ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ಆರನೆಯ ಸಂಪುಟ

"ಶಬ್ದಪಾರಮಾರ್ಗಮಶಕ್ಯಂ"
–ಕೇಶಿರಾಜ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು–೧೮

೧೯೯೦

KANNADA NIGHANTU - VOL-VI
Second Edition : 2010
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : VIII+5473 to 6480 Price : Rs. 350=00

ಮೊದಲನೆಯ ಮುದ್ರಣ – ೧೯೯೦
ಎರಡನೆಯ ಮುದ್ರಣ – ೨೦೧೦
ಪ್ರತಿಗಳು : ೨೦೦೦
ಬೆಲೆ : ಮುನ್ನೂರು ಐವತ್ತು ರೂಪಾಯಿಗಳು
@ ಹಕ್ಕುಗಳನ್ನು ಕಾಯ್ದಿರಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು (೨೦೧೦)

ಅಧ್ಯಕ್ಷರು

ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಗೌರವ ಕಾರ್ಯದರ್ಶಿಗಳು

ಪ್ರೊ. ಎಚ್.ಕೆ. ಮಳಲಿಗೌಡ

ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ

ಗೌರವ ಕೋಶಾಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಮುದ್ರಣ: ರಾಜಾ ಪ್ರಿಂಟರ್ಸ್
ನಂ.೫೯, ೪ನೆ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು– ೫೬೦ ೦೨೭.

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೯೦ನೆಯ ಡಿಸೆಂಬರ್ ತಿಂಗಳಿನಲ್ಲಿ ಇದ್ದಂತೆ)

ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ

ಸದಸ್ಯರು

ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಡಾ. ಜಿ. ಎಸ್. ಗಾಯಿ, ಎಂ.ಎ., ಪಿಎಚ್.ಡಿ.
ಡಾ. ಹಾ. ಮಾ. ನಾಯಕ, ಎಂ.ಎ., ಪಿಎಚ್.ಡಿ.
ಡಾ. ಜಿ.ಎಸ್. ಶಿವರುದ್ರಪ್ಪ, ಎಂ.ಎ., ಪಿಎಚ್.ಡಿ
ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿಎಚ್.ಡಿ.
ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಎಂ.ಎ., ಪಿಎಚ್.ಡಿ.
ಡಾ. ಕೆ.ವಿ. ರಮೇಶ್, ಎಂ.ಎ., ಪಿಎಚ್.ಡಿ.
ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.
ಶ್ರೀ ಎನ್. ಬಸವಾರಾಧ್ಯ, ಎಂ.ಎ.,

ಕರ್ನಾಟಕ ಸರ್ಕಾರದ ಪ್ರತಿನಿಧಿಗಳು

ಡಾ. ಸಿದ್ಧಯ್ಯ ಪುರಾಣಿಕ, ಬಿ.ಎ., ಎಲ್‌ಎಲ್.ಬಿ.

ಪರಿಷತ್ತಿನ ಅಧ್ಯಕ್ಷರು

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಪರಿಷತ್ತಿನ ಗೌರವ ಕಾರ್ಯದರ್ಶಿಗಳು

ಶ್ರೀ ಗೊ.ರು. ಚನ್ನಬಸಪ್ಪ
ಶ್ರೀ ಟಿ. ರಾಮಯ್ಯ

ಪರಿಷತ್ತಿನ ಗೌರವ ಕೋಶಾಧಿಕಾರಿಗಳು

ಶ್ರೀ. ಎಸ್.ವಿ. ಶ್ರೀನಿವಾಸರಾವ್

ನಿಘಂಟು ಕಛೇರಿಯ ಸಿಬ್ಬಂದಿ

ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ ಎಂ.ಎ., ಬಿ.ಟಿ.

ಸಹಾಯಕ ಸಂಪಾದಕರು

ಶ್ರೀಮತಿ ಮಂಜುಳಾರಾವ್, ಎಂ.ಎ.
ಶ್ರೀಮತಿ ಎಂ. ಎನ್. ಜಾನಕಮ್ಮ, ಎಂ.ಎ.
ಶ್ರೀಮತಿ ಉಮಾದೇವಿ, ಎಂ.ಎ
ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ
ಶ್ರೀಮತಿ ಎಂ.ಎಸ್. ಸುಜಯ, ಎಂ.ಎ
ಶ್ರೀ ಬಿ. ಆರ್. ಬಸವರಾಜ, ಎಂ.ಎ.

ಒಪ್ಪೊತ್ತಿನ ಸಹಾಯಕರು

ಶ್ರೀ ಕೆ. ಆರ್. ಶೇಷಗಿರಿ, ಎಂ.ಎ.
ಶ್ರೀ ಎ. ಎನ್. ಭಟ್, ಎಂ.ಎ.

ಕಚೇರಿಯ ಸಿಬ್ಬಂದಿವರ್ಗ

ಬೆರಳಚ್ಚುಗಾರ್ತಿಯರು : ಶ್ರೀಮತಿ ಎ. ನೇತ್ರಾವತಿಬಾಯಿ, ಶ್ರೀಮತಿ ಸಿ. ಎನ್. ವಿಜಯಲಕ್ಷ್ಮಿ

ಸಹಾಯಕರು : ಶ್ರೀ ರಾಘವೇಂದ್ರ ಪ್ರಸಾದ್, ಶ್ರೀ ಆರ್. ಶಂಕರಪ್ಪ, ಶ್ರೀ ರೇವಯ್ಯ,

ಅಧ್ಯಕ್ಷರ ನುಡಿ

'ನಿಘಂಟು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟು' ಎಂದೇ ಖ್ಯಾತವಾಗಿರುವ ಈ ಮಹಾನಿಘಂಟಿನ ಎಂಟು ಸಂಪುಟಗಳನ್ನು ಅದು ಪ್ರಕಟವಾದ ೧೫ ವರ್ಷಗಳ ನಂತರ ಮತ್ತಷ್ಟು ಸುಂದರವಾಗಿ ಮರುಮುದ್ರಣಗೊಳಿಸಿ ಕನ್ನಡ ಕುಲಕೋಟಿಗೆ ಅರ್ಪಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡಿರುವುದು ಅದರ ಸಂಪನ್ನತೆ ಮತ್ತು ಅರ್ಹತೆಗಳಿಂದಾಗಿಯೇ ಎಂಬುದನ್ನು ಲೋಕದೆದುರು ಬಿಚ್ಚಿತೋರಿಸುವ ಸಾಧನಗಳಲ್ಲಿ ಮುಖ್ಯವಾದದ್ದು ಈ ಬೃಹತ್ ನಿಘಂಟು. ಕನ್ನಡದ ಸಮಸ್ತ ಜ್ಞಾನವನ್ನೂ ತನ್ನೊಳಗೆ ಐಕ್ಯಗೊಳಿಸಿಕೊಂಡಿರುವ ಈ ನಿಘಂಟಿನ ವಿವಿಧ ಸಂಪುಟಗಳಲ್ಲಿ ಶಬ್ದವೊಂದರ ಅರ್ಥ, ವಿವರಣೆ, ಉದಾಹರಣೆ ಒಮ್ಮೊಮ್ಮೆ ಅರ್ಥಪುಟವನ್ನು ದಾಟಿ ಒಂದು ಪುಟವನ್ನು ಆವರಿಸಿಕೊಂಡಿರುವುದುಂಟು.

ಕ್ರಿ.ಶ.೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭವಾಗಿ ಈ ಸಂಪುಟ ಯೋಜನೆ ಅನುಷ್ಠಾನಗೊಂಡ ೧೯೯೫ರವರೆಗೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಿಂದಲೂ ಉಲ್ಲೇಖಗಳನ್ನು ನೀಡಲಾಗಿರುವುದು, ಕೆಲವೊಮ್ಮೆ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗುವ ಸಂದರ್ಭಗಳನ್ನು ಜೊತೆಗಿರಿಸಿ ಕೊಟ್ಟಿರುವುದು, ಪ್ರತಿಯೊಂದು ಶಬ್ದವನ್ನೂ ನಾಮಪದ ಅಥವಾ ಕ್ರಿಯಾಪದವೆಂದು ಖಚಿತವಾಗಿ ವಿಂಗಡಿಸಿಕೊಂಡಿರುವುದು, ಅರ್ಥ ಸ್ಪಷ್ಟೀಕರಣಕ್ಕೆಂದು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯ ಅಥವಾ ವಾಕ್ಯತುಂಡುಗಳೇ ಮೂಲಕಾವ್ಯವನ್ನು ಓದಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸುವುದು – ಈ ಎಲ್ಲ ಅಂಶಗಳು ಇದರ ಅಪೂರ್ವತೆಯನ್ನು ಎತ್ತಿ ಹಿಡಿಯುವ ಸಾಕ್ಷಿಕಲ್ಲುಗಳಾಗಿವೆ. ನಿಘಂಟು ಎನ್ನುವುದೇ ತುಂಬ ವೈಜ್ಞಾನಿಕವಾದ, ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ, ಭಾಷೆಯಲ್ಲಿರುವ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸಬೇಕೆಂದು ತಿಳಿಸಿಕೊಡುವ ರಚನೆಯಾಗಿರುವುದರಿಂದ ಜ್ಞಾನೇಂದ್ರಿಯಗಳೆಲ್ಲದರ ಎಚ್ಚರದ ದುಡಿಮೆಯನ್ನು ಬಯಸುತ್ತದೆ. ಕನ್ನಡದ ಅಭಿಮಾನವನ್ನು ಮೈತುಂಬಿಕೊಂಡ ಘನ ವಿದ್ವಾಂಸರ ಸತತ ಪರಿಶ್ರಮದಿಂದ ಈ ಯೋಜನೆ ಶಿಸ್ತುಬದ್ಧವಾಗಿ ಯಶಕಂಡಿದೆ. ಮೊದಲ ಮುದ್ರಣದ ೧೦,೦೦೦ ಪ್ರತಿಗಳು ಕೆಲವೇ ವರ್ಷಗಳಲ್ಲಿ ಕನ್ನಡಿಗರ ಮನೆಯ ಕಪಾಟುಗಳನ್ನು, ಗ್ರಂಥಭಂಡಾರಗಳನ್ನು, ಶಾಲೆಕಾಲೇಜುಗಳನ್ನು ಅಲಂಕರಿಸಿದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಧನ್ಯತಾಭಾವವನ್ನು ತಳೆಯುವಂತಾಯಿತು. ಆದರೆ ನಿಘಂಟುವಿನ ಉಪಯುಕ್ತತೆಯನ್ನು ತಡವಾಗಿ ಅರ್ಥಮಾಡಿಕೊಂಡವರು ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರಿಷತ್ತಿಗೆ ದೂರವಾಣಿ ಕರೆ ಮಾಡಿ, ಮಾರಾಟ ವಿಭಾಗದಲ್ಲಿ ವಿಚಾರಿಸಿ, ಪುಸ್ತಕ ಮಳಿಗೆಗಳಲ್ಲಿ ಹುಡುಕಾಡಿ ಸಿಗದೆ ನಿರಾಶರಾಗಿದ್ದಾರೆ. ಮರುಪ್ರಕಟಿಸುವಂತೆ ಒತ್ತಾಯ ಮಾಡಿದ್ದಾರೆ.

ಎಂಟು ಸಂಪುಟಗಳಲ್ಲಿ, ಒಂಬತ್ತು ಸಾವಿರಕ್ಕಿಂತಲೂ ಅಧಿಕ ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ, ಎಲ್ಲರ ಮನೆಯನ್ನೂ ಬೆಳಗಬೇಕಾಗಿರುವ ಈ ನಿಘಂಟನ್ನು ಮುದ್ರಿಸುವುದಾಗಲೀ, ಮುದ್ರಿತ ಪ್ರತಿಗಳನ್ನು ಒಂದೆಡೆ ಜೋಡಿಸಿಡುವುದಾಗಲೀ, ಮಾರಾಟದ ವ್ಯವಸ್ಥೆ ಮಾಡುವುದಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಾಗಲೀ ಅಷ್ಟೊಂದು ಸುಲಭವಾದ ಕೆಲಸವಲ್ಲ. ಈ ಅಸಾಧ್ಯವನ್ನು ಸಾಧ್ಯವಾಗಿಸುವ ಧೈರ್ಯೋತ್ಸಾಹಗಳು ಪರಿಷತ್ತಿನೊಡಲಲ್ಲಿ ಚಿಮ್ಮುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಕಾರಣವಾಯಿತೆಂದರೆ ಅದನ್ನು ಯಾರೂ ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಮಾತುಗಳನ್ನು ಪ್ರೀತಿಯಿಂದ ಆಲಿಸುತ್ತಿರುವುದು, ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಸಾರ್ವಭೌಮ ಪ್ರತಿನಿಧಿಯೆಂದೇ ಭಾವಿಸುತ್ತಿರುವುದು ಕನ್ನಡದ ಭಾಗ್ಯವೆಂದೇ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಲವು ಒತ್ತಡಗಳ ನಡುವೆಯೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರೀತಿಯಿಂದ ಭಾಗವಹಿಸುತ್ತಿರುವುದು, ಸಮಾರಂಭಗಳಲ್ಲಿ ಕೊಟ್ಟ ಆಶ್ವಾಸನೆಗಳನ್ನು ಅತಿಶೀಘ್ರವಾಗಿ ಅನುಷ್ಠಾನಗೊಳಿಸುತ್ತಿರುವುದು, ಪರಿಷತ್ತಿನ ಎಲ್ಲಾ ಯೋಜನೆಗಳಿಗೂ ಹಸಿರು ನಿಶಾನೆ ತೋರುತ್ತಿರುವುದು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ – ಕನ್ನಡ ಸಂಸ್ಕೃತಿ ಮಂತ್ರಿಗಳ ಕಚೇರಿಯ ಹೊರಗೆ ಕಡತಗಳೊಂದಿಗೆ ಗಂಟೆಗಟ್ಟಲೆ ಕಾಯುತ್ತಿದ್ದುದನ್ನು ತಪ್ಪಿಸಿರುವುದು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ತಾಲ್ಲೂಕು ಸಮ್ಮೇಳನಗಳವರೆಗೆ ಎಲ್ಲವೂ ಅದ್ಧೂರಿಯಾಗಿ ನಡೆಯಲು ಬೇಕಾದಷ್ಟು ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿರುವುದು – ಇಂಥವನ್ನೆಲ್ಲಾ ಕಂಡಾಗ ಪರಿಷತ್ತಿನ ಅಧ್ಯಕ್ಷನಾಗಿ ನನಗೆ ಮನಸ್ಸು ತುಂಬಿ ಬರುತ್ತದೆ. ಆರುಕೋಟಿ ಕನ್ನಡಿಗರ ಪರವಾಗಿ ಅವರಿಗೆ ಕೃತಜ್ಞತಾ ಕುಸುಮಗಳನ್ನು ಅರ್ಪಿಸಬೇಕೆನ್ನಿಸುತ್ತದೆ. 'ಕನ್ನಡದ ಮುಖ್ಯಮಂತ್ರಿ' 'ಕನ್ನಡಿಗರ ಮುಖ್ಯಮಂತ್ರಿ' ಎಂದು ಅಭಿಮಾನದಿಂದ ನುಡಿಯಬೇಕೆನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಕನ್ನಡದ ಮೇಲಿನ, ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗಿನ ಈ ಅಖಂಡ ಪ್ರೀತಿ ಹೀಗೇ ಮುಂದುವರಿಯಲೆಂದು ಆಶಿಸುತ್ತೇನೆ.

ಕರ್ನಾಟಕ ಸರ್ಕಾರ ನಿಘಂಟು ಯೋಜನೆಯ ಮಹತ್ವವನ್ನು ಮನಗಂಡು ಒಂದು ಕೋಟಿ ರೂಪಾಯಿಗಳನ್ನು ಸಾಹಿತ್ಯ ಪರಿಷತ್ತಿಗೆ ಉದಾರವಾಗಿ ನೀಡಿದೆ. ಸರ್ಕಾರ ಹಣ ನೀಡಿರುವುದು ಪರಿಷತ್ತಿಗಾದರೂ ಇದು ಜನತೆಯ ಹಣ ಮತ್ತು ಇದರ ಅಂತಿಮ ಫಲಾನುಭವಿಗಳೂ ಜನತೆಯೇ. ಈ ಎಚ್ಚರವನ್ನಿರಿಸಿಕೊಂಡೇ ಸಾಹಿತ್ಯ ಪರಿಷತ್ತು ಬಹುಬೇಡಿಕೆಯ ಬೃಹನ್ನಿಘಂಟಿನ ಎಂಟು ಸಂಪುಟಗಳನ್ನು ಪುನರ್ಮುದ್ರಣಗೊಳಿಸುತ್ತಿದೆ. ಸರ್ಕಾರದ ಉದಾರ ಆರ್ಥಿಕ ನೆರವಿನ ಪರಿಣಾಮವಾಗಿ ನಿಘಂಟಿನ ಬೆಲೆಯನ್ನು ಸಾಮಾನ್ಯರೂ ಕೊಳ್ಳಲು ಮನಸ್ಸು ಮಾಡುವಂತೆ ಕಡಿಮೆಗೊಳಿಸಲಾಗಿದೆ. ಭಾಷೆ ಮತ್ತು ಸಾಹಿತ್ಯಾಭಿಮಾನದ ಸಂಕೇತವೆಂಬಂತೆ ಈ ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ರಾಜ್ಯ ಸರ್ಕಾರವನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಮತ್ತು ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರುಗಳನ್ನು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ನಿಘಂಟು ಯೋಜನೆ ಪ್ರಾರಂಭವಾದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರಿಂದ ಮೊದಲಗೊಂಡು ಮುಕ್ತಾಯವಾದಾಗ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರವರೆಗೆ ಇದನ್ನು ಆಸಕ್ತಿಯಿಂದ ಮುನ್ನಡೆಸಿಕೊಂಡು ಬಂದ ಎಲ್ಲ ಅಧ್ಯಕ್ಷರುಗಳಿಗೂ ನಿಘಂಟು ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಸಂಪಾದಕರು, ಸಿಬ್ಬಂದಿ ವರ್ಗದವರಿಗೂ ಅಂದವಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ. ಮರುಮುದ್ರಣದ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿ ವಿಶ್ವಾಸಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬೆಂಗಳೂರು
೫–೬–೨೦೧೦

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಸಂಪಾದಕರ ಅರಿಕೆ

ಕನ್ನಡ-ಕನ್ನಡ ನಿಘಂಟಿನ ಒನೆಯ ಸಂಪುಟವು ಪ್ರಕಟವಾಗುತ್ತಿರುವುದು ನನಗೆ ಸಂತೋಷದ ವಿಷಯ. ಈ ಸಂಪುಟದ ಮುದ್ರಣಪ್ರತಿಯು ಸಿದ್ಧವಾಗಿ ಆರು ವರ್ಷಗಳಾದುವು. ಆದರೂ ಮುದ್ರಣಕ್ಕೆ ಅನೇಕ ಅಡ್ಡಿಗಳುಂಟಾಗಿ ಐದನೆಯ ಸಂಪುಟ ಪ್ರಕಟವಾಗುವುದೇ ೧೯೮೭ರ ಅಂತ್ಯದ ವರೆಗೆ ತಡವಾಯಿತು. ಈಗ ೧೯೯೦ರ ಕೊನೆಯಲ್ಲಿ ಈ ಆರನೆಯ ಸಂಪುಟ ಪ್ರಕಟವಾಗುತ್ತಿದೆ.

ಕನ್ನಡ ನಿಘಂಟಿನ ಈ ಮಹಾಕಾರ್ಯವನ್ನು ಸಾಧಿಸಲು ಕರ್ನಾಟಕ ಸರ್ಕಾರ ನೀಡುತ್ತಿರುವ ಧನಸಹಾಯವನ್ನು ಕುರಿತು ಭಾರತದ ಎಲ್ಲ ಭಾಷೆಗಳ ವಿದ್ವಾಂಸರೂ ನಿಘಂಟುಕಾರರೂ ಮುಕ್ತಕಂಠದಿಂದ ಹೊಗಳುತ್ತಾರೆ. ಶತಮಾನಕ್ಕೊಮ್ಮೆ ಕೈಗೊಳ್ಳಬಹುದಾದ ಇಂಥ ವಿದ್ವತ್ಕಾರ್ಯಗಳ ಬಗ್ಗೆ ನಮ್ಮ ಸರ್ಕಾರದ ನಿಲುಮೆ ಎಲ್ಲರ ಗೌರವಕ್ಕೆ ಪಾತ್ರವಾಗಿದೆ. ಕನ್ನಡಿಗರೆಲ್ಲರೂ ನಮ್ಮ ಸರ್ಕಾರಕ್ಕೆ ತಮ್ಮ ಪ್ರೀತಿವಿಶ್ವಾಸಗಳನ್ನು ನೀಡಿ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ಈ ಸಂಪುಟವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ನಮ್ಮ ನಿಘಂಟು ಸಂಪಾದಕ ಸಮಿತಿಯ ಸದಸ್ಯರೆಲ್ಲರೂ ನೀಡಿದ ಸಂಪೂರ್ಣ ಸಹಕಾರಕ್ಕೆ ನಾನು ಕೃತಜ್ಞನಾಗಿದ್ದೇನೆ. ನಿಘಂಟುಕಾರ್ಯ ಕ್ಲಿಷ್ಟವಾದ ವಿದ್ವತ್ಕಾರ್ಯ. ಇದಕ್ಕೆ ಬಹುಶ್ರುತತ್ವವೂ, ಒಬ್ಬ ವ್ಯಕ್ತಿಗೆ ಸಾಧ್ಯವಾಗದ ಅಗಾಧ ವಿದ್ವತ್ತೂ ಅಗತ್ಯವಾಗುತ್ತದೆ. ಆದುದರಿಂದ ಸಂಪಾದಕ ಸಮಿತಿಯ ಸದಸ್ಯರು ಬೇರೆ ಬೇರೆ ಕ್ಷೇತ್ರಗಳಲ್ಲಿ ಆಳವಾದ ಪರಿಜ್ಞಾನವುಳ್ಳವರಾಗಿ ಸಂಪಾದಕನಿಗೆ ಎದುರಾಗುವ ಅನೇಕ ಸಮಸ್ಯೆಗಳನ್ನು ತಮ್ಮ ತಿಳಿವಳಿಕೆಯ ಬೆಳಕಿನಲ್ಲಿ ಪರಿಹರಿಸಿ ಅವನ ಕಾರ್ಯವನ್ನು ಸುಲಭಗೊಳಿಸಿದ್ದಾರೆ. ಅವರ ವಿಶ್ವಾಸಕ್ಕೆ ನನ್ನ ಗೌರವವನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ನಿಘಂಟುಕಾರ್ಯದ ವ್ಯಾಪ್ತಿ ವಿಶ್ವವಿಶಾಲವಾದುದು. ಹೊಸ ಶಬ್ದಗಳ ಸೃಷ್ಟಿ ಆಗುತ್ತಲೇ ಇರುತ್ತದೆ. ಅದನ್ನು ಬೆನ್ನುಹತ್ತುವ ಕಾರ್ಯ ಮುಂದುವರಿದಿದ್ದರೂ ಎಷ್ಟೋ ವೇಳೆ ಈ ನಿಘಂಟು ಮುದ್ರಣವಾಗುವ ವೇಳೆಗೆ ಅವು ನಮ್ಮ ಕೈಸೇರಿರುವುದಿಲ್ಲ. ಇಂಥ ಶಬ್ದಗಳನ್ನೆಲ್ಲ ಪಟ್ಟಿ ಮಾಡಲಾಗುತ್ತಿದೆ. ಕೊನೆಯ ಸಂಪುಟದ ಅನುಬಂಧದಲ್ಲಿ ಅವುಗಳನ್ನು ಸೇರಿಸಬೇಕಾಗುತ್ತದೆ.

ಈಗ ಪರಿಷತ್ತಿನ ಅಧ್ಯಕ್ಷರಾಗಿರುವ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರು ನಿಘಂಟಿನ ಸಿಬ್ಬಂದಿಯ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿಯೂ ಈ ಸಂಪುಟವು ಬೇಗ ಮುದ್ರಣವಾಗುವುದರಲ್ಲಿಯೂ ಆಸಕ್ತಿಯನ್ನು ತಳೆದು ಸಹಾಯಮಾಡಿದ್ದಾರೆ. ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಇ. ಕೃಷ್ಣನಾರಾಯಣ ಅವರು ಪರಿಷತ್ತಿನ ೬೦ನೇ ಸಮ್ಮೇಳನದ ವೇಳೆಗೆ ಈ ಸಂಪುಟವನ್ನು ಪ್ರಕಟಪಡಿಸಲು ಎಲ್ಲ ಏರ್ಪಾಟುಗಳನ್ನೂ ಮಾಡಿ ನಮ್ಮನ್ನು ಋಣಿಗಳನ್ನಾಗಿ ಮಾಡಿದ್ದಾರೆ.

ನಿಘಂಟಿನ ಕರಡನ್ನು ತಿದ್ದುವುದು ಬಹು ಎಚ್ಚರಿಕೆಯಿಂದ ಮಾಡಬೇಕಾದ ಕಾರ್ಯ. ಇದಕ್ಕೆ ಕನ್ನಡಭಾಷಾಸಾಹಿತ್ಯಗಳ ಮತ್ತು ಮುದ್ರಣ ತಂತ್ರದ ಆಳವಾದ ಪರಿಜ್ಞಾನವಿರಬೇಕು. ಇಂಥ ಕ್ಲಿಷ್ಟಕಾರ್ಯವನ್ನು ಈ ನಿಘಂಟಿನ ಮುದ್ರಣಕಾರ್ಯ ಪ್ರಾರಂಭವಾದಾಗಿನಿಂದ ಸಮರ್ಥವಾಗಿ ನಿರ್ವಹಿಸಿದವರು ಶ್ರೀಮತಿಯರಾದ ಮಂಜುಳಾರಾವ್, ಉಮಾದೇವಿ, ವಿಜಯಲಕ್ಷ್ಮಿ, ಎಂ. ಎಸ್. ಸಂಜಯ. ಕೊನೆಕೊನೆಗೆ ಕರಡಿನ ಸಂಖ್ಯೆ ಹೆಚ್ಚಾದಾಗ ಇವರ ಜತೆಗೆ ಶ್ರೀಮತಿ ಎಂ. ಎನ್. ಜಾನಕಮ್ಮ ಮತ್ತು ಶ್ರೀ ಬಿ. ಆರ್. ಬಸವರಾಜ ಅವರೂ ಸಹಾಯಮಾಡಿದ್ದಾರೆ. ಇವರಲ್ಲದೆ ನಿಘಂಟು ಕಚೇರಿಯ ಬೆರಳಚ್ಚುಗಾರ್ತಿಯರೂ ಸಹಾಯಕ ವರ್ಗದವರೂ ಬಿಡುವಿಲ್ಲದೆ ದುಡಿದಿದ್ದಾರೆ. ಇವರಿಗೆಲ್ಲ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನುಮುಂದೆ ಈ ನಿಘಂಟಿನ ೭ ಮತ್ತು ೮ನೆಯ ಸಂಪುಟಗಳು ಪ್ರಕಟವಾಗಬೇಕು. ಈಗಾಗಲೇ ಈ ಎರಡು ಸಂಪುಟಗಳ ಬಹುಭಾಗದ ಪರಿಶೀಲನಾಕಾರ್ಯ ಪೂರೈಸಿದೆ. ಇನ್ನು ಮೂರು ತಿಂಗಳುಗಳಲ್ಲಿ ಏಳನೆಯ ಸಂಪುಟವನ್ನು ಮುದ್ರಣಕ್ಕೆ ಸಿದ್ಧಮಾಡಲಾಗುತ್ತದೆ. ಅದರ ಮುದ್ರಣವು ಪೂರೈಸುವ ವೇಳೆಗೆ ಎಂಟನೆಯ ಸಂಪುಟದ ವಿಸ್ತೃತ ಭಾಗಗಳನ್ನು ಅಂದರೆ 'ವ' ಕಾರ 'ಸ' ಕಾರ 'ಹ' ಕಾರಗಳ ಸಭಾಪ್ರತಿಯನ್ನು ಸಂಪಾದಕಸಮಿತಿಯು ಮುಂದೆ ತರಲು ಸಾಧ್ಯವಾಗುತ್ತದೆ. ಈಗಾಗಲೇ 'ವ' ಕಾರದ ಪರಿಶೀಲನೆಗೆ ಸಭಾಪ್ರತಿಯನ್ನು ಸಿದ್ಧಮಾಡಿ ಆಗಿದೆ. ಸಂಪಾದಕ ಸಮಿತಿಯ ಮುಂದಿನ ಸಭೆಯಲ್ಲಿ 'ವ' ಕಾರದ ಪರಿಶೀಲನೆ ಪ್ರಾರಂಭವಾಗುತ್ತದೆ.

ಈ ಆರನೆಯ ಸಂಪುಟದಲ್ಲಿ ನಮ್ಮ ಅವಜ್ಞತೆಯಿಂದ ಆಗಿರಬಹುದಾದ ಪ್ರಮಾದಗಳಿದ್ದರೆ ಅವುಗಳನ್ನು ವಿದ್ವಾಂಸರು ತೋರಿಸಿ ಕೊಡಬೇಕೆಂದೂ ಅಂಥವರ ಹೆಸರುಗಳನ್ನು ಉಲ್ಲೇಖಿಸಿ ಮುಂದೆ ಅವುಗಳನ್ನು ತಿದ್ದಿಕೊಳ್ಳಲಾಗುವುದೆಂದೂ ಈ ಮೂಲಕ ತಿಳಿಸಲು ನಾನಂ ಅಪೇಕ್ಷಿಸುತ್ತೇನೆ.

ಕನ್ನಡದ ಈ ಬೃಹತ್ ನಿಘಂಟು ಅನೇಕ ಬಗೆಯ ಇತರ ನಿಘಂಟುಗಳ ಪ್ರಕಟನೆಗೆ ಸಹಾಯಕವಾಗಲೆಂದೂ, ಈ ನಿಘಂಟಿನ ಪ್ರಯೋಜನ ಹೆಚ್ಚಲೆಂದೂ ನಾನಂ ಆಶಿಸುತ್ತೇನೆ.

ಬೆಂಗಳೂರು.
೨೮-೧೨-೧೯೯೦

ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕ

ಅಧ್ಯಕ್ಷರ ಕೃತಜ್ಞತೆಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ-ಕನ್ನಡ ನಿಘಂಟಿನ ಪ್ರಥಮ ಸಂಪುಟ ಬಿಡುಗಡೆಗೊಂಡಿತು. ಸಂಪಾದಕ ಮಂಡಲಿಯ ತೀರ್ಮಾನದಂತೆ ಎರಡು ವರ್ಷಕ್ಕೊಂದು ಸಂಪುಟ ಹೊರಬೀಳಬೇಕಾದರೂ ಎರಡನೆಯ ಸಂಪುಟ ಹೊರಬಿದ್ದುದು ೧೯೭೬ರಲ್ಲಿ. ಹಾಗೆಯೇ ಮೂರನೇ ಸಂಪುಟ ೧೯೭೭ರಲ್ಲಿ, ನಾಲ್ಕನೇ ಸಂಪುಟ ೧೯೭೯ರಲ್ಲಿ ಪ್ರಕಟವಾದವು. ಐದನೇ ಸಂಪುಟ ೧೯೮೭-೮೮ರ ವರೆಗೆ ಪ್ರಕಟಣೆಗೆ ಕಾಯಬೇಕಾಯಿತು. ಒಟ್ಟು ಸಂಪುಟ ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವದ ಸಂದರ್ಭದಲ್ಲಿ ಪ್ರಕಟವಾಗುತ್ತಿರುವುದು ನಮ್ಮೆಲ್ಲರ ಸಂತೋಷದ ವಿಷಯ. ಅದಕ್ಕೂ ಹೆಚ್ಚಾಗಿ ಇದರ ಬಿಡುಗಡೆ ಕನ್ನಡ ಸಾಹಿತ್ಯ ಪರಿಷತ್ತಿನ ೬೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಜ್ರಾಧಿವೇಶನ ಸಂದರ್ಭದಲ್ಲಿ ಆಗುತ್ತಿರುವುದು ನಮಗೆಲ್ಲಾ ಅತ್ಯಂತ ಹರ್ಷದ ವಿಷಯವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಮೊದಲ ಎರಡು ಸಂಪುಟಗಳನ್ನು ಸಾಹಿತ್ಯ ಪರಿಷತ್ತಿನ ಬಿ. ಎಂ. ಶ್ರೀ. ಅಚ್ಚುಕೂಟದಲ್ಲೇ ಮುದ್ರಿಸಲಾಯಿತು. ಮೂರನು ಮತ್ತು ನಾಲ್ಕನೆಯ ಸಂಪುಟಗಳನ್ನು ಬೆಂಗಳೂರು ನಗರದಲ್ಲಿರುವ ಸರ್ಕಾರಿ ಮುದ್ರಣಾಲಯವು ಮುದ್ರಿಸಿಕೊಟ್ಟಿತು. ಐದನೆಯ ಸಂಪುಟ ಭಗವಾನ್ ಇಂಡಸ್ಟ್ರೀಸ್ ಅವರಲ್ಲಿ ಮುದ್ರಿತವಾಯಿತು. ಆರನೆಯ ಸಂಪುಟದ ಮುದ್ರಣದ ಜವಾಬ್ದಾರಿಯನ್ನು ಮತ್ತೆ ಕರ್ನಾಟಕ ಸರ್ಕಾರದ ಮುದ್ರಣಾಲಯಂ ವಹಿಸಿಕೊಂಡಿದೆ.

ಬಹುಶಃ ಮುದ್ರಣಾಲಯಗಳ ಬದಲಾವಣೆಗಳು ಕಾರಣದಿಂದಾಗಿಯೇ ಈ ಸಂಪುಟಗಳು ಹೊರಬರಲು ಸ್ವಲ್ಪ ವಿಳಂಬವಾಯಿತು ಅನ್ನಿಸುತ್ತದೆ. ಆದರೆ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಇ. ಕೃಷ್ಣನಾರಾಯಣ ಅವರ ವಿಶೇಷವಾದ ಕಾಳಜಿಯಿಂದಾಗಿ ಈ ಸಂಪುಟ ಮುದ್ರಣಗೊಂಡು ಹೊರಬರಲು ಸಾಧ್ಯವಾಯಿತು. ಈ ಮುದ್ರಣಕಾರ್ಯವನ್ನು ಆಗುಮಾಡಿಕೊಟ್ಟಿರುವ ಶ್ರೀ ಇ. ಕೃಷ್ಣನಾರಾಯಣ ಮತ್ತು ಅವರ ಸಹಾಯಕ ಸಿಬ್ಬಂದಿವರ್ಗದವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ನಿಘಂಟುವಿನ ಮುದ್ರಣದ ಹಂತದಲ್ಲಿ ನಿಘಂಟು ಸಂಪಾದಕ ಸಮಿತಿಯ ಸದಸ್ಯರು ಮತ್ತು ಸಿಬ್ಬಂದಿಯವರು ವಿಶೇಷವಾದ ಶ್ರಮ ಮತ್ತು ಆಸಕ್ತಿಗಳನ್ನು ತೋರಿದ್ದಾರೆ. ಕರಡಚ್ಚನ್ನು ತಿದ್ದುವ ಕಾರ್ಯದಲ್ಲಂತೂ ನಿಘಂಟು ಸಿಬ್ಬಂದಿಯವರು ವಹಿಸಿದ ಪಾತ್ರ ಮುಂಖ್ಯವಾದುದು. ಅವರಿಗೆ ಪರಿಷತ್ತಿನ ಕೃತಜ್ಞತೆಗಳು.

ನಿಘಂಟುವಿನ ಪ್ರಧಾನ ಸಂಪಾದಕರೂ ಮತ್ತು ಸಂಪಾದಕ ಮಂಡಲಿಯ ಅಧ್ಯಕ್ಷರೂ ಆದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅಪಾರ ಶ್ರಮ ವಹಿಸಿದ್ದಾರೆ. ಅವರಿಗೂ ಸಂಪಾದಕ ಸಮಿತಿಯ ಸದಸ್ಯರೆಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳು.

ಈ ಕನ್ನಡ-ಕನ್ನಡ ನಿಘಂಟುವಿನ ಯೋಜನೆ ಪೂರ್ಣವಾಗಿ ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಇದರ ಜವಾಬ್ದಾರಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಸುಸೂತ್ರವಾಗಿ ನಿರ್ವಹಿಸಲು ಸರ್ಕಾರ ನೆರವಾಗುತ್ತಿರುವುದಕ್ಕಾಗಿ ಪರಿಷತ್ತಿನ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಬೃಹತ್ ನಿಘಂಟು ಮೊದಲು ನಾಲ್ಕು ಸಂಪುಟಗಳಲ್ಲಿ ಮುಗಿಯುತ್ತದೆ ಎಂಬ ಯೋಜನೆಯಿಂದ ಕೂಡಿದ್ದರೂ ಈಗ ಎಂಟನೆಯ ಸಂಪುಟದವರೆಗೂ ವಿಸ್ತರಣೆಗೊಳ್ಳುತ್ತಿದೆ. ಇದಕ್ಕೆ ಕಾರಣ ನಿಘಂಟು ಸಮಿತಿ ಸಂಗ್ರಹಿಸಿ ವ್ಯವಸ್ಥೆಗೊಳಿಸಿರುವ ಅಪಾರವಾದ ಶಬ್ದ ಸಂಪತ್ತು.

ನಿಘಂಟುವಿನ ಐನೆಯ ಸಂಪುಟವು ೧೯೮೭-೮೮ರಲ್ಲಿ ಪ್ರಕಟವಾಗುವಾಗ ನಿಘಂಟು ಸಂಪಾದಕ ಮಂಡಲಿ ಸದಸ್ಯರುಗಳ ಪಟ್ಟಿಯಲ್ಲಿ ಪರಿಷತ್ತಿನ ಆಡಳಿತಗಾರರ ಮತ್ತು ಸಹಾಯಕ ನಿರ್ದೇಶಕರ ಹೆಸರುಗಳ ಜೊತೆಗೆ ಅವರಿಗಿಂತ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಹೆಚ್. ಬಿ. ಜ್ವಾಲನಯ್ಯ ಮತ್ತು ಗೌರವ ಕಾರ್ಯದರ್ಶಿಗಳಾದ ಶ್ರೀ ಜಿ. ವಿ. ಶಿವಸ್ವಾಮಿ ಮತ್ತು ಶ್ರೀ ಚಂದ್ರಕಾಂತ ಪಡೇಸೂರ ಹಾಗೂ ಕೋಶಾಧಿಕಾರಿಗಳಾದ ಶ್ರೀ ಎಂ. ಪಿ. ದೇವರಾಜ್ ಅವರ ಹೆಸರುಗಳು ಸೇರಬೇಕಾಗಿತ್ತು ಎಂಬುದನ್ನು ಇಲ್ಲಿ ನಮ್ರವಾಗಿ ಸೂಚಿಸಬಯಸುತ್ತೇನೆ.

ಇನ್ನು ಕೆಲವೇ ದಿನಗಳಲ್ಲಿ ಒಟ್ಟು ಸಂಪುಟದ ಮುದ್ರಣಕ್ಕೆ ಪ್ರತಿಗಳು ಸಿದ್ಧಗೊಳ್ಳಲು ಸಾಧ್ಯವಾಗುತ್ತದೆ. ವಾಸ್ತವವಾಗಿ ಈ ನಿಘಂಟನ್ನು ರೂಪಿಸಲು ಪ್ರಾತಃಸ್ಮರಣೀಯರಾದ ಅನೇಕ ವಿದ್ವಾಂಸರುಗಳು ಅಪಾರವಾದ ಶ್ರಮವನ್ನು ವಹಿಸಿದ್ದಾರೆ. ಅವರೆಲ್ಲರ ಶ್ರಮ ಮತ್ತು ತಪಸ್ಸುಗಳ ಫಲವಾಗಿ ಈ ನಿಘಂಟಿನ ಯೋಜನೆ ೧೯೭೨ರ ಆರಂಭಕ್ಕೆ ಮುಂಗಿಯುವ ಭರವಸೆ ನಮಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಈ ನಿಘಂಟುವಿನ ಒಟ್ಟು ಸಂಪುಟವನ್ನು ಕನ್ನಡಿಗರ ಕೈಯಲ್ಲಿರಿಸಲು ನಿಜವಾಗಿಯೂ ಹೆಮ್ಮೆಯಾಗುತ್ತದೆ. ಇದಕ್ಕೆ ಸಂಬಂಧಿಸಿದ ಎಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳು.

ಬೆಂಗಳೂರು
೨೮-೧೨-೧೯೮೦

ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
ಅಧ್ಯಕ್ಷರು

ಪಾಉಗ್ಗಮಣ (ನಾ). [ಜೈನ] ಉಪವಾಸದಿಂದ ಮರಣ ಹೊಂದುವಿಕೆ; ಪ್ರಾಯೋಪಗಮನ : ಬಲದೇವಾಚಾರ್ಯ್ಯರ ಪಾಉಗ್ಗಮಣ (ಎಕ. II. ೬೨; ಸು. 750). [<ಸಂ. ಪ್ರಾಯೋಪಗಮನ]

ಪಾಂಕ್ತ (ಗು). ೧. ಕ್ರಮಬದ್ಧವಾದ ; ಸಮಗ್ರವಾದ. (ನಾ). ೨. ಕ್ರಮಬದ್ಧವಾದುದು ; ಸಮಗ್ರವಾದುದು : ಹೊಸಮಾರ್ಗದ ಗ್ರಂಥಕರ್ತನು . . . ಜನಾಂಗಗಳ ಚರಿತ್ರೆಗಳನ್ನೂ ಮನುಷ್ಯಜಾತಿಯ ಪಾಂಕ್ತವಾದ ಅಭ್ಯುದಯವನ್ನೂ ವಿವರಿಸುವನು (ಸಂಸಾ. ೪೯) ; ಎಲ್ಲಾನೂ ಪಾಂಕ್ತ ಆಗಿ ಆಗಬೇಕು. ಚಾಚೂ ಏನೂ ತಪ್ಪು ಹಾಂಗಿಲ್ಲ (ದೀಪನಿ. ೨೮) ; ಇಂಥ ಪೂರ್ವಸಂಬಂಧಕಲ್ಪನೆಯಿಂದ ಕವಿಯ ಬಹುಶ್ರುತತ್ವ ಪಾಂಕ್ತವಾಗಿ ಪ್ರಕಾಶವಾಗುತ್ತದೆ (ಸಂಜಾಂಡ. ೦೭೦). [ಸಂ.]

ಪಾಂಕ್ತೇಯ (ಗು). ೧. (ಭೋಜನಕ್ಕೆ) ಜೊತೆಗೆ ಕುಳಿತುಕೊಳ್ಳಲು ಯೋಗ್ಯವಾದ. (ನಾ). ೨. ಜೊತೆಯಲ್ಲಿರಲು ಯೋಗ್ಯವಾದುದು ; ಸಹವಾಸಯೋಗ್ಯವಾದುದು : ಛಂದಸ್ಸೇ ಸಾಧುಕಾವ್ಯಭಾಷೆಯ ಏಕಮಾತ್ರ ಪಾಂಕ್ತೇಯವೆಂದು ಗಣ್ಯವಾಗಿತ್ತು (ನಿಬಂಧ. II. ೩೦೯). [ಸಂ.]

ಪಾಂಗ 'ಪಂಗ$_1$' ನೋ.

ಪಾಂಗತ. ಪಾಂಗಿತ (ನಾ). ಕ್ರಮಬದ್ಧವಾದುದು: ತೊಟ್ಟಿಲಲ್ಲಿರುವುದು; ಅಂಬೆಗಾಲಿಕ್ಕುವುದು . . . ಎಲ್ಲಾ ಅಟ್ಟದ ಮೆಟ್ಟಲಿನಂತೆ ಪಾಂಗತವಾಗಿದೆ (ಪಾಡಿಗೇ. ೦೬೯). **ಪಾಂಗಿತ** : ಆಯುವು ತೀರಿಯಿಲ್ಲವತರಿಸಿದಿರಿ ಪಾಂಗಿತದೊಳ್ ನಿಪ ಪಾಂಡುರಾಜನಿಗೆ (ಜಪಶಾ. ೬೩-೨೫).

[<ಸಂ. ಪಾಂಕ್ತ. / ಮರಾ. ಪಂಗತ್]

ಪಾಂಗಱಿ (ಕ್ರಿ). ಕ್ರಮವನ್ನು ತಿಳಿ ; ಹದವನ್ನು ಅರಿತುಕೊಳ್ಳು : "ಪಾಂಗಱಿ (ಪಾಂಗು + ಅಱಿ)—ಪ್ರಕಾರಗಮನೇ (ರೀತಿಯನ್ನು ತಿಳಿ)" (ಶಮರಾ); ಅಲಸದೆ ಪೀನಂ ಪಡೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತಪ್ಪದೆ ಬಗೆದು ಪೇಟ್ಟುದು (ಕವಿರಾ. ೦-೪೪) ; ಕಮ್ಮಿತ್ತಾಗೆ ಪಾಂಗಱಿದಮೃತೋಪಮಾನವಿದು ತಾನೆನೆ ಮಾಟ್ಟುದು ಕ್ಷೀರದುಂಡೆಯಂ (ಶೋಕೋಪ. ೬-೦೦) ; ಅಱಿಯಲಾಗದು ನೆಟ್ಟನೆಂದು ಬಿಸುಟ್ಟುದುಂ ನಯಮಲ್ತು ಪಾಂಗಱಿವ ವಿಪ್ರಪರ್ಕಳಿಂ ಚರರಿಂ ವಿಚಾರಪರ್ಕಳಿಂ ಪೆಱರುಮನ್ನರಿನಿನ್ನುಮಾರಯಿಸಿಂ ವಿದಗ್ಧರಿನೊಯ್ಕನೆತ್ತಱಿಯಲಾಕ್ಕುಮೊ (ಕಾವ್ಯಾನ. ೯೫). [ಪಾಂಗು$_1$ + ಅಱಿ]

ಪಾಂಗಱಿ (ಕ್ರಿ). ಕ್ರಮತಪ್ಪು; ರೀತಿಗೆಡು : ಗಱಿಯಿಸಿದರ್ಥಂ ಸಲೆ ಪಾಂಗಱಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ ಮೆಱಸುಂ ಕೋದಂ ತಿರ್ಕುಂ (ಕವಿರಾ. ೨-೫) ; ಘಱಿಲನೆ ನಡೆಯೆಂದು ಜಡಿದು ಸಾರಥಿಯಂ ಪಾಂಗಱಿದು ನಿಲಲೀಯದಲ್ಲಿಂದೆಱೆದುಯ್ವಂತುಯ್ದಳಾತ್ಮವರನಂ ನರನಂ (ಕಾವ್ಯಾನ. ೨೬). [ಪಾಂಗು$_1$ + ಅಱಿ$_1$]

ಪಾಂಗಿತ 'ಪಾಂಗತ' ನೋ.

ಪಾಂಗು$_1$ (ನಾ). ೧. ಆಕಾರ; ಆಕೃತಿ ; ರೂಪು : "ಪರಿಜು ಪಾಂಗಾಕಾರಂ" (ಶಬ್ದಮಂ. ೭೨). ೨. ಬಗೆ ; ಪ್ರಕಾರ ; ರೀತಿ : "ಪಾಂಗುಂ ಪ್ರಕಾರಾಹ್ವಯಂ" (ಕರ್ಣಾನಿ. ೬೪) ; ಇರುಳುಂ ಪಗಲುಂ ಪಲವುದಿವಸಮೊಂದೆ ಪಾಂಗಿನೊಳ್ ಪ್ರಳಾಪಿಸಿ (ವಡ್ಡಾರಾ. ೦೦೬-೧೦); ಈ ಮೀಂಗಳನಾವ ಪಾಂಗಿನೊಳ್ ನಾಂ ತಿಂಬೆಂ (ಪಂಪತಂ. ೬೩-೯) ; ಲೋಕದೊಳಿನ್ನೀ ಪಾಂಗಿಂ ತಪದೊಳಿಸಗುವನ್ನರುಮೊಳರೇ (ರರ್ಮಾಮ್ಯ. ೨-೨೦೬) ; ಹೆಂಗಳ ರೂಪು ಗಂಡರಿಗೆ ಗಂಡರ ರೂಪು ಹೆಂಗಳ ಸೋಲಿಪುದೆಂಬ ಪಾಂಗಲ್ಲವವನ ಚಿಲ್ವಿಕೆ (ಪರಸ. ೧-೩೦). ೩. ಸರಿ; ಸಾಟಿ : "ಪಾಂಗೆಂದು ಗೆತ್ತೆಂದು ಸದೃಶಭಾವಂ" (ಕಶಸಾ. ೫೯-೨೯೪) ; ಒಂಬತ್ತುಂ ರನ್ನದ ನುಣ್ಣದಿರ್ ನೆಗೆದು ನೀಳ್ದೊಂದೊಂದಱೊಳ್ ಕೂಡಿ ಮೆಯ್ವೆತ್ತಿರ್ದಿಂದಿರವಿಲ್ಲ ಪಾಂಗನೆನಸುಂ ಬಾಂಬಟ್ಟೆಯೊಳ್ ಬೀಱಿ ಕಣ್ಗೆತ್ತಂ ಸೋಲಮನೀವ ರನ್ನವಸರಂ ಚಿಲ್ವಾದುದು (ಕಬ್ಬಿಕಾ. ೩೬); ಸೊಗಯಿಸುತಿರ್ದರಂದು ಪೂಪಡಿಗವೆಣ್ಗಳು ಭಾವಕರ ಬಗೆಗೆ ಸಾರ್ಟ ಹಾಪಡಿಗವೆಣ್ಗಳ ಪಾಂಗನು (ಸೌಂದಪು. ೦೨-೩೦) ; ಸತ್ಯವಾಕ್ಯಂಗಳಂ ನುಡಿವಲ್ಲಿ ಸದ್ವಾಣಿ ನಿತ್ಯಹರ್ಷಾಂಗಿಯಪ್ಪುದಱಿಂದರುಂಧತಿಯ ಪಾಂಗು (ಶಾಪಸಂ. ೨-೦೭). ೪. ಎಡೆ ; ಅನುವು; ಆಸ್ಪದ: ಬೆಡಂಗಿಂಗೆ ಪಾಂಗಾದ ದೇಸಿಗಂ . . . ಸೌಂದರ್ಯಕ್ಕೆ ನೆಲೆಯಾದಂದಕ್ಕಂ ಬೆಕ್ಕಸಂಬಟ್ಟು (ಶಾಂತಿಪು. ೩-೫೩ನ) ; ಸಂಗತಮಣಿರುಚಿಯಂ ಜಿನಪುಂಗವನಡಿಗೆಱಗುವೆಡೆಯೊಳಿನಿಸಿನಿ ಸಱಿಯಲ್ ಪಾಂಗಾದುದು ಸುರಗಿರಿಕೂಟಂಗಳುಮಂ ಪ್ರಣತಸುರಕಿರೀಟಂಗಳುಮಂ (ಅಜಪು. ೫-೫). ೫. ಅಂದ ; ಸೊಗಸು ; ಚೆಲುವು : ಬರ್ಪ ಪಾಂಗಗುರ್ವಾಗಿರೆ ಚಿಲ್ವನಾಯ್ತರಬೊಜಂಗರ ಲೀಲೆ ಸುರೇಂದ್ರಲೀಲೆಯಿಂ (ಪಂಪಶಾ. ೪-೬೭); ದರಹಾಸಂ ಭ್ರೂವಿಳಾಸಂ ನೆಗೞೆ ನಡುಗೆ ಮಧ್ಯಂ ಸ್ತನಾಭೋಗಬಾಧ್ಯಂ ಸ್ಫುರಿತಾಂಗಂ ಬೀಱೆ ಪಾಂಗಂ ನೆರೆದುಮರುನಿತಂಬಂ ಪುರಸ್ತ್ರೀಕದಂಬಂ (ಜಗವಿ. ೦೬-೭೮) ; ಪಾಂಗು ಬೆಡಂಗು ಭಂಗಿ ಸುಗಳಿಸೆ ಸುಕಂಠೆ ಪಾಡಿ ಪುದಿದಳ್ ಮುದಮಂ ನರನಾಘಚಿತ್ತದೊಳ್ (ಕುಸುಮಾ. ೦-೩೭). ೬. ಕ್ರಮವಾದುದು ; ಅನುಕೂಲವಾದುದು ; ಯೋಗ್ಯವಾದುದು : ವಿಜಯಾರ್ಧಾದ್ರಿಯನೆಯ್ದಿ ತತ್ಕಟಕದೊಳ್ ಬೀಡಿಂಗೆ ಪಾಂಗಾಗೆ ತದ್ವಿಜಯಶ್ರೀಕಟಕೋಪಮಂ ಕಟಕಮಣ್ಮುಟ್ಟಾಗೆ ಬಿಟ್ಟರ್ಪಿನಂ ವಿಜಯಾರ್ಧೇಂದ್ರಕುಮಾರನಾ ನಗದಧೀಶಂ ಬಂದು ಕಂಡಂ (ಶಾಂತಿಪು. ೦೦-೨೯). 'ಪಾಂಗಱಿ', 'ಪಾಂಗುವೆಱು' ಪರಾ. ೭. ಸಂಬಂಧ; ಹೊಂದಾಣಿಕೆ : ಬೂದಿ ಜೆಡೆ ಲಕ್ಕಣಂ ತಪಕಾದುವೆರಟ್ಟೊಣೆ ಶರಾಸನಂ ಕವಚಮಿವೆಂತಾದುವೊ ಮುತ್ತುಂ ಮೆಱಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ (ಪಂಪಶಾ. ೭-೯೨); ಕಱಿವೂವಾಗಲೊಡಂ ಪುಟ್ಟಱಿ ದೊರ್ಮೆಯೆ ಪಾಱಿ ಪೋಪ ಕಂಪಿನ ತೆಱದಿಂ ಕಱಕುಟಮಾದೊಡಲಿಂ ಪಾಂಗುಱಿಯದೆ ಪಱಿಪಟ್ಟು ಪೋದುದಸು ಮುನಿಪತಿಯಾ (ಪರ್ಶಮಾ. ೦೦-೫೯). [ದೇ. ॥ ತಮಿ. ಪಾಙ್ಕು ; ಮಲ. ಪಾಙ್ಗು, ಪಾಙ್ಗು]

ಪಾಂಗು$_2$ 'ಪಾಗು$_1$' ನೋ.

ಪಾಂಗುವಡೆ (ಕ್ರಿ). ಅಂದವನ್ನು ಪಡೆ ; ಚೆಲುವಾಗು : ಮುತ್ತಿನ ಸೂಸಕವ ಸೇರಿಸಿದಳೊರ್ವ ಲಲಿತಾಂಗಿ ಪಾಂಗುವಡೆಯೆ (ಸೌಂದಪು. ೦೩-೩೭).

[ಪಾಂಗು$_1$ + ಪಡೆ$_1$]

ಪಾಂಗುವೆಱು (ಕ್ರಿ). ಕ್ರಮಬದ್ಧವಾಗು : ಅಸದೃಶಮೆನೆ ಮುನ್ನಂ ಶಬ್ದಶಾಸ್ತ್ರಾದಿ ವಿದ್ಯಾವಿಸರಮನುಚಿತಾಳಾಪಂಗಳಿಂ ಪಾಂಗುವೆತ್ತೋದಿಸಿದೆಂ (ಸುಕುಮಾ. ೭-೪೭). [ಪಾಂಗು$_1$ + ಪೆಱು$_1$]

ಪಾಂಚಜನ್ಯ (ನಾ). ೧. ಕೃಷ್ಣನ ಶಂಖ ; P 'ಪಂಚಜನ' ಎಂಬ ರಾಕ್ಷಸನ ಮೂಳೆಗಳಿಂದ ಮಾಡಿದ ಶಂಖ : "ನಾರಾಯಣನ . . . ಶಂಖಮಂ ಪಾಂಚಜನ್ಯಮೆಂಬುದು" (ಹಶಾಯು. ೭೬-೨೭); ಇಕ್ಕಿ ಪಂಚಜನನಂ ತತ್ಪಂಚಜನಾಸ್ಥಿಜನಿತಮಂ ಪಾಂಚಜನ್ಯಶಂಖಮನುಪೇಂದ್ರನೀಟ್ಕೊಂಡೊಲವಿಂ (ಜಗವಿ. ೭-೨೩) ; ಮುರವಿಜಯ ನಿಜಪಾಂಚಜನ್ಯವನಿರದ ಫಲುಗುಣ ದೇವದತ್ತಸ್ಫುರಿತರವವನು ರಚಿಸಿದನು (ಕುಷ್ಠಾಪೀ. ೩-೨). ೨. ಕಶ್ಯಪ, ವಸಿಷ್ಠ, ಪ್ರಾಣ, ಆಂಗೀರಸ ಮತ್ತು ಚ್ಯವನ ಎಂಬ ಐದುಜನ ಋಷಿಗಳು ಮತ್ತು ಅವರಿಂದ ಪ್ರವೃತ್ತವಾದ ಐದು ಕುಲಗಳು. ೩. ಬೆಂಕಿ ; ಅಗ್ನಿ. ೪. ಚಂದ್ರ. ೫. ಮರ ; ವೃಕ್ಷ : "ಅನಲ ಹಿಮಾಂಶು ಶಂಖ ಕುಲಭೇದಗಳಿಂತಿವು ಪಾಂಚಜನ್ಯಮೆಂದೆನಿಕು" (ಪಾಪಾರ. ೬೬). ೬. ಒಂದು ಬಗೆಯ ಹುಲ್ಲು ; ಜಂಬುಹುಲ್ಲು. ೭. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಪಂಚವ್ರತ ಇಂದ್ರಿಯ . . . ಹರವಕ್ತ ಪಾಂಚಜನ್ಯ

ಶುಕ್ಲ—ಇಂತಿನಿತುಂ ೫ಕ್ಕೆ ಹೆಸರು (ಸ್ವಪಹಾ. ೧೦-೨೩). "ಅಗ್ನಿ ಕುಜಂ ದ್ವಿಜರಾಜಂ ಶಂಖಂ ತಾಂ ನಿಜವೈದಱ ಲೆಖ್ಖ ಪಾಂಚಜನ್ಯಮೆನಿಕ್ಕುಂ" (ವಾಷಾಕಂ. ೯೮). [ಸಂ.]

ಪಾಂಚಭೌತಿಕ (ಗು). ೧. ಪಂಚಭೂತಗಳಿಂದಾದ ; ಪ್ರಾಕೃತಿಕವಾದ ; ಜಡಪ್ರಕೃತಿಯ : ವ್ಯಕ್ತಸ್ಥಿತಿಗೆ ಹೇತುಭೂತವಾದ ಪಾಂಚಭೌತಿಕ ಶರೀರತ್ಯಾಗವೇ ಸಾವು (ಶಾರದ. ೧೦೪). (ನಾ). ೨. ಪಂಚಭೂತಗಳಿಂದಾದುದು ; ಪ್ರಾಕೃತಿಕವಾದುದು : ದಶಾವತಾರರೂಪಗಳು ಅಜ್ಞರ ದೃಷ್ಟಿಗೆ ಪಾಂಚಭೌತಿಕವಾಗಿ ತೋರುತ್ತಿದ್ದರೂ ಪ್ರಾಜ್ಞರ ದೃಷ್ಟಿಗೆ ಜ್ಞಾನಾನಂದಮಯವಾಗಿಯೇ ತೋರುವುವು (ಹಿಂದಸಾ. ೨೮೩). [ಸಂ.]

ಪಾಂಚರಾತ (ನಾ). ೧. ವೈಷ್ಣವಾಗಮಗಳಲ್ಲಿ ಒಂದು ; P ವಾಸಿಷ್ಠ, ನಾರದೀಯ, ಕಾಪಿಲ, ಗೌತಮೀಯಕ, ಸನತ್ಕುಮಾರೀಯ ಎಂಬ ಐದು ವಿಧ ಜ್ಞಾನಗಳನ್ನು ಉಪದೇಶಿಸುವ ಒಂದು ತತ್ವಶಾಸ್ತ್ರ : ಪಾಂಚರಾತ್ರ ಮೊದಲಾದ ಕೆಲವು ಆಗಮಗಳು ವೇದಾಂತವಿರುದ್ಧವಲ್ಲವೆಂದು ಕೆಲವರಿಂದ ಪರಿಗ್ರಹಿಸಲ್ಪಟ್ಟಿರುವುವು (ಹಿಂದಸಾ. ೯೪) ; ಶ್ರೀಪಾಂಚರಾತ್ರಾಗಮವು ಅನಂತ, ಗರುಡ, ವಿಷ್ವಕ್ಸೇನ, ಬ್ರಹ್ಮ, ಇಂದ್ರರೆಂಬ ಐದು ದೇವತೆಗಳಿಗೆ ಐದು ರಾತ್ರಿಗಳಲ್ಲಿ ಭಗವನ್ಮುಖದಿಂದ ಉಪದಿಷ್ಟವಾಗಿ ಅನ್ವರ್ಥವಾಗಿದೆ (ಶಾರದ. ೭೬). 'ಪಂಚರಾತ್ರ' ಪರಾ. ೨. ಪಾಂಚರಾತ್ರಾಗಮವನ್ನು ಅನುಸರಿಸುವ ವೈಷ್ಣವಪಂಗಡ ಮತ್ತು ಅದರ ಸಂಪ್ರದಾಯ. [ಸಂ.]

ಪಾಂಚರಾತ್ರಿಕ (ನಾ). ವೈಷ್ಣವ ಪಂಗಡದವನು ; ಪಾಂಚರಾತ್ರ ಸಂಪ್ರದಾಯದ ಅನುಯಾಯಿ : ಪಾಷಂಡಿಗಳು ಮಹಾಕ್ರೂರರಹ ಪಾಂಚರಾತ್ರಿಕರಾಗಿರೇಯೆಂದು ಗೌತಮಂ ಶಾಪವಿತ್ತಂ (ವೀಶ್ಶಪು. ೪-೨-೨೫). [ಸಂ.]

ಪಾಂಚವಾರ್ಷಿಕ (ಗು). ೧. ಐದು ವರ್ಷ ವಯಸ್ಸಾದ. ೨. ಐದು ವರ್ಷಗಳ ಅವಧಿಗೆ ಸಂಬಂಧಿಸಿದ : 'ಪಾಂಚವಾರ್ಷಿಕಯೋಜನೆ' ಪರಾ. [ಸಂ.]

ಪಾಂಚವಾರ್ಷಿಕಯೋಜನೆ (ನಾ). ವ್ಯವಸ್ಥಿತವಾಗಿ ಮಾಡಬೇಕಾದ ಕಾರ್ಯಗಳ ರೂಪರೇಷೆಯ ವಿಧಾನಗಳನ್ನು ಐದು ವರ್ಷಗಳಿಗೊಮ್ಮೆ ಮುಂಚಿತವಾಗಿ ರೂಪಿಸಿಕೊಳ್ಳುವುದು : ಭಾರತದ ಮೊದಲನೆಯ ಪಾಂಚವಾರ್ಷಿಕಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯವಿತ್ತು (ರೂಢಿ). 'ಪಂಚವಾರ್ಷಿಕಯೋಜನೆ' ಪರಾ.

[ಪಾಂಚವಾರ್ಷಿಕ + ಯೋಜನೆ]

ಪಾಂಚಾಲ, ಪಾಂಚಾಳ (ಗು). ೧. ಪಾಂಚಾಲದೇಶಕ್ಕೆ ಸಂಬಂಧಿಸಿದ : ಮುತ್ತಿಗೆ ತೆಗೆಸಿದರು ಪಾಂಚಾಲನಾಯಕರು (ಕುಪ್ಯಾಆ. ೧೫-೪೪). (ನಾ). ೨. ಒಂದು ದೇಶದ ಹೆಸರು : ಲಾಳ ಮಾಳವ . . . ಪಾಂಚಾಲಮತ್ಸ್ಯಕುರಂಗವಂಗಕಳಿಂಗಬಂಗಾಳ (ಬಸಪು. ೬-೧೮). ೩. ಪಾಂಚಾಲದೇಶದ ಅರಸು : ಮರುಳೆ ಪಾಂಚಾಲನ ಕುಮಾರಿಯ ವರಕಟಾಕ್ಷದ ಬೀಸುವಲೆಯಲಿ . . . ಧರಣಿಪಾಲಮೃಗಂಗಳನು ಸಲೆ ಬರಿಸಿಸದೆದನು (ಕುಪ್ಯಾಆ. ೧೪-೧೮) ; ಬಂಗಾಳ ಬಾಹ್ಲೀಕ ಘೋಟ ಪರಪಾಂಚಾಲ . . . ಧರಣೀಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ (ತೊರಶಾ. ೦-೭-೧೮). ೪. ಉಪ್ಪಾರ : ಕಲ್ಲಾನೆ ಕುಟುಕೋರು ಚೀಣೂರು ಪಾಂಚಾಲ್ರು ಚಿನ್ನಾದಾ ಉಳಿಯಾ ಮಸಕೊಂಡು ರಂಗಯ್ನ ಕಲ್ಲುಮಾಳಿಗೆ ಕಡದಾರೋ (ಹುಟ್ಟಿಹ. ೫೦). ೫. ಮರಗೆಲಸ ಮಾಡುವವನು ; ಬಡಗಿ : ಪಾಂಚಾಲರಿಗೆ ಆಚಾರಿ ಎಂದೂ . . . ಹಳೆಪೈಕರಲ್ಲಿ ಪೂಜಾರಿ ಎಂದೂ . . . ಕೌಟುಂಬಿಕ ಹೆಸರುಗಳಿವೆ (ತುಳುವಾ. ೦೮೪). ೬. = ಪಾಂಚಾಲಿ ೪ : ದ್ವಿತ್ರಿಪದರಚಿತವೃತ್ತಿ ವಿಚಿತ್ರೌಪಮ್ಯಾದ್ಯಲಂಕ್ರಿಯಾಸಮೇತಂ ಶ್ರೋತ್ರಸುಖಲಲಿತಮೃದುಪದ ಪಾತ್ರಂ ಪಾಂಚಾಲರೀತಿಯೆನೆ ಪೆಸರ್ವಡೆಗುಂ (ಕಾವ್ಯಾವ. ೭೮೪). **ಪಾಂಚಾಳ** : ೧. ಪಾಂಚಾಳೋತ್ತಮಮಾಹೇಂದ್ರನಗರದಿಂದಂ ಬಂದೆಂ (ವೇಮಪು. ೯-೬೮). ೨. ಪಾಂಚಾಳ ಗಂಗಾತಟಾಂತರ ಕೌಶಾಂಬಿ . . . ಮತ್ಸ್ಯದೇಶಕ್ಕೆ ತಸ್ಕರರೋಗಾದಿ ಭಯಂಗಳಂ ಜನಿಯಿಕುಂ (ಅಟ್ಟಿಮ. ೧೨-೭೦). ೭. ಪಂಚಕಾರುಕರು ; P ಉಪ್ಪಾರ, ಕಮ್ಮಾರ, ಬಡಗಿ, ಕಂಚುಗಾರ ಮತ್ತು ಸೊನ್ನಾರರೆಂಬ ಐದು ಶಾಖೆಗಳಿಗೆ ಪಾಂಚಾಳರೆಂಬ ಹೆಸರು ಇರುವುದು ; ಬಡಗಿ, ನೇತಾರ, ಕೆಲಸಿಗ, ಅಗಸ ಮತ್ತು ಸಮಗಾರ ಎಂಬ ಐದು ವರ್ಗಗಳಿಗೂ ಇದೇ ಹೆಸರುಂಟು : ಹೆಸರಿಸಿದ ಪಾಂಚಾಳ ಚಿಪ್ಪಿಗ ಕುಶಲಕಾರ್ಯದ ಶಿಲ್ಪಿಕ . . . ಮುಚ್ಚಿಗರೆಸವ ವೀಧಿಗಳೊಳಗೆ ಬರುತಿರ್ದನು ದಶಗ್ರೀವ (ಮೈಶಾಕಾ. ೨-೩೦). [ಸಂ.]

ಪಾಂಚಾಲಿ (ನಾ). ೧. ಪಾಂಚಾಲದೇಶದ ಹೆಂಗಸು. ೨. ಪಾಂಚಾಲದೇಶದ ರಾಜಪುತ್ರಿ ; ದ್ರೌಪದಿ : ಪಾಂಚಾಲಿಯುಂ ಗಂಧದಾಯಕಿಯಾಗಿರ್ಪಿನಮಂದು ಮತ್ಸ್ಯಗೃಹದಿಂದೀ ನಿಗ್ರಹಂ ಪೊಲ್ಲದೇ (ಗರಾಯು. ೩-೩೪) ; ಪಾಂಚಾಲಿಯ ಮನೋರಥಶಾಲೆಯಲಿ ಸಾರಿದರಲ್ಲೆ ಸಭೆಯಲಿ ಮಹೀಸುರರ (ಕುಪ್ಯಾಆ. ೧೫-೧) ; ಪಾಂಚಾಲಿ . . . ಸಲಹೆಂದು ಹರಿಚರಣಕೆಱಗಿದಳು (ಕೈಮಭಾ. ೨-೫೦). ೩. ಗೊಂಬೆ ; ಪುತ್ತಳಿ. ೪. [ಕಾವ್ಯಮೀ] ಕಾವ್ಯದ ರೀತಿಗಳಲ್ಲಿ ಒಂದು : ಗೌಡಿ ವೈದರ್ಭಿ ಪಾಂಚಾಲಿಯೆಂಬ ರೀತಿತ್ರಯಂಗೂಡಿ (ಎವೇಕ. ೨೭೬) ; ವಾಮನನು . . . ಓಜಸ್ಸು ಮತ್ತು ಕಾಂತಿಗಳುಳ್ಳದ್ದು ಗೌಡಿಯೆಂದೂ ಮಾಧುರ್ಯ ಸೌಕುಮಾರ್ಯಗಳುಳ್ಳದ್ದು ಪಾಂಚಾಲಿಯೆಂದೂ ಹೇಳುತ್ತಾನೆ (ಕೈಪಿಡಿ. ೨೨೨). ೫. [ನಾಟ್ಯ] ನಾಲ್ಕು ಬಗೆಯ ವೃತ್ತಿಗಳಲ್ಲಿ ಒಂದು : ಮನಾವತಿಯುಂ ದಾಕ್ಷಿಣಾತ್ಯೆಯುಂ ಪಾಂಚಾಲಿಯುಂ ಮಾದ್ರಮಾಗಧಿಯುಮೆಂಬ ನಾಲ್ಕುಂ ವೃತ್ತಿಯುಮುಂ . . . ಪಾತ್ರಸಂಕ್ರಮಣದೊಳ್ ನೆಱೆಯೆ ತೋಱಿ (ಅಪಪು. ೫-೨೮ ವ). [ಸಂ. ಪಾಂಚಾಲೀ]

ಪಾಂಚಾಲಿಕೆ, ಪಾಂಚಾಳಿಕೆ (ನಾ). ೧. ಗೊಂಬೆ ; ಪುತ್ತಳಿ : ಚಿಂತಾಮಣಿಯನು ರತ್ನಪಾಂಚಾಲಿಕೆಸಂತಾನವನು ದಿವ್ಯಭೂಮಿ ಎಂತು ಪಡೆವುದಂತೆ ಜೈನಕುಮಾರನಾ ಕಾಂತೆ ಪೆತ್ತಳು ಭೂಮಿ ನಲಿಯೆ (ವರ್ಧಕ. ೧೦-೮೧). ೨. ದ್ರೌಪದಿ. ೧, ೨ : ಆ ಮಂಟಪಂ . . . ಪಾಂಚಾಲಿಕೋದಂಚಿತಮಾಗಿಯುಂ ಕಲಶಜಾತಸಮನ್ವಿತಮುಂ . . . ಎನಿಸಿರ್ಮದು (ರಾಜಶೇ. ೮-೮ ವ). ೩. = ಪಾಂಚಾಲಿ ೪ : "ಪಾಂಚಾಲಿಕಾ" ಬಂಗಾಲದ ಒಂದು ಕಾವ್ಯಪ್ರಕಾರ (ಇಪ್ಪಕ. ೧೬೨ ಅಡಿಟಿ). **ಪಾಂಚಾಳಿಕೆ** : ೧. "ಚೀಲ ಶಿಲಾದಿಕೃತಂ ಪಾಂಚಾಳಿಕೆ ತಾನಕ್ಕುಮೆಸೆವ ಪುತ್ರಿಕೆ" (ವಸ್ತುಕೋ. ೫೧-೩೮) ; ಸೂರ್ಯನೋ ಕಲಶಮೋ ದಿಗ್ಭಿತ್ತಿಯೋ ಭಿತ್ತಿಯೋ ದೊರೆವೆತ್ತಾ ದೆಸೆವೆಣ್ಗಳೋ ಪರಿಲಸತ್ಪಾಂಚಾಳಿಕಾಜಾಳವೋ ಪಿರಿದುಂ ನಿಟ್ಟಿಸಬಾರದೆಂದೆನೆ ಜನಂ (ಎಕ. XI, ರಾವಣ. ೨೫-೭೧; 1224). ೩. ಕಾರುಣ್ಯಂ ಹಾಸ್ಯಂ ಶೃಂಗಾರಮಿವಿನಿತಱೊಳಮಕ್ಕೆ ವೈದರ್ಭಿ ಮನೋಹಾರಿ ಪ್ರಳಯಾದ್ಭುತರಸ ವೀರರಸಂಗಳ್ಗೆ ಪೇಟ್ಗೆ ಪಾಂಚಾಳಿಕೆಯಂ (ಕಾವ್ಯಾವ. ೭೮೮). [ಸಂ. ಪಾಂಚಾಲಿಕಾ]

ಪಾಂಚಾಲೆ (ನಾ). ದ್ರೌಪದಿ : ಪಾಂಚಾಲೆ ಪೊಕ್ಕಳು ಭದ್ರಮಂಟಪ ಶಾಲೆಯನು ಮರಳಿದುದು ಮನ್ಮಥನೊಡ್ಡು ಸತಿಯೊಡನೆ (ಕುಪ್ಯಾಆ. ೧೪-೧) : ದೇವ ನೀನಂದು ಗಾಂಡೀವಮಂ ತನಗಿತ್ತೆ ಭಾವಿಸಲ್ ಪಾಂಚಾಲೆ ನಿನ್ನೊಳುದ್ಭವಿಸಿದಳ್ ನಾವು ಲೋಗರೆ ನಿನಗೆ (ಕೈಮಭಾ. ೮-೪೩).

[ಸಂ. ಪಾಂಚಾಲಾ]

ಪಾಂಚಾಳ 'ಪಾಂಚಾಲ' ನೋ.

ಪಾಂಚಾಳಿಕೆ 'ಪಾಂಚಾಲಿಕೆ' ನೋ.

ಪಾಂಜ (ನಾ). (ಕರಾ) ಒಂದು ಬಗೆಯ ಹಾರಾಡುವ ಅಳಿಲು : "ಪಾಂಜ ಎಂದರೆ ಪಾರಂಬೆಕ್ಕು." . . . ಒಂದು ಜಾತಿಯ ಹಾರಾಡುವ ಅಳಿಲು. ನೀವು ಕಾಡಲ್ಲಿ ಕೆಂಚಳಿಲನ್ನು ನೋಡಿಲ್ಲವೆ ? ಇದೂ ಅದೇ ಜಾತಿಯದು (ಕಟ್ಟಿಸೇ. ೫೬).

[←ತುಳು. ಪಾಂಚ = ಒಂದು ಬಗೆಯ ಕಾಡುಬೆಕ್ಕು]

ಪಾಂಜರಪೋಳ, ಪಿಂಜರಾಪೋಲು (ನಾ). ೧. ವಯಸ್ಸಾಗಿ ನಿಃಶಕ್ತವಾದ ಅಥವಾ ಅಂಗಹೀನವಾದ ದನಗಳನ್ನು ಮುಫತ್ತಾಗಿ ನೋಡಿಕೊಳ್ಳುವ ಸ್ಥಳ ; ಧರ್ಮಾರ್ಥಗೋಶಾಲೆ : ಇತ್ತರನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋಗಿ ಯಾವುದಾದರೊಂದು ಪಾಂಜರಪೋಳ(ಧರ್ಮಾರ್ಥ ದನದ ಹಕ್ಕೆ)ದಲ್ಲಿ ಬಿಟ್ಟು ಬರಬೇಕೆಂಬ ರೊಚ್ಚು ಒಮ್ಮೊಮ್ಮೆ ಉಕ್ಕಿ ಬರುತ್ತದೆ (ಬೇಕಸ್ಥ. ೦೦೦) ; ನೂರಾರು ದನಗಳಿರುವ ಪಾಂಜರಪೋಳಗಳಲ್ಲಿಯೂ ಡೇರಿಫಾರ್ಮುಗಳಲ್ಲಿಯೂ ೩ನೆಯ ೪ನೆಯ ಯಂತ್ರ ಇಟ್ಟರೆ ಅನುಕೂಲವಾಗುವುದು (ಗೋಗ್ರಾಸ. ೫೯). **ಪಿಂಜರಾಪೋಲು** : ೨. (ಆಲಂ) ಮುದುಂಕರು ಮಾತ್ರ ಅಧಿಕಾರದಲ್ಲಿರುವ ವ್ಯವಸ್ಥೆ : ಆ ಕಚೇರಿ ಒಂದು ಪಿಂಜರಾಪೋಲು. ಬರೀ ಮುದುಕರೇ ತುಂಬಿದ್ದಾರೆ (ಕೂಡಿ).

[←ಹಿಂ. ಪಿಂಜರಾಪೋಲ್ ; ಮರಾ. ಪಾಂಜರಪೋಳ, ಪಾಂಜರಾಪೋಳ, ಪಿಂಜರಾಪೋಳ ; ಗುಜ. ಪಿಂಜರಾಪೋಳ, ಪಿಂಜರಾಪೋಲು]

ಪಾಂಟ (ನಾ). ಮಂತ್ರಪೂತವಾದ ದ್ರವ (?) : ಚನ್ನಬಸವಗೆ ಬಸವ ಪಾಂಟದಿಂ ಗುರುವಾಗಿ ಸುಜ್ಞಾನಬೋಧೆಯಂ ಉಂಟುಮಾಡೆನಲ್ (ಪ್ರಶುಪು. ೭-೩೫) ; ಎಂಟುಧೀರರನೆಂಟುಪುಷ್ಪರದ ಮೇಲಿಟ್ಟು ಪಾಂಟದಿಂ ಕೈಲಾಸಕೊಯ್ದ ಪರಶಿವನಿವಂ (ಪ್ರಶುಪು. ೭-೦೪೮). [<ಸಂ. ಘಾಂಟ]

ಪಾಂಟತ್ವ (ನಾ). ಮಂತ್ರಪೂತವಾದ ದ್ರವದ ಗುಣ (?) : ಪಾಂಟತ್ವದಿಂದೆ ಪರಿಪರಿಯ ಶಾಖಾದಿಗಳ ನಾಂಟಿ . . . ರಾಜಿಸುವರಲ್ಲಿಪ್ಪ ಜನಪದಗಳು (ಪ್ರಶುಪು. ೩-೨೦) : ಸ್ವರ್ಗದೊಳಗೆ ದೇವೇಂದ್ರನು ಪಾಂಟತ್ವದಿಂದೆ ನಮುಚಿಯ ಕೊಂದು ಶ್ರೇಷ್ಠನಾಗಿರಲು (ಪ್ರಶುಪು. ೫-೭೪).

[ಪಾಂಟ + —ತ್ವ]

ಪಾಂಟಿಮತ ? (ನಾ). (?) : ಮತ್ತರು ಡಂಗೆಗೊಂಡು ಬಡಿಯಲ್ ಚಲದಿಂದೆನಸುಂ ದುರಾಗ್ರಹಂ ಚಿತ್ತದೊಳಾಗೆ ನಿನ್ನ ಬಟಿಯಂ ಬರಲೀ ಮುಳಿಸೇಂ ಟಮಾಳದಿಂ ಸುತ್ತುವರ್ಗಲ್ಲದೊಲ್ಲೆ ಬಿಡು ನೀನೆನಗಿಲ್ಲಳ ಪೂಱಿ ತೋಱಿ ಪೇಟುತ್ತಿರಲಾಸೆಯಂ ಬಿಸುಟು ನೀಂ ಕಳೆ ಪಾಂಟಿಮತಕ್ಕೆ [ಪಾಠಾಂ. ಕಳೆ ಪಾಂಡಿಮಕಕ್ಕೆ, ಕಟಿ ಪಾಂಟಿಮತಕ್ಕೆ] ಸೈರಿಸೆಂ (ಕಾಸ್ಯಾಪ. ೪೫೦)

[?]

ಪಾಂಡಪ್ಪ (ನಾ). ಒಬ್ಬಾತನ ಹೆಸರು : ಕಮ್ಮಿಲಿಗೆ ಪಡೆವೋದಲ್ಲಿ ಕೊಮಾಲರಾ ಮಗನ್ಪಾಣ್ಡಪ್ಪನ್ ಕಾಳೆಗದುಳ್ಸತ್ತಲ್ಲಿ (ಎಕ. X. ಮುಳಬಾ. ೨೫೫-೮; 750). [ಪಾಂಡು₁ + ಅಪ್ಪ₁]

ಪಾಂಡರ (ಗು). ೧. ಬಿಳಿಯ ಛಾಯೆಯ ; ಬಿಳಿಬಣ್ಣದ : ಋತುವರ್ಣಕ್ರಮದಿಂದವೊಂದಿದ ದಿನಂ ನೀಲಾಭದಿಂ ಸ್ನಿಗ್ಧಮಚ್ಛಕರಂ ಪಾಂಡರವಾಗಿ ಕಣ್ಗೆಸೆಯೆ ಮೇಣ್ ಬೆಳ್ಳಾಗೆ ವೈಡೂರ್ಯದಾಕೃತಿಯಿಂ ತತ್ಪ್ರತಿಸೂರ್ಯನಲ್ಲಿ ಶುಭದಂ (ರೋಕೋಪ. ೪-೩೬). ೨. ಬಣ್ಣಗುಂದಿದ ; ಪೇಲವವಾದ. (ನಾ). ೩. ಬಿಳುಪಾದುದು; ಬಿಳಿದು : "ಗೌರಃ . . . ಅವದಾತಃ. ಪಾಂಡರ :—ಈ ೧೨ ಬಿಳಿದು" (ಹಲಾಯು. ೦೨೦-೪೭). ೪. ಬಿಳಿಬಟ್ಟೆಯನ್ನು ಧರಿಸಿದ ಭಿಕ್ಷು. ೫. ಕಾವಿಕಲ್ಲು ; ಗೈರಿಕಧಾತು.

[ಸಂ.]

ಪಾಂಡರಂಗಪಲ್ಲಿ (ನಾ). ಒಂದು ಊರಿನ ಹೆಸರು : ಮಹಾದೇವಗಿರೇಃ ಪೂರ್ವತ ಅನೇವಂ ಚಾಲಕನ್ದಕ ದುದ್ದಪಲ್ಲಿ ಸಹಿತಾ ಪಾಣ್ಡರಙ್ಗಪಲ್ಲೀ ಪ್ರತಿಪ(ಪಾ)ದಿತೇ . . . ಆಜ್ಞಾಪಯತೀತಿ (ಮೈಅರಿ. ೦೧೨೯, ೦೦೬-೦೯ ; ಸು. 516). [ಪಾಂಡರಂಗ₀ + ಪಲ್ಲಿ₂]

ಪಾಂಡವ (ನಾ). ೧. ಪಾಂಡುರಾಜನ ಮಗ ; P ಧರ್ಮರಾಯ, ಭೀಮ, ಅರ್ಜುನ, ನಕುಲ ಹಾಗೂ ಸಹದೇವ ಈ ಐವರಿಗೂ ಅಥವಾ ಈ ಐವರಲ್ಲಿ ಯಾರಿಗಾದರೂ ಈ ಹೆಸರು ಅನ್ವಯವಾಗುವುದು : "ಪಾಂಡವಂ ಧರ್ಮಜಂ ಯುಧಿಷ್ಠಿರನು ಧರ್ಮಪುತ್ರನೆಂಬೆನಿಕು" (ಮಂಗಠಾ. ೭೮-೩); ಆನೆಂಬುದನಿಂಬುಕೆಯ್ವೆಯಪ್ಪೊದೆ ಪಾಂಡವರ ನೊಡಂಬಡಿಸಿ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆದಂತು ಮಾಟ್ಪೆಂ (ಗದಾಯು. ೫-೪೪ ಪ) ; ಪಾಂಡವರಾಜಿಯೊಳೆನ್ನಂ ಕಂಡಾಂಪವರೊಳರೆ (ಪೇಮಿಪು. ೦೨-೦೪೪) ; ನೀವು ಸುಖದಲಿ ಪಾಂಡವರನು ಜ್ಜೀವಿಸುವುದೆಮಗುಳಿದ ಯದುಭೂಪಾವಳಿಯ ಕೃಪೆ ಮಾಡಬೇಕು (ಕುಸ್ಯಾಕಾ. ೦-೩೫). ೨. ಬಿಳಿಯ ಹಕ್ಕಿ ; ಬೆಳ್ಳಕ್ಕಿ. ೩. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಶರ ಬಾಣ ವಿಷಯ ಪಾಂಡವ ಪುರವೈರಿಮುಖಂಗಳೈದಱ ನಾಮಂ (ವೃಪಹಾ. ೯-೦೯).

ಪಾಂಡವರ ಪೂಜೆ = ದೀಪಾವಳಿಯಲ್ಲಿ ಪಾಂಡವರ ಗುರುತಾಗಿ ಸಗಣಿ ಬೆನಕಗಳನ್ನು ಇಟ್ಟು ಮಾಡುವ ಪೂಜೆ; P "ಪಾಂಡವರು ಅಜ್ಞಾತವಾಸವನ್ನು ಮುಗಿಸಿ ಕೌರವರ ಕಣ್ಣಿಗೆ ಕಂಡುದು ಬಲಿಪ್ರತಿಪದೆಯ ದಿವಸವೇ. ಪಾಂಡವರು ಪುಣ್ಯಪುರುಷರು. ಅವರ ಕುರುಹುಗಳನ್ನೂ ಮಾಡಿ ಈ ದಿವಸ ಪೂಜಿಸುವುದುಂಟು" (ಶಾಪ್ತಾ. ೦೪೮) : ಪಾಂಡವರ ಪೂಜೆಯನ್ನು ದೀಪಾವಳಿಯಲ್ಲಿ ಮಾಡುತ್ತಾರೆ (ಕೂಡಿ). **ಪಾಂಡವರ ಹಬ್ಬ** = ದೀಪಾವಳಿಯಲ್ಲಿ ಪಾಂಡವರ ಪ್ರತಿಮೆಗಳನ್ನು ಪೂಜಿಸಿ ಮಾಡುವ ಹಬ್ಬ : ಪರವ್ವ ಪ್ರತಿವರುಷವೂ 'ಪಾಂಡವರ ಹಬ್ಬ'ಕ್ಕೆ ತನ್ನ ಮಗಳನ್ನು ಕರೆಯಿಸಿಯೇ ಕರೆಯಿಸುತ್ತಾಳೆ (ಗಂಗಾಗೌ. ೬೪).

[ಸಂ.]

ಪಾಂಡವರ ಮದ್ದು (ನಾ). ಬಿಳಿನೈದಿಲೆಯ ಗಡ್ಡೆ : "ಪ್ರಪೌಂಡರೀಕಂ, ಪೌಂಡರ್ಯಂ—೨ ಪುಂಡರೀಕವೆಂಬುವ ಗ್ರಂಥ್ಯದ್ರವ್ಯದ ಹೆಸರುಗಳು. ಪೆಂಡಾರಗಡ್ಡೆ, ಪಾಂಡವರ ಮದ್ದು, ಇದು ಬಿಳೀನೈದಿಲೆಗಡ್ಡೆ" (ಸಿದ್ಧಾಂತಿ. ೦೪೦). [<ಪಾಂಡವ ? + ಮದ್ದು (<ಮರ್ದು)]

ಪಾಂಡವರ ಹರಿವೆ (ನಾ). ಒಂದು ಬಗೆಯ ಹರಿವೆಸೊಪ್ಪು : ಸುನಿಷಣ್ಣವು (ಪಾಂಡವರ ಹರಿವೆ) ಅಗ್ನಿವರ್ಧಕ (ಅಷ್ಟಾಂಗ. ೦೩೩-೭೦ ಅರ್ಥ) ; ಕುಟಿಂಜರ (ಪಾಂಡವರ ಹರಿವೆ) . . . ಜೇಷ್ಠಮಧು ಇವೆಲ್ಲ ಮಧುರ (ಅಷ್ಟಾಂಗ. ೦೩೬-೯೩ ಅರ್ಥ). [<ಪಾಂಡವ ? + ಹರಿವೆ₂ (<ಹಱುಹೆ)]

ಪಾಂಡವರಾಜಾನ್ನ (ನಾ). ಒಂದು ಬಗೆಯ ಧಾನ್ಯ : "ಮುನಿಧಾನ್ಯ—ಪಾಂಡವರಾಜಾನ್ನ" (ಓಷಧಿ. ೦೨೬). [ಪಾಂಡವ? + ರಾಜಾನ್ನ]

ಪಾಂಡಿ₁ (ನಾ). ೧. ಹೆಣ್ಣುಮಕ್ಕಳು ಆಡುವ ಒಂದು ಬಗೆಯ ಆಟ ; ನೆಲದ ಮೇಲೆ ಪಕ್ಕಪಕ್ಕದಲ್ಲಿ ನಾಲ್ಕು ನಾಲ್ಕರಂತೆ ಎಂಟು ಚಚ್ಚೌಕವಾದ ಮನೆಗಳನ್ನು ಬರೆದು. ಕಲ್ಲಿನ ಬಿಲ್ಲೆಯೊಂದನ್ನು ಕುಂಟುತ್ತಾ ಮನೆಯಿಂದ ಮನೆಗೆ ತಳ್ಳಿಕೊಂಡು ಹೋಗುವ ಆಟ ; ಕುಂಟಾಟ : ಪಾಂಡಿ ಆಡೋಣ ಬರ್ತೀಯಾ ? (ಕೂಡಿ). ೨. ಕುಂಟಾಟವನ್ನು ಆಡಲು ಬಳಸುವ ಚಪ್ಪಟೆಯಾದ ಕಲ್ಲು ; ಬಚ್ಚ : ನನ್ನ ಪಾಂಡೀನ ಎಷ್ಟು ಸಲ ಹಾಕಿದರೂ ಇನ್ನೂ ಒಂದೂ ಹಣ್ಣಾಗಲಿಲ್ಲ (ಕೂಡಿ). ೩. ಕುಂಟಾಟದಲ್ಲಿ ಗೆದ್ದ ನಂತರ ಹಣ್ಣಾದ ಮನೆಯನ್ನು ಸೂಚಿಸಲು ಹೇಳುವ ಮಾತು : ನಾನೇ ಗೆದ್ದೆ. ನನ್ನದು ಐದು ಪಾಂಡಿ ಆಯಿತು (ಕೂಡಿ). [←ತಮಿ. ಪಾಣ್ಟೆ]

ಪಾಂಡಿ₂ (ನಾ). ಒಂದು ಬಗೆಯ ದೋಣಿ,—ನಾವೆ: ಅವರ ಖಟಾಟೋಪವೇನಿದ್ದರೂ, ಅದು ಕಡಲಿಗಿಳಿದಾಗ, ಮಾರಿಬಲೆ ಎಳೆಯುವಾಗ, ಪಾಂಡಿಯಲ್ಲಿ

ಕುಳಿತು ಹುಟ್ಟುಹಾಕುವಾಗ—ಆಗಲೇ ಕಾಣಬೇಕು (ಜಾರುದಾ. ೩೨) : ಮರಕಾಲರಲ್ಲಿ ಹಲವರು ಪಾಂಡಿಗಳಲ್ಲಿ ಪರದೇಶದ ವ್ಯಾಪಾರ ಮಾಡಿ ಪಾಂಡಿ ಎಂಬ ಹೆಸರನ್ನು ಗಳಿಸಿಕೊಂಡಿದ್ದರು (ತುಳುನಾ. ೫೪).

[←ಮಲ. ಪಾಣ್ಡಿ]

ಪಾಂಡಿ₃ (ನಾ). ಒಂದು ಬಗೆಯ ಹುಲ್ಲು (?) : ಪುಣಿಸೂರ್ಪ್ಪೊಲ ನೆಲ್ಲು ಪಾಣ್ಡಿಯುವಳೆವದು (ಪ್ರೃಕಂ. ೧೯೩೦, ೩೬-೮; 800).

[?. / ತಮಿ. ಪಾಣ್ಪು. / ಸಂ. ಪಾಂಡು]

ಪಾಂಡಿತ್ಯ (ನಾ). ಅರಿವು ; ಜ್ಞಾನ : ದಶದಿಶೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಮಂ ಪಸರಿಸಿ . . . ತಾಯ್ತಂದೆಗಂ ಸಂತೋಸಂ ಮಾಡಿಯವರಂ ಬಿಡಿಸಿಯೊಡಂಬಡಿಸಿ ಬಂದೊಡೆ ತಪಮಂ ಕುಡಲಕ್ಕುಂ (ಪಡ್ಡಾರಾ. ೭೪-೧೫); ಈ ಸರಸಪಾಂಡಿತ್ಯವೀ ನಿರಹಂಕರಣಭಕ್ತಿ . . . ಈ ಘನತೆ ಆರಿಗುಂಟು (ಜಿನಪು. ೨-೩೦) ; ಈಗಿನ ಕಾಲದಲ್ಲಿ ಪಾಂಡಿತ್ಯವಿಲ್ಲದವರೆಷ್ಟೋ ಮಂದಿ ಪಂಡಿತೋತ್ತಮರೆಂದು ಬಿರುದಾಂಕಿತರಾಗಿದ್ದಾರೆ (ರಾಯಕ. ೩೮). [ಸಂ.]

ಪಾಂಡಿಮ (ಗು). ೧. ಬಿಳುಪಾದ ; ಬೆಳ್ಳಗಾದ : ಚಂದನಾಪಾಂಡಿಮ ಗಾತ್ರಂ ಗ್ರೀಷ್ಮಸಾಯಂಸಮಯದೊಳೆಸೆದತ್ತಂದು ಬಾಲಾಕಲಾಪಂ (ಶಂಪ್ರಪು. ೯-೮೪). (ನಾ). ೨. ಬಿಳಿಯ ಬಣ್ಣ ; ಧವಳತೆ : ಕನತ್ಪಾಂಡಿಮ ಭಾಸ್ವತ್ಪುರ ಶಶಿ ದಿನಕೃತ್ಪವಮಾನ ಸುಹೃತ್ಪರಹಸು ವಿಕಿರತ್ಪಟುನಯನ (ಕಾಪ್ಯಪೇ. ೭-೨೬). [ಸಂ. ಪಾಂಡಿಮನ್]

ಪಾಂಡಿಯ (ನಾ). ಪಾಂಡ್ಯದೇಶದ ರಾಜನ ಹೆಸರು : ವಲ್ಲೆವರಸ ದೇವಯ ಮೂಡಲ ಗೋವನ್ ಬರುಮಾನಟ್ಟಿದ × × × ಆಗಳು ಪಾಣ್ಡಿಯನ ಮೇಗೆ ಎಟ್ಟು ಪಱೆಯಱೂಱಿಱಿದೊ (ಎಕ. ಸಿ. ಶ್ರೀಶಿಪಾ. ೩೦-೯ ; ಸು. 800 ?). [←ತಮಿ. ಪಾಣ್ಪಿಯನ್./ ಸಂ. ಪಾಂಡ್ಯ]

ಪಾಂಡಿಸೆಟ್ಟಿ (ನಾ). ಒಬ್ಬಾತನ ಹೆಸರು : ಪಾಂಡಿಸೆಟ್ಟಿ ನಾಲ್ಕಾಸಿರಂ (ಎಇ. XIV, ೯೦-೨೩ ; 725). [<ಪಾಂಡ್ಯ + ಸೆಟ್ಟಿ]

ಪಾಂಡು₁ (ಗು). ೧. ಹಳದಿ ಛಾಯೆಯುಳ್ಳ ಬಿಳಿಯ ಬಣ್ಣದ : ರಾಜಿಸುತಿರ್ದುವಂದರುಣಪಂಕಜ ಪಾಂಡುಪಯೋಜನೀಳನೀರೇಜ ಕದಂಬಕಂಗಳ . . . ವರ್ಣಸಂಕರತೆಯಿಂದೆ ಕೊಳಂಗಳ್ (ಜಗಪಿ. ೪-೭೫). (ನಾ). ೨. ಬಿಳಿಯ ಬಣ್ಣ ; ಧವಳತೆ : "ಗೌರಃ, ಶ್ವೇತಃ . . . ಪಾಂಡುಃ, ಅವದಾತಃ, ಪಾಂಡರಃ—ಈ ೧೨ ಬಿಳಿದು" (ಹಲಾಯು. ೦೨೦-೪೩). ೩. ಒಂದು ಬಗೆಯ ರೋಗ ; ಕಾಮಾಲೆ ; ಅರಿಸಿನ ಮುಂಡಿಗೆ ರೋಗ : ತವಸದ ಎಲೆ, ಆನೆನೆಗ್ಗಿಲು . . . ನೀರಲ್ಲಿ ಕಲಸಿ ಪ್ರಯೋಗಿಸಲು ಪಾಂಡು, ಮೈ ಬೆಳ್ಳಪ್ಪುದಂ, ಗುದದೊಳ್ಪುಟ್ಟಿದ ವ್ಯಾಧಿಗಳ ಕೆಡಿಸುಗುಂ (ಶಿಪ್ಪಶಿ. ೨೦). ೪. ಒಬ್ಬ ರಾಜ ; ಪಾಂಡವರ ತಂದೆ : ಎನಗಂ ಪಾಂಡುಗಮಿಲ್ಲ ಭೇದಮೆಳೆಯಂ ಪಚ್ಚಾಳ್ವಂ (ಪಂಪಶಾ. ೦೩-೯) ; ಈತನೇ ಧೃತರಾಷ್ಟ್ರನೆರಡನೆಯಾತ ಪಾಂಡು (ಕುಸ್ಮಾಕ. ೩-೦೦). [ಸಂ.]

ಪಾಂಡು₂, ಪಾಡ್ (ನಾ). ಭೂಮಿಯನ್ನು ಅಳೆಯುವ ಒಂದು ಪ್ರಮಾಣ ; ಒಂದು ಬಿಘೆಯ $\frac{೧}{೨೦}$ನೆಯ ಭಾಗ : ೨೦ ಕಾಠಿಗೆ ೧ ಪಾಂಡು, ೨೦ ಪಾಂಡಿಗೆ ೧ ಬಿಘೆ, ೧೨೦ ಬಿಘೆಗೆ ೧ ಚಾಹೂರು (ಕಶಾಗೆ. ೨೯೦). **ಪಾಡ್** : ೨೦ ಪಾಡ್—ಬಿಘೆ ೧ (ಶೂಮಿಕ. ೬೮).

[←ಮರಾ. ಪಾಂಡ್]

ಪಾಂಡುಕ (ನಾ). ೧. ಹಳದಿಛಾಯೆಯ ಬಿಳಿಬಣ್ಣ. ೨. ಕಾಮಾಲೆ ರೋಗ ; ಅರಿಸಿನಮುಂಡಿಗೆರೋಗ. ೩. ಪಾಂಡುರಾಜ. ೪. ಒಂದು ಬಗೆಯ ಪಡವಲ ; ಕಹಿಪಡವಲ ; "ಆ ಪಾಂಡುಕಂ ಕಹಿಪಡಲಮಕ್ಕು" (ಮಂಗರಾ. ೪೪-೪೪). ೫. [ಜೈನ] ಸುಮೇರು ಪರ್ವತದ ಮೇಲಿರುವ ಭದ್ರಪಾಲ, ನಂದನ, ಸೌಮನಸ ಮತ್ತು ಪಾಂಡುಕವೆಂಬ ನಾಲ್ಕುವನಗಳಲ್ಲಿ ಕೊನೆಯದು ; P ಇದರಲ್ಲಿ ಜನ್ಮಾಭಿಷೇಕಕಲ್ಯಾಣಕ್ಕಾಗಿ ಮೀಸಲಾಗಿರುವ ನಾಲ್ಕು ಶಿಲಾಪೀಠಗಳಿವೆ : ವಿನುತೋದ್ಯತ್ಫಲ ಭದ್ರಶಾಲೆಯೆಸೆದತ್ತೀ ಭದ್ರಶಾಲಂ ಸುನಂದನವಾಗಿರ್ದುದು ದಿವ್ಯನಂದನವಿದಿಂತೊಪ್ಪಿರ್ದುದೀ ಸಾರ ಸೌಮನಸಂ ವಿಕಾಸಿಕುಸುಮಶ್ರೀಪಾಂಡುಕಂ ಪಾಂಡುಕಂ ಮನಕಿಂಬಾಯ್ತುದೆ ನೋಡ ತನ್ನಿ ಗಿರಿಗೀ ನಾಲ್ಕುಂ ಬನಂ ಜವ್ವನಂ (ಪುಷ್ಪಪು. ೦೦-೫೭). 'ಪಾಂಡುಕವನ' ಪರಾ. ೬. ಪಾಂಡುಕವನದಲ್ಲಿರುವ ಅರ್ಧ ಚಂದ್ರಾಕೃತಿಯ ನಾಲ್ಕು ಪೀಠಶಿಲೆಗಳಲ್ಲಿ ಮೊದಲನೆಯದು ; P ಈ ನಾಲ್ಕೂ ಶಿಲೆಗಳು ನೂರುಯೋಜನ ಉದ್ದವಾಗಿಯೂ ಐವತ್ತುಯೋಜನ ಅಗಲವಾಗಿಯೂ ಎಂಟುಯೋಜನ ಎತ್ತರವಾಗಿಯೂ ಇದ್ದು ಪ್ರತಿಯೊಂದು ಶಿಲೆಯ ಮೇಲೆ ನಡುವೆ ತೀರ್ಥಂಕರನಿಗಾಗಿ ಒಂದು, ದಕ್ಷಿಣಕ್ಕೆ ಸೌಧರ್ಮೇಂದ್ರನಿಗಾಗಿ ಒಂದು ಹಾಗೂ ಉತ್ತರಕ್ಕೆ ಈಶಾನೇಂದ್ರನಿಗಾಗಿ ಒಂದು—ಹೀಗೆ ಮೂರು ಪೂರ್ವಾಭಿಮುಖವಾದ ಸಿಂಹಾಸನಗಳಿವೆ ಎಂಬ ನಂಬಿಕೆ ಇದೆ : ಕ್ಷೀರೋದವಾರಿಧಾರಾಪೂರದ ಚೆಲ್ವಿಂಗೆ ಸೆಣಸುವಂತಭಿನವನೀಹಾರದ ಪೂರದ ಬೆಳ್ಪನೆ ಬಾರಿಸಿ ಪಾಂಡುಕಶಿಲಾತಲಂ ಸೊಗಯಿಸುಗುಂ (ಆದಿಪು. ೭-೭೪) ; ಬಳಸಿ ವಿದಿಕ್ಚತುಷ್ಟಯಮನುತ್ತರ ಪೂರ್ವದಿನರ್ಧವೃತ್ತಮಂ ಪೊಳೆವುವೆ ಪಾಂಡುರಪ್ರಭೆಯ ಪಾಂಡುಕಮುಂ ಕವಿಲಾದ ರತ್ನಕಂಬಳಮುಮೆನಿಪ್ಪ ಜೈನಸವನೋತ್ಸವಪೀಠಶಿಳಾಚತುಷ್ಟಯಂ (ಪುಲ್ಲಪು. ೧೨-೯೦). ೭. ನವನಿಧಿಗಳಲ್ಲಿ ಒಂದು; ಹದಿನೆಂಟು ಪ್ರಕಾರದ ಧಾನ್ಯಗಳನ್ನು ಒದಗಿಸುವ ಸಾಮರ್ಥ್ಯವುಳ್ಳ ನಿಧಿ : ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಆದಿಪು. ೧೫-೩ ಪ); ಧಾನ್ಯಂಗಳು ಹದಿನೆಂಟುಪ್ರಕಾರವ ತಾನೀವ ಪಾಂಡುಕ ನಿಧಿಯು (ದ್ವಾದಶಾ. ೧೦-೪೨೮).

[ಸಂ.]

ಪಾಂಡುಕಂಬಲ, ಪಾಂಡುಕಂಬಳ (ನಾ). ೧. ಬಿಳಿಯ ಕಂಬಳಿ. ಪಾಂಡುಕಂಬಳ : ೧. ತಗುಳ್ದೈಕಿಲಾಕ್ರಮಿಸೆ ಲೋಕಮನೆಯ್ದೆ ಸರೋಜ ಸಂಭವಂ ಪೊದಿಸಿದ ಪಾಂಡುಕಂಬಳಮಿದೆಂಬವೊಲಾದುದು ಮಂಜಿನುರ್ವರಂ (ಪುಷ್ಪಪು. ೬-೩೮). ೨. [ಜೈನ] ಪಾಂಡುಕವನದಲ್ಲಿರುವ ನಾಲ್ಕು ಪೀಠಶಿಲೆಗಳಲ್ಲಿ ಒಂದು : ಪಾಂಡುಕ ಪಾಂಡುಕಂಬಳ ರಕ್ತಕಂಬಳಾತಿರಕ್ತಕಂಬಳ ವಿಶಾಲರತ್ನಶಿಳಾತಳಪ್ರತಿಷ್ಠಿತ ಭಗವಜ್ಜನ್ಮಾಭಿಷೇಕಸಿಂಹಾಸನಾಳಂಕೃತಮುಮಾಗಿ (ಆದಿಪು. ೧-೪೯ ಪ) : ವಿಳಸತ್ಪಾಂಡುಕ ಪಾಂಡುಕಂಬಳ ಶಿಲಾಪಟ್ಟಂ ಶಿಲಾಪಟ್ಟಕಂಬಳ ಸತ್ಕಾಂತ್ಯತಿರತ್ನ ಸಂಚಳ ಶಿಲಾಪಟ್ಟಂಗಳಂ ನಾಲ್ಕು ಕೋಣ್ಗಳೊಳೊಪ್ಪಿರ್ಪುವು . . . ಜಿನದ್ರಜಕ್ಕೆ ಸವನಸ್ಥಾನಂಗಳೀ ಶೈಳದೊಳ್ (ಪುಷ್ಪಪು. ೦೦-೫೮). P ಪಾಂಡುಕ, ಪಾಂಡುಕಂಬಳ, ರಕ್ತಕಂಬಳ, ಅತಿರಕ್ತಕಂಬಳ ಎಂಬ ಈ ನಾಲ್ಕು ಪೀಠಶಿಲೆಗಳು ಅನುಕ್ರಮವಾಗಿ ಭರತ ಕ್ಷೇತ್ರ, ಪಶ್ಚಿಮವಿದೇಹ, ಐರಾವತ ಹಾಗೂ ಪೂರ್ವವಿದೇಹದ ತೀರ್ಥಂಕರರ ಜನ್ಮಾಭಿಷೇಕಕ್ಕೆ ನಿಯಮಿತವಾಗಿವೆ ಎಂಬ ನಂಬಿಕೆ ಇದೆ.

[ಸಂ.]

ಪಾಂಡುಕಂಬಲಿ, ಪಾಂಡುಕಂಬಳಿ (ನಾ). ಬಿಳಿಯ ಕಂಬಳಿಯನ್ನು ಹೊದಿಸಿದ ರಥ. ಪಾಂಡುಕಂಬಳಿ : "ಪಾಂಡುಕಂಬಳೀ . . . ಬಿಳೀ ಕಂಬಳಿ, ಪ್ಯಾನಲ್ ಮುಂತಾದವುಗಳಿಂದ ಹೊದಿಸಲ್ಪಟ್ಟ ರಥದ ಹೆಸರು" (ಸಿದ್ಧಾಂತಿ. ೨೫೨). [ಸಂ. ಪಾಂಡುಕಂಬಲಿನ್]

ಪಾಂಡುಕಂಬಳ 'ಪಾಂಡುಕಂಬಲ' ನೋ.

ಪಾಂಡುಕಂಬಳಿ 'ಪಾಂಡುಕಂಬಲಿ' ನೋ.

ಪಾಂಡುಕವನ (ನಾ).—ಪಾಂಡುಕ ೫ : ಭದ್ರಸಾಲಾನಂದನ ಸೌಮನಸ ಪಾಂಡುಕವನವಿರಾಜಿತಮುಂ (ಅಂಕ. ಂ-೫೫ ಪ); ಪಾಂಡುಕವನಕ್ಕಡರ್ದತ್ತು ಸುರೇಂದ್ರನಾರಣಂ (ಹರಿಕೃ. ೦೫-೦೫೯). [ಪಾಂಡುಕ + ವನ]

ಪಾಂಡುಕಾಮಾಲೆ (ನಾ). ಕಾಮಾಲೆ ; ಅರಿಸಿನಮುಂಡಿಗೆ ರೋಗ : ವಜ್ರಗಿರಿ ೀರ ಆಕಳ ಮಜ್ಜಿಗೆಯಲ್ಲಿ ಕೊಳ್ಳಲು ಪಾಂಡುಕಾಮಾಲೆ ಮಾಣ್ಗು ೃ. ೫೬೦). [ಪಾಂಡು$_1$ + ಕಾಮಾಲೆ]

ಪಾಂಡುಗಾತ್ರ (ನಾ) ಬಿಳಿಬಣ್ಣದ ಮೈಯುಳ್ಳವನು ; ನಾರದ : ಪಾಂಡುಗಾತ್ರಂ ತಳರ್ದನಳಲುವಾತ್ರನಾ ಬ್ರಹ್ಮವುತ್ರಂ (ಜಗಂ. ೫-೦೦). [ಪಾಂಡು$_1$ + ಗಾತ್ರ]

ಪಾಂಡುಚ್ಛತ್ರ (ನಾ). ಬಿಳಿಯ ಕೊಡೆ ; ಶ್ವೇತಚ್ಛತ್ರ : ಜಾತಿವಾಜಿ ಸಮೂಹಂ ಮದವದ್ಗಜೇಂದ್ರಘಟೆ ಪಾಂಡುಚ್ಛತ್ರಮಂಡಲಂ ನಿಗುಂಭಿಸೆ ವುತ್ರಂಗಿದಿರ್ವಂದರಂದರಸಿಯುಂ ಧೂಪಾಲನುಂ (ಹರಿಕೃ. ೬-೦೯) [ಪಾಂಡು$_1$ + ಛತ್ರ]

ಪಾಂಡುದೇಹ (ನಾ). ಬಿಳಿಯ ಮೈ ; ಧವಳಶರೀರ : ಮಹಾಪಾಂಡು ದೇಹವುಮುಜ್ಜೃಂಭಿಪಿಂತಿಕೆಯುಂ ಬಗೆಗೊಳಲ್ . . . ಅಬ್ಜಭವಹಂಸಂ ಪಾಲಿತಧ್ರಾಧ್ವದೊಳ್ (ಜಗಂ. ಂ-೦೦). [ಪಾಂಡು$_1$ + ದೇಹ]

ಪಾಂಡುಪಕ್ಷ (ನಾ). ಪಾಂಡವರ ಪಕ್ಷಪಾತಿ : ಪಕ್ಷಿವಾಹನ ಪೂರ್ಣ ಲಕ್ಷಣ ಸರ್ವೇಶ ಮೋಕ್ಷದಾಯಕ ಪಾಂಡುಪಕ್ಷ (ಪಡಾಳ್ವ. ೬೬-೦). [ಪಾಂಡು$_1$ + ಪಕ್ಷ]

ಪಾಂಡುಪಲ್ಲಿ (ನಾ). ಒಂದು ಬಗೆಯ ಮರ ; ಬಿಳಿಯ ಕಡವ : " ಧೂಸರಾ—ಪಾಂಡುಪಲ್ಲಿ " (ಓಷಂ. ೦೩). [ಸಂ. ಪಾಂಡುಪಲ್ಲೀ]

ಪಾಂಡುಪಿಂಡ (ನಾ). ಕುದುರೆಯ ಶಿಗದ ಕೆಳಗಿನ ಭಾಗ : ಊರುವಿನ ಕಣ್ಣಾದೆಡೆ ತಾನಾರಪುರ್ ನೀಂ ಪಾಂಡುಪಿಂಡಮೆಂಬಭಿಧಾನಂ (ಅಶ್ವಶಾ. ೯-೫೯). [ಪಾಂಡು$_0$ + ಪಿಂಡ]

ಪಾಂಡುಭೂಮಿ (ನಾ). ಬಿಳಿಯ ಮಣ್ಣುಳ್ಳ ಭೂಮಿ ; ಮೊಗೆಮಣ್ಣಿನ ನೆಲ: " ಪಾಂಡುಭೂ(ಪಾ)ಮಿಃ, ಉದಗ್ಭೂ(ಪು)ಮಿಃ —ಈ ಈ ಮೊಗೆಯ ಭೂಮಿ " (ಹಶಾಪು. ೪೬-೫). [ಪಾಂಡು$_1$ + ಭೂಮಿ]

ಪಾಂಡುರ (ಗು). ೧. ಬಿಳಿಯ ; ಬಿಳುಪಾದ : ಘನತರುಶಾಖಾಗ್ರಾನೂಗ್ರನಿಭೃತಪಾಂಡುರಕಪೋತಪಂಕ್ತಿಪ್ರಕರಂ ನೆನೆಯಿಪುದು ಶೂನ್ಯ ಬಾಯಿಯುಮನೇಕಯಾನಿಪಾಗ್ನಿಹೋತ್ರಧೂಮವನಿನ್ನುಂ (ಜಾಕಂಪು. ೦೦೯); ರಂಭಿಸುತ್ತು ರಘುರಾಮನ ಪಾಂಡುರದೇಹಮಂಡಲಂ (ಕಂಕಾಪು. ೬-೦೩೨). (ನಾ). ೨. ಬಿಳುಪು ; ಬಿಳಿಯ ಬಣ್ಣವುಳ್ಳುದು : " ಗೌರಃ . . . ಪಾಂಡುರಃ, ಪಾಂಡುಃ, ಅವದಾತಃ, ಪಾಂಡರ : —ಈ ೧೨ ಬಿಳಿದು " (ಹಶಾಪು. ೦೫೦-೪೭) ; ಅಂದಾಲೆ ಮದ್ಭೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳ್ವುದಱಿಂದಾಕೆಗೆ ಮಗಂ ಪಾಂಡುರೋಗ ಸಂಗತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ (ಕಃ. ತ. ಂ-೪೫ ಪ). ೩. ತೊನ್ನು ; ಶ್ವೇತಕುಷ್ಠ :" ಪಾಂಡುಃ, ಪಾಂಡುರಃ —ಈ ೨ ಬಿಳಿಯ ಬಣ್ಣವುಂ, ರೋಗವುಂ, ರಾಜನುಂ " (ಶಾಕಳ್ಯ. ೦೦೦). [ಸಂ.]

ಪಾಂಡುರಂಗ$_1$ (ನಾ). ೧. ಬಿಳಿಯ ಬಣ್ಣದ ದೇಹವುಳ್ಳವನು. ೨. ಶಿವ ; ಈಶ್ವರ : ಪಾಂಡುರಂಗನ ಭಕ್ತರೀ ಧೂಮಂಡಲದೊಳಗೆ ಸುಳಿವ ಜಂಗಮಮಂಡಳಿಗಳಂ ಕರುಸಿದರು ಪಜಹಾಲಿರಂ ಕಳುಹಿ (ಜಸಾಪ. ೯-೫); ಕಂಗಳು ಮೂರಿರ್ದಾಗಸಗಂಗೆಯನು ಧರಿಸಿ ತಿಂಗಳ ಸೂಡಿಯುಂ ಪಾಂಡುರಂಗ ತಾನಲ್ಲವದು ನಾರಂಗದ ಫಲ ಪಾಲ್ ಇಷ್ಟ ಲಿಂಗಾಭಿಷೇಕಂ (ಕುಶಾರ. ೫೦೯-೫೦). [ಪಾಂಡುರ + ಅಂಗ$_1$]

ಪಾಂಡುರಂಗ$_2$ (ನಾ). ಪಂಢರಾಪುರದಲ್ಲಿ ನೆಲೆಸಿರುವ ವಿಷ್ಣುವಿನ ಅವತಾರ ; ವಿಠ್ಠಲ : ನಾ ನಿನ್ನ ಮನೆ ಬಾರನೆ ಜಯ ಪಾಂಡುರಂಗ (ಕುಕಂರ. ೩-೦೫೬ ಕೃಷ); ನಾವುದೇವ ಪಾಂಡುರಂಗನ ಭಕ್ತ (ಶಾರಸ. ೫೯೫). [<ಪಂಢರ$_2$ (ಪ್ರಾ←ಮರಾ. ಪಂಢರ) + ರಂಗ]

ಪಾಂಡುರಂಗವಿಟ್ಠಲ (ನಾ). = ಪಾಂಡುರಂಗ$_2$: ಅನಂತಕೋಟಿ ಬ್ರಹ್ಮಾಂಡನಾಯಕ . . . ಪಾಂಡುರಂಗವಿಟ್ಠಲ (ಕುಕಂರ. ೪-೦೫೬ ಗದ್ಯ). [ಪಾಂಡುರಂಗ$_2$ + ವಿಟ್ಠಲ]

ಪಾಂಡುರಕುಷ್ಠ (ನಾ). ತೊನ್ನುರೋಗ : " ಪಾಂಡುರಕುಷ್ಠಂ ಶ್ವಿತ್ರಂ " (ಕಜ್ಜೋ. ೬೩-೬೬). [ಪಾಂಡುರ + ಕುಷ್ಠ]

ಪಾಂಡುರತೆ (ನಾ). ಬಿಳಿದಾಗಿರುವಿಕೆ ; ಧವಳತೆ ; ಬಿಳುಪು : ದುರ್ಗ್ಗಾರ್ಣವಫೇನಪಾಂಡುರತೆಯುಂ ಕೆಯ್ಕೊಂಡು ಬೆಳ್ದಿಂಗಳಂತಿರೆ ತೋಱೆಸೆವುತ್ತುರೀಯವಸನಂ ರಾಜೇಂದ್ರಚೋದ್ಯಾಂಕನಾ (ಜಕಂಪು. ೫೮). [ಸಂ. ಪಾಂಡುರತಾ]

ಪಾಂಡುರಿತ (ಗು). ೧. ಬೆಳ್ಳಗಾದ ; ಬಿಳಿಬಣ್ಣವನ್ನು ಹೊಂದಿದ : ಧವಳಕಲಮಾಕ್ಷತ ಕ್ಷೀರಗೌರಮಾಂಡುರಿತಕರ್ಕೀತನಕರಂಡಕಂಗಳಿಂ . . . ಮನಂಗೊಳಿವ ದೇವಪೂಜಾಗೃಹಮಂ ಪೊಕ್ಕು (ಪಂಚಮಾ. ೦೨-೫ ಪ) (ನಾ). ೨. ಬೆಳ್ಳಗಾದುದು : ಸುರಸ್ತ್ರೀಯರಪಾಂಗಾಕ್ಷಿಪ್ರಭಾಸಂಚಯದಿನುದಿತ ದೇಹಾಂಶುಸಂದೋಹದಿಂ ಮೇದುರ ಧಮ್ಮಿಲ್ಲಮ್ಮುತಿಸ್ತೋಮದಿ ನಧರವಯೂಪಾಳಿಯಿಂದೆತ್ತಲುಂ ಪಾಂಡುರಿತಂ ವೈಶಂಗಿತಂ ಕರ್ಬುರಿತ ಪುರುಣಿತಂ ವ್ಯೋಮಪುರಂಗಳ (ಹರಿಕೃ. ೦೫-೭೯). [ಸಂ.]

ಪಾಂಡುರೋಗ (ನಾ). = ಪಾಂಡು$_1$ ೩ : ತ್ರಿಕಟುಕ, ಚಿತ್ರಮೂಲ, ಕಬ್ಬಿಣಕಿಟ್ಟ ಇವಂ ಚೂರ್ಣವಂ ಮಾಡಿ ಅಳೆದೆಮ್ಮಲ್ಲಿ ಕುಡಿಯೆ ಪಾಂಡು ರೋಗ ಕೆಡುಗುಂ (ಪಪ್ಪ. ೦೬೭); ಪಾಂಡುರೋಗಕ್ಕೆ . . . ಅಭ್ರಕವು ಬಹಳ ಉಪಯುಕ್ತವಾಗುವುದು (ಔಷಂ. ೦೩). [ಪಾಂಡು$_1$ + ರೋಗ]

ಪಾಂಡುರೋಗಿ (ನಾ). ಕಾಮಾಲೆರೋಗದಿಂದ ನರಳುವವನು : ಪೆರ್ಮೆಯಹ ಪಾಂಡುರೋಗಿಯೆ ಪುಂಸ್ಕ ದೇವಗುರುಭಕ್ತರರ್ಘಾಪಹಾರೀ (ಪಂಕೃ. ೪-೩೨-೩೫); ಅಜಪುತೆಳಕುಷ್ಠ ಸುರತಂಗೆಯ್ಯಲಪರುನರದಿ ನೆರೆ ಪಾಂಡುರೋಗಿ ಪುಟ್ಟುವನು (ಪವಪೋ. ೦೪-೪೪).

[ಸಂ. ಪಾಂಡುರೋಗಿನ್]

ಪಾಂಡುವಾತ (ನಾ). ಒಂದು ಬಗೆಯ ವಾತರೋಗ (?) : ಒಂದು ಕವಾಟಕಂ ಕೊಂಡೊಡೆ ಪುಂದಾಗ್ನಿ, ಶೂಲೆ, ಪಾಂಡುವಾತ, ಮೇಹ, ವಾತಶೂಲೆ ಇವ್ಕೂ ಪುಣುವುವೆ (ಪಪ್ಪ. ೪೩). [ಪಾಂಡು$_1$ + ವಾತ]

ಪಾಂಡುಸಂಧಿ (ನಾ). = ಪಾಂಡುಪಿಂಡ : ತ್ರಿಕದೆರಡುಂ ಕೆಲಕ್ಕುಂ ರೋಹಿಣಿಸಂಧಿಯೆಂಬ ಪಸರಕ್ಕುಂ ಅಲ್ಲಿಂ ಕೆಳಗೆ ಪಾಂಡುಸಂಧಿಯೆಂಬ ಪೆಸರಕ್ಕುಂ (ಅಶ್ವಶಾ. ೯೯-೯) ; ತಿಕ(ಗ)ದಿರ್ಕೆಲ ರೋಹಿಣಿಯೆನಿಸುಗುವುದುವದಱ ಕೆಳಗೆ ಪಾಂಡುಸಂಧಿಯೆ (ಅಶ್ವಶಾ. ೯-೪೫); [ಇಲ್ಲಿ ಧಂಜಿ೧. ದೋಷವಿರುವುದರಿಂದ ಪಾಠ ಕೆಟ್ಟಿರಬಹುದು. [ಪಾಂಡು + ಸಂಧಿ]

ಪಾಂಡ್ಯ (ನಾ). ೧. ಭಾರತದ ದಕ್ಷಿಣಭಾಗದ ಒಂದು ದೇಶ [P] ಮಧುರೆಯನ್ನು ರಾಜಧಾನಿಯಾಗಿ ಹೊಂದಿದ್ದ ದೇಶ : ಚೇರ ಪಾಂಡ್ಯ ಕಳಿಂಗ ಖಿಸಾನ್ಧ್ರಯಾದವಮಹೀಧುಜಪೌಳಿಮಣಿಬ್ರಜ ಪ್ರಭಾಲಿಂಗಿತಪಾದಪೀಠಂ (ಪಾಣಿ. XX, ೪೬-೫ ; 1972) ; ಚೋಳಚೇರ ಪಾಂಡ್ಯಕಳಿಂಗಾದಿ ವಿಷಯಂಗಳಂ ಸಾಧಿಸಿ ಕಪ್ಪಂಗೊಡು (ರಕ್ಷಾಶ್ವ. ೦೦-೭೦). ೨. ಪಾಂಡ್ಯದೇಶದ ರಾಜ : "ಪಾಂಡ್ಯಃ = ಪಾಂಡ್ಯೋ ರಾಜನುಂ"(ಶಾಕಳ್ಯ.೦೦೦); ಪಳಯಾಲೆಂಳ್ದೇವನಾಟ್ದಂಜ್ಞಾಮ ಪಾಂಡಿಪಮೊಂ ಪಾಂಡ್ಯನಂ (ಎಕ. XI. ಶಕ್ಕರು. ೭೬-೪೮; ೨೩೭); ಎಲೆ ಚೊಳಕ್ಷಿತಿ ಪಾಳ ಸನ್ತವೆಟ್ಟೆಯಂ ನೀಂ ನೀವಿಕೊಳ್ ನಿನ್ನನುಂ ಗೊಲೆಮಾಡ್ದಿತ್ತರು

ಪಾಣ್ಡ್ಯ ಪಲ್ಲವ ಭಯಂಗೊಣ್ಡೋಡದಿರ್ (ಎಕ. II, ೫೯-೧೧೨; 974).
[ಸಂ.]

ಪಾಂಡ್ಯಗದ್ಯಾಣ (ನಾ). ಒಂದು ಬಗೆಯ ಚಿನ್ನದ ನಾಣ್ಯ; ಪಾಂಡ್ಯ ಕುಲದವರಾದ ಅಳುಪರ ನಾಣ್ಯ: ಬಿದಿರಗದ್ದೆಯ ಮೇಲಿಕ್ಕಿದ ಪಾಣ್ಡ್ಯಗದ್ಯಾಣಂ ಮುವತ್ತುಮನಾ ಪೊನ್ನ ವೃದ್ಧಿಯುಮಂ ಅಗ್ರಕೆನ್ದು ಶಾಸನಮಾಗೆ ಮಾಡಿಸಿದ ಧರ್ಮ (ಸೌಇಇ. VII, ೩೬೦-೧೬, 1140).
[ಪಾಂಡ್ಯ + ಗದ್ಯಾಣ]

ಪಾಂಡ್ಯಗಾವುಂಡ (ನಾ). ಒಬ್ಬಾತನ ಹೆಸರು: ಪಾಣ್ಡ್ಯಗಾವುಣ್ಡಂ ತಮ್ಮ ಕೆಱೆಯೊಳ್ ಮಾಧವಯ್ಯಙ್ಗೆ ಇರ್ಕಣ್ಡುಗ ಮಣ್ಣ ಪೆನ್ನಸ ಬಿಟ್ಟ (ಎಕ. XV, ಹೊಳೆನ. ೭೯-೩; 974). [ಪಾಂಡ್ಯ + ಗಾವುಂಡ(<ಗಾಮುಂಡ)]

ಪಾಂಡ್ಯವಿಲ್ಲರಸ (ನಾ). ಒಬ್ಬಾತನ ಹೆಸರು: ಪಾಣ್ಡ್ಯವಿಲ್ಲರಸರಾ ಮಗನ್ ದೇವು (ಎಇ. II, ೧೯-೧; ಸು. 800). [ಪಾಂಡ್ಯ + ವಿಲ್ಲರಸ್ಯ]

ಪಾಂತ (ನಾ). ಪಕಾರದಿಂದ ಕೊನೆಗೊಳ್ಳುವ ಶಬ್ದ: ಪಾಂತಕ್ಕೆ—ಅಪ್ಪು, ಆಲಿಂಗನೇ, ಉದಕೇ ಚ (ಶಪುರಾ); ಪಾಂತವರ್ಗಃ — ಪಕಾರವೇ ಅಂತವರ್ಣವಾಗುಳ್ಳ ನಾನಾರ್ಥ ಪದಸಮೂಹವು (ಸಿದ್ಧಾಂತಿ. ೪೦೭).
[ಪ$_1$ + ಅಂತ$_2$]

ಪಾಂತಿಪುರ (ನಾ). ಒಂದು ಊರಿನ ಹೆಸರು; P ಧಾರವಾಡ ಜಿಲ್ಲೆಯ ಈಗಿನ ಹಾನಗಲ್ಲು: ಸ್ವಾಮಿಶರ್ಮ್ಮಣೇ ಪಾನ್ತಿಪುರ ವಿಷಯೇ ಕಿಱುಕುಪ್ಪುಟೂರಗ್ರಾಮ[ಮ್] . . . ಸೋದಕಂ ಸದಕ್ಷಿಣಂ . . . .ದತ್ತವಾನ್ (ಕಇ. II, ೦-೦೦; ಸು. 600); ಬನವಾಸಿಪುರವರೇಸ್ವರಂ ಪಾಂತಿಪುರಾಧಿಪಂ ಶ್ರೀಮನ್ಮಯೂರವರ್ಮ್ಮದೇವಂ (ಸೌಇಇ. XX, ೨೪-೯೫ 1034). [ಪಾಂತಿ$_0$ + ಪುರ$_1$]

ಪಾಂಥ (ನಾ). ದಾರಿಹೋಕ; ಪ್ರಯಾಣಿಕ: "ಪಯಣಂಬೋಪಾತಂ ಮಾರ್ಗಯಾಯಿ ತಾಂ ಪಥಿಕನಧ್ವನೀನಂ ಪಾಂಥಂ" (ಪಸ್ತುಕೋ. ೪೫-೨); ಎನಸುಂ ಕೈವಾರದಿಂದಿಲ್ಲದ ಗುಣಗಣಮಂ ರಾಗದಿಂ ಕೆಮ್ಮನೀ ಪಾಂಥನೊಳಧ್ಯಾರೋಪಣಂಗೆಯ್ದೆನಗನವರತಂ ಬಣ್ಣಿಸುತ್ತಿರ್ದಳ್ (ಕಾದಂಉ. ೨೬೨); ಯುವತಿಯರಾರ್ದು ಚಪ್ಪರಿಸೆ ಕೋಗಿಲೆಯಾಂಚರವೆಂದು ಬೆರ್ಚಿ ಪಾಱವು ಗಿಳಿವಿಂಡು ಪಾಂಥರೆರ್ದೆ ಪವ್ವನೆ ಪಾಱುವುವಾ ಪ್ರದೇಶದೊಳ್ (ಅನಂಪು. ೦-೬೨). [ಸಂ.]

ಪಾಂಥಶಾಲೆ (ನಾ). ಪ್ರಯಾಣಿಕರು ತಂಗುವುದಕ್ಕಾಗಿ ನಿರ್ಮಿಸಿದ ವಿಶ್ರಾಂತಿಗೃಹ; ಛತ್ರ: ಪಾಂಥಶಾಲೆಗಳು ಮತ್ತು ಪಾಂಥಶಾಲಾ ಪಾಲಕರು (ಶಾಧಾನ.೨೯೦). [ಪಾಂಥ + ಶಾಲೆ$_3$]

ಪಾಂಥಸ್ತ (ನಾ). = ಪಾಂಥ: ಅಂದು ಗುಡಿಯಲ್ಲಿ ಅತಿಥಿ-ಅಭ್ಯಾಗತ-ಪಾಂಥಸ್ತರಿದ್ದರೆ, ಕಾಕಾ, ಅವರಿಗೆ ಗುಡಿಯಲ್ಲಿಯೇ ಪ್ರಸಾದವಾಗಬೇಕೆಂದು ವಿನಮ್ರವಾಗಿ ಬಿನ್ನವಿಸುತ್ತಾರೆ (ದೀಶಹ. II, ೬೯). [<ಪಾಂಥಸ್ಥ]

ಪಾಂಥಸ್ಥ (ನಾ). = ಪಾಂಥ: ಮಧ್ಯಾಹ್ನದ ಬಿಸಿಲಿನಲ್ಲಂತು ಸುತ್ತು ಮುತ್ತಲಿನ ಗ್ರಾಮಗಳು ಸದ್ಯಕ್ಕೆ ಸುಡುತ್ತವೆಂದು ಪಾಂಥಸ್ಥನು ಭ್ರಮೆಗೊಳ್ಳುತ್ತಾನೆ (ಕಶಾಗ. ೬); ತಾನೊಬ್ಬ ಮಾನವ, ಜನನ-ಮರಣಗಳ ನಡುವಿನ ದಾರಿಯನ್ನು ತುಳಿಯುವ ಪಾಂಥಸ್ಥ. ತನ್ನ ಮನಸ್ಸಿಗೆ ಶಾಂತಿಯಿಲ್ಲದೇಕೆ? (ಸಮಾಜ. ೩೦೦). [ಸಂ.]

ಪಾಂಪು 'ಪಾಪು' ನೋ.

ಪಾಂಬ 'ಪಾಣ್ಬ' ನೋ.

ಪಾಂಬಬ್ಬೆ (ನಾ). ಒಬ್ಬಾಕೆಯ ಹೆಸರು: ಪಡಿಯಟ ದೊರಪಯ್ಯನ ಪಿರಿಯರಸಿ ಪಾಂಬಬ್ಬೆ ತಲೆಪಱಿದು ಮೂವತ್ತುವರಿಸಂ ತಪಂಗೆಯ್ದಯ್ದಂ ನೋನ್ತುಚ್ಛಮಠಾಣಮೇಱಿದರ್ (ಎಕ. VI, ಕಡೂರು. ೦-೦೭; 971).
[ಪಾಂಬ$_0$ + ಅಬ್ಬೆ$_1$]

ಪಾಂಬುಳಕುಂಟೆ (ನಾ). ಒಂದು ಸ್ಥಳದ ಹೆಸರು: ತೆಂಙ್ಕಣದೆಸೆ ಗುಡ್ಡೆಗಲ್ಲು ತುಮ್ಬುಕುಣ್ಟೆ ರೇವುಕುಣ್ಟೆ ಪಾಮ್ಬುಳಕುಣ್ಟೆ (ಎಕ. XII ತಿಶಾ. ೩೮-೩೬; 878). [ಪಾಂಬುಳ್$_0$ + ಕುಂಟೆ$_3$]

ಪಾಂಬೆ 'ಪಾಣ್ಬೆ' ನೋ.

ಪಾಂಶು (ನಾ). (ಮಣ್ಣಿನ) ಧೂಳು; ಹುಡಿ; ರಜ: ತೋಯ . . . ಕ್ಷೀರಘೃತಂಗಳೊಳ್ ಸ್ನೇಹಗುಣಂ ಪ್ರಕರ್ಷಾಪ್ರಕರ್ಷದಿಂ ವರ್ತಿಸುಗುಂ ಪಾಂಶುಕಣಕಾಶರ್ಕರಾದಿಗಳಲ್ಲಿ ರೂಕ್ಷಗುಣಂ ವರ್ತಿಸುಗುಂ (ತತ್ವಶ್ರ. ೨೪೬).
[ಸಂ.]

ಪಾಂಶುಕೇಳಿ (ನಾ). ಧೂಳಿನಲ್ಲಿ ಆಟವಾಡುವಿಕೆ; ಧೂಳಾಟ: ತ್ವರಿತ ಗತಿಪ್ರಯುಕ್ತತುರಗೋತ್ಕರಸತ್ಖುರಘಟ್ಟನೋತ್ಥಿತೋದ್ಧುರರಜಮರ್ಕ ಮಂಡಲಮನಾವರಿಸುತ್ತಿರೆ . . . ನಿರ್ಜರಕರಿ ಪಾಂಶುಕೇಳಿಯ ನೊಡರ್ಚುಗುಮಲ್ಲಿ ಜಯಪ್ರಯಾಣದೊಳ್ (ರಾಜಶೇ. ೩-೬).
[ಪಾಂಶು + ಕೇಳಿ$_3$ (= ಕೇಲಿ)]

ಪಾಂಶುಲೆ (ನಾ). ೧. ಮುಟ್ಟಾದವಳು; ಋತುಮತಿ. ೨. ಜಾರೆ; ವ್ಯಭಿಚಾರಿಣಿ: "ಪಾಂಶುಲಾ = ಜಾರೆ" (ಕಾಕಕ್ಕ. ೨೫೯).
[ಸಂ. ಪಾಂಶುಲಾ]

ಪಾಂಶೆ 'ಪಾವಸೆ' ನೋ.

ಪಾಂಸು (ನಾ). ೧. = ಪಾಂಶು: "ಪಾಂಸುಃ, ಕ್ಷೋದಃ, ರೇಣುಃ, ಚೂರ್ಣಂ, ಧೂಳೀ, ರಜಃ—ಈ ೬ ಧೂಳಿ" (ಹಲಾಯು.೬೩-೨೯೯); ವಿವಿಧ ವೈಪಥಪಾಂಸುಗಳಿಂದೆ ನಾಡೆ ಸೀಱಿದ ತಲೆಯುಂ ಕರಂ ಮಲಿನಘಾದ ಪಟಚ್ಚರಮುಂ ನೆಗಟ್ಟಲಂದಿದಿರೊಳೆ ಲೇಖವಾಹನಿವಹಂ ಬರೆ ಕಂಡನಿಳಾಧಿನಾಯಕಂ (ಕಾದಂಉ. ೬೩೬); ಅರಿಚರಣಪಾಂಸು ಪತ್ತಿರೆ ಶರೀರಮಂ ತೊಡೆದು ಕಳೆದೆ ವಸ್ತ್ರಾಂಚಲದಿಂ ಗುರುನಂಪನ ನೀನೆನ್ನೀ ಪರಿಭವಪಾಂಸುವನದೆಂತು ಪೇಟ್ ಕಳೆದಪೆಯೋ (ಗದಾಯು.೯-೨೬); ಕುಸುಮತರುಗಳ್ ಮರುದಾಹತಿಯಿಂ ಪರಾಗಪಾಂಸುಪ್ರಸರಂಬೆರಸಲರ ಸುರಿದವುವು (ಜಗವಿ. ೪-೭೦). ೨. ಹೂವಿನ ಧೂಳಿ; ಪರಾಗ: 'ಪಾಂಸುಕೇಳಿ' ಪರಾ. ೩. ಒಂದಂ ಬಗೆಯ ಗಿಡ; ಪರ್ಪಟಕ: "ಪಾಂಸು ಪರ್ಪಟಕಮಕ್ಕು" (ಮಂಗರಾ. ೪೨-೩೬). [ಸಂ.]

ಪಾಂಸುಕೇಳಿ (ನಾ). ೧. = ಪಾಂಶುಕೇಳಿ: ಆತನ ಲಲಿತೋತ್ತಾನಶಯಿತ ದರಹಸಿತತರಂಗಿತಗತಿಸ್ಖಲಿತಮುಗ್ಧಜಲ್ಪಿತಾದಿ ಬಾಲ್ಯವಿಲಾಸಂಗಳಿಂದಂ ಕರಿಕರೋದ್ಧೂತಧೂಲೀವಿಲಾಸ ಪಾಂಸುಕೇಳಿಯಿಂದಂ . . . ಆನಂದಿತ ಹೃದಯನಾಗಿ (ಆದಿಪು. ೬-೩೦ ನ); ಆಡುವ ಪಾಂಸುಕೇಳಿಯೊಳೆ ಸಲ್ವ ತೊದಳ್ನುಡಿಯುಂ . . . ನಾಡೆಯುಂ ರೂಡಿಸೆ (ಜಕವಿ. ೩-೭೦). ೨. ಹೂವಿನ ಪರಾಗದಲ್ಲಿ ಆಡುವಿಕೆ: ಪರಾಗಪುಂಜದೊಳ್ ಪಱಿವಡಿಸಿತ್ತು ಭೃಂಗಶಿಶು ನೀರಜದೊಳ್ ನಿಜಪಾಂಸುಕೇಳಿಯಂ (ಸಂಪ್ರಪು. ೭-೬೦).
[ಪಾಂಸು + ಕೇಳಿ$_3$ (= ಕೇಲಿ)]

ಪಾಂಸುಲೆ, ಪಾಂಸುಳೆ (ನಾ). ೧. ಮುಟ್ಟಾದವಳು; ಋತುಮತಿ. ೨. ಜಾರೆ; ಹಾದರಗಿತ್ತಿ; ವ್ಯಭಿಚಾರಿಣಿ: "ಸ್ವೈರಿಣಿ . . . ಅಭಿಸಾರಿ ಪಾಂಸುಲೆ[ಪಾಠಾಂ. ಸಾಂಬಂಧಕಿ] ಬಂಧಕಿಯೆನಲ್ಕೆ ಹಾದರದ ನಾರಿಯೆನಿಸಿಕ್ಕು" (ಮಂಗರಾ. ೯೦-೪); ಒರ್ವಳ್ ಪಾಂಸುಲೆ ಈ ನೆಪದೆ ಪಾಣ್ಬನ ನೆರೆವೆನೆಂದು ಬಂದುದಂ ಭೂನುತನ ನೋಳ್ಪ ಸತಿಯರ ಗೋಷ್ಠಿಯಿಂ ಮಱೆದಳು (ಪದ್ಮರಾ. ೬-೬೯). ೩. ಭೂಮಿ. ಪಾಂಸುಳೆ: ೨. "ಪಾಂಸುಳಾ, ಬಂಧಕೀ, ಸ್ವೈರಿಣೀ, ಅಸತೀ, ಪುಂಶ್ಚಳೀ, ಇತ್ವರೀ, ಧರ್ಷಣೀ, ಕುಲಟಾ, ಅವಿನೀತಾ, ಅಭಿಸಾರಿಕಾ — ಈ ೧೦ ಹಾದರಿಗಿತ್ತಿ" (ಹಲಾಯು. ೬೦-೩೪೨) ಬಳಸಿದುದರ್ಕವಾಜಿಖುರಘಟ್ಟಿತಮಾದವರಾದ್ರಿಯಿಂದಮುಚ್ಚಳಿಸಿದ ಧಾತು

ರೇಣುವೆನೆ ಚಕ್ರಯುಗಂಗಳಗಲ್ಕೆಗಿಚ್ಚು ಪಾಂಸುಳಿಯರ ರಾಗದೇಚ್ಛಿ . . . ಸಂಜೆಯ ಕೆಂಪು ಲೋಕಮಂ (ಪಂಪಭಾ. ೯-೨). [ಸಂ. ಪಾಂಸುಲಾ]

ಪಾಂಸುಳ (ಗು). ೧. ಧೂಳು ಮುಸುಕಿದ ; ಧೂಳಿನಿಂದ ತುಂಬಿದ. (ನಾ). ೨. ಧೂಳು ತುಂಬಿದುದು : ಸವಿಾರನುದಾರಕದಂಬಕೇತಕೇ ಪ್ರಸರರಜಸ್ವರಪ್ರಕಟವಾಮಸ[ಶಾಣಂ. ವಾತು]ಳಪಾವುದು ಮೇಘಕಾಲದೊಳ್ (ಪಂಪಭಾ. ೭-೨೨). [ಸಂ. ಪಾಂಸುಲ]

ಪಾಂಸುಳೆ ' ಪಾಂಸುಲೆ ' ನೋ.

ಪಾಂಸೆ ' ಪಾವಸೆ ' ನೋ.

ಪಾಕ$_1$ (ಗು). ೧. ತೀರ ಎಳೆಯ : ಪಾಕಕುಶಕಾಶವಿಶದಂ . . . ಕೃಷ್ಣರಾವಂರೀಬಿಂಬಾಕೀರ್ಣಂ ತನ್ನದೀಶಟುಂ ಕಡುರಯ್ಯಂ (ಅಜಪ. ೫-೮೦). ೨. ಸರಳಸ್ವಭಾವದ ; ನಿಷ್ಕಪಟವಾದ. (ನಾ). ೩. ಬೇಯಿಸುವುದು ; ಪಕ್ವಗೊಳಿಸುವುದು : ಆ ಭೋಜ್ಯವಸ್ತುವಂ ಹಸನಾಗಿ ಪಾಕಮಂ ಮಾಳ್ಪ ವಿವರದ ಶಾಸ್ತ್ರಮಂ ಮನಂಗೊಂಡು ವೇಳ್ದೆಂ (ಸೂಕಣಾ. ೦-೩). ' ನಳಪಾಕ ', ' ಪಾಕಶಾಸ್ತ್ರ ' ಪರಾ. ೪. ಬೇಯಿಸಿ ಸಿದ್ಧಪಡಿಸಿದ ಅನ್ನ ಮೊದಲಾದುವು ; ಅಡುಗೆ : ಭವಿ ಮಾಡಿದ ಪಾಕವ ತಂದು ಲಿಂಗಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು (ಶಸ. ೬೫೮), ಪರಿಪರಿಯ ಬಹುಭಕ್ಷ್ಯಪಾಕದ ಪರಿಮಳದ ಶಾಕಾದಿಗಳವೊಗ್ಗರಣಗಳ ಸೌರಭಕೆ ತಿಳಿದುದು ನಿದ್ರೆ ವನಜಜನ (ಭಾಷ್ಯ. ೦೦-೫೨). ೫. ಪರಿಪಕ್ವತೆ; ಹಣ್ಣಾಗುವಿಕೆ; ಪರಿಪೂರ್ಣತೆ. ೬. ಬೆಲ್ಲ ಅಥವಾ ಸಕ್ಕರೆಯನ್ನು ಕುದಿಸಿ ತಯಾರಿಸಿದ ಮಂದವಾದ ದ್ರವ : ಸಕ್ಕರೆಗೆ ನೀರು ಸೇರಿಸಿ ಕುದಿಸಿ ಪಾಕ ನೂಲಿನಂತೆ ಎಳೆಯುಲು ಬರುವವರೆಗೆ ಕಾಯಿಸಬೇಕು (ಅಭಿಮಾ. ೦೧೧). 'ಎಳೆಪಾಕ' ಪರಾ. ೭. ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ಸಾರ ; ಕಷಾಯ : ಅಡುಸೋಗೆದೇರು, ಕಹಿವಡವಲ . . . ಚೂರ್ಣಮಾಡಿ ಒಳ್ಳ ಹಸುವಿನ ಬೆಣ್ಣೆಯಲ್ಲಿ ಪಾಕವ ಮಾಡಿ ಹದದಲ್ಲಿಳುಹಿ ತೆಗದುಕೊಳ್ಳಿ, ಹಳೆಯ ಜ್ವರ ಮಾಣ್ದುಂ (ಸಗಕ್ಕ. ೦೫೬). ೮. ಕಾರ್ಯದ ಕೊನೆಯಲ್ಲಿ ದೊರೆಯುವ ಫಲ ; ಪರಿಣಾಮ ; ಸಿದ್ಧಿ : ಪಾಕದೊಳತಿವಿಷಮಂ ತಿಂಪಾಕಫಲಪ್ರತಿಮಮಮಿಲವಿಷಯಸುಖಂ (ಅಂಪ್ರ. ೪-೭೪). ೯. ಪಚನವಾಗುವಿಕೆ ; ಜೀರ್ಣವಾಗುವಿಕೆ. ೧೦. ಮಗು ; ಕೂಸು : "ಬಾಳಃ. ಪಾಕಃ . . . ಶಿಶುಃ, ಶಾಬಃ, ಡಿಂಬಃ — ಈ ೯ ಮಗವು" (ಹಡಾಖು. ೬೬-೬೫). ೧೧. ಇಂದ್ರನಿಂದ ಹತನಾದ ಒಬ್ಬ ರಾಕ್ಷಸ : "ಪಾಕಃ = ರಕ್ಷಸಂ" (ಶಾಕ್ಷ. ೦೫೮). 'ಪಾಕಶಾಸನ' ಪರಾ. ೧೦. ೧೧ : ಕುಳಭೂಭೃತ್‌ಪರಿವಂಥಿಪಾಪಕಮುಖಂ ಪಾಕಾವಹಂ . . . ಸತತಂ ಸಂಕ್ರಂದನಂ (ಶಾಕಶ. ೬-೪). ೧೨. ಮನೆಯಲ್ಲಿ ಪೂಜೆಗೊಳ್ಳುವ ಅಗ್ನಿ ; ಗೃಹ್ಯಾಗ್ನಿ. ೧೩. ಚರು ; ಹವಿಸ್ಸು : "ಹವ್ಯಂ, ಪಾಕಃ, ಚರುಃ, ಸಾನ್ನಾಯ್ಯಂ. ಹವಿಃ — ಈ ೫ ಚರು" (ಹಡಾಖು. ೬೪-೬೬). ೧೪. ತೇಜಸ್ಸಿನ ಸಂಯೋಗ : ಪೃಥಿವಿಯಲ್ಲಿ ರೂಪ, ರಸ, ಗಂಧ, ಸ್ಪರ್ಶ ಇವು ಪಾಕದಿಂದ ಬದಲಾವಣೆ ಹೊಂದುವುವು. ಪಾಕವೆಂದರೆ ತೇಜಸ್ಸಿನ ಸಂಯೋಗ (ಶಾಕಕ್ಷ. ೨೫೮). ೧೫. [ಕಾವ್ಯಮೀ] ಅರ್ಥಗಾಂಭೀರ್ಯ ; ಪ "ಅರ್ಥಗಭೀರತೆಗೆ ಪಾಕವೆಂದು ಹೆಸರು. ಕೆಲವು ಕಾವ್ಯಗಳಲ್ಲಿ ಅರ್ಥವೂ ಅದರ ಸ್ವಾರಸ್ಯವೂ ಸಂಲಭವಾಗಿದ್ದು ಕ್ಲೇಶವಿಲ್ಲದೆ ತಿಳಿಯುವುದು ; ಮತ್ತೆ ಕೆಲವುಗಳಲ್ಲಿ ಅರ್ಥವು ಗೂಢವಾಗಿದ್ದು ಅದು ತಿಳಿಯಬೇಕಾದರೆ ಬುದ್ಧಿಕ್ಲೇಶವಾಗುವುದು" (ಕೃಬಿ. ೨೫೬.) : ಗುಣಗಣ ಮಣಿಯರಮನಿಸೆ ವೃತ್ತಿ ವಿಶ್ವರಂಬಡೆಯೆ ಪಾಕಂ ಲೋಕೋತ್ತರಮೆನಿಸೆ ಶಯ್ಯೆ ರಯ್ಯಮಾಗೆ ಬಂಧಮಗುಂದಲವಡೆಯೆ . . . ಗದ್ಯವದ್ಯ ಚಂಪ್ರಪ್ರಮುಖಪ್ರಬಂಧಂಗಳಂ ಪೇಳ್ದ (ಅಾಕಕೇ. ೩-೦೯ ಪ). 'ದ್ರಾಕ್ಷಾಪಾಕ'. 'ನಾರಿಕೇಳಪಾಕ' ಪರಾ. ೧೬. [ಜ್ಯೋತಿ] ಗ್ರಹಗತಿ : ದಶೆ : 'ಪಾಕನಾಥ' ಪರಾ. [ಸಂ.]

ಪಾಕ$_2$. **ಪಾಕ್ಕು** (ನಾ). ಸ್ವಚ್ಛವಾದುದು ; ಸಾಪು ; ಬೊಕ್ಕಟ : ಎಲೆ ತುಂಬಾ ಬಡಿಸಿಕೊಂಡು ಪಾಕವಾಗಿ ಒಂದಗುಳನ್ನೂ ಬಿಡದೆ ಚೆನ್ನಾಗಿ ಕುಮ್ಮರಿಸುತ್ತಾಳೆ ಹೊಟ್ಟೆಯೊಳಕ್ಕೆ (ಪಾಮುಠಾ. ೧೦೬). **ಪಾಕ್ಕು** : ಬೀದಿಗಳೆಲ್ಲ ಆ ದಿನ ಬೊಕ್ಕಟವಾಗಿದ್ದುವು. ಸುಬೇದಾರರು ಜಮೂಬಂದಿಗೆ ಬರುತ್ತಾರೆಂದು ಶೇಕದಾರರು ಏರ್ಪಾಡಿಗೆ ನಿಂತು ಪಾಕು ಮಾಡಿಸಿದ್ದರು (ಸಾಂಕ್ರಿ. ೫೬).

ಪಾಕು ಮಾಡು = ಹಸನುಗೊಳಿಸಿ ; ಸ್ವಚ್ಛಮಾಡು: ಆಡವಿಯಲ್ಲಿನ ರಸ್ತೆಗಳ ಅಕ್ಕಪಕ್ಕಗಳಲ್ಲೂ ಪಾಕುಮಾಡಿ ಅಲ್ಲಿ ಸಸ್ಯಗಳು ಇರದಂತೆ ನಿರ್ಮೂಲಿಸುತ್ತಾರೆ (ಕಶೋಗೀ. I,೧೧೧) ; ಬಂಜರುಭೂಮಿಯನ್ನು ಪಾಕು ಮಾಡಿ ಉಳುಮೆಗೆ ಅರ್ಹಮಾಡುವುದು (ಅಂಕಸಂ. ೨೧೧).

[← ಪಾರ. ಹಿಂ. ಪಾಕ್]

ಪಾಕಂಗೈ (ಕ್ರಿ). ಅಡುಗೆ ಮಾಡು: ಸಲವಿಂದೊದವಿಸಿದಳಖಿಲಸದ್ರವ್ಯಮಂ ಬಳಿಕ ಚಂಡಿ ಪಾಕಂಗೈದಳು (ಕೃಬಡಾ. ೧೦-೩೯).

[ಪಾಕ$_1$ + ಕೈ$_{11}$ (< ಕೆಯ್$_1$)]

ಪಾಕಂಪೊಪ್ಪು (ನಾ). (ಹೊಸ) ಬೆಲ್ಲವ ಪಾಕಕ್ಕೆ ಹುರಿದ ಕಡಲೆಕಾಯಿ ಬೀಜ, ಕಡಲೆ, ಗಸಗಸೆ, ಎಳ್ಳು ಮುಂತಾದುವನ್ನು ಹಾಕಿ ತಯಾರಿಸುವ ಒಂದು ಬಗೆಯ ಸಿಹಿತಿಂಡಿ : ಪಾಠವ್ಯಪಚನ ರುಚಿಸದೆ ಹೋದರೆ ಪಾಕುಪೊಪ್ಪನು ಮೆಲ್ಲುವೆವು (ಕಿರಾಂ. ೧೬-೩೦).

[ಪಾಕ$_1$ + ಪೊಪ್ಪು (< ಪರುವು)]

ಪಾಕಂಬೋಗು (ಕ್ರಿ). (?) : ನೆಲವಾಳು ಪಾಕಂಬೋವಲ್ಲಿ ಮೂಪರಲೋರ್ವರ್ ಸಕ್ತಡಲ್ಲದೆ ಭೂಮಿ ನಿಲ್ಲದು (ಸಾಇತಿ. IX-I, ೫೬-೦೮ ; 1059). [?]

ಪಾಕಗೂಳು (ನಾ). ಕುದಿದು ಮಂದವಾದ ಕಬ್ಬಿನ ರಸ : ಸಂದುಸಂದನು ಕಡಿದು ಕಬ್ಬನು ತಂದು ಗಾಣವಲಿಕ್ಕಿ ಅರೆದಡೆ ಬೆಂದು ಪಾಕಗೂಳ [ಶಾಣಂ. ಪಾಕಾಗುಳ್ಳ] ಸಕ್ಕರೆಯಾಗಿ ನೊಂದೆನೆಂದು ಸಿಹಿಯು ಬಿಟ್ಟಿತ್ತೆ (ಪುಹಾರೀ. ಬ. ೫೬-೫೬). [ಪಾಕ$_1$ + ಕೂಳು$_2$ (< ಕೂಬು$^*_1$)]

ಪಾಕಗೊಳ್ (ಕ್ರಿ). ಚೆನ್ನಾಗಿ ಬೇಯು ; ಪಕ್ವವಾಗು : ರಸಮಾದಿಗಳ್ ಪಾಕಗೊಂಡಿರಲು ಪಲದೇಯುಮಕ್ಕು ಬೇಯದ ರಸಂ ಪಾನಂಗಳೇದೆನಿಕ್ಕುಂ (ಪುಂಗಡಾ. ೬೯-೨). [ಪಾಕ$_1$ + ಕೊಳ್$_1$]

ಪಾಕಗೊಳಿಸು (ಕ್ರಿ). ಹದಗೊಳಿಸು : ಈ ಉಷ್ಣತೆಗೆ ಅನುಗುಣವಾಗಿ ಹಸಿರನ್ನು ಪಾಕಗೊಳಿಸಲು ಹಾಗೂ ಅವನ್ನು ಕೆಡದಂತೆ ಇರಿಸಲು ಬರುತ್ತದೆ (ಗೋಗ್ರಾಶ. ೯೪). [ಪಾಕ$_1$ + ಕೊಳು (< ಕೊಳ್$_1$) + ಇಸು$_3$]

ಪಾಕಡ ' ಫಾಕಡ ' ನೋ.

ಪಾಕಡಾ ' ಫಾಕಡ ' ನೋ.

ಪಾಕದಂಡ (ನಾ). (?) : ಚೋರ ಪಾಕದಣ್ಣ ದಶಾಪರಾಧಂಗಳವ್ವಲ್ಲಿಂ ಪೂರ್ವಾಚಾರಂ (ಎತಿ. XIV, ೦೯೧-೦೯ ; 725). [?]

ಪಾಕನಾಥ (ನಾ). [ಜ್ಯೋತಿ] ಮನುಷ್ಯನ ಜೀವನದ ಮೇಲೆ ಶುಭಾಶುಭ ಫಲಗಳನ್ನು ಬೀರುವ ಗ್ರಹ : ಶ್ರಿದಶಪಡಾಮುರಾಶಿಗಳೊಳಕ್ಕಿ ವಿಲಗ್ನದೊಳಕ್ಕಿ ಮೇಣ್ ಸುಹೃತ್‌ಸವನದೊಳಕ್ಕಿ ಸದ್ಗ್ರಹವರ್ಗದೊಳಕ್ಕಿರೆ ಪಾಕ[ಶಾಣಾ. ಚಾಪ]ನಾಥನಲ್ಲದೊಡೆ ದಶಾಧಿನಾಥನ ಸುಹೃದ್ಭವನೋಪಚಯತ್ರಿಕೋಣಗೇಹದೊಳಿರೆ ಚಂದ್ರನಿರ್ದೊಡೆ ಶುಭಾನಿಲೆ ಬೇಱೊಡೆಯೊಳ್ ಶುಭೇತರರ್ (ಶಾಕಕ್ಷ. ೯-೦೫).

[ಪಾಕ$_1$ + ನಾಥ]

ಪಾಕನೇಮಿ (ನಾ). ಬೇಯಿಸಿದುದನ್ನು ಸೇವಿಸುವುದಿಲ್ಲವೆಂಬ ನಿಯಮವುಳ್ಳವನು : ಸರ್ವಸಂಗಪರಿತ್ಯಾಗಿ ಎಂದೊಡೆ ಭೋಗಕ್ಕೆ ಪುಟ್ಟಿಗಿಸುವ ಪಾಕನೇಮಿ ಎಂದೊಡೆ ಪಡ್ರಸಕ್ಕೆ[ಕಾಣಂ. ಪಡುರಸಾನ್ನಕ್ಕೆ]ಆಶಿಸುವ (ಸಪಾಕ. ೧೨-೧೯). [ಪಾಕ$_1$ + ನೇಮಿ$_1$]

ಪಾಕಯಜ್ಞ (ನಾ). ೧. ಮನೆಯಲ್ಲಿ ನಡೆಸುವ ಹೋಮಾದಿ ಕಾರ್ಯ : ವೈಶ್ವದೇವಹೋಮ, ಬಲಿಕರ್ಮ, ನಿತ್ಯಶ್ರಾದ್ಧ ಮತ್ತು ಅತಿಥಿ ಭೋಜನ ಎಂಬ ನಾಲ್ಕು ಪಾಕಯಜ್ಞಗಳು ; P "ಹುತ, ಅಹುತ, ಪ್ರಹುತ, ಪ್ರಾಶಿತ, ಬಲಿದಾನ (ಮಹಾಭಾ. ಅಶ್ವಮೇಧಿಕ. ವೈಪ ೩೭೬)" (ಕ್ರೀಪಕ್ರ. ೩೫೪). ೨. ಅಡುಗೆ . [ಪಾಕ$_1$ + ಯಜ್ಞ]

ಪಾಕರ ' ಪಕ್ಕರೆ$_1$ ' ನೋ.

ಪಾಕರಿಪು (ನಾ). ಪಾಕನೆಂಬ ದೈತ್ಯನ ವೈರಿ ; ಇಂದ್ರ : ಪಾಕರಿಪುತನಯನಂಗಮನಾ ಕಪಟಕಿರಾತನೋವಿ ಮೆಲ್ಲನೆ ತಿವಿದಂ (ಕಭಕಂ. ೪-೮೨). [ಪಾಕ$_1$ + ರಿಪು]

ಪಾಕಲ್ ' ಪಾಗಾರ ' ನೋ.

ಪಾಕಲು$_1$ ' ಪಾಗಾರ ' ನೋ.

ಪಾಕಲು$_2$, ಪಾಕಳ (ನಾ). ೧. ಆನೆಗೆ ಬರುವ ಜ್ವರ. ೨. ಒಂದು ಬಗೆಯ ಗಿಡ ; ಚಂಗಲಕೋಷ್ಮ : "ವ್ಯಾಧಿಃ, ಕುಷ್ಮಂ. ಪಾರಿಭಾವ್ಯಂ, ವಾಪ್ಯಂ, ಪಾಕಲಂ, ಉತ್ಪಲಂ—೬ ಚಂಗಲಕೋಷ್ಮ" (ಸಿದ್ಧಾಂತಿ. ೧೪೧). **ಪಾಕಳ** : ೧. 'ಕೂಟಪಾಕಳ' ಪರಾ. [ಸಂ.]

ಪಾಕಲು ' ಪಾಗಾರ ' ನೋ.

ಪಾಕವ್ಯ (ನಾ). ಅಡುಗೆ : ಇದನಜ್ಞಿತ ಬಳಕಿಲ್ಲವಜ್ಞಾತದ ಗಸಣೆ ನೋಡುವರೆ ಅಪ್ಯತವ ಪುಗದಲೀಂಟಿದವಂಗೆ ಪಾಕವ್ಯದಲಿ ತೊಡಕಿಲ್ಲ (ಪಶಾಗ. ೧೧-೬೫-೨೩). [<ಸಂ. ಪಕ್ವವ್ಯ ?]

ಪಾಕಶಾಲೆ (ನಾ). ಅಡುಗೆಮನೆ: "ರಸವತೀ, ಪಾಕಸ್ಥಾನಂ, ಮಹಾನಸಂ—೩ ಅಡಿಗೆಯ ಸಾಲೆ, ಅಡಿಗೆಮನೆ, ಪಾಕಶಾಲೆ" (ಸಿದ್ಧಾಂತಿ. ೩೪೩). [ಪಾಕ$_1$ + ಶಾಲೆ$_3$]

ಪಾಕಶಾಸನ (ನಾ). ಪಾಕನೆಂಬ ದೈತ್ಯನನ್ನು ದಂಡಿಸಿದವನು ; ಇಂದ್ರ : "ಇಂದ್ರಃ . . . ಪಾಕಶಾಸನಃ, ದಿವಸ್ಪತಿಃ, ಬಿಡೌಜಾಃ, ಪುರುತ್ವಾನ್, ಮೇಘವಾಹನಃ — ಈ ೩೯ ದೇವೇಂದ್ರನ ಪೆಸರ್" (ಹಣಾಯು. ೧೦-೩೪); ಅನಿಮೇಷಾವಳಿ ಪಾಳಿಗಟ್ಟಿ ತರದಿಂ ದುಗ್ಧಾಬ್ಧಿಯಂ ಪುಟ್ಟಿ ಕಾಂಚನರೂಪ್ಯಂಗಳ ಕುಂಭದಿಂ ಮೊಗೆದು ಜೈಜೈಯೆಂಬಿನಂ ಪಾಕಶಾಸನಸಹಸ್ರಾಗ್ರದೊಳಿತ್ತಿ ತಂದು ಕುಡೆ ಕೊಂಡಿಂದ್ರಂ ಜನೇಂದ್ರಂಗೆ ಪುಜ್ಜನಪಂ ಕುಂದದೆ ಮಾಬ್ಬಂ (ಶುಚಮಾ. ೧-೬೬) ; ಪಾಕಶಾಸನನೈದಿ ಪೃತ್ರನ ಢಾಕುಗೆಡಿಸಿ ದಧೀಚಿಯಸ್ಥಿಯಲ್ಲಿ ಹೊಯ್ಕಲು ದಾನವಸತಸು ನೀರೊಳಿಡಗೆಡೆಯೆ (ಕುವಾಕಾ. ೪-೧೦೬). [ಸಂ.]

ಪಾಕಶಾಸನಿ (ನಾ). ೧. ಇಂದ್ರನ ಮಗ. ೨. ಜಯಂತ : "ಇಂದ್ರಃ . . . ಯುಭುಕ್ಷಾ — ೩೫ ದೇವೇಂದ್ರನ ಹೆಸರುಗಳು . . . ಜಯಂತಃ, ಪಾಕಶಾಸನಿಃ — ೨ ಅತನ ಕುಮಾರನ ಹೆಸರುಗಳು" (ಸಿದ್ಧಾಂತಿ. ೧೧). ೩. ವಾಲಿ. ೪. ಅರ್ಜುನ. [ಸಂ.]

ಪಾಕಶಾಸ್ತ್ರ (ನಾ). ಅಡುಗೆಯ ವಿಧಾನವನ್ನು ತಿಳಿಸುವ ಶಾಸ್ತ್ರ ; ಸೂಪಶಾಸ್ತ್ರ : ಒಗ್ಗಲಿ ರಾಮಪಂಡಿತ ಮತ್ತು ನಂಜಿಭಟ್ಟರು . . . ತಮ್ಮ ವರುಷದ ಸಂಪಾದನೆಯನ್ನು ಪಾಕಶಾಸ್ತ್ರದ ಪಾಂಡಿತ್ಯದಿಂದ ಗಿಟ್ಟಿಸಿಕೊಂಡು ಬರುತ್ತಿದ್ದರು (ಕಂಬಹು. ೦೦). [ಪಾಕ$_1$ + ಶಾಸ್ತ್ರ]

ಪಾಕಶೇಷ (ನಾ). ಅಡುಗೆಯನ್ನು ಬಳಸಿದ ನಂತರ ಉಳಿದುದು : ಕಿಂಚಿತ್ಪಾಕಶೇಷವ ಕೊಂಡು ಬಂದೊಡೆ ಕೃಷ್ಣನದ ಕೈಗೊಂಡು ಸವಿದನು (ಕುವಾಅ. ೧೬-೪೦). [ಪಾಕ$_1$ + ಶೇಷ]

ಪಾಕಸ್ಥಾನ (ನಾ). = ಪಾಕಶಾಲೆ : "ಪಾಕಸ್ಥಾನಂ, ರಸವತೀ, ಮಹಾನಸಂ—೩ ಬಾಣಸಿನ ಮನೆ" (ಹಣಾಯು. ೪೯-೧೪೦). [ಪಾಕ$_1$ + ಸ್ಥಾನ]

ಪಾಕಳ ' ಪಾಕಲು$_2$ ' ನೋ.

ಪಾಕಾರಿ (ನಾ). = ಪಾಕರಿಪು : ಪೆಜಸಾರ್ ಕೋಣಪ ನೂಂಕದಿರ್ ಪವನ . . . ಪಾಕಾರಿ ಬಂದೆಜಗೈ (ಕಭಕಂ. ೧-೮೩). [ಸಂ.]

ಪಾಕಿ (ನಾ). ೧. ಹಣ : ಪಗಹೆಣ್ಣುಗಳ ನೋಡಿ ಪಾಕಿಗಳನೀಡಾಡಿ ಅರಿತೊಂದು ಕಡೆಗೆ ಕರೆವೇ ಎಲೆ ಪುರುಳೆ ಹರುಷಿಂದವಳ ನೆರೆವೇ (ಪಾರಿಕಿ:. ೩೮) ; ಜೋಕೆಯಿಂ ಮೂಗುತಿಯನೊಯ್ದು ಆಕೆ ಗಂಡನ ಕಣ್ಣಿಗೇ ತಾನ್ಹಾಕಿದನು ಪಾಕಿ ಕೊಡುಯೆನುತ (ಕಭಂ. ೨೩೫). ೨. ಚಿಕ್ಕ ಬೆಲೆಯ ನಾಣ್ಯ : ಪಾಕಿಗೆ ಚಿಂತಿಸಿ ಪಣವ ನೀಗಿದರೆಂಬ ಪಾಕಿಗೆ ಬಹರೆ (ಕರಕ. ೭೦-೧೩) ; ಪಾಕಿಗೆ ಒಮ್ಮಾಣವಾದರೂ ಪಾಟಿಯ ಬರ ತಪ್ಪಲಿಲ್ಲ (ಗಾಪ). [<ಪಾಗ$_1$]

ಪಾಕಿಗ (ನಾ). ಅಡುಗೆ ಮಾಡುವವನು ; ಬಾಣಸಿಗ : ಪಾಕುಳಿಗಂ, ಪಾಕಿಗಂ, ಪಾಕಕರ್ತಂ, ಅಡುಗುಳಿಗಂ, ಅಡುಗಿಗಂ ಸ ಏವ (ಕಣ್ಮಾಖ. ೪೦೦ ಕ್ಯಾಖ್ಯಾ). [ಪಾಕ$_1$ + —ಇಗ]

ಪಾಕಿಸು (ಕ್ರಿ). ಬೇಯಿಸು : ಅಡು : ಹೃದಯದಲಿ ನೆಲಸಿಹ ಭರದ ಕೋಪವೆ ಬೀಜವದರಲಿ ನೆರೆದ ಬಲುಬಿಳಿ ಫಲವ ಮುಸಲದಿ ಧಳಿಸಿ ಪಾಕಿಸುತ ಧುರದ ಹಬ್ಬದಿ ಭೂತಕೋಟಿಗೆ ಚಿರದಲಾತಣವಿಕ್ಕಿಸುವೆ (ಕೋಗಯು. ೨೩-೬೧) ; ತನಿವಾಲ ಶರ್ಕರೆಯ ನಾಡೆ ಪಚನಿಸುತ . . . ಏಲಕ್ಕಿಯಂ ಕೊನರಿಸುತ ಪಾಕಿಸುತ್ತ (ಅಂಗಪು. ೬-೩). [ಪಾಕ$_1$ + —ಇಸು$_3$]

ಪಾಕೀಜಾ, ಪಾಕೀಜು (ನಾ). ಸ್ವಚ್ಛತೆ ; ನೈರ್ಮಲ್ಯ ; ಶುದ್ಧಿ : ಪೂರ್ವದಲ್ಲಿ ಅಂಚಿಗಲಾಖೆಯು ಗ್ರಾಮಗಳ ಪಾಕೀಜಾ ಮತ್ತು ಬಂದೋಬಸ್ತು ಮೊದಲಾದ ಇಲಾಖೆಗಳೂ ಬೇರೆ ಇರಲಿಲ್ಲ (ಪಾಳಣಾ. ೩೩). **ಪಾಕೀಜು** : ಜಮಿನು ಪಾಕೀಜು ಮಾಡಿಸಿದ್ದು ಯಾರಪ್ಪನ ಮನೆ ಗಂಟು? (ಕಂದಕೋ. ೧೪೦) ; ಅಲ್ಲಿ ನೀರು ದೀಪಗಳ ಸೌಕರ್ಯವಾಗಲಿ ಪಾಕೀಜು ವ್ಯವಸ್ಥೆಯಾಗಲಿ ಇರಲಿಲ್ಲ (ಡಾದಾಸ. ೧೩೦). [←ಪಾರ. ಪಾಕೀಜಹ್ ; ಹಿಂ. ಪಾಕೀಜಾ]

ಪಾಕೀಜು ' ಪಾಕೀಜಾ ' ನೋ.

ಪಾಕೀಟು, ಪಾಕೆಟ್ಟು (ನಾ). ೧. ಲಕೋಟೆ : ಅವಳ ಪತ್ರವನ್ನು ತನ್ನ ಟ್ರಂಕಿನ ತೀರ ಬುಡದ ಇನ್ನೊಂದು ಪಾಕೀಟಿನಲ್ಲಿ ಬಚ್ಚಿಟ್ಟು . . . ಬೀಗ ಹಾಕಿದನು (ಅಪ್ರ. ೧೪೭) ; ಮೆಹಬೂಬ . . . ಒಂದು ಕಾಗದದ ಪಾಕೀಟನ್ನು ಹೊರಗೆ ತೆಗೆದು . . . ಅದರಲ್ಲಿ ಆ ಹತ್ತೂರ ನೋಟುಗಳ ಸುರುಳಿಯನ್ನು ಸೇರಿಸಿ ರಾಘಪ್ಪನ ಬರವನ್ನು ಎದುರು ಕಾಯುತ್ತ ಕುಳಿತುಕೊಂಡಳು (ಗಂಕಾಖಾ. ೧೪೨). ೨. ಜೇಬು ; ಕಿಸೆ : ಅಂಗಿಯ ಪಾಕೀಟಿನಲ್ಲಿ ಚಿಲ್ಲರೆಯಿರಲಿಲ್ಲ (ಕೂಡ). **ಪಾಕೆಟ್ಟು** : ೩. ಹಣವಿಡುವುದಕ್ಕಾಗಿ ಮಾಡಿದ ಚರ್ಮದ ವಡಿಕೆ ಚೀಲ : ಬಸ್ಸಿನಲ್ಲಿ ನನ್ನ ಹಣದ ಪಾಕೆಟ್ಟನ್ನು ಯಾರೋ ಹಾರಿಸಿದರು (ಕೂಡ). [←ಇಂ. Pocket]

ಪಾಕ್ಕು$_1$ ' ಪಾಗು$_1$ ' ನೋ.

ಪಾಕ್ಕು$_2$ ' ಪಾಕ್ಕ$_2$ ' ನೋ.

ಪಾಕ್ಕು$_3$ ' ಪಾಯ್ಕು$_2$ ' ನೋ.

ಪಾಕುಳಿ (ನಾ). ಅಮೇಧ್ಯ ; ಮಲ : ಭವಪಾಶದ ಪಾಕುಳಿದಲ್ಲಿ ಬಿದ್ದು ನಿಶ್ಚಟಭಕ್ತನೆಂದಡೆ ಒಪ್ಪುವನೆ ಐಘಟಪೂಜಿತ ರಾಮೇಶ್ವರಲಿಂಗ (ಪಾಶಿಂ.ಳ. ೩೩-೨೨) : ಪಾಕುಳಿದೊಳಗಣ ಕ್ರಿಮಿಯಂತೆ ಪೊವಕುಳಿಗೊಂಬಂದು ನೀನಾವ ಕುಲ ಹೇಳಿರೇ (ಸರ್ವಕ. ೧೭೫-೮೫೯) ; ಸಲೆ ಕಾಯ್ದುರ್ಕಿನ ದಾರೆಯಂ ಬಿಡು ನವದ್ವಾರಂಗಳೊಳ್ . . . ಬಾಲವ್ಯಾಪಂ ಕೀವಾಗಿ

ತೀವಿರ್ದ ಸೀಂಬುಟ್ಟುವಂ ಬಾಯ್ಗೆಱೆ ನೂಂಕು ಪಾಕುಳದೊಳ್ . . . ಎಂಬ ಕಾಲಯಮನಂ ಕಂಡೆಂ (ದಶಕು. ೩-೦೭). [?]

ಪಾಕುಳಿಗ (ನಾ). = ಪಾಕಿಗ : ಪಾಕುಳಿಗಂ, ಪಾಕಿಗಂ, ಪಾಕಕರ್ತಾ (ಕಬ್ಬಾಸು. ೪೦೦ ಪ್ರಾಕ್ಯಾ). [ಪಾಕ$_1$ + – ಉಳಿಗ$_3$]

ಪಾಕುಳಿಗಿತಿ (ನಾ). ಅಡುಗೆಯವಳು ; ರಂದಣಗಿತ್ತಿ : ದೇವುಳಿಗಿತಿ, ಪಾಕುಳಿಗಿತಿ, ಕಯ್ಯುಳಿಗಿತಿ (ಕಬ್ಬಾಸು. ೦೯೨ ಪ್ರಯೋ).

[ಪಾಕುಳಿಗ + – ಇತ್ತಿ$_1$ (< – ಇತ್ತಿ)]

ಪಾಕೆಟ್ಟು 'ಪಾಕೀಟು' ನೋ.

ಪಾಕ್ಯ (ಗು). ೧. ಬೇಯಿಸಬೇಕಾದ. ೨. ಬೇಯಿಸಿ ಸಿದ್ಧಪಡಿಸಿದ. (ನಾ). ೩. ಒಂದು ಬಗೆಯ ಉಪ್ಪು ; ಅಟ್ಟುಪ್ಪು : "ಪಾಕ್ಯಂ, ಬಿಡಂ—ಈ ೨ ಅಟ್ಟುಪ್ಪಿನ ಹೆಸರು" (ಸಿದ್ಧಾಂತಿ. ೨೫೬). [ಸಂ.]

ಪಾಕ್ಷಿಕ (ಗು). ೧. ಹದಿನೈದು ದಿನಗಳ ಗಡುವಿನ ; ಹದಿನೈದು ದಿನಗಳಿಗೊಮ್ಮೆ ಬರುವ : ಇಬ್ಬರು ಸದಸ್ಯರು ಪಾಕ್ಷಿಕ ಸಭೆಯಲ್ಲಿ ... ಒಂದೊಂದು ಪ್ರಬಂಧವನ್ನು ಓದಬೇಕಾಗಿತ್ತು (ದಾದಾಸ. ೦೭). ೨. ಒಂದು ಪಕ್ಷಕ್ಕೆ ಒಲಿದ ; ಒಂದು ಪಂಗಡಕ್ಕೆ ಸೀಮಿತವಾದ. (ನಾ). ೩. ಹದಿನೈದುದಿನಗಳಿಗೆ ಸಂಬಂಧಪಟ್ಟುದು ; ಒಂದು ಪಕ್ಷಕ್ಕೆ ಸೀಮಿತವಾದುದು : ಪಾಕ್ಷಿಕವೊ ಮಾಸಿಕವೊ ವಾರ್ಷಿಕವೊ ಏನೇನೊ ಬರುವ ಯೋಜನೆ ಸಕಾಲಕ್ಕೆ ಬರಲಿ (ಸೇಪಂ. ೯೭-೧೦). ೪. ಹದಿನೈದು ದಿನಗಳಿಗೊಮ್ಮೆ ಪ್ರಕಟವಾಗುವ ಪತ್ರಿಕೆ : ಮಾಸಿಕವಾಗಿದ್ದ ಪತ್ರಿಕೆ ಈಗ ಪಾಕ್ಷಿಕವಾಗಿ ಮಾರ್ಪಟ್ಟಿದೆ (ರೂಢಿ). ೫. [ಜೈನ] ಹಿಂಸೆಯನ್ನು ತ್ಯಾಗಮಾಡಿ ಶ್ರಾವಕಧರ್ಮವನ್ನು ಆಚರಿಸುವವನು . ಕಷಾಯಂಗಳ ಕ್ಷಯೋಪಶಮ ಹೀನಾಧಿಕಭಾವದ ವಶದತ್ತಣಿಂದವು ದಾರ್ಶನಿಕ ಮೊದಲಾದ ಹನ್ನೊಂದುಸ್ಥಾನದ ವಶವನುಳ್ಳ ಪಾಕ್ಷಿಕನಾಪೇಕ್ಷೆಯಿಂದವು ಹಿರಿದು ಸಂಪನ್ನನಾಹಾತನು ನೈಷ್ಠಿಕನಹನು (ಶಾಗಾರ. ೨೯-೦). [ಸಂ.]

ಪಾಖಂಡ (ನಾ). ೧. ವೇದಧರ್ಮವನ್ನು ಖಂಡಿಸುವ ನಾಸ್ತಿಕ ಮತದವನು ; ಧರ್ಮಲಂಡ ; ನಾಸ್ತಿಕ. ೨. ಧರ್ಮಲಂಡತನ ; ಸ್ತಿಕತೆ : ರಾಮಗುಣಸಮೂಹವು ಕುಪಂಥ, ಕುತರ್ಕ . . . ದಂಭ, ಪಾಖಂಡಗಳೆಂಬ ಉರುವಲಗಳನ್ನು ಸುಡುವ ಪ್ರಚಂಡಅಗ್ನಿಯಾಗಿರುವುದು (ಕುಳಸೀ. ೯). [ಸಂ.]

ಪಾಖಂಡಮತ (ನಾ). ನಾಸ್ತಿಕಮತ : ಕೋಪರ್ನಿಕಸನ ಹಿಂದೆ ಅವನ ಮತಕ್ಕೆ ಪಾಖಂಡಮತವೆಂಬ ಹೆಸರು ಬಿತ್ತು (ಮುಂಬಯಿ. ೩-೨೨೦).

[ಪಾಖಂಡ + ಮತ]

ಪಾಖಂಡಿ (ನಾ). = ಪಾಖಂಡ ೧ : ಬ್ರಹ್ಮವಿಷ್ಣುಮಹೇಶ್ವರರನ್ನು ಭೇದಬುದ್ಧಿಯಿಂದ ನೋಡುವವನು ಪಾಖಂಡಿಯೆಂದು ಹೇಳಿದೆ (ಭಾಕದ. ೦೪೨); ಅವನ ಮನಸ್ಸು ಮರುಳಾರ್ಯನಂಥ ಪಾಖಂಡಿಯ ದರ್ಶನದಿಂದ ಇನ್ನಷ್ಟು ಕ್ಷುಬ್ಧವಾಯಿತು (ಅಕ್ರಮ. ೯೬).

[ಸಂ. ಪಾಖಂಡಿನ್]

ಪಾಗ$_1$, ಹಾಗ (ನಾ). ೧. ಕಾಲುಭಾಗ; ನಾಲ್ಕನೆಯ ಒಂದು ಅಂಶ : "ಪಾಗ – ಪಾದ = ಕಾಲಂಶ" (ಕಪ್ಪಕೋ. ೨೫). ೨. ಚಿಕ್ಕಬೆಲೆಯ ಒಂದು ನಾಣ್ಯ ; ಹಣದ ಕಾಲುಭಾಗ : ೨೦ ಸೀರೆಯ ಸುಂಕ ಪೊದಕೆಗೆ ಪಾಗ ೨ ಸೀರೆಗೆ ಪಾಗ ೧ (ಪಾಂದೇಡ್. ೩-೨೨ ಪ; 1042); ಅಯ್ಯೂರ್ವ್ವರುಮಿಟ್ಟು ಪಸುಂಬೆಯ ಸೇಸೆಯಲು ಪಾಗಮುಮಂ ಅಂಗಡಿಯಲು ಸೊಟಿಗೆ ಭತ್ತಮ ಬಿಟ್ಟರ್ (ಸೌಇಇ. IX–1, ೦೩೯-೪೦ ; 1074) ; ಕೊಯ್ಲಾಳಿಗಳೆಲ್ಲರುಮೆತ್ತಿಕಾಱರು ದೇವರ್ಗೆ ನನ್ದಾದೀವಿಗೆಗೆ ಬಿಟ್ಟ ಧರ್ಮ ಏಣಿಗೆ ಪಾಗ (ಸೌಇಇ. IX–1, ೦೪೦-೩೫; 1136); ಸುಸಿಲೇಂ ಪೇಟ್ಟ್ ಪಾಗದೊಳ್ ತೀರದೇ (ಕಾಪ್ಯಾಪ. ೬೩೩). ೩. ತೂಕದ ಒಂದು ಪ್ರಮಾಣ : "ಪಾಗಮವು ನಾಲ್ಕಾಗೆ ಪಣಂ . . . ಬಳ್ಳಮವು ನಾಲ್ಕೆನಲು ಕೊಳಗಮವು ವಿಂಶತಿಗೆ ಖಂಡುಗಾಖ್ಯಂ" (ಮಂಗಣಾ. ೦೦೪-೧೦). **ಹಾಗ** : ೧. ಹೆಣನ ತಲೆಯಕ್ಕಿ ನೆಲದೆಱೆಯ ಹಾಗ ಶವದುಡಿಗೆಯೆನಗಾಯ್ತು (ಹಕಕಾ. ೦೧-೩೮); ಇಲ್ಲಿ ಅಭಿವ್ಯಕ್ತ ಗೊಂಡಿರುವುದೇನಿದ್ದರೂ ಆ ವಿರಾಟ್‌ಪುರುಷನ 'ಹಾಗ' ಮಾತ್ರ (ಸೌಂದಸ. ೦೦೮). ೨. ಸೆಟ್ಟಿಯರೊಕ್ಕಲಿಗೆ ಹಾಗ ಎಂಟು (ಸೌಇಎ. ೦೯೪೬. ಹಾಸಗರ್. ೩೪೯-೪೩; 1036); ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ (ಬಸವ. ೧೫೮); ಹಾಗದ[ಶಾಕಾಂ. ಪಚ್ಚೆಯ] ಪಸುರ್ಮಣಿಯಂ ಕುಡಲಿಲ್ಲದಂತು ಬಾಯ್ತುಂಬುಲಮೆಂಬುದಂ ಪಡೆಯದಂತುಟೆ (ಲೀಲಾಸ. ೨-೧೦೬) ; ಹಾಗದ ಕೋತಿ ಮುಪ್ಪಾಗದ ಬೆಲ್ಲ ತಿಂತು (ಗಾದೆ). ೪. ಭಾಗ ; ಪಾಲು : ಕಾವಗೌಡಂ ತನ್ನ ಹಾಗದ ಬಳದೊಳಗೆ ಬಿಟ್ಟ ಮತ್ತರೆರಡು ಕಮ್ಮ (ಕಇ. I, ೨೪-೨೦; 1146); ಬಾಚಗಾವುಂಡನ ಹಾಗದಿಂ ಪಡುವಲು ಮತ್ತಂ (ಕಇ. I, ೨೫-೭೭; 1186) ; ಬೊಮ್ಮಗವುಡಂಗೆ ಹಾಗದ ಕೆಯ್ಯನು ಗಪುಡು ಗೊಡೆಗೆಯಾಗಿ . . . ಕೊಟ್ಟ (ಎಕ. VI. ಚಿಕ್ಕಮ. ೮೨-೪; ?).

ಹಾಗದ ಕಾಸು = ಚಿಕ್ಕಬೆಲೆಯ ನಾಣ್ಯ ಹಣ ತಿಂದು ಹುಟ್ಟಿದವನಿಗೂ ಹಾಗದ ಕಾಸು ತಿಂದು ಹುಟ್ಟಿದವಳಿಗೂ ಸಮವೆ ? (ಸಂಗಾಳ್ಯ. ೯) ; ಮೇಲೆ ಬಿದ್ದು ಬರುವ ಸೂಳೆ ಹಾಗದ ಕಾಸಿಗೂ ಬೇಡ (ಗಾದೆ). [<ಸಂ. ಪಾದ]

ಪಾಗ$_2$ 'ಪಾಗಾ' ನೋ.

ಪಾಗಡ 'ಪಾಡಗ$_2$' ನೋ.

ಪಾಗಡಿ 'ಪಗಡಿ$_2$' ನೋ.

ಪಾಗಡೆ 'ಪಾಡಗ$_2$' ನೋ.

ಪಾಗದ (ನಾ). ೧. ಪ್ರಾಕೃತಭಾಷೆ : ಸಕ್ಕದಮುಂ ಪಾಗದಮುಂ ಮದಕ್ಕುಂ ಬಗೆದಂತೆ ಸಮಱ ಪೇಟಲ್ (ಕವಿಗಾ. ೦-೪೦) ; ಸಕ್ಕದದೊಳ್ ಮುನ್ನಂ ಪಾಗದದೊಳಾದ [ಸು]ಕೃತಿಗಳೆಲ್ಲಂ ಕನ್ನಡ ಮುಡಿಗವಿದಂತೆ ಜಗನ್ನುತಮಿಾ ಕೃತಿಯೆ ತಾನಳಂಕೃತಿಯೆನಿಪಾ (ನರ್ಗಮಾ. ೦೬-೪೯) ; ಪ್ರಾಕೃತ-ಪಾಗದ (ಕಪುದ. ೨೬೮ ಪ್ರಯೋ). ೨. ಜನಸಾಮಾನ್ಯರ ಭಾಷೆ ; ದೇಶಭಾಷೆ : "ಪಾಗದಂ ನರಭಾಷಿತಂ" (ಕರ್ಣಾಶಿ. ೬೨) ; ಸಕ್ಕದದೊಳಿರ್ಪುದಂ ನಲವಿಂ ಪಾಗದದಿಂ ರಚಿಯಿಸಿ ಕೇಳ್ವೊಳ್ಪುಳ್ಳುದೆ ಸೆ (ಪಶ್ಚಿಮ. ೦-೫೪). [<ಪ್ರಾ. ಪಾಗಯ. / ಸಂ. ಪ್ರಾಕೃತ]

ಪಾಗರ$_1$ 'ಪಾಗಾರ' ನೋ.

ಪಾಗರ$_2$ 'ಪಕ್ಕರೆ$_1$' ನೋ.

ಪಾಗರಗೋಡೆ (ನಾ.) ಸುತ್ತುಗೋಡೆ ; ಪ್ರಾಕಾರದ ಗೋಡೆ ; ಪೌಳಿ : ಮಟಕೆ ಹಾಕಿದ ಪಾಗರಗೋಡೆ ಗಡಿ (ಎಕ. VIII. ತೀರ್ಥಹ. ೫೨-೧೭ ; 1641). [ಪಾಗರ$_1$ (<ಪಾಗಾರ) + ಗೋಡೆ]

ಪಾಗಲ್$_1$, ಹಾಗಲ್, ಹಾಗಲ, ಹಾಗಲು (ನಾ). ಒಂದು ಬಗೆಯ ಬಳ್ಳಿ ಹಾಗೂ ತರಕಾರಿಯಾಗಿ ಬಳಸುವ ಅದರ ಕಾಯಿ : ಸಲೆ ಪಂದಿಯ ನೆಣನುಮನಂಕೊಲೆಯ ಕಷಾಯಮುಮನೆಱೆಗೆ ಮೂಲದೊಳಾವುಂಡಲಗೆಗಿದಚ್ಚರಿಯೆನೆ ಪಾಗಲ ಕಾಯಕ್ಕುಂ (ಶೋಕೋಪ. ೬-೫೪) ; ಸಾಗರವೊಂದು ಕಂಕಣದಿನುರ್ವರೆ ಕಾವಲಿಯಿಂ ಕುಳಾದ್ರಿಗಳ್ ಪಾಗಲ ಕಾಯ್ಗಳಿಂ . . . ಕರಂ ಕಿಱಿಯವಾದುವು ಕಣ್ಗೆ ಗುಣಾವಲೋಕನಾ (ಅರ್ಧನೇ. ೬-೪) ; ಪೊತ್ತದೆ ಪೊಗೆಸುತ್ತದೆ ನಸುಬತ್ತದೆ ಕೆಂಪಡರ್ದು ಬೆಂದ ಪಾಗಲ ಕಾಯಂ ಪತ್ತೆಂಟು ತುತ್ತಿದಲ್ಲದೆ ಚಿತ್ತಂ ತಣಿಗುಮೆ (ಸೂಕ್ತಿಸು. ೦೦-೯೨). **ಹಾಗಲ್** : "ಹಾಗಲ್–ಕಾರವೇಲ್ಲ,

ಕಟಿಲ್ಲಕ, ಸುಷವಿ" (ಪಾಕರಾ. ೩.). **ಹಾಗಲ** : ಹಾಗಲ ಹಡಲಂ ಕುಳಂ ಕೂಗಲಿ ಕೂಷ್ಮಾಂಡವವರೆ ಬದನೆಗಳಿಂ ಲೇಸಾಗಿರೆ ಮಾಡಿದ ಸವಿಮೇಲೋಗರಮಂ ತಂದು ಬಡಿಸಿದರ್ ಮಾನಿನಿಯರ್ (ಧರ್ಮಪ. ೨-೫೫) ; ಕತ್ತರಿಗುಳ್ಳ ಹಡಲ ಹಾಗಲ ಕೂಗರಿ ಬದನೆ ಮೊದಲಾದ ಕಾಯ್ಗಳ ರಸಂಗಳಂ ತೆಗೆದು (ಸೂಪಶಾ. ೫-೪೦) ; ಹಾಗಲ ಬದನೆ ಹೆಗ್ಗುಳ್ಳ . . . ಹಲವು ಫಲಕಂದಗಳ ಶಾಖಾವಳಿಯ ಸವಿಯೊಪ್ಪುರಣೆ ಘಮಘಮಿಸಲಿಕೆ ಬಡಿಸಿದರು (ಅನಂರಾ. ೬-೨೫-೩೯) ; ಹಾಗಲ ಕಾಯನ್ನು ಹೇಗೆ ಅಟ್ಟರೂ ಕಹಿ (ಹಳ್ಳಿಪಾ. ೬೬). **ಹಾಗಲು** : "ಹಾಗಲು ಪೀತಪುಷ್ಪ ಕರ್ಕೋಟಕಿಯೆನಿಸಿಕ್ಕು" (ಮಂಗರಾ. ೪೪-೪೪) ; ಹರಳುಗಳಂ ಹಂದಿಗಳ ರಕ್ತವಪೆಗಳಲ್ಲಿಯೂ ಅಂಕೊಲೆ ತೈಲದಲ್ಲಿಯೂ ನೆನಸಿ ಬಿತ್ತಲು ಅದರಲ್ಲಿ ಹಾಗಲುಕಾಯಿ ಹುಟ್ಟುವುದು (ಸೌಗಂಧಿ. ೪೩೭-೦೪).

ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ = (ಆಲಂ) ದುಷ್ಟನಿಗೆ ಅದೇ ಮನೋಭಾವದ ಇನ್ನೊಬ್ಬನು ಕೊಡುವ ಸಾಕ್ಷಿ : ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ (ಗಾದೆ).

[ದೇ.॥ ತಮಿ. ಪಾಕಲ್, ಪಾವಲ್ ; ಮಲ. ಪಾವಲ್]

ಪಾಗಲ್$_2$ 'ಪಾಗಾರ' ನೋ.

ಪಾಗಲ 'ಪಾಗಾರ' ನೋ.

ಪಾಗಲು 'ಪಾಗಾರ' ನೋ.

ಪಾಗಾ, ಪಾಗ$_2$ (ನಾ). ಆನೆ ಮತ್ತು ಕುದುರೆಗಳ ಲಾಯ : ಪೂರ್ವಕಾಲದಲ್ಲಿ ಆನೆಗಳ ಪಾಗಾ ಈ ಬಾಜಾರಿನಲ್ಲಿ ಇತ್ತು (ಕಥಾಗ. ೫೨೯) ; ಮೋಜಿನ ಕುದುರಿ . . . ಪಾಂಡವರ ಮನಿಯೊಳಗ ಪಾಗಾದಾಗಿತ್ತು ಪಾಗಾದ ಗೂಟವ ಜ್ಯಾಡಿಸಿ ಕಿತ್ತು ಹೋಗುವಾಗ ಶಿಶುನಾಳಕೋಡ್ಯೋಡಿ ಬಂತು (ಕರೀಪ. ೪೭). **ಪಾಗ$_2$** : ಕುದುರಿಗೆ ಪಾಗದ ಮನೆಯಿರಲಿ ಕೋ ಪಲ್ಲಕ್ಕಿ ಅಬತಾಗಿರಿ ಚಿತ್ತರಿಗಿಮನಿಯಿರಲಿ (ಕನ್ನಶಾ. ೩೨೮).

[← ಮರಾ. ಪಾಗಾ]

ಪಾಗಾಣತಿ (ನಾ). ದಾಸಿ (?) : ಮಾರುವುದು ನಿನ್ನ ತೊತ್ತಿನ ಮಕ್ಕಳಿಗೆ ಮಾರುವುದು ನಿನ್ನ ಪಾಗಾಣತಿಯರಿಗೆ ಮಾರುವುದು ನಿನ್ನ ಬೋನಕಾರ್ತಿಯರಿಗೆ . . . ಮಾರದಿರು ಎನ್ನ ಮಾರಿಗೆ ಗುರಿಮಾಡಿ (ಮೋಕ್ಷದೀ. ೭೦-೬). [?]

ಪಾಗಾರ, ಪಾಕಲ್, ಪಾಕಲ$_1$, ಪಾಕಲು, ಪಾಗರ$_1$, ಪಾಗಲ್$_2$, ಪಾಗಲ, ಪಾಗಲು (ನಾ). ಸುತ್ತುಗೋಡೆ ; ಪ್ರಾಕಾರ ; ಪೌಳಿ : ಝಗೆಯ ಲಹರಿಯ ಜಾಳಿಗೆಯ ಪಚ್ಚಿಗಳ ಪಾಗಾರದ ಸುರತ್ನಾಳಿಗಳ ಲೆಸೆದುದು ರಾಜಸಭೆ (ಕುಷ್ಠಾಸ. ೦೩-೨೫) ; ಕಟೆಯ ಪಾಗಾರವು (ಮೂಂಕಶಾ. ೦೯೪೦, ಕುಮಟಿ. ೧೦೩-೯; 1475) ; ಮರಳಿನ ಪಾಗಾರವಳಿವುದು ಖಚಿತವು (ಗಾಥಾಸ. ೩-೪೫) ; ಮನೆಯ ಸುತ್ತಲೂ ಎತ್ತರವಾದ ಪಾಗಾರವನ್ನು ಮಾಡಿಸಿದನು (ಮುಹಿಸ. ೪೨). **ಪಾಕಲ್** : ಪಳುಕಿನ ಪಾಕಲಂ ಬಳಸಿ ರಂಜಿಸುತಿರ್ಪ ಮಹೇಶಗೇಹದೊಳ್ (ವೀರವಿ. ೨-೪೦) ; ಪ್ರಾಕಾರ–ಪಾಗರ, ಪಾಕಲ್ (ಶಬ್ದಾಮ. ೬೦ ಪ್ರಯೋ). **ಪಾಕಲ$_1$** : "ಪಾಕಲೆನಲು ಪಾಕಲ ಮೆನಲು ಕಂಗೊಳಿಕು ಪ್ರಾಕಾರದೊಳ್" (ಕಕರ. ೬೫). **ಪಾಕಲು** : "ಪಾಕಲುಯೆಂಬ ಶಬ್ದಂ = ಪ್ರಾಕಾರದಲ್ಲಿಯುಂ, ಕಾಂಗಿನಲ್ಲಿಯುಂ" (ಕಮದ. ಮ. ೩೦೨ ಪುಟ). **ಪಾಗರ$_1$** : "ಕೋಟಾ = ಪಾಗರಂ" (ಕಾಶಕ್ಕ. ೨೫೫) ; ತಳವಾಸುಗೆಯ ಪಚ್ಚಿ ಪಳಿಕೆಸೆವ ಪಾಗರಂ ಹೊಳೆವ ವಜ್ರಸ್ತಂಭ (ಮುಮೋವಿ. ೦-೨೩) ; ಬೇಲಿಯಿಕ್ಕಿದ ಕಲ್ಲುಬಸ್ತಿಯ ಪಾಗರದಡಿ ತೆಂಕಲು ಹರಿದ ಅರಳೆಗಡಿ (ಕಇ. I, ೪೦-೫೦; 1417) ; ಪಾಗರ[ಪಾಕಾಂ. ಬಾಗಿಲ] ಪೊಂದೆರಡನು ದಾಟಿ ಮುಂದೊಂದು ಬಾಗಿಲೊಳ್ನಿಂದನಾ ರಾಯ (ಭರಸ. ೨೨-೭೭); ಭವಿದೃಷ್ಟಿ ಪೂದೋಂಟಕಂ ಬೀಳದಂದದಿಂ ತವೆ ಪಾಗರವ ಕಟ್ಟಿಸುವುದಣಿಯರದೊಳು (ಪಾಸೋಪು. ೨-೬೬). **ಪಾಗಲ್$_2$** : ಸೌಧಶಿಖರಪ್ರಾಗ್ಭಾಗಮಂ ಪತ್ತಿ ಪಾಗಲ[ನಾ]ಶ್ರೈಸಿ . . . ಅಟ್ಟಾಳಮಂ ಮೆಟ್ಟಿ ನೋಟ್ಟಿ ಲತಾತನ್ವಿಯರಂಬರೇಚರಿಯರೆಂಬಾಶಂಕೆಯಂ ಮಾಡಿದರ್ (ಪುಷ್ಪಪು. ೮-೪೭) ; ಪ್ರಾಕಾರ – ಪಾಗಲ್ (ಕಮದ. ೨೮೦ ಪ್ರಯೋ) ; ದೇಗುಲಮಂ ಗೋಹುರಮಂ ಪಾಗಲ್ಗಳನಡಿಗೆಸೆಜ್ಜೆವಜ್ಜಣ ಮನೆ ಮುಂತಾಗಿ . . . ಒಡರಿಸಿದಂ (ಇಕವಿ. ೨-೧೪೦). **ಪಾಗಲ** : ಪಾಗಲಂ = ಪ್ರಾಕಾರಂ (ಕಮದ. ಪರಿ. ೨). **ಪಾಗಲು** : ಪ್ರಾಕಾರ – ಪಾಗರ, ಪಾಗಲು (ಹೊನುಗ. ೧೧೮). [<ಪಾಲಿ. ಪಾಗಾರ. / ಪ್ರಾ. ಪಾಕಾರ, ಪಾಗಾರ./ ಸಂ. ಪ್ರಾಕಾರ]

ಪಾಗಿವಾಳ (ನಾ). ಕಾಲವನ್ನು ಅಳೆಯುವ ಒಂದು ಪ್ರಮಾಣ : ಅರುವತ್ತುಅಕ್ಷರ ಕೂಡಲು ಒಂದು ಪಾಗಿವಾಳ, ೬೦ ಪಾಗಿವಾಳ ಕೂಡಲು ೧ ಘಳಿಗೆ (ರುದ್ರಭಾ. ೮೫). [?]

ಪಾಗು$_1$, ಪಾಂಗು$_2$, ಪಾಕು$_1$ (ನಾ). ೧. ತಲೆಗೆ ಸುತ್ತುವ ಉತ್ತಮ ವಸ್ತ್ರ ; ರುಮಾಲು; ಪೇಟ : ಧರೆಯ ಪಾಗನೆ ಮಾಡಿ ಸಿರಕೆ ಸುತ್ತಿದ ನೊಬ್ಬ (ರೇಪಾಂಪು. ೩-೦೭೧) ; ಪತ್ತಿದ ಪನ್ನೆ ಸುತ್ತಿದ ನಿರಾಜಿಯ ಪಾಗು ರೂಪೆತ್ತು ನಿಂದಿಹನಾರು (ಸೌಂದಕಾ. ೯-೬೭) ; ಚಂದ್ರಗಾವಿಯ ಅಂಗಿ ತೊಟ್ಟು ಇಂದ್ರನೀಲದ ಪಾಗು ಸುತ್ತಿ (ಗೋಹಾಡು. ೨೯); ಈ ಸೈನಿಕರಾದರೋ ಪೀತವಸ್ತ್ರಧಾರಿಗಳು. ಕೆಂಪುಪಾಗು ಸುತ್ತಿದ್ದರು(ತುಟಿಮಾ. ೮೨). ೨. ಒಂದು ಶ್ರೇಷ್ಠ ಬಗೆಯ ಸೀರೆ : ಚಿತ್ರ ಚಿತ್ರಾವಳಿ ಪಾಗು ಪಸುರ[ಪಾಕಾಂ. ಪಾಂಗುಪಶು]ಪಟ್ಟೆ ಸೂತ್ರವಳಿಯ ಚಿನ್ನಧಾರೆ (ಅಮುಸಾಂ. ೪-೮). **ಪಾಂಗು$_2$** : ೧. ಪಿಡಿದೆತ್ತಿ ತನ್ನ ಪಾಂಗಿಂ ಬಿಡದಡಿಯಂ ಕಟ್ಟಿ ತೂಗಿ ವಿತ್ತಮನಿಕ್ಕೆಂದಡಿಗಡಿಗೆ ಜಡಿಯುತುಂ ಬಿಡುನುಡಿಯಂ ನುಡಿಯುತ್ತುಮಿರ್ದನಾ ಶಿವಭಕ್ತಂ (ಉರ್ಕಟಿ. ೧೨-೯೪) ; ಪೆಗಲ್ವರವಿಟಿದಾ ತುಱುಂಬರೆವ ಟೊಪ್ಪಿಗೆ ಕಟ್ಟಿದ ಪಾಂಗು ಪೂಸಿ ಸೂಗಿರಿಸಿದ ಗಡ್ಡಮೀಸೆ ಕರದೊಳ್ ಸಲೆ ಚಿತ್ರಿತ ವೇತ್ರದಂಡವೊಪ್ಪಿರೆ ಸಹವಾಸಿಗಳ್ ತಳರ್ದರ್ (ಶಾಂತೀಶ್ವ. ೧೫-೮೯). **ಪಾಕು$_1$** : ೧. ಪಾರು ಅವನಿಗೆ ವೀಳ್ಯದೆಲೆ – ಹೊಗೆಸೊಪ್ಪುಗಳನ್ನಿತ್ತಳು. ಅವುಗಳನ್ನು ಅವನು ತನ್ನ ಪಾಕಿನೊಳಗೆ ಸೇರಿಸಿದ (ರೂಮಮು. ೨೬).

ಪಾಗುಸುತ್ತು = ರುಮಾಲನ್ನು ಸುತ್ತು,-ಕಟ್ಟು : ತಲೆಗೆ ಒಂದು ಥಾನು ಬಟ್ಟೆಯನ್ನು ಪಾಗು ಸುತ್ತಿ ಕಾಲಿನಲ್ಲಿ ಪಾಪಾಸು ಮೆಟ್ಟಿ . . . ಹೊರಡುತ್ತಿದ್ದರು (ಕರಸ. ೮೦೭).

[ದೇ.॥ ತಮಿ. ಪಾಕು ; ತೆಲು. ಪಾಗ, ಪಾಗಾ. / ಹಿಂ.ಪಾಗು, ಪಾಗ]

ಪಾಗು$_2$ (ನಾ). ಒಂದು ಬಗೆಯ ಚರ್ಮವಾದ್ಯ : ಮಣ್ಣಿನ ಮಕ್ಕಳು ಹಾಲಕ್ಕಿಒಕ್ಕಲು, ಭೂದಾಯಿ ನಕ್ಕಳು ಅವರಾಟಕೆ ಹರಿದಿನ ಹಗರಣ ಗುಮಟೆಯ ಪಾಗಿನ ಒಡೆ – ಕೊಟ್ಟೆ – ಪಾಯಸ ರಸದೂಟಕೆ ! (ಕ್ರೌಂಕರ್ಣ. ೩-೭). 'ಗಂಮಟೆಪಾಗಂ' ಪರಾ.

[ದೇ.॥ ತುಳು. ಪಾಂಕ್]

ಪಾಗುಡ$_1$ 'ಪಾವುಡ$_1$' ನೋ.

ಪಾಗುಡ$_2$ 'ಪಾವುಡ$_2$' ನೋ.

ಪಾಗುಡಂಗಟ್ಟು (ಕ್ರಿ). ಉಡುಗೊರೆಯನ್ನು ಗಂಟು ಕಟ್ಟು : ಪ್ರಜಾಪತಿಮಹಾರಾಜಂ ಪಾಗುಡಂಗಟ್ಟಿ ಸಂಪೂರ್ಣೇಂದುಮುಖಿಯನಿಂದು ನಾಳೆನ್ನದೆ ಬಂದ ಪೊಟ್ತೆ ಪೊಟ್ತಾಗೆ ರಥನೂಪುರಚಕ್ರವಾಳಕ್ಕೆ ಬೇಗಮಟ್ಟುವುದುಂ (ಶಾಂತಿಪು. ೫-೩೬ ಪ). [ಪಾಗುಡ$_2$ (< ಪಾವುಡ$_2$) + ಕಟ್ಟು$_1$]

ಪಾಗುಡಂಗೊಡು, ಪಾಗುಡಗೊಡು (ಕ್ರಿ). ಉಡುಗೊರೆಯನ್ನು ಕೊಡು : ಸೇಸೆಯಿಕ್ಕುವ ಪಾಗುಡಂಗೊಡುವೀ ಸಮಯದೊಳಗತ್ತ ನಾಕುವಾಸದೊಳು ಸುರರೆಱಗದೆಱಗಿದವವರ ಮಕುಟಗಳು (ಪಾಳ್ವಪಾ. ೩೬-೮).

ಪಾಗುಡಗೊಡು : ಎಱಗೆ ಮಂತ್ರಿಗಳೊಂದಿ ಕಾಣಿಕೆಯಿಕ್ಕಿ ಪಾಗುಡಗೊಟ್ಟು (ಶಾಳ್ಕಶಾ. ೩೦-೬). [ಪಾಗುಡ$_2$ (<ಪಾವುಡ$_2$) + ಕೊಡು$_1$]

ಪಾಗುಡಂತರ್ (ಕ್ರಿ). ಉಡುಗೊರೆಯನ್ನು ತರು : ಸ್ತ್ರೀರತ್ನಮಂ ದೇವರ್ಗೆ ಪಾಗುಡಂತಂದೆನೆಂದೊಪ್ಪಿಸುವುದುಂ (ಧರ್ಮಾಮೃ. ೩-೧೩೭).
[ಪಾಗುಡ$_2$ (<ಪಾವುಡ$_2$) + ತರ್]

ಪಾಗುಡಗೊಡು 'ಪಾಗುಡಂಗೊಡು' ನೋ.

ಪಾಗುಪಟ್ಟೆ (ನಾ). ಉತ್ತಮವಾದ ರೇಷ್ಮೆಬಟ್ಟೆ : ತೂಗುತೊಟ್ಟಲಿಗೊಂದು ಪಾಗುಪಟ್ಟೆಯ ಹಾಸಿ ಮಾಗಾಯಿ ಮಗನ ಮಲಗೀಸಿ ಅವರಮ್ಮ ಜೋಗೂಳ ಹಾಡಿ ಹಿಗ್ಯಾಳ (ಹಳ್ಳಿಯ. ೭೭). [ಪಾಗು$_1$ + ಪಟ್ಟೆ$_3$]

ಪಾಗೋಟಿ, ಪಾಗೋಟೆ (ನಾ). ಒಂದು ಬಗೆಯ ರುಮಾಲು ; ಪಗಡಿ : ಮುಂಡಾಸ, ತುರುಬಿನ ರುಮಾಲು, ಪಟಕಾ, ಪಾಗೋಟಿ ಎಂದು ರುಮಾಲಿನ ವಿಭಾಗಗಳು (ಗೋಯಾತ್ರೆ. ೩೪). **ಪಾಗೋಟೆ** : ಪಾಗೋಟೆಯನ್ನು ಧರಿಸಿದ ಅವರ ತಂದೆಯೂ ಮುಖರೆಯನ್ನು ಧರಿಸಿದ ಅವರ ತಾಯಿಯೂ ಬಂದವರನ್ನೆಲ್ಲ ಸ್ವಾಗತಿಸುವದರಲ್ಲಿ ತೊಡಗಿದ್ದರು (ಸಮಸ್ಯೆ. ೯೫೫); ತಲೆಯ ಮೇಲೆ ಒಂದು ಗೋಲಾಕಾರದ ಪಾಗೋಟೆ ಮತ್ತು ವಾರ್ನಿಶ್ ಮಾಡಿದ ಹೊಸದೊಂದು ಜೋಡುಪಾದರಕ್ಷೆ ಧರಿಸಿ... ಹೊರಬಿದ್ದನು (ಇಪ್ಪಳ. ೫೯). [←ಮರಾ. ಪಾಗೋಟೀ, ಪಾಗೋಟೇ]

ಪಾಗೋಟೆ 'ಪಾಗೋಟಿ' ನೋ.

ಪಾಚಕ (ಗು). ೧. ಜೀರ್ಣಶಕ್ತಿಯನ್ನುಂಟುಮಾಡುವ : 'ಪಾಚಕರಸ' ಪರಾ. (ನಾ). ೨. ಬೇಯಿಸುವಿಕೆ ; ಅಡುಗೆಮಾಡುವಿಕೆ. ೩. ಅಡುಗೆ ಮಾಡುವವನು; ಬಾಣಸಿಗ : ಒಂದು ಕಬ್ಬಿನ ರಸವೆ ಪಾಚಕನಿಂದ ಗುಡ ಶರ್ಕರೆಗಳ ಬಹುಭೇದಮಾದಂತೆ (ಗಗಶಾ. ೦೪ ೭); ಪಾಚಕನು ಬಂದು . . . ಇಂದು ಯಾವ ಬಗೆಯ ಖಾನಾ ಸಿದ್ಧಗೊಳಿಸಬೇಕು ಎಂದು ವಿಚಾರಿಸಿದನು (ಇಪ್ಪಳ. ೦೩೪) ; ಅವನು . . . ವಿಚಾರಣೆ ಮಾಡಿಸಿ, ಆ ಪಾಚಕನಿಗೂ ಮಗನಾದ ನಾಗಪ್ಪನಿಗೂ ಮರಣ ದಂಡನೆಯನ್ನು ವಿಧಿಸಿದನು (ಶಾಳಗಾ. ೬೯). [ಸಂ.]

ಪಾಚಕತ್ವ (ನಾ). ಅಡುಗೆಯ ವಿದ್ಯೆ : ಪಾಚಕತ್ವವು ಪುರುಷನನ್ನು ಬಿಟ್ಟು ಸ್ತ್ರೀಯಲ್ಲಿರುವುದು (ಭಾತತ್ವ. ೬೪೦). [ಸಂ.]

ಪಾಚಕರಸ (ನಾ). ಉಂಡ ಆಹಾರವು ಪಚನವಾಗಲು ಜಠರವು ಸ್ರವಿಸುವ ರಸ; ಪಿತ್ತಕೋಶದ ರಸ : ಒಂದೇ ಪ್ರಕಾರದ ಆಹಾರವನ್ನು ಯಾವಾಗಲೂ ಪಚನಮಾಡುವ ಪಾಚಕರಸದೊಳಗೆ ಅನ್ಯಜಾತಿಯ ಆಹಾರವನ್ನು ಪಚನ ಮಾಡುವ ಸಾಮರ್ಥ್ಯ ಉಳಿಯುವದಿಲ್ಲ (ಮುಂಬಯಿ. ೫-೦೬೯); ಆಮಾಶಯಲ್ಲಿರುವ ರಸದಿಂದ ಅನ್ನವು ಪಚನವಾಗುವ ಕಾರಣ ಅದಕ್ಕೆ ಪಾಚಕರಸವೆಂದು ಹೆಸರು (ಮುಂಬಯಿ. ೬-೩೦೬). [ಪಾಚಕ + ರಸ]

ಪಾಚಕಶಕ್ತಿ (ನಾ). ಉಂಡ ಆಹಾರವನ್ನು ಜೀರ್ಣಿಸುವ ಸಾಮರ್ಥ್ಯ : ಸಿಕ್ಕ ಹಾಗೆ ತಿನ್ನಬಾರದು. ತಿಂದರೆ ನಿಶ್ಚಯವಾಗಿ ಜೀರ್ಣಕೋಶದ ಪಾಚಕಶಕ್ತಿಯು ಕಡಿಮೆಯಾಗುವದು (ಮುಂಬಯಿ. ೪-೨೫).
[ಪಾಚಕ + ಶಕ್ತಿ]

ಪಾಚನ (ನಾ). ೧. ಅಡುಗೆ ಮಾಡುವಿಕೆ; ಬೇಯಿಸುವಿಕೆ. ೨. ಪಕ್ವಗೊಳಿಸುವಿಕೆ. ೩. ಜೀರ್ಣಗೊಳಿಸುವಿಕೆ ; ಪಚನಕ್ರಿಯೆ : ಲಂಘನವು ದೀಪನ ಪಾಚನಂಗಳನ್ನುಂಟುಮಾಡುವುದು (ಸಕಪ್ಯ. ೦೦೧). [ಸಂ.]

ಪಾಚವಾರಿ (ನಾ). ಐದು ಗಜದ ಸೀರೆ : ವಸೂ ಪರಕರದ ಪೋರಿಯಾಗಿ ಉಳಿಯದೆ ಪಾಚವಾರಿಯಲ್ಲಿಯ ಸಣ್ಣ ಹೆಣ್ಣಾಗಿ ಬಂದಿದ್ದಳು (೧೭ಪಹ. I. ೦೦೬).
[←ಮರಾ. ಪಾಂಚ್‌ವಾರ್ = ಐದು ಗಜ]

ಪಾಚಿ$_1$ 'ಪಾವಸೆ' ನೋ.

ಪಾಚಿ$_2$ (ನಾ). (ಮಕ್ಕಳ ಭಾಷೆಯಲ್ಲಿ) ಹಾಲು : (ಕಿ).
[ದೇ. ॥ ತಮಿ. ಮಲ. ಪಾಚ್ಚಿ]

ಪಾಚಿ$_3$ (ನಾ). ಮೂಡಣದಿಕ್ಕು; ಪೂರ್ವದಿಕ್ಕು : "ಪಾಚಿ–ಪ್ರಾಚಿ= ಮೂಡುದಿಕ್ಕು" (ತದ್ಧಕೋ. ೨೫). [<ಸಂ. ಪ್ರಾಚೀ]

ಪಾಚಿ$_4$ 'ಪಾಜಿ$_2$' ನೋ.

ಪಾಚಿಕೆ 'ಪಾಸಂಗೆ' ನೋ.

ಪಾಚಿಬಳ್ಳಿ (ನಾ). ಒಂದು ಬಗೆಯ ಔಷಧಿ ಸಸ್ಯ : ಬೇಲದ ತಿರುಳು (ಹಣ್ಣು), ಪಾಚಿಬಳ್ಳಿ (ಕರ್ದಟಕಿ), ಮಗ್ಗಾರೆಕಾಯಿ, ಮಗ್ಗಾರೆಬೇರು– ಇವನ್ನು ಬಗೆಯೊಂದಕ್ಕೆ ಒಂದು ಸೇರಿನಂತೆ ಹಾಕಿ ಚೂರ್ಣಿಸಿ (ಸಕಪ್ಯ. ಪಂ. ೪೩೬). [ಪಾಚಿ$_1$ (<ಪಾವಸೆ) + ಬಳ್ಳಿ]

ಪಾಚಿಸು$_1$ (ಕ್ರಿ). ಸುಡು; ಬೇಯಿಸು : ಪುಸಿದೊಡಂತಕನವರ್ ಪಾಚಿಸರೆ ನರಕದೊಳ್ ಮೈಯನು (ಸೈಮಿಶಾ. ೨೬-೪೯). [ಪಾಚನ + –ಇಸು$_3$]

ಪಾಚಿಸು$_2$ (ಕ್ರಿ). (ಮಕ್ಕಳ ಭಾಷೆಯಲ್ಲಿ) ಮಲಗಿಸು; ನಿದ್ರೆಮಾಡಿಸು : ಆಟವಾಡಿದ್ದು ಸಾಕು, ಪಾಚಿಸುತ್ತೇನೆ ಬಾ (ರೂಢಿ).
[ಪಾಚು+–ಇಸು$_3$]

ಪಾಚಿಹುಲ್ಲು (ನಾ). ಒಂದು ಬಗೆಯ ಹುಲ್ಲು : ಕಾಡುಬಿಳಿಸಜ್ಜಬು ಹುಲ್ಲು, ಪಾಚಿಹುಲ್ಲು (ಪ್ರಾಕಿಗಿ. ೪೯-೯೬೭).
[ಪಾಚಿ$_1$ (<ಪಾವಸೆ) + ಹುಲ್ಲು (<ಪುಲ್)]

ಪಾಚು (ಕ್ರಿ). (ಮಕ್ಕಳ ಭಾಷೆಯಲ್ಲಿ) ಮಲಗು; ನಿದ್ರಿಸು : ಬೂಚಿ ಬಂದಿದೆ ರಂಗ ಬೂಚಿ ಬಂದಿದೆ ಚಾಚಿ ಕುಡಿದು ಸುಮ್ಮನೆ ನೀ ಪಾಚಿ ಕೊಳ್ಳೊ ಕೃಷ್ಣಯ್ಯ (ಪುರಂದ. ೪-೧೦೧ ಅನುಪಲ್ಲವಿ). [?]

ಪಾಚೆ 'ಪಾವಸೆ' ನೋ.

ಪಾಚ್ಛಾ 'ಪಾತಶಹ' ನೋ.

ಪಾಚ್ಛಾಯಿ 'ಪಾತಶಹ' ನೋ.

ಪಾಛಾ 'ಪಾತಶಹ' ನೋ.

ಪಾಜಿ$_1$ (ಗು). ೧. ಕೀಳುತರದ; ನೀಚ : (ಕಿ). (ನಾ). ೨. ಕ್ಷುಲ್ಲಕ ವ್ಯಕ್ತಿ ; ಅಲ್ಪ ; ಕೀಳುಮನುಷ್ಯ : ಇಂದು ಕಾಜಿಯಾದವ ನಾಳೆ ಪಾಜಿಯಾಗುತ್ತಾನೆ ! (ನಿಷ್ಕಾಮ. ೧೪೩).
[←ಪಾರ. ಹಿಂ. ಮರಾ. ಪಾಜೀ]

ಪಾಜಿ$_2$, ಪಾಚಿ$_4$ (ನಾ). ಒಂದು ಬಗೆಯ ಬಲೆ : ಕೊರಲ್ವಲೆ ನಿಡಿವಲೆ ಪಾಜಿ ಬೆಳ್ಳಾರ ಬಡಿವಲೆ ಬಲುವಲೆಗಾಱರು ತೂಗಿ ಬೊಬ್ಬಿಡುತಲೈದಿವರು ಮುಂಗಡೆಯ (ಪೋಹತ. ೧೯-೧೬). **ಪಾಚಿ$_4$** : ಪಾಚಿ ಸಿಡಿಯು ಸಲೆ ಕಾಲು ಕಣ್ಣಿ ತಡಿಕೆ ಸೆಳೆಗೋಲಿನ ಬಲುನಾಯಕರೊದಗಿದರು (ಹಂಸಾಂ. ೧-೬೬).
[?]

ಪಾಜಿಕ (ನಾ). (?) : ಪರದನಾರ್ಬ್ಬನ್ದಡಪಂಗಡಿಯ ಪಾಜಿಕದಿಂದಿಟ್ಟಿಯನನ್ಯಾಯದೊಳ್ಪರಧನಂ ಪೊಯ್ದಡೆ ಸಾವು ಸಾಲ್ವರ್ (ಸೌಇಇ. IX-1, ೭೭-೩೪; 992). [?]

ಪಾಜು (ನಾ). (ಕರಾ) ನೀರು ಮೇಲಿನಿಂದ ಕೆಳಗೆ ಹರಿಯಲು ಅಗಲವಾಗಿ ಕಟ್ಟಿರುವ ಕಲ್ಲಿನ ಪಾವಟಿಗೆ,–ಮೆಟ್ಟಲು. [?]

ಪಾಜೆ$_1$ (ನಾ). ಭಾಷೆ; ಮಾತು : ಇದು ಬಸವಯ್ಯ ಆಡೋ ಮಾತು . . . ಅವನ ಪಾಜೆ ನಿಮ್ಮ ಬಾಯಲ್ಲಿ ಬರಬಾರದಲ್ಲ (ಶಕಾ. ೦೯೨).
[←ತಮಿ. ಪಾಚೈ. / ಸಂ. ಭಾಷಾ]

ಪಾಜೆ$_2$ 'ಫಾಜೆ' ನೋ.

ಪಾಟ$_1$ (ನಾ). ಹಾಡುವಿಕೆ; ಗಾಯನ : ವೀರಶ್ರೀಯುಂ . . . ಆ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳಾಗಳಾ ನಗ್ನಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನಂದಿಂದಿತ್ತ ಬಾದುಬ್ಬೆಯ ಪರ್ವಮುಂ ಪಗರಣ

ದಾಟಪಾಟಮುಮಾದುವು (ಪಡ್ಮಾರಾ. ೧೧೮-೨೩) ; ಮಸೆದ ಮದನನಲಗಿ ನಲರ್ಗಣೆಗಳಂತೆ ಕಣ್ಣೊಳ್ ಬೆಳೆದೆಳಸಿ ಬಂದಿರ್ದ ಪಾಟದಾಟದ ಮುದ್ದಿನ ಬರ್ದಿನ ಪರಿವಾರದೇವಿಯರುಮಂ (ಆದಿಪು. ೨-೬೫ ಪ) ; ತನ್ನ ಪಾಡು ವಿಂಚರದಿಂದೆಮ್ಮ ಪಾಟಮಂ ಕೀಟ್ಮೂಡಿದಳಿವಳ್ (ಕಾರಂಶಾ. ೩೩೪) ; ಎತ್ತ ಕೇಳ್ವೊಡಮೆಸೆವ ಪಾಟಮೆ [ಶಾಶಾಂ. ಗೀತಮೆ, ಪಾಡಮೆ] ಎತ್ತಲುಂ ತೀಡುವೊಡಮೊಳ್ಗುಂಧಮೆ (ಜೀವಸಂ. ೨೩೪-೨). 'ಪಾಟ್ಟು' ಹೋ.

[<ಪಾಡು$_1$./ತಮಿ. ಮಲ. ಪಾಟ್ಟು ; ತೆಲು. ನಾಯ್ಕು. ಪರ್ಜಿ. ಕೊಂಡ. ಪಾಟ ; ಗಡಬ. ಪಾಟೆ]

ಪಾಟ$_2$ (ನಾ). ೧. ಪಠ್ಯವಿಷಯಗಳ ಪಠನ ; ಗ್ರಂಥಗಳ ವಾಚನ : "ಪಾಠಃ — ಪಾಟಂ" (ಕಾಕಕ್ಕ. ೧೧) ; ಅಟ್ಟಿಯಿಟ್ಟೆಯಱಿದುಂ ಪರಿವಾರಿಸಿ ಪಾಟಮೋದಲಚ್ಚರಸಿಯರಾಡಲಚ್ಚರಸಿಯರ್...ಎಂದೊಡೇ ಪೊಗಟ್ಟುದೋ ಜಿನಚಂದ್ರವಿಭೂತಿಲೀಲೆಯಂ (ಶಾಂತಿಪು. ೭-೭೫). ೨. ವಾಡಿಕೆ ; ರೂಢಿ ; ಅಭ್ಯಾಸ : ನಿಮಗೆ ಈ ಗಾಳೀಲಿ ಕೂತ್ಕೊಂಡು ಪಾಟ ಇಲ್ವೇನೋ (ಶಾಟೀಮು. ೧೦೦) ; ಮದರಂಗಿದನ ಚಿರತೆಗೆ ಪಾಟ ಆಗಿಬಿಟ್ಟಿದೆ. ಬೇರೆ ದನ ಇಷ್ಟು ರುಚಿ ಇಲ್ಲವೇನೊ (ಸಣ್ಣಕ. VI, ೧೧೯) ; ಅವನಿಗೂ ಆ ಹೆಸರೇ ಪಾಟಾಗಿ ಹೋಗಿತ್ತು (ಸಮ್ಮೂರು. ೧೭೦).

[<ಸಂ. ಪಾಠ]

ಪಾಟ$_3$ 'ಪಟ್ಟೆ$_2$' ನೋ.

ಪಾಟಕ$_1$ (ನಾ). ಓದುವವನು ; ಪಾಠಕ : ಶ್ರಾವಕರ ಪಾಟಕರ ಜನನಿಯ ಭಾವದಿಂ ಚಿಂತಕರ ಪೊರೆವುದದಾವ ಕೃತಿಯಿದನುಳಿದು ಧರಣೀತಲದೊಳಿರುತಿಹುದು (ಶಿವೇಶ. ೧೮-೪೪). [<ಸಂ. ಪಾಠಕ]

ಪಾಟಕ$_2$ (ನಾ). ೧. ಸೀಳುವವನು ; ಹೋಳುಮಾಡುವವನು ; ಕತ್ತರಿಸುವವನು : ಕರ್ನಾಟಕಚೀಣಾಪೋಟಕದರಸುಗಳಿರ್ದರು ರಿಪುಶಿರಪಾಟಕನೋಲಗದೊಳಗೆ (ತರ್ಕಕೌ. ೩-೬). ೨. ಗ್ರಾಮದ ಒಂದು ಭಾಗ. [ಸಂ.]

ಪಾಟಕಾಱ (ನಾ). ರಾಜನ ಬಿರುದಾವಳಿಗಳನ್ನು ಹಾಡಿ ಹೊಗಳುವವನು ; ವಂದಿ ; ಪಾಠಕ : ಪಾಟಕಾಱರರಸಾಳ್ಗಳ ಬೇಟ್ಟರ ಕಳಕಳ ನಿನದಂ ಭೋರ್ಗರೆದಂಬುಧಿನಿನದದಂತುಟಾದುದು (ವರ್ಧಮಾ. ೩-೫೫) ; ಬಗೆಕಾಱಂ ಪಾಟಕಾಱನೊಳ್ನುಡಿಕಾಱಂ ಪಗೆಕಾಱನಾಗಿಯುಂ ಕೆಯ್ಮಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಂ (ಕಾಸ್ಕಾಪ. ೩೨೫) ; ಅಲರ್ಗಳ್ ಘಟ್ಟಿವಳ್ಳರ ಪಸರದಂತೆ ಕಂಪಂ ಪ[ರ]ಕಲಿಸೆ ತುಂಬಿಯೆ ಪಾಟಕಾಱನಂತೆ ಮೊರೆಯೆ (ಬಂಹರಿ. ೫-೫ ಪ). [ಪಾಟ$_1$+—ಕಾಱ]

ಪಾಟಚ್ಚರ (ನಾ). ಬಟ್ಟೆಯನ್ನು ಕಳವು ಮಾಡುವವನು; ವಸ್ತ್ರಚೋರ : "ಪಾಟಚ್ಚರಃ, ಪಟಚ್ಚಾರಃ—ಈ ೨ ಸೀರೆಗಳ್ಳಂ" (ಹಲಾಯು. ೫೬-೧೮೫).

[ಸಂ.]

ಪಾಟನ (ನಾ). ಸೀಳುವಿಕೆ ; ಕತ್ತರಿಸುವಿಕೆ : ವನಕರಿಕುಂಭಪಾಟನ ಪಟಿಷ್ಠಕಠೋರನಖಪ್ರಹಾರಭೇದನಗಳಿತಾಸ್ತ್ರರಕ್ತನವಮೌಕ್ತಿಕಪಂಕ್ತಿವಿಳಾಸ ಭಾಸುರಾನನಂ (ಪಂಪಭಾ. ೧೩-೫೦). [ಸಂ.]

ಪಾಟಲ, ಪಾಟಳ (ಗು). ೧. ತಿಳಿಗೆಂಪು ಬಣ್ಣದ ; ನಸುಗೆಂಪು ಬಣ್ಣದ : ಪಾಟಲಲೋಲವಿಲೋಚನಂ ಮನಂಬುಗೆ ನಳಿತೋಳ ಕೋಳಿಸೆಯೆ (ಪಂಪಭಾ. ೮-೫೯); ಉದ್ಯಾನಲತೆಯನೀಕ್ಷಿಸಿ ನಾಂ ಪಾಟಲ ವರ್ಣಂಗೈವೆನಿಂದು ದೇವಿಯ ಮೊಗಮಂ (ರೃಷ್ಯಾಶೋ. ೮೩). (ನಾ). ೨. ನಸುಗೆಂಪು ಬಣ್ಣ : ಸಲೆ ಮುದದಿಂದೆ ಪಾಟಲಮನಾಂತ ಕಪೋಲದೆ ರಕ್ತಲೋಚನೋತ್ಪಲದೆ ವಿಲಾಸಮಂ ತಳೆದ (ಪಾಧವಾ. ೨-೭೮); ಬಿಡದೆ ಪಾಟಲವಿಡಿದು ಸಿರದೊಳ್ ತೊಡರಿ ಮಿರುಗುತೆ ಪುಷ್ಪಭಾಗವ ಪೊಡೆಪೊಡೆವ ಬಿಳಿಲಿಡದ ಜಡೆಗಳನಾಂತು (ಕಾವೇಮ. ೫೪-೨೭). ೩. ಒಂದು ಬಗೆಯ ಹೂವಿನ ಗಿಡ ಮತ್ತು ಅದರ ಹೂವು; ಪಾದರಿ: ಪೂಗ ವಟ ದಾಡಿಮ ಪಾಟಲ . . . ಹಿಂತಾಳಮಹೀಜಮುಖ್ಯತರು ಸಂತತಿಯಿಂ ವನಬೃಂದಮೊಪ್ಪುಗುಂ (ಯಾದಸಂ. ೦-೩೫). ೪. ಮಳೆಗಾಲದಲ್ಲಿ ಕೊಯ್ಲಾಗುವ ಒಂದು ಬಗೆಯ ಬತ್ತ. **ಪಾಟಳ** : ೧. ಕಳಕಂಠಲೋಚನಚ್ಛವಿವಿಳಾಸಮಂ ತಳೆದ ನೀಲಪಾಟಳಜಂಬೂಫಳಮಧುರ ರಸಮನೀಂಟಿದೆಂ (ಕಾರಂಪೂ. ೮೬). ೨. "ಅರುಣಃ . . . ಪಾಟಳಃ, (ಆ)ತಾಮ್ರಃ, ಲೋಹಿತಃ—ಈ ೭ ಕೆಂಪು" (ಹಲಾಯು. ೧೨೦-೪೮). ೩. "ಪಾದರಿ ಪಾಟಳಂ ಪಾಟಳಿಯೆನಿಕ್ಕು" (ಮಂಗರಾ. ೩೬-೧೬); ವಿದಳಿತ ಚಂಪಕ ಲವಲೀನಾಗಂ ವಕುಳಪಾಟಳಾಶ್ವತ್ಥಬ್ರಾತಂ . . . ಆದಿಯಾಗೆ ಪಲವುಂ ಪೆಱವಂದದ ಪಾದಪಂಗಳಿಂದೊಪ್ಪುವ ಚಂದದ ಬನದೊಳೆತ್ತಲುಂ ಸುಱಿವರಗಿಳಿಗಳೆ (ಸುಕುಮಾ. ೧೦-೫೬ರಗಳೆ) ; ಸೊಗಯಿಸುವಾಟದ ಸುರರ ಭವನಮಂ ಪಿಕಸಿತ ಪಾಟಳಗಂಧಯುತೆ ಕಂಡಳ್ (ಬಂಹರಿ. ೯-೧೦೪). [ಸಂ.]

ಪಾಟಲದ್ಯುತಿ (ನಾ). ತಿಳಿಗೆಂಪು ಬಣ್ಣ : ಬಿಂಬಾಧರದ ಕೆಂಬೆಳಗು ಸುಲಿಪಲ್ಲ ಸೂಸುವೆಳಗಿನೊಡವೆರೆದು ವದನವಿಧುಮಂಡಳದ ಪಾಟಲದ್ಯುತಿಯಂತೆ ಪಸರಿಸಿ ಬೀದಿವರಿಯೆ (ಶಾಜಶೇ. ೫-೧೯ ಪ). [ಪಾಟಲ+ದ್ಯುತಿ]

ಪಾಟಲಾಧರ, ಪಾಟಳಾಧರ (ನಾ). ತಿಳಿಗೆಂಪುಬಣ್ಣದ ತುಟಿ : ಸುದತಿಯೆ . . . ಜಯಾನ್ವಿತನಾದೆಂ ಇದೊ ನಿನ್ನ ಪಾಟಲಾಧರವದನಾಬ್ಜವ ನಾಂ ವಿಲೋಕಿಸಿದ ಕತದಿಂದಂ (ಶಾಕುಂತ. ೧೦೯-೧೮೩). **ಪಾಟಳಾಧರ** : ಪಾಟಳಾಧರಸುಧಾರಸಮಂ ಸವಿದಟ್ಟಱಿಂ ಲತಾಂಗಮನಮರ್ದಪ್ಪಿ ದಕ್ಷಿಣ ವಿಟಂಗೆಣೆಯಾದುದು ದಕ್ಷಿಣಾನಿಳಂ (ಪುಲ್ಲಿಪು. ೫-೨೩). [ಪಾಟಲ+ಅಧರ]

ಪಾಟಲಿ$_1$, ಪಾಟಳಿ (ನಾ). ೧. ಪಾದರಿಗಿಡ ಮತ್ತು ಅದರ ಹೂವು : "ಪಾದರಿ ಪಾಟಳಂ ಪಾಟಲಿ[ಶಾಶಾಂ. ಪಾಟಳಿ, ಪಾಡಳಿ]ಯೆನಿಕ್ಕು" (ಮಂಗರಾ. ೩೬-೧೬) ; ಮತ್ತೊರ್ವಳ್, ಸುರಭಿಪಾಟಲೀಪಾಟಲದಶನವಸನೆ (ಆದಿಪು. ೧೧-೧೧೦ ಪ); ಜೀವನದೊಳಗೆಮ್ಮರಳನೊಂದಿಸಿ ನೆಱೆ ಸೇವಿಸಿದವರ ಶ್ರಮಗಳ ಗಾವಳಿಯನು ಪರಿದಪೆವೆಂದು ನಱುಗಂಪು ತೀವಿದ ಪಾಟಲಿಯಿಹುವು (ಕಂಪಪಿ. ೭-೫೩). ೨. ಒಂದು ದೇಶದ ಹೆಸರು : ಮಹಾರಾಷ್ಟ್ರದೇಶದ ಸ್ತ್ರೀಯರು, ಪಾಟಲಿದೇಶದ ಸ್ತ್ರೀಯರು, ಪುಂಡು ಮಾತುಗಳಂ ಅಪೇಕ್ಷೆಯೊಡನೆ ಕೂಡಿ ಆಡುವರು ; ರತಿಯಲ್ಲಿ ನಾಚಿಕೆಯಿಲ್ಲದವರು (ಕಾಮಶಾ. ೨೧೯). **ಪಾಟಳಿ** : ೧. ಕಂಪುಗೊಳಲ್ ತೆಗೆದುಸಿರಿ ನಿಸಂ ಪೊಱಮಟ್ಟೆಸಟ ತುದಿಯನೆಯ್ದಲೊಡಂ ಮುನ್ನಂ ಪಟೆಯವಪ್ಪ ಪೂಗಳ ಕಂಪಿನೊಳೇಂ ಪೊಗಟ ಪಾಟಳೀಪರಿಮಳಮಂ (ಆದಿಪು. ೧೦-೧೦೦) ; ಪಾಟಳಿಗಳೆಸಕದಿಂ ನಿಂಬೆಗಳಳುಂಬದಿಂ . . . ಅನಂತತಿಲಕದ ಕುಜಂಗಳಿಂ . . . ಪೊಂಗಿ ಪೊಂಪುಱಿಯೋಗಿ (ಕಾರ್ಯಪಿ. ೩-೯೩). [ಸಂ.]

ಪಾಟಲಿ$_2$, ಪಾಟ್ಲಿ (ನಾ). ಸುಮಾರು ಕಾಲಂಗುಲದಷ್ಟು ದಪ್ಪವಾದ ಚಿನ್ನದ ಕೈಬಳೆ : ಭಿಕೂತಾಯಿ ನನಗೆ ಪಾಟಲಿ, ಬಿಲ್ವರ ಮುಂತಾದ ವಸ್ತ್ರ ಮಾಡಿಸಿದಳು (ಸ್ಮೃತಿಪ. ೨೧೪) ; ಬಂಗಾರದ ಗೋಟು ಪಾಟಲೀ ಬಿಡಿಸಿ ಕೊಡು . . . ವಂಕೀಜೋಡು ಕೊಡಸು (ರಕ್ತರ್ಷ. ೮೨) ; ಮೈಮೇಲೆ ಬಂಗಾರ ಹಾಗು ಮುತ್ತಿನ ಆಭರಣಗಳು, ವಂಕಿ, ಸರಿಗೆ, ಗೋಟು, ಪಾಟಲಿ ಮೊದಲಾದ ಎಲ್ಲ ವಸ್ತುಗಳೂ ಇದ್ದವು (ಶ್ಯಾಮಶಾ. ೧೦). **ಪಾಟ್ಲಿ** : ನಾ ಗೋಟು ಪಾಟ್ಲಿ ಎಲ್ಲಾ ಇಟಗೊಂಡರ ಕೈ ಹಿಂಗ ಮ್ಯಾಲ ಎತ್ತಲಿಕ್ಕೆ ಆಗತಿದ್ದಿಲ್ಲ (ಗಂಮಾಯಿ. ೧೬) ; ಒಂದು ಜತಿ ಪಾಟ್ಲಿ ಮಾಡಸರಿ ಅಂತ ಹೇಳಿದರ ಕೇಳವಲ್ಲರಿ (ಕುಂಕುಮ. ೧೬). [←ಮರಾ. ಪಾಟಲೀ]

ಪಾಟಲಿತ, ಪಾಟಳಿತ (ಗು). ನಸುಗೆಂಪಾದ : ಶೂಲಧರಂ . . . ಮುಷ್ಟಿಯುದ್ಧಸನ್ನದ್ಧನಾಗಿ ನಿಂದ ಪಾರ್ಥನಿದಿರ್ಗೆವಂದೋರೊರ್ವರುದೀರ್ಣ ರೋಪಾವೇಶಪರುಷಪಾಟಲಿತಕಟಾಕ್ಷದಿನಡರೆ ನೋಡಿ ಬಾಹಾಸ್ಫಾಲನಂ ಗೆಯ್ಯಲ್ (ಶಬಶಂ. ೪-೭೦ ಪ). **ಪಾಟಳಿತ** : ಇದಿರೆಳ್ದೀರ್ಷ್ಯಾರೋಷದಿಂ

ಶಶಿಪ್ರಭೆ ನವೋದಯಶಶಿಪ್ರಭೆಯಂತೆ ಪಾಟಳಿತಮುಖಿಯಾಗಿ (ಶಂಕ್ರಪು. ೮-೧೩ ಪ). [ಸಂ.]

ಪಾಟಲಿಮ, ಪಾಟಳಿಮ(ಗು). ೧. ನಸುಗೆಂಪುಬಣ್ಣದ : ಪರಿಣತಪ್ರವಾಳ ಪಾಟಲಿ[ಪಾಠಾಂ. ೪]ಮಲೀಲಾಧರನಿಜಾಧರಪಲ್ಲವನುಂ (ಶಂಕ್ರಪು. ೪-೮೦ ಪ). (ನಾ). ೨. ನಸುಗೆಂಪು ಬಣ್ಣ. **ಪಾಟಳಿಮ :** ೧. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ. ಪಾಟಲಿಮನ್]

ಪಾಟಲೀಪುತ್ರ, ಪಾಟಳೀಪುತ್ರ (ನಾ). ಮಗಧದೇಶದ ರಾಜಧಾನಿ ; ಈಗಿನ ಪಾಟ್ನಾನಗರ : ಪಾಟಲೀಪುತ್ರದ ಮಾರ್ಗದಲ್ಲಿ ನಾಗಸೇನನಿಗೆ ಧನಿಕವ್ಯಾಪಾರಿಯೊಬ್ಬನು ಸಿಕ್ಕಿದನು (ಬಾಲ್ಯ. ಪಾಲಿಂದ. ೨೪); ಮೂರನೆಯ ಸಂಗೀತಿ—ದೇವಾನಾಂಪ್ರಿಯ ಪ್ರಿಯದರ್ಶಿಯೆಂಬ ಅಶೋಕರಾಜನ ಕಾಲದಲ್ಲಿ ಪಾಟಲೀಪುತ್ರದಲ್ಲಿ ನಡೆದದ್ದು (ಬಾಕರ. ೨೦೩). **ಪಾಟಳೀಪುತ್ರ :** ಪಾಟಳೀಪುತ್ರಮೆಂಬ ಪುರಮಲ್ಲಿ ಶ್ರೇಷ್ಠಿ ಸುದತ್ತನೆಂಬೊಂ (ಪಡ್ಡಾರಾ. ೧೫-೧೯). [ಸಂ.]

ಪಾಟಲೀಪುಷ್ಪ (ನಾ). ಪಾದರಿ ಹೂವು : ಪಾಟಲೀಪುಷ್ಪ ಅಥವಾ ಪಾದರಿಹೂವನ್ನು ಧರಿಸುವುದರಿಂದ ಮನಸ್ಸಿನ ಕ್ಲೇಶವನ್ನು ಪರಿಹಾರ ಮಾಡಿ . . . ಮಹಾಪರಿಮಳದೊಡನೆ ಕೂಡಿರುವುದು (ಸಳಪ್ಯ. ೪೪); ಮಂತ್ರ ಇಪ್ಪತ್ತುಸಾವಿರಮಂ ಜಪಿಸಿ ಪಾಟಲೀಪುಷ್ಪದಿಂ ಹತ್ತುಸಾವಿರ ಹೋಮಮಂ ಮಾಡೆ ಮಂತ್ರಸಿದ್ಧಿಯಪ್ಪುದು (ಕಾಪುಶಾ. ೨೬೦). [ಸಂ.]

ಪಾಟಲೂನು, ಪಾಟಲೋಣ, ಪಾಟಲೋನು, ಪಾಟ್ಲೋನು (ನಾ). ಐರೋಪ್ಯಮಾದರಿಯ ಷರಾಯಿ ; ಪ್ಯಾಂಟು : ಬೆಲೆಯುಳ್ಳ ಕೋಟು ಪಾಟಲೂನುಗಳ ಜೊತೆಗಳು ಅವರಲ್ಲಿ ಹತ್ತೆಂಟು ಇದ್ದವು (ಕೊಳಮು. ೨೩೦) ; ಪಾಟಲೂನು ಸಾಹೇಬರ ಪೋಷಾಕು. ಬೆಲೆಯುಳ್ಳದ್ದು (ಶ್ರೀಕಾಂತ. ೭); ಒಮ್ಮೆಲೇ ಅವಳ ಮೊಮ್ಮಗ ಗಾಡಿಯಿಂದ ಜಿಗಿದ, ಪಾಟಲೂನು, ಉದ್ದ ಕೈಯ ಅಂಗಿ ಹಾಕ್ಕೊಂಡು (ಹೊಸಕ್ಷಿ. ೭೩). **ಪಾಟಲೋಣ :** ಮೊಳಕಾಲ ಕೆಳಗೆ ಪಾದದ ಮೇಲೆ ಗೇಣು ಅಂತರದಲ್ಲಿ ನೇಣು ಹಾಕಿಕೊಂಡಂತೆ ಜೋತಾಡುವ ಇಸ್ತ್ರೀಯ ಅಸ್ತ್ರವಾಡದ . . . ಕಿರಮಂಜೀಬಣ್ಣದ ಪಾಟಲೋಣ (ದೀಪಹ. I, ೨೪). **ಪಾಟಲೋನು :** ಪಾಟಲೋನಿನ ಜೇಬಿನೊಳಗಿಂದ ಸಿಗರೇಟಿನ ಡಬ್ಬಿಯನ್ನು ತೆಗೆಯುತ್ತ ಕೇಳಿದ ಗದ್ರೆ (ಪ್ರಜಸ. ೫೯). **ಪಾಟ್ಲೋನು :** ಬೂಟು ಪಾಟ್ಲೋನು ಧರಿಸಿ ದೇಶಭಾಷೆ ಮಾತನಾಡುವುದಕ್ಕೆ ನಾಚಿಕೆಯೆನಿಸಲಾರಂಭಿಸಿತು (ಯಕ್ಷಪ್ರ. ೩೪).

[←ಮರಾ. ಪಾಟಲೂಣ, ಪಾಟಲೋಣ. / ಇಂ. Pantaloon]

ಪಾಟಲೋಣ 'ಪಾಟಲೂನು' ನೋ.

ಪಾಟಲೋನು 'ಪಾಟಲೂನು' ನೋ.

ಪಾಟವ (ನಾ). ೧. ತೀಕ್ಷ್ಣತೆ; ಚುರುಕು. ೨. ಜಾಣತನ ; ಚಾತುರ್ಯ : ಒಳ್ಳೆಯ ಸಂಗ್ರಹಶಕ್ತಿಯೂ ಭೂಗರ್ಭಶೋಧನಪಾಟವವೂ ಬಂದುವಲ್ಲದೆ ಅವನಿಗೆ . . . ಪ್ರಾಣಿಶಾಸ್ತ್ರದ ಗಾಢಪರಿಚಯವಾಯಿತು (ಪಿಶ್ಚಾಳ. ೯೨) ; ಅವನು . . . ಊಹೆ ಮಾಡುವುದರಲ್ಲಿ ಪಾಟವ ಹೊಂದಿರತಕ್ಕವನು (ಭಾರವಿ. ೩೭೪). ೩. ಪಟುತ್ವ ; ಶಕ್ತಿ ; ಸಾಮರ್ಥ್ಯ : ಮಾಟದಿಂದರಿವರ್ಜನರ್ನುಡಿಯಾಟದಿಂ ಪಂಡಿತರು ನೆನಹಿನ ಪಾಟವದೆ ದೇವರ್ಕಳಂಗೈನೆಲ್ಲಿಕಾಯಂದದಲಿ (ಪಿವೇಶ. ೮-೨೭) ; ಕತ್ತಲೆಗೆ ಜಗದಾಂಧ್ಯ ಕರಣಪಾಟವವೀಯೆ (ಪಂಕಾರಾ. ೬-೩೬-೨೩) ; ಮಾದಗಳು ನಡೆಯುತ್ತಿದ್ದ ಕೂಗಿನ ಅವಾಂತರದಲ್ಲಿ . . . ಕಿವಿಗಳ ಪಾಟವವೇ ಕುಗ್ಗಿರಬೇಕೆಂದು ಅನೇಕರು ಸಿದ್ಧಾಂತ ಮಾಡುತ್ತಲೇ ಇದ್ದರು (ಕುರಾಯಿ. ೧೨೭). 'ದೃಷ್ಟಿಪಾಟವ' ಪರಾ. ೪. ಕಲಿತನ ; ಶೌರ್ಯ : "ಪಾಟವಂ = ಬಂಟತನಂ" (ಕಾಶಕ್ಯ. ೨೭೯). ೫. ಆರೋಗ್ಯ : ಕೋಟಿಚಂದ್ರಾದಿತ್ಯ ದೇಹಪ್ರಕಾಶಉದ್ಘಾಟಿತನೇತ್ರತೀಕ್ಷ್ಣಾಂಗಪಾಟವದಿವ್ಯಮಹಾಲಕ್ಷಣದೊಳ ಮಾಟವಲ್ಲವೆ ತೀರ್ಥಕರರು (ಮುಸಿಪಂ. ೩-೩೪) ; ಊಟ ಉಪಚಾರಗಳ ಬೇಡವೆನ್ನದಿರು ಪಾಟವವು ಮೈಗಿರಲಿ ನೋಟ ತತ್ತ್ವದೊಳಿರಲಿ ಪಾಠಿಸು ಸಮನ್ವಯವ (ಮಂಕುಕ. ೨೬೧). ೬. ದುಡುಕುಸ್ವಭಾವ. [ಸಂ.]

ಪಾಟಳ 'ಪಾಟಲ' ನೋ.

ಪಾಟಳಕಾಂತಿ (ನಾ). ನಸುಗೆಂಪುಬಣ್ಣ ; ಪಾದರಿ ಹೂವಿನ ಹೊಳಪು : ನೇತ್ರಾಂಬುಜಂ ಪಾಟಳಕಾಂತಿಶ್ರೀಯಿನೊಪ್ಪುತ್ತಿರೆ . . . ಲೀಲೆಯಿಂದುಪ್ಪ ವಡಿಸಿದಳ್ ಹೃದ್ಯಾಂಗಿ ಶಯ್ಯಾಗ್ರದಿಂದಂ (ಜಗವಿ. ೨-೭೮). [ಪಾಟಳ (=ಪಾಟಲ)+ಕಾಂತಿ]

ಪಾಟಳಾಧರ 'ಪಾಟಲಾಧರ' ನೋ.

ಪಾಟಳಿ 'ಪಾಟಲಿ$_1$' ನೋ.

ಪಾಟಳಿತ 'ಪಾಟಲಿತ' ನೋ.

ಪಾಟಳಿಮ 'ಪಾಟಲಿಮ' ನೋ.

ಪಾಟಳೀಪುತ್ರ 'ಪಾಟಲೀಪುತ್ರ' ನೋ.

ಪಾಟಾಳಿ (ನಾ). ದೇವಸ್ಥಾನದಲ್ಲಿ ಸ್ತೋತ್ರಗಳನ್ನು ಹಾಡಿ ಸೇವೆ ಸಲ್ಲಿಸುವ ಒಂದು ವರ್ಗ ಮತ್ತು ಆ ವರ್ಗಕ್ಕೆ ಸೇರಿದ ವ್ಯಕ್ತಿ : ಪಾರ್ತಿಸುಬ್ಬನೆಂದರೆ . . . ಕುಂಬಳೆ ಪಾಟಾಳಿಯೂ ಆಗಿದ್ದನು (ಪಾರ್ತಿಸು. ೪) ; ಸುಬ್ಬನ ತಂದೆ ಊರ ದೇವಸ್ಥಾನದ ಪಾಟಾಳಿ (ಅಪಾಥ. ೧೪೩) ; ಪಾಟಾಳಿ ಕೆಲಸ ಮಾಡಿದ ಬಗ್ಗೆ ದೇವಸ್ಥಾನದಿಂದ ದಿನಕ್ಕೆ ಒಂದು ಸೇರು ಬೆಳ್ತಿಗೆ ಅಕ್ಕಿ ಸಿಗುತ್ತದೆ (ಹಹಸ. ೪೪). [<ಪಾಠಾಳಿ. / ತಮಿ. ಪಾಟ್ಟಾಳಿ, ಪಾಟ್ಟಾಳ್]

ಪಾಟಿ$_1$ 'ಪಾಟಿ$_2$' ನೋ.

ಪಾಟಿ$_2$ (ನಾ). ೧. ಹಲಗೆ ; ಫಲಕ : ತುಸು ಹೊತ್ತಿನಲ್ಲಿ "ಕರ್ನಾಟಕ ಖಾನಾವಳಿ" ಎಂಬ ಹೆಸರಿನ ಪಾಟಿಯು ಕಂಡಿತು (ರಕ್ತಾಕ್ಷ. ೧೪) ; ಅಲ್ಲಿ "ವಿಂಚೂರಕರ ಹೋಟ್ಲು" ಎಂದು 'ಪಾಟಿ' ಹಚ್ಚಿದ ಒಂದು ಉಪ್ಪರಿಗೆಯ ಕಟ್ಟಡ ಕಂಡಿತು (ಪಿಶ್ಚಾಸು. ೫೫). ೨. ಬಳಪದಿಂದ ಬರೆಯುವುದಕ್ಕಾಗಿ ಸಿದ್ಧಪಡಿಸಿದ ಕಲ್ಲಿನ ಕಪ್ಪುಹಲಗೆ ; ಸ್ಲೇಟು : ತನ್ನ ಪಾಟಿ ಪುಸ್ತಕಗಳನ್ನು ಕಟ್ಟಿ ಅಲ್ಲಿ ಮೂಲೆಯಲ್ಲಿಟ್ಟು ಮಾಸ್ತರರ ಕಡೆಗೆ ಸಿದ್ಧ ಹೊರಟನು (ಕಾಜಾದೇ. ೫೫) ; ಪತ್ಸಲಾ ಇಡೀ ಪಾಟಿ ತುಂಬ ಅಆ ಬರೆದು ಆತನಿಗೆ ತೀಡಲಿಕ್ಕೆ ಹಚ್ಚಿದ್ದಳು (ಸ್ವಪ್ರ. ೩೫೬). [←ಮರಾ. ಪಾಟೀ]

ಪಾಟಿಕುಂಭ (ನಾ). ದೊಡ್ಡಗಡಿಗೆ (?) : ಕಾಟಕೋಟನೆನಿಟ್ಟ ಗೊಲ್ಲರ ಮೇಟಿ ಆಡಿನ ಹಿಕ್ಕೆಯಂ ಶಶಿಜೂಟನೀಶ್ವರನೆಂದು ಪಾಲಂ ತಾನದಱ ಮೇಲೆ ಪಾಟಿಕುಂಭದಿ ಕಱೆದೆಱೆದು ಕಾಲಾಟದಿಂದುಬುಬೆಂದು ಕುಣಿವುತ . . . ಭಜಿಸುತಿರೆ (ಬಸಪು. ೯-೧೨). [ಪಾಟಿ$_0$+ಕುಂಭ]

ಪಾಟಿಗಾಣ್ (ಕ್ರಿ). ಸಮವೆಂದು ಭಾವಿಸು ; ಸರಿಸಮಾನವೆಂದು ತಿಳಿ : ಅದಿರದೆ ವೀರವೈರಿಭಟರಂ ಘಟಕೋಟಿಗೆ ಪಾಟಿಗಂಡು . . . ಘನಕಪಿತ್ಥಮನಾ ಬನದೊಳ್ ಕಡಂಗಿ ಕಿಟ್ಟದಟದು ಪೋದುದೇ ನಿನಗಮಿಾ ತೆಱದಿಂ ಕೆಡೆವಂತುಟಾದುದೇ (ಪರ್ಧಪು. ೩-೧೫). [ಪಾಟಿ$_1$ (<ಪಾಟಿ$_2$)+ಕಾಣ್]

ಪಾಟಿಗೆಡಿಸು (ಕ್ರಿ). ಸ್ಥಿತಿಗೆಡುವಂತೆ ಮಾಡು ; ನಾಶಮಾಡು : ಪಾಟಿಗೆಡಿಸುವೆವಘವನೆಂಬಾ ನವಕೋಟಿಮುನಿಗಳ ಮೆಲ್ಲಡಿಗೆ ತಾಟಿಸಿ ಹಣಿಯ ನೇಮಿಾಶಸಂಗತಿಯ ಸಂಘಾಟದಿಂದಾನುಸುರುವೆನು (ಪೇಮಿಸು. ೧-೨೦). [ಪಾಟಿಗೆಡು (<ಪಾಟಿಗೆಡು) + —ಇಸ್ಸು$_3$]

ಪಾಟಿಗೆಡು 'ಪಾಟಿಗೆಡು' ನೋ.

ಪಾಟಿಗೆಯ್ (ಕ್ರಿ). ಸಮಾನವಾಗಿ ಕಾಣು; ಎಣೆಯೆಂದು ಎಣಿಸು: ಕಾಗೆ ಕರ್ರೆನ್ನಲಾ ಕೋಗಿಲೆಗೆ ಬನ್ನಮಪ್ಪುದೆಯದಂತಿಲ್ಲಾಗಿ ಪಾಟಿಗೆಯ್ಯೆಂ (ಸಿದ್ಧೇಶು. ೧-೧೮). [ಪಾಟಿ$_1$ (<ಪಾಟಿ$_2$) + ಕೆಯ್$_1$]

ಪಾಟಿತ (ಗು). ಸೀಳಿದ; ಒಡೆದ; ಮುರಿದ: ಕೂರಿಸೆ ಗುರು ಶುಶ್ರೂಷೆಯೊಳಾ ರಾಮನನುಗ್ರಪರಶುಪಾಟಿತರಿಪುವಂಶಾರಾಮನನಿಷು ವಿದ್ಯಾಪಾರಗನೆನಿಸಿದುದು ಬಲ್ಮೆ ವೈಕರ್ತನನಾ (ಪಂಪಭಾ. ೧-೧೦೪); ಪರಿಮಳಾ ತಿಲಂಪಟಷಟ್ಚರಣಪಟಲಪಾಟಿತ ಕುಟ್ಮಲಾವಳೀಸ್ಯಂದಮಾನ ಮಕರಂದ ಬಿಂದುಸಂದೋಹಜನಿತ ದುರ್ದಿನಂಗಳಿಂ (ಕಂದ್ರಪು. ೧-೦೦೫ ಪ).

[ಸಂ.]

ಪಾಟಿದೈವ (ನಾ). ಸರಿಸಮವಾದ ದೇವತೆ; ಸದೃಶವಾದ ದೇವತೆ: ಪಾಟಿದೈವವಿದೆಂದು ನಾಡೊಳು ಪಾಟಿಸುವರೆಲೊ ಜಿನನ ವಿಧಿಗಳ ಕೋಟಲೆಯನೆಣಿಸುವೊಡೆ ತಾಂ ಫಣಿಪತಿಗೆ ಹವಣಲ್ಲ (ಬಸಪು. ೫೧-೭೫).

[ಪಾಟಿ$_1$ (<ಪಾಟಿ$_2$) + ದೈವ]

ಪಾಟಿದೋಱು (ಕ್ರಿ). ಸಮಾನವೆಂದು ಗಣಿಸು,–ಎಣಿಸು: ಅನೇಕ ನೃಪಾಲರಂ ಭುಜಾಬಳದಿನದಿರ್ಪಿ ತತ್ಕುಲಧನಂಬೆರಸೀಟ್ಕುಳಿಗೊಂಡ ಕನ್ಯಕಾ ಕುಳದೊಳಗಾರ ಪೋಲ್ವೆಯವಳೀಕೆಯನೇಕೆಯೊ ಪಾಟಿದೋಱುವಿರ್ (ಪುಸ್ತಪು. ೭-೫೭). [ಪಾಟಿ$_1$ (<ಪಾಟಿ$_2$) + ತೋಱು]

ಪಾಟಿಸವಾಲು 'ಪಾಟೀಸವಾಲು' ನೋ.

ಪಾಟಿಸು$_1$, ಪಾಳಿಸು$_1$ (ಕ್ರಿ). ೧. ಸರಿಸಮಾನವೆಂದು ಎಣಿಸು: ನೋಟವೊಂದಲ್ಲದೆ ನುಡಿಯಿಲ್ಲ ಮೈಯೊಲೆದಾಟವಿಲ್ಲ ಕುವರರಿಗೆ ಮಾಟದ ಬೊಂಬೆಯಂತಿರೆ ಕಂಡು ದೇವೇಂದ್ರ ಪಾಟಿಸಿ ನುಡಿದನಿಂತೆಂದು (ಶರತ. ೬೭-೩೯); ಪಾಟಿಸಿ ಕೇಳಣ್ಣ ನಾನು ನೀನಾಡುವರಾಟಕಾಱರು ನಮ್ಮ ಭಟರು ನೋಟಕಾಱರೆ ನೀನು ನೆನೆದ ಸಂಗ್ರಾಮ ಸಘಾಟಿಕೆಯಾಯ್ತು ಕಂಜಾಸ್ತ್ರಾ (ಶರತ. ೫೧-೮೦). ೨. ವಿಮರ್ಶಿಸು; ಪರಾಮರ್ಶಿಸು; ಪರಿಶೀಲಿಸು: ನೀಟಿಂಗೆಱಗದ ಜೈತಜಿಕಾಟಕನಂ ಕಡಿದು ಬಿಸುಡೆ ಚಿಕದೇವೇಂದ್ರಂ ಪಾಟಿಸಿ ಬಲ್ಲವರಲ್ಲದ ಮಾಟದ ರಾವಣಿಯನಿಂದು ಮಡಿಪಿದನೆಂದರ್ (ಅಪ್ರತಿ. ೬೧-೨೮). ೩. ಕೊಡು; ನೀಡು: ಒದಗಿಸು: ಹಾಟಕಭಿತ್ತಿಸಮನ್ವಿತ ನಾಟಕಶಾಲೆಗಳ ವಿವಿಧಸೌಧಂಗಳ ಕೊಂಡಾಟಮನೆ ಮೆಱೆದು ಮೆಚ್ಚಂ ಪಾಟಿಸುವುವು ಮಿಥುನತತಿಗೆ ಗೃಹಮಹಿಜಾತಂ (ಅಂಪು. ೫-೩೭); ತೃಣಮನುಜರು ಕೈಮುಗಿದು ಪಂದನೆ ಮಾಡೆ ಅನುಮಾನ ಇಲ್ಲದಲೆ ಪಾಟಿಸುವ ಕರ್ನ (ತೀರ್ಥಪು. ೧೬-೦). ೪. ಆದರಿಸು; ಗೌರವಿಸು; ಮೆಚ್ಚಿಸು: ಮಿಾಟು ಸಿಂಗರದಿಂಪುವಡೆದು ಮಿಗೆ ಬಯಸಿ ಬಯಸಿದ ಸುವಸ್ತುಗಳನಿತ್ತು ಪಾಟಿಸುವ ಭೀಮಫಲ್ಗುಣರ . . . ಕೌತುಕದ ಮಾಳ್ಕೆಯಂ ಕಂಡು ನಲಿದಾಡಿತು ಜನಂ (ಶೈಪಾಭಾ. ೩೪-೧೦). ೫. ಅಪೇಕ್ಷಿಸು; ಬಯಸು: ಊಟದಿನಾಟದಿನೊಪ್ಪುವ ಪಾಟದಿ ನಾಱಿಸುವ ತೀಟದಿಂ ಕಂಪಿನ ಕಯ್ಗೂಟದಿನಪ್ಪ ಸುಖಂಗಳೆ ಪಾಟಿಸಿದ ಸುಖಂಗಳಿಂದ್ರಿಯಂಗಳ ದೆಸೆಯಿಂ (ಅಪಪು. ೨-೮೧); ಚೆನ್ನಿಂಗೆ ಮಱುಗಿ ಮಾಣದೆ ಚೆನ್ನಂ ಪಾಟಿಸುವರಾಗಳುಂ ವಿಕಳಾಂಗರ್ (ಸಮಪ. ೬-೪೪); ಓಪರೊಳಾರುಂ ಬೇಟಮಂ ಪಾಟಿಸಿದವರೊಳೆ ನಿನ್ನಂತು ನಾಣ್ಗೆಟ್ಟು ಬಾಯ್ವಿಟ್ಟರನಾನೀ ಲೋಕದೊಳ್ ಕಂಡಱಿಯೆಂ (ಶೃಂಗಾರ. ೪-೧೮); ದೋಕ್ಷವನು ಪಾಟಿಸುವ ನರ ನಿರಪೇಕ್ಷನಾಗಿಯೆ ಭಜಿಸಬೇಹುದು (ತಿಮ್ಮಕ. ೨-೪೭). ೬. ಮಾಡು; ರಚಿಸು; ನಿರ್ಮಿಸು: ಪೊಸದುರ್ಗವಂ ಪಾಟಿಸಿ ಪಿರಿಯ ನಿಡುಬಾವಿಗಳನಗುಳಿಸಿದನದಱೊಳಗೆ (ಬಸಪು. ೦೬-೧೧); ಕೋಟೆಯಿದ್ದುದು ಮುಂದೆ ಶಿವನ ಕರೋಟಿಮಾಲಾವಳಯದವೊಲುಱೆ ಪಾಟಿಸಿದ ಕೊತ್ತಳದ ಮುಗಿಲಟ್ಟಳೆಯ ಮುರುಹಿನಲಿ (ತೂರರಾ. ೫-೨-೪); ಬಳಸದಧಿಕಸ್ನೇಹವನು ವೆಗ್ಗಳ ಮೆನಿಪ ಹಗೆತನದ ಪಾಟಿಸಿ ಬಳಗವೆಲ್ಲದ ಕೊಲಿಸಿ ತಾನಳಿದನು ಸುಯೋಧನನು (ತಿಮ್ಮಶ್ರ. ೧-೮೪). ೭. ಉಂಟುಮಾಡು; ಹುಟ್ಟಿಸು: ಬೇಟದ ಸುಗ್ಗಿ ನಾಲ್ಕೆ ದಿನವಾ ದೆಸೆಯೊಳ್ ಬಸಮಾದ ಗಂಡರಿಂಗೂಟಮೆ ಕೋ[ಶಾಕಾಂ. ತೋ]ಟಿಯೆಂದು ಸಮಸಂದೆಮೆಯುಂ ಮಱೆಯಾಗದಂತು ಬಾಯ್ ನಾಟರೆ ಬಾಯೊಳಪ್ಪುಡುಗದಂತು ತೊಡಂಕಿರದೇಕೆ ತೋಟಿಯಂ ಪಾಟಿಸೆ ತಾವೆ ತಮ್ಮಗಳನಾಱಡಿಗೊಳ್ವರೊ ನಾಡ ಗೊಡ್ಡೆಯರ್ (ಲೀಲಾವ. ೧೪-೪೦). ೮. ಹೊಂದು; ತಾಳು; ಅವಲಂಬಿಸು: ಸಂಸೃತಿವಾರ್ಧಿಯಲ್ಲಿ ಬಿರ್ದುರುಳದೆ ವೀರವೃತ್ತಿಯನೆ ಪಾಟಿಸಿ ಮೋಕ್ಷಸುಖಕ್ಕೆ ಚಿತ್ತಮಂ ತಿರಿಪುತುಮಿರ್ದ ಜೈನಮುನಿಪುಂಗವರಿಂ ಮಿಗಿಲಾರೊ ಲೋಕದೊಳ್ (ಧರ್ಮಾಮ್ಯ. ೧೨-೫೦). ೯. ಬೆರಸು; ಹೊಂದಿಸು; ಜೋಡಿಸು: ಮೇಟಿ ಪುರುವಳ್ಳಿ ಎಲೆಯುತ್ಪಾಟಿಸುಗುಂ ನಸ್ಯಕರ್ಮದೊಳ್ ವಿಷಮನದುಂ ಪಾಟಿ[ಶಾಕಾಂ. ಪಾರಿ. ಲೋಟಿ]ಸಿ ಮರಿಚದೊಳೀಯಲ್ ಕೋಟಿಲತಾ ಕುಲಮದೇವುದಿಂತಿದಱಿದಿರೊಳ್ (ಬಮರ. ೭-೮೯). **ಪಾಳಿಸು$_1$**: ೧೦. ಜೊತೆಸೇರು; ಬೆರೆ; ಜೊತೆಯಾಗು: "ಪಾಳಿಸು – ಸಂಯೋಗೇ" (ಕಮಧಾ.). P ಇಲ್ಲಿ ಕುಳಸಹಿತವಾದ ರೂಪವು ಪ್ರಾಚೀನವಲ್ಲದುದರಿಂದ ಪರ್ಯಾಯಪದವಾಗಿ ಗಣಿಸಲಾಗಿದೆ. [ಪಾಟಿ$_1$ + – ಇಸು$_3$]

ಪಾಟಿಸು$_2$ (ಕ್ರಿ). ೧. ಓದು; ಪಠಿಸು: ಬಗೆವುಗೆ ಜೈನಮನೋದದೆ ಮಿಗೆ ಪಾಟಿಸಿ ಕುಮತಿ ಕುಮತಮಂ ಪಲ್ಲಂ ನಾಲಗೆ ತಪ್ಪುವನ್ನಮಿರದೋದುಗೆ ಸಮ್ಯಜ್ಞಾನಿಯಾಗಲೇನಱಿದಪನೇ (ಸಮಪ. ೩-೩೩). ೨. ಹೊಗಳು; ಕೀರ್ತಿಸು: ಪಾಟಿದೈವವಿದೆಂದು ನಾಡೊಳು ಪಾಟಿಸುವರೆಲೊ ಜಿನನ ವಿಧಿಗಳ ಕೋಟಲೆಯನೆಣಿಸುವಡೆ ತಾಂ ಫಣಿಪತಿಗೆ ಹವಣಲ್ಲ (ಬಸಪು. ೫೧-೭೫). ೩. ತಿಳಿದುಕೊಳ್ಳು; ಕಲಿತುಕೊಳ್ಳು; ಅಭ್ಯಾಸಮಾಡು: ತೋಟಿಗೆಳಸದರನೊಯ್ಯನೊಯ್ಯನೆ ಮನೋಭವನ ಧಾಟಿಗೊಳಗಾಗಿ ನಿಲಿಸುವ ಮದನಕಲೆಗಳಂ ಪಾಟಿಸುವ ಬಗೆಯನೆಳೆಯರ್ಗೆ ಕಲಿಸುವ . . . ಚಾರುಚೇಟಿಯರ್ ಚಲಿಸುವರ್ (ಶೈಪಾಭಾ. ೬-೩೭). ೪. ಪಳಗು; ಹತೋಟಿಗೆ ಬರು: ಪಾಟಿಸಿದಯಾಹವಮೃಗಂಗಳ ಬೇಟೆಗೊಳಿಸಿದ ಶಬರರಟವಿಯ ಪಾಟಿಸಿಹ ಹೊಲಮರಿಗಳಿಂದೈದಿದನು ದೆಸೆಗಳನು (ಉತ್ತಕ. ೧೧-೩). ೫. ರೂಢಿಯಾಗಿರು; ಅಭ್ಯಾಸವಾಗಿರು; ವಾಡಿಕೆಯಲ್ಲಿರು: ಪಾಟಿಸಿ ಮಾಡಿದ ಸೊರ್ಕಿವಳಾಟಮೆ ವಲಮೆನಿಸಿ ನೆಗಟ್ಟ ನೀಲಾಂಜನೆ . . . ನೋಟಕರಂ ತವದ ಮಾಟ್ಕೆಯಿಂ ಮೋಹಿಸಿದಳ್ (ಅಂಪು. ೯-೩೮); ಮಸೆವುದು ಮಾಸಲಿರ್ದ ಪಟವೇಟಮನಿಚ್ಚಿಯ ಬಿಚ್ಚತಿಕ್ಕೆಯಂ ಪೊಸಯಿಪುದೊಳ್ಕಮಂ ನಡಪುತಿರ್ಪುದು ಧಾತುವನೊಳ್ಳಿತೆಯ್ದೆ ಪಾಟಿಸುವುದು ಕೂಟದೊಳ್ ಕುಶಲನಪ್ಪುದು . . . ಬೇಱೆ ಪೆಱತಾವುದು ಕೇಳಿಕೆಯುಂ ವಿಟತ್ವಮುಂ (ಶಾಂತಿಪು. ೮-೯೧).

[ಪಾಟ$_2$ + – ಇಸು$_3$]

ಪಾಟಿಸು$_3$ (ಕ್ರಿ). ೧. ಸೀಳು; ಹೋಳುಮಾಡು; ಕತ್ತರಿಸು: ಕೌಟಕ ನಾಮಿಷಮಂ ಮಿಗೆ ಪಾಟಿಸಿ ಮಾಱುತ್ತಮಿರ್ಪ ವೈತಂಸಿಕಂ (ಪಸ್ತುಕೋ. ೬೬-೮೫). ೨. ಕಳೆ; ನಾಶವಾಗು; ನಿವಾರಣೆಯಾಗು: ಕೋಟಿದಿನದೊಂದು ಯಾತನೆ ಪಾಟಿಸುಗುಂ ಮಾಯೆಕಾರನೀತನ ಚದುರಿಂ (ಪಸ್ತಪಂ. ೬೦). ೩. ಕೀಳು; ಉತ್ಪಾಟಿಸು: ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾನೀ ನಯದಿಂದೆ ಪೆರ್ಚಿ ಪೊರೆದಟ್ಟಱೊಳಂದೊಡನುಂಡನಲ್ಲನೇ (ಪಂಪಭಾ. ೯-೬೭). [ಪಾಟನ + – ಇಸು$_3$]

ಪಾಟಿಹೆಂಡ (ನಾ). ಹಿಂದಿನ ದಿನದ ಹೆಂಡ; ಹಳೆಯ ಹೆಂಡ: ಗೌಡರ ಮಗ . . . ಪಾಟಿಹೆಂಡ ಮತ್ತು ಹೊಸಹೆಂಡ ಎಷ್ಟು ಅಂತ ಬೇರೆಬೇರೆ ಅಳೆಸಿ ಇಷ್ಟು ಹೊಸಹೆಂಡಕ್ಕೆ ಅಷ್ಟು ಪಾಟಿಹೆಂಡ ಎಂದು

ಸೇರಿಸಿ, ತಿತ್ತಿಗೆ ತುಂಬಿಸಿ ಮಾರಾಟಕ್ಕೆ ಕಳುಹಿಸುತ್ತಿದ್ದ (ಸಪ್ಮೂರು. ೧೩೯).
[ಪಾಟ? + ಹೆಂಡ (<ಪೆಂಡ)]

ಪಾಟೀಕ, ಪಾಠೀಕ(ನಾ). ವಿದ್ವಾಂಸ ; ಪಂಡಿತ : ಸದ್ಬುಧ ಪುರೋಹಿತ . . . ಪಾಂಡಿತ್ಯ ಪಾಟೀಕ ಸಕಲವಿನಿಯೋಗ . . . ಸಂದಣಿಸೆ (ಸಪಸೋ. ೩೪-೧೮). **ಪಾಠೀಕ** : ಎಂತಹ ಪಾಠೀಕನಾಗಲಿ . . . ದಾಸರನ್ನು ಕಂಡರೆ ಸನ್ಯಾಸಿಗಳಿಗೆ ಮಾಡುವಂತೆ ನಮಸ್ಕಾರ ಮಾಡುವುದು ರೂಢಿಗೆ ಬಂತು (ಕಪಸಿ. ೩೯೧). [←ಮರಾ. ಪಢೀಕ. / ಸಂ. ಪಾಠಕ]

ಪಾಟೀಲ 'ಪಟ್ಟಾಯಿಲ' ನೋ.

ಪಾಟೀಸವಾಲು, ಪಾಟಿಸವಾಲು (ನಾ). (ನ್ಯಾಯಾಲಯದಲ್ಲಿ ಹಿಂದೆ ನಡೆದ ವಿಚಾರಣೆಯಿಂದ ತಿಳಿದು ಬಂದ ವಿಷಯಗಳನ್ನು ತಾಳೆ ನೋಡುವುದಕ್ಕಾಗಲಿ, ಮುಚ್ಚಿಟ್ಟ ವಿಷಯಗಳನ್ನು ಹೊರಡಿಸುವುದಕ್ಕಾಗಲಿ ಮಾಡುವ) ಪ್ರಶ್ನಾವಳಿ ; ಅಡ್ಡಸವಾಲು : ವಕೀಲರು ಪಾಟಿಸವಾಲು ಹಾಕುವುದೆಂದರೆ ಅದೊಂದು ಚಿತ್ರಹಿಂಸೆ (ಪಾಡಿಗೇ. ೯೩); ತನ್ನ ಅಂತರಾತ್ಮ ಎದುರಿಗೆ ಬಂದು ನಿಂತು ತನ್ನನ್ನು ಪಾಟೀಸವಾಲು ಮಾಡುತ್ತಿದೆಯೇನೋ ಎನಿಸಿತು ಅವನಿಗೆ (ಸ್ವಾಮಿಸ್ನೇ. ೦೫೨); ಮರುದಿನ ಬೆಳಗ್ಗೆ ಇಂದಿರೆಯ ಪಾಟೀಸವಾಲಿಗೆ ಆರಂಭವಾಯಿತು (ಬಂಕಿಸು. ೦೨೨). **ಪಾಟಿಸವಾಲು** : ಏನಾದರೂ ಕಳುವಾಗಿದ್ದರೆ ಅವಳೊಬ್ಬಳೇ ಅದಕ್ಕೆ ಜವಾಬ್ದಾರಳೆಂದೂ ಪಾಟಿಸವಾಲು ನಡೆಸಿದಾಗ ಆಪಾದಿತೆಯಾದ ಯೆವ್ ಫೀಮಿಯಾ ಬಾಷ್ಕೋವ ಹೇಳಿಕೆಯಿತ್ತಳು (ಪುಸರು. ೪೪); ಇವಳ ಪಾಟಿಸವಾಲಿನ ಮುಂದೆ ತಮ್ಮ ಲಾಯರತ್ವ ಸತ್ತ್ವವಿಲ್ಲದ್ದೆಂದು ಲಾಯರು . . . ಬಲ್ಲರು (ಪಾಪುಸ. ೦೬೮). [ಪಾಟೀ$_0$ + ಸವಾಲು (<ಸವಾಲ್)]

ಪಾಟು$_1$ 'ಪಾಡು$_3$' ನೋ.

–ಪಾಟು$_2$ (ಪ್ರ). ಒಂದು ಕೃದಂತ ಭಾವನಾಮ ಪ್ರತ್ಯಯ : 'ತಿದ್ದು ಪಾಟು' ಪರಾ.

ಪಾಟುಗೆಡಿಸು (ಕ್ರಿ). ಕಷ್ಟಕ್ಕೆ ಗುರಿಮಾಡು ; ದುರ್ಗತಿಗೆ ಈಡು ಮಾಡು : ಆಟವಲ್ಲವು ಕಪಟನಾಟಕಧಾರಕನೆ ಕಾಟಕಾರು ಕ್ರೂರನೋಟದಿಂದ ಪಾಟುಗೆಡಿಸಿ ಹೀನಕೋಟಲೆಯೊಳು ನೂಕಿ ಬೂಟಕತನ ಮಾಯದಾಟದಂತೆ (ಶೋಕ್ಷದೀ. ೫೦-೦). [ಪಾಟುಗೆಡು + —ಇಸು$_3$]

ಪಾಟುಗೆಡು (ಕ್ರಿ). ರೀತಿಗೆಡು ; ನಡತೆಗೆಡು : ಪಾಟುಗೆಟ್ಟು ಹೆಂಗಳೊಡನೆ ಕೋಟಲೆಗೊಂಡು ತಿರುಗಬೇಡಿ ನೀಟುಗಾತಿಯರೊಲುಮೆ ಬೂಟಕವೆಂದು ತಿಳಿಯಿರೊ (ಪುರಂದ. ೨-೧೬-೦).
[ಪಾಟು$_1$ (<ಪಾಡು$_3$) + ಕೆಡು$_1$]

ಪಾಟುಪಡು 'ಪಾಡುಪಡು' ನೋ.

ಪಾಟುಬಡಿಸು 'ಪಾಡುವಡಿಸು' ನೋ.

ಪಾಟುಬಡು 'ಪಾಡುಪಡು' ನೋ.

ಪಾಟ್ಟು (ನಾ). ೧. ತಮಿಳು ಹಾಡು,— ಸ್ತೋತ್ರ : ಅಂದೆಸಗಿ ನಾಲ್ಕನೆಯ ತಿರುವಂದಾದಿಯುಮಂ ಚತುರ್ನವತಿಯಂ ಪಾಟ್ಟಂ ಸಂದ ತಿರುಚಂದ್ರವೃತ್ತಮನೊಂದಿಸಿ ಪೇಟ್ದರ್ ಕಡಂಗಿ ನೂಱಿರ್ಪತ್ತಂ (ರಿಷ್ಯಸ. ೩-೩೮). ೨. ಕವಿತೆ; ಕಾವ್ಯ : ಪುಲಿಗೆಱೆಯ ತಿರುಳ ಕನ್ನಡದ ಪುರುಳ ರಸರಸದ ಬಾವಿ ಮನೆಮನೆಗೆ ತೀವಿ ತನ್ನೆರಡು ಪಾಟ್ಟು ಮೆಸೆಯೆ . . . ಪಂಪನ್ ಎಮ್ಮ ತಾಯ್‌ನುಡಿಗೀಗೆ ಪೊಸಪೂಸತು ಪೆಂಪನ್ (ಹೊಂಗಳು. ೩೯-೪). 'ಪಾಡು$_2$' ಪರಾ. [←ತಮಿ. ಪಾಟ್ಟು]

ಪಾಟ್ಲೆ 'ಪಾಟಲಿ$_2$' ನೋ.

ಪಾಟ್ಲೋನು 'ಪಾಟಲೂನು' ನೋ.

ಪಾಠ$_1$ (ನಾ). ಒಂದು ಬಗೆಯ ಮೂಲಿಕೆ ; ಅಗುಳುಶುಂಠಿ : "ದೀಪಿನೀ—ಅಳಿಲೆ, ಪಾಠ, ಓವ, ಮೆಂಥೆಯ" (ಓಸರಿ. ೭೬). [ಸಂ. ಪಾಠಾ]

ಪಾಠ$_2$ (ನಾ). ೧. ಓದು; ವಾಚನ. ೨. ಉಗ್ಗಡಣೆ ; ಘೋಷ ; 'ಸ್ತುತಿ ಪಾಠ' ಪರಾ. ೩. ಅಭ್ಯಾಸ ; ಅಧ್ಯಯನ : "ಅಧ್ಯಯನೇ, ಪಾಠದೊಳ್" (ಕಾಶಕ್ಕ. ೨೬೪) ; ಅಂದು ಪಾಠವು ಕಾಟ ಎಂದು ತಿಳಿದಿದ್ದೆ (ಕಎಪು. ೯-೨); ಪಾಡ್ಯ ಪಾಠಕ್ಕಾಗದು, ದೌಢ್ಯ ಕೆಲಸಕ್ಕಾಗದು (ಗಾರ). ೪. ಕಲಿಸುವಿಕೆ ; ಅಧ್ಯಾಪನ : "ಅಧ್ಯಯನಂ, ಅಧ್ಯಾಪನಂ . . . ಅಧೀತ್— ಈ ೮ ಪಾಠಂ" (ಕಾಶಕ್ಕ. ೧೬೪). ೫. ಪರಂಪರಾಗತವಾದ ಗ್ರಂಥಸ್ವರೂಪ : ಮಹಾಭಾರತಕ್ಕೆ ದಾಕ್ಷಿಣಾತ್ಯಪಾಠ, ಔತ್ತರೇಯಪಾಠವೆಂದು ಎರಡು ಪಾಠಗಳಿವೆ (ಭಾರದ. ೯೬). ೬. ಲಿಖಿತ ಭಾಗ, —ರೂಪ : ಕೆಲವು ಸಂದರ್ಭಗಳಲ್ಲಿ ಕವಿಯ ಪಾಠ ಇದೇ ಎಂದು ನಿಷ್ಕೃಷ್ಟವಾಗಿ ಹೇಳುವುದಕ್ಕಾಗದಿರಬಹುದು (ಕನ್ನಸಂ. ೦೬೨). ೭. ಅಭ್ಯಾಸಕ್ಕಾಗಿ ಆಯ್ದುಕೊಂಡ ಭಾಗ ; ಕಲಿಯುವುದಕ್ಕಾಗಿ ನಿಯೋಜಿಸಿಕೊಂಡ ಭಾಗ : ಒಂದೊಂದು ಪಾಠಕ್ಕೂ ಆಗುವಷ್ಟನ್ನು ಆರಿಸಿಕೊಂಡು ಪಾಠಮಾಡುವುದು ಸಂಪ್ರದಾಯವಾಗಿ ಬಂದಿದೆ (ಶಿಕ್ಷದ. ೨೨೦). ೮. ವೇದಾಧ್ಯಯನ ; ೯ ಬ್ರಾಹ್ಮಣನು ಪ್ರತಿನಿತ್ಯ ಮಾಡಬೇಕಾದ ಪಂಚಯಜ್ಞಗಳಲ್ಲಿ ಒಂದಾದ ಬ್ರಹ್ಮಯಜ್ಞ : "ಪಾಠಃ—ವೇದಪಾರಾಯಣ ಜಪಾದಿಗಳು . . . ಪಾಠವೇ ಬ್ರಹ್ಮಯಜ್ಞ" (ಸಿದ್ಧಾಂತಿ. ೨೧೬); ಎನಗೀ ಶಾಸ್ತ್ರಂ ಪಾಠಂ ಜನರಂಜನ ಮಾಡಿ ಪೇಟ್ದು ಕಟುವೆಂ ಪೊಟ್ಟಂ (ಅಟ್ಟಸು. ೧-೨೬). ೯. ವಿವೇಕ ; ತಿಳಿವಳಿಕೆ : ಆ ಅಹಂಕಾರಿಗೆ ಸರಿಯಾದ ಪಾಠವನ್ನು ಕಲಿಸಬೇಕು (ರೂಢಿ).

ಪಾಠಮಾಡು = ೧. ಕಲಿಸು ; ಪಾಠ ಹೇಳು : ಈಗ ಬಂದಿರುವ ಹೊಸ ಮೇಷ್ಟರು ಬಹಳ ಚೆನ್ನಾಗಿ ಪಾಠಮಾಡುತ್ತಾರೆ (ರೂಢಿ). ೨. ಉರು ಹೊಡೆ ; ಗಟ್ಟಿಮಾಡು ; ಬಾಯಿಪಾಠ ಮಾಡು : ಇನ್ನು ಅರ್ಧ ಗಂಟೆಯಲ್ಲಿ ಈ ನಾಲ್ಕು ಮಗ್ಗಿಗಳನ್ನು ಪಾಠ ಮಾಡು (ರೂಢಿ). [ಸಂ.]

ಪಾಠಕ (ನಾ). ೧. ಬಿರುದಾವಳಿಗಳನ್ನು ಹೊಗಳಿ ಹಾಡುವವನು ; ಭಟ್ಟಂಗಿ : ಕವಿಗಳಿಗೆ ಪಾಠಕಜನಕೆ ದೈವಜ್ಞರಿಗೆ ವೈದ್ಯರಿಗೆ . . . ಎಱೆದು (ಬಸಪು. ೫೯-೨೯); ಮುನಿಗಳೇ ಮಾಣಿಯರು . . . ಸೂರ್ಯಾದಿಗಳೇ ಸಹಚರರು ಘನಚತುರ್ದಶವಿದ್ಯೆ ಪಾಠಕಜನವಲ್ಲೆ (ಕುಪ್ಯಾಸ. ೦-೯೦) ; ಬವರದಾದಿಯಲಸುರಪತಿಯುಪ್ಪವಡಿಸಿದನಿದ್ದೆಸಯ ಮಂಗಳರವದ ಪಾಠಕ ಸೂತಮಾಗಧರುಗಳ ಸೂಕ್ತಿಯಲಿ (ಶೊರರಾ. ೬-೨೦-೦೦). ೨. ಓದುವವನು ; ಓದುಗ ; ವಾಚಕ : "ಓದಾಳಿಯೆಂದು ಪಾಠಕಂ" (ಕಶಸಾ. ೬೦-೩೨೯); ಕೆಲವು ಪಾಠಕರು ಈ ಗ್ರಂಥದ ಕೊನೆಯನ್ನು ನೋಡಿ ದುಃಖಿತರಾಗಬಹುದು (ಬಂಕಿಸು. ೧೬೭); ಈ ದೀರ್ಘ ವಿವರಣೆಯು ಪಾಠಕರಿಗೆ ಬೇಸರವಾಗಬಹುದು (ಜೀವಾಶ್ಯ. ೦೮೦). ೩. ಕಲಿಸುವವನು ; ಶಿಕ್ಷಕ ; ಗುರು. ೪. ವೇದ, ಪುರಾಣ ಮೊದಲಾದುವುಗಳನ್ನು ಓದಿ ಹೇಳುವವನು ; ಪ್ರವಚನಕಾರ.
[ಸಂ.]

ಪಾಠಕರಣ (ನಾ). [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು : ಧ್ರುವ ಮಟಯ . . . ಪಾಠ[ಪಾಠಾಂ. ಟೀ]ಕರಣ . . . ಜಯಾಳವೆಂಬವೇ ಮೊದಲಾದ ನೂಱೆಂಟು ತಾಳಂಗಳು (ಏಪೇಕ. ೦೯೨). [ಸಂ.]

ಪಾಠಕಲಿ (ಕ್ರಿ). ೧. ಅಭ್ಯಾಸಮಾಡು : ಜನನಿಯಿಂದ ಪಾಠಕಲಿತ ಜನರು ಧನ್ಯರು (ಕಪಪು. ೫-೧೪೮). ೨. ಅನುಭವದಿಂದ ತಿಳಿದುಕೊಳ್ಳು ; ಬುದ್ಧಿಕಲಿ : ಆ ದುಷ್ಟನು ಸರಿಯಾಗಿ ಪಾಠಕಲಿಯುವಂತೆ ಮಾಡಬೇಕು (ರೂಢಿ). [ಪಾಠ$_2$ + ಕಲಿ$_1$ (<ಕಲ್$_1$)].

ಪಾಠಕಲಿಸು (ಕ್ರಿ). ೧. ಪಾಠವನ್ನು ಹೇಳಿಕೊಡು : ಆ ಪಂಡಿತರು ತುಂಬ ಚೆನ್ನಾಗಿ ಪಾಠ ಕಲಿಸುತ್ತಾರೆ (ರೂಢಿ). ೨. (ಶಿಕ್ಷೆಗೊಳಗಾಗಿಸಿ) ತಪ್ಪನ್ನು ತಿದ್ದಿಕೊಳ್ಳುವಂತೆ ಮಾಡು ; ಬುದ್ಧಿಕಲಿಸು : ಬಲು

ಸೊಕ್ಕಿಗೆ ಬಂದಿದ್ದಾನೆ, ಅವನಿಗೆ ಪಾಠ ಕಲಿಸಬೇಕಾಗಿದೆ (ರೂಢಿ).

[ಪಾಠ$_2$ + ಕಲಿಸು$_1$]

ಪಾಠಕಾಱ (ನಾ). ಭಟ್ಟಂಗಿ ; ಸ್ತುತಿಪಾಠಕ : ಪೊಗಳುತೆ ವರ್ಪವರ ಸರಂಗಳೊಳಂ ಪಾಡುವ ಪಾಠಕಾಱರಿಂಚರಂಗಳೊಳೆಲ್ಲಂ ದಿಗ್ಭಿತ್ತಿಗಳ್ ತೆಕ್ಕನೆ ತೀವೆ (ಸಂಪರಾ. ೩-೫೪ ಪ). [ಪಾಠ$_2$ + — ಕಾಱ]

ಪಾಠಕಿ (ನಾ). ಕಲಿಸುವವಳು ; ಅಧ್ಯಾಪಿಕೆ : "ಅಧ್ಯೇತ್ರೀ = ಪಾಠಕಿ" (ಕಾಶಕ್ಕ. ೧೬೪). [ಸಂ. ಪಾಠಕೀ]

ಪಾಠಕ್ರಮ (ನಾ). ೧. ಓದಬೇಕಾದ ಕ್ರಮ ; ಅಭ್ಯಾಸ ಮಾಡಬೇಕಾದ ಕ್ರಮ : ವರ್ಣಂಗಳ ಪಾಠಕ್ರಮಮರ್ಣವವೃತಧಾತ್ರಿಯೊಳ್ ಪ್ರಸಿದ್ಧಂ (ಶಪುದ. ೪). ೨. ಗ್ರಂಥದಲ್ಲಿರುವ ವಿಷಯದ ಅನುಕ್ರಮ : ಜ್ಞಾನಾವರಣೀಯಂ . . . ಅಂತರಾಯಮೆಂದಿಂತು ಮುಂ ಪೇಳ್ದ ಪಾಠಕ್ರಮಮೀ ಪ್ರಕಾರದಿಂದಂ ಸಿದ್ಧಮಾದುದು (ಗೊಮ್ಮಸಾ. ೨-೮).

[ಪಾಠ$_2$ + ಕ್ರಮ]

ಪಾಠಗ್ರಂಥಿ (ನಾ). (ಹಸ್ತಪ್ರತಿಯಲ್ಲಿ) ಮೂಲಪಾಠವೇನಿರಬಹುದೆಂದು ಊಹಿಸಲಾಗದಂತೆ ಕೆಟ್ಟುಹೋಗಿರುವ ಪಾಠ ; ಸಮಸ್ಯಾತ್ಮಕವಾದ ಪಾಠ : ಇಂಥ ಅಪರಿಹಾರ್ಯವಾದ ಅತಿ ದುಷ್ಟ ಪಾಠಕ್ಕೆ ಪಾಠಗ್ರಂಥಿ (Crux) ಎಂಬ ಹೆಸರನ್ನು ಕೊಟ್ಟಿದೆ (ಕನ್ನಸಂ. ೨೦೭).

[ಪಾಠ$_2$ + ಗ್ರಂಥಿ]

ಪಾಠಣ (ನಾ). ಕಲಿಸುವಿಕೆ ; ಅಧ್ಯಾಪನ : ಓದಿಸುವ ಬುಧವರನ ಬರಿಸಿವೊಲಿದು . . . ಪುತ್ರಚಿಂತಾಮಣಿಯಾ ಪಾಠಣದ ಬುಧವರನ ಚರಣಗಳಿಗೆರಗಿಸುತ್ತೆ ಕಳುಹೆ (ಪಪಪೋ. ೧೫-೬೧). [<ಸಂ. ಪಾಠನ]

ಪಾಠದೋಷ (ನಾ). ಗ್ರಂಥಗಳಲ್ಲಿ ಕಾಣುವ ಅಶುದ್ಧವಾದ ಅಥವಾ ತಪ್ಪಾದ ಬರೆವಣಿಗೆ : ಈ ಎರಡು ಪ್ರಧಾನದೋಷಗಳಿಂದ ಉದ್ಭವಿಸುವ ಪಾಠದೋಷಗಳ ಬಗ್ಗೆ ಇನ್ನೊಂದು ಅಧ್ಯಾಯದಲ್ಲಿ ಹೇಳಲಾಗುತ್ತದೆ (ಭಾರಪ. ೩೦). [ಪಾಠ$_2$ + ದೋಷ]

ಪಾಠನಿರ್ಣಯ (ನಾ). (ಹಳೆಯ ಗ್ರಂಥಗಳ ಹಸ್ತಪ್ರತಿಗಳನ್ನು ತಾಳೆ ನೋಡಿ) ಸರಿಯಾದ ಪಾಠ ಯಾವುದೆಂಬುದನ್ನು ನಿರ್ಧರಿಸುವಿಕೆ : ಪಾಠನಿರ್ಣಯದ ವಿಷಯದಲ್ಲಿ ತೋರುವ ವ್ಯವಸ್ಥಿತವೂ ಕೌಶಲ್ಯಪೂರ್ಣವೂ ಆದ ವಿವೇಚನೆಯೆಂದು ಇದನ್ನು ಸೂತ್ರಿಸಬಹುದು (ಭಾರಪ. ೯); ಹಸ್ತಪ್ರತಿಗಳ ಆಧಾರದ ಮೇಲೆ ಅದರ ಪಾಠನಿರ್ಣಯ ಮಾಡುವುದು (ಕನ್ನಸಂ. ೨೮). [ಪಾಠ$_2$ + ನಿರ್ಣಯ]

ಪಾಠಪರಿಷ್ಕರಣ (ನಾ). ಹಳೆಯ ಹಸ್ತಪ್ರತಿಗಳಲ್ಲಿರುವ ಪಾಠದೋಷಗಳನ್ನು ನಿವಾರಿಸುವಿಕೆ : ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡ ಮೇಲೆ ಗ್ರಂಥಸಂಪಾದನಕಾರ್ಯ ಪಾಠಪರಿಷ್ಕರಣದಲ್ಲಿ ಪರ್ಯವಸಾನವಾಗುತ್ತದೆ (ಕನ್ನಸಂ. ೧೬೨); ಅತ್ಯುತ್ತಮಹಸ್ತಪ್ರತಿ ಇಲ್ಲವೆ ದಾಖಲೆಗಳಲ್ಲಿಯೂ ಸಹ ಕಂಡುಬರುವ, ಆದರೆ ನಂಬಲು ಯೋಗ್ಯವಲ್ಲದ ಅಂಶಗಳನ್ನು ಹಸ್ತಪ್ರತಿಸಂಪ್ರದಾಯದಿಂದ ತೆಗೆದುಹಾಕುವುದೇ ಪಾಠಪರಿಷ್ಕರಣ . . . ಗ್ರಂಥಕಾರನ ಪಾಠದ ಮೂಲರೂಪವನ್ನು ಸಾಧಿಸುವುದು (ಭಾರಪ. ೪೧).

[ಪಾಠ$_2$ + ಪರಿಷ್ಕರಣ]

ಪಾಠಭೇದ (ನಾ). ಪ್ರಾಚೀನಕಾವ್ಯಗಳ ಹಸ್ತಪ್ರತಿಗಳಲ್ಲಿರುವ ಬೇರೆ ಬೇರೆ ಪಾಠ ; ಪಾಠಾಂತರ : ಗ್ರಂಥಗಳಲ್ಲಿ ಪಾಠಭೇದಗಳುಂಟಾಗುವುದು, ಪ್ರಕ್ಷೇಪಗಳಾಗುವುದು, ಗ್ರಂಥಪಾತವಾಗುವುದು, ಅಸ್ತವ್ಯಸ್ತವಾಗುವುದು, ಪ್ರತ್ಯಂತರಗಳ ಸಹಾಯದಿಂದ ಪಾಠಶೋಧನೆ ಮಾಡುವುದು —ಇವೇ ಮುಂತಾದುವನ್ನು ಪ್ರಾಚೀನ ಭಾರತೀಯವಿದ್ವಾಂಸರು ಬಲ್ಲವರಾಗಿದ್ದರು (ಕನ್ನಸಂ. ೧೦) ; ಈ ಉಪನಿಷತ್ತಿನ ಎರಡು ಬೇರೆಬೇರೆ ಪ್ರತಿಗಳಲ್ಲಿ ಪಾಠಭೇದವಿದೆ (ಜೀಪಾತ್ಮ. ೨೮೭). [ಪಾಠ$_2$ + ಭೇದ]

ಪಾಠಭ್ರಾಂತಿ (ನಾ). ಹಸ್ತಪ್ರತಿಯನ್ನು ಬರೆಯುವವನ ತಪ್ಪಿನಿಂದಾಗಿ ಉಂಟಾದ ಪಾಠ : ಪಾಠಭ್ರಾಂತಿ ಮತ್ತು ಅವುಗಳನ್ನು ಪರಿಹರಿಸುವ ಪ್ರಯತ್ನಗಳು (ಭಾರಪ. ೬೭). [ಪಾಠ$_2$ + ಭ್ರಾಂತಿ]

ಪಾಠಮಿಶ್ರಣ (ನಾ). ಬೇರೆ ಬೇರೆ ಸಂಪ್ರದಾಯದ ಪಾಠಗಳನ್ನು ಮಿಶ್ರಣ ಮಾಡಿ ಬರೆಯುವಿಕೆ : ಭಿನ್ನಶಾಖೆಗಳು ಹೀಗೆ ಒಂದರೊಡನೊಂದು ಸೇರುವುದಕ್ಕೆ ಪಾಠಮಿಶ್ರಣ (Crossing or Intermixing) ಎಂದೂ . . . ಹೆಸರು (ಭಾರಪ. ೫೪) ; ಎಲ್ಲ ಪ್ರತಿಗಳ ಉತ್ತಮಾಂಶಗಳನ್ನೊಳಕೊಂಡ ಒಂದು ಪಾಠವನ್ನು (Eclectic text) ಸಂಪಾದಕನು ಕೊಡಬೇಕಾಗುತ್ತದೆ. ಆಗ ಅದರಲ್ಲಿ ಭಿನ್ನಸಂಪ್ರದಾಯಗಳ ಪಾಠಮಿಶ್ರಣ ಆಗಲೇಬೇಕಾಗುತ್ತದೆ (ಕನ್ನಸಂ. ೧೭೬). [ಪಾಠ$_2$ + ಮಿಶ್ರಣ]

ಪಾಠಯಿಸು 'ಪಾಠಿಸು' ನೋ.

ಪಾಠಯೋಜನೆ (ನಾ). ಭಿನ್ನಭಿನ್ನಪ್ರತಿಗಳ ಉತ್ತಮಾಂಶಗಳನ್ನು ಆಯ್ದುಕೊಂಡು ಬಹುಶಃ ಸರಿಯೆನ್ನಿಸಬಹುದಾದ ಪಾಠವನ್ನು ನಿರ್ಮಿಸುವುದು: ಈ ರೀತಿಯ ಪಾಠಯೋಜನೆಯನ್ನು ಕೆಲವರು ಸಂಪಾದನ ಶಾಸ್ತ್ರಜ್ಞರು ಒಪ್ಪುವುದಿಲ್ಲ . . . ಉತ್ತಮಪ್ರತಿಗಳು ದೊರೆತಂತೆಲ್ಲ ಇಂಥ ಪಾಠಯೋಜನೆಯಲ್ಲಿ ವ್ಯತ್ಯಾಸಗಳನ್ನು ಮಾಡುತ್ತಲೇ ಇರಬೇಕಾಗುತ್ತದೆ (ಕನ್ನಸಂ. ೧೭೬). [ಪಾಠ$_2$ + ಯೋಜನೆ]

ಪಾಠವಿಕಲತೆ (ನಾ). ಗ್ರಂಥಸ್ವರೂಪವು ಕೆಟ್ಟುಹೋಗುವಿಕೆ; ಗ್ರಂಥದ ಮೂಲಶಬ್ದಸ್ವರೂಪವು ಬದಲಾಗುವಿಕೆ : ಪಾಠವಿಕಲತೆ ಎಷ್ಟು ಶೀಘ್ರಗತಿಯಲ್ಲಿ ಘಟಿಸುತ್ತಾ ಹೋಗುವುದೆಂದರೆ ಹೊಸ ಸ್ಖಾಲಿತ್ಯಗಳ ಹುಲುಸುಬೆಳೆಯಲ್ಲಿ ಮೂಲಪಾಠಾಂತರಗಳು ಮರೆಯಾಗಿ ಬಿಡುತ್ತವೆ (ಭಾರಪ. ೬೬). [ಪಾಠ$_2$ + ವಿಕಲತೆ]

ಪಾಠಶಾಲೆ (ನಾ). ವಿದ್ಯಾಭ್ಯಾಸ ಮಾಡುವ ಸಂಸ್ಥೆ ; ವಿದ್ಯಾಲಯ : ಸುರಬಾಲೆಯ ಸಂಗಡ ಒಟ್ಟಾಗಿ ಪಾಠಶಾಲೆಗೆ ಹೋಗಿದ್ದೇನೆ (ಇಪ್ಪಳ. ೮); ಮನೆಯೆ ಮೊದಲ ಪಾಠಶಾಲೆ (ಕಪಪು. ೫-೧೪೮). [ಪಾಠ$_2$ + ಶಾಲೆ$_3$]

ಪಾಠಶೋಧಕ (ನಾ). ಗ್ರಂಥದ ಸರಿಯಾದ ಪಾಠವನ್ನು ಕಂಡು ಹಿಡಿಯುವವನು : ಅವನ ಮುಂದಿನ ಕೆಲಸ ಪ್ರಾಮಾಣಿಕನಾದ ಪಾಠಶೋಧಕನ ಕೆಲಸ, ಪಾಠವಿಮರ್ಶಕನ ಕೆಲಸವಲ್ಲ (ಭಾರಪ. ೬೬).

[ಪಾಠ$_2$ + ಶೋಧಕ]

ಪಾಠಶೋಧನೆ (ನಾ). ಗ್ರಂಥದ ಸರಿಯಾದ ಪಾಠವನ್ನು ಗೊತ್ತುಪಡಿಸುವಿಕೆ : ಪ್ರತ್ಯಂತರಗಳ ಸಹಾಯದಿಂದ ಪಾಠಶೋಧನೆ ಮಾಡುವುದು (ಕನ್ನಸಂ. ೧೧). [ಪಾಠ$_2$ + ಶೋಧನೆ]

ಪಾಠಸಂಪ್ರದಾಯ (ನಾ). ಕಾವ್ಯಗಳಲ್ಲಿ ಸಾಂಪ್ರದಾಯಿಕವಾಗಿ ಬಂದಿರುವ ಗ್ರಂಥಪಾಠ ಮತ್ತು ಅದನ್ನು ಅನುಸರಿಸಿರುವ ಪದ್ಧತಿ : ಪ್ರತಿ ಮಾಡುವ ಕೆಲಸ ಯಾವ ಊರಿನಲ್ಲಿ ನಡೆಯಿತೆಂಬುದು ಗೊತ್ತಾಗುತ್ತದೆ. ಇದರಿಂದ ಪ್ರಾದೇಶಿಕ ಪಾಠಸಂಪ್ರದಾಯಗಳನ್ನು ತಿಳಿಯಲು ನೆರವಾಗುತ್ತದೆ (ಕನ್ನಸಂ. ೫೩). 'ಪಾಠಸಂಪ್ರದಾಯನಿರ್ಣಯ' ಪರಾ.

[ಪಾಠ$_2$ + ಸಂಪ್ರದಾಯ]

ಪಾಠಸಂಪ್ರದಾಯನಿರ್ಣಯ (ನಾ). ಒಂದು ಗ್ರಂಥದಲ್ಲಿ ಯಾವುದಾದರೊಂದು ಶಬ್ದವು ಬೇರೆ ಬೇರೆ ಪರಂಪರೆಗಳಲ್ಲಿ ಉಲ್ಲೇಖಿತವಾಗಿದ್ದರೆ ಯಾವ ಸಂಪ್ರದಾಯಕ್ಕೆ ಹೆಚ್ಚು ಪ್ರಾಧಾನ್ಯ ಕೊಡಬೇಕೆಂದು ತೀರ್ಮಾನಿಸುವುದು : ಪಾಠಸಂಪ್ರದಾಯನಿರ್ಣಯ (Recension) : ಮೇಲೆ ಹೇಳಿದ ಸಾಮಗ್ರಿಗಳ ಮೂಲರೂಪವನ್ನು ಸಾಧಿಸುವುದು (ಭಾರಪ. ೪೧). [ಪಾಠಸಂಪ್ರದಾಯ + ನಿರ್ಣಯ]

ಪಾಠಸಾಕ್ಷಿ (ನಾ). ಹಸ್ತಪ್ರತಿಗಳನ್ನು ತಾಳೆ ನೋಡುವುದರಿಂದ ಸಿಕ್ಕುವ ಮೂಲಗ್ರಂಥಸ್ವರೂಪಗಳ ಆಧಾರ : ಹಸ್ತಪ್ರತಿಗಳ ಪಾಠಸಾಕ್ಷಿ

ಗಳನ್ನು ತೂಗಿನೋಡುವುದು ; ಅವು ತಪ್ಪಾಗಿದ್ದರೆ ಅವನ್ನು ತಿದ್ದುವುದು ಅಥವಾ ಸರಿಪಡಿಸುವುದು (ಕನ್ನಸಂ. ೨೮). [ಪಾಠ$_2$ + ಸಾಕ್ಷಿ]

ಪಾಠಹೇಳು (ಕ್ರಿ). ಕಲಿಸು ; ವಿದ್ಯಾಭ್ಯಾಸ ಮಾಡಿಸು : ಅವನ ಮೈಯನ್ನು ಮುಟ್ಟದೆ ಪಾಠ ಹೇಳಲಿಕ್ಕೆ ನನ್ನಿಂದಾಗದು (ಮರಪು. ೧೭೯).
[ಪಾಠ$_2$ + ಹೇಳು (<ಪೇಟ್)]

ಪಾಠಾಂತರ (ನಾ). ಹಸ್ತಪ್ರತಿಗಳಲ್ಲಿ ದೊರೆಯುವ ಬೇರೆಬೇರೆ ಪಾಠ : ಇದಕ್ಕೆ ಕೆಲವು ಪಾಠಾಂತರಗಳೂ ಉಂಟು (ಕುಮಾಸಾಂ. ೨೩); ಹಸ್ತಪ್ರತಿಗಳನ್ನು ಪರಸ್ಪರ ಹೋಲಿಸಿ ಪಾಠಾಂತರಗಳಲ್ಲಿ ಉಚಿತವಾದುವನ್ನು ಆರಿಸಿಕೊಳ್ಳುವ ಕ್ರಮವನ್ನು ಈತನು ಅವಲಂಬಿಸಿರುವುದು ಮುಖ್ಯವಾದುದಾಗಿದೆ (ಕನ್ನಸಂ. ೧೫); ಲಭ್ಯಪ್ರತಿಗಳ ಪ್ರಮಾಣಗಳನ್ನು ಪಾಠಾಂತರದಿಂದ (Collation) ನಿರ್ಧರ ಮಾಡಿಕೊಳ್ಳಬೇಕು (ಭಾರಪ. ೪೧). [ಸಂ.]

ಪಾಠಾಳಿ (ನಾ). ದೇವಸ್ಥಾನದಲ್ಲಿ ಮಂತ್ರಗಳನ್ನೂ ಸ್ತೋತ್ರಗಳನ್ನೂ ಪಠಿಸುವವನು : ಉದಯಕಾಲದಲ್ಲಿ ನೈವೇದ್ಯಕ್ಕೆ ಪಾಠಾಳಿ ಹೊಯ್ದ ಪಡಿಯಿಂದಲೂ ದಿನವೊಂದಕ್ಕೆ ಪೇಟೆಯ ಮೂಡೆ ೪ ಅಕ್ಕಿಯ ಲೆಕ್ಕದಲ್ಲಿ (ಮೈಲಿ. ೧೯೨೮, ೧೦೨-೧೯; 1598); ಈ ಹಾಡುಗಳನ್ನು ಹಾಡುವಾಗ ಪಾಠಾಳಿ (ಪಾಟಾಳಿ) ಎಂಬುವನು ಪ್ರತ್ಯೇಕ ವ್ಯಕ್ತಿ. ಅವನ ಕೆಲಸಗಳಲ್ಲಿ ದೇವರ ಸ್ತುತಿಪಾಠ ಒಂದು (ಪಾಪಗೀ. ೧೫); ಈಗಲೂ ಪೆರಡೂರು, ಎಲ್ಲೂರು ದೇವಸ್ಥಾನಗಳಲ್ಲಿ ಪಾಠಾಳಿಯು ಶಿವಳ್ಳಿಬ್ರಾಹ್ಮಣವರ್ಗಕ್ಕೆ ಸೇರಿದವರು ಆಗಿರುವರು (ಕುಳುಸಾ. ೧೦೯). [ಪಾಠ$_2$ + —ಆಳ್ಳಿ$_3$]

ಪಾಠಿ (ನಾ). ಒಂದು ಬಗೆಯ ಸಸ್ಯ ; ಚಿತ್ರಮೂಲ : "ಪಾಠಿನ್, ಚಿತ್ರಕಃ, ವಹ್ನಿಸಂಜ್ಞಕಃ—೩ ಚಿತ್ರಮೂಲದ ಪೆಸರುಗಳು" (ಸಿದ್ಧಾಂತಿ. ೧೩೦).
[ಸಂ. ಪಾಠಿನ್]

ಪಾಠಿಸು, ಪಾಠಯಿಸು (ಕ್ರಿ). ೧. ಓದು ; ಪಠನಮಾಡು ; ಅಧ್ಯಯನ ಮಾಡು : ಪರಿಪ್ರಶ್ನಾನಂತರಂ ಪಾಠಿಸಲ್ ಪೋಗವೇಟ್ ಕನ್ಯಾಭವನಕ್ಕೆ ಪೋದಳ್ (ಜಾಪುಂಪು. ೫೫). ೨. ಓದಿಸು : ಕೃಷ್ಣಚರಿತೆಯ ಪೀಠಿಕೆಯೊಳಗೊಂದು ಪದನ ಪಾಠಿಸಿ ಕೇಳಿದ ಸುಜನರ್ಗೆ ಮುಕುತಿಪಧೂಟಿಯ ಸಂಸರ್ಗವಹುದು (ಪೋಪತ. ೦-೩೯). ೩. ಸಾಧಿಸು ; ರೂಢಿಸಿಕೊಳ್ಳು : ಘನವಿವೇಕವನುಳ್ಳವರು ಹಗೆತನವ ಪಾಠಿಸಿ ಮುಳುಗರಧಿಕಭವಾಂಬುರಾಶಿಯಲಿ (ತಿಮ್ಮಲಿ. ೧-೭); ಪಾಟವವು ಮೈಗಿರಲಿ ನೋಟ ತತ್ತ್ವದೊಳಿರಲಿ ಪಾಠಿಸು ಸಮನ್ವಯವ (ಮುಂಕುಳ. ೨೬೦). **ಪಾಠಯಿಸು** : ೪. ಉರು ಹೊಡೆ ; ಕಂಠಪಾಠ ಮಾಡು : ಕೋಟಿಗೀತವನೋದಿ ಪಾಠಯಿಸಿ ಫಲವೇನು ಕೂಟಸ್ಥನಲ್ಲದವನೋದು ಗಿಳಿ ಕಲಿತ ಪಾಠದಂತಕ್ಕು (ಸರ್ವಜ್ಞ. ೪೪೦). [ಪಾಠ + —ಇಸ್ಸು$_3$]

ಪಾಠೀಕ 'ಪಾಟೀಕ' ನೋ.

ಪಾಠೀನ (ನಾ). ೧. ಸಾರ್ವಜನಿಕರಿಗೆ ಪುರಾಣ, ಪುಣ್ಯಕಥೆಗಳನ್ನು ಓದಿ ಹೇಳುವವನು; ಪುರಾಣಿಕ. ೨. ಒಂದು ಬಗೆಯ (ದೊಡ್ಡ) ಮೀನು,—ಮತ್ಸ್ಯ : "ಮೀನಂ ಶಫರಂ ತಿಮಿ ಪಾಠೀನಂ ಝಷಮನಿಮಿಷಂ ವಿಶಾರಂ ಮತ್ಸ್ಯಂ ಮೀನವೆಸರ್" (ಪಸ್ತುಕೋ. ೨೨-೫); ಉತ್ಕಮಠಲುಠನಕಾಠಿನ್ಯ ಪಾಠೀನಮತ್ಸ್ಯಚ್ಛದನಚ್ಛೇದಾದಿ ನಾನಾಜಲಚರನಿಕರ . . . ರೌದ್ರಂ ಸಮುದ್ರಂ (ಕಾಪ್ಯಸಾ. ೭೪)... ೩. ಮತ್ಸ್ಯಾವತಾರಿಯಾದ ವಿಷ್ಣು : ಕೃಷ್ಣ ಪಾಠೀನ ಕಮಠ ವರಾಹ ವರ್ಧಿಷ್ಣು ನೃಸಿಂಹ ವಾಮನಾಖ್ಯ ಜಿಷ್ಣು ರಾಮತ್ರಯ ಬುದ್ಧರೂಪ ಕಲ್ಕಿವಿಷ್ಣು ರಂಗಾ ರಕ್ಷಿಸನ್ನ (ಕಠಸಾಂ. ೬೫-೨೫).
[ಸಂ.]

ಪಾಠೀನಪಾಳಿ (ನಾ). ೧. ಮನ್ಮಥನ ಬಾವುಟ : ಮೀನಧ್ವಜ. ೨. ಮನ್ಮಥ ; ಕಾಮ : ಮಂತ್ರಿಯುಮನ್ಯನಿಖಿಳಸೇನಾಧಿಪರು ಸಹಿತ ಬಂದು ಭಾಪು ನೀನಲ್ಲದಿನ್ನಾರೆಮ್ಮ ಸಲಹೆಂಬುತಾ ಪೊಳೆವ ಪಾಠೀನಪಾಳಿಯಡಿಗೊಂದಿಸಲು . . . ಅವರ್ಗೆಯಭಯಮುಮನಿತ್ತು ಮನ್ನಿಸಿದನು (ಪವಮೋ. ೧೨-೯೩).
[ಪಾಠೀನ + ಪಾಳ್ಳಿ (=ಪಾಲ್ಳಿ$_2$)]

ಪಾಠೆ (ನಾ). ೧. ಒಂದು ಬಗೆಯ ಮೂಲಿಕೆ ; ಅಗುಳುಶುಂಠಿ ; "ಪಾಠೆಯೆಂದೆನಲಗುಳುಶುಂಠಿಯಕ್ಕುಂ" (ಮುಂಗರಾ. ೪೩-೪೦). ೨. ಒಂದು ಬಗೆಯ ವನಸ್ಪತಿಯ ಬೇರು ; "ಸಿತಪಾಟಲಿ" (ಪಂಡಿತ. ೨೩೬).
[ಸಂ. ಪಾಠಾ]

ಪಾಠೋಪಕರಣ (ನಾ). ಪಾಠವನ್ನು ಕಲಿಸುವಾಗ ಸಹಾಯಕವಾಗಿ ಬಳಸುವ ಚಿತ್ರ, ವಿಗ್ರಹ, ಫಲಕ ಮೊದಲಾದ ಸಲಕರಣ : ಬೋಧನಕ್ರಮ ಹೆಚ್ಚು ಫಲಪ್ರದವಾಗಬೇಕಾದರೆ ಹಲವು ಸಲಕರಣೆಗಳು ನೆರವಾಗುತ್ತವೆ. ಅವನ್ನು ಪಾಠೋಪಕರಣಗಳೆಂದು ಕರೆಯಬಹುದು (ಶಿಕ್ಷದ. ೨೬೫). [ಪಾಠ$_2$ + ಉಪಕರಣ]

ಪಾಠ್ಯ (ಗು). ೧. ಓದಬೇಕಾದ ; ಪಠಿಸಬೇಕಾದ. (ನಾ). ೨. ಓದಬೇಕಾದುದು ; ಪಠಿಸುವಂತಹುದು : ದೊದಲಿನಲ್ಲಿ ಸಾಹಿತ್ಯವ ಕೃತಿಗಳು ಕೇವಲ ಗೇಯ ಅಥವಾ ಪಾಠ್ಯವಾಗಿದ್ದುವು (ಅಂಕಾ. ೨೦೫). ೩. ಹಾಡಿನ ಸಾಹಿತ್ಯ : ಬ್ರಹ್ಮನು . . . ಋಗ್ವೇದದಿಂದ ಪಾಠ್ಯವನ್ನೂ ಸಾಮವೇದದಿಂದ ಸಂಗೀತವನ್ನೂ ಯಜುರ್ವೇದದಿಂದ ಅಭಿನಯವನ್ನೂ ಅಥರ್ವವೇದದಿಂದ ರಸವನ್ನೂ ತೆಗೆದುಕೊಂಡು ನಾಟ್ಯವೇದವನ್ನು ನಿರ್ಮಿಸುತ್ತಾನೆ (ಭಾರದ. ೫೫೦). 'ಪಠ್ಯ' ಪರಾ. [ಸಂ.]

ಪಾಡ್ 'ಪಾಂಡ್ಯ$_2$' ನೋ.

ಪಾಡಗ$_1$, ಹಾಡಂಗಿ, ಹಾಡಗ (ನಾ). ತೇಗದ ಮರ : "ಪಾಡಗಮೆಂದು ತೇಗು" (ಕನಸಾ. ೫೦-೭೩); "ಪಾಡಗಮೆ ತೇಗು" (ಕಬ್ಬಿಳ್ಳೆ. ೭೦). **ಹಾಡಂಗಿ** : ಸಿರಿಸಂ ಹಾಡಂಗಿ ಭಾರಂಗಿ . . . ಎಂಬೀ ಮರದುಱುಗಲಿ ಱುಂಬಿನಿಂದತಿಗಹನಮೆನಿಪ ಗಹನಾಂತರದೊಳಗೆ (ಪಾರ್ಶ್ವಪು. ೦೨-೫೮). **ಹಾಡಗ** : "ಹಾಡಗಂ ಸಾರವತಿಯಕ್ಕುಂ" (ಮುಂಗರಾ. ೪೦-೩೨); ಹಾಡಗ, ಬಿಳೇಚಳ್ಳೆ, ಗವುಡಿ (ಮೈತಿಗಿ. ೨೪-೪೫೧) ; ತೇಗು ಮುಪ್ಪಾಗುವಾಗ ಹಾಡಗ ಹಸಿಯಾರಲಿಲ್ಲ (ಗಾರ).

ಪಾಡಗ$_2$, ಪಾಗಡ, ಪಾಗಡೆ (ನಾ). ಕಾಲಿನ ಕಡಗ ; ಕಾಲುಬಳೆ : ಗೆಜ್ಜೆಗಳ ಸಜ್ಜನೆಗೆ ಅಂದುಗೆಯಾನಂದೆಗೆ ನೇವುರದ ಭಾವಕಿಗೆ ಪಾಡಗದ ಪರುಷಕ್ಕೆ . . . ತಂದೆ ನಿಯಾಮಿಸಿ ಕೊಟ್ಟ . . . ಷೋಡಶಸಹಸ್ರ ವಿಳಾಸಿನಿಯರ್ವೆರಸು ನಡೆತಂದು (ಗಿಂಕ. ೩-೯೧ ಪ) ; ಬೆರಳ ಚಿಲ್ವಿಕೆಯಿಂದ ಮುದ್ರಿಕೆ ಮೆಱೆಯ ಪಾಡಗ ನೇವುರಂಗಳು ಕರಚರಣ ಸೌಂದರ್ಯದಲಿ . . . ಒಪ್ಪಿದವು (ಕುಮ್ಮಾಲ. ೧೩-೧೫) ; ಚಂದವ ನೋಡಿರೆ . . . ಅಂದುಗೆ ಪಾಡಗ ಗೆಜ್ಜೆಯ ಧರಿಸಿ ಧಿಂಧಿಮಿಕೆಂದು ಕುಣಿಯುವ ಕೃಷ್ಣನ (ಪುರಂದ. ೩-೦೦೫ ಅಮಪಲ್ಲವಿ) ; ಚರಣದಲ್ಲಿ ಗೆಜ್ಜೆ ಪಾಡಗವು ಶಬ್ದಮಾಡಿತು (ಕೋಹಿನೂ. ೩೭). **ಪಾಗಡ** : "ಪಾಗಡ—ಕಾಲ ಕಡಗ" (ಪಾವಕೋ. ೧೫). **ಪಾಗಡೆ** : ಬಾಗಿರೆ ಪತಿಯಳಕಮನಿಂಬಾಗಿರೆ ಮುಳಿಸಾಱುವನ್ನೆಗಂ ಸಿಲ್ಕಿಸುಗೀ ಪಾಗಡೆಯೆಂದೊದವಿರೆ ಪೆಂಪಾಗಡೆ ಪದಪದ್ಮದೊಳ್ ಪೆಱಳ್ ಪದಮಿಟ್ಟಳ್ (ಲೀಲಾವ. ೦೨-೭೭).
[ದೇ.॥ ತಮಿ. ಪಾಟಕ ; ಮಲ. ಪಾಡಕ ; ತುಳು. ಪಾಡಗೊ ; ತೆಲು. ಪಾಡಗ./ಸಂ. ಪಾದಕಟಕ]

ಪಾಡಳಿ 'ಪಾಡಱಿ' ನೋ.

ಪಾಡಱಿ (ಕ್ರಿ). ೧. ಕ್ರಮವನ್ನು ತಿಳಿದುಕೊಳ್ಳು : ತೋಡುಂ ಬೀಡುಮದುಡುಗದೆ ಪಾಡಱಿದೆಚ್ಚಾಜಿರಂಗದೊಳ್ ವಾಜಿಯ[ನ]ಟ್ಟಾಡಿ ಸುರಾ[ಂ]ಗನೆಯರೊಳ[ಂ] ಕೂಡಿದೊನೇಂ ಕಲಿಯೆ ನೆಗಳ್ದ ಕಂ[ದರಕೇತಂ] (ಎಇ. XVIII. ೦೭೨-೮ ; 985) ; ಭಯಭಕ್ತಿಯಿಂ ಪಾಡಱಿದು ಘಜಿಸಿ

(ಶರ್ಮಾ. ೩-೪೦). ೨. ಸ್ಥಿತಿಯನ್ನು ತಿಳಿ : ಫಲುಗುಣನ ಚಿತ್ತದ ಪಾಡಟಿದು ನುಡಿವುತ್ತ ತಂದನು ಪಾಳೆಯಕೆ ರಥದ (ಕುಪ್ಯಾಕ. ೧೬-೨). ೩. ಅಂದವನ್ನು ಅರಿ : ಅಸುಗೆದಳಿರ ದುಪ್ಪಟಿಯಂ ಪಾಡಟಿದುಟ್ಟು ಪುಳಿಂದಪುರಂಧ್ರಿಯರೊಪ್ಪವಡೆದರಲ್ಲಿ (ಜಯಕಾ. ೧೫-೩೮). ೪. ಯೋಗ್ಯತೆಯನ್ನು ಅರಿತುಕೊಳ್ಳು : ರೂಢಿಪತಿ ಸತ್ಕರಿಸಿ ವಂಶದ ಪಾಡಟಿದು ವುಣಲಿಕ್ಕೆ ಕಳುಹಿದ (ಸಂಭವ. ೨೬-೧೩). [ಪಾಡ್ಯು + ಅಟಿ]

ಪಾಡಟಿ, ಪಾಡಳಿ (ಕ್ರಿ). ೧. ಸ್ಥಿತಿಗೆಡು; ನೆಲೆಗೆಡು : ಕಿವಿಯ ನೆಯ್ದೆ ಕನ್ಯಾಕಲಕಂಠರವಂ ಶ್ರೀಕಂಠಂ ರಾಗರಸೋತ್ಕಂಠಂ ಪ್ರತಿಷ್ಠೆಯೊಳ್ ಪಾಡಟಿದಂ (ಪಂರಾಮಾ. ೦೦-೧೧೦) ; ನಾಡೆಯುಮಾ ನೃಪಮದನಂ ಪಾಡಟಿದಲ್ಲಲ್ಲಿ ಪೊಕ್ಕು ನಿಜವಲ್ಲಭೆಯಂ ಕೂಡೆ ತೊಟಲ್ದೋರಂದದೆ (ಕುಸುಮಾ. ೦೪-೧೨೫) ; ಪಾಡಟಿದು ಇಂತು ಶಿಕ್ಷೆಗಾನ್ ಸಂದೆನ್ (ಐದೃಪ್ರ. ೦೪-೨೮೪). ೨. ಬಲಗುಂದು ; ನಿಃಸತ್ತ್ವವಾಗು ; ನಿರ್ವಿಣ್ಣವಾಗು : ಪರಮಮಿತ್ರಾ ಇಂತೇಕೆ ಬರ್ದಿ ಬಂಬಳಂಬಾಡಿ ಪಾಡಟಿದುಬ್ಬೆಗಂಬಟ್ಟಿರ್ದೆ (ಪಡ್ಮಾರಾ. ೩೯-೬) ; ಬಾಡಿ ಪಾಡಟಿದು ಬಟಲ್ದು ಜೋಲ್ದಿರವು ಮೆಯ್ಯೊಳೆ ಮೆಯ್ವಿಡಿದೆನ್ನ ಕಣ್ಗಳೊಳ್ ಸುಟಿದುವು (ಪಂಪಭಾ. ೪-೬೦) ; ಕೋಡನೂಱಿ ಪಾಡಟಿದು ಪರಿಕಲಿಸಿ ಕೆಡೆದ ಮದಾಂಧಗಂಧಸಿಂಧುರಂಗಳಡಿಯೊಳಡಂಗಿದನೆ ಗೆತ್ತು ಕೈಗುತ್ತಿ ನೋಡಿಯುಂ (ಗದಾಯು. ೬-೨೮ ಪ). ೩. ಕಳೆಗುಂದು; ಕಾಂತಿಗುಂದು ; ಬಣ್ಣಗೆಡು : ನಸುಮಾಸಿ ಪಾಡಟಿದ ರೂಪಿನೊಳುಣ್ಮುವ ಗಾಡಿ ನಾಡೆ ಕಣ್ಗೆದಱ (ಪಂಪಭಾ. ೦೩-೯೯) ; ಪೊಗೆಗೊಂಡ ಚಿತ್ರಲತೆ ಧೂಳಿಗೊಂಡ ಪುತ್ತಳಿಗೆ ಮಂಜುಗೊಂಡಬ್ಜಿನಿ ಕಾರ್ಮುಗಿಲೊಳಕೊಂಡೆಳೆ ವಱಿಯೆನೆ ಮೃಗಲೋಚನೆ ಸೀತೆ ನಾಡೆ ಪಾಡಟಿದಿರ್ದಳ್ (ಪಂರಾಮಾ. ೦೦-೮೩) ; ಚಿತ್ತವಲ್ಲಭನುಟಿದ ವಿರಹಪರಿತಾಪದಿಂ ಬಾಡಿ ಪಾಡಟಿದ ಗಾಡಿಕಾರ್ತಿಯಂ ನೋಡಿ (ಅಪಂಪು. ೮-೨೭ ಪ). ೪. ಮೈಮರೆ ; ಪರವಶವಾಗು : ವನಚರಿ ಪಾಡೆ ಪಾಡಟಿದು ಸಾರ್ದೊಲಿದಾಲಿ ಸುತಿರ್ಪ ದಂತಿಯಂ ವನಚರನೆಚ್ಚೊಡೆ (ಲೀಲಾವ. ೮-೩೫). **ಪಾಡಳಿ** : ೧. ನಿಲಲ್ಬಗೆಗಾಣದೆ ಪಾಡಳಿದುರುಳ್ವಂದದಿನಸ್ತಾದ್ರಿಯ ಕೋಡುಂಗಲ್ಲು ಪರಿಮದಿಂ ಬಿಳ್ದನದಿತಿಸುತನಬುಧಿಯೊಳು (ಜಯಕಾ. ೧೩-೫೮) ; ತೀಡುವ ಸುಯ್ಲುಬ್ಬೆಗೊಂಡೊಡಲಿಂದವೆ ಪಾಡಳಿದನು ಸುಕುಮಾರ (ಶ್ರೀಪಾಲ. ೪-೫೩). ೨. ತೋಳಂ ತೂಗಿ ಬಾತ ಬೆರಳೊರಸಿ ಮಸೆದು ಪಾಡಳಿದ ತೊಡೆ ಹಲವು ಹರಳೊತ್ತಿ ಬೊಕ್ಕೆಗಳು ಮೂಡಿ ನಡೆಗೆಟ್ಟ ದೆಲ್ಲಡಿಯ ನಿಜವನಿತೆಯಂ ನೋಡಿ (ಹಸಕಾ. ೯-೨೯) ; ಬಾಡಲು ಪಂಕಜ ಕೂಡಲು ಚಾತಗೆ ಮೂಡಲು ಉತ್ಪಲರಾಗವನು ಪಾಡಳಿಯಲು ವಿರಹಿಗಳಂಬುಧಿ ಪೆಚ್ಚೆ ಮೂಡ ಮೂಡಲು ಚಂದ್ರಮನು (ಜೀವಂಸಾಂ. ೪-೩೦) ; ಕಡುಪಸಿವಿನಿಂ ಪಾಡಳಿದು ತದ್ವೇದಿಕಾಗ್ರದೊಳಗಿರುತಿರ್ದನು (ಪಂಪು. ೫೨-೪೭). [ಪಾಡ್ಯು + ಅಟಿ₁]

ಪಾಡಾಟ (ನಾ). ಹಾಡುವಿಕೆ : ದುಃಖ ಸುಖವಾಯ್ತೇ, ಪಗೆಯೆ ಪುಡಿಯಾಯ್ತೇ, ಗೋಳೆಲ್ಲ ಪಾಡಾಟವಾಯ್ತೇ ! (ಪಾರಸಿ. ೧೩-೨೯೩).

[ಪಾಡ್ಯು + ಆಟ]

ಪಾಡಾವಿಗ (ನಾ). (?) : ಗಾನ್ಧರ್ವಿಗರ್ಗ್ಗಂ ಪಾಡಾವಿಗಂಗಂ ಪಾತ್ರಕ್ಕೆ ಮದ್ದಳೆಯವಂಗಯಾ ಕೋಲ ಮ ೩೦ (ಸೌಇಇ. IX-1, ೧೫೫-೫ ; ಸು. 1086). [?]

ಪಾಡಿ₁ 'ಪಾಟಿ₂' ನೋ.

ಪಾಡಿ₂, ಪಾಳಿ₁, ವಾಡಿ₁, ಹಾಡಿ, ಹಾಡ್ಯು₄, ಹಾಡ್ಯ (ನಾ). ೧. ಊರು; ಹಳ್ಳಿ ; ಗ್ರಾಮ : ಶ್ರೀಪುರುಷಮಹಾರಾಜರ್ ಪೃಥುವೀರಾಜ್ಯಗೆಯೆ ಕೂಡಲೂರ್ಪ್ಪಾಡಿಒಡೆಯ ನಂದಿ ಕಾದನಾ ಎಱನಾಗನಾ ವ್ಯವಹಾರ ವನ್ತರಂ ಸಾಲಮಿಲ್ಲಾಮ್ (ಎಕ. X, ಕೋಲಾರ. ೭ ೨ ; 760) ; ಈ 'ಪಾಡಿ' ಯಿಂದಲೇ 'ಪಟ್ಟಿ' 'ಹಟ್ಟಿ' ಎಂಬುವುಗಳು ಹುಟ್ಟುತ್ತವೆ (ತುಳುಪಾ. ೩೦) ; ಕಾಡುಮೇಡುಗಳುಳಿದು ಪಾಡಿಗಳ ಬಳಿವಿಡಿದು . . . ನಡೆದು (ಕಾಲೂರ. ೦೫೦-೩೩೦). ೨ ಅನೇಕ ಊರುಗಳ ಹೆಸರಿನ ಕೊನೆಯಲ್ಲಿ ಈ ಶಬ್ದ ಉಳಿದುಕೊಂಡಿದೆ. ಉದಾ : ಕನ್ನಂಬಾಡಿ, ಬಾಗೆವಾಡಿ, ಹಾಗಲವಾಡಿ. ೨. ಜಿಲ್ಲೆ; ನಾಡು; ಪ್ರಾಂತ್ಯ : 'ಗಂಗವಾಡಿ' ಪರಾ. ೩. ದನ ಮುಂತಾದುವನ್ನು ಕಟ್ಟುವ ಸ್ಥಳ : ಹಟ್ಟಿ; ಕೊಟ್ಟಿಗೆ : ಕೇಳಿದನು ಕುದುರೆಪಾಡಿಯೊಳಿರ್ದ ನಳ (ತುರಂಗ. ೩೨-೧೨). ೪. ಮನೆಗಳ ಶ್ರೇಣಿ; ಕೇರಿ : ಆತನು ಗೇರು ಬೀಜ ಶೇಖರಿಸುವ ರೀತಿಯೇ ಬೇರೆ. ಪರರ ಪಾಡಿಯಿಂದ ಕದ್ದು ಬೀಜ ತರುವುದಿಲ್ಲ (ಪರಾವ. ೪೨) ; ಗಿರಿಜನರು ಬಿದಿರಿನಿಂದ ಗುಡಿಸಲುಗಳನ್ನು ನಿರ್ಮಿಸಿ ಹುಲ್ಲಿನ ಮಾಡುಗಳನ್ನು ಕಟ್ಟಿ ಅವಲ್ಲಿ ವಾಸಿಸುತ್ತಾರೆ. ಇಂತಹ ಮನೆಗಳ ಗುಂಪಿಗೆ 'ಪಾಡಿ' ಎಂದು ಕರೆಯುತ್ತಾರೆ (ತುಳುಪಾ. ೨೨೦). ೫. ಪಡೆ; ದಳ; ಸೈನ್ಯ : ಆನೆ ರಿಪುಸೇನೆಗೆ ಸಾಲ್ವೆನವುಂಕಿ ಪೇಡಿ ಪಾಡಿಗಟ್ಟಿಱಿವೆಡೆಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟುದೇ (ಕಾವ್ಯಸಾ. ೪೧೧ ಶೂದ್ರಕ); ಪೂಡಿದ ಕಣೆ ಕುಣಿದು ತೆಗೆದ ಕೊಮರನ ಬಿಲ್ಲೊಳ್ ಮೂಡಿದುದು ನುಂಗಲಹಿತರ ಪಾಡಿಗಳಂ ಮಸಗಿ ಮಿಟ್ಟು ಬಾಯ್ದೆಱೆದ ತೆಱಂ (ಅರ್ಧನೇ. ೬-೪೨); ಕೆಟ್ಟೋಡಿ ಪಾಡಿಯೆಲ್ಲಂ ಪಿಟ್ಟುಂಪಿಟ್ಟಾಗಿ ಪೋದೊಡಂ . . . ಈಸನೊರ್ವನೆ ನಿಂದಂ (ಕಬ್ಬಿಕಾ. ೨೯೫); ಮನೆಯಲ್ಲೆಡೆಯ ಮಾಡಿದ ನೃಪನ ಪಾಡಿಯ ಪಡಿತಳಿಸಿ ತತ್ಸೈನ್ಯಸಾಗರಕೊಂದು ನಿಮಿಷದಲಿ (ಸಂಭವ. ೨೬-೦೫). ೬. ಸೈನ್ಯದ ಬೀಡು : ಪಾಳೆಯ : ನೆರೆದನುರಾಗದಿಂ ಪಡೆಯ ಪಾಡಿಯ ಬೀರರ ಪೆಂಡಿರಟ್ಕಱಿಂ ಪರಸಿಯೊಱಲ್ದು ಸೇಸೆಗಳನಿಕ್ಕೆ . . . ಪೊಕ್ಕನಾತ್ಮಮಂದಿರ ಮನುದಾತ್ತಚಿತ್ತನವನೀತಳಪೂಜ್ಯಗುಣಂ ಗುಣಾರ್ಣವಂ (ಪಂಪಭಾ. ೦೦-೧೨೫). ೭. ಸೇವಕರ ಸಮೂಹ ; ಕೆಲಸಗಾರರ ಗುಂಪು : (ಕ). ೮. ಸೈನಿಕ ; ಯೋಧ : ಹಡಪದ ಹುಡುಗ ಸತ್ತಿಗೆಯೊಳು ಬಲ್ಲೆಹವಿಡಿದ ಪಾಡಿಗಳೊಡಬರಲು ಪಡಿಗುದುರೆಯ ರಾವುತರು ಪೊಳಲ ಪೊಱಮಡುತಿರ್ದರು (ಶ್ರೀಪಾಲ. ೦೩-೬೬). **ಪಾಳಿ₁** : ೫. ತುಂಬಿ ಪೊಸದಾವರೆ ಮಲ್ಲಿಗೆಯೆಂಬಿವಾಂತರಂ ದೆಸೆದಲಿಗೆಯ್ವ ಪಾಳಿ (ಕಬ್ಬಿಕಾ. ೧೭೪). **ವಾಡಿ₁** : ೧. ಊರು, ಕೇರಿ. . .ವಾಡ, ವಾಡಿ. . .ಕೋಟೆ (ಕಂಪುಹು. ೭೯). ೩. 'ವಾಡಿ' ಪದಕ್ಕೆ ಇರುವ ದನಗಳ ಹಟ್ಟಿ ಎಂಬ ಅರ್ಥವು ಉತ್ತರ ಹಿಂದುಸ್ತಾನದ ಪ್ರಾಚೀನಗ್ರಂಥದಲ್ಲಿ ದೊರೆಯುತ್ತಿದ್ದುದನ್ನು ಹೇಳಿದ್ದಾಗಿದೆ (ಕರ್ಣಾಟ. ೯೩). ೯. ಬೇಲಿಯಿಂದಾವೃತವಾದ ಹುಲ್ಲುಗಾವಲು, ತೋಟ ಮುಂತಾದುವು: (ಕ). ೧೦. ನಗರದ ಬಡಾವಣೆ; ಉಪನಗರ : (ಕ). ೧೧. (?) : ಜಿನಚಂದ್ರಮುನೀಂದ್ರರ ಪಾದಮೂಲದೊಳ್ವಿನಮಿತರಾಗಿ ಕೊಂಡು ಕೊನೆವರ್ ಸಲೆ ವಾಣಿಯ ವಾಡಿಯೊಳ್ ಮಹಾವನಿಪರ್ (ಶಾಂತಿಪು. ೧-೩೩). **ಹಾಡಿ** : ೧. ಕೂಲಿ ಆಳುಗಳು ರೈಟರಿಗೆ ತಮ್ಮ ಹೆಸರುಗಳನ್ನು ಕೊಟ್ಟು ತಾವು ವಾಸ ಮಾಡುವ ಹಾಡಿಗಳಿಗೆ ತೆರಳಿದರು (ಪಪನೀ. ೨೦). 'ಹಾಡಿಹಕ್ಕಲು' ಪರಾ. ೪. ಪಣಿಯರ ಹಾಡಿಯಲ್ಲಿ ಕೊಳುಂಬನ ಮನವನ್ನು ಸೆಳೆದ ಚೆಲುವೆಯ ಹೆಸರು ದೇಚು (ಗಿಂಕೆ. ೦). **ಹಾಡ್ಯು** : ೧. ಮತ್ತವರೊಳಗೆ ಕರುವರ ಕಲ್ಲಣಂ ಹಂದಿಗೆಯ್ಯ ಸ್ಥಳಂ ತಂನ ವೀಸಂ ಕಾಣಿಯ ಬಳದೊಳಗೆ ಬಡಗಣ ಮೊದಲ ಹಾಡಿನಲಾ ಹಬ್ಬೇಶ್ವರದೇವರ ದೇವಕಾರ್ಯಕ್ಕೆ ಬಿಟ್ಟ ಎರೆಯ ಮತ್ತರೊಂದು (ಕಇ. I. ೨೫-೮೩ ; 1190). **ಹಾಡ್ಯ** : ೧೨. ಹುಲ್ಲು, ಸೌದೆ ಮುಂತಾದುವು ದೊರೆಯುವ ಸಣ್ಣ ಕಾಡು : ಬೈಸಿಕಲ್ಲನ್ನು ಮೋಹನನ ಮನೆಯ ಹಿಂದುಗಡೆ ಹಾಡ್ಯದಲ್ಲಿಟ್ಟು . . .

ನಿಂತು ನೋಡುತ್ತಿದ್ದನು (ಪಂಚಪಂ. ೧೨೫); ಅದರ ಒತ್ತಿಗೆ ಬ್ಯಾಣದ ಹಕ್ಕಲು, ಅದರಾಚೆಗೆ ಸೊಪ್ಪಿನ ಹಾಡ್ಯ ಕಣ್ಬೊಲವಾಗಿತ್ತು (ಮಲೆಮ. ೧೩೨). ಹಾಡ್ಯ—ಹುಲ್ಲುಸೌದೆಯ ಕುರುಚುಕಾಡು (ಪಮ್ಮಸು. ೨೪೭); ಅಲ್ಲಿಂದ ಗದ್ದೆ, ಹಾಡ್ಯ, ಹಕ್ಕಲು, ಒಡ್ಡು ಇತ್ಯಾದಿಗಳನ್ನು ಸುತ್ತಿ ನೋಡಿಕೊಂಡು ಮನೆಗೆ ಹಿಂದಿರುಗುವಾಗ ಕಪ್ಪು ಕವಿದಿತ್ತು (ಗಂಗಾಳ. ೧೯).

[ವೇ. ॥ ತಮಿ. ಪಾಟಿ; ಮಲ. ಪಾಡಿ; ತುಳು. ಪಾಡಿ, ಹಾಡಿ; ತೆಲು. ಪಾಡು; ಕೊಡ. ಪಡಿ = ಕುರುಬರ ಹಟ್ಟಿ, — ಗುಡಿಸಲು./ಮರಾ. ಪಾಡಾ, ವಾಡೀ./ಪ್ರಾ. ವಾಡಿ, ವಾಡೀ./ಸಂ. ವಾಟೀ]

ಪಾಡಿ$_2$ 'ಪಹಡಿ' ನೋ.

ಪಾಡಿ$_4$ (ನಾ). ಒಂದು ಬಗೆಯ ಬಲೆ: ಉರುಳು ಪಾಡಿ ಸಿಡಿ ಸೆಳೆ ಗಾಣ ಬೆಳ್ಳಾರ ತಡಿಕೆ ದೀವದ ಖಗಮೃಗಸಂತತಿಗೂಡಿ ನಡೆತಂದನಾ ವನಚರನು (ಪೇಪುಸಂ. ೨-೩೮). 'ಪಾಜ್ಯ' ಪರಾ. [?]

ಪಾಡಿಗೈ? (ಕ್ರಿ). ಮಲಗು; ಒರಗು (?): ಕಳಚಿ ನೊಗನನು ತೆಗೆದು ಕಬ್ಬಿಯನಿಳುಹಿ ಪಡಿವಾಘೆಗಳ ಸರಿದನುಕೊಳಿಸಿ ಪಿಡಿಯಲು ಪಾಡಿಗೈದವು ಮರಳಿದೆಡಬಲಕೆ (ಕುಪ್ಪಾಕ್ರೋ. ೧೦-೩೩); ಅಳಿದವೈನೂಱಾನೆ ಮಗ್ಗುಲ ನೆಲಕೆ ಕೀಲಿಸಿ ಪಾಡಿಗೈದವು ಬಲುಗುದುರೆ ಹದಿನೈದುಸಾವಿರವೇಳುನೂಱುರಥ ಮಲಗಿದವು (ಕುಪ್ಪಾಕ್ರೋ. ೦೮-೬). [ಪಾಡಿ? + ಗೈ (<ಕೆಯ್$_1$)]

ಪಾಡಿತನ (ನಾ). ಒಂದು ಬಗೆಯ ಊಳಿಗ,—ಸೇವೆ (?): ಭಕ್ತರ ಮಂದಿರಕ್ಕೆ ಹೂಕಾಯಿ ಹಣ್ಣು ಹುಲ್ಲ ಹೊಱೆ ಕಟ್ಟಿಗೆ ಬೊಕ್ಕಸ ಪಹರಿ ಪಾಡಿತನ ಬಾಗಿಲು ಮುಂತಾಗಿ ಶುಶ್ರೂಷೆಯ ಮಾಡಿ ಉಂಬಾಗ . . . ತುಡುಗುಣಿಗೆಲ್ಲಿಯದೋ ನಿಜಜಂಗಮಸ್ಥಲ (ಮೋಳಿಮಾ. ೪೩-೧೮೦).

[ಪಾಡಿ? + — ತನ]

ಪಾಡಿಯ 'ಪಾಡಿವ' ನೋ.

ಪಾಡಿರಾವುತ (ನಾ). ಸರಿಸಮಾನವಾದ ರಾವುತ: ಪಿಡಿದ ಕುದುರೆಯ ನೇಱುವ 'ಪಾ [ಪಾಠಾಂ. ಪ] ಡಿರಾವುತರೆಡಬಲದೊಳಗೈನೂಱು ಬಿಡದೆ ಮೆಱೆಯೆ . . . ಪಡೆಗಿದಿರಾಗಿ ಮಲೆತನು (ಕುರಾಸಾಂ. ೦೪-೦೦೮).

[ಪಾಡಿ$_1$ (<ಪಾಟ್ಯಿ$_2$) + ರಾವುತ]

ಪಾಡಿವ, ಪಾಡಿಯ, ಪಾಡ್ಯ (ನಾ). ಪಕ್ಷದ ಮೊದಲನೆಯ ತಿಥಿ; ಪ್ರತಿಪದೆ: "ಪ್ರತಿಪತ್ ಪಕ್ಷತಿ ನಾಮದ್ವಿತಯಂ ಪಾಡಿವಂ" (ವಸ್ತುಕೋ. ೦೬-೭); ಚೈತ್ರಮಾಸ ಸುದ್ಧಪಕ್ಷದ ಪಾಡಿವದ ಬುಧವಾರಂ . . . ಈಶ್ವರಯ್ಯಗೆ ಕೊಟ್ಟರ್ (ಎಕ. VIII, ಸೊರಬ. ೭೧-೩; 938); ಪಾಡಿವದೆಳವೆಱೆ ಪುಣ್ಣಮಿವರೆಗಂ ರೂಡಿಸಿ ದಿನದಿನದಪ್ಪದೆ ಕಲೆಯೊಳ್ ಕೂಡಿ ಬಳೆದು ಕುವಲಯಕತ್ಯಾನಂದಮನೀವಂದದೊಳು (ಜಯಕಾ. ೨-೬೫); ಪಾಡಿವದ ಶಶಿಯ ಮೂಡಿದುದನಾರ್ ಕಂಡರಾ ಇರುಳ್? (ಶ್ರೀರಾಮಾ. ೬೩೨-೮೩). **ಪಾಡಿಯ**: ನಾಡಿಯಱುವತ್ತಕ್ಕೆ ಒಂದು ತಿಥಿಯಕ್ಕದಕೆ ಪಾಡಿಯ[ಪಾಠಾಂ. ವ]ಮೊದಲು ಪೌರ್ಣಮಿಯದಮಾವಾಸ್ಯೆ ಕಡೆ (ಮಂಗರಾ. ೨೦-೯). **ಪಾಡ್ಯ**: "ಪ್ರತಿಪತ್ತಿಂಗೆ ಪಾಡ್ಯಮೆಂದವತರಿಕು" (ಶಬ್ದಮಂ. ೨೦); ಅಶುಭ ಷಷ್ಟಿ ಅಷ್ಟಮಿ ನವಮಿ ಪಾಡ್ಯ (ಗಗತಾ. ೪-೬೬); ಪಾಡ್ಯ ಪಾಠಕ್ಕಾಗದು, ಮೌಢ್ಯ ಕೆಲಸಕ್ಕಾಗದು (ಗಾದೆ).

[<ಪ್ರಾ. ಪಾಡಿವಯಾ. / ಸಂ. ಪ್ರತಿಪದ್]

ಪಾಡಿಸು, ಹಾಡಿಸು (ಕ್ರಿ). ೧. ಹಾಡುವಂತೆ ಮಾಡು; ಹಾಡು ಹೇಳಿಸು; ಗಾಯನ ಮಾಡಿಸು: "ಪಾಡಿಸು — ಗಾಯನೇ" (ಶಮಧಾ); ಬದ್ದವಣಮಂ ಬಾಜಿಸಿ ಮಂಗಳಮಂ ಪಾಡಿಸಿ (ಪಂಪಭಾ. ೦-೧೩೩ ವ); ಸಕಲಲೋಕಗಳಂ ಹೆತ್ತ ಮುತ್ತೈದೆ ಬಾಲಕತನದ ನಟನೆಯಂ ನೋಡಿ . . . ತೊಟ್ಟಿಲೊಳು ಪಟ್ಟಿರಿಸಿ ಜೋಗುಳಂ ಪಾಡಿಸಿದಳು (ಸಿದ್ಧರಾ. ೧-೫೮); ಪಾಡಿಸುತುಂ ಪೆಸರ್ವಡೆದ ಗಾಣರಿಂ (ಕಬ್ಬಿಕಾ. ೨೯೦). ೨. ಬಿರುದಾವಳಿ, ಗುಣಾತಿಶಯ ಮೊದಲಾದುವುಗಳನ್ನು ಹೊಗಳಿ ಹೇಳಿಸು; ಸ್ತುತಿ ಮಾಡಿಸು: ಪೆಸರೆಸೆಯೆ ಬೀರಮಂ ಪಾಡಿಸಿಯುಂ ಪೊಗಳಿಸಿಯುಮುರ್ಕಿ ಬಿಟ್ಟೂಹವದೊಳ್ ಕುಸಿದು ಪೆಱಪಿಂಗಿ ಪೇಟ್ ಮಾನಸರೇನಿನ್ನೂಱು ವರ್ಷಮಂ ಬಟ್ಟಪರೇ (ಪಂಪಭಾ. ೦೨ ೦೭೬); ಪೊಱಮಟ್ಟಂ ಲಲಿತಾಂಗನೆಂದೊಡಮಪರ್ . . . ಭೀತಿಯಿಂ ಬೀರಮಂ ಮಱೆದುಂ ಪಾಡಿಸಲ್ಮಣ್ಮರ್ (ಧರ್ಮಾಮ್ಯ. ೨-೬೬); ಗಮಕಿತ್ವದ ವಾಗ್ಮಿವೃಂದದೊಳ್ ಲೀಲೆ ಮಿಗಲ್ಕೆ ಪಾಡಿಸುತಪಾಡಿಸುತುಂ (ನಂದಿರ. ೦೦ ಸೂಚನೆ). **ಹಾಡಿಸು**: ೧. ಹಾಡಿಸಬೇಡ ನಾನಾವಾದ್ಯವ ದನಿಮಾಡಿಸಬೇಡ . . . ಸ್ವಸ್ತದಿ ನಿದ್ದೆಗೆಯ್ವುದು (ಮೋಹತ. ೨೭-೩೬); ಚಿಕ್ಕಪ್ಪನಿಗೆ ಹುಡುಗಿಯ ಬಾಯಿಂದ ಮತ್ತೊಂದು ಹಾಡನ್ನು ಹಾಡಿಸಬೇಕೆಂದು ಆಶೆಯುಂಟಾಗಿರಬಹುದು (ಜನಜೀ. ೧೩೯).

[ಪಾಡು$_1$ + — ಇಸು$_3$]

ಪಾಡಿಟಿಸು (ಕ್ರಿ). ಬಲಗುಂದಿಸು; ಸೋಲಿಸು: ಇದಿರಾಂಪರಳವನ ಸಕಟಿದು ಪಾಡಿಟಿಸಿ ಬಸವಟಿಸದೀ ಚೆಲ್ವೆಯರದೇಂ ನಿಲ್ವರೇ (ಜಕವಿ. ೬-೧೫೪). [ಪಾಡು$_3$ + ಇಟಿಸು]

ಪಾಡು$_1$, ಹಾಡು$_1$ (ಕ್ರಿ). ೧. ಗಾಯನ ಮಾಡು; ರಾಗಬದ್ಧವಾಗಿ ಗೀತೆಯನ್ನು ಹೇಳು; ಸಂಗೀತ ಹೇಳು: ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತುಮಟ್ಟೆ ಮಟ್ಟಿದಿರ್ದೊಡೆ (ವಡ್ಡಾರಾ. ೧೦೮-೦೫); ಎರಲೆಗೆ ಪಾಡುವ ಗೋರಿಯನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ (ಆದಿಪು. ೧೪-೮೦); ರಸಮೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊಣ್ಮೆ ರಾಜಿಸಿದಪುದೋ (ಕಾರಂಪು. ೬೭೩); ಸಕಲರಾಗಂಗಳಿಂದೊಸೆದು ತುಂಬುರ ನಾರದರ್ ಪಾಡುತಿರ್ದರೊಂದೆಸೆಯೊಳತಿವಿಭವದಿಂದೆ (ಸಿಪು. ೨-೨೮). ೨. ವಂಧುರವಾಗಿ ಧ್ವನಿಮಾಡು; ಗುಂಜಾರವ ಮಾಡು: ಕುಕಿಲ್ವ ಕೋಗಿಲೆಯ ಪಾಡುವ ತುಂಬಿಯ ನಲ್ಲರೊಳ್ಮೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟ್ಪೊಡಾವ ಬೆಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ಪಂಪಭಾ. ೪-೨೮); ಪಾಡುವ ತುಂಬಿಯಿಂ ಕುಕಿಲ್ವ ಕೋಗಿಲೆಯಿಂ ಕಡುರಯ್ಯಮಾಗಿರಲ್ (ಧರ್ಮಾಮ್ಯ. ೨-೦೪೪); ಗಿಳಿಯೋದಿದಪುದು . . . ಅಳಿ ಪಾಡಿದಪುದು (ಶಬ್ದಾಮ. ೪೫೪ ಪ್ರಯೋ). ೩. ಹೊಗಳು; ಕೀರ್ತಿಸು: ಪಾಡುವರು ಕೆಲರಲ್ಲಿ ಹರಿಯನು ನೋಡುವರು ನಿಜದೃಷ್ಟಿ ದಣಿಯಲು ಆಡುವರು ತಮ್ಮಿಂದ ಪುಣ್ಯರದಾರು ಲೋಕದಲಿ (ಕೌಶಿಕಾ. ೪೪-೧೩); ಭೂತಗಣ ಕರತಾಳದಲಿ ಕುಣಿದಾಡುತಿರ್ದವು ಪಾಡುತವನಿಪನ (ತೊರರಾ. ೩-೬-೧೩); ಕಂದರ್ಪತನಯನ ಕಡಿದಾಡಿ ತೆಗೆತಂದ ಮಂದರಧರನ ಪಾಡಿದರು (ಮೋಹತ. ೪೨-೪೭). **ಹಾಡು$_1$**: ೧. "ಗಾಯತೇ-ಹಾಡಿದಪಂ" (ಕಾಶಕ್ಕ. ೧೨೮); ಎನ್ನ ಕಾಯುವ ದಂಡಿಗೆಯ ಮಾಡಯ್ಯಾ . . . ಬತ್ತೀಸರಾಗವ ಹಾಡಯ್ಯಾ (ಬಸವ. ೫೦೦); ಓತು ಕೊಂಡಾಡುತಂ ಹಾ[ಪಾಠಾಂ. ಆ]ಡುತಂ ಹರಸುತಂ (ಬಸರ. ೭-೮೨). ೨. ಕೈವಿಡಿದು ಕುಣಿವುತ ತಣಿವುತಂ ಬೊಬ್ಬಿಡುತ ಹಾಱುತ ಚಪ್ಪಳಿಕ್ಕುತ ಹಾ[ಪಾಠಾಂ. ಪಾ]ಡುತಾಡುತ್ತ (ಬಸಪು. ೫೯-೨೪). ೩. ತಮ್ಮಂಗದ ಮೇಲೆ ಲಿಂಗವಿರಲು ಅನ್ಯರನೆ ಹಾಡಿ ಅನ್ಯರನೆ ಹೊಗಳಿ ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು (ಬಸವ. ೦೦೭); ಎನ್ನನಲ್ಲದೆ ಬೇಡನೆನ್ನನಲ್ಲದೆ ನೋಡನೆನ್ನನಲ್ಲದೆ ಹಾಡನು (ಕಣ್ಣರ. ದೇ. ೦೪೪-೦೦); ನೋಡಿ ದಣಿಯನು ಬಿರುದ ಹೊಗಳಿಸಿ ಹಾಡಿ ದಣಿಯನು ನಿಚ್ಚಲುಚಿತವ ಮಾಡಿ ತಣಿಯನು ಮಾನನಿಧಿಯನದೆಂತು ಮಱೆದಪೆನು ಕಾಡಲಾಗದು ಕೃಷ್ಣ ಖಾತಿಯ ಮಾಡಲಾಗದು ಬಂದೆನಾದೊಡೆ ರೂಢಿ ಮೆಚ್ಚದು ಕೌರವನ ಹಗೆ ಹರಿಬ ತನಗೆ (ಕುಪ್ಕಾಕಾ. ೧೦-೧೮).

ಹಾಡಿ ಹರಸು = ಹೊಗಳಿ ಆಶೀರ್ವದಿಸು.—ಹರಸು : ಮದನ ಹರನರಸಿ ಬಿಜಯಂಗೈದು . . . ಸಿದ್ಧರಾಮಯ್ಯನೆಂದು ಹೆಸರಿಟ್ಟಾಡಿ ಹಾಡಿ ಹರಸಿದಳು (ಸಿದ್ಧರಾ. ೨-೬) ; ಅಂದು ಸುಜನಸ್ತೋಮ ಪಾಂಡುವ ನಂದನರ ನೆಱೆ ಹಾಡಿ ಹರಸುತಲಿ (ಸಂಧಿ. ೧೫ ೧೨೫) ; ಜನತೆ . . . ಶಿಶುವಿಗೆ 'ಶ್ರೀನಿವಾಸ'ನೆಂದು ಹೆಸರಿಟ್ಟು ಹಾಡಿ ಹರಸಿತು (ಹೇಮಕೂ. ೭). [ದೇ.॥ ತಮಿ. ಮಲ. ಪಾಟು ; ತೆಲು. ಪಾಡು ; ಕೋಲಾ. ಪಡ್ ; ನಾಯ್ಕ. ಗಡಬ. ಪಾರ್ ; ಪರ್ಜಿ. ಪಾಡ್ ; ಗೊಂಡಿ. ಪಾರಾನಾ ; ಕುವಿ. ಪಾಚ್ಲೀ ; ಕುರುಖ್. ಪಾರ್ನಾ ; ಮಲ್ತೊ. ಪರೆ]

ಪಾಡು$_1$, ಹಾಡು$_2$ (ನಾ). ೧. ಗೀತ : "ಗೀತಮೆನೆ ಗಾನಮೆನೆ ಪಾಡೆ ನಿಕ್ಕುಂ" (ಶುಂಗಾ. ೨೩-೨) ; ಛಂದವನಱಿಯದನೋದುಂ ಮುಂದಿರ್ದಾ ತಾಳದಳವನಱಿಯದ ಪಾಡುಂ ಬಂದುದ ಕೆಡೆವನ ನುಡಿಯುಂ ಒಂದರ್ಕುಂ ಬಾರ್ತೆಯಿಲ್ಲ (ಕಂಠೀರಂಪು. ೧-೪೪ ಆಕಾಶ) ; ಪಾಡಿನೋಡೆಯುಂ ಗಡಣಿಸು ತುಂಬಿ (ಕಬ್ಬಿಗಾ. ೧೫೭) ; ಅಂತದು ಪಾಡಿನ ಜೋಡಿನ ದಾಟಿಯೈಸೆ (ರಾಮಾಶ್ವ. ೬೮-೧೨). ೨. [ಕಾವ್ಯವಿನಾ] ಒಂದು ಬಗೆಯ ಕಾವ್ಯಪ್ರಬಂಧ ; ಪ್ರಹದಿನೈದು ಅಥವಾ ಇಪ್ಪತ್ತೈದು ಭಾಗಗಳು ಪ್ರಬಂಧದ ಅಂಗವಾಗಿ ಹೊಂದಿಕೊಂಡಿರುವುದು: ಪದಿನಯ್ದುವಿರ್ಪತ್ತಯ್ದುಂ ಪದಂ ಯಥಾಸಂಭವಂ ಪ್ರಬಂಧನ ಮೆಯ್ಯೊಳ್ ಪುದಿದೊದವಿ ನೆಗಟ್ಟೊಡಂತದು ಸದಲಂಕಾರಂ ರಸಾಸ್ಪದಂ ಪಾಡಕ್ಕುಂ (ಕಾವ್ಯಾ. ೪೫೩). · ಪಾಡುಗಬ್ಬ ' ಪರಾ. **ಹಾಡು$_3$** : ೧. "ಗೀತಂ. ಗಾನಂ . . . ಈ ೨ ಹಾಡಿನ ಪೆಸರ್" (ಹಡಪಯು. ೧೬-೪೩) ; ಕೊಂಡಾಡಲು ಜಿಹ್ವೆ ಪವಿತ್ರ ಹಾಡ ಕೇಳಲು ಕರ್ಣದೊಳಿರ್ದ ಪಾತ್ರವೋಡುವುದಿಳೆಯ ಜೀವರಿಗೆ (ವೀಪಚ. ೪೧-೧೬) ; ಹೊಸಬಾಳಿನ ಬೆಡಗು ಸಾಕು — ಬೆಳಕು ಬೇಕು ಹಾಡಿಗೆ (ಅರಳು. ೩೫೧-೧೧). [<ಪಾಡು$_1$]

ಹಾಡು$_3$, ಪಾಟು$_1$, ಹಾಡು$_3$ (ನಾ). ೧. ರೀತಿ ; ಬಗೆ : "ಪಾಡೆನೆ ರೀತಿಯಕ್ಕುಂ" (ಕಬ್ಬ. ೧೨೬) ; ಸ್ಥಳವೆ ಜಲರೂಪದಲಿ ಜಲವೇ ಸ್ಥಳದ ಪಾಡಿನಲ್ಲಿದ್ದುದದು (ಕುವ್ಯಾಸ. ೧೨-೩೬) ; ಒಳಿಯಂದಿರ ಪಾಡೆಲ್ಲಾ ಒಂದೇ (ಪಠಾಶ. ೨). ೨. ಸ್ಥಿತಿ ; ಅವಸ್ಥೆ ; ಗತಿ : ಸುತರೊಳಗೆ ಸಿತಗರ ಸೀಳುವೆನು ಮಾನವರ ಪಾಡೇನು (ಕುವ್ಯಾರಾ್ಮ. ೧೬-೩೨) ; ನನ್ನ ಮನಸ್ಸಿನ ಪಾಡು ವಿಪರೀತವಾಗಿತ್ತು (ಆಂಹೂ. ೧೧). ೩. ತನಗೆ ಮಾತ್ರ ಸಂಬಂಧಪಟ್ಟಿರುವ ಸ್ಥಿತಿ : ಅವರಿಗೆ ಕೊಟ್ಟು ಬಿಟ್ಟರೆ ತಮ್ಮ ಪಾಡಿಗೆ ಹೊರಟು ಹೋಗುತ್ತಾರೆ (ಕ್ರಚಾಶ. ೪೭) ; ಆ ಹುಡುಗ ಬೇರೆಯವರ ತಂಟೆಗೆ ಬಾರದೆ ತನ್ನ ಪಾಡಿಗೆ ಓದಿಕೊಂಡಿದ್ದಾನೆ (ಕೂಪ). ೪. ಕ್ಷೇಮ ; ಸುರಕ್ಷಿತತೆ ; ಸುಸ್ಥಿತಿ : ಪಾಡು ತಪ್ಪಿದ ಬಳಿಕ ವಿನಯವ ಮಾಡಿ ಮೆಱೆವುದು (ಕುವ್ಯಾರಾ್ಮ. ೧-೯) ; ಸರಿವುದೇ ಪಾಡೆನುತ . . . ಸಂವರಿಸಿಕೊಳುತಡರಿದನು ತನ್ನಯ ತೇರ ತವಕದಲಿ (ಕೂಕಥಾ. ೬-೨೩-೨೯). ೫. ಕಷ್ಟ ; ತೊಂದರೆ ; ದುಸ್ಥಿತಿ : ಗರುಡಿಗಳಿಹ ವದಱೊಳಗೆ ಬಿರುದಿನ ಬಂಟರ್ಗೆ ಬಿಡದೆ ಪಾಡುಗಳನು ಬರಿಸುವಭ್ಯಾಸಿಗಳಿಹರು ; (ಕುಶಾಸಾಂ. ೪-೭೬) ; ಒಡಲ ದಂಡಿಸುವಾಯಸವಿಲ್ಲ ವಣವ ವೆಚ್ಚಿಸುವ ಪಾಡಿಲ್ಲ ಗುಣವಂತೆಯರಿಸಗುವ ಪತಿಶುಶ್ರೂಷೆಗೆಣೆಯಹ ತಪವಿನ್ನೊಳವೆ (ಹರಿಶ. ೨-೨೨) ; ನಾವು ಅನುಭವಿಸ್ತಿರೋ ಪಾಡು ಅರ್ಥವಾಗಿದೇಂತ ತೋರುತ್ತೆ (ರಂಗಶ. ೧೨೧). ೬. ಪಂತ ; ಪ್ರತಿಜ್ಞೆ : "ಪಾಡೆನೆ ಪಂಥಂ" (ಶಾಕರ. ೩) ; ತನಗೆ ಮಾತಿನ ಪಾಡು ಬಿದ್ದುದು ವಿತಥವಾಣಿಯನಾಡಲಾಱೆನು (ಸಂಧಿ. ಪರಿ. ೪೦೬-೨೦). ೭. ಪೆಂಪು ; ಮಹಿಮೆ : ಪಾಡುಳ್ಳ ಪರಮಸದ್ಭಕ್ತಯೇಳೇಳು (ಪಠಾಶೋ. ೪೩-೪೮). ೮. ಸಮಾನ ; ಸಾಟಿ : "ಪಾಡೆನೆ ಸದೃಶಮುಮಕ್ಕುಂ" (ಶಾಕರ. ೪೯) ; ವಿರಿಂಚನ ಪಾಡು ಶಕ್ರನ ಸರಿಸದವರಿಗೆ ಭಂಗವೀ ವಿಧ (ಕುಪ್ಯಾಸ. ೧೭-೬೯) ; ಆ ಪರಿಹರಬ್ರಹ್ಮಾಮರೇಂದ್ರರು ಪಾಡೆ ನಿನಗೆ (ಕೂಕರಣಾ. ೧-೫-೯) ; ಗಾಡಿಯೊಳಿಂದ್ರನ ನಗುವ ಚಕ್ರಗೆ ಶಚಿ ಪಾಡಲ್ಲವೆಂಬೆನ್ನ ಮಗಳು ಜೋಡಿಸಲೊಲ್ಲೆಯು (ಶರಶ. ೩೭-೫೩) ; ಈ ವೀರರೊಳಗೆ ಒಬ್ಬನೂ ನನಗೆ ಪಾಡಲ್ಲ (ಶರಾ. ೧೪೧). ೯. ಸರಿಯಾದುದು ; ಯೋಗ್ಯವಾದುದು ; ಉಚಿತವಾದುದು : ಓಡುಗೆಯ್ಮನ ಶಕ್ತಿಯೊಳ ವರಿರುವನ್ನ ವಾಡೆಂಬುದೆನಗೆ ಕಾಣಿಸಿತು (ವೀಪಚ. ೩೭-೫೩) ; ಇನ್ನಿಲ್ಲಿ ಕವಿಯ ವಂಶದ ಹೊಲಬನ್ನು ಒಂಪಾದರೂ ಹೇಳದೆ ಹರಿವುದು ಪಾಡಲ್ಲ (ವಾಕೋಚ. ೬೭) ; ಜಗತ್ತು ಪಾಡಾದರ ನಾವೂ ಪಾಡು (ಹೂಸಂಸಾ. ೬). ೧೦. ಹಣ್ಣಿಗೆ ಬರುತ್ತಿರುವ ಕಾಯಿ ; ಪಕ್ವವಾಗುತ್ತಿರುವ ಕಾಯಿ ; ದೋರೆಗಾಯಿ : ಉಚ್ಚತರಶಾಖಾಗ್ರಮಂ ಪತ್ತಿ ಪಾಡುಗಳನಾಯ್ದುತಿಹ ಪುಡುಗರುಗಳಂ ಅಚ್ಚಿಗಳೇಸ್ಪಿಸುತ್ತಂ (ಶುಹಾಂ. ೫-೬) ; ಇಂದಿನದು ತುಸು ಪಾಡು ನಾಳೆ ಹಣ್ಣಾದಾಗ ಬಂದೀತು ಹಾಡು (ಅರಳು. ೩೫೨-೧೪). **ಪಾಟು$_1$** : ೧. ಉಂಟು ನೀನುಲಿವಾಕು ಯಮು ಕೈಛಂಟಿಕೆಯು ನೀನರಿಯೆ ಪೂರ್ವನು ಜಂಟಿಸಿದರನುಭವಗಳಲ್ಲದೆ ಬಿದ್ದ ಪಾಟುಗಳಾ ತುಂಟ ಬಲ್ಲನೆ (ಪಂಗಾಮಾ. ೪೯೫-೪೬). ' ಪಾಟುಗೆಡು ' ಪರಾ. ೨. ' ಪರಿಪಾಟು$_1$ ' ಪರಾ. ೫. ವಾಗ್ಬ್ರಹ್ಮಗಳೆಲ್ಲರು ಪಡುವ ಪಾಟ ನೋಡಿ ನಮ್ಮ ಭಕ್ತರು. . ಅನಿಷ್ಟವ ಪರಿಹರಿಸಿದರು (ಪಠಾಶ. II. ೨೫೫-೪) ; ಪಡದ ಪಾಟುಗಳಿಂದ ಪಡೆವುದವನ ಕೈವಿಡಿದ ಪೂಚಿಂಡ ವೆರ್ಮೆಯೊಳ್ ಮುಂಡಿಗೆ ಕಣ್ಗಳಿಗೊಶ್ರಿ ಮುಂಡಾಡಿ ಮನೆಗುಯ್ದು ಪೊಡವಟ್ಟು ನಲಿದು ಪೂಜಿಪುದು (ಕಳಿ. ೬-೦೫೭). ೧೧. (ಸಮುದ್ರದಲ್ಲಿ) ತೆರೆಗಳ ಇಳಿತ : (೪). **ಹಾಡು$_3$** : ೨. ಜೂಹೆಮ್ಮೆಗೆ ಹೋದರೆ ಈ ಹಾಡು ಆಗುವುದು (ಶುಂಬಿಯು. ೨-೦೪). ೫. ಆರ್ಯಾವರ್ತದ ಜನರಿಗಾದ ಹಾಡೇ ನಮಗೂ ಉಂಟಾಗುವುದರಲ್ಲಿ ಸಂದೇಹವಿಲ್ಲ (ಕಸಿಂಹಾ. ೨೬).

ಪಾಡ ಚಾಕರಿ=ಕಷ್ಟದ ಕೆಲಸ: ಆ ಪಾಟ ಪಾಡ ಚಾಕರಿ ಅವನಂಥ ಭೋಳೆಯಲ್ಲದೆ ಇನ್ನಾರು ಮಾಡಬೇಕು ? (ಹೂಸಕ್ಷ. ೨೯). **ಪಾಡಾಗಿ** = ಚೆನ್ನಾಗಿ · ಸರಿಯಾಗಿ : ಎರಡುದಿನದಿಂದ ಮಯ್ಯಾಗೆ ಯಾಕೋ ಪಾಡಾಗಿಲ್ಲ (ಕಳುಮು. ೦೯) : ಈ ಗಿಳಿ ಪಾಡಾಗಿ ನೋಡಿಕೋರಿ (ಕರಹಾ. ೪). **ಪಾಡಾಗು, ಹಾಡಾಗು** = ೧. ಚೆನ್ನಾಗು ; ಸರಿಯಾಗು : ಇನ್ನೂ ಎಂಟು ದಿನ ಬಿಟ್ಟು ಮನೆಗೆ ಬಂದಿದ್ದರೆ ಪಾಡಾಗುತ್ತಿತ್ತು (ಸುಪಸಂ. ೩೮). ೨. ಹಣ್ಣಿನ ಹದಕ್ಕೆ ಬರು ; ದೋರೆಯಾಗು : ಕಾಯಿಗಳು ಪಾಡಾಗಿ ಬೇಳಹತ್ತಿದ ಬಳಿಕ ಅವುಗಳನ್ನು ಇಳಿಸಿ ಎಂಟು ಹತ್ತು ದಿನ ಒತ್ತಿಗೆ ಹಾಕುತ್ತಾರೆ (ಶುಂಬಿಯು. ೨-೬೨) ; ಅರಳಿದ ಕೆಲವು ಹೂಗಳೂ ಪಾಡಾದ ಕಾಯಿಗಳೂ ಕೆಳಗೆ ಬಿದ್ದಿದ್ದವು (ಕಸಿಂಹಾ. ೬೬). ೩. ಅವಕಾಶವಾಗು ; ಇಂಬಾಗು : ಗಾಡಿಗೆ ಪಾಡಾದ ಪಸದನಕ್ಕಂ ತೇಜಕ್ಕೊಂಜಾದ ಕಾಂತಿಗಂ ಬೆಡಂಗಿಂಗೆ ಪಾಂಗಾದ ದೇಸಿಗಂ ಮಾಸರಿಕೆಗೆಕ್ಕಲಾವಣಮಾದ ಸೌಷ್ಠವಕ್ಕಂ . . . ಸೌಂದರ್ಯಕ್ಕೆ ನೆಲೆಯಾದಂದಕ್ಕಂ ಬೆಕ್ಕಸಂಬಟ್ಟು (ಕಾಂತಿಪು. ೩-೫೩ ೫) ; ಗುರು ನದೀಸುತರಿದ್ದರೀ ಪರಿ ಪರಿಭವಕೆ ಪಾಡಹುದೆ (ಕುಪ್ಯಾಕ. ೫೦-೪). ೪. ಸ್ಥಿತಿಯಾಗು ; ಅವಸ್ಥೆಗೆ ಬರು : ತಾವು . . . ಸಂಶಯಪಟ್ಟಿದ್ದರಿಂದ ನನ್ನವು ಈ ಹಾಡಾಯಿತು (ಸ್ಕಾಂಕಾ. ೯); ಪಾರ್ಕೋವಿನ ಸಾಲೆಯ ದಿನಗಳ್ಲೂ ಇದೇ ಹಾಡಾಯಿತು (ರಕ್ಷಶ. ೩). **ಪಾಡಿಗೆ ಬರು** = ಹಣ್ಣಾಗುವ ಸ್ಥಿತಿಯನ್ನು ಮುಟ್ಟು : ಆ ಕಾಯಿಗಳು ಪಾಡಿಗೆ ಬಂದು ಕೆಲ ಕೆಲವು ಹಣ್ಣು ಪರಿದು ಸೊಂಪಾಗಿ ತೋರುತ್ತಿದ್ದವು (ಮುಂಬಿಯು. ೩-೩೭). **ಪಾಡುಮಾಡು**=ಸರಿಗೊಳಿಸು ; ಶಿದ್ದು ; ತೀಡು : ಜೋಡುಸವಗ ಕೌಳಿ ಕತ್ತಿ ಖಂಡೆಯ ಲೌಡಿ ಪೊಡೆಯ ಚೂಡಾಯತಗಳ ಪಾಡು ಮಾಡುವ ಸಂಭ್ರಮವಂದೆರಡುಂ ಬೀಡಿನೊಳಗೆ ಮಸಗಿದುದು (ಕುಶಾಸಾಂ. ೦೪-೭೭) ; ಶಿಲ್ಪಿ ಶಿಲ್ಪಿ ಮೇಲೆ ಮೇಲೆ ನೋಡಲು ಕಾಣಲಳವಲ್ಲದಿರ್ದ ನಡುವನು

ಇಳಿವ ನೆಱಿಯ ಪಾಡು ಮಾಡುವ ನೆವದಿಂದ ಪೊಳೆಯಿಸಿ ತೋಱಿಸು ತಿಹರು (ಕುರಾಸಾಂ. ೨೫-೭೦).

[<ಪಡ್ಯು₁./ತಮಿ. ಮಲ. ತೆಲು. ಪಾಟು ; ತುಳು. ಪಾಡು]

ಪಾಡುಂಗಾಱ, ಪಾಡುಕಾಱ, ಪಾಡುಗಾರ, ಪಾಡುಗಾಱ, ಹಾಡುಕಾರ, ಹಾಡುಕಾಱ, ಹಾಡುಗಾರ (ನಾ). ೧. ಹಾಡುವವನು ; ಗಾಯಕ ; ಸಂಗೀತಗಾರ: ಪಾಡುಂಗಾಱಂ, ಜೂದುಂಗಾಱಂ (ಶಾಸಾಶೂ. ೦೮೬ಕಾಠಾ) ; ಪಾಡುಂಗಾಱಂ, ಅಲಸುಂಗಾಱಂ (ಕಸುಪ. ೨೦೦ ಪ್ರಯೋ) ; ಕರಣಿಕ ರೊಳ್ಪಾಡುಂಗಾಱರ ಗಣಿಕೆಯರೆಸೆವ ಮಾಲೆಗಾಱರ . . . ಆಲಯಂ ಗಳೆಸೆಗುಂ ಪುರದೊಳ್ (ಶಿಸ್ಮುಪು. ೫-೭-೩೦). **ಪಾಡುಕಾಱ** : ೨. ಸ್ತುತಿ ಪಾಠಕ ; ಹೊಗಳುವವನು ; ವಂದಿ : ಸೊಗಸ ಹುಟ್ಟಿಸಿ ಸುಲಿವ ರಸವಾದಿಗಳನಿವರ ವಿಡಾಯಿಗಳ ನಂಬುಗೆಯ ಕೇವಣ ಪಾಡು ಕಾಱರ ಕರ್ಣ ನೋಡು (ಕುಪ್ಯಾಪ್ರೋ. ೦೬-೨೫). **ಪಾಡುಗಾರ** : ೧. ಪಟುಪಾಡುಗಾರ ತುಟಿ ಮುಚ್ಚಿದನು (ಸಪೀಗೀ. ೭೩-೩). **ಪಾಡುಗಾಱ** : ೧. ಮೃಡನರೆಮೆಯ್ಯನಂಬಿಕೆಗೀಯೆ ತವಗಿಪ್ಪೆಡೆಗಾಣದೆ ಎಡಗಿವಿಯ ತೊಡವಿನೆಕ್ಕಲಗಾಣನಿಳೆಗಿಳಿದನೋಯೆಂಬ ಪಡಿಯಾದನಾ ಪಾಡುಗಾಱ (ಶ್ರೀಪಾಠ. ೩-೦೫). **ಹಾಡುಕಾರ** : ೧. "ಗಾಯಕ—ಹಾಡುಕಾರ" (ಗಂಗಾಪು. ೦೦೪). **ಹಾಡುಕಾಱ** : ೧. ಛಪ್ಪನದೇಶದ ಹಾಡುಕಾಱಱೊಡೆ (ಸೌಇಎ. ೦೪೪೪, ಸೊಂಡೂರು. ೭೬-೨೦ ; 1450). **ಹಾಡುಗಾರ** : ೧. ಹಾಡು, ಹಾಡಿಕೆ ಮತ್ತು ಹಾಡುಗಾರ ಇದೊಂದು ತ್ರಿವೇಣೀಸಂಗಮವು (ಸಾಹಿಸಂ. ೬೭). [ಪಾಡು₂+ —ಕಾಱ]

ಪಾಡುಂಗಾಱಿಕೆ, ಪಾಡುಗಾಱಿಕೆ, ಹಾಡುಗಾರಿಕೆ (ನಾ). ಹಾಡುವಿಕೆ ; ಗಾಯನ ; ಗಾನ : ನೀಂ ಪಾಡುಂಗಾಱಿಕೆಯೊಳ್ ಬಲ್ಲಿದನೆನಿಪ ಜಸಮಂ ಕೇಳ್ದಿಲ್ಲಿಗೆಯ್ತಂದೆಂ (ಅಪ್ಯುಕ. ೦೭-೮). **ಪಾಡುಗಾಱಿಕೆ** : ಪಾಡುವ ಪ್ರಾತಃಕಾಲದ ರಾಗವ ಪಾಡುಗಾಱಿಕೆಯೊಳಾಲಿಸುತ (ಶರಸ. ೨೫-೮). **ಹಾಡುಗಾರಿಕೆ** : "ಗೀತಂ, ಗಾನಂ—೨ ಹಾಡುಗಾರಿಕೆ ಹೆಸರುಗಳು" (ಸಿದ್ಧಾಂತಿ. ೫೭) ; ಅವರ ಹಾಡುಗಾರಿಕೆ ಯಾವುದೇ ಪ್ರಯಾಸವನ್ನು ಕಾಣದಂತಿತ್ತು (ಸಂಗೀತ. ೫೪). [ಪಾಡುಂಗಾಱ+ —ಇಕೆ]

ಪಾಡುಕಾಯಿ 'ಪಾಡುಗಾಯಿ' ನೋ.

ಪಾಡುಕಾಱ 'ಪಾಡುಂಗಾಱ' ನೋ.

ಪಾಡುಕುಳಿ (ನಾ). ಹಾಡುವುದೇ ಗೀಳಾಗಿರುವವನು ; ಹಾಡುವುದರಲ್ಲಿ ಆಸಕ್ತಿಯುಳ್ಳವನು : ಪಾಡುಕುಳಿ, ಮಱುಕುಳಿ (ಕಸುಪ. ೨೦೩ ಪ್ರಯೋ).

[ಪಾಡು₁+ —ಕುಳಿ₂]

ಪಾಡುಗ, ಹಾಡುಗ (ನಾ). ೧. = ಪಾಡುಂಗಾಱ ೧ : ಪಾಡುಗಂ, ಜೂದುಗಂ (ಕಪ್ಯಾಪು. ೩೮೪ ಪ್ರಯೋ). **ಹಾಡುಗ** : ೧. "ಗಾಯಕಃ, ಗಾಯಿತಾ—ಈ ೨ ಹಾಡುಗಂ" (ಕಾಶಳ್ಯ. ೬೯). ೨. = ಪಾಡುಂಗಾಱ ೨ : ದಿವಿಜರ ರಾಯ . . . ಶಿವಾದಿಗಳ ಸಾಹಸಕೆ ಮೂವಡಿಯ ರಾಯಭಟರಿದೆ ನೇಮಿಸಾ ಸುರರಾಯನೂರಿನ ಹಾಡುಗರ ಹುಲುನಾಯಕರಿಗಿನಿತೇಕೆ ಖತಿ ಬೆಸಸೆಂದನಾ ಕರ್ಣ (ಕುಪ್ಯಾಠಿ. ೦೯-೨). [ಪಾಡು₁+ —ಗ₂]

ಪಾಡುಗಬ್ಬ, ಹಾಡುಗಬ್ಬ (ನಾ). [ಕಾವ್ಯವಿಶಾ] ಹಾಡುವುದಕ್ಕೆ ಅನುಕೂಲವಾದ ಕಾವ್ಯ ; ೫ ದೇಶೀಯಛಂದಸ್ಸಿನ ಷಟ್ಪದಿ, ಸಾಂಗತ್ಯ ಮತ್ತು ತ್ರಿಪದಿಗಳಲ್ಲಿ ರಚಿತವಾದ ಕಾವ್ಯ : ಪಾಡುಗಳಿಂದಂ ತಱಿಸಲೆ ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂಡಾಡುವರ್ (ಕಾಪ್ಯಾಪ. ೯೫೪) ; ನಾಡೊಳಗುಳ್ಳ ಜಾಣರು ಜಾಣೆಯರೊಡನಾಡುವ ಸವಿವಾತುಗಳ ಪಾಡುಗಬ್ಬವ ಪರುಠವಿಸಿದ ಬಗೆಯ ನೀ ನೋಡು ಮಾನಿನಿ ಮುಂದೆ ಮುಂದೆ (ಪೋಹತ. ೦-೩೫). **ಹಾಡುಗಬ್ಬ** : ಕಬ್ಬಿಗರೋದುಗಬ್ಬವ ಹಾಡುಗಬ್ಬವ ಕಬ್ಬದೊಳೊರೆವರವೆರಡು ಕಬ್ಬಿನಂತಿರಬೇಕು ಬಿದಿರಂತೆ ರಚಿಸಲ್ಕೇಕಬ್ಬೆ (ಶರಸ. ೧-೬) ; ನಿಬ್ಬಣಕೆ ಹೊರಟಂತೆ ಹಾಡುಗಬ್ಬಗಳ ಕೊಲ್ಲಾರಿಬಂಡಿ (ಶಂಮು. ೩೩-೮). [ಪಾಡು₁+ಕಬ್ಬ₁]

ಪಾಡುಗವಿತೆ (ನಾ). = ಪಾಡುಗಬ್ಬ : ಱಟಕುಳಕ್ಷಳ ಲತ್ವರೇಪೋಜ್ವಳ ಱಕಾರ ಪ್ರಾಸಭೇದಂಗಳ ಸ್ವರವ್ಯಂಜನ ವಿಭಕ್ತಿ ಸಮಾಸ ಶಿಥಿಲಗಳಾ ಪಳಿಯ ನೇನುಂ ಪಾಡುಗವಿತೆಗಳೊಳು ವಿಚಾರಿಸ ಸಲ್ಲ (ಸಾಳ್ಯಶಾ. ೧-೪೫).

[ಪಾಡು₁+ಕವಿತೆ]

ಪಾಡುಗಾ (ಕ್ರಿ). (ಪರಸ್ಪರರ) ಕ್ಷೇಮವನ್ನು ಉಳಿಸು,—ರಕ್ಷಿಸು : ಇಂತು ಪಾಡುಗಾದೊಡನೊಡನಿರ್ವರುಂ ಮೆಱೆಯಲೆಂದೆ ಶರಾಸನ ವಿದ್ಯೆಯಿಂ ಪಡಲ್ವಡಿಸಿದರೆತ್ತಮಿತ್ತಮಿದಿರೊಳ್ ಮಲೆದೊಡ್ಡಿದ ಚಾತು ರಂಗಮಂ (ಸಂಪಶಾ. ೧೧-೧೮). [ಪಾಡು₃+ಕಾ₁]

ಪಾಡುಗಾಯಿ, ಪಾಡುಕಾಯಿ, ಹಾಡುಗಾಯಿ (ನಾ). ಹುಳಿಯನ್ನು ಕಳೆದುಕೊಂಡು ಹಣ್ಣಿನ ಅವಸ್ಥೆಗೆ ತಿರುಗುತ್ತಿರುವ ಕಾಯಿ ; ದೋರೆಗಾಯಿ : ನಾಲ್ಕಾರು ಪಾಡುಗಾಯಿಗಳ ಗೊಂಚಲು ತುದಿಯಲ್ಲಿ ಬಾಗಿ ನಿಂತು . . . ಎದುರಿಗೇ ಇರಬೇಕೆ ? (ದೇಶಸ್ಯ. ೦೩೬). **ಪಾಡುಕಾಯಿ**: ತಚ್ಚೂತಶಾಖಾಗ್ರದೊಳ್ ಜೊಂಪದಿಂ ತೂಗುತಿಹ ಪಾಡುಕಾಯಿಗಳಿರಲ್ ಕಂಡು (ಮಹಾಪಿ. ೫-೫). **ಹಾಡುಗಾಯಿ** : ಹುಣಿಸೆ ಇನ್ನೂ ಹಾಡುಗಾಯಿ (ರೂಢಿ). [ಪಾಡು₃+ಕಾಯ್ಯ₄ (<ಕಾಯ್ಯ್₄)]

ಪಾಡುಗಾರ 'ಪಾಡುಂಗಾಱ' ನೋ.

ಪಾಡುಗಾಱ 'ಪಾಡುಂಗಾಱ' ನೋ.

ಪಾಡುಗಾಱಿಕೆ 'ಪಾಡುಂಗಾಱಿಕೆ' ನೋ.

ಪಾಡುಗೆಡಿಸು (ಕ್ರಿ). ನೆಲೆಗೆಡುವಂತೆ ಮಾಡು ; ದುಸ್ಥಿತಿಗೆ ಒಳಪಡಿಸು: ಪವನಜಾದ್ಯರ ಪಾಡುಗೆಡಿಸಿದನಸ್ತ್ರಸಾರದಲಿ (ಕೊರರಾ. ೬-೩೫-೩೩); ಮೋಡಿಯ ಹರಿಗೆಯ ಭಟರು ನೇಜೆಯಗಳ ನೀಡುತಿರುವ ಮುಲ್ಲುಕರ ಪಾಡುಗೆಡಿಸಿ ಹೊಯ್ದುಱೆಯಟ್ಟಿ ದೆಸೆದೆಸೆಗೋಡಿಸಿದುದನೇವೇಳ್ವೆ (ಕಂಪಪಿ. ೦೫-೪೧). [ಪಾಡು₃+ಕೆಡಿಸು₁]

ಪಾಡುಗೆಯ್, ಪಾಡುಗೈ (ಕ್ರಿ). ಸಂವರಿಸು; ಹದಗೊಳಿಸು ; ಸಿದ್ಧಪಡಿಸು : ಒಯ್ಯನೆ ಗದೆಯನಣಂ ಪಾಡುಗೆಯ್ದುರ್ದು ಭೋರೆಂದೆಱಪು ಗ್ರಾರಾತಿಯೂರುದ್ವಯಮನಿಡೆ . . . ಕೆಡೆದನಿಳಾಭಾಗದೊಳ್ ಧಾರ್ತರಾಷ್ಟ್ರಂ (ಸಂಪಶಾ. ೦೩-೯೬). **ಪಾಡುಗೈ** : ನಾವೀ ನಿಜಾಯುಧಗೂಡಿ . . . ಸಂಗರವ ಪಾಡುಗೈವುದೆ ಪಂಥ (ಕೊರರಾ. ೫-೯-೧).

[ಪಾಡು₃ + ಕೆಯ್₁]

ಪಾಡುಗೈ 'ಪಾಡುಗೆಯ್' ನೋ.

ಪಾಡುಗೊಳ್ (ಕ್ರಿ). ಲೆಕ್ಕಿಸು; ಗಮನಿಸು; ಎಣಿಸು : ಕರಿಗಳ ಪಾಡುಗೊಳ್ಳದ ಬಳದಿನಾಗಲು ನೋಡಿ ತಕ್ಷಣ ತನ್ನ ಮಗಳನು ಭೀಮಸೇನಂಗೆ ವರವಿವಾಹವ ಮಾಡಿ ನುಡಿದನು (ಸಂಪಶ. ೦೭-೨೪). [ಪಾಡು₃+ಕೊಳ್₁]

ಪಾಡುದಪ್ಪು (ಕ್ರಿ). ನೆಲೆಗೆಡು; ಹದಗೆಡು; ಕೆಟ್ಟು ಹೋಗು: ಗೋಡೆ ಗಟ್ಟಾಗಿ ಬಳಸಿಕೊಂಡ ವೀರರ ನೋಡಿ ನಾಗೇಂದ್ರ ಮೈಬೆದಱಿ ಪಾಡುದಪ್ಪಿತು ತನ್ನ ಕಾರ್ಯವೆಂದವರ ಬಿಟ್ಟೋಡಿದನಿರದೆ ತನ್ನೂರ್ಗೆ (ಶರಸ. ೫೬-೪೪). [ಪಾಡು₃ + ತಪ್ಪು₁]

ಪಾಡುಪಂತ, ಪಾಡುಪಂಥ (ನಾ). ಹೆಸರಾಂತ ಶಪಥ; ಜನಜನಿತವಾದ ಪ್ರತಿಜ್ಞೆ : ಈ ಪಾಡುಪಂತದ ಮಾತನಾಡುವ ಶರಚಾಪಾಗಮಜ್ಞ ನೀನಹುದು (ಪೋಹತ. ೧೨-೫೭); ಎಂತಾನುಮೀ ಪಾಡುಪಂತಮಂ ಮಗುಟ್ಟವೇಟ್ಕುಂ (ಶಕಪಂ. ೧೨-೮). **ಪಾಡುಪಂಥ** : ಕುಂದು ಹೆಚ್ಚಿನ ಪಾಡುಪಂಥದ ಕಂದುಕಸರಿನ ಕಲಿಮನದ ಕಡುಹಿಂದ ಕಯ್ದುಡುಕಿದರು ಕಲಿಗಳಾಜಿಯಲಿ (ಕೊರರಾ. ೪-೩-೬); ಬಡವ ಬಲ್ಲಿದರ ಕೂಡ ಪಾಡುಪಂಥದ ಮಾತು ತರವೆ (ಪ್ರೌರರಾ. ೦-೪೪). [ಪಾಡು₁+ಪಂತ₁]

ಪಾಡುಪಂಥ 'ಪಾಡುಪಂತ' ನೋ.

ಪಾಡುಪಡಿಸು 'ಪಾಡುವಡಿಸು' ನೋ.

ಪಾಡುಪಡು, ಪಾಟುಪಡು, ಪಾಟುಬಡು (ಕ್ರಿ). ಕಷ್ಟಪಡು; ತೊಂದರೆಯನ್ನು ಅನುಭವಿಸು : ಕಾಡಿನಲ್ಲಿದ್ದುಕೊಂಡು ಪಾಡುಪಟ್ಟು ತಪಸ್ಸು ಮಾಡುವುದು ಆತ್ಮಜ್ಞಾನಕ್ಕಾಗಿ (ಪಕಥಾ. ೦೭೧); ಅದಕ್ಕೋಸ್ಕರವೇ ಅಲ್ಲವೇ ನಾನೂ ನಿನ್ನ ತಂದೆಯೂ ಇಷ್ಟೊಂದು ಪಾಡುಪಡುತ್ತಿರುವುದು (ಮಹಾಗ. ೯೭) : ಹೀನಾಯವಾದ ನರಜನ್ಮಕ್ಕೆ ಹೇಗೆ ತಾನೆ ಹೋಗಿ ಪಾಡುಪಡಲಿ (ಕುಮಾಸಾಂ. ೩೪). **ಪಾಟುಪಡು :** ಪಾಟುಪಡದಲೆ ಜಗದಿ ಜೀವರ ಘೋಟಕಾಸ್ಯನು ಸೃಜಿಸಿ ಯೋಗ್ಯತೆ ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ (ಜಗರಾ. ೧೯೭). **ಪಾಟುಬಡು:** ಒಲ್ಲೆನೊ ಇಹದಲ್ಲಿ ಬಂದು ಎಲ್ಲ ಪಾಟುಬಡುವದು (ಸೋಕ್ಷದೀ. ೫೧-೫). [ಪಾಡು$_3$ + ಪಡು$_1$]

ಪಾಡುಬೀಟ್ (ಕ್ರಿ). ಕಷ್ಟ ಪಡು : ಪಾಡುಬಿದ್ದುಟುವಾರಂಬದ ಧಾನ್ಯ ಶತ್ರುಜಯ ಪುತ್ರೋತ್ಪತ್ತಿ . . . ಬೇಹಾರಮಿಂತೆಲ್ಲ ಮುಂ ಪಲಕಷ್ಟಂ ಕಡೆಗೊಳ್ಳಿತೈ (ಸೋಮೇಶ. ೯೬). [ಪಾಡು$_3$ + ಬೀಟ್$_1$]

ಪಾಡುಮೈಮೆ (ನಾ). ಹಾಡಿನ ಮಹಿಮೆ ; ಹಾಡುಗಾರಿಕೆಯ ಮಹಿಮೆ : ಸಾಜಂ ಸಡ್ಡೆಯಿಂ ಪಾಡೆ ಪಾಡುಮೈಮೆಗೆ ಪಾಸಟಿಯಿಲ್ಲಂ (ಅಧ್ಯಾತ. ೨೨-೧೧). [ಪಾಡು$_3$ + ಮೈಮೆ (<ಮೆಯ್ಮೆ)]

ಪಾಡುವಡಿಸು, ಪಾಟುಬಡಿಸು, ಪಾಡುಪಡಿಸು (ಕ್ರಿ). ತೊಂದರೆಗೊಳಗುಮಾಡು ; ಕಷ್ಟಪಡಿಸು ; ಪೀಡಿಸು : ಪಾಡುವಡಿಪರೆಂದು ಪರಿಹರಿಸದೆ ಚುನ್ನವಾಡದೆ ಮನೆವಾಳ್ತೆಯನು ಮಾಡುವುದವರ ಸಮ್ಮತದಿಂದ (ಹಂಬಿ. ೪-೦೩). **ಪಾಟುಬಡಿಸು:** ಪಾಟುಬಡಿಸದಿರು ಸಿರಿಲಕುಮಿನಲ್ಲ (ವಿದಾಕ್ಯ. ೮೬-೪) : ನೀಟಾದ ಭೋಜನವ ಬಯಸುವೆನು ಯಮರಾಯ ಪಾಟುಬಡಿಸುವ ಭಂಗ ಕೇಳಿ ಎಚ್ಚರಿಯದಲೆ (ವಿದಾಕ್ಯ. ೧೦೪-೧). **ಪಾಡುಪಡಿಸು :** ನಾವು ದೇವತೆಗಳ ಪಾಡುಪಡಿಸಿದೆವು (ಸೌಗಂಧಿ. ೦೧೧-೦೭) : ಒಂದು ವೇಳೆ ಮಕ್ಕಳಾದರೂ ಈಗ ನೀನು ನನ್ನನ್ನು ಪಾಡುಪಡಿಸುವಂತೆ ಅವರೂ ನಿನ್ನನ್ನು ಪಾಡುಪಡಿಸಲಿ (ಕವಿಕ. ೩೨). [ಪಾಡು$_3$ + ಪಡು$_1$ + —ಇಸು$_3$]

ಪಾಡುವೇಳು (ಕ್ರಿ). ಕ್ರಮವನ್ನು ಶಿಳಿಸು ; ವಿಧಾನವನ್ನು ಹೇಳಿಕೊಡು : ಅಡೆನು ಚೆಂಡಾಟವ ಚೆಂಡಾಟವನಾಡುವ ನೃಪತನಯರಿಗೆ ಪಾಡುವೇಳುತ ನಿಂದಿಹೆನು (ಕುರಾಸಾಂ. ೩೦-೪೮).

[ಪಾಡು$_3$ + ಪೇಳು (<ಪೇಟ್)]

ಪಾಡೆ (ನಾ). ದೋಣಿ ; ನಾವೆ : ಸಂಸಾರಾಂಬುಧಿಯಲ್ಲಿ ಶರೀರವೆಂಬೊ ಪಾಡೆಯಲ್ಲಿ ಕಂಸಾರಿ ವ್ಯವಹಾರಿ ಕಡುಲೋಭಿ ಜೀವಶೆಟ್ಟಿ ಕಾಲವೆಂಬೊ ಕಳ್ಳಪಾಡೆ ಕಲಹಂಸಾವುಂಡಿರುವ ಕ್ರೂರವೆಂಬೊ ಕಳ್ಳಬಂಟ ಕಿಡಿಗೇಡಿ ನೋಡುತಿಹ ಬಾರಯ್ಯ ಈಗ (ಪುರಂದ. ೩-೦೫-೦). 'ಪಾಂಡಿ' ಪರಾ.

[ದೇ. ॥ ಮಲ. ಪಾಣ್ಡಿ ; ತೆಲು. ಪಾದಿ]

ಪಾಡ್ದನ, ಪಾಡ್ದನೆ, ಪಾರ್ದನ (ನಾ). (ಕರಾ) ಭೂತಗಳ ಹಾಗೂ ತುಳುನಾಡಿನ ವೀರರ ಹಳೆಯ ಕಥೆಗಳನ್ನು ಹೇಳುವ ಹಾಡು ; ಭೂತಾರಾಧನೆಯ ಹಾಡು : ತುಳುಭಾಷೆಯ ಕತೆಗಳಲ್ಲಿ ಪಾಡ್ದನಗಳು ಎಂಬೊಂದು ವರ್ಗವಿದೆ ; ಅದು ದೈವಗಳ ಪುರಾಣಗಳ ವರ್ಗ (ಸುಪರ್ಣ. ೧೨೦); ಈ ಪಾಡ್ದನಗಳು ಮಾನವಶಾಸ್ತ್ರದ ಅಭ್ಯಾಸಿಗಳಿಗೆ ಧಾರಾಳವಾಗಿ ವಸ್ತುಗಳನ್ನು ಒದಗಿಸಬಲ್ಲುವು (ಜಾಪಗೀ. ೧೭). **ಪಾಡ್ದನೆ :** ತುಳುನಾಡಿನ ನಿದರ್ಶನವನ್ನು ಹೇಳುವಲ್ಲಿ ಇಲ್ಲಿನ ದೈವಗಳ ಪಾಡ್ದನೆ ಕೆಲವು ಜನರ ವೃತ್ತಿಯಾಗಿದೆ (ಜಾಪಗೀ. ೦೦) : ತುಳು ಪಾಡ್ದನೆಗಳ ಸೊಲ್ಲನ್ನು ಹಾಡುತ್ತ . . . ಅವರು ನಡೆಯುತ್ತಿದ್ದರು (ಜಗುಬಿ. ೮೩). **ಪಾರ್ದನ :** ಕಳ್ಳು ಕುಡಿದು ಮಧ್ಯರಾತ್ರಿ ಕಳೆದ ಮೇಲೆ ಪಾರ್ದನ ಹೇಳುತ್ತಾ ಎಲ್ಲರನ್ನು ನಿದ್ರೆಯಿಂದೆಬ್ಬಿಸುತ್ತಾ ಮನೆ ಸೇರುವುದು ಆತನ ನಿತ್ಯದ ವಿಧಿಯೇ ಆಗಿತ್ತು (ಪರಾಪ. ೪೨).

[←ತುಳು. ಪಾಡ್ದನ, ಪಾಡ್ದನೊ, ಪಾರ್ದನ]

ಪಾಡ್ದನೆ 'ಪಾಡ್ದನ' ನೋ.

ಪಾಡ್ಯ 'ಪಾಡಿವ' ನೋ.

ಪಾಡ್ಯಮಿ (ನಾ). ಚಾಂದ್ರಮಾನಪಕ್ಷದ ಮೊದಲನೆಯ ತಿಥಿ ; ಪಾಡ್ಯ; ಪ್ರತಿಪದೆ : 'ಬಲಿಪಾಡ್ಯಮಿ' ಪರಾ. ℘ ಪಂಚಮಿ, ಸಪ್ತಮಿ, ಅಷ್ಟಮಿ, ನವಮಿ, ದಶಮಿ ಇತ್ಯಾದಿ ಶಬ್ದರೂಪಗಳ ಹೋಲಿಕೆಯ ಮೇಲೆ 'ಪಾಡ್ಯ' ಶಬ್ದಕ್ಕೆ 'ಮಿ' ಎನ್ನುವುದು ಸೇರಿ ಇದು ರೂಪಿತವಾಗಿರಬಹುದು. [<ಪಾಡ್ಯ./ತೆಲು. ಪಾಡ್ಯಮಿ]

ಪಾಡ್ಯಾಹ್ನ (ನಾ). (ಕರಾ) ಪಾಡ್ಯದ ದಿನ ಮದುವಣಗರಿಗೆ ಏರ್ಪಡಿಸುವ ಉತ್ಸವ : ಐತಾಳರು ತಮ್ಮ ಮನೆಯ 'ಪಾಡ್ಯಾಹ್ನ' ಕ್ಕೆ ಅವರನ್ನು ಬರಹೇಳಿದ ಬಳಿಕ, ಉಪಾಯವಿಲ್ಲದೆ ಮರಳಿದರು (ಪುರಮ. ೨೬೮). [ಪಾಡ್ಯ (<ಪಾಡಿವ) + ಅಹ್ನ]

ಪಾಣ (ನಾ). ೧. ನರ್ತನ ಮತ್ತು ಗಾಯನಗಳನ್ನು ವೃತ್ತಿಯಾಗಿ ಉಳ್ಳವನು ; ನಟ : ಇವರು ಹಿರಿಯರುಗಳೇ ಯಾಗ ನಟ್ಟುವಿಗ ಪಾಣರು (ಬಸವ. ೬೧೩) ; ಗಾಣರ ಪಾಣರ ವೈತಾಳಿಕರ ವಂದಿ ಮಾಗಧರ ಸಂದಣಿಯೊಳ್ ಸಂದಣಿಸಿ (ಮಹಾವೇ. ೦೨-೯ ವ); ನಟ್ಟುವ ಪಾಣ ಗಣೆಯಾಟ ಮಿಣಿಯಾಟ . . . ಮೊದಲಾದ ಅಱುವತ್ನಾಲ್ಕು ವಿದ್ಯೆಗಳ ಸಾಧಿಸಿದ ಡೊಂಬನೇನು ಕಿಱಿಯನೇ (ಗಣಭಾ. ೧೨೦-೨). ೨. ಕುಣಿದು ಪೂಜೆ ಸಲ್ಲಿಸುವ ಪೂಜಾರಿ : ನಮ್ಮ ಊರಿನ ದೈವಾರಾಧನೆಗಳಲ್ಲಿ "ಪಾಣರು" ದೆವ್ವದ ವೇಷ ತೊಟ್ಟು, ಕೋಲವೆಂಬ ಉತ್ಸವಗಳಲ್ಲಿ ಕುಣಿಯುತ್ತಾರೆ (ಹುಮುಖ. ೨೬). ೩. (ಕರಾ) ಓಲೆಗರಿಯಿಂದ ಕೊಡೆ ತಯಾರಿಸುವವನು. [ದೇ.॥ ತಮಿ. ಮಲ. ಪಾಣ]

ಪಾಣವಿಕ (ನಾ). ಪಣವವೆಂಬ ವಾದ್ಯವನ್ನು ಬಾರಿಸುವವನು : ವೈಣಿಕ ಪಾಣವಿಕ ವಾಂಶಿಕ ಮಾರ್ದಂಗಿಕ ಗಾಯಕ ನರ್ತಕಾದಿ ಕುತಪಪ್ರತತಿಯುಮುಂ . . . ಸಮಕಟ್ಟಿ (ಸಂಧ್ರಪು. ೬-೮೫ ವ). [ಸಂ.]

ಪಾಣಿ$_1$ 'ಪಾಣೀಯ' ನೋ.

ಪಾಣಿ$_2$ (ನಾ). ೧. ಕೈ ; ಹಸ್ತ : "ಪಾಣಿ ಹಸ್ತಂ ಪಂಚಶಾಖೆ ಕರಮೆನಲು ಕೈ" (ಮಂಗರಾ. ೯೫-೮) ; ನೇತ್ರ ನಾಸಿಕ ಪಾದ ಪಾಣಿ ಶ್ರೋತ್ರವೆಂಬಿವು ತಮ್ಮೊಳೊಂದೇ ಸೂತ್ರದಲಿ ಸಂಸೃಷ್ಟವಾಗಿ ಸಮಾನ ಬುದ್ಧಿಯಲಿ ಗಾತ್ರವಿಡಿದಿಹವೋಲು (ಕುಮ್ಯಾಕು. ೪-೭) ; ಪಾಣಿ ಚಿಗುರಿನ ಹಾಗೆ ವಾಣಿ ಜೇನಿನ ಹಾಗೆ ಮನವೇಕೆ ಕಲ್ಲಿನ ಹಾಗೆ (ಇಂಕಾಪ. ೮೩-೨). ೨. ಬೆರಳನ್ನು ಚಾಚಿದ ಅಂಗೈ : "ನೀಡಿದ ಬೆರಳ ತಳಂ ಪಾಣಿಯೆಂಬುದು" (ಹಲಾಯು. ೮೮-೩೮); "ಅಂಗುಲಿ ಮಡಿದ ಕುಡಿತೆಯಾ ಪ್ರಸೃತಿಯೆನಿಕ್ಕು ನೀಡಿದ ಬೆರಳ್ ಪಾಣಿಯಕ್ಕುಂ" (ಮಂಗರಾ. ೯೫-೯).

[ಸಂ.]

ಪಾಣಿ$_3$ 'ಪಹಣಿ' ನೋ.

ಪಾಣಿಗೆ (ನಾ). ಆನೆಗೆ ತೊಡಿಸುವ ಒಂದು ಬಗೆಯ ಅಲಂಕಾರ (?): ಮಾಣಿಕದ ಮೊಗರಂಬ ಚಿಪ್ಪಿನ ಪಾಣಿಗೆಯ ಕಿರಿಹೊರಜೆ ಮುರುಜೆಯ ನೇಣಿನುರುಸಂಕಲೆಯ ಸೂನಿಗೆ ಕೊಂಬಿನಣಚುಗಳ ಡಾಣೆದೊತ್ತಳ ನೊತ್ತಿನೊತ್ತುಗೆ ಕಾಣಿಪಗ್ಗರಣೆಗಳ ಚೌದಂತಾನೆ ಹೊಕ್ಕುವು ರಕ್ಕಸ ವ್ರಜ ಮೆಟ್ಟಿ ಘಟ್ಟಿಸುತ (ಅಂಬಿಕಾ. ೧೪-೧೧). [?]

ಪಾಣಿಗ್ರಹಣ (ನಾ). ೧. ಕೈಹಿಡಿಯುವುದು ; ಮದುವೆ : "ಉಪಯಾಮಃ, ಪರಿಣಯನಂ, ಪಾಣಿಗ್ರಹಣಂ, ವಿವಾಹಃ, ಉದ್ವಾಹಃ —

ಈ ೫ ಮದುವೆ" (ಹಲಾಯು. ೮೦-೩೪೦); ಅಹಹ ವೈರಿಗೆ ಧರೆಗೆ ಪಾಣಿಗ್ರಹಣವಾಯಿತೆ (ಕುಪ್ಯಾಕ. ೩-೨೭); ಧರ್ಮದಾಸನಿಗೆ . . . ಕೆಲವು ದಿವಸದಲ್ಲಿಯೇ ದ್ವಿತೀಯ ಪಾಣಿಗ್ರಹಣವಾಯಿತು (ಅದೂಟಿ. ೭೭). ೨. (ಆಲಂ) ಕೈಸೆರೆ ಹಿಡಿಯುವಿಕೆ : ಪಟುಭಟರು ಅಪ್ಪಣೆ ಪ್ರಕಾರ ಪ್ರಾಣಯುಕ್ತವಾಗಿ ಪಾಣಿಗ್ರಹಣವೆಸಗಿದ ಆನೆ ೧೮೧ (ಎಕ. XII. ಕೊಡಗು. ೨೫-೨೪ ; 1624). [ಸಂ.]

ಪಾಣಿಗ್ರಹಣಂಕೆಯ್ 'ಪಾಣಿಗ್ರಹಣಂಗೆಯ್' ನೋ.

ಪಾಣಿಗ್ರಹಣಂಗೆಯ್, ಪಾಣಿಗ್ರಹಣಂಕೆಯ್ (ಕ್ರಿ). ೧. ಮದುವೆ ಮಾಡಿಕೊಡು : ಬಂಧುಗಳ್ ವಿವಾಹವಿಧಿಯನೊಡರ್ಚಿ . . . ನಾಲ್ವರುಮಂ ತಂದು ಪಾಣಿಗ್ರಹಣಂಗೆಯ್ಯೆ (ಶಾಪುಂಪು. ೪೨೮). **ಪಾಣಿಗ್ರಹಣಂಕೆಯ್** : ೨. (ಆಲಂ) ನೀರನ್ನು ಧಾರೆಯೆರೆದು ಕೊಡು ; ದಾನ ಮಾಡು : ಭೂತಶರ್ಮ್ಮರ್ಗ್ಗೆ ಶಾಲಿಗ್ಗಾಮೆ ಸರ್ವಪರಿಯಾರ ಪರಿಗ್ರಹದಿನ್ತು ಪಾಣಿಗ್ರಹಣಂಕೆಯ್ದು ಕೊಟ್ಟಾರ್ (ಸ್ಕೃಅಂ. ೧೯೪೦. ೦-೩೨ ; 788 ?). [ಪಾಣಿಗ್ರಹಣ + ಕೆಯ್$_1$]

ಪಾಣಿಗ್ರಹಣಂಗೆಯಿಸು, ಪಾಣಿಗ್ರಹಣಂಗೆಯ್ಸು (ಕ್ರಿ). ಕೈ ಹಿಡಿಸು; ಮದುವೆ ಮಾಡಿಸು : ಅಂತು ಕೈನೀರೆಱೆದು ಪಾಣಿಗ್ರಹಣಂಗೆಯಿಸಿದಾಗಳ್ [ಶಾಕಾಂ. ಗೆಯ್ದಾಗಳ್] (ಆದಿಪು. ೪-೪೮ ಪ). **ಪಾಣಿಗ್ರಹಣಂಗೆಯ್ಸು** : ಗುಣಾರ್ಣವನನಾ ದ್ರುಪದಜೆಯನೊಡನೆ ಕುಳ್ಳಿರಿಸಿ . . . ಹುತವಹಸಮಕ್ಷದೊಳ್ ಕೆಯ್ನಾರೆಱೆದು ಪಾಣಿಗ್ರಹಣಂಗೆಯ್ಸೆ (ಸಂಸಭಾ. ೩-೭೪ ಪ). [ಪಾಣಿಗ್ರಹಣಂಗೆಯ್ + — ಇಸು$_3$]

ಪಾಣಿಗ್ರಹಣಂಗೆಯ್ಸು 'ಪಾಣಿಗ್ರಹಣಂಗೆಯಿಸು' ನೋ.

ಪಾಣಿಘ (ನಾ). ೧. ಹರೆ, ಮೃದಂಗ, ಢಕ್ಕೆ ಮೊದಲಾದ ವಾದ್ಯಗಳನ್ನು ಬಾರಿಸುವವನು,- ನುಡಿಸುವವನು. ೨. ಕೈತಾಳ ಹಾಕುವವನು; "ಹಾಡುವಾಗ ಕೈಮೇಲೆ ತಾಳವ ಹಿಡಿಯುವವನು" (ಗಂಗಾಸು. ೨೦೩): "ಪಾಣಿವಾದಃ, ಪಾಣಿಘಃ—೨ ಕೈತಾಳ ಹೊಡೆಯುವವನ ಹೆಸರು" (ಸಿದ್ಧಾಂತಿ. ೩೦೦). [ಸಂ.]

ಪಾಣಿಚಳನ (ನಾ). (ನೃತ್ಯದಲ್ಲಿ) ಕೈಗಳ ಚಲನೆ, — ವಿನ್ಯಾಸ : ಮೃದುಪಾದನ್ಯಾಸಮಿಂಬಾಗೆ ಕಂಕಣರಾವಂ ಸೊಗಸಾಗೆ ಪಾಣಿಚಳನಂ ಚೆಲ್ವಾಗೆ . . . ನೀಱೆ ಮೆಱೆದಳ್ ಲೀಲಾಲಸಲ್ಲಾಸ್ಯಮಂ (ಕಾಜಶೇ. ೦೨-೭೨). [ಪಾಣಿ$_2$ + ಚಳನ (= ಚಲನ)]

ಪಾಣಿಜ (ನಾ). ಕೈಬೆರಳಿನ ಉಗುರು : "ಕಾಮಾಂಕುಶಾಃ, ಕರರುಹಾಃ, (ಪುನರ್ನವಾಃ), ಪಾಣಿಜಾಃ, ನಖಾಃ, ನಖರಾಃ — ಈ (೬) ಉಗುರ್" (ಹಲಾಯು. ೮೪-೩೩೭) ; "ಪಾಣಿಜಂ ಕಾಮಾಂಕುಶಂ ನಖಮೆನಲ್ಕುಗುರು" (ಮಂಗರಾ. ೯೩-೮). [ಸಂ.]

ಪಾಣಿತಲ, ಪಾಣಿತಳ (ನಾ). ಅಂಗೈತಳ; ಕರತಳ : "ಪಾಣಿತಲ [ಶಾಕಾಂ. ಳ] ಮೆಂದೊಡಂಗೈ" (ಮಂಗರಾ. ೯೩-೮). **ಪಾಣಿತಳ** : ದೇಸೆ ವಿಳಾಸಮಂ ಪಡೆಯೆ ಗೊಂದಳವೆಕ್ಕಣಮಾಗಳಾ ನೃಪಾವಾಸದೊಳಾಡಿದತ್ತೆಸೆಯೆ ಪಾಣಿತಳಂ ಪಡೆವಂತೆ ಕುಂಕುಮಸ್ಥಾಸಕಮಂ (ಮಲ್ಲಿಪು. ೦೨-೦೦); ಪಾಣಿತಳಪ್ರಭೆ ಪಸರಿಸೆ ಶೋಣಿತಚಮರೀಜಮೆನಿಸಿದುವು ಸಿತಚಮರಶ್ರೇಣಿಗಳ್ (ಪುಸ್ತಪು. ೭-೨೮). [ಪಾಣಿ$_2$ + ತಲ]

ಪಾಣಿತಳ 'ಪಾಣಿತಲ' ನೋ.

ಪಾಣಿತ್ರಯ (ನಾ). [ಸಂಗೀತ] ವಾದ್ಯವಾದನಕ್ರಮದಲ್ಲಿಯ ಸಮಪಾಣಿ, ಅಧಃಪಾಣಿ ಮತ್ತು ಉಪರಿಪಾಣಿಯೆಂಬ ಮೂರು ಬಗೆಯ ಹಸ್ತವಿನ್ಯಾಸ : ವಾದಕನುಪವಾದನಿನೆಸೆವ ಹೃದ್ಯವಾದ್ಯವಿಶೇಷಂಗಳೊಳ್ ನೆಗೞ್ವ ಸಮಪಾಣಿಯುಮಧಃಪಾಣಿಯುಮುಪರಿಪಾಣಿಯುಮೆಂಬ ಪಾಣಿತ್ರಯದೊಳಂ . . . ನೆಱೆದು (ಅಜಪು. ೫-೩೨ ಪ). [ಸಂ.]

ಪಾಣಿದ (ನಾ). (?) : ಇವಕ್ಕೆ ಸಾಕ್ಷಿ ಮಿಾಕಣೂರರು ಅಯಿರಣ ಕೀಟವರು ಆಣಿಗರು ಕಟಕ್ತಿಯರು ಚಂಗರಸನು ತಲೆಪರಿಯಾ ಕೆಯ್ಯಾಳದೋರ್ ಕವುಳನ್ದೆಯಾರುಂ ಕಣ್ಚಾಕುಳ್ಳಿಯುಂ ಪಾಣಿದರುಂ ಅಕ್ಕಶಾಲೆಯರಾ ಪುಲಿಯಣ್ಣಂಗಳು ಎರೆಕಾಡನಳೆದೊರ್ (ಸೌಇಇ. IX-1, ೪೭-೦೫ ; ಸು. ೨ವೆಯ ಶತ). [?]

ಪಾಣಿದಂಡ (ನಾ). ದೋಣಿಯನ್ನು ನಡೆಸುವ ಹುಟ್ಟು : "ಅರಿತ್ರಯೆನೆ ನೀರ ಹಱುಗೋಲಕ್ಕವಂ ತೆಗೆವ ಗಟ್ಟೆ ಹುಟ್ಟು ಪಾಣಿದಂಡಾಖ್ಯಮಕ್ಕುಂ" (ಮಂಗರಾ. ೧೨೩-೧೩). [ಪಾಣಿ$_2$ + ದಂಡ]

ಪಾಣಿಪಂಚೆ (ನಾ). ಸ್ನಾನಕ್ಕಾಗಿ ಉಪಯೋಗಿಸುವ ಜಾಳುಜಾಳಾದ ಪಂಚೆ ; ನೀರುಪಂಚೆ (ಉಕ) : ಇನ್ನು ನಾನು ಅರ್ಧಪರಟು ಬನೀನು ಪಾಣಿಪಂಚೇಲಿ ಕಾಲಾ ಕಳೆಯಬೇಕು (ಸ್ವಕ್ಷಿ. ೧೦೨); ಉಳಿವವರ ಬಟ್ಟೆ ಕೊಳೆಯಿಂದ ರಟ್ಟಾಗಿದ್ದರೆ ಅವನದು ಬೆಳ್ಳಗಿರದಿದ್ದರೂ ಹಳ್ಳಿಯ ಹಾರುವರ ಪಾಣಿಪಂಚೆಯಷ್ಟರ ಮಟ್ಟಿಗಾದರೂ ಶುಚಿಯಾಗಿರುತ್ತಿತ್ತು (ಮಲೆಮ. ೩೪). [ಪಾಣಿ$_1$ (< ಪಾಣೀಯ) + ಪಂಚೆ]

ಪಾಣಿಪತ್ತು 'ಪಾನಿಪತ್ತು' ನೋ.

ಪಾಣಿಪಾಡು (ನಾ). ತೋಟ ; ಉದ್ಯಾನ : ಇಲ್ಲ ಮರಾಳಮಿಲ್ಲದ ಕೊಳಂ ಕೊಳನಿಲ್ಲದ ಪಾಣಿಪಾಡು ಪಾಡಿಲ್ಲದ ತುಂಬಿ ತುಂಬಿಗಳ ಗೊಂದಣಮಿಲ್ಲದ ಪೂ (ಕವಂಪು. ೩-೯).

[ಪಾಣ್ಯಂ (P ← ತಮಿ. ಪಾಣಿ = ಊರಿನ ಸುತ್ತಲಿನ ತೋಪು) + ಪಾಡು$_3$]

ಪಾಣಿಪಾತ್ರ (ನಾ). ೧. ಪಾತ್ರೆಯಂತೆ ಒಡ್ಡಿದ ಕೈ ; ಬೊಗಸೆ : ಶ್ರೇಯಾಂಸಂ . . . ಕನಕಕಳಶದೊಳ್ ತೀವಿದಮೃತರಸಸಮಾನಧವಳೇಕ್ಷುರಸಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನಂ ಸಮುತ್ತಾನೀಕೃತವಿಶಾಲ ಪಾಣಿಪಾತ್ರದೊಳೆಱೆವುದುಂ (ಆದಿಪು. ೧೦-೦ ಪ); ಕಬ್ಬಿನ ರಸಮಂ ಪಾಣಿಪಾತ್ರದೊಳೆಱೆವುದುಂ (ಶಾಪುಂಪು. ೩೯); ಮುನೀಂದ್ರನ ಮೃದುಕಿಸಲಯಸಮಪಾಣಿಪಾತ್ರದೊಳ್ ಶುದ್ಧಮನಂ ವಸುಧೇಶನಿಕ್ಕಿದಂ ಪಾಯಸಮಂ (ಪುಸ್ತಪು. ೧೪-೦೦). ೨ [ಜೈನ] ಹನ್ನೊಂದು ಬಗೆಯ ಶ್ರಾವಕರಲ್ಲಿ ಒಬ್ಬ ; ಬೊಗಸೆಯಲ್ಲೆ ಊಟ ಮಾಡುವವನು : ವೈದಿಕಗ್ರಂಥಗಳಿಂದ ದಿಗಂಬರರು, ಶ್ರಮಣರು, ಪಾಣಿಪಾತ್ರರು, ಮಹರ್ಷಿಗಳು, ವಾತರಶನರು ಇರುತ್ತಿದ್ದರೆಂದು ತಿಳಿದು ಬರುವುದರಿಂದ ಈ ಸಂಪ್ರದಾಯವು ಅನಾದಿಕಾಲದ್ದು ಎಂದು ತಿಳಿಯಬಹುದು (ಹಿಂದಸಾ. ೭೨). [ಪಾಣಿ$_2$ + ಪಾತ್ರ]

ಪಾಣಿಪಾತ್ರೆ (ನಾ). = ಪಾಣಿಪೀಠ : [ಲಿಂಗವ] ಪಾಣಿಪಾತ್ರೆಯೆಂದು ಅಂಗೈಯಲಿಕ್ಕಿದ ಗುರುವೆ (ಶಿವಗೀ. ೭೩-೩೫೩).

[ಪಾಣಿ$_1$ (< ಪಾಣೀಯ) + ಪಾತ್ರೆ]

ಪಾಣಿಪೀಠ (ನಾ). ಅಭಿಷೇಕದ ನೀರು ಹರಿದು ಹೋಗಲು ಅನುಕೂಲವಾಗುವಂತೆ ಲಿಂಗದ ಸುತ್ತಲೂ ತಗ್ಗಾಗಿರುವ ಪೀಠ: 'ಪಾಣಿಪೀಠಲಿಂಗ' ಪರಾ. [ಪಾಣಿ$_1$ (< ಪಾಣೀಯ) + ಪೀಠ]

ಪಾಣಿಪೀಠಲಿಂಗ (ನಾ). ಅಭಿಷೇಕದ ನೀರು ಹರಿದು ಹೋಗಲು ಅನುಕೂಲವಾಗುವಂತೆ ಸುತ್ತಲೂ ತಗ್ಗಾಗಿರುವ ಪೀಠವುಳ್ಳ ಲಿಂಗ: ಗರ್ಭಗುಡಿಯಲ್ಲಿ ಬಳಪದ ಕಲ್ಲಿನ ಪಾಣಿಪೀಠಲಿಂಗ ಮೂರು ಅಡಿ ಎತ್ತರವಿದೆ (ಹೊಯ್ಸಾ. ೧೨೨). [ಪಾಣಿಪೀಠ + ಲಿಂಗ]

ಪಾಣಿಪೀಡನ (ನಾ). ೧. ಕೈಯನ್ನು ಹಿಸುಕುವುದು. ೨. ಪಾಣಿಗ್ರಹಣ; ಮದುವೆ : "ಉಪಯಾಮ ವಿವಾಹೋದ್ವಾಹ ಪರಿಣಯಂ ಪಾಣಿಪೀಡನಕ್ಕಾಖ್ಯೆ" (ಪಸ್ತುಕೋ. ೫೩-೦೦). [ಪಾಣಿ$_2$ + ಪೀಡನ]

ಪಾಣಿಪುಟ (ನಾ). ಬೊಗಸೆ : ಮೌನಿಯುಂ ಮೌನಿಸಮಾನನುಂ ಮೇಣ್ ಯೋಗ್ಯಚರ್ಯಾಕಾಲದೊಳ್ ಒರ್ಮೆಯುಂ ತನುವಂ ತೋರ್ಪನುಂ

ಪಾಣಿಪುಟಮಾತ್ರಪಾತ್ರನುಂ . . . ಇಂತಪ್ಪ ಮುನಿಗೆ ನಿಕ್ಕುವಂ ಅಲಾಭ ಪರೀಷಹಜಯಮಕ್ಕುಂ (ಶಕ್ತ್ಯಪ್ರ. ೩೩೬). [ಪಾಣಿ$_2$ + ಪುಟ$_3$]

ಪಾಣಿಬಟ್ಟಲು 'ಪಾಣಿವಟ್ಟ' ನೋ.

ಪಾಣಿಮುಕ್ತ (ನಾ). ಕೈಯಿಂದ ಎಸೆಯಬಹುದಾದ ಶಕ್ತಿ ಮೊದಲಾದ ಆಯುಧ : "ಬಿಟ್ಟೇಱು ಮೊದಲಾದುದು ಕೆಯ್ಯಿಂ ಬಿಡಲ್ಪಡುವುದು ಪಾಣಿ (ಕರ) ಮುಕ್ತಮೆಂಬುದು" (ಹಲಾಯು. ೬೬-೩೦೯) ; ಅಗ್ನಿ ಪುರಾಣವು ಆಯುಧಗಳನ್ನು ಅಸ್ತ್ರ ಮತ್ತು ಶಸ್ತ್ರಗಳೆಂದು ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಅವುಗಳಲ್ಲಿ ಮೊದಲನೆಯದನ್ನು (೧) ಯಂತ್ರಮುಕ್ತ, (೨) ಪಾಣಿಮುಕ್ತ, (೩) ಮಂತ್ರಮುಕ್ತ, (೪) ಮುಕ್ತ ಸಂಧಾರಿತ (ಬಿಟ್ಟು ಹಿಂದಕ್ಕೆ ಪಡೆದದ್ದು) ಎಂದು ನಾಲ್ಕಾಗಿ ವಿಭಾಗಿಸುತ್ತದೆ (ಕಶಾಲ. ೨೬೨). 'ಪಾಣಿಮುಕ್ತಗತಿ' ಪರಾ.

[ಪಾಣಿ$_2$ + ಮುಕ್ತ]

ಪಾಣಿಮುಕ್ತಗತಿ (ನಾ). ಸಂಸಾರಿಜೀವಕ್ಕೆ ಇರುವ ನಾಲ್ಕು ಗತಿಗಳಲ್ಲಿ ಒಂದು ; ೧ ಒಂದು ದೇಹವನ್ನು ತೊರೆದು ಇನ್ನೊಂದನ್ನು ಪಡೆಯುವುದಕ್ಕಾಗಿ ಜೀವವು ಕೈಕೊಳ್ಳುವ ಗಮನಕ್ಕೆ ವಿಗ್ರಹಗತಿಯೆಂದೂ ಹೆಸರಿದ್ದು, ಅದು ಇಷುಗತಿ, ಪಾಣಿಮುಕ್ತಗತಿ, ಲಾಂಗಲಗತಿ ಹಾಗೂ ಗೋಮೂತ್ರಗತಿ ಎಂದು ನಾಲ್ಕು ವಿಧವಾಗಿದೆ : ನಿರ್ಮುಕ್ತಬಾಣದಂತೆ ಋಜುವಪ್ಪ ಇಷುಗತಿಯುಂ ಇಟ್ಟ ಗುಂಡಿನವೋಲ್ ಏಕಚಕ್ರಮನುಳ್ಳ ಪಾಣಿಮುಕ್ತಗತಿಯುಂ . . . ಗೋಮೂತ್ರಗತಿಯುಂ ಎಂದು ಗತಿ ನಾಲ್ಕುತೆಱಂ (ಶಕ್ತ್ಯಪ್ರ.೧೦೧); ಒಂದೇ ಸಮಯದೊಳಿಚ್ಚಂಬಿನಂತೆ ಸಯ್ತೆವೋಪಿಷುಗತಿಯುಮೆರಡುಸಮಯದೊಳಿಟ್ಟ ಗುಂಡಿನಂತೆ ಒಂದೇ ಕೊಂಕಿನಿಂ ಪೋಪ ಪಾಣಿಮುಕ್ತಗತಿಯುಂ ಮೂಱುಸಮಯದೊಳು ನೇಗಿಲಂತೆರಡು ಕೊಂಕಿನಿಂ ಪೋಪ ಲಾಂಗಲಗತಿಯುಂ ನಾಲ್ಕುಸಮಯದೊಳ್ ಗೋಮೂತ್ರದಂತೆ ಮೂಱು ಕೊಂಕಿನಿಂ ಪೋಪ ಗೋಮೂತ್ರಗತಿಯುಂ (ಪಸಾರ. ೫೯೪).

[ಪಾಣಿಮುಕ್ತ + ಗತಿ]

ಪಾಣಿಮೂಲ (ನಾ). ಮಣಿಕಟ್ಟು ; ಮುಂಗೈ ಹರಡು; ಪ್ರಕೋಷ್ಠ : "ಪಾಣಿಮೂಲಮೆನೆ ಮಣಿಕಟ್ಟು" (ಮಂಗಳಾ. ೯೫-೮).

[ಪಾಣಿ$_2$ + ಮೂಲ$_2$]

ಪಾಣಿಯ 'ಪಾಣೀಯ' ನೋ.

ಪಾಣಿಯದರ 'ಪಾಣೀಯದಾರ' ನೋ.

ಪಾಣಿಯದಾರ 'ಪಾಣೀಯದಾರ' ನೋ.

ಪಾಣಿಯಬಾರ 'ಪಾಣೀಯದಾರ' ನೋ.

ಪಾಣಿಯವಣ್ಣ (ನಾ). ಒಂದು ಬಗೆಯ ವಸ್ತ್ರವಿಶೇಷ : ಉಟ್ಟ ಪಟ್ಟಣಿಗೆಯುಂ ಪೊದೆದ ಪಾಣಿಯವಣ್ಣಮುಮೆಸೆಯೆ (ಮಲ್ಲಿಪು. ೮-೧೫೭). 'ಪಾಣಿಯವಾಸ' ಪರಾ. [ಪಾಣಿಯ ? + ಬಣ್ಣ]

ಪಾಣಿಯವಾಸ (ನಾ). ಒಂದು ಬಗೆಯ ವಸ್ತ್ರವಿಶೇಷ : ಈ ವನವೀಥಿಯೊಳ್ ಬಳೆದ ಬಾಳದ ಬೇರ್ಗಳ . . . ಕೇದಗೆಯಿಂಪುವೆತ್ತ ಕಂಪಾವಗಮಿಲ್ಲಿ ಪಲ್ಲವಿಸೆ ಪಾಣಿಯವಾಸಮನಿಕ್ಕಿದಂತೆ ಸೌಖ್ಯಾವಹಮೆಂದೊಡೀ ನದಿಯನೀಕ್ಷಿಸೆ ಪಾಂಥನ ತೃಷ್ಣೆ ಪೋಗದೇ (ಶಾರ್ಕ್ಯಪು. ೯-೫). 'ಪಾಣಿಯವಣ್ಣ' ಪರಾ. [ಪಾಣಿಯ ? + ವಾಸ$_2$]

ಪಾಣಿಲಾಘವ (ನಾ). ೧. ಕೈಚಳಕ ; ಹಸ್ತಚಾತುರ್ಯ : ಕೇಣಮಿಲ್ಲದೆ ಚಾರಿ ಚಳಕ ಚಾಳೆಯ ಚಮರ್ ಪಾಣಿಲಾಘವ ಪಂಥಪಾಡುಗಳನಱಿದು ಬಿನ್ನಾಣದಿಂ ಗಾಯಗಾಣಿಸಿದರತಿಬಲರಲ್ಲಿ ನಾನಾಪ್ರಹಾರದಿಂದೆ (ಕೃಷ್ಣಾ. ೨೨-೬). ೨. ಕೈನೆರವು ; ಹಸ್ತಾವಲಂಬನ : ಭೂಜಾತೆಯಂ . . . ದೈವಾಹಸನ್ಮಂಟಪನಿಕಟಕ್ಕೆ ಕರೆದೊಯ್ಯಲವಸರದಲೊರ್ವೆ ಸದ್ಯುಕುತಿಯಿಂ ಪಾಣಿಲಾಘವವೀಯೆ ಪಾಜಿಸಿತು ಮಕರಕೇತನನಿಟ್ಟ ದೇವತೆಗೆ ನವಕಿಸಲಯೋಪಾಯನಂಗೈದೊಲು (ಪಂಕಾರಾ. ೧-೨೨-೧೭). [ಪಾಣಿ$_2$ + ಲಾಘವ]

ಪಾಣಿವಟ 'ಪಾಣಿವಟ್ಟ' ನೋ.

ಪಾಣಿವಟ್ಟ, ಪಾಣಿಬಟ್ಟಲು, ಪಾಣಿವಟ, ಪಾಣಿವಟ್ಟಲು, ಪಾಣಿವಟ್ಟು, ಪಾನಿವಟ್ಟಲು (ನಾ). = ಪಾಣಿಪೀಠ : ದೇವರದಾಸ ನಾಥವರ್ಮ್ಮನೀ ದೇಗುಲಮಂ ಕಣ್ಡಪೀಠ ಪಾಣಿವಟ್ಟಸಹಿತಂ ಕಲ್ಲೋಳ್ಮಾಡಿಸಿದಂ (ಎಕ. XI. ಶಗಳೂ. ೨೯-೧೦; 920) ; ಲಿಂಗಗಳು ಪಾಣಿವಟ್ಟಗಳು ಸಿಕ್ಕಿರುವುದರಿಂದ . . . ಶೈವಮತವನ್ನು ಅತ್ಯಂತಪ್ರಾಚೀನವೆಂದು ಹೇಳಲಾಗಿದೆ (ಶಾರದ. ೧೭). **ಪಾಣಿಬಟ್ಟಲು** : ಈ ದೇವಸ್ಥಾನದಲ್ಲಿರುವ ಲಿಂಗಕ್ಕೆ ಬಳಪದ ಕಲ್ಲಿನ ಪಾಣಿಬಟ್ಟಲಿದೆ (ರೂಢಿ). **ಪಾಣಿವಟ** : ಕೊಡಂದೇರ ಮೇದೈಯ ದೇವರ ಪಾಣಿವಟ ತೆರೆಕಲಮೆಟುಕೆಲಾ ಸಹ ಸಾಯ ಮಾಡಿದು (ಎಕ. IX. ಕೊಡಗು. ೨೯-೨೩; 1867). **ಪಾಣಿವಟ್ಟಲು** : ಪ್ರತಿಅಂಕಣದ ನಡುವೆ ಅಮೃತಶಿಲೆಯ ಪಾಣಿವಟ್ಟಲುಳ್ಳ ಸ್ಫಟಿಕದ ಲಿಂಗ (ಮುಸುಗ. ೦೩೦). **ಪಾಣಿವಟ್ಟು** : ಈ ಲಿಂಗಗಳು ಬಾಣ ಪಾಣಿವಟ್ಟುಗಳಿಂದ ಕೂಡಿದ ಆಕೃತಿಯಲ್ಲಿಲ್ಲ (ಶಾರದ. ೨೦೮). **ಪಾನಿವಟ್ಟಲು** : ಆ ದೇವಸ್ಥಾನದಲ್ಲಿರುವ ಕಪ್ಪುಶಿಲೆಯ ಲಿಂಗ, ಪಾನಿವಟ್ಟಲುಗಳು ತುಂಬಾ ಚೆನ್ನಾಗಿವೆ (ರೂಢಿ).

[ಪಾಣಿ$_1$ (< ಪಾಣೀಯ) + ಪಟ್ಟ$_3$. / ತಮಿ. ತೆಲು. ಪಾನವಟ್ಟ]

ಪಾಣಿವಟ್ಟಲು 'ಪಾಣಿವಟ್ಟ' ನೋ.

ಪಾಣಿವಟ್ಟು 'ಪಾಣಿವಟ್ಟ' ನೋ.

ಪಾಣಿವಾದ (ನಾ). ೧. ಹರೆ, ಮೃದಂಗ ಮೊದಲಾದ ವಾದ್ಯಗಳನ್ನು (ಕೈಗಳಿಂದ) ಬಾರಿಸುವವನು. ೨. ಕೈತಾಳ ಹಾಕುವವನು : "ಪಾಣಿವಾದಃ. ಪಾಣಿಘಃ — ೨ ಕೈತಾಳ ಹೊಡೆಯುವವನ ಹೆಸರು" (ಸಿದ್ಧಾಂತಿ. ೩೦೧). [ಸಂ.]

ಪಾಣಿಶಾಖೆ (ನಾ). ಕೈಬೆರಳು : "ಪಾಣಿಶಾಖೆಗಳಂಗುಲಿಗಳೆನಲು ಬೆರಲುಗಳು" (ಮಂಗರಾ. ೯೫-೮). [ಸಂ. ಪಾಣಿಶಾಖಾ]

ಪಾಣೀಯ, ಪಾಣಿ$_1$, ಪಾಣಿಯ (ನಾ). ನೀರು; ಜಲ: 'ಪಾಣೀಯದಾರ' ಪರಾ. **ಪಾಣಿ$_1$** : ಭೂನಾಥ ನೋಡಲು ಪಾಣಿಯೊಳ್ಬಿಸುಡಲು ತಾನೆಸೆಯಲು ಮುನ್ನಿನಂತೆ (ಕರಣಾ. ೮-೬೦); ಚಾ ಪಾಣಿ ಯವಸ್ತಾನೂ ಆಗಬೇಕೇನರಿ ಮತ್ತ (ಪಡೆದಾ. I. ೨೬೪). 'ಕತ್ತರಿವಾಣಿ' ಪರಾ. **ಪಾಣಿಯ** : "ಪಾಣಿಯ (ಪಾಣಿ)—ಪಾನೀಯ" (ಶದ್ಯಕೋ. ೨೬).

[< ಸಂ. ಪಾನೀಯ. / ಪ್ರಾ. ಪಾಣಿಅ]

ಪಾಣೀಯದರ 'ಪಾಣೀಯದಾರ' ನೋ.

ಪಾಣೀಯದಾರ, ಪಾಣಿಯದರ, ಪಾಣಿಯದಾರ, ಪಾಣಿಯಬಾರ, ಪಾಣೀಯದರ, ಪಾಣೀಯಬಾರ (ನಾ). ನೀರು ಹರಿದುಹೋಗುವ ಮಾರ್ಗ ; ಚರಂಡಿ ; ಜಲಮಾರ್ಗ : "ಪಾಣೀಯದಾರ (—ದರ, ಬಾರ) — ಪಾನೀಯದ್ವಾರ = ಜಲಮಾರ್ಗ" (ಶದ್ಯಕೋ. ೨೬); ಪಾಣೀಯದರಂ, ಪಾಣೀಯದಾರಂ, ಪಾಣೀಯಬಾರಂ (ಶಬ್ದಾಮ. ೩೭೮ ಪ್ರಯೋ). **ಪಾಣಿಯದರ** : "ಪಾಣಿಯದರಂ, ಪಾಣಿಯದಾರಂ, ಪಾಣಿಯಬಾರಂ—ಈ ೩ ಪಾನೀಯದ್ವಾರಕ್ಕೆ ಪೆಸರ್" (ಕಶಾ. ೫೯-೩೦೦). **ಪಾಣಿಯದಾರ** : ಮೇಲಿನ 'ಕಶಸಾ' ಪ್ರಯೋಗವನ್ನು ನೋಡಿ. **ಪಾಣಿಯಬಾರ** : ಟಂಟಣಿಸುತ್ತವಿರ್ಪ್ಪರಿನ್ರಿ(ನೃ)ಪಾಳರ ಹಿಂಡ ನಿಜಾಸಿ ದಂಣ್ಡದಿಂ ಕಂಟೆಯ ಬಾರದೊಳ್ ಸುಳಿಸಿ ಪಾಣಿಯಬಾರದ ನೀರನೂಡಿ ನಿಃಕ್ಕ(ಕ)ಂಟಕವಾಗೆ ಮಾಡಿ ಪಡೆದಂ ಸಲೆ ದಂಡಿನ ಗೋವನೆಂಬುದಂ ಬಂಟರ ಬಲ್ಲಹಂ ನೆಗೆದ ಬಲ್ಲಹರೊಳ್ ಕಲಿ ಬರ್ಮ್ಮಭೂಭುಜಂ (ಇಲ. XII. ೯೭-೧೯; 1188 ; ಶಾಪಮಂ. ೦೮೯-೦೦೫೨ ನೋ) ; ಪಾನೀಯ

ದ್ವಾರ—ಪಾಣೆಯಬಾರ (ಕಸುರ. ೨೯೬ ಪ್ರಯೋ). **ಪಾಣೇಯದರ :** ಮೇಲಿನ 'ಪಾಣೇಯದಾರ' ಉಲ್ಲೇಖದಲ್ಲಿರುವ 'ಶಬ್ದಾನು' ಪ್ರಯೋಗವನ್ನು ನೋಡಿ. **ಪಾಣೇಯಬಾರ :** ಮೇಲಿನ 'ಪಾಣೇಯದಾರ' ಉಲ್ಲೇಖದಲ್ಲಿರುವ 'ಶಬ್ದಾನು' ಪ್ರಯೋಗವನ್ನು ನೋಡಿ. [<ಸಂ. ಪಾನೀಯದ್ವಾರ]

ಪಾಣೇಯಬಾರ 'ಪಾಣೇಯದಾರ' ನೋ.

ಪಾಣ್ಣಾಟ (ನಾ). ಒಂದು ಪ್ರದೇಶದ ಹೆಸರು : ಶ್ರೀಮತ್ಕೊಙ್ಗಣಿ ವೃದ್ಧರಾಜೇನ ದುವ್ವೀನೀತ ನಾಮತೇಯೇನ ಸಮಸ್ತಪಾಣ್ಣಾಟ ಪುನ್ನಾಟಾಧಿಪತೀನಾ . . . ತೈತ್ರಿಯ ಚರಣ ಭೂತಶರ್ಮ್ಮಗ್ಗೆ ಶಾಲಿಗ್ಗಾಮೆ ಸರ್ವಪರಿಯಾರ ಪರಿಗ್ರಹದಿನ್ತು ಪಾಣಿಗ್ರಹಣಂ ಕೆಯ್ದು ಕೊಟ್ಟಾರ್ (ಸ್ಮುಅಶಿ. ೦೯೪೦. ೦-೨೮; 788). [?]

ಪಾಣ್ಬ, ಪಾಂಬ (ನಾ). ಜಾರ ; ಹಾದರಿಗ ; ವ್ಯಭಿಚಾರಿ : "ಜೋಡಂ ಪರಳಿಗನು ಪಾಣ್ಬ ಸಿತಗಂ ಜಾರಂ" (ಕವಿಕಂ. ೦೬೦) ; ನಾಣಿಲಿ ಪಾಣ್ಬಂ ಪಂದೆ ಲೋಭಂ ಖಳಂ . . . ಎಂಬೀ ನಾಮನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತಹೀನಂ (ಪಡ್ಡಾರಾ. ೦೦-೩೦); ಆನಲ್ಲಿಗೆ ವರ್ಪೆನೆಂ[ದಾ ಪಾಣ್ಬ]ನಂ ನಂಬೆ ನುಡಿದಾ ಪೊಟ್ಟಿಂಗೆನ್ನನಲ್ಲಿಗೆ ವರಿಸು (ಪಂಪಭಾ. ೬-೭೨ಪ) ; ಪಾಣ್ಬನೆಟ್ಟೆದೊಯ್ಯೆ ನಿನ್ನ ಕುಟುಂಬಿನಿಯಂ ಕಾದೆಯಿಲ್ಲ ರಾಮಾಕೃತಿಯಿಂ (ಪಗವಿ. ೦೭-೪೦). **ಪಾಂಬ :** ಪಾಂಬನಂ ದ[ನುಜನನು]ಗ್ರಖಡ್ಗಮುಖ ದಿಂದಿಱಿದೊತ್ತಿದ ದುರ್ಗಿ . . . ಪರಿರಕ್ಷಿಸುತಿರ್ಕೆ (ಪಂಪಕಂ. ೨-೨೦); ಪರಲಲನೆಗಳಿಪಿ ಬಿಡೆ ಚಪ್ಪರಿಸುತ್ತಂ ಬಂದ ಪಸವ[ಪಾಣಾಂ. ದ]ನಂ ಪಾಂಬನ ನಚ್ಚರಿಯಾಗೆ ಕಾದುತಂ ಬೆರಸರಿದಿರದೆತ್ತಿಸುವೆನಾಜಿಯೊಳ್ ಪಂದಲೆಯಂ (ಪರ್ಧಮಾ. ೪-೨೦).

ಪಾಣ್ಬರಂಕುಸ, ಪಾಂಬರಾಂಕುಶ = ಒಂದು ಬಿರುದು : ಸಂಸಾರ ಸಾರೋದಯಂ ಮಱುವಕ್ಕದಲ್ಲಟಂ ನೋಡುತ್ತೆ ಗೆಲ್ವಂ ಪಾಣ್ಬರಂಕುಸಂ ಅಮ್ಮನ ಗಂಧವಾರಣಂ (ಪಂಪಭಾ. ೧-೪೮ ಪ) ; ಚಾಳುಕ್ಯವಂಶೋದ್ಭವಂ ಪಾಂಬರಾಂಕುಶನಮ್ಮನ ಗನ್ಧವಾರಣಂ (ಕಇಅ. ೨೪-೧೩-೭೪; ?).

ಪಾಣ್ಬತನ (ನಾ). ಹಾದರ ; ಜಾರತನ ; ವ್ಯಭಿಚಾರ : "ಜುಡ—ವ್ಯಭಿಚಾರೇ, ಪಾಣ್ಬತನದೊಳ್" (ಕಾಶಕ್ಕ. ೨೬೬) ; ಆಗಳ್ ಜಸಂ ಕೆಯ್ದುವನಿಕ್ಕಿ ವೀರಶ್ರೀಗಾಣ್ಮನಯ್ ಪಾಣ್ಬತನಕ್ಕೆಳಪ್ಪಯ್ ಪೋಗೇಕೆ ನೀಂ ಮೆಯ್ಗರೆದಿರ್ಪಯೆಂದಾ ಭೋಗೀಶ್ವರಂಗಂದು ವಿನಮ್ರನಾದಂ (ಕಾಪ್ಯಾಪ. ೦೭೫). [ಪಾಣ್ಬ + — ತನ]

ಪಾಣ್ಬು (ನಾ). = ಪಾಣ್ಬತನ : "ಮಿಠಿ—ವ್ಯಭಿಚಾರೇ, ಪಾಣ್ಬೆನೊಳ್" (ಕಾಶಕ್ಕ. ೨೨); "ಹಾದರಃ—ಪಾಣ್ಬು" (ಕಾಶಕ್ಕ. ೮೩). [ಪಾಣ್ಬ + — ಉ]

ಪಾಣ್ಬೆ, ಪಾಂಬೆ (ನಾ). ಜಾರೆ ; ಹಾದರಗಿತ್ತಿ ; ವ್ಯಭಿಚಾರಿಣಿ : "ಪುಂಶ್ಚಲಿ ಕುಲಟೆಯಸತಿ ಕುಲಪಾಂಸುಳೆ ಬಂಧಕಿ ಜಾರೆ ಪಾಣ್ಬೆಯಿತ್ವರಿಕೆಯವಳ್" (ಪಸ್ತುಕೋ. ೫೨-೪) ; ಪಾಣ್ಬರಂಕುಸನಾ ಪಾಣ್ಬೆಯರ ಗೆಯ್ವ ಗೆಯ್ತಂಗಳುಮಂ . . . ಕಂಡು ಚೋದ್ಯಂಬಟ್ಟು (ಪಂಪಭಾ. ೪-೮೩ ಪ); ನಾರಾಯಣಭಟ್ಟಂ . . . ಆ ಪಾಣ್ಬೆಯ ಡಂಭತನಕ್ಕೆ ಬೆಱಗಾಗಿ (ಪಂಪಕಂ. ೨೨೯-೦೦); ಜಡನಂತವಿಚಾರಿಯಾಗದೆ ಪಾಣ್ಬೆಯಂತೆ ಮತ್ತೊಂದು ಮನಮಾಗದೆ ನಪುಂಸಕನಂತೆರಡಕ್ಕಾಸೆಗೆಯ್ಯದೆ (ಧರ್ಮಾಪ್ಕು. ೧-೦೮೩). **ಪಾಂಬೆ :** ತಾಂ ತನಗಮಿಂಬಾದಾಗಳಾ ಪಾಂಬೆ[ಪಾಣಾಂ. ಪಾಣ್ಬೆ]ಯೆಂದು ದನೆಂಗುಂ ಸುಟಿಯುತ್ತ ಪೊತ್ತುಗಳೆಗುಂ ಜಾರಂ ಮಹಾಕ್ಲೇಶದಿಂ (ಸಮಪ. ೫-೫೫); ಎಲವೆಲವೋ ನೀನಗಲ್ದೊಡೆ ನಿಲಲಾಱದ ಪಾಂಬೆ ಬಂದಳೀಯಿರ್ದಳೆ ಬಾ (ಪರ್ಧಪು. ೦೦-೨೨). [ಪಾಣ್ಬ + — ಎ]

ಪಾತ$_1$ (ನಾ). ೧. ಹಾರುವುದು ; ಹಾರಾಟ. ೨. ಬೀಳುವುದು ; ಪತನ : 'ಗರ್ಭಪಾತ' ಪರಾ. ೩. (ಬಾಣವನ್ನು) ಬಿಡುವುದು : ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಮೆಂಬಿವಯ್ದೇಸಿನೊಳಂಶೀತನ ದೊರೆಯಿಲ್ಲೆನಿಸಿದುದಾತನ ಬಿಲ್ಬಲ್ಮೆ ಸುರರಿನಂಬರತಲದೊಳ್ (ಪಂಪಭಾ. ೧೨-೦೮೫). ೪. ಪೆಟ್ಟು ; ಹೊಡೆತ : ಅಯ್ಯೊ ಏನೀ ಘಾತ! ಮರಣ ಮರ್ಮಾಘಾತ! ಅರಳೆಗಶನಿಯ ಪಾತ! (ಕ್ರೌಂಪರ್ವ. ೩೨-೨೦). ೫. ಆಕ್ರಮಣ ; ಧಾಳಿ. ೬. (ಮಲ್ಲಯುದ್ಧದ) ಪಟ್ಟು ; ವರಸೆ : ಕಳಂಬೊಕ್ಕು ನಿಱಿಸುಗೆಯ್ದು ನಖಹತಿ ದಶನಹತಿ ಪಾದಪಾತಂ ಮುಷ್ಟಿಪಾತಮೆಂಬ ದೋಷಂಗಳಂ ಪೊರ್ವದ ನಾಲ್ಕುಂ ಸ್ಥಾನದೊಳಂ . . . ಪಲತೆಱದ. ಪಾತಂಗಳೊಳಂ ನೆರೆದು (ಪಂಪ್ರಪು. ೫ ೭೭ ಪ); ಅಧಟಿಂದಂ ಮೂಱುಂ ಲಗ್ಗದ ನಾಲ್ಕುಸ್ಥಾನಮೆಯ್ದು ಡೊಕ್ಕರದ ಮಹೋಗ್ರದ ಮೂಱತೆರಡು ಬಿನ್ನಣದೊದವಂ ಪಲವು ತೆಱದ ಪಾತವ ಮೆಱೆದರ್ (ಕ್ರಿಪುವಿ. ೨೬-೧೭). ೭. ಹಾಳು : ನಾಶ : 'ಗ್ರಂಥಪಾತ' ಪರಾ. ೮. ತಪ್ಪು ; ದೋಷ. ೯. (ನೆಲಮಟ್ಟದ) ಇಳಿತ ; ತಗ್ಗು : ನಾಲೆಗಳು ವಿವಿಧವಾದ ಉಬ್ಬುತಗ್ಗಿನ ಭೂಮಿಯಲ್ಲಿ ನೂರಾರು ಮೈಲಿಗಳ ದೂರ ಹೋಗುವಾಗ ಅನೇಕ ಕಲ್ಲುಗಾರೆಯ ಕಟ್ಟಡಗಳು ಬೇಕಾಗುತ್ತವೆ. ಅವನ್ನು ಈ ರೀತಿ ವಿಂಗಡಿಸಬಹುದು. A. ಪಾತಗಳು (Drops) ಕಡಿದಾದ ಇಳಿಕಲುಗಳು (Rapids) . . . ಪಾತವು ನಾಲೆಯ ತಳದಲ್ಲಿ ಒಂದು ಮೆಟ್ಟಲಿನ ಹಾಗೆ (ಕಿಲ್ವಪಾ. ೩೭೬). ೧೦. (ನೋಟವನ್ನು) ಹರಿಸುವಿಕೆ ; ಹೊರಳಿಸುವಿಕೆ : ಜಳಧರ ಸಮಯನಿಶಾಸಂಚಲಿತವಿದ್ಯುತ್ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ (ಪಂಪಭಾ. ೧೩-೭೫ ಪ). 'ದೃಷ್ಟಿಪಾತ' ಪರಾ. ೧೧. [ನಾಟ್ಯ] ನರ್ತನಕಾಲದಲ್ಲಿ ಕಣ್ಣಿನ ಆಲಿಗಳನ್ನು ಚಲಿಸುವ ಒಂದು ವಿಧಾನ : P"ಕೆಳಗಡೆ ನೋಡುವುದು" (ಶಾಸ್ಕರಂ. ೨೭೪ ಗದ್ಯಾನುವಾದ): ಭ್ರಮಣ, ವಲನ, ಪಾತ . . . ಪ್ರಾಕೃತ — ಈ ಒಂಬತ್ತು [ಸ್ವನಿಷ್ಠ] ಆಲಿಯ ಭೇದಂಗಳ್ (ಶಾಸ್ಕರಂ. ೩-೫೪ ಪ), ಕೆಳಗಂ ನೋಡಲ್ ಪಾತಂ (ಶಾಸ್ಕರಂ. ೩-೫೬). [ಸಂ.]

ಪಾತ$_2$ (ನಾ). ಒಂದು ಬಗೆಯ ಸಸ್ಯ : ನೀಮುಖಾ, ಪರೇರಾಬೇರು, ಪದ್ವಲಿ, ಪಾತ, ಕಾಡುಬಳ್ಳಿ (ಸ್ಮುಕಿಗಿ. ೨೦-೩೯೪). [?]

ಪಾತಂಗ 'ಪತಂಗ$_2$' ನೋ.

ಪಾತಂಜಲ (ನಾ). ೧. ಪತಂಜಲಿಮಹರ್ಷಿಯಿಂದ ರಚಿತವಾದ ಯೋಗಶಾಸ್ತ್ರ ; ಷಡ್ದರ್ಶನಗಳಲ್ಲಿ ಒಂದು : ಪಾತಂಜಲ ಯಮಾದ್ಯಷ್ಟಾಂಗಯೋಗಸಾಧನದಿಂ ಮನೋನಿಶ್ಚಲತೆಯಂ ನಿಶ್ಚಲಪರಿಪಕ್ವಾಂತಃ ಕರಣಂಗೆ ಮೋಕ್ಷಸಿದ್ಧಿಯಂ ಬೋಧಿಸಿ ಸಾಧಿಸುವುದು (ವಿವೇಕ. ೦೦). ೨. ಪಾಣಿನಿಯ ಅಷ್ಟಾಧ್ಯಾಯಿಸೂತ್ರಗಳಿಗೆ ಪತಂಜಲಿಯು ಬರೆದ ವ್ಯಾಖ್ಯಾನ : ಮಹಾಭಾಷ್ಯ. [ಸಂ.]

ಪಾತಕ (ಗು). ೧. ಪಾಪ ಮಾಡಿದ ; ಪಾತಕಿಯಾದ : ರಾತ್ರಿಯ ಲೊತ್ತೆಯ ಕೊಂಬ ಪಾತಕಸೂಳೆಯಂತೆ ಬಱಿಯ ಮಾತಿಂಗೊಲೆವನೆ ನಮ್ಮ ಕೂಡಲಸಂಗಮದೇವ (ಬಸವ. ೪೬೮). (ನಾ). ೨. ಬೀಳುವಂತೆ ಮಾಡುವುದು ; ಬೀಳಿಸುವುದು. ೩. ಕೆಟ್ಟ ಕೆಲಸ ; ಪಾಪ ; ದೋಷ : "ವೃಜಿನಂ, ದುರಿತಂ . . . ಪಾತಕಂ—ಈ ೧೪ ಪಾಪಂ" (ಹಲಾಯು. ೦೦೩-೬); ಅಪವಿತ್ರನುಡಿಯ ನುಡಿವ ಸೂತಕವೇ ಪಾತಕ (ಬಸವ. ೭೬೯); ನಿನ್ನೊಡನೆ ನಗುತಿಪ್ಪ ಪಾತಕವೆನ್ನೊಳೆಂದಿಗೆ ಪರಿಹರಿಸುವುದು ನಿನ್ನುವಂ ಕೋಪಿಸುವ ಪಾಪಂ ಹಱಿವುದೆನಗೆಂದೊ (ಬಸವು. ೪೫-೮); ನಟ್ಟ ದೃಷ್ಟಿಯ ತೆಗೆಯಲಾಱದೆ ಸೋತು ಕೀಚಕ ಪಾತಕವ ನೆನೆದ (ಕುಪ್ಯಾವಿ. ೨-೯). ೪. ಪಾಪ ಮಾಡಿದ ವ್ಯಕ್ತಿ ; ಪಾಪಿ ; ಪಾತಕಿ : ದಶಸ್ಥಾನಕದೊಳ್ ರವಿಸುತನಿರೆ ಶೂಲದೊಳಿಕ್ಕುವರಾ ಲಗ್ನ ಪ್ರಸೂತನಂ ಪಾತಕನಂ (ಪಾತಕಿ. ೨೩-೭); ಮಾತಿನಲೆ ಒಲಿಸಿ ಮಹತ್ತಪ್ಪ

ಲಿಂಗವ ಕಂಡಹೆನೆಂಬ ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ (ಬಸವ. ೬೯೭); ಮುರಿಯಲಾಗದು ಕೊಂಡ ಹೆಜ್ಜೆಗಳ ಹೊರಳಿಪೆಣನನ್ನು ಮೆಟ್ಟಿ ಮುಂದಣಿಗುರವಣಿಸುವುದು ಶಪ್ಪದವರಿಗೆ ನರಕವೀ ಪಾತಕರ ಗತಿ ನಮಗೆಂದು ಸಾಜಿವರು (ಕುಮ್ಮಕ್ರೋ. ೨-೭). [ಸಂ.]

ಪಾತಕಿ (ನಾ). ಪಾಪವನ್ನು ಮಾಡಿದ ವ್ಯಕ್ತಿ; ಪಾಪಿಷ್ಠ: ಪಾತಕಿಯೊಳ್ ಲಕ್ಷ್ಮಿಯೊಳಶಿಕಾತರಕಾಪುರುಷಗಣನೆಯೊಳ್ ನೆರೆಯಲ್ಕಿಂತೀತನೆ ಬಗಗಾಂ ಪುರುತಸುಜಾತರ ಬಗೆವುದನೆ ಬಗೆವೆನಬ್ಜಪಂ ಬಗೆಯೆಂ (ಆದಿಪು. ೧೪-೧೨೬); ಮಲಹರಂಗುಣ್ಣಿಸಿದ ಪಾಲಂ ನಲಿದು ನಿಚ್ಚಂ ಕುಡಿದ ಪಾತಕಿ ತಲೆಯನಟ್ಟಿಯೊಳಿಕ್ಕಿ ಬಿಸುಡದೆ ಮಾಣ್ಬನೇ ನಿನ್ನ (ಬಸವ. ೧೪-೩೦); ತಾಯ ತುಱುಬಿಗೆ ಹಾಯ್ದು ಪಾತಕಿನಾಯಾ ಕೊಂಡಾಡುವರೆ (ಕುಮ್ಮಕ್ರೋ. ೫-೪೦). [ಸಂ. ಪಾತಕಿನ್]

ಪಾತಗಿತ್ತಿ (ನಾ). ಪಾಪ ಮಾಡಿದವಳು; ನೀಚಹೆಂಗಸು: ಭೂತಳದೊಳು ಪಸರಿಸಿತಪಕೀರ್ತಿ ಪಾತಗಿತ್ತಿಯ ದೆಸೆಯಿಂದ (ಅಂಚೆಪ. ೯-೧೦೭); ಮದನೋದ್ರೇಕಮಾನಸೆಯೊಗುತಾ ದುಷ್ಟೆ ಸುವತಿ ಮತ್ತಾ ಪಾತಗಿತ್ತಿ (ಪ್ರಭಂಜ. ೨-೫೩); ಹೆತ್ತ ಮಗನ ಹೇಸದೆ ಕೊಂದ ಪಾತಗಿತ್ತಿ (ಪ್ರಭಂಜ. ೨-೬೩).

[ಗಿ ಇದು 'ಪಾತಕಗಿತ್ತಿ' ಎಂಬುದರ ಅಪಲಿಖಿತವಿರಬಹುದು]

ಪಾತನ (ನಾ). ೧. ಕೆಳಗೆ ಬೀಳುವಂತೆ ಮಾಡುವುದು; ಬೀಳಿಸುವುದು: ಪಾತನ . . . ಚೂರ್ಣನ ವಿಮುಖೀಕರಣ ದುರ್ಭೋಗ್ಯ ನಾನಾವಿಧಾ ಸಂಖ್ಯಾತಶೀವ್ರವೇದನಾರೂಪಂಗಳಾಗಿ ಶಪದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾಲೇಶಮೆಂದೆನಿಸಿ (ಎವೀಳ. ೧೮೧); ನಿನ್ನ ಮಹಾಪೂರವಿಳಿವುದು ತಟಿನಿಯ ಜಲಧರಸಮಯವು ಕಳೆಯೆ ತಟತರುಪಾತನ ಪಾತಕವೊಂದೆಯೆ ಬಹುಕಾಲ ಉಳಿವುದು ತಿಳಿಯೆ (ಇಂಕಾಶ. ೧೭-೭೩). ೨. ತಗ್ಗುವಂತೆ ಮಾಡುವುದು; ತಗ್ಗಿಸುವುದು. [ಸಂ.]

ಪಾತರ, ಪಾತರ (ನಾ). ೧. ಪಾತ್ರೆ: ಈ ನನ್ನ ಕಟ್ಟುಗಡಸಿನ ಮೆಯ್ಕೆಂಬ ಹೊನಹಿನ ಪಾತರದಲ್ಲಿ ಎಸರಿಟ್ಟಿರುವ ರೂಪಸೌಂದರ್ಯಯುವ್ವನ ಶೃಂಗಾರ ಕಲೆಗಳೆಂಬ ಪಂಚಾಸವಗಳನ್ನು . . . ಸವಿನೋಡಿಯೇಬಿಡಬೇಕೆಂಬ ಮದನಾಗ್ರಹದ ಚಪಲಚ್ಛಲವು ನಿಮಗೆ! (ಪುಂಕ್ರಶ. ೩೯-೦೩). ೨. ಕಾಣೆತ; ನರ್ತನ; ನಾಟ್ಯ: ಕೂಳು ಕುತ್ತವೆ ಕುತ್ತ ಕೂಳು ಮೇಳವೆ ಮೇಳ ಕೂಳೊಂದು ಗಳಿಗೆ ತಡೆದಿಹರೆ ಪಾತರದ ಮೇಳ ಮುಱಿದಂತೆ (ಸರ್ವಜ್ಞ. ೩೦೦೨); ಗುಡಿಯ ಮುಂದಿನ ಪಟಾಂಗಣದಲ್ಲಿ ಒಂದೆಡೆ ಗುಗ್ಗುಳವು ಹೊಸ್ತಿ, ಮತ್ತೊಂದೆಡೆ ಪಾತರದ ಮೇಳವು ಕಾಣಿಯಬೇಕು (ಕಪ್ಪಣ. ೯). **ಪಾತುರ**: ಪಿ. ಅರ್ಹನಾದವನು; ಯೋಗ್ಯ: ಹಯವದನರಾಯನ ಪ್ರಿಯಕೆ ಪಾತುರನಾಗಿ (ಪ್ರಕುಂವ. ೪-೯೫). ೪. ಅಭಿನಯ ಮಾಡುವವನು; ನಟ: (೬).

ಪಾತರದವರು=ನಾಟ್ಯ ಮಾಡುವ ವೃತ್ತಿಯವರು; ಗಿ ಕೆಲವರು ದೇವದಾಸಿಯರಲ್ಲಿ ಈ ವೃತ್ತಿಯನ್ನು ಅನುಸರಿಸುವವರೂ ಇರುವರೆಂದೂ ತಿಳಿದು ಬರುತ್ತದೆ: ವಿಜಾಪುರಜಿಲ್ಲೆಯಲ್ಲಿ ಪಾತರದವರು ಬಸುರಾದರೆ, ಅವರು ಗೊರವರ ಕೈಯಿಂದ ಹಲ್ಲುಪುಡಿ ಹಚ್ಚಿಸಿಕೊಳ್ಳಲಿಕ್ಕೆ ಬೇಕು (ಕಶಾಗ. ೧೧೮); ಗಂಗಾಸಾನಿ ಅಚ್ಚ ಪಾತರದವರ ಮನೆತನದವಳಾಕೆ. ಆ ಊರಿಗೆ ಇವರದೊಂದೇ ಮನೆ . . . ಸೋಮವಾರಕ್ಕೊಮ್ಮೆ ಅಷ್ಟಾವಧಾನದ ಕಾಲದಲ್ಲಿ ಆ ಮನೆತನದವರೊಬ್ಬರು ದೇವರ ಮುಂದೆ ನೃತ್ಯಮಾಡುತ್ತಿದ್ದರು (ಗಂಗಾಸಾ. ೧೦).

[<ಸಂ. ಪಾತ್ರ]

ಪಾತರಗಿತ್ತಿ (ನಾ). ೧. ನರ್ತಕಿ; ನಟಿ: (೬). ೨. (ಆಲಂ) ಬಣ್ಣ ಬಣ್ಣದ ಪಕ್ಕಗಳಿಂದ ಕೂಡಿದ ಚಿಟ್ಟೆ; ಪತಂಗ: ಪಾತರಗಿತ್ತಿಯೆಂಬ ಹುಳವು ಗಿಡಗಿಡಾ ಹಾರಾಡುವುದನ್ನು ನಾವು ನೋಡುತ್ತೇವೆ (ಮುಂಶಾಬಿ. ೫-೧೦೨); ಪಾತರಗಿತ್ತೀ ಪಕ್ಕಾ ನೋಡಿದೇನ ಅಕ್ಕಾ (ಗಂ. ೯೫-೧); ಬಣ್ಣ ಬಣ್ಣದ ಹಕ್ಕಿ ಪುತ್ತ ಪಾತರಗಿತ್ತಿ ನನ್ನ ಗೆಳೆತನವಿತ್ತು ಬನದ ತುಂಬ (ಶಕಪು. ೬-೧೪೬). ೩. (ಚಿಟ್ಟೆಯಂತೆ) ವೇರೆಯಂವವಳು: ಪಟ್ಟಣಗಳಲ್ಲಿ, ಪಾತರಗಿತ್ತಿಗಳ ಮಧ್ಯದಲ್ಲಿ, ಕಾಲೇಜಿನ ವಾತಾವರಣದಲ್ಲಿ ಬೆಳೆದ ಹೇಮಾ ಹಾಗೂ ಅವಳ ಅನುರಾಗಕ್ಕಾಗಿ ಹವಣಿಸಿದ ವಿಶ್ವನಾಥರನ್ನು . . . ನಾಯಕಿ—ನಾಯಕರೆನ್ನಬಹುದು (ಶಾಸಮಾ. ೧೬೧). ೪. ವೇಶ್ಯೆ; ಗಣಿಕೆ. [ಪಾತರ + —ಗಿತ್ತಿ]

ಪಾತಶಹ, ಪಾಚ್ಚಾ, ಪಾಚ್ಚಾಯಿ, ಪಾಛಾ, ಪಾತಷಹ, ಪಾತಷಾಹ, ಪಾತುಶಾಹ, ಪಾತ್ಸಾಹ, ಪಾತ್ಸಾಯವು, ಪಾದಶಾ, ಪಾದಶಾಹ, ಪಾದಷಹ, ಪಾದಷಹಾ, ಪಾದಷಾಹ, ಪಾದುಶಾಹ, ಪಾದುಷಹ, ಪಾದುಷಾ, ಪಾಷ, ಬಾದಶಹ, ಬಾದಶಾಹ, ಬಾದಷಹ, ಬಾದುಶ (ನಾ). ೧. ಮುಸಲ್ಮಾನರ ದೊರೆ; ಸುಲ್ತಾನ: ಪೂರ್ವಕಾಲದಲ್ಲಿ . . . ಒಬ್ಬ ಬಹು ಪರಾಕ್ರಮಶಾಲಿಯಾದ ಪಾತಶಹನು ಇದ್ದನು (ಭಗಕ್ಕ. ೦೩). **ಪಾಚ್ಚಾ**: ೧. ನವಾಗೆ ಅರಸುಗಳಿಗೆ ಪಾಚ್ಚಾಗಳಿಗೆ ಪುಣ್ಯ ಲಭ್ಯ (ಪ್ರಸಂ. ೦೪೨೯, ೬೩-೩೩; 1632). ೨. ಹಿರಿಯ ಕುಳ; ಶ್ರೀಮಂತ: ಹೊನ್ನ ತೆತ್ತಲ್ಲದೆ ಹೊಲ ಮಾಡಬಾರದು . . . ಸರಕಾರಕ್ಕೆ ರುಜು ಇಲ್ಲದೆ ರೈತನಾಗಬಾರದು ಅದೆಂತೆಂದೊಡೆ ಇಮ್ಮಡ್ಯಾತನೆ ಪಾಚ್ಚಾರೈತ ಇಲ್ಲದಾತ ದುಬ್ಬುಳುಕ (ಪಶಸಂ. ೬೦ – ೬೦). **ಪಾಚ್ಚಾಯಿ**: ೧. ಅರಸುಗಳಿಗೆ ಪಾಚ್ಚಾಯಿಗಳಿಗೆ ಪುಣ್ಯ ಲಭ್ಯವೆಂದು ನೋಡಿ ದಾನಪಾಲನೆ ಮಾಡುತ್ತಾ ಇರಬೇಕು (ಪ್ರಸಂ. ೦೪೨೯, ೬೪-೬೬; 1633). **ಪಾಛಾ**: ೧. ಮೊಗಲ ಪಾಛಾಸಾಹೇಬರ ಅಳಿಕೆಯಲ್ಲಿ . . ೨ ಕೊಡಗಿ ಹಾಕಿಕೊಟ್ಟ ಊರ ಮುಂದಣ ಗದ್ದೆಯಲಿ ಬೀಜಾವರಿ (ಎಳ. XI. ಹೊಳಲ್ಕೆ. ೦೩೬- ೫ ; 1692?) ; ಟೀವುಸುಲತಾನ ಪಾಛಾರವರ ಧರ್ಮ (ಎಳ. XIV, ಶ್ರೀರಂಗ. ೦೬೫-೦; ?). **ಪಾತಷಹ**: ೧. ಈಗ ಟ್ಯೂನಿಸದ ಪಾತಷಹನಾಗಿದ್ದೇನೆ (ಪುಂಶಾಬಿ. ೫-೦೬೪). **ಪಾತಷಾಹ**: (೬). **ಪಾತುಶಾಹ**: ೧. ಪಾತುಶಾಹ ಮಹಾಸೇನಾತ್ರಸ್ತ ದಕ್ಷಿಣ ಭೂಭುಜಾಂ ಅಭಯಸ್ಯ ವಿಧಾತ (ಎಳ. VII, ತಪಕೊ. ೫-೫೬; 1641); ನೆಲವಾರ್ತೆಯುಂ ಕೇಳಿ ಪಾತುಶಾಹಂ ಬಂದು ತಲೆದೂಗಿ ಸತ್ಕನೀತೂ ಪೊದಾನಹುದೆಂದು ಸಲೆ ಸಲಾಮುಂ ಮಾಡಿ ಹೋದನು (ಗುರುಚಾ. ೦೪-೫೯). **ಪಾತ್ಸಾಹ**: ೧. ಅನಿತರೊಳ್ಪಾತ್ಸಾಹನೈತಂದು ರಾಯರಂ ಮುರಿದವನಿಯಂ ಸೆಳೆಯಲು (ಪಚಳಕಂ. ೦-೦೫೬). **ಪಾತ್ಸಾಯವು**: ೧. ಮುಂತೊಂದು ಪಾತ್ಸಾಯವ ರಣಧೂಳಿಖಾನನ ಬಿಂಕದ ಬೀಳ್ಕೊಟ್ಟನಾಗ (ಕಂಕಪ. ೦೮-೪). **ಪಾದಶಾ**: ೧. ಟಿಪುಸುಲತ್ತಾನ ಪಾದಶಾರ ಧರ್ಮ (ಪ್ರಸಂ. ೦೪೨೬, ೫೪-೦; ಸು. 1795). **ಪಾದಶಾಹ**: ೧. ದಿಲ್ಲಿಯ ಪಾದಶಾಹನತಿಭಕ್ತಿಯಿಂ ಭಂಡಾರದಿಂ ದಿವ್ಯಕನಕಾದಿ ವಸ್ತುಗಳ ತಂಡಮಂ ತರಿಸಿತ್ತು (ಕಶಾರಾ. ೨೭-೨೮). **ಪಾದಷಹ**: (೬). **ಪಾದಷಹಾ**: ೧. ಆ ಕಾಲದಲ್ಲಿ ದಿಲ್ಲಿ ಪಾದಷಹಾ ಎಂಬ ಅಶ್ವಪತಿಯು . . . ಲೆಖ್ಖವಿಲ್ಲದ ಕುದುರೆ ಪೌಜು ಉಳ್ಳವನಾಗಿದ್ದನು (ಶಕಾಮುಂ. IV, ೩೨). **ಪಾದಷಾಹ**: ೧. ಭೂಲುವ ರಾಯಸ್ವಾಮಿಯವರಿಗೆ ದಿಲ್ಲಿಯ ಪಾದಷಾಹರು ಒಪ್ಪಿಸಿದ್ದ ಗ್ರಾಮ ಭೂಮಿಗಳಂ ತಾವು ಅನುಭವಿಸಿಕೊಂಡು (ಕುಹಾಪಂ. I, ೪೨) **ಪಾದುಶಾಹ**: ೧. ವಿಜಯಾವುರದ ಸುರಿತಾಣ ವಸಹಮ್ಮದಪಾದುಶಾಹ ನೆಡೆಗೆ ನಡೆದವನಡಿವಿಡಿದು (ಶಕಪಂ. ೫೭-೬). **ಪಾದುಷಹ**: ೧. ಪ್ರಭುಗಳೆ! ನೀವು ದೊಡ್ಡ ಪಾದುಷಹರು! (ಬಕ್ಕರು ೯). **ಪಾದುಷಾ**: ೧. ರಾಜರಿಗೆ ಪಾದುಷಾಗಳಿಗೆ ಅರಸುಗಳಿಗೆ ನವಾಗೆ ಸಹ ಪುಣ್ಯ ಲಭ್ಯ ವೃದ್ಧಿಯಾಗಿ (ಪ್ರಸಂ. ೦೪೨೯, ೬೫-೪೦ : 1609). **ಪಾಷ**: ೧. ಅಲ್ಲಾದೇವಯಾ

ದೇಶದ ಮಹಮ್ಮದಾಲಿ ಎಂಬ ಸೈನಿಕನೊಬ್ಬನು . . . ಪಾಷ ಅಥವಾ ಚಕ್ರವರ್ತಿ ಪ್ರತಿನಿಧಿ ಎಂದು ಕರಸಿಕೊಂಡನು (ಇಸ್ಮಾಂಸಂ. ೫೭). **ಬಾದಶಹ :** ೧. ದಿಲ್ಲಿಯ ಬಾದಶಹನ ಹಸ್ತಕನಾದ ಒಬ್ಬ ಸರದಾರನು . . . ಅದನ್ನು ದೇವರಾಜನಿಗೆ ಅಷ್ಟೇ ಹಣಕ್ಕೆ ಮಾರಿದನು (ಮುಂಬಯಿ. ೪-೮೨); ಈಗಿನ ಹುಡುಗರಿಗೆ ಸ್ವಾಮಿಗಳಿಗಿಂತ ಮೊಗಲ ಬಾದಶಹರು ಎಂದು ಪಟ್ಟಕ್ಕ ಬಂದರಂಬೋದೇ ಹೆಚ್ಚು ಗೊತ್ತಿರತದ (ಅಕ್ಕಮೇ. ೭); 'ಬಾದಶಹ ಬಿರುದನ್ನು ಕಳೆದುಕೊಂಡ ಬಹದ್ದೂರಶಹನು . . . ಆಲ್ವರ ರಾಜರಿಗೆ ಬರೆದ ಪತ್ರಗಳು (ಪ್ರಬಂಧ. iii, ಶೇಖನಗಳ ತಿರುಳು). **ಬಾದಶಾಹ :** ೧. ಟಿಪುಸುಲತಾನ ಬಾದಶಾಹ ಶಾಹಪನವರು (ಶೊಂಕಶಾ. ೧೯೩೪, ರಾಣಿಪಸ್ಕೂರ್. ೮೨-೦ ; ?). **ಬಾದಷಹ:** ೧. ಆ ವಿಗ್ರಹವು ದೆಹಲಿಯ ಬಾದಷಹನ ಮಗಳ ಬಳಿ ಇದ್ದಿತೆಂದೂ . . . ಐತಿಹ್ಯವಿದೆ (ಕಶಾಲ. ೧೬೮); ತಲೆದಿಂಬಿಗೆ ಕೈಗಳೆ ರಡನ್ನೂ ಊರಿ ಬೆನ್ನು ಕೊಟ್ಟು ಕುಳಿತಿದ್ದರು — ಹುಕ್ಕಾ ಎಳೆಯುತ್ತ ಮಲಗುತ್ತಿದ್ದ ಜಹಾಂಗೀರ ಬಾದಷಹನಂತೆ (ಮುಂಗಾಮು. ೫). **ಬಾದುಶ :** ೧. ಅರರೆ ಬಾದುಶ ಬಿದ್ದನೆಂದು ಮೊಗಲರೆಲ್ಲ ಮೊರದೆದ್ದು ಸುತ್ತಿ ಮುತ್ತಿದರು (ಸೌಂದಕಾ. ೭-೦೧೪).

[← ಪಾರ. ಪಾದ್‌ಶಾ, ಪಾದ್‌ಶಾಹ್, ಬಾದ್‌ಶಾಹ್ ; ಹಿಂ. ಪಾಚ್ಛಾ, ಪಾತಶಾಹ್, ಪಾತಸಾ, ಪಾತಸಾಹ್, ಪಾದಶಾ, ಪಾದಶಾಹ್, ಬಾದಶಾಹ್ ; ಮರಾ. ಪಾಚ್ಚಾ, ಪಾಛಾ, ಪಾತಶಹಾ, ಪಾತಶಾಹ್, ಪಾದಶಹಾ, ಬಾಚ್ಛಾ, ಬಾದಶಹಾ]

ಪಾತಷಹ 'ಪಾತಶಹ' ನೋ.

ಪಾತಷಾಹ 'ಪಾತಶಹ' ನೋ.

ಪಾತಷಾಹಿ, ಪಾದಶಾಯಿ, ಬಾದಷಾಹಿ (ಗು). ೧. ಬಾದಷಹನಿಗೆ ಸಂಬಂಧಿಸಿದ ; ಸುಲ್ತಾನನಿಗೆ ಸೇರಿದ : (ಕಿ). ೨. ಶ್ರೇಷ್ಠವಾದ ; ರಾಜಯೋಗ್ಯವಾದ : (ಕಿ). (ನಾ). ೩. ದೊರೆತನ ; ಪ್ರಭುತ್ವ : (ಕಿ). **ಪಾದಶಾಯಿ :** ೧. ಗವರ್ನರ್‌ಸಾಹೇಬರವರು ಮುಂಬಾಯಿಯಿಂದಾ ಪಾದಶಾಯಿ ರಿಜಿಮಿಟ್ಟು ಒಂದು . . . ಪೇಶ್ವೆಯವರ ಬಳಿಗೆ ಕಳುಹಿಸಿದಲ್ಲಿ (ರಾಶೇಂದ್ರ. ೧೬೪). **ಬಾದಷಾಹಿ :** ೧. ಯಾವರ ಚಿಕ್ಕ ತಮ್ಮ ಅಲ್ಲಿಸಾಬರು ದೊಡ್ಡಬಳ್ಳಾಪುರದಲ್ಲಿ ಬಾದಷಾಹಿ ಸನ್ನದಿನ ಕಿಲ್ಲೆದಾರ ಬಳಿಯಲ್ಲಿ ನೌಕರಿ ನಿಂತರು (ಹೈದರ. ೨೨); ಈ ದೊರೆಯ ಬೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ . . . ಶಿವರಾಯಿ ಹೊನ್ನು ಬಾದಷಾಹಿ ಹೊನ್ನು (ಸತ್ರಪಾ. ೧೦೪).

[← ಪಾರ. ಪಾದ್‌ಶಾಹೀ, ಬಾದ್‌ಶಾಹೀ ; ಹಿಂ. ಪಾತಶಾಹೀ, ಪಾದಶಾಹೀ, ಬಾದಶಾಹೀ ; ಮರಾ. ಬಾದಶಾಹೀ, ಬಾಚ್ಛಾಈ]

ಪಾತಳಿ (ನಾ). ೧. ಸಮತಟ್ಟಾದ ಮೇಲ್ಭಾಗ, — ಮೇಲ್ಮೈ : ಹಗ್ಗ ಅಲುಗಾಡಿದ್ದರಿಂದ ನೀರ ಪಾತಳಿಯ ಮೇಲೆ ಸಣ್ಣ ತೆರೆ ಎದ್ದಿತು (ಮೂರುದಾ. ೧೦೪); ಪ್ರತಿ ಕೊರೆಕಂಬಿಯೂ ಪಾತಳಿಯಿಂದ (Surface) ಒಳಬಾಗಿದ ಒಂದು ಸಣ್ಣ ಚೀಲದಲ್ಲಿದ್ದು ಒಳಸ್ಥಾನವನ್ನು ಪಡೆದಿದೆ (ಕೀಟಿಪ. ೮೪) ; ಸಬ್‌ಮರೀನು ಇನ್ನೂ ನೀರಿನ ಪಾತಳಿಯ ಮೇಲೆಯೇ ನಡೆದಿತ್ತು (ಕನಸಿ. ೫೨). ೨. ಮಟ್ಟ ; ಹಂತ : ಧಾರವಾಡವು ಸಮುದ್ರ ಪಾತಳಿಯಿಂದ ೨೫೮೦ ಪೂಟು ಎತ್ತರದ ಮೇಲೆ ಇದೆ (ಕೀಟಿಪ. ೨೩) ; ಬರಿಯೆ ತರ್ಕದ ಪಾತಳಿಯಲ್ಲಿ ಶೋಭಿಸಬಹುದಾದ ಈ ಶಬ್ದಗಳಿಗೆ ವ್ಯವಹಾರಲೋಕದಲ್ಲಿ ಸ್ಥಾನವಿದೆಯೆ ? (ಮೂರುದಾ. ೧೩೫).

[← ಮರಾ. ಪಾತಳೀ]

ಪಾತಳು 'ಪತ್ತಲ' ನೋ.

ಪಾತಾಲ, ಪಾತಾಳ (ನಾ). ೧. ಭೂಮಿಯ ಕೆಳಗಿನ ಏಳು ಲೋಕಗಳಲ್ಲಿ ಒಂದು ; ನಾಗಲೋಕ : "ಅತಲಃ . . . . ತಳಾತಲಃ, ಪಾತಾಲಃ — ಈ ೭ ಅಡಿಯಣ ಲೋಕಂ" (ಕಾಶಕ್ಕ. ೨೬೧); ಸ್ವರ್ಗ ಮರ್ತ್ಯ ಪಾತಾಲ [ಪಾಠಾಂ. ೪] ದೊಳಗುಳ್ಳಖಿಳಶಬ್ದಪ್ರವರ್ತನೆಯನಭಿಧಾನಮಾಗಿ ಪೇಳಿಕ್ಕೆಂ (ಮಂಗರಾ. ೨-೩). ೨. ಸಮುದ್ರದ ಒಳಗಿನ ಬೆಂಕಿ ವಡಬಾಗ್ನಿ. **ಪಾತಾಳ :** ೧. "ಬಡಬಾಮುಖಂ . . . ನಾಗಲೋಕಂ, ರಸಾತಳಂ — ಈ ೬ ಪಾತಾಳಂ" (ಹಲಾಮು. ೧೦೩-೧) ; ಪಾತಾಳದಿಂದತ್ತ ಮಾತ ಬಲ್ಲವರಿಲ್ಲ ಗಗನದಿಂದ ಮೇಲೆ ಅನುಭಾವ ತಾನಿಲ್ಲ (ಅವನಂ. ೧೫-೫೮) ; ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೆ ದೇವ (ಬಸವ. ೫೨೮) ; ಪಾತಾಳಂ ನಿಜಮೂಲವ್ರಾತದ ಸೀಮಂ ವಿಯತ್ತಳಂ ಶಾಖಾಸಂಘಾತದ ಸೀಮವೆನಲ್ಕಾ ಚೂತಮಹೀಜಾತಮನ್ನತಿಯ ನೇವೊಗಳಿಕ್ಕೆಂ (ಕುಸುಮಾ. ೦-೦೦೦). ೨. "ಪಾತಾಳಂ ವಡಬಾಗ್ನಿ ರಸಾತಳಮೆಂಬೆರಡುಮಱಿಗೆ" (ವಸ್ತುಕೋ. ೧೨೧-೨೩). ೩. (ಆಲಂ) ಬಹಳ ಆಳವಾದ ಸ್ಥಳ : ಜೂನ್ ತಿಂಗಳಲ್ಲಿ ಎಲ್ಲ ಬಾವಿಗಳ ನೀರೂ ಪಾತಾಳ ಕಂಡವು (ಮೋಜಾಶ್ರ. ೧೨೫) ; ಬೇಸಿಗೆಯಲ್ಲಿ ಅವರ ಬಾವಿಯಲ್ಲಿ ನೀರು ಪಾತಾಳದಲ್ಲಿರುತ್ತದೆ (ರೂಢಿ). 'ಪಾತಾಳಖಾತ' ಪರಾ. ೪. [ಜ್ಯೋತಿ] ಲಗ್ನದಿಂದ ನಾಲ್ಕನೆಯ ಸ್ಥಾನ.—ರಾಶಿ : ವ್ಯವಹರಿಪ ಸಂಜ್ಞೆ ಚತುರಸ್ರವದೆಂದಷ್ಟದು ಚತುರ್ಥಗೃಹಕೆ ಚತುರ್ಥಕ್ಕೆ ಪಲಂ ಮತ್ತಂ ಪಾತಾಳ ಕೇಶ್ಮ ಸುಖ ಹಿಬುಕ ಬಂಧುವೆಂದೈದು ಪೆಸರ್ (ಜಾತತಿ. ೧-೩೪); ಶೀತಮಯೂಖಾಪತ್ಯನಿಂದಂ ತನುಧನ ದಶಧರ್ಮಾಯ ಪಾತಾಳ ಷಟ್‌ಪಂಚಮದೊಳ್ ಧಾತ್ರೀಜನಿಂ ಕೇಂದ್ರ ನಿಧನ ನಯನಾಯಂಗಳೊಳ್ ಪೂಜ್ಯನಕ್ಕುಂ (ಜಾತತಿ. ೧೦-೧೦). ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ಸಪ್ತ, ಭಯ, ಅದ್ರಿ, ಗಿರಿ, ಮುನಿ, ಪಾತಾಳ . . . ದ್ವೀಪ, ಅಶ್ವ ಇಂತಿನಿತುಂ ೭ಕ್ಕೆ ಹೆಸರು (ವ್ಯವಹಾ. ೧೦-೨೭).

ಪಾತಾಳಹೋಮ = (ಆಲಂ) ರಹಸ್ಯಕಾರ್ಯಾಚರಣೆ : ಲಕ್ಷ್ಮಿಯ ಒಡವೆಗಳನ್ನೆಲ್ಲಾ ತಂದಿರುವೆ . . . ಅದಕ್ಕೆ ಇಷ್ಟು ಪಾತಾಳಹೋಮವೇ? (ಲಕ್ಷ್ಮೀಪ್ರ. ೫೯). [ಸಂ.]

ಪಾತಾಲಗಂಗೆ, ಪಾತಾಳಗಂಗೆ (ನಾ). ಶ್ರೀಶೈಲದ ಬೆಟ್ಟದ ಬುಡದಲ್ಲಿ, ಆಳದಲ್ಲಿ ಪ್ರವಹಿಸುವ ನದಿ : ಮೇಲನೇಜಿದ ಮನುಜರಂ ಪಾತಾಲ[ಪಾಠಾಂ. ೪]ಗಂಗೆಯೊಳಾಡಿಸುತ್ತನುಕೂಲವಾಗಿಹ ತುಂಗಗಂಗಾ ವೃಕ್ಷಪಂಕ್ತಿಗಳ (ಬಸಪು. ೧೯-೫೫). **ಪಾತಾಳಗಂಗೆ :** ಶ್ರೀಶೈಲ ಕಂಧರದೊಳಾವಗಂ ಸುರಗಂಗೆ ಪಾತಾಳಗಂಗೆ ಸರಸತಿಯೆಂಬ ಪರಮ ನದಿಗಳ ಸಂಗದುದೆ ಶೋಭಿಪಾ ವಾಹನಾಖ್ಯ ತೀರ್ಥಕ್ಕೆ ಮುದದಿಂ ನರಸಿಂಹಬಿಲದಿಂದೆ ಬಂದು (ಆರಾಪ. ೩-೧೩-೩೯). [ಪಾತಾಲ+ಗಂಗೆ$_2$]

ಪಾತಾಲಗಡ 'ಪಾತಾಲಗರಡಿ' ನೋ.

ಪಾತಾಲಗರಡಿ, ಪಾತಾಲಗಡ, ಪಾತಾಳಗಡ, ಪಾತಾಳಗಡೆ, ಪಾತಾಳಗರಡಿ. ಪಾತಾಳಗರುಡ$_1$, ಪಾತಾಳಗರುಡಿ (ನಾ). ೧. ಬಾವಿ ಮುಂತಾದ ಜಲಾಶಯಗಳಲ್ಲಿ ಬಿದ್ದ ವಸ್ತುವನ್ನು ಮೇಲಕ್ಕೆ ತೆಗೆಯಲು ಬಳಸುವ, ಕೊಂಡಿಗಳುಳ್ಳ ಒಂದು ಬಗೆಯ ಕಬ್ಬಿಣದ ಸಾಧನ: ಪಾತಾಲಗರಡಿ=ನೀರಲ್ಲಿ ಮುಳುಗಿದ ಸಾಮಾನುಗಳನ್ನು ಎತ್ತುವ ಉಕ್ಕಿನ ಸರಪಳಿ" (ಜಾನಕೋ. ೧೫). **ಪಾತಾಲಗಡ :** ೧. "ಪಾತಾಂಗಡ= ನೀರಲ್ಲಿ ಮುಳುಗಿದ ಸಾಮಾನುಗಳನ್ನು ಎತ್ತುವ ಉಕ್ಕಿನ ಸರಳಿ"(ಜಾನಕೋ. ೧೫). **ಪಾತಾಳಗಡ :** ೧. ಆ ಸರಪಳಿಯ ತುದಿಗೆ ಕಬ್ಬಿಣದೊಂದು ಪಾತಾಳಗಡ ಹಚ್ಚಿರುತ್ತದೆ (ಮುಂಬಯಿ. ೩-೧೧೩); ಎಷ್ಟೋ ಸಲ ಆತ್ಮ ಹತ್ಯೆಯ ವಿಚಾರವು ಬಾವಿಯಲ್ಲಿಯ ಪಾತಾಳಗಡದಂತೆ ತಲೆಯಲ್ಲಿ ಅಸ್ಪಷ್ಟವಾಗಿ ಸುಳಿದಾಡುತ್ತಿತ್ತು (ಮುಕ್ತಿ. ೩೬). **ಪಾತಾಳಗಡ:** ೧. ಕೆಲಸ ಯಾರದೇ ಪ್ರೇರಣೆಯಿಂದವರು ನಿರ್ವಹಿಸಿರಲಿ . . . ಅವರ ಇತಿ ಮಿತಿ

ಯನ್ನು 'ಪಾತಾಳಗಡೆ' ಹಾಕಿ ಮಥಿಸುತ್ತಾರೆ (ಹಕ್ಕಿಸೋ. ೯). **ಪಾತಾಳಗರಡಿ :** ೧. ಮುಂಬಾಯಿಶಹರದಲ್ಲಿ ಆಗುವ ಜೀನಸಗಳ ವಿವರವು ನಮಗೆ ಕಂಡು ಬಂದ ಮಟ್ಟಿಗೆ ಕೆಳಗೆ ಬರಿಯಲ್ಪಟ್ಟಿದೆ. ೧. ಅಡಕೊತ್ತಗಳು . . . ೨೩. ಪಾತಾಳಗರಡಿ (ನೀರಿನಲ್ಲಿ ಹಾಕಿ ಪಳಗಿನ ಸಾಮಾನ ತೆಗಿಯುವದು) (ಮುಂಬಪ್ಪಾ. ೦೦೦); ಆಕೆ ಬಯಸಿದ ವಸ್ತು, ಹಣ್ಣುಹಂಪಲು, ಮಾಂಸ ಯಾವುದನ್ನೆಲ್ಲ ಆತ ಆಕೆಗೆ ಒದಗಿಸಿದ್ದಾನೆ. ಪಾತಾಳಗರಡಿ ಹಾಕಿಯಾದರೂ ತಂದುಕೊಟ್ಟಿದ್ದಾನೆ (ಬಸಸಿ. ೧೬೯). ೨. (ಆಲಂ) ರಹಸ್ಯವನ್ನು ಹೊರಗೆ ತೆಗೆಯುವ ವ್ಯಕ್ತಿ : ಅಚ್ಚುತಪ್ಪನವರು ಹೆಂಡತಿಯ ಮಾತಿಗೆ ತಲೆದೂಗಿ, "ನೀನು ಪಾತಾಳಗರಡಿ ಕಣೇ ರಮಾ" . . . ಎಂದರು (ಗೃಹಲ. ೧೦೪). **ಪಾತಾಳಗರುಡ$_1$:** ೨. ನಾಗಯ್ಯಸೆಟ್ಟರೊ! ಪಾತಾಳಗರುಡ ಅವರು (ಹಹಸ. ೬೫). **ಪಾತಾಳಗರುಡಿ :** ೧. ಪಾತಾಳಗರುಡಿಯ ಕೊಂಡಿಗೆ ಸಿಕ್ಕಿಕೊಂಡ ವಸ್ತು ನಡುವೆಯೇ ತಪ್ಪಿಸಿಕೊಂಡಿತ್ತು (ಮೂಕುರಾ. ೦೦೪).

[←ತಮಿ. ಪಾತಾಳಕ್ಕರಣ್ಣಿ]

ಪಾತಾಲನಿಲಯ (ನಾ). ಪಾತಾಳದಲ್ಲಿ ನೆಲಸಿರುವವನು ; ದೈತ್ಯ : "ಅಸುರಃ, ದಾನವಃ . . . ಪಾತಾಲನಿಲಯಃ (ಸ್ಮೃತಾಃ)—ಈ ರ ಅಸುರರ ಪೆಸರ್" (ಹಲಾಯು. ೩-೫). [ಪಾತಾಲ+ನಿಲಯ]

ಪಾತಾಲಲೋಕ, ಪಾತಾಳಲೋಕ (ನಾ). ಭೂಮಿಯ ಕೆಳಗಿನ ಏಳು ಲೋಕಗಳಲ್ಲಿ ಒಂದು; ನಾಗಲೋಕ; ಪಾತಾಳ: "ಪಾತಾಳಮೆನಲು . . . ರಸಾತಲಮೆನಲ್ಕಧೋಭುವನಮೆಂದೆನಲು ಪಾತಾಲ[ಪಾತಾಂ. ೪]ಲೋಕಕ್ಕೆ ನಾಮಂ" (ಮಂಗರಾ. ೧೧೬-೦). **ಪಾತಾಳಲೋಕ :** ಪಾತಾಳಲೋಕ ವಿಜಯಂ ಮಾತಂಗಕನಿಷ್ಟಸಿದ್ಧಿಯಾಯೆರಡುಂ ಮತ್ಪ್ರೀತಿಸಕಲಾವನೀವಿಖ್ಯಾತಿ ಯೆನುತ್ತವನಿಪಾಲತನಯಂ ನಲಿದಂ (ದಕಳು. ೩-೩೨) ; ಪರಮ ಜಂಗಮದಲ್ಲಿ ಹದಿನಾಲ್ಕುಲೋಕಂಗಳಡಗಿರ್ಪವು ನೋಡಾ ಅದೆಂತೆಂದೊಡೆ ಪಾದತಳದಲ್ಲಿ ಅತಳಲೋಕ . . . ಕಟಿಯಲ್ಲಿ ಪಾತಾಳಲೋಕ (ಅಬಂಡೇ. ೦೪೧-೧೨೪). [ಪಾತಾಲ+ಲೋಕ]

ಪಾತಾಳ 'ಪಾತಾಲ' ನೋ.

ಪಾತಾಳಖಾತ (ನಾ). ಬಹಳ ಆಳವಾದ ಕಂದಕ : ಉರುಳಿದೆನೊ ಪಾತಾಳಖಾತಕೆ ಎಂದು ಎದೆಯೊಳಗಾಗಿರೆ . . . ಯಾವ ಕೈಯೋ ಕಾಯುತಿದೆ ಈ ಮರುಳುಮನವನು ಪಂಚಿಸಿ (ಹಾಡುಪಾ. ೫೨-೨೦); ಅನಂತ್ಯದೊಂದು ನವಜಲಧಿಯಲ್ಲಿ ಹೊರಟಿಹುದು ನನ್ನ ನಾವೆ . . . ಮಸುಕು ಮಸುಕು ಹಿಂದೆಲ್ಲ ಮುಂದೆ ಪಾತಾಳಖಾತಸಿಂಧು(ಸ್ವಕ್ಷಾಂ. ೦೨-೩).

[ಪಾತಾಳ (=ಪಾತಾಲ)+ಖಾತ$_1$]

ಪಾತಾಳಗಂಗೆ 'ಪಾತಾಲಗಂಗೆ' ನೋ.

ಪಾತಾಳಗಂಧಿ (ನಾ). ಹಾವಿನ ವಿಷವನ್ನು ಪರಿಹರಿಸುವ ಒಂದು ಬಗೆಯ ಮೂಲಿಕೆ : ಸೂತ್ರನಾಭಿ, ಸರ್ಪಗಂಧಿ, ಪಾತಾಳಗಂಧಿ, ಶಿವನಾಭಿಬಳ್ಳಿ (ಮೃತಿಗಿ. ೬೬-೧೩೪೦).

[ಪಾತಾಳ (=ಪಾತಾಲ)+ಗಂಧಿ]

ಪಾತಾಳಗಡ 'ಪಾತಾಲಗರಡಿ' ನೋ.

ಪಾತಾಳಗಡೆ 'ಪಾತಾಲಗರಡಿ' ನೋ.

ಪಾತಾಳಗರಡಿ 'ಪಾತಾಲಗರಡಿ' ನೋ.

ಪಾತಾಳಗರುಡ$_1$ 'ಪಾತಾಲಗರಡಿ' ನೋ.

ಪಾತಾಳಗರುಡ$_2$ (ನಾ). ಹಾವಿನ ವಿಷವನ್ನು ಪರಿಹರಿಸುವ ಒಂದು ಬಗೆಯ ಮೂಲಿಕೆ ; ಸರ್ಪಾಕ್ಷಿ: ಪಾತಾಳಗರುಡನ ಬೇರಂ ಆದಿತ್ಯವಾರ ಮೋನದಿಂದ ತಂದು . . . ಮುಟ್ಟಿಸೆ ಸ್ತ್ರೀವಶ್ಯ (ಬಿಸ್ಕಿ. ೨೦೭) ; ಪಾತಾಳಗರುಡಸಮೂಲಮಂ ಚೂರ್ಣಂ ಮಾಡಿ ಹಸುವಿನ ತುಪ್ಪದಲ್ಲಿ ಕಲಸಿ ಮೆಲ್ಲಲು ಬಹುಮೂತ್ರಂ ನಿಲ್ಲುವುದು (ಸಳಪ್ಯ. ೩೮೬). 'ಗರುಡಪಾತಾಳ' ಪರಾ. [<ಸಂ. ಪಾತಾಲಗರುಡೀ]

ಪಾತಾಳಗರುಡಿ 'ಪಾತಾಲಗರಡಿ' ನೋ.

ಪಾತಾಳತಳ (ನಾ). ಪಾತಾಳಪ್ರದೇಶ : ಪಾತಾಳತಳಮನೆಯ್ದುದ ಖಾತಂ ಸುರಪುರಮನೆಯ್ದುದಟ್ಟಳೆ ಪೆಂಪು ದ್ಯೋತಿಸೆ ಪುರವಿಟ್ಟುದು ಭೋಗಾ ಶಯದ ಭೋಗವತಿಯನಮರಾವತಿಯಂ (ಅಪಪು. ೨-೦೬); ವಿಲಸಿತ ಮಹೋಕ್ಷವಾಹನ ಮಹೋಕ್ಷಪಾತಕರಲಘು ಪಾತಾಳತಳವಾಸಿ ರಕ್ತಾಕ್ಷರುಂ ಲುಲಿತ ತ್ರಿಯಕ್ಷಂ ಸಹಸ್ರೋದರಂ ದೀರ್ಘಲೋಚನಂ ಹ್ರಸ್ವಕಂಠಂ (ಅಲಾಸ. ೪-೪-೨೩).

[ಪಾತಾಳ (=ಪಾತಾಲ)+ತಳ (=ತಲ]

ಪಾತಾಳನಿವಾಸಿ (ನಾ). ಪಾತಾಳದಲ್ಲಿ ನೆಲಸಿರುವವನು ; ರಕ್ಕಸ ದೈತ್ಯ : "ದನುಜರ್ ದೈತೇಯರ್ . . . ಪಾತಾಳನಿವಾಸಿಗಳ್ ಸುರದ್ವಿಷರೆನೆ ದೈತ್ಯರ್" (ಪಸ್ತುಕೋ. ೬-೩೨).

[ಪಾತಾಳ (=ಪಾತಾಲ)+ನಿವಾಸಿ]

ಪಾತಾಳಬಾಣ (ನಾ). (ನೆಲವನ್ನು ಭೇದಿಸಿ) ಪಾತಾಳದ ವರೆಗೆ ಹೋಗುವ ಒಂದು ಬಗೆಯ ಬಾಣ : ಆಕಾಶಗಾಮಿನಿ ಸೊರಬಾಣ ನೊಪ್ಪರಿ ಪಾತಾಳಬಾಣ ವಡಕುಬಾಣ ಮಾಯೂರಿ ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿಸಾಧನವಿಶೇಷಂಗಳಿಂದಲುಂ (ಬಿಸೇಳ. ೨೬೩).

[ಪಾತಾಳ (=ಪಾತಾಲ)+ಬಾಣ$_2$]

ಪಾತಾಳಮರ (ನಾ). ಒಂದು ಬಗೆಯ ಮರ : ಪೇನಾರಿಮರ, ಪೀನಾರಿ, ಪಾತಾಳಮರ, ಭೇತಾಳ, ತೊಕಡಕನೆ ಮರ, ಭಾತಾಳ (ಮೃತಿಗಿ. ೭೨-೦೪೭೨). [ಪಾತಾಳ$_0$+ಮರ$_1$]

ಪಾತಾಳಯಂತ್ರ (ನಾ). ಔಷಧಿಗಳನ್ನು ಧಟ್ಟಿ ಇಳಿಸಲು ಬಳಸುವ, ಭೂಮಿಯಲ್ಲಿ ಹುಗಿದಿಡುವ ಒಂದು ಬಗೆಯ ಯಂತ್ರ : ಜೀಪಾಳದ ಬೀಜವಂ ಕಹಿಸೋರೆಯ ಬೀಜ ಸಹ ಪಾತಾಳಯಂತ್ರದಿಂ ತೈಲವ ತೆಗೆದು . . . ಲೇಪವ ಮಾಡೆ ಆಮಾಂತ್ಯ ವಿರೇಚನಮಕ್ಕುಂ (ಸಳಪ್ಯ. ೩೦೫).

[ಪಾತಾಳ (=ಪಾತಾಲ)+ಯಂತ್ರ]

ಪಾತಾಳಯಂತ್ರಿ (ನಾ). ಗುಪ್ತಕಾರಸ್ಥಾನ ಮಾಡುವ ವ್ಯಕ್ತಿ : ನೀನು ಇಂಥಾ ಪಾತಾಳಯಂತ್ರಿ ಎಂಬುವು ನಮಗೆ ತಿಳಿದಿರಲಿಲ್ಲ (ಅಪ್ಯಾಪ. ೮೮); ಪಾತಾಳಯಂತ್ರಿಗಳಾದ ಪೋಲೀಸರು ಪೂರ್ವ ಪಶ್ಚಿಮಗಳನ್ನೊಂದು ಮಾಡುವಂತಹ ಪಾತಾಳಯಂತ್ರಿಗಳಿರುವರೆಂಬುದನ್ನು . . . ಕೇಳಿ ಅರಿತಿದ್ದರು (ಸ್ಕೂಲಿಬು. ೦೦೯). [←ಮರಾ. ಪಾತಾಲಯಂತ್ರೀ]

ಪಾತಾಳಲೋಕ 'ಪಾತಾಲಲೋಕ' ನೋ.

ಪಾತಾಳಸುಳಿ (ನಾ). ದನದ ಹೊಟ್ಟೆಯ ಕೆಳಭಾಗದಲ್ಲಿರುವ ಒಂದು ಬಗೆಯ ಕೆಟ್ಟ ಸುಳಿ : ದನಾ ಪರೀಕ್ಷೆ ಮಾಡೋವಾಗ ಹೀನಸುಳಿ, ಪಾತಾಳಸುಳಿ, ದಾವಣಸುಳಿ . . . ಇವೆಲ್ಲಾನೂ ಚಂದಾಗಿ ನೋಡಿ ಒಳ್ಳೇ ಸುಳಿ ಇರೋದು ತತ್ತಾಲಾ (ಹುಸ್ಕಿಹ. ೦೬೫).

[ಪಾತಾಳ (=ಪಾತಾಲ)+ಸುಳಿ$_2$ (<ಸುಳ್ಳಿ$_2$)]

ಪಾತಾಳಾಂಕಣ (ನಾ). ನೆಲಮನೆಯ ಅಂಗಳ ; ಭೂಮಿಯ ಮಟ್ಟದಿಂದ ಕೆಳಗಿನ ಅಂಗಳ : ಪಾಳೆಯಗಾರರ ಕಾಲದಲ್ಲಿ ನೆಲವತ್ತು ಸ್ತಂಭಗಳ ಪಾತಾಳಾಂಕಣ ರಚಿತವಾಯಿತು (ಹೊಯ್ಸಪಾ. ೯೨) ; ನೀನು ದನ ಕಾಯುವುದಕ್ಕೂ ನಾಲಾಹಿಕ್ ಎನ್ನಿಸಿಕೊಂಡು ಮತ್ತೆ ಬಸವಣ್ಣದೇವರ ಗುಡಿಯ ಪಾತಾಳಾಂಕಣವನ್ನು ಹಿಡಿದಿದ್ದ (ಪಕುಮ. ೦).

[ಪಾತಾಳ (=ಪಾತಾಲ)+ಅಂಕಣ]

ಪಾತಾಳಿ (ನಾ). ಪಾತಾಳಲೋಕದ ಒಡೆಯ ; ವಾಸುಕಿ : ದೀನನೇ ಶರನಿಕರದಲಿ ಪವಮಾನಜನೊ ಪಾತಾಳಿಯೋ[ಪಾತಾಂ. ಪವಮಾನತನುಜ

ನೊ ಪಾವಕನೊ]ಕಲಿ ವೈನತೇಯನೊ ಕರ್ಣನೋ ನಾವಱಿಯೆವು (ಕುಮ್ಮಾಕ. ೧೨-೨೫). [ಸಂ. ಪಾತಾಲಿನ್]

ಪಾತಿ₁, ಪಾತೆ₁ (ನಾ). ೧. ಮರ, ಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ ; ಆಲವಾಲ : ಶರತ್ಕಾಲದಲ್ಲಿ ಮಳೆಯಿಲ್ಲದೆ ಸ್ವಲ್ಪ ಬಾಡುವ ಸಮಯದಲ್ಲಿ ತರುಗಳ ಪಾತಿಯಲ್ಲಿ ತುಂಬಿದ ಜಲವು ಯಿಂಗಿ ಚನ್ನಾಗಿ ನೀರು ನಿಲ್ಲುವ ಪರಿಯಂತವು ಜಲವಂ ಕಟಬೇಕು (ಸೌಗಂಧಿ. ೪೨೭-೯); ಜನ . . . ಸಸಿಗಳಿಗೆ ಹತ್ತಿರುವ ಹುಳುಗಳನ್ನು ಬಿಡಿಸುವುದು. ಅವುಗಳ ಪಾತಿ ಸರಿಮಾಡಿ ಗೊಬ್ಬರ ಹಾಕುವುದು— ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದರು (ಕಡ್ಯಾರ. ೧). ೨. ಬೀಜ ಬಿತ್ತಲು ಮಾಡಿರುವ ಮಡಿ : ಓತು ಮಾಡುವ ಲಿಂಗವಂತರ ಭಾತಿಗಳು ಶಿವಭಕ್ತಿ ಬೀಜಕೆ ಪಾತಿಗಳು ಪರಮಾರ್ಥನಿಜಯೋಗಪ್ರಸೂತಿಗಳು (ಬಸಪು. ೫೭-೯೭); ಇಂತಹ ಎರಡು ಬೀಜಗಳನ್ನು ಒಂದೇ ಹೊಲದ ಎರಡು ಪಾತಿಗಳಲ್ಲಿ ನೆಟ್ಟರೆ ಕೆಲವು ಕಾಲದ ನಂತರ ಒಂದು ಅರಳಿಮರವಾಗಿಯೂ ಮತ್ತೊಂದು ಆಲದ ಮರವಾಗಿಯೂ ಪ್ರಕಟವಾಗುತ್ತವೆ (ಜೀವಾತ್ಮ. ೧೬೪); ಸೊಪ್ಪಿನ ಬೀಜ ಬಿತ್ತುವುದಾದರೆ ಪಾತಿ ಮಾಡಬೇಕು (ತರಪ. ೬೭). **ಪಾತೆ₁** : ೧. ಯಾತದ ತುದಿಯಲ್ಲಿ ಕಟ್ಟಿದ ಮಡಕೆಯಂತೆ ಅದ ನೀತಿವಂತರು ಮೆಟ್ಟಿದಡೆ ಪಾತಾಳದ ಉದಕವ ತಂದು ಪಾತೆಗೆ ಹರಹಿದ ತೆಱನಂತೆ (ಮೋಳಿಮಾ. ೧೦೪-೪೦೫) ; ಜಲವನದಾವಳೀಂಟಳೆರೆದಲ್ಲದೆ ನಿಮ್ಮಯ ಪಾತೆಗಂಬುವಂ (ಶಾಳುಂತ. ೫೩-೮೭); ಸೀತೆ . . . ಹತ್ತಿಗಿಡದ ಪಾತೆಯೊಳಕ್ಕೆ ಧೊಪ್ಪನೆ ಬಿದ್ದಳು (ಅವತಂ. ೨೦೭). ೨. ಅದೇ ಸಂಸಾರಪಾತೆಯಲ್ಲಿ ಪುಟ್ಟದಾದ ಒಂದು ಗುಲಾಬಿಯು ಉದ್ಭವವಾಗಿ (ದಿನಾರಿ. ೮).

[ದೇ.॥ ತಮಿ. ಮಲ. ಪಾತ್ತಿ ; ತುಳು. ಪಾತಿ ; ತೆಲು. ಪಾದಿ. ಪಾದು]

ಪಾತಿ₂ (ನಾ). ಒಬ್ಬರು ಕುಳಿತುಕೊಳ್ಳುವಂತಹ ದೋಣಿ : ಚಿಕ್ಕ ದೋಣಿ : ಶಾನುಭಾಗರು ದೋಣಿಯವನೊಬ್ಬನನ್ನು ಕರೆದು 'ಬೆಳ್ಳ, ಕೋಡಿಗೆ ಪಾತಿಯನ್ನು ಹಿಡಿ ನೋಡುವ' ಎಂದರು (ಮರಸು. ೪೭೬) : ದೋಣಿ ಪಾತಿ ಹರಿಗೋಲು ಅಲ್ಲು ಇಲ್ಲು ಎಲ್ಲೆಲ್ಲೂ ಕಾಣಲಿಲ್ಲ ಈತನು (ಪಡಪಂ. ೬೮-೯); ಎಂತಹ ಸೆಳೆತಕ್ಕೂ ತಮ್ಮ ಪುಟ್ಟ ದೋಣಿ, ಪಾತಿಗಳನ್ನು ಒಯ್ಯಬಲ್ಲರು (ಬಾಲಪ್ರ. I. ೩೮೩). 'ಪಾತಿಗ' ಪರಾ.

[ದೇ.॥ ತಮಿ. ಪಾತೈ ; ತುಳು. ಪಾತಿ]

ಪಾತಿಗ (ನಾ). ದೋಣಿಯನ್ನು ನಡೆಸುವವನು : ಮುನ್ನ ಹುಟ್ಟನರಿಯದನಳವೆ ನನ್ನ ಹುಟ್ಟನಿಕ್ಕಲು, ಪಾತಿಗ ? (ಗಳಿಪಂ. ೫೫-೨೪).

[ಪಾತಿ₂+—ಗ₂]

ಪಾತಿತ (ಗು). ಬೀಳುವಂತೆ ಮಾಡಿದ ; ಬೀಳಿಸಿದ ; ಕೆಡವಿದ : ಪಾತಿತದ್ವಿಪಪತಾಕಂ ಕಾಂ[ದಿ]ಶೀಕಂ ಭಯಾಕುಳಿತಾನೀಕನಪಾಸ್ತವಿಕ್ರಮಾಗುಣೋದ್ರೇಕಂ (ಸೌಇಇ. XX. ೨೧-೨೬; 1010); ಆತನನುಜಂ ಜಗದ್ವಿಖ್ಯಾತಂ ಶ್ರೀ[ಬಾ]ಚಿರಾಜದಣ್ಣಾಧೀಶಂ ಪಾತಿತಸಮಸ್ತವೀರಾರಾತಿಬಲಂ (ಕಇಅ. ೪-೨-೧೦೨; 1058). [ಸಂ.]

ಪಾತಿತ್ಯ (ನಾ). ಅಧಃಪತನ : ದುರ್ಗತಿ : ಕುಂಟಣಿವಿದ್ಯೆಯಲ್ಲಿ ವಾರಂಗತಳಾದ ಆ ಹೆಣ್ಣು ತನ್ನ ಸಖಿಯನ್ನು ತಿದ್ದುವ ಬದಲು . . . ಪಾತಿತ್ಯದ ರಸಾತಳಕ್ಕೆ ನೂಕುತ್ತಾಳೆ (ಮಂಜುಂಡ. ೭೫). [ಸಂ.]

ಪಾತಿವ್ರತೆ (ನಾ). ಗಂಡನ ಸೇವೆಯೇ ವ್ರತವಾಗಿ ಉಳ್ಳವಳು : ಹದಿಬದೆ : ಪತಿವ್ರತೆ : ಭುವನದೊಳು ನಾವಹಗೆ ಪರಮೋತ್ಸವದ ಪಾತಿವ್ರತೆಯರಾಗಿಯು ಶಿವಚರಣ ಸದುಭಕ್ತಿಯುಕ್ತಿಯೊಳಾಚರಿಸುತಿಹೆವು (ಬಸಪು. ೨೫-೩೭). [ಸಂ. ಪಾತಿವ್ರತಾ]

ಪಾತಿವ್ರತ್ಯ (ನಾ). ಪತಿವ್ರತೆಯಾಗಿರುವಿಕೆ : ಪತಿವ್ರತಾಧರ್ಮ: ಅಹಹ ಪಾತಿವ್ರತ್ಯವತಿಸನ್ನಿಹಿತವಲ್ಲಾ ನಿನಗೆ ಹಲಬರ ಮಹಿಳೆ ಸತಿಯೆನಿಸುವರೆ (ಕುಮ್ಮಾಕ. ೨೨-೨೦); ತರುಣಿಯರುಗಳಲಾ ಅರುಂಧತಿ ವರಸರಸ್ವತಿಯನಿಬರೀಕೆಯು ಸರಿಗೆ ಹೋಲಿಸಬಹುದೆ ಪಾತಿವ್ರತ್ಯಶೀಲದಲಿ (ಕೌಶಿಲಾ. ೪೩-೫೦); ಪರಮಪಾತಿವ್ರತ್ಯ ರೂಪವು ನಾರಿಗೆ ಸ್ವರದಿಂಪು ರೂಪು ಕೋಗಿಲೆಗೆ (ಇಂಕಾಶ. ೧೫೫-೬೪). [ಸಂ.]

ಪಾತೀದಾರ (ನಾ). ಪಾಲುಗಾರ : ಭಾಗಸ್ಥ : ಹಿಸ್ಸೆದಾರ : ತಾನೇ ರಾಚಪ್ಪನನ್ನು ನಾಕಾಣೆಯ ಪಾತೀದಾರನನ್ನಾಗಿ ಮಾಡಿಕೊಂಡು ಕಂತ್ರಾಟದ ವ್ಯವಹಾರದಲ್ಲಿ ತೊಡಕಿಸಬೇಕೆಂದು ಯೋಚನೆ ಹಾಕಿದಾಗ. ತಾನೇ ಅವನ ಮನೆ ತನಕ ನಾಕೆಂಟು ಸಾರೆ ಎಡತಾಕಬೇಕಾಯಿತು (ದೀಪಹ.II. ೩೦೬).

[←ಮರಾ. ಪಾತೀದಾರ್]

ಪಾತುರ 'ಪಾತರ' ನೋ.

ಪಾತುರೆ (ನಾ). (ಕೊಡವಜನರು ಹುತ್ತರಿಹಬ್ಬದ ಕೋಲಾಟದಲ್ಲಿ ಬಳಸುವ) ಒಂದು ಬಗೆಯ ನಾಗಬೆತ್ತದ ಕೋಲು : ಆತನ ಸಂಗಡ ಪರಿಯಕಳಿ ಆಡುವುದೆಂದರೆ ಪಾತುರೆ ಹೊಯ್ಲುಗಳಿಂದ ತೊಡೆ ಮತ್ತು ಕಾಲುಗಳನ್ನು ಹುಣ್ಣು ಮಾಡಿಕೊಳ್ಳುವುದೆಂದು ಅವರೆಲ್ಲರೂ ಬಲ್ಲರು (ಹುಲಿಹಾ. ೧೨೬). [←ಕೊಡ. ಪಾತೂರೆ]

ಪಾತುರೆಕೋಲು (ನಾ). =ಪಾತುರೆ : ಕುಳಿತಿದ್ದವ ಎದ್ದು ನಿಂತು ಎಡಗೈಯಲ್ಲಿ ಪರ್ಯವನ್ನು ಹಿಡಿದು, ಬಲಗೈಯಲ್ಲಿ ಪಾತುರೆಕೋಲನ್ನು ಎತ್ತಿ ಕುಣಿಯಲಾರಂಭಿಸಿದ (ಹುಲಿಹಾ. ೧೨೬); ಚಿಮ್ಮಿ. ಪಾತುರೆಕೋಲ ಹೊಯ್ಲಿಗೆ ಕುಣಿದ ಪದ ಹೊರಹೊಮ್ಮಲಿ. (ಕಪಪು. ೬-೧೫೨).

[ಪಾತುರೆ+ಕೋಲು₁ (<ಕೋಲ್₁). / ಕೊಡ. ಪಾತೂರೆಕೋಲ್]

ಪಾತುಶಾಹ 'ಪಾತಶಹ' ನೋ.

ಪಾತೆ₁ 'ಪಾತಿ₁' ನೋ.

ಪಾತೆ₂, ಹಾತೆ (ನಾ). ೧. "ಪಾತರಗಿತ್ತಿ, ಚಿಟ್ಟೆ" (ಗಳಿಪಂ. ಟಿಪ್ಪಣಿ): ನಡುಚೈತ್ರದಿ ಮಸಗೆ ಗ್ರೀಷ್ಮ, ಬೇಯದೆ ಮನಸು ? ಮಗಚದೆ ಮೃಗ ಜಲದೊಳೂಷ್ಮಕಡಸಿದ ಕನಸು ? ಪಾತೆಯೆಲರ ಪಾತಿಯಿಲ್ಲ, ತರಗೆಲೆಗಳ ಬಟ್ಟೆಯೊಲ್ಲಡೇವುದೊ ನೆನಸು ? (ಗಳಿಪಂ. ೧೦೬-೧೯). **ಹಾತೆ** : ೧. ಮಿಡಿತೆ ಹಾತೆ ಹಾವುಗಳೆಲ್ಲ ಈ ಬೆಂಕಿಗೆ ಬದುಕಲುಂಟಾ ? (ಬಾಳಿಗಿ. ೫೦); ಗಿಡಗಳ ಸಂತಾನಕ್ರಮದಲ್ಲಿ, ಪರಾಗವಿನಿಮಯವು ಮುಖ್ಯವಾದ ಒಂದು ರೀತಿ. ಈ ಕೆಲಸವು ಹಾತೆ, ಹುಳು, ಹುಪ್ಪಟೆ ಮೊದಲಾದ ಕ್ರಿಮಿಕೀಟಗಳಿಂದ ಸಾಗುವದು (ಬಾಲಪ್ರ. II. ೭೮೦). ೨. ಜಿರಲೆ ಮುಂತಾದ ಕೀಟ : ಎಲುವ ಕಡಿವ ಶ್ವಾನ (ಸ್ವಾನ)ನಂತೆ ಹಾತೆಯ (ಹತ್ತಿಯ ಹುಳವ) ತಿಂಬ ಪಲ್ಲಿಯಂತೆ . . . ಭೋಗಕ್ಕೆ ಮಚ್ಚಿ ಹುಚ್ಚಾದಿರಲ್ಲಾ (ಸಿದ್ಧೇಪ. ೦೩೫-೪೦೦); ಮಾತಿನ ಮಾಲೆಯೂ ತೂತಾದ ಮಡಿಕೆಯೂ ಹಾತೆಯು ಹುಲ್ಲುಸರವೆಯು ಇವು ನಾಲ್ಕು ಏತಕ್ಕು ಬೇಡ (ಸರ್ವಜ್ಞ. ೧೪೯೭). ೩. ಪತಂಗ : ದೀಪದ ಹುಳು : 'ಹಾತೆಹುಳು' ಪರಾ.

[ದೇ.॥ ತುಳು. ಪಾತೆ, ಪಾಂತೆ ; ಕೊಡ. ಪಾತೆ]

ಪಾತೇಲಿ (ನಾ). ಆಗಲವಾದ ಬಾಯನ್ನುಳ್ಳ ಪಾತ್ರೆ: ಬೋಗುಣಿ; ಡಬರಿ : ದೊಡ್ಡ ದೊಡ್ಡ ಹಂಡೆಗಳು, ಕೊಳಗಗಳು, ಪಾತೇಲಿಗಳು ಆಗುವದಲ್ಲದೆ ನಿತ್ಯದ ಕೆಲಸಕ್ಕೆ ಬೇಕಾಗುವ . . . ಪಾತ್ರೆಗಳು ಹೇರಳವಾಗಿ ಹುಟ್ಟುತ್ತವೆ (ಕಶಾಗ. ೪೭೦) : ಒಲೆಯ ಮೇಲೆ ಒಂದು ದೊಡ್ಡ ಪಾತೇಲಿಯಲ್ಲಿ ಗುಳಂಬ ಬೇಯುತ್ತಿತ್ತು (ಸ್ಕೃತಿಜ. ೨೫೨).

[←ಮರಾ. ಪಾತೇಲಿ, ಪಾತೇಲೆ]

ಪಾತ್ರ (ನಾ). ೧. ದುಂಡಗಿರುವ ಸಣ್ಣ ಪಾತ್ರೆ : ಕುಡಿಯುವ ಬಟ್ಟಲು. ೨. ತಟ್ಟೆ, ಹರಿವಾಣ, ಮಡಕೆ, ಮುಂತಾದ ಪಾತ್ರೆ : ಭಾಂಡ : "ಪಾತ್ರಂ ಭಾಂಡಂ ಸ್ಥಾಲಿಯಮತ್ರಂ ಭಾಜನಮೆನಿಕ್ಕುಂ" (ಪಸ್ಸುಕೋ. ೪೯-೨೬) ; "ಅಮತ್ರಂ, ಭಾಜನಂ, ಪಾತ್ರಂ, ಸ್ಥಾಲಂ

—ಈ ೪ ತಳಿಗೆ" (ಹಲಾಯು. ೫೪ ೦೭೨); ಪಾತ್ರವಿದ್ದಷ್ಟೆ ನೀರು ಸಿಕ್ಕೀತು (ಗಾರ). ೩. ಪೂಜೆ, ಯಜ್ಞಯಾಗಾದಿಗಳಲ್ಲಿ ಬಳಸುವ ಪಾತ್ರೆ: "ಪೂಜೋಪಹಾರಮುವೆ ಬಲಿ ಭಾಜನಮುಪಯೋಗ್ಯಮಪ್ಪುದುಂ ತಾಂ ಪಾತ್ರಂ" (ಪಸ್ತುಕೋ. ೦೨೨-೨೪). ೪. ಎರಡು ದಡಗಳ ನಡುವಿನ ನೀರು ಹರಿಯುವ ಪ್ರದೇಶ; ನದಿ, ಹೊಳೆ ಮುಂತಾದುವುಗಳ ಒಡಲು: "ಎರಡು ತಡಿಯ ನಡು ಪಾತ್ರವೆಂಬುದು" (ಹಲಾಯು. ೦೦೦ - ೪೬); ಕಾವೇರಿಯು ಶಿವನ ಜಡೆಯಿಂದಿಳಿದ ಗಂಗೆಯ ಹಾಗೆ ಮೈತುಂಬಿ ಹರಿಯುತ್ತಿದ್ದಾಳೆ. ಪಾತ್ರ ತುಂಬಿ ದಡಗಳನ್ನು ಅಲೆಗಳು ಅಪ್ಪಳಿಸುತ್ತಿವೆ (ಸಿಕಲು. ೦೨೬). ೫. ನೇಗಿಲಿನಿಂದ ಉತ್ತ ಸಾಲು, —ಗೆರೆ: "ಪಾತ್ರಂ ಸೀತಾಗ್ರಮುಂ" (ಪಸ್ತುಕೋ. ೦೩೬-೦೦೬). ೬. ದೋಣಿ; ನಾವೆ: ಭವಾಂಭೋಧಿಯ ತಡಿಯನೆಯ್ದಿ ಸೆಮ್ಮಂ ನಯನಿಕ್ಷೇಪಪ್ರಮಾಣಪಾತ್ರದಿನರುಹಾ (ಶಂಕಾಮಾ. ೭-೪೦). ೭. ಯೋಗ್ಯತೆ; ಅರ್ಹತೆ: ಸ್ನೇಹವನೆಣಿಸನು ಗಣಿಸನು ಪಾತ್ರವನಂತೆ ದಶಾಂತರಗಳನು . . . ಉತ್ತಮನು (ಇಂಪಾಪ. ೭೦-೩೬). ೮. ಯೋಗ್ಯತೆಯನ್ನು ಹೊಂದಿರುವಂತಹುದು; ಯೋಗ್ಯವಾದುದು: ಈ ನೆಲ ಗೌರವ ಹಾಗೂ ಕೀರ್ತಿಗಳಿಗೆ ಪಾತ್ರವಾಗಿತ್ತೆಂದು ಅರ್ಥ (ಪ್ರಾಪಿಪ. ೬೨). ೯. ಯೋಗ್ಯನಾದವನು; ಅರ್ಹನಾದವನು: ಪಾತ್ರ ಅಪಾತ್ರವೆಂದು ಕಂಡರೆ ಶಿವನೆಂತು ಮೆಚ್ಚುವನು (ಬಸವ. ೬೦೪); ಅವರಿರವು ಸ್ವರ್ಗಗಿರ್ಗದ ಪದವಿಗಳ ಪಪಣೆ . . . ಎಂಬ ಕೀರ್ತಿಗೆ ತಾವೆ ಪಾತ್ರರಾಗಿರುತಿರಲು (ತಿರುಕ. ರೇ. ೯-೦೫). ೧೦. ದಾನ ಮುಂತಾದುವುಗಳನ್ನು ಪಡೆಯಲು ಯೋಗ್ಯನಾಗಿರುವವನು—ಅರ್ಹನಾಗಿರುವವನು: ಪಾತ್ರಮುತ್ತಮಮಧ್ಯಮಜಘನ್ಯಭೇದದಿಂ ತ್ರಿವಿಧಮಕ್ಕು (ಆದಿಪು. ೦೦-೯ ವ); ಉತ್ತಮಪಾತ್ರಂ ಸಕಲ ನಿವೃತ್ತಂ ವಿರತಾವಿರತನೆ ಮಧ್ಯಮಪಾತ್ರಂ ಮತ್ತಮಸಂಯುತ ಸಮ್ಯಗ್ವೃತ್ತಮನಂ ತಾಂ ಜಘನ್ಯಪಾತ್ರಮನಿಕ್ಕುಂ (ಶಂಪ್ರಪು. ೩-೩೨); ದಾನಕ್ಕರುಹರಿವರಲ್ಲೆಂದು ನೋಡದೆ ಮೂಢಮಾರ್ಗದಲಿ ಕರೆದಪಾತ್ರಂಗಿತ್ತು ಪಾತ್ರನ ಪರಿಹರಿಸಲೀ ಎರಡಱಿಂ ಸಂಹರಣವೈದುವುದಾರ್ಜಿಸಿದ ಧನವು (ಕುಪ್ಕಾಲಾ. ೩-೨೩); ಧನಿಕಂ ಕಳ್ದೊಡವೆಗೆ ಕಳ್ಳನ ಪಾತ್ರನಗೈದ ತೆರದೆ (ಶಾಕುಂತ. ೬೬-೦೨೦). ೧೧. ಸಾಹಿತ್ಯಕೃತಿಗಳಲ್ಲಿ ಸೃಷ್ಟಿಯಾಗುವ ವ್ಯಕ್ತಿ, ವಸ್ತು, ಸನ್ನಿವೇಶ ಮುಂತಾದುವು: ಅವನು ನಿರ್ಮಿಸಿದ ಪ್ರತಿಯೊಂದು ಪಾತ್ರಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ (ರರ್ಮಾಸಾ. ೭೪); ವ್ಯಕ್ತಿಯೊಬ್ಬನ ನೈತಿಕದೃಷ್ಟಿಯನ್ನು ಪ್ರಕಟಿಸುವುದೇ ಪಾತ್ರ (ಅರಿಕಾ. ೩೨ ಪೀಠಿಕೆ); ಶಾಕುಂತಲ . . . ರಾಧ ಮುಂತಾಗಿ ನಾಯಕಿಯರ ಪಾತ್ರವಲ್ಲ ಇವಳ ಪಾಲಾಗಿದ್ದುವು (ರಂಗನಾ. ೦೬). ೧೨. ಮಂತ್ರಿ; ಸಚಿವ: ಶ್ರೀನಾಥರಾಜನ ಲಕ್ಷ್ಮೀಪತಿರಾಜ ಪಶ್ಚಿಮಬಾಲಚಂದ್ರಮಹಾಪಾತ್ರಯಿವರು ಮೊದಲಾದ ಪಾತ್ರ ಸಾಮಂತರನೂ ಮಂನಿಯರನೂ ಜೀವಗ್ರಾಹವಾಗಿ ಹಿಡಿದುಕೊಂಡು (ಸೌಇಇ. IX-ii, ೫೦೦ ೦೨; 1515); ವಿದ್ಯಾಧರನೆಂದೆಂಬ ಪಾತ್ರೆ[ತ್ರ] ಕೈಮುಗಿದು ನಿಂದು ನುಡಿದನು ರಾವುತಪಾಯಿಕೆಯ ಪಾಡೊಂದಿದ ಬಲು ಪಂಥಗಳನು (ಕುರಾಸಾಂ. ೦೬-೬); ಉಳಿದ ಪಾತ್ರೆ[ತ್ರ]ಗಳು ಅಂದು ಬಿನ್ನವಿಸಿದರಾ ಗಜಪತಿಗಿಂತೆಂದು ರಾವುತಿಕೆಯಿರವನು (ಕುರಾಸಾಂ. ೦೬-೦೦). ೧೩. ಅಭಿನಯಿಸುವವನು; ನಟ: ಅಂತು ಭಾರದ್ವಾಜನಾಗಾಮಿಕ ಸಂಗ್ರಾಮರಂಗಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧಾರನಂತೆ ಶಸ್ತ್ರವಿದ್ಯಾಭ್ಯಾಸಂಗೆಯ್ಸುತ್ತಿರೆ (ಪಂಪಭಾ. ೨-೫೯ ವ); ಮಂಗಳರವಂಗಳಂ ಮಾಣಬೇಡುಲಿವ ವಾದ್ಯಂಗಳಂ ನಿಲಿಸಬೇಡೋಲೈಸುತಿರ್ಪ ಪಾತ್ರಂಗಳಂ ತಡೆಯಬೇಡ (ಸಿದ್ಧರಾ. ೬-೩೫); ಪಾತ್ರವಾಡವಾದಕಂ ಬಾಜಿಸಿದಂ (ಶಮರ. ೨೪೯ ಪ್ರಯೋ); ಪಾತ್ರದ ಮಾತನು ಗೀತದ ನುಡಿಯನು ಕಟ್ಟಿ ಕೊಟ್ಟರು ನಮ್ಮ ತಂದೆ (ಇಂಪಾಪ. ೦೦-೪೩). ೧೪. [ನಾಟ್ಯ] ನೃತ್ಯ; ಕುಣಿತ: ಪಾತ್ರದ ಭೋಗದವರೊಳು ಮಧುಕನಾಥಗೆ ಹೋಗಿ ಮಾಯಾಂಗನೆಯ ಲಾಸ್ಯದ ಕೇಳಿಯೊಳಿಗದ ಜೋಗವಿಸುತಿರುತಿರ್ದ . . . ಅಲ್ಲನುಪ್ರಭು ಲಿಂಗಲೀಲೆಯಲಿ (ಶ್ರೃಶುಲೀ. ೫-೭೨); ಸ್ವಾನುಭವದ ಸುಖದಿಂದಧಿಕವೆ ಪಾತ್ರ ಗಾನ ಮುಂತಾದ ಸುಖಗಳು (ಭರತ. ೦೩-೦೬೦); ಬನವಾಸಿಯೆಂಬ ಪಟ್ಟಣದ ಮಾಹಿಕರ ರಾಜನಲ್ಲಿ ಮದ್ದಳೆಕಾಱನಲ್ಲಮನೆಂಬವನು ಕಾಮಲತೆಯೆಂಬ ಪಾತ್ರದ ಸ್ತ್ರೀಗೆ ಮೆಚ್ಚಿರಲು (ಶೈರಸೂ. I, ೫೬). ೧೫. ಕುಣಿಯುವವಳು; ನರ್ತಕಿ: ನೇತ್ರೋನ್ಮೀಲನಿಮೀಲನಮಾತ್ರದೆ ನರಸುರವಿಭೇದಮಾಯ್ತಲ್ಲದೊಡಾ ಪಾತ್ರಂಗಳಱಿಯಲಾಗೆನೆ ಸುತ್ರಾಮನೆ ಸೂತ್ರಧಾರನಾಗಾಡಿಸಿದಂ (ಅಜಿಪು. ೫-೪೬). ೧೬. ದೇವಸ್ಥಾನಗಳಲ್ಲಿ ನರ್ತಿಸುವ ದೇವದಾಸಿ: ಸೂಳೆವಳಗಂ ಪಂಚಿಗಂಗಂ ಪಱೆಕಾಱರ್ಗ್ಗಂ ಪಾತ್ರಕ್ಕಂ ದೇಸಿಗ ಛಾತ್ರ ಭೋಜನಕ್ಕಮೆಂದು ಸಮಕಟ್ಟಿ . . . ಕುಡೆ (ಸೌಇಇ. XI-i, ೬೦-೦೬; 1018); ಪಂಸಿಗಂಗೆ ಮತ್ತರ್ ೧೦ ಪಾಡುವರಿರ್ಬರ್ಗ್ಗಂ ಮತ್ತರ್ ೩೦ ಪಾತ್ರವೆರಡರ್ಕ್ಕಂ ಮತ್ತರ್ ೪[ರ] ಭೋಗದ ಸೂಳೆಯರ್ ೪ (ಸೌಇಇ. XI-i, ೦೦೩-೩; ಸು. 1070); ಪಾತ್ರ ನಾಲ್ವರ್ಗ್ಗಂ ಎರೆಯ ಮತ್ತ ೩೨ ಮೊಗೆ ಮತ್ತ ೩೦ . . . ಸೂಳೆವಳಂಗೆರೆ ಮತ್ತರು ೪ (ಸೌಇಇ. XX, ೩೦೦-೯; ಸು. 12ನೆಯ ಶತ). ೧೭. (ಕಾರ್ಯದಲ್ಲಿ) ಭಾಗವಹಿಸುವಿಕೆ,—ಭಾಗಿಯಾಗಿರುವಿಕೆ; ಸಕ್ರಿಯವಾಗಿರುವಿಕೆ: ಈಚೆಗೆ ನಡೆದ ಮಂತ್ರಾಲೋಚನೆಗಳಲ್ಲೆಲ್ಲಾ ಬ್ಲಾಂಡಿಂಗ್ಸನ ಹೆಂಡತಿಯದೇ ಮುಖ್ಯಪಾತ್ರ (ಯೋರಪು. ೩೦); ಮಾನವಇತಿಹಾಸದಲ್ಲಿ, ನದಿಗಳ ಪಾತ್ರ ಬಹಳ ಪ್ರಧಾನವಾದುದು (ನನದಿ. ೦೬).

ಪಾತ್ರಜಗದಳೆ = ಒಂದು ಬಿರುದು: ಪಡೆದಳೆ ರಾಯರೊಳಪ್ಪು ಕುಡೆ ಬಾಚಲದೇವಿ ಪಾತ್ರಜಗದಳೆವೆಸರಂ (ಎಳ. VII, ಕಿವಮೊ. ೯೭-೨೩; 1113). **ಪಾತ್ರಪಾವುಳ** = ದೇವಾಲಯದ ನರ್ತಕಿ ಮತ್ತು ಪರಿಚಾರಕವರ್ಗ: ಶ್ರೀಸ್ವಯಂಭುಸೋಮೇಶ್ವರದೇವರ್ಗ್ಗೆ ಸೂಳೆಗೇರಿಯಂ ಮಾಡಿಸಿ ಅಲ್ಲಿಯ ಪಾತ್ರಪಾವುಳಕ್ಕಂ ಬಂದ ಸೂಳೆಯರು ಘ[ಗ]ಳಿಗೆ . . . ಸರ್ವ್ವ ಬಾಧಾಪರಿಹಾರಂ ಸರ್ವ್ವನಮಶ್ಯಮಾಗಿ ಪಡೆದು ಬಿಟ್ಟ ಭೂಮಿಯ ಪ್ರಮಾಣಂ (ಸೌಇಇ. XX, ೭೪-೩೦; 1112); ಕೋಟೆಯ ಕೆಯ್ಯ ಸ್ಥಳದೊಳಗೆ ಪಾತ್ರಪಾವುಳಕ್ಕೆ ಬಿಟ್ಟ ಮತ್ತರು ಇಂನೂಱ ಇಪ್ಪತ್ತು (ಕಇ. II, ೦೬-೪೩; 1122); ಶ್ರೀವಿಷ್ಣುದೇವರ ರಂಗಭೋಗದ ಪಾತ್ರಪಾವುಳಕ್ಕಂ . . . ವಿಷ್ಣುಭಟ್ಟೋಪಾಧ್ಯಾಯರ್ಗ್ಗೆ ಧಾರಾಪೂವ್ವಕಂ ಮಾಡಿ ಕೊಟ್ಟ ಮತ್ತರು ೪೦ (ಸೌಇಇ. VIII, ೩೭೦-೬; 1125).

[ಸಂ.]

ಪಾತ್ರಂಬಡೆ (ಕ್ರಿ). ಯೋಗ್ಯತೆಯನ್ನು ಪಡೆ; ಅರ್ಹತೆಯನ್ನು ಹೊಂದು: ಪುತ್ರಂಬಡೆದೆನೆ ಪರಮಪವಿತ್ರೀಕೃತಭವಸುಖಾಮೃತಕ್ಕಾನೀಗಳ್ ಪಾತ್ರಂಬಡೆದೆಂ . . . ಎರಡುಂ ಭವಕ್ಕವೊಳ್ಪಂ ಪಡೆದೆಂ (ಸುಕುಮಾ. ೦೦-೨೯).

[ಪಾತ್ರ + ಪಡೆ$_1$]

ಪಾತ್ರಂಸೂಳೆ (ನಾ). ನರ್ತಿಸುವ ವೃತ್ತಿಯನ್ನು ಅವಲಂಬಿಸಿರುವ ವೇಶ್ಯೆ,—ಗಣಿಕಾಸ್ತ್ರೀ; ದೇವದಾಸಿ: ಚಾಮರ ಹಾಕುವ ವೃತ್ತಿಯನ್ನು, ನರ್ತಿಸುವ ವೃತ್ತಿಯನ್ನು ('ಪಾತ್ರಂಸೂಳೆ') ನೋಡಿದರೆ . . . ಅವರ ವೃತ್ತಿಗಳನ್ನು, ಸ್ಥಾನಗಳನ್ನು ಹೆಸರಿಸಿರುವಂತೆ ಕಾಣುತ್ತವೆ . . . ಸೂಳೆಗೂ 'ಪಾತ್ರಂಸೂಳೆ'ಗೂ ವ್ಯತ್ಯಾಸವನ್ನು ಊಹಿಸಬಹುದು. ಎರಡನೆಯವಳು ನೃತ್ಯಾದಿ ಅಭಿನಯಗಳನ್ನು ಮಾಡುವವಳು (ಕಶಾಲಾ. ೧೮೪).

[ಪಾತ್ರ + ಸೂಳೆ]

ಪಾತ್ರಚಾರಿ (ನಾ). ಪಾತ್ರವನ್ನು ಅಭಿನಯ ಮಾಡುವವನು : ನಟ : ಸೂತ್ರಧಾರಿಣಿ ನೀನು ; ಪಾತ್ರಚಾರಿಯು ನಾನು ; ಯಾವ ಪಾತ್ರವನಿತ್ತರೇನು ನೀನೆನಗೆ (ಅಗ್ನಿಹಂ. ೧೯-೧). [ಸಂ. ಪಾತ್ರಚಾರಿನ್]

ಪಾತ್ರಚಿತ್ರಣ (ನಾ). = ಪಾತ್ರನಿರ್ಮಾಣ : ಕಾಳಿದಾಸನ ಶಕುಂತಲೆಯ ಪಾತ್ರಚಿತ್ರಣ ತುಂಬ ಸೊಗಸಾಗಿದೆ (ರೂಢಿ). [ಪಾತ್ರ + ಚಿತ್ರಣ$_0$]

ಪಾತ್ರತೆ (ನಾ). ಯೋಗ್ಯತೆ ; ಅರ್ಹತೆ : ಅಳಸಿಂಗರಾರ್ಯರ ಶಿಷ್ಯೆಯಾಗುವ ಪಾತ್ರತೆಯನ್ನು ಪಡೆದುದಕ್ಕೆ ಹೊನ್ನಮ್ಮನಿಗೆ ಸಂತೋಷ! (ಕರ್ಣಾಳ. ೧೯೭) ; ವಿದ್ಯೆಯಿಂದ ಬರಬೇಕಾದ ವಿನಯವನ್ನು ನೀನು ಪಡೆದಿದ್ದೀಯೆ. ಅದೇ ನಿನಗಿಂದು ಈ ಪಾತ್ರತೆಯನ್ನು ಕೊಟ್ಟದ್ದು (ಹೂಸಕ್ಷಿ. ೩೮) . [ಸಂ. ಪಾತ್ರತಾ]

ಪಾತ್ರತ್ರಿತಯ (ನಾ). (ದಾನ ತೆಗೆದುಕೊಳ್ಳುವವರಲ್ಲಿ) ಉತ್ತಮ, ಮಧ್ಯಮ ಮತ್ತು ಅಧಮರೆಂಬ ಮೂರು ವಿಧದ ವ್ಯಕ್ತಿಗಳು : ಆ ಭೋಗಭೂಮಿಯೊಳ್ ಪಾತ್ರತ್ರಿತಯದಾನಫಲಂಗಳಿಂದೇಕದ್ವಿತ್ರಿಪಲ್ಯೋಪಮಾಯುಷ್ಯರುಂ . . . ಆರ್ಯಾಭಿಧಾನರುಮಾಗಿ ದಂಪತಿಸ್ವರೂಪದಿಂ ಪುಟ್ಟಿ (ತಂದ್ರಪು. ೩-೩೬ ವ). [ಪಾತ್ರ + ತ್ರಿತಯ]

ಪಾತ್ರತ್ವ (ನಾ). ಅರ್ಹತೆಯನ್ನು ಹೊಂದಿರುವಿಕೆ : ಅತಿಬಾಲವಿದ್ಯಾಕುಲಾವಧಿವರ್ಣೋತ್ತಮತ್ವ ಪಾತ್ರತ್ವ ಸೃಷ್ಟ್ಯಧಿಕಾರ ವ್ಯವಹಾರೇಶಿತ್ವಾವಧ್ಯತ್ವಾದಂಡ್ಯತ್ವ ಮಾನಾರ್ಹತ್ವ ಪ್ರಜಾಸಂಬಂಧಾಂತರಮೆಂಬ ಪತ್ತುಮಧಿಕಾರಂಗಳುಮನಱಿಪಿ (ಆದಿಪು. ೧೫-೦೬ ವ): ಅತಿಬಾಲವಿದ್ಯಾಕುಳಾವಧಿ ವರ್ಣೋತ್ತಮತ್ವಂ ಪಾತ್ರತ್ವ . . . ಪ್ರಜಾಸಂಬಂಧಾಂತರಮೆಂಬಿಪ್ಪತ್ತುಮಧಿಕಾರಂಗಳುಮನಱಿಪೆ (ಶಾಪುಂಪು. ೨೦೩). [ಸಂ.]

ಪಾತ್ರದ (ನಾ). ತಕ್ಕಡಿ ; ತ್ರಾಸು : "ಪಾತ್ರದಂ ತ್ರಾಸು ಸಮದಂಡಿತೂಗುವ ಕೋಲು" (ಮಂಗರಾ. ೧೦೫-೧೪). [ಸಂ.]

ಪಾತ್ರದತ್ತಿ (ನಾ). [ಜೈನ] ಮಹಾತಪೋಧನರಾದ ಮುನಿಗಳಿಗೆ ಶುದ್ಧವಾದ ಆಹಾರಾದಿಗಳನ್ನು ಮತ್ತು ಸಂಯಮೋಪಕರಣಗಳನ್ನು ವಿಧಿಪೂರ್ವಕವಾಗಿ ನೀಡುವುದು : ಪರಮತಪಶ್ಚರಣನಿರತಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪಪಾತ್ರದತ್ತಿಯುಂ . . . ಬೆರಸು (ಆದಿಪು. ೧೫-೧೩ ವ) ; ಪಾತ್ರದತ್ತಿಯೆಂಬುದು ಮಹಾತಪೋಧನರ್ಗೆ ಪ್ರತಿಗ್ರಹಾರ್ಚನಾ ವಿಧಿಪೂರ್ವಕ ನಿರವದ್ಯಾಹಾರಸಂಯಮೋಪಕರಣಂಗಳಂ ಕುಡುವುದು (ಶಾಪುಂಪು. ೨೦೦); ಪಾತ್ರದತ್ತಿಯೆಂಬುದು ಮಹಾತಪೋಧನರ್ಗೆ ನಿರವದ್ಯಾಹಾರಮುಮಂ ಸಂಯಮೋಪಕರಣಮುಮಂ ಕುಡುವುದು (ಆಶಪು. ೧೨-೧ ವ). [ಪಾತ್ರ + ದತ್ತಿ]

ಪಾತ್ರದಾನ (ನಾ). = ಪಾತ್ರದತ್ತಿ : ಪಾತ್ರದಾನವಿಧಾನಮೆ ವಿನೋದಮಾಗೆಯುಮಿಂತು ನಿತ್ಯೋತ್ಸವಂಗಳೊಳೆ ಕೆಲವು ಕಾಲಂ ಸಲೆ (ಆದಿಪು. ೪-೫೨ ವ) ; ಕ್ರಮದೆ ಪರವ್ಯಪದೇಶಂ ಸಮತ್ಸರತ್ವಂ ಸಚಿತ್ತನಿಕ್ಷೇಪಪಿಧಾನಮತಿಕ್ರಮ ಕಾಲಮತಿಕ್ರಮಮಕ್ಕುಂ ಪಾತ್ರದಾನಮಂ ಕುಡುವೆಡೆಯೊಳ್ (ಸುಕುಮಾ. ೬-೨೨). [ಪಾತ್ರ + ದಾನ]

ಪಾತ್ರದಾನಿ (ನಾ). ಪಾತ್ರದತ್ತಿಯನು ಕೊಡುವವನು : ಮಾಯಾಚಾರಪರಿಣತರುಮಪ್ಪ ಪಾತ್ರದಾನಿಗಳುಂ ತಿರ್ಯಗ್ಜಾತಿತ್ವಮಂ ಪೊರ್ದಿದ ಮಿಥುನಂಗಳಾಗಿ ಪುಟ್ಟಿ ಪರಸ್ಪರವೈರಂಗಳಿಲ್ಲದೆ . . . ರಮಿಯಿಸುವುವು (ಆದಿಪು. ೫-೪೧ ವ). [ಸಂ. ಪಾತ್ರದಾನಿನ್]

ಪಾತ್ರಧರ (ನಾ). ಊಟದ ತಟ್ಟೆ ಮುಂತಾದುವನ್ನು ಇಡುವ ಪೀಠ, — ಮಣೆ : ಅಡ್ಡಣಿಗೆ : "ಪಾತ್ರೆಯೆನೆ ತಟ್ಟೆ ಪಾತ್ರಧರ ಮಡ್ಡಣಿಗೆ [ಪಾಠಾಂ. ಪಾತ್ರವದಡ್ಡಣಿಗೆ]" (ಮಂಗರಾ. ೬೩-೨೫). [ಸಂ.]

ಪಾತ್ರಧಾರಿ (ನಾ). ಪಾತ್ರ ವಹಿಸುವ ವ್ಯಕ್ತಿ ; ನಟ : ಭಾಗವತ ಹಿಮ್ಮೇಳದೊಡನೆ ಕುಳಿತು ಪ್ರಸಂಗವನ್ನು ಹಾಡುತ್ತಿದ್ದರೆ ಪಾತ್ರಧಾರಿಗಳು ಮಾತುಗಳಿಂದ ಅರ್ಥಪ್ರತಿಪಾದನೆ ಮಾಡುತ್ತಾರೆ (ಯಕ್ಷಣ. ೦೬) ; ನೀನೂ ಅದರಾಗ ಪಾತ್ರಧಾರೀ ಆಗೀದಿ (ದೀಪಹ. II, ೫). [ಸಂ. ಪಾತ್ರಧಾರಿನ್]

ಪಾತ್ರನಿರ್ಮಾಣ (ನಾ). ಸಾಹಿತ್ಯಕೃತಿಗಳಲ್ಲಿ ಸೃಷ್ಟಿಸುವ ವ್ಯಕ್ತಿಚಿತ್ರಣ : ದುಷ್ಯಂತನ ಪಾತ್ರನಿರ್ಮಾಣಕ್ಕಿಂತಲೂ ಶಕುಂತಲೆಯ ಪಾತ್ರನಿರ್ಮಿತಿಯಲ್ಲಿ ಕವಿ ಹೆಚ್ಚು ಗಮನ ಕೊಟ್ಟಿದ್ದಾನೆಂದು ಹೇಳಿದರೆ ಅದು ಕಾಳಿದಾಸನ ಪ್ರತಿಷ್ಠೆಗೆ ಧಕ್ಕೆ (ರರ್ಮಸಾ. ೭೪). [ಪಾತ್ರ + ನಿರ್ಮಾಣ]

ಪಾತ್ರನಿರ್ಮಿತಿ (ನಾ). = ಪಾತ್ರನಿರ್ಮಾಣ : ಸಂಸ್ಕೃತ ನಾಟಕಕಾರರು ಪಾತ್ರನಿರ್ಮಿತಿಯಲ್ಲಿ ನಿಷ್ಣಾತರಲ್ಲ ಎಂಬ ಒಂದು ಅಭಿಪ್ರಾಯವುಂಟು (ರರ್ಮಸಾ. ೭೩). [ಪಾತ್ರ + ನಿರ್ಮಿತಿ]

ಪಾತ್ರಪಾವುಳ 'ಪಾತ್ರ' ಪರಾ.

ಪಾತ್ರವಹಿಸು (ಕ್ರಿ). ೧. ಪಾಲುಗೊಳ್ಳು ; ಭಾಗವಹಿಸು : ಹಲವಾರು ಉಪಾಧ್ಯಾಯರು ಪಾತ್ರವಹಿಸಿ ಅಂಕಿ ಅಂಶಗಳನ್ನೂ ಅಭಿಪ್ರಾಯಗಳನ್ನೂ ಸೂಚಿಸಿರುತ್ತಾರೆ (ಶಿಕ್ಷದ. ೩೬೯). ೨. ನಾಟಕ ಮುಂತಾದುವುಗಳಲ್ಲಿ ವೇಷ ಹಾಕು,-ನಟಿಸು : ನೀನೇ ಪಾತ್ರ ವಹಿಸಿ ನೀನೇ ತಗೋಬೇಕು ಬಹುಮಾನ (ರಂಗಪಾ. ೯೩). [ಪಾತ್ರ + ವಹಿಸು]

ಪಾತ್ರವಾಡು (ಕ್ರಿ). ನರ್ತನ ಮಾಡು; ನರ್ತಿಸು : ಕಾಮಿನಿಯೊತಾ ಭರತಸಂಭವ ಭೂಮಿಯೋ ಪೇಳೆನಲು ಮೆಱೆದಾ ಶ್ಯಾಮೆ ಮಾಯಾದೇವಿ ಮೋಹಿಸಿ ಪಾತ್ರವಾಡಿದಳು (ಶ್ರಶುಲೀ. ೪-೫೭) ; ಪಾತ್ರವಾಡಿದ ಸತಿಯರಿಗೆ ತಂಪಹಂತೆ ಧಾತ್ರೀಶಗಿಂಪಾಗುವಂತೆ . . . ಪವಿತ್ರಾತ್ಮಕಲೆಯ ಪಾಡಿದರು (ಭರತ. ೦೩-೦೦೪) ; ನಟನ ತಾಂಡವ ನೃತ್ಯದುತ್ಕಟ ತಿರುಪು ನೇಱು ಗುಂಡಾಳವ ನಟಿಸಿ ಪಾತ್ರವಾಡಿದನು (ಶೈರಸೂ. I, ೩೫೬). [ಪಾತ್ರ + ಆಡು$_1$]

ಪಾತ್ರವಿಕೀರ್ಣ (ನಾ). ೧. ನದಿ, ತೊರೆ ಮುಂತಾದುವು ಹರಿಯುವ ಸ್ಥಳ,-ಪಾತಳಿ. ೨. ನಟಿಸುವವರಿಂದ ಆವೃತವಾದುದು. ೧, ೨ : ಪಾತ್ರವಿಕೀರ್ಣಮಾತತಸುತಾಳಧರಂ ವಿವಿಧಾವನದ್ದವಾ ಸೂತ್ರಿತವಂಶಕಾರನಿಕರಂ ಕಳಕಂಠಸಮೂಹಸಂಶ್ರಿತಂ ಚಿತ್ರಿತರೂಪಶೋಭೆಗೆಡೆಯಾದುದು ಭಾವಿಸಿ ನೋಡೆ ನಾಡೆ ತೂರ್ಯತ್ರಯಸಂಪ್ರದಾಯಮೆನೆ ಕಾನನಮಾವೃತದಿಕ್ಕುಳಾನನಂ (ತಂದ್ರಪು. ೫-೫೩). [ಪಾತ್ರ + ವಿಕೀರ್ಣ]

ಪಾತ್ರವೆಣ್ (ನಾ). ನರ್ತಕಿ : ಪರಿಪರಿ ಪಾತ್ರವೆಂಗಳು ಸಿಂಗರಿಸಿಯೆ ಹರುಷದೊಳಗೆ ನಡೆತಂದು ಕರದಭಿನಯ ಕಟ್ಟಳೆ ಕಳಾಸಿಕೆಯಿಂದ ಸಿರಿಯರಸನನೋಲಗಿಪರು (ಕಂನವಿ. ೬-೧೦೭). [ಪಾತ್ರ + ಪೆಣ್]

ಪಾತ್ರಸಂಕ್ರಮಣ (ನಾ). ಪಾತ್ರಗಳ ಜೋಡಣೆ : ದಶರೂಪಲಕ್ಷಣಮುಮಂ ಪಾತ್ರಸಂಕ್ರಮಣದೊಳ್ ನೆಱೆಯೆ ತೋಱೆ ಭರತದ ಸಾರಸರ್ವಸ್ವ ಮುಮಂ ನಾಟ್ಯಧರ್ಮದೊಳ್ ಸೌಧರ್ಮಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್ (ಆಶಪು. ೫-೨೮ ವ). [ಪಾತ್ರ + ಸಂಕ್ರಮಣ]

ಪಾತ್ರಸೃಷ್ಟಿ (ನಾ). = ಪಾತ್ರನಿರ್ಮಾಣ : ಪಾತ್ರಾಸೃಷ್ಟಿಯು ಕವಿಯ ಪ್ರತಿಭೆಗೆ ಒರೆಗಲ್ಲಾಗಿರುತ್ತದೆ (ರೂಢಿ). [ಪಾತ್ರ + ಸೃಷ್ಟಿ]

ಪಾತ್ರಾಭಿಗರ 'ಪಾತ್ರಾಭಿಗಾರ' ನೋ. ಪಾತ್ರ

ಪಾತ್ರಾಭಿಗಾರ, ಪಾತ್ರಾಭಿಗರ (ನಾ). ಊಟಕ್ಕೆ ಮುಂಚೆ (ಶುದ್ಧಿಗಾಗಿ) ಎಲೆಗಳಿಗೆ ಮತ್ತು ಎಲ್ಲ ಅಡಿಗೆಪಾತ್ರೆಗಳಿಗೆ ತುಪ್ಪವನ್ನು ಪ್ರೋಕ್ಷಿಸುವುದು : ಘೃತಸಮುದ್ರದ ಸಡಗರವು ಪಾತ್ರಾಭಿಗಾರವ್ಯಯಕೆ ತೀರುವುದೆ (ತಿಮ್ಮಕ. ೫-೭೧); ಪಾತ್ರಾಭಿಗಾರವಂ ಮಾಡಿಸಿ ಪದಾರ್ಥಂಗಳು ಬಡಿಸೆಂದು (ಕುವೇಲೋ. ೧೧೫). **ಪಾತ್ರಾಭಿಗರ :** ಪರಮ

ಸೌಖ್ಯವನಾಂತು ತಿಗುಳರು ಪಾತ್ರಾಭಿಗರ ಪರಮಾನ್ನ . . . ತೊವ್ವೆ ಪಳಿದ್ಯವ ತರತರದಲಿ ಬಡಿಸಿದರು (ಸೋಹಕ. ೩-೩೦).

[ಪಾತ್ರ + ಅಭಿಗಾರ]

ಪಾತ್ರಿ (ನಾ). ೧. ಪಾತ್ರ ವಹಿಸುವವನು : ಈ ಭೂತಾರಾಧನೆಯಲ್ಲಿ ಹಂದಿಯ ಮುಖವಾಡವನ್ನು ಅದರ ಪಾತ್ರಿಯು ಧರಿಸಿ ಕುಣಿಯುವುದು ವಾಡಿಕೆಯಾಗಿದೆ (ಜಾನಗೀ. ೬೧) ; ಅವರಿಗೆ ಇದಿರಾಗಿ ನಾಗನ 'ಪಾತ್ರಿ'ಯು (ಪಾತ್ರ ವಹಿಸುವಾತ) ಕಾಳಿಂಗಸರ್ಪದಂತೆ ಕುಣಿಯುತ್ತ ತಿರುಗುತ್ತಾನೆ (ಹುಮುಖ. ೨೫). ೨. (ಕರಾ) (ದೆವ್ವ, ದೇವರು ಮುಂತಾದ) ಅಲೌಕಿಕಶಕ್ತಿಗಳ ಆರಾಧಕ ; ಅಲೌಕಿಕಶಕ್ತಿಗಳು ಮೈ ಮೇಲೆ ಬರುವ ವ್ಯಕ್ತಿ : ಕೋಲ ಮಾಡಿಸಲು ಉಂಟಾದ ಮುಖ್ಯ ಅಡಚಣೆ ಎಂದರೆ, ದೈವದ ಪಾತ್ರಿ ಬಿರುಮಣ್ಣ ಸತ್ತದ್ದು (ಕುಡಿಕೂ. ೩೫೯) ; ಕಂಡ್ಲೂರಿನ ಮಜುರ್ಲಿದೆವ್ವದ ಪಾತ್ರಿಯನ್ನು ಕರೆಯಿಸಿ, ಬೊಬ್ಬರ್ಯನನ್ನು ಬಂಧಿಸಿ . . . ಗೋಳಿಮರದಲ್ಲಿ ಸ್ಥಾನ ಕಲ್ಪಿಸಿಕೊಟ್ಟರು (ದೇವಹಂ. ೫೭). [ಸಂ. ಪಾತ್ರಿನ್]

ಪಾತ್ರೀಕರಿಸು (ಕ್ರಿ). ಅರ್ಹನನ್ನಾಗಿ ಮಾಡು ; ಯೋಗ್ಯನನ್ನಾಗಿ ಮಾಡು : ಧನಿಕಂ ಕಳ್ದೊಡವೆಗೆ ಕಳ್ಳನ ಪಾತ್ರನ ಗೈದ ತೆರದೆ ನೀಂ ಮುಟ್ಟಿದ ನಂದನೆಯಂ ಬಹುಮತಿಸುತೆ ನಿನ್ನನೆ ಪಾತ್ರೀಕರಿಸಿ ಬಿಟ್ಟ ಮುನಿಯೆ ವಿಮಾನ್ಯಂ (ಶಾಕುಂತ. ೬೮-೧೨೦).

[ಪಾತ್ರೀಕರಣ್ಯ + — ಇಸ್ತು]

ಪಾತ್ರೀಭೂತ (ಗು). ೧. ಅರ್ಹತೆಯನ್ನು ಹೊಂದಿದ ; ಯೋಗ್ಯತೆಯನ್ನು ಪಡೆದ : ಪಾತ್ರೀಭೂತ ವಿನೇಯಸಂತತಿಗೆ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳ್ ನಿಜಮಪ್ಪನಂತಸುಖಮಂ ರಾಗಾದಿಗಳ್ ಜನ್ಮ ಮೃತ್ಯು ತ್ರಾಸಂಗಳನೀವುವು (ಶುರಾಮಾ. ೧-೪). (ನಾ). ೨. ಅರ್ಹತೆಯನ್ನು ಪಡೆದವನು ; ಯೋಗ್ಯ : ಶ್ರೋತ್ರೀಯರುಂ ಕ್ಷತ್ರಿಯರುಂ ಪಱಿಗುಟ್ಟಿ ಪಶುಯಾಗಂಗೆಯ್ದೊ ಲೋಕದೊಳ್ ಪಾತ್ರೀಭೂತರುಂ ಪವಿತ್ರಗೋತ್ರರುಮಾಗಿ ಪರಲೋಕದೊಳ್ ಪಾಕಶಾಸನ ಸಮಾನಭೋಗಿಗಳಪ್ಪರ್ (ಸಂಶಸಂ. ೬೨-೪). [ಸಂ.]

ಪಾತ್ರೆ (ನಾ). ೧. ಕೊಳಗ, ತಪ್ಪಲೆ, ತಟ್ಟೆ, ಹರಿವಾಣ ಮುಂತಾದ ಸಾಧನ; ಭಾಜನ : "ಪಾತ್ರೆಯನೆ ತಟ್ಟೆ . . . ಪಾತ್ರೆಯನೆ ಪಡಿಗಮೆನಿಸಿಕ್ಕು" (ಮಂಗರಾ. ೬೩-೨೫); ಕೆಡದಂತೆ ಬಯ್ಚಿಟ್ಟು ಕುಡುವುದೀ ಪಾತ್ರೆಯಂ (ತಿರುರ. ದೇ. ೧೦-೧೬); ವಿರಾಜಿಪ್ಪ ಮನೋಜ್ಞ ಪಾಯಸದ ಪಾತ್ರೆಗಳಿಂ . . . ಪಾಲ್ಮೊಸರಿಪ್ಪ ಕಟಾಹಕೋಟಿಯಿಂದೊಪ್ಪಿದುದಂದ ನೂನವಿಭವಂಬಡೆದಾ ವರಯಜ್ಞಮಂಟಪಂ (ಉದ್ಯಪ. ೪-೪೮) ; ಈ ಹಾಲನ್ನು ಮೊಂಡ ಚೂರಿಗಳಿಂದ ಪಾತ್ರೆಗಳಲ್ಲಿ ಸವರಿಕೊಳ್ಳುತ್ತಾರೆ (ಮುಂಬಯಿ. ೪-೪೦). ೨. ನದಿ, ಹೊಳೆ ಮುಂತಾದುವುಗಳ ಒಡಲು.— ಎರಡು ದಡಗಳ ನಡುವಿನ ಪ್ರದೇಶ : ಹೊಳೆ ತುಂಬಿದಾಗ ಅದರ ಪಾತ್ರೆಯ ಅಗಲು ೫೮೦ ಪೂಟು ಇರುತ್ತದೆ (ಕಥಾಗ. ೦೯); ಮೇಲಣ ಪರ್ವತಗಳ ನೀರು ಆ ಕೊರಕಲಿನ ಬಂಡೆಗಳ ಮೇಲಿಂದ ಉರುಳಾಡುತ್ತ ಹರಿದು ಬರುವಂತೆ ಕಂಡಿತು. ಇನ್ನು ಅದರ ಪಾತ್ರೆಯನ್ನು ತುಳಿದೇ ಬೆಟ್ಟವನ್ನು ಏರಬೇಕು (ಸ್ವಸ್ವಹೂ. ೦೩೩).

ಪಾತ್ರೆಪಡಗ, ಪಾತ್ರೆಪಗಡ, ಪಾತ್ರೆಪಡಗು, ಪಾತ್ರೆಪಡದೆ = ಕೊಳಗ, ತಪ್ಪಲೆ ಮುಂತಾದ ಪಾತ್ರೆ,—ಸಾಮಾನು : ಮನೆಯ ಪಾತ್ರೆ ಪಡಗಗಳೆಲ್ಲವೂ ದೇವಸ್ಥಾನಕ್ಕೆ ಸೇರಿದುವು (ಮಂಶವ್ಯ. ೪೮೬); ಕಾಳು ಕಡಿ ತೀರಿದ ಮೇಲೆ ಮನೆಯಲ್ಲಿ ಹೆಂಗಸರು ಮತ್ತು ಹಿರಿಯರಿಗೆ ಕಾಣದಂತೆ ಪಾತ್ರೆ ಪಡಗಗಳನ್ನು ಕೊಟ್ಟು ದೋಸೆ, ಖಾರ ತಿಂದದ್ದೂ ಉಂಟು (ಎದಿರೇ. ೩); ದನಕರುಗಳು ಹೋದುವು, ದೊಡ್ಡ ಪ್ರಮಾಣದ ಪಾತ್ರೆ ಪಗಡಗಳೂ ಹರಾಜಾಗಿ ಹೋದುವು (ಮಸಕೂ. ೪); ಇದ್ದ ಅಲ್ಪ ಸ್ವಲ್ಪ ಪಾತ್ರೆ ಪಡಗುಗಳು ಸೇಟಿನಂಗಡಿಯ ಹಾದಿ ಹಿಡಿಯಲೂ ಹೆಚ್ಚು ಕಾಲ ಬೇಕಾಗಿರಲಿಲ್ಲ (ಕಾಗಿಣಿ. ೨೭); ನಾಳೆ ಉಪವಾಸವಿದ್ದರೂ ಸರಿ, ಅವನ ಪಾತ್ರೆ ಪಡದೆಗಳಲ್ಲಿ ನಾನೇನೂ ಮಾಡಲಿಕ್ಕಿಲ್ಲ (ಪತಿ. ೯೨). **ಪಾತ್ರೆಪರಟಿ, ಪಾತ್ರೆಪರಡಿ, ಪಾತ್ರೆಪರಾಟು** = ಪಾತ್ರೆಪಡಗ : ಹರೇ ಕೃಷ್ಣನ ಪಾತ್ರೆಪರಟಿ . . . ವಶಪಡಿಸಿಕೊಂಡನು (ಬಂಕಿಮ. ೧೦೭); ಅವರು ದಿನಾಲು ಆಡುಗೆಗಾಗಿ ಕಾಳು ಕಡಿಗಳನ್ನು ಹಸನು ಮಾಡಿಕೊಡಬೇಕಾಗುತ್ತಿತ್ತು. ಪಾತ್ರೆ-ಪರಡಿಗಳನ್ನು ತಿಕ್ಕಿ ಕೊಡಬೇಕಾಗುತ್ತಿತ್ತು (ಮಣ್ಣಿಮ. ೦೭೫); ನಾಲ್ಕು ದಿನ ಬಿಟ್ಟು ಹೋದರೆ ಇಲ್ಲಿನ ಪಾತ್ರೆ ಪರಡಿ ಉಳಿದೀತೆ ? (ಮುಗಿಯು. ೧೪೯); ಪಾತ್ರೆ ಪರಾಟುಗಳು ಹೋಗಲಿ . . . ಈ ಕಣಜದ ಕಾಳನ್ನಾದರೂ ಬಿಟ್ಟುಬಿಡಿ ಸ್ವಾಮಿ (ಹೇಮಕೂ. ೩೨). **ಪಾತ್ರೆಪಳಿಗೆ** = ಪಾತ್ರೆ ಪಡಗ : ಒಗೆಯುವುದನ್ನು ಪೂರೈಸಿದ ಬಳಿಕ ಕೂಡ ನಲ್ಲಿ ಇದ್ದುದಾದರೆ, ಪಾತ್ರೆ-ಪಳಿಗೆಗಳನ್ನು ತೆಗೆದುಕೊಂಡು ಬಂದು ಬೆಳಗುವಳು (ಪ್ರತಿಬಿಂ. ೨೭). **ಪಾತ್ರೆಪೇಣಿ** = ಪಾತ್ರೆ ಪಡಗ : ವಿಪರೀತ ಪಾತ್ರೆ ಪೇಣಿ ಕುರ್ಚಿ ಮೇಜುಗಳನ್ನು ಅಡುಕಿಕೊಂಡು ಮನೆಯಲ್ಲಿ ಓಡಾಡುವುದಕ್ಕೆ ಜಾಗ ಸಾಲವಂತೆ ಮಾಡುವುದು ಜಾಣತನವಲ್ಲ (ಗೃಹಿ. ೧೬೭). [ಸಂ. ಪಾತ್ರ]

ಪಾತ್ಸಾಹ 'ಪಾತಶಹ' ನೋ.

ಪಾತ್ಸ್ಯಾವು 'ಪಾತಶಹ' ನೋ.

ಪಾಥ (ನಾ). ೧. ನೀರು ; ಉದಕ : "ಸಲಿಲಂ ಜೀವನಮಂಬು ತೋಯಮುದಕಂ ಪಾಥಂ . . . ಪಾನೀಯಮೆಂದಿಂತನಾಕುಳದಿಂದಂ ತಱಿಸಲ್ಗೆ ನೀರ್ಗೆ ಪೆಸರಂ ಪರ್ಯಾಯದಿಂ ವಾಗ್ವಿದರ್" (ಪಸ್ತುಕೋ. ೨೨-೧); ಬಂದೇಱಿದಂ ಧೀರಂ ಶೌರಿ ವರೂಥಮಂ . . . ಶಸ್ತ್ರತೂಣೀರವ್ರಾತಸನಾಥಮಂ ಧ್ವಜಝಷಾಪ್ತಸ್ವರ್ಣದೀ ಪಾಥಮಂ (ಪಗಸಿ. ೧೫-೭೦). ೨. ಅಗ್ನಿ. ೩. ಸೂರ್ಯ. [ಸಂ.]

ಪಾಥೆ (ನಾ). ಒಂದು ಬಗೆಯ ಔಷಧದ್ರವ್ಯ ; ಅತಿಬಜೆ : ಲವಣ ಪಂಚಕಮಿಂಗು ಪಿಪ್ಪಲಿ ಶುಂಠಿ ತುಂಬುರುಧಾನ್ಯಕಂ ಶಿವೆ ದುರಾಲಭೆ ಪಾಥೆ ಚಿತ್ರಕಮೋವಮೆಂಬಿವನೆಲ್ಲಮಂ ಸವನೆ ಕೊಂಡು ಸುರಾನ್ವಿತಂ ಕುಡೆ (ಲೋಕೋಪ. ೯-೨೨೯). [?]

ಪಾಥೇಯ (ನಾ). ಪ್ರಯಾಣಕಾಲದಲ್ಲಿ ದಾರಿಯ ಊಟಕ್ಕಾಗಿ ಸಿದ್ಧಮಾಡಿ ತೆಗೆದುಕೊಂಡು ಹೋಗುವ ಆಹಾರವಸ್ತು ; ಬುತ್ತಿ : "ಪಾಥೇಯಂ, ಸಂಬಳಂ—ಈ ೨ ಸಂಬಳಂ" (ಹಲಾಯು. ೫೯-೨೦೩); ಮೋಕ್ಷಪುರಪ್ರಸ್ಥಿತ ಭವ್ಯಪಥಿಕಪಾಥೇಯಮಪ್ಪ ಸಮ್ಯಕ್ತ್ವಮುಮಂ (ಅಪಸ್ತು. ೧೨-೦ ಪ) ; ರಾಘವಂ ಜಾನಕೀಸ್ಮೇರಮುಖಾಬ್ಜಾಳೋಕನಂ ಲೋಚನಸುಖಮುಖಪಾಥೇಯಮಾಗೆಯ್ದೆವಂದಂ (ಪಂಠಾಮಾ. ೭-೨೯); ಪಾಥೇಯಮಂ ಭೋಜನಂಗೈದು ವಿಶ್ರಮನಾಗಿ ತಳಿತ ಮಾಮರನ ನೆಳಲಂ ಸಾರ್ದನು (ಶೃಮಿಭಾ. ೨೯-೪೮). [ಸಂ.]

ಪಾಥೇಯಧನ (ನಾ). ಪ್ರವಾಸಕ್ಕೆ ಬೇಕಾಗುವ ಹಣ ; ದಾರಿವೆಚ್ಚ : ಬೋಧಿದರ್ಶನಚಾರಿತ್ರಮೆ ಮೋಕ್ಷಮಾರ್ಗಪಾಥೇಯಧನಂ (ಅನಂಪು. ೩-೬೨). [ಪಾಥೇಯ + ಧನ]

ಪಾಥೋಜ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : "ಪಾಥೋಜಂ—ತಾವರೆ" (ಓಷಂ. ೯೬); ತತ್ತಪಸ್ವಿಯ ಪಾದಪಾಥೋಜಯುಗಲಮಂ ಚಿತ್ತದೊಳ್ಸ್ಮರಿಸುತ್ತೆ (ರುರಪು. ೨೩-೩೭). [ಸಂ.]

ಪಾಥೋದ (ನಾ). ೧. ನೀರನ್ನು ಕೊಡುವಂತಹುದು ; ಮೋಡ. ೨. ಕೊನ್ನಾರಿಗಡ್ಡೆ : "ಪಾಥೋದಃ—ಭದ್ರಮುಸ್ತೆ" (ಓಷಂ. ೯೬). [ಸಂ.]

ಪಾಥೋದಂತಿ (ನಾ). ನೀರಾನೆ : ಎನಸುಂ ಕಣ್ಗೆಯ್ದೆ ಚಿಲ್ವಂ ಪಡೆವುದು ವಿಚಳತ್ಕೂರ್ಮ್ಮ ಪಾರೀನಸಂಘಟ್ಟನಪಾಥೋದಂತಿವಂತಾಹತಮಕರಕರ ಕ್ಷೋಭಸಂಜಾತಕಲ್ಲೋಲ . . . ಅಂಭೋನಿಧಾನಂ (ಅ೨. XV. ೪೯-೩ ; 1189). [ಸಂ. ಪಾಥೋದಂತಿನ್]

ಪಾಥೋದರ (ನಾ). ಮೋಡ ; ಮೇಘ. [ಸಂ.]

ಪಾಥೋಧಿ (ನಾ). ಸಮುದ್ರ : ಹರ್ಷೋನ್ಮಾದಕದ್ದುದು ಕಪಿಧ್ವಜನಿ, ಘೇ ಘೇ ಜಯಧ್ವನಿಗೈವ ರಾಕ್ಷಸಧ್ವಜನಿಯುಂ ಕೂಡಿ, ಪಯೋಧಿಯುಪ್ಪುವೊರ್ ಪಾಥೋಧಿಯೋಲ್! (ಕ್ರೀಡಾಮಾ. ೬೧೬ ೫೭೯). [ಸಂ.]

ಪಾಥೋನಿಧಿ (ನಾ). = ಪಾಥೋಧಿ : ಅನತರಾಗಿ ಜೀವಿಸದೆ ದುಷ್ಟನೃಪರ್ ಕೆಲರೋಡಿ ಪೋಗೆ ಪಾಥೋಧಿಧಿಯಲ್ಲಿ ಪೊಕ್ಕೊಡವರಂ ತವಿಸಲ್ ಬಟಿಸಂದು (ಪುಷ್ಪಪು. ೩-೫೩). [ಸಂ.]

ಪಾಥೋರುಹ (ನಾ). = ಪಾಥೋಜ : "ಪಾಥೋರುಹಂ–ತಾವರೆ" (ಬಸವ. ೧೩). 'ಪಾಥೋರುಹಾಕ್ಷ' ಪರಾ. [ಸಂ.]

ಪಾಥೋರುಹಾಕ್ಷ (ನಾ). ಕಮಲದಂತಹ ಕಣ್ಣುಗಳನ್ನುಳ್ಳವನು ; ಕೃಷ್ಣ : ಪಾಥೋರುಹಾಕ್ಷನಂ ದಾರುಕಂ ನಿಟ್ಟಿಸಿ ವರೂಥವಂ ತಿರುಗಿಸಿದನು (ಕೃಷ್ಣಾಭಾ. ೭-೫೬). [ಸಂ. (ಪಾಥೋರುಹ+ಅಕ್ಷಿ+–)]

ಪಾದ (ನಾ). ೧. ಕಾಲು ; ಚರಣ : "ಅಂಘ್ರಿಃ, ಚರಣಃ, ಪಾದಃ—ಈ ೩ ಕಾಲ್" (ಹಲಾಯು. ೬೯-೩೫೭); ನಿಮ್ಮ ಶರಣರ ಪಾದಮಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸಯ್ಯಾ (ಬಸವ. ೨೬೯); ಸಾಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಯಂ ವರದಾನೋನ್ನತಭದ್ರ ಲಕ್ಷಣಪದಂ . . . ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ (ಜಗಮ. ೦-೫); ಹರಿ ಪದ್ಮಾನಂದಿ ಪೀತಾಂಬರೋಲ್ಲಸಿತಂ ಚಕ್ರಸಹಾಯ ನಾಕ್ರಮಿಸಿದಂ ಭೂಚಕ್ರಮಂ ಪಾದದಿಂ (ಪುಷ್ಪಪು. ೬-೨೩). ೨. ಕದಿರು ; ಕಿರಣ ; ರಶ್ಮಿ : "ಉಸ್ರಃ, ಧಾಮ . . . ಪಾದಃ, ವಿರೋಚಃ, ಗೋಃ—ಈ ೩೨ ರಶ್ಮಿಗಳ ಪೆಸರ್" (ಹಲಾಯು. ೬-೯೯). ೧, ೨ : ಜನಚಿತ್ತಾಹ್ಲಾದಪಾದಂ . . . ಉದ್ಯನ್ಮಂಡಲಾಗ್ರಂ ಸಲೆ ಘನಪದವೀ ಶೋಭಿಯುಂ ಪೆರ್ಚಿಸುತ್ತಿರ್ಪನೊಳ್ಪಂ ಪೆತ್ತುತ್ತದಾಂ ಬೆಳಗುಗೆ ಜಗಮಂ ಗೋಪಮಾರ್ತಂಡದೇವಂ (ಜಗಮ. ೦-೯) ; ಭೂಭೃದ್ವರರಾ ತಲೆಯಲಿ ಮೆರೆಯುತ್ತ ಮೋಣಮರರ ಶಿರಭಾಗದಲಿ ಆ ಎರಡೂ ದಿನಪನ ಪಾದಗಳು ಸೌಖ್ಯವ ತರಲೆಮಗನವರತ (ಧ್ವನ್ಯಾಲೋ. ೧೭). ೩. ಪರ್ವತಗಳ ಬುಡ : "ದರಿ ಕಂದರಂ . . . ಗಿರಿಪರ್ಯಂತಂ ಪಾದಂ" (ಪಸ್ತುಕೋ. ೨೯-೩). ೪. ಸಣ್ಣಗುಡ್ಡ : "ಪಾದಾಃ, ಪ್ರತ್ಯಂತ ಪರ್ವತಾಃ–ಈ ೨ ಕೆಲದ ಕಿಱುಬೆಟ್ಟುಗಳ್" (ಹಲಾಯು. ೨೯-೧೩) ; "ಕಿಱುಗಿರಿ ಪಾದಮಕ್ಕುಂ" (ಸುಂಗಣಾ. ೩೦-೨). ೫. (ಮರದ) ಬೇರು ; ಮೂಲ : "ಪಾದಂ, ಮೂಲಂ–ಈ ೨ ಮರದ ಬೇರ್" (ಹಲಾಯು. ೩೦-೨೯) ; "ಪಾದಮೆನೆ ಮೂಲಮೆನೆ ಪಸರಿಸಿದ ಬೇರಕ್ಕುಂ" (ಸುಂಗಣಾ. ೩೨-೨). ೬. ಗುರುಹಿರಿಯರಾದವರನ್ನು ಗೌರವಾರ್ಥವಾಗಿ ಸಂಬೋಧಿಸುವ ಒಂದು ನುಡಿ : ಪಾದ ಪರಾಕು ಚಿತ್ತವಿಪುದು (ಜಸಿ. ೯-೨೯); ಹಿಂದೆ ನಾಲ್ಕೈವರ್ಷಗಳ ಕೆಳಗೊಂದು ಸಲ ನಾನಿಲ್ಲಿಗೆ ಬಂದು, ಗೈದಾಟಕ್ಕೆ ಪಾದದ ತಂದೆ ತಂಗಿ ಸುನಂದೆಯು . . . ಹಿಂದೆ ಬಂದಳು ಪಾಪಿಯಾ (ಕಪಿ. ೪೦-೩೦). ೭. ಗುರು ಹಿರಿಯರ ಹೆಸರುಗಳ ಕೊನೆಯಲ್ಲಿ ಗೌರವಾರ್ಥವಾಗಿ ಸೇರಿಸುವ ಶಬ್ದ : "ಪಾದಃ, ದೇವಃ, ಭಟ್ಟಾರಕಃ –ಈ ಮೂಱುಂ ಪೆಸರ ಕಡೆಯೊಳ್ ಪೂಜಾಪ(ಚ)ನಂ" (ಹಲಾಯು. ೨೫-೦೫೯). ೮. ಭಾಗ ; ಅಂಶ. ೯. ನಾಲ್ಕನೆಯ ಒಂದು ಭಾಗ,–ಅಂಶ ; ಕಾಲುಭಾಗ : "ಪಾದಂ ತುರ್ಯಾಂಶಂ" (ಪಸ್ತುಕೋ. ೦೨೦-೨೨). ೧೦. ಹನ್ನೆರಡು ಅಂಗುಲಗಳ ಅಳತೆ ; ಒಂದು ಅಡಿ. ೧೧. [ಛಂದ] ಪದ್ಯದ ಒಂದು ಸಾಲು: ಪಾದದೊಳೆರಡನೆಯಕ್ಕರಮಾದರದಿಂದಾದುದಾವುದದನ ಆದಿನಿತಂ ಪಾದದೊಳಿಡುವುದದಕ್ಕುಂ ಭೇದೋಕ್ತಿಕ್ರಮವಿಚಾರಿತೋರು ಪ್ರಾಸಂ (ಶಬಿಂಗಾ ೨-೩೨); ಒಂದಿದ ಚತುಷ್ಪದಿಗಳೊಳೊಂದೇ ತೆಱನೆರಡು ಪಾದಮುಂ ಮೇಣ್ ಮುಂದರ್ಕೊಂದರೆ ಬರ್ಕುಂ (ಛಂದೋಂಬು. ೩-೨೫೯ ಅಡಿ); ಪದ್ಯವು ಪಾದದಿಂದ ಕೂಡಿರುವುದು. ಪದ್ಯದ ಪಾದವು ಗಣ ಮತ್ತು ಪ್ರಾಸಗಳ ನಿಯಮವುಳ್ಳ ಶಬ್ದಸಂಘಟನೆಯಾಗಿರುವುದು (ಕೃಪಿ. ೬೯). ೧೨. [ಜ್ಯೋತಿ] ಒಂದು ನಕ್ಷತ್ರದ ಕಾಲ ಮಾನದ ನಾಲ್ಕನೆಯ ಒಂದು ಭಾಗ ; ರಾಶಿಯ ಒಂಬತ್ತನೆಯ ಒಂದು ಭಾಗ ; ಒಂದು ನಕ್ಷತ್ರಕ್ಕೆ ನಾಲ್ಕು ಪಾದ, ಒಂಭತ್ತು ಪಾದಕ್ಕೆ ಒಂದು ರಾಶಿ (ಭಾಸ್ಕರ. ೬೯-೬); "ಪದಪೂರಣೆ ಕಾಲು ತೇಜ ಮೂರ್ಪಾದಾಖ್ಯಂ" (ಜಾಪಾಶಂ. ೦೫೩); "ಅಂಘ್ರಿ ಪದಪೂರಂ ತೇಜ ಪಾದಾಹ್ವಯಂ" (ಜಾಪಾರ. ೦೩೦).

ಪಾದ ಬೆಳಸು, ಪಾದ ಬೆಳೆಸು = (ಗೌರವಾರ್ಥದಲ್ಲಿ ಅಥವಾ ವ್ಯಂಗ್ಯವಾಗಿ) ಬರು ; ಆಗಮಿಸು; ದಯಮಾಡಿಸು : ನಾಮಕರಣದ ದಿನ ಸ್ವತಃ ಅವರೇ ಪಾದ ಬೆಳಸಿ ಬಂದು ನೋಡಿ ಹೋದರು (ಬಿಡ್ಡಿಣ. ೦೩) ; ತಾಯಿ ತಕ್ಕ ಮಟ್ಟಿಗೆ ಸಂತೃಪ್ತಳಾಗಿ ದಿವಾನಖಾನೆಯ ಕಡೆಗೆ ಪಾದ ಬೆಳೆಸಿದಳು (ಪುಪರು. ೫೭೭). [ಸಂ.]

ಪಾದಕಟಕ (ನಾ). ಕಾಲಿಗೆ ಹಾಕಿಕೊಳ್ಳುವ ಕಡಗ, – ಬಳೆ : "ಸಿಂಜಿನೀ, ಪಾದಕಟಕಃ—ಈ ೨ ಕಾಲ ಕಡಗಂ" (ಹಲಾಯು. ೯೨-೯೦೭); "ಪಾದಾಂಗದಂ . . . ಪಾದಕಟಕಃ—೯ ಅಂದಿಗೆ, ಕಾಲುಸರಪಣಿ, ಪಾಗಡ, ಕಾಲುಕಡಗ, ಕಾಲುತೊಡಿಗೆ" (ಸಿಕ್ಕಾಂಕ. ೨೦೦). [ಪಾದ+ಕಟಕ$_3$]

ಪಾದಕಡಗ (ನಾ). = ಪಾದಕಟಕ : ಅಭಿಮನ್ಯುವನ್ನು ರಮಣೀಯವಾದ ಪೀತಾಂಬರಗಳಿಂದಲೂ . . . ಪಾದಕಡಗಗಳಿಂದಲೂ ಅಲಂಕರಿಸಿ (ಕೃಪಾಪ. ೦೨೯). [ಪಾದ+ಕಡಗ$_1$]

ಪಾದಕೃಚ್ಛ್ರ (ನಾ). ಪ್ರಾಯಶ್ಚಿತ್ತರೂಪವಾಗಿ ನಾಲ್ಕು ದಿನಗಳು ಮಾಡುವ ಒಂದು ವ್ರತ : ೧ ಮೊದಲ ದಿನ ಒಪ್ಪತ್ತು ಹಗಲು ಊಟ, ಎರಡನೆಯ ದಿನ ಒಪ್ಪತ್ತು ರಾತ್ರಿ ಊಟ, ಮೂರನೆಯ ದಿನ ಅಪಾಚಿತ ಅನ್ನ (ಬೇಯಿಸದೆ ಆಹಾರ), ನಾಲ್ಕನೆಯ ದಿನ ಪೂರ್ಣ ಉಪವಾಸ–ಹೀಗೆ ವ್ರತ ಮಾಡುವಿಕೆ. ಇದರ ಇನ್ನೊಂದು ಪ್ರಕಾರ–ಮೊದಲ ದಿನ ರಾತ್ರಿ ಊಟ, ಎರಡನೆಯ ದಿನ ಉಪವಾಸ, ಮೂರನೆಯ ದಿನ ಊಟ, ನಾಲ್ಕನೆಯ ದಿನ ಉಪವಾಸ : ದೋಷಪರಿಹಾರಾರ್ಥವಾಗಿ ಶರೀರಬಾಧಾತ್ಮಕತ್ವದಿಂ ಮಹತ್ಕಷ್ಟಸಾಧ್ಯಂಗಳಾದ ಪಾದಕೃಚ್ಛ್ರ ಮುಂತಾದವುಗಳ ಪಕ್ಷಮಾಸಾದಿಕಂಗಳಲಿ ಅನ್ನಮಂ ಪೆರ್ಚಿಸಿ ತಗ್ಗಿಸಿಕೊಂಬುದು (ಪಸೇಶ. ೦೫೯) ; ಒಂದು ಉಪವಾಸಮಂ ಮಾಡಿ ಮರುದಿನ ಪಾರಣೆಯೋಕಭುಕ್ತ ಮೊದಲಾದ ನಾಲ್ಕುದಿನದ ವ್ರತವೂ ಪಾದಕೃಚ್ಛ್ರವೆನಿಸೂದು (ಶಾಕೀಸು. ೯೯೨-೩). [ಸಂ.]

ಪಾದಗಟ್ಟೆ (ನಾ). ೧. ಕೇರನ್ನು ಕಟ್ಟಿ ಹೊರಡಿಸುವ ಸ್ಥಳ : ಕಳಸದಾರತಿ ಹಿಡಿದ ಐದೆಯರ ಗುಂಪು ತೇರಿಗೂ ಪಾದಗಟ್ಟೆಗೂ ಆರತಿಯನ್ನು ಬೆಳಗಿತು (ಇಪಶೀ. ೦೧೩); ಅವನಿಗೆ ಊರಿನ ಮುಂದಿನ ಪಾದಗಟ್ಟೆಯ ಬಸವನೂ ಬೇಕು ; ಊರ ಹೊರಗಿನ ಗರುಡಗಂಬದೆದುರಿನ ಹನುಮನೂ ಬೇಕು (ಶಪ್ಪಶಾ. ೦). ೨. ಕೆಳಗಿನ ಭಾಗ ; ಅಡಿಭಾಗ : ಪಾದಚಾರಿಯಾಗಿಯೇ ಅನಂತ 'ಚಾರಮಿನಾರ' ನೋಡಲು ನಡೆದ . . . ಪಾದಗಟ್ಟೆ ಮುಟ್ಟಿ, ಮೇಲೆ ಕೆಳಗೆ ನೋಡಿ ಮಳೆಗೆ ಹಿಂತಿರುಗಿದ (ಜಲಾಪ. ೫೭). [ಪಾದ+ಕಟ್ಟೆ$_1$]

ಪಾದಗಾಣಿಕೆ 'ಪಾದಗಾಣ್ಕೆ' ನೋ.

ಪಾದಗಾಣ್ಕೆ. ಪಾದಗಾಣಿಕೆ (ನಾ). ಪೂಜ್ಯರಾದ ಗಂರು ಹಿರಿಯರಿಗೆ ಒಪ್ಪಿಸಂವ ಕಾಣಿಕೆ : ವಿಕ್ರಮನಾಯಕಂ ಮತ್ತೆ ಕೆಲಂಬರ್ ಧೀರ ಕೆರಾತರುಂ ಬಂದು ವಂದಿಸಿ ಪಾದಗಾಣ್ಕೆ ಮಾಡಿದರ್ (ಹಂಪ.ಕ. ೪-೬೨ ಪ). **ಪಾದಗಾಣಿಕೆ :** ಗುರುಗಳಿಗೆ ಪಾದಗಾಣಿಕೆ ಅರ್ಪಿಸುವೇಕು (ಪೂರ್ಣ). [ಪಾದ+ಕಾಣ್ಕೆ]

ಪಾದಘಾತ (ನಾ). ೧. ಹೆಜ್ಜೆಯ ಹೊಡೆತ, — ಪೆಟ್ಟು. ೨. ಹೆಜ್ಜೆಯಿಂದಂವ ಶಬ್ದ ; ಹೆಜ್ಜೆಸದ್ದು : ತಾಯಿಯ ಪಾದಘಾತ ಮಂದವಾಗಲು ತನ್ನ ವಿಚಾರವನ್ನು ಮುಂದುವರಿಸುವನು (ಚಿಮುಂಕ. ೦). [ಪಾದ+ಘಾತ]

ಪಾದಚಾರಿ (ನಾ). ೧. ಕಾಲುನಡಗೆಯಲ್ಲಿ ಸಾಗುವಂತಹುದು : ಬರುವಾಗ ದುರದೃಷ್ಟ ಬೇಗನೆ ಬರುವುದು ಧಾವಿಸಿ ಕುದುರೆಯನೇರಿ ಬೇಳ್ಕೊಂಡು ಹೋಹಾಗ ಮೆಲ್ಲನೆ ಹೋಹುದು ಹೋಹುದು ಅದು ಪಾದಚಾರಿ (ಇಂಡಾಪ. ೦೬೨-೧೬). ೨. ಕಾಲುನಡಿಗೆಯಲ್ಲಿ ಸಾಗುವ ವ್ಯಕ್ತಿ : ಪ್ರಭುಗಳೂ ಇವರ ಸಂಗಡ ಸೇರಿ, ಪಾದಚಾರಿಗಳಾಗಿ ದೆಟ್ಟಿ ಗುಡ್ಡಗಳನ್ನು ಹತ್ತಿ ಇಳಿದು . . . ವನಭೋಜನ ಮಾಡಿದುದುಂಟು (ಶಾಂಚರಿ. ೦೨೨); ರಥದಿಂದ ಇಳಿದು, ಪಾದಚಾರಿಯಾಗಿ ಗುರುವಿನ ಬಳಿಗೆ ಸಾರಿ, ವಂದನೆ ಮಾಡಿ, ಒಂದು ಕಡೆ ನಿಂತಳು (ಪಕ್ಕುಕು. ೦೬). ೩. ಕಾಲುನಡೆಯಂ ಸೈನಿಕ ; ಪದಾತಿ ; ಕಾಲಾಳು : "ಪದಾತಿಃ . . . ಪದಿಕಃ, ಪಾದಚಾರೀ — ಈ ೮ ಕಾಲಾಳ್" (ಪಣಾಯು. ೬೪-೨೧೬). [ಸಂ. ಪಾದಚಾರಿನ್]

ಪಾದಚ್ಛಾಯೆ (ನಾ). ಕಾಲಿನ ಪಡಿಯಚ್ಚು ; ಹೆಜ್ಜೆಯಂ ಪಡಿಯಚ್ಚು : ಪಾದಚ್ಛಾಯೆಯನಿಟ್ಟು ಜೋಯಿಸದಭಪ್ರಾಯಂಗಳಂ . . . ಪೇಟ್ಟ ಜೋಯಿಸಮದಾರ್ಗಂ ಮರ್ತ್ಕರೊಳ್ ದುರ್ಲಭಿ (ಶುಳುಪು. ೬-೨೦). [ಸಂ. ಪಾದಚ್ಛಾಯಾ]

ಪಾದಜ (ನಾ). ಭಗವಂತನ ಪಾದಗಳಿಂದ ಜನಿಸಿದವನು ; ಶೂದ್ರ : ಸಂಪದದೊಳನೂನರ್ಕ್ಕೆ ಪರದರ್ ಸಲೆ ಧಾರ್ಮಿಕರಕ್ಕೆ ಪಾದಜ[ಕಾಣಂ. ಶೂದ್ರ]ರ್ (ಪಂಚಮಂ. ೩೦೯-೮); ನಿಜ ಕೃಷಿವ್ಯವಸಾಯದಲಿ ತದ್ದಿಷ್ಟದೊಲದ ಶಿಶ್ರೂಷೆಯಲಿ ಪಾದಜರು ಕೃತ್ಕರು (ಭುಜಾ.ಕ. ೦೪-೪೩). [ಸಂ.]

ಪಾದತಲ, ಪಾದತಳ (ನಾ). ಹೆಜ್ಜೆಯ ಕೆಳಭಾಗ ; ಅಂಗಾಲು : ಮುಖ ಚಂದ್ರಕಾಂತವ ಕುಂತಲ ನೀಲವ ಪದ್ಮರಾಗವ ಪಾದತಲವ (ಇಂಡಾಪ. ೧೪-೩೬). **ಪಾದತಳ :** "ಪಾದತಳವಾದಡಿಯೆನೆ" (ಪಾಪ್ರಕೋ. ೬೬-೨) ; ಸಿರದಲುದನು ತೆತ್ತೀಸಕೋಟಿ ದೇವತೆಗಳು ಪಾದತಳದಲ್ಲಿ ಧೂಮಿ ಜನನವ (ಜಪಕ. ೩೬೬). [ಪಾದ+ತಲ]

ಪಾದತಳ 'ಪಾದತಲ' ನೋ.

ಪಾದತಿಱುಗೆ (ನಾ). ಪಾದಪೂಜೆಯ ಸಮಯದಲ್ಲಿ ಕೊಡುವ ಕಾಣಿಕೆ : ಹೂರಣಾ ದಂಡದೋಷದಿಂ ಪಾದತಿಱುಗೆಯಂ ಕೊಂಬುದಿಲ್ಲೆಂದು [ಒ]ಂದು ಹೊನ ಪಾದಪೂಜೆಯಂ ಕೊಂಡು (ಶಾ. ಪ. ೬೦ -೩; ೧೨೭೧). [ಪಾದ+ತಿಱುಗೆ]

ಪಾದತ್ರಾಣ (ನಾ). ೧. ಕಾಲಿನ ಶಕ್ತಿ,—ಬಲ : ಧಾರವಾಡದ ಜೀವ್ಕೆ ಪಾದತ್ರಾಣ ಬಹಳ ಬೇಕು (ಜೀಪ್ರ. ೦೪೦). ೨. ರಕ್ಷಣಾರ್ಥವಾಗಿ ಪಾದಗಳಿಗೆ ತೊಡುವ ಸಾಧನ ; ಮೆಟ್ಟು ; ಪಾದರಕ್ಷೆ : " ಪಾದತ್ರಾಣಮುಪಾನತ್ [ನಾದುತೆ] ತಾನಂತದನುಪದೀ[ನಾ]ನಾನುಂ " (ಪಾಪ್ರಕೋ. ೪೯-೨೪). [ಪಾದ+ತ್ರಾಣ]

ಪಾದದಾಹ (ನಾ). ಒಂದು ವಿಧವಾದ ವಾತರೋಗ ; ಪಿತ್ತರಕ್ತದಿಂದ ಕೂಡಿದ ವಾತಸಂಚಾರದಿಂದ ಉಂಟಾಗುವ ಉರಿಮಾಯು : ಮುಂಡಿವಾಳ, ಲಾವಂಚ . . . ಪ್ರಾತಃಕಾಲದಲ್ಲಿ ದುಡ್ದು ೧ ತೂಕ ಚೂರ್ಣವಂ ಜೇನುತುಪ್ಪದಿಂ ಕಲಸಿ ಸೇವಿಸೆ ಕ್ಷಯ, ರಕ್ತಪಿತ್ತ, ಪಾದದಾಹ, ಪ್ರಮೇಹ . . . ರಕ್ತಾರ್ಶರೋಗ ಸಹ ಕೆಡುಗುಂ (ಪಥ್ಯ. ೨೪೯). [ಸಂ.]

ಪಾದಧೂಳಿ (ನಾ). ಪಾದಕ್ಕೆ ಹತ್ತಿರುವ ಧೂಳು : ಅಂತರಂಗ ದೊಳಾಣ್ಮನ ಪಾದವ ಧರಿಪ ಧಾವೆಯರ ಪಾದಧೂಳಿಗಳಿಂದೆ ಪಾವನಮಹುದೀ ಮೇದಿನಿಯೆನೆ ಮಿಳ್ಕುದೇನು (ಪಂಪ. ೨-೩), ನವ್ಮ ತಾಯಿಯ ಪಾದಧೂಳಿಯು ನವ್ಮ ಪ್ರಾಣದ ನಿಲುಗಡೆ (ಪಂಚು. ೪೬-೨೬); ಶಿವಶರಣ — ಸಾಧು — ಸತ್ಪುರುಷರ ಪಾದಧೂಳಿಯಿಂದ ಕನ್ನಡನಾಡು ಪಾವನವಾಗಿದೆ (ಕಸ್ಮಾ. ೦೬). [ಪಾದ+ಧೂಳಿ (=ಧೂಲಿ)]

ಪಾದನ್ಯಾಸ (ನಾ). ಹೆಜ್ಜೆಯಿಂಡುವಿಕೆ : ಪಾದನ್ಯಾಸವಿಳಾಸಮುರ್ವರೆಯು ವಿಶ್ವಾಧ್ಯಾಂತಮಂ ತೂಳ್ದೆ . . . ದುವರಿಗೆ ವಂದಂ ಪಾರ್ಶ್ವ ಯೋಗೀಶ್ವರಂ (ಪಾರ್ಶ್ವಕ್ಕ. ೦೪-೪೬). [ಪಾದ+ನ್ಯಾಸ]

ಪಾದಪ (ನಾ). ಬೇರಿನಿಂದ ನೀರಂ ಕಂಡಿಯಂವುದು ; ಮರ, ಗಿಡ ಮಂತಾದುವು : "ತರು ಶಾಖಿ ಪಾದಪಂ . . . ಶಿಖಿ ವೃಕ್ಷಂ" (ಪಜ್ಜೂಕೋ. ೩೦—೦); ಪಾದಪಂಗಳ ಪುಷ್ಪಸ್ತಬಕಂಗಳಂ ಮುಱಿವುತಂ (ಶಾಪುರಾ. ೬೩೦); ಕಡಿದರರಿಭುವಾದಪವನಡಗೆಡಹಿದರು ಗಜಗಿರಿಗಳನು (ಭುಜ್ಕಾಲೀ. ೪—೯). [ಸಂ.]

ಪಾದಪಟ್ಟ (ನಾ). ಗೌರವಸೂಚಕಚಿಹ್ನೆಯಾಗಿ ಕಾಲಿನಲ್ಲಿ ಧರಿಸುವ ಒಂದು ಬಗೆಯ ಆಭರಣ ; ಕಾಲ ತೊಡರು : (೫). [ಸಂ.]

ಪಾದಪಲ್ಲಟ (ನಾ). (ಪದ್ಯದ) ಸಾಲುಗಳ ಅದಲು ಬದಲು : ಈ ಮೇಲಿನ ಪದ್ಯಗಳಲ್ಲಿ ಅಕ್ಷರಪಲ್ಲಟ, ಪದಪಲ್ಲಟ, ಪಾದಪಲ್ಲಟ ಮತ್ತು ಪ್ರಾಸಪಲ್ಲಟಗಳೂ ಕಂಡುಬರುವುದನ್ನು ಗಮನಿಸಬಹುದು(ಭುಚಾಲಾಂ. ೧೫). [ಪಾದ+ಪಲ್ಲಟ]

ಪಾದಪಾತ (ನಾ). ವಂಲ್ಲಯಂದ್ದದಲ್ಲಿಯ ದೋಷಗಳಲ್ಲಿ ಒಂದು ; ಕಾಲಿನಿಂದ ಒದೆಯುವುದು : ಕಳಂದೊಳ್ಳು ನಿಜಿಸುಗೆಯುಂ ನಷಿಹತಿ ದಶನಹತಿ ಪಾದಪಾತಂ ಮುಷ್ಟಿಪಾತಮೆಂಬ ದೋಷಂಗಳೇ ಪೊರ್ದದ ನಾಲ್ಕುಂ ಸ್ಥಾನದೊಳಂ . . . ಪಲತೆಱದ ಪಾತಂಗಳೊಳಂ ನೆರೆದು (ಪಂಪ್ರಕ್ರಿ. ೫—೬೬ ಪ). [ಪಾದ+ಪಾತ]

ಪಾದಪಾಶ (ನಾ). ೧. ದನ, ಕರು ಮಂತಾದ ಪ್ರಾಣಿಗಳ ಕಾಲಿಗೆ ಕಟ್ಟುವ ಹಗ್ಗ : ಪಾದಪಾಶ—ಪಾದವಾಸ (ಪಾಪ್ರ. ೨೦೨ ಕೃಪೋ). ೨. [ಛಂದ] ಮಧ್ಯಲಘುವುಳ್ಳ ಗಣ ; ಅಗ್ನಿಗಣ ; ರಗಣ : ಇದಱಂ [ತೆಯವ್ವೆ] ನಿಯಮಂಗಳುದಯಿಸೆ ತೃತೀಯ [ಪಾದದೊಳ್] ವಾದವಾಶ [ಸುರವಾರ್ಷಭರಂ] ಮದವದ್ಗಜೇಂದ್ರಗತಿ ನಾಗವರ್ಮನಿಂ (ಛಂದೋಂಬು. ೬-೨೦೬). [ಸಂ.]

ಪಾದಪಾಶನ (ನಾ). ೧. ಮರ, ಗಿಡ ಅಥವಾ ಸೌದೆಯೇ ಆಹಾರವಾದುದಂ ; ಬೆಂಕಿ ; ಅಗ್ನಿ. ೨. [ಛಂದ] ಮಧ್ಯಲಘುವುಳ್ಳ ಗಣ ; ಅಗ್ನಿಗಣ : ನನಯುಗ ಮಿರೆ ಪಾದವಾಶನನಿರಿರೆ ಬಂದು ಕೋಕನದವದನೆ ನವಿಯಿಂ ವಿನುತಮಿದುವೆ ನಾವುದಿಂ (ಛಂದೋಂಬು. ೬-೨೦೬). [ಪಾದವ+ಅಶನ]

ಪಾದಪೀಠ (ನಾ). ಕಾಲಿಡುವುದಕ್ಕಾಗಿ ಮಾಡಿದ ಪೀಠ ; ಕಾಲುಮಣೆ : ವಿಜಯ ಪೊಡಮಡುವ ತೆಱನೆರ್ದೆಯೆಱಪನನುವಡಿಸಿ ಪೊಳೆವ ಪಾಳುವ ಕಿಱಿಗಿಱಿದ ಪೊನ್ನ ಪೊಂಗಳ ತುಱುಗರ್ ಪರಿಲಸೆ ವಾದಪೀಠದ

ದೊದರೊಳ್ (ಕಂಚಿ. ೦೦-೩೦); ಯಾದವವಮಹೀಧವಪಾಳಿವಮಣಿಬ್ರಜ ಪ್ರಧಾಲಿಂಗಿತಪಾದಪೀಠಂ (ಶಾಇ. xx, ೧೬-೬; 1078); ವಿನಯಂ ಗುಂದದೆ ಪಾದಪೀಠತಳದೊಳ್ ಕುಳ್ಪರ್ ಲೋಕೈಮಿತ್ರನ ನೊತ್ಸಂಬದಿನೆಸ್ತಿ (ಕುಸ್ತ. ೧-೬). [ಪಾದ + ಪೀಠ]

ಪಾದಪೂಜೆ (ನಾ). ೧. ಗೌರುಹಿರಿಯರ ಪಾದಗಳನ್ನು ಪೂಜಿಸುವುದಂ : ಅಂತು ಮಹಾಜನರ ಪಾದಪೂಜೆಯಂ ಕೊಟ್ಟು (ಕೂಡ್ಕಾಣ. ೬-೬೬ 1079): ಮೇಗಣ ಅರಮನೆತ್ತರು ಗದ್ದೆಯ ನೀರ್ವಾರಿಗಂ ಕ್ರಯವಂ ಕೊಟ್ಟು ಊರಿಂಗೆ ಪಾದಪೂಜೆಯ ಕೊಟ್ಟು ಮಾನ್ಯವಾಗಿ ಆ ದೇವರಿಗೆ ಬಿಟ್ಟರು (ಶಾಇ. xx, ೩೨-೨೦; 1138). ೨. ಮಠಾಧಿಪತಿಗಳೆದುರಿಗೆ ಪಂಥದ ಮೂಲಪುರುಷರ ಪಾದಗಳಿಗೆ ಮಾಡುವ ಪೂಜೆ : ಇಂದು ಅವರ ಮನೆಯಲ್ಲಿ ಶೃಂಗೇರಿಮಠದ ಸ್ವಾಮಿಗಳನ್ನು ಕರೆಸಿ ಪಾದಪೂಜೆ ನಡೆಸಿದರು (ಕೂಡ). ೩. (ಅಲಂ) ಒದೆಯುವುದಂ; ಥಳಿಸುವುದು : ಸತ್ಯಗೆ ಪಾದಪೂಜೆಯನೆಸಪ ನಯಗಾಜ್ಞ್ (ಅಕ್ಕಣ್ಣ. ೧೦-೧೦೩); ಮೂರು ಮಾಲ್ಕು ಜವ ಕಾಡಾಳರಿಗೆ ಅವರು 'ಪಾದಪೂಜೆ'ಯನ್ನು ಮಾಡಿದರು (ಎಚಿ. ೦೫೯).

[ಪಾದ + ಪೂಜೆ]

ಪಾದಪೂರಕ (ನಾ). ಪದ್ಯದ ಸಾಲನ್ನು ಪೂರ್ಣಗೊಳಿಸಲು ಪದ ಅಥವಾ ಅಕ್ಷರವನ್ನು ಸೇರಿಸುವುದು; ಸಾಲನ್ನು ಭರ್ತಿಮಾಡುವುದು : ತನ್ನ ಆಶ್ರಯದಾತನಿಗೆ ಆದರವನ್ನು ತೋರಿಸಲೂ . . . ಪಾದಪೂರಕವಾಗಿಯು. ನೃಪತುಂಗನ ಹೆಸರನ್ನು ಗ್ರಂಥಕಾರನು ಬಳಸಿರುವನೆಂಬುದು ಸ್ಪಷ್ಟವಾಗಿದೆ (ಕಾಶಾ. ೫೬). [ಪಾದ + ಪೂರಕ]

ಪಾದಪೂರಣ (ನಾ). ಪದ್ಯದ ಪಾದಗಳನ್ನು ಪೂರ್ಣಗೊಳಿಸುವುದು : " ನೆಱೆ ಸಲೆ ತವೆ ಮಿಗೆಯೊಗುಮಿಗೆಯುಱಿಯೆಂಬಿವು ಪಾದಪೂರಣಾರ್ಥಂ" (ಕಚಂ. ೩೪): ಹಕಾತ್ಸಾಗಿ ಪಾದಪೂರಣಕಾರ್ಯದಲ್ಲಿ ಅವುಗಳಿಗೆ ಸಮನ್ವು ಹೋಗುತ್ತದೆ ; ಅವುಗಳಿಂದ ಮಾತ್ರಾರಕ್ಷಣವಾಗುವುದು ಮಾತ್ರ (ಕಾಅಶಾ. II, ೨೦೦). [ಪಾದ + ಪೂರಣ]

ಪಾದಪೆಂಡೆಯ (ನಾ). ದಿರುವಿನ ಚಿಹ್ನೆಯಾಗಿ ಕಾಲಲ್ಲಿ ಧರಿಸುವ ಒಂದಂ ಬಗೆಯ ಕಡಗ : ಪಾದಪೆಂಡೆಯವಡೆದೆಸೆವ ಪೆಂವ್ (ಕಾಚ.೭೭).

[ಪಾದ + ಪೆಂಡೆಯ]

ಪಾದಪ್ರಕ್ಷಾಲನ, ಪಾದಪ್ರಕ್ಷಾಳನ (ನಾ). ಕಾಲುಂಗಳನ್ನು ತೊಳೆಯುವುದಂ : ತನ್ಮನಿಯುಗಲಪಾದಪ್ರಕ್ಷಾಲ [ಜಾಅಂ. ೪] ನೋದಕದೊಳ್ಕೊರಳ್ದು (ಜಿಪು. ೭-೨ ಪ); ಪಾದಪ್ರಕ್ಷಾಲನಮಂ ಸಾದರದಿಂ ಮಾಡಿ ಸಾರ್ದರಲ್ (ಪುಣಾಪು. ೦೦-೫೫). **ಪಾದಪ್ರಕ್ಷಾಳನ** : ಶ್ರೀಕೃಷ್ಣನು ಯಜ್ಞರಕ್ಷಣೆಯ ಭಾರವನ್ನೂ ದ್ರಾಹ್ಮಣರ ಪಾದಪ್ರಕ್ಷಾಳನಾದಿ ಕೈಂಕರ್ಯವನ್ನೂ ವಹಿಸಿದನು (ಜಾಕೃಪ. ೦೦೦). [ಪಾದ + ಪ್ರಕ್ಷಾಲನ]

ಪಾದಪ್ರಕ್ಷಾಳನ 'ಪಾದಪ್ರಕ್ಷಾಲನ' ನೋ.

ಪಾದಪ್ರಣತ (ನಾ). ಪಾದಗಳಿಗೆ ನಮಸ್ಕರಿಸಿದವನು, –ದಾಗಿದವನು : ದ್ವಾರಪಾಲಕರಸಂಗವರ ಬರವವಱಿ ಬಂದು ಕಾಣಿಸೆ ಲೋಕಾಂತಿಕ ದೇವರವೀಶ್ವರಾದಪ್ರಣತರಾಗಿ (ಜಾಅಪು. ೦೩-೧೨ ಪ).

[ಪಾದ + ಪ್ರಣತ]

ಪಾದಪ್ರಣಾಮ (ನಾ). ಕಾಲಿಗೆ ನಮಸ್ಕಾರ ಮಾಡುವುದು: ಕಾದಂಬರಿಯು ಮೆಯ್ಯ್ ವಲವುಗೂಡಿ ಚಂದ್ರಾಪೀಡನಿಗೆ ಪಾದಪ್ರಣಾಮವ ಮಾಡಿ . . . ಕುಳಿತುಕೊಂಡಳು (ಪಚಂ. ೫೬). [ಪಾದ + ಪ್ರಣಾಮ]

ಪಾದಬಂಧ (ನಾ). (ಆನೆ ಮೊದಲಾದುವುಗಳ) ಕಾಲಿಗೆ ಕಟ್ಟುವ ಸರಪಣಿ; ಸಂಕೋಲೆ : "ನಿಗಳಃ, ಪಾದಬಂಧಃ, ಹಿಂಡೇರಃ, ಶೃಂಖಲಾ, ಅಂದುಳಃ —ಈ ೫ ಅವೆಯ ಕಾಲ್ಗುಟ್ಟು" (ಪಚಾಕು. ೫೫-೬೦); " ಹಿಂಡೇರ ಮಂದುಳಂ ಶೃಂಖಲಾ ಪಾದುಬಂಧಂ ಏಗಳಮೆನಲು ಸಂಜಲೆಯೆನಿಕ್ಕುಂ " (ಪುಂಗಾ. ೧೬-೬). [ಪಾದ + ಬಂಧ]

ಪಾದಮಾರ್ಗ (ನಾ). ೧. ಕಾಲುನಡಗೆಯಂ ದಾರಿ; ಕಾಲುದಾರಿ. ೨. ಕಾಲುನಡಗೆ : ಅವಧಿಜ್ಞಾನಿಗಳ್ ಪವನಮಾರ್ಗದಿಂದಿಳೆವುದಂ ಕಂಡು ಪಾದಮಾರ್ಗದೊಳ್ ತೀರ್ಥಂಕರದೊಳ್ ಅವತರಿಪುರಸ್ಸರಮಿದಿರ್ಗೊಡು (ಜಿಪು. ೫-೫೬ ಪ); ಪಾದಮಾರ್ಗದಿಂ ಪೋಗಿ ಸೌಧರ್ಮಕಲ್ಪದೊಳಗ್ಗಳ ಕೃತಕಚೈತ್ಯಾಲಯಂಗಳಂ ಕಲ್ಪಪಾದಪಪ್ರತಿಪಾದಿತ ವಿವಿಧಾರ್ಚನಂ ಗಳಿಂದರ್ಚಿಸಿ (ಪಂಪ್ರ. ೧-೬೬ ಪ). [ಪಾದ + ಮಾರ್ಗ]

ಪಾದಮೂಲ, ಪಾದಮೂಳ (ನಾ). ೧. ಕಾಲಿನ ಕೆಳಭಾಗ ; ಅಂಗಾಲು. ೨. ದೇವಸ್ಥಾನದ ಸೇವೆಯಲ್ಲಿ ಕಾಯಮ್ಮಾಗಿ ನಿರತರಾದ ಪರಿಚಾರಕ ವರ್ಗ: ಶ್ರೀಮದ್ದಿವ್ಯಕಲ್ಪಪಾದ್ಯೆತಧಾರರ ಮಯ್ದುನಾವು ಣ್ಮವಂ ಪಾದಮೂಲಮುಂ ಪನ್ನೆರಡಱಿಗಿಣ್ಣಾಕ್ಕಳುಮಿಬ್ಬು (ಪಾ. ೪ (೦). ೫೨. ೫೬-೬ ; ೨೫೬ ಪ). ೩. (ಅಲಂ) ಕಾಲಿನ ಬಳಿ,—ಸಮೀಪ : ಅತನ ಪಾದಮೂಲದಲ್ಲಿ ಅರಿಂದಮನ ಅನಮಸಾಹಸಿಯಾದ ವೀರವಿಕ್ರಮನೆಂಬ ನಾಯಿಯೊಂದು ಕುಳಿತುಕೊಂಡು ದೇವೇಂದ್ರನ ಮುಖವನ್ನೇ ನೋಡುತ್ತಿದ್ದಿತು (ಕಾಕಪ. ೦); ಒಂದು ದಾನವ ಎಲ್ಲಿಂದಲೋ ಬಂದು ಅವರ ಪಾದಮೂಲದಲ್ಲಿ ಬಿತ್ತು (ಪುಚಾಕ. ೫೪). **ಪಾದಮೂಳ** : ೨. ಶ್ರೀರಾಮೇಶ್ವರದೇವರ್ಗ್ಗೆ ಅಂಗಭೋಗಕ್ಕಂ ರಂಗ ಭೋಗಕ್ಕಂ ಗನ್ಧಧೂಪದೀಪನಿವೇದ್ಯಕ್ಕೆ ದೇಗುಲದ ಖಂಡಸ್ಫುಟಕಲ್ಲಿಯ ತಪೋಧನರ ಗ್ರಾಸಕ್ಕ [ಂ] ಪಾದಮೂಳಪರಿಗ್ರಹಕ್ಕಂ . . . ಕೊಟ್ಟರು (ಕಇತ. ೬೦-೫೨-೪೦ ; 1121); ಅಲ್ಲಿಯ ಬ್ರಾಹ್ಮಣರ ತಪೋಧನರ ದೇವರ ಬ್ರಹ್ಮಪುರಿ ನಾಗಿಯಣ್ಣಳಿಟ್ಟನ ಗ್ರಾಸಕ್ಕಂ ಪಾದಮೂಳ ಪರಿಗ್ರಹಕ್ಕಂ . . . ಬಿಟ್ಟರು (ಕಇತ. ೫೦-೫೩-೫೫; 1121). [ಪಾದ+ಮೂಲ]

ಪಾದಮೂಲಿ (ನಾ). =ಪಾದಮೂಲ ೨ : ಆ ಊರ ೨೪ ಪ್ರಜೆ ಜನನಾಳು ಯಮ್ಮಾಳದೇವರ ಪಾದಮೂಲಿಗಳು ಯಿವರ್ಕ್ಕಳ ಸನುಮತದಿಂದ . . . ಕೊಂಡ ಕ್ಷೇತ್ರದ ವಿವರ (ಶಾಇ. IX-II ; ೪೫೨-೪ : 1402) ; ತುಳುವದ ಶಾಸನಗಳಲ್ಲಿ ಬರುವ ಅಧಿಕಾರಿಗಳು ಯಾ ಅಧಿಕಾರವರ್ಗಗಳು . . . ಒಕ್ಕಲರು (ಒಕ್ಕಲ ಮಕ್ಕಳು), ಮೂಲಿಗರು, ಪಾದಮೂಲಿಗಳು (ತುಶಾಸಾ. ೫೬೦). [ಸಂ. ಪಾದಮೂಲಿನ್]

ಪಾದಮೂಳ 'ಪಾದಮೂಲ' ನೋ.

ಪಾದರ್ 'ಪಾರದಾರ' ನೋ.

ಪಾದರ (ನಾ). ಒಂದು ಬಗೆಯ ಸಸ್ಯ : "ಮುಟೋರಃ —ಱಲುು, ಪಾದರ, ಪಾರಿವಾ(ಣ)ಳ, ಕಕ್ಕೆ, ಅರಸೆಕ್ಕೆ, ಮುತ್ತುಗ, ಮಂದಾರ" (ಓಷಧಿ. ೦೦೫). [?]

ಪಾದರಕ್ಕೆ (ನಾ). =ಪಾದರಕ್ಷೆ : ಪರಪದಂ ತದ್ಭವವಾದ ಸವಾಸ್ಕೆ . . . ಪಾದರಕ್ಷಾ—ಪಾದರಕ್ಕೆ (ಹುಡ. ೨೯೯ ಪ್ರಹೋ); ಪಾದರಕ್ಕೆ, ಪರದೊವ್ಮಂ, ದಾಸಾಲೆ (ಕಣ್ಣಾ. ೨೪೩ ಪ್ರಹೋ). [<ಸಂ. ಪಾದರಕ್ಷಾ]

ಪಾದರಕ್ಷಣ (ನಾ). =ಪಾದರಕ್ಷೆ : "ಉಪಾನತ್, ಪಾದರಕ್ಷಣಂ—ಈ ೨ ಪಾದರಕ್ಷೆ" (ಪಲಾಹು. ೩೨-೦೫೩). [ಪಾದ+ರಕ್ಷಣ]

ಪಾದರಕ್ಷೆ (ನಾ). ರಕ್ಷಣಾರ್ಥವಾಗಿ ಪಾದಗಳಿಗೆ ತೊಡಂವ ಸಾಧನ ಮೆಟ್ಟು ; ಪಾದತ್ರಾಣ : "ಉಪಾನತ್, ಪಾದರಕ್ಷಣಂ — ಈ ೨ ಪಾದರಕ್ಷೆ" (ಪಲಾಹು. ೩೪-೦೫೩) : ಅವನಾದರೆನು ಶ್ರೀವಿಷಾದೇವನ ನೆನೆವವನ ಬಾಯ ಶಂಬುಲ ಮೆಲುವೆ ಬೀಳುಡಿಗೆಯು ಹೊದೆವೆ ಪಾದರಕ್ಷೆಯ ಕಾಯ್ದು ಬದುಕುವೆ (ಜಪ. ೧೬೬) ; ದೇವತಾದರ್ಶನಕ್ಕೆ . . . ಪಾದರಕ್ಷೆಗಳನ್ನು ಮೆಟ್ಟಿ ಹೋಗಬಾರದು (ಜಾಂಕಲಾ. ೧).

[ಸಂ. ಪಾದರಕ್ಷಾ]

ಪಾದರಗಿತ್ತಿ, ಹಾದರಗಿತ್ತಿ (ನಾ). ವ್ಯಭಿಚಾರ ಮಾಡುವವಳು ; ಜಾರೆ : ಪರಿಜನಂಗಳ ಮೆಚ್ಚಿಸುವಾಗ ಪಾದರಗಿತ್ತಿಯೇ ಶರಣ ಸರ್ವರ ಮೆಚ್ಚಿಸುವಾಗ ಸಂತೆಯ ಸೂಳೆಯೇ ಶರಣ (ಸಿದ್ಧೇಪ. ೧೦೫-೩೨೬). **ಹಾದರಗಿತ್ತಿ** : ಈ ಮಹಾಮಹಿಮರಿಗೆ ಜಗದ ಜತ್ತಿಗೆಯ ಹಾದರಗಿತ್ತಿಯ ಹದಿನೆಂಟುಜಾತಿಯ ಮನೆಯಲ್ಲಿ ತೊತ್ತಾಗಿ ಹುಟ್ಟಿದ ಶಿವದ್ರೋಹಿಯ ಲಿಂಗವಂತರ ಮನೆಯ ಹೊಗಿಸುವರೆ (ಶೂನ್ಯಸಂ. ೨೩೯-೦೦); ಗೋಣುಗೊಯ್ಯೆಯರು. . . ಹಾದರ ಗಿತ್ತಿಯರು ಬ್ರಹ್ಮತ್ಯಕಾತಿಯರನವರತಮುಂ ಹೊನ್ನುಬಾಕಿಯರು (ಬಸವು. ೪೦-೫೫); ಗಂಡನಲ್ಲಿ ವಿಕಾರವಾದ ನೀಚವ್ಯಾಪಾರವಂ ಮಾಡುವಳು. ಹಾದರಗಿತ್ತಿಯಂತೆ ಒಯ್ಯಾರದಿಂ ನಟಿಪಳು (ಕಾಮಶಾ. ೨೦೯) ; ಹಾದರಗಿತ್ತಿ ಕಾಲು ಹಸೆಮಣೆ ಮೇಲೂ ನಿಲ್ಲುವುದಿಲ್ಲ (ಗಾರೆ).

[ಪಾದರ$_1$ (<ಪಾರದಾರ)+ —ಗಿತ್ತಿ]

ಪಾದರಜ (ನಾ). ೧. ಕಾಲುನಡಗೆಯಿಂದೆದ್ದ ಧೂಳು ; ಕಾಲುಧೂಳು : ಭಯವಶವಿಮುಕ್ತಭೂಷಣಚಯ ಕೇರಳಕಾಮಿನೀಮುಖಶ್ರೀನೃಪಸೇನೆಯ ಪಾದರಜದಿನಂದೇನಯತ್ನಕುಂಠಾಮವಿಳ ಸಮಂ ತಾಳ್ದಿದುದೋ ((ಶಾಂತಿಪು. ೦೦-೦೫). ೨. ಹೆಜ್ಜೆಗಳಿಗೆ ಅಂಟಿರುವ ಧೂಳು ; ಪಾದಧೂಳಿ : ಕಮಲಭವಾದ್ಯರುಂ ಪಡೆವರೇ ಹರಿಪಾದರಜೋಲವಪ್ರಸಾದಮಂ (ಜಗವಿ. ೩-೪೨); ಕಾಲಿಗೆ ಬಿದ್ದು ನಮಸ್ಕರಿಸಿ, ಪಾದರಜವನ್ನು ನನ್ನ ತಲೆಯ ಮೇಲೆ ಸಿಂಪಿಸಿ . . . ಓಡಿ ಹೋದೆನು (ಪುಸಿ. ೫). [ಪಾದ+ರಜ$_1$]

ಪಾದರಸ (ನಾ). ೧. ಒಂದು ಬಗೆಯ ದ್ರವರೂಪದ ಲೋಹ ; ಪಾರಜ : "ರಸ ಪಾರದ ಸೂತಕ ಚಪಲ[ಸಂ]ಜ್ಞಿತಂ ಗಿರಿಶವೀರ್ಯಮದು ಪಾದರಸಂ" (ಪಸ್ತುಕೋ. ೯೪-೦೩); ವೈಕ್ರಯಕಶರೀರಂಗಳ್ ಪಾದರಸದ ಮಾರ್ಗದಿಂ ಪತ್ತುತ್ತುಮಿರ್ಕುಂ (ಸುಕುಮಾ. ೦೦-೪೭ಪ) ; ಚೂರಿಸಿ ನಿಲುಕಿದರು ಫಣಿಯಂತೆ ಪಯಮೈಲುಳಿಯಲೊಲೆದರು ಪಾದರಸದಂದದಲಿ ಪಟುಭಟರು ((ಕುಪ್ಯಾಗ. ೭-೨) ; ಪಾದರಸ ಕರತಳದಲಿರುತದನಂಟದಂದದಿ ತಿಳಿವಿಗರು ಸಂಸ್ಕೃತಿಯಲಿರೆ ನಿರ್ಲೇಪರೆಂದೆಣಿಸು (ಗಗತಾ. ೦೫-೨೫); ಇಲಿ ಪಾದರಸ ಕುಡಿದ ಹಾಗೆ (ಗಾರೆ). ೨. (ಆಲಂ) ಚುರುಕಾದ ವ್ಯಕ್ತಿ: ಉರಿಯ ಬಂದಿಯ ಹಿಡಿದು ಹೆಚ್ಚುವ ದೊರೆಯಲೇ ದಿಟ ಪಾದರಸವೆಲೆ ಯರಸ ನಿನ್ನ ಕುಮಾರನು (ಕುಪ್ಯಾರ್ಪ್ರೋ. ೯-೪೦).

[<ಪಾರದ+ರಸ./ತಮಿ. ಪಾತರಚ ; ತುಳು. ತೆಲು. ಪಾದರಸ]

ಪಾದರಿ$_1$ (ನಾ). ಜಾರೆ ; ವ್ಯಭಿಚಾರಿಣಿ ; ಹಾದರಗಿತ್ತಿ : ಪೋದಿರುಳಿನ ಕಿತ್ತಡಮಂ ಮೂದಲೆಯಾಗಿಂತು ನುಡಿದೊಡಱಿದುದನಱಿದಾ ಪಾದರಿ ಬೇಸತ್ತವೊಲಿರೆ ಪೋದು ಬಗೆ ಕದಡಿ ತಾಯ ಪೊರೆಗೆ ನೃಪೇಂದ್ರಂ (ಯಶೋಸ. ೨-೭೦); ಚಪಲೆ ಚಂಚಲೆ . . . ಪರವಶೆ ಪಾದರಿ ವಿಫಲೆ ವಿಹ್ವಲೆ . . . ತಾಮಸಿಯೆನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ಬಾರದೆ (ಶೈಕುಶಾ. ೫-೬೦) ; ಅತಿಪಾತಂ ಮಧುಪಾನವ್ಯಸನ ದೊಳ್, ಮಧುಪಾನವ್ಯಸನಮಾಱಡಿಯೊಳ್, ಆಱಡಿ ಪಾದರಿಯೊಳ್, ಪಾದರಿ ಬನದೊಳಲ್ಲದಿಲ್ಲಂ (ರಾಮಾಶ್ವ. ೬-೨).

[ಪಾದರ$_1$ (<ಪಾರದಾರ)+ —ಇ$_2$]

ಪಾದರಿ$_2$, ಹಾದರಿ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು ; ಪಾಟಲಿ : "ಪಾದರಿ ಪಾಟಳಾಖ್ಯಂ" (ಪಸ್ತುಕೋ.೩೩-೦); ಪಾದರಿ ಪೂತುವು ತೋರಿದುವಾದುವು ಮಲ್ಲಿಗೆಗಳ್ (ಅಪಿಪು. ೦೦-೬೫); ಅತಿಪಾತಂ ಮಧುಪಾನವ್ಯಸನದೊಳ್, ಮಧುಪಾನವ್ಯಸನಮಾಱಡಿಯೊಳ್, ಆಱಡಿ ಪಾದರಿಯೊಳ್, ಪಾದರಿ ಬನದೊಳಲ್ಲದಿಲ್ಲಂ (ರಾಮಾಶ್ವ. ೬-೨). **ಹಾದರಿ** : "ಹಾದರಿ—ಪಾಟಲಾ=ಪಾದರಿ" (ಶರ್ಕಕೋ. ೪೯); ಕೇದಗೆ ಸಂಪಗೆ ನಾಗಂ ಹಾದರಿಯದಿರ್ಗುಂತೆ ಸುರಯಿ ವಕುಳ ಲವಂಗಂ ಜಾದಿ ಮೊದಲಾದನೇಕ ಪೂದೋಂಟಂ ಸುರಭಿಪರಿಮಳಾಮೋದಂಗಳ್ (ಎಳ್. VIII, ಸಾಗರ.೦೦೯-೫೦, 1042); ಅಶೋಕೆಯನೊದೆದು ಪಲ್ಲವಿಸೆಂಬ ಹಾದ[ಶಾಶಾಂ. ಪಾದಿ] ರಿಯ ನೆಳಲ್ಗೆ ಹರಿಣಂಗಳಂ ಹೊಡೆಯೆಂಬ ಕೆಲಸದ ನೆವದಿಂ ರತಿಮಂಗಳಿ . . . ಕಳುಪಿ (ಪಂಚಿ. ೦೪-೩೯); ಹಾಲೆ ಹಾದರಿ ಬನ್ನಿ ಮೊದಲಾದ ಶರುಗಳ ಜಾಲದಿಂದೆಸೆದುದಾ ವಿಪಿನ (ರಾಮವಿ. ೦೫-೫೯).

[<ಸಂ. ಪಾಟಲಿ./ತಮಿ. ಮಲ. ಪಾತಿರಿ ; ತುಳು. ಪಾದರಿ ; ತೆಲು. ಪಾದಿರಿ, ಪಾದಿಲಿ]

ಪಾದರಿ$_3$ 'ಪಾದ್ರಿ' ನೋ.

ಪಾದರಿಗ, ಪಾರದರಿಗ, ಹಾದರಿಗ (ನಾ). ಹಾದರ ಮಾಡುವವನು ; ವ್ಯಭಿಚಾರಿ ; ವಿಟ : ಮಿನ್ನಳಂತೆ ಗಾಳದೊಳ್ ತೊಡರ್ದಿರ್ದ ಪಾದರಿಗರಿಂ (ಕಾಪ್ಯಸಾ. ೫೨೯ ಶೂದ್ರಕ); ಪೃಥ್ವಿಯಂ ರಕ್ಷಿಸುವ ಸ್ವಾಮಿ ಚೋರ ಜಾರ ಪಾದರಿಗರ್ಕಳಂ ಕೊಲ್ಲದಿರ್ಕುಮೆ (ಪಜ್ಞಾರಾ. ೬೦-೯); ಪಾದರಿಗೆಯ ಮೂಗನರಿದು ಪಾದರಿಗನಂ ಕೊಲ್ವರು (ಸೌಇಇ. IX-1, ೭೭-೩೩; 992); ನಾವಿದನ ಪೆಂಡತಿಯಪ್ಪ ದೂದವಿ ಪಾದರಿಗನಂ ಸಂಕೇತಸ್ಥಾನದೊಳಿರಿಸಿ ಪರಿತಂದು (ಪಂಚತಂ. ೭೫-೩). **ಪಾರದರಿಗ** : ಕ್ಷಪಾಕರನಿನಾತ್ಮಜಾಂಶಗತನಾಗೆ ನೋಡಲ್ ದಿನಾಧಿಪಪ್ರಭೃತಿ ಷಡ್ಗ್ರಹಂ ಗಳವನಲ್ಪಪುತ್ರಂ ಸುಖದ್ಯಪೇತಧನಭಾಗಿ . . . ಪಾರದರಿಗಂ ಮಹಾ ಕೃಪಣನಕ್ಕುಮಾ ಲಗ್ನಜಂ (ಪಾಶಕಿ. ೨೦-೨೨). **ಹಾದರಿಗ** : "ಜಾರಃ, ಉಪಪತಿಃ — ಈ ೨ ಹಾದರಿಗಂ" (ಹಲಾಯು. ೬೩-೨೨೯) ; ಕಳ್ಳ ಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಕಾಣಾ (ರೇದಾಪ. ೨೨-೩೮); ಕಡುಹುಗಳ್ಳನು ಹಾದರಿಗನುಂ ಗಡಣಿಗಿವರೆನೆ ಶೂದ್ರಿಕಂ ಕಾಲಗಡಿಕನಹ ಕೀಚಕನು ನೆಱೆ ಕಡಿವಡೆದರು (ಬಸವು. ೦೦-೫೦); ಹೋದನತ್ತಲು ಸತಿಯ ಕೊಂಡಾ ಹಾದರಿಗನು (ಕೌತಿರಾ. ೬-೪೩).

[ಪಾದರ$_1$ (<ಪಾರದಾರ)+ —ಇಗ]

ಪಾದರಿಗೆ (ನಾ). =ಪಾದರಿ$_1$: ಪಾದರಿಗೆಯ ಮೂಗನರಿದು ಪಾದರಿಗನಂ ಕೊಲ್ವರು (ಸೌಇಇ. IX-1, ೭೭-೩೩; 992); ಪಾದರಿಗೆಯ ದೂದವಿ ಯಂತೆ ಪೆಱರಂ ಸಂಕೇತಂಗೊಳಿಸದೆ (ಧರ್ಮಾಮೃ. ೫-೯೯); ನಿಗ್ರಹಕ್ಕೆ ಪಾದರಿಗೆಯ ನೋಡಿ ನಿಗ್ರಹಮನೆಯ್ದಿಪರುಗ್ರದುರಂತದುಃಖಮಂ (ಪಸಾರ. ೩೦೦). [ಪಾದರಿಗ+ —ಎ$_2$]

ಪಾದರಿಸು (ಕ್ರಿ). ಹಾದರ ಮಾಡು ; ವ್ಯಭಿಚಾರ ಮಾಡು : ಜಲಜಶರತಾಪಮಂ ನಿಲಿಸಲಾಱದೆ ಬಂಧುಗಳು ತಿಳಿಯದಂತೆ ಪಾದರಿಸು ತಡಕದೊಳಿರಲು (ರಾಘಶ. ೦೦-೩೪); ದನುಜೇಂದ್ರನಾತ್ಮಸುತೆ ಕರ್ನಿಕೆಯು ಪಾದರಿಪುದನುಮತವೆ (ಪಪಮೋ. ೨೬-೯).

[ಪಾದರ$_1$ (<ಪಾರದಾರ)+ —ಇಸು$_3$]

ಪಾದಲೇಪೌಷಧಿ (ನಾ). ಕಾಲಿಗೆ ಹಚ್ಚಿಕೊಳ್ಳುವ ಒಂದು ಬಗೆಯ ಅಂಜನ : ಪಾದಲೇಪೌಷಧಿಪ್ರಭಾವದಿಂ ವಿಂಶತಿಸಹಸ್ರಸೋಪಾನಂಗಳ ನಸಂಗದಿಂದಮೇಱಿ ಗಂಧಕುಟಿಯಂ ಪೊಕ್ಕು (ಸಂದ್ರಪು. ೬-೫ ಪ); ಅಲ್ಲಿ ಸರ್ವರೂ ಪಾದಲೇಪೌಷಧಿಸಾಮರ್ಥ್ಯದಿಂ ಆ ಸೋಪಾನಗಳನ್ನಾರೋಹಿ ಸಿದರು (ಪುರುಸ. ೦೨೯). [ಸಂ.]

ಪಾದವಟ್ಟ (ನಾ). ಕಾಲಿನ ಒಂದು ಬಗೆಯ ಆಭರಣ ; ಕಾಲಂದುಗೆ : ಪೆಂಡೆಯ ಪಾದವಟ್ಟಗಳೊಪ್ಪಿದುವು ಚಂದ್ರಮಂಡಲಮುಖಿಯಡಿಗಳೊಳು (ಪರಸ. ೪೦-೬೦). 'ಪಾಯವಟ್ಟ' ಪರಾ. [<ಪಾದಪಟ್ಟ]

ಪಾದವಟ್ಟಿಗೆ (ನಾ). ಪೆಂಟ್ಟಿಲು ; ಸೋಪಾನ : ಪಾಸಿದ ತಣ್ಗದಿರಱೆಯ ಪಾದವಟ್ಟಿಗೆಗೊಳಗೇರಿಯ ನಿಡುಮರಂಗಳಿಱುಂಬಿನ ಕಟ್ಟಲೆಯನೊಳ ಕೊಂಡು. . . ಕಿಱುಗಾಳಿಯಲೆಪದಿಂ ಕಾಲ್ಪರಿವ ತೆರೆಯಿನೊಂದು ಕೊಳಂ ಪಗಲ್ವೆಣ್ಣ ಕೈಸಿಡಿಯೆಂಬಂತಿರೆ ಸೊಗಯಿಸಿದತ್ತು (ರಾಮಾಶ್ವ. ೫೨-೦೯).

[<ಸಂ. ಪಾದಪಟ್ಟಿಕಾ]

ಪಾದವಲ್ಮೀಕ (ನಾ). ಆನೆಯ ಕಾಲಿನಂತೆ ಕಾಲು ದಪ್ಪವಾಗಿ ಊದಿಕೊಳ್ಳುವ ಒಂದು ಬಗೆಯ ರೋಗ; ಆನೆಕಾಲುರೋಗ: "ಶ್ಲೀಪದಂ, ಪಾದವಲ್ಮೀಕಂ ... ಈ ೨ ಒಱಲೆಗಾಲ್" (ಹಲಾಯು. ೯೯-೪೫೦).
[ಪಾದ+ವಲ್ಮೀಕ]

ಪಾದವಾಸ (ನಾ). = ಪಾದಪಾಶ ೧: ಪರಪದದ ಮೊದಲೊಳ್ ಪಕಾರ ಬಕಾರ ಮಕಾರಂಗಳಿರೆ ಪತ್ವಮಕ್ಕುಂ . . . ಪಾದಪಾಶ—ಪಾದವಾಸ, ಯೋಗಪಾದುಕಾ — ಜೋಗಮಾವುಗೆ (ಶಮದ. ೨೯೨ ಪ್ರಯೋ).
[<ಸಂ. ಪಾದಪಾಶ]

ಪಾದವಿನ್ಯಾಸ (ನಾ). ೧. ನಡೆಯುವಾಗ ಕಾಲನ್ನು ಇಡುವುದು. ೨. ಪದ್ಯದ ಪಾದಗಳನ್ನು ಜೋಡಿಸುವುದು. ೩. ಕಿರಣಗಳನ್ನು ಹರಡುವುದು, – ಪಸರಿಸುವುದು. ೨, ೩: ಅತಿಶಯಪದಾರ್ಥ ನಿಕರಪ್ರತೀತಿಯಂ ಪಡೆವ ಪಾದವಿನ್ಯಾಸಂ ಭೂನುತಮಾಗದಲ್ಲೆ ನಿರ್ದೋಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ (ಶಂಪ್ರಪು. ೦-೪೭).
[ಪಾದ+ವಿನ್ಯಾಸ]

ಪಾದವಿಷ್ಟರ (ನಾ). ಕಾಲಿಡುವುದಕ್ಕಾಗಿ ಮಾಡಿದ ಪೀಠ; ಕಾಲುಮಣೆ; ಪಾದಪೀಠ: ಕ್ಷಮಾರಾಪ್ತರ್ ನಯಕೋವಿದರ್ ಸಕಳ ಶಾಸ್ತ್ರಾರ್ಥರ್ . . . ಕುಲೀನರ್ ನೃಪೇಂದ್ರಮೃಗೇಂದ್ರಾಸನಪಾದವಿಷ್ಟರ ದೊಳಿರ್ದರ್ (ಆಪಂಪು. ೨-೨೩). [ಪಾದ+ವಿಷ್ಟರ]

ಪಾದಶಾ 'ಪಾತಶಹ' ನೋ.

ಪಾದಶಾಖೆ (ನಾ). ಕಾಲಿನ ಬೆರಳು. [ಸಂ. ಪಾದಶಾಖಾ]

ಪಾದಶಾಯಿ 'ಪಾತಷಾಹಿ' ನೋ.

ಪಾದಶಾಹ 'ಪಾತಶಹ' ನೋ.

ಪಾದಶಿಲೆ (ನಾ). ಕಂಬದ ತಳಕ್ಕೆ ಆಧಾರವಾಗಿ ಕೊಡುವ ಕಲ್ಲು; ಕಂಬದ ಅಡಿಗಲ್ಲು: ಎನ್ನ ಪಾದವೇ ಪಾದಶಿಲೆಯಾಗಿ ಎನ್ನ ಕಾಲೇ ಕಡಹದ ಕಂಬಗಳಾಗಿ (ಸರ್ವಪ. ೦೮೦-೬೩೦). [ಪಾದ+ಶಿಲೆ]

ಪಾದಶೂಲೆ (ನಾ). ಕಾಲಿನಲ್ಲಿ ಉಂಟಾಗುವ ನೋವು: ಮೂಱು ಮಾನ ಮಜ್ಜಿಗೆ ಒಂದು ಹಿಡಿ ಲೊಕ್ಕಿಯ ಸೊಪ್ಪಿನೊಳಗೆ ಹೊಯ್ದು . . . ಸೇವಿಸಿ ಮರ್ದನಂ ಮಾಡೆ ಮಂದಾಗ್ನಿ, ಪಾತಶೂಲೆ, ಪಾದಶೂಲೆ, ಸರ್ವಾಂ(ಗ)ಶೂಲೆ, ಮುಡುಬುಶೂಲೆ, ಮಾಣ್ಗುಂ (ಎನ್ಯೆಪ. ೬೫).
[ಪಾದ+ಶೂಲೆ$_1$]

ಪಾದಶೃಂಖಲೆ (ನಾ). ಕಾಲನ್ನು ಕಟ್ಟಲು ಉಪಯೋಗಿಸುವ ಸರಪಣಿ ಪರಪದಂ ತದ್ಭವಮಾದ ಸಮಾಸಕ್ಕೆ— ಉತ್ತರದೇಶ—ಉತ್ತರದೇಸ . . . ಪಾದಶೃಂಖಲಾ—ಪಾದಸಂಕಲೆ (ಶಮದ. ೨೯೯ ಪ್ರಯೋ).
[ಪಾದ + ಶೃಂಖಲೆ]

ಪಾದಷಹ 'ಪಾತಶಹ' ನೋ.

ಪಾದಷಹಾ 'ಪಾತಶಹ' ನೋ.

ಪಾದಷಾಹ 'ಪಾತಶಹ' ನೋ.

ಪಾದಸಂಕಲೆ (ನಾ). = ಪಾದಶೃಂಖಲೆ: ಪರಪದಂ ತದ್ಭವಮಾದ ಸಮಾಸಕ್ಕೆ — ಉತ್ತರದೇಶ — ಉತ್ತರದೇಸ . . . ಪಾದಶೃಂಖಲಾ — ಪಾದಸಂಕಲೆ (ಶಮದ. ೨೯೯ ಪ್ರಯೋ); ದಾನಸಾಲೆ, ಬಾಹುಬಳೆ, ಪಾದಸಂಕಲೆ (ಶಬ್ದಾಮ. ೨೯೬ ಪ್ರಯೋ). [ಪಾದ+ಸಂಕಲೆ]

ಪಾದಸರ (ನಾ). ಕಾಲಿಗೆ ಧರಿಸುವ ಒಂದು ಬಗೆಯ ಸರಪಣಿಯಾಕಾರದ ಆಭರಣ; ಕಾಲುಸರ: ಜಗನ್ಮೋಹನಾಕಾರದಿಂ . . . ಪಾದಸರ ಕಾಲುಂಗುರಗಳಿಂ ಬಂಧುರಮಾದ ಪಾದದ್ವಂದ್ವವಿನ್ಯಾಸದಿಂ (ಸೌಗಂಧಿ. ೩೯-೦೦); ಹೆಜ್ಜೆಯ ಕುಣಿತಕ್ಕೆ ತಕ್ಕಂತೆ ಈ ಪಾದಸರಗಳ ಕಿರುಗೆಜ್ಜೆಯ ನಾದ ಅನುರಣಿಸುವಂತಿದೆ (ನೊಳಂಬ. ೯೬). [ಪಾದ+ಸರ$_3$]

ಪಾದಸಾಲೆ (ನಾ). ಕಾಲಿನ ಆಭರಣ: ಬಿಜ್ಜಣಿಯು ಕಾಳಂಜಿಯುಂದವಹ ಪಾದಸಾಲೆಯು ಮುಖ್ಯವುಪಕರಣವೃಂದಮಂ ನೆರಪಿ . . . ಶೃಂಗರಿಸು ತಿರಲು (ಪಪಪೋ. ೨೬-೬೬). [ಪಾದ+ಸಾಲೆ$_7$/ತಮಿ. ಪಾತಚಾಲ]

ಪಾದಾಂಗುಳೀಯಕ (ನಾ). ಕಾಲಿನ ಬೆರಳಿಗೆ ಇಟ್ಟುಕೊಳ್ಳುವ ಉಂಗುರ; ಕಾಲುಂಗುರ; ಕಾಲುಸುತ್ತು: ಪಾದಾಂಗುಳೀಯಕ ಗುಣಗಳು—ಸ್ತ್ರೀಯರುಗಳು ಕಾಲುಬೆರಳುಗಳಲ್ಲಿ ಉಂಗುರಗಳು, ಪಿಲ್ಲಿ . . . ಧರಿಸಿದಲ್ಲಿ ಹೆಚ್ಚಾದ ಮಂಗಳವೂ, ಸರ್ವದುಷ್ಟಗ್ರಹೋಚ್ಚಾಟನವೂ ಸದಾ ಆನಂದವೂ ಆಗುವುವು (ಸಕಸ್ವೆ. ೪೦). [ಸಂ. ಪಾದಾಂಗುಳೀಯಕ]

ಪಾದಾಂಬು (ನಾ). ಪಾದದಲ್ಲಿ ಹುಟ್ಟಿದ ನೀರು: ನೈಜದಿಂದಜನ ಕರಪಾತ್ರದಗ್ರೋದಕಂ ವೈಜಯಂತೀಧರನ ಪಾದಾಂಬು . . . ತಾನಂತು ಮಲ್ಲದತಿಪಾಪಂಗಳ ಮೈಜೋಡನುಗಿದು ಬಿಸುಡುವ ಗಂಗೆ ಬೆದಱಿದಳ್ (ಶೈಪುಣಾ. ೯-೨೬). [ಪಾದ+ಅಂಬು$_3$]

ಪಾದಾಕ್ಷ (ನಾ). ಪಾದದಲ್ಲಿ ಕಣ್ಣುಳ್ಳವನು; ಶಿವ; ೨ ವಿಷ್ಣುವು ಕ್ಷುಪನೆಂಬ ರಾಜನ ನಿಮಿತ್ತವಾಗಿ ದಧೀಚಿಮುನಿಯನ್ನು ಚಕ್ರಾಯುಧದಿಂದ ಹೊಡೆದಾಗ ಅದು ಮುರಿದು ಹೋಗಲು, ಶಿವನನ್ನು ಮೆಚ್ಚಿಸಿ ಪುನಃ ಚಕ್ರವನ್ನು ಪಡೆಯುವೆನೆಂದು ವಿಷ್ಣುವು ಸಹಸ್ರಕಮಲಗಳಿಂದ ಅರ್ಚಿಸತೊಡಗಿದನು. ಆಗ ಒಂದು ಕಮಲವು ಸಾಲದಾಗಲು ಭಕ್ತಿಭರದಲ್ಲಿ ತನ್ನ ಕಣ್ಣನ್ನೇ ಕಿತ್ತು ಶಿವನ ಪಾದಗಳಿಗೆ ಅರ್ಪಿಸಿ, ಸಂತುಷ್ಟನಾದ ಶಿವನಿಂದ ತನ್ನ ಕಣ್ಣು, ಚಕ್ರ ಎರಡನ್ನೂ ಮರಳಿ ಪಡೆದನು. ಇದರಿಂದ ಶಿವನು 'ಪಾದಾಕ್ಷ'ನಾದನೆಂದು ಶೈವಪುರಾಣಗಳಲ್ಲಿ ಹೇಳಿದೆ: ಭಾಳಾಕ್ಷ ಪಾದಾಕ್ಷನಂ . . . ಶಿವನು ಸೋಮಾಭಿರಾಮಾಂಗನಂ ಹೃದ್ರಾಜೀವ ದೊಳಿಟ್ಟು ನಾಡೆ ನೆನೆದು (ಹಪ್ಪಾಕ. ೨-೬). 'ಕಣ್ಣಡಿಗ' ಪರಾ.
[ಸಂ. (ಪಾದ+ಅಕ್ಷಿ+—)]

ಪಾದಾಗ್ರ (ನಾ). ಕಾಲಿನ ತುದಿ; ತುದಿಗಾಲು: "ಪಾದಾಗ್ರಂ, ಪ್ರಪದಂ — ಈ ೨ ತುದಿಕಾಲ್" (ಹಲಾಯು. ೬೭-೩೭೫); ತಾದರೆ ಪಾದಾಗ್ರದೆ ನೂಂಕಿದಂ ಮುಳಿದವಂ ವಾರಾಶಿಯೊಳ್ ಚಂದ್ರನಂ (ರಾಜಕೇ. ೪-೨೨). [ಪಾದ+ಅಗ್ರ$_1$]

ಪಾದಾಘಾತ (ನಾ). ಕಾಲಿನ ಹೊಡೆತ; ಒದೆತ: ಅಮರಿತು ಪಾದಾಘಾತದಿಂದ ಧರೆ (ಬಸವ. ೫೯೦); ಅಶೋಕಮರಗಳು . . . ಧಾರಿಣಿಯಿಂದಲೋ ಮಾಲವಿಕೆಯಿಂದಲೋ ಪಾದಾಘಾತದೋಹದ ಮಾಡಿಸಿಕೊಂಡಂತೆ ಮೈಯೆಲ್ಲ ಹೂ ತಳೆದಿತ್ತು (ಪಸ್ತುಹೂ. ೦೭೦). [ಪಾದ+ಆಘಾತ]

ಪಾದಾತ (ನಾ). ೧. ಕಾಲುನಡೆಯ ಸೈನಿಕ; ಕಾಲಾಳು: "ಪದಾತಿಃ, ಪತ್ತಿಃ, ಪಾದಾತಃ . . . ಪಾದಚಾರೀ — ಈ ೮ ಕಾಲಾಳ್" (ಹಲಾಯು. ೭೪-೨೯೬); "ಯಾತಂ ಪದಾತಿಕಂ . . . ಪಾದಾತಂ ಪದಾಜಯಂ ಪದಿಕನೆನೆ ಕಾಲಾಳ್" (ಮಂಗರಾ. ೬೫-೨೬). ೨. ಕಾಲಾಳುಗಳ ಸೈನ್ಯ. — ಪಡೆ: ಪದಾತಿ ಸೈನ್ಯ: ನಡೆದುದು ಪಾದಾತಂ ಚತುರಶೀತಿಕೋಟಿ ಪ್ರಮಿತಂ (ಆಪಪು. ೦೦-೩೩); ಆ ಪಾದಾತಂ ಲಕ್ಷಾಲಕ್ಷಮದಂ ಪ[ರಿ]ವೀಕ್ಷಿಸಲರಿದುಱದದಿರ್ಚಿ ಕಾದುವರೊಳರೇ (ಶಾಂತಿಪು. ೦೦-೦೦೭). [ಸಂ.]

ಪಾದಾತಿ (ನಾ). ಕಾಲಾಳು; ಪದಾತಿ. [ಸಂ.]

ಪಾದಾತಿಕ (ನಾ). ೧. = ಪಾದಾತ ೧: "ಪದಾತಿಃ, ಪತ್ತಿಃ, ಪಾದಾತಃ, ಪಾದಾತಿಕಃ . . . ಪಾದಚಾರೀ — ಈ ೮ ಕಾಲಾಳ್" (ಹಲಾಯು. ೭೪-೨೯೬). ೨. = ಪಾದಾತ್ತ: "ಪದಿಕಂ ಪತ್ತಿ ಪದಾತಂ ಪದಾತಿ ಪಾದಾತಿಕಂ ಪಾದಾಜಿಗೆ ನಾಮಂ" (ವಸ್ತುಕೋ. ೬೩-೦೦). [ಸಂ.]

ಪಾದಾದಿಯಮಕ (ನಾ). [ಕಾವ್ಯಮೀ] ಶಬ್ದಾಲಂಕಾರಗಳಲ್ಲಿ ಒಂದು: ಪದ್ಯದ ಸಾಲುಗಳ ಮೊದಲಲ್ಲಿ ನಿಯತವಾಗಿ ಬರುವ ಯಮಕ: ಪತ್ತಿ

ಪಾದಾದಿಯಮಕಕ್ಕೆ — ಉಪದಾತ್ತನುತೋನ್ನತಮಂ ದ್ವಿಪಮದಪರಿ ಪೂರ್ಣಗಿರಿಸರಿತ್ಸಂತತಿಯಂ ಉಪದಾತ್ತನುತೋನ್ನತಮಂ ತಪನಕರೋತ್ತ ಪನತಪ್ತತಪನೋಪಲಮಂ (ಕಾಪ್ಯಾಪ. ೫೩೯). [ಸಂ.]

ಪಾದಾಪವಿದ್ಧ (ನಾ). [ನಾಟ್ಯ]ನೃತ್ಯದ ಒಂದು ಭಂಗಿ; ನೂರೆಂಟು ಕರಣಗಳಲ್ಲಿ ಒಂದು; ಉ "ಕಟಕಾಮುಖ ಹಸ್ತಗಳೆರಡನ್ನು ಒಂದ ಕ್ಕೊಂದು ಹಿಮ್ಮುಖವಾಗಿರುವಂತೆ ನಾಭಿಯ ಹತ್ತಿರ ಹಿಡಿದು ಸೂಚೀಪಾದದಿಂದ ಅಪಕ್ರಾಂತಚಾರಿಯನ್ನು ಮಾಡುವುದು" (ಲಾಸ್ಯರಂ. ೨೯೪ ಗದ್ಯಾನುವಾದ); ತಲಪುಷ್ಪಪುಟ, ಲೀನ . . . ದಂಡಪಕ್ಷ, ಪಾದಾಪವಿದ್ಧ . . . ಗಂಗಾವತರಣ — ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ಪ). [ಪಾದ + ಅಪವಿದ್ಧ]

ಪಾದಾಪವಿದ್ಧಕ (ನಾ). = ಪಾದಾಪವಿದ್ಧ: ಸಲೆ ವಲಿತ ದಂಡಪಕ್ಷಂ ಸುಲಲಿತ ಪಾದಾಪವಿದ್ಧಕಂ . . . ಭುಜಗತ್ರಸ್ತರೇಚಿತಾಖ್ಯಮಿವಿಂತುಂ (ಲಾಸ್ಯರಂ. ೪-೩೦). [ಸಂ.]

ಪಾದಾಭಿಘಾತ (ನಾ). = ಪಾದಾಘಾತ: ಪಾದಾಭಿಘಾತವಿಚಲನ್ಮೇದಿನ್ಯುತ್ಥಿತ ವಿಶಾಲಧೂಳಿ ಪಟಲಾಚ್ಛಾದಿತಗಗನಂ ನಡೆದುದು ಪಾದಾತಂ ಚತುರಶೀತಿ ಕೋಟಿಪ್ರಮಿತಂ (ಆದಿಪು. ೦೦-೩೩). [ಪಾದ + ಅಭಿಘಾತ]

ಪಾದಾಭಿಷೇಚನ (ನಾ). ಪಾದಗಳಿಗೆ ಅಭಿಷೇಕ ಮಾಡುವುದು: ಪೌರರ್ಮಾಡಿದ ನಲಿನೀಪತ್ರಪುಟಪ್ರಸಾದಿತಸಾರಜಲಪಾದಾಭಿಷೇಚನದೊಳ ಮಭಿಷೇಕವಿಧಿಯಂ ನಿರ್ವರ್ತಿಸಿ (ಆದಿಪು. ೬-೬೯ ಪ). [ಪಾದ + ಅಭಿಷೇಚನ]

ಪಾದಾಭ್ಯಂಗನ (ನಾ). ಎಣ್ಣೆ ಮುಂತಾದ ಲೇಪನದ್ರವ್ಯಗಳನ್ನು ಪಾದಗಳಿಗೆ ಹಚ್ಚಿ ತೊಳೆಯುವುದು: ಪಾದಾಭ್ಯಂಗನದಿಂದ ನೇತ್ರ ರೋಗವೂ . . . ಶಿರೋಭ್ಯಂಜನದಿಂದ ಸರ್ವರೋಗವೂ ಹರವಾಗುವುದು (ಸಕಪ್ಯ. ೩೦). [ಪಾದ + ಅಭ್ಯಂಗನ]

ಪಾದಾರ್ಚನೆ (ನಾ). ಪಾದಗಳನ್ನು ಪೂಜಿಸುವುದು, — ಅರ್ಚಿಸುವುದು; ಪಾದಪೂಜೆ: ಭಕ್ತನ ಮಠವೆಂದು ಜಂಗಮ ನಡೆದು ಬಂದಲ್ಲಿ . . . ಕರೆದು ಕುಳ್ಳಿರಿಸಿ ಪಾದಾರ್ಚನೆಯಂ ಮಾಡಿ ಪಾದೋದಕವಂ ಕೊಂಡು (ಬಸವ. ೬೬೪); ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಂಗೆ (ಬಸವ. ೬೬೭). [ಪಾದ+ಅರ್ಚನೆ]

ಪಾದಾರ್ಧ (ನಾ). ಪದ್ಯದ ಸಾಲಿನ ಅರ್ಧಭಾಗ ಯಮಕಂ (ಪ)ದ ಪಾದಾರ್ಧ ಸಮಶ್ಲೋ(ಕಾದಿ)ಗೋಚರಂ (ಕವಿರಾ. ೨-೦೨೯). [ಪಾದ+ಅರ್ಧ]

ಪಾದಾವರ್ತ (ನಾ). ೧. ಬಾವಿಯಿಂದ ನೀರನ್ನು ಮೇಲಕ್ಕೆತ್ತಲು ಉಪಯೋಗಿಸುವ (ಕಾಲಿನಿಂದ ತಿರುಗಿಸಬಹುದಾದ) ಒಂದು ಬಗೆಯ ರಾಟೆ, — ಯಂತ್ರ: "ಉದ್ಘಾಟಕಂ, ಘಟೀಯಂತ್ರಂ, ಪಾದಾವರ್ತಃ, ಅರಘಟ್ಟಕಃ — ಈ ೪ ಊಟಣಂ" (ಹಲಾಯು. ೦೦೩-೬೩). ೨. ಕ್ಷೇತ್ರದ ಒಂದು ಅಳತೆ; ಒಂದು ಚದರಡಿ: ಪಾದಾವರ್ತ ಶತತ್ರಯಂ (ಎಇ. III. ೩೨೦-೦೬; ೫೭೬). [ಸಂ.]

ಪಾದಾಶ್ರಿತ (ನಾ). ಪಾದಗಳಲ್ಲಿ ಆಶ್ರಯವನ್ನು ಪಡೆದವನು; ಶರಣಾದವನು: ಹರಿಪಾದಾಶ್ರಿತರಾಗಿಮಿಲ್ಲದೊಡೆ ಪಗೆಗೊಳ್ಳಿಂ (ಜಗವಿ. ೬-೦೦೫). [ಪಾದ + ಆಶ್ರಿತ]

ಪಾದಾಶ್ರಿತೆ (ನಾ). ಪಾದಗಳಲ್ಲಿ ಆಶ್ರಯವನ್ನು ಹೊಂದಿರುವವಳು; ಶರಣಾಗತೆ: ನಾವೀಗ ಜಗದಂಬೆಯ ಪಾದಾಶ್ರಿತೆಯರಾಗಿದ್ದೇವೆ (ಕಪಾಕುಂ. ೩೩). [ಪಾದಾಶ್ರಿತ + —ಎ$_2$]

ಪಾದಾಸ್ತ್ರ (ನಾ). ಕಾಲುಗಳನ್ನೇ ಆಯುಧವಾಗಿ ಉಳ್ಳುದು; ಕೋಳಿ: ಪಾರಿವ ಶಿಖಿ ಗಂಡಭೇರುಂಡ ಕೆಂಗಣ್ಣ ಕೀರಂಚೆ ಕೊಂಚೆ ಪಾದಾಸ್ತ್ರ . . . ಖಂಜರೀಟ ಖಗದ ಸಂಚಾರ . . . ಆ ನಗದಿ ರಂಜಿ ಸುವದಪಾರ (ಶೈರವೇ. ೦-೫೫). [ಪಾದ + ಅಸ್ತ್ರ]

ಪಾದಾಹತಿ (ನಾ). = ಪಾದಾಘಾತ: ಆಸ್ಥಾನದಲ್ಲಿರ್ದ ದುರ್ಧರವಿದ್ಯಾಧರ ವೀರರಂ ಜವನ ಬಾಯೊಳ್ ತೂಂಕಿದಂ ತನ್ನ ನಿಷ್ಠುರಪಾದಾಹತಿಯಿಂ ಪ್ರಭಂಜನಸುತಂ ಹಸ್ತಪ್ರಹಾರಂಗಳಿಂ (ಪಂಠಾಮಾ. ೦೦-೦೪೨). [ಪಾದ + ಆಹತಿ]

ಪಾದಿ$_1$, ಹಾದಿ (ನಾ). ೧. ಬಟ್ಟೆ; ದಾರಿ; ಮಾರ್ಗ: ಅಕ್ಕಿ ಬತ್ತ ಹೇಱಿಂಗೆ ಮಾನ ೨ ಎಣ್ಣೆ ಕೊಡಕ್ಕೆ × ಳಸಿಗೆ ೨ ಪಟ್ಟಣಸಾಮಿ ಗೊಯ್ದಿ ಸೆಟ್ಟಿದೇವರ್ಗೆ ಯೆತ್ತದೋಪಾದಿಯೆಲೆಯೆತ್ತಿ ಕೊಂಬನ್ತು ಊರು ಗಡವೂರ ಗಂಗರ × × × ಬಾಚಗಉಡ ಬಮ್ಮಿಸೆಟ್ಟಿ ಕನುಲ್ವರುಂ ಗೊಯ್ದಿಸೆಟ್ಟಿಯ ಪಾದಿಯ ಸಂತೆಯ ಯೆತ್ತಿಕೊಂಬರು (ಎಕ. VII, ೩೫ಮೊ. ೬೬-೫೩; 1203); ಇದುವೆ ಕಡವೆಯ ನೊರೆಯು ಭಲ್ಲುಕಂ ಕೆದರ್ದೆಡೆಯುಯಿದು ಗಜಂ ಪೋದ ಪಾದಿ (ರಾಘವ. ೦೭-೬೯). ಹಾದಿ: ೧. ಇದು ಸತ್ಪಥಕ್ಕೆ ಎಯ್ದುವ ಹಾದಿ (ಬಲೇಶ್ವ. ಕ. ೪೨೯-೨೦); ಅಸುರರು ಹಾದಿಯನು ಸವಱಿದರು ಯಮಪುರದತ್ತ ಪಯಣಕ್ಕೆ (ಕೌಶಿರಾ. ೨೦-೦೬); ವಿದುರನ ಗೃಹದಿ ಮೋದದಿ ಒಕ್ಕುಡುತೆಯ ಪಾಲನೆ ಕೊಂಡು ಹಾದಿಲಿ ಹರಿಸಿದ್ದು ಎಲ್ಲಿ ಕಲಿತೆಯ್ಯ (ಪುರಂದ. ೦-೯೬-೬); ಆದಿದೈವವನು ತಾ ಭೇದಿಸಲಿಕಱಿಯದಲೆ ಹಾದಿಯ ಕಲ್ಲಿಗೆಡೆಮಾಡಿ ನಮಿಸುವ ಮಾದಿಗರ ನೋಡು (ಸರ್ವಜ್ಞ. ೦೯೬). ೨. ಪಂಕ್ತಿ; ಸಾಲು; ಓಳಿ: ಕಯ್ಕೋಳರ ಹಾದಿಗಳೊಂದೆಸೆ ಯೊಳು ಬಯ್ಕೆಯ ಸತಿಯರ ಸಾಲೊಂದೆಸೆಯೊಳು (ತಿರುವಾ. ದೇ. ೨೨೨-೦೯). ೩. ರೀತಿ; ಬಗೆ; ಕ್ರಮ: ಮೋದದಿಂ ಕವಿ ಕಾವ್ಯದೊಳ್ ಪೊಗಳ ಬೇಕೆಂಬ ಹಾದಿಯಾಂ ಪೊಗಳ್ದಡೀಶ್ವರನಾಣೆ ಶಿವಸಿದ್ಧರಾದಿತ್ಯ ಸಿದ್ಧರಾಮನ ಚರಿತ್ರವನೆಯ್ದೆ ಪೊಗಳಲಾನೆನಿತಱವನು (ಸಿದ್ಧರಾ. ೦-೬); ಕಮಲೋದರನು ಕಾಮಿನಿಯನೆದೆಯೊಳಗಾದರಿಸಿದನು ಕಮಲಭವ ಜಗವಱಿಯೆ ನಂದನೆಯ ಐದೆಯನು ನೆಱೆ ಮಾಡಿಯರೆವೆಣ್ಣಾದನೀಶ್ವರನಿಂದ್ರಗಿಂದ್ರರ ಹಾದಿಯದು (ತೊರರಾ. ೦-೫-೩೭); ಮುಂದಿನ ಪೀಳಿಗೆಗೆ ಅನುಕೂಲವಾಗುವಂತಹ ಮತ್ತು ಉಪಯೋಗವಾಗುವಂತಹ ಹಲವಾರು ಮಹತ್ವದ ವಿಷಯಗಳ ಬಗ್ಗೆ ಹಾದಿ ಹಾಕಿಕೊಡುವುದೂ . . . ಅಷ್ಟೇ ಮಹತ್ವದ್ದು (ಸಸ್ಯಳ. ೬೦).

ಹಾದಿಗುಂಟ = ದಾರಿಯ ಉದ್ದಕ್ಕೂ: ಹಳ್ಳವಾಗಿ ಬಂದ ಹಾಲು ಹಾದಿಗುಂಟ ಹರಿವುದಿನ್ನೂ (ಹಾಡುಪಾ. ೩೨-೬). ಹಾದಿಗೆ ಬರು = ದಾರಿಗೆ ಬರು; ಸರಿಯಾದ ಕ್ರಮಕ್ಕೆ ಬರು; ಸರಿಯಾಗು. ರಾಮನು ಒಬ್ಬ ಸ್ತ್ರೀಯನ್ನೇ ಉದ್ಧರಿಸಿದನು . . . ಆದರೆ ನಾಮದಿಂದ ಕೋಟ್ಯವಧಿಬಲರ ವಿಪರೀತಬುದ್ಧಿಯು ಹಾದಿಗೆ ಬಂದಿರುವದು (ತುಳಸೀ. ೬); ಅಂತೂ ಹಾದಿಗೆ ಬಂದಿದ್ದಾನೆ (ಕಪ್ಪುಹು. ೬೦). ಹಾದಿಗೆ ಹಚ್ಚು = ದಾರಿಯನ್ನು ಕಾಣಿಸು; ಸರಿಯಾದ ಮಾರ್ಗದಲ್ಲಿ ನಡೆಸು: ನನ್ನನ್ನು . . . ಈ ಹಳ್ಳದಿಂದ ಎತ್ತಿ ಹಾದಿಗೆ ಹಚ್ಚು ದೇವಾ (ಹಳ್ಳಹಾ. ೬೯). ಹಾದಿಗೆ ಹತ್ತು = ಹಾದಿಗೆ ಬರು: ಅಪ್ಪ . . . ಹಾಗೆ ನಡೆಸಿಕೊಂಡದ್ದ ರಿಂದಲೇ ಹುಡುಗ ಹಾದಿಗೆ ಹತ್ತಿದ (ಹೊಸಕ್ಷಿ. ೦೬೬). ಹಾದಿ ಬೀದಿ ರಂಪ = ಬೀದಿಯಲ್ಲಿ ನಡೆಯುವ ಜಗಳ; ಬೀದಿಜಗಳ: ಅಲ್ಲಿಗೇನು ಹೋಗಿ ನೀವು ಹಾದಿ ಬೀದಿ ರಂಪ ಎಬ್ಬಿಸಬೇಡಿ (ಗಂಗಾವ. ೯೬).

[ದೇ.॥ ತಮಿ. ಪಾತೈ; ಮಲ. ಪಾಥ; ತುಳು. ಹಾದಿ. / ಸಂ. ಪಥ]

ಪಾದಿ$_2$ (ನಾ). ಕಾಲಾಳು; ಪದಾತಿ: ಥಳಥಳಿಸುವ ರಥಯೂಧಪಾದಿ ಗಳಿಂದ ಥಳಪಳನೆಸೆವ ಕೈದುಗಳ ಥಳಥಳಿಕೆಯೊಳು ಮೇಲಿಕ್ಕಿದ ಮಗಧನ ಥಳಕನೆ ಗೆಲಿದನೆ ಜಯತು (ಶತಸಾಂ. ೭೦-೫೯). [ಸಂ. ಪಾದಿನ್]

ಪಾದಿಕ (ನಾ). = ಪಾದಿ$_2$: "ಪದಾತಿಃ, ಪತ್ತಿಃ, ಪಾದಾತಃ, ಪಾದಾತಿಕಃ, ಪದಾ (ಜಿ)ಜಯಃ, ಪಾದಿಕಃ, ಪದಿಕಃ, ಪಾದಚಾರೀ — ಈ ರ ಕಾಲಾಳ್" (ಹಲಾಯು. ೭೪-೨೯೬). [ಸಂ.]

ಪಾದಿಲೋಣ 'ಪಾದೆಲೋಣ' ನೋ.

ಪಾದುಕ (ನಾ). ಹಾವುಗೆ; ಪಾದುಕೆ : "ಪಾದುಕಪಾದನುಪದೀನವೆಂಬೆ ಹಾವುಗೆಯು" (ಕುಂಗಣಾ. ೬೦-೦೪). [ಸಂ.]

ಪಾದುಕಾಕಾರ (ನಾ). ಹಾವುಗೆಯನ್ನು ತಯಾರಿಸುವವನು; ಚಮ್ಮಾರ : "ಚರ್ಮಕೃತ್, ಪಾದುಕಾಕಾರಃ — ೨ ಸಮ್ಮಗಾಱಂ" (ಹಲಾಯು. ೧೮ ೧೪೨). [ಸಂ.]

ಪಾದುಕಾಸಿದ್ಧಿ (ನಾ). ಐದು ಬಗೆಯ ಸಿದ್ಧಿಗಳಲ್ಲಿ ಒಂದು; ಮಂತ್ರ ಶಕ್ತಿಯುಳ್ಳ ಪಾದುಕೆಗಳನ್ನು ಧರಿಸಿ ಇಚ್ಛೆ ಬಂದಲ್ಲಿ ಸಂಚರಿಸಬಹುದಾದ ಸಿದ್ಧಿ : ಪಾದುಕಾಸಿದ್ಧಿ ಅಂಜನಾಸಿದ್ಧಿ ಘಟಿಕಾಸಿದ್ಧಿ ಮೂಲಿಕಾಸಿದ್ಧಿ ರಸರಸಾಯನಾದಿ ಸಿದ್ಧಿಗಳಂ ಸಾಧಿಸುತ್ತಿರ್ಪಂ (ಪಪಚ. ೦೦). [ಸಂ.]

ಪಾದುಕೆ (ನಾ). ೧. (ಮರ, ಲೋಹ ಮುಂತಾದುವುಗಳಿಂದ ಮಾಡಿದ) ಪಾದರಕ್ಷೆ; ಹಾವುಗೆ : "ಪಾದುಕಾ, ಅನುಪದೀನಾ — ಈ ೨ ಹಾವುಗೆ" (ಹಲಾಯು. ೩೨-೦೫೬); ಚರ್ಮದ ಪಾದುಕೆಗಳನ್ನು ಹಾಕಿಕೊಳ್ಳುವುದರಿಂದ . . . ಮಹಾಹಿತಕರವಾಗಿರುವುದು (ಸಶಕೃ. ೫೫); ರಾಮನ ಪಾದುಕೆಯನ್ನು ತಂದಿಟ್ಟುಕೊಂಡು ರಾಮನ ಪ್ರತಿನಿಧಿಯಾಗಿ . . . ರಾಜ್ಯವನ್ನು ನೋಡಿಕೊಳ್ಳುತ್ತೇನೆ (ಪಾರಾಳ್ಳ. ೨೯); ಪೂಜ್ಯ ಪಾದುಕೆಗಳಂ ಪೂಜ್ಯಪಾದಂಗೆತ್ತು ಸಿಂಹಾಸನದೊಳಿಟ್ಟು ಪೂಜಿಸುವೆನಾಂ (ಶ್ರೀಧಾಕಾ. ೦೬೩-೫೬೬). ೨. ಕಲ್ಲು ಅಥವಾ ಮರದ ಮೇಲೆ ಮೂಡಿರುವ, ದೇವರು ಅಥವಾ ಗುರುಗಳ ಪೂಜಾರ್ಹವಾದ ಪಾದದ ಗುರುತು, — ಮಂದ್ರೆ. [ಸಂ. ಪಾದುಕಾ]

ಪಾದುಕೆಗೆಯ್, ಪಾದುಕೆಗೈ (ಕ್ರಿ). ಪಾದರಕ್ಷೆಯಾಗಿ ಮಾಡು; ಹಾವುಗೆಯನ್ನಾಗಿ ಮಾಡು : ಗಣ್ಯ ಪುಣ್ಯರ ಚರಣಕೆನ್ನೆರ್ದೆಯನೊಸೆದು ಪಾದುಕೆಗೆಯ್ವೆನು (ಧಾಶತ. ೦-೦೩). **ಪಾದುಕೆಗೈ :** ನಿರ್ಮಲಾತ್ಮಕ ಪರಮಶಿವಶರಣರಡಿಗೆಯನ್ನೆರ್ದೆಯ ಪಾದುಕೆಗೈವೆನು (ಪಪಮೋ. ೦-೦೯). [ಪಾದುಕೆ+ಕೆಯ್/ಗೈ]

ಪಾದುಕೆಗೈ 'ಪಾದುಕೆಗೆಯ್' ನೋ.

ಪಾದುಶಾಹ 'ಪಾತಶಹ' ನೋ.

ಪಾದುಷಹ 'ಪಾತಶಹ' ನೋ.

ಪಾದುಷಾ 'ಪಾತಶಹ' ನೋ.

ಪಾದೂಯುಗ್ಮ (ನಾ). (ಹೆಪ್ಪಿಗಳ ಗುರುತುಳ್ಳ) ಹಾವುಗೆಗಳ ಜೋತೆ : ಶಿವನಾಮಾಂಕಿತಮಂ ರತ್ನವಿರಚಿತಮನುತ್ತಮಾಂಗದೊಳ್ ಪಾದೂಯುಗ್ಮವನೆಸೆಯೆ ತಳೆದು (ಕಾರಂಪು. ೬೬೦. [ಸಂ.]

ಪಾದೆಲೋಣ, ಪಾದಿಲೋಣ (ನಾ). ಒಂದು ಬಗೆಯ ಕಪ್ಪುಬಣ್ಣದ ಉಪ್ಪು; ಬಿಡಲವಣ : ಸೂರ್ಚಿವಾಳಾವಣದ ಮೇಲೆ ಕಮ್ಮತ್ತು ಇರತಕ್ಕ ಜೀನಸಗಳು. ೧. ಅಕ್ಕಲಪಾಂ . . . ೧೨೬. ಪಾದೆಲೋಣ (ಶುಂಪಾ. ೦೩೬). **ಪಾದಿಲೋಣ :** ಆ ಜೀನಸಗಳು . . . ಈ ಪ್ರಕಾರ-ಅಕ್ರೋಡ, ಅಕ್ಕಲಪಾರ . . . ಪಚ್ಚಕರ್ಪೂರ, ಪಾದಿಲೋಣ, ಪಿಸ್ತ, ಹಿಪ್ಪಲಿ (ಶುಂಪಾ. ೨೦೯). [←ಮರಾ. ಪಾದೇಲೋಣ]

ಪಾದೋದಕ (ನಾ). ೧. ಕಾಲುಗಳನ್ನು ತೊಳೆಯಲು ಕೊಡುವ ನೀರು : ಅತಿಥಿಗಳಿಗೆ ಪಾದೋದಕವನ್ನೀಯುವುದು ಆದರ ಸತ್ಕಾರದ ಪದ್ಧತಿ (ಶ್ರವಂಕ. ೧೩). ೨. [ವೀಶೈ] ಗುರುಹಿರಿಯರ ಕಾಲುಗಳನ್ನು ತೊಳೆದ ನೀರು; ಪಾದತೀರ್ಥ : ಒಳಗೆ ತೊಳೆಯಲುಯ್ಯದೆ ಹೊಱಗ ತೊಳೆದು ಕಂಡಿವುತ್ತಿದ್ದರಯ್ಯ ಪಾದೋದಕಪ್ರಸಾದವನಱಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತೈದಾರೆ (ಆಪಕಂ. ೩೬-೦೬೦); ಗಂಡ ಕೊಂಬುವು ಪಾದೋದಕಪ್ರಸಾದ ಹೆಂಡತಿ ಕೊಂಬುದು ಸುರೆ ಮಾಂಸ (ಪಪಪ. ೦೦೪); ಶ್ರೀಪಾದಮಂ ತೊಳೆದು ಪಾದೋದಕಮಂ ತಳೆದು . . . ಕೃತಾರ್ಥ ಮನನಾಗುತ್ತಿರಲ್ (ಪಂಪಿ. ೯-೩೦). ☞ ಪಾದೋದಕದಲ್ಲಿ ಹತ್ತು ಬಗೆಗಳನ್ನು ಹೇಳುತ್ತಾರೆ : "ದಶವಿಧಪಾದೋದಕ : ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ಧಾರೋದಕ, ಸತ್ತೋದಕ" (ಪಪಪ. ೪ ೩೩೦ ಪಾಂಡಾಪಳಕ್ಕೂಕೋಪ). [ಪಾದ+ಉದಕ]

ಪಾದೋದಕಿ (ನಾ). ಪಾದೋದಕವನ್ನು ಸ್ವೀಕರಿಸುವವನು, — ಸೇವಿಸುವವನು : ಹುಸಿಪಲ್ಲದೆ ಪ್ರಸಾದಿಯಲ್ಲ ತೃಪ್ತೆಯಲ್ಲದೆ ಪಾದೋದಕಿಯಲ್ಲ (ಪಪಕಂ. ೧೨೪-೫೬೩). [ಸಂ. ಪಾದೋದಕಿನ್]

ಪಾದ್ಯ (ಗು). ೧. ಕಾಲಿಗೆ ಸಂಬಂಧಿಸಿದ. (ನಾ). ೨. ಕಾಲುಗಳನ್ನು ತೊಳೆಯುವ ನೀರು : ಮುನಿಜನಪೂಜಾನ್ನದಾನಾದಿಕರಣಜನಿಗೃಹಜನ ಸತತೋಪನೀಯಮಾನಪಾದ್ಯಗಂಧಾಕ್ಷತಕುಸುಮಚರುಧೂಪದೀಪಫಲಾದರ್ಚನಾತ್ಮಕಪುಣ್ಯ ನಿತ್ಯಮಹೋತ್ಸವಂ (ಆದಪು. ೧೫-೦೫೮); ರಾಘವಂಗಾನತರಾಗಿ ಮೌಳಿವಣಿದೀಪ್ತಿಜಲಂಗಳಿನೀಯೆ ಪಾದ್ಯಮಂ (ಪಂಗಾಪು. ೧೬-೫೦); ಅಕ್ಕನ ಕೇಸಡಿದಳಿರ್ಗೆ ಜಯಶ್ಯಾದೆ ಪಾದ್ಯಮಂ ಪ್ರಕಟಿಸಿದಳ್ (ಆಪಂಪ್ರ. ೨-೩೧). ೩. ಕಾಲುಗಳನ್ನು ತೊಳೆಯುವುದು; ಪಾದಕ್ಷಾಲನ : ಜನಪತಿಗಂದು ಪಾದ್ಯಮನದೇಂ ಪೆಱೆಪಂತೆ ಮೆಲ್ಲನೆ . . . ಸುಟಿದತ್ತು ಸದ್ಮಸರಸೀಶರಶೇಕರ ಮಂದಮಾರುತಂ (ಕುಗ್ಗಪ್ಪ. ೭-೪೮); ಮುಂದದೊಳೆದ್ದು . . . ಪುಣ್ಯಸಂಪದದ ಸಂಧ್ಯಾವಂದನಂ ಮಾಡಿ ವಿಹಿತಾರ್ಘ್ಯಪಾದ್ಯಮಂ ನಿರ್ವರ್ತಿಸಿ (ಪಪಕಾ. ೪-೫೯); ಮುನಿಯನಿದಿರ್ಗೊಂಡು ಪೊಡಮಟ್ಟು ಭದ್ರಾಸನದೊಳ್ಕುಳ್ರಿಸಿ ಅರ್ಘ್ಯಪಾದ್ಯಂಗಳಿಂ ಪೂಜಿಸಿ (ರಾಪೂಕೃ. ೦೦-೪); ಪಾದ್ಯಕ್ಕೆ ನೀರು ಇಲ್ಲ, ಊಟಕ್ಕೆ ಪುಣ್ಣಿಗೆಯಿಲ್ಲಿ? (ನಾಡ). [ಸಂ.]

ಪಾದ್ಯದ್ರವ್ಯ (ನಾ). ಕಾಲುಗಳನ್ನು ತೊಳೆಯುವ ನೀರಿನ ಜೊತೆಗೆ ಉಪಯೋಗಿಸುವ ವಸ್ತು; ಪೂಜಾಸಾಮಗ್ರಿ : ಬಿಳಿಯ ಸಾಸುವೆ ಕುಸುಮ ದೂರ್ವೆ ಕೋಷ್ಠ ಲಾವಂಚ ಕರ್ಪೂರಮೆಂಬಾಱು ಪಾದ್ಯದ್ರವ್ಯಂಗಳಂ . . . ಸುಪಾಠಿಸಿ (ಪಪಚ. ೯೪). [ಪಾದ್ಯ+ದ್ರವ್ಯ]

ಪಾದ್ಯಪಾತ್ರೆ (ನಾ). ಪಾದ್ಯದ್ರವ್ಯಗಳೊಂದಿಗೆ ಬೆರೆಸಿದ ನೀರಿರುವ ಪಾತ್ರೆ, — ಬಟ್ಟಲು : ವಿವಿಧಾಶ್ಚಗಂಧ ಕರ್ಪೂರ ಲಾವಂಚ ಸಾಸವೆ ಕೋಷ್ಠ ದೂರ್ವೆಯೆಂಬಾಱ ನೀರೊಳು ಬೆರಸಿ ಶಿವನ ಪಾದಕ್ಕೆಂದು ಸಂಲ್ಪಿಸುತ್ತೊಲಿದು ಪಾದ್ಯಪಾತ್ರೆಯೊಳಿಱಿವುದು (ಗುರುಚಾ. ೩ ೫೯). [ಪಾದ್ಯ+ಪಾತ್ರೆ]

ಪಾದ್ಯವಿಧಿ (ನಾ). ಕಾಲುಗಳನ್ನು ತೊಳೆಯುವ ಕ್ರಿಯೆ; ಪಾದಕ್ಷಾಲನ : ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡಿದಪ್ಪುದುಂ (ಆದಪು. ೧೪-೦೩೩). [ಪಾದ್ಯ+ವಿಧಿ]

ಪಾದ್ರಿ, ಪಾದರಿ (ನಾ). ಕ್ರೈಸ್ತರ ಧರ್ಮಗುರು; ಚರ್ಚಿನ ಒಬ್ಬ ಕಾರ್ಯಕರ್ತ : ಡೂಬಾಯಿ ಪಾಶ್ರಿ ತನ್ನ ಮಿತ್ರರಿಗೆ ಬರೆದ ಕೆಲವು ಪತ್ರಗಳು ಫ್ರಾನ್ಸ್‌ದೇಶದಲ್ಲಿ ನೊಶಬೊನ್ ವಿಶ್ವವಿದ್ಯಾಲಯದ ಪುಸ್ತಕ ಭಂಡಾರದಲ್ಲಿವೆಯಂತೆ (ಸಾಪ್ರ. ೩೫೯ ೨೬); ಪಾದ್ರಿ . . . ನಮ್ಮನ್ನು ಭಿಕ್ಷೆಯಾಗಿ ಸಂತೆ ತಮ್ಮನ್ನು ಪಾಪಿಲು ಹೇಳಿದ್ದರು (ಆಕೋಲೆ. ೦೪). **ಪಾದರಿ :** ಆಂಗ್ಲರ ಅಳ್ವಿಕೆ ಆರಂಭದಿಂದ ಕೋಚಿಕಾಲ ಕ್ರಿಶ್ಚಿಯನ್ ಪಾದರಿಗಳಿಗೆ ಭರತಖಂಡದ ಪ್ರವೇಶಕ್ಕೆ ಅನುಮತಿ ಇರಲಿಲ್ಲ (ಚುಕ್ಕಾತ. ೧೦೪ ೬೧೪೪). [← ಸ್ಪ್ಯಾನಿಷ್. ಪೋರ್ಚ್. Padre]

ಪಾನ್‌ದಾನು, ಪಾನದಾನು (ನಾ). ೧. (ಉಕ) ಎಲೆಯಂಡಿಕೆ ತಾಂಬೂಲ; ವೀಳೆಯ : ಆ ಸಾಹೇಬರು . . . ಹರ್ಷತರಾಗಿ ಹೂವಿನ ಹಾರ ಪಾನ್‌ದಾನುಗಳನ್ನು ಸ್ವೀಕರಿಸಿ ಮಹಾಸ್ವಾಮಿಯವರಿಂದ ಅಪ್ಪಣೆ ತೆಗೆದುಕೊಂಡರು (ಚುಹಾಕಾ. II, ೦೩೦). **ಪಾನದಾನು :** ೨. ತಾಂಬೂಲವನ್ನು ಇಡುವ ಡಬ್ಬಿ, — ಸಂಪುಟ : ಪರಿಜಾರೆಯು

ಕೈಲಿದ್ದ ಪಾನದಾನು ನೆಲದ ಮೇಲೆ ಬಿದ್ದು ಝನಝನ ಶಬ್ದವಾಯಿತು (ರೇಣಿ. ೭೫). [←ಹಿಂ. ಮರಾ. ಪಾನ್‌ದಾನ್]

ಪಾನ್‌ಪಟ್ಟಿ, ಪಾನಪಟ್ಟಿ (ಸಾ). ೧.=ಪಾನ್‌ದಾನು ೧: ಪಟ್ಟದ ಆನೆ, ಪಟ್ಟದ ಕುದುರೆಗಳು ಕೆರೆಯ ಒಳಗೆ ಹೋಗಿ ಪೂಜೆ ಆಗಿ ಬಂದ ಮೇಲೆ ಎಲ್ಲರಿಗೂ ಹೂವಿನ ಹಾರ ಪಾನ್‌ಪಟ್ಟಿ ಮರ್ಯಾದೆ ಆಯಿತು (ಶುಹಾಸಂ. II, ೧೮೪). **ಪಾನಪಟ್ಟಿ**: ೨. ಸಂಣ್ಣ, ಅಡಿಕೆಯನ್ನು ಹಾಕಿ ಸಿದ್ಧಪಡಿಸಿದ ವೀಳ್ಯ; ಬೀಡ: ಅವರು . . . ಛಡಿ, ಚಹ, ಪಾನಪಟ್ಟಿ ಇಷ್ಟರಿಂದಲೇ ಎದ್ದುಬಿಟ್ಟರು (ಶುಹ್ಮಾಕ. ೦೦೯).

[←ಮರಾ. ಪಾನ್‌ಪಟ್ಟೀ]

ಪಾನ್‌ಸುಪಾರಿ, ಪಾನಸುಪಾರಿ, ಪಾನುಸುಪಾರಿ (ನಾ).=ಪಾನ್‌ದಾನು ೧: ಅಕ್ಷತೆಗೆ ಬಂದ ಅತಿಥಿಗಳಿಗೆಲ್ಲಾ ಸಾರಿಗೆ ಮೇಲೆ ಸಾರಿಗೆಯಂತೆ ಚಹಾ, ಪಾನ್‌ಸುಪಾರಿ ಮುಗಿಯುವವರೆಗೂ ತಾಸೆರಡು ತಾಸಾಯಿತು (ಪ್ರೇ. ೧೩). **ಪಾನಸುಪಾರಿ**: ಪಾನಸುಪಾರಿ, ಅತ್ತರದಾನೆ, ಗುಲಾಬದಾನೆ, ಹೂಗುಚ್ಛ ಇವುಗಳನ್ನು ಕೊಡುವ ಕಾರ್ಯಕ್ರಮ ನಡೆಯಿತು (ಅಪ್ಪ. ೨೪೭); ಪಾನ-ಸುಪಾರಿಯ ಭರ್ಜರೀ ತಯಾರಿ ನಡೆಯಿತು (ರೀಪಕ. II. ೩೩೪). **ಪಾನುಸುಪಾರಿ**: ಪಾನುಸುಪಾರಿಯ ಕೆಲಸ ಮುಗಿದ ಮೇಲೆ ಸಿದರಾಮಪ್ಪನೂ ಅಲ್ಲಿಗೆ ಬಂದನು (ಅಪ್ಪ. ೨೪೮).

[←ಹಿಂ. ಮರಾ. ಪಾನ್‌ಸುಪಾರೀ]

ಪಾನ$_1$ (ನಾ). (ಕುದುರೆಯ) ಅಪಾನ; ಗುದಪ್ರದೇಶ: ಬಾಲದ ದಂಡಿಗೆ ಬಾಲದ ದಂಡೆಂಬ ಪೆಸರನನುಕರಿಸಿರ್ಕುಂ ಬಾಲದ ದಂಡೆಯೊಳಗಿರ್ಪುದ ಲೀಲೆಯಿನಱ ಪಾನಮೆಂಬ ಪೆಸರದಕೆಂದುಂ (ಅಶ್ವಶಾ. ೯-೪೭).

[<ಸಂ. ಅಪಾನ]

ಪಾನ$_2$ (ನಾ). ೧. ಕುಡಿಯುವಿಕೆ; ಕುಡಿತ: ಜ್ಞಾನ ತಪ್ಪಿಸುವ ಪಾನಗಳನ್ನು ಮಾಡಬಾರದು (ಶಿಕಶಿಂ. II, ೬). ೨. ಪಾನೀಯ; ಪೇಯ: ಬಲುವಿಧವಾದ ರಸವನೆ ಕೂಡಿಸಿ ಪಾನಪ್ರಭೇದವನ್ನು ಅನುವಾಗಿ ಮಾಡಿ ತಂದು ವಸ್ತ್ರಕ್ಕೆ ಹಚ್ಚಿ ದೀಪವನೆ ಮುಟ್ಟಿಸಿದರದು ವಸನ ಸುಡದು (ಶಿಧಾಕ್ಷ. ೩೯-೩). ೩. ಕುದಿಸದ ಪದಾರ್ಥ: "ಬೇಯದ ರಸ: ಪಾನಂಗಳೆಂದೆನಿಕ್ಕುಂ" (ಸುಂಗಶಾ. ೩೪-೪). ೪. ಕಷಾಯ: ದುರಿಚಾಮೃತರುಚಿ ಚಾತುರ್ಜಾತಕಯುಂತಮಾಗೆ ಸುಧೋಪಮಾನಮಕ್ಕುಂ ಪಾನಂ (ರೋಕೋಸ. ೯-೫೭). ೫. ಕುಡಿಯುವ ಬಟ್ಟಲು; ಚಷಕ. ೬. ನೀರಿನ ಕಾಲುವೆ; ನಾಲೆ. [ಸಂ.]

ಪಾನಂಧಿಪಡಿ (ನಾ). ಒಂದು ಸ್ಥಳದ ಹೆಸರು: ಅನ್ತ ಬನ್ದು ಪಟ್ಟಗಲ್ಲ ನೈರಿತ್ಯನ್ದಿಶಿ ಪಾನನ್ದಿಪಡಿಯೆ (ಎಇ. IV (R), ಶಾಸುರಾ. ೩೫೪-೫೩; ೩೦೪).

[?]

ಪಾನಕ (ನಾ). ಬೆಲ್ಲ ಅಥವಾ ಸಕ್ಕರೆಯೊಂದಿಗೆ, ನಿಂಬೆ ಮುಂತಾದ ರಸ, ನೀರು – ಇವುಗಳನ್ನು ಸೇರಿಸಿ ತಯಾರಿಸಿದ ಪಾನೀಯ; ಪರಬತ್ತು: ಪಾನಕವು ಶ್ರಮ ಹಸಿವೆ ನೀರಡಿಕೆ ದಣುವುಗಳನ್ನು ನಾಶ ಮಾಡುವುದು (ಅಜ್ಞಾಂಗ. ೦೨೨-೩೪ ಉರ್ಧ); ಬೆಳ್ಗೆ ಊಟವಿಲ್ಲದೆ ಬರಿಯ ಹುಣಿಸೆಹಣ್ಣನ್ನು ಕಿವುಚಿ ಬೆಲ್ಲದಲ್ಲಿ "ಪಾನಕ" ಕುಡಿದಿದ್ದರು (ಅಂಹೂ. ೧೮); ವಿಧವಿಧವಾದ ಪಾನಕಗಳಿಗೆ ಮಂಜಿನ ಗಡ್ಡೆಗಳನ್ನು ಸೇರಿಸಿ ಕುಡಿಯುವುದು (ಶಾಸ್ಕಾರ. ೦೨೯).

ಪಾನಕ ಪಣ್ಕಾರ=ಪರಬತ್ತು ಮತ್ತು ಪ್ರಸಾದರೂಪವಾದ ತಿಂಡಿ: ರಾಮನವಮಿಯಂದು ಮನೆಗೆ ಬಂದವರಿಗೆ ಪಾನಕ ಪಣ್ಕಾರ ಕೊಡುವುದು ಕೆಲವರ ಸಂಪ್ರದಾಯ (ಕೂಗ). [ಸಂ.]

ಪಾನಕಪೂಜೆ (ನಾ). (ನರಸಿಂಹಜಯಂತಿ, ರಾಮನವಮಿ ಮುಂತಾದ ಹಬ್ಬಗಳಂದು) ಪೂಜೆ ಮಾಡಿ ಪ್ರಸಾದರೂಪವಾಗಿ ಭಕ್ತಾದಿಗಳಿಗೆ ಇತರ ಖಾದ್ಯಗಳೊಡನೆ ಪಾನಕ, ಮಜ್ಜಿಗೆ ಮುಂತಾದುವನ್ನು ಹಂಚುವುದು: ನನ್ನ ಕಾಲದಲ್ಲಿ ಶ್ರೀರಾಮನವಮಿ ನಡೆಯುವುದು. ಎಲ್ಲೆಲ್ಲೂ ಅರವಟ್ಟಿಗೆಗಳನ್ನಿಡಿಸುತ್ತೇನೆ. ಪಾನಕಪೂಜೆಗಳನ್ನು ಮಾಡಿಸುತ್ತೇನೆ (ಕಂಕಶ. ೨೨); ಅವರು ರಾಮನವಮಿ ಪ್ರಯುಕ್ತ ಪಾನಕ ಪೂಜೆಗೆ ಕರೆದಿದ್ದಾರೆ (ಕೂಗ). [ಪಾನಕ+ಪೂಜೆ]

ಪಾನಕೇಳಿ (ನಾ). ಮದ್ಯ ಮುಂತಾದುವನ್ನು ಕುಡಿಯುವ ಲೀಲೆ, – ವಿನೋದ: ಏಳಿ, ತಡವೇಕೆ ಪಾನಕೇಳಿ ಮೊದಲಾಗಲೀಗ, ಅಂಗಡಿಯು ಕದವ ಈ ಕ್ಷಣಕೆ ತೆರೆಯ ಹೇಳಿ (ಅರಕು. ೦೦೭-೯).

[ಪಾನ$_2$+ಕೇಳಿ (=ಕೇಲಿ)]

ಪಾನಕ್ರೀಡನ (ನಾ).=ಪಾನಕೇಳಿ: ದುಶ್ಶಾಸನನ ನೆತ್ತರದಿ ಪಾನ ಕ್ರೀಡನಾಸೌಭಾಗ್ಯಸೊಪದಕೆ ಸರಿಯದಾವದು (ಕುಶ್ಶಾಳ. ೨೨-೨೩).

[ಪಾನ$_2$+ಕ್ರೀಡನ]

ಪಾನಕ್ರೀಡೆ (ನಾ).=ಪಾನಕೇಳಿ: ಕಾಮತ್ರಿಲೋಕೀಜಯಾಕರಶಾಖಾಸಿ ಲತಾಳಿಯೋ ಬಗೆವೊಡೆಂಬಂತಿರ್ದುದಿಂದ್ವಂಕ ಕರ್ಬುರಕಾಯಂ ಶಬರೀಚಯಂ ನೆರೆದು ಪಾನಕ್ರೀಡೆಯೊಳ್ ನಾಡೆಯುಂ (ಸಂಭವ. ೫-೫೬).

[ಪಾನ$_2$+ಕ್ರೀಡೆ]

ಪಾನಗೋಷ್ಠಿ (ನಾ). ೧. ಕೆಲವು ಜನ ಸೇರಿ ಒಟ್ಟಿಗೆ ಮದ್ಯಪಾನ ಮಾಡುವುದು, – ಕುಡಿಯುವುದು: "ಆಪಾನಂ, ಪಾನಗೋಷ್ಠಿ – ಈ ೨ ಕಳ್ಗುಡಿವುದು" (ಹಲಾಯು. ೫೯-೧೭೩). ೨. ಮದ್ಯಪಾನ ಮಾಡುವವರ ಗುಂಪು; ಕುಡಿಯುವವರ ಕೂಟ: (ಕೆ). ೩. ಮದ್ಯಪಾನ ಮಾಡುವ ಸ್ಥಳ; ಹೆಂಡದಂಗಡಿ: (ಕೆ). [ಪಾನ$_2$+ಗೋಷ್ಠಿ]

ಪಾನಗೋಷ್ಠಿಕೆ (ನಾ). ೧.=ಪಾನಗೋಷ್ಠಿ ೨: "ಪಾನಗೋಷ್ಠಿಕೆ – ಸರಾಯ ಕುಡಿಯುವುದಕ್ಕಾಗಿ ಕೂಡಿದ ಮಂದಿ" (ಗಂಗಾಸು. ೨೦೩). ೨.=ಪಾನಗೋಷ್ಠಿ ೩: "ಆಪಾನಂ, ಪಾನಗೋಷ್ಠಿಕಾ – ೨ ಅನೇಕ ಮಂದಿ ಕೂಡಿ ಮದ್ಯಪಾನ ಮಾಡುವ ಸ್ಥಳದ ಹೆಸರುಗಳು" (ಸಿಧ್ಧಾಂತಿ. ೩೦೯). [ಪಾನ$_2$+ಗೋಷ್ಠಿಕೆ]

ಪಾನದಾನು 'ಪಾನ್‌ದಾನು' ನೋ.

ಪಾನನಿರೋಧ (ನಾ). ಮಾದಕಪಾನೀಯಗಳ ತಯಾರಿಕೆ ಮತ್ತು ಮಾರಾಟದ ಮೇಲೆ ಹಾಕುವ ನಿಷೇಧ, –ನಿರ್ಬಂಧ: ಪಾನನಿರೋಧ ಬಂದ ಮೇಲೆ ಕುಡಿಯುವವರು ಹೆಚ್ಚಾಗಿದ್ದಾರೆ (ಸಪ್ಪಾಕು. ೩೦೩).

[ಪಾನ$_2$+ನಿರೋಧ]

ಪಾನಪಟ್ಟಿ 'ಪಾನ್‌ಪಟ್ಟಿ' ನೋ.

ಪಾನಪಭಟಾರ (ನಾ). ಒಬ್ಬಾತನ ಹೆಸರು: ಶ್ರೀನೆಡುಬೊಱೆಯ ಪಾನಪಭಟಾರರ್ನೋನ್ತು ಮುಡಿಪ್ಪಿದಾರ್ (ಎಇ. II, ೯-೦; ಸು. 700).

[ಪಾನಪ? + ಭಟಾರ]

ಪಾನಪಾತ್ರ (ನಾ). (ವಿಶೇಷವಾಗಿ ಮದ್ಯವನ್ನು) ಕುಡಿಯುವ ಪಾತ್ರೆ: "ಚಷಕಃ, ಪಾನಪಾತ್ರಂ, ಸರಕಃ, ಅನುತರ್ಷಣಂ—೪ ಹೆಂಡ ಕುಡಿಯುವ ಬಟ್ಟಲ ಹೆಸರು" (ಸಿಧ್ಧಾಂತಿ. ೩೦೯). [ಪಾನ$_2$+ಪಾತ್ರ]

ಪಾನಪಾತ್ರೆ (ನಾ).=ಪಾನಪಾತ್ರ: ಈ ಸಾಂಗತ್ಯದ ಪುಟ್ಟಪುಟ್ಟ ಪಾನ ಪಾತ್ರೆಗಳಲ್ಲಿ ಸಂಸ್ಕೃತದ ಸುಭಾಷಿತಗಳನ್ನೂ ಮುಕ್ತಕಗಳನ್ನೂ ಕನ್ನಡಿಸಿ ಕೊಟ್ಟಿದ್ದೇನೆ (ಇಂಜಾಸ. IV, ೮೦೪). [ಪಾನ$_2$+ಪಾತ್ರೆ]

ಪಾನಭಾಜನ (ನಾ).=ಪಾನಪಾತ್ರ: "ಕಂಸಃ, ಪಾನಭಾಜನಂ — ೨ ಬಟ್ಟಲ್" (ಸಿಧ್ಧಾಂತಿ. ೨೮೩). [ಪಾನ$_2$+ಭಾಜನ]

ಪಾನಭೂಮಿ (ನಾ). ಮದ್ಯಪಾನ ಮಾಡುವ ಸ್ಥಳ: ಪಾನಭೂಮಿ ಯೊಳೇಂತು ಯಜ್ಞಕುಂಡದೊಳಂತು ಪ್ರಜ್ವಲಿಸುವನೆ ಕೃಶಾನು (ಗಾಶಾಸ. ೫೬-೨೭). [ಪಾನ$_2$+ಭೂಮಿ]

ಪಾನವಾಟ (ನಾ). ಮದ್ಯಪಾನ ಮಾಡುವ ಸ್ಥಳ; ಪಡಖಾನೆ; ಹೆಂಡದಂಗಡಿ: ಈ ವೇಳೆಗೆ ಪಾನವಾಟಿಯ ಹೆಣ್ಣುಮಗಳು ಮ್ಯಾಲಿ ಮತ್ತಷ್ಟು ಬಿಯರ್ ತಂದಳು (ಸಂಗ್ರ. VIII, ೧೦೨). [ಸಂ. ಪಾನವಾಟೀ]

ಪಾನವ್ಯಸನ (ನಾ). ಮದ್ಯಪಾನ ಮಾಡುವ ಗೀಳು; ಕುಡಿಯುವ ಚಟ: ಖೈದಿಗಳಲ್ಲಿ ಮನೆಮಾಡಿಕೊಂಡಿದ್ದ ದುಷ್ಟಪ್ರವೃತ್ತಿಗಳು ಪಾನವ್ಯಸನ, ದ್ಯೂತಕ್ರೀಡೆ, ಕ್ರೂರಹಿಂಸೆ, ನರಮಾಂಸಭಕ್ಷಣ ಮೊದಲಾದ ಘೋರಾಪರಾಧಗಳು . . . ನೆಕ್ಕುದೋವನಿಗೆ ಮನವರಿಕೆಯಾಗಿತ್ತು (ಪುಸರು. ೫೫೪). [ಪಾನ್ಯ+ವ್ಯಸನ]

ಪಾನಸುಪಾರಿ 'ಪಾನ್‌ಸುಪಾರಿ' ನೋ.

ಪಾನಾಂಗ (ನಾ). [ಜೈನ] ಹತ್ತು ಬಗೆಯ ಕಲ್ಪವೃಕ್ಷಗಳಲ್ಲಿ ಒಂದು; ಮಧುರವಾದ ಪೇಯಗಳನ್ನು ಒದಗಿಸುವುದೆಂದು ನಂಬಲಾದ ಕಲ್ಪವೃಕ್ಷ: ಪಾನಾಂಗ: ಈ ಜಾತಿಯ ಕಲ್ಪವೃಕ್ಷದಿಂದ . . . ನೀರು ಮತ್ತು ಪೇಯಪದಾರ್ಥಗಳು ದೊರೆಯುತ್ತವೆ (ಶ್ರಾವಕಾ. ೨೬೨). [ಸಂ.]

ಪಾನಾಂಬು (ನಾ). ಕುಡಿಯುವ ನೀರು: ಬೀಸಣಿಗೆ ತೆರೆಗಿಂಡಿ ತಂಬುಗೆ ವಾಸಿಸುವ ಪಾನಾಂಬುವೊಪ್ಪೆ (ಪಸಪು. ೧೨-೯). [ಪಾನ್ಯ+ಅಂಬ್ಯು]

ಪಾನಿ$_1$ (ನಾ). ಕುಡಿಯುವವನು: ವಿಲೋಕಪ್ರಪಂಚವಿರಹಿತಾರಾಧ್ಯರಮಲ ಸದ್ಗೀತಪೀಯೂಷಪಾನಿ (ಶಕೋಪು. ೧-೫೧). [ಸಂ. ಪಾನಿನ್]

ಪಾನಿ$_2$ (ನಾ). ೧. ವಸ್ತ್ರ; ಬಟ್ಟೆ: 'ಇರ್ಪಾನಿ' ಪರಾ. ೨. (?): ಅರಟ್ಟಿಗಳರಸರ್ ಚೊತ್ತಮ್ಮನ್ ಎಡೆತ್ತೊಱೆನಾಡುಸಾಸಿರವುಮಾಳುತ್ತಿದು ಎಟ್ಟದು ಒನ್ದಡಿ ಪಾನಿಯೆಮೇಟುಂ ಒನ್ನತ್ತೆ ದಿವಸಂ ಪಟ್ಟುಂಗಟ್ (ಎಳ. III, ಮೈಸೂರು. ೫೫-೮; ಸು. 740). [?]

ಪಾನಿಗಟ್ಟು (ಕ್ರಿ). [ಜೈನ] ಚರಿಗೆಗೆ ಬಂದ ಜೈನಸಂನ್ಯಾಸಿಗಳನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳು: ಭಟ್ಟಾರರೊಡವಂದ ಬ್ರಹ್ಮಚಾರಿ ತಪಂಬಟ್ಟ ಸೆಂಬುದಂ ಕೇಳ್ದೊಸೆದು ಮುನ್ನೆಮ್ಮ ಮನೆಯೊಳುಂಡು ತಪಂಬಟ್ಟನಿಂ ಪಾಳೆ ನಮ್ಮ ಮನೆಯೊಳ್ ಪಾನಿ[ಪಾಣಾ. ನೆ]ಗಟ್ಟುವಮೆ ದು ಬಗೆದಿರ್ದು (ಶಾಂತಾ. ೭೯-೦೨); ಎಮ್ಮಲ್ಲಿಗೆ ನೀಮುಂ ಕಿತ್ತಯ್ಯಂಗಳನೊಡಗೊಂಡು ಬಂದು ಪಕ್ಕದಿರ್ದು ಪಾನಿ[ಪಾಣಾ. ನೆ]ಗಟ್ಟಿ ಮಾರ್ಗಮಂ ತೋಱಿ ಮಗುಱೆ ಬಿಜಯಂಗೆಯ್ಯಂ (ಶಾಂತಾ. ೮೧-೧). ℘ ಇಲ್ಲಿ 'ಪಾನಿಗಟ್ಟಿ' ಎಂಬ ಕೃದಂತಪದವು ಶ್ರಾವಕ, ಶ್ರಮಣ ಈ ಇಬ್ಬರಿಗೂ ಅನ್ವಯವಾಗುವಂತೆ ಪ್ರಯೋಗವಾಗಿದೆ. ಆದುದರಿಂದ ಅರ್ಥಕ್ಲೇಶವಿದೆ. ಶ್ರಮಣರನ್ನು ಭಿಕ್ಷೆಗಾಗಿ ಆಹ್ವಾನಿಸಿ ಕಾಲು ತೊಳೆಯುವ ಸಮಯದಲ್ಲಿ ಅವರ ತಲೆಯ ಮೇಲುಭಾಗದಲ್ಲಿ ಚೌಕಾಕಾರದ ಶುಭ್ರವಸ್ತ್ರವನ್ನು ಕಟ್ಟುವ ಪದ್ಧತಿಯಿದೆಯಂತೆ. ಆದುದರಿಂದ ಇಲ್ಲಿ 'ಪಾನಿ' ಎನ್ನುವುದು ಯಾವ ಶಬ್ದದಿಂದ ಉತ್ಪನ್ನವಾಗಿದೆ ಎಂಬುದು ಚರ್ಚೆಗೆ ಆಸ್ಪದವನ್ನುಂಟುಮಾಡುತ್ತದೆ. 'ಇರ್ಪಾನಿ' ಹೋ.

[ಪಾನಿ ? + ಕಟ್ಟು$_1$]

ಪಾನಿಪತ್ತು, ಪಾಣಿಪತ್ತು (ನಾ). ೧. ದಿಲ್ಲಿ ಮತ್ತು ಅಂಬಾಲಗಳ ನಡುವೆ ಇರುವ ಐತಿಹಾಸಿಕ ಪ್ರಸಿದ್ಧಿಯುಳ್ಳ ಒಂದು ಯುದ್ಧ ಭೂಮಿ. ೨. (ಆಲಂ) ಯುದ್ಧದಲ್ಲಿ ಉಂಟಾಗುವ ರಕ್ತಪಾತ: ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು ಪಾನಿಪತ್ತುಗಳನ್ನು ಮುಕ್ಕುಳಿಸುವೆ (ಪಾರಶೀ. ೪೦-೦೨). ಪಾಣಿಪತ್ತು: ೩. ಮಹಾಯುದ್ಧ: ಪ್ರಪಂಚದ ಪಾಣಿಪತ್ತಿನಲ್ಲಿ ಇವೆರಡೇ ವರ್ಗಗಳು ಒಂದಕ್ಕೊಂದು ಇದಿರಾಗಿ ಪಡೆಗಟ್ಟಿ ನಿಲ್ಲುವವು (ಮಾಪಾರ. ೧೦೦). [←ಹಿಂ. ಪಾನೀಪತ್]

ಪಾನಿಯಾಲಯ (ನಾ). ಸಮುದ್ರ (?): ಕೀಶತಿಯಾಡುವುದ ಕೇಳುತ ವಿಭೀಷಣಂ ಪಾನಿಯಾಲಯವ ಕಳೆದುತ್ತರದ ತಟದೊಳು ದಿನೇಸನಂದನ ನಿರ್ದೊಡಲ್ಲಿಗೈತಂದು (ಪಂಕಾರಾ. ೬-೫-೪). [<ಪಾನೀಯ+ಆಲಯ]

ಪಾನಿವಟ್ಟಲು 'ಪಾಣಿವಟ್ಟ' ನೋ.

ಪಾನಿಸು (ಕ್ರಿ). ಕುಡಿ; ಪಾನಮಾಡು: ಶುನಕಮಾಂಸವ ಭಕ್ಷಿಸಿಸುರಯ ಪಾನಿಸಿದವರ ಪಾಪಕೆ ಹೋಹರು (ಎಳ. XII, ಮುದ್ರಗಿ. ೮೮-೦೭; 1544) ಗಂಗೆಯಿಂದೆಸಗಿದಾ ಮದಿರೆಯಂ ಪಾನಿಪರೆ? (ಹೆಸ್ಕರ. ೧೨-೭೫).

[ಪಾನ್ಯ+—ಇಸ್ಯು]

ಪಾನೀಯ (ಗು). ೧. ಕುಡಿಯಬಹುದಾದ; ಕುಡಿಯಲು ಯೋಗ್ಯವಾದ. (ನಾ). ೨. ಕುಡಿಯಲು ಯೋಗ್ಯವಾದ ಪಾನಕ, ಸೋಮರಸ, ಹಣ್ಣಿನ ರಸ, ಮದ್ಯಮುಂತಾದ ದ್ರವಪದಾರ್ಥ: ಸಹಕಾರಪಕ್ವರಸಸಾರಾಸಾರಪಾನೀಯದಿಂ ಸವಿಶೇಷಂ ಬೆಳೆದೊಪ್ಪಿ ತೋರ್ಪ ಕಳಮಂ ತಾನೆಲ್ಲಿಯುಂ (ಸುಳುಮಾ. ೦-೭೪). ೩. ನೀರು; ಜಲ: "ಆಪಃ(ಪ್), ತೋಯಂ . . . ಪಾನೀಯಂ . . . ಜೀವನೀಯಂ—ಈ ೨೬ ನೀರ್" (ಹಲಾಯು. ೧೦೭-೨೬); ಇತ್ತ ಶಿಷ್ಯಂ ಮುದದೊಳು ಪರಿಶುದ್ಧ ಪಾನೀಯದಿಂ ಸ್ನಾನಮಂ ಮಾಡಿ (ಶ್ರೀಕ. ೭-೪೦). [ಸಂ.]

ಪಾನೀಯಖೇಯ (ನಾ). (ಊರಿನ ಸುತ್ತಲೂ ತೋಡಿರುವ) ಕಂದಕ; ಅಗಳು: ಮೂವಳಸುವಳಸಿ ಸುತ್ತಿರ್ದುದಂಭೋಧಿಯೆಂಬಂತೆ ಗಭೀರಾರಾವದಿಂ ಪಲ್ಮೊರೆವವೊಲೆಸೆಗುಂ ಸುತ್ತಿ ಪಾನೀಯಖೇಯಂ (ಸುಳುಮಾ. ೯-೫೭). [ಪಾನೀಯ+ಖೇಯ]

ಪಾನೀಯಜ (ನಾ). ನೀರಿನಲ್ಲಿ ಹುಟ್ಟಿದುದು; ತಾವರೆ: 'ಪಾನೀಯಜಾಸನ' ಪರಾ. [ಸಂ.]

ಪಾನೀಯಜಾಸನ (ನಾ). ತಾವರೆಯನ್ನು ಪೀಠವಾಗಿ ಉಳ್ಳವನು; ಬ್ರಹ್ಮ: ಅಂಭೋಜಾಯತಾಕ್ಷನ ನಾಭಿಯಲಿ ಪಾನೀಯಜಾಸನನುದಿಸಿದನು (ಕೊರರಾ. ೪-೨-೧೩). [ಪಾನೀಯಜ+ಆಸನ]

ಪಾನೀಯಧಾರಕ (ನಾ). ಮದ್ಯ ಮುಂತಾದ ಪಾನೀಯಗಳನ್ನು ಸದಾ ಹಿಡಿದು ಸಿದ್ಧವಾಗಿ ನಿಂತಿರುವ ಸೇವಕ: ತಾ ಭೋಗಿಸದೆ ಬಳಸದೆ ರಾಜನನೋಲಗಿಸುವವನೆ ಪಾನೀಯಧಾರಕನು (ಕುಸ್ಕಾಳಾ. ೩-೯೩).

[ಪಾನೀಯ+ಧಾರಕ]

ಪಾನೀಯಮಂಡಪ (ನಾ). (ನೀರು, ಪಾನಕ, ಮಜ್ಜಿಗೆ ಮುಂತಾದ) ಪೇಯಗಳನ್ನು ದಾರಿಹೋಕರಿಗೆ ನೀಡಲು ದಾರಿಯ ಪಕ್ಕಗಳಲ್ಲಿ ಕಟ್ಟಿರುವ ಮಂಟಪ; ಅರವಟ್ಟಿಗೆ: ಪಾನೀಯಮಂಡಪಂಗಳೊಳ್ ಕಲಶಮನೆತ್ತಿ ನೀರೆಱೆವ ಕಾಂತೆಯ . . . ನೋಡಿ (ತಂದ್ರಪು. ೧-೯೭).

[ಪಾನೀಯ+ಮಂಡಪ]

ಪಾನೀಯಶಾಲಿಕೆ (ನಾ). =ಪಾನೀಯಮಂಡಪ: "ಪ್ರಪಾ, ಪಾನೀಯಶಾಲಿಕಾ—೨ . . . ಅರವಟಿಕೆ" (ಸಿದ್ಧಾಂತಿ. ೦೦೦).

[ಸಂ. ಪಾನೀಯಶಾಲಿಕಾ]

ಪಾನೀಯಶಾಲೆ (ನಾ). =ಪಾನೀಯಮಂಡಪ; "ಪ್ರಪಾ, ಪಾನೀಯಶಾಲಾ — ಈ ೨ ಅಱವಟ್ಟಿಗೆ" (ಹಲಾಯು. ೩೦ ೧೪೨); ಅನಂಗಶೃಂಗಾರ ಲೀಲೆಗಳೆನಿಪ್ಪ ಪಾನೀಯಶಾಲೆಗಳುಂ (ಪುಸ್ಕಪು. ೯-೨೨ ವ); ಆ ಪಾನೀಯಶಾಲೆಯೊಳು ನಿಂದು ನೀರೆಱೆವ ನಾರಿಯರ ಲಾವಣ್ಯವ ಸುಂದರ ಲೋಚನದಿಂದ ಕುಂದದೀಂಟುತ ಪಥಿಕರು ಜಲಪಾನ ಸಾಕೆಂದೆನ್ನರಾ ಬಟ್ಟೆಗಳೊಳು (ಪರ್ಧಕ. ೧-೫೮). [ಪಾನೀಯ+ಶಾಲೆ$_3$]

ಪಾನೀಯಸಂಚರ (ನಾ). ನೀರಿನಲ್ಲಿ ಸಂಚರಿಸುವಂತಹುದು; ಮೀನು: "ಮೀನಂ ರುಷಂ . . . ಪಾನೀಯಸಂಚರಂ ಶಕಲಿ ವೈಸಾರಿಣಂ ಮತ್ಸ್ಯಮೆನೆ ಮೀನ್ಗೆ ನಾಮಂ" (ಪುಂಗರಾ. ೧೨೧-೬). [ಪಾನೀಯ+ಸಂಚರ]

ಪಾನು (ನಾ). ೧. ಎಲೆ; ಪತ್ರ: (*). ೨ ಪುಸ್ತಕದ ಅಥವಾ ಪತ್ರಿಕೆಯ ಹಾಳೆ: ಬಳವಂತನು ಅವಸರದಿಂದ ಪಾನು ತಿರುವುತ್ತ ಹೋದ್ದರಿಂದ ಆ ಚಿತ್ರಗಳು ಗೋದಾವರಿಗೆ ನೆಟ್ಟಗೆ ಕಾಣಿಸಲಿಲ್ಲ

(ಶಾಕ್ತಗೃ. ೬೦) ; ಒಂದು ಮಾಸಪತ್ರಿಕೆಯನ್ನು ತೆಗೆದುಕೊಂಡು ಅದರ ಪಾನುಗಳನ್ನು ತಿರುವಿಹಾಕುತ್ತಿದ್ದರು (ಶಂಕಿಶಂ. ೪). ೩. ವೀಳ್ಯದೆಲೆ : "ವೀಳ್ಯದೆಲೆ . . . ನಾಗಲತೆ, ತಾಂಬೂಲವಲ್ಲಿ, ಎಲೆಬಳ್ಳಿ, ಪಾನು, ಅಂಬಾಡಿಎಲೆ, ನಾಗವಲ್ಲಿ" (ಹಸ್ತಿ. ೦೦೬). 'ಪಾನುಸುಪಾರಿ' ಪರಾ. ೪. ಅಡಕೆ, ಸುಣ್ಣ ಮೊದಲಾದುವನ್ನು ಹಾಕಿ ಮಡಿಸಿರುವ ವೀಳೆಯದೆಲೆಯ ಸುರುಳಿ ; ಬೀಡ ; ಪಾನ್‌ಪಟ್ಟಿ : (೬). ೫. ಇಸ್ಪೀಟು ಎಲೆ : ಪಾನುಗಳು ಸರಿಯಾಗಿ ಬರದೆ ಈ ಸಲವೂ ಅವನು ಸೋತುಹೋದನು (ಮೂಡ). [←ಹಿಂ. ಮರಾ. ಪಾನ್]

ಪಾನುಂಗಲ್, ಪಾನಂಗಲ್ಲು, ಹಾನಂಂಗಲ್, ಹಾನುಂಗಲು, ಹಾನುಗಲ್, ಹಾನಂಗಲ್ಲು (ನಾ). ಒಂದು ಸ್ಥಳದ ಹೆಸರು ; ಈಗಿನ ಧಾರವಾಡಜಿಲ್ಲೆಗೆ ಸೇರಿದ ಒಂದು ಊರು : ಮಾಧವಶರ್ಮನಃ ಪಾನುಂಗಲ್ವಿಷಯೇ (ಎಳ. X, ಕೋಣಾಶಿ. ೬೨–೬೬ ; 787). **ಪಾನುಗಲ್ಲು** : ಪಾನುಗಲ್ಲೆಂಬ ಪುರವರಕೆಯ್ದಿ ಗೋವಿಂದಪೆಗಡೆಯೆಂದೆನಿಪ ಶಿಷ್ಯನ ಸದನದಲ್ಲಿರು ತಿರೆ (ಪಾಸೋಕ್ತ. ೬–೦೦೦). **ಪಾನುಂಗಲ್** : ಬನವಾಸಿ ಪಲಸಿಗೆ ಪಾನುಂಗ್ಗಲ್ಲುಚ್ಚಂಗಿಗೊಣ್ಣ ಹೊಯ್ಸಳವೀರಬಲ್ಲಾಳದೇವರ ರಾಜ್ಯದ . . . ಬಿಲಗೋವಿಂದರಸರುಂ ಉಮ್ಮಡಿಯ ಬವರಕ್ಕೆ ನಡದಲ್ಲಿ (ಎಳ. X. ಗೋಂಲಿ. ೪೦–೪ : 1180) ; ಶ್ರೀಮತ್ಪೃಲಪದೇವರಸರು . . . ಪಾನುಂಗೆಲ್ವೆನೂರುಮಂ ಸ(ಪಾ)ಹ್ಯಾಭ್ಯಂತರಸಿದ್ಧಾಯವಿನೆಯ ಸ್ವಾಮ್ಯವಮನಾಳುತ್ತಮಿರೆ (ಕಳುಂ. ೯–೬). **ಪಾನುಂಗಲು** : ನರಸಿಂಗವರ್ಮ್ಮ ನಿವರ್ಮ್ಮಳನಂ ಕಳಪಾಳಕಾಳಾನಳಂ ಪಾನುಂಗಲುಗೊಣ್ಣ ಚೆತುರ್ಮುಖಿಗಣ್ಣ (ಎಳ. II, ೦೪೩–೪೯; 1131); ಬನವಸೆ ಪಾನುಂಗಲು . . . ಯಿಂತೀ ಸಮಸ್ತ. ದುರ್ಗ್ಗಂಗಳಂ (ಎಳ. VII, ೫೫೮. ೪೦–೫೩; 1180 ?). **ಪಾನುಗಲ್** : ಪಾನುಗಲ್ಲಾಡೆಯೆಲಂಬಿಯ ಕಂಪನದ ಬಟಿಯ ಬಾಡಂ (ಎಳ. VII. ೫೫೦. ೪೨–೪೪ ; 1168). **ಪಾನುಗಲ್ಲು** : ಪಾನುಗಲ್ಲ ಮಹಾಸೀಮ್ನಿ ವಿಖ್ಯಾತಿವಧಿತಾಂಶ್ರಿತಂ (ಎಳ. VII. ೫೫೫. ೪೫–೪೯ ;1527). [?]

ಪಾನುಗಲ್ಲು 'ಪಾನಂಗಲ್' ನೋ.

ಪಾನುಸುಪಾರಿ 'ಪಾನ್‌ಸಂಪಾರಿ' ನೋ.

ಪಾನೆ, ಪಾಣ್ಣಿ, ಪಾನ್ನ, ಪಾನ್ನಿ, ಪಾನಂ, ಪಾನೆ, ಪನ್ನೆ, ಪಾನೆ (ನಾ). ೧. ಲೋಹ, ಮರ, ಮಣ್ಣು ಮುಂತಾದುವುಗಳಿಂದ ಮಾಡಿದ ಅಗಲಬಾಯಿಯಿಯ ಪಾತ್ರೆ : ಕಟಿಕ್ಕವಿರ್ದ ನೆರೆ ಸಂಕಟ ಮೆನಿಸದೆ ತೆಱವುಗುಡುವವೊಲ್ ಪಾನೆಯ ಕೂಬ್ ಟಕಂ ನೆರೆದುಂಡೊಡಮುತ್ಕಟಭಪ್ಪಕ್ಷೀಣಭುದ್ಧಿಯಂ ಮುನಿ ತಳೆದಂ (ಅಪಂಪ. ೯–೦೦೨) : ದೊಕ್ಕನೆ ಪಾನೆಯನಿಕ್ಕದೆ ಕೆಕ್ಕಳಿಸದೆ ಕಣ್ಣನುಗುಳದಗುಳಂ ಬಿರಳಿಂ ತಕ್ಕುದ ನೆರೆಯದೆ ಭಕ್ತಿಯಿನಿಕ್ಕಿದವೋಲುದರಗರ್ತಮಂ ಪೊಗ್ದಿನಿತಂ (ಜಾಹಿ. ೨೦–೦೩). ೨. ಅಳೆಯಂವೆ ಒಂದು ಸಾಧನ : ಅವರ ತವ್ಮೋ ಅಮ್ಮಯ್ಯಂ ದೇಗುಲಮಂ ಮಾಡಿಸಿ ಭಟೂರರ್ಗ್ಗೆ ಊರಮ್ಮೂಡಣ ಕಿಳಾರಕೆಯ್ಯೊಳ್ಪಿರಿಯ ಪಾನೆಯೊಳಱು ಗಣ್ಣುಗಂ ಮಣ್ಣುವಾ × × × ಕೀಸವಯ್ಯಂಗೆ ಬಿ × × ಟ್ಟ (ಎಳ. VII, ೬೯೪ಹ. ೨೬–೦೩; ೮೭೮) ; ಗುಣಿಗನ ಒಂದು ಮತ್ತಲ್ಗೆ ಪಿರಿಯ ಪಾನೆಯೊಳ್ ಎರಡು ಪಾನೆ ಬತ್ತವ . . . ಎಲ್ಲ ಕಾಲಕ್ಕಮೆ ಕೊಟ್ಟೊರ್ (ಎಳ. VIII, ೫೫೮. ೬೬–೭; ೪೮). 'ಇಪ್ಪಾನೆ', 'ಒಪ್ಪಾನೆ' ಪರಾ. **ಪಾಣ್ಣಿ**₁ : ೩. ನೀರು, ಮಂಸುರಿ ಇತ್ಯಾದಿಗಳನ್ನು ಹಾಕಿಡುವ ಅಗಲವಾದ ಬಾಯಿಂಳ್ಳ ದೊಡ್ಡದಾದ ತೊಟ್ಟಿ : ಸಮತಟ್ಟಾದ ಬಯಲುಗಳಲ್ಲಿ ರೈಲುಹಾದಿಯ ಎರಡು ಮಗ್ಗುಲಿಗೂ ಬಲು ಉದ್ದವಾದ ಎರಡು ನೀರಿನ ಪಾನೆಗಳನ್ನು ಮಾಡುತ್ತಾರೆ (ಪಾಂಕ್ರ.I. ೬೯೯). ೪. ದೋಣಿಯಲ್ಲಿ ಪ್ರಯಾಣಿಕರು ಕೂರಲು ಹಾಕಿರುವ ಅಡ್ಡಹಲಗೆ: ಅವಸರದಿಂ ದೋಣಿಪತ್ತಿ ಕುಳಿತಳಾಕೆ ಪಾಣಗೊತ್ತಿ,(೧೨೫೦. ೭೫–೦೦); ಯಾವುದೋ ಒಂದು ಮತಾಯಿಯು ದೋಣಿಯ ಪಾಣಿಯಲ್ಲಿ ಕುಳಿತ ಆ ಹುಡುಗನನ್ನು ಅಪ್ಪಳಿಸಿ ಸೆಳೆದು ಒಯ್ದುಬಿಟ್ಟಿತ್ತು (ಕ್ರಿಂಪು. ೧೭). **ಪಾನ್ನೆ** : ೧. ಶತ್ರನುಜನಾ ಜನನಿಯಿಲ್ಲದಡತ್ಯಲಿತ್ಯಲು ಪರಿಸುತ ಹಸಿವೆತ್ತಿ ಬಾ[ಣಾಂ. ದೋ] ನ ದೊಳೊಂದು ಹೂರಿಗೆಯಂ ತೆಗೆದು ಮೆಲಲು (ಜೈಪು. ೨೪–೩೫). **ಪಾನಿ**₁ : ೧. ಆಕೆ ಕಮಂಡಲು ಒಂದನ್ನು ತಂದಿದ್ದಳು . . . ಈ ಮಣ್ಣುಪಾನಿಯಂತೆ ಎಡವಿ ಬಿದ್ದರೆ ಎಲ್ಲಿ ಒಡೆದುಹೋಗುವುದೋ ಎಂಬ ಭಯವೇ ಇಲ್ಲ (ಚಿಪಾ. ೦೪೭) ; ಸಬಕಾರದ ನೊರೆಯನ್ನು ಒಂದು ಪಾನಿಯಲ್ಲಿ ತುಂಬಿಟ್ಟು ದೋಷಿಸಬೇಕಾದ ಮುಖವನ್ನು ನಾಲ್ಕಾರು ನಿಮಿಷ ಅದರಲ್ಲಿ ನೆನೆಯಿಟ್ಟು ತೆಗೆದರಾಯಿತು (ಪೀಕೃ. ೬೬). ೩. ಕಲಗಚ್ಚಿನ್ನು ಪಾನಿಗೆ ಸುರಿಯಲು ಬಂದ ರಂಗವ್ವ . . . ಕೇಳದಳು (ಚಿಪಾ. ೪೮). ೫. ಹೂವಿನ ಸಸಿ ಮುಂತಾದುವುಗಳನ್ನು ಬೆಳೆಸುವ ಮಣ್ಣಿನ ಪಾತ್ರೆ ; ಕುಂಡ : ನಾನು ಬಾಗಿಲಿದುರು ಒಂದು ಸುಂದರವಾದ ಕೈತೋಟ ಮಾಡಿದೆ. ಐವತ್ತು ಪಾನಿಗಳನ್ನು ತಂದಿರಿಸಿದೆವು (ಸ್ವ. ಪಿ. ೩೫೪) ; ಸಂಜೆಯ ಮುಂದೆ ಬಂಕದಲ್ಲಿಟ್ಟ ಪಾನಿಯೊಳಗೆ ಅರಳಿದ ವಲ್ಲಿಗೆಯ ಹೂವಿನ ಗಂಧ ಬರುತ್ತಿತ್ತು (ಭಾಸ್ವ. ೨೫೬). **ಪಾನ್ನು** : ೫. ನಾಗಪ್ಪನು . . . ಹೂವಿನ ಪಾನುಗಳಿಗೆ ನೀರು ತಣಿಸುತ್ತಿದ್ದನು (ಕಪಿ. ೬೬). **ಪಾನೆ** : ೧. ಗಮಗಮಿಸುತ್ತಿದ್ದ ಕಾಫಿ ತುಂಬಿದ್ದ ಬೆಳ್ಳಿಯ ಗಡಿಗೆ, ಸಕ್ಕರೆಯ ಪಾನೆ . . . ರೊಟ್ಟಿಗಳನ್ನು ಳ್ಳ ಬುಟ್ಟಿಗಳನ್ನು ಜೋಡಿಸಲಾಗಿತ್ತು (ಕುಪು. ೦೩) ; ಪಾನೆಯನ್ನು ತಲೆಮೇಲೆ ಕವಿಚಿಕೊಂಡು ತಿರುಗಲಾರಂಭಿಸಿದನು (ಶಕಾಕು. IV. ೦೦೬). ೩. ಪಾನೇಯಂತಾ ಬಾಯಿದೆರೆಯೆ ಬಾಯಿ ತುಟಿಯು ವಿಾಂದ ಹಲ್ಲು . . . ಆ ನಳರಾಜ ತಾನು ಯಿಂತಾ ರೂವು ಧರಿಸಿದ (ಜಪಚ. ೦೦೦) ; ಒಳಗಿದ್ದ ದೊಡ್ಡ ಪಾನೆಗಳಲ್ಲಿ ಮದ್ಯ ತುಂಬಿದ್ದಿತು (ಪಾಂಚಿಪಾ. ೨೨೮) ; ಈ ಕಲಗಚ್ಚಿನ ಪಾನೆಯಲ್ಲಿ ಅಲ್ಲಿದ್ದ ಗೋಗಣವು . . . ಅಕೃತ್ರಿಮಸುಖವನ್ನು ಸವಿಯುತ್ತಿದ್ದಿತು (ಕಪಿ. ೦೩೮). ೫. ಚಿತ್ರವಿಚಿತ್ರವಾದ ಅನೇಕ ಬಗೆಯ ಗಿಡ ಬಳ್ಳಿಗಳು ಇರುವ ವಣ್ಣಾ ಪಾನೆಗಳು ಸಾಲಾಗಿ ಇವೆ (ಕುಕರ್ಮ. ೪೫). ೬. ಎತ್ತುಗಳನ್ನು ಹೂಡಿ, ಬಾವಿಯಿಂದ ನೀರೆತ್ತಲು, ಚರ್ಮದಿಂದ ಮಾಡಿದ ಒಂದು ಸಾಧನ; ಕಪಿಲೆ : ಧರ್ಮಡೋಣಿಗೆ ನೀರ ಎತುವ ಕಬಿನದ ಎತದ ಪಾನೆ ಕಬಿನದ ಕಟ್ಟು ಬಿಷ್ಮಂ ಧರ್ಮವನು ತವದೆ ನಡಸಿ ಬಾಹೆಲು (ಶ್ರೀಭಾ. IX–ii, ೬೭೦–೨೨ ; 1559). **ಪನ್ನೆ** : ೨. ಕೊಟ್ಟ ಧ್ರಂ(ಧ)ರ್ಮ್ಮ ಚೈತ್ಯ ಪವಿತ್ರದಲಿ ಪೊಕ್ಕಲಿಗೆ ಹಾಗೆ ವೆಟ್ಟಲುಗೊಳಗ ಹನ್ನೆಗೆ ಮಾನವಕ್ಷ ಸೊಂಟಿಗೆಯಣ್ಣೆ (ಸಾಭಾ. XV. ೪೭–೫೨ ; 1154). **ಪಾನೆ** : ೨. ಶ್ರೀವೈಸಂವೇಶವದೇವರ [ದೇವಡಿ]ಗಳಿಗೆ ಗುಗ್ಗರಿಗೆ ಪಾನೆಯಲಂಂ ಅಂಗಡಿಗಳಲು ಸುಟ್ಟು ಗಾಯಮಂ ಬಿಟ್ಟರ್ರು (ಸಾಭಾ. XV. ೪೧೫–೦೦ ; 1165); ನೃಂಪ್ಪದೇವರ ಬಾಳನ [ತೆ] ಅಪರಾಹ ಪ ೬ ಧತ್ತ ಪಾನೆ ೪೫ ನೂ ಧಾರೆಯಾಗಿ ಎಱದು ಕೊಟ್ಟರು (ಕಾ· III–i. ೨–೬ ; 1331); ಯಳ್ಕೆಱೆ ಪಾನೆ ೩೬ (ಕ್ರಿಶಂ. ೦೯೪. ೫೪–೦೩ ; 1673); ಎರಡು ಪಾನೆ ಭತ್ತಕ್ಕಾಗಿ, ಹನ್ನೆರಡು ಗಂಟೆ ದುಡಿಯುವ ಜನವಾಗಿರಲಿಲ್ಲ (ಪೀಕಕು. ೪೯). ೭. ಭೂಮಿಯ ಒಂದು ಅಳತೆ : ಯಿಾ ಅಕ್ಕಿಯ ಕೊಜುತೆಗೆ ಕೊಠಾರಿ ಗುಡಿಯ ನಾಲ್ಕತ್ತು ಪಾನೆ ಗದ್ದೆಯ ಮೇಲಣ ಎಂಟು ಪಾನೆಯಕ್ಕಿಯೂ ಕೂಡಿ ನಡಉದು (ಶಾಭಾ. IX–ii, ೪೦೫–೨೬ ; 1872). [ದೇ.ತ ತಮಿ. ಪಾನೈ, ಪಾಣಾ; ಮಲ. ಪಾನ, ಪಾನಿ; ತುಳು. ಪಾಣೆ, ಪಾಣ, ಪಾನೆ, ಪಾಣ, ಪಾಡೆ, ಪಾನ, ಪಾವೆ : ತೆಲು. ಪಾನ ; ಕೊಡ. ಪಾನಿ]

ಪಾನ್ನಾಡು (ನಾ). ಒಂದು ಪ್ರದೇಶದ ಹೆಸರು : ಶ್ರೀಮತ್ ಕೊಣ್ಣಣಿವೃದ್ಧರಾಜೇನ ದುರ್ವ್ವಿನೀತ ನಾಮಧೇಯೇನ ಸಮಸ್ತ ಪಾನ್ನಾಡ (? ಪಾಹಾಡ) ವುನ್ನಾಡಾಧಿಪತಿನಾ (ಇಂ. v. ೦೪೯–೦೦ ; ೬೭೮). [? + ನಾಡು]

ಪಾಪ್ಪ 'ಪಾವೆ' ನೋ.

ಪಾಪ್ಪ (ನಾ). ೧. ದೋಷ ; ಪುಣ್ಯವಲ್ಲದ ಕಾರ್ಯ ; ದುರಾಚಾರ : "ವೃಜಿನಂ, ದುರಿತಂ . . . ಪಾಪಂ, ಪಾಪ್ಮಾ, ಪಾತಕಂ—ಈ ೧೪ ಪಾಪಂ" (ಹಲಾಯು. ೦೦೩-೩) : ಪಾಪಮಿದು ಪುಣ್ಯಮಿದು ಹಿತರೂಪಮಿದಹಿತಪ್ರಕಾರಮಿದು ಸುಖಮಿದು ದುಃಖೋಪಾತ್ತಮಿದೆಂದಱಿಪುಗುಮಾ ಪರಮಕವಿ ಪ್ರಧಾನರಾ ಕಾವ್ಯಂಗಳ್ (ಕವಿಕಾ. ೦-೦೮); ಪಾಪದ ಪುಣ್ಯದ ಭೇದಮನೀ ಪರಿಯಿಂದಱಿಯದಿರ್ಪ ನಡೆಪಾಪಿಯರ್ಗಾ ಶ್ರೀಪುರುಷೋತ್ತಮನಂ ಮನೆಗಾಪೆನಿಸಿದ ದಿವ್ಯಪಾದಕಾನೆಱಗಿದಪೆಂ (ಪಕಂ. ೬-೨೨೬). ೨. ದುರಾಚಾರದಿಂದ ಬಂದ ಕರ್ಮಫಲ : ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲ ದೊಡಾಳ್ದನಾಳ್ ಸರೋಗ ನರೋಗಂ (ಶಾಂತಿಪು. ೬-೦೪೦); ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ ಇನ್ನು ಬಯಸಿದರುಂಟೆ (ಬಸವ. ೨೪); ಬಸವ ಶರಣೆನೆ ಪಾಪವಳಿವುಗು (ಬಸವ. ೦-೨೫). ೩. ತಪ್ಪು ; ಅಪರಾಧ : ಭೂಪನಂ ಹೊದ್ದುವುದು ರಾಷ್ಟ್ರದ ಪಾಪ (ಬಸವ. ೫೫-೬). ೪. ಕೆಟ್ಟ ವಸ್ತು : "ಅರ್ವಾಣಂ, ಅಣಕಂ . . . ಪಾಪಂ, ರೇಫಸಂ—ಈ ೧೩ ಹೊಲ್ಲಹ ವಸ್ತು" (ಹಲಾಯು. ೫೬-೦೮೨). ೫. ಕೆಟ್ಟ ಮನುಷ್ಯ; ದುಷ್ಟ; ಪಾಪಿ : "ನೃಶಂಸಃ, ಘಾತುಕಃ, ಕ್ರೂರಃ, ಪಾಪಃ—೪ ಪರರಿಗೆ ಬಾಧೆಮಾಡುವ ಸ್ವಭಾವವುಳ್ಳವನ ಹೆಸರುಗಳು" (ಸಿದ್ಧಾಂತಿ. ೩೩೬); ಮಿಟ್ಟು ಪೊಟ್ಟಂ ಪಾರೆ ಪಾಪರ್ ದೇವರಂ ತೆಗಟಿಸಲೊಡವೇನಕ್ಕುಂ ? (ರಾಮಾಶ್ವ. ೨೪-೪). ೬. ದುರ್ದೈವ ; ದುರದೃಷ್ಟ. ೭. ಕೇಡು ; ಅನಿಷ್ಟ : 'ಪಾಪಶಂಕಿ' ಪರಾ. ೮. ಅನುಕಂಪೆಯನ್ನು ಸೂಚಿಸುವಾಗ ಬಳಸುವ ಒಂದು ಶಬ್ದ : ಕೂಸಿಗಿಂತ ತ್ರಾಣಿಯಲ್ಲ ಪಾಪ ರಾಯರು (ರಾಮಾಪ. ೯೭) ; ಏನೋ ಚೂರುಚಾರು ಅಂತಿಂತಹ ಕಾಳುಕಡಿ ತಿಂದರೆ ತಿನ್ನಲಿ ಪಾಪ ಎಂಬಂತಿಲ್ಲ (ರೇಕಸ್ಥ. ೪೪) ; ಪಾಪ ಮಗು ಏನೆಂದುಕೊಂಡಿತೋ ಕಾಣೆ (ಪಕಾಕ್ಷ. ೦೮.). ೯. [ಜೈನ] ಒಂಬತ್ತು ವಿಧವಾದ ಪದಾರ್ಥಗಳಲ್ಲಿ ಒಂದು : 'ನವಪದಾರ್ಥ', 'ಪಾಪಪದಾರ್ಥ' ಪರಾ. [ಸಂ.]

ಪಾಪ್ಪ (ನಾ). ಒಂದು ಬಗೆಯ ಗಿಡ : "ಪರ್ಪಣಃ—ಪಾಪ, ಚಪಲ, ಗೇರು" (ಓಷಧಿ. ೯೦). [?]

ಪಾಪಕರ್ತ (ನಾ). ದುರಾಚಾರವನ್ನು ಮಾಡಿದವನು : ಪಾಪಕರ್ತನು ನಾನು ಪಾಪನಾಶನ ನೀನು (ಪುರಂದ. ೪-೯೦-೦). [ಪಾಪ್ಪ+ಕರ್ತ]

ಪಾಪಕರ್ಮ (ನಾ). ೧. ಕೆಟ್ಟ ಕೆಲಸ ; ದುರಾಚಾರ : ಆತನ ಭಾರ್ಯೆ ಪೃಥ್ವಿಶ್ರೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮ ಜೀವಂ ನೆಲಸಿದೊಡೆ (ಪಡ್ಡಾರಾ. ೬೬-೯); ಎಲವೊ ಎಲವೋ ಪಾಪಕರ್ಮವ ಮಾಡಿದವನೇ . . . ಒಮ್ಮೆ ಶರಣೆನ್ನೆಲವೋ ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು (ಬಸವ. ೬೨೦); ಪಾಪಕರ್ಮವ ಮಾಡಿದಜಮಿಳನ ಯಮಭಟರು ಕೋಪದಿಂದಲಿ ಸೆಳೆಯೆ (ಪುರಂದ. ಧಾ. ೨-೯೩-೪); ಪಾಪಕರ್ಮಗಳ ನಶಿಗಳೆದು ನಿಂದವಗೆ ಕೋಪವೆಲ್ಲಿಯದು (ಸರ್ವಜ್ಞ. ೫೦೨). ೨. ಕೆಟ್ಟ ಕೆಲಸವನ್ನು ಮಾಡಿದವನು ; ದುಷ್ಕರ್ಮವನ್ನು ಮಾಡಿದವನು ; ಪಾಪಿಷ್ಠ : ಎನ್ನ ಪಾಪಕರ್ಮನ ಕತದಿಂದಮೀ ನಿಮಗಮೀಯಿರವಾದುದೆ ಸಿಂಧುನಂದನಾ (ಗದಾಯು. ೫-೪೦); ತನಗಿಕ್ಕುವೆಱೆವ ಕರುಣಂ ಮನದೊಳಮಿನಿತಿಲ್ಲ ಪಾಪಕರ್ಮನವಂ ಮಾವನೆ (ಸುಳುಮಾ. ೨-೬೦) ; ಇಂ(ಇ)ದನಾ[ರಾ]ನುಂ ಕಿಡಿಸಿಹೆನೆಂಬ ಪಾಪಕರ್ಮ್ಮಂಗುಪೇಕ್ಷಿಸಿದಂಗಂ . . . ಸಾಸಿರಕವಿಲೆಯುಮಂ ವಾರಣಾಸಿಯೊಳಂ ಕುರುಕ್ಷೇತ್ರದೊಳಂ ತಂನ ಸ್ವಹಸ್ತದೊಳು ಕೊಂದ ದೋಷಮಕ್ಕು (ಎಇ. XXVII. ೬೩-೫೪; 1114).

[ಪಾಪ್ಪ+ಕರ್ಮ]

ಪಾಪಕೃತ್ಯ (ನಾ). ಕೆಟ್ಟಕೆಲಸ ; ದುರಾಚಾರ ; ಪಾಪಕರ್ಮ : ನಾವು ಅಹರ್ನಿಶಿ ಅನೇಕ ಪಾಪಕೃತ್ಯಗಳನ್ನೆಸಗುತ್ತಿದ್ದೇವೆ. (ಪುವರು. ೩೪೫).

[ಪಾಪ್ಪ+ಕೃತ್ಯ]

ಪಾಪಕ್ಷಯ (ನಾ). ಪಾಪವು ನಾಶವಾಗುವುದು; ದುಷ್ಕರ್ಮವು ಕಳೆಯುವುದು : ಪಾಪಕ್ಷಯಕ್ಕೆಂದು ಗಂಗೆಯೊಳ್ಳಿಂದರೆ ಪಾಪಿಯ ದೊಳಿತಿಂದಂತೆ ತಾಪಸ್ಥಸುರರಿಂಗೆ ಹಿತಗೈಯ ಬಂದ ಪ್ರಾಣೋಪನಮರಿಹಿನೆ ನೀನು(ಮೋಹತ. ೬-೩೩); ಶುಭತಾರೆಯಲಿ ಪಾಪಕ್ಷಯವು (ಗಗಣಾ. ೪-೬೦).

[ಪಾಪ್ಪ+ಕ್ಷಯ]

ಪಾಪಗ್ರಹ (ನಾ). ದುಷ್ಪರಿಣಾಮವನ್ನುಂಟುಮಾಡುವ ರಾಹು, ಕೇತು, ಶನಿ, ಮಂಗಳ ಮುಂತಾದ ಅಶುಭಗ್ರಹ : ಪಾಪಗ್ರಹಮು [ಪಾಶಾಂ. ಗೃಹಮದು]ದಯದೊಳಿರೆ ಪಾಪೇಕ್ಷಣಮಾಗೆ ತಱಟಿಯಕ್ಕುಂ (ಪಾಶತಿ. ೨೦-೨೦). [ಪಾಪ್ಪ+ಗ್ರಹ]

ಪಾಪಚಿತ್ತ (ನಾ). ೧. ಕೆಟ್ಟ ಮನಸ್ಸು. ೨. ಕೆಟ್ಟ ಮನಸ್ಸುಳ್ಳವನು ; ದುಷ್ಟ : ಪಾಪಚಿತ್ತರು ಗೋಣಿಯಲಿ ನರರೂಪನೊಂದಂ ರಚಿಸಿಯುಡಿಯಲಿ ಕೌಪನುಡಿಸಿ ವಿಭೂತಿಯಂ ಸರ್ವಾಂಗದಲಿ ಪೂಸಿ (ಬಸವ. ೩೨-೫೦).

[ಪಾಪ್ಪ+ಚಿತ್ತ]

ಪಾಪಚೇಲಿ (ನಾ). ಒಂದು ಬಗೆಯ ಮೂಲಿಕೆ; ಅಗಳುಶುಂಠಿ : "ಅಗುಳುಸುಂಟಿ—ಪಾಠೆ, ಅಂಬಷ್ಠೆ, ವಿದ್ಧಕರ್ಣಿ, ಪಾಪಚೇಲಿ, ಪ್ರಾಚೀನೆ, ರಸೆ" (ಪಾಪರಾ. ೬). [ಸಂ. ಪಾಪಚೇಲೀ]

ಪಾಪಚ್ಚಿ (ನಾ). ಮಕ್ಕಳನ್ನು ಪ್ರೀತಿಯಿಂದ ಕರೆಯುವಾಗ ಅಥವಾ ನಿರ್ದೇಶಿಸುವಾಗ ಉಪಯೋಗಿಸುವ ಒಂದು ಮಾತು : ಆ ಮಾಯಾನಗರಿಯಲ್ಲಿ, ಪಾತಾಳದಲ್ಲಿಯ ಪಾಪಚ್ಚಿಯಂತೆ, ಮಂದಾಕಿನಿ ಗಾಬರಿಯಾದಳೇನೊ (ಕ್ಷಿತಿಜ. ೨೦). 'ಪಾಪಣ್ಣಿ' ಪರಾ. [←ತಮಿ. ಪಾಪ್ಪಾಚ್ಚಿ]

ಪಾಪಟಿ 'ಪಾಪಟ್ಟೆ' ನೋ.

ಪಾಪಟ್ಟೆ$_1$ (ನಾ). ೧. ಬೈತಲೆ ; ಸೀಮಂತ. ೨. ಒಂದು ಬಗೆಯ ಆಭರಣ (?) : ಪೊಸಮಿಸುನಿಯೊಳು ಬಿಗಿದ ಠತ್ನದ ಯಸುಳುದೆನೆಗಳ ಶಹಲೆದಿಂಡಿನ ಬೆಸದ ಬಿಂಕದ ಹಿಳುಕು ಪಾಪಟೆ ಪಟ್ಟೆ ನಿಚ್ಚಳದ . . . ವಜ್ರದ್ವಾರಸೊಬಗಿನೊಳೆಸದುದಾಕ್ಷಣ ಮಯನ ನಿರ್ಮಿತದಿಂದಲಾ ನಗರ (ಅಂಬಿಕಾ. ೬-೩) : ಕಡಗ ಸರಫಣಿ ಸಾರಸನ ಶಿರಕಿಡುವ ಮಲಕುಗಳಿಂದ ಮುತ್ತುಗಳೊಡನೆ ತೊಡರಿದ ಮುದ್ದುಪಾಪಟೆಬಲೆಯು ರಂಜಿಸುತ . . . ನಡೆತರುವ ಶಿಶುಗಳ ಬೆಡಗ ನೋಡುತಲಿ (ಪಸಾ. ೬-೦೯).

[ದೇ.ಪ ತುಳು. ಪಾಪಟೆ ; ತೆಲು. ಪಾಪಟ ; ಕುವಿ. ಪಾಪೆಟ್ಟೆ]

ಪಾಪಟ್ಟೆ$_2$, ಪಾಪಟಿ, ಪಾಪಡಿ$_1$, ಪಾವಟೆ (ನಾ). ೧. ಒಂದು ಬಗೆಯ ಔಷಧಿ ಸಸ್ಯ; ಇಂದ್ರವಾರುಣಿ; ಹಾವುಮೆಕ್ಕೆ: "ಕಾಕಚ್ಛೇದಿ—ಪಾಪಟೆ" (ಓಷಧಿ. ೩೦); ನೆಲಗೋಣಿ ಪು(ಹು)ಣಿಸೆ ಪಾಪಟೆ ಹುಲಿಗಿಲ್ ದೊಗ್ಗಳೆಯ ಹಱುಹೆಯೆಂಬಿವಱೆಲೆಯಂ ಕಟಿಯೊಳುಱೆ ಕಾಸಿ ಕಟ್ಟಲ್ ತೊಲಗುಗುಮೊದಱಿಸುವ ಮುಳ್ಳ ವಿಷಮೆನಿತನಿತುಂ (ಬಸುದ. ೨-೨೦೦); ಮುಳ್ಳು ಮುತ್ತುಗದ ರಸ, ಪಾಪಟೆಸೊಪ್ಪಿನ ರಸ, ಹೆಗ್ಗುಳ್ಳಂಗಡಲೆಸೊಪ್ಪಿನ ರಸ . . . ಪ್ರಾತಃಕಾಲದಲ್ಲಿ ಗ ೪ ತೂಕವಂ ಸೇವಿಸುವುದು (ಸಳಸ್ಥ. ೨೦೬). ೨. ಒಂದು ಬಗೆಯ ಮರ ಮತ್ತು ಉಪ್ಪಿನಕಾಯಿಗೆ ಉಪಯೋಗಿಸುವ ಅದರ ಹುಳಿಯಾದ ಕಾಯಿ : ಅಂಬಟೆಯ ತದುಕಿಲ ಸುಂಡೆ ಪಾಪಟೆಯ ಚಳ್ಳೆ ಮಾಗುಳಿ ತಳಿಲೆ ತೊಗರಿ ಗುಳ್ಳ ತಿಂತ್ರಿಣಿಯುಪ್ಪುಗಾಯಿಗಳೆಲ್ಲ ಸುವ್ವಾರಿಯರು ಬಡಿಸಿದರತಿವಿಚಿತ್ರದಲಿ (ಅಪಂಠಾ. ೬-೨೫-೩೮). **ಪಾಪಟಿ** : ೧. "ಪಾಪಟಿ—ಪರ್ಪಟ=ಒಂದು ಗಿಡ" (ಶಪ್ಕಕೋ. ೨೬); ಗಸಗಸೆ, ಸಾಸಿವೆ . . . ಪಾಪಟಿ, ಮಂಗಾರೆ (ಸಮ್ಮಸು. ೨೩೮). **ಪಾಪಡಿ**$_1$: ೧. ಸೆ(ಸಿ)ಗುಡಿತೆಯ ಮುಳ್ ಕೊಗ್ಗಿಯ ದಾಗುಡಿ ಚಿತ್ತರಟಿ ಪಾಪಡಿಗಳೆಂಬವಱೊಳ್ ಪ್ರಾಗುಕ್ತ ಮೂಲಮಿರದರೆದಾಗಳ್ ಖರಮೂತ್ರಲೇಪಮಾತ್ರೆ ವಿಷಘ್ನಂ (ಬಸುದ. ೬-೩೨). **ಪಾವಟೆ** : ೧. ಪಾವಟೆ :—ಈ ಕಾಯಿ ಸಮೂಲವಂ ತಂದು ಅರೆದು ಬೆಣ್ಣೆಯಲ್ಲಿ ಕಲಸಿ ಮೂಱು

ಆದಿತ್ಯವಾರ ತೆಗೆದುಕೊಳ್ಳೆ ಮೂಲವ್ಯಾಧಿ ಗುಣ (ಶಿಪ್ರ. ೬); ಪಾವಟೇ ಬೀಜ, ತಕ್ಕೋಲ . . . ಲಾಮಂಚ—ಇವನ್ನು ಪ್ರತ್ಯೇಕ ಕರ್ಷಪ್ರಮಾಣ ಹಾಕಿ ಚೂರ್ಣಿಸಿ ಹಾಲಿನಲ್ಲಿ ಕಲಸಿ ಹಾಕುವುದು (ಸಳಪ್ಪ. ೧೫೦ ಪಂ).
[ದೇ.॥ ತಮಿ. ಪಾಪಟ್ಟೈ; ಮಲ. ಪಾಪಟ್ಟ; ತುಳು. ಪಾಪಟೆ ; ತೆಲು. ಪಾಪಟಿ]

ಪಾಪಟ್ಟೆ, ಪಾಪಡಿ$_2$ (ನಾ). ೧. "ಸುವಾಸನಾಯುಕ್ತವಾದ ಮಣ್ಣು" (ಶ್ರಕಣ್ಣ). ೨. ಒಂದು ಬಗೆಯ ಸುಗಂಧದ್ರವ್ಯ : "ಜತುಕೆ ಪಾಪಟೆ [ಪಾಠಾಂ.ಡಿ] ಯೆನಿಕ್ಕುಂ" (ಮಂಗರಾ. ೪೨-೩೯). **ಪಾಪಡಿ$_2$** : ೧. ಘಟ ಅಂದರೆ ಉಸುಬುಮಣ್ಣು ಹೊಟ್ಟು (ಪಾಪಡಿ) ಮುಂತಾದವುಗಳು (ಮುಂಬಪ್ಪಾ. ೩೯). ೨. ಮೇಲಿನ 'ಮಂಗರಾ.' ಪ್ರಯೋಗದ ಪಾಠಾಂತರವನ್ನು ನೋಡಿ.
[<ಸಂ. ಪರ್ಪಟೀ]

ಪಾಪಡಖಾರ 'ಪಪ್ಪಡಕಾರ' ನೋ.

ಪಾಪಡಿ$_1$ 'ಪಾಪಟ್ಟೆ$_2$' ನೋ.

ಪಾಪಡಿ$_2$ 'ಪಾಪಟ್ಟೆ$_3$' ನೋ.

ಪಾಪಡಿ$_3$ (ನಾ). (ಉಕ) ಹಳದಿ ರೇಷ್ಮೆಯಲ್ಲಿ ಒಂದು ಪ್ರಕಾರ : ೧೯, ಪಾಪಡಿ ೨೦, ಮಾನಚುಂಗ . . . ೪೩, ಕುಬೀನ ಇದರ ಹೊರ್ತು ಮತ್ತೂ ರೇಶ್ಮಿಯಲ್ಲಿ ಬಹಳ ಜಾತಿಗಳುಂಟು (ಮುಂಬಪ್ಪಾ. ೦೦೯).
[←ಮರಾ. ಪಾಪಡೀ]

ಪಾಪಣ್ಣಿ (ನಾ). ಮಕ್ಕಳನ್ನು ಪ್ರೀತಿಯಿಂದ ಕರೆಯುವಾಗ ಅಥವಾ ನಿರ್ದೇಶಿಸುವಾಗ ಉಪಯೋಗಿಸುವ ಒಂದು ಮಾತು : ಪಾಪಣ್ಣಿ ಸ್ಕೂಲಿಗೆ ಹೋಗಲು ಹಟ ಮಾಡಲಿಲ್ಲ (ಕೂಡಿ). 'ಪಾಪಚ್ಚಿ' ಹೋ.
[ಪಾಪ$_1$ (<ಪಾಪೆ) + ಅಣ್ಣಿ$_1$]

ಪಾಪನಾಯಕಿಹೊನ್ನು (ನಾ). ಒಂದು ಬಗೆಯ ಬಂಗಾರದ ನಾಣ್ಯ : ದುರ್ಗವು ಕೈವಶವಾದ ಮೇಲೆ ಈ ದೊರೆಯ ಬೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ . . . ೧ ಗಬರು . . . ೧ ಪಾಪ ನಾಯಕಿಹೊನ್ನು (ಪತ್ರಪಾ. ೦೦೯). [? + ಹೊನ್ನು$_1$ (<ಪೊನ್)]

ಪಾಪನಾಶನ (ನಾ). ೧. ಪಾಪದ ನಿವಾರಣೆ; ದುಷ್ಕರ್ಮದ ನಾಶ. ೨. ಪಾಪವನ್ನು ನಾಶ ಮಾಡುವವನು; ದುಷ್ಕರ್ಮವನ್ನು ಹೋಗಲಾಡಿಸುವವನು : ಗೌರಿಸಹಿತಂ ಮುಂದೆ ನಿಂದು ಮಹೇಶ ನೀಶನು ಪಾಪನಾಶನನು [ಪಾಠಾಂ. ಪಾಶಧರಕರನು] . . . ಮೆಚ್ಚಿ ತಾನೊಲಿದು (ಬಸಪು. ೨೬-೨೬); ಪಾಪಕರ್ತನು ನಾನು ಪಾಪನಾಶನ ನೀನು (ಪುರಂದ. ೯-೯೦-೦). [ಸಂ.]

ಪಾಪಪದಾರ್ಥ (ನಾ). [ಜೈನ] ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ ಮತ್ತು ಮೋಕ್ಷ ಎಂಬ ಒಂಬತ್ತು ವಿಧವಾದ ಪದಾರ್ಥಗಳಲ್ಲಿ ಒಂದು : ಜೀವಪದಾರ್ಥಮು ಜೀವಪದಾರ್ಥಂ ಮೋಕ್ಷಪದಾರ್ಥಂ ಆಸ್ರವಪದಾರ್ಥಂ ಸಂವರಪದಾರ್ಥಂ . . . ಪುಣ್ಯಪದಾರ್ಥಂ ಪಾಪಪದಾರ್ಥಮೆಂಬ ನವಪದಾರ್ಥಮುದುಂ . . . ಕೈಕೊಂಡು (ಸುಕುಮಾ. ೩-೩೯ ಪ). [ಪಾಪ$_2$ + ಪದಾರ್ಥ]

ಪಾಪಪ್ರಜ್ಞೆ (ನಾ). ತಾನು ಮಾಡಿದ ದುಷ್ಕರ್ಮದ ಅರಿವು, – ತಿಳಿವಳಿಕೆ : ಈ ಕರಾಳಸಾವಿಗೆ ತಾವೂ ಕಾರಣರು ಎಂಬ ಪಾಪಪ್ರಜ್ಞೆ ವಾಸುದೇವನ ಪತ್ರದ ಕತೆಯಲ್ಲಿ ಬಿಡುಗಡೆ ಪಡೆಯುವ ಹದಣಿಕೆಯಲ್ಲಿತ್ತು (ಮೂರುದಾ. ೩೩೬); ಮಗನಿಗೆ ತನ್ನ ವ್ಯವಹಾರವೆಲ್ಲ ಗೊತ್ತಾದಾಗ ಅವಳು ಪಾಪಪ್ರಜ್ಞೆಯಿಂದ ನಿರ್ಬಲಳಾಗುತ್ತಾಳೆ (ಹೊಸಕ್ಷಿ. ೨೬೨).
[ಪಾಪ$_2$ + ಪ್ರಜ್ಞೆ]

ಪಾಪಭೀತಿ (ನಾ). ಪಾಪದ ಅಂಜಿಕೆ : ಪಾರ್ಥನು ಪಾಪಭೀತಿಯಿಂದ ವಿಹ್ವಲನಾಗಿದ್ದಾನೆ (ಭಾರದ. ೦೦೬). [ಪಾಪ$_2$ + ಭೀತಿ]

ಪಾಪಭೀರು (ನಾ). ಪಾಪಕ್ಕೆ ಹೆದರುವವನು; ದುಷ್ಕರ್ಮಕ್ಕೆ ಅಂಜುವವನು : ಅವನಾ ನಿಸ್ತ್ರಿಂಶಕರ್ಮಕ್ಕೆ ಕೊಕ್ಕರಿಸಿ, ಪಾಪಭೀರು ವಪ್ಪುದಱಿಂ (ಅಂಪು. ೨-೦೯ ಪ); ಜನಕತನೂಜೆ ನೆಟ್ಟನೆ ಮಹಾಸತಿ ಗರ್ಭಿಣಿ ಪಾಪಭೀರು (ಸಂರಾಮಾ. ೦೫-೬೨); ಅಧಿಕಪಾಪಭೀರುಗಳೀ ಮಾಸದಲಿ ಓರಂತೆ ದೀಪಪೂಜೆಯ ಮಾಡಿದವರು ಮುರಾರಿಯ ಕೆಲದ ಲೊಪ್ಪುವರು (ರುಕ್ಮಾಂಗ. ೬-೦೯). [ಪಾಪ$_2$+ಭೀರು]

ಪಾಪಭೀರುತ್ವ (ನಾ). ಪಾಪಕೆ ಹೆದರುವ ಸ್ವಭಾವ : ಅಂತುಪಶಮ ಭಾವಮುಂ ಪಾಪಭೀರುತ್ವಮುಂ ತನಗೆ ತೊಟ್ಟನೆ ಪುಟ್ಟೆ (ಸಂರಾಮಾ. ೯-೦೯ಪ); ಇಲ್ಲಿ ಧರ್ಮರಾಜನ ಪಾಪಭೀರುತ್ವ, ಸತ್ಯಸಂಧತೆ ಅಭಿವ್ಯಕ್ತವಾಗುತ್ತದೆ (ಭಾರದ. ೦೦೩). [ಸಂ.]

ಪಾಪರ್ 'ಪಾಪರು' ನೋ.

ಪಾಪರ್‌ಚೀಟಿ (ನಾ). ದಿವಾಳಿ ; ಪಾಪರು : ಪಾಪರ್‌ಚೀಟಿ ತೆಗೆದುಕೊಂಡಿದ್ದ ಒಬ್ಬ ಸಾಲಗಾರನನ್ನು ದೋಷಾರೋಪಣೆಯಿಂದ ತಪ್ಪಿಸಿದ್ದಾಯ್ತು (ಪುಸರು. ೨೦೨). [ಪಾಪರ್ (<ಪಾಪರು) + ಚೀಟಿ$_2$ (< ಚೀಟು$_2$)]

ಪಾಪರತ (ನಾ). ದುರಾಚಾರದಲ್ಲಿ ಆಸಕ್ತಿಯುಳ್ಳವನು : ಪಾಣ್ಬಂ ಖಳ ಪ್ರೀತಿ ಪಾಪರತಂ ತಾನವರೋಹಿಯಪ್ಪ ದಶೆಯೊಳ್ ವಿಶ್ವಂಭರಾಪುತ್ರನಾ (ಪಾತಶಿ. ೯-೨೨). [ಪಾಪ$_2$+ರತ]

ಪಾಪರಹಿತ (ನಾ). ೧. ಪಾಪವಿಲ್ಲದುದು ; ದೋಷಮುಕ್ತವಾದುದು : ಪಾಪರಹಿತಂಗಳುರುಸುಖರೂಪಂಗಳೆನಿಪ್ಪನೇಕವಿಧಕೇಳಿಗಳಿಂದಾ ಪುಣ್ಯ ದಂಪತಿಗೆ ನಿಮಿಷೋಪಮಮೆನೆ ಪೋಯ್ತನೇಕವತ್ಸರನಿಕರು (ಸಂಧ್ರಪು. ೦೦-೦೦೯). ೨. ಪಾಪದಿಂದ ದೂರವಾದವನು ; ದುಷ್ಕರ್ಮದಿಂದ ದೂರವಾದವನು : ಆ ಪರಮಕಾರುಣಿಕಗೆಱಗಿಯೆ ಪಾಪರಹಿತನು ಮಾಡಿದನು ವಿನಯದಲಿ ಬಿನ್ನಪದ (ಶಿಭಾಗ. ೦೦-೩೨-೩೩). [ಪಾಪ$_2$ + ರಹಿತ]

ಪಾಪರು, ಪಾಪರ್ (ನಾ). ದಿವಾಳಿಯಾದವನು ; ನಿರ್ಗತಿಕ : 'ಜನತಾ' ಎಂಬ ಆಧುನಿಕಯುಗದ ಈ ಹೆಸರು ಪ್ರಜಾಪ್ರಭುತ್ವದ ಪಾಪರು ಅಥವಾ ಅರ್ಧಪಾಪರುಗಳಾದ ಯಾತ್ರಿಕರನ್ನು ಸಾಗಿಸುವಂಥ ಬಂಡಿಯದು (ಅಳಪಿ. ೦); ಎಲ್ಲಾ ಹೋಯಿತು, ಪಾಪರಾದೆ (ದೌಲತ್. ೦೬೯). **ಪಾಪರ್**: ಪಾಪರ್‌ಆಗಿ ಅಪ್ಪೀಲುಮಾಡಲಿಕ್ಕೆ ಅಪ್ಪಣೆಗೋಸ್ಕರ ಮೂವತ್ತುದಿವಸಗಳು (ಗ್ರಾಮಾಳ. ೦೬೫); ಕೋರ್ಟಿಗೆ ಹೋದವರು . . . ಅಸ್ತಿಪಾಸ್ತಿ ಎಲ್ಲವನ್ನು ಪರರ ಪಾಲುಮಾಡಿ ಪಾಪರ್ ಆಗ್ತಾರೆ (ಸಮ್ಮಳ್ಳಿ. ೯೯); ನೀವೂ ನಮ್ಮ ಹಾಗೆ ಬೇಗ 'ಪಾಪರ್' ಆಗ್ತೀರಿ (ಸಮ್ಮೂರ. ೬೬).

ಪಾಪರು ಮಾಡು=ನಿರ್ಗತಿಕನನ್ನಾಗಿ ಮಾಡು ; ದಿವಾಳಿಯಾಗುವಂತೆ ಮಾಡು : ಎಷ್ಟೋ ಜನ ಒಬ್ಬರ ಮೇಲೊಬ್ಬರನ್ನು ಕಡಹಿ ಅವರನ್ನು ಪಾಪರು ಮಾಡಿ ತಾವೂ ಹಾಳಾಗುತ್ತಾರೆ (ಹುಸ್ವಹ. ೦೬೬).
[←ಇಂ. Pauper]

ಪಾಪರ್ಧಿ (ನಾ). ಬೇಟೆ; ಮೃಗಯಾವಿಹಾರ: "ಆಚ್ಛೋಟನಂ, ಮೃಗಯಾ, ಮೃಗವ್ಯಂ, ಪಾಪರ್ಧಿಃ, ಆಖೇಟಕಃ—ಈ ೫ ಬೇಂಟೆ" (ಹಲಾಯು. ೬೦-೨೬೦); ಶಬರನ ಮಾತಂ ಶ್ರೇಣಿಕಂ ಕೇಳ್ದು ಪಾಪರ್ಧಿಗರ್ತಿಕನಾಗಿ ಬೇಂಟೆಬಿನ್ನಣದವರಂ ಕೂಡಿಕೊಂಡಟವ್ಯಮಂ ಪುಗುತಪ್ಪುದುಂ (ಪುಷ್ಕಾಸ್ತ್ರ. ೩-೫೩ ಪ); ದ್ಯೂತ ಮದ್ಯ ಪಿಶಿತ ವೇಶ್ಯಾಪಾಪರ್ಧಿ ಚೌರ್ಯ ಪರದಾರ ಮೆಂಬ ಸಪ್ತವ್ಯಸನಮಂ ನಿರಾಕರಿಸಿಯುಂ (ಕ್ರಿಪುಪಿ. ೦೯-೬೫ ಪ).
[<ಸಂ. ಪಾಪರ್ದ್ಧಿ]

ಪಾಪವಿಘಾತಿ (ನಾ). ಪಾಪವನ್ನು ನಿವಾರಿಸುವಿಕೆ ; ಪಾಪವನ್ನು ನಾಶಮಾಡುವಿಕೆ : ಕೇಳಿದನು ಜನಮೇಜಯಕ್ಷಿತಿಪಾಲಕನು ವರಸರ್ವ ಯಜ್ಞಸ್ಥೂಲಪಾಪವಿಘಾತಿಗೋಸುಗವೀ ಮಹಾಕಥೆಯ (ಕುಮ್ಮಾಲ. ೨-೯).
[ಪಾಪ$_2$ + ವಿಘಾತಿ]

ಪಾಪವಿನಾಶ (ನಾ). ಪಾಪವನ್ನು ನಾಶಮಾಡುವವನು; ದುಷ್ಕರ್ಮವನ್ನು ಹೋಗಲಾಡಿಸುವವನು: ಜಯಜಯ ನಂದನಂದ ವರವೀಶ್ವರ ಪಾಪವಿನಾಶ ಲೋಕವಿಸ್ಮಯಕರ ಶಂಭು ಶಂಕರ (ಅಂಪ್ರ. ೦೦-೨೨); ದಾಶರಥಿ ವೈಕುಂಠನಗರನಿವೇಶ ತ್ರೈಜಗದೀಶ ಪಾಪವಿನಾಶ (ಹಂಸಾ. ೦೦). [ಪಾಪ್ಮ+ವಿನಾಶ]

ಪಾಪಶಂಕಿ (ನಾ). ಅನಿಷ್ಟವಾಗುವುದೆಂಬ ಸಂದೇಹವುಳ್ಳುದು: ಅತಿ ಸ್ನೇಹವು ಪಾಪಶಂಕಿಯಾವವ್ದು (ಜಾತಿಶಂಕ. ೫೬-೨). [ಸಂ. ಪಾಪಶಂಕಿನ್]

ಪಾಪಸತ್ವ (ನಾ). ದುಷ್ಪ್ರಾಣಿ; ಕೆಟ್ಟ ಜೀವಿ: ನಾಲ್ಕನೆಯ ತಂಳ ಧರಂ ಪುಟ್ಟ ಪಾಪಸತ್ವಂಗಳ್ ಕಾಡೆ ಲಕುಟಯಷ್ಟಿಯಿಂದಿ ರಕ್ಷಾವಿಧಿಯನುವ ದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ (ಅಂಪ್ರ. ೬-೫೬೨). [ಪಾಪ್ಮ+ಸತ್ವ೨]

ಪಾಪಹರ (ಗು). ೧. ಪಾಪವನ್ನು ನಾಶಮಾಡುವ; ದುಷ್ಕರ್ಮವನ್ನು ಹೋಗಲಾಡಿಸುವ: ಪಾಪಹರಮೂರ್ತಿ . . . ತಾಪಸಸುತನೆನ್ನನಂದು ಭೋಂಕೆನೆ ಕಂಡಾ (ರಚಾ. ೯-೬೯). (ನಾ). ೨. ಪಾಪವನ್ನು ನಾಶಮಾಡುವವನು: ಪಾಪಹರಂ ಪ್ರತಾಶಿತತ್ವಪಾ ವೃಷಧ್ವಜಂ. . . ಉಪಾಶ್ರಿತಭವ್ಯಜನಾಭಿನಂದನಂ (ಅಂಪ್ರ. ೦-೪೦); ಆಹವಿಂದ್ರರಧಿಕ ಭಕ್ತಿಯಿನಹರ್ನಿಶಂ ತಪ್ಪ ನೆಲೆಗಳಿಂ ತಳರದೆ ಪಾಪಹರಂಗೆಱಗುವರಿನಿದ ಮಾಹಿಮೆಯ ಪಬಿಗಟ್ಟಿದ ಪರಮಾನೋಟಯೊಳಿರ್ದ್ (ಶಾಂಪ್ರ. ೯-೦೨೪). [ಸಂ.]

ಪಾಪಹೃತ್ತು (ಗು). ಪಾಪವನ್ನು ಪರಿಹಾರ ಮಾಡುವ; ಪಾಪವನ್ನು ಹೋಗಲಾಡಿಸುವ: ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ . . . ಪಾಪಹೃತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ (ಅಂಪ್ರ. ೦-೦). [ಸಂ. ಪಾಪಹೃತ್]

ಪಾಪಾಂತಕ (ಗು). ಪಾಪವನ್ನು ನಾಶಮಾಡುವ: ಆ ಪರಮಾಧರೆಯೊಳಾಶ್ರಿತಪಾಪಾಂತಕಪುಣ್ಯತೀರ್ಥಪಾನಕಜನಸಂತಾಪವಿನಿವರ್ತಿ ಶುಭಕರ ದಾವಗೆಗಳ್ ಮಾಹಿಮೆಯಿಂದೆ ವಿರಾಜಿಕರ್ಂ (ಹಮ್ಮಿ. ೦-೩೪). [ಪಾಪ್ಮ+ಅಂತಕ]

ಪಾಪಾತ್ಮ (ನಾ). ದುಷ್ಟ; ಪಾಪಿ: ಪಾಪಾತ್ಮ ನಾನಲ್ಲ ಪಾಪವನಗಿನಿತಿಲ್ಲ (ಕಪಿ. ೦೪೦ ಕಗ್ಗ೦); ಪಾಪಾತ್ಮನ್ನ ಪರಮಾತ್ಮ ಶಿಳಿಯನೆ ? (ಗಾಪ). [ಸಂ. ಪಾಪಾತ್ಮನ್]

ಪಾಪಾಲೋಕನ (ನಾ). [ಜ್ಯೋತಿ] ಅಶುಭಗ್ರಹಗಳ ದೃಷ್ಟಿ; ದುಷ್ಟಗ್ರಹಗಳ ನೋಟ: ಪಾಪಗ್ರಹಮಾದಯದೊಳಿರೆ ಪಾಪೇಕ್ಷಣವಾಗೆ ತಜಟಿಪಿಗಳ್ಕುಂ ಲಗ್ನ ಚಾಪ ವಷಮೋಷನಾಗಿರೆ ಪಾಪಾಲೋಕನದೆ ವಿಕೃತದಂತನೆನಿಕ್ಕುಂ (ಜಾತಕ. ೨೦-೨೦. [ಪಾಪ್ಮ + ಆಲೋಕನ]

ಪಾಪಾವಹ (ನಾ). ಪಾಪದಿಂದ ಕೂಡಿದವನು; ಪಾಪಿಷ್ಠ; ಪಾಪಿ: ಖರರುಜ್ಞಂದನಂ . . . ತ್ರಿಕೋಣಸ್ಥನಾಗಿರೆ ಪಾಪಾವ [ಜಾತಾಂ. ಪಾಪ. ಪ] ಹನಕ್ಕುಂ (ಜಾತಕ. ೦೬-೧೧). [ಪಾಪ್ಮ+ಆವಹ]

ಪಾಪಾಸಕಳ್ಳಿ 'ಪಾಪಾಸುಕಳ್ಳಿ' ನೋ.

ಪಾಪಾಸು 'ಪಾಪೋಸು' ನೋ.

ಪಾಪಾಸುಕಳ್ಳಿ, ಪಾಪಾಸಕಳ್ಳಿ (ನಾ). ಕಳ್ಳಿಯ ಜಾತಿಗೆ ಸೇರಿದ ಒಂದು ಬಗೆಯ ಮುಳ್ಳಿನ ಸಸ್ಯ; ಡಬ್ಬುಗಳ್ಳಿ (ಉಕ): ಹಳ್ಳಿಯ ಸುತ್ತ . . . ಪಾಪಾಸುಳ್ಳಿಯ ಬೇಲಿಯೂ ಇದೆ(ಪುರಕಾ. ೨೩); ಆ ಹೂವಿನ ಕೊರಳಿಗೂ ಹೊಟ್ಟೆಗೂ ಹುಡುಗರು ಬೇಕಾದಷ್ಟು ಪಾಪಾಸುಕಳ್ಳಿ ಹಣ್ಣಿನ ರಸವನ್ನು ಸವರಿದರು (ಕಳಹು. ೩೦). **ಪಾಪಾಸಕಳ್ಳಿ**: ಪಾಪಾಸಕಳ್ಳಿಬೇರು . . . ಗಡ್ಡುಗದ ಬೇರು ಇವನ್ನು ಪ್ರತ್ಯೇಕ ೧೦ ಪಲ ತೆಗೆದುಕೊಂಡು ಸಣ್ಣಗೆ ಕತ್ತರಿಸಿ (ಕಳಪ್ರ. ೦೦೦ ೩೦). [ಪಾವಾಸು (<ಪಾವೋಸು)+ಕಳ್ಳಿ೨]

ಪಾಪಾಸ್ರವ (ನಾ). [ಜೈನ] ಜೀವನಲ್ಲಿ ಹರಿದು ಬರುವ ಪಾಪಕರ್ಮಗಳು: ಆಸ್ರವವಿರಹಿತಮಿಂ ಪುಣ್ಯಾಸ್ರವಮೊಂದದಿಂ ವೈಪರೀತ್ಯಭವಂ ಪಾಪಾಸ್ರವಮಂತವಜ್ಜೊಳ್ ಪುಣ್ಯಾಸ್ರವವಸ್ತುಸ್ವರೂಪವುಮಿಂ ತ್ರಿವಿಧಂ (ಜಾಂತತ್ತ್ವ. ೦೪-೧). [ಪಾಪ್ಮ ೧ ಆಸ್ರವ]

ಪಾಪಿ (ಗು). ೧. ಕೆಟ್ಟ; ದುಷ್ಟ. (ನಾ). ೨. ಪಾಪ ಮಾಡಿದವನು; ಕೆಟ್ಟ ಕೆಲಸವನ್ನು ಮಾಡಿದವನು; **ಪಾಪಿಷ್ಠ**: "ಖಳನುಗ್ರಂ ಪಾಪಿ ದುಷ್ಪಾತ್ಮಕ(ನವನೆ) ಶಠಂ ದುರ್ಜನಂ ತಾನನಾರ್ಯಂ" (ಜಿನ್ಮು ಕೋ. ೦೨೦-೦೦); ಕಿಱಿದಾನುಂ ವೇಗಮಿರ್ದಲ್ಲಿ ಕಾರ್ಯವ್ಯಗ್ರಪಾಪಿ [ಪಾಣಾ. ವಾಸಿ] ಪಾಶಾಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನಿಂತೆಂದಂ (ಶಂಚಂ. ೦೩-೯ ಪ); ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ (ಬಸವ. ೨೨೩); ಅಟವಿಟಿಸಿ ವರವಧುವ ತಂದುತ್ಕಟಿದ ಪಾಪಿಗೆ ಹೇಸಿ ವನವಧು ಚಿಟುಕ ಮುರಿದಪಳ್ (ಕೂಚಂ. ೩-೪-೦೦) ; ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು (ಗಾಣ).

ಪಾಪಿಕೂಸು, ಪಾಪಿಯ ಕೂಸು = ಶ್ರೀಶೈಲದಲ್ಲಿ ಕೆಲವರ ಕಣ್ಣಿಗೆ ಬೀಳುವುದೆಂದು ನಂಬಲಾದ ಒಂದು ಮಗು; ಇದು ಎತ್ತಿಕೊಂಡವರನ್ನೇ ನಾಶಮಾಡುವುದೆಂದು ಹೇಳಂತ್ತಾರೆ: ಕೂಸೆಂದು ಮುಟ್ಟಲು ಹೋದ ಏಸೊಂದು ಜನಗಳು ಆಸು ನೀಗಿ ತುತ್ತಾಗಿ ಹೋದರು ಪಾಪಿಕೂಸು ವಿಶಾಲರೂಪು ತಾಳಿ ನುಂಗುತಿರೆ (ಸಿಕೃತ್ತಿ. ೬-೩೦); ಪಾಪಿಯ ಕೂಸನೆತ್ತಿದಂತೆ ಕೂಡಲಸಂಗಮದೇವರ ಭಕ್ತಿ ಅಳಿವಾನದವರಿಗೆ ಅಳವಡದಯ್ಯಾ (ಬಸವ. ೬೬೬); ಬಾಬಾಯೆಂದು ಪಾಪಿಯು ಕೂಸನೆತ್ತಿಕೊಳ್ವಂತಿಯು ಕೂಸನೆತ್ತಿಕೊಂಡು (ಆರ್ಜಪೀ. ೬-೬೦ ಪ); ಧರಿಸಿ ಪಾಪಿಯ ಕೂಸ (ಪಡಪ್ರ. ೦೦೯-೨೬). [ಸಂ. ಪಾಪಿನ್]

ಪಾಪಿಯಸಿ (ನಾ). ಕೆಟ್ಟವಳು; ದುಷ್ಟೆ; ಪಾಪಿಷ್ಠೆ: ನಾನೆಂಥ ಪಾಪಿಯಸಿ ?— ಎಂದು ತನ್ನನ್ನು ತಾನೇ ಹಳಿದುಕೊಂಡಳು (ಪಡಂಣಾ. ೦೫), [<ಸಂ. ಪಾಪೀಯಸೀ]

ಪಾಪಿಷ್ಠ (ನಾ). = ಪಾಪಾತ್ಮ: ಲೋಕಂ ಪೊಗಳಲಿದಱಿಂದ ಹೋಗದ ಸಹ್ಯಭಾವನೆಯಿಂದಮಂದಿರು ಮತ್ತೆಯುಂ ಪಾಪಿಷ್ಠರಾಗಿರ್ದು (ಜಪಂ. ೬೦-೨೦); ಆ ಸೂರ್ಯನು ಹ್ಯಾಗೆ ಪಾಪಿಷ್ಠನಾದನೋ ಪುನಃ ಯಾವ ವ್ಯಪಾಯದಿಂದ ಪರಿಶುದ್ಧನಾದನೋ (ಅಳಗಿಮಾ. ೨). [ಸಂ.]

ಪಾಪಿಷ್ಠೆ (ನಾ). ದುಷ್ಟೆ: ಪಾಪಿ: ನಿಮ್ಮಡಿಗಳ ವಕ್ಷಸ್ಥಳಮಂ ವಿದಾರಿಸಿ ರಕ್ತಪಾನಮಂ ಮಾಟ್ಪೆನೆಂಬ ದೋಹಳವನಿಗೆ ಪಾಪಿಷ್ಠೆಗೆ ಪುಟ್ಟರ್ದುದು (ಕೃಷ್ಣಾಸ್ತ್ರ. ೬-೬೬೪); ನಿಮ್ಮಿಬ್ಬರಲ್ಲಾರೋ ಒಬ್ಬಳು ಆ ಪಾಪಿಷ್ಠೆಯಾಗಿರಬೇಕು (ರಚಚಿಣಾ. ೦೪೬). [ಸಂ. ಪಾಪಿಷ್ಠಾ]

ಪಾಪು, ಪಾಂಪು (ನಾ). (ಕರಾ) ಸೇತುವೆ; ಪೂಲು; ಸಂಕ: ಅಚ್ಚಿಯು ನೀರು, ಕಳೆದ ವರ್ಷದ ಪಾಪನ್ನು ಕೊಚ್ಚಿಕೊಂಡು ಹೋಗಿದೆ (ಕಾಪೂಸ.೬೬). **ಪಾಂಪು**: ಅತ್ತತ್ತವುರಕ್ಕೆ ಈ ಪಾಂಪಿನ ಮೇಲಿಂದಲ್ಲದೆ ಬೇರೆ ಕಡೆಯಿಂದ ಹೋಗಲು . . . ಅಸಾಧ್ಯವೇ ಆಗಿತ್ತು (ಕಾಪೂ. ೫೬). [<ತುಳು. ಪಾವು]

ಪಾಪೆ, ಪಾಪ್ಪ, ಹಾಹ್ಪೆ (ನಾ). ೧. ಗೊಂಬೆ; ಪುತ್ಥಳಿ; ವಿಗ್ರಹ; ಪುಡುಕೆಯಂ ತೆಱೆದು ನೋಟ್ಪನನ್ನೆಗಮದಱೊಳಗಿರ್ದ ಇಂದ್ರಜಾಲಿಗರ ಪಾವೆಗಳುಂ ಸೀರೆಗಳುಂ ರುಣಂಬಮುಂ ಕೊಂಡು (ಕಣ್ಣಾಕಾ. ೦೯-೦೦); ಪಳುಕಿನ ಪಾವೆಯನಮರ್ದಿಂ ತೊಳೆದಂತೊರ್ಮ್ಮೊದದಿ ದಿವ್ಯವು ಮಣಿಮಯಕುಂಡಲಮಕುಟಕಟಿತಭೂಷಣವಿಲಾಸದಿಂದೇಂ ವಿಲಾಸಮಾ ತಾಳ್ದಿದುದೋ (ಆಪಂ. ೬-೬೯) ; ಕದನದೊಳಾರ್ದ್ರಸಾರ್ದಿಸಿ ಮಹಾರಥರಟ್ಟು ಸಿಡಿಲ್ದುದು . . . ಪಾವೆ ರೂಪುಗೊಟ್ಟುದು ನೊಗನೋರೆಯೋಯ್ತು (ಕಂಗಾಪು. ೦೬-೬೯); ಲೋಗರ್ . . . ತಿಟ್ಟವಿಟ್ಟ

ಪಾವೆಯೆನೆ ಮೂಗುವಟ್ಟರ್ವರ್ (ಣಕಪಕ್ಕ. ೦೦-೦೯). ೨. ಕಣ್ಣಿನ ಗೊಂಬೆ ; ಕನೀನಿಕೆ ; ಕಣ್ಣುಗುಡ್ಡೆ : ಸುಭದ್ರೆಯು ರೂವು ಕಣ್ಣ ಪಾವೆಯಂತೆ ಕಣ್ಣಿಲ್ಲೆ ತೊಟಲೆ (ಕಂಪರಾ. ೪-೬೯ ಪ); ವೋಹಲತಾ ಪರಿವೃದ್ಧಿಗೀಗಳೇ ಸುರಿವುವೆ ಕಣ್ಣ ಪಾವೆಯನೆ ಪೊಣ್ಮಿದುವತ್ಸವಬಾಷ್ಪ ವಾರಿಗಳ್ (ಪುಭಕ್ಷ. ೪-೬೯); ಅಡಿದಳಂ ಸುಟ್ಟ ಮಣ್ಣಿಗೆಯಾಗೆ ಪಾವೆ ಕವ್ಪಡರೆ . . . ಧನಿಕಂ ಬೆಳ್ಪವಿಡಿಯಲುಮಭಕ್ಷಭಕ್ಷಣನೆನಿಪನು (ಜಪಪ. ೦೦-೦೬); 'ಎನ್ನ ಮನದಲಿ ನೀನು ನಿನ್ನ ಮನದಲಿ ನಾನು ಎಮ್ಮ ಕಣ್ ಪಾವೆಯೊಳು ನಾವು ನಾವುಗಳು (ಪಚೀಗೀ. ೪೦-೦೦). ೩. ಗೊಂಬೆಗಳಿಂದ ಕೂಡಿದ ಬಿರುದಿನ ಪೆಂಡೆಯು : (೪). **ಪಾಪ**$_1$: ೨. 'ಕಾಶಿಬಿಂದು' . . . ಇದರ ಮಧ್ಯೆ ಗುಂಡಾದ ರಂಧ್ರವಿರುತ್ತದೆ. ಇದಕ್ಕೆ 'ಪಾವ' ಎಂದು ಹೆಸರು . . . ಈ ಕಾಶಿಬಿಂದುವಿನ ಮೇಲೆ ಬೆಳಕು ಬಿದ್ದರೆ ಪಾವವು ಸಂಕುಚಿತವಾಗುತ್ತದೆ (ಪಹ್ಮಧ್ಯ. ೦೦೩). ೪. ಮಗು ; ಕೂಸು : ಅವರ ಪಾವ ಒಂದೇ ಸಮನೆ ಅಳುತ್ತಿತ್ತು (ಕೂಅ). **ಪಾಹೆ**$_1$: ೧. ಕರುಣದ ಪಾಹೆಯಂತೆ ದೈನ್ಯದ ಸೀವೆಯಂತೆ . . . ಭೋಗದ ವಿಯೋಗಿಯಿನಿಸರ್ದ ತರುಣಿಯರ ವಿರಹಾತಿಶಯಮಂ ಗಿರಿಂದಾಂ ಕರುಣಿಸಿ ನೋಡಿ (ಗಂಪ. ೪-೦೦೬ ಪ); ಕಾಳವಟ್ಟದೊಳ್ ಮೂಡಿದ ಪಾಹೆಯಂತೆಬೆಲೆ (ಅಕಂಪ್ರ. ೦೩-೭೯); ನೀನಾಡಿಸುವ ಪಾಹೆಯಾನು (ಕದ್ಮಣಾ. ೦-೩) : ಪಳಚುವುವು ಪಾಹೆಗಳು ಸೂತ್ರಜ್ಞನಲ್ಲುಗಿದೊಡೆ ತತ್ಪುಣ್ಯಪಾಪಾವಳಿಗಳುಂ ಪಾಹೆಗಳಗುಂಟೇ ಸೂತ್ರಧರನಿರಲು (ಭುಪ್ಯಲು. ೪-೭೨). ೨. ನೇತ್ರ : ಪಾಹೆಗೆ ವಿಶ್ವರೂಪಿಲ್ಪ ಬಲುಹುಂಟೆ (ಬೀಳ್ಳಿಬೀ. ೪೦-೦೩) ; ರಾಹು ತೊಡಕಿದ ರವಿಯಂತೊಲು . . . ದಿಟ್ಟಿಸಿದ ಕಂಗಳ ಪಾಹೆಯಮೊಲೆಸೆದಿರ್ದ ನಾಹವರಂಗವಮಧ್ಯದಲಿ (ಕೂಅರಾ. ೪-೪-೩೨). ೩. "ತೊಡರೆಂದೊಡಕ್ಕಂ ಬಿರುದಿನ ಪಾಹೆ" (ಕಬ್ಬಡಂ. ೩೨) ; ಕಾಲ ಪೊಂದೊಡರ ದೈತ್ಯರ ಪಾಹೆಗಳೊಪ್ಪೆ ವೇಣುವಿಂ ತುತ್ತುರುನಿಸ್ವನಂ ನೆಗಟ್ಟೆ ಗೋವಳರಾಯನ ಲೀಲೆ ರಂಜಿಕುಂ (ಪಗವಿ. ೩-೪೩) ; ಅವರರ ತೊಡರ ಪಾಹೆಯನೆದಿದ ಕಾಲಿಂಗಟ್ಟುವ ಹೊಜವಂಟ (ಕಾಖಿಂಗಾ. ೦೦-೩೨) ; ರಾಜರಾಜರ ಧುರದೊಳಗೆ ಗೆದ್ದವರ ಹೆಸರಿನ ಹಲವು ಪಾಹೆಗಳ ಬಿರುದುಗಳ ಖಡೆಯುವನು ಕಾಲಲಿ ಧರಿಸಿದನು (ಕೂಅರಾ. ೩-೪೦-೦೩). ೪. ರೂಪ ; ಆಕಾರ ; ಮಾಟ : ಜಗವೆಲ್ಲವು ನಿನ್ನ ಪಾಹೆ ಉತ್ಪತ್ತಿ ಸ್ಥಿತಿಲಯವೆಲ್ಲವೂ ನಿನ್ನ ಪಾಹೆ ಕ್ರಿ ನಿಕ್ರಿ ಎಂಬುದೆಲ್ಲವು ನಿನ್ನ ಪಾಹೆ (ಕೂಗಅಪ. ೦೦೩-೪೪೩) ; ಚಿತ್ರದ ಬೊಂಬೆಯ ಪಾಹೆ ಎಲ್ಲಕ್ಕೆ ಆತ್ಮನಿಂದ ಚೇತನಿಸಿ ನಡೆವುತ್ತಿವೆ (ಪುರೀಪ. ೩೭೭-೩೦). ೬. (ಆಲಂ) ನೋಟ; ದೃಷ್ಟಿ: ಆತ್ಮಂಗೆ ಕಾಯವೆ ರೂಪು ಆ ಕಾಯಕ್ಕೆ ಆತ್ಮನೆ ಪಾಹೆ ಆ ಪಾಹೆಗೆ ಅಜ್ಞವೆ ಬೀಜ ಆ ಬೀಜಕ್ಕೆ ಗೋಪತಿನಾಥ ವಿಶ್ವೇಶ್ವರ ಲಿಂಗವೆ ನಿರ್ವೀಜ (ಪುಣಗಾ. ೭-೩೦); ಕಟ್ಟಿದರೆ ವಿಷವೇಱಿತಲ್ಲದೆ ವಿಷಕ್ಕೆ ಪಾಹೆಯಿಲ್ಲ . . . ಪಾವಿದ್ದಂತೆ ವಿಷವ ಕೊಲಬಹುದೆ (ಪಗಕೂ. ೪. ೭೩೭-೩೭). 'ಪೂಹೆ' ಪರಾ.

ಪಾಹೆಯ ಕಟ್ಟು=ಕೇಡಿನ ನಾಶಕ್ಕಾಗಿ ಗೊಂಬೆಗಳಿರುವ ಯಂತ್ರವನ್ನು ಕಟ್ಟು : ರತಿಗೆ ಪಾಹೆಯ ಕಟ್ಟುವಳು ತನ್ನತಿಶಯದ ಚೆಲುವಿನಲಿ ಯೆನಿಸಿದ ಸುತೆಯನಾ ವಿಭು ತಾಂ ಸ್ವಯಂವರವಿಧಿಯಲೀಯಲಿಕೆ (ಪಾಳ್ಳಣಾ. ೫೯-೪೦). **ಪಾಹೆಯ ತೊಡರು**=ಸಣ್ಣ ಸಣ್ಣ ಬೊಂಬೆಗಳಿಂದ ಕೂಡಿದ ಕಾಲಿನ ಆಭರಣ ; ಬಿರುದಿನ ಪೆಂಡೆಯು : ನಕ್ಷತ್ರಕುಲವಿಟ್ಟಣಿವ ಮುಡಿ ಹೂವನಿಟ್ಟ ಚರಣದೊಳಗಳವಟ್ಟ ಪಾಹೆಯ ತೊಡರನಿಟ್ಟ ವೀರೇಶ್ವರನ ಚರಣಾಬುಜಕ್ಕೆ ಶರಣು (ಬಕಪಂ. ೦೬-೦೬) ; ಪಾಹೆಯ ತೊಡರ ಭಂಡರು ಕೆಲರು ಕೆಲರು ಕಾಲಕ್ರಮಾಗತದ ಗಡಬಡೆಯ ಭಂಡರು (ಭುವ್ಯಾ. ೦೩-೩). [ದೇ.॥ ತಮಿ. ಪಾಪ್ಪಾ, ಪಾವ್ಯೆ ; ಮಲ. ಪಾಪ ; ತುಳು. ಪಾವೆ ; ತೆಲು. ಪಾವ]

ಪಾಪೋಸು, ಪಾಪಾಸು, ಪಾಯಿಪೋಸು (ನಾ). ೧. ಕಾಲನ್ನು ಮುಚ್ಚುವಂತಹುದು ; ಮೊಚ್ಚೆ ; ಪಾದರಕ್ಷೆ: ಪಾಪೋಸು ಹೋದುವಲ್ಲ ಸ್ವಾಮಿ ಎನ್ನ (ಕುರಂದ. ೪-೦೦೯ ಕ್ಷಣ) : ಕಾಲ ಕುಪ್ಪಸ ಪಾಪೋಸು ಜೋಲುವ ಅವಿಳೆಯ ಮೊಲೆಕಟ್ಟುಗಳ ಚಿಲ್ಲ ಸೂಳೆಯರ್ಕೆದಿದರಾಗ (ಕಂಸಂ. ೦೦ ೪) : ಗೆಳೆಯರು . . . ತಮ್ಮ ಪಾಪೋಸುಗಳನ್ನು ಎಳೆಯುತ್ತ ಮುಂದೆ ಮುಂದೆ ನಡೆದರು (ಕಪಳ. ೪೦) ; ಪಾವಕ್ಕೆ ತಕ್ಕ ಪಾಪೋಸು, ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ (ಗಾಡ), **ಪಾಪಾಸು**: ೧. ವ್ಯಾಪಾರ ನಮಗಾಯಿತ್ತು . . . ಪರಮಾಪಾಪಿ ಕಲಿ ಎಂಬೊ ಪಾಪಾಸು ಮೆಟ್ಟಿ ದುರಾತ್ಮರಾದವರ ಎದೆ ಮೇಲೆ ನಡೆವಂಥ (ಕುರಂದ. (೨-೦೩-೦) ; ಪಾಪಾಸು, ಎಕ್ಕಡ, ಛತ್ರಿ ಮುಂತಾದವುಗಳನ್ನು ಉಪಯೋಗಿಸಿದರೆ . . . ಕಾಲುಕಣ್ಣುಗಳಲ್ಲಿ ಹುಟ್ಟುವ ಸಕಲ ರೋಗಗಳನ್ನೂ ಕೆಡಿಸುವುವು (ಸಳಶ್ಯ. ೩೩); ಒಂದುದೇಶದ ಜನರು ಪಾಪಾಸು ಹಾಕುವರು, ಇನ್ನೊಂದು ಕಡೆಯವರು ಬೂಟ್ಸುಗಳನ್ನು ಉಪಯೋಗಿಸುವರು (ಪಾಂಶ್ರ. I, ೪೩೦). ೨. ಎಕ್ಕಡದ ಆಕಾರದಲ್ಲಿರುವ ಮತ್ತು ಮುಳ್ಳುಗಳಿಂದ ಕೂಡಿದ ಎಲೆಗಳುಳ್ಳ ಒಂದು ಬಗೆಯ ಸಸ್ಯ ; 'ಪಾಪಾಸುಕಳ್ಳಿ' ಪರಾ. **ಪಾಯಿಪೋಸು**: ೧. ಈ ಶರೀರ ನಿನ್ನ ದಾಸರ ಪದಕೆ ಪಾಯಿಪೋಸು ಮಾಡಿದರೂ ಋಣಾ ಸಲ್ಲಿಸುವೇನೆ (ಪೋಕ್ಷರೀ. ೫೬-೨). [←ಪಾರ್. ಪಾಪೋಷ್ : ಹಿಂ. ಪಾಪೋಶ್, ಪಾಯಪೋಶ್ ; ಮರಾ. ಪಾಯ್‌ಪೋಶ್, ಪಾಯಪೋಸ್]

ಪಾಪೌಘ (ನಾ). ದುಷ್ಕರ್ಮದ ರಾಶಿ.—ಸಮಾಸ : ಕಲ್ಯಾಣದಾಯ ಕಾಹಲಲ್ಯಾಪನುತಿಪಾತ್ರ ಕಲ್ಯಾಣಾಚಲಧನ್ವ ಪ್ರಮಥತ್ಕಲ್ಮತಿಪಾಪೌಘ ವಲ್ಕಲವಿತ್ರ ಧಾವಲ್ಯಾಂಗ (ಕ್ಕಕವೀ. ೪-೦೦); ಪಾಪೌಘಪ್ರಬದ್ಧಂ ಮರುಳಿ ಗೆಲದದೇಕರ್ಪನಾ ಗೆಲ್ಲ ಪಾಂಗಂ ನಡೆ ನೋಳ್ಪಿಂ (ಕ್ಕಕಂ. ೫೯-೦೦೩).

[ಪಾಪ್ಮ + ಓಘ]

ಪಾಪ್ಪಳಿ 'ಪೊಪ್ಪಳಿ$_1$' ನೋ.

ಪಾಪ್ಮ (ನಾ). ಪಾಪ : ದುಷ್ಕರ್ಮ ; ಪಾತಕ : "ವೃಜಿನಂ, ದುರಿತಂ . . . ಅಶುಭಂ, ಪಾಪಂ, ಪಾಪ್ಮಾ, ಪಾತಕಂ—ಈ ೧೪ ಪಾಪಂ" (ಹರಿಹಾಖ್ಯ. ೦೦೩-೩). [ಸಂ. ಪಾಪ್ಮನ್]

ಪಾಬ (ನಾ). (?) : ಸದಾಯು ಪಾಬ ಕೂಪ ತಟಾಕ ನಿಧಿನಿಕ್ಷೇಪ (ಎಕ್ಷ. X (S), ೪೩೯೦೪. ೩೦೯-೦೩; 17೫೫೫ ೮೩). [?]

ಪಾಭಸೆ (ನಾ). ಒಂದು ಸ್ಥಳದ ಹೆಸರು : ಇನ್ನು ವಿಂಧ್ಯಾಟವೀನಿಕಟ ಕಾಪೀತಟವುಂ . . . ಜನವಾಸ ದೇಶವುಂ ಪಾಭಸವು ಕೋಟಿಯುಂ ವೊದಲಾಗೆ (ಎಕ್ಷ. 11, ೩೯-೦೦೦ ; 974). [?]

ಪಾಮ (ನಾ). ಒಂದು ಬಗೆಯ ಚರ್ಮರೋಗ ; ತುರಿಕೆ : "ಕಚ್ಚೂ ನಾಮುಜಿಗೆ ಪಾಮಂ" (ಪಚ್ಚಕೋ. ೬೩-೩೩) ; "ಪಾಮಂ ಖಸಂ ಖಿತ್ಸವೆನೆ ಕೆರಕನಿಕ್ಕುಂ" (ಪಾಂಗಣಾ. ೦೦೩-೦). [ಸಂ. ಪಾಮಾ]

ಪಾಮನ (ಗು). ೧. ಕಜ್ಜಿ ಹತ್ತಿದ. (ನಾ). ೨. ಕಜ್ಜಿ ಹತ್ತಿದವನು : "ಟಚ್ಚು ಪಾಪಾಸನಕ್ಕುಂ" (ಪಚ್ಚಕೋ. ೬೯-೯೦). [ಸಂ. ಪಾಮನ್]

ಪಾಮರ$_1$ (ನಾ). ನೆಲಬಾವಿಯಿಂದ ನೀರು ಸೇದುವಾಗ ಕಾಲಿಡಲು ಅನುಕೂಲವಾಗುವಂತೆ ಬಾವಿಗೆ ಅಡ್ಡಲಾಗಿ ಹಾಕುವ ಮರದ ಪಾಸಂಹಲಗೆ. [< ಪಾಮ್ಯ + ಪುರ$_1$]

ಪಾಮರ$_2$ (ಗು). ೧. ಅಲ್ಪವಾದ ; ತುಚ್ಛ : ಗರುವವ್ಯಾತಕೊ ನಿನಗೆ ಪಾಮರವಾನುಜನೆ (ಕುರಂತ. ೨-೦೩೮ ಕ್ಷಣ). ೨. ವಿದ್ಯೆ ಹಿಳಿಯದ. ೩. ಕಜ್ಜಿ ಹತ್ತಿದ. (ನಾ). ೪. ಅಲ್ಪ ; ನೀಚ : "ವಿವರ್ಣಃ, ಪಾಮರಃ . . . ಕ್ಷುಲ್ಲಕಃ, ಇತರಃ—೧೦ ನೀಚನ ವೆಸರಾ" (ಶಿಡ್ಯಾಂ. ೩೦೨). ೫. ವಿದ್ಯೆ ಹಿಳಿಯದವನು ; ದಡ್ಡ ; ವಿಮೂಢ : ಬರಿ ತಾರಾಡಿ ಅವನರಿವಿಗೆಟುಕುವವೊಲೊಂದಾತ್ಮನಯವ ಪವಣಿಸಿದನಿದನು

ಪಾಮರಜನದ ಮಾತಿನಲಿ (ಮಂಕುಳ. ೯೩೮) : ಪಾಮರ ಮೊದಲಾಗಿ ಪಂಡಿತರವರೆಗೆ ಯಾರೂ 'ನಾನಿರುವೆನೇ ಇಲ್ಲವೇ' ಎಂದು ಸಂಶಯಪಡುವುದಿಲ್ಲ (ಭಾರದ. ೨೩೫). ೬. ಒಕ್ಕಲಿಗ ; ರೈತ : ಮೂಡೆಗಟ್ಟಂ ಕಟ್ಟಿ ಹುಡುಕುನೀರೊಳ್ ಮೆಟ್ಟಿ ಕಾಡುತಿಹ ಪಾಮರರ ಕೈವಿಡಿತೆಗೊಳಗಾಗಿ (ಭಾವಸಂ. ೨-೮) ; ಗಗನಮೆನಿಪ್ಪ ಪಾಳ್ವೊಲದೊಳ್ . . . ಮರ್ಬೆನಿಪ ಗೊಬ್ಬರವಂ ತಳಿದಲ್ಲಿ ಚೆಲ್ಲಿ ತಾರಗೆಗಳೆನಿಪ್ಪ ಬಿಳ್ತುಗಳನಂತವ ಕೈಂದವಬಿಂಬರೌಪ್ಯಕುಂಭಗತಸುಧಾಮರೀಚಿಜಳಮಂ ಸುರಿದಂ ಸಲೆ ಕಾಲ ಪಾಮರಂ (ರಾಜಶೇ. ೦೦-೬೮). [ಸಂ.]

ಪಾಮರಿ (ನಾ). ೧. ಹಳ್ಳಿಯ ಹೆಂಗಸು ; ಒಕ್ಕಲಗಿತ್ತಿ : ಪಾಮರಿಯರ್ ಜಿತಾಮರಿಯರಿರ್ಪರ್ಕಾದು ಕೇದಾರಮಂ (ಮಲ್ಲಿಪು. ೨-೨೦); ನೆಯ್ದಿಲ್ವೂ ವುಡಿಯನೆತ್ತಿ ಬೈತಲೆದೀವುವ ಪಾಮರಿಯರಂ ಮಹೀಪತಿ ಕಂಡಂ (ಲೀಲಾವ. ೫-೬೮) : ನಸುಬಾಗಿ ಬೀಸುಗಲ್ಗಳನಿಡುತಿರ್ಪ ಪಾಮರಿಯರೊಪ್ಪುವರಾ ಕಳಮಪ್ರದೇಶದೊಳ್ (ದಶಕು. ೦-೨೯) ; ಶಾಲಿಗಳ ಕೈಗಂಪ ಪೊಲಗಾವ ಪಾಮರಿಯರೋಳಿಗಳ ಮೈಗಂಪ . . . ಸೇವಿಸುತೆ ಪಥಿಕರಾಸರ್ಗಳೆವರಾ ನಾಡೊಳು (ಕೈಪಾಣಾ. ೩-೮). ೨. ತಿಳಿವಳಿಕೆಯಿಲ್ಲದವಳು ; ದಡ್ಡಿ. [ಸಂ. ಪಾಮರೀ]

ಪಾಮರೀಜನ (ನಾ). ಹಳ್ಳಿಯ ಹೆಂಗಸರು ; ಚದುರಿಂದೆ ಗರ್ದೆಗಳನೊಲ್ದುಱೆ ಕಾವುದು ಪಾಮರೀಜನಂ (ಕ್ರಿಪುಪಿ. ೨-೪೦). [ಸಂ.]

ಪಾಮರೆ (ನಾ). = ಪಾಮರಿ ೧ : ಪಾಮರೆಯರ ಕಲಮದೊಳು ಗಿಳಿಯ ಸೋಪಲು (ತರ್ಕಾ. ೦೩-೫). [ಸಂ. ಪಾಮರಾ]

ಪಾಮಾಜಿ 'ಪಾವಸೆ' ನೋ.

ಪಾಮೆ (ನಾ). ೧. = ಪಾಮ : "ಪಾಮಾ, ಕಚ್ಛೂ, ಖಸ – ಈ ೩ ಕೆರಕು (ಕೆರಂಕು)" (ಹಲಾಯು. ೯೮-೯೯೮). ೨. ಹೊಟ್ಟೆರುವಂತ ಹುದು ; ಉಮಿಯಿಂದ ಕೂಡಿದುದು : ಮಾಲವಲ್ಲಿ ಪಾರವಾಳದ (ಮಾವಿ) ಬಣ್ಣಿನಂಥಾ ಕಾಳುಗಳು ಕೂಡಿರಬಾರದು. ಮತ್ತು "ಪಾಮಾ" ಅಂತಂದರೆ ಹೊರಟು ಕೂಡಿರಬಾರದು (ಮುಂಬಪ್ಯಾ. ೫೬). [ಸಂ. ಪಾಮಾ]

ಪಾಯ್$_1$, ಹಾಯ್$_1$, ಹಾಯು (ಕ್ರಿ). ಪಾಯಿದ, ಪಾಯ್ದ, ಹಾದ, ಹಾಯ್ದ (ಭೂತಕೃ). ಪಾಯಿದು, ಪಾಯ್ದು, ಹಾದು, ಹಾಯಿದು (ಭೂತನ್ಯೂ). ೧. ನೆಗೆ ; ಹಾರು : "ಪಾಯ್ – ಲಂಘನೇ" (ಶಮಧಾ) ; ನೆಲಸಿರ್ದ ಪಜ್ರಪಂಜರಮಳಱುವಿನಂ ಪಾಯ್ದ ಸಿಂಧುರಾರಾತಿಯನುಜ್ಜ್ವಳತನುವನಭ್ರಪಥದತ್ತ ಲಂಘಸಲ್ಕಿರ್ದುದಂ ಚಮೂಪತಿ ಕಂಡಂ (ಆದಿಪು. ೦೬-೯೫) ಆಗಳಾ ಪಱುವಂಗಳಿಂದೆ ಪಾಯ್ವ ಪುಲಿಗಳ ಮಱೆಗಳೊಳ್ ಪರಿದಾಡುವ ತರುಣಹರಿಣಂಗಳುಮಂ . . . ನೋಡಿ (ಪಂಪಭಾ. ೦-೦೦೫ ಪ) ; ಧೀಂಕಿಟ್ಟು ಪಾಯುತ್ತೆ . . . ಕೆಡಪಿತೊಂದೇಣನಂ ಚಿತ್ರಕಾಯೆಂ (ಗಿಂಕ. ೦-೯೫) ; ಮೇಗಣ್ಗೆ ಪಾಯ್ವ ಸೆಂಡಂ ವನಿತೆಯೊರ್ವಳ್ ಕೀಳ್ವಡಿಸಿ ಪೊಯ್ಯೆ (ಪದ್ಮರಾ. ೬-೯೮) ೨. ಮೇಲಿನಿಂದ ಕೆಳಕ್ಕೆ ಹಾರು ; ಧುಮುಕು : ಆ ಕೋಡಗಂ . . . ಒಂದು ದಿವಸಂ ಪರ್ವತಶಿಖರದಿಂ ಪಾಯ್ದು ಬಂದು ಬರ್ದುಂಕಿ ಮುನಿವರರ ಪಕ್ಕದ ಬಿರ್ದತ್ತಾಗಳ್ (ಪಡ್ಮಾರಾ. ೦೭೨-೨೪); ಬೊದಿಲ್ಲೆನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದಂ ನಿಧಿಗಂಡನಂತೆವೋಲ್ (ಪಂಪಭಾ. ೦-೯೬) : ಕೋಪಾನಳನಳುರೆ ಮಹಾಕೂಪದೊಳಿಭವೈರಿ ಪಾಯ್ದು ಸತ್ತುದು (ಪಂಪತಂ. ೯೦-೨); ರಥದಿಂದಾ ಕ್ಷೋಣಿಗೆ ಪಾಯ್ದಂ ಬಳಾಹಕಂ ಭಯದಿಂದಂ(ಕುಸುಮಾ. ೦೦-೨೯). ೩. ತುಡಿ ; ಸ್ಪಂದಿಸು ; ಮಿಡುಕು ; ಹೊಡೆದುಕೊಳ್ಳು : ಅಟ್ಟು ಪಟ್ಟ ಪುಲ್ಲೆಯಂತಿರೆರ್ದೆ ಪಡಪಡ ಪಾಯೆ (ಲೀಲಾವ. ೦೦-೬೦ ಪ). ೪. ಹೊರಸೂಸು ; ಹೊಮ್ಮು : ಮುತ್ತುಗಳಂತಿರೆ ಸೂಸಿ ಪಾಯ್ವ ಶೀಕರದೊಳೆ ನಾಂದು ಸೇಡುಗೊಳುತಂ (ಕಾಪ್ಯಸಾ. ೬೮ ಕೂದ್ರಳ) ; ಎಚ್ಚ ಶರಾಳಿಗಳ್ ಛಟಿಲ್‌ಛಟಿಲೆನೆ ಪಾಯೆ ಪಾಯ್ವ ಬಿಸುನೆತ್ತರ ಸುಟ್ಟುರೆ ಚಾತುರಂಗಮಂ ಕಟಕುಟಮಾಗೆ ಪೇಟೆ ಪೆಸರಿಲ್ಲೆನೆ ಪಾಯಿಸಿ ತೇರಂ (ಪಂಪಭಾ. ೮-೦೦೫) ; ಪೂತ್ತರಿಸುವ ಚಕ್ರಸಿಂಧುರದ ಪುಷ್ಕರದಿಂದಿರದುಣ್ಮಿ ಪಾಯ್ವ ಶೀಕರನಿಕರಂ (ಕುಸುಮಾ. ೯-೩೮) ; ಬೆಚ್ಚನೆ ಪಾಯ್ತಂದು ಪೊದಟ್ಟ ರಕ್ತಜಲದಿಂದಂ ತೋಯ್ದು ಕಂದರ್ಪದೇವನ ಚಕ್ರಕ್ಕೆಣೆಯಾಯ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ (ಕಾಪ್ಯಸಾ. ೯೩೨). ೫. ದಾಟಿ ಹೋಗು ; ದಾಟು ; ಉತ್ತರಿಸು : ಜಲನಿಧಿಯಂ ಪಾಯ್ದೊರ್ವನೆ ನಿಲಿಕಿ ದಶಾನನನ ಪೊಟಲನಾ ಲಂಕೆಯಂ (ಕಪಿರಾ. ೩-೦೯೦) ; ನಿಜಪರಿಜನಂಬೆರಸು ಗಂಗೆಯಂ ಪಾಯ್ದದಱ ಪಡುವಣದೆಸೆಯ ಕಾಮ್ಯಕವನದ ಬಟ್ಟೆಯಂ ತಗುಳ್ದು ಪೋಗೆವೋಗೆ (ಪಂಪಭಾ. ೭-೨೦ ಪ) ; ಗಂಗೆಯಂ ಪಾಯ್ವಾಗಳಂಬಿಗರ ಮಗಳ್ ಮತ್ಸ್ಯಗಂಧಿಯೆಂಬ ಕನ್ನಿಕೆ ನಾವೆಗೆ ಹುಟ್ಟನಿಕ್ಕುವಲ್ಲಿ (ರರ್ಮಪ. ೩-೦೦೦ ಪ) ; ಕಱಂಗಿದ ತಮಾಲಮೆಂಬ ಕಾಟ್ಪೊಚ್ಚಮಂ ಪಾಯ್ದುಂ (ರಾಮಾಶ್ವ. ೫೭-೨೯). ೬. ಅಪ್ಪಳಿಸು ; ಡಿಕ್ಕಿಹೊಡೆ ; ತಾಟಿಸು : ಗಗನತಳಂಬರಂ ನೆಗೆದು ಮತ್ತಗಜಂಗಳ ಮಸ್ತಕಕ್ಕೆ ಪಾಯ್ದುಗಿಬಗಿ ಮಾಡುವಲ್ಲಿ (ಕಾದಂಪೂ. ೯೯) ; ಬಲವದ್ವೃಕ್ಷಮನೊತ್ತಿ ಪಾಯ್ದು . . . ಸುಟಿದತ್ತಂದೊಂದು ಜಂಝಾನಿಲಂ (ಉದ್ಯಟಿ. ೭.೮೨) ; ಎನ್ನ ತ್ರಿವಿಧಸಪ್ತಕಜನ್ಮಸಾಫಲ್ಯವೆಂದು ಕಂಭವನೆ ಪಾಯಲ್ (ಭಾವಸಂ. ೩-೭) ; ಕಾಯ ಬಲಿದಿಹುದೆಂದು ಬೆಟ್ಟವ ಪಾಯೆ ಕೆಡುತಿಹ ಬಹಳ ಪಾಪಿಯ ದಾಯ ಬಳಿಕಿವಗಾಯ್ತು (ಕೋಗಯ. ೫-೦೯). ೭. ಎರಗು ; ಮೇಲೆ ಬೀಳು ; ಆಕ್ರಮಣ ಮಾಡು : ತುಱುಗೋಳೊಳೆ ಸಾವುದು ಸೈಪಿದೆಂದು ಪಾಯ್ದಱಿಕೆಯ ಗೋವರಣ್ಮೆ ಬರೆ (ಪಂಪಭಾ. ೮-೯೫) ; ಅರ್ಕಾಶ್ವಂಗಳಂ ನೀಳ್ಕಿ ಠೊಪ್ಪರದಿಂ ಪಾಯ್ವಳವಿಂದೆ ಕೇಶಿ ಪರಿತಂದಂ ಕಂಸಾನಾದೇಶದಿಂ (ಜಗವಿ. ೫-೯೯) ; ಒಲಿದು ಪಿಡಿದ ಚೆನ್ನಿಗನೊಲ್ಲದೆ ಪೋದ ಲಲನಾಜನದ ರೋಷವನು ಗೆಲಲಱಿಯದು ಪಾಯ್ದು ಪಶುತಪ್ಪಿ ಪೋದ ಪೆಣ್ಬುಲಿಯ ಕೋಪಾಟೋಪದಾಟ (ಕುರಾಸಾಂ. ೩೩-೬೩). ೮. ಮುಸುಕು ; ಮುತ್ತು : [ನವ]ಶಾಳಿಗೆ ಪಾಯ್ವ ಶುಕಾಳಿ ತೋಱೆ (ಪಂಪಭಾ. ೦-೫೨) ; ವಿಶಾಲಮಪ್ಪ ಆಲದ ಮರದ ಮೇಲೆ ಕಾಗೆ ಬಂದು ಪಾಯ್ದುಂ ದುಸ್ವರದಿಂ ಕರೆವುದುಂ (ಪಂಪತಂ. ೨೨೯-೦೦) ; ಬಂಡನುಣ್ಬಳಿಪಿನಿಂ ಪೆಣ್ದುಂಬಿಗಳ್ಪಾಯ್ದು ಪುಷ್ಪರಸಾಸಾರದ ತುಂತುಱಿಂದೆಱಕೆ ನಾಂದಾಂದೋಳಿತಾಶೋಕಮಂಜರಿಯಂ ಸಾರ್ವುವು ಪಲ್ಲವೋಲ್ಲಸಿತಮಂ ಬಾಲಾತಪಭ್ರಾಂತಿಯಿಂ (ಮಲ್ಲಿಪು. ೨-೩೬) ; ಕೇಣವಿಲ್ಲದ ರೋಹಿತವಾರ್ಧಿಯೊಳು ಕಟ್ಟುಗಾಣಕ್ಕೆ ಪಾಯ್ವ ಮೀನೆನಲು ಗೋಣರೆಗಡಿದು ಪೆರ್ನರವಾಂತು ಮಿಡುಕುವ ಪ್ರಾಣದ ಶವಗಳೊಪ್ಪಿದುವು (ಮೋಹತ. ೯೦-೬೦). ೯. (ಭೂತ, ಪಿಶಾಚಿ ಮುಂತಾದುವು) ಮೆಟ್ಟು ; ಹಿಡಿದುಕೊಳ್ಳು : ಪಾಯ್ದತ್ತು ಭೂತಮೆಂಬರ್ ಕೆಲರ್ ; ಮತ್ಸರದ ಕೌರವನ ಪ್ರೇತಮೆಂಬರ್ ಕೆಲರ್ (ಆಶ್ವತ್ಯಾ. ೦-೦೨). ೧೦. ಮುಂದೆ ನುಗ್ಗು : ಸಂಜಾತರೋಷಂ ಮೇಷಂ ಮುಳಿದು ಕೆಡೆಯೆ ಪಾಯ್ದೊಡವಳ್ ಕಡುಮುಳಿದು ಪಿರಿಯದೊಂದುರಿವ ಕೊಳ್ಳಿಯಂ ತಂದಾ ತಗರಂ ಪೊಯ್ಯಲೊಡನದಱ ಮೆಯ್ಯನುರಿ ಪತ್ತಲ್ ಕಟ್ಟಿದ ನೇಣಂ ಪಱಿಯೆ ಪಾಯ್ದಾ ತಗರ್ ಪರಿದು ಕುದುರೆಯ ಮುಂದುರಮಂ ಮಾರಿ ಪುಗುವಂತೆ ಪೊಕ್ಕು (ಪಂಪತಂ. ೦೭೯-೦೦) ; ಆ ಕಲಕಂಠಜಾಲಕಂಗಳ ಕಳಕಳಕ್ಕೆ ತೆರಳ್ದು ಕೀಱಿ ಪಾಯ್ವ ಗೋಲಾಂಗೂಲಂಗಳ್ (ಕುಸುಮಾ. ೨-೭೦ ಪ) ; ಮುತ್ತಿದ ಕಿರಾತರಂ ಕಾಣುತ್ತುಂ ನಾಲ್ದೆಸೆಗೆ ಪಾಯ್ವ ಮಿಗಮಂ ಕೆಡೆಯೆ ಚ್ಚೊತ್ತಿ (ಉದ್ಯಟಿ. ೨-೭೦) ; ಕಂಡೆಡೆಗೆ ಪಾಯ್ವರಿಂ ಕಾಯ್ವರಿಂ

ಸುಯ್ವರಿಂ ತದ್ರಣಾಂಕಣಮೆಸೆದುದು (ಶಂಪು. ೦೬-೨೦). ೧೧. (ರಭಸದಿಂದ) ಹೋಗು ; ಬಳಿಸಾರು ; ಪಲತೆಱದಿಂ ಲೋಗರ್ದಾನಲಾಭಭೋಗೋಪಭೋಗವೀರ್ಯಾದಿಗಳಂ ಸಲಿಸುವೆಡೆಗೆಡೆಗೆವಾಯ್ದುಂ ಬಱಿಸಂದೊಂಗಂತರಾಯಮನುಬಂಧಿಸುಗುಂ (ಸುಕುಮಾ. ೬-೨೬) ; ಹರಿಯಜರ್ ಪಂದಿ ಪರ್ದುಗಳಾಗುತೆ ಮೇದಿನಿಗೆ ನಭಕೆ ಪಾಯ್ದಱಸಿ ಕಾಣದೆ (ಪದ್ಮರಾ. ೦೦-೨೩೦). ೧೨. ಎಡೆಯಾಡು ; ತೊಳಲಾಡು : ನೆಯ್ದಿಲ್ಗೊಳಂಗಳೊಳೋಲಾಡಿಯುಮೊಸರ್ವ ಚಂದ್ರಕಾಂತಶಿಲಾತಳಂಗಳೊಳ್ಕರಂಗಳನೆಟವಿಯುಂ ವಿಘಟಿತ ಚಕ್ರವಾಕಂಗಳಪ್ಪ ಕಮಲವನಂಗಳೊಳ್ ಪಾಯ್ದುಮಿಂತು ಪಲತೆಱದೆ ಕೋಟಲೆಗೊಳುರ್ತಿರ್ಪಂ (ಶಾಂಪು. ೮೧೬). ೧೩. ಇರಿ ; ತಿವಿ ; ಗುಮ್ಮು : ನಸೆವಣಕದೆ ಬೆನ್ನಂ ಸಂಧಿಸುವುದುಮಸವಸದಿನೆಡೆಗೆ ಪುಗಲೊಡನಂತಾ ಬಸವಂ ಪಾಯ್ದೊಡೆ ಕೆಸಱೊಳ್ ಬಸವಱಿದಿರ್ದೊಂದು ಗೊಂದೆ ಪೊಂದಿತ್ತಾಗಳ್ (ಶಂಪ್ರಪು. ೨-೨೯) ; ನಿಟ್ಟೊಡಲನಂ ನಿರ್ವ್ಯಗ್ರನಂ ತತ್ಪುರೋರುಪದಪ್ರಾಪ್ತನನೆಟ್ಟಿ ಪಾಯ್ದು ಪಸುತೂರ್ಗೋಡಿಂದೆ ಕೋದೆತ್ತಿ ಮಂಡಪಸೋಪಾನದ ಪಾರ್ಶ್ವದಲ್ಲಿ ಕೆಡವಂತೀಡಾಡಿದತ್ತೆತ್ತಲುಂ (ಪರ್ಧಪು. ೩-೬). ೧೪. ಆವರಿಸು ; ಹಬ್ಬು : ಮಂದೈಸಿ ಪಾಯ್ದ ಸಾಯಕಸಂದೋಹದಿನಭ್ರಮಾರ್ಗಮಾರ್ಗಂ ಕಾಣಲ್ ಬಂದುದಣಮಿಲ್ಲ ಶರಭಯದಿಂದೋಡಿದುದಕ್ಕುಮೆಂಬ ನುಡಿ ಪರೆವಿನೆಗಂ (ಶಾಂತಿಪು. ೪-೦೪). ೧೫. ತೆವಳು ; ನುಸುಳು : ಪುಟುವೊಲ್ಪಾಯೆ ಮೃಗಂಗಳೋಡಲವಕಾಶಂ ತಾನದಿಲ್ಲೆಂಬಿನಂ ಸುಱಿದಂಭೋನಿಧಿ ಮೇರೆದಪ್ಪಿದ ತೆಱಂ ಬಂದತ್ತನೀಕಾರ್ಣವಂ (ಕಾಪ್ಯಸಾ. ೪೬೫). ೧೬. ಕೈನೀಡು ; ಚಾಚು : ಧರ್ಮಪತ್ನಿ ಬಾಯಱಿದು ಕೊರಲ್ಗೆ ಪಾಯ್ದು ಪರಿದಾಡುವ ಬಾಲಕನಾದ ಶೋಕದಿಂ ಗಟಗಟ ಕಣ್ಣ ನೀರ್ ಸುರಿಯೆ ಚಿಂತಿಪ ಪಾರ್ವನ ಶೋಕದೊಂದು ಪೊಂಪುಱಿಯನೆ ನೋಡಿ ನಾಡೆ ಕರುಣಂ ತನಗಾಗಿರೆ ಕೊಂತಿ ಚಿಂತೆಯಿಂ (ಪಂಪಭಾ. ೩-೨೫) ; ಮೋಕ್ಷಮಾರ್ಗದೊಳ್ ಪದವಿಡೆ ಮಾಯೆ ಮುಂದಲೆಗೆ ಪಾಯಳೆ (ಶಂಕಶ. ೬೦). ಹಾಯ್ಪ್ : ೧. ಷಡಾಧಾರ ಬಳಿವಿಡಿದು ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ (ಉಪಪ. ೦೦-೨೦) ; ಬಂದರವರಿಬ್ಬರು ಮಹೀತಳಕಿಂದುವದನೆಗೆ ಸುತರನಿತ್ತರು ಮಂದಗಮನೆಯ ಕಳುಹಿ ಹಾಯ್ದರು ಗಗನಮಂಡಲಕೆ (ಸಂಭಪ. ೦೫-೯೦); ಆ ಲತಾಂಗಿಯ ಪತಿಯ ಕೀರ್ತಿ ವಿಶಾಲವಾದಂದದಲಿ ರಾಜಮರಾಳ ಗಗನಕೆ ಹಾಯ್ದು ಕಂಡಿಳಿತಂದುದಾ ಪುರಕೆ (ಪಳಶ. ೨-೨೮). ೪. ಅಱಲುಗೊಂಡ ಕೆಱೆಗೆ ತೊಱೆ ಬಂದು ಹಾಯ್ದಂತೆ ಬಱಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ (ಮಹಾದೇ. ಬ. ೨೪-೪೫) ; ಇದು ಹೊಸತು ಬಾಣಾಬ್ದಿವೇಲೆಯನೊದೆದು ಹಾಯ್ದುದೊ ಭುವನವಳಿವಂದುದಯಿಸಿದ ಮಳೆಗಾಲವೋ ಮಾಮಾ ಶರಾವಳಿಯೊ (ಕುಪ್ಯಾಭೀ. ೯-೩೭). ೫. ಕಂಭವನೆ ದಾಂಟಿ ಮೇಲಣ ಬಾಗಿಲನೆ ಹಾಯ್ದು ಕುಂಭಿನಿಯ ಮೊಲೆ ವಾಲನುಂಡು ದಣಿಯದ ಶಿಶುವೆ (ಶಿಪಗೀ. ೦೯೨-೯೬೦) ; ಆ ಭವನಮುಖದಲಿ ಕಿಚ್ಚನೊಟ್ಟಿಸಿ ಪವನಸುತಸಹಿತಿವರು ಹಾಯ್ದರು ಬಿಲದ ಮಾರ್ಗದಲಿ (ಕುಪ್ಯಾಅ. ೮-೬೮) ; ಆ ಭರತ ನಿಜಬಲಸಹಿತ ಭಾಗೀರಥಿಯ ಹಾಯ್ದೊಲವು ಮಿಗಿಲೈತಂದನಾ ಮುನಿನಾಥನಿದ್ದೆಡೆಗೆ (ಶೊರರಾ. ೨-೬-೦೪). ೬. ದಟ್ಟೈಸಿ ಮಡಲಿಱಿದ ಕಾಳದೊಳು ನಡುವಿರುಳು ನಟ್ಟ ಮುಳ್ಳುಗಳನೆಡಹಿದ ಕಲ್ಲ ಹಾಯ್ದು ಮರಮುಟ್ಟಂ . . . ಮಱೆದು ಗೋಳಿಟ್ಟು ಬಾಯ್ವಿಟ್ಟು ಮೊಱೆಯಿಡುತ ನಡೆತಂದು (ಹಶಕಾ. ೦೨-೨೦); ಸ್ಥಳವನೇ ಜಲವೆಂದು ನಿರ್ಮಳಜಲವನೇ ಸ್ಥಳವೆಂದು ಬಾಗಿಲ ನೆಳಲ ಭಿತ್ತಿಯ ಹಾಯ್ದು ಬಾಗಿಲ ಭಿತ್ತಿಯೆಂದಿಳಿದು (ಕುಪ್ಯಾಸ. ೦೩-೨೬). ೭. ಪೊನ್ಕೊಳದ ಎಮ್ಮೆತುಱುಗಳೊ ××× ಹಾಯ್ದು ಮಡಕಪ್ಪಣ ಕಾದಿ ಸತ್ತು ಸಗ್ಗಿಯಾದ (ಮೈಆರಿ. ೦೯೩೦, ೦೨-೩ ; ಸು. 961) ; ಇರುಳುಗಳ್ಳನ ಕೂಡೆ ಸೇರಿದ ಮರುಳಿನಂತಿರೆ ನೀವು ರಣದಲಿ ತಱಿಸಿಕೊಂಬರಿ ಹಾಯ್ದರವದಿರು ನಿಮ್ಮನೆಡೆಯೊಡ್ಡಿ (ಕುಪ್ಯಾಪ್ರೋ. ೦೬-೩೨). ೮. ತಾವರೆಯೆಸಳ ದೋಣಿಯ ಮೇಲೆ ಹಾಯ್ದವು ಕುಸುಮದುಬ್ಬರದ ತೊಱೆಯನು ಕೂಡೆ ತುಂಬಿಗಳು (ಕುಪ್ಯಾಅ. ೫-೯). ೧೦. ಹಲಉ ಕುದುರೆ ಹರಿಇಸಲು ಕಳ ಹಾಯ್ದು ಕುದುರೆಯ ಕೆಡಹಿ (ಮೈಆರಿ. ೦೯೩೦, ೬೭-೬ ; ಸು. 1164). ೧೧. ನಾರಿಯರು ಕಂಡರು ಸುಲಜ್ಜಾಭಾರದಲಿ ತಡಿಗಳಿಗೆ ಹಾಯ್ದರು [ಪಾಠಾಂ. ಹಾಯಿದು] ಸೀರೆಗಳ ತೆರೆವಿಡಿದರಂಗೋಪಾಂಗಲತೆಗಳಿಗೆ (ಕುಪ್ಯಾಅ. ೦೦-೩೦) ; ಹಾಯ್ದನು ಹಂಸೆಯಲಿ ಮುನಿಪ (ಶೊರರಾ ೦-೫-೨೫) ; ಸೇನಾಸಮಗ್ರದಿಂ . . . ಕುದುರೆಗಳ ಹಿಂದುಗೊಂಡು ಬರಲು ತರ್ವಾಯೊಳವು ಹಾಯ್ದುವನಿಲಜವದಿಂ ಪಡೆಯೊಳೊರ್ವರುಮಱಿಯದಂತೆ ಕುಂತಳನಗರಕೆ (ಶೈಮಿಭಾ. ೨೯-೬). ೧೬. ನುಡಿಯದಿರಸತ್ಯವನು ರಾಜ್ಯವ ಬಿಡು ವಿಭಾಡಿಸಿ ನಿನ್ನ ವಧುವಿನ ಮುಡಿಗೆ ಹಾಯ್ದರೆ ನೀನಧರ್ಮದ ತಡಿಯನಡರದಿರು (ಕುಪ್ಯಾಸ. ೦೦-೩೦). ೧೭. ಓಡಿಹೋಗು ; ಪಲಾಯನ ಮಾಡು : ಕಪಿಸೇನೆ ಕಂಗೆಟ್ಟೊದಱಿ ಹಲುಗಿರಿಯುತ್ತ ಹಾಯ್ದುದು ಕದನ ಸಾಕಿವನೊಡನೆನುತ (ಕೌಶಿರಾ. ೨೫-೨) ; ಗಡ್ಡದ ಮುದುಕರು . . . ಕಂಗೆಟ್ಟು ಹಾಯ್ದರು [ಪಾಠಾಂ. ಯ್ದುದು] ಹೊದಕೆ ದಂಡು ಕಮಂಡಲವ ಬಿಸುಟಖಿಳದೆಸೆದೆಸೆಗೆ (ಶೊರರಾ. ೦-೦೦-೦೨) ; ಹಯಚತುಷ್ಟಯವನಿಸಲು ಉಗ್ರಶರಘಾತಿಗವು ಸೂತನಂ ಕೈಕೊಳದೆ ವಿಗ್ರಹವನುಳಿದೊಂದು ಕಡೆಗೆ ಹಾಯ್ದುವು (ಶೈಮಿಭಾ. ೭-೫೨). ೧೮. ದಾಟಿ ಹೊರಬರು ; ಹೊರಬೀಳು : ವಸುಮತೀಶ್ವರ ಕಡಿವ ತೆಱಹಿನೊಳಸುರನೆಚ್ಚಂಬಡಸಿ ರಾಮನ ಬಸುಱನುಚ್ಚಳಿಸಿದವು ಹಾಯ್ದುವು ತೋದರಕುತದಲಿ (ಕೌಶಿರಾ. ೩೫-೩೨) ; ಕೊಯ್ದ ಕೊರಳಿನ ಕೊಱೆದ ತೋಳಿನ ಹಾಯ್ದ ಮೂಳೆಯ ಸುರಿವ ಕರುಳಿನಲೆಯ್ದೆ ಪಡೆಗೇಱಾಯ್ದು ಚೂಣಿಯ ಚಾತುರಂಗದಲಿ (ಕುಪ್ಯಾಕ. ೨-೪) ; ಉಚ್ಚಳಿಸಿ ಹಾಯ್ದವಂಬುಗಳವನ ಕಾಯದಿಂದೆಚ್ಚಱಿಲ್ಲದೆ ನಿಮಿಷಮಿರ್ದು ಚೇತರಿಸಿಕೊಂಡೆಚ್ಚನು (ಶೈಮಿಭಾ. ೬-೪೫). ೧೯. ಉಂಟಾಗು ; ಸಂಭವಿಸು : ಭೂಸುರವಿಷಯಕೀತನನು ಕೊಟ್ಟೆ ತಾನೆನೆ ಹಾಯ್ದು ನಾಲ್ವರ ಹೊಟ್ಟೆಯೊಳಗುರಿ ಬಳಿಕ ನೀವಿದ ಕೊಟ್ಟಿರೇಕೌ ತಾಯೆ ಭೀಮನನೇನ ಮಾಡಿದಿರಿ (ಸಂಭಪ. ೨೩ ೪೬). ಹಾಯು : ೧. ಮರನನೇಱಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯು [ಪಾಠಾಂ. ಱು]ತಲಿದೆ ಬೆಂದ ಮನವ ನಾನೆಂತು ನಂಬುವೆನಯ್ಯಾ (ಬಸವ. ೩೩). ೪. ಎಲೋ, ಹುಡುಗಾ ! ನಿನ್ನ ಕೈಯೊಳಗಿಂದ ನೆತ್ತರ ಹಾಯುತ್ತದೆ (ಮುಂಬಯಿ. ಕಿ. ೨-೪೭). ೫. ಕಿಂದರಜೋಗಿಗೆ ಮಕ್ಕಳೆಲ್ಲ ಮುಗ್ಧರಾಗಿ ಹಳ್ಳ ಹೊಳೆಗಳನ್ನೂ ಹಾಯ್ದು ಬೆಟ್ಟದ ಒಡಲಲ್ಲಿ ನುಗ್ಗಿದರಂತೆ (ಗಾಳಿಪ. ೬೩) ; ಈ ದೇವರ ರಥೋತ್ಸವದಲ್ಲಿ ಜನರು ಕಿಚ್ಚು ಹಾಯುವರು (ಕಪ್ಯಾಸಾ. ೦೦). ೬. ಅಲ್ಲವಹುದೆಂಬ ಅಜ್ಞಾನಿಯೊಡನಾಟ ಕಲ್ಲು ಹಾದಂತೆ (ಸರ್ವಜ್ಞ. ೬೦೦) ; ತಲೆ ಗಟ್ಟಿಯೆಂದು ನೀ ಕಲ್ಲನು ಹಾಯ್ದರೆ (ಇಂಕಾಪ. ೯೨-೪೯). ೭. ಧನುಜರತಿ ಭೀತಿಯಲಿ ಸೈನ್ಯವ ಕೂಡಿ ಧಾಳಿಯನು ನಿರುತ ಹಾಯುತೆ (ಸಂಭಪ. ಪಂ. ೩೦೯); ಲಖನೌಗೆ ಬಂದ ಬಳಿಕ ಅವರ ಕಿರಿತನ ಶಬ್ದಗಳಲ್ಲಿ ಹೊರಡಲಾರಂಭಿಸಿತು. ಜೇಡರವನ ಸಿಟ್ಟು ಗಡ್ಡದ ಮೇಲೆ ಹಾಯುತ್ತಿತ್ತು (ಶ್ರೇಮಾಶ್ರ. ೬೫). ೧೦. ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪುಗೋದಿಯ ಕಿಚಡಿಯು (ಪಂಪು. ೦೨-೨೦). ೧೧. ಆ ಪುಣ್ಯಾತ್ಮಳ ಮನಸಿನೊಳಗ ಏನಿದೆಯೊ ಏನೊ . . . ಮೊದಲೇ ಒಂದು ಕಾಗೆ ಸಮೀಪ ಹಾಯಲೊಲ್ಲದು (ಅಕ್ಕಮೇ. ೬೯) ; ಮುಂದೆ ಎಂಟಾನೆಂಟು ದಿವಸಗಳಾದರೂ ಅವನ ಮನೆಯ ಕಡೆಗೆ ಹಾಯಲಿಲ್ಲ (ಮುಂಬಯಿ. ೪-೫೩) ; ಜೈನ ಕವಿಗಳು ಚಂಪುವಿನ ಹತ್ತಿರ ಹಾಯಲಿಲ್ಲವೆಂದರೂ ಸರಿ (ಕಸಾಪ. ೬೪೮). ೧೩. ಮುಂದೆ ಬಂದರೆ ಹಾಯದೀರಿ ಹಿಂದೆ ಬಂದರೆ ಒದೆಯದೀರಿ (ಗೋಪಾಡು. ೮೦) ; ಒಂದು ಹಸುವು ಗೋಪಾಲಕನನ್ನು ಹಾಯಲಿಕ್ಕೆ ಹೋಯಿತು (ಪುಣಾಪ. ೦೦೮)

೧೪. ಎಮ್ಮದ ದೊಡ್ಡಪರ್ವತಗಳೆಲ್ಲ ಪ್ರಾಯಶಃ ಪಶ್ಚಿಮದಿಂದ ಪೂರ್ವಕಡೆಗೆ ಹಾಯುತ್ತವೆ (ಕೂಗೂರ. ೨೬). ೧೯. ನೆಗಡಿ ಹಾಯು ದಂತೆ ಅವನು ತನಗೇನೊ ಉಪಾಯ ಮಾಡಿಕೊಂಡಿದ್ದಾನೆ (ರೇಳಕೃ. ೦೦). ೨೦. ಗೋಚರಿಸು; ಹೊಳೆ : ಚಹಾ ಗುಟುಕರಿಸಿದ. ಕೊನೆಯ ಗುಟುಕು ಗುಟುಕರಿಸುವಾಗ ತಾನು ಹೊರಗೆ ಹೋಗಬೇಕು ಎಂಬ ವಿಚಾರ ಹಾಯಿತು (ಅಪವಾ. ೨೬).

ಹಾದಾಟ=ಪರಸ್ಪರ ಹಾಯುವಿಕೆ : ಎತ್ತುಗಳ ಹಾದಾಟದ ನಡುವೆ ಸಿಕ್ಕ ಮಗು ಕಂಗಾಲಾಯಿತು (ಕೂಪ). **ಹಾದು ಬರು**=ದಾಟಿ ಬರು : ಕಳಿಸಿದರೆ ಕಳಿಸು ಬೆಲೆಬಾಳುವಂತಹ ಸರಕು ಎಲ್ಲ ಬಂದರುಗಳಿಗು ಹಾದು ಬರಲಿ (ಕಂಚಾ. ೦೬-೬) ; ಅವರಿಬ್ಬರು . . . ಒಂದು ತೋಟಕ್ಕೆ ಹೋಗಿ, ಅಲ್ಲಿಯ ಮಾವಿನ ತೋಪಿನೊಳಗಿಂದ ಹಾದು ಬರುತ್ತಿದ್ದರು (ಶುಂಪಶು. ೯. ೩-೩೭). **ಹಾಯ್ದಾಡು, ಹಾದಾಡು**=೧. ಓಡಾಡು ; ನಡೆದಾಡು; ತಿರುಗಾಡು : ಆನೆ ಅರಣ್ಯವನ್ನು ದಾಟಿ ಬಂದು, ಜನರು ಹಾಯ್ದಾಡುತ್ತಿರುವ ಗುಡುತಿನ ದಾರಿಯಲ್ಲಿ ಅವನನ್ನು ಇಳಿಸಿ (ಬುದ್ಧಕಾ. ೩೩). ೨. ಕೊಂಬಿನಿಂದ ಇರಿ,–ತಿವಿ : (೪). ೩. ದಾಟು : (೪). **ಹಾಯ್ದು ಹೋಗು, ಹಾದು ಹೋಗು**=ದಾಟಿ ಹೋಗು : ಗೌಡರ ಗರ್ಜನೆ ದೂರದಲ್ಲಿ ಹಾಯ್ದು ಹೋಗುವವರಲ್ಲಿಯೂ ಹೆದರಿಕೆ ಹುಟ್ಟಿಸುತ್ತದೆ (ಗಾಳಿಗು. ೩) ; ಎಲ್ಲಾ ಗ್ರಹಗಳೂ . . . ಒಂದಕ್ಕೊಂದು ತಾಗದೆ . . . ಪ್ರತ್ಯೇಕವಾಗಿ ದೂರವಾಗಿವೆ. ಒಂದರ ಮೇಲೆ ಒಂದು ಹಾದು ಹೋಗಿಲ್ಲ (ಆಕಾಶ. ೦೩) ; ಬಗೆಬಗೆಯ ಸುಂದರ ಆಕೃತಿಗಳು ನಮ್ಮ ಕಣ್ಮುಂದೆ ಹಾದು ಹೋಗುತ್ತವೆ (ಬಾಳಪ. ೩೨೩).

[ದೇ.॥ ತಮಿ. ಕೊಡ. ಪಾಯ್; ಮಲ. ತೆಲು. ಪಾಯು]

ಪಾಯ್₂, ಪಾಯು₁, ಹಾಯ್₂, ಹಾಯಿ₂, ಹಾಹೈ (ನಾ). ೧. ಚಲಿಸುವುದು; ನಡೆಯುವುದು : (೪). ೨. ರೀತಿ; ಕ್ರಮ : (೪). ೩. ಔಚಿತ್ಯ ; ಯುಕ್ತತೆ : (೪). **ಪಾಯು₁** : ೨. ದುಡ್ಡು ಇರೂತನಕ ಎಲ್ಲಾರೂ ದೇಕಾಗೋದು. ದುಡ್ಡು ಹೋದ ಮ್ಯಾಲ ಎಲ್ಲಾರೂ ಘನಾಘಾನಾ ಆಗೋದು. ಇದು ಲೋಕದ ಪಾಯೂನ ಅದ (ಗಂಹಾಹು. ೦೦೮) ; ಪುಟ್ಟ . . . ವೈಲವಾನನೇಸಲ್ಲ. ಅದರೂ ಕುಸ್ತಿಯ ಪಾಯವನ್ನು ನೋಡುವುದು ಎಂದರೆ ಅವನಿಗೆ ತುಂಬಾ ಆಸೆ (ರೇಹುಕಾ. ೪೬). **ಹಾಯ್₂** : ೪. ದಾಟುವುದು ; ದಾಟುವಿಕೆ : (೬). **ಹಾಯಿ₁** : ೫. ಗಾಳಿಯ ಅನುಕೂಲತೆಗಾಗಿ ದೋಣಿಯ ನಡು ಗಂಬಕ್ಕೆ ಕಟ್ಟುವ ನೌಕಾಪಟ ; ಹಡಗಿನ ಪಟ : ತೇಲಿದ್ದು ತೇಲಿತ್ತು ಮುಳುಗಿದ್ದು ಮುಳುಗಿತ್ತು ಗಾಳಿ ನೀರ್ ಬಾಳು ಒಗುಮಿಗುತಲಿಹುದು. ಬೇಲೆ ಕೀರ್ತಿಯ ಹಾಗು ಪಾಪ ಬಿಡುತಿದೆ ಬಾಯಿ ತೆರನೊರೆಯಲಿತಿಹಾಸ ನಗುತಲಿಹುದು (ಗಂ. ೬೪-೦೬) ; ಹಾಯಿ ಇರಲಿಲ್ಲ ದೋಣಿಗೆ: ಸುಮ್ಮ ಸುಮ್ಮನೆ ಗೊತ್ತುಗುರಿ ಇಲ್ಲದೆ ಅದು ನೀರ ಮೇಲೆ ತೇಲುತಿತ್ತು (ಬಕಥಂ. ೦೦೬) ; ಎತ್ತಿದ್ದ ಹಾಯಿಗಳನ್ನು ಅನುಕೂಲಮಾರುತವು ತುಂಬಿ. ಹಡಗವನ್ನು ಸಮುದ್ರದ ಮೇಲೆ ವೇಗವಾಗಿ ಓಡಿಸಿತು (ಭಾಪ್ರ. ೬೯). ೬. ಹಾಯಿಪಟವನ್ನು ಕಟ್ಟಿರುವ ದೋಣಿ ; ನೌಕಾಪಟವನ್ನು ಹೊಂದಿಸಿರುವ ನಾವೆ : ಹಾಯಿ ಏಳಿನು ಹಿಡಿಯುವರು ನೀರ ಮೇಲೆ ಹೋಗಲು ಉಪಯೋಗಿಸುವ ಸಣ್ಣ ಹರಿಗೋಲು (ಕಪ್ಪಾಹಾ. ೦೧೪) ; ಹೆಲನರಿಗೆ ಮುನ್ನೂರು ಹಡಗುಗಳು . . . ಕಡುವೇಗ ಇನ್ನೂರು ಹಾಯಿಗಳು (ಕಾರಭ. ೦೪-೬೬) ; ಹಾಯಿ ಬಿಚ್ಚಿದ್ದನ್ನು ನೋಡಿ ಮನೆಯ ದಾರಿ ಹಿಡಿದಿದ್ದೆ ತಾನು (ಹೂಸಕೃ. ೪೭). **ಹಾಹೈ** : ೫. "ಹಡಗಿನ . . . ಪಟಂ ಹಾಹೆಯಂಕ್ಕ" (ಪುಂಗಾಂ. ೦೨೦-೩) ; ಗಾಳಿಗಪ್ಪ ಹರಿದೀತು ಹಾಹೆ ಹುಟ್ಟಿಲ್ಲದಾಗೆ ಪಡಗ ? (ಸಾಶುಪ್ರಪ. ೩೩-೨).

ಪಾಯ್ಮಟ್ಟು=ರೀತಿ ; ವೈಖರಿ ; ಕ್ರಮ : ದುರುಗೋಜಿಯು ಹೊಲಿಯುವ ಪಾಯ್ಮಟ್ಟಿನಲ್ಲಿ ಅಂಗಿಯನ್ನು ಹೊಲಿಯುವವರು ಈ ಊರಿನಲ್ಲಿ ಮತ್ತಾರು ಇಲ್ಲ (ಕೂಪ). [<ಪಾಯ್₁./ತುಳು. ಪಾಯಿ]

ಪಾಯ್₁ 'ಪಾಯ್₂' ನೋ.

ಪಾಯ್₂ (ನಾ) ೧. ಪಾದ; ಅಡಿ; ಚರಣ: "ಪಾಯು (ಪಾಯ್, ಪಾಯಿ)–ಪಾದ" (ಕರ್ನಕೋ. ೨೬) ; ಗತಿ ಸ್ತಂಭಿಸಿ ಪಾಯಂ [ಪಾಕಾಂ.ನಂ] ಪೈಸರಂ ಬೋಗಿ ಪುಸ್ತಂ ಪುಲಂಗಿ ನೋಟಪುಚ್ಚೊತ್ತಿ ಪೂರ್ಜಿಸುವ ಮಗಳಂ ಪದ್ಮಾವತಿ ಕಂಡು (ಪುಲುರ.ಹ.೦೬೯-೦೬). ೨. ಬುನಾದಿ; ಅಸ್ತಿವಾರ; **ಅಡಿಪಾಯ** : ಸವಿತ್ವದಿಂದಲೂ ಸಂತೋಷದಿಂದಲೂ ಪಾಯ ಗಟ್ಟಿ ಮಾಡುವ ಬಗ್ಗೆ . . . ಒಂದು ದಾರಿ ಮಾಡಿ ಇರಿಸಬೇಕಾಗಿ ಇದೆ (ರಾಕೀಂದ್ರ. ೦೬೩) ; ಉಪ್ಪಾರನಾಗಿ ಪಾಯಾ ತುಂಬಬೇಕು (ಶುಂಬಹು. ೪-೦೪೩) ; ಸದ್ಯದಲ್ಲೇ ನಾನು ಮನೆಯ ಪಾಯ ತೆಗೆಸಬೇಕಾಗಿದೆ (ಮೋಪಕ್ಕ. ೬೨). ೩. ನಾಲ್ಕನೆಯ ಒಂದಂ ಭಾಗ; ಕಾಲುಭಾಗ: 'ಪಾಯದ್ರವ್ಯ' ಪರಾ.

ಪಾಯ ಹಾಕಿಸು=ಬುನಾದಿಯನ್ನು ಹಾಕಿಸು ; **ಅಡಿಪಾಯವನ್ನು ಹಾಕಿಸು** : ಅತ್ತಿಪಬ್ಬೆ ಯೋಚಿಸಿ ಮೊಟ್ಟಮೊದಲು ಜಿನಾಲಯಕ್ಕೆ ಪಾಯ ಹಾಕಿಸಿದಳು (ರಾತಪಂ. ೦೬೩). **ಪಾಯ ಹಾಕು**=ಬುನಾದಿ ಹಾಕು; ಅಡಿಪಾಯ ಹಾಕು : ಪಾಯ ಹಾಕಿದ್ದಾರೆ ; ಮೇಲೆ ಕಟ್ಟಡ ಎದ್ದಿಲ್ಲ (ರಂಗಕ. ೦೫೩). [<ಪ್ರಾ. ಪಾಯ. /ಸಂ. ಪಾದ]

ಪಾಯಕ (ನಾ). ಕಾಲಾಳು ; ಪದಾತಿ : ಜಾಳಾಂಧ್ರ ದೇಶದ ಅರಸು ಆನೆಯನೇಜಿ ನಾಯಕ ಪಾಯಕ ಮಾವಹಿಗರ ತಳಹತ್ತು ಪಾರ್ಬಲ ಸಹಿತ ರಾಜಬೀದಿಯೊಳು ಬರುತ್ತಿರಲು (ಸರ್ಪಸ. ೨೦೩-೪೦) ; ಹರಿಗೆಯ ತುಳುವ ಪಾಯಕರು ಬಿಲ್ಲವರು ಕಾಡೆರೆಯ ವೀರರು. . .ನತದರು ಶರಣವಗಣಿಬೊಡನೆ (ಶಂಕವಿ. ೬–೩೫). 'ಕಾಲಂಪಾಯಕ' ಪರಾ. [<ಪ್ರಾ. ಪಾಇಕ್ಕ. / ಸಂ. ಪಾಯಿಕ]

ಪಾಯಕರು 'ಪಾಯಕ್ಕ' ನೋ.

ಪಾಯಖಾನೆ, ಪಾಯಿಖಾನೆ, ಪಾಯ್ಖಾನೆ (ನಾ). ೧. ಶೌಚಗೃಹ ; ಕಕ್ಕಸು : ಕಾಮ ತುಚ್ಛವಾದ ಸಂಗತಿ–ಪಾಯಖಾನೆಗಳ ಗೋಡೆಗಳ ಮೇಲೆ ರೂಪಿಸುವ ಸಂಗತಿ–ಎಂಬ ಕಲ್ಪನೆ ಆಗ (ಪುಟ್ಟ. ೦೦೬); ಉಳದದ್ದ ನಿದ್ದೀ ಪಾಯಖಾನ್ಯಾಗ ಮಾಗಸಿದಿ ಏನಲೇ ರ್ಯಾಣಕ್ಕಾ ! (ಕಂಎಹು. ೦೦೦). ೨. ಮಲ; ಅಮೇಧ್ಯ : ಪಾಯಿಲೆ ಬಿದ್ದ ಮಗುವಿನ ಪಾಯಖಾನೆ ತೆಗೆಯಲು ಆಳ್ಳ ಯಾರೂ ಇರಲಿಲ್ಲ (ಕೂಪ). **ಪಾಯಿಖಾನೆ** : (೪). **ಪಾಯ್ಖಾನೆ** : (೪).

[←ಪಾರ. ಪಾಖಾನಹ್, ಪಾಏಖಾನಾ ; ಹಿಂ. ಪಾಖಾನಾ, ಪಾಯಃ ಖಾನಾ ; ಮರಾ. ಪಾಯ್ಖಾನಾ]

ಪಾಯಜಾಮ, ಪಾಯಜಾಮೆ, ಪಾಯಿಜಾಮ, ಪಾಯಿಜಾಮೆ, ಪೈಜಾಮ, ಪೈಜಾಮಾ (ನಾ). ದೊಗಲೆ ಪರಾಯಿ; ಅಳ್ಳಕವಾದ ಇಜಾರ ; ಸ್ವಲ್ಪ ಹರಿದಿದ್ದ ಪಾಯಜಾಮ, ಮಾಸಿದ ಅಂಗಿ (ರಂಗಕ. ೦೨೪). **ಪಾಯಜಾಮೆ** : ಒಪ್ಪ ಬಣ್ಣದ ರೇಶ್ಮೆಯ ನಿಲುವಂಗಿ, ಹತ್ತಕಾಲಿನ ಸೂಲಿನ ಪಾಯಜಾಮೆ (ಕ್ರಶಾಕ. ೪). **ಪಾಯಿಜಾಮ** : ಒಬ್ಬ ಸಂಗೀತಗಾರನು . . . ಕುತ್ತಿನಿ ಪಾಯಿಜಾಮ ಹಾಕಿಕೊಂಡು ಹಾಡುತ್ತಿರಲಾಗಿ (ಶಕಾವಂ. IV. ೦೦); ಮೆಲ್ಲನೆ ಕಡಲ ತೆರೆ ಅಂಗರನ ಪಾಯಜಾಮವನ್ನು ಮುಟ್ಟಿತ್ತುತ್ತಿತ್ತು (ಹೊಸಕ್ಷ. ೬೨). **ಪಾಯಿಜಾಮೆ** : ಬಣ್ಣ ಬಣ್ಣದ ಪಾಯಿಜಾಮ, ಅದೇ ರೀತಿಯ ಅಂಗಿ ತೊಟ್ಟ ಈ ವ್ಯಕ್ತಿ ದೊಡ್ಡಪ್ಪನೇ ಎಂದು ಯಶೋದೆ ಒಂದು ಕ್ಷಣ ಶಂಕಿಸಿದಳು (ವಾಕ್ಯ. ೦೩). **ಪೈಜಾಮ** : ಅಜಾಪುತ್ರ ವೃಷ್ಟಿ ಕಿಶೋರನ ಪೈಜಾಮದ ಕಡೆ ಹರಿಯಿತು (ಅಕ್ಕಾಕ್ಕ. ೨೬). **ಪೈಜಾಮಾ** : ಶ್ರೀಧರ . . . ಪೈಜಾಮಾ ಬದಲಿ

ಒಪ್ಪಿ ಶಾಂತ ಮಲಗಿವ್ಲಿಗೆ ಹೋಗಿ ಮಗುವಿನ ಹಣೆ ಮುಟ್ಟಿ ನೋಡಿದ (೨೫೪೦. ೯೭); ಪರುಶರ್ಟನ್ನು ತೆಗೆಯುವನು . . . ವೈಜಾಮಾ ಕಳೆದೊಗೆಯುವನು (೦೯೪೦. ೦೦೭).

[←ಪಾರ. ಪಾಎದಾಮಹ್, ಪಾಜಾಮಹ್ ; ಹಿಂ. ಪಾಯಜಾಮಾ, ಪಾಜಾಮಾ; ಮ-ರಾ. ಪಾಯ್‌ಜಮಾ, ಪಾಯ್‌ಜಾಮಾ]

ಪಾಯಜಾಮೆ 'ಪಾಯಜಾಮ' ನೋ.

ಪಾಯಣ್ಣ (ನಾ). (?) : ಆರಸುಗಳ ಕೈ ಉತ್ತಾರರತ್ತ ಪಾಯಂಣ ಸಂದಾ ದೀಪ ಪುಡಿಮಟ್ಟು ಅಲಂಕಾರದಿಪಕೆ ಸಹಾ ನಾಂಗ್ಯಾ ೩೦ ಲೌ ೦ (೨೪. XI. ಹೂಳ್ಕೆ. ೬-೪೯ ; ೧೬೧೪). [?]

ಪಾಯದಳ, ಪಾಯಿದಳ, ಪಾಯ್ದಳ (ನಾ). ಕಾಲಾಳುಂಗಳ ದಂಡು ; ಪದಾತಿಸೈನ್ಯ . "ಯಾತ್ರಾ ಪದಾತಿಕಂ ಪಾಯದಳ ಪತ್ತಿ ಪಾದಾತಂ ಪದಾಜಯಂ ಪದಿಕನೆನೆ ಕಾಲಾಳ್" (ಪಂಗಂಗಾ. ೮೬-೨೬); ಒಂದು ಕೊಡಗ . . .ಆ ಪುರವರಸು ತನ್ನ ಪಾ[ಶಾಖಾ.ಪಾ]ಯದಳ ಸಹಿತ ಬಂದರೆ ಒಂದೇ ಬಾರಿ ಮುಜ್ದು ನುಂಗಿತ್ತ ಕಡೆ (೨೪೪೦. ೪೯-೩೨೦); ನೂಕಿತೊಂದೇ ವಾಘೆಯಲಿ ರಥ ನಾಕುಸಾವಿರ . . . ಲಕ್ಕಪಾಯದಳ (ಭಾಷ್ಯಾ. ೨-೯) ; ಕದನದ ಗಾಯದಲಿ ನೊಂದೊಜಲಿ ಬಾಯಲಿ ಬೆರಳನಿಟ್ಟುವು ವೈರಿಪಾಯದಳ (೨೪೪. ೯-೪೪); ಬಾಜಮಾಗ, ಪಾಯದಳ, ದಳದಳದ ಪೆರಗೆ, ಬಂದು ಬಂದೆತ್ತಲುಂ . . . ಬೀಡುಬಿಟ್ಟಳೆಯ (೨೩೪೩. ೩-೦೦೪). **ಪಾಯಿದಳ** : ತುರಗ ಕರಿ ರಥ ಪಾಯಿದಳ ಬಲ ಹೊರಳಿಯೊತೆದುನು (ಭಾಷ್ಯಾಕ್ಕೂ೯. ೦೨-೦೯); ಬಂದು ಭಂಡಾರ ಬೊಕ್ಕಸರುಳ್ಳಿ ಪಟ್ಟಿಯ ಒಂದು ಉಳಿಯದೆ ಪಾಯಿದಳವ ಇಂದು ಒಪ್ಪಿಸಿ ಹೋಗು (೨೦೨೦. ೪೦-೦೦೩) ; ಅರ್ಜುನನು ಪಾಯಿದಳದ ಮೇಲೆ ಕಾಣಿಸಿಕೊಂಡು ಅದನ್ನು...ನೋಯಿಸಲು (೪೪೨೦. ೦೦೪). **ಪಾಯ್ದಳ** : "ಪಾಯ್ದಳ (ಪಾಯದಳ) —ಪಾದದಲ = ಕಾಲಾಳ ಸೈನ್ಯ" (೪೮೪೦೯. ೨೬); ಮುಜ್ದಾದನೊಗ್ಗಿನ ಪಾಯ್ದಳವನು (ಭಾಷ್ಯಾಕ್ಕೂ೯. ೩-೬೬); ನೆರೆಮಾದಗಣೆತಪರಸುಗಳು ಕರಿತೆರಗದಥವಾಯ್ದಳದ ಸಂದಣಿ (೨೪೪. ೬-೩೦); ವಾಜಿಯು ಕಾಪಿಂ ಪಾಯ್ದಳಂ ಸಡಗರದಿಂ ನಿಚ್ಚಯಯಾಣದಿಂ ದೇಶದೇಶಂಗಳಂ ಕಲುಕಲುಂಪು ಪೋಗುತುಮಿರ್ದುದು (೨೩೮೪. ೩೦-೨). [ಪಾಯ್+ದಳ್ (=ದಲ)]

ಪಾಯದಟಿ, ಪಾಯಿದಟಿ (ನಾ). =ಪಾಯದಳ : ಪಾಯುದಟವೆಲ್ಲ ಮೆಚ್ಚು ಮುಜ್ದಾದಂ ರಾಜಸಜಯಾಗೆ ತೆಱಪುಪಡೆದಿದಿರೊಡ್ಡಿನ ತೇರೊಡ್ಡುಗಳ್ ಶೂರಸಾರಥಿಪ್ರೇರಣದಿನೋರೊಂದಂ ಪತ್ತಿ ಸಾರ್ದಿದಾಗಳ್ (೨೦೨೪. ೧೨-೬೪ ಪ) **ಪಾಯಿದಟಿ** : ಮೂಲ ಬಲದೊಳ್ . . . ನೂಜೂನೆಯಿಸಾಯಿಸಾಸಿರಕುವರೆ ಲಕ್ಕಪಾಯಿದಟವಾಯ್ತೆಂನು ಲೆಕ್ಕಿಗಂ ಬಿನ್ನವಿಸೆ (೪೪೦೦. ೨೨-೦೪). [ಪಾಯ್+ದಟ]

ಪಾಯದೂತ (ನಾ). ಕಾಲಾಳು : ವಾಯುಪಾವರರಿಕಾಲನಾ ಪಾಯು ದೂತರತಿವೇಗದಿಂ (೨೨೦೪. ೨-೯-೪೪). [ಪಾಯ್+ದೂತ]

ಪಾಯದೆ 'ಪಾಯಿದೆ' ನೋ.

ಪಾಯದ್ರವ್ಯ (ನಾ). ದ್ರವ್ಯದ ನಾಲ್ಕನೆಯ ಒಂದು ಭಾಗ; ದ್ರವ್ಯದ ಕಾಲುಭಾಗ : ಪಾಯುದ್ರವ್ಯಂ ಅಡಿಗಚ್ಚು ಕಾಣಿಕೆ (೨೦೪೬೨. ೦೯೭೪. ಬಂಕಾಪೊಕ. ೬-೦೯ : ೧೪೪). [ಪಾಯ್+ದ್ರವ್ಯ]

ಪಾಯಿನ್ನೇರಳೆ (ನಾ). ಒಂದು ಬಗೆಯ ನೇರಿಳೆ : ಕರೇನೇರಳೆ. ಪಾದು ನ್ನೇರಳೆ (ಪ್ಯಾಕಿಗ. ೬೬-೦೪೪೬). [? + ನೇರಳೆ (<ನೇಜಲ್)]

ಪಾಯಬಂದ (ನಾ). ಕುದುರೆಯ ಹಿಂಗಾಲಿಗೆ ಕಟ್ಟುವ ಹಗ್ಗ; ಪಿಚ್ಚಾಡಿ: ಪುಶಳ. . .ಧಾಬಿಗೆ ಹೋಗಿ ಬಾಪೂಸಾಹೇಬನ ಕುದುರೆಯು 'ಪಾಯಬಂದ ಕಾಡಣಿ'ಯನ್ನು ಬಿಚ್ಚಿಕೊಂಡು, ಶರಂಗಿ ಕೋಣೆಗೆ ಬಂದು ಬಾಗಿಲು ಹಾಕಿಕೊಂಡಳು (ಗ್ರಾಹಾಪು. ೦೪೦). [←ಮರಾ. ಪಾಯ್‌ಬಂದ್]

ಪಾಯಭರಣೆ (ನಾ). ತಳಪಾಯವನ್ನು ತುಂಬುವುದು ; ಅಡಿಪಾಯವನ್ನು ಮುಚ್ಚುವುದು : ಈಗ ಬಸವಂತಿ–ಶ್ಯಾಮರಾಯರ ನಡುವೆ ಚೈನಾ–ಭಿತ್ತಿ ನಿರ್ಮಿಸುವ ಹುಂಟಿಕೆ ಹಾಕಿದ್ದ. ಭಿತ್ತಿಯು ಪಾಯಭರಣೆ ಸರಬಲಿಗೆ ಆಸುರಿಸಿತ್ತು (೦೯೪೪. II. ೪೮೩). [ಪಾಯ್+<ಭರಣ್]

ಪಾಯರಿ (ನಾ). ಅಂತಸ್ತು ; ಪದವಿ : ಏ ಪಾಯರಿ ಏರಾಕ ಹತ್ತೀ ದೆಲಾ. ಮೊದಲ ನಸ್ಸ ಇಲ್ಲೆ ಬರೇ ಮುಸುರೀ ತಿಕ್ಕಾಕ ಕರತಂದಿ. ಈಗ ಮುಮುವೆಗೆ ತಯಾರಾದಿ (೪೪೨೪. ೦೦೪). [←ಮರಾ. ಪಾಯರೀ]

ಪಾಯಲಿ, ಪಾಯಿಲಿ, ಪಾಯಿಲೆ (ನಾ). ಧಾನ್ಯವನ್ನು ಅಳೆಯುವ, ನಾಲು ಸೇರಿನ ಒಂದು ಅಳತೆ : ೪ ಶೇರಿಗೆ ೧ ಸೊಲಿಗಿ, ಪಾಯಲಿ ಅಥವಾ ಚಿಟ್ಟಿ . . . ೨೦ ಮಣಕ್ಕೆ ಅಥವಾ ೧೦ ಹೇರಿಗೆ ೧ ಖಂಡುಗ ; ಈ ಪರಿಮಾಣಗಳು ಬಹುತರವೊಂದೇ ಸವನಾಗಿ ಯೆಲ್ಲ ಕಡೆಯಲ್ಲಿ ನಡಿಯುತ್ತವೆ (೪೩೩೧. ೨೯೦) . **ಪಾಯಿಲಿ** : ರೂಪಾಯಕ್ಕೆ ಇಷ್ಟು ಪಾಯಿಲಿ ಮೇಲೆ ಅಂತಾ ಇರತಕ್ಕ ಜೀನಸುಗಳು (೪೮೦೬೨೨. ೦೨೨). **ಪಾಯಿಲೆ** : ಟೂರುಮರಿ (ಅಕ್ಕಿಅರಳು) ಮುಂಬಯಿಯಲ್ಲಿಯ ಅಳಿಯುವ ಪಾಯಿಲೆ ೨೦೪ ಸೂರ್ತಿ ರೂಪಾಯಿಯೆ ಭಾರ ಇರುತ್ತದೆ (೪೮೦೬೨೨. ೦೨೨).

[← ಮರಾ. ಪಾಯಲೀ]

ಪಾಯವಟ್ಟ, ಪಾಯಿವಟ್ಟ (ನಾ). ೧. ಕಾಲಿಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ ; ಕಾಲಂದುಗೆ ; ನೂಪುರ : "ಸಿಂಜಿನಿ ಹಂಸಕಂ ಕಡೆಯ ಪೆಂಡೆಯುಂ ಪಾಯುವಟ್ಟಂ" (೪೮೧೦೨. ೦೦೨-೩೦) : ಸಂವಿವಟ್ಟಿವ ಪಾಯಪಟ್ಟಮುಮಂ ... ವಿವಿಧ ಕಿಸಲಯದ ಕಿಸಲಯಮುಮಂ ಮನೋಹರವೆನೆ ಸವೆದು ತಪುತವುಗೆ ಪಸವನಂಗೊಂಡು (೪೦೨೨೪. ೬-೦೦೪ ಪ); ರಾಜೀವಲೋಚನೆ ಕಳುಹಿದಳು ವಿಕ್ರಯಿಸಲೆಂದದೆ ಪಾಯವಟ್ಟಿವನು (೨೪೪. ೪೨-೦೨) ; ಲುಲಿವ ನೇವ್ರರ ಪಾಯುವಟ್ಟಿದ ಲಲಿತಕಂಠಣ ತೋಳ ಬಂದಿಯು . . . ಕೋವುಳೆಯರೆಯ್ದಿದರು (೨೨೪೦೯. ೪-೨೪) ; ಬಾಯಿ ಬಡಿಕ ತವಸಿಗಳ ಶಾಯಿ ನೀ ಕಡೆಮೊಟ್ಟಿನುತೆ ಕಾಲಂದುಗೆ ಪಾಯುವಟ್ಟಿವ ತಂದಿಕ್ಕಿದರು (೨೦೪೪೪. ೨೩-೪೬). ೨. ಗೌರವಸೂಚಕಚಿಹ್ನೆಯಾಗಿ ಕಾಲಿನಲ್ಲಿ ಧರಿಸುವ ಒಂದು ಬಗೆಯ ಆಭರಣ ; ಕಾಲ ತೊಡರು ; ಪೆಂಡೆಯ : "ಪಾಯುವಟ್ಟ—ಪಾದವಟ್ಟ=ಪೆಂಡೆಯು" (೪೮೪೦೯. ೨೬) ; ಪಾದಪಟ್ಟ—ಪಾಯುವಟ್ಟ (೪೪೨೪. ೨೪೨ ಕ್ರಿಕೋ); ವೀರಮುದ್ರಿಕೆ ಪಾಯುಪಟ್ಟ ಕಾಂಚಿದಾಮ ಹಾರ ಕೇಯೂರ (೨೪೦೪೪. ೭-೬೦). **ಪಾಯಿವಟ್ಟ** : ೧. ರತ್ನಗಿರಿಂಬು ನೇವ್ರರ ಪಾಯಿವಟ್ಟಂಗಳು ತರುಣಿಗೊಪ್ಪಿವವು (೨೪೪೨೦. ೨-೦೨೨) ; ಕೇವಾವರೆಯು ಬಂಡುಗಣಿಗೆಳಸಿಲ್ಕೆ ತಂದಿಹ ಪುವ ಹಂಸೆಯಂತೆ ಚೆಂಪಿನ ಮುತ್ತಿನ ಪಾಯಿಪಟ್ಟಿವ ಪವಮ್ಮೆಂದ್ವವೆಸೆದು ವಂದವಳ (೪೦೪೨. ೯-೨೨). [<ಸಂ. ಪಾದಪಟ್ಟಿ]

ಪಾಯವಧಾರು (ನಾ). (ಆಚಾರ್ಯರಲ್ಲಿ, ರಾಜರು ಮೊದಲಾದವರನ್ನು ಕುರಿತ) ಕೊಂಡಾಟದ ಒಂದು ನುಡಿ ; ಪರಾಕು ಹೇಳುವಾಗ ಬಳಸುವ ಒಂದು ಮಾತು : ಪಾಯುಪಧಾರುದಿಸಲು ಗಜಮಾಸ್ಯಕದೊಳಳವಟ್ಟು ಕೈವೀಸೆ ಭೂತರೆಂಬ ಲಗ್ಗೆಪಜ್ಜಿಗಳ ಬೊಬ್ಬೆಯಬ್ಬರಂಗಳೊಳು ಚಂದ್ರಾದಿತ್ಯ ಮುತ್ತಿದ ಶಿವಾಲಯವನು (೨೦೪೪೪. ೩-೬); ಇನಸಂದನನು . . . ಮುಂದೆ ಪಾಯುಪಧಾರು ರಿಪ್ಪನೃಪಬಂದಿಕಾಜಿ ಪಧಾರು ಧಿರುವಯುವೆಂದು ಕಳಕಳ ಗಜಜ ವಿಗೆ ಕಾರುಭೂವಿಗೈತಂದ (ಭಾಷ್ಯಾಕ್ಕೂ೯. ೦-೦೯); ಕೆಲವ ಪಾಯುಪಧಾರುಗಳ ಮಾಂಗಳಾಪಾತ ರವವೆಸೆಯಲುತ್ಸವದೊಳಗೆ ಸುಮುಹೂರ್ತದಲಿ ಹೊಕ್ಕರು ಹರಿಬಲರು ಪುರವ (೨೨೨೪. ೦೦-೪೨-೩). [ಪಾಯ್+ಅಧಾರು]

ಪಾಯಶುದ್ಧಿ (ನಾ). ಕಟ್ಟಡ ಮುಂತಾದುವಕ್ಕೆ ತಳಹದಿ ಹಾಕುವಾಗ ಅಡಿಪಾಯದಲ್ಲಿ ಅಮಂಗಳಕರವಾದುದೇನೂ ಇಲ್ಲದಿರುವಿಕೆ,—

ಶುದ್ಧವಾಗಿರುವಿಕೆ : ಮನೆ ಕಟ್ಟುವಾಗ ಪಾಯಶುದ್ಧಿ ಚೆನ್ನಾಗಿರಬೇಕು (ಶಬ್ದ). [ಪಾಯ್+ಶುದ್ಧಿ]

ಪಾಯಸ (ನಾ). ೧. ಅಕ್ಕಿ, ರವೆ, ಗಸಗಸೆ, ಸೇವಗೆ ಮುಂತಾದುವುಗಳನ್ನು ತುಪ್ಪದಲ್ಲಿ ಹುರಿದು, ಹಾಲಿನಲ್ಲಿ ಬೇಯಿಸಿ ಸಕ್ಕರೆ ಅಥವಾ ಬೆಲ್ಲವನ್ನು ಸೇರಿಸಿ ಸಿದ್ಧಪಡಿಸುವ ಒಂದು ಬಗೆಯ ಸಿಹಿಪೇಯ : "ಕ್ಷೀರೇಯಂ, ಪಾಯಸಂ, ಪರಮಾನ್ನಂ—ಈ ೩ ತುಯ್ಯಲ್" (ಶಂಕಥು. ೩೩–೦೩೩) ; ಮುಂದದೆ ಮಾಡಿದಳ್ ಪಾಯಸಮಂ ನವಘೃತಸಮನ್ವಿತಂ ಸಿತಸಹಿತಂ (ಶಂಶಕಂ. ೦೩೪–೨೨) ; ದೇವ ಪರಡಿಯ ಪಾಯಸನನುಣ್ಣಾ ದಪ್ಪೆಯ್ಯಾ (ಜಸಂ. ೬–೦೨೬) ; ಶಾಕಶೀಕರಣೆಯು ಗಾಡಪೋಡಣೆಯು ಸುಪಾಕ ವೊಗ್ಗರಣೆ ಪಾಯಸವ. . . ಬಡಿಸಿವರು (ಕಚ. ೪–೭೪). ೨. ಒಂದು ಬಗೆಯ ಗಂಧದ್ರವ್ಯ ; ಲೋಬಾನ : "ಪಾಯಸಃ, ಶ್ರೀವಾಸಃ, ವೃಕ್ಷಧೂಪಃ, ಶ್ರೀವೇಷ್ಟಃ, ಸರಳದ್ರವಃ—೫ ಸರಳದೇವದಾರುವೃಕ್ಷದ ಬೊಂಕೆ, ರ್ಯಾಳ್ಚದ ಬೊಂಕೆ" (ನಿಘಂ೦. ೨೦೬). [ಸಂ.]

ಪಾಯಸಂಕಲೆ (ನಾ). ಕಾಲಿಗೆ ಕಟ್ಟುವ ಸರಪಣಿ,—ಸಂಕೋಲೆ : "ಪಾಯ(ಪಾದ) ಸಂಕಲೆ—ಪಾದಶೃಂಖಲಾ" (ಕಡ್ಕೋ. ೫೬). [ಪಾಯ್+ಸಂಕಲೆ]

ಪಾಯಱಿ (ನಾ). (?) : ಬಯ್ದಂಗೆ ಪಣಮುಮೊ[ದುಂ] ಪೊಯ್ದಂಗಾಱು ಪಣಮಿಱಿಯೆ ಪನ್ನೆರಡುಪಣಂ ಪಾಯಱಿದೆ ಸುರಿಗೆಗಿರ್ತಿರದೆಯ್ದಿದವಂ ಗೆಂಟುಪಣಮೆ ದಣ್ಡಂ (ಕ್ಷಾಚಿತ. IX–೧, ೦೦೨–೧೫ ; ೧೦೪೬). [?]

ಪಾಯಾಳ (ನಾ). ದೂತ ; ಪರಿಚಾರ ; ಸಂದೇಶವಾಹಕ : ಪಂಚ ಶರನ ಪಾಯಾ[ಕಾಣಂ. ಯ್ದಾ, ಯ್ದಾ]ಳನಂತೆ ಚಂಚರೀಕವ ಕುಂಚ ಮನೆತ್ತಿ ಕಿಂಜಲ್ಕದ ಕೆಂದೂಳಿಯೊಳ್ಪೊರೆದು ಮಕರಂದಬಿಂದುವೆಂಬ ಬೆವರಂ ವೇಱೆ ವರಿತರ್ವ ತಣ್ಣೆಲರಿಂ . . . ಪುನಂಗೊಳಿಸಿ (ಅರ್ಹಪ್ರ. ೪–೬೮ ಕ); ಗಾಳಿಯು ಮುಂದೋಡುವ ಜಂಘಾಳಹವುದ್ವಯಮೆನೇಱಿ ಪಥಗತಪುರವಾಳಾಗಳಂ ಕಱಿದಾ ಜಂಘಾಳರ್ ಪಾಯಾಳರೆಯ್ದಿ ಶೌರಿಪುರಮಂ (ಹರಿವಂ. ೪–೭೭). [<ಪ್ರಾ. ಪಾಜೂಲ]

ಪಾಯಾಳು (ನಾ). ಪಾದಚಾರಿ : ಗುರುವೆಂಬ ಅಂಜದ ಶಿಷ್ಯನೆಂಬ ಪಾಯಾಳು (ಪಕ್ಷಪ. ೪. ೬೩೬–೦೪೦೦). [ಪಾಯ್+ಆಳ್ (<ಆಳ್)]

ಪಾಯಿ೧ (ನಾ). ೧. ಪಾಪಿ ; ಪಾಪಿಷ್ಠ : "ಪಾಯಿ—ಪಾಪಿನ್. ೨. ಪಾದ (ಕಡ್ಕೋ. ೫೬). ೨. ಬಡವ ; ನಿರ್ಗತಿಕ : "ಪಾಯಿಃ = ಬಡವಂ" (ಶಾಕ್ಯ. ೦೬೬). 'ಬಡಪಾಯಿ' ಪರಾ." [<ಸಂ. ಪಾಪಿನ್]

ಪಾಯಿ೨, **ಪೈ** (ನಾ). ೧. ಒಂದು ನಾಣ್ಯದ ಹೆಸರು : ಪ್ರತಾಪ ಚೌಲ ನಾಲ್ಕುಂ ಸತತಂ ಚೌಲಕ್ಕೆ ನಾಲ್ಕು ಪಾಯಿಂಗಳಕ್ಕುಂ ಅತಿಶಯದ ಪಾಯಿಯೊಂದಕ್ಕೆ ಗತಿಸಂಖ್ಯೆಯು ಗತಿಯುಮಿಯೆಂದ (ಕ್ಷತ್ರಚೂ. ಅಷ್ಟಮಂಜ I, ೩–೨೬); ಪ್ರತಾಪಕ್ಕೆ ಪಣವು ಬಾಣಂ . . . ಪ್ರತಾಪಕಂ ಪದಿನಾಱುಪಾಯಿ ಬೌಷ್ಪಿಗತಿಗಳುಮಂ (ಕ್ಷತ್ರಚೂ. ಅಷ್ಟಮಂಜ I, ೩–೨೬). ಪೈ೨ : ೨. ಹಿಂದೆ ಬಲಾವಣೆಯಲ್ಲಿದ್ದ ತಾಮ್ರದ ಒಂದು ಸಣ್ಣ ನಾಣ್ಯ ; ಆಣೆಯ ಹನ್ನೆರಡನೆಯ ಒಂದು ಅಂಶ ; ಒಂದು ಬಿಡಿಗಾಸು : ಮುಪ್ಪಾಗವು ಮೂಱುವೀಸಕ್ಕವು ಪೈಗಳವಾಗುತ್ತಿರಲಾ ಧಾರಣೆಯೊಳಿಪ್ಪತ್ತು ಹಣವು ಹಾಗಕೆ ತಪ್ಪದೆಯೆನ್ಬೆಂದು ವೇಳು (ರಾಷ್ಟ್ರಕ. ೬–೦೯) ; ಜಗದೀಶ ಚಂದ್ರನು . . . ಒಂದು ಪೈಯನ್ನೂ ತೆಗೆದುಕೊಳ್ಳದೆ, ಶ್ರದ್ಧಾಭಕ್ತಿಯಿಂದ ತನ್ನ ಕೆಲಸವನ್ನು ನಿರ್ವಹಿಸಿಕೊಂಡು ಹೋದನು (ಪ್ರಕೃ. ೧೬). ೩. ಈಗ ಬಲಾವಣೆಯಲ್ಲಿರುವ ರೂಪಾಯಿಯ ಮೂರನೆಯ ಒಂದು ಭಾಗ: ಒಂದು ಪೈಯನ್ನು ಖರ್ಚು ಮಾಡಲೂ ಹಿಂಮುಮುಂದು ನೋಡುವ ಸ್ವಭಾವ ಅವರದು (ಕೂಡ).

[←ಮರಾ. ಪೈ. / ಹ್ರಾ. ಪಾಯ. / ಸಂ. ಪಾದ]

ಪಾಯ್ಕೆ (ನಾ). ಮೊಳಕೆ : ಬೀಜದ ಬೆಳ್ಳಿಳ್ಳಿಯು ಹಳುಕುಗಳನ್ನು ಸೀಳಿದರೆ ಮೊಳಕೆ ಬಂದಿರುವುದು ಚೆನ್ನಾಗಿ ಕಾಣಿಸುತ್ತದೆ. ಅಂತಹ ಪಾಯಿಗಳನ್ನು ೪–೫ ಅಂಗುಲ ದೂರಕ್ಕೊಂದಿರುವಂತೆ ನೆಡಬೇಕು (ಹಡಪ. ೫೬). [?].

ಪಾಯಿಂಟ್ 'ಪಾಯಿಂಟು' ನೋ.

ಪಾಯಿಂಟು, ಪಯಿಂಟು, ಪಾಯಿಂಟ್, ಪೈಂಟು (ನಾ). ೧. ವಿಷಯ; ಅಂಶ : ಈ ಕೆಳಗೆ ವಿವರಿಸಿರುವ ಪಾಯಿಂಟುಗಳನ್ನು ವಿಚಾರಿಸಿ ಅವುಗಳನ್ನು ನೋಟು ಮಾಡಿಕೊಳ್ಳಬೇಕು (ಗ್ರಾಪ್ರಾಕ. ೫೬); ಇಲ್ಲಿರೋ ಪಾಯಿಂಟಿನ್ಮೆ ನೋಡು (ಎಪ್ರುಳ. ೫೯). **ಪಯಿಂಟು** : ೧. ನನಗೂ ನಿಮ್ಮ ಪಯಿಂಟು ಸಮನೆಂದೇ ಕಾಣಿಸುತ್ತದೆ (ಪ್ರಾಕಾಪ್ರ. ೨೨೦). **ಪಾಯಿಂಟ್** : ೨. ಮುದ್ರಣದಲ್ಲಿ ಅಚ್ಚಿನ ಮೊಳೆಗಳ ಅಳತೆಯ ಒಂದು ಮಾನ : ಅಚ್ಚುಮೊಳೆಗಳ ತಯಾರಿಕೆ ಮತ್ತು ಇತರ ಕೆಲವು ಮುದ್ರಣಕ್ಷೇತ್ರಗಳಲ್ಲಿ ಪಾಯಿಂಟ್ ಎಂಬ ಕ್ರಮಬದ್ಧ ಅಳತೆಯನ್ನು ಬಳಕೆಯಲ್ಲಿದೆ. ಪಾಯಿಂಟ್ ಎಂದರೆ ೧/೭೨ ಅಂಗುಲ (ಮುದ್ರಣ. ೦೨). **ಪೈಂಟು** : ೧. ಹೌದು ಅಮ್ಮ, ನೀವೆನ್ನುವ ಪೈಂಟು ಸರಿ (ಕೃಕೃಹೂ. ೯೯). [← ಇಂ. Point]

ಪಾಯಿಕ (ನಾ). ಕಾಲಾಳು ; ಪದಾತಿ. [ಸಂ.]

ಪಾಯಿಕು 'ಪಾಯ್ಕು೨' ನೋ.

ಪಾಯಿಖಾನೆ 'ಪಾಯಖಾನೆ' ನೋ.

ಪಾಯಿಜಾಮ 'ಪಾಯಜಾಮ' ನೋ.

ಪಾಯಿಜಾಮೆ 'ಪಾಯಜಾಮ' ನೋ.

ಪಾಯಿತರ್ 'ಪಾಯ್ತರ್' ನೋ.

ಪಾಯಿದಳ 'ಪಾಯದಳ' ನೋ.

ಪಾಯಿದಟಿ 'ಪಾಯದಟಿ' ನೋ.

ಪಾಯಿದೆ 'ಫಾಯಿದೆ' ನೋ.

ಪಾಯಿನಿ (ನಾ). ಒಂದು ಬಗೆಯ ತಂತೀವಾದ್ಯ : ವಿಪಂಚಿಕೆ ಚಿತ್ರಿಕೆ . . . ಪಾಯಿನೀ ರಾಗಮಾಲಿನೀ ಕಾಲಕೇಯೆಂಬ ಮೂಱಪತ್ತುಮೂಜು ತಂತ್ರಿ ವಾದ್ಯಂಗಳಲ್ಲಿ (ಎಪೀಗ. ೨೩೬). [?]

ಪಾಯಿಪೋಸು 'ಪಾಪೋಸು' ನೋ.

ಪಾಯಿಲಿ 'ಪಾಯಲಿ' ನೋ.

ಪಾಯಿಲೆ 'ಪಾಯಲಿ' ನೋ.

ಪಾಯಿವಟ್ಟ 'ಪಾಯವಟ್ಟ' ನೋ.

ಪಾಯಿಸು, ಪಾಯ್ಸು, ಹಾಯಿಸು, ಹಾಯ್ಸು, ಹಾಯ್ಕಿ (ಕ್ರಿ). ೧. ಹಾರುವಂತೆ ಮಾಡು : ನೆಗೆಯುವಂತೆ ಮಾಡು : (೪). ೨. ಹರಿಯುವಂತೆ ಮಾಡು : ಪ್ರವಹಿಸುವಂತೆ ಮಾಡು : (೪). ೩. ದಾಟುವಂತೆ ಮಾಡು ; ದಾಟಿಸು : ತೊಜೀಯ ತಡಿಯೊಳೋತಮುಂ ನಡೆಯಿಸುವ ಮಶ್ವಗಂಧಿಯಂ ಕಂಡೆಮ್ಮನೀ ತೊಜೀಯಂ ಪಾಯಿಸೆಬುದುಂ (ಶಂಕಥಾ. ೦–೬೬ ಕ) ; ಮುನಿದು ಮಸಕವಂ ಪುಗ್ಗಿಸಲ್ಕುನ್ಮಂಬ್ಧೀಶ್ವರನಂ ಹಿಮ್ಮೂಡ್ರಿಯಂ ಪಾಯಿಸ(ಲ) (ಲಾ?) ದರಿಸುವಂ . . . ಕುಂಧರಾವಂ (ಕಶಂ. ೬–೬) . ೪. ಮೇಲೆ ಬೀಳುವಂತೆ ಮಾಡು ; ನುಗ್ಗಿಸು : ಹೆಂಜಾರ ಸಮರದೊಳ್ ಮುರಾರಿ ಮಾರನಾಗಿ ಗುದುರೆಯು ಪಾಯಿಸಿ ಕಾಸ್ಮಂಯನಿಜಿಪುಂ (ಎಕ. III. ಪಂಚಕ. ೦೨೨–೦೩ ; ಸು. ೨೬೬ ?) ; ಮುಂ ಪೃಸಿದಪನಿಂತೆ ಪಾಯಿಸಿದನಿಂತ್ರ ನೊಳಾದಿನೆರೇಂದ್ರರೆಲ್ಲರಂ, (ಪಂಪಭಾ. ೫–೬೨) ; ನೂರುಕುವಿಭಸಂತತಿ ಪಾಯಿಸುವಶ್ವವೃಂದಮುರ್ವಿಸೆ ಕವಿತರ್ವರಾತಿಚತುರಂಗಪತಾಕಿನಿಯಂ ಮುಕುಂದನೀಕ್ಷಿಸಿ ಮುರಿದಿಚ್ಛೆನಾ ಪಡೆಗೆ ಮಾರ್ವಡೆಯಂ (ಜಗಂ. ೦೪–೧೧);

೫. ಒಳಗಾಗುವಂತೆ ಮಾಡು ; ಒಳಗಾಗಿಸು : ಲೇಸಲ್ಲದ ಸುಖಕ್ಕೆ ಪಾಯಿಸಿ ನೋಯಿಸುವಿಂದ್ರಿಯಂಗಳುಮಂ (ರರ್ಮಾಮ್ಯ. ೯-೨೩). ೬. ಹೋಗುವಂತೆ ಮಾಡು; ಚಲಿಸುವಂತೆ ಮಾಡು; ಮುನ್ನಡೆಸು : ಪೊಳೆವ ಬಾಳುಳ್ಕಂಗಳಂ ಪೋಲೆ ಪಾಯಿಸಲೆಂದಿರ್ದಳವಂ ಪೊದಟ್ಟಿಸೆಯೆ ಚಕ್ರಾರಾವಂ (ಅದಿಪು. ೦೪-೦೦೦); ಬೆಲಗಸೆ ತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರಿ ಬಚ್ಚಲ ಪರಿನೀರಿನೊಳ್ ಪರಿಯ ಲೋಳಿಯಿಸಲ್ ಪಱಿಗೋಲನಿಕ್ಕಿ ಪಾಯಿಸಲ್[ಪಾಠಾಂ. ಪಾಯ್ಸಲೆ] ನೆಲೆಯೆಂದು . . . ಬಗೆದುದಂದು ಜನಂ ಘನಚಂದ್ರಿಕಾಂಬುವಂ (ಅಪಪು ೬-೪೫). ಪಾಯ್ಸು : ೪. ಭೀಮಯ್ಯನ ಮಗಂ ಪೆರ್ಗ್ಗಡೆ ಬೆಣಾಯ್ಯಂ ಗಂಗರಾನೆಯ ಕುಂಭಸ್ಥಳಕ್ಕೆ ಕುದುರೆಯಂ ಪಾಯ್ಸಿ ಸತ್ತೊಡೆ (ಎಕ. XII, ಮದ್ಯಗಿ. ೭೦-೯; ಸು. ೮೭೦). ೭. ಸೇರಿಸಿಕೊಳ್ಳು ; ಕೂಡಿಸಿಕೊಳ್ಳು : ವದನಂ ಗೆಲವಿಂ ವಿಧುಬಿಂಬದ ಕಳೆಗಳನೊಳಗೆ ಪಾಯ್ಸಿ ಕೊಂಡುದೆನಲ್ ಕುಂದದ ಕಾಂತಿಯಿನಾ ಕಾಂತೆಯ ರದನಾವಳಿಯೇಂ ಕರಂ ತಳತ್ತಳಿಸಿದುದೋ (ಪುಸ್ಪಪು. ೩-೪೬). ಹಾಯಿಸು : ೨. ಆ ಉಪೇಂದ್ರಂಗಾದ ಶೇಷವನೀ ವಿಧಾತ್ರನು ಧರೆಗೆ ಹಾಯಿಸಲೀ ವಿಧದಿ ದಧಿ ಕಡಲು ಪುಟ್ಟಿದುದು (ಸಂಭಪ. ೬-೦೦) ; ನೆಟ್ಟ ಬೀ ಕ್ಕಾಗಲಿ ಪೈರಿಗಾಗಲಿ ನೀರು ಹಾಯಿಸಬೇಕು (ಕರಪ. ೬೭); ಬುದ್ಧಿವಂತಮನುಷ್ಯ ಕಾಲುವೆ ತೋಡಿ. ಗದ್ದೆ ತೋಟಗಳಿಗೆ ನೀರು ಹಾಯಿಸಿ ಗಿಡ ಮರಗಳನ್ನು ಬೆಳೆಯಿಸುತ್ತಾ ಬಂದ (ನವರಿ. ೪). ೩. ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ ನಾ ನಿನ್ನ ಹಾಯಿಸಿಕೊಟ್ಟಿಹೆನೆಂದನು (ಕೂನ್ಯಸಂ. ೦೨೬-೩೭) ; ತೊರೆಯಾರೆರೆಯಾ . . . ಹೊತ್ತ ಹಿಂಗಿಸಿ ಹಾಯಿಸೆನ್ನ (ಗಿಳಿವಿಂ. ೫೫-೦೫) ; ಒಕ್ಕಲಿಗನು . . . ದನಗಳನ್ನು ಬಿಚ್ಚಿ. ಹೊಡೆದು ಕಿಚ್ಚು ಹಾಯಿಸುವನು (ಕನ್ನವಾ. ೦೬೬). ೪. ಈಯೊಳ್ಳಿಗನನೆಡಕಿಕ್ಕಿ ಹಾಯಿಸು ಕಲ್ಲೆಯಲಿ ಮುರಿನೂಕು ನಡೆ ಭೂಪತಿಯ ಸಮ್ಮುಖಕೆ (ಕುಪ್ಯಾಕ್ರೋ. ೨-೩೪) ; ಹೀಗೆ ತಾವೇ ಮೋಟಾರು ಹಾಯಿಸಿ ಕೊಲ್ಲುವದಾದರೆ ನಮ್ಮ ಕಾವಲುಯೇತಕ್ಕೆ ? (ಪ್ರಜಸ. ೭೬). ೮. ಬರುವಂತೆ ಮಾಡು : ತರು : ಆ ದಿವಸದ ಕನ್ನಡಕವಿಗಳೆಲ್ಲ . . . ಭಾರತದ ಇತರ ಭಾಷೆಗಳ ಸಾರವನ್ನು ಕನ್ನಡಕ್ಕೆ ಹಾಯಿಸಿದವರು (ರಾಮಾಂ. ೯೩). ಹಾಯ್ಸು : ೪. ಮುಂಗಡೆಗೆ ಮಾವಂತರಾ ಮಾತುಗವಂ ತವೆ ಹಾಯ್ಸಿ ನೋಡುತ ಲಿಂಗವಂತನ ಬರವಿಗವರುಗಳಡ್ಡ ಗಟ್ಟಿರಲು (ಬಸಪು. ೨೦-೩೯) ; ಹಾಯ್ಸು ರಥವನು ಭೀಮಸೇನನ ರಥದ ಮುಂಗುಡಿಗೆ (ಕುಪ್ಯಾಕ. ೨೦-೨೫). ಹಾಸ್ಸು : ೯. ದಾಟು ; ಹೋಗು : ಗಾಣಿ ಹುಬ್ಬುಗುಟಿಕ್ಕಿದಳು. ಕಾವಲುಗಾರನ ಮೇಲೆ ಹಾಸಿ ಹೋಯಿತು (ಜಮಾಸ್ಯಾ. ೩೪). [ಪಾಯ್ಸ್ + — ಇಸ್ಸು]

ಪಾಯು (ನಾ). ಐದು ಕರ್ಮೇಂದ್ರಿಯಗಳಲ್ಲಿ ಒಂದು ; ನವದ್ವಾರಗಳಲ್ಲಿ ಒಂದು ; ಮಲದ್ವಾರ : ಗುದ : "ಗುದಃ, ಪಾಯುಃ, ಅಪಾನಂ—ಈ ೩ ಗುದಂ" (ಹಲಾಯು. ೮೫-೩೫೯) ; ಏಳನೆಯ ತಿಂಗಳಿಗೆ ಪಾಯು ಮೇಢ್ರಂ ಯೋನಿಯು ಉದಯಿಸುಗು (ಲಕಿಪಂ. ೩೯-೩೫) ; ಪ್ರಾಣ ಮಾರುತಂ ನಾಸಿಕಂ ಗಂಧ ಪಾಯುಗಳೈದು ಭೂಮಿ ಪಂಚಕವೆನಿಪವು (ವೀಶೈಪು. ೬-೩-೦೨) ; ವಾಕ್, ಪಾಣಿ, ಪಾದ, ಪಾಯು, ಉಪಸ್ಥ—ಈ ಐದು ಕರ್ಮೇಂದ್ರಿಯಗಳು (ಹಿಂದಸಾ. ೨೩೬). [ಸಂ.]

ಪಾಯ್ಕು, ಹಾಕು, ಹಾಯಿಕು, ಹಾಯಿಕ್ಕು, ಹಾಯ್ಕು (ಕ್ರಿ). ೧. ಕಳಚು : ತೆಗೆ ; ಬಿಚ್ಚು : ಅವರ್ . . . ಅಸಗವೊಳಗೆ ಬಂದು ತಮ್ಮ ತಮ್ಮ ಸೀರೆಗಳು ಪಾಯ್ಕಲ್ಕಾ ತಿಱುಕುಱುಪಿತೊಂಡಂ ಹಸಾದವೆನುತ್ತವಂ ನಿರ್ಮಳಮಪ್ಪಂತೊಗೆಯಲುದ್ಯುತನಾದಂ (ಶ್ರೀಪುಪಿ. ೫೫-೯೫) ; ಹಱಿದ ವಿವಿಧವಸ್ತ್ರಂಗಳಂ ಪಾಯ್ಕಿ ಪೊಸತಾದ ವಸ್ತ್ರವನಲಂಕರಿಸಿಕೊಂಬಂದದಿಂ ಕರ್ಮದಿಂ ದಗ್ಧದೇಹವನೆ ಬಿಟ್ಟು (ವೀಶೈಪು. ೬-೬-೫೩). ಹಾಕು : ೨. ಇಡು ; ಇರಿಸು : ಅಸುವಿಲ್ಲದಂತಿರ್ದೊಡಿವು ಸತ್ತುವೆಂದು ಭಾವಿಸಿ ಬಱಿದೆ ನೆಲಕೆ ಹಾಕದೆ ಮಾಣಂ (ಸಮ್ಯಕಾ. ೨-೩೬) ; ನಾನು ಅವರ ಮನೆಗೆ ಕಾಲು ಹಾಕುವುದಿಲ್ಲ (ರೂಢಿ). ೩. ಧರಿಸು ; ತೊಡು : ಬೇಸಗೆಯಲ್ಲಿ ಹತ್ತಿಬಟ್ಟೆ ಹಾಕಬೇಕು (ರೂಢಿ). ೪. ಸ್ಥಾಪಿಸು : 'ಅಂಗಡಿ ಹಾಕು' ಪರಾ. ೫. ನೆಡು ; ಬಿತ್ತನೆ ಮಾಡು : ನಮ್ಮ ಮನೆಯ ಮುಂದೆ ಒಂದು ಮಲ್ಲಿಗೆಯ ಬಳ್ಳಿಯನ್ನು ಹಾಕಿದ್ದೇನೆ (ರೂಢಿ). ೬. ಸುರಿ ; ಹೊಯ್ಯು ; ಎರೆ : ಗಿಡಗಳಿಗೆ ದಿನಾಲು ನೀರು ಹಾಕಬೇಕು (ರೂಢಿ). ೭. ತೂರು ; ಎಸೆ ; ಬಿಸುಡು : ಒಡಲು ದಿಟವೆಂದಡೆ ಅದು ಒಡೆಯಹಾಕುವ ಕುಂಭ (ಕೋಲಶಾಂ. ೫-೦೩); ಉದಿತದಿನೇಶನೆಂಬ ಮಣಿಕಂದುಕಮಂ ಧರೆಯೆಂಬ ಕಾಂತೆ ತನ್ನುದಯ ಗಿರೀಂದ್ರಮೆಂಬ ಕರದಿಂದದು ಹಾಕಿ ತದಸ್ತಶೈಲಮೆಂಬೊದವಿದ ಹಸ್ತದಿಂದೆ ಪಿಡಿದಲ್ಲಿ ಪುರಾಂಗನೆ ಮಧ್ಯದೊಳ್ ವಿನೋದದೆ ಪಿಡಿಯಲ್ಕದಂ ಕರಮನೆತ್ತಿದವೊಲ್ ಮೆಱೆಗುಂ ನೃಪಾಲಯಂ (ಬಾಧಪು. ೦-೦೫೫). ೮. ಪ್ರಸವಿಸು ; ಈಯು : ಅವತೋಕಾ, ಸ್ರವದ್ಗರ್ಭಾ— ೨ . . . ಕಂಡು ಹಾಕಿದ ಹಸುವು (ಸಿದ್ಧಾಂತಿ. ೨೯೪) ; ಈ ದಿನ ನಮ್ಮ ಮನೆಯ ಹಸು ಕರು ಹಾಕಿತು (ರೂಢಿ). ೯. ಗುರುತಿಸು ; ರೇಖಿಸು ಬರೆ : ಈ ಚಿತ್ರದಲ್ಲಿ ಹಾಕಿರುವ ಗೆರೆಗಳು ಕಂಡೂ ಕಾಣದಂತಿವೆ (ರೂಢಿ). ೧೦. ಆರುಭಿಸು ; ತೊಡಗು : 'ಕೈಹಾಕು' ಪರಾ. ೧೧. ತೊಡಗಿಸು ; ವಿನಿಯೋಗಿಸು : ದ್ರವ್ಯ ಗಳಿಸುವುದಕ್ಕೆ ಎಂದಿಗೂ ಮನಸು ಹಾಕುತ್ತಿದ್ದಿಲ್ಲ (ಮುಂಬಯಿ. ೫-೨೦೬); ಈ ವ್ಯಾಪಾರಕ್ಕೆ ಬಂಡವಾಳವನ್ನು ಹಾಕುವುದೇ ತುಂದಾ ಕಷ್ಟದ ಕೆಲಸ (ರೂಢಿ). ೧೨. ಸೇರಿಸು : ನಮ್ಮ ಹುಡುಗನನ್ನು ಸ್ಕೂಲಿಗೆ ಹಾಕಬೇಕು (ರೂಢಿ). ೧೩. ನೀಡು ; ಬಡಿಸು : ನೂಕುವವನು ಹಾಕನು, ಬೋಕಿಯವನು ಕೊಡನು (ಗಾರ) ; ನನಗೆ ಊಟ ಹಾಕು (ರೂಢಿ). ೧೪. ಹೊಡೆ ; ಪೆಟ್ಟು ಕೊಡು ; ಬಡಿ : ಅವನಿಗೆ ಎರಡು ಹಾಕು (ರೂಢಿ). ೧೫. ಮಾಡು ; ರಚಿಸು : ಜಂಗಮವು ಬೇಡಿದಡೆ ಹೊಸವಸ್ತ್ರಂಗಳನೆ ಕೊಡುವಂ ನಿರಂತರ ಲಿಂಗಸಂಪದವೊದಗಿ ಹಾಕಿದ ಸೀರೆಗಳನವರ್ಗೆ (ಬಸಪು. ೨೦-೩೫) ; ಶ್ರೀಮತು ಕರಿಯಪಗಳ ಸಿಸ್ಯತಮ್ಮಯನು ಮಾತಾಪಿತೃಗಳಿಗೆ ಪುಣ್ಯವಾಗಲಿಯೆಂದು ಹಾಕಿದ ಬನಕ್ಕೆ ಮಂಗಳ (ಮೈಆರಿ. ೦೯೨೯, ೨೬-೪; ೯). ೧೬. ತ್ಯಜಿಸು ; ತೊರೆ : ಆ ಕಲ್ಪದೊಳಗುಳ್ಳನೇಕಸುಖಂಗಳ ಸಾಕಲ್ಯಮಾಗನುಭವಿಸಿ ನಾಕೋದ್ಭವನು ನಿಜಾಯುವಿನಂತ್ಯದೊಳ್ ಹಾಕಿದ ನಿಜದೇಹವನು (ಅಂಜಪ. ೯-೨೩೯). ೧೭. ಹಚ್ಚು ; ಲೇಪಿಸು : ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕ್ಕೆ ಗುಣ (ಗಾರ). ೧೮. ಹೇರು ; ಹೊರಿಸು : ನಿಶ್ಚಯಿಸಿದ ದರದಂತೆ ಅಡತಿ ಮಜೂರಿ ಮುಂತಾದುವುಗಳನ್ನು ಹಾಕಲು ತೊಂದರೆಯಾದೀತು (ಮುಂಬಪ್ಯಾ. ೪). ೧೯. ಹಾಸು : ಹೊಸ ಕೂಟವಱಿತು ಹಾಸಿಗೆಯನು ಹಾಕುವ ಶಿಶುವು ಏನೆ ಅಮ್ಮ (ಪುರಂದ. ೨-೮೩-೩). ೨೦. ಒಟ್ಟು ; ಗಿಡಿ : ಆಳಿಯರ್ ಬೀಸುವ ಚಮರಾಲವಟ್ಟತಣ್ಗಾಳಿಯಿಂದವಳೊಡಲ್ಗಿಚ್ಚು ತಾಳಿಯ ಹಾಕಿ ಪೆರ್ಮೊಱಗೊಂಡ ತೆಱದಿ ಛಡಾಳಿಸಿತುಷ್ಣ ಸಂಘಟಿಸಿ (ಮೋಹತ. ೨೬-೬೨). ಹಾಯಿಕು : ೧. ಘಾಯವಡೆದಾನೆಗಳು ಗುಳವನು ಹಾಯಿಕಲು ನೆಲಕುರುಳಿದವು ವಾನಾಯುಜಂಗಳು ಬಿಗುಹಬಿಡೆ ದೊಪ್ಪೆಂದವಾಚೆಯಲಿ (ಕುಪ್ಯಾಕ. ೫-೪). ೬. ಪುಳಕಜಲ ಪುಬ್ಬರಿಸೆ ಕುಸುಮಾಂಜಳಿಯನಂಘ್ರಿದ್ವಯಕೆ ಹಾಯಿಕಿ ನಳಿನಭವ

ಮೈಯಿಕ್ಕಿದನು (ಕುಪ್ಯಾಳ. ೬-೨೦). ೭. ಖಡುಗ ಕೊಂತವ ನಧಕೆ ಹಾಯಿಕಿ ಹಿಡಿವ ಸುಭಟರ ಭುಜದ ಹೊಯ್ಲಿನ ಕಡುಮನದ ರಣದವಕಿಗರ ಸೌರಂಭ ರಂಜಿಸಿತು (ಕುಪ್ಯಾಪ್ರೋ. ೯.೨೬) ; ಇಡುವ ಡೆಂಕಣಿ ಹಾಯಿಕುವ ಗುಂಡು ಮೇಲುಱ್ ಕೆಡಹುವ ತೊಲೆ ಪತ್ತಿದವರ ಬಡಿವ ಬಲ್ಗುದಿಗೆ (ಕುರಾಸಾಂ. ೩೭-೩೩) ; ತಂದು ನಾ ಬಡಕುಮಾರಕನನು ಕಡಲೊಳಗಂದೆ ಹಾಯಿಕಿ ಮರ್ದಿಸಿದೆ (ಪೋಹಕ. ೦೨-೩). ೧೬. ಈ ದುರಾಗ್ರಹ ನಿಲಲಿ ಹಾಯಿಕು ಕೈದುವನು (ಕುಪ್ಯಾಪ್ರೋ. ೦೬-೩೯). ೨೧. ಬೀಸು : ಸಿಲುಕಿದನು ಘಡ ಸ್ವಾಮಿದ್ರೋಹಿಗೆ ಬಲೆಯ ಹಾಯಿಕೊ ಗಂಡು ಮೀನಗ್ಗಳೆಯ ಗಾಣವ ಕೊಳ್ಳವೆನುತೌಕಿದರು ಬಳಸಿನಲಿ (ಕುಪ್ಯಾಳ. ೦೯-೦೯). ೨೨. ಕೆಡೆಯಿಸು ; ಬೀಳಿಸು : ಬಲುಕಣಿಗಳಿವದಿರನು ಕರಿ ಮುಂಕೊಳಿಸಿ ಕೆಡಹಿತು ಯುವನಕೌಸಲಬಲವ ಕೈಕೆಯಮಗಧಭೂಪರ ಕೊಡಹಿ ಹಾಯಿಕಿತು (ಕುಪ್ಯಾಪ್ರೋ. ೩-೨೯). ಹಾಯಿಕ್ಕು : ೨೧. ಮುನಿ ಹಾಯಿಕ್ಕಿದನಲಾ ಬಲೆಯನಕಟಾ ಸಿಕ್ಕಿದಿರಲಾ ಸ್ವಾಮಿದ್ರೋಹರು (ಕುಪ್ಯಾಸ. ೨-೦೯). ಹಾಯ್ಕು : ೨. ಹೃದಯವಲ್ಲಭ ಕನ್ನಡಿಯ ಮಧ್ಯದಲಿ ಉದ್ದಿನ ಬೀಜವನು ಹಾಯ್ಕುವಡೆ ಬೀಳುವುದೆನಿತು ತಳುವಿಂತನಿತು ಮಾತ್ರದಲಿ . . . ಶಿವನಂ ಕೀರ್ತಿಸಾ (ಬಸಪು. ೪೨-೩೫) ; ಗಗನದಲಿ ರಥ ಯೋಜನಾಂತಕೆ ಚಿಗಿದು ಧರಣಿಯ ಮೇಲೆ ಬೀಳಲು ನಗುತ ಕರಣವ ಹಾಯ್ಕಿ ಮಂಡಿಯೊಳಿರ್ದನಾ ದ್ರೋಣ (ಕುಪ್ಯಾಪ್ರೋ. ೦೩-೦೯). ೩. ಒಮ್ಮಾರು ಕೇಶಪಾಶವ ಮಾಡಿ ತ್ರಿಭಾಗೆಯ ಘಮ್ಮನೆ ನಿಡುಜಡೆವೆಣೆದು ಕಮ್ಮಲರ್ಗಳ ಸೂಡಿ ಸಿರಿಮುಡಿಯಲಿ ವೀರಚಿಮ್ಮುರಿಯನು ಹಾಯ್ಕಿದನು (ಪೋಹಕ. ೩೩-೩೯) ; ತಲೆಗಳ ಕೋದು ಕೊರಳೊಳಗೆ ಹಾಯ್ಕಿ . . . ಪೆರ್ಮರುಳೊಂದಿರುತ್ತಿರಲ್ ಕಂಡು ಭಯಭಕ್ತಿಯಿಂ ಚರಣಕೆಱಗಿದುದೊಂದು ಪುಲ್ಮರುಳ್ (ಪಬಪು. ೪೦-೨೬). ೪. ವೈಶ್ಯಕುಲಸಂಭವರು ಹಾಯ್ಕಿದರಲ್ಲಿ [ಪಾಠಾಂ. ಹೊಯಿಸಿದರು] ಗೂಡಾರವನು (ಪಳಪ. ೩-೪೪). ೭. ಸದಮದ ಭರಿಕೈಯೊಳಗೆ ಈರೇಳುಭುವನವನು ಒದಱಿ ಹಾಯ್ಕಿ ತಾನೆ ನಿಂದುದಲಾ (ಪನ್ನಪ. ಕ. ೩೯೬-೦೩೩೨) ; ಪಾಕವೆಲ್ಲವನಕ್ಕಟ ವೃಥಾಪಾಕವಂ ಮಾಡಿದನಿವಂ ನಮಗೇಕೆನುತ್ತವೆ ತನಯನಂ ಕೊಂದೆಳೆದು ಹಾಯ್ಕಿದಳು (ಬಸಪು. ೨೯-೩೯) ; ಕಲಿಭೀಮಂ . . . ಶರ ಧನುವ ಹಾಯ್ಕಿದನೆ ಧೊಪ್ಪನೆ ಧರೆಗೆ ಧುಮ್ಮಿಕ್ಕಿದನು (ಕುಪ್ಯಾಳ. ೦೨-೨೬) ; ಹೆಗ್ಗಿರಿಯೊಂದ ಕಿತ್ತೆತ್ತಿ . . . ತಂದನು ಗಂಡುಗಲಿ ಹಾಯ್ಕಿದರೆ ಮುಳುಗಿತು ತಳದ ಪರಿಯಂತ (ಕೌಶಿಂ. ೦೬-೭) ; ಕರ್ಮಾಂಗಮಾಗಿರ್ದ ಪಿಂಡಮಂ ತೆಗೆದು ಮಡುವಿನೊಳೆ ಹಾಯ್ಕೆಂದೊಡುದ್ದಂಡದಿಂದೆತ್ತಿ ಬೀದಿಗೆ ಬಿಸುಡಲ್ (ಕೈಪುಭಾ. ೦೦-೩೦). ೨೧. ಹತ್ತಿ ತದ್ಗಿರಿಶಿಖರವನು ಮರಮೊತ್ತದಲಿ ಬಲೆಗಳನು ಹಾಯ್ಕಿದರೊತ್ತಿ ಸೋಹಿದರು (ಪಳಪ. ೨-೦೩). ೨೨. ಭುಜಗ ಸಮೂಹವ ಖಗರಾಜ ಹೊಕ್ಕಂತೆ ಕುಜನರ ಕುಟ್ಟಿ ಹಾಯ್ಕಿದನು (ಪೋಹಕ. ೩೩.೨೦). ೨೩. ತೊಡಿಸು : ದಂತಿಗಳ ಹೆಗಲಲಿ ನಿಡುನೊಗನ ಕಟ್ಟಿದರು ಕಿವಿಯಲಿ ಕೀಲುಗಳ ಸರಿಸಿ ಜಡಿವ ಗುಳವನು ಹಾಯ್ಕಿ ಬೀಸಿದರೊಡನೊಡನೆ ಹಕ್ಕರಿಕೆ ಜೊಂಬಲಡಸಿ ಗಾಲಿಯ ಬಿಗಿದು (ಕುಪ್ಯಾಪ್ರೋ.೬-೪೩) ; ನೃಪ ನಿವಹದಲಿ ನೀ ಹಾಯ್ಕು ಮನವಿದ್ದವನ ಕೊರಳಿಗೆನುತ್ತ ಕೊಟ್ಟನು ಪುಷ್ಪ ಮಾಲಿಕೆಯ (ಪಳಪ. ೩-೩೭) ; ಅಂಗಲಾಚುತ್ತವನ ತಾಯ್ತಂದೆಗಳ್ . . . ಅಳುತಿರೆ ಚಿಕ್ಕಲಿಂಗಣ್ಣನಾ ಲಿಂಗಮಂ ಕಂಡು ತುದವನ ಕೊರಲಿಂಗೆ ಹಾಯ್ಕಲೊಡನೆ ಲಿಂಗಣ್ಣನಸು ಬರಲ್ (ಪಬಪು. ೬-೩೦). ೨೪. ಕೊಡು : ಕುಡಿತೆಯೆರಡಱೊಳರ್ಘ್ಯಜಲವನು ಹಿಡಿದು ಹಾಯ್ಕುವ ಸಮಯದಲಿ ತಲೆ ನಡುವೆ ಬಿದ್ದುದು ಅರ್ಘ್ಯಜಲ ನವರಕ್ತಮಯವಾಗೆ (ಕುಪ್ಯಾಪ್ರೋ. ೦೯-೪೩); ಕುಚದ ವೃತ್ತತೆಯ ಕೊಟ್ಟಳು ಕೋಕಪಕ್ಷಿಗೆ ಕಚದ ಭಾರವ ಕೊಟ್ಟು ನವಿಲ್ಗೆ ವಚನ ಸುಸ್ವರ ತನಗೇಕೆಂದು ಶುಕಪಿಕನಿಚಯಕ್ಕೆ ಹಂಚಿ ಹಾಯ್ಕಿದಳು (ಪೋಹಕ. ೯-೩೦). ೨೫. ಗುರಿಪಡಿಸು ; ಒಳಗಾಗಿಸು : ಕಾಮನ ಸೂನು ಬಾಣನ ಮಗಳಿಗೆ ಹೊಗಲವರ್ ಕಂಡು ವಿಗಡನ ಹಿಡಿದು ಸಂಕಲೆಗೆ ಹಾಯ್ಕಿದರು (ಪೋಹಕ. ೩೬-೩೦). ೨೬. ಉಂಟುಮಾಡು : ತೀವ್ರತೇಜವ ಹಾಯ್ಕೆ ಜನಿಯಿಸಿತಾ ವಿಧಾತೃವಿಹಿತವ ತಾಳ್ದುಱ್ಯಿಯಾ ವಸುಂಧರೆಯೊಳಗೆ ಬಡಬಾನಳವು ಮಸ್ಸಹವು (ಸಂಭಪ. ೨೩-೬೨). ೨೭. ಹೊಂದಿಸು ; ಜೋಡಿಸು ; ಅಳವಡಿಸು : ಕರಿಯುರವಣಿಸಿ ಬಂದು ದೀರ್ಘಕರಾಗ್ರದಿಂ ಪಿಡಿದು ಭರದೊಳುದ್ದಕೆ ಹಾಯ್ಕಿ ಕೊಂಬುಗಳೆರಡ ನೆಗ್ಗಲು (ಬಸಪು. ೨೨-೦೦) ; ನವಹೆಮಮಂದದ ಹಳವಿಗೆಯ ತುದಿವಲಗೆಯಲಿ ಹಾಯ್ಕಿದರು ಪನ್ನಗನ (ಕುಪ್ಯಾಪ್ರೋ.೦೦-೪೦); ಸೂಸಿದರ್ ಕೆಂಡಮಂ ಬಲ್ಗವಣೆಲ್ಗಳಂ ಬೀಸಿದರ್ . . . ಬೀರ್ವಗ್ಗಮಂ ಹಾಯ್ಕಿ ಸೇದಿದರ್ ಮರುಳ್ಗೈಗಳಿಂ ತೂಂತರು (ಪಬಪು. ೪೨-೩೬). ೨೮. ಪಕ್ಕಕ್ಕೆ ತಳ್ಳು ; ಸರಿಸು : ಹಿಡಿದ ಬಿಡುವೊಬ್ಬುಳಿಗೆ ತಹ ಬಲನೆಡಕೆ ಹಾಯ್ಕುವ ಸುಪ್ರತೀಕಗಜ (ಕುಪ್ಯಾಪ್ರೋ. ೩-೦೦). ೨೯. ಇರಿ ; ತಿವಿ ; ಗುಮ್ಮು : ಹಾವಿನಂತಿರೆ ನಿಲುಕಿದರು ಸೂಕರನವೊಲು ಕೋಡೆತ್ತಿ ಹಾಯ್ಕಿದರು (ಕುಪ್ಯಾರೀ. ೪-೩೩). ೩೦. ಬಿಡು : ರಕ್ಕಸಿಯ ಜೀವವನೊದೆದು ಹಾಯ್ಕು (ಕೊರಂ. ೦-೦೦-೬).

ಹಾಕಿಕೊಳ್ಳು = ೧. ಧರಿಸು ; ತೊಡು : ಹಬ್ಬದ ದಿನ ಹೊಸಬಟ್ಟೆ ಹಾಕಿಕೊಳ್ಳುವುದರಲ್ಲಿ ಮಕ್ಕಳಿಗೆ ತುಂಬಾ ಉತ್ಸಾಹ (ಕೂಡಿ). ೨. ಹೊಂದು ; ವಶಪಡಿಸಿಕೊಳ್ಳು : ಅಣ್ಣನ ಹೆಂಡಿರ ತಮ್ಮ ಹಾಕಿಕೊಂಡು ಕೊಡದಿರಲಾಗಿ ಇದು ಅನ್ಯಾಯವೆಂದು ಅವನ ಕಿಱಿಯ ತಮ್ಮ ತಾ ತೆಕ್ಕೊಂಡ (ಸಗಸಾ. ಕ. ೪೩೪-೬೮). ಹಾಕಿಡು = ಇರಿಸು ; ಇಡು : ನಾಗೊಂದಿಗೆ ಅಥವಾ ಹಲಿಗೆಗಳಲ್ಲಿ ಸಾಮಾನುಗಳನ್ನು ಹಾಕಿಡುವ ಪಾತ್ರೆಗಳನ್ನು ವ್ಯವಸ್ಥಿತವಾಗಿ ಇರಿಸಬೇಕು (ಅಡುಸೌ ೩೨). ಹಾಕಿಯಾಡು, ಹಾಕ್ಯಾಡು = ಹೊಡೆದಾಡು : ಅವನು ಹಾಗೆ ಹೇಳಿದರೆ, ನೀನು ತಕರಾರು ಮಾಡಬೇಕಾಗಿತ್ತು. ಮಹಾರಾಜ ! ನಾನು ಹಾಕಿಯಾಡಿದೆನು. ಆದರೂ ಅವನು ಕೇಳಲಿಲ್ಲ (ಬೀರಬ. ೦೬೬) ; ಗೋಕುಲದೊಳು ಪುಟ್ಟಿ ಆಕಾರವಡಗಿಸಿ ಹೋಕೆತನದಲ್ಲಿ ಹಾಕ್ಯಾಡುತ ಗೊಲ್ಲರ ಕೂಡಲಿ ಬೆಳೆದು (ಪೋಕ್ಷರೀ. ೨೦-೨) ; ಇವು ತಮ್ಮ ಹುಡುಗರದೆ ಅಂತ ರಂಗಣ್ಣರಾಯರು, ಅಲ್ಲ, ತಮ್ಮ ಹುಡುಗರವು ಅಂತ ಯಂಕಣ್ಣರಾಯರು ಹಾಕ್ಯಾಡಿದರು (ಪ್ರಪಾಚಿ. ೪೩). ಹಾಕ್ಯಾಟ = ಬಡಿದಾಟ ; ಗುದ್ದಾಟ : ಯಾರ ಸಂಗಾಟಾದ್ರೂ ಹಾಕ್ಯಾಟ ಗೀಕ್ಯಾಟ ಆಗೇತೇನು ? (ಪ್ರೇಮಾಕ್ರ. ೯); ಮನ್ಯಾಗ ಏನಾರೇ ಹಾಕ್ಯಾಟ ಗೀಕ್ಯಾಟ ಆಗೇತೇನ್ರಿ ? (ಸಂದಹು. ೨೬).

[ಪಾಯ್ಕ್ + - ಕು1]

ಪಾಯ್ಕು2, ಪಾಕು3, ಪಾಯಕು, ಪಾಯಿಕು (ನಾ). ಒಳ್ಳೆಯದು, ಭಲೆ ಎಂಬರ್ಥದ ಕೊಂಡಾಟದ ಒಂದು ನುಡಿ: "ಅರರೆ ಧಣಾ ಭಾಪು ಭಳಿರೇ ಧಿರುರೇ ಮಝು ಪೂತುರೆ ಪಾಯ್ಕು [ಪಾಠಾಂ. ಪಾಕು, ಪಾಯಿಕು] ಚಾಗು ಸಲೆ ಸುಂಪುರೆಯೆನೆ ಕೊಂಡಾಟವ ನುಡಿ" (ಪಾರಂ. ೪೬); ಅನಿಮಿಷಾವಳಿ ಪೂತು ಪಾಯ್ಕೆನೆ ಹೆಣಗಿದರು ಘಟರು (ಕುಪ್ಯಾಪ್ರೋ. ೬-೩೭) ; ಆಯಿತಿದು ಸಮರದಲಿ ಗುರು ಗಾಂಗೇಯ ಕರ್ಣ ದ್ರೌಣಿಗಳ ತಜುವಾಯ ಲೆಕ್ಕಕೆ ಸಂದನೈ ಮಝು ಪೂತು ಪಾಯ್ಕೆನುತ (ಕುಪ್ಯಾಳ. ೨೦-೩೩). ಪಾಕು3 : ಮೇಲಿನ 'ಭಾರನಿ' ಪ್ರಯೋಗದ ಪಾಠಾಂತರವನ್ನು ನೋಡಿ. ಪಾಯಕು : ಸರಿಸ ಸಬಳಿಗೆ ಪೂತು ಪಾಯಕುಯೆಂಬ ಕಳಕಳಿಸೆ . . . ಮಸಗಿದುದೊಂದು ಕಡೆಯಲಿ (ಕುಪ್ಯಾಪ. ೬-೬); ಪೂತು ಪಾಯಕು ಮಝು ಭಾಪು ಭಲರೆಯೆಂದು ಸೂತಸುತರು ಕೊಂಡಾಡೆ (ಕುರಾಸಾಂ. ೦೯-೯೨). ಪಾಯಿಕು : ಪೂತು ಪಾಯಿಕು ತತ್ತ ಹೊತ್ತಿನೊಳಾತುಕೊಂಬವ

ರಾರು (ಶಾಕ್ಕಾರ್ತ್ರೀ ೯-೧೧) : ಅತರೆ ಧಣುಧಣು ಪೊತು ಪಾಲಿಸು ಸರಿಯು ಕಾಣೆನು (ಶುಣ್ಕಳ. ೨೩-೦೭).

ಹಾಯ್ಪಾನೆ 'ಪಾಯಖಾನೆ' ನೋ.

ಹಾಯ್ಪೆ (ನಾ). ಹಾಯುವಿಕೆ : ಹಾಯುವುದು : ಸುಯ್ತಂ. ಸುವ್ತಂಗಳ್ : ಪಾಯ್ತಂ. ಪಾಯ್ತಂಗಳ್ (ಕಜ್ಜಾತು. ೪೩೩ ಕ್ರಿಯೋ).

[ಪಾಯ್₁ + −ತ್ಪೆ]

ಹಾಯ್ತರ್, ಪಾಯಿತರ್ (ಕ್ರಿ). ೧. ಚಿಮ್ಮು : ಸೂಸು : ಪಡ ಪಡವಾಯ್ವ ಮೆಲ್ಲರ್ದಿಗಳಂ ಕರಯುಗ್ಮದಿನೊತ್ತಿ ಕಣ್ಣ ನೀರಡಿಗಡಿಗಂಡ್ಮೆ ಪಾಯ್ತುರೆ (ಆಚಿ. ೬-೦೨೦) : ತಿರುವಾಯೊಳ್ ತೊಟ್ಟು ದಿವ್ಯಾಸ್ತ್ರ ಮನಿಸೆ . . . ಕರ್ನೆತ್ರರಿರ್ವೆಯ್ಯೊಳಂ ಪಾಯ್ತುರೆ (ಕಂಕಾರ. ೦೩-೨೬) ; ಮೂಗಿಂದಂ ಬಾಯಿಂದಂ ಬೇಗಂ ಕನ್ನೆತ್ರರೊಡನೆ ಪಾಯ್ತುರೆ ಕಣ್ಗಳ್ ವೇಗೊಗೆದು ಸೂಸೆ ಹರಿ ಕಡುವೇಗದಿ ಪಿಡಿದೊತ್ತಿ ಕೊಂದು ಬಿಸುಟುಃರ್ದಿರ್ದಂ (ಬಂಹರಿ. ೬-೩೦). ೨. ವೇಗವಾಗಿ ಹರಿ : ಪ್ರವಹಿಸು : ಬಿಟ್ಟಿದ ವೇಗದಿಂ ಪಾಯ್ತು[ಪಾಣಂ. ಪರಿತ]ರ್ದ ನಿರ್ಝರಶೀಕರಂಗಳಿಂ ಮೆಯ್ಗೂಪ್ಯಾಯನವಾಗಿ (ಕಜ್ಜಾತ. ೦೦೬-೬) ; ಪರಿವುಣ್ಣೋತ್ಕಟದಾನಧಾರೆ ಕಟದಿಂ ಪಾಯ್ತರ್ಪುದಂ ಬೆರ್ಚಿ ಪುಷ್ಕರದಿಂ ಶೀಕರನಿರ್ಝರಂ ಸುರಿವುದುಂ . . . ' ಒಪ್ಪೆ ಚಕ್ರಯು ಮನಂಗೊಂಡತ್ಯು ಪುತ್ಪದ್ವಿಪಂ (ಆದಿಪು. ೦೨-೩೮) : ಎಚ್ಚೊಡೆಳೆಯುದಿರೆ ಶರವಿರದುಚ್ಚ ಳಿಸಿದುದೊಡಲನದಲಿ ಕೆನ್ನೀರ್ ಭರದಿಂ ಬಿಚ್ಚನೆ ಪಾಯ್ತುರೆ ಕಣ್ಣರೆ ಮುಚ್ಚುತ್ತುಂ ಮೂರ್ಛೆವೋದುದಲ್ಲಿ ವರಾಹಂ (ಕಲಹಂ. ೯-೨೨). ೩. ಮೇಲೆ ಬೀಳು ; ಆಕ್ರಮಣ ಮಾಡು : ನೆರೆದಿರಿರಾದೊಡಾಟ್ಟುವ ಪೊದಳ್ದರೆಬುಟ್ಟಿದೊಡಂಡುಗೊಳ್ವ ಪಾಯ್ತುರೆ ಮಾಸುಂಡಿತ್ತಿ ಗರ್ಜಿಪ . . . ಬಗೆ ಮೊಳ್ಕಳಮಾದುದು ಸೂಕರೇಂದ್ರನಾ (ಕಲಹಂ.೯-೦೦). ೪. ಬಾಣ ಮೊದಲಾದುವು ದೇಹದೊಳಗೆ ನಾಟಿ ಬರು.—ಹಾದು ಬರು : ಹೊಗರೊಗುವ ಪೊಸಮಸೆಯ ಬಾಣವಸುರನ ತನುವನುಗಿದು ಭರವಸದಿಂದೆ ಪಾಯ್ತಂದು ಧರಣಿಯಂ ಬಗಿದು ಪಾತಾಳವಂ ಪೊಕ್ಕ ಫಣಿಪನ ನಲೆಯಲ್ (ಪಚಿ. ೪೮-೦೦). ೫. ಹೊರಬರು : ಹೊರಬೀಳು : ಕರಾಳೊಕ್ಕುರ್ವಿಯೊಳ್ ಕಪ್ಪಚಿಸೆ ನೆನವಳಿರ್ ಸೂಸೆ ಬಂಬಲ್ಕಿದುಬ್ಬಿ ಪಾಯ್ತುರೆ . . . ಕಾದಿತ್ತು ಖಡ್ಗಿಪ್ರತಾನಂ (ಪಗಪ. ೬-೫೬). ೬. ಮುಂದಮರಿ ; ಮುನ್ನುಗ್ಗು : ಕೆದಱುತುಂ ಕೇಸರವ್ರಾತಮಂ ಮುಂಗಡೆಬೊಳ್ ಪಾಯ್ತುಂದಮುದ್ಯತ್ಪದಃಖಿವಿದಳತ್ಕುಂಜರೇಂದ್ರಂ ಮೃಗೇಂದ್ರಂ (ಕಲಹಂ. ೩-೬೨). **ಹಾಯಿತರ್** : ೬. ಆ ಶೃಂಗಿಯಿಂ ಶೃಂಗಿಯುಂ ಸೋಕುವಂತೆ ಸೋಂಕಿ ಪೋಪಾಗಳಲ್ಲಿ ಮುನಿ ಮುನಿದು ನೀಂ ದೆಸೆಬಿವ್ವಂ ಮರೆಯುಂತೆ ಪಾಯಿತಂದೆಯಪ್ಪುದಜ್ಞ. ಮರೆಯೂಗೆಂದು ಶಾಪಮಂ ಕಾಡೆ (ಕಇ. I, ೨೬-೨೩; 1186). [ಪಾಯ್₁ + ತರ್]

ಹಾಯ್ದಳಿ 'ಪಾಯಿದಳಿ' ನೋ.

ಪಾಯ್ಮ (ನಾ). ಒಂದು ಅಳತೆ : "ಪೌತವಃ, ದ್ರವ್ಯಮಂ, ಪಾಯ್ಮಂ . . . ಮಾನಾರ್ಥಕಂ" (ನಿಘಂ೦೬. ೩೦೦). [ಪಂ.].

ಹಾಯ್ಸು 'ಪಾಯಿಸು' ನೋ.

ಹಾರ್, ಪಾರು₁, ಹಾರು₂ (ಕ್ರಿ). ೧. ನೋಡು ; ಅವಲೋಕಿಸು : ಇನಿತಂ ಪಾರೆನ್ನಂ ತ್ವರಿತಗತಿಕೆ ಪಿಡಿ ಮೇಲುದನೀಗಳ್ ಲಲಿತಲತಿಕೆ (ಕಾದಂಪು. ೧೮೨) : ಗೆರ್ಲದೆಳೆಳ್ ಪಾರ್ದೊಡೆ ಬಯ್ದು ಮೆಯ್ನೆರೆ (ಜಿ)ದ ಪೊಯ್ತಿಂದಂತದಂ ಪೇಳ್ ನೀಡದೆಲೊಡಂ (ಕೋಕೋಚಿ. ೨-೨೬) : ಪೋರ್ದಂ ಪೀರ್ದಂ ಪಾರ್ದಂ ಸವಂತು ಪೀರ್ದಂ . . . ಸೋರ್ದಂ ತಾನೆಂದೊಡಂ ಗುರುಪಧ್ಯಯಿನಿತುಂ (ಪಚಿರ. ೮೦) : ಪೊಲಾನೆಯ್ ಕೆಸಿನ ವೆಣಪನ್ ಮಣ್ ಗಾಡದಿರ್ಕಾರುವರ್ . . . ಬಯಸಿ, ಪಾರ್ದ್ದು ನಲಿದೆಜವ ವರ್ದಿಂಗೆ ಧವಿಯೆರೆಯ ನಿಧಿಪೂಗೆ ಬಿಸುಟಿರ್ಕೆ ಬಯಲೊಳ್ (ಕಂಕಗೂ. ೨-೨೨). ೨. (ಸವಯವನ್ನು) ಎದುರು ನೋಡು ; ನಿರೀಕ್ಷಿಸು ; ಪ್ರತೀಕ್ಷಿಸು : "ಪಾರ್—ಸಪಯಾನ್ವೇಷಣೇ" (ಪಕುರಂ) : ಕಾರ್ಗಾಲದ ಬರವಂ ಚಾದಗೆ ಪಾರ್ವಂತೆ ತನ್ನ ಬರವನೆ ಪಾರುತಿರ್ದ ಧರ್ಮಪುತ್ರನ ಮರುತ್ಸುತನ ಪಾದಮಲಂಗಳಂ ನಿಜಮಕುಟಮರೀಚಿಗಳಿಂದಮರ್ಚಿಸಿ (ಕಂಕಕಾ. ೯-೬೬೮) ; ಕಜ್ಜಮಂ ಕಾಲಮುಂ ಪಾರ್ವ ಕಜ್ಜಗಲಿಗಳುಮಂ ಮಾರ್ಗವಿಶಾಯದ ಬಿದಿರಿಂದ ಲೋಭಿಗಲಿಗಳುಮಂ. . . ನೋಡಿ (ಗದಾಪು. ೯-೬೪೫) ; ನೀರೆಜಿದುಜಕಾರಕ್ಕೆಳೆನೀರಂ ರುಚಿ ವೆರಸು ತೀವಿ ಮನಪಾಲಕರಂ ಪಾರುತ್ತಿರ್ವಂತಿರ್ಪುವು ಸಾರಾಯಫಲಾಳಿ ನಾಳಕೇರಂ ಬನದೊಳ್ (ಗೀಕಳ. ೨-೪೭). ೩. ಬಯಸು ; ಅಪೇಕ್ಷಿಸು ; ಹಾರ್ಯೈಸು : ದೇವನ ದಾನೋದಯಮುಂ ಪಾರ್ವೆಯುಳಿದುರ್ಕೆಜಗುಮೆವೇ (ಆದಿಪು. ೯-೦೦೯) ; ನೀರಸುಣಲ್ಕೆ ಪೋಗಿ ಯಮುನಾನದಿಗೊರ್ಮೆಯೆ ಬೆರ್ಚಿದಂತೆ ನಿಷ್ಕಾರಣವೇಕೆ ನೀಂ ಮಗುಬ್ದು ನಿನ್ನೊಳೆ ಚಿಂತಿಸುತಿರ್ದೆ ಪೇಳ್ಮಿದಂ ಪಾರದೆ ಬೇಱದೊಂದುವಂ (ಕಂಕಕಂ. ೩೬-೦೦) ; ಭಾಸ್ಕರಂ ಕನ್ನಡಿಯ ಬೆಳಗಂ ಪಾರ್ವನೆ (ಬಸ. ೯-೦೨೨) ; ಪೆಱರೊಡವೆಯಂ ಪಾರ್ವನೆ ಸುರರಾಜಂ (ಕಲಹ. ೨೩-೨೨). ೪. ವಿಚಾರ ಮಾಡು ; ಯೋಚಿಸು ; ಆಲೋಚನೆ ಮಾಡು : ಬಿಸನಂಗಳಂ ಸಮಕಟ್ಟುವಮ್ಪೊಡೆ ಸಪ್ತ ವ್ಯಸನಂಗಳಯ್ದರುಮನೊಂದುಂ ಗೆಲ್ದುವಲ್ಲ ರಾಷ್ಟ್ರವ್ಯಸನಮಂ ಬಳ ವ್ಯಸನಮಂ ಪಾರ್ವಮಪ್ಪೊಡವು ಮನ್ನೆವಿಲ್ಲ (ಕಂಕಶಾ. ೬-೬೬೮) ; ಪಾರಲ್ಕೇಂ ಜೀವಿತಕಂಧಾರಣಕಂ ಗವನಮೊಂದೆ ಪೊಜಗಾಗಿರೆ ಮತ್ತಾರಯಲುಪಾಯ ವಿಲ್ಲವಧಾರಿಸುವುದು ಮನದೊಳಾರ್ಯ ಸಮಗಿದು ಕಾರ್ಯಂ (ಕಾದಂಪು. ೬೬೬) ; ಉದಾತ್ತನಂ ಪಾರದೆ ಬಯ್ದು (ಕಂದ್ರಪ್ರ. ೯-೬೪). ೫. ಲಕ್ಷಿಸು ; ಗವನಿಸು : ಮದನಂ ತೋಟಿಗನಾದ ಚೂತಪತನ್ಯುದ್ಯಾರಾವದೊಳ್ಕೊಡಿ ಪಾಡಿದ ವೆಣ್ದುಂಬಿ ವಿಸಂತದೊಳ್ಕದನಕೇಳೀಸೂತ್ರಮಂ ಪಾರದೋದಿದ ಕೀರಂ . . . ಅಲ್ಲದಿಲ್ಲೆನೆ ಬನಂ ಚಿತ್ತೋತ್ಸವಾಲಂಬನಂ (ಪುಪ್ಪಪ್ರ. ೨-೪೭). **ಹಾರು₁** : ೧. 'ಪಾರುವಳಿಯೆ' ಪರಾ. ೨. ಮಜ್ಜಿಗೆಯ ಬರವಂ ಪಾರುವ ಒಕ್ಕಲಿಗನಂತೆ (ಶ್ರಾಕಣಾ. ೦೩೩-೬) ; ಬರವ ಪಾರು [ಪಾಣಂ. ಹಾರು. ನೋಡು]ತ್ತಿರಲು ಬಂದ್ಯೆ ಕರುಣದಿಂದಗ್ನಿಯನು ಪರಿಹರಿಸು (ಪಕಪ. ೬-೦೨) ; ಪಾರದೆ ಪರಸಹಾಯವಾನು ಪೋರದೆ ಪುರ್ಬು ಗಂಟಿಕ್ಕದೆ ಪುಸಿಯದೆ ಸೇರಿ ಸೇವೆಯನೆಸಗುವುದು (ಹರಿಲ. ೩-೨೩) ; ತಾನರಿಯದಾವ ದನೊ ಪಾರುತುಂ . . . ಸಭಿಯುರ್ಗಗೋಚರಸ್ವರ್ಗದಲಿ ಚಂದ್ರಮಾಪಿ ವಾನದೊಳ್ ಮಾರಳಿ ಬಾರಿವಳ್ ಕಳೆದ ಕಾಲಮಂ (ಶಕ್ರಾಂಗ. ೬೨-೦೬೦೪). ೩. " ಬಯಸು, ಬೇಡು, ಕೇಳು, ಕೋರು, ಹಾರ್ಯೆಸು, ಪಾರು (ಹಾರು) " (ಶಂಶಬು. ೬೬). **ಹಾರು₂** : ೧. ಹಸುಳೆಯುಂ ತನ್ನಯ ಕಾಮಾರನೆಂದೇ ಬಗೆದು ಕರೆಕರೆದು ತಲೆದಡವಿ ತಡವರಿಸಿ ಮೆಯ್ದುಜಿಹನು ಹಾರುತಿರೆ (ಹಚಕಾ. ೦೩-೨) ; ತಾಗಿದ ಕೂರಲಗು ಗಜ್ಜೆವೋಜ್ಜಿದವು ನಿಜಹಬ್ಬುದ ವೈರಿಗಳಲಿ ಹಿಂದಿದರ್ಜುನನಜ್ಜಿದನಾ ದೈತ್ಯಾರಿ ಗೆಂದನು ದೇವ ಬಿನ್ನಹ ವಾರುವಂಗಳ ಪಹಲತೆಯಂ ಚಿತ್ರೈಸಿದಿಕೆಯಿಂದ (ಶುಣ್ಕಾರ್ತ್ರೀ. ೨೧-೨೩). ೨. ತೆಗೆ ವಾರುವಮಂ ಹಾರುವ ಬಗೆಯುಂ ತನಗಿರುಳ ಬರವಮೆನುತ ಸವಂಗಂಬುಗುವ ಕಟಕಿಗವನಳಿಜಂ ಪುಗಿಸಿದುದು ಭುಜಾಸಿ ಗಂಗದಣ್ಣಾಧಿಪನ (ಇಳ. II, ೭೩-೨೨; 1118) ; ನಿಮ್ಮ ಬರವ ಹಾರುತಿರ್ಪೆನಯ್ಯ (ಪುಚಾರಿ. ೨. ೧೩೯-೩೨೪) ; ನಿಲ್ಲು ಕಳಶಜ ತಪ್ಪಿದವ ನಾನಲ್ಲ ಫಲುಗುಣ ಸಾತ್ಯಕಿಯಪ್ಪೋಲಿಲ್ಲ ತನ್ನಲಿ ವಿನಯು ಹಾರದಿರಿ (ಶುಣ್ಕಾರ್ತ್ರೀ. ೦೩-೦೦) ; ವಾರನಾರಿಯರು ಶಾವಾರ ನಾರಿಯರೊ ಶೃಂಗಾರಕೆ ಸೋತು ಭೂವರನ ಹಾರುತ್ತಿದ್ದರು ಸುರಪಶುವ ಗೋದಾನಕ್ಕೆ ಹಾರುವ ಹಾರುವನಂತೆ (ಪಚಿ. ೦-೬೬). ೩. ಸರ್ಪನ ಬಾಯ

ಕವ್ವೆ ನೊಣಕ್ಕೆ ಹಾರುವಂತೆ ಅವ್ಯಾಯನ ಬಡದು(ಶುಷಾರೀ. ಲ. ೩೬-೦೩೬); ಮೂವಣ್ಗಳಂ ಪೀರ್ವ ಕೀರವಿಟ್ಟಿಯ ಪಣ್ಣಿ ಚಿತ್ರಂ ಹಾರಿದವುದೇ (ಪಾಪ್ಪ. ೦೦-೦೦); ಧಾರುಣಿಯ ಲಂಪಟರು ಕದನವ ಹಾರಿ ಬಂದರು ಗಡ (ಕುಪ್ಪಾ೦೮. ೦-೪) ; ಹಾರಿದ ಸಖಿಯರ ಪೊರೆವಿರಿ ನೀವೊಂದ ಹಾರಲಿಲ್ಲದ ಬಲ್ಲೆನೆನ್ನ ಹಾರವಂತೊವ್ವದಿ ಬೀಳರೆಂದೊಂದೋದು ಹಾರವ ಹರಸಿಯಿಕ್ಕಿದಳು (ಪಚ. ೩೩-೦೦). ೪. ಹಾರಲತಿಶಯತೃಷ್ಣೆ ನಾಶಕ್ಕೆ ಕಾರಣವಲೇ ಮಾಪ (ಕುಪ್ಪಾಸಿ. ೦೩-೩೪) ; ಅಧರ ಉರುಟತಿ ಮದನಮಂದಿರ ಸದರ ರೋಮಾವಳಿ ಪರಿದು ನುಡಿಗಳು ತೊದಳು ಲಜ್ಜೆಯು ಹೀನದ್ವಿಗುಣ ಹಾರಿ ನೋಡೆಂದ (ಕಪ್ಪಾ೬೪. ೫-೨೦). [ದೇಶೀ. ತಮಿ. ಮಲ. ಪಾರ್]

ಪಾರ್ಶ್ವ ' ಪಾಟ್ಟಿ ' ನೋ.

ಪಾರೆ ' ಪಾಟ್ಟಿ ' ನೋ.

ಪಾರ (ನಾ). ೧. ನದಿ, ಸಮುದ್ರ ಮುಂತಾದುವುಗಳ ದಡ,–ತೀರ : " ಪಾರವೆಂಬುದು ತಡಿ " (ಹರಿಹರ. ೦೦೦-೧೫) ; ಕಾಣದಂಬುಧಿಯ ತೋಳ್ ನೀಡಿ ಸನ್ನೆಗೈವೀಸಿ ಎರೆದಂತಾಯ್ತು ರಾವುಂಗೆ, ತನ್ನಾತ್ಮದತಿ ದೂರದಾ ಪಾರದಿಂ (ಕ್ರೀಶಾಪು. ೦೩೭-೩೯೯) ; ಪಾರವಿರ್ಪ ಜಲರೂಪ ಸಿಂಧುವಂ ಪೀರಿದಾತನ ಮಹತ್ತ್ವಮೇನೊ ಪೇಳ್ (ಪೀಗಟ್ಟಿ. ೭೯) . ೨. ಎಲ್ಲೆ ; ಗಡಿ ; ಮೇರೆ ; ಸೀಮೆ : ಅಮಿತಮತಿಗುಣನಿಧಿತಿ ವಿಕ್ರಮಗುಣಾದಿಂ ಶಾಸ್ತ್ರಪಾ[ಪಾರಂ.ಶಸ್ತ್ರ ವಾ]ರಮುಂ ರಿವುಳ[ಪಾ] [ಪಾರಂ. ವಾ. ಹಾ]ರಮುಮೊಡನೆ ಸಂದುವೆನಿಸಿದನವೀಯುಬಲಶಾಲಿ ಮನುಜಪಾರ್ತಾಂಡನೃಪಂ (ಪಂಚಕ. ೦-೧೩) ; ಸ್ವಾರಸ್ಯವಮಿತ ವಾರಿಗವಿರದು ಜೀವನದಿ ಪಾರದಿರ್ಕೆಯ ನೆನೆದು ನಡೆಯಲದು ಸಫಲ (ಶುಂಕುಶ. ೬-೭೬); ಅವರ ಸಂತೋಷಕ್ಕೆ ಪಾರವೇ ಇಲ್ಲ (ಕಪ್ಪದ. ೦೦೬). ೩. [ಸಾಂಖ್ಯ] ಒಂಬತ್ತು ಬಗೆಯ ತುಷ್ಟಿಗಳಲ್ಲಿ ಐದನೆಯದು : ಪಾರ ಎಂದರೆ ದ್ರವ್ಯಾರ್ಜನೆ. ಐದನೆಯದು (ಪಂಚಕ. ೭೩). [ಸಂ.]

ಪಾರಂ (ಅ). ಚೆನ್ನಾಗಿ ; ಅತಿಶಯವಾಗಿ : ಆರೂಢಪ್ರಸನಕ್ಕೆಪ್ಪೋಪ ಯುವರಾಜಾಗಮ್ಯನಕಧ್ವಾನದಿಂ . . . ವಾರಸ್ತ್ರೀಗಪಾನೋತ್ಥವಸ್ಫುರಣಾಲಂಕಾರಧ್ವಂಕಾರದಿಂ ಪಾರಂ ಪಟ್ಟವದಂ ಜನಶ್ರುತಿಪಥಕ್ಕಾಗಿರ್ಪದಾಹ್ವಾದನಂ (ಶುಜಾತೇ. ೦-೭೮). ' ಪಾರಂತಗುಳ್ ' ಪರಾ. [<ಪಾರ್ಶ್ವ]

ಪಾರಂಗತ (ಗು). ೧. ಸಂಪೂರ್ಣವಾಗಿ ತಿಳಿದ ; ಸಮಗ್ರವಾಗಿ ಅರಿತ : ಸಂಪ್ರಸಿದ್ಧವೈದ್ಯನಾದ ಪಾರಂಗತ ಕಾನ್ತೀಪಾನೂ ಕೂಡ ಕಾಕನ ಸಂಶೋಧನೆಯಿಂದ ಬೆರಗಾಗಿ ಹೋದನು (ಪಕ್ಷಾ. ೬೪). (ನಾ). ೨. ಚೆನ್ನಾಗಿ ತಿಳಿದವನು ; ನಿಷ್ಣಾತ : ಪಾರಂಗತರಂಗಂತರಾಳ ದೂರ ಗಳೇನು ? ಸ್ವೈರಪಥವಾತನದು (ಶುಂಕುಶ. ೬೯೮); ಆಂಡಯ್ಯನು . . . ತನ್ನ ಕುಲಪರಂಪರೆಗನುಗುಣವಾಗಿ ವಿದ್ಯೆಯಲ್ಲಿ ಪಾರಂಗತನಾದನು (ಶಾಒಸ. ೦೦೩). [ಸಂ.]

ಪಾರಂಗಮತೆ (ನಾ). ಪೂರ್ಣಪಾಂಡಿತ್ಯ ; ಸಂಪೂರ್ಣಜ್ಞಾನ : ಪ್ರಸೇನಜಿತನ ತಂದೆಯು, ಬಾಗಮ ಕಲಿತು ಬಂದ ವಿದ್ಯೆಯು ಪಾರಂಗಮತೆಯನ್ನು ಕಂಡು ಸಂತುಷ್ಟನಾಗಿ, ಅವನಿಗೆ ರಾಜ್ಯದಲ್ಲಿ ಅಭಿಷೇಕ ಮಾಡಿದನು (ಹರಿವಂ. ೦೨೪). [ಸಂ. ಪಾರಂಗಮತಾ]

ಪಾರಂತಗುಳ್ (ಕ್ರಿ). ಎಲ್ಲವನ್ನೂ ಚೆನ್ನಾಗಿ ತಿಳಿ ; ಪಾರಂಗತನಾಗು : ಕಾವಂತತ್ವದಜಿಮೊಳ್ ಪಾರಂತಗುಳ್ವೆಟ್ಟಿತಂಗುಡುವೊಲ್ದಂತೊಡಗೂಡುವ . . . ಬರ್ಪವಂಗಬಲೆಯರ್ ಸೋಲ್ವರ್ ಮಹೋತ್ಸಾಹದಿಂ (ಶಾಶ್ಯಂ. ೦೬-೬). [ಪಾರಂ + ತಗುಳ್]

ಪಾರಂಪರೆ (ನಾ). ೧. ಕುಲ ; ವಂಶ ; ಪರಂಪರೆ : ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ ಹೇಳಪರ ಪಾರಂಪರೆಗೆ ಸಲೆ ಸಂದ ರಾಜಗುರು ನೀನಲ್ಲಿಯದವರಿಲ್ಲ (ಕಚಿಕಾ. ೫-೬) ; ಅವನಿಗೆ ಇಕ್ಷ್ವಾಕು ಮೊದಲಾದ ಪಾರಂಪರೆ[ಪಾಕಾಂ. ಪರಂಪರಿ, ಪರಂಪರೆ]ಯಿಂದ . . . ಸಲ ಕ್ಷಪ್ರಿಯುಪವರ್ಗ ಹಾಗೂ ಸಮಸ್ತ ಸ್ತ್ರೀವರ್ಗ ಜನಿಸಿತ್ತು (ಕೃಕಸಾ. I. ೦೬). ೨. ಸಂಪ್ರದಾಯ : ದಶರಥಧರಣಿಪತಿ ರವಿಕುಲದ ಪಾರಂಪರೆಯ ವರಮಾಪ್ತ ಪ್ರಧಾನರ ಕರೆಸಿ (ತೊರಾ. ೦.೩-೦).

[<ಪ್ರಾ. ಪಾರಂಪರ. / ಸಂ. ಪಾರಂಪರ್ಯ]

ಪಾರಂಪರ್ಯ (ನಾ). ಪರಂಪರೆಯಿಂದ ಬಂದಿರುವುದು ; ಸಂಪ್ರದಾಯ ; ಆಚಾರ : " ಆಮ್ನಾಯಃ, ಸಂಪ್ರದಾಯಃ, ಪಾರಂಪರ್ಯಂ, ಗುರುಕ್ರಮಃ— ಈ ೪ ಎಡೆವಜ್ಜಿಯವ ಗುರೂಪದೇಶಂ" (ಪಂಚಮಂ. ೩೭-೨೯೬) ; ಅರ್ಧಗಪ್ಪಡದ ತೀರ್ಥಪಾರಂಪರ್ಯದಿಂದಂ ಸುರಧೆಯೆಂಬುದು ನಾಡಲ್ಲಿ ವಳಭಯೆಂಬುದು ಪೊಬಲದನಾಕ್ಕೊಂ ವಜ್ರಪಾಳಂ (ಪಚಾ೦೨. ೪೩-೩) ; ಅನೇಕ ಶತಮಾನಗಳಿಂದ ಪಾರಂಪರ್ಯವಾಗಿ ನಡೆದು ಬಂದಿರುವ ದೈನ್ಯಭಾವವನ್ನೂ ತೊಲಗಿಲ್ಲ (ಆರ್ಯಾಕ. ೩೩). [ಸಂ.]

ಪಾರಂಪರ್ಯೆ (ನಾ). = ಪಾರಂಪರ್ಯ: "ಮುಂತೆ ಪಾರಂಪರ್ಯೆ [ಪಾಕಾಂ. ಪರಿಯೆ]ಸಂಪ್ರದಾಯಮೆನಲ್ ನಿರಂತರಂ ಗುರೂಪದೇಶಮೆನಿಕ್ಕು " (ಹುಂಗಣಿ. ೬೫-೬). [ಸಂ. ಪಾರಂಪರ್ಯ]

ಪಾರಂಬಿ. ಪಾರಂಬೆ (ನಾ). ಮರದ ಬೀಳಲು : ಕರುಳಿಗೊಂದು ಹೊಸ ಕರುಳ ಪಾರಂಬಿ ಇಳಿಬಿಟ್ಟು ನೆಲವ ನಿನ್ನದೆ ಮಾಡಿಕೊಂಬಿ (ಪಪ್ಪಕ್ಕ. ೬-೬). **ಪಾರಂಬೆ** : ಬರಿತ ಚರಿತರುಶಾಬೆಯಿಂ ನೆಲಕಿಳಿದ ಪಾರಂಬೆಗಳ ಪೋಲುವ ಬೆಳೆವ ಶ್ಮಶ್ರುಗಳುಳ್ಳ ಸಚಿವರನಂತಗಳನು ಕೊಂಡು (ಕಪುಪಂ. ೦೫೯-೬೦).

[← ಮರಾ. ಪಾರಂಬೀ. ಪಾರಂಬಾ]

ಪಾರಂಬೆ ' ಪಾರಂಬಿ ' ನೋ.

ಪಾರಕ₁ (ಗು). ೧. ಆಚೆಗೆ ಒಯ್ಯುವ; ದಾಟಿಸುವ : ಪಾರಂಮಾಡುವ. (ನಾ). ೨. ಆಚೆಗೆ ಒಯ್ಯುವವನು ; ದಾಟಿಸುವವನು : ನ್ಯಾರ ವ್ಯಾರಂಗಳೊಳಗಲದಿಹ ಪಾರಕರ ಬಗೆಗೊಳ್ಳದಂತರ್ವ್ಯಾರದಾ ಸಾವಾಸಿಗಳ ವಿಸಾಜ್ಯತ್ವ ನಡೆತರಲು (ಪಕ್ಷ. ೬೧-೬೯) ; ಕಟ್ಟಿದ ಪುಟ್ಟ ಪಟ್ಟಿಯು ಕಾಸೆಯಂ ಧಟ್ಟಿ ಕಟ್ಟಾಯುತದ ಪಿಂಡಿವಾಳ ನೆಟ್ಟನೆ ಮೀಜೆಯೆಂ ಪಾರ[ಪಾಕಾಂ. ರು] ಕರು ಕಣ್ಣಿಸೆದರು ಪಟ್ಟುವಾನೆಗಳಂತಲ್ಲಿ (ಕುಪಾಸಾಂ. ೨೬-೬೦). [ಸಂ.]

ಪಾರಕ₂. ಪಾರಗ₂ (ನಾ). ೧. ಹಂಗೆಯನ್ನು ಹಿಡಿದ ಯೋಧ ; ಗುರಾಣಿಯನ್ನು ಹಿಡಿದಿರುವ ಸೈನಿಕ (?): ಒಜಿಲೆ ಗಜದಾಡೆಗಳ ಕೈಗಳ ಹಜ್ಜುಯು ಹೊಯ್ದುರು ಪಾರಕರು ಮುಕ್ಕುಜ್ಜಿಕದರೆ ಸೂಳೆಗರು ಕೋದೆ ಶ್ರೀನರು ಕರಿಘಟೆಯು (ಕುಪ್ಪಾ೨. ೨-೦೬) ; ಸೀಳ ಬಡಿದನು ಸಮರಥರ ಪಾಣಿಗಳ ರಾವುತರನು ಮಹಾರಥಜಾಲವನು ಜೋಧರನು ಧಾರಿಯ ಪಾರಕಪ್ರಜವ (ಕುಪ್ಪಾಗ. ೯-೩೬). **ಪಾರಗ**₂ : ೨. ಒಂದು ಬಗೆಯ ಆಯುಧ ; ಹರಿಗೆ ; ಡಾಲು : ವೀರನಹಿವಿರಾಗೆನುತ ಬಹುಭೂರಣದ ಚಮ್ಮಟಿಪ ಖಿಡುಗದ ಪಾರಗದ ಪರಿಣತರು ಹೆಣಗಿದರು (ಕುಪ್ಪಾಕ್ರಿ೨. ೦೯-೩) ; ಬಾರಣದ ಚಮ್ಮಟಿಪ ಖಿಡುಗದ ಪಾರಗವಲ್ಬಟ್ಟಿಪ ಲುಳಿಯು ಪ್ಪಾರದೊಡ್ಡಿನ ಹೊಯ್ಲು ಹೋರಟಿಗಳ ಪಾರೆಬೆಗಳ ಸಾರತರಶ್ರಮ ರೊದಗಿದರು (ಕುಪ್ಪಾಳ. ೦೯-೩೩).

[<ಪ್ರಾ. ಧಾರಕ್ಕ ?./ಸಂ. ಸ್ಫಾರಕ ?]

ಪಾರಕಾವಣೆ ' ಪಾರಜಾವಣೆ ' ನೋ.

ಪಾರಕು. ಪಾರಕ್ಕು. ಪಾರಕ. ಪಾರಕು. ಪಾರಕ್ಕೆ. ಪಾರಕ್ಕ್ಯ (ನಾ). ಒಂದು ಬಗೆಯ ಧಾನ್ಯ : ಪೃಥಮವಿವಸದೊಳೆ ಪಾರಕನ ಕೂಟುವಾ ವರೆಯುವುಮೆಣ್ಣೆಯುವಾಡಿನಳೆಯುವಾಂ ಬಡ್ಡಿಸಿದೊಡವನಮೃತವಾ ನುಣ್ಣಾಂತುಂಡು (ಪಚಾ೦೧. ೬೯-೩೬) ; ಎಂ ತ್ರುವೆ ಳು ಪೊಯ್ದು ಪಾರಕನಂತೆ ತನ್ನ ಕಾಲದ ತವನಂತರದೊಳು ವರ್ಶನವೋಹನೀಯತ್ರಯವು ದೊಳಾವುದಾನುಮೊಂದುದಯಿಸಿ ಬಳ್ಕುಂ (ಪಾಸಾ. ೧೦೦ ೦೨); ಬರಗೆಳ್ದು

ಕೋರೆ ಪಾರಕುವೆರಸಗಸೆ ಕುಸುಂಬೆ ಕಟಿವೆ ನೆಲ್ ಸಾವೆಗಳುಂ ತುರಗಕ್ಕಹಿತಂ (ಅಶ್ವಕಾ. ೭-೫೯). **ಪಾರಕ್ಕು :** ಆದರದೆ ಜ್ಯೇಷ್ಠದಪರದ ಬೂದಿಯ ಮೃಗಶಿರದೆ(ರಾದಿ) ಕೊಂಡ ಮಟ್ಟಿಯಿಂ ಬೆಳೆಗುಂ ದೋದಿನಿ ಪೊಜಗಣ(ವರ) ನಾಲ್ಕಱೊಳಾದೊಡೆ ಪಾರಕ್ಕು ಬರ(ಱ)ಗು ಬೆಳೆಗುಂ ಸ್ವಲ್ಪಂ (ಜಿಲ್ಲಿಸು. ೬-೦೩೬); ಉಪ್ಪಿಲ್ಲದ ಪಾರಕ್ಕಿನ ಸಪ್ಪಾನೋಗರದೊಳಾಮ್ಲವೇಱಿದ ಕಟಿಯಂ ತಪ್ಪದೆ ಬಲಸಿಕ್ಕೆ (ಪುಷ್ಕಾಸ್ತ್ರ. ೩-೯೬). **ಹಾರಕ :** "ಕೋದ್ರವಾ ಹಾರಕಂಗಳು" (ನೀತಿವಾ. ೦೭-೭೦); ಹಾರಕವಕ್ಕಿ ಅಶನ ಹೆಸಱ ಗುಗ್ಗುರಿ ಹುಗ್ಗಿ ಪಾಯಸ. . . ನಿವಾಳಿಸಿ (ಬಾಲಪ. ೦೨೬-೬); ಸೆಜೆ ನವಣೆ ನೆಲು ಹಾರಕ × × × ಧಾನ್ಯ ಕುಳಪಾಲ ಭತ ಖ ೧ (ಸೌಇಇ. IX-II, ೫೫೯-೨೯; 1533); ಹಾರುವರ ಹೊಲಕ್ಕೆ ಹಾರಕ, ದೇವರ ಹೊಲಕ್ಕೆ ಹುಚ್ಚೆಳ್ಳು (ಗರುಂಬಾ. ೧೫). **ಹಾರಕು :** "ಉನ್ಮಾಳಃ, ಕೋದ್ರವಃ, ಕೋರದೂಷಕಃ—ಈ ೩ ಹಾರಕು" (ಜಲಾಯು. ೧೫-೧೨೬). **ಹಾರಕ್ಕಿ :** ಕ್ಷೀರಸಿತಪಾನದಿಂ ಧುತ್ತೂರದ ಕೂಷ್ಮಾಂಡರಸದೊಳಂ ಬೆಲ್ಲದೊಳಂ ಹಾರಕ್ಕಿನ(ಯ) ಸೊರ್ಕಟಿಗುಂ (ಲೋಕೋಪ. ೦೦-೧೨). **ಹಾರಕ್ಕು :** ಮಾರಿಚಂ ಕುಂಬಳದೆಲೆಯುಮನರೆದ ರಸಂ ಸಿಂಧುಜಾತಮುಂ ಕೂಡಿ ಬಟಿಕ್ಕಿರದೀಂಟಲ್ ಹಾರಕ್ಕಿನ ಪಿರಿದೆನಿಪ ವಿಷಾಪಹರಣಮಕ್ಕು ಮಮೋಘಂ (ಪಸುದ. ೨-೦೫೯).

[ದೇ. ॥ ತೆಲು. ಆರಿಕ, ಆರಿಕೆ, ಆರುಕ, ಆರುಗ]

ಪಾರಕ್ಕು 'ಪಾರಕು' ನೋ.

ಪಾರಖ (ನಾ). (ಮುತ್ತು, ರತ್ನ ಮುಂತಾದುವುಗಳ) ದರ್ಜೆ ; ಕಿಮ್ಮತ್ತು : ಯೋಗ್ಯತೆ : ಪಾರಖ ನಮೂನೆ—ತೂಕದ ಸಮಯ ಗಿರಾಯಿಕರು ಅರಳಿ ತೆಗೆದುಕೊಂಡರೆ, ಈ ಖರ್ಚಿನ ರಕಮು ಬೀಳುವದಿಲ್ಲ (ಮುಂಬಪ್ಪಾ. ೦೭). [←ಮರಾ. ಪಾರಖ್]

ಪಾರಖಾವಣೆ 'ಪಾರಖಾವಣೆ' ನೋ.

ಪಾರಖಾವಣೆ, ಪಾರಕಾವಣೆ, ಪಾರಖಾವಣೆ, ಪಾರ್ಖವಣೆ (ನಾ). ೧. (ನಾಣ್ಯ, ಮುತ್ತು, ರತ್ನ ಮೊದಲಾದುವುಗಳನ್ನು) ಪರೀಕ್ಷಿಸಿ ನೋಡುವುದು ; ಪರೀಕ್ಷೆ ; ತಪಾಸಣೆ : (ಕಿ). ೨. ಸಲ್ಲಿಸುವುದು ; ಜಮಾ ಮಾಡುವುದು ; ಪಾವತಿ ಮಾಡುವುದು : ಅದು ವರ್ತಕ ಧರ್ಮವಲ್ಲ. ಹಾಗಿದ್ದರೆ ಜಾಗ್ರತೆಯಾಗಿ ಪಾರಖಾವಣೆಗೆ ಹಣ ತರಿಸು (ಅಗೂಲಿ. ೦೦); ಗ್ರಾಮದ ಕಂದಾಯವು ವಸೂಲಾದ ಕೂಡಲೇ ಪಟೇಲನ ಅಪ್ಪಣೆ ಪ್ರಕಾರ ಆ ಹಣವನ್ನು ತಾಲ್ಲೂಕು ಖಜಾನೆಗೆ ಪಾರಖಾವಣೆ ಮಾಡುವುದಕ್ಕಾಗಿ ತೆಗೆದುಕೊಂಡು ಹೋಗುವ ಕೆಲಸವು ಇವನದಾಗಿರುತ್ತದೆ (ಗ್ರಾಮಾಕ. ೩). **ಪಾರಕಾವಣೆ :** ೧. ಲಿಂಗರಾಜ ಅನ್ಯಾಯ ಮಾಡಿದರು. ಅದರ ಲೆಕ್ಕ ದೇವರೆದುರು ಪಾರಕಾವಣೆ ಆಗುತ್ತೆ (ಬಳಿರಾ. ೦೬೯). **ಪಾರಖಾವಣೆ :** ೨. ಆ ಮೇರೆಗೆ ಐವಜು ಪಾರಖಾವಣೆ ಮಾಡಿಕೊಂಡು ಕಳಪಿಹಣವನ್ನು ವಾಪಸ್ ಕೊಟ್ಟು ಬಾಕಿ ಐವಜಿಗೆ ಆಗಿಂದಾಗ್ಯೆ . . . ರಶೀದಿ ಕೊಡಬೇಕು (ಮಹಾಸಂ. II, ೬೬). **ಪಾರ್ಖವಣೆ :** ೨. (ಮೃಗೆಕಿ. IV, ೬೮೨). 'ಪಾರುಖಾಣೆಯ' ಪರಾ.

[←ಮರಾ. ಪಾರಖಾವಣ್]

ಪಾರಖೀ (ನಾ). (ಮುತ್ತು, ರತ್ನ, ನಾಣ್ಯ ಮೊದಲಾದುವುಗಳನ್ನು) ಪರೀಕ್ಷಿಸುವವನು : ಪರೀಕ್ಷಕ : ಅದು ಸರಾಫರ ದಂಧೆಯಲ್ಲಿ ಕಳೆದ ೪೦ ವರುಷದ ಅನುಭವ. ಬಂಗಾರದ, ಮುತ್ತುರತ್ನದ ಪಾರಖೀ ನಾವು (ಗೀತುಗ. ೧೨). [←ಹಿಂ. ಮರಾ. ಪಾರಖೀ]

ಪಾರಗ$_1$ (ನಾ). ೧. ತೀರವನ್ನು ಮುಟ್ಟಿದವನು ; ದಡವನ್ನು ಕಂಡವನು : ಅನುಪಮಗುಣರನುಪಮತಪರನುಪಮಸಿದ್ಧಾಂತವಾರ್ಧಿ ಪಾರಗರೆಂದೀ ವನಧಿಪರೀವೃತಸಕಳಾವನಿ ಪೊಗಟ್ಟುದು ಸಕಳಚಂದ್ರ ಸೈದ್ಧಾಂತಿಗಳಂ (ಸುಕುಮಾ. ೦-೨೯); ಸ್ವಸ್ತಿ ಸಮಸ್ತಶಾಸ್ತ್ರಾಮ್ರತ ಪಾರಾವಾರಪಾರಗರುಂ ತಮಕ್ತತಪೋನುಷ್ಠಾನನಿಷ್ಠಿತರುಂ (ಕಇಲ. ೯೪-೩-೯; 1124); ಸಂಗೀತಾಂಬುಧಿಪಾರಗರ್ ಪಲರುಮಿಾ ತಾನಂಗಳಂ ಬಲ್ಲರೇ (ಅಪ್ರತಿ. ೪೨-೦೩). ೨. ಸಂಪೂರ್ಣವಾಗಿ ತಿಳಿದವನು ; ನಿಪುಣ ; ಪಂಡಿತ: 'ಚತುರ್ವೇದಪಾರಗ', 'ಶ್ರುತಪಾರಗ' ಪರಾ. [ಸಂ.]

ಪಾರಗ$_2$ 'ಪಾರಕ$_3$' ನೋ.

ಪಾರಗತ್ವ (ನಾ). ನೈಪುಣ್ಯ : ಅವರುಪದೇಶಕೌಶಲಮುಮಂ ಪರಮಾಗಮ ಪಾರಗತ್ವಮಂ . . . ಭವ್ಯಜನಕಂ ಪರಿಕೀರ್ತಿಸುತಿರ್ದು (ಮಹಾಸೇ. ೩-೦೯).

[ಸಂ.]

ಪಾರಗಾಣಿಸು (ಕ್ರಿ). ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟಿಸು; ಪಾರುಮಾಡು : ಯಾರೂ ಕಾಯುವರಿಲ್ಲ ಸೇರಿದೆ ನಿನಗಯ್ಯಾ ಧೀರ ವೇಣುಗೋಪಾಲ ಪಾರಗಾಣಿಸೊ ಸ್ವಾಮಿ (ಕರವಿ. ೩೩೯); ಸಂಕಷ್ಟಗಳ ಮಾರುವ ದಾಂಟಿಸಿ ಪಾರಗಾಣಿಸುವ ಒಂಟಿ ಇವನೆಂದಾ ಪಿಲಾತನಕಟರಿ ವನೇಂ (ಗೊಲ್ಲೂಥಾ. ೨-೯೬). [ಪಾರಗಾಣು + — ಇಸು$_3$]

ಪಾರಗಾಣು (ಕ್ರಿ). ದಡವನ್ನು ಸೇರು ; ಪಾರಾಗು : ಕಡಲ ಕಡೆದರು ಸುರಾಸುರರು ನಿಜಬಲದಿಂದ ಕುಡಿದನದನು ತಪಸ್ಸಿನಿಂದ ಕುಂಭಜನು ಕಡಮೆಜನ ಪಾರಗಾಂಬರೆ ಗಾಸಿಯನು ಪಡದೆ ? (ಮುಂಕುಕ. ೨೫೯); ಈ ಸಲದ ಕೆಲಸದಲ್ಲಿ ನಾವು ಪಾರಗಾಣುತ್ತೇವೆಂಬ ಭರವಸೆಯೇ ನನಗಿಲ್ಲ (ಬಿಶಾಪ. ೦೫). [ಪಾರ$_2$ + ಕಾಣು (<ಕಾಣ್)]

ಪಾರಗಾವ (ನಾ). ಒಂದು ಊರಿನ ಹೆಸರು : ದಕ್ಷಿಣತಃ ಪಾರಗಾವಾವ್ರಾ(ಬ್ರಾ)ಹ್ಮಣ ಗ್ರಾಮಃ ಪಶ್ಚಿಮತಃ ಏಲ್ವ ? ವಾಡೇಗ್ರಾಮಃ (ಇಲ. XI. ೦೦೩-೩೯; 753). [? + ಗಾವ (<ಗಾಮ)]

ಪಾರಗೆಯ್ (ಕ್ರಿ). ಹಿಂಜರಿ ; ಹಿಂದೆಗೆ : ಅಕ್ಕುಳಿಸಿತೆಂದುಂ, ಮೆಯ್ದೆಗೆದುದೆಂದುಂ . . . ನುಣ್ಚಿತೆಂದುಂ, ಪಾರಗೆಯ್ಯೆಂದುಂ—ಈ ೧೩ ಅಪಸರಣಕ್ಕೆ ಪೆಸರ್ (ಕಸಾ. ೭೨-೬೯೯). [ಪಾರ$_2$ + ಕೆಯ್$_1$]

ಪಾರಜ (ನಾ). ದ್ರವರೂಪದ ಒಂದು ಬಗೆಯ ಲೋಹ : ಪಾದರಸ : ರಸದೊಳು ಪಾರಜದೊಳು . . . ಷಡುರಸದೊಳಾ ರಸಾಖ್ಯಂ (ಮುಂಗಳಾ. ೦೪೬-೩೫) ; ಭಯ ಮತ್ತು ಧೈರ್ಯವು ಬೆಂಕಿ ಮತ್ತು ಬರ್ಫಕ್ಕೆ ತಗುಲಿದ ಪಾರಜದಂತೆ ಕೆಳಗೆ ಮೇಲೆ ಒಮ್ಮೆಲೆ ಸರಿದಾಡ ಹತ್ತಿದುವು (ಜಯಂತ. ೪೯); ಕನ್ನಡಿಯ ಒಂದು ಮೈಗೆ ಪಾರಜ ಹಾಕಿ . . . ನೋಡುವ ಕನ್ನಡಿಯನ್ನು ಮಾಡುತ್ತಾರೆ (ಮುಂಬಯಾ. ೪-೨೨೨). 'ಪಾದರಸ' ಪರಾ. [<ಸಂ. ಪಾರದ]

ಪಾರಟ 'ಪರಡ್ಕೆ' ನೋ.

ಪಾರಡೆ 'ಪರಡ್ಕೆ' ನೋ.

ಪಾರಣಕ್ಷಮ (ನಾ). ಬೇರೆಯವರ ಉಪವಾಸವನ್ನು ಕೊನೆಗೊಳಿಸುವುದರಲ್ಲಿ ಸಮರ್ಥನಾದವನು : ಚಾರುಚಕೋರವಿದೂರಪಾರಣಕ್ಷಮ ನವವಲ್ಲಭಂ ಬೆಳಗಿದಂ ಪುರಮೊಂದೆನೆ ಲೋಕಮೆಲ್ಲಮಂ (ಸಂಪ್ರಕ್ರಿ. ೬-೩೫).

[ಸಂ.]

ಪಾರಣಾವಾಸರ (ನಾ). ಪಾರಣೆ ಮಾಡುವ ದಿವಸ : ಪಾರಣಾವಾಸರಾಳಿ ಗಳಿಂತಿರ್ತೆಱನಪ್ಪ ಪುಣ್ಯದಿನಮಂ ಸಮ್ಮಿಶ್ರಮಂ ಮಾಡೆ (ಸುಕುಮಾ. ೯-೦೨).

[ಸಂ.]

ಪಾರಣಾವಿಧಿ (ನಾ). ಪಾರಣೆಯನ್ನು ಮಾಡುವ ರೀತಿ,—ಕ್ರಮ : [ಪ್ರವ್ರ]ಜ್ಯಾಶ್ರಮಗುರೂರ್ವರಾಸ್ಯತಿಲಕಂ ಯಾಮಿನೀವಿಯೋಗಮಂ ನಿರ್ವರ್ತಿಸಿ ರಾಜಮಂದಿರಕ್ಕೆ ವಂದು ಪಾರಣಾವಿಧಿಯೊಳಮೃತಾಹಾರ ಮನಾರೋಗಿಸಿ (ಶಾಂತಿಪು. ೯-೯೯ ಪ) ; ಮಂಡೋದರಿಯುಂ ತಾನುಂ ಪಾರಣಾವಿಧಿಯಂ ಮಾಡಿಸಿ ರಾಮನಲ್ಲಿಗೆ ವಂದು (ಪಾಪುಂಪು. ೩೦೦). [ಸಂ.]

ಪಾರಣೆ1 (ನಾ). ೧. ವ್ರತೋಪವಾಸದ ಮಾರನೆಯ ದಿನ ಮಾಡುವ ಊಟ: ವಕ್ಷೋಪವಾಸದ ಪಾರಣೆಗೆಂದು ಪೋಬಲ್ಲೆ ಚರಿಗೆವ್ಹಗುತಂದೊಡೆ (ಪಕ್ಕಾಡಾ. ೭೭-೭೬) ; ಪಾರಣೆಯ ಏನಂಗಳೊಳಪವಧಾರಿಸಿ ಜಠರಾಗ್ನಿ ನಂದದಂದದಿನರ್ಧಾಹಾರಮನಾರೋಗಿಸುವಾಚಾರದಿನಳವಟ್ಟುದಪರೂ ಳವ ವೋದರ್ಯಂ (ಸುಳಾಪು. ೯-೩) ; ಫಡ ತೊಲಗು ಕೌರವಕೃತಾಂತನ ಪಡೆಗೆ ಪಾರಣೆಯಿಪ್ಪಾಗಳೀಗಳೆ ನಡೆಸುವೆನು ನಾಕಕ್ಕೆ ನೆಲಿದ ಮಹಾ ರಥಾವಳಿಯ (ಕುಕ್ಕಾಡ್ರೋ. ೫೦. ೨೫೮) ; ಪಾರಣೆಯಾದರೂ ಪಾರಾಯಣ ತೀರಲಿಲ್ಲ (ಗಾಚ). ೨. ತೃಪ್ತಿ ; ಸಂತೋಷ : ಅಲ್ಲವೋ ಬರಿಯ ವಾಸನೆ ಅಲ್ಲ ಬರಿ ಕಣ್ಣ ಪಾರಣೆ (ಪಾಸಿಗ. ೦೭-೦೭).

ಪಾರಣೆ ಪರ್ವ = ಪಾರಣೆ ಮಾಡುವ ಹಬ್ಬ : ಬರಿಸುವುದೊಂದೂ ರೊಳಿರ್ವಳಿನುಪಚಾರವೆರಸಿ ಪಾರಣೆ ಪರ್ವಗಳಿಗೆ ನೆರೆಯೂರೊಳು ಬಾಳುವ ನಿಜತನುಜೆಯ ಕರೆಯಿಸುವುದು ಕಾಲವಳಿತು (ಪರಿಂ. ೫-೨೯). **ಪಾರಣೆ ಮಾಡು** = ಉಪವಾಸ ಮುಗಿದ ನಂತರ ಊಟ ಮಾಡು : ಬಸವಂತಿ ತನ್ನ ಆರೋಗಣೆದುನ್ನು ಬಡಿಸಿಕೊಂಡು ಉಪವಾಸದ ಪಾರಣೆ ಮಾಡಿದಳು (ಬೀಚಿ. II, ೦೪೭). [ಸಂ. ಪಾರಣ]

ಪಾರಣೆ2 (ನಾ). ಒಂದು ಗ್ರಂಥದ ಪೂರ್ಣವಾದ ವಾಚನ (?) : ಕವಿಳಾಸಪುರದೊಳಗೆ ಸ್ವಯಂಭುವಲ್ಲಿಕಾರ್ಜುನ ಸಂಗಮೇಸ್ವರ ನಾಗೇಸ್ವರ ಯಿಂ ಮಹಾಲಿಂಗಗಂ. ಅಂಗಭೋಗ ರಂಗಭೋಗ ಜೇರ್ನೋರ್ವಾರಕ್ಕಂ ಪಾರಣೆಯ ಜಂಗಮಾರಾಧನೆಗಂ . . . ಸಲುವಂತೆ (ಎಇ. XXI. ೦೪-೬೦; 1880). [<ಸಂ. ಪಾರಾಯಣ ?]

ಪಾರಣ್ಯ, ಹಾರಣಿ, ಹಾರಣೆ (ನಾ). ಒಂದು ಬಗೆಯ ತೆರಿಗೆ : ಕೆಯ್ಗಂ ಮುಗೆಂ ತೊ ನ್ಬಕ್ಕಮರುವಣಂ ಗದ್ಯಾಣ ಮೂಱು ಪಣವಾಱು ಪರಿಪುಂ ಪಾರಣೆಯುಂ ವೊದಲಾಗಿ ಕರುಕುಳಬಾಧೆಯೊನ್ದುವಿಲ್ಲದನ್ಯಾಗಿ ಗಾವುಣ್ದರ್ ಪ್ರತಿಪಾಳಿಸುವರ್ (ಸಿಇಇ. XI-1, ೬೯-೩೬; 1045) ; ಪರಿಪು, ಪಾರಣೆ—ಇವೆರಡೂ 'ಕಿಜುಕುಳ 'ಗಳು, ಎಂದರೆ ಸಣ್ಣ ತೆರಿಗೆಗಳು (ಕಶಾಂ. ೧೦೦). **ಹಾರಣೆ** : ಆ ವೆರುಮಾಳೆವೂರರ ಮಹಾ ಜವಂಗಳು ಪಡಿಕೆ ಹಾರಣೆಯೆಂದೆನ್ನದೆ ಸರ್ವಾಬಾಧಪರಿಹಾರ ಸರ್ವ ಮಾನ್ಯಂಗಳಿಂ . . . ನಡಸಿ ಕೊಡುವರು (ಎಳ. XI, ೫೯ಕ್ರ. ೦೨-೧೩; 1286). **ಹಾರಣೆ** : ಈನ್ತಿವಱ ಪದಿವುಂ ಹಾರಣೆ ಮೊದಲಾಗೆ (ಕೂಂಶಾ. ೦೯೭೫, ಕಾತಿಪ್ರೂಕ್ಷಿ. ೯-೩೫; 955). [?]

ಪಾರಣೆಗೆಯ್ (ಕ್ರಿ). ಉಪವಾಸದ ನಂತರ ಊಟವನ್ನು ಮಾಡು : ಅಱುರೀಷವೆನಲು ದ್ವಾದಶಿ ದ್ವಿಜಭೂಸುರರಂಬಕ್ಕೆಯನ್ನದಾನಗಳ ಸಂಭ್ರಮದಲಿ ಮಾಡಿ ಪಾರಣೆಗೆಯ್ದನಾ ಕುಂಭಿನೀಪತಿ ಭಕ್ತಿಯಲಿ (ಕಂಪ. ೯-೯). [ಪಾರಣೆ + ಕೆಯ್1]

ಪಾರತಂತ್ರತೆ (ನಾ). ಇನ್ನೊಬ್ಬರ ಅಧೀನವಾಗುವಿಕೆ ; ಬೇರೆಯವರ ವಶವಾಗುವಿಕೆ : ಪುತ್ರದೋಹಳಕಾರಣಮಂ ಧಾರಿಣೀಪತಿಗೆ ಸವಿಸ್ತರಂ ಬನ್ನಿಸೆ ಕೇಳ್ದರಸನುಂ ತತ್ಪ್ರಣೋಪಗತತನೂಭವಾರಾಭಿಂತಾಪಾರ ಕೃತ್ರತೆಯಿ ವಿಷ್ಣಾನವನನುಂ ದೀನಾನನನುಮಾಗಿ (ಹಂದ್ರಕೃ. ೬-೬೨ ೬). [<ಪರತಂತ್ರ]

ಪಾರತಂತ್ರ್ಯ (ನಾ). ಅನ್ಯರಿಗೆ ಅಧೀನವಾಗಿರುವುದು ; ಪರಾಧೀನತೆ : ಶ್ರುತಿಯೊಳಗಾಡುವ ಹಾಡಿನ ತೆರದಿ ಸ್ವತಂತ್ರ ನೀನೀ ಪಾರತಂತ್ರ್ಯದಿ (ಪಚೇ. ೯-೯೯) ; ಭವ್ಯಪರಂಪರೆಯ ನಾಡು ಪಾರತಂತ್ರ್ಯದ ಸಂಕೋಲೆಯಿಂದ ಬಂಧಿತವಾಯಿತು (ಅಕ್ಕಾರ್ತ. ೨). [ಸಂ.]

ಪಾರತೆ (ನಾ). ವೀಕ್ಷಣೆ ; ನಿರೀಕ್ಷಣೆ : ಹರವಿಜಾರತೆಗಳೋ ನಿರುತ ಪಾರತೆಗಳೋ ನಿಮ್ಮೆ ತೋರತೆಗಳೊ ತಮುವಿದೂರತೆಗಳೋ (ಕಪಂ. ೪-೩೪). [<ಪಾರ್1 + -ತೆ3]

ಪಾರತ್ರಯ (ನಾ). ಪರಲೋಕ : ಹೆಂಡ್ರು ಮಕ್ಕಳಿಗಾಗಿ ಎನ್ನ ಹಿತವನೆ ಮರೆದು ಕಂಡಕಂಡವರ ಕಾಡಿ ಬೇಡಿ ಉಂಡುಟ್ಟು ಸುಖಪಟ್ಟು ವಾರತ್ರಯವ ಮರೆದು ಕೊಂಡೆಯಲಿ ನಿಪುಣನಾಗಿ ತೂಗಿ (ಪಂಕೃ. ೫೪-೬). [<ಸಂ. ಪಾರತ್ರ್ಯ]

ಪಾರತ್ರಿಕ (ಗು). ೧. ಪರಲೋಕಕ್ಕೆ ಸಂಬಂಧಪಟ್ಟ ; ಪಾರಲೌಕಿಕ ವಾದ : ವಿಹಿತವ ನಾನಾಭೋಗಮುಂ ಮತ್ತಮುನ್ನತಪಾರತ್ರಿಕಸೌಖ್ಯದೇಳ್ಗೆ ಯನಸೂನಂ ಮಾಳ್ಪ . . . ಕವಿ ನಿಂ ಬೇಗಂ ಪೊಗಳ್ (ಕೃಕೃ. ೦-೨೬); ಪಾರತ್ರಿಕಾನಂದಮುಂ ಗಳಿಪು ನಾಯಕನಾಗೆ ಮತ್ಕೃತಿಯದೇಂ ಸ್ಪಪಾಂತುದೋ ಲೋಕದೊಳ್ (ಕ್ಕುಕೂಪು. ೦-೨೨). (ನಾ). ೨. ಪರಲೋಕ : ಪರರುಜ್ಜಿಂದನನೊಂದಿದಂಮದಯದೊಳ್ ರೋಗಾನ್ವಿತಂ ದಾಲ್ಕಕಾಲ ರುದ್ಧಾರ್ತಂ ಮಲಿನಂ ಸಹಾಮನಲಸಂ ಪಾರತ್ರಿಕವ್ಯಾಪ್ತಿ[ಣಾಣಂ. ಪಾತತ್ರಿಕದ್ಯಾಪ್ತ. ಪಾತತ್ರಿಕವ್ಯಾಪ್ತಿ]ತತ್ಪರನಕ್ಕುಂ (ಣಾಚಿ. ೦೩-೦೪). ೩. ಪರಲೋಕಕ್ಕೆ ಸಂಬಂಧಿಸಿದುದು ; ಪಾರಲೌಕಿಕವಾದುದು : ಬಲ್ಲಿಕ್ಕೆ ೃಂದ್ರಮೈಹಿಕಪಾರತ್ರಿಕಭೋಗಮುಂ ಕುಡುವಿನಂ ಮಾಣಿಕ್ಕಭಟ್ಟಾರ ಕಾಂತಿಕಮುಂ ಸಾರೆ ವಿನೇಯರಾಜಿಗೆ ಜಯಂ ಭವ್ಯಂ ಶುಭಂ ಮಂಗಳಂ (ಅಂಪ. ೦೭-೬) ; ಸಾಂಸಾರಿಕ — ಪಾರತ್ರಿಕಗಳೆಂಬ ಇತ್ತರಡ ವುರು ಪಾರ್ಥಗಳೂ ನಿಕಟಸಂಬಂಧದಿಂದ ಒತಗೂಡಿ ಚಿಮರ್ವಗರ್ಗವೆನ್ನಿಸುವುದು (ಪಾಕೋಚಿ. ೪೫೪). [ಸಂ.]

ಪಾರದ (ನಾ). ೧. ದ್ರವರೂಪದ ಒಂದು ಬಗೆಯ ಲೋಹ ; ಪಾದರಸ ; ಪಾರಜ: "ರಸ ಪಾರದ ಸೂತಕ ಚಪಲ[ಸಂ]ಜ್ಞಿತಂ ಗಿರಿಶ ವೀರ್ಯಮದು ಪಾದರಸಂ" (ಪಚ್ಕೂಕೋ. ೯೪-೦೬) ; ಪಾಸರವೆನೆ ಪಾರದದಿಂ ಪೂಸಿದ ವೊಲ್ ಪೊನ್ನ ಮುಕುರಬಿಂಬಂ ಹಿಮಲಿಪ್ತಂ ನೇಸಱ ಬಿಂಬಂ ತಿಂಗಳ ಕೂಸಿನ ವೊಲ್ ಕೋಡುತಿರ್ದುದಿನ ದಿನದೊಳ್ (ಅಂಅಚ. ೯-೬); ಪಾರದಂ ಸಿದ್ಧರಸಮಾದೊಂದು ಸಂತಸಂ ಬಾಲ ನರವಂ ಕಂಡೊಡಪ್ಪುದುಂ (ಅಚಾಕೃ. ೬೬-೦೭). ೨. ಲೋಹವನ್ನು ಚಿನ್ನವನ್ನಾಗಿ ಮಾಡುವ ರಸ ; ಸಿದ್ಧರಸ : ಪಾರದಂ ವಾರದೆ ಬಂದ ತೋರ್ಕೆ ಸುಮನೋವಮಣಿಸನ್ನಣಿಹಾರದಲ್ಲಿ ಬಂದೋರನಾಮಾಗಿ ನಿನ್ನ ವರಿವನ್ದಿಜನಕ್ಕೆನಿಪೊನ್ದು ದಾನಗಂಧೀರತೆಯಾದುದೇಂ ಪೊಗಳ್ವೆಂ (ಪಚೇ. III, ಸಿಚಿದಿ. ೫೬೦-೫೬; 1408). [ಸಂ.]

ಪಾರದಂದೊಡೆ (ಕ್ರಿ). ಪಾದರಸವನ್ನು ಹಚ್ಚು,—ಲೇಪಿಸು : ಕಡೆವರೊ ಶಂಖದಿಂ . . . ರುಚಿರೋಜ್ವಲಾಂಗಮಂ ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂದೊಡೆದರೊ ವೇಲಿನಲ್ ಕರಮೆ ಕಣ್ಗೊಸೆದಿರ್ದುದು ರೂಪು ಕಾಂತೆಯಾ (ಕಾದಂಪು. ೬೬೬). [ಪಾರದ + ತೊಡೆ1]

ಪಾರದರ ' ಪಾರದಾರ ' ನೋ.

ಪಾರದರಿಗ ' ಪಾದರಿಗ ' ನೋ.

ಪಾರದರಿಗೆ (ನಾ). ಹಾದರ ; ವ್ಯಭಿಚಾರ : ಹರವರಕ್ಕನಂಗದೊಳಾ ರ ದರಿಗೆಯು ಪಚ್ಚವಂ ಕೊಣ್ಡು ಪಾದರಿಗೆಯು ಮುಗನರಿದು ಪಾದರಿಗನಂ ಕೊಲ್ವುರು (ಸಿಇಇ. IX-1, ೬೬-೬೨; 992). [ಪಾರದರ (<ಪಾರದಾರ) + -ಇಗ್6]

ಪಾರದರ್ಶಕ (ಗು). ೧. ತನ್ನ ಮೂಲಕ ನೋಡಿದರೆ ಆಚೆಯ ಕಡೆ ಇರುವ ವಸ್ತು ಸ್ಪಷ್ಟವಾಗಿ ಕಾಣಲಾಗುವಂತೆ ಬೆಳಕನ್ನು ತನ್ನ ಮೂಲಕ ಶುದ್ಧವಾಗಿ ಹಾಯಗೊಡುವ : ಕಾಡು ಪಾರದರ್ಶಕ ಪದಾರ್ಥವು (ಪುಂಬಿಯು. ೯-೨೨೦); ಬೆಳಕು ಕೆಲವು ವಸ್ತುಗಳ ಮೂಲಕ ಹೆಚ್ಚು ನಷ್ಟ ಹೊಂದದೆ ಹೊರಕ್ಕೆ ಬರುವುದು. ಇಂತಹ ವಸ್ತುಗಳನ್ನು ಪಾರದರ್ಶಕವಸ್ತುಗಳೆಂದು ಹೇಳುತ್ತೇವೆ (ಶಾಪ್ರ. ೦೫೫). (ನಾ). ೨.

ತನ್ನ ಮೂಲಕ ಆಚೆಯ ಪಕ್ಕವನ್ನು ಕಾಣಿಸುವಂತೆ ಬೆಳಕನ್ನು ಸಾಗಿಸುವಂತಹುದು : ಈ ಬರ್ಫವು ಹೆಚ್ಚು ಕಡಿಮೆ ಪಾರದರ್ಶಕವಾಗಿರುತ್ತದೆ (ಮುಂಬಯಿ. ೬-೦೯೦). 'ಅಪಾರದರ್ಶಕ' ಪರಾ. [ಸಂ.]

ಪಾರದರ್ಶಕತೆ (ನಾ). ಪಾರದರ್ಶಕ ಗುಣ : ಶಾಸ್ತ್ರಗಳ ಸಂಕ್ಷಿಪ್ತಶೈಲಿ ಇದಕ್ಕೆ ಎಷ್ಟರ ಮಟ್ಟಿಗೆ ಕಾರಣವೋ ಸಂಸ್ಕೃತಭಾಷೆಯ ಪಾರದರ್ಶಕತೆಯೂ ಅಷ್ಟರ ಮಟ್ಟಿಗೇ ಕಾರಣವಾಗಿರಬಹುದು (ಸಮಾಲೋ. ೦೩೩); ಗುಟ್ಟುಗುಟ್ಟಿನ ಗಂಟು ವ್ಯಕ್ತಿವ್ಯಕ್ತಿಗಳೆಲ್ಲ : ಈ ಗುಡಿಯುಮದರ ನಂಟು ಈ ಮಹಾಗುಟ್ಟಿನೆಡೆ ಒಬ್ಬೊಬ್ಬನೂ ಪಡೆವ ಪಾರದರ್ಶಕತೆಯನು ಅರಿವರಾರುಂಟು ? (ಮಲೆಪೇ. ೩೫-೦೦). [ಸಂ. ಪಾರದರ್ಶಕತಾ]

ಪಾರದರ್ಶಿ (ನಾ). ಯಾವುದೇ ವಿಷಯವನ್ನಾಗಲಿ ಪೂರ್ಣವಾಗಿ ತಿಳಿದುಕೊಂಡವನು ; ಪಾರಂಗತ ; ನಿಷ್ಣಾತ : ಆ ದ್ವಾರಕಿಯಲದನಱಿತು ವೃದ್ಧವಚೋವಿಶೇಷದಲಿ ಶೌರಿ ಕರೆಸಿದನಾತ್ಮವಿದ್ಯಾಪಾರದರ್ಶಿಯನೊಲಿದು ಮನದಲಿ ಸೀರಧರಸಹಿತಾತನೊಡನಿಂತೆಂದನುಚಿತದಲಿ (ಶಿಭಾಗ.೦೦-೬೭-೪೮); ಅರ್ಜುನನು ಧನುರ್ಧರನೆನಿಸಿಕೊಂಡಂತೆಯೇ ಖಡ್ಗಪ್ರಯೋಗದಲ್ಲಿಯೂ ರಥಯುದ್ಧದಲ್ಲಿಯೂ ಕೂಡ ಪಾರದರ್ಶಿಯೆನಿಸಿಕೊಂಡನು (ಭೀಷ್ಮಸ. ೫೯). [ಸಂ. ಪಾರದರ್ಶಿನ್]

ಪಾರದಾರ, ಪಾದರ$_1$. ಪಾರದರ, ಪಾರದ್ವಾರ, ಹಾದರ (ನಾ). ೧. ಮತ್ತೊಬ್ಬನ ಹೆಂಡತಿಯೊಡನೆ ಹೊಂದಿರುವ ಅನೈತಿಕಸಂಬಂಧ ; ಪರಸ್ತ್ರೀಗಮನ,— ಸಂಸರ್ಗ : ಅದು ಕಾರಣದಿಂದಂ ಮಹಾದುಃಖಕೆ ಪಾರದಾರಮೆ ಮೊದಲೆಂದು ಬೆರ್ಚಿ ಪರಸ್ತ್ರೀಯರಂ ತಾಯಂ ಕಾಣ್ಬಂತೆ ಕಾಣ್ಬುದು (ರರ್ಮಾಮ್ಯ. ೬-೦೪೩). ೨. ಪರಪುರುಷನೊಡನೆ ಇಟ್ಟುಕೊಳ್ಳುವ ಅನೈತಿಕ ಸಂಬಂಧ : ಪರಪುರುಷಗಮನ : ಸತಿ ತಪ್ಪಿ ಪಾರದಾರವ ಮಾಡಿದಲ್ಲಿ ಒಳಗಿಟ್ಟುಕೊಂಡು ಸಂದು ಸಂಶಯವಿಲ್ಲದೆ ಗುರುಲಿಂಗಜಂಗಮಕ್ಕೆ ಉದಾಸೀನವ ಮಾಡಿದಡೆ ತಪ್ಪನೊಪ್ಪಬಹುದೆ (ಮೋಳಿಮಾ. ೩೪-೨೨೪). ೩. ವ್ಯಭಿಚಾರ; ಚಾರತನ : ಪಾರದಾರ ಮಾಡಿದೊಡೆ (ಹೈಅರಿ. ೦೯೩೬, ೨೩-೩೬; 872); ಪಾರದಾರ ಮಾಡಿದೊಡೆ ಇಟ್ಟೂಱ ಇರ್ಪ್ಪತ್ತನಾಲ್ಕು ದ್ರಮ್ಮ ಆ × × ಮಿಣಕ್ಕೆಡೆ ಇಪ್ಪತ್ತ್ರ ನಾಲ್ಕು [ದ್ರ]ಮ್ಮ (ಕಇಅ. ೬೬-೦೮-೩೬; 932). **ಪಾದರ$_1$** : ೩. ಪಸೆಯೊಳ್ಳಸುರ್ವಂದರೊಳಗ್ನಿಸಾಕ್ಷಿಯೊಳ್ಕೊಂಡ ಪಾಂಡುಪತಿಯಿರೆ ದೋಷಾವಸಥರ್ಪಾದರದಿಂ ಜನಿಯಿಸಿದರ್ (ಗದಾಯು. ೩-೩೬); ಪಾದರಂ ಲೇಸು ಸಾವುದರಿದು (ರರ್ಮಾಮ್ಯ. ೬-೮೦); ಪೆಸರನಡಗಿಸಿ ಕಳವು ಪಾದರಂಗಳ ಹಿಂಸೆಯಸುವ ತೊಲಗಿಸಿ ಧರಾತಳವನಾಜ್ಞೆಯೊಳೆ ಪಾಲಿಸುವ ರಾಜಂಗಿಹಪರಂಗಳೊಳಗನುಮಾನವಿಲ್ಲ (ಶಬಪು. ೬-೦೬). **ಪಾರದರ** : ೧. ನೃಪತನಯಂ . . . ಪಾರದರದೊಳ್ ಪುಟ್ಟಿದನರಸಂಗಮರಸಿಗಂ ಪುಟ್ಟಿದನೇ (ಪಂಪಭಾ. ೦೨-೦೩೩); ಇನಿತೊಂದು ಪರಾಭವಪದಮನೆಯ್ದುವರ್ ಪಾರದರದೊಳೆಂದಾಂ ಪರದಾರನಿವೃತ್ತಿಗೆಯ್ದೆಂ (ಸುಕುಮಾ. ೭-೩೪). ೩. ನುಡಿಯಲ್ಕಾರ್ತರುಮಿಲ್ಲ ಪಾರದರದೊಳ್ ಸತ್ತಂಗಟಲ್ಡನ್ನರಾರ್ (ಪಂಪಭಾ. ೬-೮೦); ಶೋಭಮಿರ್ಪತಿಶಯತೋಷಮಿರ್ಪ ಮತವಿರ್ಪೆಡೆಯೊಳ್ . . . ಪಾರದರಮಿರ್ಪ ಪರಿಗ್ರಹಕಾಂಕ್ಷೆಯಿರ್ಪ ಕುತ್ಸಿತಮತಮಿರ್ಪುದಲ್ತು (ಅರ್ಥನೇ. ೦-೩೯). **ಪಾರದ್ವಾರ**: ೩. ಹೋಗಬಿಟ್ಟು ಮರಳಿ ಹಿಂದೆ ನೋಡಿ ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ ಅದೆ ಪಾರದ್ವಾರನಾಯಕನರಕ ತಪ್ಪದು (ಬಸವ. ೭೩೩); ಸಾವಿರ ನೋಂಪಿಯ ನೋಂತು ಪಾರದ್ವಾರ ಮಾಡಿದಂತಾಯಿತ್ತು ಅವನ ವ್ರತ (ಸರ್ವವ. ೦೮೯-೮೪೭) **ಹಾದರ** : ೧. ಶಿವನರೆವಣ್ಣನಂ ಹರಿಯ ಹಾ[ಪಾಠಾಂ. ಪಾ]ದರವಬ್ಜಜನೊಲ್ದಲಜ್ಜೆ ಹೇಟವ ನನವಿಲ್ಲ ಬಲ್ಲಹನ ಶೌರ್ಯಮಂ (ಅನಂಪು. ೦-೯೦); ಕೊಳಲರಾಗದ ರಹಿಯೊ ಕಲ್ಲಿಯ ಕಲಸುಗೂಳೋ ಹಳ್ಳಿಕಾತಿಯರೊಳಗುಡಿಯ ಹಾದರವೊ . . . ಜಯಸಿರಿಯ ಕಾಹಿನೊಳಾರು ನೀನು (ಕುಮ್ಮಾಸ. ೨-೭೬). ೩. ಸಾಸಿರನೋಂಪಿಯೊಂದೆ ಹಾ[ಪಾಠಾಂ. ಪಾ]ದರದೊಳೆ ಕೆಟ್ಟು ಪೋಕುಂ (ಸಮಶ. ೩-೬೮); ಅನ್ಯದೈವವೆಂಬುದು ಹಾದರ (ಬಸವ. ೬೦೮); ಕಳವು ಹಾದರವೆರಡಱಲಿ ತಾನಳಿದವಂಗಪಕೀರ್ತಿನರಕದೊಳಿಳಿವನಲ್ಲದೆ ಸಗ್ಗಸುಖವಿಲ್ಲ (ಕೌತಿರಾ. ೩೮-೦೩); ಹಾದರಕ್ಕೆ ಹುಟ್ಟಿದ ಮಕ್ಕಳು ಚೆನ್ನ, ಹಲವು ಸೊಪ್ಪಿನ ಮೇಲೋಗರ ಚೆನ್ನ (ಗಾರೆ).

ಪಾದರವಾಡು, ಹಾದರವಾಡು = ವ್ಯಭಿಚಾರ ಮಾಡು: ಧುರದೊಳ್ . . . ಲಂತಾಸುರನಂ ಕೊಂದಂ ಕಪಾಲದೊಳ್ತಿರಿದುಂಡಂ ಸುರಮುನಿ ಪತ್ನಿಯರೊಳ್ಪಾದರವಾಡಿದು (ಸಮಶ. ಅನುಬಂಧ I, ೩೬೨) ; ಗೊಲ್ಲರಲ್ಲಿಗೆ ಬೆಣ್ಣೆಯಂ ಕಳು ಲ್ಲಿಗೆಯ್ದಿ ಮುರಾರಿ ಗೋಪಿಯರಲ್ಲಿ ಹಾದರವಾಡಿ (ಬಸವು ೩೪-೪೦) ; ಏಡಿ ಹಾದರವಾಡೆ ಗೋಡಾರಗಪ್ಪೆಯ ಕೂಡಿ (ಸರಾಪ. ೦೦-೯). [<ಸಂ. ಪಾರದಾರ್ಯ. / ತುಳು. ಹಾದರೊ ; ಕೊಡ. ಪಾದರ]

ಪಾರದಾರಿಕ (ನಾ). ೧. ವ್ಯಭಿಚಾರ ; ಹಾದರ : ಸಾಧಾರಣಮೆಂಬಧಿಕರಣಮಂ ಚಾರಾಯಣಂ ಸಾಂಪ್ರಯೋಗಿಕಮಂ ಸ್ವರ್ಣನಾಭಂ . . . ಪಾರದಾರಿಕಮಂ ಗಾಣಿಕಾಪುತ್ರಂ . . . ಪೇಟ್ಟಿಂ (ಮದತಿ. ೦-೩೮೮). ೨. ವ್ಯಭಿಚಾರ ಮಾಡುವವನು ; ಹಾದರಿಗ. [ಸಂ.]

ಪಾರದಾರ್ಯ (ನಾ). ಹಾದರ ; ವ್ಯಭಿಚಾರ : ಚೋರವಿದ್ಯವು ಸಹಜನಿಮಗಾ ಪಾರದಾರ್ಯವು ನಿಯತ ದಿಟದಿಟ ಹಾರುವಂಗವು ಹಸನು (ಕೌತಿರಾ. ೩೬-೪೩). [ಸಂ.]

ಪಾರದಿ, ಪಾರುಧಿ, ಹಾರುದಿ (ನಾ). ಬೇಟೆ ; ಮೃಗಯೆ ; ಶಿಕಾರಿ : ಬನವಾಸಿಪುರವರಾಧೀಶ್ವರಂ . . . ಅಭಿನವಪಾರ್ಥಂ ಸುಭಟರ ತೀರ್ತ್ಥಂ [ನಿಂ]ದಿರಿವಾತಂ ಪಾರದಿಪರಸುರಾಮನುಭಯದೇಸಿವಲ್ಲಭಂ (ಪೌಇಇ. XX, ೦೦೦-೦೦; 1129); ಧಾರುಣಿಯ ಜನದ ಹುಯ್ಯಲ ನಿಲಿಸಬೇಕೆಂದು ಪಾರದಿಗೆ ಪೊಱಮಟ್ಟು ಮೃಗಪಕ್ಷಿಕುಲವ ಸಂಹಾರಿಸುತ ಹೇಮಕೂಟದಿ ಗುರುವಿರೂಪಾಕ್ಷನಂ ಕಂಡನವನೀಶನು (ಹಶಕಾ. ೩ ಸೂಸನೆ) ; ವರಪುರೇಶ್ವರ ತನ್ನ ಸೇನೆಯ ನೆರಹಿ ಪಾರದಿ[ದಿ]ಯಾಡುತಲ್ಲಿಗೆ ಸರಿದು ಬಂದನು ಜಾಮದಗ್ನಿಯ ವರತಪೋವನಕೆ (ಸಂಭಪ. ೨೬-೦೨). **ಪಾರುಧಿ** : ಮಱುದಿವಸ ಪಾರುಧಿಯನಾಡಿಯೆ ವರಮಹಾಪಾಳೆಯವ ಹೊಕ್ಕರು (ಸಂಭಪ. ಪರಿ. ೩೨೯); ನೆಱೆಯ ಕಾಲದ ದೃಷ್ಟಿ ಸುರಿಯಲು ಪರಿಹರಿಸಿ ಪಾರುಧಿಯ ಭೂಪತಿ ಮರಳುತಲೆ ಮಳೆಗಂಜಿ ಹೊಕ್ಕನು ದೈತ್ಯನಂವನೆಯ ನಿರುತಮಂದಿರದೊಳಗೆ (ಸಂಭಪ. ಪರಿ. ೩೨೯). **ಹಾರುದಿ** : ಅಖಿಳಜಗದಳಲುರಿಯ ನಂದಿಸುವ ಹಾರು[ಪಾಠಾಂ. ಪಾರ]ದಿಯೆ ಸಂಸಾರವಾರುಧಿಯನುತ್ತರಿಪ ಗುರುಪಾದವ ತಂದು ತೋಱಿತ್ತಲಾ (ಹಶಕಾ. ೩-೮೪). [<ಪ್ರಾ. ಪಾರದ್ಧಿ./ಸಂ. ಪಾರ್ದ್ಧಿ]

ಪಾರದೃಶ್ಯ (ನಾ). ದೂರದ ದೃಶ್ಯ.—ನೋಟ : ಪಾರದೃಶ್ಯವನ್ನು ಕಳುಹುವವರು, ಎದುರಿನ ನೋಟವು ಒಂದು ಕೆಮೆರಾಲೆನ್ಸಿನಿಂದ ಈ ಗೋಲಕದ ಒಳಗಿರುವ ಲೋಹದ ಹಾಳೆಯ ಮೇಲೆ ಬಿಳುವಂತೆ ಮಾಡುತ್ತಾರೆ (ಪಾರಪ್ರ. III, ೦೬೩೩). [ಪಾರ$_2$ + ದೃಶ್ಯ]

ಪಾರದೃಶ್ವ (ನಾ). ಪೂರ್ಣವಾಗಿ ತಿಳಿದುಕೊಂಡವನು ; ಪಾರಂಗತ ; ನಿಷ್ಣಾತ : ಆ ನೃಪಾಲಮೌಲಿಮಾಣಿಕ್ಯಂ ಪದವಾಕ್ಯಪ್ರಮೇಯನ್ಯಾಯರಾಜನೀತಿಭರತಸುರತಾದಿ ಸಮಸ್ತಶಾಸ್ತ್ರಪಾರಾವಾರಪಾರದೃಶ್ವನುಂ . . . ಸಕ್ಷ್ವಾಕುವಂಶಕುಶೇಶಯಾಕರಭೂಲೋಕದಿವಾಕರನುಮೆಂಬ ನೆಗಟ್ತೆಗಂ ಪೂಗಟ್ತೆಗತ್ತಳಗಮಾದಂ (ಅನಂಪು. ೨.೦೦ ವ). [ಸಂ. ಪಾರದೃಶ್ವನ್]

ಪಾರದೇಶಿಕ (ಗು). ಪರದೇಶಕ್ಕೆ ಸಂಬಂಧಿಸಿದ : 'ನವೀನಸಂಸ್ಕೃತಿಯವರಿಗೆ ಅವರೋದಿ ಅರಿತಿರುವ ಪಾರದೇಶಿಕಪಂಥದ ರೀತಿಯಲ್ಲಿ ಧರ್ಮವೆಂದರೆ ಮತವು . . . ಭಕ್ತಿಯು ಎಂದೇ ಭಾವನೆಯು (ಅರ್ಯಭ. ೩). [ಸಂ.]

ಪಾರದ್ವಾರ ' ಪಾರದಾರ ' ನೋ.

ಪಾರದ್ವಾರಿ (ನಾ). ಹಾದರಿಗ ; ಜಾರ : ಕ್ರೂರಕರ್ಮಿಗೆ ಶಥಗೆ ಪಾರದ್ವಾರಿಗೆ . . . ಇಹಪರವಿಲ್ಲ (ಇಸಂಸ. ೩-೮೦).

[ಪಾರದ್ವಾರ (<ಪಾರದಾರ) + —ಇ]

ಪಾರಪತೆಗಾರ ' ಪಾರುಪತ್ಯಗಾಱ ' ನೋ.

ಪಾರಪತ್ತೆಗಾಱ ' ಪಾರುಪತ್ಯಗಾಱ ' ನೋ.

ಪಾರಪತ್ಯ ' ಪಾರುಪತ್ಯ ' ನೋ.

ಪಾರಪತ್ಯಗಾರ ' ಪಾರುಪತ್ಯಗಾಱ ' ನೋ.

ಪಾರಪತ್ರ (ನಾ). ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡಲು ಪಡೆಯುವ ಅಪ್ಪಣೆಚೀಟಿ, ಅಧಿಕಾರಪತ್ರ ; ರಹದಾರಿ: ಭಾರತದೊಳಕ್ಕೆ ಪ್ರವೇಶ ಮತ್ತು ಅಲ್ಲಿಂದ ಉತ್‌ಪ್ರವಾಸನ ಮತ್ತು ನಿರ್ವಾಸನ ; ಪಾರಪತ್ರಗಳು ಮತ್ತು ದೃಷ್ಟಾಂಕಗಳು (ಶಾರಾಪ. ೨೬೯).

[ಪಾರ್ಯ + ಪತ್ರ]

ಪಾರಮಾರ್ಥ (ನಾ). ೧. ಮಹೋನ್ನತವಾದ ಸತ್ಯ. ೨. ಒಳ್ಳೆಯದು; ಉತ್ತಮವಾದುದು : ನೀರ ಬೊಬ್ಬುಳಿಕೆಯ ಕರ್ಬೊನ್ನೊಳೆ ಕಟ್ಟಿಯಾ ರೈಕೆಗೆಯ್ವ ಮರುಳನಂತೆ ಶಾರೀರಸೌಖ್ಯವ ನಿಜವೆಂದು ತಿಳಿವುದು ಪಾರಮಾರ್ಥವೆ ಬಲ್ಲವರಿಗೆ (ಕ್ರಿಕುಂ. ೯-೨೬). ೩. ಪರಮಾರ್ಥಕ್ಕೆ ಸಂಬಂಧಿಸಿದುದು ; ಮೋಕ್ಷ : ವಿಭ್ರಾಂತಿಯ ಪೊಂದಿ ದೂಷಿತನುದಾಗಿ ನಿರಂತರಪಾರಮಾರ್ಥಸಚ್ಚಿಂತನೆಯುಂ ತೊಲಂಗಿಸಿ (ಅಮಕ. ೫೫).

[< ಪರಮಾರ್ಥ]

ಪಾರಮಾರ್ಥಿಕ (ಗು). ೧. ಪರಮಾರ್ಥಕ್ಕೆ ಸಂಬಂಧಿಸಿದ ; ಮೋಕ್ಷಮಾರ್ಗಕ್ಕೆ ಸಂಬಂಧಿಸಿದ : ಮುಕುಳಿತಕರೋಪೇತಂ ದೂತಂ ಪ್ರಜಾಪತಿ ಪಾರಮಾರ್ಥಿಕವಚನಸದ್ಭಾವಂ (ಶಾಂತಿಪು. ೩-೩೭); ನಿಮ್ಮ ನಿಮ್ಮ ಕರ್ಮಗಳನ್ನು ಅನಾಸಕ್ತವಾಗಿ, ನಿಮ್ಮ ನಿಮ್ಮ ಯೋಗ್ಯತೆಗನುಗುಣವಾಗಿ ಮಾಡುತ್ತ ಹೋಗಿರಿ. ಅದರಲ್ಲಿಯೇ ನಿಮ್ಮ ಐಹಿಕ, ಪಾರಮಾರ್ಥಿಕ ಸುಖವಿದೆ (ರರ್ಮಾಸಾ. ೦೩೬). ೨. ತತ್ತ್ವವಿಚಾರದಲ್ಲಿ ಮನಸ್ಸನ್ನು ತೊಡಗಿಸಿದ. ೩. ಶ್ರೇಷ್ಠವಾದ ; ಮುಖ್ಯವಾದ. (ನಾ). ೪. ಪರಮಾರ್ಥಕ್ಕೆ ಸಂಬಂಧಿಸಿದುದು ; ಮೋಕ್ಷಮಾರ್ಗಕ್ಕೆ ಸಂಬಂಧಿಸಿದುದು : ಪಾರಮಾರ್ಥಿಕ ವ್ಯಾವಹಾರಿಕ ಪ್ರಾತಿಭಾಸಿಕ ತುಚ್ಛವೆಂದು ಪದಾರ್ಥಗಳು ನಾಲ್ಕಾಗಿ ತಿಳಿಯಲಕ್ಕುಂ (ಪಂಚಿ. ೨೦) ; ಮಾನವನ ಜೀವನಸಂಗ್ರಾಮ ಹೇಗೆ ದ್ವಿಮುಖವೊ ಹಾಗೆಯೇ ಮಾನವನ ಅನ್ವೆ ಪಣೆಗೆ ವಿಷಯವಾದ ವಿಶ್ವವೂ ದ್ವಿಮುಖ—ಪಾರಮಾರ್ಥಿಕ ; ವ್ಯಾವಹಾರಿಕ; ನಿತ್ಯ ; ಅನಿತ್ಯ (ಮಾಸ್ಕಾ. ೩ ಪೀಠಿಕೆ); ನಾನು ಎರಡು ಕೃತಿಗಳನ್ನು ರಚಿಸಿರುವೆನು. ಒಂದು ಲೌಕಿಕ, ಇನ್ನೊಂದು ಪಾರಮಾರ್ಥಿಕ (ಬಾಸಸಂ. ೬). ೫. ಪರಮಾರ್ಥವನ್ನು ಕುರಿತ ಚಿಂತನೆ ; ತತ್ತ್ವವಿಚಾರ : ಇವರು ನಿಶ್ಚಿಂತರಾಗಿ ವೃದ್ಧರಾಜಮಾತೆಯೊಡನೆ ತಮ್ಮ ಉಳಿದ ಆಯುಷ್ಯವನ್ನು ಪಾರಮಾರ್ಥಿಕದಲ್ಲಿ ಕಳೆಯುತ್ತಿದ್ದರು (ಸಪಕಿ. ೨೯). ೬. ಅತಿಶ್ರೇಷ್ಠವಾದ ಸತ್ಯ : ಅದ್ವೈತವೇದಾಂತದಲ್ಲಿ ಪರಮಾತ್ಮನನ್ನು ವಿನಾಯಿಸಿ ಭೇರೆ ಯಾವ ವಸ್ತುವೂ ಪಾರಮಾರ್ಥಿಕವಾಗಿ ಇರುವುದಿಲ್ಲ (ಶಕ್ತಿ. ೦೦). ೭. ವಿಚಾರಮಾಡತಕ್ಕವನು ; ಬಲ್ಲವನು ; ಪ್ರಾಜ್ಞ : ಪಾರಮಾರ್ಥಿಕನೆಂದೊಡೆ ಪ್ರಾಜ್ಞನೆಂಬುದರ್ಥಂ (ಮಸೋಪಿ. ೬-೦೭ ಪೀಠಿ) ; ಒಂದೆ ಜಾಗ್ರದಿ ವ್ಯಾವಹಾರಿಕನೆಂದು ಸ್ವಪ್ನದಿ ಪ್ರಾತಿಭಾಸಿಕನೆಂದು ಸುಪ್ತಿಲಿ ಪಾರಮಾರ್ಥಿಕನೆಂದು ಪೆಸರದಕೆ (ಅಮೃತ. ೯-೨೯); ಸುಷುಪ್ತ್ಯವಸ್ಥೆಯಲ್ಲಿಯೂ ವ್ಯಷ್ಟಿಕಾರಣಶರೀರದಲ್ಲಿಯೂ ಅಭಿಮಾನವ ಮಾಡಿದ ಜೀವನಿಗೆ ಪ್ರಾಜ್ಞನೆನುತಲೂ ಪಾರಮಾರ್ಥಿಕನೆನುತಲೂ . . . ಹೆಸರು (ಪೇಸಾರ. ೬).

[ಸಂ.]

ಪಾರಮೇಶ್ವರಾಗಮ (ನಾ). ಆಗಮಂಗಳಲ್ಲಿ ಒಂದು ಬಗೆ : ಆ ಸಿದ್ಧಾಂತ ಭೇದಂಗಳಾವಾವವೆಂದೊಡೆ ಕಾಮಿಕಾಗಮ ಯೋಗಜಾಗಮ . . . ಪಾರಮೇಶ್ವರಾಗಮ ಕಿರಣಾಗಮ ವಾತೂಲಾಗಮವೆಂಬವಿಪ್ಪತ್ತೆಂಟು ದಿವ್ಯಾಗಮಗಳಕ್ಕುಂ (ಪಂಚಿ. ೬೮). [ಸಂ.]

ಪಾರಮೇಷ್ಠ್ಯ (ನಾ). ಬ್ರಹ್ಮಪದವಿ ; ಬ್ರಹ್ಮತ್ವ : ಪಾರಮೇಷ್ಠ್ಯದ ಪರಮವಿಭವದ ಸಾರಭವನವದಾಯ್ತು (ಪಾಗ ೦೦-೯-೦೦); ಪಾರಮೇಷ್ಠ್ಯದ ತನ್ನ ನಿಜಪದಸಾರಸುಖವಜ್ಞಾನ ಮೂಢಶರೀರಿಗಳಿಗಳವಡದೆನುತ ಮನದೊಳಗೆ ಕರುಣಿಸಿದ (ಪಾಗ. ೦೦-೨೯-೩೯). [ಸಂ.]

ಪಾರಮೈಶ್ವರ್ಯ (ನಾ). ೧. ಅತಿಶಯವಾದ ಸಿರಿ ; ಉತ್ಕೃಷ್ಟವಾದ ಸಂಪತ್ತು. ೨. ಚಕ್ರವರ್ತಿತ್ವ ; ಸಾರ್ವಭೌಮತ್ವ : ಉತ್ತರಾಪಥದ ರಾಜರನ್ನು ಗೆದ್ದು ಅವರಿಂದ ಪಾಳಿಧ್ವಜಾದಿ ಪಾರಮೈಶ್ವರ್ಯಸೂಚಕ ಚಿನ್ಹಗಳನ್ನು ತೆಗೆದುಕೊಂಡನೆಂದು ಬರೆದಿದೆ (ಕಸಾಲಿ. ೮೨). [ಸಂ.]

ಪಾರಮ್ಯ (ನಾ). ೧. ಪರಾಕಾಷ್ಠೆ ; ತುತ್ತತುದಿ : ' ಬಾಳಗಂಗಾಭರಟಳಕ ' ಎಂಬ ಹೆಸರು ಕಿವಿಗೆ ಬಿದ್ದೊಡನೆ . . . ಅಪ್ರತಿಮಪ್ರೋತ್ಸಾಹ, ಪ್ರಸ್ಫುಟಿತ ಗಾಂಭೀರ್ಯ, ಪರಿಣತಿಯ ಪಾರಮ್ಯ—ಇವೆಲ್ಲವೂ ಮನಃಪಟಲದೆದುರು ಸುಳಿದುಹೋಗುತ್ತವೆ (ರರ್ಮಾಸಾ. ೦೨೯). ೨. ಪ್ರಾಧಾನ್ಯ : ಜೀವ ಮಾನುಷ್ಯದೊಳು ಪಡೆವಮಿತಭಾವಗಳ ಪಾರಮ್ಯವಿಲ್ಲೆಂಬ ಭೂಮಾನುಭೂತಿ (ಮರಿದೇ. ೫೯-೬); ಈ ಗ್ರಂಥಗಳಲ್ಲಿ ದೇಶಭಾಷೆಗೆ ಕೊಟ್ಟಿರುವ ಪ್ರಾಶಸ್ತ್ಯ, ಜಾತಿಕುಲಗೋತ್ರಗಳನ್ನು ಬದಿಗೊತ್ತಿ ಭಕ್ತಿಗೆ ಕೊಟ್ಟ ಪಾರಮ್ಯ, ಅತಿಶಯ ಬೆಲೆಯುಳ್ಳದ್ದೆಂದು ಇಂದಿನವರಿಗೆ ತೋಚದೇ ಇರದು (ಶಾರದ. ೩೯೮). ೩. ಶ್ರೇಷ್ಠತೆ : ಸತ್ಯ, ಅಹಿಂಸೆ ಮತ್ತು ಗುರಿಯನ್ನು ಸಾಧಿಸುವ ಸಾಧುಮಾರ್ಗ—ಇವು ಮೂರೂ ಪರಸ್ಪರ ಸಂಬಂಧವುಳ್ಳವುಗಳಾಗಿವೆ ; ಮತ್ತು ನೀತಿನಿಯಮಗಳ ಹಿರಿಮೆಯೂ ಪಾರಮ್ಯವೂ ಅವಕ್ಕೆ ಮೂಲಾವಲಂಬನ (ಕ್ರಿಯಾಶಿ. ೦೩೯). [ಸಂ.]

ಪಾರಯಿಸು, ಪಾರಯ್ಸು, ಪಾರೈಸು, ಹಾರಯಿಸು, ಹಾರಯ್ಸು, ಹಾರವಿಸು$_1$, ಹಾರೈಸು (ಕ್ರಿ). ೧. ಬಯಸು ; ಅಪೇಕ್ಷಿಸು : ಮೇರುನಗೋಪಕಂಥವನದೊಳ್ ವನಕೇಳಿವಿಳಾಸಮಂ ಸ್ವಯಂಧೂರವಾಣಾಂಬುರಾಶಿವಿಲಸತ್ತಟದೊಳ್ ಜಲಕೇಳಿಲೀಲೆಯಂ ಪಾರಯಿಸಿರ್ದುದಂ ನೆನೆವೊ ನೀಂ (ಅಪಿಪು ೩-೮೩) ; ಪರಿವರ್ತಿತ ಕಟಾಕ್ಷಕಿರಣಾಕ್ಷತಂಗಳಿಂ ನಿಜಾಂಘ್ರಿಗಳನರ್ಚಿಸುವ ಕನ್ಯಾರತ್ನಮಂ ನಿಜಕುಲಕ್ಕಿದುವೆ ಚೂಡಾರತ್ನಮೆಂದು ನೋಡಿ ಪಾರಯಿಸಿ[ಪಾಕಾಂ. ಯ್ಸಿ] ಪಲವಂ ನಲ್ವರಕೆಯಂ ಪರಸಿ (ಪರ್ಶಪು. ೩-೯೭ ಪ). ಪಾರಯ್ಸು : ೧. ಅದರ್ಕೆ ಪಾರಯ್ಸಿ ಸೌಭಾಗ್ಯಶಾಳಿ ವಿಟನಿಂತೆಂದಂ (ಶಾಂತಿಪು. ೯-೬೩ ಪ); ಸಯ್ಪಂ ತೊದಳೊಳ್ಪೊದಟ್ಟ ನುಡಿಯಂ ಪಾರಯ್ಸಿ[ಪಾಕಾಂ. ರೈಸಿ] ಕೇಳಲ್ಕೆ ನೋನೆನೊ (ಸುಳುಮಾ. ೯-೦೦೩). ಪಾರೈಸು : ೧. ಆ ರಾಜಸುತಂ ಪಸಿದೆಂ ನೀರಡಸಿದೆನೆನಗಿವಲ್ತದಲ್ತಲ್ತೆನ್ನಂ ಪಾರೈಸಂ ಪಲವಂ (ಅಪಿಪು. ೩-೮೮) ; ಆ ರಮಣೀರಮಣರ ಶೃಂಗಾರರಸಾಪೂರ್ವತರ ತರಂಗಿಣಿಯೊಳದೇಂ ಪಾರೈಸಿ ತೊಟಲ್ದುವೊ ರಸಪೂರದ ಮಿಂಗಳನೆ ಪೋಲ್ತು ನೋಟ್ಟರ ಕಣ್ಗಳ್ (ಸಂಧ್ರಪು. ೬-೭೭) : ಅದ್ಭುತವೆನಿಪ್ಪುತ್ಪಾತವೊಂದಲ್ಲದಬ್ಜವಿಕಾಸಂ ನೆಲೆಗೊಂಡು ಕೋಕಮಿಥುನಂ ಪಾರೈಸಿರಲ್ ಮಬ್ಬು ಪಿಂಗುವುದೇ (ಪಳಸಂ. ೩೯೭). ಹಾರಯಿಸು : ೧. ಧಾರುಣೀಪತಿ ಧರ್ಮಸುತ ತಾ ಹಾರಯಿಸಿಯಿಹುದೆಂದು ಕುಂತೀನಾರಿ ತಾ ಪತಿಕರಿಸೆ ಪಾರ್ಥನು ಚಲುವಮತವೆಂದ (ಸಂಭಪ. ೨೩-೮೬) ಎನ್ನ ಪ್ರಾಣನಿಮ್ಮ ಪ್ರಸಾದವನೆ ಹಾರಯಿಸುತಿರ್ಪುದಯ್ಯಾ (ಅಪಿಂದೇ. ೦೮೨-೬೬); ಆರೋಗ್ಯಭಾಗ್ಯವನು ಮನಕೆ ತನುಗೆಂತಂತೆ ಹಾರಯಿಸುವೊಡೆ ಹಲವು ಸರಳನೀತಿಗಳ ಧಾರಯಿಸು ನೆನಸಿನಲಿ ನುಡಿಯಲ್ಲಿ ನಡತೆಯಲಿ ಪಾರಾಗು ಸುಳಿಯಿಂದ (ಮುಂಳುಳ. ೮೦೬). ೨. ಒಳ್ಳೆಯದನ್ನು ಬಯಸು ; ಶುಭ

ಕೋರು ; ಹರಸು : ಈ ಸಂಸ್ಥೆಯು ಕೆಲಸ ನಾನಾಮುಖವಾಗಿ ಹಬ್ಬಲೆಂದು ಹಾರಯಿಸುತ್ತೇನೆ (ಕುಟಾಂ. ೦೨೮). ೩. ಎದುರು ನೋಡು : ನಿರೀಕ್ಷಿಸು ; ಕಾಯಿರಿ : ರಾಜಕುಮಾರಿ ಬನದೊಳ್ಪುಲ್ಲೆಲೆದು ನಿಂತಾಲಿಸುತ್ತೆ ಮರಳಿ ಮುಂಬರಿದು ಹಾರಯಿಸಿ ನಿಡುನೋಟಪಟ್ಟುತ್ತೆ . . . ಸಮ್ಮಸಾಚಿಯನರಸುತಿರೆ (ಜೈಮ್ಹಾ. ೫೦-೩೧೮). ೪. ಸಂತೋಷ ಪಡು ; ಮೆಚ್ಚು : ನಿತ್ಯನುರವಣಿಸಿ ಬರುತಿರ್ದನುಮ್ಮಹದಲ್ಲಿ ಹಾರಯಿಸುತಂ ಹಿಗ್ಗುತಂ ಹೊಂಗಿ ಹೊಗಳುತಂ ತೀರದೆನ್ನಳವಲ್ಲ ನಿಷ್ಠೆ ಪರಿದೆನ್ನುತಂ (ಹಯ. ಕ್ರೀ. ೦೦-೦೩); ಕಂಗಳವಟ್ಟು ಬೆಳೆದೆಳೆಯು ದರ್ಭೆಯಂ ಕಂಡು ಹಾರಯಿಸಿ . . . ಕುಡುಗೋಲ್ವಿಡಿದು ಸಾರ್ದಂ (ಹಹಾ. ೦೨-೬). **ಹಾರಯ್ಸು** : ೧. ಬಜೆರೆ ಬಳಲಬೇಡಮ್ಮಾರ್ಲಿ ಹಾರಯ್ಸು [ಹಾಹಾಂ. ರೈಸ]ದಿರ್ದಯವನು (ಕೃಬಾಹಾ. ೦೬-೩). ೨. ಮೇಲಣ ಜಗದ ಜನ ಹಾರಯ್ಸು [ಹಾಹಾಂ. ರೈಸಿ] ತಲೆದೂಗುಗಳಲಿರಲಿದ್ದೆಸಯ ಬಲ ಮೆಜಿದುದು ಮಹಾಹವವ (ಕೂಪಹಾ. ೬-೦೯-೨೦). ೩. ಬರವನೇ ಹಾರಯ್ಸು [ಹಾಹಾಂ. ರೈಸಿ] ಕೃತಿಯಾದ ಕೌಸಲಿಗೆ ರಾವುಪಧಿವಂದಿಸಿದನು (ಕೃಬಹಾ. ೦೬-೯). ೪. ಊರುದ್ವಯದೊಳ್ ಕರದೊಳ್ ಚಾರು ಭುಜಾಗ್ರಂಗಳೊಳ್ ಸುದಾಹುಗಳೊಳ್ ಪೃಥ್ವೋರಃಸ್ಥಳದೊಳ್ ಗಿರಿಸುತೆ ಹಾರಯ್ಸುತೆ ಬಸುಪಾಪಾಲೆಬುಂ ಪಸರಿಸಿದಳ್ (ಗಿರಿ. ೩-೮೦): ಹರುಷದಿಂದ ಏನಾಕ ಹಾರಯ್ಸಿದನು ಪೊಯ್ಸಿದನುಳಿಳ್ಳೇರಿಗಳ ನಾಕಪತಿ . . . ರಾವಣಿಯ ಮಾರಣದಲಿ (ಕೂಪಹಾ. ೬-೮೪-೩೯). **ಹಾರವಿಸು**$_1$: ೧. ಹಾರವಿಸಿ ನಲಿದೆತ್ತೆ ಕಿಂಚಿತಾ ಧಾರವಿಲ್ಲದೆ ಕೈಗೆ ಸೋಂದೆ ಸಾರತೇಜಃ ಪುಂಜತನು ಶಿಶು ತನ್ನ ಕೈಯೊಳಗೆ ಪೂರವಿಸಿಕೊಂಡಿರಲು (ಕ್ರಕುಲ. ೬-೫೩) ; ಕಲ್ಲಿದೆಯೊಳಿರ್ದು ಹಾರವಿಸಿದನು ಪಿಡಿದು ಮೆಟ್ಟಿದ ಕೊಂಬೆಗಳ್ಮಂರಿದುವೇ ಇಲ್ಲ ತನಗಿನ್ನು ಗತಿ ಸೆರೆಗಳಂ ಬಿಡಿಸುವವರಿಲ್ಲೆನ್ನು ... ಎಂದು ಮೊರೆಯಿಟ್ಟಳು (ಕುಶಾಗ. ೬-೨೯). ೩. ಹರಿಯು ಬರವಿಗೆ ಹಾರವಿಸಿ . . . ಮೆರೆದಿಹವು ತೋರಣಾಗಳಶ್ರೇರದಲ್ಲಿ ಸಾಲ್ಗೆರೆದು (ಕೂಗಡು. ೬-೦೦). ೪. ನೋಡಿರೆ ಬಸವಸುಖಾವಾರನಂ ನೀವೆಸಲು ಸರ್ಬರು ಕಂಡು ತಾವಾಗ ಹಾರವಿಸಿ ಹೊಡವಂಟು (ಜಚಕ್ಕ. ೩-೨೮) ; ತಂಗಿಯ ನಾರು ಸೋಲಿಸುವವರು ತಾವಾರಿಲ್ಲ ನೃಪರೊಳಗೆ ಭೂರಿವಿಪ್ರರ ಮಧ್ಯದಲ್ಲಿನ್ನಾರದುಂಟೆಂದೆನುತ ಮನದಲಿ ಹಾರವಿಸಿ ಶ್ರೀಕಂಠವರವಿದು ಸಿದ್ಧಿಸುವುದೆಂದ (ಹಂಕಪ. ೬೦-೨೦); ಹಾಡುವ ಹಾರವಿಸುವಸುರೆಯರ . . . ಕಂದು ಹೇಸುತ ಹನುಮ ಹೊಱವಂಟ(ಕೂಪಾ. ೩-೨-೬೬). **ಹಾರ್ಪೆಸು**: ೧. ನೀರೊಳಗಣ ವೆನತಾತೆಪೊಲಾರೆಬ್ಬಿವೊಡಮಾರುಳಿವಂದು ಪುರುಳ್ಳಿದ ಹುಂಕಾರದೆಸೆ ದಾತು ಬಲ್ಗೆಗೆ ಹಾರ್ಪೆಸುವರೇಕೆ ಬಯಕೆಗವಿಗಳ್ ಕೆಲಬರ್ (೧೮ಹಾಪ. ೦-೩೯); ಹರನ ಕರುಣಕ್ಕೆ ಹಾರ್ಪೆಸಿ ಭಕ್ತಿಭರದಿಂ ಭಾರ್ಪೆಸಿ (ಪಚ. ೪-೬೦); ಹರಿ ವೆಚ್ಚನಯ್ಯ . . . ಹಣವಿಗೆ ಹಾರ್ಪೆಸಿಕೊಂಡು ಕಿರುವಶಿಗೊ೯ೋಹರ ಕಂಡು ಹಣಕಾಸು ಕೊಂಡು ಬಂದು ಸ್ವಾಮಿಯು ನೋಡುವವಗೆ (ಕುರಾಪ. ೨-೬೪-೪); ನಾನೆಂದೂ ಅವರಿಗೆ ಕಡಕು ಹಾರ್ಪೆಸೊಲ್ಲ (ಕುಸಲ. ೬೬೨). ೨. ಮಂಗಳವೃತ್ತಂಗಳನೋದಿ ಪೊಗಟ್ಟು ಹಾರ್ಪೆಸಿ ಪರಸುವ ಪಂದಾರುವ್ಯೇದಾರಕರ ಸಂದಣಿಗಳೊಳಂ . . . ಅತ್ಯುತ್ಸವೋತ್ಸವಪ್ರಕ್ಷೋಭಿತವಾಗಿರ್ದುದು (ಅಕಂಪ್ರ. ೩-೩ ೪) ; ಈ ವಿವಾಹ ನಿರ್ವಿಘ್ನವಾಗಿ ನೆರವೇರಲಿ ಎಂದು ಹಾರ್ಪೆಸದವರು ಒಬ್ಬರೂ ಇಲ್ಲ (ಕ್ರಚಾಪ ೦೦೬). ೩. ತರುಣಿಯರು ವೀಧಿವೀಧಿಯೊಳಡ್ಡಗಟ್ಟಿ ಸ್ಪಂದರ ನಿವ್ಮ ಬರವ ಹಾರ್ಪೆಸುತಿರ್ದರು (ಕೌಂದ. ೦೩-೦); ಆರ ಹಾರ್ಪೆಸಿದರೇಸುಂಟು ಬಜಿನೀರ ಕಡೆದರಲ್ಲೇನುಂಟು (ಕುರಂದ. ೦-೦೫೪ ಪದ್ಯ); ಬಾಯಾರಿ ಹೋದರೆ ನೀರೊಡನೆ ಬತ್ತುವುದು. ತಾಯು ಸೋದರರೆಂದು ಹಾರ್ಪೆಸಲು . . . ಮಾಯವಾಗುವರು ಮೆಲ್ಲನೆ ದೂರದಿಂದ (ಕಾಪ್ರ. ೩೦-೦). ೪. ಅಯ್ಯೋ ಏ ನೋಡಿದರೆ ನೋಡು ನೋಡದಿದ್ದರೆ ಮಾಣಾ ನಾ ವಿನ್ನ ನೋಡಿ ಹಿಗ್ಗಿ ಹಾರ್ಪೆಸಿದಲ್ಲದೆ ಸೈರಿಸಲಾಜೆಯಮ್ಮ (ಕುಪಾರ್ಥ. ೬. ೪೯-೬೩) ; ಚಿತ್ತದಲಿ ಹಾರ್ಪೆಸಿ ಪಗುತಲು ಮತ್ತೆ ಸುವ್ಮಾದದಲಿ ಬಂದಳು ಮತ್ತಗಜಗತಿಯಿಂದಲಾ ಸಭೆಯದಲಿ ಮದವಮಿ(ಕ್ರಕುಲ. ೩-೪೦) ; ಮಾನಿಪತಿ ಚಿತ್ತದಲಿ ಹಾರ್ಪೆಸಿ ಹರಸಿದನಂಜನಾಸುತನ (ಕೂಪಾ. ೩-೦-೩೩). [<ಪಾರ್$_1$ + –ಇಸು$_3$]

ಹಾರಯ್ಸು ' ಪಾರಯಿಸು ' ನೋ.

ಪಾರಲೌಕಿಕ (ಗು). ೧. ಪರಲೋಕಕ್ಕೆ ಸಂಬಂಧಿಸಿದ ; ಪರಲೋಕದ : ಪುಸ್ತಕಗಳೆಂಬ ಗುರುಗಳು . . . ಲೌಕಿಕ ಮತ್ತು ಪಾರಲೌಕಿಕ ವಿಷಯಗಳ ಪರಿಜ್ಞಾನ ಮಾಡಿಕೊಡುವರು (ಗ್ರಂಪಾಂ. ೨); ಸತ್ಯಂ ಎಂದರೆ ಪಾರಲೌಕಿಕ ಸದ್ರೂಪಿಯಾದ ಬ್ರಹ್ಮವೆಂತಲೂ ಅರ್ಥ ಮಾಡುತ್ತಾರೆ (ಪಾಪಂ. ೪೨, ೨೩೮). (ನಾ). ೨. ಪರಲೋಕಕ್ಕೆ ಸಂಬಂಧಿಸಿದುದು : ವೀಕ್ಷ : ಮಂಗನಸೇವೆನೆ ಪಾರಲೌಕಿಕವಗಡಹುದಪಖ್ಯಾತಿ ತನ್ನನು ತೊಂಪುದ್ಧಿಷದಲ್ಲಿ (ಕುಪ್ರಾಂ. ೦೦-೦೬) ; ದಶರಥಂ . . . ಪಾರಲೌಕಿಕದಿಷ್ಟಿಗೆ ತನ್ಮಾತ್ಮನಂ ತಿರುಗಿಸಲ್ಕೆಳಸಿ, ಸಚಿವರಂ ಗುರುಗಳಂ ಪ್ರಜೆಗಳಂ ಕರೆದೊಕ್ಕೆದಂ (ಶ್ರೀರಾಪು. ೩೬-೭೬). [ಸಂ.]

ಪಾರಲೌಕಿಕವಿಧಿ (ನಾ). ಸತ್ಪರಿಗಾಗಿ ಮಾಡುವ ಕ್ರಿಯೆ ; ಉತ್ತರ ಕ್ರಿಯೆ : ಅಪರಕರ್ಮ : ದವಿತಾರಿಯು ಭುಜಬಲವಿಶ್ರುತದಳಿಗೆ ಮಚ್ಚಿ ಮಚ್ಚುಗುಡಿಸುವವೊಲನುಶ್ರುತದಿಂ ನೀರ್ಗುಡಿಸಿ ಯಥಾಶ್ರುತದಿಂ ಪದವಡಿಸಿ ಪಾರಲೌಕಿಕವಿಧಿಯಂ (ಕಾಂಶಕು. ೪-೩೮). [ಪಾರಲೌಕಿಕ + ವಿಧಿ]

ಪಾರವಶ್ಯ (ನಾ). ೧. ಬೇರೆಯವರಿಗೆ ವಶವಾಗುವುದು ; ಪರಾಧೀನತೆ : " ಪರವಸವೆಮೆಂಬುದು ಪಾರವಶ್ಯಮೆಂದೆಸವರ್ಥಂ " (ಪಚಂ. ೦೦೪). ೨. ಆನಂದದ ಪರವಶತೆ,– ವೈಮರೆವು : ಅತ್ತಲೊಬ್ಬಯ್ಯಂ ಶಿವಾವಂದೋತ್ಕರ್ಷವಂ ತಾವೆಂಬ ಪೆಸರಂ ಪೊತ್ತು ಲಿಂಗಧ್ಯಾನತದ್ಗತಪಾರವಶ್ಯದಲಿ . . . ಸಮಾಧಿಸ್ಥನಾಗಿರಲು (ಬಚಕ್ಕ. ೩೪-೯). [ಸಂ.]

ಪಾರದಾರಿ (ನಾ). (?) : ಪೊಗೆ ಭೋಗೆಯುಂ ಪಾರದಾರಿಯುಂ x x x ಲವೆದಾದೋನುಂ ಕೊಟ್ಟೋನುಂ(ಎಗ್ರ. IV. ಕಿಗ್ಕಿ. ೧೬-೩; ಸು. ೭೫೦).[?]

ಪಾರವೆಯ್ದಿಸು (ಕ್ರಿ). ೧. ದಡವನ್ನು ಸೇರಿಸು ; ದಾಟಿಸು : ಘೋರ ತವನಿಸ್ತಾರಪಟು ಸೂಸಾರಪಾರಾವಾರವಂ ಏಗೆ ಪಾರವೆ[ಹಾಹಾಂ. ವ]ಯ್ದಿಸಲಾವುವಾಪತನೂಳವನೆ ಬಾರಾ (ಜಚಕ್ಕ. ೫೪-೧೦). ೨. ತುದಿ ಮುಟ್ಟಿಸು ; ಕೊನೆಗಾಣಿಸು : ಪೂರವಾಗಿಜ ನಿಮ್ಮ ಕೃತಿಯಂ ಪಾರವೆ [ಹಾಹಾಂ. ವ]ಯ್ದಿಸಿ ಪೊರೆವುದಮ್ಮನುದಾರವಾಹಿವಾಗಾರ ಬಸವ ಕುವಾರ ಭವದೂರ (ಜಚಕ್ಕ. ೦-೬). [ಪಾರ್ಶ + ಎಯ್ದಿಸು]

ಪಾರವೆಯ್ದು (ಕ್ರಿ). ದಡವನ್ನು ಸೇರು ; ದಾಟು ; ಪಾರಾಗು : ಹೆದ್ದೊಱೆಯವೞಿ ತಡಿಗೆ ದಾಂಟಿಸುವ ತೋರವಜ ಬಲುದವ್ವವೆರೆ ವಾನಹಾರಿ ಸೋರೆಯೋಡಂ ಪಿಡಿದು ತಾಂ ಪಾರವೆ[ಹಾಹಾಂ. ವ]ಯ್ದುವೆ ನೆಂಬವನೆವೊಲು ಕೇಳು ಜಗದೇವಾ (ಜಚಕ್ಕ. ೬೦-೧೬).

[ಪಾರ್ಶ + ಎಯ್ದು]

ಪಾರಶವ (ನಾ). ೧. ಒಂದು ಬಗೆಯ ಲೋಹ ; ಹದವಾಡಿದ ಕಬ್ಬಿಣ; ಉಕ್ಕು. ೨. ಒಂದು ಬಗೆಯ ಕಬ್ಬಿಣದ ಆಯುಧ : " ಪಾರಶ [ಹಾಹಾಂ. ಸ]ಮನೆ ಶಸ್ತ್ರ "(ಹುಂಗಾಹಾ. ೪೦-೩). ೩. ಬ್ರಾಹ್ಮಣನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದ ವರ್ಣ. [ಸಂ.]

ಪಾರಶಿಕ, ಪಾರ್ಸಿಕ (ನಾ). ೧. ಪರ್ಷಿಯಾದೇಶ ; ಇರಾನ್ : ಪಡೆದುದು ಭೂರಿಬಲ . . . ವಿಂಧ್ಯ ಬೋಟಕ ಪಾರಶಿ[ಹಾಹಾಂ. ಸಿ]ಕ ಸಾಂಬ್ರಾಣಿ ಹುರುವಂಜಿಗಳ ಬಳಿವಿಡಿದು (ಕೂಪಾ. ೬-೬-೯). ೨. ಪರ್ಷಿಯಾದೇಶದ ವ್ಯಕ್ತಿ : ಜಡಗತಿಯ ಕೋಸದುಗ್ಗಡದ ಕೇಳಿಯ ತಕ್ಕ ನುಡಿಯವಳೆ ಪಾರ

ಶಿಕದವಳಸಿಯಳೆ (ಜಪಸ. ೬-೨೦). ೩. ಪರ್ಷಿಯಾದೇಶದ ಕುದುರೆ.

ಪಾರ್ಸಿಕ : ೨. ಕಾಳಗವೆ, ಶಾಂತಿ ನಿನಗಿಲ್ಲೆಂದು ಪಾರ್ಸಿಕಂಗಿತ್ತುದಾ ದೈವಂ (ಪಾರಸಿ. ೬-೦೬೨). [<ಸಂ. ಪಾರಸೀಕ]

ಪಾರಶೀಕ (ನಾ). ಪರ್ಷಿಯಾದೇಶದ ಜನ : ಪಾರಶೀ[ಪಾಶಾಂ. ಸೀ]ಕ ಕಿರಾತ ಬರ್ಬರ ಪಾರಿಯಾತ್ರರ ಮುಱಿದು ಸರ್ವವಿಹಾರವನು ಮಾಡಿದನು ಮ್ಲೇಚ್ಛ ಸಹಸ್ರಕೋಟಿಗಳ (ಕುಪ್ಪಾಸ. ೬-೨೬). [ಸಂ.]

ಪಾರಸ (ನಾ). = ಪಾರಶಿಕ ೧ : ಬರ್ಬ್ಬರಂ×[ಪಾರಸ]ದೈಕಪಾದ ಲಂಬ ಕರ್ನ್ನಸ್ತ್ರೀರಾಜ್ಯ ಘೋಳಾಮ×ಮೆಂಬ ನಾನಾದೇಶದೇಶಾಂತರ×××ಗಳ (ಸೌಇಇ. XX, ೦೦೨-೩೦; 1144 ?) ; ಪೂರ್ವಕಾಲದಲ್ಲಿ ಪಾರಸದೇಶವನ್ನು ಆಳಿದಂಥ ವಿಖ್ಯಾತರಾದ ಮುಸಲ್ಮಾನ ಅರಸರಲ್ಲಿ ಒಬ್ಬ ಬಹುಪರಾಕ್ರಮಶಾಲಿಯಾದ ಪಾತಶಹನು ಇದ್ದನು (ಕಗದ್ಯ. II, ೦೩). [ಸಂ.]

ಪಾರಸವ (ನಾ). = ಪಾರಶವ ೧ : "ಶಸ್ತ್ರಂ, ತಿ.ಕ್ಷ್ಣಂ, ಅಯಃ, ಪಾರಸವಂ —ಈ ೪ ಉಕ್ಕು" (ಹಲಾಯು. ೨೬-೦೬). [ಸಂ.]

ಪಾರಸಿ (ಗು). ೧. ಪರ್ಷಿಯಾದೇಶಕ್ಕೆ ಸಂಬಂಧಿಸಿದ. (ನಾ). ೨. ಪರ್ಷಿಯಾದೇಶದ ಭಾಷೆ : ಒರೆದು ನೋಡೀ ಲಿಪಿಯ ಒಡಲ ಬಲ್ಲವರು ಆರೆ ಪಾರಸಿಯಲ್ಲ ಅರಬ್ಬಿಯಲ್ಲ (ಕರಲೀ. ೦೩೯-೬). [ಸಂ. ಪಾರಸೀ]

ಪಾರಸಿಕ (ನಾ). ೧. = ಪಾರಶಿಕ ೧ : ಪಾರಸಿಕದೇಶದಲಿ ಪುಟ್ಟಿರೆ ವನಾಯುಜಂ (ಪುಂಗರಾ. ೬೩-೨೦); ಏಷ್ಯವನು ಯೂರೋಪಿಗೊಂದಿಸಿದ ಸೇತು, ಪಾರಸಿಕವೀರರಿಗೆ ಹಾ ರಾಹು ಕೇತು ! (ಪಾರಸಿ. ೬-೦೩೬). ೨. ಪರ್ಷಿಯಾದೇಶದ ಜನ : ಪಾರಸಿಕರಸಾಧ್ಯಬಲಂ ಪೆರ್ಚಿದ ಹೆಲಸಿರಿಯೆ ಪೋಗೆ (ಪಾರಸಿ. ೦-೦). ೩. ಪರ್ಷಿಯಾದೇಶದ ಕುದುರೆ. [ಸಂ.]

ಪಾರಸಿಗ (ನಾ). ಪರ್ಷಿಯಾದೇಶಕ್ಕೆ ಸೇರಿದವನು ; ಪಾರಸಿಕ : ರುದ್ರದತ್ತಂ ಪಾರಸಿಗನುಪದೇಶಮಂ ಬೇಱೆಯುಂ ಕೇಳ್ದನಪ್ಪುದಱಿಂ ತನ್ನ ಕಯ್ಯ ಕತ್ತಿಗೆಯಿಂದೇಱಾಡ ಪೋರಿಗಳಂ ತಲೆಯನರಿದು (ಬಂಹಂ. ೪-೩೩ ಪ). [ಪಾರಸ + — ಇಗ]

ಪಾರಸೀಕ (ನಾ). ೧. = ಪಾರಶಿಕ ೧ : ಪಾರಸೀಕದೇಶದಲ್ಲಿ ಹುಟ್ಟಿದುವು ವನಾಯುಜಂಗಳೆಂಬುದು (ಹಲಾಯು. ೬೨-೨೬೩); ಬರ್ಬರ ಪಾರಸೀಕ ಪಾರಿಯಾತ್ರ ಹಮ್ಮೀರ ಡೊಕ್ಕಾರ ತುರುಷ್ಕ ಮರುಪ್ರಭೃತಿಭೂಪಾಲರಿಂ ಭಯಾನಕರಸಮುಂ . . . ನೆಗಳುತ್ತುಮಿರೆಯಿರೆ (ಜಗಪ. ೨-೩೯ ಪ). ೨. = ಪಾರಸಿಗ : ತುರುಕ ಬರ್ಬರ ಪಾರಸೀಕರ ತುರಗವೈಸಾವಿರ ಸಹಿತ ಮೋಹರಿಸಿ ನಿಂದನು ಶಕುನಿ ಥಟ್ಟಿನ ಬಲದ ಬಾಹೆಯಲಿ (ಕುಪ್ಪಾಗ. ೦-೪). ೩. ಪರ್ಷಿಯಾದೇಶದ ಭಾಷೆ ; ಪಾರಸಿ : ಈ ಶಾಸನಗಳು ಬಾಣಮುಖಾಕ್ಷರದಿಂದ ಕೆತ್ತಲ್ಪಟ್ಟಿರುವುವು. ಇವುಗಳು ಪಾರಸೀಕ, ಸೂಸಾನ್ ಮತ್ತು ಶೇಮಿಯ ಎಂಬ ಮೂರು ಭಾಷೆಗಳಲ್ಲಿವೆ (ಕಸಾಪ. ೨-೩). ೪. ಪರ್ಷಿಯಾದೇಶದ ಕುದುರೆ : "ವಾನಾಯುಜ ವಾಜಿಕುಳಂ ಪಾರಸೀಕಮೆಂದಱಿಗವಱೊಳ್" (ಪಸ್ತುಕೋ. ೬೬-೨೩). [ಸಂ.]

ಪಾರಳತೆ (ನಾ). (ಭೂಮಿಯ) ಒಂದು ತುದಿಯಿಂದ ಮತ್ತೊಂದು ತುದಿಯವರೆಗಿನ ಅಳತೆ ; ವ್ಯಾಸದ ಅಳತೆ : ಭೂಗೋಳದ ವ್ಯಾಸವು ಅಥವಾ ಭೂಗರ್ಭದ ಪಾರಳತೆಯು ೭,೯೧೨ ಮೈಲುಗಳುಳ್ಳದ್ದಾಗಿದೆ (ಭೂಗೋಳ. ೩). [ಪಾರ್ಶ + ಅಳತೆ]

ಪಾರಾ ' ಪಹರೆ ' ನೋ.

ಪಾರಾಚೌಕಿ (ನಾ). ಪಹರೆಯವರು ಕಾವಲು ಇರುವ ಚಾವಡಿ,—ಠಾಣೆ : ಅವರು ಹಗಲು ಟೀಪುಸುಲ್ತಾನರ ಸರಹದ್ದಿನಲ್ಲು ಇದ್ದುಕೊಂಡು, ರಾತ್ರಿಕಾಲದಲ್ಲಿ ಪಾರಾಚೌಕಿ ತಪ್ಪಿಸಿ, ಕಳ್ಳಮಾರ್ಗವಾಗಿ ಕೊಡಗಿನ ಸೀಮೆ ಸರಹದ್ದಿನ ಒಳಗೆ ಬರುವುದು (ಶಾಕೇಂದ್ರ. ೦೦೩). [ಪಾರಾ (<ಪಹರೆ) + ಚೌಕಿ]

ಪಾರಾಟ ' ಪಾಱಾಟ ' ನೋ.

ಪಾರಾಪತ (ನಾ). ಪಾರಿವಾಳ ; ಕಪೋತ : ಮಯೂರಪಾರಾಪತಪ್ರಕರ ಕುಕ್ಕುಟ ಭಟಕತ್ಕುಚಾಪ ಶಿತ್ತಿರಿ ಕಪಿಂಜಳಾದಿ ವಿವಿಧವಿಹಂಗಪರಿಶೋಭಿತೋಪಾಂತದೊಳ್ (ಪರ್ಗಪು. ೩-೬೨ ಪ) ; ಪ್ರಮತ್ತ ಪರಪುಷ್ಟಮಯೂರ ಕೀರಪಾರಾಪತಂಗಳುಲಿವಮುಂ . . . ಸೊಗಯಿಸುತ್ತುಮಿರಲ್ (ಸುಜಾಪೇ. ೬ ೮೨ ಪ). [ಸಂ.]

ಪಾರಾಯಣ (ನಾ). ೧. ದಾಟುವುದು ; ಕಡೆಹಾಯುವುದು. ೨. ಗ್ರಂಥಾದಿಗಳನ್ನು ಮೊದಲಿನಿಂದ ಕಡೆಯವರೆಗೆ ಓದುವುದು ; ಗ್ರಂಥಾದಿಗಳ ಆಮೂಲಾಗ್ರವಾದ ಪಠನ : "ಸಾಕಲ್ಯವಾಚನಂ, ಪಾರಾಯಣಂ—ಈ ೨ ಕಡೆ ಮುಟ್ಟಲೋದುವುದು" (ಹಲಾಯು. ೬೬-೨೪೭); ವೇದಪಾರಾಯಣದ ಫಲ ಗಂಗಾದಿ ತೀರ್ಥಸ್ನಾನಫಲ . . . ವಸ್ತ್ರಾದಿ ಕನ್ಯಾದಾನಫಲವಹುದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ (ಕುಪ್ಪಾಗ. ೦೩-೨೦) ; ತಿರುಪರಾತ್ಪರವಾಸುದೇವನ ತಿರುವಡಿಗಳನು ನುತಿಸಿ ಪೂಜಿಸಿ ತಿರುಪ್ರಬಂಧಾದಿಗಳ ಪಾರಾಯಣವ ಮಾಡುತಲಿ (ಸಗಶಾ. ೦೯-೪೯); ಪಾರಾಯಣ, ಜಪಗಳು ಪೂಜೆಯಲ್ಲಿ ಆವಶ್ಯಕಗಳಾಗಿರುತ್ತವೆ (ಶಾರದ. ೨೨೬). ೩. ಗ್ರಂಥಾದಿಗಳನ್ನು ಮೊದಲಿನಿಂದ ಕಡೆಯವರೆಗೆ ಓದಿದವನು : ಪಂಡಿತ ; ಪಾರಗ : "ಅನಂತಪಾರಾಯಣಂ ಮಿಗೆ ಓದಿದವನಕ್ಕುಂ" (ಪುಂಗರಾ. ೭೩-೩) ; ನಿಜಾನ್ವವಾಯಪಾರಾಯಣನಿಂತು ಸಂತತಿಗಡರ್ಪನೊಡರ್ಚಿದನುತ್ತರೋತ್ತರಂ (ಶಾಂತಿಪು. ೬-೦೦೩).

ಪಾರಾಯಣ ಮಾಡು = ೧. ಗ್ರಂಥಾದಿಗಳನ್ನು ಮೊದಲಿನಿಂದ ಕೊನೆಯವರೆಗೆ ಓದು : ಪಾರಾಯಣ ಮಾಡಿದ ಬ್ರಾಹ್ಮಣಭೋಜನಕ್ಕಂ ದಕ್ಷಿಣೆಗಂ ಬಿಟ್ಟರು (ಸೌಇಇ. XI-i, ೦೦೬-೯ ; 1076) ; ಶ್ರೋತ್ರಿಯರು . . . ದಿನವೂ ರಾಮಾಯಣವನ್ನು ಪಾರಾಯಣ ಮಾಡುತ್ತಿದ್ದರು (ಪಂಕಪ್ಯ. ೦೯೬). ೨. ಒಂದೇ ವಿಚಾರವನ್ನು ಹಲವು ಸಲ ವಿವರಿಸಿ ಹೇಳು : ಮತ್ತೆ ಮತ್ತೆ ಅದೇ ವಿಷಯವನ್ನು ಪಾರಾಯಣ ಮಾಡಬೇಡ (ರೂಢಿ). [ಸಂ.]

ಪಾರಾವತ$_1$ (ನಾ). ಪಾರಿವಾಳ ; ಕಪೋತ : "ಪಾರಾವತಾಖ್ಯಂ ಕಪೋತಂ" (ಪಸ್ತುಕೋ. ೪೨-೦೪) ; ರಾಜಹಂಸ ಪಾರಾವತಮಿಥುನಂಗಳುತ್ತುಂಗ ಪ್ರಾಸಾದಶಿಖರಮಣಿಗವಾಕ್ಷಾಂತರಾಳವಿವಿಧಗೃಹಾಂತರಗತಂಗಳಾದುವು (ಪಂಪಶಾ. ೪-೪೯ ಪ) ; ಪಾರಾವತಂ ವಾನರನೆತ್ತಾಡಂಚೆ ಸಿಂಹಂ . . . ಕಾಚ್ಕೋಚಿಯೊಂಬೀ ತಿರಿಕವ್ರಾತಂಗಳೊಳ್ ಸಂಭವಿಸಿ ದುರಿತದಿಂದುಃಖಮಂ ಪೆಱಲಾಱೆಂ (ಧರ್ಮಾಮೃ. ೦೩-೦೩೬); ಶುಕ ನೀಲಕಂಠ ಪಾರಾವತ ಮಧುಕರನಿಕರದಿಂದದು ಸೊಗಯಿಪುದು (ಕುರಾಸಾಂ. ೪-೩೦). [ಸಂ.]

ಪಾರಾವತ$_2$ (ನಾ). ಒಂದು ಬಗೆಯ ಮರ ; ಹಾಲಿವಾಣ : ಪಾರಾವತವೆಂಬ ಮರಂಗಳಂ ಪಶ್ಚಿಮದಲ್ಲಿ ನೆಲ್ಲಿಮರಗಳಂ ಉತ್ತರದಲ್ಲಿ . . . ಹಾಕಬೇಕು (ಸೌಗಂಧಿ. ೪೨೬-೦೯). [?]

ಪಾರಾವಾರ (ನಾ). ೧. ನದಿ, ಸಮುದ್ರ ಮೊದಲಾದುವುಗಳ ಎರಡು ದಂಡೆಗಳು,— ತೀರಗಳು. ೨. ಸಮುದ್ರ ; ಕಡಲು : "ರತ್ನಾಕರಃ . . . ಪಾರಾವಾರಃ, ತೋಯಧಿಃ, ಅರ್ಣವಃ, ಜಳರಾಶಿಃ, ಸಾಗರಃ, ಸಮುದ್ರಃ—ಈ ೧೨ ಸಮುದ್ರಂ" (ಹಲಾಯು. ೦೦೬-೩೦) ; ಶ್ರೀರಮಣಿಯಂ ದ್ವಿಷದ್ಬಳಪಾರಾವಾರದೊಳಾದಗ್ರಭುಜವಿಜಯಮಹಾಮೇರು[ವಿ]ನೆ ಕಡೆದು ಪಡೆದಳವಾರುಮನಿಚಿಸಿದುದುದಾತ್ತನಾರಾಯಣನಾ (ಪಂಪಶಾ. ೪-೦); ಸದಸದಾದಿವಸುಸ್ವರೂಪನಿರೂಪಣಪ್ರವೀಣಸಿದ್ಧಾನ್ತಾದಿ ಸಮಸ್ತಶಾ[ಸ್ತ್ರಾ]ಮೃತಪಾರಾವಾರಪಾರಗರುಂ (ಸೌಇಇ. XX, ೪೬-೨೩; 1072) ; ಕಾಯ್ದು ಚುಯ್ಯೆಂದುವೇಱುಂ ಕುಲಪಾರಾವಾರವಿಾ ಬೇಸಗೆಯುದಿಸಿಲೊಳ್ (ಜಗಪಿ. ೦೬-೭೦). ೩. ಎಲ್ಲೆ ; ಮೇರೆ : ಅಮ್ಮೈಯ್ಯನ

ಸಂತೋಷಕ್ಕೆ ಪಾರಾವಾರವೇ ಇರಲಿಲ್ಲ (ಶಂಗಾಳ್ಯ. ೩೨೭) ; ನಾನು . . . ನನ್ನ ಪಾರಾವಾರವಿಲ್ಲದ ಅಂಧಜಗತ್ತಿನ ಪರಮೇಶ್ವರನನ್ನು ಕರೆಯುತ್ತಿದ್ದೆನು (ಇಷ್ಟಲಿ. ೨೦೬). ೪. [ಜೈನ] ಒಂದು ದೀರ್ಘವಾದ ಅವಧಿ,-ಕಾಲ; "ಪಳತಕ್ಕಿಂತ ಬಹು ಮಹತ್ತಾದ ಕಾಲ" (ಸೈಸಕೋ. ೦೬೬): ಏಕಪಾರಾವಾರೋಪಮಾಯುಷ್ಯನುಂ ವರ್ಷಸಹಸ್ರಸಂಕಲ್ಪಕಲ್ಪಿತಾಮೃತಾಹಾರನುಂ . . . ಆಗಿ (ಆದಿಪು. ೨-೬೯ ಸ). [ಸಂ.]

ಪಾರಾವಾರಗ (ನಾ). ಎಲ್ಲವನ್ನೂ ಸಂಪೂರ್ಣವಾಗಿ ತಿಳಿದವನು ; ಪಂಡಿತ ; ನಿಷ್ಣಾತ : ಕುಮಾರಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವುದಿನಸದಿಂದೊಳಗೆ ದ್ವಾದಶಾಂಗಚತುರ್ದಶಪೂರ್ವಮಪ್ಪಾಗಮಮೆಲ್ಲಮುಂ ಗ್ರಂಥಾರ್ಥಸ್ವರೂಪದಿಂ ಕಲ್ತು ಸಕಲಶಾಸ್ತ್ರಪಾರಾವಾರಗನಾಗಿ (ಸಂಸ್ಕಾರಾ. ೬೪-೨೪). [ಸಂ.]

ಪಾರಾಶರ (ಗು). ೧. ಪರಾಶರಋಷಿಗೆ ಸಂಬಂಧಿಸಿದ. (ನಾ). ೨. ಪರಾಶರಋಷಿಯ ಮಗ ; ವೇದವ್ಯಾಸ : "ಪಾ[ಪಾಶಾಂ. ಪ]ರಾಶರಂ ವ್ಯಾಸನಕ್ಕುಂ" (ಮಂಗರಾ. ೬೬-೦೦) ; ಇದಂ ಮುನಿಪಾರಾಶರನೊಲ್ದು ಪೇಳ್ (ಪಂಪಪಾ. ೬-೫). ೩. ಪರಾಶರಸಂಪ್ರದಾಯದ ಸೂತ್ರಗಳು,-ನಿಯಮಗಳು. [ಸಂ.]

ಪಾರಾಶರಿ (ನಾ). ಪರಾಶರಸಂಪ್ರದಾಯದ ಸಂನ್ಯಾಸಿ,—ಭಿಕ್ಷು : "ಭಿಕ್ಷುಃ, ಪರಿವ್ರಾಟ್, ಕರ್ಮಂದೀ, ಪಾರಾಶರೀ, ಮಸ್ಕರೀ—ಸನ್ಯಾಸಿಯ ಹೆಸರುಗಳು" (ಸಿದ್ಧಾಂತಿ. ೨೨೮). [ಸಂ. ಪಾರಾಶರಿನ್]

ಪಾರಿ$_1$ 'ಪಾಱಿ' ನೋ.

ಪಾರಿ$_2$ (ನಾ). ಗಾಡಿಯ ತೊಟ್ಟಿಲಿಗೆ ಆಸರೆಯಾಗಿರುವ ಎರಡೂ ಪಕ್ಕಗಳ ಮರದ ಪಟ್ಟಿ : ಬಂಡಿಯ ಜಾಡು ತುಂಬಾ ಏರುಪೇರಾಗಿದೆ. ಇಳಿದು ಪಾರಿ ಹಿಡಿಯುತ್ತೇನೆ. ನಿಧಾನವಾಗಿ ಬಿಡು (ರೂಢಿ).

[ದೇ.॥ ತಮಿ. ಪಾರ್]

ಪಾರಿ$_3$, ಹಾರಿ$_1$ (ನಾ). ಒಂದು ಬಗೆಯ ಸಸ್ಯ : ಹಿಂಗು ನಿಳಂಗ ಪಹ್ನಿ ಕಟುಕತ್ರಯ ಸೈಂಧವಮುಂ ಫಲತ್ರಯಂ ಸಂಗತಮಪ್ಪ ಪಾರಿ [ಪಾಶಾಂ. ರೆ, ಲೆ]ಯಜಮೋದ ಪುರಂದರಮೆಂಬಿವಂ . . . ಕೊಳರ್ ಶೃಂಗಿ ಮಹೋರಗಾದಿ ವಿಷಸಂತತಿಯಂ ಕಳೆಗುಂ (ಪಸುದ. ೩-೬೨). ಹಾರಿ$_1$: "ಬಹುಪ್ರಜಾ—ಮೊದೆ, ಇಲಿ, ತಕ್ಕೋಲ, ಹಾರಿ" (ಓಷಧಿ. ೦೦೬).

[ದೇ.॥ ತಮಿ. ಪಾರಿ]

ಪಾರಿ$_4$, ಹಾರಿ$_2$ (ನಾ). ಸಾಲು ; ಪಂಕ್ತಿ ; ಶ್ರೇಣಿ : "ಪಾರಿಯೆನಲಾದ ಪುದು ಜಾರೆಗಂ ಶ್ರೇಣಿಗಂ" (ಕಕ. ೬೪). 'ಪಾರಿಪಂಜು' ಪರಾ. ಹಾರಿ$_2$: ಕಾದೆಮ್ಮೆಪೋರಿಯ ಹಾರಿಯಂತೆಯುಂ ಪಂದಿಯ ಗೊಂದಳದಂತೆಯು (ಪುಷ್ಪಪು. ೩-೦೨೬ ಸ) ; ಸುರಿವ ಘಟಾಳಿ ತೀವುವ ಘಟಾಳಿ ಮರಳ್ವ ಘಟಾಳಿ ಹಾರಿಯೊಳ್ಪರಿವ ಘಟಾಳಿ ಸಾಗರದ ಮೇರುವಿನಂತರದೊಳ್ ನಿರಂತರಂ ತಿರುಗೆ (ಅಪಂಪು. ೩-೬೩). [< ಸಂ. ಪಾಲಿ]

ಪಾರಿ$_5$ (ನಾ). ೧. ಕುಡಿಯುವ ಬಟ್ಟಲು ; ಪಾನಪಾತ್ರೆ ; ಲೋಟ. ೨. ಪುಡಿ ; ಹಾಡಿ : ಅತಿಸುರಭಿಸಹಕಾರಕಸ್ತೂರಿಕರ್ಪೂರಪಾರಿ [ಪಾಶಾಂ. ಲಿ]ಸಮ್ಮಿಶ್ರತಾಂಬೂಲರಾಗರಕ್ತಾಧರಪ್ರವಾಲಪ್ರಭಾಪ್ರಕಟಿತಪೂರ್ವಸಂಧ್ಯಾರಾಗನುಂ (ಆದಿಪು. ೩-೯೦ ಸ). [ಸಂ. ಪಾರೀ]

ಪಾರಿ$_6$ 'ಪಹರಿ' ನೋ.

ಪಾರಿಕತ್ತು 'ಘಾರೀಕತ್ತು' ನೋ.

ಪಾರಿಕಾಂಕ್ಷಿ (ನಾ). ಮುನಿ ; ಋಷಿ : "ತಪಸ್ವೀ, ತಾಪಸಃ, ಪಾರಿಕಾಂಕ್ಷೀ...ಸಿ ತಪಸುಳ್ಳವನ ಹೆಸರುಗಳು" (ಸಿದ್ಧಾಂತಿ. ೨೨೫) ; ಆ ಕೌರವನ ನಗರಿಗೆ ಪಾರಿಕಾಂಕ್ಷಿಪ್ರವರನೊಬ್ಬನು ಬಂದು ಹೊಕ್ಕನು ರಾಜಮಂದಿರವ (ಕುಸ್ಕಾಲ. ೦ ೦೦); ಪೂಜಾಯೋಗ್ಯವಸ್ತುಗಳ ಕೈಕೊಂಡು ಪರಮಶ್ರದ್ಧಾನ್ವಿತದಿ ನರದೇವನೈತಂದನಾ ಪಾರಿಕಾಂಕ್ಷಿಯೆಡೆಗೆ (ಪಂಕಾರಾ. ೦-೦೬-೪೩). [ಸಂ. ಪಾರಿಕಾಂಕ್ಷಿನ್]

ಪಾರಿಕಾಯ 'ಪಾರಿಖಾಯ' ನೋ.

ಪಾರಿಕೆ (ನಾ). ದರ್ಶನ ; ಕಾಣ್ಕೆ : ಪಾರ್ವರ ಪಾರಿಕೆ ತ್ರಿನೇತ್ರಶಿಖೆಯೊಲು ಉತ್ತರೋತ್ತರವು ಮೇಲುಮುಖ (ಸೂರ್ಯಪಾ. ೦೦೩-೯).

[ಪಾರು$_1$ (<ಪಾರ್$_1$)+—ಇಕೆ]

ಪಾರಿಖತ್ತು 'ಘಾರೀಕತ್ತು' ನೋ.

ಪಾರಿಖಾಯ, ಪಾರಿಕಾಯ, ಹಾರಿಕಾಯ, ಹಾರಿಕಾಯಿ (ನಾ). ಒಂದು ಬಗೆಯ ತೆರಿಗೆ,—ಸುಂಕ : ಇದನುಪೇಕ್ಷಿಸಿದಾತಂ ಕೆಱೆಯನೊಡೆದ ಪಾತಕನಕ್ಕುಂ ಪಾರಿಖಾಯಂ ಮೊದಲಾಗೆಲ್ಲಮೂರ್ಗ್ಗೇ × × ನಿವೇಶನಂ ಕೊಟ್ಟ (ಎಇ.XX, ೬೮-೪೨; 1012); ತಿಪ್ಪೆಸುಂಕ ಮನೆದೆಱೆ ಪಾರಿಖಾಯ ಹೊಲೆಗೊಱೆ ಮಱವ ಈಂತಿನಿತುವಂ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಸೌಇಇ. XX, ೦೫೮-೪೩; 1176). **ಪಾರಿಕಾಯ** : ಶ್ರೀಮಜ್ಜಗದೇವ ನಾರಾಯಣದೇವರಿಂಗಾಳ ಹೊಳಲು ಹಂನೆರಡಱ ಬಳಿಯ ಪಿರಿಯ ಪೆಂಬಱಿತಿಯ ವಟ್ಟಂ ಪಾರಿಕಾಯಮುಮಂ ಕಾವವಿದೆಱೆಯುಮ[ಂ] ದೇವರಂಗಭೋಗಕ್ಕೆ ಧಾರಾಪೂರ್ವ್ವಕಂ ಮಾಡಿ ಕೊಟ್ಟರ್ (ಕಇಅ. ೩೬-೪೪-೦೯; 1107). **ಹಾರಿಕಾಯ** : ಕೇಮನ ಕೇಸಿಯಣನಾಯಕ ಸತ್ರಕ್ಕೆ ಬಿಟ್ಟ ಧ[ರ್ಮ್ಮ]ಹಾರಿಕಾಯ ತಿಪ್ಪೆಸುಂಕ ಗಾಣದಲಿ ಕಾಶ್ಮೀರಭೂಮಿ ಮತ್ತ ಇದಿನಿಸುವಂ ನಿರ್ವ್ವಾಣದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟ ಧರ್ಮ್ಮ (ಸೌಇಇ. IX-1, ೨೩೫-೦೬ ; 1141) ; ಹಿರಿಯ ಕೆಱೆಯ ತುಂಬಿನ ಹರಿಯ ಎರಡು [ಭ]ರಣ ತೋಟ ಪೂರೊಳಗೆ ಹಾರಿಕಾಯ ಹೊಂಗೆ ವೀಸದ ಆಯ ಗಾಣಂಗಳಲ್ಲಿ ಸೊಲ್ಲ[ಗೆ] ಎಣ್ಣೆ ಒಂದು ಗಾಣ . . . ಸರ್ವ್ವನಮಸ್ಯವಾಗಿ ಕೊಟ್ಟ ವ್ರಿತಿ (ಕಇ. IV, ೨-೦೮ ; 1241) ; ಮಗ್ಗ ಮುದ್ರೆ ಕ್ರಯ ಕಡ್ಡಾಯ ಹಾರಿಕಾಯ ಬಾಳುಕ . . . ನೀಉ ಆಗುಮಾಡಿಕೊಂಡು . . . ಭೋಗಿಸಿ ಬಹುದು (ಸೌಇಇ. IX-11, ೪೪೦-೨೫ ; 1419). **ಹಾರಿಕಾಯಿ** : ಅನುಪು ಹಾರಿಕಾಯಿ ಮೊದಲಾದ ಏನುಂಟಾದನು ಸರ್ವಮಾನ್ಯವಾಗಿ . . . ಸಮರ್ಪಿಸಿದೆಉ (ಸೌಇಇ. IX-11, ೪೯೦-೦೭ ; 1513). [?]

ಪಾರಿಜಾತ (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು ; P ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಮತ್ತು ಹರಿಚಂದನವೆಂಬ ಐದು ದೇವತರುಗಳು ಇಂದ್ರನ ನಂದನವನದಿಂದ ಬಂದುವೆಂದು ನಂಬಲಾಗಿದೆ : ಕನಕಧ್ವಜನೆಂಬ ದೇವಂ . . . ನಮೇರು ಮಂದಾರ ಸಂತಾನಕ ಪಾರಿಜಾತಂಗಳೆಂಬ ಪೂಗಳಂ ಸುರಿಯುತ್ತಂ ದೇವರ್ಕಳ ದೇವಿಯರ್ಕಳ್ ಸಹಿತಂ ಕ್ಷಪಣಕನ ವಿಮಾನದ ಮುಂದೆ ಇಂತೆಂದು ಪೇಳ್ದಾಡಿದಂ (ಪಡ್ಡಾರಾ. ೮೪-೮) ; ದೇವರ್ಕಳೀಗಳರ್ಚಿಸಿ ಹೋದರೆಲೆ ದೇವ ದೇವಲೋಕದ ಪಾರಿಜಾತದರಳಿವೆ ದೇವ (ಪಂಪರ. ೯-೫೮) ; ಮಂದಾರ ಪಾರಿಜಾತ ಸಂತಾನ ಕಲ್ಪ ಹರಿಚಂದನಗಳೆಂಬ ಪೆಸರಿನಿಂ ಪ್ರಸಿದ್ಧಮಾದ ಕಲ್ಪವೃಕ್ಷಪಂಚಕಮಿಪ್ಪುದು (ಏಪೇಕ. ೨೦೧). [ಸಂ.]

ಪಾರಿಜಾತಕ (ನಾ). = ಪಾರಿಜಾತ : "ಮಂದಾರಃ, ಪಾರಿಜಾತಕಃ, ಹರಿಚಂದನಃ, ಕಲ್ಪವೃಕ್ಷಃ, ಸಂತಾನಃ—ಈ ೫ ದೇವರ ಮರಂಗಳ್" (ಹಲಾಯು. ೨೨-೦೩೫) ; ನಂದನವನಸಂಭವಹರಿಚಂದನ ಸಂತಾನ ಪಾರಿಜಾತಕ ವಿಲಸನ್ಮಂದಾರನದೋರುದ್ರುಮಸಂದೋಹದ ಕುಸುಮಕೋಟಿಯಂ ವಾಸಿತಮಂ . . . ಮದಾಳಿಗಳ್ ಮುಸುಱ್ (ಪುಷ್ಪಪು. ೦೧-೪೪) ; ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು ಮಾವು ಮಲ್ಲಿಗೆಯಿತ್ತು ಮನೆಯಿದಿರು (ಸಪೀರೀ. ೧೭-೨೪೩). [ಸಂ.]

ಪಾರಿಣಾಮಿಕ (ಗು). ೧. ಪರಿಣಾಮಕ್ಕೆ ಸಂಬಂಧಿಸಿದ. (ನಾ). ೨. [ಜೈನ] ಜೀವತ್ವ, ಭವ್ಯತ್ವ, ಅಭವ್ಯತ್ವ ಮೊದಲಾದ ಕರ್ಮಗಳು

ಉದಯ, ಉಪಶಮ ಮೊದಲಾದುವುಗಳಿಂದ ಉತ್ಪನ್ನವಾಗದೆ ಇರುವುದು : ಭಾವೋಪಲಕ್ಷಕಂ ಜೀವನೆಂಬುದು ಅವಾವುವೆಂದೊಡೆ ಔದಯಿಕಭಾವಂ . . . ಕ್ಷಾಯೋಪಶಮಿಕಭಾವಂ ಪಾರಿಣಾಮಿಕಭಾವಮೆಂದಿಂತು ಭಾವಮಯ್ದುತೆಱನಕ್ಕುಂ (ಸುಕುಮಾ. ೮-೪ ಪ) ; ಸಾಸಾದನ ಸಮ್ಯಗ್ದೃಷ್ಟಿಗೆ ಪಾರಿಣಾಮಿಕಭಾವಂ . . . ಅಕ್ಕುಂ (ತತ್ತ್ವಪ್ರ. ೪೮).

[ಸಂ.]

ಪಾರಿತಥ್ಯೆ (ನಾ). ಹೆಂಗಸರು ತಲೆಯಲ್ಲಿ ಧರಿಸುವ ಒಂದು ಬಗೆಯ ಆಭರಣ : "ಪಾರಿತಥ್ಯೆ = ಮುಡಿಯ ಮೇಗಣ ಮುತ್ತಿನ ಸೆಂಡು, ಮುತ್ತಿನ ದಂಡೆಯೆಂದೂ ಎಂಬರು" (ಶಾಸಾರಾ. ೪). [ಸಂ. ಪಾರಿತಥ್ಯಾ]

ಪಾರಿತೋಷ (ನಾ). ಬಹುಮಾನ : ಶಾಲಾವಾರ್ಷಿಕೋತ್ಸವದಲ್ಲಿ ಆ ಹುಡುಗನಿಗೆ ಅನೇಕ ಪಾರಿತೋಷಗಳು ಬಂದುವು (ಕೂಠಿ). [ಸಂ.]

ಪಾರಿತೋಷಕ (ನಾ). = ಪಾರಿತೋಷ : ಶ್ರೀಮನ್ತರ ಪಾರಿತೋಷಕದಿಂದ ನಾನೂ ಧನ್ಯೆಯಾದೆನಲ್ಲ! (ಪಟ್ಟಿಅ. ೦೩-೦೭); ಇಂದಿಗೆ ಸುಮಾರು ಸಲವತ್ತೇಳು ವರುಷಗಳ ಹಿಂದೆ ರವೀಂದ್ರನಾಥಠಾಕೂರ ಅವರಿಗೆ ಒಂದು ಪಾರಿತೋಷಕವು ಸಿಕ್ಕಿತು. ಅದು ನೋಬೆಲ್ ಪಾರಿತೋಷಕ (ಕಪಪು. ೩-೧೩೦).

[< ಸಂ. ಪಾರಿತೋಷಿಕ]

ಪಾರಿತೋಷಿಕ (ನಾ). = ಪಾರಿತೋಷ : ಬಳಿದ ಮುನಿನಾಥವಾರ್ತಾ ವಿಳಸತ್ಕಲ್ಪಲತೆ ಫಲಿತವಾದತ್ತೆನೆ ಭೂತಳಪಾಲಂ ಪನಪಾಲಂಗಳತೆಗೆ ಮಿಗಿಲೆನಿಸಿ ಪಾರಿತೋಷಿ[ಪಾಠಾಂ.ಷ]ಕಮಿತ್ತಂ (ಪಂದ್ರಪು. ೨-೦೦೦) ; ಅವರ ಆ ಕರಕೌಶಲಕೆ ಬೆರಗಾದರು . . . ಪಾರಿತೋಷಿಕಗಳನೇಕವನಿತ್ತರು ಮೆಚ್ಚಿದ ಸರಕಾರದವರು (ಇಂಶಾಪ. ೦೦-೩೮). [ಸಂ.]

ಪಾರಿಪಂಜು (ನಾ). ಸಾಲುದೀವಟಿಗೆ : ಸುತ್ತ ಕೋವರದ ಕಾವಲು ಪಾರಿಪಂಜಿನ ಮೊತ್ತವನೇನ ಬಣ್ಣಿಸುವೆ (ಅಮುಸಾಂ. ೨-೩೩).

[ಪಾರಿ + ಪಂಜು]

ಪಾರಿಪಂಥಿಕ (ನಾ). ದಾರಿಹೋಕರನ್ನು ಸುಲಿಯುವವನು ; ಕಳ್ಳ : "ಏಕಾಗಾರಿಕಃ, ತಸ್ಕರಃ, ದಸ್ಯುಃ . . . ಪಾರಿಪಂಥಿಕಃ, ಸ್ತೇನಃ — ಈ ೧೦ ಕಳ್ಳಂ" (ಹಲಾಯು. ೫೬೦-೬೩) ; ಅರಸುಗಳ ಪನಿತೆಯರ್ಕಳ ಪರಿಕರಪರಿಪೂರ್ಣಭೋಜನಂಗಳ ದುರಿತಾಚರಣರತಪಾರಿಪಂಥಿಕ ನರರಂ. ಕಥಾಶ್ರವಣಮಹಿತಮೆಂಬರ್ ಶ್ರಮಣರ್ (ಶಾಸಾರ. ೨೫-೦೪೯). [ಸಂ]

ಪಾರಿಪಕ್ಷ (ನಾ). ಕುದುರೆಯ ಬಾಯಲ್ಲಿರುವ ಕಡೆಯ ನಾಲ್ಕು ದವಡೆ ಹಲ್ಲುಗಳು : "ಎರಡು ನಡುದಂತಗಳು ಸಂದಂಶಮಕ್ಕೊತ್ತಿನೆರಡು" ಪಲ್ಗಳು ಮಧ್ಯಮಂಗಳಕ್ಕವಱೊತ್ತಿನೆರಡು ದ್ವಿಜಂ ಪಾರಿಪಕ್ಷಂಗಳ್ (ಮಂಗರಾ. ೬೩-೨೦); ಕಡೆಯ ಪಲ್ಗಳ್ ನಾಲ್ಕಕ್ಕಂ ಪಾರಿಪಕ್ಷ(ಕ್ವ)ಮೆಂಬುದು (ಅಶ್ವಶಾ. ೪೬-೯). [ಸಂ.]

ಪಾರಿಪತ್ಯ 'ಪಾರುಪತ್ಯ' ನೋ.

ಪಾರಿಪಾಟ್ಯ (ನಾ). ರೀತಿ ; ಓರಣ ; ಕ್ರಮ : ವೇಣಿಯ ರಚನೆಯಲ್ಲಿ ಚಾತುರ್ಯದ ಪಾರಿಪಾಟ್ಯವು ಕಾಣುತ್ತಿದ್ದಿತು (ಕಪಾಕುಂ. ೯೪). [ಸಂ.]

ಪಾರಿಪಾರ್ಶ್ವಕ (ನಾ). ೧. ಆಳು ; ಸೇವಕ ; ಪರಿಚಾರಕ. ೨. ನಾಟಕದಲ್ಲಿ ನಾಂದಿಯನ್ನು ಹೇಳುವವನು : "ಸಾಮಾನ್ಯಾಭಿನಯ" ಪ್ರಕರಣ ಸಂಬಂಧದಲ್ಲಿಯೇ ನಾಯಕ ನಾಯಿಕೆಯರ ಭೇದ, ಅವರ ಶೀಲಸ್ವರೂಪಗಳು, ಪರಿವಾರ, ಸೂತ್ರಧಾರ, ಪಾರಿಪಾರ್ಶ್ವಕ ಮುಂತಾದವರ ಗುಣಗಳು . . . ಇವೆಲ್ಲಾ ನಿರೂಪಿಸಲ್ಪಟ್ಟಿವೆ (ಸಂಪಾಟ. ೦೨). [ಸಂ.]

ಪಾರಿಪಾರ್ಶ್ವಿಕ (ನಾ). = ಪಾರಿಪಾರ್ಶ್ವಕ. [ಸಂ.]

ಪಾರಿಪ್ಲವ (ಗು). ೧. ಅಲುಗುವ ; ಹೊಯ್ದಾಡುವ ; ಚಂಚಲವಾದ : ವಸ್ತುಹೀನಮಭಿಧಾನಮುಂಟಕ್ಕುಮಪ್ಪೊಡೆ ಶಬ್ದಾರ್ಥಸಂಬಂಧಂ ಪಾರಿಪ್ಲವ ಪರಿಪ್ಲವಮಕ್ಕುಂ (ಶಾಂತಿಪು. ೯-೦೩೮ ಪ) ; ಪಯಃಪ್ಲವದೊಳಗೆ ಮುಟ್ಟಿ ಪಾರಿಪ್ಲವನೇತ್ರೆಯರಮರಕಾಂತೆಯರ್ ಸೊಗಯಿಸಿವರ್ (ಅಪಪು. ೪-೬೦). ೨. ತೇಲುವ. (ನಾ). ೩. ಹೊಯ್ದಾಟ ; ಅಸ್ಥಿರತೆ ; ಚಾಂಚಲ್ಯ : "ಲೋಲಂ, ಚಪಳಂ . . . ಪಾರಿಪ್ಲವಂ, ಚಳಾಚಳಂ, ಸಂಚಳಂ — ಈ ೧೦ ಸಂಚಳಂ" (ಹಲಾಯು. ೦೦೩-೦೦) ; ಅವಬೋಧಂ ವಿಷಯಪರಿಪ್ಲವಂ (ಮನೋವಚನಕಾಯನಿಯಮಂ ಪಾರಿಪ್ಲವ)ಮಿನಿತಿಲ್ಲದೆ ಮೂಱುಂ ಭುವನಮನೆಱಗಿಸುವ ಸಮತೆ ಸಮನಿಸಿದಪುದೇ (ಶಾಂತಿಪು. ೯ ೦೦೯). ೪. ವ್ಯಾಪನೆ ; ಹರಡುವಿಕೆ ; ವಿಸ್ಫುರಣೆ : ವರ್ಣಕ್ಕಿಂತಲೂ ನಯನಗಳಿಗಿಂತಲೂ ಸೌಂದರ್ಯದಾ ಪಾರಿಪ್ಲವವು ಅತ್ಯಂತ ಮುಗ್ಧರವಾಗಿದ್ದಿತು (ಕಪಾಕುಂ. ೪೫). ೫. ದೋಣಿ. ೬. ಒಂದು ದೇಶದ ಹೆಸರು : ಹಯಮುತ್ತರಾಭಿಮುಖವಾಗಿ ಪಾರಿಪ್ಲವಧರೆಯೊಳ್ಳೆದಿ ಪೆಣ್ಗುದುರೆಯಾಗಿ ಪುಲಿಯಾಗಿ . . . ಮುನ್ನಿನಂತೆ ನಿಯಮಿತಮಜಾಶ್ವಮಾದತ್ತು (ಸೈಮಿಪಾ. ೦೩-೬). [ಸಂ.]

ಪಾರಿಬರುಹ (ನಾ). (ಮದುವೆ ಮುಂತಾದ ಶುಭಸಮಾರಂಭಗಳಲ್ಲಿ ಕೊಡುವ) ಬಳಂಪಳಿ ; ಉಡುಗೊರೆ : ಪಾರಿಬರುಹಂಗಳನು ಕೊಂಡು ಮುರಾರಿ ಪಾರ್ಥ ಸುಭದ್ರೆಯರು ಸಹಿತೇಱಿ ರಥವನು . . . ಬಿಜಯಂಗೈದನಿಂದ್ರಪ್ರಸ್ಥಪುರವರಕೆ (ನಿಭಾಗ. ೦೦-೬೨-೩೬). [<ಸಂ. ಪಾರಿಬರ್ಹ]

ಪಾರಿಬ್ರಾಜಕ (ನಾ). ವಿರಕ್ತಿ ; ಸಂನ್ಯಾಸ : ಪಾರಿಬ್ರಾಜಕಮೆಂದಭಿಷ್ಟುತೆಗೆಯಲ್ ನಿನ್ನೋಲ್ಗುಣಂ ಮಾಸದೇ (ಸುಕುಮಾ. ೪-೩೦).

[<ಪಾರಿವ್ರಾಜಕ]

ಪಾರಿಭದ್ರ (ನಾ). ೧. ಒಂದು ಬಗೆಯ ಮರ ; ಹಾಲಿವಾಣದ ಮರ : "ಪಾರಿಭದ್ರಃ, ನಿಂಬತರುಃ, ಮಂದಾರಃ, ಪಾರಿಜಾತಕಃ — ೪ ಹಾಲಿವಾಣದ ಮರದ ಹೆಸರುಗಳು" (ಸಿದ್ಧಾಂತಿ. ೦೦೭). ೨. ಬೇವಿನ ಮರ. ೩. ದೇವದಾರುವೃಕ್ಷ. ೪. ಚಂಗಲಕೋಷ್ಠ. [ಸಂ.]

ಪಾರಿಭದ್ರಕ (ನಾ.) = ಪಾರಿಭದ್ರ ೧ : "ಮಂದಾರಃ, ಪಾರಿಭದ್ರ (ಜಾತ)ಕಃ — ಈ ೨ ಹಾರಿವಾಳಂ" (ಹಲಾಯು. ೩೩-೪೭). ೨. ದೇವದಾರುವೃಕ್ಷ : "ಶಕ್ರಪಾದಪಃ, ಪಾರಿಭದ್ರಕಃ, ಭದ್ರದಾರು, ದ್ರುಕಿಲಿಮಂ, ಪೀತದಾರು, ದಾರು, ಪೂತಿಕಾಷ್ಠಂ — ೭ ದೇವದಾರುವೃಕ್ಷದ ಹೆಸರು" (ಸಿದ್ಧಾಂತಿ. ೦೨೪). [ಸಂ.]

ಪಾರಿಭಾವ್ಯ (ನಾ). ಒಂದು ಬಗೆಯ ಮೂಲಿಕೆ : "ವ್ಯಾಧಿ." ಕುಷ್ಠು, ಪಾರಿಭಾವ್ಯಂ. . . . ಉತ್ಪಲಂ — ೬ ಚಂಗಲಕೋಷ್ಠ" (ಸಿದ್ಧಾಂತಿ. ೦೪೧).

[ಸಂ.]

ಪಾರಿಭಾಷಿಕ (ಗು). ೧. ಯಾವುದಾದರೊಂದು ಕಲೆ, ವಿಜ್ಞಾನ, ಕೈಗಾರಿಕೆ ಮೊದಲಾದುವಕ್ಕೆ ವಿಶಿಷ್ಟವಾದ ಅರ್ಥದಲ್ಲಿ ಬಳಕೆಗೆ ಬಂದಿರುವ ; ತಾಂತ್ರಿಕವಾದ ಅರ್ಥವುಳ್ಳ. (ನಾ). ೨. ತಾಂತ್ರಿಕವಾದ ಅರ್ಥವುಳ್ಳುದು : ಅನುಭಾವ ಎಂಬ ಮಾತನ್ನು ಪಾರಿಭಾಷಿಕವಾಗಿ, ಬಹುಮಟ್ಟಿಗೆ "mysticism" ಎಂಬರ್ಥದಲ್ಲಿ, ಕನ್ನಡದಲ್ಲಿ ವೀರಶೈವರಲ್ಲದೆ ಇನ್ನಾರೂ ಉಪಯೋಗಿಸಿಲ್ಲ (ಶೂನ್ಯಕು. ೦೩೦) ; ಮಕ್ಕಳ ಅಂತಸ್ತಿಗೆ ಹಿಡಿಯದ ಜಟಿಲವೂ ಪಾರಿಭಾಷಿಕವೂ ಆದ ಅಂಶಗಳನ್ನು ಕಡಿಮೆ ಮಾಡುವುದುತ್ತಮ (ಶಿಕ್ಷದ. ೦೩೦). [ಸಂ.]

ಪಾರಿಭೋಗಿಕ (ನಾ). ಬುದ್ಧನು ಉಪಯೋಗಿಸಿದ ವಸ್ತುಗಳು : ಬುದ್ಧನು ಉಪಯೋಗಿಸಿದ ಪದಾರ್ಥಗಳು (ಪಾರಿಭೋಗಿಕ) : ಇವರಲ್ಲಿ ಭಿಕ್ಷಾಪಾತ್ರೆ, ಕಮಂಡಲು ಮತ್ತು ಆಸನಗಳು ಮುಖ್ಯ ಉದಾಹರಣೆಗಳು (ಶಾಕ್ಷದ. ೪೯೩). [ಸಂ.]

ಪಾರಿಯ 'ಪಾರಿವ್ಯ' ನೋ.

ಪಾರಿಯಪಟ್ಟೆ 'ಪಾರಿಯವಟ್ಟೆ' ನೋ.

ಪಾರಿಯರ 'ಪಾರಿರ್ಯಾರ' ನೋ.

ಪಾರಿಯವಟ್ಟಿ, ಪಾರಿಯಪಟ್ಟಿ, ಪಾರಿವಟ್ಟಿ (ನಾ). ಒಂದು ಬಗೆಯ ಬಣ್ಣದ ಬಟ್ಟೆ : ವಸರ್ಪಟ್ಟಿ ಪಾರಿಯವ[ಕಾಕಾಂ. ಪ]ಟ್ಟಿ ಕೆಂಬಟ್ಟಿ ಕ್ಷುಗಸೆವ ಹಳದಿಯ ಪಟ್ಟಿಗಳ ಪೊಸಗುಡಿಗಳ ಸಾಲು ಹೊಯ್ದುವು ಗಗನಕಾ ಎಸಕಾ ಪಾಳಿಪುದೊಳಗೆ (ಶಾಂಕಾಂ. ೨೨-೬೨). **ಪಾರಿಯಪಟ್ಟಿ** : ಉಟ್ಟ ದುಕೂಲವೆಂಬುವದು ಪಾರಿಯಪಟ್ಟಿಯೊಲಾಗೆ (ಪಂಪಭಾ. ೬-೩೮) ; ಕಂಗಾಣಿಸದೆ ಪಾರಿಯಪಟ್ಟ[ಟ್ಟಿ] ಕರ್ಪಣ್ಣ ಗೊಂಗಡಿ ಮುಸುಕಿಟ್ಟುಕೊಂಡು . . . ದುಸ್ಸಂಗದಂಪತಿಗಳೊಪ್ಪಿದರು (ಪೋಕಥ. ೦೬-೨೩). **ಪಾರಿವಟ್ಟಿ** : ಭೂದೇವಿಯರ್ ಕುಜಾವಳಿಯೆಂಬ ಪುಕ್ಕಳಿಗೆ ಸಾದರದಿ ಪಾರಿವಟ್ಟಿಯು ವಾಸಿ ನಿಲಿಸಿದೊರ್ (ಪಚೋಕಥ. ೦೦-೨೩).

[ಪಾರಿಯ (<ಪಾರಿವ1) + ಪಟ್ಟಿ2]

ಪಾರಿಯಾತ್ರ (ನಾ). ೧. ವಿಳುಕುಲಪರ್ವತಗಳಲ್ಲಿ ಒಂದಂ ; ℘ ಇದು ವಿಂಧ್ಯಪರ್ವತದ ಪಶ್ಚಿಮಭಾಗದಿಂದ ನರ್ಮದೆಯ ಉತ್ಪತ್ತಿಸ್ಥಾನದ ವರೆಗೂ ಹಬ್ಬಿ ಅರಾವಳಿಬೆಟ್ಟಗಳಲ್ಲಿ ಸೇರಿಕೊಂಡಿದೆ. ೨. ಒಂದು ದೇಶದ ಹೆಸರು : ಪಾರಸೀಕ ಪಾರಿಯಾತ್ರ ಹಮ್ಮೀರ ಡೊಕ್ಕಾರ ತುರುಷ್ಕ ಮುರುಪ್ರಭೃತಿಭೂಪಾಲಕರಿಂ ಭಯಾನಕರಸಮುಂ . . . ನೆಗಟುತ್ತುವಿರೆ (ಜಗಂ. ೨-೩೯ ಕ); ಪಾರಿಯಾತ್ರ ವಿಂಧಿಳ ಪಾಂಚಾಳ . . . ಮತ್ಸ್ಯದೇಶಕ್ಕೆ ತಸ್ಕರ ರೋಗಾದಿ ಭಯಂಗಳಂ ಜನಿಯಿಕುಂ ಪಂಕೇಜಮಿತ್ರಾತ್ಮಜಂ (ಜಬ್ಭಹ. ೦೨-೬೦); ಪುಷ್ಕರ ಪಾರಿಯಾತ್ರ ಕರೂಷ ಕಾಂಭೋಜ . . . ಧರಣೀಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ (ಕೂರಾ. ೦-೬-೦೬). ೩. ಪಾರಿಯಾತ್ರದೇಶದಲ್ಲಿ ಹುಟ್ಟಿದುದು : ಮಾನುತಗಮನದ ಪಾರಿಯಾತ್ರನ ತುರಗ ಹೂಡಿದ ಹೇಮನಿರ್ಮಿತ ಹಿರಿಯ ಟಿಕ್ಕೆಯವ . . . ತಳತ ಶಸ್ತ್ರದಿ ಭರದಿ ತುಂಬದ ಕೋಟರಥಗಳು ರಣಕೆ ಹೊಱಪಡಲು (ಶಾಂಕಾ. ೨೦-೬). [ಸಂ.]

ಪಾರಿಯಾತ್ರಕ (ನಾ). ೧. =ಪಾರಿಯಾತ್ರ ೧: '' ಹಿಮವಾನ್, ನಿಷಧಃ, ವಿಂಧ್ಯಃ, ಮೂಲ್ಯವಾನ್, ಪಾರಿಯಾತ್ರಕಃ, ಗಂಧಮಾದನಂ . . . ಏ ಹೇಮಕೂಟಾದಯು ! '' (ಸಿರಾ೦೨೬. ೦೦೭). ೨. = ಪಾರಿಯಾತ್ರ ೨ : ಪಾರಿಯಾತ್ರಕ ಕೇರಳವುಖಾಪಾರದೇಶಂಗಳಿಂಬೆಸೆವ ಜಂಗಮವು ಭಕ್ತಾಳಿ ಎಡೆಯೆಡೆಯೋಲೀ ಗಡಣೆಯಿಂದೆಡೆವಿಡದ ನಡವುತ್ತಿರಲು (ಜಚಕ್ರಿ. ೬-೦೯); ಪಾರಿಯಾತ್ರದೇಶದಲ್ಲಿಪ್ಪ ಮಲ್ಲಿಕಾಪುರದಲ್ಲಿ ಪಾರಿಯಾತ್ರಕನೆಂಬ ರಾಜನಿಪ್ಪನು (ಕೃಕೂಂ. I, ೩೭೦). [ಸಂ.]

ಪಾರಿಯಾತ್ರಿಕ (ನಾ). ಪ್ರಯಾಣಕ್ಕೆ ಯೋಗ್ಯವಾದ ರಥ : ''ಅಧ್ವನ್ಯಃ, ಪಾರಿಯಾತ್ರಿಕಃ, ಕರ್ಣೇರಥಃ —ಈ ೩ ಪಯಣದ ರಥಂ '' (ಹರಾಶು. ೩೩-೨೯೦). [ಸಂ.]

ಪಾರಿಯಾತ್ರೆ (ನಾ). = ಪಾರಿಯಾತ್ರ ೧: ಸ್ವಸ್ತಿ ಅನೇಕಸುಧಾರಸ × ತ್ರಪೀಚಿಚ್ಛಾಯಲವಣಾಬ್ಧಿಪಳೆಯುವಳಯುತವೇಳಾವನಗಂಗಾತೀರವಾರಿಯಾತ್ರೆ ತನುಮಧ್ಯದೇಶಾಧೀಶ್ವರ ಮಾಹಿಷ್ಮತೀಪುರವರಾಧೀಶ್ವರನ ಪಿಹಯವಂಶೋದ್ಭವಂ (ಕಇಶ. ೦೨-೪-೬೪; ೧೧೪೪). [ಸಂ. ಪಾರಿಯಾತ್ರ]

ಪಾರಿಯಾನಿಕ (ನಾ). = ಪಾರಿಯಾತ್ರಿಕ. [ಸಂ.]

ಪಾರಿರಕ್ಷಕ (ನಾ). ಸಂನ್ಯಾಸಿ ; ಭಿಕ್ಷುಃ : '' ಪರಾಶರೀ . . ಪಾರಿರಕ್ಷಕಃ, ಪಾರಿವ್ರಾಜಕಃ, ತಪಸ್ವೀ, ಕರ್ಮಂದೀ, ತಾಪಸಃ —ಈ ೯ ತಪಸ್ವೀ '' (ಹರಾಶು. ೬೬-೨೩೩). [ಸಂ.]

ಪಾರಿರ್ಯಾರ, ಪಾರಿಯರ (ನಾ). ಪರಿಹಾರ : ಮನ್ನೆಗಾಮುಣ್ಣು ಪ್ರಜೆಕರಣ ಚೈಕ್ಯನಿತ್ತುದು ಮುವತ್ತವರಡು ಸರ್ವಪಾದ ಪಾರಿರ್ಯ್ಯಾರ (ಸೌಇಇ- IX-1, ೩೨-೩: ?). **ಪಾರಿಯರ** : ಇ ಪಾರಿಯರಮನಬಿಪೊನ್ನಂದನನ್ತಾಯ ತಪಸ್ಸಿಯುಮಾನ್ತೆಡೆಸೋನಕ್ಕು ತಾನ್ (ಸೌಇಇ. IX-1, ೩೨-೬ ;?).

[<ಸಂ. ಪರಿಹಾರ]

ಪಾರಿವ1 (ನಾ). ಒಂದು ಬಗೆಯ ಪಕ್ಷಿ ; ಕಪೋತ ; ಪಾರಿವಾಳ : ''ದೃಶದಾತನಂ ಪಾರಿವಮೆನಿಕ್ಕು'' (ಹುಂಗಾ. ೩೨-೨); ದಿವ್ಯಮ[ಖ]ಮಂ ಕೆಯ್ಕೊಂಡು ಸಗ್ಗಕ್ಕೆ ಪಾಱುವಾ ಪಾರಿವ ಜಕ್ಕವಕ್ಕಿಗಳ್ (ಪಂಪಭಾ. ೬-೩೮); ಕಾವಿನೀಪುಣಿತವೀಚೆಂದು ವಾರಿವದ ಮೆಲ್ಲಾಲಿಯಂ . . . ತಣೆಯದೆ ಕೇಳ್ದರ್ (ಉಪ್ಪಳ. ೦-೧೨); ಕಾಬುಜಿಲೆ ಲಾವುಗೆ ಗೌಜು ಪಾರಿವ . . . ಗಿಂಚಲು ಗರಿಗ ವೊದಲಾದಖಿಲವಿಹಗಕುಲ ಬಿದ್ದುದುರಿಯೊಳಗೆ (ಕುವಾ. ೪. ೨೦-೩೩). [<ಪ್ರಾ. ಪಾರಾವಯ, ಪಾರೇವಯ-/ಸಂ. ಪಾರಾವತ-/ತೆಲು. ಪಾರುವ, ಪಾರುವಾ, ಪಾವುರಾ]

ಪಾರಿವ2, ಪಾರಿಯ (ನಾ). ೧. ಒಂದು ಬಗೆಯ ಬಣ್ಣ : ಪವಣ್ಪಾಡಿದ ಸುವರ್ಣಪಾರಿವದ ಕುಪ್ಪಸವೊಪ್ಪೆ ಬೆಡಂಗನಾಳ್ದು ಕಣ್ಗೆಡಜಿದೆ ವೆಂಡವಾಸದ ವಿಳಾಸದ ಸೂಳೆಯರೊಪ್ಪ ತೋಱಿದರ್ (ಪಂಪಭಾ. ೯-೦೦೩); ''ಪಾರಿವಾಳದ ಬಣ್ಣ '' (ಪಂಪಚೋ. ೩೪೦) ; ಬೀಸುಬಡಿಗೆಯ ಧನುಸರಳ ಪಾರಿವ[ಕಾಕಾಂ. ಭಾಸುರ]ದ ಕುಪ್ಪಸದ ಕೇಶದಲಿ ತಳಿರುಗಳ ಕಟ್ಟಿ ವಿಲಾಸದಲಿ ಹರಿತಹ ಕಿರಾತರು ಘಾಸಿಯಾದರು (ಶಾಮ್ಭ. ೮೦೩. ೪-೦೦). **ಪಾರಿಯ** : ೨. ಒಂದು ಬಗೆಯ ಬಣ್ಣದ ಬಟ್ಟೆ : ದೈತ್ಯಮರ್ದನನ ದಾಸವಾರಿಯ ರಕ್ಕಸಜೂಜಿನ ಪಟ್ಟಿಯ ಪರಿಗೆಯ ಪಸರದ ಪಾರಿಯ ದೊಯ್ಯಾರವ ಕೆಂಪಟ್ಟಿನ ಪಂತಿಯ . . . ತಟ್ಟಿಸೊಟ್ಟಿಲೆಯ ಟಟ್ಟುಬ್ಬಟಿಯ ಬಿರುದಿನ ಹರಿಗೆಕಾಜಿತ ಪರಿವೀಥಿಯೊಳಂ (ಗಿಂಪ.೬-೩೩ ಕ); ತವೆ ವಾರಿಯದಿ ನಿಂಪ್ರಗೋಪದಿಂ ಶಿವನಾಂತ ತೊಪಲೆರಡನಣಕಿಸುತೆ ಪೊಂಬಟ್ಟೆಯಿಂದೆ ಮಾಧವನ ಮಳ್ಗಿಸುತೆ . . . ಒಪ್ಪಿವರಲ್ಲಿ ದೂಸಿಗರ್ (ಕತ್ಕಾ. ೬-೬೬); ಬಟ್ಟೆಮುತ್ತುಗಳು ಕೇವಣಿಸಿರ್ದ ಪಾರಿಯ ಪಟ್ಟಾವಳಿ ಚಲ್ಲಣವ ತೊಟ್ಟು (ಪೋಕಥ. ೦೨-೧೩). [<ಪ್ರಾ. ಪಾರಯ-/ತಮಿ. ಮಲ. ಪಾರಿ]

ಪಾರಿವಂಕ (ನಾ). = ಪಾರಿವ1. ಗೊರವ ಗೌಜನು ಕಾಡೆ ಗಿಡಗ ಸಬಲ ಪುಂಡೆ ಹರಡೆ ಕೆಂಬೋತು ಪಾರಿವಂಕ . . . ಪರಿಯನಿನ್ನೇನ ವೇಳ್ವೆನು (ಕೂರೇಣಾಂ. ೦-೬೨). [<ಪಾರಿವ1]

ಪಾರಿವಗೂಗು (ನಾ). ೧. ಪಾರಿವಾಳದ ಧ್ವನಿ. ೨. (ಆಲಂ) ಸಂಭೋಗ ಕಾಲದಲ್ಲಿ ಕೊರಳಿನಿಂದ ಹೊರಡುವ ಧ್ವನಿ ; ಮಂಗಿತ ; ರತಿ ಕೂಜಿತ : ನಲ್ತೋಳಂ ಪಿಡಿದೀಲ್ದು ಬಿಣ್ಪೊಡೆಯು ವೇಲಿಟ್ಟಿನ್ನ ವೆಂಬೈಲ್ಗೆಗೊಳ್ವಳಪ್ಪಂತಿರೆ ತಳ್ಕಿಗೆಯ್ದು . . . ಅಗ್ಗಳದೊಳ್ಪಾರಿವ ಗೂಗಿನಿಂ ತಣಿಪೆಂ (ಜಕಥ. ೬-೨೩೬). [ಪಾರಿವ1+ಕೂಗು2]

ಪಾರಿವಟ್ಟಿ ' ಪಾರಿಯವಟ್ಟಿ ' ನೋ.

ಪಾರಿವಾಣ1 ' ಪಾರಿವಾಳ1 ' ನೋ.

ಪಾರಿವಾಣ2 ' ಪಾರಿವಾಳ2 ' ನೋ.

ಪಾರಿವಾಳ1, ಪಾರಿವಾಣ1, ಪಾರಿಂವಾಣ1, ಪಾಲ್ವಣ, ಹಾರವಾಣ1, ಹಾಲುವಾಣ1 (ನಾ). = ಪಾರಿವ1 : '' ಪಾರಾವತಃ, ಕಲರವಃ, ಕಪೋತಃ —ಈ ೩ ಪಾರಿವಾಳ '' (ಕಾಕಾಂ. ೦೦೪) ; ಅಂಬಾಲಿಕೆ ನಿನ್ನಯ ಕವಿಯಿಂ ಬಿಟ್ಟಪುದೆಂದು ಜಗುಟ್ಟ ಚಿನ್ನೆಯ್ದಿಲ ಪೂಂ ಭರದೆ ತೆಗೆದು ಬೀಸಿದೆನಂಬರದೊಳ್ ಪಾರಿವಾಳಮಂ ಬೆದಱಿಪವೋಲ್ (ದಕಾಂ. ೬-೨೬೬) ; ಶುಕಪಿಕಪಾರಿವಾಳದ ಹುಬ್ಬುಲುಬ್ಬಿತು ಸುಕರವಾಯ್ತೆಂದುಸುರುವೆನು (ಕಥಕ. ೦೨-೧೪) ; ಅವನು ನಿರ್ಮಲಳು ಕೊಟ್ಟಿದ್ದ ಪಾರಿವಾಳದ ಕಾಲಿಗೆ ಒಂದು ಪತ್ರವನ್ನು ಕಟ್ಟಿ ಹಾರಿಬಿಟ್ಟನು (ಐಇಮ. ೨೨೪). **ಪಾರಿವಾಣ1** : '' ಪಾರಾವತಃ, ಕಲರವಃ ಕಪೋತಃ . . . ಪಾರಿವಾಣದ ಹಕ್ಕಿ '' (ಸಿರಾ೦೨೬. ೦೩೭); ಶ್ಲಿಷ್ಟಾಧಿಕವಾದ ನಾಡಿಯು ಪಾರಿವಾಣದ ಹಾಗೆ ವೇಗ ಮಂದವಾಗಿ ಶೀತವಾಗಿ ಆಡುತ್ತಿಹುದು (ಸಶಶ್ಮ. ೦೩); ಪಾರಿವಾಣ ಬಿಡೋಕೆ ಹೋಗಿದ್ದೆಯಾ? (ಕರ್ಮುಶ್ರೀ. ೩೦೦). **ಪಾರುವಾಣ1** : (೫). **ಪಾಲ್ವಣ** : ಕಾಡ ಗೌಜಲು ಕರಿಯ ಲಾವುಗೆ . . . ಪರಿತ ಪಾಲ್ವಣ ಸ್ವೇತಸೋರೆಯು

ಪರಿದ ಗೀಜಗ ಮೆರೆದವು (ಗೋಹಾಡು. ೨೪). **ಹಾರವಾಣ್ಯ** : (ಕ), **ಹಾಲುವಾಣ್ಯ** : "ಪಾರಾವತಃ, ಕಲರವಃ, ಕಪೋತಃ — ೩ ಹಾಲುವಾಣದ ಹಕ್ಕೀ ಹೆಸರುಗಳು" (ಸಿದ್ಧಾಂತಿ. ೦೩೬). [<ಸಂ. ಪಾರಾವತ]

ಪಾರಿವಾಳ್ಯ, ಪಾರಿವಾಣ್ಯ, ಪಾರುವಾಣ್ಯ, ಹರಿವಾಣ್ಯ, ಹರಿವಾಳ್ಯ, ಹಾರವಾಣ್ಯ, ಹಾರಿಯಾಳ, ಹಾರಿವಾಣ, ಹಾರಿವಾಳ, ಹಾರುವಾಣ, ಹಾಲಿವಾಣ, ಹಾಲುವಾಣ್ಯ (ನಾ). ಒಂದು ಬಗೆಯ ಮರ ; ಪಾರಿಭದ್ರ : "ಪಾರಿಭದ್ರಃ, ನಿಂಬತರುಃ, ಮಂದಾರಃ, ಪಾರಿಜಾತಃ — ಈ ೪ ಪಾರಿವಾಳದ ಮರ" (ಶಾಶಾ. ೦೦೬) ; ಪಾರಿವಾಳದಾ ತದಕಿನ...ಇಪ್ಪೆಯ ಮರಂಗಳ ಕೊಂಬುಗಳಂಬರಂಬರಂ ಪುದಿದು ಪೊದಟ್ಟು ಸುರ್ಬಡರೆ ಪರ್ಬಿರೆ (ಲೀಲಾವ. ೬-೨೨); ಆವರಿಕೆಸೊಪ್ಪು, ಕರಿಹತ್ತಿ ಸೊಪ್ಪು, ಪಾರಿವಾಳದ ಸೊಪ್ಪು . . . ರಸವ ಹಿಂಡಿ ಬೆರಣಿ ಬೂದಿಯ ಕಲಸಿ ನೆತ್ತಿಬಾಯಿಗೆ ಒತ್ತಿದಾಕ್ಷಣವೇ ರಕ್ತವಾಂತಿ ನಿಲ್ಲುದು (ಸಕಸ್ಯ. ೦೮೮). **ಪಾರಿವಾಣ್ಯ** : "ನಿಂಬತರುಃ — ಬೇವು, ಪಾರಿವಾ(ಳ)ಣ" (ಓಷಧಿ. ೮೭); ಆ ತೈಲದಿಂ ಕೈಯಂ ಪೂಸಿ ಪಾರಿವಾಣದ ಕಾಯಂ ಒತ್ತಲು ಒಡೆಯುವುದು (ಪಿಸ್ಯಪಿ. ೩೩) ; ಪಾರಿವಾಣದ ಸೊಪ್ಪಿನ ರಸ, ಒಂದೆಲಗನ ರಸ . . . ಇವಿಷ್ಟನೂ ಪ್ರತ್ಯೇಕ ಒಂದು ಹಲವ ಹನಿಸಿ, ಮರ್ದಿಸಿ . . . ಕೊಡಿಸುವುದು (ವೈದ್ಯಸಾ. I. ೮೪). **ಪಾರುವಾಣ್ಯ** : "ಪಾರುವಾಣ (ಹಾಲಿವಾಣ) — ಪಾರಿಭದ್ರ = ವೃಕ್ಷವಿಶೇಷ" (ತದ್ಭಕೋ. ೨೬). **ಹರಿವಾಣ್ಯ** : ಹರಿವಾಣ : — ಈ ಬಿತ್ತ ಮೂಱನ್ನು ನೀರಲ್ಲಿ ಅರೆದು ಕುಡಿಯೆ ಮೂಱುದಿನದಲ್ಲಿ ಋತುವಾಗುವಳು (ಪಿಸ್ಯಪಿ. ೭). **ಹರಿವಾಳ್ಯ** : ಈ ನಮ್ಮ ಊರ ಮುಂದಿನ ಹರಿವಾಳದ ಮರಗಳು (ಮುಂಬಯಿ. ೬-೨೮೮), **ಹಾರವಾಣ್ಯ** : (ಕ). **ಹಾರಿಯಾಳ** : "ಹಾರಿಯಾಳದ ಮರ = ಪಾರಿಜಾತಕ, ಪಾರಿಭದ್ರ, ಮಂದಾರ, ನಿಂಬತರು" (ಶಾಶಾ. ಕ). **ಹಾರಿವಾಣ** : "ಪಸಿರಃ — ಉತ್ತರಣಿ, ಚೆನ್ನೆಗ್ಗಿಲು, ಗಜಹಿಪ್ಪಲಿ, ಹಾರಿವಾಣದ ಮರ" (ಓಷಧಿ. ೦೪೬); ಅವರಿಯ ಮೂಳಮುಮಂ ತುಪ್ಪವುಮಂ ಮೇಣ್ ಹಾರಿವಾಳ(ಣ)ದೆಲೆಯಂ ತಿಳತೈಳವುಮಂ ಮೇಣಿಡು ವಾಜ್ಯವುಮನೆಱೆಯೆ×××ಪೋಕುಂ ಕ್ರಿಮಿಗಳ್ (ಲೋಕೋಪ. ೯-೨೩೦). **ಹಾರಿವಾಳ** : ಅರುಟಾಳಂ ಹಾರಿವಾಳಂ ತುಡು ತಡಸೊಡವಂ ಲೊಕ್ಕಿ ಗೊಟ್ಟಕ್ಕಿ . . . ತಱಿಯದಿಂದೊಪ್ಪುತಿರ್ದತ್ತರಣ್ಯಂ (ಗಿಂಕ. ೦.೭೨) ; ಕುರುಟಿಗೆ ಹಾರಿವಾಳ[ಶಾಶಾಂ. ಣ]ದ ರಸಂಗಳೊಳಾಲದ ಪಾಲನಿಂಬಿನಿಂ ಬೆರಸಿಡು (ಐಮಪ. ೦೩-೩೯) ; ಹಾರಿವಾಳ (ಪಾಂಗಾರಾ) — ಮಧ್ಯಮ ಆಕಾರದ ವೃಕ್ಷವು, ಕಟ್ಟಿಗೇ ಕೊರೆದು ಹಲಿಗೆಗಳನ್ನು ಮಾಡುವರು (ಕಠಾಗ. ೩೦). **ಹಾರುವಾಣ** : (ಕ). **ಹಾಲಿವಾಣ** : ಹಾವಿನ ಹೆರೆ, ಹಾಲಿವಾಣದ ಎಲೆ, ಬಿಳಿಯ ಸಾಸುವೆಯಿಂದಂ ಸಮಂಗೊಂಡು ಶಿಶುವಿಂಗೆ ಧೂಪವಿಕ್ಕುವುದು (ಶಾಲಿ. ೦೨೩-೭); ಸುರದುಂಬೆಯೆಕ್ಕೆಯೆಲೆ ನಾಗರಮುಂ ಬಜೆಯುಳ್ಳಿ ಹಾಲಿವಾಣದ ಕೊನರುಂ ಮರಿಚುಬೆರಸರೆ ನಸ್ಯಂ ವರಮಿದುವೆ ನೃಮೂತ್ರದಿಂ ವಿಷಘ್ನವೆನಿಕ್ಕುಂ (ಐಮಪ. ೭-೩೬); ಹಾಲಿವಾಣದ ಮರದಲ್ಲಿ . . . ಕಾಜಾಣವೊಂದು ಆಲಾಪನೆಗೆ ತೊಡಗಿತು (ಮಲೆಮ. ೪೦). **ಹಾಲುವಾಣ್ಯ** : ವೀಳೆಯದೆಲೆ ಹಂಬು ಹಬ್ಬುವುದಕ್ಕೆ ಅನುಕೂಲವಾದ ಗಿಡಗಳನ್ನು ಪಕ್ಕದಲ್ಲಿ ಬೆಳೆಸಬೇಕು. ಇವು ಸಾಮಾನ್ಯವಾಗಿ ಅಗಸೆ ಮತ್ತು ಹಾಲುವಾಣ (ವೃಮ. ೩೩). [<ಸಂ. ಪಾರಿಭದ್ರ]

ಪಾರಿವೂಳಿಗ (ನಾ). ಕಾವಲು ಕಾಯುವ ಕೆಲಸ ; ಪಹರೆ ಊಳಿಗ : ಶಿಮ್ಮದಾಸನ ಮಗ ಲೋವಿದಾಸಗೆ ಶ್ರೀ ಸ್ವಾಮಿಯವರ ಪಾರಿವೂಳಿಗ ಶಂಖು ಜಾಗಟೆ ಗುಡಿಕಾವಲು ಅದ್ದುತ ಮುದ್ರೆ ಸಹ ಅಪ್ಪಣೆ ಪಾಲಿಸಿ ಧರ್ಮ ಕೊಟ . . . ಪೊಲ ೮ (ಮೈಆರಿ. ೦೯೨೯, ೭-೦೩ ; 1673).

[ಪಾರ್ಕಿ (<ಪಹರಿ)+ಊಳಿಗ (<ಊಳಿಗ)]

ಪಾರಿವೇಂಟೆ, ಪಾರುವೇಟೆ (ನಾ). ೧. ದೇವಸ್ಥಾನದಲ್ಲಿ ನಡೆಯುವ ಒಂದು ಉತ್ಸವ ವಿಶೇಷ : ಮಕರಸಂಕ್ರಮಣದ ಮರುದಿನ ಪಾರಿವೇಂಟೆಯಾಗಿ ಗಿರಿಪ್ರದಕ್ಷಿಣ ಮಾಡುವಾಗ . . . ಅವಧರಿಸುವ ಮಹಾನೈವೇದ್ಯದ ಹರಿವಾಣ ೨೦ (ಸೌಇಇ. IX — II, ೩೩೦-೬ . 1533). **ಹಾರುವೇಟೆ** : ೨. ಬೇಟೆ ; ಶಿಕಾರಿ : ಕೋಟೆಯ ಮುಂದಿನ ಪಾರುವೇಟೆಯ ಬಯಲಲ್ಲಿ ಬೋನನ್ನು ಇಳಿಸಿದಾಗ, ಸುತ್ತ ನೆರೆದಿದ್ದ ಜನರನ್ನು ಕಂಡು. . . ಹುಲಿರಾಯನಿಗೆ ದಿಗ್ಭ ಮೆಯಾಯಿತು (ಕೂಲೇಪಾ. ೪).

[ದೇ. ೩ ತಮಿ. ಪಾರಿವೇಟ್ಟೈ ; ತೆಲು. ಪಾರುವೇಟ, ಪಾಱುವೇಂಟ]

ಪಾರಿವ್ರಾಜ (ನಾ). = ಪಾರಿವ್ರಾಜಕ ೨ : "ಭಿಕ್ಷು ಕರ್ಮಂದಿಯವಂ ಪೀನಂ ಪಾರಿವ್ರಾಜಂ ತಾನಕ್ಕುಂ" (ಪಸ್ತುಕೋ. ೩೬-೩೪). [ಸಂ.]

ಪಾರಿವ್ರಾಜಕ (ನಾ). ೧. ವಿರಕ್ತಿ ; ಸಂನ್ಯಾಸ : ಪಾರಿವ್ರಾಜಕ (ಪಾರಿವ್ರಾಜ್ಯ)ಮೆಂಬುದು ಗೃಹಸ್ಥಧರ್ಮಮಂ ಪ್ರತಿಪಾಳಿಸಿ ವಿರಕ್ತಚಿತ್ತಂ ದೀಕ್ಷೋದ್ಯುಕ್ತನಾಗಿ . . . ನಿರ್ಗ್ರಂಥಾಚಾರ್ಯರ ಪಕ್ಕದೆ . . . ದೀಕ್ಷೆಗೊಳ್ಳುದು (ಶಾಪುಂಪು. ೨೨೮). ೨. ಒಂದೆಡೆ ನಿಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಸುಳಿದಾಡುವ ತಪಸ್ವಿ : "ಪರಾಶರೀ, ಬ್ರತೀ, ಭಿಕ್ಷುಃ . . . ಪಾರಿವ್ರಾಜಕಃ, ತಪಸ್ವೀ, ಕರ್ಮಂದೀ, ತಾಪಸಃ — ಈ ೯ ತಪಸ್ವಿ" (ಹಲಾಯು. ೬೮-೨೩೩). [ಸಂ.]

ಪಾರಿವ್ರಾಜ್ಯ (ನಾ). [ಜೈನ] ಶ್ರಾವಕನು ನಿರ್ವಾಣದೀಕ್ಷೆಯನ್ನು ತೆಗೆದುಕೊಳ್ಳುವುದು : ಸಜ್ಜಾತಿ ಸದ್ಗೃಹಿತ್ವಪಾರಿವ್ರಾಜ್ಯ ಸುರೇಂದ್ರತ್ವ ಸಾಮ್ರಾಜ್ಯಪರಮಾರ್ಹಂತ್ಯಪರಿನಿರ್ವಾಣಮೆಂಬೇಟುಂ ಪರಮಸ್ಥಾನನಾಮ ಕರ್ತ್ರನ್ವಯಕ್ರಿಯೆಗಳಂ (ಆದಿಪು. ೦೩-೦೬ ಪ) ; ತಪದೊಳ್ ನೆಗೞ್ದೊಡೆ ದಿವ್ಯವಿಜಯಪರಮನಿರ್ವಾಣಸುಖಭಾಜನರಪ್ಪರಿದು ಪಾರಿವ್ರಾಜ್ಯಕ್ರಿಯೆ (ಶಾಪುಂಪು. ೨೩೦). [ಸಂ.]

ಪಾರಿಶುದ್ಧತೆ (ನಾ). ಅತ್ಯಂತ ಶುದ್ಧವಾಗಿರುವುದು ; ಪರಿಶುದ್ಧತೆ : ನಡೆ ನುಡಿ ಎರಡರಲ್ಲೂ ಪಾರಿಶುದ್ಧತೆ ಈ ಸೌಂದರ್ಯದ ಲಕ್ಷಣ (ಪಂಶೀ. ೩೬); ನಮ್ಮ ಮಕ್ಕಳು . . . ಅಂತರಂಗದ ಪಾರಿಶುದ್ಧತೆಗೂ ನೆರವಾಗತಕ್ಕ ಶಿಕ್ಷಣವನ್ನೂ ಪಡೆಯಬೇಕು (ಶಿಕ್ಷದ. ೬೨೪).

[ಸಂ. ಪಾರಿಶುದ್ಧತಾ]

ಪಾರಿಶೇಷಕ (ನಾ). ಉಳಿದ ಅಂಶ ; ಪರಿಶೇಷ : ಮಹೀಧಾರಾಂತರವ ನಿಶ್ಚಯಿಸಿ ಭಾರತಪಾರಿಶೇಷಕವ ಅಂತಕಾಂತಕ . . . ಹೊಕ್ಕನು ದೋರಕಾಪುರಿಯ (ಕುಪ್ಯಾಅ. ೨-೩೩). [ಸಂ.]

ಪಾರಿಶೇಷನ್ಯಾಯ (ನಾ). ಒಂದು ಬಗೆಯ ನ್ಯಾಯ ; ೯ ನಾಲ್ಕಾರು ವ್ಯಕ್ತಿಗಳಲ್ಲಿ ಒಬ್ಬ ವ್ಯಕ್ತಿಯನ್ನು ಅಥವಾ ನಾಲ್ಕಾರು ವಸ್ತುಗಳಲ್ಲಿ ಒಂದು ವಸ್ತುವನ್ನು ಗುರುತಿಸಬೇಕಾದಾಗ ಜೊತೆಗಿರುವ ಇತರ ವ್ಯಕ್ತಿ ಅಥವಾ ವಸ್ತುಗಳನ್ನು ಅಲ್ಲಗಳೆದು ಕೊನೆಗೆ ಉಳಿಯುವ ನಿರ್ದಿಷ್ಟ ವ್ಯಕ್ತಿ ಅಥವಾ ವಸ್ತುವನ್ನು ಒಪ್ಪಿಕೊಳ್ಳುವಿಕೆ : ಪಾರಿಶೇಷನ್ಯಾಯದಿಂ ಪರಮೇಶ್ವರನೇ ಜಗತ್ಕರ್ತೃವೆಂದು ನಿಶ್ಚಿತಮಕ್ಕುಂ (ಪಿಪೇಳ. ೨). [ಸಂ.]

ಪಾರಿಷದ (ಗು). ೧. ಪರಿಷತ್ತಿಗೆ ಸಂಬಂಧಿಸಿದ ; ಸಭೆಗೆ ಸಂಬಂಧಿಸಿದ. (ನಾ). ೨. ಸಭಾಸದ ; ಸಭಿಕ : ಹೊಸಹೊಸ ಕವಿಗಳು ತಮ್ಮ ಹೊಸ ಹೊಸ ಕೃತಿಗಳಿಂದ ಪಾರಿಷದರಿಗೆ ಪರಿಚಿತರಾದರು (ಕಡೂತ್ರ. ೩೩); ತಮ್ಮಂತಹ ದೊಡ್ಡವರು, ರಸಿಕ ಪಾರಿಷದರು ಮಾಡುವ ಪ್ರಯತ್ನದಿಂದ ರಸಿಕಜೀವನವು ಪುನರುದ್ಧಾರವಾಗಬೇಕಾಗಿದೆ (ಸಾಹಿಸೀ. ೭೯). ೩. ರಾಜ, ದೇವತೆ ಮುಂತಾದವರ ಸೇವಕವರ್ಗ. ೪. [ಜೈನ] ಇಂದ್ರನ ಸಭೆಯಲ್ಲಿ ಸದಸ್ಯರಾಗಿರುವ ದೇವತಾವರ್ಗ : ಸಾಮಾನಿಕತ್ರಯಸ್ತ್ರಿಂಶತ್ಪಾರಿಷದಾತ್ಮರಕ್ಷಲೋಕಪಾಲಾಭಿಯೋಗ್ಯಕಿಲ್ಬಿಷರೊಡನೆ ಗಜ

ತುರಗ ರಥ ವೃಷಭಗಂಧರ್ವನರ್ತಕೀಪವಾತ್ಮನೀಕಂಬೆರಸು ಬಂದು ಮುಂದೆ ನಿಲ್ವುದುಂ (ಜಿಪು. ೭-೪೨ ಪ) ; ಅನೇಕ ಪ್ರಕಾರಪಾರಿಷದ ಪ್ರಕೀರ್ಣಕಾಭಿಯೋಗ್ಯ ಕಿಲ್ಬಿಷಿಕರುಮಂತರ್ಮಧ್ಯಬಾಹ್ಯಾವಸ್ಥಿತಗಳಪ್ಪ ಮೂಱುಂಪರಿಷೆಯುಮಾತ್ಮೀಯಪರಮೈಶ್ವರ್ಯರ್ ಪ್ರಕಾಶಕಮಾಗೆ (ಸರ್ಗಪು. ೦೦-೬೦ ಪ). ೫. [ವೀಶೈ] ಚಂಡೀಶ್ವರ ಮುಂತಾದ ಶಿವಗಣ ; ಪ್ರಮಥಗಣ : ಕಲ್ಯಾಣಮಮರಪಾರಿಷದಗಣಸಂಕುಲಕೆ (ಪಾರ್ಶ್ವ. ೦೭/೦೩) [ಸಂ.]

ಪಾರಿಷ್ಪವ (ನಾ). ಗದಾಯುದ್ಧದಲ್ಲಿ ಒಂದು ವರಸೆ(?) : ಬವರಿ ಮತ್ಸ್ಯೋದ್ಗತಿ ವಿಲಂಘನ . . . ಸಂಪ್ಲವನ ಪಾರಿಷ್ಪವ ಗದಾಪರಿರಂಭ ವಿಕ್ಷೇಪ . . . ಲಘುವಿನ್ಯಸ್ತವೆಂಬೀ ವಿವರದಲಿ ಕಾದಿದರು (ಕುಮಾಗ. ೬-೨೫). [?]

ಪಾರಿಸಿ, ಪಾರ್ಸಿ (ನಾ). ೧. ಪರ್ಷಿಯಾದೇಶ ; ಇರಾಣ : ಪಶ್ಚಿಮದಲ್ಲಿ ಸುಮಾರು ಒಂದು ಲಕ್ಷ ಪಾರಿಸೀಜನರೂ . . . ವಾಸವಾಗಿದ್ದಾರೆ (ಭೂಗೋಳ. ೭೦). 'ಪಾರಿಸಿಲಿಪಿ' ಪರಾ. ಪಾರ್ಸಿ : ೨. ಪರ್ಷಿಯಾದೇಶದ ಜನ : ಹಿಂದೂದೇಶದವರಲ್ಲದ ಆಸ್ಮಾಖಂಡದ ವಂಶೀಯರು ... ಚೀನೀಯರು, ಮೊಗಲರು, ಪಾರ್ಸಿ ಪಠಾಣರು (ತುಳುಸಾ. ೦೭೪).

[<ಸಂ. ಪಾರಸೀ]

ಪಾರಿಸಿಲಿಪಿ (ನಾ). ಪರ್ಷಿಯಾದೇಶದ ಭಾಷೆಯ ಲಿಪಿ : ದ್ರಾವಿಳ ಲಿಪಿಯು ಪಾರಿಸಿ[ಶಾಶಾಂ. ರಸ, ರಿಸ]ಲಿಪಿಯು ಲಾಳಲಿಪಿ ಮೊದಲಾದ ಹಲವು ಲಿಪಿಗಳನೋದಬಲ್ಲಗ್ಗಳದ ಕರಣಿಕರಂ ಕರೆಸಿ ಬಿಜ್ಜಳಮಹೀಪತಿಯಾಗತಾ ಹಿಡಿದಿರ್ದ ಲೇಖೆಯನು ಅವರ ಕೈಯೊಳು ಕೊಟ್ಟು (ಬಸಪು. ೫-೫೩).

[ಪಾರಿಸಿ+ಲಿಪಿ]

ಪಾರಿಸು (ಕ್ರಿ). ಉಪವಾಸ ಮುಗಿಸಿದ ನಂತರ ಆಹಾರವನ್ನು ಸೇವಿಸು ; ಪಾರಣೆ ಮಾಡು : ಎನ್ನ ಮಹಾಮಹಿಮೆಯೊಳೆಂತುಣ್ಣೆನೆಂದು ಪಾರಿಸದೆ ಮತ್ತಮಷ್ಟೋಪವಾಸಂಗೆಯ್ದು (ಸಂಪ್ರಾಶಾ. ೦೦೭-೦೬); ಅಪರಾಜಿತಂ ವಿಮಳವಾಹನ ಜಿನಪತಿಯಂ[ಅರ್ಹದ್ದಾಸನಂ] ಕಂಡಲ್ಲದುಣ್ಣೆನೆಂದೆಂಟುದಿವಸಮುಪವಾಸಂಗೆಯ್ದು ಪಾರಿಸಲೊಲ್ಲದಿರೆ ಸುರರಾಜನಱಿದು . . . ವಿಮಳವಾಹನನ [ಅರ್ಹದ್ದಾಸನ] ಪ್ರತಿಬಿಂಬಮಂ ತೋಱಿಸೆ ಕೃತಾರ್ಥನಾಗಿ ನಮಸ್ಕಾರುಗೆಯ್ದು ಪಾರಿಸೆ (ಶಾಪುಂಪು ೩೨೫); ಮುನಿಪಂ ಮಾಸೋಪವಾಸಾಂತರದೊಳನುನಯಂ ಪಾರಿಸಲ್ಕೆಂದು ಪೊಕ್ಕೊಯ್ಯನೆ ಚರ್ಯಾಮಾರ್ಗದಿಂದಂ ಬರೆ(ಬಂಹರಿ. ೫-೩೪).

[ಪಾರಣೆ$_1$+ — ಇಸು$_2$]

ಪಾರಿಸೋಜ (ನಾ). ಒಬ್ಬಾತನ ಹೆಸರು : ಹಿಟ್ಟಿನ ಅಕ್ಕಸಾಲೆ ಪಾರಿಸೋಜಂಗೆ ಮತ್ತರು ೪ (ಕೊಲ್ಲಾಕಾ. ೩೭-೩೭ ; 1049).

[ಪಾರಿಸ$_?$ +ಓಜ$_1$ (<ಒವರ್ಸು)]

ಪಾರಿಹಾರಿಕ (ನಾ). ಮಾಲೆಯನ್ನು ಕಟ್ಟುವವನು ; ಮಾಲೆಗಾರ : "ಮಾಳಾಕಾರಃ, ಮಾಲಿಕಃ, ಪಾರಿಹಾರಿಕಃ—ಈ ೩ ಮಾಲೆಗಾಱಂ" (ಹಲಾಯು. ೯೬-೪೩೫). [ಸಂ.]

ಪಾರಿಹಾರ್ಯ (ನಾ). ಬಳೆ ; ಕಂಕಣ ; ಕಡಗ : "ಅಪಾಪಃ, ಪಾರಿಹಾರ್ಯಃ, ಕಟಕಃ, ವಳಯಃ—ಈ ೪ ಕಂಕಣಂ" (ಹಲಾಯು. ೯೦-೪೦೩) ; ಮೇಖಲೆಯ ಪಾರಿಹಾರ್ಯದ ಮಣಿನೂಪುರದ ಮಧುರಸ್ವನಂ ಮುಪ್ಪುರಿಗೂಡಿದ ಮದನಪಾಶಮೆನೆ ನಡೆತಂದಳ್ (ಸಂಕಾಪು. ೩-೬೪) ; ಮಣಿಕಾಂಚೀ ಮಣಿಪಾರಿಹಾರ್ಯಮಣಿಮಂಜೀರಸ್ವನಂ ಪೊಣ್ಮಲ್ . . . ಗಣಿಕಾಶ್ರೇಣಿಯುಮೇಱಿ ನಿಂದುದು ತವಂಗಶ್ರೇಣಿಯಂ ಲೀಲೆಯಿಂ (ಜಗವಿ. ೬-೪೪).

[ಸಂ.]

ಪಾರೀಕತ್ತು 'ಫಾರೀಕತ್ತು' ನೋ.

ಪಾರೀಖತ್ತು 'ಫಾರೀಕತ್ತು' ನೋ.

ಪಾರೀಣ (ನಾ). ೧. ದಾಟುವುದು. ೨. ಎಲ್ಲಾ ವಿಷಯಗಳಲ್ಲಿ ಸಂಪೂರ್ಣಪರಿಚಯವನ್ನು ಪಡೆದಿರುವುದು ; ಪಾಂಡಿತ್ಯ. ೩. ಎಲ್ಲಾ ವಿಷಯಗಳಲ್ಲಿ ಸಂಪೂರ್ಣಪಾಂಡಿತ್ಯವನ್ನು ಪಡೆದಿರುವವನು ; ಪಂಡಿತ ; ನಿಷ್ಣಾತ : ದ್ವಾವಶಗಣಸರಸ್ವರೋಜವಿವಳನ ಶೋಭಾಪ್ರಭಾವಪ್ರಸವಪಾರೀಣದಿವ್ಯವಚನಮರೀಚಿಮಾಲಿರೊ ಚಿರ್ನಿಚಯ ಶ್ರಿಜಗಚ್ಚೂಡಾಮಣಿಯಂ . . . ಪೊಡೆವಟ್ಟು (ಶಾಂಶಿಪು. ೯.೬೯ ಪ); ನಿಜಗುರುಭಜನಪಾರೀ[ಪಾಶಾಂ. ರಿ]ಣನ . . . ನೋಡಿ (ಬಸಪು ೩೯-೫೩).

[ಸಂ.]

ಪಾರು$_1$ 'ಪಾರ್$_1$' ನೋ.

ಪಾರು$_2$ 'ಪಾಱು$_1$' ನೋ.

ಪಾರು$_3$ (ಕ್ರಿ). ೧. ಬೆಳೆ ; ವೃದ್ಧಿಯಾಗು : (ಕ). ೨. ಉಂಟಾಗು ; ಸಂಭವಿಸು : (ಕ). [ದೇ. ॥ ತಮಿ. ಪಾರಿ ; ತೆಲು. ಪಾಱು]

ಪಾರು$_4$ 'ಪಾಱು$_2$' ನೋ.

ಪಾರು$_5$, ಹಾರು$_3$ (ನಾ). ೧. ಆಚೆಯ ದಡ ; ಪಾರ : "ಪಾರು-ಪಾರ=ಆಚೆದಡ" (ತದ್ಯಕೋ. ೨೬); ಸಿರಿಯ ಪೊಸ ತವರೂರು ಪವಳರನ್ನದ ಪಾರು ಸುರರೈಸಿರಿಯ ನಾಡು . . . ಶಾನೆನುತ್ತಿಂಗಡಲ್ ಕಂಗೊಂಡುದು (ಕವಿಸ. III, ೨೦೫ ಪ್ರಭಾವತೀಪರಿಣಯ). ೨. ಕೊನೆ ; ಅಂಚು : (ಕ). ೩. ಮನೆಯ ಮಾಡಿನ ಇಳಿಜಾರು ; ಸೂರಿನ ಇಳಿಜಾರು ಭಾಗ : (ಕ). ೪. ನೊಗದ ಎರಡು ಪಕ್ಕ, —ಕಡೆ ; 'ಪಾರುವಿಳಿ' ಪರಾ. ೫. ಅಪಾಯದಿಂದ ತಪ್ಪುವಿಕೆ ; ಬಚಾವು : ಮೃಗಗಳಂ ನೋಡಾರ್ಯ ! ಬಲೆಗೆ ಬಲಿಯಾಗಿ, ಪಾರು ಬೇರಿಲ್ಲದಿರೆ, ರೋಸಿ, ಹಿಂದಿರುಗಿ, ಕುರುಡುಧೈರ್ಯವ ನೆಮ್ಮಿ, ಬೇಂಟೆಯನನೆದು ರಿಸದೆ? (ಶಕಾರ. ೭೦-೬). ಹಾರು$_3$: ೩. ಈ ಗುಬ್ಬಚ್ಚಿಗಳಿಗೆ ಮನೆಯ ಹಾರಿನ ಸಂದಿಗಳಲ್ಲಿ ಗೂಡು ಕಟ್ಟುವ ಅಭ್ಯಾಸವಿಲ್ಲದಿದ್ದರೆ ಚೆನ್ನಾಗಿರುತ್ತಿತ್ತು (ಈಶಕೆ. ೫೦).

ಪಾರಾಗು=ಬಿಡುಗಡೆ ಹೊಂದು ; ಬಚಾವಾಗು : ಇವನ ಕೈಯಿಂದ ಪಾರಾಗಲು ಗಾಂಧೀಜಿ ಮಾಡಿಕೊಂಡ ಯೋಜನೆ ನನ್ನ ತಲೆಯನ್ನು ತುಂಬಿತು (ದೇಕನ್ಯೆ. ೩೮) ; ಆತ್ಮಸತ್ತ್ವವಿದ್ದ ಒಂದೇ ಒಂದು ಜೀವವೆಂದರೆ ಸತ್ತು ಪಾರಾಗಿ ಹೋದ ತಮ್ಮನ ಹೆಂಡತಿ (ಹೊಸಕ್ಷಿ. ೨೯೪). ಪಾರು ಮಾಡು = ಕಾಪಾಡು : ರಕ್ಷಿಸು : ನಿನು ನನ್ನನ್ನು ಪಾರು ಮಾಡಬೇಕು ರಂಗಣ್ಣ (ರಂಗರೋ. ೨೩) ; ಜೂಜಿನಲ್ಲಿ ಮರಾತ್ಮರಿಂದ ಕಷ್ಟಕ್ಕೆ ಸಿಕ್ಕಿದಾಗ ನಮ್ಮನ್ನು ಪಾರು ಮಾಡಿದವಳು ಅವಳು (ವಸಭಾ. ೦೬೫).

[<ಸಂ. ಪಾರ]

ಪಾರುಂಬಳೆ 'ಪಾಱುಂಬಳೆ' ನೋ.

ಪಾರುಖಾಣ 'ಪಾರುಖಾಣೆಯ' ನೋ.

ಪಾರುಖಾಣಯ 'ಪಾರುಖಾಣೆಯ' ನೋ.

ಪಾರುಖಾಣೆ 'ಪಾರುಖಾಣೆಯ' ನೋ.

ಪಾರುಖಾಣೆಯ, ಪಾರುಖಾಣ, ಪಾರುಖಾಣಯ, ಪಾರುಖಾಣೆ (ನಾ). ೧. ಬಹುಮಾನ ; ಉಡುಗೊರೆ : "ಎಸೆದುಂ ಕೊಡುವುಚಿತ ಪಾರುಖಾಣೆಯುಮಕ್ಕುಂ" (ಕವಿಕಂ. ೨೫೫) ; ಪಾರುಖಾಣೆಯುವಿತ್ತನಾ ಜಂಭಾರಿಯೂರ್ಪಶಿ ರುಭೆ ಮೇನಕೆ ಗೌರಿ ಮೊದಲಾದಖಿಳಪಾತ್ರಕೆ (ಕುಮ್ಯಾಅ. ೭-೯೬). ೨. ಕರಣಿಕರು ಇಡುವ ಲೆಕ್ಕಾಚಾರ : ತೀರದಿಬ್ಬರ ಸತ್ವಪವನಿಯ ಸಾರದಿಬ್ಬರ ಬಲುಹುಗಾಣದು ಪಾರುಖಾಣೆಯವದಟರಿಬ್ಬರ ಭುಜಬಲಾಟೋಪ ಸಾರಳಿಯದು (ಕುಮ್ಯಾಸ. ೨-೦೦೬).

ಪಾರುಖಾಣ : (ಕ). **ಪಾರುಖಾಣಯ** : ೧. "ಪಾರುಖಾಣಯ

ವೆಂದು ಉಚಿತವಲ್ಲಿತು ಕಡುವ ವಸ್ತು" (ಶಪಾ. ೬೬-೬೬೪)

ಪಾರುಪಾಣಿ : ೧. ತುಂಬುರ ರಂಭೆ ಭೃಂಗಿಯುಂ ಪರಿಕಿಸಿ ಪಸಾಯಮುಂ ಪಾರುಪಾಣಿಯ ಕೊಡಲು ನೆರೆದಿರ್ದ ಹರನ ಸಭೆ ಸುಖದ ಸೊಗಸಿನ ಡೊಮ್ಮುವಿಡಿದು ಮೆಱೆದಿರಲು (ಸಿದ್ಧಶಾ. ೦-೨೬); ತೀರಿ ಕಡವಿಲು ಕಡಿತ ಗಿರಿಗಳ ಹೋರಟೆಗೆ ಹೊಗದೇಱು ಸೇನೆಗೆ ಪಾರು ಪಾಣಿಯು ಕೊಟ್ಟಿವಾಗಳೆ (ಶಾಕಾರಿ. ೯-೨೬). ೨. ಧಾರುಣೀಪತಿ ಕೇಳು ನಿನ್ನ ಕುಮಾರರಲಿ ತೊಂಬತ್ತಯೆಂಟಱ ಪಾರ.ಪಾಣಿಯ ಲಿಕ್ಕ ಸಂದುದು ನಿಮ್ಮ ಚಿತ್ತದಲಿ (ಶಾಕಾಳ. ೦೯-೨೬). ೩. ನಾಶ ; ಕೊನೆ ; ಮುಂಕಾಯ್ತು : ಕಂಡುದು ಪಾರುಪಾಣಿಯನುರನಸು ಬಲು ಭಾರಿಯೊಡಲೊರ್ಗುಡಿಸಿ ಕೆಡೆದುದು ಬಿರಿದ ಗಿರಿಯಂತೆ (ಶಾಕಾಕ್ರೌ. ೦೬-೬೪). ೪. ವಿರಹತಾಪ (?): "ಕರನಿಕರ ಲಿಕ್ಕ ಸಂಖ್ಯೆಯೊಳಿರಿಸರ್ ವಿಬುಧಾಳಿಗೀಯುವರ್ಕ್ಕಂಗಳೊಳಾಂ ಮಾರಣದೊಳು ಮದವತಾವದಿ ಪರಿವರ್ತಿಸು ಪಾರುಪಾಣಿಯಿಂದಱಿಗೆ" (ಶಾಕಾ. ೬೬). 'ಪಾರುಪಾವಣೆ' ಪರಾ. [?. / ಮರಾ. ಪಾರುಖಣೇ=ನಾಶವಾಗು, ನಷ್ಟವಾಗು]

ಪಾರುಗಟ್ಟಿಗೆ, ಹಾರಕಟ್ಟಿಗೆ, ಹಾರಗಟ್ಟಿಗೆ, ಹಾರುಂಗಟ್ಟಿಗೆ, ಹಾರೆಗಟ್ಟಿಗೆ (ನಾ). ಚೂಪಾದ ಆಯಬಂಧವನ್ನು ತುದಿಗೆ ಅಳವಡಿಸಿದ ಕೋಲು ; ಅಂಕುಶ : ಪಾರುಗಟ್ಟಿಗೆಯಪನುರ್ಬಿನೊಳಿಜಗುವ ಸೊರ್ಕಾನೆಯ ನಿಗ್ಗಹಕ್ಕೆ ಎರ್ದೆಯೊಡ್ಡಿ ಸೋಂಕದ ಮುನ್ನಮೆ ಒರ್ಮೆಯ್ಯೊಳೊರೆದು ತಪ್ಪಿಸಿ ಎಡೆಗಡವುವಂತೆ ಕಡಿಪ (ಶಶಾಂ. ೦೬೬-೦). **ಹಾರಕಟ್ಟಿಗೆ** : ಕೊರಳ ಡೊಕ್ಕಿಗೆ ಹಾರಕಟ್ಟಿಗೆ ಸುರಳಿತದ ವೊಗರಂಬ ಸಾವಿರ ಕರಿಗಳಡಬಲಕೊಲುವುತ್ತೆದಿದುವಧೀಪವಿಯಲಿ (ಸಂಪಾ. ೨೦-೯೦). **ಹಾರಗಟ್ಟಿಗೆ** : ನೀಲದ ಹಾರಗಟ್ಟಿಗೆಯೆನಿಸಿರ್ದುದು ಬಾಲೆಯ ಬಾಸೆ (ಕೃಭಾ. ೨೦-೯೯). **ಹಾರುಗಟ್ಟಿಗೆ. ಹಾರೆಗಟ್ಟಿಗೆ** : "ಒತ್ತುವ ಹಾರೆಗಟ್ಟಿಗೆ ಅಯೋಮುಖಂ" (ಕುಂಗಶಾ. ೪೬-೬); ಹಾಕಿದ ಜುಟಿಕೆ ಸೂನಂಗಿ ಕೈಗತ್ತಿ ನೂಕುವ ಹಾರಿಗಟ್ಟಿಗೆಯು (ಅಮುಚಾಂ. ೨-೬೫).

ಹಾರುಗಟ್ಟಿಗೆವಿದ್ಯೆ=ಅಂಕುಶವನ್ನು ಬಳಸುವ ವಿದ್ಯೆ : ಆನೆಯೊಂದಿಗೆ ಕಾದುವ ಹಾರುಗಟ್ಟಿಗೆವಿದ್ಯೆ . . . ನಾನಾಸಂಜ್ಞೆಗಳನು ಅರಿತು (ಕಶಾ. ೬). 'ಆರೆಗಟ್ಟಿಗೆ' ಪರಾ. [<ಪಾರ್+ಕಟ್ಟಿಗೆ]

ಪಾರುಗಡೆ (ನಾ). ಬಿಡುಗಡೆ ; ಪಾರಾಗುವುದು : ತಂದೆಯು ಪ್ರೇತವಾಗಿ ಎಲ್ಲೂ ವೈತರಣಿ ದಾಟಲಾರದೆ ಅಲೆಯುತ್ತಿರಬೇಕು. ಈ ಪಿಂಡ ಸಲಿಸಿದ ಮಂಲೆಯೂ ಅವರ ಪಾರುಗಡೆಯಾಗುತ್ತದೋ ಇಲ್ಲವೋ (ಕುಗಿಚಿ. ೪೬). [ಪಾರು+ಕಡೆ]

ಪಾರುಗಾಣಿಸು (ಕ್ರಿ). ೧. ದಡವನ್ನು ಸೇರಿಸು : ದಡ ಮುಟ್ಟಿಸು ; ದುಃಖಸಾಗರದಲ್ಲಿ ತೇಲುತ್ತಿರುವ ನಮ್ಮ ಜೀವನನೌಕೆಯನ್ನು ಪಾರುಗಾಣಿಸಮ್ಮಾ (ಜಾಪಂಂ. ೯). ೨. ರಕ್ಷಿಸು : ನೀವೇ ನನ್ನ ಮಾನವನ್ನು ಕಾಪಾಡಿ ಪಾರುಗಾಣಿಸಬೇಕು (ಜಾಳಕೃ. ೨೬). ೩. ಕೊನೆಮುಟ್ಟಿಸು ; ಮುಗಿಸು : ನಿನ್ನ ಕಾರ್ಯವನ್ನು ನೀನೇ ಪಾರುಗಾಣಿಸು ತಾಯಿ! (ಶಾಂಹಿ. ೦೬೨). ೪. ಪರಿಹರಿಸು; ಹೋಗಲಾಡಿಸು : ಶನಿಮಹಾರಾಯನು ಹೆಗಲೇರಿದರೆ ಅದರ ಪರಿಣಾಮವನ್ನು ಪಾರುಗಾಣಿಸುವುದಕ್ಕೆ ತ್ರಿಮೂರ್ತಿಗಳಿಗೂ ಅಸಾಧ್ಯ (ಹಂಗಾಳ್. ೦೫೬).

[ಪಾರುಗಾಣು+—ಇಸು]

ಪಾರುಗಾಣು (ಕ್ರಿ). ೧. ಪಾರಾಗು ; ಬಚಾವಾಗು : ಬಳಕರು ನನ್ನ ನಾಡಿ ಹಿಡಿದು ಕುಳಿತಿದ್ದರು. ಬೆಳಗ್ಗೆ ನಾನು ಪಾರುಗಂಡೆ (ಸ್ವ. ೦೦೬) ೨. ಕೊನೆಮುಟ್ಟು : ನೀವು ಮಾಡಿದ ಲಗ್ನ ಸುಗಸುಗುತ ಪಾರುಗಂಡಿದ್ದರೆ ಅವನಿಗೆ ಎಷ್ಟೋ ಆನಂದವೆನಿಸಬಹುದಿತ್ತು (ಕುಪಪ. ೬೫). [ಪಾರು+ಕಾಣು (<ಕಾಣ್)]

ಪಾರುಗೆಯ್ದು 'ಪಾಱುಗೆಯ್ದು' ನೋ.

ಪಾರುಧಿ 'ಪಾರದಿ' ನೋ.

ಪಾರುಪತ 'ಪಾರುಪತ್ಯ' ನೋ.

ಪಾರುಪತಿಗಾರ 'ಪಾರುಪತ್ಯಗಾರ' ನೋ.

ಪಾರುಪತ್ತಿ 'ಪಾರುಪತ್ಯ' ನೋ.

ಪಾರುಪತ್ತೆಗಾರ 'ಪಾರುಪತ್ಯಗಾರ' ನೋ.

ಪಾರುಪತ್ಯ, ಪಾರಪತ್ಯ, ಪಾರಿಪತ್ಯ, ಪಾರುಪತ, ಪಾರುಪತ್ತಿ, ಪಾರ್ವತ್ಯ (ನಾ). ೧. ಮೇಲ್ವಿಚಾರಣೆ ; ಉಸ್ತುವಾರಿ ; ಯಾಜಮಾನ್ಯ : ಇಳೆಯೊಳ್ಗಾಂ ತನಗಲ್ತೆ ವೆಗ್ಗಳನೆನಿಸುತ್ತಂ ಪಾರುಪತ್ಯಂಗಳಂ ಕಳಗೀಯರ್ (ಸೋಕುಚಿ. ೬೪); ಧರ್ತ್ರದ ಯೆಲ್ಲಾ ಪಾರುಪತ್ಯವನೂ ಮಾಡಿಕೊಂಡಿರ್ಪ ಸಂಕರವುಟ್ಟರಿಗೆ ೪೦ ಸಲಗ ಧರ್ತ್ರ (ಎಳ. VIII, ೬೬೯೫. ೩-೨೨ ; 1484); ಹಿಂದಕ್ಕೆ ದೇಲೂರ ಚೆನ್ನಕೇಶವನ ಗುಡಿಯಲ್ಲಿ ಸೂರಯ್ಯನೆಂಬ ಒಬ್ಬ ಬ್ರಾಹ್ಮಣನು ಪಾರುಪತ್ಯವನ್ನು ಮಾಡಿಕೊಂಡಿದ್ದನು (ಕೀಚಿಂಂ. II. ೫೪); ನೀರು ಹೊರುವ ಬಡ್ಡಿಗೆ ಊರ ಪಾರುಪತ್ಯವೇಕೆ? (ಗಾಪಿ). ೨. ಆಳಿಕೆ ; ಅಧಿಕಾರ : ಮನೆಯಲ್ಲೆಲ್ಲಾ ನಿನ್ನದೇ ಪಾರುಪತ್ಯವಾಗಿದೆಯಲ್ಲ (ಶಾಕಟು. ೦೦೩) ; ಅವನು ನಮ್ಮ ಕಡೆಗೆ ತಿರುಗಿಬಿಟ್ಟರೆ ಅವಳದೇನು ಪಾರುಪತ್ಯ ನಡೆಯುತ್ತದೆ? (ಕುಚಾಗ. ೦೬೮); ಬೇಳಿಗೆ ಪಾರುಪತ್ಯ ಕೊಟ್ಟರೆ ಜಾವ ಕ್ಕೊಂದು ಸರ್ತಿ ಮುಟ್ಟಿಸುತು (ಗಾಪಿ). ೩. (ಅಲಂ) ದೊಡ್ಡಸ್ತಿಕೆ ; ಪ್ರತಿಷ್ಠೆ : ಅವಳು ಮಾಡುವ ಪಾರುಪತ್ಯಕ್ಕೆ ಕೊನೆಯೇ ಇಲ್ಲ (ಕೂಪ). **ಪಾರಪತ್ಯ** : ೧. ಮಾಡಿದೆವು ಗುರುಭಾರವನು ಮುರಗೇಡಿಯುರಿರಣಪಾರಪತ್ಯವ ಮಾಡುವಾತನು ಕೃಷ್ಣನು (ಶಾಕಾಳ. ೬-೬೦); ಯಿಂ ಧರ್ತ್ರದ ಪಾರಪತ್ಯ ×× ಬಿಟ್ಟುದು ಕಾಲೆಯು ಬೀಜವರಿ ಖಿ ೨ ॥ (ಎಳ. VIII. ೬೬೯೫. ೦೪-೦೦; 1440); ಏನೂ ಚಿಂತೆಯಿಲ್ಲ. ಹಿಂದುಗಡೆ ಅವನ ಪಾರಪತ್ಯವನ್ನು ಮಾಡಲಿಕ್ಕೆ ಬಂದೀತು (ಕುಂಬಾಳ. ೦೫೬). ೨. ಇಷ್ಟಕ್ಕೂ ಅವಳ ಪಾರಪತ್ಯವೆಲ್ಲಾ ಎರಡೇ ತಿಂಗಳು (ಕಂಗಕ. ೫೬). **ಪಾರಿಪತ್ಯ** : ೧. ಚಿಂನಪ್ಪಅಯ್ಯನವರು ಪಾರಿಪತ್ಯವ ಮಾಡಿ ನಡಸಿಕೊಂಡಿಹರು (ಸೌಪಾ. ೦೯೩. ಆಪಾಯಿ. ೩೦೬-೩೦; 1397); ಅವಳ ಪತಿಯುಂ ಗ್ರಾಮಮುಂ ನಾಡ ಪಾರಿಪತ್ಯವನೆಸಗುವಾತನುಂ (ಪಚಕ್ಕಿ. ೩-೨-೩೬). **ಪಾರುಪತ** : ೪. ಮೇಲ್ವಿಚಾರಕ ; ವಾರುಪತ್ಯಗಾರ : ಆಚಾರ್ಯರಿಗೆ ಗ ೬ ಪಾರುಪತರ ಸತ್ಕಕ್ಕೆ ಗ ೬೨ . . . ಶ್ರೀ ವಿಶ್ವೇಶ್ವರದೇವರ ಅವಿಚ್ಛಿತವಡಿ ಮೊದಲಾದ ಎಲ್ಲಾ ಧರ್ಮಕ್ಕಂ . . . ಧಾರಾಪೂರ್ವಕಂ ಪಡಿಸಿ ಕೊಟ್ಟರು (ಎಳ. XV. ೬೬೩೫. ೨೫೬-೬೬ ; 1270). **ಪಾರುಪತ್ತೆ** : ೧. ಮಗನೆ ರಾಜ್ಯದ ಪಾರುಪತ್ತೆಗೆ ದಾರೂ ಇಲ್ಲ (ಕಾಕೃಪ. ೬೬-೦). **ಪಾರ್ವತ್ಯ** : ೧. ಕಳಚಿದಂ ಮಣಿಮಯಾದ ಮಕುಟಮಂ ದಂತಂಗಳಿಂ ಮುರಿಯುಲೊದ್ದು ನಿಲಿಸಿದಂ ಪಗೆ ಪಾರ್ವತ್ಯಮಂ (ಕುಗಂಗ. ೬೬-೬೨).

[ದೇ.+ತಮಿ. ಪಾರುಪತ್ತಿಯು, ಪಾರಪತ್ತಿಯು ; ತುಳು. ಪಾರ್ವತ್ಯ ; ತುಳು. ಪಾರುಪತ್ಯ, ಪಾರುಪತ್ತೊ ; ತೆಲು. ಪಾರುಪತ್ತೆ, ಪಾರ್ವತ್ತೆ]

ಪಾರುಪತ್ಯಗಾತಿ (ನಾ). ಮೇಲ್ವಿಚಾರಣೆ ನಡೆಸುವವಳು ; ಉಸ್ತುವಾರಿ ಮಾಡುವವಳು : ಆಗ್ರಪೇನಾವೆತ್ತೋವ್ನ . . . ಯಜಮಾನಿಯು ಮಗನ ಬಳಿ ಪಾರುಪತ್ಯಗಾತಿಯಾಗಬೇಡಿದಳು (ಕುಪಪ. ೦೩).

[ಪಾರುಪತ್ಯ +—ಕಾತಿ]

ಪಾರುಪತ್ಯಗಾರ 'ಪಾರುಪತ್ಯಗಾಣಿ' ನೋ.

ಪಾರುಪತ್ಯಗಾರಿಕೆ (ನಾ). ಆಳ್ವಿಕೆ ; ಪ್ರಭುತ್ವ : ಹಿಂದಿಯ ಪಾರುಪತ್ಯಗಾರಿಕೆಗಿರುವ ಹಕ್ಕನ್ನು ಪ್ರಶ್ನಿಸಿ ಹಲವಾರು ಪ್ರಾಂತ್ಯಗಳು ಪ್ರತಿಭಟಿಸಿದುವು (ಕಪ್ರಿ. ೬೬೦). [ಪಾರುಪತ್ಯಗಾರ (<ಪಾರುಪತ್ಯಗಾಣಿ)+—ಇಕೆ]

ಪಾರುಪತ್ಯಗಾಱ, ಪಾರಪತೆಗಾರ, ಪಾರಪತ್ತೆಗಾಱ, ಪಾರಪತ್ಯಗಾರ, ಪಾರುಪತಿಗಾರ, ಪಾರುಪತ್ತೆಗಾರ, ಪಾರುಪತ್ಯಗಾರ, ಪಾರುಪತ್ಯೆಕಾಱ, ಪಾರ್ಪತ್ತೆಗಾರ, ಪಾರ್ಪತ್ಯಗಾರ (ನಾ). ಮೇಲ್ವಿಚಾರಣೆ ನಡೆಸುವವನು ; ಉಸ್ತುವಾರಿ ಮಾಡುವವನು : ಆವಾವ ಪಾರುಪತ್ಯಗಾಱ ಬಂದ ಅವ ಯಿದ ಅಳುಹಿದರೆ ಯಿಾ ಶ್ಲೋಕಾರ್ಥದ ಪಾಪಕ್ಕೆ ಹೋಹರೂ (ಎಳ. III (R), ಗುಂಡ್ಯುಪೇ. ೦೩೫-೩೬ ; 1492) ; ನಮ್ಮ ಬೂದಿ ಹಾಳಸೀಮೆಯ ಪಾರುಪತ್ಯಗಾಱ ಲಖರಾಜನ ತಿಮ್ಮಪಯನೆ ಕಳುಹಿಸಿದ ಶಾಸನದ ಕೊಡಗಿಯ ಕಲ್ಲನು × × × ನೆಟ್ಟಿಸಿ ಕೊಟ್ಟೆವು (ಎಳ. VI, ಕಡೂರು. ೦೨೬-೦೦ ; 1532). **ಪಾರಪತೆಗಾರ :** ರಾಜೇಶ್ರೀದೊರೆಗಳು ತಮ್ಮ ಹುಜೂರು ಸಾಮದಿಕರು ಪಾರಪತೆಗಾರ ಕಸಬೆ ಗವುಡ ಗ್ರಾಮಾನುಗ್ರಾಮಗಳ ಗವುಡರು (ಎಳ. XI, ಹೊಳಲಾ. ೨೫-೬೦ ; 1665). **ಪಾರಪತ್ತೆಗಾಱ :** ಪಾರಪತ್ತೆಗಾಱ ಸಹ ವರುಸ ೧ಕೆ ಮೂಱಗಱ್ಯ ಮರ್ದನೆಯ × × ತಿಂಗಳು ೧ಕ್ಕೆ . . . ಆಚಂದ್ರಾರ್ಕವಾಗಿ ನಡಳುದು (ಎಳ. VI (R), ಶಾಂಡಪ. ೦೬೨-೨೮ ; 1526). **ಪಾರಪತ್ಯಗಾರ :** ಮಹಾಮಾತ್ರರು ಎಂಬ ಹೆಸರುಳ್ಳ ಅಧಿಕಾರಿಗಳು . . . ಪಾರಪತ್ಯಗಾರರ, ಲೆಕ್ಕಪತ್ರಗಳ ಸಂರಕ್ಷಕರ ಮತ್ತು ನಾಣ್ಯನಿರ್ಮಾಪಕರ ಕೆಲಸಗಳನ್ನೂ ಸಹ ನೋಡಿಕೊಳ್ಳುತ್ತಿದ್ದರು (ತುಳುಪಾ. ೮೫). **ಪಾರುಪತಿಗಾರ :** (?). **ಪಾರುಪತ್ತೆಗಾರ :** ಮಹಾರಾಜೇಶ್ರೀಯವರ ಅಪ್ಪಣೇ ಪ್ರಕಾರಕ್ಕೆ ಜಿಗಣಿಸ್ಥಳದ ಅಧಿಕಾರ್ರು ಪಾರುಪತ್ತೇಗಾರ್ರು ಶಾನುಭಾಗರು ಗವುಡ ಜಿಗಣಿ ಪಂಚಾನನದವರು ಸಹ ಮಾನ್ಯದ ಭೂಮಿ × × × (ಎಳ. IX, ಅಪೇಳ. ೯೦-೬ ; 1765); ಹೊಳೆಯ ದಡದಲ್ಲಿ ಇರುವುದು ನರಸಿಂಹಸ್ವಾಮಿಯ ದೇವಸ್ಥಾನ. ಇದರ ಪಾರುಪತ್ತೇಗಾರರು ಒಳ್ಳೆ ವಯಸ್ಸಾದವರು (ಗರುಡಾ. ೦೬೫). **ಪಾರುಪತ್ಯಗಾರ :** ತೆರಕಣಾಂಬೆಯ ಜಾವಡಿಗೆ ಚಿಕ್ಕ ಪಾರುಪತ್ಯಗಾರರು ಈ ಲೆಕ್ಕದಲ್ಲಿ ಕುಳವಾಸಿಯಕ್ಕೆ ಕೊಟ್ಟು ಆಳ್ವಾರದೇವರ ರಥೋತ್ಸವನು ಆಚಂದ್ರಾರ್ಕಸ್ಥಾಯಿಯಾಗಿ ನಡಿಸಿ ಬಹಿರಿ ಎಂದು ಬಿಡಿಸಿ ಕೊಟ್ಟ ಧರ್ಮ ಶಿಲಾಶಾಸನ (ಎಳ. XIV, ಗುಂಡ್ಯುಪೇ. ೮-೦೫ ; 1520) ; ಪಾರುಪತ್ಯಗಾರನಾಗಲಿ ... ಸುಂಕದ ಮಣೇಗಾರನಾಗಲಿ ಆರು ಇದಕ್ಕೆ ವಿಗಡ ಆಚರಿಸಿದರು ಅವರು ತಂದೆ ತಾಯಗಳ ವಾರನಾಸಿಯಲಿ ಕೊಂದ ಪಾಪಕೆ ಹೋಹರು (ಎಳ. IX, ಸೂಕ್ಷಪ. ೩-೨೦ ; 1530) ; ನೀನು ಅಡಿಗೆಮನೆಯ ಪಾರುಪತ್ಯಗಾರರಿಗೆ ಅಧ್ಯಕ್ಷನಾಗಿ . . . ಸುಖವಾಗಿ ಇರು (ಕೃಷಾಪ. ೦೬) ; ಅವರು ದೇವಸ್ಥಾನದ ಪಾರುಪತ್ಯಗಾರರಾಗಿದ್ದರು (ಬಡಸಂ. ೦೦೯). **ಪಾರುಪತ್ಯೆಕಾಱ :** ಕಾಳಮಲ್ಲಿಕಾರ್ಜುನ ದೇವರು ಪಾರುಪತ್ಯೆಕಾಱ ಕೆಂಪಿನ ಲಿಂಗಣೊಡೆಯರು ದೇವರು ಕೂಡಿ ಕಟ್ಟಿದ ಭಾವಿಯ ಜೀರ್ಣೋದ್ಧಾರವನು ಮಾಡಿದರೂ (ಎಳ. IV (R), ಕಾಸುರಾ. ೨೩೨-೯ ; 1540). **ಪಾರ್ಪತ್ತೆಗಾರ :** ನಾನೂ ಅಯ್ನೋರೂ ಮತ್ತು ಪಾರ್‌ಪತ್ತೇಗಾರ್ರೂ ಮೂವರೂ ದೀವಟಿಗೆ ಹಿಡ್ಕೊಂಡು ಗುಡಿ ಮೂರು ಸುತ್ತ ಬಳಸಿ ನೋಡಿ (ಇಬದು. ೩೫). **ಪಾರ್ಪತ್ಯಗಾರ :** (ಸ್ಕೃಗಣಿ. IV, ೬೮೨).

[ಪಾರುಪತ್ಯ + — ಕಾಱ]

ಪಾರುಪತ್ಯೆಕಾಱ ' ಪಾರುಪತ್ಯಗಾಱ ' ನೋ.

ಪಾರುದ ' ಪಾರ್ವ ' ನೋ.

ಪಾರುವಾಣ$_1$ ' ಪಾರಿವಾಳ$_1$ ' ನೋ.

ಪಾರುವಾಣ$_2$ ' ಪಾರಿವಾಳ$_2$ ' ನೋ.

ಪಾರುವಿಳಿ (ನಾ). ನೊಗದ ಆ ಕಡೆ, ಈ ಕಡೆಗಳಲ್ಲಿರುವ ಹಗ್ಗ : ಪಾರುವಿಳಿಯ ಹೆಗಲೊಳು ಹೂಡಿ ನೊಗನನು ಸಾರಥಿಗಳನು ಸತ್ಕರಿಸಿ . . . ಪೊಱಮಟ್ಟರಂದಾ ರಥಿಕರು ರಥವೇಱಿ (ಶ್ರೀಪಾಂ. ೦೩-೬೯).

[ಪಾರು$_5$ + ಮಿಳಿ$_3$]

ಪಾರುವೀಳೆಯ (ನಾ). (ದೇವರು, ಅರಸರು ಹಾಗೂ ಅಧಿಕಾರಿಗಳ) ದರ್ಶನವನ್ನು ಮಾಡಿದವರಿಗೆ ಕೊಡುವ ಗೌರವತಾಂಬೂಲ ; ಬೆಳ್ಳಿಬೆಟ್ಟದಂತೆಸೆವ ಕಪ್ಪದ ಪಾರುವೀಳೆಯ[ಪಾಣಾಂ. ಳ್ಯ]ಗಳನು ಬಾದುರಗೆ ಡಿಳ್ಳೀಶ್ವರನೀಯೆ ಮಲ್ಲುಃಖಾನರು ತಳ್ಳಂ ಗೊಂಡರೆದೆಯೊಳು (ಕುರಾಸಾಂ. ೦೯-೯೬). [ಪಾರು$_1$ (<ಪಾರ್$_1$) + ವೀಳೆಯ]

ಪಾರುವೇಟೆ ' ಪಾರಿವೇಂಟೆ ' ನೋ.

ಪಾರುಶದ (ನಾ). ರಾಜ, ದೇವತೆ ಮುಂತಾದವರ ಸೇವಕವರ್ಗ,— ಪರಿವಾರ : ನಾರದಾದಿ ಮುನೀಶ್ವರರ ಪರಿವಾರವೊಂದೆಸೆಗೊಂದೆಸೆಗೆ ನಿಜ ಪಾರುಶದ ಪರಿವಾರವಾ ಸುರವರರ ಪರಿವಾರ . . . ಪರಿವರಿಸಿರಲು (ನಿಭಾಗ. ೬-೯-೩೨). [<ಸಂ. ಪಾರಿಷದ]

ಪಾರುಷ್ಯ (ನಾ). ೧. ಒರಟುತನ ; ಕಾಠಿಣ್ಯ. ೨. ನಿಷ್ಠುರತ್ವ : ಪಾರುಷ್ಯ ಎಂದರೆ ನಿಷ್ಠುರತ್ವ (ಭಾತತ್ತ್ವ. ೦೯೦). ೩. ಕಠಿಣವಾದ ಮಾತು ; ಬಿರುಸುನುಡಿ : "ಪಾರುಷ್ಯ, ಅತಿವಾದಃ — ೨ ಅಪ್ರಿಯವಾಗಿ ನುಡಿಯುವಿಕೆ" (ಸಿದ್ಧಾಂತಿ. ೫೩). ೪. ಬೃಹಸ್ಪತಿ. [ಸಂ.]

ಪಾರೆ$_1$, ಆರೆ$_1$, ಹಾರೆ (ನಾ). ನೆಲವನ್ನು ಅಗೆಯುವುದು, ಕುಟ್ಟುವುದು ಮುಂತಾದ ಕೆಲಸಗಳಿಗೆ ಉಪಯೋಗಿಸುವ ಕಬ್ಬಿಣದ ಒಂದು ಉಪಕರಣ ; ಗಡಾರಿ : ಕಡುಗಾಯ್ದ ಪಾರೆಯೆಂತುಂ ಸುಡಲರಿಯದು ಸತ್ಯಮುಳ್ಳನಂ ಪುಸಿವವನಂ ಸುಡುವುದು (ಧರ್ಮಪ್ರ. ೬-೦೯೦) ; ಆಕೆ ತನ್ನ ಶುಚಿತನಕ್ಕೆ ದಿವ್ಯಮಂ ಪಿಡಿವೆನೆಂದು ಪಾರೆಯಂ[ಪಾಣಾಂ. ಪಾಳಮಂ] ಕಾಸುವ ಸಮಯದೊಳ್ (ಪುಷ್ಯಾಸ್ತ್ರ. ೩-೬೮ ಪ) ; ಡೋಣಿಕೈ ಡೆಗ್ಗೆವರ ಪಾರೆ ನೆಲಗುಮ್ಮ ಡೊಂಕಣಿ ಸಬಳ ಶರಗಳ ಸಂಕುಳವೆಯ್ದಿತು ಕೊಲ್ಲಾರದೊಳಾ ಬಿಂಕಕಾರ್ತಿಯ ದಂಡಿನೊಳಗೆ (ಕುರಾಸಾಂ. ೯೦-೫೦). **ಆರೆ$_1$:** ಚರಿತದಿಂದೊಂದುದ್ದುವಾ[ಪಾಣಾಂ. ಬಾ]ರೆಯಂ ಪಿಡಿತಂದು ಪರಮ ವೈರಾಗ್ಯಯುಕ್ತಂ ಹರುಷದಿಂ ಬಂದು (ವಾಗೀರ. ದೇ. ೨೬೯-೫). **ಹಾರೆ :** "ಹಾರೆ ಭೇದಿಯತ್ಕುಂ" (ಪುಂಧರಾ. ೦೦೯-೨); ಕೂರ್ಪುವೆತ್ತ ಧಾರೆ ತೋರ ಹಾರೆಗಾಸಿ ಗುದದೊಳಿಟ್ಟು . . . ಸುಡುವರು (ನಾಪಂಚ. ೬-೦೯೩); ಹಾರೆಯಾಕಾರದ ಚಂಡವೇಗೆಯ ರಾಯ ವೀರಭುಜದಿ ತೂಗಿ ನೋಡಿ ವಾರುವಾಣಿಯ ತೆಂಕಮುಖ ಮಾಡಿ ತೆಂಕಮುಖಾರವಿಂದಾಯತನಾದ (ಭುಜ. ೨೯-೬೬); ಚಪ್ಪಡಿಕಲ್ಲನ್ನು . . . ಹಾರೆಯಿಂದ ಮೀಟಿ ಒಳಗೆ ಹೋಗಿ ನೋಡಲು ಒಂದು ಅಂಕಣದ ಚಿಕ್ಕ ಮನೆಯಾಗಿತ್ತು (ಹುಪ್ಕಪ. ೬೯).

[ದೇ.॥ ತಮಿ. ಪಾರೈ ; ಮಲ. ಕುವಿ. ಪಾರ ; ತುಳು. ಪಾರೆಂಗಿ ; ತೆಲು. ಪಾರ, ಪಾಱ; ಕೋತ, ತೊದ. ಪಾರ್]

ಪಾರೆ$_2$ (ನಾ). ಬಂಡೆ : ಆ ಪಾರೆಯನ್ನು ಹಳ್ಳದಲ್ಲಿ ತಳ್ಳುವುದಕ್ಕೆ ಅದರ ಕೆಳಗೆ ಡೊಗರು ತೋಡುತ್ತಾನೆ (ಕಥಾಮಂ. IV, ೮); ಪಾರೆಯನ್ನು ಹತ್ತಿ ಅದರ ಮೇಲೆ ಹೋಗಿ ನಿಂತರೆ, ಎಷ್ಟು ಚನ್ನಾಗಿ ಕಾಣುತ್ತದೊ ಸುತ್ತಲೆಲ್ಲ (ಕುಡಿಕೂ. ೨೩). [ದೇ.॥ ತಮಿ. ಪಾಱೈ. ಪಾರ್; ಮಲ. ಪಾಱ; ತುಳು. ಪಾಡೆ; ಕೊಡ. ಪಾರೆ ; ಪರ್ಜಿ. ಪಾರ]

ಪಾರೆ$_3$ 'ಪಹರೆ' ನೋ.

ಪಾರೆ$_4$ (ನಾ). ಶರೀರದ ಒಂದು ಭಾಗ ; ಅವಯವ : ವೆತ್ತರಂ ಕುಡಿದು ಸೀನೆಣದೊರ್ಪಿಡಿಖಂಡಮಂ ಪತ್ತೆ ತೊಳ್ಳುದ ಪೆಣದೊಟ್ಟಿದ ಪಾರೆಯುಮೀರೆಯುಂ ತುತ್ತಿ ನುಂಗಿ (ಕಾನ್ಯಾಪ. ೮೨೫).

[?. / ತುಳು. ಪಾರೆ = ಭುಜ]

ಪಾರೆಯಂಬು (ನಾ). ಹಾರೆಯಾಕಾರದ ಬಾಣ : ಓರೊಂದೆ ಪಾರೆಯಂಬಿನೊಳೋರೊಂದೆ ಗಜೇಂದ್ರಮುರುಳೆ (ಶಂಪಶಾ. ೦೦-೬೦); ವಿಜಯನು ಅವರ ಮೇಲೆ ಕೆಂಗರಿಗಳ ಪಾರೆಯಂಬುಗಳನ್ನು ಕರೆದು . . . ಸುಶರ್ಮನ ತಲೆಯನ್ನು ಹಾರಿಸಿದನು (ಕಾಸುಪ. ೨೬). [ಪಾರೆ$_1$ + ಅಂಬು$_2$]

ಹಾರೆವಾಯ್ (ನಾ). ಹಾರೆಯ ತುದಿ. — ಮೊನೆ : ವಂದಿಯ ಒಂದನೆಯ್ದು ಪಡಿವಿಟ್ಟಿಯ ನೆಟ್ಟಿಜಿ ವುಲ್ಲೆಯಂ ತೆಱಂದಂದೆಸು ವಾರೆವಾಯ ಸರಲಿಂ (ಶುಶಾಪ್ರ. ೨-೦೬). [ಹಾರೆ + ಬಾಯ್]

ಹಾರೈಸು 'ವಾರಯಿಸು' ನೋ.

ಹಾರೋಕ್ಷ (ನಾ). ಕಣ್ಣಿಗೆ ಕಾಣದಿರುವುದು ; ರಹಸ್ಯವಾದುದು : ಪಾರೋಕ್ಷವೆಂಬುದು ತಿಳಿವುದದು ಅಪರೋಕ್ಷವೆಂಬುದು ನೆಲೆಗೆ ಕಂಡದು ಬಳಿಕ ಪಾರೋಕ್ಷವದು ಅದು ವಾರೆಯುಂ (ಕ್ರಾಪ್ರಸಾ. ೪-೬೯). [ಸಂ.]

ಹಾರೋಡು 'ಪಾಱಿಸೋಡ' ನೋ.

ಹಾರ್ಕು$_1$ (ನಾ). ಭುಜಾಗ್ರ ; ಅಂಸ ; ಹೆಗಲು : ಸೂಸಿದ ಖಂಡ ಮುರುಳ್ದ ತಲೆ ಪಱಿದು ಕರಂ ವಸರಿಸಿದ ಪಾರ್ಕು ಕರುಳೊಕ್ಕನುವಿಟ್ಟ ದೆಣಂ ದಲೆತ್ತವಾ ರಣರಂಗಂ (ಪೇಜಿಪು. ೦೦-೦೫೪); ಬಾಣಘಾತದಿಂ ಪಾಱುವ ಪಾರ್ಕುಗಳ್ ವರದ ವಣ್ಣಲೆಗಳ್ . . . ವಾಜಿ ವಾರಣ ವರೂಥವುಸಂಜೆಸಿದತ್ತು ಸುತ್ತಲುಂ (ಶುಹಾಪ್ರ. ೬-೦೦೯); ಅಲ್ಲಿ ಕಕುದ ಸಂಬಂಧಿಯಪ್ಪ ಪಾರ್ಕುಗಳ್ಗಿ ಯಿಸಯೆ(ಅಂಸವೆ)ಂಬ ಪೆಸರಕ್ಕುಂ (ಅಷ್ಟಪ್ರ. ೬೯-೦೬). [< ಸಂ. ಪಾರ್ಶ್ವ]

ಹಾರ್ಕು$_2$ (ನಾ). ವಿಹಾರಪ್ರದೇಶ ; ಉದ್ಯಾನ : ಅವರು . . . ಭೇಟ ಕೊಡದ ಪಾರ್ಕುಗಳಿರಲಿಲ್ಲ (ಸೋಕುಗ. ೬೬). [← ಇಂ. Park]

ಹಾರ್ಕೆ (ನಾ). ಹಾರುವಿಕೆ ; ನೆಗೆತ : ಲಂಘನಂ=ಒಣಗುಂ, ವಾರ್ಕೆಯುಂ (ಶಾಕಳ್. ೦೦) ; ಜಳಪರಿಪೀತವಾರಿದಮನಾನೆಗಳಿಂದು ತ್ರುಡುಂಕು ವಾನೆಗಳ್ಗಳಚಳನಂಗಳಿಂದೊಗೆದ ವಾಃಕಣಮಂ ಸೊದೆಗೆತ್ತು ನುಂಗುವಾ ಜಳಚರದಾ ಪರಿಸ್ಫುರಣಮುಂ ವಿಗೆ ಮುತ್ತಿನ ಪಾರ್ಕೆಯೆಂದು ಕೈದಳೆ ವಪುರೀಜನಂಗಳ ಬೆಡಂಗಿನೊಳೊಪ್ಪಿತು ಸಿಂಧುಬಂಧುರಂ (ಪಂಪ್ರಕ್ಕು. ೦-೬೨). [ಪಾರ್$_2$ (< ಪಾಜು$_1$) + — ಕೆ]

ಹಾರ್ಖವಣೆ 'ವಾರಖಾವಣೆ' ನೋ.

ಹಾರ್ಗುಪ್ಪೆ 'ಪಾಱುಂಗುಪ್ಪೆ' ನೋ.

ಪಾರ್ಟಿ (ನಾ). ೧. ಪಂಗಡ; ಪಕ್ಷ: ತಾನು ಕ್ರಾಂತಿಕಾರಿ ಪಾರ್ಟಿಗೆ ಸೇರಿದ್ದೇನೆ ಎಂದು ನಿನ್ನೆ ತಾನೇ ಆತ ಹೇಳಿದ (ಅಣ್ಣಾಹ. ೬೬) ; ನಮ್ಮ ಹಳ್ಳಿಯಲ್ಲಿ ಹಿಂದೆ ಪಾರ್ಟಿಯಾಗಿ ಆದರ ಕಷ್ಟ ನಿಷ್ಠೂರಗಳನ್ನು ಅನುಭವಿಸಿ ತ್ಯಾಗಿಗೆ ಒಂದೇ ಗುಂಪಾಗಿದ್ದರು (ಹುಮ್ಮಹ. ೬೦). ೨. ಸಂತೋಷ ಕೂಟ : ಗೆಳೆಯರ ಒತ್ತಾಯಕ್ಕೆ ಅನಂತ ಊರು ಮುಂದಿನ ಗುಡ್ಡದ ಮೇಲೆ ಪಾರ್ಟೀ ಕೊಟ್ಟನು (ಪೀಡಾಪ್ರ.೨). [← ಇಂ. Party]

ಪಾರ್ಟು (ನಾ). ೧. ವಿಭಾಗ ; ಖಂಡ ; ಭಾಗ : ಈ ಪುಸ್ತಕವನ್ನು ಮೂರು ಪಾರ್ಟುಗಳನ್ನಾಗಿ ವಾಡಿ ಪ್ರಕಟಿಸಲಾಯಿತು (ಕೂಪ್ರ). ೨. ನಾಟಕ, ಸಿನಿಮಾಗಳಲ್ಲಿ ನಟನಟಿಯರಿಗೆ ವಹಿಸುವ ಪಾತ್ರ : ಅವಳು ಮರಾಠಿ ನಾಟಕದಲ್ಲಿ ಬಹಳ ಚೆನ್ನಾಗಿ ಪಾರ್ಟು ಮಾಡುತ್ತಾಳೆ ! (ಶ್ರಕೃಹೊ. ೨೫೬); ರಾಧಾ ನಾಟಕದಾಗ ಕೃಷ್ಣನ ಪಾರ್ಟ ಇದ್ದಾಂಗ ಕಾಣ್ತಾದ ನಿಂದು ? (ಕಮ್ಮು. ೦೭). [← ಇಂ. Part]

ಪಾರ್ಥ (ನಾ). ೧. ದೊರೆ ; ರಾಜ. ೨. ಪೃಥೆಯ ಮಗ; ಅರ್ಜುನ : ಇದು ಚಕ್ರವ್ಯೂಹಮಿ ವ್ಯೂಹವನೊಡೆವದಟಂ ಪಾರ್ಥಂ (ಪಂಪೊ. ೦೦-೭೭); ಉರಗೇಂದ್ರಲೋಕಮಂ ಪೊಕ್ಕುರಗರೊಳಿಂದುರಗ ಪತಿಯ ನಿಜಸುತೆಯೊಡನಾದರದಿಂ ಜಯಲಕ್ಷ್ಮಿಯೊಳೊಡವೆರೆದಂ ಕೀರ್ತಿಯೊಳಮೊಂದೆ ವಸೆಯೊಳೆ ಪಾರ್ಥಂ (ಗದಾಯು. ೨-೮೨); ಸಂಹರಿಸು ಮುತ್ಪರಿಭವನೆಂದುರುತರವ ಭಕ್ತಿಯಲಂದು ಸೈಗೆಡದಿರ್ದನಾ ಪಾರ್ಥ (ಕುಣ್ಮಾ. ೬-೧೬). ೩. ಒಂದು ನಕ್ಷತ್ರದ ಹೆಸರು : ಪಾರ್ಥನನ್ನು ಗುರುತಿಸಲು ಸಮತ್ರಿಕೋನಾಕಾರವ ಮೂರುನಕ್ಷತ್ರಗಳು ಸಹಾಯಕ ಪಾಗುತ್ತವೆ (ಪ್ರಕೃಪ್ರ. ೨೯). [ಸಂ.]

ಪಾರ್ಥಕುಮಾರ (ನಾ). ಅರ್ಜುನನ ಮಗ ; ಅಭಿಮನ್ಯು : ಶಿವಸಿವ ನುಡಿವ ಕವಿ ಯಾರಿನ್ನು ಪಾರ್ಥಕುಮಾರನಾಪವವ (ಕುವಾಕ್ರೋ. ೬-೬). [ಪಾರ್ಥ + ಕುಮಾರ]

ಪಾರ್ಥಜ (ನಾ). ೧. ಅರ್ಜುನನ ಮಗ. ೨. ಅಭಿಮನ್ಯು. ೩. ಬಭ್ರುವಾಹನ: ಪಾರ್ಥಜನ ಶರಾಸರ್ಪದೊಳ್ನಿಜಯನುವರಿಲ್ಲ ಪಾಂಡವನ ಪರಿವಾರದೊಳ್ (ಕೃಪಾ. ೨೨-೬೮); ಚಿತ್ರಾಂಗದೆಯು ಕಳೇಬರವರ್ಪ ಶಬೆಯೆಡೆ ಪಾರ್ಥ ಪಾರ್ಥಜರಿರ್ವರುಂ ಕಾಲ್ನತಗೆಜುಂದೆ ಸಾರ್ದರ್ (ಕಣ್ಣಾಗ. ೬೯-೨೪೬). [ಸಂ.]

ಪಾರ್ಥಿ (ನಾ). ೧. ಅರ್ಜುನನ ಮಗ. ೨. ಅಭಿಮನ್ಯು : ಹರನ ನಯನಜ್ವಾಲೆ ಪಾರ್ಥಿಯು ಸರಳ ಕಿಡಿಯುರಿ ಪಲ್ಲುಟಿಸೆ ನಗರದೊಳಗೆ ಸೈವರಿದು ಸದೆದನು ಸೇಲಸೈನಿಕರ (ಕುಣ್ಮಾಕ್ರೋ. ೬-೨). ೩. ಬಭ್ರುವಾಹನ : ಎನ್ನ ವಿಕ್ರಮವನೀಗ ನೋಡೆನುತೆದ್ದು ಕರೆಸಿದಂ ಪಾರ್ಥಿ ನಿಜಸೈನಿಕವನು (ಕೃಪಾ. ೨೪-೨೬). ೪. ಮತ್ತಿಯ ಮರ. [ಸಂ.]

ಪಾರ್ಥಿವ (ಗು). ೧. ಪೃಥ್ವೀ ಸಂಬಂಧವಾದ ; ಭೌತಿಕವಾದ ; ಭೂಮಿಗೆ ಸಂಬಂಧಿಸಿದ : ಈ ಅನಂತ-ಕೋಟಿ-ಬ್ರಹ್ಮಾಂಡದ ಅನಂತ ಅಸ್ತಿತ್ವದ ಹಿನ್ನೆಲೆಯಲ್ಲಿ ವಿಮರ್ಶಿಸಿದಾಗ ಹೊಳೆದೀತು ನಮ್ಮಿ ಕ್ಷಣ ಭಂಗುರವಾದ ಪಾರ್ಥಿವ ಬದುಕನ್ನು ನೋಡುವ ದೃಷ್ಟಿ (ಪುಸಂಪ್ರ. ೨೦೬). ೨. ಭೂಮಿಯೆಂಬ್ಗೆ ಆಳುವ ; ಅರಸುವೆಂಶದ : ಪಾರ್ಥಿವ ಚೂಡಾರತ್ನಂ ತೀರ್ಥಂಕರೇಂದ್ರನೂವಯಾಚಳಂ ಪ್ರಾಪ್ತಾನೇಕಾರ್ಥಂ ಪರಿಪಾಳಿತಬುಧಸಾರ್ಥಂ ಸಿದ್ಧಾರ್ಥನೆಳೆವೊಳಲ್ಪೆ ಕೃತಾರ್ಥಂ (ಪರ್ಪು. ೦೩-೩೯). ೩. ಇಹಲೋಕಕ್ಕೆ ಸಂಬಂಧಿಸಿದ ; ಐಹಿಕವಾದ : ಪಾರ್ಥಿವ ಪರಿಭಾವಿತಮಲ್ಲಿ ಮುಮುಡಿ ಹೋಗವಂತೆ. . .ಅನಂತತೆಯು ಚಿದಾನಂದವ ಆಸೆ ಪುಟ್ಟಿಸಿದ್ದು ಈ ಸ್ವಪ್ನಲೋಲತೆ (ದೇಚಿ. ೨). (ನಾ). ೪. ಪೃಥ್ವಿಗೆ ಸಂಬಂಧಿಸಿದುದು ; ಭೌತಿಕವಾದುದು : ನಾಟಕವು ನಾಟಕಕಾರನ ಸಂತಾನವು, ಅವನ ಭಿನ್ನತೆಯು ಪಾರ್ಥಿವವಾಗಿದೆ (ಶ್ರಂರ ೧೦). ೫. ಭೂಮಿಯನ್ನು ಆಳುವವನು ; ರಾಜ : "ರಾಜಾ, ರಾಜನ್ಯಃ . . . ಪಾರ್ಥಿವಃ, ನರದೇವಃ, ಲೋಕಪಾಲಃ —ಈ ೧೨ ಅರಸು" (ಹೂಗಾಯು. ೬೯-೨೬೬); ಅವಲೋಕಿಪುದುಂ ನವನವನವ ವಲ್ಲಿಗೆಜಿಗುವ ರುಷಪವ್ವಯುಂಗಳವೆನೆ ಪಾರ್ಥಿವನ ನಯನಂಗಳೆಜಗಿದುವಯವದಿಂ ನಿಂದ ಗಾಯಿಕಾಯುವತಿಯರೊಳ್ (ಜಾಬಿಪ್ರ. ೬-೩೬); ಇಜಯದೆ ಬೇಡಿದೊಡೀವುದೆ ಬಜೆದೆ ಕುಲೀನತೆಗೆ ಬೆಸವು ಪಾರ್ಥಿವ ಶಬ್ದಕ್ಕೆಜೆವಟ್ಟೆನಿಸಿ ಧರಿತ್ರಿಗೆ ಪೊಜೆಯೆನಿಪಂ ರಾಜನಾಮಧಾರಕನಶ್ಲೋ (ಪಂಚಾಸಾ. ೯-೧೦). ೬. ಶಿವ ; ಈಶ್ವರ. ೭. ಮಣ್ಣಿನಲ್ಲಿ ಹುಟ್ಟಿದುದು ; ಮರ, ಗಿಡ ಮೊದಲಾದುವು. ೮. ಆಕಾಶ : "ಶಶಿಕಂಠ ಭೂಪ ನಭ ಮಾರುತಿ ನಾಲ್ಕುಂ ಪಾರ್ಥಿವಾಪ್ಯಮೆನಿಕುಂ ಜಗದೊಳ್" (ಜಾಬಿಕಂ. ೬೩). ೯. ಅರುವತ್ತು ಸಂವತ್ಸರಗಳಲ್ಲಿ ಹತ್ತೊಂಬತ್ತನೆಯ ಸಂವತ್ಸರದ ಹೆಸರು : ಆ ಪರಾಭವ ಪ್ಲವ ವಿಭವ . . . ಪಾರ್ಥಿವ . . . ಅಕ್ಷಯವೆಂಬಿವಱೊಳ್ ತೆಱನಾಗಿಹುದು (ಶಪೀಗ. ೩೨೦). ೧೦. ಮಣ್ಣಿನ ಪಾತ್ರೆ ; ಗಡಿಗೆ. ೧೧. ದೇಹ ; ಒಡಲು. [ಸಂ.]

ಪಾರ್ಥಿವ ಕುಲ (ನಾ). ರಾಜವಂಶತನ ; ಅರಸುವಂಶ : ಕಾರ್ಯಾಭಿಷಿಕ್ತ ಪಾರ್ಥಿವಕುಲಪ್ರಸೂತರುಂ ವಿನಯೋಪಪನ್ನರುಂ ಕೋವಿದರುಂ . . . ಪೊಜಗೆ ತಾರಗಾನಾಥರ್ ಪ್ರಣಾಮಲಾಲಸರಾಗಿ ಬಾಗಿಲೊಳ್ ಪಾರ್ದಿರ್ವರ್ (ಶಾಪೂ. ೨೩೦) ; ಸಮ್ಮವಿಶಜಾತಂ ಪಾರ್ಥಿವಕುಲ ವಲಿಷ್ಠವಂಶಸಂಭವಶ್ರೇಷ್ಠಂ ! (ಕಣ್ಣಾಗ. ೬೬-೧೧೦).

[ಪಾರ್ಥಿವ + ಕುಲ]

ಪಾರ್ಥಿವಗುಣ (ಗು). ೧. ಪೃಥ್ವಿಯ ಸಂಬಂಧವುಳ್ಳ ; ಭೂಗುಣವುಳ್ಳ. ೨. ರಾಜಯೋಗ್ಯವಾದ ಗುಣದಿಂದ ಕೂಡಿದ ಕ್ಷತ್ರಿಯ ಗುಣದಿಂದ ಕೂಡಿದ : ಪ್ರಿಯದಿಂದೊಂದೆಡೆಯಿರವಂ ಬಯಸಿದ ಶೌರ್ಯಾದಿಸಕಲಪಾರ್ಥಿವಗುಣಸಂಚಯದಭ್ಯರ್ಥನದಿಂದಾಶ್ರಯರೂಪನನಾ ಮಹೀಶನು ಬಿದಿ ಪಡೆದಂ (ಕುಸ್ತ್ರಪ್ರ. ೩-೨೯). (ನಾ). ೩. ಪೃಥ್ವಿಯ ಸಂಬಂಧವುಳ್ಳುದು ; ಭೂಗುಣದಿಂದ ಕೂಡಿದುದು. ೪. ರಾಜಯೋಗ್ಯಗುಣದಿಂದ ಕೂಡಿದವನು ; ಕ್ಷತ್ರಿಯಗುಣದಿಂದ ಕೂಡಿದವನು. ೩. ೪ : ಪಾರ್ಥಿವಗುಣಯುತಮಾಗಿಯುಮರ್ಥಿತ ಫಲದಾಯಿಯಾಗಿಯುಂ ನಿನ್ನೊಳ್ ತಾಂ ವ್ಯರ್ಥತೆಯುಂ ಪಡೆಗುಂ ಪರಮಾರ್ಥವಚೇತನತೆಯಿಂದೆ ಕಲ್ಪಕಾಜಾತಂ (ಕಲಿಂ. ೩-೪೪).

[ಪಾರ್ಥಿವ + ಗುಣ]

ಪಾರ್ಥಿವತ್ವ (ನಾ). ಮಣ್ಣಿನ ಗುಣದಿಂದ ಕೂಡಿದುದು : ಅರಸು ಗುಣಕ್ಕಾಗರಮಾದರಸನೆ ಪಾರ್ಥಿವನದೊಂದುಮಿಲ್ಲದೆ ಬೆಸದಿರ್ಪರರಸನವಂ ಮೃತ್ಪಿಂಡಸ್ವರೂಪದಿಂ ಪಾರ್ಥಿವತ್ವಮಂ ಪ್ರಕಟಿಸುಗುಂ (ಪಾಪುಂಪು. ೩೦೦).

[ಸಂ.]

ಪಾರ್ಥಿವಪುತ್ರ (ನಾ). ೧. ರಾಜಪುತ್ರ ; ಕ್ಷತ್ರಿಯ ಕುಮಾರ : ಕುದಶರೆಯ ಕಪಯದೊಳ್ ಬರ್ಪ ಪಾರ್ಥಿವಪುತ್ರಸಾರ್ಥಮುಂ (ಸಂಪ್ರಪು. ೭-೮೦ ನ). ೨. ಸೂರ್ಯ. [ಪಾರ್ಥಿವ + ಪುತ್ರ]

ಪಾರ್ಥಿವಶರೀರ (ನಾ). ೧. ಜಡಶರೀರ ; ಭೌತಿಕವಾದ ದೇಹ : ಸತ್ಯಸುಪ್ರೀತನಂ ಧನ್ಮನೆಯಿನಿಲ್ಲಗೈಯ್ಯಲ್ಕೆಳಸಿ ಸಂಹರಿಸಿ ಆ ಜರಾಜರ್ಝರಿಂ ಪಾರ್ಥಿವಶರೀರಮಂ ಅನಾಯಾಸಂ ಘಾಸಿಸಿದರೇನಂತೆ ! (ಅಮಸಂ. ೦೬ ೬) ; ಅವರ ಆತ್ಮವು ಪಾರ್ಥಿವಶರೀರದ ಬಂಧನವನ್ನು ತೊರೆದು ಹೊರಟು . . . ಹೋಗಿರಬೇಕು (ಸಂಗೀತ. ೨೯). ೨. ಶವ ; ಹೆಣ : ಶ್ರೀಶರೀಫರ . . . ಪಾರ್ಥಿವಶರೀರವನ್ನು ಎಲ್ಲ ಸಮಾಜದವರು ತೇರು ಕಟ್ಟಿ . . . ಶರೀಫರ ತಂದೆಯ ಸಮಾಧಿಯ ಜೊತೆಗೆ ಅಂತ್ಯವಿಧಿಯನ್ನು ಒಳ್ಳೆ ವಿಜೃಂಭಣೆಯಿಂದ ಮುಗಿಸಿದರು (ಶರೀಪ್ರ. ೭೯ ಕಲಿಕಾಪ್ಯಪಂಚಯ).

[ಪಾರ್ಥಿವ + ಶರೀರ]

ಪಾರ್ಥಿವಸಂವತ್ಸರ (ನಾ). ಅರುವತ್ತು ಸಂವತ್ಸರಗಳಲ್ಲಿ ಹತ್ತೊಂಬತ್ತನೆಯದು : ಕಳಚುರಿಚಕ್ರವರ್ತಿ ಭುಜಬಳಮಲ್ಲದೇವ ವರ್ಷದ ಹತ್ತನೆಯ ಪಾರ್ಥಿವಸಂವತ್ಸರದ ಶ್ರಾವಣ ಬಹುಳ ದ್ವಾದಶೀ ಬ್ರಿ[ಬೃ]ಹಸ್ಪತಿ ವಾರದಂದಿನ ಬ್ಯತಿಪಾತ ಪರ್ಬ ನಿಮಿತ್ತದಿಂ (ಕೊಲ್ಹಾಣ. ೦೨-೦೯; 1165) ; ದಂಡನಾಯಕರುಂ ಸಮಸ್ತಕರಣಂಗಳುಂ ಪಾರ್ಥಿವಸಂವತ್ಸರದಾಷಾಡ ಬಹುಳನವಮೀ ಮಂದವಾರ ದಕ್ಷಿಣಾಯನಸಂಕ್ರಾಂತಿಯಲು . . . ಧಾರಾಪೂರ್ಬ್ಬಕಂ ಕೊಟ್ಟರು (ಕೊಲ್ಹಾಣ. ೦೩-೩೯; 1166).

[ಪ್ರಾರ್ಥಿವ + ಸಂವತ್ಸರ]

ಪ್ರಾರ್ಥೇನಿಯಂ (ನಾ). (ಬೆಳೆಗಳಿಗೆ ಕಳೆಯಾಗಿರುವ) ಒಂದು ಕೀಳು ಬಗೆಯ ಸಸ್ಯ : ಈಚೇಚೆಗೆ ಕಂಡ ಕಡೆಯಲ್ಲೆಲ್ಲಾ ಪಾರ್ಥೇನಿಯಂ ಬೆಳೆ ಹೆಚ್ಚುತ್ತವೆ (ಕೃಷಿ). [← ಇಂ. Parthaneum]

ಪಾರ್ದನ 'ಪಾಡ್ದನ' ನೋ.

ಪಾರ್ಪತ್ತೆಗಾರ 'ಪಾರುಪತ್ಯಗಾಜಿ' ನೋ.

ಪಾರ್ಪತ್ಯ 'ಪಾರುಪತ್ಯೆ' ನೋ.

ಪಾರ್ಪತ್ಯಗಾರ 'ಪಾರುಪತ್ಯಗಾಜಿ' ನೋ.

ಪಾರ್ಪಾಲಿ (ನಾ). ಒಂದು ಬಗೆಯ ಸಸ್ಯ : ಪಾರ್ಪಾಲಿ, ಕೊಡಚಿ, ಗೊಟ್ಟ (ಪ್ರಾಕಿಗಿ. ೭೯-೦೬೩೩). [?]

ಪಾರ್ಪು (ನಾ). ನೋಟ ; ದರ್ಶನ : ಏನ್ ನೋನ್ತ ನೋನ್ಪಿಯೋ, ಏನ್ ಪಾರ್ತ ಪಾರ್ಪೋ (ಹೊಂಗಳು. ೩೯-೦೦). [ಪಾರ್$_1$ + — ಪ್ಪು]

ಪಾರ್ಬ 'ಪಾರ್ವ' ನೋ.

ಪಾರ್ಬಣ (ನಾ). ಪರ್ವಕಾಲದಲ್ಲಿ ಪಿತೃಗಳಿಗೆ ತರ್ಪಣ ನೀಡುವ ಕ್ರಿಯೆ,—ವಿಧಿ ; ಅಮಾವಾಸ್ಯೆಯ ದಿನ ಮಾಡುವ ಶ್ರಾದ್ಧ ; ಪರ್ವಶ್ರಾದ್ಧ : ಕಳುಹಿ ಪಾರ್ಬಣಯೋಗ್ಯ ಮಾಂಸಂಗಳನು ರಾಜಾಲಯಕೆ ವನದಲಿ ಸುಳಿದು ಮೃಗಯಾವ್ಯಸನದಲಿ ವರನೃತ್ಯಗೀತದಲಿ ಬಳಲಿ ಬಸವಳಿವುತ್ತ ಹೋದನು ಫಲುಗುಣನು (ಶಿಶಾಗ. ೦೦-೬೮-೨೩).

[<ಸಂ. ಪಾರ್ವಣ]

ಪಾರ್ಬಿಕೆ 'ಪಾರ್ವಿಕೆ' ನೋ.

ಪಾರ್ಲಿಮೆಂಟು (ನಾ). ರಾಷ್ಟ್ರದ ಕೇಂದ್ರಸರ್ಕಾರಕ್ಕೆ ಸಂಬಂಧಿಸಿದ ಪ್ರಮುಖಪಟ್ಟಣಗಳ ಪ್ರಜಾಪ್ರತಿನಿಧಿಗಳನ್ನೊಳಗೊಂಡ ಪ್ರಧಾನ ಸಭೆ ; ಲೋಕಸಭೆ ; ಕೇಂದ್ರಸಂಸತ್ತಿನ ಉಭಯಸಭೆಗಳಲ್ಲಿ ಒಂದು : ಬ್ರಿಟಿಷ್ ಪಾರ್ಲಿಮೆಂಟಿನ ಉದ್ದೇಶ ನಮ್ಮನ್ನು ಹಿಂದಿನ ಅಂಧಕಾರದಲ್ಲೇ ತೊಳಲಿಸಬೇಕೆಂದು ಇರಲಿಕ್ಕಿಲ್ಲ (ಕಾರದ. ೪೨೭).

[← ಇಂ. Parliament]

ಪಾರ್ವ, ಪಾರುವ, ಪಾರ್ಬ, ಹಾರವ$_1$, ಹಾರುವ$_1$, ಹಾರ್ವ (ನಾ). ವೇದ ಮೊದಲಾದ ಧರ್ಮಗ್ರಂಥಗಳನ್ನು ಓದಿ ತಿಳಿದಿರುವವನು ; ಬ್ರಹ್ಮಜ್ಞಾನಿ ; ಬ್ರಾಹ್ಮಣ : "ಪಾರ್ವರೆನಲ್ ದ್ವಿಜರ್ಕಳ್" (ಕಪಾಗಿ. ೫೭) ; ಇ ಧರ್ಮ್ಮಕ್ಕೆ ಬಕ್ರ ಬಪ್ಪೊಂ ಬಾರಣಾಸಿಯುಳ್ ಸಾಸಿರ್ವ[ರ್] ಪಾರ್ವ್ವರುಂ ಸಾಸಿರಂ ಕವಿಲೆಯಂ ಕೊನ್ದ ಪಾತಕನಕ್ಕೆ (ಪ್ರಾಲಿ. ೦೯೩೬. ೫೩-೩೫; ಸು. 550) ; ಪದಿನೆಂಟುಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ ಪಾರ್ವಂ (ಪಡ್ಡಾಂ. ೭೩-೦೫) ; ಪರದರ್ಗಾ ಪಾರ್ವ[ಸಾಕಾಂ. ಬರ್]ರ್ಗಾವರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್ ಸ್ಥಿರಗೋಪಾಧ್ಯಾಯಕ್ಷ್ಮಾಪರಿಪಾಲ್ಯಕ್ಷೇತ್ರಕರ್ಷಣಂಗಳ್ಕ್ರಿಯೆಗಳ್ (ಕಲಿಂ. ೦ ೬೪) ; ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಜಿತಿಲ್ಲ (ಪಂಪಭಾ. ೦-೦೦೫ನ) ; ಪರಿದಿಱಿದಂತಕನೊಳ್ ಪಾರ್ವರ ಪಿಳ್ಳೆಯ ಪೋದ ಜೀವಮಂ ತಂದಂ (ಗಣಾಯು. ೨-೩೫). **ಪಾರುವ** : ಪುರದೊಳಗಣ ಪಾರುವರೆಲ್ಲರುಮಂ ಮತ್ತನ್ಯಸಮಯಿಗಳುಮಂ ಕಳ್ಳರ್ ಭರದಿಂದಂ ಕಂಡುಂ ಸಾವರಮೋಘಂ ಸೀಳ್ದು ಕೊಲೆ ತಳಾಜರ ಕೈಯೊಳ್ (ರರ್ಮಾಪ್ಯು. ೯-೫೩) ; ಕಾದಿ ಕಲು ಮರ ಮೊರಡಿಗಳ ಪುಡುಕಿ ತತ್ವಸಂಬೋಧೆಯಿಲ್ಲದೆ ಕೃಪಣ ಶಿಶ್ನೋದರಂಗಳಂ ಸಾಧನಂಗೈವ ಪಾರುವರೆಸೆವರಾ ಕಲಿಯೊಳು (ಪಂಕಾರಾ. ೩-೨೨-೦೨) ; ಆ ಪಾರುವಂ ಗುರಿಗಟ್ಟಿ ಸೂಸಿದ ಪುಣುಂಬುಗಳ್ರಾಮಂಗೆ ಕಪಿಗಳಂತೆ ಪೇರೊಲವನಾಂತು (ಶಿಸಿಂ. ೦೯-೩೫). **ಪಾರ್ಬ** : ಕಯ್ಯ ಸಟ್ಟುಗದಿಂದ ಕೆಡೆಹೊಡೆದು ಕೊಂದು ಪಾರ್ಬನನೆಳೆದು ಹಾಯ್ಕಲು (ಬಸಪು. ೫೩-೪೦). **ಹಾರವ$_1$** : ಕೌರವರ ಹತ್ತಿರ ಯಾರಿದ್ದಾರೆ ? ಕೆಲವರು ಪಂಚಾಂಗದ ಹಾರವರು ; ಉಳಿದವರು ಮುದುಕರು (ನೀತಿಪಂ. III. ೩೦) ; ಲಭ್ಯಾಸವಿಲ್ಲದ ಪಾರವ ಅಗ್ನಿಕಾರ್ಯ ಮಾಡಿದರೆ ಗಡ್ಡ ಮೀಸೆ ಹೊತ್ತಿತು (ಗಾರ). **ಹಾರುವ$_1$** : ಅನಾಗತೋಕ್ತಿ ಕಾಲೂರನನೇಕಮಂ ದ್ವಿಜರ್ಗೆಗೊಟ್ಟುದಱಿಂದಮವಗ್ರಹಾರಮಾ ಹಾರುವರಿಂದ ಮಾಡಿ × × ದೆ (ಎಕ. VIII, ಸಾಗರ. ೦೦೯-೫೯; 1079) ; ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ (ಬಸವ. ೫೯೦) ; ತಿರಿವ ಹಾರುವರೊಡನೆ ಭೂಮೀಶ್ವರರಿಗೆತ್ತಣ ಮೈತ್ರಿ (ಸಂಪಶಿ. ೦೭-೯೨) ; ಹಾರುವನು ಉಪಕಾರಿ ಹಾರುವನು ಅಪಕಾರಿ ಹಾರುವನು ತೋರ್ವ ಬಹುದಾರಿ ಮುನಿದರೆ ಹಾರುವನೆ ಮಾರಿ (ಸರ್ವಜ್ಞ. ೦೦೦೯). **ಹಾರ್ವ** : ನೀನು ಔಷಧಿಯನ್ನು ಕೊಟ್ಟು ಗುಣ ಮಾಡೆನುತ ಹೀನ ಹಾರ್ವಗೆ ಪೇಳಿ ಒಪ್ಪಿಸುತ ಪೋದ (ಶರಲೀ. ೪೦೦-೭) ; ಆ ಹಾರ್ವನು ನಾನು ಹಸಾ ಕೊಟ್ಟವನು (ಹೊಸುಗ. ೭೨).

ಹಾರ್ವರ ಬಲ್ಲಹ, ಹಾರ್ವರ ಬಲ್ಲಡ–ಬ್ರಾಹ್ಮಣರ ಮುಂಖ್ಯಸ್ಥ ; ಒಂದು ಬಿರುದಂ : ವೃತ್ತರಾದುಣಸಂಖ್ಯಾಂತಿಪರ್ವ್ವನಿಮಿತ್ತಂ ಮಹಾ ಪ್ರಭು ಹಾರ್ವರ ಬಲ್ಲಹಂ ಬಸವರಸ ಮುಂಖ್ಯಪಹಾಷ್ಟಸಂಗಳ ಸಂನಿಧಾನದಲು ಸರ್ವ್ವನಮಸ್ಯವಾಗಿ ಧಾರಾಪೂರ್ವ್ವಕ ಮಾಡಿ . . . ಬಿಟ್ಟು ಮತ್ತರು ೧೨ (ಕಾಶಾಶಾ. ೦೬-೨೨ ; 1235); ಸುಮಾರ್ಗಿಯೆಂಬ ವೇದಿನಿ ಪೆರಟುಂದೆ ಬಂಣ್ಣವುದು ಹಾರ್ವರ ಬ್ಲಹ ಮಂಡ್ಲಿದೇವಸಂ (ಕೂಂತ್ರಾಶಾ. ೦೯-೭೬: 1235). P ಕೆಲವು ಸ್ಥಳನಾಮಗಳಲ್ಲಿರುವ 'ಹಾರೋ' ಎಂಬ ಪೂರ್ವಪದವು 'ಹಾರುವರಿಗೆ ಸಂಬಂಧಪಟ್ಟ' ಎಂಬ ಅರ್ಥವನ್ನು ಸೂಚಿಸಂತ್ತದೆ. ಉದಾಹರಣೆ–ಹಾರೋಗದ್ದೆ – ಹಾರುವರ ಗದ್ದೆ. ಹಾರೋಹಳ್ಳಿ – ಹಾರುವರ ಹಳ್ಳಿ.

[<ಪಾರ್₂. / ತಮಿ. ಹಾರ್. ಪಾರ್ಪ್ಪನಾರ್, ಪಾರ್ಪ್ಪಾರ್; ಮಲ. ಪಾರ್ಪ್ಪಾನ್; ಕೊಡ. ಪಾರುವ; ತೆಲು. ಪಾಱುಂಡು, ಪಾಱುಂಡಾಂಡು]

ಹಾರ್ವಂತಿ, ಪಾರ್ವತಿ₂, ಪಾರ್ವಿತಿ, ಹಾರವಿತ್ತಿ, ಹಾರುವಿತ್ತಿ (ನಾ). ಬ್ರಾಹ್ಮಣ ಹೆಂಗಸು; ಬ್ರಾಹ್ಮಣನ ಹೆಂಡತಿ: ಸೋಮ ಶರ್ಮನೆಂಬೊಂ ಭಟ್ಟನಾತನ ಪಾರ್ವಂತಿ ಶ್ರೀವೇದಿಯಂಬೊಳ್ (ಕಶಾಂಗ. ೦೨-೦೦); ಆಗಳ್ ಸಾಹಸಭೀಮಂ . . . ಪಾರ್ವಂತಿಯುಂ ಪಾರ್ವನುಂ ವರಸಿ ಸೇಸೆಯನಿಕ್ಕಿ ೯೪ಪೆ ಪೊಲಿ ಬಂಡಿಯನಟ್ಟಿಕೊಂಡು ರಕ್ಕಸನರ್ದೆಡೆಗೆಯ್ತಂದು (ಜಂಚಾ. ೬-೫೬ ಕ); ಅಶೋಕದತ್ತನೆಂಬ ವಾಣ್ಯನು ತಳುವಿರ್ ಪಿಡಿದು ಕೊಲ್ವುದುಂ ವಿನೋದಂ ತನ್ನ ಪಾರ್ವಂತಿಯ ದುಶ್ಚರಿತ್ರವಜನಿ ದನವ್ಯಾದಜಿನಾತೆಯು ಬಿಟ್ಟಯನೆ ಬಾದುಬಿದಿರ್ದು (ತಂರಾಚ. ೦೭-೪೪ ಕ). **ಹಾರ್ವತಿ₂** : ಕೇಳೆನ್ನ ಸುಡಿಯ ಪಾರ್ವತಿಯೆನಗೈವರು ಬಾಲರುಂಟುವ ರೊಳಗೊರ್ವ ಹಾಳೊಡಲಿನ ಧೇವಂ (ಕಬಾಸಂ. ೨೩-೦೫೪); ಅರಸಿ. ಪಾರ್ವತಿ. ಒಕ್ಕಲಿತಿ. ಸೆಟ್ಟಿತಿ (ಕಶ್ಲಾಪು. ೨೦೨ ಕ್ರಮೋ). **ಹಾರ್ವಿತಿ**: ಶುಕ ನಾಸ ಮಂತ್ರಿ ಸಂಧಾವಿತೆಯುಪ್ಪ ಪಾರ್ವಿತಿ ಮನೋರಮೆಗತ್ತ ಭವತ್ಪ್ರಸಾದದಿಂದೀ ವರಲಗ್ನದೊಳ್ ತನಯನತ್ಯಧಿಕೋತ್ಸವಮಾಗೆ ಪುಟ್ಟಿದಂ (ಕಾರಂಪು. ೪೨೩); ಭಾಂಡಿಲನೆಂಬ ಪುರೋಹಿತಂಗವಾತನ ಪೆಂಡತಿ ವಿಷ್ಣುವತಿಯೆಂಬ ಪಾರ್ವಿತಿಗಂ ಪುಟ್ಟಿದ ಮಗಂ . . . ಪೃಷ್ಟದಾದಂ (ಕಪೂಕಾ. ೬-೦೨೪); ಆತನ ಪಾರ್ವಿತಿ ಪಾರ್ವತಿಯನ್ನಳಪ್ಪ ಚೆನ್ನೆ ಯೊಂದುದಿನಂ ಪಸದನಂಗೊಂಡು ತನ್ನಡಿಯಾ ನೋಡುತ್ತಿವಿರೆ (ಕಪಾಕ. ೦೪-೭೮). **ಹಾರವಿತ್ತಿ** : ಅತ್ತಲೊರ್ವ ಮುಂಡೆ ಹಾರ[ಜಾತಿಂ. ರು] ವಿತ್ತಿ ಬಸಣುಹಾಗಿ ಅಡವಿಯಲ್ಲಿ ಹೆಣ್ಣು ಹೆತ್ತು ಬಿಟ್ಟು ಹೋಗಲಾ (ಧ್ಯಪಾ. ೬. ೭೮). **ಹಾರುವಿತಿ** : ವರನ ಪರಿ ಹೊಸತಾಯ್ತು ಹೊತ್ತನು ಹರನ ಹಿಂ ಹಾರುವಿತಿಯನು ನಮ್ಮರಸಿ ನೆಲೆ ಹಾರುವಿತಿಯೆಂದರು ನಗುತ ಜವರೆಯರು (ಕಾಶಾಂ. ೦೩-೩೬); ಗೋದೆಯ ತೆಲಿಪೊಳು ಬರೆದಕ್ಕರವ ನೋಡಿಕೊಂಡಿದಾರಜುಪಿಯೆನೆ ಮುಂಡೆ ಹಾರುವಿತಿಯೊಳು ಬಂದೊರ್ಬ ತುಜುಕನಿದ ಬರವನೆನೆ (ಪಂಕೃ. ೭-೪೪-೪೯). **ಹಾರುವಿತ್ತಿ** : ಹಾರುವಿತ್ತಿ[ಜಾತಿಂ. ವಗಿತಿ]ಯೊಳು ಸೊಬಗುಮನೋರಂತ ಹುವರು ನಾಡೆ ಗಾಬಿಲರಲ್ತೇ (ಕಾಶಾಸ್ಕ. ೭-೨೬).

[ಪಾರ್ವ + –ತಿ₁ (<–ಸ್ತಿ)·/ತಮಿ. ಪಾರ್ಪ್ಪತ್ತಿ]

ಹಾರ್ವಗೊಲೆ (ನಾ). ಬ್ರಾಹ್ಮಣಹತ್ಯೆ; ಬ್ರಹ್ಮಹತ್ಯೆ : ಅವನೆನ್ನ ಪಾಡೊಳ್ ದಾಟುಳ್ದು ತುಜುಸೆಜ್ಜೆಯೊಡವೆನ್ನನಾಗರಂ ಪಿಡಿದು ಬಂಡು ಗೆಯ್ದು ಪಾರ್ವಗೊಲೆಗೆ ವೇಸಿ ಬಿಟ್ಟು ಎನ್ನ ನಾಡೊಳ್ ತಲೆಯೂರಿಸವ ಬೂನನೆರೆಯಂ ಕೊಂಡು . . . ತಿರುಳಿಲಿ ಪಾರ್ವಗಿತ್ತಂ (ಶಿವಂ. ೦೩-೯). [ಪಾರ್ವ + ಕೊಲೆ]

ಹಾರ್ವಗೋಲು (ನಾ). (ಬ್ರಾಹ್ಮಣಸಮುದಾಯವು ಸೇರಿ ನಿಷ್ಕರ್ಷಿಸಿದ) ಒಂದು ಅಳತೆಯ ಕೋಲು : ಮಹಾಪ್ರಭು ಪಾರ್ವರ ಬಲ್ಲಹಂ . . . ಹೆಂಚಿಗೆವಟ್ಟಿಯಂ ಪೂಡಲು ಕೆಂಜೆಲವಾಡದ ಬಟ್ಟಿಯಂ ಪಡುವಲು ಪಾರ್ವಗೋಲಲು ಬಿಟ್ಟು ಮತ್ತರು ೧೨ (ಧಶಾ. II. ೩೮-೩೩; 1235). [ಪಾರ್ವ + ಕೋಲು₂ (<ಕೋಲ್₁)]

ಹಾರ್ವಣ (ಗ). ೧. ಅಮಾವಾಸ್ಯೆಗೆ ಸಂಬಂಧಪಟ್ಟ. ೨. ಹುಣ್ಣಿವೆಗೆ ಸಂಬಂಧಿಸಿದ : ವೃಣಾತಸಂಧಾಗರ್ಭವೆಂ ಕಾರಣವಿಂ ಕೋಪಾಳೆಯು ಮುಖಸಂಧಾರುಚಿಗುಬಂದಂತಣಿಗೊಂಡು ತೊಳಗುತ್ತುಂ ಪಾರ್ವಣ ಶಶಿ ಬಿಂಬಕ್ಕೆ ಕೃತತೆಯೆತ್ತಣಿನಾಯ್ತೋ (ಅಣಾಪ. ೦೪-೨೨) ; ಕನ್ನಡ ಪಾರ್ವಣ ಶತಿಯನು . . . ನವಲತೆಯುಂ ಸನ್ನುತವಾರಿಜಾತನ ಪಡೆದಂತೆ ಸುವನ್ನೆ ಪಡೆದಳು ವೃತ್ತಸವು (ಕಂಶ್ರಜಾಂ. ೪-೨೨); ಕ್ಷಣರುಚಿ ರುಚಿರೇಕ್ಷಣೆ ಪಾರ್ವಣ ವಿಧುಮಂಖ ಪಾಣ್ಮೆ ಪೋಗಲಳವಲ್ಲದೆ ತಲ್ಲಗೆಸಿ ಪಿಡಂಮೆಟ್ಟುತ್ಕಂಗಣ ಕೈದುತೆ ಸುಯ್ದು ಬೈದಳಾ ಕಮಳಜನಂ (ರಾಪಪೀ. ೦೦-೨೩). (ನಾ). ೩. ಅಮಾವಾಸ್ಯೆಯಲ್ಲಿ ಪಿತೃಗಳಿಗೆ ಮಾಡುವ ಒಂದು ಶ್ರಾದ್ಧ ಕರ್ಮ. [ಸಂ.]

ಹಾರ್ವಣಶ್ರಾದ್ಧ (ನಾ). ಪರ್ವಕಾಲದಲ್ಲಿ ಮಾಡುವ ಶ್ರಾದ್ಧ : ಪುತ್ರ ಅನ್ನವುದು ತಿಳಿಗಿನ ಮೂರು ತಲೆಗಳನ್ನೂ ಒಳಗೊಳ್ಳುತ್ತದೆ. ಏಕೆಂದರೆ ಆ ಮೂವರೂ ಪಾರ್ವಣಶ್ರಾದ್ಧ ಮಾಡುವ ಅಧಿಕಾರಿಗಳು (ಮಾಪ್ರ. ೨೩೦). [ಪಾರ್ವಣ + ಶ್ರಾದ್ಧ]

ಹಾರ್ವತಿ₁ 'ಪಾರ್ವಂತಿ' ನೋ.

ಹಾರ್ವತಿ₂ (ನಾ). ೧. ಪರ್ವತರಾಜನ ಮಗಳು ; ಗಿರಿಜೆ : "ರುದ್ರಾಣೀ . . . ಪಾರ್ವತೀ. ಗೌರೀ . . . ಗಿರಿಜಾ. ಮೇನಕಾತ್ಮಜಾ —ಈ ೨೧ ಗೌರೀದೇವಿಯ ಪೆಸರ್" (ಕಶಾಶು. ೪-೦೩); ನಾಗೇಂದ್ರ ಘನವೆಂಬಿನೆ ಪಾರ್ವತಿಯ ತೆಱುಂಬಿನೆಪಾಂಡ್ರಿಕೆಯಾಯಿತ್ತು ಅಂತಹ ಪಾರ್ವತಿ ಘನವೆಂಬಿನೆ ಪರಮೇಶ್ವರನ ಅರ್ಧಾಂಗಿಯಾದಳು (ಜಪ. ೬:೬); ಮಹಾತ್ರಿಲೋಚನೆ ಮಹಾನಿಧಿ ತನ್ನ ವಿವಾಹವರ್ಣನಾಸಂಗತಿಯಿಂದು ಮತ್ಕೃತಿಗೆ ಪಾರ್ವತಿ ವಾಕ್ಕೆ ಮಹೋತ್ಸವಂಗಳಂ (ಗಿಪ. ೦-೪). ೨. ಮಂತ್ರಗಳಲ್ಲಿ ಒಂದು : ಗಾಯತ್ರಿ ಪ್ರಸೃತ್ಯಂಜಯು ದಕ್ಷಿಣಾಮೂರ್ತಿ . . . ಪಾರ್ವತಿ ಕಾಮಧೇನು ಕಲ್ಪವೃಕ್ಷ . . . ಮಹಾಮಂತ್ರಂಗಳಂ (ಪಪಿ. ೦೦). ೩. ತದುಕಿನ ಗಿಡ ; ಆನೆಬೇಲ. ೪. ಗೊಲ್ಲರವಳ್ತಿ; ಗೋಪಿಕೆ. ೫. ದ್ರೌಪದಿಯ ಒಂದು ಹೆಸರು. ೬. ಸಗಂಧದ ಮಣ್ಣು. [ಸಂ. ಪಾರ್ವತೀ]

ಹಾರ್ವತಿತನಯ (ನಾ). ೧. ಪಾರ್ವತಿಯ ಮಗ. ೨. ಕಾರ್ತಿಕೇಯ; ಷಣ್ಮುಖಿ. ೩. ಗಣಪತಿ; ಗಣನಾಥ: ಶರಣು ಪಾರ್ವತಿತನಯ ಮೂರುತಿ ಶರಣು ಮೂಷಿಕವಾಹನ (ಕುಂವ. ೦-೩ ಪ್ರಥ). [ಪಾರ್ವತಿ₂ + ತನಯ]

ಹಾರ್ವತಿಯೆಜ್ಜೆಯ (ನಾ). ಗಿರಿಜೆಯ ಪತಿ ; ಈಶ್ವರ : ಪಾರ್ವತಿಯೆಜ್ಜೆಯನ ವರದಿಂ ಮತ್ಪತಿ ಕರ್ವಿಲ್ಲಂ ಸಮ್ಮೋಹನರೂಪದಿಸುರ್ವಿಯು ವಿಟರೆಲ್ಲರ್ದೆಯೊಳ್ನೆಲಸಿದಾ (ಕಪುಗಾ. ೦-೬೬). [ಪಾರ್ವತಿ₂ + ಎಜ್ಜೆಯ]

ಹಾರ್ವತೀಜಾನಿ (ನಾ). = ಪಾರ್ವತಿಯೆಜ್ಜೆಯ : ಆ ನರನಾಥನಾ ಕುಸುಮಭೂಷಣಮಂ ವದದಿತ್ತು ಪಾರ್ವತೀಜಾನಿಗೆ ತಾನುಮಾತ್ಮ ರಮೆಯುಂ ಬಳಿಯಂ ತಳೆದಿರ್ಪನಂ (ರಾಪಪೀ. ೦೦-೬೦).

[ಸಂ. (ಪಾರ್ವತೀ + ಜಾಮೃ + –)]

ಹಾರ್ವತೀದಯಿತ (ನಾ). = ಪಾರ್ವತಿಯೆಜ್ಜೆಯ : ಶ್ರೀಯಂ ಮಹಾಲಕ್ಷ್ಮಿ . . . ದೀರ್ಘ್ಯಾಯುಷ್ಮಂ ಪಾರ್ವತೀದಯಿತಂ ಮಾಣದೆ ಪೌಡಿಸೆಟ್ಟಗೆ ಕುಡುತ್ತಿರ್ಕ್ಕಾಗಳುಂ (ಕಾಶಾಜ. ೦೩-೩; 1166). [ಸಂ.]

ಹಾರ್ವತೀದಲ್ಲಭ (ನಾ). = ಪಾರ್ವತಿಯೆಜ್ಜೆಯ : ಪಾರ್ವತೀವಲ್ಲಭಚರಣ ಸರಸೀರುಹಭೃಂಗಂ ಮಹಾಮಹಿಮೋತ್ತುಂಗಂ ನಾಮಾದಿ ಸಮಸ್ತಪ್ರಸಸ್ತಿ ಸಹಿತಂ (ಕೌಪ. xx. ೧೬-೩೩; 1078). [ಸಂ.]

ಪಾರ್ವತೇಯ (ನಾ). ಪರ್ವತಪ್ರದೇಶದಲ್ಲಿ ಜನಿಸಿದವನು ; ಪರ್ವತವಾಸಿ : ಪಟ್ಟಂಡಭೂಪಲ್ಲಭನುಂ ಹಿಮವತ್ತಟಂಬಿಡಿದು ಮೂಡಮೊಗದೆ ಪಯಣಂಬರೆ ಪಾರ್ವತೇಯೋಪಾದಪ್ರಧಾನಪುರಸ್ಸರನಾಗಿ (ಶಾಂತಿಪು. ೦೦-೫೬ ಪ); ಈ ಜನಗಳ ಭೂಷಣಗಳು ಆಕಾರಗಳಂ ನೋಡಿದರೆ ಪಾರ್ವತೇಯರಂತೆ ಕಾಣುವರೆಂದು ನಿಶ್ಚೈಸಿ (ಮುರ್ತ್ರಾಮಂ. ೨೬). [ಸಂ.]

ಪಾರ್ವರ (ನಾ). (?) : ಸ್ವಸ್ತಿಶ್ರೀವಿಕ್ರಮಮಹಾರಾಜನ್ಪೃಥಿವಿರಾಜ್ಯಕೆಯ್ಯೆ ಪಬ್ಬು ರಕ್ಕಸನೂರುಕೊಳ್ವಲ್ಲಿ ಪಾರ್ವ್ವರೊದೊಳ್ ಸತ್ತಾನ್ ಪೆರಾಣ್ಕೋಪನ್ (ಎಕ. X (3), ಶ್ರೀಶಿಪಾ. ೦೦೬-೪; ಸಂ. 700) ; ಪಾರ್ವ್ವರೊದೊಳ್ ಸತ್ತಾನ್ (ಪ್ರಾಂಶಿ. ೦೯೦೬, ೦೦-೪; ೧ಸೆಯ ಕಸ). [?]

ಪಾರ್ವಾಟ (ನಾ). ಮೆರವಣಿಗೆ ; ಪ ವರ್ಷದಲ್ಲಿ ಯಾವುದಾದರೂ ಹಬ್ಬದಲ್ಲಿ ಒಂದು ಪ್ರಾಣಿಯನ್ನು ಬೇಟೆಯಾಡಿ ಅದನ್ನು ಕೊಲ್ಲುವುದಕ್ಕೆ ಮುಂಚೆ ಮೆರವಣಿಗೆ ಮಾಡುವುದೂ ಕೆಲವು ಹಬ್ಬಗಳಲ್ಲಿ ಮೊಲ, ನರಿ ಇತ್ಯಾದಿ ಪ್ರಾಣಿಗಳನ್ನು ಬೇಟೆಯಲ್ಲಿ ಹಿಡಿದು ಮೆರವಣಿಗೆ ಮಾಡಿ ಮತ್ತೆ ಕಾಡಿಗೆ ಬಿಡುವುದೂ ಉಂಟು : ವರ್ಷಕ್ಕೆ ಒಂದು ಸಲ ಇವರು ಒಂದು ಚಿರತೆಯನ್ನು ಹಿಡಿದು ಪಾರ್ವಾಟ ಮಾಡಿ ಮುಗಿಸುವುದು (ಸಂಸ್ಥಿ. VI, ೦೦೯). [<ಪರ್ವ ? +ಆಟ]

ಪಾರ್ವಿಕೆ, ಪಾರ್ಬಿಕೆ (ನಾ). ಬ್ರಾಹ್ಮಣಿಕೆ; ಹಾರುವತನ: ಪಾರ್ವಿಕೆಯೊಳ್ ಇರ್ದ ಪಾರ್ವಂಗೆ ಕೂಳನ್ ಒಯ್ವರ್ (ಪ್ರಾಕ್ಯಾಸ್ಯ. ೩೯೬) ; ಕಡೆಗೆ ವಂದಿಸದಿದ್ದನಾದಡೆ ಕೆಡುಗು ಪಾರ್ವಿ[ಶಾಕಾಂ. ಬಿ]ಕೆ ಮುಂದೆ ವಂದಿಸಿದಡೆ ಕೆಡುಗು ಮೃಡಭಕ್ತಿಯಂತಾಗಿಂತೆರಡಱಿಂದ ಕೆಡುವನಿಳೆಯೊಳು ಪಾರ್ಬನು (ಬಸಪು. ೩-೬೯). **ಪಾರ್ಬಿಕೆ** : ಅಕುಲದಭವನ ಭಕ್ತತತಿಗಾವ ಕುಲ ವೆಂದಿದನೆಣಿಸಿ ನೀ ಪಾರ್ಬಿಕೆಗೆ ಸಲಿಸುವೆಯಿಂತಿನಿತು ಮಾರ್ಗಂಗಳೆಂದು (ಬಸಪು. ೩-೦೯) [ಪಾರ್ವ + — ಇಕೆ]

ಪಾರ್ವಿತಿ 'ಪಾರ್ವಂತಿ' ನೋ.

ಪಾರ್ವಿಸು (ಕ್ರಿ). ಹಾರಿಸು ; ನುಗ್ಗಿಸು (?) : ತ (ಂ)ನ್ನ ವಾರುವಮಂ ವಿ(ಂ)ನ್ನವಿತ್ತು ಮು(ಂ)ನ್ನ ಪಾರ್ವಿಸಿ ಮುರಾರಿಯೊಳು ದೆಖ್ಖಾದೆಖ್ಖಿಯೊಳು ಕಾದಿ ತಳ್ತಿಱಿದು ಗೆಲ್ದು (ಸೌಇಪ. IX-i, ೩೯೨-೨೦; 1148). [?]

ಪಾರ್ವೆ (ನಾ). = ಪಾರ್ವಂತಿ : ಪರಿಕಿಸದಾ ಪಾರ್ವ್ವೆ ನಡೆದು ಪರಮಾತ(ರ್ಥ)ಂ ಕೊನ್ದಳಿನ್ತು ಮುನ್ಗುರಿಯಂ ತಾನೆರಡಿಲ್ಲದೆಂಬ ನಾಳ್‌ನುಡಿ ಪೊರೆದು (ಪ್ರಾಂಶಿ. ೦೯೨೬, ೩೯-೩; 11ಸೆಯ ಕಸ). [ಪಾರ್ವ + — ಎ$_2$]

ಪಾರ್ಶ್ವ (ನಾ). ೧. ಪಕ್ಕ; ಮಗ್ಗುಲು; ಬದಿ : "ಕೆಲಂ ಪಾರ್ಶ್ವ ಸಂಜ್ಞೆಕಂ" (ಪಸ್ತುಕೋ. ೬೯-೬) ; ಮಣಿವಿಚಿತ್ರಪಾರ್ಶ್ವಂಗಳುಮಧಸ್ಸ್ಥಲೋಪರಿಮತಲಸಮಾನವಿಸ್ತಾರಂಗಳುಮಪ್ಪ ಹಿಮವನ್ಮಹಾಹಿಮವನ್ನಿಷಧನೀಲರುಗ್ಮಿಶಿಖರಿಗಳೆಂಬ ವರ್ಷಧರಮಹೀಧರಂಗಳಿಂದಂ . . . ಎಸೆದು (ಅಂಪು. ೦-೯೬ಸ) ; ಆ ಮಹಾನುಭಾವನಾ ಮಹಾಕಾಳದೊಳ್ ಸುಪ್ರಾಸುಕ ಪ್ರದೇಶಮಂ ಕಂಡು . . . ಏಕಾಗ್ರಚಿತ್ತದೊಳೇಕಪಾರ್ಶ್ವದೊಳ್ ಮೆಯ್ಯನಿಕ್ಕಿ (ಸುಕುಮಾ. ೦೨-೦೬ ಪ); ಕೆಳಗೆ ಪಶ್ಚಿಮಪಾರ್ಶ್ವದಲ್ಲಿ ಒಂದರೊಳಕ್ಕೆ ಒಂದಕ್ಕೆ ಪ್ರವೇಶವಿರುವ ಎರಡು ಕೊಠಡಿಗಳು (ಸಂಟರು. ೦೯). ೨. ಎದೆಯ ಕೆಳಗಿನ ಎರಡು ಮಗ್ಗುಲು ; ಪಕ್ಕೆ : "ಪಾರ್ಶ್ವಂ—೧ ತಯೋರಧಃ—ಕಂಕಳ ಕೆಳಗಡೇ ಪಕ್ಕದ ಪೆಸರುಗಳು" (ಸಿದ್ಧಾಂತಿ. ೦೯೨). ೩. ಸಮೀಪ; ಹತ್ತಿರ : "ಸಮೀಪಂ . . . ಪಾರ್ಶ್ವಂ, ಉಪಾಂತಂ, ಅಪದಾಂತರಂ—ಈ ೧೮ ಸಮೀಪಂ" (ಪಠಾಯು. ೦೦೩-೬); ಪುರುಜಿನ ಪಾರ್ಶ್ವದೊಳ್ ವೃಷಭಸೇನಗಣಾಗ್ರಣಿ ತಜ್ಜಿನೋಕ್ತಮಂ ಭರತನೃಪಂಗೆ . . . ಒಲವಿಂದೆ ಪೇಟ್ದುದಂ . . . ಪೇಟ್ಟೆಂ (ಪಾರ್ಶ್ವಪು. ೦-೯೯). ೪. ವಂಚನೆಯ ಉಪಾಯ ; ಕುತಂತ್ರ : 'ಪಾರ್ಶ್ವಕ' ಪರಾ. ೫. ಒಂದು ವಸ್ತುವಿನ ಮೇಲ್ಮೈ. ೬. ಧಾರೆ ; ಅಂಚು ; ನೇಮಿ. ೭. ಕನ್ನಡದಲ್ಲಿ ಪಾರ್ಶ್ವನಾಥಪುರಾಣವನ್ನು ಬರೆದ ಒಬ್ಬ ಕವಿಯ ಹೆಸರು : ಲಲಿತಪದಾರ್ಥಾಳಂಕೃತಿಗಳಿನೊಸರ್ವ ರಸಂಗಳಿಂದೆ ಬುಧರೊಳ್ಪುಳಕಾವಳಿಸಸ್ಯಮೊಗೆಯೆ ಕವಿಕುಳಶಿಳಕಂ ಶಾಸನಮನೊಲ್ದು ಪೇಟ್ದಂ ಪಾರ್ಶ್ವಂ (ಪಾರ್ಶ್ವಪು. ಅಸುಬಂಧ. II, xii). ೮. ಒಂದು ದೇಶದ ಹೆಸರು : ಗೌಳ ಪಾರ್ಶ್ವ ಕರೂಷ ಕೋಸಲ ಚೇದಿ . . . ಹಮ್ಮೀರಾದಿ ಸಕಲದೇಶಾಧೀಶಸಮುದಯಸೈಕತಸೇತುಮಹಾಸಂಧುಪ್ರವಾಹ ಪರಾಕಂ (ಯಾದಸಂ. ೩-೦ ಪ). ೯. [ಜೈನ] ಇಪ್ಪತ್ತುಮೂರನೆಯ ತೀರ್ಥಂಕರನ ಹೆಸರು; ಪಾರ್ಶ್ವನಾಥ : ವೃಷಭ . . . ಪಾರ್ಶ್ವ ವರ್ಧಮಾನರೆಂಬಿಪ್ಪತ್ತುನಾಲ್ವರ್ ತೀರ್ಥಕರರ್ (ಶಾಪುಂಪು. ೪೦೨) ; ದಿವಿಜನಾಥಂ ಜನ್ಮಾಭಿಷೇಕಕಲ್ಯಾಣಾನಂತರಂ ಪಾರ್ಶ್ವನೆಂಬುದು ತ್ರಿಲೋಕಪೂಜಿತಮಪ್ಪ ಧರ್ಮಂ ಅದರ್ಕಾಶ್ರಯಮಪ್ಪುದಱಿಂ ಪಾರ್ಶ್ವನೆಂದು ಪೆಸರನಿಟ್ಟು ಪೋಗೆ (ಪಾರ್ಶ್ವಪು. ಅಸುಬಂಧ. I, iii). [ಸಂ.]

ಪಾರ್ಶ್ವಕ (ನಾ). ೧. ಮೋಸದಿಂದ ಹಣವನ್ನು ಸಂಪಾದಿಸುವವನು. ೨. "(ಸೈನ್ಯದ ಪಕ್ಕವನ್ನು ರಕ್ಷಿಸುವ ಅಥವಾ ಅವನ್ನು ಅಪಾಯಕ್ಕೊಳಪಡಿಸುವ) ಸೈನಿಕರಕ್ಷಣೆಗಳು : ಪಾರ್ಶ್ವಕ" (Flank. ಇಂಕನಿ). [ಸಂ.]

ಪಾರ್ಶ್ವಕೋಣಾಸನ (ನಾ). [ಯೋಗ] ಒಂದು ಬಗೆಯ ಆಸನ : ಮುಖ್ಯವಾದ ಕೆಲವು ಆಸನಗಳು, ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೬೬. ಪಾರ್ಶ್ವಕೋಣಾಸನ (ಭಾಕದ. ೦೬೭). [ಸಂ.]

ಪಾರ್ಶ್ವಕ್ರಾಂತ (ನಾ). [ನಾಟ್ಯ] ಹದಿನಾರ ಬಗೆಯ ಮಾರ್ಗ ಆಕಾಶಚಾರಿಗಳಲ್ಲಿ ಒಂದು ಪ "(i) ಕುಂಚಿತಚರಣವನ್ನು ಮೇಲಕ್ಕೆತ್ತಿ ನೆಲವನ್ನು ಹಿಮ್ಮಡಿಯಿಂದ ಗಟ್ಟಿಸುವುದು. [ಇದನ್ನೇ ಪಾರ್ಶ್ವದಂಡಚಾರಿಯೆಂದೂ ಕರೆಯುತ್ತಾರೆ] (ii) ಕುಂಚಿತಚರಣವನ್ನು ಮತ್ತೊಂದು ತೊಡೆಯವರೆಗೂ ಎತ್ತಿ ಉದ್ಘಟ್ಟಿತ ಮಾಡಬೇಕು" (ಲಾಸ್ಕರಂ. ೩೦೯ ಗದ್ಯಾಸುಪಾದ) ; ಒಂದು ಪದಂ ಕುಂಚಿತದಿಂದಂ[ದಂ] ಬಡೆದೆತ್ತಿ ತ[ನ್ನ] ಪಾರ್ಶ್ವದ ದೆಸೆಯಿಂ ಚಂದದೆ ಲಾಗಿಸಿ ಮಡದಿಂದೊಂದಿಸೆ ಭೂತಳಮನಿಂತು ಪಾರ್ಶ್ವಕ್ರಾಂತಂ (ಲಾಸ್ಕರಂ ೬-೯೨) ; ಈ ಚಾರಿ ಪಾರ್ಶ್ವದಂಡಪಾದಮೆಂದು ಲೋಕಪ್ರಸಿದ್ಧಂ; ಮತ್ತೊಂದು ತೊಡೆ ಪರಿಯಂತರ ಎತ್ತಿ ಉದ್ಘಟ್ಟಿತಪಾದವಂ ಮಾಡಿದರೆ ಇದನ್ನೂ ಪಾರ್ಶ್ವಕ್ರಾಂತಮೆಂಬರು (ಲಾಸ್ಕರಂ. ೬-೯೨ಸ). [ಸಂ. ಪಾರ್ಶ್ವಕ್ರಾಂತಾ]

ಪಾರ್ಶ್ವಗತ (ನಾ). = ಪಾರ್ಶ್ವಾಗತ : ಋಜು ಋಜುಪರಾವೃತ್ತಿ ಅರ್ಧಋಜು ಅರ್ಧಋಜುಪರಾವೃತ್ತಿ ಸಾಚಿ ಸಾಚಿಪರಾವೃತ್ತಿ ದ್ವ್ಯರ್ಧಾಕ್ಷಂ ತತ್ಪರಾವೃತ್ತಿ ಪಾರ್ಶ್ವಗತಮೆಂಬ ನವಸ್ಥಾನಕಂಗಳೊಳು . . . ಅಳವಡೆ (ಸಂದ್ರಪು. ೦೩-೬೦). [ಸಂ.]

ಪಾರ್ಶ್ವಚರ (ನಾ). ೧. ಪಕ್ಕದಲ್ಲಿರುವವನು. ೨. ಸಮೀಪದಲ್ಲಿ ಸಂಚರಿಸುವವನು. ೩. ಸೇವಕ ; ಆಳು : ಅಭಿನವರೂಪಹಾವನವ ಭಾವಸಮನ್ವಿತೆ ಪುಟ್ಟಿದಳ್ ಸ್ವಯಂಪ್ರಭೆ ಮಗಳಾಕೆ ಪಾರ್ಶ್ವಚರ ಭೂಚರ ಖೇಚರ ನೇತ್ರಪುತ್ರಿಕಾನಿಭೆ . . . ನಯನೋತ್ಪಲೇಂದುಕಿರಣ ಪ್ರಭೆಯಪ್ಪುದು ತಪ್ಪದೊಪ್ಪುಗುಂ (ಶಾಂತಿಪು. ೩-೦೬). [ಪಾರ್ಶ್ವ + ಚರ]

ಪಾರ್ಶ್ವಭೇದ (ನಾ). [ನಾಟ್ಯ] ನರ್ತನದಲ್ಲಿ ಒಂದು ಬಗೆ ; ಪ "ವೃಶ್ಚಿಕಕುಟ್ಟಿತ, ಊರ್ಧ್ವಜಾನು, ಆಕ್ಷಿಪ್ತ, ಸ್ವಸ್ತಿಕ ಈ ನಾಲ್ಕು ಕರಣಗಳನ್ನೂ ಮಾಡಿ ಒಂದಾವರ್ತಿ ಸುತ್ತಿ ಉರೋಮಂಡಲ, ನಿತಂಬ, ಕರಿಹಸ್ತ, ಕಟೀಛಿನ್ನ ಈ ನಾಲ್ಕು ಕರಣಗಳನ್ನೂ ಕ್ರಮವಾಗಿ ಮಾಡುವುದು" (ಲಾಸ್ಕರಂ. ೩೦೦ ಗದ್ಯಾಸುಪಾದ): ಮಿಸುಪಾಚ್ಛುರಿತ ಪಾರ್ಶ್ವಭೇದ ಸರ್ಪಿತಂ ಊಡಿವೆತ್ತ ಮತ್ತಾಕ್ರೀಡಂ ಪಸರಿಪ ವಿಮ್ಯದ್ಭ್ರಾಂತಂ ಶಶಿಮುಖಿ ವಿಷ್ಕಂಭಕಾಪಸೃತಮೆಂಬಿನಿತುಂ (ಲಾಸ್ಕರಂ. ೩-೯). [<ಸಂ. ಪಾರ್ಶ್ವಚ್ಛೇದ ?]

ಪಾರ್ಶ್ವಜಾನು (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು; P "ಸಮಪಾದದಿಂದ ನಿಂತುಕೊಂಡು ಒಂದು ಕಾಲಿನಿಂದ ತೊಡೆಯ ಹಿಂಭಾಗವನ್ನು ತಾಗಿಸಿ, ಒಂದು ಕೈಯನ್ನು ಮುಷ್ಟಿಹಸ್ತದಿಂದ ಎದೆಯ ಹತ್ತಿರದಲ್ಲೂ ಇನ್ನೊಂದು ಕೈಯನ್ನು ಅರ್ಧಚಂದ್ರಹಸ್ತದಿಂದ ಸೊಂಟದ ಹತ್ತಿರದಲ್ಲೂ ಹಿಡಿಯುವುದು. ಹೀಗೆ ಎರಡು ಪಾರ್ಶ್ವಗಳಲ್ಲೂ ಮಾಡುವುದು. ಯುದ್ಧ, ನಿಯುದ್ಧ [ಜಟ್ಟಿಕಾಳಗ] ಇವೇ ಮೊದಲಾದುವನ್ನು ಅಭಿನಯಿಸುವಾಗ" (ಶಾಸ್ಕರಂ. ೩೦೦ ಗದ್ಯಾನುವಾದ); ತಲಪುಷ್ಪಪುಟ, ಲೀನ . . . ತಲಸಂಸ್ಫೋಟಿತ, ಪಾರ್ಶ್ವಜಾನು . . . ನಾಗಾಪಸರ್ಪಿತ, ಗಂಗಾವತರಣ—ಈ ನೂಱೆಂಟು ಕರಣಂಗಳ್ (ಶಾಸ್ಕರಂ. ೪-೨೨ಪ). [ಸಂ.]

ಪಾರ್ಶ್ವದ್ವಯ (ನಾ). [ನಾಟ್ಯ] ಹದಿಮೂರು ವಿಧವಾದ ಹಸ್ತಕ್ಷೇತ್ರಗಳಲ್ಲಿ ಒಂದು: ಪಾರ್ಶ್ವದ್ವಯ, ಪುರಸ್ತಾತ್, ಪಶ್ಚಾತ್ . . . ಕಟಿಶಿರ, ಊರುದ್ವಂದ್ವ—ಈ ಹದಿಮೂಱು ಹಸ್ತಕ್ಷೇತ್ರಂಗಳ್ (ಶಾಸ್ಕರಂ. ೪-೦೩ಪ). [ಸಂ.]

ಪಾರ್ಶ್ವನಾಥ (ನಾ). ೧. = ಪಾರ್ಶ್ವ ೭: ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಕಥಾವತಾರವರ್ಣನಂ (ಪಾರ್ಶ್ವಪು. ೦-೦೩೫ ಗದ್ಯ). ೨. = ಪಾರ್ಶ್ವ ೯: ಸಂಪೂರ್ಣಮಾಯ್ತು ಕವಿಪ್ರಸ್ತುತಪಾರ್ಶ್ವನಾಥಚರಿತಂ ಪಾರ್ಶ್ವೋದಿತಂ (ಪಾರ್ಶ್ವಪು. ೦೬ ೦೮೬). [ಸಂ.]

ಪಾರ್ಶ್ವನಿಕುಟ್ಟಕ (ನಾ). [ನಾಟ್ಯ] ನೂರೆಂಟುಕರಣಗಳಲ್ಲಿ ಒಂದು; P "ಪತಾಕಹಸ್ತಗಳೆರಡನ್ನು ಸ್ವಸ್ತಿಕದಂತೆ ಹಿಡಿದು, ಒಂದು ಕೈಯನ್ನು ಮೇಲ್ಮುಖವಾಗಿಯೂ ಇನ್ನೊಂದನ್ನು ಕೆಳಮುಖವಾಗಿಯೂ ಮಾಡಿ, ಮೇಲ್ಮುಖವಾಗಿರುವ ಕೈಯನ್ನು ಪಾರ್ಶ್ವದಲ್ಲಿ [ಪಕ್ಕೆಯಲ್ಲಿ] ನಿಲ್ಲಿಸಿ, ಕೆಳಮುಖವಾಗಿರುವ ಕೈಯನ್ನು ಪಾರ್ಶ್ವಕ್ಕೆ [ಪಕ್ಕೆಗೆ] ತರುವಾಗಲೇ ಆ ಪಾರ್ಶ್ವದ ಕಾಲನ್ನೂ ಅಂಗಾಲು ಮೇಲ್ಮುಖ ಮಾಡಿ ಪಕ್ಕೆಯ ಹತ್ತಿರಕ್ಕೆ ತಂದು ಕೈಗೆ ಮುಟ್ಟಿಸುವುದಲ್ಲದೆ ಇನ್ನೊಂದು ಕೈಯನ್ನು ಮೇಲಕ್ಕೆ ಚಲಿಸುವುದು. ಹೀಗೆ ಎರಡು ಪಾರ್ಶ್ವಗಳಲ್ಲೂ ಪರ್ಯಾಯವಾಗಿ ಮಾಡುವುದು" (ಶಾಸ್ಕರಂ. ೨೯೭ ಗದ್ಯಾನುವಾದ): ತಲಪುಷ್ಪಪುಟ, ಲೀನ, ವಿವರ್ತಿತ . . . ಪಾರ್ಶ್ವನಿಕುಟ್ಟಕ, ಚಕ್ರಮಂಡಲ, ಉರೋಮಂಡಲ . . . ವೃಷಭಕ್ರೀಡಿತ, ನಾಗಾಪಸರ್ಪಿತ, ಗಂಗಾವತರಣ—ಈ ನೂಱೆಂಟು ಕರಣಂಗಳ್ (ಶಾಸ್ಕರಂ. ೪ ೨೨ ಪ). [ಪಾರ್ಶ್ವ+ನಿಕುಟ್ಟಕ]

ಪಾರ್ಶ್ವಪಾದಾಸನ (ನಾ). [ಯೋಗ] ಒಂದು ಬಗೆಯ ಆಸನ: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೬೩. ಪಾರ್ಶ್ವಪಾದಾಸನ . . . ೭೯. ಭೈರವಾಸನ ಇತ್ಯಾದಿಗಳನೇಕವಿವೆ (ಶಾರದ. ೦೬೭). [ಸಂ.]

ಪಾರ್ಶ್ವಭಾಗಿನಿ (ನಾ). ಮಗ್ಗುಲಲ್ಲಿರುವವಳು; ಪತ್ನಿ: ನಿನ್ನನ್ನು ಸೆರೆಯಲ್ಲಿಟ್ಟು ತನ್ನ ಪಾರ್ಶ್ವಭಾಗಿನಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಆ ಅಧಮ ಕೇಶವರಾಯನೇ ನನ್ನ ಪತಿ (ಅಂಬಿಕೆ. ೩೬). [ಸಂ. ಪಾರ್ಶ್ವಭಾಗಿನೀ]

ಪಾರ್ಶ್ವಮಂಡಲ (ನಾ). [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತಗಳಲ್ಲಿ ಒಂದು: ಚತುರಸ್ರ, ಉದ್ವೃತ್ತ, ತಲಮುಖ . . . ಪಾರ್ಶ್ವಮಂಡಲ, ಉರೋಮಂಡಲ . . . ಅಲಪದ್ಮ, ಉಲ್ಬಣ, ವಲಿತ, ಲಲಿತ—ಈ ಮೂವತ್ತು ನೃತ್ತಹಸ್ತಂಗಳ್ (ಶಾಸ್ಕರಂ. ೨-೪೪ ಪ); ಈ ಕೆಳಗೆ ಹೇಳಿರುವ ಹಸ್ತಗಳು ನೃತ್ತಹಸ್ತಗಳು—೧. ಚತುರಸ್ರ, ೨. ಉದ್ವೃತ್ತ . . . ೨೨. ಪಾರ್ಶ್ವಮಂಡಲ (ಅಶಾಸ್ಕ. ೪೯). [ಸಂ.]

ಪಾರ್ಶ್ವವರ್ತಿ (ನಾ). ಸಹಾಯಕ; ಸೇವಕ. [ಸಂ. ಪಾರ್ಶ್ವವರ್ತಿನ್]

ಪಾರ್ಶ್ವವಾಯು (ನಾ). ದೇಹದ ಅರ್ಧಭಾಗದ ಚಲನೆಯನ್ನು ಉಡುಗಿಸುವ ವಾತರೋಗ; ಲಕ್ವ: ಮಾತು ನಿಲ್ಲಬಹುದು, ಪಾರ್ಶ್ವವಾಯು ಬರಬಹುದು (ಕಂಠೋ. ೩೦); ಜಯಜಯಮತಿರಾಗವು ಪಾರ್ಶ್ವವಾಯುವನ್ನು ಗುಣಪಡಿಸುವುದೆಂಬ ನಂಬಿಕೆಯಿದೆ (ಶಾರದ. ೩೪೪). 'ಅರ್ಧಾಂಗವಾಯು' ಪರಾ. [ಪಾರ್ಶ್ವ+ವಾಯು]

ಪಾರ್ಶ್ವಶೂಲೆ (ನಾ). ಪಕ್ಕೆಗಳಲ್ಲಿ ಉಂಟಾಗುವ ನೋವು; ಪಕ್ಕೆಶೂಲೆ: ಹೊಟ್ಟೆಶೂಲೆಗೆ, ಪಾರ್ಶ್ವಶೂಲೆಗೆ:—ಒಳ್ಳಿತಾದ ಮೆಣಸು ಹೊನ್ನು ತೂಕವನ್ನು ವೀಳ್ಯದೆಲೆಗೆ ತೊಡೆದು ಆ ಎಲೆ ಮೆಲ್ಲಲು ಹರ (ಶಿನೃಪಿ. ೦೨೫); ಗರುಗ, ಬಳ್ಳಿಸೊಂಡೆ . . . ವಾಯಿವಿಳಂಗ—ಇಷ್ಟನ್ನು ಚೂರ್ಣಿಸಿ, ಕಲ್ಕವ ಮಾಡಿ ಕವಡಿ, ತೈಲಪಕ್ವದಲ್ಲಿಳುಹಿ ಪಾನವ ಮಾಡಲು . . . ಪಾರ್ಶ್ವಶೂಲೆ, ಗ್ರಹಣಿ, ಅಗ್ನಿಮಾಂದ್ಯ, ಇವಿಷ್ಟು ಪರಿಹರವಹುದು (ಸಕನೃ. ೨೨೬). [ಪಾರ್ಶ್ವ+ಶೂಲೆ₁]

ಪಾರ್ಶ್ವಸ್ಥ (ನಾ). ೧. ವಿಟಪುರುಷರಲ್ಲಿ ಒಂದು ಬಗೆ; ಹತ್ತಿರದ ಮನೆಯಲ್ಲಿ ವಾಸಿಸುವ ವಿಟ,—ಜಾರ: ಸ್ತ್ರೀಯಿದ್ದ ಮನೆಯ ಬಿಟ್ಟು ಕೆಲವ ಮನೆಯೊಳಿರ್ಪನಂ ಪಾರ್ಶ್ವಸ್ಥನೆಂಬುದು (ಶಾಸುಶಾ. ೨೫೨). ೨. ಸೂತ್ರಧಾರನ ಸಹಾಯಕ. [ಸಂ.]

ಪಾರ್ಶ್ವಸ್ವಸ್ತಿಕ (ನಾ). [ನಾಟ್ಯ] ಮೂವತ್ತೆರಡು ಅಂಗಹಾರಗಳಲ್ಲಿ ಒಂದು; P "ಒಂದು ಪಾರ್ಶ್ವದಲ್ಲಿ ದಿಕ್‌ಸ್ವಸ್ತಿಕವನ್ನೂ ಇನ್ನೊಂದು ಪಾರ್ಶ್ವದಲ್ಲಿ ಅರ್ಧನಿಕುಟ್ಟಕವನ್ನೂ ಪುನಃ ಪಾರ್ಶ್ವವ್ಯತ್ಯಾಸದಿಂದ ಅದೇ ಕರಣಗಳನ್ನು ಮಾಡಿ ಅಪವಿದ್ಧ, ಊರೂದ್ವೃತ್ತ, ಆಕ್ಷಿಪ್ತ, ನಿತಂಬ, ಕರಿಹಸ್ತ, ಕಟೀಛಿನ್ನ ಈ ಕರಣಗಳನ್ನು ಕ್ರಮವಾಗಿ ಮಾಡುವುದು" (ಶಾಸ್ಕರಂ. ೩೦೮ ಗದ್ಯಾನುವಾದ): ಸ್ಥಿರಹಸ್ತ, ಪರ್ಯಸ್ತ . . . ಪಾರ್ಶ್ವಸ್ವಸ್ತಿಕ, ಭ್ರಮರ . . . ಸ್ವಸ್ತಿಕರೇಚಿತ—ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಶಾಸ್ಕರಂ. ೩-೭ ಪ). [ಪಾರ್ಶ್ವ+ಸ್ವಸ್ತಿಕ]

ಪಾರ್ಶ್ವಾಗತ (ನಾ). [ಚಿತ್ರಶಾ] ಒಂದು ವಸ್ತುವಿನ ಮಗ್ಗುಲು ನೋಟ; ಋಜ್ವಾಗತ, ಅರ್ಧಋಜ್ವಾಗತ, ಪಾರ್ಶ್ವಾಗತ, ಸಾಚಿ ಮತ್ತು ದ್ವ್ಯರ್ಧಾಕ್ಷ ಎಂಬ ಪಂಚವಿಧ ಸ್ಥಾನಕಗಳಲ್ಲಿ ಒಂದು: ರಂಜಿಸುಗುಂ ಪಾರ್ಶ್ವಾಗತಂ . . . ತದ್ವಿದ್ಯರಂ ಮೆಚ್ಚಿಸುಗುಂ ದ್ವ್ಯರ್ಧಾಕ್ಷಮೆಂಬಂತಿರೆ ಸೊಗಯಿಸುತಿರ್ಪಂಗನಾಭಂಗಿಯಂ ಚಿತ್ರಿಸಿ ಚಿತ್ರಕ್ಕಾಯುವೊಯ್ದಂ ಮದನನೆನೆ ಮಹಾದೇವಿ ಕಣ್ಗೊಪ್ಪಿ ತೋರ್ಪಳ್ (ಅಸಪು. ೨-೪೫). 'ಪಾರ್ಶ್ವಗತ' ಪರಾ. [ಸಂ.]

ಪಾರ್ಶ್ವೋತ್ತಾನಾಸನ (ನಾ). [ಯೋಗ] ಒಂದು ಬಗೆಯ ಆಸನ: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ, ೨. ಚತುರಂಗದಂಡಾಸನ . . . ೬೬. ಪಾರ್ಶ್ವಕೋಣಾಸನ, ೬೭. ಪಾರ್ಶ್ವೋತ್ತಾನಾಸನ . . . ೭೯. ಭೈರವಾಸನ ಇತ್ಯಾದಿಗಳನೇಕವಿವೆ (ಶಾರದ. ೦೬೭). [ಸಂ.]

ಪಾರ್ಷದ (ನಾ). ೧. ಸಭೆಯಲ್ಲಿರುವವನು; ಸಭಾಸದ: ಸಕಲಧನೇಶ ಮುಖ್ಯರು ಪಾರ್ಷದೋತ್ತಮರು (ಶಿಶಾಗ. ೦೦-೬೨-೨೬). ೨. ಪರಿಚಾರಕ: ಅವರನ್ನು ಜಯವಿಜಯರೆಂಬ ಪಾರ್ಷದರು ತಮ್ಮ ಕೈಯೊಳಗಿನ ವೇತ್ರಯಷ್ಟಿಯಿಂದ ಪ್ರತಿಬಂಧಿಸಿದರು (ಶಾಷ್ಟ್ರಕ. ೦೦೦). [ಸಂ.]

ಪಾರ್ಷ್ಣಿ (ನಾ). ೧. ಪಾದದ ಹಿಂಭಾಗ; ಹಿಮ್ಮಡಿ: ಗೂ[ಢ]ಗುಲ್ಪ ಪಾರ್ಷ್ಣಿಗಳನೊಳಕೊಂಡ ಮನುಜಮಾಂಧಾತನ ಪೊಜಅಡಿಗಳ್ ವಿರೋಧಿಭೂಪಾಳರನಡಿಗೆಱಗಿಸಿದ ಸಂತೋಷದೊಳುನ್ನತಂಗಳಾದಂತೆ ಕೂರ್ಮೋನ್ನತಂಗಳಾದುವು (ಪಂಪಶಾ. ೨-೩೯ ಪ); ವಿಸಟಂಬರ್ಪಾನೆಯಂ ವಾಕ್ಷ್ರಣಿಧಿಯೊಳೆ ಬೆಸಂಬೆತ್ತು ಕಾಲ್ಗೋಪು ಕೂರಂಕುಸದಿಂದಂಗುಷ್ಠದಿಂ

ಪಾರ್ಷ್ಣಿಯನಳವಡಿಸುತ್ತುಂ . . . ಬಂಬಲ್ವರಿಯಿಸಿ (ಶುದ್ರಪು. ೯-೧೩); ಪಿರಿಮತ್ಕ್ಷಿಪ್ತಂ ಪತಿತಂ . . . ಅಂಗುಲಿ ಸಂಗತಮಿಯೆಂಟುಂ ಸಮಂತು ಪಾರ್ಷ್ಣಿಯ ಭೇದಂ (ಶಾಸ್ತ್ರರು. ೩-೦೦೦). ೨. ಸೈನ್ಯದ ಹಿಂಭಾಗ. ೩. ಹಿಂಬದಿ; ಹಿಂಭಾಗ: "ಪರಭಾಗಂ ಪಾರ್ಷ್ಣಿ ಮಡಂ" (ಪಸ್ತುಕೋ. ೬೬-೨). ೪. ಹಿಂದಿನಿಂದ ಹಿಡಿಯುವುದು,—ಆಕ್ರಮಿಸುವುದು: "ಹಿಂದೆ ಹಿಡಿವಲ್ಲಿ ಮಡವಲ್ಲಿ ಪಾರ್ಷ್ಣಿಯೆಂದೆನಿಕು" (ಮಂಗರಾ. ೦೪೨-೨೦). ೫. ಹಿಂದಿನಿಂದ ಹಿಡಿಯುವವನು,—ಆಕ್ರಮಿಸುವವನು; ಪಾರ್ಷ್ಣಿಗ್ರಾಹಕ: "ಹಿಂದೆ ಸೆಳೆವನಲ್ಲಿಯುಂ, ಮಡದಲ್ಲಿಯುಂ — ಪಾರ್ಷ್ಣಿಯೆಂಬುದು" (ಪಲಾಯು. ೦೩೬-೩೬). ೬. ರಥದ ಅಚ್ಚಿನ ಮುಂಭಾಗ,—ತುದಿ. ೭. ಒದೆತ; ತುಳಿತ. ೮. ಜಯವನ್ನು ಹೊಂದುವ ಅಪೇಕ್ಷೆ. ೯. ತನಿಖೆ; ವಿಚಾರಣೆ. ೧೦. ಸ್ವೇಚ್ಛಾಚಾರದಿಂದಿರುವವಳು; ಸ್ವೈರಿಣಿ. ೧೧. ಕುಂತಿಯ ಒಂದು ಹೆಸರು. [ಸಂ.]

ಪಾರ್ಷ್ಣಿಗಮನ (ನಾ). [ನಾಟ್ಯ] ಹಿಮ್ಮಡಿಗಳನ್ನೂರಿ ಹಿಂದಕ್ಕೆ ನಡೆಯುವುದು; ನೃತ್ಯದಲ್ಲಿ ಒಂದು ಭಂಗಿ: ಪಿಂತಣ್ಗೆ ಮಡಗಳಿಂದಂ ಸಂತತ ನಡೆಯಲ್ಕೆ ಪಾರ್ಷ್ಣಿಗಮನಮೆನಿಕ್ಕುಂ (ಶಾಸ್ತ್ರರು. ೨-೦೦೦).

[ಪಾರ್ಷ್ಣಿ + ಗಮನ$_2$]

ಪಾರ್ಷ್ಣಿಗ್ರಾಹಕ (ನಾ). ಹಿಂಭಾಗದಲ್ಲಿದ್ದು ಮೇಲೆ ಬೀಳುವ ಶತ್ರು: ಅದಂ ಕಂಡು ಕಪ್ಪಮಿಯದೆ ಚಪ್ಪರಿಸುವ ಮಂಡಳಿಕರುಮನಡಂಗದಾಟ ವಿಕರುಮಂ ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮನಱಿದು (ಅಧಿಪು. ೪-೮೨ ಪ).

[ಪಾರ್ಷ್ಣಿ+ಗ್ರಾಹಕ]

ಪಾರ್ಷ್ಣಿಪಾರ್ಶ್ವಗತ (ನಾ). [ನಾಟ್ಯ] ಇಪ್ಪತ್ತುಮೂರು ದೇಶೀಯಸ್ಥಾನಕಗಳಲ್ಲಿ ಒಂದು; ಪ "ಒಂದು ಪಾದದ ಒಳಭಾಗದಲ್ಲಿ [ಕೀಲಿನಲ್ಲಿ] ಇನ್ನೊಂದು ಕಾಲಿನ ಹಿಮ್ಮಡಿಯನ್ನು ಅಡ್ಡಲಾಗಿರಿಸುವುದು" (ಶಾಸ್ತ್ರರು. ೩೩೦ ಗದ್ಯಾನುವಾದ): ಪದದೊಳಪಾರ್ಶ್ವಮನಿತರದ ಪದಪಾರ್ಷ್ಣಿ[ಯುಮೊಂದೆ ಪಾರ್ಷ್ಣಿ]ಪಾರ್ಶ್ವಗತಾಖ್ಯಂ (ಶಾಸ್ತ್ರರು. ೬-೪೦).

[ಸಂ.]

ಪಾರ್ಷ್ಣಿರೇಚಿತ (ನಾ). [ನಾಟ್ಯ] ಮೂವತ್ತೈದು ದೇಶೀಯಭೌಮಚಾರಿಗಳಲ್ಲಿ ಒಂದು; ಪ "ಪಾರ್ಷ್ಣಿಪಾರ್ಶ್ವಗತಸ್ಥಾನಕದಲ್ಲಿ ಹಿಮ್ಮಡಿಯನ್ನು ರೇಚಿತ ಮಾಡುವುದು" (ಶಾಸ್ತ್ರರು. ೩೨೨ ಗದ್ಯಾನುವಾದ): ರಥಚಕ್ರ, ಪರಾವೃತ್ತತಲ, ನೂಪುರ . . . ವಿಶ್ಲಿಷ್ಟ, ಪಾರ್ಷ್ಣಿರೇಚಿತ, ಊರುತಾಡಿತ . . . ಅರ್ಧಸ್ಖಲಿತ, ಸಮಸ್ಖಲಿತ; ಈ ಮೂವತ್ತೈದು ದೇಶಿಯ ಸಂಬಂಧದ ಭೌಮಚಾರಿಗಳು (ಶಾಸ್ತ್ರರು. ೬-೦೬ ಪ).

[ಪಾರ್ಷ್ಣಿ + ರೇಚಿತ]

ಪಾರ್ಷ್ಣಿವಿದ್ಧ (ನಾ). [ನಾಟ್ಯ] ಇಪ್ಪತ್ತುಮೂರು ದೇಶೀಯಸ್ಥಾನಕಗಳಲ್ಲಿ ಒಂದು; ಪ "ಒಂದು ಕಾಲಿನ ಹಿಮ್ಮಡಿಯ ಮೇಲೆ ಇನ್ನೊಂದು ಕಾಲಿನ ಹೆಬ್ಬೆಟ್ಟನ್ನು ಇಡುವುದು" (ಶಾಸ್ತ್ರರು. ೩೩೦ ಗದ್ಯಾನುವಾದ): ಚತುರಸ್ರ, ಪಾರ್ಷ್ಣಿವಿದ್ಧ . . . ಚರಣಂ ಮಡದೊಳಗನ್ಯದ ಚರಣದ ಪೆರ್ಬೆಟ್ಟನಿರಿಸೆ ಪಾರ್ಷ್ಣಿಯ ವಿದ್ಧಂ (ಶಾಸ್ತ್ರರು. ೬-೩೯).

[ಸಂ.]

ಪಾರ್ಸಲ್ 'ಪಾರ್ಸಲ್ಲು' ನೋ.

ಪಾರ್ಸಲ್ಲು, ಪಾರ್ಸಲ್, ಪಾರ್ಸೆಲ್ (ನಾ). (ಸಾಮಾನ್ಯವಾಗಿ ಟಪಾಲು ಮೂಲಕ ಕಳಿಸುವ) ಕಟ್ಟಿದ ವಸ್ತು; ಭಾಂಗಿ: ಬುಟ್ಟಿಗಟ್ಟಲೆ ಹಣ್ಣುಗಳನ್ನು ಪಾರ್ಸಲ್ಲು ಮಾಡಿ ಊರಿಗೆ ಕಳಿಸಿದರು (ರೂಠಿ). ಪಾರ್ಸಲ್: ನೀವು ನಮ್ಮಿಬ್ಬರಿಗೂ ಪಾರ್ಸಲ್ ಮಾಡಿ ಕಳಿಸಬೇಕು (ಸಮಸೀ. ೩೨೩). ಪಾರ್ಸೆಲ್: "ಪಾರ್ಸೆಲ್ . . . ಒಂದು ಕಟ್ಟಾಗಿ ಕಟ್ಟಿದ ಸಾಮಾನು; ಮೂಟೆ; ಭಾಂಗಿ" (Parcel. ಇಂಕಡಿ). [←ಇಂ. Parcel]

ಪಾರ್ಸಿ 'ಪಾರಿಸಿ' ನೋ.

ಪಾರ್ಸಿಕ 'ಪಾರಶಿಕ' ನೋ.

ಪಾರ್ಸೆಲ್ 'ಪಾರ್ಸಲ್ಲು' ನೋ.

ಪಾಲ್$_1$, ಪಾಲು$_1$, ಹಾಲು$_1$ (ನಾ). ೧. ಸಸ್ತನಿಗಳು ತಮ್ಮ ಸಂತಾನ ಪೋಷಣೆಗಾಗಿ ಅವುಗಳಿಗೆ ಕುಡಿಸುವ, ಸ್ತನಗ್ರಂಥಿಗಳಿಂದ ಉತ್ಪತ್ತಿಯಾಗುವ ಬಿಳಿಯ ಬಣ್ಣದ ದ್ರವ; ಕ್ಷೀರ: "ಕ್ಷೀರು ದುಗ್ಧಂ ಪಾಲ್" (ಪಸ್ತುಕೋ. ೯೨-೦); ಕಿಟ್ಟೂನೇಶ್ವರದಾ ದೇವರು ಪರವರಿಯೆ ಭತ್ತಮುಂ ಕವಿಲೆಯ ಪಾಲುಂ ಎಟ್ಟುಂ × × × (ಎಕ. VI. ಕೊಪ್ಪ. ೩೬-೩; ಸು. 6757); ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ (ಕದಿರಾ. ೦-೩೬); ಬಡಿಗಂಡನಿಲ್ಲ ಪಾಲನೆ ಕಂಡಂ (ಪುಪಶಾ. ೬-೦೯). ೨. (ಕಳ್ಳಿ, ಎಕ್ಕ ಮುಂತಾದ) ಕೆಲವು ಸಸ್ಯಗಳು ಸ್ರವಿಸುವ ಬಿಳಿಯ ರಸ: ಒಳಮೊಂಡಿನ ಪಾಲ್ಗಳುಮಂ ಪೀರ್ದಿಂಗೊರಲ್ಗಳುವ ನೀರ್ವಕ್ಕಿಗಳ ಸುಸಿಲ ಮಸಕದಿಂಚರಂಗಳುಮಂ . . . ನೆಗಟುತ್ತಮಿರ್ಪೆಂ (ಕಾದಂಉ. ೩೨೬); ಪಾಲೆಂಬ ತೆಱದೆ ಪಶುವಿನ ಪಾಲಂ ಪೋಲುವುವೆ ನಾಯ ಕಳ್ಳಿಯ ಪಾಲ್ಗಳ್ (ಅಪಪು. ೨-೬೬); ಪಾಲೆಂಬ ನಾಮಮಾವಿನ ಪಾಲಿಂಗಂ ನಾಯ ವಟದ ಕಳ್ಳಿಯೊಳಾದಾ ಪಾಲಿಂಗಮಕ್ಕುಮಾದೊಡ ಪಾಲೊಳ್ಪುಂ ಸವಿಯುಮದಱೊಳೇಂ ಸಮನಿಕುಮೇ (ರರ್ಮಾಸ್ಕು. ೦-೦೯೨). ೩. ತೆಂಗಿನ ಕಾಯಿ, ಕಬ್ಬು ಮುಂತಾದುವುಗಳ ರಸ: (ಕ). ೪. ಸಿಡುಬು ಮೊದಲಾದುವುಗಳಿಗೆ ಮದ್ದಿನಂತೆ ಉಪಯೋಗಿಸುವ ಲಸಿಕೆ: (ಕ). ೫. ಬಿಳಿಯ ಬಣ್ಣ; ಬಿಳುಪು: 'ಪಾಲ್ತುತ್ತ' ಪರಾ. ೬. ಸಾಮಾನ್ಯವಾಗಿ ಬತ್ತ, ಗೋಧಿ ಇತ್ಯಾದಿ ಏಕದಳಧಾನ್ಯದ ಬಲಿಯದೆ ಇರುವ ಎಳೆಯ ಕಾಳಿನಲ್ಲಿರುವ, ಪಿಷ್ಟಾಂಶದಿಂದ ಕೂಡಿರುವ ಬಿಳಿಯ ರಸ: 'ಪಾಲ್ದುಂಬು', 'ಪಾಲ್ದೆನೆ' ಪರಾ. ಪಾಲು$_1$: ೧. ಕಱೆಯಿತ್ತೆ ಸುರಧೇನು ಪಾಲನು (ಸಂಪಪ. ೬-೭); ಚಿಲುಪಾಲು ತಂಬಾಲು ಕೆನೆವೆರಸಿದ ಪಾಲು ಸುಲಲಿತ ಬಟ್ಟವಾಲುಗಳ ಸಲೆ ಕಟ್ಟು ಮೊಸರುಗಳ್ ಗಟ್ಟಿಪಾಜ್ಜಿಗೆಗಳ ಲಲನೆಯರುಣಬಡಿಸಿದರು (ಕುಪಡಿ. ೮-೯೦); ಗೊಲ್ಲ ಕರೆದಾ ಧ್ವನಿಯ ಕೇಳಿ ಎಲ್ಲ ಪಶುಗಳು ಬಂದವಾಗ ಚಲ್ಲಿ ಸೂಸಿ ಪಾಲ ಕರೆದು ಅಲ್ಲಿ ತುಂಬಿತು ಬಿಂದಿಗೆ (ಗೋಹಾಡು. ೪೦). ಹಾಲು$_1$: ೧. "ಆ ವುಧಸ್ಯಂ ಪಯಂ ದುಗ್ಧಮಾ ಕ್ಷೀರಮೆನಲಾವುಗಳು ಕಱೆವ ಹಾಲಕ್ಕು" (ಮಂಗರಾ. ೩೪-೩); ಕಲ್ಲ ನಾಗರ ಕಂಡರೆ ಹಾಲನೆಱೆಯೆಂಬರು (ಜಸಪ. ೦೯೪); ಹಾಲ ಸಾಗರ ಮನೆಯ ಸೆಜ್ಜೆಯ ಮೇಲೆ ಶೇಷನ ಹಾಸು (ಸಂಪಪ. ೬-೦); ಹುಳಿಗಲಸಿದರೆ ಕೊಡನ ಹಾಲವೊಲಳಿವುದೇ ಕ್ಷೀರಾಂಬುನಿಧಿ (ಕೊರಾ. ೩-೬-೪೦). ೨. ಎಷ್ಟೆಲ್ಲ ಔಷಧ ಹಾಕಿಕೊಂಡವನಿಗೆ ಕಳ್ಳೀಹಾಲಿನ ಹೆದರಿಕೆಯೆ! (ಕಂಬಿಹು. ೦೮); ಎಕ್ಕದ ಹಾಲು, ಕೋಲುಗಳ್ಳಿಹಾಲು ಮತ್ತು ಕಣಗಿಲುಹಾಲು ಈ ಮೂರು ಸಸ್ಯಕ್ಷೀರಗಳನ್ನು ಒಂದೊಂದು ತೊಟ್ಟು ಸೇರಿಸಿ ರೊಟ್ಟಿ ಹಾಕಿಸಿಕೊಂಡು ತಿನ್ನು (ಶಪ್ಸೂರು. ೦೬೩); ಈ ಗಿಡಗಳನ್ನು . . . ಮೈಸೂರ ನಾಡಿನಲ್ಲಿ ಬೆಳಸುತ್ತಾರೆ. ಇದರ ಹಾಲಿನಿಂದ ರಬ್ಬರನ್ನು ತಯಾರಿಸುತ್ತಾರೆ (ಸಸ್ಯಶಾ. ೦೩೩). ೩. ಮಾಘ ಫಾಲ್ಗುಣದಲ್ಲಿ ಗಾಣವನ್ನು ಹಾಕಿದರೆ ಅಷ್ಟರಲ್ಲಿ ಬಿಸಿಲು ಬಲಿತು ಕಬ್ಬಿನ ಹಾಲು ಸ್ವಲ್ಪು ಕಡಿಮೆ ಆಗುವದು (ಕೃಷಿಪ್ರ. ೦೮೩); ಕಬ್ಬಿನ ಗಣೆ ಡೊಂಕು, ಅದರ ಹಾಲದು ಡೊಂಕೆ ರಸಿಕಾ ಪೇಳೊ (ಗಂ. ೩೨-೦); ಗಾಣದ ಚಕ್ರಗಳಲ್ಲಿ ಕಬ್ಬು ಜಜ್ಜಿ ಹೋಗಿ ಅದರಿಂದ ಹಾಲು ಸುರಿಯುತ್ತಿತ್ತು (ಕಪಪು. ೩-೮೨). 'ಕಾಯಿ ಹಾಲು' ಪರಾ. ೫. 'ಹಾಲುಗಲ್ಲು', 'ಹಾಲುಗಾರೆ' ಪರಾ. ೬. ಧೊರೆ ನನ್ನ ತಮ್ಮ ಬರುವಾಗ ಯಾಲಕ್ಕಿಗೊನಿ ಬಾಗಿ ಹಾಲ ಸುರಿದಾವ (ಗರಿ. ೩೮). ೭. ಸುಕುಮಾರತೆ; ಕೋಮಲತೆ; ಮೃದುತ್ವ: 'ಹಾಲುಗಲ್ಲ', 'ಹಾಲುಗೆನ್ನೆ' ಪರಾ.

ಪಾಲ ಪೊನಲ್=ಹಾಲಿನ ಹೊಳೆ : ಪಾಲ ಪೊನಲ್ ಪೊದಟ್ಟೊದವಿ ಸೌಂದರಮಂದರಕಂದರಂಗಳು ಶೈಲದರೀಗೃಹಂಗಳುಮನೊರ್ಮೆಯೆ ತೆಕ್ಕನೆ ತೀವಿ . . . ಪರಿದತ್ತು ನಗೋಪಕಂಠದೊಳ್ (ಅಪಪು. ೯-೬೬). **ಪಾಲ ಮುನ್ನೀರ್** =ಹಾಲಿನ ಸಮುದ್ರ; ಕ್ಷೀರಸಾಗರ : ಪಾಲ ಮುನ್ನೀರ್ ತೆರೆಯಂತಿರ್ದುತ್ತರೀಯಂ ನೆಲದೊಳಲೆಯಿಸುತ್ತಿರ್ದ ಮೂರ್ಧಾಭಿಷಿಕ್ತರ್ ಬೆರಸು . . . ಬಂದನಾ ಸಾರ್ವಭೌಮಂ (ಶಾದಂಉ. ೨೬೪); ಎನ್ನ ದೇಹದ ಬೆಮರ್ವನಿಯೊಳೊಗೆದರ್ ಪಾಲ ಮುನ್ನೀರ ಮಗಳೆಱೆಯ ಬೊಮ್ಮರ್ (ಪದ್ಮಶಾ. ೦೦-೨೫). **ಪಾಲುರ್ಕು, ಹಾಲುಕ್ಕು**=ಹಾಲು ತುಂಬಿಕೊಂಡು ಹೊರಬರು; ಹಾಲು ಸೂಸು: ಭುವನಸಂಭ್ರಮದೊಡನೆ ತಾಯೆರ್ದೆಗೆ ಪಾಲುರ್ಕಿ ಬರಲೊಂದಿರುಳ್, ಕನಸಿನೊಳ್, ದುಗ್ಧಾಬ್ಧಿಯಂ ಕಂಡು ನಲಿದಳ್ ದೇವಿ ಕೌಸಲ್ಯೆ (ಶ್ರೀರಾಮಾ. ೧೫-೪೦೫); ಈ ಮನೆ ಹಾಲುಕ್ಕಿದಂತೆ ಬಳೆಯಲಿ (ಸಪತಿ. ೩೬). **ಪಾಲ್ಬೆಣ್ಣೆಯುಂಬಳಿ**=ಹಾಲು ಮತ್ತು ಬೆಣ್ಣೆಗಾಗಿ ಕೊಟ್ಟ ಕೊಡುಗೆ : ಸದಾಶಿವರಾಯನಾಯಕನ ಮೊಮ್ಮದಿರೆಂಬ ವಾತ್ಸಲ್ಯದಿಂದಾ ಕುಮಾರರ್ಗೆ ಪಾಲ್ಬೆಣ್ಣೆಯುಂಬಳಿಗೆಂದು ನಿಯಾಮಿಸಿ ಮಾಸೂರಂ ಮಲ್ಲೂರು . . . ಸಂಕಣಭೂಪಂಗಾ ಸಮಯದೊಳಿತ್ತು (ಕೆಳಸ್ಕ. ೩-೫). **ಹಾಲ ಕಾಗದ**=(ಹಾಲಿನಂತೆ) ಬೆಳ್ಳಗಿರುವ ಕಾಗದ: ಬಿಳುಪಾದ ಕಾಗದ : (ಕ). **ಹಾಲ ಕಾಱ**= ಗೋವಳಿಗ; ಕವಾಡಿಗ : ಹಾಲಕಾಱರ ಊರ ಚಿಕದೇವರು . . . ಯಿಾ ಶಾಸನದಲಾದ ಪ್ರಮಾಣಿನ ಭೂಮಿಯನೂ ಶ್ರೀನರ[ಸಿಂಹ]ಭಾರತೀಶ್ರೀಪಾದ ಒ[ಡೆ]ಯರು × × × (ಸೌಇಇ. IX-II, ೪೩೦-೪೬; 1406). **ಹಾಲ ಕೆನೆ**=ಪಾಲ್ಗೆನೆ : ಹಾಲ ನೇಮ ಹಾಲ ಕೆನೆಯ ನೇಮ (ಬಸಪ. ೨೩೨). **ಹಾಲಗಂಬ**=ಮದುವೆಯಲ್ಲಿ, ಧಾರೆಯ ಮಂಟಪಕ್ಕೆ ಸಮೀಪವಾಗಿ ನೆಡುವ (ಮುರಿದರೆ ಹಾಲು ಸುರಿಸುವ) ಮರದ ಕೊಂಬೆ : ಹಂದರಗಂಬಕ ಚೆಂದನ್ನ ಸಿಂಗಾರ ತಂದ ಕಟ್ಟಿದರ ಹಾಲಗಂಬ ಮಾವಯ್ಯ ಬಂದ ಹಂದರಕ ಬಣ್ಣದಾಗ (ರೋಕಗೀ. ೪೭). **ಹಾಲಗಾಳು**=ಹಾಲು ತುಂಬಿದ ಕಾಳು; ಎಳೆಯ ಕಾಳು : ಉಳಿದ ಪಕ್ಷಿಗಳು ತಿನ್ನುವಾಗ ಬಿದ್ದಂಥ ಹಣ್ಣು ಹಂಪಲುಗಳನ್ನೂ ಹಾಲಗಾಳುಗಳನ್ನೂ ತಂದು ನನಗೆ ಗುಟುಕು ಕೊಟ್ಟು ಉಳಿದರೆ ತಾನು ತಿನ್ನುತ್ತಿತ್ತು (ಮುಂಬಯ. ೫-೩೦೨). **ಹಾಲಗೋಳಿ**=ಹಂಸಪಕ್ಷಿ : ಹಾಲಗೋಳಿಯ ಮ್ಯಾಲ ನೀರಗೋಳಿಯ ತಂದ ನೀರಾಗ ನಿರಗಿ ಒದೆಯೂವ ಹೆಣ್ಣೀನ ಹ್ಯಾಂಪಕ ತಂದ ಶಿವರಾಯ (ಕಪ್ಪಶಾ. ೦೦೬). **ಹಾಲ ತೊಱೆ**=ಪಾಲ್ದೊಱೆ : ಹಾಲ ತೊಱೆಗೆ ಬೆಲ್ಲದ ಕೆಸಱು ಸಕ್ಕರೆಯ ಮಳಲು ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು (ಬಸಪ. ೨೯೦). **ಹಾಲ ಧಾರೆ**=ಒಂದು ಬಗೆಯ ಪೂಜೆ ; ಕ್ಷೀರಾಭಿಷೇಕ: [ಮು]ನಿಚಂದ್ರದೇವರುಗಳ ಹೆಸರಿನಲು ನಡ[ವ] ಹಾಲ ಧಾರೆಗು ಸಹ ಅಕ್ಕಿ ಮೂಡೆ ೧೦ (ಎಇ. XX, ೯೯-೪೮; 1556). **ಹಾಲ ಬಾನ**=ಹಾಲಿನೊಂದಿಗೆ ಕಲಸಿದ ಅನ್ನ : ಹಾಲ ಬಾನುಣಲೊ ಹವಳ ಕೇರಾಡಲೊ (ಗರತಿ. ೧೨೫); ಹರಿಯಾಗೆದ್ನಮ್ಮಗಳು ಹಾಲಾ ಬಾನುಣ್ಣೂಳು (ರೋಕಗೀ. ೮೦). **ಹಾಲ ಮಣಿ**=(ಹಾಲಿನಂತೆ) ಬಿಳುಪಾದ ಗಾಜಿನ ಮಣಿ : (ಕ). **ಹಾಲ ಸಹಸ್ರ**=ಹಾಲ ಧಾರೆ : ಶ್ರೀಸ್ವಯಂಭು ರಾಮೇಶ್ವರದೇವರ್ಗ್ಗೆ [ಹಾ]ಲ ಸಹಸ್ರ ಗರ್ದುಗೆಯಂ ಕೊಟ್ಟು ರಕ್ಷಿಣೆಯಾಗಿ ಕಟ್ಟೆಯ ಕೆಯಿಂ ತೆ × × × ಬಟ್ಟೆಯಿಂ ಪಡುವಲು . . . ಬಿಟ್ಟ ಕೆಯಿ ಹಿರಿಯ ಕೋಲ ಮತ್ತರೇಳು (ಕಇ. II, ೨೪-೩೦; 1167). **ಹಾಲ ಹರವಿ**=೧. ಹಾಲಿನ ಕೊಡ : ತಾಳಮರದ ಕೆಳಗೆ ಒಂದು ಹಾಲ ಹರವಿಯಿರ್ದೊಡೆ ಅದ ಹಾಲ ಹರವಿಯೆನ್ನರು ಸುರೆಯ ಹರವಿಯೆಂಬರು (ಬಸಪ. ೯೦); ಹಾಲ ರವಿಯ ಸುತ್ತ ಯಾಲಕ್ಕಿ ನಾಶಾವ ಯಾರುಂಡರವ್ವ ಹಗಲೂಟ (ಗರತಿ. ೭೨). ೨. ಒಂದು ಊರಿನ ಹೆಸರು : ತಂಮ ಪ್ರವಿಷ್ಟದ ತುಱುಘಟೆಯ ಮೂಡಣ ಬೆಂಚೆಯಾಶಾನ್ಯದಲ್ಲಿ ಹಾಲ ಹರವಿಯ ದಾರಿಯಿನ್ತೆಂಕಲೂರ್ಮ್ಮಧ್ಯಕದೊಱೆಯಂ ಧಾರಾಪೂರ್ಬ್ಬಕಮ್ಮಾಡಿ ಕೊಟ್ಟ ಮತ್ತರಾಱು (ಸೌಇಇ. IX-I, ೨೯೫-೧೦; 1172). **ಹಾಲ ಹಸುಳೆ**=ಎಳೆಯ ಮಗು: ಆ ತರುಣಿಯು ವಯಸ್ಸಿನಲ್ಲಿ ದೊಡ್ಡವಳೇ ಆಗಿದ್ದರೂ ನಿರ್ದೋಷಿತ್ವದಲ್ಲಿ ಯಥಾರ್ಥವಾಗಿಯೂ ಹಾಲ ಹಸುಳೆಯಾಗಿದ್ದಳೆಂಬುದರಲ್ಲಿ ಯಾವ ಸಂದೇಹವೂ ಇಲ್ಲ (ಕಪಕ. ೫೨); ತನ್ನ ಭವಿತವ್ಯದ ಬಗ್ಗೆ ಏನೇನೂ ಅರಿಯದ ಹಾಲ ಹಸುಳೆ ಹಿಂದುಮುಂದಿನ ಯೋಚನೆಗೆ ಅವಕಾಶವಿಲ್ಲದೆ ಹಸೆಯನ್ನೇರುತ್ತಾಳೆ (ಅಲ್ಪಪಿ. ೪೨). **ಹಾಲ ಹೂರಣಗಡುಬು**=ಹಾಲಿನಲ್ಲಿ ನೆನೆಸಿ, ಸಿದ್ಧಮಾಡುವ ಒಂದು ಬಗೆಯ ಹೂರಣಗಡುಬು : ತಱುಪಿನೆಮ್ಮೆಯ ಹಾಲ ನಾಲ್ಕೊಂದೆನಿಸಿ ಕಾಸಿ ನೆಱೆ ಸಣ್ಣನಾದಕ್ಕಿಹಿಟ್ಟ ನಿನಿಸಂ ಹೊಯ್ದು . . . ಕರ್ಪುರಂ ಮೊದಲಾದ ನಱುಗುಪ ಪೊರೆಯೊತ್ತಿ ಹಾಲ [ಪಾಶಾಂ.ಲು] ಹೂರಣಗಡುಬುವೆಸರಾಂತು ಸವಿವಡೆದುದು (ಸೂಪಶಾ. ೧-೫೮). **ಹಾಲಿಗೆ ಸಕ್ಕರೆ ಬೆರಸು**=ಒಂದಕ್ಕೊಂದು ಪೂರಕವಾಗುವಂತೆ ಚೆನ್ನುಮಾಡು—ಸೊಗಸುಗೊಳಿಸು; ಈ ಎರಡು ಸಂಸಾರಗಳ ವಿವಾಹ ಬಂಧನ ಹಾಲಿಗೆ ಸಕ್ಕರೆ ಬೆರಸಿದಂತಾಗಿದೆ (ರೂಢಿ). **ಹಾಲಿಗೆ ಹುಳಿ ಹಿಂಡು**=ಕೆಡಿಸು; ಕೆಟ್ಟುದನ್ನು ಮಾಡು; ಹಾಳುಮಾಡು. **ಹಾಲಿನೊಡೆ**=ಹಾಲಿನಲ್ಲಿ ಬೇಯಿಸಿ ಮಾಡುವ ಒಂದು ಬಗೆಯ ವಡೆ : ತಿಳಿದುಪ್ಪದಿಂದ ಬೆಂದೊಡೆಯನೆಮ್ಮೆಯ ಹಾಲಿನೊಳಗೆ ಬೇಯಿಸೆ ಹಾಲಿನೊಡೆಯಾಯ್ತು (ಸೂಪಶಾ. ೧-೭೦). **ಹಾಲು ಕುಡಿದ ಹಾಗೆ ಆಗು**= ತೃಪ್ತಿಯಾಗು ; ತಣಿವನ್ನು ಹೊಂದು : ಈ ಸಂತೋಷದ ಸಂಗತಿಯನ್ನು ಕೇಳಿ ಹಾಲು ಕುಡಿದ ಹಾಗೆ ಆಯಿತು (ರೂಢಿ). **ಹಾಲುಕ್ಕಿಸು**=ಹೊಸ ಮನೆಯನ್ನು ಪ್ರವೇಶ ಮಾಡುವಾಗ (ಸಮೃದ್ಧಿಯ ಸಂಕೇತವಾಗಿ) ಹಾಲನ್ನು ಉಕ್ಕಿಸು : ಹೊಸಮನೆಗೆ ಹೋಗಿ ಹಾಲುಕ್ಕಿಸಿ ಬರಲು ಇಂದು ಒಳ್ಳೆಯ ಮುಹೂರ್ತವಿದೆ (ರೂಢಿ). **ಹಾಲುಜೇನು, ಹಾಲ್ಜೇನು**=ಜೇನು ಬೆರಸಿದ ಹಾಲು; ಜೇಂಬಾಲು : ರಸರಸವು ಹಾಲುಜೇನು (ಹೃದಸ. ೬೬-೨); ತನ್ನ ಒರಟುತುಟಿಗಳನ್ನು ಅವಳ ಹಾಲುಜೇನಿನಂತಹ ತುಟಿಗಳಿಗೆ ತಗುಲಿಸಿದ (ಹಾಡುಹು. ೫); ನಿನ್ನ ಬಾಯಲ್ಲಿ ಹಾಲ್ಜೇನು ಸುರಿಯಲಿ (ಶಾಂತಲಾ. ೬೯); ಹಾಲ್ಜೇನನ್ನೇ ತನ್ನ ಮೈಯಲ್ಲಿ ತುಂಬಿಟ್ಟುಕೊಂಡು ಬೆಳೆದಳು ಅವಳು (ಹೊಸಕ್ಷಿ. ೩). **ಹಾಲುತುಪ್ಪ**=ಸತ್ತವರ ಸಮಾಧಿಗೆ ಮೂರನೆಯ ದಿನ ಮಾಡುವ ಒಂದು ವಿಧಿ. **ಹಾಲು ತುಪ್ಪ ಅನ್ನು**=ಒಳ್ಳೆಯದಾಗಲೆಂದು ಹೇಳು ; ಶುಭವನ್ನು ಹಾರೈಸು : ಛೀ, ಹುಚ್ಚಿ ! ಹಾಲು ತುಪ್ಪ ಅನ್ನು (ರಾಕೂಟಿ. ೧೧೦). **ಹಾಲು ತುಪ್ಪದಲ್ಲಿ ಕೈತೊಳೆ**=ಸುಖ, ಸಮೃದ್ಧಿಯ ಜೀವನವನ್ನು ನಡೆಸು : ನನ್ನಗಳು ಹಾಲು ತುಪ್ಪದಲ್ಲಿ ಕೈ ತೊಳೀತಾಳೆ (ಪಡೆರಾ. II, ೧೦೬೦). **ಹಾಲು ತುಪ್ಪ ಬಿಡು**=ಸತ್ತವರ ಸಮಾಧಿಗೆ ಮೂರನೆಯ ದಿವಸ ಹಾಲು ಮತ್ತು ತುಪ್ಪವನ್ನು ಹಾಕು : ಸತ್ತ ದಿನ ದುಃಖದಲ್ಲಿ ಭಾಗಿಗಳಾಗಲು ಬಾರದಿದ್ದವರು . . . ಮೂರನೇ ದಿನ ಹಾಲೂ ತುಪ್ಪ ಬಿಡುವ ಹೊತ್ತಿಗೆ ಎಷ್ಟು ಕೆಲಸವಿದ್ದರೂ ಬಿಟ್ಟು ಬರುತ್ತಿದ್ದರು (ಹುಟ್ಟಿಹ. ೭೬). **ಹಾಲು ಬಿಡಿಸು**=ಶಿಶುವಿಗೆ ಸ್ತನ್ಯಪಾನದ ಅಭ್ಯಾಸವನ್ನು ಬಿಡಿಸು : ಹಾಲು ಬಿಡಿಸುವ ಹೊತ್ತಿಗೆ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ (ರೂಢಿ).

[ದೇ.ಪ ತಮಿ. ಮಲ. ಕೊಡ. ಕೋಲಾ. ಗಡಬ. ಗೊಂಡಿ. ಪಾಲ್; ತುಳು. ಪೇರ್ ; ತೆಲು. ಪಾಲು, ಪಾಡಿ ; ಕುಇ. ಪಾಲು, ಪಾಡು; ಕುವಿ. ಪಾಲು ; ಬ್ರಾಹುಈ. ಪಾಲ್ಹ್]

ಪಾಲ್₂, ಪಾಲು₂ (ನಾ). ೧. ಹಂಚಿದ ಭಾಗ ; ಹಿಸ್ಸೆ : ಮಿಂದು ಪೂಜ್ಯರ್ಗೆ ಮುಂ ಪಾಲಂ ನೀಡದೇನನುಮುಣ್ಣನುಂ ಅಧರ್ಮದಿಂ ಪಾಲ್ಗೆ ಗೋವಂಬೊಲ್ ಗೋವಂ ಕರೆಯಂ ದಿಟಂ (ಸೌಪಂದ. ೨-೦೯).

ಪಾಲು$_2$: ೧. ಅತಿಬಳನ ನಿಮಗೀವೆನಾತನ ಗತಿಯ ಪರಿ ವಿಪರೀತ ತಾನಾ ಸುತನ ನಿಲಿಸಲಿಕಾಱೆನೀವೆನು ನಿಮ್ಮ ಪಾಲಿಗೆಯು (ಸಂಭವ. ೨೩-೩೯); ಶ್ರೀಹರಿಹರದೇವರ ಅವಸರಸತ್ರಕ್ಕೆ ಸಮರ್ಪ್ಪಿಸಿದ್ದು ಎರಡು ಪಾಲು (ಇಂ. IV, ೩೫೯-೯ ; 1580) ; ಧನವನೊದವಿಸುವುದೊಕ್ಕಲಿಗೈದು ಪಾಲರಸಿಗೊಂದು ಪಾಲೀಕ್ರಮದೊಳು (ಪಂಪು. ೯-೦೦) ; ತಂನ ಪಾಲಿಗೆ ಬಂದ ಭೂಮಿಯ ವಳಗೆ ಕೊಟದು (ಎಳ. VII, ೨೮೫. ೨೯-೨೦ ; 1712); ಪಾಲಿಗೆ ಬಂದದ್ದು ಪಂಚಾಮೃತ (ಗಾರ). ೨. ಬಣ ; ಪಂಗಡ : 'ಪಾಲುಮುಖಂಡ' ಪರಾ.

ಪಾಲಾಗು—೧. ಭಾಗಕ್ಕೆ ಬರು ; ಪಾಲಿಗೆ ಸೇರು : ಪಲಬರ ಪಾಲಾದರಮಾ ಕಲಹಂಸೋತ್ತುಂಗಗಮನಭಾಮಿನಿಯರನುಜ್ವಲಗುಣ ರಾಜಿ ಪತಿವ್ರತಕಲಿತಾತುಳಕಾಂತ ಗೌರಿಗೆಣೆಯೆನಲಹುದೇ (ಹಂಪ್ಪಕ. ೨-೩೬); ಹಣ್ಣು ಹಂಪಲಗಳು . . . ಪುಣ್ಯವಂತರ ಪಾಲಾಗುವವು (ಪಟ್ಟಿಹೊ. ೧೩) ; ನಮ್ಮ ರಹಸ್ಯವು ಪ್ರತಿಕಕ್ಷಿಗಳ ಪಾಲಾಯಿತು (ರಾಜಿ. ೦೫). ೨. (ಆಸ್ತಿಯಲ್ಲಿ) ತನ್ನ ಭಾಗವನ್ನು ತೆಗೆದುಕೊಂಡು ಹೋಗು ; ಹಿಸ್ಸೆಯಾಗು ; ಭಾಗವಾಗು : ಒಡೆದು ಪಾಲಾಗಿದ್ದ ಕಾನೂರಿನ ಆಸ್ತಿ ಮತ್ತೆ ಒಂದಾಯಿತು (ಕಾನೂರು. ೬೩೦). **ಪಾಲು ಮಾಡು**—೧. ವಿಭಾಗಿಸು ; ಭಾಗಮಾಡು : ತಿರುಗಿ ಹಪ್ಪಳವನ್ನು ಪಾಲು ಮಾಡಿ . . . ತಿನ್ನಿಸಿಯೇ ಬಿಟ್ಟಳು (ಪುಸಮ. ೩೦). ೨. ಹಿಸ್ಸೆಮಾಡು : ಚರಸ್ವತ್ತುಗಳನ್ನು ಪಾಲು ಮಾಡುವಾಗಲೂ ಕೂಡ ಅನೇಕ ಉಪಾಯಗಳಿಂದ ತಮಗೆ ಹೆಚ್ಚು ಪಾಲು ಬರುವಂತೆ ಮಾಡಿಕೊಂಡರು (ಕಾನೂರು. ೩೯೯).

[ದೇ.II ತಮಿ. ಮಲ. ತುಳು. ಕೊಡ. ಪಾಲ್ ; ತೆಲು. ಪಾಲು ; ಹರ್ಜ. ಪೇಲ]

ಪಾಲ$_1$ 'ಪಾಲ್ಕೆ' ನೋ.

ಪಾಲ$_2$, ಪಾಳ$_2$, ಹಾಲ$_1$ (ನಾ). ೧. ನೊಸಲು; ಹಣೆ : ಫಕಾರಕ್ಕೆ-ಪಕಾರಂ-ಕಫ-ಕಪ . . . ಫಾಲ—ಪಾಲ (ಕಸುದ. ೨೫ ; ಪ್ರಯೋ). **ಪಾಳ$_2$** : ೧. "ಪಾಲ (ಪಾಳ)—ಫಾಲ=ಹಣೆ" (ಕರ್ಕಾಂ. ೨೬). ೨. ನೇಗಿಲಿನ ಗುಳ : "ಪಾಳ ; ಕುಸೀರ ;—ಈ ೨ ಕುಟು (ಹಲಾಯು. ೧೯-೨೨೦) ; ಫಾಲ, ಪಾಳ ; ಫಣಿ, ಪಣಿ (ಕಪ್ಪಾಸು. ೦೯೨ ಪ್ರಯೋ). **ಹಾಲ$_1$** : ೨. ಬೆಳಗಪ್ಪ ಜಾವದಲ್ಲಿ ಕೂರಿಗೆಯ ಹಾಲದ ಮೊಳಗೆಯಿಡುವುದು (ಅಟ್ಟಿಸು. ೯-೨೯ ಪ). [< ಸಂ. ಫಾಲ]

ಪಾಲ$_3$ (ನಾ). ೧. ರಕ್ಷಿಸುವವನು ; ಕಾಪಾಡುವವನು : ಕಾಯ ಬೇಕೆನ್ನ ಗೋಪಾಲ ಒಂದುಪಾಯವನಱಿಯೆನು ಭಕುತರ ಪಾಲ (ಪುರಂದ. ೨-೦೬೯ ಪಣ್ಣಿ). ೨. ಒಬ್ಬಾತನ ಹೆಸರು : ಬನ್ನೂರ್ಚಾವರಿಯ ಮಗ ಪಾಲ ಬಲ್ಲದ ತುಱುಗೊಳೊ ಕಾದಿ ತುಱುವನಿಕ್ಕಿಸಿ ಸ್ವರ್ಗ್ಗಿಯಾದ (ಎಳ. X, ಮುಳಪಾ. ೧೯-೯ ; ಸು. ೦೮೦). ೩. ಪೀಕದಾನಿ ; ಪಡಿಗ. ೪. ರಕ್ಷಣೆ : ಕಾಪಾಡುವುದು. [ಸಂ.]

ಪಾಲಂಕಿ$_1$ 'ಪಲ್ಲಂಗ' ನೋ.

ಪಾಲಂಕಿ$_2$ (ನಾ). ಒಂದು ಬಗೆಯ ಸುಗಂಧದ್ರವ್ಯ; ಕುಂದುರುಷ್ಕ.

[ಸಂ. ಪಾಲಂಕೀ]

ಪಾಲಕ (ನಾ). ೧. ಕಾಪಾಡುವ ವ್ಯಕ್ತಿ ; ರಕ್ಷಕ ; ಪೋಷಕ : "ಅಮ್ಮಿತಾ=ಪಾಲಕಂ" (ಕಾಶಕ್ಕ. ೯೦) ; ಆ ದಿನ ಶಾಲೆಗೆ ಇಬ್ಬರು ಪಾಲಕರು ಹಿರಿಯ ಗುರುಗಳನ್ನು ಕಾಣಲು ಬಂದಿದ್ದರು (ಕಪ್ಪು. ೯-೨೯) ; ಅವಳ ದೊಡ್ಡಮ್ಮನೇನೊ ಒಳ್ಳೆಯವಳಾಗಿದ್ದಳು. ಆದರೇನು ಅವಳು ಎಷ್ಟಾದರೂ ಪಾಲಕಳೇ ಹೊರತು ತಾಯಿಯಲ್ಲ (ಉಪಪಾ. ೦೯೩). ೨. ಆಳುವವನು; ರಾಜ. ೩. ರಕ್ಷಿಸುವುದು; ರಕ್ಷಣೆ. ೪. ಕುದುರೆ. ೫. ಅಶ್ವರಕ್ಷಕ. [ಸಂ.]

ಪಾಲಕಾಪ್ಯ (ನಾ). ೧. ಕರೇಣುಮಹರ್ಷಿಯ ಮಗ ; ಆನೆ, ಕುದುರೆ ಮುಂತಾದುವುಗಳ ಲಕ್ಷಣಗಳನ್ನು ತಿಳಿಸುವ ಗ್ರಂಥವನ್ನು ಬರೆದ ಒಬ್ಬ ಮುನಿ. ೨. ಈತನು ಬರೆದ ಗಜಾಶ್ವಾದಿ ಲಕ್ಷಣಗಳನ್ನೊಳಗೊಂಡ ಶಾಸ್ತ್ರಗ್ರಂಥ : ಇರ್ವರುಮನೋದಲಿಟ್ಟೊಡೇಟೆಂಟುವರುಷದೊಳಗೆ ವ್ಯಾಕರಣಂ . . . ಪಾಲಕಾಪ್ಯಂ ಚಾಣಕ್ಯಂ ವೈದ್ಯಂ ಮೊದಲಾಗೊಡೆಯ ಶಾಸ್ತ್ರಂಗಳನೆಲ್ಲಮನಿರ್ವರುಂ ಕಲ್ತು (ಪಡ್ಡಾರಾ. ೧೨೮-೨೨).

[ಸಂ.]

ಪಾಲಕಿ 'ಪಲ್ಲಂಗ' ನೋ.

ಪಾಲಕೆಱೆ 'ಪಾಲ್ಕೆಱೆ' ನೋ.

ಪಾಲಕ್ಕಿ (ನಾ). ಒಂದು ಬಗೆಯ ತರಕಾರಿ ಸೊಪ್ಪು : ನಮ್ಮ ಮನೆಯ ಹಿತ್ತಲಿನಲ್ಲಿ ಪಾಲಕ್ಕಿಯ ಸೊಪ್ಪು ಹೇರಳವಾಗಿ ಬೆಳೆದಿದೆ (ಕೂಡಿ).

[< ಸಂ. ಪಾಲಕ್ಯಾ. / ತೆಲು. ಪಾಲಾಕು. / ಹಿಂ. ಪಾಲಕ್]

ಪಾಲಕ್ಯ (ನಾ). ಒಂದು ಬಗೆಯ ತರಕಾರಿಸೊಪ್ಪು ; ಹರಿವೆ : "ಪಾಲಕ್ಯಮೊಂಬುದು ಹಱುಹೆ (ಹಲಾಯು. ೨೬-೦೦) : ಪಾಲಕ್ಯವು (ಪಾನಕನ ಪಲ್ಲೆ) ಗುರು ಮತ್ತು ಸಾರಕವಿದೆ (ಶಿಸ್ಕುಂಗ. ೧೩೬).

[ಸಂ. ಪಾಲಕ್ಯಾ]

ಪಾಲಕ್ಯೆ (ನಾ). = ಪಾಲಕ್ಯ. [ಸಂ. ಪಾಲಕ್ಯಾ]

ಪಾಲಖಿ 'ಪಲ್ಲಂಗ' ನೋ.

ಪಾಲಘ್ನ (ನಾ). ಅಣಬೆ : ನಾಯಿಕೊಡೆ : "ಛತ್ರಾ, ಅತಿಛತ್ರಃ, ಪಾಲಘ್ನಃ — ೩ ಕೊಡೆಹುಲ್ಲಿನ ಹೆಸರುಗಳು. ಛತ್ರಾಕಾರವಾದ ಹುಲ್ಲು, ಛತ್ರಾತಿಛತ್ರವೆಂದು ಏಕಪದವಾಗಿ ಕೆಲವರು ಹೇಳಿದರು" (ಸಿದ್ಧಾಂತಿ. ೧೫೦).

[ಸಂ.]

ಪಾಲಡಕೆ, ಹಾಲಡಕೆ (ನಾ). ಹಸಿಯ ಅಡಕೆ : ಮದನವೇದನೆಯ ವಿನ್ನಾಣಂಗಳಪ್ಪ ಪಸುರೆಸೆವ ಪಾಲಡ[ಪಾಣಾಂ. ಡಿ]ಕೆಯ ಗೊಂಚಲುಮಂ . . . ಕತ್ತುರಿಯ ಕಂಪಿನಿಂ ಸೊಂಪಂ ತಳೆದ ಮಲಯಜವಿಲೇಪನಮುಮನರಸಂಗೆ ತೋಱೆ (ಕಾರಂಕಾ. ೧೮೮). **ಹಾಲಡಕೆ** : ಹಾಲಡಕೆ ಬಹಳ ಮತ್ತು ಬರುವಂತೆ ಮಾಡುತ್ತದೆ (ಕೂಡಿ). [ಪಾಲ್$_1$ + ಅಡಕೆ$_1$]

ಪಾಲನ (ಗು). ೧. ನಡೆಸುವ ; ಪಾಲಿಸುವ. ೨. ಕಾಪಾಡುವ ; ರಕ್ಷಿಸುವ. (ನಾ). ೩. ನಡೆಸುವುದು ; ಪಾಲಿಸುವುದು. ೪. ಕಾಪಾಡುವುದು ; ರಕ್ಷಣೆ. ೫. ಆಗ ತಾನೇ ಕರು ಹಾಕಿದ ಹಸುವಿನ ಹಾಲು. [ಸಂ.]

ಪಾಲನೆ (ನಾ). ೧. ಕಾಪಾಡುವುದು ; ರಕ್ಷಿಸುವುದು ; ರಕ್ಷಣೆ : ನಿರ್ವ್ಯಸನದೊಳು ಪಾಲನೆಯೊಳು ಧನದೊಳು . . . ಭೋಗಮಕ್ಕು (ಪುಂಗರಾ. ೧೫೦-೫೦) ; ಪಾಲನೆಯಿಲ್ಲದಿದ್ದರೆ ಲಾಲನೆಗೆ ಕಡಿಮೆಯೆ ? (ಗಾರ); ಮಕ್ಕಳ ಪಾಲನೆಯ ವಿಷಯದಲ್ಲಿ ತಾಯಿಯಾದವಳು ಹೆಚ್ಚು ಗಮನ ಕೊಡಬೇಕು (ಕೂಡಿ). ೨. ಸಾಕುವುದು : ಈಗಿನ ಕಾಲದಲ್ಲಿ ಸೀಮೆದನಗಳನ್ನು ಪಾಲನೆ ಮಾಡುವುದು ತುಂಬಾ ದುಬಾರಿ (ಕೂಡಿ). ೩. ನಡೆಸುವುದು ; ಪಾಲಿಸುವುದು : ಯಾವುದೇ ಕೆಲಸದಲ್ಲಿ ನಿಯಮದ ಪಾಲನೆ ತುಂಬಾ ಮುಖ್ಯ (ಕೂಡಿ). [ಸಂ. ಪಾಲನ]

ಪಾಲಶರ್ಮ (ನಾ). ಒಬ್ಬಾತನ ಹೆಸರು : ಕಾಶ್ಯಾ(ಶ್ಯ) ಪಗೋತ್ರ ಪಾಲಶರ್ಮ್ಮಣಚತಾರಿಅಂಶಃ (ಇಂ. VII, ೧೮೮-೯೦ ; 668).

[ಪಾಲ್$_3$+ಶರ್ಮ]

ಪಾಲಾ (ನಾ). ಜೊತೆ ; ಸಂಗ ; ಸಹವಾಸ : ನೀನೂ ಅವನನ್ನು ಏರಿಗಟ್ಟಿಕೊಂಡು ಬರುವಿಯಾ ? ನಿನ್ನ ಪಾಲಾನೂ ಪೂ (ಸಿರಾಪ. ೮೯).

ಪಾಲಾ ಪೂ — ಜೊತೆ ಬಿಡುವುದು ; ಸಂಗ ಬಿಡುವುದು ; ಠೂ : ರಾಮನೂ 'ಪಾಲಾ ಪೂ' ಎಂದನು (ಸಿರಾಪ. ೮೯) ; ನಿನ್ನ 'ಪಾಲಾ

ಪೂ !!' ಎಂದು ಸೆಟಕೊಂಡು ಅತ್ತ ದೂರ ಹೋಗಿ ಒಂದು ಕಂಟಿಯ ಕಡೆಗೆ ಮೋರೆ ಮಾಡಿ ನಿಂತು ಅಳಹತ್ತಿದಳು (ರಾಸಹು. ೧೪). ಪಾಲಾ ಪೂ ಬಿಡು = ಜೊತೆ ಬಿಡು ; ಠೂ ಬಿಡು ; ಸಂಗ ಬಿಡು : ಮೊದಲಿನಿಂದಲೂ ಇಬ್ಬರೂ ಕೂಡೇ ಇರುತ್ತಿದ್ದೆವಲ್ಲ, ನೀನೇ ನನ್ನ ಪಾಲಾ ಪೂ ಬಿಟ್ಟೆ (ಕಾಣಿಕ. ೨೩). ಪಾಲಾ ಬಿಡು = ಪಾಲಾಪೂ ಬಿಡು : ಸಾಯಂಕಾಲವು ಗೆಳೆಯರು ಪಾಲಾ ಬಿಟ್ಟದ್ದರಿಂದ ಒಬ್ಬಂಟಿಗನಾಗಿ ಕೂತಿರುವ ಹುಡುಗನಂತೆ . . . ತೋರುತ್ತಿತ್ತು (ಕಿಶಾಶ. ೯೨) ; ನೀನು ರಂಗನ ಪಾಲಾ ಬಿಡು, ಅವನ ಸಂಗವನ್ನು ಮಾಡಬೇಡ (ರಂಗರೋ. ೭೪). ಪಾಲಾ ಹಿಡಿ = ಜೊತೆ ಸೇರು ; ಸಂಗ ಕಟ್ಟು : ತಾನಾಗಿ ಪಾಲಾ ಬಿಟ್ಟು ತಾನಾಗಿ ಪಾಲಾ ಹಿಡಿದಾನೆಂದು ಬಸವಂತನ ಕನಸುಮನಸಿನಲ್ಲಿಯೂ ಅನಿಸಿದ್ದಿಲ್ಲ(ಕಿಶಾಶ.೯೮).

[← ಮರಾ. ಪಾಲವ = ಸಂಬಂಧ]

ಪಾಲಾಶ (ಗು). ೧. ಮುತ್ತುಗದ ಮರಕ್ಕೆ ಸಂಬಂಧಿಸಿದ ; ಪಲಾಶವೃಕ್ಷದ. (ನಾ). ೨. ಮುತ್ತುಗದ ಮರ ; ಪಲಾಶವೃಕ್ಷ : ನಂದುವ ಕಿಚ್ಚುಮನಸ್ತಮಯಂದೋಱುವ ಚಂದ್ರಸೂರ್ಯರೆಂಬರ ನಂಬದೆ ಸುಂದರವಿಧಿ ಕೆಂಬೆಳಗಂ ತಂದಿಟ್ಟವೊಲೆಯ್ದೆ ತೋಱಿತಾ ಪಾಲಾಶಂ (ಮಲ್ಲಿಕಾ. ೩-೩೬೬); ಪಾಲಾಶ ಕಲಧೌತಪುಷ್ಪಂಗಳುಂ ತುಳಸಿ ಮಾಲೂರ ಪತ್ರೆಯಿಾ ನಾಲ್ಕು ಲಿಂಗಕ್ಕೆ ಪ್ರಕ್ಷಾಲಿಸಿ ಪುನಃಪುನಃ ಧರಿಸಬೇಕಾದುದುಂ ನಿರ್ಮಾಲ್ಯವಲ್ಲ ಸತತಂ (ಗುರುಕಾ. ೬-೧೭). ೩. ಮುತ್ತುಗದ ಮರದಿಂದ ಮಾಡಿದುದು. ೪. ಹಸುರುಬಣ್ಣ ; ಮರಕತವರ್ಣ : "ಶ್ಯಾಮಂ, ಶ್ಯಾಮಳಂ, ರಾಮಂ, ಪಾಲಾಶಂ, ಹರಿತಂ, ಹರಿತ್—ಈ ೬ ಪ(ಹ)ಸುರ್" (ಹಲಾಯು. ೦೨೦-೪೯). [ಸಂ.]

ಪಾಲಾಶದಂಡ (ನಾ). ಮುತ್ತುಗದ ಕೋಲು : ಕೈಗಳವಡುವ ತತ್ ಪಾಲಾಶದಂಡವೆ ವಿಷ್ಣುಕಂಕಾಳ ಇಡುವ ಮೇಧಾವಿಯೆ ಭಸಿತವು (ರಸಪು. ೩-೫೪). [ಪಾಲಾಶ + ದಂಡ]

ಪಾಲಾಸ (ನಾ). ಮುತ್ತುಗದ ಮರ ; ಪಲಾಶವೃಕ್ಷ : ಪಾಲಾಸ ಬದಿರೆಕ ಮಾಮರ ತಳಿರ್ತೆಕ್ಕೆ ಗೋಳಿಯಾಲವು (ರೇಪಾಂಪು. ೬-೨೬೮).

[< ಪ್ರಾ. ಪಾಲಾಸ./ಸಂ. ಪಾಲಾಶ]

ಪಾಲಿ₁ (ನಾ). ಕಾಪಾಡುವವನು ; ರಕ್ಷಿಸುವವನು : ಸೂರ್ಯಲೋಚನ ಶರಣ ಪಾಲಿ ನಗಧರ್ಮ ಸೃಷ್ಟಿಸ್ಥಿತಿಪ್ರಹರಣವಿನೋದಿತಂ . . . ವಿರೂಪಾಕ್ಷ ನನವರತ ನಿಮ್ಮ ಸಲಹುಗೆಯೆನುತೆ ಪರಕೆಯಿತ್ತಂ (ರಾಘಶ. ೩-೧೨).

[ಸಂ. ಪಾಲಿನ್]

ಪಾಲಿ₂, ಪಾಳಿ₃ (ನಾ). ೧. ಸಾಲು ; ಪಂಕ್ತಿ : ಬೆಳದಿಂಗಳಿನಲ್ಲಿ ಎಲ್ಲವೂ ಸ್ಪಷ್ಟವಾಗಿ ಕಾಣದಿದ್ದರೂ ಸುಗಂದದಿಂದ ಬಕುಳಪುಷ್ಪವೆಲ್ಲಿದೆ, ಸಿಂಧುವಾರದ ಪಾಲಿ ಎಲ್ಲಿದೆ, ಸಂಪಿಗೆ ಎಲ್ಲಿದೆಯೆಂಬುದನ್ನರಿಯಬಹುದಾಗಿತ್ತು (ಶಾಖಿ. ೩೬) ; ರಂಗಾದಲ್ಲೀ ಪಾಲೀ ತಿರುಗೋನೇ ಸೀಬೀಯ ರಂಗಾ ನಮ್ಮೇಲೇ ದಯವಾಗೋ (ಹುಟ್ಟಿಹ. ೩೬). ೨. ಗುಂಪು ; ಸಮೂಹ. ೩. ಭಿತ್ತಿ ; ಗೋಡೆ : "(ಎರಡು ಭಾಗಗಳನ್ನು ಪ್ರತ್ಯೇಕಿಸುವ) ತಡಕೆ, ಪಾಲಿ; ಅಂತರಪಟ" (Dissepiment. ಇಂಕಪಿ). ೪. ಸೇತುವೆ; ಸಂಕ: "ಆಳಿ ಪಾಲಿ[ಪಾಕಾಂ. ೪]ಯೆನಲೇರಿಯಕ್ಕುಂ" (ಮಂಗರಾ. ೧೨೩-೧೪). ೫. ಸುತ್ತಲೂ ಬಿಗಿಯುವುದು,—ಕಟ್ಟುವುದು. ೬. ಆಸ್ಪದ ; ಅವಕಾಶ. ೭. ಜಾಗ ; ಪ್ರದೇಶ. ೮. ದಿಕ್ಕು. ೯. ಪಾಲು ; ಭಾಗ. ೧೦. ಕತ್ತಿಯ ಹಿಡಿಕೆ : "ಪಾಲಿ[ಪಾಕಾಂ. ೪] ಪರುಜು ವೆನಲು ಮೋಹಳಮಕ್ಕು" (ಮಂಗರಾ. ೮೮-೩೬). ೧೧. ಆದಿ ; ಪೂರ್ವ. ೧೨. ಕಿವಿ. ೧೩. ಹಾಲೆ. ೧೪. ನಿತಂಬ. ೧೫. ದೇಹ ; ಶರೀರ. ೧೬. ಗುರುತು ; ಚಿಹ್ನೆ. ೧೭. ಬಾವುಟ. ೧೮. ದಾರ. ೧೯. ಬಳ್ಳಿ. ೨೦. ಬಾಣ ; ಸರಳು. ೨೧. ಬೆಂಕಿ. ೨೨. ವೇದವನ್ನು ಹೇಳುವ ಒಂದು ರೀತಿ ; ಸಂಹಿತಾಪಾಠ. ೨೩. ನಾಚಿಕೆ ; ಲಜ್ಜೆ. ೨೪. ತೇವ ; ಹಸಿ. ೨೫. ಹೇನು. "ಕ್ಷೇತ್ರದೊಳಾದಿಯೋಳ್ ಶರದೊಳಾರ್ದ್ರವದೋಳ್ ಕೃತಿಭೇದ ಭಿತ್ತಿಯೋಳ್ ಶ್ರೋತ್ರದೊಳಗ್ನಿಯೋಳ್ ಪರಜಿನೋಳ್ ಪರಮೇಶನೊಳುಂ ವಿಬಂಧದೋಳ್ ಗಾತ್ರದೊಳಾಸೆಯೋಳ್ ಧ್ವಜದೊಳಾಸ್ಪದದೋಳ್ ಲತೆಯೋಳ್ ವಿಭಾಗದೋಳ್ ಸೂತ್ರದೊಳ್ಳೆದೆ ಲಜ್ಜೆಯೋಳ್ ಸಂಚಯದೋಳ್ ಸಲೆ ಪಾಲಿ [ಪಾಕಾಂ. ೪] ವಾಚಕಂ" (ಪಾನಾರ.೩೨). ಪಾಳಿ₅: ೧. ಸೂಳೆ ನಿಂಬೆಗೆ ಕರುಣಾಳು ದೇವರ ದೇವ ಪಾಳಿಯಿಂ ಪೊಮ್ಮಳೆಗಱೆದನೇಳುದಿವಸ (ಶೃರಸೂ. ೧, ೧೪೭). ೨. ಚಿತ್ರಾಂಬುದಪಾಳೀಜಾಳದೊಳ್ಪೊಯ್ದೆಳವೆಱೆಯಗೆಯಲ್ತು (ಅನಂಪು. ೨-೩೪) : ಗರುಡರ ಗಣಂ ಕಿನ್ನರರ ಕುಲಂ ವಿದ್ಯಾಧರರ ಪಾಳಿ ಸಿದ್ಧರ ಸಮೂಹ . . . ದಿಕ್ಪಾಲಕರು ಮುಖ್ಯರಾದ ಪರಿಪರಿಯ ನಿರ್ಜರರಿರ್ದರೀಶನೊಡ್ಡೋಲಗದೊಳು (ಸಿದ್ಧೇಪು. ೧-೩೯) ; ಚೂಳಿಯೊಳ್ ಮೈದೋಱಿದಂ ಮಂದ ಮಾರುತಂ ಪಾಳಿಯಿಂ ನಡೆಸಿದಂ ಸೇನೆಯಂ ಸೇನಾನಿ (ಪಂಪು. ೩೫-೦೨). ೪. "ಆಳೀ, ಪಾಳೀ—ಈ ೨ ಏರಿ" (ಹಲಾಯು. ೧೦೦-೫೪); ಕಳಮಕಾನನದ ಮುಂದೆ ಮಂದೈಸಿದ ಜಾದಿಯ ಮೆಳೆಗಳ ಬಳಸಿನಿಂ ಪೊಳೆವ ಪಾಳಿಯಂ ಮೆಟ್ಟಿ ನಿಂದು (ಲೀಲಾವ. ೫-೬೮ ವ). ೭. ಪಾಂಡುಕುಮಾರರಟವಿಯ ಪಾಳಿಯಲಿ ಪರುಠವಿಸಿದರು ಪದಯುಗಪರಿಭ್ರಮವ (ಕುಷ್ಠಾಲ. ೪-೧); ನದಿಯಿಂ ನಂದನದಿಂ ಲತಾಪ್ರತತಿಯಿಂ ಪುಷ್ಪಾಳಿಯಿಂ ಪಾಳಿಯಿಂ . . . ತದಿಳಾಮಂಡಳವೊಪ್ಪುಗುಂ (ರಾಜಶೇ. ೨-೨೮). ೧೨. ಪಾಳಿವರ್ಜಿತ ಪತಿವಿಭೂಷ ಸದ್ಭಕ್ತದುರಿತಾಳಿಪರ್ಜನ್ಯಜಂಝಾವಾತ ಗಿರಿಜಾಲೋಲ ಪಾಲಿಸುಗೆ ರಾಮೇಶ್ವರಾ (ನವಮೋ. ೫-೧). ೧೭. ಮಕರಪಾಳಿವಪು ದುರ್ಗದಹ . . . ಭಾಸುರಚರಿತ್ರಾ (ನವಮೋ. ೨೫-೧೩). ೧೯. ವಿಧಿ ಮಾಯಾಪಾಶಯುತಪಾಳಿವಿಭೇದಕಲವಿತ್ರ ಭವಸಾಗರಬಹಿತ್ರ (ನವಮೋ. ೨೫-೦೩). ೨೨. ಋಗ್ಯಜುಸ್ಸಾಮಾಥರ್ವಣವೇದಂಗಳು ಸ್ವರವರ್ಣಭೇದದಿಂದಂ ಮಂತ್ರಸಹಿತ ಪಾಳಿಪದಕ್ರಮಜಟೆಭೇದದಿಂದಂ ಶತಸೂತ್ರಂ ಮೊದಲಾಗೆಲ್ಲಮಂ ಯಥಾಕ್ರಮದಿಂದುಚ್ಚರಿಸಿ (ವಡ್ಡಾರಾ. ೨೩-೨೫) ; ಲೋಲಹರಿ ಮತ್ಸ್ಯಾವತಾರದಿ ತಮನನಱೆಯಟ್ಟಿ ಬೀಳಲಪ್ಪಳಿಸಿದನುವಾಲದಿ ಘೋಳೆನುತ ತಮ ಬೀಳೆ ವೇದದ ಪಾಳಿಗಳು ಕ್ರಮದಿಂದ ಹರಿಯನು ಹೊಗಳುತಿದಿರಾಗಿ (ಸಂಭವ. ೪-೨೯); ಉದಾತ್ತ ಅನುದಾತ್ತ ಸ್ವರಿತ ಪ್ರಚಯ ಪಾಳಿ ಪದ ಕ್ರಮ ಜಟೆ ಚರ್ಚೆಯೆಂಬ ಋಗ್ಯಜುಸ್ಸಾಮಾಭಿಧಾನಮುಳ್ಳ ವೇದಶಾಸ್ತ್ರಂಗಳಂ ವಚಿಸುವೆವು (ದಶಾವ. ೨-೦೩ ವ). ೨೩. ಪಾಱಿತು ಪಾಳಿ ಮೈದೋಱಿತು ಮದನಾಗ್ನಿ ಜಾಱಿತು ಜಾಣ್ಮೆ (ಕುರಾಸಾಂ. ೨೨-೯); ಜಾಱಿತು ಜಾಣ್ಮೆ ಬಿಂಕ ಮಱೆಗೊಂಕಿತು ಬಿನ್ನನೆಯಾಯ್ತು ಬಿನ್ನಣಂ ಪಾಱಿತು ಪಾಳಿ (ಪಕಪಿ. ೬-೨೦೯). "ಕ್ಷೇತ್ರಶರಪೂರ್ವದಿಶಹರಗಾತ್ರಾನಲ ಶ್ರುತಿ ವಿಭಾಗ ಧ್ವಜ ಲತೆ ಕಿವಿ ಬಹುಸೂತ್ರಾಯುಧಬಂಧಪ್ರಿಯ ಚಿತ್ರಾಸ್ಪದ ಭೀತಿ ಮಾನವಿಂಶತಿ ಪಾಳೀ" (ನಾನಾಕಂ. ೭೨). ೨೬. ತುದಿ ; ಅಂಚು : ಮೇಲೆ ನಿಂತರು ಮಡದೆಡೆಗೆ ನಾಲ್ವೆರಳನುಕೂಲ ಗೇಣಾಗಲುಂ ಗುಟದ ಪಾಳಿಗೆ ಋಜುಕೂಲಮಳವಡಲಂಗದೊಳಾಲಿಗಳರೆಮುಗುಳ್ದಿರಲು (ವರ್ಧಪ. ೦೧-೬೯). ೨೭. ಸರದಿ ; ಬಾರಿ. ಇಂದುಮತಿಗೆ ಐದನೆಯ ವಾರ್ಡಿನಲ್ಲಿ ಸಹಾಯ ಮಾಡುವ ಪಾಳಿ ಬಂದಿತ್ತು (ಅಪನಾ. ೧೬೦); ಅಂಬೆಯ ಭಕ್ತರು ಪಾಳಿಯಿಂದ ಆ ವೆಚ್ಚವನ್ನು ಒದಗಿಸುತ್ತಿದ್ದರು (ಶರಪ. ೨೮೬) ; ನಾಲ್ಕುಜನ ಸಿಪಾಯಿಗಳು ದಿವಸಾಗಲೂ ಪಾಳಿಯ ಪ್ರಕಾರ ಮನೆ ಕಾಯುತ್ತಿದ್ದರು (ಹಳ್ಳಿಹಾ. ೦೬). ೨೮. ಬೀಸುವ ಕಲ್ಲಿನ ಒಂದೊಂದು ಭಾಗ,—ಹೋಳು : ಈ ಬೀಸುವ ಕೆಲ್ಲು ಮಾತ್ರ ಪ್ರಕೃತಿ ಪುರುಷರಂತೆ ಅಚಲವಾದುದನ್ನು ನೋಡಿ ಬಾಬೂನಿಗೆ ಅಚ್ಚರಿಯಾಯಿತು. ಆ ಕಲ್ಲು, ಆ ಗೂಟ, ಆ ಮೊರ, ಆ ಬೀಸುವ ಪಾಳಿಗಳು, ಪಾಳಿಗಳೊಳಗಿಂದ ಹೊರಟ

ತುಭ್ರನಾಮಾಂಕಿತವಾದ ಆ ಹಿಟ್ಟು ಎಲ್ಲವೂ ಬಾಬೂನಿಗೆ ಆತ್ಮೀಯವಾಗಿದ್ದವು (ರಕ್ಷರ್ಯ. ೦೧೩).

ಪಾಳಿ ಹಚ್ಚು = ಸಾಲಾಗಿ ನಿಂತು ಸರದಿಗಾಗಿ ಕಾಯುತ್ತಿರು : ಒಂದು ಬಚ್ಚಲಾ, ಐವತ್ತುಮಂದಿ ಪಾಳೀ ಹಚ್ಚಾರ ಮೈ ತೊಳಕೋಳಿಕ್ಕೆ (ಸ್ವಾಪ. ೦೬) ; ನಾವು ಸಲೂನಿನಲ್ಲಿ ಪಾಳಿ ಹಚ್ಚಿ ಕುಳಿತುಕೊಳ್ಳುತ್ತೇವೆ (ರೇಳನ್ಯ. ೭೦).

[ಸಂ.]

ಪಾಲಿ₃, ಪಾಳಿ₆ (ನಾ). (ಬುದ್ಧನ ಉಪದೇಶಗಳ ಮೂಲಭಾಗವನ್ನು ಹೊಂದಿರುವ) ಪ್ರಾಕೃತಭಾಷೆಗಳಲ್ಲಿ ಒಂದು ; ಈ ಭಾಷೆಯ ಹೆಸರನ್ನು ತ್ರಿಪಿಟಕಗಳ ಟೀಕೆಗಳಲ್ಲಿ ಮಾತ್ರ ಬಳಸಲಾಗಿದೆ : ಪಾಲಿ ಸಾಹಿತ್ಯದ ಸಾಲಿನಲ್ಲಿ ಪ್ರಾಚೀನತೆಯ ಅಗ್ರಸ್ಥಾನವು 'ಬುದ್ಧವಚನ'ಕ್ಕೇ ಮೀಸಲಾಗಿರುವುದು (ಬುದ್ಧಕ. ೩ ಪ್ರಕೀಕ). ಪಾಳಿ₆ : ಈ ಬಹುವಚನ ಪ್ರತ್ಯಯ ಪ್ರಾಕೃತ—ಪಾಳಿಭಾಷೆಗಳಲ್ಲಿ . . . ಸೇರಿ ಹೋಗಿದೆ (ಪ್ರಾಪಿಪಿ. ೧೫೨).

ಪಾಲಿಂಧಿ (ನಾ). ಒಂದು ಬಗೆಯ ಸಸ್ಯ ; ಕರಿಯ ತಿಗಡೆ.

[ಸಂ. ಪಾಲಿಂಧೀ]

ಪಾಲಿಕೆ₁ 'ಪಲ್ಲಂಗ' ನೋ.

ಪಾಲಿಕೆ₂ (ನಾ). ೧. ಕಾಪಾಡುವವಳು ; ಕಾಯುವವಳು : ಪೊಣ್ಮುವಾ ಪುಳಕಂಗಳೆ ಸಸಿಗಳಾಗೆ ರತಿಸುಖಮೆಂಬ ಫಲಮಂ ವಿಲಾಸಿಯುವಜನಕಿತ್ತು ಮನ್ಮಥನ ಕಳಮವನಮೋಯೆನಲ್ ಕಳಮವನದೊಳ್ ಕಳಮವನಪಾಲಿಕೆಯ ರೊಪ್ಪುಗುಂ (ಪರ್ಶಕಾ. ೬-೧೭). ೨. ಮದುವೆಯಲ್ಲಿ ಬ್ರಹ್ಮ, ಇಂದ್ರ, ಯಮ, ವರುಣ ಮತ್ತು ಸೋಮದೇವತೆಗಳಿಗೆ ಅರ್ಪಿಸಲು, ದ್ವಿದಳ ಧಾನ್ಯಗಳನ್ನು ತುಂಬಿಡುವ ಐದು ಮಣ್ಣಿನ ಪಾತ್ರೆಗಳು : (ಕ). ೩. ಮಣ್ಣಿನ ಪಾತ್ರೆ : ಪ್ರತ್ಯೇಕಂ—ಬೇರೆಬೇರೆ, ಪಾಲಿಕಾದೀನಾಂ-ಬಯಸಿಕೆ, ಶ್ರಾವೆ, ಮೊದಲಾದವರ ಸಂಖ್ಯೆ, ದಶ-ಹತ್ತು (ಪ್ರತಿಷ್ಠಾ. ೪-೦೭).

[ಸಂ. ಪಾಲಿಕಾ]

ಪಾಲಿಡಿ (ಕ್ರಿ). ಹಾಲು ತುಂಬು : ಪೂಗೊಯ್ದು ಸರಸಿಜಾನನೆ ಪೋಗಲೀ ನೆರೆ ಮುಗಿದುದಿಲ್ಲ ಬಂಧನಕೋಶು ಕೈಗಳಿನುಡಿದೀ ತಳಿರ್ಗಳ ಪೂಗಂ ಪಾಲಿಡಿದು ನಾಡೆ ಕಾಣಿಪುದಿನ್ನುಂ (ಶಾಕುಂತ. ೩೩-೫೭). [ಪಾಲ್₁+ಇಡಿ₂]

ಪಾಲಿತ (ಗು). ರಕ್ಷಿಸಲ್ಪಟ್ಟ ; ಕಾಪಾಡಲ್ಪಟ್ಟ : ಲೋಲಕಾರುಣ್ಯಾತ್ಮ ಭಲರೇ ಪಾಲಿತಾರ್ಥನಿಕಾಯ ಭಲರೇ (ಐಸಪು. ೩೦-೨೫) ; ಅಭಿಮನ್ಯುವನ್ನು . . . ದ್ರೋಣಾಚಾರ್ಯನಿಂದ ಪಾಲಿತವಾದ ವಾಹಿನಿಯನ್ನು ಪ್ರವೇಶ ಮಾಡೆಂದು ಹೇಳಿ, ಕೊಲ್ಲಿಸಿದೆನು (ಭೀಷ್ಮಪ. ೨೨೮). [ಸಂ.]

ಪಾಲಿತಪುತ್ರಿ (ನಾ). ಸಾಕುಮಗಳು : ನನ್ನ ಪಾಲಿತಪುತ್ರಿಯಾದ ನಿನ್ನ ಹಿತರಕ್ಷಣೆ ನನಗೆ ಸೇರಿದೆ (ರಾಕ್ಷೋದ. ೦೯೯). [ಪಾಲಿತ + ಪುತ್ರಿ₂]

ಪಾಲಿಶ್ 'ಪಾಲಿಷ್' ನೋ.

ಪಾಲಿಷ್, ಪಾಲಿಶ್ (ನಾ). ೧. ಉಜ್ಜುವುದರಿಂದ ಉಂಟಾಗುವ ಮೆರುಗು,-ಹೊಳಪು : ಮನುಷ್ಯರಲ್ಲದೆ ಹಕ್ಕಿಗಳಿಗೂ ಈ ಪಾಲಿಷ್ ಮಾಡಿದ ಅಕ್ಕಿಯನ್ನು ಕೊಟ್ಟರೆ ಬೆರಿಬೆರಿಯ ಮಾದರಿಯ ರೋಗ ಬರುತ್ತದೆ (ಗೃಹವಿ. ೩೩) ; ಅಕ್ಕಿಯನ್ನು ವಿಶೇಷವಾಗಿ ಪಾಲಿಷ್ ಮಾಡಿದರೆ ಅದರಲ್ಲಿರುವ ತವುಡು ಮತ್ತು ಭ್ರೂಣ ಹೊರಟುಹೋಗಿ . . . ಜೀವಾತುಗಳ ಅಂಶಗಳು ನಷ್ಟವಾಗುವುವು (ಅಡುಸೌ. ೭೪). ೨. ಮೇಲ್ಮೈಗೆ ಹೊಳಪು ಕೊಡಲು ಉಪಯೋಗಿಸುವ ಒಂದು ಬಗೆಯ ಮೆರುಗು ಪದಾರ್ಥ ಮತ್ತು ಅದರಿಂದಾದ ಹೊಳಪು : ಜವಾನನು ಬೂಟ್ಸುಗಳಿಗೆ ಪಾಲಿಷ್ ಕೊಟ್ಟು ಮೆರುಗು ಬರುವಂತೆ ಮಾಡಿಟ್ಟಿದ್ದನು (ರಂಗಳ. ೨೨). ಪಾಲಿಶ್ : ೨. ಪಾಲಿಶ್ ಮಾಡಿಸೋಣವೇ ? (ಪೋಳಪೆ. ೬೯).

[← ಇಂ. Polish]

ಪಾಲಿಸಿ (ನಾ). ವಿಮೆಯ ಕರಾರುಪತ್ರ : ನನ್ನ ಸ್ನೇಹಿತನು ಬಹು ಒತ್ತಾಯಪಡಿಸಿದುದರಿಂದ . . . ಇನ್ನೊಂದು ಕಂಪನಿಯಲ್ಲಿ ಒಂದು ಪಾಲಿಸಿಯನ್ನೂ ತೆಗೆದುಕೊಂಡೆನು (ಪಾಡಿಗೇ. ೦೦೦). [← ಇಂ. Policy]

ಪಾಲಿಸು, ಪಾಳಿಸು₃ (ಕ್ರಿ). ೧. ಕಾಪಾಡು; ಸಲಹು: ವೈರಿಗಳ್ ತಳರ್ದಪರೆಂತು ತನ್ನ ಬಲಮಿಲ್ಲದೆ ತಾಳ್ದುವೆನೊಪ್ಪುಗೊಳ್ಗೆ ತನ್ನಳಿಯನನೆಯ್ದೆ ಪಾಲಿಸುಗೆ ಬಂದಿದನೀಗಳನಾಥಯೂಥಮಂ (ಅಧಿಪು. ೪-೮೪) ; ಕರುಣಿಸು ದೈವಮೆ ಪಾಲಿಸು ಹರಾದ್ರಿ . . . ವನದೇವಿಯರಿರಾ ನೆರೆದೆಲ್ಲರುಮೆನಗೆ ಪುರುಷಭಿಕ್ಷಮನಿಕ್ಕಿಂ (ಕಾದಂಪೂ. ೯೨೫) ; ಪ್ರಜೆಯಂ ಪಾಲಿಸಬಲ್ಲೊಡಾತ ನರಸಂ (ಸೋಮೇಶ. ೯). ೨. ಆಡಳಿತ ನಡೆಸು ; ಆಳು : ತನ್ನ ವಿಕ್ರಮಮೆ ತನ್ನ ನೆಗಚ್ಚೆಯೆ ತನ್ನ ಮಾತೆ ತಾನೆಸೆವ ಜಗತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ (ಪಂಪಭಾ. ೦೪-೩೯) ; ಸಜ್ಜನನುತನಾಗಿ ಪಾಲಿಸು ಮಹಾವನಿಯಂ ರವಿಚಂದ್ರರುಳ್ವಿನಂ (ರರ್ಮಾಪ್ಯು. ೦೩-೦೬೯) ; ಚಲದಂಕಕಂಠೀರವನರಸೇಂದ್ರ ಭೂತಳವ ಪಾಲಿಸುತಿರರ್ತಿಯಲಿ (ಕಂಪಡಿ. ೬-೨). ೩. ನೆರವೇರಿಸು ; ನಡೆಸು ; ಈಡೇರಿಸು : ದುಷ್ಟರಂ ತಿನ್ನದ ಸಿಂಹಂ ತನ್ನನೆ ನಂಬಿ ಬಂದಿರ್ದೆನ್ನನೆಂತುಂ ತಿಂಬುದಿಲ್ಲಮಾದೊಡಮಾನುಂ ನುಡಿದು ಮಾತಂ ಪಾಲಿಸುವೆನೆಂದು ಸಿಂಹದ ಸಮೀಪಕ್ಕೆ ಬಂದು . . . ಎನ್ನ ಶರೀರಮಂ ಕೈಕೊಳ್ಳಿಮೆನೆ (ಪಂಪಕಂ. ೦೪೫-೦೫) ; ಆಲಿಸೆನ್ನ ಬಿನ್ನಪವ ಲಾಲಿಸೆನ್ನ ಬಿನ್ನಪವ ಪಾಲಿಸೆನ್ನ ಬಿನ್ನಪವ (ಭುಹಾರೇ. ಬ. ೩೬-೬೦) ; ಪಾಲಿಸುವೆನೆಂತು ನಿಷ್ಠೆಯಂ ಭಾವರಾಗದ ಜೀವಿ ಸಹಜ ಸಂಚಲ ಪರಂತಾಂ ? (ಪಶ್ರಾಂಗ. ೩೯-೦೦೫೦). ೪. ದಯಪಾಲಿಸು ; ಕೊಡು ; ನೀಡು : ತಾಮಿರ್ವರುಂ ಪಚ್ಚಿಕೊಂಡು ಪೊಟಲ್ಗೆವಂದು ಲಾಭದ ಪೆರ್ಚಿಂ ಬಸದಿಗೆ ಬಂದು ವರಧರ್ಮಭಟ್ಟಾರಕರಂ ಕಂಡು . . . ಇನ್ನೊಂದು ವ್ರತಮಂ ಪಾಲಿಸಿಮೆಂಬುದುಂ (ರರ್ಮಾಪ್ಯು. ೨-೦೬೯) ; ಸ್ವಾಮಿ ನಮಗೆ ಅಮರನಾಯಕತನಕ್ಕೆ ಪಾಲಿಸಿದ ಕೊಟ್ಟೂರ ಚಾವಡಿಗ್ಗೆ(ಗೆ) ಸಲುವ . . . ಗ್ರಾಮವನು . . . ಶ್ರೀಹರಿಹರದೇವರ ಅವಸರಸತ್ರಕ್ಕೆ ಸಮರ್ಪ್ಪಿಸಿದ್ದು (ಇಲ. I, ೩೨೬.೬ ; 1530) ; ಪೂತನಿ ವಿಷದ ಮೊಲೆಯನಿತ್ತ ಹಂಗಿಗೆ ಮಾತಾಸ್ಪದವ ಪಾಲಿಸಿದ (ಪೋಹಕ. ೩೪-೦). ೫. ಅನುಸರಿಸು ; ಆಚರಿಸು : ತಾನಿತರ ಕನ್ಯಕೆಯಂತೆ ನಾಣ್ಗೆಟ್ಟು ಸೈರಣೆಯಂ ಬಿಟ್ಟು . . . ನಿಜಾಚಾರಮಂ ಮಱೆದು ಶೀಲಮಂ ತೊಱೆದು ಕುಲಕ್ರಮಮಂ ಪಾಲಿಸದೆ ರಾಗಾಂಧೆಯೆನಾಗಿ (ಕಾದಂಪೂ. ೬೭೪) ; ಜಸಮಂ ಧರ್ಮಮುಮಂ ಪಾಲಿಸುವೊಡಂ . . . ಆರೈದು ಪರೀಕ್ಷಿಸುವುದು ಮನುಜಂ ಸಮಸ್ತಕಾರ್ಯಸ್ಥಿತಿಯಂ (ಪಂಪಕಂ. ೦೯೯-೦೩) ; ನೀತಿಯ ಪಾಲಿಸದೆ ಕೊಲೆಗಡುಕತನದೊಳು ಮೇಲುಗಾಣದೆ ಬಂಧುಗಳ ಗುರುಗಳ ಸಹೋದರರ ಕೋಲ ಮೊನೆಯಲಿ ಕೊಂದು (ಕುಪ್ಯಾಭೀ. ೩-೪೨) ; ಪಿತೃವಾಕ್ಯವು ನ್ಯಾಯವಾಗಿದ್ದ ಪಕ್ಷದಲ್ಲಿ ಅದನ್ನು ಪಾಲಿಸುವುದು ಪುತ್ರನ ಕರ್ತವ್ಯ (ಪ್ರಶಾಶ. ೪೧). ೬. ಮನ್ನಿಸು ; ಕ್ಷಮಿಸು: ಓಬಳಣ್ಣನಾಯಕನು . . . ನನ್ನ ತಪ್ಪನ್ನು ಪಾಲಿಸಬೇಕೆಂದು ಅವರ ಪಾದಕ್ಕೆ ಬಿದ್ದನು (ಪತ್ರಪಾ. ೧೬). ಪಾಳಿಸು₃: ೧. ಬೇಳಲೆ ಬಗೆವೊಡೆ ಹರಿಯೊಡ ನಾಳೋಚಿಪಮೆಂದು ಬಚಿಯನಟ್ಟಿದೆನೆಮ್ಮಂ ಪಾಳಿಸುವೈ[ನೀಂ]ನಿನ್ನೊಡ ನಾಳೋಚಿಸದೆಮಗೆ ನೆಗಚಲೇಂ ನೆಱವುಂಟೇ (ಪಂಪಭಾ. ೬-೨೨) ; ಮೂಳರಂ [ಮಂ] ಪಾಳಿಸಿಯುಂ ಕೋಶಮಂ ಪೋಷಿಸಿಯುಂ ಇಂತು ಸಾಮ್ರಾಜ್ಯಮಂ . . . ನಿಜಾಯತ್ತಮುಮೆನಿಸಿದಂ (ಪಂಪ್ರಪು. ೨-೬೧) ; ಮನಃಕ್ಷತಂ ಬಿಡದೆ ಪಾಳಿಸಿ ಮೇಳಿಸಿ ಪುತ್ರಮೋಹದಿಂ ನಡೆಪಿದ ಕೂರ್ಮೆಯಂ ಬಗೆವುದಲ್ಲಿ (ಪುಷ್ಪಪು. ೦೩-೯೬). ೨. ಧರೆಯಂ . . . ಸುರಪತಿವಿಭವಂ ಪಾಳಿಸುತ್ತಿರ್ದ್ದಂ (ನಾಂಪೇಡ್. ೩-೪ ; 1047) ; ಭೂಪಾಳರ್ ಪಾಳಿಪರಿಳೆಯಂ (ಅಟ್ಟಿಸು. ೬-೬೩). ೫. ರಾಮನರೇಂದ್ರನುಂ ನೆಗಟ್ಟ ಪಾಂಡುನರೇಂದ್ರನ ಪುತ್ರರಯ್ವರುಂ ಪ್ರೇಮದಿನಾರ್ಹತಬ್ರತಮನೊಪ್ಪಿರೆ ಪಾಳಿಸಿ ಮುಕ್ತಿಕಾಮಿನೀಕಾಮರೆನಲೆ

ಸಂದರ್ (ಸಮಾ. ೨-೩೬) ; ಜಿನಧರ್ಮಮಂ ಬಿಸುಟರ್ತಿಯಿಂ ಪಾಳಿ ಪಾತನುಮಿಂದ್ರಿಯಂಗಳ ಭೋಗಮಂ ಮರುಳಲ್ಲನೇ (ರರ್ಮಾಮ್ಯ. ೩-೦೬೩). ೫. ಪಾಳಿಯಂ ಪಾ[ಪಾಶಾಂ. ಬಾ]ಳಿಸುವಂ ಬನ್ನಿಂ (ಪಂಚತಂ. ೦೪೪-೦೬). ೭. ನಡೆದಂಕೊಳ್ಳು ; ಸಲ್ಲು : ಹರಿಸುತಂಗೆ ಗಿರಿದುರ್ಗಮಾಗಿ ಪಾಳಿಸದ ಕೃತಕಶೈಲಮಿಲ್ಲ (ಪುಷ್ಪಪು. ೯-೨೨).

ಪಾಲಿಸಿ ಕೊಡು = ದಯಪಾಲಿಸು ; ಕರುಣಿಸು : ಆ ಗ್ರಾಮವನು ಹುಗಿನು ಹೊಯಿಸಿ ಪಾಲಿಸಿ ಕೊಟ್ಟರು (ಎಳ. VII, ತಿವಮೊ. ೦೦೬-೩೬; 1558 ?). [ಪಾಲನ+ ಇಸು$_3$]

ಪಾಲು$_1$ 'ಪಾಲ್$_1$' ನೋ.

ಪಾಲು$_2$ 'ಪಾಲ್$_2$' ನೋ.

ಪಾಲುಂಡೆ, ಹಾಲುಂಡೆ (ನಾ). ಹಾಲಿನಿಂದ ತಯಾರಿಸಿದ ಒಂದು ಬಗೆಯ ಸಿಹಿಭೆಕ್ಷ್ಯ : "ಪೀಯೂಷಪಿಷ್ಟಮೆನೆ ಪಾ[ಪಾಶಾಂ. ಹಾ]ಲುಂಡೆಯೆನಿಸಿಕ್ಕು" (ಮುಂಗರಾ. ೬೪-೨) ; ಅಮರ್ದಿನುಂಡಿಗೆಗಳೆನಿಸುವ ಪಾಲುಂಡೆಗಳುಮಂ . . . ಅರಸಂಗಂ ಪಂಕ್ತಿಯೊಳುಣ್ಬ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಳುಮಾ. ೦೦-೨೯೫). **ಹಾಲುಂಡೆ :** ಹೂರಿಗೆಯ ಲಡ್ಡುಗೆಯ ಬೆಟ್ಟಂಗಳಲ್ಲಲ್ಲಿ ಹಾಲುಂಡೆ ಘೃತಪೂರದಾಲಯವದಲ್ಲಲ್ಲಿ (ಬಸರ. ೬-೦೦) ; ತುಪ್ಪದ ತೋರ ಹಾಲುಂಡೆಗಳ ಯೆಳ್ಳುಂಡಿಗೆಯ ಕೆನೆಮೊಸರ ಚಾರುಶಾಕಾವಳಿಯಲಾ ವಿಸ್ತಾರ ಭಕ್ಷ್ಯಾವಳಿಯ ಪಾಕದೊಳೋರೆ ಹುಸಿಯುಂಟೆಂಬ ಯಂತ್ರವ ಕಳಚ ಬಲುಹುಂಟು (ಸಂಭವ. ೩೦-೫) ; ಸಣ್ಣಸೇವಗೆ ಹಾಲುಂಡೆ . . . ಪೂರಣಗಡುಬು ಭೂಪಗೆ ಮುದ್ದು ವೆಣ್ಣುಗಳೆಡೆ ಮಾಡಿದರು (ಕಂಪಂ. ೬-೬೭). [ಪಾಲ್$_1$+ಉಂಡೆ]

ಪಾಲುಗ (ನಾ). ಹಾಲು ಮಾರುವವನು ; ಹಾಲಿನ ವ್ಯಾಪಾರಿ : ಪೊನ್ನುಗಂ, ನಾರುಗಂ, ಪಾಲುಗಂ, ಪರಲುಗಂ (ಕಪ್ಪಾಮ. ೪೨೪ ಪ್ರಯೋ). [ಪಾಲ್$_1$+ —ಉಗ]

ಪಾಲುಗಡಲು 'ಪಾಲ್ಗಡಲ್' ನೋ.

ಪಾಲುಗಾರ 'ಪಾಲ್ಗಾಱ' ನೋ.

ಪಾಲುಗಾರತಿ 'ಪಾಲುಗಾರ್ತಿ' ನೋ.

ಪಾಲುಗಾರಿಕೆ (ನಾ). (ವಾಣಿಜ್ಯ ಮತ್ತು ವ್ಯಾಪಾರದಲ್ಲಿ) ಪಾಲು ಪಡೆದಿರುವುದು; ಭಾಗವನ್ನು ಹೊಂದಿರುವುದು: ಅದು . . . ಎಲ್ಲ ಕಲೆಗಳಲ್ಲಿಯೂ ಪಾಲುಗಾರಿಕೆ ; ಎಲ್ಲ ಸೌಜನ್ಯದಲ್ಲಿಯೂ ಎಲ್ಲ ಸಂಪನ್ನತೆಯಲ್ಲಿಯೂ ಪಾಲುಗಾರಿಕೆ (ರಾಜ್ಯಾಂಗ. ೨೦) ; ಇವರ ಆಚಾರ್ಯಪದವಿಯು ಹೆದರಿ ಕೊಟ್ಟಿದ್ದಲ್ಲ . . . ಕೋಮುವಾರು ಪ್ರಾಂತವಾರು ಪಾಲುಗಾರಿಕೆಯಲ್ಲಿ ಬಂದದ್ದಲ್ಲ (ಪಾಪಾಮಂ. ೯೯). [ಪಾಲುಗಾರ (<ಪಾಲ್ಗಾಱ)+ —ಇಕೆ]

ಪಾಲುಗಾರ್ತಿ, ಪಾಲುಗಾರತಿ (ನಾ). ಭಾಗವನ್ನು ಪಡೆಯುವ ಹಕ್ಕುಳ್ಳವಳು ; ಹಿಸ್ಸೆದಾರಳು : ಎಲೈ, ನನ್ನ ದುಃಖದ ಪಾಲುಗಾರ್ತಿ, ಸುಮ್ಮನೆ ಅಳುವುದರಲ್ಲಿ ಏನೂ ಅರ್ಥವಿಲ್ಲ (ಮುಂಬಯಿ. ೪-೧೬೦); ಬಸವಣ್ಣನ ಕಷ್ಟ—ಸುಖಗಳಲ್ಲಿ ನಾಗಲಾಂಬಿಕೆ ಪಾಲುಗಾರ್ತಿಯಾಗಿದ್ದಾಳೆ (ಕರ್ನಾಕ. ೦೨೮). **ಪಾಲುಗಾರತಿ :** ಅವರೆಲ್ಲರಿಗೂ ಬರುವ ಕಷ್ಟ ಸುಖಗಳಲ್ಲಿ ತಾನೂ ಪಾಲುಗಾರತಿಯಾಗಿದ್ದಾಳೆ (ಬಸಸಿ. ೦೪) ; ತನು ಮನ ಧನದಲ್ಲಿ ಪಾಲುಗಾರತಿಯಲ್ಲ (ಸಬೇಗೀ. ೬-೪೫).

[ಪಾಲುಗಾರ (<ಪಾಲ್ಗಾಱ)+ —ತಿ$_1$ (< —ಇತ್ತಿ)]

ಪಾಲುಗುಣ, ಫಾಲ್ಗುಣ (ನಾ). ಚಾಂದ್ರಮಾನ ವರ್ಷದ ಹನ್ನೆರಡನೆಯ ತಿಂಗಳು : ಬಿದಿರೂರ ಬಿಟ್ಟಗಣ್ಣನ ಮಗ ಚಿಕ್ಕಬಮ್ಮಗಣ್ಣ ಪಾಲುಗುಣ ಮಂಗಳವಾರದಂದು ಸುರಲೋಕಪ್ರಾಪ್ತನಾದ (ಮೃಂಗಂ. ೦೯೩೨, ೩೩-೫; 1190) ; ಫಕಾರಕ್ಕೆ ಪಕಾರಂ . . . ಫಾಲ್ಗುಣ—ಪಾಲುಗುಣ (ಕಪುದ. ೨೫೫ ಪ್ರಯೋ); **ಫಾಲ್ಗುಣ :** ಫಾಲ್ಗುಣದ ಶುಕ್ಲಾಷ್ಟಮಿಯಂದು ನಂದೀಶ್ವರ ಪೂಜೆಗೆಂದು . . . ಪೋಗಿ (ಪುಷ್ಪಪು. ೬-೫೫೫) ; ಅಖಿಳಮಂತ್ರಗಳ ಜಪ . . . ಫಾಲ್ಗುಣದಲ್ಲಿ ಸಕಲಜಯ (ಗಗೆಶಾ. ೪-೬೬); ಫಾಲ್ಗುಣದ ಸುವಾಸಿತವಾದ ಬಿಸಿಲುದಿನದಲ್ಲಿ . . . ಅವನು ಬರುತಲಿರುವನು (ರರ್ಮಾಸಾ. ೬೪). [<ಸಂ. ಫಲ್ಗುನ]

ಪಾಲುಗೂಡು (ಕ್ರಿ). ಪಾಲನ್ನು ಹೊಂದು,—ಪಡೆ: ಇಬ್ಬರೂ ಕೂಡಿಯೆ ಹೊಸಧಾಟಿಯ ಆರತಿಹಾಡು ಹಾಡಿದೆವು. ಶೇಷಣ್ಣ ಬಿಂದಣ್ಣ ಒಂದೊಂದು ರೂಪಾಯಿ ಹಾಕಿದರು . . . ನಾನು ಅಕ್ಕ ಹಂಚಿಕೊಂಡೆವು. ಜಯಣ್ಣನೂ ಪಾಲುಗೂಡಲು ಬಂದ. ಅಕ್ಕ ಬೈದು ಕಳಿಸಿದಳು (ಸ್ವಪ್ನ. ೦೯೩).

[ಪಾಲು$_2$ (< ಪಾಲ್$_2$)+ಕೂಡು$_1$]

ಪಾಲುಗೊಳ್ಳು 'ಪಾಲ್ಗೊಳ್' ನೋ.

ಪಾಲುಣ (ನಾ). ದೇವರಿಗೆ ಮಾಡುವ ಹಾಲಿನ ನೈವೇದ್ಯ : ಯಿಪ್ಪತುಎಂಟು ಹೊನ್ನನ್ನು ನಿಮ್ಮ ಸ್ಥಾನದ ಬಯಿರವದೇವರ ಪಾಲುಣ ಕೋಸರ ತಿರುನಾಳನು ಹೊಸ್ತಾಗಿ ರಥೋತ್ಸಹವನೂ ಮಾಡುವ (ಎಳ. X, ಕೋಲಾರ. ೩೪-೦೬; 1495). [ಪಾಲ್$_1$+?]

ಪಾಲುದಾರ 'ಪಾಲ್ದಾರ' ನೋ.

ಪಾಲುಪಂಚಾಯ್ತಿ (ನಾ). ಹಿಸ್ಸೆಯ ಬಗ್ಗೆ ನಡೆಯುವ ಪಂಚಾಯ್ತಿ : ಊರಿನಲ್ಲಿ ಏನು ಗಲಾಟೆಯಾಗಲಿ, ಪಾಲುಪಂಚಾಯ್ತಿ ನಡೆಯಲಿ, ಅಲ್ಲಿ ಶ್ಯಾಮಕಕ್ಕ ಇರಬೇಕು (ಹೊಸಕ್ಷಿ. ೨೪೯).

[ಪಾಲು$_2$ (< ಪಾಲ್$_2$)+ಪಂಚಾಯ್ತಿ (<ಪಂಚಾಯಿತಿ)]

ಪಾಲುಪಟ್ಟಿ (ನಾ). ಆಸ್ತಿ, ಕೆಲಸ ಮುಂತಾದುವುಗಳಲ್ಲಿ ಯಾರ ಪಾಲು ಎಷ್ಟು ಎಂಬುದನ್ನು ನಮೂದಿಸುವ ಕರಾರುಪತ್ರ,—ದಾಖಲೆ ಪತ್ರ : ತಮ್ಮನೊಡನೆ ಪಾಲುಪಟ್ಟಿಯಾದ ಕೆಲವೇ ದಿನಗಳಲ್ಲಿ ನಂಜುಂಡ ಶ್ರೋತ್ರಿಯರ ಆದಾಯ ಬೆಳೆಯಲು ಪ್ರಾರಂಭಿಸಿತು (ಪಂಚಪ್ರ. ೪೩೫).

[ಪಾಲು$_2$ (<ಪಾಲ್$_2$)+ಪಟ್ಟಿ$_2$]

ಪಾಲುಪೊಂಗಲು, ಹಾಲುಪೊಂಗಲು (ನಾ). ಹಾಲಿನಿಂದ ಮಾಡುವ ಒಂದು ಬಗೆಯ ಪೊಂಗಲು : ಪಾಲುಪೊಂಗಲನಿಕ್ಕಿಸಯ್ಯ ಬಾಲಗೋವ್ಗಳ ಕೂಡಿ ಸಾಗಲು ಲೋಲಕೃಷ್ಣನು ನಿಮಗೆ ಒಲಿವನು (ಗೋಪಾಡು. ೦೦೦). **ಹಾಲುಪೊಂಗಲು :** ತಣ್ಣೀರುಸ್ನಾನ, ದೇವಪೂಜೆ, ಯಜ್ಞ ಕರ್ಮಗಳು ಮುಗಿದ ನಂತರ ಹಾಲುಪೊಂಗಲ ಉಪಾಹಾರ (ಶಾಂಕಲಾ. ೬೬).

[ಪಾಲು$_1$ (<ಪಾಲ್$_1$) + ಪೊಂಗಲು$_1$ (<ಪೊಂಗಲ್$_2$)]

ಪಾಲುಮಾರಿಕೆ (ನಾ). ಸೋಮಾರಿತನ ; ಆಲಸ್ಯ : ಪಾಲುಮಾರಿಕೆ, ಜನ್ಮಭೂಮಿಯಲ್ಲಿ ಆಶೆ, ರೋಗಿಯಾಗುವಿಕೆ, ಭಯಶೀಲತೆ, ಅಸಂತೋಷ ಈ ಐದೂ ಪೂಜ್ಯತೆಗೆ ವಿಘ್ನಕಾರಣಗಳು (ಮುಂಬಯಿ. ೬-೩೩೭) ;ಅದೇನೋ ಕಾಗದ ಬರೆಯಬೇಕೆಂದರೇ ನನಗೆ ಕೆಟ್ಟ ಪಾಲುಮಾರಿಕೆ (ಅಪಕಂ. ೦); ಕೆಲಸವನ್ನು ಮಾಡುವುದರಲ್ಲಿ ಪ್ರಫುಲ್ಲೆಗೆ ಪಾಲುಮಾರಿಕೆಯಿಲ್ಲ (ದೇವೀಪಾ. ೬೦).

[ಪಾಲುಮಾರು +— ಇಕೆ. / ತಮಿ. ಪಾಲ್ಮಾಱಿಕೈ ; ತೆಲು. ಪಾಲುಮಾಲಿಕ, ಪಾಲ್ಮಾಲಿಕ]

ಪಾಲುಮಾರು (ಕ್ರಿ). ಆಲಸ್ಯಹೊಂದು ; ಸೋಮಾರಿಯಾಗು : ಪಾಲುಮಾರದೆ ಭಕ್ತಿಯಿಂದಲಿ ಮೂಲಮಂತ್ರಧ್ಯಾನದೊಳು ಪಗಲಿರುಳು ನೀನಿರ್ದು (ಯಕೋರ. ೦೬) ; ತನ್ನ ಕೆಲಸದಲ್ಲಿ ಎಂದೂ ಪಾಲುಮಾರುತ್ತಿರಲಿಲ್ಲ. ಜೈಲಿನ ಕಾಯಿದೆ ಕಟ್ಟಲೆಯ ಪ್ರಕಾರ . . . ಒಂದನ್ನೂ ತಪ್ಪದೆ ನೋಡಿಕೊಳ್ಳುವನು (ಸಬ್ಬಳ. IX, ೪೦) ; ಬೆಳಗಿನ ಝಾವದ ಚಳಿಯಲ್ಲೆದ್ದು ಸ್ನಾನಾದಿಗಳನ್ನು ಮಾಡಲು ಪಾಲುಮಾರದ ಸ್ತ್ರೀಯರ ಹೊರತು ಮಿಕ್ಕವರೆಲ್ಲರಿಗೂ ಇದು ಬಾಧಕರವಾಗಿಯೇ ಇದ್ದಿತು (ಂಕ್ಷ್ಮೀಶ್ರ. ೯).

[ದೇ.॥ ತಮಿ. ಪಾಲ್ಮಾಱು ; ತೆಲು. ಪಾಲುಮಾಲು, ಪಾಲ್ಮಾಱು, ಪ್ರಾಲುಮಾಲು, ಪ್ರಾಲ್ಮಾಲು]

ಪಾಲುಮುಖಂಡ (ನಾ). ಹಳ್ಳಿಗಳ ಬಣಗಳ ಮುಖ್ಯಸ್ಥ : ತಮ್ಮ ಮಗಳ ಮದುವೆಯ ಸಂದರ್ಭದಲ್ಲಿ ಪಾಲುಮುಖಂಡರಿಂದ ಬಹಿಷ್ಕಾರ ಗಿಹಿಷ್ಕಾರದ ಅವಮಾನದ ಗೊಂದಲಕ್ಕೆ ಅವಕಾಶ ಒದಗದಿರುವುದಕ್ಕಾಗಿಯೂ . . . ಮದ್ದು ತೆಗೆದುಕೊಳ್ಳುತ್ತಿದ್ದಾಳೆ (ಸುಲಸು. ೬೬೦).

[ಪಾಲು$_2$ (<ಪಾಲ್$_2$)+ಮುಖಂಡ]

ಪಾಲುವಂತಿಗೆ (ನಾ). ತನ್ನ ಪಾಲಿಗೆ ಸಲ್ಲಬೇಕಾದ ಹಣ ; ಪಾಲು ಗಾರಿಕೆಯ ಹಣ : (ಕಿ). [ಪಾಲು$_2$ (< ಪಾಲ್$_2$)+ವಂತಿಗೆ]

ಪಾಲೆ$_1$, ಹಾಲೆ$_1$ (ನಾ). ಒಂದು ಬಗೆಯ ಹಕ್ಕಿ ; ಹಂಗನ ಹಕ್ಕಿ ; ಶಕುನದ ಹಕ್ಕಿ : "ಚಾಷಃ, ಕಿಕೀದಿವಿಃ — ೨ ಹಂಗನ ಹಕ್ಕೀ ಹೆಸರು, ಶಕುನದ ಹಕ್ಕಿ, ಆಂಧ್ರದಲ್ಲಿ ಪಾಲೆಪಕ್ಷಿ" (ಸಿದ್ಧಾಂತಿ. ೦೫೯). **ಹಾಲೆ$_1$** : (ಕಿ).

[ದೇ.॥ ತಮಿ. ಪಾಲೈ ; ತೆಲು. ಪಾಲ]

ಪಾಲೆ$_2$, ಹಾಲೆ$_2$ (ನಾ). ೧. ಒಂದು ಬಗೆಯ ಮರ ಮತ್ತು ಅದರ ಹಣ್ಣು : "ರಾಜಾದನಂ, ಫಲಾಧ್ಯಕ್ಷಂ, ಕ್ಷೀರಿಕಾ — ಈ ೩ ಪಾಲೆಯ ಮರ" (ಶಾಸಾ. ೦೦೬) ; ಜಳದಂ ಪಿಪ್ಪಲಿ ದೇವದಾರು ರುಜೆ ನಿಂಬಂ ಚಿತ್ರಕಂ ಪಾಲೆ . . . ಇಂತಿವಂ ಜಳದೊಳೆ ಮೂವಡಿಗೂಡಿ ಕಾಸಿ . . . ಕುಡಲೊಡಂ ಸರ್ವಜ್ವರಂ ಪಿಂಗುಗುಂ (ಲೋಕೋಪ. ೯-೨೩೫) ; ಅಂಬಟೆ ಪಾಲೆ ಬಿಳ್ಪಾಲೆ (ಶುಕ್ಕಾಂಗ. ೦೦-೨). **ಹಾಲೆ$_2$** : ೧. ಹಾಲೆಯಂಕೋಲೆದಿಂಡಂ . . . ಹೆಜ್ಜಾಲ ಹೆದ್ದುಂಬರೌದುಂಬುರಂಗಾಲಯವದೆನಿಸಿ ನಾನಾ ಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದು (ಸೋಮನ. ೩-೨) ; ಹಲಸು ಹಾಲೆಯರಳಿ ಚಿಲ್ಲ ಚಿನ್ನೆಗೆ ತೇಗು ತುಂಬುರವರಗಳಿಂ ನಿಲ್ಲದೆ ಮೆಱೆದುದಾ ವಿಪಿನ (ಕುರಾಸಾಂ. ೨೬-೫೫) ; ಹಾಲೆ ಬಿದಿರಿಪ್ಪೆ ಹುಣಿಸಂಕೋಲೆಲಚಿಯ . . . ಬನ್ನಿ ಹೊನ್ನೆಯ ತರುಗಳ್ (ಹಮ್ಮೀರ. ೯-೬೯). ೨. ಒಂದು ಬಗೆಯ ಔಷಧಿ ಸಸ್ಯ : "ಅಮೃತಶಿಖಾ—ಚಿಟಿಕೆ, ಹಾಲೆ" (ಓಷಧಿ. ೯) ; "ಶೋಫ—ಚಿಟಿಕೆ, ಹಾಲೆ" (ಓಷಧಿ. ೧೬೨). ೩. ಪಡವಲದ ಬಳ್ಳಿ ಮತ್ತು ಅದರ ಕಾಯಿ : "ಹಾಲೆ ಕೋಶಾತಕಿ ಪಟೋಳಿಯಕ್ಕು" (ಮಂಗರಾ. ೩೬-೨೦). ೪. (?) : "ಹಾಲೆ ಕಾಂಡಿಕೆ [ಪಾಠಾಂ. ಕಾಟಿಕೆ, ಕಾಡಗೆ]ಯಕ್ಕು" (ಮಂಗರಾ. ೯೯-೯೭).

[ದೇ.॥ ತಮಿ. ಪಾಲೈ ; ಮಲ. ತೆಲು. ಪಾಲ ; ತುಳು. ಪಾಲೆ]

ಪಾಲೆ$_3$, ಆಲೆ$_2$, ಪಾಲ$_1$, ಹಲ್ಲೆ$_1$, ಹಾಲೆ$_3$ (ನಾ). ೧. ಕಿವಿಯ ಮೃದುವಾದ ಕೆಳಭಾಗ, –ಕೊಪ್ಪು : ನಸುನೇಲ್ವ ಕರ್ಣಾಟೀಕರ್ಣ ಪೂರನ ಪಾಲೆಗಳುಂ ಸರಸ್ವತಿಯಾಡುವ ಲೀಲಾಂದೋಳದಂತಾದುವು (ಸಂಪಶಾ. ೨-೩೯೫) ; ತಾಜವಜಾದ ಕೇಶಮನುಗುರ್ಗೊನೆಯಿಂ ತೆಗೆದೊತ್ತಿ ಪಾಲೆಯಂ ಮಿಾಱಿದ ಸುತ್ತಿನೋಲೆಗಳನೋವುತುಮಾಯತಮಾಗೆ ತೊಟ್ಟು (ಲೀಲಾವ. ೫-೦೦೬) ; ಪೊಸಮುತ್ತಿನ ಪುಂಜದೆ ರಂಜಿಸುವೋಲೆಯನಮರಿ ಪಾಲೆಯೊಳ್ ನಿಯಮಿಸಿದಳ್ (ಸಂಪ್ರಶು. ೧೦-೧೩೨). ೨. ಸೇತುವೆ ; ಸಂಕ : ಕೋಟಿಚಿನ್ನಯರು ಬಲ್ಲಾಳನ ಆಳುಗಳೊಂದಿಗೆ ಪಾಲೆ ದಾಟಿ . . . ಬೆಳ್ಳಿಯ ಕಲಶದ ಬಿಳಿಯ ಉಪ್ಪರಿಗೆಯನ್ನು ಏರಿದರು (ಕೋಟಿಕ. ೦೯). **ಆಲೆ$_2$** : ೧. ಮಿರುಪ ತಳಿರೆಲೆ ಕೆಂಪಿನಾಲೆಯ ಜೋಲ್ವ ಕರ್ನಗಳ (ಅಂಬಿಕಾ. ೫-೦೬) ; ಹಣೆ ಚಚ್ಚಿಕೊಳ್ಳುವಿಕೆ, ಕಿವಿಯ ಆಲೆಯನ್ನು ಅನಾವಶ್ಯಕವಾಗಿ ಉಜ್ಜಿಕೊಳ್ಳುವಿಕೆ (ಸುಲಸು. ೧೯೨). **ಪಾಲ$_1$** : ೨. ಎಳೆನವಿಲಾತಡಿಯೊಳಾಡುತಿರಲೊರ್ವ ಲಲನೆ ನೋಡಲು ಕೇಕರಾಂಶು ಪೊಳೆದೆಯ್ದುತು ತತ್ಪ್ರತ್ರಿಮನದಿಗಿಟ್ಟ ಪಳುಕಿನ ಪಾಲದಂದದೊಳು (ಶ್ರೀಪಾಲ. ೫-೩೬) ; ನೀರ ಮುಟ್ಟದೆ ಮೇಲಕೆತ್ತಿ ಪಾಲವ ಕಟ್ಟಿ ದಾರಿಯ ಮಾಡಬೇಕದಕೆ ಧಾರಿಣಿ ಚರರಾಗದಂಬರೇಚರರು ಕಠೋರವ್ಯಂತರರು ಬೇಕೆಂದ (ಭರತ. ೩೩-೭೯) ; ಕಾಡುಮೇಡುಗಳನ್ನು ಹಿಂದೆ ಹಾಕಿ ತೋಡುಗಳನ್ನೂ ಪಾಲಗಳನ್ನೂ ದಾಟಿದರು (ಕಾಂಪಿ. ೦೩ ಕಥಾಸಾರ). **ಹಲ್ಲೆ$_1$** : ೧. ಕಿವಿಗಳ ಹಲ್ಲೆಗಳ ಎಳೆವಜ್ರದ ಬೆಂಡೋಲೆಗಳು ಕಿರಣಗಳನ್ನು ಸೂಸುತ್ತಿದ್ದುವು (ಮುಷ್ಟಿಮು. ೨೦೩). **ಹಾಲೆ$_3$** : ೧. ವರಮುತ್ತಿನೋಲೆಗಳು ತೀವಿ ಹೊಳೆವುತ್ತಮಿರೆ ಲೆಂಕರಸನೆಂಬ ಭಕ್ತಂ ಕಂಡು ಸರಸರನೆ ಭೋಂಕನೋಲೆಯನಲ್ಲಿ ತೆಗೆವುತಿರೆ ಸರಸರನೆ ತೆಗೆದ ಸಂಭ್ರಮದೊಳಗೆ ಹಾಲೆ ಸೊಪ್ಪಾಗುತಿರೆ (ಬಸರ. ೦೩-೧೩) ; ಹಾಲೆಗಳೊಳು ಥಳಥಳಿಪ ಮುತ್ತಿನ ಹರಳೋಲೆಗಳನು ಧರಿಸಿಹರು (ಸಂಪ್ರಸಾಂ. ೧೨-೧೦೬) ; ನಾ ತೂಗಿ ಬಾಗಿ ನೀರ ಮೊಗೆದ ಮಾವಯ್ಯ ಹಾಲೆ ಸವೆದು ವಾಲೆ ಬಿತ್ತು ಮಾವಯ್ಯ (ಹಳ್ಳಿಯ. ೦೭೯).

[<ಸಂ. ಪಾಲಿ, ಪಾಲೀ]

ಪಾಲೆ$_4$ (ನಾ). ಒಂದು ಬಗೆಯ ತೆರಿಗೆ : ಮುಂದನಾಡ ಬಂಗೆಡಗ್ರಾಮ ಪೊನ್ದಕೆ ಪಾಲೆಯ ಗಲುಹ ಅಯ್ನೂಱು ವರಹ (ಎಳ. XIV, ಗುಂಡ್ಯುಪ. ೦೨೯-೬೫; ಸು. 1410). [?]

ಪಾಲೆಗೊರವಿ (ನಾ). ಒಂದು ಬಗೆಯ ಮರ : (ಮೈಸಿಗಿ. ೫೬-೦೦೩೯).

[ಪಾಲೆ$_2$+ಗೊರವಿ$_2$]

ಪಾಲೆರೆ 'ಪಾಲೆಱೆ' ಸೂ.

ಪಾಲೆಱೆ, ಪಾಲೆರೆ, ಹಾಲೆರೆ, ಹಾಲೆಱೆ (ಕ್ರಿ). ೧. ಹಾಲನ್ನು ಹೊಯ್ಯು,–ಸುರಿ : ದೊರೆಯಕ್ಕುಮೆ ನಿನಗೆ ಯುಧಿಷ್ಠಿರನರ್ಘ್ಯಮನೆತ್ತೆ ಶಂಖದೊಳ್ ಪಾಲೆಱೆದಂತಿರೆ ಮಲಿನಮಿಲ್ಲದೊಳ್ಗುಲದರಸುಗಳಿರೆ ನೀನು ಮಗ್ರಪೂಜೆಯನಾಂಪಾ (ಶಂಪಶಾ. ೬-೫೦). ೨. ಹಾಲು ಕೊಡು ; ಹಾಲು ಕುಡಿಸು : ಪಾಸಿನ ಮೇಲೆ ಪಟ್ಟಿರಿಸಿ ಪಾಲೆಱೆದೆನ್ನೊಡಗೂಡಿ ಬಾಲಿಕಾಭ್ಯಾಸದಿನೆತ್ತಿ ಸತ್ತಿಗೆಯ ತಣ್ಣೆಳಲೊಳ್ ಬಳೆವಂತು ಮಾಡಿ . . . ಕೊಲ್ವುದೇ (ಗಿರಿಕ. ೦-೦೦೬) ; ಕೆಱೆಯಂ ಕಟ್ಟಿಸು . . . ಶಿಷ್ಟರಂ ಪೊರೆಯೆನುತ್ತಿಂತೆಲ್ಲಮಂ ಪಿಂದೆ ತಾಂ ಯೆಱದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ (ಸೌಇಇ. IV, ೨೬೭-೪೫ ; 1380) ; ಪಾಲೆಱೆದೋವಿ ಚಿಣ್ಣನ ಪಕ್ಕೆಗೈದಿದಳು (ಮೋಹತ. ೯-೭೫). **ಪಾಲೆರೆ** : ೧. ವಿಜಯವರ್ಮನರೇಂದ್ರ ಬೇಗದಿಂ ತನ್ನ ಸತಿಯು ಪಾಲೆರೆಯುತಿರಲು (ಸೌಗಂಧಿ. ೧೩೨-೧೧). ೨. ತೊಡೆಯ ತೊಟ್ಟಿಲೊಳಿಟ್ಟು ಪಾಲೆರೆದು . . . ಪಾಲಿಸಿದ ನಿನ್ನ ಮೆಯ್ಯಿದನೆಂತು ಪೇಳ್ ಕಾಂತಾರರಾಕ್ಷಸಿಗೆ ತುತ್ತುಗೂಳ್ ಕೊಡಲಿ ? (ಶ್ರೀರಾಮಾ. ೭೯-೯೬). **ಹಾಲೆರೆ** : ೧. ಪುಷ್ಪಗಳ ಗೊಂಚಲುಗಳೆಂಬ ತೊಟ್ಟಿಲಿನೊಳ್ . . . ಮಕರಂದವೆನುವ ಹಾಲೆರೆದು (ಸೌಗಂಧಿ. ೯೭೦-೦) ; ಹಾವಿಗೆ ಹಾಲೆರೆದರೆ ತನ್ನ ವಿಷ ಬಿಟ್ಟೇತೇ ? (ಗಾಪ). **ಹಾಲೆಱೆ** : ೧. ಹಾವಿಗೆ ಹಾಲೆಱೆದೇನು ಫಲ (ಪುರಂದ. ೦-೬೧ ಪಲ್ಲವಿ). [ಪಾಲ್$_1$+ಎಱೆ$_1$]

ಪಾಲೇಱು (ಕ್ರಿ). ಹಾಲು ಹೆಚ್ಚಾಗು : ಆಲದ ಅತ್ತಿಯ ಬಸಿರಿಯ ಪಾಲೇಱಿದ ಕೊನೆಯನುಡಿದು ಮದಮಿಶ್ರಿತದಿಂದಾಲೋಚಿಸದಿಕ್ಕುವು ದಾರೇಱುದಿನಂ ತರದೆ ಹಯಕೆ ಖಾಸವಿನಾಶಂ (ಅಶ್ವಶಾ. ೬-೩೮).

[ಪಾಲ್$_1$+ಏಱು$_1$ (<ಏಱು$_1$)]

ಪಾಲೈಸು (ಕ್ರಿ). (?) : ಭೋರೆಂದು ಸುರಿವ ಕೀಬ್ಮರದ ಪೂರದಿಂ ಕಾರ ಕಾವಣಮಂ ಜಂಝಾನಿಳನೊತ್ತುವಂತೆ ಕುಱುಕುಱುಂಮೆಟ್ಟ ನಡೆಯಿಸುತ್ತುಂ ಗಜಱುವ ಗಟಿಕಾಱರ ಚಪ್ಪರಿಸುವೊಪ್ಪಕಾಱರ ಕರೆವ ಪರಿಕಾಱರ ಪಾಲೈ[ಪಾಠಾಂ. ರೈ]ಸುವಾರೆಕಾಱರ ನೆರವಿಗಳಂ ಕೈಸನ್ನೆಯಿಂ ನಿವಾರಿಸುತ್ತುಂ (ಅನಂಪು. ೩-೨೯೫). [?]

ಪಾಲೋಗರ, ಹಾಲೋಗರ (ನಾ). ಹಾಲಿನಲ್ಲಿ ಮಾಡಿದ ಅನ್ನ : ಪಲತೆಱದ ಪಾಲೋಗರದ ಕಟ್ಟೋಗರದ ಸೊಗಸುವಡೆದ ನೀರೋಗರದ ಮಿಸುಗುವಂಬಲಿಯ ವಿಧಮಂ ವಧೂಜನವಱಿವ ತೆಱದಿನೊರೆವೆಂ (ಸೂಪಶಾ. ೩ ಸೂಪಸ). **ಹಾಲೋಗರ** : ಹಾಲುಂಡೆ ಘೃತಪೂರದಾಲಯವದಲ್ಲಲ್ಲಿ ಹಾಲೋಗರೊಡೆ ಶಣ್ಣ ಸೇವಗೆಗಳಲ್ಲಲ್ಲಿ . . . ಮೇಲೋಗರದ ಹಿರಿಯ ರಾಸಿ ಮಸಗಿದವಲ್ಲಿ (ಬಸರ. ೬-೦೨) ; ಹಾಲೋಗರವ

ಹುಂಡು ಬಾಲೆಯರ ತೋಳ ಮೇಲೆ ಒಡಗಿದರೆ ಬಾರದ ಭವದಲ್ಲಿ ಬವ್ವುದು ತವ್ವದು ತಾನಿರಣ್ಣ (ಬಿಕ್ಕೇತ. ೪೯-೧೪೦): ಸಾಲವನು ಕೊಂಬಾಗ ಹಾಲೌಗ ರುಂಡಂತೆ [ಹಾಣಾಂ. ಹಾಲುಕೊಳ್ಳುಂಬಂತೆ. ಹಾಲುಹುಣ್ಣುಂಡಂತೆ] (ಸರ್ವಜ್ಞ. ೩೩೯). [ಪಾರ್₁+ಓಗರ]

ಹಾಲೌಗು, ಹಾಲವುಗ (ನಾ). ಹಾಲು ಮತ್ತು ಅಕ್ಕಿಹಿಟ್ಟಿನಿಂದ ತಯಾರಿಸಿದ ಒಂದು ಬಗೆಯ ಖಾದ್ಯ : ಸೂಸಲುಂಡಲಿಗೆ ಪಾಲೌಗು ಪಾಯಸ ಬೆಣ್ಣೆಗಾಸಿದ ತುಪ್ಪ ಕೆಂಗೂಳ ರಾಸಿ ರಂಜಿಸಲು (ಭಾಣಾಂ. ೨೬-೨). **ಹಾಲವುಗ** : ಚಿಗುಳಿ ಚಕ್ಕುಲಿ ಹಾಲವುಗ (ಪಾಪು. ೦೪-೧೩). [ಪಾರ್₁ + ಟಿಗು₃ (<ಅವುಗು)]

ಪಾಲ್ಕಿ 'ಪಲ್ಲಂಗ' ನೋ.

ಪಾಲ್ಕೆ 'ಪಲ್ಲಂಗ' ನೋ.

ಪಾಲ್ಕೆಱಿ, ಪಾಲಕೆಱಿ (ನಾ). ಒಂದು ಕೆರೆಯ ಹೆಸರು : ಅನ್ನೆ ಬರೆ ಪಾಲ್ಕೆಱಿಯು ತೆಜ್ಜಣ ಕಡಗೋಡಿ (ಪ್ರಸ್ತಾ. ೦೪೨೧, ೧೦-೦೬೧ ; ೫೬೭). **ಪಾಲಕೆಱಿ** : ಅನ್ನೆ ಬನ್ದು ಪಾಲಕೆಱಿಗನೆ ಬಂ ಪುನೆಸೆಯಿಂ ಅನ್ನೆ ಬನ್ದು ನಗರೆವಳ್ಳಿದ ಮೂಡಣ ಬೇಲಿಯಿಂ (ಎಳ. III. ಪಂಚಕ. ೦೩೯-೧೩ : ೩೧೬ ?). [ಪಾರ್₁+ಕೆಱಿ]

ಪಾಲ್ಗಂಚಿ (ನಾ). ಒಂದು ಬಗೆಯ ಗಿಡ : (?). [ಪಾರ್₁+ಕಂಚಿ₁]

ಪಾಲ್ಗಂದಲ್ (ನಾ). ಹಾಲಿನ ಮಡಕೆ : ಪಾಲ್ಗಂದಲಿಂ ಮಾಯಂ ಬೋದುದು ಬೆಳ್ಳೆಜೊಲ್ಲೆಯೆಲೆ ಕೃಷ್ಣ ನೀನೆ ಕಿಂದಿರ್ದೆ (ಪಪ್ರಕಂ. ೫೧). [ಪಾರ್₁+ಕಂದಲ್₁]

ಪಾಲ್ಗಡಗ. ಹಾಲ್ಗಡಗ (ನಾ). ಚಿಕ್ಕಮಕ್ಕಳ ಕಾಲಿಗೆ ತೊಡಿಸುವ ಒಂದು ಬಗೆಯ ಕಡಗ : ಅರಳೆಲೆಯುಂ ಮಾಗಾಯುಂ . . . ಪೊಕ್ಕಳು ಘಂಟೆ ಪಾಲ್ಗಡಗ ಗೆಜ್ಜೆ ಸಹ ಜಾಲದೊಡವಾ ವರಿವರಿಯು ರತ್ನಖಚಿತಾ ಭರಣಗಳನಿಟ್ಟು (ಪಪೋ. ೦೪-೩೦). **ಹಾಲ್ಗಡಗ** : ಹಸರಂಗಿ ತೊಡಸೀದ ಹಾಲ್ಗಡಗ ಇಡಸೀದ (ಗರ್ಭ. ೧೦). [ಪಾರ್₁+ಕಡಗ₁]

ಪಾಲ್ಗಡಲ್, ಪಾಲಂಗಡಲಂ, ಪಾಲ್ಗಡಲಂ, ಹಾಲುಗಡಲುಂ, ಹಾಲ್ಗಡಲುಂ (ನಾ). ಹಾಲಿನ ಸಮುದ್ರ : ಕ್ಷೀರಸಾಗರ : ಇದೊಂದು ಪೌರಾಣಿಕಕಲ್ಪನೆ. ಸಪ್ತಸಮುದ್ರಗಳಲ್ಲಿ ಒಂದು : ವಿಷ್ಣುವಿನ ವಾಸಸ್ಥಾನ : ಜೈನಧರ್ಮದಲ್ಲಿ ಅರ್ಹಂತನ ಜನ್ಮಾಭಿಷೇಕಕ್ಕೆ ಬಳಸುವ ಜಲನಿಧಿಯು ಸಮುದ್ರ : "ಇಂಗಡಲಿಂದು ಪಾಲ್ಗಡಲೊಳ್" (ಕಾಗಾಕ. ೫೦) ; ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡಗಣ್ಣಿ ಮಾಡಿ ಪಾಲ್ಗಡಲನುಪಾಯದಿಂ ಕಡೆಯೆ (ಶಾಕೃಶಾ. ೧೪೫ ಹಿರ್ಕ್ರಿ) : ಕಡೆಯಿಕ್ಕಿದ ಬಿಡುವುತ್ತಿನ ಪೊಡರ್ದಗ್ಗುಮ ಬೆಳಗು ಪೊಳೆವ ದುಗುಲದ ಪಸೆಯೊಳ್ ತೊಡರ್ದಿರೆ ಪೆಜತಲ್ತಿದ ಪಾಲ್ಗಡಲಿನಿಸುದಾ ವಿವಾಹವೇದಿ ವಿಲಾಸಂ (ಆಂಪು. ೬-೧೬) : ಜಗಮಿದು . . . ಪಾಲ್ಗಡಲಿಂದೊಗೆದುದೊ ಪೇಟ್ಗಿಂಪಿಗೆಂ ಸೊಗಯಿಸುವುದು ಸಾಂದ್ರಚಂದ್ರಿಕಾವಿಸ್ತಾರಂ (ಶಾಡಂಬು. ೧೧೩). **ಪಾಲುಗಡಲು** : ಪಾಲುಗಡಲಲಿ ಫಣಿಯ ಮಂಚದ ಮೇಲೆ ಪವಡಿಸಿ, ಪರಮನಿನಿಸಿದ ಲೀಲೆಯಿತ್ತಲು ಮಾನುಜಭಾವದ ನಟನೆ ತಾನೆತ್ತ (ಶಾಟಾ. ೧೩-೧೩) : ಪಾಲುಗಡಲು ಮನೆಬಾಗಿರಲು ಒಂದಾಲದೆಲೆಯು ಮೇಲೆ ಮಲಗುವರೆ (ಪುರಂದ. ೪-೦೦೯-೦). **ಪಾಲ್ಗಡಲು** : ಪಾಲ್ಗಡಲೊಳ್ಕೊಪ್ಪೆ ಶಯನಿಪಂತೆ ಪೊಕ್ಕು ನೀರ್ಗಲ್ಗಳ ರಾಚಿಸರಸಿಯನು ಸಲ್ಲಿದು ಸುರರೆಬ್ಬಿ ಏಂದು (ಪಭಾಕ. ೯-೧೪) : ಕೊಡವಾಲು ಪುಳಿವೆರ ನಳವುಪಲ್ಲದೆ ಪಾಲ್ಗಡಲು ನಾಶವನೈದುವುದೆ (ಮೋಹಕ. ೦-೩೦). **ಹಾಲುಗಡಲು** : ಇದು ಹಾಲುಗಡಲಿನ ಸೀಪು : ಚಂದ್ರಪುನೆ ಸ್ವಾಮಿ (ಶಾದೀ. ೭೩-೦೬). **ಹಾಲ್ಗಡಲು** : ಕುಂರಿಂದೆ ಹೆಪ್ಪಾದ ಹಾಲ್ಗಡಲಿನೈಕಲೊಳ್ಳ ಡ್ಡಿಯುಂ ಸವಿಕಡಿಯುಂಟಿಲ್ಲಿಗೆಯುನೊಟ್ಟಿ (ಶಾಕ್ಕಾಂಗ. ೧೦-೨೧೮೯) : ಹಾಲ್ಗಡಲಿನ ಕೆರೆತೆರೆಯು ಮೇಲೆ ಮಹಾವಿಷ್ಣು ನರ್ತಿಸಿದಾಗ ಲಾಸ್ಯಕಲೆ ಮೂಡಿ ಬಂದಿತು (ಸೌಂದ. ೧೧೭).

ಪಾಲ್ಗಡಲ ಕುವರಿ – ಕ್ಷೀರಸಾಗರದಲ್ಲಿ ಜನಿಸಿದವಳು: ಲಕ್ಷ್ಮಿ : "ಸಿರಿ ಲಕುಮಿ ಮಾಲಕುಮಿ ಪಾಲ್ಗಡಲ ಕುವರಿ ವಿಷ್ಣು ಕಾವರವನೆಯಳೆಂಬ ವೆಸರಿಂದಿರಿಗೆ" (ಕಬ್ಬಹು. ೭). **ಪಾಲ್ಗಡಲ ಮಗಳ್** = ಪಾಲ್ಗಡಲ ಕುವರಿ : ಪಾಲ್ಗಡಲ ಮಗಳನಿಯನೊಡನೆ ಬೊಮ್ಮಂ ಸರಿವಿಗಿಲ್ಲೆ ಕನಿಸಿಂ ಪೋರೆ (ಪಾಪಪು. ೩. ೨೬). **ಪಾಲ್ಗಡಲೊಡೆಯ** = ಕ್ಷೀರಸಾಗರದ ಒಡೆಯ ವಿಷ್ಣು : ಕರಿಯ ವರಸ ಚಕ್ಕದಿ ಉದ್ಧರಿಸಿದ ಹರಿ ನಮ್ಮ ಪಾಲಿಪ ಪಾಲ್ಗಡಲೊಡೆಯನು (ಪುರಂದ. ೩-೦೩೩-೦) : ಕರ್ಣಜ ಪಾರ್ಥರಾಸ್ಯಂಗಳಿಂ ಕಡುಚಿಲ್ಮುಕಾಂತಿಕಲೆಗಳನಾಂತುವಾಗ ಪಾಲ್ಗಡಲೊಡೆಯನಂ ಮುಂದೆ ಕಂಡು (ಶೃಖಪಾ. ೨೪-೩೭). [ಪಾರ್₁ + ಕಡಲ್₂]

ಪಾಲ್ಗಡಲು 'ಪಾಲ್ಗಡಲ್' ನೋ.

ಪಾಲ್ಗಡೆ (ಕ್ರ). ಹಾಲನ್ನು ಕಡೆ. — ಮಥಿಸು : ಒಂದೆ ಕೈಯೊಳಾ ಪಾಲ್ಗಡೆವೆನೆಂಬ . . . ವೆರ್ಗಾವಿಲನಂ ಪೋಲ್ಕುಂ (ರಹಾಗಪ್ರ. ೩-೦೦೬ ೩೩೮೮೨) : ಘನಕುಚೆ ಗೋಪಿ ಪಾಲ್ಗಡೆಯುತುಂ ಮನೆವಾಟ್ಗೆಗೆ ಪೋಗೆ (ಪಗೀ. ೩-೩೦). [ಪಾರ್₁ + ಕಡೆ₁]

ಪಾಲ್ಗಱಿ, ಹಾಲುಕರೆ (ಕ್ರ). ಹಾಲನ್ನು ಕರೆ, – ಹಿಂಡು : ಇನಿತು ಪಾಲ್ಗಱಿದು ಹೊಂಬುಟ್ಟಲೊಳಿರಿಸಿ ತಾಂ ನಿಲಿಸಿ ಬಂದಾ ಮಲಹರನ ಬಳಗದೆ ಯುವತಿ ಹೋದಹಳು (ಪಪು. ೩೦-೦೨) ; ಕಾಡುವ ಪಶುವಿನ ಬಾಲವ ಕಟ್ಟಿಸಿ ಕೂಡೆ ಪಾಲ್ಗಱಿಯಲು ಒದೆಯುವುದೆ (ಪುರಂದ. ಧಾ. ೨-೪೧-೨). **ಹಾಲುಕರೆ** : ಹಾಲುಕರೆದು ಮೊಸರು ಮಾಡಿ . . . ಮಾರಾಟ ಮಾಡುತ್ತೇವೆ (ಪಪುತೂ. ೬೦) ; ಹೊಸದಾಗಿ ಬಂದು ಕೊಟ್ಟಿಗೆ ಸೇರಿರುವ ಕಾಳೆಮ್ಮೆಗೆ ಕರು ಬಿಟ್ಟು ಹಾಲುಕರೆದುಕೊಂಡಿದ್ದಾರೆ (ಕಳಾಪು. ೪೦). [ಪಾರ್₁ + ಕಱಿ₁]

ಪಾಲ್ಗಾಱ. ಪಾಲುಗಾರ (ನಾ). ೧. (ಆಸ್ತಿಯ) ಭಾಗಸ್ಥ ; ಹಿಸ್ಸೆದಾರ : ಪಾಲು ಬರಬೇಕಾದ ಹಕ್ಕುಳ್ಳವನು : ಪಾಲ್ಗಾಱರ್ಗಂದಿರ್ ! ಎಲ್ಲಮನ್ ಪೇಬಿಟ್ಟಿನ್ (ಅಕ್ಕಾ. ೧೨-೨೫೬). **ಪಾಲುಗಾರ** : ೧. ಕರಾರು ಪತ್ರಕ್ಕೆ ಎಲ್ಲ ಪಾಲುಗಾರರ ಒಪ್ಪಿಗೆ ಮತ್ತು ಅಂಕಿತಗಳು ದೊರೆತ ಮೇಲೆ ಪಾಲುಗಾರಿಕೆಯು ಪೂರ್ಣವಾಗುತ್ತದೆ (ಪಕ್ಕಿ. ೪೬) ; ಪ್ರತಿಸ್ಪರ್ಧಿ ಎನ್ನುವುದಕ್ಕಿಂತಲೂ ಪಾಲುಗಾರ ಎನ್ನುವುದೇ ಸರಿ (ಪುಂಗಾಪು. ೫೬). ೨. ಪಾಲುಗೊಳ್ಳುವವನು : ಊರಲ್ಲಿಯ ಎಷ್ಟು ಜನರ ದುಃಖದಲ್ಲಿ ಅವನು . ಈಗಾಗಲೇ ಪಾಲುಗಾರನಾಗಿಲ್ಲ ? (ಪುಂಕಾಡಾ. ೦೬೨). [ಪಾರ್₂ + – ಕಾಱ]

ಪಾಲ್ಗುಂಬಳ, ಹಾಲಗುಂಬಳ. ಹಾಲುಕುಂಬಳ, ಹಾಲುಗುಂಬಳ, ಹಾಲ್ಗುಂಬಳ (ನಾ). ಒಂದು ಬಗೆಯ ಬಳ್ಳಿ ಮತ್ತು ತರಕಾರಿಯಾಗಿ ಬಳಸುವ ಅದರ ಕಾಯಿ : ಸೋರೆ : ಮಟ್ಟಿಗಾಲದೊಳೆಲೆವಾಡಂ ಹಬ್ಬಿಯೆಳ್ಕಿಂ ಹಿಬ್ಬಿದ ತೈಲಮಂ ಬಿಸತತಿಯಂ ಮೊಳೆಯುಲ್ಲುಮುಮಂ ಪಾಲ್ಗುಂಬಳಪಾಂ[ಹಾಣಾಂ. ಯುಲ್ಲಪುನುಪ್ಪುಂಗಾಪ್ಪುಳಂ]ಸೇವಿಸಲುಮಾಗ ದೆಂದಂ ಜೈನಂ (ಪಪುಚ. ೬-೯). **ಹಾಲಗುಂಬಳ** : "ಶ್ರವುಷ್ಟೀ – ಹಾಲಗುಂಬಳ" (ಲಿಪಿ. ೦೬೨) ; ಕಹಿಸೋರೆಬಳ್ಳಿ, ಈಸುಗಾಯಿಬಳ್ಳಿ, ಹಾಲಗುಂಬಳ (ಪ್ರಾಕಿ. ೪೪-೧೨೨). **ಹಾಲುಕುಂಬಳ** : "ಇಕ್ಷ್ವಾಕು—ಹಾಲುಕುಂಬಳಕಾಯಿ. ೨. ರಾಜವಿಶೇಷ" (ಗಂಗಾಪು. ೪೪). **ಹಾಲುಗುಂಬಳ** : "ದೀರ್ಘವೃಂತ ಫಲಾ–ಹಾಲುಗುಂಬಳ" (ಲಿಪಿ. ೬೬) ; ಹಾಲುಗುಂಬಳ ವನಸಫಲದ ಸಾರತರ ಶಾಕಭೇದವ ನಾನು ಬಲ್ಲನಿತ ಚಾರುಚಂದ್ರಾನನೆಯರಱಿವ ಮೊಲ್ಲೆ ಯೊಳನುರಾಗದುಂದವೆಯುಸುರ್ವೆನು (ಸೂಪಶಾ. ೩ ಸೂಪಪ) ; ಹಾಲುಗುಂಬಳ . . . ಕಫವಾತಕರ (ಶಾಕ್ಕಾಂಗ. ೦೪೬-೬೬). **ಹಾಲ್ಗುಂಬಳ** : ಹಾಲ್ಗುಂಬಳ

ಕಾಡುವು ಪಲ್ಕ ತೀದು ಕೈ ಕಾಲೆಲ್ಲ ವಾತ ಹಿಡಿದುಕೊಂಡಿದೆ (ಜೂತ).

[ಪಾಲ್ + ಕುಂಬಳ]

ಪಾಲ್ಗುಡಿ. ಹಾಲ್ಕುಡಿ, ಹಾಲ್ಗುಡಿ (ಕ್ರಿ). ೧. ಹಾಲನ್ನು ಕುಡಿ.—ಪಾಸ ಮಾಡು: ಕಳ್ಗುಡಿಪವರಂ ಪೊಲ್ಲರೆಂಬಂತೆ ಪಾಲ್ಗುಡಿಪವರನೇಕೆ ಪೊಲ್ಲರೆಸ್ಸರ್ (ರತ್ನಾಕ್ಯ. ೬-೪೩) : ನಂದಿನಿಯ ಪಾರೆದೆ ನೀಂ ಕುಡಿಯಿಲ್ಕೆ ನಿನ್ನ ಚೀಡಿಕೆ ಬಳೆವಪ್ಪ ದೆಂಬುಲಿ ನಂಬಿಸೆ ಪಾಲ್ಗುಡಿದು (ಜಗಕ. ೩-೩೧) : ಕಲ್ಲಿನಾಥನಂ ಕಂಡಜಗ ಮುಂದೆ ಪಾಲ್ಬಟ್ಟಲನ್ನು ದೇವ ಪಸಿದೆ ಪಾಲ್ಗುಡಿವ ದೆಂದುಸುರ್ದ್ ಕೊಡಗೊಸು ಕುಳಮಂ ಮಜಿಗೊಂಡು ನಿಂದಿರ್ದ್ (ಪ್ರಕಥ. ೯-೭೧ ಕ). **ಹಾಲ್ಕುಡಿ** : ೨. ಎದೆಹಾಲು ಕುಡಿ : ಮೊಲೆಯುಣ್ಣು : ಹಾಲ್ಕುಡಿವ ಮಗುವನ್ನು . . . ಬಿಟ್ಟು. ಹೊಲಗೆಲಸಕ್ಕೋ ಗದ್ದೆಕೆಲಸಕ್ಕೋ ಹೋದ ತಾಯಿ ಮನೆಗೆ ಬಂದಿರಗುತ್ತಾಳೆ (ಕಪ್ಪಡು. ೧೭). **ಹಾಲ್ಗುಡಿ** : ೩. ರಸವನ್ನು ಕುಡಿ : ಗೌರಿಹಣ್ಣಿನೆ ಹಾಲ್ಗುಡಿದು ಬೀಡೋಳ ಧೃಪಸ್ಪೆಶ್ರಿತು (ಪಂಚಮು. ೧೨-೧೧). [ಪಾಲ್ + ಕುಡಿ]

ಪಾಲ್ಗುಡಿಸು. ಹಾಲುಕುಡಿಸು (ಕ್ರಿ). ೧. ಹಾಲನ್ನು ಪಾನಮಾಡಿಸು : ತಂಪಿಗೆ ಪಾಲ್ಗುಡಿಸೆಂಬ . . . ಹಾದರಿಯು ನೆಳಲ್ಗೆ ಹರಿಣಂಗಳಂ ಹೊತೆಯೆಂಬ ಕೆಲಸದ ನೆವದಿಂ ರತಿಮಂಗಳೆ ಬಂದ ಕೆಳದಿಯರೆಲ್ಲರಂ ಮೆಲ್ಲದೆಲ್ಲನೆ ಕಳುಪಿ (ಪಂಪಭಾ. ೧೯-೩೩). **ಹಾಲುಕುಡಿಸು** : ೨. ಮೊಲೆಯೂಡು : ಸ್ನಪ್ನಪಾನ ಮಾಡಿಸು : ಎಷ್ಟು ಹೊತ್ತಿಗೆ ಹಾಲುಕುಡಿಸಿದೆಯೇನೋ ಎಂದು ಹಾತೊರೆಯುತ್ತ ಬಂದ ತಾಯಿ . . . ಅಲ್ಲೊಂದು ಕಡೆ ಅಳಿತು ಹಾಲುಣಿಸುತ್ತಾಳೆ (ಪಕ್ಕಾಲು. ೧೩).

[ಪಾಲ್ + ಕುಡಿಸು (< ಕುಡಿಯಿಸು)]

ಪಾಲ್ಗೆನೆ (ನಾ). ಹಾಲನ್ನು ಕಾಯಿಸಿದಾಗ ಮೇಲೆ ನಿಲ್ಲುವ ಶಿರುಳು.—ಸಾರವತ್ತಾದ ಭಾಗ: ಹಾಲಿನ ಕೆನೆ : ಪುಳಗಾಯಿಂ ತಡಿಕಿನ ಕೆಂಪಳರಂ ಪಾಲ್ಗೆನೆಯುನೆಳೆಯು ಪುಲ್ಲಂ ಕಬ್ಬಂ ಬಲಪಂತಸಕ್ಕುಮೆಂದುಜ್ವಲಚಿತ್ತಂ ತಂದು ಪೊರೆವುದುಂ ಗಜಶಿರುಪಂ (ರತ್ನಾಕ್ಯ. ೧೨-೧೨೯).

[ಪಾಲ್ + ಕೆನೆ]

ಪಾಲ್ಗೊಂಬ (ನಾ). (?) : ಮಲ್ಲಿಗವಾಪಿ ಅಂತೆ ಬರೆ ಪಾಲ್ಗೊಂಬ್ಬ ಎಂಬ ಪುಣಾಸೆ ಅಂತೆ ಬರೆ (ಕ್ಷತ್ರ. ೧೯೨೧. ೧೦-೧೦೬ ; ೨೧೧). [?]

ಪಾಲ್ಗೊಡು (ಕ್ರಿ). ಹಾಲನ್ನು ಕೊಡು. —ನೀಡು : ಪಸಿವಜೀತು ತಾಯ್ತನ್ನ ಶಿಶುವಿಗೆ ಒಸೆದು ಪಾಲ್ಗೊಡು[ಣಾಗಿ ಬೆಲೆಕೊಡು]ವಂತೆ ನೀ ಪೋಷಿಸದೆ ಬೇಜಿನ್ನಾರು ಪೋಷಕರಾಗಿ ಸಲಹುವರು (ಹಂಸಾ. ೨೬).

[ಪಾಲ್ + ಕೊಡು]

ಪಾಲ್ಗೊಳ್. ಪಾಲುಗೊಳ್ಳು (ಕ್ರಿ). ೧. ಭಾಗವನ್ನು ಹೊಂದು.—ಪಡ : ಬೇಡಮೋ ಸ್ಕೂಸರಸನೊಡನವನ ಶಯ್ಯೆಯನ್ ಪಾಲ್ಗೊಳ್ವುದೆಂದುಂ ಬೇಡಬೇ ಬಾನಿಂದಮಿಬ್ಬರು ಬಂದವನೊಡನೆ ಪಾದುವೆ ತಾನೆಂದುಂ (ಕವ್ಯಕ್ಷ. ೧೬-೧೦೩೬). **ಪಾಲುಗೊಳ್ಳು** : ೧. ನಮಗೇ ಸಾಲದಿರುವ ಅನ್ನದಲ್ಲಿ ಇವು ಪಾಲುಗೊಳ್ಳುವುದರಿಂದ ಹಾಗೂ ನಮ್ಮ ಸಂಖ್ಯೆಯೂ ಬೆಳೆಯುತ್ತಿರುವುದರಿಂದ ಇಲಿಯು ಭವಿಷ್ಯಕ್ಕೆ ನಾವು ಕೈಯಿಕ್ಕಬೇಕಾಗಿದೆ (ಕೀಚಕ. ೪೩). ೨. ಭಾಗವಹಿಸು : ಪಾತ್ರವಹಿಸು : ಈ ಜನ ಸಹಪವಾಗಿಯೊ ಏಂಬಂತೆ ತಮ್ಮ ಜೀವನದರ್ಶನದಲ್ಲಿ ಪಾಲುಗೊಳ್ಳುವಂಥ ಮಿತ್ರ ಮೇಳವನ್ನೆ ಸದಾ ಆಶ್ರಯಿಸಿರುತ್ತಾರೆ (ಪ್ರಣಯ. ೧೫) : ಅಸಂಖ್ಯ ರೂಪಗಳು ಇದರಲ್ಲಿ ಪಾಲುಗೊಂಡರೂ ಇದು ಹೆಚ್ಚುವುದೂ ಇಲ್ಲ ಕುಂದುವುದೂ ಇಲ್ಲ . . . ಈ ಸೌಂದರ್ಯ ಸಂಪೂರ್ಣವಾದುದು (ಶಾಂಪ್ರ. ೧೦೭).

[ಪಾಲ್ + ಕೊಳ್]

ಪಾಲ್ಗೋಡು (ನಾ). (ಪೃದುವಾಗಿದ್ದ) ಅಲುಗಾಡುವ ಕೋಡು : ಕೋಡು ಅಲುಗಾಡುವ ಹಸುಗಳಿಗೆ ಹಾಲು ಹೆಚ್ಚು ಎಂಬ ನಂಬಿಕೆಯಿದೆ : ಸಜೀನ ಸಜ್ಜನಿಂಬನಿಜುನೆಜ್ಜಿದು ಪಾಲ್ಗೋಡಿನ ಜೋಲ್ಗೆಚ್ಚಲ ಕೋರವೊಲೆಯು ಎಗಂದಿ ಕರ್ಮಜಿವಿನ ತೊರೆದ ತಂಬಾಲಂಬೆರಡು ಹಸಿ (ಜಿನಪತ್ಯ. ೦೦೦-೬೨). [ಪಾಲ್ + ಕೋಡು]

ಪಾಲ್ತುತ್ತ. ಹಾಲ್ತುತ್ತ (ನಾ). ಬಿಳಿಯ ಪಾಷಾಣ : ಮೈಲುತುತ್ತ : (ಕ). **ಹಾಲ್ತುತ್ತ** : (ಕ). [ಪಾಲ್ + ತುತ್ತ / ತಮಿ. ಪಾಲ್ತುತ್ತ; ತೆಲು. ಪಾಲತುತ್ತ]

ಪಾಲ್ಪೊರೆ ' ಪಾಲ್ಪೊರೆ ' ನೋ.

ಪಾಲ್ದಳಿ (ಕ್ರಿ). ಹಾಲನ್ನು ಸಿಂಪಡಿಸು.—ಚಿಮುಕಿಸು : ಮಲ್ಲಿಗೆಯರ ಕ್ಕೊಂಡಿ ಪಾಲ್ದಳಿದಂದದಿ ಚಿಲ್ಲಿತು ಬೆಳುದಿಂಗಳಿಗೆ (ಪೋಚಪ. ೦೯-೦೦೨).

[ಪಾಲ್ + ತಳಿ]

ಪಾಲ್ದಾರ. ಪಾಲುದಾರ (ನಾ). ಪಾಲುಗಾರ : ಭಾಗಸ್ಥ : (ಕ). **ಪಾಲುದಾರ** : ನಿನ್ನ ದುಃಖವಲ್ಲಿ ನಾನೂ ಪಾಲುದಾರ ಎಂದು ಹೇಳೋಣ ಅಂತ ಬಂದೆ (ಪೂಕ್ಷ. ೦೨೦). [ಪಾಲ್ + — ದಾರ]

ಪಾಲ್ದುಂಬು. ಹಾಲುತುಂಬು. ಹಾಲ್ದುಂಬು (ಕ್ರಿ). ೧. ಹಾಲು ತುಂಬಿಕೊಳ್ಳು. — ಭರ್ತಿಯಾಗು : ಪಾಲ್ದುಂಬಿದ ಸಾಲ್ದಿನೆಗಳ ನೆಲ್ದು ಜಾಗಲನೊಲ್ದು ಏಳಿ ಗಿಳಿ (ಶಾತೀ. ೨-೦೩). **ಹಾಲುತುಂಬು** : ೧. ಭತ್ತದ ಗದ್ದೆ ತುಂಬ ಪೂಲು ಕದರು. ಕದರಿನಲ್ಲಿಸ್ಸೂ ಹಾಲು ತುಂಬ ಬೇಕು. ಹಾಲು ಗಟ್ಟಿಯಾಗಿ ಕಾಳು ಪೂರಬೇಕು (ಹೂಯಿಪಾ. ೨೦೭). ೨. ಪಾಲನ್ನು ತುಂಬಿಸು.—ಭರ್ತಿಮಾಡು : ಬಾಚ್ಚಿಪುಲ್ಲಿ ಹಾಲುತುಂಬಿ ಕೊಡು (ಜೂತ). **ಹಾಲ್ದುಂಬು** : ೧. ಬಿತ್ತಿದ ೪೦–೭೫ ದಿನಗಳಲ್ಲಿ ಹಾಲ್ದುಂಬಿ ಹೊತಗೆ ಬಂದು ಬಿಡುವುದು. ಹೀಗೆ ಹಾಲ್ದುಂಬುತ್ತಲೇ. ಕೊಯ್ದು ದನಕ್ಕೆ ಹಾಕಿದರೆ, ಅತ್ಯಂತ ಪೋಷಕಆಹಾರವಾಗುತ್ತದೆ (ಗೋಗ್ರಾ. ೭೦).

[ಪಾಲ್ + ತುಂಬು]

ಪಾಲ್ದೆನೆ. ಹಾಲ್ದೆನೆ (ನಾ). ಧಾನ್ಯದ ಎಳೆಯ ತೆನೆ ; ಹಾಲು ತುಂಬಿದ ತೆನೆ : ಸಸಿಯುಂತೆ ಪೈರಿಯುಂತೆ ಪಾಲ್ದನೆಯುಂತೆ ಕೊಯ್ದಾದಂತೆ (ರತ್ನಾಕ್ಯ. ೦೨-೨೪) ; ಗಿಳಿ ಸೋಪಂಗನೆಯರ ಕಣ್ಗಳ ರುಚಿ ದಿಸೆದಿಸೆಗೆ ಪಸರಿಸಿರೆ ಪಾಸಿನ ನಿರ್ಮಳಜಾಳವೆಂದು ಪಾಲ್ದನೆಗಳ ದಿಸೆಗಂ ಸಾರವಂದಿ ಕೆಲವರಗಿಳಿಗಳ್ (ಪ್ರಕೃತಿ. ೨-೧೬) ; ಉರ್ವರೆಯು ಶಾಲಿಗಳ ಪಾಲ್ದೆನೆಗೆ ನಭದಿಂ ಪುಟಿಸರ್ದ ಗಿಳಿಪಿಂಡುಗಳನುಲಿಯಿಂದೆ ಪಾವುರಿಯರೆರ್ಪಿಸಿದೊಡೆ (ಕೃಷಾ. ೬-೪). **ಹಾಲ್ದೆನೆ** : ಸಜೀವು ರಂಜಿಸುವ ಹೊಂಬಿಲಿನಲ್ಲಿ ಆ ಬಂಗಾರ ಬೆಳೆ ಬಂದ ಹಕ್ಕಿಗಳಿಗೆ ಹಾಲ್ದೆನೆಯ ಗುಟುಕು ಕೊಡುತ್ತ ಸೃಷ್ಟಿಯ ಅನಂತಕರುಣೆಗೆ ಉದಾಹರಣೆಯಾಗಿ ನಿಂತಿದೆ (ಹಚಿ. ೨೦೬).

[ಪಾಲ್ + ತೆನೆ]

ಪಾಲ್ದೊರೆ. ಪಾಲ್ಪೊರೆ (ಕ್ರಿ). ೧. (ಮೊಲೆಯಲ್ಲಿ) ಹಾಲು ತುಂಬಿಕೊಳ್ಳು.—ಕೂಡಿಕೊಳ್ಳು : (ಕ). ೨. (ಮೊಲೆಯಿಂದ) ಹಾಲು ಜಿನುಗು; ಪಾಲು ತೊಟ್ಟಿಕ್ಕು. — ಸ್ರವಿಸು : ಬಾಲಂಗೆ ಮೋಹದಿಂದೆ . . . ಪಾಲ್ದೊರೆದ ಮೊಲೆಯೂಡಿ (ಕೃಷಾ. ೦೯-೩೦). **ಪಾಲ್ಪೊರೆ** : ೨. ಕಣ್ಣಾಣೆಯನರ್ಘಕನಂ ನಡೆನೋಡಿನೋಡಿ ಪಾಲ್ದೊರೆದು ಕುಚಂಗಳಿಂ ಬಿತದೆ ಸೂಸುವ ಸೈಪನಗೆಂದು ಸಾರ್ದುಮೋ (ಪುಗ್ಗಕ. ೩-೧೦೩).

[ಪಾಲ್ + ತೊರೆ]

ಪಾಲ್ಪೊಜೆ. ಪಾಲ್ತೊರೆ (ನಾ). ಹಾಲಿನ ಪ್ರವಾಹ.—ಹೊಳೆ : ತೊಜೆಗಳೆಲ್ಲಂ ಪಾಲ್ಪೊಜೆ[ಣಾಗಂ. ಪಾದೊಜೆ]ಯೆನಿಸಿಯುಂ (ಅಚಿ. ೯-೬೬೮). ಬಯಲು ಪಾಲ್ಪೊಜೆಯು ಪೀರ್ವಂತೆ ಪೀರ್ದೊಂದೆಬಿ ಬಯಕೆಯಿಲ್ಲದೆ ತನೆದಿಪಸು (ಶಚಿ. ೨೯-೬೬). **ಹಾಲ್ತೊರೆ** : ವೆರ್ತು ತುಂಬಿ ಮೂಡಿದನು. ಹಾಲ್ತೊರೆಯುದಾಸಾಂತ ಬಾನಿಂದ ಬಂತು (ಕಪಾ. ೧. ೧೩೦).

[ಪಾಲ್ + ತೊಜೆ]

ಪಾಲ್ನೊರೆ (ನಾ). ಹಾಲಿನ ನೊರೆ : ಪಾಲ್ನೊರೆವಳ್ಳಿನಂತೆ ... ಕಂಗಳ ಕಾಂತಿ ದೆಸೆದೆಸೆಗೆ ಪಸರಿಸಲ್ (ತಬಪು. ೬೭-೫೪). [ಪಾಲ್$_1$ + ನೊರೆ$_2$]

ಪಾಲ್ಪಡು (ನಾ). ಒಂದು ಸ್ಥಳದ ಹೆಸರು : ಶ್ರೀ ಎಮ್ಮೆಯರ ಮಗ ಬೊಲ್ಲಗಂಗಗಾವುನ್ನಾನಿಜಿದು ಬಿಲ್ದನಾತಂಗೆ ಪಾಲ್ಪಡುವಿನುಳ್ಳಿಡುವಣ ಕಜಿಯುಳ್ ತಾಮರೆ ಕಟ್ಟನೆಬಗೆ ಮೂವತ್ತು ಗೂಳಂ ಕಬಿನ ಕಲ್ನಾಡು ಸರ್ವಮಿಹಾರಪ್ರಸುವಂಗೈದಾರ್ (ಎಳ. X, ಕೌಂಗ್. ೦೬-೬; ಸು. ೩೧೦); ತುಜಿವ ಮಗುಜ್ಜಿ ಮಾಣ್ಪಬಾಚರಿಯುಜ್ಜಿಬುಂ ಪಾಲ್ಪಡುವಿನ ಚೋಲಾಚರಿ ಇಜಿದು ಸರ್ಗ್ಗಸ್ಥನಾದಂ (ಎಳ. X, ಕೊಣಾಂ. ೦೪-೬; 1036).

[?]

ಪಾಲ್ಪಸುಳಿ, ಹಾಲುಹಸುಳಿ (ನಾ). ಹಾಲು ಕುಡಿಯುವ ಮಗು; ಹಸುಗೂಸು: ಸೃಷ್ಟಿಯಿದು ನಿನ್ನೆರ್ದೆಯ ಪಾಲ್‌ಪಸುಳಿ, ಓ ತಾಯೆ (ಶ್ರೀಆಚಾ. ೦೩೩-೨೦೭). **ಹಾಲುಹಸುಳಿ** : ಆಗಿದ್ದುದು ಹಾಲುಹಸುಳಿಯಾಗಿದ್ದ ದಿನದಿಂದ ತನ್ನನ್ನು ಸಾಕಿ ಸಲಹಿದ ಅಜ್ಜಿಯ ಅವಶ್ಯಕತೆ (ಶಪಂ. ೦೦೩).

[ಪಾಲ್$_1$ + ಪಸುಳಿ]

ಪಾಲ್ಬಟ್ಟಲ್ (ನಾ). ಹಾಲಿನ ಬಟ್ಟಲು : ನಾವಿದಂ ನೋಡುವೆವೆನುತ ಶಿವದೇವನಾ ಪುಜುವಿವಸವ ಬಳಿಯುನಾ ವಿಧದೊಳೊಬ್ಬಳವಳೆದು ಪಾಲ್ಬಟ್ಟಲಂ ಕೊಟ್ಟು ದೇವನಿಳಯಕೆ ಕಳುಹುತಂ (ಶಪು. ೦೪-೨೬); ಕಲ್ಲಿನಾಥನಂ ಕಂಡೆಜಗಿ ಮುಂದೆ ಪಾಲ್ಬಟ್ಟಲನಿಟ್ಟು ದೇವ ಪಸಿದೆ ಪಾಲ್ಗುಡಿವುದೆಮಸುರ್ಮ (ಕ್ರಪು. ೯-೭೦೫). [ಪಾಲ್$_1$ + ಬಟ್ಟಲ್]

ಪಾಲ್ಬತ್ತು (ಕ್ರಿ). ಹಾಲು ಇಲ್ಲದಂತಾಗು ; ಹಾಲು ಇಂಗಿ ಹೋಗು : ಪಾಲ್ಬತ್ತಿದಾಕಳಂತೆ ಮಕ್ಕಳ್ಗಲ್ಲದ ಸತಿಯಂತೆ (ಧಪೋಕು. ೯-೨೬ ಅಕಪದ್ಯ).

[ಪಾಲ್$_1$ + ಬತ್ತು$_1$]

ಪಾಲ್ಮರ, ಹಾಲ್ಮರ (ನಾ). ಹಾಲು ಬರುವ ಆಲ, ಅತ್ತಿ, ಅರಳಿ, ಇಪ್ಪೆ, ಗೋಣಿ, ಬಸರಿ ಮುಂತಾದ ಮರ : ಕ್ಷೀರವೃಕ್ಷ : ಮಧುಮದ್ಯ ಮಾಂಸಂಗಳುಮುಮ್ಮು ಪಾಲ್ಮರದ ಪಣ್ಗಳುಮಾಳಂಬೆಯುಂ ಸಣಬಿನ ಪೂವುಮೆಂದಿವಂ ಕೀಲಿಸುವರುಂ . . . ಮುಂ ಸರಕಂಗಳೊಳ್ ಪುಟ್ಟಿ ದುವಿಗಳೆಮ್ಮುವರ್ (ತಪ್ರಾ. ೦೫೬-೦೭); ಮರಂಗಳೆಲ್ಲಂ ಪಾಲ್ಮರಂಗಳೆನಿಸೆಯುಂ ಬಳ್ಳಿಗಳೆಲ್ಲವುಮ್ಮತವಳ್ಳಿಗಳೆನಿಸೆಯುಂ (ಶಪು. ೪-೭೭೮); ತಳಿತ ಪಾಲ್ಮರಜೀಜ ಪಿಂಗಲಿ ಬಳಿದು ಬಾಯ್ಗೊಂಡವ ಸರಾಗದಿನೊರಿದು ನಂಪತಿ ತಾಜನಿಶ್ವಪ ಕರಿಯು ಹಕ್ಕಿಗಳು (ತಿಗಣಾ. ೦-೬-೬) ; ಪಾಲ್ಮರದ ಚಕ್ಕೆ ಪದನ್ನು ಅಂಬಿಲದಲ್ಲಿ ಅರೆದು ಮೈಗೆ ಪೂಸಲು ದಾಹವ್ವರ ಪಮಾಣುವುದು (ಚಕ್ಕೆ. ೫೬). **ಹಾಲ್ಮರ** : ತಂಪ್ಪಂ ಸಾಮಿ ಹಾಲ್ಮರನ ಸಮಿತ್ತು ಈ ಪ್ರಪ್ಯಂಗಳಂದಿ ಅಗ್ನಿದೇವತಾರ್ಥವಾಗಿರ್ದ ಮಂತ್ರಂಗಳಿಂ ಹೋಮುವುಂ ಪಾತಿಸಿ (ಕೂಗೋಸೂ. ೯-೪೬ ೬೯೩).

[ಪಾಲ್$_1$ + ಮರ$_1$]

ಪಾಲ್ಮಲೆ (ನಾ). ಹಾಲಿನ ಮಳೆ ; ಕ್ಷೀರಧಾರೆ : ಒಸರ್ದವುದಮುರ್ದಿನ ಪಾಲ್ಮಲೆ ಪರಿಣತೆಸೆ ಜಗಮಂಜೊಡಸೆ ಕರ್ಪೂರದ ರಜಂ ಮುಸುಕಿವುದೆಸೆ ಪೃಥಿವೀನಾಜಿಮುಮ್ಮು ಪೊಳಿಪಮೃತಕಿರಣನಮ್ಮತಕರಂಗಳ್ (ಆಪು.೧೫-೦೨).

[ಪಾಲ್$_1$ + ಮಲೆ^{3}]

ಪಾಲ್ಮುನ್ನೀರ್ (ನಾ). ಹಾಲಿನ ಸಮುದ್ರ ; ಕ್ಷೀರಸಾಗರ : ಪಾಲ್ಮುನ್ನೀರೊಳೊನ್ಮಳೆತೆಲರುನೆಗಳ್ ಬಲ್ಮನೆಯೊಕ್ಕಿಡಿಯಿಟ್ಟಾಗಸದೊಜೆ ಮೇಲ್ಕೆನು ಪೊಳ್ಪೆಜೆಯೊಳಿಗಳ್ಳಿಲಯು ಬೆಳ್ಳಾವರೆಗೆಬ್ಬು (ಶಾಪ್ರೀ. ೨-೭೭).

[ಪಾಲ್$_1$ + ಮುನ್ನೀರ್]

ಪಾಲ್ಮೊಲೆ (ನಾ). ಹಾಲು ತುಂಬಿರುವ ಮೊಲೆ : ಕಿಡಿವ ಪಾಲ್ಮೊಲೆಯುಂ ತಳರ್ವಾಯುಂವಾವರಿಸುತ ಕುರ್ದಿವ ಕಿವಿಗ ಸದ್ಯಾವಮುಳಕ್ಷಿಸಾಕೆಯು ಕಣ್ಗಳ್ ಬೀಲಿಯು ಕಣ್ಣೆಸೆ (ಕಪಾಗಾ. ೨-೭೭). [ಪಾಲ್$_1$ + ಮೊಲೆ$_1$]

ಪಾಲ್ಯ (ಗು). ೧. ಕಾವಾಡಬೇಕಾದ; ರಕ್ಷಿಸಬೇಕಾದ. (ನಾ). ೨. ಕಾವಾಡಬೇಕಾದುದು ; ರಕ್ಷಿಸಬೇಕಾದುದು : ಅಜಿತವಿಜಿತಕಲ್ಪಿತ ನಿನಗಿಂ ತ್ಯಾಜ್ಯಂ ಪರಿಗ್ರಹಂ ದಲ್ ಪ್ರಾಜ್ಯಂ ತವಮದುವೆ ಪಾಲ್ಯಮಾ ಕೈವಲ್ಯಂ (ಅಪು. ೬-೭೭). [ಸಂ.]

ಪಾಲ್ಲಕೆ ' ಪಲ್ಲಂಗ ' ನೋ.

ಪಾಲ್ವಕ್ಕಿ, ಹಾಲಕ್ಕಿ, ಹಾಲವಕ್ಕಿ, ಹಾಲಹಕ್ಕಿ, ಹಾಲುವಕ್ಕಿ, ಹಾಲುಹಕ್ಕಿ, ಹಾಲ್ವಕ್ಕಿ (ನಾ). ೧. ರಾತ್ರಿಯಲ್ಲಿ ಸಂಚರಿಸುವ ಗೂಬೆಯ ಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ ; ಶಕುನದ ಹಕ್ಕಿ ; ಪಿಂಗಲಿ : "ಎಸೆವ ಪಿಂಗಲಿ ಶಕುಂತಂ ಭಾಸಮೆನಲು ಪಾಲ್ವಕ್ಕಿ[ಹಾಲಂ. ಹಾಲುವಕ್ಕಿ] ಯೆಂದನಿಕ್ಕುಂ" (ಪಂಗಣಾ. ೩೨-೬) ; ಪಾಲ್ವಕ್ಕಿ ವ್ಯಗ್ರಾಂಕ ಘೂಕ ದನುಜಂ ಪಾರೀನಮಿಂತು ನಿಶಾಚರಪಕ್ಷಿಂ (ಪಾಪಾಕ. ೫೪). **ಹಾಲಕ್ಕಿ** : ೧. ಚಿಲೀಪಿಲೀ ಚಿಲಿಪಿಲಿ ಎಂದೂ ಹಾಲಕ್ಕಿ ಉಲಿಯುತಲಿತ್ತ ಶುಭ ನುಡಿಯೆ (ಪಾದೀಗೀ. ೩-೪); ಹಾಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ ಬೇಲೂರ ಗದ್ದೆ ಗೊನೆಬತ್ತದ ನೆಲ್ಲಕ್ಕಿ ಸೀರಾವೆ ನಮ್ಮ ಅರವಮನೆಗೆ (ಪಾಕಥ.೧೦೩). **ಹಾಲವಕ್ಕಿ** : ೧. "ಪಿಂಗಲಃ—ಹಾಲವಕ್ಕಿ" (ಲಪಂ. ೯೭). **ಹಾಲಹಕ್ಕಿ** : ೧. ಹಾಲಹಕ್ಕಿಯನ್ನು ಹಿಂದುಗಡೆಯಲ್ಲಿ ಕಂಡರೆ ಬಹುಪುತ್ರಪ್ರಾಪ್ತಿ ಆಗುವುದು (ಪಾಗುಂ.೫೪೫–೭); ಹಾಲಹಕ್ಕಿಯು ಜಗದಾಹ್ಲಾದಕರವಾದ ಚಂದ್ರನ ಪ್ರಣಯಿಯನ್ನು ಉಚ್ಚಕಂಠದಿಂದ ಸಪ್ತಮತಾರದಲ್ಲಿ ಮಾತನಾಡಿಸುತ್ತಿದ್ದಿತು (ಕೋಒಪ್ರ. ೪); ಹಾಲಹಕ್ಕಿ ಆದರೆ ಹಾಲು ಕರೀತೇ? (ಗಾಪ). **ಹಾಲುವಕ್ಕಿ** : ೧. "ನೀರೋರ್ವಪಃ—ಹಾಲುವಕ್ಕಿ, ವಕ್ಷಿಸಮುದಾಯ" (ಲಪಂ. ೬೪); ಕೊಟ್ಟ ಕೂಗಿತ್ತು ಹಾಲುವಕ್ಕಿ ಬಳಯಿತ್ತು, ಹಂಗ ಕಟ್ಟಿತ್ತು ಅವನ ಅವಳ ಮದುವೆ ನಿಂದಿತ್ತು (ಪಾಕಥ. ೪. ೦೪೬-೦೪೭) ; ಅಂದು ಮಧ್ಯಾಹ್ನ 'ಎಣ್ಣೆ ಜೋಗಿ' ಬಂದು ಹಾಲುವಕ್ಕಿಯ ಶಕುನವನ್ನು ಒಡಚಿ ಹೇಳುವಾಗ . . . ಧೈರ್ಯ ಹೇಳಿ ಹೋಗಿದ್ದ (ಶಳಪು. ೬೪). ೨. ಒಕ್ಕಲಿಗರಲ್ಲಿ ಒಂದು ಬಣ. – ಪಂಗಡ : ಬಾಲೋಲಿಕಾರ, ಬಂಟ, ದಪ್ಪಿ, ಗತ್ತಿ, ಗಂಡ, ಹಲದವ, ಹಾಲುವಕ್ಕಿ . . . ಪಕ್ಕಲಿಗ, ವೆಲ್ಲಾಲ (ಶುಳಾ. ೦೬೦). **ಹಾಲುಹಕ್ಕಿ** : ೧. "ಮಷ್ಯೂಲೂಕಃ—ಹಾಲುಹಕ್ಕಿ" (ಲಪಂ. ೦೫೬) ; ಹಸುಬ ಹಂಗನು ಬಾವುಗೆ ಹಾಲು ಹಕ್ಕಿಯು ಕುಶಲದಿಂದುಲಿವ ಮನೆಯನು ಹಸನಾಗಿ ಶಕುನವ ವೇಳ್ವ ಪಕ್ಷಿಗಳು ಮಾತ್ಸರಿದವು ಆ ಮಲೆಯೊಳಗೆ (ಪಾಕರೇಣಾ. ೦-೬೦). **ಹಾಲ್ವಕ್ಕಿ** : ೧. ಏಗಾಪಳಿಯ ಗೂಡುಗಳಲ್ಲಿ ಗಲಗು ಪರಿದಾಯ್ತು ಹಾಲ್ವಕ್ಕಿ ಹರಿದವು ಪಕ್ಕಿಗೆ (ಪಕ್ಕು.೪೨. ೦೦-೬೮) ; ಹಾಲ್ವಕ್ಕಿ ಕೋಗಿಲೆ ಕೋಟದೇವನ ಕುಕ್ಕುವಾಯಿಯ ಕೆಂಡವಕ್ಕಿಗಳವಲಿಳಿಳಿಪ್ಪಿದುದು (ಪಾಳ್ಕಥಾ. ೫-೨೨).

ಹಾಲಕ್ಕಿ ಒಕ್ಕಲರು=ಒಕ್ಕಲಿಗರ ಒಂದು ಒಳಪಂಗಡ . ಕರಾವಳಿ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ನಾಡವರು. ಹಾಲಕ್ಕಿ ಒಕ್ಕಲರು, ನಾಮಧಾರಿಗಳು ಮುಖ್ಯವಾಗಿ ಒಕ್ಕಲತನದಿಂದ ಜೀವಿಸುವರು (ಕಪಾಜ.೬).

[<ಪಾಲ್$_1$ + ವಕ್ಕಿ]

ಪಾಲ್ವಣ ' ಪಾರಿವಾಳ$_1$ ' ನೋ.

ಪಾಲ್ವಳ್ಳಿ, ಹಾಲುಹಳ್ಳಿ (ನಾ). ಒಂದು ಹಳ್ಳಿಯ ಹೆಸರು : ಪೂಜಿತಮು ಸೀಮಾವಾಯ್ಯೆದೆಯನ್ನೆನ್ದೊಡೆ ತೆಂಕ ಪಾಲ್ವಳ್ಳಿಂ ನೈರಿತಿಯೊಳ್ಬರವಲಿಗೆಜೆಯು ತೆಂಕಣ ಕೋಡಿಯಿಂ (ಶಾಶಾ.XI-i, ಪ್ರ-೭೬;ಸು. 1007). **ಹಾಲುಹಳ್ಳಿ** : ನಮ್ಮೂರಂತೂ ಹಾಲುಹಳ್ಳಿಯ ದಂಡೆಯ ಮೇಲಿದೆ. ಅವರಿಂದಲೇ ನಮ್ಮೂರಿಗೆ ಹಾಲುಹಳ್ಳಿ ಎಂದು ಹೆಸರು ಬಂದಿದೆ. ಹಾಲುಹಳ್ಳವು ಊರ ಪೂರ್ವಕ್ಕಿದ್ದು ಹನ್ನೆರಡುತಿಂಗಳೂ ಜುಳುಜುಳು ಎಂದು ಹರಿಯುತ್ತಿದೆ (ಶಪು. ೬–೦). [ಪಾಲ್, +ಪಳ್ಳ]

ಪಾಲ್ವೊನಲ್ (ನಾ). ೧. ಹಾಲಿನ ಹೊಳೆ : ಆ ಕುಮುದಾಕರಂಗಳ ತನಿವೆಳಗಿನ ಬಳಗಮುಂ ಪಾಲ್ವೊನಲ ಪೂರಮೆಂದು ಪೀರ್ವಾಸೆಯಿಂ ಪರಿ ತರುತಿರ್ಪ ತರುಣಕಲಹಂಸಪ್ರಸರಮುಂ (ಕುಸುಮಾ. ೨-೭೧ ಪ). ೨. ಕಬ್ಬಿನ ಹಾಲಿನ ಹೊಳೆ : ರಸದಾಳಿಯೆಸೆವ ಪಾಲ್ವೊನಲೊ ಸೊಗಯಿಪ ಪೊಚ್ಚಪೊಸ ಜೇನ ಸೋನೆಯೋ (ಪಸ್ಕಾ. ೧-೩೦). ೩. ಎಳೆಯ ಧಾನ್ಯದ ರಸದ ಪ್ರವಾಹ : ಕೀರಕಿಶೋರಚಂಚುಹತಿಯಿಂದೆನಸುಂ ಕಣಿಶಾಗ್ರ ಭಾಗದಿಂ ಭೋರನೆ ಸೋರ್ವ ಪಾಲ್ವೊನಲೆ ಕಾಲ್ವೊನಲಾಗೆ (ಕುಸುಮಾ. ೨-೪೫). [ಪಾಲ್$_1$ + ಪೊನಲ್]

ಪಾಲ್ಸೊತೆ 'ಪಾಲ್ಸೊದೆ' ನೋ.

ಪಾಲ್ಸೊದೆ, ಪಾಲ್ಸೊತೆ (ನಾ). ಬೆಳ್ಳಗಿರುವ ಸುಣ್ಣ : ಅರೆದೊಡೆ ಸೌಧಸಂತತಿಗೆ ಪಾಲ್ಸೊದೆಯಪ್ಪ ಕಟಲ್ಚಿ ಕೂಡೆ ಕಪ್ಪುರವಳುಕಪ್ಪಗುರ್ವ ನೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ (ಜಗವಿ. ೧೬-೧೦೯). **ಪಾಲ್ಸೊತೆ** : ರೂಢಿವಡೆದ ನೃಪಾಲಕರ ನೆಲೆಮಾಡ ಚಿನ್ನದ ಚಿನ್ನ ಕನ್ಯಾ ಮಾಡಮೊಪ್ಪುವಮಾತ್ಯಮುಖ್ಯರ ಪಾಲ್ಸೊತೆಯ ಮಾಡ (ಸಾಳ್ಕಾ. ೨-೯). [ಪಾಲ್$_1$ + ಸೊದೆ]

ಪಾವಕ (ಗು). ೧. ಶುದ್ಧಗೊಳಿಸುವ ; ಪವಿತ್ರಗೊಳಿಸುವ. ೨. ಶುದ್ಧವಾದ. ೩. ಪ್ರಕಾಶಮಾನವಾದ. (ನಾ). ೪. ಶುದ್ಧಗೊಳಿಸುವಂತಹುದು : ಆವ ಜೀವದ ಪಾಕವಾವನುಭವದಿನಹುದೊ . . . ನೋವೆಲ್ಲ ಪಾವಕವೊ (ಮಂಕುಶ. ೬೦೯). ೫. ಬೆಂಕಿ ; ಅಗ್ನಿ : "ಸಪ್ತಾರ್ಚಿಃ . . . ಪಾವಕಃ . . . ಹುತಾಶನಃ—ಈ ೪೦ ಕಿಚ್ಚಿನ ಪೆಸರ್" (ಹಲಾಯು. ೧೨-೬೨); ಪಾವಕನಟ್ಟಿ ಖಾಂಡವಮನುಂಡಪನರ್ಜುನನೂಡಿದಪ್ಪಂ (ಪಂಪಭಾ. ೫-೭೮) ; ಪಾವಕನು ನಿಜರೂಪದಿಂದಾ ದೇವಿಯರನೊಡಗೊಂಡು ಬಂದನು (ಕೌಶಿಂಗಾ. ೪೩ ೩೯). ೬. ಉತ್ತಮವಾದ ಆಚರಣೆ ; ಸದಾಚಾರ ; ಒಳ್ಳೆಯ ನಡತೆ. ೭. ದೀಪದ ಬತ್ತಿ. ೮. ಆಗ್ನೇಯಾಸ್ತ್ರ. ೯. ಮೇಲಕ್ಕೆ ಕಾಣುವಂತಹುದು ; ಸ್ಪಷ್ಟವಾದುದು. ೧೦. ಗೇರು ಮರ. ೧೧. ಒಂದು ಬಗೆಯ ಔಷಧಿಗಿಡ ಚಿತ್ರಮೂಲ. ೧೨. ವಾಯುವಿಳಂಗ. ೧೩. ಮಂಕ್ತಾಯ. ೧೪. ನೆಲ್ಲಿಗಿಡ. ೧೫. ವರುಣ. ೧೬. [ಛಂದ] ಅಕ್ಷರಗಣಗಳಲ್ಲಿ ಒಂದು; ನಡುವೆಲಘು ವಿರುವ ಗಣ; ರಗಣ (–U–): ಪಾವಕೋದ್ಭಾವದಿಂ ಶ್ರೀವಧೂಪಾವನಂ (ಭಂಜೋಂಬಾ. ೨-೫೮); "ಉತ್ತಮಾಚಾರದೊಳು ಗೇರಿನೊಳು ನಱುವಲೊಳು ಚಿತ್ರಮೂಲದೊಳಗ್ನಿಯೊಳು ಕಿಚ್ಚುಗೋಲೊಳುರಿವತ್ತಿಯೊಳು ಪಾವಕ ಮೆನಿಕ್ಕು" (ಮಂಗರಾ. ೦೫೩-೬೨); "ವೀತಿಹೋತ್ರಂಗೆ ಸಲೆ ಭಲ್ಲಾತಕಿಗುಂ ಚಿತ್ರಮೂಲದೊಳು ತೀವ್ರದೊಳುಂ ಅತುರದಿ ಮುಗಿದ ವಸ್ತುಗಳೀ ತೆಱದಿಂ ಪಾವಕಾಖ್ಯಮೆನಿಕುಂ" (ವಾಸಾಳಂ. ೦೪೫). [ಸಂ.]

ಪಾವಕದಿಕ್ಕು (ನಾ). ಅಗ್ನಿಯ ದಿಕ್ಕು ; ಆಗ್ನೇಯ : ಪಾವಕದಿಕ್ಕಿನಂತೆ ವನದಂತೆ . . . ಕಾಮಿಜನದಂತೆ ಸಮುತ್ಕಳಿಕಾಕುಳಂ ಕೊಳಂ (ಪುಸ್ವಪು. ೨-೬೩). [ಪಾವಕ + ದಿಕ್ಕು]

ಪಾವಕನಯನ (ನಾ). ಬೆಂಕಿಗಣ್ಣ ; ಶಿವ : ಪಾವಕನಯನನಪರಾವತಾರನು : . . ಸುಖದಿಂದೆ ಸುರಗಿಯ ಚೌಡರಸನಿರ್ದ (ಜಸಪು. ೩೩-೨೦) ; ಸಕಲಜನರಾ ಜಲಪ್ರಳಯವಾಗಲ್ಕೆ ಪಾವಕನಯನಗಂದು ಮೊಱೆಯಿಡೆ (ಪೀಕೃಪು. ೩-೧೦-೬). [ಪಾವಕ + ನಯನ]

ಪಾವಕಪಾವನೆ (ನಾ). ಅಗ್ನಿಪರೀಕ್ಷೆಯಿಂದ ಶುದ್ಧಳೆಂದು ತೀರ್ಮಾನಿಸಲ್ಪಟ್ಟವಳು; ಸೀತೆ : ಹಾ! ರಾಘವಾ! ಪಾವಕಪಾವನೆಯುಂ ತೊಱೆಯಲ್ಕೆಂತು ಮನಂದಂದೆಯ್ ? (ರಾಮಾಶ್ವ. ೨೫-೦೭). [ಪಾವಕ+ಪಾವನೆ]

ಪಾವಕಾಂಬಕ (ನಾ). = ಪಾವಕನಯನ : ಪಾವಕಾಂಬಕಮೂರ್ತಿ ಸೊಡ್ಡಳದೇವ ಬಾಚರಸಯ್ಯನೆನಲತಿಪಾವನಾತ್ಮನು (ಜಸಪು. ೫೩-೧) ; ಇಂತಪ್ಪ ಸತ್ಪುರುಷನಾವ ಕಾರ್ಯಕ್ಕೆ ಕಳುಹಲು ಮೀರುವವನಲ್ಲ ಪಾವಕಾಂಬಕನೆಡೆಗೆ ಕಳುಹುವುದೆಯನುಚಿತಂ ಕಳುಹದಿರೆ ಸಕಲಸುರರ ಬಾಧೆ ಹಿಂಗದು (ಸಪಮೋ. ೫-೬). [ಪಾವಕ + ಅಂಬಕ]

ಪಾವಕಾಕ್ಷಿ (ನಾ). (ಶಿವನ) ಬೆಂಕಿಯ ಕಣ್ಣು ; ಬೆಂಕಿಯನ್ನುಗುಳುವ ಕಣ್ಣು : ನೀನಖಿಳವಂ ನಿನ್ನ ಭಾಳದ ಪಾವಕಾಕ್ಷಿಯುಂ ತೆಗೆದು ಸುಡುವಲ್ಲಿ (ಪೀಕೃಪು. ೨-೩-೫೬). [ಪಾವಕ + ಅಕ್ಷಿ]

ಪಾವಕಾಸ್ತ್ರ (ನಾ). ಮಂತ್ರಿಸಿ ಬಿಟ್ಟಾಗ ಬೆಂಕಿಯನ್ನು ಸುರಿಸುವುದೆಂದು ನಂಬಲಾದ ಒಂದು ಅಸ್ತ್ರ ; ಆಗ್ನೇಯಾಸ್ತ್ರ : ಪಾವಕಾಸ್ತ್ರವು ಮೊಱೆದು ಭುಗಿಭುಗಿಲೆಂದು ಹೊಗೆಯಾವರಿಸಿ ಕವಿತರಲು (ಕೌಶಿಂಗಾ. ೩೬-೫೭); ಡಾವರದೊಳೆದ್ದ ವಡಬಾಗ್ನಿಯೋ ವಿಲಯರುದ್ರನ ಪಣೆಯ ಕಣ್ಗೆಚ್ಚಿದೋ ಭಾವಿಸುವೊಡರಿದೆಂಬೊಲಾದುದು ಧನಂಜಯನ ಪಾವಕಾಸ್ತ್ರಂ (ಕೈಮಿಶಾ. ೦೩-೦೧). [ಪಾವಕ + ಅಸ್ತ್ರ]

ಪಾವಕಿ$_1$ (ನಾ). ೧. ಅಗ್ನಿಯ ಮಗ. ೨. ನೀಲ : ಪಾವಕಿಯ ಪಟುತನವ ಬಣ್ಣಿಪನಾವನಿಂದ್ರಾರಿಯನು ಗೆಲುವನು . . . ಕಲಿಗಳ ದೇವನೀ ಕಪಿಯೆಂದು ಹೊಗಳಿದ ರಾವಣನ ಮಗ ಮತ್ಸರಂಗಳ ಬಿಟ್ಟು ಪರಿಣಮಿಸಿ (ಕೌಶಿಂಗಾ. ೩೪-೪೩). ೩. ಕಾರ್ತಿಕೇಯ ; ಸ್ಕಂದ. [ಸಂ.]

ಪಾವಕಿ$_2$ (ನಾ). ಅಗ್ನಿಷ್ಟಿಕೆ ; ಕುಮಟೆ : "ಪಾವಕಿ(ಕೆ)ಯೆನಲ್ ಬೆಸಕಿಲಕ್ಕು" (ಮಂಗರಾ. ೬೧-೨೦). [ಪಾವಕ + —ಇ$_3$?]

ಪಾವಟಣಿಗೆ (ನಾ). ಮೆಟ್ಟಿಲು ; ಸೋಪಾನ : ನೀರು . . . ಮೊನ್ನೆ ನಾನು ಬಂದಾಗ ಎರಡು ಪಾವಟಣಿಗೆ ಕೆಳಗಿದ್ದವು (ಸಮಜೀ. ೮೭); ಆಕೆ . . . ಪಾವಟಣಿಗೆಗಳನ್ನಿಳಿದು, ಕೆಳಗೆ ಬಂದಳು (ಭೂಮಿಶಾ. ೧೦೬).

[←ಮರಾ. ಪಾವಟಣೀ, ಪಾವಠಣೀ]

ಪಾವಟಿ (ನಾ). = ಪಾವಟಣಿಗೆ : ಚೆಲುವ ಪಾವಟಿಗಳನು ರಚಿಸುವೆ (ಪ್ರಾಪಸಿಂ. ೧೭-೯) ; ನೆರೆದರಸುಗಳ ಮಧ್ಯದಲಿಯೇರಿದನಲ್ಲಿ ಪಾವಟಿಯ (ಜನಭಾ. ೨೭-೧೯) : ಯಶೋದೆ ಗಾಡಿಯಿಂದಿಳಿದಳು. ವಸುಧೆಯೊಂದಿಗೆ ತಿಂಗಳ ಹಿಂದೆ ಹತ್ತಿದ್ದ ಪಾವಟಿಗಳನ್ನೇ ಹತ್ತಿ ಮೇಲೆ ಬಂದಳು (ವಾಸ್ವಲ್ಕ. ೨೨೭).

[←ಮರಾ. ಪಾವಟೀ / ತುಳು. ಪಾವಟೆ ; ತೆಲು ಪಾವಟಿ]

ಪಾವಟಿಕೆ, ಪಾವಟಿಗೆ (ನಾ). = ಪಾವಟಣಿಗೆ : ನೂರಾರು ಪಾವಟಿಕೆಗಳನ್ನು ಇಳಿದ ಬಳಿಕ, ಬಾವಿಯ ಎರಡೂ ಮಗ್ಗಲಿಗೆ ಬಂಕಗಳಿವೆ (ಹಬ್ಬಿ. ೯). **ಪಾವಟಿಗೆ** : ಮುತ್ತಿನ ಪಸೆಯ ಜಗುಲಿ ನೀಲದ ಪಾವಟಿಗೆ ಮಿಕ್ಕ ಮಣಿಮಿಸುನಿಕುಸುರಿಗೆಲಸಂಗಳಿಂದಲಂಕರಿಸಿ . . . ಇಂಬುವಡೆದುದ್ವಾಹಮಂದಿರಂ ಮೆಱೆದುದು (ಹಾಲಾಸ್ಯ. ೧-೬-೨೭ ಪ); ರಾಜಮಾತೆಯ ಹಣೆಯ ಮೇಲೆ ಮುಪ್ಪು ಇಳಿಯಲೆಂದು ಪಾವಟಿಗೆಗಳನ್ನು ಇಟ್ಟಂತೆ ನಾಲ್ಕಾರು ಸುಕ್ಕುಗಳು ಇದ್ದುವು (ಸವಶಿ. ೩೧).

[ಪಾವಟಿ + — ಇಕೆ]

ಪಾವಟಿಗೆ 'ಪಾವಟಿಕೆ' ನೋ.

ಪಾವಟೆ 'ಪಾಪಟೆ$_2$' ನೋ.

ಪಾವಡ$_1$ 'ಪಾವುಡ$_1$' ನೋ.

ಪಾವಡ$_2$ 'ಪಾವುಡ$_2$' ನೋ.

ಪಾವಡ$_3$ (ನಾ). ಕಣದಲ್ಲಿ ಧಾನ್ಯವನ್ನು ಒಂದೆಡೆಗೆ ಸೇರಿಸಿ ರಾಶಿ ಮಾಡಲು ಅಥವಾ ನೆಲವನ್ನು ಸಮಮಾಡಲು ಬಳಸುವ (ಕಬ್ಬಿಣದ) ಸಾಧನ ; ಗೋರೆ : ಒಬ್ಬ ಕಮ್ಮಾರನು ಒಂದು ಗುದ್ದಲಿಯನ್ನು ಕೊಟ್ಟು ಪಾವಡವನ್ನು ತಕ್ಕೊಳ್ಳಲಿಕ್ಕೆ ಅಪೇಕ್ಷಿಸುತ್ತಾನೆಂದು ಕಲ್ಪಿಸುವ (ಮುಂಪಯಾ. ೫-೨೬೧).

[←ಮರಾ. ಪಾವಡೇ, ಫಾವಡೇ]

ಪಾವಡ್ಕ, ಪಾವುಡ್ಕ (ನಾ). ರಿಕಾಪು ; ಅಂಕವಣೆ : ಪಾವಡಗಳ ಮೆಟ್ಟಿ ಮಾಳಿಗೆ ಕೈನೀಡಿ ರಾವುತರೊಡೆಯನೊಪ್ಪಿದನು (ಭರತ. ೨೯-೧೬). **ಪಾವುಡ್ಕ** : ತಂಡತಂಡದೊಳು ನಡೆದು ಬಹ ಪೌಜನು ಕಂಡು ಪಾವು [ಪಾಠಾಂ. ಪ]ಡಗಳ ಮೆಟ್ಟಿ ಮಂಡೆಯ ನೆಗಹಿ ನೋಡುವ ರಾವುತರ ಗಂಡ ಗಿಂಡಿಯ ಲಕ್ಕನೆಯ್ದಿದನು (ಕುರಾಸಾಂ. ೧೧-೫೮). [?]

ಪಾವಡಜಲ (ನಾ). ಬಟ್ಟೆಯಿಂದ ಮುಚ್ಚಿ ತಂದ (ಅಭಿಷೇಕದ) ನೀರು: ಭಾವವೊಂದಿಲ್ಲದೆ ಪಾವಡಜಲ ತಂದು ತೀವಿ ಲಿಂಗಾರ್ಚನೆಗಳನು ಮೂವೇಳೆಯೊಳು ಮಾಡಿ (ಕರಸಾ. ೨-೩೪).

[ಪಾವಡ್ಕ (< ಪಾವುಡ್ಕ) + ಜಲ]

ಪಾವಡಿಗ, ಹಾವಡಿಗ, ಹಾವಾಡಿಗ (ನಾ). ಹಾವುಗಳನ್ನು ಹಿಡಿದು ಆಡಿಸುವ ವೃತ್ತಿಯವನು : ಹಾವಾಡಿಸುವವನು : ಪಾವಡಿಗಂ ಪಾವಿನ ಕಯ್ಯೊಳ್ . . . ಇರುಳ್ಳಟ್ಟಿಗಾಱಂ ಕಳ್ಳನ ಕಯ್ಯೊಳ್ ಸಿಕ್ಕುವಂತೆ (ರಮಾರ್ಮ್ಯ. ೧೩-೧೫೫) ; ಪಾವಂ ಪಿಡಿದನಿತಱೊಳೇಂ ಪಾವಡಿಗರ್ ಸುಭಟರಪ್ಪರೇ ಜಗುನೆಯ ನೀರ್ವಾವಂ ಪಿಡಿದನಿತಱೊಳುರ್ವೀವಳಯಂ ಸುಭಟನೆಂಗುಮೇ ಹರಿ ನಿನ್ನಂ (ಜಗಂ. ೧೭-೪೪) : ಅಡಿಗ ಪ್ರತ್ಯಯಕ್ಕೆ – ದೇವಡಿಗಂ, ಪಾವಡಿಗಂ, ಪೂವಡಿಗಂ (ಕಮಪ. ೨೦೩ ಪ್ರಯೋ). **ಹಾವಡಿಗ** : "ವ್ಯಾಳಗ್ರಾಹೀ, ಅಹಿತುಂಡಿಕ:–ಈ ೨ ಹಾವಡಿಗಂ" (ಹಲಾಯು. ೧೦೦-೪೫೯) ; ನಾನಾವರ್ಣದ ಸಂಸಾರ ಹಾವು ಹಾವ[ಪಾಠಾಂ. ವಾ]ಡಿಗನ ಸ್ನೇಹವಂತೆ (ಬಸವ. ೧೨) : ವೈನತೇಯನ ವಿಗಡಿಸಿದ ವಿಷವೆನು ಸದರವೊ ಹಾವಡಿಗರಿಗೆ (ಕುಮಾಅ. ೦೫-೦೦) : ಹಾವ ಹರಿಕಟಕದಲಿ ಹರಹಿದ ಹಾವಡಿಗರೇ ನಾವು (ಕೊರರಾ. ೬-೦೭-೯). **ಹಾವಾಡಿಗ**: "ವ್ಯಾಳಗ್ರಾಹೀ, ಅಹಿತುಂಡಿಕ:– ಈ ೨ ಹಾವಾಡಿಗನ ಹೆಸರು" (ನಾಪರಾ. ೯೯) ; ಕಳ್ಳ ಹಾದರಿಗ ಹಾವಾಡಿಗ ಅವರಾರಾದಡು ಶಿವಲಾಂಛನವ ತಾಳ್ದು ಬಂದಲ್ಲಿ ಶಿವನೆಂದೇ ಪ್ರಮಾಣಿಸುವುದು (ಮೋಳಿಮಾ. ೪೨-೧೭೫) : ಭೋಗಭಂಗಂ ಹಾವಾ[ಪಾಠಾಂ. ವ]ಡಿಗರೊಳ್ . . . ಅರ್ಥವಾದಂ ಸ್ತೋತ್ರದೊಳಲ್ಲದೆ ತನ್ನೊಳಲ್ಲೆ ನಿಸಿರ್ಪುದು (ರಕಳು. ೧-೨೨ ವ) : ಹಾವಾಡಿಗರು, ಗೊಂದಲಿಗರು . . . ಎಲ್ಲರೂ ಸಂದಣಿಸಿ ಬಂದಾಗಿ ಇರುವವರ ತಾಳ್ಮೆಯ ಪರೀಕ್ಷೆಯನು ಮಾಡುವರೋ (ಅರಳು. ೩೫೪-೧೧). [ಪಾವು + – ಅಡಿಗ]

ಪಾವಡಿಗಿತಿ (ನಾ). ಹಾವಾಡಿಗರ ಜಾತಿಯವಳು ಅಥವಾ ಹಾವಾಡಿಗನ ಹೆಂಡತಿ : ಪಾವಡಿಗಿತಿ, ಪೂವಡಿಗಿತಿ, ಮಾಲೆವಡಿಗಿತಿ . . . ಪಟ್ಟಸಾಲಿಗಿತಿ, ಗಂದಿಗಿತಿ (ಶಪ್ಪಾನು. ೧೯೨ ಪ್ರಯೋ).

[ಪಾವಡಿಗ + – ಇತ್ತಿ (< – ಇತ್ತಿ)]

ಪಾವಡೆ 'ಪಾವುಡ್ಕ' ನೋ.

ಪಾವಣೆ, 'ಪಾವುಣ' ನೋ.

ಪಾವಣೆ, 'ಪಾವುಣೆ' ನೋ.

ಪಾವತಿ (ನಾ). ತಲುಪಬೇಕಾದ ವಸ್ತು, ಹಣ ಮೊದಲಾದುವು ತಲುಪಿದುವೆಂದು ಬರೆದು ಕೊಡುವ ದಾಖಲೆಪತ್ರ : ರಸೀದಿ : ತಾನು ಪೋಲೀಸ ಅಧಿಕಾರಿಯಾದುದರಿಂದ ಪಾವತಿಯನ್ನು ನೀಲಲೋಚನೆಯ ಹೆಸಿನಿಂದಲೇ ಬರೆಯಬೇಕೆಂದು ಹೇಳಿದ (ಪ್ರಣಸ. ೨೫) : ಅನೇಕ ಪಾವತಿಗಳಿಲ್ಲ. ಕೆಲವಂತೂ ಸುಳ್ಳುಪಾವತಿಗಳು ಎನ್ನುವದು ಸ್ಪಷ್ಟವಿದೆ (ಇಮಾಸ. ೧೫೦). [←ಹಿಂ. ಮರಾ. ಪಾವತಿ:]

ಪಾವತಿದಾರ (ನಾ). ಹಣವನ್ನು ಕಟ್ಟಬೇಕಾದವನಂ, – ಕೊಡಬೇಕಾದವನು : (Drawer. ಪಾರಿಸಿ. ೩೩). [ಪಾವತಿ + – ದಾರ್ಕ]

ಪಾವತಿಪುಸ್ತಕ (ನಾ). ರಸೀದಿಗಳನ್ನು ಬರೆಯುವ ಪುಸ್ತಕ ; ರಸೀದಿ ಪುಸ್ತಕ : ಕಿಸೇದಾಗ ಅವ ಅಲ್ಲಾ ಪಾವತಿಪುಸ್ತಕ (ತಿಡುಗು. ೧೨).

[ಪಾವತಿ + ಪುಸ್ತಕ]

ಪಾವನ (ಗು). ೧. ಹಸನಂಗೊಳಿಸುವ ; ಪವಿತ್ರಗೊಳಿಸುವ : ಸುರವಕಂ ಸುರವಕ್ತ್ರಪಾವನಸದಾಚಾರಂ . . . ನಂದನಂ ಪುಟ್ಟಿದಂ (ಪುಸ್ವಪು. ೧೩-೧೦). ೨. ಪರಿಶುದ್ಧವಾದ ; ಪವಿತ್ರವಾದ : ಪಾವನಕ್ಷೀರಮಂ ಕೊಡುವ ಕೆಚ್ಚಲ ಮಾಂಸವಾವ ಲೇಸು (ಪಸಕಾ. ೬-೧೭); ವರಧನುಷ್ಕೋಟಿಯಲಿ ಮಿಂದೀಶ್ವರಪದಾಂಬುಜಕೆಱಗಿ . . . ತತ್ತೀರ್ಥಸೇವಾಪರಮಪಾವನಕರಣನಾದನು (ಕುಮಾಕ. ೦೯-೧೫) ; ಕಳೇಬರವನರ್ಪಿಸುವೆ ಪಾವನ ಸರಿತ್ಪತಿಯ ವಿಸ್ತೃತೌದಾರ್ಯಕ್ಕೆ ! (ಪಾಸ್ತಾಂಗ. ೬೬-೦೬೯೮). (ನಾ). ೩. ಶುದ್ಧವಾದುದು; ಪವಿತ್ರವಾದುದು: "ಶುಚಿ, ಮೇಧ್ಯಂ, ಪವಿತ್ರಂ, ಪುಣ್ಯಂ, ಪಾವನಂ — ಈ ೫ ಶುದ್ಧಮಪ್ಪ ವಸ್ತು" (ಹಲಾಯು. ೨೨-೧೩೨) ; ಶರಣ ನಡೆದುದೆ ಪಾವನ ಕಾಣೆರೊ (ಬಸವ. ೮೭೨) ; ಪ್ರಚುರ ಕಾಳಿಂದೀವನಂ ಪಾವನಂ (ಜಗಂ. ೩-೬೬). ೪. ಪವಿತ್ರಗೊಳಿಸುವವನು : ದೇವನನಱಿದು ಪೂಜಿಸಿದಾತ ಷಡುದರು ಶನಕ್ಕಧಿಕ ಜಗಕ್ಕೆ ಪಾವನ (ಬಸವ. ೬೦೭) : ರಾಜೀವಪೀಠನ ಪಿತನೆ ಜಗಕತಿ ಪಾವನನೆ . . . ಕಾವುದಾನತಜನವ (ಕುಮಾಕ. ೧-೧) ; ಆವ ವರ್ಣದಲು ದಿಸಿರಲು ಸದ್ಭಾವನನೆ ಪಾವನನು (ಗಗತಾ. ೧೪-೩೮). ೫. ಬೆಂಕಿ ; ಅಗ್ನಿ. ೬. ಶುದ್ಧಗೊಳಿಸುವ ನೀರು, ಗೋಮಯ ಮೊದಲಾದ ವಸ್ತು. ೭. ತಪಸ್ಸು. ೮. [ಛಂದ] ಪ್ರತಿಯೊಂದು ಪಾದದಲ್ಲಿ ಮೂರು ಅಕ್ಷರಗಳಿರುವ ಒಂದು ಸಮಪಾದ ವೃತ್ತ : ಪಾವಕೋದ್ಭಾವದಿಂ ಶ್ರೀವಧೂಪಾವನಂ (ಛಂದೋಂಬು. ೨-೫೮). [ಸಂ.]

ಪಾವನಗೊಳಿಸು (ಕ್ರಿ). ಪವಿತ್ರಗೊಳಿಸು ; ಪುನೀತಗೊಳಿಸು : ಬಾದೊರೆಯೆ ! . . . ಕಡೆಗಣಿಸದಿರು ನಾನು ಬಡವನೆಂದು ಜೀವದಾಪೋಷಣೆಯನೆತ್ತಿ ಪಾವನಗೊಳಿಸು (ಬಿಪಾಸ. ೪೮-೩).

[ಪಾವನ + ಕೊಳ್ + – ಇಸು]

ಪಾವನಚಾರಿತ್ರ (ನಾ). ಒಳ್ಳೆಯ ಶೀಲ ; ಶುದ್ಧವಾದ ನಡವಳಿಕೆ : ಪಾವನಚಾರಿತ್ರೌಷಧಸೇವೆಯೆ ದೋಷತ್ರಯಂಗಳಂ ಕಿಡಿಸೆ ತಪೋಭಾವನೆಯೊಳಿಸೆವನಾಮಯನಾವನುಮಾ ಮುನಿಯೆ ಪರಮಧರ್ಮಕ್ಕಾರ್ಮಂ (ಅಪಪು. ೬-೬೧). [ಪಾವನ + ಚಾರಿತ್ರ]

ಪಾವನತೆ (ನಾ). ಪವಿತ್ರತೆ ; ಪಾವಿತ್ರ್ಯ ; ಪರಿಶುದ್ಧಿ : ಪಾವನತೆಗೆ ಬಯಸಿ ಜಗತ್ಪಾವನನಂ ಗಂಗೆ ಪೊರ್ದಿ ಪೊಗಟ್ಟಂದದಿನಿಂದೀವರಪರಿಮಳರತ ಮಧುಪಾವಳಿರವದೆಸೆವುದಮಳಪರಿಖಾವಳಯಂ (ಪಾರ್ಶ್ವಪು. ೧೬-೩೫) ; ಮುಸುಟೆ ಚೌಡಾರ್ಯ . . . ನಿಜಪಾವನತೆಯೊಪ್ಪಲು ನೋಡಿ ಶಿವಸಮಯಸ್ಥರಂ ಮಾಡಿ (ಬಸಪು. ೩೨-೬೩). [ಸಂ. ಪಾವನತಾ]

ಪಾವನತ್ವ (ನಾ). ಪಾವನತೆ ; ಪವಿತ್ರತೆ ; ಪರಿಶುದ್ಧಿ : ನೀವು ಬಿಜಯಂಗೆಯ್ದು ಕರುಣಾಭಾವಗುಣದಿಂ ನೋಡಿ ಮರ್ತ್ಯವನೋದಿ ಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲಿ ಪಾವನತ್ವವನಿತ್ತು ಪಾಲಿಸಿ ಕಾವುದೆನ್ನಯ ಬಿನ್ನಪವನು (ಬಸಪು. ೧-೬೦) ; ಪಾವನತ್ವದಿ ನೋಡೆ ಅಮರಗಂಗಾಜನಕ ದೇವತ್ವದಲಿ ನೋಡೆ ದಿವಿಜರೊಡೆಯ (ಪುರಂದ. ೨-೧೬೪-೨).

[ಸಂ.]

ಪಾವನಿ (ನಾ). ೧. ವಾಯುದೇವನ ಮಗ. ೨. ಹನುಮಂತ ; ಆಂಜನೇಯ : ಪಾವನಿ ಜಾಂಬವಾಂಗದ . . . ಸುಗ್ರೀವ ವಿಯಚ್ಚರ ಪ್ರಮುಖರೇಱಿದ ರತ್ನವಿಮಾನಮಾಲೆ ಶೋಭಾವಹಮಾಗಿ ಸುತ್ತಿ ಬರೆ (ಪಂರಾಮಾ. ೧೨-೯೨) ; ಭಾನುಜನೆಂಬುದು ಬೇಟ್ವವರ್ಗ್ಗೆ ಪಾವನಿ ಪರನಾರಿಗೆಂಬುದು ಧರಿತ್ರಿ ನೆಗಟ್ತೆಯ ತಂತ್ರಪಾಟನಾಮನಂ (ಎಕ. XII. ಪಾವುಗ. ೪೩-೩೦ ; 1151). ೩. ಭೀಮಸೇನ : ಪಾವನಿಯೊಳ್ ಪೊಣರ್ದಂ ಮಗಧಾವನಿಪಂ ಪೊಣರಲಂಜಿದಂ ನಿನಗೆ (ಜಗಂ. ೧೬-೩).

[ಸಂ.]

ಪಾವನೆ (ನಾ). ಪವಿತ್ರಳಾದವಳು ; ಪರಿಶುದ್ಧಳಾದವಳು : ವರ ರೂಪವತಿ ತಾನೆಂದು ವರಮಪಾವನೆಯೆಂದು ಬಱದೆ ಬೆಱೆಯದನು ಸರಿಸುವುದಾತ್ಮವಲ್ಲಭನ (ಪಂಪ. ೩.೩೦); ಬಲ್ಲೆನವಳಯೋನಿಜೆಯೆಂಬುದಂ ಪಾವನೆಯೆಂಬುದಂ ಪುಣ್ಯಶ್ಲೋಕೆಯೆಂಬುದಂ (ರಾಮಾಶ್ವ. ೨೫ ೨೬) ; ಪಾವನೆಯರಾ ಕೃಷ್ಣೆಭೀಮೆಯರ ತಾಯ್ನಾಡು ಕಾವೇರಿಗೋದೆಯರು ಮೈದೊಳೆವ ನಲುನಾಡು (ಕನ್ನಶಾ. ೧೧೦. ೨೧). [ಸಂ. ಪಾವನಾ]

ಪಾವನ್ನ (ಗಂ). ೧. ಪವಿತ್ರವಾದ : ಬಿನ್ನಪ ಲಾಲಿಸಯ್ಯಾ ಭಕುತವತ್ಸಲ ದೇವ ನಿನ್ನ ಸುರತರು ಪಾವನ್ನ ನೆಳಲು ಚೆನ್ನಾಗಿ ನಂಬಿದವನೊ (ಮೋಕ್ಷದೀ. ೩.೧). (ನಾ). ೨. ಪುನೀತನಾದವನು: ದೇವಕೀಸುತವೊಲಿದು ಕರೆತಂದು ಎನ್ನನು ಪಾವನ್ನ ಮಾಡಿದನು (ಪಿಡಾಕ್ಯ. ೪೫ ಅನುಪಲ್ಲವಿ).

[< ಸಂ. ಪಾವನ]

ಪಾವಮಾನಿ (ನಾ). ೧. = ಪಾವನಿ ೨: ರಾಜೀವಲೋಚನ ನಿನ್ನೊಳೀ ನರನೊಳೀ ಧ್ವಜದ ಪಾವಮಾನಿಯೊಳುಱೆ ಕಾದಿ ಮದ್ಭುಜದ ಕಂಡೂತಿಯಂ ಕಳೆಯ ವೇಳ್ಪುದೀಗ (ಸೈಮಿಶಾ. ೨೭-೩೫). ೨. = ಪಾವನಿ ೩ : ನಿನ್ನ ಕೊಂದಡೆ ಪಾವಮಾನಿಗೆ ಪಂಥ ತಪ್ಪುವುದೆನುತ ಖಾತಿಯಲಿ ತಾವಕನ ಸಾರಥಿಯ ರಥ ತುರಗಾವಳಿಯನಾಯುಧವ ಖಂಡಿಸೆ ಜೀವಗಳ್ಳರ ದೇವ ಪಸರಿಸಿದನು ಪಲಾಯನವ (ಕುಪ್ಯಾಕ. ೪-೬). [ಸಂ.]

ಪಾವರಣೆ, ಪವರಣೆ, ಹಾವರಣಿ, ಹಾವರಣೆ, ಹಾವುರಾಣಿ (ನಾ). ಸರೀಸೃಪ ವರ್ಗಕ್ಕೆ ಸೇರಿದ ಒಂದು ಪ್ರಾಣಿ : ಬೇಳೆಯ ಪತ್ರಂಗಳೊಳಂ ಬೇಳೆಯ ಗೆಡ್ಡೆಯನೆ ಕೂಡಿ ಮರ್ದಿಸಿ ಕುಡಲೇಂ ಪೇಟಲ ರಿದೆಂಬ ಕೊಟಕನ ಚೇಟಿನ ಪಾವರಣೆ[ಶಾಶಾಂ. ವಿರಣೆ]ಯುಗ್ರವಿಷ ಮನದಟಿಗುಂ (ಐಮದ. ೦೦-೬೪). **ಪವರಣೆ** : ಕೋಡು ಕೊಟಗೆಲ್ ತೊಗಲ್ . . . ಪಲ್ಲಿ ಪಾವು ಪವರಣೆ ನವಿಲಾವೋಡೆಂಬಿವು ಕಷ್ಟಂ ಮನೆ ಮಾಡುವ ನೆಲನನಗುಟ್ ಕಾಣ್ಬೊಡೆ (ಲೋಕೋಪ. ೩-೧೫). ೫ ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. **ಹಾವರಣೆ**: "ಉರಗಕರನೆನೆ ಹಾವರಣೆ [ಶಾಶಾಂ. ಹಾರವಣೆ]ಯಕ್ಕು" (ಮಂಗರಾ. ೪೯-೧೩) : ಸರೀಸೃಪಾಭಿಧಾನಮಂ ತಾಳ್ದಿದ ಉಡು ಓತಿ ಹಲ್ಲಿ ಹಾವರಣೆಯೆಂಬೀ ಜೀವಂಗಳಿಗೆ ನವಪೂರ್ವಾಂಗ ಪರಿಸಂಖ್ಯೋತ್ಕೃಷ್ಟಾಯುಷ್ಯಮಕ್ಕುಂ (ಪಸಾರ. ೨೪೮). **ಹಾವರಣೆ** : "ದ್ವಿರಸಃ—ಉಡು, ಸರ್ಪ, ಹಾವರಣೆ" (ಓಷಧಿ. ೭೬): ಗೊದ್ದ ನೆಗೆವ ಹಾವರಣೆ ಕೆಂಜೇಳು . . . ಬುಸ್ಸೆಂಬ ಪಾವುಗಳಾಗ ವಿಗಡದೆ ಪರಿದಾಡುತಿಹುವು (ಕಂನಪಿ. ೧೬-೪೦). **ಹಾವುರಾಣಿ** : "ಸರಟಃ, ಕೃಕಲಾಸಃ—೨ ತೊಂಡೇ ಹೆಸರು ; ಹೆಂಟೇಗೊದ್ದ, ಓತಿಕ್ಯಾತ, ತೊಣ್ಣೇ ಕೇತ, ಹಾವುರಾಣಿಗೂ ಇದೇ ಹೆಸರೆಂದು ಕೆಲವರನ್ನುವರು" (ಸಿದ್ಧಾಂಶಿ. ೨೫೭); ಈಗ ಹೋಗಿ ಬದುಕಿದ ಹಾವನ್ನೋ ಹಾವುರಾಣಿಯನ್ನೋ ತೆಗೆದು ಕೊಂಡು ಬರುವುದು ಬೇಡ (ಪಸುಹೊ. ೯೦). [ಪಾವು$_1$ + ಅರಣೆ]

ಪಾವರಿ (ನಾ). ಒಕ್ಕಲುಗಿತ್ತಿ ; ಪಾವಂರಿ : "ಪಾವರಿವೊಕ್ಕಲಗಿತ್ತಿ" (ಪಸುಹಿ ೦೯೬). [< ಸಂ. ಪಾಮರೀ]

ಪಾವಲಿ (ನಾ). ಕಾಲಂರೂಪಾಯಿಯ ನಾಣ್ಯ ; ನಾಲ್ಕಾಣೆ : ಐತಾಳರು ಆ ದಿನ ಪಾವಲಿ ಬಜೆ ತಿಂದವರು ಅದನ್ನು ಹೊಗಳಿದ್ದೆ ಹೊಗಳಿದ್ದು (ಬೇವಜಂ. ೬೫); ಮಾತೆಯು ವಿಶೇಷ ದಯಾಭಾವದಿಂದ ಏಳು ಪಾವಲಿ ತೆಗೆದು ಕೊಡುವಳು (ಕಮಕ. ೦೪).

[← ಹಿಂ. ಪಾವಲೀ ; ಮರಾ. ಪಾವಲಾ, ಪಾವಲೀ]

ಪಾವಸೆ, ಪಾಂಶೆ, ಪಾಂಸೆ, ಪಾಚಿ$_1$, ಪಾಚೆ, ಪಾಮಾಜಿ, ಪಾಸಿ$_1$, ಪಾಸೆ$_1$, ಹಾಂಸೆ, ಹಾಚಿ, ಹಾವಂಚೆ, ಹಾವಚಿ, ಹಾವಚೆ, ಹಾವಸಿ, ಹಾವಸೆ, ಹಾವುಸೆ (ನಾ). ೧. ನೀರಿನ ಮೇಲೆ ಅಥವಾ ಶೇವವಾದ ಬಂಡೆಗಳ ಮೇಲೆ ಬೆಳೆಯುವ ಒಂದು ಬಗೆಯ ಹಸುರು ಸಸ್ಯ : ಶೈವಾಲ : "ಶೈವಾಳಂ ಜಳನೀಳಿಕೆ ಶೈವಳಮದು ನೀರೊಳಾದ ಪಾವಸೆಯೆನಿಕುಂ" (ವಸ್ತುಕೋ. ೨೫-೧೬); ಏಳೆದೆನಿಸಿರ್ದ ಪಾವಸೆಯ ತಣ್ಣೆಟ್ಟೆಯಿಂದಮೆ ನೆಯ್ದ ಸೀರೆ ಶೀತಳಿಕೆಯ ಚಾಮರಂ ಪೊಸ ಮೃಣಾಳದ ತೋಳ್ವಳೆ . . . ಸಿರಿಕಂಡದಿಂದು ಕಣ್ಗೊಳೆ ನೆಲಸಿರ್ದರಲ್ಲಿ ಜಲದೇವಿಯರಂತೆ ವಿಳಾಸಿನೀಜನಂ (ಕಾದಂಉ. ೪೫೯); ಹರಿವ ವಾರಿ ನೆಱೆ ಪಾವಸೆ ಮುಸುಕುವದೇ (ಮೋಕಿಮಾ. ೯೦-೩೫೬) : ಇದು ಪರಿದಿರ್ದ ಪಾವಸೆ ಮುಗಿಲ್ಮುಱಿಯೆಂಬಿನಮಿಂಬುಗೆಟ್ಟು ಕಂದಿದ ಪಟಗಂಚುಗನ್ನಡಿ ವೊಲೇನಿಳಿದಾದುದೊ ಚಂದ್ರಮಂಡಲಂ (ಸಂದ್ರಪು. ೯-೫). **ಪಾಂಶೆ** : ೧. ನಿಂದ ವಾರಿಯಲ್ಲಿ ಪಾವಸೆ ತನ್ನಿಂದ ಒದಗಿದಂತೆ ಚರಿಸೆ ಪಾಂಶೆ [ಶಾಶಾಂ. ಪಾಸಿ, ಹಾವಸೆ] ಹಱಿದು ನಿರ್ಮಲವಾದಂತೆ (ಬಸ್ಯಾಶಾ. ೪. ೬೫-೦೦೦). **ಪಾಂಸೆ**: ೧. ತ್ರಿವಿಧದ ಸತ್ತೆಯ ಸರ್ವೇಂದ್ರಿಯ ಬೆಳೆದ ಪಾಂಸೆ [ಶಾಶಾಂ. ಪಾಸೆ]ಯ ಮಱೆಯಲ್ಲಿ ತಪ್ಪಿಹೋಯಿತ್ತು ಮತ್ಸ್ಯ (ಸಕವ. III, ೫೪-೧೧೦; ಸರ್ವವ. ೬೦-೩೦೬ ನೋ : ನಿರ್ಮಳೋದಕವನಾ ಪಾಂಸೆ ಪರಮಾತ್ಮನಂ ಜೀವಭಾವಮಿವು ಮುಸುಕಿಕೊಂಡಿರ್ಪಂತೆ ಜಗದೊಳುಳ್ಳ ಅರಸುಗಳ ವೇಷ್ಟಿಸಿರ್ಪುದು ಕ್ಷಾತ್ರತಾಮಸಂ (ಪಂಪು. ೬-೨). **ಪಾಚಿ$_1$** : ೧. ಸರಸಿಜಮೆಲ್ಲ ಬೇಯೆ ಕೆಸರುಂ ಜಲಮುಂ ತವೆ ಪಾಚಿ ಕುರ್ಗೆ ಪಲ್ಗಿರಿವ ತೆರಂ ಸರಂ ಕರಮೆ ಬೀಡೆಗಳಾಗಿರೆ ಪಕ್ಷಿಸಂಘಮಾ ಸರವರದಿಂದೆ ಪೋದುವು (ಸಂದ್ರಶ್ಯು. ೬-೧೧೭) : ಕಾಮ ತನ್ನ ಹಚ್ಚಂಗಿ ಹಾಸಿಧಾಂಗಲ್ಲಿ ನೀರ ಪಾಚಿ ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ ಪಾಚಿ ಸರಿಸಿದಾಗ ಕಪ್ಪುನೀರು ಕರಿತಾವ ಒಳಗ ಬಳಿಗೆ (ಗಂಗಾಶ. ೬೭-೬); 'ಶೈವಲಿನಿ' ಎಂದರೆ ಪಾಚಿ ಕಟ್ಟಿದ ಹೊಳೆ (ಇಂಕಿಮ. ೨೧೦). **ಪಾಚೆ** : ೧. ಒಂದು ಸಾಮಾನ್ಯ ಹುಲ್ಲು ಪಾಚೆಯ ವಿಚಾರವನ್ನು ಕೂಡ ಸೋಮಾರಿಗಳಿಂದ ತಿಳಿಯಲು ಸಾಧ್ಯವಿಲ್ಲ (ಜೀವಾತ್ಮ. ೭). **ಪಾಮಾಜಿ** : ೧. ಕಲ್ಲಿನ ಮೇಲೆ ಕಾಲಿರಿಸಿದರೆ ಪಾಮಾಜಿಯಿಂದ ಜಾರಿ ಆತ ನೀರನ್ನು ಸೇರ ಬಾರದು (ಮೈಲಿಮಾ. ೨); ಅಮೇರಿಕಾ ದೇಶಕ್ಕೆ ಸಮೀಪದ ಶಾಂತಸಾಗರದಲ್ಲಿ ಒಂದು ಜಾತಿಯ ಸಮುದ್ರ ಪಾಮಾಜಿಯು ನೂರಾರು ಮೈಲುಗಳ ತನಕ ಬೆಳೆದು ಹಬ್ಬಿರುತ್ತದೆ (ಭಾಲಪ್ರ. II. ೬೯೫). **ಪಾಸಿ$_1$** : ೧. ಮತ್ತೊಂದು ಕಡೆಗೆ ಮೆಲ್ಲಮಲ್ಲನೆ ತಿರುಗಿ ನೋಡಲು ಒಂದು ಕಡೆ ಗೋಡೆಯು ಸಿಕ್ಕಿತು. ಅದೆಲ್ಲಾ ಪಾಸಿ ಹಿಡಿದು ಹೋಗಿದ್ದಿತು (ರಾತಾಮ. ೬೬). **ಪಾಸೆ$_1$** : ೧. ಹೊಟ್ಟೆಗಿಲ್ಲದೆ ಒಂದು ಬಗೆ ಪಾಸೆಯನ್ನು ಜನರು ತಿಂದು ಜೀವಿಸುವರು. ಈ ಪಾಸೆಯ ಭೂಮಿಯ ಮೇಲೆ ಸಿಕ್ಕುವುದು (ಸುಮತ. ೧೪೨). ೨. ಹಲ್ಲುಗಳಮೇಲಿನ ಕಿಟ್ಟ. ಕೊಳೆ : ನಲ್ಲಳಗಲ್ದ ಳಲುರ್ವಿರೆ ಮೆಲ್ಲದೆ ಬಾಯಲ್ಲಿ ಪಾಸೆದಳೆದು ರಥಾಂಗಂ ಪುಲ್ಲಶರನೆಸುಗೆ ಗಾಱದೆ ಪುಲ್ಲಂ ಕರ್ಚಿದವೊಲಾಗಳೇ ನೊಪ್ಪಿದುದೊ (ರಾಜಶೇ. ೦೦-೦೫) : ಪುಲ್ಲಶರನು ರುಬೆಯಂ ತಾಳಲಮ್ಮದೆ ಕಾಮನಲ್ಲಿ ಚಕ್ರಗಳು ಭೂತಳಕೊರಗಿ ಭೀತಿಯಿಂಪುಲ್ಲ ಕಚ್ಚಿದುವೊಯೆನೆ ಪಲ್ಲೊಳಂಟಿಹ ಪಾಸೆಯೇಂ ಚೋದ್ಯಕರ ಮೆನಿಪುದೊ (ವಂಕಾರಾ. ೫-೨-೨೯). **ಹಾಂಸೆ** : ೧. ಕಲ್ಲ ಮೇಲಿನ ಹಾಂಸೆ [ಪಾಶಾಂ. ಹಂಸೆ] ಮಲ್ಲಿಗೆಯರಳ ತನಿಗಂಪು ಹೊಸ ಮೋಹ ನಿಲ್ಲವಿವು ನೋಡ (ಸರ್ವಜ್ಞ. ೦೫೨೬) ; ಈ ಹಸುರು ಹಾಂಸೆಯು ಎಲ್ಲಕ್ಕೂ ನೀಚಜಾತಿಯ ಉದ್ಭಿಜ ವಿರುತ್ತದೆಂಬುದೊಂದು ಮುಖ್ಯ ಮಾತು (ಮುಂಜಯ. ೬ ೨೨೬) **ಹಾಚಿ** : ೧. "ಪಾಂಶಾ = ಹಾಚಿ" (ಕಾಶಕ್ಯ. ೨೫೯) ; "ಜಲನೀಲೀ ಶೈವಾಲಂ, ಶೈವಲಂ—೩ ಹಾಚಿ ಹೆಸರುಗಳು. ನೀರು ಮೇಲೆ ಮುಚ್ಚಿಕೊಳ್ಳುವ ಕೊಳೆಯ ಹಾಚಿ" (ಸಿದ್ಧಾಂಶಿ. ೬೯). **ಹಾವಂಚೆ** : ೧. ಕಡುಹೀಲಿಯ ಝುಲ್ಲರಿಗಳ ಗಡಣಮನಾ ನಡೆವ ಕುದುರೆಗಳ ಕೆಲದೊಳ್ ಪಿಡಿಯಲ್ಕೆ ಸೈನ್ಯವಾರ್ಧಿಯೊಳಡಸಿದ ಹಾವಂಚೆಯಂತಿರದು ಕಣ್ಗೆಸೆಗುಂ (ಭಾರಪು. ೦೦-೪೯). **ಹಾವಚಿ** : ೧. ಮಂಡೆ ಕೂದಲುಗಳೆಂಬ

ಹಾವಚಿಗಳೂ ಭುಜದಂಡಗಳೆಂಬ ಸರ್ವಗಳೂ (ಕೃಭಾಗೀ. ೧೫೨). **ಹಾವಚೆ** : ೨. ಎಲ್ಲವ ಬಿಟ್ಟು ಹಲ್ಲ ಸುಲಿಯ ಬಂದೆ ಮುನ್ನಿನಲ್ಲಿಯ ಹಾವಚೆ [ಪಾಣಂ.ಸೆ] ಹಲ್ಲ ಬಿಡದು ನೋಡಾ (ಸಭವ. III, ೬೬–೦೬೦). **ಹಾವಸಿ** : ೧. ಹಳ್ಳ ಹಾವಸಿ ಹಾವು ಹುಲಿ ಕಾಡಾನೆ ಕೋಣಗಳು . . . ಹೆಮ್ಮಾರಂಗಳು ಪಲ್ಲವಿಸಿ ಜೀರೆಂಬ ಕಾನನದಲ್ಲಿಯಜಿಸುತ ಬರುತಲಿರ್ದಳು ಪಾಯೆಯಲ್ಲವನ (ಕ್ರಶುಂ. ೬–೧೬). **ಹಾವಸೆ** : ೧. "ಜಲನೀಲೀ. ಶೈವಾಲಂ. ಶೈವಲಂ– ಈ ೩ ಹಾವಸೆಯ ಪೆಸರು" (ಪಾಕರಾ. ೦೦೦) : ಕುಜುಹೆಂಬೆನೆ ಕಲ್ಲಿನಲ್ಲಿ ಹಶ್ತಿದ ಹಾವಸೆ (ಅಂಬವ. ೪. ೬೧–೩೬) : ಕಳಸದ ತಳಿರ್ : ನೀರ ಹಾವಸೆ (ಕಮುರ. ೦೬೨ ಕ್ರಡೋ) : ಬಲ್ಲವರು ಹಾವಸೆಯು ಕಲ್ಲ ತಾ ವೆಟ್ಟುವರೆ (ಸರ್ವಜ್ಞ. ೬೯೦). ೨. ಸೊರವಾಯು ಹಾವಸೆಪರಿದ ಪಲ್ಗಳ ಜೋಲ್ಬುಟಿಯು ನಸುಮುರುಟುಗಿವಿಗಳ ಹಜಿಕಗಡ್ಡದ . . . ಕುಜುಬನು (ಬಸಪು. ೨೦–೦೦) : ಮಸುಳಿಸಿದ್ದ ದುಕೂಲ ರದನದೊಳಿಸೆಪ ಹಾವಸೆ (ಕುವ್ಯಾ. ೬–೩೬) : ಹಲ್ಲ ಹಾವಸೆಗಳಂ ಪಳಲಿಕ್ಕುತುದ್ದುದ್ದಿ ಮುಂಡಿಯ ಕಟ್ಟಿ . . . ಸಿಂಗಾರ ವಿದು ತಮಗೆಂದು ರಚಿಸಿದರು ಮುನಿಗಳು (ವೀಚಿಕ್ಷ. ೬–೦೦–೧೩). ೩. ಹಸುರುಬಣ್ಣ : ಕಮಲಕೇಸರ ಸೀರಿ ತುಂಬಿಗಳ ಕುಸುರುಗಳು ಹಾವಸೆಯು ರವಿಕೆ ಗಿಳಿಬಣ್ಣ (ಕವ್ಯಪಾ. ೬೭೬). **ಹಾವುಸೆ** : ೧. ಹಾವುಸೆಯು ಅರೆಯುಸ್ಸು ಹಾವಿನಾ ಮುರಿಯನ್ನು ಹಾಡುತ್ತ ಬರುವ ಕೊರಪೀಯು ಕಂಡರೆ ಹಾದೀಯು ಬಿಟ್ಟು ಪುರೆಯಾಗು (ಹಶ್ಯ.ಶ. ೬೬).

[ದೇ.॥ ತವಿ. ಪಾಚ್ಚೈ. ಪಾಚಿ : ಮಲ. ಪಾಶಿ. ಪಾಶರ್, ಪಾಯಲ್. ಪಾಯಿ, ಪಾಯಿಲ್ : ತುಳು. ಪಾಚಿ. ಪಾಂಬಚ್ಚಿ. ಪಾಪುಜಿ. ಪಾಪುಜು. ಪಾಪಾಜಿ. ಪಾಪಾಜು ; ಕೊಡ. ಪಾಮಂಜಿ : ತೆಲು. ಪಾಚಿ. ಪಾಸು. ಪ್ಯಾಚಿ]

ಪಾವಸೆಗಲ್, ಹಾವಸೆಗಲ್ಲು (ನಾ). ಪಾಚಿ ಮೆತ್ತಿಕೊಂಡ ಕಲ್ಲು ; ಹಾವಸೆ ಹಿಡಿದ ಕಲ್ಲು : ಪಾವಸೆಗಲ್ಲಂ ಮೆಟ್ಟಿದಂತೆ ಸನ್ಮಾರ್ಗಮಂ ಎಸಜು ಪರಿಯದೆ (ರರ್ಮಾಮ್ಯ. ೦೦–೦೦೯). **ಹಾವಸೆಗಲ್ಲು** : ಪಾವಸೆಗಲ್ಲ ಮೆಟ್ಟಿ ಪರಿದು ಗೊತ್ತ ಮುಟ್ಟಬಾರದಯ್ಯಾ ನುಡಿದಂತೆ ನಡೆಯಲು ಬಾರದಯ್ಯಾ (ಬಸವ. ೨೦೦) : ತನಗರಿಯದಂತೆಯೇ ಪಾವಸೆಗಲ್ಲಿನ ಮೇಲೆ ನಡೆದು ಅನಾಮತ್ತಾಗಿ ಅಗಾತನಾದ (ಬೀಪ್ರ. II, ೬೯).

[ಪಾವಸೆ + ಕಲ್ಲ್]

ಪಾವಸೆಗಿಜು (ಕ್ರಿ). ಪಾಚಿಯೆಂದು ಭ್ರಮಿಸು : ಬಳಗಜಿಯದೆ ಪಚ್ಚೆಯ ಸಿಲೆಗಳನಂಚಿಯ ಪಿಂಡು ಕಂಡು ಪಾವಸೆಗೆತ್ತಪ್ಪಳಿ, ಕರ್ದುಕುತ್ತುಮೇಂ ತಳಪುಳಗಪ್ಪುವೊ (ಪಾಂಚಪ್ರ. ೨–೧೬) : ನವಕರ್ಣಾಪೂರದೊಂದಲೆದ ಶಿರೀಷ ಮಂಜರಿಯನೀಕ್ಷಿಸಿ ಪಾವಸೆಗೆತ್ತು ತೃಷ್ಣೆಯಿಂ ಬಲವರುಶಿರ್ದುದಂಗನೆ ಯನುಸ್ಮಿಬಾಲವಾರಾಳಮಂಡಳಂ (ಕಾರಂಉ. ೦೬೯).

[ಪಾವಸೆ + ಗಿಜು]

ಪಾವಸೆಗೊಳ್ (ಕ್ರಿ). ಪಾಚಿಗಟ್ಟು : ಪಾವಸೆ ಪಿಡಿ : ಪ್ರೌದ್ಧ ಕಣ್ಣಿನಿಯ ಬಾನಲ ತಣ್ಣಸದೊಳ್ ಪಗಿಲ್ತ ಪಾವಸೆಗೊಳೆ ಕಾರ ತಂದಲೊಳಗುಂದಲೆ ಬಾಗಿರೆ ನಟ್ಟು ಸೋರ್ದ ಪಾಚ್ಚಸದಿಯ ಪೆಣ್ಣ ಜೋಪಡಪೊಲೊಪ್ಪಿದ ಳೊರ್ವಳನಂಗರಾಗದಿಂ (ಪಾಂಚಪ್ರ. ೬–೧೬) : ಪಸರಿಸಿದ ಬಯಲ್ಮಡು ಪಾವಸೆ ಗೊಂದಿರೆ ಗಡಣದಾತುವೆಳಪೆಂದಿರ್ ನುಗ್ಗಾಸಲಿಬೆಗೆತ್ತೆಪ್ಪುರೆ (ಲೀಂಶಾ. ೩–೧೬) : ಮೇಗೆ ಸೆಗೆದಿಸುವ ಪಾವಸೆಗೊಂಡ ಪೇರಾಪೆಯಂ ತಾವರೆಯು ಕೊಪೆಯಿಲೆಗೆತ್ತಜ್ಜಿಯುದೆಜಗಿದೊಡದು ತೆಜಂಬೊಳೆಯೆ ಬೆಚ್ಚಿ ಬಿಚ್ಚಿತು ಬಾಜಿ ಕಳಪಳಪ ವಿಕಳಕುರಪಕರನಿಕರಂಗಳೊಳಿಂ (ತಂದ್ರಶ. ೩–೧೦ ಪ).

[ಪಾವಸೆ + ಕೊಳ್]

ಪಾವಸೆವಲ್. ಹಾವಸೆಹಲ್ಲು (ನಾ). ಕೀಚುಗಟ್ಟಿದ ಹಲ್ಲು; ಕೊಳೆಗಟ್ಟಿದ ಹಲ್ಲು : ಮುರಿಂಟಿದ ಕರ್ಣಮುರ್ವಿ ಕೆಕ್ಕರಿಸಿದ ಕಣ್ಣಜಿಟುದಲೆ ಪಾವಸೆ ವಲ್ಮಿಗೆ ಗಂಟುವುರ್ಬುಗಳ್ (ವೃಶಪ. ೦೦–೬೦). **ಹಾವಸೆಹಲ್ಲು** : ಮುಜಿದ ಹಾವಸೆಹಲ್ಲ ಹಜುವಾಯ ತುಜುಚಿಗಳು ಬತ್ತಲೆಯ ಬಾಳ್ಬಿಣಂಗಳು ಸುತ್ತ ಮುತ್ತಿರಲು (ಪಾಗೀಶ. ದೀ. ೨೫೪–೨೬). [ಪಾವಸೆ + ಪಲ್]

ಪಾವಾಡೆ 'ಪಾವುಡ' ನೋ.

ಪಾವಾಣಿ (ನಾ). ಕಾಲುಆಣೆ ಬೆಲೆಯ ತಾಮ್ರದ ಒಂದು ನಾಣ್ಯ ; ಮೂರು ಕಾಸಿನ ಬಿಲ್ಲೆ ; ಕಾಲಾಣೆ: ಇಬ್ಬರಿಗೆ ಎರಡೆರಜಾಣೆಯಂತೆ ಲೆಕ್ಕ ಮಾಡಿ, ಹದಿನಾರು ಪಾವಾಣಿಗಳನ್ನು ಎಣಿಸಿಯೂ ಕೊಟ್ಟರು (ಸ್ವಕ್ಷಹೂ. ೬೧) ; ಎನಿದ್ದರೂ ಪಾವಾಣಿ. ಆಣೆ ವ್ಯಾಪಾರ. ಅಷ್ಟರಲ್ಲೆ ತೃಪ್ತಿ ಅವರಿಗೆ (ರೇಚಹಂ. ೬೦). [ಪಾವ್ಯ + ಆಣ್ಯ]

ಪಾವಿ (ಗು). ಹೆಜ್ಜೆಗೆ ಸಂಬಂಧಿಸಿದ : ಕಾಲಮಾನದ ಹಾಗೆ ತಾಲಮಾನವ ಪಲ್ಲಟಿಸುತ್ತ ಹೆಜ್ಜೆಯ ಹಾಕುವೊಲು ಪಾವಿ ಪದ್ಧತಿಯಲ್ಲಿ ಪದ ಕೂಡಿ ಬರುವಾಗ ಯಾರಾರೆ ಗುರು–ಲಘು ಎಣಿಸುವರೆ ? (ಸೋಗೀ. ೨೬–೧೬೬). 'ಪಾವ್ಯ' ಪರಾ. [← ಹಿಂ. ಪಾಂವ್]

ಪಾವಿಟ್ಟಿಗೆ (ನಾ). ಒಂದು ಊರಿನ ಹೆಸರು ; ಈ ಬಿಜಾಪುರಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಇರುವ ಈಗಿನ ಸಾಲೋಟಗಿ ಎಂಬ ಊರು : ಪಾವಿಟ್ಟಿಗೆ ಇತಿ ಪ್ರಾತನಾಮ ಗ್ರಾಮೆ? (ಎಇ. IV, ೬೦–೦೯ ; ೪೬೬) ; ಈ ಊರಿನ ನಿಜವಾದ ಹೆಸರು 'ಪಾವಿಟ್ಟಿಗೆ'. ಅಲ್ಲಿಯ ಶಾಲೆಯಿಂದಾಗಿ ಅದರ ಹೆಸರು 'ಶಾರಾಪಾವಿಟ್ಟಿಗೆ' ಯಾಗಿ, ಇದೇ ಮುಂದೆ 'ಸಾಲೊಟಗಿ' ಎಂದಾಯಿತು (ಶಾಇಂ. ೨೦೯ ಆಡಿ). [?]

ಪಾವಿತ್ರ್ಯ (ನಾ). ಶುದ್ಧತೆ ; ಪವಿತ್ರತೆ ; ಶುಚಿತ್ವ : ಸದ್ದಿರದೆ ತುಟ ಬೆರಳಿನೊಳು ಸುಳಿವ ಮಾರುತದ ಪಾವಿತ್ರ್ಯದೊಸಗೆಯನು ತಳೆದು ಬಹ ನೆಲದ ನೆನೆದೊಡನೆ ನೆರೆಗೊಳುವ ನೇತ್ರಾಂಬುತೀರ್ಥಗಳ . . . ಸಂಘಟಿಸಿ ತಪ್ಪಧಾಭಿಸ್ನವಾದೀಶ್ವರಪ್ರಕೃತಿರೂಪಂ (ಮುಶರೀ. ೬೯–೪) : ವೃತ್ತಿಯ ಪಾವಿತ್ರ್ಯದಿಂದ ದೊಡ್ಡ ಹೆಸರು ಬಂದಿತ್ತು (ಕಂಬಹು. ೪೦). [ಸಂ.]

ಪಾವು$_1$, **ಹಾವು** (ನಾ). ೧. ನೆಲದ ಮೇಲೆ ಸರಿದುಕೊಂಡು ಹೋಗುವ ಪ್ರಾಣಿ ; ಸರೀಸೃಪವರ್ಗಕ್ಕೆ ಸೇರಿದ ಒಂದಂ ಜಂತು ; ಸರ್ಪ : ದಕ್ಷಿಣಭಾಗದಾ ಪುದುರೆ ಉಯ್ಯಿನಿತಾಪ × × ಶಾಪದೆ ಪಾವು ಮುಟ್ಟಿ ದೊನ್ . . . ನೋನ್ತು ಭಕ್ತಿಯಿಮ್ ಅಕ್ಷಿಪಣಕ್ಕೆ ರಮ್ಯಸುರಲೋಕ ಸುಕಕ್ಕೆ ಭಾಗಿ ಆ × × (ಎಶ. II, ೨೦–೦ ; ಸು. 700) ; ಈಶ್ವರನಂತೆ ಪಾವಂ ತೊಟ್ಟಿರ್ದ ಬೇತಾಳರಿಂ . . . ಅತಿಭಯಂಕರಾಕಾರಮಪ್ಪುದು (ಕಾಕೃಣಾ. ೩೫೯ ಟೂಪ್ಪಣಿ) ; ತಗುಳ್ದು ಪಾಲನೆಜಿವಿಂ ಪಾವಿಂಗೆ ದಾಯಾದ್ಯರಂ ಪಿರಿಯರ್ಮಾಡಿದಿರ್ (ಕುಕಥಾ. ೨–೬೯). ೨. ರಾಹು : ನೆರೆಯ ಬೆಳ್ದಿಂಗಳನು ಪಾವು ಗಿಡಿದಂತೆ . . . ಎತ್ತಣಿಂದೆರಗಿತೋ ಮೃತ್ಯು ! (ಹೊಂಗಳು. ೩೬–೯). **ಹಾವು** : ೧. ಗರುಡನಂತೆ ಹಾವಿನ ಹಟವಿಗೆಯನಾರಯ್ದು ನೋಡಿಯುಂ (ಗರಾಹು. ೬–೨೬ ಪ) : ಪಾವಿನ ಬಾಯ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಪಾವಿನ ಸಂಗವೇ ಲೇಸು ಕಂಡಯ್ಯ (ಶುಹಾದೇ. ಲ. ೬೯–೦೫೬) ; ಬೇವು ಬೆಲ್ಲ ದೊಳಿಡಲೇನು ಫಲ ಹಾವಿಗೆ ಹಾಲೆಱೆದೇನು ಫಲ (ತ್ರಿಲಿಂಪ. ೦–೬೦ ಕ್ಷಣ); ಎಲೆ ಹಾವೆ ! ಹೊಟ್ಟೆ ಹೊಸೆಯುವ ಜಂತು ! ನಿನಗೆ ಕವಿಯಿಲ್ಲ ; ನಾಲಗೆ ಯೆರಡು ; ಹಲ್ಲೊಳಿದೆ ವಿಷವು (ಉಹ್ಯಾ. ೬೨–೯). ೩. ಒಂದು ಬಗೆಯ ಮೀನು : ಹಾವುಮೀನು : ಬಂಗಡೆ ಹಾವು . . . ಹಂದೆಗನಾನೆಮೊಗ ನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಹಕಥಾ. ೩–೧೩).

[ದೇ.॥ ತವಿ. ಪಾಮ್ಬು ; ಮಲ. ಪಾಮ್ಬು ; ತುಳು. ಹಾವು : ಕೊಡ. ಪಾಂಬ್ : ತೆಲು. ಪಾಮು : ಕೋಲಾ. ನಾಯ್ಕಿ. ಪಾವ್ : ಪರ್ಜ. ಬಾವ್ : ಗಡಬ. ಬಾವ್. ಬಾಮು. / ಪ್ರಾ. ಪಾವ]

ಪಾವ್ಯ (ನಾ). ೧. ನಾಲ್ಕನೆಯ ಒಂದು ಭಾಗ ; ಕಾಲುಭಾಗ ; ಚತುರ್ಥಾಂಶ : ಪಾವ ಗಾಂಜಿ ತೂಕ (ಶುಂಲಯಾ. ೬. ೪–೦೧೧).

'ಪಾವುಸೇರು' ಪರಾ. ೨. ಕಾಲುಸೇರಿನ ಅಳತೆ ಮತ್ತು ಅದನ್ನು ಅಳೆಯುವ ಸಾಧನ : ಮುಂದೆ ಸವಾಸೇರು ಮೂವತ್ತೆರಡು ಚತುಃಷಷ್ಟಿ ಯರ್ಧ ಸೇರರ್ಧಪಾವು ಸಂಧಿಸಿದ ಸೇರು ನಾಲ್ವತ್ತು ಗದ್ಯಾಣಮಂ ಬಾದಿಷದು (ಭಾಸ್ಕರ. ೬೫-೬) : ತೊವೆಗೆ ಹೆಸರು ಜನ ೧ಕ್ಕೆ ಪಾವಿನಲ್ಲು ಕಾಲ ೧ಕ್ಕೆ ಮ ೪೦॥ ಗೆ ಗ ೪ ತುಪ್ಪ ದಿನ ೧ಕ್ಕೆ ಜನ ೧ಕ್ಕೆ ಪಾವು ಆರೆ (ಎಳ. VI, ಕೃಂಗೇರಿ. ೦೦- ಶುಲ ೩೭೨ ; 1652) : ಪಡಿಯಲ್ಲೇ ಹಿಡಿತ ಹಿಡಿಯದವನು ಪಾವಲ್ಲಿ ಹಿಡಿಯೋ ಪಾಪವುಂಟೇ (ಹುಟ್ಕಿತ. ೦೪೨). ೩. ಪಾದ : ಕಾಲು : 'ಪಾವುಗೊಱಡು' ಪರಾ.

[< ಪ್ರಾ. ಪಾಅ. / ಹಿಂ. ಮರಾ. ಪಾವ್. ಸಂ. ಪಾದ]

ಪಾವುಂಜೆ. ಪಾವುಜ (ನಾ). ಒಂದು ಬಗೆಯ ವಾದ್ಯ : ಱಂಚೆಯ ಚಿನುಚಂಪೆ ಕುಕ್ಕುರು ತುಡುಮು ಪಾವುಂಚೆ[ಜೆ] ಕಿಂಕಿಣಿಗಳನೆತ್ತಿ ಜೆಂಜೆಕು ತಕದಿಕ ತೋ ದಿಗಿದಿಮಿಕೆಂದು ರಂಜನೆ ಮಿಗೆ ಕೇಳಿಸಿದರು (ಭರತ. ೦೩-೦೬) : ಕುಕ್ಕುರು ಡುಮುಡುಮು ಪಾವುಂಜೆಯ ಜೀನು ಡಕ್ಕೆ ನಾಟ್ಯಾನಕ ಚಂಪ (ಪಾಸ್ಕರ. ೪೦-೦೦೩). ಪಾವುಜ : ತಾಳ ಮದ್ದಳೆ ಪಾವುಜ ಶ್ರುತಿ ಮುಖ ವೀಣೆ ಸಾಳಂಗ ಶುದ್ಧಗಾನೆಯರ . . . ಮನೆಗಳೊಪ್ಪಿದುವು (ಸೋಕತ. ೩-೩೦). [?. / ಪ್ರಾ. ಪಾವಯ]

ಪಾವುಕೊರಡು 'ಪಾವುಗೊಱಡು' ನೋ.

ಪಾವುಗಿಱು (ಕ್ರಿ). ಹಾವೆಂದು ಭ್ರಮಿಸು : ಹಾವೆಂದು ಎಣಿಸು : ಧೂಪಧೂಮಯಷ್ಟಿಗೆ ನವಿಲೊಸೆದೆಱಗುವುದು ಪಾವು[ಪಾಶಾಂ. ವಿ.ವೆ]ಗೆತ್ತಾ ಪುರದೊಳ್ (ಅಪಶು. ೨-೦೬). [ಪಾವು$_1$+ಗಿಱು]

ಪಾವುಗುಲಿ (ನಾ). ಹಾವನ್ನು ಕೊಲ್ಲುವಂತಹುದು : ನವಿಲು. ಮುಂಗುಸಿ ಮುಂತಾದುವು : ಪಾವುಗುಲಿ ನಕುಲೋ ಮಯೂರೋ ವಾ(ಶಬ್ದಾನು. ೫೪೭ ವ್ಯಾಖ್ಯಾ). [ಪಾವು$_1$ + — ಕುಲಿ$_1$]

ಪಾವುಗೆ. ಹಾವಿಗೆ. ಹಾವುಗೆ$_1$ (ನಾ). (ಮರ. ಚರ್ಮ ಇತ್ಯಾದಿಗಳಿಂದ ಮಾಡಿದ) ಮೆಟ್ಟು : ಪಾದುಕೆ ; ಪಾದರಕ್ಷೆ : ℘ ಸಾಮಾನ್ಯವಾಗಿ ವಿರಕ್ತರು ಧರಿಸುವ ಪಾದುಕೆಗೆ ಈ ಹೆಸರನ್ನು ಹೇಳುತ್ತಾರೆ : ವಿಷಮೋಚಿಕೆಗಳೆಂಬ ಪಾವುಗೆಗಳುಮಭೇದ್ಯಮೆಂಬ ಕವಚಮುಂ . . . ಪದಿವೆಣ್ಣಾಸಿರ ಮ್ಲೇಚ್ಛರಾಜರುಮಾತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ (ಅಪಶು ೧೫-೩ ವ): ಅನಂಗಟಂಕೃತಿಸ್ತರಮೆನೆ ಪೊಣ್ಮೆ ಪಾವುಗೆಯ ಗೆಜ್ಜೆಯ ಮೆಲ್ಲುಲಿ ಬಂದಳಂದಳಂಕರಣಗೃಹಕ್ಕೆ . . . ದೇವಿ ಲೀಲೆಯಿಂ (ಹಂಪ್ರಪು. ೦೨-೬) : ನೆತ್ತರ ತಳ್ತ ಬಲ್ಲಲೆಯ ಬಿಂದಿಗೆ ಪಾವುಗೆ ಪಂಚಮಸ್ವನಂ ಬೆತ್ತದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೫೩೩). ಹಾವಿಗೆ : ಎನ್ನ ನಾಲಗೆಯು ನಿಮ್ಮಯ ಮನ್ನಣೆಯು ಮಹಾನು ಭಾವಿಗಳ ಚರಣಕ್ಕಂ ಹೊನ್ನಹಾವಿಗೆಯು ಮಾಡೆಲೆ ಪನ್ನಗಕಟಕಾ (ಶಂಕಕಂ. ೩); ಎನ್ನ ಮನ ಪ್ರಾಣಗಳು ಹೊನ್ನು ಹಾವಿಗೆಯಾಗಿ ನಿನ್ನ ಚರಣಕೆ ಯೋಗ್ಯ ಮೆಟ್ಟಾಗಲಿ (ಸುಸಾರ. ೦೦-೫) : ಹಿತವಾಗಿ ಬಂದ ಭರತಗೆ ಹಾವಿಗೆ ಕೊಟ್ಟು ವ್ರತವ ಧರಿಸಿದ ಉನ್ನತಮಹಿಮಾ (ಪಸ್ತ್ರೋಸು. ೬-೫). ಹಾವುಗೆ$_1$: "ಪಾದುಕಾ. ಅನುಪದೀನಾ . . ಈ ೨ ಹಾವುಗೆ" (ಹಲಾಯು. ೫೨ ೧೫೬) : ಹೊನ್ನ ಹಾವುಗೆಯ ಮೆಟ್ಟಿದವನ ಮಿಡಿ ಮುಟ್ಟಿದ ಕೆಂಜೆಡೆಯವನ . . . ಕೂಡಲಸಂಗಯ್ಯನೆಂಬವನ (ಬಸವ. ೫೦೩) : ಕೆಲದೊಳಿಕ್ಕಿದ ಹವಳದ ಹಾವುಗೆಯಂ ಮೆಟ್ಟಿ ನಿಲುವುದುಂ (ಬಾರಪು. ೧೧-೪೯ ವ) : ಹಾವುಗೆಯ ಸೀಗುರಿಯ . . . ಕನ್ನಡಿಯ ವಿವಿಧ ಸಖೀವಿಳಾಸಿನಿಯರ ಕದಂಬಕವೈದಿ ತೊಗ್ಗಿನಲಿ (ಕುಪ್ಕಾಅ. ೦೩-೪೩). [< ಪ್ರಾ. ಪಾಉಅ. ಸಂ. ಪಾದುಕಾ]

ಪಾವುಗೊಱಡು. ಪಾವುಕೊರಡು (ನಾ). ಮರದ ಪಾದುಕೆ: ಕಡಾವಿಗೆ : ತ್ರಿವಿಧಲಿಂಗಸ್ನಾನವ ಮಾಡಿ ಪಾವುಗೊಱಡ ಮೆಟ್ಟಿ ಪಾವಡವಾಗಲಿ ಪರ್ಣಾಸನವಾಗಲಿ ವರ್ಭೆ ಬೆತ್ತ ಮೊದಲಾದಾಸನದಲ್ಲಿ ಮೂರ್ತವ ಮಾಡಿ (ಕಸ್ಕರ. ೪. ೬೩-೦೬೬). ಪಾವುಕೊರಡು : ಒಂದೇ ಮರದ ತುಂಡನ್ನು ಕೆತ್ತಿ ಮಾಡಿದ ಪಾದರಕ್ಷೆ : ಮರದ ಅರೆಜೋಡು ; ಪಾವುಕೊರಡು (Sabot. ಇಂಳಿ). [ಪಾವು$_2$ + ಕೊಱಡು (< ಕೊಱಂಡು)]

ಪಾವುಜ 'ಪಾವುಂಜೆ' ನೋ.

ಪಾವುಡ$_1$. ಪವಡೆ, ಪವಾಡ$_2$, ಪಾಗುಡ$_1$, ಪಾವಡ$_1$, ಪಾವಡೆ, ಪಾವಾಡೆ, ಪಾವುಡೆ$_1$, ಪಾಹುಡ$_1$ (ನಾ). ೧. ಬಟ್ಟೆ ; ವಸ್ತ್ರ : ಶಾ ಗಾಂಧಾರಿ ವಲ್ಲಭನಿಳೆಯೊಳಾರುವ ಕಾಣನೆಂಬುದನಳುಕಿ ಕಂಡಳು ತನ್ನ ಕಣ್ಣಿಗೆಪಾವುಡವ ಕಟ್ಟಿ ನಳಿನಮುಖಿ ತನ್ನಾತ್ಮಧರ್ಮದ ಕಳೆಯ ಕೆಡಿಸದೆ ನಡೆವುತಿಪ್ಪಳು (ಸಂಭವ. ೦೪-೨೪); ವರಚಂದ್ರಿಕೆಯ ಪಾವುಡಕೆ ಶೋಭಿಸುವ ಪೊಂಬರಹದ ತುಭ್ರ ದೂಮಟವ ಸ್ಮರಬಾಣಗಱಿಯಂತೆ ನಿಱಿವಿಡಿದುಡಿಸಿದರ್ ದರಹಾಸ ಮುಖಿಗೆ ಸಂಭ್ರಮದೆ (ಸೋಕತ. ೨೩-೦೩); ಪಾವುಡ ಕುಂಚ ಕಾಳಂಜಿ ಕನ್ನಡಿ ನೆಱೆ ಹೂವಿನ ಬೀಸಣಿಗೆಗಳ ಭಾವಕಿಯರು ಪಿಡಿದಾಕ್ಷಣ ಶ್ರೀರಂಗದೇವನ ನೋಲೈಸುತಿಹರು (ಳಂಸಪ. ೬-೦೦೫) : ಮಹಾರಾಜರು ಕುಳಿತುಕೊಳ್ಳುವ ಉಚ್ಚಾಸನದ ಪಾವಟಿಗೆಯಿಂದ ಮೊದಲು ಮಾಡಿ ಓಲಗಸಾಲೆಯ ಮುಂಬಾಗಿಲವರೆಗೂ ದಾರಿಯನ್ನು ಗುರುತಿಸುವಂತೆ ಹಾಕಿದ್ದ ಕೆಂಪು ಮುಖಮಲ್ಲಿನ ಪಾವುಡ (ಶಾಜಯೋ. ೩೬). ೨. ತಲೆಗೆ ಸುತ್ತುವ ವಸ್ತ್ರ; ಪಟಗಾ : ರುಮಾಲು : ಪೇಟ : ತಿಳಿಗಾವಿಯಂಗಿಯಿಂ ಶಾಟಿ ಪಾವುಡ ಗಳಿಂ . . . ರಾಜಿಸಿ ಪೋಪ ಚೆಲುವ ಹರೆಯದ ಸತ್ಯಶೋಧಕನ ವೇಷಮಂ ನೆಲದೊಳೀಕ್ಷಿಪರ ಕಂಗಳ್ತಣಿಯವೇ (ಕುಮಾಪು. ೪-೨೦) : ಈ ಪಾವುಡ ಹರಿದುಬಿಟ್ಟಿದೆ. ಎಂದು ಪಾವುಡವನ್ನು ತೋರಿಸಿದನು (ಇಯಂಕ.೬೨). ಪವಡೆ : ೧. ಇವನೆಲ್ಲಾ ಸಮಾನಂ ಕೊಂಡು ಪುಡಿಮಾಡಿ . . . ಕಂಚಿನ ಹರಿವಾಣದಲ್ಲಿ ಹಾಕಿ ತಾಮ್ರದ ಚೊಂಬಿನಿಂದ ಮರ್ದಿಸಿ ಆಮೇಲೆ ಸುಣ್ಣಾ ಪವಡೆಗೆ ಹಾಕಿ (ಶಾಕುಸಂ. ೩೪-೬). ಪವಾಡ$_2$: ೧. ಜೋಡಿಸಿದ ಜಾಂಬೂನವದ ಪರಿಪಾಡುಗಳ ಪಲ್ಲವದ ಫಳಿಯ ಪವಾಡಗಳ ಕೇತನ ನಿಕೇತನವೆಸೆದವಲ್ಲಲ್ಲಿ (ಕೊರಂಗ. ೫-೨-೨೫). ಪಾಗುಡ$_1$: ೨. "ಮುಂಡಾಸ. ರುಮಾಲ. ಪಾಗು. ಪಾಗುಡ (ಪಾವುಡ). ಪಾಗೋಟೆ. ಪಗಡಿ" (ಕಂಪುಹು. ೯೦). ಪಾವಡ$_1$: ೧. ಶಿವನ ಗ್ರಹಣೆಯಂ ಶೋಧಿಸುವುದಿಲ್ಲವೊ ಪಾವಡವ[ಶಾಕಾಂ. ಡೆಯ]ನಿಕ್ಕಿ (ಬಸಪು. ೪೭-೧೫) : ಕುಂಭವೊಡೆವಡೆ ಮೇಲುಮುಸುಕಿರ್ದ ಪಾವಡದಿ ಅಂಬು ಗಟ್ಟಿಯುಮಾಗಿ ನೆಲಕೆ ಬೀಳದೆ ಇರಲು ಕುಂಭಿನೀಶಗೆ ಪೇಳಲು (ಪ್ರೌಢರಾ. ೦೦-೩೬); ಪೊಳೆವ ದುಗುಲದ ಪಾವಡವನೆಡಬಲದೆ ಪಿಡಿದರು (ಕಾವೇಮ. ೬೫-೧೧). ೨. ಬೋಳುಮಂಡೆಯು ಬೊದಡೆ ಪುಸ್ತಕ ತೋಳಿ ನಲ್ಲಾಧಾರ ಕಾವಿಯ ಹೋಳು ಪಾವಡವಡ್ಡಜಾಡಿಯ ಅಧಿಕ ಷಟ್ಸ್ಥಲದ ಭಾಳಲೋಚನ ಬ್ರಹ್ಮರೆಂಬೊಲು . . . ಸುವಿರಕ್ತಮೂರ್ತಿಗಳೊದಗಿ ತಮ ಲಕ್ಷ (ಶರಲೀ. ೫೯೩-೩); ನೀರಲ್ಲಿ ನಿಂತಿರುವ ನೀಲಿಪಾವಡದಣ್ಣ ನೀರು ಕೆಟ್ಟಾವು ಬದಿಗಾಗೊ (ಹಳ್ಳಿಪಾ. ೬೬). ೩. ಹೆಂಗಸರ ಒಳ ವಸ್ತ್ರ; ಒಳಲಂಗ : (೪). ೪. (?) : ತಾನು ಜಂಗಮಾರ್ಚನೆಯ ಮಾಡುತ ಮಾನಿನಿಗೆ ಮೆಚ್ಚಿದೆಯೆನುತಲಿ ಆಸ್ಥಾನಕೆ ನಡೆವಾಗ ಪಾವಡವ ಮಾಡುತಲಿ (ನಂದಲೀ. ೪ ಸೂಕನೆ). ವಪಾಡೆ : ೧. ಭಾಜನದ ಕಂಠಕ್ಕೆ ಪಾವಡೆಯ ಬಣ್ಣಿಸಲಾಗಿ ವ್ರತಕ್ಕೆ ಬೀಜ ಮೊದಲಾಯಿತ್ತು (ಸರ್ವನ. ೧೮೮-೮೭೫); ಭಾವಿಪುದಜಪಿತ್ತದೊಳಂ ಪಾವಡೆ[ಶಾಕಾಂ. ಟಿ] ಯೊಳ್ ಕಟ್ಟಿ ಪೊಗೆಯೊಳಿಟ್ಟುದನಿಂಬಿಂ ಪಾವಡರ್ದು ಪಿಡಿಯೆ ದುಯ್ಮಱೆ ದಾವಂಗಂ ಮಾಟ್ಟುದೊಂದು ಚೋದ್ಯಮಂ (ಐಮದ. ೬-೫೩); ಮಡಿಕೆ ತುಂಬಿ ಪಾವಡೆಯ ಕಟ್ಟುವರಲ್ಲದೆ ಸರ್ವಾಂಗವ ಸದಾಚಾರದ ಪಾವಡದಲ್ಲಿ ಕಟ್ಟುವರನಾರನೂ ಕಾಣೆನಯ್ಯ (ಸಿದ್ಧೇನ. ೦೦೦-೩೦೭); ಬಟ್ಟಗಳಸಿಗೆಗೆ ನೀರ್ವೊಯಿದು ಪಾವಡೆಯುಮಂ ಕಟ್ಟಿ . . . ಬೇಯಿಸಲು ನೀರ್ವತ್ತಿಗೆಯ

ಪೆಸರನಾಂತು ಸುಖತರಮಾಗಿರ್ಪುದು (ಸೂಪಶಾ. ೦-೦೯). ೨. ಕರದೊಳಗಣ ಕಡುಗತ್ತಿ ಕಂಬಳಿಯನು ಹರುಷದಿಂ ಹೊದ್ದು ಪಾವಡೆಯ ಶಿರದೊಳು ಕಟ್ಟಿದ ಹುಳ್ಳಿಗಾಱನು ಭವ್ಯನೆರವಿಯ ನೋಡುತಲಿರ್ದ (ಜೀವಂಸಾಂ. ೨ ೦೩). ೫. ನಡೆಮಡಿ : ಹಡದಿ : ವಸುಂಧರಾವಳಯಪಾವನಸುಚರಿತ್ರೆಗೆ ಪಾವಡೆಯಂ ಪಾಸಲುಂ . . . ಆತ್ಮೀಯಪರಿಜನಮಂ ಪೆಸರ್ವೆಸರೊಳ್ ಕರೆದು ನಿರವಿಸಿ ಬೆಸಸಿದಾಗಳ್ (ವರ್ಧಮಾ. ೧೧-೩೨ ವ); ಮಿಸುನಿಯ ಹಡಪ ಚಾಮರ ಕುಂಚ ಕಾಳಾಂಜಿ ಪೊಸವಟ್ಟೆಯ ಪಾವಡೆಯ ಜಸವಟ್ಟೊಳಿಗ ದವರ ಮೇಳದೊಳಾಗ ವಸುಧೇಶ ಸಾರಿಗೈದಿದನು (ಕಂಪಪ. ೨೨ ೬೬). **ಪಾವಾಡೆ** : ೧. ಪೊಡೆಯ ಮಾಡಿ. ಪೊದ್ದೆಪಾವಾಡೆ ಮೇಲೆ ತಟ್ಟಿ ಕಾದ ತುಪ್ಪದಲ್ಲಿ ಹಾಕಿ . . . ಕೆಂಪಾಯಿತೆಂದಡೆ ತೆಗೆದುಕೊಂಬುದು (ಭೇಮಸೂ. ೧೬). ೬. ಲಂಗ: ಪರಕಾರ: ಹಿಂದೆ ಸಿಲ್ಕು ಪಾವಾಡೆ ಸಿಲ್ಕು ಜಾಕೆಟ್ಟು ಪೊನಲಾದ ಥಳಕು ಪಳಕುಗಳಿಂದ ಹೌರಾಡುತ್ತಿದ್ದವಳು ಈಗ ಅದೆಷ್ಟು ಸ್ಥಿರಮೂರ್ತಿಯಾಗಿ ಶೋಭಿಸುತ್ತಿದ್ದಾಳೆ ! (ಪತಿ. ೩೯). **ಪಾವುಡ$_1$** : ೧. ಚರಣಾರವಿಂದದ ಪಡಿಗದೆ ತೊಳೆದು ಗಂಧ ಕತ್ತುರಿಯಿಂದ ತಿಗುರಿಕ್ಕಿ ಪಾವುಡೆಯಿಂದೊರಸಿದರು ಸೌಖ್ಯದಲಿ (ಮೋಹತ. ೨೬ ೩); ಕುಡಿಕೆಯಿಂದ ಪಾವಲಿ ತೆಗೆದು ಅರಿಸಿನದ ಪಾವುಡೆಯಲ್ಲಿ ಕಟ್ಟಿಟ್ಟಳು (ಸರ್ವಮಂ. ೧೨೬). ೬. "(ಹೆಂಗಸಿನ) ಲಂಗ. ಪಾವುಡೆ" (skirt. ಇಂಕಸಿ): ನಿರಿಗೆ ಹಿಡಿದ ಪಾವುಡೆಯನ್ನುಟ್ಟ . . . ಹೆಂಗಸರಿಬ್ಬರು ನೆಲವನ್ನುಜ್ಜಿ ತೊಳೆಯುತ್ತಿದ್ದು ಪಕ್ಕದ ಬಾಗಿಲಿಂದ ಹೊರಗೆ ಬಂದರು (ಪುನರು. ೬೯). **ಪಾಹುಡ$_1$**: ೧. ಮಂಟಪದಲ್ಲಿ ಇಡಬೇಕಾದ ಜಿನಾಗಮಕ್ಕೆ ಹೊಸ ಪಾಹುಡವನ್ನು ಕಟ್ಟಿ ಸಿದ್ಧಗೊಳಿಸುವುದು (ಶ್ರೀಯಾಂಸ. ೨೩).

[< ಪ್ರಾ. ಪಾಉಡ./ಸಂ. ಪ್ರಾವೃತ]

ಪಾವುಡ$_2$. ಪಾಗುಡ$_2$. ಪಾವಡ$_2$. ಪಾವುಡೆ$_2$. ಪಾಹುಡ$_2$ (ನಾ). ೧. ಉಡುಗೊರೆ ; ಉಪಾಯನ : ಗೌರವಸೂಚಕವಾಗಿ ಕೊಡುವ ಕಾಣಿಕೆ : "ಪಾವುಡಮುಪಾಯನಮುಪಗ್ರಾಹ್ಯಮುಪವಾ ಪ್ರಾಭೃತಕ ಮೆಂದೆನಿಕ್ಕುಂ" (ಮಂಗರಾ. ೮೦-೮); ಬಂದುವು ಪಾವುಡಂ ನೃಪತಿ ಗೆಂಬುದುಂ (ಕಪಿರಾ. ೦-೦೦೬); ಉತ್ತರಮಧುರಾಪುರಾಧಿನಾಯಕಂಗೆ ಸಂವಾಹದೋಲೆಯಂ ಪಾವುಡಮಂ ಕೊಂಡು ಬಂದು (ವರ್ಧಮಾ. ೨-೪೪ ವ); ಈ ಮಹಿಯೊಳಾವನುಂ ಸಮವಲ್ಲದಂತಿಪ್ಪ ಅರಸುಗಳು ಮೈಯಿಕ್ಕಿ ಪಾವುಡವನಟ್ಟುವರ್ (ಶಾಪುರ. ೨೧೧-೬); ಒಳ್ಳೆ ಗಡ ಪಾವುಡವ ಮಾಸುಕಿಯಲ್ಲಿಗಟ್ಟಿತು (ಕುಷ್ಕಾರ್ಪ್ರೋ. ೩-೩೩). **ಪಾಗುಡ$_2$** : ೧. "ಪ್ರಾಭೃತಂ. ಪ್ರದೇಶನಂ—ಈ ೨ ಪಾಗುಡದ ಪೆಸರು" (ಶಾಸರಾ. ೦೩೩); ಪರಮಂಡಲಿಕರ್ ಪಲರ್ ಪಾಗುಡಂಗಳುಮೋಲೆಗಳುಂ ಪೆರ್ಗಡೆಗಳು ಮನನವರತಂ ಕೂಸುಗಳಂ ಬೇಡಿಯಟ್ಟುತ್ತಿರ್ಪರ್ (ಪಡ್ಡಾರಾ. ೧೩೧-೬); ತನ್ನ ಬಂದ ಬರವನಱಿಯೆ ಬಿನ್ನಪಂಗೆಯ್ದು ತನ್ನ ತಂದ ಪಾಗುಡಮಂ . . . ಅಮಾತ್ಯೋತ್ತಮನ ಕೆಯ್ಯೊಳ್ ಕುಡುವುದುಂ (ಶಾಂತಿಪು. ೨-೨೨ ವ); ನಿಮ್ಮ ತಂದೀ ಪಾಗುಡಮನಿಂತೆ ಕೊಂಡು ಪೋಗಿಂ (ಬಂಹು. ೯-೩೯ ವ). **ಪಾವಡ$_2$**: (ಕಿ). **ಪಾವುಡೆ$_2$** : ೧. ನೃಪಸಂಕುಳಕೆ ಲೇಖಿವ ಬರೆಸಿ ಪಾವುಡೆಗಳನೆಸಗಿ . . . ಹೊಳಲಿಗೈತಹುದೆಂದು ಸಾಱಿಸಲು (ಜೀವಂಸಾ. ೭-೨೦); ಓಲೆಕಾಱರ್ ಬಂದು ಮುನಿಗೆಱಗಿ ಪಾವುಡೆಯುಮಂ ಕಟ್ಟೋಲೆಯುಮನೊಪ್ಪಿಸಿದರ್ (ರಾಮಾಶ್ವ. ೬೯-೨೬). **ಪಾಹುಡ$_2$** : ೨. [ಜೈನ] ಆಗಮಗ್ರಂಥದ ಭಾಗ,—ಪರಿಚ್ಛೇದ,—ಅಧ್ಯಾಯ : ಪ್ರತಿಯೊಂದು ಪೂರ್ವದಲ್ಲೂ ಅನೇಕ ಪ್ರಕರಣಗಳಿವೆ. ಈ ಪ್ರಕರಣಗಳಿಗೆ 'ವಸ್ತು' ಗಳೆಂದು ಹೆಸರು. ಈ ಪ್ರತಿಯೊಂದು ವಸ್ತುಗಳಲ್ಲೂ ಮತ್ತೆ ಇಪ್ಪತ್ತು ಇಪ್ಪತ್ತು ವಿಭಾಗಗಳಿವೆ. ಈ ವಿಭಾಗಗಳಿಗೆ 'ಪಾಹುಡ' ಗಳೆಂದು ಅನ್ನುವರು (ಶ್ರೇಸಪ. ೦೩೬). [<ಪ್ರಾ. ಪಾಹುಡ. / ಸಂ. ಪ್ರಾಭೃತ./ತೆಲು. ಪಾವಡ]

ಪಾವುಡ$_3$ 'ಪಾವುಳ' ನೋ.

ಪಾವುಡ$_4$ 'ಪಾವಡ$_4$' ನೋ.

ಪಾವುಡ$_5$ (ನಾ). ಗೋಧಿಹಿಟ್ಟಿನಿಂದ ಮಾಡುವ ಒಂದು ಬಗೆಯ ಭಕ್ಷ್ಯ,—ಉಂಡೆ : ನೆಱ್ ಸಣ್ಣಗೋದುವೆಯ ಹಿಟ್ಟ . . . ಬಱ್ ಮೊಸರುಕೆನೆಯದಱ್ಕೊಳು ಕಲಸಿವುಂಡೆಯಂತೆಱ್ಯೆ ಪಾವುಡಮಾಯ್ತು (ಸೂಪಶಾ. ೧-೩೩). [?]

ಪಾವುಡಂಗಟುಪು (ಕ್ರಿ). ಕಾಣಿಕೆಯನ್ನು ಕಳಿಸು: ಉಡುಗೊರೆ ಕಳಿಸು : ಸರಸಶೀತಳಪರಿಮಳಮಂ ಪಾವುಗಳಿರ್ದಲ್ಲಿಗೆ ಪಾವುಡಂಗಟುಪುವ ಮಳಯಜ ತರುಗಳುಂ (ಲೀಲಾವ. ೬ ೬೦ ವ). [ಪಾವುಡ$_2$ + ಕಟುಪು (< ಕಟುಪು$_1$)]

ಪಾವುಡೆ$_1$ 'ಪಾವುಡ$_1$' ನೋ.

ಪಾವುಡೆ$_2$ 'ಪಾವುಡ$_2$' ನೋ.

ಪಾವುಣ. ಪಾವಣ$_1$. ಪೌಣೆ (ನಾ). ೧. ಮುಕ್ಕಾಲು ; ಮುಪ್ಪಾಗ: ೭೫ ಚೀಲ ಹಿಡಿದು ನೂರದ ವರಿಗೆ ದರ ಚೀಲಕ್ಕೆ ಪಾವುಣ . . . ಆಣೆ (ಮುಂಬಪ್ಕಾ. ೨೪೧). **ಪಾವಣೆ$_1$** : ೨. ಕಾಲಂಶ ಕಡಮೆಯಿರುವುದು. P ಸಮಾಸದಲ್ಲಿ ಪೂರ್ವಪದವಾಗಿದ್ದು. ಈ ಶಬ್ದ ಮುಂದಿನ ಪದವಾದ ಸಂಖ್ಯೆಗೆ ೧/೪ ರಷ್ಟು ಕಡಮೆಯೆಂಬರ್ಥವನ್ನು ಸೂಚಿಸುತ್ತದೆ : ಈ ಕಾರಣದಿಂದ ದರ ಒಂದು ಪಟ್ಟಿಯಲ್ಲಿ . . . ಪಾವಣೆ ಎರಡು ಆಣೆಯಂತೆ ಕೂಲಿ ಬರದು (ಮುಂಬಪ್ಕಾ. ೨೪೯). **ಪೌಣೆ** : ೩. ಮುಕ್ಕಾಲಿನ ಮಗ್ಗಿ : ಕಾಲು, ಅರ್ಧ, ಪೌಣೆ, ಸವ್ವಾ, ದೀಡೆ, ಅಡೀಚಿಗಳನ್ನೂ ಕಂಠಪಾಠ ಮಾಡಿಸಿದ್ದರು (ಗಾಳಿಪ. ೧೭೮).

[← ಮರಾ. ಪಾಉಣ. ಪಾಊಣ. ಪೌಣ : ಹಿಂ. ಪೌನ, ಪೌನೆ./ ಪ್ರಾ. ಪಾಊನ, ಪಾಓನ./ಸಂ. ಪಾದೋನ]

ಪಾವುಣಿ (ನಾ). ಹಾವುಗಳನ್ನು ತಿನ್ನುವಂಥದು : ನವಿಲು : ಪಾವುಣಿ— ಭುಜಂಗಭುಕ್ ಮಯೂರ ಇತಿ ಯಾವತ್ (ಶಬ್ದಾಮ. ೫೪೬ ವ್ಯಾಖ್ಯಾ).

[ಪಾವು$_1$ + — ಉಣಿ]

ಪಾವುಣೆ. ಪಾವಣೆ$_2$ (ನಾ). ೧. ಅತಿಥಿ : ನಮ್ಮ ಮನೆಗೆ ದೊಡ್ಡ ಪಾವುಣೆ (ಅತಿಥಿ) ಬರುವವರಿದ್ದಾರೆ (ಇತಿಶ್ರೀ. ೭೩). **ಪಾವಣೆ$_2$** : ೨. ಆಪ್ತ : ಸಂಬಂಧಿಕ : ಪಾವಣೇರ ಅಂತ ಹೂವಣ್ಣನ ಮಾರಿ ನೋಡೇ ಬಿಟ್ಟ. ಇಲ್ಲಾದರ ಚಾವಡಿಗಿ ತರಾಂವ ಮೆಟ್ಟಿನ ಹೊರೀ ಸಂಗಡಾ (ಪಸರ್ಗ. ೩೯): ಪಾವಣೇರು (ಆಪ್ತರು)—ಮನ್ಯಾಗ ಪಾವಣೇರು ಬಯಿಂದಾರ (ಮನೆಯೊಳಗೆ ಆಪ್ತರು ಬಂದಿದ್ದಾರೆ) (ಸುವರ್ಣ. ೩೨೫).

[← ಮರಾ. ಪಾಹುಣಾ./ಪ್ರಾ. ಪಹುಣ, ಪಾಹುಣಿಅ./ಪಾಲಿ. ಪಾಹುನ. ಸಂ. ಪ್ರಾಘುಣ]

ಪಾವುದೊಡವು (ನಾ). ಹಾವುಗಳ ಆಭರಣ : ಸ್ಫುರಿಸುವಾತ್ಮಕಳಾತಿಶಯದಿ ಲೋಕವನಲಂಕರಿಸಿಕೊಂಡಿರ್ಪಾ ಮಹಾಮಹಿಮಗಂ ನಿರಂತರ ಪಾವುದೊಡವು ಗಡ ಸಾಕೆಂದು (ಸಂದಿಪಾ. ೦೭-೪೩). [ಪಾವು$_1$ + ತೊಡವು]

ಪಾವುಮೀನ್. ಹಾವುಮೀನು (ನಾ). ಹಾವಿನಂತೆ ಉದ್ದವಾದ ದೇಹವಿರುವ ಒಂದು ಬಗೆಯ ಮೀನು : ಪವಳವಾಯಂ ಬಾಳೆಮೀನ್ ಪಾವುಮೀನ್ ಕಿಱುಮೀನ್ . . . ಎನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೩-೦೦೩). **ಹಾವುಮೀನು** : "ಹಾವಿನ ರೂಪದ. ಮೀನು. ಹಾವುಮೀನು" (Eel. ಇಂಕಸಿ): ನದಿಯ ನೀರಲ್ಲಿ, ಒಂದು ಜಾತಿಯ ಹಾವುಮೀನು (Eel) ಇದೆ. ಇದು ೬-೭ ಅಡಿ ಉದ್ದವಾಗಿದ್ದು, ಆರಂಗುಲ ದಷ್ಟು ದಪ್ಪವಾಗಿ ಬೆಳೆಯುವುದು. ಇದರ ಮೈಯನ್ನು ನಾವು ಮುಟ್ಟಿದರೆ ಸಾಕು, ಪ್ರಾಣಾಪಾಯವಿದ್ದೆ (ಪಾಲಶ್ರ. 1. ೮೦). [ಪಾವು$_1$ + ಮೀನ್$_2$]

ಪಾವುಮೆಕ್ಕೆ. ಹಾವೆಕ್ಕೆ. ಹಾವುಮಕ್ಕಿ. ಹಾವುಮೆಕ್ಕೆ. ಹಾವ್ಮೆಕ್ಕೆ (ನಾ). ಒಂದು ಬಗೆಯ ಮೆಕ್ಕೆಯ ಬಳ್ಳಿ ಮತ್ತು ಬಹಳ ಕಹಿಯಾಗಿ

ರುವ ಅವರ ಕಾಯಿ : ಇಂದ್ರವಾರುಣಿ : p ಇದು ವಿಷಾಪ ಹಾರಿಯಾದುದು : ಪಾವುಮೆಕ್ಕೆಯ ಕಂಪಿನಂತೆ ತಿಪ್ಪೆಯ ನೀರಂತೆ ಬಡವನ ಮಹಿಮೆಯಂತೆ . . . ಪೊಱಗಣ್ಗೆ ರಂಜಿಸುವ ಬಹಿರಾಳಾಪದ ತೊಂಬನೊಲ್ಲದೆ (ರರ್ಮಾಮ್ಯ. ೬-೯೪). **ಹಾಮೆಕ್ಕೆ** : ಹಾಮೆಕ್ಕೆಯ ಹಣ್ಣೊಳತಿಕ್ಷೇಮದೊಳಿರಿಸಿಟ್ಟ ಸುಂಟಿ ಹಿಪ್ಪಲಿ ಮೆಟಸೆಂಬೀ ಮೂಱಂ . . . ನಸ್ಯಂಗೆಯ್ದೆಂ (ಪಶಕಾ. ೯-೦೦೦): p ಇದು ಪ್ರಾಸಕ್ಕಾಗಿ ಮಾಡಿಕೊಂಡಿರುವ ರೂಪ. **ಹಾವುಮಕ್ಕಿ** : ದೊಡ್ಡಹಾಲ್ಮೆಕ್ಕೆ. ಹಾವು ಮಕ್ಕಿಕಾಯಿ. ಇಂದ್ರಾವರುಣಿ (ಮೃತಿಗಿ. ೨೨-೪೦೦). **ಹಾವುಮೆಕ್ಕೆ** : "ವಿಶಾಲಾ. ಇಂದ್ರವಾರುಣೀ—ಈ ೨ ಹಾವುಮೆಕ್ಕೆ" (ಪಾಶಾ. ೦೦೨): ಪದನಱಿದು ಪುರಿದು ತಿಲತೈಲದೆ ನಿಶೆ ಪೆಡೆಯಕ್ಕಿಯೆಂಬಿವಂ ಮೇರ್ಣ ಗೋಮೂತ್ರದೆ ಹಾವುಮೆಕ್ಕೆ[ಪಾಶಾಂ. ಹಾಮೆಕ್ಕೆ]ಯಂ ಬ್ರಹ್ಮದಂಡೆಯು ಮನರೆದು ಪೂಸೆ ಪುಣ್ಗಳ್ ಕಿಡುಗುಂ (ಲೋಕೋಪ. ೯-೬೦): ಫಲವಾದರೇನು ಹಾವುಮೆಕ್ಕೆಯ ಕಾಯಿ (ಬಸಪ. ೦೨೦): ಬೇವು ತಾ ಪರಿಪಕ್ವವಾದರೆ ಹಾವುಮೆಕ್ಕೆಗೆ ಸಾಕ್ಷಿ ಗಡ (ಕುಪ್ಪಾಲ. ೧೭-೧೫): ಒಳಗೆ ಕಾಠಿಣ್ಯವು ಹೊರಗೆ ಸುಪಕ್ವವು ಹಾವುಮೆಕ್ಕೆಯ ಗಿಡದಂತೆ (ಇಂಶಾಪ. ೧೮೮-೨೬). **ಹಾವ್ಮೆಕ್ಕೆ** : ಅದಱೊಳು ಹುಟ್ಟಿದನು ಕೊಲೆಗಡಿಗ ಹಾವಿನ ಹುತ್ತದಲಿ ಹಾವ್ಮೆಕ್ಕೆ ಬೆಳೆದಂತೆ (ಕುಪ್ಪಾರ್ಕ್ರೋ. ೦೪-೦೬). [ಪಾವು$_1$ + ಮೆಕ್ಕೆ$_1$]

ಪಾವುಪೆಡಗೆ (ನಾ). ಹಾವಿನ ಬುಟ್ಟಿ : ಹಾವಿನ ಹೇಳಿಗೆ : (ಕಿ). [ಪಾವು$_1$ + ಪೆಡಗೆ (<ಪೆಟ್ಟಿಗೆ)]

ಪಾವುಸೇರು (ನಾ). ಕಾಲು ಸೇರು : ಸೇರಿನ ಕಾಲುಭಾಗ : ಪಾವು : ಆ ಕನಸಿನಲ್ಲಿ ಅವರ ಸದ್ಗುರುಗಳು ಕಾಣಿಸಿಕೊಂಡು ಅವರಿಗೆ 'ಊಟಕ್ಕಾಗಿ ಪಾವುಸೇರು ತುಪ್ಪವನ್ನು ಬೇಡಿದರಂತೆ' (ಪರಪ. ೦೪೯). [ಪಾವು$_2$ + ಸೇರು$_3$]

ಪಾವುಳ. ಪಾವುಡ$_3$(ನಾ). ದೇವಸ್ಥಾನದ ಪ್ರಾಕಾರದಲ್ಲಿಯೇ ವಾಸಿಸುವ ಕೆಳಪಂಗಡದ ಸೇವಕರ ಗುಂಪು.—ವರ್ಗ : ದೇವರ ತ್ರಿಕಾಲಪೂಜೆಗಂ ತಪೋಧನರ ವಿದ್ಯಾರ್ಥಿಮಾಣಿಗಳಾಹಾರದಾನಕ್ಕಂ ಪಾವುಳಪರಿವಾರದ ಜೀವಿತಕ್ಕಂ ದೇಗುಲದ ಖಂಡಸ್ಫುಟಿತ ನವಕರ್ಮಕ್ಕವೆಂದು ಕೊಟ್ಟ ಅಲ್ಲಿಯ ಘಳೆಯ ಮತ್ತರು ೫೦ (ಪಾಂಡೇಶ್. ೩-೨೨ ಪ: 1047): ಜೀರ್ಣೋದ್ಧಾರ ನವಸುಧಾಕರ್ಮ್ಮಕ್ಕಂ ಪಾವುಳವರ್ಗ್ಗಕ್ಕಂ (ಇಲ. VIII, ೨೦-೨ನೆಯ ಕಲಂ; 1077): ದೇವರಂಗಭೋಗಕ್ಕಂ ಪಾವುಳಕ್ಕಂ ಬಿಟ್ಟ ಪಿರಿಯ ಸೋಗೆಯ ಸೊರು (ಸೌಇಇ. IX-1, ೦೬೦-೬೯; 1092): ಬ್ರಹ್ಮಪುರಿಯ ಬ್ರಾಹ್ಮಣರಿಗೆ ಮತ್ತರು ಹ ೧೦ . . . ಪಾವುಳಕ್ಕೆ ಮತ್ತರು ಹ ೧೦ (ಸೌಇಇ. IX-1, ೨೪೦-೧೪; 1142). **ಪಾವುಡ$_3$** : ಆಹಾರದಾನಕ್ಕಂ ಪಾವುಡಕ್ಕಂ . . . ಬಿಟ್ಟ ಕರಿಯ ನೆಲಂ (ಸೌಇಇ. IX-1. ೧೫೦-೨೯; 1081). [<ಪ್ರಾ. ಪಾಳುಲ./ಸಂ. ಪಾಪಕುಲ]

ಪಾವೆಱೆಯ (ನಾ). ಹಾವುಗಳ ಒಡೆಯ : ಅದಿಶೇಷ : ವಾಸುಕಿ : ಭಾವಿಸೆ ಕೆನೆ ಬಲ್ತಂತಿರೆ ಪಾವೆಱೆಯನ ಮೆಯ್ಯ ಪಾಸೆ ಪವಡಿಸಿ ಸೊಗದಿಂ ದೇವತೆಗಳ ಮೊರೆಯಾಲಿಪ ಠಾವೆನೆ ಪಾಲ್ಗಡಲದೊಂದು ಪರಮಸ್ಥಾನಂ (ಪಕಪ. ೫-೧೪೩): ಅನಂತನೆಂದುಂ . . . ಶೇಷನೆಂದು ನೆಗಟ್ತೆದೆತ್ತು ಮೆಲ್ಲೆಲರ್ಪಟ್ಟಿಯಿಂ ತೀವಿದ ಪಾವೆಱೆಯನೆಂಬ ಮೆಲ್ವಾಸುಗೆಯುಮಂ ಭಾವಿಸಿದಂ (ಪಕಪಂ. ೮೬-೧೫). [ಪಾವು$_1$ + ಎಱೆಯ]

ಪಾಶ (ನಾ). ೧. (ಕಟ್ಟಲು ಉಪಯೋಗಿಸುವ) ಹಗ್ಗ ; ನೇಣು : "ಋಕ್ಷಾಶ ದಾಮಾಹ್ವಯಂ" (ಪಾಪಾರ. ೩೪) : ಸುಖಿಮ ಖಪಾಶದಿಂ ಜೀವರನು ಬಂಧಿಸುವೆ ನಾಂ ಭಾವಜಂ (ಪತ್ರಾಂಗ. ೨೬-೬೨೮). ೨. ಕೊರಳಿಗೆ ಹಾಕಿ ಎಳೆಯುವ ನೇಣಿನ ಕುಣಿಕೆ ; ಹಾಗೆ ಎಳೆಯುವುದಕ್ಕೆ ನಿರ್ಮಿಸಿಕೊಂಡ ನೇಣಿನ ಸಾಧನ : ಒಂದು ಆಯುಧ : ಸುರಪನಗ್ನಿ ಯಮ ನಿರುತಿ ವರುಣ ಮರುತ ಧನದನೀಶಾನ್ಯರೆಂಬವರ ಪವಿಶ್ಯಕ್ತಿದಂಡ ವರಕೊಂತ ಪಾಶ ಧ್ವಜಂ ಖಡ್ಗಶೂಲತತಿವೆರಸಿ . . . ಸೆಳೆದು ಶಹನು ತತ್ತಡೆ ಹರಿಶ್ಚಂದ್ರನೃಪನು (ಹಶಕಾ. ೦-೪೩) ; ಖಡ್ಗ . . . ಪಾಶ . . . ಎಂಬ ಬತ್ತೀಸಾಯುಧಗಳಿಂ (ಪಸಕ. ೨೬೨). 'ಯಮಪಾಶ' ಪರಾ. ೩. ಬಂಧನ ; ಸೆರೆ : ಸಾಕು ಇನ್ನಱಿದೆ ತ್ರಿವಿಧ ಪಾಶವ ಹಱಿದೆ (ಅವಸಂ. ೧೫೭-೬೨೦): ಪಾಶವಱತು ಗುರುವಾಗಬೇಕು ವೇಶವಱತು ಚರವಾಗಬೇಕು (ಶದಗೋ. ೦೧೫-೫೧): ಈ ಪಾಶದಿಂದ ಮುಕ್ತವಾಗುವ ದಾರಿಯಿಲ್ಲವೆ? (ರರ್ಮಸಾ. ೨೬೨). ೪. ಬಲೆ ; ಜಾಲ : "ಪಾಶಃ, ಬಂಧನಗ್ರಂಥಿಃ, ವಾಗುರಾ, ಮೃಗಜಾಳಿಕಾ-ಈ ೪ ಬೆಳ್ಳವಾರಂ" (ಹಲಾಯು. ೯೮-೪೪೩). ೫. ತಲೆಗೂದಲು ; ಮುಡಿ ; ತುರುಬು : "ಹಸ್ತಂ ಪಾಶಂ ಪಕ್ಷಂ ಶಸ್ತ್ರಕಚಪ್ರಚಯವಾಚಕಂ" (ಪಸ್ತುಕೋ. ೭೦-೦೯); "ಹಸ್ತಃ, ಪಕ್ಷಃ, ಪಾಶಃ—ಈ ೩ ಹಿಮ್ಮುಡಿ" (ಹಲಾಯು. ೮೭-೩೭೭); "ಹಸ್ತಕಂ ತುಱುಬು ಹಿಣಿಲು ಪಾಶಂ" (ಮುಗಂಶಾ. ೯೪-೬). ೬. ನಾಶಕ್ಕೆ ಸೆಳೆಯುವ ಆಕರ್ಷಣೆ : ಸಮುದ್ರತೀರದಲ್ಲಿ ಓಡಾಡುತ್ತಿದ್ದ ಅವನಿಗೆ ನೀರಿನ ಸೌಂದರ್ಯವು, ಈಜುವ ಆಸೆಯಿಂದ, ಪಾಶವಾಗಿ ಪರಿಣಮಿಸಿತು (ಕೂಡಿ). ೭. ಲೆತ್ತದ ದಾಳ. ೮. (ಸಮಾಸಗಳ ಉತ್ತರಪದವಾದಾಗ) ಸೌಂದರ್ಯ, ಹೆಚ್ಚಳ, ತಿರಸ್ಕಾರ ಮೊದಲಾದುವನ್ನು ಸೂಚಿಸುವ ಶಬ್ದ : 'ಕರ್ಣಪಾಶ', 'ಕೇಶಪಾಶ' ಪರಾ. ೯. [ಶೈವ] ಶೈವಾಗಮದ ಪಶು, ಪಾಶ, ಪತಿಯೆಂಬ ಮೂರು ತತ್ವಗಳಲ್ಲಿ ಒಂದು ; ಸಂಸಾರಬಂಧನ : ಜೀವನೇ ಪಶುವು, ಅವನನ್ನು ಆವರಿಸಿರುವ ಸಂಸಾರಬಂಧನವೇ ಪಾಶ, ಜೀವನ ಸಂಸಾರಪಾಶವನ್ನು ಕಳೆದು ಉದ್ಧರಿಸುವವನೇ ಪತಿಯಾದ ಪರಮೇಶ್ವರ (ಭಾರದ. ೭೩). ೧೦. ಷಟ್ಪದಾರ್ಥಗಳಲ್ಲಿ ಒಂದು : ಸಕಲಾಗಮಂಗಳಲ್ಲಿಯೂ ಪತಿ ಕುಂಡಲಿನಿ ಮಾಯೆ ಪಶು ಪಾಶ ಕಾಂಕ್ಷೆಯೆಂಬ ಷಟ್ಪದಾರ್ಥಂಗಳುಂ ಅಕ್ಕುಂ (ಪಸಕ. ೭೨). ೧೧. = ಪಾಶಯೋಗ : ನಿಲೆ ಸಪ್ತಗ್ರಹಮೊಂಡೆ ರಾಶಿಯೊಳ್ ಯೋಗಂ ಗೋಳನಾಮಂ . . . ಅವೈದು ಗೇಹದೊಳಿರಲ್ ಪಾಶಂ (ಶಾಶಕಿ. ೧೩-೫). ೧೨. [ನಾಟ್ಯ] ಇಪ್ಪತ್ತುನಾಲ್ಕು ಬಗೆಯ ಸಂಯುತಹಸ್ತಗಳಲ್ಲಿ ಒಂದು : ೧. ಅಂಜಲಿ . . . ೧೫. ಪಾಶ . . . ೨೪. ಅವಹಿತ್ಥ (ಅಭಾವ್ಯ. ೪೮). [ಸಂ.]

ಪಾಶಕ (ನಾ). ೧. ಲೆತ್ತದ ದಾಳ : "ಅಕ್ಷಃ, ದೇವಕಃ, ಪಾಶಕಃ—೩ ಪಾಚಿಕೆಗಳ ಹೆಸರುಗಳು, ಲೆತ್ತಗಳು" (ಸಿದ್ಧಾಂತಿ. ೩೨೦). ೨. ಲೆತ್ತದ ಆಟ ; ಪಗಡೆಯಾಟ : 'ಪಾಶಕಶಾರಿ' ಪರಾ. ೩. (ಸಮಾಸದಲ್ಲಿ ಉತ್ತರಪದವಾದಾಗ) ಬಲೆ ; ಜಾಲ. [ಸಂ.]

ಪಾಶಕಶಾರಿ (ನಾ). ಲೆತ್ತದಾಟದ ಕಾಯಿ ; ಪಗಡೆಕಾಯಿ : ಬಹೌ ನಾಯಿಗಳಿರುವೀ ಗ್ರಾಮದೊಳು ಬಾಲೆ ಪಾಶಕಶಾರಿಯವೋಲೆ ನಿನಗಾಗಿ ಮನೆಮನೆಗಲೆವಂದು ಸುಕುಮಾರಿ ತಿಂದಾವು ನಾಯಿಗಳೆಗರಿ (ಗಾಭಾನ. ೩೫-೩೬). [ಪಾಶಕ + ಶಾರಿ]

ಪಾಶಜ (ನಾ). [ಜ್ಯೋತಿ] ಪಾಶಯೋಗದಲ್ಲಿ ಹುಟ್ಟಿದವನು : ಧನಸಂವರ್ಧನಶೀಲ ಭೃತ್ಯಸುಹೃದಾಢ್ಯಂ ಪಾಶಜಂ (ಶಾಶಕಿ. ೦೩-೦೬). [ಸಂ.]

ಪಾಶಪಾಣಿ (ನಾ). ೧. ಪಾಶವನ್ನು ಆಯುಧವಾಗಿ ಹಿಡಿದಿರುವವನು : ವರುಣ : "ವರುಣಂ ಪಶ್ಚಿಮದಿಕ್ಪತಿ ಶರನಿಧಿಪತಿ ಪಾಶಪಾಣಿ ಯಾದೋನಾಥಂ ವರುಣಾನೀರಮಣಂ [ವಾರಿರಾಶಿ]ನಿಳಯಂ ಪ್ರಚೇತಸಂ ಪೆಸರಿಂದಂ" (ಪಸ್ತುಕೋ. ೬-೪೩). ೨. ಯಮ ; ಅಂತಕ : ನಿನ್ನುಮನಿರಿಸದೆ ಕುರುವಂಶಾನಿಮಿತ್ತರಿಪು ಪಾಶಪಾಣಿ ಸವಿ ನೋಡಿದನೇ (ಗದಾಯು. ೩-೭೯). [ಪಾಶ + ಪಾಣಿ$_2$]

ಪಾಶಬಂಧ (ನಾ). ನೇಣಿನಿಂದ ಕಟ್ಟುವುದು; ಹಗ್ಗದಿಂದ ಬಿಗಿಯುವುದು: ಅಂತು ಕೃತಾಂತಪಾಶಬಂಧಂಗಳಾದಂತೆತ್ತಲುಂ ತಳರದೆ ತೀವ್ರಪತತ್ರಿ ಧರಮಂ ಪೇಱೆ (ಶಾಂತಿಪು. ೪-೧೬೫). [ಪಾಶ+ಬಂಧ]

ಪಾಶಯೋಗ (ನಾ). [ಜ್ಯೋತಿ] ಏಳುಗ್ರಹಗಳು ಐದುರಾಶಿಗಳಲ್ಲಿ ಹಂಚಿಕೊಂಡಿರುವ ಒಂದು ಯೋಗ; P ಒಂದೇ ರಾಶಿಯಲ್ಲಿ ಇರುವ ಗ್ರಹಗಳ ಸಂಖ್ಯೆ ಬೇರೆಬೇರೆಯಾದಂತೆ ಆ ಸ್ಥಿತಿಗೆ ಬೇರೆಬೇರೆ ಹೆಸರುಗಳನ್ನು ಜ್ಯೋತಿಶ್ಶಾಸ್ತ್ರದಲ್ಲಿ ನಿರೂಪಿಸುತ್ತಾರೆ: ಪಾಶಯೋಗದಲ್ಲಿ ಹುಟ್ಟಿದವನು ಹಣವನ್ನು ಅಭಿವೃದ್ಧಿಪಡಿಸುವ ಸ್ವಭಾವವುಳ್ಳವನೂ, ಸೇವಕರು ಮತ್ತು ಸ್ನೇಹಿತರಿಂದ ಕೂಡಿರುವವನೂ ಆಗುತ್ತಾನೆ (ಜಾತಕ. ೧೩-೧೬ ಅಡಿಟಿ); ೫ ರಾಶಿಗಳಲ್ಲಿ ಗ್ರಹರಿರಲೂ ಪಾಶಯೋಗಂ (ಆಯುಟೀ. ೨೪ ೫). [ಪಾಶ+ಯೋಗ]

ಪಾಶವಾರ, ಪಾಶವಾರು (ನಾ). ಒಂದು ಬಗೆಯ ತೆರಿಗೆ: ಮನೆದೆರಿಗೆ ಮೊದಲಾದ ೧೯ ಬಾಬುಗಳನ್ನು ನೇಮಿಸಿದರು. (೧) ಮನೆದೆರಿಗೆ. (೨) ಹುಲ್ಲುಹಣ . . . (೧೬) ಪಾಶಾವಾರ. (೧೭) ಮದುವೆದೆರಿಗೆ. (೧೮) ಉಪ್ಪಿನ ಮೋಳೆ. (೧೯) ಕೌದಿಯ ತೆರಿಗೆ (ಮಹಾಪಂ. ೧. ೧೨೪) **ಪಾಶವಾರು**: ಇವು ಪೂರ್ವಕಾಲದ ತೆರಿಗೆಗಳು: ಮನೆತೆರಿಗೆ . . . ಪಾಶವಾರು. ಗುಳುವಿನ ಪೊಮ್ಮು, ತೆರದ ಬಾಗಿನ ಹೊನ್ನು (ಸಮ್ಮನು. ೨೪೩). [?]

ಪಾಶವಾರು 'ಪಾಶವಾರ' ನೋ.

ಪಾಶವಿಕ (ಗು). ೧. ಪಶುವಿಗೆ ಸಂಬಂಧಿಸಿದ. ೨. ಪಶುವಿನಂತಹ: ಕಾಡುತನದ: ಒರಟುತನವುಳ್ಳ: ಆ ಪ್ರಾಯದಲ್ಲಿ ಎಂಥ ಪಾಶವಿಕ ಆನಂದಗಳನ್ನು ಜಾಗೃತಗೊಳಿಸಿದ್ದಳಲ್ಲ ಆ ವೇಶ್ಯೆ (ಅಶ್ರಮ. ೬). [ಸಂ.]

ಪಾಶವೀಪ್ರವೃತ್ತಿ (ನಾ). ಪಶುವಿನಂತಹ ಒರಟುಸ್ವಭಾವ; ವಿವೇಕದ ಹಿಡಿತವಿಲ್ಲದ, ಪ್ರಾಣಿಸಹಜವಾದ ವೃತ್ತಿ: ಸಂದಿಗ್ಧಜೀವನದ ಹಿಂಸಾಕೃತ್ಯದ ಪಾಶವೀಪ್ರವೃತ್ತಿಯ ಅವಳ ತಂದೆ (ಪುಸರು. ೧೩೦). [ಸಂ.]

ಪಾಶವೀವೃತ್ತಿ (ನಾ). ಪಶುಸಹಜವಾದ ಸ್ವಭಾವ,—ನಡವಳಿಕೆ: ನಿಯೋಗಿಯದು ಪಾಶವೀವೃತ್ತಿ: ಅದು ಶೀನೂನ ದೃಷ್ಟಿಯಲ್ಲಿ ಸುಖದ ಹಾದಿಯಲ್ಲ (ಸಮಜೀ. ೬೬೩). [ಸಂ.]

ಪಾಶಹರ (ಗು). ಬಂಧನವನ್ನು ಪರಿಹರಿಸುವ; ಕಟ್ಟನ್ನು ಬಿಚ್ಚಿ ಮುಕ್ತಗೊಳಿಸುವ: ಮರಿತಮೋಚನಶಿವರು ಲೋಕೇಶ್ವರಶಿವರು ಶ್ರೀಕಂಠಶಿವರುಂ ಪಾಶ [ಪಾಶಾಂ. ಪ] ಹರಶಿವರು (ಬಸಪು. ೫೮-೧೭). [ಸಂ.]

ಪಾಶಹಸ್ತ (ನಾ). ಪಶ್ಚಿಮದಿಕ್ಕಿನ ಅಧಿಪತಿ; ವರುಣ: ನಯನೌಘಚ್ಛಲದಿಂದೆ ನೈದಿಲೆಸಟಂ ಶಕ್ರಂ ಮುಸುಂಕಟ್ಟನೈದೆ ಯಮಂ ಭಾಯೆಯನೊಂದಿ ನಿತ್ತಗಲದಿರ್ಪಂ ಪಾಶಹಸ್ತಂ ಪಯೋಧಿಯನಾಶ್ರೈಸಿದಂ . . . ಆವರ್ತಿಸೆ ತಳ್ತು ನಾಲ್ದೆಸೆಯುಮಂ ಗ್ರೀಷ್ಮಪ್ರತಾಪೋದಯಂ (ಸಂಧ್ರಪು. ೯-೬೭). 'ಪಾಶಪಾಣಿ' ಪರಾ. [ಪಾಶ + ಹಸ್ತ]

ಪಾಶಾಂಡಿ 'ಪಾಸಂಡಿ' ನೋ.

ಪಾಶಾಣ 'ಪಾಸಾಣ' ನೋ.

ಪಾಶಾಣಿ (ನಾ). (ಆಲಂ) ಕಲ್ಲಿನಂತಹ ಮನಸ್ಸಿನವನು: ಕ್ರೂರವ್ಯಕ್ತಿ: ನೀವಿಷ್ಟು ಹೃದಯಹೀನರು, ಚಾಂಡಾಲರು, ಪಾಶಾಣಿಗಳೆಂದು ನನಗೆ ತಿಳಿದಿರಲಿಲ್ಲ (ಕಾವೇರಿ. ೨೦೬). [ಪಾಶಾಣ (< ಪಾಸಾಣ) + —ಇ$_3$]

ಪಾಶಿ$_1$ (ನಾ). ೧. ವರುಣ; ಪಾಶಪಾಣಿ: "ಪ್ರಚೇತಸಂ ವಾರ್ಧಿವಿಭು ಪಾಶಿ ಪ್ರತ್ಯಗ್ಧಿಶಾರಮಣನೆನೆ ವರುಣನಮ್ಮಂ" (ಮಂಗರಾ. ೧೫ ೧೦); ಇಂದ್ರನಗ್ನಿ ಯಮನೈರುತಿ ಪಾಶಿಮರುತ್ಕು ಬೇರಮಂಜುಳ ಶಿತಿಕಂಠನೆಂಬಖಿಳದಿಕ್ಪತಿಗಳ್ ನಡೆದರ್ ನಿಜಾಶೆಯೊಳ್ (ಶಾಕಪು. ೧೬-೩೨೭); ಒಂದೆಸೆಯಿಂದ್ರನದೊಂದೆಸೆಯನಲನು . . . ಒಂದೆಸೆ ಪಾಶಿಯದೊಂದೆಸೆಯನಿಲನದೊಂದೆಸೆ ತ್ರ್ಯಂಬಕಸಖನು (ಶೈರವೇ. ೫-೨೮). ೨. ಯಮ. [ಸಂ. ಪಾಶಿನ್]

ಪಾಶಿ$_2$ 'ಫಾಸಿ' ನೋ.

ಪಾಶಿಸಜಾ (ನಾ). ಗಲ್ಲಿನ ಶಿಕ್ಷೆ: (ಕಿ). [ಪಾಶಿ$_2$ (< ಫಾಸಿ) + ಸಜಾ]

ಪಾಶುಪತ (ಗು). ೧. ಶಿವನಿಗೆ ಸಂಬಂಧಿಸಿದ: ಶೈವಾಚಾರಕ್ಕೆ ಸಂಬಂಧಿಸಿದ: ಸಮಂಚಿತಪಾಶುಪತಸುವ್ರತನಿರತನಂ ಪುಣ್ಯಚರಿತನನು . . . ಕೊಂಡಾಡಿ (ಬಸಪು. ೪೬-೭೨); ಶ್ರೀಶಂ . . . ಪಾಶುಪತ ಸುಬ್ರತದಿನರ್ಚಿಸುತೀಶನಂ ಭಜಿಸುವನು (ಬಸಪು. ೫೪-೬೦). (ನಾ). ೨. ಶೈವಪಂಥಗಳಲ್ಲಿ ಒಂದು: ಕ್ರಮದಿಂ ವರ್ತಿಸುವಾ ಕಾಳಮುಖಾಖ್ಯ ಕಪಾಳಿ ಪಾಶುಪತ ಶೈವರೊಳೋರ್ವ ಮಹಾಬ್ರತಿಗೊರವಂ ರುದ್ರಮಾರ್ಗದಿಂ ನಡೆವರುಟಿದ ಮೂರ್ವರ್ನಡೆಯರ್ (ಸಮಪ. ೧೪-೫೦); ಪಾಶುಪತಾದಿ ಶಾಸನಧಾರಕರು ಬಂದು . . . ತಮತಮಗೆ ಲಿಂಗೈಕ್ಯರುಗಳಾಗೆಯ್ದೆ (ಬಸಪು. ೫೮-೧೫); ಪಾಶುಪತ ಕಾಪಾಲಿಕ ಮಹಾವ್ರತಂಗಳೆಂಬಿವೆ ಆತಿಮಾರ್ಗಿಕ ಶಾಸ್ತ್ರತ್ರಯಮಾಗಿರ್ಪುದು ಅದಱೊಳ್ ಪಾಶುಪತವು ಮಾಯಾಕರ್ಮನಾಮಕ ಪಾಶದ್ವಯಾದಿಗಳಂ ನಿರ್ವಹಿಸುವುದು (ವಿವೇಕ. ೧೧); ಶೈವಾಗಮಗಳು ಒಂದೊಂದು ಬಾರಿ ಶೈವಮತವನ್ನು . . . ಪಾಶುಪತ, ಕಾಪಾಲಿಕ ಮತ್ತು ಕಾಳಾಮುಖಿ ಎಂದೂ ವಿಂಗಡಿಸುತ್ತವೆ (ಶಕ್ತಿಬ. ೧೨೩). ೩. ಪಾಶುಪತ ಪಂಥವನ್ನು ಅನುಸರಿಸುವ ಶೈವ: ಅಲ್ಲಿ ಪಾಶುಪತರು ಧ್ಯಾನಮಾಡುತ್ತಿದ್ದರೆಂದೂ ಹೇಳಿದೆ (ಕಶಾಲಿ. ೧೨೭). ೪. ಒಂದು ಬಾಣದ ಹೆಸರು: ಶಿವನು ಅರ್ಜುನನಿಗೆ ಅನುಗ್ರಹಿಸಿದ ಒಂದು ಮಂತ್ರಾಸ್ತ್ರ: ತುಡು ಪಾಶುಪತಮನೆನೆ ನರನೆಡೆಮಡಗದೆ ತುಡೆ ದಿಶಾಳಿ ನಡುಗಿದುದು (ಪಂಪಭಾ. ೧೧-೧೫೨); ಮೃಡಸಮಾನರು ನೀವು ಪಕ್ಷಿಗೆ ತೊಡಲದೇತಕೆ ಪಾಶುಪತಮಂ (ಬಸಪು. ೨೨-೪೧); ಈತನೆಮ್ಮಯ ಪಾಶುಪತವಿಖ್ಯಾತ ಬಾಣವ ಬೇಡಿತಪದಲಿ ವೀತರಾಗದ್ವೇಷಿಯಾದನು (ಕುಮಾಲಿ. ೬-೨೬). ೫. ಒಂದು ಬಗೆಯ ಸಸ್ಯ; ಕೊಕ್ಕರೆಹೂವಿನ ಗಿಡ: "ಶಿವಮಲ್ಲಿ, ಪಾಶುಪತಃ, ಏಕಾಷ್ಠಿಲಃ, ಬಕಃ, ವಸುಃ—೫ ಬಕಪುಷ್ಪದ ಹೆಸರು; ಕೊಕ್ಕರೇ ಹುವ್ವಿನ ಗಿಡ" (ಸಿದ್ಧಾಂತಿ. ೧೩೦). [ಸಂ.]

ಪಾಶುಪತಾಸ್ತ್ರ (ನಾ). = ಪಾಶುಪತ ೪: ಪೆಱತೇನುಮನೊಲ್ಲೆನೆನಗೆ ನಿಮ್ಮಡಿ ಪಾಶುಪತಾಸ್ತ್ರಮಂ ದಯೆಗೆಯ್ವುದು (ಪಂಪಭಾ. ೮-೨೫ ಪ): ಸಲಿಸು ಪಾಶುಪತಾಸ್ತ್ರವನು ವೆಗ್ಗಳದ ಬೊಮ್ಮಶಿರೋಸ್ತ್ರವನು ಕೈಗೊಳಿಸುವುದು ಕೃಪೆಯುಳ್ಳೊಡೆ (ಕುಮಾಲಿ. ೬-೯೭). [ಪಾಶುಪತ+ಅಸ್ತ್ರ]

ಪಾಶುಪತಿ (ನಾ). ೧. ಪಶುಪತಿ: ಶಿವ: ಈಶತತ್ವ ಬ್ರಹ್ಮಮಯ ಪಶು ಪಾಶುಪತಿಗೆ ಸಮಾನವೇ ತತ್‌ಕೇಶವಂ ಬ್ರಹ್ಮಾದಿ ಪಶುಗಳು (ಬಸಪು. ೫೪-೨೨); ನಿನಗೆ ಪತಿ ಪಾಶುಪತಿಯಿರೆ ತೊಟ್ಟನೆ ಪಶುಗಳಂ ಕೊಲುವ ಮೆಲುವ ಕುಮನದ ಪಶುಕರ್ಮಿಗಳ ದುಃಕರ್ಮಂಗಳೊಳಗಿರಲು ಮನಸಿಚಾಂತಕನಂತವನನುಸಿಕನೆ ಬಿಡುವನೆ (ಬಸಪು. ೬೦-೪೦). ೨. = ಪಾಶುಪತ ೩: ಶೈವ ಸೈವೆಜಗಾದ ಪಾಶುಪತಿ ಪಥವಱಿಯ ಕಾಳಾಮುಖಿ ಕಂಗೆಟ್ಟ (ಜನ್ನವ. ಕ. ೨೫೦-೫೪೫). [< ಸಂ. ಪಶುಪತಿ]

ಪಾಶುಪಾಲ್ಯ (ನಾ). ದನಕರುಗಳನ್ನು ಸಾಕುವಿಕೆ: ಪಶುಪಾಲನೆಯ ಉದ್ಯೋಗ: "ಪಾಶುಪಾಲ್ಯಂ—ಗೋಮಹಿಷ್ಯಾದಿಗಳನ್ನು ಪಾಲಿಸುವಿಕೆ" (ಸಿದ್ಧಾಂತಿ. ೨೭೩); ನಿಖಿಲಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪಣ್ಯಕರ್ಮಂಗಳುಮಂ . . . ಉಪದೇಶಂಗೆಯ್ದು (ಆದಿಪು. ೮-೬೪ ಪ); ಅರ್ಥಕಲ್ಪನೆಯ ಉದ್ಯೋಗಗಳು ಐದುವಿಧ: ೧) ಪಾಶುಪಾಲ್ಯ ಅಥವಾ ಗೋರಕ್ಷ . . . ೫) ಕುಸೀದ—ಲೇವಾದೇವಿ (ಶಾರರ. ೩೫೭). [ಸಂ.]

ಪಾಶುರ (ನಾ). (ತಮಿಳ್‌ಭಾಷೆಯ) ಭಕ್ತಿಗೀತೆ : ಶ್ರೀವೈಷ್ಣವದೇವಸ್ಥಾನಗಳಲ್ಲಿ ವೇದಮಂತ್ರಗಳೊಡನೆ ಆಳ್ವಾರರ ಪಾಶುರಗಳನ್ನು ಹೇಳುವುದು ಅರ್ಚನಾವಿಧಿಯ ಮುಖ್ಯಭಾಗವಾಗಿದೆ (ಶಾರಪ್ರ. ೩೯೯) ; ಈ ಪಾಶುರಗಳನ್ನು ನಮ್ಮ ಜ್ಞಾನವಿಷಯಗಳನ್ನಾಗಿ ಮಾಡಿಕೊಳ್ಳಬಾರದು ಏಂದಲ್ಲ (ಶಚಿಗೀ. ೮೭). [← ತಮಿ. ಪಾಚುರ]

ಪಾಶ್ಚಾತ್ಯ (ಗಂ). ೧. ಹಿಂಭಾಗದ ; ಹಿಂದಣಗಡೆಯ. ೨. ಆಮೇಲೆ ಬರಂಥ ; ತರುವಾಯದ. ೩. ಪಡುವಣದ ; ಪಶ್ಚಿಮದೇಶಗಳಿಗೆ ಸಂಬಂಧಿಸಿದ ; ಪಾಶ್ಚಾತ್ಯ ನಾಗರೀಕತೆಗೂ ಏಷ್ಯಾಖಂಡದ ದೇಶಗಳ (ಪೌರಸ್ತ್ಯ) ನಾಗರೀಕತೆಗಳಿಗೂ ಮೂಲಭೂತವಿಷಯಗಳಲ್ಲಿ ಪರಸ್ಪರ ವೈತ್ಯಾಸಗಳಿವೆ (ಕ್ರಿಯಾಶ. ೧೩೩). (ನಾ). ೪. ಪಶ್ಚಿಮದ ನಾಡಿನವನು ; ಪಶ್ಚಿಮದೇಶಸ್ಥ ; ಸಮುದಾಯಧರ್ಮಪ್ರಜ್ಞೆ ಪಾಶ್ಚಾತ್ಯರುದಶ್ವಸಾಧನದೊಳಾದುದು ದರ್ ತುಮುಲಂ ಮಾಹಾಹವಂ (ಶಾಂತಪ. ೦೦-೩೩). [ಸಂ.]

ಪಾಶ (ನಾ). ಬಲೆ ; ಜಾಲ : ಕೌರೀಕ್ಕೊಗ್ಗುವದು ಲೋಕಂ ಕೌಳಿಕೊಗ್ಗುವದು ಪಾಶ ವಿಶಾಲಮೋಹಕ್ಕೊಗ್ಗುವದು ತತ್ವವಿದಂ ಪೊಗದರೆ ಕೇಳಲಾರದು (ಪಪೀಚ. ೧೧-೭೦). [ಸಂ. ಪಾಶಾ]

ಪಾಶೆ (ನಾ). ೧. ಬಲೆ ; ಜಾಲ. ೨ ಪಾಶಗಳ ಸಮೂಹ : ನೇಣುಗಳ ಗುಂಪು. ೩. ಹೋದ ಕೂದಲು : ಜಡೆ : ವೇಣಿ. [ಸಂ. ಪಾಶಾ]

ಪಾಷ ‘ಪಾತಶಹ’ ನೋ.

ಪಾಷಂಡ (ಗಂ). ೧. ವೈದಿಕಸಂಪ್ರದಾಯವಿರೋಧಿಯಾದ ; ಧರ್ಮಲಂಡವಾದ. (ನಾ). ೨. ವೇದವಿರುದ್ಧವಾದ ಮತ ; ಧರ್ಮಲಂಡ ಮತ ; ವೇದಶಾಸ್ತ್ರದ ಹೊಲಬನಱಿಯದೆ ಭೇದವಾನಂ ಮಾಡಿ ಪಾಷಂಡಿ ಮತದಲಿ ನಡೆದು ದಂಭಾಚಾರಪರನಾಗಿ . . . ಬಿದಿವ ಬೀಳಗೆ ಬೋಧೆಯೇತಕೆ (ಅಷ್ಟಕ. ೦-೩೦). ೩. ವೈದಿಕಸಂಪ್ರದಾಯವಿರೋಧಿಯಾದ ಮಿಥ್ಯಾಮತನು ; ಪಾಷಂಡಮತದ ಅನುಯಾಯಿ : ಪೆಸ್ಲ(ಚೆ) : ಮುಟ್ಟಾಳ–ಪಾಷಿ, ಪತಿತ–ಪಾಷಂಡರ ಅಂತ್ಯಗತಿಯೇ ಜ್ಞಾನಿ–ವಿಜ್ಞಾನಿ, ಪಂಡಿತ—ಪರೋಪಕಾರಿಗಳಿಗೂ ಉಂಟಾಗುತ್ತದೆ (ಕವಾಗ್ರ. ೭) ; ಈ ಚಕ್ರೇಶ್ವರನು ಶುದ್ಧ ಪಾಷಂಡ (ಕ್ರಿಶಾಹು. ೦೪೦). ‘ಪಾಖಂಡ’ ಪರಾ. [ಸಂ.]

ಪಾಷಂಡಮತ (ನಾ). = ಪಾಷಂಡ ೨ : ಈ ಪುಣ್ಯದೇಶವಲ್ಲಿ ನಮ್ಮ ಪುಣ್ಯಕ್ಕೆ ವಿರುದ್ಧವಾದ ತೊಂಬತ್ತಾರು ಪಾಷಂಡಮತಗಳಿವೆ (ಕ್ರಿಪಾ. ೧-೦೭೦). [ಪಾಷಂಡ + ಮತ]

ಪಾಷಂಡಿ (ನಾ). ೧. = ಪಾಷಂಡ ೩ : ಸಂನ್ಯಾಸಿ ಪಾಷಂಡಿಯಾವ ಕಾಪಾಲಿ ಮರುಳಾಗಿ ತಿರುಗಿದ (ಪಪ್ರಕ. ೪. ೨೫೦-೨೪೩) ; ಮೋಕ್ಷೋಪಾಯಮಜಾನಂತಂ ಯದ ಭಿಕ್ಷುವೆ ಪಾಷಂಡಿ (ಪಪಾರ. ೪೭೫) ; ಜೋಗರು ಚಂದ್ರಮನು. ಸೋಂಬಂ ಪಗಲಂ. ಪಾಷಂಡಿ ವೇದಂಗಳಂ ಪಲುಪಾಂತಿರಕ್ಕುಂ (ಶಾಪ್ರ. ೫೪-೬) ; ಧರ್ಮಸಮನ್ವಯದ ನಾಡಿನಲ್ಲಿ ಪಾಷಂಡಿಗಳ ಅನಾವಶ್ಯಕವಾಗಿತ್ತು (ಶಾಕೋರ. ೪೬). ೨. (?) : ಬೀದಿಬೀದಿಯೊಳಲ್ಲಮೋಕಿಯುಂ ಗುಂಪಿಯುಂ ಆದಮೊಪ್ಪಿದುದು ಪಲತೆಱದ ಪಾಷಂಡಿಯುಂ (ಅಪು. ೪-೭೮ನೇ). ‘ಪಾಖಂಡಿ’ ಪರಾ. [ಸಂ. ಪಾಷಂಡಿನ್]

ಪಾಷಾಂಡಿ ‘ಪಾಸಂಡಿ’ ನೋ.

ಪಾಷಾಣ (ನಾ). ೧. ಕಲ್ಲು ; ಶಿಲೆ : “ಶಿಲೆ ಪಾಷಾಣಂ ಗ್ರಾವೋಪಲಾಶ್ಮ ದೃಷದಾಖ್ಯಮಕ್ಕುಂ” (ಶಸ್ತುತೀ. ೨೮-೪) ; ಆ ವಾಕ್ಯದುಂ ವಿಜ್ಞಾನದೆಯುಯುಪ್ಪೊಡೆ ಪೂರ್ವೋಕ್ತದೋಷಪಾಷಾಣಸಂಚೂರ್ಣಿತಮಪ್ಪಿಲ್ಲೆ (ಅಭಿ. ೨-೦೦ ಕ) ; ನೀಳಾದಿ ಪಾಷಾಣಸಂಕುಲದೊಳ್ ದುರ್ವಿದರಂತು ಪೊಲಿಸುವೆನೇ ರೂಪಂ ಯಶೋಭದ್ರೆಯಾ (ಪಚಾಪು. ೪-೪೪) ; ಪುಣ್ಯವಿಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ನೋಡಯ್ಯ (ಅಪಪು. ೨೦೭-೧೨೨) ; ನಿರ್ದೈವರಂಗೈತಳಕ್ಕೆ ಬಂದರೆ ಪರುಷ ಪಾಷಾಣ (ಶುಪ್ರಾಕ್ರೀ. ೦೪-೪೬) ; ಪರ್ವತಗಳ ಹೊಟ್ಟೆಯೊಳಗೆ ಕಬ್ಬಿಣ ಮುಂತಾದ ಲೋಹಗಳುಳ್ಳ ಪಾಷಾಣಗಳು (ಅದುರುಗಲು) ಇರುತ್ತವೆ (ಮುಖಾದಿ. ೬-೪೧). ೨. ಮಣಿ : ರತ್ನ : ಪಾಷಾಣಪರೀಕ್ಷೆವಂತನಂತೆ . . . ಗುರುವುಳ್ಳವರ ನಿಜವೀತುಟು (ಶಸಾ. ೪೨೬). ೩. ಒಂದು ಬಗೆಯ ವಿಷ : ‘ಗಾಲಿಪಾಷಾಣ’ ಪರಾ. [ಸಂ.]

ಪಾಷಾಣದಾರಣ (ನಾ). ಕಲ್ಲನ್ನು ಸೀಳುವ ಸಾಧನ : ಉಳಿ : ಟಂಕ : “ಟಂಕಃ . ಪಾಷಾಣದಾರಣಃ . ೨ ಕಲ್ಲು ಕಡಿಯುವ ಉಳಿಯ ಹೆಸರು” (ಸಿಂಶ್ಯಂಕ. ೩೦೩). [ಪಾಷಾಣ + ದಾರಣ]

ಪಾಷಾಣಬೇರು (ನಾ). ಒಂದು ಬಗೆಯ ಸಸ್ಯ : “ಪಾಷಾಣಬೇರು. ಕಿರಿಯಾತು” (ಪಸ್ಯಕ. ೬೪). [ಪಾಷಾಣ + ಬೇರು (< ಬೇರ್)]

ಪಾಷಾಣಭೇದಿ (ನಾ). ಒಂದು ಬಗೆಯ ಸಸ್ಯ : ಕಲ್ಲುಕರಗ : ಚಕ್ಷುರೋಗಕ್ಕೆ . . . ನೆಲ್ಲಿಯ ಚಿಟ್ಟು. ಪಾಷಾಣಭೇದಿ. ನೇಜಲು ತ್ಯಕ್ಕೂಗಾಯ ಕಷಾಯಂಗಂ ಮಾಡಿ ತೊಳೆಯುವುದು (ಪತ್ಯಕ. ೦೭೦) ; ಏಪಿಂತಿಕೆ ಬೇರು. ಕಗ್ಗಿಬೇರು. ಪಾಷಾಣಭೇದಿ ಇವುಗಳನ್ನರೆದು ಮಜ್ಜಿಗೆಯಲ್ಲಿ ಕದಡಿ ಇಂಗಸಕ್ಕೆ ಕಾಯಿಸಿ ಕುಡಿಯೆ ಶೀತಜ್ವರಂ ತೀರ್ಗುಂ (ಸಚಿ. ೬೮). [ಸಂ. ಪಾಷಾಣಭೇದೀ]

ಪಾಷಾಣಸಂಧಿ (ನಾ). ೧. ಬಂಜೆಯಲ್ಲಿರಬಹುದಾದ ಬಿರುಕು : (೫). ೨. ಗವಿ ; ಗುಹೆ : “ಗುಹಾ. ಪಾಷಾಣಸಂಧಿಃ . . ಈ ೨ ಗುಹೆ” (ಹಶಾಮು. ೨೮-೦೩). [ಪಾಷಾಣ + ಸಂಧಿ]

ಪಾಷಾಣಹೃದಯ (ನಾ). ಕಲ್ಲುಮನಸ್ಸಿನವನು ; ಕಲ್ಲೆದೆಯವನು ; ಕಠಿಣಹೃದಯವಿಷಾದವನು : ಪಾಷಾಣಹೃದಯರಲ್ಲೆದೆ ಮೂಡಿಸಿ ಪುತ್ಕಾಪ್ರಮಂ ಪರೀಕ್ಷಿಸುಗೆ ಗುಣಾಸ್ಪೋಪಿಗಳಲ್ಲೊದೆ ಕನಸಿಸಿಕಾರದೊಳೇಂ ನಿಷಪ್ರಪಂಚಮಜಿಸನರೊಳರೆ (ಅಂಡಾವ. ೧-೬೪). [ಪಾಷಾಣ + ಹೃದಯ]

ಪಾಸ್ ‘ಪಾಸ್ಯ’ ನೋ.

ಪಾಸ$_1$. ಪಾಸ್ಯ. ಹಾಸ$_1$. ಹಾಸ್ಯ (ನಾ). ಹಗ್ಗ ; ನೇಣು : ನಾಯುಂ ಬಿಡು ಸಮಿಸುಂ ದೀವಂಗಳಂ ಪಾಸದಿಂ ವಾಗುರಿಯಿಂ ಬೇಸು (ಜಗ. ೦೬-೦೭) ; ಓಸರಿಪೆ ಜಗದ ಪಾಸವಿದೆಂಬಂತೆ ನೀಳ್ದ ಕೆಜೆಪೆಗಳೊಳಂ (ಅಪ್ಪಾಕಾ. ೦೬೮) ; ಅವಂ ತಾಂ ಪಾಸದೊಳರ್ದ ಜಾಯೆಯಲಂ ತೋಜಿಸಿ (ದಪಾ. ೨-೧೦೬೮). **ಪಾಸ್ಯ** : ಆ ಕುಕ್ಕುರಂಗಳಂ ಕಟ್ಟುರ್ವ ಪಾಸಿನ ನೇಣಂ ನಿಮ್ಮ ಕರ್ಮವ್ಯಾಪಾರದೊಳ್ ಬಂಧಿಸಿಕೊಳ್ಳಿ (ಕಂತಕಾ. ೨೦-೩). **ಹಾಸ**$_1$: ಬಿಡಿವಿಡಿಸುತ್ತ ಬೇಡರು ನಾಯ ಹಾಸಮಂ ಪಿಡಿವ . . . ಪೆರಸುವೆ ಬಲಂ ಕಿಗ್ಗಜ್ಜಿಕ್ಕೆ ನೋಡಿತ್ತು ನಾಲ್ಕಪೆಯೆನಲು (ಕಾಶಾ. ೬-೪) ; ಹಾಸಗಳ ಪಿಡಿವಳೆಂ ನಾಯ್ಗಳ ಬೀಸುವಲಿಗಳ ... ಬೀಸಿದರು ಬೇಂಟೆಗರು (ಕುಪ್ರಾಕಿ. ೬-೯) ; ಆ ನಾಯಿಗಳುಪ್ಪಿಗಪೋಡಲು ನಾಯ ಹಾಸದ ಕಳಚಿದರು (ಪೋಚಕ. ೧೯-೦೪) ; ಒರ್ವ ಪುಳಿಂದ ತನ್ನ ಪೆಸರ ಪೇರಿದಿಯ ಹಾಸಮಂ ಕಳಚಿ ಪೈರಪಡಿ ಕೈ ಚಿಟುಕೆಗೆಯ್ದು ಪುಲ್ಲೆಯಂ ತೋಜಿ ಬಿಡಲು (ರಾಪಶಿ. ೪ ೦೬೭). **ಹಾಸ್ಯ** : “ಕುಕ್ಕುರಂಗಳಂ ಬಂಧನದೊಳಂ ತಳ್ದದೊಳು ಹಾಸ” (ಪಶ್ವಪು. ೧೧೧) ; ಕೊರಳ ಹಾಸಂ ಬಿಡಲೊಡನೆ . . . ಕಂಪಿಸುವಷ್ಟಿಸುತಂ ಜಾಯೆಯಂಗಳು ಪಾಪುವೇಗದಲಿ ಪರಿದು ಕವಿಯಲು (ಪಹ. ೪೪-೪೪) ; ಪೆಸರ ನಾಯ್ಗಳ ಹಾಸ ಹಜ್ಜಾಮ್ಬಸದಲುಳಿಗದಪಡಿಲ ಪಿಡಿಯ್ಕಗ ಬಂಸುನಪ್ಪ ಪಪಪಿಬಾಗಳೊಪೆಪಪ್ಪ ಪೆದೆಯ ಹಂದಿನರಿ (ಶುಪ್ರಾಕಿ. ೦೩-೩೦) ; ಕಾಲ ಬಿಣ್ಣಿಗಳ ಬಯಿಕೊಲು ಹೊರಳಿಗಳ ಸೊಪ್ಪಿನುಡುಗೆಯು ಹಾಸುಗಳನಾರಿತಾ ಪರಿಪ ಕಾಣ್ಮಿಗಳ ಶ್ವಾಪರಿಗಣಂ ಬಿಡದೆ ಪೊಜಪಟ್ಟುದಾಕ್ಷಣಂ (ತಪು. ೫೩-೦೦).

[< ಪ್ರಾ. ವಾಸ./ಸಂ. ಪಾಶ]

ಪಾಸ್ಯ 'ಪೋಸ' ನೋ.

ಪಾಸಂಗ (ನಾ). ೧. ತಕ್ಕಡಿಯಲ್ಲಿ ಪೇರು ಕಟ್ಟುವ ಕಾಣಿ. ೨. ತೀರ ಅಲ್ಪವಾದುದು,—ಕಡಮೆಯಾದುದು : ಒಂದು ಜೀವಕ್ಕೆ ಇನ್ನೊಂದು ಜೀವವು ಕೊಡಬಹುದಾದ ಆನಂದದ ಪಾಸಂಗಕ್ಕೆ ನಿಖಿಲಕಲಾನಂದವೂ ಬಾರದು (ಸಾಹಿಸಂ. ೨೧) ; ನಮಗೆ ತಿಳಿದೆಲ್ಲ ಸಂಗತಿಗಳನ್ನು ಕೂಡಿ ಹಾಕಿದರೂ ತಿಳಿಯಬೇಕಾದುದರ ಪಾಸಂಗಕ್ಕೂ ಸರಿಹೋಗುವುದಿಲ್ಲ (ವಿಶಾಮಂ. ೩೦).

ಪಾಸಂಗಕ್ಕೆ ಹತ್ತು = ಸರಿಸಮಾನವಾದ ಯೋಗ್ಯತೆಯನ್ನು ಪಡೆ ; ಸದೃಶವಾಗು : ಅದರ ತಲೆಯೊಳಗಿನ ಮಿದುಳು ನಮ್ಮ ಮಿದುಳಿನ ಪಾಸಂಗಕ್ಕೆ ಹತ್ತುವ ಹಾಗಿಲ್ಲ (ಮುಂಬಯಿ. ೬-೩೦೦) ; ವಿಷ್ಣುವರ್ಧನನು ಪುಲಿಕೇಶಿಯ ಪಾಸಂಗಕ್ಕೆ ಹತ್ತುವಂತಹನಿರಲಿಲ್ಲ (ಈಶಸಂ. ೯೦).

[← ಪಾರ. ಹಿಂ. ಮರಾ. ಪಾಸಂಗ್]

ಪಾಸಂಗಿ 'ಪಾಸಂಗೆ' ನೋ.

ಪಾಸಂಗೆ, ಪಾಚಿಕೆ, ಪಾಸಂಗಿ, ಪಾಸಗೆ$_1$, ಪಾಸುಗೆ$_2$, ಹಾಸಂಗಿ, ಹಾಸಗಿ (ನಾ). ೧. ಜೂಜಿನ ದಾಳ ; ಲೆತ್ತ ; ಪಗಡೆಯ ದಾಳ ; ಅಕ್ಷ : ದುರ್ಯೋಧನನೊಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂಗೆಯಂ ಪೊರಳ್ಚಿ . . . ದಾಯಮನಾಡೆ (ಪಂಪಭಾ. ೬-೭೧ ಪ). **ಪಾಚಿಕೆ** : ೧. "ಅಕ್ಷಃ, ದೇವಕಃ, ಪಾಶಕಃ—೩ ಪಾಚಿಕೆಗಳ ಹೆಸರು, ಲೆತ್ತಗಳು" (ಸಿದ್ಧಾಂತಿ. ೩೨೦). **ಪಾಸಂಗಿ** : ೧. ಸಾರಿಯನಿಡುತ ತಪ್ಪಿದೆನೆಂದೊ ಪಾಸಂಗಿಗಳ ನಾನಿಂತೊಂದನೊಂದಂ ಪಿಡಿದು ತಪ್ಪಿಸಿ ಹಾಯಿಕಿದೆನೆಂದೊ (ಬಸಪು. ೪೩-೦೩); ಅಂತು ಲಜ್ಜಾನತಾನನೆ ನೆತ್ತದಾಟಮನುಳಿದು ನೆತ್ತವಲಗೆಯ ಮೇಲೆ ಪಾಸಂಗಿಗಳ ನೊಯ್ಯನಿರಿಸಿ (ವೃಷಪ. ೨೯-೩೨ ಪ). **ಪಾಸಗೆ$_1$** : ೧. "ದುಂದುಭಿ ಮೃದಂಗಮುಂ ಪಾಸಗೆಯುಂ" (ಪಸ್ತುಕೋ. ೦೨೨-೨೬) ; ಭಯಮಱಿಯದ ಕಲಿಯುಂ ಚಾಗಿಯುಮೆನಿಸದೆ ನಾಡೆ ಲೋಭಿಯುಂ ಪಂದೆಯುಮಾಗಿಯೆ ಬಾಟ್ವಂಗಲ್ಲದೆ ಸೂಳೆಯ ಕಣ್ ಪಾಸಗೆಯ ಕಣ್ಣುಮೇನುಱುಗುಗುಮೇ (ಪಂಪಭಾ. ೬-೭೩) ; ಅಂಗುಳೀನಖಚಯಕಾಂತಿಗಳನವಗಯ್ಸಿ ಸಲೆ ಪಾಸಗೆಯ ದೆಸೆದೆಸೆಗೆ ಪೊರಳ್ಚಿದಂ ಮತ್ತೊರ್ವಂ (ಶಾಂತಿಪು. ೩-೦೦೩) ; ಆಡಲೊಸೆದು ಪೂಡಿ ಸಾರಿಯನೋಸರಿಸಿ ಪಾಸಗೆಯನಿಕ್ಕಲ್ (ವೇಮಪು. ೦೦-೨೮ ಪ). **ಪಾಸುಗೆ$_2$** : ೧. ಒಯ್ಯನೆ ಪಾಸುಗೆಗಳನಂತಿರಿಸಿ . . . ನಗುವುಜ್ಜುಗವೇನ ದನುಸುರುಸುರೆಂದಾ ಸಜ್ಜನದಲೆವಣಿ ತನ್ನಿನಿಯನ ಸಿರಿವಜ್ಜೆಗಳಂ ಪಿಡಿದು (ಕಾರ್ಕಂಡೇ. ೩-೦೬). **ಹಾಸಂಗಿ** : ೧. "ಅಕ್ಷಃ, ದೇವನಃ, ಪಾಶಕಃ—ಈ ೩ ಹಾಸಂಗಿ" (ವಾಚಿಕಾ. ೬) ; ಹಾಸಂಗಿಯನಿಳಿಪುತೆ ಹೊರೆಯಿಳಿದಳ್ ಲೇಸಾಯ್ತಾಟವೆನುತ್ತುಂ ನುಡಿದಳ್ (ಕಾರ್ಕಳ. ಹ. ೦೬೭-೨೩) ; ಹಲಗೆಯೈ ಕುರುಭೂಮಿ ಕೌರವಕುಲದ ತಲೆ ಸಾರಿಗಳು ನೆಱೆಯಲಿ ಗೆಲಲು ಬಂದೆನು ಕೊಳ್ಳು ಹಾಸಂಗಿಗಳನು (ಕುಮ್ಮಾರ್ಯೂ. ೦೦-೪೯); ಕರಗಿ ಕಂದುತ ಮನವಿಳಿದು ಲೆತ್ತದ ಹಾಸಂಗಿಯನಂತಿರಿಸಿ . . . ಇಂತೆಂದಳು (ಶೃಂಸೂ. I, ೪೬) ೨. ಪಗಡೆಯ ಹಾಸು ; ಪಗಡೆಪಟ್ಟ : ಹರಹು ಹಾಸಂಗಿಗಳನಾಡುವೆವು (ಪಳಸ. ೪-೨೬) ; ಲೋಕೇಶನಾ ಪುರಲಕ್ಷ್ಮಿಯಾಡಲ್ಕೆಂದು ಹಾಸಿದ ಹಾಸಂಗಿಯಂತೆ ನಾಕಲೋಕವ ಜಱೆವುತ ಸೊಬಗಿನಿಂದಾನೇಕ ಚವ್ವೀದಿ ರಾಜಿಪುದು (ಸ್ಥಾನಪ. ೦-೦೨೬) ; ಒಂದೆಡೆಯಲ್ಲಿ ಹಾಸಂಗಿಯಂ ಪಾಸಿದಂದದಿಂದೆ . . . ಒಪ್ಪಿದುವು ಪೂಗಿಡುಗಳು (ಶೇಷರಾ. ೭-೦೨) ; ಹಾಸಂಗಿಯನ್ನು ಹಾಸಿದರು. ಸಾರಿಯ ಸಾಲನ್ನು ಜೋಡಿಸಿದರು (ರಾಜಸೂ. ೯೬) ; ಹಗಲಿರುಳ ಹಾಸಂಗಿಯೊಡ್ಡಿ ಮಾನವರಂ ಬಿಸುಗೆಯಾಗಿಸಿ ನಿಯತಿಯಾಡಿಸುವುದವರಂ (ಗಿಳಿಪಂ. ೦೨೨-೩೩). **ಹಾಸಗಿ** : ೧. ಇಳೆಯಾಧಿಪರ ಮನವನರಿದಾ ನೆತ್ತವಲಗೆಯ ಶಕುನಿ ತಂದಿರಿಸಿ ನಿಲಿಸಿ ಸಾರಿಯನು ಹಾಸಗಿಯನೀಯಲು ಕೈಗೆ ಚಲದಂಕರಂದಾಡಿದರು (ವೇಮಪಂ. ೨೪-೨೬).

[< ಪ್ರಾ. ಪಾಸಗ./ಸಂ. ಪಾಶಕ./ಪಾಲಿ. ಪಾಸಕ]

ಪಾಸಂಡಿ, ಪಾಶಾಂಡಿ, ಪಾಷಾಂಡಿ (ನಾ). ೧. ವ್ರತಿ : ಸಂನ್ಯಾಸಿ : ಲೇಸೆನಿಸಿದ ಮೂಱುಮನಾಶ್ಲೇಸೆಯೊಳಂ ಕಱೆಯಲಱಿಗೆ ನೀರ್ಗಮದುಚಿತಂ ಪಾಸಂಡಿಗೆ ಶಿಶುಗಳ್ ಸಂತೋಸದೆ ತಾನಿರ್ಕುಮೆಂದನೊಳ್ಪಿನ ಱಟ್ಟಂ (ಅಶ್ವಸು ೬-೪೩). ೨. ಪಾಷಂಡ ೩ : ಪಾಷಂಡಿ ಪಾಸಂಡಿ (ಶಮರ. ೨೩೩ ಪ್ರಯೋ). **ಪಾಶಾಂಡಿ** : ೨. ಪಾಶಾಂಡಿಗೆ ಲೋಕವಿಲ್ಲ. ಪಾಷಾಣಕ್ಕೆ ರೋಗವಿಲ್ಲ (ಗಾರ). **ಪಾಷಾಂಡಿ** : ೨. ಪಾಷಾಂಡಿಗಳಪ್ಪ ಪಾಶವ ಹೊತ್ತು ತಿರುಗುವ ವೇಷಧಾರಿಗಳೆಲ್ಲರು ಜಂಗಮವಲ್ಲದೆ ಜ್ಞಾನ ಜಂಗಮವಲ್ಲ (ಮೋಳಿಮಾ. ೦೩೩-೩೬೩). [< ಪ್ರಾ. ಪಾಸಂಡಿ. / ಸಂ. ಪಾಷಂಡಿನ್]

ಪಾಸಗೆ$_1$ 'ಪಾಸಂಗೆ' ನೋ.

ಪಾಸಗೆ$_2$ (ನಾ). ಮಲ್ಲಯುದ್ದದ ಒಂದು ಪಟ್ಟು.—ಹಿಡಿತ : ಪಾಸಗೆ ವನ್ನಿಮುಟ್ಟಿ ಚಟ್ಟು ಸಿರಣಪಟ್ಟಿ ಬಾಹುದಣಿ ಖಮ್ಮರಿ ಕತ್ತರಿ . . . ಎನಿಪ್ಪ ಜೆಟ್ಟಿಗನ ನಚ್ಚಿನ ಬಿನ್ನಣಮೊಪ್ಪೆ ಕಾದಿದರ್ (?) (ಸಂದ್ರಪು. ೩-೭೬) ; ಕಮ್ಮರಿ ಮುಹುಡಂ ಜವತ್ಸವಡಿ ಪಾಸಗೆ ಕಕ್ಕವಡುಮ್ಮ . . . ಎನಿಪ್ಪ ಜಟ್ಟಿಗರ ಬಿನ್ನಣಮೊಪ್ಪೆ ಕಡಂಗಿ ಕಾದಿದರ್ (ತ್ರಿಪುಪ. ೨೬-೦೮). [?]

ಪಾಸಟಿ (ನಾ). ಸರಿ ; ಸಾಟಿ ; ಸಮ : "ಸರಿ, ದೊರೆ, ಪಡಿ, ಗೆಡೆ, ಪಾಟಿ, ಪಾಸಟಿ . . . ಸಂಗಡಂ —ಈ ೧೮ ಸಮಾನಕ್ಕೆ ಪೆಸರ್" (ಕಶಸಾ. ೩೯-೨೯) ; ಪವನಸುತಂಗೆ ಪಾಸಟಿಗಳೊರ್ವರುಮಿಲ್ಲ (ಪಂಪಭಾ. ೦೨ ೦೨೦) ; ಬಾಯಿಬಡಿಕರು ಬಗುಳಿದರೆ ಹರಿಯಾಯತಿಕೆ ಪಾಸಟಿಯೆ (ಕುಮ್ಮಾಸ. ೯-೪೭); ರೂಪಿನಲಿ ನೀನತಿಚೆಲುವ ನಿನಗವಳು ಪಾಸಟಿ ಸತಿಗೆ ನೀನೇ ರಮಣನಲ್ಲದೆ ಕಾಣೆನಿತರರನು (ನಳಸ. ೨-೨೩).

ಪಾಸಟಿಕೆ (ನಾ). ಸಮಾನತೆ (?) : ಮೊದಲೊಳ್ ತಾಂ ಮಾನಸನಾಗಿ ದೇವರ್ಕ್ಕಳಂ ಭಕ್ತಿಯಿಂದಂ ಪದೆದು ತನಗಿಳಿಪಿಕೊಂಡಂತೆ ದಯೆಯಿಂದೆತ್ತಿ ಕೊಂಡುಂ ಕೀಳ್ಗುದಿವರನಾ ಕೀಳಿಲಿಂ ಬಳಿಕೆ ರೂಢಿಸುತೆ ಪಾಸಟಿಕೆಯಂ ಪುದುವಿನಾ ನಣ್ಪಿನೆಲ್ಲರುಮಂ ಕವಿ ಸತ್ಯಲೋಕದೊಳಾಳ್ವಂ (ಪಂಸಪ. ೦೨-೩೦).

[ಪಾಸಟಿ + - ಇಕೆ]

ಪಾಸಟಿಗಾಣು (ಕ್ರಿ). ಸದೃಶವಾದುದನ್ನು ಕಾಣು ; ಸಮಾನವಾದುದನ್ನು ನೋಡು : ನರನಟನೆ ತೋರಿದಿ ಲಕ್ಷ್ಮೀನಲ್ಲ ನಾ ಪಾಸಟಿಗಾಣೆ ಅಪ್ರತಿಮಲ್ಲ (ಜಗದಾ. ೩೪೦). [ಪಾಸಟಿ + ಕಾಣು (<ಕಾಣ್)]

ಪಾಸರೆ 'ಪಾಸಱೆ' ನೋ.

ಪಾಸಲೆ 'ಫಾಸಲೆ' ನೋ.

ಪಾಸಱೆ, ಪಾಸರೆ, ಹಾಸರೆ, ಹಾಸಱೆ (ನಾ). ಅಗಲವಾದ ಕಲ್ಲು ; ಹಾಸುಗಲ್ಲು ; ಹಾಸುಬಂಡೆ : ಪಾಸಱೆ ಸಿಂಹಪೀಠಮಳಿನೀರುತಿ ಮಂಗಳಗೀತಿ ಭೂತಳರಂ ಪಾಸು (ಪಂಪಭಾ. ೭-೨೯) ; ಒಗೆವೆನೊ ಬೀಸಿ ಪಾಸಱೆಯೊಳ್ (ಪಂಪಾಮಾ. ೪-೦೭) ; ಪರಲೆಲ್ಲಂ ಮುತ್ತು ಮಾಣಿಕಂ ಪಾಸಱೆಗಳ್ ಪರುಸಂಗಳ್ (ಶಮರ. ೬೯ ಪ್ರಯೋ) ; ಬಱಸಿದಿಲೆಱಗೆ ಪಾಸಱೆ ಬಿರಿವಂತೆ ಪೊಚ್ಚರಿಸಿ ಸೀಳಾಯ್ತು ಮತ್ತೊಡನೆ . . . ತೆಱೆದುದಾ ವಜ್ರಕವಾಟ (ಭರಸ. ೨೯-೭೩). **ಪಾಸರೆ** : ಹೊಳೆಯೊಳು ನೀರೊಳಗಿರುವ ಪಾಸರೆಯೊಳು ಮರೆಯಾಗಿ ಮೀನಿರುವಂತೆ . . . ಹಾಯಾಗಿ ನಾನಿಹೆನಲ್ತ (ಇಂಜಾಪ. ೨೪೦-೯೩) ; ಅಷ್ಟರಲ್ಲಿ ಶಿಷ್ಯವೃಂದವು ಆ ಪಾಸರೆಯನ್ನು ಸಮೀಪಿಸಿತ್ತು (ಪೇಮಕೂ. ೭೬). **ಹಾಸರೆ** : ಆ ಹೆದ್ದಾರಿಯೇ ಮೇರೆಯಾಗಿ ನಡೆದು ಹಾಸರೆಯಲ್ಲಿ ನಿಂದು ಅಲ್ಲಿಂದ ಮೂಡ ಮುಂತಾಗಿ (ಎಕ. III, ಶ್ರೀರಂಗ. ೦೩೩-೬೩ ; 1458) ; ಸಮೀಪದ ಹೆದ್ದಾರಿಯ ಒತ್ತಿರಿಣ ಕರಿಯ. ಕಲ್ಲ ಹಾಸರೆ (ಎಕ. VII, ಶಿವಮೊ. ೨೬-೨೩೭ ; 1524); ನೆಲದ ಹಾಸರೆಯೊಳಂ ತಳೆದ ಮಣಿವಾವುಗೆಯ ಕುರುಹ ಲೇಸಿನಿಂ ವಸುನೀರಿನಿಂದೆ ಚಿತ್ರಿಸಿದರೆಂಬಂತೆ ಸಲೆ ರಾಜಿಸುತಿರೆ (ವನಮೋ. ೨೪-೬೦) ; ಮಳೆ ಗಾಳಿಗಳ ನಿರಂತರ ಆಘಾತದಿಂದ ಹಾಸರೆಯಾದರೂ ಒಂದು ದಿನ ಬಿರಿಯುವುದು (ಹಾಹುತ್ತ. ೪೯). **ಹಾಸಱೆ** : ಬಡಗಣ

ಭಾಗದ ಹಾಸಱೆ (ಶಾಸಾ. IX-1, ೨೫೦-೬೩ ; 1148) ; ಹಾಱುವ ಮೊರಡಿಗಳನೆದ್ದು ಹರಿದಿಡುವ ಹಾಸಱೆಗಳ . . . ಸಿದ್ಧರಾಮಂಗೆ ತೋಱುತ್ತ ನಡೆತಂದನಾ ದಿಗಂಬರವೀರನು (ಸಿದ್ಧರಾ. ೩-೨) ; ಸೂಸಕದ ಮುತ್ತುಗಳು ತಾರಾರಾಶಿಗಳ ಹಬ್ಬುಗೆಯ ನೀಲದ ಹಾಸಱೆಗಳು ಹೋಲುತಿದ್ದವು ಗಗನ ಮಂಡಲದ (ಕುಪ್ಪಾಸ. ೦೩-೩೦) ; ಕಾಳಕೂಟದ ಮಡುವಿನೊಳು ಮುಳುಗುವೆನೊ ಹಾಸಱೆಯೊಳಗೆ ಬೀಳುವೆನೊ (ವಳಸ. ೩-೨೩). [ಪಾಸು$_1$+ಅಱೆ$_4$]

ಪಾಸಱೆಗಲ್ಲು. ಹಾಸರೆಗಲ್ಲು. ಹಾಸಱೆಗಲು, ಹಾಸಱೆಗಲ್ಲು (ನಾ). = ಪಾಸಱೆ : ಅದಱ ಸೀಮೆ . . . ಮೂಡ ಪಾಸಱೆಗಲ್ಲು ತೆಂಕ ಅಪ್ಪೋಪ ವಾಸಿಗಟ್ಟು ಪಡುವ ನಟ್ಟ ಕಲ್ಲು (ಎಕ. VII. ಶಿಕಾಂ. ೦೨೦-೦೬ ; 1048) ; ಅರಿಯಮನೈತಂದುದಯಾದ್ರಿಯ ಪಾಸಱೆಗಲ್ಲ ಮೇಲೆ ಮಂಡಿಸಿದ (ಕಂಪಪಿ. ೯-೨೦೬). **ಹಾಸರೆಗಲ್ಲು** : ಕರಸಿದರು ಹುಡಿಗಲ್ಲು ನಿಡುಗಲ್ಲು ಬಡಿಗಲ್ಲು ಭರ ಹಾಸರೆಗಲ್ಲು ಬಿರಿಗಲ್ಲುಗಳನು (ಪಪಮೋ. ೩೨-೩೩). **ಹಾಸಱೆಗಲು** : ಕೆಱೆಯೇರಿಯ ಕೆಳಗಣೆರಡುಂ ಹಾಸಱೆಗಲುಗಳ ನಮವಣ ಗರ್ದ್ದೆ[ಯ] ಮತ್ತೆರೆರಡುಂ (ಕಇಲ. ೬೨-೦೫-೬೩ ; 1117). **ಹಾಸಱೆಗಲ್ಲು** : ಆ ಗದ್ದೆಯಿಂ ಮೂಡಲು ನಟ್ಟ ಕಲ್ಲು ಅಲ್ಲಿಂ ತೆನ್ಕ ಹಾಸಱೆಗಲ್ಲು (ಎಕ. II. ೩೩೯-೨೬ ; 1282) ; ನಿಡಿಗಲ್ಲು ನಿಶಿತ ಹಾಸಱೆಗಲ್ಲು ಚೌಕದ ಬಡಿಗಲ್ಲು ಬಟುಗಲ್ಲು ಬೀಳೆ ತುಡುಕಿದ ವಜ್ರಮಾರ್ಗಣದಿಂದೆ ಶ್ರೀಕೃಷ್ಣ ಹುಡಿಯೇಳಲೆಚ್ಚು ಹಾಱಿಸಿದ (ಮೋಪಶ. ೪೦-೬೩). [ಪಾಸಱೆ + ಕಲ್ಲು (< ಕಲ್$_3$)]

ಪಾಸಾಣ. ಪಾಶಾಣ (ನಾ). ೧. ಕಲ್ಲು : ಶಿಲೆ : "ಪಾಸಾಣಂ ಶಿಲೆ" (ಕರ್ಣಾನಿ. ೭೦) ; ಪಾಷಾಣ—ಪಾಸಾಣ (ಶಮಸ. ೨೫೩ ಪ್ರಮೋ). ೨. ಅಶ್ಮರೀ ರೋಗದಿಂದ ಉಂಟಾಗುವ ಮೂತ್ರವಿಕಾರ : ಮೂತ್ರದೊಳಗಿನ ಕಲ್ಲು: ನಿರುತಂ ಜಾಜಿಯ ಬೇರಂ ಕರಿಯಾಡಿನ ಪಾಲೊಳರೆದು ಮೂಱುದಿನಂ ಶರ್ಕರೆವರಸು ಕುಡಿಯೆ ಪಾಸಾ(ಸ)ಣದ ರೋಗಮುಂ ಮೂತ್ರಕೃಚ್ಛ್ರಮುಂ ಪ್ರಶಮಿಸುಗುಂ (ಲೋಕೋಪ. ೯-೦೩೫). **ಪಾಶಾಣ** : ೧. 'ಪಾಶಾಣಿ' ಪರಾ. [< ಪ್ರಾ. ಪಾಸಾಣ. ' ಸಂ. ಪಾಷಾಣ]

ಪಾಸಾಲೆ (ನಾ). ಬಾಯಿ ಅಗಲವಾಗಿರುವ ಪಾತ್ರೆ : ಬಿಂದಿಗೆ ಪಾಸಾಲೆ ಅಡ್ಡಣಿಗೆಗಳನು ತಂದು ಹರಿವಾಣದೊಳಿರಿಸಿ (ಪಾಪಿಸಾಂ. ೩-೬೭) ; ಚಿನ್ನದ ಕೊಪ್ಪರಿಗೆ ಗಿಂಡಿ ಪಾಸಾಲೆ ತಟ್ಟೆ ಅನೇಕ ಬಟ್ಟಲುಗಳು (ಪಾಪುಪಂ. ೩೦೨) ; ಬಳಿಕ ಕೊಂಡನು ಲಿಂಗಮುಖದಿಂದಗ್ಗಣಿಯನಾಗ ಸೆಳೆದು ಪಾಸಾಲೆಯಲಿ ದ್ರವ್ಯಗಳಳನಡಿಸಿ ತುಂಬಿದನು (ಶಪಲೀ. ೨೦೬-೦೦).

[?. ತೆಲು. ಪಾಸನ. / ಸಂ. ಭಾಜನ ?]

ಪಾಸಿ$_1$ 'ಪಾವಸೆ' ನೋ.

ಪಾಸಿ$_2$ (ನಾ). =ಪಾಶಿ$_1$ ೧ : ಸಾಧುರೋಹಣ ಪಾಸಿಯುತೆ ರತ್ನಾಧಿಕರು ಮಾಧುರ್ಯಯುಕ್ತ ಹರಿಶ್ಚಂದ್ರ ಚೋಳರುವೊಲುಂ ಸತ್ಯರಿಹರಾ ಪುರದೊಳು (ಪ್ರಸುಪು. ೩-೩೨). [< ಸಂ. ಪಾಶಿನ್]

ಪಾಸಿ$_3$ 'ಫಾಸಿ' ನೋ.

ಪಾಸಿ$_4$ 'ಫಾಸೆ' ನೋ.

ಪಾಸಿಕೆ. ಹಾಸಿಕೆ$_1$ (ನಾ). ಹಾಸುಗೆ : ಶಯ್ಯೆ : ಬಟ್ಟೆವೋಪರ್ ಬಟಲ್ಕೆಗಟಿದುವನಱಿಪುದ ಬಾಡುಂದಳಿರ ಪಾಸಿಕೆಗಳುಮಂ . . . ಬಳಕೆಯ್ದು ಬತ್ತಿದ ಪಳ್ಳಂಗಳೊಳಮತಿರೌದ್ರಮಾದ ಪೇರಡವಿಯೊಳಗೆ ಬರ್ಪಾಗಳ್ (ಕಾದಂಗಾ. ೨೬೬) ; ಅಂಗಸಂಭವಾನಳನವೊಲಪ್ಪ ಕೆಂದಳಿರ ಪಾಸಿಕೆಯುಂ ವಿಷನಾಮವುಳ್ಳ ಶೀತಳಜಳಮುಂ . . . ಅಕ್ಕ ಕೇವಳ ಮೆನಗಾಭಿಚಾರವಪಚಾರಮಿದೇಂ ಶಿಶಿರೋಪಚಾರವೇಂ (ಜಗವಿ. ೦೦-೪೪) ; ಕೌಶಿಕಂ . . . ಪವಡಿಸಿದ ತೃಣರಚಿತ ಪಾಸಿಕೆಯೊಳು (ಪಂಕಾರಾ. ೦-೦೨-೫೩). **ಹಾಸಿಕೆ$_1$** : ಹಾಸಿಕೆ ಹೊರಸೇಕೆ ಲೇಸೇಕೆ ನಿಮ್ಮ ಭೃತ್ಯನಿಗೆ (ದೇಪಾವ. ೩೦-೫೨) ; ಆ ಶಿಖಂಡಿಯು ತೋಱಿ ಸರಳಿನ ಹಾಸಿಕೆಯಲೊಬ್ಬನನು ಮಾತಿನ ವಾಸಿಯಿಂದೊಬ್ಬನನು ಮುನ್ನಿನ ಕುಲವನೆಚ್ಚಱಿಸಿ ಘಾಸಿ ಮಾಡಿದೆ ನೊಬ್ಬನನು (ಕುಪ್ಪಾಸ. ೦-೩೫) ; ಹಾಸಿಕಿಲ್ಲದೆ ಹಾವಿನ ಮೇಲೆ ಒಱಗಿದವ (ಪುರಂದ. ೨-೦೦-೦).

ಹಾಸಿಕೆಪಥ್ಯ = (ವೈದ್ಯಕೀಯ ಕಾರಣಗಳಿಂದ) ಸಂಭೋಗವನ್ನು ವರ್ಜಿಸುವಿಕೆ : ಹಾಸಿಗೆಪಥ್ಯ : ಹಾಸಿಕೆಪಥ್ಯ ಇಪ್ಪತ್ತನಾಲ್ಕು ದಿವಸ (ಕಾಮಶಾ. ೨೬೭). [ಪಾಸು$_1$ + — ಇಕೆ]

ಪಾಸಿಕೆಗೆಯ್ಮೆ (ನಾ). ರತಿಕ್ರೀಡೆ : ಸುರತ : ಎಳೆದು ಪಾಸಿಕೆಗೆಯ್ಮೆಗಳಿಸಿ ಮೆಯ್ಗುಡದಂತೆ ತಳರಿಸಿ ಪೆಣ್ತನದನುವ ಬಟಿಕವನೆಸಗುವ ಬಲ್ಲೆಗೆ ಬಟಿಸಂದೊಳಸರಿದೊಡಲನೊಪ್ಪಿಪುದು (ಶಕವಿ. ೬-೫೦ ಸಾಂಗತ್ಯ).

[ಪಾಸಿಕೆ+ಗೆಯ್ಮೆ (<ಕೈಮೆ$_1$)]

ಪಾಸಿಗೆ 'ಪಾಸುಗೆ$_1$' ನೋ.

ಪಾಸಿಸು (ಕ್ರಿ). ಆವರಿಸು ; ವ್ಯಾಪಿಸು (?) : ಓಲೈಸಿಕೊಳುತ ನಿಜದೇಹ ಕಾಂತಿಯೊಳೆಸೆವುತಾಲಸಿತ ಪಾಟಕೇಶ್ವರರುದ್ರನಿರ್ಪರೊಡನೇಳು ಪಾತಾಳಂಗಳಂ ಪಾಸಿಸುತ್ತ ಭೂಪೃಷ್ಠಾಂತಮಾಗಿರುತಿಹ ಮೇಲುಗಡೆಯೊಂದು ಕೋಟಿಯು ಯೋಜನಂ (ಪತುಪು. ೫-೦-೨೦). [ಪಾಸು$_1$? + — ಇಸು$_3$]

ಪಾಸಿಱೆ (ಕ್ರಿ). ಹರಡಿಕೊಂಡಿರು ; ಪಸರಿಸು ; ವ್ಯಾಪಿಸು : ತಳರೆ ತಾಗುವ ತೆರೆದುಱುಂಗಲಲೆಪದಿಂ ಸೂಸಿ ಪಾಸಿಱಿದು ಬಣ್ಣವುರಂ ತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯು ನೀರ್ವೂಗಳ ರಜಂಗಳುಮನೊಳದೊಂಡಿನ ಪಾಲ್ಗಳುಮಂ ಪೀರ್ದು (ಕಾದಂಗಾ. ೫೨೬).

[ಪಾಸು$_1$+ಇಱಿ$_1$]

ಪಾಸು$_1$. ಹಾಸು$_1$ (ಕ್ರಿ). ೧. ಬಿಚ್ಚಿ ಹರಡು : ಅಗಲವಾಗಿ ಬಿಡಿಸು ; ಪಸರಿಸು: "ಪಾಸು—ಆಸ್ತರಣಕ್ರಿಯಾಯಾಂ, ತಲ್ಪೇ ಚ" (ಶಮಧಾ); ಅರಸರ್ ಬರ್ಪ ಬಟ್ಟೆಯೊಳೆಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರವಟ್ಟು ದುಕೂಲ ಚೀನಾದಿ ದಿವ್ಯವಸ್ತ್ರಂಗಳಂ ಪಾಸಿ (ವತ್ಸಾರಾ. ೨೬-೩) ; ಕುಳಿರ್ವ ತಿಳಿನೀರನುಡುಗದೆ ತಳಿ ತಳಿರಂ ಪಾಸು ಜಳದೆಯಿಂ ಬೀಸು (ಅಂಪು. ೨-೦೪); ಬಲೆಯಂ ಪಾಸಿ ಬಲಿಹರಣಂಗೆಯ್ದಂತೆ ಕೂಬಂ ಸೂಸಿ ಪೋಪುದುಂ (ಪಂಪಶಂ. ೨೮೯-೦೪) ; ಪಾಸಿದ ದಳಿಂಬಮುಗುರ್ಗಳ ಕೇಸಡಿಗಳ ಚರಣ ಭೂಷಣಂಗಳ ರುಚಿಯಿಂ ಬಾಸಣಿಸಿ ಚಿತ್ರಪಟಮಂ ಪಾಸಿದವೊಲಿರೆ ವಧೂವರರ್ ನಡೆತಂದರ್ (ಅಪಂಪು. ೬-೫೪). ೨. ಒಡ್ಡು : ಎದುರಿಗೆ ಹಿಡಿ : ಮದುವೆಯಾಗಲೆವೇಳ್ಕುಮೆಂದು [ಮೇಲುವಂ ಪಾಸಿ] ಬೇಡುವುದುಂ (ಧರ್ಮಾಮೃ. ೩-೨೬೭). ೩. ನೀಡು ; ಚಾಚು : ತನುವಲ್ಲದತನು ತಾಪಂ ತನುವಂ ಸುಡೆ ನಿಲಿಸಲೆಂತುಮಾಱದೆ ತನುವಂ ತನುಮಧ್ಯೆಯ ರಲರ್ವಾಸಿನ ನನೆವಾಸಿನ ಮೇಲೆ ಪಾಸಿದರ್ ತನುತನುವಂ (ಮಲ್ಲಪು. ೩-೩೩), ಕರಡಿ ಪಿಪೀಳಿಕಾವಳಿಗೆ ನಾಲಗೆ ಪಾಸುವವೋಲ್ ಯಮಂ ಭಯಂಕರ ರಸನಾಗ್ರಮಂ ಧರೆಗೆ ಪಾಸಿದಂ (ಸಮಪ. ೦೫-೯೬); ಪೊನ್ನ ಬಣ್ಣದ ನವಕರ್ಣಿಕಾರ ಕುಸುಮಕ್ಕೆಱಗಿರ್ದ ಮದಾಳಿ ಕಂಪುಗಾಣದೆ ಕಱಿದತ್ತು ಪೆಣ್ಣ ಪೊಸರೂಪಿನ ಪಾಪೆಗೆ ಪಾಸಿ ಬಿರ್ದ ಬಱ್ಡೊದವಿಸಿದಿಂಪುಗಾಣದಬಲಿಂ ಪೆಱಪಿಂಗುವ ಕೇಳನಂದದಿಂ (ಲೀಲಾವ. ೯-೦೦೬); ಬಲ್ಗೊಲೆಗೆ ಹೇಸಿದರ್ ಸುರರ್ಗಳ ದಿಡ್ಡಿಯೊಳ್ ಕೈಗಳಂ ಪಾಸಿದರ್ (ಪಪಪು. ೪೨-೩೬). ೪. ಅಡ್ಡಲಾಗಿ ಚಾಚಿಕೊಂಡಿರು ; ಕೆಡೆ : ಬಿದ್ದಿರು : ನೆಲನಂ ಮಾಱುದ್ದಿ ಕೆಯ್ಯಿಂ ಧರಾತಳದೊಳ್ ಪಾಸಿದ ತನ್ನ ತೀವ್ರಗದೆಯಂ ಕಂಡೆತ್ತಿಕೊಂಡು . . . ಮುಳಿದಿಟ್ಟಂ ಕಲಿಸತ್ತಿಗಂ (ಗದಾಯು. ೬-೩೬). **ಹಾಸು$_1$** : ೧. ಸಂಗಯ್ಯ ಒಲಿದಾನೊ ಒಲಿಯನೊ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು (ಬಸವ. ೫೨೦); ಅಂದವರಿಗಿಲ್ಲರಸ ಹಾಸಲಿಕೊಂದು ವಸ್ತ್ರಗಳಿಲ್ಲ ಹೊದೆಯಲಿಕೆ (ಸಂಭಪ. ೨೨-೬); ಹಾಸಿಗೆಯನು ತಂದು ಹಾಸುವೆನೆಂದರೆ ಶೇಷನ ಮೇಲೆ ನೀ ಪವಡಿಸಿರ್ಪೆ (ಪುರಂದ. ೨-೬೬-೪); ಹಾಸೀಗಿ ಹಾಸೆಂದ ಮಲ್ಲೀಗಿ

ದುಡಿಯೆಂದ (ಗಸಂ. ೬೬). ೨. ಆತನ ಪ್ರಸಾದಕ್ಕೆನ್ನ ಸೆಱಗ ಹಾಸಿ ಆರೋಗಿಸಿ ಸುಖಿಯಾದೆನು (ಸಿದ್ಧಪ.ಕ.೩೦೬-೦೦೩೬). ೫. ಹರಡಿಕೊಳ್ಳು : ಅರ್ಜುನನಂಬಿನುಱುಬೆಗೆ ಹೆಣನ ದಾವಣೆ ಹಾಸಿದವು ಸೂಸಿದವು ದೊಂಡೆಗಳು (ಕುಪ್ಪಾಕ್ಯೂ. ೦೦-೩).

ಹಾಸಿ ದುಡಿ=ಮೈ ಒಡ್ಡಿ ದುಡಿ : ಕಷ್ಟಪಟ್ಟು ಕೆಲಸ ಮಾಡು : ಹಾಸಿ ದುಡಿದರೆ ತನಗುಂಟು ತನ್ನ ಪ್ರಮಥರಿಗುಂಟು (ಬಸವ. ೩೨೪). ಹಾಸಿ ಹೊದೆ= ಸಂಪೂರ್ಣವಾಗಿ ಒಂದರಲ್ಲಿಯೇ ಮಗ್ನವಾಗು, -ತನ್ಮಯವಾಗು : ಚನ್ನಮಲ್ಲಿಕಾರ್ಜುನ ನಿಮ್ಮ ಪ್ರಸಾದವ ಹಾಸಿ ಹೊದೆದುಕೊಂಡಿಪ್ಪೆ (ಮಹಾದೇ. ಬ. ೦೦೨-೨೩೩).

[ದೇ.॥ ತಮಿ. ಪಾಯ್, ಪಾವು]

ಪಾಸು$_2$, ಹಾಸು$_3$ (ನಾ). ೧. ಹಾಸುಗೆ ; ಶಯ್ಯೆ : "ತಳ್ಪಂ, ತಳಿಮಂ— ಈ ೨ ಪಾ(ಹಾ)ಸು" (ಪರಾಯು ೩೦-೦೩೨) ; ಎರಡು ಘಟಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ . . . ಮಹರ್ಧಿಕದೇವರಾಗಿ (ವಡ್ಡಾರಾ. ೯೯-೩); ತಳಿರ್ಗಳ ಕಂಡವಟಂಗಳೆ ತಳಿರ್ಗಳೆ ಪಾಸುಗಳೆ ತಳಿರ್ಗಳೋವರಿಗಳೆ (ಅರಿಪು. ೦೦-೬೬) ; ಚಂದ್ರಾಪೀಡಂ . . . ಅಡಕಿಲ್ಗೊಂಡೊಪ್ಪುವ ಕೌಳುಡೆಯಿಂ ಸೊಗಯಿಸುವ ಪಾಸಿನೊಳ್ ಪಟ್ಟಿರ್ದಂ (ಕಾರುಣ ೯೯) ; ಮಣೆಯೊಳ್ ಪಡುವುದರಿದೋ ಪಾಸಿನೊಳ್ ಪಡುವುದರಿದೋ (ಧರ್ಮಾಮೃ. ೬-೯೦). ೨. ಮಗ್ಗದಲ್ಲಿ ಉದ್ದಕ್ಕೆ ಹಾಕಿರುವ ಎಳೆಗಳ ಸಾಲು : ಪಟ್ಟಗಾಱನೆ ಪಾಸಂ ತವೆ ತೋಡುವಂತೆ ಕರುಳಂ ನೀಂ ತೋಡಿದೈ ದೈತ್ಯನಾ (ಕಾಪ್ಯಾಪ. ೩೫೫) ; ಆಸುರದೊಳಿಂದ್ರಜಾಲದ ಕೂಸುಗಳಂ ಕಂಸನೊಗೆದನಱಿಯೊಳ್ ನೆತ್ತರ್ ಸೂಸೆ ದೆಸೆದೆಸೆಗೆ ಕೆಂಪಿನ ಪಾಸಂ ಪಿಡಿದೊಗೆವ ಪಟ್ಟುಕಾಱನ ಶೆಱದಿಂ (ಅರ್ಧನೇ. ೬-೩೦). 'ಪೊಕ್ಕು$_2$' ಪರಾ. ಹಾಸು$_3$: ೧. "ಶಯ್ಯೆ, ಶಯನೀಯ, ಶಯನ—ಹಾಸು" (ಪಾಚಿಶಾ. ೯) ; ಹಾಸನಱಿದು ಕಂಥೆಯಂ ಪೊಲಿಸುವ ಮೆದೆಯಂ ಸುಟ್ಟರಳಂ ಕುಱುಕುವ ತುಪ್ಪವನೊಕ್ಕು ಸಗಣಮಂ ಕೊಳ್ವ . . . ಎಗ್ಗನಂ ಪೋಲ್ವೆಂ (ಧರ್ಮಾಮೃ. ೩-೨೦) ; ಹಾಸಿನೊಳು ಪವಡಿಸುವಾತನೆಂತು ಕಲುನೆಲದೊಳೊಱಗುವೆ (ಹತಕಾ. ೯-೬) ; ಹಾಲ ಸಾಗರ ಮನೆಯ ಸಜ್ಜೆಯ ಮೇಲೆ ಶೇಷನ ಹಾಸು (ಸಂಭವ. ೬-೦). ೨. ಕಾಸಿ ಕಮ್ಮಾಱನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ (ಬಸವ. ೩೯೦). ೩. ಪಗಡೆಆಟದಲ್ಲಿ ಹಾಸುವ, ಮನೆಗಳುಳ್ಳ ಪಟ ; ಪಗಡೆಪಟ್ಟ : ಪಗಡೆಯ ಕಾಯಿ ಹಾಸನ್ನೆಲ್ಲ ಸುತ್ತಿ ಬಂದು ಹಣ್ಣಾಯಿತು! (ಬಂಕಿಮ. ೨೯೯) ; ಆಟಕ್ಕೆ ಹಾಸು ಹಾಸಿದೆ ಬಾ ಆಡೋಣ (ವ್ಯಾಸಶಿ. ೦೨೦). ಕೆಲವು ಸಾಮಂತರು ಪಗಡೆಯಾಡಲು ಹಾಸನ್ನು ಬಿಚ್ಚುತ್ತಿದ್ದರು (ಬಾಣಲ. ೨೩೯). ೪. ಚಾಪೆ, ಜಮಖಾನೆ ಮುಂತಾದ ಹಾಸುವ ಸಾಧನ : 'ನಿಡುಹಾಸು' ಪರಾ.

ಪಾಸುಪೊಕ್ಕು$_1$, ಪಾಸುಪೊಕ್ಕು$_1$, ಹಾಸುಹೊಕ್ಕು=೧. ಮಗ್ಗದಲ್ಲಿರುವ ಉದ್ದ ಎಳೆ ಹಾಗೂ ಅಡ್ಡ ಎಳೆ. ೨. ಮಗ್ಗದ ನೇಯ್ಗೆಯಲ್ಲಿ ಎಳೆಗಳು ಒಂದರಲ್ಲೊಂದು ಹೆಣೆದುಕೊಂಡಿರುವಿಕೆ. ೩. ಬಿಗಿಯಾದ ಹೊಂದಿಕೆ : ಸರ್ವರಾ ಸರ್ವಕರ್ಮಗಳ ಪಾಸುಪೊಕ್ಕಿನ ಜಟಿಲಜಾಲಮೆ ಕೃತಿಪುದಲ್ತೆ ನಡೆವೀ ಜಗನ್ನಾಟ್ಯಮಂ! (ಶ್ರೀರಾಮಾ. ೩೨೦-೩೬೦) ; ಸೆಕಂಡು, ಮಿನಿಟು, ತಾಸುಗಳ ಹಾಸುಹೊಕ್ಕಿನಲಿ ಅಲ್ಲೊಂದು ಇಲ್ಲೊಂದು ಬಣ್ಣದ ನೂಲು (ವೆಂಮು. ೩೦-೨೯) ; ಭಾವದ ಒಂದೊಂದೂ ಸುಳಿವು ಎಳೆಎಳೆಯಾಗಿ ಬಿಡಿಸಿ ಬಂದು, ಹಾಸುಹೊಕ್ಕಾಗಿ ಹೆಣೆದು, ಹೊನ್ನ ಪೊರೆಯಾಗಿ ಕಣ್ಣನ್ನು, ಮನಸ್ಸನ್ನು ಮುತ್ತುತ್ತಿದ್ದಿತು (ಸವಿ. ೩). ೪. ಸಮಗ್ರವಾದುದು : ಎನ್ನೊಳಿಂತಿದು ಪಾಸುಪೊಕ್ಕು (ರಾಮಾಶ್ವ. ೦೦೬-೨೬); ಬೀಡು ಕಾಣಿಕೆಯಿತ್ತು ಕಂಡುದು ನಾಡೆ ಕಾಣಿಸಿದನು ಪುರೋಚನ ಕೂಡೆ ಸಂದನು ಹಾಸು ಹೊಕ್ಕಾಗವರ ಮನವಱಿದು (ಕುಪ್ಪಾಲ. ೯-೯೯). ಹಾಸಿನ ನುಲಿ— ಶಿರಂಚಿಕೊಂಡಿರುವ ಮಗ್ಗದ ನೂಲು : (೯). ಹಾಸುಹೊದ್ದು— (ಸಂಪೂರ್ಣವಾಗಿ) ಹೊಂದಿರುವಿಕೆ ; ರೂಢಿಯಾಗಿರುವಿಕೆ. ಅಭ್ಯಾಸ : ಹುಡುಗತನದಿಂದಲೂ ಅದೇ ಹಾಸುಹೊದ್ದಾಗಿ ಹೋಗಿದೆ ನನಗೆ (ಮಸೋಸಂ. ೯೯). [<ಪಾಸು$_1$]

ಪಾಸು$_3$ 'ಪಾಸ$_1$' ನೋ.

ಪಾಸು$_4$, ಪಾಸ್ (ನಾ). ೧. ತೇರ್ಗಡೆ ; ಉತ್ತೀರ್ಣವಾಗುವಿಕೆ ; ಸಫಲತೆ : ಅಷ್ಟೆಲ್ಲ ಓದಿಸಿ ಪಾಸಾಯಿತೆನುವಾಗ ಇಲ್ಲದೆ ಹೋದರು ತಂದೆ (ಬಂಸಾಪ. ೨೨-೯೬) ; ಗೋಪಾಲರಾಯ ಮೆಟ್ರಿಕ್ ಪಾಸಾದ ಅಧ್ಯಾಪಕ (ಮುಂಗಾಮು. ೨೯). ೨. ಒಪ್ಪಿಗೆ ; ಪಸಂದಾಗುವಿಕೆ ; ಮೆಚ್ಚಾಗುವಿಕೆ : ಯಾವ ಕನ್ಯೆಯೂ ಅವನಿಗೆ ಪಾಸು ಎನಿಸಲಿಲ್ಲ ; ಇನ್ನೂ 'ವರ'ನಾಗಿಯೆ ಉಳಿದಿದ್ದಾನೆ (ಕೂಠಿ). ೩. ಅಪ್ಪಣೆಚೀಟಿ; ಅನುಜ್ಞಾಪತ್ರ ; ಪರವಾನೆ ; ರಹದಾರಿ : ಸರ್ಕಾರಿನೌಕರನಾದುದರಿಂದ ಅವನಿಗೆ ಪ್ರವಾಸಕ್ಕೆ ಪಾಸು ಕೊಟ್ಟೇ ಕೊಡುತ್ತಾರೆ (ಕೂಠಿ). ೪. ನಾಟಕ, ಸಿನಿಮಾ ಮೊದಲಾದುವುಗಳಿಗೆ ವಿಶೇಷ ವ್ಯಕ್ತಿಗಳಿಗೆ ನೀಡುವ (ಶುಲ್ಕವಿಲ್ಲದ) ಪ್ರವೇಶಪತ್ರ : ಜೇಬಿನಿಂದ ಪಾಸುಗಳನ್ನು ತೆಗೆಯುತ್ತ . . . ಇವೇನು ಕಾಂಪ್ಲಿಮೆಂಟರಿ ಆಗೋದಿಲ್ಲ ಎನ್ನುತ್ತ ಪಾಸುಗಳನ್ನು ಕೊಡಬಂದ (ರಂಗಣಾ. ೯೩). ಪಾಸ್ : ೧. ನಾನಾದರೂ ಪಾಸ್ ಆದವರಲ್ಲಿ ಒಂಬತ್ತನೆಯವನು (ತೊಳಮು. ೨೨೬).

ಪಾಸಾಗು= ತೇರ್ಗಡೆಯನ್ನು ಹೊಂದು; ಉತ್ತೀರ್ಣತೆಯನ್ನು ಪಡೆ ; ಸಫಲವಾಗು : ಅವನು ಪರೀಕ್ಷೆಯಲ್ಲಿ ಪಾಸಾಗುವ ನಿರೀಕ್ಷೆ ಇಲ್ಲ (ಕೂಠಿ). ಪಾಸು ಬೀಳು= ಮನಸ್ಸಿಗೆ ಬರು : ಅಂಗಡಿಕಾರನು ತೋರಿಸಿದ ಯಾವ ಸೀರೆಯೂ ಅವಳಿಗೆ ಪಾಸು ಬೀಳಲಿಲ್ಲ (ಕೂಠಿ). ಪಾಸು ಮಾಡು=೧. ಒಪ್ಪು ; ಮೆಚ್ಚು : ವರ ಪಾಸು ಮಾಡುವ ಗುಂಗಿನಲ್ಲಿಯೇ ಇವನನ್ನು ತಮ್ಮ ಪಾಸಲಿಸ್ಟಿನೊಳಗೇರಿಸಿದರು (ಅಪಣಾ. ೦೦). ೨. ಮಂಜೂರು ಮಾಡು ; ನಿರ್ಣಯಿಸು ; ಠರಾಯಿಸು : ಕವಡ ಗಂಟಕರು ಕೂಡಿ ತಮಗೆ ಅನುಕೂಲವಾಗುವಂತೆ ಠರಾವು ಪಾಸು ಮಾಡಿಕೊಳ್ಳುವ ನಾಟಕವೂ ಅಲ್ಲ (ಅಪಣಾ. ೯). [←ಇಂ. Pass]

ಪಾಸುಂದೊವಲ್ (ನಾ). ಹಾಸುವ ಚರ್ಮ ; ಕೃಷ್ಣಾಜಿನ : ಆ ಜೋಗವಟ್ಟಿಗೆಯುಮಾ ಬೆಳ್ಳಡೆಯುಮಾ ಬೆಂಬೂದಿಯ ಪೂಸುಂ . . . ಮೇಣಾ ಪಾಸುಂದೊವಲುಮೆನ್ನೀ ಎಸುಗೆಯ ಕೂರಂಬಿನ ನನೆಯೊಂದು ಕುತ್ತೆಸಳ ಜಾಲೆಗೆ ಸೀಕರಿವೋಗದೇಂ ಮಾಣ್ಗುಂ (ರಾಮಾಶ್ವ. ೩೬-೦೬).

[ಪಾಸು$_1$+ತೊವಲ್$_3$ (<ತೋಲ್$_1$)]

ಪಾಸುಂಪೊಕ್ಕುಂ, ಪಾಸುಪೊಕ್ಕು$_2$, ಪಾಸುಪೊಕ್ಕುಂ, ಹಾಸುಹೊಕ್ಕು$_2$ (ಅ). ಅಡ್ಡಕ್ಕೂ ಹಾಗೂ ಉದ್ದಕ್ಕೂ ; ಓತಪ್ರೋತವಾಗಿ ; ಅತ್ತಲೂ ಇತ್ತಲೂ ; ಉದ್ದಗಲವಾಗಿ: ಆ ಸಭೆಯೊಳ್ ಹರಿಕರವಿನ್ಯಾಸಂಗಳ್ ನುಡಿಯನಡಕುವಂತಿರೆ ನುಡಿದಂ ಪಾಸುಂಪೊಕ್ಕುಂ ಪರೆದು ಸಭಾಸದನಂ ತೊಳಗಿ ಬೆಳಗೆ ದಂತಪ್ರಭೆಗಳ್ (ಪಂಪಭಾ. ೯-೩೯) ; ಪಾಸುಂಪೊಕ್ಕುಂ ಬರಿದು ನಿಚಿತವಚನಕದಂಬಕಮೆರ್ದೆಗೊಳಿಸೆ ಸಭೆಯ ವಿಬುಧಾವಳಿಯಂ (ಕಾಂತಿಪು.೯-೦೨೯) : ಅಂತಿದಿರುಂ ಬಟಿಯುಂ ಪಾಸುಂಪೊಕ್ಕುಂ . . . ಪರಿದು (ಗದಾಯು. ೬-೨೯ ಪ). ಪಾಸುಪೊಕ್ಕು$_2$: ತೊಳಲಿದಳ್ ತೊಳತೊಳಲಿ, ಬಗೆಯದೆ ಬಳಲ್ಕೆಯಂ ಬೆಮೆಗೊಂಡ ಪಾಂಗಿನಿಂ ಪಾಸುಪೊಕ್ಕಾಗಿ ಬನ ಬೆಟ್ಟಗಳಲೆಲ್ಲೆಲ್ಲಿಯುಂ (ಶಿಕ್ರಾಂಗ. ೩೨-೦೯೨೬). ಪಾಸುಪೊಕ್ಕುಂ ತಾಱುಂ ಬಟಿಯುಂ, ಪಾಸುಪೊಕ್ಕುಂ (ಕಬ್ಬಾಮು. ೬೩ ಬ್ಯಾಬ್ಯಾ). ಹಾಸುಹೊಕ್ಕು$_2$: ಎಡಹುತ್ತ ತಾಗುತ್ತಲೆಲುಗಳಂ ಮೆಟ್ಟಿ ತನ್ನಡಿಗಳಳುಕಿತ್ತನಱಿಯದೆ ಹಾಸುಹೊಕ್ಕು ಹರಿದಾಡಿದಂ ಭೂಪಾಲನು (ಹತಕಾ. ೦೦-೯೨) ; ದಿಕ್ಕು ದಿಕ್ಕಿಗೆ ಕದಲಿಸುವನಶ್ವವ ಹಾಸುಹೊಕ್ಕಾಗಿ ತುಂಡುತುಂಡಾಗಿ ಸಕ್ಕನ

ಸರಿತದೊಳೇಱು ತೋಱುದನೆವೆಯಿಕ್ಕುವಪ್ಪಱೊಳೆರಳ್ಬಾರಿ (ಪರ. ೩೦-೬೩).
[ಪಾಸು$_2$+ಪೊಕ್ಕು$_2$]

ಪಾಸುಂಬಲೆ. ಪಾಸುವಲೆ. ಹಾಸುವಲೆ (ನಾ). ಒಂದು ಬಗೆಯ ಬಲೆ: ತಡಿಕೆವಲೆಯ ಬೀಸುಂಬಲೆಯ ಪಾಸುಂಬಲೆಯ ಕಣ್ಣಿವಲೆಯ . . . ಬಲ್ಲೊಜಿಪೊತ್ತು (ರಾಪಾಶ್ಯ. ೬೩-೨೪). **ಪಾಸುವಲೆ:** ಬಡಿಕೋಲು ಜಾಯಿಲಂ ಪಾಸುವಲೆ ಬೀಸುವಲೆ. . . ಪಿಡಿದು . . . ಅಟವಿಯೊಳು ಬೇಂಟೆಯಾಡುತ್ತಿರ್ದರು (ರಾಪ. ೦೬-೬೬). **ಹಾಸುವಲೆ:** ತಡಿಕೆವಲೆ ತಟ್ಟಿವಲೆ ಹಾಸುವಲೆ ಬೀಸುವಲೆ . . . ಮಂದಸಿನವಲೆಯ ಹೊಱಗಳ ಬೇಡವಡೆ ನೆರೆದುದು (ಹಡಕಾ. ೩-೬); ಹಾಸುವಲೆಗಳಿಂದ ಹರಿವಲೆಯಿಂದ . . . ಬೇಂಟೆಯ ಜನರಲ್ಲಿ ಘಾಸಿ ಮಾಡುವರು ಮೃಗಗಳ (ರಾಪ. ೦೩-೬೩); ಹಾಸುವಲೆಯು ಹರಿವಲೆಯುಂಟು . . . ವಾರಣದಿಂದ ಎಸೆದರು ವಿಪಿನದೊಳ್ ಚರರು (ಅಶ್ವಾರ. ೩-೨೬). [ಪಾಸು$_1$-ಬಲೆ$_1$]

ಪಾಸುಗಲ್. ಹಾಸುಕಲ್ಲು. ಹಾಸುಗಲ್ಲು (ನಾ). ೧. ಅಗಲವಾದ ಚಪ್ಪಟೆಕಲ್ಲು: ಹಾಸರೆಗಲ್ಲು: ಮಾಣಿಕಗಂಬದೋಳಿಯಿನಮರ್ಚಿದ ಪಚ್ಚೆಯ ಪಾಸುಗಲ್ಲ ಬಿನ್ನಾಣದಿನಿಂದ್ರನೀಲಮಣಿವೇದಿಕೆಯಿಂ . . . ಬಗೆಗೆ ಕೌತುಕಮಾಯ್ತು ವಿವಾಹಮಂಟಪಂ (ಉಪ್ಪಳ. ೬-೪). **ಹಾಸುಕಲ್ಲು:** ೧. ಪಚ್ಚೆಯ ಹಾಸುಕಲ್ಲುಗಳಿಂ ಕುರುವಿಂದದ ಜಗತಿಗಳಿಂದ ಕಟ್ಟಿ ಚಿನ್ನದ ಗಾರೆಯಂ ಮಾಡಿ (ಸೌಗಂಧಿ. ೩೩೬-೩). **ಹಾಸುಗಲ್ಲು:** ೧. ಅಪ್ಪಾಜಿಯು ಎದ್ದು . . . ಹಾಸುಗಲ್ಲಿನ ಮೇಲೆ ಕುಳಿತುಕೊಂಡರು (ಸಂಗಾಳ್ಯ. ೯); ನಾಲ್ಕಾಳ ಅಗಳಿಗೆ ಬಿದ್ದು ಒಡೆದ ಹಾಸುಗಲ್ಲು ತಗಲಿ ಉಳಿಯುವುದೆಂದರೇನು? (ಕಾಲೂರ. ೦೦ ಕಥಾಸಾರ). ೨. ನೆಲಕ್ಕೆ ಹೊಂದಿಸಿರುವ ಕಲ್ಲು; ನೆಲಕ್ಕೆ ಮೆಟ್ಟಿರುವ ಕಲ್ಲು: ಅವರ ಮನೆಯಲ್ಲಿ ಅಂಗಳಕ್ಕೆ ಹಾಸುಗಲ್ಲು ಹಾಕಿದ್ದಾರೆ (ರೂಢಿ). ೩. ಕಲ್ಲಿನಿಂದ ಮಾಡಿದ ಆಸನ.--ಬೆಂಚು: ಉದ್ಯಾನದಲ್ಲಿ ಹಾಸುಗಲ್ಲುಗಳಿರುವುದರಿಂದ ಸಂಜೆ ಕುಳಿತುಕೊಳ್ಳಲು ಅನುಕೂಲವಾಗಿರುತ್ತವೆ (ರೂಢಿ). [ಪಾಸು$_1$+ಕಲ್$_3$]

ಪಾಸುಗೆ$_1$. ಪಾಸಿಗೆ. ಹಾಸಿಗೆ. ಹಾಸುಗೆ (ನಾ).=ಪಾಸಿಕೆ: ಕಾಂಚನ ಮಂಚದ ಮೇಲೆ ಚೆಲ್ವುವೆತ್ತಂಚೆಯ ತುಪ್ಪುಟಿಂ ಸಮೆದ ಪಾಸುಗೆಗಳೇಱುಮನಿಕ್ಕಿ . . . ಮಕೂಲಪರಿಚ್ಛದಂಗಳಂ ಪ್ರಾಂಚಿತಮಾಗಿ ಪಾಸಿದೊಡೆ (ಶಾರಪು. ೬-೦೦೭); ಬಸವೇಶ ತನ್ನ ಮಂದಿರಕೆ ಪಾಸುಗೆಯಿಂದಲಿ ಬಿಜಮಾಡಿಸಿ ತಂದನು ಯೆಸೆವ ಶರಣರ್ಜನಸಹಿತ (ಸನ್ನಕಾ. ೦-೯೦). **ಪಾಸಿಗೆ:** ಪಾಸಿಗೆ ನಾಂಬ ಮುಂಬದಮಳುಂಬಂ ಕೂಟದೊಳ್ ನಲ್ಲರಾ (ಸಂಧ್ರಪು. ೬-೬೬); ಬೀಸುವುದೊಮ್ಮೆ ಪಿಡಿದು ಬಿಜ್ಜಣಿಗೆಯ ಪಾಸುವುದೊಮ್ಮೆ ಪಾಸಿಗೆಯ (ಹದಿಬ. ೪-೦೬). **ಹಾಸಿಗೆ:** "ಶಯ್ಯಾ. ಶಯನೀಯಂ. ಶಯನಂ—ಈ ೩ ಹಾಸಿಗೆ" (ನಾಪರಾ. ೦೨೩); ಹರಿಯ ಹಾಸಿಗೆಯಾದನಂತನ ಮಹಿಮೆ ಗೋಚರವೆ (ಸಂಭಪ. ೬-೨); ಹಾವು ಎನ್ನ ಹಾಸಿಗೆಯಂತೆ ಕದ್ದು ಬೆಣ್ಣೆಯ ನಾ ತಿಂದೆನಂತೆ (ಪುರಂದ. ೨-೦೯-೩); ಹರಿಗೆ ಹಾಸಿಗೆಯಾಗಬೇಕೆಂದು ಪಾತಾಳಪುರದಿಂದಲುರಗೇಂದ್ರ ಬಂದ (ಕಂಪಪಿ. ೬-೦೦); ಬದಿಯ ಹಾಸಿಗೆಗಳಲ್ಲಿ ದೊಡ್ಡಮ್ಮ. ಸೋದರತ್ತೆ. ಗಾಢ ನಿದ್ದೆ ಸೇರಿದ್ದರು (ಮೂರುದಾ. ೩೦೦). **ಹಾಸುಗೆ:** "ಪ್ರವೇಣೀ. ಆಸ್ತರಣಂ – ಈ ೨ ಹಾಸುಗೆ" (ಹಲಾಯು. ೩೦-೦೩೩).

ಹಾಸಿಗೆಪಥ್ಯ=(ವೈದ್ಯಕೀಯ ಕಾರಣಗಳಿಂದ) ಸಂಭೋಗವನ್ನು ವರ್ಜಿಸುವಿಕೆ: ಹಾಸಿಗೆಪಥ್ಯ ನೆಲವತ್ತು ದಿನ ಇದ್ದರೆ ವೀರ್ಯವೃದ್ಧಿ (ಕಾಮಶಾ. ೨೬೬). **ಹಾಸಿಗೆಯ ಊಳಿಗ**=ಹಾಸಿಗೆಯನ್ನು ಸಿದ್ಧಪಡಿಸುವ ಕೆಲಸ.—ಊಳಿಗ: ಅರಮನೆಯಲ್ಲಿ ಸಮುಖದೊಳು ನಿತ್ಯಕಟ್ಟಳೆಯಲ್ಲಿ ನಡೆಯುವ ಊಳಿಗಗಳು...ಪಟ್ಟೆಪಾವುಡೆಯ ಊಳಿಗ. ಹಾಸಿಗೆಯ ಊಳಿಗ (ಮಹಾಪಂ. I. ೪೩). **ಹಾಸಿಗೆಯಿದ್ದಷ್ಟು ಕಾಲು ಚಾಚು**–ಆದಾಯಕ್ಕೆ ತಕ್ಕಂತೆ ವೆಚ್ಚ ಮಾಡು: ಹಾಸಿಗೆಯಿದ್ದಷ್ಟು ಕಾಲು ಚಾಚಬೇಕಷ್ಟೆ (ಗ್ರಂಥಾಲಿ. ೦೦); ಪ್ರತಿಯೊಬ್ಬನೂ ತನ್ನ ಹಾಸಿಗೆಯಿದ್ದಷ್ಟು ಕಾಲು ಚಾಚಿಕೊಳ್ಳಬೇಕು (ಮಿತವ್ಯ. ೭). **ಹಾಸುಗೆ ಹಿಡಿ**=ರೋಗದ ಕಾರಣದಿಂದ ಮಲಗು: ಖಾಯಿಲೆ ಬೀಳು: ಶೀತದ ಜೊತೆಗೆ ಜ್ವರ, ತಲೆನೋವುಗಳು ಸೇರಿಕೊಂಡವು. ಆತ ಹಾಸುಗೆ ಹಿಡಿಯಬೇಕಾಯಿತು (ಕುಡಿಕೂ. ೦೨೦).
[ಪಾಸು$_1$+– ಗೆ. / ತುಳು. ಹಾಸಿಗೆ]

ಪಾಸುಗೆ$_2$ 'ಪಾಸಂಗೆ' ನೋ.

ಪಾಸುದಳಿರ್ (ನಾ). (ಹಾಸಿಗೆಯಂತೆ) ಹಾಸಿದ ಚಿಗುರೆಲೆ: ಪಾಸುದಳಿರ್ ಕರಿಂಕುವರಿದಂತಿರೆ ತೊಟ್ಟಲರ್ವಚ್ಚಮಾಕ್ಷಣಂ ಕೇಸುರಿ ಕೊಂಡವೊಲ್ ಮಿಗೆ ಮುರುಂಟೆ . . . ಕಾಸಿದ ಕಾಮಪುತ್ರಿಕೆವೊಲಿರ್ದಳವಳ್ ವಿರಹೋಗ್ರ ವಹ್ನಿಯಿಂ (ಶಾಂತೀಶ್ವ. ೩-೦೦೦). [ಪಾಸು$_1$+ತಳಿರ್$_2$]

ಪಾಸುಪೊಕ್ಕು$_1$ 'ಪಾಸು$_2$' ಪರಾ.

ಪಾಸುಪೊಕ್ಕು$_2$ 'ಪಾಸುಂಪೊಕ್ಕುಂ' ನೋ.

ಪಾಸುಪೊಕ್ಕುಂ 'ಪಾಸುಂಪೊಕ್ಕುಂ' ನೋ.

ಪಾಸುಪೋರ್ಟು 'ಪಾಸ್ಪೋರ್ಟು' ನೋ.

ಪಾಸುಮಂಚ 'ಪಾಸುಮಂಚ' ನೋ.

ಪಾಸುಮಣೆ. ಹಾಸುಮಣೆ (ನಾ). ೧. ಅಗಲವಾದ ಮಣೆ.–ಪೀಠ: ಹಾಸುಮಂಚವರಳ್ಗಳುಯ್ಯಲುವಾಸುಮಣೆ[ಶಾಶಾಂ. ಣಿ]ತಲೆಗಿಂಬು ಮೇಲ್ಮಡಿವಾಸು . . . ಒಪ್ಪೆ ವಿಳಾಸವಿಭ್ರಮದಂಗವಣೆಯ ವಿಳಾಸಿನೀವಾಸ (ಬಸಪು. ೦೨-೯). **ಹಾಸುಮಣೆ:** ೧. Fungiಗಳಿಗೆ ಮಾನವನ ದೇಹದಲ್ಲಿ ಹಾಸುಮಣೆ ಹಾಕಿದಂತಾಗಿದೆ (ಮನೋಪಂ. ೨೩೦). ೨. ಪಗಡೆಯಾಟದ ಹಲಗೆ: ಆ ಕಾಯಿಗಳೋ . . . ಹಾಸುಮಣೆಯ ಮೇಲೆ ಮಾಯೆಯ ಕೆಂಡಗಳಂತೆ ಧುಮುಕುತ್ತವೆ (ಧಾರರ. ೨೩). ೩. ನೇಯ್ಗೆಯ ಹಾಸು ಇರುವ ಮಣೆ: ಬೆಳೆದು ಬಂದ ಹತ್ತೀನೇ ಪಿಡಿದು; ಹತ್ತೀನೇ ಪಿಡಿದಳ್ಳೇ ಇಕ್ಕೆ ರಾಮರು ಪಿಡಿವೋ ಎಳ್ಹೆಡೆ ಬಿಲ್ಲು ಜೋಳದ ಗಿಣಿಕೇಲ್ ಹಂಜೀ ಪಿಡಿದು: ಹಾಸುಮಣೆಯಂಬಿಗೆ ಆಧಾರ, ಅರಕಾಸಿಗೆ ಒಂದು ಕದರನೆ ಹೂಡಿ (ನಾಪರ. ೦೪೦). [ಪಾಸು$_1$+ಮಣೆ]

ಪಾಸುವಂಚ. ಪಾಸುಮಂಚ. ಹಾಸುಮಂಚ (ನಾ). ಅಗಲವಾದ ಮಂಚ: ಸುಪ್ಪತ್ತಿಗೆಯ ಪಾಸುವಂಚದೊಳು ಸಲ್ಲಲಿತ ಸುಮಗಂಧಮಂ ಸೂಡಿ ತಾಂಬೂಲಮಂ ಮೆಲಲಿತ್ತು (ಮಹಾಪಿ. ೨೨-೩೬). **ಪಾಸುಮಂಚ:** ಕೊಟ್ಟಿಗೆ ಕೊಲ್ಲಾರ ಕೀಲಾರ ಹೊಱೆಯ ತಾಳ್ದೊಟ್ಟಿಗಳ್ ಪಾಸುಮಂಚಗಳು ಪೆಟ್ಟಿಗೆ ಭಂಡಾರ ಬೊಕ್ಕಸ ಸಾಗಿ ಬಂದೊಟ್ಟುಗೂಡಿದುವು ಬೀಡಿನೊಳು (ಭರತ. ೨೬-೪೯). **ಹಾಸುಮಂಚ:** ರತಿಗೇಹಂ ಹಾಸುಮಂಚಂ . . . ವೀಣೆ ನೆತ್ತಂ ಸಹಚರಿಯಿವನುಳ್ಳಂಗದರ್ಗೈಕರೂಪಾನ್ವಿತೆ ಜಾಣುಳ್ಳಾಕೆ ಮಾಟ್ಕುಂ ವಿಟರ್ಗಭಿಮತಮಂ ಕಾಮಸಾಮ್ರಾಜ್ಯದೊಳ್ಪಂ (ಸೂಕ್ಷಿಸು. ೦೪-೨); ಗಿಳಿಗೆ ಹಾಸಿದಳು ಹಾಸುಮಂಚವ ಅಳಿಯನ ಪಂಜರದೊಳಗಿರಿಸಿ (ಪುರಂದ. ೦-೦೦೦-೬). [ಪಾಸು$_1$+ಮಂಚ]

ಪಾಸುವಲೆ 'ಪಾಸುಂಬಲೆ' ನೋ.

ಪಾಸುವೊಕ್ಕು 'ಪಾಸು$_2$' ಪರಾ.

ಪಾಸುಳಿ (ಕ್ರಿ). ಹಗ್ಗವನ್ನು ಕಳಚು: ನಾಯ್ಗಳಂ ಪಾಸುಳಿದು ಬಿಡುವ . . . ಬಿಲ್ಲರಲ್ಲಿಯ ತಂಡಮೆಸೆದುದು (ಪಶುಪು. ೨-೦-೨೩).
[ಪಾಸು$_3$ (<ಪಾಸ$_1$)+ಉಳಿ$_1$ (<ಉಟ್$_1$)]

ಪಾಸೆ$_1$ 'ಪಾವಸೆ' ನೋ.

ಪಾಸೆ$_2$ 'ಫಾಸೆ' ನೋ.

ಪಾಸೆವಿಳಿ (ನಾ). ಹಾವಸೆಯ ಎಳೆ,–ನೂಲಂ: ಕುವಳಯಕುಟ್ಮಳಾವಳಿಯ ಪೆರ್ಗಳೆಯಂ ನೆಗೆದೇಱ್ ಲಾಗಿಸುತ್ತೆ . . . ಪಾಸೆವಿಳಿಯೊಳ್

ಮುದ್ರಾಡಿ ತರಂಸಂಘಸಂಭವರವವಾವ್ಕಾದಿದುದು ಕೂತೆ ರುಷಂ ಪೊಸ ಡೊಂಬನೆಂಬಿನಂ (ರಾಷಕೃ. ೨-೬೨). [ಪಾಸ್ಸ್ [೧] (<ಪಾಪಸ) + ಎಂಳ್ [೨]]

ಪಾಸ್‌ಪೋರ್ಟ್, ಪಾಸುಪೋರ್ಟ್ (ನಾ). ಇತರ ದೇಶಗಳಲ್ಲಿ ಪ್ರವಾಸ ಮಾಡುವುದಕ್ಕೂ ಹಾಗೆ ಪ್ರವಾಸ ಮಾಡುವಾಗ ತಕ್ಕ ಸಂರಕ್ಷಣೆಯನ್ನು ಪಡೆಯುವ ಹಕ್ಕಿರುವುದಕ್ಕೂ ಆ ದೇಶದ ನಿಯುಕ್ತಾಧಿಕಾರಿಯು ಕೊಡುವ ಪ್ರವಾಸಾಧಿಕಾರಪತ್ರ; ರಹದಾರಿ: "ಪ್ರವಾಸದ ರಹದಾರಿ: ಪ್ರವಾಸಪತ್ರ; ಪಾಸ್‌ಪೋರ್ಟ್" (Pass-port. ಕಪ್ರಿ. ೬೦). ಪಾಸುಪೋರ್ಟ್: 'ನಾನು ನಿಜಕ್ಕೂ ಬ್ರಿಟಿಷ್ ಪ್ರಜೆ.' ಪಾಸುಪೋರ್ಟನ್ನು ತಂದಿದ್ದರಾಗಿತ್ತು ಎಂದುಕೊಂಡ (ಹೊಸಗ. ೨೬೩).

[←ಇಂ. Passport]

ಪಾಸ್‌ಬುಕ್ (ನಾ). ಬ್ಯಾಂಕಿನವರು, ಠೇವಣಿದಾರನು ತಮ್ಮ ಬ್ಯಾಂಕಿನಲ್ಲಿ ಇಟ್ಟ ಮತ್ತು ತೆಗೆದುಕೊಂಡ ಹಣದ ಲೆಕ್ಕವನ್ನು ಬರೆದುಕೊಡುವ ಲೆಕ್ಕದ ಪುಸ್ತಕ: ಇದನ್ನೆಲ್ಲ ಕಾಳಕ್ಕೆ ಪಾಸ್‌ಬುಕ್ ಎಂಬ ಲೆಕ್ಕದ ಪುಸ್ತಕದಲ್ಲೂ ಬರೆದು ಆಗಿಂದಾಗ್ಗೆ ತಿಳಿಪಡಿಕೆ ಕೊಡುವರು (ಹೊಸಕ್ರ. ೩೫ ಆಡು). [←ಇಂ. Passbook]

ಪಾಹರೆ 'ಪಹರೆ' ನೋ.

ಪಾಹು (ಅ). ಕಾಪಾಡು, ರಕ್ಷಿಸು ಎಂಬರ್ಥದ ಸಂಸ್ಕೃತ ಧಾತುವಿನ ವಿಧ್ಯರ್ಥದ ಆಖ್ಯಾತರೂಪ: ಇಂದುಧರನೇ ಪಾಹಿ ಎಂತ್ಪೇಶ್ವರನೆ ಪಾಹಿ ಕಂದುಗೊರಳನೆ ಪಾಹಿ ಪಟುನಾಟಕ ಪಾಹಿ (ಕ್ರಿಶಕ. ೨೦-೧೩). 'ದೇಹಿ' ವರ. [ಸಂ.]

ಪಾಹುಡ[೧] 'ಪಾವುಡ[೧]' ನೋ.

ಪಾಹುಡ[೨] 'ಪಾವುಡ[೨]' ನೋ.

ಪಾಳ್ 'ಪಾಟು' ನೋ.

ಪಾಳ[೧] 'ಪಾಟ' ನೋ.

ಪಾಳ[೨] 'ಪಾಲ[೨]' ನೋ.

ಪಾಳಂಬಡು 'ಪಾಟಂಬಡು' ನೋ.

ಪಾಳಡವಿ (ನಾ). ನಿರ್ಜನವಾದ ಅರಣ್ಯ; ಘೋರಾರಣ್ಯ: ಹಾಂ ಪಾಳಡವಿಯೊಳ್ಪಸಳಿಯುಂ ಕೊಂಪುಬಹುದುದು ಹೆಳಿದೊಡೆ ಚಂಡಾಲರಂದಳಿಹಿ ಬಂದರಹುದು (ಕೃಬಹಾ. ೨೯-೨೨).

[ಪಾಳ್ (<ಪಾಟು) + ಅಡವಿ]

Δ ಪಾಳತ 'ಹಾಳತ' ನೋ.

ಪಾಳತಿ, ಪಾಳ್ತಿ (ನಾ). (ಕಳ್ಳನಂತೆ) ಬೇರೆಯವರ ಚಲನವಲನಗಳನ್ನು ಗುಪ್ತವಾಗಿ ನೋಡುತ್ತಿರುವಿಕೆ; ಸಮಯಾವಕಾಶಗಳನ್ನು ಕಾದು ನೋಡುವಿಕೆ; ಹೊಂಚುಹಾಕುವಿಕೆ: ಸದ್ದು ಮಾಡದೆ ಎನಗೆ ತಿಳಿಯಾದಂತೆ ಕ್ರುದ್ಧಜನರು ಪಾಳತಿಯಲ್ಲಿ ಬಂದು ಒಳಬಿದ್ದು ಸಂಚರಿಸುವ ತೆರನಾಗಿದೆ (ಹೋಳೇ. ೯-೨೭); ಪಾಳತಿಯಲಿ ಬರುವಾ ಕರುಗಳ ಕಣ್ಣಿಗಳನೆ ಬಿಡುವಾ ಬಾಲುರನು ಬಡಿದೋಡುವ ಕಾಡುವ (ಶ್ರೀಕೃಚ. ೬೦-೯). ಪಾಳ್ತಿ: ಇಬ್ಬರು ಬದ್ಮಾಷರು . . . ಹಿಂದಿನ ಜಾಲ್ಸ್ನಿಂದ ಅವರ ಮ್ಯಾಲ ಪಾಳ್ತಿ ಇಟ್ಟುಗೊಂಡು ಬಂದಾರ (ಹೊಸಂಚಾ. ೦೮೩).

ಪಾಳತಿಯಿಡು, ಪಾಳತಿ ಇಡು, ಪಾಳತಿದು = ಕಣ್ಣಿಡು; ಕಾವಲಿರು: ನಾವಿನ್ನು ಅವರ ಮೇಲೆ ಪಾಳತಿಯಿಡಬೇಕಲ್ಲ ? (ಕೃಕಕ್ಕೆ. ೭೯); ಅವರು. . . ಅವನ ಮೇಲೆ ಸೂಕ್ಷ್ಮವಾಗಿ ಪಾಳತಿ ಇಟ್ಟರು (ಸಪಾಚೇ. ೪೭೨); ನೀನು . . . ಗಂಡನ ಜೀವನದ ಬಗ್ಗೆ ಪಾಳತಿ ಇಡುವ ಧೈರ್ಯಶಾಲಿ (ಕುಸ್ತ್ರೀ. ೦೫೬); ಶ್ರೀನಿವಾಸ ನಿನ್ನ ಭಕ್ತ ಪೂರಾದಘಾವಂತನೆಂದು ಹೀಸಜನರ್ ಪಾಳತಿಟ್ಟಿನೇನು ಹೇಳಲ್ಕೊ? (ಕ್ರಸಚೇ. ೨೨-೦).

[← ಪುರಾ. ಪಾಳತ, ಪಾಳತಿ:, ಪಾಳಥ, ಪಾಳಥೀ]

ಪಾಳತಿಗಾರ (ನಾ). ಗುಪ್ತಚಾರ; ಬೇಹುಗಾರ: ಈ ಪಕ್ಷದವರ ವರ್ತಮಾನವನ್ನು ಆ ಪಕ್ಷದವರಿಗೂ, ಆ ಪಕ್ಷದವರ ವರ್ತಮಾನವನ್ನು ಈ ಪಕ್ಷದವರಿಗೂ ಹೇಳುತ್ತ ಅನೇಕ ಜನ ಪಾಳತಿಗಾರರು ಹೇರಳವಾದ ಹಣವನ್ನು ಸಂಪಾದಿಸಿಕೊಂಡರು (ಶಿಕಾಗ. ೨೦೯).

[ಪಾಳತಿ + −ಕಾರ[೨] (< −ಕಾಱ)]

ಪಾಳೆದಿವ್ಯ (ನಾ). ಕಾಯಿಸಿದ ಕಬ್ಬಿಣದ ಕುಳವನ್ನು ಹಿಡಿದು ತಾನು ಸತ್ಯವಂತನೇದು ಸಿದ್ಧಪಡಿಸುವ ಒಂದು ದಿವ್ಯ: ಆ ಶಿವಶಕ್ತಿಗಳು ಪಾಳೆದಿವ್ಯವಂ ಹಿಡಿದಿಹೆವೆಂದು (ಕುಂಂಕಾ. IX, ೨೦೩ ; 12 ಪದ್ಯ ೫೬ ಗದ್ಯ), ದಿವ್ಯಗಳಲ್ಲಿ ಬಹುಪ್ರಚಲಿತವಿದ್ದುದೆಂದರೆ 'ಪಾಳೆದಿವ್ಯ' ಅಥವಾ 'ಫಾಲದಿವ್ಯ'. ಕಾಸಿದ ಲೋಹದಪನ್ನು ಕೈಯಲ್ಲಿ ಹಿಡಿಯುವುದನ್ನೇ ಪಾಳೆದಿವ್ಯವೆಂದು ಕರೆದಿರುವುದು (ಕಜಾಲಿ. ೨೫೦). [ಪಾಳ್[೪] (=ಪಾಲ್ದ) + ದಿವ್ಯ]

ಪಾಳೆಯ 'ಪಾಳಿಯ' ನೋ.

ಪಾಳೆಯಗಾರ 'ಪಾಳಿಯಗಾರ' ನೋ.

ಪಾಳೆಯಪಟ್ಟು 'ಪಾಳಿಯಪಟ್ಟು' ನೋ.

ಪಾಳೆವಿ (ನಾ). = ಪಾಳೆವಿಗ: ಶ್ರೀಕಾಲಭೋಗವು ಮಾಡುವ ಪಾಳೆವಿಗಳಿವ್ವರು ಮುಪ್ಪಿಳಿಯಾಜಿಯು ನಾಲ್ವರ್ಗ್ಗಂ ಮಕ್ಕಳು [ಕ]ಂ ಹಾಡುವ ಸಮುದಾಯು ರೆಂರ್ಕ್ಕಂ ಮಕ್ಕಳು ೬೦ ಪಾತ್ರವೆರತಕ್ಕಂ ಮಕ್ಕ ೪೦(ಕಶಾ. ೯-೬-೨೫೬: 1085). ? ಇದು 'ಪಾಳೆವಿಗರಿರ್ವರು' ಎಂದಿರಬಹುದೆ ?

[< ಪಾಳೆವಿಗ ?]

ಪಾಳೆವಿಗ (ನಾ). ಮದ್ದಳೆ ಮುಂತಾದ ಚರ್ಮವಾದ್ಯಗಳನ್ನು ನುಡಿಸುವವನು(?): ಪೂಜಾರಿಗೆ ವರ್ತ್ತನ ೧೦ ಪೊಳಿಗೆದು ಮಾಣಿಪುರ್ಗ್ಗೆ ಮಕ್ಕಳು ೧೬ ಪಾಳೆವಿಗರಿಗೆ ಮಕ್ಕಳು ೧೨ ಪಾತ್ರಕ್ಕೆ ಮಕ್ಕಳು ೧೨ (ಕಶಾ. IX-i, ೦೭೭-೨೯; 1068). [< ಪಟಹ[೧] ?]

ಪಾಳಾಸ, ಪಳಾಸ (ನಾ). ಕುದುರೆಯನ್ನು ಕಟ್ಟುವ ಹಗ್ಗ: ಮತ್ತಂ ಮಂಜರದೊಳ್ ನಟ್ಟ ಕೆಟ್ಟಿನ ಮುಂಡಿಗೆ ಮುಜ್ಜುಂ ಪಳಾಸಂ ಪಜ್ಜುಂ ಪೊಜವಟ್ಟು ನೆರವಿಮನುತಪಡಿಸಿ ಪಾಯ್ದು ಬೀದಿವರಿದಾಜಿಗೊಂಡು . . . ಪೊಜಕಾಲೊಳ್ ನಡೆವ ಸುಕಳಾಶ್ವಮಂ ಬೀಗದಿಂ ಬೀಗವಾಯ್ದು (ರಿಂಕೃ. ೨-೧೦೩ ಕ); ಮುಂಡಿಗೆಯುಂ ಮುಜ್ಜುಮ ಕರಂ ದೃಢವನಿಸಿದ ಪಾಳಾಸ ಮನಶ್ರಮದಿಂದಂ ಪಜ್ಜುಮ ಒಂದಜಿಕೊಳ್ಳೊಂದು ತೊಡಂಕಿ ಬಿಸಿಲಾಣದ.ರೆಯಂದದಿ ಪರಿದವ್ ಪುರವೀಧಿಗಳೊಳು (ಕಪ್ರ:ಚಾ. ೦೩-೭೩ ; ದಬ್ಬಳಿಕ ಪಾಳಾಸದಸೆವಿಳಿ ಚಿಲ್ಲುಹ ಕಬ್ಬಿ ತಾವಣಿ ಮೇಲಕ್ಕೆ ಉಬ್ಬಲೀಯುವ ಕಬ್ಬುನವ ಗುಂಡು ವಾಡಿಗಳಬ್ಬರವಿರೆ ಸುಮ್ಮನಿಹುದು (ಕ:ಚಾಖಂ. ೯-೩೭). ಪಳಾಸ: ಆ ಭದ್ರ ಹಸ್ತಿ . . . ಕೆಲವು ತೆಜಿಗಳನು ತಿವಿಯೆ ಕಂತೆದ್ದುವ ಕೆಲವು ಪಳಾಸವ ಕೊಂಡು (ಪಾಗಳ. ೬-೯). [?]

ಪಾಳಿ[೧] 'ಪಾಡಿ[೩]' ನೋ.

ಪಾಳಿ[೨] 'ಪಾಟಿ[೧]' ನೋ.

ಪಾಳಿ[೩] 'ಪಾಟಿ[೩]' ನೋ.

ಪಾಳಿ[೪] (ನಾ). ಪುಡಿ; ಹುಡಿ; ಚೂರ್ಣ: ಕಾಶ್ಮೀರಸಾರಾವಹಾಪೂರ್ವಾರ ಪಾಳಿಸಮ್ಮಿಶ್ರಿತತಾಂಬೂಲರಾಗಪರಿಚುಂಬಿತಬಿಂಬಾಧರರಾಗವದನನುಂ . . . ದೂರೀಕೃತಸು[ರ]ಕುಮಾರಸೌಂದರ್ಯನುವೆನಿಸಿ(ಕುಳುಚಾ. ೦೦-೦೩೭).

[< ಸಂ. ಪಾರಿ:]

ಪಾಳ್ಕೆ 'ಪಾಲ್ಕೆ' ನೋ.

ಪಾಳ್ಕೆ 'ಪಾಲ್ಕೆ' ನೋ.

ಪಾಳ್ಗೆ[೭] (ನಾ). ಮೊಳಕಾಲಿನ ಸಂದು: ಬಾಹ್ಯದ ವೀಟಕಾರ್ ಕಟಕಕೆ ಬೇಹುಮು ತಾಂ ಪಾಳ್ಗೆ(ಗೆ)ಯಿಂಬ ವೆಸರವರಕಕ್ಕುಂ (ಅಕೃಚಾ. ೯-೩೩) ; ಮೊಣಕಾಲ ಟಕಕ್ಕೆ ಪಾಳೆಯೆಂಬ ವೆಸರಕ್ಕುಂ (ಅಕೃಚಾ. ೩೬-೨೦). [?]

ಪಾಳಕಟ್ಟು (ನಾ). ಒಂದು ಪ್ರದೇಶ (?) : ಆ ಸವನಿಗ್ಗಜಿಪ್ಪಿಂಜಿಯು ಬಡಗಣ ಕೋಡಿಯು ಪಡುವಲ್ಪಾಳಕಟ್ಟಿನ ಪೋ[ಗ]ಳಿಯು ಒಡಹು ತೋಂಬುಮಾಗಿ ಪಡುವಣಳ ಗಮೊಳ್ ಮೇಗ್ಪೆಯು ಬಟ್ಟೆಯುಂ ಮುಟ್ಟಿ ಬಡಗಣ ಸೀಮೆ (೩೧೩೦. XI-i, ೬೯-೫೦; ಸಂ. 1043). [?]

ಪಾಳಕೆತನ (ನಾ). ೧. ಸಾಲಾಗಿರುವ ಧ್ವಜ : ಧವಳಹಾರಂಗಳಿಂದೇಂ ಪೊಡಮೊಪ ನವಿ ನಟ್ಟ ನಂಬಳಚುಮಿಳಪಾಳಕೇತನಪ್ರಚುರಂಗಳ್ (೨೯೭೫. ೦೨-೬) ; ಪಾಳಕೇತನೇಳಂಗಳಂ ಮಾರುತ್ಪಾಳಾವಲಿಕರವಲ್ಲಭಂಗಳಂ ಲೀಲೆಯಿಂ ತಳೆದು ರಾಜಿಸುತ್ತ ತದ್ಪಾಳಕೋತ್ಪಾತ ಮುಂದೆ ಸುತ್ತಲುಂ (೨೯೭೫. ೦೪-೬). ೨. ಚಾಲುಕ್ಯರ ಕಾಲದಲ್ಲಿದ್ದ, ಲೌಕಿಕಪಾರ ವೈಶ್ವರ್ಯನಿರ್ವಾಹಕವಾದ ಒಂದು ರಾಜಬಿರುದು : ಮುಂದೆ ಎರಿದ ಧವಳಚ್ಛತ್ರ ಚುಮ್ಬಾದಿತ್ಯ ಪಾಳಕೇತನಾದಿ ರಾಜಬಿರುದಾಂಗಳುಂ ವೊಱಗುಂ ಮುಂಗಳತೂರ್ಯಾಂಗಳಿಸಿದೆಯಿ (೩೫೭೨. ೬-೪೬ ಕ). P ಹಾರ, ವರ್ಷ, ನವಿಲು, ಕಮಲ, ಹಂಸ, ವಿಮಾನ, ಸಿಂಹ, ವೃಷಭ, ಆನೆ, ಚಕ್ರ-ಈ ೧೦ ಲಾಂಛನಗಳುಳ್ಳ ಧ್ವಜಗಳ ಹತ್ತು ಸಾಲುಗಳು ನಾಲ್ಕೂಕಡೆಗೆ ಚತುರಂಗ್ರವಾಗಿ ನಿರುತ್ತವೆ ; ಪ್ರತಿಯೊಂದು ಸಾಲಿನಲ್ಲಿ ಒಂದೊಂದು ಲಾಂಛನದ ೧೦೦ ಧ್ವಜಗಳಿರುತ್ತವೆ ; ಎಂದರೆ ಒಂದು ದಿಕ್ಕಿಗೆ ೧೦೮೦ ಧ್ವಜಗಳಾಯಿತು. ಹೀಗೆ ನಾಲ್ಕೂ ದಿಕ್ಕುಗಳಿಗೂ ಕೂಡಿ ೪೩೨೦ ಧ್ವಜಗಳಾದುವು. ಈ ರೀತಿಯ ಧ್ವಜಗಳ ರಚನೆಗೆ ಪಾಳಕೇತನ ಎಂಬ ಪದಪ್ರಯೋಗ ಪೂರ್ವಪುರಾಣದಲ್ಲಿದೆ. 'ಪಾಳಿಧ್ವಜ' ಪರಾ. [ಪಾಳಿ (=ಪಾಲಿ) + ಕೇತನ]

ಪಾಳಿಕ್ಕು (ಕ್ರಿ). ನಾಶ ಮಾಡು ; ಹಾಳುಗೆಡಹು : ಚೋಳನಳವಿಂದು ಪುರುಂ ಪಾಳಿಕ್ಕಿ ಭುಜಕ್ಕೆ ವೆಸಕ್ಕಂದೊಪಲಿಗನೆನೆ ತಾನಿಳ × × × ಚಕ್ರ ದಂಬಡಾಧಿಪನ (ಪ್ರಾಶ. ೦೯೩೦. ೬೬-೨೮; 1080).

[ಪಾಳ್ (<ಪಾಱು) + ಇಕ್ಕು]

ಪಾಳಿಗೆಡು 'ಪಾಱಿಗೆಡು' ನೋ.

ಪಾಳಿತೋರಣ (ನಾ). ಸಾಲಾಗಿರುವ ತೋರಣ : ಆಯತರಂಗವಲ್ಲಿವರಿ ಶೋಭೆಯನೆಸಿಚಿತ ಚಾರುತೋರ್ಣಪರ್ಣಾಲ್ಯಂಧ ಪಾಳಿತೋರಣವಿರಾಜಿತಮಂ . . . ಸುಂದರರಾಜವಾರ್ಗಮಂ ಶ್ರೀಯು ನಿವಾಸಮಂ ಪ್ಪಗೆ ನ್ಯವೇಶ್ಮರ ಖನ್ಮಕೆಯುಂ ೬ಮಾರನಂ (೩೦೬೫. ೬-೪). 'ಪಾಳಿಕೇತನ' ಪರಾ.

[ಪಾಳಿ (=ಪಾಲಿ) + ತೋರಣ]

ಪಾಳಿದಪ್ಪು (ಕ್ರಿ). ೧. ಕ್ರಮ ತಪ್ಪು : ತಾಳಲಯಸಂಗೀತವಾದ್ಯಯತಿಗಳ ಗತಿಗೆ ಪಾಳಿದಪ್ಪದೆ ನರ್ತನಂಗೆಯ್ವ ಕೇಳಿಗಳಿಂ (೩೬೫. ೯-೩೬). ೨. ಕೆಟ್ಟುಹೋಗು ; ಹಾಳಾಗು : ಕಾರ್ಯದ ಹದನಿದು ಪಾಳಿದಪ್ಪಿದುದು (೩೦೯೪ ೦೪-೩೯). [ಪಾಳಿ (<ಪಾಲ್ಚಿ) + ತಪ್ಪು]

ಪಾಳಿಧ್ವಜ (ನಾ). ೧. =ಪಾಳಿಕೇತನ ೧ : ಬಿಳ್ಗೊಡೆಗಳುಂ ಪಾಳಿಧ್ವಜಂಗಳುಂ . . . ಪೊರಲಾಗೊಡೆಯು ರಾಜ್ಯಚಿಹ್ನಂಗಳ್ ಮುಂದೆ ಪರಿಯೆ (೩೩೨೦. ೦೩೩-೦೯); ರಾಜಚಿಹ್ನ ಪಾಳಿಧ್ವಜಸಮಕುಲಮುಂ ಭುಜಬಲಪ್ರಭಾ ಪಾಳಿಲೆಯೊಳ್ಪರೆ ಪಜ್ಜಯಾಹು ಪಮುಣಾಮಂದಂ (೩೦೩೩. ೨-೦೨). ೨. = ಪಾಳಿಕೇತನ ೨ : ಪಾಳಿಧ್ವಜಾವಿ ಸವಸ್ತಪ್ರಾರಮೈಶ್ವರ್ಯ ಚಿಹ್ನಸ್ಯ ವಿಜಯಾದಿತ್ಯಸತ್ಯಾ[ಶ್ರ]ಯ ಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜಪರಮೇಶ್ವರಭಟ್ಟಾರಕಃ ಸರ್ವಾನೇವ[ಮಾಜ್ಞಾ]ಪಯತಿ (೩೦೩೩. XX. ೯-೬ ; 663). [ಪಾಳಿ (=ಪಾಲಿ) + ಧ್ವಜ]

ಪಾಳಿಮಹಾಧ್ವಜ (ನಾ). =ಪಾಳಿಕೇತನ ೨ : ರಾಗದ ಪೂಜೆಯನ್ನ ಪಪ್ಪಸಗೆಯು ಗಳ್ದ ಕೆಂಪೆರೆ ಪಾಳಿಮಹಾಧ್ವಜಂ (೩೩೨೦. ೦೯-೦೩); ಕಲ್ಪದ ರೋಳೆ ಪಾಳಿಮಹಾಧ್ವಜಂಗಳಂ ಪಿಡಿದು ಮುಂಪಮ್ಮಂದನೆ ನಡೆದರ್ (೩೩೪. ೯-೨೫). [ಪಾಳಿ (=ಪಾಲಿ) + ಮಹಾಧ್ವಜ]

ಪಾಳಿಲ್ 'ಪಾಟಿಲ್' ನೋ.

ಪಾಳಿವ (ನಾ). (?) : ಸೋಪಿನ ತೋಪಿನ ವಲಹದ ಕೋಪಿನ ಪಾಳಿವದ ಗೋಂವೇಂಟಿಗೆ ಮತ್ತಂ ಚಾಪಪ್ರವೀಣರುದ್ಗತಕೋಪನರ್ದಡೆತಂದರ್ಲ್ಲಿ ಮುಂದೆ ವೞಿಂದರ್ (೩೩೪೫೫. ೬-೦೨೪). [?]

ಪಾಳಿವೆಱು (ಕ್ರಿ). ಸಾಲುಗಟ್ಟು ; ಸಾಲಾಗಿರು : ಅಂಬುಧಿಯು ತರಂಗದ ಬೆಂಬರವೊಳ್ ಪರಿವ ವಹಿಕ್ರಮಂಗಳಂತೆ ತುರಂಗದ ಬೆಂಬಳಿಯೊಳ್ಪೆರಿಂದು ಪಾಳಿವೆತ್ತ ರಥಂಗಳಂ (೩೩೪೫. ೬-೦೦ ಕ).

[ಪಾಳಿ (=ಪಾಲಿ) + ಪೆಱು]

ಪಾಳಿಸು 'ಪಾಟಿಸು' ನೋ.

ಪಾಳಿಸು (ಕ್ರಿ). ೧. ಸೀಳು ; ಸಿಗಿ: ಅತಂ ಶಸ್ತ್ರದಿಂ ಗಲ್ಲಮುಂ ಪಾಳಿಸಿ ವ್ರಣ ವೆಸಸಿದಕ್ಕಿಯುಂ ತೆಗೆದು ಕತ್ತಿಯಿಂದೆತ್ತಿ ತೊಱೆಯಿದು ತುಡುಲವ್ಯಾಧಿಯೆಂದು ಪೆಸರಿಟ್ಟು (೩೩೨೫. ೯-೨೬ ಕ); ತುರಗದ ಕಿವಿಯಂ ಪಾಳಿಸಿ ಸುರಗೋಪಜಿಹ್ವೆಯಿಂದಮಿರಾಣಜಲಂ ಪಾಯ್ದುರುತರೆ ದೀರ್ಘಜೀವಿ (೩೬೬೫. ೫-೨೫); ಮಾಜಿಪ ಪರಿಪಿನ ಪಾಳಿಸುವ ಪರಶುವಿನ ಧಾಳಾಧೂಳಿ ಮುಸಗಿಸಿ (೪೦೧೪. ೦೦-೯); ಶುಕಪಿಕ ಪಾಳಿಸಿದ ನವಿಪತಿಯು ಚೂತ ಫಲಾಳಿ ನಿರ್ಜರ ನಿರಿಸುವವು ಪಥಿಕರ ಪಥಶ್ರಮವ (೩೦೫೫. ೫-೬-೦೩). ೨. ಕೊಲ್ಲು; ಪಧಿಸು : ಒಪ್ಪಿಸರದೆ ಪಾಳಿಸುವಾಹಿತರನುಗಿದನುಸುರುಗಳ (೪೦೧೦೦. ೦೬-೩೬). ೩. ಹಿಮ್ಮೆಟ್ಟಿಸು ; ಸೋಲಿಸು : ವಿಳಸೆ ಪಪ್ಪ ದೊರ್ದಮನುರೋರುಹಾನುಜ್ಜ್ವಲಕುಂಭಕೋಭಮಂ ಪಾಳಿಸೆ ಲೊಚನಾಂತ ವಿಗ ಲಾತೆಯುನಾ ಜಯಕೇತುವೀಲೆಯಂ ವಿಳಸೆ ವೀಲು ರಂದುಗೆಯು ನುನ್ದಾನಿ ದುಂದ.ಧರಾನಿದಾವಮು ಚಾಳಿಸೆ ಬಂದು ತರ್ಪವಚ ಮಂಗಳಲಕ್ಷ್ಮಿಯೊಲಿಂದು ನೋಡಿಸಿಳ್ (೩೦೨೫ ೦೨-೩; ಬಾದ ಮಾಕಂದ ದೊಳ್ [ಣಣಾ. ೪೪]ಳಿಯುಂ ಪಾಳಿಸುರ್ಥವಗ್ಗದ ಬಸಂತಕ್ಕಳ್ತೆಯೆಲ್ಲಿಂಗಳು ಜ್ಜ್ವಳಿಪಂ ತಾಳ್ದು ಗುಣಂ ರಕ್ಷಿಸೆಯೆ ಪೇಜ್ಞಂ . . . ಕಾವ್ಯಮಂ (೩೩೦೫. ೦-೪೭). [< ಪಾಟಿಸು]

ಪಾಳಿಸು 'ಪಾಲಿಂಚು' ನೋ.

ಪಾಳು 'ಪಾಟು' ನೋ.

ಪಾಳುಕೋಡಕೆಱೆ (ನಾ). ಒಂದು ಊರಿನ ಹೆಸರು : ವೆಗ್ಗಡೆಗೌಡ ಶ್ರೀಪೃಥಿ ಅಗಳವನ್ನೆರಡುಮಾಳಿ ಪಾಳುಕೋಡಕೆಱೆಯುಂ ಅಯ್ದೊನಿ ಕಾವು ವತ್ತೊನ್ದಿ ವೃಸಾದುಗೆದ್ದೊರ್ (೩೬೫೦. ೦೨೫೬. ೦೨೦-೬ ; ೦೬೫೦ ೫೫).

[? + ಕೆಱೆ]

ಪಾಳುಗೆಡೆ (ಕ್ರಿ). ಹಾಳಾಗು ; ನಾಶವಾಗು : ದೇವಶಾಸ್ತ್ರಜ್ಞರ ಮತ್ತು ಕವಿಗಳ ನೆಲೆವೀಡೂ ಆಗಿದ್ದ ಪೂರ್ವಧಾನೆಲ್ಲ ಪಾಳುಗೆಡದು ನೆಲಸವ್ಯ ವಾಯಿತು (೩೩೨೦೦೦. ೧೩). [ಪಾಳು (<ಪಾಱು) + ಕೆಡೆ]

ಪಾಳುಗೈ 'ಪಾಳ್ಗೆಯ್' ನೋ.

ಪಾಳುಬೀಳು, ಹಾಳುಬೀಳು (ಕ್ರಿ). ಹಾಳಾಗು ; ನಾಶವಾಗು : ದೇವರಿಲ್ಲದ ಗುಡಿಯು ಪಾಳುಬಿದ್ದಂಗಡಿಯು (೪೬೪. ೩೦-೦) ; ಪೂಜಾವಿಲ್ಲದ ಗುಡಿ ಪಾಳುಬೀಳುವುದೆಂಬುವು ಅವ್ಗಗೂ ಗೊತ್ತು (೩೦೬೫. ೦೧೩). **ಹಾಳುಬೀಳು** : ಬಹಳಸಂಪದ ಉಡುಗಿಹೋದುದು ಧಾನ್ಯಮೌಷಧಿಲ್ಲ ದಂತಾಯ್ತು ಹಿರಿಯ ಕಣಜಗಳ್ದಿಗ್ದಿಗ್ಗೆ ವರಿಸಿಲು ನೆಲೆ ಹಾಳುಬಿದ್ದವು (೩೩೫. ೨೬-೦೦); ಅಂದಿನಿಂದ ಈ ಮನೆ ಹಾಳುಬಿದ್ದಿತು (೪೪೫. ೫೬).

[ಪಾಳು (<ಪಾಱು) + ಬೀಳು$_1$ (<ಬೀಱು$_1$)]

ಪಾಳುಭೂಮಿ (ನಾ). ಬೀಳುನೆಲ ; ಸಾಗು ಮಾಡದೆ ಬಿಟ್ಟ ಭೂಮಿ ; ಹಾಳುಬಿದ್ದ ಸೀಮೆ : ಆ ಉಗ್ರಬಾಹು ನಸ್ಸ ಪಾಲಕ್ಕಂಪಿಕ್ಕೆ ನಲ್ಲಲಾರದೆ ಪಾಳುಭೂಮಿಯೊಳ್ ನಾಲುಪೊಲ್ಲ ಧೊರೆಯೆಂದು ಕಾಣಿಸಿಕೊಳ್ತಿರ್ದನು (೩೦೧೦೦. ೦೫೦-೦). [ಪಾಳು (<ಪಾಱು) + ಭೂಮಿ]

ಪಾಳುಮನೆ ' ಪಾಟ್ಮನೆ ' ನೋ.

ಪಾಳೆ$_1$, ಹಾಳಿ$_1$, ಹಾಳೆ$_1$ (ನಾ). ೧. ಅಡಕೆಯ ಗೊಂಚಲಿನ ಮೇಲಿರುವ ಪೊರೆ,–ಅಗಲವಾದ ಎಲೆಯಂತಹ ಆವರಣ ; ಅಡಕೆಪಟ್ಟೆ : ಸಂಪಗೆಯ ಮುಗುಳುಮಂ ಮಾವಿನ ಮಿಡಿಯ ಗೊಲೆಯುಮಾನಡಕೆಯ ಪಾಳೆಗಳೊಳಂ . . . ತಾವರೆಯೆಲೆಪಟ್ಟಲ್ಗಳೊಳಮೊಟ್ಟಿ ಕಟ್ಟಿ (ಶಿಲಾಪ. ೦೩-೩೬ ಪ); ಮಿಾನಿನ ಕಾಕ್ಕೆಯಿಂದ ಕೆಳಗಿಳಿದ ಉಪ್ಪುನೀರು ಪಾಳೆಯನ್ನು (ಅಡಕೆ ಯ ಸೋಗೆಯ ಬುಡ) ದಾಟಿ . . . ಕಮರ ನಾತವನ್ನು ಹುಟ್ಟಿಸಿತ್ತು (ಹೊಸಕ್ಷಿ. ೯೬). ೨. ಬಟ್ಟೆ ಮೊದಲಾದುವುಗಳ ಸೀಳು,–ತುಂಡು: ಅಂಗರಾಜಂ . . . ಪಸಿಯ ನೇತ್ರದಸಿಯ ಪಾಳೆಯೊಳ್ ತಲೆನವಿರು ಪಚ್ಚುಗಂಟಿಕ್ಕಿ ಮಣಿಮಯಮಕುಟಮಂ ಕವಿದು (ಪಂಪಭಾ. ೦೨-೦೦೬ ಪ). **ಹಾಳಿ$_1$** : ೩. ಗದ್ದೆ ಮೊದಲಾದ ಭೂಮಿಯ ಸೀಳು,–ಭಾಗ ; ಪಟ್ಟೆ : ಚೆಂದುವಾರಲ್ಲಿ ಬಿಟ್ಟ ಬಾಳಿಗೆ ಗಡಿ ಮೂಡಲು . . . ಹೆದಾರಿಯ ಸುಗ್ಗಿಯ ಗದ್ದೆಯ ಹಾಳಿ ಗಡಿ (ಕಇ. I, ೪೦-೪೦ ; 1417) ; ಯಿಾ ನಾಕು ಗಡಿಯೊಳಗೆ ಬಂಕನೆಂಬ ಬಯಲು ತೊಲುವ ಹಾಳಿ ಸಹ ನಾಗಂ[ಡು]ಗದ್ದೆಮು ೬ (ಸೌಇಇ. IX–ii, ೪೬೫-೦೨ ; 1472). **ಹಾಳೆ$_1$** : ೧. ಅಡಕೆ ಹಾಳೆಯ ಗುಣ—ಇದರಲ್ಲಿ ಊಟ ಮಾಡುವುದರಿಂದ . . . ಸರ್ವಾಂಗವಾತ ರೋಗಂಗಳಂ ಹೋಗಲಾಡಿಸುವುದು (ಸಕಸ್ಯ. ೯೬); ಒಡಕಲು ಅಕ್ಕಿ ಸ್ವಲ್ಪ ತೆಗೆದು ಒಂದು ಒಣಹಾಳೆಗೆ ಹಾಕಿಕೊಂಡು . . . ಗಂಜಿ ಮಾಡಲು ಪ್ರಾರಂಭಿಸಿದಳು (ಪಾಳಿಸ್ಯ. ೦೦). ೩. ತೆಂಕಲು ಇಸರಣನಾಯಕನ ಆಳಿಕೆ ಪಡುವಲು ಹಾಳೆ (ಕಇ. I, ೫೦-೩೬ ; 1432). ೪. ಕಾಗದ; ಪಾನು : ಮತದಾರರ ಪಟ್ಟಿಯ ಹಾಳೆಗಳು ಹರವಿ ಬಿದ್ದಿವೆ (ಅಶ್ಯಮೇ. ೯೦) ; ಹಗಲಿರುಳ ಹಾಳೆಗಳ ತೆರೆದು ಮುಚ್ಚುತ (ಕಾಲೂರ. ೦೬೭-೪೨೫). ೫. ಅಗಲವಾದ ಹಾಗೂ ತೆಳುವಾದ ತಗಡು,—ಹಲಗೆ : ಆ ರಸವನ್ನು ಒಂದು ಹರವಾದ ಹಲಿಗೆಯ ಮೇಲೆ ಸುರುವಿ, ಸಮ ಮಾಡಿ, ದೊಡ್ಡ ಹಾಳೆಯ ಮಾಡುತ್ತಾರೆ (ಮುಂಬಯಿ. ೯-೨೨೦). ೬. (ಊಟದ) ಎಲೆ : ಪೊಂಬಾಟೆಯ ಹಾಳೆಯೊಳಿಮ್ಮಾವಿನ ಕೊನೆಯುಮಂ ಪುಲ್ಲಿಗೆಯ ನನೆಯುಮಂ . . . ಸುತ್ತಿ (ಮಲ್ಲಿಪು ೫-೪೯); ತಾನುಂಡು ತನ್ನ ಗುಡ್ಡಂಗ ಹಾಳೆಯನಾಂತನು (ಸಿದ್ಧರಾ. ೯-೦೬); ದೊನ್ನೆಗಳ ಹರಹಿ ಬಾಳೆಲೆ ಹಾಳೆಯಂ ಹಾಕಿ (ಸಮ್ಯಕ್ಕೌ. ೬-೨೩) ; ಹಾಳೆಯೊಳಗಣ ಶೇಷಮಂ ಶುನಕ ನುಣಲು (ಭಾಸಪಂ. ೬-೦೦).

ಪಾಳೆಯ ಕಡ್ಡಿ = "ನೆಲ ಸಾರಿಸಲು ಉಪಯೋಗಿಸುವ ಅಡಿಕೆಯ ಹಾಳೆಯ ತುಂಡು" (ಬಾಳಿಗಿ. ಕೋಶ) : ಒಲೆ ಮತ್ತು ಅಡಿಗೆಮನೆಗೆ ಸಗಣಿನೀರು ಕಲಡಿಸಿ ಪಾಳೆಯ ಕಡ್ಡಿಯಿಂದ ಸಾರಿಸಿ ಶುದ್ಧ ಮಾಡುವ, ಅವರ ಕೆಲಸ ಮುಗಿಯುತ್ತದೆ (ಬಾಳಿಗಿ. ೦೯).

[ದೇ. ॥ ತಮಿ. ಪಾಳೈ ; ಮಲ. ತೆಲು. ಪಾಳ ; ತುಳು. ಕೊಡ. ಪಾಳೆ]

ಪಾಳೆ$_2$ ' ಪಾಳೆಯ ' ನೋ.

ಪಾಳೆ$_3$, ಫಾಳೆ (ನಾ). ೧. ರೈತನು ಭೂಮಿಯ ಒಡೆಯನಿಗೆ ಕೊಡುವ ಹಣ ; ಗೇಣಿ; ಲಾವಣಿ : ಆ ರೈತ ನಿಮಗೆ ಪಾಳೆ ಕೊಡುವುದಿಲ್ಲವೇನು ? (ಪಾಪೋಲೀ. ೨೬೩) ; ನಾಕು ಪರಸಾತು ಪಾಳೇನ ಕೊಡಾಕಿಲ್ಲ (ಮಣ್ಣುಹೆ. ೩೭). **ಫಾಳೆ** : ೧. ಫಾಳೇದ ರೂಪಾಯಿ ತಂದಿ ದೋ. ಇಲ್ಲೋ ? (ರಕ್ತಸ್ಯ. ೬). ೨. ಕಂದಾಯ : ಉಪ್ಪಿನದು ಮುಗೀತು, ಸರಕಾರಿ ಫಾಳೇದ್ದೂ ಮುಗೀತು, ಇನ್ನು ಈ ಸಾರೆ ಯಾತರದರೆಪಾ ಸತ್ಯಾಗ್ರಾ? (ಮೂರಾಬ. ೨೯).

[?]

ಪಾಳೆಗಾರ ' ಪಾಳೆಯಗಾರ ' ನೋ.

ಪಾಳೆಗಾರಿಕೆ ' ಪಾಳೆಯಗಾರಿಕೆ ' ನೋ.

ಪಾಳೆಡೆ (ನಾ). ಸುಡುಗಾಡು ; ಶ್ಮಶಾನ : ಅವರಿದರೆಂಬ ಮಾತುಗಳನಾಲಿಸಿ ಪಾಳೆಡೆಗೈದಿ ರಾತ್ರಿಯೊಳ್ ತವಕದಿನತ್ತಲಿತ್ತ ಮಗುಳ್ದೆತ್ತಿದಡಸ್ಥಿಗಳಿರ್ಪ ವಿದ್ದಿಲಿರ್ಪವು ತುಷರಾಶಿಯಿರ್ಪವೊಡೆಹುಚುಗಳಿರ್ಪವು ಭೂತವಟ್ಟಿ ಬರ್ಪವು ಧನವಾಸೆ ಮತ್ತೆ ಬಿಡದೊಂದಿನಿತುಂ (ಕಂಕಶ. ೬೨).

[ಪಾಳ್ (<ಪಾಟ್ಯ್) + ಎಡೆ$_3$]

ಪಾಳೆನಿಸು ' ಪಾಟೆನಿಸು ' ನೋ.

ಪಾಳೆಯ, ಪಾಳಯ, ಪಾಳ್ಯ, ಪಾಳ್ಯ, ಪಾಟೆಯ (ನಾ). ೧. ಪಡೆ; ಸೈನ್ಯ ; ದಂಡು : ಕತ್ತಲೆಯ ಪಾಳೆಯದ ರವಿ ಹೊಕ್ಕಂತಾಯಿತ್ತಯ್ಯ (ಮಹಾದೇ. ಬ. ೬೨-೦೫೩ ; ಕಲ್ಪಾಂತಮೆ ಘೋತ್ಕರದ ಪಾಳೆಯವೆತ್ತಿ ಬಿಟ್ಟುದು ಧರಣಿಯಗಲಕೆ ಧಾಳಿಯಿಟ್ಟುದು (ಸುಭಪ. ೩೭-೩೩); ತೆರಳಿತಿದು ಹರನೆಡೆಗೆ ನಡೆವಾ ಸ್ಮರನ ಪಾಳೆಯವಂತೆ (ಶೊರರಾ ೦-೫-೩೬) ; ಕತ್ತಲೆಯ ಪಾಳೆಯಂ ಬೀಡು ಬಿಡೆ ಧಾತ್ರಿಯಲಿ (ಪತ್ರಾಂಗ. ೨-೩೫). ೨. ಸೈನ್ಯದ ಶಿಬಿರ ; ದಂಡಿನ ಠಾಣ್ಯ : ಗುತ್ತಿಯ ದಣ್ಣನಾಯಕಂ ಸಂಬು ದೇವನುಂ ಪಾಳೆಯದ ಸಾವಾಸಿ ಆನನ್ದಭಟ್ಟನುಂ . . . ಇನ್ತಿನಿಬರುವಿರ್ದ್ದು (ಸೌಇಇ. IX–i, ೨೩೨-೦೦; 1135) ; ಪಾಳೆಯಕೆ ತಿರುಗಿದರು ಕೃಷ್ಣಾರ್ಜುನರು ದುಗುಡದಲಿ (ಕುಪ್ಯಾಕ. ೦೬-೦); ಪುರೋದ್ಯಾನವೀಧಿಯೊಳ್ ಪಾಳೆಯಂ ಬಿಟ್ಟುದರ್ಜುನನ ಸೇನೆ ! (ಪತ್ರಾಂಗ. ೬೨-೦೯೬೫); ಶತ್ರುಸೇನೆ ರಾಜಧಾನಿಗೆ ಸುಮಾರು ಮೂರುಗಾವುದಗಳ ದೂರದಲ್ಲಿ ಪಾಳೆಯ ಇಳಿಸಿತ್ತು (ಶಾಂತಲಾ. ೦೬೩). ೩. ಬೀಡು ; ಬಿಡಾರ : "ನಿವೇಶಃ, ಶಿಬಿರಃ, ಷಂಡಃ—ಈ ೩ ಅರಸು ಬಿಡುವ ಪಾಳೆಯ" (ನಾಪರಾ. ೦೩೩); ಇತ್ತು ಮಗಧಸೌಂದರಿ ತನ್ನ ಪಾಳೆಯದೊಳು ವಾಸಯಸಜ್ಜಿಕೆಯಾಗಿ (ಅರ್ಧನೇ. ೩-೦೦೭ ಪ) ; ಮಱುದಿಪಸ ಮಹಳಾಶಿರೋಮಣಿ ಪರಮಸೌಭಾಗ್ಯದ ಸಮುದ್ರದ ಸಿರಿಯ ಪರಿಣಯವೆಂದು ಸಾಱಿತು ಪಾಳೆ [ಶಿಪ್ರಾಂ. ೪]ಯಂಗಳಲಿ (ಕುಪ್ಯಾಅ. ೦೩-೦); ದೇವನತ್ತಲು ಸತ್ಯಭಾಮಾದೇವಿಯರ ಪಾಳೆಯದೊಳಿರುತಿರ್ದೀ ವಿಲಾಸದ ನೋಡಿ ನಕ್ಕನು (ಸುಭಪ. ೩೬-೪೭); ವೈಶ್ಯಕುಲ ಸಂಭವರು ಹಾಯ್ಕಿದರಲ್ಲಿ ಗೂಡಾರದನು ಬಿಟ್ಟರು ಪಾಳೆಯದ (ನಳಪ. ೫-೪೪). ೪. ಸೀಮೆ ; ರಾಜ್ಯ : ರಥನನು ಕೊಂಡು ನಗರದ ಹೊಱಪಳಯದಲಿ ಬಂದು ಹೊಕ್ಕರು ತನ್ನ ಪಾಳೆಯದ (ಕುಪ್ಯಾಸ. ೨-೦೨೩); ಬಂಡು ಬಕ್ಕುಡಿ . . . ಕಳಕಳಮೆಂಬಿವು ಸರಸಿಜಂ ರತಿ ಸರಸಿ ಗಱಿವೂ ವಿಯೋಗ ಘನವಿರಹಿ ಜನದೊಳಗಲ್ಲದೇ ನೋಡಲಾ ನಾಡ ಹಿರಿಯೂರ ಪಟ್ಟಣದ ಪಾಳೆಯದ ಜನದೊಳಲ್ಲ (ಪಬಪು. ೬-೪೨) ; ಮಲೆವರನೊಕ್ಕಲಿಕ್ಕಿ ಗುಡುಗಾಡಿಸಿ ಬೇಡರ ಪಾಳೆಯಂಗಳು. . . ಮರ್ದಿಸಿತ್ತು ಮಹಿಶೂರ ಭಟಾಳಿ ಮರಾಟ ಕೋಟಿಯಂ (ಅಪ್ರತಿ. ೧೪-೪). **ಪಾಳೆಯ** : ೧. ಕಾಳಂಬಾರ್ಣವದ ಸೀಮಾಲಂಘನವೊ ಮೃತ್ಯುವಿನ ಪಾಳೆಯವೊ ಅಪನಿ ಕುಸಿದುದು ನೆರೆದ ಸೇನೆಯ ಹಣಿಗೆ (ಕುಪ್ಯಾರ್ಯೋ. ೯-೨೫) ; ಪಾಳೆಯವನಿದ್ದ ಕಾಣುತಾ ಗುಹನಾಳು ಕುಮರೆಯ ಕೂಡಿ ಗಮನೆದ ಚಾಳಿ ಯಾವುದೊ ತಿಳಿಯಬೇಕೆನು ತಲ್ಲಿಗೈತಂದ (ಶೊರರಾ. ೨.೬-೧೧). ೨. ದ್ರೋಣ ನಿಜಬಲದಂದದನು ನೆಱೆ ನೋಡಿ ನೋಡಿ. . . ಬರಹೇಳೆಂದು ಭಟ್ಟರನಟ್ಟದನು ಪಾಂಡವರ ಪಾಳೆಯಕೆ (ಕುಪ್ಯಾರ್ಯೋ. ೯-೨೮). ೩. ನಾಳೆಯಿಂದ ಸೂಳೆಯರ ಪಾಳೆಯದಲ್ಲಿ ಮ್ಯಾಳವಂ ನೋಡುತ್ತ ನಾನಿಲ್ಲಿಯೆಯಿರುವೆನು (ಸೌಗುಧಿ. ೧೯೦-೧೦). ೪. ಆದಿಯೂರು ಪಾಳೆಯದ್ರದೇಶಕ್ಕೆ ನಾನು ಅಧಿಪತಿ (ಪ್ರತಾಪ. ೧೭) ; ಈ ನಗರದ ರಾಜ್ಯವು ಸತ್ವಶಾಲಿಗಳ ಪಾಳೆಯ (ಬೌಲಕ್. ೬೬). **ಪಾಳ್ಯ** : ೪. ' ಪಾಳೆಗಾರ ' ಪರಾ. **ಪಾಳ್ಯ** : ೧. ಪ್ರಳಯಕ್ಕೆ ಹೆದರದದ ಪಾಳ್ಯಕ್ಕೆ ಹೆದರ್ಪೂನೆನೆ ? (ಗಾರ). ೨. ಮೆಱೆದುದಗ್ಗದ ವೀರರಾಮನ ಪಾಳ್ಯ ಬನದೊಳಗೆ (ರಾಮಪ. ೨೦-೬೮) ; ನಿಲ್ಲದೈತಂದು ಸತ್ಯಾಗಾಲದ ಪಾಳ್ಯವೆಲ್ಲವ ಸೂಱೆಯಾಡಿದನು (ಕಂಪಪ.

೩-೩೭) ; ಕೌರವೇಶ್ವರನ ಸಿರಿ ಸೊಗಡುದೋರಿತ್ತೆನುತ ಪಾಳ್ಯಕಂ ಸರಿಯೆ (ಕುರಂಗ. ೫೮-೭೦). ೪. ಕಾನ್ಯಕುಬ್ಜ ಬ್ರಾಹ್ಮಣಪಂಡಿತರ ಪಾಳ್ಯ (ಶಾಖಾ. ೬೦) ; ನಾಯಿ ಬೊಗಳಿ ಪಾಳ್ಯಕ್ಕೆ ಕೇಡು ತಂತು (ಗಾಪ). ೫. ಸ್ಥಳ ; ಜಾಗ : ಕೆರಿಯ ಪಾಳ್ಯದ ಮ್ಯಾಲ ಕರೀಕಬ್ಬ ಹಚ್ಚ್ಯಾರಲ್ಲಮ್ಮ ಜಾಣೆ (ಸುಗ್ಗಿ. ೦೦). ೬. ಬಣ ; ಪಂಗಡ ; ಪಕ್ಷ : ಈ ಬಗೆಯಾಗಿ ಪ್ರಪಂಚವನ್ನೇ ಎರಡುಪಾಳ್ಯಗಳಾಗಿ ನೋಡುವ ಸಾಮ್ಯವಾದಿಗೆ . . . ಯಾವ ರಾಷ್ಟ್ರೀಯತೆಯ ಭಾವನೆಯೂ ಮನ ಮುಟ್ಟದು (ಸಾಪಾದ. ೧೬೩) ; ಅದರಲ್ಲಿ ಅರ್ಧಾಂಶ ನಿನಗೂ ನಿನ್ನ ಪಾಳ್ಯಕ್ಕೂ ಹಂಚಿ ಕೊಡುವನು (ಶಿಂಪ್ಯ. ೦೯೦). ೫ ಈ ಶಬ್ದವು ಅನೇಕ ಊರುಗಳ ಹೆಸರುಗಳ ಕೊನೆಯಲ್ಲಿ, 'ಹಳ್ಳಿ' ಎಂಬರ್ಥದಲ್ಲಿ ಸೇರುತ್ತದೆ. Δ ಪಾಟೆಯ : ೧. ಮಂಗಪದಂಣ್ಣಾಯಕರು ತುಟು ರಾಜ್ಯದ ಮೇಲೆ ದಂಡೆತ್ತಿ ಬಂದು ಬಿದಿರೆಯಲು ಬಿಟ್ಟು ಚಪಟರ ಕೆಡಹಿ ತಾಳು ತಿರಿಗಿ ಪಾಟೆಯವೆತ್ತಿ ಬಹಲ್ಲಿ (ಕಸ. I. ೩೬-೩ ; 1398 ?).

ಪಾಳೆಯ ಮಾಡು = ಬಿಡಾರ ಹೂಡು ; ಶಿಬಿರವನ್ನು ಏರ್ಪಡಿಸು : ಪಾಂಡವರು ಉಪಪ್ಲವ್ಯದಲ್ಲಿ ಪಾಳೆಯ ಮಾಡಿರುವರು (ಭೀತ್ಮಪ. ೦೯೩). [ದೇ.ಕ ತಮಿ. ಪಾಳೈಯ ; ಮಲ. ಪಾಳಯ ; ತುಳು. ಪಾಳ್ಯ, ಪಾಳ್ಯೆ, ಪಾಳ್ಯೊ ; ತೆಲು. ಪಾಲೆಮು, ಪಾಳಯಮು, ಪಾಳೆಮು]

ಪಾಳೆಯಂಗೆಯ್ (ಕ್ರಿ). ಸೈನ್ಯಶಿಬಿರವನ್ನು ರಚಿಸು ; ಬೀಡು ಬಿಡು : ಆ ಮಣಿಕಟಕನಗೇಂದ್ರಕಟಕದೊಳ್ ನರೇಂದ್ರಕಟಕಂ ಪಾಳಿಯಿಂ ಪಾಳೆಯಂಗೆಯ್ದು (ರಾಜಶೇ. ೬-೨೯ ಪ). [ಪಾಳೆಯ + ಕೆಯ್$_1$]

ಪಾಳೆಯಗಟ್ಟಳೆ (ನಾ). ಸೇನೆಯ ನಿಯಮ : ಎತ್ತಿದ ಕೈದೀವಿಗೆಯ ಬೆಳಗಿನೊಳೆಪ್ಪತ್ತುಸಾವಿರ ವಾಜಿ ಬಿಡದೆ ಸುತ್ತಿತ್ತು ಪಾಳಯವನು ನೇಮಿಯ ನೇಮವೆತ್ತು ಪಾಳೆಯಗಟ್ಟಳೆ[ಶಾಶಾಂ. ಣಿ]ಯೊಳು (ಕುರಾಶಾಂ. ೦೯-೩೩). [ಪಾಳೆಯ+ಕಟ್ಟಳೆ$_1$]

ಪಾಳೆಯಗಾರ, ಪಾಳಯಗಾರ, ಪಾಳೆಗಾರ, ಪಾಳೇಗಾರ, ಪಾಳ್ಯಗಾರ, ಪಾಳ್ಯೆಗಾರ, ಪಾಳ್ಳೆಗಾರ (ನಾ). ೧. ಚಿಕ್ಕಸೀಮೆಯ ಅಧಿಪತಿ ; ತುಂಡರಸ ; ಮಾಂಡಲಿಕ : ಅಂದು ಮೈಸೂರರಸರು . . . ಹಲವು ಗ್ರಾಮಗಳನ್ನು ಹದ್ದಿನಲ್ಲಿಟ್ಟುಕೊಂಡಿದ್ದ ಪಾಳೆಯಗಾರರು (ಶ್ರೀರಾಯ. ೯). ೨. (ಆಲಂ) ತನ್ನ ಮನಸ್ಸಿಗೆ ಬಂದಂತೆ ನಡೆಯುವವನು ; ಯಾರನ್ನೂ ಲಕ್ಷಿಸದಿರುವವನು. ೩. (ನಿರಂಕುಶನಂತಿರುವ) ಮುಖಂಡ. ಪಾಳಯಗಾರ : ೧. ಇಲ್ಲಿ ಆಳಿಕೊಂಡಿದ್ದ ಪಾಳಯಗಾರರಲ್ಲಿ ಅಗ್ಗೀತಿಮ್ಮನಾಯಕನೆಂಬಾತ ಒಬ್ಬನಾಗಿದ್ದನು (ಶೀಕಿಸಂ. XI, ೬). ಪಾಳೆಗಾರ: ೧. ಮಿಳೆಮಿರಂಗಿ ಅಮ್ಮಿನಾಯಕ ಅಪ್ಪೆನಾಯಕ ವಗೈರೆ ಪಾಳೆಗಾರ್ರನ್ನೆಲ್ಲಾ ಹೊಡೆದು (ಹೈದರ. ೩೪). ೨. ಶಿಕ್ಷಣಾಧಿಕಾರಿಗಳು ಕೇವಲ ದರ್ಪದ ಪಾಳೆಗಾರರಾಗಿರದೆ . . . ಹಿರಿಯ ವ್ಯಕ್ತಿಗಳಂತೆ ಸೇವೆ ಸಲ್ಲಿಸುವರು (ಶಿಕ್ಷಣ. ೭೫೭). ಪಾಳೇಗಾರ : ೧. ತುಂಡು ಪಾಳೇಗಾರರು ನಮ್ಮ ದೇಶದ ಯಲ್ಲೆಕಟ್ಟಿನ ಗ್ರಾಮಗಳಂ ಮುಂಚಿತವಾಗಿಯೇ ಸೂರೆಗೊಳ್ಳುವದಕ್ಕೆ ಯತ್ನವಂ ಮಾಡಿ ಇದ್ದಾರೆ (ಮುದ್ರಾಮಂ. ೬೦) ; ರೈತರೇ . . . ಪಾಳೇಗಾರರಾಗುತ್ತ ನಡೆದಿದ್ದರು (ಮುಂಬಿಯ. ೯-೬೦) ; ಇವಳು . . . ಇಲ್ಲಿಯೇ ಒಬ್ಬ ಪಾಳೇಗಾರರ ಮಗಳು (ದೌಲ್ಲ. ೭). ಪಾಳ್ಯಗಾರ : ೧. ಐಗೂರು ಕೃಷ್ಣಪ್ಪನಾಯಕನೆಂಬ ಪಾಳ್ಯಗಾರಂ . . . ಸ್ವಾಮಿಗೆ ಸಾಷ್ಟಾಂಗಮೆರಗಿ (ಅರ್ಜಾಸಿ. ೩೦-೯೧ ಪ). ಪಾಳ್ಯೆಗಾರ : ೧. "ಸಾವಂತ —ಪಾಳ್ಯೆಗಾರ" (ಗಂಗಾಮ. ೩೨೮). ಪಾಳ್ಳೆಗಾರ : ೧. "ಮಂಡಲೇಶ್ವರ —ಪಾಳ್ಳೆಗಾರ, ಮಾಂಡಲಿಕ ಅರಸು" (ಗಂಗಾಮ. ೨೯೬).

[ಪಾಳೆಯ+ —ಕಾರ$_1$ (< —ಕಾಱ)./ತಮಿ. ಪಾಳೈಯಕ್ಕಾರ; ತೆಲು. ಪಾಲೆಗಾಡು, ಪಾಳೆಗಾಂಡು, ಪಾಳೆಗಾಡು]

ಪಾಳೆಯಗಾರಿಕೆ, ಪಾಳೆಗಾರಿಕೆ (ನಾ). ೧. ಪಾಳೆಯಗಾರನ ಅಧಿಪತ್ಯ : ಉತ್ತರದಲ್ಲಿ ಮುಂದಿನ ಮುನ್ನೂರುವರ್ಷಗಳ ಅವಧಿಯಲ್ಲಿ ಅನೇಕ ಸ್ವತಂತ್ರ ಪಾಳೆಯಗಾರಿಕೆಗಳು ಅಸ್ತಿತ್ವಕ್ಕೆ ಬಂದುದು ಎದ್ದು ಕಾಣುತ್ತದೆ (ಕಶ್ಯಪ್ರಾ. ೩೨೯). ಪಾಳೆಗಾರಿಕೆ : ೨. ದಬ್ಬಾಳಿಕೆ ; ನಿರಂಕುಶಪ್ರಭುತ್ವ : ಪುಂಡ ಪಾಳೆಗಾರಿಕೆಯು ನಮ್ಮ ಮೂರು ಜಿಲ್ಲೆಗಳ ಜೀವನಸರ್ವಸ್ವವಾಗುವುದು (ಶಿಕಾಮಂ. ೬). [ಪಾಳೆಯಗಾರ+ —ಇಕೆ]

ಪಾಳೆಯಗಾರ್ತಿ (ನಾ). ೧. ಪಾಳೆಯಗಾರನ ಹೆಂಡತಿ : ಕೆರಗೋಡಿನ ಯುದ್ಧರಂಗದಲ್ಲಿ ತನಗೆ ಕಯ್ಸೆರೆವಂದ ಪಾಳೆಯಗಾರ್ತಿ ಬೆಣ್ಣೆಹೊನ್ನಿ ಎಂಬ ಸುನ್ದರಿ ರಾಣಿ ವೀರಸ್ತ್ರೀಯನ್ನು . . . ಕೊಂದ ಮದ್ದೂರ ವಿಟ್ಟಣ್ಣ (ಪ್ರತಿನಾಮ ವಿಠ್ಠಲರಾಜಯ್ಯ)ನು ಹೊರಗಿರುವನು (ಕಸ್ಕಲ. ೯೮-೯). ೨. ಪಾಳೆಯಗಾರಿಕೆ ಮಾಡುವವಳು.

[ಪಾಳೆಯಗಾರ+ —ತಿ$_1$ (< —ಇತ್ತಿ)]

ಪಾಳೆಯದೆಗೆ (ಕ್ರಿ). ದಂಡಿನ ಪಾಳೆಯವನ್ನು ಎತ್ತು ; ಶಿಬಿರವನ್ನು ತೆಗೆ ; ಬಿಡಾರ ತೆಗೆ : ಇಳಿದರ್ದ ಬಳಿಯಿಂದ ಪಾಳೆಯದೆಗೆದೊಡೆ ಕಲಿಯೇಱಿದ ನಮ್ಮ ಭಟರು ಸಲೆ ಭೀತಿಗೆ ಮನವಿಡುವರು (ಕಂಪಿ. ೦೯-೩೨). [ಪಾಳೆಯ+ತೆಗೆ$_1$]

ಪಾಳೆಯಪಟ್ಟು, ಪಾಳಯಪಟ್ಟು, ಪಾಳ್ಯಪಟ್ಟು (ನಾ). ಪಾಳೆಯಗಾರನ ಅಧಿಪತ್ಯದಲ್ಲಿರುವ ಸೀಮೆ ; ಪಾಳೆಗಾರನ ರಾಜ್ಯ : ಈ ಕಥೆ ನಡೆಯುತ್ತಿರುವಾಗ ಉಮ್ಮತ್ತೂರು ಸಂಪದ್ಯುಕ್ತವಾದ ಪಾಳೆಯಪಟ್ಟು (ಶ್ರೀರಾಯ. ೯). ಪಾಳಯಪಟ್ಟು : ಚಿತ್ರದುರ್ಗದ ಪಾಳಯಪಟ್ಟನ್ನು ಮೊದಲು ಸ್ಥಾಪಿಸಿದವನು ಮತ್ತಿ ತಿಮ್ಮಣ್ಣನಾಯಕ (ಪಾಳಗಾ. ೩೮) ; ಬಾಗೇಪಲ್ಲಿತಾಲ್ಲೋಕು . . . ಒಂದು ಪಾಳಯಪಟ್ಟಾಗಿತ್ತು (ಶೀಕಿಸಂ. XI, ೬). ಪಾಳ್ಯಪಟ್ಟು : ಅರಕಲಗೂಡೆಂಬ ಗಡಿಯಲ್ಲಿ ತನ್ನಾಪ್ಪಳ್ಯ ಪಟ್ಟಿನ ಗಡಿಗಳ ವಿಚಾರಣೆಯಂ ಮಾಡುತಿರ್ದೈಗೂರು ಕೃಷ್ಣಪ್ಪನಾಯಕನೆಂಬ ಪಾಳ್ಯಗಾರಂ. . .ಸ್ವಾಮಿಗೆ ಸಾಷ್ಟಾಂಗಮೆರಗಿ (ಅರ್ಜಾಸಿ. ೩೦-೯೦ ಪ) ; ಊರಿನಲ್ಲಿ . . . ನಿಮ್ಮಂಥ ಸಂಭಾವಿತರೂ ದೊಡ್ಡಮನುಷ್ಯರೂ ಇಲ್ಲವೇ? ಬನ್ನೂರೇನು, ದುಷ್ಮಾನ್ ಪಾಳ್ಯಪಟ್ಟೇ? (ಕಂಪಿ. ೨೦೦).

[ಪಾಳೆಯ+ಪಟ್ಟು./ತಮಿ. ಪಾಳೈಯಪ್ಪಟ್ಟು ; ತೆಲು. ಪಾಳೆಪಟ್ಟು, ಪಾಳೆಮುಪಟ್ಟು]

ಪಾಳೆಯಮಿಳಿ, ಪಾಳ್ಯವಿಳಿ (ಕ್ರಿ). ಠಾಣ್ಯ ಹಾಕು ; ಬೀಡು ಬಿಡು : ಈಶ್ವರಂ ತ್ರಿಪುರಕೈದಿ ಪಾಳೆಯಮಿಳಿವನು (ಕಸಿಪು. ೯೦ ಸೂಸನೆ). ಪಾಳ್ಯವಿಳಿ : ಲಗ್ಗೆಯೊಳಗೆ ನೊಂದು ರಿಪುಭೂಪರ ಸೇನೆ. . . ದೂರ ಚೌದಿಕ್ಕಿನೊಳಾಗ ಬೊಗ್ಗನೆ ಪಾಳ್ಯವಿಳಿದರು (ಕಂಪಿ. ೩-೬೦).

[ಪಾಳೆಯ+ಇಳಿ$_1$ (<ಇಟು)]

ಪಾಳೆಯವಿಕ್ಕು (ಕ್ರಿ). ಬೀಡು ಬಿಡು ; ಶಿಬಿರ ಹೂಡು : ಸೊಕ್ಕಿದ ಮೊರಸರ ಬೇಲೂರವರ ಬಲ. ಲೆಕ್ಕವಿಲ್ಲದೆ ನಡೆತಂದು . . . ಪಾಳೆಯ ವಿಕ್ಕಿತು ಬಡಗ ದಿಕ್ಕಿನಲಿ (ಕಂಪಿ. ೧೨-೦೯). [ಪಾಳೆಯ+ಇಕ್ಕು]

ಪಾಳೇಗಾರ 'ಪಾಳೆಯಗಾರ' ನೋ.

ಪಾಳೇಳ್ (ಕ್ರಿ). ಹಾಳಾಗು ; ಹಾಳು ಬೀಳು ; ನಾಶವಾಗು : ಚೋಳಿಕ ಕ್ಷಿತಿತಳಂ ಪಾಳೇಳ್ವಿನಂ ಭಸ್ಮಮಾಗುರಿದಿಂತೆಯ್ದೆ ನೊಳಂಬವಾಡಿ ಬನವಾಸೀ ಮಂಡಳಂ ಪೂಳಿದೆ ತರೆದಂತಾದುದು ಗುತ್ತಿ ಪಾತ್ತಿ ಪೊಗಿದತ್ತಾ ಪಾನುಗಲು ಬೇಡದಾಳ್ವರ ಖೇಡಂ ಪ್ರಬಳ ಪ್ರತಾಪಶಿಖಿಯಿಂ ಬಲ್ಲಾಳಭೂಪಾಳಕಂ (ಎಳ. V. ಕನ್ನಡಾ. ೨೨೦-೦೭; 1178?) ; ಬೆಳ್ವೆಳಗಿನ ಬಾಳ್ವೆಳೆಯಂ ತಳ್ವದೆ ಬಾಂಬೊಲದೊಳರುಣಕರಶಿಖಿಶಿಖೆ ಪಾಳೇಳ್ವಿನಮಳುರ್ದುಱ್ ಚಿಂತೆಯ ನಾಳ್ವಂತೆವೊಲೋಷಧೀಶ್ವರಂ ಕಳೆಗೆಟ್ಟಂ (ರಾಜಶೇ. ೦೨-೦೩).

[ಪಾಳ್ (<ಪಾಟ್) +ಎಳ್$_1$ (<ಎಟು್$_1$)]

ಪಾಳ್ಮೆಸು (ಕ್ರಿ). ನಾಶಮಾಡು ; ಹಾಳುಮಾಡು : ನಿನ್ನ ಕೊಂದು ಪಾಳ್ಮೆಸುವೆಂ ನಾಕಲೋಕಪುಂ (ಹರಿ. ೪೯-೩೧).
[< ಪಾಟು + — ಇಸು]

ಪಾಳ್ಗಿಯ್, ಪಾಳುಗೈ, ಪಾಳ್ಗೈ, ಪಾಳ್ಗಿಯ್ (ಕ್ರಿ). ನಾಶ ಮಾಡು ; ಹಾಳುಗೆಡಹು ; ಧ್ವಂಸಗೊಳಿಸು : ಇದೇಸ್ಯೆ ಸಚ್ಚಿದವರೊಡವೆಯನೆ ಪಾಳ್ಗಿಯ್ದೆ (ಜಸಭ. ೧೧-೬) : ಬೈರಾಗಿಪುಂ ವಿಜನಮಧ್ಯೆ ಕಳ್ಳೊಡಗೂಡಿ ನಪ್ಮಯ ಕುಲದ ಯಶಶ್ಚಂದ್ರಿಕೆಯ ಪಾಳ್ಗೆಯ್ದೆ (ಕಶ್ರಾಂಗ. ೪೯-೧೬೬೬). **ಪಾಳುಗೈ** : ತಪ್ಮ ಸಂಶೋಧನೆ ನಿರ್ಮಾಣಗಳು ಪ್ರಪಂಚದ ಮಾನವ ಸಂಸ್ಕೃತಿಯನ್ನೇ ಪಾಳುಗೈಯುತಲಿವೆ ಎಂಬ ವಿವೇಕ ವಿಜ್ಞಾನಿಗಳಲ್ಲಿ ಮೂಡಿತು (ಕಾಲಾಯ. ೬೯). **ಪಾಳ್ಗೈ** : ಅರಿನೃಪರನು ಕೊಂದು ಪುರವ ಪಾಳ್ಗೈದಾಗ ಹರಳೆ ಬಿತ್ತಿಸಿದರು (ಕಾಸಪ. ೩-೧೬) ; ಹಲವು ಸಜ್ಜನರನು ಒಬ್ಬ ಕೀಳನು ಬಂದೂ ಕೆಡಿಸಿ ಪಾಳ್ಗೈಪನು (ಇಂಚಾಕ. ೧೬೩-೩). **ಪಾಳ್ಗಿಯ್** : ಒಂದಿರುಳು ನಾಟ್ಯರಂಗದೊಳೊಮ್ಮೆ ಎದೆಯೂಸೆಯನೆ ವೆನೆದು ನೆನೆದು. ಹೆಜ್ಜೆಯನು ಪಾರೆತು ಪಾಳ್ಗಿಯ್ದಾಟವನು (ಚರಿತ್ರ. ೩. ೪೩೦). [ಪಾಳ್ (<ಪಾಟು)+ಕೆಯ್[1]]

ಪಾಳ್ಗೈ ' ಪಾಳ್ಗಿಯ್ ' ನೋ.

ಪಾಳ್ತಿ ' ಪಾಳತಿ ' ನೋ.

ಪಾಳ್ದೇಗುಲ ' ಪಾಟ್ದೇಗುಲ ' ನೋ.

ಪಾಳ್ನೆಲ ' ಪಾಟ್ನೆಲ ' ನೋ.

ಪಾಳ್ಮನೆ ' ಪಾಟ್ಮನೆ ' ನೋ.

ಪಾಳ್ಮನೆಹಾಳ ' ಪಾಟ್ಮನೆಪಾಟ ' ನೋ.

ಪಾಳ್ಮೆಯ್ (ನಾ). ಹಾಳಾಗುವಂಥ ದೇಹ ; ಅಶಾಶ್ವತವಾದ ಶರೀರ : ಪಾಳ್ಮೆಯ್ಯೋರ್ದೊಲವಿಂ ಪುಣ್ಮಪುನೀ ಮನಂ ಗಳಿಸಿಕೊಂಡಾ ದೇವ ಲೋಕಕ್ಕೆ ಪೋಗಲೊಡಂ ನೋವಪರವರ್ಗೊ ನೋವು ತನಗೋ (ಕಕ್ಕಾಕ.೦೩).
[ಪಾಳ್ (<ಪಾಟು)+ಮೆಯ್[1]]

ಪಾಳ್ಯ ' ಪಾಳೆಯ ' ನೋ.

ಪಾಳ್ಯಗಾರ ' ಪಾಳೆಯಗಾರ ' ನೋ.

ಪಾಳ್ಯಪಟ್ಟು ' ಪಾಳೆಯಪಟ್ಟು ' ನೋ.

ಪಾಳ್ಯವಿಳಿ ' ಪಾಳೆಯವಿಳಿ ' ನೋ.

ಪಾಳ್ಯೆಗಾರ ' ಪಾಳೆಯಗಾರ ' ನೋ.

ಪಾಳ್ವಸಿಜ್ ' ಪಾಟ್ವಸಿಜ್ ' ನೋ.

ಪಾಳ್ವೊಲ (ನಾ). ಕೃಷಿ ಮಾಡಿರದ ಭೂಮಿ ; ಹಾಳು ಬಿದ್ದ ಹೊಲ ; ಬೀಳಾದ ಹೊಲ : ಗಗನಮೆನಿಪ್ಪ ಪಾಳ್ವೊಲದೊಳ್ . . . ಚಿಲ್ಲಿ ತಾರೆಗಳೆನಿಪ್ಪ ಬಿಳ್ಪುಗಳನಂತವಕ್ಕಿಂದವಬಿಂಬರೌಪ್ಯಕುಂಭಗತಸುಧಾ ಮುರೀಚಿಜಲಮಂ ಸುರಿದಂ ಸಲೆ ಕಾಲಪಾವುರಂ (ಕಾಚಕೇ. ೦೧-೬೪).
[ಪಾಳ್ (<ಪಾಟು) + ಪೊಲ]

ಪಾಳ್ವುರಿ, ಹಾಳುಸುರಿ (ಕ್ರಿ). ಶೂನ್ಯವಾಗಿ ಕಾಣು ; ಭಣಗುಡು : ಪುರಜನವಿದ್ದು ಭೂಪರನಿಲ್ಲದಂದು ಪಾಳ್ವುರಿವುತಿದ್ದುದು ನಪ್ಮ ನಗರ (ಕಕಕ. ೩೩-೪೪). **ಹಾಳುಸುರಿ** : ನಿನ್ನ ಚಾವಡಿಗನುಕಾಲ ಸಂದಣಿ ತಪ್ಪದಿಂದು ಹಾಳುಸುರಿವುತಿದೆಯೆಂತು ನೋಡುವೆವು (ಕಕಕ. ೭೮-೮೪) ; ಹಾಳುಸುರಿವ ನೆಲದ ಸಡುಪೆ ಪುರಂದರವು ನೀತಿತೇಕೆ? (ಕಪುಚ. ೮೩-೯) ; ಜಾತ್ರೆ ಮುಗಿದ ಪರಿಯಂತೆ ಸ್ಮೇಶನು ಹಾಳುಸುರಿಯ ಹಕ್ಕಿತು (ಜಪುಂಕ. ೪೪೦) ; ಹಾಳುಸುರಿಯುತ್ತಿದ್ದ ಮನೆಯ ಜೀರ್ಣಾವಸ್ಥೆ ಮೊಟ್ಟಮೊದಲು ಅವನ ಕಣ್ಣಿಗೆ ಬಿತ್ತು (ಪುವಕು. ೨೭೨).

ಹಾಳುಹಾಳು ಸುರಿ, ಹಾಳ್‌ಹಾಳ್‌ಸುರಿ (ದ್ವಿರುಕ್ತಿ) : ಊರು ಹಾಳು ಹಾಳು ಸುರಿಯುತ್ತಿತ್ತು (ಕಕಕು. ೧೦೦) ; ಊರು ಹಾಳು ಹಾಳು ಸುರಿಲಿಕ್ಕೆ ಹತ್ತೀದ (ಗಂಗಾಸಾ. ೦೯೪) ; ಹಾಳ್‌ಹಾಳ್ ಸುರಿಯಿತು ಹಗೆಯ ಬೀಡಕಟ (ಹೊಂಗಳು. ೨೨-೬). [ಪಾಳ್ (<ಪಾಟು)+ಸುರಿ[1]]

ಪಾಳ್ಳಿಗಾರ ' ಪಾಳೆಯಗಾರ ' ನೋ.

ಪಾಱಿಳಿ ' ಪಾಱಿಟಿ ' ನೋ.

ಪಾಱಿಟಿ, ಪಾಱಿಳಿ (ಕ್ರಿ). ಚಂಚಲತೆಯಿಲ್ಲವಾಗು ; ವ್ಯಸ್ತವಾಗದಿರು : ಪಾಱಿಟಿಯದ ಮನಮಂ ಪೊಱಮಾಡುವ ಸಕಳೇಂದ್ರಿಯಂಗಳಂ ಪ್ರಕೃತಿಯಿ ನಿಟ್ಟೇಱಿದ ಮದಾಂಧಗಜಮಂ ಮಾಱಿ ಬರ್ದುಂಕುವರುಮೊಳರೆ ಮಾನವ ಮದನಾ (ಅಂಚಾಕ. ೪-೪೪). **ಪಾಱಿಳಿ** : ಕಟ್ಟುವಡೆದಂತೆ ನೆರೆಗೊಂಡ ಮನಮುಮಾ ಮನದ ಬೆಂಬಳಿವಿಡಿದು ಪಾಱಿಳಿದಶೇಷಶರಣಂಗಳುಂ (ಚಾಚಕೇ. ೧೪-೦೦೬ ಕ). [ಪಾಱು[3]+ಅಟ್ಟಿ[1]]

ಪಾಱಿಸಾಟ, ಪಾರಾಟ, ಹಾರಾಟ, ಹಾಱಿಸಾಟ (ನಾ). ೧. ಆಕಾಶದಲ್ಲಿ ಸಂಚರಿಸುವಿಕೆ ; ಉಡ್ಡಾಣ : ' ಪಾಱಿಸಾಡು ' ವರಾ. **ಪಾರಾಟ** : ೨. ಚೆಲ್ಲಾಪಿಲ್ಲಿ ; ದಿಕ್ಕಾಪಾಲು : ದಿಕ್ಕು ನಭ ಧರೆಯಂಬುದನು ಕಣ್ಣಿಕ್ಕಿ ಕಾಣ್ದಂ ತೋರಿಸಿದದ್ಭುತರಕ್ಕಸರ ಶಸಾ ದಿ ಸಗಬಲವನ್ನು ಸಂಹರಿಸಿ ಮಿಕ್ಕ ವಾಹನಿಗೆರಗಲಾ ರಣರಕ್ಕಸನ ಭಯಕಂಜಿ ಪಾರಾಟಕ್ಕಿದಸದಳೆ ಸೇನೆಯರಿದಿಂದ್ರಾರಿ ಕೈ ಕಚ್ಚಿ ತೆಗೆದ (ಕಣಾಹ. ೪೫೮-೪೪). **ಹಾರಾಟ** : ೧. ಆಕಾಶದಲ್ಲಿ ಪಕ್ಷಿಗಳ ಹಾರಾಟ ನೋಡಲು ಸೊಗಸಾಗಿರುತ್ತದೆ (ಕೂಡ). ೩. (ಆಲಂ) ಕೂಗಾಟ ; ಆರ್ಭಟ : ತಾನು ಒಂದು ಗಳಿಗೆ ಸುಂದರಮ್ಮನವರ ಮನೆಗೆ ಹೋದರೆ ಎಷ್ಟು ಹಾರಾಟ ! (ಕಾಕ. ೦೩೩). **ಹಾಱಿಸಾಟಿ. ಹಾಱಿಸಾಟದವರು** — ಆಕಾಶದಲ್ಲಿ ಸಂಚರಿಸುವವರು ; ವೇಚರರು : ಮೂಱುಲೋಕದ ಸ್ವಾಮಿಯಣುಗನೆಂದಹಿಗರ್ವವೇಱಿ ಲಕ್ಷ್ಮಿಸನೆಂಬುವರು ಹಾಱಿಸಾಟದವರ ನಾಡಿನ ಹೆಣ್ಣು ಕರೆದುಕೊ (ಕಕಕ. ೪೨-೬೩).
[ಪಾಱು[3]+ಆಟ]

ಪಾಱಿಸಾಡು, ಹಾರಾಡು (ಕ್ರಿ). ೧. ಆಕಾಶದಲ್ಲಿ ಶೇಲಾಡು, — ಚಲಿಸು ; ಉಡ್ಡಾಣ ಮಾಡು : ಸಿಂಗದ ಕಕ್ಷೋರನಿನಾದಕೆ ಬೆರ್ಚುವಾನೆ ಪಾಱಿಸಾಡುವ ಪಾಳ್ಕನಂಭ್ರಗತಿಗೇಳ್ದುಱಿ ಪಾಱುವನೇಕಪಕ್ಷಿಯಿಂ ಕೂಡಿ ವಿರಾಜಿಸುತ್ತತುಳಬಂಧುರವಿಂಧ್ಯಮನೋಜ್ಞಭೂಧರಂ (ಅಂಧ್ರ. ೩-೪೩). **ಹಾರಾಡು** : ೨. ಅಲ್ಲಾಡು ; ಅಲುಗಾಡು : ನೆತ್ತಿಯಲ್ಲಿ ಒಂದು ಪಿಳ್ಳಜುಟ್ಟು ಹಾರಾಡುತ್ತಿತ್ತು (ಕಕಜು. ೨). ೩. (ಆಲಂ) ಕೂಗಾಡು ; ರೇಗಾಡು : "ಈ ಹಾಳು ಸರ್ಕಾರೀ ಕೆಲಸಕ್ಕೆ ಎಳ್ಳುನೀರು ಬಿಟ್ಟು ಬಿಡಲೇ? " ಎಂದು ಒಂದೊಂದು ವೇಳೆ ಹಾರಾಡುತ್ತಿದ್ದನು (ಹಾಗಕ. ೭) ; ನಿನ್ನ ಈ ವಯಸ್ಸಿನಲ್ಲಿ ನೀನು ಹೀಗೆ ಹಾರಾಡುತ್ತಿದ್ದಿ ? (ಕಳ್ಳಕಾ. ೦೦೮) ; ಅವರಿಗಂತೂ ಕುಂಬು ಆಯಾಸವಾಗಿತ್ತು. ಎಲ್ಲರ ಮೇಲೂ ಹಾರಾಡುತ್ತಿದ್ದಾರೆ (ಕುಕ್ರೇಡು. ೩೯). [ಪಾಱು + ಆಡು[1]]

ಪಾಱಿ, ಪಾರಿ (ನಾ). ಹಾದರಗಿತ್ತಿ ; ಜಾರೆ : "ಪಾಱಿಯೆನೆ ನಿತಗೆಯಕ್ಕುಂ" (ಕಣಾಗ. ೭೦). **ಪಾರಿ[1]** : "ಪಾರಿಯೆನಲಾದಪುದು ಜಾರಿಗಂ ಶ್ರೇಣಿಗಂ ಪೆಸರು" (ಕಜ. ೬೪). 'ಮುದಿಪಾಱಿ' ವರಾ.
[ಪಾಱು + — ಇ[3]]

ಪಾಱಿಕ್ಕು (ಕ್ರಿ). ಹಾದರ ಮಾಡು : ಪಾಱಿಕ್ಕಿ ಪರಿವಲ್ಲಿ ಬಾಲಗಜ್ಜಿ ಕಾಲಂ ತೊಡರೆ (ಅಂಚಾಕ. ೩-೦೦೧೩). [ಪಾಱು + ಇಕ್ಕು]

ಪಾಱಿವೆಣ್ (ನಾ). ೧. = ಪಾಱಿ. ೨. (ಆಲಂ) ಜಗಳಗಂಟಿಯಾದ ಹೆಣ್ಣು : "ಪಾಱಿವೆಣ್ ಕಲಹಶೀಲಾಸ್ಮೀ" (ಕಣ್ಮಹಿ. ಆ ಪ್ರ.೧೦).
[ಪಾಱಿ + ಪೆಣ್]

ಪಾಱಿಸು, ಹಾರಿಸು, ಹಾಱಿಸು (ಕ್ರಿ). ೧. ಜಿಗಿಸು ; ಹೆಗೆಸು ; ಪುಟಿಸು ; ಹಾರುವಂತೆ ಮಾಡು : ಕ್ಷಿತಿಪತಿಯ ಧೈರ್ಯಗುಣಪರ್ವತಮಂ ... ಅತಿ ವೇಗದೆ ಪಾಱಿಸಿದುದು ಸುತವಿರಹವ್ಯಥೆಯವರೂಪಪವನಾಘಾತಂ

(ಕುಸ್ತಿ. ೩-೯) ; ಪರಿಯಿಪ ನೆಟ್ಟನಟ್ಟುವಿದಿರೇಱಿಪ ಪಾಱಿಪ ಕಿಳ್ತು ದಾಂಟಿಪ . . ಪಂಚಧಾರೆಯೊಳ್ ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿಪುತ್ರನಾ (ರಾಜಕ. ೦೩-೮೨). ೨. ಚೆದರಿಸು ; ಚೆಲ್ಲಾಪಿಲ್ಲಿ ಮಾಡು : ದಿವಿಜವಿಮಾನಕೋಟಿಯಂ ತಱಗೆಲೆಯಂತೆ ಪಾಱಿಪ. . .ರುದ್ರಗಣೇಂದ್ರರಿಂದೆ (ರಾಜಕ. ೦೯-೦೦೬ ಪ). ೩. ಓಡಿಸು; ಕಳೆ; ನಿವಾರಿಸು : ಪಾಡುವ ಗಾಣರ ಗೇಯಂ . . . ಕಂಪನೊಳ ಕೊಂಡಲೆವೊಂದೆಲ[ರೆಂಬ]ವಂದು ಪಾಱಿಸುವುದಗ್ರ ವೀರಭಟರಾಹ ಕೇಳಿ ಪರಿಶ್ರಮಂಗಳಂ (ಸಂಪಾ. ೦೦-೯) ; ಆಱಿಸಲಂಗದ ಮಲಮಂ ಪಾಱಿಸ ಲಿಂದ್ರಿಯದ ದರ್ಪಮಂ ಮಾರ್ಗದ ಮೈದೋಱಿಸಲಾಱನೆಯ ತಪಕ್ಕೇ ಱಿದನಾ ತಪದ ಪೆಸರೆ ಕಾಯಕ್ಲೇಶಂ (ಅಸಂಪು. ೯-೦೭) ; ಕಳಮ ಕ್ಷೇತ್ರದಿಕ್ಕೆಲದಲ್ಲಿ ಪರಿಮಳದಳೆದ ನೀಲಾಬ್ಜವ ಕಿತ್ತು ತೊಳಗುವ ಗಿಳಿ ವಿಂಡನಿಟ್ಟು ಪಾಱಿಸುವ ಹೆಂಗಳ ರೂಪ ನೋಡುತ್ತೈದಿದನು (ಸೋಹಕ. ೩-೨೫). ೪. ನಾಶಗೊಳಿಸು; ಧ್ವಂಸಮಾಡು; ಧೂಳೀಪಟ ಮಾಡು: ಮಾಱೌಂತ ದಾನವರ್ಕಳ ಹಾಱಿಂದರ್ವಿಸುವ ಬಳಮನೊರ್ವನೆ ರಣದೊಳ್ ಪಾಱಿಸಿದಂ ವಿದ್ಯೆಗಳಿಂ (ಸೇಮಿಪು. ೦೨-೨೯). ೫. ಎತ್ತಿ ಹಾಕು ; ಅಪಹರಿಸು; ಲಪಟಾಯಿಸು: ಆತಂ ಮಾಡುವನಾಚಾರಮಂ ಪೇಱ್ವೊಡೆ . . . ವೀರರ ಪಡಪಂ ಪಾಱಿಸುವಂ (ಧರ್ಮಾಮೃ. ೨-೬೬). ಹಾರಿಸು : ೧. ಅಪ್ಪಿ ತಪ್ಪಿ ನೆಲದಲಿ ಬಂದು ಇಳಿದರಿವುಗಳ ಊದಿ ತೂರಿ ಹಾರಿಸು ಮತ್ತೆ ಮೇಲೆ ಮುಗಿಲಲಿ (ಗಂ. ೦೨೬-೦೫) ; ಕುಂಭಕರ್ಣನು ತನ್ನ ಮೂಗಿನಲ್ಲಿ ಹೊಕ್ಕ ಹನುಮಂತನನ್ನು ಹಾರಿಸಿ ಒಗೆದಂತೆ . . . ನನ್ನನ್ನೂ . . . ಒಗೆದಿದ್ದಾನೆ (ರೇಳಕ್ಕ. ೩೯). ೫. ಮಲ್ಲವ್ವನಿಂದ ಈಗ ಎಷ್ಟು ಹಾರಿಸಲು ಶಕ್ಯವಾದೀತು? (ಶಾಪೂರೀ. ೨೦೬). ೬. ಸಿಡಿಸು ; ಉಡಾಯಿಸು; ಚಿಮ್ಮಿಸು : ಹಾಸ್ಯಚಟಾಕಿಯ ಹಾರಿಸುತಾ ದಿನ ಗುರುತಿಸುತಿದ್ದೆ ಹಾಜರಿಯ (ಇಂಪಾಸ. ೩೯-೯೩) ; ಸಂಚುಗಾರರಲ್ಲೊಬ್ಬ ಗುಂಡು ಹಾರಿಸಿದನು (ಪುಸಕು. ೨೯೦). ೭. ಹಸು, ಎಮ್ಮೆ ಮೊದಲಾದುವುಗಳ ಮೇಲೆ ಗರ್ಭಧಾರಣೆಗಾಗಿ ಹೋರಿ, ಕೋಣಗಳನ್ನು ಹಾಯಿಸು,— ಏರಿಸು : ಎರಡು ಅಚ್ಚತಳಿಯ ಗೂಳಿಗಳನ್ನು ಹಾರಿಸಿ ಅಡ್ಡಡ್ಡ ತಳಿ ಯೆಬ್ಬಿಸುವುದು (ಕಪಿಕೋ. I. ೨೨೨). ೮. ಮರೆ ಮಾಡು ; ತಪ್ಪಿಸುವುದಕ್ಕೆ ಪ್ರಯತ್ನಿಸು: 'ಮಾತು ಹಾರಿಸು' ಪರಾ. ೯. ತೊನೆದಾಡುವಂತೆ ಮಾಡು ; ಹಾರಾಡುವಂತೆ ಮಾಡು : ಏರಿಸಿ, ಹಾರಿಸಿ, ಕನ್ನಡದ ಬಾವುಟ ! (ಕನ್ನಪಾ. VIII). ಹಾಱಿಸು : ೩. ಸಂಕಿಲಿಯ ನೇಹದಂ ಹಾ[ಹಾಱಂ.ಪಾ]ಱಿಸಿ ಪರವೆಯರ ನೇಹದ ವಶೀಕರಣಪರಿಮಳಮಂ ತೋಱಿಸೆ (ಸಂಪಕ. ೦೯-೮೫). ೧೦. ತುಂಡು ಮಾಡು ; ಕತ್ತರಿಸು; ತರಿ: ದಳ್ಳುರಿಧಾರೆಯೆಂಬೈದಱಿ ದೇವನನೆಸಲು ಮಧ್ಯದಲಿ ಹಾಱಿಸಿದನಾ ಪಾರ್ಥ (ಕುಸ್ಕಾಡ್ರೋ. ೩-೫೯) ; ನಿಡಿಗಲ್ಲು ನಿಶಿತ ಹಾಸಱ ಗಲ್ಲು . . . ಬೀಱ ತುಡುಕಿದ ವಜ್ರಮಾರ್ಗಣದಿಂದೆ ಶ್ರೀಕೃಷ್ಣ ಹುಡಿಯೇಳಲೆಚ್ಚು ಹಾಱಿಸಿದ (ಸೋಹಕ. ೯೦-೭೩). ೧೧. ಇಲ್ಲದಂತೆ ಮಾಡು; ಇಲ್ಲವಾಗಿಸು : ಶಶಿಧರಾ ನಿನ್ನನೆರಡು ಚಿಂತೆಯದಿಲ್ಲದರ್ಚಿಸುವೆನು ಭಾಷೆ ತಾನಿದು ಸಿರಿಯ ಹಾಱಿಸಾ ನಾನಿದಕೆ ಬೇಸತ್ತೆನಯ್ಯ (ಸಿದ್ಧೇಪು.೨೦-೭೦). ೧೨. (ಇತರರಿಗೆ ತಿಳಿಯದಂತೆ) ನೀಡು (?) : ನೀಱಿಯನು ನೀ ಯಜ್ಞಕಾಲಕೆ ಕರೆದು ಪಿಂಡವನು ಹಾಱಿಸುವುದೈ (ಸಂಪಸ. ೩-೭).

ಹಾರಿಸಿಕೊಂಡು ಬರು=ಅಪಹರಿಸಿಕೊಂಡು ಬರು : ಸ್ವಯಂವರದಲ್ಲಿ ಏಕರಥಿಕನಾಗಿ ರಾಜರನ್ನೆಲ್ಲಾ ಗೆದ್ದು ಕನ್ಯೆಯರನ್ನು ಹಾರಿಸಿಕೊಂಡು ಬಂದ ವೀರ (ಪಸಕಾ. ೩೫೮). ಹಾರಿಸಿಕೊಂಡು ಹೋಗು = ಲಪಟಾಯಿಸು ; ಅಪಹರಿಸು: ಸುಖಧನನು ನನ್ನ ಹೆಂಡತಿಯನ್ನು ಹಾರಿಸಿಕೊಂಡು ಹೋಗಿರುವನು (ಕಪಾಸ. ೦೨೩). [ಪಾಱು₁ + —ಇಸು₂]

ಪಾಱು₁, ಪಾರ್₂, ಪಾರು₂, ಹಾರು₂, ಹಾಱು₁ (ಕ್ರಿ). ೧. ಎಗರು; ಜಿಗಿ; ನೆಗೆ; ಪುಟಿ; ಚಿಮ್ಮು : "ಪಾಱು—ಉತ್ಪ್ಲವನೇ (ನೆಗೆ), ವಹಿತ್ರ ಭೇದೇ ಚ (ಹೆಱಿಗೋಲು)" (ಕಪಾಶಾ) ; ಪಗೆಯನೇಂಗಳ ಪಟ್ಟಮೆ ಪಾಱಿ ತಿಂಬುದೇ (ಸಂಪಾ. ೦೨-೯೦) ; ಆ ವಿಯಚ್ಚರಪರಂ ನಟನಾಗಿ ಸಭೆಗೆ ಪಾಱಿದಂ (ಸೇಮಿಪು. ೯-೩೬) ; ಸಿಡಿಸಿಡಿದು ಪಾಱಿದವು ಬೆಟ್ಟಂಗಳೆತ್ತಲುಂ (ಪಂಪಾ. ೯೬-೨೫). ೨. ಏರು ; ಮೇಲಕೆ ಹೋಗು : ಕಪ್ಪುರದ ಪಾಱುವ ಸುಟ್ಟುರೆ . . . ಆಪರಿಸುವ ತುಂಬಿ ಚೆಲ್ವೆಸೆಯೆ ಕಣ್ಗೆಸೆದತ್ತು ಖಗೇಂದ್ರನೋಲಗಂ (ಆದಿಪು.೨-೫); ಗುಬ್ಬಿಯ ಕೊರಲ್ಗೆ ಗೊಧಿಯ ಕಲ್ಲ ಕಟ್ಟಿ ದೊಡುಬ್ಬಿಯಾಗಸಕೆ ಪಾಱುವುದೇ (ಸೋಹಕ. ೦-೨೨). ೩. ಆಕಾಶದಲ್ಲಿ ಚಲಿಸು ; ಉಡ್ಡಾಣ ಮಾಡು : ನಾಮಾಕಾಶದೊಳ್ ಕಾಗೆಗಳಂತಿರೆ ಪಾಱುವನಿತಲ್ಲದೆ ನಮಗಿನಿತು ವಿಭವಮುಮೈಶ್ವರ್ಯಮುಂಟೆ (ಸಂಪಾ. ೦೩೬-೦೮) ; ಕರ್ಚಿ ಪಾಱಿದುವು ಕೆಂದಳಿರಂ ಗಿಳಿವಿಂಡಿನೋಳಿಗಳ್ (ಸಂಪಾ. ೩-೩೦) ; ಎಱಂಕೆಯೊಂದಱಿಂ ಪಾಱಲಾರ್ಕುಮೆ ಪತತ್ರಿರಾಜನುಂ (ಕಾಪ್ಯಾಸ. ೯೯೨) ; ನೀಱ ನಿರೀಕ್ಷಿಸುತ್ತೆ ಮಣಿದರ್ಪಣಮಂ . . . ತೋರಗುರುಳಂ ತೆಗೆಯುತ್ತಿರಲಲ್ಲಿ ಪಾಯ್ದು ಪೆಣ್ಣಾಱಡಿ ಪಾಱ ಕೂರುಗುರ ಕೊಳ್ಗಗಿದಾಗಳೆ ತನ್ನ ಕುಂತಳಂ ಪಾಱಿತೆಗೆತ್ತು ಪಾಱಱಿದು ಪಾಱಿಪಳೇಂ ಕರಪಾಕೆ ಮುಗ್ಗೆಯೋ (ರೀಶಾಸ. ೦೨-೨೨). ೪. ತೊಲಗು ; ಹಿಂದೆ ಸರಿ; ದೂರವಾಗು : "ಅಕ್ಕುಳಿಸಿತೆಂದುಂ . . . ಪಾಱಿತೆಂದುಂ . . . ಪಾರಗೆಯ್ಯೆಂದುಂ— ಈ ೧೩ ಅಪಸರಣಕ್ಕೆ ಪೆಸರ್" (ಕಪಾ. ೭೨-೬೯೯) ; ಬಿರಯಿಂಗಳಂಜಿ ತಾಱ ಪಗಲಾಣ್ಮನ ಮೆಯ್ ಬಿಸುಪೇಱ ಮಾಗೆ ಚೆಚ್ಚರದೊಳ್ ಪಾಱ . . . ತೀಡಿದುದು ತೆಂಕಣಗಾಳಿ ಬಸಂತದೇಟ್ಗೆಯೊಳ್ (ಕಪ್ಪಕಾ. ೫೩). ೫. ಚೆದರು; ಚೆಲ್ಲಾಪಿಲ್ಲಿಯಾಗು; ದಿಕಾ ಪಾಲಾಗು : ಬಱಿದಾದುದು ಜಲಧಿಜಲಂ ಕಿಱಿದಿರ್ದುದು ಮೇರು ನಿನ್ನ ಭರದಿಂ ಸುಯ್ಯೊಳ್ ತಱಗೆಲೆಗಳಂತೆ ಪಾಱಿದರಱಿಕೆಯ ಸುರರೇಂ ಕುಮಾರಚರಿತಂ ನಿನ್ನ (ಅಸಪು. ೯-೬) ; ನಿಶ್ವಾಸಂಗಳಿಂ ಪಾಱಿದುದೊ ಕುಸುಮಬಾಣಂಗಳಿಂ ನುಚ್ಚುನೂಱಾದುದೊ . . . ಎಂಬಂದದೆ ಲಜ್ಜಾಮಗ್ನೆಗೇನುಂ ನುಡಿ ಪೊಱಮಡದಾಯ್ತೆಂತುಮಾ ಕಾಂತೆಗಾನಿಳ್ (ಕಾಪಂಉ. ೨೯೦). ೬. ವೇಗವಾಗಿ ಮಿಡಿ,-ಬಡಿದುಕೊಳ್ಳು ; ಕಂಪಿಸು : ಅಂತಃಪ್ರವಿಷ್ಟಚಂದ್ರಾಪೀಡಸ್ಪರ್ಶಲೋಭದಿಂದವೆನೆ ಕಡು ಪಾರ್ಪ[ಪಾಠಾಂ. ಗಂಡುವಾಯ್ಯ] ಮೆಲ್ಲೆರ್ದೆಯೊಳ್ ಕಯ್ಯನಿಕ್ಕಿ (ಕಾಪಂಉ. ೩೬). ೭. ನಾಶವಾಗು ; ಹಾಳಾಗು : 'ಪಾಱಿಸು' ಪರಾ. ಪಾರ್₂: ೧. 'ಪಾರ್ಕೆ' ಪರಾ. ಪಾರು₂ : ೩. ಅಳಿಗಳುಂ ಪಾರುತಿವೆ (ಸಂಕಾಶಾ. ೩-೬-೬೦); ಇನ್ನು ಪಾರದಿರೆನ್ನ ಬಳಿಯ ಸೊಗಗೂಡು (ಗಿಳಿಪಿಂ. ೦-೬). ಹಾರು₂ : ೧. ಬೆಕ್ಕು ಹಾರುತಿದೆ ನೋಡಿದಿರಾ ? (ಗಂ. ೮೨-೩) ; ಭೂರಂಪಕಾಲದಲಿ . . . ಬಂಡೆಗಳುರುಳಿ ಕಂದರತಲದಿ ಢಿಕ್ಕಿ ಹೊಡೆದು ಹುಡಿಹುಡಿ ಹಾರಿ ಕಿಡಿಕಿಡಿ ಸಿಡಿಯುವಂತೆ (ಪಾಪ್ರಾಂಗ. ೮೨-೨೨೫೦). ೩. ರೆಕ್ಕೆಯ ಬೀಸುತ ಚೇತನಗೊಳಿಸಿ ಹೊಸಗಾಲದ ಹಸುಮಕ್ಕಳ ಹರಸಿ ಹಕ್ಕಿ ಹಾರುತಿದೆ ನೋಡಿದಿರಾ ? (ಗಂ. ೫೭-೩). ೬. ರೋಗಿಗೆ ನಾಡಿಯು ಮುಖಸ್ಥಾನದಲ್ಲಿ ಕ್ಷಣಕ್ಷಣಕ್ಕೆ ನಿರಂತರವಾಗಿ ಹಾರಿದರೆ ಆತನಿಗೆ ನಾಲ್ಕನೆಯ ದಿನಕ್ಕೆ ಮರಣವೆಂದರಿವುದು (ಸಕನ್ಯ. ೦೩). ೮. ಇಲ್ಲವಾಗು ; ಹೊರಟು ಹೋಗು; ಕಳೆದು ಹೋಗು : ಶರಣು ಶರಣೆಂಬುವೆವು ಹರಣ ಹಾರುವ ತನಕ (ಕನ್ನಪಾ. ೦೩೮). ಹಾಱು₁ : ೧. ಹರಿವ ಹಾಱುವ ಪಂಠಿಸುವ . . . ಎಳೆಗಱುಗಳನು ನೋಡಿದನು ನಗುತ ನರೇಂದ್ರನೊಲವಿನಲಿ (ಕುಸ್ಕಾಂ. ೦೭-೩೫) ; ಅಂಬುಧಿಯ ಹಾಱ ಲಂಕೆಯ ಸುಟ್ಟು ರಕ್ಕಸರ ಮಡುಹಿ ಸತ್ಯಲೋಕದ ಪದವಿಯನಿತ್ತು ಸಲಹಿತಣ್ಣ (ಪುರಂದ. ೦-೦೮೦-೦); ಕಾರ್ಯ ಸಿದ್ಧಿಸಿತೆಂದು ಮಾಯಾಕಾಂತೆ ಖೇಚರಕೆ ಹಾಱಿದಳು (ಸೋಹಕ. ೩೦-೨೬).

೩. ತೋಱುತು ವಾಯಸನೆಡಗಡೆಯೆಡದಿಂದೆ ಹಾಱುತು ಹಂಗ ದಕ್ಷಿಣಕೆ (ಪೋಹತ. ೬-೨೫) ; ಱೆಕ್ಕೆಯ ಕೊಡಹಿ ಹಾಱುತು . . . ನುಡಿದುದು ನೃಪಗೆ ವಿನಯದಲಿ (ಪಳಸ. ೨-೨೦). ೪. ಸೌಂದರಪೆರುಮಾಳೆ ಪಿರಿದು ಕೋಪದಿಂ ಹಾಱ[ಪಾಠಾಂ. ಱು, ರ, ಱ] ನೂಂಕಿ (ಸಂಬರ. ೬-೯೯); ಆಡಗುವ ಶಾರ್ದೂಲ ಹಾಱುವ ಹರಿಣನ ಕೆಡಹಿ ರೋಹಿತವನೀಂಟುವುದು (ಪೋಹತ. ೪೦-೩೦). ೫. ಹಾಱುತ್ತು ಬ್ರಹ್ಮನೋಲಗ ಕೆದಱುತ್ತಿದೇನಯ್ಯ (ಅಪಸಂ. ೭-೨೪) ; ತೂಱುದರೆ ತನಿಹೊಟ್ಟು ಗಾಳಿಗೆ ಹಾಱುವುದು (ಕುಪ್ಯಾಪ್ರೋ. ೦೬-೪೪). ೬. ಎಡದೋಳು ಹಾಱುತು ವಾಮಲೋಚನ ಬೆಂಬಿಡದಲುಗಿತು (ಪೋಹತ. ೬-೨೬). ೮. ಏನು ಬಂದಿರಿ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾಱು ಹೋಹುದೆ (ಬಸವ. ೨೪೦) ; ಹಾಱುದವು ಹೆಸರುಗಳು ಭಂಗದ ಸೂಱೆಗಳ ಕಟ್ಟಿದರು ಮಿಗೆ ತಲೆಮಾಱುಗಳು ಮರಳಿದರು ರಣಹೇಡಿಗಳ ಬಗೆಯಂತೆ (ಕುಪ್ಯಾಭೀ. ೭-೬); ಶಿವಶಿವ ಭಾಗ್ಯ ಹಾಱುತಲಾ (ಕೌಶಿರಾ. ೨೨-೫). ೯. ಸೂಸು ; ಹೊರಚೆಲ್ಲು ; ಹೊಮ್ಮಿಸು : ತಾಱುಥಟ್ಟಿಗೆ ಹರೆದು ರೌದ್ರವ ಹಾಱುದವು ಕಣ್ಣುಗಳು ರಪುಬಲದೇಱ ನಾಲಗೆ ಹೊಗಳಲಮ್ಮದು (ಕುಪ್ಯಾಳ. ೦೦-೦೫).

ಹಾರಿಕೊಳ್ಳು = ದುಮುಕು : ಶೀಲಭಂಗವಾಯಿತೆಂದು ಹೊಳೆಗೆ ಹಾರಿಕೊಂಡೆಯಾ ಗೌರಾ? (ಶುಂಗಭ. ೦೦೫) ; ಕೆಲವರು ಯಾವ ಯಾವ ಕಾರಣಕ್ಕೋ ಕೆರೆ ಬಾವಿ ಹಾರಿಕೊಳ್ಳುತ್ತಾರೆ (ಹೊಸಕ್ಷಿ. ೦೭೭). ಹಾಱ ಹೊಯ್ = ಮೇಲಕ್ಕೆ ಚಿಮ್ಮುವಂತೆ ಹೊಡೆ ; ಹಾರಿಸು : ಸಡ್ಡೆಮಾಡದೆ ರಕ್ಕಸನ ಕೂರ್ಗಣೆಗಳ ವಿಡ್ಡೂರವನು ಹಾಱ ಹೊಯ್ದು ಅಡ್ಡವಾತಿಯಲಿ ಸ್ಯಂದನಸೂತ ವಾಜಿಯ ಒಡ್ಡವಣೆಯ ಖಂಡಿಸಿದ (ಪೋಹತ. ೪೦-೫೪).

[ದೇ.॥ ತಮಿ. ಮಲ. ಪಾಱು ; ತುಳು. ಪಾರು ; ಕೊಡ. ಪರ್ ; ತೆಲು. ಪಾಱು ; ತೊದ. ಪೊರ್]

ಪಾಱು₂, ಪಾರ₁, ಪಾರು₄, ಹಾಱು₂ (ನಾ). ೧. ಜಿಗಿತ; ಹಾರಿಕೆ : 'ಏಕ್ಕೆಪಾಱು' ಪರಾ. ೨. ಹಾರಾಡುವಿಕೆ ; ಉಡ್ಡಾಣ : 'ಪಾಱು ಗೆಡು' ಪರಾ. ೩. ಒಂದು ಬಗೆಯ ನಾವೆ ; ಹರಿಗೋಲು : "ಪಾಱೆಂದೆನೆ ಪೋತಭೇದಂ" (ಕರ್ಣಾನಿ. ೭೦) : ಅಂತು ಪರಾರ್ಥ್ಯಮಪ್ಪ ಸ್ತ್ರೀರತ್ನಮಂ ಪೇಱುವ ಪಾಱನೆ ಪೋಲ್ತು ಕೀಱು ಪಾಱುವ ಅಮಿತರಯ ಗಮನ ಖೇಚರವಿಮಾನಕೇತನದ ಕೋಳೊಳ್ (ಶಾಂತಿಪು. ೨-೬೩ ಪ); ಅಱಗಡ ಲೆನಿಸಿದ ಸುಗುಣನ ಮೆಱೆವ ಪದದ್ವಂದ್ವಮೆಂಬ ಪಾಱಂ ಕಟ್ಟಬ್ಕಱನೆ ಯ್ದಿದವರ್ಗಲ್ಲದೆ ಪೆರ್ಗಡಲಂ ದಾಂಟಲಾರ್ಗಮರಿದು (ಕೀತಿಮಂ. II, ೩). ೪. ವಿಮಾನ : "ಪಾಱೆಂದುಂ ನಡೆಮಾಡಮೆಂದುಂ ವಿಮಾನಂ" (ಕಶಸಾ. ೬೯-೫೭೫) ; ಬೆಚ್ಚಂತಾನೆಯ ತಟ್ಟಿಗೊಳಚ್ಚಗಿಯುಂ ತಳೆದ ಱೆಂಚೆಯಂಗಳ್ ನಡೆನೋಟ್ಟಚ್ಚಿಗೆ ಚೆಲ್ವಂ ಬೀಱುದುವಚ್ಚರಸಿಯರೇಱು ಬಂದ ಪಾಱಿನ ತೆಱದಿಂ (ಕಬ್ಬಿಕಾ. ೨೬೨) ; ಬಿಸವಂದಮಾಗೆ ಸರ್ವರ್ ಬಳಿಕನುಕ್ರಮದಿನಸು ಕೀಟ್ಟರಿಯ ಪಾಱೆದೆಂದು ಜನರೆಂದು ತಾನೊಸಗೆ ಪರ್ಬಿದುದು ರಾಘವ ಬಂದನೆಂದು ಪುಷ್ಪಕಮವನಿಗಿಳಿದು ಬರಲು (ಶ್ರೀರಾಮ. ೪-೨೩). **ಪಾರ₁** : ೫. (ಕರಾ) ಜಲಪಾತ ; ದಬದಬೆ : ಗಂಗಾವಳಿನದಿಯ ಸಂತೆಪೇಟೆ ಪಾರದಲ್ಲಿ ಹದಿನೈದುಪೂಟಿನ ಮೇಲಿನಿಂದ ನೀರು ಬೀಳುತ್ತದೆ (ರೂಢಿ). **ಪಾರು₄** : ೫. ಸಹ್ಯಾದ್ರಿಯಲ್ಲಿ ಹರಿಯುವ ನದಿಗಳಿಗೆಲ್ಲ ಬೆಟ್ಟದಲ್ಲಿ ಮಾರಿಗೊಂದು ಪಾರು ಇದೆ (ರೂಢಿ). **ಹಾಱು₂** : ೬. ಹೃದಯ, ನರ ಮೊದಲಾದುವುಗಳ ವಿಂಡಿತ...-ಸ್ಪಂದನ: 'ಎದೆಹಾಱು' ಪರಾ.

[<ಪಾಱು₁./ ತಮಿ. ಪಾಱು ; ಮಲ. ಪಾಱು, ಪಾಱು]

ಪಾಱು₃ (ನಾ). ೧. ಚಪಲತೆ ; ಚಂಚಲತೆ : 'ಪಾಱಬಿ', 'ಪಾಱು ಬೊಜಂಗ' ಪರಾ. ೨. ಹಾದರ ; ಜಾರತನ : "ಸಿತಗತನದೊಳ್ ಪಾಱು" (ಶಬ್ದಮಂ. ೦೦೯) : ಪಾಱೆನೆ ಕರಂ ಪಿರಿದುಂ ಗಟಪುತ್ತುಮಿರ್ಪಳಂ ಸಾರಿಕೆಯೆಂಬರಲ್ಲದಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್ (ಸಂಪಕಾ. ೪-೬೩). ೩. ಹಾದರಗಿತ್ತಿ; ಜಾರೆ : ಅಣಮೆಮೆಯಿಕ್ಕದೊಪ್ಪುಗುಮೆ ಕಣ್ಮಲರೆಂತುಗೆ ದೇವಸೌಂದರೀಗಣದ ವಿಳಾಸಮಂಜಿಸುವಪೋಲ್ ಪೆಡೆಯಂ ಮುಡಿಯಲ್ಲಿ ತೋರ್ಪ ನಾಗಿಣಿಯರ ಕೆಯ್ತಮೆಂತೊ ಕಳೆ ಪಾಱುವ ಪಾಱುಗ[ಪಾಠಾಂ. ವ]ಳಂದಮೇಂ ಬೆಡಂಗಣಿಯರ ಮಿಾಕೆಗೆಂದು ಪೊಗಟ್ಟರ್ (ಆದಿಪು. ೪-೪೭) ; ಪಾಱುಗಳಂ ಮಿಗೆ ನಂಬುವುದೆ (ಮುದಶಿ. ೦೦-೭೦). ೪. ಚಂಚಲನಾದ ವಿಟ,—ಜಾರ : ನಾಣೆಲಿ ನಿಟ್ಟುರಂ ಸಿತಗನಾಟವಿಟ ತುದಿಗೋಡ ಪಾಱು[ಪಾಠಾಂ. ಪಕ್ಷಿ] ನಿನ್ನಾಣೆ ಗಡಾಗಡುಂ ನಿನಗೆ ಕೂರದರೊಳ್ ಬೆರಸಿರ್ಪಂ . . . ಬೇಡವನ ನಣ್ಪು (ಲೀಲಾವ. ೨-೧೨೨) : ಪಾಱಿಕ್ಕಿ ಪರಿವಲ್ಲಿ ಬಾಲಗಚ್ಚೆ ಕಾಲಂ ತೊಡರೆ ಕೆಡೆದೊಡೆದ ಮೊಣಕಾಲೊಳುಪ್ಪಂ ಪತ್ತಿಸಿ ಪರಿವ ಪಾಱು[ಱು]ಗಳುಮಂ (ಲೀಲಾವ. ೫-೧೦೪ ಪ). ೫. ವಿಟವರ್ಗ ; ಜಾರರ ಗುಂಪು : ಎಳಮಾವಂ ಪಲ್ಲವಗ್ರಾಹಿಯನನುನಯದಿಂ ಸುತ್ತಿ ತೆಂಗಾಳಿಯಿಂ ಸಂಚಳನಪ್ರಾಗಲ್ಭ್ಯದೊಳ್ ವಾಸನೆವಡೆದು ಪರಿಷ್ವಂಗದೊಳ್ತಾಂಗಿ ಭೃಂಗಾವಳಿಯಂ ಪೋ[ಪಾ]ಱು ದರಸ್ಮೇರದಿನೆಱಗಿಸಿ ವಲ್ಲೀಲತಾತನ್ವಿ ವೇಶ್ಯಾಕಳೆಯೊಳ್ ಸೌಭಾಗ್ಯ ಶೋಭಾವತಿಪರಿಣತಿಯಂ ಗರ್ಭದೊಳ್ಕಲ್ತಳಕ್ಕುಂ (ಮಲ್ಲಿಪು. ೬-೩೯). ೬. ಕೈಲಾಗದವನು ; ದುರ್ಬಲನಾದ ವ್ಯಕ್ತಿ ; ಅಶಕ್ತ ; ಹೇಡಿ : ಜಗಟಂಬೊಕ್ಕವರೊಳ್ ಕೆಲರ್ ಪೆಟವರಾಗಿರ್ದರ್ ಜವಂಗೆಟ್ಟು ಪಾಱುಗಳ ನ್ಯಾದ್ರಿಗೆ ಪಾಱು ಪೋಗಿ ಕೆಲಬರ್ ಬೆಳ್ದಿಂಗಳಂ ಪೀರ್ವ ಪಕ್ಕಿಗಳಂತಿರ್ಪ ರಳುರ್ಕೆಗೆಟ್ಟು ಕೆಲಬರ್ ಸೂರ್ಯಪ್ರಭಂಗಳ್ಕಿ ಗೂಗೆಗಳಂತಿರ್ಪರ್ (ಅರ್ಧನೇ. ೨-೮೩) : ಏಱುವೆವೆಂದು ಪೊಚ್ಚಱಿಸಿ ಬಂದು ಮಹೋಗ್ರಸಮಗ್ರ ಚಾಪಮಂ ಪಾಱುಗಳಪ್ಪ ಭೂಪರಿರದೆತ್ತುತೆ ಬಿಟ್ಟುಸಿರಿಕ್ಕಲಾಱದಿರ್ದು . . . ಪೋಗೆ (ಸೇಮಿಪು. ೯-೯೭).

ಪಾಱುಂಗುಪ್ಪೆ, ಪಾರ್ಗುಪ್ಪೆ, ಪಾಱುಗುಪ್ಪೆ, ಹಾಱುಗುಪ್ಪೆ (ನಾ). ಮಕ್ಕಳ ಒಂದು ಬಗೆಯ ಆಟ ; ೨ ಮರಳಿನ ಗುಡ್ಡೆಯನ್ನು ರಚಿಸಿ ಅದನ್ನು ನೆಗೆದು ದಾಟುವ ಒಂದು ಆಟ : ಸುರಭಿಶರನ ಸುಲಲಿತಕೀರ್ತಿಶ್ರೀ ಧರೆಯಿಂ ದಿಗ್ವಲಯಕೆ ಪಾಱುವೆನೆನುತುರುಮುದದಿಂ ದೆಯ್ತುಂದಾ ಪಾಱುಂಗುಪ್ಪೆಗಡರಿದಂತೆ . . . ತರಳನಯನೆ ಮುತ್ತಿನ ಮೆಟ್ಟಕ್ಕಿವೆಡೆಗೇಱುವಳತ್ತ (ಜಯಕಾ. ೮-೨೨). **ಪಾರ್ಗುಪ್ಪೆ** : ಶಿವಗಣಾವಳಿ ನಲಿದು . . . ತವಕದಿಂ ಪಾರ್ಗುಪ್ಪೆಯಾಡುತ . . . ಪಾಡುತ್ತ ನಡೆಯಲು (ಬಸವು. ೩೨-೩೭). **ಪಾಱುಗುಪ್ಪೆ** : ಚೆನ್ನೆಯರ್ ಪಾಱು ಗುಪ್ಪೆಯನಾಡುವ ಮಣಲ್ದಿಣ್ಣೆಯ ನೋಡಿ ಹಿಗ್ಗಿದರು (ಪೋಹತ. ೪-೫೪). **ಹಾಱುಗುಪ್ಪೆ** : "ಪಱುವಱುಯೆನಲು ಹಾಱುಗುಪ್ಪೆ" (ಶಬ್ದಮಂ. ೫೭) ; ಹಿಡಿಗವಡೆ ಗುಱಿಯಾಳು ಚಂಡಿನ ಹೊಣಕೆ ಚಿಣಕೋಲಾಳು ಚಿನಿವೆಂಡಿನಲಿ ದಂಡೆಯ ಹಾಱುಗುಪ್ಪೆಗಳ . . . ವಿನೋದದಲಾಡಿದರು (ಸಂಭವ. ೦೭-೦); ಕುಪ್ಪಿ ಕುಣಿದು ತೇಜಿ ಹರಿದುದರ್ತಿಗೆ ಹಾಱುಗುಪ್ಪೆಯನಾಡುವಂದದೊಳು (ಭರತ. ೨೯-೩೬). [ಪಾಱು₁ + ಕುಪ್ಪೆ₁]

ಪಾಱುಂಬನಿ (ನಾ). ಸಿಡಿಯುವ ಹನಿ ; ತುಷಾರ : "ಪಾಱುಂಬನಿ ತುಷಾರಮಕ್ಕು" (ಮಂಗರಾ. ೦೩-೫). [ಪಾಱು₁ + ಪನಿ₂]

ಪಾಱುಂಬಳೆ, ಪಾರುಂಬಳೆ (ನಾ). ೧. ಚಕ್ರ ; ಚಕ್ರಾಯುಧ : "ಪಾಱುಂಬಳೆಯೆನೆಯದು ಚಕ್ರಾಹ್ವಯಂ" (ಕರ್ಣಾನಿ. ೨೩) : ಪಾಱುವ ಪಾಱುಂಬಳೆ ಕೊಳೆ ಜೇಱೆಟ್ಟಂಬರಕೆ ತಲೆ ಸಿಡಿಲ್ದೊಡಮಾ ಕಾಯ್ದಾಱದೆ ಹರಣಂಗೆಯ್ದುವು ಜಾಱಲ್ಲದೆ ಜೋದರಟ್ಟೆಗಳ್ ಕೆಲವಾಗಳ್ (ಸಂಪಕಾ ೧೦-೯೫) : ಒಡವುಟ್ಟಿದನರಸಿಯನೆನ್ನೊಡವುಟ್ಟಿದರೆನ್ನದಬ್ಬೆಯೆಂದತ್ತಿಗೆಯೆಂ ದೊಡೆ ನಾಲಗೆಯಾತನ ತಲೆ ಸಿಡಿಲ್ದು ಪಾಱೇಟ್ಟುಗೆಮನ್ನ ಪಾಱುಂಬಳೆ ಯೊಳ್ (ಶಾಂತಿಪು. ೬-೮೦) : ನೀಱನುರದೊಳ್ ಮನೋಜನ ಪಾಱುಂ

ಬಳೆಯೊಸಿ [ಮಲಯರುಹಪರಿಮಳಮಂ ಬೀಱುವ ಪುಳಕಾಂಕುರದಳ್ಳೇಱಿಂ ನಸುಕಱಕಱುಂದ ಮೊಲೆವಜ್ಜೆಯುಮಂ] (ಲೀಲಾವ. ೧೦-೯೨); ಮುಂತಿವರಂ ತಮೋರಾಶಿಯುಂ ಪಿಂತಾ ಪಾಱುಂಬಳೆಯುಂ ಬರೆ (ಉದ್ಯೂಕ. ೧೪-೨೬). ೨. ಒಂದು ಬಗೆಯ ಆಟ : ಪಱಿವಱಿ ಪಾಱುಂಬಳೆ ಮರಗೆರಸಿ ಕುಳಿಲ್ಲೆಂಡು . . . ಎಂಬಿವನಾ ಮುರಹರನಲ್ಲಲ್ಲಿಗಾಡುತುಂ ಬರಲ್ (ಪಗಿ. ೪-೪೪). ಪಾರುಂಬಳೆ : ೧. "ಪಾರುಂಬಳೆಯೆನಲ್ ಚಕ್ರ" (ಕಶಕ. ೬೪). [ಪಾಱು$_1$ + ಬಳೆ$_2$]

ಪಾಱುಂಬಳೆಗೆಯ್ಯ, ಪಾಱುಂಬಳೆಗೈಯ (ನಾ). ಚಕ್ರಪಾಣಿ ; ವಿಷ್ಣು : "ಎಲರುಣಿವಟ್ಕೆಗ ಪಾಱುಂಬಳೆಗೆಯ್ಯಂ . . . ತಾಂ ಹರಿಯೆಂದು ಪತ್ತು ವರಿಜನೆನುತ್ತುಂ" (ಕವಿಕಂ. ೨೩). ಪಾಱುಂಬಳೆಗೈಯ : "ಅರಲ್ಪೊಡೆಯಂ, ಎಲರುಣಿವಟ್ಕೆಗಂ, ಪಾಱುಂಬಳೆಗೈಯಂ . . . ಕಾವನಯ್ಯಂ—ಈ ೧೨ ವಿಷ್ಣುಗೆ ಪೆಸರ್" (ಕಶಕಾ. ೪೬-೯) ; ಪಲಗಣ್ಣಂ ಪಾಱುಂಬಳೆಗೈಯಂ ಪೆಲವೊಱೆಗಂ ಬೆಂತರಬಲ್ಲಹನುಜ್ಜಲಿಸುವ ಜೋಯಿಸರಾಣ್ಮಂ ಮಿಗದರಸಂ ಮೊದಲಾಗಿ ಸಲೆ ಸೊಗಯಿಸುವ ಶತೇಂದ್ರರ್ (ಪಡುಕಾ. ೧೬-೩೯).

[ಪಾಱುಂಬಳೆ + ಕೆಯ್$_2$ + – ಅ$_7$]

ಪಾಱುಂಬಳೆಗೈಯ 'ಪಾಱುಂಬಳೆಗೆಯ್ಯ' ನೋ.

ಪಾಱುಂಬಳೆದಿರುಪು (ಕ್ರಿ). ಚಕ್ರದಂತೆ ತಿರುಗಿಸು : ಇಳೆಯಂ ಕಿಟ್ಟಿತ್ತಿ ಪಾಱುಂಬಳೆದಿರುಪುವ ಚಂದ್ರಾರ್ಕಂಬಿಂಬಂಗಳಂ ಸೂಟೊಳೆ ತಾಳಂಗುಟ್ಟು ವೇಟುಂಕಡಲುಮನುಱ್ ತುಳ್ಕಾಡುವ . . . ಈಶಪ್ರಮಥಸಮಿತಿ ಬಂದತ್ತು ಸಂರಂಭದಿಂದಂ (ಪಗಿ. ೧೮-೦೦). [ಪಾಱುಂಬಳೆ+ತಿರುಪು$_1$ (< ತಿರಿಪು$_1$)]

ಪಾಱುಂಬಳೆವಿಡಿ (ಕ್ರಿ). ಚಕ್ರಾಯುಧವನ್ನು ಹಿಡಿ : ಶೂಲಪಾಣಿಯ ನಿಟ್ಟಿಸಿ ಕೃಷ್ಣ ರಿಪುಪ್ರತಿಕೂಲ ಪಾಱುಂಬಳೆವಿಡಿಯೆ ಮೂಲೋಕ ಧಿಟನೆ ತಿರುಗುತಿರ್ದುದು ಕುಲಾಲಚಕ್ರಾಕೃತಿಯಂತೆ (ಮೋಹಶ. ೩೯-೩೯).

[ಪಾಱುಂಬಳೆ + ಪಿಡಿ$_1$]

ಪಾಱುಗಂಡ (ನಾ). ಚಂಚಲನಾದ ವ್ಯಕ್ತಿ; ಅಲ್ಪನಾದ ಜಾರ : ಬಿರುದರ ಬಿಂಕಮಂ ಪೊಗಟ್ಟ . . . ಬಿಂಕದ ಬರ್ದೆಗೆಯ್ತುದೊಳ್ ಬೆರಸಿದೊಡಂದೆ ಬರ್ದೆನೆನುತಿರ್ಪ ಭುಜಂಗನೆ ತೋಳೊಳಿರ್ಕೆ ಸಾಯಿರವರಿಸಂಬರಂ ಸುಡುವೆನಾಂ ಗಡ ಮತ್ತಿನ ಪಾಱುಗಂಡರಂ (ಲೀಲಾವ. ೨-೬೨).

[ಪಾಱು$_3$ + ಗಂಡ$_1$]

ಪಾಱುಗಣ್ (ನಾ). ಚಂಚಲವಾದ ಕಣ್ಣು (?) : ಪೆಱಮೆಟ್ಟೆ ತುಱುಗಿ ಮಿಗೆ ತಳ್ತಿಱಿದಪ್ಪುವೊಡನೊಡನೆ ತಮ್ಮೊಳೀ ಕಾಂತೆಯ ನುಣ್ದುಱುಗೆವೆ ಗ[ಣ್ಣ]ಳ್ಕೀಗಿನ ಕೊಱತೆಗೆ ದಲ್ ಪಾಱುಗಣ್ಣ ಬಟಿಗದು ಸಹಜಂ (ಪುಷ್ಕಪು. ೩-೩೦). [ಪಾಱು$_3$ + ಕಣ್]

ಪಾಱುಗುಪ್ಪೆ 'ಪಾಱುಂಗುಪ್ಪೆ' ನೋ.

ಪಾಱುಗೆಡು (ಕ್ರಿ). ಹಾರಾಡುವುದು ನಿಂತುಹೋಗು ; ಹಾರಲು ಅಸಾಧ್ಯವಾಗು: ಕರಿ ಮುಱಿದ ಪೆರ್ಗೊಂಬಿನಿಱುಂಬಿನೊಳೊಱೆತುಗುವ ಪಾಲ ಪಗಿನದೊಳ್ ಮಿಗೆ ನೆಗೆವ ಗಗನಚರಿಯ ನಿಡುಜಡೆ ತೊಡಂಕಿ ಜಿಗಿಲ್ತು ತೆಗೆಯಲ್ ಬಾರದಿರೆ ಪಾಱುಗೆಟ್ಟು (ಶಬಶಂ. ೩-೩೫ ಪ).

[ಪಾಱು$_2$ + ಕೆಡು$_1$]

ಪಾಱುಗೆಡೆ (ಕ್ರಿ). (?) : ಒರುವಾಯಂ ಕುಂಬಕಂಬಾಯ್ದುಮೇಡಿಸಿಯುಂ ಱೋಡಿಸಿಯುಂ ಏಱಿಸಿಯುಂ ಬಂದಾಡಿಯುಂ ಮಿಡುಕಾಡಿಯುಂ ಪಾಱುಗೆಡೆವ ಕಾಳಮಹಾಕಾಳರ ಗೆಡೆವೊಕ್ಕಿರೆ (ಕಾಂತಿಪು. ೯-೬೦ ಪ).

[ಪಾಱು ? + ಕೆಡೆ$_1$]

ಪಾಱುಗೆಯ್ತು$_1$ (ನಾ). (ಆಕಾಶದಲ್ಲಿ) ಹಾರಾಡುವ ಕಾರ್ಯ : ಈ ನಿಖಿಳಾ ಮರರ್ಗೆ ಜಿನಯಾತ್ರೆಯೊಳಾಗದು ಪಾಱುಗೆಯ್ತುಮಧ್ವಾನಮನಿಂಬುಮಾಡಿ ಪಡೆಯಿಪ್ಪೆನೆನುತ್ತಮೆ ಶಕ್ರವಿಕ್ರಿತಂ ಶ್ರೀ ನಿಱಿಸಿಟ್ಟ ನಿಚ್ಚಣಿಗೆಯೆಂಬಿನೆಗಂ ಸ್ಫಟಿಕೇಂದ್ರನೀಲಸೋಪಾನದ ಮೂಱು ಪಂಕ್ತಿ ನಿಮಿರ್ದೇನೆಸೆದಿರ್ದುದೊ ಮಂದರಂಬರಂ (ಪುಷ್ಕಪು. ೧೦-೩೩). [ಪಾಱು$_2$+ಕೆಯ್ತು$_1$]

ಪಾಱುಗೆಯ್ತು$_2$, ಪಾರುಗೆಯ್ತು (ನಾ). ೧. ಜಾರತನ; ಹಾದರ; ವ್ಯಭಿಚಾರ: ಕಳ್ಳೊಡನೆ ಪುಟ್ಟಿದುದಱಿಂ ಸೊರ್ಕುಂ ಅಚ್ಚರಸಿಯರೊಡನೆ ಪುಟ್ಟಿದುದಱಿಂ ಪಾಱುಗೆಯ್ತುಮುಂ ನಿನಗೆ ಸಹಜಮಾಗಿರ್ದುವು (ಗರಾಯು. ೯-೭ಪ); ಪಾಱುಗೆಯ್ತುದ ಜವ್ವನಿಗಿನಿಯನಿತ್ತ ನಖರದಕ್ಷತಂಗಳನೆ ತೊಡವು ಮಾಡಿ ಮೆಱೆವುದನವಳೊಡನಾಡಿ ನೋಡಿ ಕಂಡು (ಶಂಪ್ರಪು. ೯-೩೩ಪ); ಪಾಱುಗೆಯ್ತುದ ಮಡದಿಯರುಱ್ ಪಾರಶೀಕದವರೆಂದೆನಿಪರ್ (ಮನ್ಮತಿ. ೩-೨೩) ; ಮಗನೊರ್ವಂ ಪುಟ್ಟಿ ದೋಷಾಕರನೆನಿಸಿದನೆನ್ನೊಳ್ಮಗಳ್ ಪಾಱುಗೆಯ್ತುಂ ಮಿಗೆ. . . ಕುಭೃದ್ವರ್ಗದೊಳ್ ಕ್ರೀಡಿಪಳ್ (ಶಬಶಂ. ೦-೩೨). ಪಾರುಗೆಯ್ತು : ೨. ಅನಿಶ್ಚಯಸ್ಥಿತಿ ; ಚಾಂಚಲ್ಯ : ದೈನ್ಯದಿಂದೆಡರಿಂದೆ ಕಷ್ಟಂಗಳಿಂ ಪಾರುಗೆಯ್ತುದಿಂ ಕುತ್ತಂಗಳಿಂದನಾಥತ್ವದಿಂ ನಿಸ್ಸಹಾಯತೆಯಿಂದಮಳಲುತ್ತೆ ಚಿನ್ತಿಸುತುಮುಬ್ಬೆಗಂಬಟ್ಟು...ನಿದ್ದೆವೋಗುತೆ ಸಾಯದಿರ್ಪಿರವಿಗುರಿದೆರ್ದು ಪೇಸೆಳ್ದು (ಸಂಸಪ. ೨೨-೨೦). [ಪಾಱು$_3$+ಕೆಯ್ತು]

ಪಾಱುಗೊಂಬು (ನಾ). ಎತ್ತರದಲ್ಲಿ ಹಾರುತ್ತಿರುವ ಕೊಂಬೆ ; ತೂಗಾಡುವ ಕೊಂಬೆ, – ಶಾಖೆ : ತೋರಮರಂಗಳ ಪಾಱುಗೊಂಬನೇಱಿರಯ್ಯಮಾಗಿ ಮೊರೆವ ಕುಕಿಲ್ವ ಪಾಡುವ ಬಾಸೆವಕ್ಕಿಗಳ ಗಜಬಜದಿಂ (ರಾಮಾಶ್ವ. ೬೪-೬) ; "ತುಂತ್ತತುಂದಿಗೊಂಬೆ" (ರಾಮಾಶ್ವ. ತ. ಪಿಶ್ವಪ).

[ಪಾಱು$_1$+ಕೊಂಬು$_1$]

ಪಾಱುಡು (ನಾ). (?) : ಮಾಱುಡು, ಪಾಱುಡು, ಸೀಱುಡು, ಬೆದಱುಡು ಇತ್ಯಾದಯಃ (ಕಶ್ಮಾಸು. ೮೨ ವ್ಯಾಖ್ಯಾ). [?]

ಪಾಱುತನ$_1$ (ನಾ). ಹಾರುತ್ತ ಚಲಿಸುವಿಕೆ ; ಹಾರಾಟ : ಪಾಱುಂ ಬಾಳಂ ಮಸೆವಂತೆ ಪಾಱುತನಮಿಂತಾಯ್ತು (ಅರ್ಧನೇ. ೩-೦೦).

[ಪಾಱು$_2$ + – ತನ]

ಪಾಱುತನ$_2$ (ನಾ). ಜಾರತನ ; ಹಾದರ : ಪಾಱುತನದಿಂ ಮೇಲೆ ಕೆಡೆದು ಕವಿತಂದ ದರದಳಿತ ಚಂಪಕಮುಕುಳಮಕರಂದಕ್ಕೇವೈಸಿ ಕೆಲಕ್ಕೆ ಪಾಯ್ದು ಪೋಪ ತುಂಬಿಯ ಬಂಬಲಂ ಕಂಡು (ಲೀಲಾವ. ೧೪-೭೬ ಪ); ಚಕಿತ ಮೃಗಾಕ್ಷಿ ನೀನೆಳಸಿ ಕೆಮ್ಮನೆ ಜೊಮ್ಮನೆವೋಗಿ ಭಾವದಿಂ ಪ್ರಕಟಿಸಲೇಕೆ ಪಾಱುತನಮಂ (ಪುಷ್ಕಪು. ೩-೩೯); ತೊಲತೊಲಗೆಲವೋ ಕೈವಿಡು ಪೊಲನಲ್ತಿದು ಪಾಱುತನಕೆ ಪೋಪೋಗು (ಶಕಸಿ. ೬-೨೭೪). [ಪಾಱು$_3$ + – ತನ.]

ಪಾಱುನೀಱ್ (ನಾ). (ಆಕಾಶದಲ್ಲಿ) ಹಾರಾಡುವ ಚೆಲುವೆ ; ಖೇಚರಸುಂದರಿ : ಎಸಟ್ಮಸಗಿದಲರ ಗೊಂಚಲ್ಗಳನಿಳಿಪ ಚಂಚರೀಕಸಂಚಯದಂತೆ ಪಾಱುನೀಱ್ಯರ್ ಪುಷ್ಪಕವಿಮಾನಮಾಳಗಳಿನವನೀತಳಕ್ಕವತರಿಸಿ ಪರಿಷದ್ವಲಯಮಂ ಪುಗುತರ್ಪಾಗಳ್ (ಅನಂಪು. ೨-೩೪ಪ). [ಪಾಱು$_1$ + ನೀಱ್]

ಪಾಱುಬೊಜಂಗ, ಪಾಱುಬೊಜಗ (ನಾ). ಚಪಲನಾದ ವಿಟ; ಚಂಚಲನಾದ ವಿಟಪುರುಷ : ಸೊಬಗುಮಂ ಗಾಡಿಯುಮನೊಳಕೊಂಡು ತಿರುಗುವೆಳವೆಂಡಿರ ಬಟ್ಟಮೊಲೆಯಿಟ್ಟೆಡೆಯೊಳವೊಕ್ಕು ತೋರ ಮುತ್ತಿನಾರಮನಲ್ಲಾಡಿಯುಂ . . . ಪಾಱುಬೊಜಂಗನ ಗೆಯ್ತುಮನೊಳಕೊಂಡು ತೀಡೆ (ಕಬ್ಬಿಕಾ. ೫೪). ಪಾಱುಬೊಜಗ : ವಾರಗೇರಿಯೊಳೇಱುಂ ಜವ್ವನದ ನೀಱ್ಯರ ಮೇಲುದಱ ಸೆಱಂಗನೋಸರಿಸಿ ಸಾರೆ ನಿಲ್ತು ತೋರ ಮೊಲೆಗಳಂ ಸೇರ್ದು ಪಿಡಿದೌಂಕಿ ಪಾಱುಬೊಜಗನಂತೆ ಮೀಱಿ ನಿಟ್ಟೋಟಂಗೊಂಡು . . . ಪಶ್ಚಿಮಾನಿಲಂ ಮೈದೋಱಲೊಡಂ (ರಾಮಾಶ್ವ. ೨-೧೮). [ಪಾಱು$_3$+ಬೊಜಂಗ]

ಪಾಱುಬೊಜಗ 'ಪಾಱುಬೊಜಂಗ' ನೋ.

ಪಾಱುವೆಂಡತಿ (ನಾ). ಹಾದರಗಿತ್ತಿ ; ಜಾರಸ್ತ್ರೀ ; ಕುಲಟೆ : ಪಾಱುವೆಂಡತಿಯಂತೆ ಪೊಱಸು ಬಡಗಿಯಂತೆ ಮರಕುಟಿಗ . . . ಇಂತಂ

ಮುನೇಕವಕ್ಷಿದಾತಿಗಳಿಂ ತೆಕ್ಕನೆ ತೀವಿದ ಪಟುವಂ (ಪಂಚಮ. ೨-೫೪ ಕ). [ಪಾಜು₂ + ಪೆಂಡತಿ (< ಪೆಂಡಿತಿ)]

ಪಾಜಿ³ ? (ನಾ). (?): ಅಶ್ವಾನಾಚಾರ್ಯಭಗವನ್ಮರಾ ಸ್ಥಾನಮಾನ್ಯೇವಾಚಾರ್ಯಭಗವಸ್ಯರ್ಗ್ಗೆ ಕೊಟ್ಟು ಶ್ರೀಲೋಕಪಾಲೇಶ್ವರಕಮ್ಮಾಜಿ ಬಿಳ್ಳ [ಸ್ವ]ದತ್ತ(ತ್ತಾ)[ಂ] ಪರದತ್ತ(ತ್ತಾ)ಂ ವಾಯೋ ಹರೇತಿ(ತ) ವಸುಂಧ [ರಾಂ] (ಇಇ. X. ೧೫೭-೭ : ೭೫೨). [?]

ಪಾಜೀಳ್ 'ಪಾಜೀಟು' ನೋ.

ಪಾಜೀಟು, ಪಾಜೀಳ್ (ಕ್ರಿ). ೧. ಹಾರಿಹೋಗು ; ಸಿಡಿದು ಹೋಗು ; ಚಿಮ್ಮಿ ಹೋಗು : "ಪಾಜೀಟು—ನಿರ್ಧಾವನೇ (ಓಡಿ ಹೋಗು). ಅಪಮಾನೇ ಚ (ಅಪಮಾನಿತನಾಗು)" (ಶಮಧಾ) : ಅಂತು ದುರ್ಯೋಧನಂ . . . ತನ್ನ ಬಲದ ಪದಾಭಿಘಾತದೊಳಂ ಕುಲಗಿರಿಗಳ್ ಜೀಜಿಬ್ಬು ಪಾಜೀಟಿಯಂ . . . ನಿಚ್ಚಪಯಣದಿಂ ಬಂದು (ಪಂಪಭಾ. ೧೭-೩೧ ಕ); ಆ ಖಳನಿನಾರ್ಗಂ ಪೇಟಿಮೊಳ್ಳುಂಟಿ ಕಪ್ಪಾನೆ ಕೈಗಾದಿರದೋ ವದುಪ್ಪನೊಲೆಯೊಳ್ ಪೊಯ್ದಂತೆ ಪಾಜೀಟಿ ದುರ್ಜನನಂ ಬಯ್ದುದು (ಸೂಕ್ತಿಸು. ೧-೬೨). ೨. ದೂರವಾಗು : ತೊಲಗು : ಪಾಜೀಟಿ ದುರ್ಭಾವನೆ ಲಕ್ಷ್ಮೀವಲ್ಲಭಂ ಪೊಲ್ಲದು ತಪೆದೊಡದಕ್ಕೆನ್ನೆಗಂ ಕಿಮ್ಮಗಿರ್ದು (ಪಾಂಚಕ್ಷ. ೯-೦೭೩). ೩. ಅವಮಾನ ಹೊಂದು : ಅಪಮಾನಿತನಾಗು : "ಪಾಜೀಟು—ನಿರ್ಧಾವನೇ (ಓಡಿ ಹೋಗು). ಅಪಮಾನೇ ಚ (ಅಪಮಾನಿತನಾಗು)" (ಪಪಂಧಾ). **ಪಾಜೀಳ್**: ೪. ಅವಮಾನ ಮಾಡು; ಹೀಯೊಳಿಸು : ಕಾಳ್ದಪರಾಧಮಂ ತಪೆದು ಬಂದಪನಾಕೃತಿಗಂಡು ನಾರಿ ಪಾಜೀಳ್ದೊರೆಯಲ್ಲೆ ಸಾಕಿವ ಶೂರಂ ಬಳಿಕಂತದನಂದು ಕಲ್ತು ತಾಂ ನೀಳ್ದು ಸುರ್ವನ್ನೆಗಂ ಮುಳಿದಂ (ಪಪಪಾ. ೬-೧೧೦). [ಪಾಜು₁ + ಏಟು²]

ಪಾಜೋಡ. ಪಾರೋಡು (ನಾ). ದೋಣಿ : ನಾವೆ : ಅನ್ನೆಗಂ ಪಾಜೋಡಂ ಕರೆ ಮುಟ್ಟಿ ಬರೆ ನಾವಿಕರ್ಗೆ ತ್ರಿಣಪಣ್ಣಮನಿತ್ತು ಮನ್ನಿಸಿ ಸರ್ವರಾವನುಕೂಲದೆಯ ಪುಳಿನದೊಳಿಬ್ದರ್ (ಶಾಪಾಕ್ಷ. ೩೧-೯). **ಪಾರೋಡು** : ಅಲ್ಲಿನ ಹಾಯ್ಗಡವಲ್ಲಿ ಪಾರೋಡನ್ನು ಏರಿ ಶ್ರೀರಂಗನ ನಡುಗಡ್ಡೆಯನ್ನು ಮುಟ್ಟಬೇಕಾಗಿತ್ತು (ಶಪಚಿ. ೦೨೬). [ಪಾಜು₂ + ಓಡ]

ಪಾಟು², ಪಾಳ್, ಪಾಳು, ಪಾಟು, ಹಾಳ್, ಹಾಳ್₁, ಹಾಳು, ಹಾಟು (ನಾ). ೧. ಶೂನ್ಯವಾದುದು : ನಿರರ್ಥಕವಾದುದು : ಬೀಳು ಬಿದ್ದುದು : ನಾರವಾದುದು : ಅಜಿಕೆಯು ಸರಲಿಂದೂಱಿ ಕೊಂಡಾವ ಮೆಯ್ಯಂ ಪಾಟಿಂಬಂತಾಗೆ ಪಾರ್ದಾರ್ದುಱಿದಿಸೆ ಮುಳಿಸಿಂ ಸೂರ್ವರುಂ . . . ಬಿಟ್ಟರ್ (ಪಂಪಭಾ. ೧೧-೧೩) ; ಈ ವಿಭು ಕಾಮಭೋಗಮನುಪೇಕ್ಷಿಸಿ ಕಾಮನ ಗೆಂಡು ಬೆಂಡು ಕೇಳೀವನಲೀಲೆ ಪಾಟು² . . . ಲೋಕವನತುಂ ಪ್ರಜಹಾರಪುಸಾರಂ (ಪುಕ್ಕಕ. ೧೨-೯೦). ೨. ಹಾಳು ಬಿದ್ದ ಜಾಗ : ಬೀಳು ಬಿದ್ದ ಸ್ಥಳ : ಶೂನ್ಯಸ್ಥಾನ : "ಪಾಟು²—ಶೂನ್ಯಸ್ಥಾನಂ" (ಕಮರ. ೫೦. ೦); ಮುಂದೊಂದು ಪಕ್ಷಿಯಂ ಕಂಡೊರೋ ಪಾಜೀಂ ಎಂದು ಬೆಸಗೊಳಲಾತಂ ಮೂಗನಂತಿರ್ಪುದುಂ (ಪುಕ್ಕಾಸ್ತ್ರ. ೩-೧೧ ಕ). ೩. ಸಾಗುವಳಿ ಮಾಡಬೇಕಾದ ನೆಲ : ಜವಿಯಾನು: ಭೂಮಿ: ಪನ್ನಿರ್ಕ್ಕಣ್ಣಾಗಪೆದೆನೆಲ್ಲಣ್ಣನ್ನೆನೆನ್ನ ಪಾಟುನ್ನೆನ್ನ ಅತಿವುರ ಪದೆದನು ಪದೆದೊ ನಱಿಪುಜಾ ಅಲ್ಲೆ × × × ಗಲ್ದ ಸತ್ವವರಶರಾಗತ (ಇಇ. V, ೧೩೭-೪; ೪೫೫); ಮಿಕ್ಕಣ್ಣ ಕತ್ತಪಣಾಮನೆಯುಮಮ್ಮಾಟುಪ್ಪಟ್ಟಿಯುನ್ನರೆಕ್ಕುವೆ ಒಪೆಱಿಸ್ (ಮೈಶಿ. ೧೯೮೨. ೩೦-೩೪ : ಸು. ೧೧೧) ; ಬಿಟ್ಟು ಪಡೆದ ಸ್ಥಿತಿ ಖಣ್ಡಾಗಂ ಕಟನಿಯುಂ ಪಾಟ್ಕುಣ್ಡಾಗವು ತಣ್ಡಾಪಟ್ಟು (ಎಳ. X (ಸ). ೬೯೧. ೨೬-೧೧ : ೧೩೫೮ ಕ೫) ; ಇಸರತ್ಪಿಯೆಂಬ ಕಸಪುಂ ಕಟ್ಟಿದಂಬರಮೆಂಬ ಪಾಟಸೇಱುದುದಸಿತಾಂಬುವಾಹಕುಲಮೆಂಬ ಕಟ್ಟುಂಬ ಕದಂಬಕೋತ್ಕರಂ (ಇಇಕ್ಷ. ೬-೬೦). ೪. ಕೆಟ್ಟುದು ; ಅಪ್ರಯೋಜಕವಾದುದು : 'ಪಾಟ್ಗಿಬ್ಬ', 'ಪಾಟ್ಸಿಲ' ಪರಾ. ೫. ಬಿಡಿದಾದುದು; ಪಾಳಿಯಾದುದು : 'ಪಾಟ್ಪಸಿಟು' ಪರಾ. **ಪಾಳ್** : ೫. 'ಪಾಳ್ಪಸಿಟು' ಪರಾ. **ಪಾಳು** : ೨. ಹೊತ್ತು ಮುಗಿದೆ ಮುಮ್ಮುಕ್ಕ ತುದಿಗೆ ಆನಂತ್ಯದಿದಿರು ಕಡೆಗೆ ಇಹದ ಭಂಡ ಕಥೆ ಮುಗಿಯಿದಂತೆ ಪಾಳಿನಲಿ ಒಂಟಿ ನಡಿಗೆ (ಕೃಕ್ಕಾಂ. ೨೨-೪). ೬. ಬಯಲು; ಅವರೇಜಾದೇಪಸ್ಥಾನದ ಹಿಂದಿನ ಪಾಳು . . . ಕಳ್ಳಿಯ ಸಾಲು ಇನ್ನೂ ಎಮ್ಮೋಜಾಗ ಅವಳ ಲೀಲಾಸ್ಥಳ! (ಪಪಗೀ. ೯೩). **ಪಾಟು**: ೩. ಗಂಗವಮಹಾನಾಳಿಕೆ × × ಗಟನಿವೆರಸು ಮೂವತ್ತು ಗುಳಿ ಅಯ್ಯುಳ್ಳ ಪಾಟು ಕೊಟ್ಟೋರ್ (ಎಳ. IX, ಹೊಸಕೋ. ೬೬-೬; ಸು. 720) ; ಆತಪ್ಪಿಗೆ ಭಟ್ಟಾರರ್ಮ್ಮೆಚ್ಚಿ ಕೊಟ್ಟಿ ಕೊಡಂಗೆ ಪದಿಕ್ಕೊಳಿ ಕಳನಿ ಮಾಮಕಾಚಿಯ ಕೆಟಿಗೆ ಪದಿಕ್ಕೊಳಿ ಪಾಟು (ಎಳ. X. ಮುಳಬಾ. ೯೩ ; ಸು. 970). **ಹಾಳ್** : ೧. 'ಹಾಳ್ಬನೆ' ಪರಾ. **ಹಾಳ್₁** : ೩. ಮಾಳದ ಇಬ್ಬಡಗದ ಹಾಳ ಮತ್ತರು ೧೧ (ಶಾಇಶಾ. IX-I, ೬೬-೭೭ ; ಬಿ1099); ಅದಱ ತದನಾನ್ತರ ಮುಳಕುಟಿ ಆಲದ ಹಾಳ ಅದಱ ತದನನ್ತರ ಚೈಕೋಲ ತಾಬಿಮರ (ಶಾಇಶಾ. IX-I, ೪೧-೩೫ : ಸು. 1128ಹು ೫೫); ಕುಂಬಾಱಿಗೆಱಿಯ ಮೂಡಣ ಹಾಳ ಬೆದ್ದಲಿ ಮತ್ತರು ಹತ್ತುಮಂ . . . ಕೊಟ್ಟರು (ಶಾಇಶಾ. IX-I, ೪೪೭-೪೪೭ 1148). **ಹಾಳು** : ೧. ದೇವಭಕ್ತರಿಲ್ಲದೂರು ಸಿನೆ ಹಾಳು (ಪಪಪ. ೯೭); ನೆರೆಮುದಪುರರು ಹಾಳು ಹಱಿ ಸಾಗರದ ಕಡೆಯುಲಿ ರೂಹುಗಳೆದುಟ್ಟಿಱಿವೆಗಳ . . . ತರಳಹೃದಯದ ದೇವರಿಂದ್ರನನಱಿಸಿ ಕಂಡರು (ಕುಮ್ಮಾ. ೬-೧೩) ; ಆಳು ಮಾಡುವುದು ಹಾಳು (ಗಾಪ). ೫. 'ಹಾಳುಹೊಟ್ಟೆ' ಪರಾ. ೭. (ಆಲಂ) ಹೇಸಿಗೆ ; ಹೊಲಸು : ಕೀಳ ಕೆಣಕಬೇಡ, ಹಾಳೆ ಮೆಟ್ಟಬೇಡ (ಗಾಪ). **ಹಾಟು**: ೨. 'ಹಾಟುಬುಟ್ಟೆ' ಪರಾ.

ಹಾಳುಹಾಳು (ದ್ವಿರುಕ್ತಿ) : ಆವಳಿಗೆ ಈಗ ಮನೆ, ಮನ, ಅಂತರಂಗ ಎಲ್ಲವೂ ಹಾಳುಹಾಳು ಎನಿಸಿ ತನ್ನ ಜೀವನವಲ್ಲಿ ಯಾವುದೋ ಒಂದು ಕೊರತೆಯಿದೆ ಎಂದು ತೋರಹತ್ತಿತು (ಗಂಗಾಜಾ. ೬೯). **ಪಾಳ ಕೆಯ್, ಹಾಳ ಕೆಯಿ = ಸಾಗುವಳಿಯಾಗದ ಹೊಲ, – ಜಮೀನು** : ತಮ್ಮ ಪಾಳ ಕೆಯ್ಯ ತಳಮೊಳಗೆ ಜೀರಗೆವಳ್ಳದ ತಡಿಯೊಳ್ . . . ಬಿತ್ತ ಪೂದೋಱಿ (ಶಾಇಶಾ. XI-I, ೧೦೬-೧೨; 1069); ಊರಿಂಗೀಶಾನ್ಯದ ಶ(ಸ)ತ್ರದ ಕೆಯ್ಮಂ ಪಡುಪಣ ಪಾಳ ಕೆಯ್ಮಂ ಕೊಣ್ಡ ಗವಜೇಶ್ವರದೇವರ್ಗ್ಗೆ ಬಿಟ್ಟಿ ಮತ್ತ[ರ್] ಶೆ (ಇಇ. XIII, ೪೩-೩೭ ; 1084); ಚಂದ್ರಶೇಖರವಂಡಿತದೇವರ ಕಾಲಂ ಕಟ್ಟಿರ್ ಧಾರಾಪೂರ್ವ್ವಕಂ ಮಾಡಿ ಕರಡಿಕಲ್ಲಲು ಕೊಟ್ಟು ಸ್ಥಳವೃತ್ತಿ ಪೊಳೆಯ ಪುತ್ರರು ೫೦ ಹಾಳ ಕೆಯಿ ಪೊಳೆಯ ಪುತ್ರರು ೭ (ಪಾಂಡೇಜೆ. ೧೦-೯ ; 1079). **ಪಾಳ್ಮಾಡು, ಹಾಳು ಮಾಡು = ೧. ಕೆಡಿಸು** : ಭ್ರಷ್ಟಗೊಳಿಸು : ಕ್ಷಿತಿವ ನೀನಾಭರಣವನೀವೆನೆಸಲದು ಸತಿಯರ್ಗೆ ರಮಿಯಾದುದಿಲ್ಲ ಪತಿಯಲಂಕಾರವ ಪಾಳ್ಮಾಡಿ ನೋಡರು ವಱಿಳಕ್ಕೆಯರ ಚರಿತವದು (ಶಪಚಿ. ೯-೫೧); ಅರುಹನಾಜ್ಞೆಯನುಳಿದು ಮನೆಯಂ ಹಾಳು ಮಾಡಿದಲಾ (ಪಪಕ್ಷ. ೪೨-೭); ಅಂತಕಗಣತದಲ್ಲಿ ನನಗೆ ಬಂದ ಎರಡು ಸಂಬರು ನನ್ನ ಪುನಶ್ಚಿನ ನೆಮ್ಮದಿಯನ್ನೆಲ್ಲಾ ಹಾಳು ಮಾಡಿತು (ಶಾಕರು. ೯೦); ಇಲ್ಲಿ ಪ್ರೇಮವೆಂದರೆ ತಮ್ಮ ತಾರುಣ್ಯದ ಪಾಶದಲ್ಲಿ ಬಿಗಿದ ಮುಗ್ಧ ಹುಡುಗಿಯನ್ನು ಹಾಳು ಮಾಡುವುದೇ ಬಹುಜನರ ಉದ್ದೇಶವೂ ಅರ್ಥವೂ ಆಗಿದೆ (ಅಕಾಜಾ. ೬೪). ೨. ದಂಡಿಮುಮಾಡಂ: ಪೋಲುಮಾಡು: ವ್ಯರ್ಥವಾಗಿ ಕಳೆ : ಆಹಾರದ ವಿಷಯದಲ್ಲಿ ಭಾರತದ ಜನರು ಮಾಡುವ ದೊಡ್ಡ ಅನ್ಯಾಯವೆಂದರೆ ವಿವಿಧ ರೀತಿಗಳಲ್ಲಿ ಆಹಾರಪದಾರ್ಥಗಳನ್ನು ಹಾಳು ಮಾಡುವುದು (ಅಕಾಜಾ. ೭೬). **ಪಾಟುಗು, ಪಾಳಾಗು, ತಾಳಾಗು, ಹಾಟುಗು = ಕೆಡು** ; ನಾರವಾಗು ; ದುರ್ಗತಿಗೀಡಾಗು : **ಪಾಳ್**

ನಿಲೆ ನೆಗಟ್ ಡಾಬ್ಬುದು ಡಾಟ್ಂಬುದು ನಿಕ್ಕುವಂ ಗುಣಗ್ರಾಮಗಳ್ ಪಾಟುಗೆ ತೆಗಟ್ ಬಾಬ್ಬುಂ ಡಾಟೀನಾಚಿಂದ್ರತಾರಮೋ ಮಾನಸರಾ (ಧರ್ಮಾ. ೬-೦೬೭); ಪನ್ನೆರಡುವರ್ಷಂಬರೆಗಮಿ ನಾಡೊಳನಾವೃಷ್ಟಿಯುಂ ಮಹಾರೌದ್ರ ಪ್ರಳವಪರ್ಜ್ಜನ್ಯ ಮಧ್ಯಮದೇಶಮೆಲ್ಲಂ ಪಾಟಕ್ಕುಂ (ಕರ್ಣಾ. ೬೩-೦೦); ಗ್ಳಳು ಗೋಳಿಟ್ಟುನಂಗಂ ಹ್ರುತಬಲಸರ್ವ್ವಾಂಗನಾದಂ ಕರಂ ನೇಪಾಳ ಪಾಳಾಗಿ ಪೋದಂ (ಕೌಶ. XV. ೫೫-೦೯ ; 1147); ಸಿರಿ ನೆಲಸಿದ ಮನೆ ಪಾಳಪ್ಪುದೆ (ಕರ್ಣಕ. ೬-೫೦); ಜೀವಕ್ ಬೆಂದುದು ಬೆಲ್ಲ ಸಕ್ಕುದು ಸುಖಂ ಹಾಳಾಯ್ತು (ಗಿರಿ. ೮-೬೭); ಸ್ವಾಮಿದ್ರೋಹರು ಹೊಕ್ಕ ಮನೆ ಹಾಳಹುದಕ್ಕಾ (ಭಾಷ್ಯಕ್ರೋ. ೬-೦೦); ಈ ಜಗಳದಿಂದ ಯಾದವರೆಲ್ಲ ಹಾಳಾದರು (ಭಕ್ತಿಸಂ. II. ೬) ಹಾಳ ಹನ್ನಸು = ಸಾಗುವಳಿಯಾಗದ ಭೂಮಿ ; ಹಾಳು ಬಿದ್ದ ಜಮೀನು : ಹಾಳ ಹನ್ನಿಲಂ ಬಡಗ ತೋರಣಗೆಯಿ ನವಿಲಕೋಲಲು ಮತ್ತರು ೨೦ (ಶಾಸ. IX-೬, ೦೬೬-೦೯; 1099); ಗವಜೇಶ್ವರದೇವಗೆಯಿಂ ಪಡುವ ಮಂನೆಯು ಪಂನಸು ತೆಂಕ ಭು ೧೪೦ ಹ ೨೩ . . . ಹಾಳ ಹುನಸು ಮಾರ್ತಂಡೇಶ್ವರ ದೇವಗೆಯಿಂ ಮೂಡ ಹಡುವ ಭು ೯೦ ಬ ೧೦ (ಶಾಸ. IX-೬. ೨೩೨-೪೦ ೧೬೫). ಹಾಳ ಹರಟೆ = ಹಾಳಂಹರಟೆ : ನಿಷ್ಪ್ರಾರಪಚನ ಸಟೆ ಹಾಳ ಹುರಟೆಗಳೆಂಬ ವಾಚಕ ಪಾಪಗಳು ನಾಲ್ಕು :ಪರದ್ರವ್ಯವನಪಹರಿಸುವಂತಾ ಚಿಂತೆ ಪರರ್ಗೆ ಅಪಕಾರವ ನೆನೆವ ಚಿಂತೆ (ಶಾಚೀಸು. ೦೬೭-೪). [ದೇ.ಕ ತಮಿ. ಮಲ. ಪಾಟ್ ; ತುಳು.ಪಾಳು, ಹಾಳು; ಕೊಡ.ಪಳಿ ; ತೆಲು. ಪಾಡು]

ಪಾಟ, ಪಾಳ್$_1$ (ನಾ). ಹರಕೆ : 'ಪಾಟಿಂಬಡು' ಪರಾ. **ಪಾಳ್**$_1$: ದೆಸೆ ಮಸಗಿ ಬಪ್ಪ ಪಸುಂಬೆಗಂ . . . ಎತ್ತಿದ ನೆತ್ತರ ಕೂಜಿಗಂ ಪಟ್ಟ ಪಾಳಕ್ಕಂ ಪಾಯ್ದ ಬಲಿಗಂ ವೊಱಿಯೆಂಬ ಶಬ್ದಕ್ಕಂ ಸವೆಯದಧರ್ಮಕ್ಕಂ ಕೂಡಿವ ಸಂಘಾತಕ್ಕಂ ಮಾಡಿದ ಬೈವಸ್ತೆಗಂ ತಪ್ಪುವರಲ್ಲರು (ಎಳ. VII. ಶಾಂ.೦೦೯-೫೨ ; 1054). [?]

ಪಾಟಿಂಬಡು, ಪಳ್ಳಿಂಬಡು, ಪಾಳಿಂಬಡು, ಪಾಟಿಂಬಡು (ಕ್ರಿ). ಹರಕೆ ಹೊರು ; ಯಾವುದಾದರೂ ಇಷ್ಟಾರ್ಥಪ್ರಾಪ್ತಿಗಾಗಿ ಹರಕೆ ಹೊತ್ತು ಕಾಯಕ್ಲೇಶವನ್ನು ಪಡು.—ಹೊಂದು: ಪಾಟಿಂಬಟ್ಟೊಡಂ ಪಲವು ದೈವಕೆ ಪರಸಿದೊಡಂ (ಕರ್ಣಾಮೃ. ೬-೦೬೬ ೨೭೫); ಒಡನ ಜಮಿಂದ್ರತ್ವಮಂ ಕುಡೆಂದು ಜಿನೇಂದ್ರಂಗೆ ಪಾಟಿಂಬಡುಪಂತೆ ತಿಂಗಳ್ ಸನ್ಯಸನಮಿರ್ದೊಡಲನೀಡಾಡಿ (ಕರ್ಣಕ. ೨-೬೫೮); ಸುತನಿಂದಂ ಬೇಳಾದ ನೆಱೆ ಪಾಟಿಂಬಟ್ಟವನಟ್ಟಿ ತಿಂಬ ದೈವಕ್ಕೀಗಳ್ (ಸಂದ್ಧಕ್ರಿ. ೦೦-೫೫); ಅಟ್ಟಿ ತಿಂಬ ದೈವಮನಱಿ ಪೋಗೆ ಪಾಟಿಂಬಟ್ಟಿರೆಂಬಂತೆ (ಪುಷ್ಪಕ. ೦೦-೦೦೫ ೫). ಪಾಳಿಂಬಡು: ಎನಗಜಮಿಂದ್ರತ್ವವ ಕೊಡು ನೀನೆಂದು ಜಿನಗೆ ಪಾಳು [ಳಂ] ಬಡುವಂತೆ ಮುನಿ ಮೂಱುತಿಂಗಳು ಸನ್ಯಸನದೊಳಿರ್ದು ತನುಮಾಡಿ ತನುವ ಬಿಸುಟನು (ಕಬಸಂ. ೬-೦೦೭). ಪಾಳಿಂಬಡು : ಪೊಡವಿ:ಶ್ವರಂ ಹಿಂದೆ ಅಱಿ ಪಾಳಿಂಬಟ್ಟು ಪಡೆದ ಸುತನೀತನು (ಪಡಾ. ೦೨-೪೨). ಹಾಟಿಂಬಡು : ಧನಂ ಪಡೆವೆನೆಂದು ಕಾಳಿಗೆ ಹಾಟಿಂಬಟ್ಟುಂ ಕುತ್ಸಮಂ ಕಿಡಿಸುವ ನಿಮಿತ್ತದಿಂ ಚಂಡಿಕೆಗೆ ಕುಂಡವನಿಟ್ಟುಂ (ಪಡಾ. ೪೬). [ಪಾಟ+ಪಡು$_1$]

ಪಾಟ್ಟಿ$_1$, **ಪಾಳಿ**$_3$ (ನಾ). ಬೆಳೆಯಿರುವ ಭೂಮಿ : ದೇವಗ್ಗೆರ್ ಕೊಟ್ಟ ಗಳ್ದೆ ಮೂಗನೆಂಗ ಪಾಟಿ ಕಣ್ಣುಗ ಇಸ್ತವದೆರೆ ಎಱಿದು ಕೊಟ್ಟ (ಎಳ. ೪ (೬); ಕೌಂಗ್. ೦೦೦-೬; 1080ಯ ೪೬); ತೆನೆದುಱುಗಲೊಳೊಱಿತು ಪರಿವ ಪಾಲುಂ ಕಳಹಂಸುಕಾಯುಮಿಂಬಿಂ ಪಾಳಿಯನನವರತಂ ಬಿಡದು ಪಾಟಿಯುಂ ಪಾಳಿಪವೋಲ್ (ಕಾಂಚೀಕ್ಷೇ. ೦-೯೪). **ಪಾಳಿ**$_3$: ಶ್ರೀಮತ್ ಅರ ಕುಟ್ಟಿ ಅರಕುಟ್ಟೀಶ್ವರಕೆ ಕೊಟ್ಟ ಗಟ್ಟಿ . . . ಪಡುವಣ ಮಾಣಂ ಬಡಗಣ ಹಾಳಿವರಸಿ ಮೊಳೆವೆದೆ ಏಳ್ಕಣ್ಣುಗಂ (ಎಳ. IV. ೨೪೦ಡೂ. ೫೬-೬ ; ಕು. ೧೭೬?). 'ಪಾಟು' ಪರಾ. [ದೇ.ಕ ತಮಿ. ಪಾಟು ; ಕೊಡ. ಪಾಳಿ]

ಪಾಟ್ಟಿ$_2$, **ಪಾಟ್ಟಿ**$_1$, **ಪಾಡ್ಡಿ**$_1$, **ಪಾಳ್ಳಿ**$_2$, **ಹಾಳ್ಳಿ**$_2$ (ನಾ). ೧. ಕ್ರಮೆ ; ರೀತಿ ; ಪ್ರಕಾರ : "ಪಾಟು = ಕ್ರಮಂ" (ಶಬ್ದ. ಪಠ. ೩); "ತಱುವಾಯೆಂದುಂ, ಪಾಟಿಯೆಂದುಂ ಕ್ರಮಂ" (ಧರ್ಮಾ. ೬೬-೫೦೯); ನದೀಜನೆ:ದೊರೆಯನೇದೊರೆಯಂ ಗಳ ಕುಂಭಪ್ರೋದ್ಭವನಾತನ ಪುತ್ರನೇ ದೊರೆಯನೇದೊರೆಯುಂ ಕೃಪನಂತಾ ಪಾಟಿಯೊಳಂದ ಕರ್ಣನೇ ದೊರೆಯಂ (ಜಂಪಣ. ೬-೬೩). ೨. ಪದ್ಧತಿ ; ಸಂಪ್ರದಾಯ ; ಧರ್ಮ : ಪಾಟು ನಿಲೆ ನೆಗಟ್ ಡಾಬ್ಬುದು (ಧರ್ಮಾ. ೪-೦೬೭); ಇನ್ನೆವಗವರಸಂ ಸೂಚಿಂ ಪಾಟಿ[ಪಾಠಂ. ಪಾಳಿ, ಪಾಲಿ, ಪಾಳಿ] ಯುಮನೀಗುಂ (ಕರ್ಣಾ. ೦೦೦-೨೪); ಅಲ್ಲಿರ್ದುಂ ಏಮ್ಮ ಮನಕ್ಕೆ ಕೊಳ್ಕೆರಿಕ್ಕೆಯಾಗಿಯುಂ ಪಾಟಿಗೆ ಗೆಂಟಾಗಿಯುಂ ನೆಗಟ್ಟ್ವಮಲ್ಲೆಂದೀ ಪೊಡಮಟ್ಟು (ಜಂಪಣ. ೬-೨೦ ಕ): ಸುಮ್ಮನಿರದೆ ಪಾಟಿಯಱಿ ಪಾಳಿಸುವಂ ಬನ್ನಿಂ (ಶಾಪಸಂ. ೦೪-೦೪); ನಿನಗಿದು ಪೆಣ್ಪಾಯೆಲಕ್ಕ ದೊಗವಿಸಾಯದೆ ಮನ್ನಿಸದುದ್ದತಿಕ್ಕಿಯಿಂ ಮುನಿದವರಂತೆ ಕೇಳ್ ನುಡಿಯಂ ದಿರ್ಪುದು (ಧರ್ಮಾಕ್ಕು. ೦೦-೦೪೬). ೩. ಒಡೆಯನುಗಾಗಿ ಸ್ವಾಮಿ ಭಕ್ತನು ನಿರ್ವಹಿಸಬೇಕಾದ ಕರ್ತವ್ಯ,—ಧರ್ಮ ; ಅನ್ನದ ಋಣ : ಮೂಱು ತಿಂಗಳಾಯ್ತುವಱಿಬನಿಂತು ನಿಂದನೊಳನೇ ಶಾ ನಿಲ್ಲಮೊಲ್ಲಿ ಪಾಟಿಗಿನ್ನೆವರಮಿರ್ದವಿನ್ನೆಮಗೆ ನಿತ್ಯರಿಸಲ್ ನೆಱವಿಲ್ಲ (ಇಂಪ್ರ. ೯-೪೪), ಜೋಳದೊಳಾದ ಪಾಟಿಗಂ ಪತಿಹಿತವ್ರತ್ರಿಗಃ ಜಸಃಮಿನ್ನೆನಗಾಸವಡಲ್ಕೆ ಬರ್ಕುಮೇ (ಶಾಂಕಿಕ್ಷ. ೩-೭೦). ೪. ಮೈತ್ರಿ ; ಸ್ನೇಹ : ಒದವಿದ ಕೂರ್ಮೆಯಿಲ್ಲದಳಿವಾರಯಮಿಲ್ಲದ ಪಾಟಿ ರಾಗಮಿಲ್ಲದ ಸುಖಿಲ್ . . . ಉಬ್ಬೆಗವಿಲ್ಲದ ಕಣ್ಣ ನೀರ್ ಕರ ಚದುರರುಮಂ ಮನಂಗೊಳಿಪುದೇಂ ಕಡುಜಾಣೆಯರೋ ಲತಾಂಗಿಯರ್ (ಆದಿಪು. ೦೨-೪೩), ಮೊಱಿಯ ವಿಪರೀತಮಂ ಅಱುವಿನ ವಿಘಾತಮಂ ಕೀಟ್ ನೀಲಪ್ಪುದುಂ . . ; ಪಾಟು ಪಗೆಯಪ್ಪುದುಂ (ಭೀಪಸಂ. ೪೨-೦೨). ೫. ಸಮ ; ಸಾಟಿ, ಸಮಾನ : ಇಂತು ಬಿಟ್ಟುರಾ ರಣಪುಱಿದುಟ್ಟು ಮೈಲಗೆಯಾ ಸತಿಯಿವ ಬಾಸಿಗದೊಳ್ಕೆಗುಂಡ ಮೇಲುಣಿನ ಮೆಲ್ಲ ತಂಬುಲವ ಪಾಲ್ಗೆಗೆದಂದ ಸಮಸ್ತರಾಜ್ಯಮಂ (ಕೃಷ್ಣ. ೧೩-೭೨). **ಪಾಟಿ**$_1$: ೧. ಕೊಡು ಕಲ್ಪಾಂತರಕೆ ಸವೆಯದ ಕೋಟಿದಿನಕರನ ಪಾಟಿಯಲಿ ಹೊಸಹೊಸಯ್ದು ನುಡಿ ಕವಿಗೋ ಟಲೆಯ ನಿಕ್ಕಿದುದು (ಕೃಷ್ಣಾ. ಪಱ-೬೬). ೨. "ಸರಿ, ದೊರೆ, ಪಡಿ, ಗೆಡೆ, ಪಾಟು . . . ಸಂಗಡಂ—ಈ ಪದಕ್ಕೆ ಸಮಾನಕ್ಕೆ ಪೆಸರ್" (ಕರ್ಣಾ. ೫೯-೨೫೧) : ಎಱೆ ಮರುದೇವಿ ಪಾಟಿ ಸುಪೇಣೆ ಸಮಂ ಶಿವದೇವಿ ಪಾಟಿ ಲಕ್ಷ್ಮಣೆ . . . ದೊರೆ ಸುದರುನ್ನತಿ ವೆಱಿಱ್ಗೊರೆಯೇ ಗುಣವಂಕಕಾರ್ತ್ತಿಯೊಳ್"(ಶಾಸ. XI-೬, ೩೨-೪೮: 1007); ಸೌಂದರ್ಯದೊಳೆಣೆ ಯೌವನದೊಳು ಪಾಟಿ ಱಿರಿಯೊಳ್ ಸಕ್ಕಸಮಂ ಶಾವೆನೆ ಬಂಧುರತೆವಡೆದ ರಾಜಪತ್ನಿಯರು . . . ಸುಲೋಚನೆ ಯೊಡನೊಲ್ದೆಯ್ದಿದರು (ಪಚಂಕಾ. ೩-೨೬). ೬. ಅಳತೆ ; ಪ್ರಮಾಣ ; ಪರಿಮಾಣ : 'ಆ ಪಾಟಿ', 'ಈ ಪಾಟಿ' ಪರಾ. ೭. ಸೊಗಸು; ಅಂದ; ಶೋಭೆ : "ಪಡಿ ದೊರೆ ಪಾಸಟ ಪಾಟಿಯು ಗೆಡೆಯೆಱೆಯೆನೆ ತೋಳ್" (ಧರ್ಮಂ. ೦೩೬); ಪಾಟಿ ವಿಗೆ ರುಕ್ಮಿಣೀದೇವಿ ಮೊದಲಾಗಿಹೆ ವಧೂಟಿಯರ ವರ್ಗಮಂ ನೃಪತಿ ಸಕ್ಕರಿಸಿದಂ (ಕೃಪಪಾ. ೬೪-೬೦). ೮. ಯೋಚಿತ್ಯ; ಸಮರ್ಪಕತೆ: (೨). ೯. ಪೊರೆ; ಪಟಲ : ಕೋಟಿಹುಳಿಗಳು ಕೋಟಿ ನಿಸ್ಸಳ . . . ಕೋಟಿಡಿಂಡಿಮವಗಳನು ಬಾರಿಸೆ ಗೋಟು ತುಂದಿತು ಜಗದ ಕವಿಗಳ ಪಾಟಿ ಹೊಟ್ಟೆತು(ಕಾಶಿಖ. ೨೪-೨). **ಪಾಡ್ಡಿ**$_1$: ೫. ತಾನೆ ಪಾಡಿ ಪಾಸು ಯೆನಿಪ್ಪೊಳ್ (ಪೊಂಗಳಾ. ೦೧೩೩. ಜುಗಾತ್ತರ. ೦೬-೦೩ ; ೧). **ಪಾಳ್ಳಿ**$_2$: ೧.

'ಪಾಳಿದವ್ವ' ಪರಾ. ೨. ಸೂಳೆಗಂಗಷ್ಟಾಂಗದಿಂ ನಮಿಸಿಕೊಡುವುದು ಪಾಳಿಯೇ ತನಗೆ (ಕಕ್ಕಣಾ. ೩-೨೪); ಕೇಳುಮೆಗಳವ್ವ ದೇಜಿ ಚರಿತವ ಪಾಳಿ ಕಾನದು ಬೆ ಜೀಲಾ (ಕುಷ್ಮಾ. ೯-೦೩); ವಳಗಂಜದೆ ಪಾಳಿಯನುಲ್ಲಂಘಿಪುದು . . . ಅರಸುವಮಕ್ಕಳ ಮತವೇ (ಜಯಾ. ೬-೯). ೧೦. [ಸಂಗೀತ] (?): ಮಣಿಕಂಪಿತಂ ಹಳುವಾಯಿ ಟೋಕೆಳವನೂದ್ಗತ್ಯಶ್ರಿ ಪಾಳಿ ವಿಮೋಕ್ಷವಿಂಪು ಲಯಾಸ್ಪದಂ (ಕ್ಷತ್ರ. ೦೦-೯). **ಹಾಳಿ** : ೧. ಹಾ[ಹಾಕಾಂ. ಪಾ] ಳಿಯಿಲ್ಲದ ಸುಮ್ಮನಿಹುದಿದು ಖೊಳತನವಲ್ಲ (ಜಷ್ಣು. ೨೬-೩೫); ಬಿಡಲು ಹೇಳುವೆ ನೀನು ಮುಮುಕ್ಷೆಗೆ ನುಡಿವ ಹಾಳಿಗೆ ಏನು ಚದುರನು ದಿಡಿಸಿ ಕಳಹಲು ನಾವು ಬಲ್ಲೆವು ನಮ್ಮ ಪಂಥಗಳ (ಲೋಕಾ. ೭೪-೪೬); ಕೇಳಿದ್ದೆ ಸೌಮಿತ್ರಿ ವಿಸ್ತ್ರವಿಶಾಲವಂಶೋದ್ಭವನ ವಚನದ ಹಾಳಿಯನು (ಕೂರ್ಮಾ. ೩-೯-೩). **ಹಾಳಿ ಹೂಡು**=೧. ಸರಿಗಟ್ಟು; ಸಮಾನವಾಗು : ಪಾಂಡು ಸ್ಮೈರ್ಯದಲಿ ದ್ರೋಣವಂ ಪಾಳಿ ಮಾಡುವರಿಲ್ಲದಿರುತಿರಲ್ (ಕುರಂಗ. ೪೯-೨೨). ೨. ಸಮಾನವೆಂದು ಭಾವಿಸು: ವಚನವ ... ಲಿಂಗನಿಷ್ಠಾಹೀನರು ಓದಿ ಪಾಡಿದರೆ ... ಏನೆಂದೂ ಪಾಳಿ ಮಾಡರಯ್ಯಾ (ಸಿದ್ಧೇಶ್ವ. ೭೩/೨೦೯); ಲಾಟ ದೇಶದ ರಾಯನಿವನೆಸಲೀಕ್ಷಿಸಿ ಪಾಳಿಮಾಡದೆ ಹೂದಳಿಪಳು (ಕಥಸ. ೫೫-೯೨). 'ಪಾಡು' ಪರಾ. [ದೇ-ತೆಲು. ಪಾಟಿ, ಪಾಡಿ; ಕೋತ. ಪಾಟೆ]

ಪಾಳಿಕಾಱ (ನಾ). ನಿಯಮವನ್ನು ಪಾಲಿಸುವವನು; ಧರ್ಮದಂತೆ ನಡೆಯುವವನು: ಪಾಟಿಕಾಱಂ, ಒಳ್ನುಡಿಕಾಱಂ, ಪಗೆಕಾಱಂ (ಕಷುಶ-೦೪೯ ಕ್ರಿಯೋ) : ಎಲೆ ಪಾಟಿಕಾಱುಗಳಿಂ (ಜಂಷಹಿ ೦೪-೦೩ ಪ). [ಪಾಟು+-ಕಾಱ]

ಪಾಟಿಗಿಡು 'ಪಾಟಿಗೆಡು' ನೋ.

ಪಾಟಿಗೆಡು, ಪಾಟುಗೆಡು, ಪಾಳಿಗೆಡು, ಪಾಟಿಗಿಡು, ಹಾಳಿಗೆಡು (ಕ್ರಿ). ಕ್ರಮ ತಪ್ಪು : ರೀತಿಗೆಡು : ನಿಯಮವಿಲ್ಲದಾಗು : ಪಾಟಿಗೆಟ್ಟ ಬಸನಂಗಳಿವೆತ್ತನೆಂಬಿಳ್ಕೆತಪ್ಪುವಂ ಪಡೆಗುಮೊ (ಜಃಷಂ. ೦೩-೨); ಆ ರಣ ಧೂಳಿ ಪಾಟಿಗೆಟ್ಟು ಪಾಡುಬಿದು . . . ಬೆರ್ಚಿ ಬಿಗುರ್ತು (ಜಶಪಾ. ೨-೦೦೩). **ಪಾಟುಗೆಡು** : ಕೇರಳ ಪಾಟುಗೆಟ್ಟಮ ಮಾಗಧನು ಹೊಡೆಗೆಡದನವನಿಯಲಿ (ಜಃಷಂ. ೮೩-೨೪) : ಅಹಿಪತಿ ಕೂರ್ಮರಗ್ಗಳಿಕೆ ಪಾಟುಗೆಡೆ ತೋಱಿಸಿದರೀ ಪರಿಪಾಟಿಯಲಿ ಪೊಕಪತಿಗೆ ವಾಲಗ ನಾಟದೊಸಲು ಗಣನೆದಿಲ್ಲದ ರಾವು ಸೈನಿಕವ (ಕೂರ್ಮಾ. ೪-೬-೩೩) ; ಪಾಟುಗೆಟ್ಟೀಗ ಬೇಱುಪಾತ್ಮ ಬೇಱೆಂದೆಂಬ ಪೋಟವುಳ್ಳಾತ್ಮಸಿದ್ಧರಿಗೆ ಕೋಟಿರಂಜನೆಗಳ ಹೊಱಗೆ ಕಾಣಿಸಲೆದ ಪಾಟವು ವಸ್ತುಶಕ್ತಿಯದು (ಕಥಸ. ೬-೮೩). **ಹಾಳಿಗೆಡು** : ಪಾಳಿಗಡದಿಂತು ಪಪ್ಪನ್ನದೇಶದ ಮಹೀಪಾಳರಂ ಕಾಣಿಸುವ . . . ಪಡಿಯಜಿರ ಕೋಳಾಹಳಂ ಪೊಸ್ಕೆ (ಕಕ್ಕಣಾ. ೩-೪). **ಪಾಟಿಗಿಡು** : ಒಸೆದಜ್ಯಾನಂಗೆ ದಮೋ ಕಳಕಸಂಧವಂ . . . ದೆಸುಗೆಗಿಡೆ ಪಾಟಿಗಿಡೆ ತನ್ನಸುವಂ ತೆಲ್ಲಟಿಗೆ ಗುಡುವ ತೆಱದೊಳೆಕ್ಕೊಟ್ಟಂ (ಗಜಾಹು. ೩-೦೩). **ಹಾಳಿಗೆಡು** : ಕಾಲ ತಡಬಡಿಸುತ್ತ ನಿಲುತಂ ಹಾಳಿಗೆಡುತಂ ಭಕ್ಕಭೀತಿಗೆ ಸೋಲುತಂ ವಾಲ್ಮೀಕಿವಿಭು ಸಂದಣಿಯೊಳೊಳಪೊಮ್ಮ (ಜಷ್ಣು. ೫೬-೨೬).

[ಪಾಟು$_{1}$ + ಕೆಡು$_{1}$]

ಪಾಳಿಡು, ಹಾಳಿಡು (ಕ್ರಿ). ಹಾಳುಮಾಡು; ನಾಶಮಾಡು: ಏನಾದೊಡೆ ಏನೆನ್ನ ಪಾಳಿಡಲ್ಕೆ ಅಱನವನ್ (ಅಧ್ಯಕ್ಷ. ೫೬-೦೨೨೨). **ಹಾಳಿಡು**: ನಾಕದ ವಿಳೆಯುವಮ ಹಾಳಿಟ್ಟು ಹರಿದು ಸುರಲಿ ದೆಸೆದೆಸೆಗೆ ಅಳುಕಿದರು ನೃಪರಾದವರು . . . ದೈತ್ಯರುಱುಬಿಗೆ (ಜಶಾಗ. ೬-೨-೦೨). [ಪಾಟು+ಇಡು$_{1}$]

ಪಾಟಿಯಕ್ಕ (ನಾ). ಒಬ್ಬಾಕೆಯ ಹೆಸರು : ಪಾಟಿಯಕ್ಕಂ ದೋಲಿಯಕ್ಕಂ . . . ಕಾರ್ಕ್ಕಣ್ಣಾಗ ಬಿತ್ತುವುದುಂ ಕೊಟ್ಟಳ್ (ಆಳ್. VIII. ೫೧೮. ೪೦-೦೦; ಮು. ೫೦೦). [ಪಾಟಿ$_{3}$+ಅಕ್ಕ$_{11}$]

ಪಾಟಿಲ್, ಪಾಳಿಲ್ (ನಾ). ಒಂದು ಬಗೆಯ ಮಿನು : ಪೀತಿಕಾ—ಪೀಟಿಗೆ : ಪಾಠೀನ—ಪಾಟಿಲ್ (ಕಕ್ಕಾಕು. ೦೬೦ ಕ್ಕಾಕ್ಕಾ). **ಪಾಳಿಲ್** : "ಪಾಳಿಲ್—ಪಾಠೀನ—ಮತ್ಸ್ಯಭೇದ" (ಕಕ್ಕಕೋ. ೫೬).

[<ಸಂ. ಪಾಠೀನ]

ಪಾಟಿವೇಟು (ಕ್ರಿ). ಸರಿಯಾದ ಧರ್ಮವನ್ನು ಹೇಳು.—ನೀತಿಯನ್ನು ತಿಳಿಸು : ಪೂರ್ವಿಂದಪರಾಧಿಯನುಜೆ ಜರ್ವತೆ ಲಲಕಾಂಚಿಯಿಂದೆ ಬಂಧಿಸಿ ಕಾಯ್ವಿಂದುರ್ವಿಂ ಬಯ್ದೊದೆವು ಸದೆಬಳ್ ಸರ್ವರ್ ಕೆಳದಿಯರೆ ಪಾಟಿವೇಟ್ವುವಿನಿಯಳ್ (ಕಸರ. ೩-೦೩೦). [ಪಾಟು$_{3}$+ವೇಟು]

ಪಾಟು 'ಪಾಟ್' ನೋ.

ಪಾಟುಗೃಹ (ನಾ). ಹಾಳುಬಿದ್ದ ಮನೆ : ತುರಿಪದೆ ಗೋಹಳಿಯೆಡೆಯೊಳ್ ಪೊರಳ್ವರುಂ ಪಾಟುಗೃಹಂಗಳೊಳ್[ಜಾಕಾಂ. ಪಾಟ್ಟರಂಗಳೊಳ್] ಪೊರಳುವುದುಂ ಕರಮೊಪ್ಪರೆ ಪಾಣ್ಪಂ ತಾಂ ನರಕಂಗಳೊಳಿಂತೆ ಪೊರಳ್ವ ನೆಂಬುದನೀಗಳ್ (ಜಷುಕ. ೫-೩೮). [ಪಾಟು (<ಪಾಟ್) + ಗೃಹ]

ಪಾಟುಡು (ನಾ). ಹಾಳಾದ ಜಾಗದಲ್ಲಿರುವ ಉಡು : ಪವನಸೂನು ವೆಸಕುಳನಾಯಂ ಬಡಿವಂತಿರೆ ಪಾಟುಡುವಂ ಬಡಿವಂತಿರೆ ಬಡಿದನನಬರಂ ಕೌರವರಂ (ಗಜಾಹು. ೩-೦೦). [ಪಾಟು+ಉಡು$_{3}$]

ಪಾಟುನಾಡು (ನಾ). ಹಾಳಾದ ದೇಶ : ಪಾಟುನಾಡುಂ ನಂಬಿ ತೀವಿದ ನಾಡಂ ಕಿಡಿಸುವ ಭೂಪನುಮಾಂ . . . ಪೋಲ್ತಂ (ಕಷೂಕ್ಕು. ೩-೩೦). [ಪಾಟು (<ಪಾಟ್) + ನಾಡು]

ಪಾಟುನೆಲ 'ಪಾಟ್ನೆಲ' ನೋ.

ಪಾಟುಪದ್ರವ (ನಾ): ಅನಿಷ್ಟದ ಕಾಟ. — ತೊಂದರೆ : ಎಂತು ವೊದಲೆರಗಿತೋ ಈ ಪಾಟುಪದ್ರವಂ ? (ಕಕ್ಕಾ. ೦೩-೨೪೩). [ಪಾಟು+ಉಪದ್ರವ]

ಪಾಟುಬಾವಿ ಪಾಟ್ವುವಿ' ನೋ.

ಪಾಟಿನಿಸು, ಪಾಳಿನಿಸು (ಕ್ರಿ). ೧. ಹಾಳಾದಂತೆ ತೋರು; ಹಾಳು ಬಿರಿ; ಭಣಗುಡು: ಪಾತಾಳಾಸ್ಥಿಂ ಮಹಾವನಸ್ಥಸಮೂಹಂ ಸ್ವರ್ವಿಮಾನೋತ್ಕರಂ ಜ್ಯೋತಿರ್ಲೋಕಮಿವೆಯ್ದೆ ಪಾಟಿನಿಸೆ ಬಂದತ್ತಾನಗಂ ತತ್ಪ್ರಣವ್ಯಾಕಂ (ಕಂದ್ರಕ್ಷ. ೦೪ ೩೩) **ಹಾಳಿನಿಸು**: ೧. ಕಾಶಿನಗರವದು ನೆಜಿ ಪಾ[ಜಾಕಾಂ.ಹಾ]ಳಿನಿಸಿದುವನಜಿಂದು ಕಡುಘೂರ್ಣಾಕಾಳ ಗಂಡನ ತಡೆದು ನುಡಿದಳು ಜಡಿವ ರೋಷದಲಿ (ಕೂರ್ಮಾ. ೨-೪-೦). ೨. ಹಾಳುಗೆಡಹು : ನಿರ್ಜನವಾಗುವಂತೆ ಮಾಡು : ಅಸಮೂಸ್ಯಾರಿಯ ಪೂಜೆಯ, ನೆಜಿ ಸಂತಸದಿಂ ಮಾಡಿಸಿ ಪಾಳಿನಿಸಿ ಕರಂ ಕಾರಾಗಾರವವುಪಸಥಕ್ಕೆಯ್ದಿ ಮಗನ · ವದನಮನೀಕ್ಷಿಸಿ ಯೆರೆವರ್ಗಮರಪಹೀರುಹದಂತೊಸೆದಿಕ್ಕಂ ರಾಜಪ್ರಭರಾಜಂ (ಜಷುಗ ೨-೬೦). [ಪಾಟು$_{3}$ + ಎನಿಸು$_{1}$]

△**ಪಾಟಿಯ** 'ಪಾಳೆಯ' ನೋ.

ಪಾಟಿಸೊಜಿಲೆ (ನಾ). ಹಾಳಾದ ಗೆದ್ದಲು : ಪಾಟಿಸೊಜಿಲೆಯಿಟ್ಟ ವೃತ್ತಿನ. ಪೊಲ ಪಾವುರಂಗಳಿಡರ್ದು ವೆಗಲಿಂ ಜೋಲ್ದೊಂದೇಟಿಂಟಿಬ್ಬರೆಯತಿವತಿ ಬೀಬಲ್ವರಿದಿರ್ದ ಕಲ್ಪಟಜಮಂ ಪೋಲ್ತಂ (ಜಷಂಕ್ಷ. ೪-೨೬). [ಪಾಟು+ಒಜಿಲೆ$_{1}$]

ಪಾಟ್ಗತೆ (ನಾ). ಕೆಟ್ಟ ಕತೆ ; ಹಾಳುಕತೆ ಎಂತೆಂತೊ ರಗಳೆಯು ಪಾಟ್ಗತೆ ಕಡೆಗೆಂಡುದು (ಜಷಾಕ್ಷ. ೦೬೩-೨೬). [ಪಾಟು+ಕತೆ]

ಪಾಟ್ಗಬ್ಬ (ನಾ). ಹಾಳಾದ ಕಾವ್ಯ ; ದುಷ್ಕಾವ್ಯ : ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬಜುವರ್ಣನೆಯ ಬೇಸಱಿಕೆಯ ಪಾಟ್ಗಬ್ಬವಂ ಪೊಳ್ಕೆಂದೆ ನುಡಿದಂ (ರಾಮಾಕ್ಷ. ೦೬೪-೯). [ಪಾಟು+ಕಬ್ಬ$_{1}$]

ಪಾಟ್ಗೃತ್ತ (ನಾ). ಕೆಟ್ಟ ರೋಗ: ಅವ ಮುರ್ದಾ ಪಾಟ್ಗೃತ್ತವನ್ ಪರಿಹರಿಸಲಾರ್ದತ್ತು (ಅಧ್ಯಕ್ಷ. ೦೪-೨೪೪). [ಪಾಟು+ಒತ್ತ]

ಪಾಟ್ಗೆಡಪು. ಹಾಳುಗೆಡವು. ಹಾಳುಗೆಡಹು (ಕ್ರಿ). ಹಾಳು ಮಾಡು : ಕೆಡಿಸು : ನಾಶಗೊಳಿಸು : ನಿನತದಾವ ಪಾತಕಂ ಸೆಳೆದು ಸೇಡುಗಾಳಿಯನ್ ಪಾಟ್ಗೆಡಪಿದೆ ಕಿಡಿಸಿದೆ ದೇವಸಮಾಕೃತಿಯುಮನ್? (ಶಿವಶ್ರ. ೩೦-೬೩೩). **ಹಾಳುಗೆಡವು** : ಪರ್ಷಿಯನ್ನರು ಈ ಸುಂದರ ಮಂದಿರಗಳನ್ನು ಹಾಳುಗೆಡವಿದರು (ಕನಿಕೋ. 1, ೦೬೦). **ಹಾಳುಗೆಡಹು** : ಹುಳುಗಳು ಹಾಳುಗೆಡಹಬಹುದಾದ್ದರಿಂದ ಒಮ್ಮೆಯೆ ಹೆಚ್ಚು ಕಾಳುಗಳನ್ನು ಕೊಂಡು ಇಡುವುದು ಹಿತವಲ್ಲ (ಅಡುಗೆ. ೫೩). [ಪಾಟ್+ಕೆಡಪು]

ಪಾಟ್ಗೆಱೆ (ನಾ). ಹಾಳಾದ ಕೆರೆ ; ಪಾಳುಬಿದ್ದ ಕೆರೆ : ಕುಕವಿಯ ಕಾವ್ಯಮಂ ಸುಕವಿ ಕೇಳ್ದು . . . ಕವಿತಾಗುಣಮಂ ಬೆದಕಲ್ಕೆ ರತ್ನಶುಕ್ತಿಕೆಯ ನೊಜಲ್ದು ಪಾಟ್ಗೆಱೆಯೊಳೀಕ್ಷಿಸುವಂಗೆಣೆಯಾಗದಿರ್ಕುಮೇ (ಪಶಕು. ೦-೦೦). [ಪಾಟ್+ಕೆಱೆ]

ಪಾಟ್ಗೋಡೆ. ಹಾಳುಗೋಡೆ (ನಾ). ಹಾಳು ಬಿದ್ದ ಗೋಡೆ ; ಕಟ್ಟಡ ಬಿದ್ದು ಹೋಗಿ ಅವಶೇಷವಾಗಿ ನಿಂತ ಗೋಡೆ : ಅಂಗಡಿಯ ಸಂದಿಗಳೊಳುತ್ತುಂಗಾಲಯದ ಪಕ್ಕದಲಿ ಪಾಟ್ಗೋಡೆಗಳೊಳ್ ಪೊಂಗುತ್ತುಂ ನೆರೆದರ್ ಕುಟಿಲಾಂಗನೆಯರ್ ಜಾರಕಾಂತರಂ ನಲವಿಂದಂ (ಉಪ್ಪಳಿ. ೦೦-೦೦೭). **ಹಾಳುಗೋಡೆ** : ಹಾದರಕ್ಕೆ ಹೋದರೆ ಕಳ್ಳದಮ್ಮ ವಾಯಿತ್ತು ಹಾಳುಗೋಡೆಗೆ ಹೋದರೆ ಚೇಳೂಱಿತ್ತು (ಬಸವ. ೦೦೦); ಕತ್ತೆ ತಪ್ಪಿಸಿಕೊಂಡರೆ ಹಾಳುಗೋಡೆ (ಗಾರೆ). [ಪಾಟ್+ಗೋಡೆ]

ಪಾಟ್ದಿನ (ನಾ). ಹಾಳಾದ ದಿವಸ: ವ್ಯರ್ಥವಾದ ದಿವಸ : ಪಾಟ್ದಿನಂ ಬೀಟದವೊಲಱನೆಸಗೆಯದೊರ್ವನ ಬಾಟ್ದಿನದ ಬಟಿಗಡಚುಗಲ್ಲು (ಕುಱಳ್. ೦-೪-೮). [ಪಾಟ್+ದಿನ]

ಪಾಟ್ದೇಗುಲ. ಪಾಳ್ದೇಗುಲ. ಹಾಳುದೇಗುಲ (ನಾ). ಹಾಳು ಬಿದ್ದ ದೇವಸ್ಥಾನ: ಹಾಳಾದ ದೇವಾಲಯ : ಪಗಲೆಲ್ಲಂ ಪಾಟ್ದೇಗುಲ ದೊಳಂಜನಮನೆಚ್ಚ ತಾಂ ತೊನ್ನನಾಗಿ . . . ಇರುಳಪ್ಪಾಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು (ಪಡ್ಡಾರಾ. ೦೨೨-೨೦). **ಪಾಳ್ದೇಗುಲ** : ಬಾಹಿರದ ಪಾಳ್ದೇಗುಲದೊಳಗೆ ಸಾವಿರ ಸೊಡರುಗಳನೆತ್ತಿ ಭಜಿಸುವ ನೇಮವಾತಂಗೆ (ಬಸಪು. ೫೦-೫೪). **ಹಾಳುದೇಗುಲ** : ಶಯನಕ್ಕೆ ಹಾಳುದೇಗುಲವುಂಟು (ಮಹಾಬೇ. ಬ. ೭೯-೦೯೯).

[ಪಾಟ್+ದೇಗುಲ]

ಪಾಟ್ನೆಲ. ಪಾಳ್ನೆಲ. ಪಾಟುನೆಲ (ನಾ). ೧. ಕೇಡು ಮಾಡುವ ಭೂಮಿ : ಅಶುಭಕರವಾದ ಭೂಮಿ : ಈ ನೆಲನಿದು ಪಾಟ್ನೆಲನೆನಗೆ ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ದಪೆನೇ (ಗದಾಯು. ೫-೪೭). **ಪಾಳ್ನೆಲ** : ೨. ಹಾಳುಬಿದ್ದ ಭೂಮಿ : ವಿಮಲ ಪುಣ್ಯಕ್ಷೇತ್ರಮುಂ ಕಾಡ ಪಾಳ್ನೆಲನುಂ . . . ನಿಜೈಕದೃಷ್ಟಿಗೆ ಸಮಂ (ಶಪಕ. ೧೨೪-೨೧). **ಪಾಟುನೆಲ** : ೩. ನಿಸ್ಸಾರವಾದ ನೆಲ; ಸತ್ವರಹಿತವಾದ ಭೂಮಿ : ಗೆಲವೇನಿಲ್ಲದ ಯುದ್ಧ ಪಾಟುನೆಲದೊಳ್ ಬೇಸಾಯ . . . ಫಲದ ಭ್ರಾಂತಿಯ ತೋರ್ಪುವೈ (ಸೋಮೇಶ. ೨೩).

[ಪಾಟ್+ನೆಲ]

ಪಾಟ್ಬಸದಿ (ನಾ). ಹಾಳು ಬಿದ್ದ ಜಿನದೇವಾಲಯ,...ಬಸದಿ : ಪಾಟ್ಬಸದಿಯ ಪೆಣ್ಣ ಜೋಹದವೊಲೊಪ್ಪಿದಳೊರ್ವಳನಂಗರಾಗದಿಂ (ಶಾಂತಿಪು. ೬-೮೮). [ಪಾಟ್+ಬಸದಿ]

ಪಾಟ್ಬಾವಿ 'ಪಾಟ್ವಾವಿ' ನೋ.

ಪಾಟ್ಮನ (ನಾ). ಕೆಟ್ಟ ಮನಸ್ಸು: ದುರ್ಬುದ್ಧಿ : ಕೋಟಲೆಗೊಳಗಪ್ಪ ಪಾಟ್ಮನದ ಮಾನಸರಂ ಸುಡು ಸಂದ ಗೊಡ್ಡರಂ (ಸಂಪ್ರಪು. ೬-೮೦).

[ಪಾಟ್+ಮನ]

ಪಾಟ್ಮನೆ. ಪಾಳುಮನೆ. ಪಾಳ್ಮನೆ, ಹಾಳುಮನೆ, ಹಾಳ್ಮನೆ, ಹಾಟ್ಮನೆ (ನಾ). ಬಿದ್ದು ಹಾಳಾದ ಮನೆ : ಬಿದ್ದುಹೋದ ಮನೆ : ಪುಟಿತ ನಾಯಂ ಕಂಡಂತೆ ಕಂಡಕಂಡರೆಲ್ಲಮೆರ್ವಟ್ಟೆ ಪಾಟ್ಮನೆಯಂ ಪೊಕ್ಕು (ಸಾವುಂಪು. ೩೫೧); ಕೆಮ್ಮನೆ ಪಾಟ್ಮನೆಯೊಳ್ ಗುಱುಗುಮ್ಮನೆ ಸುಟಿದಿರದೆ ಪೋಪಮಜಿತನ ಬಟಿಯಂ (ಅಜಿಪು. ೬-೧೨೩); ಕೆಮ್ಮನ್ನು ತೊನೆದು ಮಾಣದರಸಾಳ್ತನದಿಂ ಪುಗುವಂತು ದೇವಗತಿ ಪಾಟ್ಮನೆಯೇ (ರರ್ಮಾಮ್ಯ. ೬-೦೭೨); ಆ ಲಕ್ಷ್ಮಿಯಾ ರೂಪುಮಾ ಹರೆಯಂ ಬೇವಿನ ಸುಗ್ಗಿ ಪಾಟ್ಮನೆಯ ಚಿತ್ರಂ ಕಾಡ ಚುದ್ರಾತಪಂ (ಅನಂಪು. ೬-೫೬). **ಪಾಳುಮನೆ** : ಆಸೆಯಿಲ್ಲದ ಬದುಕು ಬದುಕೆ . . . ಪಾಳುಮನೆಯಲಿ ಬೆಳಕು ಬೆಳಕೆ? (ಶಿಲಾಂ. ೯೩-೦೫). **ಪಾಳ್ಮನೆ** : 'ಪಾಳ್ಮನೆಹಾಳ' ಪರಾ. **ಹಾಳುಮನೆ** : ಹಾಳುಮನೆಯ ಹೊಕ್ಕು ಒಡಲು ಉರಿಯುತಿದೆ (ಪುರಂದ. ೨-೮೪-೦); ಮೌನವಾಗಿ ಅವರು ನಡೆದು ಹೋಗಲು ಸ್ವಲ್ಪ ಸಮಯದಲ್ಲಿ ಒಂದು ಹಾಳುಮನೆಯು ತೋರಿತು (ಮನೆಸ. ೭). **ಹಾಳ್ಮನೆ** : ತೋಟದಲ್ಲಿ ಒಂದು ಹಾಳ್ಮನೆಯಿದೆ (ರೂಢಿ). **ಹಾಟ್ಮನೆ** : 'ಹಾಟ್ಮನೆಹಾಟ' ಪರಾ. [ಪಾಟ್+ಮನೆ]

ಪಾಟ್ಮನೆಪಾಟ, ಪಾಳ್ಮನೆಹಾಳ, ಹಾಟ್ಮನೆಹಾಟ (ನಾ). ೧. ತುಡುಗು ನಾಯಿ : ಕಳ್ಳನಾಯಿ : "ಪಾಟ್ಮನೆಪಾಟಂ ತುಡುಗುಣಿ" (ಕಕುಪಿ. ೬೫). **ಪಾಳ್ಮನೆಹಾಳ** : ೧. ತೋಳ್ವಲಮಂ ರಣಾಂಗಣದೊಳೆಲ್ಲರ್ಗಿಂದು ನಾಂ ತೋಱುವೆಂ ಬಡಿವೆಂ ಪಾಳ್ಮನೆಹಾಳನಂ ಬಡಿವೋಲ್ಮಿಕ್ಕಾದ ದೇವರ್ಕಳಂ (ಪೀರಪಿ. ೦೦-೩೫). **ಹಾಟ್ಮನೆಹಾಟ**: ೧. "ಹಾಟ್ಮನೆಹಾಟಂ-ತುಡುಗುಣಿ ನಾಯ್" (ಕಮದ. ಸಂ. ೦). ೨. ನಾಯಿ ; ಶ್ವಾನ : "ಸೊಣಗ ಹಾಟ್ಮನೆ ಹಾಟ ಶ್ವಾನ ಕುಕ್ಕುರನೆಂಬಿವೆಣಿಸೆ ನಾಯ್ವೆಸರು" (ಶಬ್ದಮಂ. ೩೨)

[ಪಾಟ್ಮನೆ+ಪಾಟ್+ — ಅ$_7$]

ಪಾಟ್ಮಸಗು (ಕ್ರಿ). ಹಾಳಾದಂತೆ ತೋರು ; ಹಾಳುಸುರಿ ; ಶೂನ್ಯವೆನಿಸು : ದೆಸೆ ಪಾಟ್ಮಸಗಿರ್ದಪುದಂಧನಾದೆನಾರ್ ಶರಣೆನಗೆ (ಕಾದಂಪು. ೯೦೨). [ಪಾಟ್+ಮಸಗು$_3$]

ಪಾಟ್ವಕ್ಕೆ (ನಾ). ಹಾಳುಬಿದ್ದ ಮನೆ : 'ಪಾಟ್ವಕ್ಕೆವಡು' ಪರಾ.

[ಪಾಟ್+ಪಕ್ಕೆ$_1$(<ಪಟ್ಕೆ)]

ಪಾಟ್ವಕ್ಕೆವಡು (ಕ್ರಿ). ಹಾಳುಮನೆಯಲ್ಲಿ ವಾಸಿಸು : ಈ ಪಟಮಂ ಪ್ರಾಣಮನೆ ಕೈಯೆಡೆಗುಡುವಂತೆನ್ನ ಕೈಯೊಳ್ಕೊಟ್ಟು ಮದೀಯ ಪ್ರಾಣವಲ್ಲಭನಂ ... ಅಱಸೆಂದಟ್ಟಿದೊಡೆ ಬಂದಿದನಿಲ್ಲಿ ಪಸರಿಸಿ ಪಾಟ್ವ[ಟ್ವ]ಕ್ಕೆ ಪಟ್ಟಿರ್ದೆಂ (ಅಡಿಪು. ೪-೨೧ ಪ). [ಪಾಟ್ವಕ್ಕೆ+ಪಡು$_1$]

ಪಾಟ್ವಸಿಱ್, ಪಾಳ್ವಸಿಱ್ (ನಾ). ಬರಿಹೊಟ್ಟೆ ; ಹಾಳುಹೊಟ್ಟೆ : ಪಾಟ್ವಸಿಱ್ಕೊಳ್ ಸಾಸವೆಯಂ ಕುಡಿದರಂತೆ ಮಱುಗಿ (ರರ್ಮಾಮ್ಯ. ೦೦-೦೯೨). **ಪಾಳ್ವಸಿಱ್** : ಕೆಕ್ಕಳಗಣ್ ಕೆದಱಿದ ಕೆಂಗೂದಲ್ ಮೊಕ್ಕ ನೊಸಲ್ ನಿಡುಕುಂಗೋಣ್ ಬಿಡುಬಾಯಕ್ಕುಳಿಸಿದ ಪಾಳ್ವಸಿಱ್ (ಸಿಡುಕಾ. ೭-೨೬). [ಪಾಟ್+ಬಸಿಱ್]

ಪಾಟ್ವಾವಿ, ಪಾಟುಬಾವಿ, ಪಾಟ್ಬಾವಿ, ಹಾಳುಬಾವಿ, ಹಾಳುಭಾವಿ (ನಾ). ಬಳಕೆಯಿಲ್ಲದೆ ಹಾಳು ಬಿದ್ದ ಬಾವಿ ; ನಿರುಪಯುಕ್ತವಾದ ಬಾವಿ: ತದ್ದ್ವಿಜಂ ಜಳಕುಟಪ್ರಹಾರದಿಂ ಕಾಲ್ಮುಱಿದು ಪುಟಿತು ಪಾಟ್ವಾವಿಯೊಳ್ ಪೊಕ್ಕು ಸತ್ತು (ಸಾವುಂಪು. ೩೫೦). **ಪಾಟುಬಾವಿ** : ಸಲೆ ಸೋಲ್ತು ಪಾಟುಬಾವಿಯ ಜಲಮಂ ತೆಗೆಯಲ್ಕೆ ಮಕರಕೇತನನಿಂದಂಕುರಿಸಿಕ್ಕಿದ ನೀಲದ ಬಟಲನನುಕರಿಸಿತ್ತು ಕಾಂತೆಯೋರ್ವಳ ನಯನಂ (ರರ್ಮಾಮ್ಯ. ೭-೨೦೮). **ಪಾಟ್ಬಾವಿ** : ಬೀಯದಂ ಭರದೆ ನೋಡುತ್ತೊಂದು ಪಾಟ್ಬಾವಿಯೊಳ್ ಕೆಡೆದಾಗಳ್ ಮರಪಟ್ಟು ಮೂರ್ಛೆ ವಡೆದಿರ್ದಂ (ರಸರ. ೪-೨೨೬). **ಹಾಳುಬಾವಿ** : ಮುಬಾರಕನು ಕಾಣದೆ ಒಂದು ಹಾಳುಬಾವಿಯಲ್ಲಿ ಬಿದನು (ಬಂಕಿಮ. ೨೨೦); ಹಳಿಯೇರಿ ಇಳು

ಕಲು ಇಳಿದರೆ ತೀರಿತು, ಅಲ್ಲಿ ಹಾಳುಬಾವಿಯಿದೆ (ಹೊಸಕ್ಷ. ೦೬೦). **ಹಾಳುಭಾವಿ** : ಹುಟ್ಟುಕುರುಡ ಹಾಳುಭಾವೀಲಿ ಬಿದ್ದ (ಗಾಪ).

[ಪಾಳ್ + ಬಾವಿ]

-ಪಿ (ಪ್ರ). ಒಂದು ಕೃದಂತ ಭಾವನಾಮ ಪ್ರತ್ಯಯ : ಕನ್ನಡದಲ್ಲಿ 'ಪಿ' ಪ್ರತ್ಯಯವೆಂದು ಹೇಳುವ ಶಬ್ದಗಳೆಂದರೆ ನೋಂಪಿ ಮತ್ತು ಕಲ್ಪಿ ಎಂಬುವು ಎರಡು ಮಾತ್ರ (ಸಂಶಾಸ. ೨೦೦). 'ಕಲ್ಪಿ'. 'ಕೇಳ್ಪಿ' ಪರಾ.

ಪಿಂ 'ಪಿನ್' ನೋ.

ಪಿಂಕಣಿಸು 'ಪೆಂಗಣಿಸು' ನೋ.

ಪಿಂಕುಳಿ 'ಪೆಂಕುಳಿ' ನೋ.

ಪಿಂಗ (ಗು). ೧. ಕಂದುಬಣ್ಣದಿಂದ ಕೂಡಿದ ; ಕಂದುಬಣ್ಣದ : ಪಿಂಗ ಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರವೊಡಂಬಡೆ ನೋಟಕರ್ಕಳನಾ ತಪಸ್ವಿ ಮರುಳ್ಚಿದಂ (ಶಂಪಶಾ. ೬-೬). (ನಾ). ೨. ಕಂದುಬಣ್ಣ : ಕಪಿಲವರ್ಣ : "ಪಿಂಗಃ. ಪಿಶಂಗಃ—ಈ ೨ ಕಪಿಲವರ್ಣಂ" (ಹಲಾಯು. ೦೨೦-೫೦). ೩. ಒಂದು ಬಗೆಯ ಪಕ್ಷಿ ; ಕಾಡುಪಾರಿವಾಳ : "ಪಿಂಗಂ ಬೆಳುವಮೆನಿಸಿಕ್ಕು" (ಮಂಗರಾ. ೫೨-೦೦). [ಸಂ.]

ಪಿಂಗಚಕ್ಷು (ನಾ). ೧. ಏಡಿ ; ನಳ್ಳಿ. ೨. ಕೆಂಗಣ್ಣುಳ್ಳವನು : ದುರ್ಯೋಧನ : ಕರ್ಣ ಭೀಷ್ಮಾದ್ಭುತಧ್ವಾನಕಠೋರಂ ಪಿಂಗಚಕ್ಷುರ್ಬಲ ಮನಮಮ ಪೋಲ್ತೊಪ್ಪುತಿರ್ದತ್ತರಣ್ಯಂ (ಶಪಸಂ. ೩-೨೯).

[ಸಂ. ಪಿಂಗಚಕ್ಷುಸ್]

ಪಿಂಗಟ (ನಾ). = ಪಿಂಗ ೨. : ಕ್ರಮವಾಗಿ ಕಿತ್ತಳೇಬಣ್ಣ, ಅರಿಶಿಣ, ಹಸುರು ಪಿಂಗಟ, ನೀಲ . . . ಈ ಪ್ರಕಾರ ಬಣ್ಣಗಳ ಪಟ್ಟಿಗಳು ಕಾಣಿಸುವವು (ಮುಂಬಯಿ. ೬-೯೯). [←ಮರಾ. ಪಿಂಗಟ]

ಪಿಂಗಡಲು (ನಾ). ಪಶ್ಚಿಮದಿಕ್ಕಿಗೆ ಇರುವ ಸಮುದ್ರ : ಪಿನ್ನೇಸಱು ಪಿಂಗಡಲೊಳಗಗುಳದ ಮುನ್ನಂ . . . ಉತ್ತಮಾಂಗವನಾಗಸದ ಅತ್ತ ಹಾಱುವ ತೆಱದಿಂದೆಚ್ಚನು (ವೇಮಸಂ. ೨೬-೦೬೬) ; ಪ್ರಿಯಮಿತ್ರಂ ಪಿಂಗಡಲ ಮಡುವಿನೊಳ್ ಲಯಮಾದುದನಱಿದುಂ ಸುಖಿಸುವುದಿದು ನಯಮೇ (ಜಯಕಾ. ೦೩-೬೦). [ಪಿಂ (<ಪಿನ್) + ಕಡಲು (<ಕಡಲ್$_2$)]

ಪಿಂಗಡೆ. ಹಿಂಗಡೆ$_1$ (ನಾ). ೧. ಹಿಂಭಾಗ ; ಹಿಂದುಗಡೆ : "ಪಿಂತಿಲ್ ಪೆಱಗು ಪೆಡಮೆನಲ್ ಪಿಂಗಡೆ" (ಕಬ್ಬಿಕೈ. ೯೫) ; ಪಿಂಗಡೆಯೊಳಗೆ ಜತನಮಿರು ಮಾಚಿಭಟ್ಟ (ಆರಾಸ. ೦-೩-೦೫). ೨. ಪೂರ್ವಕಾಲ ; ಹಿಂದಿನ ಕಾಲ : ಒಡೆಯ ಪೇಳ್ನಿನಗೇನು ದುಗುಡವೆಂದೆನಲು ಪಿಂಗಡೆಯ ಸುದ್ದಿಯನುಸಿರಿದನು (ಮೋಹಸ. ೩೦-೦೭). ಹಿಂಗಡೆ$_1$: ೧. "ಪೆಡಮೆಟ್ಟು, ಪೆಱಗು, ಪೆಱತು, ಪಿಂತಿಲ್—ಈ ೪ ಹಿಂ[ಶಾಕಾಂ. ಪಿಂ]ಗಡೆಗೆ ಪೆಸರ್" (ಕಶಸಾ. ೬೫-೯೫೫) ; ಸಂಗಡಿಸಿ ನಲಿನಲಿದು ನಡೆವ ತುರಂಗ ಕರಿಘಟೆಗಳ ವಿಕೀರ್ಣದ ಹಿಂಗಡೆಯ ಬಿಜ್ಜಳಮಹೀಶನ ಮುಂಗಡೆಯೊಳೊಪ್ಪಿ (ಬಸಪು. ೩-೯೯) ; ಭೂವರನ ಹಿಂಗಡೆಯೆ ಪರಮಸಂತೋಷದೆ ನಡೆದು ಬರುವ ಬಲುಸಿರಿಯ ಸಂಭ್ರಮವನೇನೆಂಬೆ (ಕಂಪಪಿ. ೨೫-೫) ; ಕಳ್ಳನು ಅವರನ್ನು ಮನೆಯ ಹಿಂಗಡೆಯಿದ್ದ . . . ಹಳ್ಳಕ್ಕೆ ಕರೆದೊಯ್ದು ಅಲ್ಲಿದ್ದ ಒಂದು ಕಲ್ಲನ್ನೆತ್ತಿದನು (ಮಹಸ. ೦೦). 'ಮುಂಗಡೆ' ಪರಾ.

[ಪಿಂ (<ಪಿನ್) + ಕಡೆ$_3$]

ಪಿಂಗತೆ, ಹಿಂಗತೆ (ನಾ). ಹಿಂದೆ ನಡೆದ ಕತೆ ; ಹಿಂದಿನ ಕತೆ : ಇಂತು ಪಿಂಗತೆಗಳಂ ಪೇಳ್ದುದಱಿನೇನಾದುದು (ಆರಾಸ. ೦-೦೦-೨೦). ಹಿಂಗತೆ : ಇದು ಮೂಲದಲ್ಲಿ ಆರಂಭದಲ್ಲಿಯೇ ಬಂದಿದೆ. ನಾಗಚಂದ್ರನಲ್ಲಿ ಒಂದು ಸಂದರ್ಭದಲ್ಲಿ ಹಿಂಗತೆಯಾಗಿ ಹೇಳಲಾಗಿದೆ (ಕಸಾಸ. ೦೨೭).

[ಪಿಂ (<ಪಿನ್) + ಕತೆ]

ಪಿಂಗದಾಲ್ಚಿನ್ನಿ (ನಾ). ದಾಲ್ಚಿನ್ನಿಯಲ್ಲಿ ಒಂದು ಬಗೆ : ಮಟ್ಟದಾಲ್ಚಿನ್ನಿ, ಪಿಂಗದಾಲ್ಚಿನ್ನಿ (ಸ್ಕೃತಿಗಿ. ೨೦-೩೯೦). [ಪಿಂಗ + ದಾಲ್ಚಿನ್ನಿ (<ದಾಲಚಿನ್ನಿ)]

ಪಿಂಗಲ, ಪಿಂಗಳ$_1$ (ಗು). ೧. ಕಂದುಬಣ್ಣದಿಂದ ಕೂಡಿದ ; ಕಂದುಬಣ್ಣದ : ಪಿಂಗಲ ಕಣ್ಣುಳ್ಳಾತನು ಧನಹೀನನು (ಸಾಮುಂ. ೭-೬) ; ಪಿಂಗಲ ಜಟಾಜೂಟಕೂಟಂ, ತ್ರಿಣೇತ್ರಂ (ಶ್ರೀರಾಮಾ. ೪೭-೫೩೮). (ನಾ). ೨. ಕಂದುಬಣ್ಣ. ೩. ಸೂರ್ಯನ ಸೇವಕರಲ್ಲಿ ಒಬ್ಬ : ತಳೆಯೆ ಮುಚ್ಚಳಮಂ ಪುರೋಗತ ಫಲಿತ ದೃಶ್ಯವ ಕಾಣಿಸುತ ವಿಧಿಯುಳಿದು ಮಾಠರ ಪಿಂಗಲರೊಳಿಷ್ಟತೆಯನಾಡುವನೆ (ವಿವೇಶ. ೦೦-೩೧). ೪. ಸಂಸ್ಕೃತ ಛಂದಶ್ಶಾಸ್ತ್ರಕಾರರಲ್ಲಿ ಪ್ರಸಿದ್ಧನಾದ ಒಬ್ಬನು : ಇಂದುಧರನುಮೆಗೆ ಪೇಟ್ದಾ ಛಂದಂ ಪಿಂಗಲ[ಶಾಕಾಂ. ೪]ನಿನವನಿಯೊಳ್ ಪರಪಿದೊಡಾ ಛಂದೋಂಬುರಾಶಿಯೊಳ್ ಮೊಗೆತಂದದನಾತ್ಮೀಯಸತಿಗೆ ನಾಕಿಗನುಸಿರ್ದಂ (ರುದೋಂಬು. ೦-೩೦). ೫. ಒಂದು ಬಗೆಯ ಸಣ್ಣ ಜಾತಿಯ ಗೂಬೆ. ೬. ಅರುವತ್ತು ಸಂವತ್ಸರಗಳಲ್ಲಿ ಐವತ್ತೊಂದನೆಯದು. ೭. ಒಂದು ಬಗೆಯ ಹಾವು. ೮. [ಜೈನ] ನವನಿಧಿಗಳಲ್ಲಿ ಒಂದು ; ೯ ಇದು ಮಕುಟ, ಹಾರ, ಕೇಯೂರ, ಕುಂಡಲ ಮುಂತಾದ ಭೂಷಣಗಳನ್ನು ಕೊಡುತ್ತದೆ : ಸ್ತ್ರೀಪುರುಷಯೋಗ್ಯಮಪ್ಪ ನಾನಾವಿಧಾಭರಣಂಗಳಂ ಕುಡುವ ಪಿಂಗಲನಿಧಿಯುಂ (ಶಾಸ್ತ್ರಸೀ. ೦೯-೯). ಪಿಂಗಳ$_1$: ೧. ನೀಲಾಂಬುದ ಶ್ಯಾಮನುಂ ಕನಕಪಿಂಗಳಜಟಾಬಂಧಕಳಾಪನುಂ . . . ಮೃಗತ್ವಕ್ಪರಿಧಾನನು ಮಾಗಿ ವ್ಯಾಸಧಟ್ಟಾರಕಂ ಪುಟ್ಟುವುದುಂ (ಶಂಪಶಾ. ೦-೬೯ ಪ) ; ಸೋಮ ಸೋಮವಿಭೂಷ . . . ಗುಣಗಾತ್ರಗಾತ್ರ ಪಿಂಗಳಜಟಾರಾಮರಾಮ (ಹಸಕಾ. ೦-೩) ; ಶೋಭಾಕರಂ ದುರಿತಭೀಕರಂ ಪಿಂಗಳಜಟಾಭಾರನಹಿ ರಾಜಹಾರಂ (ಉದ್ಯಸೇ. ೭-೦೩) ; ಇಹುದತುಳಪಿಂಗಳಜಟಾಪಟಲನಮಲಪದ ಪದ್ಮಸದ್ಭೃಂಗಕುಂತಳದೇಶವು (ಶಾಶಸ. ೦-೩೦). ೬. ಪಿಂಗಳ ಸಂವತ್ಸರದ ಭಾದ್ರಪದ [ಮಾಸ ಬ್ರಹ] ಸ್ವತಿವಾರ ವ್ಯತಿಪಾತವದ್ಯಾಷ್ಟಮಿಯಲು (ಕೊಲ್ಹಾಣಾ. ೭-೯೯; 1137) ; ಸ್ವಸ್ತಿಶಕವರ್ಷಂ 1179ನೆಯ ಪಿಂಗಳ ಸಂವತ್ಸರದ ಚೈತ್ರಸು[ಶು]ದ್ಧ ೭ ಗುರುವಾರದಲು (ಕೊಲ್ಹಾಣಾ ೨೨-೬೩; 1257). ೮. ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾ ಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಆವಿಪು. ೦೫-೩ ಪ) ; ಕಾಳ ಮಹಾ ಕಾಳ ಪಾಂಡುಕ ಪಿಂಗಳ ನೈಸರ್ಪ ಪದ್ಮ ಮಾಣವಕ ಶಂಖ ಸರ್ವರತ್ನ ನವನಿಧಿ ಪರಿಪೂರ್ಣಮುಂ (ಆವಿಪು. ೭-೨೦ ಪ) ; ಹಾರ ಹೀರಾವಳಿ ಮಕುಟ ಕುಂಡಲ ಕೇಯೂರಾದಿಯ ಭೂಷಣಗಳ ಮೇರೆಯಿಲ್ಲದೆ ಕೊಡುತಿಹ ಪಿಂಗಳನಿಧಿ ರಾರಾಜಿಸುತಿಹುದು (ಕಂಪ್ರಸಾಂ. ೦೯-೮೬). ೯. ತಿಳಿಯಾದ ಕೆಂಪು ಬಣ್ಣ ; ನಸುಗೆಂಪು : "ಹರಿಃ (ಕ್ರಮಂ), ಕದ್ರುಃ, ಕಡಾರಃ ಪಿಂಗಳಃ — ಈ೪ ನಸುಗೆಂಪು" (ಹಲಾಯು. ೦೨೦-೫೦). ೧೦. ಹಳದಿ ಬಣ್ಣ ; ಹೊಂಬಣ್ಣ : ಪಿಂಗಳಮಾದ ನೆಲ್ಲ ತೆನೆಯಂ ನಸುಗರ್ಚಿದ ರಕ್ತ ಚಂಚು ಪಕ್ಷಂಗಳ ಶಾಡ್ವಲಚ್ಛವಿ ಮನಂಗೊಳೆ ಪಾಱುವ ಕೀರಮಾಲೆ . . . ಪೊನ್ನ ಮಾಣಿಕದ ಪಚ್ಚೆಯ ತೋರಣದಂತೆ ರಂಜಿಕುಂ (ಜಗವಿ. ೪-೬೬).

[ಸಂ.]

ಪಿಂಗಲಿ, ಪಿಂಗಳಿ (ನಾ). ೧. ಒಂದು ಬಗೆಯ ಗೂಬೆ : "ಕಾಕಾರಿ ಕೌತಿ ಕಾಖ್ಯಮುಲೂಕಂ ಪಿಂಗಲಿ ನಿಶಾಟನಂ ತಾನಕ್ಕುಂ" (ಪಸ್ತುಕೋ. ೪೨-೦೫). ೨. ಶಕುನದ ಹಕ್ಕಿ ; ಹಾಲಕ್ಕಿ : "ಶಕುಂತಃ, ಭಾಸಃ— ಈ ೨ ಪಿಂಗಲಿ" (ಹಲಾಯು. ೪೦-೯೯) ; ಪಿಂಗಲಿ. . .ಗೂಗೆಯಾದಿಯಾದ ಖಗಂ ರಾಜಾಂಗಣದೊಳ್ ಚರಿಸುವೊಡೆ ಸರಂಗೆಯ್ವೊಡೆ ತಡೆಯದಾ ಗೃಹಂ ಪಾಟಕ್ಕು (ಶೋಕೋತ. ೪-೬೩) ; ಉಜ್ವಲ ಶಾಸ್ತ್ರಸಿದ್ಧ ಶುಭಸೂಚನೆಯ ಜೋಡು ಪಿಂಗಲಿಗಳುಱ ತೋಱ ನಡೆದಾ ನೃಪಂ ಪೊಱಬೀಡ ಬಿಟ್ಟನಾ ಕಾಲಂ

ದಲ್ಲಿ (ಚೋಕು. ೦೩-೧). **ಪಿಂಗಳಿ** : ೧. "ಕಾಕಾರಿ ಪಿಂಗಳಿ ನಿಘಾಟನಂ ಕೌಕಮುಲೂಕಮೆವೆ ಗೂಗೆಯಕ್ಕುಂ" (ಪುಂಗಾ. ೫೫-೪).

[<ಸಂ. ಪಿಂಗಲಾ]

ಪಿಂಗಲೆ, ಪಿಂಗಳೆ (ನಾ). ೧. ಒಂದು ಬಗೆಯ ಗೂಬೆ. ೨. ದಕ್ಷಿಣ ದಿಕ್ಕಿನ ಹೆಣ್ಣಾನೆ; ಕುಮುದ ದಿಗ್ಗಜದ ಪತ್ನಿ. ೩. ಶರೀರದ ಒಂದು ನಾಡಿ. **ಪಿಂಗಳೆ** : ೨. "ದ್ವಿವೆಗಳಭ್ರಮುಂ ಕಪಿಲೆ ಪಿಂಗಳೆ ಪೆಱಾವ್ಯಸರ್ನ್ನ್ವುರದಂತಿಯದಂಜನಾಂಜನಾವತಿ ಸಿತದ್ವಿವೆಯೆನಲು ಕ್ರಮದಿ" (ಪುಂಗಣಾ. ೦೪-೫೦) : ಅಭ್ರವುಂ ಕಪಿಲೆ ಪಿಂಗಳೆ . . . ಅಂಜನಾವತಿಯರೆಂಬ ತಮ್ಮ ತಮ್ಮ ಸ್ತ್ರೀಗಜಗಳೊಡಗೂಡಿ ಕ್ರಮದಿಂ ಭೂಮಿಯಂ ವಹಿಸಿರ್ದವು (ಪಪೀಕ. ೦೬೭). ೩. ಇಡಾ ಪಿಂಗಳಾ ಸುಷುಮ್ನಾನಾಳ ವೆಂದು ಅಱಿದಹೆನೆಂದರೆ ಕೂಡಲಸಂಗಮದೇವ ಮೂಗ ಕೊಯ್ಯುದೆ ಮಣ್ಣಾನೆ (ಪಪಪ. ೬೯೪); ಇಡೆ ಪಿಂಗಳೆಗಳೆನಿವೆರಡು ನಾಡಿಯು ತುದಿ ಯೊಳಾಡುತ್ತಲಿರ್ದು (ಕೈಪಪ.೪-೫-೩); ನೆಟ್ಟನಿರುತ ಸುಷುಮ್ನ ನಾಡಿಯ ಮುಟ್ಟು ಸವ್ಯದ ಭಾಗದೊಳು ತಾ ನಟ್ಟಿಹುದು ಈಡಾನಾಡಿ ದಕ್ಷಿಣದೊಳ್ ಪಿಂಗಳೆಯುಂ (ಗಗಣಾ. ೪-೦೪). ೪. ಒಂದು ಬಗೆಯ ಮೃಗ.—**ಪ್ರಾಣಿ** : ಪಿಂಗಳೆ ಗೋಣಿ ಧಲ್ಲ ಶಶ ಜಂಬುಕ ವಾನರ ಹುಂಡುರೀಕ . . . ವ್ಯಗೇಂದ್ರಮುಖ್ಯಮೃಗಸಂಚಯದುಂಚಗಾಡಿಯಿಂ ಕಂಗೊಳಿಪತ್ತು ತುಂಗಬಹುಶೃಂಗವಿರಾಜಿತವಿಂಧ್ಯಭೂಧರಂ (ಕಾಪ್ಪ. ೩-೪೩).

[ಸಂ. ಪಿಂಗಲಾ]

ಪಿಂಗಳ$_1$ 'ಪಿಂಗಲ' ನೋ.

ಪಿಂಗಳ$_2$ (ನಾ). ಶರೀರದ ಒಂದು ನಾಡಿ : ಈಡಾ ಪಿಂಗಳ ಸುಷುಮ್ನ ನಾಳ ಮಧ್ಯದ ಕೂಗ ಕಂಡು ಕೂಗಿದೆ (ಅಪಪಂ. ೦೫೨-೬೯); ನಾಸಿಕಾರಂಧ್ರದಿಂ ಇಡೆ ಪಿಂಗಳೆಂದಿರಡುನಾಡಿಗಳಿಂದೊಡಗೂಡಿದೆರಡುನಾಳಗಳಿಹವು (ಪಪೀಕ. ೦೦೭); ಈಡ ಪಿಂಗಳ ಎರಡು ಜೋಡಿಸಿ ಸುಷುಮ್ನೆ ನೋಡಿ ಅರಿದೆ ಪೆವಲು ಕೊಯ್ಯನು ಮೂಗು ಕೂಡಲಸಂಗಮದೇವಯ್ಯಮ (ಶಿಕೃಶಿ. ೬೪-೩). 'ಪಿಂಗಲೆ' ಪರಾ. [ಸಂ. ಪಿಂಗಲಾ]

ಪಿಂಗಳದೃತ (ನಾ). ಈಶ್ವರನಿಗೆ ಸವಧಾನನಾದವನು; ಕುಬೇರ : ಪಿಂಗಳದೃತವ ವಿಧಿಗಳನು... ಕೊಂಡೊಘ್ಘುಸವನು (ತಣಾಗ. ೦೦-೬೯-೩).

[ಸಂ. ಪಿಂಗಲದೃಶ್]

ಪಿಂಗಳನಾಡಿ (ನಾ). = ಪಿಂಗಳ$_2$: ದಕ್ಷಿಣಭಾಗದ ಪಿಂಗಳನಾಡಿಯೇ ಸೂರ್ಯನಾಡಿಯೆಂದು ಗಂಗಾನದಿಯೆಂದು ವೇಳಲ್ಪಡುವುದು (ಅಪಂಪೇ. ೫೦೯-೫೫); ಗಂಗಾನಾಡಿ, ಪಿಂಗಳನಾಡಿ, ಸೂರ್ಯನಾಡಿ ಈ ಮೂರು ಹೆಸರು ಬಲಮೂಗಿನ ಉಸಿರಿಗೆ ಒಪ್ಪುವಂಥವು (ಪಪ್ಪಾ. ೦೪೯).

[ಪಿಂಗಳ$_2$+ನಾಡಿ$_1$]

ಪಿಂಗಳನೇತ್ರ (ನಾ). ೧. ಕಂದುಬಣ್ಣದ ಕಣ್ಣು. ೨. "ಶಿವ" (ಪಪಪ.ಕೋಪ): ಪಿಂಗಳನೇತ್ರನನೆಂತುಂ ಪಿಂಗದೆ ಪೂಜಿಸುತಮಿರ್ಪ ಮಾಹೇಶ್ವರಮಂ ಲಿಂಗಿಯುಮಂ ಶಿವಭಕ್ತನುಮಂ ಗಹನಂಗೆಯ್ಯರೆವ್ಮ ಸವಯಿನಗೆವ್ಮ್ (ಪಪಪ. ೪-೭೮). [ಪಿಂಗಳ$_1$(=ಪಿಂಗಲ)+ನೇತ್ರ]

ಪಿಂಗಳಾಕ್ಷ (ನಾ). ೧. ಕೆಂಗಣ್ಣು ಉಳ್ಳುದು : ಅಡೆಯಂ ಕೋದೆತ್ತುಲಂ ಮಾರ್ದನಿಗೆ ಮಸಗುತುಂ . . . ಬಂದುದು ಮದವಿದಳಕ್ಪಿಂಗಳಾಕ್ಷಂ ಮಹೋಕ್ಷಂ (ಅಂಣಾಪ. ೩-೩೩). ೨. ಶಿವ.

[ಸಂ. ಪಿಂಗಲಾಕ್ಷ]

ಪಿಂಗಳಿ 'ಪಿಂಗಲಿ' ನೋ.

ಪಿಂಗಳಿಕ (ನಾ). ೧. ಒಂದು ಬಗೆಯ ಕೊಕ್ಕರೆ : ಕಳವಿಂಕ ಪಿಂಗಳಿಕ ತಾಳ್ವವರಿಗಗ (ಪುಪ್ಪಾಂಗ. ೦೦-೩). ೨. ಒಂದು ಬಗೆಯ ಗೂಬೆ.

[ಸಂ. ಪಿಂಗಲಿಕಾ]

ಪಿಂಗಳಿಸು 'ಪೆಂಗಣಿಸು' ನೋ.

ಪಿಂಗಳೆ 'ಪಿಂಗಲೆ' ನೋ.

ಪಿಂಗಾಕ್ಷ (ಗು). ೧. ಕೆಂಪು ಬಣ್ಣದ ಕಣ್ಣುಳ್ಳ. (ನಾ). ೨. ಕೆಂಪು ಬಣ್ಣದ ಕಣ್ಣುಳ್ಳ ಒಂದು ಬಗೆಯ ಹಕ್ಕಿ : "ಪಿಂಗಾಕ್ಷವೆನೆ ಕಣದಂ" (ಪುಂಗಾ. ೫೨-೯). ೩. ಹುಲಿ : "ಪಿಂಗಾಕ್ಷ—ದೆಕ್ಕಿನ ಕಣ್ಣಿನ ಹಾಗೆ ಕಣ್ಣುಳ್ಳದ್ದು ; ಹುಲಿ" (ಗಂಗಾಸು. ೨೦೩). ೪. ಕೋತಿ. ೫.=ಪಿಂಗ ಚಕ್ಷು ೨ : ಪೊಕ್ಕುಡಿವೆಂ ಪಿಂಗಾಕ್ಷನೂರುದ್ಯವನನುರುಗದಾಘಾತದಿಂ ನುಚ್ಚುನೂರಾಗೊಡೆವೆಂ . . . ಮಕುಟವಂ (ಪಂಪಭಾ. ೭-೦೩); ಪಿಂಗಾಕ್ಷ ನತಿವಿಷಮವರುಷವೇಷಾವೇಶಧರನಾಗಿ (ಗಣಾಸು. ೩-೩೪೪). ೬. ಶಿವ : ಪಿಂಗಾಕ್ಷಂ ನಿಜಕಿಂಕರಾಗ್ನಿಬಲತೇಜೋದೇಗದಿಂ . . . ಕೋಪಾಟೋಪಮಂ ತಾಳ್ದಿದಂ (ಪಗೂ. ೦೪-೦೪). [ಸಂ.]

ಪಿಂಗಾಣಿ (ನಾ). ೧. ಒಂದು ಬಗೆಯ ಬಿಳಿಯ ಜೇಡಿಮಣ್ಣು ; ಚೀನಿ ಮಣ್ಣು(ಉಕ): ಚೀನರು ಪಿಂಗಾಣಿಯನ್ನು (Porcelain) ಸುಡಲು ಕಲ್ಲಿದ್ದಿಲನ್ನು ಉಪಯೋಗಿಸುತ್ತಿದ್ದರು (ಶಿಲ್ಪಾ.೦೫೫); ಪಿಂಗಾಣಿಯ ಫಲಕಗಳ ಮೇಲೆ ಕೆತ್ತನೆಮಾಡಿ ವ್ಯವಹರಿಸುವುದು ಬಳಕೆಗೆ ಬಂದಿತು (ಪುದ್ರಳ. ೬). ೨. ಬಿಳಿಯ ಜೇಡಿಮಣ್ಣಿನಿಂದ ಮಾಡಿದ ಪಾತ್ರೆ ಮುಂತಾದ ವಸ್ತುಗಳು : ಗಂಗೋದಕ ಹೂಜೆ ಘನರತ್ನಕೀಲಿತ ಪಿಂಗಾಣಿ ಗಂಧಲರ್ದಟ್ಟಿ . . . ಹೊಳಿವ ಬಜ್ಜಣಿಗೆಯು ಹೆಂಗಳು ತಂದಿರಿಸಿದರು (ಪೋಚಕ. ೦೬-೫೮); ಕೊಂಡು ಪಿಂಗಾಣಿಯನೆಸೆಯುತ್ತ ದೂರಕೆ ಮತ್ತೆ ಕೊಂಡುಕೊಮಿಕ್ಕ ಹಣಕೆ (ಪಂಚಾಕ. ೫೬೨-೧೭); ರೇಶಿಮೆ, ಪಿಂಗಾಣಿ, ಚಾ ಈ ಮೂರು ವಸ್ತುಗಳ ಹೊರತು ಚೀನರ ಹತ್ತಿರ ವ್ಯಾಪಾರದ ಒಡವೆ ಬೇರಾವುದೂ ಇದ್ದಿರಲಿಲ್ಲ (ಪಪಪಂ.೦೦). [← ಪಾರ. ಪಿಂಗಾಲ್, ಪಿಂಡಾನ್]

ಪಿಂಗಾರ, ಹಿಂಗಾರ (ನಾ). (ಕರಾ) ಅರ್ಧ ಬಿರಿದ ಅಡಕೆ ಹೂವಿನ ಕೋಶ ; ಹೊಂಬಾಳೆ : ಒಂದೆರಡು ಕಂಗುಗಳಲ್ಲಿ ಪಿಂಗಾರ ಒಡೆದು ಅಕ್ಕಿಯ ಕಣಗಳಂತೆ ಅದರ ಹುಸಿ ಹೂಗಳು ನೆಲಕ್ಕೆ ಬಿದ್ದಿದ್ದುವು (ಪಾಗಿ. ೦೫೫) ; ಅಲ್ಲಿನ ಗಡುಗಳು ಪಿಂಗಾರ, ಮೊಗಡ, ಕಾಯಡಕೆ, ಮಾಲೆ ಕಾಯಿ, ಪಣ್ಣಡಕೆ, ಗೋಟಡಕೆ, ಕರಿಗೋಟುಗಳನ್ನು ಉಳ್ಳವುಗಳಾಗಿದ್ದುವು (ಪಾಪಾಗ. ೫೫೬). **ಹಿಂಗಾರ** : ಅಡಕೆಯ ಹೂವಿನ ಹಿಂಗಾರದ ತೇರ್ :—ಕೆಂಗಿನ ಹೂವಿನ ಬಂಗಾರದ ತೇರ್ . . . ಸುತ್ತುತ್ತಿರೆವಾ ಮುಕ್ತಿನ ತೇರ್ ಬಂತದೊ, ಬಂತದೊ, ಬಂತದೊ, ವಾರ್ ! (ಅಗ್ಗಸಂ. ೩೫-೫೩) ; ಕೈಯಲ್ಲಿ ಅಡಕೆಯ ಹಿಂಗಾರ ಹಿಡಿದು ಅವಳು ನಿಮಿತ್ತ ಹೇಳುತ್ತಿದ್ದಳು (ಕ್ರಕೃ. ೯೯) ; ಹಿಂಗಾರ ಇಲ್ಲದೆ ಶೃಂಗಾರ ಆಗದೋ ? (ಗಾಡ).

[ದೇ.‖ ತುಳು. ಪಿಂಗರ, ಪಿಂಗರೆ, ಪಿಂಗಾರ]

ಪಿಂಗಾಲ್, ಹಿಂಗಾಲ್, ಹಿಂಗಾಲು (ನಾ). ೧. ಪಾದದ ಹಿಂಭಾಗ ; ಹಿಮ್ಮಡಿ : ಸೂತಿಕಾಸದನಮಂ ಪೊಕ್ಕು ದೇವಕಿಯ ಮುಂದೆ ಪಟ್ಟರ್ದ ಶಿಶುವಿನ ಪಿಂಗಾಲಂ ಪಿಡಿದುಕೊಂಡು ನಡೆತಂದು (ಪಗೂ. ೬-೦೩ ಪ). ೨. ನಾಲ್ಕುಕಾಲುಗಳುಳ್ಳ ಪ್ರಾಣಿಗಳ ಹಿಂಭಾಗದ ಕಾಲುಗಳು : ನಿಮಿರ್ದಂಗಂ ನೀಳ್ದ ಮುಂಗಾಲುಮಿಡುಗಿ ನಡೆವ ಪಿಂಗಾಲ್ ಚಲದ್ವಾಲ ದಂಡಂ . . . ಕೂಡೆ ತನ್ನೊಳ್ ಬಗೆದಳವಿಗೆ ಮುಂಕೊಂಡು ಧೀಂಕಿಟ್ಟು ಪಾಯುತ್ಪವುರುತ್ಕೋಡುತ್ತೆ ಪೀಱುತ್ಕಡಸ ಕೆಡಪಿತೊಂದೇಣನಂ ಚಿತ್ರ ಕಾಯಂ (ಗಂಗಾ. ೦-೯೫) ; ಬಿಲ್ಲಂಬನೊಂದಾಗಿ ಪಿಡಿದೋಡಿ ವೊಲನ ಪಿಂಗಾಲ್ವಿಡಿದು ಶಿರುಪಿಟ್ಟು . . . ಕೆಡಪಿದನೋರ್ವ ಬಲವಂತ ಬೇಡನಾಗಳು (ಚಾಪಿಪ. ೦೭-೭೩) ; ಪಿಂಗಾಲ್ಗಳಂ ಕೀಳ್ದು ದಾಂಟುವ ಪೊಜಕಾಲ್ಗಳ್ಳ ಮುರಳಿ ಮೆಟ್ಟುವ . . . ಸುತ್ತೇಱುವ ಬಿತ್ತರಂಬಡೆದ ವಾಹಳಿತನದೊಳ್ (ಪಣಕೇ. ೩-೦೦,೪). **ಹಿಂಗಾಲ್** : ೨. ಮುಂಗಾಲು ಮಡಿದು ಹಿಂಗಾಲ್ನೀಡಿ ರಥವ ತುರಂಗಮಾವಳಿಗಳು ತೆಗೆದುವು (ಪಗಪ. ೫೪-೫೯). **ಹಿಂಗಾಲು** : ೧. ಮೇಲುವಾಯಾ ರೋಹಕರ ಹಿಂಗಾಲ ಹಿಡಿದೀಡಾಡಿ ರಿಪುಗಜಾಳಿ

ದೊಳಗೊಂದಾನೆಯನು ತಾನೇಱಿ ಬೊಪ್ಪಿಱಿದು (ಭಾಷ್ಯ. ೨-೦೭); ತೊಂತರದೊಡೆಗಳ . . . ಹೇರುರದ ಹಿಂಗಾಲು ಬೆರಡುಹಾಹೆಗಳಹಂಕಾರ ದಂಬಿನ ದಡಿಗರಕ್ಕಸರ್ ಕೊಂಟಾನುಕೋಟಿಗಳದೇನೆಂಬೆನು (ಪಾಪು. ೪೭-೦೪). ೨. ಸಿಳಿ ಹರಹಿತು ಕರಿಗಳನು ನೇಪಾಳಗುದುರೆಯ ಥಟ್ಟುಗಳ ಹಿಂಗಾಲಲಣೆಮದು . . . ಸುಪ್ರತೀಕಗಜ (ಭಾಷ್ಯಕ್ರೀ. ೩-೦೩); ಮುಂದಿದ ಮಾಂಗಾ ಎಗಳ ಮುಂದಕೆ ಹೋಗುವ ಹಿಂಗಾಲುಗಳ . . . ಚಂಗುವಾಜಿನ ವ್ಯಗಪ್ಯಗೀನಕುರಾಂಬದೊಳಗಡಪಾಯ್ದುವಗಲವಲಿ (ಹರಣಾ. ೩-೬-೮೩).

[ಪಿಂ (< ಪಿನ್) + ಕಾರ್ಯ]

ಪಿಂಗಿಸು, ಹಿಂಗಿಸು (ಕ್ರಿ). ೧. ತೊಲಗಿಸು; ತೆಗೆ; ಸರಿಸು; ದೂರಮಾಡು: ಅಗ್ರಾಸನದಿಂ ಚಾಣಾಕ್ಯನಂ ಪಿಂಗಿಸೆಂದೊಡೆ (ಪಞ್ಚಾತಾ. ೦೪೫-೩೪); ಪದ್ಮರ್ಶನೋತ್ಪನ್ನಲಜ್ಜಾರಸದಿಂದಂ ಮೇಲುದಂ ವೆರ್ಮೊಲೆಗೆ ತೆಗೆಪ ಭೂಷಾವ್ಯಾಜಾಳಂಗಳಂ ಪಿಂಗಿಸಿ ತತ್ಕಾಲೋಪಜಾತ ಪ್ರಚುರ ಪುಲಕಮಂ ಭೂಷಣಶ್ರೀಗೆ ಪಕ್ಕಾಗಿಸುವೀ ವ್ಯಾಪಾರಸಾರಂ ಸಮನಿಸುಗುವೆ ಕಾದಂಬರೀದೇವಿಗಾಗಳ್ (ಕಾದಂಂಾ. ೩೦೭) ; ನನೆಯಂಬುಂ ಕಂತುವಿಂದಂ ಬಿಸುಡಿಸಿವಲರ್ಗಣ್ ಚಂದ್ರಬಿಂಬೋದಯಪ್ರಾರ್ಥನೆಯಂ ಕರ್ನೆಯ್ದಿಲಿ ಪಿಂಗಿಸಿ ಕಳೆವ ವೊಗಂ . . . ಆ ನಾಡ ಜೆಂಡಿರ್ಗೆ ಸಾಜಂ (ಕುಸ್ಪು ೨-೨೬) ; ಆಗಜಘಣ ಪೆರೆಯಂ ಬಿಸುಟಿಂದದಿ ಪಿಂಗಿಸಿ ಮೆಯ್ಯ ಮಾಸುಕನಾ ಕನಕಲತಾಂಗಿಪಡೆಯ ನಿಜಪದಸನಮನೀಕ್ಷಿಸೆ (ಪಡುಣಾ. ೨-೨೩). ೨. ನಿವಾರಿಸು; ಹೋಗಲಾಡಿಸು; ಪರಿಹರಿಸು: ಮುಂತೆ ಪೇಟ್ಟ ಕಜ್ಜಿಪಂ ಕಜ್ಜಿಗೊಂಡು ಕವೀಶರಾರ್ಪಂತು ಪಿಂಗಿಸಂಗೆ ಕಾವ್ಯದಿನಾ ಲಘ್ಪ ದೋಷಮಂ (ಕಣಾ. ೦-೦೨೯); ನಿವುಗರಮನೆಗೆ ಪೋಗಿ ಕೂಬಂ ತಂದಪೆನ್ನೆವರಂ ನೀರಂ ಕುಡಿವು ತ್ಪಜೆಯಂ ಪಿಂಗಿಸುವುದೆಂದೊಡೆ (ಪಞ್ಚಾತಾ. ೦೨೯-೦) ; ವಿಗಳದ್ಬಾಷ್ಪಾಂಬುದೀನಾನನೆಯಿನಿಸಿದ ಲಕ್ಷೀಪತಿ ದೇವಿಯಂ ವೇಲ್ದಲೆ ಸಂತೈಸುತ್ತುಮಾತ್ಮಾನುಜೆಯು ಮಾನದ ನಿಮೇಗಮಂ ಪಿಂಗಿಸುತ್ತುಂ (೨೦ಪು. ೩-೨೦); ತರುಕಾಂಡಂ ದೆಸೆಯಾನೆಗಳ್ಗೆ ಕಟುಕಂಡೂ ವ್ಯಾಪ್ತಿಯಂ ಪಿಂಗಿಸುತ್ತಿರೆ (೩೧೨. ೦೭-೩೩); ಈ ಸ್ಯಪಶಿಗಂತಕನ ಬಾಧೆಯಂ ಪಿಂಗಿಸುವೆ ನಾನೆನುತ್ತ (೩೦ಪು. ೩೦-೦೨). ೩. ಬಿಡು; ತೊರೆ; ತ್ಯಜಿಸು: ಸಮ್ಯಕ್ತ್ವದತಿಚಿತ್ತಾಂಗಳ್ ಶಂಕಾದ್ಯಷ್ಟಪಾಳಂಗಳುಮೆಂಬಿವು ಮಾದಂಗಳುಂ ವಾಂಛಿಯುಮೂಢದೃಷ್ಟಿಯುಮಾಪಾಜನಾಯತನಸೇವೆಗಳುಮೆಂದಿವಿ ವಿರ್ಪಕ್ಷವ್ಯುತ್ಪಕ್ಕಮಂ ಪಿಂಗಿಸಿ ನಿಶ್ಯಂಕಾದ್ಯಷ್ಟಗುಣಂಗಳಿಂ ಕೂಡಿದ ಶುದ್ಧಪಾಪ್ತಿ ಸಮ್ಯಕ್ತ್ವಪೂರ್ವಕಂ ಪ್ರತಂಗಳನೇಱಿಸಿಕೊಂಡು (ಪಞ್ಚಾತಾ. ೨೦೨೬-೦) ; ಅಂಗನೆಯರ್ಗಳ ಸವತಿ ಜರಾಂಗನೆ ತಾನವಳ ಸವತಿ ಸಂದಿರ್ದ ನಿಯಾಶ್ಯಂಗನೆಯಾ ಸವತಿಯುಮವಂ ಪಿಂಗಿಸಿ ಪುಮವಾಚ್ತಿನಕ್ಕೆ ಪಾಂಕ್ಯಂಗನೆಯೊಳ್ (೩೭ಪು. ೨-೭೩) ; ಕೃತಿಯಂ ಆಲಿಸಿ ಕೇಳ್ದಲ್ಲದುದು ಪಿಂಗಿಸಿ ಲೀಲೆಯಿನೊಳ್ಕೃತ್ತಂ ಪಿಡಿವಾ ಬಾಧಜಾಲಂ (೩೪೫. ೦-೨೨). ೪. (ಸಮಯವನ್ನು) ಕಳೆ; ತಳ್ಳು; ನೂಕು: ವನಿತಾನೂತನ ಗೀತನರ್ತನವಿಲೋಕವ್ಯಾಪ್ತಿಯೊಳ್ ಪಿಂಗಿಪರ್ ದಿನಮಂ ಪಾಸ್ಥರೂಪ ರೂರ್ಜಿತಯಶರ್ ನಾನಾವಿನೋದಂಗಳಿಂ (ಪುಣ್ಯಾಸ್ರ. ೦-೬೨). **ಹಿಂಗಿಸು:** ೨. ಚಿತ್ತದ ಪ್ರವೃತ್ತಿಯು ಹಿಂಗಿಸಿ ಮಾತ್ಸಿಪಥವ ತೊಱೆದಿದನಲ್ಲಾ ಅಸುಖ್ಯಾತರುಗಳಿಗೆ (ಪುಚಾರಿ. ೩. ೬೨-೦೩೬) ; ಹಿಂಗಿಸುವೆನೆಲ್ಲರ ಮನೋ ಮಯದಂಗದೊಳಹೊಜಿಗಿಡಿದ ತಮದ ತರಂಗಗಳನೆಂದೆನುತ (ಕ್ರಪುಂಂ. ೧೦-೨) ; ತಾಪವನು ಹಿಂಗಿಸುವಶೋಕೆಯ ತೊಟಪಿಸಲಿ . . . ಇರಿಸಿದನು ತೊರವೆಯಾಮನಂಗನೆಯ (ತೊರಾ. ೩-೦೦-೮೪); ಅಂಗಡಿಯಿಂದ ಅವಲಕ್ಕಿ ಕೊಂಡು ತಿಂದು ನೀರು ಕುಡಿದು ಹಸಿವೆ ಹಿಂಗಿಸಿದರು (೭೨೯. ೦೭). ೫. ಹಿಂದೆ ಹಾಕು; ಹಿಮ್ಮೆಟ್ಟಿಸು; ಸೋಲಿಸು: ಹೋಗಠಾವಿಯ ಕೋಲುವಿಡಿದುಲ್ಲಂಘಿಸುತ ಪಡಿಪಡಿದು ಚಿಮ್ಮುತ ಹೊಂಗಿ . . . ಸಂಗಡಿಗರಂ ಹಿಂಗಿಸುತ ತನ್ನಂಗವಂ ತಾನೇಱಿಲಿಳಿಯಲು ನೋಡುತಾಡುತ್ತ (೩೫ಪು. ೨೬-೦೨) ; ಸರಳು ಮೂಱಿರಲೆಚ್ಚು ರಿವುವನು ಧುರದಿ ಹಿಂಗಿಸಿ ಹಂಸವಯು ಮೋಹರದೊಳಗೆ ಮೊಳಗಿದನು (ಭಾಷ್ಯಕ್ರೀ. ೦೦-೦೩). ೬. ಕಡಮೆಯಾಗಿಸು; ಮೊಟಕುಗೊಳಿಸು: ತೊರೆಯರೆರೆಯಾ; ಏಕೆ ನಿನ್ನ ಹೊಶ್ತಿಗಲ್ಲದೆ ದಾರೆ ಮುನ್ನ? ಹೊತ್ತ ಹಿಂಗಿಸಿ ಹಾಯಿಸೆನ್ನ ಕಬನಿಯ ಕರೆ ಕೇಳದೆ? (೧೪೩೦. ೩೩-೩೬). ೭. ಬೇರೆ ಮಾಡು, ಬೇರ್ಪಡಿಸು (?): ಎರಡು ಭಾಗಿಸಿ ಹಿಂಗಿಸಿ ಸ್ಥಳ ಕದ್ದಳಗೆರೆ ಮು × × ಗುಳಿಯ ಕೆಜೆ ದೊಡ್ಡಿಗಟ್ಟ ಗವುತಿಗೆರೆ . . . ಆ ಕದ್ದಳೆಗೆಜೆಯ ಲಕ್ಷುಮಿ ನಾರಾಯಣದೇವರ × × × ಯ ಮೂಲಸಿದ್ಧಾಯವನೂ ಆ ದೇವಂಗೆ ಕೊಟ್ಟುದು (೨೪. III, ಶ್ರೀರಂಗ. ೦೦೪-೩೪; ಸು. 1200); ಆ ಸೋವನಾಥಪುರದ ಮಹಾಜನಂಗಳು ತತ್ಪ ವಿಭಾಗವಲ್ಲಿ ಹಿಂಗಿಸಿ ಕೊಟ್ಟ ಬಂಡೂರ ತಶ್ಚಿನ ವೃತ್ತಿಯಿವ್ವತ್ತೊಂದರೊಳಗೆ (೨೪. III, ತುಮ. ೧೪-೦೬; 1200).

[ಪಿಂಗ್ಸು + —ಅಸ್ಯ]

ಪಿಂಗ್ಸು[1], ಹಿಂಗ್ಸು[1] (ಕ್ರಿ). ೧. ಹಿಂದಕ್ಕೆ ಹೋಗು; ಹಿಂದೆ ಸರಿ; ಹಿಂದಿರುಗು: "ಪಿಂಗು–ಅಪಸರಣೇ (ಹಿಂದಿರುಗು)" (ಪಾಧಾ); ಲಲನೆಯ ಇದವುಗಳೊಳ್ ಮಾರ್ಮಲೆದೊಡಜಂ ಪಿಂಗವೇಟ್ಟು[ಪಾಣಾ. ಪಳ್ಳುವೇಳಿ] ಮೂಗರಿದುದಱಿಂದೆಲೆಗಳ ಲೋಕದೊಳೆಲ್ಲಿಯುಮೆಲೆಗಳ ಮೂಗರಿವುವಾ ದುದಂದಿಂ ಬಟಿಯಿಂ (ಕಾಕ್ಕಾ. ೩೫೬ ಪೂರ್ವಾ); ನಿನ್ನ ಬೀಗಿ ಬಿಗಿದಿರ್ದ ಕುಚದ್ವಯಮಾರ್ದ್ರದಲ್ಲಿ ಕಾಂ ಪಿಂಗದೆ ನಟ್ಟ ದಿಟ್ಟಿಯನಪಂ ಕಿಬಲೆಂದನಂ ಗೆಯ್ದು ತೂಗಿದಂ (೨೦ಪು. ೦೨-೦೩); ಎಳಸಿ ಪಿಪಾಸೆಯಿಂ ಮೃಗಚಯಂ ಪರಿತಂದೊಳಸಾರ್ದು . . . ಪಿಂಗುವುದು ತಾಂ ಜಲತೂನ್ಯವೆಂದುದು (ಭಾಷಾ. ೦-೩೦); ಕಳಿಂಗ ಪಿಂಗು ಕಡೆ ನಿಲ್ ಕರ್ನಾಟಕಾಧೀಶ ಬಂದೆಲ್ಲಿಗೈ ಕೇರಳ ಪಾಂಡ್ಯ ನೀಂ ಗಳವದಿರ್ . . . ಎನುತಲ್ಲಿ ಕಂದರ್ಪಕಾಲಾಗ್ನಿ ಗರ್ಜಿಸುತ್ತೊಪ್ಪಿದರ್ (ಕಾಶಪ್ರ. ೩-೨೦). ೨. ಕಡಮೆಯಾಗು; ಹಿಗ್ಗು; ಕ್ಷಯಿಸು: ಪಿಂಗದೆ ಬೆಳಗುವ ಗುಣಮಾದು ಪಿಂಗಲೊಡಂ ಜ್ಯೋತಿರಂಗ ಳೂಜಂಗಳ ತೇಜಂಗಳ್ ಮಾಸುಳ್ದುವು (೩೦ಪು. ೬-೩೦); ಅಡವಿ ಮೂಗು ಬಟ್ಟರ್ದುದು ಬೇಟೆಯೊಳಾದ ಕಳಳಂ ಪಿಂಗುವಿನಂ (ಕಾದಂಪೂ. ೬೩); ತುಂಗಪರಾಕ್ರಮಂ ಪಿಂಗದು ಮಾನದಿಂ ಶ್ರಿಪುರಂಗಳನಿಚ್ಛಾತನಧನುರ್ಮಯಕ್ಕೆ (ಪಾಇಇ. XX, ೨೪-೨೪; 1034); ಪಿಂಗದ ದೆಳ್ದಿಂಗಳ್ ಕಳ್ಪಂಗೆಂತುಂ ಶೋಭೆಯಿಡೆಯದು (ಧರ್ಮಾಭ್ಯು. ೦೪-೦೪೦). ೩. ಕುಸಿ; ಕುಗ್ಸು: ಬಲ ಭಾರ್ಕ್ಕಹಿನಾಥನಳ್ಕೆ ತಲೆದೊಂಗಲ್ ಪಿಂಗಲಲ್ಲಾಡೆ ಭೂವಲಯವಿ ಬಾಲದ ಮೇಲೆ ಬಿರ್ದು ಕಡುನೊಂದು (ಕಾಕ್ಕಾ. ೫೫೫; ಧರ್ಮಾಭ್ಯು. ೩-೦೦ ನೋ). ೪. ಬಿಟ್ಟುಹೋಗು; ಹೊರಟುಹೋಗು: ತನ್ನಿಂ ಕಾಳಕೆ ಪಿಂಗಿದ ಪೊನ್ನಿನ ತೆಱದಂತೆ ಕಾಂತೆ ಕರಮೆಸೆದಿರ್ದಳ್ (ಗಾಹಾಮು. ೩-೬೦); ನಿಜರಾಜ್ಯಭಾರದಿಂ ಪಿಂಗಿ . . . ಧರಾಧೀಶ್ವರಂ ಪುರದಿಂದಂ ಪೊಜಮಟ್ಟಂ (೩೪೫ಪು. ೦-೦೩೩ ಪ); ಗಗನದಿಂದಿಳಿವಂಗಾಧಾರವಾಗುತ್ತೆ, ತಪ್ಪುವರೆ ಕಾಳ್ಕಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ ಇಂತು ಸಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ (೩೪೮. ೪-೩೦) ; ಅವರ್ಗಂ ಪಿಂಗಿದಾ ಸ್ವರಂ ನಾವಿಯೆಂದು ಪೇಟ್ಲಪ್ಪಡುಗುಂ (೩೪೮. ೯). ೫. ಕಾಣದಂತಾಗು; ಮರೆಯಾಗು: ಪಿಂಗಿ[ಪಾಣಾ. ಪೊಂಗಿ]ಪೋದುದು ಪಶ್ಚಿಮತಯಂ . . . ಅನನಂ ವಿಸುಗೆ ಬೆಳರ್ತು ಪೂರ್ಣಶಶಿಕಾಂತಿಯನಾಂತುದು ಗರ್ಭದೇಟ್ಗೆಯೊಳ್ (ಪಂಪಭಾ. ೦೪೪-೦೩); ಬ್ಯಾತಿ ಧರಿತ್ರಿಗಾಗೆ ಕುವಾತಾರ್ಕ್ಷಗಣಂಗಳಡಂಗಿ ಪಿಂಗೆ ತದ್ಭಾತಿಪವಸ್ಯಮಂ ಬೆವಜಿ ಪೋಗೆ (ಸುಖಾಮು. ೬-೬೩). ೬. ತೊರೆ; ತ್ಯಜಿಸು: ತೆಂಗಿನ ಪೊಸನೇಗಿಂದಜಾದಿಂಗಳ್ಕರಪಾವಸಿ ಕಂಬಿಯಿಂ ಬಟ್ಟಿದೊಡಂ ತಾಂ ಗಡ ಬಿಟ್ಟೊಡೆ ಮತ್ತಂ ಪಿಂಗದು ಡೊಂಕೆಬ ವಾಯು ಬಾಲದ ತೆಱದಿಂ

(ಹೊಕ್ಕು. ೨-೮೨) ; ಮುಲವ್ರಹು ಕಪ್ಪನೆ ಣಿಗಳ ಸಂಗಸುಖಿಯಂ ಹಿಂಗದ ಕೂಡಲಸಂಗಮೇಶ್ವರನಪ್ಪ ಕಪ್ಪಡಿಯ ಸಂಗಮವಂ ಪೊಕ್ಕು (ಬಸ. ೫-೧೪) ; ದೇವತ್ವಮಂ ಪೆಂಗಿ ಸೂಕರತ್ವವನಾಂತ . . . ಆ ವಿಭುವನೇ ಶರಣೊಕ್ಕು ಕರುಣಂಬಡೆವ ಹರಿಯೆಂತಘಂಗನುಸಿರೈ (ಕದ್ಮಠ. ೦೦-೨೬೬). ೫. ಪರಿಹಾರವಾಗು ; ನಿವಾರಣೆಯಾಗು : ಇವರ ಕಾಲಡಿಗಳ ನೆವ್ಮ ತಲೆಗಳೆಂಬ ತಾವರೆಯ ಪೂಗಳಿಂದರ್ಚಿಸಿದೊಡಲ್ಲದೆ ಪಾವ ಪೆಂಗದೆಂದು ಬಗೆದು (ಕಣ್ಣಾಣ. ೧೪-೦೬) ; ಮಗಳೆ ಮನಸ್ಸಮಂ ನಿನಗಿದೀಗಳೆ ಪೆಂಗುಗೆ (ಅಷ್ಟ. ೬-೫೦) ; ಅವನಿಪಂಗದ್ವಶ್ವಮಂ ಪಿಂಗುಪಂತು . . . ತಳರ್ದುರ್ ತೀಡಿತ್ತೊಂದು ಮಂದಾನಿಲಂ (ಕಾದಂಬ. ೨೫೬) ; ಬೇವಿನ ಗಿಡುವಂ ತಂದಿಟ್ಟಾವಿನ ನೊರೆಮಾಲನೆಱೆದು ನಡಬಿದೊಡಂ ಕೀಳ್ ಜಾತಿಂಗೆ ಕೈಪೆ ಪಿಂಗದು (ಕಡೂರಮ್ಮ. ೫-೦೫೬) ; ಇನಿತು ಪಿಪಾಸೋದಯಂ ಕ್ಷಿಪ್ರಮಯಂ ಕ್ಷೀಣಾನ್ನಿದ್ರಾಬಾಧೆ ಪೆಂಗಿರ್ಪುದು (ದಶಕು. ೫-೧೨). ೬. ನಿವಾರಣೆಯನ್ನು ಹೊಂದು ; ಬಿಡುಗಡೆಯನ್ನು ಪಡೆ ; ಮುಕ್ತವಾಗು : ದೊಗಳ್ ವಿಶಾಲವಾದುವು ಕೆಸಱಿಂ ಪೆಂಗಿತ್ತು ಧರಣಿ ತಿಳಿದುವು ಕೊಳಗಳ್ ಶ್ವಸನಪಥಮುಮಳವಾಯ್ತಿಂದೊಸಗೆಗಳು ಬೀಱುವಂತೆ ಶರದಾಗಮು ಬೆಳೆಗಳ್ (ಶಾಪಾ. ೨-೬೦) ; ಬಲ್ಲೆಱೆಯಿಂ ಪೆಂಗಿದುದೊಂದು ಗಂಧಗಜ ದಂತಾದಾಗಳೆಗೆಯ್ನೆನೋ (ಪುಗಟಪ. ೦೦-೮೨) ; ಈ ಪದಿನೆಟುಂ ಜೋಷದಿಂ ಪೆಂಗಿದ ಪುರುಷನೆ ಸರ್ವಜ್ಞನಾಪ್ತಂ ತ್ರಿಣೇತ್ರಂ ವಂದನ ಕ್ಷುಧ್ವರಸಂ. . . ಜನೇಶಂ (ಪಪಂಪ. ಆಪಾಬಾಂಧ I. ೪೫೬-೬). ೯. ಬಿಡು : ತಪ್ಪು ; ಉಳಿ : ಶೃಂಗಾರದಿಂದೆ ಹಾಸ್ಯಂ ಸಂಗಳಿಸಿದ ರೌದ್ರದಿಂದೆ ಪೆಂಗಿಪ್ಪಾಸ್ಯಾಪಿತೀಕ್ಷ್ಣಾಂಗದಿನದ್ಭುತಮೆಂದುಂ ಪೆಂಗದೆ ಬೀಭತ್ಸದಿಂ ಭಯಾನಕ ಮೊಗಿಸುಂ (ಶೃಂಗಾಶ. ೦-೦೯) ; ತಿಂಗಳ್ಗೆ ಮಾಜುಮಮಬ್ಜಿಗಳ್ ಪೆಂಗದೆ ಪದನಾಗಿ ಕೊಳ್ವವಲ್ಲಿಯ ಬೆಳೆಯುಂ ಕಂಗದ್ಭುತಮಂ ಪೆರ್ಚಿಪುದಂಗೀಕೃತ ಬಾಹಳಧಾನ್ಯಮುಂಜರಿಗೆಗಂ (ಶಾಪಶ. ೪-೬). ಹಿಂಗು₁ : ೧. ಬಂದ ಕವಸದಲ್ಲಿ ಬಿದ್ದು ಹಿಂಗಿದೆಯಲ್ಲ (ಅಪಪಂ. ೨೬೯-೦೨೩) ; ಇದಿರಲಿರಲಳವಡದೆ ಗುರು ಹಿಂಗಿಪನು (ಶಾಪಾಕ್ರೋ. ೦೨-೦೬) ; ಚೋಳ ಹಿಮ್ಮೆಟ್ಟಿದನು ಹಿಂದಕೆ ಲಾಳ ಸಾಡಿದಮು ಹಿಂಗಿದನು ಬಂಗಾಳ ಬೆಂಗೊಟ್ಟೋಡಿದನು ಪಾಂಡ್ಯನು (ಕೂಪಣಾ. ೪-೨೩-೬) ; ಉತ್ತದೊಳ್ನಿಶ್ಚೈಸಿ ನೆರೆಯಲೆಳಸುವಳೊವ್ವ ಹೊತ್ತಲ್ಲದನು ಚಿತಕೆ ಕೆದಱಿ ಹಿಂಗುವಳೊವ್ವ (ಕೃಪಪಂ. ೩೦-೨೩). ೨. ನಾಗರಾಜನುತ್ತಮ ಮಂಡಪಸ್ತಂಭಕ್ಕೆ ಹೊಜೆ ಹಿಂಗಿದುವಾ ದಿಗಿಭಕ್ಕೆ ಕಂಠಭಾರಮದುಂ ಗಿತ್ತೆನಲು (ಪಾ. XVI. ೪೬-೫೬; 1147); ಬಲಿದ ವಿರಹಾಗ್ನಿಯಲಿ ನೊಂದೆನು ಬಳಲಿದೆನು ತನು ಬಾಡಿ ತಾಪವಿ ನಲವು ಹಿಂಗಿತು (ಪಕಪ. ೨-೪೦) ; ತೆಂಗಾಯಿ ಪಲಸು ಕಿತ್ತಳೆ . . . ಭೃಂಗಾಯಿವಣ್ಣಳು ಸಹಿತ ಹಿಂಗದ ಬಹು ಫಲಾದಿಗಳ ತೋಂಟಿಗರು ಸಾರಂಗವಾಣಿಗೆ ಪಾರ್ಚಿದರು (ಪಚಪಕ. ೪-೬೨) ; ಗುಂಗೆಯ ಧರಿಳ ಭುಸಪಿಟ್ಟು ಫಲದೊಳು ಹಿಂಗದೆ ಮುಕ್ಕಣ್ಣನಾಂತು . . . ಆ ತೆಂಗಿನ ಮರಗಳೊಪ್ಪಿದುವು (ಕಂಪಪ. ೨-೪೨) ; ಕಂಗೆಟ್ಟ ಕರುಳು ಹಿಂಗಲರಿಯದ ಎದೆಯ ಕಸಿವು ಪಕಾತಿಯಾಗಿ ತಳರ್ದಂಳಸುವ ದೇಹವು ಅಪಳನ್ನು ದಿಙ್ಮಾಥನ್ನಾಗಿ ಮಾಡಿದ್ದವು (ಪಪಚಂ. ೪೬೨). ೪. "ಹಿಂಗಿದುದೆನೆ ಬಿಟ್ಟು ಪೋದುದೆಂದಱಿಗೆ ಬುಧರ್" (ಕಾಪಪ. ೪೭) ; ಜೀವ ಹಿಂಗೆ ಘಟವೋದು ದಿನಕ್ಕೆ ಆಶ್ರಯಿಸಿ ನಿಲಲರಿಯದು (ಅಷ್ಟಾಪ್ರ. ೦೧೪-೬೨). ೫. ನಿಷ್ಠೆಯಿಂದ ಲಿಂಗವ ಪೂಡಿಸಿ . . . ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು (ಪಪಪ. ೬೪೪) ; ನಾಳೆ ತರಣಿಯ ಸಂಭವು ಹಿಂಗದ ಮುನ್ನ ಕೊಲುವೆನು ಕಲಿ ಜಯದ್ರಥನ (ಶಾಪಾಕ್ರೋ. ೬೦೩. ಕರ್ಣ. ೨೮೫); ತಂಗಾಳಿ ಬೀಸಿತು ಭೃಂಗಸ್ತೋಂಕಾರದಿ ಹಿಂಗಿತು ಧರೆಯು ಕತ್ತಲೆಯು ರಂಗುದೋಜಿತ್ತು ಪೂರ್ವಾದ್ರಿಯು ದೆಸೆಯೊಳು ತುಂಗವಿಗ್ರಹಸೂರ್ಯನಂದಿಸೆ (ಆ೦೦೩. ೫-೨೪). ೬. ಪವ್ಮ ಶರಣರು . . . ಆಸೆಯನಳಿವರು ರೋಷವ ಹಿಂಗಿವರ್ಕಾವನ ನುಚ್ಚರು (೦೦೧೪. ೪. ೬೦-೪೪) ; ಜನನಿ ಹಿಂಗಿದ ಶಿಶುಗೆ ಸಸಿ ಬಸುಟ ಕುದುಬವಕ್ಕೆ . . . ಚೋಡಿಯೂವುದಾ ಪುರಜನಂ ಜನಪತಿ ಹರಿಶ್ಚಂದ್ರನೆಲ್ಲವ ಮುನಿಗಿತ್ತರಣ್ಯಕ್ಕೆ ನಡೆವಾಗಲು (ಹಪಚಾ. ೯-೨೪) ; ಕೇಳಿಲೆ ಮರುಳೆ ಸೂತಜ ಕೈವಾಜಿಯು ಸಂಗರವ ಸಿರಿ ಹಿಂಗುವಳೆ ತನ್ನ ನೆನುತ್ತ ಗರ್ಜಿಸಿದ (ಕುಪಾಕ್ರೋ. ೬-೫೪) ; ಕೈವಿಡಿವಳಗರೆರಿಸಿ ಸೂಳೆ ವೆಂಡಿರ ಸಂಗವೊಳಗಿರ್ಪ ಧನಪತಿಯಂ ಹಿಂಗಿರಿರ್ಪಳೀ ಜಯಲಕ್ಷ್ಮಿ (ಪಂಪ. ೬-೧೬). ೭. ದಂಡಾಗ ಬಿಡಪು ಜೀವನ ಸ ದೇಹ ಪಿಂಗದಾಗಿ (ಪಪಪ. ೪೬) ; ಮಳೆಗೈಟಿಳರ ಪಿಬ್ಬಾಳಿ ಪಿಂಗಿಪ ಪರಶರಾಮನ ತೋಳ ಬಲುಹಿನಲಿ (ಸಂಪಪ. ೨೬-೨೬); ಆ ಪುಣ್ಯಾಪುರುಷನು ಕರವ ಕುಬಳಿಸಿ ಕೊಡಲು ತನ್ನನಿವರನ ಕ್ಷುತ್ಪೃಷೆ ಪಿಂಗೆಬಾಕ್ಷಣ ಭನ್ಯಕಾವ್ಯಾಧಿ ಕರಗೆ (ಕಪಪಾಚ. ೪-೬೬); ಧನೀಕರ ಕಡು ದೈನ್ಯವ ಪಚ್ಚರೆ ಕಡು ದಾರಿದ್ರ್ಯವ ಪಿಂಗೀತೆ (ಪುಪಾಪ. ೦-೦೫೬-೩) ; ನಮ್ಮ ವಿಜಾಪರಜಿಲ್ಲೆಯ ನೀರಿನ ಆರಮ ಇನ್ನೂ ಪಿಂಗಿಲ್ಲ ! (ಹುಸಕ್ಷ. ೦೫೬). ೮. ನಚ್ಚಿರ್ಪ ನೋಟದಿಂದೋಜೆಯಿಂ ವಿಸಾಜಿತಂ ಭವದಿಂದ ಹಿಂಗುತಂ ನೆಗಹಿಂಪ ಹಿಗ್ಗಿನತಃ (ಪಸಕ ೩-೦೦೩). ೯. ತುಂಗ ವಿತಿಮೋಹಿಲನು . . . ಧೂಪದಿಂ ಶಿವಲಿಂಗಕರ್ಪಿಸಿ ಮಿಕ್ಕ ನವೈರ್ಚನ ವಿಧಾನವನು ಪಿಂಗನಂತಾಚರಿಸಿ (ಪಸಪು. ೪೩-೪೪) ; ಆ ನೃಪ ರೂಪಾನು ಪಿಂಗದ ಲಾವಣ್ಯಂವಳೆವೆಸೆವಂತ್ಯ ಗಪಲೋಪಧರಯುಗಳೆಯು ಬಸಿಜೊಳು ತಿಗಳದೋಭತ್ಪಪ್ಪನ್ನೆಬರಂ ಬಳಿನು ಬಲಿನಂದು (ಕಪಚಾ. ೨-೪೬); ಪಿಂಗದೆ ನೆನೆಗೆ ಪಂಗಳಫಲವಿಂ ಹುಟ್ಟು ನಾವು (ಪುಗಾವ. ೩-೦೫೬ ಶ್ಲಂ) ; ಹೊರಮಾಗಲೊಬ್ಬರು ಬರೆ ಕಾಣದೆ ಪಿಂಗದೆ ಹೊ ವನು ಭೀತಿಯಲಿ ಬರುಬರು ಆರೋ ನೋಡುವೆನೆನ್ನುತಾ ಹಿಂಗದೆ ನೋಡಿದ ವರುಣಲಿ (ಕವಕೋ. ೩೩-೪). ೧೦. ಪೀದೆ ಉಳಿ ; ಪೀದೆ ಬೀಳು : ಪೊ ಶ್ರಿ ರ್ಪ ನ ವಂ ದು ಕೃಷ್ಣಂ ಗಿರಿಜಾನೋವನೆಂತಪ್ಪಗಳೀಗಳಂ ಪಿಂಗದವಾತಿಹನೆನಿಗೆ ಕೃಷ್ಣಭೂಮಿ ಬರ್ಪುದಜ್ಜರಿಯೆ (ಕೃಪಾಣ. ೨೭ ೨೦) ; ರಂಗನಾಥನ ಸೇವೆ ಮಾಡಿಜೂರ್ವರಿ ನಿವ್ಯಾಂಗನೆಯುವಾಗಳೊಪ್ಪನಲಿ ಹಿಂಗದೆ ತನ್ನ ನೆಲೆಗೆ ಪೋಪೊಲು ಪೋಹನಾಗಿಯೇಜಿವಳನ್ಯರಿಗಮು (ಕಂಪಪ. ೯-೪೭). ೧೧. (ಹಿಂಡಿಕೆ) ಮರಳು ; ವಾಪಸ್ಸಾಗು : ಹಿಂಗಿದವು ತಜ್ಜು ಬೇಟೆಯಾಡಿ ಮೃಗಗಳಿಗೆ ಮನ್ವಂರೆನು ಕಿಡಿಪಾಗಗಳನು ಕೊಡಿಸಿದನು ಪರಿವಾನಕೆ ವಿನೋದವರಿ (ಕುಪಾಭಿ. ೦೭-೪೮). ೧೨. ಮುಂದುಡು ; ಸಂಕೋಚಗೊಳ್ಳು : ಒವ್ಮೆ ನೋಡುಬೊವ್ಮೆ ನುವ್ಮೆನಲವ್ಮ ತಾನೆನುತಿಪ್ಪಳಾ ಶ್ರೀರವ್ಮನಾವವ ನೆನೆಬಳೊವ್ಮೆಯು ಹಿಂಗಿ ನಾಚುವಳು (ಸಂಪಪ. ೬-೦೦೯). ೧೩. ಸರಿ ; ತೆರಳು ; ಹೋಗು : ಅಳವು ತನಗಿಮ್ಮಡಿಸಿ ಬಾತದು ನೆಲೆಯೆನಸುವಂದೆ ಹಿಂಗು ಹಿಂದಕೆ ಸುಲಭವಲ್ಲ ಸುಮಾಹುಹರನ ವಿರೋಧ ನಿನಗೇವ (ಕೂಪಣಾ. ೪-೬-೬). ೧೪. ಸಂದುಹೋಗು ; ಕಳೆ ; ಮುಗಿ ; ತೀರು : ಪಿಂಗಿದವು ಹನ್ನೊಂದುವರೆವರುಷಂಗಳಬೀತಬೊಳು (ಕುಪಾಭಿ. ೨೬-೪). ೧೫. ಸಲ್ಲಿಸು ; ತೀರಿಸು ; ಸಂದಾಯಮಾಡು : ನಮ್ಮ ಕೂಡಲಸಂಗನ ಶರಣರ ಋಣವ ನಾ ಪಿಂಗಲಾಜೆ (ಪಸಪ. ೪೭೦). ೧೬. ನಿವಾರಿಸು ; ಇಲ್ಲವಾಗಿಸು ; ಪರಿಹರಿಸು : ಅಂಗಭೋಗಕೆ ಮೆಚ್ಚಿ ಲಿಂಗಭಕ್ತಿಯ ಪೂಜೆದೆ ಭುಗಪತುತಿಪೆನು ಗುರುರಾಯ ಭವಪೂರ ಹಿಂಗೆನ್ನ ಭವವ (ಸಪಪಕ್ಷ. ೦೦೩). ೧೭. ಹಾಳಾಗು ; ಕೆಡು : ಹುಬಿಯಂ ಕಾಣುಹತಂ ಕೋಪಗಿಚ್ಚು ಭುಗಿಲೆಂದು ಜಪ ಜಾಜಿ ತಪ ತಗ್ಗಿ ಮತಿ ಗತವಾಗಿ ಸಂದ ಯೋಗಂ ಹಿಂಗಿ (ಹಪಚಾ. ೬-೨೦) ; ಹಿಂಗಿದನು ಸಿರಿಯಾಳಸೆಟ್ಟಿಯು ಹಾಂಗೆ ಎನ್ನಂ ನೋಡದಾ ಮತಿ ಹಿಂಗದುಳೀ ನಿಟಿ ಕ್ಷಣದ ಸಿಟಿ ನಾನಮ್ಮ (ಪಸಪ. ೨೪-೬೪) ; ಪರ್ಪಣ ಪೂಗೆಂಬಲ ಘಾಯದಿ ಬಿಪ್ಪಳಿ ಹಿಂಗುವರು (ಹಾಳ್ಕಶಾ. ೦೬-೪). ೧೮. ವ್ಯರ್ಥವಾಗು ; ನಿಷ್ಫಲವಾಗು :

ಫಡಫಡೆಲವೊ ಭೀಮಸೇನನೆ ಮೃಡನ ವರ ಹಿಂಗುವುದೆ ಮಿಗೆ ತನ್ನೊಡೆಯ ಮುನಿಪನ ಕರುಣ ಹಿರಿದುಂಟೆನುತಲಸುರಪತಿ . . . ಕಾದಿದನು ಹದಿನೆಂಟು ಸೂಳಿನಲಿ (ಕುಣ್ಣಾಸ. ಪಿಂಗ. ೨-೨೩೬) ; ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು ಮೂವತ್ತುಮೂರುಕೋಟಿ (ಗಂ. ೫೦-೯). ೧೯. ಮೃತ ವಾಗು ; ಸಾಯು ; ಮಡಿ : ಹಿರಿಯ ಮಗನ ಕಾಲ ಮುಱಿದು ನಡುವಳ ಮಗನ ಕಯ್ಯ ಮುಱಿದು . . . ಅವರು ಹಿಂಗಿ ನಾ ಬದುಕಿದೆನೆಂದು ತ್ರಿವಿಧದ ಸಂದ ಬಿಟ್ಟು ಸದಾಶಿವಮೂರ್ತಿಲಿಂಗದಲ್ಲಿಗೆ ಸಂದಿತು ಚಿತ್ತ (ಅಲಾಪ್ರ. ೪. ೧೪೬-೦೫೬) ; ಅಡಸಿದಾಪತ್ತಿನಲಿ ಧೈರ್ಯವ ಹಿಡಿವುದೆ ಸುಪ್ರೌಢಿ ಸಾಕಿನ್ನೊಡಲು ಕರಗಿದೊಡೇಳಲಱಿವನೆ ಹಿಂಗಿದಭಿ ಮಾನ್ಯ (ಕುಣ್ಣಾಸ್ತ್ರೋ. ೭-೨೩) ; ಸತ್ತು ಹುಟ್ಟುವ ಹುಟ್ಟಿ ಹಿಂಗುವ ಸುತ್ತ ತೊಡಂನು ಮಾಣಿಸೆಲೆ ಪುರುಷೋತ್ತಮನೆ (ಚಿಂಕಾ. ೬೦).

[ದೇ.೩ ತಮಿ. ಪಿನ್ನು ; ತುಳು. ಹಿಂಗು]

ಪಿಂಗು$_2$ (ನಾ). ಹಿಮ್ಮೆಟ್ಟುವಿಕೆ ; ಹಿಂಜರಿಯುವಿಕೆ : ಸಿಂಗದ ಮುಱಿವುಂ ಮೇಷದ ಪಿಂಗುಂ ವಯವಿದರ ವಿನಯಮಿಂತಿವು ಮೂಱುಂ ಭಂಗವೆನಿ ಸಲ್ಕೆ ಪಡೆಯುವು ಕಂಗೆಡಿಕುಂ ಭರದಿನಹಿತರದಟುಂ ಧುರದೊಳ್ (ಸಂಪಸಂ. ೨೬೬.೩) ; ಸಿಂಗದ ಹಳಿಗುಂ ಮೇಷದ ಪಿಂಗುಂ ಕೋವಿದರ ಭೀತಿಯೆಂಬೀ ಮೂರುಂ ಭಂಗವೆನಿಸಲ್ಕೆ ಪಡೆಯುವು ಕಂಗೆಡಿಸಿಯೆ ಕೊಲ್ಲದಿರವು (ಶೀತಿಸಂ. ೨೬೬). [< ಪಿಂಗು$_1$]

ಪಿಂಗುಗೆ (ನಾ). ತೊರೆಯುವಿಕೆ ; ತ್ಯಜಿಸುವಿಕೆ ; ವಿಸರ್ಜನೆ : ಅಂಗಾದಿ ದ್ವಿತಯಂಗಳ ಪಿಂಗುಗೆಯುಂ ಮಾಡದಾತನಜ್ಞಾನಿ ಗಡ (ಪಸಪ್ರ ೦೯-೫೦).

[ಪಿಂಗು$_1$ + - ಗೆ]

ಪಿಂಗುಡಿ, ಹಿಂಗುಡಿ (ನಾ). ಹಿಂದಿನ ಭಾಗ ; ಹಿಂಭಾಗ : ನಾರಾಚದಲಿ ಬಲನೆಡನ ಕೀಲಿಸಿ ಪಿಂಗುಡಿಯ ಮುಂಗುಡಿಯ ಕಟ್ಟಿದನಂಬಿನಲಿ (ಕುಣ್ಣಾಲಿ. ೨೦-೨೬) ; ಹಾಯೆನುತ ಭಟರೊಱಲಿದರು ಪಿಂಗುಡಿಗೆ ಬಿದ್ದುದು ಸಮರಸೌರಂಭ (ಪಿಶಾಗ. ೦೦-೫೬-೦೬). ಹಿಂಗುಡಿ : ಹರಿಯೊಡನೆಯಾಹವದ ಕಲಸಕೆ ತರಣೆನುತ ಹಿಂಗುಡಿಗೆ ಮಹಿಷದ ಮರಳಿಸಿದನೇನೆಂಬೆನಾಹವದುರು ವಿಡಂಬನವ (ಪಿಶಾಗ. ೦೦-೭೦-೨೯). [ಪಿಂ (< ಪಿನ್) + ಕುಡಿ$_2$]

ಪಿಂಗುರು 'ಪೊಂಗುರು' ನೋ.

ಪಿಂಗೂಳೆಯ (ನಾ). ಹಿಂಭಾಗದಲ್ಲಿ ಇರುವ ಗುಂಪು : ಆರ್ತರೌದ್ರ ಧ್ಯಾನಮೆಂಬ ಮುಂಗೂಳೆಯದ ನಾಯಕರ್ವೆರಸು ದುರ್ಜನರ ಕೂಟ ಮೆಂಬ ಪಿಂಗೂಳೆಯದ ವೀರರ್ವೆರಸು . . . ನಿಲ್ಲದೆಲ್ಲಿಯುಂ ಬೆನ್ನಟ್ಟಿ (ರರ್ಮಾಸ್ಯ. ೦೦-೫೬). [ಪಿಂ (< ಪಿನ್) + ಗೂಳೆಯ]

ಪಿಂಗೊಳಿಸು (ಕ್ರಿ). ಹಿಂದಿರುಗುವಂತೆ ಮಾಡು; ಮರುಕಳಿಸು : ಅಂಗಜನ ಕೇಳಿಯಾಲಯನಿಕೇತನದಿ ದೀಪಂಗಳುರಿದುರಿದು ಭುಗಿಭುಗಿನುಂಡ ಕತ್ತಲೆಯ ಪಿಂಗೊಳಿಸಿ ಕಾರುವೋಲ್ ಕಜ್ಜಲವು ತೋರುತಿಹುದು (ಪಸಪು. ೫೦-೯). [ಪಿಂ (< ಪಿನ್) + ಕೊಳ್$_1$ + — ಇಸು$_3$]

ಪಿಂಗೋಳ್ (ನಾ). ಹಿಂದುಗಡೆ ; ಹಿಂದಿನ ಭಾಗ ; ಹಿಂಭಾಗ : ಕೇಕಯ ವಿಷಯಾಧೀಶ್ವರರಪ್ಪ ಕೈ[ಕ]ಯರಯ್ಯರುಮೊಂದಕ್ಷೋಹಿಣೀಬಲದೊಡನೆ ಸಿಡಿಲನುರುಳಿ ಮಾಡಿದಂತು ಪಿಂಗೋಳೊಳ್ ನಡೆಯೆ (ಸಂಪಶಾ. ೯-೯೫ ಪ).

[ಪಿಂ (< ಪಿನ್) + ಕೋಳ್]

ಪಿಂಚ (ನಾ). = ಪಿಂಛ ೨ : ಪಿಂಚವ ಮಡಗಿ ಮಂಡೆಗೆ ವಿನುತಗುಣಿ ತನ್ನೊಳಗೆ ಸನ್ಯಾಸನವ ತಾಳಿಯು ಮುನಿಪನಂಘ್ರಿಯ ನೆನೆಯುತಿರ್ದು (ಅಂಪ. ೦೨-೯) ; ಮೈಮೇಲೆ ಚೆಲ್ಲಿದ್ದ ಕುರುಳನ್ನೆಲ್ಲ ಪಿಂಚದಿಂದ ಮೃದು ವಾಗಿ ಜಾಡಿಸಿಕೊಂಡರು (ರಾಪಸಂ. ೦). [< ಸಂ. ಪಿಂಛ]

ಪಿಂಚಣಿ 'ಪೆನ್ಷನ್ನು' ನೋ.

ಪಿಂಚಣಿದಾರ 'ಪೆನ್ಷನ್‌ದಾರ' ನೋ.

ಪಿಂಚನ್ 'ಪೆನ್ಷನ್ನು' ನೋ.

ಪಿಂಚನಿ 'ಪೆನ್ಷನ್ನು' ನೋ.

ಪಿಂಚನೂರ್, ಹಿಂಚನೂರು (ನಾ). ಒಂದು ಊರಿನ ಹೆಸರು : ಪ್ರ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಈಗಿನ ಹೀಚ ನೂರು : ಸಿಯಗೆಲ್ಲರ್ ಮಱುಗೆರೆನಾಡು ಮೂನೂಱುಮಾಳೆ ಮೂಱು ಕೊಡೆ ಅಣ್ಣಿಯರ್ಪಿಞ್ಚನೂರಾ ಏಱಿನುಳ್ಳೆಱಿದು ಬಿಟ್ಟಾರ್ (ಎಕ. XVI, ತುಮಕೂ. ೬೬-೯ ; ಸು. 750) ; ಪಿಞ್ಚನೂರುಳ್ಳನ್ನರ[ಸ]ರುಳೆಱಿದು ಸತ್ತನ್ (ಎಕ. XVI, ತುಮಕೂ. ೬೬-೩ ; ಸು. 750). ಹಿಂಚನೂರು : ಹಿಞ್ಚನೂರ ತೊಣ್ಡಿಗೌಡನ ಸುಪುತ್ರನೇಚಗೌಣ್ಡನಾತನ ಸುತ ಹೊನ್ನಗೌಣ್ಡನು ಹಿಞ್ಚ ನೂರ ಕಲಿದೇವರಿಗೆ . . . ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ (ಎಕ. XII, ತಿಪಟೂ. ೫೯-೩೩ ; ಸು. 1120). [? + ಊರ್]

ಪಿಂಚನ್ನು 'ಪೆನ್ಷನ್ನು' ನೋ.

ಪಿಂಚು$_1$, ಹಿಂಚು$_1$ (ಕ್ರಿ). ೧. ಹಿಂದೆ ಉಳಿ ; ಹಿಂದೆ ಬೀಳು ; ಹಿಂದುಗು : "ಪಿಂಚು-ಪಶ್ಚಾದರ್ಥೇ (ಹಿಂದುಳಿ)" (ಶಸಾಧಾ) ; ಇಂಚಿಯ ಪಸವಿನ ಬಱದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಶಾದುವಾ ನಾಡೂರ್ಗಳ್ (ಪಂಪಶಾ. ೯-೫೦) ; ತೀರ್ಥಜಲಂಗಳ್ ಪಿಂಚಿದರ್ಗಿಲ್ಲೆಂಬ ತಿರೆ ಮುಂಚದರಲ್ಲಲ್ಲಿ ಮೊಗೆ ಯಲ್ಕಿವಿಜರ್ (ಅಸಂಪು. ೩ ೭೫) ; ಅನುಮಾನಿಸದೆ ಚಕ್ರದಿಂದಿಟ್ಟು ಕೊಲ್ಲೆಂಬ ದನಿ ಪಿಂಚಲವಳ ತಲೆ ಮುಂಚಿ ಬೀಳ್ವಿನಮಿಡಲ್ . . . ಖ್ಯಾತೆಯ ಜೀವನಂ ಪೋಯ್ತು ನಿಮಿಷದೊಳಗೆ (ಪಸಪು. ೨೦-೨೬) ; ಸೀತೆಗೆ ವೈಖಾನಸರ ಮುತ್ತೈದೆಯರನೇವೊಟ್ಟಿಂಗೆ ಕಾಣ್ಬೆನೋ ಎಂಬೊಂದು ತವಕದಿಂ ನಡೆ ಮುಂಚಿದುದು ಲಕ್ಷ್ಮಣಂಗೆ . . . ಎಂತು ದೇವಿಯಂ ತೊಱೆವೆನೊ ಎಂಬೊಂದು ದುಗುಡದಿಂ ಪಿಂಚಿದುದು (ರಾಮಾಶ್ವ. ೩೩ ೩). ೨. ಮರಳು ; ಹಿಂದಿರುಗು : ಮುಂಚಿದ ಪಡ್ರುತು ಮತ್ತಂ ಪಿಂಚುವುದಸ್ತಕೆ ಪೋದಂ ಪಿಂಚುವನಿಂಗದಿರಂ ತಾಂ ಮತ್ತಂ ಮುಂಚಿದ ಪೊಚ್ಚದ ನೀರುಂ ಮಾನವನಾ ಯೌವನಮುಂ ಪಿಂಚದು (ಸೌಸಂದ. ೯.೨೯). ೩. ಹಿಂದೆ ಸರಿ; ಹಿಮ್ಮೆಟ್ಟು : ರಣದಿಂದೆ ಪಿಂಚದತಿವೀರಕ್ಷತ್ರಿಯರ್ (ಪಿಸ್ಕುಪು. ೦ ೨-೩೫). ೪. "ತಡವಾಗು ; ತಡಮಾಡು" (ಪ್ರಶಸ್ತಾ). ಹಿಂಚು$_1$: ೧. ಏನೆಂಬೆ ನೇನೆಂಬೆನೇನಾದಿನಾಥನಂ ಆನಱಿಯೆನಾನಱಿಯೆನುರವಣಿಪ ಧೀರನಂ ಸಾಟಿ ಹಿಂಚಿತು ಮುಂಚಿತವನ ತಲೆ ಕಳನೊಳಗೆ (ಪಸಾರ. ದೇ. ೦೦೬-೭); ಹೋಗೆಂಬ ನುಡಿ ಹಿಂಚೆ ಮುಂಚಿ ಜೀವಂ ನೆಗೆದು ತಾಗಿ ನಡುನೆತ್ತಿಯುಂ ಬಗಿದು ಬಾದಣದೆಗೆದು ಮೇಗಡರ್ದು ಗಗನಕ್ಕೆ ದಂಡಾಯಮಾನದುರಿಯಾಗಿ ನೆಗೆಯಲ್ಕೆ (ಸಿದ್ಧರಾ. ೯-೩೯) ; ಮಾತು ಹಿಂಚಿತು ಮುಂಚಿ ಸುಭಟವ್ರಾತ ಹೊಕ್ಕುದು (ಕುಣ್ಣಾಸ್ತ್ರೋ. ೩-೨೩). ೩. ಪಂಚಮಹಾಪಾತಕಿಯಂ ಸಂಗರ ದೊಳ್ ಹಿಂಚುವನು ಪುಟುಗೊಂಡದ ಸಂಚದೊಳಿಕ್ಕಾವ ಕಾಲಮೇಟದ ತೆಱದಿಂ (ಪಕಕು. ೩-೦೯) ; ಭಲರೆ ಭಲರತಿಬಲರೆ ಹಿಂಚದಿರಿನ್ನು ಹೊಯ್ ಹೊಯ್ ಚೂಣೆಗರನೆನುತ ಬಲಜಲಧಿ ಮುಕ್ಕುಳಿಸಿ ಮಿಗೆ ಹೆಕ್ಕಳಿಸಿ ಕವಿದುದು (ಕುಣ್ಣಾಲೀ. ೯-೩) ; ಪುಕ್ಕವ ಕಂಡ ಕರ್ಣನದನಲ್ಲಿಗಿಸೆ ಮಡಿಯ ದುರುಳುವುದೆಂದು ಬಗೆಗುಂದಿ ಹಿಂಚಲಿದೊ ಕಂಡ ಕಣ್ಣಿಗೆ ಪಾರ್ಥನದರ ಕಂಠದ ಮಣಿಯ ಕುರಿತೆಸೆಯೆ, ಕಣ್ಮುಗಿದು ನೆಲಕೆ ಹೊರಳಿತು ಹಕ್ಕಿ ! (ಪೆಸ್ಕರ. ೯-೦೯). ೪. ಸಚಿವರ ಸತಿಯರ್ ನಾಲ್ವರ್ . . . ಪುತ್ರರನೆರ ಡೆರಡು ತಿಂಗಳಿಂ ಹಿಂಚಿ ಪಡೆವರನುನಯಮೆಸೆಯಲ್ (ದಕಕು. ೨-೬) ; ಕೋಕಿಳನು ಪಂಚಸ್ವರದೆ ಕೂಗಲು ಹಿಂಚದೆ ಪಂಚಬಾಣನು ಬಂದೆಯ್ದಿದನು (ಅಂಪ. ೯-೦೯೩). ೫. ಬಿಡು; ಉಳಿ: ನೆಱೆ ಮಿಂಚುವ ಬೊಲ್ಲ ಬೋರನನು ಪಂಚಬಾಣನ ಪೆಸರಿನ ಮೇಘವರ್ಣನ ಹಿಂಚದೆ ನಡಸಿ ತೋಱಿದರು (ಅಂಪ. ೬-೫೩). 'ಮುಂಚು$_1$' ಪರಾ. [ಪಿಂ (< ಪಿನ್) + — ಚು$_1$]

ಪಿಂಚು₂, ಹಿಂಚು₂ (ನಾ). ೧. ಹಿಂದಕ್ಕೆ ಇರುವಂತಹುದು; ಹಿಂದಿನದು: (ಕ). **ಹಿಂಚು₂ :** ೨. ತಡ; ಸಾವಕಾಶ: ಏಟು ಮುಂಚು ಮಾತು ಹಿಂಚು, ಎಂದುಕೊಂಡು . . . ಇದ್ದ ಈ ಉಪಾಧ್ಯಾಯನ ಕೈಯಿಂದ ಯಾವಾಗಲಾದರೂ ಮಹಾದೇವನಿಗೆ ಒಂದೊಂದು ಪೆಟ್ಟು ಬೀಳುತಿತ್ತು (ಕುಮಾಣಾ. ೭೦); ಊಟಕ್ಕೆ ಮುಂಚು ದಂಡಿಗೆ ಹಿಂಚು (ಗಾಡಿ).

ಪಿಂಚುಮುಂಚು, ಹಿಂಚುಮುಂಚು = ಹಿಂದುಮುಂದು: ಕೂತಲ್ ಜುಮ್ಮನಿವದೊಸರಿ ತೆಗೆವತ್ಕಲೊವಗಿ ತಳವೇಲಿವಿರ್ಗಳೊಳ್ ಪಿಂಚು ಮುಂಚಿನಿಸದೆ ಸರಿಯೆನಿಸಿ ಕೂಡಿ (ಕಬಾಪು. ೦೦-೭೦); ಆವ ಬೀಜವ ಬಿತ್ತಿದರೂ ಮೊಳೆಯ ಮುಖ ಹಿಂಚುಮುಂಚುಂಟೆ? (ಕೂವೃಸಂ. ೨೨೯-೩೨); ಹಿಂಚುಮುಂಚೀನಕ್ಕ ನಿವಗೆಸುಗೆಂದಳದೇಂ ಚವುರೆಯೊ ಪಟ್ಟವರಸಿ (ಕಚಿ. ೪೨-೭೦); ಶಿವನಯಿಪ್ಪತ್ತೈದು ಲೀಲಾಕಥಾಕ್ರಮಂ ವಿವರಿಸಲು ಹಿಂಚು ಮುಂಚಿನ್ನದಿರಿ ಕೋವಿದರು (ಗಾಚಣಾ. ೪-೪೭); ಇವುಗಳ ಕಾಲ ಬಹುಶಃ . . . ಕ್ರಿ. ಶ. ೧೨ನೆಯ ಶತಕ ಅಥವಾ ಸ್ವಲ್ಪ ಹಿಂಚುಮುಂಚು ಇರಬಹುದೆಂದು ತಿಳಿಯಬಹುದು (ಕ್ರಾಸಂ. ೫೬). **ಹಿಂಚಾಗು** = ಹಿಂದೆ ಉಳಿ; ಹಿಂದಾಗು: ಈ ಸಂಚಿತವನಳಿಯದೆ ಮುಂಚೆ ತಾನುಂಬ ಅಶನಕ್ಕೆ ನೀಡಿ ಕಾ ಹಿಂಚಾಗಿ ಕೊಂಬ ಪ್ರಸಾದಿಯ ನೋಡಾ (ಪೋಪಮಾ. ೭೦-೨೬೬); ಹಿಂಚಾದುದಾಹವದೊಳು ನಿನ್ನ ಪಾತೆಂದು ಪಂಚಾಸ್ಯ ನಗುತೆ ಕೋಲ್ಗಳಿತ (ಕೋಚಕ. ೪೯ ೩೨). **ಹಿಂಚು ಮಾಡು** = ಹಿಂದೆ ಸರಿಯುವಂತೆ ಮಾಡು; ಹಿಂದೆಗೆಸು; ಹಿಮ್ಮೆಟ್ಟಿಸು: ವಿಂಚುಗಳ ಸಂಚಯವ ಹಿಂಚು ಮಾಳ್ಪ ಮಳತರ ಚಂಚಲದೃಗಂಚಲದ . . . ಚವಳೆಯರಿರ್ದರ್ (ಸೌಂಪ್ರ. ೦೭ ೩೫). **ಹಿಂಚುಮುಂಚಾಗು** = ಹಿಂದುಮುಂದಾಗು: ಉಂಚಯ . . . ಚಿಟ್ಟಿ ದಕಗಳಂ ಚದುರರು ತಂದಲ್ಲಿ ಹಿಂಚುಮುಂಚಾ[ಣಾಣಾ. ಬಿ]ಗೆ ಪಾಱಿಸು ಶಿಹರು (ಕುಣಾಣಾ. ೪-೮೪); ನವಗ್ರಹಗಳೊಂದೊಂದು ಮೂಱು ನಕ್ಷತ್ರಂಗಳೊಡಗೂಡುತಾ ಕಾಂ ಚಮತ್ಕೃತಿಯೊಳಿರ್ಪತ್ತೇಳನೊಳಕೊಂತು ಹಿಂಚು ಮುಂಚಾಗಿಹವು (ಜಕೃಕ. ೪-೬ ೬೦); ನೂರರೊಳರಪತ್ತು ದೈಪದ ಯತ್ನವು ಪುರುಷಯತ್ನವು ನಲವತ್ತು ಇದು ಹಿಂಚುಮುಂಚಾದರೆಮಗಾಗ ವಿಜಯವು ಕೇಪಲ ಕನುನ ಸೊತ್ತು (ಕಂತ್ರಚಿ. ೦೪೦-೬೪). [<ಪಿಂಚು₁]

ಪಿಂಚು₃ 'ಪಿಂಚೆಯ' ನೋ.

ಪಿಂಚೆಯ, ಪಿಂಚು₃, ಪಿಂಜೆ₂, ಪೆಂಚೆ, ಪೆಂಚೆಯ (ನಾ). ೧. ನವಿಲುಗರಿ: ಪಿಂ[ಣಾಣಾ. ವೆಂ]ಚೆಯದ ದಂಡೆ ಸುಶ್ರಿದ ಚಂಚತ್ಕಟಿಸೂತ್ರವೊಪ್ಪೆ . . ಚುಚಿತಿಯಾ ವಿಪ್ರರಾಜಪಥ ಕಂಡಾಗಳ್ (ಕೃಕಾಶ್ರ. ೦೨ ೩೨). **ಪಿಂಚು₃ :** ೨. ಅನ್ನದ ಗಂಜಿ: ಪಂಚಪಾಯಸ ಪತ್ಕಫಲ ಚತುಷ್ಕಂ ಒಹುಳದಿಂ ಚಿಲ್ಲ ಸವಿಗೊಡುವ ನವರಸಾವಳಿಯುವಳ ಪಿಂಚೊಗೆದು ರುಚಿ ಕೊಡುವ ರಾಡಾನ್ನ ತೊಗೆ ತುಪ್ಪವುಂ ಚದುರಿನಿಂದ ನೀಡಿ (ಲಂಗಕ್ಷ. ೦೩-೦೩). **ಪಿಂಜೆ₂ :** ೩. (ನವಿಲಿನ ಗರಿಯ) ಕುಂಚ; ಪಿಂಛ: ಕರ್ಣ ವರ್ಣೀ ಲಳಿತಲತಾಗಿಯಂಗಜನ ಬಿಜ್ಜೆಯ ಪೀಲಿಯ ಪಿಂಜೆಯಿಂಬಿನು (ಪಾಂ. ೬-೦೪೦). **ಪೆಂಚೆ :** ೧. ಕನ್ನಡಿ ಕಡಂಗ ಪೆಂಚೆಯ ಕುಂಚ . . . ಹೊಂಗಟ್ಟುಚಿತ್ರಗಳ ಪಿಡಿದು ಸೇವಕಜನರು ಕಣ್ಣೆವೆಯಿಡದೆ ಹರಿಯ ನಿರೀಕ್ಷಿಸುತ ಬಂದು (ಆಪಂಣಾ. ೦-೩-೪೨). ೪. ನವಿಲು: ಅಚೆಗಳ್ಕೊಳ್ಳರ್ವಕ್ಕಿಗಳ್ಕೊನ್ನಪಕ್ಕಿಗಳ್ಪೆಂ[ಣಾಣಾ. ಳ್ಪಂ] ಚೆಗಳ್ಗಿಳಿಗಳಿಣೆಪಕ್ಕಿಗಳ್ಪಜವೆಗಳ್ಕೊಂಚೆಗಳ್ಕೋಗಿಲೆಗಳಲ್ಲಲ್ಲಿಗೊಪ್ಪಿದುವು ಸಜ್ಜೀವಭಾವದಿಂದೆ (ಕೃಬಣಾ. ೦೭-೨೩). **ಪೆಂಚೆಯ :** . ನಿಂಬಪಾಲೆಯ ಕಿಱುವೀಲಿಯ ಪೆಂಚೆಯದ ಕೇಶಬಂಧದೊಳು . . . ಪಸದನಂಗೆಯ್ದು (ಜಾಪು. ೪-೬೦ ೮).

[< ಸಂ. ಪಿಚ್ಛ, ಪಿಚ್ಛಾ]

ಪಿಂಛ (ನಾ). ೧. ಹಕ್ಕಿಗಳ ರೆಕ್ಕೆ.—ಗರಿ: "ತನೂರುಹಂ . . . ಛದಃ, ಪಿಂಛಂ, ವಾಜಃ, ಪಕ್ಷಃ—ಈ ೯ ಎಱ(೧)ಕೆ" (ಹಲಾಯು. ೪೦-೬೬): "ತನೂರುಹಂ, ಪಿಂಛ . . . ವಾಜಮೆನೆ ಪಕ್ಷಿಗಳ ಗಱಿಯಕ್ಕುಂ" (ಸುಂಗಣಾ. ೫೦-೨). ೨. ನವಿಲುಗರಿ; ಪೀಲಿ: 'ಪಿಂಛಾತಪತ್ರ' ಪರಾ. ೩. ನವಿಲುಗರಿಯ ಕುಂಚ: ಪಿಂಛ ಕಮಂಡಲಾದಿ ವ್ಯವಹರಣ ವಿಲೋಕನಮುಮೆಂಬಿವು ಮೊದಲಾದ ಸತ್ಕಲ್ಪಮುಂ ಲಿಪ್ಸಿ ವೇಟ್ಟ ಶ್ವೇತಪಟಯೂವನೀಯ ಕಾಷ್ಮ ದ್ರಾವಿಡ . . . ಇಂದ್ರಸಭೆಯ ಸಮುಚ್ಚಯಮಪ್ಪ ಸುಶಯವಿಖ್ಯಾತ್ಯಸಮಾ (ಪಾಂಗ. ೩). [ಸಂ.]

ಪಿಂಛಭೃತ್ರ (ನಾ). ನವಿಲುಗರಿಯಿಂದ ಮಾಡಿದ ಕೊಡೆ.—ಧರ: ಧ್ವಜೋತ್ಕರಸಂದೋಹ ಸಮುಮುಂ ಬಿಸುಟ್ಟಿಡುಗಿ ಪಿಂಛಭೃತ್ರಮುಂ . . . ಬಾದರ್ ಭಯಭ್ರಾಂತಿಯಿಂ (ಆಪಂ. ೦೪-೬೬). [ಪಿಂಛ + ಛತ್ರ]

ಪಿಂಛಧ್ವಜ (ನಾ). ನವಿಲುಗರಿಯಿಂದ ಮಾಡಿದ ಧ್ವಜ.—ಬಾವುಟ: ಕುಂಡಲಾಲಪುರವರೆ ಶ್ವರಃ . . . ಭಗವದರ್ಹನ್ಮುಖಾಲೋಕ ಪಿಂಛಧ್ವಜ ವಿಭೂಷಣಾ (ಆಪು. XVIII. ೨೦೦-೪ : ೧೬೫೫ ೪೪). [ಪಿಂಛ + ಧ್ವಜ]

ಪಿಂಛನು 'ಪೆನ್ನನ್ನು' ನೋ.

ಪಿಂಛಾತಪತ್ರ (ನಾ). = ಪಿಂಛಭೃತ್ರ: ಗಗನತಳದೊಳ್ ವಜ್ರಸಾರಮೇಂ ಬ ರಥಾನೀಕ ಛತ್ರಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ ಮಹಾವಿಭೂತಿಯೊಳ್ ಕೂಡಿ (ಪಕ್ಕಾಂಣ ೬೨-೬); ಇದಱೊಳ್ ಮೂರ್ಧಾಭಿಷೇಂ ತನಗೆ ಗತ ಸಾಮಂತಾಯ್ತು ಪಿಂಛಾತಪತ್ರಾ ವುದಿದೆತ್ತಂ ತನ್ನೆ ಬಲ್ಮಾಡುವುದು ಗರ್ವ (ಪಂಪಣಾ. ೦೩-೧೬); ಭವಿಸೆ ಪೋಲ್ವುದು . . . ಜಲದೇವಿಯು ಪಿಂಛಾತಪತ್ರಮನೆ ಶತಪತ್ರಾ (ಗಣಾಯು ೬-೪೦); ಬರುಳೊಳ್ತುಂಬಿದ ವುಡಿಗತ್ತುರಿಯಂ ಸುಳಿಗಾಳಿ ವೂಸಿ ಮೇಲಕ್ಕೆತ್ತ ತರುಣಿಯ ಮುಖಲಕ್ಷ್ಮಿಗೆ ಪಿಡಿದುರುತರ ಪಿಂಛಾತಪತ್ರಮೆನೆ ಇಕ್ಕೆಸೆಗುಂ (ತ್ರಿಶಂ. ೪-೦೦೩). [ಪಿಂಛ + ಆತಪತ್ರ]

ಪಿಂಜ (ಗು). ೧. ದಿಗ್ಭ್ರಮೆಗೊಂಡ; ಭ್ರಾಂತಿಗೊಂಡ; ತಬ್ಬಿಬ್ಬಾದ. (ನಾ). ೨. ಮನಸ್ಸಿನ ಗೊಂದಲ; ದಿಗ್ಭ್ರಮೆ. ೩. ಚಂದ್ರ. ೪. ಶಕ್ತಿ. ೫. ಒಂದು ಬಗೆಯ ಕರ್ಪೂರ. ೬. ಕೊಲ್ಲುವಿಕೆ. [ಸಂ.]

ಪಿಂಜಡಿ (ಕ್ರಿ). ಹಿಂದಕ್ಕೆ ತಾಗು,—ಬಡಿ,—ಅಪ್ಪಳಿಸು: ವಸಜಾಕ್ಷಿಯಳ ವದನಚಂದ್ರಮನ ರಾಹು ತಾ: ಕಿನಿಸಿಂದೆ ಪಿಡಿದು ನಿಂದಿರ್ಪಂತೆ ನಿಡಿದಾದ ವೇಣಲು ಪಿಂಜಡಿವುತಿರೆ (ನವಮೋ. ೦೫-೪೭). [ಪಿಂ (< ಪಿನ್) + ಜಡಿ₂]

ಪಿಂಜಣಿಗ (ನಾ). ಒಂದು ಬಗೆಯ ವೃತ್ತಿ, ಮತ್ತು ಆ ವೃತ್ತಿಯನ್ನು ಕೈಗೊಂಡವನು: ಪಿಂಜಣಿಗರು ಅಸಗರು ಸಹ × × × ನಾಡ ದಳವಾರಿಕೆ . . . ಸಮರ್ಪಿಸಿಯಿರಲಾಗಿ (ಎಕ. XI, ಹೊಳಲ. ೧-೦೪ ; 1557).

ಪಿಂಜಣಿಗಂಗುತ್ತುಗೆ = ಪಿಂಜಣಿಗ ವೃತ್ತಿಯವರ ಮೇಲೆ ಹಾಕುವ ತೆರಿಗೆ: ನಾಡ ತಳವಾರಿಕೆ ವರ್ತನೆ ಪಿಂಜಣಿಗಂಗುತ್ತುಗೆ ಯಲೆಂಗು ಮಮಂ ಮಹರ್ನವಮಿ ಉಲುಪೆ . . . ಕಾಣಿಕೆ ಇವ್ವಗಳು ಸಹವಾಗಿ ಯಿವ ಉಂಟಾವ ಯಿತಿಬಾಧೆಗಳನು ಬಿಟು (ಸಿಇಇ. IX—II, ೬೬೬-೦೫ ; 1566).

[?]

ಪಿಂಜರ (ಗು). ೧. ಕಂದುಬಣ್ಣದಿಂದ ಕೂಡಿದ; ಮಾಸಲುಕೆಂಪು ಬಣ್ಣದ: ಪಿಂಜರತನುಗಳ್ ಕೊಳದಿಂ ಕೊಳಕ್ಕೆವಾಯ್ವಳಿತತಿಗಳ್ ವನ ಮೊಸದು . . . ಅನುಕರಿಸಿಬ್ಯಂ (ಪರಾಮ. ೧-೫೪); ಮುರಿದ ಜಡೆಗಳ ರಜಃಪಿಂಜರವ ಸಂತತಾ ಸುಂದರೋರಂಗ ಶುಃಪಿಕಾಗಾಶ್ರಯವಾದ ಪರಮವಪಾವಿರೂಪಾಕ್ಷ ಲಬ್ಧುಮಂ ಪೊರೆಯಲಾಗತಜನರನು (ಕಬಪು. ೪ ೦). ೨. ಹಳದಿ ಬಣ್ಣದಿಂದ ಕೂಡಿದ; ಹೊಂಬಣ್ಣದ: ಅವುಃಯ ಕನಕಾಮ್ಜಪಿಂಜರವರಾಗುಂ ಗಾತ್ರದೊಳ್ ತೆಪುಟ್ಟಿ ಕೊಳದಿಂ ಕೊಳಕ್ಕೆ ಅಗುತಿರ್ಪ . . . ಭೃಸುರಸಂಚಯಳು (ಸುಗುಮಾ. ೯-೩೦). (ನಾ). ೩. ಕೆಂಪು ಮಿಶ್ರಿತವಾದ ಹಸುರು; ಹಳದಿ ಬಣ್ಣ: "ಕೆಂಬಸುರೆನೆದಿರೆ ಪಿಂಜರವೆಂಬುದು" (ಮಪ್ರಕೋ. ೦೦೯-೬೬). ೪. ಪಂಜರ; ಬೋನು:

ಆ ಗಿಳಿಯು ಮೂಱುಮನೆಯ ಪಿಂಜರದಲ್ಲಿ ಕೂತು ಕುರುಷ್ಟ ಲಿಂಗ ಪೂಜಾಂ ಲಿಂಗ ಪೂಜಾಂ ಎಂಬುತ್ತಿದೆ (ಸಿದ್ಧಪ. ಕ. ೬೩-೨೦೦) ; ಹೊನ್ನ ಮಾಣಿಕವ ನುಡಿ ಕಾಳಿ ತದಕಿನ ಪಿಂಜರದ ಮುನ್ನೆರಡು ಕಾಳಿ ನುಡಿದಾವ ಹೆಬ್ಬಾಗಿಲಕ (ಕೋಳಗೀ. ೧೯೯) ; ಆದಿಮಧ್ಯಾಂತವಿಲ್ಲದವನನ್ನು ಸಣ್ಣದಾದೀ ನಮ್ಮ ಮನಸ್ಸೆಂಬ ಪಿಂಜರದಲ್ಲಿ ಹೊಗಿಸಲಾರೆವು (ದೇವೀಸೌ. ೩೪). ೫. ಒಂದು ಬಗೆಯ ಹಕ್ಕಿ : ಗಳೆಗಳಂಟಿಗೆ ಸಿಲುಕಿದವು ಪಿಕ್ಕುಳಿಗ ಪಿಂಜರ ಮಂಜರಿಗ ಮಿಂಬುಲಿಗ ಲಾವುಗೆ ಸರಲೆ ಬುಱುಲೆಗಳೆಚ್ಚ ಮಿಂಟೆಯಲಿ (ಕೊರಾ. ೩-೩-೧೬). ೬. ಒಂದು ಬಗೆಯ ಕುದುರೆ. ೭. ಎಲುಬಿನ ಗೂಡು ; ಅಸ್ಥಿಪಂಜರ. ೮. ಬಂಗಾರ : ಚಿನ್ನ. ೯. ಹಳದಿಯ ಬಣ್ಣವಾಗಿ ಉಪಯೋಗಿಸುವ ಒಂದು ಬಗೆಯ ಖನಿಜ : ಹರಿದಾಳ. [ಸಂ.]

ಪಿಂಜರಾಪೋಲು 'ಪಾಂಜರಪೋಳ' ನೋ.

ಪಿಂಜರಿ$_1$. ಹಿಂಜರಿ (ಕ್ರಿ). ಹಿಂದಕ್ಕೆ ಸರಿ ; ಹಿಮ್ಮೆಟ್ಟು : ಒಡನೆಯೆ ಸುಧ್ವಜನುಂ ಪಿಂಜರಿದರಿಯ ಕೈಯಂ ಕುಟ್ಟಿದಂ (ರಾಮಾಶ್ವ. ೯೩-೨೬) ; ಪಿಂಜರಿದು ಸಾವಿನತ್ತಲೆ ಪೋಪ ಪಯಣಂ ? ತೆಗೆ. ತೆಗೆ. ಒಲ್ಲೆನ್ (ಅಶ್ವತ್ಥಾ. ೧೯-೪೦೦). ಹಿಂಜರಿ : ಮಾನಕೆ ಮಾನಿಷ್ಠರಂಜಿ ಹಿಂಜರಿದರೆ . . . ತನಗೆಯೆ ಅಂಜಿ ಹಿಂಜರಿದರು ಭಾಪುರೆ ಎಂದುಬ್ಬಿ ಮೆರೆವನು ಪೋಡಿ (ಇಂಪಾಪ. ೯೪-೩೯) ; ಅವಳ ಧೈರ್ಯವೇ ಧೈರ್ಯ, ಯಾವುದಕ್ಕೂ ಹಿಂಜರಿಯುತ್ತಲೇ ಇರಲಿಲ್ಲ (ಅಂಹೂ. ೩೬) ; ಚಣಚಣಕೆ ವೈರಿಯ ದಳಂ ಬಲಗುಂದುತಳಿದುಳಿದು ಹಿಂಜರಿಯುತೋಡುತಿದೆ ಲೆಕ್ಕಿಸದೆ ವೀರ ಪಾರ್ಥನ ವೀರವಾಣಿಯಂ (ಪತ್ರಾಂಗ. ೬೩-೨೨೬೯).

[ಪಿಂ (< ಪಿನ್) + ಜರಿ$_1$ (< ಸರಿ$_1$)]

ಪಿಂಜರಿ$_2$ (ನಾ). ಒಂದು ಬಗೆಯ ಸರ್ಪ : ಪಿಂಜರಿ ಕಂಧರಕೋಟ ಧನಂಜಯ ಪಾಂಡುರ ಕಶಾಲಿ ಪಿಂಡಾಂಶುಕ ಚಿತ್ರಾಂಜನ . . . ಮಣಿಂಜಯ ಸಮದಂಗಳಾದಿಯಾವಹಿನಿವಹಂ (ವೃಷಿ. ೩೦-೨೮).

[←ತೆಲು. ಪಿಂಜರ./ಸಂ. ಪಿಂಜರಕ]

ಪಿಂಜರಿ$_3$ (ನಾ). ೧. ಚಿನ್ನ ; ಬಂಗಾರ : ವಾಸವದಿಕ್ತಟಂ ಸಮೆದ ಮೂಪೆ . . . ಸಮೀರನೇರಣಿಗನಾಗೆ ನಿದಾಘದ ದೀಪವರ್ತಿಯೊಳ್ ಕಾಸೆ ತೆರಳ್ದ ಪಿಂಜರಿಯಪೋಲ್ ಕಿಸುಸಂಜೆ ತೆರಳ್ವಿನಂ (ಅಪಪು. ೬-೭೦). ೨. ಬೆಳ್ಳಿ ; ರಜತ : "ಪಿಂಜರಿಯೆಂದು ಬೆಳ್ಳಿ" (ಕಶಾ. ೩೦-೬೨) ; ಪಿಂಜರಿಯ ನಗಮೊ . . . ಸುಧೆಯಾ ರಂಜಿಪ ರಾಶಿಯೊ ತಾನೆನೆ ನಂಜುಂಡನ ಸದನಮೊಂದು ಸಲೆ ಶೋಭಿಸುಗುಂ (ಹಮ್ಮೀರ. ೬-೩೪) ; ಕಿಸುಪೊನ್ನ ಪಿಂಜರಿಯ ಚೆಂದವಗಲ್ಲ ಕೋಂಟೆಯ ಮೂಪಳಸಿನಗಟಿಂದೊಳಗೆ . . . ಸಿಂಗರದೊಂದು ದೇಗುಲಂ ಕಣ್ಗೆಡ್ಡವಾಗಿ ರಂಜಿಕುಂ (ರಾಮಾಶ್ವ. ೩೪-೧೯). [<ಸಂ. ಪಿಂಜರ]

ಪಿಂಜರಿ$_4$ (ನಾ). ಮೇಲ್ಕಟ್ಟು ; ವಿತಾನ : "ಪಿಂಜರೀ—ಮೇಲ್ಕಟ್ಟು" (ಕಾಶಕ್ಯ. ೨೬೦). [ಸಂ. ಪಿಂಜರೀ ?]

ಪಿಂಜರಿತ (ಗು). ೧. ಹೊಂಬಣ್ಣದಿಂದ ಕೂಡಿದ ; ಹಳದಿ ಮಿಶ್ರಿತ ಕೆಂಪುಬಣ್ಣದ : ಆಭರಣದ ಮಾಣಿಕಂಗಳ ಪೊದಟ್ಟರುಣಾಂಶುಗಳಿಂದ ಮಂದು ಪಿಂಜರಿತಪಿಶಂಗಿತಾರುಣಿತದಿಙ್ಮುಖಮಾದುದು ತನ್ಮಹೋತ್ಸವಂ (ಅಂಪು. ೭-೧೦೪) ; ಸುರಭಿಮಲಯರುಹಪಂಕಪಿಂಜರಿತ ರಜತಶುಕ್ತಿಕೆಗಳಿಂ (ಪಂರಾಮಾ. ೧೨-೨ ಪ) ; ಕಿಂಜಲ್ಕಮಂಜರೀಪಿಂಜರಿತದಿಶಾವಲಯಂ (ಹಶಕಾ. ಪರಿ. ೨೩೦). (ನಾ). ೨. ಹಳದಿಮಿಶ್ರಿತವಾದ ಕೆಂಪುಬಣ್ಣವುಳ್ಳದು ; ಹೊಂಬಣ್ಣವುಳ್ಳದು : ವಿಯತ್ತಳಂ ಬಗೆದು ನೋಟಿಪ್ಪೊಡೆ ನಾಡೆ ಪತತ್ಪತತ್ರಿಜರ್ಝರಿತಮೆ ದಿಕ್ತಟಂ ರಿಪುನರಾಧಿಪರಕ್ತಧುನೀಪ್ರವಾಹಪಿಂಜರಿತಮೆ ಬೀರಮಂ ಪೊಗಟ್ವನೇವೊಗಟ್ವಂ ಕದನತ್ರಿಣೇತ್ರನಾ (ಪಂಪಭಾ. ೧೪-೪) ; ಮೇಣಲ್ಲಲ್ಲಿ ಮಂಜುಮೆಯ್ ರವಿಕಿರಣರಾಗದಿಂ ಕಿಂಜಲ್ಕಪಿಂಜರಿತಮಾಯ್ತು (ಕ್ರೀರಾಮಾ. ೨೬೮-೮೦). [ಸಂ.]

ಪಿಂಜರಿವಟ್ಟಲ್ (ನಾ). ಬೆಳ್ಳಿಯ ಬಟ್ಟಲು : ಪಿಂಜರಿವಟ್ಟಲೊಳ್ಮಿಱುಪ ಸೀಧುವನೀಂಟುತೆ ನೋಡಲಲ್ಲಿ ಮೇಣ್ಮಂಜುಮುಖೇಂದು ಬಿಂಬಿಸೆ ಸುಧಾರುಚಿ ಸಿಲ್ಕಿದನೆಂದು ನೋಟ್ಪ ತತ್ಕಂಜದಳಾಕ್ಷಿಯಂ (ಶಾಪ್ತಪ. ೩-೭೮).

[ಪಿಂಜರಿ$_3$ + ಬಟ್ಟಲ್]

ಪಿಂಜರಿವೆಟ್ಟು, ಪಿಂಜರಿವೆಟ್ಟು (ನಾ). ಬೆಳ್ಳಿಯ ಬೆಟ್ಟ ; ರಜತಾದ್ರಿ : "ರಜತಾದ್ರಿಯಕ್ಕು ಪಿಂಜರಿವೆಟ್ಟವೆನಲು" (ಕಶಪ. ೬೬). ಪಿಂಜರಿವೆಟ್ಟು : "ಪಿಂಜರಿವೆಟ್ಟೆಂದು ಬೆಳ್ಳಿವೆಟ್ಟಂ" (ಕಶಾ. ೪೯-೪೫) ; ಪಿಂಜುಂ ರೂಪಿಪ ಲಿಂಗದೊಂದು ಪರಿಜಂ ತಾಳ್ದೆಲ್ಲರಂ ರಕ್ಷಿಸಲ್ ನಂಜು ಪಿಂಜರಿವೆಟ್ಟನೇ ಮಱೆತದೇಂ ಕಂಗೊಳ್ವನೋ ಮೈಮೆಯಿಂ (ಮೃಸೂಮ. ೨-೦೩).

[ಪಿಂಜರಿ$_3$ + ಬೆಟ್ಟ]

ಪಿಂಜರಿವೆಟ್ಟು 'ಪಿಂಜರಿವೆಟ್ಟ' ನೋ.

ಪಿಂಜರಿಸು (ಕ್ರಿ). ಹೊಂಬಣ್ಣದಿಂದ ಆವರಿಸು,—ವ್ಯಾಪಿಸು : ಜಂಬೂದ್ವೀಪದ ಮೇರುವಿನ ಸಮಕ್ಷದೊಳು ಸಂಜನಿಯಿಸಿದಾ ಜಂಬೂಫಲರುಚಿ ಪಿಂಜರಿಸಿದುದೋ ಭುವನತಳಮನೆನೆ ರಂಜಿಸಿದುದು ಕಳ್ತಲೆ (ಇಯಕಾ. ೦೩-೬೨). [ಪಿಂಜರ + — ಇಸು$_3$]

ಪಿಂಜಲ, ಪಿಂಜಳ (ಗು). ೧. ಅತಿಯಾಗಿ ದಿಗ್ಭ್ರಮೆಗೊಂಡ ; ಕಂಗೆಟ್ಟ ; ತಬ್ಬಿಬ್ಬಾದ. ಪಿಂಜಳ : (ನಾ). ೨. ಧೂಳು ; ಹುಡಿ : ಅಂಜನಗಿರಿಯಂ ಚೂರ್ಣಿಸಿ ಪಿಂಜಳಮಪ್ಪಂತೆಯದಂ ಮೆಯ್ವತ್ತದವೋಲ್ ರಂಜಿಪ ಜಾಂಡಕರಂಡದೊಳಂಜನಮಂ ತುಂಬಿ ಬೊಮ್ಮನಿರಿಸಿದನೋ . . . ಎಂಬಂತೆ ದಿಕ್ಚಕ್ರದೋಳ್ ಕಳಾಭೀಳಮಹಾಂಧಕಾರಮೆಸೆಗುಂ (ಹಮ್ಮೀರ. ೩-೦೩). [ಸಂ.]

ಪಿಂಜಳ 'ಪಿಂಜಲ' ನೋ.

ಪಿಂಜಳಕ (ನಾ). ಧೂಳು ; ಹುಡಿ : "ಧರಣೀಸಮುತ್ಥಿತಂ ಪಾಂಸುರೇಣುಚೂರ್ಣಾಭಿಧಾನಕಂ ಕ್ಷೋದಂ ಧೂಳಿ ರಜಂ ಪರಾಗಮೆಂದಿವು ತೆರಳ್ಗುಪುದಿದಿರ್ದುದಕ್ಕುಮದು ಪಿಂಜಳಕಂ" (ಪಸ್ತುಕೋ. ೯೦-೦೩).

[ಸಂ. ಪಿಂಜಲಕ]

ಪಿಂಜಾರ, ಪಿಂಜಾರಿ (ನಾ). ೧. ಹಿಂಜುವವನು ; ಹೆಕ್ಕುವವನು : "ಪಿಂಜಾರಃ = ಹಿಕ್ಕುವಂ" (ಕಾಶಕ್ಯ. ೨೬೦). ೨. ಅರಳೆಯನ್ನು ಬಿಡಿಸುವವನು,— ಹಿಂಜುವವನು : "ಪಿಂಜಾರಃ —ಅರಳೆಯನೆಕ್ಕುವಂ" (ಕಾಶಕ್ಯ. ೨೩೬) ; ಕುಂಬಾಱ ಹೊಟ್ಟೆಯಲಿ ಪಿಂಜಾರ ತಾ ಹುಟ್ಟಿ ಕುಂಭಿಕುಂಭಿಗಳನಳಿಯುತ್ತ ಕುಂಭಿನಿಯೊಳಿಂಬುಗೊಂಡಾನು (ಸರ್ವಜ್ಞ. ೦೦೯೪) ; ಅವತು ನಿದ್ದೆ ಹೋದಾಗ ತುರುಗಳು ಊರ ಪಿಂಜಾರನ ಹೊಲ ಹೊಕ್ಕು ಬೆಳೆ ತಿಂದುಬಿಡುವುವು (ಪರಸ. ೭೦೬) ; ನಮ್ಮ ದೇಶದಲ್ಲಿ ವಸ್ತ್ರವನ್ನು ಹುಟ್ಟಿಸುವ ಕೆಲಸದಲ್ಲಿ ಪಿಂಜಾರ ... ನೇಕಾರ ಮುಂತಾದ ಕೈಕೆಲಸದವರು ಬೇರೆಬೇರೆ ಭಾಗಗಳನ್ನು ವಹಿಸಿಕೊಂಡು ಅಷ್ಟೇ ಮುಗಿಸುತ್ತಾ ಹೋಗುತ್ತಾರೆ (ಮುಂಬಯಿ. ೩-೨೫೩). ೩. ಸೇವಕ ; ಗುಲಾಮ ; ಆಳು : ಸಾವಿರ ಕುದುರೆಯ ಸರದಾರ, ಮನೆಯ ಹೆಂಡತಿಗೆ ಪಿಂಜಾರ (ಸಂಪಾಪ. ೦೩೬). ಪಿಂಜಾರಿ : ೨. ಪಿಂಜಾರಿಯರು ಪಸಾರಿಯರು . . . ಮೊದಲಾದ ಪಾನಾಜಾತಿ (ಸೌಗಂಧಿ. ೦೨೩-೯). ೩. ಪಲ್ಲಕ್ಕಿಯ ಮೇಲ್ಮುಸುಕು,— ಆಚ್ಛಾದನೆ : "ಪಿಂಜಾರಿಃ = ದಂಡಿಕೋರ್ಧ್ವಾಚ್ಛಾದನಂ" (ಕಾಶಕ್ಯ. ೨೩೬).

[←ಹಿಂ. ಪಿಂಜಾರ ; ಮರಾ. ಪಿಂಜಾರೀ]

ಪಿಂಜಾರಿ 'ಪಿಂಜಾರ' ನೋ.

ಪಿಂಜಾರಿಕೆ (ನಾ). ಅರಳೆಯನ್ನು ಹಿಂಜುವ ಕೆಲಸ ; ಹಾಸುಗೆ, ಗಾದಿ ಮೊದಲಾದುವುಗಳನ್ನು ಮಾಡುವ ಕೆಲಸ,—ಉದ್ಯೋಗ : ಸಂಯುಕ್ತ ಪ್ರಾಂತದ ಹೊರತಾಗಿ ಉಳಿದ ಕಡೆಯಲ್ಲೆಲ್ಲ ಬಹುಶಃ ಪಿಂಜಾರನು ಮಂಸಲ್ಮಾನನೇ ಇರುವುದರಿಂದ ಈ ಪಿಂಜಾರಿಕೆಯು ಉದ್ಯೋಗವು

ಮುಸಲ್ಮಾನರ ಆಳಿಕೆಯಲ್ಲಿ ಉದಯವಾಯಿತೆಂಬುದು ಸ್ಪಷ್ಟವಾಗುವುದು (ಪಾಕಿಶಾ. ೨೫). [ಪಿಂಜಾರ + —ಇಕೆ]

ಪಿಂಜಾವಳಿ (ನಾ). ಒಂದು ಬಗೆಯ ವಸ್ತ್ರ : ಮಲಯಜ ಶ್ರೀಗೌರಿ ಗೆಣೆಯುಂ ... ಚಂದ್ರಾತಪಂ ಭೂತಿಳಕಮುಂ ಮಣಿವಟ್ಟು ಪಿಂಜಾವಳಿಯು ಸಂಧ್ಯಾರಾಗವುಂ ಕೈದೊಡಕುದಯರಾಗ (ಬಸವು. ೦೦-೨೪).

[? + ಪಳ್ಳಿ (< ಪಟ್ಟು)]

ಪಿಂಜೆ$_1$ 'ಪಿಂಜು$_2$' ನೋ.

ಪಿಂಜೆ$_2$. ಹಿಂಜೆ (ನಾ). ಅರಳೆಯ ಸುರುಳಿ ; ಹಂಜೆ : (ಕಿ). ಹಿಂಜೆ : ಹತ್ತಿಯ ಹಿಂಜೆ (Sliver)ಯಲ್ಲಿ ಎಳೆಗಳೆಲ್ಲವು ಅಸ್ತವ್ಯಸ್ತವಾಗಿ ಇದ್ದರೆ ಉಪಯೋಗವಿಲ್ಲ (ಶಾಂಸ್ತ್ರ. I. ೪೦೭); ಹಾಸುಹೊಕ್ಕಿಗೆ ಪಕ್ಕಾದ, ಗಂಜಿಗೆ ಹಿಂಜೆಯಾದ, ನನ್ನೀ ಕೈಲಾಳಿಯ ಮಗ್ಗಕ್ಕೆ ಪಂಜಾದ ನನ್ನೂರಿನ ಹಿರಿಯರೆಲ್ಲರ ಕ್ಷಮಾಪಣೆ ಹಾಗೂ ಆಶೀರ್ವಾದ ಕೋರುತ್ತೇನೆ (ನಸ್ಸೂರು. ಪೀಠಿಕೆ. ೦೫). [< ಸಂ. ಪಿಂಜಾ]

ಪಿಂಜು$_1$. ಹಿಂಜು (ಕ್ರಿ). ೧. ಬೇರೆ ಬೇರೆ ಮಾಡು ; ವಿಭಾಗಿಸು : "ಪಿಂಜು-ಪೃಥಕ್ಕರಣೇ" (ಕಸುರಾ); ಹೊಂಜಾಳಿಗೆಯನಿತ್ತ ರಂಗಶೇಖರಗಾಗ ಪಿಂಜೆ ಮನ್ನಿಸಿದ ಮೇಳವನು ಸಿಂಜಿನಿ ಶಿಖರಿಣಿಯರಿಗೆ ಮತ್ತೊಲಿದ ಪರಂಜಿಯಾಭರಣವನಿತ್ತ (ಭರಕ. ೦೩-೧೪೫). ೨. ಅರಳೆಯನ್ನು ಹೆಕ್ಕು,—ಬಿಡಿಸು,—ಚೊಕ್ಕಟ ಮಾಡು : "ಪಸುಗೆಯೊಳ್ ಕಾರ್ಪಾಸ ವಿವರಣದೊಳಂ ಪಿಂಜು" (ಕಸ್ಕಸುಂ. ೮೮). ೩. ಬೇರೆ ಬೇರೆಯಾಗು ; ಬಿಡಿಬಿಡಿಯಾಗು ; ವಿರಳವಾಗು ; ದೂರವಾಗು : ಮಂಜು ಮುಸುಂಕೆ ಕೊಂಕುಗೊಸರಿಂ ಮಸುಳ್ಗೊಂಡ ಬಿಸಪ್ರಸೂನವೋ ಪಿಂಜದೆ ಪೂಣ್ದು ಪೊಣ್ಮೆ ಪೊಗೆಸುತ್ತಿದ ಪುತ್ತಳಿಯೋ . . . ಎನಲ್ (ಪಕವಿ. ೩-೩೦). ಹಿಂಜು: ೧. ಮೋಡವ ಹಿಂಜಿ ಜನರಿಗೆ ಅಂಜಿ ರವಿ ಅಡಗಿದನಂದು (ಅರಳು. ೦೪೪-೦೫). ೨. ಹಿಂಜಿದರಳೆಯ ಹಿಂಡೊ ? ಐರಾವತದ ದಂಡೊ ? ಮಂಜೊ ? . . . ಮಲೆಯ ಕಲೆಯಾ ಬಂಡೆಯಲ್ಲೇನ ನಾ ಕಂಡೆ ? (ಅಸಿಕೇ. ೯-೦೩); ತೆರೆತೆರೆಯಾಗಿ ಹಿಂಜಿದ ಅರಳೆಯಂತೆ ಮೋಡಗಳು ತೇಲಿ ತೇಲಿ ಹೋಗುತ್ತಲಿದ್ದವು (ಗಾಳಿಗು. ೦೩); ಶಾಂತಾಳು ಹಿಂಜಿದ ಹತ್ತಿಯಂತೆ . . . ಬಂಡೆಗಲ್ಲಿನೊಳಗಿಂದ ತಿಳಿನೀರು ಜುಳು-ಜುಳು ಹರಿದಂತೆ ನಕ್ಕದ್ದೂ ಕೂಡಿತು (ಅಪಶಾ. ೦೦೮); ಹಳತು-ಹೊಸತನು ಹಿಂಜಿ ಹೊಸೆದು ಹೊತ್ತಿಸಿ ಹಿಡಿದ ಶಾಂತಿ-ಪಣತಿ (ಪಂಸುಂ. ೫೦-೧೦); ಹಿಂಜಿದ ಹತ್ತಿಯ ಚೂರುಗಳಂತಿರುವ ಮೋಡದ ಚುಕ್ಕೆಗಳು . . . ಕಾಣಿಸಿಕೊಳ್ಳುತ್ತವೆ (ಹಸುಹೊ. ೨೫೩) ೪. ತೆಳುವಾಗು ; ಚೊಕ್ಕಟವಾಗು ; ಶುದ್ಧವಾಗು : ಕಸರು ಕಳೆದ್ರತಮ ಹಿಂಜಿ ಬಂತು ರವಿಕಿರಣ ನೂಲುವಂತೆ (ಅರಳು. ೪೦೪-೮); ಹೊಗೆ ಮೋಡ ಹಿಂಜಿ ಕಣ್ಮರೆಯಾಗುವಂತೆ ನೆನಸಿದ ರೂಪ ಹುಡಿಯಾಗುತಿದೆ (ಉಯ್ಯಾರೆ. ೪-೦); ಮುತ್ತಿದ ಮೋಡ ಚದರಿ, ಹಿಂಜಿ ಹೋಗಿ ಸಾಂದ್ರ ಚಂದ್ರಿಕೆ ಚೆಲ್ಲಬಹುದು (ಬೇಲಿಕ. II, ೨೦೯). ೫. ಬಟ್ಟೆಯ ಎಳೆಗಳು ದೂರವಾಗು ; ಜಾಳಾಗು : ಮೊನ್ನೆ ತಾನೇ ತೆಗೆದುಕೊಂಡ ಸೀರೆ ನೀರಿಗೆ ಹಾಕಿದ ಕೂಡಲೆ ಹಿಂಜಿ ಹೋಯಿತು (ರೂಠಿ). ೬. ವಿಸ್ತಾರ ಮಾಡು ; ವಿಸ್ತರಿಸು : ಓಡುತ್ತಿರುವ ಕುದುರೆಯ ಒಂದು ನಿಮಿಷವನ್ನು ಹಿಂಜಿ ಹತ್ತು ಘಂಟೆಯ ಕಾಲವನ್ನಾಗಿ ಮಾಡಬಲ್ಲೆನಾದರೆ (ಶಿಸಂಸ. I, ೨೫೭). ೭. ಸೂಕ್ಷ್ಮವಾಗಿ ಪರಿಶೀಲಿಸು ; ಕೂಲಂಕಷವಾಗಿ ವಿಚಾರ ಮಾಡು : ಈ ಪ್ರಶ್ನೆಯನ್ನು ಇನ್ನೂ ಅಷ್ಟು ಹಿಂಜಿ ನೋಡೋಣ (ಮಾಶಾದ. VI. ಎರಡು ಮಾತುಗಳು); ತನ್ನ ಚಿಂತೆಗಳ ಒಳಪದರುಗಳನ್ನು ಹಿಂಜುವುದರಲ್ಲಿ ಒಂದಾದಳು (ಮೂರುಬಾ. ೫೦); ನನ್ನ ಬುದ್ಧಿಗೇನೋ ದೌರ್ಬಲ್ಯ ಬಂದು . . . ಸಣ್ಣಮಾತನ್ನೇ ಹಿಡಿದು ಹಿಂಜುತ್ತಿದೆ (ಪಸಂಶಾ. ೨೫); ಈ ಹಾಡನ್ನು ಹಿಂಜಿ ಅರ್ಥ ಮಾಡಿ ನೋಡಿದರೆ ಈ ತೊಡಕು ಬಗೆಹರಿದು ಹೋಗುವುದು (ಕನ್ನಸಾ. ೪೫).

[ದೇ.॥ ಮಲ. ಪಿಚ್ಚು, ಪೀಚ್ಚು ; ತೆಲು. ಪಿಂಜು]

ಪಿಂಜು$_2$, ಪಿಂಜೆ$_1$ (ನಾ). ಹೀಚುಗಾಯಿ : ಮಿಡಿ : (ಕಿ). ಪಿಂಜೆ$_1$: "ಪಿಂಜೆ ತೀರ = ಸಣ್ಣ ಕಾಯಿ" (ಪಾಸಕೋ. ೧೫). 'ಪೀಚ್ಚು$_2$' ಪರಾ. [ದೇ.॥ ತಮಿ. ಪಿಞ್ಚು ; ಮಲ. ಪಿಞ್ಚು; ತೆಲು. ಪಿಂದಿಯ, ಪಿಂದೆ]

ಪಿಂಜೂಲ (ನಾ). ದರ್ಭೆಗಳ ಕಟ್ಟು : ಮುತ್ತುಗದ ದೊನ್ನೆಗಳಲ್ಲಿ ನೀರು ತುಂಬಿಕೊಂಡು ದರ್ಭೆ ಪಿಂಜೂಲಗಳನ್ನು ಹಿಡಿದು ಮಂತ್ರಜಲವನ್ನು ಪ್ರೋಕ್ಷಿಸುತ್ತ ಬಂದರು (ಮಹಾಣ. ೯೮). [ಸಂ.]

ಪಿಂಜೂಷ (ನಾ). ಕಿವಿಯ ಮಲ : ಗುಗ್ಗೆ. [ಸಂ.]

ಪಿಂಜೆ$_1$ (ನಾ). ನೆರಿಗೆ ಹಾಕಿ ಕಟ್ಟಿದ ಕಚ್ಚೆ. 'ಪಂಚಕಚ್ಚೆ' ಪರಾ.

ಪಿಂಜೇ ಹಾಕಿ ಧೋತ್ರವನ್ನುಡು=ಒಳ ಅಂಗಿಯ ಮೇಲೆ ಬರುವಂತೆ ಮಡಿಕೆಗಳನ್ನು ಒಳಸೇರಿಸು,—ಸಿಕ್ಕಿಸು : (ಸ್ಕಾಂಪರ್).

[← ತೆಲು. ಪಿಂಜೆ, ಪಿಂಜಿಯ]

ಪಿಂಜೆ$_2$ 'ಪಿಂಚೆಯ' ನೋ.

ಪಿಂಜೆ$_3$ (ನಾ). ೧. ಬಾಧೆ ; ನೋವು. ೨. ಅರಿಸಿನದ ಪುಡಿ,—ಹುಡಿ. ೩. ಅರಿಸಿನದ ಬಣ್ಣ : ಮೆಯ್ಯ ಬಣ್ಣಮುಂ ಪುಣ್ಯಮುಮರಿಸಿನದ ಪಿಂಜೆ[ಪಾಕಾಂ. ಜಿ]ಯಂತೆ ಪಾಱು ಪೋಕುಂ (ಅರ್ಧನೇ. ೫-೪ ಪ). ೪. ಅರಳೆ; ಹತ್ತಿ. ೫. ಬೆತ್ತ ; ಸೆಳೆ. [ಸಂ. ಪಿಂಜಾ]

ಪಿಂಜೆಱಂಗು (ನಾ). ಹಿಂಭಾಗದ ಸೆರಗು : ಪೊಂಜೆಳೆ, ಪಿಂಜೆಱಂಗು (ಕಸ್ಕಾಸು. ೯೩ ಪ್ರಯೋ). 'ಮುಂಜೆಱಂಗು' ಪರಾ.

[ಪಿಂ (< ಪಿನ್) + ಸೆಱಂಗು]

ಪಿಂಡ (ನಾ). ೧. ಮುದ್ದೆ ; ಉಂಡೆ : ಕುಂಡಲಿಯ ಕಂಡಾತ ಹೆಂಡತಿಗೆ ಒಲಿಯುವನೆ ಕಂಡಿತದೊಳಿಪ್ಪ ಶಿವಯೋಗಿ ಮಾಂಸದ ಪಿಂಡಕೊಲಿಯುವನೆ (ಸರ್ವಜ್ಞ. ೫೦೫). ೨. ಗುಂಪು ; ಸಮೂಹ : "ಪಿಂಡಂ ಸಲೆ ಸಂತೆ ನೆರವಿ ಜಾಳಿಗೆ ತೆಮ್ಮಲ್" (ಕವಿಕಂ. ೧೦೬); ಅದೇಂ ಕಣ್ಗೊಳಿಸಿದುದೊ ವಿನ[ಕ್ಷ]ತ್ರಕಚ್ಛತ್ರಪಿಂಡಂ[ಪಾಕಾಂ. ಸಿಧಂ] (ಪಂಪಶಾ. ೦೩-೩೮); ರವಿಹಯಲಾಲಾಪಿಂಡಂ ದಿವಿಜನದೀಫೇನಮಾಲೆ . . . ಎಂಬಿನಮಲ್ಲಲ್ಲಿಗೆ ಧವಳಾಂಬುದಪಟಲಮೆಸೆದುದು (ಪಗಸಿ. ೪-೬೧). ೩. ಆಹಾರ ; ಉಣಿಸು: ರುಚಿಯಲ್ಲದ ಪಿಂಡಂ ಕುದಿರೆಗೆ ತಾಂ ಪೊಲ್ಲದೆನಿಪ ಕವಳಮನಿಷ್ಟಂ (ಅಕ್ಕಶಾ. ೭-೮೦); ದಂಡ ತಪ್ಪಿಸುತ ಪಿಂಡ ಗಳಿಸಿ ಉಂಡಾಡಿಭಟ್ಟನಾಗಿ . . . ದಪ್ಪ ಅಕ್ಷರದ ಪದವಿ ಪಡೆದು ಇಹೆ ಮೇಲು ಸಾಲಿನಲ್ಲಿ (ಅರಳು. ೪೨೯-೫); ನಾವು ಹೀಗೆ ಮತ್ತೊಬ್ಬರು ಹಾಕಿದ ಪಿಂಡವನ್ನು ತಿಂದುಕೊಂಡು ಸದಾ ನರಕವನ್ನು ಅನುಭವಿಸದಂತೆ ಬೇಗ ಏನಾದರೂ ಏರ್ಪಾಡು ಮಾಡು (ಪಸಶಾ. ೨೮). ೪. ಒಂದು ಸಲಕ್ಕೆ ನುಂಗುವಷ್ಟು ಆಹಾರ ; ತುತ್ತು ; ಕಬಳ : ಒಂದು ಅನ್ನದ ಪಿಂಡವನ್ನು ನನ್ನನ್ನು ಳಿಸಲು ನೀಡುವವರಿಲ್ಲದಾಗ ಅದೇ ಸುಖವಾದ ಸುಲಭ ಹಾದಿ ಎಂದುಕೊಂಡಿದ್ದೆ (ಪೀಸಪಾ. ೩೧೧). ೫. (ದೇವತೆಗಳಿಗೆ, ಪಿತೃಗಳಿಗೆ ಅರ್ಪಿಸಲಾಗುವ) ಅನ್ನದ ಮುದ್ದೆ ; ನೈವೇದ್ಯ : ಕುತ್ತಮಂ ಕಿಡಿಸುವ ನಿಮಿತ್ತ ಚಂಡಿಕೆಗೆ ಪಿಂಡಮನಿಟ್ಟುಂ . . . ರೌದ್ರದೇವತೆಗಳಂ ಕೊಂಡಾಡಿ ದುಃಖದಿಂದಾಳುತ್ತಂ ಮುಳುಗುತ್ತಂ ಇಪ್ಪರು (ಶಾಸ್ತ್ರಪೀ. ೪೭-೮); ಇವನಿಂದ ಸತ್ತ ಮ್ಯಾಲ ಅಷ್ಟು ಪಿಂಡಾ ಕಂಡೇವು ಅನ್ನೋ ಒಂದು ಭರವಸೆ ಹುಟ್ಟಿತದ (ಗಂಮಾಯಿ. ೦೦೭). ೬. ಗರ್ಭದಲ್ಲಿರುವ ಭ್ರೂಣ : ಅಂಡಜವೆಂಬ ತತ್ತಿಯೊಡೆದು ಪಿಂ[ಶಾಕಾಂ. ಬಂ]ಡ ಪಲ್ಲಟವಾಗಿ ಗಂಡ ಗಂಡರನಱಿಸಿ ತೊಳಲಿ ಬಳಲುತ್ತೈದಾರೆ (ಅಪಸಂ. ೪-೦೩); ಕ್ಷಯರೋಗದ ರೋಗಾಣುಗಳು ತಾಯಿಯಿಂದ ಪಿಂಡಕ್ಕೆ

(Foetus) ಹೋಗುವುದಿಲ್ಲ (ಕಂಠೋ. ೮ ಕಾಪೋದ್ಯಾನ); ಮನುಷ್ಯನೊಡನೆ ಮನುಷ್ಯ ತಿಕ್ಕಾಡಿ ತೀರ ಒಂದು ಪಿಂಡವನ್ನು ಸೃಷ್ಟಿಸಿಡಲಿಲ್ಲ (ಪಿಂಡ. I, ೬೮). ೭. ಶಿಶು ; ಹಸುಳೆ ; ಮಗು : ಜಗಕೆ ಚೋದ್ಯದ ತನುಜೆ ಜನಿಸಲು ಬಗದು ನಮ್ಮಯ ಹೆಸರನಿಡುವುದು ಅಗಣಿತದ ಗಂಡೊಂದು ಪಿಂಡವು ಜನಿಸುವುದು ಬಳಿಕ (ರೇವಕಾ. ೪-೨೫); ಅವ ನಿನ್ನ ಕೊಲ್ಲದೆ ಮಾಣ ಶಿಶುವೆಂದುದಾಸೀನ ಬ್ಯಾಡ ಮಾಯ ಮಂತ್ರದ ಪಿಂಡವು (ಕಪಸೋ. ೧೧-೨೫). ೮. ದೇಹ ; ಶರೀರ : "ತನುಃ, ತನೂಃ . . . ಪಿಂಡಂ, ಕ್ಷೇತ್ರಂ, ಗಾತ್ರಃ, ಅಪಘನಃ, ಮೂರ್ತಿಃ—ಈ ೧೭ ಶರೀರಂ" (ಪಲಾಯು. ೮೪-೩೫೬) ; ಆ ಗುಂಗುಱ ಬಾಯಲ್ಲಿ ಕತ್ತರಿವಾಣಿ ಕಾಲಿನಲ್ಲಿ ಕಂಡೆಹ ಅಂಡದಲ್ಲಿ ಕಾಳಕೂಟ ಪಿಂಡವೆಲ್ಲವೂ ಅಸಿಯ ಬಳಗ (ಅಜಿಪು. ೪. ೦೩೩-೦೦೮); ಪಿಂಡವೆಂದರೆ ಶರೀರವು (ಪ್ರಿಹ್ಮಶಾ. ೩೯೮ ಅಜಿಪ). ೯. (ಶರೀರದ) ಒಂದು ಭಾಗ ; ಅಂಗ : Brain (ಮೆದಳು) ಎಂಬುದು ಶರೀರದ ಒಂದು ಪಿಂಡ (ಶಾಪಾತ್ಮ. ೦೦೮). ೧೦. ದಪ್ಪ ; ಗಾತ್ರ : ಗೋಡೆಯ ಯೆತ್ತರವು ೩೦ ರಿಂದ ೫೦ ಘೂಟನವರೆಗೆ ; ಪಿಂಡವು ಸರಾಸರೀ ಮಾನದಿಂದ ೨೦ ಘೂಟು ಇರುತ್ತದೆಂದು ಹೇಳಬಹುದು (ಳಭಾಗೆ. ೫೫). ೧೧. ಗಟ್ಟಿಯಾದುದು. ೧೨. ಒಂದು ಬಗೆಯ ಸುವಾಸನಾ ದ್ರವ್ಯ ; ಸಾಂಬ್ರಾಣಿ. ೧೩. ಕಬ್ಬಿಣ.

ಪಿಂಡ ಒಗೆ=ಶರೀರವನ್ನು ಬಿಡು ; ಸಾಯು : ದೂರದ ಊರಿನಿಂದ ಮಗ ಬರುವ ಹೊತ್ತಿಗೆ ತೀರಾ ಸುಸ್ತಾಗಿದ್ದ ಅವರು ಪಿಂಡ ಒಗೆದು ನಡೆದಿದ್ದರು (ಕೂಡಿ). [ಸಂ.]

ಪಿಂಡಂಗೆಯ್ (ಕ್ರಿ). ಮುದ್ದೆ ಮಾಡು; ಉಂಡೆಯಾಗಿ ಮಾಡು : ಆಕಾಶದೊಳ್ಚಂದ್ರನಂ ಮುನ್ನಂ ನಾಲ್ಕೊಗನೊಪ್ಪವಿಟ್ಟ ಬಗೆಯೋ . . ಚಿನ್ನಿಂ ಪೊಂದಿದ ಬೆಣ್ಣೆಯಂ ತೆಗೆದು ಪಿಂಡಂಗೆಯ್ದು ಮೇಲಿಟ್ಟನೋ (ಪಂಪಾಕ. ೨-೫೮). [ಪಿಂಡ + ಕೆಯ್$_1$]

ಪಿಂಡಕ (ನಾ). ಒಂದಂ ಬಗೆಯ ಸುಗಂಧವಸ್ತು ; ಲೋಬಾನ. [ಸಂ.]

ಪಿಂಡಖರ್ಜೂರ (ನಾ). ಒಂದು ಬಗೆಯ ಖರ್ಜೂರ ; ಮೆದುವಾಗಿ ಇರುವ, ಉತ್ತಮದರ್ಜೆಯ ಖರ್ಜೂರ : ಪಿಂಡಖರ್ಜೂರದಲ್ಲಿ ಬೇಸರಪಟ್ಟು ಹುಣಿಸೆಹಣ್ಣನ್ನು ತಿನ್ನಲು ಬಯಸಿದವನಂತೆ ರಾಣೀವಾಸದ ಉತ್ತಮಾಂಗನೆಯರನ್ನು ತಿರಸ್ಕರಿಸಿ ನೀನು ಮುನಿಪುತ್ರಿಯನ್ನು ಬಯಸುವವನಾದೆ ! (ಶಾಳುಂತ. ೨೪-೦೮). [ಪಿಂಡ + ಖರ್ಜೂರ]

ಪಿಂಡಗಲ್ (ಕ್ರಿ). ಗುಂಪಿನಿಂದ ದೂರವಾಗು ; ಒಂಟಿಯಾಗು : ನೆಗಟಿ ಕಳಸ್ವನಂ ಕಳಮದಿಂ ಕಳಮಕ್ಕೆ ವನಾಳಿಯಿಂ ವನಾಳಿಗೆ . . . ಪಿಂಡಗಲದೆ ಪಾಱುತಿರ್ಪುವಿದಿರುಂಬಟಿಯುಂ ಶುಕಭೃಂಗಹಂಸಕೇಕಿಗಳ್ (ಜಗನಿ. ೯-೮೭). [ಪಿಂಡು$_2$ + ಅಗಲ್$_1$]

ಪಿಂಡಗೊಳ್ಳು (ಕ್ರಿ). ಒಟ್ಟಾಗಿ ಸೇರು ; ಒಂದಾಗು : 'ಕಾವ್ಯಾಕ್ಷಿ'ಯ ಮುನ್ನುಡಿಯಲ್ಲಿ ನಾನು ಹೇಳಿದ ಮಾತು ಇಂದೂ ಹೇಳಬಹುದು ; ಜಾತಿ ಅದೇ. ಆದರೆ ಒಗರು-ಪೊಗರು ಕಣ-ಕಣದಲ್ಲಿ ಪಿಂಡಗೊಂಡಿದೆ (ಸಂಸಮು. IV, ಕಾಲ್ಕು ಮಾತು); ನಿರ್ದುಷ್ಟಸತ್ತ್ವವು ನವನೀತದಂತೆ ಪಿಂಡಗೊಂಡು ಮೂರ್ತಿಯಾಗಿ ರಾಜಸಿಕದ 'ತಾನೇ ಈಶ್ವರ' ನೆಂಬ ಅಹಂಭಾವಕ್ಕೆ ಮದ್ದಾಗುವವರೆಗೆ ಮಲೆನಾಡಿನ ಕತೆಯೇನು ? (ಸಂಜನಂ. ೬ ಮುನ್ನುಡಿ).

[ಪಿಂಡ + ಕೊಳ್ಳು$_1$ (< ಕೊಳ್$_1$)]

ಪಿಂಡಚ್ಚನೆ (ನಾ). (ಅರ್ಚನಾರೂಪವಾಗಿ ಮಾಡುವ) ಸಮೂಹ ನೃತ್ಯ ; ಮೇಳನರ್ತನ : ಪಂಡಿತಪನೇಜಪನಪಾರ್ತಂಡಂಗಾಲಂಬಿಹಾರ ಸುಮನೋಮಾಲಂ ಪೆಂಡಿರ ಕುಚಕೋಕಚಯಂ ಪಿಂಡಚ್ಚನೆಯಾಡುವಂತೆ ನರ್ತಿಸಿತಾಗಳ್ (ರೇಲಾಶ. ೧೨-೦೦). 'ಗೊಂದಳವೆಕ್ಕಣ' ಪರಾ.

[ಪಿಂಡು$_2$ + ಅಚ್ಚನೆ$_1$ (< ಅರ್ಚನೆ)]

ಪಿಂಡಚ್ಛೇದ (ನಾ). ಪಿತೃಗಳಿಗೆ ಪಿಂಡಪ್ರದಾನ ಮಾಡುವುದಕ್ಕೆ ಯಾರೂ ಇಲ್ಲದಂತಾಗುವುದು,-ಪಿಂಡ ಹಾಕುವುದು ನಿಂತುಹೋಗುವಿಕೆ : ಮಗಳನೀವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ ಮಗನ ನೀವೆನಪ್ಪೊಡೆ ಸಂತತಿಚ್ಛೇದಮುಂ ಪಿಂಡಚ್ಛೇದಮುಮಕ್ಕುಮದಱಿಂದೆನ್ನನೆ ಕುಡಲ್ವೇಟ್ಕುಂ (ಸಂಪಭಾ. ೩-೨೫ ಪ). [ಪಿಂಡ + ಛೇದ]

ಪಿಂಡಜ (ನಾ). ಭ್ರೂಣದಿಂದ ಹುಟ್ಟಿ ಬರುವ ಮನುಷ್ಯ, ಪಶು ಮೊದಲಾದುವು : ಆಕಾಶ ಒಂದಂಡಜ ಪೃಥ್ವಿ ಒಂದು ಪಿಂಡಜ ಎರಡಱ ಮಧ್ಯದಲ್ಲಿ ಪಕ್ಷಿ ಮಱಿಗಳನಿಕ್ಕಿತ್ತ ಕಂಡೆ (ಅಪನಂ. ೧೭೦-೭೬೮); ಅಂಡಜ ಇಪ್ಪತ್ತೊಂದು ಲಕ್ಷ ಪಿಂಡಜ ಇಪ್ಪತ್ತೊಂದು ಲಕ್ಷ . . . ಇಂತು ಎಂಬತ್ತು ನಾಲ್ಕು ಲಕ್ಷ ಜೀವರಾಸಿಗಳೊಳಗೆ (ಅಬಂಡೇ. ೬-೭). [ಸಂ.]

ಪಿಂಡಪಾತ (ನಾ). ೧. ಪಿಂಡವನ್ನು ಕೊಡುವುದು. ೨. "ಭಿಕ್ಷಾಪಾತ್ರದಲ್ಲಿ ದೊರೆತ ಅನ್ನ" (ಸ್ವಕಾಪ. ಪಿಸ್ವಪ. ೯೩) : ಆವ ಪಿಂಡವನ್ನುಂಡವನೆ ಸುಗತ ನಿರುಪಧಿಶೇಷ ನಿರ್ವಾಣವಡೆದಪನೊ. ಅರಿಯಿರೈ ಆ ಪಿಂಡಪಾತದ್ವಯಂ ಪಿಂಡಪಾತಾಂತರದಿನೆನಿತೊ ಆಯುಷ್ಕರಂ. ಯಶಸ್ಕರತರಂ . . . ಮಹಾಫಲತರಂ ! (ಸ್ವಕಾಪ. ೭೩-೨೫೪). [ಸಂ.]

ಪಿಂಡಪಾದ(ನಾ).ದಪ್ಪವಾದ ಕಾಲುಗಳನ್ನುಳ್ಳುದು; ಆನೆ. [ಸಂ.]

ಪಿಂಡಪ್ರದಾನ (ನಾ). ಶ್ರಾದ್ಧದಲ್ಲಿ ಪಿತೃಗಳಿಗೆ ಪಿಂಡವನ್ನು ಅರ್ಪಿಸುವುದು : "ನಿವಾಪಃ—೧ ಪಿತೃದಾನಂ—ಪಿತೃ ಪಿತೃತ್ವವನ್ನು ಹೊಂದಿದವರು, ತೃಪ್ತಿಪಡುವದಕ್ಕೋಸ್ಕರ ಮಾಡಲ್ಪಡುವ ದಾನಂ, ತಿಲೋದಕ ಪಿಂಡಪ್ರದಾನಗಳ ಹೆಸರು" (ಸಿದ್ಧಾಂತಿ. ೨೨೩); ಮುಂನ ತಂಮಡಿಯಕ್ಕ ಮೋಚಲಮಹಾದೇವಿಯರು ಸ್ವರ್ಗಸ್ತರಾದವರ ಪಿಂಡಪ್ರದಾನದಲು ನೀರದೇವಾಲ್ಯದಲು . . . ಧಾರೆ ಎರ [ದ] ೧೨ ಡು (ಸೌಇಇ.VII.೧೭೭-೮; 1302); ಈ ಸಖನ ಕಳೇವರಮಂ ದಹಿಸಿ ಅಸ್ಥಿಯಂ ವಾರಣಾಸಿಯಲ್ಲಿ ಬಿಟ್ಟು ಗಯೆಯಲ್ಲಿ ಪಿಂಡಪ್ರದಾನಂ ಮಾಡಿ (ಪನ್ನಶಾ. ೬-೧೫೯ ಪ).

[ಪಿಂಡ + ಪ್ರದಾನ]

ಪಿಂಡಮರ್ದನ (ನಾ). ಮುದ್ದೆಯಾಗುವಂತೆ ಬಡಿಯುವುದು,-ಚಚ್ಚುವುದು; ನಜ್ಜುಗುಜ್ಜು ಮಾಡುವುದು : ನಿನ್ನುಮಂ ಸೆಱೆಗೊಂಡ ಕೊಂಡು ಪಿಂಡಮರ್ದನಂ ಮಾಡದೆ ಬಿಡುವೆನೆ, ನೋಡೆಂದು ಪೊಂಗಱಿಯ ಕೂರಂಬುಗಳನಾರ್ದೆಚ್ಚಂ (ರಾಮಾಶ್ವ. ೧೫೬-೨೪). [ಪಿಂಡ + ಮರ್ದನ]

ಪಿಂಡಮೂಲ (ನಾ). ಕೆಂಪುಮೂಲಂಗಿ ; ಕ್ಯಾರಟ್ಟು : "ಪಿಂಡೀತಕಂ—ಪಿಂಡಮೂಲ" (ಓಷಂ. ೯೭). [ಸಂ.]

ಪಿಂಡರಂಗ (ನಾ). ವಜ್ರದ ಹೊರಮೈ ಅಥವಾ ಹೊರಭಾಗದ ಕಾಂತಿ : ಲಾಲಿಸೈ ಬಾಹಿರದಿ ಪ್ರಜ್ವಲಿಪ ಪ್ರಭೆಯಿರಲು ಲೀಲೆಯಿಂ ತಿಳಿಯದನು ಪಿಂಡರಂಗವದೆಂದು ಬಾಲಾರ್ಕನಿದಿರಿನೊಳು ಪಿಡಿಯೆ ರತ್ನದ ಮಧ್ಯೆ ಛಾಯೆ ತಾ ತೋರುತಿರಲದು ಛಾಯರಂಗಮದೆಂದು (ರತ್ನಶಾ. ೧೦-೧೩).

[ಪಿಂಡ + ರಂಗ]

ಪಿಂಡರಿಕೆ (ನಾ). ಮೊಳಕಾಲಿನ ಕೆಳಭಾಗ ; ಮೀನಖಂಡ : ಪ್ರತಿಹುಂಕಾರಕ್ಕೆ—ಪ್ರತಿಕ್ರಂದನದ ಸೆಳೆತಕ್ಕೆ ನಡುಗುವ ಕಾಲ ಪಿಂಡರಿಕೆಗಳು ಮೊದಲು ಅಧೀರವಾಗಿ ಬರುತ್ತ ನಿರ್ಧಾರವಾಗಿ ನಡೆಯಹತ್ತಿದವು (ರಕ್ತರ್ಯ. ೩೪೩); ಪಿಂಡರಿಕೆಗಳಿಗೆ ಬಿದ್ದ ಬಾರಕೋಲ ಹೊಡೆತ ಕಾಲುಗಳನ್ನು ತ್ವರಿತವಾಗಿ ಓಡಿಸುತ್ತಿದ್ದವು (ಭಾಗಿ. ೬೪).

[←ಹಿಂ. ಪಿಂಡರೀ, ಪಿಂಡಲೀ ; ಮರಾ. ಪಿಂಡರೀ, ಪಿಂಡರೀ]

ಪಿಂಡಲು, ಪಿಂಡಿಲು, ಹಿಂಡಲು, ಹಿಂಡಿಲು (ನಾ). ೧. ಮೊತ್ತ; ರಾಶಿ : ತೊರೆದುಗುವ ತೋರಮೊಲೆಗಳನುಂಡು ಕಟು ಪಿಂಗೆ ಪಾಲ ಧಾರೆಗಳೊಕ್ಕು ನೊರೆಯ ಪಿಂಡಲು ಪೊಂಗೆ (ಅಸಂಪು. ೯-೦೭ ಪಗಳೆ). ಪಿಂಡಿಲು: ೨. ಪೊದರು; ಮೆಳೆ: ಸಿಡಿಲಿನ ಕುಡಿನಾಲಿಗೆಯೊಲು ನಿಮಿರುವ

ಮಿಡುಗ ಬರಲು ಕೈಕೊಂಡು . . . ಪೊಡೆದನಾ ಶಂಭುಕನಡಗಿರ್ದ ಬಿದಿರ ಪಿಂಡಿಲನು (ಶಂಕಪ. ೦೩-೩೩). ಹಿಂಡಲು : ೨. ಬಿದಿರಿನ ಹಿಂಡಲಿನಲ್ಲಿ ಅಡಗಿ ಕುಳಿತರೆ, ಯಾರಿಗೆ ತಿಳಿದೀತು ? ಹಿಂಡಲಲ್ಲಿ ಹುಲಿಯ ಹೆದರಿಗೆ ಗಂಟ ಸಹ ಬರಲಾರದು (ಕ್ಷತ್ರಹೊ. ೩೦) ; ಕೊಳದ ಮೂಡಿಗೆ ಕೇದಕೆಯ ಹಿಂಡಲು ಇಲ್ಲವೇನವ್ವ. ಆ ದಾರಿಯಲ್ಲಿ ನಡೆಯಿತು ನೋಡಿ ಎಂದಳು (ಹಪ್ರಸ. ೦೫) ; ಗಡಿಬೀಲಿಯ ಮುಂಡಾಗದ ಹಿಂಡಲಿನಲ್ಲಿ ಕಣ್ಮರೆಯಾಗಿದ್ದ ಕಾಲುದಾರಿಯ ಸಮೆದ ನುಣ್ಪಿನ ಬೂದುಬಣ್ಣಾವ ರೇಪೆ (ಪುಕಮು. ೪೩). ಹಿಂಡಿಲು : ೧. ತನ್ನ ಮದುವೆಯ ಕಿಂಜಿಗೆ ಹಿಂಡಿಲನ್ನು ಕಡಿದು ನನ್ನ ಮೇಲೆ ತಳ್ಳುತ್ತಿದ್ದಾನಲ್ಲಾ ಎಂಬ ಸಿಡುಕೂ ಅವರ ಸುಟ್ಟಿವ ನುಡಿಗಳಿಗೆ ಕಾರಣವಾಗಿತ್ತು (ಪುಕಮು. ೩೮೫). ೨. ಬಿದಿರ ಹಿಂಡಿಲ ಮುಳ್ಳು ಗುಜುಲು ನಟ್ಟಿಣದೊಳಗ್ಗದ ಕಾಲಗತ್ತಲೆಯೊಳಂ ಪೋಗಬೇಕಲಾ. . .ವಾಪಿಗಳು (ಪಕ್ಕಪು. ೪-೦೮-೦೩) ; ಬಿದಿರ ಹಿಂಡಿಲುಗಳಾವರಿಸಿ ಬೆಳೆದಿಹ ಬಿಂಡಿಲುಗಳೊತ್ತೊತ್ತಿಲುಬುದ ತಂಡ ತಂಡದ ಬಳ್ಳಿ ಗಿಡು ಮರ ಮೆಜ್ಜೆದುದ್ದೊಗ್ಗಿನಲಿ (ಕ್ಷಶ್ರಾಕ. ೪-೦೦) ; ಬೆತ್ತದ ಹಿಂಡಿಲು, ವಾಟೆಯ ಹಿಂಡಿಲು, ಬಿದಿರ ಹಿಂಡಿಲು, ಗುರಿಗ ಹಳು ಎಲ್ಲ ಕಿಕ್ಕಿರಿದು-ಬೆಳೆದಿದ್ದು, ಯಾವಾಗಲೂ ಸರಲು ನೀರು ಹರಿಯುತ್ತಿದ್ದ ತಾಣ (ಪುಕಮು. ೬೩). [ಪಿಂಡು + ಅಲು (<-ಅಲ್)]

ಪಿಂಡಸ್ಥ (ನಾ). [ಜೈನ] ಧ್ಯಾನದ ಪದಸ್ಥ, ಪಿಂಡಸ್ಥ, ರೂಪಸ್ಥ ಮತ್ತು ರೂಪಾತೀತಗಳೆಂಬ ನಾಲ್ಕುವಿಧಗಳಲ್ಲಿ ಒಂದು ; ಆತ್ಮ ಚಿಂತನೆಯಿಂದ ಸಂಸಾರಬಂಧನವನ್ನು ನಷ್ಟಗೊಳಿಸುವುದು : ಪದಸ್ಥಂ ಪಿಂಡಸ್ಥಂ ರೂಪಸ್ಥಂ ರೂಪಾತೀತಂ ಎಂದು ಧ್ಯಾನಂ ಚತುರ್ವಿಧ ಮಕ್ಕುಂ (ಜಚಾರ. ೪೭೩). [ಸಂ.]

ಪಿಂಡಳಿಗೆ (ನಾ). ಒಂದು ಬಗೆಯ ತೆರಿಗೆ.—ಸಂಂಕ : ಪ್ರತಿವರುಷವು ಪಿಂಡಳಿಗೆಯಾಗಿ ಶಿಲುವ ಗ ೧೮ (ಶೂಂಶಾ. ೦೯೩೩. ಜಾಪೀಂ. ೪೨—೮; 1101). [?]

ಪಿಂಡಟಿ (ಕ್ರಿ). ಗುಂಪು ಚೆದರಿ ಹೋಗು.—ಚೆಲ್ಲಾಪಿಲ್ಲಿಯಾಗು ; ಹಿಂಡೊಡೆ : ದಿವಿಜಕುಜಂಗಳಾರವೆಗಳಾದುವು ಸಿದ್ಧರಸಂ ಶತೂಕಮಾದುವು ಸುರಧೇನು ಪಿಂಡಟಿಯದೊಂದೆಡೆಯೊಳ್ ನೆರೆದಿರ್ದುವು (ಹಂಧಾಪು.೩-೦೧೪). [ಪಿಂಡು + ಅಟು]

ಪಿಂಡಾಂತ (ನಾ). ದೇಹ; ಶರೀರ : ಪಿಂಡಾಂಡಮೆಂದುದು ಸ್ಥೂಲಕಾರಣ ಸೂಕ್ಷ್ಮ ತನುವಿನಲಿ (ಹಂಕಾ. ೧೭) ; ನಿಃಕಲ ಪರಶಿವನಿಗೆ ಮುನ್ನಿನಂತೆ ಜಗತ್ಸೃಷ್ಟಿ ಮಾಡುವ ಲೀಲೆದೋಱಲು ಆ ಪ್ರಭವೀಂದ್ರನಿಗೆ ನಿನ್ನ ಸದ್ಭಕ್ತಿಂದ ಪಿಂಡಾಂಡಗಳ ನಿರ್ಮಿಸು ಎಂದು ಪೇಳಲು (ಕ್ಷತ್ರಹೊ. ೧. ೬೨) ; ಎಂದು ಅಷ್ಟತನುಗಳು ನಿರ್ಮಿತವಾಗಿ ಪಿಂಡಾಂಡವಾದುವು ಅಂದು ಇಂದು ಪರಿಯಂತರ ಬಂದೆನಯ್ಯ ಬಹುಜನ್ಮಂಗಳಲ್ಲಿ (ಆಪಂಚೆ. ೬-೩). [ಪಿಂಡ + ಅಂಡ]

ಪಿಂಡಾಕ್ಷರ (ನಾ). ಸಂಯುಕ್ತ ವ್ಯಂಜನಾಕ್ಷರ : ಈಳಿದ ಪಿಂಡಾಕ್ಷರಂಗಳು ಆಕರ್ಷಣಕರ್ಮದೊಳಂ ಅಹುದು ಪೀಕಾರದಿಂದಂ ಸಾರಸ್ವತಸಿದ್ಧಿಯಕ್ಕುಂ (ಕ್ರಪ್ರಕ್ರಿ. ೦೦-೦೩). [ಪಿಂಡ + ಅಕ್ಷರ]

ಪಿಂಡಾದಾನ (ನಾ). ಆಹಾರವಸ್ತು, ಪಡಿ ಅಥವಾ ಕೂಲಿಯನ್ನು ಕೊಡುವುದು : ೫೦ ಗದ್ಯಾಣ ಪೊನಂ ಪಿಂಡಾದಾನದಿಂದಂ ಧರ್ಮ್ಮವತ್ಸರೆಯಿಂ ಪಿಜ್ಜುವಂತಾಗಿ ಧಾರಾಪೂರ್ವಕಂ ಮಾಡಿ . . . ಕೊಟ್ಟರ್ (ಶಾಇಶ. XI-II. ೦೩೪-೬೩ : 1104) ; ಸರ್ವ್ವಬಾಧಾಪರಿಹಾರವಾಗಿ ಪಿಂಡಾದಾನವಾಗಿ ಕೊಟ್ಟರು (ಮೈಆ. ೦೯೩೭. ೪೦-೩೫ ; 1228) : ನಿಯತಿ ಪಿಂಡಾದಾನ [ಕ್ರ]ಮದಿಂ ಸ್ಥಳಪತ್ತಿ ಕ್ಷೇತ್ರನಿಳಯಂಗಳಂ . . . ಸರ್ವ್ವಾಬಾಧೆ ಪರಿಹಾರವೆನಿ . . . [ವಿಳ]ಸಜ್ಜಳಧಾರಾಪೂರ್ವ್ವಕಂ ಪುನರ್ದ್ದತ್ತಿ ಮಾಡಿ (ಶಾಇಶ. XX. ೩೦೬-೪೪ : 1347) ; ಕಟ್ಟುಗಾತ್ರಗೆ ಪಿಂಡಾದಾನಮಂ ಪಟ್ಟಣಕ್ಕೆ ಒಡಂಬಟ್ಟು ಕೊಟ್ಟರು (ಎಇ. XIV. ಪುಳ. ೦೪೨-೨೨ ; ಷ. 1251). [ಪಿಂಡ+ಆದಾನ]

ಪಿಂಡಾನೆ, ಹಿಂಡಾನೆ (ನಾ). ಹಿಂಡಿಗೆ ಸೇರಿದ ಆನೆ : ಕಾಕಯಿಳ್ಳಿಬಂದು ಪಿಂಡಾನೆಗಳೊಂದುಗೂಡಿ ಶಿಕ್ಷೋಪಕರಣಂದೆರಸು . . . ನಿಜಗಜಂಗಳಂ ಪಣ್ಣಿ ಕೈಗ್ಗೆದು ಪೂರ್ವಾಪವಮನವಷ್ಟಂಭಿಸಿ ಸಂಧ್ಯನುಂ ಎಗೆ ನೆರೆಪದಾಗಳ್ (ಪಾಚಕ. ೬-೦೦ ಪ). ಹಿಂಡಾನೆ : ಗಜಘಟಾವ್ಯೆತಿ ಮೂನರಲಿ ಕೋದಂಬುಗಳು ಹಿಂಡುನೆಗಳನೇಳಂಟನೊದೆದೋಡಿವವೆ (ಶುಪ್ರಕ. ೩-೦೫). [ಪಿಂಡು+ಆನೆ1]

ಪಿಂಡಾಯು (ನಾ). [ಜ್ಯೋತಿ] ಸೂರ್ಯಾದಿ ಗ್ರಹಗಳ ಬಲಾಬಲಗಳೆ ಮೇರೆಗೆ ನಿರ್ಣಯಿಸಿ ಲೆಕ್ಕ ಹಾಕುವ ಆಯುಸ್ಸಿನ ಪ್ರಮಾಣ.—ಪರಿಮಿತಿ : ಇವೆ ನೀಚದೊಳರ್ಧಮನಪಹರಿಸುಗುಮಾ ನೀಚರಾಶಿಯಿಂದಂ ಪೂರ್ವಾಪರದೊಳಿನುವಾತದಿಂ ವರಹಂಸುಗುಮುಳಿ ಗ್ರಹಾ[ಯು] ಪಿಂಡಾಯುವಿನೊಳ್ (ಜಾಕಪ. ೯-೦೨). [ಪಿಂಡ+ಆಯು]

ಪಿಂಡಾಯುಷ್ಕ (ನಾ). = ಪಿಂಡಾಯು : ಧರಣೀಜಂ ಪದಿನೈದು ಘಮೆರುಚಿ ಮತ್ತೊಂಬತ್ತು ಶಾಶಾಂಕ ಪನ್ನೆರಡಿವ್ವತ್ತು ದಿನಾಧಿನಾಥಸುತಂ . . . ದೈತ್ಯಗುರುವಿವ್ವತ್ತೊಂದುಸಂವತ್ಸರಂ ಪರಮೋಚ್ಚಾಂಶದೊಳೊಂದಿನಿಂದೊಡದು ಪಿಂಡಾಯುಷ್ಕವಕ್ಕುಂ ಧ್ರುವಂ(ಜಾಕಪ. ೯-೦೦). [ಪಿಂಡ+ಆಯುಷ್ಕ]

ಪಿಂಡಾರಿ, ಪೆಂಡಾರಿ (ನಾ). ಹಾದಿ ತಪ್ಪಿಯುವಂಥ ಕಳ್ಳರ ಗುಂಪು.—ತುಡುಗರ ಸಮೂಹ : ಇಂದಿಯಾದೇಶದ ಅಭಿವೃದ್ಧಿಯಮ್ಮ ಸಾಧಿಪಲಾ ಪಿಂಡಾರಿಗಳಮ್ಮ ಬಿಡಬೇಕೆಂದು ನಿಮ್ಮ ಹಂಚಿಕೆಯೇನು? (ರಾರಾಚ. ೦೫೯). ಪೆಂಡಾರಿ : ಪೆಂಡಾರಿಯರು ಬರುವಾಗ ಹೆಂದಿರ ಗೊಡವೆಯೇನು ? (ಗಾಪ). [←ಹಿಂ. ಪಿಂಡಾರಾ, ಪಿಂಡಾರೀ; ಮರಾ. ಪೆಂಢಾರಾ, ಪೆಂಢಾರೀ./ತಮಿ. ಪಿಣ್ಡಾರಿ, ಪೆಣ್ಡಾರಿ; ತೆಲು. ಪಿಂಡಾರಿ]

ಪಿಂಡಾಲು (ನಾ). ಒಂದು ಸಸ್ಯ ಬಗೆಯ ಮತ್ತು ಅದರ ಗೆಡ್ಡೆ : "ಕಂದಗ್ರಂಥಿ—ಪಿಂಡಾಲು" (ಓಪಂ. ೫೫) ; "ರೋಮಾಲುಃ—ಪಿಂಡಾಲು" (ಓಪಂ. ೦೯೦). [ಸಂ.]

ಪಿಂಡಿ1, ಹಿಂಡಿ1 (ನಾ). ೧. ಎಣ್ಣೆಯ ಕಾಳುಗಳಿಂದ ರಸ ತೆಗೆದ ಮೇಲೆ ಉಳಿಯುವ ಶೇಷ : ಬೂದಿಪೂದ ಪುಳ್ಳಿಯಂತೆ ಪಿಂಡಿಯಾದ ಎಳ್ಳಿನಂತೆ ಬಸಿಲಂ ಪೊಕ್ಕ ಕೊಬ್ಬಿನಂತೆ (ಕಪೂಕ್ಕು. ೯-೩೩) ; ಪಿಂಡಿಯಿಂದೆಮ್ಮೆಯ ವಾರ್ ಪೆರ್ಚುವಂತೆ ಮೊಲೆವಾಲಿಂ ಮಕ್ಕಳ್ ಪೆರ್ಚುವಂತೆ (ಕಪೂಕ್ಕು. ೦೯-೦೦೪). ಹಿಂಡಿ1 : ೧. "ತೈಲಕಂ ಹಿಂಡಿ" (ಶುಂಗಾ.೦೨೦-೩) ; ಹಿಂಡಿಯಂ ನಂಬಿ ಎಣ್ಣೆಯನುಗುವ ತೆಲ್ಲಿಗನುಮಂ (ಕಪೂಕ್ಕು. ೯-೩೦) ; ಚಂಡಿತನೆಂಬ ಹಿಂಡಿ ಆಡಬೇಕು ದಿಂಡತನವೆಂಬ ವೆಂಡೆ ಮೇವು . . . ಪಾಂಡುರೆಂಗೆ ಗುಂಡಿ ಒಳಗೆ ಹಿಂಡಿಕೋದೇಕು (ಶುಕಂದ. ೨-೩೩-೨) ; ಮಿಂಡೆಯ ಗಂಡ ತಾ ದಂಡಿಗೆ ಹೋಗಿಹರೆ ಹಿಂಡಿಯ ಹೆಡಿಗೆಗೆ ಕೋಣನ ತಂದು ಕಣಾಗಂಡಿತೆ ಹೊಡೆದಂತೆ (ಕಪೂಕ್ಕು. ೦೯೩) ; ಹಿಂಡಿಯನ್ನೂ ಅಡಿನ ಹಾಲನ್ನೂ ಅಂಕೆಲೆ ಬೀಜಗಳೊಡನೆ ಅರದು (ಪಾಗಂಂ. ೪೩೮-೮) ; ಸಂತೆಗೆ ಹೋದಮ ಧೀಮಣ್ಣಾ ಹಿಂಡಿಯ ಕೊಂಡನು ಹತ್ತು ಮಣ (ಕಪೂಕ್ಕು. ೩-೭೩). ೨. ನಂಜಿಕೊಳ್ಳಲು ಮಾಡುವ ಒಂದು ಬಗೆಯ ಖಾರವಾದ ವ್ಯಂಜನವದಾರ್ಥ: "ಚಟ್ನಿ, ಪಾರ" (ಜಾಪಕೋ. ೩೭) ; ಒಳ್ಳಿತೆನಿಸಿದ ತೈಲ ಕುಂಭಕೋಟಿಗಳ ತಂದರು ಹಿಂಡಿ ಕಡಿಗಾಗಿ (ಶಿಪ್ರಹ. ೪-೩೦) ; ಹುಗ್ಗಿ ಕಜ್ಜಿಕಾಯಜೊಯಪ್ಪ ಸೇವಗೆ ಹಿಂಡಿ ಗುಗ್ಗುರಿ . . . ದೋಸೆಯ ಸಬ್ಬಲಗ್ಗೆಯಹೆಳೆಯೊಪ್ಪತಲ್ಲಿ (ಆಪಚ. ೨೦-೦೫೬) ; ಆ ಹುಡುಗಿ ಒಳಗಿನಿಂದ ರೊಟ್ಟಿ, ದೋಸೆ, ಹಿಂಡಿ, ಎರಡು ಉಳ್ಳಾಗಡ್ಡಿ ತೆಗೆದುಕೊಂಡು ಬಂದಿತು (ಪಚಂಕು. ೫೨). ೩. ಒಂದು ಬಗೆಯ ಸಿಹಿಯಾದ ಖಾದ್ಯ : ಕಳಕಳನೆ ಮೊಲೆವಾಲವರ್ಥಿ ಅಳುತಮ್ಮಂ

ಬಾಲಕನ ಕೈಯಲಿ ಮೆಲುವ ಹಿಂಡಿಯ ಕರಣೆಯಂ ಕೊಟ್ಟಂತು ತಾಯ್ತನ್ನ ಮೊಲೆಯನುಱ್ ಮಱಪಿಟ್ಟು ಮೆಲ್ಲನೆ ತೊಲಗುವಂದದಿ (ಐಸಪು. ೨೪-೬೮).

ಹಿಂಡಿಯ ಕಚ್ಚರಿ = ಒಂದು ಬಗೆಯ ಸಿಹಿಯಾದ ಖಾದ್ಯ : ಅದಕ್ಕೆ ಬಾಗಿದ ಕೂಳು ಸೇವಗೆಯ ಪಾಯಸ ಮುಕ್ಕಡಲೆಯ ಹುಗ್ಗಿ ಹಿಂಡಿಯ ಕಚ್ಚರಿ ಅಲಸಂದೆಯ ಗುಗ್ಗುರಿ ಜೇನುತುಪ್ಪ . . . ಮಂತ್ರ ಸಮನ್ವಿತವಾಗಿ . . . ನಿವಾಳಿಸಿ (ಶಾಂಪ. ೦೨೯-೨); ಸೂಸಲುಂಡಿಗೆ ಹಿಂಡಿಯ ಕಚ್ಚರಿ ಜೇನತುಪ್ಪ ಬೆಲ್ಲ ಕಬ್ಬಿನ ಹಾಲು . . . ಇವಂ ಮಂತ್ರ ಸಮನ್ವಿತವಾಗಿ ಶಿಶುವಿಗೆ . . . ನಿವಾಳಿಸಿ (ಶಾಂಪ. ೦೩೦-೨೦).

[< ಪಿಂಡು₁. / ತಮಿ. ಮಲ. ಪಿಣ್ಟಿ; ತುಳು. ಪಿಂಡಿ, ಪುಂಡಿ, ಹಿಂಡಿ; ತೆಲು. ಪಿಂಡಿ]

ಪಿಂಡಿ₂ 'ಪುಂಡಿ' ನೋ.

ಪಿಂಡಿ₃ (ನಾ). ೧. ಮುದ್ದೆ ; ಉಂಡೆ : ಮಂ(ಮುಂ)ಡಸೀಗೆಯ ದಲಮಂ ತಂದರೆದು ತೊಳೆದು ಮಣ್ಣಿನ ಬಾಯೊಳ್ ನಿಲೆ ಪಿಂಡಿಯ ನಿಕ್ಕಲೊಡಂ ತೊಲಗೆ ವಿಷಂ ಸುಖದಿನಿರ್ಪನಾ ದಷ್ಟನವಂ (ಐಸುರ. ೧೬-೧೦೦). ೨. ಗುಂಪು; ಸಮೂಹ : ಗುತ್ತಿ ನೋಡುತ್ತಾನೆ, ಇಂಬಳಗಳ ಪಿಂಡಿ! (ಮರೆಸು. ೧೮). ೩. ಕಟ್ಟು ; ಹೊರೆ : ಹುಲ್ಲ ಹೊರೆಯ ಮಾರುವ ಭಂಡಿಗಳಲಿ ಕಲ್ಲು ತರುವ ಸೌದೆಯ ಪಿಂಡಿಯ ಪುರದಲ್ಲಿಯೇ ತಿರುಗಿಪ (ಭಕ್ತಿಸ. IV, ೦೪-೫); ಅವನ ಮೀಸೆಯ ಕೂದಲು . . . ಹುಲ್ಲಿನ ಪಿಂಡಿ ಇಟ್ಟಾಗ ನೇತಾಡುವ ಹುಲ್ಲಿನಂತೆ ಇದ್ದವು (ಮಹಾಶ್ಯಾ. ೧೯); ಕಮಲಮ್ಮನವರ ಯಜಮಾನರು ವೀಳೆಯದೆಲೆ ಸಾಹುಕಾರರು. ಪಿಂಡಿಗಳಲ್ಲಿ ಸೊಗಸಾಗಿರುವುದನ್ನು ಆರಿಸಿ ತಂದು ಹೆಂಡತಿಗೆ ಕೊಡುತ್ತಾರೆ (ಶಾಯಿಕ. ೩೦). [ಸಂ.]

ಪಿಂಡಿಕ (ನಾ). ಊತ ; ಬಾವು : "ಕರ್ಮವಲೆಯೆಂದೆನಲು ಕಾಮಾಲೆ ಪಿಂಡಿ [ಪಾಠಾಂ. ಪಾಂಡು]ಕಂ" (ಮಂಗರಾ. ೦೦೪-೪). [ಸಂ. ಪಿಂಡಿಕಾ]

ಪಿಂಡಿಕಾಯಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ : ಪಿಂಡಿಕಾಯಿ, ರಾಮಗೋಟು (ಮೃತಿಗಿ. ೫೫-೦೦೦೪).

[ಪಿಂಡಿ₂ (< ಪುಂಡಿ) + ಕಾಯ್ಕ್ (< ಕಾಯ್ಕ್)]

ಪಿಂಡಿಕೆ (ನಾ). ೧. ಊತ : ಬಾವು. ೨. ಕಾಲಿನ ಮೀನಖಂಡ ; ಕಣಕಾಲು : ಪ್ರೋದ್ಬದ್ಧಪಿಂಡಿಕಾಃ . . . ಗಂಟುಕಟ್ಟಿದ ಮಣಿ ಕಾಲುಳ್ಳವರು (ಸ್ವರ್ಗಸಾ. I. ೧೪). ೩. ಚಕ್ರದ ನಾಭಿ; ಗುಂಬ : "ನಾಭಿ ಪಿಂಡಿಕೆಯೆನಲು ಕೂಲುದುಂಬಕ್ಕು [ಪಾಠಾಂ. ಪಿಂಡಕೈಯ್ಯೆನಲು ಕೂದಲುಂಬಕ್ಕು]" (ಮಂಗರಾ. ೮೪-೨೪). ೪. ಪೀಠ ; ಆಸನ. ೫. (ದೇವರ ಪ್ರತಿಮೆ, ಲಿಂಗ ಮೊದಲಾದುವುಗಳ) ಆಧಾರಪೀಠ ; ಗದ್ದುಗೆ : ಇಷ್ಟಲಿಂಗವು ಅರ್ಥಾತ್ ಒಂದು ಭೌತಿಕ ಲಿಂಗವು. ಅದರ ಪೀಠ, ಪಿಂಡಿಕೆ ಹಾಗು ಗೋಮುಖಗಳು ಬಿಂದು-ನಾದ-ಕಲೆಗಳ ಪ್ರತಿನಿಧಿಗಳು (ಪರಪ. ೧೯೪); ತಿಬೇಟದಲ್ಲಿ ಹಿಮಾಲಯದಂಥ ಶೈಲಶ್ರೇಣಿಯೊಂದು ಹಬ್ಬಿದೆ . . . ಇದರ ಆಕಾರವು ಮಹಾದೇವರ ಪಿಂಡಿಕೆಯಂತಿದೆ (ಕೃಲಾಸ. ೬೨); ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ಚತುರಸ್ರಾಕಾರವಾಗಿ ಗರ್ಭಗುಡಿ ಇರುತ್ತದೆ. ಇದರ ಮಧ್ಯದಲ್ಲಿ ಪಿಂಡಿಕೆಯನ್ನಿಟ್ಟು . . . ಮೂಲಬೇರವನ್ನು ಸ್ಥಾಪಿಸಿರುವರು (ಹೊಯ್ಸಾಪಾ. ೧೯). [ಸಂ. ಪಿಂಡಿಕಾ]

ಪಿಂಡಿಗೆ, ಹಿಂಡಿಕೆ, ಹಿಂಡಿಗೆ (ನಾ). ೧. (ದೇವರ ಪ್ರತಿಮೆ, ಲಿಂಗ ಮೊದಲಾದುವುಗಳ) ಆಧಾರಪೀಠ ; ಗದ್ದುಗೆ : ಜಲವೆ ಪದಶಿಲೆ ಪೃಥ್ವಿಯೆ ಪಿಂಡಿಗೆ ಆಕಾಶವೆ ಲಿಂಗ (ಅವಸಂ. ೧೫೫-೭೦೧); ದೇವ ಸೆಜ್ಜೆಯನು ಉಪ್ಪರಿಸಿಮೆನೆ . . . ಬಸವ ಭಾವಂ ಬಲಿದು ಮುನ್ನವೇ ಸೆಜ್ಜೆಯೊಳು ಎಸೆವ ಲಿಂಗಂಗಳಾಗುತ್ತಮಿರೆ ಸೆಜ್ಜೆಯೊಳು ತೊಟ್ಟು ಪಿಂಡಿಗೆ [ಪಾಠಾಂ. ಪಿಡಿಕೆ] ಯಾಗೆ ಫಲಮೆ ಲಿಂಗಮದಾಗೆ (ಐಸರ. ೯-೫೭) ; ಕಕಾರಕ್ಕೆ ಗಕಾರಂ . . . ಪಿಂಡಿಕಾ-ಪಿಂಡಿಗೆ (ಕಮರ. ೨೫೫ ಪ್ರಯೋ). ೨. ಗುಂಪು; ರಾಶಿ ; ಸಮೂಹ : "ಪಿಂಡಿಗೆ—ಪಿಂಡಿಕಾ—ಉರುಳೆ, ಗುಂಪು" (ಶರ್ಕಕೋ. ೨೬); ಮೇರುವಿನೊಳಚ್ಚೊತ್ತಿದ ಹೊಸ ಪೊನ್ನ ಪಿಂಡಿಗೆಯೊಡನೆ . . . ನವರತ್ನವೃಷ್ಟಿಯಂ ಶಿವಂ ಕಱೆದನೆಂಬಂತೆ (ಐಸರ. ೦೨-೬೦). ೩. ಕಟ್ಟು; ಪೆಂಡಿ : ಪಸಿಯರಿಸಿನದ ಪಿಡಿಯೆಲೆಯ ಪಿಂಡಿಗೆಯಾಂ ಕರ್ಬಾಳದ ಕಟ್ಟುಗಳಿಂ ಸುರ್ಬುಗೊಂಡ ಕರ್ಬಿನ ತಟ್ಟೆಗಳಿಂ . . . ತಿರುಳೆಲೆಯ ತೆರೆಸುತ್ತಿನೊಳಮೆಸೆವ ಪಸುರ್ವಂದರೊಳಗೆ (ಲೀಲಾವ. ೦೦-೫೨). ಹಿಂಡಿಕೆ : ೩. ತಲೆಯ ಮೇಲೆ ಹಂಡೆ, ಹೆಗಲ ಮೇಲೆ ಒಗೆದ ಬಟ್ಟೆಗಳ ಹಿಂಡಿಕೆ (ಸ್ಮೃತಿಸ. ೪೨). ಹಿಂಡಿಗೆ : ೨. ಮಱುಗೊಂಡ ಕುತ್ತಮಡಂಗಿ ಪದುಳಮಿರ್ಪ ತೋಟಿಯ ತೋಳ್ವಲನ ನರದ ಹಿಂಡಿಗೆಯ ಬಲ್ಲೆಂತ ತೊಂದು ಬಲ್ಲಿಂ ಮೈವೆರ್ಚಿ . . . ಪೋಪೋಪ ಕುದುರೆಗೆ (ಶಾಮಾಕ್ಷ. ೦೩೯-೨೮)

ಹಿಂಡಿಗೆ ಬಿಗಿ = ಒಟ್ಟಾಗಿ ಸೇರಿಸಂ ; ಒಂದುಗೂಡಿಸು : ಹೂಡಿದೆಲು ಮರಮುಟ್ಟು ಮಾಂಸದ ಗೋಡೆ ಚರ್ಮದ ಹೊದಿಕೆ ನರವಿಕೆ ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು (ಹಂಪಾ. ೮೫).

[< ಸಂ. ಪಿಂಡಿಕಾ]

ಪಿಂಡಿತ (ಗು). ೧. ಮುದ್ದೆಯಾಗಿ ಮಾಡಿದ; ಉಂಡೆಯಾಗಿ ಮಾಡಿದ. ೨. ಗುಂಪುಗೂಡಿದ ; ಒಟ್ಟಾಗಿ ಸೇರಿದ. [ಸಂ.]

ಪಿಂಡಿತಕ (ನಾ). ಒಂದು ಬಗೆಯ ಸಸ್ಯ : ಪಿಂಡೀತಕ : ಪಿಂಡಿತಕ ವಂಗಾರವಲ್ಲರಿ ಪುಂಡ್ರ ಬಿಲ್ವಜ ವೀರನಾಳಿಯ ಖಂಡದರಾಶ್ಮಕುಷ್ಠಬರ್ಹದ ವೃಕ್ಷ ಗಂಧಚಯ . . . ಎಸೆದುವಾ ವನದಿ ? (ಕೋಗಯ. ೪-೪೦)

[< ಸಂ. ಪಿಂಡೀತಕ]

ಪಿಂಡಿಲು 'ಪಿಂಡಲು' ನೋ.

ಪಿಂಡಿವಳ 'ಬಿಂಡಿವಾಳ' ನೋ.

ಪಿಂಡಿವಾಳ 'ಬಿಂಡಿವಾಳ' ನೋ.

ಪಿಂಡಿಶೂರ (ನಾ). ಮನೆಯಲ್ಲಿ ಮಾತ್ರ ಶೌರ್ಯ ತೋರುವವನು; ಜಂಭ ಕೊಚ್ಚುವುದರಲ್ಲಿ ಶೂರನಾದವನು : "ಚೀಱ ಗೃಹದೊಳು ಗರ್ಜಿಪಂ ಪಿಂಡಿಶೂರನಕ್ಕು" (ಮಂಗರಾ. ೩೦-೦೩). [< ಸಂ. ಪಿಂಡೀಶೂರ]

ಪಿಂಡಿಸು (ಕ್ರಿ). ಕುಗ್ಗಿಸು ; ದುರ್ಬಲಗೊಳಿಸು : ಜರೆ ನಿಜಶಕ್ತಿಯಿಂ ಪಿಟಿದು ಪಿಂಡಿಸದನ್ನೆಗಂ . . . ನೆನೆವುದಿಂದ್ರನರೇಂದ್ರಫಣೀಂದ್ರವಂದ್ಯನಂ (ಸಮಪ. ೦-೧೦೩). [ಪಿಂಡು₁ + —ಇಸು₃]

ಪಿಂಡಿಸೊಪ್ಪು, ಪಿಂಡೀಸೊಪ್ಪು, ಹಿಂಡಿಸೊಪ್ಪು (ನಾ). ಒಂದು ಬಗೆಯ ಸೊಪ್ಪು : (ಕಿ). ಪಿಂಡೀಸೊಪ್ಪು : ಮಣಿತುತ್ತೀಗಿಡ, ಪಿಂಡೀಸೊಪ್ಪು (ಮೃತಿಗಿ. ೪೬-೬೨). ಹಿಂಡಿಸೊಪ್ಪು : ನೆಗ್ಗಿಲ ಬೇರು, ಹಿಂಡಿಸೊಪ್ಪಿನ ಬೇರು ಸಹ ೧ ಪಡಿ ನೀರಲ್ಲಿ ಹಾಕಿ . . . ಶರ್ಕರೆವೆರಸಿ ತೆಗೆದುಕೊಳ್ಳಲು ಮೂತ್ರಕಟ್ಟು ಬಿಡುವುದು (ಸಳಸ್ಯ. ೩೭೪).

[ಪಿಂಡಿ₂ (< ಪುಂಡಿ) + ಸೊಪ್ಪು₂]

ಪಿಂಡೀತಕ (ನಾ). ಒಂದು ಬಗೆಯ ಸಸ್ಯ : "ಬೋನಗಾರೇ-ಪಿಂಡೀತಕ, ಮರುವಕ, ಶ್ವಸನ, ಕರಹಾಟಕ, ಶಲ್ಯ, ಮದನ" (ಪಾಠಾಂ. ೬); "ಪಿಂಡೀತಕಃ, ಮರುವಕಃ . . . ಮದನಃ—ಈ ೬ ಮಂಗಾರಗಿಡದ, ಬೋನಗಾರೆಮರದ ಹೆಸರುಗಳು" (ಸಿಠ್ಯಾಂತಿ. ೦೨೪). [ಸಂ.]

ಪಿಂಡೀಶೂರ (ನಾ). ೧. ಮನೆಯಲ್ಲಿ ಮಾತ್ರ ಶೌರ್ಯ ತೋರುವವನು,-ಜಂಬ ಕೊಚ್ಚುವುದರಲ್ಲಿ ಶೂರನಾದವನು: "ಗೇಹೇನರ್ದೀ, ಗೃಹೇಶೂರಃ, ಪಿಂಡೀಶೂರಃ—ಈ ೩ ಗೃಹಗರ್ಜನೆಗೆಯ್ವವಂ" (ಹಲಾಯು. ೬೯-೨೦೨). ೨. ಊಟದ ವಿಷಯದಲ್ಲಿ ಮಾತ್ರ ಶೌರ್ಯವುಳ್ಳವನು. [ಸಂ.]

ಪಿಂಡೀಸೊಪ್ಪು 'ಪಿಂಡಿಸೊಪ್ಪು' ನೋ.

ಹಿಂಡು₁, ಹಿಂಡು₁ (ಕ್ರಿ). ೧. ರಸ ಒಸರುವಂತೆ ಗಟ್ಟಿಯಾಗಿ ಹಿಸುಕು,–ಅದುಮಂ; ನೀರು ಹೊರಬರುವಂತೆ ನುಲಿ: ಹಿಂಡುವ ನಿಂಬೆಯ ಪಣ್ ವಿಧುಮಂಡಲಮೆಳಜೊನ್ನಮೆಱೆವ ನೀರ್ವೊನಲೆನಿಕುಂ (ಶಕಶಿ. ೬-೨೩); ತೆಂಗಾಯ ಬಲುಹಿಂದ ಭಿನ್ನಿಸೆಳೆನೀರ ಸೇವಿಸಬೇಕು ರಸದಾಳಿ ಕೆತ್ತಬೇಕು ಒಲಿದು ಪಿಂಡಲಿಬೇಕು ಮಾವಣ್ಣ ಬಾಳೆಪಣ್ಸುಲಿಯ ಬೇಕೊಡೆಯದೆ ಕೆತ್ತದೆ ಪಿಂಡದೇ ಸುಲಿಯದೇ ದ್ರಾಕ್ಷಫಳವನ್ನು ಸವಿದಂತಾಯ್ತು (ಶಪಸೋ. ೨೬-೩). ೨. ನುಲಿಚು; ತಿರುಚು: ವಿಭು ಸಾಯೆ ಪೊಯ್ದು ಕಿವಿಯಂ ಪಿಂಡಿ ದೂಡಲೊಡರ್ಚಿ ಬಂದನೇ (ಸುಕುಮಾ. ೨-೬೩). ೩. ಸುರಿ; ಏರೆ; ಹೊಯ್ಯು: ಕಲ್ಲಲ್ಲಿ ನಾರೆತ್ತುವರ್ ಮರುಳಂ ಪೋ ಪುರುಳಾಗಿಪರ್ ಕಿವಿಗಳೊಳ್ ಪೀಯೂಷಮಂ ಪಿಂಡಲುರ್ವರೆಯೊಳ್ ಸಂದ ಕವಿಪ್ರವೇಕರೆ ಪಲಂ ಬಲ್ಲರ್ ಪೆಱರ್ ಬಲ್ಲರೇ (ಲೀಲಾವ. ೧-೧೩); ಆ ಕಾಂತಾಕಚಶ್ರೇಣಿಗೊಯ್ಯನೆ ಮುಂದಿಕ್ಕಿದ ಚಂದನಾಂಬುವನಲಂಪಂಬೆತ್ತು ತಾಂ ಪಿಂಡಿದಳ್ (ಶಾಸ್ತ್ರಪ. ೯-೨೦); ಪರಿಪರಿಯ ಸಿಂಗಾರದಲಿ ನೋಳ್ಪರ ಬಗೆಯನಿರ್ಕುಳಿಗೊಳುವ ಕೇಳ್ವರ ಕಿವಿಗೆ ವಾಕ್ಸುಧೆಯ ಪಿಂಡುತ ಬಂದರರಮನೆಗೆ (ಸಾಳ್ವಭಾ. ೩೨-೧೮). ೪. (ಆಲಂ) ನಿರ್ಬಲಗೊಳಿಸು; ನಿಸ್ಸತ್ವಗೊಳಿಸು: ಈ ತೆಱದಿಂದಂ ನಿನ್ನಂ ಘಾತಿಸಿ ಬಿಡದಲೆದು ಪಿಟಿದು ಪಿಂಡಿದ ದುಃಖವ್ರಾತಮಿದು ಮಗಳೆ (ಅದಿಪು. ೩-೩೮). **ಹಿಂಡು₁**: ೧. "ಹಿಂಡು–ನಿಷ್ಪೀಡನೇ, ಗೋಸಮೂಹೇ ಚ" (ಶಸುರಾ); ಮಳಲೊಳ್ ತೈಲಂಗಳಂ ಹಿಂಡಲಕ್ಕಡವೀಸಿಂಗವ ತಿದ್ದಲಕ್ಕು ಕಱೆಯಲ್ ಬಕ್ಕುಗ್ರದ ವ್ಯಾಘ್ರಮಂ ಕಡುಮೂರ್ಖಂ ಹಿತ ಕೇಳ್ವನೇ (ಸೋಮೇಶ. ೪೯); ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ (ಗಿರಿಕ. ೯-೬೨); ಹೊಸ ನಿಂಬೆಹಣ್ಣ ಹುಳಿಯಂ ಹಿಂಡಿಯರಿಸಿನವ ಬೆರಸಿ . . . ಬೋನದೊಳಿಕ್ಕಿ ಬಣ್ಣಿಸಿಯದಂ ಕಲಸಿ ಬಿಳಿಯುಪ್ಪನಿಕ್ಕಲದು ಸಾಸುವೆಯ ಕಟ್ಟೋಗರ (ಸೂಪಶಾ. ೩-೨೦); ಸ್ಪಂಜಿನ ತೆರದೊಳು ದೊಡ್ಡ ವರಿರುವರು . . . ತಮ್ಮೊಳಗಿರುವುದನೀಯರು ಹಿಡಿದೊತ್ತಿ ಹಿಂಡಿದ ಹೊರತು (ಜಂಪಾಪ. ೦೯೯-೯೯). ೨. ಕೆಲವರು . . . ಅವನ ಜುಟ್ಟನ್ನೆಳೆಯುತ್ತಲೂ, ಮತ್ತೆ ಕೆಲವರು ಕಿವಿಯನ್ನು ಹಿಂಡುತ್ತಲೂ ಹಿಂಸೆ ಮಾಡುತ್ತಿದ್ದರು (ರಾವಿಪ. ೨೦). ೩. ಬೆಂಡಿನಂದದ ಲಘುಕಿನ್ನರಿಯೊಳು ಸ್ವರಮಂಡಲದೊಳು ಶ್ರುತಿಗೂಡಿ ಗಂಡುಗೋಗಿಲೆಯಂತೆ ಹೆಣ್ದುಂಬಿಯಂತಾಗ ಹಿಂಡಿದರಾತ್ಮಸಾರವನು (ಭರಸ. ೦೬-೧೩೭). ೪. ಪಾಂಡುತನಯರ ನಂದನರು ತಾವೈವರೀತನ ಹಿಂದುಳುಹಿ ಹಿಂಡಿದರು ಹೇರಾಳದ ಚತುರ್ಬಲವ (ಕುಪ್ಯಾಕ. ೩-೦೬); ಕೊಳನ ಹೊಕ್ಕಿಭದಂತೆ. . .ಬಲವನರಿ ಭಟ ಸುಳಿದು ತುಳಿದನು ಹಿಳಿದು ಹಿಂಡಿದನು (ಕೌತಿಶಾ. ೩೬-೧೭); ವಿರಕ್ತರ ಮನದ ಶಾಂತರಸದೊಬ್ಬುಳಿಯನು ಹಿಂಡಿ ಕೆಡಿಸುವ . . . ಮುಂಡಿಕೆಯ ರೂಪುಯೌವನವಿಲಾಸವನು ಬಣ್ಣಿಪರಾರು (ಸಮ್ಯಕೌ. ೮-೦೦) ೫. (ಹಾಲನ್ನು) ಕರೆ: ನಿತ್ಯವೂ ಸ್ವಲ್ಪ ಸ್ವಲ್ಪ ಹಿಂಡಿ ಕೊಂಡು ಕುಡಿಯುತ್ತಾರೆ (ಕಂಕಶೆ. ೦೫); ಹಾಲನ್ನು ಹಿಂಡುವ ಅಥವಾ ಸರಬರಾಯಿ ಮಾಡುವ ಹೊಲಸು ವಿಧಾನಗಳಿಂದಾಗಿ ಹಾಲಿನೊಡನೆ ರೋಗಾಣುಗಳು . . . ಹೆಚ್ಚಾಗಿರುತ್ತದೆ (ಅಡುಸೌ. ೮೫); ಹಿತ್ತಲಿನಲ್ಲಿ, ಹಿಂಡುವ ಹೊತ್ತು ಮೀರಿ . . . ಆಕಳ ಕರು ಒಂದೇ ಸಮನೆ ಒದರ ಹತ್ತಿತ್ತು (ಗಂಗಾಸಾ. ೨೦). ೬. (ಹಾಲನ್ನು) ಕೊಡು: ಅದು ಹಾಲು ಹಿಂಡುತ್ತದೆ (ಮುಂಬಯಿ. ೪-೨೪); ಅವರಿಗೆ ಆಗ ಉಳಿದ ಉಡುಗರೆಗಳೆಂದರೆ . . . ಎರಡು ಹಿಂಡುವ ಆಕಳು (ಹಬ್ಬಿಪ. ೨೭). ೭. ಒತ್ತು; ನೋವು ಮಾಡು: ತುರುಕರ ದಿಂಡುಗುಂಡಿಗೆಯ ಹಿಂಡಿದ ನಿನ್ನಯ ಬಾಹುದಂಡಮಂ ಪೊಗಳ್ವೆನೆ? (ಗಿಳಿಹಿ. ೫೨-೯); ಎಲ್ಲಿಂದಲೋ ಒಳಸೇರಿದ ಕಸವಿಸಿಯು ಅವನ ಹೃದಯವನ್ನು ಹಿಂಡ ತೊಡಗುವುದು (ಶಬ್ದಹೂ. ೫೫); ತನ್ನ ಗೆಳೆಯರೆಲ್ಲರೂ ದಸ್ತಗಿರಿಯಾದ ಸುದ್ದಿ ಆಜಯನ ಹೃದಯವನ್ನು ಹಿಂಡುತ್ತಲಿತ್ತು (ಅಶ್ಮಾರ್ಪ. ೧೬೫). ೮. ಕಾಡು; ಪೀಡಿಸು; ಹಿಂಸಿಸು; ನುಗ್ಗುಮಾಡು: ಉಂಡೆವೈ ಸಮಚಿತ್ತದಲಿ ನೀವ್ ಕೊಂಡಿರೈ ಘಾಯಗಳನೆಡೆಯಲಿ ಹಿಂಡುವಿರಲೈ ನಾವು ಸಹಿತೀ ಊರ ಹಾರುವರ (ಕುಪ್ಯಾಲಿ. ೧೦-೩೫); ವ್ಯಸನಕ್ಕೆ ವ್ರೌಢ ನೊಳೆಱಗದಿರೆಂದು ರಕ್ಕಸಿಮುಂಡೆ ಮಗಳ ಹಿಂಡಿದಳು (ಪೋಹತ. ೧೮-೭೫). ೯. ಹೀರು: ಜೇನುಹುಳು . . . ನಾಲಗೆಯ ಮೇಲಿನ ಮಕರಂದ ಶೀರ್ಷಕಗಳಿಂದ ಹಿಂಡಿ ಜಿಹ್ವೆಯ ಬುಡದಲ್ಲಿ ಒಂದು ಸಣ್ಣ ಕುಳಿಯೊಳಗೆ ಸಂಗ್ರಹಿಸುತ್ತದೆ (ಕೀಟಿಶ. ೯೦). ೧೦. ಇಲ್ಲವಾಗಿಸು; ಮುಗಿಸು; ನಾಶಪಡಿಸು; ಧ್ವಂಸ ಮಾಡು: ಕೊಂಡು ತಾನುರಿಲಿಂಗವಾದನಖಂಡತೇಜೋಮಯನು ನಿಮಿಷಕೆ ಹಿಂಡಿದನು ಹದಿನಾಲ್ಕು ಲೋಕವನುರುಹಿ ಘೋಳಿಡಿಸೆ (ಸಂಭವ. ೬-೫); ಇವನು ಗಡ ಚಿಕ್ಕಂದು ಮೊಲೆಗೊಟ್ಟವಳ ಹಿಂಡಿದ ಗಂಡ ಬಂಡಿಯ ಜವಳಿಗಾಲಲಿ ಮುಱಿದನೈ ಮಾಮಾ ಸಮರ್ಥನಲೆ (ಕುಪ್ಯಾಸ. ೧೦-೧೩).

ಹಿಂಡಿ ಪಿಟಿ = ೧. ಚೆನ್ನಾಗಿ ಹಿಂಡು. ೨. ಅತಿಯಾಗಿ ಹಿಂಸಿಸು: ಒಲ್ಲಣಿಗೆಯಂ ಪಿಟಿವಂತೆ ಪಿಂಡಿ ಪಿಟಿವ ಪಗೆಗೆ . . . ಈ ಪದದೊಳ್ ಕಡಿದೊಟ್ಟದಾಗಳ್ ಗೆಲಲಾಱೆ (ಪಂಪಭಾ. ೧೨-೨೦೬ ಪ); ಶತಬಲಿಯೆಂಬಸುರ ಮಹೀಪತಿ ಸುರರಂ ಪಿಂಡಿ ಪಿಟಿ[ಪಾಣಾ. ಹಿಂಡಿ ಹಿಟಿ]ದು ತನ್ನಯ ಪದಮಂ ಸುತನೆನಿಪ ಸಹಸ್ರಬಲಿಕ್ಷಿತಿಪತಿಗಿತ್ತೊಂದು ಗಿರಿಯೊಳಿರ್ದಂ ತಪದಿಂ (ರರ್ಮಪ. ೪-೧೬). ಹಿಂಡಿ ಹಿಪ್ಪಲಿ ಮಾಡು = ಕುಗು ವಂತೆ ಮಾಡು: ಕುಗ್ಗಿಸು; ನಿಸ್ಸತ್ವಗೊಳಿಸು: ಅವನ ಹೃದಯವನ್ನು ಕಟುಕರು ಕರುಣೆಯಿಲ್ಲದೆ ಹಿಂಡಿ ಹಿಪ್ಪಲಿ ಮಾಡಿದಂತಾಗಿದ್ದಿತು (ಪಂದಸೀ. ೮). ಹಿಂಡಿ ಹಿಪ್ಪೆ ಮಾಡು = ಹಿಂಡಿ ಹಿಪ್ಪಲಿ ಮಾಡು: ರಾಜನೂ ರಾಜಪ್ರತಿನಿಧಿಗಳೂ ಅದಾವಾಗ . . . ಪ್ರಜೆಗಳನ್ನು ಹಿಂಡಿ ಹಿಪ್ಪೆ ಮಾಡಲು ಯತ್ನಿಸುವರೊ ಆಗ ರಾಜ್ಯಕ್ರಾಂತಿಯ ಕಾಲವು ಸಮೀಪಿಸಿತೆಂದು ತಿಳಿಯತಕ್ಕುದೆ! (ವಿಜಸಾ. ೨೫).

[ದೇ. ॥ ತುಳು. ಪಿಂಟು, ಪುಂಟು; ಕೊಡ. ಪುಂಡ್; ತೆಲು. ಪಿಂಡು; ಕೋಲಾ. ನಾಯ್ಕಿ. ಪಿಂಡ್]

ಹಿಂಡು₂, ಹಿಂಡು₂, ಹಿಂಡೆ (ನಾ). ೧. ಗುಂಪು; ಸಮೂಹ; ರಾಶಿ: "ಬಂಬಲ್ . . . ಪಿಂಡು[ಪಾಣಾಂ.ಡಿ] ತೆರಳ್ಕೆ . . . ಈ ೪೦ ಸಮೂಹಂ" (ಕಕಸಾ. ೫೬-೨೨೨); ಗೋಮಂಡಲದಂತಿರ್ದ ಕಡವಿನ ಕಾಡೆರ್ಮೆಯ ಪಿಂಡುಗಳಿಂದಂ . . . ಅತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು (ಪಂಪಭಾ. ೭-೨೯ ಪ); ಪಂಚಾಗ್ನಿತಾಪತಪ್ತಮಾನಸರಪ್ಪ ತಪೋಧನಜನಕ್ಕೆ ತಪನತಾಪಮನಾಗಲೀಯದೆ ತಳಿರ್ದುಱಗಲಂ ಪೊತ್ತು ನಭದೊಳ್ ನಲಿದಾಡುವ ಸೋಗೆನವಿಲ್ಗಳ ಪಿಂಡುಗಳುಮಂ (ಪಂಪತಂ. ೧೧೮-೧೦); ಜವದಿಂ ಪಾಪದ ಪಿಂಡಿನಂತಳಿಕುಳಂ ಬಿಟ್ಟೋಡೆ (ಅರ್ಧನೇ. ೧-೮); ನೆಗೆದು ನಿಂದಂಚೆಯ ಪಿಂಡೆಂಬಂತಿರೆ ಬೆಳ್ಳುಗಿಲದಱಿಂ ಬೀಳ್ವ ತುಷಾರಮದಱ ಗಱಿವನಿಯೆನಿಕುಂ (ರಾಜಶೇ. ೬-೬). ೨. ಶ್ರಾದ್ಧದ ದಿನಗಳಲ್ಲಿ ಪಿತೃಗಳಿಗೆ ಅರ್ಪಿಸುವ ಅನ್ನದ ಮುದ್ದೆ: 'ಪಿಂಡುಗೂಟಿ' ಪರಾ. **ಹಿಂಡು₂**: ೧. ಸುತ್ತಲುಂ ಗಿಳಿಗಳ ಹಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾಕುಳಮನುರಾಗದಿಂ . . . ಇರ್ಪುವು (ಕಾದಂಪೂ. ೧೨೬); ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ (ಮಹಾದೇ. ಶ. ೧೩೮-೩೦೩); ಕುಱಿಯ ಹಿಂಡಿನ ತೋಳನೈ ನಿನ್ನಾನೆ (ಕುಪ್ಯಾಸ್ತೋ. ೩-೨೭); ಹಾಲುಬತ್ತಕೆ ಕವಿವರಗಿಳಿಗಳ ಹಿಂಡ ಮೇಲಕೆಬ್ಬಿಸುವ ನಾರಿಯರ ಪೇಳಲಳವೆ (ಕಂಪವಿ. ೫-೬೪); ಘಾತನಾಡುವುದನ್ನೇ ಮರೆತು ಕಿಡಿಕಿಯ ಹೊರಗೆ ಒತ್ತಾಗಿ ಬೆಳೆದ ಬಾಳೆಯ ಹಿಂಡುಗಳಲ್ಲಿ ದೃಷ್ಟಿ ನೆಟ್ಟಿ ಕೂತ (ಮೂರುದಾ. ೧೪೮). ೪. (ದನದ) ಮಂದೆ; (ಗೋ)

ಸಮೂಹ : "ತುಱು ಮಂದೆಯೊಳು ನಿಷ್ಪೀಡನದೊಳು ಹಿಂಡೆಂದೆನಿಕು" (ಶಬ್ದಮಂ. ೯೭) ; ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ ಬಯಸುತಿರ್ದೆನಯ್ಯ ನಿಮ್ಮ ಶರಣರ ಬರವನು (ಬಸವ. ೩೬೩) ; ಹಿಂಡ ಬಿಟ್ಟೆಂದೆಂದು ಹಿಂದಿನಿಂ ಬಹುವಲ್ಲ ಕಂಡವರ ಹೊಲಕಿಳಿವ ತೊಂಡುದನವುಲ್ತು (ಕಾಲಂಕ. ೮೦-೦೩೨). ಹಿಂಡೆ : ೨. "ಹಿಂಡೆ — ಪಿಂಡ=ಪಿಂಡದ ಮುದ್ದೆ" (ಶಬ್ದಕೋಶ. ೯೯) ; ಬಯಕೆಗೆ ಪಶುವಂ ಕೊಲ್ವವರಯಸಕ್ಕಂಜುವರೆ ಕೊಂದು ಕೊಳ್ವಾತಂ ಹಿಂಡೆಯ ಕೂಟ್ಟಿಗೆ ಹೇಸುವನೆ (ಸಮಯ. ೧೪-೧೨೩) ; ಅಳಿದ ಕಲ್ಲಿಗೆ ಹೆಂಟೆ ಹಿಂಡೆಯ ಕೂಳನಟ್ಟು ಉಂಬವರಿಲ್ಲದೆ ಅಳುತ್ತಿದ್ದಿತ್ತು (ಪುಷ್ಪಗುಂ. ಕ. ೨೪೯-೦೩) ; ಎನ್ನ ಮಕ್ಕಳು ಕೊಂದು ಹಿಂಡೆಯ ಕೂಳನುಂಬರು ಹೇಸುವವರಲ್ಲ (ಸಂಕಥ. ೨೦-೭೮).

ಹಿಂಡುಹಿಂಡು (ದ್ವಿರುಕ್ತಿ): ಇಂದು ಮಾಡಿಸುವೆಂ ಮಹೋತ್ಸವದಿಂದೆ ಸಾವಿರ ಹೊಂಗಳಿಗೆ ಬಲಿತಂದು ಕುಱುಗಳ ಹಿಂಡುಹಿಂಡಿನ ಛಂದದಲಿ ನೆರಹಿ (ಬಸವ. ೨೮-೨೨) ; ಹಿಂಡುಹಿಂಡಿನಲೇಣಯ ಮೇಲೇಱಿ ಮುಂಕೊಂಡುಱುವಾ ರಿಪುಬಲವ ಖಂಡಿಸಿ ಸಿರಗಳ ಮರುಳ್ಗಳ ಕೊರಳಿಗೆ ದಂಡೆಯ ಹಾಕಿದರಾಗ (ಶಂಪಾ. ೦೪-೬೦) ; ತುಂಡುತುಂಡು ದೊರೆಗಳು ಕೂಡಿ ಹಿಂಡುಹಿಂಡು ಸೈನ್ಯ ಕೂಡಿಸಿದರು (ಗಾಪ). ಪಿಂಡಾಗು=ಗುಂಪಾಗು; ಗುಂಪುಗೂಡು: ಕಟ್ಟಾನೆ ಬೀದಿಯೊಳಟ್ಟಿಕೊಂಡು ಪೋಗಿ ನಟ್ಟಾರಣ್ಯವಂ ಪೊಗುವುದುಂ ಪರಿಜನಂಗಳೆಲ್ಲಂ ವಿಸ್ಮಯಂಬಟ್ಟು ಪಿಂಡಾ[ಗಾಣಾಂ. ದಾ] ಗಿಪ್ಪುದುಂ (ಪ್ರಜ್ಞಾಶ್ರ. ೨-೩೮ ಪ). ಹಿಂಡಾನುಹಿಂಡು=ಭಾರಿ ಸಮೂಹ,— ಗುಂಪು : ಹಿಂಡಾನುಹಿಂಡು ಬೌದ್ಧಭಿಕ್ಷುಗಳಲ್ಲಿ ಮಹಾತ್ಮರಾದ ಭಿಕ್ಷುಗಳು ಎಲ್ಲಿ ಅಡಗಿರುವರೋ ಯಾರಿಗೆ ಗೊತ್ತು (ರಮಾಕ. ೦೩೩).

[< ಸಂ. ಪಿಂಡ]

ಪಿಂಡುಗಂಕಣ, ಹಿಂಡುಗಂಕಣ (ನಾ). ೧. ಒಂದು ಬಗೆಯ ಬಳೆ,— ಕಂಕಣ : ಮಾಣಿಕದ ಮುತ್ತಿನ ಪಿಂಡುಗಂಕಣಮಂ ತೊಟ್ಟ ಕೈಯಿಂದಂ ಪೊನ್ನ ಸಟ್ಟುಗಮಂ ತೀವಿ ಭೈಕ್ಷಮಂ ಪಿಡಿಯೆಂದು ನೀಡಿದ ಕೈಯನಿತನೆ ಕಂಡು (ವಡ್ಡಾರಾ. ೮೯-೭) ; ಬಾಣಸಿಗೆಯರ್ ಪಿಂಡುಗಂಕಣಂಗಳಂ ನೂಂಕಿ ನೂಲ ತೊಂಗಲನೆತ್ತಿ . . . ಪಂಕ್ತಿಯೊಳುಣ್ಬ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಕುಮಾ. ೦೦-೨೯ ಪ); ತನ್ನ ನಿದ್ರೆಯೊಡನೆ ಕಟ್ಟಲೆ ಪರೆಯುತ್ತುಂ ಕಣ್ಮಲರೊಡನೆ ಕಮಲದಳವಲರೆ ತನ್ನ ಪಿಂಡುಗಂಕಣದೊಡನೆ ಕೊಳರ್ವಕ್ಕಿಗಳಲಿಯೆ . . . ಸೆಜ್ಜೆಯಿನುಡ್ಡುಗದಿನೆರ್ದು ಶೃಂಗಾರಗೇಹದೊಳ್ ಶೃಂಗಾರಂಗೆಯ್ಯುತ್ತುಮಿರ್ದಳ್ (ಅರ್ಧನೇ. ೨-೦೮ ಪ); ನಲ್ದೊಡವುಗಳೊಳ್ ಎಕ್ಕಸರಂ ಶ್ರುತಕೀರ್ತಿಗೆ ದುಕ್ಕಂಡದ ಪಿಂಡುಗಂಕಣಂ ಮಾಳವಿಗಾ ಜಕ್ಕಸರಂ ನಿನ್ನರಸಿಗೆ (ರಾಮಾಶ್ವ. ೩೯-೦೭). ೨. ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ: ಸಿರಿಸದ ಬಾಸಿಗಮಂ ಮಾಂಕರಿಸುವ ನಳಿತೋಳ ಪಿಂಡುಗಂಕಣದ ಸರಂ ಮೊರೆವಳಿಗಳ ಸರಮಂ ಚಪ್ಪರಿಸುವಿನಂ ಚೆನ್ನೆ ಪೊನ್ನೆಯರಲಂ ಕೊಯ್ದುಳ್ (ಆದಿಪು. ೦೦-೯೯ ಆಕಸ್ಮ) ; ವಿನ್ನಂತಃಪುರದ ಕಾಂತಾಜನದ ಕದಂಬನೊಳ್ ವ್ಯಾಗಮಾದಪತ್ರಲೇಖೆಯಂ ಬರೆಯಲುಂ ಬಾಹುಲತೆಯೊಳ್ ಪಿಂಡುಗಂಕಣಮನೇಱಿಸಲುಂ (ಸಂಶಾಸಾ. ೦೪-೨೦೦ ಪ). ಹಿಂಡುಗಂಕಣ : ೧. "ಗುಬ್ಬಿಗಂಕಣ ಹಿಂಡುಗಂಕಣಮು ಮೆಂದು ಮಣಿಗಂಕಣಂ ಹಸ್ತಗಂಕಣವು" (ಶಬ್ದಕೋ. ೯೭).

[ಪಿಂಡು$_2$ + ಕಂಕಣ]

ಪಿಂಡುಗಜ್ಜೂರ (ನಾ). = ಪಿಂಡಖರ್ಜೂರ : ಬಿತ್ತರಂಬಡೆದ ಪನಾನೀರೆಳನೀರ್ ಪಿಂಡುಗಜ್ಜೂರ ದ್ರಾಕ್ಷಿ ರಸವಾಳೆ ದಾಳಿಂಬ ಪಲಸಿಮ್ಮಾವರನೇಱಿಲ್ ಮೊದಲಾದ ಫಳಕುಳಂಗಳಿಂ (ಹಾಲಾಸ್ಯ. ೦-೬-೨೬ ಪ).

[ಪಿಂಡು$_2$ + ಕಜ್ಜೂರ (< ಕರ್ಜೂರ)]

ಪಿಂಡುಗೂಡು, ಹಿಂಡುಗೂಡು (ಕ್ರಿ). ಒಟ್ಟುಗೂಡು ; ಒಟ್ಟಾಗಿ ಸೇರು ; ಗುಂಪಾಗು : ನಿಜದಿಂದಂ ಪಿಂಡುಗೂಡಿರ್ದೆಲೆ ತೃಣಗಣಮಂ ಮೇದು ಸತ್ವಾನಮಂ ಪೀರ್ದಜಪೋತಂ ಲೀಲೆಯಿಂದಂ ನಲಿವವೊಲ್ (ರಮಾಕ. ೦೦-೦೪). ಹಿಂಡುಗೂಡು : ಕಂಡಕಂಡವರ ಮನೆಯಲ್ಲಿ ಕೊಂಡಾಡಬೇಕೆಂದು ಹಿಂಡುಗೂಡಿ ಕೂಳನಿಕ್ಕುವ ಭಂಡರಿಗೆಲ್ಲಿಯದೋ ಭಕ್ತಿ (ಮೋಕಾ. ೧೬-೫೯) ; ಆಗಾಗ್ಗೆ ಹಿಂಡುಗೂಡುತ್ತಿದ್ದ ಮೋಡಗಳಲ್ಲಿ ಸೂರ್ಯ ಮರೆಯಾಗುತ್ತಿದ್ದನು (ಪ್ರಕರು. ೨೬೬).

[ಪಿಂಡು$_2$ + ಕೂಡು$_1$]

ಪಿಂಡುಗೂಟ್, ಹಿಂಡೆಕೂಳು, ಹಿಂಡೆಗೂಳು (ನಾ). ೧. ಮುದ್ದೆಯಾದ ಅನ್ನ : ಮಾಯದೆ ಮೆಯ್ಯೊಳ್ ಶ್ರೀಖಂಡಮಂ ಪೂಸುವೆನೆಂಬ ಪಿಂಡುಗೂಟ್‌ಕೂಳಗಗುಬನುಣ್ಬೆನೆಂಬ (ರಮಾಕ್ಷ. ೧೨-೨೪). ಹಿಂಡೆಕೂಳು : ೨. ಶ್ರಾದ್ಧದ ದಿನಗಳಲ್ಲಿ ಪಿತೃಗಳಿಗೆ ಇರಿಸಲಾಗುವ ಅನ್ನದ ಮುದ್ದೆ : "ಹಿಂಡೆಕೂಳು=ಪಿಂಡಾನ್ನ, ಶ್ರಾದ್ಧದ ಊಟ, ಹೀನವಾದ ಊಟ" (ಕಮಾಣಾಂ. ೬೪೯) ; ಹಿಂಡೆಕೂಳು ಮುಂಡೆಗೆ ಆದೀತೇ ? (ಗಾಪ). ಹಿಂಡೆಗೂಳು : ೨. ಹಿಂಡೇಗೂಳಾ ಗುಂಡೀದಂಡೇಲುಂಡೂ ಕೈಯ್ಯಾ ಜೋಡೀಸುವೆಂ (ಪ್ರಸುಮಾ. ೨-೯೪). [ಪಿಂಡು$_2$ + ಕೂಟ್$_1$]

ಪಿಂಡುಗೊಳ್, ಹಿಂಡುಗೊಳ್ (ಕ್ರಿ). ಒಟ್ಟುಗೂಡು ; ಗುಂಪಾಗು : ಮೇಳದ ಕೆಳದಿಯರ್ ಪಿಂಡುಗೊಂಡು ತದ್ಯೋಗ್ಯ . . . ಮಂಗಳೋಪಕರಣಂಗಳಂ ಪಿಡಿದಾ ಸ್ಕಂದನದ ಸುತ್ತಲುಂ ಮುಂದ್ಪಿಸಿ ನಡೆಯೆ (ಚಾರಪ. ೦೦-೭೩ ಪ) ; ಪಿಂಡುಗೊಂಡು ಜೊಂಡೇಳ್ದ ಕಾಳ್ಪಿದುಳ ಕೋಳ್ಗೆ ಸಱಂದರೆದೆಱಿದ ಕಣ್ಗಳಿಂ ... ಪಾಸಿ ಮಸರಿಸಿದಂತೆ ಬಿಳ್ದ ಪೆರ್ಮೆಣಂಗಳಿಂದಂ ಭಯಾವಹವಾದ ಬಟ್ಟೆಯಂ ನಿಟ್ಟಿಸುತ್ತಿರೆ (ರಾಕಸೇ. ೩-೦೨೦ ಪ). ಹಿಂಡುಗೊಳ್ : ಎನಿತು ಸುರರಾಗರೆನಿತಸುರರಾಗರು ನೆನೆಯೆ ಎನಿತು ದೇವರ ದೊಡ್ಡೆ ಹಿಂಡುಗೊಳ್ಳದು ನೆನೆಯೆ (ರುದ್ರಭ. ಕೇ. ೨೦೭-೦೪).

[ಪಿಂಡು$_2$ + ಕೊಳ್$_1$]

ಪಿಂಡುಮಾತು, ಹಿಂಡುಮಾತು (ನಾ). ಹೆಚ್ಚು ಮಾತು ; ಬಹಳವಾದ ಮಾತು : ಕೊಂಡಾಡುವಾಗಾನು ಭಟ್ಟನಲ್ಲೊಳ್ಳಿತ ಕಂಡು ಸೋಲದ ಸುಖಿ ಯಾರು ಪಿಂಡುಮಾತಿನ ಹೋಲಿಯೇನು ನೀನೊಬ್ಬನೆ ಮಂಡೆ ದೂಗಿಸಿದೆ ಮೂಜಗವ (ಭರತ. ೬೦-೭೮). ಹಿಂಡುಮಾತು : ಕಂಡಕಂಡದ್ದೆಲ್ಲ ಕಮಲನಾಭನ ಮೂರ್ತಿ . . . ತಂಡತಂಡದ ಮಾರ್ತೆ ಮಾರಿಹಾಕ್ಷನ ಕೀರ್ತಿ ಹಿಂಡುಮಾತುಗಳೆಲ್ಲ ಹರಿಯ ನಾಮ (ಶಿಶುಪಾ. ೨೫-೦).

[ಪಿಂಡು$_2$ + ಮಾತು$_1$]

ಪಿಂಡೋತ್ಪತ್ತಿ (ನಾ). ಭ್ರೂಣದ ಉತ್ಪತ್ತಿ, — ಹುಟ್ಟು : ಪಿಂಡೋತ್ಪತ್ತಿ (ವಿವೇಕ. ೨೫೫). [ಪಿಂಡ + ಉತ್ಪತ್ತಿ]

ಪಿಂತಟ್ಟು, ಹಿಂದಟ್ಟು (ಕ್ರಿ). ೧. ಹಿಂದಕ್ಕೆ ಕಳುಹಿಸು ; ಹಿಂದೆ ಹೋಗುವಂತೆ ಮಾಡು : ಇದು ಸಿದಂ ಬದ್ಧಮೆಂದು ಪೂಣ್ದು ನುಡಿದು ಬಂದ ನಿಯೋಗಿಯಂ ಪಿಂತಟ್ಟಲೊಡಂ (ರಾಮಾಶ್ವ. ೦೪೩-೦೪). ಹಿಂದಟ್ಟು : ೧. ಬೆಟ್ಟ ಬರುತಿದೆ ಮುಂದೆ ಹೊಯ್ ಹೊಯ್ ಬೆಟ್ಟು ಹಿಂದಟ್ಟಿಡದಲವುಕುವ ಹೊಟ್ಟುಗಳ ಹೊಯ್ನುನುತ ರಣದೊಳಗಟ್ಟೆಯಾಡಿದರು (ಶಾಕಿರಾ. ೩೨-೨೨). ೨. ದಾಟಿ ಮುಂದೆ ಹೋಗು ; ಹಿಂದೆ ಹಾಕು : ಅಕ್ಕವಕ್ಕದ ಮರಗಿಡಗಳನ್ನು ಹಿಂದಟ್ಟುತ್ತಾ ರೈಲು ಮುಂದಕ್ಕೋಡುತ್ತಿತ್ತು (ರೂಢಿ). [ಪಿಂತೆ$_2$ + ಅಟ್ಟು$_2$]

ಪಿಂತಡಿ, ಪಿಂದಡಿ (ನಾ). ಹಿಂದಕ್ಕೆ ಇಡುವ ಹೆಜ್ಜೆ : 'ಪಿಂತಡಿಯಿಡು' ಪರಾ. ಪಿಂದಡಿ : 'ಪಿಂದಡಿಯಿಡು' ಪರಾ. [ಪಿಂತು + ಅಡಿ$_2$]

ಪಿಂತಡಿಯಿಡು, ಪಿಂದಡಿಯಿಡು (ಕ್ರಿ). ಹಿಂದೆ ಸರಿ; ಹಿಮ್ಮೆಟ್ಟು : ನ[ಮ]ಗಾಜರಿಂಗದೊಳು ಪರಿಭವವಾಗಿ ಮುಂತಡಿಯ ಪಿಂತಡಿಯಿಟ್ಟಡೆ ನಮ ಪೂರ್ವದಾ ಪುರುಷರು ನಾಳವಾಸಿಗಳಧೋಗತಿಗೆಯ್ದುವರು

(ಶಾ. V, ೪೨-೫೫; 1238); ವಿಸಸನದಲ್ಲಿ ಮುನ್ನಣಡಿಯುಂ ಸಲೆ ಪಿನ್ತಡಿಯಿಟ್ಟು ಪೋಗದೊಂದೆಸಕಮನಾನ್ತವಂಗೆ ಪೆಸರಾವುದು (ಶಾಇಾ. XX. ೫೭-೪೫; ?). ಪಿಂದಡಿಯಿಡು: ಇಱಿವಲ್ಲಿ ಮೆಯ್ಯೆಡೆದು ಪಿಂದಡಿಯಿಟ್ಟೊಡಮನ್ಯಕಾಂತೆ ಬಂದೊಡಮಳಿಪಿಂದೆ ಸೋಲ್ತೊಡಮಾದಾಗದೆ ಅಂಬುಧಿ ಮೇರೆದಪ್ಪುಗುಂ (ಗದಾಯು. ೧೦-೬). [ಪಿಂತಡಿ + ಇಡು$_1$]

ಪಿಂತನೆ (ಅ). ೧. ಹಿಂದೆಯೇ: ನೆಗಳ್ದರಿಘೂರ್ಜರ ದ್ವಿಪಘಟಾಳಿಗೆ ತನ್ನಯ ಸೂಚಿಯಾನೆ ತೊಟ್ಟಗೆ ಸಮರಾಗ್ರದೊಳ್ ಪರಿಯೆ ಪಿಂತನೆ [ಶಾಕಾಂ. ೫] ಸಂದುವು ರಾಜಪುತ್ರರಾ (ಗದಾಯು. ೧-೧೬): ಒಡನೆಯ್ದು ವಲರ್ಗಣ್ಗಳ್ ಬಿಡಿದು ಮನಂ ಪೋಯ್ತು ಮನದ ಪಿಂತನೆ [ಶಾಕಾಂ. ೫] ಧೈರ್ಯಂ ನಡೆಗೊಂಡುದು (ಶಗಸಿ. ೫-೧೮). ೨. ತಡಮಾಡದೆ: ಸುಹೃತ್ಸ್ನೇಹದಿಂ ಮತ್ತೆಯುಂ ಪಿಂತನೆ ಬಂದೈ ನೀನೆನುತ್ತಬ್ಜಜೆಂಗೊಳೆ ಕೆಳೆಯನೊಳ್ ಮಾತನಾಡುತ್ತಮಿರ್ದಂ (ಕಾದಂಉ. ೭೯೩).

ಪಿಂತಪಿಂತನೆ (ದ್ವಿರುಕ್ತಿ): ಈ ಚೋದ್ಯಮಂ ನೋಟ್ಟೆನೆಂದಾನುಮಾಪಜ ಪಿಂತಪಿಂತನೆ ಪೋದೆಂ (ಶಂತಶಂ. ೨೨೭-೯). [ಪಿಂತು + – ಅನೆ$_1$]

ಪಿಂತರ್ (ಕ್ರಿ). ಹಿಂದಕ್ಕೆ ತರು: ಸುಗ್ರೀವಂ ವೀರರ ಸಾಸಕ ಪೊಗಟ್ಟು ಒಡನೆಯೆ ಸೀತೆಯಂ ಪಿಂತರ್ಪ ಕಜ್ಜಮನಣಗೆಯ್ದು, ಪಲವೆಡೆಯ ಪಾಣರಂ ನೆರೆಯಿಸಿದಂ (ಕುಮಾ. ೩೭-೭). [ಪಿಂ (< ಪಿನ್) + ತರ್]

ಪಿಂತಿಕ್ಕು, ಪಿಂದಿಕ್ಕು, ಹಿಂತಿಕ್ಕು, ಹಿಂದಿಕ್ಕು$_1$ (ಕ್ರಿ). ೧. ಹಿಂದೆ ಸರಿಸು; ಹಿಂದೆ ಹಾಕು. ೨. ಮರಳಿಸು; ಹಿಂದಿರುಗಿಸು: ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿ . . . ಧ್ವಜೋತ್ಕರ ಸಂದೋಹಮುಮಂ ಬಿಸುಟ್ಟುಡುಗಿ ಪಿಂಭೃತ್ಯಪಂ ಪ್ರಪ್ರಯಾಕರ ವೇಮೋಚಿತರರ್ಘ್ಯಹಸ್ತರಿದಿರಂ ಬಂದರ್ ಭಯಭ್ರಾಂತಿಯಿಂ (ಆದಿಪು. ೧೨-೬೯); ತುಱುವಂ ಪಿನ್ತಿಕ್ಕಿ ಪರಿಯಂ ಮಾರ್ಕ್ಕೊಣ್ಡು ಜಾಗಿ ತಳ್ತಿಱಿದು (ಎಇ. VIII, ಸೊರಬ. ೧೬-೫; 1015). ೩. ಕಡೆಗಣಿಸು; ಅಲಕ್ಷ್ಯ ಮಾಡು: ಭಯಮುಂ ಲೋಭಮುಮೆಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾಟಿಯಾನೊಕ್ಕಾಳ್ದನಗೆಯ್ದು ಸತ್ಯತಮುಮಂ ಪಿಂತಿಕ್ಕಿ ಜೋಳಕ್ಕೆ ತಪ್ಪಿಯುಮೀ ಬಾಟ್ಟುದೆ (ಶಂಶಾಕಾ. ೯-೮೪). ಪಿಂದಿಕ್ಕು: ೧. ಪರಿದೈದಿ ಬಲವಮ್ಮನಮ್ಮೂದಲಿಸಿ ಮುನ್ದಣ ಪುಯ್ಯಲ ಪಿನ್ದಿಕ್ಕಿ ಮುನ್ದಾಗಿ ಸಿರಿವುರದ ಹಳಮೆಗೆ ತುಱುವನಿಕ್ಕಿಸಿ ಮಗುಟ್ಟು ಬರಂಕಿಟ್ಟೊಡೆ (ಎಇ. XII, ತಿಪಟೂ. ೧೦-೮; ಸು. 930?); ಸಂಭ್ರಮಂಬೆರಸು ಮುನ್ನಿರ್ದ ಕುಸುಮಾಶಯನಮಂ ಪಿಂದಿಕ್ಕಿ ಕಂಪಿಸುತ್ತಮೆನಗಿದಿರೆಟ್ಟ ಕಾದಂಬರೀದೇವಿಯಂ ಕಣ್ಣಾರೆ ನೋಡಿ . . . ಸಾಫಲ್ಯಮಂ ಸಾಧಿಸುವಂ (ಕಾದಂಕಾ. ೫೧೯). ೪. ದಾಟು; ಮುಂದೆ ಹೋಗು: ಗಾಢವಡೆದ ಕಾಡಂ ಪಿಂದಿಕ್ಕಿ ಮೆಲ್ಲಮೆಲ್ಲನೆ ನಡೆವಾಗಳ್ (ಕರ್ನಾಕಾ. ೨೦೯). ಹಿಂತಿಕ್ಕು: ೨. ವಂಕದೇವನಾಯಕನವರು ಯೆಡೆನಾಡ ಒಡಣಯಂ ಹಾಯ್ದು ಸೆಱೆಯಂ ಜೀವಧನವನುಂ ಕೊಣ್ಡು ಹೋಹಲ್ಲೆ . . . ತಮ್ಮ ಒಡೆಯ ಯೆಡಗಾವುಣ್ಡನು ಸಹಿತಂ ಹರಿದು ಸೆಱೆಯಂ ಜೀವಧನಮುನುಂ ಹಿಂತಿಕ್ಕಿ ಹಲವು ಕುದುರೆ ಹಲಬರು ವೀರಭಟರಂ ಕೆಡಹಿ (ಎಇ. VIII, ಸೊರಬ. ೨೨೦-೦೩; 1231). ಹಿಂದಿಕ್ಕು$_1$: ೧. ಪಾಂಡ್ಯ ಕೈಕೆಯ ಕೇರಳರ ಹಿಂದಿಕ್ಕಿ ಪಡಿಬಲವಾದನಾ ಭೀಮಂ (ಕುಪ್ಪಾಳ. ೩-೧೫); ಹಂಸಾರೂಢ ನಾರದನ ಹಿಂದಿಕ್ಕಿ ನೋಡಲಾಕ್ಷಣ ಪುಷ್ಪಕವೀದುದು ದೇವಚೂಡಾಮಣಿಯ ಪಟ್ಟಣಕೆ (ಪೋಹಕ. ೦೩-೧೯). ೫. ಸೋಲಿಸು; ಹಿಮ್ಮೆಟ್ಟಿಸು: ತರ್ಕಶಾಸ್ತ್ರದಲೆಸೆವ ವಾಕ್ಯಗಳಕ್ಕಜಗಳಿಂದನ್ಯರನು ಹಿಂದಿಕ್ಕಿ . . . ಸೊಕ್ಕಿನಲಿ ಬೆರಿತಹರಿಗೆಂದಿಗುಂ ಪಕ್ಕಮಾಪ್ಪುದೆ ಮಾನವು (ಗಗಶಾ. ೦೩-೦೯). ೬. (ಆಲಂ) ಬೆನ್ನಿಗೆ ಇಟ್ಟುಕೊಳ್ಳು: ಕಾಪಾಡು; ರಕ್ಷಿಸು: ನಿನ್ನ ಬಾಂಧವಜನಸಹಿತ ಹಿಂಡುವೆನು ಹಿಂದಿಕ್ಕುವನ ತೋಲು (ಕುಪ್ಪಾಳ. ೯-೦೮).

ಹಿಂದಿಕ್ಕಿಕೊಳ್ಳು = ೧. ಕಾಪಾಡು; ರಕ್ಷಿಸು: ಮಿಕ್ಕ ಮಾತ್ಕೇಕಿನ್ನು ನೀ ಹಿಂದಿಕ್ಕಿಕೊಂಬರೆ ಕೊಲುವನಾವನು (ಕುಪ್ಪಾಳೀ. ೧-೨೨); ಸಿಕ್ಕದಿನ್ನೆಲ್ಲಿಗೆ ಪೋದಪನಪನ ಹಿಂದಿಕ್ಕಿಕೊಂಬರಸುಗಳುಂಟೆ (ಕುರಾಶಾಂ. ೧೮-೧೩೧); ಎಕ್ಕತುಳದಲಿ ತನ್ನನೇ ಮಱೆಯೊಕ್ಕು ನೀನಿರು ಸಾಕು ತಾ ಹಿಂದಿಕ್ಕಿಕೊಂಬೆನು ತಾಯೆ (ಶಿಶಾಗ. ೩-೧೫-೧೬). ೨. ಕಾಣದಂತೆ ಬಚ್ಚಿಡು: ತನುಮನಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯು ಒಳಲೊಟ್ಟೆಯು ನುಡಿವರು ನೀವೆಲ್ಲ ಕೇಳಿರೆ (ಶಸಪ. ೨೦೨). [ಪಿಂತ್ತೆ + ಇಕ್ಕು]

ಪಿಂತಿರಿಸು, ಪಿಂದಿರಿಸು, ಹಿಂದಿರಿಸು (ಕ್ರಿ). ೧. ಹಿಂದುಗಡೆಯಲ್ಲಿ ಇರುವಂತೆ ಮಾಡು; ಹಿಂಭಾಗದಲ್ಲಿ ಇರಿಸು: ನೂರ್ವರ್ ತಮ್ಮುಂದಿರುಮಂ ಪಿಂತಿರಿಸಿ ಲಕ್ಷಣಂ ಮೊದಲಾಗೆ ನೂರ್ವರ್ ಮಕ್ಕಳುಮಂ ಮುಂತಿರಿಸಿ (ಶಂಶಕಾ. ೯-೨೮ ಸ); ತನಗಾಗಳ್ತೊಡವಟ್ಟಳಂ ಪದಪಿನಂ ಪೊಣ್ತೆತ್ತ ಬಾಯಿತ್ತ ಬಾಯೆನುತಂ ತನ್ನ ಕೆಲಕ್ಕೆ ಕಾಂತೆ ಕರೆದಾದಂ ಭ್ರಾಂತಿಯಿಂದಂ ಸಭೀಜನಮೆಲ್ಲಂ ನಡೆನೋಡೆ ಪಿಂತಿರಿಸಿಕೊಂಡು (ಕಾದಂಉ. ೨೪೦). ೨. ಹಿಂದೆ ಬಿಟ್ಟು ಹೋಗು: ಬಬಿಕಿಂತಿಳೇಶ ಪಿಂತಿರಿಸುವೆ ಮೆಯ್ಯ ಪಿಂತೆ ನೆಲಲಿರ್ಪುದೆ ಬಾರದೆ ಮಾಣೆಂದು ಪೂಣ್ದರಸಿಯರೇಱಿದರ್ ನೃಪನ ಕೂಡೆ ಪಲರ್ ಪಿರಿಯಂದನಾಂಗಳಂ (ಆಪಂಪು. ೪-೨). ಪಿಂದಿರಿಸು: ೨. ಇರಿಸಲ್ವೇಡಿರ್ದರಂ ಪಿಂದಿರಿಸಿ . . . ಎಲ್ಲಿಯುಂ ನಿಲ್ಲದೆ ಕೆಲದಿವಸಕ್ಕೆಯ್ದಿದಂ ಪದ್ಮಪತ್ರೋತ್ಕರಕಾಂತಿಪ್ರಚ್ಛದಾಚ್ಛಾದಿತಜಲ ಮೆನಿಪಚ್ಛೋದಮಂ ಸಾರ್ವಭೌಮಂ (ಕಾದಂಉ. ೬೬೦). ಹಿಂದಿರಿಸು: ೨. ತನ್ನೊತಡಣ ಶಬರರಂ ಹಿಂ[ಶಾಕಾಂ. ಪಿಂ]ದಿರಿಸಿಯೊರ್ವನೆ ಬರುತ (ಶಸಪು. ೧೮-೫). [ಪಿಂತ್ತೆ + ಇರಿಸು]

ಪಿಂತಿರುಗು 'ಪಿಂದಿರುಗು' ನೋ.

ಪಿಂತಿಲ್, ಪಿತ್ತಲ್, ಪಿತ್ತಿಲ್, ಹಿತ್ತಲ್, ಹಿತ್ತಲು, ಹಿತ್ತಿಲ್, ಹಿತ್ತಿಲು (ನಾ). ೧. ಹಿಂದುಗಡೆ; ಹಿಂಭಾಗ: "ಪೆಡೆಮೆಟ್ಟು, ಪೆಜಗು, ಪೆಜತು, ಪಿಂತಿಲ್—ಈ ೪ ಪಿಂಗಡೆಗೆ ಪೆಸರ್" (ಕಶಾ. ೬೫-೪೫೫); "ಪೆಜತು ಪಿಂಗಡೆ ಪೆಡಂಮೆಟ್ಟುಱ್ ಪೆಜಗುಂ ಪಿಂತೆ ಪಿಂತಿಲೆನೆ ಹಿಂದೆನಿಕುಂ" (ಕವಿಕಂ. ೧೯೬). ಪಿತ್ತಲ್: ೧. ಬಲಿಸಗರಕ್ಕೆ ಮೂಗೆನಿಸಿದಾ ತ್ರಪುರಾಂತಕ ದೇವತಾಲಯಾವಳಿ ಮಾನಿಪ . . . ಪಿತ್ತಲೆಸೆತೆಯಲ್ಲದಲ್ಲುಗುತಮಿಱ್ದುದ ನೀಕ್ಷಿಸಿ (ಶಾಇಾ. IX-i, ೧೬೧-೫೬; 1092). ೨. (ತರಕಾರಿ, ಹೂಗಿಡಗಳು ಮುಂತಾದುವನ್ನು ಬೆಳೆಸುವ) ಮನೆಯ ಹಿಂದಿನ ಜಾಗ: ಮನೆಯ ಹಿಂಭಾಗದ ಸ್ಥಳ: ಮುನಿಪನ ಬರವಂ ದೂರದೊಳನುಸಯದಿ ಕಂಡು . . . ನಿಲಿಸೆನೆ ಪನಜಾನನೆ ಪಿತ್ತಲಪತ್ತಲೋಡಿದಾಗಳ್ (ರಮ್ಮಾಯ. ೪-೧೧೦); ಶಿವಲಿಂಗಯಜನಕೊಪ್ಪುವ ಪೂಸ ಕಮ್ಮರಲಂ ತಿಱಿಯಲ್ಪಿತ್ತ [ಶಾಕಾಂ. ತ್ರಿ]ಲನಿರದೆಯ್ದ ವಿನೋದದಿಂದೆ ಪೂಗೊಯ್ದುವನೆಂಬೆ. (ವೃತ್ತಿ. ೫೫-೨೮). ಪಿತ್ತಿಲ್: ೨. ಪದಿಂಬರ್ ದೇವಡಿತಿಯರ್ಗ್ಗಂ ತಮಗಂ ಮನೆಗಂ ಅಂಗಣಕ್ಕಂ ಪಿತ್ತಿಲ ಬಟ್ಟೆಗಂ . . . ಕೂಪಿಭಟ್ಟಾರರ ಕಾಲಂ ಕಟ್ಟಿ ಧಾರೆಯನೆಱೆದು ಬಿಟ್ಟು ಕೊಟ್ಟರ್ (ಎಇ. IX, ಶಾಮರಾ. ೦೯-೯; ಸು. 1000?); ಮನೆಯ ಪಿತ್ತಿಲೋಳಿತನಂ ಪಿಡಿದೊಯ್ದು ಭೋಂಕೆನೆ ಕೊಂದು . . . ಪೊಟ್ಟುದೆಂದು ಕಷಾಯದಿಂ ಬರೆದೋಲೆಯಂ (ರಮ್ಮಾಯ. ೧೦-೧೬೨); ಎಳೆಯಳ್ ಪಿತ್ತಿಲ ಬಾಟಿಗಳೆಲೆಯೊಳ್ . . . ಅಗ್ರಂ ತಳರೆಸೆಯುಂತಿರ್ಪ ಕದಳೀದಳಮಂ ಮೆಲ್ಪೆಸೆಯೆ ಚಿವುಟಿ ತಂದಳ್ ಬೇಗಂ (ರಕಳಾ. ೦೨-೧೨೮). ಹಿತ್ತಲ್: ೨. "ಹಿತ್ತ[ಶಾಕಾಂ. ತ್ರಿ]ಲಂ ನಿಷ್ಕುಟಮಾದೆಂಬುದು" (ಮಂಗರಾ. ೧೪೧-೦೬); ಹಿತ್ತಲ ದೆಸೆಯೊಳ್ ಬಿಡದೋಡುವಾಕೆ ಕಾಣ್ದಳ್ ಕಡೆದಳ್ (ರಮ್ಮಾಯ. ೨೨೪). ಹಿತ್ತಲು: ೨. ಮನೆಮನೆಯ ಹಿತ್ತ[ಶಾಕಾಂ. ತ್ರಿ]ಲುಂಗಳಡುಮುಡುಕಿನೊಳಗೊಬ್ಬನೆ ಸಾರ್ದು (ಶಸಪು. ೩೦-೫); ಗಂಗಾಸಾನಿ ಸುಭಗೆಯುನ್ನು ಜುಲುಮೆಯಿಂದ

ಹಿತ್ತಲಿಗೆ ಕರೆದುಕೊಂಡು ಹೋದಳು (ಗಂಗಾಕಾ. ೨೨) ; ನಮ್ಮದೇ ಆದ ಮನೆಯಿದೆ, ಹಿತ್ತಲಿದೆ, ತೋಟವಿದೆ (ಮೂರುರಾ. ೧೨೩) ; ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದ (ಗಾದೆ) ; ಹಿತ್ತಲ ಗಿಡ ಮದ್ದಲ್ಲ, ಮನೆಹೊಡತಿ ಮುದ್ದಲ್ಲ (ಗಾದೆ). ಹಿತ್ತಿಲ್ : ೧. ಬಡಗಣ ಕೊಪ್ಪಲ ಹಿತ್ತಿಲಲು ... ಹಿರಣ್ಯಪೂರ್ವ್ವಕವಾರಾಧಿಸಿ ಸರ್ವ್ವನಮಶ್ಯವಾಗಿರೆ ಪಡೆದು ಬಿಟ್ಟರ್ (ಸೌಇ. V, ೬೫೦-೪೩ ; 1162). ೨. "ಹಿತ್ತಿಲಲ್ಲಿಯುಂ ನಿಷ್ಕುಟಮೆಂಬುದು" (ಹಲಾಯು. ೧೩೬-೩೦) ; ಪತ್ತಿದ ಗಂಡರ ಚಿತ್ತವ ಕಿಡಲೀಯದಿತ್ತುದೇ ಕೋಟಿ ತನಗೆಂಬ ಸೂಳೆಯ ಹಿತ್ತಿಲಲ್ಲಿರದೆ ಸುರಭೂಜ (ಲೀಲಾವ. ೨-೩೫). ಹಿತ್ತಿಲು : ೨. ನಿನಗೆ ಕರವೆತ್ತಿ ಪೊಡೆವಡುವ ಭಕ್ತ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನ್ನೆ ರಾಮನಾಥಾ (ದೇದಾಪ. ೨೯-೪೯) ಹಿತ್ತಿಲೊಳ್ಸಂಜೀವನೌಷಧಿ ಬೆಳೆದು ರಂಜಿಸುತ್ತಿರಲು (ಸೌಂದಪು. ೦೫-೬೭) ; ಮನೆಯೊಳ್ ಸುರಧೇನು ಕಱೆಯುತಿರ್ಪುದು...ದಿವಿಜಾನೋಕಹಮೋವದೆ ಕುಡುವುದು ಬೇಡಿದುದಂ ಹಿತ್ತಿಲೊಳು (ಜಯಳಾ. ೦೨-೩೭) ; ಹಿತ್ತಿಲಲಿ ಮರ ಹಾರುವನು ಅಳಿಲಿನಂತೆ (ಕಪಿಪು. ೧೦-೯).

ಪಿತ್ತಿಲ ವನ, ಹಿತ್ತಿಲ ಬನ, ಹಿತ್ತಿಲ ವನ = ಮನೆಯ ಹಿಂಭಾಗದಲ್ಲಿರುವ ತೋಟ ; ಕೈದೋಟ : ಶ್ರೀವೀರಜಿನೇಂದ್ರಸಮವಸರಣಂ ಬಂದೀ ಆವಾಸದ ಪಿತ್ತಿಲ ವನದೋವರಿಯೊಳ್ ನೆಲಸಿತಖಿಲಸುರಗಣಸಹಿತಂ (ಕಬ್ಬಾಸು. ೩೦ ಪ್ರಯೋ) ; ಕೃಷ್ಣನವನ ಕರಕೊಂಡು ಹಿತ್ತಿಲ ಬನಕೆಯ್ದೆ ತೊಂಡುಗೆಡೆವ ಗಿಳಿಯಿಲ್ಲದ ಠಾವಲಿ ಮಂಡಿಸಿದನು ರಾಯಕುವರ (ಪರ್ಧಸ. ೩-೩) ; ಆ ತರಳಾಕ್ಷಿ ಹಿತ್ತಿ[ಪಾಠಾಂ. ತ್ತ]ಲ ವನಕವಳನಂದಾ ತುರದಿಂದೆಯ್ದಿಸಿದಳು (ಕುರಾಪಾಂ. ೨೩-೬೯). ಹಿತ್ತಲ ಕಾಯಿ = ಮನೆಯ ಹಿಂಭಾಗವನ್ನು ಕಾಯುವವನು : ಎಂದಿನಂತೆ ಅವನಿಗೆ 'ಹಿತ್ತಲ ಕಾಯಿ' ಪದವಿ ಕಾದಿರುತಿತ್ತು (ರಾಮಾಪ. ೨೬). ಹಿತ್ತಲ ಬಾಗಿಲ್ = ಮನೆಯ ಹಿಂಭಾಗಕ್ಕೆ ಇರುವ ಬಾಗಿಲು; ಹಿತ್ತಲಿಗೆ ಇರುವ ಬಾಗಿಲು ; ಹಿಂಬಾಗಿಲು : ತನ್ನರಮನೆಯ ಹಿತ್ತ[ಪಾಠಾಂ. ತ್ತಿ]ಲ ಬಾಗಿಲಲಿ ಲಿಂಗಪ್ರಸಾದವನು ಜನನಿ ತಂದವನಿಯಲಿ ಸುರಿಯಲು (ಜಪು. ೬೦-೨೦). ಹಿತ್ತಲ ಮನೆ = ಮನೆಯ ಹಿಂಭಾಗದ ಅಂಗಳದಲ್ಲಿ ಕಟ್ಟಿರುವ ಮನೆ : ಸಿಲುಕಿತಲ್ಲಾ ನೀರೆನುತ ಕೋಮಳೆ ತವಕದಿಂ ತನ್ನ ಕೈಗೊಟ್ಟಳಲುತಂ ಹಿತ್ತ[ಪಾಠಾಂ. ತ್ತಿ]ಲ ಮನೆಗೆಪೊಡಗೊಂಡು ತಾನೆಯ್ದಿ (ಬಸಪು. ೪೨-೩೧) ; ಅಂಗಳದಿಂದ ಹಿತ್ತಲ ಮನೆಯವರೆಗೂ ಗಡಿಬಿಡಿ ಆರಂಭವಾಗಿಬಿಟ್ಟಿತ್ತು (ಸ್ವಸಿ. ೯) ; ತಾಯಿಯೂ ಮಗಳೂ ಆಗ ಕರೆದ ಎರಡು ದೊಡ್ಡ ಮಡಿಕೆ ಹಾಲನ್ನು ಹೊತ್ತುಕೊಂಡು ಹಿತ್ತಲ ಮನೆಗೆ ಹೋಗುತ್ತಾರೆ (ಮಲೆನಾ. ೨೬). ಹಿತ್ತಲು ಗುಡಿಸು = ನಿಂದಿಸು ; ದೂಷಿಸು : ನಿಮ್ಮ ನಿಮ್ಮ ಭಾವನ ಜಗಳದಲ್ಲಿ ನೀವು ನಮ್ಮ ತಂದೇ ತಾಯಿಯ ಹೆಸರು ಹಿಡಿದು ಹಿತ್ತಲು ಗುಡಿಸಬೇಡಿ (ಜಕರಾ. ೨೧೩). ಹಿತ್ತಿಲು ಮನೆಯ ಊಳಿಗ = ಹಿತ್ತಲ ಮನೆಯನ್ನು ಕಾಯುವ ಕೆಲಸ : ಅರಮನೆಯಲ್ಲಿ ಸಮುಖದೊಳು ನಿತ್ಯಕಟ್ಟಳೆಯಲ್ಲಿ ನಡೆಯುವ ಊಳಿಗಗಳು . . . ರಜದ ಊಳಿಗ, ಹಿತ್ತಿಲು ಮನೆಯ ಊಳಿಗ (ಮಹಾಪಂ. I. ೪೩).

[ಪಿಂತು + – ಇಲ್ಲ್. / ತುಳು. ಪಿತ್ತಿಲ್, ಬಿತ್ತಿಲ್]

ಪಿಂತು, ಪಿಂದು, ಹಿಂದು₁ (ನಾ). ೧. ಹಿಂಭಾಗ ; ಹಿಂಬದಿ : "ಬೆಂಗಡೆಗೆ ಪಿಂತೆನಿಕ್ಕುಂ" (ಕಶರ. ೬೩) ; ಕಿಚ್ಚಿನುರಿಯುಂ ಪೊಗೆಯುಂ ದುಷ್ಪಾಶ್ವದ ಮುಂತುಂ ಪಿಂತುಂ ಬೆಟ್ಟಮನೇಱುವುದುಮಿಱುವುದುಂ (ರರ್ಮಾಮ್ಯ. ೯-೦೩೨) ; ತುಕಾರಕ್ಕೆ – ಮುಂದು, ಮುಂತು ; ಪಿಂದು, ಪಿಂತು (ಕಮದ. ೧೨೦ ಪ್ರಯೋ). ೨. ಹಿಂಜರಿಯುವಿಕೆ: ವೀರದಿನ್ದೊಪ್ಪುವ ಸಾಮಂತ ಜಗದಾಳ ಮಲೆಯ ತೊತ್ತಳೆದುಳಿವ ಯತ್ತಿದ ಮೊನೆಗೆ ಮುನ್ತು ಕಡಿಕಾಳಗಕ್ಕೆ ಪಿನ್ತು (ಎಕ. XII, ಶಿಪಟೊ. ೧೦೯-೨೪ ; 1130). ಪಿಂದು : ೧. ಏಱಗಲಱಿಯದೆ ಜಿಣ್ಣುಕಮ್ಮಗುಟ್ಟುಂ ಬರಲಣಮಱಿಯದೆ ತಪ್ಪಂ ಪಿನ್ದುಂ ತೆಱನನಱಿಯದೆ . . . ಪೊಯಿಸಿದನು (ಎಕ. II. ೦೩೩-೧೩೮ ; 982) ಒಂದಱ ಪಿಂದೊಂದಡಸಿ ಗುಡುಗುಡನೆ ಸುರಿವಾನಂದಜಲಬಿಂದುಗಳೆನ; ನಿರತಿಶಯಹರ್ಷದುಂ ಪ್ರಕಟಿಸುತ್ತಿರಲ್ (ಕಾಮಂಪು. ೮೬೩) ; ಪಾರ್ದು ಸರುವಂ ಕಟ್ಟೆಂಬ ಮುಟ್ಟೆಂಬ ಪಿಂ[ಪಾಠಾಂ. ಬು]ವಡಸೆಂಬೊತ್ತರಿಸೆಂಬ್ನ . . . ಪುಳಿಂದವೃಂದನಿನದಂ ಪೊಣ್ಮೆತ್ತು ಕಾಂತಾರದೊಳ್ (ಗಿರಿಕ. ೧-೬೨). ಹಿಂದು₁ : ೧. ಜೆಡೆ ಗಂಗೆಯ ಸ್ಥಾನ ನೊಸಲು ಚಂದ್ರನ ಸ್ಥಾನ ಹಿಂದು ಸೂರ್ಯನ ಸ್ಥಾನ (ಬಸವ. ೬೪೪) ; ಹಿಂಡ ಬಿಟ್ಟೆಂದೆಂದು ಹಿಂದಿನಿಂ ಬಹುವಲ್ಲ ಕಂಡವರ ಹೊಲಕಿಳಿವ ತೊಂಡುವನಮಲ್ತು (ಕಾಲೂರ. ೬೦-೦೩೨). ೨. ಕಡ್ಲೆಗೆ ಮುಂದು ಕಡಿವಾಣಕ್ಕೆ ಹಿಂದು (ಗಾದೆ). ೩. ಕೊನೆಯದು ; ಅಂತ್ಯ : ನೀರ ಕ್ಷೀರದಂತೆ ನೀನಿಪ್ಪೆಯಾಗಿ ಆವುದು ಮುಂದು ಆವುದು ಹಿಂದು ಎಂದಱಿಯೆನು (ಮಹಾದೇ. ಬ. ೦೩-೧೦) ; ಮುಂದನಱಿಯದ ಗುರುವು ಹಿಂದನಱಿಯದ ಶಿಷ್ಯ (ಸರ್ವಜ್ಞ. ೬೯). ೪. ಹಿಂದೆ ನಡೆದುದು : ಹಿಂದ ನೆನೆಯಾ ಖೂಳ . . . ಎನುತ ಹೆಱೆಯಂಬಿಂದ ಕಡಿದಿಳುಹಿದನು ಪಾಂಚಾಲಾಧಿಪನ ಶಿರವ (ಕುಪ್ಯಾರ್ಪ್ರೋ. ೦೭-೩೬).

ಪಿಂತಣ್, ಹಿಂದಣ್ = ಹಿಂಭಾಗ ; ಹಿಂಬದಿ :- ಅಕ್ಕುಳಿಸಿತೆಂದುಂ . . . ಪಿಂತಣ್ಗೆವಂದುದೆಂದುಂ . . . ಪಾರಗೆಯ್ಯೆಂದುಂ — ಈ ೧೩ ಅಪಸರಣಕ್ಕೆ ಪೆಸರ್ (ಕಶಪಾ. ೬೨-೬೪೯); ಒಳಸೋರ್ದುದು . . . ಮೆಯ್ದೆಗೆದುದು ಘಟಿಲೆನೆ ಪಿಂತಣ್ಗೆವಂದುದುಂ ಜಗುಟಿದುದುಂ (ಕಪಿಕಂ. ೨೩೨); ಬೆಱಗಡರಿ ಮುಖದಿರುಹಿ ಹಿಂದಣಿನಿಱಿದ ಕರ್ಣನ ನೋಡಿ ಮುಖದಲಿ ಕಿಱುನಗೆಯ ಕೇವಣಿಸಿ (ಕುಪ್ಯಾರ್ಪ್ರೋ. ೬-೩೩) ; ಕರ್ಣ ಹಿಂದಣಿಲೆಚ್ಚು ಕೂರಂಬಿನೊಳ್ಳನುವ ಖಂಡಿಸಿದನು (ಕುರಂಗ. ೩೨-೩೦). ಪಿಂತಣ, ಪಿಂತಳ, ಪಿಂದಣ, ಹಿಂದಣ, ಹಿಂದಳ = ೧. ಹಿಂಭಾಗಕ್ಕೆ ಇರುವ ; ಹಿಂಬದಿಯ : ತನ್ನರಸಿ ಚಿಕ್ಕಬ್ಬೆಗೆ ಬಡಗನ್ನಿಕೆಱೆಯ ಬಡಗಣ ಬದರಿಯ ಪಿನ್ತಣಕೆಱೆಯಮ್ಬಿಟ್ಟ (ಎಕ. VII, ಶಿಪಟೊ. ೯೬-೨೨ ; ಸು. 915); ಇರ್ಕ್ಕಲದ ಮುಂದ್ದಣ ಪಿನ್ದಣಮಣ್ಡಳಕ್ಕೆ ಭೀಷಣಮತಿರೌದ್ರಮದ್ಭುತಮಗುರ್ವ್ವಿನ ತೇಜದಳುರ್ಕ್ಕೆ ಧಲ್ಲನ (ಸೌಇ. XI-1, ೩೨-೯, 1007) ; ಹಿಂದಣೊಡ್ಡನು ಝಾಡಿಸಿದವೀ ಕ್ಷೇಮಧೂರ್ತಿನೃಪಾಲನಾನೆಗಳು (ಕುಪ್ಯಾಕ. ೨-೦೨) ; ನಿಂದನ್ನೆ ಬಳಿಕೀತನಾ ಹೆಬ್ಬಂದಿಯಿದಿರಲಿ ಮೆಲ್ಲಮೆಲ್ಲನೆ ಹಿಂದಣಡಿಗಳಲಂಡುಗೊಂಡುದು ಶಂಭುಕಾಸುರನ (ಹೊರರಾ. ೩-೩-೨೦). ೨. ಹಿಂದಿನ ; ಮೊದಲಿನ : ಪಿಂತಣ ಭವದೊಳಾನೆಸಗಿದ ಪಾತಕಸಂತತಿಯೊರ್ಮೊದಲೊಳಗೆ ಭ್ರಾಂತಿ ಪಡೆದು ಕೆಡಲೆಂದೆಱಗುವೆ (ಅಂಜನ. ೦-೯) ; ಖಚರೇಶನ ಪಿಂತಣ ಪುಣ್ಯದ ಫಲದಿಂ . . . ವಿಮಲಚಾರಣರೆಯ್ತರಲು (ಶಾಂತೀನ. ೨-೯೮) ; ಪಿಂತಣ ಕಾಲದಲ್ಲಿ ಭೂಮಿಯಂ ಪರಿಪಾಲನೆಗೆಯ್ದ ಭೂಪೋತ್ತಮರ ಮಹಾತ್ಮ್ಯಮಂ ಚೆನ್ನಾಗಿ ಕಿವಿಗೊಳಿಸು (ಭಾರಶಾಂ. ೦೯೯) ; ನೂಂಕುವುದೊಮ್ಮೊಮ್ಮೆ ನರರಕ್ಕೆ . . . ಒಮ್ಮೆ ಮಾನುಷಕೆ ಪಿಂತಳ ಪಾಪಪಂಕದ ತೀವ್ರವದೆಂತೊ (ಪರ್ಧಸ. ೩-೩೦); ಹಿಂದಣ ಜನ್ಮವ ತೊಡೆದು ಮುಂದಣ ಪಥವ ತೋಱಿದನೆನ್ನ ತಂದೆ (ಮಹಾದೇ. ಬ. ೨೯-೯೯) ; ಆ ಜಾಗ, ಹಿಂದಣ ವರ್ಷ ಕುಮಾರಿ ಬೆಳೆದ ತಾವಿನಿಂದ ಮೈಲು ದೂರದ ಇನ್ನೊಂದು ಬೆಟ್ಟದಲ್ಲಿದೆ (ಕುಡಿಕೂ. ೧೦). ೩. ಮೊದಲು ; ಪೂರ್ವ : ಅಲ್ಲಿಗೆ ಮತ್ತೊಂದು ಕಡೆಯಿಂದ ಇನ್ನೂ ಹಿಂದಣದಲ್ಲಿ ಬಂದವರು (ಯಕ್ಷಬ. ೨); ಹಿಂದಳ ಸುಖ ಮುಂದಳ ದುಃಖಂಗಳು ಮುಂದಳ ಸುಖ ಹಿಂದಳ ದುಃಖಂಗಳು ಇವ ತಾ ಸಂಧಿಸಿ ಅನುಭವಿಸಿದಲ್ಲಿ (ಶಾಪೊಮ್ಮ. ಕ. ೩೩೮-೨೦). ಪಿಂತಣಂ = ೧. ಹಿಂಭಾಗದಲ್ಲಿರುವವನು; ಹಿಂದಿನವನು : (ಕ). ೨. ಪೂರ್ವ ಕಾಲದವನು : ಅಕಾರಕ್ಕೆ . . . ಪಿಂತಣಂ, ಅತ್ತಣಂ, ಇತ್ತಣಂ (ಕಮದ. ೨೦೦ ಪ್ರಯೋ). ಪಿಂತಣರ್ = ಹಿಂದಿನವರು; ಪೂರ್ವ

ದವರು : ಪಿಂತಣರ ಕಬ್ಬಗೆ ಸೇವ್ಯಮುವೆ ವನ್ಯಂ (ಸಂಸ್ಕೃ. ೬-೦). ಪಿಂತಾಗು, ಪಿಂತಾಗು, ಪಿಂದಾಗು=ಗಿ. ಹಿಂದೆ ನಡೆದಿರು.— ಘಟಿಸಿರು : ಪಿಂತಾದ ದುಸ್ಸಹಾವಸ್ಥಾಂತರ ಸಂತತಿಯನಾಗಳನುಭವಿಸುತ ಮಿರ್ಪಂತಿರ್ದಗಳ್ ಜೈತನ್ಯಮನಂತಾಗಳ್ ಹರಿಯಿಸಿತ್ತು, ವಮೂರ್ಧಾವೇಗಂ (ಕಾದಂಬ. ೧೫೬). ೨. ಹಿಂದೆ ಉಳಿ : ಹಿಂದೆ ಬೀಳು : ಅದು ಪಿಂತಾಗಿರೆ ಮತ್ತವೊಂದು ಶರಮೆಯ್ದಿತ್ತಂತದಂ ಪಿಂದುಗೆಯ್ದೊದ ಜುತ್ಸಂ ಪೆಜತೊಂದು ವೂರ್ಗಣಮಳುಂಬಿಂ ಪಾಯ್ದುದು (ಜಾಪಂ. ೪-೧೦) ; ಲಿಂಗ ಮುಂತಾಗಿ ಮನ ಹಿಂತಾಗಿ ಅಂಗಭಾವವಳಿದು ಅರ್ಪಿಸಿಕೊಳಬಲ್ಲ ಪ್ರಸಾದಿಯು ಪರಮಪರಿಣಾಮವೆ ಪ್ರಸಾದ (ಅದಪ್ರ. ೨೬-೬೬); ಪಡುರಥರುರವಣೆಯು ಹಿಂದಾಯ್ತು ರಾಯರ ಗುರುವ ಕಂಡವರಿಲ್ಲೆನುತ ಕುರುರಾಯ ಚಿಂತಿಸಿದ (ಕುಷ್ಕಾಕ್ರೋ. ೬-೫೬). ಪಿಂದುಮುಂದು. ಹಿಂದುಮುಂದು=ಗಿ. ಹಿಂದಿನ ಭಾಗ ಮತ್ತು ಮುಂದಿನ ಭಾಗ : ಪಿಂದುವುಮುಂದು [ಪಾಣಾಂ. ಪಿಂತುವುಮುಂತು]ಮನೆಡ ಬಲನುವುಂ ಬೆರ್ಚಿದಂತೆ ನೋಟ್ಯುವಪ್ಪೊಡಾಗಳ್ ನಿವಗೆ ತಪ್ಪಲ್ಪಗೆದು ಬಂದನೆಂದಱಿಯಿಮೆಂದು ವೇಟ್ಯುದುಂ (ಪಂಚತಂ. ೧೩೨-೩); ಹಿಂದುವುಮುಂದ ವಗಡಿಸಿದಾ ಮಾದ್ರೇಯ ರವಿಸುತರೊಡಲೊಳಂಬನು ಹೊಳೆದನು (ಕುಷ್ಕಾಕ್ರೋ. ೬-೦೬). ೨. ಆಗುಹೋಗು : ಶಿವಶಿವ ಪಿಂದುಮುಂದೆನೆ ಸದೆ ಇನಿತುಬ್ಬರೆ (ಪಂಪಭಾ. ೪೭-೨೩); ಮನೆಗೆಲಸಮಂ ಮಾಣ್ದು ಮೇಣ್ ಮಾಳ್ಪಳವಳು ಕೊನೆಮುಳ್ಗಳಂತಾಗೆ ಹಿಂದುಮುಂದುಗಳೆಲ್ಲ ಕೊನೆದು ಬಾಡಿದ ನಿರತೆಯಂ ಮಾಲಿಸುವಳು (ಕಾಒಚ. ೦೦೬-೨೩೫). ೩. ಹಿಂಭಾಗವು ಮುಂಭಾಗಕ್ಕೂ ಮುಂಭಾಗವು ಹಿಂಭಾಗಕ್ಕೂ ಬದಲಾದ ಸ್ಥಿತಿ : ಎರುವೇರು ; ಹೆಚ್ಚು ಕಡಮೆ ; ಏವರೀತ : ಬಂದ ಶರಣರ ನಿಲವನಱಿದು ಸಂದು ಸಂಶಯವಳಿದು ನಂಬದಿದ್ದರೆ ಹಿಂದು ಮುಂದಾಗಿ ಹೋಹನು ಕಾಣಾ ನಮ್ಮ ಗೊಹೇಶ್ವರಲಿಂಗವು (ಅಕಸಂ. ೨೦೬-೧೭೬); ಹಿಂದಕ ಮುಂದಕ ಮಾಡಿಕೊಳ್ಳು = ವಾಂಛಿ ಹಾಗೂ ಭೇದಿಯನ್ನು ಮಾಡಿಕೊಳ್ಳು : ಈ ಕಾಳಿನ ಹಿಟ್ಟಲೇ ಮಾಡಿದ ರೊಟ್ಟಿತುಣುಕು ತಿಂದು ಮಕ್ಕಳ್ಲಾ ಹಿಂದಕ ಮುಂದಕ ಮಾಡಿಕೊಂಡ ನೆಲಪಟ್ಟು ಬಿದ್ದಾವರಿ (ಗ್ರಾಕುಡು. ೦೧೬). ಹಿಂದಲಿನವರು=ಹಿಂದಿನ ಕಾಲದವರು ; ಪೂರ್ವಕಾಲದವರು : ಹಿಂದಲಿನವರು ಮಾಡಿರುವ ಕವನಗಳು ಮುಗಿದು ಹೋದರೆ ತಾವೇ ಹೊಸಹೊಸದಾಗಿ ಅಲ್ಲೇ ಕವನಗಳನ್ನು ಗತ್ತಿಗೆ ಸರಿಯಾಗಿ ಹೆಣೆಯುತ್ತಿದ್ದರು (ಪುಟ್ಟಕ. ೨೨). ಹಿಂದಲು=ಗಿ. ಹಿಂಭಾಗ ; ಹಿಂಬದಿ : ತಂದೆ ಹೊಡೆಯುವರೆಂದು ಹೆದರಿ ಮನೆಯ ಹಿಂದಲೀಂದ ಒಳಗೆ ಬಂದು ರೂಮು ಸೇರಿದ್ದನು (ಕೂಡ). ೨. ಬಳಿಕ ; ತರುವಾಯ : ವೃದ್ಧನು ಆ ಸಮಾಚಾರವನ್ನು ಅವನ ಊರಿಂದ ಬಂದಿದ್ದ ಪ್ರಯಾಣಿಕರಿಂದ ಹಿಂದಲಿಂದ ತಿಳಿದುಕೊಂಡಿದ್ದನು (ಕಾಕಾಂ. ೨). ಹಿಂದಲೇಟು ಹೊಡೆ=ಹಿಂಜರಿ ; ಹಿಮ್ಮೆಟ್ಟು : ಮಂಜಯ್ಯನ ಕರೆಗೆಹಿಂದಲೇಟು ಹೊಡೆಯುವುದರಿಂದ ತನ್ನ ಹೇಡಿತನ ಸ್ಥಾಪಿತವಾಗುವುದೆಂದು ಹೆದರಿದ (ಪಪಂ. ೨೦೪). ಹಿಂದುಮುಂದುಗಾಣ=ದಿಕ್ಕುತೋಚು ; ದಾರಿಗಾಣು: ಸಮುದ್ರಯಾನದಲ್ಲಿ ದಾರಿ ತಪ್ಪಿ ಹಿಂದುಮುಂದುಗಾಣದೆ ಪೇಚಾಡುವ ನಾವ್ಕರಿಂಗೆ ಇದೇ ದೈವ (ಕೃಗಣಿಗೀ. ೨೬) ; ಹಿಂದುಮುಂದು ನೋಡು, ಹಿಂದುಮುಂದೆ ನೋಡು=ಗಿ. "ಅನಿಶ್ಚಯದಿಂದಿರು ; ಅರೆಮನಸ್ಸಾಗಿರು; ಶಂಕಿಸು ; ಹಿಂಜರಿ ; ಹಿಂದುಮುಂದು ನೋಡು " (Hesitate. ೭೦೪೫). ೨. ಎಚ್ಚರಿಕೆಯಿಂದಿರು : ಜಾಗರೂಕನಾಗಿರು : (ಕ). [<ಪಿನ್]

ಪಿಂತೆ1 (ನಾ). ೧. ಹಿಂದುಗಡೆ ; ಹಿಂಬದಿ ; ಹಿಂಭಾಗ : "ಪೆಜತು ಪಿಂಗಡೆ ಪೆಡಂಪೆಟ್ಟುಱಿ ಪೆಱಗುಂ ಪಿಂತೆ ಪಿಂತಿಲೆನೆ ಹಿಂದೆನಿಕುಂ" (ಪಪಂ. ೦೧೩). [<ಪಿಂತು]

ಪಿಂತೆ2, ಪಿಂದೆ, ಹಿಂತೆ, ಹಿಂದೆ (ಅ). ೧., ಹಿಂಬದಿಯಲ್ಲಿ ; ಹಿಂಭಾಗದಲ್ಲಿ ; ಹಿಂದುಗಡೆಯಲ್ಲಿ : ಸಿಂಧುರದ ಜಾರದ ಮಾಲೆಯ ಕಾಂತಿ ತಳ್ತು ಪಜ್ಜಳಿಸುವ ಕುಂಭವುಂ ತಳೆದು ಪಿಂತೆಪೆದಿರ್ದುದು ಗಂಧ ಸಿಂಧುರಂ (ಕಾದಂಬ. ೩೧೬); ಇವರ್ಗೆ ತಕ್ಕುದೂ ಮಾಬ್ಪೆನೆಂದಾಗಿ ಪೋಗಿ ಚಿಂತಾಸಿದ್ಧವಿನಾಯಕನ ಪಿಂತೆ ಕಂಪ್ಕೆರ್ದುದುಂ (ಜಾಪಂ. ೪೮-೦೨); ಇಂತು ನೆರೆದುದು ಜಾತುರಂಗಬಲ ಬಲಿದಿಕ್ಕೆ ಪಿಂತೆ ಪಡಿಹತಿಕೆ ಸಹಿತಂ ಬರುತ ಧವನಕ್ಕೆ (ಆಚಾ. ಕೀ. ೭೬-೬). ೨. ಮೊದಲಲ್ಲಿ ; ಪೂರ್ವದಲ್ಲಿ ; ಮುಂಚೆ : ಪಿಂತೆ ಕೆಲಕಾಲದೊಳ್ಗೊಂದುದಿವಸಂ ನಂದಿ ಭೃಂಗಿ . . . ಗಿರಿಜಾತೆಸಹಿತೀ ಕೃಮದೊಳು ಓಲಗಂಗೊಟ್ಟಿರ್ಪ ಸಮಯದೊಳ್ (ಜಾತ್ಕ. ೭-೬); ರಾಘವಂ ಪಿಂತೆ ರಾವಣನಂ ವಧಿಸಿ ವಾಜಿಮೇಧದೊಳ್ಪಾರ್ವರಂ ತಣಿಪಿದಂ (ಕೃಷ್ಣಾ. ೨-೨೫); ಬಲಿಯು ದಾನವ ಗೈದ ಚಿಂತೆಯನು ಪಿಂತೆ ಕಲಿಯುಲಿಲ್ಲವೆ ನೀವು ? (ಕುಚ. ೭೬-೯). ೩. ಪರೋಕ್ಷದಲ್ಲಿ : ಪಿಂತೊರ್ವರು ಪ್ರಾಣಶಾಸ್ತ್ರನದೆ ಬುದ್ಧಿವಂತರಿಲ್ಲೆಂದಾಡುವರು ಮುಂತಣ ರಾಜಶಾರ್ದೂಲನುಸಿರುವೆ ಧೂತಾಂತ ಕೇಳೆಂದು ಕೈವುಂಗಿದ (ಪೋಪಕ. ೩೬-೩೬). ಪಿಂದೆ : ೧. ಉಱಿಯ್ದ ಚಂದ್ರನೆ ನಾಂ ಕಪಿಂದಲಕ ನೀನೀ ಪುಂಡರೀಕಾರ್ಥಿವಾ ತೆಱದಿಂ ಪಿಂದೆಯಿದೇಕೆ ಬಂದೆ ಗಡ (ಕಾದಂಬ. ೬೦೯); ವುಟುಲ ತನ್ವಂ ಸಾರುತುಂ ಪಿಂದೆ ನಿಂದಿಳಿವೃಂದಂ ಬರೆ ವಾರುತುಂ (ಕ್ಷತ್ರ. ೨-೩೯). ೨. ತಪ್ಪನೆಸಗಿದೆ ಪಿಂದೆ ಜಡಧಿತನಾಗಿ (ಶ್ರೀಣಾಪು. ೩-೦೪); ಕಾಳೆಗಕ್ಕೆ ಬೆದರಿ ತನ್ನಡಿ ಶರಣ್ಮೊಕ್ಕರೆ ಕಾಂ ಪಿಂದೆ ಕಂಡಂತೆ ಕಂಡುದಾಸೀನದಿಂ ವರ್ತಿಸೆ (ಚಕ್ರೀಂಗ. ೬೩-೨೦೫). ೩. ಗುರುವಂ ಮುಂದೆ ಪೊಗಟ್ಟುದು ಮಿತ್ರರಂ ಬಂಧುಗಳಂ ಪಿಂದೆ ಪೊಗಟ್ಟುದು (ಪಂಚತಂ. ೫೭-೦೬). ಹಿಂತೆ : ೧. " ಪಿಂತೆ=ಹಿಂತೆ [ಪಾಣಾಂ. ದೆ] " (ಕುಪ್ರ. ೨೧೦ ೫೪). ೪. ಅನಂತರ ; ತರುವಾಯ ; ಆಮೇಲೆ : ಅಂತಪ್ಪನಂತಕೋಟಿಗಣಂಗಳೆಲ್ಲರಂ ಮುಂತೆ ಸೃಷ್ಟಿಸಿದರಾ ವನಿತದೇವತೆಗಳಂ ಹಿಂತೆಯುಂ (ಪಕ್ಷಿಕ್ಷ. ೬-೨೦-೬೬). ಹಿಂದೆ : ೧. ಮರ್ಮವನಱಿತು ಮಾಡಿದ ಭಕ್ತಿ, ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯ (ಅದಪ್ರ. ೦೦-೦೯); ಯಾವಗಹುದಿದು ಹಿಂದೆ ಬಂದೆಸುವೀ ಎಗಡತನ ನಿನಗೆ ಮೆಱಿವುದು ಕರ್ಣ (ಕುಷ್ಕಾಕ್ರೋ. ೬-೬೯); ದಕ್ಷಿಣಕೆ ನಡೆದುದು ವಾಜಿ ಚಂಪಕಾವುರಕಂದು ಹಿಂದೆ ಬಹ ಪಡೆ ಸಹಿತ ವಹಿಲದಿಂದೆ (ಕೃಷ್ಣಾ. ೦೦-೬೬). ೨. ಇನ್ನು ವಾನೆಕ್ಕ ಮಗನಂ ಪಡೆವುದೆತ್ತಲು . . . ಲೋಕಂ ನಗುವ ಮಾತನಾಡಿದಿರಿ ಹುಟ್ಟುವಡೆ ಹುಟ್ಟನೆ ಹಿಂದೆ ಹೇಗೆಂದಳು (ಸಿದ್ಧಾ. ೦-೧೦); ಹಿಂದೆ ಪರಸತಿಗಾಗಿ ಹಿಡಿವಡೆದೆಂದು ಧೃಂಗಿಸುವಲ್ಲಿ ದೃಗು ಜಲಬಿಂದುವೊಂದುಂ ಹೊಱಿವಡದು . . . ಇಂದದೇನು ನಿಮಿತ್ತ ಸಲಿಲಂ ನಿನ್ನ ನಯನದಲಿ(ಜಾತ್ಕ. ೦೪-೩೬); ಎಲವೊ ಕೌರವ ಹಿಂದೆ ವಂಚಿಸಿ ಕಳವಿನಲಿ ಜೂಜಾಡಿ ರಾಜ್ಯವ ಗೆಲಿದ ಗರ್ವವನುಗಳು (ಕುಷ್ಕಾಕ್ರೋ. ೦೦-೯೯). ೩. ಹಿಂದೆ ಗಳಹುವನಿವನು ಬಾಯಿಗೆ ಬಂದ ಪರಿಯಲಿ (ಕುಷ್ಕಾಪ್ರ. ೦-೦೦); ಹಿಂದೆ ಬಯ್ಕಾರದು, ಮುಂದೆ ಹೊಗಳ್ದಾರದು (ಗಾಡಿ). ೪. ಹೊಸ್ಸದೇವರು ಬೆಸಸಲು ಕಾದಿ ಸುರಲೋಕಪ್ರಾಪ್ತನಾದ ಹಿನ್ನಾದನ್ನ ಹವರಂ ಲೇಸಾಗಿ ನಡೆಹುವರು (ಕ್ಷುಆಕ. ೦೯೩. ೩೦-೨; ಮು. 1126); ಪಾರ್ಶ್ವಗ್ರಹ—ತಾನು ಹಗೆಯ ಮೇಲೆ ಎತ್ತಿ ಹೋಹಲ್ಲಿ ಹಿಂದೆ ರಾಜ್ಯವಂ ಉಪದ್ರವ ಮಾಡುವವನು (ಕಾಶಾಣ. ೪) ; ಆ ಬಾಳೇಎಲೆಗಳ ನಡುವೆ ಗಿಡದೊಳಗಿಂದ ಒಂದರ ಹಿಂದೆ ಒಂದು ಹೊಸ ಸುಳಿ ಏಳುತ್ತವೆ (ಮುಂಆಯು.೨-೩೬).

ಹಿಂದೆ ಕಳುಹು = ಹಿಂದಕ್ಕೆ ಕಳುಹಿಸು : ಮಾಪಸು ಕೆಳೆಂ ಹಿಸು : ಬರೆದು ಕೊಡುವೆನು ಸ್ಥಿರ ಚರಾಸ್ತಿಯ ಉಂಬಳಿ. ಎಂದೆನುತಂ ಪಿರಿಯಮನೆ ಕಂದನಹ ಕಡೆಕಂದಿಯಾ ಒಂದೆಮಳು

ಹಿದ ಹಿಂದೆ ಕಳುಹಿದ ಇಂದುನಾಥಾಧೀಶನು (ಕುಪು. ೨೦-೪೨). ಹಿಂದೆ ಬೀಳು=೧. ಹಿಂದೆ ಉಳಿ,—ಆಗು : ಜಗದ ಜೀವನರಥವು ಮುಂದಿರೆ ಹಿಂದೆ ಬೀಳದು ಭಾರತ (ಪಂಮು. ೩೨-೦೩). ೨. ಹಿಂಬಾಲಿಸು ; ಅನುಸರಿಸು : ಈ ನರಸ ಬಹಳ ದಿನದಿಂದಲೂ ಆಕೆಯ ಹಿಂದೆ ಬಿದ್ದಿರುವುದು ನನಗೆ ಗೊತ್ತಿದ್ದರೂ ವಿಷಯ ಹೀಗೆ ವಿಕೋಪಕ್ಕೆ ಹೋಗುತ್ತದೆ ಎಂದು ಭಾವಿಸಿರಲಿಲ್ಲ (ರೇವಹಂ. ೬೭). ೩. ಕೆಳಮಟ್ಟದಲ್ಲಿಯೇ ಇರು : ಓದಿನಲ್ಲಿ ಈ ಹುಡುಗ ಬಹಳ ಹಿಂದೆ ಬಿದ್ದಿದ್ದಾನೆ (ರೂಢಿ). ಹಿಂದೆ ಮುಂದೆ= ೧. ಹಿಂಭಾಗಕ್ಕೆ ಮತ್ತು ಮುಂಭಾಗಕ್ಕೆ : ಹಿಂದೆ ಮುಂದೆ ಮರಳಿ ಮರಳಿ ಬೆಗಡೊಂದಿ ನಡೆವುತ ಗಾಳಿಯದು . . . ಪೌಳಿಯ ಕಡೆಗೆ ನಸುಸಾರ್ದು (ಜಸಪು. ೨೬-೩೦). ೨. ಆಗುಹೋಗುಗಳನ್ನು ಕುರಿತು: ಈ ಜನ . . . ಅಧಿಕಾರಿಗಳಾಗದಿದ್ದ ಪಕ್ಷಕ್ಕೆ ಇಷ್ಟೊಂದು ದಗೆಯಲ್ಲಿ ದೊಡ್ಡ ಗುಂಪನ್ನು ಹೊರಗಟ್ಟುವುದಕ್ಕೆ ಮುಂಚೆ ಇಷ್ಟತ್ತು ಸಾರಿಯಾದರೂ ಹಿಂದೆ ಮುಂದೆ ಯೋಚಿಸುತ್ತಿದ್ದರು (ಪುಸರು. ೪೬೫). ಹಿಂದೆಮುಂದೆ ನೋಡು=ಹಿಂದೆಗೆ ; ಹಿಂಜರಿ ; ಅನುಮಾನಿಸು : ಅವರೂ ಉಳ್ಳವರಲ್ಲ. ಆದರಲ್ಲೂ ಹರೆಯದ ಅವಿವಾಹಿತ ಅಬಲೆಯೊಬ್ಬಳನ್ನು ಸಲಹಲು ಹಿಂದೆ ಮುಂದೆ ನೋಡಿದರು (ಕೂಮಿತಾ. ೩೭) ; ನಮ್ಮನ್ನು ಆಜ್ಞಾಪಿಸಲು ಪ್ರಭುಗಳು ಹಿಂದೆ ಮುಂದೆ ನೋಡಬಾರದು (ಕುಳಸೀ. ೦೩೦). ಹಿಂದೆ ಹತ್ತು=ಹಿಂದೆ ಬರು ; ಹಿಂಬಾಲಿಸು; ಬೆನ್ನಟ್ಟು : ಕುಱಿಯುರವಣಿಸಿ . . . ಅಱಚುತಭವನ ಭವನವಂ ಪುಗಲುಱದೆ ಮಿಂಡನು ಹಿಂದೆ ಹತ್ತಲು ಮಱುಗುತಾಗಳು ಕಿನ್ನರಯ್ಯಂ ಕರುಣದಲಿ ನೋಡಿ (ಜಸಪು. ೨೬-೦೦) ; ಕರೂಷದ ಕೊಬ್ಬಿನವದಿರು ಹಿಂದೆ ಹತ್ತಿದರೆ ಮರಳಬಲ್ಲನೆ ಭೀಮನು (ಕುಪ್ಕಾಳ. ೩-೨); ತಂದೆಯನು ಕೊಂದವಗೆ ಮೋಹಿಸಿ ಹಿಂದೆ ಹತ್ತಿದಳೆಂದು ಹೆಣ್ಣ ಕೊಡೆಂದು ನಮ್ಮಯ ತಂಗಿಯಿಂದಟ್ಟುವುದುಚಿತವಹುದು (ಸಾಳ್ವಭಾ. ೩೦-೦೦). ಹಿಂದೆ ಹಾಕು=ಹಿಂದೆ ಉಳಿಯುವಂತೆ ಮಾಡು ; ದಾಟು ; ಕ್ರಮಿಸು: ಕಾಡುಮೇಡುಗಳನ್ನು ಹಿಂದೆ ಹಾಕಿ ತೋಡುಗಳನ್ನೂ ಪಾಲಗಳನ್ನೂ ದಾಟಿದರು (ಕಾಂಪಿ. ೦೩ ಕಥಾಸಾರ). ಹಿಂದೆ ಹೋಗು=೧. ಹಿಂದಕ್ಕೆ ಹೋಗು ; ಮರಳು : ಬೋಳನು ದಾರಿ ತಪ್ಪಿ ನಡೆದಿದ್ದನು . . . ಹಿಂದೆ ಹೋಗುವುದೇಕೆ ? ಈ ದಾರಿಯನ್ನೂ ಬಲ್ಲೆನಲ್ಲವೆ! ಎಂದು ಒಂದು ಪಾಲದೆಡೆಗೆ ಬಂದನು (ಕಾಂಪಿ. ೦೦ ಕಥಾಸಾರ). ೨. ಹಿಂಬಾಲಿಸು ; ಅನುಸರಿಸು : ಅಂದು ಮೈಗೆಟ್ಟವನಿಸುರನಿರುಳೊಂದು ಪಶುವಿನ ಹಿಂದೆ ಹೋಗುತ (ಜಸಪು. ೩೬-೩೨). ಹಿಂದೇಟು ಹಾಕು=ಹಿಂಜರಿ; ಅನುಮಾನಿಸು: ಅಷ್ಟೊಂದು ಬಂಡವಾಳವನ್ನು ತಾನೊಬ್ಬನೇ ಸುರಿದು ಸಾಹಸ ಮಾಡಲು ಸ್ವಲ್ಪ ಹಿಂದೇಟು ಹಾಕುತ್ತಿದ್ದನು (ಸಿಪಿಲಿ. ೭೭). ಹಿಂದೇಟು ಹೊಡೆ= ಹಿಂದೇಟು ಹಾಕು : ನಾನು ಕೊಂಚವಾದರೂ ಹಿಂದೇಟು ಹೊಡೆಯದೆ ಎಲ್ಲ ಕಾರ್ಯವನ್ನೂ ಮಾಡುತ್ತಿದ್ದೆ (ಅಂಹೂ. ೬೪). [<ಪಿಂತೆ$_1$]

ಪಿಂತೆಗೆ ' ಪಿಂದೆಗೆ ' ನೋ.

ಪಿಂತೊಲೆ (ನಾ). ಒಲೆಯ ಹಿಂಭಾಗ : ಅಂಗಯ್ . . . ಪಿಂತಿಲ್, ಪಿಂತೊಲೆ (ಕಸುದ. ೦೬೬ ಪ್ರಯೋ). [ಪಿಂತು+ಒಲೆ$_2$]

ಪಿಂದಡಿ ' ಪಿಂತಡಿ ' ನೋ.

ಪಿಂದಡಿಯಿಡು ' ಪಿಂತಡಿಯಿಡು ' ನೋ.

ಪಿಂದಯ್ದು, ಪಿಂದೈದು (ಕ್ರಿ). ಹಿಂದೆ ಹೋಗು ; ಹಿಂಬಾಲಿಸು : ಬಟಿಸಲ್—ಪಿಂದಯ್ದು ಪೋಪುದು (ಕಸುಸಿ. ೪. I. ೮೩). ಪಿಂದೈದು : ಊರುವೇಗದೊಳುಬ್ಬಿ ಮುಂದೈದಲಾ ಗಿರಿಯ ಸಾರವತ್ತಾದ ವೃಕ್ಷಗಳೆಲ್ಲಾ ಪಿಂದೈದುತೋರಂತೆ ನಿಜಬಂಧುಗಳನಂ ಬೀಳ್ಕೊಡುವಂತೆ ಮೌಹೂರ್ತ ಮನುಸರಿಸಲು (ಪಂಕಾರಾ. ೩-೦-೨೦).

[ಪಿಂದು (<ಪಿಂತು)+ಅಯ್ದು$_{01}$ (<ಎಯ್ದು)]

ಪಿಂದಲೆ, ಹಿಂತಲೆ, ಹಿಂದಲೆ (ನಾ). ೧. ತಲೆಯ ಹಿಂಭಾಗ ; ಹೆಡತಲೆ : ರಾಹುವದನ ಶಶಿಬಿಂಬದ ಪಿಂದಲೆಯೊಳೆನೆ ತೋರಮುತ್ತಿನ ತಲೆದುಡುಗೆಯಿನೆಸೆದುದಲರ ಸೋರ್ಮುಡಿ ಸತಿಯಾ (ಶುಷ್ಕಪು. ೩-೩೬) ; ತಲೆಯ ಪಿಂದು, ಪಿಂದಲೆ (ಶಬ್ದಾಮ. ೩೪೯ ಪ್ರಯೋ). ಹಿಂತಲೆ : ೧. ಯಶೋದೆಯ ಹಿಂತಲೆಗೆ ಬಲವಾದ ಏಟು ಬಿತ್ತು (ವಾತ್ಸಲ್ಯ. ೨೬೩). ಹಿಂದಲೆ : ೧. ಹಿಂದಲೆಯನ್ನು ಸರಿಯಾಗಿ ಬಾಚಿಕೊಂಡಿಲ್ಲ (ರೂಢಿ). ೨. ಹಿಂಭಾಗದಲ್ಲಿರುವಂತಹುದು : ಹಿಂಬದಿಯಲ್ಲಿರುವುದು : ಬಲಗಡೆಗಿದ್ದ ಹಿಂದಲೆ ಹಟ್ಟಿಯ ಬಾಗಿಲಿಂದ ಬಂಡಿಗಾರರ ಗುಟುರುಗೊರಕೆ ತೂರಿ ಬರುತ್ತಿತು (ಪುಸರು. ೩೪೯). ' ಮುಂದಲೆ ' ಪರಾ.

[ಪಿಂ (<ಪಿನ್)+ತಲೆ$_1$]

ಪಿಂದಳೆ (ಕ್ರಿ). ಅನುಸರಿಸು ; ಹಿಂಬಾಲಿಸು : ತಂದೆಯ ಕೆಳೆಯನ ಕಂದಂ ಪಿಂದಳೆದೆಡೆವಿಡದೆ ದೂಳಿಯಾಟಂ ಮೊದಲೆನ್ನಿಂದಮೆ ಏಟ್ಗೆಗೆ ವಂದಪನೆಂದಿಪನಂ ಪೆಂಪುವಡಿಕುಮಪ್ರತಿಮಾಂಕಂ (ಪಳಂ. ೩-೯೮).

[ಪಿಂ (<ಪಿನ್)+ತಳೆ$_1$]

ಪಿಂದಿಕ್ಕು ' ಪಿಂತಿಕ್ಕು ' ನೋ.

ಪಿಂದಿರಿಸು ' ಪಿಂತಿರಿಸು ' ನೋ.

ಪಿಂದಿರುಗು, ಪಿಂತಿರುಗು, ಹಿಂತಿರುಗು, ಹಿಂದಿರುಗು (ಕ್ರಿ). ೧. ಹಿಂದಕ್ಕೆ ತಿರುಗು ; ಹಿಮ್ಮುಖವಾಗು : (ಕ). ೨. ಹಿಂದಕ್ಕೆ ತೆರಳು ; ವಾಪಸ್ಸಾಗು ; ಮರಳು : ಮೂಢ ಪಿಂದಿರುಗಿ ಪೋಗಿ ಸಲಹಿಕೊ ಶರೀರಮಂ (ಪಂಕಾರಾ. ೩-೩-೦೦). ೩. ಹಿಂದೆಗೆ ; ಹಿಂಜರಿ : " ಪೆಱತೆಗೆದುದಕೆ ಪಿಂದಿರುಗಿತೆಂದಕ್ಕು " (ಕಬ್ಬಿಳ್ಳ. ೭೦). ಪಿಂತಿರುಗು : ೧. ಪಿಂತಿರುಗಿ ನೋಡಲೊ ವಿಶಾಲಾಕ್ಷ ಮೋಹರಸಮಂ ತುಳ್ಕಿ ನುಡಿಸೊ ಸವಿನುಡಿಜಾಣ (ಪಂಪು. ೦೯-೩೭). ೨. ರೋಷದುಃಖದ್ವಂದ್ವದಲಿ ಬೆಂದು ಮಣಿಪುರಕೆ ಪಿಂತಿರುಗಿ ಬಂದಳತಿಭೀಷಣಮನಃಸ್ಥಿತಿಯಲಿ ! (ಪಾಂಗ. ೬೪-೦೭೩೭). ಹಿಂತಿರುಗು : ೨. ಇನ್ನು ಮೇಲೆ ನನಗೂ ನನ್ನ ದೊಡ್ಡಿಗೂ ಗತಿ ಯಾರು! ಎಂದು ಅಳುತಾ ತನ್ನ ಊರಿಗೆ ಹಿಂತಿರುಗಿದನು (ವೀತಿಸಂ. VII, ೮). ಹಿಂದಿರುಗು : ೧. ಗಣಪತಿ ಹಿಂದಿರುಗಿ ನೋಡಲಾಗಿ (ಮುಂಬಯಿ. ೪-೭೯). ೨. ಅರ್ಜುನಂ ನೋಡುತಿರಲಾ ಭಾಮೆ ಬಂದವೊಲೆ ಹಿಂದಿರುಗಿ ನಿಬಿಡಕಾಂತಾರದಲಿ ತರುಗುಲ್ಮಪರ್ಣಗರ್ಭಂಬೊಕ್ಕು . . . ಮರೆಯಾದಳಿರದೆ (ಪಾಂಗ. ೩೪-೯೦೯) ; ಜಯಸೇನನು ತಡಮಾಡದೆ ಬೇಕಾದಷ್ಟು ಹೊಂಗೂದಲನ್ನು ಖಡ್ಗದಿಂದ ಕತ್ತರಿಸಿ ತೆಗೆದುಕೊಂಡು ಹಿಂದಿರುಗಿದನು (ಪುಸಸ. ೮೬). [ಪಿಂ (<ಪಿನ್)+ತಿರುಗು$_1$]

ಪಿಂದು ' ಪಿಂತು ' ನೋ.

ಪಿಂದುಗಡೆ, ಹಿಂದುಗಡೆ$_1$ (ನಾ). ಹಿಂಭಾಗದ ಸ್ಥಳ ; ಹಿಂದಿನ ಭಾಗ : ಪೆಱಗೆ=ಅತ್ವದ ಪಿಂದುಗಡೆಯಲ್ಲಿ, ಇತ್ವಂ=ಇಕಾರಂ ಹುಟ್ಟುವುದು (ಕಸುದ. ೦೬೮ ಪೀಳೆ). ಹಿಂದುಗಡೆ$_1$: ಪಿಂತೆ=ಹಿಂದುಗಡೆಯಲ್ಲಿ (ಕಸುದ. ೪೨ ಪೀಳೆ) ; ತರಕಾರಿ ಬೆಳೆಯಲು . . . ಸ್ಥಳ ಮನೆಯ ಹಿಂದುಗಡೆ ಆದರೆ ಒಳ್ಳೆಯದು (ಅಡುಸೌ. ೦೨೬) ; ನಿಮ್ಮನ್ನೆಲ್ಲಾ ನೋಡಿಕೊಂಡು ಹಿಂದುಗಡೆ ಬರುತ್ತೇನೆಂದು ಬೆಕ್ಕು ಹಿಂದೆ ಹೋಗುತಾ, ಶಾನೇ ಹಿಂದೆ ನಿಂತ ಒಂದು ಇಲಿಯನ್ನು ಬಕ್ಕನೆ ಬಾಯಿಗೆ ಹಾಕಿಕೊಳ್ಳುತಾ ಬಂತು (ವೀತಿಸಂ. IV, ೨೬).

[ಪಿಂದು (<ಪಿಂತು)+ಕಡೆ$_3$]

ಪಿಂದುಗಳೆ, ಹಿಂದುಗಳೆ (ಕ್ರಿ). ೧. ಹಿಂಜರಿ; ಹಿಂದೆಗೆ; ಹಿಮ್ಮೆಟ್ಟು. ೨. ತಿರಸ್ಕರಿಸು; ಜರೆ ; ಹೀಯಾಳಿಸು : ಕಂದರ್ಪನಂ ಪಿಂದುಗಳೆವಂದಮಂ ತಳೆದು ನಿಂದ ರಾಜಪುತ್ರರಿಂದೆ (ರಾಜಶೇ. ೩-೦೯ ಪ). ಹಿಂದುಗಳೆ: ೧. ನೊಂದವರು ನಿಲಿ ಸ್ವಾಮಿಕಾರ್ಯಕೆ ಹಿಂದುಗಳೆದರು ಮರಳಿ (ಕುಪ್ಕಾಳ. ೮-೨೯) ; ಈಗಳಾನೆಂತು ರಣಕೆ ಹಿಂದುಗಳೆದಪೆನು (ಕೃಮಿತಾ. ೨೩-೦೦).

೨. ಕೋವಿದರು ಪೇಳೆಂದೆನಲವರ ನುಡಿಯನು ಹಿಂದುಗಳೆಯಲಮ್ಮದೀ ರಾಮನಾಥನ ಸಂದ ಕಥೆಯನು ಸುರಿದೆನು (ಕುರಾಸಾಂ. ೦-೬೬); ಬುದ್ಧಿಯನು ಹೇಳಿದರೆ . . . ಹಿಂದುಗಳೆಯದಿರು ಮಗನೆ (ಹಂಸಾಂ. ೦-೬೮); ಹಿಂದುಗಳೆಯದಿರೆನ್ನ ಮಾತನು (ಶೈಮಿಭಾ. ೨೬-೩೦). ೩. ಅತಿಕ್ರಮಿಸಂ; ಮೀರು: ತರಣಿಯ ತೇರ ತೇಜಿಯ ಹಿಂದುಗಳೆವ ಸಾಸಿರಘೋಟಕಾನ್ವಿತರಥವ ಭರವಸದಿಂದೇಱಿ ತೆರಳಿದ ಶೋಣಿತಪುರಪತಿ ವಾದ್ಯಘೋಷದಲಿ (ಮೋಹತ. ೪೦-೩). ೪. ಮುಗಿದು ಹೋಗು: ತೀರು: ತನಗಿಂದು ಮೂವತ್ತಾಱುವತ್ಸರ ಹಿಂದುಗಳೆದವು (ಸಂಭವ. ೩-೨೨). ೫. (ಸಮಯವನ್ನು) ದಾಟು; ಕ್ರಮಿಸು: ಒಂದೊಂದುದಿನವನೊಂದೊಂದುವರುಷವಾಗಿ ಹಿಂದುಗಳೆದು ರಾಯ ತನ್ನ ಇಂದುಮುಖಿಯ ನೋಡುವ ಕಡುಕಾತುರದಿಂದ ದುರ್ಗಕೆ ತೆರಳಿದನು (ಕುರಾಸಾಂ. ೩೪-೩); ಹಿಂದುಗಳೆದಳು ಬಾಲ್ಯವನು ಪಿತೃಮಂದಿರದಲಿರಲು ಯವ್ವನ ಕಂದೆಱದುದು (ಪಿಭಾಗ. ೪-೩-೦೦). [ಪಿಂದು (<ಪಿಂತು)+ಕಳೆ$_1$]

ಪಿಂದುಗೆಯ್ (ಕ್ರಿ). ಹಿಂದೆ ಉಳಿಯುವಂತೆ ಮಾಡು; ಹಿಂದೆ ಹಾಕು: ಬಳನಂ ರಾಜ್ಯೋಚಿತಸುಖದೊಳೆಲ್ಲಿಯುಂ ಪಿಂದುಗೆಯ್ಯಲಱಿಯದನೆಯದೇಂ ಗಳ ಪರಲೋಕದ ಸುಖಮಗ್ಗಳಮೇಂ ಬಲುಪಿಂದೆ ಪಿಂದುಗೆಯ್ವುದು ಗುಣಮೇ (ಪರ್ಶಪು. ೯-೬೩); ಅದು ಪಿಂತಾಗಿರೆ ಮತ್ತಮೊಂದು ಶರಮೆಯ್ದಿತ್ತಂತದಂ ಪಿಂದುಗೆಯ್ದೊದಱುತ್ತುಂ ಪೆಱತೊಂದು ಮಾರ್ಗಣ ಮಳುಂಬಂ ಪಾಯ್ದುದು (ಕಬಸಂ. ೪-೪೦). [ಪಿಂದು (<ಪಿಂತು)+ಕೆಯ್$_1$]

ಪಿಂದುಗೊಳ್, ಹಿಂದುಗೊಳ್ (ಕ್ರಿ). ಹಿಂಬಾಲಿಸು; ಅನುಸರಿಸು: ಎಯ್ದಿದತ್ತು ತತ್ತರುಣಿಯ ಪಿಂದುಗೊಂಡಖಿಳಬಂಧುಜನಂ ಪಿತೃಮಾತೃ ಸೋದರರ್ (ದಶಕು. ೬-೦೦); ಕಾರ್ಮುಗಿಲ್ಗೆ ಕರ್ಬುವಿಲ್ಲಂ ಕೈವೀಸಿ ಕರೆದು ಕಳುಪಲೊಡನೆ ತಾನುಂ ಸಂಗಡಮಾಗಿ ಪೋಗಿ ಪೊತ್ತೆತ್ತುವ ಗಂಧವಹನ ಪಿಂದುಗೊಂಡು ಮಂಡಳಿಸಿ ಮಱಿಮುಗಿಲಂತೆ ಪಾರ್ವ ಮದಮಧುಕರ ಪ್ರಕರದಿಂ (ರಾಜಕೇ. ೦-೦೩೩ ಪ). ಹಿಂದುಗೊಳ್: ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯೆ (ಬಸರ. ೩-೩೨); ಬಂದುದೀ ಮೃಗಪೋತ ಭೀತಿಯ ಮಂದಗತಿಯಲಿ ಮೃಗಸುನೇತ್ರೆಯ ಹಿಂದುಗೊಂಡು[ಪಾಠಾಂ. ಹಿಂದಣಿಂದ] (ಶೊರಾ. ೩-೮-೨೮); ಒಡೆಯನ ಲಲಿತಮೂರ್ತಿಯನಗಲಲಾಱದೆ ಹಿಂದುಗೊಂಡಳುತ ತೊಳಲಿ ಬರುತ (ಪಿಭಾಗ. ೩-೨-೩೦); ಗೀರ್ವಾಣ ಪತಿನಂದನಂ ಬಹಳದೇಶವನಪರ್ವತನದೀನದಂಗಳನುತ್ತರಿಸಿ ಕುದುರೆಗಳ ಹಿಂದುಗೊಂಡು ಬರಲು (ಶೈಮಿಭಾ. ೨೮-೬).

[ಪಿಂದು (<ಪಿಂತು)+ಕೊಳ್$_1$]

ಪಿಂದುಱಿ, ಹಿಂದುಳಿ (ಕ್ರಿ). ಹಿಂದೆ ಉಳಿ,—ನಿಲ್ಲು; ಹಿಂದಾಗು: ಮುಂದಾಗಿ ದಿನಪನುದಯಾನಂದದೊಳಸ್ತಮಯಸಮಯದೊಳ್ ಸಂಜೆ ಕರಂ ಪಿಂದುಱಿದುದಂತೆ ಕೆಲರೊಡವಂದಾದುದಯದೊಳೆ ಸಾರ್ವರೆಡಱೊಳಗಲ್ವರ್ (ಶಾಸ್ತ್ರಸಾ. ೬೯೯ ಕೂದ್ರಳ); ಬಗೆವರ ಬಗೆ ಪಿಂದುಱಿಯೆ . . . ಮುಗಿಲ ಪೊಱೆಯಿಂ ಸುರಿವ ಮುತ್ತುಗಳಂ ಕಾರ ಮುಂಬನಿಯ ತಂದಲೆಂದು ಬಂದು ನುಂಗಲಂಗೈಸುವ ಚಾದಗೆಯ ಮಱಿಗಳುಮಂ (ಕಬ್ಬಿಳಾ. ೨೩೪). ಹಿಂದುಳಿ: ಸಕಲೇಂದ್ರಿಯಗಳುಬ್ಬಟೆ ಬಲಿದ ವಿವರುಪಚಾರದಲಿ ಹಿಂದುಳಿದುದುಗ್ರತಪಃಪ್ರಭಾವದ ಬೆಳಗು ನಿಮಿಷದಲಿ (ಶೊರಾ. ೦-೩-೩೩); ನಾವು ನಾಳೆ ಹಿಂದುಳಿಯಬಾರದು ಕದನಕನುವಾಗಿರಲಿ ಪಾಯದಳಮೆಂದು ನುಡಿದಂ(ಶೈಮಿಭಾ. ೦೭-೩೦); ಸಭೆಯೊಳು ಮೇಲೆದ್ದು ಕಾಣಿವನು ಬಹುಭಾಷಿ ಹಿಂದುಳಿವನು ಮಿತಭಾಷಿ (ಇಂಜಾಪ. ೨೦೩-೬೩).

ಹಿಂದುಳಿದ ಪಂಗಡ—ಪ್ರಗತಿಗೆ ಸಹಾಯಹೊಂದದಿರುವ ಗುಂಪು: ಮಿಡಲ್‌ಸ್ಕೂಲಿನಲ್ಲಿ ಸ್ಕಾಲರ್‌ಷಿಪ್ಪುಗಳ ಹಂಚಿಕೆ ಹಿಂದುಳಿದ ಪಂಗಡಗಳಿಗೆ ಇವೆಯಲ್ಲ (ರಂಗಳ. ೧೦೮). ಹಿಂದುಳಿದ ಪ್ರದೇಶ—ಪ್ರಗತಿಯಾಗದಿರುವ ಪ್ರಾಂತ,—ಸ್ಥಳ; ಕೆಳಮಟ್ಟದ ಅಥವಾ ಹೀನಸ್ಥಿತಿಯಲ್ಲಿರುವ ಪ್ರದೇಶ: ಹಿಂದುಳಿದ ಪ್ರದೇಶಗಳಲ್ಲಿ ಅಡುಗೆಮನೆಯ ಹೊಗೆಯು ಒಂದು ಜಾಗತಿಕ ಸಮಸ್ಯೆಯಾಗಿರುವುದರಿಂದ . . . "ರಾಜೂಚೂಲಾ" ಅನೇಕ ದೇಶಗಳಲ್ಲಿ ಜನಪ್ರಿಯವಾಗುತ್ತಿದೆ (ಅಮಸೌ. ೨೨).

[ಪಿಂದೆ (<ಪಿಂತೆ$_2$)+ಉಱಿ$_1$]

ಪಿಂದೆ 'ಪಿಂತೆ$_2$' ನೋ.

ಪಿಂದೆಗೆ, ಪಿಂತೆಗೆ, ಹಿಂದೆಗೆ (ಕ್ರಿ). ೧. ಹಿಂದಕ್ಕೆ ಸರಿ; ಹಿಂಜರಿ; ಹಿಮ್ಮೆಟ್ಟು: ಪೊಗುವ ತೊಡಂಕುವೆತ್ತುವ ಬಿದಿರ್ಚುವದಿರ್ಚುವ ಪಾಯ್ವ ಪೊಯ್ವ ಪಿಂದೆಗೆವ ಮರಲ್ವ ಮೇಲ್ವರಿವ . . . ಬಿನ್ನಣಮೊಪ್ಪೆ ಪಗಿಲ್ತು ಕಾದಿದರ್ (ಕಬಸಂ. ೪-೭೪); ರಾಯನ ನುಡಿಗಾನು ವಿನಯಗೂಡಿ ಪಿಂದೆಗೆದಿರೆ ಪಟ್ಟದರಸಿ . . . ಕಟ್ಟಾಣಿ ಪೆಣ್ಮಣಿಯೆ ಬಾರೆಂದು ಮುಂದಕೆ ಬರಿಸಿದಳು (ಹದಿಬ. ೧-೨೭). ಪಿಂತೆಗೆ: ೧. ಯುಕ್ತಾಯುಕ್ತವಿವೇಕಕ್ಕೆ ಪಿಂತೆಗೆದು ಉನ್ಮತ್ತನಂತಚ್ಚಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ ಕಂಡು (ಕಾದಂಕಾ. ೩೬೩); ಅತಿಭೀತಿಯಿಂದನುಗೆಟ್ಟು ಪಿಂತೆಗೆಯದೆ ಮಿತಿಮೀಱಿ ಮೇಲುವರಿಯದೆ . . . ಪತಿಸೇವೆಗೈದು ಬಾಳುವುದು (ಹದಿಬ. ೩-೩೦). ೨. ಹಿಂದಕ್ಕೆ ತೆಗೆದುಕೊಳ್ಳು: ಆ ಕ್ರೋಡನುರುತರಕ್ರೋಧವಿಹ್ವಲನಾಗಿ ಮುಂಗಾಲ್ಗಳಂ ಪಿಂತೆ[ಪಾಠಾಂ.ದೆ]ಗೆಯದಿದಿರೈದಿ (ಮಹಾವಿ. ೭-೨೮). ಹಿಂದೆಗೆ: ೧. ಶ್ರೀಮಂತರಾದ ಪಾಂಡವರು . . . ಹಿಂದೆಗೆಯದೇ ಯುದ್ಧವನ್ನು ಮಾಡುವರು (ಶೈಮಿಭೀ. ೧೦೪); ಚೋಳರಾಜಾಧಿರಾಜನು ಯುದ್ಧದಲ್ಲಿ ಗಾಯಗೊಂಡು ಹಿಂದೆಗೆದನು (ಮೊಳಂಬ. ೩೮); ಹಾದಿಯಲಿ ಹಳ್ಳವಿದೆ ಮುಳ್ಳಿಡಿದ ಕೊಳ್ಳವಿದೆ ಎಂದಳುಕಿ ಹಿಂದೆಗೆಯದಿರು (ಪಾಂಪಜ. ೪೬-೧೩); ವಿಜಯಿ ದುರ್ದೈವದ ದಂಡು ಹಿಂದೆಗೆಯಿತು (ಇಂಜಾಪ. ೩೨-೪೬). [ಪಿಂ (<ಪಿನ್)+ತೆಗೆ$_1$]

ಪಿಂದೆಸೆ, ಹಿಂದೆಸೆ (ನಾ). ಹಿಂದಿನ ಭಾಗ; ಹಿಂಭಾಗ: ಮುಗ್ಗುರಿಸಿ ನಿಲ್ಲುತುಂ ಪಿಂದೆಸೆಗೆ ನೋಡುತುಂ . . . ಮುಂಬರಿದನೆಂತಾನುಮೆದೆಯ ಚಾಂಚಲ್ಯಮಂ ನಿಗ್ರಹಿಸಿ ವ್ಯಗ್ರಮನಧಿಂ (ಪಾಸ್ತಾಂಗ. ೫೧-೦೩೮೩); ಮುಂದಕೆ ಪೋಪುದು ತನುವಿದು ಪಿಂದೆಸೆಗೋಡುವುದು ಬಳಕೆಗೈದದ ಮನವೇನೆಂದಪೆನೊ (ಶಾಕುಂತ. ೧೮-೩೪). ಹಿಂದೆಸೆ: ಪೂರ್ವ ಆದಿಯ ಇಷ್ಟದಲ್ಲಿ ಮಧ್ಯಭಾವ ಆತ್ಮನಲ್ಲಿ ಉತ್ತರ ತುತ್ತತುದಿಯಲ್ಲಿ ಮೆಟ್ಟಿ ನೋಡಲಾಗಿ ಹಿಂದೆಸೆಯಲ್ಲಿ ಕಂಡೆ (ಮೋಳಿಮಾ. ೧೪೯-೩೬೬); ತತ್ ಸರಸಿಜಾನನೆ ವಲ್ಲಭನ ಹಿಂದೆಸೆಯೊಳಿರುತಿರಲು (ಬಸಪು. ೪೨-೩೬).

[ಪಿಂ (<ಪಿನ್)+ದೆಸೆ$_2$]

ಪಿಂದೈದು 'ಪಿಂದಯ್ದು' ನೋ.

ಪಿಂದೊಡೆ, ಹಿಂತೊಡೆ (ನಾ). ತೊಡೆಯ ಹಿಂಭಾಗ,—ಹಿಂಬದಿ: ಮೋದೆ ಸಿತಾಸಿಯಿಂ ಪಱಿಯೆ ಕೈ ಕೆಲವಂದು ಮಹಾವರಾಹನಂತಾದುವು ಕೂಡೆ ಕುಕ್ಕುಱಿಸೆ ಪಿಂದೊಡೆಗಳ್ ಕೆಲವೇಕದಂತನಂತಾದುವು (ಕಂದ್ರಪು. ೧೦-೬೬). ಹಿಂತೊಡೆ: "ತೊಡೆಯ ಹಿಂಭಾಗ; ಹಿಂತೊಡೆ; ಹಿಂತೊಡೆ ಮತ್ತು ಪಿರ್ರೆ" (Ham. ಇಂಕವಿ). [ಪಿಂ (<ಪಿನ್)+ತೊಡೆ$_2$]

ಪಿಂಪಿಣಿ (ನಾ). ಹಿಂಭಾಗದಲ್ಲಿರುವ ಜಡೆ: ಮುಗುದೆಯವಿಂದುವದನೆ ಪಿಂಪಿಣಿಯಿಂದೊಗೆದಿಳಿದಾ ಮುತ್ತಿನ ಬಟ್ಟೊಪ್ಪಿತ್ತಗಲದೆ ಪಿಂತಣ ದೆಸೆಯಿಂ ತಾಳಿದ ರಾಹುವಿನ ನಾಲಿಗೆಯಂತೆ (ಜ್ಞಾನಸಂ. ೬-೬೯).

[ಪಿಂ (<ಪಿನ್)+ಪಿಣ್ಣೆ$_2$. / ತೆಲು. ಪಿಂಪಿಣೀ=ನಾಲ್ಕು ಕಾಲಿನ ಜಡೆ]

ಪಿಂಬಕ್ಕ (ನಾ). ಹಿಂಬದಿ; ಹಿಂಭಾಗ: ಪೊಂಬೆಸದ ಬೆಸುಗೆಯ ಪಿಂಬಕ್ಕ [ಪಾಠಾಂ. ಪೆಂಪಿಂ ಚಬುಕ]ದೊಳೆ ನಿಗುಂಬಿಸಿದ ಕರಿಯ ಬಿಳಿಯ ಝುಲ್ಲರಿಯ ಪುಲ್ಲಿಯ ಕದಳಿಕೆಯ ಕಡುಪಿನಿಂ (ಅಪಂಪು. ೧೪-೬ ಪ).

[ಪಿಂ (<ಪಿನ್)+ಪಕ್ಕ]

ಪಿಂಬಗಲ್, ಪಿಂಬಗಲು, ಹಿಂಬಗಲು (ನಾ). ಹಗಲಿನ ಕಡೆಯ ಭಾಗ ; ಸಂಜೆ : ಬಳೆದ ವಿಮೋಹದಿಂ . . . ಕರುಣಂ ಪಿರಿದಾಗಿ ಪಿಂಬಗಲ್ ಕಳೆ ವಿನವಿರ್ದನಾ ಪರಮಯೋಗಿಗಮಂತುಟು ಮೋಹಮಾಗದೇ (ಸುಳಿಯಾ. ೪-೬೬) ; ಜಾಂಬವನಂ ಪಿಂಬಗಲಾದಿತ್ಯನಂತೆ ತೇಜಂಗಿಡಿಸಿ (ಕರ್ಣಾಟ್ಯ. ೭-೧೩) ; ಮುಂಬಗಲ್ ಪಿಂಬಗಲ್ ಸುಳಿಸುಳಿವ ತಂಬೆಲರ್ ಚೆಂಬಾನೆ ಕುಂಬಿಡುವ ಬೆಟ್ಟಗಳ ಸಾಲು (ಶಾಂಕರ. ೨೫-೦೨). ಪಿಂಬಗಲು : "ಪಿಂಬಗಲೆನಲ್ ಸಾಯಾಹ್ನಕಭಿಧಾನವು" (ಶಕರ. ೬೫). ಹಿಂಬಗಲು : ಉದಯದಿ ಸಾಧನೆ ಹಿಂಬಗಲೋದು ನಕ್ತದೊಳೋದಿದೋದಿನ ಚಿಂತೆ ಮೃದುಮೃದುವಾಗಿ ನಡೆವುದು (ಶರಕ. ೨೭-೯೧) ; ನಾಳೆ ಹಿಂಬಗಲವರೆಗೆ ಹರಿಬಕ್ಕೆ ನನ್ನತ್ತ ಉಸಿರೆತ್ತುವುದಿಲ್ಲವೆಂದು ನೀವು ಪ್ರತಿಜ್ಞೆ ಮಾಡಿ ಕೊಟ್ಟರೆ ಮಾತ್ರ ಈಗ ನನ್ನ ಮರುನುಡಿಯುಂಟು (ಮಂತ್ರಿ. ೫೮-೫). 'ಮುಂಬಗಲ್' ಪರಾ. [ಪಿಂ (<ಪಿನ್)+ಪಗಲ್]

ಪಿಂಬಗಲು 'ಪಿಂಬಗಲ್' ನೋ.

ಪಿಂಬಡು$_1$ (ಕ್ರಿ). ಹಿಂದೆ ಹೋಗು ; ಹಿಂಬಾಲಿಸು ; ಅನುಸರಿಸು : ತನ್ನಿಚ್ಛೆಯಿಂ ಮುಂತೆಮುಂತೆ ಪೋಪೋಪ ಕುದುರೆಗೆ ತಿಂಗಳೆಂಟಾಗಲೊಡಂ ಅಂಗವಂಗಾದಿ ದೇಶಂಗಳ್ ಕಂಗೆಟ್ಟು ಕಪ್ಪಂಗೊಟ್ಟು ಪಿಂಬಟ್ಟೋಲಯಿಸುತ್ತೆ ಬರುತವಿರ್ಪುದುಂ (ರಾಘವಾಂ. ೧೩೯-೧). [ಪಿಂ (<ಪಿನ್)+ಪಡು$_1$]

ಪಿಂಬಡು$_2$ (ನಾ). ಅನಂತರ ; ತರುವಾಯ : ಎನ್ನ ಪಿಂಬಡಿನೊಳೆ [ನಣ್ಪೆ]ನಯ್ಯ ನಿಮಗಂ ಮಗನಲ್ಲನೆ ಧರ್ಮನಂದನಂ (ಪಂಪಭಾ. ೦೩-೦೮); ಕಾಸನರ ಭೀಮಂ . . . ತಳ್ತಿಱಿದು ಸುರಲೋಕಕ್ಕೆ ಸಂನ್ಯಸಾತನ ಪಿಂಬಡಿನೊಳಾತನ ಮಗಂ ಕಚ್ಚವರ ಕರವಣ್ಣ ಕಲ್ಲ ನಿಱಿದಮ್ಮಂಗಳ (ಎಳ. VIII (೩), ಸೊರಬ. ೫೭೫-೫ ; ೩೩೧) : ಬರಲವರ್ ಪಿಂಬಡಿಂ ಮುನ್ನಮಾನೈದುಮೆನ್ (ತ್ರಿಣಾಪು. ೦೨೬-೨೯). [<ಪಿಂಬಡು$_1$]

ಪಿಂಬರೆಯ (ನಾ). ಕಳೆದು ಹೋದ ತಾರುಣ್ಯ ; ಹಿಂದಕ್ಕೆ ಸರಿದ ಯೌವನ,-ಪ್ರಾಯ : ತರುವಲಿ ಬೇಡ ಪಿಂಬರೆಯದಂಗನೆಯಾದೊಡೆ ಬೇಡ ಜವ್ವನಂ ಗರಗರನಪ್ಪ ಸೊಂಪುತನವುಳ್ಳವಳಾದೊಡೆ ಬಂದು ಮುಂದೆ ಸಂಚರಿಸುಗೆ (ಶೂಕ್ರಸು. ೮-೧೦೭).

[ಪಿಂ (<ಪಿನ್)+ಪರೆಯ$_2$ (<ಪರಯ)]

ಪಿಂಬವಣೆ (ನಾ). ಹಿಂದೆ ಅನುಭವಿಸಿದ ಕಷ್ಟ,-ಬವಣೆ : ಶಂಬರ ಶರ ನಿಧಿಯೊಳು ತನ್ನ ಕೆಡಹಿದ ಪಿಂಬವಣೆಯನು ತೋಱುವರೇ ಚೆಂಬಣ್ಣ ಗಂಧೋದಕದಲ್ಲಿ ಸ್ಥರ ತನ್ನ ಕುಂಭಕುಚೆಯನು ನೂಂಕಿದನು (ಸೋಕಶ. ೦೯-೬೬). [ಪಿಂ (<ಪಿನ್)+ಬವಣೆ]

ಪಿಂಬಳಿ, ಹಿಂಬಳಿ$_1$, ಹಿಂಬಟಿ (ನಾ). ೧. ಹಿಂದಿನ ಸ್ಥಳ ; ಹಿಂಬದಿ ; ಹಿಂಭಾಗ : ಅರಲಂಬುಗಳಿನಾದವಿಡಿದ ಬತ್ತಳಿಕೆ ಭುಜಶಿರದ ಪಿಂಬಳಿಯಲ್ಲಿ ಕಣ್ಗೊಳಿಸಲಾ . . . ಸುಮದ ರಾಜನ ಮೇಲೆ ದಾಳಿಟ್ಟನು (ಕೇಕಶಾ. ೬-೨೬). ಹಿಂಬಳಿ$_1$: ೧. ಕಱು ಹಾಯ ಹಿಂಬಳಿಯನಱಿವಂತಿರಱಿದು ಸೊಂದರಗಣಾಧೀಶ್ವರಂ ಬೆಂಬಿಡಿದು ಬಂದು (ಸೊಂದಪು. ೧೦-೦೨). ಹಿಂಬಟಿ : ೨. ಪರೋಕ್ಷ : ಪರೋಕ್ಷೇ=ಹಿಂಬಟಿಯೊಳ್ (ಪೇಕಶಾ. ೩೦-೪). [ಪಿಂ (<ಪಿನ್)+ಬಳಿ$_3$ (<ಬಟ್ಟಿ$_3$)]

ಪಿಂಬಱಿಗೇಸ (ನಾ). ಹಿಂಭಾಗದ ಹರುಕು ಹರಂಕಾದ ಕೂದಲು : ಕೊಱೆವಲ್ ಬತ್ತಿದ ಕಾಲ್ ಪಿಂಬ[ಪಾಶಾಂ. ಸಿಂಪಿ]ಱಿಗೇಸಂ ನೆಕ್ಕ ಕದಪು ಪೊಕ್ಕಿರ್ದ ಬಸಿಱಿ ತೆಱೆದ ಮುಖಕುಹರವರ್ಬಿಸೆ ಪಿಱಿತಿನಿಗಳ ಬಳಗ ಮೆಯ್ದು ತಂದುದು ಮುನಿಯಂ (ಶಾಕ್ಷಾಪ. ೧೫೦).

[ಪಿಂ (<ಪಿನ್)+ಪಱಿ$_1$+ಕೇಸ$_2$]

▲**ಪಿಂಬಾಲಿಸು** 'ಹಿಂಬಾಲಿಸು' ನೋ.

ಪಿಂಬೂಣಿಸು (ಕ್ರಿ). ಹಿಂದಿನಿಂದ ಬಾಣ ಬಿಡು : ಏಣನ ಮುನಿನಾಥ ಕಾಣುತ ಬಂದು ಪೆಂ[ಪಿಂ]ಬೂಣಿಸಿ ನಿಂದ ಪೇಟಕನ ಕಾಣುತ (ಧೃಕಾಂ. ೩-೦೪೪). [ಪಿಂ (<ಪಿನ್)+ಪೂಣಿಸು]

ಪಿಂಬೆದೆ, ಹಿಂಬೆದೆ (ನಾ). ಬಿತ್ತನೆ ಮಾಡಬೇಕಾದ ತರುವಾಯದ ಕಾಲ ; ಬಿತ್ತನೆ ವೇಳೆ ಮೀರಿದ ಕಾಲ : ಪಿಂಬೆದೆ, ಪಿಂಬೊಟ್ಟು (ಕಸುಕ. ೦೬೬ ಕ್ರಿಯೋ). ಹಿಂಬೆದೆ : ಹಿಂಬೆದೆಯೊಳಗೆ ಬಿತ್ತಿದ್ದರಿಂದ ಸರಿಯಾದ ಬೆಳೆಯಾಗಲಿಲ್ಲ (ಕೂಡಿ). [ಪಿಂ (<ಪಿನ್)+ಬೆದೆ]

ಪಿಂಬೊಟ್ಟು, ಹಿಂಬೊತ್ತು (ನಾ). ೧. ಮುಳುಗುತ್ತಿರುವ ಸೂರ್ಯ ; ಸಂಜೆಯ ಸೂರ್ಯ : "ಪಿಂಬೊಟ್ಟೊಂದು ಪಡುನೇಸಱ್" (ಕಕಾಸಾ. ೫೭-೨೫೩) ; ಅಂಗಯ್, ಅಂಗಾಲ್ . . . ಪಿಂಬೆದೆ, ಪಿಂಬೊಟ್ಟು (ಕಸುಕ. ೦೬೬ ಕ್ರಿಯೋ). ೨. ಹಿಂದಿನ ಕಾಲ ; ಪೂರ್ವ ಕಾಲ : ಕುರುರಾಯಂ ಬಹುವಿತ್ತಮಂ ಕುಡುವನಾ ಕರ್ಣಂಗೆ ಮತ್ತಾ ಸಹೋದರರ್ಗೂ ಪಾಂಡವರ್ಗೇನುಮಂ ಕುಡನದೇಂ ಪಿಂಬೊಟ್ಟೊಳ್ಕರ್ಣನುರ್ವರೆದಾರಿದ್ರನೆನಲ್ಕೆ ಸಂದಂ (ರಣ್ಣಕ. ೪೮). ಹಿಂಬೊತ್ತು : ೩. ಸಂಜೆ ; ಸಾಯಂಕಾಲ : ಉಪ್ಪರಿಗೆಯನೇಱಿ ಹಿಂಬೊತ್ತಿಗಾನಂದದಿಂದದ್ದಿಯ ನೋಳ್ಪ . . . ಏಳಿರೆಂದೆದ್ದನಬಲೆಯರ್ವೆರಸಿ (ಕಕಕ. ೨೩-೦೫).

[ಪಿಂ(<ಪಿನ್)+ಪೊಟ್ಟು]

ಪಿಕ್‌ನಿಕ್ 'ಪಿಕನಿಕ್ಕು' ನೋ.

ಪಿಕ್‌ಪಾಕೆಟ್ಟು (ನಾ). ಜೇಬಿನಲ್ಲಿರುವ ಹಣ ಅಥವಾ ಹಣದ ಪಾಕೆಟ್ಟನ್ನು ಅಪಹರಿಸುವಿಕೆ ; ಜೇಬುಗಳ್ಳತನ : ಬಸ್ಸಿನಲ್ಲಿ ಬರುತ್ತಿದ್ದ ಅಂಗಿಯ ಒಳಜೇಬನ್ನೇ ಕತ್ತರಿಸಿ ಪಿಕ್‌ಪಾಕೆಟ್ಟು ಮಾಡಿದ್ದರು (ಕೂಡಿ).

[←ಇಂ. Pick Pocket]

ಪಿಕ (ನಾ). ಕೋಗಿಲೆ ; ಕಳಕಂಠ : "ಅನ್ಯಭೃತಃ, ಪರಪುಷ್ಟ, ಕಳಕಂಠಃ, ಕೋಕಿಳಃ, ಪಿಕಃ—ಈ ೫ ಕೋಗಿಲೆ" (ಹಲಾಯು. ೧೦-೧೩) ; ತನಿವಾಲನುಂಡು ಬಳೆವರಗಿಳಗುರ್ಕಿನಿಂ ಕೊನರಂ ಕರ್ದುಂಕಿ ಕೂಗುವ ಪಿಕದ ಸೊರ್ಕಿನಿಂ (ತಿರುಪ. ದೇ. ೨-೦೨) ; ಪಿಕ ಶುಕ ಕೋಕ ಸಾರಸ . . . ಕುರಗೀಪ್ಲವಪ್ರಕರದಿಂದೆ ವಿರಾಜಿಕುಮುನ್ನತಂ ವನಂ (ಹಮ್ಮೀರ. ೪-೮೨); ಶುಕ ಪಿಕ ವಿಹಂಗ ಗೀತಾಂಜಲಿಯನರ್ಪಿಸುತೆ . . . ಪ್ರಕೃತಿದೇವಿಯೆ ತಾನು ರತಿಯ ರೂಪದಿ ನಿನ್ನ ಪೂಜಿಸುವಳನುದಿನಂ ! (ಜಾಕ್ರಾಂಗ. ೦೭-೯೯೦).

[ಸಂ.]

ಪಿಕನಿಕ್ಕು, ಪಿಕ್‌ನಿಕ್ (ನಾ). ವನಭೋಜನ ; ಬಯಲೂಟ : ಮಕ್ಕಳು ಸ್ಕೂಲಿನಿಂದ ಪಿಕನಿಕ್ಕಿಗೆ ಹೋಗಿದ್ದಾರೆ (ಕೂಡಿ). ಪಿಕ್‌ನಿಕ್ : ಬಹುದಿನಗಳ ಹಿಂದೆ ತಾವೆಲ್ಲ ಪಿಕ್‌ನಿಕ್ ಹೋಗಿದ್ದಾಗ . . . ಗೋವಿಂದ ತನ್ನ ಪೋಟೊ ತೆಗೆದಿದ್ದುದು ಅವಳ ಡ್ಯಾಪಕಕ್ಕೆ ಬಂತು (ಪಕಾಂ. ೪೩).

[←ಇಂ. Picnic]

ಪಿಕನಿಸ್ವನೆ (ನಾ). ಕೋಗಿಲೆಯಂಥ ಇಂಪಾದ ಸ್ವರವನ್ನುಳ್ಳವಳು : ಪಿಕನಿಸ್ವನೆ ವಧು ತಳ್ತೆಡದ ಕೆಲದೊಳಿರೆ . . . ನ್ಯಪನೊಂದೆ ಕೊಂಬು ಕೆಯ್ವಂದ ಚೊತಶಾಖೆಯೊಲಿರ್ದಂ (ಸರ್ಗಪು. ೭-೦೬). [ಸಂ. ಪಿಕವಿಸ್ವನಾ]

ಪಿಕಲಾಟ 'ಪೀಕಲಾಟ' ನೋ.

ಪಿಕಲಾರಿ, ಪಿಕಳಾರ, ಪಿಕಳಾರಿ (ನಾ). ಒಂದು ಬಗೆಯ ಹಕ್ಕಿ : (೨). ಪಿಕಳಾರ : ಕಾಮಳ್ಳಿ ಕಾಜಾಣ ಪಿಕಳಾರ ಗಿಳಿ ಚೋರೆ ಕೋಗಿಲೆಗಳುಲಿಹಕ್ಕಿ ನಲಿಯುತುಂ (ಜಾಕ್ರಾಂಗ. ೪೨-೦೦೩೬) ; ಕೋಗಿಲೆ ಕಾಜಾಣ ಪಿಕಳಾರ ಕಾಮಳ್ಳಿಗಳ ದನಿಗಡಲಿನ ನಡುವೆ ದೀವಿಯವೋಲಿಹುದೀ ವಮ್ಮ ಹೊಸ ಹಳ್ಳಿ (ಕಂಪ್ರವೀ. ೦೬೦-೯೦). ಪಿಕಳಾರಿ : ಇತರ ಕವನಗಳಲ್ಲಿ ಆಗಾಗ ತೇನೆ, ಕಾಜಾಣ, ಗಿಳಿ, ಕಾಮಳ್ಳಿ, ಪಿಕಳಾರಿ, ಕೋಗಿಲೆ, ಮಲೆವಕ್ಕಿಗಳ ಉಲ್ಲೇಖ ಬರುತ್ತಿದೆ (ಶಾಕಪಾ. ೧೯). [<ಪಿಕಳ ?]

ಪಿಕಳೆ, ಪಿಕ್ಕಳೆ (ನಾ). ಒಂದು ಬಗೆಯ ಹಕ್ಕಿ : ಗರುಡಂ . . . ಪಿಕಳಂ ಬಕಂ ಶಿಖಿ ಶುಕಂ ಜಾನಾಡಿ ವರ್ಬಕ್ಕಿ ಹೆಂಗುರು ಕಾಕಂ ಚಿಲುಕೂಲಿ ರತ್ನ ಖಗವಿಕರ್ಮಂ ತದ್ವನಾಗೌಘದೊಳ್ (ಹಾಹರ. ೩-೫೯); '' ಕಾಗೆ '' (ಹಾಹರ. ಕೋಶ); ಗರುಡಂ ಗೀಜಗನಂಚೆ ಸೋರೆ ಪಿಕಳಂ [ಜಾಣಂ. ಳಕಂ] ಕಾಕಂ ಬಕಂ . . . ಚಿಲುಕೂಲಿ ಜಾತಕಮವಿಕರ್ಮಂ ತತ್ಪರುವಾತದೊಳ್ (ಹರಹರಂ. ೪-೧೬). **ಪಿಕ್ಕಳೆ** : ಪಿಕ್ಕಳೆದ್ವಿತಯ ಲಾವುಗೆ ತೋರ ಗಿರುಜೆಯು ಕುಕ್ಕುಟ ತಗಜು ಕೋಣಗಳ ಸೊಕ್ಕಾನೆಗಳ ಕಾದಿಸುತಿರ್ದ ದೊರೆಗಳ ಮಕ್ಕಳ ಕೂಡೆ ಬೀದಿಯಲಿ (ಕೋಹಕ. ೦೭-೪೨); ಶುಕ ಪಿಕ ಕೇಕಿ ಕಾರಂಡ ಕೆಂಬೂತ ಕಾಗೆ . . . ಕಾಡ್ಗೋಳಿ ಪಿಕ್ಕಳಂ ಕಬ್ಬಕ್ಕಿಗಳ್ ಮೆಱದವು (ಕಬುಪ್ರ. ೨-೦-೦೭). [←ತೆಲು. ಪಿಕಿಲಿ, ಪಿಕ್ಕಿಲಿ]

ಪಿಕಳಾರ ' ಪಿಕಲಾರಿ ' ನೋ.

ಪಿಕಳಾರಿ ' ಪಿಕಲಾರಿ ' ನೋ.

ಪಿಕಾಸಿ, ಪಿಕ್ಕಾಸ್, ಪಿಕ್ಕಾಸು (ನಾ). ಒಂದು ಕಡೆಯಲ್ಲಿ ಚುಚ್ಚಿವ, ಮತ್ತೊಂದಂ ಕಡೆಯಲ್ಲಿ ಕೆದಕುವ ಮೊನೆಗಳಿಂದ ಕೂಡಿದ, ನೆಲವನ್ನು ಅಗೆಯುವ ಒಂದು ಬಗೆಯ ಸಾಧನ : ಆ ಬಳಿಕ ಮಹಮ್ಮದನು ಪಿಕಾಸಿಯನ್ನು ಹಿಡಿದು ಕಲ್ಲನ್ನೊಡೆಯಲು ಪ್ರಯತ್ನಿಸಿದನು (ಕೈಗಂಪ್ರ. ೬೪); ಒಂದು ಪಿಕಾಸಿ, ಗುದ್ದಲಿ ತರಿಸಿರಿ ಎಂದನು (ಪಾಪೀಯು. ೨೯), ಹಾರೆ, ಗುದ್ದಲಿ, ಪಿಕಾಸಿ . . . ಕೈತನ ಸಾಧನಗಳೂ ಹೌದು (ಕಾಸೂಕೋ. I. ೧೧೯). **ಪಿಕ್ಕಾಸ್** : ಅವರು ಹಾರೆ ಪಿಕ್ಕಾಸ್ ಹಿಡಿದು ಹೊರಟಾಗ ಬೀಜಗಳ ಗಂಟನ್ನಿಟ್ಟು ಬುಟ್ಟಿಯನ್ನು ಮೋಹನ ಹೊತ್ತು ತರುತ್ತಾನೆ (ಜಾಲಗಿ. ೭೬). **ಪಿಕ್ಕಾಸು** : ತೋಟದ ಮಣ್ಣನ್ನು ಆಳವಾಗಿ ಉಳುವ ನೇಗಿಲುಗಳಿಂದಾಗಲಿ, ಪಿಕ್ಕಾಸುಗಳಿಂದಾಗಲಿ . . . ಉತ್ತು ನೆಲದಲ್ಲಿ ಗೊಬ್ಬರವನ್ನು ಬೆರೆಯಿಸಬೇಕು (ಜಾಂಪ್ರ. I. ೨೧೩); ತೋಟದಲ್ಲಿ ಕೆಲಸ ಮಾಡುವ ಹಾರೆ ಪಿಕ್ಕಾಸು ಇತ್ಯಾದಿ ಸಾಮಗ್ರಿಗಳ ಕಳವು ಹೆಚ್ಚಾಗ ತೊಡಗಿತು (ರಕ್ತರೂ. ೯೯). [←ಇಂ. Pickaxe]

ಪಿಕಾಳಿ (ನಾ). ಕೋಗಿಲೆಗಳ ಗುಂಪು,—ಸಮೂಹ : ಇದು ಜನಮಿದು ನೃಪಗೃಹಮೆಂಬುದು . . . ಪಟ್ಟದ ಶುಕ ಪಿಕಾಳಿಗೆನೆ ನೃಪಸದನಂ ಸೊಗಯಿಪುದು (ಜಗಪ. ೨-೫೬); ತಮಾಳವನಂ ಜಳಬುದ್ಬುದಪುಷ್ಪೋಷಮನೊಳ ಕೊಂಡು ಕಟ್ಟಲಿಸೆ ಕಂಡು ಘನಾಗಮಮಾದುದೆಂದು ಸಂಭ್ರಮಿಸಿ ಪಿಕಾಳಿ ಮೂಗುವಡೆ (ಶಿಸ್ಮಕಿ. ೬-೦೯). [ಪಿಕ+ಆಳಿ (=ಆಲಿ)]

ಪಿಕೆ (ನಾ). ದೋಗಿಗಳ ಹತ್ತಿರವಿರುವ ಒಂದು ಬಗೆಯ ಕೊಂಬಿನ ವಾದ್ಯ (?) : ಕೊರಲ ಶಂಕಿನ ಸರವೆರಲೆಗೊಂಬಿನ ಪಿಕೆ [ಜಾಣಂ. ಕೆ] ಸೋರೆಯೋಡು ಕೆಲದಱುವಾಗಿ ಕರದ ತ್ರಿಶೂಲದ ಕಿಱುಜಡೆವೊತ್ತ ದೋಗಿಗಳರಲೊಪ್ಪಿತಾ ರುದ್ರಭೂಮಿ (ಶ್ರೀಜಾಂ. ೯-೦೯). [?]

ಪಿಕೀರು ' ಫಿಕೀರು ' ನೋ.

ಪಿಕೆಟ್ (ನಾ). ಕಾವಲಿಗಿರುವ ಸಣ್ಣ ಸೈನ್ಯ ; ಕಾವಲುದಳ : "ಕಾವಲುಪಡೆ, ಗಸ್ತುಪಡೆ ; ತಡೆಕಾವಲುಗಾರರು. ಪಿಕೆಟ್ " (Picket. ಕಕ್ರಿ. ೬೨).

ಪಿಕೆಟ್ ಮಾಡು = ಕಾವಲಿರುವಂತೆ ಮಾಡು : "ಕಾವಲುಹಾಕು. ಪಿಕೆಟ್ ಮಾಡು " (Picket. ಕಕ್ರಿ. ೬೨). [←ಇಂ. Picket]

ಪಿಕೆಟಿಂಗ್ (ನಾ). ಒಳಗೆ ಹೋಗದಂತೆ ಅಥವಾ ಹೊರಗೆ ಬರದಂತೆ ತಡೆಯುವುದು : ಅಂದಿನಿಂದಲೇ ಕರನಿರಾಕರಣೆ, ಉಪ್ಪಿನ ಸತ್ಯಾಗ್ರಹ, ಪಿಕೆಟಿಂಗ್‌ಗಳು . . . ಆರಂಭವಾಗಬೇಕೆಂದು ಗಾಂಧೀಜಿ ತಿಳಿಸಿದರು (ಆಶಾಕ್ರ. ೦೩೬); ಮದ್ಯನಿಷೇಧದ ಪಿಕೆಟಿಂಗ್ ನಡೆಸುವಾಗಲೂ ಸಭೆ ಮೆರವಣಿಗೆಗಳನ್ನು ಮಾಡುವಾಗಲೂ ಆತಂಕಗಳನ್ನು ತಂದೊಡ್ಡ ತೊಡಗಿದರು (ಕಬುಚಾ. ೦೩೨). [←ಇಂ. Picketting]

ಪಿಕ್ಕ ' ಪಿಕ್ಕಾ ' ನೋ.

ಪಿಕ್ಕಮಾತು (ನಾ). ಹುರುಳಿಲ್ಲದ ಮಾತು,—ನುಡಿ : ಹಿರಿಯರಾಗಲಿ ಕಿರಿಯರಾಗಲಿ ಯಜಮಾನನೊಡನೆ . . . ಪಿಕ್ಕಮಾತುಗಳನ್ನು ಸರ್ವಥಾ ಆಡದಾರದು, ವಾದಿಸಬಾರದು (ಕುಬೋಂ. ೬೯).

[ಪಿಕ್ಕ (< ಪಿಕ್ಕಾ) + ಮಾತು]

ಪಿಕ್ಕಳೆ ' ಪಿಕಳೆ ' ನೋ.

ಪಿಕ್ಕಳಿ (ನಾ). (?) : ಕಟ್ಟುಗಳ ಮಜಿ ಸಮ್ಮದಿಕ್ಕಡದ ಪೊಸಕೋರಿಯಂಟ್ಟಿ ಗೆಯ ಪಿಕ್ಕಳಿಯ ಪೂಮುಂಡಿಯ ಜವ್ವನದ ದಿಟ್ಟವೇಡಿತಿಯರಾಣ್ಮರ ಪಿಂದೆ ನಡೆದರಟ್ಟಿಟ್ಟಿ ಎಂಗಗಳ ಕೆಡವುತ (ಕುಕೇಚ. ೩೨-೨೪). [?]

ಪಿಕ್ಕಾ, ಪಿಕ್ಕ (ಗು). ೧. ಕಾಂತಿಹೀನವಾದ ; ದುರ್ಬಲವಾದ; ಅಶಕ್ತವಾದ : (೨). ೨. ಹುರುಳಿಲ್ಲದ ; ನಿಸ್ಸತ್ವವಾದ : (೨). **ಪಿಕ್ಕ** : ೨. ' ಪಿಕ್ಕಮಾತು ' ಪರಾ. [←ಮರಾ. ಫಿಕ್ಕಾ]

ಪಿಕ್ಕಾಸ್ ' ಪಿಕಾಸಿ ' ನೋ.

ಪಿಕ್ಕಾಸು ' ಪಿಕಾಸಿ ' ನೋ.

ಪಿಕ್ಕು, ಪಿಕ್ಕು, ಹಿಕ್ಕು$_{೬}$, ಹೆಕ್ಕು$_{೬}$ (ಕ್ರಿ). ೧. ಬೇರ್ಪಡಿಸು; ಪ್ರತ್ಯೇಕಿಸು; ಬಿಡಿಸು; ವಿಭಾಗ ಮಾಡು : "ಪಿಕ್ಕು—ವಿವರಣೇ (ಬಿಡಿಸು)" (ಕಬುಣ); ಪುದಿದೊದವಿದ ಜನ್ಮಾಂತರಸ್ನೇಹಮೊಂದೇ ನುಡಿಯಲ್ ಪಿಕ್ಕಲ್ಕರಿದೊಂದಲ್ಲೆ [ಜಾಣಂ. ವೈಕಲ್ಪದಂತಲ್ಲೆ]ನಲೆಡೆ ವೆಱರ್ಗಿನ್ನಿಲ್ಲ (ಆಂಪ್ರ. ೪-೨೬); ವಿದುಟ ಕೋಟ್ಗಿಸಲೊಪ್ಪೊಕ್ಕು ಕರುಳ ಮೆದೆಯಂ ಪಿಕ್ಕಿ ವರಸಿ ತೋಡಿಯಂ (ಗದಾಯು. ೬-೨೬ ಶ); ಈಟ್ಟುಂ ಪಟ್ಟಿಯ ಮೊತ್ತಮಂ ಕಳಿ ಕಸಂ ನೂಂಕುತ್ತೆ ಯೆಕ್ಕುತ್ತೆ ಮೇಣ್ ನೋಟ್ಟಾ ಬೀಜವನೆತ್ತಿ ಪಿಕ್ಕಿ ಕಳೆದುಂ ನೂಲ್ಕೂಲ್ವ ಜಂತ್ರಗಳುಂ . . . ಮೈಸೂರಿನಲ್ಲೊವ್ವುಗುಂ (ಕ್ಯುತೊಪು. ೬-೪೬). ೨. (ಕೂದಲನ್ನು) ಸಿಕ್ಕು ಬಿಡಿಸು; ಬಾಚು : ತಲೆಯನಿರುಳ್ಪಿಕ್ಕಿದೊಡೆತ್ತ ಲಾನುವೊಂದಲ್ಲಿ ಭಾಗ್ಯಮುಳ್ಳಾ ರೋಮಂ ತಲೆಯಿಂದುದಿರ್ದೊಡೆ ಬಟ್ಟೆಯಂ ನಿಲರಿಯದು ಭಾಗ್ಯಮೆಂಬರಱಿವಿಲ್ಲದವರ್ (ಶಬುಪ. ೨೩೬೦೧. I. ೬೮೩–೮೩) ; ತದ್ರಮಣಿಯ ಕಚವಂ ಪಿಕ್ಕಿದಳವಾಳಿನನಖನಿಕರದಿಂ ವಧೂಮಣಿಯೊರ್ವಳ್ (ಜಾಕ್ಷ.೮-೨೩) ; ಸೋರ್ಮುಡಿಯನಾಗಳ್ ಪಿಕ್ಕಿ ಪೂದೊಡಂಬೆಯಂ ಮುಡಿಯಿಸುವರಾರ್ (ಕಾಪಾಕ್ಷ. ೭೭-೨೨). ೩. ಕಿತ್ತು, ಹೊರಕ್ಕೆ ತೆಗೆ ; ಕೀಳು ; ಸೆಳೆ : ಪೆಣದೆರಗೆ ಅಲೆತರ್ವ ರಣವದುರ್ಕರೆಯದೆಯೆ ಬರ್ವತಿಥಿ . . . ವಿನತಂಗಪ್ರತ್ಯಂಗಗಳ ಕಿರಿಯ ಅವಶೇಷಂಗಳನೆ ಪಿಕ್ಕಿ ಪಜ್ಜಿದಿಕ್ಕುವುದು (ಕಕ್ಕಕ್ರ. ೩೪-೨೨೩೭); ಎಲ್ಲಮುನುಂ ಪೊಲೆಗಲಸಿಯಿರ್ದತ್ತು. . .ಮಗನ ಪೆಣದಿನ್ ಪರ್ದುಗಳ್ ನಾಯ್ಗಳುವುಂ ಪಿಕ್ಕಿದರೆಯಿನ್ (ಅಂಕಗೊ. ೧೩-೧೨೯). ೪. ತೆರೆದು ನೋಡು ; ಬಿಡಿಸಿ ನೋಡು ; ಬಗೆದು ನೋಡು : ಮುನ್ನೇಱಿದ ಕೋಡಂ ನೋಡಿ ಹಲ್ಲುಂ ಕಿರಿದಗಿದುರವಂ ಪಿಕ್ಕಿ ಪೇನಿಂದೆ ತಿನ್ನುರ್ವಿದ ಮೆಯ್ಯಂ ಕಯ್ಯೊಳೆತ್ತಂ ತುಜ್ಜಿಸಿ . . . ಕಳ್ಳಿರ್ದುದು ಕೋಡಂ (ಹೂಕ್ಷಸು. ೬-೦೧೬). ೫. (ಭೇದವನ್ನು) ಎದ್ದು ಕಾಣುವಂತೆ ಮಾಡು ; ಎತ್ತಿ ತೋರಿಸು ; ಕೆದಕು : ಬೆದಕು : ಕುಲಮೆಂಬುದುಂಟೆ ಬೀರವೆ ಕುಲವಲ್ಲದೆ ಕುಲವಂ ನಿಂತು ಪಿಕ್ಕದಿರಿಂ (ಹಂಚಕಾ. ೨-೧೩) ; ಇಂದಿನವರಂದಿನವರ್ ಕೆಲಕೆಲಂದು ಪಿಕ್ಕು [ಜಾಣಂ. ಕರ್ಕ]ವೀ ದಂದುಗದಿಂದಮೇ ಸವಗನಿಂದ್ಯಕವೀಂದ್ರರ ವಂದ್ಯರಾವಗಂ (ಕಬುಗಾ. ೧-೪೨). ೬. ದೂರವಾಗು ; ಪ್ರತ್ಯೇಕವಾಗು : ಅಸ್ಪೌಘವಾತನ ಮೆಯ್ಯಿಂ ಕಿಡಿ ಸೂಸೆ ತಾಗಿ ಸಿಡಿದುಂ ಪಿಮ್ಮೆಟ್ಟಿಯುಂ ಪಿಕ್ಕಿ ಪಿಂತನೆ ಬಂದು ತಿಱುವಾಯ್ದು ಪೊರ್ದಿಯುಂ ಪಂಗುರ್ವಾದತ್ತು (ಜಗಪ. ೯-೩೮). ೭. ಸೂಸು (?) : ಆದಂ ಗೀತದ ಬಣ್ಣಂ ನಾದದೊಳಕ್ಕರಮುಮೆಯ್ದೆ ಶಬ್ದದೊಳಱಿಯಲ್ಕಾದವುದೆನೆ ಬಾಜಿಸುವರ್ ವಾದಕರುಂ ಪಿಕ್ಕಿ ಗೀತಸಮುಚ್ಚಯದಿಂದಂ (ಜಂಕ್ರಕ್ರಿ.

೦೩-೭೪). ಪಿರ್ಕು : ೧. ಅರ್ಕಂಗಾರಕ ಧಾತುಂ ಶುಕ್ರಂ ಬುಧ ಸೋಮ ನಿಂದಾ ಬೆಳ್ಳಿಯುಮಕ್ಕುಂ ಪಿರ್ಕಿದ ಲೋಹಂ ಶನಿಯೊಳಗಕ್ಕುಮಿದೆಂದರಿದು ಪೇಳು (ಸರಿಂ. ೬೫). ೨. ವೀಳಯಂಗುಡುವ ಮೇಲುದಂ ಪಿಡಿ ವಣ್ಬಿಕ್ಕುವ ತಲೆಯಂ ಪಿರ್ಕುವ ನೆಲನನುಗ್ಗಡಿಸುತಂ ಬರ್ಪ ಚಮರಜಪಾ ನಿಕ್ಕುತಿರ್ಪ ಮೇಳದಿಂ (ಪಾರ್ಶ್ವಪು. ೦೨-೬ ಪ); ಮುಡಿಯನೊಯ್ಯನೆ ಪಿರ್ಕಿಯಲರ್ವುಡಿಗಳ ತಳಿದು . . . ಬಿಂಕಕಾರ್ತಿಯರಲ್ಲಿ ಕಡುಗಾಡಿವೆತ್ತಿರು ತಿಹರು (ಕುಣಾಸಾಂ. ೩-೩೫). ಹಿಕ್ಕು$_1$: ೧. ಕಾಸು ಚುಚ್ಚು ಸುಡು ಹಿಂಡಿ ಹಿಳಿ ಹಿಕ್ಕು ಹರಹೆಂದೆಂಬ ಘಲ್ಲಣೆಗಳ . . . ನಾನಾರವಂಗಳಿಂ ನರಕವದ್ಭುತ ವಾದುದು (ಸಿದ್ಧರಾ. ೬-೨೭); ಹಱಿವ ಹಿಕ್ಕುವ ಮುಕ್ಕುವೊಕ್ಕುವ ಮುಱಿವ . . . ಧ್ವನಿಗಳವನಿಗೆ ಭಯವನೀವುತಿರೆ (ಸಾಸಂಸ. ೬-೦೨); ಸೊಕ್ಕಿದೀ ಭೀಮಾರ್ಜುನರ ಕೌರವರ ಕೈಯಿಂದ ಹಿಕ್ಕಿ ಕೊಲಿಸುವೆನೆಂಬ ಭೀಷ್ಮಕೆ ತಕ್ಕುದಾಯಿತೆನುತ್ತ . . . ಕುಣಿದನು ಶಕುನಿ ಮನದೊಳಗೆ (ಕುಪ್ಪಾಸ. ೬೦೩. ೧೪-೪೬); ಹೊಕ್ಕು ಲೀಲಾಸರಸಿಗಳನಿರದೆ ಕಯ್ಯಿಕ್ಕಿ ಹೊದಱುಗಳೆಡೆಯನು ಹಿಕ್ಕಿ ಹೆಮ್ಮೊಳೆಗಳನಱಸಿ ನೋಡಿದೆವು (ಕುಣಾಸಾಂ. ೩೨-೨೪). ೨. ಪರಿಪರಿಯ ನೀಳ್ದ ಕೆಂಜೆಡೆಗಳನಲಂಕರಿಸಿ ಎಳೆಯ ಶಶಿಕಳೆ ನೋಯದಂತೆ ಮೆಲ್ಲನೆ ಹಿ[ಕಾಸಾಂ.ಪಿ]ಕ್ಕಿ (ಪುಷ್ಪರ. ಜ. ೫೨೬-೧೨); ಆ ಸುದೇಷ್ಣಾದೇವಿಯರೆ ನಿಡುಕೇಶವನು ಹಿಕ್ಕುವಳು (ಕುಪ್ಪಾಸ. ೬೦೩. ೨-೩); ಮಂಡೆಯ ಕುರುಳ ಹಿಕ್ಕುವರೊಂದು ಕೆಲರು ಪೂವಂಡೆಯ ಮುಡಿಸುವರ್ ಕೆಲರು (ಸೋಷಸ. ೨೭-೩೪); ಬಲಗಡೆಗೆ ಬೈತಲೆ ತೆಗೆದು ಹಿಕ್ಕಿದ್ದರೂ ಗಾಳಿಗೆ ಸ್ವಲ್ಪ ಹಾರಾಡುತ್ತಿದ್ದ ಕ್ರಾಪು (ಹೂಬಿ. ೩೭). ೩. ಬೆಕ್ಕಿನ ದೃಕ್ಕನು ಕುಕ್ಕಬೇಕು ಹಕ್ಕಿಯ ಪಕ್ಕವ ಹಿಕ್ಕಬೇಕು (ಸುಹಾರೇ. ಇ. ೦೭೭-೩). ೫. ಅಕ್ಕಟೀ ಕುಲಪಿಡಿದು ಸತ್ಕುಲಕೆ ಹೋರುವರೆ ಹಿಕ್ಕಿದಡೆ [ಕಾಸಾಂ. ಹೆಕ್ಕಿದರೆ] ಶುದ್ಧಹೊಲೆಗಿಕ್ಕಿ ಮಾತಾಡುವರೆ (ದೀಶ್ವಾಸೋ. ೪೨-೨೪); ಆ ಸವತಿಯರೇನು ಜಾಣೆಯರೊ ಅವರಾ ತಂತ್ರವ ಬಲ್ಲರಹುದದ ಹಿಕ್ಕದೆ ಸುವಿನಯ ಮಿಗೆ ಕಳುಹಿದರು (ಭರಸ. ೬-೭೬). ೮. ತೆರೆ; ಬಿಚ್ಚು : ರಾಮನ ರೂಪಲ್ಲದೆ ಮಿಕ್ಕ ಚೆಲ್ವಡರ್ದ ರೂಪುಗಳ ಲೆಕ್ಕಿಸದೆನ್ನ ಕಣ್ಣೆಂದಂತ ರಂಗವ ಹಿಕ್ಕಿ ಕೆಳದಿಯೊಳಾಡಿದಳು (ಕುಣಾಸಾಂ. ೨೩-೦೧). ೯. ಕೆರೆ; ತುರಿಸು : ಪಕ್ಕದ್ವಂದ್ವಂಗಳು ಝಾಡಿಸಿ ಕೆಲಕೆ ನಿಮಿರ್ದೊತ್ತಿ ಮೂಗಿಂದ ಗೋಣಂ ಹಿಕ್ಕುತ್ತಂ ಬಂದು ಗೇಹಂಗಳನಡರಿ . . . ಕೂಗಿತಾ ತಾಮ್ರ ಚೂಡು (ಸೂಕ್ತಿಸು. ೯-೩೦). ಹೆಕ್ಕು$_1$: ೧. ಸರಳು ಹೊಕ್ಕವು ಹೆಕ್ಕಿದವು ಪೇಚರಬಲವನೊಕ್ಕಿದವು ತೂಱಿದವರಿಭಟನ ಚುಚ್ಚಿದವು ಹೆಚ್ಚಿದವೆಂಟು ದೆಸೆಗಳಲಿ (ಕುಪ್ಪಾಸ. ೨೦-೨೨).

ಪಿಕ್ಕಿ ನೋಡು, ಹಿಕ್ಕಿ ನೋಡು = ೧. ಬಗೆದು ನೋಡು; ವಿಂಗಡಿಸಿ ಪರೀಕ್ಷಿಸು; ವಿವೇಚಿಸು : ಎಂತೆಂತು ಪಿಕ್ಕಿ ನೋಟಿಸ್ಪೊಡಮಂತಂತೆ ವಿಚಾರಸಹಮಾನಾ × × × ದ್ಯಂತಂ ಜೈನಾಗಮಮಾನದಂತಿಂತುಂತೆಂದೆ ನಲ್ಕದೇಂ ಬಂದವುದೇ (ಸಸುತ. ೩-೨೯); ಕೆಲವರು ಮಾತ್ರ ಎಲ್ಲವನ್ನೂ ಪಿಕ್ಕಿ ನೋಡುವ, ಯಾವುದನ್ನಾದರೂ ತೂಕ ಮಾಡಲು ತವಕಿಸುವ . . . ನಿಷ್ಪಕ್ಷಪಾತಪ್ರಕೃತಿಯವರು (ಕಟಾ. IV. ೦೧೮೪); ತನ್ನ ಸಮಕಾಲೀನ ವಾದ ಸಮಯ ಅಥವಾ ಮತಗಳನ್ನು ಹಿಕ್ಕಿ ನೋಡುವುದು . . . ಅವನ ಗ್ರಂಥದ ಮುಖ್ಯೋದ್ದೇಶ (ಸಂಸೋಕ. ೬೦). ೨. ಬಿಡಿಸಿ ನೋಡು; ವಿಭಾಗ ಮಾಡಿ ನೋಡು; ಸೀಳಿ ನೋಡು : ಒದವಿ ಕೊಯ್ದುಂ ಕೊಱಿದುವು: ಹಿಕ್ಕಿ ನೋಡಿದೊಡೆ ಸದಮಲಾಮೃತವನೇ ಕಾಣಿಸುತೆ ಪಲಸುಗಳ್ ವಿದಿತಸಜ್ಜನರಂತೆ ಮೆಱಿದುವು (ಶದ್ಮರಾ. ೬-೨೯).

[ದೇ. ೩ ಕೊಡ. ಪಿಕ್, ಪಿಗ್]

ಪಿಕ್ಕುಳಿಕೆ, ಪಿಕ್ಕುಳಿಕೆ, ಪಿಕ್ಕುಳಿಗ, ಪೆಕ್ಕಳಿಗ (ನಾ). ಒಂದು ಬಗೆಯ ಹಕ್ಕಿ; ಪಿಕಳ : ಗಳೆಗಳಂಟಿಗೆ ಸಿಲುಕಿದವು ಪಿಕ್ಕುಳಿಕ[ಕಾಸಾಂ. ಗ] ಪಿಂಜರ ಮಂಜರಿಗ ಮಿನ್ಬುಲಿಗ ಲಾವುಗೆ ಸರಲೆ ಬುಱುಲೆಗಳೆಚ್ಚ ಮಿಂಟೆಯಲಿ (ಕೊರಾ. ೩-೩-೦೮); ಪಿಕ್ಕುಳಿಕ ಚೆಂಬೋತ ಗೀಜಗ ಕುಕ್ಕುಕೋಗಿಲೆ . . . ಕೆಂಡವಕ್ಕಿಗಳವಱೊಳೊಪ್ಪಿದುದು (ಸಾಳ್ವರಾ. ೩-೨೨). ಪಿಕ್ಕುಳಿಕೆ : "ರಕ್ತ ಚ್ಛದಂ ಪಿಕ್ಕುಳಿಕೆ" (ಸುಂಗರಾ. ೫೨-೯). ಪಿಕ್ಕುಳಿಗ : ಮೇಲಿನ 'ತೊರರಾ' ಪ್ರಯೋಗದ ಪಾಠಾಂತರವನ್ನು ನೋಡಿ. ಪೆಕ್ಕಳಿಗ : ಪೆಕ್ಕಳಿಗ ಗಿಳಿ ಗುಬ್ಬಿ ಸಾಳುವ (ಕಾಸ್ತರಾ. ೦೦-೨೩). [<ಪಿಕಳ]

ಪಿಕ್ಕುಳಿಕೆ 'ಪಿಕ್ಕುಳಿಕ' ನೋ.

ಪಿಕ್ಕುಳಿಗ 'ಪಿಕ್ಕುಳಿಕ' ನೋ.

ಪಿಕ್ಕೆ$_1$ 'ಪಿಳ್ಕೆ' ನೋ.

ಪಿಕ್ಕೆ$_2$ (ನಾ). ಒಂದು ಬಗೆಯ ಸಸ್ಯ ಮತ್ತು ಅದರಿಂದ ಉತ್ಪನ್ನವಾಗುವ ಸುಗಂಧದ್ರವ್ಯ : "ಜಾತಿಮಾಳತಿ ವಾಸಂತಿ ಮಾಧವಿ ಮಲ್ಲಿಗೆ ವಿಚಕಿಳಂ . . . ಮತ್ತದು ವಿಳಕ್ಕೆಳಭಿಕೆ ಪಿಕ್ಕೆಯಕ್ಕುಂ" (ಪಸ್ತುಕೋ. ೩೬-೩೪); ಅರೆದಾಸವದಿಂದಂ ಬೋಟರಸಂ ಲಘು ಪಿಕ್ಕೆಯೆಂಬಿವಂ ಬೆರಸಿ ಮನೋ ಹರಮಾಗಿ ಧೂಪಮಂ ಕುಡೆ (ಶೋಕೋಸ. ೭-೫೬). [<ಸಂ. ಸ್ಪೃಕ್ಕಾ]

ಪಿಕ್ಚರ್ 'ಪಿಕ್ಚರು' ನೋ.

ಪಿಕ್ಚರು, ಪಿಕ್ಚರ್ (ನಾ). ಚಲನಚಿತ್ರ; ಸಿನಿಮಾ : ನನ್ನ ಮಗಳು ಅವಳ ಸ್ನೇಹಿತೆಯರೊಡನೆ ಪಿಕ್ಚರಿಗೆ ಹೋಗಿದ್ದಾಳೆ (ಸೂಕ). ಪಿಕ್ಚರ್ : ಪಿಕ್ಚರ್ ಶುರುವಾಗುವುದು ಆರೂವರೆಗೆ (ಸೂಪಲ್ಕ. ೦೨೬). [←ಇಂ. Picture]

ಪಿಗಳ (ನಾ). ಒಬ್ಬಾತನ ಹೆಸರು : ಕುನ್ದತೂರ ತುಱುಗೊಳೊಳಾ ನ್ತಿಱಿದು ಸತ್ತೊ ತಾಮ್ಬೆಯ ಪಿಗಳಂ (ಎಕ. X. ಮುಳಿಪಾ. ೨೪೪-೫; ಸು. 890). [?]

ಪಿಗ್ಗು 'ಪಿಳ್ಗು' ನೋ.

ಪಿಚ್$_1$ (ನಾ). ಒಂದು ಅನುಕರಣ ಶಬ್ದ : 'ಪಿಚ್ಚೆನ್ನು' ಪರಾ.

ಪಿಚ್$_2$ (ನಾ). (ಕ್ರಿಕೆಟ್ ಆಟದಲ್ಲಿ) ಗುರಿಕೋಲುಗಳ ಮಧ್ಯದ ಸ್ಥಳ : ಮಳೆ ಬಂದು ಪಿಚ್ ಬಹಳ ಕೆಟ್ಟದ್ದರಿಂದ ಇಂಗ್ಲೀಷ್ ಆಟಗಾರರಲ್ಲಿ ಐದು ಮಂದಿ . . . ಔಟಾದರು (ಸಾಡಿಗೇ. ೧೩೦). [←ಇಂ. Pitch]

ಪಿಚಂಡ (ನಾ). ೧. ಹೊಟ್ಟೆ; ಉದರ : ಶ್ರೀಮತ್ಕಾಂಡಜಜಾಂಡಮಂಡಲ ಪಿಚಂಡಾಮ್ನಾಯ ವಾಜಿಸ್ಥಿರಂ (ಹಪ್ಪಾರ. ೧-೧); ಪಾಹಿ ಭುವನತ್ರಯ ಪಿಚಂಡಚಿದಖಂಡಾ (ಹಾಣಸ್ಯ. ೧-೨-೬೫). ೨. ಸ್ಥೂಲವಾದ ತೊಡೆ : "ಊರುಃ, ಸಕ್ಥಿಃ, ಪಿಚಂಡಂ ?— ಈ ೩ ಹೆರ್ದೊಡೆ" (ಹಲಾಯು. ೬೫-೩೬೧). [ಸಂ.]

ಪಿಚಂಡಿ$_1$ (ನಾ). = ಪಿಚಂಡ ೨ : "ಊರುಗಳು ಪಿಚಂಡಿಗಳೆನಲು ಪೆರ್ದೊಡೆಗೆ ನಾಮಮಕ್ಕುಂ" (ಮಂಗರಾ. ೯೮-೧೭). [ಸಂ. ಪಿಚಂಡಿನ್]

ಪಿಚಂಡಿ$_2$ 'ಪಿಚಾಡಿ' ನೋ.

ಪಿಚಂಡಿಲ, ಪಿಚಂಡಿಳ (ಗು). ೧. ಸ್ಥೂಲವಾದ : ದಪ್ಪ; ತೋರ. ಪಿಚಂಡಿಳ : (ನಾ). ೨. ಸ್ಥೂಲವಾದ ಹೊಟ್ಟೆಯುಳ್ಳವನು; ಡೊಳ್ಳುಹೊಟ್ಟೆಯವನು : "ಪಿಚಂಡಿಳಃ, ಬೃಹತ್ಕುಕ್ಷಿಃ, ತುಂದಿಳಃ, ಉದರಿಳಃ ...ಈ ೪ ಹೊಟ್ಟೆಗಂ" (ಹಲಾಯು. ೯೯-೪೫೪). [ಸಂ.].

ಪಿಚಂಡಿಳ 'ಪಿಚಂಡಿಲ' ನೋ.

ಪಿಚಕ್ (ನಾ). ಒಂದು ಅನುಕರಣ ಶಬ್ದ : "ಪಿಚಕ್ ಜಿಗಿಸುವುದು (ಪಿಚಕಾಳಿ, ಜೀಕಳಿ)" (ಶಾಸಕೋ. ೧೬); ಪಿಚಕ್ ಪಿಚಿಕ್ಕೆಂದು . . . ಹಾರು ತ್ತಿದ್ದ ಕೆಸರಿನಲ್ಲಿ. ಎಚ್ಚರಿಕೆಯಿಂದ. ಆದರೂ ಅವಷ್ಟು ಬೇಗಬೇಗನೆ, ಕಾಲು ಹಾಕಿದಳು (ಮರೆಸು. ೬೫೮). 'ಪಿಚಕ್ಕನೆ' ಪರಾ.

ಪಿಚಕಾರಿ (ನಾ). ೧. ನೀರು, ಓಕುಳಿ ಮುಂತಾದುವನ್ನು ಎರಚುವುದ ಕ್ಕಾಗಿ ಬಳಸುವ ಒಂದು ಬಗೆಯ ಸಾಧನ; ಜೀರ್ಕೊಳವಿ; ಜೀಕಳಿ : ನೀರು ನಿಂತ ಪಕ್ಷದಲ್ಲಿ ಡಿ.ಡಿ.ಟಿ. ಅಥವಾ ಸೀಮೆಯೆಣ್ಣೆಗಳನ್ನು ಈ ಸ್ಥಳ

ಗಳಲ್ಲಿ ಪಿಚಕಾರಿ ಹೊಡೆಸಬೇಕು (ಗೃಹಪ. ೦೫೬); ಈ ಬಣ್ಣಗಳ ತೀರ್ಥವನ್ನು ನಿತ್ಯವೂ ನೆತ್ತಿಗೆ ಪಿಚಕಾರಿಯಿಂದ ಹೊಡೆಯಬೇಕು (ಜಪಾ. ೦೩). ೨. ಮಲಬದ್ಧತೆಯ ಪರಿಹಾರಕ್ಕಾಗಿ ಗುದಪ್ರದೇಶಕ್ಕೆ ನೀರು ಪ್ರವೇಶಿಸುವಂತೆ ಮಾಡುವ ಸಾಧನ: ಪಿಚಕಾರಿ ಹೊಡೆದು ಮಲ ವಿಸರ್ಜನೆ ಮಾಡಿಸಬೇಕು (ಗ್ರಾಮಾಳ. ೦೨೯). ೩. (ಆಲಂ) (ಬಾಯಿಯಿಂದ) ಚಿಮ್ಮಿಸಿದುದು: ಕುರ್ಚಿಯ ಹಿಮ್ಮಗ್ಗಲು ಇರುವ ಕಿಟಕಿಯಲ್ಲಿ ತಂಬುಲದ ಪಿಚಕಾರಿಯನ್ನು ಬಿಡುತ್ತಿದ್ದರು (ಕಂಗಕೋ. ೦); ಪಾನಪಟ್ಟಿಯ ಪಿಚಕಾರಿಯನ್ನು ಹೊಡೆದು, ಸಿಗರೇಟಿನ ಒಂದು ಝರುಕಿಯನ್ನು ಎಳೆದು . . . ಕೇಳಿದ (ದೀಪಹ. II. ೨೦೩). [←ಹಿಂ. ಮರಾ. ಪಿಚಕಾರೀ./ತುಳು. ಪಿಚ್ಕಾರಿ, ಪಿಸ್ಕಾರಿ; ತೆಲು. ಪಿಚಿಕಾರು. ಪಿಚ್ಚಿಕಾರು]

ಪಿಚಕ್ಕನೆ (ಅ). ಪಿಚಕ್ ಎಂದು ಶಬ್ದವಾಗುವ ಹಾಗೆ: ಅಂಗಾತನಾಗಿ ಬಿದ್ದ. ಮೈ ಆಳದ ಗೊಜ್ಜೆಯಲ್ಲಿ ಬಿದ್ದಾಗ ಪಿಚಕ್ಕನೆ ಗೊಜ್ಜೆ ಚಿಮ್ಮಿ . . . ಅಲ್ಲಿಂದ ಎದ್ದು ಕಾಲೆತ್ತಿ ಎಳೆದು ದಾಟುವುದರಲ್ಲಿ ಹೋದ ಪ್ರಾಣ ಕೈಗೆ ಬಂತು (ಪಪಹಾ. II. ೧೨೩೩); ಬಾಯಲ್ಲಿಯ ತಂಬಾಕನ್ನು ಪಿಚಕ್ಕನೆ ಉಗುಳಿ . . . ಕುದುರೆಯ ವೇಗವನ್ನು ಹೆಚ್ಚಿಸಿದನು (ಸಂಗಾಪ. ೫೯).

[ಪಿಚಕ್ + —ಅನ್ನೆ]

ಪಿಚವ್ಯ (ನಾ). ೧. ಹತ್ತಿಯ ಗಿಡ; ಅರಳೆಯ ಗಿಡ. ೨. ಹತ್ತಿ; ಅರಳೆ: "ಪಿಚವ್ಯಃ, ಬಾದರಃ, ಕಾರ್ಪಾಸಃ—ಈ ೩ ಪಚ್ತಿ (ಹತ್ತಿ)" (ಹಲಾಯು. ೩೯-೯೯). [ಸಂ.]

ಪಿಚಾಡಿ, ಪಿಚಂಡಿ₂, ಪೀಚಾಡಿ (ನಾ). ೧. ಹಿಂಭಾಗ; ಹಿಂಬದಿ: ಫಾಜಲ್‌ಖಾನನು ತನ್ನ ದಂಡು ತೆಗೆದುಕೊಂಡು ಆಗಾಡಿಗೆ ಆಗಿಕೊಂಡು ಪಿಚಾಡಿಗೆ ಜಾನ್ ಕಸ್ತೂರಿ ಆಗಿಕೊಂಡು ಮಧ್ಯಗುನುಗು ಹಾಕಿಕೊಂಡು . . . ಹೋಗುತ್ತಾ ಇದ್ದಲ್ಲಿ (ಶಾಶಂಪ್ರ. ೯೦). ೨. ಕುದುರೆಯ ಹಿಂದಿನ ಕಾಲು,—ಹಿಂಗಾಲು: (ಕ). ೩. ಕುದುರೆಯ ಹಿಂಗಾಲುಗಳನ್ನು ಕಟ್ಟುವ ಹಗ್ಗ: ಪೇಟೆಗೆ ಹೋಗಿ . . . ಕುದುರೆಯ ಮುಂಗಾಲು ಹಿಂಗಾಲುಗಳಿಗೆ ಕಟ್ಟುವ ಆಗಾಡಿ ಪಿಚಾಡಿ ಹಗ್ಗಗಳನ್ನು ತೆಗೆದುಕೊಂಡು ಬಂದರು (ಪಗಗ. ೫೦); ಸಾಳೋನರಸಿಂಗರಾಯನ ಖಾಸಾಕುದುರೆಯನ್ನು ಕಟ್ಟಿದ್ದ ಕಡೆಗೆ ಹೋಗಿ ಸ್ವಲ್ಪವೂ ಗದ್ದಲವಾಗದಂತೆ ಅದರ ಆಗಾಡಿಯನ್ನೂ ಪಿಚಾಡಿಯನ್ನೂ ಬಿಚ್ಚುತ್ತಾ ಇದ್ದನು (ಪಪ್ರಶಾ. ೦೦). ಪಿಚಂಡಿ₂: (ಕ). ಪೀಚಾಡಿ: ೧. ಮೆಟ್ಟಿ ಸೌಧಾಗ್ರತರುತುದಿಗಳಂ ಸಾಲೆ ಹಯದೊಟ್ಟು ಪೀಚಾಡಿಯಾ ಗಾಡಿಯಂ ಕಿತ್ತು ಪುರಕೇರಿದವು (ಪಪಮು. ೫-೯); ಬೀಗೆ ನಿರ್ವೆಸನ ರಕ್ತಾಂಘ್ರಿಯೋಳ್ ವತ್ತಲಾಗಾಡಿ ಪೀಚಾಡಿ ಕಿತ್ತು (ಪಪಮು. ೦೨-೦೪).

ಪಿಚಂಡಿ ಬಿಗಿ = ಹಿಂದಿನಿಂದ ಕೈಗಳನ್ನು ಕಟ್ಟು; ಹಿಮ್ಮುಖವಾಗಿ ಕಟ್ಟು: "ಹೆಡೆಮುರಿ ಕಟ್ಟು" (ಶಾಪಕೋ. ೦೬).

[← ಹಿಂ. ಪಿಛಾಡೀ, ಪೀಛವಾಡೀ; ಮರಾ. ಪಿಛಾಡೀ]

ಪಿಚಿ (ನಾ). ಒಂದು ಅನುಕರಣ ಶಬ್ದ: (ಕ).

ಪಿಚಿಪಿಚಿ (ದ್ವಿರುಕ್ತಿ): ಮಾತುಮಾತಿಗೊಮ್ಮೆ ಪಿಚಿಪಿಚಿ ಉಗುಳುವ ಈ ಮಹಾಪುರುಷರ ಸಹವಾಸ ಬೇಡ (ಗಾಳಿಗು. ೩೨); ಮಳೆ ಬಂದು ನೆಲವೆಲ್ಲ ಪಿಚಿಪಿಚಿಯಾಗಿದೆ (ಕೂಡಿ).

ಪಿಚಿಂಡ (ನಾ). ಹೊಟ್ಟೆ; ಉದರ: "ಪಿಚಿಂಡಃ, ಕುಕ್ಷಿಃ, ಜಠರಂ, ಉದರಂ, ತುಂದಂ ೫ ಹೊಟ್ಟೆ, ಬೊಜ್ಜೆ" (ಸಿದ್ಧಾಂತಿ. ೧೯೦). [ಸಂ.]

ಪಿಚಿಂಡಿಲ (ಗು). ಸ್ಥೂಲವಾದ ಹೊಟ್ಟೆಯನ್ನು ಉಳ್ಳ; ಡೊಳ್ಳು ಹೊಟ್ಟೆಯಿಂದ ಕೂಡಿದ. [ಸಂ.]

ಪಿಚಿಕೆ, ಪಿಚ್ಚಿಕೆ, ಹಿಚಿಕೆ (ನಾ). ಪಕ್ಷಿ ಅಥವಾ ಪ್ರಾಣಿಗಳ ಹಿಕ್ಕೆ,—ಮಲ: ಈ ಹಕ್ಕಿ . . . ತನ್ನ ಪಿಚಿಕೆ ಯಾರಿಗೂ ಸಿಕ್ಕದಿರಲೆಂದು ಅದನ್ನು ನೆಲವಲ್ಲಿ ಹೂಳುತ್ತದೆ (ಪ್ರಣಾ. I, ೨೦): ಅಕಸ್ಮಾತ್ ಮಾಂಸದ ಚೂರುಗಳನ್ನು ಹದ್ದುಗಳು ನುಂಗಿಬಿಟ್ಟರೆ . . . ಬೆಳಗಾದ ಮೇಲೆ ಅವುಗಳ ಪಿಚಿಕೆಯನ್ನು ಹುಡುಕಿ ವಜ್ರಗಳನ್ನು ಆಯ್ದುಕೊಳ್ಳುತ್ತಾರೆ (ಪ್ರಣಾ. II, ೩೯). ಪಿಚ್ಚಿಕೆ: (ಕಸಾಕಾಂ. ೩೬೩). ಹಿಚಿಕೆ: ಎರೆಯ ಗದ್ದೆಗೆ ಗೊಬ್ಬರವಾದೀತೆ ಗುಬ್ಬಿಯ ಸಾವಿರ ಹಿಚಿಕೆ (ಇಂಶಾಪ. ೧೯೬-೭೯); ಎಷ್ಟೋ ಸಾರಿ ಅದು ಎಲೆಯ ಮೇಲೆ ಹಕ್ಕಿಗಳ ಹಿಚಿಕೆಯಂತೆ ಬಿದ್ದಿರುವುದು (ಪಾಂಪ್ರ. II. ೦೦೨೩); ಅರ್ಧ ಬೆಂದ ಅನ್ನ . . . ಪ್ರಾಣಿಗಳ ಹಿಚಿಕೆ, ಜಿರಳೆ, ಕೂದಲುಗಳಿಂದ ತುಂಬಿದ ಆಹಾರ (ಅಕ್ಷಾರ್ಪ. ೭). [< ಪಿಳ್ಳೆ]

ಪಿಚಿಗುಟ್ಟು (ಕ್ರಿ). ಕೆಸರಿನಿಂದ ಗಲೀಜಾಗು,—ಕೊಳಕಾಗು: ಹೆಚ್ಚಾದ ಮಳೆ ಬಿದ್ದು ನೆಲವೆಲ್ಲ ಪಿಚಿಗುಟ್ಟುತ್ತಿತ್ತು (ಕೂಡಿ). [ಪಿಚಿ + ಕುಟ್ಟು₁]

ಪಿಚು (ನಾ). ೧. ಅರಳೆ; ಹತ್ತಿ: "ತೂಲಕಂ, ಪಿಚುಃ — ಈ ೨ ಅರಳೆ" (ಹಲಾಯು. ೩೯-೯೯). ೨. ಹತ್ತಿಯ ಗಿಡ. ೩. ಎರಡು ತೊಲೆಗಳ ತೂಕ. [ಸಂ.]

ಪಿಚುತೂಲ (ನಾ). = ಪಿಚು ೧. [ಸಂ.]

ಪಿಚುತೂಳಕ (ನಾ). = ಪಿಚು ೧: "ಹತ್ತಿ ಕಾರ್ಪಾಸಂ ಪಿಚವ್ಯಮಾ ಬಾದರಂ ಅರಳೆ ಪಿಚುತೂಳಕಾಖ್ಯಂ" (ಮುಂಗಶಾ. ೩೬-೨೬). [ಸಂ. ಪಿಚುತೂಲಕ]

ಪಿಚುಮಂದ (ನಾ). ಬೇವಿನ ಮರ: "ಅರಿಷ್ಟಃ, ಪಿಚುಮಂದಃ — ಈ ೨ ಬೇವು" (ಹಲಾಯು. ೩೩-೯೩); ಚಂಚುರ ಪಿಚುಮಂದವಲ್ಲವಸಮುಲ್ಲಸಿತಂ ಮುಸಲೋರುಸೀರಡಂಬರಯುತಮೇಂ ಮನಕ್ಕೊಲವನಿತ್ತುದೊ ಬಾಗಿ ಲರಿಷ್ಟಸದ್ಮದಾ (ಪಂಪ್ರಪು. ೩-೯೭); ಪರಿಪರಿ ರಸಾಲ ಪಿಚುಮಂದ . . ಮರುಗ ಪಚ್ಚೆಯ ದವನ ಬಿಲ್ವ ಬೆಳವಲ ನಿಂಬೆ ಹೀರಳೆಯು (ಕೋರಸಿ. ೦-೦೭); ಪಿಚುಮಂದಪತ್ರವ ಲವಿತ್ರಮನೊಲಿದು ಬಿನ್ನವಿಲ್ಲದೆ ಪಿಡಿಸಿ (ಪಪಮೋ. ೦೫-೨೦). [ಸಂ.]

ಪಿಚುಮರ್ದ (ನಾ). = ಪಿಚುಮಂದ: "ಅರಿಷ್ಟಃ, ಸರ್ವತೋಭದ್ರಃ, ಹಿಂಗುನಿರ್ಯಾಸಃ, ಮಾಲಕಃ, ಪಿಚುಮರ್ದಃ, ನಿಂಬಃ — ೬ ಬೇವಿನ ಗಿಡದ ಹೆಸರುಗಳು" (ಸಿದ್ಧಾಂತಿ. ೦೨೬). [ಸಂ.]

ಪಿಚುಲ, ಪಿಚುಳ (ನಾ). ೧. ಅರಳೆ; ಹತ್ತಿ. ೨. ಹುಣಿಸೆಮರ. ೩. ಒಂದು ಬಗೆಯ ಸಸ್ಯ; ನೀರುಕಣಗಿಲೆ. ೪. ಒಂದು ಬಗೆಯ ಸಸ್ಯ; ಕಕ್ಕೆಗಿಡ: "ಝಾವುಕಃ, ಪಿಚುಲಃ—ಈ ೨ ಪಿಚುಲಂ?" (ಹಲಾಯು. ೩೨-೯೨); "ಪಿಚುಲಃ, ಝಾಬುಕಃ—೨ ಕಕ್ಕೆಗಿಡದ ಹೆಸರುಗಳು" (ಸಿದ್ಧಾಂತಿ. ೦೨೦). ೫. ಒಂದು ಬಗೆಯ ಕಾಗೆ; ಸಂಬಾರ ಕಾಗೆ. ಪಿಚುಳ: ೩. "ತೊಱೆಗಣಿಗಿಲಾ ಲೋಮಕಂ ಪಿಚುಳಮದು" (ಮುಂಗಶಾ. ೩೯-೧೦). [ಸಂ.]

ಪಿಚುಸೋದ (ನಾ). ಹತ್ತಿಯನ್ನು ಎಕ್ಕುವ ಕೋಲು; ಕುಡುಹು: "ಪಿಚುಸೋದಮೆನೆ ಕುಡುಹು" (ಮುಂಗಶಾ. ೬೦-೦೯). [ಪಿಚು + ಸೋದ]

ಪಿಚುಳ 'ಪಿಚುಲ' ನೋ.

ಪಿಚ್ಚ₁ (ನಾ). ೧. ಬುದ್ಧಿಕೆಟ್ಟವನು; ಹುಚ್ಚ: ಎಲೆಲೆ ಪಿಚ್ಚ ಬ್ರಾಹ್ಮಣ ನಾನೆ ನಿನಗೆ ತೊತ್ತಿನ ಮಗ ನಾನೆ ನಾನೆಯೆನೆ (ಶಂಬರ. ೬-೦೩೨). ೨. ಶಿವ: ಪರಮನೇ ಪಿಚ್ಚನೇ ಪೆಱೆದಾಳ್ದ ಪಶುಪತಿಯೆ . . . ಎಂದು ನಾಂದೀ ಪದವ ಪಾಡಿದನು ನಂಬಿ ಶುಭುವಿನಿದಿರೊಳು (ಸೌಂದಪು. ೫-೨೬). [ದೇ.॥ ತಮಿ. ಮಲ. ಪಿಚ್ಚನ್; ತೆಲು. ಪಿಚ್ಚ, ಪಿಚ್ಚಿ = ಉನ್ಮಾದ]

ಪಿಚ್ಚ₂ 'ಪಿಸಿತ₁' ನೋ.

ಪಿಚ್ಚಂಬಕ (ನಾ). ೧. ಗೀಜು ತುಂಬಿದ ಕಣ್ಣು; ಪಿಸರುಗಣ್ಣು. ೨. ಪಿಸರುಗಣ್ಣಿನವನು; ಗೀಜುಗಣ್ಣನ್ನು ಹೊಂದಿರುವವನು: ನಂಬಿ ಕೋಪದೊಳು ಪಿಚ್ಚಂಬಕನ ನೂಕೆಂದು ಪೇಳೆ (ಪ್ರೌಢಾ. ೦೬-೨೨).

[ಪಿಚ್ಚು + ಅಂಬಕ]

ಪಿಚ್ಚಕಾಯಿ (ನಾ). ಒಂದು ಬಗೆಯ ಮರವು : ಮಾವಿನ ಜಾತಿಗಳು : ಗೋಳಕಾಯಿ, ಬಾದಾಮಿ, ರಸಪುರಿ, ಜೇರಿಗೆ, ಪಿಚ್ಚಕಾಯಿ, ಕರೀಕಾಯಿ (ಶಬ್ದಕು. ೨೩೬). [ಪಿಚ್ಚ ? + ಕಾಯಿ (< ಕಾಯ್)]

ಪಿಚ್ಚಟ (ಗು). ೧. (ಒತ್ತಿದುದರಿಂದ) ಚಪ್ಪಟೆಯಾದ ; ಅಗಲವಾದ. (ನಾ). ೨. (ಒತ್ತುವಿಕೆಯಿಂದ) ಚಪ್ಪಟೆಯಾದ ವಸ್ತು. ೩. ಕಣ್ಣಿನ ಒಂದು ಬಗೆಯ ರೋಗ. ೪. ತಮರ. [ಸಂ.]

ಪಿಚ್ಚವೂಗ (ನಾ). ೧. ಮಾಂಸವನ್ನು ತಿನ್ನುವವನು. ೨. ದೈತ್ಯ ; ರಾಕ್ಷಸ : " ಪಿಚ್ಚವೂಗನೆಂದೊಡೆ ನಿರಂತಿವೆಸರಕ್ಕು " (ಕ್ರಿಶ್ರಿ. ೦೯).

[ಪಿಚ್ಚ (< ಪಿಸಿತ) + — ಊಗ]

ಪಿಚ್ಚ೧ (ನಾ). ಒಂದು ಅನುಕರಣ ಶಬ್ದ.

ಪಿಚ್ಚಹೂಗು = (ಕರಾ) ತೆಳ್ಳಗಾಗು ; ತೆಳುವಾಗು : ಏರು ಸ್ವಲ್ಪ ಪಿಚ್ಚಾಗಿದ್ದಿರಬೇಕು. ಹಿಟ್ಟಿಲ್ಲ ಪಿಚ್ಚೆಯಾಗಿದೆ. ರೊಟ್ಟಿ ತಟ್ಟಲು ಬಾರದು (ಕುಂ).

ಪಿಚ್ಚ೨ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು: "ರಕ್ತಪುಷ್ಪೀ —ಪಿಚ್ಚ, ಊಷ್ಮಕರ್ಣ, ದಾಸಾಳ " (ಓಷ. ೦೪೮); ಜೆಡೆಗೆ ಪಿಚ್ಚಿದ [ಜಾತಾಂ. ಪೀಚಿದ]ಲಜ್ಜೆಯನೆಂದೊ ಪಿಡಿದ ದಂಡವನುಡಿದವನೆಂದೊ ಮುಂಡಿದನೆಂದೊ ಮಿಸಲಾದ ಪ್ರಸೂನ ಪತ್ರೆಗಳ (ಜೀವಿಪ್ರ. ೩-೩೦).

[ದೇ. ॥ ತಮಿ. ಪಿಚ್ಚ — ದೊಡ್ಡಗಾತ್ರದ ವಲ್ಲಿಗೆ]

ಪಿಚ್ಚ೩ (ನಾ). ವೃಷಣ ; ತರಡು : ಅವನು ಬರಲಿ. ಪಿಚ್ಚಿಗಳು ಎಗರುಸು ತ್ತೀನಿ—ಸುವ್ವನೆ ಬಿಡ್ತೀನಿ ಅಂತ ತೀರಿದ್ದೀರಾ ? (ಗಾಜಾಪ. ೦೧೩).

[ದೇ. ॥ತುಳು. ಪಿಚ್ಚ ; ತೆಲು. ಪಿಚ್ಚ]

ಪಿಚ್ಚ೪ (ನಾ). (ಎಳೆಯದೆಲೆಯ) ಕಟ್ಟು : ತುಪ್ಪ ಏನು ಮಾಡೀತರೋ ಒಂದು ಪಿಚ್ಚ ವೀಳೆದೆಲೆ ಬಗೆದರ . . . ಎಂದನು ರಾವಬಾಯ (ಕ್ರಮಾಮು. ೦೪೦). [?]

ಪಿಚ್ಚಿಕೆ ' ಪಿಚಿಕೆ ' ನೋ.

ಪಿಚ್ಚಿಹೂ (ನಾ). ಒಂದು ಬಗೆಯ ಹೂವು : " ರಾಳಿಕಃ, ರಾಹಕಃ—ಈ ಯೆರಡುಂ ಪಿಚ್ಚಿಹೂ " (ಓಷ. ೦೪೭). [ಪಿಚ್ಚ೨ + ಹೂ (< ಪೂ)]

ಪಿಚ್ಚು (ನಾ). ಕಣ್ಣಿನ ಕೊಳೆ, — ಹೊಲಸು ; ಪಿಸರು : ಅಂಗವೆಲ್ಲವು ನೆತ್ತರೊಸರಿ ನಾರುತ್ತಿಹುದು ಕಂಗಳಲಿ ಪಿಚ್ಚು ಸುರಿವುತ ಸುಗಿದ ಮೈಯ್ಯ ವಯವಂಗಳೊಳು ಈವ ಸೋರುವ ಬೇನೆಯನ್ನು ತಾನಂಗೈಸಿಕೊಂಡಿರುತಿರೆ (ಪ್ರಿಕಾ. ೨೦-೨೩); ಈ ನೀರು ಕಣ್ಣಿಗೆ ದೊರೆಯದಿದ್ದರೆ ಕ್ಷಣಮಾತ್ರ ದೊಳಗೆ ಪಿಚ್ಚಿನ ತರವು ಕಣ್ಣಿನ ಮೇಲೆ ಕೂತು ಅದು ಕೆಟ್ಟುಹೋಗಿರುತ್ತಿತ್ತು (ಕುಂಬಹು. ೪-೨೭); ಆ ಮುದುಕ ವಿಧವೆಯಾದ ರೇಣವ್ವನಂತೆ ಕಣ್ಣಿನಲ್ಲಿ ಪಿಚ್ಚು ಇಟ್ಟು ದಾಯಲ್ಲಿ ಜೊಲ್ಲು ಸೋರಿಸುವುದಿಲ್ಲ (ಕೋಟಿಪ್ರ. ೫೩).

' ಪಿಳಚು ' ವರಾ.

[ದೇ.॥ ತಮಿ. ಪಿಳಿಚ್ಚ ; ತುಳು. ಹೇಂಚಿ = ಕೊಳೆ, ಹೊಲಸು : ದ್ರಾವಿಡಭಾ. ಪಿಚ್ಚ್]

ಪಿಚ್ಚುಗಣ್ಣು (ನಾ). ಪಿಸರಿನಿಂದ ಕೂಡಿದ ಕಣ್ಣು : ಗೀಜು ತುಂಬಿರುವ ಕಣ್ಣು : ಶಶುವಿನಾಳಧೀಶ ಮುಂದೆ ಕೊಸರಿ ಕೊಸರಿ ಹೋಗದಿರು ಹಸನವಿಲ್ಲ ಹರಯವು ಮಿಂದಿ ಪಿಸುರು ಪಿಚ್ಚುಗಣ್ಣಿನ ಮುದಕೀ (ಶಂಕ. ೨೨-೩). [ಪಿಚ್ಚು + ಕಣ್ಣು (< ಕಣ್)]

ಪಿಚ್ಚೆ. (ನಾವಿ). ೧. ಅಳತೆ ಅಥವಾ ತೂಕದಲ್ಲಿ ಕಡಮೆಯಿರುವುದು : (ಕ). ೨. ನಾಣ್ಯವು ತೂಕ, ಬಣ್ಣ ಇವುಗಳಲ್ಲಿ ಕಡಮೆ ತರಗತಿಯಾಗಿರುವುದರಿಂದ ಅದನ್ನು ಮುರಿಸಬೇಕಾದಾಗ, ಕೊಡಬೇಕಾದ ಶುಲ್ಕ.—ವಟ್ಟ : ಪಾಣೀಶರವರು ಕೊಡುವ ಪೊಸರೀ ಪಿಚ್ಚೆಯಿಲ್ಲದೇ ಮಾರುತ್ತದೆ. ತಾವು ಕೊಡುವುದು ಪಿಚ್ಚೆ ಕೊಟ್ಟು ಮುರಿಸಿಕೊಳ್ಳಬೇಕಾಗಿರುವುದರಿಂದ ಒಂದೇ ಕಡೆಯಲ್ಲದೆ ಹತ್ತುಕಡೆ ತಿರುಗಿ ಮುರಿಸಿ ಪದಾರ್ಥಗಳನ್ನು ತರಬೇಕಾಗಿರುವುದು (ಕ್ಷಣಾ. ೦೩).

ಪಿಚ್ಚೆಸೇರು = ಕಡಮೆ ಅಳತೆಯ ಸೇರು : (ಕ).

[ದೇ.॥ ತೆಲು. ಪಿಚ್ಚ, ಪಿಚ್ಚೆ]

ಪಿಚ್ಚೆನ್ನಿಸು (ಕ್ರಿ). ಏನೂ ಇಲ್ಲದಂತೆ ಭಾಸವಾಗು ; ಖಾಲಿಯಾದಂತೆ ತೋರು,—ಕಾಣಿಸು : ಜೋಗದ ಜಲಪಾತವನ್ನು ತಳದಲ್ಲಿ ನಿಂತು ಘಂಟೆಗಟ್ಟಲೆ ನೋಡಿದ ಕಣ್ಣುಗಳಿಗೆ ನಯಾಗರದ ನೋಟ ಪಿಚ್ಚೆನ್ನಿಸಿತು (ಜಂಟಿಪ್ರ. ೦೨೮). [ಪಿಚ್ಚ್೧ + ಎನ್ನಿಸು (< ಎನಿಸು೧)]

ಪಿಚ್ಚೆನ್ನು (ಕ್ರಿ). = ಪಿಚ್ಚೆನ್ನಿಸು : ಅದನ್ನು ನೋಡಿ ದೈವಕಳ್ಳನಾದ ಸಣ್ಣಪ್ಪನ ಮನಸ್ಸು ಪಿಚ್ಚೆಂದಿತು (ಕ್ರಿಪ್ರ. ೧೨೭).

[ಪಿಚ್ಚ್೧ + ಎನ್ನು (< ಎನ್೧)]

ಪಿಚ್ಚೈ (ನಾ). ೧. (ಹಕ್ಕಿಗಳ) ರೆಕ್ಕೆ ; ಗರಿ. ೨. ನವಿಲಿನ ಪುಚ್ಚೈ. — ಬಾಲ. ೩. ಬಾಣದ ಗರಿ. [ಸಂ.]

ಪಿಚ್ಚಂದ (ನಾ). ಅರಸರ ಮನೆ ; ಅರಮನೆ. [ಸಂ.]

ಪಿಚ್ಚಂದಕ (ನಾ). = ಪಿಚ್ಚಂದ : ಈಶ್ವರಸದ್ಮನಾಂ ಪಿಚ್ಚಂದಕ ಪ್ರಭೇದಾಃ-ಭವಂತಿ—ಅರಸುಗಳ ಮನೆಗಳಲ್ಲಿಯೂ ದೇವಸ್ಥಾನ ಮುಂತಾದವುಗಳಲ್ಲಿ ಅಲಂಕಾರವಾಗಿಯೂ ಚಿತ್ರವಾಗಿಯೂ ರಚಿಸಲ್ಪಟ್ಟಿರುವ ಬಾಗಿಲು, ಲೋವೆ ಮುಂತಾದ ತರಹಾಗಳ ವಿಶೇಷಗಳ ಹೆಸರುಗಳು (ಸಾಂ೦ಪ್ರ. ೦೦೩).

[ಸಂ.]

ಪಿಚ್ಚಲ (ಗು). ೧. ಜಾರುವ ; ಜಾರಿಕೆಯುಳ್ಳ. ೨. ಗಟ್ಟಿಯಹದ : ಗಡ್ಡಿಗಡ್ಡಿಯಾಗಿರುವ. (ನಾ). ೩. ಕೆಸರುನೀರು; ರಾಡಿ ; ಬಗ್ಗಡ ; "ಪಿಚ್ಚಲ[ಜಾತಾಂ. ಪಿಲ]ವೆನಲ್ಕೆಸಜನೀರೆಂದೆನಿಕ್ಕುಂ"(ಜಂಗಾಪ. ೦೫೯-೦೭).

[ಸಂ.]

ಪಿಚ್ಚಿಲ(ಗು). ೧. = ಪಿಚ್ಚಲ ೧. (ನಾ). ೨. = ಪಿಚ್ಚಲ ೩. ಕೆಸರಿನಿಂದ ಕೂಡಿದ ಎಡೆ,—ಜಾಗ : "ಪಿಚ್ಚಿಲಂ, ವಿಜಲಕಂ—ಈ ೨ ಕೆಸಱುಳ್ಳೆಡೆ" (ಪಡಿಪು. ೦೮೨-೩೬). ೪. ಗಟ್ಟಿಯಾದ ಅಥವಾ ಗಡ್ಡಿಗಡ್ಡಿಯಾಗಿರುವ ಮೊಸರು : ಭೋಜ್ಯ ಭಕ್ಷ್ಯಂ ವೇಯ ಲಲಿತ ಲೇಹ್ಯಂ ಚೋಷ್ಯ ಪಿಚ್ಚಿಲ ಪಡ್ಯಸಗಳಂ ವಿಳಸವನುಗುಣದ ರುಚಿಯಂ ವೇಲೆಯಱಿವವರ ಚರಣಾಂ ಬುಜಕ್ಕೆ ಶರಣಾ (ಅಕ್ಷಾಂ. ೪೯-೫೪). [ಸಂ.]

ಪಿಚ್ಚಿಲೆ (ನಾ). ೧. ಒಂದು ಬಗೆಯ ಮರ : ಬೂರುಗದ ಮರ. ೨. ಅನ್ನದ ಗಂಜಿ. ೩. ಒಂದು ಬಗೆಯ ಮರ ; ಕರೀಮರ : (ಕ).

[ಸಂ. ಪಿಚ್ಚಿಲಾ]

ಪಿಚ್ಚೈ (ನಾ). ೧. ಅನ್ನದ ಗಂಜಿ. ೨. ಬೂರುಗದ ಮರದ ಅಂಟು ; ಎಲವದ ಮೇಣ : "ಪಿಚ್ಚಾ, ಕಾಲ್ಕಲೀವೇಷ್ಟಃ —೨ ಬೂರಗಿಂಗೆ ಹೆಸರು, ಎಲವದ ಮ್ಯಾಣ" (ಸಾಂ೦ಪ್ರ. ೦೨೩). ೩. ಹಾಮಿನ ವಿಷಪೂರಿತವಾದ ಜೊಲ್ಲು. [ಸಂ. ಪಿಚ್ಚಾ]

ಪಿಜ (ನಾ). ದೊಡ್ಡಗಾತ್ರದ ಹಲಸು : ಹೆಬ್ಬಲಸು : ಪಿಲ (ಹಲಸು), ಪಿಜ (ಹೆಬ್ಬಲಸು) . . . ಉರೇ (ಜಿಂಕೆ) ಇತ್ಯಾದಿಗಳನ್ನು ಸಂಕೇತವಾಗಿರಿಸಿಕೊಂಡವರೆಂಬ ಅರ್ಥದಿಂದಲೋ . . . ಬಂದ ಕುಲನಾಮಗಳು, ಪಿಲತ್ತಾಯ, ಪಿಜಕ್ಕಾಯ . . . ಇತ್ಯಾದಿ (ತುಜಾಶಾ. ೦೭೩).

[←ತುಳು. ಪಿಜ, ಪೆಜ — ಕಾಡುಹಲಸು]

ಪಿಜ್ಜ 'ಪಜ್ಜ' ನೋ.

ಪಿಟ್ಟ೧ (ನಾ). ಒಂದಂ ಅನುಕರಣಶಬ್ದ : 'ಪಿಟಿಗುಟ್ಟು' ಪರಾ.

ಪಿಟಪಿಟ (ದ್ವಿರುಕ್ತಿ) : ಬಾಯಿ ಪಿಟಪಿಟ ಎನ್ನುತ್ತಿದೆ (ಕೂಡ).

ಪಿಟ್ಟ೨ (ನಾ). ೧. ಧಾನ್ಯಗಳನ್ನು ತುಂಬಲು ಉಪಯೋಗಿಸುವ ಬಿದಿರಿನ ಬುಟ್ಟಿ ; ಗಳಿಗೆ. ೨. ಧಾಮನೆ ; ಮಾಡು. ೩. ಮನೆ : ಗೃಹ. [ಸಂ.]

ಪಟಪ್ (ನಾ). ಒಂದು ಅನುಕರಣ ಶಬ್ದ : ಊರ್ವಿಳೆಯನ್ನು ಯಾರೂ ಪಟಪ್ ಎಂದು ಮಾತನಾಡಿಸಲಿಲ್ಲ (ಕೊಗ್ಗು. ೪೪).

ಪಟಲ₁ (ನಾ). ೧. ಬುಟ್ಟಿ ; ಪೆಟಾರಿ : ಮುಂತೈದುವೆಂ ಭೃತ್ಯನಂತೆ ಪಂಥಾನಮಂ ಸಂತಸದಿ ತೋರುತ ಖಿನಿಶ್ಚ ಪಟಕಂಗಳಂ ತಾಂ ತಳೆದು ಫಲಮೂಲಪುಷ್ಪೋಪಹಾರಂಗಳನ್ನರ್ಪಿಸುತ್ತಲಿಹಿಗೆ (ಪಂಚಾಖ್ಯಾ. ೨-೦೦-೩೦); ಮಿಯಲ್ಕೈದಲ್ಕಿರ್ವರುಂ ಕೊಳಕೆ, ಮುಂದುಳಿ ಕೌತುಕವಾಗಿ ಮುಟ್ಟಿ ನೋಡಿದಳವರ ಪಟಕನುಂ (ಕೃಷ್ಣಾಖ್ಯಾ. ೨೭೦-೨೦೩); ಪಟಕವೆಂದರೆ, ಪೇಟಕಾ, ಪೆಟ್ಟಿಗೆ (ಜಂಗಮಾ. ೨೪); ರಜನಿಯೊಳ್ ಭದ್ರವಾಗಿಹ ಪಟಕದೊಳಗೆ (ಪಂಚಕ. ೦೩೬). ೨. ಗುಳ್ಳೆ ; ಬೊಕ್ಕೆ : "ಪಟಕಃ, ಸ್ಫೋಟಕಃ, ಗಂಡುಃ-ಈ ಸಿ ಪು(ಹು) [ಪುಗು] ಬು" (ಕಣಾಮು. ೧೯-೧೩೦); ಜ್ವರದಾಹ ಶ್ವಾಸಕಾಸ ಬ್ರಣ ಪಟಕ ಶರೀರೋರೋಗ ಸರ್ವಾಂಗಶೂಲಾದಿ ರುದಾಸಂ ದೋಷ ಪಂಡಾಭರದಿವೊಳಜುತುಂ (ಹರಿಕಾ. ೦೦-೨೬). ೩. [ಬೌದ್ಧ]ಬೌದ್ಧ ಮತದ ಪವಿತ್ರ ಗ್ರಂಥ ; ಕ್ಷ ಸೂತ್ರಪಿಟಕ, ವಿನಯಪಿಟಕ ಮತ್ತು ಅಭಿಧರ್ಮಪಿಟಕಗಳೆಂಬುವು ಮೂರು ಪ್ರಸಿದ್ಧವಾದ ಪಿಟಕಗಳು : ಚೀನಾಭುತ್ತಿಯಲ್ಲಿ ವಿನಿತಪ್ರಭಾ ಎಂಬ ಹೆಸರಾಂತ ಪಂಡಿತನಿದ್ದ. ಮೂರು ಪಿಟಕಗಳನ್ನೂ ಕರಗತ ಮಾಡಿಕೊಂಡಿದ್ದ (ಕ್ಷತ್ರಾಖ್ಯಾ. I, ೨೦೬) ; ಪಿಟಕಗಳಿಗೂ ಅಟ್ಠಕತೆಗಳಿಗೂ ನಡುವೆ ಸೃಷ್ಟಿಯಾದ ಈ ಸಾಹಿತ್ಯದಲ್ಲಿ ಕೆಲವು ಗ್ರಂಥಗಳು ಉಳಿದಿವೆ (ಬುದ್ಧಕ. ಪಾಲಿಂದ. & ಕ್ಷಪಿಕ) ; ಪ್ರಾಚೀನಕಾಲದ ಬೌದ್ಧವನ್ನು ತಿಳಿಯಲು ನಮಗೆ ಪಿಟಕಗಳೆ ಆಧಾರ (ಪಿಬೌಗ್ರ. ೦೦೦). 'ತ್ರಿಪಿಟಕ' ಪರಾ. [ಸಂ.]

ಪಟಲ₂ (ನಾ). ಒಂದು ಬಗೆಯ ಹಕ್ಕಿ ; ಗೀಜಗ : (೪). [?]

ಪಟಲಾರ್ಬುದ (ನಾ). ಒಂದು ಬಗೆಯ ವ್ರಣದಿಂದ ಕೂಡಿದ, ಗಂಟಲಿನ ಕ್ಯಾನ್ಸರ್ ರೋಗ : ಕಟವಾಯಿ ನಡುವಿನ ಪ್ರದೇಶದಲ್ಲಿ ದಾವು ತೋಱಿ . . . ಅನ್ನ ಪಾನಗಳ ಹೋಗಲೀಸದೇ ಕೊರಳ ಬಂಧಿಸಿ ಕೊಂಡು ಇಹುದು. ಈ ಪ್ರಕಾರದಲ್ಲಿದ್ದರೆ ಪಟಲಾರ್ಬುದ ಎನಿಸಿಕೊಂಬುದು (ಕ್ಷರ್ಕಾ. II, ೦೦೩). [ಸಂ.]

ಪಟಪಟ (ಕ್ರಿ). ಪಟಪಟ ಎಂದು ಶಬ್ದಮಾಡು ; ಗುಣುಗುಟ್ಟು : ಧೈಸಿ . . . ಪಟಪಟ್ಟುತ್ತಿದ್ದಳು (ಪಟಾಕ. ೪೩). [ಪಟ್ಟು + ಕಟ್ಟು]

ಪಟಾರಿ, ಪಠಾರಿ, ಪೆಟಾರಿ, ಪೆಟಾರಿಗೆ, ಪೆಟ್ಟಾರಿ, ಪೆಠಾರಿ (ನಾ). ೧. (ಪಸ್ತ್ರಗಳನ್ನು ತುಂಬಿಡಲು ಮಾಡಿದ ಲೋಹದ ಅಥವಾ ಮರದ) ಪೆಟ್ಟಿಗೆ.-ಸಂದೂಕ : ತನ್ನ ಬಳಿ ಅದನ್ನೆಲ್ಲ ಭದ್ರವಾಗಿ ಇಡಲು ಪಟಾರಿ ಇಲ್ಲ ಎಂಬ ನೆವ ಹೇಳಿ . . . ಅವಳ ಕೈಗೇ ಕೊಟ್ಟಿದ್ದಳು (ಪಟಕು. ೨೦೬) ; ಪಡಸಾಲೆಯಲ್ಲಿ ಪಟಾರಿಯು ಬಾಗಿಲ ತೆಗೆದುಕೊಂಡು ಅದರ ಮುಂದೆ ಕುಳಿತಿದ್ದಳು (ಕದ್ಮ. ೦೬೭) : 'ಉಲನ್' ಕೋಟುಗಳು ಆಗ ತಾನೆ ಪಟಾರಿಯಿಂದ ಹೊರಬಿದ್ದು ಕೋರುಹುಡುಗರನ್ನು ಅಲಂಕರಿಸಿದ್ದುವು (ಸುಚಂ. ೪೬) ; ಮೂರು ವರ್ಷ ಸಂದರೂ ಅವರ ಪಟಾರಿಯಲ್ಲಿ ಇನ್ನೂ ಹತ್ತು ರೂಪಾಯಿನ ನೋಟೇ ಬರುವುದಕ್ಕೆ ನಿರ್ಧಾರಿಸಿತ್ತು (ರಚಕಂ. ೬೦). **ಪಠಾರಿ** : ೧. ಪಠಾರಿಯನ್ನು ತೆಗೆದು ಹುಡುಕಿ ಒಂದು ಜತೆ ಚಿನ್ನದ ಬುಗುಡಿಗಳನ್ನೂ ಸ್ವಲ್ಪ ಹುಡಿಚಿನ್ನವನ್ನೂ ತಂದು ಅವನ ಕೈಗೆ ಕೊಟ್ಟು (ಕಂಗಾಳ್ಳ. ೦೩೦). **ಪೆಟಾರಿ** : ೧. ಹಜಾರದ 'ಪೆಟಾರಿ'ಯ ಮೇಲೆ ರಗ್ಗು ಹಾಸಿ ಮಲಗಿ ಬಿಟ್ಟನು (ಜಾಂಕು. ೦೫೬) : ಮನೆತನದ ವ್ಯವಹಾರಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ಕ್ರಮವಾಗಿ ಜೋಡಿಸಿ ಮರದ ಪೆಟಾರಿಯಲ್ಲಿಟ್ಟು (ಪಂಚ್ಯ. ೦೦೪). **ಪೆಟಾರಿಗೆ** : ೨. ಬಿದಿರಿನಿಂದ ಮಾಡಿದ ಪೆಟ್ಟಿಗೆ.-ಬುಟ್ಟಿ : ಶಿವಾಜಿಯು ಹಣ್ಣುಗಳ ಪೆಟಾರಿಗೆಯೊಳಗೆ ಕೂತು ಯುತ್ತಿಯಿಂದ ಪಾರಾಗಿ ಬಂದನು (ಕಣಾಗ. ೪೫೫). **ಪೆಟ್ಟಾರಿ** : ೧. 'ಪೆಟ್ಟಾರಿ' ಯಿಂದ . . . ಪಟ್ಟೆಯ ವಸ್ತ್ರವನ್ನೂ ತಾಲನ್ನೂ ತಂದು ತುಂಬಿದ ಸಭೆಯಲ್ಲಿ ಆ ವಿದ್ವಾಂಸನಿಗೆ ಹೊದಿಸಿಬಿಡುವರು ! (ಗಾಪ್ರ. ೨). **ಪೆಠಾರಿ** : ೧. ಅನೇಕ ವಸ್ತ್ರಾಭರಣಗಳು ರಾಯರ ಪೆಠಾರಿಗಳನ್ನು ಸೇರಿದವು (ಗಪ್ರ. ೨೧೦) : ಅವರು ಯಾವ ಪೆಠಾರಿ ತೆಗೆಸಿ ನೋಡಲಿ ಅದು ಕೆದರಿ ಗೂರಾಡಿರದಿರದು (ಕ್ಷಕ್ಷಚಂ. ೧೪) : ಸ್ಯೋದ್ದಿನಪು ಅತುರ ಗಾರತನದ ಕಂಬಳಿಯನ್ನು ಸುತ್ತಿ ನಿರೀಕ್ಷಣೆಯು ಪೆಠಾರಿಯಲ್ಲಿಸೆದು ಮುಚ್ಚಿಟ್ಟನು (ಪಗಚಂ. ೦೩೪) ; ಮನುಷ್ಯನ ಪರವಾದ ಅದೇ ಶ್ರದ್ಧೆಯನ್ನು ಸಾಂಪ್ರದಾಯಿಕ ಪೆಠಾರಿಗಳಲ್ಲಿ ಬೀಗ ಹಾಕಿದ್ದೇವೆ (ಪಪ್ರ. I, ೪).

[←ಹಿಂ. ಪಿಟಾರೀ, ಪೆಟಾರೀ ; ದುರಾ.-ಪೆಟಾರೀ]

ಪಟಿಕೆ (ನಾ). (ಮುಖದ ಮೇಲೆ ಏಳುವ) ಗುಳ್ಳೆ; ಮೊಡವೆ : ಹಿರೇಮದ್ದು ಜಟ್ಟಾಮಾಂಸಿ . . . ಹುಣಿಸೇಬೀಜದ ಸಿಪ್ಪೆ ಇವುಗಳ ಸಮಭಾಗ ಚೂರ್ಣ ಮಾಡಿ ಸೇವಿಸಲು . . . ಪಟಿಕೆ; ಮೇಹ ಮೊದಲಾದ ರೋಗಗಳು ಗುಣವಾಗಿ ಶುಕ್ರವೃದ್ಧಿಯಾಗುವುದು (ಸಕ್ಕ. ಪ್ರ. ೧೮೪); ಮುಖದ ತುಂಬ ಪಟಿಕೆಗಳಿದ್ದ ಉರುಟುಮುಖದೆಯ ವ್ಯಕ್ತಿ (ಕಾಷು. ೩೨೦); ಮುಖದ ಮೇಲೆ ಹೇರಳವಾಗಿ ಮೂಡಿದ ಕಾರುಣ್ಯಪಟಿಕೆಗಳು ಅವಳ ಸೌಂದರ್ಯದಿಂದ ಹುಡುಗಿತನವನ್ನು ಕಸಿದುಕೊಂಡುವು (ಅಪಕ. ೦೨೩).

[< ಸಂ. ಪಟಿಕ]

ಪಟಿಪಟಿ (ನಾ). ೧. ಒಂದು ಅನುಕರಣ ಶಬ್ದ. ೨. (ಅಲಂ) ದಡ್ಡ ; ತಿಳಿಗೇಡಿ : ಇವನು ಶುದ್ಧ ಪಟಿಪಟಿ (ಮಾಪ್ರ).

ಪಟೀಲು (ನಾ). ಕಮಾನಿನಿಂದ ನುಡಿಸಲುಗುವ ಒಂದು ಬಗೆಯ ತಂತಿವಾದ್ಯ : ಚುಂದದಿಂ ಮುಖವೀಣೆ ವೋರ್ಚಿಂಗ್ ಪಟೀಲುಗಳ ಪಿಂದೆ ನುಡಿ ಪಿಮ್ಮೇಳದವರೊಡನೆಯೊಲಪಿಂ ನಿಂದು ಕಾಣಿಯುತ್ತಿರುವ ದಾರಕಾಂತಾವೃಂದಮಂ ನೋಡು (ಅಕಾಗ. ೫೪-೩೦); ಧನುರ್ವೀಣೆ ಅಥವಾ ಪಟೀಲಿವ ಪೂರ್ವಮಾದರಿಯಾದ ರಾಮಣಾಸ್ತ್ರವು ಇಂದಿನ ಪಾಶ್ಚಾತ್ಯ ಪಟೀಲು ರೂಪಿತವಾದುದರಲ್ಲಿ ಬಹುಪ್ರಭಾವವನ್ನು ಬೀರಿದೆ (ಕಾರಿದ. ೪೧೩); ಕರೀಮನ ಹತ್ತಿರ ಒಂದು ಪಟೀಲು ಇದೆ (ಕಜಚಂ. ೬೨).

[←ಇಂ. Fiddle]

ಪಟೀಲುವಾದಕ (ನಾ). ಪಟೀಲನ್ನು ನುಡಿಸುವವನು : ಹಲವಾರು ಬಾರಿ ಇವರ ಕಚೇರಿಗಳಿಗೆ ಸುಪ್ರಸಿದ್ಧ ಪಟೀಲುವಾದಕರಾದ ತಿರುಕ್ಕೋಡಿಕ್ಕಾವಲ್ ಕೃಷ್ಣಅಯ್ಯರ್ ಅವರೂ ಪಟೀಲು ನುಡಿಸುತ್ತಿದ್ದರು (ಪಂಗೀಕ. ೬೬).

[ಪಟೀಲು+ವಾದಕ]

ಪಟೀಲುವಾದನ (ನಾ). ಪಟೀಲನ್ನು ನುಡಿಸುವಿಕೆ ; ಪಟೀಲು ಕಚೇರಿ : ಕರೀಮನ ಪಟೀಲುವಾದನವೆಂದರೆ . . . ಒಂದು ಸಲವಲ್ಲ, ನೂರೆಂಟು ಸಲ ಆ ಪಟೀಲುವಾದನ ಕೇಳಬೇಕೆನ್ನುತ್ತಾರೆ (ಕಜಚಂ. ೬೨) ; ಪರಮೇಶ್ವರ ಭಾಗವತರು ವೀಣಾವಾದನ, ಪಟೀಲುವಾದನ ಮತ್ತು ಸ್ವರದಾತ್ನ ವಾದನಗಳಲ್ಲಿ ಬಹಳ ಪರಿಶ್ರಮ ಪಡೆದಿದ್ದರು (ಸಂಗೀಕ. ೪೩).

[ಪಟೀಲು+ವಾದನ]

ಪಟುಗುಟ್ಟು (ಕ್ರಿ). ಪಟಪಟ ಎಂದು ಶಬ್ದಮಾಡು ; ಗುಣುಗುಟ್ಟು : ಅಪ್ಪಾಜಿಯು ಇನ್ನೂ ಕಣ್ಣು ಮುಚ್ಚಿಕೊಂಡೆ ಬಾಯಿನಲ್ಲಿ ಪಟುಗುಟ್ಟುತ್ತಾ ಪೂಜೆಯಲ್ಲಿ ಮಗ್ನರಾಗಿದ್ದರು (ಕಂಗಾಳ್ಳ. ೦೯೪).

[ಪಟ್ಟು + ಕಟ್ಟು]

ಪಟ್ಟಿ₁ 'ಪಿಟ್ಟಿ' ನೋ.

ಪಟ್ಟಿ₂ (ನಾ). ಒಬ್ಬಾತನ ಹೆಸರು : ಚಿತ್ರಭಾನುಸಂವತ್ಸರಮಧಿಕಾಷಾಢ ಬಹುಳದಶಮಿಯಾದಿನದೊಳ್ ಗುರುಚರಣಮೂಳದೊಳ್ ಸುಧಪರಿಣಾಮದೆ ಪಟ್ಟನಿನ್ದ್ರಲೋಕಕ್ಕೊಗದವಂ (ಎಶ. II, ೦೩೪-೭೨; ಮು. ೨೭೭). [?]

ಪಟ್ಟಿಗ (ನಾ). ಒಬ್ಬಾತನ ಹೆಸರು : ಪಟ್ಟಗಂ ಸಲೆ ನೆಗದಳಿಂ (ಭುಜಾಖ್ಯಾ. ೪. ೨೦೭-೬೨; ೨೭೭). 'ಪಿಟ್ಟಿಗ' ಪರಾ. [ಪಟ್ಟ₂ + ಗ]

ಪಟ್ಟಿಗೆಱ್ [1] (ನಾ). ಒಂದು ಊರಿನ ಹೆಸರು : ಪಟ್ಟಿಗೆಱ ಪನ್ನಿರಡು ಗಾಮುಣ್ಡ ಪ್ರಚೆರ್ಸ್ತಿ (ಎಳ. XI. ೫೬ಕ್ರ.ದು. ೨೪-೦; ಷ. 500 ?).

[ಪಟ್ಟ೨೪ + ಕೆಱ್]

ಪಟ್ಟಿಬೆ (ನಾ). ಒಬ್ಬಾಕೆಯ ಹೆಸರು : ಅಮ್ಮಣಗಾವುಣ್ಡನುಂ ಮೞ್ನಾತಿ ಪಟ್ಟಿಬೆಗಾವುಣ್ಡೆಯುಂ ಲಿಂಗಪ್ರತಿಷ್ಠೆಯುಂ ದೇಗುಲಮುಂ ಮಾಡಿಸಿ. ಸಾಸನಮುಂ ನಿಱಿಸಿದಂ (ಎಳ. VIII, ಸೊರಬ. ೧೬೦-೦೦; 1012).

[ಪಟ್ಟ೨ + ಅಬೆ (<ಅಬ್ಬೆ)]

ಪಟ್ಟಿಯಯ್ಕ (ನಾ). ಒಬ್ಬಾತನ ಹೆಸರು : ಊರೊಡೆಯ ಪಟ್ಟಿಯಯ್ಕಂ ಕಾಲ್ಗೞಿಯೆ . . . ಪನ್ನಿಮ್ಮತ್ತಕ್ಕೆಯ್ಮಂ ಕೊಟ್ಟರ್ (ಚಾ. XII, ೨೫೬-೦೦ : 951). [ಪಟ್ಟ೨೪ + ಅಯ್ಕ೨೧]

ಪಟ್ಟಿ ‘ಪಟ್ಟು’ ನೋ.

ಪಟ್ಟಿದ (ನಾ). ಒಂದು ಬಗೆಯ ಬಣ್ಣ : ಅರ್ಜುನನ ಮಾವ ಚಿತ್ರರಥನು ಕೊಟ್ಟ ಪಟ್ಟಿವ ಬಣ್ಣದ ಕುದುರೆಗಳನು ಹತ್ತುಸಾವಿರವನು . . . ಧರ್ಮ ಸೋತನು (ಕೃಷ್ಣೂ. I, ೧೦೧). [?]

ಪಟ್ಟು, ಪಟ್ಟಿ೧, ಪಟ್ಟೆ, ಪಿಟ್ಟೆ೨, ಹಿಟು, ಹಿಟ್ಟು (ನಾ). ೧. (ಧಾನ್ಯದ) ನಯವಾದ ಪುಡಿ ; ಪಿಷ್ಟ : “ಪಿಟ್ಟದು ಪಿಷ್ಟಂ ಚೂರ್ಣಿತಂ” (ಕಬ್ಬಿಗ. ೧೩-೨೦) : ದಿವ್ಯೌಷಧಿಗಳಿಂದಂ ಮಾಡಿದುಂಡೆಗಳಂ ಪಿಟ್ಟಿನೊಳ್ [ಕಾಣಂ. ಪದಿನಾಱು] ಸಾಸಿರ್ವರರಸಿಯರ್ಕಳ ಮನೆಗಳೊಳ್ ಪ್ರಯೋಗಿಸಿ (ಕಬ್ಬಾಕಾ. ೨೬೦-೨೯) : ಕರಿಹಸ್ತಚರ್ಮಮುಂ ಮೇಣ್ ಕರಿದಂತವನರೆದು ಬಟ್ಟ ಗಡಲೆಯ ಪಿಟ್ಟಂ ಬೆರಸಿಕ್ಕುಗೆ (ಕೋಕೋಚ. ೬-೫೨); ಪಿಟ್ಟಿನ ಕೋಟೆಯಾ ದೊಡಮಿಂದೆಂದನಿಕ್ಕವೇಟ್ಪುದು (ಹುಚೋಚ. ೩-೨೦). ೨. ಜೀವಿಕೆ ; ವೃತ್ತಿ : ಸ್ಥಾನಂ ಮಾನ್ಯಂ ಪಿಟ್ಟುಂ ಭೂನುತರಪ್ಪಿುವತೊಕ್ಕಲುಂಬುಮರಸುಂ . . ಮೂಲಿಗರುಂ ಪ್ರಭುಗಳೆಂಟು ಹಿಟ್ಟುಂ ಮಾನ್ಯಂ (ಕಂಕಾಕಾ. ೦೭-೨೯ : 1196). ೩. ಆಯಾ ವೃತ್ತಿಗೆ ಸಂಬಂಧಿಸಿದ ಮುಖ್ಯಸ್ಥ : ನಾಗರಸಂ ಪಗುಡಿಯತಳವಮು[ಂ]ತಾಯಿಗಳು ಅಱುವತೊಕ್ಕಲು ಎಂಟುಪಿಟ್ಟು ಕಾರಣಂಗಳು ಮುಖ್ಯವಾಗಿಯವರನುಮತದಿ . . . ಮಾಡಿಸಿದ ಬಸದಿ (ಕಾ. V, ೨೭-೨೨; 1176). **ಪಿಟ್ಟು**೧ : ೪. (ಕಲಸಿದ) ಹಿಟ್ಟಿನ ಉಂಡೆ ; ಪಿಡಿಬೆ: ದೀವಂಗಳಂ ವಿರಚಿಸಿಯುನಂತಫಲವುಂಧಿಕಮಿವು ಪೊನ್ನಾರತಿಯಿನೆಂದು ಪಿಟ್ಟಿ[ಕಾಣಂ. ೪೬]ದಿಂದಂ ಸರಳ ನೀರಾಜನಂಗೆಯ್ದು ವಾತ್ಸೆಯೊಳಿರಿಸಿ (ಅಕಾಚ. ೦-೦೦-೦೦). **ಪಿಟ್ಟೆ** : ೪. ಆ ಕಲ್ಲುಕೆಂಡದ ಅಂಗರೋಗೆಗೆಯ . . . ಕೆಂಡದ ಮೇಲೆಯಿಟ್ಟು ಪಿಟ್ಟೆ ಸೀವ ಹಾಗೆ ಸಾಡುವುದು (ಶಚಪುಗೂ. ೦೬), ಸಕ್ಕರೆಯಸಿಕ್ಕಿ ಉಂಡೆಯ ಮಾಡಿ, ಕಣೆಂದ ಪಿಟ್ಟೆಯಲಿ ಪುಚ್ಚುವುದು (ಶಚಪುಗೂ. ೨೭). **ಪಿಟ್ಟೆ**೨ : ೪. ಪಿಟ್ಟೆಯಂ ತೆಗೆದು ತಱಿವಳಲು ರವೆಯದ ವಸ್ತ್ರ ಬಟ್ಟಮುತ್ತಿನ ಹರಳು ನುಚ್ಚಕ್ಕಿಯಂದಿಂ ಕಟ್ಟಾಣಿಮವ್ವ ತರುಣಿಯರು ಸೊಜ್ಜಿಗದೆಗೆದು ಕರ್ಪಾಯಮುಂ ಮಾಳ್ಪುದು (ಸೂಕಥಾ. ೦-೯); ಹಪ್ಪಳವ ಸವನಾಗಿ ಪೊತ್ತಿಯಿಮ್ಮೆಯ್ದು ಬೆಣ್ಣೆಯ ತೊಡೆದು ನಾಲ್ಕೈದಸಡು ಳಲಿಕ್ಕೆ ಅವಱಿರಡು ಮೆಯ್ದು ಪಿಟ್ಟೆಯ ಬಟ್ಟಲು ಕವಿಸಿ ಹವಣಱಿದು ಹಂಚಿನೊಳು ಸುಟ್ಟು ಪಿಟ್ಟೆಯನು ತೆಗೆದು (ಸೂಕಥಾ. ೧-೦೨) : ಮೂಲ ವ್ಯಾಧಿಗೆ . . . ಅರಿಸಿನಪಂ ಚೂರ್ಣವಂ ಮಾಡಿ ಕಳ್ಳಿಹಾಲಲ್ಲಿ ಕಲಸಿ ಪಿಟ್ಟೆಯಂ ಮಾಡಿ ಮೊಳೆಗೆ ಉಣ್ಣೆಯಂ ತೊಡೆದು ಆ ಪಿಟ್ಟೆಯಂ ತೊಡೆಯಲು ಎಲ್ಲಾ ಮೊಳೆಗಳುಂ ಕೆಡುಗುಂ (ಪಥ್ಯ. ೦೩೭); ನೇರಿಲ ಚಿಕ್ಕೆ. ದಾಳಿಯ ಹೂವನು ಸಹ ತುವ್ವ ಬಟ್ಟು ಕಾಟ್ಟ ಮುದ್ದೆಯ ಮಾಡಿ ಪಿಟ್ಟೆಯ ಕಾಟ್ಟ ಬೇಯಿಸಿ ಜೇನುತುಪ್ಪಪಂ ಕಲಸಿ ಸೇವಿಸೆ ಅತಿಸಾರಂ ಕೆಡುಗುಂ (ಪಥ್ಯ. ೩೨೩). **ಹಿಟು** : ೫. [ಮೂ]ಲಸ್ತಾನ ದೇ[ವ]ರ್ಗ್ಗಿಯಂಗ ಭೋಗ ನಿವ ದ್ಯಕ್ಕಂ ಎ[ಂ]ಟುಹಿಟು (ಕಾಚಾ. XV. ೩೦-೨೪; 1145); ಹನೆರಡು ಹಿಟು ಸಹಿತ (ಕೂಳಕಾ. ೦೯೩೩. ಶಾಸೇಂ. ೦೮೬-೩೬; ?); ಗೋವ ಗಱುಡ ಹನೆರಡು ಹಿಟು ಮುಂದಿಟ್ಟು ಕೊಟ್ಟರ್ (ಎಳ. VII, ೫೬೦೫ ೧೪-೧; ?). **ಹಿಟ್ಟು** : ೧. ಪಿಷ್ಟ-ಹಿಟ್ಟು (ಪಥ್ಯ ೨೫೬ ಕ್ರಮಸೂ); ಬೇಕಿಗಕ್ಕಿಯ ಸಣ್ಣ ಹಿಟ್ಟ ಸೋದಿಸಿ ಹುರಿದು ಕೊಳ್ತಿ (ಸೂಪಥ್ಯ. ೦-೨೪); ಹೆಡಗೆ ಹೇಱಿನಲಕ್ಕಿ ಹುಡಿ ಹಿಟ್ಟುಗಳ ತುಂಬಿ ಕೊಡಗೂ ವಾಲಿಯು ಸಾರಿದರು (ಕಂಪಾ. ೦೦-೪೩); ಹಿಟ್ಟುಗಳನ್ನು ವಿಶ್ರಮ ಮಾಡುವುದು. ತರಕಾರಿಗಳನ್ನು ತುಂಡು ಮಾಡುವುದು. . . ಈ ಕೇಂದ್ರದಲ್ಲಿಯೂ (ಅಸಂಸೌ. ೧೨). ೨. ಎಣ್ಣೆಹಿಟ್ಟು ಪಂಚಮುಷ ಉಂಟು ಧರೆಯ ಮೇಲೆ (ಅವಜ. ೫೯-೩೫೫); ಶ್ರೀಸೋಮನಾಥ ದೇವರ ನನ್ದಾದೀವಿಗೆಗೆ ಮಾರೂಜ ತನ್ನ ಅಕ್ಕಸಾಲಿಕೆಯು ಹಿಟ್ಟಿನ ಭೂಮಿಯ ಒಳಗೆ ಅನ್ಯೂರ ದಾರಿಯ ಮೂಡಣ ಕೆಯ್ಕ ದಕ್ಷಿಣವಾಗಿ ಬಿಟ್ಟ (ಎಳ. VI, ೪೫೫ಕು ೦೦೩-೦೩೩; ?). ೩. ಸೇನಗೌಡನಮಗ ಚಿಕ್ಕಗೌಡನು ತಮ್ಮ ಮಾವ ನೇಮಗೌಡನುಂ ಅಜ್ಜಂಪತ್ತೊಕ್ಕಲು ಹನ್ನೆರಡು ಹಿಟ್ಟು ಸಹಿತು ಪೂಜಾರಿ ನಾಗಯ್ಯನ ಕರೆದು . . . ಕೊಟ್ಟರು (ಶಾಶಾ. IX-II, ೫೩-೪; ಷ. 1093); ಮಸಣಗಾವುಂಡ ಈಚಗಾವುಂಡ ಮುಖ್ಯವಾದ ಹನೆರಡು ಹಿಟ್ಟು ಸಹಿತ ಬಿಟ್ಟ ಧರ್ಮ (ಎಳ. XIX, ೦೮೫-೫೫ ; 1210). ೫. ಆಹಾರ ; ಊಟ ; ಗರಸುವಾದಿಗಳಿಲ್ಲ ಸಭಾರವ ಹೊತ್ತು ಬಾದ್ಯೆದಾರೆ ಹಿಟ್ಟು ನಸ್ಸ ಮಾಡ ಹಾಳು ಊರಿಗುಪಟಳ (ಅಥಪಂ. ೪೯-೫೯೪); ಹೊಟ್ಟೆಗೆ ಹಿಟ್ಟು ಬಿಕ್ಕದ ಇಂಥಾ ದಿನಗಳಲ್ಲಿ ಪರ್ಷ ಕ್ಕೊಂದು ಬಾಣಾತವು ಬೇರೆ ! (ಕೃಪಕ. ೪); ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು (ಗಾಡಿ). ೬. (ರಾಗಿ, ಜೋಳ ಇತ್ಯಾದಿ ಧಾನ್ಯಗಳ) ಹಿಟ್ಟಿನಿಂದ ಮಾಡುವ ಒಂದು ಬಗೆಯ ಆಹಾರ ; ಮುದ್ದೆ : ದಾಣಲಿ . . . ಹಿಟ್ಟು ತೊಳಸುವ ಬಾನೆ (ಸಂಗ್ರಂಕ. ೨೪೩) ; ಆಗ ರೈತನು ಒಜೆಯ ಸುತೋಷವಟ್ಟು ‘ಹಿಟ್ಟುಂ ತಿಂದಂ ಬೆಟ್ಟುಂ ಕಿತ್ತಿಟ್ಟುಂ. ಹಿಟ್ಟುಂ ಬಿಟ್ಟುಂ ಕೆಟ್ಟುಂ’ ಎಂದು ಹೇಳಿದನು (ಅಗಕ. ೦೩೩); ಮನೆಗೆ ಬಂದ ಮೇಲೆ ಹಿಟ್ಟುಂಡು ಕೆಲವರು ಯಕ್ಷಗಾನದ ಆಟ ಕಲಿಯುವ ಮನೆಗೆ ಹೋಗುತ್ತಿದ್ದರು (ಹುಬ್ಬಹ. ೬೯). ೭. ಒಂದು ಬಗೆಯ ತೆರಿಗೆ : ಪುರವನು ಕಟ್ಟಿಸಿ ದೇವರ ಹಿಟ್ಟು ಹುಗ್ಗಿ ತೆಱಿಗೆನುಂ ಬಿಟ್ಟು (ಎಳ. VI, ೫೯೬ಕು. ೧೪-೦೮; 1449) ; ಬಿರಾಡ ಒಟ್ಟು ಹುಗ್ಗಿ ಬೀಜವರಿ ಇವೆಲ್ಲವನು ...ಸರ್ವಮಾನ್ಯವಾಗಿ ಶಾಸನವನು ಪ್ರತಿಷ್ಠೆಯಾಸು ಮಾಡಿದರು (ಎಳ. V. ಕಾಸಿಪ. ೨-೨೮; 1563).

ಪಟ್ಟುಂಪಟ್ಟು, ಪಟ್ಟುಪಟ್ಟು, ಹಿಟ್ಟುಹಿಟ್ಟು (ದ್ವಿರುಕ್ತಿ) : ಕೆಟ್ಟೋಡಿ ಪಾಡಿಯೆಲ್ಲಂ ಪಟ್ಟುಂಪಟ್ಟಾಗಿ ಪೋದೊಡಂ . . . ವೆಱಿದೆಗೆಯದೀಸನೊರ್ವನೆ ನಿಂದು (ಕಬ್ಬಾಕಾ. ೨೫೩) ; ಪೊಯ್ಕನೆ ಬೆಟ್ಟುಂ ಪಟ್ಟು ಪಟ್ಟಾಗಿರೆ ಸಮರದೊಳೀ ವೀರವೆರ್ಸೂರ್ಡಿದೆಪಂ (ಎಳ. VII, ೫೫೮೫. ೪-೧೪ ; 1122) : ಬೆಟ್ಟಿದ್ದೆಯುಂ ಕಾಟ್ಟದ ತೆಱಿದೆ ಕರಂ ಪಟ್ಟುಪಟ್ಟಾಗಿ ಪಾಱಿಬ್ದುದು. . . ಪಟುಭರಾಸೂನಸೇನಾಪ್ರತಾನಃ (ಪಾಪಿಕ್ಕ. ೧೨-೦೧); ಅವಳು ಹಾಕುವ ಒಂದು ಒನಕೆಯ ಏಟಿಗೇ ಕಾಳುಗಳು ಹಿಟ್ಟುಹಿಟ್ಟಾಗುತ್ತವೆ(ಜೂಪ). **ಪಟ್ಟಾಗು** = ೧. ಪುಡಿಯಾಗು. ೨.(ಆಲಂ) ನಾಶವಾಗು : ಪಟ್ಟಾದ ಪೀಱಾದ ಸಿಂಧುರದಿಂ ತಟ್ಟಾದ ಪುಟ್ಟಿಸಸ್ಥರಥದಿಂ ಕಣ್ಣಂ ಮಾನಕ್ಕಂ ಭಯಂಕರವಾದಾಜಿಯೊಳ್ (ಪಂಂಪಾಮ. ೯-೦೨೮). **ಪಟ್ಟುಪೀಱಾಗು** = ಹಾಳಾಗು ; ನಾಶವಾಗು : ಪಂಡಿತೆ ಬಟ್ಟಯ್ಯ ವುಗುವುದುಂ ದಾರಪಟ್ಟಗಂ ದಟ್ಟಿಸಿ ಕೊರಳಂ ಪಿಡಿದು ನೂಂಕೆ ವಂಡಿತೆ ಬಿದ್ದು ಪೆಗಲ ವೇಗದ ರೂಪು ಪಟ್ಟುಪೀಱಾಗೆ (ಕೃಪಾಕೃ. ೪-೨೪೪). **ಪಟ್ಟೆಹಿಟ್ಟು** = ಒಟ್ಟಿನಿಂದ ಕಲಸಿದ ಮುದ್ದೆ : ಅದಿನಿಂದ ಬೀಗದ ಹಾವಡಗಳ ಹೊತೆವಾಟ್ಟ ಪಟ್ಟೆಹಿಟ್ಟಿನ ಪೆಟ್ಟಾಟ. ಹಪ್ಪಳದ ಹುಡಿಯಾಟಗಳೆಲ್ಲಾ ನೀತೇ ಹೋದವು (ಸಂಂಕಾಕಾ. ೭೪). **ಒಟ್ಟಿನ ಹಾದಿ** = ಜೀವನೋಪಾಯ : ಒಟ್ಟಿನ ಹಾದಿಯ ಹುಡುಕಿದ ದೇಸಲೆಯೆ ಹೆಣ್ಣನ

ಬರವನು ನೋಡು (ಇಂಕಾಶ ೨೦೮-೨೭). ಹಿಟ್ಟಿನಾರತಿ = (ಅಕ್ಕಿಯ) ಹಿಟ್ಟಿನಿಂದ ಮಾಡಿದ ಸೊಡಲುಗಳ ಆರತಿ : ರಂಗವಾಲೆ ಹಿಟ್ಟಿನಾರತಿಗೆ ಪೋಲಗ ನಾಲ್ಕಕ್ಕಂ ಗದ್ಯಾಣಂ ಹದಿನಾಱು (ಎಕ. III, ತಿರುಮ. ೯೭-೯೮ : 1270). ಹಿಟ್ಟುಬಿಟ್ಟಿ = ಊಟವನ್ನು ಹಾಕಿ ಅದರ ಬದಲಾಗಿ ಮಾಡಿಸಿಕೊಳ್ಳುವ ಕೆಲಸ: (ಕಿ). ಹಿಟ್ಟು ಹಿಡಿಬೂದಿಯಾಗು = ಹಾಳಾಗು : ಇವರಿಂದ ಭಾರತೀಯಸಂಸ್ಕೃತಿಗೆ ಬಲವಾದ ಪೆಟ್ಟು ಬಿದ್ದಿತಲ್ಲದೆ ಹೆಣ್ಣಿನ ಜೀವನವು ಹಿಟ್ಟು ಹಿಡಿ ಬೂದಿಯಾಯಿತು (ಅಲ್ಕಿ. ೨೯). ಹಿಟ್ಟೆತ್ತು = ೧. ಭಿಕ್ಷೆ ಎತ್ತು ; ತಿರುಪೆ ಬೇಡು. ೨. ಕಂಡವರ ಮನೆಯಲ್ಲಿ ಬಿಟ್ಟಿ ಊಟ ಮಾಡಿಕೊಂಡು ಇರು : ಅವರಿವರ ಮನೆ ಹಿಟ್ಟೆತ್ತಿಕೊಂಡು ಹಂಗಿನ ಕೂಳು ತಿಂದುಕೊಂಡು ವಿದ್ಯಾಭ್ಯಾಸ ಮಾಡದಿದ್ದರೂ ಆಗ್ತದೆ (ಕಂಗಾಳ್ಯ. ೬).

[< ಸಂ. ಪಿಷ್ಟ./ಪ್ರಾ. ಪಿಟ್ಠ]

ಪಿಟ್ಟುಕಾರ, ಹಿಟುಕಾಱ, ಹಿಟ್ಟುಕಾರ, ಹಿಟ್ಟುಕಾಱ (ನಾ). (ಎಂಟು ಅಥವಾ ಹನ್ನೆರಡು ಬಗೆಯ ಕಸಬುಗಳ) ಕಸಬುದಾರರ ಗುಂಪಿನ ಸದಸ್ಯ : ಅಂದಣಿಗೆಯ ಕಲ್ಲಗೌಂಡನುಂ ನಿಡುಗುಂದಿಯ ಸಮಸ್ತಪ್ರಜೆ ಪಿ(ಹಿ?)ಟ್ಟುಕಾರರುಂ ಅನೆಬಾಳ ಪ್ರಜೆ ಪಿ(ಹಿ?)ಟ್ಟುಕಾರರುಂ ಇನ್ತಿವರ ಸಮಕ್ಷದಲ್ಲಿ . . . ಬೊಮ್ಮಗೌಂಡನು ಪಡೆದನು (ಕಕುಂ. ೧೫೫-೦೬ ; ಸು. 1050). **ಹಿಟುಕಾಱ:** ಶ್ರೀಮಂನ್ನಾಳ್ಪಭು ಬಾಳೂರ ಕೇಸಪಗೌಡನು ಸಮಸ್ತ ಪ್ರಜೆಗಳು ಹನ್ನೆರಡು ಹಿಟುಕಾಱರ ಸಮಕ್ಷದಲಿ . . . ಕಾದಿ ಸುರಲೋಕ ಪ್ರಾಪ್ತನಾದ (ಕಇ. V, ೮೫-೪ ; 1269). **ಹಿಟ್ಟುಕಾರ :** ಹಾಗ ಎಂಟು ಹಿಟ್ಟುಕಾರ ನಾಡೊಕ್ಕಲಿಂಗೆ (ಇಎ. ೦೯೪೬, ಬೈರ್‌ಹಾಸಗರ್. ೩೪೯-೪೩ ; 1086). **ಹಿಟ್ಟುಕಾಱ :** ಬಡಗಿತನಕ್ಕಾರು ನಿಂನ್ದವರು ಹಿಟ್ಟುಕಾಱ ಬಡಗಿ ಕಲ್ಲೋಜ ಬಿಟ್ಟ ಧರ್ಮಮಂ ... ಪ್ರತಿಪಾಲಿಸುವನು (ಸೌಇಇ. XV, ೬೯-೮; 1186) ; ಸೋದರ ಸೋಮಗೌಡ ಹಿಟ್ಟುಕಾಱರಿಗೆ ಅಱುವಣ ಮತ್ತರಿಂಗೆ ಹಂನೆರಡು ಹೊಂನ ಮರಿಯಾದೆ ಕೋಲು ಕೊಳಗ ದೇವರಿಗೆ . . . (ಮಾನ್ಯ)ವಾಗಿ ಕೊಟ್ಟರು (ಎಇ. XXIII. ೦೯೫-೬೦ ; 1265) ; ಸಮಸ್ತ ಪ್ರಜೆ ಹಿಟ್ಟುಕಾಱರುಂ (ಇಎ. ೦೯೪೬, ಹಾಸಗರ್. ೨೨೬-೦೯ ; ?).

[ಪಿಟ್ಟು + - ಕಾರ$_1$ (< — ಕಾಱ)]

ಪಿಟ್ಟುಗ (ನಾ). ಒಬ್ಬಾತನ ಹೆಸರು : ನಿರ್ಜ್ಜಿತವೈರಿಪ್ರಜನೆನಿಸಿ ಪಿಟ್ಟುಗಂ ಸಲೆ ನೆಗಱ್ದಂ (ಸೌಇಇ. XX. ೦೮-೦೨; 980) ; ನೆಗಱ್ದ ಪಿಟ್ಟುಗಂ ಬೀಡಿನ ಸೌಚೀರನೊ ಪ್ರಚಣ್ಡಭುಜದಣ್ಡಂ ಮಾವನ ಗನ್ಧಹಸ್ತಿ ಕವಿಜನವಿನುತಂ ಮೊನೆ ಮುಟ್ಟಿ ಗಣ್ಡನಾಹವಸೌಣ್ಡ (ಎಕ. II, ೦೩೯-೬೩ ; ಸು. 982). 'ಪಿಟ್ಟಗ' ಪರಾ. [ಪಿಟ್ಟು ? + - ಗ$_2$]

ಪಿಟ್ಟುಗುಟ್ಟು, ಹಿಟ್ಟುಂಗುಟ್ಟು, ಹಿಟ್ಟುಗುಟ್ಟು (ಕ್ರಿ). ೧. ಪುಡಿಯಾಗುವಂತೆ ಕುಟ್ಟು ; ಹಿಟ್ಟಾಗಿ ಮಾಡು : ನುದಶ್ರೀಯವಂ ಕೊಂಡು ಪಿಟ್ಟುಗುಟ್ಟಿ[ಶಾಕಾಂ. ಪಿಟ್ಟಂ ಕುಟ್ಟಿ]ಅವುಗಳನಟ್ಟು (ಪುಷ್ಯಾಸ್ತ್ರ. ೩-೦೮ ಪ). **ಹಿಟ್ಟುಂಗುಟ್ಟು :** ೧. ಹಿಟ್ಟುಂಗುಟ್ಟುತ್ತೇಳುಂ ಬೆಟ್ಟಗಳಂ ಕಡಲ್ಗಳೇಳ ರೊಳ್ಕಲಸುತ್ತುಂ ಬೊಟ್ಟಿಟ್ಟುಕೊಳ್ವ ಮಗನಂ ನಿಟ್ಟಿಸಿ ಗಿರಿವರತನೂಜೆ ಹಿಗ್ಗುತಿರ್ಪಳ್ (ವೀರವಿ. ೯-೪೬). **ಹಿಟ್ಟುಗುಟ್ಟು :** ೧. ಸುಡುವುದು ಸುಟ್ಟು ತೂಱುವುದು ತೂಱಿದ ಬೂದಿಯ ಹಿಟ್ಟುಗುಟ್ಟಿ ಬೊಟ್ಟಿಡುವುದು (ಅನಂಪು. ೯-೫೬); ಅಹಿತಬಲದೊಳಗಾನೆವರಿವರಿದು ಹಿಟ್ಟುಗುಟ್ಟುತ . . . ಕಳನ ಚೌಕದಲಟ್ಟಿಯಾಡಿಸಬಲ್ಲವನೆ ರಾವುತನು (ಕುಷ್ಯಾಸ. ೦-೭೬) ; ವಜ್ರದ ಕದವಾ ಹಿಟ್ಟುಗುಟ್ಟುವೆನೆಂಬ ನುಡಿ ಬೆವಱಿಸಿತ್ತು (ಕರಸ. ೨೯-೬೩). ೨. (ಆಲಂ). ನಾಶಮಾಡು ; ಧ್ವಂಸಮಾಡು : ಅಷ್ಟಮದಂಗಳ ಹಿಟ್ಟುಗುಟ್ಟಿ ವಸ್ತುವ ಕಾಣಬೇಕೆಂಬುದು (ಮೋಳಿಮಾ. ೦೦೦-೪೩೯).

[ಪಿಟ್ಟು + ಕುಟ್ಟು$_1$]

ಪಿಟ್ಟುಗೆಯ್ (ಕ್ರಿ). ಪುಡಿ ಮಾಡು ; ಹಿಟ್ಟು ಮಾಡು : ಸಿಡಿಲೆಂದೀ ಹಸ್ತದಿಂ ನೀನಡಸಿ ಪೊಡೆದು ಕಲ್ಕಂಬಮಂ ಪಿಟ್ಟುಗೆಯ್ದಾ ಕಡುಬಲ್ಪೇನೆತ್ತ ಪೋಯ್ತೋ (ಶಾಂತೀಶ್ವ. ೬-೩೫). [ಪಿಟ್ಟು + ಕೆಯ್$_1$]

ಪಿಟ್ಟುಪಿಡುಗು (ನಾ). ಹೆಚ್ಚಿನ ಕೇಡು ; ದೊಡ್ಡ ತೊಂದರೆ.

ಪಿಟ್ಟು ಪಿಡುಗನೆ ಸಾಯು = (ಸಿಡಿಲಿಗೆ ಸಿಕ್ಕ ಹಾಗೆ) ಇದ್ದಕ್ಕಿದ್ದಂತೆ ಸಾಯು ; ಅನಿರೀಕ್ಷಿತವಾಗಿ ಮರಣ ಹೊಂದು : (ಕಿ). ಪಿಟ್ಟು ಪಿಡುಗಾಗಿ ಸಾಯು = ಪಿಟ್ಟು ಪಿಡುಗನೆ ಸಾಯು : (ಕಿ).

[← ತೆಲು. ಪಿಟ್ಟಪಿಡುಗು]

ಪಿಟ್ಟೆ$_1$ 'ಪೆಂಟೆ$_1$' ನೋ.

ಪಿಟ್ಟೆ$_2$ 'ಪಿಟ್ಟು' ನೋ.

ಪಿಟ್ಟೆನ್, ಪಿಟ್ಟೆನ್ನು (ಕ್ರಿ). ಏನನ್ನಾದರೂ ಹೇಳು ; ಸ್ವಲ್ಪವಾದರೂ ಮಾತನಾಡು : ನೃಪಸಭಾಮಧ್ಯದೊಳ್ ಪೆರ್ಚಿ ವಾಗ್ಗುಂಫದೊಳಾಗಳ್ ಬೆಟ್ಟೆನಲ್ಪಿಟ್ಟೆನಲೆಡೆಗುಡದಾಶ್ಚರ್ಯಮಂ ತಾಳ್ದಿ ನಿಂದು (ಸುಳುಮಾ. ೨-೦೩) **ಪಿಟ್ಟೆನ್ನು :** ಆದರೂ ಅವಳು ಅವನಿಗೆ ಪಿಟ್ಟೆನ್ನಲಿಲ್ಲ (ಹೇಮಂಶ. ೦೪೫) ; ಗೋವರ್ಧನ ಪಿಟ್ಟೆನ್ನಲಿಲ್ಲ (ಮುಗಿಮು. ೦೦೭); ಅವರು . . . ಪಿಟ್ಟೆನ್ನದೆ ಹೋದರು (ಮುಗಿಯು. ೨೩೫).

ಪಿಟ್ಟೆನ್ನಗೊಡು = ಏನಾದರೂ ಹೇಳಲು ಅವಕಾಶ ಕೊಡು ; ಮಾತನಾಡಗೊಡು: ಅವರಿಗೆ ಪಿಟ್ಟೆನ್ನಗೊಡುವುದಿಲ್ಲ ಅವಳು (ಕಕಳ. ೨).

[ಪಿಟ್$_0$ + ಎನ್$_1$]

ಪಿಟ್ಟೆನ್ನು 'ಪಿಟ್ಟೆನ್' ನೋ.

ಪಿಟ್ಲೆ$_1$ (ನಾ). (ಉಕ) (ಹಾಗಲಕಾಯಿಯ) ಮೇಲೋಗರ : ಹೆಚ್ಚು ಗಟ್ಟಲೆಯ ಅಡಿಗೆಯಲ್ಲಿ ಹಾಗಲಕಾಯಿಯ ಪಿಟ್ಲೆಯೂ ಸೇರಿತ್ತು (ಕೂಡಿ).

[← ಮರಾ. ಪಿಠಲೇ = ಕಾಳಿನ ಮೇಲೋಗರ]

ಪಿಟ್ಲೆ$_2$ (ನಾ). (ಕರಾ) ಸಣ್ಣಕಾಯಿ : ಹೀಚು : ಈ ವರ್ಷ ಮರಕ್ಕೆ ತುಂಬ ಕಾಯಿಯಾಗಿತ್ತು. ಆದರೆ ಎಲ್ಲ ಪಿಟ್ಲೆ. ರೂಪಾಯಿಗೆ ಇಪ್ಪತ್ತೈದು ಕೊಟ್ಟರೂ ಖರ್ಚಾಗುವ ಹಾಗಿಲ್ಲ (ಕೂಡಿ). [?]

ಪಿಠರ (ನಾ). ೧. ಮಡಕೆ ; ಕುಂಭ : "ಉಖಾ, ಸ್ಥಾಳೀ, ಚರುಃ, ಕುಂಭೀ, ಪಿಠರಂ, ಕುಂಡಂ—ಈ ೬ ಮಡಕೆ" (ಹಲಾಯು. ೩೨-೦೩೯) ; "ಚರು ಕುಂಭ ಕುಂಡಮುಖೆ ಪಿಠರ[ಶಾಕಾಂ. ಡಾರ]ಮಾ ಸ್ಥಾಲಿ ಭಾಂಡಂ ಮಡಕೆಯೆಂದೆನಿಕ್ಕುಂ" (ಮಂಗರಾ. ೬೨-೨೨). ೨. ಕಡೆಗೋಲು; ಮಂತು. ೩. ಒಂದು ಬಗೆಯ ಮೂಲಿಕೆ ; ಕೊನ್ನಾರಿಗಡ್ಡೆ ; ಭದ್ರಮುಸ್ತೆಯ ಬೇರು. [ಸಂ.]

ಪಿಠಾರಿ 'ಪಿಟಾರಿ' ನೋ.

ಪಿಡಿ$_1$, ಹಿಡಿ$_1$ (ಕ್ರಿ). ೧. (ಕೈಯಲ್ಲಿ) ಹಿಡಿದುಕೊಳ್ಳು ; ಗ್ರಹಿಸು ; ತಳೆ ; ಧರಿಸು : "ಪಿಡಿ—ಗ್ರಹಣೇ, ಕರಿಣ್ಯಾಂಚ (ಹೆಣ್ಣಾನೆ)" (ಕಸುಧಾ) : ಆಜಿಯೊಳುರ್ಚಿ ಕೈದುವಂ ಪಿಡಿವವರೆಲ್ಲಮಣ್ಮುವೊಡಮಿ ಯುಗಮೇಕೆ ಕನಿಷ್ಟಮಪ್ಪುದೋ (ಕಾಪ್ಯಸಾ. ೪೨೩ ಕೂಪ್ತಳ) ; ಮರಂಗಳಂ ಪೋಟ್ಟಂತೆ ಕರಗಸಂಗಳಿಂದಮುದ್ದಂ ಪಿಡಿದು[ಶಾಕಾಂ. ಬರಿಯೆ]ಪೋಟ್ಟುದುಂ (ಪಡ್ಡಾರಾ. ೯೬-೦) ; ಪಿರಿದು ನಚ್ಚಿನೊಳ್ ಪಿಡಿದು ದಂಡರತ್ನಮನಾಗಳ್ (ಅಂಪು. ೦೩-೩೯); ಭಯದಿಂದೋಡುತ್ತಿರೆ ಕಾಡೊಳೊಂದು ಮರದ ಕೊಂಕುಗೊಂಬಾತನ ತುಱುಂಬಂ ಪಿಡಿದು ತಡೆಯೆ (ಕರ್ಮಾಸ್ತು. ೨-೫೭). ೨. ತೆಗೆದುಕೊಳ್ಳು ; ಕೈಕೊಳ್ಳು ; ಸ್ವೀಕರಿಸು : ಭೈಕ್ಷಮ ಪಿಡಿಯೆಂದು ನೀಡಿದ ಕೈಯನಿತನೆ ಕಂಡು (ಪಡ್ಡಾರಾ. ೯೯-೮); ಪುರೋಹಿತಂ ವಿವಿಧಾಗಮ ವಿದನಿದುವೆ ಭಾವಿಪುತ್ರಾವಾಪ್ತಿಶ್ರೀಗೆ ನಿಮಿತ್ತಂ ಪಿಡಿ ನೀಂ ರಾಗದೊಳೆಂದೆನ್ನ ಕೆಯ್ಗೆ ಪರಸುತ್ತಿತ್ತಂ (ಪುಷ್ಯಪು. ೩-೦೦೪). ೩. ಸ್ವಾಧೀನಪಡಿಸಿಕೊಳ್ಳು ; ವಶಪಡಿಸಿಕೊಳ್ಳು : ತನ್ನಿಚ್ಛೆಕಾರ್ತಿ ಗಡ ಕಡುಚಿನ್ನೆ

ಗಡಂ ಪಿಡಿದೊತ್ತಳಿಸಿ ತಾಂ ವೇಟ್ಟುದುಗೆದ್ದುನ್ನಳ್ಗಡ ದೊರೆಕೊಂಡೊಡೆ ಮುನ್ನಿಸದಿರ್ದನೆ ವಿಚಿತ್ರಪೂತಂ ಜಾರಂ (ಪಮಕ. ೩-೫೬). ೪. ಆಶ್ರಯಿಸು ; ಅವಲಂಬಿಸು ; ತಾಳಂ : ಚಲಂಬಿಡಿಮದನೆಯೆದ್ದ ಮುಂ ಪಿಡಿದುದು ಪಿಡಿದಾ (ಪಂಚತಂ. ೦೩-೧೬); ಸ್ವೀಯರ್ಕಳ್ ಅವನೊರ್ವಂ ಕೆಲದೊರ್ವನವನನೇ ಪಿಡಿವರ್ ಲತೆಗಳ್ ಸವಿಾಪವರಾವ ಮರನಿರ್ವುದನೇ ಪಿಡಿವುವು (ಪಂಚತಂ. ೩೨-೨೦); ತೊಱೆಯೊಳ್ಪೋವಂ ತೆಪ್ಪದೆಗೆತ್ತಹಿಯನೆಬ್ಬಿ ಪಿಡಿವಂತಕ್ಕುಂ (ಪತ್ರ. ೩-೧೧); ಮುಖಗಳಂತೆ ಪೌನ ಪಿಡಿದನೆ ಫಸಗೋವು ಕಾಯ್ದಾಗ ಗಾಳಿ ಸೋಕಿತೇನೆ (ಪ್ರಂಚ. ೨-೩೪-೨). ೫. ಸೆರೆ ಹಿಡಿ : ಬಂಧಿಸು : ಸ್ವಸ್ತಿಶ್ರೀಬಾಲಾದಿತ್ಯರಾಳು ಶ್ರೀ ಮುಂಜ್ಞನೆಮ್ಮೊನ್ನೀಲಸಿನ್ನ ಮನಸಿಜರಾನಿಱಿದು ಪಿಡಿದು ತಾನ್ಮೊನ್ನಿದಾನ್ (ಕ್ಯ೦೦. ೦೧೩೦. ೩-೪ ; ಷು. ೩೬೫ು ೫೫); ಅರಸನ ಕೋಷ್ಠಾಗಾರದ ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದುಂ ಕರೆವುಮೊಳಗೊಳಗೆ ಸುಟ್ಟಿಯುತ್ತಿರೆ ನೃಪನನನಱಿದು ಪಿಡಿದು ತರವೇಬ್ಬುಗಳ್ (ಅಭಿ. ೩-೦೩); ಮುನ್ನಪಾನಿನ್ನನೆನ್ನಳೆಂದಱಿಯದೆ ಪೊಲ್ಲವಾನಸೆಯಿಂದೆ ಬಗದು ಪಿಡಿದಂ (ಶುಃಷಾ. ೬-೨೪ ೪); ಪಿಡಿದಾ ಪ್ರತಾಪತವನಂ ಚಾವುಂಡಭೂಪಾಳಕಂ (ಏತಿ. XX. ೦೦೬-೨೬; 1167). ೬. ಅನುಸರಿಸು : ಸಟೆ ದಿಟವೆಂಬು ವೆರಡುವಿಡಿದು ನಡವ್ವದೀ ಲೋಕವೆಲ್ಲವು ಸಟೆದಿಟವೆಂಬುವೆರಡುವಿಡಿದು ನಡವನೇ ಲೋಕದೊಡನೆ ಶರಣನು (ಪಃಚಾರಿ. ೪ ೩೬-೦೪೦); ಪಿಲೀಶ್ವರನ ಬಲ ಪಿಡಿದುದು ಬಂದ ದಾರಿಯನು (ಭಾಣಾಖಂ. ೦೬೬೦-). ೭. ರಕ್ಷಿಸಂ; ಸಲಹಂ ; ಕಾಪಾಡು : ಎಂತಾದೊಡವೆನ್ನ ಕೆಲೆಮನಸುವಂ ಪಿಡಿವುದು ಸೆಜಗೊಡ್ಡಿ ಬೇಡಿದೆಂ ಮೃಗನಯನನೇ (ಕಾದಂಪೂ. ೧೬೯). ೮. (ಹಾವು) ಕಚ್ಚು ; ಕಡಿ : ಒಮ್ಮನೆ ಬಂದು ಬಾಗಿಲಂ ನುಗ್ಗುಳ್ಳಳ ನೆತ್ತಿಯಂ ಪಿಡಿಮದಾಗ್ರಃಮೊಳ್ಮಳಿಸಂ ಪುಹೋರಗಂ (ಪುಃಪು. ೬-೬); ಇಂದು ಧರನಾಜ್ಞೆಯಿಂದುರಗಂ ಪಿಡಿಯಲಲ್ಲಿ . . . ಪಿಡಿದುರಗನಿಂ ಪುಡಿದ ಮಗನನೀಕ್ಷಿಸುತಿರ್ದುದು (ಇಳಿ. ೮೬. ೩೪-೦೬). ೯. ಅಮರಂ; ಮೈಮೇಲೆ ಬರು ; ವೆಟ್ಟಿಕೊಳ್ಳು : ಬಂದಿಕಾಜಿನಂತೆ ತೆಱವುವಾರ್ದುಂ ಪಿಡಿವ ಕಾಕಿನಿಯರಿಂ (ಕಾವ್ಯಸಾ. ೩೨೯ ಪೂರ್ವಕ್ಕ); ವಿಶಾಚಂ ಪೀಡಿಸಿತ್ತು ಭೂತಂ ಪಿಡಿದುದು (ಪಞ್ಚಾಖ್ಯಾ. ೦೦೪ ಕ್ರಿಯೋ). ೧೦. ಊದು ; ಧ್ವನಿ ಮಾಡು: ನಿಶಾಪಸಾಸಸಮಯದೊಳ್ ಪಮಾಣದ ಸೂಬುಗಾಳಿಗಳಂ ಪಿಡಿದು ಬೀಡೆತ್ತಲುವೊಗಂಗೆಯ್ದುದಂ ಲಂಡು (ಪಂಚತಂ. ೦೩೬-೦೩). ೧೧. ಪ್ರಾರಂಭವಾಗು ; ಮೊದಲುಗೊಳ್ಳು : ಒಡನೆ ಕಪ್ಪನಿ ಕೌಂಡಿನ ಹೇಪಾಪತಿವಿಡಿದ್ದು ಸಮಸ್ತ ನದಿಗಳ ಸವಗಲದೊಳಗೊಳಕೊಂಡು ಮುಂಕ್ಕಿ ಸ್ಥಾನಕಿಡೆಯಾಹಳು ಕಾವೇರಿ (ಪಂಚತಂ. ೨-೧೯). ೧೨. ಕಂಡುಹಿಡಿ ; ಗುರುತಿಸು ; ತಿಳಿ : ಶಕುನವಮನೊಳ್ಕಿತ್ತುಪಾಯಮಂ ಪಿಡಿಪಂದೀತನೆ ವಂದಿ (ಪಂಚತಂ. ೩-೧೬). ' ತಪ್ಪುವಿಡಿ ' ಪರಾ. ಹಿಡಿ1: ೧. ಹಿಡಿದ ಹೆಜ್ಜೊಡತನಿಂಪುಬಿಂಬಂ ಪೋಲ್ತುದು (ಪಕ್ಕಥಾ. ೦-೫೪); ಹಲಗೆ ಬಳಪವ ಹಿ[ಡಿದಂತಿರ. ಪ್ರತಿಪುದೊಂದಗ್ಗಳಿಕೆ (ಭುಜಬ. ೧-೦೩); ಹಿಡಿವ ಕನ್ನಡಿ ಲಸಗಳ ಕೆಲಕಿಡುತ . . . ಬಂದಳು ಕೌಸಲಾದೇವಿ (ಪೂಪಣಾ. ೨-೬-೨). ೨. ಉಂಬ ಜಂಗಮ ಬಂದರೆ ಸಜೆಯೆಂಬರು ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬವಮ್ಮ (ಬಸ. ೦೧೨); ಹಿಡಿಯೆನ್ನ ಪರ ವ್ಯರ್ಥವಾಗದು (ಪೂಪಾಹ. ೩೮-೧೬). ೩. ಹಿಡಿದು ಹೆಣ್ಣುಗಳ ದೇವರ ಶಿಲೆಗಳ ತಲೆಯೊಡೆದು ಪುರವೆ ಸೂಜಿ ಪಾಡಿ (ಕಂಚಿ. ೦೦-೬); ಕಾಮುರೆಯುಂ ಓಡಿ ಹೋದರೆ ಅವನ್ನು ಹಿಡಿಯುವ ಕೃಮಿ (ಪುಃಂಬಿಮಾ. ೪-೬೪). ೪. ಸಂಗವೆರವುಮಂಟು ಒಂದ ಬಿಡು ಒಂದ ಹಿಡಿ (ಬಸ. ೦೩೪); ಅತಿಸಿದಾ ವಕ್ತಿಸಲಿ ಧೈರ್ಯ ಹಿಡಿವುದೆ: ಸುಪ್ರೌಢಿ (ಭಾಣಾಕ್ರೋ. ೬-೨೩); ಹರಿ ಹೋಗಿ ಹಾವಿನ ಹಾಸಿಗೆ ಹಿಡಿದನು ಶಿವ ಹಿಮಗಿರಿಯು ಹತ್ತಿದನು (ಭಾಣಾಕ್ರೋ. ೦೦೬-೬೦). ೫. ದ್ರೋಣಾದಿಗಳು ಹೊಕ್ಕುದು ಧರ್ಮಪುತ್ರನ ಹಿಡಿವ ತವಕದಲಿ (ಭಾಣಾಕ್ರೋ. ೩-೧೪); ತರುವಲಿಯು ಕೊಡಿಪಿಡಿದೆಲ್ಲಯೆನುತ (ಭಾಣಾಕ್ರೋ. ೬-೬). ೬. ಇಲ್ಲಿಯುವರಿಗೂ ಬಂದು ಲಾಭವನ್ನೇನೂ ಪಡೆಯದೆ ಬಂದ ದಾರಿಯನ್ನು ಹಿಡಿದು ಸಾಗಬೇಕಾಯಿತು (ಕೂಪ). ೮. ಘಟಸರ್ಪನಲ್ಲಿ ಕೈದುಮಡಿದರೆ ಹಿಡಿವುದ ಮಾಣ್ಬುದೆ (ಬಸ. ೨೦೨); ಹಿಡಿವ ಫಣಿಯನು ಹೊಡೆತ ಸಿಡಿಲನು . . . ಸುಖಿದುಃಖಿದುದಯದ ಕಡೆಮೊದಲ ಕಾಣಿಸುವನಾವನೆಂದನಾ ಶಕುನಿ (ಭಾಣಾಕ್ರೋ. ೯-೩೦). ೯. ನಾನೇನು ಮಾಡಿದ್ದೆ ಎಂದು ಜಕಣ ನನ್ನನ್ನು ಹಿಡಿಯಿತು ? (ಪತ್ರ. ೦೩೨). ೧೧.° ೧೩ನೆಯ ಶತಮಾನದಿಂದ ಹಿಡಿದು ೧೭ನೆಯ ಶತಮಾನದ ಕೊನೆಯವರೆಗೆ . . . ನಿರೂಪಿಸಲಾಗಿದೆ (ಕ್ರಶಾಶಾ. II. ೬ ಕ್ರಶಾಶಚ). ೧೩. ತೊಡಗು ; ಆರಂಭಿಸಂ : ಉದಯವಾಗದ ಮುನ್ನ ಬವರವ ಹಿಡಿಯಬೇಹುದು (ಭಾಣಾಕ್ರೋ. ೦-೬೪); ಕರ್ಣನು ಭೀಮಸೇನವ ರಥವನಱಿಸುತ ಬಂದು ಪುನರಪಿ ಕಾಳಗವ ಹಿಡಿದ (ಭಾಣಾಕ್ರೋ. ೦೩-೧೦). ೧೪. (ಕರಾರಿಗೆ ಒಳಪಟ್ಟು) ಪಡೆ ; ಹೊಂದು : ಹಿಡಿದ ಹೂಲಕ್ಕೆ ಒಡವೆಯ ಕೊಡೆನೆಂಬವರೆ ಬಹುವರೇ ಪೊತವಿಯೊಡೆಯುತು (ಕಾಗಿಮಾ. ೦೦೬-೪೩೦). ೧೫. ಆವರಿಸು ; ಕವಿ : ಹಿಡಿದ ದುಗುಡದಲಬ್ಬಿನನು ಮನ ವಿಡುಕಿದನು (ಭಾಣಾಕ್ರೋ. ೦೪-೨೪). ೧೬. ತಡೆ; ನಿರೋಧಿಸು; ನಿಯಂತ್ರಿಸು : ತುಟಿ ಕಚ್ಚಿ ಹಿಡಿಯದಿರು ಬಿಕ್ಕ (ಪಾತೀ. ೩೬-೨೨); ಪಾಂಡವರ ಸಹಕಾರದೊಡನೆ ನೀನು ಧರ್ಮಾರ್ಥಗಳಿಂದ ರಾಜ್ಯವಾಳುವುದಕ್ಕೆ ಮೊದಲು ಮಾಡಿದರೆ ನಿನ್ನನ್ನು ಹಿಡಿಯುವವರಾರು? (ಪಪಣಾ. ೨೩೨). ೧೭. ವಿನಿತಿಗೊಳಿಸು : ಕೈಗೆರಡು ಕಾಸು ಬಂದಿತೆಂದು ವಿನಿ ಮಿಾರಿದ ಖರ್ಚಿಗಿಳಿಯಬೇಡ. ಸ್ವಲ್ಪ ಹಿಡಿದು ಖರ್ಚು ಮಾಡುವುದನ್ನು ಕಲಿ (ಕೂಪ). ೧೮. ಸಾಕಾಗು ; ಒಳಕೊಳ್ಳು ; ಹಿಡಿಸಂ : ಅಡಿಗಿರಿಗಳ ನುಂಗುವನ ಬಾಯ್ ಹಿಡಿಯದಿಹುದೇ ಹಣ್ಣುಹಂಪಲು (ಭಾಣಾಕ್ರೋ. ೦೬-೪೦); ಓಗರವ ತಾ ತೋಯೆಯನಿಕ್ಕು ಹಸನಾಯ್ತು ಮೇಲೋಗರವ ಬಡಿಸು ದೊನ್ನೆಗಳು ಹಿಡಿವಂತೆ (ಪಜ್ಯಳಿ. ೬-೨೬); ಒಳವುಗುವುವರೆ ಗುದ್ದಾಡಿದರು ಬಾಗಿಲು ಹಿಡಿಯದೆ ಪೊಕ್ಕು ಗದ್ದುಗೆ ಎಡವರಿಕ್ಕೆಲದಿ (ಕೂಚಪ. ೬-೪೦). ೧೯. ಬೇಕಾಗು; ಅವಶ್ಯಕವಾಗು : ಈ ಕೆಲಸ ಮುಗಿಯಲು ಕಡೆಯ ಪಕ್ಷ ಎಂಟು ದಿನಗಳಾದರೂ ಹಿಡಿಯುತ್ತದೆ (ಕೂಪ). ೨೦. ಒಪ್ಪು ; ಪುರಸ್ಕರಿಸು : ಪರದೇಶದವರು ಈ ನಾಣ್ಯಗಳನ್ನು ಹಿಡಿಯಾಲಿಲ್ಲ (ಶಂಕುಚ. ೬೫). ೨೧. ಒಗ್ಗು ; ಸರಿಬೀಳು: ಆ ಊರಿನ ನೀರು ನನಗೆ ಹಿಡಿಯುವುದಿಲ್ಲ (ಕೂಪ); ಈ ವಿಷಧ ನನಗೆ ಹಿಡಿಯಲಿಲ್ಲ (ಕೂಪ). ೨೨. ಕಾಯು; ಹೊಂಚು; ಎದುರುನೋಡು: ಸಮಯವನ್ನು ಹಿಡಿದು ಬೆಟ್ಟದ ಒಡೆಯರ ಮೇಲೆ ಬಿದ್ದು ಅವರನ್ನು ಬಂಧಿಸಿ ರಾಜಬೆಡಿಮತ ಎದುರಿಗೆ ಕರೆದೊಯ್ದರು (ಬಪ್ರ. ೨೫). ೨೩. ಎಡೆಬಿಡದಿರು ; ಸತತವಾಗಿರು : ದಿನ ಪೂರ್ತಿ ಹಿಡಿದ ಮಳೆ ಬಿಟ್ಟಲ್ಲ (ಕೂಪ); ಸುವಾಸು ಹೊತ್ತು ಒಡಿವಿದ್ದರಚ್ಚಿಯನ್ನು ಮಗು ಬಿಡಲಿಲ್ಲ (ಕೂಪ).

ಪಿಡಿವಿಡಿ, ಪಿಡಿಪಿಡಿ, ಹಿಡಿಹಿಡಿ (ದ್ವಿರುಕ್ತಿ): ಪಿ[ಡಿವಿಡಿಯೆ ಕರಗುವುವು ಬಯ್ತೊತೆ ಮುಸುಗಾಗಿರ್ಪುದು . . . ಧನವೆ ಜಗತ್ಪ್ರಾಣಪಾಧನವಾಲ್ಕೇ (ಪಂದ್ರಕೃ. ೯-೦೫) ; ದಜದಜನೆಲೆಯೆಬ್ ಪಿಡಿಪಿಡಿ ತಜ್ಜಾತಜ್ (ಅಚಿತ್ರ. ೦೦-೯); ಎಲೆಲೆ ಹಿಡಿಹಿಡಿ ಭೀಮನನು ತೆಗೆ ಕೆಲಕೆ ದುರ್ಯೋಧನನ (ಭಾಣಾಳ. ೬-೩೬); ಗುರುಗಳ ಚರಣವ ಹಿಡಿಹಿಡಿ (ಪುರಂದ. ೧-೦೩೯-೦); ಬೇತ್ತಾದಾ ಶಿವಿರಾಸ್ಮವೆನೆವೇಡ ಬೇಡ ಮುಂಬುನ್ನಾ ತುಕೋ ಹಿಡಿಹಿಡಿಯೆ.ನಂತೆ . . . ಇಕ್ಕಿದನು (ಪೂಚತಪ. ೪೦-೧೪); ಹಿಗಿ ಹಿಡೀಲೆ ರೊಕ್ಕಾ ತಗದು ಹಿಡಿಹಿಡಿ ಅನ್ನಾಂವಾ ಖರೇ ಅ--; ಕೈ ಮಾಡಿದರ ಹಿತವ ಬಿಡಾಂವಾ (ಪಪಗೀ. ೮೨-೦೬) ಪಿಡಿದುಕೊಳ್

ಪಿಡಿಕೊಳ್, ಪಿಡಕೊಳ್ಳು, ಪಿಡಿದು ಕೊಳ್ಳು –೧. ಕೈಯಲ್ಲಿ ಹಿಡಿ : ದುಕೂಲಂಗಳನುಡೆ ಕೊಟ್ಟು ಹಾರವುಂ ಪಿಡಿದುಕೊಂಡಿಂತೆಂದಳ್ (ಕಾದಂಬ. ೦೦೯) ; ಆ ವಿಭೂತಿಯುಂ . . . ಎಡದ ಹಸ್ತದೋಳ್ಪಿಡಿದು ಕೊಂಡು ಬಲದ ಹಸ್ತದಿಂ ಮುಚ್ಚಿಕೊಂಡು (ಕವಪ. ೦೮–೧೬) ; ನಿಮಿರ್ದ ಕರಾಗ್ರದಿಂ ಪಿಡಿದುಕೊಂಡಲರ್ಗೊಂಚಲಂ (ಭುಜಬ. ೩–೦೦೯) ; ಗೋವಳರು ಗುಡಿಗಟ್ಟಿ ಸಂತಸದೀವಿ ಬಂದಾ ಫಣಿಯ ಹೊಸವನು ತಾವರೆಯ ಪಿಡಿಕೊಂಡು ಬರೆ ಹರಿ ತಂದೆಗೊಪ್ಪಿಸಲು (ಹಾಳ್ಕಾ. ೨೨–೧೬) ; ಹುಲಿಯ ಮಿಸೆಯು ಹಿಡಿದುಕೊಂಡು ಒಲಿದುಯ್ಯಲೆಯಾಡುವಂತೆ ಕೂಡಲಸಂಗನ ಶರಣರೊಡನೆ ಮಜ್ಜನವಾದಿದರೆ ಸುಣ್ಣದ ಕಲ್ಲ ಪಾಡಿಲಲ್ಲಿ ಕಟ್ಟಿ ಕೊಂಡು ಮಡುವ ಬಿದ್ದಂತೆ (ಬಸವ. ೬೬೦ ಅ) ; ಗೋಪಾಲನೂ ಇವಳ ಜೊತೆಯಲ್ಲೇ ಬೆಳ್ಳಿಯ ಲೋಟವನ್ನು ಹಿಡಿದುಕೊಂಡು ಹೊರಟಿದ್ದನು. (ಶಾಳಹೂ. ೦೦೩). ೨. ಸೆರೆಹಿಡಿ ; ಬಂಧಿಸು : ಕೆಲರ್ ಕಂಡೊಡೆ ಕರೆಗುಮೆಂದು ಕೆಲದ ಮರಂಗಳನೊತ್ತುಗೊಂಡು ಕೆಲಬರೆಮ್ಮನೆಬ್ಬಿಟ್ಟ ಪಿಡಿದುಕೊಳ್ಗುಮೆಂದು ಮಗುಟ್ಟು ನೋಡುತ್ತಿರ್ಪಂ (ಅಂಚೆ. ೯–೧೨ ಅ) ; ಇವನ ಹಿಡಕೊಂಡು ಹೋಗೆಲೋ ಜೋಗಿ ಇವನವ್ವ ಮಾತ ಕೇಳದೆ ಪುಂಡನಾದ (ಕೃಷ್ಣಾ. ೬–೦೯ ೪೧೦) · ೩. ಅಮರಿ ಕೊಳ್ಳು ; ಮೆಟ್ಟಿಕೊಳ್ಳು : ಸತ್ತವರು ಜಕಣಿಯಾಗಿ ಬಂದು ಬದುಕಿದ್ದವರನ್ನು ಹಿಡಿದುಕೊಳ್ಳುತ್ತದೆ ಎಂದು ಕೀಳಿದ್ದೆ (ಕದ್ಮ. ೦೩೬). **ಪಿಡಿದುಯ್ –ಸೆರೆಪಿಡಿದು ಕರೆದೊಯ್ಯು** : ಬಂಧಿಸಿಕೊಂಡು ಹೋಗು: ಪಿಡಿದುಯ್ದುದು ಗಂಧರ್ವರ ಪಡೆ ಗಡ ನಿವ್ಮಣ್ಣನಂ (ಕುಚಕಾ. ೬–೩೬). **ಪಿಡಿದೆತ್ತು**. ಹಿಡಿದೆತ್ತು –೧. (ಕೈಯಲ್ಲಿ) ಹಿಡಿದು ಮೇಲಕ್ಕೆತ್ತು : ಶಾರ್ದ್ಗವ ಪಿಡಿದೆತ್ತಿ ಶಿಂಜಿನಿಗೊಳಿಸಿ (ಕೋಚಕ. ೩೯–೨೩) ; ಪಿಡಿದೆತ್ತಿ ಕಲೆಯ ಕೊರಲಂ ತೀಡಿ ಕೈಗಳಿಂ (ಅಂಬಿಕಾ. ೦೬೩–೩೬೭) ; ಹಸ್ತಿದ ಮೆಯ್ಯೊಳ್ ಸೊಡಹಿ ಕರವ ಹಿಡಿದೆತ್ತಿದಳಬುಜಾಯತಾಕ್ಷಿ (ಕೋಚಕ. ೯–೨೬) ಬಾಗಿ ನೆಬಸ್ಮರಿಸುತ್ತಿದ್ದ ಪ್ರಿಯತಮೆಯನ್ನು ಹಿಡಿದೆತ್ತಿ (ಕಡೇಶ. ೦೬೮) ; ಮೆಲ್ಲಗಿವಳನು ಮುಟ್ಟು, ಮರುಗಿ ಹಿಡಿದೆತ್ತು (ಜಾಗೇಶ. ೩೦–೬). ೨. ಎದ್ದು ಕಾಣುವಂತೆ ಮಾಡು; ಎತ್ತಿ ತೋರಿಸು : ನುಣ್ಣೊಗಮಿರ ಗಚ್ಚದಾವರೆಯ ಮೆಯ್ನಿರಿಯಂ ಪಿಡಿದೆತ್ತೆ (ಕಬ್ಕಾ. ೪೦). **ಪಿಡಿದೆಲೆ**. **ಪಿಡಿದೆಳೆ –ಹಿಡಿದು ಜಗ್ಗು** : ಕೃಷ್ಣನ ಮುಂದಲೆಯಂ ಪಿಡಿದೆಳೆದಲ್ಲಿಯೆ ತಲೆವಿಡಿದರ್ ವಮ್ಮ ವೀರಮಂ ಕೌರವರುಂ (ಪಂಪಭಾ. ೬–೩೬) ; ಅವನನು ಕಂಡ ಸೀಜಿಯ ಪಂಚೇಂದ್ರಿಯ ಪಿಡಿದೆಳೆದು ಮುಂಚುತಲಿವೆ ಕೂಟಕೆ (ಶಂಪಾ. ೯–೩೦) ; ಬಿಡಿಸಿ ಸೆರಗಂ ನಿರಿಯಂ ಪಿಡಿದೆಳೆದು ನಡೆಯುವರ್ ತೋರ್ದೊಡಲು ಬಿಗಿಯಂ (ಕಾಂಪು. ೧೨೯–೩೩). **ಪಿಡಿದೊತ್ತು**. ಹಿಡಿದೊತ್ತು –೧. (ಕೈಯಲ್ಲಿ) ಹಿಡಿದುಕೊಂಡು ಒತ್ತು : ಪಿಡಿದೊ [ಪಾಣಿ. ದೆ]ತ್ತಿ ಪೊಡೆಯೆ ನೇಗಿಲ್ ನಡೆವೊನೆಯೊಳ್ ನೆಗೆದ ಲಶವುಂ ಬಂದು (ಪಾಪಸಂ. ೦೧೪-೦೪). ೨. ಒತ್ತಾಯ ಮಾಡು ; ಬಲಾತ್ಕರಿಸು : ಸ್ವಂಜಿನ ತೆರದೊಳು ದೊಪ್ಪದರಿರುವರು . . . ತಾವಾಗಿ ತಮ್ಮೊಳಗಿರುವುವನೀಯರು ಹಿಡಿದೊತ್ತಿ ಹಂಡದ ಹೊರತು (ಇಂಗಾಪ. ೦೧೪-೦೧). ೩. ವಶಪಡಿಸಿಕೊಳ್ಳು ; ಸ್ವಾಧೀನ ಮಾಡಿಕೊಳ್ಳು : ಗೂಪಯಸನೋದಿಸಿ ಭಟ್ಟುಪ[ಸೆಕ್ಕಿ]ವೆಟ್ಟಿ × × × ಪಂದೇಭಹೇಪು × × ಪುಂ ಹಯವುಂ ಹಿಡಿದೊತ್ತಿ ತಂದು (ಪಾಭಾ. XI–I, ೫೦–೬೩, 1006). ☞ ಈ ಧಾತು ಅನೇಕ ಪದಗಳೊಡನೆ ಸೇರಿ ಅನೇಕಾರ್ಥಗಳನ್ನು ಕೊಡುತ್ತದೆ. ಉದಾ. 'ಕಾಲ್ವಿಡಿ', 'ಕೆಯ್ವಿಡಿ', 'ಗೀಳು ಹಿಡಿ' ಇತ್ಯಾದಿ.

[ದೇ. ॥ ತಮಿ. ಟಿಟಿ ; ಮಲ. ಪಿಡಿ; ಕೊಡ. ಪುತಿ; ತೆಲು. ಪಿಡಿ; ತೊದ.ಇಡಿ]

ಪಿಡಿ₃, ಹಿಡಿ₃ (ನಾ). ೧. ಹಿಡಿಯುವಿಕೆ; ಗ್ರಹಿಸುವಿಕೆ : 'ಪಿಡಿವೆಱು' ಪರಾ. ೨. ಹಿಡಿದುಕೊಳ್ಳಲು ಅನುಕೂಲಿಸುವಂತೆ ಇರುವ ವಸ್ತುವಿನ ಭಾಗ ; ಕಾವು; ಹಿಡಿಕೆ; "ತ್ಸರುಃ, ಮುಷ್ಟಿಃ–ಈ ೨ ಹಿ(ಪಿ)ಡಿ" (ಶಡಾಹು. ೬೪–೬೦೯); ಮುಖದರ್ವಣಕ್ಕೆ ತಂದಿಕ್ಕಿದ ರನ್ನದ ಪಿಡಿ ಸಂದಯವೇನೆನೆ ಸುದತಿಯು ಕವುನೀಯ ಬುಃಂಧವೆಸೆಗು (ಪುಪ್ಪಪು. ೩–೬೩); ಅವಳ ಕೊರಲ್ ಜನವಾದವೆಸೆವಿನುಂ ಧಾಜನವಾದತ್ತು ಮೆಂಗಾಸ್ಮಮುಖರದ ಪಿಡಿಯೊಳ್ (ಜಗ. ೦೦–೬೮); ದೆಳ್ಳಿಯ ಪಿಡಿಯು ಚಿತ್ತಿಯ ತಂದು ಹೊಕ್ಕಳ ಬಳ್ಳಿಯ ಕೊಯ್ದರ್ಚಕನ (ಕೋಚಕ. ೧೬–೨೧). ೩. ಮುಷ್ಟಿ; ಮುಟ್ಟಿಗೆ : ಉಡಲುಂ ತೊಡಲುಂ ಕೊಟ್ಟುಂ ಪಿಡಿ ಶೀವಿದ ಪೊನ್ನನಿತ್ತುಂ (ಪುಚ. ೭–೩೧); ಪಿಡಿ ಪಣಿ ತೋಳ್ ತುದಿ ಪೊಳೆ ಮೊಳೆ ವಿಡಿಯೆನೆ ತೋಜಿತ್ತು, ವಿರಹಿ ಕೌರವಬಲವುಂ ಬಡಿವಲ್ಲಿ ಕಾವುಳೀವುಂ ಪಿಡಿದ ಗದಾದಂಡಮೆನಿಸಿ ಮಾವುರನಿದಿರೊಳ್ (ಕುಪ್ರಕ. ೭–೪೩೬); ಪುಡಿದಿಯು ಸೆಳೆನಡು . . . ಪಿಡಿಗೊಳಗಾಗಿರ್ದುದು (ರಹಃ. ೩–೩೭); ಪೆರ್ಗವತೆ ಸೇರೆ ಪಿಡಿ ಧರಭಂಗಳೆನಿಪವರೊಳಭಿನಯಿಸಿ ತೋಜಿಸಲ್ಕಾಪಾಣಿವನದ ವುಂ ಸೃಷ್ಟಿಸಿದನೆಂಬ ಟೆಲ್ಲಿನ ಕೋವುಲೆಯರಲ್ಲಿ ಕಣ್ಗೆಸೆದರು (ಕೃಪುಣ. ೩–೨೦). ೪. ಮುಷ್ಟಿಯಲ್ಲಿ ಹಿಡಿಯಬಹುದಾದಷ್ಟು ಪ್ರಮಾಣ ; ಮುಷ್ಟಿಗ್ರಾಹ್ಯವಾಗುವಷ್ಟು ಪ್ರಮಾಣ : "ಪಿಡಿಯೆನಿಪ್ಪ ನುಡಿ ಮುಷ್ಟಿಗ್ರಾಹ್ಯದ ಪೆಸರುಂ" (ಕಜಾಪ. ೧೪); ಗಾವುಂಡ್ಗಾರು ಪಾರ್ವರು ತಮ್ಮ ಕೆಜಿಯ ಪುಣ್ಯೊರ್ಕ್ಕಣ್ಣುಗ ಮಣ್ಣುವಿಪ್ಪಿಡಿಭತ್ತವುಂ . . . ಚಿನ್ನ ಸೂರ್ಯಕಾಲವುಂರಂ ಸಲ್ವನ್ತೆ ಕೊಟ್ಟರ್ (ಪಾಇತಿ. IX–I, ೦೮–೧೩; ೧೫೫) ; ಸಡುವೊಂದು ಪಿಡಿಯೆಸಲು ಜವ್ವನದ ಸೊಕ್ಕಾನೆಯಿಡುಬುಂಜಿನ ಮೊಲೆಮೆಟ್ಟಿನೊಳು ತನ್ನ ತಲೆಯನಿಟ್ಟೊಡನಳುಪೆ ಪುರುಷಸಿಂಹಂ (ಪಾಕಥಾ. ೬–೨೨) ; ಪಿಡಿಯೆಂಬ ನುಡಿ ತಳೋದರಿಯರುರುಮಧ್ಯದೊಳ್ (ಕ್ರಕುಕ. ೩–೧೧). 'ಒರ್ಪಿಡಿ' ಪರಾ. ೫. ಇಸ್ಪೀಟುಎಲೆಗಳ ಕಟ್ಟು : ಕೈಯಲ್ಲಿ ಹಿಡಿದ ಪಿಡಿಯಿಂದ ಜಾತಿಯನ್ನು ತೆಗೆದು ಹಾಲುತ್ತಾ ಗೋಪು ನುಡಿದ (ಕಾಂಯಾ. ೨); ಒಳಗಡೆ . . . ಒಂದು ಇಸೂತಿಯ ವಸ್ತ್ರ ಸೂಲು ಸೂಡೆ ಇಸ್ಪೀಟುಪಿಡಿ ಇವಿಟ್ಟಿವೆ (ಕೃಡಾಳ. ೧೨), ಇಸ್ಪೀಟು ಆಟದಲ್ಲಿ ಅವನು ನಿಸ್ಸೀಮ. ಮನೆಯಿಂದ ಹಳೆಯ ಪಿಡಿಯೊಂದನ್ನು ಕೊಂಡು ಬಂದು, ಮರದ ನೆರಳಿಗೆ ಬಿಡಿಸಿ . . . ಎಲೆಗಳನ್ನು ಇಳಿಸುವಾಗ, ಅವನ ಉತ್ಸಾಹ ತುರೀಯಾವಸ್ಥೆಗೆ ಮುಟ್ಟುತ್ತದೆ (ಕೃಕೃಹೂ. ೩೬). ೬. ಬಂಧನ ; ಸೆರೆ; 'ಪಿಡಿವಡೆ' ಪರಾ. ೭. ಕಸವೊರಕೆ : ಅಸಿ ಮಸಿ ಲಸಿ(ಷು) ಪಿಡಿ ಪಿಡಿಲ್ ರಸಿಯುಂ ಪುರಿಯೋಡುಂ ಕೋಡಂ ಕಾವಲಿ ನಾಲಿಯುಂ ಬಿಸಗೋಬರ್ ಪಿಡಿದಿರೆಯುಂ ಪುಸಿವರ ಶೂಲು ಜಗಕ್ಕೆ ಮಜ್ಜಿಯಿಲ್ಲೆಂದಂ (ಅಬ್ಬಕು. ೯–೪೪). ೮. ಒಂದು ಬಗೆಯ ಆಯುಧ . ಕಠಾರಿ : ಹೊಳೆವ ಕಠಾರಿ ಕೈಗತ್ತಿ ತೋಮರ ಬಲ್ಲು ಬಲುದಡಿ ಪಿಡಿ ಚಕ್ರದಲಿ ಒಳಬಂಟ ಕಂಪವಿಚ್ಛೇದವಿನೋದದ ತಳಪರಿರೂರ ಕಾದಿಹರು (ಕೋಚಕ. ೦೬–೦೦೩); ಕೊರಳ ಯಜ್ಞೋಪವೀತದ ಮುಡಿಹೂಗಳ ಪರಿಮಳಿಸುವ ಗಂಧದಿಂದ ಕರದೊಳು ಪಿಡಿಯನಾತರಸುವರ್ಕಳಿಗಳು ಧುರೀನವಾದರು (ಕಂಪಾ. ೧೬–೮೨). ೯. ಸಣ್ಣದು : ಚಿಕ್ಕದು : 'ಪಿಡಿಗಲ್', 'ಪಿಡಿಗುಂಡು' ಪರಾ. **ಪಿಡಿ₄** : ೨. "ತ್ಸರುಃ,–ಖಡ್ಗಾದಿ ಮುಷ್ಟಿ ಕತ್ತಿ ಮೊದಲಾದವುಗಳ ಹಿಡಿಗೆ ಹೆಸರು. ಕತ್ತಿಯ ಪಿಡಿ. ಆಯುಧದ ಕೈಪಿಡಿ" (ಶಿಡ್ಗಾಂ. ೨೬೩); ಹಿಡಿಯಿಲ್ಲದ ಶಸ್ತ್ರ ಕೀಲಿಲ್ಲದ ಕತ್ತರಿ (ಸರ್ವಜ್ಞ. ೦೨೬–೬೪೦); ಕತ್ತಿ ತಮ್ಮದೆನೆ ಹಿಡಿ ತಮ್ಮದಲ್ಲವೆ ದೇವ ? (ಹಕ್ಕಿಕ. ೩೦–೦೨೦); ಪಾತ್ರೆಗಳ ಹಿಡಿ. ಸೊಂಡಿಲಿಗೆ, ಸಂದುಗೆರೆ ಇತ್ಯಾದಿಗಳ ಬಡಿಗೆ ವಿಶೇಷಗುಣವನ್ನು ಕೊಡಬೇಕು (ಅಡುಬಾ. ೧೩). ೩. ಹಿಡಿಯೊಳಗುವಂತಹ ತುಂಬಿ ಅಥ

ಮಾಡುವನೆಗ್ಗ (ಪಜಗಕ. ೬೯-೨೦೬); ಜಗವಿದೆಲ್ಲವು ನನ್ನ ಮಾಯೆಯೊಳೊಗೆದು ತೋಱಿ ಸುಳಿಸೆ ಸುಳಿವುದು ಹಿಡಿಯಲಡಗುವುದು (ಕಬ್ಮಾಶೀ. ೩-೫೬); ಹಿಡಿಹಿಡಿಯೊಂದರೆ ಹಿಡಿಯಲಿ ಸಿಗುವನೆ ಬ್ರಹ್ಮಾಂಡವೇ ಆತ (ಪಂಪಭಾ. ೨೯-೬); ಹಿಡಿ ತುಂಬ ಹಣ ಕೊಟ್ಟರೊ ನುಡಿ ಚೆನ್ನಾಗಿರಬೇಕು (ಗಾಡ). ೬. 'ಹಿಡಿವಡೆ' ಪರಾ. ೭. "ಹಿಡಿ=ಕಶಬರಿಗೆ" (ಕಾಕರೆಹೀ. ೫೬); ಮರದ ಹಸಿ ಅಡರುಗಳಿಂದ ಒಂದು ಗುಡಿಸುವ ಹಿಡಿ ಮಾಡಿ, ತರಗೆಲೆ ಗುಡಿಸಿದಳು (ಪಭಾಭಾ. ೨೬). ೯. 'ಹಿಡಿಗಲ್ಲು' ಪರಾ. ೧೦. ಮಾಸಲು; ಮುಡಿಪು: ಹಿಡಿಯುಂಬ ನುಡಿ ವಿಮಸಲಲ್ಲುಂಟು ನಿಚ್ಚಲು ಜಡಿಯುಂಬ ಶಬ್ದ ವುಳೆಯೊಳು (ಕೃಸ್ತ. ೪-೨೬). 'ಹಿಡಿಮಂದಿ' ಪರಾ.

ಹಿಡಿಹಿಡ್ಡಿ (ದ್ವಿರುಕ್ತಿ): ಇನ್ನೂ ಯಾತ ಬರಲಿಲ್ಲವ್ವಾ . . . ಹಿಡಿಹಿಡೀಲೆ ರೊಕ್ಕಾ ತಗದು ಹಿಡಿಹಿಡಿ ಅನ್ನಾಂವಾ ಖರೇ ಅಂತ ಕೈವಾತಿದರ ಹಿಡದ ಬಡಾಂವಾ (ಪಪಗಗ. ೪೨-೦೩); ಕೆಲವು ನಿದರ್ಶನಗಳು ಬಿಡಿಬಿಡಿಯಾಗಿ-ಸಿಗುತ್ತವೆ; ಗ್ರಂಥರೂಪದಲ್ಲಿ ಹಿಡಿಹಿಡಿಯಾಗಿ ಏನು ಸಿಗುತ್ತಿಲ್ಲ (ಕ್ರಾಪ್ರ. ೩೦).

[<ಪಿಡಿ$_1$/ತಮಿ. ಪಟಿ; ಮಲ. ಪಿಡಿ; ತುಳು. ಪುಡ, ಪುದಿ, ಹಿಡಿ; ಕೊಡ. ಪುದಿ; ತೆಲು. ಪಿಡಿ]

ಪಿಡಿ$_2$, ಹಿಡಿ$_2$ (ನಾ). ೧. ಹೆಣ್ಣಾನೆ; ಕರಿಣಿ: "ಪಿಡಿಯೆಂದು ವೆಣ್ಣಾನೆ" (ಶಬ್ದಾ. ೩೦-೪೬); ಬಬೀರಕಾಂತಾ . . . ಎನ್ನ ಪೆಂಡತಿ ಮಲಯಾ ಪತಿಯುವ್ವ ಪಿಡಿ ಪುರುಂಡಿನಿಂದಂ ಚಂದನಪುಲಯಂಬೆಂಬ ಪರ್ವತದ ಶಿಖರ ದಿಂದಂ ತನ್ನನಿಕ್ಕಿ ಸತ್ಪಂತೆ ನಿನ್ನ ಪೆಂಡತಿಯುಂ ಸತ್ಪಳೆಂದು ಪೇಟ್ದು (ಕಡಾಶಾ. ೪೯-೦೦); ತಲೆಪರಿದೋಡೆಯು ಪಿಡಿಯನೇಱಿ ಪೆಂಡವಾಗ ದೊಳ್ಕೊಂಡಿರ್ ಒಳಸಿ ಬರೆ (ಪಂಚತಾ. ೩-೨೬ ಕ); ಪೊಡೆಯೆಂಬಿದು ಬೆಳೆಗೆಯ್ಕೊಪ್ಪಿಡಿಯೆಂಬಿದು ಕರಿಣಿಯೊಳ್ . . . ಅಲ್ಲದಿಲ್ಲಾ ನಾಡೊಳ್ (ಕಾಕಶ). ೦-೧೩); ೨. ಯಾವುದೇ ಪ್ರಾಣಿಯ ಜಾತಿಯಲ್ಲಿ ಹೆಣ್ಣನ್ನು ಸೂಚಿಸಲು ಉಪಯೋಗಿಸುವ ಪದ: ಈ 'ಪಿಡಿ' ಎಂಬುದರ ಮೂಲಾರ್ಥ 'ಹೆಣ್ಣಾನೆ' ಎಂದಿದ್ದರೂ ಕ್ರಮೇಣ ಈ ಪದವನ್ನು ಇತರ ಪ್ರಾಣಿಗಳ ಹೆಣ್ಣುಗಳನ್ನು ಸೂಚಿಸುವಾಗ ಉಪಯೋಗಿಸಿರುವ ಉದಾಹರಣೆಗಳು ಅನೇಕವಾಗಿವೆ. ಮಲಯಾಳ, ತೆಲುಗುಭಾಷೆಗಳಲ್ಲಿಯೂ ಇದನ್ನು ಕಾಣಬಹುದು: 'ಪಿಡಿ' ಎಂಬುದು ಮೃಗಗಳೊಳಗಿನ ಸ್ತ್ರೀತ್ವಸೂಚಕವಾಗಿ ಪೂರ್ವಕಾಲದಲ್ಲಿ ರೂಢಪವಾಗಿದ್ದ ಹೆಸರೆಂದು ಭಾವಿಸಬಹುದು (ಕಾತೂಣ. ೩೦೭). 'ಪಿಡಿಗುದುರೆ' ಪರಾ. **ಹಿಡಿ$_3$**: ೨. 'ಹಿಡಿಗುದುರೆ', 'ಹಿಡಿಯಾನೆ' ಪರಾ.

[ದೇ. ಕ ತವಿ. ಪಟಿ; ಮಲ. ತೆಲು. ಪಿಡಿ]

ಪಿಡಿಕಟ್ಟು 'ಪಿಡಿಗಟ್ಟು' ನೋ.

ಪಿಡಿಕಲ್ 'ಪಿಡಿಗಲ್' ನೋ.

ಪಿಡಿಕಿಸು 'ಪಿಡಿಕೆಯ್ಸು' ನೋ.

ಪಿಡಿಕುತ್ತು$_1$ (ನಾ). ೧. ಹಿಡಿಯುಳ್ಳ ಒಂದು ಬಗೆಯ ಚುಚ್ಚುವ ಆಯುಧ: ಇತುವಿಟ್ಟಿಯು ಪಿಡಿಕುತ್ತಿಸ ಕಕ್ಕಡೆಯ ಕೋಳ್ಗೆ ಮಾರ ಷುಲು ಪಾಯ್ದು (ಪಂಚತಾ. ೮೨-೬೦). ೨. ಚುಚ್ಚುವಿಕೆ; ಶಿವಿತ: ಎಡಗಯ್ಯೊಳ್ ಮುಂದಲೆಯುಂ ಪಿಡಿದಿಱುದು ಮಾರಲ್ಟಿಯೊತ್ತಿ ಸುರಿಗೆಯೊಳುರಪುಂ ಪಿಡಿಕುತ್ತುಗುತ್ತಿ ನೆತ್ತರನುಡುಪಾನನೆ ಕುದಿದು ತಣಿದು ಮೂರ್ಛೆಗೆ ಸಂದಳ್ (ಲಾಚರಿ. ೩-೪೦). [ಪಿಡಿ$_3$ + ಕುತ್ತು$_3$]

ಪಿಡಿಕುತ್ತು$_2$ (ನಾ). (ಆನೆಗೆ ಸಂಬಂಧಿಸಿದಂತೆ) ಬೆದೆ (?): ದುರ್ವಾಜಿಗಳೊಳೆ ತೊಡರ್ವ ಸಿಕ್ಕು ನೆಗಟ್ಟು ಕರಿಗಳೊಳ್ ಪಿಡಿಕುತ್ತು ಪರಭೂಷಣಂಗಳೊಳ್ ಮುತ್ತು (ಲಂಚರಿ. ೦-೦೯ ಕಗಳೆ).

[ಪಿಡಿ$_3$ + ಕುತ್ತು$_3$ (< ಕುತ್ಸ)]

ಪಿಡಿಕೆ, ಹಿಡಿಕೆ (ನಾ). ೧. ಹಿಡಿತ; ಬಂಧನ; ಸೆರೆ: 'ಪಿಡಿಕೆವೆಱು' ಪರಾ. ಹಿಡಿಕೆ: ೨. ಹಿಡಿದುಕೊಳ್ಳುವ ಸಾಧನ; ಕಾವು; ಹಿಡಿ: ಹೋತಿನ ಕೋಡುಗಳು ಚೂರೀ ಹಿಡಿಕೆಗೆ ಬರುತ್ತವೆ (ಕುಂಬಾಮಾ. ೩-೦೨); ಆ ವ್ಯಕ್ತಿ ವಿಗವಿಗರನೆ ವಿಂಚುಕ್ತಿದ್ದ ಹಿಡಿಕೆಯನ್ನುಳ್ಳ ನಡಗೋಲನ್ನು . . . ಊರುತ್ಸ ಹಳ್ಳಿಯ ಬೀದಿಯಲ್ಲಿ ನಡೆದು ಬರುತ್ತಿದ್ದನು(ಕೃಕಟು. ೨೬೬). ೩. ಹಿಡಿ; ಮುಷ್ಟಿ: ಬದ್ಧಯಾ ವುಷ್ಟಾ—ಹಿಡಿಕೆಯಲ್ಲಿ ಹಿಡಿದು ಆಳೆವ ಮೊಬ (ಕಾಣಾ. ೦೨೨); ಅತಕೆಯಮ್ಮು ಆಳ್ಣಾ ಹಿಡಿಕೆಯಮ್ಮು ಕಚ್ಚಲಣ್ಣ ಕಱದಾರ ಕಱುತ್ತಿಕಿ ರಾಜಣಗಿ ಹಾಲಣ್ಣ (ಕಕೆ. ೨೨೦-೩). ೪. ಮುಷ್ಟಿಯಲ್ಲಿ ಹಿಡಿಯಬಹುದಾದಷ್ಟು ಪ್ರಮಾಣ; ಒಂದು ಹಿಡಿಯಷ್ಟು ಪ್ರಮಾಣ: ಮಾಡಿದ ಕಿವಿ ಸಣ್ಣರೋವಂ ಹಿಡಿಕೆಯ ನಡು . . . ಅಡಿ ಮುಂಚುವ ನಾಯ್ಗಳಂ ನೃಪಾಲಂ ಕಂಡಂ (ಪಕಾಂ. ೬೨).

[ಪಿಡಿ$_1$ + — ಕೆ]

ಪಿಡಿಕೆಯ್, ಹಿಡಿಗಯ್, ಹಿಡಿಗೆಯ್$_2$ (ನಾ). ೧. ಹಿಡಿ; ಮುಷ್ಟಿ; ಮುಟ್ಟಿಗೆ: ಪಿಡಿಕೆಯ್ ಕೀವಿದ ಕೂರ್ಗಣೆ . . . ದೆಡಂಗನೆಯೊಳಕೊಳೆ ಧನುರ್ಧರರ್ ಪೆಣೆದೆಟ್ಟರ್ (ಪಂಪಭಾ. ೦೦-೩೦). ಹಿಡಿಗೆಯ್: ೨. (ಅಲಂ) ಅಧೀನ; ವಶ: ಹಿಡಿಗ[ಕಾಣಾಂ. ಗೆ] ಯ್ಕೊಳಿರ್ದಸುರರಿಪು ಪಾರ್ಥನಂ ಕರೆದು . . . ನೇಮಿಸಲು (ಕೃಪಭಾ. ೨೫-೩೪). ಹಿಡಿಗೆಯ್$_3$: (೪).

[ಪಿಡಿ$_2$ + ಕೆಯ್$_3$]

ಪಿಡಿಕೆಯ್ಸು, ಪಿಡಿಕಿಸು, ಪಿಡಿಕ್ಕೈಸು, ಹಿಡಿಕಿಸು, ಹಿಡಿಕೆಯ್ಸು, ಹಿಡಿಕ್ಕೈಸು (ಕ್ರಿ). ೧. ಹಿಡಿದುಕೊಳ್ಳುವಂತೆ ಮಾಡು: (ಕ). ೨. ಕೈಯಲ್ಲಿ ಹಿಡಿದುಕೊಳ್ಳು, –ತೆಗೆದುಕೊಳ್ಳು: ಕಡುಲಂಪಂ ಪಿಡಿಕೆಯ್ಸುಬರ್ಕುಮೆ ಬಟಲ್ದೈತಂದ ತುಂಗಾಳಿಯುಂ ಪಿಡಿಯಲ್ ಬರ್ಕುಮೆ (ಅರಣೀ. ೦-೩೦). ೩. ಮುಷ್ಟಿಯನ್ನು ಗಟ್ಟಿಯಾಗಿ ಹಿಡಿ, –ಬಿಗಿಮಾಡು: ಪಿಡಿದಡಸಿ . . . ಒದೆದೊದೆದು ಗುದ್ದಿಗುದ್ದಿಯೆ ಕೊಲಲೆಂದಡಪಡಿಸು ವಂತಿರ್ದುವ ಪಿಡಿಕೆಯ್ಸು[ಕಾಣಾಂ. ೮ಯಿಸು]ದ ಕೆಯ್ಮುಮೊದೆವ ಕಾಲುಂ ಹರಿಯೂ (ಅರಣೀ. ೬-೩೭). ಪಿಡಿಕಿಸು: ೨. ಬಿಡದೆ ಸುಖಂತ್ರದಿಂದಂ ನಡೆದಂ ಶುದ್ಧಾತ್ಮನಪ್ಪನದನೊಲ್ಲದೆ ವಿಂದಡೆ ಶುದ್ಧನಲ್ಲ ಮಲವುಂ ಪಿಡಿಕಿಸಿ ಪೊಱಗಯ್ಯನೊರಸಿ ಕಚ್ಚಿದ ತೆಱದಿಂ (ಸಮಸ. ಅಮುಂಜಕ. I. ೩೫೩-೬). ೩. ಎರಡುಕೆಯ್ಯಂ ಪಿಡಿಕಿಸಿ ನಿಲ್ವುದುಂ ತಲೆಯುಂ ತೂಗುತ್ತೆ ನಿಲ್ವುದುಂ . . . ಇಂತಿವೆಲ್ಲವುಂ ಪರಿಹರಿಸಿ ಜಿನಪ್ರತಿಮೆಯಂತೆ ನಿಲ್ವುದು ತೃತೀಯಸಾಮಾಯಿಕನೆಂಬ ಶ್ರಾವಕನ ಸ್ವರೂಪಂ (ಪಜಗಕ. ೩೮೩); ಚರಣದಂದುಗೆಕಿಂಕಿಣಿಗಳಿಂ ಚರಣದೊಂದೆರಡಡಿಯನಿಡುತಂ ತರುಣಿ ಯರು ಬಾತಲ್ಕೆ ತೋಳಾಡುತ್ತೆ ಪಿಡಿಕಿಸುತೆ ಶಿರಪೊಲೆಯುತ್ತಂ ನರ್ತಿಸುತಲಿ (ಪಂಚಕಾ. ೦೬-೩೨). ೪. ಒತ್ತು; ಅದುಮು: ಅಡಿಯುಂ ಬಲ್ಲಿದುವು ನಾಲ್ಕೊಡೆಯಂ ಪಿಡಿಕಿಸಿದುವಡರ್ದು ಕಾವನ ತೋಳಂ ಬಿಡದಪ್ಪಿದುವು . . . ಪೊಳೆವ ತಾಜುಗೆವೆಗಣ್ಗಳ್ (ಕಬ್ಭಾ. ೩೫). **ಪಿಡಿಕ್ಕೈಸು**: ೨. ಕೂಡೆ ಮುಸುಱುವ ವಾಱಿದುಂಬಿಯ ಬೀಬಲಿಂ ಲತೆಗಳು ಕರಿಯ ದದ್ದಿಯುಂ ಕವಿದಾತೆಯುಮಾಗೆ ಪಿಡಿಕ್ಕೈಸಲಪ್ಪ ತೆಂಪಿಂ ತೀವಿದಂತಾಗಿ (ಕಾಕರಂಗು. ೩೦೯); ಅಂತು ಪುಡಿಗತ್ತುರಿಯೆಂದು ಪಿಡಿಕ್ಕೈಸಿ ಪೂಸಲುಂ ಪಾಸಿ ದೊಟ್ಟೆಗಟ್ಟಲುಂ ವಿಸಿರಂಗಮಿಂದುಗಂ ಗುದ್ದಲಿಗೊಡಗುಬ್ಬು ಪೊಱಗಾಗಲುಮಾಪ್ಪ ಕಾಳದ ಕಟ್ಟಲೆಯೊಳ್ (ಅರಣೀ. ೩-೦೬ ಕ). ೪. ವಜ್ರವಿಯಮಪಾಪ ಪೀಠದ ಬೆಟ್ಟಿತಿಂಬಂತಿರಗಲೆ ನೂಂಕಿ ಮೆಲ್ಲಿದುಪಪ್ಪ ತಸ್ಸ ನುಣ್ಗೊಡೆಗಳನರಸನ ಪಾದವಲ್ಲವಕ್ಕೆ ಸಾರ್ದಿ ಪಾವೆವಲ್ಲವಂಗಳಿಂ ಪಿಡಿಕ್ಕೈಸುತ್ತುಮಿರ್ವುದುಂ (ಅರಣೀ. ೦-೦೦೦ ಕ); ಲಕ್ಷ್ಮೀ ಲಲನೆಯ ತೆಱದಿಂ ಲೀಲೆಯಿಂ ತನ್ನ ಕಾಲಂ ಪಿಡಿಕ್ಕೈಸುತ್ತಿರ್ದಳಂ ಕನ್ನೆಯನೆ ಕನಸಿನೊಳ್ ಕಂಡಂ (ಅರಣೀ. ೩-೩೯). **ಹಿಡಿಕೆಸು**: ೨.

ಅರ್ಜುನನ ಯಮಳರ ಪದವನೆಚ್ಚಱದಂತೆ ಹಿಡಿಕಿಸುತ . . . ಘನಕಾನನದ ಮಧ್ಯದಲೀತನಿದ್ದನು (ಕುಸ್ಯಾಳ. ೯-೬); ಅರ್ಜುನ ನಕುಲ ಸಹದೇವ ರೆಚ್ಚರಾಗದ ತೆರದಿ ಹಿಡಿಕಿಸುತ್ತ (ರಸ್ಯಾಗಾ. ೩೯-೦೦). ೫. ಹಿಂಡು; ಹಿಸುಕು: ಕೊಡು ಬೆಸನನಹಿಪತಿಯ ತುಡುಕುವೆ ತಡೆವೆನರ್ಜನ ಕಾಲನಸುವನು ಹಿಡಿಕಿ[ಪಾಠಾಂ. ಸಡಿಲಿ]ಸುವೆ (ಕೊರಗಾ. ಪಂ. ೬೦೯). ಹಿಡಿಕೆಯ್ಸು: ೨. ಅತುಳಶಿವಸುಖಸುಧೆಯನಾತ್ಮಸ್ಥಿತಿಗೆ ಕೈಕೈಯಿಂದೆ ಹಿಡಿಕೆಯ್ಸು [ಪಾಠಾಂ. ಕೈಸು]ತವೆ ಸವಿಯಂ ನೋಳ್ಪವೊಲು ಹಸ್ತಂಗಳಂ ಪೀರ್ವ ವಿತತ ಲಿಂಗಧ್ಯಾನಿ (ಬಸವ. ೩-೩೫). ೩. ಹಿಡಿಕೆಯ್ಸಿದ ದೊಟನಂ ರತ್ನಿಯೆಂಬುದು (ಹಲಾಯು. ೯೮-೩೮೨); ಪಿ(ಹಿ)ಡಿಕೆಯ್ಸಿದ ಕೆಯ್ಯ ಕುಡಿತೆಯುಂ ಮುಷ್ಟಿಯೆಂಬುದು (ಹಲಾಯು. ೯೮-೩೮೩). ಹಿಡಿಕೈಸು: ೧. ಮೇಲಿನ 'ಹಿಡಿಕೆಯ್ಸು' ಉಲ್ಲೇಖದ 'ಬಸವು' ಪ್ರಯೋಗದ ಪಾಠಾಂತರವನ್ನು ನೋಡಿ. [ಪಿಡಿ$_1$ + ಕೆಯ್ಸು]

ಪಿಡಿಕೆವೆಱು (ಕ್ರಿ). ಹಿಡಿತಕ್ಕೆ ಒಳಗಾಗು; ಬಂದಿಯಾಗು: ಅತ್ಯಾಸಕ್ತಿಯಿಂ ಮರವಟ್ಟರುತೆಯುಂ ಚಿತ್ರಿಸಿದರಂತೆಯುಂ ಮೂರ್ಛೆ ಪೋದರಂತೆಯುಂ ಆರಾನುಂ ಪಿಡಿಕೆವೆತ್ತರಂತೆಯುಂ ಮಿಡುಕದೆ ನೋಡುತಿರ್ದೆಂ (ಕಾದಂಪು. ೬೧೬). [ಪಿಡಿಕೆ + ಪೆಱು$_1$]

ಪಿಡಿಕೈಸು 'ಪಿಡಿಕೆಯ್ಸು' ನೋ.

ಪಿಡಿಖಂಡ, ಹಿಡಿಖಂಡ (ನಾ). ೧. ಸಣ್ಣ ಚೂರು,-ತುಂಡು: 'ಪಿಡಿಖಂಡಂಗೊಯ್' ಪರಾ. ೨. ಮಾಂಸದ ಸಣ್ಣ ಚೂರು,-ತುಣುಕು: 'ಪಿಡಿಖಂಡಂಗೊಳ್' ಪರಾ. ಹಿಡಿಖಂಡ: ೨. ಕೈ ಇಲ್ಲದ ಮೋಟ ಹಿಡಿಖಂಡವ ಕೊಯ್ದ ನಾಲಿಗೆ ಇಲ್ಲದ ಬಾಯಲ್ಲಿ ಮೆದ್ದ (ಕೋಳಿಪು. ೨೦೩-೬೬೦). [ಪಿಡಿ$_2$ + ಖಂಡ]

ಪಿಡಿಖಂಡಂಗೊಯ್, ಹಿಡಿಖಂಡಂಗೊಯ್ಯು, ಹಿಡಿಖಂಡಗೊಯ್ಯು (ಕ್ರಿ). ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸು; ತುಂಡುತುಂಡಾಗಿ ಮಾಡು: ಬೇವ ಪೆಣಮರಿವ ಬಾಯ್ಗೊಂಡದೊಳ್ ತಮ್ಮ ಜನುವಂ ಪಿಡಿಖಂಡಂಗೊಯ್ದು ಬೀಟ್ವ ಸಾಧಕರುಮಂ (ಅರ್ಥಸೇ. ೩-೪೦ ಪ). ಹಿಡಿಖಂಡಂಗೊಯ್ಯು: ಇನ್ನೆನ್ನಂಗದ ಮೇಲೆ ಬರಲಿ ಹಿಡಿಖಂ[ಪಾಠಾಂ. ಗಂ]ಡಂಗೊಯ್ಯಲಿ . . . ಮತ್ತೆಯೂ ಲಿಂಗಾರಾಧನೆಯ ಮಾಡುವೆ (ಬಸವ. ೬೦೬). ಹಿಡಿಖಂಡಗೊಯ್ಯು: ಪರಧನಕ್ಕಳುಪಿದವರ ಹಿಡಿಖಂ[ಪಾಠಾಂ. ಕಂ]ಡಗೊಯ್ಯನೆ (ಬಸವ. ೩೬೬); ಕಂಡು ಸೈರಿಸಿ ಬಿಡುವುದಕಟಾ ಭಂಡತನ ಬಲುವೀರರಿಗೆ ಹಿಡಿ[ಪಾಠಾಂ. ಕಡಿ]ಖಂಡಗೊಯ್ಯಲುಬೇಕು ಬಲ್ಲಡೆ ಶಾಸ್ತ್ರಸಿದ್ಧವಿದು (ಕೊರಗಾ. ೩-೬-೩೫).

[ಪಿಡಿಖಂಡ + ಕೊಯ್]

ಪಿಡಿಖಂಡಂಗೊಳ್ (ಕ್ರಿ). ೧. ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸು,-ತುಂಡರಿಸು: ಪಿಡಿಖಂಡಂಗೊಳೆ ಮನದೊಳ್ ಪೊಡರ್ಪುಗೆಟ್ಟಗಿದು ಬೆಗಡು ಗೊಂಡವಧಾನಕ್ಕೊಡರಿಸೆ ಭಂಗಮದಂದವರೊಡವುಟ್ಟರೆ ಪುಟ್ಟುಗುಂ ವಿಭಂಗಜ್ಞಾನಂ (ಶಾಂತಿಪು. ೬-೧೦); ಅಡಗಿನ ಕಡುವೆಸನಿಗ ತಿನ್ನಡಗಂ ನಿನ್ನಡಗನೆಂದು ಪೇಸೇಟ್ವಿಸೆಗಂ ಸಿ[ಪಿ]ಡಿಖಂಡಂಗೊಂಡುಗಿಬಗಿದಿಡಿ[ದಿ]ದಿದೆಡೆವಿಡದೆ ಕೂಱುಗೊಳ್ವರ್ ಬಾಯೊಳ್ (ಸುಕುಮಾ. ೦೧-೪೨). ೨. ಮಾಂಸದ ಸಣ್ಣಚೂರನ್ನು ತೆಗೆದುಕೊಳ್ಳು: ದೆವಸದೊಳೆಯ್ದು ಅರಸನಂ ಜಾಮಿಸಿ ನುರಿವುತ್ತಿಟ್ಟುದಂ ಕಣ್ದು ಕೀಟ್ಗುಣ್ಣೆಯಾಗಲ್ಕು[ಡ]ದುದಮಂ ಕುಡುವೆನೆನ್ದು ಪಿಡಿಖಣ್ಡ[ಂ]ಗೊಣ್ಡು ದೆಸೆವಲಿಗೆಱವೊಟ್ಟು (ಸೌಪಾ. Xi-1. ೦೦-೨೦; 865). [ಪಿಡಿಖಂಡ + ಕೊಳ್$_1$]

ಪಿಡಿಗಟ್ಟು, ಪಿಡಿಕಟ್ಟು, ಹಿಡಿಕಟ್ಟು (ನಾ). ೧. ಹಿಡಿತ; ಸೆರೆ; ಬಂಧನ: ಪಾರ್ಥನವನಂ ನೋಡಿ ಪಿಡಿಗಟ್ಟಿಂಗೊಳಗಾಗದವನಿವನ ವಧ್ಯನೆಂದು . . . ಬಳಿಪುವುದುಂ (ಮಹಾವೇ. ೦೦-೩೬ ಪ). ಪಿಡಿಕಟ್ಟು: ೧. 'ಈ ಪ್ರಸೂನಂಗಳನೂನಸೌರಭಕ್ಕಂ ಸುಕುಮಾರತೆಗು ಸೈರಿಸದೆ ನಿಚ್ಚಂ ಮಚ್ಚರಿಸುವುವೆಂದು ಪಿಡಿಕ[ಪಾಠಾಂ. ಗ]ಟ್ಟಿಂಗೊಳಗುಮಾಡಿದು ದೇಬಂತೆ ಪುಷ್ಪಲಾವೀಕದಂಬಂ ಪುಷ್ಪಮಾಲೆಗಳು ಪಿಡಿದಿರ್ದವುದೆಂದು ತ್ರೇಕ್ಷಿಸುತ್ತುಂ (ಪಾರ್ಶ್ವಪು. ೦೦-೪೩ ಪ); ಬಱನಿಲ್ಲಾಱಡಿಯಿಲ್ಲ ಕಳ್ಳರ ಭಯಂ ಮುನ್ನಿಲ್ಲ . . . ನಿರೋಧಮಿಲ್ಲ ಪಿಡಿಕಟ್ಟಿಲ್ಲುದ್ಧ್ರಸಂಪತ್ತಿಯಿಂ ಮೆಱೆವಾ ಪೂರ್ವವಿದೇಹದೊಳ್ (ಶಾಂತಿಪು. ೪-೬). ಹಿಡಿಕಟ್ಟು: ೨. ಕಟ್ಟುಪಾಡು; ಕಟ್ಟಳೆ; ವ್ಯವಸ್ಥೆ: ನಮ್ಮೂರಿನ ಹಿಡಿಕಟ್ಟು ಯಾವೂರಲ್ಲೂ ಇರಲಿಲ್ಲ (ಹುಟ್ಟಿಹ. ೦೩೩); ಆರ್ಥಿಕ ಅನುಕೂಲತೆ ಗೋಸ್ಕರ ಮಾಡಿಕೊಂಡ ಆಡಳಿತದ ಹಿಡಿಕಟ್ಟು ಎನ್ನುವ ಸಂಕುಚಿತ ನೋಟದಿಂದ ನೋಡುವುದನ್ನು ಬಿಟ್ಟು ಸಮಗ್ರರೀತಿಯಲ್ಲಿ ನೋಡು (ರರ್ಮಶ್ರೀ. ೬೮). [ಪಿಡಿ$_2$ + ಕಟ್ಟು$_2$]

ಪಿಡಿಗಲ್, ಪಿಡಿಕಲ್, ಹಿಡಿಗಲ್ಲು (ನಾ). ೧. ಸಣ್ಣಕಲ್ಲು: ಕಾಲಿಂದ ನೆಲನ ಪೊಯ್ದಾಡೆ ಪಿಡಿಗಲ್ಗಳಂ ಮಾಲೆಯಾಡಿದ ತೆಱದಿಂದ ಮೇಲೆಸೆದಿಹ ವಂಬರದೊಳೆನಲದಱ ಕರಾಳತನವನೇನನೆಂಬೆ (ಕುರಾಸಾಂ. ೯-೪೯). ಪಿಡಿಕಲ್: ೨. ಕುಂಬಾರನು ಮಡಕೆಯನ್ನು ಮಾಡಲು ಉಪಯೋಗಿಸುವ ಕಲ್ಲು; ಮಣ್ಣು ತಟ್ಟುವ ಕಲ್ಲು: ಅಸಿ ಮಷಿ ಕುಶೆ(ಷು) ಪಿಡಿ ಪಿಡಿಕಲ್ ಕುಸಿಯುಂ ಪುರಿಯೋಡು ಕೋಡು ಕಾವಲಿ ನುಲಿಯುಂ ಬೆಸಗೊಂಬರ್ ಪಿಡಿದಿರೆಯುಂ ಪುಸಿವರ ಶೂಲಂ ಜಗಕ್ಕೆ ಮಟ್ಟಿಯಿಲ್ಲೆಂದಂ (ಅಟ್ಟಿಪು. ೦-೪೪). ಹಿಡಿಗಲ್ಲು: ೧. ಮುಂಡದ ಹಲಗೆ ಹೆಣದ ಎಲುವಿನ ಕತ್ತಿ . . . ಖಂಡದ ಹಿಡಿಗಲ್ಲು ನರದ ಚಬುಕುಗಳ ಗಂಡುಭೂತಗಳೆದ್ದವಾಗ (ಹರಿಸಾಂ. ೩-೩೬); ಆರಿಸಿ ತೆಗೆದ ಹಿಡಿಗಲ್ಲುಗಳದೇ ಎಕರೆಗೊಂದು ರಾಸಿಯಾಯಿತು (ಶಿಳುಪು ೬೩); ಆಕೆ ಹೊರಗೆ ಬಂದು ನಾಲ್ಕಾರು 'ಹಿಡಿಗಲ್ಲು'ಗಳನ್ನು ಎತ್ತಿಕೊಂಡಳು (ಬರಹಾ. ೦೦೦).

[ಪಿಡಿ$_2$ + ಕಲ್$_3$./ ತಮಿ. ಪಿಟಿಕಲ್]

ಪಿಡಿಗುಂಡು (ನಾ). = ಪಿಡಿಗಲ್ ೧: ಪಿಡಿಗುಂಡಿಟ್ಟು ಕವಣೆಯಾಂತ ಸತಿಯರ ನಿಡುತೋಳ್ಗಳೆಸೆದುವು (ಶ್ರೀಪಾಂ. ೦-೩೩); ಪಿಡಿಗುಂಡು ಬಡಿಗುಂಡು ಜಡಿದು ಪೊಯಿವ ಗುಂಡು ಒಡನೆತ್ತಿ ಹಾಕುವ ಗುಂಡು (ಅಪಂಸ. ೦೬-೪೬); ಕನಕಾದ್ರಿಯಂ ಪಿಡಿಗುಂಡ ಮಾಳ್ಪ . . . ಸೂರ್ಯಮಂಡಲವ ನೊಡೆವ ಘುಡುಘುಡಿವ ಸಿಡಿಲಂ ಸೀಳ್ವ ರುದ್ರಗಣಮೆಡೆವಿಡದೆ ಕಣ್ಗೆಸೆದುದು (ಸಬಪು. ೨-೨೪); ಪಿ[ಪಾಠಾಂ. ಸಿ]ಡಿಗುಂಡು ಬಡಿಕೋಲ್ಗಳುಱುಬೆಯಿಂದಿ ಱುಬೆಯಿಂ . . . ಜಡಿದಾರ್ದು (ಶ್ವಮಿಪಾ. ೨೬-೪೬). [ಪಿಡಿ$_2$ + ಗುಂಡು]

ಪಿಡಿಗುದುರೆ, ಹಿಡಿಗುದುರೆ (ನಾ). ಹೆಣ್ಣುಕುದುರೆ: ಪಿಡಿಗಳನೇಱಿ ಕೆಲಂಬರ್ . . . ಕೆಲರ್ಪಿಡಿಗುದುರೆಗಳೊಳ್ ಪೆಱವರ್ಪೊಡವಿಯೊಳಡಿಯಿಟ್ಟು ತಳರ್ದರ್ (ರಾಜಶೇ. ೦೦-೦೩). ಹಿಡಿಗುದುರೆ: ಎಕ್ಕಟಿಗರೇಱಿ ಹಿಡಿಗುದುರೆಗಳನು ಎಣಿಕೆ ಮಾಡದೆ ಹಿಡಿದ ರಾಯರಾವುತರು . . . ಹೊತ್ತಱಿಯದೆಚ್ಚಾಡುವ ಮಹಾರಥಿಕರೆಸೆದರಲ್ಲಿ (ಸಮ್ಮಳೌ. ೯-೪೯); ಹಿಡಿದರು ಹಿಡಿಗುದುರೆಯ [ಪಾಠಾಂ. ಬಲುಖಾನರ] ರಾವುತರನು ಕೆಡಹಿದರು (ಕುರಾಸಾಂ. ೪೨-೬೬). [ಪಿಡಿ$_2$+ಕುದುರೆ]

ಪಿಡಿಗುದ್ದು (ನಾ). ಮುಷ್ಟಿಯನ್ನು ಬಿಗಿದು ಕೊಡುವ ಪೆಟ್ಟು,-ಹೊಡೆತ: ಈ ಬಸಪ್ಪನನ್ನು ಹಿಡಿಸಿ ಚೆನ್ನಾಗಿ ಪಿಡಿಗುದ್ದಿನ ಸೇವೆಯನ್ನು ಮಾಡಿಸಲೇಬೇಕೆಂದು ನಿಷ್ಕರ್ಷೆ ಮಾಡಿಕೊಂಡು (ಮುಸುಗ. ೬೩).

[ಪಿಡಿ$_2$+ಗುದ್ದು$_2$(< ಗುರ್ದು$_2$). / ತೆಲು. ಪಿಡಿಗುದ್ದು, ಪಿಡಿಗ್ರುದ್ದು]

ಪಿಡಿಗೋಲ್, ಪಿಡಿಗೋಲು, ಹಿಡಿಕೋಲು, ಹಿಡಿಗೋಲು (ನಾ). ಹಿಡಿದುಕೊಳ್ಳುವ (ಸಣ್ಣ)-ಕೋಲು, ದೊಣ್ಣೆ: ದಟ್ಟಿಯೊಳ್ಸುತ್ತಿರ್ದ ನಾಗರ ಮರಿಯೆಂಬ ಕೂರಸಿಯಂ ಕೊಂಡು ಪಿಡಿಗೋಲ್ಗೊಳಿಸಿ ಘಲ್ಲಿಸುತ್ತಂ ಕುಶಖಾನಂಗಿದಿರ್ಚಿ ನಿಲಲ್ (ಕಳಪ್ಪ. ೩-೨೮). ಪಿಡಿಗೋಲು: ಶಾಂತಲಾದೇವಿ

. . . ವಕ್ಕದ ದಂತದ ಪಿಡಿಗೋಲನ್ನು ಮೆಲ್ಲಗೆ ತೆಗೆದುಕೊಂಡು ದೇಗುಟೆಯ ಮೇಲೆ ಪ್ಯದುವಾಗಿ ಬಡಿದಳು (ಕವಿ. ೨೦೦). **ಹಿಡಿಕೋಲು** : ನಾಟಿ: ಬೀಹದ ಮಾರಿ ಹಿಡಿಕೋಲು. ಐದು: ಒಂದು ಭಾರಿ ಧಶ್ರಿ (ಕೂಡಂಗಿ. ೦೦೬). **ಹಿಡಿಗೋಲು** : ಒಡೆಯರ ವ್ಯಾಣಕ್ಕೆ ಇದ್ದಿತ್ತೆ ಯಜ್ಞೋಪವೀತ ಕಡೆಯಲ್ಲಿದ್ದ ಅಂತ್ಯದನು ಹಿಡಿದಿದ್ದನೇ ವ್ಯಾಣದಲ್ಲಿ ಹಿಡಿಗೋಲ (ರೇಣಾಕ. ೪೯–೯೬). [ಪಿಡಿ$_1$ + ಕೋಲ್$_1$]

ಪಿಡಿಗೋಲು 'ಪಿಡಿಗೋಲ್' ನೋ.

ಪಿಡಿಚೆ ' ಪಿಡಿತೆ ' ನೋ.

ಪಿಡಿಚೆಂಡುವೊಯ್ (ಕ್ರಿ). ತಲೆಯನ್ನು ಹಿಡಿದುಕೊಂಡಂ ಕತ್ತರಿಸು : ದುರ್ಜನರೆಲ್ಲಂ ಉರವಣಿಸಿ ಬಂದಿರಪ್ಪಡೆ ತಲೆಯಂ ಪಿಡಿಚೆಂಡುವೊಯ್ವ ನಜ್ಜುನನನುಡುಂ (ಎಳ. VI, ೪೬೩೮. ೩೮–೩೭; 1191).

[ಪಿಡಿ$_1$+ಚೆಂಡು (<ಸೆಂಡು) + ವೊಯ್$_1$]

ಪಿಡಿತ, ಹಿಡಿತ (ನಾ). ೧. ಹಿಡಿದುಕೊಳ್ಳುವಿಕೆ : 'ಕಾಲ್ವಿಡಿತ' ಪರಾ. **ಹಿಡಿತ** : ೨. ಅಂಕೆ ; ಹತೋಟಿ ; ಅಧೀನ : ಆತ್ಮನಾದವನ ಯಲ್ಲಿದ್ದಿತ್ತು ಷಡುವರ್ಗದೊಳಗಲ್ಲ ನಡೆ ನುಡಿ ಚೈತನ್ಯವಲ್ಲ ಹಿಡಿತಕ್ಕೆ ಬರಲಿಲ್ಲ ಇನ್ನೆಂತಿಪ್ಪುದೋ (ಅರಕ. ಕುಮ. ೨೦೮-೩೬೫); ಸ್ಪುಟದಿ ಹಿಡಿಯೆ ಹಿಡಿತಕೆ ಸಿಕ್ಕದಿಹ ಹಸ್ತವುಟದೊಳಶ್ಶಿತ್ತ ರಚ್ಚಿಸುವ (ಕರ್ನ. ೦೩-೩೫). ೩. ಕಟ್ಟುಪಾಡು ; ವ್ಯವಸ್ಥೆ ; ಒಟ್ಟಿನಲ್ಲಿ ನವಮ್ಮೂರ ರೈತರು ಒಂದು ಹಿಡಿತದಿಂದ ಊರನ್ನು ಆಳುತ್ತಿದ್ದರು(ಹುಬ್ಬ. ೧೭). ೪. ಕುಸ್ತಿವರಸೆಯಂ ಒಂದು ಪಟ್ಟು : ಸುಗ್ರೀವನು ಅನೇಕ ಹಿಡಿತಗಳಿಂದ ತನ್ನ ಸಾಮರ್ಥ್ಯವನ್ನು ತೋರಿಸಿದರೂ ಕಡೆಗೆ ವಾಲಿಗೆ ಅಂಜಿ ಆತನು ಹಿಂದಕ್ಕೆ ಸರಿಯುತ್ತಿದನು (ಕುಳೀ. ೨೩೦). [ಪಿಡಿ$_1$ + – ತ$_3$]

ಪಿಡಿತರ್, ಹಿಡಿತರ್, ಹಿಡಿತರು (ಕ್ರಿ). ೧. (ಕೈಯಲ್ಲಿ) ಹಿಡಿದುಕೊಂಡು ಬರು : ಎಮ್ಮ ಭಕ್ತರು ಕೊಟ್ಟ ವಾತ್ರೆಯಂ ಪಿಡಿತಂದು . . . ಬಯ್ಕುಟ್ಟು ಕೊಡಿಯೆಂದು (ತಮಿ. ಕೀ. ೦೬–೭). ೨. ಸೆರೆ ಹಿಡಿದು ತರು ; ಬಲಾತ್ಕಾರದಿಂದ ಕರೆತರು : ಎನ್ನನಾಗದಮ್ಮನ ನಿಕ್ಕಿದನು ಪೊರಳ್ದ ಕೊಂವಂದಱೆಯಟ್ಟಿ ಮುಟ್ಟಿ ಪಿಡಿತಂದು (ಕರಾಹು. ೦–೦೯); ರುದ್ರಸಖುಮುಖ್ಯಸುರರಂ ಬಡಿದು ಪಿಡಿತಂದು (ಕಂಪು. ೦–೯); ನರರಕ್ಕಸರನಿಜ್ಜೀದೋಡಿಸಿ ಪಿಡಿತಂದ ವರಮದಗಜದ ಶಾಲೆಗಳು ಮೆಱೆದುವು (ಕಂಪಕ. ೬–೨೦). **ಹಿಡಿತರ್** : ೨. ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ (ಶುಶಾಕೀ. ೩. ೭೦–೦೭೪). **ಹಿಡಿತರು** : ೧. ಆ ಬಱಿಯ ಬಟ್ಟಲನಬಳಿ ಹಿಡಿತರಲು (ಪಾಪು. ೦೪–೨೬). ೨. ನಾವು ಹಿಡಿತಂದುದು ಮೊದಲು ನೀರ್ಗುಡಿಯಲೊಲ್ಲವು (ಪಾಪು. ೬೦–೫೪); ದಾಂಡವವಿಭುವ ಹಿಡಿತಹೆನೆಂದು ಕೌರವಸಭೆಗೆ ಭಾಷೆಯ ಕೊಟ್ಟು (ಭಾಷ್ಯಕ್ರಿ. ೨ ಸೂಚಿ). [ಪಿಡಿ$_1$+ತರ್$_1$]

ಪಿಡಿತರಿಸು, ಹಿಡಿತರಿಸು (ಕ್ರಿ). ಸೆರೆಹಿಡಿದುಕೊಂಡು ಬರುವಂತೆ ಮಾಡು ; ಸೆರೆ ಹಿಡಿಸು : ಕೊಟ್ಟಾರದ ಕರಣಂ(ಣ)ಗಳಂ ಬಂಚಿಸಿ ಕಳ್ದು ದ್ರವ್ಯಮಂ ಸೂಳೆಗೆ ಕೊಟ್ಟೊಡರಸಂ ಪಿಡಿತರಿಸಿ ಹತಿಯಿಸೆ (ಪಾಪುಂಜ. ೨೬); ಜಿನಮುನಿಗಳಂ ಪಿಡಿತರಿಸಿ ಕಬ್ಬುನದ ಶೂಲಂಗಳಲಿ ತೆಗೆಸಿದನು (ಪಾಪು. ೫೦–೫೧). **ಹಿಡಿತರಿಸು** : ಒಡೆಯರು ವೀರಾಜಯ್ಯನನ್ನು ಶಿಕ್ಷಿಸಬೇಕೆಂದು ನಿಶ್ಚಯ ಮಾಡಿ ಅವನನ್ನು ಹಿಡಿತರಿಸಿ (ಒಡೆ. ೦೬).

[ಪಿಡಿತರ್+ – ಇಸು$_5$]

ಪಿಡಿತೆ, ಪಿಡಿಚೆ, ಹಿಡಿತೆ (ನಾ). ೧. ಹಿಡಿದುಕೊಳ್ಳುವಿಕೆ ; ವಶಪಡಿಸಿಕೊಳ್ಳುವಿಕೆ ; ಸ್ವಾಧೀನ ಮಾಡಿಕೊಳ್ಳುವಿಕೆ : (ಕೆ). **ಪಿಡಿಚೆ** : ೨. ಒಂದು ಹಿಡಿಯಷ್ಟು ಪ್ರಮಾಣದ ವಸ್ತುವ್ದೆ.—**ಉಂಡೆ** : ಕಾಡು ಮಾರದ ಸೊಪ್ಪು ನೆರಳ ಕಟ್ಟಿಯೆಡೆಯು ನೀರ ತಂದು ಮಾಡಿ ಮಣ್ಣು ಪಿಡಿಚೆಯಲಿ ಕೂಡಿ ನಿನ್ನ ಪೂಜೆ (ಕಬ್ರೆ. II. ೩೦–೦); ಪಿಡಿಚೆಯನು ಮಾಡುತಲಿ ಶಿಖೆಗಳ ಪಿಡಿದು ತೂಗುತ ಹತ್ತುಮೊಗಗಳ ಏಡಿತೆ ನೀನಾರೆಂದು ಕೇಳಿದಳವಳು ದಶಗಳನ (ಜಾತ್ರೆ. ೩೩–೩೩). **ಹಿಡಿತೆ** : ೧. ಚಿವ್ಮುಟಿಗೆಯಲಿ ಮುಳ್ಳನುಪ್ಪೊತ್ತಿ ಅವುರಿಸಿದಂತೆ ಪೊನೆಗಾವಿಂದ ವಸ್ತುವನು ಮುತ್ತಿ ಹಿಡಿದಂದದಲಿ ವೊಳೆಗಳನೊತ್ತಿಯಿಳ್ಕಳಿದಿಂ ಹಿಡಿದಂತೊತ್ತಿ ಬೆಳಗಲಿ ಚಿತ್ತು ಹಿಡಿವುದೆ ಹಿಡಿತಿ[ತೆ]ಕೇಳು (ಜ್ಞಾಪ್ರಬೋ. ೦೪–೩೩) : ಲಕ್ಷವಿದ ಹಿಡಿತಿ[ತೆ]ಯನರಿಯುವಳ ಲಕ್ಷ ನಿಂತೆ ನೀನೆ ಬ್ರಹ್ಮಾಗಿ ಹೊಳೆಯು (ಕಡಾಪ. ೩೭–೩). ೩. ಹಿಡಿಕೆ ; ಕಾವು ; ಹಿಡಿ : ಹಿಡಿತೆಯು ಹಿಡಿದು ಇಱಿಯಬೇಕಲ್ಲದೆ ಮೊನೆಯು ಹಿಡಿದು ಇಱಿದವರುಂಟೇ (ಕೋಗಮ. ೨೭೭–೨೯೪). ೪. ಬಂಧನ ; ಹಿಡಿತ : ಇವನ ಕಾದರೆಯೊಡನೆಯಿವಂ ಪರನ್ಪರ ಹಿಡಿತೆಗೊಳಗಾದನು (ಶಾಸೋಪು. ೩೩–೭).

ಪಿಡಿತೆಬಿಡಿತೆ—ಸೆರೆ ಹಿಡಿಯುವಿಕೆ ಮತ್ತು ದಂಡಿಸುವಿಕೆ : ಜನನಾಥನೇ ನೊಂದನಾದರುಂ ಪಿಡಿತೆಬಿಡಿತೆಗಳಿಂದ ಜನವಸೀಕೃತಗೈವುದು (ಕಂಗಾಕಾ. ೭–೨೭–೭). **ಹಿಡಿತೆಬಿಡಿತೆ—ಹಿಡಿಯುವಿಕೆ ಮತ್ತು ಬಿಡುವಿಕೆ** : **ಹಿಡಿತೆಬಿಡಿತೆ** ಕೊಳುಕೊಡೆಯು . . . ಜಡಿಮುಡಿ ಗಾಡಿಮೋಡಿಗಳು ಕ್ಷತ್ರಿಯಗೆ ಸಂಗಡಿಸಿರದೇಕು (ಹಜ. ೩೯–೦೦೩); ಬಲ್ಲ ಸೊಲ್ಲಿನ ಹಿಡಿತೆ ಬಿಡತೆಗಳೆಲ್ಲ ತ್ರೈಜಗದೂಡೆಯ ಈ ಬಲ್ಲ (ಗಗಾ. ೨–೭೮).

[ಪಿಡಿ$_1$+ – ತೆ$_3$]

ಪಿಡಿನಡು (ನಾ). ಹಿಡಿಯಲ್ಲಿ ಹಿಡಿಯಬಹುದಾದಮ್ಮ ತೆಳಂವಾದ ಸೊಂಟ ; ತೆಳುನಡು : ಉಡುವುಧ್ಯದ ರೋಹಿಣಿಗೆ ಪಡಿಯೆನಿಪ ಕೆಳದಿಯರ ನಡುವೆ ಪಿಡಿನಡುವಿನ ನೀಜಿ'ಯ ಕಂಡು (ಕಂಪಣಾಂ. ೨–೬೩); ತರುಣಭೃಮರಸವಿಸಿತಿಯ ಬೆಡಂಗಂ ಪರಿದುಂ ಗೆಲೆವಂದುದು ಪಿಡಿನಡುವಿನ ಕುವರಿಯ ಕುರುಳೋಳಿ (ಜಯಾಕಾ. ೩–೩೦); ಬಾಯ್ತುಡುವ ಪೆಣ್ಮೀನ ತಂದವಳು ಪಿಡಿನಡುವಿನ ವಾಯಾಂಗನೆಗಿತ್ತು ಬೇಗಡಿಗೆಯ ಮಾಡ ಹೇಳಿದಳು (ಕೋಚಕ. ೦೦–೩೭); ಕೊಬ್ಬಿದ ಪೊಜವಾಜು ಪಿಡಿನಡು ಕೊಂಕಿದ ಹುಬ್ಬಿನ ಪೆಣ್ಣು (ಕರ್ನ. ೨–೨೮). [ಪಿಡಿ$_1$+ನಡು$_1$]

ಪಿಡಿನಡೆ (ನಾ). ಅನೆಯ ಗಂಭೀರವಾದ ನಡಿಗೆ.—**ಮಂದಗಮನ** : ಅಣುಗಿ ಎನಸುಂ ನಾಣ್ಣೆ ಱರೆದೊಳ್ ಪೂಮಾಲೆಗೊಂಡು ಪಿಡಿನಡೆಯಂತೆ ಸಱುಚರಿಯರ್ವೆರಸು ಮೆಲ್ಲನವರಿರ್ವರ ಸನಿಯಮುಂ ಸಾರ್ದು (ಅದ್ಭು. ೦೦–೦೦). [ಪಿಡಿ$_1$+ನಡೆ$_3$]

ಪಿಡಿಪಡು 'ಪಿಡಿವಡು' ನೋ.

ಪಿಡಿಪೀ (ಕ್ರಿ). ಅಧೀನವಡಿಸು ; ವಶಕ್ಕೆ ಕೊಡು : ಕಾದುವ ಕೂರ್ವುದೋರ್ವ ಬೆಸನಂ ರಘುಜಂ ಬೆಸವೇಳ್ದನಿಲ್ಲ . . . ಆನೀ ದನು ಜಾತ್ಮಜಂಗೆ ಪಿಡಿಪತ್ತು ದಶಾನನನಳ್ಕೆ ಬಳ್ಕೆ ಲಂಕಾದಹನಕ್ಕೊಡರ್ಚುವೆಂ (ಕಂಗಾಮಾ. ೦೦–೦೬೬); ಬಗೆಬುದೆ ದಾನವಾಧಿಪನ ದೋರ್ಬಲಮಂ ಖಚರಪ್ರವೀರತಂ ಬಗೆಯದೆ ನಚ್ಚಿ ತನ್ನಳವನಿಂದಗಿಗಾಂ ಪಿಡಿಪೀವೆನೆಂಬುದಂ ಬಗೆದು (ಕಂಗಾಮಾ. ೦೦–೦೬೯). [ಪಿಡಿವು+ಈ$_5$]

ಪಿಡಿಪು, ಹಿಡಿಪು, ಹಿಡಂಪಂ (ನಾ). ೧. ಹಿಡಿದುಕೊಳ್ಳುವಿಕೆ ; ಹಿಡಿತ ; ಪತಿಯಾಜ್ಞೆತಿಗೆ ಪ್ರತಿನುಡಿಯಲಾರದೆ ಪತಿವ್ರತೆ ಮಹಾಸ್ಯದಿಂ ಸಡಿಲಿಸಿನಿಯನ ಮುಷ್ಟಿಯಂ, ಪಿಡಿವನೋಸರಿಸಿ (ಶ್ರೀಪಾಪು. ೧೧೬–೩೩). **ಹಿಡಿಪು** : ೧. ತೊಡೆಯ ಹಿಡಿಹಿನ ವಾಜಿ ತೊಂಡಿಯನೊಗಡಿ ಲಾಳ್ಪುವ ತೇಜಿ (ಕೃಷ್ಣಾಶ್ವ. ೦೩–೦೦). ೨. ಹಿಡಿ ; ಮುಷ್ಟಿ : ಕಂಗಳು ಹೊಳೆಯೆ ಮಜ್ಜಿವಿಾನೆಂದು ಹೆಕ್ಕಳಿಸಿದರು ಹಿಡಿ[ಜಾಣಂ.ಡು]ಹಿನಲಿ ಅಲರಿದಂಬುಜವೆಂದು ವದನಕೆ ನಿಲುಕಿ ತುಂಬಿಗಳೆಂದು ಕುರುಳಿಂಗಳತಿ ಕೈಗಳ ತೆಱೆದರತಿ ಮುಗುದೆಯರು (ಭುವ್ಯಾಕ. ೦೦-೫೮). ೩. ಹತೋಟಿ ; ಅಂಕೆ : ಬಲುಕಣೆಯು ಹಿಡಿ[ಜಾಣಂ.ಡು]ಹಿಂಗೆ ಲಾಗಿಸು

ತಿರ್ದುದಾ ಪಂತಿ (ಕುಪ್ಯಾಪ್ರೋ. ೩-೩೭); ಆವಗು ಕೈಯಲ್ಲಿ ಪಿಡಿಯೆ ಹಿಡಿಹಿಗೆ ಸಿಕ್ಕದು (ವೀಕೈಪು. ೬-೩-೩೯). ೪. ಸೆರೆ ; ಬಂಧನ : ಎಸುತ ನಡೆದಿಟ್ಟಳಿಸಿ ಹಿಡಿಹಿಂಗೊಳಗುಮಾಡಿ ವಿಘಾತಿಯಲಿ ತಡೆಯೆ (ಕುಪ್ಯಾಪ್ರೋ. ೨-೩). ಹಿಡುಹು : ೨. ಮೇಲಿನ ಉಲ್ಲೇಖದ 'ಕುವ್ಯಾಆ. ೧೧-೨೮' ರ ಪ್ರಯೋಗದ ಪಾಠಾಂತರವನ್ನು ನೋಡಿ. ೩. ಮೇಲಿನ ಉಲ್ಲೇಖದ 'ಕುವ್ಯಾದ್ರೋ. ೩-೩೭' ರ ಪ್ರಯೋಗದ ಪಾಠಾಂತರವನ್ನು ನೋಡಿ. [ಪಿಡಿ$_1$ + – ಪು$_2$]

ಪಿಡಿಪೆಱು 'ಪಿಡಿವೆಱು' ನೋ.

ಪಿಡಿಪೊನ್. ಹಿಡಿಹೊನ್ನು (ನಾ). ಹಿಡಿ ತುಂಬುವಷ್ಟು ಚಿನ್ನದ ನಾಣ್ಯ : ನಿಲ್ಲೆಂದ ಪಡಿಯಱಿಗೆ ಪಿಡಿಪೊನ್ನ [ಪಾಠಾಂ ಹೊಂಗ]ಳ ಚೆಲ್ಲುತ ಚತುರಭೂಮಿಪರು ನಿಲ್ಲದೆಯ್ತಂದರು (ಕಂಠಾಸಾಂ. ೦೬-೩೦). ಹಿಡಿಹೊನ್ನು : ಬಡವನಾದರು ಚಿಂತೆ ಬಲಿದನಾದರು ಚಿಂತೆ ಹಿಡಿಹೊನ್ನು ಕೈಯೊಳಾದರು ಚಿಂತೆಯು (ಪುಕಂದ. ೦-೪೫-೩); ಪಾಳೆಯಪಾಳೆಯದೊಳಗೆ ಚೆಲ್ಲಿತು ಸೂಱೆ ವೀಳೆಯ ಹಿಡಿಹೊನ್ನು ವರಹ (ಪೋಪಕ. ೦೬-೩೬); ದೀನದಲಿತರಿಗಂತೂ ಹಿಡಿಹೊನ್ನು, ಬೊಗಸೆಹೊನ್ನು ದೊರೆತುವು (ಹೇಶುಕೂ. ೬); ಕಡೆಗಣ್ಣ ಭಾವಕ್ಕೆ ಹಿಡಿಹೊನ್ನ ಕೊಟ್ಟೇನು (ಹಳ್ಳಿಪಾ. ೬೦).

[ಪಿಡಿ$_2$ + ಪೊನ್]

ಪಿಡಿಯಂಬು, ಹಿಡಿಯಂಬು (ನಾ). ೧. ಹಿಡಿದಿರುವ ಬಾಣ : ಪಿಡಿಯಿಂದಿಟ್ಟಿದಳ್ . . . ವಧು ಮದನನ ಕೈಪಿಡಿಯಂತೆಸೆದೀಕ್ಷಿಪರಂ ಪಿಡಿಯಂಬಿಂ ಕಾಮನಾರ್ದು ಸಾರ್ದಿಸುವಿನೆಗಂ (ಪಗಶಿ. ೦೪-೩೬). ಹಿಡಿಯಂಬು : ೧. ಕತ್ತಿ ಬಳಹು...ಕತ್ತರಿ ಮಳಲು ಚಂಡವೇದಿಯು ಕಿತ್ತ ಹಿಡಿಯಂ ಬಿಡುವ ಕಲ್ಲುಂ ಮತ್ತೆ ಮುಖ ಮಾಯದತಿಲಕಮುಂ ಕರ್ಕಟಿಯ ರಜ್ಜು (ಪಸಪು. ೩೦-೩). ೨. ಹಿಡಿ ತುಂಬುವಷ್ಟು ಬಾಣ: ಹಿಡಿಯಂಬಂ ಕಟ್ಟೆ ಬಾರಿಂದುಡೆದೊವಲೆಡೆಯೊಳ್ ಬಿಲ್ಲುಮಂ ಕೌಂಕುಳಲ್ಲಂದಡಸಿಟ್ಟೆಯ್ದೊತ್ತಿಯಂಬಂ ತಿರುಪುತೆ . . . ಎಡಬಲನಂ ನೋಡುತುಂ ಪೋದನೊರ್ವಂ ಕಡುಪಿಂದಂ ಬೇಂಟೆಯ ಕ್ರೀಡೆಗೆ ದರವಿಳಸತ್ಕಿಂಕಿರಾತಂ ಕಿರಾತಂ (ಪಾಠಪು. ೦೦-೦೦೩). [ಪಿಡಿ$_1$ + ಅಂಬು$_2$]

ಪಿಡಿಯಚ್ಚುವಿಡಿ (ಕ್ರಿ). ಹಿಡಿದುದನ್ನೇ ಬಲವಾಗಿ ಹಿಡಿ,—ದೃಢವಾಗಿ ನಂಬು : ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಯತಿಕಯೋಗಾಚಾರಮಾಧ್ಯಮಿಕಮತವಿತಥಾಭಿದಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು (ಅದಿಪು. ೨-೭ ಪ); ಪುರಜನಂಗಳೆಲ್ಲಮೋರೊರ್ವರನೆ ಪಿಡಿಯಚ್ಚುವಿಡಿದು ನುಡಿಯೆ (ಸಂಸಪಾ. ೨-೫೬ ಪ); ಎಂದೊಡದನೆ ಪಿಡಿಯಚ್ಚುವಿಡಿದುಂಟುಮಾಡಿ ದಂಡಂಗೊಂಡು ತಿಳಿದೊಳಂ ಕಂಡು ಯುವರಾಜಪ್ರಭೃತಿಗಳೆತ್ತ ಮೆಟ್ಟೆತ್ತ ಚಪ್ಪಟೆಯೆಂದು ನಗುತಂ ಪೋಗಿ (ಶಾಂತಿಪು. ೯-೯೪ ಪ); ಪಾಪಹೇತುವಪ್ಪ ದುರ್ಮಾರ್ಗಮಂ ಪಿಡಿಯಚ್ಚುವಿಡಿಯದೆ . . . ಸುಖಹೇತುವಪ್ಪ ಸನ್ಮಾರ್ಗದೊಳ್ನೆಗಟ್ಟುದು (ಧರ್ಮಾಸ್ಯು. ೪-೩೬).

[ಪಿಡಿ$_1$ + ಅಚ್ಚು$_3$ + ಪಿಡಿ$_1$]

ಪಿಡಿಯಾನೆ, ಹಿಡಿಯಾನೆ (ನಾ). ಹೆಣ್ಣುಆನೆ ; ಪಿಡಿ ; ಕರಿಣಿ : ಪಿಡಿಯಾನೆಯಲ್ಲಿಯುಂ ಧೇನುಕಾ, ಗಣಿಕಾ ಎಂಬುದು (ಹಠಾಯು. ೦೩೩-೦೩). ಇಕ್ಷುಚಾಪನ ಪರಿವಾರದೇವತೆಯರಂತೆಸೆದಿರ್ಪ ವಿಳಾಸಿನೀಜನಂ ತನತನಗಾಗಳೆಯ್ದೆ ಪಿಡಿಯಾನೆಗಳಂ ಪಗೆಪಿಂದಮೇಱಿದರ್ (ಕುಸುಮಾ. ೩-೩೩). ಹಿಡಿಯಾನೆ : "ಹಸ್ತಿನೀ, ವಶಾ—ಈ ೨ ಹಿಡಿಯಾನೆ" (ಹಠಾಯು. ೩೯-೩೨).

[ಪಿಡಿ$_3$ + ಆನೆ$_1$]

ಪಿಡಿಯಾಳ್, ಪಿಡಿಯಾಳು, ಹಿಡಿಯಾಳು (ನಾ). ಬಂದಿ ; ಸೆರೆಯಾಳು: 'ಪಿಡಿಯಾಳ್ಗೈಸು' ಪರಾ. ಪಿಡಿಯಾಳು : ಪಿಡಿಯಾಳಾಗಿ ಪೋಪೆನು (ಅಂಪಸ. ೦೪-೦೫೩); ಅಂಜಚ ಪಿಡಿಯಾಳಾಗಿ ಹಿಡಿದು ನಿಮ್ಮಡಿ[ಗೊಪ್ಪಿಪ] ಸಡಗರ ವೆನಗಿರುತಿರಲ್ (ತ್ರಿಪುಸಾಂ. ೦೪-೦೩೩); ತರಣಿಯಂ ಬೆನ್ನಟ್ಟಲೊಡನೆ ಪಿಡಿಯಾಳಾದ ಕಿರಣಂಗಳಂ ಸೆಱೆಯಿನಲ್ಲಿಟ್ಟುದೋ ತಮಂ (ಪಸಪು. ೯-೯). ಹಿಡಿಯಾಳು : ಚಂದ್ರಸೂರ್ಯರನಡ್ಡವಿಸಿ ಹಿಡಿಯಾಳ ಹಿಡಿದವು ಮುಗಿಲ ಚೂಣಿಗಳು (ಕುಪ್ಯಾಲಿ. ೦೯-೦೬); ರಾಮನ ಹಿಡಿಯಾಳ ಹಿಡಿವೆವು (ಕುಠಾಸಾಂ. ೦೯-೦೨೩); ಹಿಡಿಯಾಳಾಗಿ ಸಿಕ್ಕಿದ ಚಿಕ್ಕಹೈದನ ಕಡಿದಡೆ ಕಲಹವಿಲ್ಲನುತ (ಪೋಪಕ. ೩೬-೦೯). [ಪಿಡಿ$_3$ + ಆಳ್$_3$]

ಪಿಡಿಯಾಳು ಪಿಡಿಯಾಳ್' ನೋ.

ಪಿಡಿಯಾಳ್ಗೈಸು (ಕ್ರಿ). ಸೆರೆಯಾಳನ್ನಾಗಿ ಮಾಡು ; ಬಂಧಿಸು ; ಸೆರೆಹಿಡಿ : ಪಿಡಿಯಾಳ್ಗೈಸುವೆಂ ನೆರೆದ ನಿನ್ನ ತೆತ್ತಿಗರನೆನುತಾ ಖಳಂ ಕೋಲ್ಗಱೆದನು (ಪಸಪು. ೪೯-೨೦).

[ಪಿಡಿಯಾಳ್ + ಕೈಸು (< ಕೆಯ್ಸು)]

ಪಿಡಿಯಿಸು, ಪಿಡಿಸು, ಹಿಡಿಸು (ಕ್ರಿ). ೧. ಹಿಡಿದುಕೊಳ್ಳುವಂತೆ ಮಾಡು ; ಹಿಡಿಯುವಂತೆ ಮಾಡು : ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ ಪಿಡಿಯಿಪ್ಪೆಂ ಕರಚಕ್ರಮಂ (ಸಂಸಪಾ. ೦೦-೨೩); ಪರಲೋಕಾಲೋಕನಮಂ ಪರಿಹರಿಸಿದೆವಲ್ತೆ ನೋಡಿ ಮೆಂದೀಗಳುದಾಹರಿಸುವ ತೆಱದಿಂ ಪಿಡಿಯಿಪರರಸುಗಳೆಡೆವಿಡದೆ ಮೇಘಡಂಬರತತಿಯಂ (ಕಾದಂಪೂ. ೩೩೩); ಗಂಡಿಗಂ ತಾಪಸನವರನೊಡಗೊಂಡು ಬಂದತಿಪೂತಜಲದಲಿ ದಂಡಮಂ ಪಿಡಿಯಿಸಿ ಮುಳುಂಕಿಸಲು (ಪಸಪು. ೨೬-೬೩). ೨. ಬಳಿ ; ಲೇಪಿಸು ; ಸವರು : ನಾಗರಮನರೆದು ಕರಮಿಂಬಾಗಿರೆ ಗಾಳಿಸಿ ಬಟ್ಟಿಕ್ಕೆ ನಸ್ಕಾಂಜನಮಂ ಬೇಗಂ ಮಾಟ್ಟುದು ನೀರೊಳಗಾಗಳೆ ಪಿಡಿಯಿಸುಗೆ ಮೂತ್ರಕೃಚ್ಛ್ರಾಪಹರಂ (ಅಶ್ಶಾ. ೦೦-೨೨). ಪಿಡಿಸು : ೧. ತನ್ನುಡೆಗಚ್ಚೆಯನು ಬಲುಹಾಗಿ ಪಿಡಿಸುತ್ತಾತನಂ ತಲೆವಾಗಿಸುತ್ತಂ (ಪಸಪು. ೨೬-೨೩); ಪೊಯ್ ತ್ರಿವಿ ಪಿಡಿಸು ಬಸುರ್ಗಳಂ ಬಗಿ ಕರುಳನುಗಿ . . . ಎನುತ್ತೆ ಕವಿದುದು ಸುರಪದಾತಿ ಮಸಗಿ (ಪಸಪು. ೩೯-೩). ೩. ಸೆರೆಹಿಡಿಯುವಂತೆ ಮಾಡು ; ಸೆರೆಹಿಡಿಸು : ಬೇಡಿದರ್ಗಿಲ್ಲೆಂಬುದುಂ ಕಾದಿ ಸೋಲ್ವುದುಂ ಪೆಱವೆಣ್ಣಂ ಪಿಡಿಸುವುದುಂ ಕನಸಿನೊಳಪ್ಪೊಡಮಿಲ್ಲಂ (ಗದಾಯು. ೨-೬ ಪ). ೪. ಒಳಗೊಳ್ಳಲು ಸಮರ್ಥವಾಗು ; ಸಾಕಷ್ಟು ಅವಕಾಶವನ್ನು ಹೊಂದಿರು ; ಸಾಕಾಗು : ಕೆಡೆದುದೊ ಮಂದರಂ ಧರೆಗೆ ಬಿಟ್ಟುದೊ ಭಾನುರಥಂ ನಭಸ್ಸ್ಥಲಂ ಪಿಡಿಸಿ[ಪಾಠಾಂ. ಗಿ]ದುದೋ . . . ಎನಲ್ ನಭಮಂ ಪುದಿದತ್ತು ನೀವಿ ಜೇವೊಡೆಯೆ ಬಲಾಚ್ಯುತರ್ ತ್ರಿಭುವನೈಕಭಯಂಕೃತಚಾಪಟಂಕೃತಂ (ಸಂಶಾಮಾ. ೯-೪೯). ಹಿಡಿಸು : ೧. ಜಡವಿರಹಿತಂ ನಿಃಪ್ರಪಂಚದ ಬೆಡಗಿನೊಳ್ಪಿನ ಮತಿಯ ಕೀಲಂ ಹಿ[ಪಾಠಾಂ. ಪಿ]ಡಿಸಿ ಲಿಂಗಪ್ರಾಣಮಥನ ಸವನುಭವವನಱಹಿ (ಪಸಪು. ೨೯-೩೩); ದಂಡಿಗೆ ಬೆತ್ತ ಹಿಡಿಯುವುದಕ್ಕೆ ಮಂಡೆ ಮಾಚಿ ನಾಚುತಿದ್ದೆ ಹೆಂಡತಿ ಸಂತತಿ ಸಾವಿರವಾಗಲು ದಂಡಿಗೆ ಬೆತ್ತ ಹಿಡಿಸಿದಳಯ್ಯ (ಪುಕಂದ. ೦-೯೩-೦). ೪. ದೋಣಿಯಲ್ಲಿ ಅದು ಹಿಡಿಸುವುದಕ್ಕಿಂತಲೂ ಹೆಚ್ಚಾಗಿ ಜನ ತುಂಬಿದ್ದರು (ಪಂಗಾಳ್ವ ೪೯೯). ೫. ಒಳಹೊಗಲು ಸಮರ್ಥವಾಗು ; ಅಳವಡು ; ಹೊಂದಿಕೆಯಾಗು ; ಆ ಪಾತ್ರದೊಳಗೆ ನದಿಯ ಬೋರೆ ಹಿಡಿಸಲಿಲ್ಲ (ಮುಂಬಯಿ. ೩-೯೩); ಈ ಡಬ್ಬದಲ್ಲಿ ಹತ್ತು ಸೇರು ಅಕ್ಕಿ ಹಿಡಿಸುತ್ತದೆ (ರೂಢಿ). ೬. ಬೇಕಾಗು ; ಅವಶ್ಯವಾಗು ; ಅಗತ್ಯವಾಗು : ಈ ಕೆಲಸಕ್ಕೆ ನಾಲ್ಕುದಿನ ಹಿಡಿಸುತ್ತದೆ (ರೂಢಿ) ; ಈ ಭಕ್ಷ್ಯಕ್ಕೆ ಎರಡು ಸೇರು ಸಕ್ಕರೆ ಹಿಡಿಸುತ್ತದೆ (ರೂಢಿ). ೭. ಒಪ್ಪಿಗೆಯಾಗು ; ಮನಸ್ಸಿಗೆ ಬರು : ಅವರಿಗೆ ನಾನು ಹೇಳಿದ್ದು ಹಿಡಿಸಿತು (ಅಮಾ. ೬ ಹಿಸ್ಸೆ).

ಪಿಡಿಯಿಸಿಕೊಳ್, ಪಿಡಿಸಿಕೊಳ್, ಹಿಡಿಸಿಕೊಳ್ಳು = ಹಿಡಿದುಕೊಳ್ಳುವಂತೆ ಮಾಡು : ಅನ್ನೆಗಂ ಭೀಮಸೇನನುಂ ಬೋನವೇಳಿಗೆಯುಂ ಸಟ್ಟುಗಮು

ಮನೊರ್ವ ಪರಿಚಾರಕನಿಂ ಪಿಡಿಯಿಸಿಕೊಂಡು ಬಂದು ನಿಂದನಂ ಕಂಡು (ಶಂಪಭಾ. ೬-೩೩ ಪ) ; ಮಂಡಲಿಕರ ಕೈಯ ಹೆಡಪ ಹಾವುಗೆ ಕುಂಚ ಗಿಂಡಿಯ ಪಿಡಿಸಿಕೊಂಬವನು . . ನಡೆದನು ಗುಡುವಿಗೆ ಗಿಂಡಿಯೊಳಿಗವವನಾಗಿ (ಭರತ. ೩-೯) ; ತಕ್ಕಾಲಪ್ರೇಮವನಱಿಯದೆ ವಿಭವಕ್ಕೆ ಮಾಡಿದವನ ಭಕ್ತಿ ಇರುಳು ಸತ್ತಿಗೆಯ ಹಿಡಿಸಿಕೊಂಡುತೆ (ಪಸಪ. ೨೨೬) ; ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ (ಗಾರ).

[ಪಿಡಿ$_1$ + – ಇಸು$_3$]

ಪಿಡಿವಗೆ (ನಾ). ಕಡುವೈರಿ ; ಪ್ರಬಲವಿರೋಧಿ : ಪೊರ್ಕುಳ್ ಸುಳಿಯನಟ್ಟಹಾಸಂಗೆಯ್ಯೆ ಕಿಱುದೆಱೆಯ ಮುಱುಕಮಂ ತ್ರಿವಳಿ ಸಂದೇಹ ಮಧ್ಯಂ ನೆಟ್ಟನೊರ್ಪಿಡಿಯೆಂಬ ನುಡಿಗೆ ಪಿಡಿವಗೆಯಾಗೆ (ಕಪ್ಪಣಾ. ೩-೨೮).

[ಪಿಡಿ$_1$+ ಪಗೆ$_3$]

ಪಿಡಿವಡು, ಪಿಡಿಪಡು (ಕ್ರಿ). ಸೆರೆಗೆ ಸಿಗು ; ಬಂಧನಕ್ಕೊಳಗಾಗು : ಎಮ್ಮಂ ಪಿಡಿದೆಱೆವಂದಿನ ನಿಮ್ಮದಟುಗಳೀಗಳೆತ್ತವೋದುವೊ ಪಿಡಿವಟ್ಟಮ್ಮ ಬಟಲ್ಗಿರೆ ಕಂಡಿರೆ ನಿಮ್ಮಳವಂ ನಿಮಗಮಿಾಗಳೀಯೆಡರಾಯ್ತೇ (ಶಂಪಭಾ. ೬-೩೯) ; ರಣಲೋಳನಿಳಾತಳಕೆ ಪಾಯ್ದು ರಥದಿಂದೊರೆಯಿಂ ಬಾಳಂ ಕಿಟ್ತೆಯ್ದುವಿನಂ ಬಾಳಂ ಪಿಡಿವಡೆವ ಮಾಟ್ಕೆಯಿಂ ಪಿಡಿವಟ್ಟಂ[ಪಾಠಾಂ. ವೆತ್ತಂ] (ಪಗಿ. ೦೦-೬೯). **ಪಿಡಿಪಡು** : ಒಟ್ಟಡೆಗೆಟ್ಟು ಕಾರ್ಯವಶದಿಂ ಖಚರಂ ಪಿಡಿಪಟ್ಟು ಪಲ್ಲಣಂಗಟ್ಟಿಸಿಕೊಂಡುಂ (ಪಂಠಾಮಾ. ೯-೦೦೩); ತೊಡಕು ತಿದ್ದುವುದೇಳಿಯೇಳಿಯೆಂದೆನಲಂದು ಪಿಡಿಪಟ್ಟ[ಪಾಠಾಂ. ವೆತ್ತ] ತೆಱದೆ ತಿರುನೀಲಕಂಠರು ನೊಂದು (ತಿರುಕ. ದೇ. ೨೦-೦೯); ಕದನಕ್ಷೇತ್ರದೊಳಾಂತ ಶತ್ರು ಪಿಡಿಪಟ್ಟಂ (ಪುಷ್ಪಪು. ೩-೦೬). [ಪಿಡಿ$_2$ + ಪಡು$_1$]

ಪಿಡಿವಡೆ, ಹಿಡಿವಡೆ, ಹಿಡಿಹಡೆ (ಕ್ರಿ). ಬಂಧನವನ್ನು ಹೊಂದು ; ಸೆರೆಗೆ ಒಳಗಾಗು : ರಣಲೋಳನಿಳಾತಳಕೆ ಪಾಯ್ದು ರಥದಿಂದೊರೆಯಿಂ ಬಾಳಂ ಕಿಟ್ತೆಯ್ದುವಿನಂ ಬಾಳಂ ಪಿಡಿವಡೆವ ಮಾಟ್ಕೆಯಿಂ ಪಿಡಿವಟ್ಟಂ (ಪಗಿ. ೦೦-೬೯) ; ಪಿಡಿವಡೆದ ಸುರರಿಂದಸುರರಿಂದೆ ನರರಿಂದೆ . . . ಆ ರಣಾಂಕಣಮೆಸೆದುದು (ಪಂಪು. ೩೨-೦೭). **ಹಿಡಿವಡೆ** : ಬಿಟ್ಟ ಕಣ್ಣು ಬಿಗಿದ ಹುಬ್ಬು ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ ಕೂಡಲಸಂಗಮದೇವ ಹಿಡಿವಡೆದ (ಬಸವ. ೬೦೯); ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ (ಮಹಾದೇ. ಬ. ೦೩೯-೩೦೩) ; ಬಟ್ಟೆಯೊಳು ಕಳ್ಳರಿಂ ಹಿಡಿವಡೆದನೋ (ಸಿದ್ಧಣಾ. ೨-೯೩); ಭೂಪನಿಂ ಹಿಡಿವಡೆವಂದದಿಂ ಬೆದಱಿ ನಿಂದುದು ಹಂಸೆ ಸರೋಜಷಂಡದೊಳ್ (ಸಳಸಂ. ೯೯). **ಹಿಡಿಹಡೆ** : ಪತಿ ಹಿಡಿಹಡೆಯೆ ಬಪ್ಪ ಪಡೆಯಂತೆ ಕಱುಗಳು ಹಾದಿಯೆಡೆವಱಿದು ತಮಗೆ ತಾವೇ ಬಪ್ಪುದಂ ಕಂಡು (ಸಿದ್ಧಣಾ. ೨-೯೯). [ಪಿಡಿ$_2$+ಪಡೆ$_1$]

ಪಿಡಿವಲೆ (ನಾ). ಒಂದು ಬಗೆಯ ಬಲೆ : ಪಿಡಿವಲೆ ಸೆಳೆವಲೆ . . . ಬಡಿವಲೆ ಬಲುವಲೆಗಾಱರು ಕೂಗಿ ಬೊಬ್ಬಿಡುತಲೈದಿದರು (ಪೋಷಕ. ೦೯-೦೬).

[ಪಿಡಿ$_1$+ಬಲೆ$_1$]

ಪಿಡಿವಿಡಿ (ಕ್ರಿ). ಮುಷ್ಟಿಯನ್ನು ಬಿಗಿ ಹಿಡಿ : ಪಿಡಿವಿಡಿದು ಗುರ್ದಿದ ರವನ ಬೆನ್ಮುರಿಯುವಂತೆ (ಕಾಲೂರ. ೦೬೩-೩೬೨) ; ತಡೆಯೆನಲ್ ಕೇಳ್ವನೇಂದಡಿಗ ಪಿಡಿವಿಡಿದು (ಕಾಲೂರ. ೦೭೦-೩೬೦). [ಪಿಡಿ$_2$ + ಪಿಡಿ$_1$]

ಪಿಡಿವೆಱು, ಪಿಡಿಪೆಱು (ಕ್ರಿ). ೧. ಸೆರೆ ಸಿಗು ; ಬಂದಿಯಾಗು ; ವಶವಾಗು : ಪಿಡಿವೆತ್ತ ಕಳ್ಳನಂತೆ ಸಿಡಿಮಿಡಿಗೊಳ್ಳುತ್ತಿರ್ದುಂ (ಪಂಪಕಂ. ೦೮-೨೦) ; ಪಿಡಿವೆತ್ತ ಕಳ್ಳನಂತೆ ತಲ್ಲಣಿಸಿ (ರರ್ಮಾನ್ಯು. ೦-೦೬೮). ೨. ಪಡೆ ; ಹೊಂದು : ಆಪತ್ತಂ ಪಿಡಿವೆತ್ತ ಕುಂಭಕರ್ಣಾದಿಗಳೊಳ್ ಮತ್ತೇನೊಡರಿಸುವರ್ (ಪಂಠಾಮಾ. ೦೯-೬೮). **ಪಿಡಿಪೆಱು** : ೧. ಎಮ್ಮರಸನಂ ಕೊಂದವನಂ ನೀನಱಿವೆಯಂಜದೆ ಪೇಟಲ್ಲದಿರ್ದೊಡೆ ನಿನ್ನಂ ಕೊಲಿಸಿವಪ್ಪೆನೆಂದೊಡೆ ಭಯದಿಂ ಪಿಡಿವೆತ್ತುಮಾತನಿಂತೆಂದು ಪೇಟ್ಟಂ (ವಡ್ಡಾರಾ. ೦೮೨-೦) ; ಗುಣಹತ ಕರಯುಗ ಕಾಳಿಮಕಿಣಂಗಳೆಸೆದೀತನೊಳ್ ರಿಪುಶ್ರೀ ಪಿಡಿವೆತ್ತ ಣಿಯರಮಟಲೆ ಪನಿತಶೋಷಣಸಾಂಜನಬಿಂದುವೆಂಬ ಬಗೆಯಂ ಪಡೆಗುಂ (ಕಾಂಶಿಪು. ೩-೦೩೯) ; ರಾಜ್ಯಕಾಲಂ ಸಲೆ ಬಾರಿಯೋಳ್ಪಿಡಿವೆತ್ತ ಗಜವ್ಯತಿಕರಮಂ ಕೇಳ್ದು (ಕಾವುಂಪು. ೦೦೨). [ಪಿಡಿ$_2$ + ಪೆಱು$_1$]

ಪಿಡಿಸು ' ಪಿಡಿಯಿಸು ' ನೋ.

ಪಿಡಿಹ, ಹಿಡಿಹ (ನಾ). ಹಿಡಿಯುವಿಕೆ ; ನಿಗ್ರಹ ; ಬಂಧನ : ' ಬಂದಿ ವಿಡಿಹ ' ಪರಾ. **ಹಿಡಿಹ** : " ನಿಗ್ರಹಂ ಪೀಡನಂ ಸ್ಪರ್ಶನಂ ಗ್ರಹಣಮೆನಲು ಹಿಡಿಹಂ " (ಪುಂಗರಾ. ೦೩೦-೦೬). [ಪಿಡಿ$_1$ + – ಹ$_3$(< – ಪ$_2$)]

ಪಿಡಿಹಾರ, ಹಿಡಿಹಾರ (ನಾ). ತುಂಬಿದ ಹಿಡಿ.—ಕೈ ; ಭರ್ತಿಯಾದ ಮುಷ್ಟಿ : ಆರತಿಯನೆತ್ತಿದ ಮಹಾಸತೀಜನಕೆ ಪಿಡಿಹಾರದಿಂ ಪೊಂಗಳಂ ವಸ್ತ್ರಂಗಳಂ . . . ಮಹಾಭೂಷಣಪ್ರತತಿಗಳನು ಆರಯ್ದು ಕೊಡಿಸಿ (ಪಂಪು. ೩-೦೬). **ಹಿಡಿಹಾರ** : ನಲಿದು ಸಖೀಸಖವ್ರಜಕೆ . . . ಎತ್ತಿ ಪೊನ್ನ ಬಟ್ಟಲೊಳೆಱೆದೀವ ಕುಂಕುಮರಸಂ ಹಿಡಿಹಾರದಿನೀವ ಚೊಕ್ಕದಂಬುಲಮೆಸೆವನ್ನೆಗಂ ಮೆಱೆದಳಂದು ವಿಲಾಸಿನಿ ತದ್ವಿಲಾಸಮಂ (ಕಂದ್ರಪು. ೬-೯೩). [< ಪಿಡಿ$_2$]

ಪಿಡುಕು (ಕ್ರಿ). ಚಿಮ್ಮು ; ಮಿಡುಕು ; ಚಡಪಡಿಸು (?) : ಬಿಡ್ಡೋದರಿ . . . ಬರೆ ಕಂಡು ಕಂದರ್ಪಂ ನೆಲೆಮಿಂಚು ಮಿಂಚಿತಮಮಾ ಗೊಲೆನೂಂಕಿದುವಿಂದು ಸೈಪುಗೌಂಗುಗಳಮಮಾ ಪೊಲವಿಡಿದುದು ಬಗೆಯಮಮಾ ಬಲೆಯೊಳ್ ಕಣ್ಬಾಳೆ ತೊಡರೆ ಪಿಡುಕುವುದಮಮಾ ಎಂದು ನಿರವಿಸಿ (ಪಕಂ. ೬-೦೬೯). ' ಪಿಡುಗು$_1$ ' ಪರಾ. [?]

ಪಿಡುಗು$_1$ (ಕ್ರಿ). ೧. ಸಿಡಿಲಿನ ಹಾಗೆ ಸಿಡಿ.—ಆಸ್ಫೋಟಗೊಳ್ಳು : ಅಂತು ನುಡಿದು ಕಾಯ್ದುನೊಳ್ ಪಿಡುಗಿ ನಡನಡನಡುಗಿ . . . ಉಗುಟ್ಟ ನಸುರನುರಿವ ಪಟಿಗಳು (ಪಂಪಭಾ. ೬-೩೬ ಪ). ೨. ಸೀಳು; ಬಿರಿ ; ಒಡೆ : ಉರ್ವರೆ ನಡುಗಿತ್ತಜಾಂಡಮೊಡೆದತ್ತು ನೆಲಂ ಪಿಡುಗಿತ್ತು ಸಪ್ತಸಾಗರ ಮುಡುಗಿತ್ತು (ಪಂಪಭಾ. ೦೨-೨೦೨) ; ಈ ಶಂಖಮನಿನ್ನುಂ ಪಿಡಿದೊಡೆ ಜಗಂ ಪಿಡುಗಿ ಕೆಡುಗು[ಪಾಠಾಂ. ಪಿಡಿಗಿ ಕೆಡುಗು, ಪಿಡಿಗಿಡುಗು] ಮೆಂದು . . . ಶಾರ್ಙ್ಗಶಂಖಮನಿಟಿಪಿ ನಾಗಶಯ್ಯೆಯಿಂದಿಟಿದು ಪೋಪುದಂ ಕಂಡು (ಅರ್ಧನೇ. ೬-೩೬ ಪ).

ಪಿಡುಗು$_2$ (ನಾ). ೧. ಸಿಡಿಲು : ಗುಡುಗು ಜನರೆದೆ ನಡುಗು ಮೃಗಪತಿಯುಡುಗು ಬೀಳುವ ಪಿಡುಗು ಮಿಂಚಿನ ಕಡುಗು ಕತ್ತಿಯ ಬೆಡಗು ಮಳೆನೀರ್ ಕರಿಕರಾಯತದಿ (ಕೃಳರ್ಣಾ. ೨-೬೮); ಅವರೇ . . . ಬಂದರೆ ಶತ್ರುಗಳ ಪಾಲಿಗೆ ಪಿಡುಗು ಬಿದ್ದಂತೆಯೆ (ಕಾಂಕಲಾ. ೩೬). ೨. ಕೇಡು ; ತೊಂದರೆ; ಹಿಂಸೆ : ನಿನ್ನ ಸಂಪದಕೇ ಪಿಡುಗ ತಂದೊಡ್ಡುವನು ಪಾತಕರೊಡೆಯನು (ಪಸಪಾ. ೩೭-೨೩) ; ನಮ್ಮೂರೊಳಗ ಪ್ಲೇಗು ಅಂತ ಈ ಊರಿಗೆ ಬಂದರ . . . ಇಲ್ಲೇ ತಿರುಕರ ಪಿಡುಗು (ಪಿಡುಗು. ೦೩); ಅರ್ಚಕರು ಇದೇನೋ ಪಿಡುಗು ಬಂತೆಂದು ನಡುಗುತ್ತ (ಪರೇಪ. ೦೯೩). ೩. ಪ್ಲೇಗು, ಸಿಡುಬು, ಕಾಲರಾ ಮುಂತಾದ ಘೋರವಾದ ಸಾಂಕ್ರಾಮಿಕರೋಗ,—ಅಂಟು ಜಾಡ್ಯ : ನಾರಣಪ್ಪ ಪ್ಲೇಗನ್ನು ತಂದ. ಅದು ಕಾಳ್ಗಿಚ್ಚಿನಂತೆ ಹರಡುವ ಪಿಡುಗು (ಸಂಸ್ಕಾರ. ೧೦೯); ಈ ಬರದೊಡನೆ ಅನೇಕ ಪಿಡುಗುಗಳೂ ಪ್ರಾರಂಭವಾದವು (ಳಳಹು. ೦೦೦) : ಮೊನ್ನೆ ಮೊನ್ನೆ ನಮ್ಮಲ್ಲಿ ಟಾಯ್ ಫಾಯಿಡ್ ಪಿಡುಗಾಗಿ ಎಷ್ಟು ಜನ ವೃಥಾ ಸಾಯಲಿಲ್ಲ ? (ಅಪಸಾ. ೦).

[ದೇ. ॥ ತಮಿ. ಪಿಟುಕು ; ತೆಲು. ಪಿಡುಗು]

ಪಿಡುಗುಬೇನೆ (ನಾ). = ಪಿಡುಗು$_2$ ೩ : ಆತನ ತಂದೆ ಪಿಡುಗುಬೇನೆಯಿಂದ ಕಾಲವಾದರು (ಹಾಡುಹು. ೬೯). [ಪಿಡುಗು$_2$ + ಬೇನೆ]

ಪಿಡ್ಡ (ನಾ). (ಉಕ) ಧಾನ್ಯವನ್ನು ಕೂರಿಗೆಯಿಂದ ಬಿತ್ತುವಾಗ ಬೇರೆ ಎಡೆಗೆ ಬೀಳದಂತೆ ನಾಳದ ಬಾಯಿಯನ್ನು ಮುಚ್ಚುವ ಬೆಣೆ :

ಕೂರಿಗೆಯ ಬಾಯಿಗೆ ಪಿಡ್ಡ ಹಾಕಿ ಬಿತ್ತದಿದ್ದರೆ ರಾಗಿ ಅಕ್ಕಡಿ ಸಾಲಿ ನಲ್ಲಿಯೂ ಬೆಳೆಯುತ್ತದೆ (ಕೂಕಿ.. [?]

ಪಿಣ (ನಾ). ಒಂದು ಬಗೆಯ ಲೋಹ ; ಕಬ್ಬಿಣ : (ಕ).

[< ಸಂ. ಪಿಂಡ ?]

ಪಿಣಕುಟಿ. ಪಿಣಕುಟೆ (ನಾ). (ಕರಾ) ಸಣ್ಣದು ; ಚಿಕ್ಕದು ; ಎಳೆಯದಾಗಿ ಪೀಚುಪೀಚಾಗಿರುವುದು : ಅದು ಸಣ್ಣ ಪಿಣಕುಟಿಯಾಗಿರುವಾಗ ಕಂಡ ನೆನಪು. ಅದಕ್ಕೆ ಮದುವೆಯಂತೆ ! (ಕುಕಸು. ೩೩). ಪಿಣಕುಟೆ : ಪಿಣಕುಟೆ ಎಂದೂ ಇರಲಿಕ್ಕಿಲ್ಲ . . . ಅದೂ ಚೊಚ್ಚಲು ಮಗು. ಎಂದೂ ಪಿಣಕುಟೆಯಂತೆ ಇರಲಿಕ್ಕಿಲ್ಲ (ಕುಕಸು. ೦೦೪). - [← ತುಳು. ಪುಣಕಟ್]

ಪಿಣಕುಟೆ 'ಪಿಣಕುಟಿ' ನೋ.

ಪಿಣ್ಕೆ$_1$ (ಕ್ರಿ). ಕಟ್ಟು ; ಬಂಧಿಸು : ಅರಿಸಿನದಂತೆ ಮೆಯ್ವತ್ತಿ ಪಿಣಿವರ್ ಕಾಱಿಯಂತೆ ಕೊರಲಂ ಪತ್ತಿ ಕೊಯ್ವರ್ ಗರಗಸದಂತೆ ಮೆಯ್ಯಂ ಕೊಱಿವರ್ (ರಸೂಸ್ಯ. ೩-೩೩) ; ಶೀತಮಯೂಖಮಾಲಿ ತಾಂ ಸನ್ನಿಹಿತಂ ನಭಸ್ಥಳದೊಳೆಯ್ದಿರುಳುಂ ಪಗಲುಂ ನಿರಂತರಂ ತನ್ನ ಕುರಂಗಮಂ ಪಿಣಿದು ನಿಲ್ಲದೆ ಸುತ್ತಿ ಬರುತ್ತಮಿರ್ಕಮಂ (ಶಾಧಪು. ೦-೦೩೬).

[ದೇ. ॥ ತಮಿ. ಪಿಣಿ]

ಪಿಣ್ಕೆ$_2$ (ನಾ). ಜಡೆ ; ಹೆರಳು : "ಪಿಣಿ ಬಟಲ್ಮುಡಿಯೊಳ್" (ಕಣಾಗಿ. ೩೮). 'ಪಿಣಿಲ್$_2$' ಪರಾ. [ದೇ. ॥ ತಮಿ. ಪಿಣಿ]

ಪಿಣ್ಕೆ$_3$ 'ಪಿಣಿಲ್$_3$' ನೋ.

ಪಿಣಿಲ್$_1$ (ಕ್ರಿ). ಜಡೆ ಹಾಕು,—ಹೆಣೆ : ಸರಿದ ನೀಲವಿಭಾಸುರಕುಂತಳಂಗಳಂ ಒತ್ತಿ ಪಿಣಿಲ್ದು ಪೂಸಿ ಪುಣುಗಂ . . . ಚಿತ್ರಜತಾಪಮಂ ಕಳೆವರೆಂದೊಡೆ ಕಾಂತೆಯರೇಂ ವಿಚಿತ್ರಮೋ (ಪೀಳಸಂ. ೨-೬೯). 'ಪೆಣ್ಕೆ$_1$' ಪರಾ.

ಪಿಣಿಲ್$_2$, ಪಿಣಿಲು$_1$, ಹಿಣಿಲ್$_1$, ಹಿಣಿಲು$_1$ (ನಾ). ೧. ಒಂದಕ್ಕೊಂದು ಹೆಣೆದುಕೊಂಡಿರುವಂತಹುದು,—ತೊಡಕಿಕೊಂಡಿರುವುದು : ಮುಡಿಯಂ ಪಿಡಿದೆಟ್ಟಿದವನಂ ಮಡಿಯಿಸಿ ಮತ್ತವನೆ ಕರುಳ ಪಿಣಿಲಿಂದೆನ್ನಂ ಮುಡಿಯಿಸುವಿನೆಗಂ ಮುಡಿಯಂ ಮುಡಿಯೆಂ ಗಡ (ಸಂಸಾ. ೬-೦೦) ; ಕರುಳ ಪಿಣಿಲಂ ತೆಗೆವ ಪರ್ದುಗಳುಮಂ (ಗದಾಯು. ೩ ೩ ಪ) ; ಬಸಿಱಂ ಪೊಟ್ಟುಂ ಕರುಳ ಪಿಣಿಲ್ಗಳನುರ್ಚಿಯುಂ (ಪಾಕ. ೦೩೦). ೨. ಹೆರಳು ; ಹೆಳಲು ; ಜಡೆ : ಬಿಡೆ ಪಿಣಿಲಂ ಕುರುಧ್ವಜನಿ ತೊಟ್ಟನೆ ಬಾಯನೆ ಬಿಟ್ಟುದಂದು (ಸಂಸಾ. ೯-೦೦೦) ; ಉಗುರಿಸಿ ಬೆಂಗೆ ಬಿಟ್ಟ ಪಿಣಿಲೊತ್ತಿದ ಬೈತಲೆ ಸಣ್ಣ ಪುರ್ಬು (ಲೀಲಾಪ. ೯-೬೬) ; ಬರಿಸಿ ಕಂಡು ಮನಂಗೊಂಡು ಕಯ್ಯೊಂಡು ಜಡೆಗೊಂಡ ಪಿಣಿಲಂ ತಾನೆ ಬಿಡಿಸಿ . . . ಸುಖಮಿರಿಸಿ (ಬಂಪಂ. ೯-೯೩ ಪ) ; ಸಿಂಜಿನಿಯಂ ತೆಗೆದಿಟ್ಟ ಪುಷ್ಪಮಾರ್ಗಣನ ಧನುಃಶಲಾಖೆ . . . ನಭೋಮಣಿರುಚಿಯ ತೆಱಂಬೊಳೆವ ಪದ್ಮಿನಿ ತಾನೆನಿ ಸುತ್ತೆ ತಾಳ್ದ ಸನ್ಮಣಿ ಪಿಣಿಲಚ್ಚಮುತ್ತು ಕನಕಾಂಬರದಿಂ ಕಮಲಾಕ್ಷಿ ತೋಱಿದಳ್ (ರಾಜಕೇ. ೦೦-೦೬). ಪಿಣಿಲು$_1$: ೧. ಸೂರ್ಯೋದಯವಾಗಿ ಹೊಂಬಿಸಿಲು . . . ಪಿಣಿಲಾಗಿ ಹೆಣೆದುಕೊಂಡಿದ್ದ ಬಳ್ಳಿ ಹೊದರುಗಳ ಮೇಲೆಯೂ ಶುಷ್ಕಪರ್ಣಾವೃತ್ತವಾಗಿದ್ದ ನೆಲದ ಮೇಲೆಯೂ ಬಿದ್ದಿತು (ಕಾಸೂರು. ೯೩). ಹಿಣಿಲ್$_1$: ೧. ಕರುಳ ಹಿಣಿಲಂ ಹಿಕ್ಕಿ ತಿಂದು ತೊಡೆಯಡಗನವುಡಿ ಬೆಸೆದು (ಪಸಾ. ೬-೦೬). ೨. ಹೂದುಱುಬಿನ ಹಿಣಿಲ್ಗಳ ದಂಡೆಗಳ ಮುಮ್ಮೊನೆಯ ಮುಂಜೆಱಗುಗಳ . . . ವನಿತೆಯರು ಬಳಸಿದರು (ಕೂರಾ. ೦-೦೬-೩೨). ಹಿಣಿಲು$_1$: ೨. ಏತಕೀ ಬಳೆಗೈಗೆ ಬಿಲು ಹಿಣಿಲೇತಕೀ ಜೊಲ್ಲೆಹಕೆ ಚಲ್ಲಣವೇತಕೀ ಹೆಣ್ಣುಡಿಗೆಗೆ (ಕುಸ್ಯಾಳ. ೨೨-೨೩) ; ಬೆಡಗಿನಿಂ ಹಿಣಿಲ ಹೊಸಪರಿಯಿಂದ ಶೃಂಗರಿಸಿ (ಕುರಂಗ. ೩೩-೩೦) ; ಹಿಣಿಲು ಪವಣಿಸದೆ ಬರಿ ಮುಡಿಯನ್ನೆ ಕಟ್ಟಿಕೊಂಡು (ಸಾಧಾ. ೩). ೩. ಬಿಗಿದು ಸುತ್ತಿದ ತಲೆಗೂದಲು ; ಮುಡಿ ; ತುರುಂಬು : ಕುಣಿದ ತೊಡರಿನ ಪೆಂಡೆಯದ ಡೊಂಡಿಣಿಯ ಬಿರುದರ ನೂಕುನೂಕಿನೆ ಹಿಣಿಲ ಬಾವುಲಿಗಾಱರು . . . ಸಾರಿದರು (ಕುಸ್ಯಾಳ. ೯-೩೯). ೪. ಹೆಣೆದಿರುವುದು ; ಜಡೆಯಂತಿರುವುದು : ಪಕ್ಕಗುಟೆಗಳ ತುಳುಕಿನುಗ್ಗಡಣೆಗಳ ಹಿಣಿಲಿನ ಬಲುವೊರಜೆಗಳ ಬಾರಸಕಲೆಗಳನು ಬಿಗಿದರು ಜೋಡಿಸಿದರುಬ್ಬರದ ಮದಗಜದ (ಕುಸ್ಯಾಸ್ತ್ರೋ. ೩-೨). ೫. (ನವಿಲಿನ) ಗರಿ ; ಪುಚ್ಛ ; ಸೋಗೆ : ಬಿಗಿದ ಹುಬ್ಬುಗಳ ಪೆಱ್ಕೆನೊಸಲ ತಿಲಕದ ನವಿಲ ಹಿಣಿಲ ಕಾಂತಿಯಿಂದೆ . . . ತೊಳಗುವ ಸುಧನ್ವನ . . . ಶಿರದ ಪಿಡಿದೆತ್ತಿಕೊಂಡು (ಸ್ವಪಾಣಾ. ೦೩-೩೦). 'ಪೆಣಲ್' ಪರಾ.

[< ಪಿಣಿಲ್$_1$ / ತಮಿ. ಪಿನ್ನಲ್]

ಪಿಣಿಲ್$_3$, ಪಿಣ್ಕೆ$_3$, ಪಿಣಿಲು$_2$, ಪಿಳಿಲು$_1$, ಹಿಣಿ, ಹಿಣಿಲ್$_2$, ಹಿಣಿಲು$_2$, ಹಿಳಲು, ಹಿಳಿಲ್, ಹಿಳಿಲು$_1$, ಹೆಣಲು$_2$, ಹೆರಳು$_2$ (ನಾ). ೧. ಎತ್ತು, ಒಂಟೆ ಮೊದಲಾದ ಪ್ರಾಣಿಗಳ ಬೆನ್ನಿನ ಮೇಲಿನ ಡುಬ್ಬ,—ಇಣಿ : ಎತ್ತಿಂಗೆ ಪಿಣಿಲೊಪ್ಪುಗುಮಲ್ಲದೆ ಕೆಚ್ಚಲೊಪ್ಪದಾವಿಂಗೆ ಕೆಚ್ಚಲೊಪ್ಪುಗುಮಲ್ಲದೆ ಪಿಣಿಲೊಪ್ಪದು (ರಸೂಸ್ಯ. ೬-೨೨೩) ; ವೇದಾಂತಂ ಪಿಣಿಲ್ ತೀರ್ಥಸ್ಮೃತಿ ಸುಮಂತ್ರಂಗಳೇ ರೋಮಂ ಶಿವಾಗಮವೆ ಪ್ರಾಣಮಿಂತಾದಿ ವೃಷಭಂ ಮೆಱೆದನು (ಸಂಪು. ೦೩-೨೨). ಪಿಣ್ಕೆ$_3$: ೧. 'ಪಿಂಪಿಣಿ' ಪರಾ. ಪಿಣಿಲು$_2$: ೧. ಸಿಂಗರಮಾದ ಪಿಣಿಲಿನಿಂದೆಸೆವ ವೃಷಪುಂಗವನೆಯ್ತಂದುದೊಂದು (ಸಂಸ್ಪಾಂ. ೨-೩೩). ೨. ಬೆನ್ನು : ಸೊಕ್ಕಾನೆಯ ಪಿಣಿಲಿಂದಿಳುಪಿದರಾ ಚಿಕ್ಕಜವ್ವನದ ಚೆನ್ನಿಗನಾ (ಪ್ರಸಂಸ. ೨-೬೯) ; ಅನುರಾಗದಿಂದಾಖಗನು ಮನುಜೇಶನ ತನ್ನಯ ಪಿಣಿಲೊಳಗಿಟ್ಟಾ ಘನಮಾರ್ಗಕೆ ಲಂಘಿಸಿದನು (ಶ್ರೀಶಾಲಿ. ೬-೦೯೯). ಪಿಳಿಲು$_1$: ೧. ಪೆಗಲುರಪಂಚಕ ಖುರಕೋಡು ಕಾಲ್ಕಣ್ಮೊಗ ಪಣೆ ಪಚ್ಚಳ ಪಿಳಿಲು ಸೊಗಯಿಸೆ ಮೆಱೆದವಂದಲ್ಲಿ ಲುಲಾಯಗಳಗಲದೆ ಕಾಡೆಮ್ಮೆವಿಂಡು (ಕುಸಾಸಾ. ೨೬-೬೦). ಹಿಣಿ : ೧. "ಅಂಸಕೂಟಃ, ಕಕುತ್—ಈ ೨ ಹಿಣಿ[ಪಾಕಾಂ. ಹಿಣಿಲು]" (ಪರಾಯು. ೯೯-೦೦೦). 'ಇಣಿ' ಪರಾ. ಹಿಣಿಲ್$_2$: ೧. "ಹಿಣಿ[ಲದು] ಕಕುದು" (ಪಸ್ತುಕೋ. ೬೯-೦). ಹಿಣಿಲು$_2$: ೧. "ಅಂಸಕೂಟಃ, ಕಕುತ್—ಈ ೨ ಹಿಣಿಲು [ಪಾಕಾಂ. ಹಿಣಿ]" (ಪರಾಯು ೯೯-೦೦೦) ; "ಹಿಣಿಲು ಕಕುದು" (ಸಂಗಸಾ. ೩೩-೨) ; ಗೂಳಿಯ ಹಿಣಿಲಂತಿರೆ ಹೆಗಲವರಿಗೆ, ಮುಡಿಯ ಮುಟ್ಟುವ ತೋಳ್‌ದಿಂಡು (ಅಪಕ್ಕ. ೯೬-೦೬). ಹಿಳಲು : ೧. "ವಹಃ, ಅಸ್ಯಸ್ಕಂಧಪ್ರದೇಶಃ —ಈ ೨ ಎತ್ತಿನ ಹೆಗಲ ಹೆಸರು, ಎತ್ತಿನ ಭುಜಶಿರಸ್ಸು, ಹೆಗ್ಗತ್ತು, ಹಿಳಲು" (ಸಿದ್ಧಾಂತಿ. ೨೯೩). ೩. ವಂಣ್ಣಿನ ದಿಬ್ಬ,—ಗುಡ್ಡ (?) : ಪೊಡವಿನ ಹಿಳಲ ಮೇಲೆ ಮಾಳ್ಲುನಾಯಕನ ಮೂಲವಾಗಿ ಆಳುತಿದ ಹಿತಿಲ ಮೇಲೆ ಕಾಯಕನಿಯ ಶ್ರೀಪಾರಿ[ವ]ದೇವರಿಗೆ ದೇವಪೂಜೆಗೆ ಶ್ರೀಗಂಧಕ್ಕೆ . . . ೪ ಹಣವ ಆಚುದ್ರಾರ್ಕಸ್ಥಾಯಿಯಾಗಿ ನಡೆಸಿ [ಹೋ] ಹೆನೆಂದು ಮಯಿಲುನಾಯಕ ಮಾಡಿದ ಧರ್ಮ್ಮ (ಕಇ. I, ೩೦-೯೯ ; 1432 ?). ಹಿಳಿಲ್ : (ಕ). ಹಿಳಿಲು$_1$: ೧. ಅತೀತವಪ್ಪ ಪರಶಿವನು ಬಸವಣ್ಣನ ಹಿಳಿಲ ಕೆಳಗೆ ಸೂಕ್ಷ್ಮರೂಪಾಗಿರ್ಪನು ನೋಡಾ (ಅಪಸಂ. ೦೯೯-೯೦೦) ; ಅತ್ಯುನ್ನತವಾದ ಹಿಳಿಲಿನಿಂದ ಒಪ್ಪುತಲಿರುವ ಮಹಾವೃಷಭದೊಡನೆ (ಕ್ರಿಪಾಕ. ೯೬). ಹೆಣಲು$_2$: ೧. ಸಹಸ್ರ ಕವಿಲೆಯಂ ಕೊಡುವಂ ಕೊಳಗುವಂ ಹೆಣಲುಂ ಬೆಳ್ಳಿಯ(ಂ)ಲುಂ (ಸೂಕಾಸಾ. ೦೯೩೦, ಸುಸ್ಥಂಪಾಳ್. ೬೯-೦೯ ; 1033). ಹೆರಳು$_2$: ೪. ವೀಣೆ ಮುಂತಾದ ತಂತೀವಾದ್ಯಗಳಲ್ಲಿ ನಾದವನ್ನು ಹೆಚ್ಚಿಸುವುದಕ್ಕಾಗಿ ಅಳವಡಿಸಿರುವ ಬುರುಡೆ : "ಕಕುಭಃ, ಪ್ರಸೇವಕಃ —೨ ವೀಣೆಯ ಹೆರಳಿನ ಹೆಸರುಗಳು" (ಸಿದ್ಧಾಂತಿ. ೩೯). ಈ ಇಲ್ಲಿ ಕುಳಸಹಿತವಾದ ಶಬ್ದ ಸ್ವತಂತ್ರವಾಗಿ ಸಿಕ್ಕುವುದು ಇತ್ತೀಚಿನವಾದುದರಿಂದ 'ಣ' ಸಹಿತವಾದ ಶಬ್ದವನ್ನೇ ಪ್ರಧಾನಉಲ್ಲೇಖವಾಗಿ ಪರಿಗಣಿಸಲಾಗಿದೆ.

ಪಿಣಿಲಿಱಿ, ಹಿಣಿಲಿಱಿ (ಕ್ರಿ). ೧. ಒಂದಕ್ಕೊಂದು ಹೆಣೆದುಕೊಳ್ಳು : ಮಲ್ಲಿಕಾಲತೆಯ ಮುಗುಳ್ಗುಡಿಗಳೊಳಂ ಚಂಪಕಲತೆಯಲರ್ಗುಡಿಗಳೊಳಂ ಪಿಣಿಲಿಱಿದು ಪೆಣೆದು ಪರ್ವಿ ಪಸರಿಸಿದ ಪೊಂಬಾಟಿಯ ಕಂಬಂಗಳ ತುಱುಂಬಿನೊಳ್ ಬಳ್ವಳ ಬೆಳೆದ ಮೃದ್ವೀಕಾಲತೆಯ ಕಾಯಮಾನಂ ಕಾಮನ ರತಿಯ ವಿವಾಹಕ್ಕೆ ಚೈತ್ರನೆಂಬ ಚಿತ್ರಕಂ ಬಣ್ಣಮಿಟ್ಟು ತಿಣ್ಣಂ ಸಮೆದ ಪಸುರ್ವಂದರಂದದಂತಿರೆ (ಅನಂಪು. ೬-೦೦ ಪ). ೨. ಜಡೆಹಾಕು; ಹೆಳಲು ಹಾಕು : ನೀಲಪಟದಿಂದೊಲಿದು ಚಲ್ಲಣವನುಟ್ಟಲ್ಲಿ ಲೀಲೆಯಿಂ ಕೇಶಮಂ ಪಿಣಿಲಿಱಿದುಕೊಂಡಲ್ಲಿ (ತಿನಸಂ. ೩೬-೪); ರಸವರ್ಧನಂಗಳಂ ಬಿಸುಟಸುವಱಿ ಪಿಣಿಲಿಱಿದು ಕೇಶಮಂ ಕಾಸೆಯನುಟ್ಟು (ಬಂಹಂ. ೪-೩೦). **ಹಿಣಿಲಿಱಿ** : ೧. ಹೆಣಗಿ ಹಿಣಿಲಿಱಿದಭ್ರವಲಿ ಸಂದಣಿಸಿ ಕಣೆ ಕೈಕೊಂಡ ವಂಬರಮಣಿಗೆ ನಡೆದುದೊ ತಿಮಿರರಾಜನ ದಂಡು ಮಂಡಳಿಸಿ (ಕುಪ್ಪಾಳ್ಯ. ೪-೦೬). ೨. ನಿರ್ಮಳಬ್ರಹ್ಮಚಾರಿಗಳ ಬಿಗಿದ ಪಾಶವೋ ನಾರಿ ಹಿಣಿಲಿಱಿದ ಕೇಶವೋ (ಸೌಂದಪು. ೩೩) ; ಧರಿಸಿ ದಿವ್ಯಾಂಬರವ . . . ನಿಡುಕೇಶವಂ ಹಿಣಿಲಿಱಿದು (ಸೌಂದಪು. ೬-೩೩). [ಪಿಣಿಲ್$_2$+ಇಱಿ$_1$]

ಪಿಣಿಲು$_1$ 'ಪಿಣಿಲ್$_2$' ನೋ.

ಪಿಣಿಲು$_2$ 'ಪಿಣಿಲ್$_3$' ನೋ.

ಪಿಣಿಲೇಱು$_1$ (ಕ್ರಿ). = ಪಿಣಿಲಿಱಿ ೧: ಪಂಚಾಯುಧದ ಮಲ್ಲಿಗೆಯ ತೊಂಗಲ ಸೆಱಂಗು ನಾಂದು ಪಿಣಿಲೇಱಿದೆಱಲ್ಚಿದ ವೇಣಿಯೊಳ್ಪೆಣೆದು ಮಿಂಚಿನಂಚೆ ವೆರಸು ಕಾರ್ಮುಗಿಲ ಬಿಟಲು ಕಾಲೂಱಿದಂತೆ ಮೇಲೆ ಮೆಱೆಯೆಯುಂ (ಅನಂಪು. ೨-೨೯ ಪ). [ಪಿಣಿಲ್$_2$ + ಏಱು$_1$ (< ಏಱು$_1$)]

ಪಿಣಿಲೇಱು$_2$ (ಕ್ರಿ). ಡುಬ್ಬದವರೆಗೂ ಏರು,—ಬೆಳೆ : ಬರಿಗುಡಂ ಪಿಣಿಲೇಱಿ ರೋಮಮುಡಿದಿರ್ಬೆನ್ನಾಗೆ ಮುಂಗಾಲಗಲ್ತರೆ . . . ಕೋಟ್ಕುಟ್ಟಿ ಪೆರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೇಕರಂ ಸೂಕರಂ (ಸಂದ್ರಪು. -೬೦). [ಪಿಣಿಲ್$_3$ + ಏಱು$_1$ (< ಏಱು$_1$)]

ಪಿಣಿಲ್ಗಂಡ (ನಾ). ಹಿಣಿಲಿನ ಮಾಂಸಖಂಡ ; ಹೆಗಲಿನ ಮಾಂಸ : ನೊರೆವೀಟಲ್ ದಾಡೆಗುಟ್ಟುತ್ತೆರಡುಬರಿ ಪಿಣಿಲ್ಗಂಡಮುಂ ಪೇಱ್ಕೆ ಕೊರ್ವಿಂ ಬಿರಿಯುತ್ತುಂ ಲೋಹಸೂಚೀಸಮಸಮುಚಿತರೋಮೋತ್ಕರ ಸ್ಕಂಧಭಾರೋದ್ಧುರನಮ್ರಾಸ್ಯಂ . . . ಪಿರಿದಾಶ್ಚರ್ಯಕ್ಕೆ ಪಕ್ಕಾಗಿರೆ ನೆರೆದು ಸಮುತ್ಕೇಸರಂ ಸೂಕರೌಘಂ (ಶಾಂತೀಶ್ವ. ೩-೬೬).

[ಪಿಣಿಲ್ + ಕಂಡ$_1$]

ಪಿಣೆ (ಕ್ರಿ). (?) : ನೆಗಟ್ಟು ಮಾರ್ಗ್ಗದೆ ಗೆಲ್ಗುಮೆ ಪಿಣೆದಲ್ಲಿ ಕೀರ್ತಿ ನಾರಾಯಣನಂ (ಎಕ. II. ೦೩೩-೦೪೯ ; 982).

[ಇದು 'ಪೆಣೆ' ಎಂಬುದರ ಅಪಲಿಖಿತವಿರಬಹುದು]

ಪಿಣ್ಣ (ಗು). ತೋರವಾದ ; ದೊಡ್ಡ ಗಾತ್ರದ : ಬಣ್ಣವಣ್ಣಿಗೆ ಯಱವೆಯ ತೊಟ್ಟಿಲೊಳಿಟ್ಟು ಪಿಣ್ಣ ಸವಿಯ ಸೂಱಿಗೊಂಡು ಪಿಣ್ಣ ಕುಚೆಯರು ಜೋಗುಳವಾಡಿ ತೂಗುವ ಬಣ್ಣಿಗೆ ಬಯಲಾದುದಕಟ (ಸರ್ವಪು. ೦೦-೩೪). [< ಪ್ರಾ. ಪೀಣ. / ಸಂ. ಪೀನ]

ಪಿಣ್ಯಾಕ (ನಾ). ೧. (ಎಣ್ಣೆ ತೆಗೆದ ಮೇಲೆ ಉಳಿಯುವ) ಹಿಂಡಿ : ಚರಟ ; ನಿಸ್ಸಾರವಾದ ವಸ್ತು : ವಿವಿಧಸರಸಾನ್ನವನು ಪಿಣ್ಯಾಕವನು ಸರಿಯೆಂದುಂಡು . . . ನವವೆನಿಪ ಚೀನಾಂಬರವನೊತ್ತುವ ಕಠಿನವಲ್ಕಲವ ಸರಿಯೆಂದವನಜಗರವ್ರತಿಯಹನು (ತಿಮ್ಮಶಾಂ. ೩-೩೦) ; ಶಿಲವ ಮಥನಿಸೆ ತೈಲ ಪಿಣ್ಯಾಕ ಬೇಱುಾದವೊಲು ಸ್ಕೃತಿಯಾಮಥನದಿಂ ಲೌಕಿಕಾಚಾರ ತೊಲಗಿ ಲಿಂಗಾಚಾರವಂಗಕ್ಕೆ ಪ್ರತ್ಯಕ್ಷವಪ್ಪುದಱಿವಿನ ಮಥನದಿಂ (ಪತಿಂ. ೦೬ ೯) ; ಸಾರಿ ದಡವನು ಬಳಿಕ ವನದೊಳಗಾರಯಿದು ತಂದೆಲಚಿಹಣ್ಣನು ಸೇರಿಸುತ್ತಿಂಗುದಿಯ ಪಿಣ್ಯಾಕವನು ಜತೆಗದರ (ರಾಮಾಸಂ. ೨-೩-೦೦). ೨. ಹಾಲು ಮಡ್ಡಿ ಮುಂತಾದ ಸುಗಂಧದ್ರವ್ಯ. [ಸಂ.]

ಪಿತ (ನಾ). ತಂದೆ ; ಅಪ್ಪ : ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ (ಬಸವ. ೨೦೩) ; ಶ್ರೀವನಿತೆಯರಸನೆ ವಿಮಲರಾಜೀವಪೀಠನ ಪಿತನೆ . . . ಕಾವುದಾನತಜನವ ಗದುಗಿನ ವೀರ ನಾರಯಣ (ಕುಪ್ಪಾಳ. ೦-೦) ; ಪಿತನು ಕೋಪಕೃತಾಪರಾಧಯುತನಂ ಕೊಂದಿಕ್ಕಲೆಂದಾ ಮಹಾಮತಿ ಕೈಕೊಂಡು ಕುಠಾರಮಂ ಜಡಿಯೆ (ಸ್ವಪ್ನ. ೬-೦೬). [< ಸಂ. ಪಿತೃ]

ಪಿತರ (ನಾ). ಸ್ವರ್ಗಸ್ಥನಾದ ಹಿರಿಯ ; ಪಿತೃ : ನೆಗಟ್ತಿಯ ಬೀರರೆಲ್ಲಂ ಬಡವರ ಪಿತರರಂತೆ ಮಿಳ್ಮಿಳ ನೋಡುತ್ತಿರೆ (ಸಂಪಾ. ೬-೩೩ ಪ) ; ಮುನ್ನಿನ ಭವದೊಳ್ ಕುಡವರ್ ಕಣ್ಬಡಿನೊಳ್ ಧೃತಿಗಿಡೆ ಬಡವರ ಪಿತರರಂತೆ ಮಱುಗುತ್ತಿರ್ಕಂ (ಕಾಪ್ಯಾವ. ೦೬೦) ; ಮಾತರರುಂ ಪಿತರರುಮಾ ಭ್ರಾತರರುಂ . . . ಎಲ್ಲರುಂ ಸಲೆ ಸೈತಿರ್ಪರ್ ಜವನನಾರುಮೇಂ ಬಾರಿಪರೇ (ಶಪ್ಪಾಸು. ೦೨೨ ಪ್ರಯೋ). [ಸಂ. ಪಿತೃ]

ಪಿತಲಾಟ 'ಪಿತ್ತಲಾಟ' ನೋ.

ಪಿತಾಜಿ (ನಾ). (ಗೌರವಾರ್ಥದಲ್ಲಿ) ತಂದೆ : ವಿಜಯದಾಸ ಹೊರಗಿನಿಂದ ಬಂದವನೆ ಪಿತಾಜಿಯ ವಿಚಿತ್ರರೂಪವನ್ನು ನೋಡಿ—ನೀನು ಅತ್ತೆಯಾ . . . ಎಂದು ಕೇಳಿದನು (ಕಂಬಹು. ೯೩). 'ಅಪ್ಪಾಜಿ' ಪರಾ.

[< ಪಿತ + — ಜಿ]

ಪಿತಾಮಹ (ನಾ). ೧. ತಂದೆಯ ತಂದೆ ; ಅಜ್ಜ ; ತಾತ : "ತಂದೆಯ ಪಿತ ಪಿತಾಮಹಂ" (ಶುಂಗರಾ. ೯೩-೦೪) ; ನೆಗಟ್ತಿಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆ ಯೆನೆ ಕುಂತಿ ಕುಂತೀಭೋಜನ ಮನೆಯೊಳ್ ಬಳೆಯುತ್ತಿರ್ಪನ್ನೆಗಂ (ಸಂಪಾ. ೦-೬೬) ; ಧೀರನಿಧಿ ಬಿಟ್ಟದೇವನೊಳೋರಗೆ ಬಲ್ಲಾಳನಿಂತು ನರಸಿಂಹಸುತಂಗಾರೆಣೆ ಗಗನಂ ಗಗನಾಕಾರಮೆನಲ್ತಮ್ಮೊಳೆಣೆ ಪಿತಾಮಹ ಪೌತ್ರರ್ (ಯಕೋಕ. ೦-೦೩) ; ಎಲೆ ಭೂಪ ನಿನ್ನ ಪಿತಾಮಹರು ಹಿಂದಕೆ ಮುನಿಶಾಪದಿಂದಳಿದು ಭೂತಂಗಳಾಗಿರ್ಪರೆನಲು (ಪ್ರೌಢರಾ. ೦-೯೩). ೨. ಬ್ರಹ್ಮ : "ಬ್ರಹ್ಮಾ, ಸ್ರಷ್ಟಾ, ಧಾತಾ, ಪರಮೇಷ್ಠೀ, ಪದ್ಮಭೂಃ . . . ಪಿತಾಮಹಃ, ಜಗತ್ಕರ್ತಾ, ವಿಶ್ವಾತ್ಮಾ, ಕಮಲಾಸನಃ—ಈ ೨೦ ಬ್ರಹ್ಮನ ಪೆಸರ್" (ಹಲಾಯು. ೨-೬) ; ಬಣ್ಣಿಸುವ ಪಿತಾಮಹಂಗಮರಿದೆಗ್ಗ ಮೊಗ್ಗೆ ನಿನಗಮದೆನಗು (ಶಾಂತಿಪು. ೦-೬೦) ; ಚಕ್ರಿಧರತ್ವಮಂದು ಸಫಲಂ . . . ಆ ವಿಕ್ರಮಸಾಲ್ವನಂ ತವಿಸಿದಂದಿದ ನಾನಱಿದೆಂ ಪಿತಾಮಹಾ (ಜಗಪ. ೦-೬೩); ಶ್ರೀಮದಗಜಾನಯನಕ್ಕೈರವ . . . ಪಿತಾಮಹಾದಿ ಸುಪರ್ವಸಂಕುಳನಮಿತಪಾದಾಬ್ಜ . . . ಕೃಪಾವದನಂ (ಕಂಳಿಪಾ. ೦ ೦). ೩. ರಾಜ ; ಅರಸ. ೪. ಬೇರೆಯವರ ಮನಸ್ಸಿನಲ್ಲಿರುವುದನ್ನು ತಿಳಿಯುವವನು : "ಧಾತೃ ಭೂನಾಥ ತಾತ ಮನೋಜ್ಞಾನಿ ಪಿತಾಮಹಾಹ್ವಯಂ" (ನಾನಾರ. ೨೩). [ಸಂ.]

ಪಿತುಮೆ (ನಾ). ಒಳಸಂಚು ; ಕುತಂತ್ರ ; ಪಿತೂರಿ : ನಿಜಸಂಸ್ಥಾನದೊಳರ್ಪ ಕುಹಕಿನಿಯೋಗಿಗಳೊಡರ್ಚಿದ ಪಿತುಮೆ[ಪಾಠಾಂ. ತೂರಿ]ಯಿಂ ವಿಜಯಪುರವರ್ತಿಯೆನಿಸುವ ಮುಜಬರಖಾನಂ ತೆರಳ್ಚೆ (ಕೆಳಸ್ಯ. ೬-೩೩) ; ಜಾನಂತರಾಯಿಂ ಪಿತುಮೆಯ ಮೇಲೆ ಖವಾಸಖಾನನು ಕೊಲಿಸಿ ತಾನೇ ಮುಖ್ಯನಾಗಿ ಪಾತುಶಾಹಿಯ ಬದುಕುಗಳಂ ನಡೆಸಿದು (ಕೆಳಸ್ಯ. ೯-೩೯).

[←ಮರಾ. ಫಿತವಾ, ಫಿತಾವಾ]

ಪಿತೂರಿ 'ಫಿತೂರಿ' ನೋ.

ಪಿತೂರಿಗಾರ (ನಾ). ಒಳಸಂಚನ್ನು ಹೂಡುವವನು ; ಸಂಚುಗಾರ ; ಮೋಸಗಾರ : ಇಂದಿನ ಫ್ರೆಂಚ್ ಜನಾಂಗದವರಷ್ಟು . . . ಪಿತೂರಿಗಾರ ಜನ ಈವರೆಗೆ ಯಾವ ರಾಷ್ಟ್ರದಲ್ಲಿಯೂ ಹುಟ್ಟಿಲ್ಲ (ಕೃಷ್ಣಭೂ. ೬೬).

[ಪಿತೂರಿ (< ಫಿತೂರಿ) + — ಗಾರ (< — ಕಾಱ)]

ಪಿತೂರಿವ್ಯಾಪಾರ (ನಾ). ಒಳಸಂಚಿನ ವ್ಯವಹಾರ : ಇದೆಲ್ಲ ಪಿತೂರಿ ವ್ಯಾಪಾರವಾಗಿಯಿದೆ (ಹೈದರ. ೬೮).

[ಪಿತೂರಿ (< ಫಿತೂರಿ) + ವ್ಯಾಪಾರ]

ಪಿತೃ (ನಾ). ೧. ತಂದೆ ; ಪಿತ : "ಜನಕನಾ ಪಿತೃ ವಪ್ತೃ ತಾತನೆನೆ ತಂದೆ" (ಪುಂಗರಾ. ೯೦-೯) ; ಪಿತೃಮರಣಜಾತದುಃಖಮನೀಗಳ್ ಮಱೆದು ಮನಂ ನೀರ್ಗುಡಿಯಲ್ ಮಱುಗಿದಪುದು (ಕಾವಂಪೂ. ೦೯೬) ; ಪಿತೃ ಪವನಂಜಯಂ ಖಚರವಲ್ಲಭನಂಜನೆ ಪೆತ್ತ ತಾಯ್ ಮಹಾಸತಿ ಹನುಮಂತನೆಂ ಪೆಸರೊಳಾಂ (ಪಂಡಾಪೂ. ೦೦-೯೩) ; ಪಿತೃ ಕೃತಕೃತ್ಯನಾಗೆ ಪಸವಂ ಜನಸಂತತಿ ನೀಗೆ ಶತ್ರುಸಂತತಿ ತಲೆವಾಗೆ . . . ತಳೆದಂ ಭುವನ ಪ್ರಭು ರಾಜ್ಯಲಕ್ಷ್ಮಿಯಂ (ಪುಷ್ಪಪು. ೦೩-೨) ; ಪಿತೃಸಮೋಭ್ರಾತ ಎನಿಪ್ಪುದು ಶ್ರುತಿವಚನವು (ಕುಪ್ಪಾಳ. ೦೬-೨೦). ೨. ಹಿಂದಿನವನು ; ಪೂರ್ವಜ : ಪಿತೃಗಳುಪಾರ್ಜಿಸಿಟ್ಟ ಸಿರಿ ಜವ್ವನದೇಟ್ಗೆ ಪೆಱಂಗಿಲ್ಲೆನಿಪ್ಪತಿಶಯರೂಪು ಶಕ್ತಿಗಳಿವಲ್ಲವೆ ಹಾನಿಯ ಬಳ್ಳಿವಳ್ಳಿ (ಕಾವಂಪೂ. ೩೩೯). ೩. ಸ್ವರ್ಗಸ್ಥನಾದ ಹಿರಿಯ : ಪಿತೃ ಪಿತಾಮಹ ಪ್ರಪಿತಾಮಹರೆಂಬ ಮೂರುವಿಧ ಪಿತೃಗಳಿಗೆ ಅಧಿಪತಿಗಳು ವಸುಗಣ, ರುದ್ರಗಣ, ಆದಿತ್ಯಗಣ ಎಂಬ ಮೂರು ಗಣಗಳು (ಹಸಾರ. ೦೪-೦ ಕಾತ್ಯಯ) ; ಪಿತೃಭಕ್ತಿವಿಹೀನರಾದ ಸಂಕರಸಂತಾನದಿಂದ ಪಿತೃಲೋಕದಲ್ಲಿರುವ ಪಿತೃಗಳು ಲುಪ್ತಪಿಂಡೋದಕರಾಗಿ ನರಕಗತರಾಗುತ್ತಾರೆ (ಕಾರದ. ೦೦೨) ; ಮುಕ್ತಿಯೋಗ್ಯರಲ್ಲಿ ದೇವ, ಮನುಷ್ಯ, ಪಿತೃ, ಚಕ್ರವರ್ತಿ, ಮನುಷ್ಯೋತ್ತಮ ಎಂದು ಐದು ವಿಧಗಳು (ಹಂಪಾ. ೨೫೬). ೪. [ಜ್ಯೋತಿ] ಮಖಾನಕ್ಷತ್ರದ ಅಧಿದೇವತೆ. ೫. ಮಖಾನಕ್ಷತ್ರ : ಪಿತೃ ಮೂಱುಂ ಪೂರ್ವೆ ವೈವಸ್ವತಮಿನಿತುಮವುಗ್ರಂ (ಲೋಕೋಪ. ೦-೯).

[ಸಂ.]

ಪಿತೃಋಣ (ನಾ). ದೇವಋಣ, ಋಷಿಋಣ, ಪಿತೃಋಣಗಳೆಂಬ ಋಣತ್ರಯಗಳಲ್ಲಿ ಒಂದು ; ಮನುಷ್ಯನು ಸಂತಾನವನ್ನು ಪಡೆದು ತನ್ನ ಪಿತೃಗಳಿಗೆ ಸಲ್ಲಿಸಬೇಕಾದ ಋಣ : ಪಿತೃಋಣ ಗುರುಋಣ ದೇವಋಣ ಇತ್ಯಾದಿ ಎಲ್ಲ ಋಣದ ಭಾರವನ್ನು ನಿಮ್ಮೊಬ್ಬರ ತಲೆಯ ಮೇಲೆ ಹೊರಿಸಬೇಕಾಗುತ್ತದೆ (ಹೊಸಕ್ಷಿ. ೨೫೨). 'ಋಣತ್ರಯ' ಪರಾ. [ಸಂ.]

ಪಿತೃಕರ್ಮ (ನಾ). ಸ್ವರ್ಗಸ್ಥರಾದ ಹಿರಿಯರಿಗೆ ಪಿಂಡ ಮುಂತಾದುವನ್ನು ಅರ್ಪಿಸುವಿಕೆ ; ಶ್ರಾದ್ಧ : ಪರಂಪರಾನುಗತವಾದ ಸತ್ಸಂತಾನದಿಂದಲೇ ಪಿತೃಕರ್ಮಗಳು ನಡೆಯಬೇಕು (ಕಾರದ. ೦೦೨).

[ಸಂ. ಪಿತೃಕರ್ಮನ್]

ಪಿತೃಕಾನನ (ನಾ). ಸುಡುಗಾಡು; ಶ್ಮಶಾನ : ಪಿತೃಕಾನನಗಳಲಿ ದೇವಾಲಯಗಳಲಿ ಜನಿಸಿದುದ್ಗಮರಾಜಿಗಳು ಸಲ್ಲವು ವಿವಾಹಕ್ಕೆ (ತಿಮ್ಮಲ. ೬-೫೩).

[ಸಂ.]

ಪಿತೃಕಾರ್ಯ (ನಾ). = ಪಿತೃಕರ್ಮ : ಅಂಧನೃಪಾಲ ವಿದುರಗೆ ತಿಳುಹಿದನು . . . ಕೊಳುಗುಳಕೆ ಪೋದಪೆಯಲ್ಲಿ ಮೃತಮಕ್ಕಳಿಗೆ ಪಿತೃಕಾರ್ಯಗಳ ಮಾಡುವವೆಂದು ನಿಯಮಿಸಿದ (ತಿಮ್ಮಸ್ವೀ. ೧-೯೦). [ಸಂ.]

ಪಿತೃಗ್ರಹ (ನಾ). ಸ್ವರ್ಗಸ್ಥರಾದ ಪಿತೃಗಳಿಂದ ಉಂಟಾಗುವುದೆಂದು ನಂಬಲಾದ ಪೀಡೆ : ಎಳ್ಳು, ಉದ್ದು, ಬೆಲ್ಲ ಇವುಗಳಲ್ಲಿ ಪ್ರೀತಿ, ಅಪರ ಕೃತ್ಯದ ವ್ಯಾಪಾರದಲ್ಲಿ ಪ್ರೀತಿ, ಶಾಂತನಾಗಿಹಣ, ಪೂರ್ವಾಹ್ಣದಲ್ಲಿ ಸುಮ್ಮನಿದ್ದು ಅಪರಾಹ್ಣದಲ್ಲಿಯೇ ಸಂಚಾರದ ಮಾಡುವಣ ಈ ಲಕ್ಷಣಗಳುಂಟಾಗಿಹುದು ಪಿತೃಗ್ರಹವೆಂದಱಿವುದು (ಪೈರ್ಯಸಾ. 11. ೬೬). 'ದೇವಗ್ರಹ' ಪರಾ. [ಸಂ.]

ಪಿತೃತರ್ಪಣ (ನಾ). ಸ್ವರ್ಗಸ್ಥರಾದ ಹಿರಿಯರಿಗೆ ಕೊಡುವ ತರ್ಪಣ,- ಎಳ್ಳು ನೀರು : "ನಿವಾಪಃ, ಪಿತೃತರ್ಪಣಂ...ಈ ೨ ನೀರ್ಗುಡುವುದು" (ಹಲಾಯು. ೦೦೫-೦೬) ; ಬಸುಱಿನ ಬಿಸಿಯ ರಕುತವನು ಎಱೆದು ಪಿತೃತರ್ಪಣವ ನೀಡುವೆ (ಕೌತಿರಾ. ೩೫-೨೦) ; ಸಸಿನೆ ಸಂಧ್ಯಾನ ಜಪ ಹೋಮಸ್ವಾಧ್ಯಾಯಮಂ ಪಿತೃತರ್ಪಣಮಂ ರೀತ್ಯಾ . . . ಸದಾಚಾರ ತಪ್ಪದೆ ಮಾಡುತಿಹರು ಸದ್ಧರ್ಮದೊಡನೆ (ಪಪಮೋ. ೨-೩೬).

[ಸಂ.]

ಪಿತೃದಾನ (ನಾ). ಸ್ವರ್ಗಸ್ಥರಾದ ಹಿರಿಯರಿಗೆ ಸಲ್ಲಿಸುವ ತಿಲೋದಕ, ಪಿಂಡಪ್ರದಾನ ಇತ್ಯಾದಿಗಳು : "ನಿವಾಪಃ-ಪಿತೃದಾನಂ-ಪಿತೃ ಪಿತೃತ್ವವನ್ನು ಹೊಂದಿದವರು, ತೃಪ್ತಿಪಡುವುದಕ್ಕೋಸ್ಕರ ಮಾಡಲ್ಪಡುವ ದಾನ, ತಿಲೋದಕ ಪಿಂಡಪ್ರದಾನಗಳ ಹೆಸರು" (ಸಿದ್ಧಾಂತಿ. ೨೨೨). [ಸಂ.]

ಪಿತೃದಿನ (ನಾ). ಶ್ರಾದ್ಧದ ದಿನ ; ತದ್ದಿನ : ಇಂದು ಪಿತೃದಿನವಿಂದು ಸಂಕ್ರಮಣಿಂದು ಸೂರ್ಯಗ್ರಹಣ ಹರಿದಿನವಿಂದು ಯಜ್ಞಾರಂಭದಿನ ಪಡ್ಡಂತಿ ಲೇಸೆಂದು . . . ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆ (ಕುಪ್ಪಾಪಿ. ೬-೦೩). [ಸಂ.]

ಪಿತೃದ್ವಂದ್ವ (ನಾ). ತಂದೆ ಮತ್ತು ತಾಯಿ ; ಮಾತಾಪಿತೃಗಳು : ನವಮಾಸಾವಶೇಷಾಯುಷ್ಯರಾಗಿ ನೆಲಸಿರ್ದ ಗರ್ಭಂ ತದವಸಾನದೊಳ್ ಪುಟ್ಟಲೊಡಂ ಪಿತೃದ್ವಂದ್ವಂ ಕ್ಷುತಜೃಂಭಣವ್ಯಾಜದಿಂ ಪರಾಸುಗಳಕ್ಕುಮೆಂದು ಪೇಟೆ (ಸಂಧ್ರಪು. ೩-೩೮ ಪ) ; ಇದು ಸರ್ವೋರ್ವಿಗಮತ್ಯ ಪೂರ್ವಮೆನೆ. . . ಪೂಜಿಸಿದನಿಂದ್ರಂ ತತ್ಪಿತೃದ್ವಂದ್ವಮಂ (ಪುಷ್ಪಪು. ೦೨-೦೩).

[ಸಂ.]

ಪಿತೃಧನ (ನಾ). ತಂದೆಯಿಂದ ಅಥವಾ ಪೂರ್ವಜರಿಂದ ಪಡೆಯುವ ಆಸ್ತಿ; ಪಿತ್ರಾರ್ಜಿತ ಸ್ವತ್ತು: ಸುತಂ ಪಿತೃಧನಮದಮತ್ತಂ ಮೂರ್ಖನೆಂದೊಡೇನಱಸುವುದೋ (ಕಾವ್ಯಾವ. ೦೯೨). [ಸಂ.]

ಪಿತೃಪಕ್ಷ (ನಾ). ೧. ತಂದೆಯ ಕಡೆಯ ಬಂಧು : ಪಕ್ಷವೆರಡೇ ಲೋಕದೊಳ್ ಪಿತೃಪಕ್ಷ ಮೇಣಾ ಮಾತೃಪಕ್ಷ ವಿಪಕ್ಷ ತಂದೆಯ ದೆಸೆ ಸಪಕ್ಷವು ತಾಯ ದೆಸೆಯವರು (ಕುಪ್ಪಾಳ. ೮-೦೬). ೨. ಭಾದ್ರಪದಮಾಸದ ಕೃಷ್ಣಪಕ್ಷ ; ಹಿರಿಯರಿಗೆ ತರ್ಪಣ ಕೊಡುವ ಕಾಲ : ಪಿತೃಪಕ್ಷ, ಮಹಾಲಯಅಮಾವಾಸ್ಯೆಗಳಲ್ಲಿ ನಾವು ಮಾಡುವ ಪಿತೃಪಕ್ಷ ಶ್ರಾದ್ಧಗಳ ಮೂಲದಲ್ಲಿ ಈ ಕೃತಜ್ಞತಾದರ್ಶನವೇ ಇದೆ ಎಂಬುದನ್ನು ಮರೆಯುವಂತಿಲ್ಲ (ಕಾಹ್ಯಾ. ೦೨೯) ; ಪಿತೃಪಕ್ಷ, ಯುಗಾದಿಹಬ್ಬಗಳಲ್ಲಿ ಅವನ್ನು ತಿಂದ ಮಾರನೆಯ ದಿನ ಮಾವಯ್ಯ ಕಾಲುವೇ ಏರೀ ಮೇಲೇ ಇರುತ್ತಿದ್ದ (ಸಮ್ಮೂರು. ೨೨೦). [ಸಂ.]

ಪಿತೃಪತಿ (ನಾ). ಪಿತೃಗಳ ಒಡೆಯ ; ಯಮ : "ಶಮನಃ, ಸಮವರ್ತೀ ಪ್ರೇತಪತಿಃ, ಪಿತೃಪತಿಃ . . . ಈ ೧೬ ಜವನ ಪೆಸರ್" (ಹಲಾಯು. ೦೩-೭೦) ; ಸುತ ಸುರಪತಿಯುಂ ಸ್ವಾಹಾಪತಿಯುಂ ಪಿತೃಪತಿಯುಂ . . . ಪಶುಪತಿಯುಮೆನಿಸಿದಾಶಾಪತಿಗಳ್ (ಪುಷ್ಪಪು. ೦೬-೯೦) ; ಬಿದ್ದವರನೊಡೆ ತಳೆದು ಮೇಲುಬ್ಬೆದ್ದು ಕವಿ ವಿದಾಳುಕುದುರೆಯ ಬಿದ್ದಿನಲಿ ಬೇಸಱಿಸಿದನು ಪಿತೃಪತಿಯ ಪರಿಜನವ (ಕುಪ್ಪಾಳ. ೦೦-೩೬) ; ಅಡರಿದನು ಪಿತೃಪತಿ ಮಹಾರಥವ (ಉತ್ತರಾ. ೬-೨೬). [ಸಂ.]

ಪಿತೃಪದೇಶ (ನಾ). ಯಮನ ದೇಶ ; ಯಮಲೋಕ : ಸಂದೇಹಿಗಳ್ಗೆ ಪಲ್ಗಿರಿದವರ ಶರಣರಂ ನಿಂದಿಸಿ ಪಿತೃಪದೇಶಕೊಕ್ಕಲಾದವರ ಮಾಯಾಂಧಕಾರದೊಳು ಕಂಗಾಣದರ ಸಂಗವಿಱಿಕಿನೊಳು ಸಿಕ್ಕಿದೊಲು (ಹಲಿ. ೦೩-೨೦).

[ಸಂ.]

ಪಿತೃಪ್ರಸು (ನಾ). ೧. ತಂದೆಯ ತಾಯಿ ; ಪಿತಾಮಹಿ ; ಅಜ್ಜಿ. ೨. ಸೂರ್ಯಾಸ್ತದ ಸಮಯ; ಮುಸ್ಸಂಜೆ: "ಸಂಧ್ಯಾ, ಪಿತೃಪ್ರಸೂಃ- ೨ ಸಂಧ್ಯಾಕಾಲದ ಹೆಸರುಗಳು. ಅಂದರೆ ಸಂಜೆ" (ಸಿದ್ಧಾಂತಿ. ೩೫).

[ಸಂ. ಪಿತೃಪ್ರಸೂ]

ಪಿತೃಪ್ರಿಯ (ನಾ). ಪಿತೃಗಳಿಗೆ ಪ್ರಿಯನಾದವನು; ಪಿತೃಪತಿ; ಯಮ: "ಪ್ರೇತಪತಿ ಸಮವರ್ತಿ . . . ಶಮನನಿನಜಾತಂ ಪಿತೃಪ್ರಿಯಂ ಹರಿ ದಂಡಪಾಣಿ ಕೀನಾಶಂ ಕೃತಾಂತನಕ್ಕುಂ" (ಮಂಗರಾ. ೦೫-೦೦). [ಸಂ.]

ಪಿತೃಭಕ್ತತೆ (ನಾ). ತಂದೆಯಲ್ಲಿ ಇಟ್ಟಿರುವ ಭಕ್ತಿ,—ಪೂಜ್ಯಭಾವ: ಸಂದ ದಾನಚಿಂತಾಮಣಿ ತನ್ನದೊಂದು ಪಿತೃಭಕ್ತತೆಯಂ ಮೆಱೆಯಲ್ ಪುರಾಣಚೂಡಾಮಣಿಯಂ ನಿಮಿರ್ಚಿದಳ್ (ಶಾಂತಿಪು. ಪಂ. ೦-೦). [ಸಂ. ಪಿತೃಭಕ್ತತಾ]

ಪಿತೃಭಕ್ತಿ (ನಾ). = ಪಿತೃಭಕ್ತತೆ: ಉದಾತ್ತನೀ ಮಲ್ಲಪಯ್ಯನೊಳೊಪ್ಪುಗುಂ ಪಿತೃಭಕ್ತಿಯುಂ ವಿನಯೋಕ್ತಿಯುಂ (ಶಾಂತಿಪು. ೦-೪೦); ಪಿತೃಭಕ್ತಿವಿಹೀನರಾದ ಸಂಕರಸಂತಾನದಿಂದ . . . ಪಿತೃಗಳು ಲುಪ್ತಪಿಂಡೋದಕರಾಗಿ ನರಕಗತರಾಗುತ್ತಾರೆ (ಭಾರದ. ೦೦೨). [ಸಂ.]

ಪಿತೃಭೂಮಿ (ನಾ). ಸುಡುಗಾಡು; ಶ್ಮಶಾನ: ಆ ನಡುರಾತ್ರಿಯಲ್ಲಿ ರಾಜಮಾತೆಯ ಚಿತಾದರ್ಶನಕ್ಕೆಂದು ರಾಜಕುಲದ ಪಿತೃಭೂಮಿಗೆ ನಡೆದು ಹೋದನು (ಶಾಂತಲಾ. ೦೬೯). [ಸಂ.]

ಪಿತೃಮೇಧ (ನಾ). ೧.=ಪಿತೃಯಜ್ಞ ೧: ಇಂದು ದೇವತೆಗಳನ್ನು ಪ್ರಾರ್ಥಿಸುವ ಪಿತೃಮೇಧ ಎಂಬ ಯಜ್ಞವು ಕಲ್ಯಾಣಕಾರಕವಾಗಿ ಆಗಲಿ (ಪುಣ್ಯಾರ. ೩೨೭). ೨. = ಪಿತೃಯಜ್ಞ ೨: ವಿವಿಧಭಕ್ತಿಯಲಿಂತು ಪಿತೃಮೇಧವನು ವಿಹಿತವಿದೆನಲನುಷ್ಠಿಸಿಯವರು . . . ಅಮರನದೀತಟಾಕಗಳಿಗೈದಿದರು (ಕಿಷ್ಕಿಂ. ೦೦-೩೪). [ಸಂ.]

ಪಿತೃಯಜ್ಞ (ನಾ). ೧. ಗೃಹಸ್ಥನು ಮಾಡಬೇಕಾದ ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ ಮತ್ತು ಬ್ರಹ್ಮಯಜ್ಞಗಳೆಂಬ ಪಂಚಮಹಾಯಜ್ಞಗಳಲ್ಲಿ ಒಂದು; ಸ್ವರ್ಗಸ್ಥರಾದ ಹಿರಿಯರಿಗೆ ನೀಡುವ ತರ್ಪಣ: ದೇವಯಜ್ಞ, ಪಿತೃಯಜ್ಞ . . . ಬ್ರಹ್ಮಯಜ್ಞಾದಿಗಳಂ ಮಾಳ್ಪಾತನಾಗಿ (ವಿವೇಕ. ೦೩೪); ಬ್ರಹ್ಮಯಜ್ಞ, ಪಿತೃಯಜ್ಞ ... ಮನುಷ್ಯಯಜ್ಞ—ಈ ಐದು ಮಹಾಯಜ್ಞಗಳು ... ಪಿತೃತರ್ಪಣವು ಪಿತೃಯಜ್ಞವು (ಆರ್ಯರ. ೦೬೭); ಭೂತಯಜ್ಞ, ಮನುಷ್ಯಯಜ್ಞ, ಪಿತೃಯಜ್ಞ . . . ಎಂಬ ದೈನಂದಿನದ ಕರ್ತವ್ಯನಿರ್ವಹಣದಿಂದ ಗೃಹಸ್ಥನು ಲೋಕಸಂಗ್ರಹನಿರತನಾಗಿರಬೇಕು (ಪುಣ್ಯಾರ. ೯೦ ಪೀಠಿಕೆ). ೨. ಸತ್ತವರಿಗೆ ಮಾಡುವ ಕರ್ಮ; ಅಪರಕರ್ಮ; ಅಂತ್ಯಕ್ರಿಯೆ: ವಿಧ್ಯುಕ್ತವಾಗಿ ಪಿತೃಯಜ್ಞ ನಡೆಯಿತು. ಹೀಗೆ ಅಗ್ನಿಸಂಸ್ಕಾರವಾದ ಮೇಲೆ ಎಲ್ಲರೂ ಗಂಗಾತೀರಕ್ಕೆ ಹೋಗಿ ತರ್ಪಣ ಕೊಟ್ಟರು (ವಸಭಾ. ೩೫೯). [ಸಂ.]

ಪಿತೃಯಾಣ (ನಾ.) = ಪಿತೃಯಾನ ೨: ಇಷ್ಟಾಪೂರ್ತಗಳನ್ನು ಮಾಡಿದವರ ಪಿತೃಯಾಣ (ಇದಕ್ಕೆ ಕೃಷ್ಣಮಾರ್ಗವೆಂದೂ ಧೂಮಮಾರ್ಗವೆಂದೂ ಹೆಸರು) (ಅಮೃತ. ೭-೨೨ ಟೀಕು); ಬ್ರಹ್ಮದೊಂದಿಗೆ ಐಕ್ಯವನ್ನು ಪಡೆದ ಜೀವಾತ್ಮನು ಪಿತೃಯಾಣಕ್ಕಿಂತ ಭಿನ್ನವಾದ ದೇವಯಾನದಲ್ಲಿ ಹೋಗುತ್ತಾನೆಂದು ಹೇಳಿದೆ; ಪಿತೃಯಾಣವು ಪುನರ್ಜನ್ಮಕ್ಕೆ ಒಳಗಾಗಿರುವ ಬದ್ಧಜೀವನಿಗೆ ಸೇರಿದ್ದು (ತಕ್ಕಪ್ಪಾ. ೬೩). [ಸಂ.]

ಪಿತೃಯಾನ (ನಾ). ೧. ಪಿತೃಗಳು ಸಂಚರಿಸುವ ವಾಹನ. ೨. [ವೇದಾಂತ] ಪುನರ್ಜನ್ಮಕ್ಕೆ ಒಳಗಾಗುವ ಬದ್ಧಜೀವನು ಪಡೆಯುವ ಒಂದು ಗತಿ; ಪಿತೃಗಳು ಹೋಗುವ ಮಾರ್ಗ; ಕೃಷ್ಣಗತಿ: ಹುಟ್ಟಿದ ಪ್ರಜೆಗಳು ಸತ್ತ ಬಳಿಕ ಬೇರೆಬೇರೆಯಾಗಿ ಹೋಗುವರೆಂಬುದನ್ನು ಬಲ್ಲೆಯಾ . . . ದೇವಯಾನ ಪಿತೃಯಾನಮಾರ್ಗಗಳ (ಮರಣಾನಂತರ ಆತ್ಮನ ಗತಿಗಳು) ಸಾಧನಗಳೇನೆಂಬುದನ್ನು ಬಲ್ಲೆಯಾ? (ಭಾರದ. ೪೦). 'ದೇವಯಾನ' ಪರಾ. [ಸಂ.]

ಪಿತೃರೇಖೆ (ನಾ). [ಸಾಮುದ್ರಿ] ಹಸ್ತರೇಖೆಗಳಲ್ಲಿ ಒಂದು: ಮಧ್ಯಮದ ಆದಿಯಲ್ಲಿ ಪಿತೃರೇಖೆಯಿರುವದು (ಸಾಮುಂ. ೯೭-೦೩). [ಸಂ. ಪಿತೃರೇಖಾ]

ಪಿತೃಲೋಕ (ನಾ). ಮೃತರಾದ ಪಿತೃಗಳು ಇರುವ ಲೋಕ; ಚಂದ್ರಲೋಕಕ್ಕಿಂತ ಮೇಲಿರುವುದೆನ್ನಲಾದ ಒಂದು ಲೋಕ: ಮುಂದೆ ಪಿತೃಲೋಕಮಾರ್ಗಂ ದೂರಮಪ್ಪುದೆನಗೆಂದು ಬಗೆಯದೆ . . . ಸಲೆ ಸಂದ ಸತ್ಕುಲಕುಜಕೆ ಕೊಡಲಿಯಾದಳ್ ಭಾವಿಸೆ (ಆರಾತ. ೧-೭-೨೪); ಶ್ರೋತ್ರಂಗಳಲಿ ಪ್ರಾಣವು ಪೋಗೆ ಪಿತೃಲೋಕದಲಿ ಸಂಚರಿಸುವರು (ಗಗತಾ. ೯-೫೯); ಪಿತೃಭಕ್ತಿವಿಹೀನರಾದ ಸಂಕರಸಂತಾನದಿಂದ ಪಿತೃಲೋಕದಲ್ಲಿರುವ ಪಿತೃಗಳು ಲುಪ್ತಪಿಂಡೋದಕರಾಗಿ ನರಕಗತರಾಗುತ್ತಾರೆ (ಭಾರದ. ೦೦೨). [ಸಂ.]

ಪಿತೃವಂಚಿತ (ನಾ). ೧. ತಂದೆಯಿಂದ ವಂಚಿತನಾದವನು. ೨. ತಂದೆಯನ್ನು ಕಳೆದುಕೊಂಡವನು: ಅವನ ತೀಕ್ಷ್ಣಬುದ್ಧಿ ಮತ್ತು ಪ್ರತಿಭೆಗಳಿಗಾಗಿ ಎಷ್ಟು ಪ್ರೀತಿಸುತ್ತಿದ್ದರೋ ಅಷ್ಟೇ ಪಿತೃವಂಚಿತನಾದ ಅವನ ಬಡತನದ ಬಾಳಿಗಾಗಿ ಮರುಕಪಡುತ್ತಿದ್ದರು (ಬಾಡಿಪಿ. ೨೦). [ಸಂ.]

ಪಿತೃವನ (ನಾ). ಶ್ಮಶಾನ; ಪಿತೃಭೂಮಿ: "ಶ್ಮಶಾನಂ, ಪಿತೃವನಂ—ಈ ೨ ಮಸಣಗಾಡು" (ಹಲಾಯು. ೦೦೫-೦೬); ಗಿರಿಗುಹೋದರ ಕಂದರ ವಿಟಪಿ . . . ಪಿತೃವನ ಜೀರ್ಣದ್ವಾರ ಶೂನ್ಯಗೃಹಾದಿಗಳೊಳ್ (ಅಪಪು. ೯-೨೯ ಪ); ಪಿತೃವನಮದಾ[ಶಾಶಾಂ. ಪರೇತವನಮಾ ಪರಿಭವನಮಾ]ಯ್ತಂಬುಜವನಂ (ಲೀಲಾವ. ೭-೯೩); ಲಲನೆನಂದನರನು ಮಹೀಸುರನಿಳಯದಲಿ ಮಾಱಿದನು ತಾನೇ ಹೊಲೆಯಗಾಳಾಗಿದ್ದನಾ ಪಿತೃವನಪತಿತ್ವದಲಿ (ಶೂರಾ. ೩-೨-೨೯). [ಸಂ.]

ಪಿತೃವಾಕ್ಯ (ನಾ). ತಂದೆಯ ಮಾತು,—ನುಡಿ: ಪಿತೃವಾಕ್ಯಮನುಲ್ಲಂಘಿಪ ಸುತನೆ ಮಹಾಜ್ಞಾನಿಯಾದೊಡಂ ವಿಬುಧರ ಸಮ್ಮತಮಲ್ತವಂಗೆ ನರಕದ ಗತಿ ತಪ್ಪದು (ವಿಷ್ಣುಪು. ೦-೫-೨೩೬).

ಪಿತೃವಾಕ್ಯಪರಿಪಾಲನೆ = ತಂದೆಯ ಮಾತನ್ನು ನಡೆಸುವಿಕೆ; ತಂದೆಯ ಆಜ್ಞೆಯನ್ನು ಪಾಲಿಸುವಿಕೆ: ರಾಮನ ಪಿತೃವಾಕ್ಯಪರಿಪಾಲನೆಯು ರಾಮಾಯಣಕ್ಕೆ ನಾಂದಿಯಾಯಿತು (ರೂಢಿ). [ಸಂ.]

ಪಿತೃವಿತ್ತ (ನಾ). ಪಿತ್ರಾರ್ಜಿತವಾಗಿ ಬಂದ ಹಣ,—ಸಂಪತ್ತು: ತಾಂ ಪಿತೃವಿತ್ತಮದೋನ್ಮತ್ತಧರ್ಮದೊಳ್ ಬಹಿರ್ಮುಖನುಂ . . . ಮೋಕ್ಷದೊಳ್ ನಿರಪೇಕ್ಷಕನುಮಾಗಿ (ಪಂಚತಂ. ೨೯-೫); ಪಿತೃವಿತ್ತಭೋಗಿ ಕುನಖಂ ಮೆಲ್ಪಿಂದೆ ಬಲ್ಪಿಂದೆ ಸಾಧಿಸೆ ಸಾಧ್ಯಂ ನಿಪುಣಂ ಮಹೋದ್ಯಮಿ ನಿಗೂಢಾಂಸಂ ಧನುರ್ಗೇಹಜಂ (ಶಾತಕಿ. ೦೭-೯). [ಸಂ.]

ಪಿತೃವಿಯೋಗ (ನಾ). ತಂದೆಯನ್ನು ಕಳೆದುಕೊಳ್ಳುವಿಕೆ; ತಂದೆಯ ಮರಣ, — ಸಾವು: ಗುರುವಿರಹಜನಿತಚಿಂತಾತರಂಗಿಣೀರಯಮನಾತ್ಮಕುಲಪೃದ್ಧವಚಸ್ತರಣಿಯಿನೆಂತಾನುಮಧಃಕರಿಯಿಸಿದಂ ಪಿತೃವಿಯೋಗಮೇಂದುಸ್ತರಮೋ (ಪಂಪ್ರಪು. ೨-೬೦). [ಸಂ.]

ಪಿತೃವ್ಯ (ನಾ). ತಂದೆಯ ಸಹೋದರ; ಚಿಕ್ಕಪ್ಪ ಅಥವಾ ದೊಡ್ಡಪ್ಪ: "ತಾತನೊಡಹುಟ್ಟಿದಾತಂ ಪಿತೃವ್ಯನೆನಿಕ್ಕು (ಮಂಗರಾ. ೯೨-೧೩); ಅಂಕುಶನೊಳ್ ನಿರಂಕುಶಂ ಲಕ್ಷ್ಮಣಂ ಪಿತೃವ್ಯಂ ದಶಕಂಧರನೊಳ್ ನೆರೆವಂತಿರೆ . . . ಮೆಱೆದು ಕಾದುತ್ತಿರ್ದಂ (ಪಂರಾಮಾ. ೦೬-೧೩); ಚರಣಾಂಭೋಜಾತಮಂ ಪೂಜಿಸಿದ ತನಯನಂ ತತ್ಪಿತೃವ್ಯಂ ಧರಾಧೀಶ್ವರನಾಶೀರ್ವಾಕ್ಸಮೇತಂ ತೆಗೆದು ಬಿಗಿದು ತಟ್ಕೈಸಿದಂ ಪ್ರೀತಿಯಿಂದಂ (ವರ್ಧಪು. ೨-೪೪); ನೀನಲಾ ಗುರುವಂದ್ಯನೆವಗತಿಮಾನನೀಯನಲಾ ಪಿತೃವ್ಯನದೇನ ಹೇಳಿದೆ ತಂದೆ ಲಾಲನಪೋಷಣಾರ್ಹರಿಗೆ (ನಿಭಾಗ. ೦೦-೪೫-೩೩). [ಸಂ.]

ಪಿತೃಶೇಷ (ನಾ). ಶ್ರಾದ್ಧದಲ್ಲಿ ಪಿತೃಗಳಿಗೆ ಅರ್ಪಿಸಿದ ನೈವೇದ್ಯ. [ಸಂ.]

ಪಿತ್ತ (ನಾ). ೧. ಶರೀರದ (ವಾತ, ಪಿತ್ತ, ಶ್ಲೇಷ್ಮಗಳೆಂಬ) ಮೂರು ಬಗೆಯ ಧಾತುಗಳಲ್ಲಿ ಒಂದು : "ಮಾಯುಃ, ಪಿತ್ತಂ – ಈ ೨ ಪಿತ್ತಂ" (ಹಠಾಯು. ೯೯-೯೦೦). ೨. ಪಿತ್ತಾಧಿಕ್ಯದಿಂದ ಉಂಟಾಗುವ ಬೇನೆ,–ರೋಗ: ಪಿತ್ತವಿಕಾರ : ಸಿತಮಂ ದ್ರಾಕ್ಷೆಯುಮಂ ಮಧುಯುತಮಾಗಿರೆ ತಿಂದು ಬಳಿಕೆ ತಣ್ಣೀರ್ಗುಡಿಯಲ್ ಹತಿಯಿಸುಗುಮಧಿಕಪಿತ್ತಮಂ (ಲೋಕೋಪ. ೯-೦೦); ವಾತಂ ಪಿತ್ತಂ ಕಫಮೆಂಬೀ ತೆಱದಿಂ ಮೂಱು ದೋಷಮಾದ್ಯಂತ ಸಮಾಖ್ಯಾತಂಗಳವುಷ್ಣದಿನತಿಶೀತದಿನುಪಶಮಿಕುಮಲ್ಲಿ ಮಧ್ಯಮದೊಂದುಂ (ಕಾವ್ಯಾವ. ೪೭೦); ತೊಂಡೆಯ ಹೂವು . . . ಈ ಎಲೆರಸ ಸಕ್ಕರೆ ಸಹ ಹಾಲಲ್ಲಿ ಕುಡಿಯೆ ಪಿತ್ತ ಮಾಣ್ಗುಂ (ವಿಷ್ಣು. ೫). ೩. ಕೋಪ ; ಸಿಟ್ಟು : ಬಿಚ್ಚಿ ಬಿಟ್ಟಂತಾಯ್ತು ಕಿವಿ ಥಟ್ಟುಚ್ಚಿ ಹೋಯಿತು ಘೋರರಭಸಕೆ ಹೆಚ್ಚಿ ಪಿತ್ತವು ತಲೆಯನೇಱಿದವೋಲ್ಪ ತಿರುಗಿದರು (ಕೌಶಿರಾ. ೦೯-೦೨); ಪುಂಡರ ಪುಂಡತನ ಇವುಗಳ ನಿರ್ಭೀತಚಿತ್ರ ಧಾರ್ಮಿಕರೆಂಬವರ ಪಿತ್ತವನ್ನು ಹೆಚ್ಚಿಸಿದೆ (ಸಾಸಮಾ. ೦೨); ಬರೆದ ಉತ್ತರವು ಆಚಾರ್ಯರ ಪಿತ್ತವನ್ನು ಕೆರಳಿಸಿತು (ಮನೆಬೆ. ೪೫). ೪. ಮರುಳುತನ ; ಹುಚ್ಚು : ಇದೇನು, ನಿಮಗೆ ಕ್ಷಣಚಿತ್ತ ಕ್ಷಣಪಿತ್ತ? (ನಾಳೀಪಂ. ೫೬). ೫. ಹುಚ್ಚು ತಲೆಗೇರಿದವನು ; ಹುಚ್ಚ : ನಂಜುಣಪುರದ ವನದಲ್ಲಿ ಕೋಪದಿಂ ಪಿತ್ತನೆಯೆಂದು ಬೈದಂತೆ ಪಾಡು (ಕ್ರಿಪುಪ. ೨-೦೦೯ ಪ). 'ಪಿಚ್ಚ$_1$' ಪರಾ.

ಪಿತ್ತ ತಲೆಗೇಱು, ಪಿತ್ತ ತಲೆಗೇರು=೧. ಹುಚ್ಚು ಹಿಡಿ : ವಿಷಯದ ಪಿತ್ತ ತಲೆಗೇಱಿದಲ್ಲಿ ವಿವೇಕವೆಂಬ ದೃಷ್ಟಿ ನಷ್ಟವಾಗಿ ಪಶುಪತಿಯ ನೆನೆಹು ಕೆಟ್ಟು ಮತಿ ಮಂದವಾದಲ್ಲಿ (ಬೇದಾವ. ೨೭-೪೬). ೨. ಸಿಟ್ಟು ಹೆಚ್ಚಾಗಂ ; ಅತಿಶಯವಾಗಿ ಕೋಪ ಬರು : ಪಿತ್ತ ತಲೆಗೇರಿದವನಿಗೆ ಶಂಖ ಕರ್ರಗೆ ಕಂಡರೆ ಅದರ ಬಣ್ಣ ಕೆಟ್ಟೀತೇ? (ಗಾಪೆ). ಪಿತ್ತದ ಗಂದೆ=ಪಿತ್ತಾಧಿಕ್ಯದಿಂದ ಮೈಮೇಲೆ ಏಳುವ ಬೊಕ್ಕೆ,–ಗುಳ್ಳೆ : ಅವನ ಮೈಮೇಲೆಲ್ಲಾ ಪಿತ್ತದ ಗಂದೆಗಳೆದ್ದಿವೆ (ರೂಢಿ). ಪಿತ್ತ ನೆತ್ತಿಗೇರು=ಪಿತ್ತ ತಲೆಗೇಱು ೨ : ನನಗಂತೂ ಪಿತ್ತ ನೆತ್ತಿಗೇರಿಬಿಡುತ್ತದೆ (ಸುವಸಂ. ೦೪) ; ಬಸಗೋಂಡನ ಹೆಂಡತಿಗೆ, ಬಸವಂತಿಯ ಈ ನಿತ್ಯಸ್ನಾನ, ವಾಸಾಂಸಿಯ ಬದಲಾವಣೆ, ಪಿತ್ತ ನೆತ್ತಿಗೇರಲು ಕಾರಣವಾಗಿದ್ದವು (ದೀಪಕ. II, ೦೪೨). [ಸಂ.]

ಪಿತ್ತಕ (ನಾ). ಒಂದು ಬಗೆಯ ಕೀಳುತರದ ರತ್ನ : ಪಿತ್ತಕವೆಂಬುವದ ಗಿಣಿಯ ರೆಕ್ಕೆಯಂತೆಯಿರುವುದು (ಸೌಗಂಧಿ. ೩೬-೦೫). [ಸಂ.]

ಪಿತ್ತಕಲ್ಲು (ನಾ). ಪಿತ್ತಕೋಶದಲ್ಲಿ ಬೆಳೆಯುವ ಒಂದು ಬಗೆಯ ಕಲ್ಲಿನಂತಹ ವಸ್ತು ಮತ್ತು ಅದಕ್ಕೆ ಸಂಬಂಧಪಟ್ಟ ರೋಗ : ಇಂತಹವರು ಟೈಫಾಯ್ಡ್‌ವಾಹಕರಾಗುವುದಲ್ಲದೆ, ಕೆಲವು ವೇಳೆ ಪಿತ್ತಕಲ್ಲು (Gall Stone)ಗಳಿಂದ ನರಳುತ್ತಾರೆ (ಕೆಂಕೋ. ೭೦).

[ಪಿತ್ತ+ಕಲ್ಲು (<ಕಲ್$_3$)]

ಪಿತ್ತಕೋಶ (ನಾ). (ಕಶೇರುಕಪ್ರಾಣಿಗಳ) ಜಠರದ ಬಲಭಾಗದಲ್ಲಿ ಇರುವ, ಪಿತ್ತರಸವನ್ನು ಉತ್ಪತ್ತಿ ಮಾಡುವ, ಆಹಾರವು ಜೀರ್ಣವಾಗುವುದಕ್ಕೆ ಸಹಾಯಕವಾದ ಒಂದು ಮುಖ್ಯಾಂಗ ; ಪಿತ್ತಜನಕಾಂಗ : ಒಂದು ಯಕೃತ್ತಿನಿಂದ (Liver) ಪಿತ್ತಕೋಶವನ್ನು ಸೇರಿ (Gall-bladder) ಅಲ್ಲಿಂದ ಹರಿದು ಬರುವ ಪಿತ್ತರಸ (ಶಾಲಪ್ರ. I, ೨೫೦) ; ಪಿತ್ತದಲ್ಲಿ ಈ ರೋಗಾಣುಗಳು ಬಹು ಬೇಗ ಬೆಳೆದು ಪಿತ್ತಕೋಶದಲ್ಲಿ ಆಶ್ರಯವನ್ನು ಪಡೆಯುತ್ತವೆ (ಕೆಂಕೋ. ೭೦). [ಸಂ.]

ಪಿತ್ತಕ್ಷೋಭ (ನಾ). ಪಿತ್ತದ ಉದ್ರೇಕ ; ಪಿತ್ತಪ್ರಕೋಪ : ಮಲ ಮೂತ್ರಗಳ ದುರ್ಗಂಧದಿಂದ ನಮಗೆ ಪಿತ್ತಕ್ಷೋಭವಾಗಿ ಓಕರಿಕೆ ಬರುತ್ತದೆ (ಮುಂಬಿಯಾ. ೫-೦೫೯). [ಸಂ.]

ಪಿತ್ತಗ್ರಹಣಿ (ನಾ). ಪಿತ್ತದಿಂದ ಉಂಟಾಗುವ ಅತಿಸಾರ,–ಆಮಶಂಕೆ ; ಪಿತ್ತಾತಿಸಾರ: ಬೆಲ್ಲವತ್ತದ ತಿರುಳು, ಕೊಡಸಿಗೆಬೀಜ, ಕೊಡಸಿಗೆ ತಿಗುಡು, ಧಾತಕೀಕುಸುಮ, ಕಟುಕರೋಹಿಣಿ, ಶುಂಠಿ ಇವಂ ಚೂರ್ಣಿಸಿ ಅಕ್ಕಿ ಗಚ್ಚಿನಲ್ಲಿ ಕಲಸಿ ಜೇನುತುಪ್ಪವೆರಸಿ ಕುಡಿಯೆ ಪಿತ್ತಗ್ರಹಣಿ, ಮೂಲರೋಗ, ಪ್ರವಾಹವಾದ ಅತಿಸಾರ, ಹೊಟ್ಟೆಬೇನೆ ಸಹ ಪರಿಹರಮಕ್ಕುಂ (ಸಕಪ್ಯ. ೩೪೯). [ಸಂ.]

ಪಿತ್ತಘ್ನ (ನಾ). ಒಂದು ಬಗೆಯ ಸಸ್ಯ ; ಗುಡೂಚಿ. [ಸಂ. ಪಿತ್ತಘ್ನೀ]

ಪಿತ್ತಜನಕಾಂಗ (ನಾ). ಪಿತ್ತರಸವನ್ನು ಉತ್ಪತ್ತಿ ಮಾಡುವ ಒಂದು ಜೀರ್ಣಾಂಗ ; ಪಿತ್ತಕೋಶ : ವಿಷಮತೆ ದೇಹದಲ್ಲಿ ಹೆಚ್ಚಾದಾಗ ಹೃದಯಕ್ರಿಯೆ ನಿಲ್ಲುತ್ತದೆ . . . ಪಿತ್ತಜನಕಾಂಗ ಊದಿಕೊಳ್ಳುತ್ತದೆ (ಕೆಂಕೋ. ೨೨) ; ಆಹಾರದಲ್ಲಿ ಪ್ರೋಟೀನು ಅಭಾವವಾದರೆ . . . ಪಿತ್ತಜನಕಾಂಗ, ರಕ್ತ, ಚರ್ಮ ದುರ್ಬಲವಾಗುತ್ತವೆ (ಗೃಹಪ. ೦೦) ; ದೇಹದಲ್ಲಿ ಪಿತ್ತಜನಕಾಂಗವೂ ಈ ಕೆರೋಟಿನ್ ವಸ್ತುವನ್ನು Vitamin 'A' ರೂಪಕ್ಕೆ ಮಾರ್ಪಡಿಸುತ್ತದೆ (ವಿಮ್ಮದ್ಯ. ೦೨೦). [ಸಂ.]

ಪಿತ್ತಜಿಹ್ವೆ (ನಾ). ಪಿತ್ತಾಧಿಕ್ಯದಿಂದ ನಾಲಿಗೆಯ ರುಚಿ ಕೆಡುವ ಒಂದು ಬಗೆಯ ರೋಗ : ಜಿಹ್ವಾಲಸವೆಂದು, ಅಧಿಜಿಹ್ವೆ ಎಂದು, ಉಪಜಿಹ್ವೆ ಎಂದು, ವಾತಜಿಹ್ವೆ, ಪಿತ್ತಜಿಹ್ವೆ, ಶ್ಲೇಷ್ಮಜಿಹ್ವೆ ಎಂದು ಆಱು ತೆಱ (ಪೈದ್ಯಸಾ. II, ೦೦೬) ; ಪಿತ್ತಜಿಹ್ವೆ ಎಂಬುದು ಹಳದಿವರ್ಣವಾಗಿ ಬೆಂದ ಹಾಗೆ ಇಹುದು (ಪೈದ್ಯಸಾ. II, ೦೦೭). [ಸಂ. ಪಿತ್ತಜಿಹ್ವಾ]

ಪಿತ್ತಜ್ಜ (ನಾ). (ಕರಾ). ತಂದೆಯ ಅಜ್ಜ ; ಮುತ್ತಜ್ಜ : ಹೆಗಡೆಯ ಪಿತ್ತಜ್ಜನ ಜನ್ಮಸ್ಥಳ ಗುಳ್ವಾಡಿ (ಬೇಪಹಂ. ೦೩೯). 'ಪಿಜ್ಜ' ಪರಾ.

[<ಪಿತ+ಅಜ್ಜ$_2$]

ಪಿತ್ತಜ್ವರ (ನಾ). ಪಿತ್ತದಿಂದ ಉಂಟಾಗುವ ಜ್ವರ : ಸಿರಿಕಂಡಂ ದೊಡ್ಡಿಪತ್ರೆ . . . ಕೊತ್ತುಂಬರಿ ಈ ಔಷಧಂಗಳಂ ಸಮಭಾಗಿಯಾಗೆ ಕೊಂಡು ಅಷ್ಟಾವಶೇಷ ಕಷಾಯಮಂ ಮಾಡಿ ಕುಡಿಯೆ ಪಿತ್ತಜ್ವರಂ ಕಿಡುವುದು (ಲೋಕೋಪ. ೯-೧೭ ಟೀಕೆ); ಪಿತ್ತಜ್ವರಂಬಡೆದವರ್ಗೆ ಪಾಲೋಗರದ ತುತ್ತು ಕಹಿಯಾದಂತೆ (ಸಮ್ಯಕೌ. ೯-೫೬) ; ವಾತಜ್ವರ, ಪಿತ್ತಜ್ವರ, ಶ್ಲೇಷ್ಮಜ್ವರ . . . ಆಗಂತುಕಜ್ವರವೆಂದು ಎಂಟು ಪ್ರಕಾರವಾಗಿರುವುದು (ಸಕಪ್ಯ. ೬೨). [ಸಂ.]

ಪಿತ್ತದೋಷ (ನಾ). (ವಾತ, ಪಿತ್ತ, ಶ್ಲೇಷ್ಮಗಳೆಂಬ) ತ್ರಿದೋಷಗಳಲ್ಲಿ ಒಂದು: ಪಿತ್ತದೋಷಂ ಗೋಮೂತ್ರವರ್ಣವಾಗಿರುವುದು (ಸಕಪ್ಯ. ೦೮೨). [ಸಂ.]

ಪಿತ್ತನಾಡಿ (ನಾ). ಶರೀರದ ನಾಡಿಗಳಲ್ಲಿ ಒಂದು : ಪಿತ್ತಾಧಿಕವಾದ ಕಾಲದಲ್ಲಿ ಮಧ್ಯನಾಡಿಯೂ ಪಿತ್ತನಾಡಿಯೂ ವೆಗ್ಗಳವಾಗಿ ನಡೆವುದು (ಸಕಪ್ಯ. ೦೦) ; ಮಧ್ಯಾಹ್ನದಲ್ಲಿ ಪಿತ್ತನಾಡಿ ಅಧಿಕವಾಗಿ ಆಡುವುದು (ಸಕಪ್ಯ. ೦೩). [ಸಂ.]

ಪಿತ್ತಪಾಪಟ 'ಪಿತ್ತಪಾಪಡಾ' ನೋ.

ಪಿತ್ತಪಾಪಡಾ, ಪಿತ್ತಪಾಪಟ (ನಾ). ಪಿತ್ತವನ್ನು ಶಮನ ಮಾಡುವ ಒಂದು ಬಗೆಯ ವನಸ್ಪತಿ,–ಮೂಲಿಕೆ : ಸೂರ್ತಿ ಚವಾಳಾಮಣದ ಮೇಲೆ ಕಿಮ್ಮತ್ತು ಇರತಕ್ಕ ಜೀನಸಗಳು . . . ೧೨೬. ಪಾದೆಲೋಣ ; ೧೨೭. ಪಿತ್ತಪಾಪಡಾ (ಮುಂಬಿಪ್ಯಾ. ೦೨೬). ಪಿತ್ತಪಾಪಟ : ಅಮೃತಬಳ್ಳಿ ಕಿರಾತಕಡ್ಡಿ, ಪಿತ್ತಪಾಪಟ, ನಾಗರಮೋಥ, ಶುಂಠಿ ಇವನ್ನು ಮುಕ್ಕಾಲು ತೊಲೆಯಂತೆ ಜಜ್ಜಿಹಾಕಿ . . . ಜೇನು ಕೂಡಿಸಿ ಮೂರುಸಲಕ್ಕೆ ಉಪಯೋಗಿಸುವುದು (ಮನೆಮಾ. ೨೫).

[→ಹಿಂ. ಪಿತಪಾಪಡಾ ; ಮರಾ. ಪಿತ್ತಪಾಪಡಾ]

ಪಿತ್ತಪ್ರಕೃತಿ (ನಾ). ಹೆಚ್ಚು ಪಿತ್ತದಿಂದ ಕೂಡಿದ ದೇಹಸ್ಥಿತಿ: ಈ ಪ್ರಕೃತಿಯನ್ನು ಉಳ್ಳವರು—ಮುಂಗೋಪಿಗಳಾಗಿರುವುದು, ಹೆಚ್ಚು ಬುದ್ಧಿಯುಳ್ಳವರಾಗಿರುವುದು, ವೃದ್ಧಾಪ್ಯವಿಲ್ಲದೆಯೂ ಕೂದಲು ನರೆತವರಾಗಿರುವುದು ಮುಂತಾದ ಲಕ್ಷಣಗಳಿಂದ ಕೂಡಿರುತ್ತಾರೆ: ಬಿಸುಮೆಯ್ಯ . . . ಶೈತ್ಯದೆಡೆಗೊಸೆದ ಪಲತೆಱಗಳನೆಣಿಸುವಬಲೆ ಪಿತ್ತಪ್ರಕೃತಿಯ ಪೆಣ್ಣು (ಪಪಸ. ೩-೨೦); ವಾತಪ್ರಕೃತಿ, ಪಿತ್ತಪ್ರಕೃತಿ, ಶ್ಲೇಷ್ಮಪ್ರಕೃತಿ, ಮಿಶ್ರಪ್ರಕೃತಿ ಎಂದು ಪ್ರಕೃತಿಯು ನಾಲ್ಕುತೆರನಾಗಿರುವುದು . . . ಮುಂಗೋಪಿಯಾಗಿರುವುದು, ಬುದ್ಧಿಯುಳ್ಳವನಾಗಿರುವುದು, ಸ್ವಪ್ನದಲ್ಲಿ ಕಿಚ್ಚು, ಕಿಡಿ ಮೊದಲಾದ ಜ್ಯೋತಿಸ್ಸುಗಳ ಕಾಂಬುದು, ಈ ಲಕ್ಷಣವುಳ್ಳವನನ್ನು ಪಿತ್ತಪ್ರಕೃತಿಯುಳ್ಳವನೆಂದು ತಿಳಿವುದು (ಸಕಸ್ಕೆ. ೦೬); ಮೊದಲೇ ಪಿತ್ತಪ್ರಕೃತಿ, ಸಾಲದ್ದಕ್ಕೆ ಜೇಬಿನಲ್ಲಿ ಕಡಲೆಕಾಯಿ ತುಂಬಿ ಹಸಿದ ಹೊಟ್ಟೆಯಲ್ಲಿ ತಿನ್ನೋದು (ಹಸ್ನೊಂದ. ೫೪). [ಸಂ.]

ಪಿತ್ತಪ್ರಕೋಪ (ನಾ). ಪಿತ್ತವು ಹೆಚ್ಚಾಗುವಿಕೆ,—ಉದ್ರೇಕಗೊಳ್ಳುವಿಕೆ; ಪಿತ್ತೋದ್ರೇಕ: ಉರಗಿಯ ಬಾತ್ಸ್ಯಾಕ್ಷಿಯ ಛಿನ್ನರುಹದ ಕೊಳುಗುಳಿಕೆಯ ರಸದೊಳೊಂದನೆ ಸಕ್ಕರೆವೆಶಸು ಕುಡಿಯೆ ಕರಮುಬ್ಬರಿಸಿದ ಪಿತ್ತಪ್ರಕೋಪ ಮಿರದುಪಶಮಿಕುಂ (ರೋಕೋಪ ೯-೯); ಕಾರ, ಹುಳಿ . . . ವಿಷಮಾನ್ನ ಭೋಜನ ಮುಂತಾದವುಗಳಿಂದಲೂ ಶರತ್ಕಾಲದಿಂದಲೂ ಪಿತ್ತಪ್ರಕೋಪವಾಗುವುದು (ಸಕಸ್ಕೆ. ೨೦); ಬೆಳಿಗ್ಗೆ ಎದ್ದ ಬಳಿಕ ಅನ್ನಾಶಯವು ತೆರವಾಗಿರುತ್ತದೆ. ಆಗ ಹಗುರಾದ ಆಹಾರವನ್ನು ಸ್ವಲ್ಪ ತಕ್ಕೊಂಡರೆ ಪಿತ್ತಪ್ರಕೋಪವಾಗುವುದಿಲ್ಲ (ಮುಂಬಿಯ. ೫-೦೬೮). [ಸಂ.]

ಪಿತ್ತರಸ (ನಾ). ಜೀರ್ಣರಸಗಳಲ್ಲಿ ಒಂದು; ಪಿತ್ತಜನಕಾಂಗವು ಉತ್ಪತ್ತಿ ಮಾಡುವ ಒಂದು ಜೀರ್ಣರಸ: ಪಿತ್ತರಸವೆತ್ತಂ ತಳ್ತವೋಲ್ ಪಚ್ಚನಾಗಿ ರಸಾವೇಷ್ಟಿತ ಮುಷ್ಟಿಮಾತ್ರದೆಳವುಲ್ಲಲ್ಲಲ್ಲಿ ವಿಭ್ರಾಜಿಕುಂ (ಕುಸುಮಾ. ೨-೪೭); ಕಿಬ್ಬೊಟ್ಟೆಯಲ್ಲಿ ಆಹಾರದೊಡನೆ ಪಿತ್ತರಸ, ಮೇದೋಜೀರಕಗಳು ಸೇರಿ ಹೆಚ್ಚಿನ ಯಾವತ್ತು ಪದಾರ್ಥಗಳು, ಶರೀರದ ಸ್ವೀಕಾರಕ್ಕೆ ಬೇಕಾದ ರೀತಿಯಲ್ಲಿ ರೂಪುಗೊಳ್ಳುವುವು (ಪಾಲಿಪ್ರ. I. ೨೩೦); ಆಹಾರ ಜೀರ್ಣಕ್ಕಾಗಿ ಯಕೃತ್ತು ಸ್ರವಿಸುವ ಕಹಿಯಾದ ಹಳದಿಯ ಹಸಿರು ರಸ: ಪಿತ್ತರಸ (Bile. ಇಂಡಿ). [ಸಂ.]

ಪಿತ್ತರೋಗ (ನಾ). ಪಿತ್ತದಿಂದ ಉಂಟಾಗುವ ಕಾಯಿಲೆ: ಕಾರ್ಪಾಸಚೂರ್ಣ — ಹತ್ತಿಬೀಜದ ಚೂರ್ಣ ಗ ೪ ತೂ . . . ಸಕ್ಕರೆ ಗ ೧ ತೂ, ಇಷ್ಟನ್ನೂ ಒಟ್ಟು ಚೂರ್ಣ ಮಾಡಿ ಸೇವಿಸಲು ಪಿತ್ತರೋಗಗಳು ನಾಶವಾಗುವುವು (ಸಕಸ್ಕೆ. ಪಂ. ೪೦೭). [ಸಂ.]

ಪಿತ್ತರೋಗಿ (ನಾ). ಪಿತ್ತೋದ್ರೇಕದಿಂದ ಉಂಟಾಗುವ ರೋಗಕ್ಕೆ ಒಳಗಾದವನು; ಪಿತ್ತರೋಗದಿಂದ ನರಳುವವನು: ಪಿತ್ತರೋಗಿ, ಜ್ವರರೋಗಿ, ಹಸಿದವನು, ವಾಹರೋಗಿ . . . ಮೇಹರೋಗಿ ಇವೇ ಮೊದಲಾದ ರೋಗವುಳ್ಳವರು ಮರ್ದನಕ್ಕೆ ಅಯೋಗ್ಯರು (ಸಕಸ್ಕೆ. ೩೦). [ಸಂ. ಪಿತ್ತರೋಗಿನ್]

ಪಿತ್ತಲ್ 'ಪಿಂತಿಲ್' ನೋ.

ಪಿತ್ತಲ (ಗು). ೧. ಪಿತ್ತಕ್ಕೆ ಸಂಬಂಧಿಸಿದ. (ನಾ). ೨. ತಾಮ್ರ ಮತ್ತು ಸತುವು ಸೇರಿ ಆಗುವ ಒಂದು ಬಗೆಯ ಹಳದಿಯ ಬಣ್ಣದಿಂದ ಕೂಡಿದ ಮಿಶ್ರಲೋಹ: ಹಿತ್ತಾಳೆ. ೩. ಹಳದಿಯಿಂದ ಕೂಡಿದ ಒಂದು ಮಿಶ್ರವರ್ಣ: ಸುವೇಶಲಮಂತೆಯೂ ಸೊಗಸನಾಂತಿರೆ ಪಿತ್ತಲಂ ಸಲೆ ಮುಗ್ಧಮಾ ಪೃಥುಕಂ ಮಹಾನಿಗಮಸನ್ನುತಮಾದ ಲಕ್ಷಣಮಂ ಸಮಂ ಪಿಕಾಲಿಸಿ . . . ಗೂಢಮಾದಲ್ಲದ ಪಿತ್ತಲಂ ಶುಕಪಾಕ್ಷಭಂ (ಹಾಲಾಸ್ಕ. ೨-೦೫೬). ೪. (ಆಲಂ) ಠಕ್ಕಿನ ನಡತೆ: ವಂಚನೆ: 'ಪಿತ್ತಲಾಟ' ಪರಾ. [ಸಂ.]

ಪಿತ್ತಲಾಟ, ಪಿತಲಾಟ (ನಾ). (ಆಲಂ) ಠಕ್ಕು; ಮೋಸ; ವಂಚನೆ: ಇದೆಲ್ಲಾ ಅವಸರದ ಹೋಬಳಿ ಶಿವಾಚಾರದವರ ಪಿತ್ತಲಾಟದಿಂದ ನಡೆದಿದೆ ಎಂದು ವಿಶೇಷವಾಗಿ ಮನಸ್ಸಿಗೆ ತಟ್ಟಿತು (ಮುಸುಗ. ೬೩). **ಪಿತಲಾಟ**: ಈಚೀಚೆಗೆ ಅವನ ಪಿತಲಾಟ ಹೆಚ್ಚಾಗುತ್ತಿದೆ (ಕೂಡಿ).

[ಪಿತ್ತಲ+ಆಟ. / ತಮಿ. ಪಿತ್ತಲಾಟ್ಟಮ್, ಪಿತ್ತಲಾಟಕಮ್; ಮಲ. ಪಿತ್ತಲಾಟ್ಟಮ್; ತೆಲು. ಪಿತಲಾಟ, ಪಿತಲಾಟಕ]

ಪಿತ್ತವಿಕಾರ (ನಾ). ಪಿತ್ತವು ಹೆಚ್ಚಾಗಿ ಉಂಟಾಗುವ ತಲೆ ತಿರುಗುವಿಕೆ ಮುಂತಾದುವು: ದ್ರಾಕ್ಷಿಹಣ್ಣು, ಇಪ್ಪೆಹೂವು . . . ಪ್ರತಿದಿನ ಉದಯ ಕಾಲದಲ್ಲಿ ಕಿಟ್ಟ ಸಹ ನಾಲ್ಕು ವರಹ ತೂಕದ ಸೇವಿಸಲು ಪಿತ್ತಗುಲ್ಮ ಹರ. ಸರಲ ಪಿತ್ತವಿಕಾರಂಗಳು ಕೆಡುವವು (ಸ್ವಸ್ಥಾ. I. ೩೦೩); ಒಂದಿಷ್ಟು ಹೆಚ್ಚಿಗೆ ಸುಣ್ಣವನ್ನು ಗುಡಾಕಿಗೆ ಸಮ ಬಾಯಿಗೆ ಹಾಕಿಕೊಂಡ. ಗುಡಾಕಿನ ಜೋರಿಗೆ ತಲೆ ತಿರುಗತೊಡಗಿತು. ಪಿತ್ತವಿಕಾರದಿಂದ ಹೆಗಡೆ ಕಂಗಾಲಾದ (ದೇವಸಂ. ೦೬೬). [ಸಂ.]

ಪಿತ್ತವೇರಿಸು (ಕ್ರಿ). ಪಿತ್ತವೇರುವಂತೆ ಮಾಡು; ಪಿತ್ತವನ್ನು ಕೆರಳಿಸು: ಶಿವಮೊಗ್ಗದಲ್ಲಿ ಪಿತ್ತವೇರಿಸುವ ತುಂಗಾಪಾನವನ್ನು ನಿತ್ಯವೂ ಮಾಡಿ (ರಂಗಳ. ೦). [ಪಿತ್ತ+ಏರಿಸು (<ಏಱಿಸು)]

ಪಿತ್ತವೇಱು (ಕ್ರಿ). ಪಿತ್ತವು ಹೆಚ್ಚಾಗು; ಹುಚ್ಚು ಹಿಡಿ: ಸತ್ತ ಬಳಿಕಾ ಜೀವದೆತ್ತ ಹೋಹುದನಱಿಯ ಅತ್ತ ಪರಲೋಕದೆಂಬವರ ತಲೆಯಲ್ಲಿ ಪಿತ್ತವೇಱಿಹುದು (ಸರ್ವಾಸ್ಥ. ೩೫೨). [ಪಿತ್ತ+ಏಱು$_1$ (<ಏಱ್$_1$)]

ಪಿತ್ತಶಮನ (ನಾ). ಪಿತ್ತವಿಕಾರವು ನಾಶವಾಗುವಿಕೆ,—ಇಲ್ಲವಾಗುವಿಕೆ: ಕಹಿ ಸಿಹಿ ತೊಗರು . . . ಪರಿಮಳಪುಷ್ಪಮಾಲ್ಯಾಲಂಕಾರ ಮುಂತಾದವುಗಳೆಲ್ಲವೂ ಪಿತ್ತಶಮನದ್ರವ್ಯಗಳು (ಸಕಸ್ಕೆ. ೨೦). [ಸಂ.]

ಪಿತ್ತಸನ್ನಿ (ನಾ). ಪಿತ್ತದಿಂದ ಉಂಟಾಗುವ ನ್ನಿ,—ಬುದ್ಧಿಭ್ರಮಣೆ: ಅಂತರ್ದಾಹವು, ಭ್ರಮೆಯು . . . ಇವು ಮುಂತಾದ ಚಿಹ್ನೆಗಳೊಡನೆ ಕೂಡಿಕೊಂಡಿರುವುದೆ ಪಿತ್ತಸನ್ನಿಯ ಲಕ್ಷಣವೆಂದರಿವುದು (ಸಕಸ್ಕೆ. ೦೬೪) [ಪಿತ್ತ+ಸನ್ನಿ$_2$]

ಪಿತ್ತಹರ (ನಾ). ಪಿತ್ತವನ್ನು ನಾಶಪಡಿಸುವಂತಹುದು; ಪಿತ್ತಶಮನವನ್ನು ಮಾಡುವ ವಸ್ತು: ಪೀತಮಸ್ತ್ರದ ಗುಣ—ಮನಸ್ಸಿಗೆ ಸಂತೋಷಕರವಾಗಿಯೂ ಪಿತ್ತಹರವಾಗಿಯೂ . . . ಇರುವುದು (ಸಕಸ್ಕೆ. ೩೪); ಪಿತ್ತಹರ, ಪಿತ್ತನಾಶಕ (Antibilous. ಇಂಕಡಿ). [ಸಂ.]

ಪಿತ್ತಳೆ, ಪಿತ್ತಾಳೆ, ಹಿತ್ತಳೆ, ಹಿತ್ತಾಳೆ (ನಾ). ಎರಡು ಭಾಗ ತಾಮ್ರ ಮತ್ತು ಒಂದು ಭಾಗ ಸತುವು ಸೇರಿ ಆಗುವ, ಒಂದು ಬಗೆಯ ಹಳದಿಬಣ್ಣದಿಂದ ಕೂಡಿದ ಮಿಶ್ರಲೋಹ; ಪಿತ್ತಲ: ಎಂತುಂ ನೇರಾಣಿಯ ಪೊನ್ನಂತಿರೆ ಲೇಸೆನಿಪುದೆಂತು ಪರಿಕಿಪೊಡವೆನಿಪ್ಪಂತದು ಧರ್ಮಂ ಪಿತ್ತಳೆಯಂತೆಸೆವುದು ಧರ್ಮವಾಗಿ ಸಲಲಱಿದಪುದೇ (ಸಮಸ. ೧೫-೨೧); ಪಿತ್ತಳೆ ಪೊನ್ನಂತಾಗಿಯುಂ ಪೊನ್ನಲ್ಲವಂತೆ (ಧರ್ಮಾನ್ಯು. ೦೦-೦೫೬); ತನ್ನ ತವರುಮನೆಯವರಿತ್ತ ಪಿತ್ತಳೆ ಪೊನ್ನೆಂದು ಬಗೆದು ಪೂಜಿಸುವ ಕನ್ನೆಯರೊಳು ಕಡುಗೂರ್ಮೆಯನೊಡರಿಸಿ ಪೊನ್ನುರನ್ನದೊಳು ಪೂಜಿಪುದು (ಹಂಬ. ೩ ೨೨). **ಪಿತ್ತಾಳೆ**: 'ಹೊಂಬಿತ್ತಾಳೆ' ಪರಾ. **ಹಿತ್ತಳೆ**: "ಅರಕೂಟಃ, ರೀತಿಃ—ಈ ೨ ಹಿ[ಶಾಕಾಂ. ಪಿ]ತ್ತಳೆ" (ಹಲಾಮು. ೨೯-೦೬); ಹಿತ್ತಳೆಗೆ ಬೆಳ್ಳಿಯುತ್ತಮಮುತ್ತಮಮದಱಿಂ ಸುವರ್ನದೆಂಬವೊಲ್ (ಸಮಸ. ೦೫-೦೬). **ಹಿತ್ತಾಳೆ**: "ಹಿತ್ತಾಳೆಯೊಳು . . . ವಿಮಾನದೊಳು ಪುಷ್ಪಕವೆನಿಕ್ಕು" (ಮಂಗರಾ. ೦೫೩-೬೩); ಉತ್ತಮಸುವರ್ಣವದು ಹಿತ್ತಾಳೆಯೆಹಗಹುದು ಹಿತ್ತಾಳೆಯೆನಿಸಿ ಕನಾವುಂ ತಾನದೆಹಗಹುದು (ದೀಕ್ಷಾಪೋ. ೪೪-೦೦); ಹಿತ್ತಾಳೆಯುಂಲಿಂಗವಂ ತಾಗಿಯೊಗೆದರಾವುತ್ತಮದೊಳಧಿದೈವವುಳ್ಳುದದು ದೈವವಲ್ಲ (ದೀಕ್ಷಿಪು. ೪-೩-೪೦); ಐದನೆ ಕೋಟೆ ಹಿತ್ತಾಳೆಯಿದರಲ್ಲಿ ಮೋದದಿ

ಶರದನು ನೆಲಸಿ (ಸೌಗಂಪ. ೩-೨೫); ಎರಡನೆಯದರಲ್ಲಿ . . . ಹಿತ್ತಾಳೆ ಮಾತ್ರ ಮಿಶ್ರಲೋಹವಾದ್ದರಿಂದ ಆ ವರ್ಗಕ್ಕೆ ಅದು ಸೇರುವಂತಿಲ್ಲ (ತಿಕ್ಷಣ. ೩೫೬).

ಹಿತ್ತಾಳೆಕಿವಿಯವನು (ಆಲಂ) = ಚಾಡಿಮಾತುಗಳನ್ನು ಕೇಳುವವನು: ಹಿತ್ತಾಳೆಕಿವಿಯವನೆಂಬ ನಾಮಾಂಕಿತವೂ . . . ಹೆಡ್ಡನಿಗೆ ಸುಜ್ಞರು ಕೊಟ್ಟ ಹೆಸರು (ಗೋಯಾತ್ರ. ೫೫). ಹಿತ್ತಾಳೆಯ ಕಿವಿ = (ಆಲಂ) ಚಾಡಿಯ ಮಾತುಗಳಿಗೆ ಬಗ್ಗುವ ಕಿವಿ: ಚಾಡಿಯ ಮಾತನ್ನು ಕೇಳುವ ಸ್ವಭಾವ: ನನ್ನದು ಪೂರಾ "ಹಿತ್ತಾಳೆಯ ಕಿವಿ"ಯಾಯಿತು (ಕೇಸೋಡ. ೬೩). [<ಸಂ. ಪಿತ್ತಲ]

ಪಿತ್ತಾತಿಸಾರ (ನಾ). ಪಿತ್ತದಿಂದ ಉಂಟಾಗುವ ಅತಿಸಾರ; ಪಿತ್ತಗ್ರಹಣಿ: ಮತ್ತಂ ರಕ್ತ ಕೂಡಿಕೊಂಡು ಕಪ್ಪುವರ್ಣ ಹಳದಿವರ್ಣವಾಗಿಯೂ . . . ಬೆವರು ಬಾಯಾರಿಕೆಯೂ ಉಂಟಾಗಿ ತೋರ್ಪುದೆ ಪಿತ್ತಾತಿಸಾರವೆನಿಸಿಕೊಳ್ಳುವುದು (ಸಳಸ್ಯ. ೩೦೬). [ಸಂ.]

ಪಿತ್ತಾಧಿಕ (ನಾ). ೧. ಪಿತ್ತಾಧಿಕ್ಯದಿಂದ ಕೂಡಿದುದು; ಪಿತ್ತವಿಕಾರವುಳ್ಳುದು: ಪಿತ್ತಾಧಿಕವಾದ ನಾಡಿಯು ಕಪ್ಪೆಯ ಮರ್ಯಾದೆಯಲ್ಲೂ ನವಿಲಂತೆಯೂ ತೀವ್ರವಾಗಿ ಉಷ್ಣವಾಗಿ ನಡೆವುದು (ಸಳಸ್ಯ. ೦೩). ೨. ಪಿತ್ತವು ತಲೆಗೇರಿದವನು; ಹುಚ್ಚು ಹಿಡಿದವನು; ಹುಚ್ಚ: ಪಿತ್ತಾಧಿಕನು ತಿರುಗುತ ಲೋಕ ತಿರುಗುವುದೆಂಬ ತೆಱನಂತೆ (ಕುಪ್ಪಾಳೀ. ೩ ೫೫). [ಸಂ.]

ಪಿತ್ತಾಧಿಕ್ಯ (ನಾ). ಪಿತ್ತವು ಹೆಚ್ಚಾಗಿ ಇರುವಿಕೆ; ಪಿತ್ತದ ಹೆಚ್ಚಳ: ಬಲದ ಕೈಯ ಹೆಬ್ಬೆರಳಿನ ಮೂಲದಲ್ಲಿರ್ದ ನಾಡಿಯನ್ನು ಪರೀಕ್ಷಿಸಲಾಗಿ (ಆ ನಾಡಿಯು) . . . ಪಿತ್ತಾಧಿಕ್ಯವಾದೊಡೆ ಅತಿವೇಗದಿಂ ಚಂಚಲವಾಗಿ ನಡೆವುದು (ಸಳಸ್ಯ. ೦೦); ಪಿತ್ತಾಧಿಕ್ಯದಿಂದ ದೇಹ ಮಧ್ಯವು, ಶ್ಲೇಷ್ಮಾಧಿಕ್ಯದಿಂದ ದೇಹವು ಸ್ಥೂಲವಾಗಿರುವುದು (ಸಳಸ್ಯ. ೦೯). [ಸಂ.]

ಪಿತ್ತಾವರಣ (ನಾ). ಪಿತ್ತದಿಂದ ಉಂಟಾಗುವ ಒಂದು ಬಗೆಯ ರೋಗ: ದ್ರಾಕ್ಷಿ ಯಷ್ಟಿಪ್ರಧುಕ . . . ಸಮರಸವ ಮಾಡಿ, ಉದಯಕಾಲದಲ್ಲಿ ಆ ಲೇಹ್ಯವನ್ನು ಸೇವಿಸೆ ಪಿತ್ತಾವರಣ ಸಕಲವಾದಾವರಣರೋಗ ರಕ್ತಪಿತ್ತ ಸಹ ಗುಣಮಕ್ಕುಂ (ಸಳಸ್ಯ. ೦೪೬). [ಸಂ.]

ಪಿತ್ತಾವಿಳ (ನಾ). ಪಿತ್ತದಿಂದ ಕೂಡಿದವನು; ಪಿತ್ತರೋಗಿ: ತೊಳಗುವ ನಭದೊಳ್ ಪಿತ್ತಾವಿಳದೃಷ್ಟಿಗವಿದ್ಯಮಾನಮೇಚಕರುಚಿಯೊಂದೆಳಸಿ ಮಿಗೆ ತೋರ್ಪ ತೆಱದಿಂ ಖಳಂಗೆ ಪೊಲಸಲ್ತೆ ಕೃತಿಯೊಳಿಲ್ಲದ ದೋಡು (ಪುಷ್ಪಪು. ೦-೪೯). [ಸಂ. ಪಿತಾವಿಲ]

ಪಿತ್ತಾಶಯ (ನಾ). ಪಿತ್ತಜನಕಾಂಗ; ಪಿತ್ತಕೋಶ: ಬ್ಬಿ ಜೀವಸತ್ವ . . . ಇದು ಹಾಲು, ಹಣ್ಣು, ಪಿತ್ತಾಶಯ (Liver), ಮೊಟ್ಟೆಗಳು, ಪಾಲಿಶ್ ಮಾಡದೆ ಇದ್ದ ಅಕ್ಕಿ ಮತ್ತು ಇತರ ಧಾನ್ಯಗಳಲ್ಲಿ ಸಿಕ್ಕುತ್ತದೆ (ಪಿರಶಾ. ೨೬). [ಸಂ.]

ಪಿತ್ತಾಳೆ 'ಪಿತ್ತಳೆ' ನೋ.

ಪಿತ್ತಿಲ್ 'ಪಿಂತಿಲ್' ನೋ.

ಪಿತ್ತಿಲ್ದೋಂಟ (ನಾ). ಹಿತ್ತಲಿನ ತೋಟ, -ಉದ್ಯಾನ: ಬಸದಿಯ ಪೂಜಿಗಣ ಪಿತ್ತಿಲ್ದೋಣ್ಟೆಮುಂ ತೆಮ್ಬಾಲದೊಳು . . . ಕೊಟ್ಟ ಮಣ್ಣು (ಎಕ. X. ಕೋಲಾರ. ೯೦-೯೦; ೪೦೩).

[ಪಿತ್ತಿಲ್ (<ಪಿಂತಿಲ್) + ತೋಂಟ]

ಪಿತ್ತು, ಪಿತ್ಥ (ನಾ). ೧. = ಪಿತ್ತ ೧. ೨. = ಪಿತ್ತ ೩: ಪಿತ್ತು ನೆತ್ತಿಗೇನಾದರೂ ಹತ್ತಿದೆಯೋ (ಮುಸಿಮಾ. ೨); ಒಂದುಗಳೆ ಕೂಡಿ ಒಂಬತ್ತರವರೆಗೆ ಏರಿದುವು; ಪಿತ್ತಿನಂತೆ. ಅವಕ್ಕೊಂದು ಸೊಪ್ಪೆ ಬಂದು ಸೇರಿ ಹತ್ತಾಯಿತು, ಕಫದ ಕೆಮ್ಮಿನಂತೆ (ಪಡೆದಾ I. ೪೩೯). ಪಿತ್ಥ: ೧. ಪಿತ್ಥ ಹೆಚ್ಚಾದಾಗ ಹೊಟ್ಟೆ ತೊಳಸುತ್ತದೆ (ರೂಢಿ). ೨. ಸುಳ್ಳೇ ನನ್ನ ಪಿತ್ಥ ಕೆಣಕಬೇಡಾ . . . ಎಂದವರೇ ಬಳಿತಲ್ಲಿಂದ ಎದ್ದು ಹೊರಗೆ ಹೋಗುವ ಉಡುಪನ್ನು ಧರಿಸ ಹತ್ತಿದರು (ಮೂರುದಾ. ೪೦). ೩. = ಪಿತ್ತ ೫: ಕುಲಕೋಟಿಯೆಂಜಲ ತಿಂಬವ ಪಿತ್ಥನೊ (ಬಿಜ್ಜರಾ. ೬-೨೦೪). ೪. ಕೊಬ್ಬು; ಸೊಕ್ಕು; ಗರ್ವ: ಆಯಿತು, ಬರುವುದಾದರೆ ಬಾ. ನಿನ್ನ ಪಿತ್ಥ ಇಳಿಸದೆ ಬಿಡಲಾರೆ (ರಕ್ತರೂ. ೬೪); ಈವತ್ತು ಇವರು ಸರಿಯಾಗಿ ಪಿತ್ಥ ಇಳಿಸಿದ್ದಾರೆ (ಮೂರುದಾ. ೬೪). [<ಸಂ. ಪಿತ್ತ]

ಪಿತ್ತೋದರ (ನಾ). ಪಿತ್ತದಿಂದ ಉಂಟಾಗುವ ಒಂದು ಬಗೆಯ ಹೊಟ್ಟೆಯ ರೋಗ, -ಉದರಬೇನೆ: ತಾರೇಕಾಯಿ, ಹುಣಿಸೇಬೀಜದ ಸಿಪ್ಪೆ, ಇವುಗಳ ಸಮಭಾಗ ಚೂರ್ಣ ಮಾಡಿ ಸೇವಿಸಲು ಸರ್ವಾಂಗದಾಹ, ಕೈಕಾಲು ಮತ್ತು ಕಣ್ಣುಗಳ ಉರಿ, ಪಿತ್ತೋದರ . . . ಮೊದಲಾದ ರೋಗಗಳು ಗುಣವಾಗಿ ಶುಕ್ಲವೃದ್ಧಿಯುಂಟಾಗುವುದು (ಸಳಸ್ಯ. ಪಂ. ೪೦೭). [ಸಂ.]

ಪಿತ್ತೋದ್ರೇಕ (ನಾ). ೧. ಪಿತ್ತವು ಹೆಚ್ಚಾಗುವಿಕೆ; ಪಿತ್ತಪ್ರಕೋಪ: ಪಿತ್ತೋದ್ರೇಕವುಳ್ಳವನಾಗಿ ತೀವ್ರವಾದ ತೃಷ್ಣೆಯೂ ಹಸಿವೂ ಉಂಟಾದವನಾಗಿ . . . ಕೆಂಪಾಗುವ ಕಣ್ಣುಗಳುಳ್ಳವನಾಗಿ ಇರುವವನೇ ಪಿತ್ತಪ್ರಕೃತಿಯುಳ್ಳವನೆಂದರಿವುದು (ಸಳಸ್ಯ. ೦೬). ೨. ಪಿತ್ತವು ತಲೆಗೇರುವಿಕೆ; ಮತಿವಿಕಾರ; ಬುದ್ಧಿಭ್ರಮಣೆ: ಪಿತ್ತೋದ್ರೇಕಂ ಪುಗುಳುಂ ಚಿತ್ತಭ್ರಮೆಯೆಂಬಿವಕ್ಕುಂ (ಪಿಮಾಪ. ೦೫-೫); ಕರೆ ಕರೆ ಬೇಗರ್ಕಿರ್ತಿಯನೆಂದನಾ ತರುಣ ಬಂದೊಡನೆ ಕೈಮುಗಿಯೆ ಹರಿದಾಡಿ ಬಳಲಿದೆ ಮಗನೆ ಪಿತ್ತೋದ್ರೇಕ ತಿರುಗಿಸಿದುದೆ ನಿನ್ನನೆಂದ (ಕರಸ. ೫೦-೦೦೦). [ಸಂ.]

ಪಿತ್ಥ 'ಪಿತ್ತು' ನೋ.

ಪಿತ್ರಾರ್ಜಿತ (ಗು). ೧. ತಂದೆಯು ಗಳಿಸಿದ, -ಸಂಪಾದಿಸಿದ. ೨. ವಂಶದ ಪೂರ್ವಿಕರು ಗಳಿಸಿದ: ಈ ದಿನ ನಾವು ನಮ್ಮ ಪಿತ್ರಾರ್ಜಿತ ಭೂಮಿಗಾಗಿಯೂ ನಮ್ಮ ನಮ್ಮ ಮಡದಿ ಮಕ್ಕಳ ಸಂರಕ್ಷಣಾರ್ಥವಾಗಿಯೂ ಪ್ರಾಣಗಳನ್ನು ಮುಡುಪಿಟ್ಟು ಯುದ್ಧಕ್ಕೆ ಹೋಗುತ್ತಿರುವೆವು (ಶಾಂತಲಾ. ೦೭೪); ಒಂದಿಷ್ಟು ಪಿತ್ರಾರ್ಜಿತ ಹೊಲಗದ್ದೆಗಳೂ ಬಂದಿದ್ದವು (ಕಂಬಿಮ. ೨೫). (ನಾ). ೩. ತಂದೆಯು ಸಂಪಾದಿಸಿದುದು; ತಂದೆಯ ಆಸ್ತಿ. ೪. ವಂಶದ ಪೂರ್ವಿಕರು ಆರ್ಜಿಸಿದ ಸಂಪತ್ತು: ಪಿತ್ರಾರ್ಜಿತವನ್ನು ಅನುಭವಿಸುತ್ತಿರುವ ಅವನು ಆಸ್ತಿಸಂಪಾದನೆಗೆ ಬವಣೆಪಡಬೇಕಾದುದೇನೂ ಇಲ್ಲ (ರೂಢಿ). [ಸಂ.]

ಪಿತ್ರುಧನ (ನಾ). ಪಿತ್ರಾರ್ಜಿತವಾಗಿ ಬಂದ ಹಣ, -ಸ್ವತ್ತು: ಸೋಮೇಶ್ವರಭಟ್ಟರು ತಮ್ಮ ಪಿತ್ರುಧನು ಶುಕ್ಲದ್ರವ್ಯಮಪ್ಪ ದಸವಂಧದ ಸರ್ವ್ವಬಾಧಾಪರಿಹಾರಂ ಮಾನ್ಯದ ಏಳುಸ್ಥಳದ ಭೂಮಿಯುಂ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಕಇಲ. ೭೯-1088).

[<ಸಂ. ಪಿತೃಧನ]

ಪಿತ್ರ್ಯ (ಗು). ೧. ಪಿತೃಸಂಬಂಧವಾದ: ಪಿತ್ರಾರ್ಜಿತವಾಗಿ ಬಂದ. (ನಾ). ೨. ಪಿತೃಗಳಿಗೆ ಮಾಡಬೇಕಾದುದು: ಶ್ರಾದ್ಧ; ತಿಥಿ. [ಸಂ.]

ಪಿದರ (ನಾ). "ತೀರುಗಳನ್ನು ಬಿಗಿದು ಹಿಡಿಯುವ ಅಡ್ಡಮರ: ಬಿಗಿಮರ; ದೂಲ; ಅಡ್ಡಕೋಲು" (ಅನಂನಾ).

[←ತುಳು. ಪಿತ್ತರ, ಪಿದರ, ಪಿದಾರ]

ಪಿದೆಗ (ನಾ). ಒಂದು ಬಗೆಯ ಪಕ್ಷಿ: ಕುಳಿರ್ಗೆಯ್ಯ ಕೊಳರ್ವಕ್ಕಿ ಕಾವ ಪಿದೆಗು ಬಿಸಿಲ್ವಕ್ಕಿಯಿವು ಮೊದಲಾಗಿ ಪಾವನಂ ವನದೊಳುಂ ಪಾವನತ್ವವನೈದಿ ಜೀವಿಪುವು ಭಯವನುಳಿದು (ಪ್ರಭುಪು. ೩-೦೪). [?]

ಪಿಧಾನ (ನಾ). ೧. ಮುಚ್ಚುವಿಕೆ ; ಹೊದಿಸುವಿಕೆ. ೨. ಮುಚ್ಚುವಂತಹ ಸಾಧನ ; ಮುಚ್ಚಳ : "ಪಿಧಾನಂ, ಉದಂಚನಂ — ಈ ೨ ಎಸರ್ಮುಚ್ಚೆ" (ಹಲಾಯು. ೫೩-೦೬೦) ; ಈ ಭುಕ್ತಾನ್ನಕ್ಕೆ ಅಮೃತವು ಪಿಧಾನವಾಗಲಿ (ಸುಜಾಪ. ೩೦೨). [ಸಂ.]

ಪಿನ್, ಪಿಂ, ಹಿಂ, ಹಿನ್ (ಗು). ೧. ಹಿಂಬದಿಯ ; ಹಿಂಭಾಗದ : 'ಪಿನ್ನೆಲೆ' ಪರಾ. (ನಾ). ೨. ಹಿಂಬದಿ ; ಹಿಂಭಾಗ. ೩. ಮೊದಲು ; ಮುಂಚೆ : ಪಿನ್ ಮಱುಮೋಗೀಶ್ವರನುಳ್ಳೆ ಕದಿ ತಣಿದ ನಾಗನ್ಮುನಿ' (ಸೌಪಾ. IX-1, ೩೯೨-೪ ; ೩ಸಂಯ ೫೪). ೪. ಮೊದಲಿನದು ; ಮುಂಚಿನದು ; ಹಿಂದಿನದು : 'ಪಿನ್ನೀಕ್ಷಿಸು', 'ಪಿನ್ನೋ' ಪರಾ. ಪಿಂ : ೧. 'ಪಿಂಗಡೆ', 'ಪಿಂಗಾಲ್' ಪರಾ. ೨. ನುಡಿಸಲ್ ಕೇಳಿ ಶುಕಾಳಿಯೊಳ್ ನುಡಿವ ಸೋಂಕಲ್ ಪಿಂಗೆ ಸಾರ್ದಿರ್ದ ಕೌಳುಡೆಯುಂ ಸೋಂಕುವ ... ಓಪಳದೊಂದು ಭಾವರಸ ಗರ್ಭಕ್ರೀಡೆಯುಂ ವ್ರೀಡೆಯುಂ ಪಡೆವನ್ನಂ ಮುದಮಂ ಮುಕುಂದನತಿರಾಗೋದ್ರೇಕಮಂ ತಾಳ್ದಿದಂ (ಜಗಪಿ. ೦೦-೦೩೬). ಹಿಂ : ೧. 'ಹಿಂಗಚ್ಚೆ', 'ಹಿಂಗಟ್ಟು' ಪರಾ. ೩. ಹಿಂ ಭವನನೊಲಿಸಿದರ ಮೂಜಗದೊಳನಿಂದಭವನ ಕೃಪೆ ಪಡೆದವರ ಮುಂ ಭವನ ಮೆಚ್ಚಿ ಪದಪಾದಾಬ್ಜಕೆ ವಂದಿಪೆನಾನತಿಮುದದಿಂದೆ (ಕ್ರಿಶುಕಿ. ೦-೦೩). ಹಿನ್ : ೧. 'ಹಿನ್ನೆಲೆ' ಪರಾ.

ಪಿನ್ನ — ಮೊದಲಿನ ; ಮುಂಚಿನ ; ಹಿಂದಿನ : ನೀರಿಲ್ಲದ ಕೆಱೆಯ ನಡುವಂ ಕಂಡುದಱಿಂ ತೀರ್ಥಂಕರಚಕ್ರವರ್ತಿಗಳ ಪುಟ್ಟಿದ ಮಧ್ಯ ದೇಶದೊಳ್ ಪಿನ್ನ[ಜಾಪಾಂ. ಧರ್ಮದ]ನೆಗಱ್ತೆಯಾಗದು (ಸಂಗ್ರಾಂ. ೬೬-೦೯).

[ದೇ. ॥ ತಮಿ. ಮಲ. ಕೋತ. ತೊದ. ಪಿನ್]

ಪಿನದ್ಧ (ಗು). ೧. ಕಟ್ಟಿರುವ ; ಬಂಧಿಸಿರುವ : ಪಿನದ್ಧ ವಿವಿಧ ಮಣಿದರ್ಪಣಧ್ವಜಂಗಳುಂ . . . ಆಮೋದಕುಸುಮದಾಮನಿಕಾಮಕಮನೀಯಂಗಳುಮಪ್ಪ ತೋರಣಂಗಳನೆ ನುಗುಳುತ್ತುಂ (ಅಂಪ. ೪-೩೬ ಪ) ; ಪರಿಚಿತಭೂತಿರೇಖಮುಖದರ್ಶಿತ ಸರ್ಷಪಪುಂಜಮಂಜನೋಪರಚಿತಖಡ್ಗ ಖೇಟಕಸಮುದ್ಭಟವಿದ್ಧಪಿನದ್ಧಭಿತ್ತಿ . . . ಏಂ ಮನಕ್ಕೊಲವನಿತ್ತುದೊ ಬಾಗಿಲರಿಷ್ಟಸದ್ಮದಾ (ಸಂಧ್ರಪು. ೩-೯೭). ೨. ಕೂಡಿದ ; ಸೇರಿದ : ಆಗಳಾತನುಂ . . . ಅಶೋಕ ಪುನ್ನಾಗ ಪಕುಲ ಚಂಪಕ ಸಹಕಾರ ಲವಂಗ ಕ್ರಮುಕ ನಾಳಿಕೇರ ನಾಗವಲ್ಲೀ ಪಿನದ್ಧದ್ರುಮಷಂಡ ಮಂಡಿತಮನಿಂದ್ರವನದೊಳೋರಂತಪ್ಪುದಂ ನೋಡುತುಂ (ಸಂಗ್ರಾಂ. ೫೯-೨೫). ೩. ಹದಿಸಿದ ; ಮೆಟ್ಟಿದ ; ತೆತ್ತಿಸಿದ : ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂತರಸುರತಾಲಯಂಗಳಿರ . . . ಕಡುಕೆಯ್ದು ಕೃತಾಂತನಿಂತು ನಿರ್ನೆರಮೆಱೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪರೇ (ಅಂಪ. ೩-೪) ; ಸುರುಚಿರಚಂದ್ರಕಾಂತದ ಪಿನದ್ಧತಳಂ ವಿಕಸದ್ವಿನೀಳನೀರರುಹವಳಾವಭಾಸಿ ತಟರೂಢತಮಾಳಲತಾಮನೋಹರಂ (ಪರ್ಶಪು. ೨-೦೫). ೪. ಅವರಣವನ್ನು ಹೊಂದಿದ ; ಮುಚ್ಚಿದ. ೫. ಚುಚ್ಚಿದ ; ನಾಟಿದ. ೬. ಅಡಗಿದ ; ಗುಪ್ತವಾದ. ೭. ಬಟ್ಟೆ, ಕವಚ ಮುಂತಾದುವನ್ನು ಧರಿಸಿದ. (ನಾ). ೮. ಕಟ್ಟುವಿಕೆಗೆ ಒಳಗಾದುದು : "ಬದ್ಧಂ, ಪಿನದ್ಧಂ, ಆಮುಕ್ತಂ, ಅಪಿನದ್ಧಂ — ಈ ೪ ಬಟ್ಟಲ್ಪಟ್ಟುದು" (ಹಲಾಯು. ೦೨೩-೬೨). ೯. ಕಟ್ಟು ; ಬಂಧನ : "ಅಪಿನದ್ಧಮೆನೆ ಪಿನದ್ಧಂ ಬದ್ಧಮೆನೆ ಕಟ್ಟು" (ಸುಂಗಾ. ೦೩೪-೩೫). ೧೦. ಬಟ್ಟೆ, ಕವಚ ಮುಂತಾದುವನ್ನು ಧರಿಸಿದವನು : "ಆಮುಕ್ತಃ, ಪತಿಮುಕ್ತಃ ಪಿನದ್ಧಃ, ಅಪಿನದ್ಧಃ — ೪ ಬಟ್ಟೆಗಳನ್ನು ತೊಟ್ಟುಟ್ಟು ಕಟ್ಟಿಕೊಂಡವನ ಹೆಸರುಗಳು" (ಸಿದ್ಧಾಂಕಿ. ೨೫೬). 'ಅಪಿನದ್ಧ' ಪರಾ. [ಸಂ.]

ಪಿನಪಾಲ 'ಪಿನಿವಾಲ' ನೋ.

ಪಿನಾಕ (ನಾ). ೧. ಶಿವನ ಒಂದು ಆಯುಧ ; ತ್ರಿಶೂಲ. ೨. ಶಿವನ ಧನುಸ್ಸು, — ಬಿಲ್ಲು : "ಪಿನಾಕಂ, ಅಜಗವಂ (ಸ್ಯಾತ್) — ಈ ೨ ಮಹಾದೇವರ ಬಿಲ್(ಲ್ಲು)" (ಹಲಾಯು. ೪-೦೯) ; ಪರಶು ತ್ರಿಶೂಲ ಡಮರುಗ ತರವಾರಿ ಪಿನಾಕಬಾಣ ಖಟ್ವಾಂಗ ಕಪಾಲ ರಥಾಂಗ ಪಜ್ರ ಧರನಪ್ಪುರುತರ ದಶಬಾಹು ಲಸಿತ ಜಯ ಶಿವಲಿಂಗಾ (ಕ್ರಿಪುಂ. ೩೩-೦೬೬) ; ಅಭವಂ ಪಿನಾಕಮಂ ನೆಗಪಿ ಜೇವೊಡೆದೊಂದು ಬಾಣಮಂ ಪೂಡಿ ತೆಗೆದೆಸಲ್ (ಸಂಪು. ೫೦-೪೦). [ಸಂ.]

ಪಿನಾಕಧರ (ನಾ). ಪಿನಾಕವನ್ನು ಧರಿಸಿರುವವನು : ಶಿವ : ತಾನುದ್ರೇಕಿಸಿಯೆ ಸಮರದಲಿ ನಿಲಲು ಪಿನಾಕಧರನಿಗೆ ನೂಕದೆಂದನು ಸತಿಯರಿದಿರಿನಲಿ (ಕುಸ್ಯಾಪಿ. ೩-೦೩) ; ದರ್ವೀಕರೇಶೋರುಮೌರ್ವೀಪಿನಾಕಧರ . . . ಸುಸರ್ವ ಜಯಸಿದ್ಧನಂಜ (ಗುಕುಪಾ. ೦೪-೦). [ಸಂ.]

ಪಿನಾಕಪಾಣಿ (ನಾ). = ಪಿನಾಕಧರ : ಅಱಿಯಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ ನೆಱೆಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ಕೆ (ಗರಾಯು. ೪-೪೯). [ಸಂ.]

ಪಿನಾಕಾಯುಧ (ನಾ). ಪಿನಾಕವೆಂಬ ಆಯುಧವನ್ನು ಉಳ್ಳವನು ; ಶಿವ : ಬಿಲ್ತೋಳ ಮುನ್ನಂ ಪಿನಾಕಾಯುಧನೆ ಸಲಿಳ ಚಕ್ರಾಯುಧಂ ಜಾಮದಜ್ಞ್ಯಂ ಬಲ್ಲು . . . ಇಂದ್ರಾತ್ಮಜಾತಂ ಬಲ್ಲಂ ಕೇಳಿಗ ಬಲ್ಲಾಳನೆ ಕಲಿಗಳ ದೇವಂ (ಎಕ VI. ಪಕ್ಕಪು. ೩೭-೩೩ ; 1180). [ಸಂ.]

ಪಿನಾಕಿ$_1$ (ನಾ). = ಪಿನಾಕಾಯುಧ : ಲೋಕವೀರೇಳಕೆ ನೆಱೆ ಬಲ್ಲಿದನು ಪಿನಾಕಿಯೆಂಬರು ಕಥೆಯೊಳಗೆ (ಕ್ರಿಪುಸಾಂ. ೩-೨೯) ; ನೀನೆನಗೋಪಳಾದರೆ ಸಾಕು ಮಲೆತಡೆಯಾ ಪಿನಾಕಿಗೆ ತೆರಳುವೆನೆ ಬಳಿಕಲ್ಲಿ ನೋಡೆಂದ (ಕುಸ್ಯಾಪಿ. ೨-೨೯) ; ತೃಣಾಂಬೀರದ ಮಧ್ಯೆ ಬೇಡುತಿರ್ದಳ್ ಬಿಡದೆ ಫಣಿಧರ ಪಿನಾಕಿಯಂ ತನ್ನಭೀಷ್ಟ ಸಫಲಮಕ್ಕೆಂದು (ಪತ್ರಾಂಗ. ೬೨-೨೨೬೦).

[ಸಂ. ಪಿನಾಕಿನ್]

ಪಿನಾಕಿ$_2$ (ನಾ). ೧. ಒಂದು ಬಗೆಯ ವಾದ್ಯ : ಚಿನ್ನ ತಿತ್ತಿರಿ ಱಂಚೆ ಮುಱು ತಾಪು ಹೆಗ್ಗಾಳೆ ಮನ್ನೆಯಗಹಳೆ ಪಿನಾಕಿ ಉನ್ನತಪಹ ಶಂಖಪಟಹ ಡಿಂಡಿಮ ಮಡ್ಡು ಸನ್ನಾಹಭೇರಿ ಮೊಳಗಲು (ಶಾಪುಂ. ೬-೭೦) ; ಕೊಂಬು ತಿತ್ತಿರಿ ಕಾಳೆ ತುಡುಮು ಪಿನಾಕಿಯಾಡಂಬರದೊಳು ಪೊಕ್ಕ ಪುರವ (ಭರತ. ೫೭ ೬೬) ; ಜೋಕೆವಿಡಿದು ಸೇನೆ ನಾಲ್ಕುದಿಕ್ಕಿನಲಿ ವಿವೇಕವಿಲ್ಲದೆ ಪರಿತರಲು ನೂಕುತ ಕನಲಿ ಪಿನಾಕಿಗಱೆವ ವಾದ್ಯದಾ ಕೂಗು ಬೊಬ್ಬೆ ರಂಜಿಸಿತು (ಪಿಪಸಾಂ. ೪-೬೦). ೨. ಒಂದು ಬಗೆಯ ವೀಣೆ : ಪ್ರಾಚೀನ ಗ್ರಂಥಗಳು, ಕಿನ್ನರಿ, ಪಿನಾಕಿ, ರುದ್ರವೀಣೆ . . . ಭುಜಂಗವೀಣೆ, ರಾವಣಹಸ್ತ ಮುಂತಾಗಿ ನಾನಾರೀತಿಯ ವೀಣೆಗಳನ್ನು ನಮೂದಿಸುತ್ತವೆ (ಸಂಗೀಸಂ. ೩೦೦). [ಸಂ. ಪಿನಾಕಿ]

ಪಿನಾಕಿವೀಣೆ (ನಾ). ಒಂದು ಬಗೆಯ ವೀಣೆ : ತಂತ್ರೀವಾದ್ಯಕಳಾಮಹಿತ ನಾದ ಮಾದರಸ ರಾವಣವೀಣೆ, ರುದ್ರವೀಣೆ . . . ಕಿನ್ನರವೀಣೆ, ಪಿನಾಕಿ ವೀಣೆ ಮೊದಲಾದ ಮೂವತ್ತೆರಡು ವೀಣೆಗಳನ್ನೂ ವೇಣುಸ್ವರಮಂಡಲಗಳನ್ನೂ ಶ್ರುತಿಗೊಳಿಸಿ (ಭರತ. ೨೮೫). [ಪಿನಾಕಿ$_2$+ವೀಣೆ$_1$]

ಪಿನಾಶಿ 'ಪೀನಾಶಿ' ನೋ.

ಪಿನಾಸಿ 'ಪೀನಾಶಿ' ನೋ.

ಪಿನಿಕ್ಷೀರ (ನಾ). ಒಂದು ಬಗೆಯ ಸಸ್ಯ : ಪಯಸ್ವಿನೀ...ಕ್ಷೀರಕಂದ, ಬೆಳ್ಳಿ (ಬಿಳಿ?)ಯ ಸೂರಣ, ದುಗ್ಧಿ, ಪಿನಿಕ್ಷೀರ, ಕಾಕೋಳಿ, ಹಾಲುಗುಂಬಳ, ಎಮ್ಮೆ, ಆಡು, ಆಡುವ ಹಾಲೆ" (ಶಿಪಧಿ. ೪೦). [ಪಿನಿ ? + ಕ್ಷೀರ]

ಪಿನಿವಾಲ, ಪಿನಪಾಲ, ಪಿನ್ನಿವಾಲ (ನಾ). ಒಂದು ಬಗೆಯ ಮರ : ಪಿನಿವಾಲ . . . ನಿಬಿಡವಾದ ಛಾಯೆಯುಳ್ಳದ್ದಾಗಿ ಬಹುಮನೋಹರ ವಿರುತ್ತದೆ. ಕಟ್ಟಿಗೆ ಮಿದು, ಕೆಲಸಕ್ಕೆ ಬಾರದ್ದು (ಕಣಾಸಿ. ೪೩).

ಪಿನಪಾಲ : ಪಿಲಾಲದ ಪಾರ, ಕಿರಿಗೋಳಿ, ಜೀವಿ, ಪಿನಪಾಲ (ಸ್ಮೃತಿಗಿ. ೩೬-೭೨೪). ಪಿನ್ನಿವಾಲ : (ಕ). [?]

ಪಿನಿಹುಲ್ಲು (ನಾ). ಒಂದು ಬಗೆಯ ಹುಲ್ಲು : ಕಾಡುಗಸಗಸೆಹುಲ್ಲು, ಪಿನಿಹುಲ್ಲು (ಸ್ಮೃತಿಗಿ. ೩೪-೬೩೬). [ಪಿನಿ ? + ಹುಲ್ಲು (<ಪುಲ್)]

ಪಿನ್ನಲ್‌ಕೋಲಾಟ (ನಾ). ಒಂದು ಬಗೆಯ ಕೋಲಾಟ : ಜಡೆ ಕೋಲಾಟ : p "ಕಲಾವಿದರು ಒಂದು ಕೈಯಲ್ಲಿ ದಾರವನ್ನು ಮತ್ತೊಂದು ಕೈಯಲ್ಲಿ ಒಂದು ಜತೆ ಕೋಲುಗಳನ್ನು ಹಿಡಿದು ನರ್ತಿಸುತ್ತಾರೆ. ಎತ್ತರದ ಪ್ರದೇಶಕ್ಕೆ ಅಥವಾ ಅಟ್ಟಕ್ಕೆ ವಿವಿಧ ಬಣ್ಣಗಳ ದಾರಗಳನ್ನು ತೂಗು ಹಾಕಿ ನರ್ತಕರು ತಮ್ಮ ತಾಳಬದ್ಧ ಚಲನೆಯಿಂದ ಆ ದಾರಗಳನ್ನು ಜಡೆ ನೇದಂತೆ ನೇಯುವ ಹಾಗೂ ಜಡೆ ಬಿಡಿಸುವ ಚಲನೆಗಳು ಪಿನ್ನಲ್‌ಕೋಲಾಟದಲ್ಲಿವೆ" (ಭಾಕಶಾ. ೧೨೬): ಹಾಡಿಗೆ ಅನುಗುಣವಾಗಿ ಅಭಿನಯಿಸಲ್ಪಡುವ ಪಿನ್ನಲ್‌ಕೋಲಾಟದಲ್ಲಿ ಹಲವು ರೂಪದವುಗಳಿವೆ (ಭಾಕಶಾ. ೧೨೬).

[←ತಮಿ. ಪಿನ್ನಕ್ಕೋಲಾಟ್ಟಮ್]

ಪಿನ್ನಿ, ಪಿನ್ನೆ₂ (ನಾ). ಮಣ್ಣಿನ ಪಾತ್ರೆ : ಹನ್ನೆರಡುವರ್ಷದ ತಂಗಳ ಕೂಳನು ಪಿನ್ನಿಯೊಳಱಿದು ನಾಲಗೆಲಿ ಕುನ್ನಿಯಂದದಿ ನೆಕ್ಕಿ ಮೈಗೊರಸಿ ಕೊಂಬೋದು ಮುನ್ನ ಮಾಡಿದ ಪಾಪವೈಸೆ (ಪಸ್ಕಾಕಾ. ೯-೮೨); ಮುನ್ನ ಉಂಬಿ ಶರಣರು ವ್ಯಾಳ್ಯವ್ಯಾಳ್ಯಕೆ ಚಿನ್ನ ಬೆಳ್ಳಿ ಪಾತ್ರದೊಳಗೆ ಇನ್ನು ಹಂಚಿ ಲುಂಬಂತಾಯ್ತು ಬನ್ನಿಯೆಂದು ಪಿನ್ನಿಯೊಳಂಬಲಿಯೆಱಿಯೆ (ಪಸ್ಕಾಕಾ. ೦೦-೨೩). ಪಿನ್ನೆ₂ : ನಾಯಿ ಮಣ್ಣುಪಿನ್ನೆಯಲ್ಲಿ ಅಂಬಲಿಯನ್ನು ಕುಡಿಯುತ್ತಿದೆ (ಕೂಡಿ) [?]

ಪಿನ್ನಿವಾಲ 'ಪಿನಿವಾಲ' ನೋ.

ಪಿನ್ನೀಕ್ಷಿಸು (ಕ್ರಿ). ಮತ್ತೆ ನೋಡು ; ಮರಳಿ ನೋಡು : ಜನಪನಾದ ವಿರಾಟನೆದುರೊಳಗನುವು ಸಾಗದು ನಿಮ್ಮ ನೃಪಗನುಮನದಿ ಪಿನ್ನೀಕ್ಷಿಸು ತಲೈದುವುದೆನಲು ಗೋವಳರು (ಪಸಭಾ. ೩೭-೧೯). [ಪಿನ್+ಈಕ್ಷಿಸು]

ಪಿನ್ನು (ನಾ). (ಉಡುಪಿನ ಭಾಗಗಳು, ಕಾಗದಗಳು, ತಲೆಯ ಕೂದಲು ಇತ್ಯಾದಿಗಳನ್ನು ಚುಚ್ಚಿ ಸೇರಿಸಲು ಉಪಯೋಗಿಸುವ) ಒಂದು ಬಗೆಯ ಸೂಜಿಯಂತಹ ಲೋಹದ ವಸ್ತು ; ಗುಂಡುಸೂಜಿ ಇತ್ಯಾದಿ : ತಲೆಗೆ ಕೆಂಪುರಿಬ್ಬನ್ ಕಟ್ಟಿಕೊಂಡು, ತಲೆಯಲ್ಲಿ ಹತ್ತೆಂಟು ಕಡೆಗೆ ಅಡ್ಡತಿಡ್ಡ ಪಿನ್ನು ಚುಚ್ಚಿಕೊಂಡಿದ್ದಳು (ಗಂಪುಯಾ. ೮೩); ಬಾಬುಸದ ಮಧ್ಯೆಯ ಗುಬ್ಬಿ ಕಳಚಿ ಹೋಗಿದ್ದಕ್ಕೆ, ಕೊರಳಲ್ಲಿಯ ಬೆಳ್ಳಿ ಎಳೆಯಲ್ಲಿದ್ದ 'ಪಿನ್ನ'ನ್ನು ಹಾಕಿ 'ಫಿಟ್' ಮಾಡಿದಳು (ಪೂಸಕ್ಷಿ. ೪೭) ; ಪಿನ್ನು ಕಳಚಿ ಹೋಗಿ ಪುಸ್ತಕದ ಹಾಳೆಗಳೆಲ್ಲ ಅದಲುಬದಲಾದುವು (ಕೂಡಿ).

[← ಇಂ. Pin]

ಪಿನ್ನೆ₁, ಹಿನ್ನಿ, ಹಿನ್ನೆ (ನಾ). ೧. ಸೂಜಿಯ ಹಿಂಭಾಗ,—ರಂಧ್ರವಿರುವ ಭಾಗ : ಸೂಜಿಯ ಪಿನ್ನೆಯೊಳಂ ಮಣಿಯ ದ್ವಾರದೊಳು ನುಸುಳ್ದಿರ್ಪರಿರ್ದೆಡೆಯೊಳೊರ್ವನಂ ಕಳ್ವಂತಪ್ಪ ಕಳ್ಳರ ಕಳ್ಳನಿವಂ (ರರ್ಮಾಸ್ಕು. ೬-೦೯). ಹಿನ್ನಿ : ೧. ಸೂಜಿಯ ಮೊನೆಯಲ್ಲಿ ದಾರ ವೇಱಿ ಹಿನ್ನಿ[ಭಾಕಾಂ. ನ್ನೆ]ಯ ಹಂಗ ಬಿಡಿಸಿತ್ತು ನೋಡಾ (ಪಜಾಸಾ.ಳ. ೧೩೭-೩೨೪); ಸೂಜಿಯ ಹಿನ್ನಿಯಲ್ಲಿ ಮುಗಿಲ ತೋರದ ದಾರ ಹಿಡಿಯಿತ್ತು (ಸುಂಳಪಂ. ಳ. ೬೭೦-೦೩); ದೊನೆ ಮೂಱು ಹಿನ್ನಿಯೊಂದು ಆ ಸೂಜಿಯಲ್ಲಿ ಹೊಲಿದಿಹೆನೆಂದಡೆ ಕುಪ್ಪಸಕ್ಕೆ ಚಿಪ್ಪು ಒಡಗೂಡವು ನೋಡಾ (ಸರ್ಪಸ. ೦೨೩-೬೩೦). ೨. (ಬಾಣದ) ಹಿಂಭಾಗ ; ಗರಿ ; "ಕರ್ತರಿ, ಪುಂಖ" (ಭಾಕಶಾ. ೪). ಹಿನ್ನೆ : ೩. ಹಿಂಬದಿ ; ಹಿಂಭಾಗ : ಕೊಳ್ಳಿಯ ಹಿನ್ನೆಯಿಂದ ಸೊಸೆಯ ತಲೇ ಮೇಲೆ ಕುಕ್ಕಿದಳು (ಪಾಪುಕಾ. ೮೬).

[ದೇ. ॥ ಮಲ. ತುಳು. ಪಿನ್ನೆ]

ಪಿನ್ನೆ₂ 'ಪಿನ್ನಿ' ನೋ.

ಪಿನ್ನೆಣಿಕೆ (ನಾ). ಹಿಂದಾದುದನ್ನು ಕುರಿತು ಯೋಚಿಸುವುದು ; ಪಶ್ಚಿಮಬುದ್ಧಿ : ಪಿನ್ನೆಣಿಕೆ ಮುನ್ ಬಗೆಯನೊತ್ತಿ ಪುಸಿ ಮಾಟ್ಟುದು (ಅಂತಿಗೂ. ೧೯-೩೭೬). [ಪಿನ್+ಎಣಿಕೆ]

ಪಿನ್ನೆತ್ತಿ (ನಾ). ನೆತ್ತಿಯ ಹಿಂಭಾಗ : ಪಿನ್ನೆತ್ತಿಯೊಳ್ ತುಱುಬನಿಕ್ಕಿದಳು (ಸೋಪಕ. ೯-೨೬). [ಪಿನ್+ನೆತ್ತಿ]

ಪಿನ್ನೆಲೆ, ಹಿನ್ನೆಲೆ (ನಾ) ೧. ಹಿಂದಿನ ನೆಲೆ,—ಸ್ಥಳ ; ಹಿಂಬದಿ ; ಹಿಂಭಾಗ : ಪೋರ್ದರಿಱಿದರ್ ನೂಂಕಿದರ್ ಮರಳಿ ಪಿನ್ನೆಲೆಗೆ ಸಾರ್ದು ಪೋಯೆಂದುಱುಬಿ ತಮತಮಗೆ ಪೊಯ್ದಾಡುತಿರ್ದು (ಪಂಪು. ೪೯-೨೩); ಪ್ರವೀರನು ತೆಗೆಸಿದರ್ಪಿನ್ನೆಲೆಗೆ (ಸ್ವಪುಶಾ. ೯-೩೦). ಹಿನ್ನೆಲೆ : ೧. ಕರಿ ಘಟೆಯ ಮಱೆವೊಕ್ಕು ನಿಂದರು ನರರು ತೇಜಿಗಳೋಡಿ ತೇರಿನ ಮಱೆಯ ಸಾರ್ದವು ತೇರು ಹಾಯ್ದವು ದೊರೆಯ ಹಿನ್ನೆಲೆಗೆ (ಕುಪ್ಯಾಳ. ೧೫-೩೬) ; ಮದಗಜಗಮನೆಯೊರ್ವಳು ಪರಿಮಧ್ಯೆಯೊಳೊದಗಿ ಸರಸ ಕೈತುದು ಬೆದಱಿ ಹಿನ್ನೆಲೆಗೈದೆ (ಕಂಪು. ೨೫-೦೨೬) ; ಘಟನೆಗಳ ನಿರೂಪಣೆ ಮತ್ತು ಪಾತ್ರಸೃಷ್ಟಿಗಳೇ ಅಲ್ಲಿನ ಮುಖ್ಯೋದ್ದೇಶ. ಇವುಗಳನ್ನು ಅತ್ಯಂತ ಸ್ಪಷ್ಟವಾಗಿ ನಮ್ಮ ಕಲ್ಪನೆಗೆ ದೊರಕುವಂತೆ ಮಾಡಿ ಕವಿ ಹಿನ್ನೆಲೆಗೆ ಸರಿಯುತ್ತಾನೆ (ಭಾಸಗೀ. ೩). ೨. ಯುದ್ಧಭೂಮಿಯ ಹಿಂಭಾಗಕ್ಕೆ ಇರುವ ಸ್ಥಳ : ಮುಱಿದ ಚೂಣಿಯ ಭಟರು ತಂದರು ಬಿಱಿಸಿನರೆನೆಲೆಗಿದು ನಿಹಾರದೊಳಿಱಿದು ನೆಱಿ ಸೊಪ್ಪಾಗಿ ಸಾರಿತು ಸರಿದು ಹಿನ್ನೆಲೆಗೆ (ಕುಪಾ ೪. ೦೯-೦೨); ಲಗ್ಗೆಯೊಳಗೆ ನೊಂದು ರಿಪು ಭೂಪರ ಸೇನೆಯೊಗ್ಗೊಡೆದೋಡಿ ಹಿನ್ನೆಲೆಗೆ ಹಿಗ್ಗುದೆಗೆದು ದೂರ ಚೌದಿಕ್ಕಿನೊಳಾಗ ಬೊಗ್ಗನೆ ಪಾಳ್ಯವಿಳಿದರು (ಕಂಪಶಿ. ೩-೬೦). ೩. "ಮುಂದುಗಡೆ ಇರುವ ಮುಖ್ಯವ್ಯಕ್ತಿಗಳಿಗೆ ಅಥವಾ ವಸ್ತುಗಳಿಗೆ ಪ್ರಾಧಾನ್ಯ ಕೊಡುವಂಥ ದೃಶ್ಯ ಚಿತ್ರ ಅಥವಾ ವರ್ಣನೆ" (Back-ground. ಇಂಕಶಿ) : ಶುದ್ಧವಾದ ಅಂತರಿಕ್ಷದ ಹಿನ್ನೆಲೆಯಲ್ಲಿ ಅವು ಮರಳ ರೆಕ್ಕೆಗಳಂತೆ ಕೊಂಬೆಗಳಂತೆ ತೋರುತ್ತಿದ್ದವು (ಪುರಶಾ. ೪೨). ೪. ಭೂಮಿಕೆ ; ತಳಹದಿ ; ಬುನಾದಿ ; ಸನ್ನಿವೇಶ : ಈ ಗ್ರಂಥದ ಸ್ವರೂಪವನ್ನು ಅರಿಯಬೇಕಾದರೆ ಅದು ಹುಟ್ಟಿದ ಹಿನ್ನೆಲೆಯನ್ನು ಅರಿಯಬೇಕಾದುದು ಅತ್ಯಗತ್ಯ (ಸೂಸ್ಕಳು. ೦) ; ಗೊಬೆಲ್ ಯಾವ ಒಂದು ವಿಷಯ ಪ್ರತಿಪಾದನೆ ಮಾಡುವಾಗಲೂ ಅದರ ಚಾರಿತ್ರ್ಯ ಮತ್ತು ಹಿನ್ನೆಲೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದನು (ಸಸ್ಕಳ. ೪೭) ; ಕನ್ನಡದಲ್ಲಿ ಪ>ಹ ಆದುದಕ್ಕೆ ಒಂದು ಐತಿಹಾಸಿಕ ಹಿನ್ನೆಲೆ, ಬೆಳವಣಿಗೆ ಇದೆ (ದ್ವಾಶಿಶಿ. ೩೩೬); ಶಂಕರ ರಾಮಾನುಜರಿಗೆ ಅವರವರ ಮತಸ್ಥಾಪನೆಗೆ ಹಿನ್ನೆಲೆ ಪರ್ಪಾಡಾಗಿತ್ತು (ಭಾಕದ. ೨೯೬); ಇಂದು ಈ ಹಣ ಯಶೋದೆಗಾಗಿರಬಹುದು ಎಂಬ ಸಂದೇಹದ ಹಿನ್ನೆಲೆಯಲ್ಲೆ ಈ ಮಾತು (ಪಾಸ್ವಲ್ಯ. ೯೯).

[ಪಿನ್+ನೆಲೆ₁]

ಪಿನ್ನೇಕಾಯಿ (ನಾ). ಒಂದು ಬಗೆಯ ಮರ : ಸುರಹೊನ್ನೆ, ಪಿನ್ನೇಕಾಯಿ, ಪುನ್ನಾಗ, ಸುಡಾಬು, ಹೂಹೊಮ್ಮೆ (ಸ್ಮೃತಿಗಿ. ೦೬-೨೯೭) ; ಕಲ್‌ಹೊನ್ನೆ, ಕಿರಿಹೊನ್ನೆ . . . ಪಿನ್ನೇಕಾಯಿ, ಪುನ್ನಾಗ, ಬೊಬ್ಬಿ, ಶ್ರೀಹೊನ್ನೆ, ನಾಮೇರು, ಸುಡಾಬು, ಇರೈ (ಸಸ್ಕಶಿ. ೨೬).

[ಪಿನ್ನೆ₀ (p←ತಮಿ ಪಿನ್ನೈ) + ಕಾಯ್ಯಿ (<ಕಾಯ್ಯ್)]

ಪಿನ್ನೇಸಱು (ನಾ). ಪಶ್ಚಿಮಕ್ಕೆ ಇರುವ ಸೂರ್ಯ ; ಮುಳುಗುತ್ತಿರುವ ಸೂರ್ಯ: ಇನ್ನೊಮ್ಮೆ ಶರವ ತಿರುವಿಗಿಟ್ಟು ನೋಡೆಂದು ತನ್ನ ದಿವ್ಯಾಸ್ತ್ರ ದಿನವನ ಪಿನ್ನೇಸಱು ಪಿಂಗಡಲೊಳಗಗುಳದ ಮುನ್ನ . . . ಅವನುತ್ತ ಮಾಂಗವನಾಗಸದ ಅತ್ತ ಹಾಱುವ ತೆಱದಿಂದೆಚ್ಚನು (ಸೇಮಿಸಂ. ೨೮-೦೮೮).

[ಪಿನ್ + ನೇಸಱು (<ನೇಸಱು)]

ಪಿನ್ನೋ (ಕ್ರಿ). ಹಿಂದೆ ಆದುದಕ್ಕಾಗಿ ವ್ಯಥೆಯನ್ನು ಹೊಂದು; ಪಶ್ಚಾತ್ತಾಪ ಪಡು: ಎಂತು ನೀನ್ ಪಿನ್‌ನೋಯದೆಯೆ ಪೋಪೆ? (ಅಂತಿಗೂ. ೦೦-೨೦೨). [ಪಿನ್ + ನೋ]

ಪಿನ್ನೋಡು (ಕ್ರಿ). ಹಿಂದಕ್ಕೆ ಹೊರಳಿ ನೋಡು; ಹಿಂದಿರುಗಿ ನೋಡು: ಎನಗೆ ಅಂಜಿಕೆಯೆಂಬುದಿಲ್ಲ. ಅದಱಿಂದೆ ನೀನ್ ಬಂದ ದಾರಿಯೊಳೆ ಪಿನ್ನೋಡದೋಡು! (ಇರ್ಕಪ್ರ. ೩೦-೦೦೦೬). [ಪಿನ್ + ನೋಡು]

ಪಿಪಾಸ (ನಾ). ನೀರಡಿಕೆ; ಬಾಯಾರಿಕೆ; ದಾಹ: "ನೀರಡಿಕೆ ತರ್ಷಂ ಪಿಪಾಸಮೆನಿಸಿಕ್ಕುಂ" (ಮಂಗರಾ. ೬೦-೦೯); ಸತ್ಯಗುಪ್ತನು ಆ ಜಲವನ್ನು ಹಿಂಗಿ ಪಿಪಾಸವನ್ನು ಸ್ವಲ್ಪ ಶಮನ ಮಾಡಿಕೊಂಡು ಸುತ್ತಲೂ ನೋಡುತಾ ಕೂತುಕೊಂಡನು (ಪೇಲಿಮಾ. ೩). [ಸಂ. ಪಿಪಾಸಾ]

ಪಿಪಾಸಿತ (ಗು). ೧. ಬಾಯಾರಿದ; ನೀರಡಿಸಿದ. (ನಾ). ೨. ಬಾಯಾರಿದವನು; ನೀರಡಿಸಿದವನು: "ತೃಷಿತಃ, ತರ್ಷಿತಃ, ಪಿಪಾ(ಸುಃ), ಪಿಪಾಸಿತಃ—ಈ ೪ ನೀರಡಿಸಿದಾತಂ" (ಹಲಾಯು. ೫೯-೨೦೭). [ಸಂ.]

ಪಿಪಾಸು (ಗು). ೧. = ಪಿಪಾಸಿತ ೧. (ನಾ). ೨. = ಪಿಪಾಸಿತ ೨: "ತೃಷಿತಃ, ತರ್ಷಿತಃ, ಪಿಪಾ(ಸುಃ), ಪಿಪಾಸಿತಃ—ಈ ೪ ನೀರಡಿಸಿದಾತಂ" (ಹಲಾಯು. ೫೯-೨೦೭). [ಸಂ.]

ಪಿಪಾಸೆ (ನಾ). ೧. ನೀರಡಿಕೆ; ಬಾಯಾರಿಕೆ; ತೃಷೆ: "ಉದನ್ಯಾ, ತರ್ಷಃ . . . ಪಿಪಾಸಾ—ಈ ೫ ನೀರಟ್ಕೆ" (ಹಲಾಯು. ೬೦-೨೦೮); ಅಂತಳವಿಗಟ್ಟಿದ ಪಿಪಾಸೆಯುಂ ಪಸಿವುಮಸಮಯಂಬಡೆದು . . . ನೀರ್ನೆ ಟಲನಱಸಿ . . . ನಡೆವಾಗಳ್ (ಲೀಲಾವ. ೬-೯೨ ಪ). ೨. (ಆಲಂ) ತಿಳಿದು ಕೊಳ್ಳಬೇಕೆಂಬ ಇಚ್ಛೆ,—ಬಯಕೆ: ಅಂತೆಯೆ ಮುಂದೆ ಅದು ಶಾಶ್ವತವಾದ ಆನಂದದ ಬಗೆಗೆ ಪಿಪಾಸೆಯನ್ನು ಹುಟ್ಟಿಸುತ್ತದೆ (ಮಹಾಯೋ. ೦೬೩). [ಸಂ. ಪಿಪಾಸಾ]

ಪಿಪಿಲೆ, ಪಿಪ್ಪಿಲ (ನಾ). ಇರುವೆ; ಪಿಪೀಲಿಕೆ: ತರುಗಿರಿಯನೆಲ್ಲ ತಱಗೆಲೆಯಂತೆ ಹಾಱಿಸುವ ವುರುತರದ ಪ್ರಳಯಮಾರುತನೊಳುಂ ಪಿಪಿಲೆಗಳು ಹರುಷದಿಂದಿದಿರೊಡ್ಡಿ ನಿಲ್ವ ಸತ್ವವದುಂಟೆ (ಪ್ರಶುಪು. ೬-೦೨). ಪಿಪ್ಪಿಲ: ಉನ್ನತದ ಪಿಪ್ಪಿ [ಪಾಠಾಂ. ಪ್ಪ]ಲ ಪ್ರಸಾದದಗುಳು ಕಚ್ಚಿ ಬರೆ ಕಾಣುತದಕೆ ಬಸವಂ ಮನ್ನಣೆಯೊಳುಂ ಸಕ್ಕರೆಯ ತಳಿಯೆ (ಪ್ರಶುಪು. ೭-೩೯).

[< ಸಂ. ಪಿಪೀಲ]

ಪಿಪೀಲಕ (ನಾ). ೧. ದೊಡ್ಡ ಕಪ್ಪು ಇರುವೆ; ಗೊದ್ದ. ೨. (ಆಲಂ) ಅಲ್ಪವ್ಯಕ್ತಿ; ಕ್ಷುದ್ರಜೀವಿ: ಈ ಸುಶರ್ಮಕ ಶಕುನಿ ಸಲೆ ದುಶ್ಶಾಸನಾದಿ ಪಿಪೀಲಕರು ತಮಗೇಸು ಬಲುಹುಂಟೈಸನೊದಗಲಿ ಎಂದರವರು (ಕುಪ್ಯಾಕ. ೦೫-೦೫). [ಸಂ.]

ಪಿಪೀಲಿಕ (ನಾ). ೧. (ಹೆಣ್ಣು) ಇರುವೆ: "ಪಿಪೀಲಿಕಂ ಕ್ಷುದ್ರದೊಂದೆ ನಲ್ಕಿಱುಹೆಯಕ್ಕುಂ" (ಮಂಗರಾ. ೯೯-೦೩); ಅಲ್ಲಿಗೆ ಮರ್ಕಟನಂತಾಗದೆ ಇಲ್ಲಿಗೆ ವಿಹಂಗನಂತಾಗದೆ ಈಚೆಯಲ್ಲಿಗೆ ಪಿಪೀಲಿಕನಂತಾಗದೆ (ಮೋಳಿಮಾ. ೦೦೦-೯೩೮); ಬೆಲ್ಲದ ರಸಮಂ ದಾರಮಂ ಪೂಸಿ ಪವಳದ ಛಿದ್ರ ಮೊದಲೊಳಿಟ್ಟು ಇಱುಂಪೆಗಳುಳ್ಳ ಠಾವಿನೊಳಿರಿಸಲ್ ಪಿಪೀಲಿಕಂಗಳಾ ದಾರಮಂ ಪೆಱಗಣ ಛಿದ್ರಕ್ಕೆ ತೆಗತಪ್ಪುದುಂ (ಪುಷ್ಯಾಸ್ತ್ರ. ೩-೨೦ ಪ); ಆ ಲಿಂಗದ ಮೇಲೊಂದು ಪಿಪೀಲಿಕನಿರೆ ಕಂಡು ಬೆದಱಿ . . . ಶೂಲಿ ಕರಂ ನೊಂದನೆಂದು ಬಳಲುತ್ತಿರ್ದಂ (ಕ್ರಿಪುಂ. ೦೬-೭). ೨. (ಇರುವೆಗಳು ಸಂಗ್ರಹಿಸುವುವೆಂದು ಭಾವಿಸಲಾದ) ಒಂದು ಬಗೆಯ ಚಿನ್ನ. [ಸಂ.]

ಪಿಪೀಲಿಕಾನ್ಯಾಯ (ನಾ). ಇರುವೆಯಂತೆ ಸಾವಧಾನವಾಗಿ, ನಿರಂತರವಾಗಿ ಕೆಲಸವನ್ನು ಪೂರೈಸುವಿಕೆ: ಎನಿತೊ ಸೋಜಿಗದ ಬಿಲ್ಗಾರಿಕೆಯ ಕೆಯ್ತಗಳ ಕಂಡಗೆ ಪಿಪೀಲಿಕಾನ್ಯಾಯದಿಂ ತಾನುಮಂತೆಸಗಬೇಕೆಂಬುದ ಸ್ಫೂರ್ತಿಯಾದರೆ ತಪ್ಪೊ ಅಚ್ಚರಿಯೊ ಏನಂತೆ? (ಪಿಪ್ಕರ. ೦೭-೦೦). [ಸಂ.]

ಪಿಪೀಲಿಕಾಸ್ತ್ರ (ನಾ). ಇರುವೆಗಳನ್ನು ಉತ್ಪತ್ತಿ ಮಾಡುವ ಒಂದು ಬಗೆಯ ಅಸ್ತ್ರ: ತೊಟ್ಟು ತೆಗೆದೆಚ್ಚಂ ಪಿಪೀಲಿಕಾಸ್ತ್ರವನೊಡನೆ ಕಟ್ಟಿಱುಹೆ ಮುತ್ತಿದುವು ಘಣೆಗಳು (ಶ್ರೀಮಿಪಾ. ೨೯-೩೯). [ಸಂ.]

ಪಿಪೀಲಿಕೆ (ನಾ). ಇರುವೆ: ಕ್ರಿಮಿಪಿಪೀಲಿಕಾಭ್ರಮರಮನುಷ್ಯಾದಿ ವಿಭೇದಮಾಗಿ ದ್ವೀಂದ್ರಿಯಾದಿ ತ್ರಸಂಗಳ್ (ಸುಳುಮಾ. ೬-೬ ಪ); ಯಮದಂಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯುಂ (ಜಗಂ. ೨-೩೯); ಧಾರುಣಿಯೊಳು ಪಿಪೀಲಿಕೆಯು ವಿಸ್ತಾರದಲಿ ಮಾಡಿದ ಮನೆಯ ಕಾಳೋರಗನು ಹೊಗುವಂತೆ ರಿಪುಕುಂತೀಕುಮಾರಕರು ವೈರದಲಿ ಸಪ್ತಾಂಗವನು ಕೈಸೂಱೆಗೊಂಬರು (ಕುಪ್ಯಾಕ. ೯-೦೯). [ಸಂ ಪಿಪೀಲಿಕಾ]

ಪಿಪ್ಪರಗೆ (ನಾ). ಒಂದು ಊರಿನ ಹೆಸರು; P ಬಿಜಾಪುರಜಿಲ್ಲೆಯ ಈಗಿನ ಹೂವಿನ ಹಿಪ್ಪರಿಗೆ: ಬಾಸುರಿಕೋಡು ಇಂಗಳಿಸರ ಬಾಗೆವಾಡಿ ಸಾಮಳವಾಡಿಗೆ ಒಡ್ಡವೊಡಿಗೆ ಮಧ್ಯವತ್ತಿ [ಗೆ] ಪಿಪ್ಪರಗೆ ನಾಮಗ್ರಮೋ (ಸೌಇಇ. XI-i, ೬-೨೦; 862); [ಪೊ]ಲದ ಸಾಳವಾಡಿಗೆಯು × × ಯಿಂ ಪಡುವ ಪಿಪ್ಪರ[ಗೆ]ಯ ಸೀಮೆಯಿಂ ತೆಂಕ ಸರ್ವ್ವ[ನಮ]ಶ್ಯಂ ಬಿಟ್ಟಕರಿಯ ನೆಲ ಮತ್ತರ್ ೫೫ (ಸೌಇಇ. XI-i, ೯೯-೨೭; ಸು: 1062). [?]

ಪಿಪ್ಪಲ, ಪಿಪ್ಪಳ (ನಾ). ೧. ಒಂದು ಬಗೆಯ ಮರ; ಅರಳಿ; ಅಶ್ವತ್ಥ: "ಶ್ರೀವೃಕ್ಷಃ, ಪಿಪ್ಪಲಃ, ಅಶ್ವತ್ಥಃ, ಬೋಧಿಃ—ಈ ೪ ಅರಳಿ" (ಹಲಾಯು. ೩೩-೯೩); "ಪಿಪ್ಪಲಂ ಬೋಧಿಯಶ್ವತ್ಥಮೆನಲರಳಿಯಕ್ಕುಂ" (ಮಂಗರಾ. ೩೯-೦೦); ಉರುಪಯೋಧರಬಿಲ್ವವನು ಹೊಯ್ದೊರಸಿ ಕದಳಿಯ ನುಣ್ಣೊಡೆಯನಿಟ್ಟೊರಸಿ ರಮಿಸಿತು ವನಸಿರಿಯ ಪಿಪ್ಪಲದಳಾಂಗದಲಿ (ಕುಪ್ಯಾಕ. ೨೦-೩೦); ಜಾಲಿ ಜೇನೊಡವಿಪ್ಪೆ ಪಿಪ್ಪಲ ಮಾಲೆಯಿವ ನೋಡಬಲೆ (ತೂರರಾ. ೩-೦-೨೮); ಖದಿರು ಬಿಲ್ವ ತಮಾಲ ತಂಡಸಿ ಬಿದಿರು ಬೆತ್ತ ಪಲಾಶ ಪಿಪ್ಪಲ ಮಧುಕ ಹೊನ್ನ ಕದಂಬ ಗುಗ್ಗುಳ ನಾಗ ಪುನ್ನಾಗ (ಉತ್ತಕ. ೦೧-೯). ೨. ನೀರು; ಜಲ. ೩. ಜವುಗಿನ ನೆಲ,—ಭೂಮಿ. ೪. ಮೈಲಿಗೆ. ೫. ಯತಿ; ಸಂನ್ಯಾಸಿ: "ಕುಜಭೇದಂ ಶ್ಲಕ್ಷ್ಣ ಯೋಗೀಶ್ವರ ಜಲ ಮಲಿನಂ ಪಿಪ್ಪಲಾಖ್ಯಾನಂ" (ಪಾಪಾರ. ೬೩). ಪಿಪ್ಪಳ: ೧. ನನೆವೊತ್ತಿತ್ತದಿರ್ಗುಂತೆ ಪಲ್ಲವಿಸಿದತ್ತುದ್ಯತ್ತಮಾಳಂ ಕರಂ ಕೊನರೇಱಿತ್ತುರು ಪಿಪ್ಪಳಂ . . . ಘನತಾರಾಂಕುರಭಾರಮಂ ಕುರವಕಂ ವೆತ್ತತ್ತು ಕಣ್ಗೊಪ್ಪದಿಂ (ಪಾರಪು. ೦೪-೨೮); ಸಾಳ ರಸಾಳ ತಾಳ ತಿಲಕಾಮಳ ಪಿಪ್ಪಳ[ಪಾಠಾಂ. ಲ] . . . ತರುಸಂತತಿಯಿಂ ವನಬೃಂದವೊಪ್ಪುಗುಂ (ಯಾವನಂ. ೧-೩೫). ೬. ಒಂದು ಊರಿನ ಹೆಸರು: ಪಿಪ್ಪಳಗ್ರಾಮನಾಮಾಗ್ರಹಾರಸಮುತ್ಪನ್ನಃ (ಮೈಅಂ. ೦೯೨೧, ೦೦-೧೯೩, 947). [ಸಂ.]

ಪಿಪ್ಪಲಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಬೇರು; ಹಿಪ್ಪಲಿ; ಬಾಲಮೆಣಸು: "ಕೃಷ್ಣಾ, ಉಪಕುಲ್ಯಾ, ವೈದೇಹೀ, ಮಾಗಧೀ, ಪಿಪ್ಪಲೀ, ಕಣಾ—ಈ ೬ ಪಿಪ್ಪಲಿ" (ಹಲಾಯು. ೦೦೦-೪೬೦); ಚಕೋರಪಂಜರಂಗಳೊಳ್ ಪಿಪ್ಪ[ಪಾಠಾಂ. ಪ್ಪಿ]ಲೀತಂಡುಲಂಗಳ ಕುಟುಕಂ ಸೂಸಲುಂ (ಕಾಪಂಪು. ೦೦೦೬); ಪಿಪ್ಪಲಿ ಚಲ್ಲಗಾಯ್ ಮೆಱಸು ಮಾಗುಳಿವೇರ್ಮೊಳೆಯಲ್ಲದೇಲೆ . . . ಅರೆಮಾಮಫಲಂಗಳಾಪಿಯಾದು ಪ್ಪಿನ ಕಾಯ್ಗಳಂ ಮಗಮಗಿಪ್ಪುವನಿಕ್ಕಿದನಬ್ಜಪತ್ರದೊಳ್ (ಲೀಲಾವ. ೩-೬೬); ಜ್ವರಮೆಂಬುದು ಮಾಣ್ಗುಂ ಪಿಪ್ಪಲಿಗೂಡಿದ ವಾಲ್ ಕಾದಾಱಿ ಕುಡಿಗೆ ಶರ್ಕರೆಯಿಂದಂ (ಕಲ್ಯಾಕಾ. ೩-೯೨). [ಸಂ].

ಪಿಪ್ಪಲಿಗ (ನಾ). ಹಿಪ್ಪಲಿಯನ್ನು ಮಾರುವವನು; ಬಾಲಮೆಣಸಿನ ವ್ಯಾಪಾರಿ: ತಂಬುಲವಂ ಕೊಳ್ವಂ ಮಾಱುವಂ ಮೇಣ್, ತಂಬುಲಿಗಂ. ಏವಂ ದವಸಿಗಂ, ಗಂದಿಗಂ, ಮೆಣಸಿಗಂ, ಪಿಪ್ಪಲಿಗಂ (ಕಣ್ಣಾಸು. ೯೦೯ ಪ್ರಯೋ). [ಪಿಪ್ಪಲಿ + — ಗ್ಯ]

ಪಿಪ್ಪಲಿಗಾಯಿ (ನಾ). ಹಿಪ್ಪಲಿತಾಯಿ : ಸಿಂಬಿ ಕೂಗಲಿ ಪಿಪ್ಪಲ[ಲಿ]ಗಾಯಿ ಕೊಯ್ದರು ನಂಬಿಯಂ ಕಳಿದಣ್ಗಳೊಡನೆ (ತೋಟಕ. ೧-೬೦).
[ಪಿಪ್ಪಲಿ+ಕಾಯಿ (ಕ ಯಯ್)]

ಪಿಪ್ಪಲೀಪತ್ರ (ನಾ). ಅರಳಿಯ ಎಲೆ.—ಪತ್ರ ; **ಪಿಪ್ಪಲದಳ** : ಅಯಃಪಿಪ್ಪಲೀಪತ್ರಪೂಲಾಂಚಿತಮುಮ್ಕತ್ಪಾದಪೀಠಾನ್ವಿತವಿಧವಳ ಪ್ರಭ್ವ ದಾಚ್ಛಾಧಿತಂ ವಿ[ಸ್ತೃತಮಾದುತ್ತುಂಗಗರ್ಭೋಚಿತಶಯನ]ದೊಳಾ ಕಾಂತೆ ಚಿಣ್ಗೆಡ್ದಪಾದಳ್ (ಶಾಕಂಭ. ೬೯೪). [ಸಂ.]

ಪಿಪ್ಪಲೆ (ನಾ). =ಪಿಪ್ಪಲ ೧ : ಪಿಪ್ಪಲೆ ಅರಳಮೇರು ಫಲಾಸೇನ ಮುತ್ತಗ ಮೇರು (ಪ್ರಕಾಶ. ೬-೬). [ಸಂ. ಪಿಪ್ಪಲ]

ಪಿಪ್ಪಳೆ ' ಪಿಪ್ಪಲ ' ನೋ.

ಪಿಪ್ಪಿಲ ' ಪಿಪಿಲೆ ' ನೋ.

ಪಿಪ್ಪು (ನಾ). ಮಚ್ಚೆ ; ಗುರುತು : " ಜಟುಲಃ . . . ಪಿಪ್ಪುಃ, ತಿಲಕಃ, ತಿಲಕಾಲಃ — ೫ ತಿಲಕಾಕಾರಗಳಾದ ಕರೀಮಚ್ಚೆಗಳ ವೆಸರುಗಳು, ಸಂಗಾತೀಮಚ್ಚೆ, ಹುಟ್ಟುಮಚ್ಚೆ " (ನಿಘಂ೭. ೦೪೪). [ಸಂ.]

ಪಿಮ್ಮಡ, ಪಿಮ್ಮಡಿ, ಹಿಂಬಡ, ಹಿಮ್ಮಡ, ಹಿಮ್ಮಡಿ, ಹಿಮ್ಮಡುಂ (ನಾ). ೧. ಅಡಿಯ ಹಿಂಭಾಗ ; ಪಾದದ ಹಿಂಬದಿ : ಧತಿ ಕಡದೆ ಪುನದ ಬಲ್ಮಾಡುಗದೇ ಪಿಮ್ಮಡದೊಳತಿಧೈರ್ಯದಿಂ ನಡೆದು ಪೋವಂ (ಕಣಾಕ. ೨-೯-೩೭); ಪಿಮ್ಮಡದೀಡೆ ಕೆಲವು ದೂರಂ ನಡೆದು ತುದಿಗಾಲೆಳೆನಿತು ದೂರಂ ಬರುತೆ ಕಾಲೋರೆಯಿಂದಡಿಯಿಡುತ ನಡವುತಿರೆ (ಶಾಸೋಪ. ೭-೩೭); ಚಂದದ ಪಿಮ್ಮಡ ಸೊಬಗಾಂತ ಬೆರಳುಗಳಿಂದೆಸವುವ ಪದ್ಮೆಯವನ (ಣಗಳು. ೨೭-೧೩). **ಪಿಮ್ಮಡಿ** : ೧. ತಲೆಕೆಟಗಾಗಿ ಕಟ್ಟಿದಲಗೊ ಜೆಯನುರ್ಬಿ ಬೀಳ್ ಪಿಮ್ಮಡಿಯುಂ ವಱಿಯೆ ವೆಱಗಂ ನೋಡುತುಂ ಮುವ ಪೆರ್ಬಂಟುವಂ . . . ಕಂಡು (ರಣಾಕ. ೫-೦೧೯ ೪). **ಹಿಂಬಡ** : ೧. ಮೊದಲು ನಾವು ಸ್ಥಿರಾಸನದಲ್ಲಿ ಕೂಡಲು ವ್ಯಾರಂಭಿಸಬೇಕೆಂದು ಹೇಳಲಾಗಿದೆ . . . ಇದರಲ್ಲಿ ಎರಡು ರೀತಿಗಳಿರುವುವು : ನಾವು ಬೇಕಾದರೆ ಎಡದ ಹಿಂಬಡವನ್ನು ಒತ್ತಬಹುದು ಇಲ್ಲವೇ ಬಲದ ಹಿಂಬಡವನ್ನು ಒತ್ತಬಹುದು (ಕಡಿ. ೧೪) ಅಂಗುಷ್ಠ ಎಂಬುದಕ ಮುಂದ ಪಾದವ ಬರಿ ಹಿಂಬಡಕ ಕಾಲು ಛೇದಾದ ನಡ ಧಡ . . . ಹತ್ತು ಶಿರಗಳ ಬರೆದಾಳು ಮುಂದೆರಡು ಪಾವ ಬರೆದಳು (ಕಣಾಕ. ೨೬೦). **ಹಿಮ್ಮಡ** : ೧. ತವೆ ಹಿಮ್ಮಡಂಗಳು ವಿಗುವ ಘನವೇಣಿಲತೆ (ಕಂಪ್ರ. ೬-೧೩); ಆಣಿಯರವೆತ್ತ ಹಿಮ್ಮಡದ ಎಣೆತೊಡೆಯಿಲ್ಲದಡಿಯ ರಂಗಾಯಿಂಬ [ರ]ಮಣಿ ಮೈದೋರ್ವಳಿನ್ನೆಂದೊ (ಕಣಾಂ. ೨೨-೦೧); ನೀಲ ಆಡಿನನು ತನ್ನ ಹಿಮ್ಮಡದಿಂದ ಸಾವಕಾಶವಾಗಿ ಬಂದೂರಿಗೆ ತಿವಿದನು (ಪಂಗಾಕ. ೨). ೨. ಚಪ್ಪಲಿಯ ಹಿಂಭಾಗದ ಅಟ್ಟಿ : ಆ ಚಪ್ಪಲಿಗಳು ಕೊಂಚ ಅವನತಿಯನ್ನು ಹೊಂದಿದ್ದುದರಿಂದ, ಮತ್ತೆ ಅವಕ್ಕೆ ಹಿಮ್ಮಡ ಟಟ್ಟಿಸಿ ಹೊಳಪು ಕೊಡಿಸಿದ್ದೆ (ಕುಂಗಾಕ. ೦೦); ಒಕ್ಕಲಿಗನು ಬಾಗಿಲಲ್ಲಿ ಎತ್ತರವಾದ ಹಿಮ್ಮಡದ ತನ್ನ ವೆಟ್ಟುಗಳನ್ನು ಬಿಟ್ಟು ಒಳಕ್ಕೆ ಹೋದನು (ಕಕ್ಕಕ್ಕ. ೦). **ಹಿಮ್ಮಡಿ** : ೧. ಅಟ್ಟಿ ಹರಿದು ಹರಿಯ ಹಿಮ್ಮಡಿಯ ಓಡಿದು ಕೊಂಡು ಬಟ್ಟಿನು ಕಟ್ಟಿ ಯಾಳಿದೆ ರುವ್ರನೆಂಬವನ (ಸಕವ. ೧೨. ೨೪೬-೩೭); ಮೇಣೆವಲ್ಲರಿ ತುಡುಕೆ ಹಿಮ್ಮಡಿಯಿ (ಕಂಪ್ರ. ೯-೬೬); ಹಿಮ್ಮಡಿಗಳಲ್ಲಿರುವ ಸುಳಿಗಳಿಗಡು ಸ್ವಾಮಿಗೆ ನಾಶಕರಗಳಾಗುವೆವು (ಶಾಗಂಧಿ. ೩೦೭-೨೦). ೨. ರಬ್ಬರಿನ ಹಿಮ್ಮಡಿಯುಳ್ಳ ವೆಟ್ಟು . . . ಪಾದರಕ್ಷೆಗೆ ಬೇಕಾಗುವ ಹಾಳೆ, ಹಿಮ್ಮಡಿ, ಬಾರು—ಎಲ್ಲ ವನ್ನೂ ರಬ್ಬರಿನಿಂದ ಮಾಡಲು ಬರುತ್ತದೆ (ಡಾಲ್ಕ್ರ. I. ೫೪); ಕೂಲಿಂಗ್ ಗ್ಲಾಸ್, ಹಿಮ್ಮಡಿ ಎತ್ತಿದ ಎಕ್ಕಡ . . . ಇವುಗಳಾಹಾರವೆ (ಪಪ್ಪಾಕ. ೩೦೩). **ಹಿಮ್ಮಡು** : ೧. ವಿಪಾದಿಕೆ—ಕಾಲ ಹಿಮ್ಮಡು ಒಡೆಯುವ ರೋಗ (ಗಂಗಾಚಿ. ೨೪೧). [ಪಿಂ (<ಪಿನ್) + ಮಡ್ಕ]

ಪಿಮ್ಮಡಿ ' ಪಿಮ್ಮಡ ' ನೋ.

ಪಿಮ್ಮೆಟ್ಟು, ಹಿಮ್ಮೆಟ್ಟು (ಕ್ರಿ). (ಹೆದರಿ) ಹಿಂದಕ್ಕೆ ಸರಿ ; ಹಿಂದಿರಿ : ಪಸುಧಾಚಕ್ರಂ ಪದಾಕ್ರಾಂತಿಯಿನದಿರೆ ಭುಜಾಕ್ರಾಂತಿಯಿಂ ದಿಗ್ಗಜಂಗಳ್ ದೆಸೆಯಿಂ ಪಿಮ್ಮೆಟ್ಟೆ (ಜಗಂ. ೯-೭೬); ತೇರೊಳ್ ಪೂಡಿದ ತೇಜಿಗಳ್ ಸರಲ ಕೂರ್ಬಿಂಗಳ್ಕೆ ಪಿಮ್ಮೆಟ್ಟೆ (ಶಶ್ಮಾ. ೨೭೩); ಇಟ್ಟಡಿಯ ನೆಟ್ಟನಿಸಿಂ ಪಿಮ್ಮೆಟ್ಟಿ ದಟವಟ್ಟದರೆಯಟ್ಟಳಿವರಂ ಕೈಗೊಟ್ಟು ವುಯಿಲಿಟ್ಟರ್ (ಜಪಾ. ೨-೧೩). ಹಿಮ್ಮೆಟ್ಟು : " ಹಿಮ್ಮೆಟ್ಟಿತಕ್ಕೆ ವೆಡವೆಟ್ಟಿತೆಂದಕ್ಕು " (ಕಾಕ್ಕೆ. ೬೯); ಇಂತಿಱಿದು ಕೈವಿಟ್ಟು ಪಾತಕಂ ಹಿಮ್ಮೆಟ್ಟೆ ಮುಂತೆ ಹೂವಳೆನೆರಸಿ ಶಂಕರಂ ನಿಜ ಪುಟ್ಟಿ(ಬಿಶಾಕ. ಕೀ. ೧೫೬-೧೩); ದುರ್ಬಲನೊಡನೆ ಭಂಗವ್ಯಾಪ್ತಿ ತನ್ನನು ಸುಗಲೆನುತ ಹಿಮ್ಮೆಟ್ಟಿ ಪುಮ್ಮಲಪಱುಗಿದನು ಭೀಮ (ಭಾಕ್ಕಾಅ. ೬೦-೬೦); ಹೂ ಬಾಯಿ ಬಡಿಯಿತು ಸೋತು ಹಿಮ್ಮೆಟ್ಟಿತು ಗುಣವು (ಇಂಚಾಕ. ೨೦೬-೭). [ಪಿಂ (<ಪಿನ್)+ಮೆಟ್ಟು$_1$]

ಪಿಮ್ಮೈಯ್, ಹಿಮ್ಮೈಯ್ (ನಾ). ೧. ದೇಹದ ಹಿಂಭಾಗ. ೨. ಹಿಂದಿನ ಜನ್ಮ ; ಪೂರ್ವಜನ್ಮ : ವಿಷ್ಣುದೂತರಾ ತುಂಬುರನಂ ಕಯ್ವಿಡಿದು ಕರೆದುಯ್ಯೆ, ಪಿಮ್ಮೈಯೊಳೇಂ ನೋಂತನೋ ! ಎನುತೆ ಬಲ್ಮಗೆಯೊಳ್ ಪಬಲಿಸಿ (ಶಶ್ಮಾ. ೫೦-೦೧). **ಹಿಮ್ಮೈಯ್** : ೧. ಹಿಮ್ಮೈಯ್ಯ ಮುಮ್ಮೈಯ್ಯ ಶೋಧಿಪೆಯಲ್ತ್ತ ನೀನೊಮ್ಮೆ ಮೈದೋಱಿಂಬರು (ಶಶ್ಮಾ. ೨೨-೦೮೮).
[ಪಿಂ (<ಪಿನ್) + ಮೆಯ್$_3$]

ಪಿಮ್ಮೊನೆದೋಱು (ಕ್ರಿ). ಹಿಂಭಾಗದಲ್ಲಿ ಪೊನೆದೋರು ; ಹಿಂದುಗಡೆಯಲ್ಲಿ ತುದಿ ಕಾಣಿಸು : ಬಿಮ್ಮನೆ ಬಿಗುವೇಱಿ ಎಾಱಿ ಪೊಣ್ಮುವ ಮೊಲೆಗಳ್ ಪಿಮ್ಮೊನೆದೋರ್ಪನೆಗಂ ಪಾನದುಮ್ಮಾಹದಿಂ ಬಿಗಿದು ಬಿಗಿದು ಬೆಂಡೇಱುವೆನೋ (ಶಶ್ಮಾ. ೬-೨೦೧). [ಪಿಂ (<ಪಿನ್) + ಮೊನೆದೋಱು]

ಪಿಮ್ಮೋರೆ (ನಾ). ೧. ಹಿಂದಕ್ಕೆ ತಿರುಗಿದ ಮುಖ. ೨. ಹಿಂದಕ್ಕೆ ಮುಖ ಮಾಡಿದವನು.

ಪಿಮ್ಮೋರೆಯರ್ = ಹಿಂಜರಿಯುವವರು : ಪಿಮ್ಮೋರೆಯರ್ ಸ್ವಾರ್ಥದಲ್ಲಿಯತ್ಯಾಸಕ್ತರನರ್ಥದೊಳ್ ಭಯದೊಳ್ ತಲ್ಲಣಿಸರ್ (ಕೌಕಂದ. ೦೪-೧೦). [ಪಿಂ (<ಪಿನ್)+ಮೋರೆ (<ಮೋಱಿ)]

ಪಿಯಣ (ನಾ). ಒಬ್ಬಾತನ ಹೆಸರು : ಪಿಯಣನಾಳುತ್ತಿರೆ ತೈಲವದೇವಂ ರಾಜ್ಯಂಗೆಯೆ . . . ಬನವರುಮ್ಮ ಮಾಡಿಸಿದ ಕಬ್ಬ (ಅಶ. VIII. ಸೊಡ್ಡ. ೩೨೯-೩ : 986). [?]

ಪಿಯಾನೊ (ನಾ). ಪಾರ್ಶ್ವೀನಿಯಂನಂತೆ ನುಡಿಸುವ ಒಂದು ಬಗೆಯ ವಾದ್ಯ ; P " ಹಲಗೆಯ ಮೇಲೆ ಅಳವಡಿಸಿರುವ ಕೀಲಿಕ್ಕೆಗಳನ್ನು ಒತ್ತುವುದರಿಂದ ಆಯಾ ಸನ್ನೆಗಳು ಮೀಟಲ್ಪಟ್ಟು ಅವಕ್ಕೆ ಹೊಂದಿಸಿರುವ ಸುತ್ತಿಗೆಗಳು ತಂತಿಗಳನ್ನು ಬಡಿದು ನಾದವುಂಟುಮಾಡುವ. (ಮತ್ತು ತಂತಿಗಳ ಸ್ಪಂದನವನ್ನು ನಿಲ್ಲಿಸಲು ತಕ್ಕ ತಡೆಗಳನ್ನು ಅಳವಡಿಸಿರುವ) ಮತ್ತು ಸಾ., ಧ್ವನಿಗುಂಫನವನ್ನು ತಕ್ಕಂತೆ ಅನುಗೊಳಿಸಲು ಕಾಲೊತ್ತುಗಳಿರುವ. ಒಂದು ವಾದ್ಯ " (Piano. ೨೦೪೭) : ಮಧ್ಯಪಚುಸ್ಸಿನ ತೋರವಾದ ಹೆಂಗಸು ವಿರುಗುವ ಬಿಗಿಯಾದ ಬಟ್ಟೆಯನ್ನು ತೊಟ್ಟು ಪಿಯಾನೊ ಬಾರಿಸುತ್ತಿದ್ದಳು (ಹೂಚಿ. ೨೪೦); ಶ್ರುತಿ ತಪ್ಪಿದ ಪಿಯಾನೊ, ಗೋಡೆಯನ್ನಲಂಕರಿಸಿದ್ದ ಹಡಗಿನ ಹಳದಿ ತಿರುಗಿದ ಚಿತ್ರಗಳು ಎಲ್ಲವೂ ಬಗೆಗೂ ಒಂದು ಅಭಿಮಾನ ಮನೆ ಮಾಡಿತ್ತು (ಬಳಚ. ೬೯) ; ಭಾರತದ ವಾದ್ಯದ ಅನುಕರಣ ಮಾಡಿರುವ ಈಗಿನ ಪರದೇಶವಾದ್ಯವಾದ ಪಿಯಾನೋ (ಶಾಗೀಕಂ. ೦೫೦). [←ಇಂ. Piano]

ಪಿಯಾಲ (ನಾ). ಒಂದು ಬಗೆಯ ಸಸ್ಯ ; ಪ್ರಿಯಾಲ : " ಮೊಱಲೆ—ರಾಜಾದನಂ, ಪಿಯಾಲಃ, ಸನ್ನಕದ್ರುಃ, ಧನುಃಪಟಃ " (ಪಾಕಾ. ೬).
ಪ್ರಿಯಾಲ ' ಪರಾ. [ಸಂ.]

ಪಿರಂಗಿ 'ಫಿರಂಗಿ' ನೋ.

ಪಿರಂಗಿಗೆಲಸ (ನಾ). ಪಾಶ್ಚಿಮಾತ್ಯರ ಕೌಶಲ,—ಕುಶಲಕೆಲಸ : ಕರುಮಾಡದ ಮೊತ್ತಮೊದಲ ನೆಲೆಯೇಱಿಯಲ್ಲಿ ರಂಗುವಡೆದ ಪಿರಂಗಿಗೆಲಸದ ಜಾಲಾಂತರದೊಳಮರಿಸಿದ ಸವಡಿಗನ್ನಡಿಗೊಟವಿಯೆಡೆಯಂ ನೋಡಿ (ಜಕಸಿ. ೬-೧೯೯ ಪ). [ಪಿರಂಗಿ (<ಫಿರಂಗಿ)+ಕೆಲಸ]

ಪಿರಕಣೆ, ಪಿರುಕಣೆ (ನಾ). ಒತ್ತಾಯವನ್ನು ನಿರೀಕ್ಷಿಸಿ ಆಡುವ ಮಾತು; ಬಲವಂತದ ನಿರೀಕ್ಷೆಯಿಂದ ಕೂಡಿದ ನಡವಳಿಕೆ : ಈ ಹೆಂಗಸರ ಬಲವಂತದ ಮಾತುಗಳೂ ಪಿರಕಣೆಗಳೂ ರಾಮಯ್ಯನವರ ಕಿವಿಗೆ ಬಿತ್ತು (ಇಂದು. ೦೦೩). ಪಿರುಕಣೆ : ಏನೂ ಬರದೆ ನಾಟಕದಲ್ಲಿ ಪಾರ್ಟು ಮಾಡೋದಕ್ಕೆ ಹೊರಟಿದ್ದೀಯಾ—ಹಾಡು. ಇರಲಿ ಈ ಪಿರುಕಣೆ (ಪರಿಶಾ. ೨೩). [?]

ಪಿರಚಲು (ನಾ). (ಮೇಲೆ ಮೇಲೆ ಬರುವ ರೋಗದಿಂದ ಉಂಟಾದ) ತೊಂದರೆ ; ಕಾಟ ; ಹಿಂಸೆ : ಮಧ್ಯೆ ಮಧ್ಯೆ ಕಾಹಿಲೆ ಬೇರೆ ಬೀಳುತ್ತಿದ್ದರು. ಕಾಹಿಲೆಯ 'ಪಿರಚಲು' ಬೇರೆ ಗಂಟುಬಿತ್ತು (ಶಾಯಿಕ. ೦೬೨); ನನಗೆ ಕೆಟ್ಟ ಪಿರಚಲು ಬಂದು ಬಿಟ್ಟಿದೆ (ಗೃಹಲ. ೨೮೩). [?]

ಪಿರದು (ನಾ) ಪಿರ್ರೆ ; ನಿತಂಬ : ಅವನ ಸ್ತ್ರೀಯು ಕೃಶವಾದ ನಡುವುಳ್ಳವಳು. ದೊಡ್ಡದಾದ ಪಿರದುಗಳುಳ್ಳವಳು (ಕುಕಸ. ೬).

[ದೇ. ॥ ತೆಲು. ಪಿರುದು, ಪಿಱುಂದು]

ಪಿರಮಿಡ್ಡು (ನಾ). "(ಮು. ಪುರಾತನ ಈಜಿಪ್ಟಿನಲ್ಲಿ) ಬಹುಭುಜಾಕೃತಿಯ ಅಥವಾ (ಸಾ.) ಚೌಕನೆಯ ತಳಹದಿಯ ಮೇಲೆ ಪಕ್ಕಗೋಡೆಗಳು ಇಳಿಜಾರಾಗಿರುವಂತೆಯೂ ಮೇಲಕ್ಕೆ ಹೋಗುತ್ತ ಹೋಗುತ್ತ ಕೊನೆಗೆ ಸೂಚ್ಯಗ್ರವಾಗಿ ಮುಗಿಯುವಂತೆಯೂ ಕಲ್ಲು ಮೊ.ಗಳಿಂದ ರಾಜರ ಸಮಾಧಿಗಳಾಗಿ ಕಟ್ಟಿದ ಸ್ಮಾರಕ ಕಟ್ಟಡ : ಗೋಪುರಾಕೃತಿಯ ಕಟ್ಟಡ" (Pyramid. ಇಂಕಸಿ); ೨ ಇದು ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ : ಸುಮಾರು ಕ್ರಿ.ಪೂ. ೨೯೦೦ರಲ್ಲಿ ಜಗದ್ವಿಖ್ಯಾತವಾದ ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಒಂದಾದ ಗಿಸೆಯ ಪಿರಮಿಡ್ಡು . . . ಕಟ್ಟಲ್ಪಟ್ಟಿತು (ಪಜಿಸ. ೦); ದ್ರಾವಿಡನಮೂನೆಯ ಶಿಖರವು ಅಡ್ಡಡ್ಡವಾದ ಹಂತಗಳಿಂದ ಕೂಡಿ, ಪಿರಮಿಡ್ಡಿನ ಆಕಾರವನ್ನು ಹೊಂದಿದೆ (ಶಾರದ. ೪೯೨).

[←ಇಂ. Pyramid]

ಪಿರಿ$_1$, ಹಿರಿ$_1$ (ಕ್ರಿ). ೧. ತರಿ ; ಕೀಳು ; ತರಚು : ಪಿರಿದ [ಪಾಕಾಂ. ತಱಿದು, ಬಿರಿತ, ಬಿರಿದ] ತುಪ್ಪುಳಿನ ಕೊರಳ ಮಿಡುಕಿನ . . . ಪತಿಯ ಸುತ್ತಲು ತಿರುಗಿ ಚೀಱುವ ವಿಹಗಸತಿಯನು ಕಂಡನಾ ಮುನಿಪ (ಕೊರಂಗ. ೦-೨-೦೪). ೨. ಹೊರಕ್ಕೆ ಎಳೆ ; ಸೆಳೆ ; ಕಿತ್ತು ತೆಗೆ : ಸೂರಾಂಬಿಕೆಯ ಮನೆಯ ಕೇರಂ ಕೆಡಪಿ . . . ತೊನೆದು ಸೂರಂ ಸೇರಿ ಪಿರಿಯುತ್ತು ಮಂತ್ಯಜನನನುನಯದೆ ಪಿಡಿದು ಪೆಡಗುಡಿಗಟ್ಟಿ ತನ್ನಿಮೆಂದೆನಸುಮಿರದಿಂತು ನುಡಿಯುತ್ತಿರ್ಪ ವೇಳೆಯೊಳ್ (ಅಶಾತ. ೦-೬-೨೫); ಒಱಿಯಿಂದ ಮಿರ್ಬಾಯ ಖಡ್ಗಮನ್ ಪಿರಿದು (ಅಶ್ವತ್ಥಾ. ೨-೩೬). ೩. ಹಾಳಾಗು ; ನಾಶವಾಗು ; ಇಲ್ಲವಾಗು : ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱಪೋಲ್ ಮಾಣ್ಬುವೋಲ್ಪೋಱಿ ಬೇಗಂ ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾತಿಗಳ್ನಿಲ್ಲವಾರ್ಗ್ಗಂ (ಏಕ. II. ೮೬-೦; ಸು. 700); ತಾಂ ಬಱಿದೆಂತು ಬಂದನೀ ಬಿಸಿಲೊಳಿದೇಕೆ ಮೆಯ್ಯರಿಸಿನಂ ಪಿರಿದಕ್ಕಟ ತಳ್ತ ಬಾಸುಟುಂ ಪಸಿಯವು ನೊಂದನೆಂದು ನುಡಿದಳ್ ತಡೆದೊಯ್ಯನೆ ಬಂದನಲ್ಲನಂ (ಲೀಲಾಪ. ೨-೫೭); ಆ ಸುಖಾನುಭಾಸಮುಂ ಪಿರಿಗುಂ (ಮೂರುಶಾ. ೦೩೬-೦೨೩೮). ಹಿರಿ$_1$: ೨. ಉರುಗದೆಯಿಂದ ಕೌರವನ ತೊಡೆಗಳನು ಮುಱಿದೆ ದುರುಳ ದುಶ್ಶಾಸನನ ಕರುಳುಗಳ ನೀ ಹಿರಿದೆ (ಪಾಡಿಕೀ. ೫೦-೨); ಹಿರಿದ ಕತ್ತಿಯೊಡನೆ ಅರಸನೂ ಪ್ರಚ್ಛನ್ನವಾಗಿ ಅವಳ "ಬೆನ್ನೊಳೆ ಪೋದಂ ದೋಷದ ಬೆನ್ನೊಳೆ ಸಂಧಿಸುವ ದಂಡದಂತೆ" (ಕಾಪ್ಯಸ. ೬೦); ತಗ್ಗಿಪ ಸಲುವಾಗಿ ನೀರಿನ ಕುದಿಯನು ತಣ್ಣೀರು ಸುರಿಯುವ ಬದಲು ಒಲೆಯೊಳಗುರಿಯುವ ಸೌದೆಯೊಳೆರಡನು ಬೇಗನೆ ಹಿರಿವುದೆ ಮೇಲು (ಇಂಸಾಸ. ೨೦೩-೫೫). ೪. ಕತ್ತರಿಸು ; ತುಂಡುಮಾಡು : ಬಾಳೆಯ ಹೊಡೆಯ ಹಿರಿದು ಹಸನಾಗಿ ಪಾಕಂ ಮಾಡಿಯದಱಡಕೆದಾಳಿಲವೆಸರ ಕರೆವುದು (ಸೂಪಶಾ. ೫-೨೨). ೫. ಒಡೆ : ಬಿರಿ ; ಸೀಳು : ಎರಡು ಮೋಟಕರಂಗಳಿಂ . . . ಹೊಡೆವುತ್ತ ಬಡಿವುತ್ತ ಮರಳಿ ಮತ್ತೆಯು ಕುಟ್ಟುತಿರೆ ತಲೆ ಹಿರಿದು ಬುಗುಟಿಗಳೆದ್ದೊಡೆದು ನೆತ್ತರು ಬಿಡದೆ ಹೋರನೆ ಸುರಿಯೆ (ಬಸಪು. ೩೯-೨೯). ೬. ಲೂಟಿಮಾಡು ; ಕಿತ್ತುಕೊಳ್ಳು : ಎನ್ನ ಸತಿಯು ಎನ್ನ ಸುತರು ಎನ್ನ ಬಂಧು ಬಳಗವು ಇನ್ನು ಸಾಕಿ ಸಲಹು ಎಂದು ಎನ್ನ ಹಿ [ಪಾಕಾಂ. ಹ]ರಿದು ತಿಂಬರು (ಪುರಂದ. ೦-೦೬೬-೩); ನಿಂತರೆ ಕುಳಿತರೆ ದುಡ್ಡು ಹಿರಿಯುವಿರಿ (ಗೃಹಲ. ೦೬೯); ಬೆಂದ ಮನೆಯಲ್ಲಿ ಹಿರಿದದ್ದೇ ಲಾಭ (ಗಾರ). ೭. (ಸಂತೆ, ಜಾತ್ರೆ ಮುಂತಾದುವು) ಚೆದರು ; ಮುಕ್ತಾಯವಾಗು : ಜಾತ್ರೆಯು ಹಿರಿದ ಮೇಲೆ, ಚೋಮನ ಮನೆಯವರು ಕುಕ್ಕರಳ್ಳಿಗೆ ಬಂದು, ನಾಲ್ಕು ದಿನ ಇದ್ದು ಹೋದರು (ಕುಡಿಕೂ. ೩೯೨); ಕೊಳ್ಳಲಿ ಹುದನು ಕೊಂಡೆನೆಲ್ಲ ಹಿರಿವುದೆಂದೀ ಸಂತೆ ಬಲ್ಲರಾರು ನೆರಸಿದನಲ್ಲದೆ ? (ಗಿಳಿಪಿಂ. ೫೯-೩).

ಪಿರಿದಿಡು, ಹಿರಿದಿಡು—ಬೇರೆ ಮಾಡಿ ಇಡು ; ಕಿತ್ತಿಡು ; ಪ್ರತ್ಯೇಕಿಸು : ಬೆಳಕಲ್ಲ ತಳಕಲ್ಲ ಕಳೆಯಲ್ಲ ಕಲೆಯಲ್ಲ—ನಷ್ಟವಹುದೂಯಿಲ್ಲಿ ಪ್ರಕೃತಿಯಿಂ ಪುರುಷನಿವ ತನ್ನ ತಾಂ ಪಿರಿದಿಡುವ ಶ್ರೀಮೂರ್ತಿ ತಂತ್ರದಲ್ಲಿ (ಶುಲೆಸೇ. ೨೬-೦೦); ನಿನ್ನ ದುರಹಂಕಾರವನ್ನೆಲ್ಲ ಅಡಗಿಸಿ ಆಡವೀಪಾಲು ಮಾಡ್ದೇ ಇದ್ರೆ ನನ್ನ ನಾಲಿಗೆ ಹಿರಿದಿಟ್ಟುಬಿಡ್ತೇನೆ (ಅಜಿತಂ. ೦೬೨).

[ದೇ. ॥ ತಮಿ. ಮಲ. ಪಿರಿ]

ಪಿರಿ$_2$ 'ಪಿಱಿ' ನೋ.

ಪಿರಿ$_3$ (ನಾ) ನವಿಲುಗರಿ ; ಪೀಲಿ : ಅಂತು ಬರ್ಪಂತಃಪುರಕಾಂತೆಯರ ನಡುವೆ ಪಿರಿ [ಪಾಕಾಂ. ಪೀಲಿದಱಿ]ಯ ತುಱುಂಗಲೊಳುದ್ಯಾನಷಂಡಂ ಬೆರಸು ವನದೇವತೆಯೆ ಬರ್ಪಂತೆ ... ಬಾದಳ್ (ಪರಗಿ. ೫-೪೯ ಪ); ಪಣ್ಣಿದ ರಣದೊಳ್ನಿನ್ನಯ ಕಣ್ಣೆಲ್ಲಮನೊಂದುನಿಮಿಷಮಾತ್ರದೆ ಪಿರಿಯಾ ಕಣ್ಣಿನಿಸಿ ತೋಱದೊಡೆ ಮುಕ್ಕಣ್ಣಂ ನಾನಲ್ತು (ಪೀಕಿ. ೦೦-೬೬).

[ದೇ. ॥ ತೆಲು. ಪಿರಿ]

ಪಿರಿ$_4$, ಪೆರ್, ಪೆರು$_2$, ಪೇರ್$_1$, ಹಿರಿ$_2$, ಹೆರ್, ಹೇರ್$_1$ (ಸಪೂರೂ). 'ಪಿರಿದು' ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪಿರಿತನ', 'ಪಿರಿಯಕ್ಕರ' ಪರಾ. ಪೆರ್ : 'ಪೆರ್ಗರಡಿ' 'ಪೆರ್ಗಿಚ್ಚು' ಪರಾ. ಪೆರು$_2$: 'ಪೆರುದಟ್ಟಾರ' ಪರಾ. ಪೇರ್$_1$: 'ಪೇರಡವಿ', 'ಪೇರಡಿ' ಪರಾ. ಹಿರಿ$_2$: 'ಹಿರಿಗನಸು', 'ಹಿರಿಗೆಯ್ಮೆ' ಪರಾ. ಹೆರ್ : 'ಹೆರ್ಗಂಬ' ಪರಾ. ಹೇರ್$_1$: 'ಹೇರಂಬು', 'ಹೇರಿಟ್ಟಿ' ಪರಾ. [<ಪಿರಿದು$_1$]

ಪಿರಿಕಿ$_1$, ಬಿರಿಕಿ (ನಾ). ೧. ತಿರುಗಣೆ ; ಮರಸುತ್ತು : ಬಾಗಿಲುಗಳಿಗೆ ಇನ್ನೂ ಪಿರಿಕಿ ಹಾಕಿಲ್ಲ (ಕೂತಿ). ಬಿರಿಕಿ : ೨. ನೂಲು ತೆಗೆಯುವ ಸಾಧನ ; ತಕಲಿ : ಸಣ್ಣಳೆಗಳಂ ತೆಗೆದು ಸುತ್ತುತ್ತೆ ಬಿರಿಕಿಯಂ ತಿಣ್ಣನೇ ತಿರುಹುತಿರೆ (ದುರಪು. ೯-೦೨).

[ದೇ. ॥ ತುಳು. ಪಿರಿಕಿ, ಪಿರಿಕೆ—ತಿರಿಚುವಿಕೆ, ತಿರುಗಿಸುವಿಕೆ]

ಪಿರಿಕ್ಕಿ$_2$, ಪಿರ್ಕಿ (ನಾ). ೧. ಭಯ ; ದಿಗಿಲು : 'ಪಿರಿಕಿತನ' ಪರಾ. ೨. ಭಯಪಡುವವನು ; ಅಂಜುವ ಸ್ವಭಾವದವನು; ಪುಕ್ಕಲ : "ತ್ರಸ್ನುಃ, ಭೀರುಃ, ಭೀರುಕಃ, ಭೀಲುಕಃ— ೪ ಹೆದರುವವನ ಪೆಸರು.

ಭಯಪಡುವ ಪಿರಿಕಿ" (ಪಿಡ್ಕಾಂತಿ. ೩೨೯) ; ಪಿರಿಕಿ. ಪುರುಕ: ತಮಿಳಿನಲ್ಲಿ ಉ ಬಹುವೇಳೆ ಇ ಆಗಿ ಉಚ್ಚಾರವಾಗುತ್ತವೆ. ಪುಲಿ ಪಿಲಿ; ಇದರಂತೆ ಪುರುಕಿ ಪಿರಿಕಿ ಆಗಿದೆ. ಅರ್ಥ ಪುಕ್ಕಲುಮನುಷ್ಯ (ಪಮ್ಮಕು. ೦೦೭). ಪಿರ್ಕಿ: ೩. ಹುಚ್ಚು; ಮರುಳು: ಅವರಿಗೆ ಪಿರ್ಕಿಯೆಂದು (ಹುಚ್ಚೆಂದು) ನನಗೂ ಪಿರ್ಕಿಯೇ ? (ಗಂಗಾಪ. ೦೭೩). ೪. ಹುಚ್ಚ ; ಮರುಳ : ಆತ ಏನಾದರೂ ಪಿರ್ಕಿಯ ಹಾಗೆ ಮಾತಾಡಲಿಕ್ಕೆ ಹತ್ತಿದನೆಂದರೆ ಕೂಡಲೇ . . . ಕುಂಕುಮವನ್ನು ಸ್ವಲ್ಪ ಅವನ ಮೇಲೆ ಹಾರಿಸಿಬಿಡಿ (ಶ್ಯಾಮಾಂಸ. ೨೬); ಸಾಣೆಕಲ್‌ನಂತಹ ಮಿತ್ರರೇ "ಅದೊಂದು ಪಿರ್ಕಿ ಅಲ್ಲವೇ" ಎಂದು ಅನ್ನುವುದೂ ಉಂಟು (ಪಿಡಾಉ. ೨೭).

[ದೇ. ॥ ತಮಿ. ಪಿಱಕ್ಕ ; ತೆಲು. ಪಿರಿಕಿ, ಪಿಱಿಕಿ]

ಪಿರಿಕಿತನ (ನಾ). ಭಯ ; ಅಂಜಿಕೆ : ಇಷ್ಟಾದ ಮೇಲೂ ನಮ್ಮ ಕಷ್ಟ ನಿವಾರಣೆಯಾಗಲಿಲ್ಲ ; ನಮ್ಮ ಪಿರಿಕಿತನ ದೂರವಾಗಲಿಲ್ಲ (ಸಂಯಾತ್ರ. ೩).

[ಪಿರಿಕಿ$_2$+ —ತನ]

ಪಿರಿಕಿಸ್ವಭಾವ (ನಾ). ಅಂಜುವ ಸ್ವಭಾವ ; ಪುಕ್ಕಲುತನ : "ಪಿರಿಕಿ ಸ್ವಭಾವದ ; ದಿಗಿಲು ಬೀಳುವ ; ರೇಗುವ" (Jumpy. ೩೦೪೮).

[ಪಿರಿಕಿ$_2$+ಸ್ವಭಾವ]

ಪಿರಿಕೆಱೆ^{3} (ನಾ). ಒಂದು ಊರಿನ ಹೆಸರು : ಅವಿನೀತಮಹಾಧಿರಾಜೇನ ದತ್ತೇನ ಪಡಿಯೇಟಱೊಳಂ ಊರೂರೊಳ್ಪನ್ನಿರ್ಕ್ಕಣ್ಡುಗಱ್ಗೆಯ್ದು ಅಮ್ಬಲಿಮಣ್ಣುಂ ತಳವನಪುರದೊಳ್ತಳವಿತ್ತಿಯ ಮಣ್ಪೊಗರಿಗೆಟೆಯೊಳ್ಪನ್ನಿರ್ಕ್ಕಣ್ಡುಗಂ ಪಿರಿಕೆಱೆಯೊಳಂ ರಾಜಮಾನಂ . . . ದತ್ತಂ (ಎಳ. I, ೦-೨೦ ; 466). [ಪಿರಿ$_4$(<ಪಿರಿದು$_1$)+ಕೆಱೆ^{3}]

ಪಿರಿಚು, ಪಿರುಚು, ಪಿಱಿಚು, ಪಿಱುಚು (ಕ್ರಿ). ೧. ಬೇರೆ ಮಾಡು ; ಪ್ರತ್ಯೇಕಿಸು : ಪೊಱಗೇನನಾದೊಡಂ ಕುಱಿತು ತದ್ರೂಪಮಂ ಪಿರಿಚುತದ ಱಸ್ತಿಭಾತಿಗಳನಾತ್ಮನೆಂದಱಿಯಲೊಂದನೆಯ ಸವಿಕಲ್ಪ (ಅಪುಸಾ. ೬-೪-೦೦); ಬಱಿದೆ ಹೋಗದಿರು ಬಾ ಬಾರೆಂದು ಕರೆದೊಂದು ಮಿಱುಗುವ ಪದಕವ ಕೊಟ್ಟ ಪಿರಿಚಿ ಮತ್ತವಳೊಡನಿದ್ದರ ಮನ್ನಿಸಿ ನೆಱೆಜಾಣ ಬೀಳ್ಕೊಟ್ಟನೊಡನೆ (ಭರತ. ೩೯-೬೬). ೨. ಬೇರೆಯಾಗು ; ಅಗಲು ; ಬಿಟ್ಟುಹೋಗು : ಮಱಸಿದೆ ತಾಯಿತಂದೆಯ ನಿಜದೇಶವ ತೊಱಸಿದೆ ಸಕಲಸುಖಗಳಿಂದ ನೆಱೆ ನಿನ್ನ ನಲ್ಗುಣಗಳ ಮೆಚ್ಚಿದೆನಿನ್ನು ಪಿರಿಚಿ ಸ್ಥೆರಿಪೆನೆಂತೊ (ಸೂಬಸೋ. ೯-೬೨); ನೆಱೆಯದಿರಕ್ಕ ಬೇಗದಿ ನೆಱೆದಾಗೆಮ್ಮ ಪಿರಿಚಿ ಹೋಹಿರಿ (ಭರತ. ೪೩-೪೩). P ಮೇಲಿನ ಎಲ್ಲ ಪ್ರಯೋಗಗಳಲ್ಲಿ ಶಕಟರೇಫದ ಪ್ರಾಸವಿರುವುದಂ ವಿಮರ್ಶಾರ್ಹವಾಗಿದೆ. ಪಿರುಚು : ೧. ಪೊರಗಣ ಘಟಾದಿ ವಿಷಯದ ನಾಮರೂಪಗಳ ಪಿರುಚುತುಳಿದಸ್ತಿಭಾತಿ ಪ್ರಿಯಗಳ ಸ್ಮರಿಸುವುದೆ . . . ಸವಿಕಲ್ಪಕಸಮಾಧಿಯಹುದು (ಶ್ಯಾಕ. ೩-೬೬-೦). Δ ಪಿಱಿಚು : ೧. ಕಟುಗೊಡಗೆಯನೂ ಪಿಱಿಚಿ (ಸೌಇಎ. ೧೯೩೯, ಪುಂಗಸೂರು. ೦೩೬-೦೦ ; 1419). Δ ಪಿಱುಚು : ೧. ಅರಸಂಣ್ಣ ಹೆಗ್ಗಡೆ ತಾನು ತೆಱುವ ಭಂಡಾರಸ್ಥಳದ ನೆಲುವಾಗಿಲಿಗೆ ಒಕ್ಕಲನು ವಿಂಗಡಿಸಿಕೊಂಡು ಧರ್ಮಸ್ಥಳವಾದ ತುಂಬುರವಳ್ಳಿಗೆ ಒಕ್ಕಲ ಪಿಱುಚಿ ಕೊಟ್ಟು (ಮೈಅರಿ. ೦೯೩೨, ೪೨-೩೦; 1418); ಪಟ್ಟದ ಗ್ರಾಮಕ್ಕೆ ಬಾರಕೂರ ರಾಜ್ಯದೊಳಗೆ ಯಿಂನೂಱ ಅಯಿವತ್ತು ವರಹನ ಹುಟ್ಟುವಳಿಯ ಗ್ರಾಮವನೂ ಪಿಱುಚಿ ಕೊಡ ಹೇಳಿ (ಮೈಅರಿ. ೦೯೩೯, ೩೦-೬ ; 1451). [ಪಿರಿ$_1$+ —ಚು$_1$]

ಪಿರಿತನ, ಹಿರಿತನ (ನಾ). ೧. ಹಿರಿಮೆ; ಮೇಲ್ಮೆ; ಶ್ರೇಷ್ಠತೆ : ವಯಸ್ಸಿಗೇಂ ಪಿರಿತನಮೆ ? ನಿನ್ನ ಪೆರ್ಮೆಗೆ ವಂದಿ ನಿನ್ನಾತ್ಮದೋಜೆ ; ಮೇಣ್ ನಿನ್ನ ತೇಜಕ್ಕೆ ಸಾಕ್ಷಿ ನಿನ್ನಕ್ಷಿ ಕಮಲಾಕ್ಷ ! (ಶ್ರೀರಾಮಾ. ೦೩೩-೨೩೯). ಹಿರಿತನ : ೧. ಅಪಕಾರಿಗುಪಕಾರವೆಸಗುವುದಾದರೆ ಅದರೊಳು ಹಿರಿತನವುಟು (ಇಂಸಾಸ. ೨೨-೯೯) ; ಹಿರಿತನಕ್ಕೂ ಕೆಳೆತನವೇ ಮಿಗಿಲು ಇದರೊಳಿಲ್ಲ ಔಚಿತ್ಯದ ದಿಗಿಲು (ಗಣೇಶ. ೨-೨೭). ೨. ಒಡೆತನ ; ಯಜಮಾನಿಕೆ : ಹಿರಿತನಕ್ಕೊಗುತ್ತಿ ಗರುವಿಕೆ ಮಾಡುತ್ತಿ ನೆರೆಹೊರೆಯರ ಕೂಡ ಬಡಿದಾಡುತ್ತಿ (ಪುರಂದ. ೪-೦೩-೩) ; ತೊತ್ತಿಗೇತಕೆ ಮನೆಯ ಹಿರಿತನ (ಸ್ವಾಸಂಸಂ. ೦-೩೦). ೩. ಪ್ರಾಚೀನತೆ : ಈ ಕಾವು ಶಬ್ದದ ಹಿರಿತನವು (ಪ್ರಾಚೀನತೆಯು) ಕಾವೂರು, ಕಾವಾಡಿ . . . ಇತ್ಯಾದಿ ಊರ ಹೆಸರುಗಳ ಮೂಲಕವೂ, ಕಾವಕ್ಕೆ, ಕಾವಮ್ಮ, ಕಾವು ಎಂಬ ಹೆಂಗಸರಲ್ಲಿ ಬರುವ ಹೆಸರುಗಳ ಮೂಲಕವೂ ಉಳಿದು ಬಂದಿದೆ (ಸುಳುಪಾ. ೨೯೯).

[ಪಿರಿ$_4$ (<ಪಿರಿದು$_1$) +—ತನ]

ಪಿರಿತಿನಿ ' ಪಿಱಿತಿನಿ ' ನೋ.

ಪಿರಿತಿನಿಸು (ನಾ). ಮಾಂಸಾಹಾರ : ನರಿಗೇನು ಪಿರಿತಿನಿಸೊ ಕಾಯುಣಿಸೊ ಬೇಕೆರಡು (ಕಾಲೂರ. ೩೩-೯೦). [ಪಿರಿ$_2$ (<ಪಿಱಿ)+ತಿನಿಸು$_2$]

ಪಿರಿದೀ (ಕ್ರಿ). ಹೇರಳವಾಗಿ ಕೊಡು ; ಹೆಚ್ಚಾಗಿ ಕೊಡು ; ಅಧಿಕವಾಗಿ ನೀಡು : ಅವಂದಿರ್ಗೆ ಪಿರಿದಿತ್ತು ಕಳಿಪುತೆ (ಸೇಮಿಪು. ೦೨-೦೪೩) ; ಧನಮಂ ಪಿರಿದಿತ್ತಪೆನೆಂಬ ಮಾಳ್ಕೆಯಂ ಮನದೊಳವರ್ಚಿ (ಶಾಪಕ. ೦೦-೦೬೩). [ಪಿರಿದು$_2$ (<ಪಿರಿದುಂ)+ಈ$_2$]

ಪಿರಿದು$_1$, ಹಿರಿದು$_1$ (ನಾ). ೧. ದೊಡ್ಡದು ; ಗಾತ್ರವಾದುದು ; ಘನವಾದುದು : ಎಣ್ಬರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು ಸಿಲೆಯಂ ತಂದು ತಲೆಯತ್ತಿಟ್ಟು ಪಟ್ಟಿರ್ದುದಂ . . . ಕಂಡು (ಪಜ್ಜಾರಾ. ೬೬-೨೬) ; ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾರತ ಮನಪೂರ್ವಮಾಗೆ ಸಲೆ ಪೇಟ್ಟ [ಕವೀಶ್ವರರಿ]ಲ್ಲ (ಸಂಪಾ. ೦-೦೦); ಪಿರಿದೊಂದು ವಸ್ತು ದೊರೆಕೊಂಡುದು ಬಾರ್ಪುರೆ ಬರ್ದೆನೆಂದು ರಕ್ಕಸನಿದಿರೆರ್ದು ಕೊಲ್ವ ಪದದೊಳ್ (ಸುಳುಪಾ. ೭-೦೬). ೨. ಮಿಗಿಲಾದುದು ; ಹೆಚ್ಚಾದುದು ; ಅತಿಶಯವಾದುದು : ಇಂತಪ್ಪ ಕ್ಷತ್ರಿಯಪುತ್ರಾದಿಗಳೆಲ್ಲವೆನಗೆಱಗಿ ಪೊಡಮಟ್ಟು ಕಿಂಕುರ್ವಾಣಂಗೆಯ್ದಪ್ಪರುಣ್ಬುದರ್ಕೇನೀಗಳ್ ಸಂಕಟವಿಸಾ ತಪದ ಫಲವಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂದುಪವಾಸಂಗೆಯ್ದೆವು (ಪಜ್ಜಾರಾ. ೮೨-೦೬) ; ಮುಳಿಸೆಂಬುದೆನಗೆ ಕೌರವರೊಳೆ ಪಿರಿದು (ಪಂಪಭಾ. ೯-೬೨) ; ಪಿರಿದಪ್ಪ ಸಂತಸಮನೆಯ್ದಿ ಬಸಂತಂ . . . ನಿಸ್ಸಾಳಮಂ ಸೂಟ್ಯೆಸವೇಟಲ್ (ಶ್ಯಾಕಾ. ೩೨೦); ಬೆಟ್ಟಗಳ ಕಪಿನಿಕರ ತಂದೊಡೆ ಕಟ್ಟಿದನು ನಳ ರಾಮ ಶರಧಿಯ ಕಟ್ಟಿದುದು ಪಿರಿದಲ್ಲ (ಸಂಭವ. ೨೦-೬೬). ೩. ಶ್ರೇಷ್ಠವಾದುದು ; ಮೇಲಾದುದು : ಕತೆ ಕಿಱಿದಾದೊಡಂ ಕತೆಯ ನಾಯಕನುನ್ನತವಂಶವೀರ್ಯವಿತ್ರುತ ಮಹಿಮಪ್ರಪಂಚಿತಗುಣಂ ಪಿರಿದು (ಪುಸ್ತಪು. ೦-೪೩). (ಗು). ೪. ಹೆಚ್ಚಾದ ; ಅಧಿಕವಾದ ; ಬಹಳವಾದ . ಕುದಿಕುದಿದತ್ತಣಂ ಕುದುರೆ ನ್ಹೂಱಱೊಳಾ ಬಲದಾನೆ ಪತ್ತು ತಾಗಿದುವೆನೆ ದೋಷಮಾ ಪಿರಿದುಸಂಖ್ಯೆಯೊಳೇಕಬಹುತ್ವಸಂಗದಿಂ (ಕವಿರಾ. ೦-೦೨೦); ಪಿರಿದು ಮಾತೇಕೆ ಸಿಲುಕಿದೆವೆಮಗೊಡೆಯರಿಲ್ಲ (ಕಿರುರ. ದೇ. ೦೬-೦೦); ಪಿರಿದು ಭಂಗವನಾಂತೆನೆನುತಬ್ಧಿ ತಗ್ಗಿ ತಾಂ ಹೆಚ್ಚುಕುಂದಿನೊಳೆಸೆದುದು (ಕಪಪ್ರ. ೨-೩). ೫. ಶ್ರೇಷ್ಠವಾದ ; ಮೇಲಾದ : ಪಿರಿದೈರಾವತವನು ಪೂರ್ಣಚಂದ್ರನ . . . ಕಂಡು ನೆಱೆ ಕಣ್ದೆಱೆದಳು (ಕಂಪರಿ. ೪-೩೨). ೬. ಅತಿಶಯವಾದ; ಮಿಗಿಲಾದ; ವಿಶೇಷವಾದ : ಕಿಱಿದಱೊಳೆ ಪಿರಿದುಮರ್ಥಮನಱಿಪಲ್ ನೆಱೆವಾತನಾತನಿಂದಂ ನಿಪುಣಂ (ಕವಿರಾ. ೦-೦೩) ; ನೀಲ ನಿಷಧಮುಮನೆಯ್ದಿಪ ನೀಲದ ಗಜದಂತಗಿರಿಗಳಾಳ್ದುವು ಪಿರಿದುಂ ಲೀಲೆಯಂ (ಅದಿಪು. ೨-೨೮); ತವದ ಪಿರಿದಟ್ಟುಯಿಂದಿದಸವರಿರ್ವರುಮಱಿಯೆ ನೆಱೆಯೆ ಪೇಟಿಸಿ (ಶಾಂತಿಪು. ೦-೩೩). ಹಿರಿದು$_1$: ೧. "ವಶ—ಸ್ಥೌಲ್ಯೇ, ಹಿರಿದರೊಳಂ, ಕಿರಿದರೊಳಂ" (ಶಾಕಳ್ಯ. ೨೦); ಅಲ್ಪವೊ ಭೂಮವೊ ಹಿರಿದೋ ಕಿರಿದೋ . . . ರಸಪ್ರಯೋಜನ ಭುವನಂ

ಕವನಂ : ಭಗವಂತನೆ ಕವಿ, ಸಹೃದಯನಾಂ! (ಅನಿಕೇ. ೩೦-೦) ೨. ಹಿರಿದಪ್ಪ ಸ್ನೇಹಂ ಸಿಂಹಕ್ಕಂ ವೃಷಭಕ್ಕಂ ಕಾಂತಾರದೊಳಾಗಿರಲ್ (ಪಂಚತಂ. ೨೦-೦೦); ಹಾನಿ ಹಿರಿದುಂಟಱಿವೆನಂಗಸ್ಪಂದಶಕುನದಲಿ (ಸಂಪಕ. ೦೬-೦೯); ಪರಿಕಿಸಲಾ ಕೋಡಗದ ಮಾಂಸವು ನರಪತಿಗಳಿಗೆ ಯೋಗ್ಯವೇ ಹೇಳರಸ ಹಿರಿದಹ ಹೇಸಿಕೆಯ ಕೈಕೊಂಡೆ (ಕೊರಂಗಾ. ೪-೪-೩೬). ೪. ಹಿರಿದು ದುಃಖವಹ ಧನದಿಂ ಕಪಟಿಯಾದ ಮಿತ್ರನಿಂದೇಂ ಪ್ರಯೋಜನಂ (ಪಂಚತಂ. ೦೦೦-೦೩); ಲಸತ್ಕೃತಿಯಿದನಾಂ ಪುಣ್ಯನಿಮಿತ್ತಂ ಹಿರಿದುಂ ಹರಿಸದೊಳುಸಿರಿದೆನು (ಜಯಾಗಾ. ೦-೨೬). ೫. ಪಂಚಭೂತಮಯವಾದ ಬ್ರಹ್ಮಾಂಡ ಶರಣ ಸಂಗದಲ್ಲಿ ಪಂಚಬ್ರಹ್ಮಮಯವಾಯಿತ್ತಾಗಿ ಇಷ್ಟಖಂಡಿತವಾಗಿ ಸೌರಾಷ್ಟ್ರ ಸೋಮೇಶ್ವರನ ಶರಣರಿಗೆ ಹಿರಿದೊಂದು ಘನವಿಲ್ಲ (ಅದಪ. ೪೩-೦೦೦). 'ಕಿಱಿದು' ಪರಾ.

ಪಿರಿಪಿರಿದು, ಹಿರಿಹಿರಿದು (ದ್ವಿರುಕ್ತಿ) : ಪಿರಿಪಿರಿದಾಗಿ ಗಡಣಿಸಿದೆನುತ . . . ಒಳಗಿಹ ಕೊಪ್ಪರಿಗೆಗಳನೆನಿತುಮಾ ತರಹೇಳು ಬೇಗದೊಳೆನುತ (ಬಸವು. ೩೯-೦೮); ಗುಹೇಶ್ವರಲಿಂಗವ ಕಿಱಿಕಿಱಿದಾಗಿ ನೆನೆದರೆ ಹಿರಿಹಿರಿದಾಗಿ ಕಾಡುವದು ನೋಡಾ ಮಱಹು (ಕೂನ್ಯಸಂ. ೦೩೩-೪). ಪಿರಿದಾಗು, ಹಿರಿದಾಗು = ಹೆಚ್ಚಾಗು; ವೃದ್ಧಿಯಾಗು; ಬೆಳೆ : ರಾಗಂ ಪಿರಿದಾಯ್ತು ವಸಂತಾಗಮದೊಳ್ (ಪುಲ್ಲಿಪು. ೩-೬); ಒರ್ವ ಬಾಲೆ ಮುಗ್ಧೆ ಹರೆಯಂ ಕಿಱಿದು ಯೌವನಂ ಪಿರಿದಾಗಿ ಮುಖವೆಲ್ಲಂ ಕಣ್ಣು . . . ನೋಟವೆಲ್ಲಂ ಬೇಟವೆನಿಸಿ (ಪಂಚಕ. ೪-೩೬); ಎನಿತೆನಿತು ಭೂಮಿ ಕ್ರಮದಿಂ ಮಾಱಿ ಕಿಱಿದಾಗೆ ಅನಿತನಿತು ತನ್ನಯ ಮನಂ ಹೆಚ್ಚಿ ಹಿರಿದಾಗೆ (ಇಳೆಕ. ಬೇ. ೩೦-೨); ಇತ್ತ ದಿನ ಹಿರಿದಾದವೀಗಳು ಹೊತ್ತ ಕಾರ್ಯದ ಹೊಱಿಗೆ ಯಾವುದೊ ಹದನ ಹರಿ ಬಲ್ಲ (ಸಂಪಕ. ೩-೬೩). ಪಿರಿದು ಮಾಡು = ಹೆಚ್ಚು ಮಾಡು ; ವಿಸ್ತರಿಸು; ದೊಡ್ಡದಂ ಮಾಡು : ಮಹಾದ್ಭುತಭಯರೌದ್ರ ಭಯಾನಕವೀರರಸಂಗಳನೆ ಕಪಟಕ್ರಿಯೆಯಿಂ ಪಿರಿದು ಮಾಡಿ ಪೇಟ್ವುದುಂ (ಪಂಚತಂ. ೪೬-೦೪). ಪಿರಿಯ, ಹಿರಿಯ = ೧. (ವಯಸ್ಸು, ಪ್ರಭಾವ, ವಂಶ, ಗುಣ ಮೊದಲಾದುವುಗಳಲ್ಲಿ) ದೊಡ್ಡವನು; ಶ್ರೇಷ್ಠ : ಏಂ ಪಿರಿಯನೋ ಖಗೇಂದ್ರಾಧೀಶಂ (ಶಾಂತಿಪು. ೩-೬೬); ಕುಲದೊಳು ಕಿಱಿಯಂ ಮನದೊಳು ಪಿರಿಯಂ (ತಿರುನಾ. ಬೇ. ೨೦೩-೦೩); ಧರ್ಮಶಾಸ್ತ್ರದೊಳು ಭೇದಿಸಿ ಪಿರಿಯರು ಪೇಳಿದುದನೆ ಕೃತಿಗೈದಾನು ಕಿವಿಗೊಳಿಸಿದೆನು (ಹರಿಪ. ೦-೩೦); ಮನಸು ಹೇಸದೆ ಕೂಡಿಕೊಂಡಿಪ್ಪನುವ ನೋಡಾ ಹರಹರಾ ತನಗನುಮತಮೆಯಿದು ತಾವು ಸರ್ಬಕೆ ಹಿರಿಯರಾಗಿರ್ದು (ಬಸವು. ೩೬-೬) ; ಅರಸನಾಗಲಿ ಧನಿಕನಾಗಲಿ ಹಿರಿಯನಾಗಲಿ ಬಡವನಾಗಲಿ ಮರಣ ಜನಿಸಿದ ಬಳಿಕ ತಪ್ಪದು (ಕುಪ್ಯಾಪ್ರೋ. ೬-೨೯) ; ವಿಜಯದಾಸರು ಮನೆಯ ಹಿರಿಯರಿದ್ದಂತೆ ಊರಿನ ಹಿರಿಯರೂ ಆಗಿದ್ದರು (ಕಂಬಹು. ೦). ೨. ಮೊದಲನೆಯ ಮಗ; ಜ್ಯೇಷ್ಠಪುತ್ರ : ಹಿರಿಯನಲಿ ಜನಕಂಗೆ ಮೋಹವು ಕಿಱಿಯನಲಿ ಕಡುಮೋಹ ಜನನಿಗೆ (ಸಂಪಕ. ಪಂ. ೦-೩೯). ೩. ಪತಿ; ಯಂಜಮಾನ : "ಹಿರಿಯ . . . ಹಿರಿಯ" ಅವಳ ನಾಲಗೆ ಆ ಅಕ್ಕರಗಳೆನ್ನು ಉಚ್ಚರಿಸಬೇಕಾದರೆ ಏಕೋ ತೊದಲಿದ ಹಾಗೆನ್ನಿಸಿತು (ಗುಣಾಗೌ. ೦೩೦); ನಮ್ಮ ಹಿರಿಯಾ ಮೊದಲಿನ ಗುಣಾ ಬಿಟ್ಟು ಸಂಭಾಯತ ಆಗಿದ್ದ. ಈಗ ಗೌಡರು ಬರಾಣಾ ಮತ್ತ ಕುಡಿಯೂದು, ನನ್ನ ಹೊಡಿಯೂದು, ನಡಿಸ್ಯಾನ (ಗ್ರಾಮಾಯ. ೩೨೦). ೪. ಬ್ರಾಹ್ಮಣ ; ದ್ವಿಜ : "ದಿಮ್ಮಿದರುಮೆನಲ್ ಸೈದರೆನೆ ಗನಹರೆನೆ ಸೇರಿದರ್ ಪಾರ್ವರೆನೆ ಪಿರಿಯರೆನೆ ದ್ವಿಜರ ನಾಮಂ" (ಕಬ್ಬಮಂ. ೩೩). ಪಿರಿಯ ಕೋಲ್, ಹಿರಿಯ ಕೋಲ್ = ೧. ದೊಡ್ಡ ಕೋಲು ; ಬಲವಾದ ದೊಣ್ಣೆ. ೨. ಭೂಮಿಯನ್ನು ಅಳೆಯಲು ಉಪಯೋಗಿಸುವ ಒಂದು ಬಗೆಯ ಅಳತೆಗೋಲು : ಸುಗನ್ಧವರ್ತಿ ಸೀಮೆಯಿನ್ದ ಪಡುವಲು ಪಿರಿಯ ಕೋಲಲು ಮತ್ತರು ೬ (ಸೌಇಇ. XX. ೦೩-೪ ; 875) ; ಸರ್ವ್ವನಮಸ್ಯ ಸರ್ವ್ವಬಾಧಾಪರಿಹಾರವಾಗಿ ಬಿಟ್ಟ ಕೆಯಿ ಹಿರಿಯ ಕೋಲ ಮತ್ತರೇಳು (ಕಇ. II. ೨೪-೩೨; 1167). ಪಿರಿಯ ಪಾಲಾಳ್ = ದೊಡ್ಡವಂಶಕ್ಕೆ ಸೇರಿದ ವ್ಯಕ್ತಿ; ಉತ್ತಮಕುಲಕ್ಕೆ ಸೇರಿದವನು : ನೀನ್ ಕಂಡಪಯ್ ! ಪಿರಿಯ ಪಾಲ್ ಆಳ್ಗಳ್ ಕೀಟ್ಟೆವಟಿಯ ಕೊಳ್ಗೆಯಿನ್ ತಾಮೆಂದುಮುಟಿಯರ್, ಪಿರಿದಟಿವರೆಂದು (ಅಂತಿಗೂ. ೦೩-೨೯೦). ಪಿರಿಯ ಮಗ, ಹಿರಿಯ ಮಗ, ಹಿರೀಮಗ, ಹಿರೇಮಗ = ದೊಡ್ಡ ಮಗ; ಮೊದಲನೆಯ ಮಗ; ಜ್ಯೇಷ್ಠಪುತ್ರ : ಹರಿಶ್ಚಂದ್ರನೆಂಬ ತನ್ನ ಪಿರಿಯ ಮಗನಂ ಕರೆದು ... ಪೇಟ್ಟೊಡೆ (ಅಂಪು. ೨-೦೪ ಪ); ಅರಸನ ಪಿರಿಯ ಮಗನನೀಗಳೆ ಪೋಗಿ ಕೊಂದಪೆಂ (ಪಂಚತಂ. ೦೦೩-೩); ಧುರವಿಶಾರದನಹೆ ವಿರಾಟನ ಹಿರಿಯ ಮಗ ನೀನಂದು ಗೋಕುಲಹರಣದಲಿ ಕಲಿಯಾಗಿ ಕಾದಿದೆಯೆನುತ ತೆಗೆದೆಚ್ಚ (ಕುಪ್ಯಾಪ್ರೀ. ೩-೨೩); ನೃಪೋತ್ತಮನ ಹಿರಿಯ ಮಗ ತಾನೀಗ ತನ್ನಂತರದಲಾ ಭರತಂಗೆ ಸೇರಿತು ಧರಣಿ (ಕೊರಂಗಾ. ೪-೨-೨) ; ಅವರ ಹಿರೀಮಗ ದೊಡ್ಡ ಕೆಲಸದಲ್ಲಿದ್ದಾನೆ (ಕೂಡಿ); ಹಿರೇಮಗ ಮಹಮದಶಾಬಾಸಾಹೇಬರು . . . ಈ ವರ್ತಮಾನವೆಲ್ಲ ಹೇಳಿದರು (ಸ್ವಕಥ. ೨೯). ಪಿರಿಯವು (ಬಹುವ) = (ವಯಸ್ಸು, ಆಕಾರ, ಗಾತ್ರ, ನೀಳತೆ ಮೊದಲಾದುವುಗಳಲ್ಲಿ) ದೊಡ್ಡದಾದುವು : ನಿಡಿಯಲರ್ಗಣ್ಗಳ ಬೆಡಂಗಿಯರ್ಕಳನರ್ಕಂ ನಡೆ ನೋಡಿ ಪೋಗಲಾಱದೆ ತಡೆಯೆ ಪಗಲ್ ಪಿರಿಯವಪ್ಪುವಾ ಪುರವರದೊಳ್ (ಕಾನ್ಯಸಾ. ೦೬೮ ಕೂದ್ರಳ) ; ವಾಯುಭೂತಿಯುಂ . . . ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ ಪಿರಿಯವಪ್ಪ ಪೊಱಿಗಳಂ ಪೊತ್ತು ಪೋಗಿ (ಪಡ್ಡಾರಾ. ೯-೦). ಪಿರಿಯಾಕೆ, ಹಿರಿಯಾಕೆ = ದೊಡ್ಡವಳು; ಜ್ಯೇಷ್ಠಳಂ : ಎಲ್ಲರಿಂ ಪಿರಿಯಾಕೆ ನಿನ್ನನಲ್ಲದೆ ಪೆಱರನೊಲ್ಲೆನೆಂದಿರ್ದೊಡೆ ಮತ್ತಿನಿರ್ವರುಮಂ ಮದುವೆಯಂ ಮಾಡಿ (ಪಂಪಭಾ. ೦-೭೪ ಪ); ಆಕೆಯೇ ಆ ಮನೆಗೆಲ್ಲಾ ಹಿರಿಯಾಕೆ (ಕೂಡಿ). ಪಿರಿಯಾತ = ದೊಡ್ಡವನು ; ಜ್ಯೇಷ್ಠ : ಪಿರಿಯಾತಂ ಸ್ವಭಾವದಿಂ ಋಜುಮಾರ್ಗವೃತ್ತಿಯಂ ತಳೆದು ವಿನಯ ವಿಭೂಷಣನಾದಂ (ಸುಕುಮಾ. ೨-೩೭ ಪ). ಪಿರಿಯೊಟ್ಟೆ, ಪಿರಿಯೊಟವೆ, ಹಿರಿಯೊಬ್ಬೆ = ದೊಡ್ಡ ಮಂಳ್ಳುಪೊದರು,—ಬೇಲಿ(?) : ಪೆರ್ಬಳದೊಳಗಣ ಚಾದುಪೊಲದಿನ್ದೆ ಪಿರಿಯೊಟ್ಟೆಯ ಕೈವರದೊಳ್ ಒನ್ದು ಮಾನ್ಯಂ (ಎಕ. X (೮), ಸಕ್ಕಬ. ೦೦೬-೬೨ ; 850) ; ಪೆರ್ಬಳದೊಳಗಣ ಛಾದುಪೊಲದಿಂದೆ ಪಿರಿಯೊಟವೆಯ ಕೈವರದೊಳೊಂದು ಮಾನ್ಯಮ್ (ಪ್ರಾಸಂ. ೦೯೦೪, ೦೩-೬೨ ; 806) : ಅಲ್ಲಿಂ ತೆಂಕ ಹಿರಿಯೊಬ್ಬೆಯಿಂ ಪೋಗಲು ಬಿಂಬಿ ಸೆಟ್ಟಿಯ ಕೆಱೆಯ ಕೋಡಿಯ ಕೀಳ್ಬೆಯಲು . . . ಅಲ್ಲಿಂ ಹಡವಲು ಹಿರಿಯೊಬ್ಬೆಯ ಸೆಳ್ಳಮೊಱಡಿಯ ಹಡುವಣ ಬಳ್ಳೆಯ ಕೆಱೆಯ ತೆಂಕಣ ಕೋಡಿಯ ಬಳರಿಯ ಬನ (ಎಕ. II. ೩೪೩-೬೦; ಸು. 1159). ಪೆರ್ಗಾವಂ = ಅತಿಶಯವಾಗಿ ಕಾಪಾಡುವವನು ; ವಿಷ್ಣು : ಸೃಷ್ಟಿಸುವ ಸಮರ್ಥ ಪೆರ್ಗಾವನೈಶ್ವರ್ಯಕರ್ತಳೀತನ ರಾಣಿ ನಿಖಳಮೈಭೋಗವು ವ್ಯರ್ಥದ್ವಾರಕಿ ದೊಡ್ಡಿತಹುದೆ (ಮೋಡಕ. ೨೯-೨೭). ಹಿರಿದಾಗಿ = ಹೆಚ್ಚಾಗಿ ; ಬಹಳವಾಗಿ : ಹೆಮ್ಮೆಯಲಿ ಹಿರಿದಾಗಿ ಕೆಡುವರು (ಸಂಪಕ. ೩-೦೨) ; ಏಪ್ರರಿಳೆಯನು ಮಂದಮತಿ ಕೈಕೊಂಡು ಕವರಿದನವರ ಹಿರಿದಾಗಿ (ಸಂಪಕ. ೨೬-೩೭). ಹಿರಿದು ಕಿಱಿದು = ಮೇಲು ಕೀಳು : ಕಿಱಿಯರಾದಡೇನು ಹಿರಿಯರಾದಡೇನು ಅಱಿವಿಂಗೆ ಹಿರಿದು ಕಿಱಿದುಂಟೆ (ಕೂನ್ಯಸಂ. ೦೬೦-೬೨). ಹಿರಿಯ ಗಡಿಂಬ = ಭೂಮಿಯ ಒಂದು ಅಳತೆ : [ಹಿ]ರಿಯ ಗಡಿಂಬದ ಕೋಲೊಳ್ ಬಿಟ್ಟ ಮತ್ತ ೬೦ (ಸೌಇಇ. XX. ೩೯-೯೦; 1064) ಹಿರಿಯ ಗಳೆ = ೧. ದೊಡ್ಡ ಕೋಲು. ೨. = ಪಿರಿಯ ಕೋಲ್ ೨ : ಹಿರಿಯ ಗಳೆಯಲು ಗದ್ದೆ ಕಮ್ಮ (ಎಇ. ೦೯೪೬.

ಶಾಸಗರ್. ೨೨೯-೨೯; ೯). ಹಿರಿಯತನ, ಹಿರೇತನ = ೧. ದೊಡ್ಡತನ; ಘನತೆ; ಹೆಚ್ಚುಗಾರಿಕೆ: ನಿಮ್ಮಾ ಹಿರಿಯತನಕೆ ಪಡಿಯುಂಟೆ (ಕರುಶ. ಕೆ. ೦೯-೨); ತಿರುಗಿ ನೋಡಿದಡೀಗ ನಿನ್ನಯ ಹಿರಿಯತನವಳಿವುದೆ (ಬಸವ. ೩೯-೨೨); ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ ಗುರುವುತನದಲಿ ನೋಡೆ ಜಗದಾದಿಗುರುವು (ಪುರಂದ. ೨-೦೬೯-೦). ೨. ದೊಡ್ಡಸ್ತಿಕೆ; ಅಹಂಕಾರ: ಈ ಕಾಂಗ್ರೆಸ ಚಂಡಾಲರು ಹಿರೇತನ ಮಾಡಿ ಯಾರಿಗೂ ಬಿರುದುಗಳು ಇರಬಾರದು ಅಂದ್ರು (ಪಕ್ಷಿಂಗ. ೨೬). ಹಿರಿಯ ಮಗಳು, ಹಿರೀ ಮಗಳು = ದೊಡ್ಡ ಮಗಳು; ಜ್ಯೇಷ್ಠಪುತ್ರಿ: ಅವರ ಹಿರಿಯ ಮಗಳು ಊರಿಗೆ ಬಂದಿದ್ದಾಳೆ (ಕೂಡ); ನಾಳೆ ಅವರ ಹಿರೀಮಗಳ ಮದುವೆ (ಕೂಡ). ಹಿರಿಯ ಮಾಣಿ, ಹಿರಿಯ ಮಣಿ, ಹಿರೇ ಮಣಿ = "ಪಾಠಶಾಲೆಯಲ್ಲಿ ತರಗತಿಯ ಶಿಸ್ತು ನೋಡಿಕೊಳ್ಳುವ ಹಿರಿಯ ವಿದ್ಯಾರ್ಥಿ: ಹಿರೇಮಣಿ (ಹಿರಿಯ ಮಾಣಿ)" (Monitor. ೧೦೪೮): (ಪಾಠಶಾಲೆಯ) ಹಿರಿಯ ಮಣಿ (Captain. ೧೦೪೮); ಎರಡು ಮೂರು ವರುಷಗಳ ಕಾಲದಲ್ಲಿಯೇ ಈ ಹುಡುಗನು . . . ಪಾಠಶಾಲೆಯಲ್ಲಿ 'ಹಿರೇಮಣಿ'ಯಾದವನು (ಗುಣಾಗ. ೬). ಹಿರಿಯ ಸೊಳಸ = ಒಂದು ಅಳತೆಯ ಪ್ರಮಾಣ: ಮೂಲೆವತ್ತಂ ಹೇಱುಂಗೆ ಹಿರಿಯ ಸೊಳಸ-೨ . . . ಮೇಳಸು ಹೇಱುಂಗೆ ಹಿರಿಯ ಸೊಳಸ ೨ ಜೀರಗೆ ಹೇಱುಂಗೆ ಹಿರಿಯ ಸೊಳಸ ೨ (ಸೌಇಇ. IX-1, ೦೭೨-೩೦; 1106). ಹಿರೆ ಹುದ್ದರಿ = ದೊಡ್ಡ ಎದುರಾಳಿ,-ಪ್ರತಿಸ್ಪರ್ಧಿ; ಹಿರಿಯಹುದ್ದರಿ: ರಾಮನೂ ಶೀನನೂ ಹಿರೆ ಹುದ್ದರಿಯಾಗಿ ತಿಳ್ಳಿಯಾಟವನ್ನು ಹೂಡಿರುವರು (ಕಿರಾಶ. ೧೬). ಹಿರೇ ರೋಗ = ೧. ದನಗಳಿಗೆ ಬರುವ ಒಂದು ಬಗೆಯ ಸಾಂಕ್ರಾಮಿಕ ಕರುಳುಬೇನೆ: (ಕ). ೨. ಒಂದು ಬಗೆಯ ಕುಷ್ಠರೋಗ: (ಕ).

[ದೇ.ಇ ತಮಿ. ಪೆರಿತು; ಮಲ. ಪೆರು; ತುಳು. ಪೆರಿ; ತೆಲು. ಪೇರು]

ಪಿರಿದ್ಯ, 'ಪಿರಿದುಂ' ನೋ.

ಪಿರಿದುಂ, ಪಿರಿದ್ಯ, ಹಿರಿದ್ಯ (ಅ). ೧. ಹೆಚ್ಚಾಗಿ; ಅಧಿಕವಾಗಿ; ಬಹಳವಾಗಿ: ಕರಂ ಪಿರಿದುಂ ಗಬಪುತ್ರಮಿರ್ಪಳಂ ಸಾರಿಕೆಯುಂಬರಲ್ಲದಭಿ ಸಾರಿಕೆಯೆಂಬರೆ ಬುದ್ಧಿಯುಳ್ಳವರ್ (ಪಂಪಭಾ. ೯-೬೩); ಘನತೆಂಜೋಗರ್ಭ ದುರ್ಬಿಂದಱಿಯದೆ ಪಿರಿದುಂ ತನ್ನ ಪಾದಂಗಳಿಂ ಸನ್ಮುನಿವೃಂದಾಗಣ್ಯ ಪುಣ್ಯಾಪಳತನುತತಿಯುಂ ಮುಟ್ಟಿಯುಂ (ಶಾಸಪಾ. ೦-೪೦); ರಡೆ ಮೊದಲಳಿದ ಗಗನದ ನಡುವೆ ಪಿರಿದುಂ ಬಳಸಿದಾ ವಾಯುಪ್ರಿತಯದೊಳ್ (ಸಾಳ್ವಭಾ. ೦-೩೦). ಪಿರಿದ್ಯ: ೧. ಅವನಿಂತಾರಾದೊಡಂ ಪಲ್ಗಿಱಿದು ಪಿ[ಪಾಣಂ.ಬಿ]ರಿದು ಬಾಯಿಂದೆ ದೈನ್ಯಾಕ್ಷರಂ ಸಂಭವಿಸುತ್ತೆನ್ನಾಳ್ದ ಸಂದೇಶ ಮನೆ ಕರುಣಿಸೆಂದಲ್ಲಿ (ಕರ್ಣಾ. ೨೦); ಪಿರಿಯಂ ಅಃ ಪಿರಿದೀವನಿತ್ತುದಾ ನೆನೆವನೆ ಚಿಃ ಅದಂ ನೆನೆಯಂ (ಕಪಾದ. ೦೩೨ ಸ್ವೋಪ); ಸರಳ ಹತಿಯಲಿ ನಕುಲ ಸಾತ್ಯಕಿ ಬಿರುದ ಸಹದೇವಾದಿ ವೀರರು ಪಿರಿದು ನೊಂದರು (ಶಾಸ್ಕಾಳ. ೦೩-೯೨). ೨. ಅತಿಶಯವಾಗಿ; ವಿಶೇಷವಾಗಿ; ವಿಂಗಿಲಾಗಿ: ಅಂತು ಪಿರಿದೋಲಗಂಗೊಟ್ಟರ್ವನ್ನೆಗಂ (ಪಂಪಭಾ. ೯-೨೯ ಪ). ಹಿರಿದ್ಯ: ೧. ಅಳು ಹಿರಿದಿದ್ದೇನು ಫಲ ಹೀಹಾಳಿದೈವಕೆ ಬೇಜ್ ಪರಿಯ ವಿತಾಳವಿಲ್ಲ ವಿಪಕ್ಷದೊಳು (ಕುಸಾಳ. ೦೩-೬); ನೊಂದಿರಿ ಹಿರಿದು ನಿಷದಱಿಂದ (ಕೊರಂಗ. ೦-೮-೬೩). [< ಪಿರಿದು$_1$]

ಪಿರಿಪಿರಿ (ನಾ). ಒಂದು ಅನುಕರಣಶಬ್ದ: ಅವರು ಯಾವಾಗಲೂ ಪಿರಿಪಿರಿ ಎನ್ನುತ್ತಾರೆ (ಶಾಗಸಾ. ೦೩೬); ನೀವು ಇತ್ತಿತ್ತಲಾಗಿ ಎಂತದೋ ಪಿರಿಪಿರಿ ಮಾತಾಡುತ್ತೀರಪ್ಪ (ಹೂಸ್ಥ. ೬೬). 'ಕಿಱಿಕಿಱಿ' ಪರಾ.

ಪಿರಿಪಿರಿ ತಿರುಗು = ಸಮ್ಮನೆ ತಿರುಗಾಡು; ಅತ್ತಿಂದಿತ್ತ ಅಲೆ: ದಿನದ ಇಪ್ಪತ್ನಾಲ್ಕು ತಾಸು ಪಿರಿಪಿರಿ ತಿರುಗಿ ದೇಶದುದ್ದಾರಕ್ಕೆ ದೇಹವನು ತೇಯ ಬಲ್ಲ (ಪಂಮು. ೨೯-೨೩); ಯಾವುದರ ಸಂಧಾನದಲ್ಲಿ ಎಷ್ಟೋ ವರ್ಷ ಅವಿಶ್ರಾಂತವಾಗಿ ಪಿರಿಪಿರಿ ತಿರುಗಿದ್ದೆನೋ ಅದರ ಸುಳಿವು ಈಗ ಹತ್ತುತ್ತಿದೆ (ಇಷ್ಟಳ. ೪೯೬). ಪಿರಿಪಿರಿ ಮಾಡು = ತೊಂದರೆ ಕೊಡು; ಪೀಡಿಸು; ಕಿರಿಕಿರಿ ಮಾಡು: ಯಾವಾಗಲೂ ಏನೋ ಪಿರಿಪಿರಿ ಮಾಡುತ್ತ ಕುಳಿತಿರುತ್ತಾಳೆ (ಪಳ್ಳಿಜಾ. ೦೦೬); ಬಸ್ಸಿನಲ್ಲಿ ಹೋಗೋಣ ಎಂದರೆ ಕಂಡಕಟ್ರು ಮಿನಾನು ಬಸ್ಸಿನಲ್ಲಿಡಲು ಪಿರಿಪಿರಿ ಮಾಡೋದು ಬೇರೆ (ಹೊಸ್ಥ. ೩೬); ನೆಂಟಸ್ತಿಕೆ ವಿಷಯ ಇನ್ನು ಪಿರಿಪಿರಿ ಮಾಡಬೇಡ (ಸಸಸ. ೬೩).

ಪಿರಿಯಕ್ಕರ (ನಾ). [ಛಂದ] ದೇಸಿಛಂದಸ್ಸಿನ ಅಕ್ಷರವೃತ್ತದ ಐದುಪ್ರಕಾರಗಳಲ್ಲಿ ಒಂದು; ಪ್ರತಿಪಾದದಲ್ಲಿಯೂ ಮೊದಲು ಒಂದು ಬ್ರಹ್ಮಗಣ, ನಂತರ ಐದು ವಿಷ್ಣುಗಣ, ಕೊನೆಯಲ್ಲಿ ಒಂದು ರುದ್ರಗಣ—ಹೀಗೆ ಒಟ್ಟು ಏಳು ಗಣಗಳಿಂದ ಕೂಡಿದ, ನಾಲ್ಕು ಪಾದಗಳನ್ನುಳ್ಳ ವೃತ್ತ: ಮೊದಲೊಳಜಗಣಂ ಕುಂದದೆ ಬರ್ಕತ್ತಮಯ್ದುಗಣಂಗಳೆ ವಿಷ್ಣುವಕ್ಕುಂ ತುದಿಯೊಳೆಂಬ ತಾಣದೊಳೆಲ್ಲಿಯುಂ ಕಂದರ್ಪರಿಪುಗಣಂ ನೆಲೆನೆಲಸಿ ನಿಲೆ . . . ಪಿರಿಯಕ್ಕರಂ (ಕಂದೋಂಬು. ೩-೨೨); ನಾಗವರ್ಮನು ೫ ಅಕ್ಕರಗಳನ್ನು ಹೇಳಿರುವನು:— ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿಱಿಯಕ್ಕರ (ಕೃಕಿ. ೦೨೩) 'ಕಿಱಿಯಕ್ಕರ' ಪರಾ. [ಪಿರಿ$_4$ (< ಪಿರಿದು$_1$) + ಅಕ್ಕರ$_2$]

ಪಿರಿಯಣ್ಣ, ಹಿರಿಯಣ್ಣ (ನಾ). ೧. ಹಿರಿಯ ಸಹೋದರ; ದೊಡ್ಡ ಅಣ್ಣ: ಪಿರಿಯಣ್ಣಂಗೆಱಗುವುದೇಂ ಪರಿಭವವೇ (ಅಭಿಮ. ೦೯-೩೩); ಪಿರಿಯಣ್ಣನ ನನ್ನಿಯನಾದರದಿಂ ಕಾಯಲ್ಕೆ ಪೆಱರ್ಗೆ ಬಾಣಸುಗೆಯ್ದಂ (ಗದಾಯು. ೬-೩೬); ಧರಣೀಶಾ ಕೇಳ್ಮನ್ನಿನ ಭವದೊಳ್ ಪಿರಿಯಣ್ಣಂ ನಾಂ ನಿನಗೆ (ಶಯಾಶಾ. ೩-೬೬). ಹಿರಿಯಣ್ಣ: ೧. ಅವನು ಹಿರಿಯಣ್ಣನ ಮಾತಿಗೆ ಎಂದೂ ಎದುರಾಡಿದವನಲ್ಲ (ಕೂಡ). ೨. ಒಂದು ಕ್ಷುದ್ರದೇವತೆಯ ಹೆಸರು: ಎಲ್ಲಾಯಿ ಯಕನಾತಿ ಬನದ ಶಂಕರಿ ಮಲ್ಲಗ ಜಟ್ಟಿಂಗ . . . ಕಲ್ಲದ ಚವಡಿಕಿ ಮೂರಿ ಮಸಣಿ ಜಕ್ಕಿ ಸಲ್ಲದ ಹಿರಿಯಣ್ಣ ಗುರುವ ಜಲದೇವಿ (ಪಾಗಾಸು. ೩೬-೨). [ಪಿರಿ$_4$ (< ಪಿರಿದು$_1$) + ಅಣ್ಣ$_1$]

ಪಿರಿಯಪಸುಂಡಿ (ನಾ). ಒಂದು ಊರಿನ ಹೆಸರು: ನಿಜಿಯಾಬ್ಬರಸಿ ತನ್ನ ಮಗಂ ಶಾನ್ತಿವರ್ಮ್ಮರಸಂ ಮಾಡಿಸಿ[ದ] ಪಿರಿಯ ಬಸದಿಗೆ ತನ್ನ ನೀವಟಂ ಪಿರಿಯ ಪಸುಣ್ಡಿಗೆ ಪೋದ ಬಟ್ಟೆಯಿಂ ತೋಕ ಕಾಡಿಯೂರ ಪೊಲ[ದ] × × × ನೂಱಯ್ವತ್ತು ಮ[ತ್ತ]ರ್ಕ್ಕೆಯ್ಯಂ ನವಸ್ಯಮಾಗಿ ಬಿಟ್ಟಳ್ (ಸೌಇಇ. XX, ೦೯-೧೦; 980). [< ಪಿರಿದು$_1$ + ಪಸುಂಡಿ]

ಪಿರಿಯಬಾಣಗೆಱೆ (ನಾ). ಒಂದು ಊರಿನ ಹೆಸರು: ಪಿರಿಯ ಬಾಣಗೆಱೆ ಯನ್ನುತ್ತರಾಯಣಸಂಕ್ರಾನ್ತಿಯೊಳ್ವಕ್ಕಾಣಭಟಾರರ ಶಿಷ್ಯರ್ ಚಿಲ್ಲುಕ ಭಟಾರರ ಕಾಲಾ ಕರ್ಚಿ ಕೊಟ್ಟ ಮರ್ಯಾದೆಯೊಳಗೆ (ಎಇ. XII, ಶಿಕಾ. ೨೯-೩೬; 943). [< ಪಿರಿದು$_1$ + ಬಾಣಗೆಱೆ ?]

ಪಿರಿಯಬಿದಿರೂರ್ (ನಾ). ಒಂದು ಊರಿನ ಹೆಸರು: ಬೀರನೊಟಂಬ ನೊಟ್ಟಿ ಕಿಱ್ಕುನಾಡ ಪಿರಿಯಬಿದಿರೂರ ಕಲ್ಲಡುಗೊಟ್ಟು (ಎಇ. X, ಗೋಕಾಲಿ. ೯-೨೨; ಸು. 920). [< ಪಿರಿದು$_1$ + ಬಿದಿರೂರ್]

ಪಿರಿಯಬ್ಬೆ (ನಾ). ದೊಡ್ಡ ತಾಯಿ; ದೊಡ್ಡಮ್ಮ: ಆತನ ಪೂರ್ವಭವದ ಪಿರಿಯಬ್ಬೆ ದೇವಶ್ರೀಯೆಂಬಳ್ ಯಕ್ಷಿಯಾಗಿರ್ದಾಕೆ ಬಂದಳ್ (ಪಾಚಂಪು. ೬೯). 'ಕಿಱಿಯಬ್ಬೆ' ಪರಾ. [ಪಿರಿ$_4$ (< ಪಿರಿದು$_1$) + ಅಬ್ಬೆ$_1$]

ಪಿರಿಯಮಾಗುಂಡೆ (ನಾ). ಒಂದು ಊರಿನ ಹೆಸರು; ಪ ಶಿವಮೊಗ್ಗ ಜಿಲ್ಲೆಯ ಸೊರಬತಾಲ್ಲೂಕಿನ ಈಗಿನ ಹಿರೇಮಾಗಡಿ: ಅಯ್ಯಣ ಪುತ್ರ ನಾಗರಬಣ್ಣ ಎಟ್ಟತ್ತು ಆಳುತಿಟ್ಟು ಪಿರಿಯಮಾಗುಣ್ಡೆಯ ಪೊಲೆಗ ಊರ್ಗ್ಗಮುಣ್ಡುಗೆಯ್ದುತ್ತಿರೆ (ಎಇ. VIII, ಸೊರಬ. ೨೦೩-೦೩; 980). [< ಪಿರಿದು$_1$ + ಮಾಗುಂಡೆ$_2$ (< ಮಾಗುಂಡಿ)]

ಪಿರಿಯಮುಗುಳಿ (ನಾ). ಒಂದು ಊರಿನ ಹೆಸರು ; p ಈಗಿನ ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರು : ಪಿರಿಯಮುಗುಳಿಯ [ಕೊ] ಮಾರಯ್ಯನು [೦] (ಎಇ VIII, ೫೬-೦೩ ; ಸಂ. 1000) 'ಕಿಱಿಯ ಮುಗುಳಿ' ಪರಾ. [< ಪಿರಿದು$_1$ + ಮುಗುಳಿ$_1$]

ಪಿರಿಯಮೆಟಪಿ (ನಾ). ಒಂದು ಊರಿನ ಹೆಸರು : ಶ್ರೀಮತ್ ಮೊಱ(೦)ಮ್ಮಾಧಿರಾಜರ್ ಪಿರಿಯಮೆಟಪಿಯ ಬಾಳತೋಮಾಭಟರಗ್ಗೆ ಕೊಟ್ಟ ಸ್ಥಿತಿ ಎನ್ನೆನ್ದೊಡೆ (ಸೌಇ. IX-1, ೩೨-೬; ಸಂ. 10ಸಯ ಶಕ).

[< ಪಿರಿದು$_1$ + ಮೆಟಪಿ$_3$]

ಪಿರಿಯಯ್ಯ, ಹಿರಿಯಯ್ಯ (ನಾ). ೧. ದೊಡ್ಡಪ್ಪ : ನಮ್ಮ ಪಿರಿಯಯ್ಯ ತಳೆದ ನಮ್ಮಯ್ಯನ ವಸುಧೆಯನು ಸೆಳೆದುಕೊಂಡನು ತನ್ನ ವಿದ್ಯಾಬಲದಿನಾತಂಗಳುಕಿ ಮತ್ತಿತನೀ ಪುರದೊಳಿಹನು (ಶಾಕೃಶಾ. ೦೬-೨೬) ; ಭೀಮಂ ನಿನಗೆ ಪಿರಿಯಯ್ಯನಹನೆ (ಶಾಸಾ. ೦೯-೦೬). ೨. ಒಬ್ಬಾತನ ಹೆಸರು : ಮಚ್ಚಿಕೆಱೆಯ ತೆಂಕಣ ಕಡೆಯಿಂ ಪಿರಿಯಯ್ಯ ಪುಣಾಸೆವರಂ ನಟ್ಟ ಒಳಗಲ್ಲಿನ್ದಂ ಪಡುವಣ ತೆವರಿಂದೊಳಗೆ ಆಯ್ದು ಕೊಳಗ ಬೆದೆ ಪೊಂಬೊಲನುಮಿದು ಚನ್ದ್ರಾರ್ಕತಾರಂಬರಂ ಸಲ್ವುದು (ಎಇ. IV, ಹಗೃಶ. ೦೬-೦೯ ; 1021) ; ಶ್ರೀಮತ್ಕಂಚಲಮಹಾದೇವಿಯರು ಶ್ರೀಮತ್ಪಿರಿಯಯ್ಯಂಗಳ್ ಮೊದಲಾಗಿ ಸಮಸ್ತಪ್ರಧಾನರುಂ . . . ಪುನರ್ದ್ದತ್ತಿ ಮಾಡಿ (ಸೌಇ. XX, ೪೬-೩೯ ; 1072). ಹಿರಿಯಯ್ಯ : ೧. ಕೆಲಬರೊಡಹುಟ್ಟಿದರು ಗುರುಗಳು ಕೆಲರು ಕೆಲಬರು ಮಾವ ಮೈದುನ ನಳಿಯ ಮಗ ಹಿರಿಯಯ್ಯ ಮಾತ್ರಯ ಮೊಮ್ಮನೆನಿಸುವರು (ಕುಪಾಕೀ. ೩-೨೬) ; ತಾತ ಕೇಳ್ಪೆ ಪಾರ್ಥ ನಿನಗೆ ಹಿರಿಯಯ್ಯನಹನೀತಂ ಕಣಾ ಧರ್ಮರಾಜನೀ ನೃಪನ ಜಾಮಾತನಾಗಿರ್ದಪಂ (ಕೈವಿಶಾ. ೨೬-೦೦).

[ಪಿರಿ$_4$ (< ಪಿರಿದು$_1$) + ಅಯ್ಯ$_{11}$]

ಪಿರಿಯರ (ನಾ). ದೇವಸ್ಥಾನ ಮಂಂತಾದ ಪವಿತ್ರಸ್ಥಳಗಳಲ್ಲಿಯ ಹಿರಿಯ ಅಧಿಕಾರಿ,—ಧರ್ಮಾಧಿಕಾರಿ : ಪುರದ ಪೆರ್ಗ್ಗಡೆಗೆ ಮತ್ತ ರಾಜು ಪಿರಿಯರಂಗೆ ಮತ್ರರಾಜು (ಎಇ. XIII, ೦೬೨-೪೯ ; 1056).

ಪಿರಿಯರವಾಳಸೂಳೆ — ಧರ್ಮಾಧಿಕಾರಿಗಳ ಪಾಲನೆಯಲ್ಲಿರುವ, ದೇವರ ಹೆಸರಿನಲ್ಲಿ ಬಿಟ್ಟ ವೇಶ್ಯೆ,—ಸೂಳೆ : ದೇವರ ಭೋಗಕ್ಕೆ ನಡೆವ ಪಿರಿಯರವಾಳ ಸೂಳೆಗೆ ಮತ್ತರಿಪ್ಪತ್ತು (ಎಇ. XV, ೯೯-೯೯ ; 1060).

[ಪಿರಿ$_4$ (< ಪಿರಿದು$_1$) + ಅರ$_2$ (< ಅಱ$_2$)]

ಪಿರಿಯರವಣ (ನಾ). ಒಂದು ಬಗೆಯ ತೆರಿಗೆ ; ಹಿರಿಯ ಧರ್ಮಾಧಿಕಾರಿಗಳಿಗೆ ಕೊಡುವ ತೆರಿಗೆ (?) : ಅಲ್ಲಿ ಮನ್ನೆಯ ನಿಬನ್ದದ ಕಿಱುದೆಱೆಗಳಾವುವೆನ್ದಡೆ ಮನೆವಣಂ ಪಿರಿಯರವಣಂ ಧನಬಳಂ . . . ಇನ್ತೀ ನಡೆವ ತೆಱೆಗಳ್ಕಂ . . . ಸರ್ವ್ವಬಾಧಾಪರಿಹಾರವಾಗೆ ಬಿಟ್ಟು ನಡೆಯಿಸಿದ (ಸೌಇ. XX, ೪೭-೩೬, 1074). [ಪಿರಿಯರ + ಪಣ$_3$]

ಪಿರಿಯರಸಿ, ಹಿರಿಯರಸಿ (ನಾ). ದೊಡ್ಡ ರಾಣಿ : ಪಟ್ಟದ ರಾಣಿ ; ಅಗ್ರಮಹಿಷಿ : ಪಿರಿಯರಸಿಯ ಪಟವೇಟದ ಪರಿವಿಡಿ ಮಗುಟ್ಟುಂ ಕೊನರ್ತುದು (ಶಾಂಕಾ. ೭-೩೨) ; ಪಡಿಯಱ ದೊರಪಯ್ಯನ ಪಿರಿಯರಸಿ ಪಾಂಟಪ್ಪೆ ತಶೆವಱೆದು ಮೂವತ್ತು ವರಿಸಂ ತಪಂಗೆಯ್ದುಯ್ದುಂ ನೋನ್ತುಚ್ಛಮಾಣಮೇಱೆದರ್ (ಎಇ. VI, ಶಹೂರು. ೧-೦೯ : 971) ; ಮದನಂ ಪಿರಿಯರಸಿಯ ಪೆರ್ಗಡೆಗಳ ಬರವಿನ ಕಾರಣಮಾನಱೆದು (ಶಾಂಪಂ. ೯-೩೬). ಹಿರಿಯರಸಿ : ಅಕ್ಕತಂಗಿಯರೈವರು ಒಬ್ಬನ ಅರಸಿಯರು ಕಿಱಿಯಕ್ಕನ ಕೊಡುವರೆ ಹಿರಿಯರಸಿ ಕುಂಟಣೆ ಹಿರಿಯರಸಿಯ ಕೊಡುವರೆ ಕಿಱಿಯರಸಿ ಕುಂಟಣೆ (ಕೂಸ್ಥಸಂ. ೨೨೨-೫೬) ; ಸೇರಿದವು ಪೂರ್ವಾಂಶ ಪಾಗೆಗಳು ಹಿರಿಯರಸಿ ಕಿಱಿಯರಸಿಯವರಿಬ್ಬರಿಗೆ (ಕೊಂಪಾ. ೦-೭-೫೬). 'ಕಿಱಿಯರಸಿ' ಪರಾ. [ಪಿರಿ$_4$ (< ಪಿರಿದು$_1$) + ಅರಸಿ]

ಪಿರಿಯರಾಜಾನ್ನ (ನಾ). ಒಂದು ಬಗೆಯ ಬತ್ತ : ಪಿರಿಯರಾಜಾನ್ನ ಜೇರಿಗೆರಾಜಾನ್ನವು ವುರುತರ ಸೊಗಸು ರಾಜಾನ್ನ ಪರಿಶೋಭಿಸುವ ಕಸ್ತೂರಿ ರಾಜಾನ್ನದ ವರಶಾಲಿಯ ಗದ್ದೆಯಿಹುವು (ಕಂಪಂ. ೩-೬೮).

[< ಪಿರಿದು$_1$ + ರಾಜಾನ್ನ]

ಪಿರಿಯಹೊಟ್ಟ (ನಾ). ಒಂದು ಊರಿನ ಹೆಸರು; p ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಈಗಿನ ದೊಡ್ಡಹೊಮ್ಮ : ಎಡೆನಾಡ ಪಿರಿಯ ಹೊಟ್ಟದ ಪನ್ನಿರ್ಬ್ಬರುಂ . . . ಕೂಚಿಭಟರ್ಗೆ . . . ಕಾಲಂ ಕರ್ಚ್ಚಿ ಧಾರೆಯೆಱೆದು ಕೊಟ್ಟರ್ (ಎಕ. III, ಸಂಇಪ. ೦೮೬-೩; 977).

[< ಪಿರಿದು$_1$ + ಹೊಟ್ಟ$_2$ (< ಪೊಟ್ಟ)]

ಪಿರಿಯಾದಿ 'ಫರ್ಯಾದು' ನೋ.

ಪಿರಿಯಾಯ್ಯ (ನಾ). ಒಬ್ಬಾತನ ಹೆಸರು : ನಯವಂ ಮೆಱೆವಂ ಶತ್ರುತನಯನಾಯ [೦] ಪರನೆನಿಸಿ ನೆಗೞ್ದ ಪಿರಿಯಾಯ್ಯನನಾಶ್ರಯಣೀಯ ನಾದನಾ ಕ್ಷತ್ರಿಯಾದಿಗಂ ಸಕಳ ಸಮಯಿ[ಗಂ ಬು] ಧಜನಕಂ (ಸೌಇ. XI-1, ೪೫-೦೦; 980).

[ಪಿರಿ$_4$ (< ಪಿರಿದು$_1$) + ಅಯ್ಯ$_{10}$ (p ← ಸಂ. ಆದಿತ್ಯ$_5$)]

ಪಿರಿಯಿಂಡಿ (ನಾ). ಒಂದು ಊರಿನ ಹೆಸರು; p ಈಗಿನ ಬಿಜಾಪುರ ಜಿಲ್ಲೆಯ ಇಂಡಿ : ಅಳಂಪೂರ ಬಟ್ಟೆಯಿಂ ಪಡುವ ಕಿಱಿಯಿಣ್ಡಿಯ ಬಟ್ಟೆಯಿಂ ಪಿರಿಯಿಣ್ಡಿಯ ಸೀಮೆಯಿಂ ಮೂಡಲನ್ತೆರಡುಂ ಬಟ್ಟೆಯುಂ ದೊಳಗೆ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ನೆಲಂ (ಸೌಇ. XX, ೨೦-೬೦ : 1019). [ಪಿರಿ$_4$ (< ಪಿರಿದು$_1$) + ಇಂಡಿ$_0$]

ಪಿರಿಯಾಚಲ್, ಹಿರಿಯಾಚಲು, ಹಿರೀಚಲು (ನಾ). ಒಂದು ಬಗೆಯ ಈಚಲುಮರ; ದೊಡ್ಡ ಈಚಲು : ಪಿರಿಯಾಚಲ ಪಣ್ಣಂ ಸರಿಕನ ಬಿತ್ತಮರ್ದುವಳ್ಳಿ ಮೂಲಂಗಿಯ ಬೇರರಿಸಿನ ಮಡುವಾಗಲ್ ಏಷಹರ ಮಕ್ಕುಂ (ಶಶಾದ. ೩-೦೦೬). ಹಿರಿಯಾಚಲು : "ಇಂದ್ರಾಸಂ—ಹಿರಿಯಾಚಲು" (ಬಿಕಂ. ೦೬). ಹಿರೀಚಲು : "ಅಶೋಕಃ—ಅರಳಿ, ಅಶೋಕೆ, ಹಿರೀಚಲು" (ಬಿಕಂ. ೩). 'ಕಿಱೀಚಲ್' ಪರಾ.

[ಪಿರಿ$_4$ (< ಪಿರಿದು$_1$) + ಈಚಲ್ (< ಈಂಚಿಲ್)]

ಪಿರಿಯುಬ್ಬಣ, ಹಿರಿಯುಬ್ಬಣ (ನಾ). ಒಂದು ಬಗೆಯ ದೊಡ್ಡ ಮೊನಚಾದ ಆಯುಧ (?) : ಪಿರಿಯ [ಯು]ಬ್ಬಣ ಕಠಾರಿಯಿಂ ತಿವಿದಾಡಿ ಗದೆಗಳಿಂದ ಧುರದೊಳಿಬ್ಬರು ಹೆಣಗಿ ಬಹುಲಾಗುವೇಗದಿಂ . . . ಕಾದಿದರು ಖಾತಿಯಿಂದುಭಯಭಟರು (ಶಂಗಂ. ೬೬-೨೯). ಹಿರಿಯುಬ್ಬಣ : ಹಿರಿಯುಬ್ಬಣದ ಸಬಳದ ಶೂಲ ಸುರಗಿಯ ಕಣೆಯ ಹೊಱೆ ಚಾಟಿದವು ಕಟಕಾಚಾರ್ಯನಿದಿರಿನಲಿ (ಶಾಬ್ಯಕ್ರೀ. ೦೫-೦೯); ಹಿರಿಯುಬ್ಬಣವ ಜಡಿವುತ ಕುದುರೆಯ ಮೇಲೆ ಹರುಷದಿಂ ಬಹನಾರಿವನು (ಶಾಣಾಂ. ೨೦-೯೦) ; ಹಿರಿಯುಬ್ಬಣವ ಜಳಿಪಿಸಿ ಎಾಸೆಯ ಮೇಲೆ ಬೆರಳಿಡುತತುಳಪೌರುಷದ ಬಿರುದಿನಗ್ಗಳಿಗೆಗಳನು ಪೊಗಳಿಸಿಕೊಳ್ವ ದೊರೆ ಯಾವನುಸಿರು (ಕಂಪಂ. ೦೩-೩೮). [ಪಿರಿ$_4$ (< ಪಿರಿದು$_1$) + ಉಬ್ಬಣ$_1$]

ಪಿರಿಸಂದಿ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಅಣುವಶ × × × ಯಲೋಕನೆಮ್ಬುದು ಎಬ್ಬತ್ತೈದು ಪನ್ದಿಯಂ ಕೊನ್ದತ್ತು ಇದುವೆರಸಿ ಯಾ ನಾಯಕಧಳಗನೆಮ್ಬುದು ಪಿರಿಸನ್ದಿ ಮಾಗ ಯಿಪ್ಪತ್ತಾಱು ಪನ್ದಿಯಂ ಕೊನ್ದನ್(ಎಇ. X, ಕುಳಶಾ. ೧೩-೨; ಸಂ. 975). [ಪಿರಿ$_4$(< ಪಿರಿದು$_1$)+ಸಂದಿ?]

ಪಿರುಕಣೆ 'ಪಿರಕಣೆ' ನೋ.

ಪಿರುಚು 'ಪಿರಿಚು' ನೋ.

ಪಿರ್ಕಿ 'ಪಿರಿಕ್ಕಿ$_2$' ನೋ.

Δ **ಪಿರ್ಕು** 'ಪಿಕ್ಕು' ನೋ.

ಪಿರ್ಗು$_1$ 'ಪಿಳ್ಗು' ನೋ.

ಪಿರ್ಗು₂, ಹಿಗ್ಗು₂, ಹಿರ್ಗು, ಹಿಳ್ಗು₂ (ನಾ). ಸಂತೋಷ ; ಆನಂದ : ಇಂತಪ್ಪ ಪಿರ್ಗಿಂದಮೇ ಪೆರ್ಚುಗೆನ್ನೆಲ್ಲ ಪಗೆಗಳುಂ ಮೇಣ್ ನೀನುಮವರೊಳಗೆ ಒರ್ವನ್! (ಐದ್ಯಶ್ರೆ. ೩೦-೦೦೨೦). ಹಿಗ್ಗು₂ : ಹಿಗ್ಗು ಬಡವಗೆ ಹೊಲ್ಲ ಸಿಗ್ಗು ಸೂಳೆಗೆ ಹೊಲ್ಲ ನುಗ್ಗಿಯ ಹೂಗೆ ಮಳೆ ಹೊಲ್ಲ (ಸರ್ವಜ್ಞ. ೯೨೮); ಆನಂದ ಅಲೆಯಾದಾಗ ಹಿಗ್ಗಾಗಿಯೂ ಘನೀಭೂತವಾದಾಗ ಸೌಂದರ್ಯವಾಗಿಯೂ ಪರಿಣಮಿಸುತ್ತದೆ (ಸೌಂದಸ. ೦೬); ನಿಸರ್ಗವನ್ನುಂಡ ಅವನ ಸರಳ ಹೃದಯವು ಅದನ್ನು ಬಣ್ಣಿಸುವುದರಲ್ಲಿ ಹಿಗ್ಗಿನ ಬುಗ್ಗೆಯಾಗಿದೆ (ಶಪ್ತಿಶಾ. ೨೦೦). ಹಿರ್ಗು : ತನುಜಾತೆರೊರ್ಗಿಸುತ ವೈವಾಹ ಹಿರ್ಗಿನನುಸುರ್ಗಿ ಸಂಪರ್ಗಳಿಂದೈದಿ ಬರುತ (ಪಸಪು. ೩೨-೯). ಹಿಳ್ಗು₂ : "ಹರ್ಷಃ . . . ಹೃಷ್ಟಂ, ಹೃಷ್ಟಿಃ — ಈ ೭ ಹಿಳ್ಗು" (ಶಾಶಕ್ಯ. ೦೯೩). [<ಪಿಳ್ಗು]

ಪಿರ್ರೆ (ನಾ). ಅಂಡು ; ಕುಂಡಿ ; ನಿತಂಬ : ಕಟಿಃ. "ಕಟೀ, ಶ್ರೋಣಿಃ, ಶ್ರೋಣೀ, ಕಕುದ್ಮತೀ—ಅಂಡುಗಳ ಹೆಸರುಗಳು, ಪಿರ್ರೆಗಳು" (ಸಿದ್ಧಾಂತಿ. ೦೯೦). [ದೇ. ॥ ತೆಲು. ಪಿಱ್ಱ ; ಕೋಲಾ. ನಾಯ್ಕಿ. ಪಿರ್ರ]

ಪಿಲ (ನಾ). ಹಲಸಿನ ಮರ : ಪಿಲ (ಹಲಸು), ಪಿಜ (ಹೆಬ್ಬಲಸು) . . . ಇತ್ಯಾದಿಗಳನ್ನು ಸಂಕೇತವಾಗಿರಿಸಿಕೊಂಡವರೆಂಬ ಅರ್ಥದಿಂದಲೋ . . . ಅಥವಾ ಅವುಗಳನ್ನು ವಿಶೇಷವಾಗಿ ಪೋಷಿಸುತ್ತಿದ್ದವೆಂಬರ್ಥದಿಂದಲೋ ಬಂದ ಕುಲನಾಮಗಳು, ಪಿಲತ್ತಾಯ, ಪಿಜತ್ತಾಯ (ತುಳುವಾ. ೦೫೩).
[ದೇ. ॥ ಮಲ. ಪಿಲಾವು ; ತುಳು. ಪಿಲ, ಪೆಲ]

ಪಿಲಿಕಂದೋಡಿ (ನಾ). ಒಂದು ಬಗೆಯ ಮಂಡಲದ ಹಾವು ; ದೊಡ್ಡ ಜಾತಿಯ ಕನ್ನಡಿ ಹಾವು : ನಾಗರ ಹಾವಲ್ಲ. ಚಿಟ್ಟೆಹುಲಿಯಂತೆ ಅದರ ಮೈಮೇಲೆ ಪಟ್ಟೆಮುದ್ರೆ . . , ಅಯ್ಯೊ ಇದು ಪಿಲಿಕಂದೋಡಿ (ಬಾಳಗಿ. ೬೦). [ದೇ. ॥ ತುಳು. ಪಿಲಿಕಂದೊಡಿ]

ಪಿಲಿಚಾಮುಂಡಿ (ನಾ). ಒಂದು ಕ್ಷುದ್ರದೇವತೆಯ ಹೆಸರು : ಈತನ ಮನೆಯೊಳಗೆ ಕೆಂಪುವರ್ನದ ಪಿಲಿಚಾಮುಂಡಿ ಬಂದು ಗಡಬಡಗುಟ್ಟುತ್ತಾ ಹೋಗುತ್ತದೆ (ಪಾಸ್ಕಪುಂ. ೨೮).
[ಪಿಲಿ?(ಪ ← ತುಳು. ಪಿಲಿ=ಹುಲಿ) + ಚಾಮುಂಡಿ]

ಪಿಲು (ನಾ). ೧. ಒಂದು ಬಗೆಯ ಮರ ; ಉಗುನಿ ; ಪೀಲು : "ಪಿಲು ಸಹಸ್ರಾಂಶುವೆನಲುಗಿನಿ" (ಮಂಗರಾ. ೪೮-೪೯). ೨. ಹುಲ್ಲು ; ತೃಣ. ೩. ಕಲ್ಲು ; ಶಿಲೆ : "ಕುಜಾತಂ ತೃಣಂ ಅಶ್ಮಂಗಳ್ ಪಿಲುವಕ್ಕುಂ" (ಪಾಪಾರ. ೦೫೬). 'ಪೀಲು₁' ಪರಾ. [ಸಂ.]

ಪಿಲ್ಲ (ನಾ). ರೋಗದಿಂದ ನೀರು ಸುರಿಯುವ ಕಣ್ಣಿನವನು ; ಸೋರು ಗಣ್ಣಿನವನು : "ಪಿಲ್ಲಃ, ಚಿಲ್ಲಃ, ಚುಲ್ಲಃ — ಈ ೩ ಅಚಿಗಣ್ಣವಂ" (ಹಲಾಯು. ೯೯-೪೫೩). [ಸಂ.]

ಪಿಲ್ಲಕೆ (ನಾ). ಹೆಣ್ಣಾನೆ; ಪಿಡಿ. [ಸಂ. ಪಿಲ್ಲಕಾ]

ಪಿಲ್ಲಣಿ (ನಾ). ಒಂದು ಬಗೆಯ ಆಯುಧ ; ಪರಿಘ : ನನೆಯಂಬನೆಂಬ ಮಲ್ಲನ ಕನಕದ ಪಿಲ್ಲಣಿಗಳುಪಮೆಗೇವಯಿಸಿದುವೆಂದೆನಿಸಿ ನಸುವಾಗಿ ಜಂಘೆಗಳೆನಸುಂ ಕಣ್ಗೊಳಿಪುವು (ಶಾಂತೀಶ್ವ. ೦೩-೦೮೮); ಮಲ್ಲರ ಸದನದ ಕೈಗಳ ಪಿಲ್ಲಣಿಗಳ ಕಾಯಬಲದ ಕಳನಂ ಪುಗುತಪ್ಪಲ್ಲಿಯಭಿನಯದಗುರ್ವುಗಳೆಲ್ಲರ ಬಗೆಗೀಯೆ ಬಹಳ ನಯಮಂ ಭಯಮಂ (ಮಹಾಪೇ. ೬-೭೩). [?]

ಪಿಲ್ಲಣಿಗೆ (ನಾ). = ಪಿಲ್ಲಣಿ : "ಪರಿಘಮೆನೆ ಪಿಲ್ಲಣಿಗೆ" (ಮಂಗರಾ. ೯೮-೩೭); ಸೊಕ್ಕಾನೆಯ ಕೆಯ್ಯ ಕರಿಯ ಪಿಲ್ಲಣಿಗೆಯುಮಗುರ್ವುಮದ್ಭುತಮಾಗೆ (ಅರ್ಥಪೇ. ೯-೬೬ ಪ); ಪಿಲ್ಲಣಿಗೆ ಹರಿಗೆ ಚಕ್ರಂ ಭಲ್ಲೆಯಮಸಿತಾದ್ರಿಮುದ್ಗರಂ ಕ್ಷುರಿಕೆಗಳೆಂಬೆಲ್ಲಾ ಶಸ್ತ್ರಮನಾಂತತಿಭುಲ್ಲವದಿಂ ವೀರರದಟಿನಿಂ ಪರಿಯಿಟ್ಟರ್ (ತ್ರಿಪುವಿ. ೬-೬). [ಪಿಲ್ಲಣಿ + —ಗೆ]

ಪಿಲ್ಲಿ₁, ಪಿಲ್ಲೆ (ನಾ). (ಹೆಂಗಸರು) ಕಾಲಿನ ಬೆರಳಿಗೆ ತೊಡುವ (ಉಂಗುರ ದಂತಹ) ಒಂದು ಆಭರಣ : ಮುತ್ತಿನ ದಂಡೆ . . . ಮುತ್ತಿನುಂಗುರಂ ಮುತ್ತಿನ ಪಿಲ್ಲಿಯೆಂಬ ಸದಲಂಕರಣಂಗಳನೆಯ್ದೆ ತೊಟ್ಟು ತಾಂ ಮುತ್ತಿನ ಬೊಂಬೆಯೆಂಬ ಬಗೆಯಂ ನೆಱೆ ಪುಟ್ಟಿಸುತಿರ್ದಳಾಕ್ಷಣಂ (ಬಾರಪು. ೬-೦೦೮); ವರ ಹಸ್ತಕಡಗ ಮಂಟಿಗೆ ಪಿಲ್ಲಿ ಕಾಲುಂಗುರಗಳಿಂ ಕುವರಿಯೊಪ್ಪಿದಳು (ಪಂಪ್ರಸಾಂ. ೯-೦೨); ಪಿಲ್ಲಿ ಕಾಲಿನೋಳೆ ಚೆಲ್ಲಿದ ನೆರಿಗ್ಯೋಳೆ ಕಲ್ಮೇಲೆ ಕಾಲ ತೊಳೆಯೋಳೆ ಲಕ್ಕವ್ವ ಪಿಲ್ಲಿ ಹೊಳೆದವು ಬಿಸಿಲಿಗೆ (ಪಾಪಪ. ೨೩). ಪಿಲ್ಲೆ : ಅಳವಡಿಸಿ ತೋಳ ಬಾಪುರಿ ಬಂದಿ ಭುಜಕೀರ್ತಿಗಳನು . . . ಕಾಂಚಿದಾಮರುಳಿಯುಯಂದಿಗೆ ಪಿಲ್ಲೆ ಮೆಂಟಿಕೆಗಳು (ಪಪಪೋ. ೦೦-೨೫); ಕಾಲ ಕಂಚಿನ ಪಿಲ್ಲೆ ಕಿವಿಯಾಗ್ಹಿತ್ತಾಳಿ ವಾಲಿ . . . ಜಾಣಿ ನೀ ಯಾ ನಾಡದ ಕೊರಿವೇ (ಮುಗ್ಗಿ. ೦೬); "ವಜ್ಜರ ಹಚ್ಚಿದ ವಾಲೆ ಗೆಜ್ಜೆ ಹಚ್ಚಿದ ಪಿಲ್ಲೆ ಹೆಜ್ಜೆ ಹೆಜ್ಜೆಗೆ ನಗಿಸುವ ರಾಯರೊಡನೆ ಮಾಡಿದ ಬಾಳು" ನಿತ್ಯಾನಿತ್ಯಾ ಜ್ಞಾಪಕ ಬಂದು ವಿಧವೆಗೆ ಜೀವನದಲ್ಲಿ ಬೇಸರಿಕೆಯನ್ನು ಹುಟ್ಟಿಸುವುದು (ಪಳ್ಯಾಪಾ. ೬೯).; 'ಕಿಱುಪಿಲ್ಲಿ' ಪರಾ.
[ದೇ.॥ ತಮಿ. ಪಿಲ್ಲಾಣಿ ಪೀಲ; ಮಲ. ಪೀಲಿ; ತುಳು. ಪಿಲ್ಲಿ, ಪಿಲ್ಲೆ ತೆಲು. ಪಿಲ್ಲಾಡಿ, ಪಿಲ್ಲಾಣಿ]

ಪಿಲ್ಲಿ₂ (ನಾ). ಬೆಕ್ಕು : ಮಾನವ ಮುಱಿದು ರಣದಲ್ಲಿ ಪಿಲ್ಲಿಸನ್ನಿಭನಿವನ ಮಾಳ್ಪೆನು (ಕಪಪ. ೯-೩೫). [ದೇ.॥. ತಮಿ. ತೆಲು. ಕೋಲಾ. ನಾಯ್ಕಿ. ಪಿಲ್ಲಿ; ಪರ್ಜಿ. ಬಿಲೆಯ್./ಹಿಂ. ಬಿಲ್ಹಾ, ಬಿಲ್ಲೀ./ಸಂ. ಬಿಡಾಲ]

ಪಿಲ್ಲಿಪೆಸರ, ಪಿಲ್ಲಿಹೆಸರು (ನಾ). ಒಂದು ಬಗೆಯ ಸಸ್ಯ; ಕಾಡುಹೆಸರು ; ಮುದ್ಗಪರ್ಣಿ : ನರಿಹೆಸರು, ಪಿಲ್ಲಿಪೆಸರ (ಪ್ರಾಸಿಗಿ ೬೦-೦೨೫೬). ಪಿಲ್ಲಿಹೆಸರು: "ನರಿಹೆಸರು, ಪಿಲ್ಲಿಹೆಸರು, ವನಮುದ್ಗ" (ಸಸ್ಯಪಿ. ೦೦೯).
[←ತೆಲು. ಪಿಲ್ಲಪೆಸರ]

ಪಿಲ್ಲಿಯುಂಗುರ (ನಾ). = ಪಿಲ್ಲಿ₁ : ಪಿಲ್ಲಿಯುಂಗುರವು ಕಣ್ಗೆಸೆಯೆ ಸಲ್ಲಲಿ ತಾಂಗಿಯ ಕೆಂಬಜ್ಜೆ ಮೆಱೆದುವು ಚೆಲ್ಲುವಂತನುರಾಗರಸವ (ಕರಪ. ೯೦-೬೨).
[ಪಿಲ್ಲಿ₁ + ಉಂಗುರ]

ಪಿಲ್ಲಿಹೆಸರು 'ಪಿಲ್ಲಿಪೆಸರ' ನೋ.

ಪಿಲ್ಲೆ 'ಪಿಲ್ಲಿ₁' ನೋ.

ಪಿಶಂಗ (ಗು). ೧. ಕೆಂಪು ವಿಂಶ್ರಿತವಾದ ಕಂದುಬಣ್ಣದ : ಭಾಸ್ಕರ ತನೂಜೆಯನುಭಯತಟನಿಕಟ ಕುಸುಮನಿವಹ ತತ್ಪರಾಗಪಟಳಪಿಶಂಗತರತ್ತ ರಂಗಸರೋಜೆಯಂ ಮೆಚ್ಚೆ (ಶಂಪಣಾ. ೩-೩೯ ಪ). ೨. ನಸುಕೆಂಪಾದ : ಹರಿನೀಲಾಚಲದಿಂ . . . ಪಿಶಂಗಕಮಳಶ್ರೀಲೀಲೆಯಿಂ ಪಂಚರತ್ನರುಚಿ ವ್ಯಾಪ್ತಿ ನಿರಂತರಂ ನೆಗಟ್ಟಿನು (ಅಪಪು. ೦೦-೨೨). 'ಪಿಶಂಗತಲ' ಪರಾ. (ನಾ). ೩. ಕಂದುಬಣ್ಣ ; ಕಪಿಲವರ್ಣ : "ಪಿಂಗಃ, ಪಿಶಂಗಃ—ಈ ೨ ಕಪಿಲವರ್ಣಂ" (ಹಲಾಯು. ೦೨೦-೫೦); "ಪಿಂಗಳಂ ಕದ್ರು ಕಡಾರ ಚಂಡಸೀಮ ನಸುಗೆಂಪು ಪಿಂಗಂ ಪಿಶಂಗಂ ಕವಿಲು ಶ್ಯಾಮವೆನೆ ಹಸುರುಗೆಂಪದು" (ಮಂಗರಾ. ೦೩೦-೨೦). ೪. ಕೆಂಪು ಬೆರೆತ ಹಳದಿಯ ಬಣ್ಣ ; ಹೊಂಬಣ್ಣ : ನೀರಾಜನದೀಪಕಳಿಕಾಶ್ರೇಣೀತೋಣಾಂಶುಬಾಲಾತಪ ಪ್ರಸರಪಿಶಂಗಮುಂ . . . ಎನಿಸಿ ಗೋವರ್ಧನನಗಂ ಸೊಗಯಿಸೆ (ಪಗವಿ. ೯-೮೨ ಪ); ಒಂದೆಡೆಯಲ್ಲಿ ಮಜ್ಜದಿಭದಾನದ ಕೂಟದಿನೆಯ್ದೆ ಕೃಷ್ಣಮಾಯ್ತೊಂದೆಡೆಯಲ್ಲಿ ವಾರಿಜರಜೋವ್ರಜದಿಂದೆ ಪಿಶಂಗಮಾಯ್ತು . . . ಖಾತಿಕಾವಳಯಮೊಪ್ಪಿ ಮನೋಹರಮಾದುದತ್ತಲುಂ (ಬಾರಪು. ೦-೦೦೬); ಇಂದುಬಿಂಬಂ ಸಾಲಾಗಿಯರುಣಂ ಪಿಶಂಗಮಾಸಿತರುಚಿಗಳೋಲೈಸಿ ಪೂರ್ವಾದ್ರಿಯೆಂಬ ದೇವಗೃಹದ ಮೇಲಿಟ್ಟ ಮಣಿಗಳಸ ಪೊಂಗಳಸ ರಜತಕಳಶಂಗಳೆನೆ ಚೆಲ್ವಾದುದು (ಪಂಪು. ೯-೦೮). [ಸಂ.]

ಪಿಶಂಗತಲ (ನಾ). ನಸುಕೆಂಪುಬಣ್ಣದ ಅಂಗಾಲು : ಬಾಲಕನ ಪಿಶಂಗತಲಂ ಬಾಲಕನ ಸ್ಖಲಿತಚಲನವಿನ್ಯಾಸದ ಲೀಲಾಲಸಮಂ ಕಾಣದ ದುರ್ಲೀಲಮೆನಿಪ್ಪೊಂದು ಜೀವನಂ ಜೀವನಮೇ (ಮುಗ್ಗಿ. ೩-೦೦೬). [ಸಂ.]

ಪಿಶಂಗತೆ (ನಾ). = ಪಿಶಂಗ ೪ : ತುಂಗತೆಯುಂ ಕನಕಾಂಶು ಪಿಶಂಗತೆ ಯುಂದಱಿಯಲಾದುದಿಲ್ಲಱಿಳ ಮರುತ್ತುಂಗವನ ನೆಗೆದ ಭುಜಶಿಖರಂ ಗಳುಮಂ ಮೇರುಶಿಖರಿಶಿಖರಂಗಳುಮಂ (ಇಷಾ. ೯-೧೯). [ಸಂ. ಪಿಶಂಗತಾ]

ಪಿಶಂಗಾಶ್ಮ (ನಾ). ಒಂದು ಬಗೆಯ ರತ್ನ ; ಗೋಮೇದಕ : "ಬಂಧುರ ಪಿಶಂಗಾಶ್ಮವೆನೆ ಗೋಮೇಧಿಕಂ" (ಶುಂಗಾ. ೩೦-೬). [ಸಂ. ಪಿಶಂಗಾಶ್ಮನ್]

ಪಿಶಂಗಿತ (ಗಂ). ಹೊಂಬಣ್ಣದಿಂದ ಕೂಡಿದ : ಕುಸುಮತಿಸಲಯಪರಾಗ ಪಿಶಂಗಿತರಂಗತ್ವರಂಗಮಾದಂತೆ (ಅಜಿಪು. ೬-೦೦೦ ಪ); ಸ್ವಸ್ತಿ ಸಮಸ್ತಮಂಡಳಿಕ-ಮಸ್ತಕಪುಷ್ಪರಜಃಪಿಶಂಗಿತಾಂಘ್ರಿಸ್ತಬಕದ್ವಯಂ (ಶಾಂತಿಪು. ೦೦-೬೯) ; ದಳಿತಾಂಭೋಜರಜಃಪಿಶಂಗಿತಲಸದ್ಗಂಧಾದಿ ತೀರ್ಥೋದಕಂ (ಕಂಪ್ರಪು. ೦೨-೦೦೭). [ಸಂ.]

ಪಿಶನಾರಿ 'ಪಿಸನಾರಿ' ನೋ.

ಪಿಶವಿ 'ಪಿಸಿವಿ' ನೋ.

ಪಿಶಾಚ (ನಾ). ೧. (ಸ್ವಂತವಾದ ಭೌತಿಕಶರೀರವಿಲ್ಲದೆ, ಇತರ ಭೌತಿಕ ಶರೀರಗಳ ಮೂಲಕ ತನ್ನ ಪ್ರಭಾವವನ್ನು ವ್ಯಕ್ತಪಡಿಸುವುದೆಂದು ನಂಬಲಾದ) ಒಂದು ಬಗೆಯ ಅಮಾನುಷಶಕ್ತಿ ; ದೆವ್ವ ; ಭೂತ : ಪಿಶಾಚವೇಷಮುಂ ಕೈಕೊಂಡರಮನೆಯಂಗಣದೊಳಿರ್ದು (ಪಡ್ಮಾಲಾ. ೩೯-೨೩); ನಿಜಜೀವಂ ಪರಲೋಕದೊಳ್ ನಿಜಮಹಾಮಾಂಸಂ ಪಿಶಾಚಾಸ್ಯದೊಳ್ . . . ನಿಜಕಾಯಂ ಕುರುಭೂಮಿಯೊಳ್ ನೆಲಸೆ (ಗದಾಯು. ೫-೫); ಅರ್ವ ಪಿಶಾಚರಬ್ಬರಿಪ ಜಟ್ಟಿಗರುಬ್ಬುವ ಚಂಡಿ ರಕ್ತಮಂ ಪೀರ್ವ ಕರಾಳಿ (ತ್ರಿಪುಪು. ೨೪-೩೬೩) ; ಪಿಶಾಚ ಬಿಟ್ಟರೂ ನಿಶಾಚರ ಬಿಡ (ಗಾಪ). ೨. (ಶ್ಮಶಾನವಾಸಿಗಳಾದ) ಈಶ್ವರನ ಭೂತಗಣ : ಯಿನ್ನದಿಯೊಳ್ ಮುಟುಂಗೆ ಮುಂದಲೆ ಜಡೆಗಟ್ಟಿ . . . ವಾಮತನು ಪೆಣ್ಗೆಡೆಯಾಗಿ ಪಿಶಾಚಸಂಗಮಗ್ಗಳಿಸಿರೆ ಪುಟ್ಟುಪೊಂದಿಗೆಡೆಯಲ್ಲದೆ ತೋರ್ಪರಿದಲ್ತೆ ವಿಸ್ಮಯಂ (ಪಕಳಾ. ೯-೬). ೩. ದೇವಯೋನಿಗಳಲ್ಲಿ ಒಂದು ವರ್ಗ : "ಕಿನ್ನರರು ಗಂಧರ್ವರಪ್ಸರರು . . . ಪಿಶಾಚರು . . . ಭೂತನಾಮಿಗಳು ದೇವ ಯೋನಿಗಳೆನಿಕ್ಕುಂ" (ಶುಂಗಾ. ೦೭-೦೭); ಹರಿ ನುಡಿದನಂದು ಪಿಶಾಚ ಗುತ್ತರವ (ಪಭಾಗ. ೦೦-೬೦-೨೬); ತಮೋಯೋಗ್ಯರಲ್ಲಿ ದೈತ್ಯ, ರಾಕ್ಷಸ, ಪಿಶಾಚ, ಮನುಷ್ಯಾಧಮ ಎಂದು ನಾಲ್ಕು ಪ್ರಕಾರಗಳು (ಹಂದಸಾ. ೨೫೬). ೪. ಒಂದು ಜನಾಂಗದ ಹೆಸರು : ಆರ್ಯರು ವಾಯವ್ಯಪ್ರಾಂತದಲ್ಲಿ ಪಿಶಾಚರೆಂಬ ಜನರೊಡನೆ ಕಾದಾಡಬೇಕಾಯಿತು (ಭಾಇಪ್ರ. ೫೫). [ಸಂ.]

ಪಿಶಾಚಕೋಶಾತಕಿ (ನಾ). ಒಂದು ಬಗೆಯ ಸಸ್ಯ ; ಕಹಿಹೀರೆ : "ಪಿಶಾಚಕೋಶಾತಕೀ-ಕಹಿಹೀರೆ" (ಲಿಸಂ. ೧೯). [ಸಂ. ಪಿಶಾಚಕೋಶಾತಕೀ]

ಪಿಶಾಚಗ್ರಹ (ನಾ). ದೆವ್ವದ ತೊಂದರೆ ; ಭೂತದ ಕಾಟ: ಪ್ರಲಾಪ ಉಂಟಾಗಿಹಣ, ನಿಷ್ಠುರಭಾಷೆಯನಾಡುವಣ, ಭಯಂಕರವಾಗಿಹಣ . . . ಮಲಿನವಾಗಿಹಣ, ಜಿತೇಂದ್ರಿಯನಾಗಿಹಣ, ಹೀಗಿದ್ದರೆ ಪಿಶಾಚಗ್ರಹ ವೆಂದಱಿವುದು (ಸ್ಕಂಪುಶಾ. II. ೬೬). 'ದೇವಗ್ರಹ' ಪರಾ. [ಸಂ.]

ಪಿಶಾಚಪ್ರಾಪ್ತ (ನಾ). ಪಿಶಾಚಿ ಹಿಡಿದವನು ; ದೆವ್ವ ಮೆಟ್ಟಿಕೊಂಡ ವನು : ಗುರು ಲಗ್ನಸ್ಥಿತನಾಗೆ . . . ಮೇಣ್ ತ್ರಿಕೋಣಗೃಹದೊಳ್ ಪಾಪಗ್ರಹಂಗಳ್ ಸುಧಾಕಿರಣಂ ಕರ್ಕಿ ವಿಲಗ್ನದೊಳ್ ನಿಲೆ ಪಿಶಾಚಪ್ರಾಪ್ತ ನಕ್ಕುಂ ನರಂ (ಜಾತಕ. ೨೦-೦೬). [ಸಂ.]

ಪಿಶಾಚಬಾಧೆ (ನಾ). = ಪಿಶಾಚಗ್ರಹ : ಜನನಕಾಲದಲ್ಲಿ ಗುರು ಲಗ್ನದಲ್ಲೂ ಪಳೆಯ ಸ್ಥಾನದಲ್ಲಿ ಅಂಗಾರಕನೂ ಇದ್ದರೆ . . . ಜಾತಕನಿಗೆ ಪಿಶಾಚಬಾಧೆ ಇರುತ್ತದೆ (ಜಾತಕ. ೨೦-೦೬ ಅಡಿಟಿ). [ಸಂ. ಪಿಶಾಚಬಾಧ]

ಪಿಶಾಚಲಿಪಿ (ನಾ). ಒಂದು ಬಗೆಯ ಲಿಪಿ : ಜಲಲಿಪಿ ಪಿಶಾಚಲಿಪಿ . . . ಈ ಅಗಣಿತಲಿಪಿಗಳ ನೋಡಲಱಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳ ಗೊಳುತಿದ್ದರು ವಿದ್ವಾಂಸರುಗಳೆಲ್ಲ (ಶಾಸ್ಕರ. ೬೬-೯). [ಸಂ.]

ಪಿಶಾಚಶೈಲ (ನಾ). ಶೈಲೇಂದ್ರ, ದ್ವಿಶಿಖರ, ಮಹಾಶೈಲ, ಗಜಶೈಲ, ಪಿನಾಕಶೈಲ, ಪಿಶಾಚಶೈಲ, ಪಂಚಶೈಲ, ಕೈಲಾಸ, ವಾಸೋತ್ತರ ಮತ್ತು ಹಿಮಾದ್ರಿ ಎಂಬ ಹತ್ತು ಕುಲಪರ್ವತಗಳಲ್ಲಿ ಒಂದು ; P ಕುಲಪರ್ವತಗಳ ಸಂಖ್ಯೆ ಮತ್ತು ಹೆಸರುಗಳ ಬಗ್ಗೆ ಪ್ರಾಚೀನಕವಿ ಗಳಲ್ಲಿ ಭಿನ್ನಾಭಿಪ್ರಾಯಗಳಿವೆ : ಶೈಲೇಂದ್ರ . . . ಪಿಶಾಚಶೈಲ . . . ಹಿಮಾದ್ರಿಗಳೆಂಬ ದಶಕುಲಪರ್ವತಂಗಳೇ ಪೂರ್ವೋಕ್ತ ಗಂಧಮಾದನ ವೆಂಬ ಕೀಲಕಪರ್ವತಕ್ಕೆ ತೆಂಕಣದಿಕ್ಕಿನಲ್ಲಿಹವು (ಪಕೀಲ. ೨೦೩). [ಸಂ.]

ಪಿಶಾಚಸತ್ವ (ನಾ). [ಕಾಮಶಾ] (ಸ್ತ್ರೀಯರ) ಹನ್ನೆರಡು ಬಗೆಯ ಸ್ವಭಾವಗಳಲ್ಲಿ ಒಂದು ; ತಮೋಗುಣಪ್ರಧಾನವಾದ ಸ್ವಭಾವ : ಅಸಿಯ ನಡುವಿನ ಮಿಸುಗುವೆಸಳ್ಗಣ್ಣ ಪಿರಿದುಂಬ ಬಿಸುಮೆಯ್ಯ ಮದ ಮಾಂಸ ಪ್ರೀತಿಯ ಪುಸಿಗೇಳ್ವರುಳ್ ತೊಳಲ್ವ ಸುನಿರದೆ ಲಜ್ಜೆಯಳಿದೆಸವಳ ಪಿಶಾಚಸತ್ವದವಳ್ (ಇಪಸ. ೫-೩೯); ದೇವಸತ್ವ ಯಕ್ಷಸತ್ವ . . . ಪಿಶಾಚಸತ್ವ ರಾಕ್ಷಸಸತ್ವ ಕಿನ್ನರಸತ್ವ ಖಚರಸತ್ವವೆಂಬ ದ್ವಾದಶಸತ್ವಸತಿಯರಿಂ (ಪಕೀಲ. ೦೦೩). 'ದ್ವಾದಶಸತ್ವ' ಪರಾ. [ಸಂ.]

ಪಿಶಾಚಸ್ತ್ರೀ (ನಾ). ೧. ಹೆಣ್ಣು ಪಿಶಾಚಿ. ೨. [ಕಾಮಶಾ] ಸ್ತ್ರೀಯರಲ್ಲಿ ಒಂದು ಬಗೆ ; ತಮೋಗುಣಪ್ರಧಾನವಾದ ಸ್ವಭಾವವುಳ್ಳವಳು : ಲಜ್ಜೆಗೆಟ್ಟವಳು ಹಿರಿದನುಂಬುವಳು ದೇಹಮುಂ ಬಿಸುಪಾದವಳು ಮದ್ಯ ಮಾಂಸವನುಂಬಳು ಇವಳು ಪಿಶಾಚಸ್ತ್ರೀ (ಕಾಮಶಾ. ೨೦೬). [ಸಂ.]

ಪಿಶಾಚಿ$_1$ (ನಾ). ಹೆಣ್ಣು ದೆವ್ವ : "ಪಿಶಾಚೀ, ಪಿಶಾಚಿಕಾ, ಈ ೨ ಹೆಣ್ದೆವ್ವ" (ಶಾಕಶ. ೨೦೯); ರಕ್ಕಸಿಯುರಾಶಾಪಿಶಾಚಿಯುರಿಚ್ಛಿಗಾತಿಯುರು (ಇಷಾ. ೯೦-೫೨). [ಸಂ. ಪಿಶಾಚೀ]

ಪಿಶಾಚಿ$_2$ (ನಾ). = ಪಿಶಾಚ ೧ : ಅರ್ವ ಪಿಶಾಚಿಯರ್ಕಳನಸುಂಗೊಳೆ ಬೇವ ಪೆಣಕ್ಕೆ ಕೋಪದಿಂ ಪೋರ್ವ ಮರುಳ್ಗಳಂ . . . ಈಕ್ಷಿಸಿದಂ ಪ್ರತಿರೂಪಶೂದ್ರಕಂ (ಶಾಸ್ಕಾ. ೫೩೯); ಬೆನ್ನು ಬಿಡದ ಪಿಶಾಚಿ ಹೊನ್ನು ಕೊಟ್ಟರೆ ನಿಂತೀತೇ? (ಗಾಪ). [ಸಂ.]

ಪಿಶಾಚಿಕೆ$_1$ (ನಾ). (ಆಲಂ) ದುಷ್ಟತನ ; ಕ್ರೌರ್ಯ : ನಾವನಾರ್ಯರು ಮೆಸಗದೀ ಪಿಶಾಚಿಕೆಯನಕಟೆಸಗಿದಿರೆ? (ಹರ್ಷ. ೫೫-೦೯). [ಪಿಶಾಚ + — ಇಕೆ]

ಪಿಶಾಚಿಕೆ$_2$ (ನಾ). ೧. ಹೆಣ್ಣುದೆವ್ವ : "ಪಿಶಾಚೀ, ಪಿಶಾಚಿಕಾ, ಈ ೨ ಹೆಣ್ದೆವ್ವ" (ಶಾಕಶ. ೨೦೯). ೨. ಒಂದು ಬಗೆಯ ಸಸ್ಯ ; ಕಾಸರಿಕೆ : "ಪಿಶಾಚಿಕಾ—ಕಾಸರಿಕೆ, ನಸುಗುನ್ನಿ, ಮರುಳಿ" (ಲಿಸಂ. ೧೯). [ಸಂ. ಪಿಶಾಚಿಕಾ]

ಪಿಶಿತ (ನಾ). ೧. ಮಾಂಸ ; ಬಾಡು ; ಅಡಗು: "ಪಲಲಂ, ಜಾಂಗಲಂ . . . ಪಿಶಿತಂ, ಆಮಿಷಂ, ಕ್ರವ್ಯಂ, ತರಸಂ, ಈ ೮ ಮಾಂಸಂ" (ಜಲಾಯು. ೦೦೯-೯) ; ಆತನುಂ ನಾಲಗೆಯಿಂದಂ ಪಿಶಿತದ ಖಂಡಮುಂ ಬಾಯೊಳಿಡೆ (ಪಡ್ಮಾಲಾ. ೨೦-೦) ; ಸೀಳ್ದೊಟ್ಟಿಂ. ವೈರಿಯನೊಡ್ಡಿ ತತ್ಪಿಶಿತದಿಂದಾತಂಗೆ ನೀಂ ಕೂರ್ಪೊಡೇಗೆಟ್ಟತ್ತಿನ್ನಡೆ ಮಾಡು ತದ್ವಿಷಜಗಣಕ್ಕಾಹಾರಮಂ ಭೂಪತೀ (ಪಂಪಭಾ. ೦೬-೬೦) ; ಧುರದೆಡೆ . . . ಕರುಳ್ಗಳೆ ತೋರಣಂ ಪಿಶಿತದೊಬ್ಬುಳಿಗಳ್ ನೆರಪರ್ದ ಬುತ್ತಿ ನೆತ್ತರೆ ಜಳಮಾಗಲಂತು . . . ಉಣಾತಿರ್ದುವು ಭೂತಸಂಕುಳಂ (ತ್ರಿಪುಪು. ೨೪-೩೬೯). ೨. ಮಾಂಸದ ಅಡುಗೆ ; ಪಾಕ : ನಡುಪಿರುಳ್ಪೋಗಿ ಪಣಜರನೊಟ್ಟಯ್ಸಿ ಮಂಚಿಸಿ ಕುಱಿದಂದೆನೆಂದನೊರ್ವಂ ಪಿಡಿದು ತಂದಿತ್ತ ಕುಱಿಯಾನಾನುಱ್ ಕೊಂದು ಪಿಶಿತಮಂ ಮಾಡಿದೆನೆಂದ ನೊರ್ವಂ (ಸುಳುಪಾ. ೬—೦೩). [ಸಂ.]

ಪಿಶಿತಖಂಡ (ನಾ). ಮಾಂಸದ ಚೂರು : ಬಿಸುನೆತ್ತರುಮಂ ಕಂಡ ದಿಂಡೆಯುಮಂ ಕಂಡು ಕ್ಷುಧಾರ್ತನಪ್ಪದೊಂದು ಮೃಗಧೂರ್ತಂ ಪಿಶಿತ ಖಂಡಕ್ಕೆ ಸಾರ್ದು (ಪಂಪಕಂ. ೬೨-೦೬). [ಸಂ.]

ಪಿಶಿತಭೋಜನ (ನಾ). ಮಾಂಸದ ಊಟ : ಪಿಶಿತಭೋಜನದಲ್ಲಿಗೆ ನಿಲ್ಲ ದೆಕ್ಕೆಯಿಂ ಸಾರ್ವ ನಿಶಾಚರೀಜನಮಂ . . . ಈಕ್ಷಿಸಿದಂ ಪ್ರತಿರೂಪ ಶೂದ್ರಕಂ (ಕಾಪ್ಯಸಾ. ೫೩೪). [ಸಂ.]

ಪಿಶಿತಾಶ (ನಾ). ೧. ಮಾಂಸವನ್ನು ಭಕ್ಷಿಸುವವನು ; ಮಾಂಸಭಕ್ಷಕ : ಕಡುಭಕ್ತರ್ಪಿಶಿತಾಶರಪ್ಪರಸುಗಳ್ ಮರ್ತ್ಯರ್ಕೆಲರ್ಮಾಂಸದಿಂದೊಡ ಗೂಡಿರ್ದ ನಿವೇದ್ಯಮಂ . . . ಕುಡರೇ (ಪಸಾರ. ೨೯೫). ೨. ರಾಕ್ಷಸ ; ನಿಶಾಚರ : ಯಮಪಾಶದಿಂ ಪಾಪಕರ್ಮಂ ಮೊದಲೆ ಬಿಗಿದ ಪಿಶಿತಾಶರಂ ತೇಜಸ್ವಿ ರಾಮನ್ . . . ಸಂಹರಿಸಿ ಧರ್ಮಲಾಭಕೆ ಯಶೋದೀಪ್ತಿಯಂ ಮೆರೆವನಯ್ (ಶ್ರೀರಾಮಾ. ೨೯-೨೦) ; ಕೀಸಿದಾ ಕೂರಂಬುಗಳಿಗೊಂದಿನಿತೆ ಘಾಸಿಯಾಗುತ್ತೆ ಪಿಶಿತಾಶನುರಿದೆದ್ದನ್ (ಶ್ರೀರಾಮಾ. ೦೯೦-೦೫೦). [ಸಂ.]

ಪಿಶಿತಾಶನ (ನಾ). ೧. ಮಾಂಸವನ್ನು ತಿನ್ನುವುದು. ೨. ಪಿಶಾಚಿ. ೩. ರಾಕ್ಷಸ : ಪಿಶಿತಾಶನನು ಕಂಗಳ ಮುಚ್ಚಿ . . . ವಿವರಿಸಿದ (ಪಿಭಾಗ. ೦೦-೬೦-೨೯). [ಸಂ.]

ಪಿಶಿತಾಶಿ (ನಾ). ೧. = ಪಿಶಿತಾಶ ೧ : ವಸುಧಾಜನಂಗಳೆಲ್ಲಂ ಮಸಣ ಮದೆಂದೊಡೆ ಭಯಸ್ಥರಪ್ಪರದೇಂ ಪೇಟ್ ಪಿಶಿತಾಶಿಯ ತನುವಂತದೆ ಮಸಣಂ ಮಸಣಕ್ಕೆ ಬೇಱೆ ಕೋಡೆರಡೊಳವೇ (ಪಸಾರ. ೨೯೭). ೨. ರಾಕ್ಷಸ. ೩. ನೈಋತ್ಯದಿಕ್ಕಿನ ಅಧಿಪತಿ ; ನಿರುತಿ : ಇಂದ್ರನ ಮುಂದುಗೆಡಿಸಿ . . . ಪಂದೆಯೆನಿಸಿ ಯಮನನು ಪಿಶಿತಾಶಿಯ ತಂದನು ಪಿಡಿಯಾಳಾಗಿ (ಕ್ರಿಪುಸಾಂ. ೬೬೫). ೨, ೩ : ಎನಗೆ ವಿಜಾತಿ ಕೌಶಿಕನುಮಿಾ ತೃಣಕಾಷ್ಠಸಮೂಹಭೋಜಿಯಾಯನಲನನಾರತಂ ಕೊಲುವ ನಿರ್ಘೃಣ (ನೀ) ಪಿಶಿತಾಶಿ ದೈತ್ಯನೀ ವನಧಿಯೊಳಿರ್ಪ ಜಂಬುಕನುಮಿಾ ಸಲೆ ಚಂಚಳನಪ್ಪ ವಾಯುವೀ ಧನಪತಿಯಪ್ಪ ತದ್ಧನದನೀ ಬಡಭೌತಿಕನುಂ ಸಮಾನರೇ (ಶೇಖಪು. ೨-೦೦೪). [ಸಂ. ಪಿಶಿತಾಶಿನ್]

ಪಿಶಿತಾಹಾರ (ನಾ). = ಪಿಶಿತಭೋಜನ : ಮೃದುಪಿಶಿತಾಹಾರಮಂ ಪಡೆದುಂ ಮೆಚ್ಚಿ ಕರುಣಿಸಿ ತಿನಲೊಲ್ಲದೆ ಕಾದು ಕಟಿಪಿದ ರಕ್ಕಸಂಗೆ ಮಿಕ್ಕವರುಳ್ಳೊಡೆ ಪೇಟ್ಮೆಂದಂ (ಸುಕುಮಾ. ೬-೨೬ ಪ). [ಸಂ.]

ಪಿಶಿತೆ (ನಾ). ಒಂದು ಬಗೆಯ ಔಷಧೀದ್ರವ್ಯ ; ಜಟಾಮಾಂಸಿ : "ಜಟಾಮಾಂಸಿ ಪಿಶಿತೆಯೆನಿಕ್ಕು" (ಮಂಗರಾ. ೪೩-೪೦). [ಸಂ. ಪಿಶಿತಾ]

ಪಿಶುನ (ನಾ). ೧. ತಿಳಿಯುವಂತೆ ಮಾಡುವುದು ; ಸೂಚಿಸುವಿಕೆ ; ಸ್ಪಷ್ಟಗೊಳಿಸುವುದು. ೨. ಸೂಚನೆ ; ಚಿಹ್ನೆ : 'ಸಂಗರಪಿಶುನ' ಪರಾ. ೩. ಚಾಡಿ ಹೇಳುವಿಕೆ ; ದೂರುವಿಕೆ : ಇದು ಅತಿಶಯೋಕ್ತಿ ಎಂದು ಕೆಲವು ಪಿಶುನಪ್ರವೀಣರು ಹೇಳಿ ಹಾಸ್ಯ ಮಾಡಿದಾಗ್ಯೂ . . . ಚಿಂತೆ ಇಲ್ಲ (ಮುಸುಗ. ೩೬). ೪. ಚಾಡಿ ಹೇಳುವವನು; ಚಾಡಿಕೋರ : "ಕರ್ಣೇಜಪಃ, ಸೂಚಕಃ, ಪಿಶುನಃ – ೩ ಚಾಡೀ ಹೇಳುವವನು, ಕ್ಷುದ್ರಗಾರ" (ನಿಡ್ಡಾಂತಿ. ೩೮೬) ; ನಿಶ್ಚಿತಮಿದೆನಗೆ ಸಕಲವಚಶ್ಚತುರ ಜನೋಪದೇಶದಿಂ ಪಿಶುನವಚೋವೃಶ್ಚಿಕವಿಷಹರಮಖಿಳವಿಷಶ್ಚಿನ್ನುತಿಮಂತ್ರ ಮೆಂಬುದಿನ್ನುಂ ಮುನ್ನುಂ (ಲೀಲಾವ. ೦-೦೪) ; ಕೊಂಡೆಯುಮಂ ಕೇಳಲ್ ಮನಂದರಲ್ ಪಿಶುನರ್ ಪೊರ್ದಿಯಿಂತೆಂದರ್ (ದಶಕು. ೯-೭೩ ಪ). ೫. ನೀಚ ; ದುಷ್ಟ ; ಕ್ರೂರಿ : "ಪಿಶುನಃ—೧ ದುರ್ಜನ, ಚಾಡೀ ಕೋರ" (ನಿಡ್ಡಾಂತಿ. ೪೦೪) ; ಸತ್ತುಂ ಪಿಶುನಂ ಪೆಱರ್ಗಾಪತ್ತಂ ಮಾಡ ದಿರನೆಂದು ಮಱುಗಿದವುದು ಮಚ್ಚಿತ್ತಂ (ಲೀಲಾವ. ೦-೩೭) ; ನಿಷ್ಠುರಿಗಳಿಗೆ ಪಿಶುನ[ಶಾಣಾಂ.ಣ]ರಿಗಯೋಗ್ಯರಿಗಿದನು ಪೇಳದಲೆ . . . ಪರಮ ಭಗವದ್ಭಾಸರಿಗೆ ತಿಳಿಸುವುದು ಈ ರಹಸ್ಯ (ಹಸಾರ. ೦೩-೩೨) ; ತಂದೆ-ತಾಯಿ, ಬಂಧು, ಗುರು ಇವರನ್ನು ದ್ವೇಷಿಸುವವರೂ ಆದ ಪಿಶುನರು ಶೋಚನೀಯರಾಗಿರುವರು (ಕುಳಸೀ. ೧೬೨). ೬. ಕುಂಕುಮಕೇಸರಿ ; ಕೇಶರ : "ಪಿಶುನ–ಕುಂಕುಮ, ಕೊಂಡೆಯನು" (ಓಷಂ. ೧೭). [ಸಂ.]

ಪಿಶುನತ್ವ (ನಾ). ಚಾಡಿ ಹೇಳುವುದು; ದೂರು ಹೇಳುವಿಕೆ. [ಸಂ.]

ಪಿಶುನೆ (ನಾ). ಒಂದು ಬಗೆಯ ಸಸ್ಯ ; ಸಂಕೇಬೇರು : "ಮರುನ್ಮಾಲಾ . . . ಪಿಶುನಾ, ಸ್ಪೃಕ್ಕಾ . . . ಕೋಟಿವರ್ಷಾ, ಲಂಕೋಯಿಕಾ . . . ೧೦ ಸ್ಪೃಕ್ಕೆಯೆಂಬ ಗ್ರಂಧ್ಯದ್ರವ್ಯ, ಸಂಕೇಬೇರು" (ನಿಡ್ಡಾಂತಿ. ೦೪೩). [ಸಂ. ಪಿಶುನಾ]

ಪಿಷ್ಟ (ನಾ). ೧. (ಧಾನ್ಯ ಮೊದಲಾದುವುಗಳ) ಹಿಟ್ಟು ; ಪುಡಿ : "ಪಿಟ್ಟದು ಪಿಷ್ಟಂ ಚೂರ್ಣಿತು" (ವಸ್ತುಕೋ. ೧೫-೨೦) ; ಅಂತು ಧರ್ಮತೀರ್ಥಪ್ರವರ್ಧ ನಂಗೆ ಸುಗಂಧಶುಷ್ಕಚೂರ್ಣ ಪಿಷ್ಟದಿನುದ್ವರ್ತನವಿಧಿಯಂ ನಿರ್ವರ್ತಿಸಿ (ಅಕಪು. ೪-೬೮ ಪ) ; ಪಿಷ್ಟ – ಹಿಟ್ಟು (ಶಮದ. ೨೬೮ ಪ್ರಯೋ). ೨. ಅಕ್ಕಿ, ಗೋಧಿ, ರಾಗಿ ಮೊದಲಾದ ಧಾನ್ಯಗಳ ಹಿಟ್ಟಿನಿಂದ ತಯಾರಿಸಿದ ಆಹಾರಪದಾರ್ಥ. ೩. ಒಂದು ಬಗೆಯ ಲೋಹ ; ಸೀಸ. ೪. ರಾಸಾಯನಿಕವಾಗಿ 'ಕಾರ್ಬೋಹೈಡ್ರೇಟ್' ಎಂದು ನಿರ್ದೇಶಿ ಸುವ ವಸ್ತು,–ಅಂಶ: ಧಾನ್ಯಗಳು ಮತ್ತು ಆಲೂಗಡ್ಡೆ, ಮರಗೆಣಸು, ಗೆಣಸು ಮೊದಲಾದ ಗೆಡ್ಡೆಗೆಣಸುಗಳಲ್ಲಿ ಬಹಳ ಪ್ರಮಾಣದಲ್ಲಿ ಪಿಷ್ಟವಿದೆ (ಅಡುಸಾ. ೫೮). [ಸಂ.]

ಪಿಷ್ಟಕುಟ್ಟ (ನಾ). [ನಾಟ್ಯ] ಭ್ರಮರ, ಆಸ್ಕಂದಿತ, ಆವರ್ತ, ಶಕಟಾಸ್ಯ, ಅಡ್ಡಿತ, ಸಮೋಸರಿತ, ಅಧ್ಯರ್ಧಿಕ, ಏಲಕಾಕ್ರೀಡಿತ, ಪಿಷ್ಟಕುಟ್ಟ ಮತ್ತು ಚಾಷಗತಿ ಎಂಬ ಹತ್ತುಬಗೆಯ ಭೌಮ ಮಂಡಲಗಳಲ್ಲಿ ಒಂದು ; ೫ ಸೂಚಿ, ಅಪಕ್ರಾಂತ, ಭುಜಂಗತ್ರಾಸಿತ ಗಳೆಂಬ ಚಾರಿಗಳನ್ನು ಕ್ರಮವಾಗಿ ಮಾಡಿ, ಮಂಡಲಾಕಾರವಾಗಿ ಸಂತ್ತುವುದು : ಬಲ[ಪದ]ದೊಳ್ ಸೂಚಿಯನೆಡಗೆಲದೊಳಪಕ್ರಾಂತ ಚಾರಿಯಂ ಬಲನೆಡದೊಳ್ ಸಲೆ ಭುಜಗತ್ರಾಸಿತಮಂ ವಿಲಸಿತದಿಂದೆಸೆವ ಮಂಡಲಭ್ರಾಂತಿಯುಮಂ ಕವೆಯೊಳ್ ಸಮೆಯಲ್ ಕೇಳಿದು ಬಿಡದೆಸೆವೀ ಪಿಷ್ಟಕುಟ್ಟಮಂಡಲಮೆನಿಕುಂ (ಲಾಸ್ಯರಂ. ೬-೩೦). [ಸಂ.]

ಪಿಷ್ಟಚರ್ಚೆ (ನಾ). ಹಿಟ್ಟಿನ ರಂಗವಲ್ಲಿ,—ರಂಗೋಲೆ : ಮುನಿಕುಮಾರಿ ಯರಿಕ್ಕಿದ ಪಿಷ್ಟಚರ್ಚೆಯಿಂ . . . ಎಸೆದು ತೋಱದುದಾಗಳತೋಕಭೂರುಹಂ (ಕಾಪಂಪೂ. ೨೨೬). [ಸಂ. ಪಿಷ್ಟಚರ್ಚಾ]

ಪಿಷ್ಟಪಚನ (ನಾ). (ಧಾನ್ಯದ) ಹಿಟ್ಟನ್ನು ಬೇಯಿಸಲು ಉಪಯೋಗಿ ಸುವ ಪಾತ್ರೆ : "ಋಂಜೀಷಂ, ಪಿಷ್ಟಪಚನಂ—೨ ಬಾಣಲಿ, ಗಾದಿಗೇ ಮುಚ್ಚಳ, ಕಡುಬುಮುಚ್ಚಳ, ಹಿಟ್ಟು ತೊಳಸುವ ಬಾನೆ". (ನಿಡ್ಡಾಂತಿ. ೨೮೩) [ಸಂ.]

ಪಿಷ್ಟಪದಾರ್ಥ (ನಾ). 'ಕಾರ್ಬೋಹೈಡ್ರೇಟ್'ನ ಅಂಶವು ಹೆಚ್ಚಾಗಿರುವ ಪದಾರ್ಥ : ಜೀರ್ಣಶಕ್ತಿ ಕಡಿಮೆಯಾಗಿರುವವರಿಗೆ ಪಿಷ್ಟ ಪದಾರ್ಥಗಳು ಅನಾರೋಗ್ಯಕಾರಿ (ತರಪ. ೬೦). [ಸಂ.]

ಪಿಷ್ಟಪೇಷಣ (ನಾ). ೧. ಹಿಟ್ಟನ್ನು ಪುನಃ ಪುಡಿ ಮಾಡುವುದು. ೨. (ಆಲಂ) ಮಾಡಿದುದನ್ನೇ ಮಾಡುವಿಕೆ : ಉಪಯೋಗವಿಲ್ಲದ ಕೆಲಸಮಾಡುವುದು ; ವ್ಯರ್ಥವಾದ ಪುನರಾವೃತ್ತಿ : ನಿಚ್ಚಮಿಾ ಪಿಷ್ಟ ಪೇಷಣಮಿಾ ಚರ್ವಿತಚರ್ವಣಂ ಸುಖಮಿದೇಂ ನಿನ್ನಂ ಮರುಳ್ ಮಾಡಿತೋ (ಆದಿಪು. ೩-೬೯) ; ಉಣಸಿಂ ತಂಬುಲದಿಂ ಭೂಷಣ ಗಣಿಕಾಗಾನ ವಸ್ತ್ರ ಮಾಲ್ಯಾದಿಗಳಿಂ ತಣಿಯೆನಣಂ ಚರ್ವಿತಚರ್ವಣಮಾ ಪಿಷ್ಟಪೇಷಣಕ್ಕಂ ಮೂಢಂ (ಸಮಪ. ೬-೩೦) ; ಇವನ ಕವನಗಳಲ್ಲಿ ಪಿಷ್ಟಪೇಷಣವಿರಲಿಲ್ಲ (ಉರ್ಮಪಾ. ೦೦೫) ; ದೇವಸುತರಿಗೆ ನರರ ಬಾಂಧವ್ಯವೆಂತಹುದು ? ಪಿಷ್ಟಪೇಷಣವೇಕೆ ? (ಭಾಸನಾ. ೪೪). 'ಚರ್ವಿತ ಚರ್ವಣ' 'ತವಡುಕುಟ್ಟು' ಪರಾ. [ಸಂ.]

ಪಿಷ್ಟಾತ (ನಾ). (ಆವರಣ, ವಸ್ತ್ರ ಮುಂತಾದುವುಗಳನ್ನು ಸುವಾಸನೆಯಿಂದ ಕೂಡಿರುವಂತೆ ಮಾಡಲು ಬಳಸುವ) ಸುಗಂಧಯುಕ್ತವಾದ ಪುಡಿ ; ಬುಕ್ಕಿಹಿಟ್ಟು : "ಪಿಷ್ಟಾತಃ, ಪಟವಾಸಕಃ — ೨ ಬಟ್ಟೆಗಳಿಗೆ ಪರಿಮಳ ಕಟ್ಟುವ ಗಂಧದ್ರವ್ಯದ ಹೆಸರು" (ಸಿದ್ಧಾಂತಿ. ೨೦೦). 'ಪಟವಾಸ' ಪರಾ. [ಸಂ].

ಪಿಷ್ಟಾತಕ (ನಾ). = ಪಿಷ್ಟಾತ : ಜಗತ್ಕುಶೇಶಯನಿವಾಸಿನೀಪ್ರಮದ ಮುಷ್ಟಿಪಿಷ್ಟಾತಕಂ ವಿಶಾಲತರತುಂಗಸೌಧತಳಸಂಗಿಪೌರಾಂಗನಾವಶೀಕರಣ ಚೂರ್ಣಮಾದುದು ಬಳೌಘಧೂಳೀಚಯಂ (ಅಂಪು. ೦೦-೦೩) ; ಕೆದಱಿದ ಪಿಷ್ಟಾತಕದಿಂದೊದವಿದ ಪಟವಾಸಚೂರ್ಣದಿಂ . . . ಪದೆಪಂ ಪುಟ್ಟಿಸಿದುದಿಟ್ಟಳಂ ನೃಪಸದನಂ (ಪಂಡಾಪು. ೯-೨೭); ಪಿಂಜರಿತಪಿಷ್ಟಾತಕಂ ದೆಸೆದೆಸೆಗೆ ಪಸರಿಸೆಯುಂ (ಪಂದ್ರಪು. ೦೨-೩೩ ಪ). [ಸಂ.]

ಪಿಷ್ಟಾತಕಕೇಳಿ (ನಾ). (ಉತ್ಸವಸಂದರ್ಭಗಳಲ್ಲಿ) ಸುವಾಸನೆಯ ಪುಡಿಯನ್ನು ಪರಸ್ಪರ ಎರಚುವಿಕೆ : ದಿವಿಜೇಂದ್ರವೃಂದಂಬೆರಸಿಂದ್ರ ನೊಸಗೆ ಮರುಳ್ಗೊಂಡು ಪಿಷ್ಟಾತಕಕೇಳೀವಿಧಾನಾನಂತರಂ (ಶಾಂತಿಪು ೦೦-೬೯ ಪ). [ಸಂ. ಪಿಷ್ಟಾತಕಕೇಳಿ]

ಪಿಷ್ಟಾತಕಚೂರ್ಣ (ನಾ). = ಪಿಷ್ಟಾತ : ದಿಕ್ಪಾಲಕರ ಕೆದಱುವ ಪಿಷ್ಟಾತಕಚೂರ್ಣಮೆನಿಸುವ ರಜಃಪುಂಜಮುಮಂ . . . ನೋಡುತ್ತುಂ ನಡೆಯೆ (ಅಂಪು. ೦೩-೪೪ ಪ) ; ಕಾಮಸಾಮ್ರಾಜ್ಯದೊಸಗೆಯೊಳ್ ಪಸರಿಸಿದ ಪಿಷ್ಟಾತಕಚೂರ್ಣವಂತೆ ಮಂದಮಾದ ಪೊಂದಾವರೆಯ ರಜದೊಳಂ (ಪುಲ್ಲಪು. ೨-೩೨ ಪ) ; ಕೆದಱಿದ ಪಿಷ್ಟಾತಕಚೂರ್ಣದೊಳ ಪಟವಾಸಚೂರ್ಣದೊಳಮಷ್ಟದಿಶಾವದನಮುಮಾ ನಭಮುಂ ಪಡೆದುದು ನಾನಾವರ್ಣರುಚಿರರಚನಾಚ್ಛವಿಯಂ (ಪುಷ್ಕಪು. ೯-೩೨). [ಸಂ.]

ಪಿಷ್ಟಿ (ನಾ). ಪುಡಿ ; ಹುಡಿ ; ಚೂರ್ಣ : ಕ್ರಿಮಿ ಮೇಣ್ ಭಸ್ಮಂ ಮೇಣ್ಪಿಷ್ಟಿ ಮೇಣ್ ಶರೀರಕ್ಕೆ ನಿಟ್ಟೆಯಿಾ ದೊರೆಯಿದಱೊಳ್ ಕಮನೀಯಮೊಂದುಮಿಲ್ಲ (ಅಪಪು. ೨-೩೩). [ಸಂ.]

ಪಿಷ್ಟೋದಕ (ನಾ). ಹಿಟ್ಟಿನೊಡನೆ ಬೆರಸಿದ ನೀರು : ಪಿಷ್ಟೋದಕಗುಡಧಾತಕೀಸಂಯೋಗದಿಂದಮೆಂತು ಮದವಿಕಾರಮೆಸೆದಪ್ಪುದು (ಅಂಪು. ೨-೯ ಪ) ; ಪಿಷ್ಟೋದಕಗುಡಧಾತಕ್ಯಾದಿಯತ್ತಣಿಂ ಮದಶಕ್ತಿ ಪುಟ್ಟುವಂತೆ (ಶಾಂತಿಪು. ೬-೦೨೮ಪ). [ಸಂ.]

ಪಿಸನಾರಿ, ಪಿಶನಾರಿ (ನಾ). ಜಿಪುಣ ; ಲೋಭಿ : ಎಂಥಾ ಪಿಸನಾರೀನಪ್ಪಾ ಇವನು ಅಂತ ಅಂದುಕೊಳ್ತಾರೆ (ಪಪ್ಪುಳ್ಳ. ೨೦). ಪಿಶನಾರಿ : ಜುಗ್ಗ, ಜಿಪುಣ ; ಪಿಶನಾರಿ (skinflint. ಇಂಕಸಿ) ; ಇತರರೆಲ್ಲರೂ ಪಿಶನಾರಿಗಳೆಂದು ಹೇಳಬೇಕಾಗಿ ಬರುತ್ತದೆ (ಸಾಹಿಸೇ. ೭೭). 'ಪೀನಾರಿ$_2$' ಪರಾ.

[ದೇ. ॥ ತಮಿ. ಪಿಚಿಣಾಱಿ, ಪಿಚಿಣೇಱಿ, ಪಿಚುಣಾಱಿ ; ತೆಲು. ಪಿಸಿನಾರಿ]

ಪಿಸರು$_1$, ಪಿಸುರು$_1$ (ನಾ). ೧. ದೇಹದ ಕೊಳೆ, —ಕಶ್ಮಲ ; "ಶರೀರದ ಹೊಲಸು" (ಪಾಪಕೋ. ೦೬). ೨. ಕಣ್ಣು, ಮೂಗುಗಳ ಕೊಳೆ, —ಮಲ ; ಗೀಜು : (ಕಿ). 'ಪಿಚ್ಚು$_1$' ಪರಾ. ಪಿಸುರು$_1$: ೧. ಹಸನವಿಲ್ಲ ಹರೆಯವು ಮೀರಿದ ಪಿಸುರು ಪಿಚ್ಚುಗಣ್ಣಿನ ಮುದಕಿ. (ಶಕೀಶ. ೩೩-೦೭). ೨. ಸಾಮಾನ್ಯಜನರು ಮಕ್ಕಳು ಹುಟ್ಟಿದ ಕೆಲವು ದಿನಗಳಲ್ಲೆ ಕಣ್ಣಿನಲ್ಲಿ ಪಿಸುರು ಮತ್ತು ಕೆಂಪು ಕಂಡರೂ ಕೂಡಾ . . . ಕಣ್ಣಪ್ಪು ನೇತ್ರಾಂಜನಗಳನ್ನು ಕಣ್ಣಿಗೆ ಹಚ್ಚಿ ಕಣ್ಣು ಪೂರ್ತಿ ಇಂಗಿ ಹೋದ ಮೇಲೆ ವೈದ್ಯರಲ್ಲಿಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿರುವ ಪ್ರಸಂಗಗಳು ಎಷ್ಟೋ ಉಂಟು (ಪಪ್ಪುದ್ಯ. ೦೩). 'ಕಿಸುರ್$_2$' ಪರಾ.

[ದೇ. ॥ ತೆಲು. ಪಿಸರು]

ಪಿಸರು$_2$, ಪಿಸುರು$_2$ (ನಾ). ೧. ಆವೇಶ ; ಉನ್ಮತ್ತತೆ : (ಕಿ). ೨. ಸೊಕ್ಕು ; "ಪಿಸರು — ಮೂರ್ಖ ಸೊಕ್ಕು ; ಉಪದ್ವ್ಯಾಪಿತನ ; ತುಂಟತನ" (ಪಾಪಕೋ. ೦೬). ೩. ಹಟಮಾರಿತನ ; ಮೊಂಡುತನ : (ಕಿ). ಪಿಸುರು$_2$: ೨. ಪಿಸುರು ಇದ್ದವರ ಹತ್ತರ ಉಸುರಬಾರದು (ಗಾರ).

ಪಿಸರು ತೆಗೆ = (ಆಲಂ) ನಿಂದಿಸು ; ತೆಗೆಳು ; ಬಯ್ಯು : ಪಿಸರು ತೆಗೆದರೂ ಪಿಶಾಚ ಬಿಡುವುದಿಲ್ಲ (ಗಾರ).

[?. / ತುಳು. ಪಿಸ್‌ರ್, ಪಿಸರ್]

ಪಿಸರುಗಣ್ಣು (ನಾ). ಹೆಚ್ಚು ಪಿಸರು ಬರುವ ಕಣ್ಣಿನ ಒಂದು ಬಗೆಯ ರೋಗ : ಅವನು ಪಿಸರುಗಣ್ಣಿನ ಬಾಧೆಯಿಂದ ನೇತ್ರವೈದ್ಯರಲ್ಲಿಗೆ ಹೋಗಿದ್ದಾನೆ (ಕೂಡಿ). 'ಪಿಳಚಲುಕಣ್ಣು' ಪರಾ.

[ಪಿಸರು$_1$ + ಕಣ್ಣು (< ಕಣ್)]

ಪಿಸಾಂಟ, ಪಿಸಾಂಟು, ಪಿಸಾಡಿ, ಪಿಸಾಳಿ (ನಾ). (ಉಕ) ತಲೆ ಕೆಟ್ಟ ವ್ಯಕ್ತಿ ; ಹುಚ್ಚ : ಯಾರೋ ಹುಡುಗಿ ಹೆಚ್ಚಾದ ಅಪ್ಪನೊಬ್ಬ ಈ ಪಿಸಾಂಟನ ಕೊರಳಿಗೆ ತನ್ನ ಮಗಳನ್ನು ಕಟ್ಟುವ ಧೈರ್ಯ ಮಾಡಿದ (ಮೂರುದಾ. ೦೩೨). ಪಿಸಾಂಟು : ಬಸ್ಸೇ ತಮ್ಮದು ಅಂತ ತಿಳ್ಕೊಂಡಿದ್ದೊ ಪಿಸಾಂಟುಗಳು (ಹೊಸಕ್ಷಿ. ೩೩). ಪಿಸಾಡಿ : ಈ ಪಿಸಾಡಿನ್ನ ಯಾರು ಕೇಳತಾರ್ರೀ ? (ಪತಿಕೋ. ೩೭). ಪಿಸಾಳಿ : ಈ ದಾಂಡಿಗ ಜವಾನ ಪಿಸಾಳಿಗಳ ಕಯ್ಯಲ್ಲಿ ಸಿಕ್ಕು ನಾನು ಒದ್ದಾಡಲಾರೆನಪ್ಪಾ (ಬೀಕಬಿ. ೦೨೯).

[←ತುಳು. ಪಿಸಂಟೆ. ಪಿಸಿಂಟೆ = ಮುಂಗೋಪಿ./ಮರಾ. ಪಿಸಾಟ್ = ಹುಚ್ಚು]

ಪಿಸಾಂಟು 'ಪಿಸಾಂಟ' ನೋ.

ಪಿಸಾಡಿ 'ಪಿಸಾಂಟ' ನೋ.

ಪಿಸಾಳಿ 'ಪಿಸಾಂಟ' ನೋ.

ಪಿಸಿ$_1$, ಹಿಸಿ (ಕ್ರಿ). ೧. ಸಿಗಿ ; ಕಿತ್ತು ತೆಗೆ ; ಹರಿದು ಹಾಕು : "ಹರಿ, ಮುರಿ, ಒಡೆ, ಪಿಸಿ [ಹಿಸಿ]" (ಕಂಪುಹು. ೯೦). ೨. (ಬಟ್ಟೆ, ಮುಂತಾದುವು) ಹಿಂಜು ; ಹರಿದುಹೋಗು ; ಕಿತ್ತುಹೋಗು : ಒಡಲು ಉಡಿಗೆಗಳಂತೆ ಮಾಸಿ ಪಿಸಿವುದು (ಉಯ್ಯಾಲೆ. ೩೩-೯). 'ಪಿಸುಂಕು' ಪರಾ. ಹಿಸಿ : ೧. ಶಿಶುವ ಸಲಹಿದು ಸುರವಿರೋಧಿಯ ಬಸುಱ ಬಗಿದೆಳಿಗರುಳನುಗುರಲಿ ಹಿಸಿ [ಪಾಠಾಂ. ನಸಿ, ಸಸಿ]ದು ಕೊರಳಲಿ ಹಾಯ್ಕಿದನು ನರಹರಿಯ ರೂಪಿನಲಿ (ಕೊರಣಾ. ೬-೨-೩೦) ; ಅವರ ಬಾಯಿಂದ ಆ ಮಾತು ಬರುವ ಮುಂಚೆ ಅವರ ಕಟವಾಯ್ಗಳನ್ನು ಹಿಸಿದಲ್ಲದೆ ನನಗೆ ನಿದ್ರೆ ಬಾರದು (ಅಗ್ರಹ. ೩೦); ಮಿತ್ತು . . . ಶಿಶುವನು ಕಿತ್ತು ಹಿಸಿದು ತಿಂಬುವ ಕಂಡು (ಪಾಂಪಪ. ೨೯-೦೩). ೨. "ಹಿಂಜು, ಹಿಕ್ಕು, ಬಾಚು, ಹಿಸಿ [ಪಿಸಿ]" (ಕಂಪುಹು. ೯೨) ; ಕುಪ್ಪಸ ಹಿಸಿವಂತೆ ಮೈಯುಬ್ಬಿಕೈ ಮುಗಿದೊಪ್ಪದಿ ಸಾಗಿದರವರು (ಭರಪ. ೩೯-೦೦೦); ಸುಲಭವಾಗಿ ಹಿಸಿಯುವ ದಾರಗಳಿಂದ ಮಾಡಿದ ಬಟ್ಟೆ ಬಾಳಿಕೆ ಬರುವುದಿಲ್ಲ (ಗೃಹಪಿ. ೬೯). ೩. (ಹಣ್ಣು ಮುಂತಾದುವು) ಸೀಳಿಕೊಳ್ಳು ; ಬಿರಿ ; ಒಡೆ : ಅಸಿದಾದ ಬದನೆಯೆಳೆವದದ ಕಾಯ್ಗಳನು ನಾಲ್ಕೆಸಳಾಗಿ ಕುಯಿದು ತುಪದೊಳಗುಕ್ಕರಿಸಿಯವು ಹಿಸಿಯದಂದದಿ ಹಿಕ್ಕಿ (ಸೂಪಕಾ. ೯-೯); ಮೆಱೆವ ಪೊಂಗೊಡಮೊಲೆಯನವನ ವಕ್ಷಃಸ್ಥಳದೊಳಿಟ್ಟೊತ್ತಿದೊಡೆ ಹಿಸಿದೊಳಗಣ ತನಿಸುಧೆಯೊಸರ್ದು ತೊಟ್ಟಿಡುವ ಬಿಂದುಗಳ ಸಾಲಿದೆನಲು ಕಡಿಕಿ ಪಱಿದುಗುವ ಹಾರದ ಮುತ್ತುಗಳ ಮಣಿಗಳೆಡೆವಿಡದೆ ಸೂಸುತಿರೆ (ಕೈಮಭಾ. ೦೦-೦೬) ; ಕಾಲೊಂದನಾ ದಾರಿಗಿನ್ನೊಂದನೀ ದಾರಿಗೆಂದೇ ಕಾಲದೊಳೂರಿ ನಡೆಯುವುದಾದರೆ ಎರಡಡಿ ಹೋದೀರಿ ಸೊಂಟವು ಹಿಸಿದು ಬಿದ್ದೀರಿ (ಇಂಪಾಪ. ೨೩೬-೬೯). ೪. ಬಿರಿಯುವಂತೆ ಮಾಡು; ಎರಡಾಗಿ ಸೀಳು : ಹಿರಿದಾಗಿಯದ ಹಿಸಿದು ನಾರುವದನಂ ಮಾಡಿ ಅರಗಿನಂದದೊಳು ಸರಿಗೆಯ ಮಾಡಿಕೊಂಡು ಕತ್ತರಿಸುವುದು (ಸೂಪಕಾ. ೦-೪೦) ; ತುಂಬಿದಕ್ಕರಿನೆದೆಯ ಹಿಸಿಯುತೆ ಹಿಂಡಿ ಬಾಳನು ಬಸಿವರು (ದ್ರಾಕ್ಷಿಪಾ. ೩೬-೦೭); ಹಲಸಿನ ಹಣ್ಣಿನ ತೆರನಿರೆ ನಿನ್ನನು ಹಿಸಿವರು ಬಂಧುಬಾಂಧವರು (ಇಂಪಾಪ. ೨೨೯-೩೩).

೫. ಅವಯಕು ; ಒತ್ತು ; ಹಿಂಡು : ಕಕ್ಕಸದಿಂದ ಕಡಿವ ಚಿವುಟುವನು ಗುರಿಕ್ಕುವ ಹಿಸಿವ ಹೆಟ್ಟುವನು ಚಿಕ್ಕವರುಗಳನೆಲ್ಲರನು (ಪೀಟುಸಂ. ೦೩-೦೦೯).

ಹಿಸಿಹಿಸಿ (ದ್ವಿರುಕ್ತಿ) : ಆಶಯೆಂಬ ಪಾಪಿಯ ಕೂಸು ಹಿಸಿಹಿಸಿದು ತಿನುತ್ತಿರ್ಪುದು (ಅಪಸಂ. ೨೩೬-೦೦೬೬). ಹಿಸಿದು ಬೀಳು = ಬಿರಿದು ಬೀಳು; ಒಡೆದಂ ಬೀಳಂ : ಮಳೆಯುಂ ಮುಗಿಲೇ ಹಿಸಿದು ಬೀಳುವಂತೆ ಸುರಿಯುತ್ತಿತ್ತು (ಪುಕಥ. ೬೨೪). ಹಿಸಿದು ಹೋಗು = ಸೀಳಿಹೋಗಂ ; ಬಿರಿ : ಅವರನ್ನು ನೋಡುವುದಕ್ಕೆ ಜನವು ಊರೇ ಹಿಸಿದು ಹೋಗುವಂತೆ ಕಿಕ್ಕಿರಿದು ಬಿಟ್ಟಿತು (ಪಪಣಾ. ೬೬).

ಪಿಸಿ೧ (ನಾ). ಒಂದು ಬಗೆಯ ಔಷಧದ್ರವ್ಯ ; ಜಟಾಮಾಂಸಿ: "ಪಿಸಿ:—ಜಟಾಮಾಂಸಿ" (ಓಷ. ೧೭) [< ಸಂ. ಪಿಶೀ]

ಪಿಸಿ೨ (ನಾ). ತಲೆ ಕೆಟ್ಟವನಂ ; ಹುಚ್ಚ : ಹಂಗೇಕೆ ತಲೆ ಕೆಟ್ಟವರಂತೆ ಮಾಡಿದರೊ ಏನೋ. ಮಹಾ ಪಿಸಿ ಇರಬೇಕು ಈ ಪೋಲೀಸ ಅಧಿಕಾರಿ (ಕೃಶ. ೧೮೨). [← ಮರಾ. ಪಿಸಾ = ತಲೆ ಕೆಟ್ಟವರುವ]

ಪಿಸಿತ೧, ಪಿಚ್ಚ೨ (ನಾ). ಮಾಂಸ ; ಅಡಗಂ ; ಪಿಶಿತ : ಗಗನಗಮಯಲ್ಲಿ ತಿರುಗುವ ಖಗರಾಜಂ ಕಂಡು ಪಿಸಿತಮೆಂದದ ಮನದೊಳ್ ಬಗೆದೆತ್ತಿ ಕೊಂಡು ಪೋಪುದು ಮೃಗಶಾಬೇಕ್ಷಣೆಯ ವಾಪುಚರಣದ ವೆಟ್ಟಂ (ಕುಶಾಸ್ತ್ರ. ೬-೩೪) ; ಪಿಸಿತದ ಪಾಧುರಮೆಂತಹುದೊ (ಕಕುಪು. ೪-೦೨-೩೦). ಪಿಚ್ಚ೨ : "ಪಿಚ್ಚ — (ಪಿಸಿತ) — ಪಿಶಿತ = ಮಾಂಸ" (ಕಕ್ಕಕೋ. ೨೬). 'ಪಿಚ್ಚವುಣಿಗ' ಪರಾ. [< ಸಂ. ಪಿಶಿತ]

ಪಿಸಿತ೨ (ನಾ). ಕೆಟ್ಟ ನಡತೆ (?) : ಹುಸಿ ಕೊಲೆ ಕಳವು ಪಾರದಾರ ಇಂತೀ ಪಿಸಿತವ ಹಜಿಯೊ ನಿಃಕಳಂಕ ಮಲ್ಲಿಕಾರ್ಜುನಾ (ಮೋಳಪಾ. ೬೬-೨೬೬). [?]

ಪಿಸಿತಾಂಗ (ನಾ). ಮಾಂಸಮಯವಾದ ದೇಹ ; ಔತಿಕಶರೀರ : ಜ್ಞಾನಾಗ್ನಿಯೋಳ್ದಹನವಾದ ಪಿಸಿತಾಂಗ ವಿಗೆ ಮಾನಿತ ಸುಮಂತ್ರವಾಗೆ ಗುರುಕರುಣದಿ (ರಕೋಪು. ೬-೬೬). [ಪಿಸಿತ೧ + ಅಂಗ೨]

ಪಿಸಿಪಿಸಿ (ನಾ). ಒಂದು ಅನುಕರಣಶಬ್ದ : ಉಲಿಯೆ ಡೊಂಬನು, ಕೆಲರ ಪಿಸಿಪಿಸಿ, ಕೆಲರ ಗುಡುಗುಡು, ಕೆಲವರಾ ಗಲಭೆ ಕಳಕಳ ಆಟದಾ ಕಳದಲಿ ವಿಶಾಲಕೆ ತುಂಬಿತು (ಕಪು. ೬೯-೨೬) ; ಗುಡುಗುಡು ಮಾತಾಡಿ ಪಿಸಿಪಿಸಿ ನಗುವುತ ಸೆರಗ ತಮ್ಮುಸಕ ಎಳೆದಾರ (ಕಕ್ಕಣಾ. ೬೬೨).

ಪಿಸಿಪಿಸಿ ಮಾತಾಡು = ತುಂಬ ಮೆಲ್ಲಗೆ ಮಾತಾಡು ; ಪಿಸಗೆಂಟ್ಟು : (ಕ). ಪಿಸಿಪಿಸಿವಾತು, ಪಿಸಿಪಿಸಿಮಾತು = ತುಂಬ ಮೆಲ್ಲಗೆ ಆಡುವ ಮಾತು ; ಪಿಸುಮಾತು : ಅಯ್ಯಾ ನಿನ್ನ ಬಿನ್ನಣದ ಪಿಸಿಪಿಸಿವಾತಂತಿರ್ಕೆ (ಕಳಂ. ೬-೦೩೪ ಕ) ; ಕಿಸಿಕಿಸಿನಗು, ಪಿಸಿಪಿಸಿಮಾತು . . . ಅವಳ ಜೀವನಕ್ಕೆ ಚಿಟುಕುಮುಳ್ಳಾಗಿದ್ದವು (ರೀಚಕ. II, ೦೪೦).

ಪಿಸಿವಿ, ಪಿಶವಿ (ನಾ). (ಉಕ) ಕೈಚೀಲ : ಪಿಸಿವಿಯಲ್ಲಿ ಅಕ್ಕಿ ತಂದೆ (ಕೂಡ). **ಪಿಶವಿ** : ಪಿಶವಿಯೊಳಗಿನ ಪುಸ್ತಗಳನ್ನೂ ಪಾಟಿಯನ್ನೂ ಹೊರತೆಗೆದು ಚಾವಿಯ ಮೇಲೆ ಹರವಿ . . . ನೋಡತೊಡಗಿದ (ಕ್ಷಶಾ. ೧೩). [← ಮರಾ. ಪಿಸವೀ, ಪಿಶವೀ]

ಪಿಸು (ನಾ). ಒಂದು ಅನುಕರಣ ಶಬ್ದ : 'ಪಿಸುಗುಟ್ಟು' ಪರಾ.

ಪಿಸುಂಕು, ಪಿಸುಕು, ಪಿಸುಗು, ಹಿಚಕು, ಹಿಚಿಕು, ಹಿಚಿಗು, ಹಿಚಿಕು, ಹಿಜಿಗು, ಹಿಸಕು, ಹಿಸಿಕಂ, ಹಿಸುಕು೧, ಹಿಸುಗು (ಕ್ರಿ). ೧. ನೀವು ; ತೀಡು ; ಮರ್ದಿಸಂ : ರುಂಬತೀತಿ ಪಿಸುಂಕಿದಪುದೆಂಬುದು (ಕಾಕೃ. ೬೦). ೨. ಅಲಕ್ಷ್ಯ ಮಾಡು ; ಅನಾದರದಿಂದ ಕಾಣು ; ಅವಮಾನಿಸಂ ; ತಿರಸ್ಕರಿಸಂ : "ಪಿಸುಕು, ಪಿಸುಂಕು—ಅವಜ್ಞಾ ತಿಶಯೇ (ಅಪಮಾನ ಮಾಡು)" (ಕಪುಡಾ) ; ಪಿಸುಂಕಿ ಕಳೆದಟ್ಟ ಚೈತ್ರಮಾತುರಾಜನಂ ಭೂತಳಂ ಬಸಂಬಡೆ ನಿದಾಘ ಭೂರಮಣನೇಳ್ಗೆಯಂ ತಾಳ್ದಿದಂ (ಪಂಪ್ರಕ್ಕ. ೬-೦೦೬). 'ಪಿಸಿ೨' ಪರಾ. **ಪಿಸುಂಕು** : ೨. ಪೇಲಿನ 'ಪಿಸುಂಕು' ಉಲ್ಲೇಖಿದ 'ಶವುಧಾ' ಪ್ರಯೋಗವನ್ನು ನೋಡಿ. ೩. (ಹಣ್ಣಿನಂತೆ) ಕಿವುಚು ; ಹಿಂಡು : (೫). ೪. ಅದುಮು ; ಒತ್ತು : (೫). ೫. ಹರಿದು ಹಾಕು : (೫). **ಪಿಸುಗು** : ೧. ತಳಿರ್ಹಾಸಿಗೆ ಮಾಡಿ ಮಲಗಿಸಿ ಬಳಿಕದಿ ನೀ ಪಾದ ಪಿಸುಗೆ ನಿದ್ರೆಯಾ ಗೈವೆಂ (ಪಪುಚ. ೫೬). ಹಿಚಕು : ೩. "ಪಿಚಕು—ಹಿಂಡು" (ಕಾಪಕೋ. ೫೬) ; ಹಿಡಿದ ವಿಷಯವನ್ನು ಅವರು ಹೇಗೋ ಎತ್ತೆತ್ತೊ ಹಾರಿಸಬಲ್ಲರು, ಎಲ್ಲೆಲ್ಲೋ ಹಿಚಕಬಲ್ಲರು (ಗಾಕಾ. vii, ಕುಸ್ಕಗೆಡು ಮೂಕು). **ಹಿಚಿಕು** : ೩. ಸ್ವಲ್ಪ ಅರಳಿ ಮುಚ್ಚಿಯಲ್ಲಿ ತಕ್ಕೊಂಡು ಕಿವಿಯ ಹತ್ತಿರ ವೈದು ಹಿಚಿಕಿ ನೋಡಬೇಕು (ಮುಂಕಾಣ್ಣ. ೪೦). ೪. ಕರಡಿಗಳು ಅವರ ಕುತ್ತಿಗೆ ಹಿಚಿಕಿ (ಪುಂಕಾಥಾ. ೬. ೬-೦೦೯). **ಹಿಚಿಗು** : ೪. ಮುಂದ ಅವರು ಕುತಗೀ ಹಿಚಿಗಿ-ಪತಗೀ ಹಿಚಿಗಿ ಮಾಡಬಾರದೂ ಅಂತ ನಿಮ್ಮ ಮಾನಸಿ ನಾಗ ಇವ್ರ, ಈಗ ಆ ಹುಡಿಗೀ ಕಡಿಯಿಂದ . . . ಜವಾಬು ತಗೊಂಡು ಬಿಡೋಣ (ಗಂಗಾಸಾ. ೦೬೨). **ಹಿಚುಕು** : ೪. ಹರಿಯರಿರೆ ಕಿಜಿಯಂಗೆ ಪಟ್ಟವೆ ಕೊಜಿವೆಳಲಾ ಹಿಚುಕಿ ಕೊರಳನು . . . ಎಂದು ಭರತನು ಹರಿದು ಹಲುಬಿದನು (ಕಾತಾ. ೪-೦೯) ; ಆ ವ್ಯಕ್ತಿ, ಆಗ ನನ್ನ ಕುತ್ತಿಗೆ ಯನ್ನು ಹಿಚುಕಿಬಹುದೆನಿಸಿತು (ಪಪುಪ. ೦೦೬) ; ರಾವಣ್ಣನ ಕೈಯನ್ನು ಹಿಚುಕಿ ಕೇಳಿದಳು (ಕಪಳ. ೬೨). **ಹಿಜಿಗು** : ೪. ಕುತ್ತಿಗೆಯನ್ನು ಹಿಜಿಗಿ ಪ್ರಾಣ ತೆಗೆಯುತ್ತೇನೆ (ಕಾಂಪ್ರ. ೪೦೬). **ಹಿಸಕು** : ೩. "ಹಿಸಕು—ಹಿಚಕು, ಹಿಂಡು" (ಕಾಪಕೋ. ೫೬). **ಹಿಸಿಕು** : ೪. ಹೆದರದೆ ಕೊಟ್ಟಿಹ ಹಣವನು ಕೇಳ ಬಂದ ಭಕ್ತನ ಕೊರಳು ಹಿಸಿಕಿ ಯಮುನೆಯ ಹಿಂದೆ ಸಮಾಧಿಯು ತೆಗೆದು (ಕಾಭಾಪು. ೦೨೦-೦). ೬. ಪರಿಶೀಲಿಸಿ ನೋಡು ; ಪರೀಕ್ಷಿಸು : ಭೂಮಿಪಾಲೋತ್ತಂಸರೊಳಗೆ ಹಿಂದಂ ಹಿಸಿಕಿ ನೋಳ್ಪರೇ ಬಲ್ಲವರ್ಧರಣಿ ಪಾಲ (ಕಪ್ಪಕಾ. ೬-೦೬). **ಹಿಸುಕು೧** : ೩. ಬೆರಳು ತಾಳ ಹಣ್ಣ ಹಿಸುಕಿದಡೆ[ಪಾತಾಂ. ಹಿಸಿದಡೆ, ಹಿಸಿಕಿದಡೆ]ಮೆಲಲುಂಟೆ (ಪಾಚಾರ್ಯ. ೪. ೦೨-೨೬) ; ಅಸವಾಸ್ಯ ನಾಣ್ಟೆ ಜಿನನ ಮುಂದೆ ಸಿಹಿವಿಲ್ಲ ಹಿಸುಕಿ ಬೀಸಾಡಿ ಸಾರ್ವಂತೆ ರಸದಾಳಿಗಬ್ಬಿನ ರಸದೊಳಾ ನೃಪತಿ ಮಿಯಿಸುವಂದ ಮೆಜ್ಜಿದುದಾ ಜಿನನ (ಕಪಪ. ೦೬-೭೬) ; ಕಂದಯ್ಯ ಹಣ್ಣನ್ನು ಒಡೆದು ತಿರುಳನ್ನು ಹಿಸುಕಿ ತೋರಿಸಿದರು (ಪಪುಹೂ. ೫೬). ೪. ಎನಿತೋ ಕೋಗಿಲೆಗಳ ನುನ್ಗೊರಳನು ಹಿಸುಕಲು ತಳುಹದ ಕಲಿಭಟನಿವನು ! (ಕಪಣಾ. ೨೨-೩) ; ದೈತ್ಯಬಾಹು ಮುಗ್ಧತೆಯನು ಹಿಸುಕಲು ಚಾಚಿತು ಹಲಬಾರಿ (ಪಂಪು. ೩೯-೦೩) ; ರಾಣಿ ಸಂಗಾಮಿಯ ಕೈ ಹಿಡಿದು ಹಿಸುಕಿ, ಕೃಪಾಕಟಾಕ್ಷವನ್ನು ಬೀರಿದಳ್ಳ (ಪಪಣಾ. II, ೧೬೬). **ಹಿಸುಗು** : ೪. ಯಾರನ್ನು ಕಂಡರೆ ಕತ್ತು ಹಿಸುಗಬೇಕೆನಿಸುತ್ತದೆ ನಿಮಗೆ ? (ಪಪುಹೂ. ೩೬). 'ಹಿದುಕು' ಪರಾ.

[ದೇ. ॥ ತಮಿ. ಪಿಚಕ್ಕು ; ತುಳು. ಪಿಸ್ಸು ; ತೆಲು. ಪಿಸುಕು ; ಗಡಬ. ಪಿಸ್ಕೊಲ್ಪೆ ; ಗೊಂಡಿ. ಪಿಸ್ಕನಾ : ಕುರುಖ್. ಪಿಚ್ಕಿನಾ]

ಪಿಸುಕೆ (ನಾ). ಒಂದು ಬಗೆಯ ಕೀಟ : ತುಂಬ ಪತಂಗ . . . ಪಿಸುಕೆ ಎಳಂಬಿ . . . ಕೊಟ್ಟಾರಿಗಂ ಯೆಡೆವುಬುಯೆಂದಿತ್ಕೇಪಮಾದಿಗಳೊಳಂ ಸ್ಪರ್ಶರಸಗಂಧರೂಪಶಬ್ದಂಗಳೆಂಬೀಯಯ್ದುಮನಜ್ಞಪ (ಪಪಾಕ. ೪೯).

[< ಪ್ರಾ. ಪಿಸುಅ. / ಸಂ. ಪಿಶಂಕ]

ಪಿಸುಕು 'ಪಿಸುಂಕು' ನೋ.

ಪಿಸುಗು 'ಪಿಸುಂಕು' ನೋ.

ಪಿಸುಗುಟ್ಟು (ಕ್ರಿ). (ಕವಿಯಲ್ಲಿ) ಮೆಲ್ಲಗೆ ಹೇಳು : ಪಿಸಂದನಿಯಲ್ಲಿ ಗೊಟ್ಟಾಗಿ ಹೇಳು, ಪಿಸುಮಾತನ್ನಾಡು: "ವಿನುಕು-ಅಂತರ್ಗತಸ್ವನೇ (ಪಿಸುಗುಟ್ಟು). ಕಾಂತೌ ಚ (ಪ್ರಕಾಶನ)" (ಕಪುಡಾ) ; ಆ ಎಲೆಗಳು

ಗಾಳಿಯು ಕಿವಿಯಲ್ಲಿ ಹೀಗೆ ಪಿಸುಗುಟ್ಟಿದುವಂತೆ (ರಾಪಾಸಾ. ೩೩); ಪಿಸುಗುಟ್ಟಿದರೂ ಕೇಳುವಷ್ಟು ಹತ್ತಿರ ಇದ್ದರು (ಶ್ರೀಪಾಸ್ಮೃ. ೨೦); ಅರ್ಚಕನ ಅನಾಚಾರ ಕುರಿತು ಹೊಸೂರಿನ ಜನರು ಪಿಸುಗುಟ್ಟುತ್ತಿದ್ದರು (ಹೊಸೂಹ. ೨೩). 'ಗೊಣಗುಟ್ಟು' ಪರಾ. [ಪಿಸು+ಕುಟ್ಟು$_1$]

ಪಿಸುಗುಡು (ಕ್ರಿ). = ಪಿಸುಗುಟ್ಟು : 'ಅದು ಸರಿಯಲ್ಲ' ವೆಂದು ಅವನ ಸಮಸ್ತಚೇತನವೂ ಪಿಸುಗುಡುತ್ತಿತ್ತು (ಪ್ರಸರು. ೩೬೯); ಇನ್ನೊಬ್ಬರ ಕಿವಿಯಲ್ಲಿ ಗುಟ್ಟಾಗಿ ಪಿಸುಗುಡುವಾಗ ... ಹಠಾತ್ತಾಗಿ ಆಸ್ಫೋಟವಾಗುವ ಸೀನಿನಿಂದ ಏನು ಅವಾಂತರವಾದೀತು (ರೀಚಸ್ಮೃ. ೦೨). 'ಗೊಣಗುಡು' ಪರಾ. [ಪಿಸು+ಕುಡು$_1$ (< ಕೊಡು$_1$)]

ಪಿಸುಣ್, ಪಿಸುಣ$_1$, ಪಿಸುಣಂ, ಹಿಸುಣ$_1$, ಹಿಸುಣಾ (ನಾ). ಚಾಡಿ ; ಚಾಡಿಯ ಮಾತು; ಕುತ್ಸಿತ : "ಪಿಸುಣೆಂದು ಕುತ್ಸಿತಂ" (ಶಬಸಾ. ೭೨-೬೪); ಆಳ್ಮೆಸಕಗಿಯೆ ನುಡಿದನೆಂಬೀ ಪಿಸುಣನಣಂ ಕೇಳ್ದೆನಿಲ್ಲ ಬೀಡಿನೊಳವನಾ (ಶಂಪಭಾ. ೬-೨೨); ಪುಸಿಗೆ ಪಿಸುಣ್ಗೆ ಪೋರಟಿಗೆ ಮಾಯೆಗೆ ಹಿಂಸೆಗೆ . . . ಬಸಗಡಿದೀಟ್ಟ ಕಾಟ್ಟಿಸನದಟ್ಟುಳಿಗಂ ಪುಗದಂತಿರೆಲ್ಲರಂ ಪೊಸಯಿಸಿ ಕಾರ್ತವೀರ್ಯನೆಸಕಂಬಡೆದಂ ದೊಡದೇವಭೂವರಂ (ಕಸಕಾ. ೩-೦೩); ಸವತಿಯೊಂದು ಪಿಸುಣ್ಗೆ ಎಱ್ಕೆಯಂ ಮಾಱುವೋದನೆಂಬೊಂದುಬ್ಬೆಗದಿಂ ಕೊರಗಿದಳೆನೆ ಪದ್ಮಿನಿ ನಾಡೆ ಬಾಡೆ (ರಾಪಾಸ್ಮೃ. ೨೨-೯). ಪಿಸುಣ$_1$: ಪಿಸುಣಂ ಪರಾಭವಂ ಕಲಹಮುಂ ಕಪಟಮಳಿಜಸಮತಿಕ್ರೂರಮನ್ಯಾಯಮಿವು ಪರ್ಜೆ ತದ್ವಸುಮತೀವನಿತೆ ತಾಳದೆ ಕಂಪಿಸುತ್ತಿರ್ಪಳು (ಶಪಾ. -೦೦). ಪಿಸುಣು : ಪಿಸುಣಂಗೆ ಮುಳಿವಂ ವಾದ್ಯವಿದ್ಯಾಧರಂ . . . ಸಿಂಗನ ಗರುಡ ನಾ[ಮಾ]ದಿ ಸಮಸ್ತಪ್ರಶಸ್ತಿಸಹಿತಂ (ಇಇ. XIX. ೦೬೯-೦೨; 1040); ವಿಕಾಳಿಸಿತೆ ಕೌರವನ ಬುದ್ಧಿ ವಿಟಾಳಸಂಗತಿಯಾಯ್ತಲಾ ಪಿಸುಣಾರ ಕೆರಳಿಚಿದು (ಕುಪಾ. ೧೨-೯೬); ಕಲಹಿಸದಿರಾರೊಡನೆ ಪಿಸುಣನುಳಿ ಪರಧನಕ್ಕಳುಪದಿರು ತವಪಸಗು (ಕ್ಷೇಕ. ೩-೨-೩). ಹಿಸುಣ : ಕಂಗಳು ಹಿಸುಣವ ಹೇಳಿಹವೆಂದು ನೋಡಲಮ್ಮೆನವ್ವಾ (ಸರ್ವಸ. ೭೦-೩೬೦); ಹಿಸುಣವನು ಹೇಳುವ ಕೇಳುವರಿಗಿನ್ನಾವುದೈ ಪ್ರಾಯಶ್ಚಿತ್ತವಿಧಿಯೆಂದ (ಸಂಪಶ. ೦೩-೭೦). ಹಿಸುಣು: ಹಿಸುಣು ಧರ್ಮದ್ರೋಹ ರುಚೆ ಕೈಮಾಸಕ ವಳಿವನ್ಯಾಯವೆಂಬಿವರೆಸಕ ಹೊದ್ದದಯೋಧಿಪನ ಧರಣೀತಳಾಗ್ರದಲಿ (ಕೊಕೆಶಾ. ೦-೩-೨೬). [< ಸಂ. ಪಿಶುನ]

ಪಿಸುಣ$_1$ 'ಪಿಸುಣ್' ನೋ.

ಪಿಸುಣ$_2$, ಹಿಸುಣ$_2$ (ನಾ). ೧. ಚಾಡಿ ಹೇಳುವವನು; ಚಾಡಿಕೋರ: "ಪಿಸುಣನೆನಲ್ ಪೈಶೂನ್ಯಂ" (ಕಶಾಪ. ೨೦೬); ಪಿಸುಣರ ಪೊಸೆವೊ ಕುಠಿ(ಟಿ)ಲಂ ವೊ × × ವ ಈಯದೆ ಈಱ್(ಇಱ್)ಯ[ದೆ] ನನ್ನಿ ನುಡಿಯದೆ ನಣ್ಣಿ(ನ್ದಿ)ದೇವಂಗಟ್ಟಿಸ್ಸಿಮುಯ್ವುಮ್ಪಡೆದೊಂಗರ ಅಲೆದೊಂ ಮೂದಲಿವೊಂ (ಅಇ. XXIV. ೧೯೩-೦೨; ಸು. 885); ದೈವ ಗುರು ದ್ವಿಜರ ಚರಣಸೇವೆಯಲಾರ್ತತೆಯು ಪಿಸುಣರ ನುಡಿಗಳಲಿ ಮೂರ್ಖತೆಯು ನೀ ವಿರಚಿಪೆಯೊ ಬೇಸಱುವೆಯೋ (ಕುಪಾ. ೦-೩೬); ಪುದಿದಿರ್ಪುದು ತೇಱ್ಗೆ ವಿಷಂ ತುದಿವಾಲದೊಳ್ಳಿದೆ ಘಣಿಗೆ ತುದಿದಾಡೆಗಳೊಳ್ ತುದಿನಾಲಗೆಯೊಳ್ಳಿ ಸುಣಂಗಿದು ಸರಿಯವು ಸೋಂಕೆ ಕೊಲ್ವುವಿದು ಸೋಂಕದೊಡಂ (ಕಶಾ. ೦-೩೫); ಪಿಸುಣನ ಹತ್ತಿರ ಉಸುರಬಾರದು (ಗಾದೆ). ೨. ನೀಚ; ದುಷ್ಟ : "ದುರ್ಜನಃ. ಪಿಶುನಃ. ಕ್ಷುದ್ರಃ. ನೀಚಃ. ಕರ್ಕೇಜಪಃ. ಖಳಃ—ಈ ೬ ಪಿಸುಣಂ" (ಹಶಾಯು. ೩೭-೦೯೦); ಪಿಸುಣನೆ ಪಾತಕ ಪರಸತಿಯರಿಗೆ ವೋಹಿಸುವನಧಮ ದುರ್ನುಡಿಯ ಉಸುರುವನೇ ಕ್ರೂರ ಚಾರಿತ್ರಭ್ರಷ್ಟನೆ ಪಸುಧೆಗೆ ಪಾಪಿಯೆನಿಸುವ (ಕಂಪಂಸಾಂ. ೬-೩೬); ಬಂಜೆ ಪ್ರಸವದ ನೋವಱಿವಳೆ ಪಿಸುಣಂ ಸಿರಿಗಳಿಂ ಜಸದೊಳಿಪ್ಪವನ ಸೈರಿಪನೆ (ಕುಸ್ಕಾಂಗ. ೦-೦೬); ಪಿಸುಣನ ದ್ರವ್ಯ ಲೋಭಿ ಬಯಸಿದ ಹಾಗೆ (ಗಾದೆ). ೩. ಶಕುನವನ್ನು ಸೂಚಿಸುವುದೆನ್ನಲಾದ ಒಂದು ಬಗೆಯ ಹಕ್ಕಿ ; ಹಂಗನ ಹಕ್ಕಿ : ಗೊರವ ಗಿಳಿ ಜಾಗರಿಗ ಹರಡೆ ಹಸುಬಂ ಪಿ[ಶಾಣಂ ಹಿ]ಸುಣ ಹೆಬ್ಬಕ್ಕಿ ಗಿಡುಗ . . . ಹಕ್ಕಿಗಳ ಮಳೆ ಕಱ್ದುದವಿಯೊಳಗೆ (ಸೋಮಚ. ೩-೯). ಹಿಸುಣ$_2$: ೧. "ಹಿಸುಣ—ಪಿಶುನ=ಪಿಸುಣ" (ಶಬ್ದಕೋ. ೪೯); ಸಸಿನವೇ ನಿನ್ನಱಿತಖಳರಿಗೆ ಹಿಸುಣರಿಗೆ ವಂಚಕರಿಗಜ್ಞರಿಗುಸುರಿಯೆಲೆ ನಿನ್ನಂತರಂಗವನೆಂದನಾ ಮುನಿಪ (ಕುಪಾ. ೬೦೩. ೦-೩೯); ಹಿಸುಣರ ಜಾಳಿಗರ ಚದುರೋಕ್ತಿ ನಮಗೇಕಿಂದವರೊಡನೆ (ಕೊಕಶಾ. ೨-೦-೨೬). ೨. ಚೋರನನು ಕಂಟಕನ ಹಿಸುಣನ ಜಾರನನು ಪಾಪನನು ಸಮಯವಿಕಾರಭೇದಿಯನಿಂತಱುವರನು ಕಂಡು ಮನ್ನಿಸದೆ ದೂರದಲಿ ವರ್ಜಿಸುವುದು (ಕುಪಾಶಾ. ೯-೯೬). ೩. ಮೇಲಿನ 'ಸೋಮಚ. ೩-೯'ರ ಪ್ರಯೋಗದ ಪಾಠಾಂತರವನ್ನು ನೋಡಿ.

[ಪಿಸುಣ್ + — ಅ$_7$]

ಪಿಸುಣತನ (ನಾ). ಚಾಡಿಕೋರತನ ; ಪಿಶುನತ್ವ : ನಿಜಬಂಧುಗಳು ಅಳಿಯೆ, ಪಿಸುಣತನ ಅಡಗಿತೇ ? (ಕಪಾ. ೩೦); ಸಂಗೀತದಲ್ಲಿ ಓಡದಿದ್ದ ಅವರ ಬುದ್ಧಿ ಪಿಸುಣತನದಲ್ಲಿ ಚುರುಕಾಯಿತು (ಕೂಪಸ. ೦೩೯).

[ಪಿಸುಣ$_1$ (<ಪಿಸುಣ್) + — ತನ]

ಪಿಸುಣತೆ, ಹಿಸುಣತೆ (ನಾ). (ಒಬ್ಬರ ಬಗ್ಗೆ) ಆಡಿಕೊಳ್ಳುವುದು,—ದೂರುವುದು ; ಚಾಡಿ ಹೇಳುವುದು : ಇಳೆಯೊಳು . . . ಸಂಚಲಚಿತ್ತವಂಧತ್ವ ಮುಳಿಸು ಹೊಲೆ ಮೃಷೆ ರೌದ್ರವವು ದುರ್ಬಲವೆ ಜೀವನ್ಮೃತವು ಪಿಸುಣತೆ ಕೊಲೆಯದೆಲೆ ಸುಕುಮಾರ ಕೇಳಿರಿದಱಹಿದನು ಮುನಿಪ (ಪಾಪಂಚ. ೩-೬೦); ರಾಮಂಗೆ ಪಟ್ಟಗಟ್ಟುವ ಪ್ರೇಮದೆ ದಶರಥನೃಪಾಲನನುಮಾಡಿಸುತಿರಲಾ ಮಂಥರೆ ಪಿಸುಣತೆಯಿಂ ಕಾಮಿನಿ ಕೈಕಯಿಗೆ ವೇಳಲಾಕ್ಷಣದೊಳಗೆ (ಪಣಾಪ. ೯-೦೧೯). ಹಿಸುಣತೆ : ಹಿಸುಣತೆಯ ಹಿಂಗಿಸಿ ಮನಸ್ಸಿನ ಮಸಕವನು ಮಾಣಿಸಿ ವಿಕಾರದ ವಿಷಯ ವಿಧಿಗಳನುಱ್ ವಿಸರ್ಜಿಸಿ . . . ಸಸಿನೆ ಸತ್ಕೃತಿ ನಡೆವಗಲ್ಲದೆ ಹುಸಿಯ ನುಡಿವಗೆ ಭಕ್ತಿಯಹುದೇ (ಪ್ರಭುಲಿಂ. ೧೬-೯೦).

[ಪಿಸುಣ$_1$ (<ಪಿಸುಣ್) +—ತೆ$_3$./ ಸಂ. ಪಿಶುನತಾ]

ಪಿಸುಣತ್ವ (ನಾ). = ಪಿಸುಣತನ : ವಿಷಮವಿಶ್ವಾಮಿತ್ರಮುನಿ ಮುನಿದು ತಪ್ಪ ಸಾಧಿಸದಪ್ಪನಱಿದಿರೆಂದಱುಪಬೇಕಱುಸಿದಡೆ ಪಿಸುಣತ್ವ ವಱುಪದಿರ್ದಡೆ ನೃಪನ ಕೇಡ ನಾನೋತುಪೇಕ್ಷಿಸಿದಾತನು . . . ಇದ ವೇಳದಂತೆ ವೇಳ್ದಪೆನೆಂದು ನೆನೆದನಾ ಮುನಿನಾಥನು (ಪಪಶಾ ೫-೬೨).

[< ಸಂ. ಪಿಶುನತ್ವ]

ಪಿಸುಣಾಡು, ಹಿಸುಣಾಡು (ಕ್ರಿ). ಚಾಡಿ ಹೇಳು ; ದೂರು ಹೇಳು ; ದೂರು : ಮೂಡಿದ ದೊಡವಿ ಮುಗುಳ್ಮೊಗವಿಡಿಱುವುಂಜರೀಸ್ತನಂ ತೋಳ್ಮೊದಲೊಳ್ ತೀಡುವ ನಱುಗಂಪೇಂ ಪಿಸುಣಾಡಿದುದೋ ಸಖಿಗೆ ಪುಷ್ಪಸಮಯೋದಯಮಂ (ಪ್ರಸುಪ್ರ. ೩-೦೦೫); ಅದಱೊಳ್ವಿದ್ಯಾಧರ ವಿಘನಂ ಕೂಡಿದುವನರಸನೊಳ್ಪಿಸುಣಾಡುವೋಲ್ . . . ಆ ನವ ಮೌಂಧಕೆ ಪದೆದೆಱಗುವ ಪೊಸಪಱಮೆಂಗಳ ಪಸುಳೆಯಿಂಚರವೊಪ್ಪದುವು (ಪಪುಶಾ. ೯-೯); ನಿನ್ನ ಹಿಂಗಡೆಯೊಳು ಪಿಸುಣಾಡುವವನನು ಓಡಿದೀಯ ತಡೆದೀಯ ನೀನು (ಇಂಶಾಪ. ೬೬-೬೨). ಹಿಸುಣಾಡು : ದುಡಿದು ಹಣ್ಣಾದ ದೇಹ ಮನದ ಬೇಸರದ ಭಾವನೆಯನ್ನು ಹಿಸುಣಾಡುವಂತಿವೆ (ಪೋಕಸಾ. ೯೬ ಪ್ರಸ್ತಾವನೆ). [ಪಿಸುಣ್ + ಆಡು$_1$]

ಪಿಸುಣಾಡುಹ (ನಾ). ಚಾಡಿ ಹೇಳುವುದು; ಬೇರೆಯವರ ಬಗ್ಗೆ ದೂರುವುದು ; ದೂರು ಹೇಳುವುದು : "ಪಿಶುನಭಾವಃ—ಪಿಸುಣಾಡುಹಂ. ಕೊಡೆಯ" (ಪಕಿಶಾ. ೨೬-೦೬).

[ಪಿಸುಣಾಡು + — ಹ$_3$ (< — ಪ$_3$)]

ಪಿಸುಣಿ (ನಾ). ೧. ಕೆಟ್ಟ ವ್ಯಕ್ತಿ ; ನೀಚ ; ದುಷ್ಟ : ಬೇಡಿದರೆ ಬೇಡುವದು ಮಾಡುವ ಧರ್ಮಿಯನು ಮೂಢಮೂರ್ಖರನು ಪಿಸುಣಿಗಳ ಪೀಡಿಸಿ ಬೇಡಬೇಡೆಂದ (ಸರ್ವಜ್ಞ. ೬೦೩). (ಗು). ೨. ಕೆಟ್ಟದಾದ ; ನೀಚವಾದ ; ದುಷ್ಟ : ಹಸಿದವರನು ಕೂಡಿ ಪುರುಷ ಮನೆಗೆ ಬಂದು ಅಸಿಯಳ ಕೇಳಲಾಕ್ಷಣದಿ ಗುಸುಗುಟ್ಟಿ ಕೊನರುವ ಪಿಸುಣಿಮನದ ಹೆಣ್ಣ ಕಸವೆಂದು ಸೀಯೆ ನಾನವಳ (ಕಪೋತ.೦೯-೬೩). [ಪಿಸುಣ್ + —ಇ$_3$]

ಪಿಸುಣಿಗ, ಹಿಸುಣಿಗ (ನಾ). ಚಾಡಿಮಾತನ್ನು ಹೇಳುವವನು ; ಚಾಡಿಕೋರ : ಶ್ವಾನಬಾಲವು ಡೊಂಕು ಹೀನಮನವದು ಡೊಂಕು ಕಾನನದಿ ಹರಿವ ಹೊಳೆ ಡೊಂಕು ಪಿಸುಣಿಗನು ಶಾನೆ ಡೊಂಕೆಂದ (ಸರ್ವಜ್ಞ. ೦೪೬೨); ಯಾಮಿನನಂಥ ಪಿಸುಣಿಗರ ಒಂದು ಪರಿವಾರವೆ ದರ್ಬಾರಿನ ಸುತ್ತಲೂ ಅದರ ಬಿಗುಹನ್ನು ಶಿಥಿಲಮಾಡಲು ಸುಳಿದಾಡುತ್ತಿದೆ (ಪೂರ್ವ. ೬೩). ಹಿಸುಣಿಗ : ಮಿತ್ರಂಗೆರಡು ಬಗೆದವನ ಹಿಸುಣಿಗನ ಕೃಪಣನ ವೃಥಾ ಕೋಪಿಸುವವನ ದುರ್ಗತಿಗಳಾಗಲಿ ಶಶಿಮುಖಿಯೆ ನಾ ಮರಳಿ ನಿನಗಳು ಪಿದರೆ (ಪ್ರಭುಂ. ೦೦-೦೩). [ಪಿಸುಣ್ + —ಇಗ]

ಪಿಸುಣಿಸು (ಕ್ರಿ). ಚಾಡಿ ಹೇಳು ; ದೂರು ಹೇಳು ; ದೂರು : ಇಂದಿವನ ಮೇಲೆ ಪಿಸುಣಿಸಿದವರ್ ಬಲ್‌ಬನ್ನಮಂ ದಿಟಂ ತಾಳ್ವರಲ್ಲದೆಯಿ ಮಹಿಪನಿನಿಸು ಕುಂದನಾಂಪನೆಯೆಂಬವರ್ . . . ಕೆಲಂಬರಲ್ಲಿ (ಶಪ್ತಕಾ. ೬-೩೨). [ಪಿಸುಣ್ + — ಇಸು$_3$]

ಪಿಸುಣು 'ಪಿಸುಣ್' ನೋ.

ಪಿಸುಣೆ (ನಾ). ಚಾಡಿ ಹೇಳುವವಳು ; ಚಾಡಿಕೋರಿ : ಪಿಸುಣೆ ದುರಾತ್ಮೆ ದುಶ್ಚರಿತೆ ದುರ್ಭಗೆ ದುರ್ಮತಿ ದುಷ್ಟೆ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಸುಪತಿ. ೬-೬). [ಪಿಸುಣ್ + — ಎ$_2$]

ಪಿಸುಣ್ಗೆಡೆ (ಕ್ರಿ). (ಬೇರೆಯವರ ಮೇಲೆ) ಅಪವಾದವನ್ನು ಹೊರಿಸು ; ನಿಂದಿಸು ; ದೂರು : ಅನುನಯಾಭಿವಾದನಸಮನ್ವಿತಂ ಮಧುಕೈಟಭಂ ಕಳಿಪೆ ನಾರದ ನಾರದಂ ನುಡಿದರೆಂಬಂತೆ ಪಿಸುಣ್ಗೆಡೆದು ಸನ್ಮಾರ್ಗಾನುವರ್ತಿಯಾಗಿ (ಅನಂಪು. ೦೩-೨೨ ಪ) ; ಬಿಜ್ಜಳಂ ಸಭಾಸದರೊಡನೆ ಕಂಡು ಕೌತುಕಂಗೊಂಡು ಪಿಸುಣ್ಗೆಡೆ[ಪಾಠಾಂ. ಣ್ಗೈ]ದ ಖಳರಂ ತರ್ಜನಂಗೈದು ಮತ್ಪುರದೊಳಿನ್ನಾವನಾದೊಡಮಿಂತು ಬಸವನಂ ಕೂರ್ತು ಪಿಸುಣ್ಗೆಡೆಯೆ ಜಿಹ್ವಾಚ್ಛೇದನಂಗೈಪೆನೆಂದು ಪೂಣ್ದು ನುಡಿದು (ಪ್ರಸಂ ೬-೦೬ ಪ). [ಪಿಸುಣ್ + ಕೆಡೆ$_2$]

ಪಿಸುಣ್ಬೇಟು (ಕ್ರಿ). ಚಾಡಿಯನ್ನು ಹೇಳು,—ನುಡಿ ; ದೂರು : ಧರ್ಮಿಗಂ ಕೊಲೆಯೇ ಮಂತ್ರಿಗಮಿಚ್ಛಕಾಱತನಮೇ ತಕ್ಕಂ ಪಿಸುಣ್ಬೇಟ್ವನೇ ಚಲಮಂ ಗಂಡುಮನಪ್ಪುಕೆಯ್ವೆನಗಮಾ ಕೌಂತೇಯರೊಳ್ ಸಂಧಿಯೇ (ಗದಾಯು. ೩-೪೬) ; ಈತನನುದಾಸೀನಂ ಮಾಡಿ ಕಳಿಪಿದೆನ ಪ್ಪೊಡೇನಾನುಮಂ ಪುಸಿದು ಪಿಸುಣ್ಬೇಟ್ದಪಂ (ಶಂಸಕಂ. ೩೦-೦೯) ; ಕೆಳದಿಯನಡಂಗಿ ಕಾಡಲ್ ಮುಟುಂಕೆ ಮತ್ತೊರ್ವಳೇಂ ಪಿಸುಣ್ಬೇಟ್ದುವೊ ಕೋಮಳೆಯಿರ್ದೆಡೆಯಂ ತತ್ಪರಿಮಳಕ್ಕೆ ಮೇಗೆಳಸಿ ಸುಟಿವ ಮಧುಕರನಿಕರಂ (ಸಂಪ್ರಪು. ೬-೦೪೦). [ಪಿಸುಣ್ + ಪೇಟು]

ಪಿಸುದನಿ (ನಾ). ತಗ್ಗಿದ ಧ್ವನಿ,—ಸ್ವರ : ಪಿಸುದನಿಯಲ್ಲಿ ಆಡಿದ ಮಾತುಗಳನ್ನೂ ಇವರು ಕೇಳಬಲ್ಲರು (ಅಕ್ರಮ. ೮೯) ; ಅದಾಗ ತಂದೆಯವರು ಪಿಸುದನಿಯಲ್ಲಿ ಅಮ್ಮನ ಹತ್ತಿರ ಮಾತನಾಡಹತ್ತಿದರು (ಅಪೋಲೀ. ೩). [ಪಿಸು + ದನಿ$_1$]

ಪಿಸುನುಡಿ$_1$ (ಕ್ರಿ). (ಕಿವಿಯಲ್ಲಿ) ಮೆಲ್ಲಗೆ ಹೇಳು ; ತಗ್ಗಿದ ಧ್ವನಿಯಲ್ಲಿ ಮಾತನಾಡು : ತಾಯಳಲುತಿರೆ ಮುಂದೆ ತಂಗಾಳಿಯೆನೆ ಬಂದು ಕಾಯುವಳ್ ಪಿಸುನುಡಿದು ಕಾಲೂರ ಚೆಲುವೆ (ಕಾಲೂರ. ೦೫೬-೪೨೨). [ಪಿಸು + ನುಡಿ$_1$]

ಪಿಸುನುಡಿ$_2$ (ನಾ). ಕಿವಿಮಾತು; ಗುಟ್ಟು : ನಡೆದಿವೆ ಹೆಣ್‌ಗಂಡಿನ ಕಾಲುಗಳು . . . ಪಿಸುನುಡಿಗಳ ಮಾರ್ದನಿಗಳ ಕಿರುಗೋಣೆಗಳಿಂದ ಕಾಣದ ಗಡಿಗಾಡುಗಳಿಂದ (ಶ್ರೀಕ್ಷಿಣಾ. ೦-೦೦); ಹೊರಗಡೆಗೊಯ್ವೊಡೆ ಮೃತ ಮೃತ್ತಿಕೆಯ ಗೋಡೆ ಒಳಗುಸುರಿದ ಪಿಸುನುಡಿಯ ಇಲ್ಲಿ ನೀ ಪ್ರಾರ್ಥಿಸಿ ಮೆಲ್ಲನೆ ಬೇಳ್ಪೊಡೆ ಕೇಳಿಸಿಕೊಳನೆ ಆ ಒಡೆಯ (ಇಂಶಾಕ. ೦೩೦-೪೪). [ಪಿಸು+ನುಡಿ$_2$]

ಪಿಸುಮಾತು 'ಪಿಸುವಾತು' ನೋ.

ಪಿಸುರು$_1$ 'ಪಿಸರು$_1$' ನೋ.

ಪಿಸುರು$_2$ 'ಪಿಸರು$_2$' ನೋ.

ಪಿಸುವಾತು, ಪಿಸುಮಾತು (ನಾ). ಕಿವಿಮಾತು; ಪಿಸುನುಡಿ : ಮುಂಜಾವದುದಯವಲಿ ಕಮ್ಮಲರ ಪಿಸುವಾತು ಭೃಂಗಜೀವನವನೆಳ್ಚರಿಸುವಂತೆ . . . ಬಾ ಎನ್ನ ಬಯಲುಗುಡಿಗೆ ! (ಕಪಿಣಾ. ೬೬-೦). ಪಿಸುಮಾತು : ಪಿಸುಮಾತೊಲು ದೆಸೆದೆಸೆಯೊಳು ಹಬ್ಬಿದೆ ಎಲೆಯ ದನಿ (ಪೂರ್ವಕಾ. ೪೨-೦೯); ಕಂಪಿತಸ್ವರದಿಂದ ಮೆಲ್ಲನೆ ಪಿಸುಮಾತಿನಲ್ಲಿ "ಶಿವು" ಎಂದೆ (ರಾಮಾಪ. ೦೦೬); ಅವನು . . . ಆಗಾಗ್ಗೆ ಪಿಸುಮಾತಿನಲ್ಲಿ ಏನಾದರೂ ಹೇಳುತ್ತಿದ್ದನ (ಮರೆಸಾ. ೦೦೬); ಕುಡಿದವನು ಬಲ್ಲನೆ ಪಿಸುಮಾತ ? (ಗಾಡೆ). [ಪಿಸು+ಮಾತು$_1$]

ಪಿಸುಟು (ಕ್ರಿ). ೧. ಸಿಗಿ; ಸೀಳಿ·ಹಾಕು: ಕಿತ್ತು ತೆಗೆ: ನೆಲಕ್ಕೆ ಬಾಳನಲ್ಲಾಡೆ ನೆಗಪ್ಪಿಕೊಂಡು ತೊಡೆಗಾ ನರಸಿಂಹನವುಂಕಿ ಕಂಭದಿಂ ಮೂಡಿದ ಕಾಳರಕ್ಕಸನನಿಕ್ಕುವವೋಲ್ ನಖದಿಂ ಕರುಳ್ಗಳಂ ತೋಡಿ ಪಿಸುಟ್ದು ಸೀಳ್ದು ಬಿಸುಟಂ ಕಲಿಕಂಸನನಬ್ಜಲೋಚನಂ (ಅರ್ಥಪೇ. ೬-೦೦೭). ೨. ಹಿಸಿದು ಹೋಗು; ಹಿಂಜಿ ಹೋಗು; ಹರಿದು ಹೋಗು : ಪೆರ್ಬುಲಿ ಪಾಯೆ ಕಂಠಗತ ಜೀವಿತರಾದವರೆಕ್ಕಲಂ ಕನಲ್ದುರ್ಬಿ ಪಿಸುಟ್ದ ದೊಂಡೆಗರುಳಂ ತಳೆದಿರ್ಪವರ್ . . . ಬರ್ಪವರೊಪ್ಪಿದರ್ (ದಶಕು. ೩-೪೦). ೩. ಸೀಳಿ ಹೋಗು ; ಬಿರಿದು ಹೋಗು; ಒಡೆ : ಚುರ್ಚು ಮಾರ್ನುಡಿಯದೆ ಗಾಣದೊಳ್ ಪಿಟ್ ಪಿಸುಟ್ದಿರೆ [ಪೋ]ಟಿಸು ಪಿಂಡಿವಾಳದೊಳ್ (ಸುಕುಮಾ. ೬-೩೨); ಪರ್ಬಿದ ದುಸ್ತಮಸ್ತಮೋನ್ಮದಕರಿಯೂಥಮಂ ಪೆಳಱ್ ಪೋಟ್ ಪಿಸುಟ್ದ ತದುತ್ತಮಾಂಗದಿಂ ಕೆದಱಿದ ಮೌಕ್ತಿಕಾವಳಿವೊಲಾದುವು ಮೂಡಣ ತಾರಕಾಳಿಗಳ್ (ಕಾಪ್ಯಾಪ. ೯೦೨); ನೃಪಂ . . . ಆ ನೆತ್ತದ ಮಣಿಯಿಂದಿಱ ದೊಡೆ ನೆತ್ತಿ ಪಿಸುಟ್ದತ್ತು ಸತ್ತುವಂತಾಯೆರಡುಂ (ಯಶೋಕ. ೩-೪೩).

ಪಿಸ್ತಾ, ಪಿಸ್ತೆ (ನಾ). ಒಂದು ಬಗೆಯ ಮರ ಮತ್ತು ಬಾದಾಮಿಯಂತಹ ಅದರ ಬೀಜ; ೫ ಕೆಲವು ಸಿಹಿತಿಂಡಿಗಳನ್ನು ತಯಾರಿಸುವಾಗ ಈ ಬೀಜವನ್ನು ಬಳಸುತ್ತಾರೆ : ಇಷ್ಟರಲ್ಲೇ ಅವನು ಪ್ರತಿದಿನವೂ ಬಂದು ಪಿಸ್ತಾ, ಬಾದಾಮ ಲಂಚ ಕೊಟ್ಟು ಕೊಟ್ಟು ಮಿನಿಯ ಪುಟ್ಟಹೃದಯವನ್ನು ಅದೆಷ್ಟೋ ಆಕ್ರಮಿಸಿಕೊಂಡು ಬಿಟ್ಟಿದ್ದಾನೆ (ಇಷ್ಟಕ. ೩೪); ೨೦ ಸೂರ್ತಿ ೪೨ ಬೇತಾಳಮಣದ ಜೀನಸಗಳು . . . ರ ಪಿಸ್ತಾ (ಮುಂಡಪ್ಯಾ. ೦೨೩). ಪಿಸ್ತೆ : ಈ ಹಡಗಗಳಲ್ಲಿ ಅರಬಸ್ತಾನದಿಂದ ಉತ್ಪತ್ತಿ ಖಜೂರ, ಡಾಳಿಂಬ, ಬದಾಮು, ರಾಳ, ಮಿಠಾಯಿ, ಮನೂಕ, ಪಿಸ್ತೆ ಮುಂತಾದ ಸರಕುಗಳು ಬರುತ್ತವೆ (ಕಪಾಗ. ೩೦೩); ಗೋಡಂಬಿ, ಮನೂಕ, ಮುಂಬೈಯ ಪಿಸ್ತೆ, ಹಾಗು ಹತ್ತೆಂಟು ಹಣ್ಣುಗಳ ಶೀಕರಣಿಯನ್ನು ತಿನ್ನುವಾಗ ವಸಂತರಾಯನ ಆದರ ಏನಯಗಳು ಉಕ್ಕೇರಿದವು (ಗಂಪಾಯಿ. ೨೦೩). [←ಪಾರ. ಹಿಂ. ಮರಾ. ಪಿಸ್ತಾ]

ಪಿಸ್ತೂಲು (ನಾ). ಸಣ್ಣ ತುಪಾಕಿ,—ಬಂದೂಕು : ಜನರಲ್ ಮೆಂಡೂಸ್‌ಸಾಹೇಬ್‌ಬಹಾದ್ದೂರವರು ಒಡಂಬಡದೆ ತಮ್ಮ ಕೈಯಿಂದ ಪಿಸ್ತೂಲಿನ ಗುಂಡಿನಿಂದ ತಮ್ಮ ಮೈಗೆ ತಾವೇ ಹೊಡೆದು ಜಕಮಿ ಮಾಡಿಕೊಂಡು (ರಾಷೇಂಪ್ರ. ೮೬); ಪಿಸ್ತೂಲನ್ನು ದೊರಕಿಸ

ಬೇಕಾದರೆ ಸಾಕುಸಾಕಾಗಿ ಹೋಯಿತು(ಅಮಗಾಂ. ೫೦). [←ಇಂ. Pistol]

ಪಿಸ್ತೆ 'ಪಿಸ್ತಾ' ನೋ.

ಪಿಹಿತ (ಗು). ೧. ಮುಚ್ಚಿದ; ಮರೆ ಮಾಡಿದ: ಅನೇಕಸೇವಕ ಕ್ಷತ್ರಿಯಾತಪತ್ರಮಂಡಲಪಿಹಿತದಿನಕರನುಮುಚ್ಚಲಿತ ಬಹಲಧೂಲೀಪಟಲ ಪಿಹಿತರಿಪುನೃಪತಿನಗರನುಂ . . . ಆಗಿ ನಡೆಯೆ(ಅದಿಪು. ೦೨-೬೦ ಪ); ನಿರ್ದಯ ಪೋಗು ಬೇಗಮೆಂಬಂತೆಯುಮೆನ್ನನಶ್ರುಪಿಹಿತಾಕುಲದೃಷ್ಟಿಗಳಿಂದೆ ನೋಡಿದಳ್ (ಕಾಸಂಕಾ. ೬೬೮); ಕಾಂತಾಕೀರ್ಣಪಿಷ್ಟಾತಕಪಿಹಿತಲತಾಂತಂಗಳೊಳ್ ಪಾಯ್ದು ಮೆಯ್ ಶಂಕಿಸೆ (ಲೀಲಾವ. ೦೯-೨೦). (ನಾ). ೨. ಮುಚ್ಚುವಿಕೆ; ಮರೆಮಾಡುವಿಕೆ: "ಅಪವಾರಿತಂ, ಸಂವೃತಂ ಸಂದಿತಂ ಪಿಹಿತಮೆನಲು ಮುಚ್ಚಲ್ಕೆ ನಾಮಂ" (ಮುಂಗಣಾ. ೦೩೦-೦೯). ೩. ಮುಚ್ಚಿರುವಂತಹುದು; ಮುಚ್ಚಿದುದು: "ಅಪವಾರಿತಂ, ಪಿಹಿತಂ, ಸಂವಿತಂ, ಸಂವೃತಂ, ಸ್ಥಗಿತಂ--ಈ ೫ ಮುಚ್ಚಿದುದು" (ಹಲಾಯು. ೦೨೨-೫೮). [ಸಂ.]

ಪಿಳಕಾರಿ (ನಾ). ಒಂದು ಬಗೆಯ ಹೂವಿನ ಗಿಡ; ಕಣಗಿಲೆ: "ಪಿಳಕಾರಿ-ಗಣಜಿಲು" (ಓಪಧಿ. ೯೮). [?]

ಪಿಳಕಿಸು, ಪಿಳಿಕಿಸು, ಪಿಳುಕಿಸು (ಕ್ರಿ). (ರೆಪ್ಪೆಯನ್ನು ಒಂದೇ ಸಮನೆ) ಬಡಿ; ಮಿಟುಕಿಸು: ಪೆಜತ್ತಾಯರೂ ಕಣ್ಣು ಪಿಳಕಿಸಿ ಕೊಂಡು . . . ಕುಳಿತಿದ್ದರು (ಗಂಗಾವ. ೨೫): ಎಚ್ಚರ, ಕಣ್ಣು ಪಿಳಕಿಸ ಬಾರದು; ಉಗುಳು ನುಂಗಬಾರದು; ಇಲ್ಲವಾದರೆ ಸತ್ತಿಯೆಂದು ತಿಳಿ! (ಕುಂಹಿಂ. ೨೬). ಪಿಳಿಕಿಸು: ಗೋವರ್ಧನನಿಗೆ ತಾನಾವುದೋ ಗೂಡನ್ನು ಸೇರಿದ ಅರಿವಾಗಿ ಕಣ್ಣು ಪಿಳಿಕಿಸಲು (ಮುಗಿಮ. ೦೦೬). ಪಿಳುಕಿಸು: ಚಾರು ತುಂಬ ಸಿಡಿಮಿಡಿಗೊಂಡು ಮಂಚದ ಮೇಲೆ ಕುಳಿತು ಕಣ್ಣು ಪಳಪಳ ಪಿಳುಕಿಸಿ . . . ದುರುದುರು ನೋಡಹತ್ತಿದಳು (ಇಪ್ಪಳ. ೨೮೮); ಪಿಳುಕಿಸದ ಸಿರಿಗಣ್ಣು ಸುತ್ತು ಚಿನ್ನದ ರೇಖೆ ಬೆಳ್ಳಿ ಮಿರುಗಿನ ಮೈಯ ಕಾಂತಿ ನಿನಗೆ (ಪಪಲ್ಲ. ೦೦-೯) 'ಪಿಳಿಪಿಳಿ' ಪರಾ. [ಪಿಳಕ್ಕು$_0$ + —ಇಸು$_3$]

ಪಿಳಗು 'ಪಿಳ್ಗು' ನೋ.

ಪಿಳಚಲು (ನಾ). ಕಣ್ಣು (ಪಿಸರಿನಿಂದ ಕೂಡಿ) ಗುಳಿ ಬಿದ್ದಿರುವುದು; ಕಾಂತಿಹೀನವಾದುದು: ಅವನ ಕಣ್ಣು ಯಾವಾಗಲೂ ಪಿಳಚಲು (ಕೂಡಿ). 'ಪಿಳಚಲುಕಣ್ಣು' ಪರಾ. [ಪಿಳಚು + — ಅಲು(< — ಅಲ್$_2$)]

ಪಿಳಚಲುಕಣ್ಣು (ನಾ). (ಪಿಸರಿನಿಂದ ಕೂಡಿ) ಗುಳಿ ಬಿದ್ದ ಕಣ್ಣು; ಕಾಂತಿಹೀನವಾದ ಕಣ್ಣು: ಹಣೆಯಲ್ಲಿ ಎದ್ದು ಕಾಣುವ ಗಂಧಾಕ್ಷತೆ, ಪಿಳಚಲುಕಣ್ಣಿಗೆ ಕನ್ನಡಕ . . . ಇವುಗಳಿಂದ ಅಲಂಕೃತರಾದ ಸೀತಾ ರಾಮಯ್ಯ (ಸೋತುಗೆ. ೫). 'ಪಿಸರುಗಣ್ಣು' ಪರಾ.

[ಪಿಳಚಲು + ಕಣ್ಣು (< ಕಣ್). / ತಮಿ. ಪಿಳಿಚ್ಚೈಕ್ಕಣ್]

ಪಿಳಚು (ನಾ). ಕಣ್ಣು (ಪಿಸರಿನಿಂದ ಕೂಡಿ) ಆಕರ್ಷಣೆಯ ಶಕ್ತಿಯನ್ನು ಕಳೆದುಕೊಂಡಿರುವುದು; ಕಾಂತಿಹೀನವಾದುದು: ಕಣ್ಣೇನೋ ಪಿಳಚು ದಿಟ, ಹಣ ಪಿಳಚೆ? (ಪಪ್ಪಕ. ೫). [ದೇ.॥ ತಮಿ. ಪಿಳಿಚ್ಚೈ]

ಪಿಳಪಿಳನೆ 'ಪಿಳ್ಪಿಳನೆ' ನೋ.

ಪಿಳಿ$_1$ 'ಪಿಟಿ' ನೋ.

ಪಿಳ್ಳಿ, ಹಿಳ್ಳಿ (ಕ್ರಿ). ಒಡೆ: ಸೀಳು; ಬಿರಿ: ಒಡೆಯಲಜಾಂಡಂ ಕುಲಗಿರಿ ಕೆಡೆಯಲ್ ಪಿಳಿಯಲ್ಕೆ ಧಾತ್ರಿ ದಿವಿಜರ್ನಡುಗಲ್ಕೆ . . . ಸಿಂಹನಾದಂಗೆಯ್ದಂ (ಗದಾಯು. ೬-೦೬). ಹಿಳ್ಳಿ: ಇಳೆ ಹಿಳಿಯಲು ಜವ ಜರಿಯಲು . . . ಹರಿ ಬೊಮ್ಮರು ಕಂಬನಿದುಂಬಿದರೆನೆಯಪಜಯ ಗಜಬಜವು (ಪೀರೇಶ. ೨ ೩೪): ಪರ್ವತ ಹಿಳಿಯೆ ಹೆಚ್ಚಿದ ಪಟಹ ಪಣಹ ಮೃದಂಗ ಡಿಂಡಿಮದ ಉಲಿಯ . . . ಗೊಂದಳದ ಕಳಗರ್ಚಾಯ್ತು ಕೌರವಸೈನ್ಯಶರಧಿಯಲಿ (ಕುಪ್ಯಾಕ್ರೋ. ೯-೨೬). 'ಪಿಳ್ಗು' ಪರಾ.

[ದೇ.॥ ತಮಿ. ಪಿಳ್. ಪಿಳ; ಮಲ. ಪಿಳ]

ಪಿಳಿಕಿಸು 'ಪಿಳಕಿಸು' ನೋ.

ಪಿಳಿಕು 'ಪಿಳ್ಕು' ನೋ.

ಪಿಳಿಗು 'ಪಿಳ್ಗು' ನೋ.

ಪಿಳಿಪಿಳಿ (ನಾ). ಒಂದು ಅನುಕರಣ ಶಬ್ದ: ಅವನು ಪಿಳಿಪಿಳಿ ನನ್ನನ್ನೇ ನೋಡುತ್ತಿದ್ದ (ದೀಶದ. ೮೭).

ಪಿಳಿಪಿಳಿ ಕಣ್ಣು ಬಿಡು = (ಆಶ್ಚರ್ಯ ಅಥವಾ ಅಸಹಾಯಕತೆಗಳಿಂದ) ಕಣ್ಣನ್ನು ಪಿಳಕಿಸು; ಒಂದೇ ಸಮನೆ ನೋಡು: ಬಿಂದಣ್ಣ ಪಿಳಿಪಿಳಿ ಕಣ್ಣು ಬಿಟ್ಟರು (ಪೃಪಿ. ೯೫೦); ನಾನೊಬ್ಬನೇ ಪಿಳಿಪಿಳಿ ಕಣ್ಣು ಬಿಡಬೇಕಾಗಿದೆ! (ಶಾಲಿಮ. ೬೬). 'ಪಿಳ್ಪಿಳನೆ' ಪರಾ.

ಪಿಳಿಲ್ 'ಪಿಟಿಲ್' ನೋ.

ಪಿಳಿಲು$_1$ 'ಪಿಣಿಲ್$_3$' ನೋ.

ಪಿಳಿಲು$_2$ (ನಾ). ಕಾತರ (?): ಇಂದುವದನೆಯರು ದೂರದೊಳಲ್ಲಮನ ಮಹಾಸೌಂದರ್ಯವೆತ್ತ ಶ್ರೀಪಾದಪದ್ಮಗಳಾನಂದದಿಂ ಕಂಡು ವಿಮಳೆಗೆ ಮಾಯೆಗಂ ಪೇಳೆ ಜೀವದೊಳು ಪಿಳಿಲನಾಂತು (ಪ್ರಮಪು. ೫-೦೯೩). [?]

ಪಿಳುಕಿಸು 'ಪಿಳಕಿಸು' ನೋ.

ಪಿಳುಕು$_1$ 'ಪಿಳ್ಕು' ನೋ.

ಪಿಳುಕು$_2$ (ನಾ). ಮರಿ; ಶಾಬ; ಪೋತ: ಬೇಡಂ ಪಿಳುಕೊತ್ತಿನ ತಾಯೋಡಲ್ ಬಿಟ್ಟಲ್ಲಿ ಪಿಡಿದನಂತಾ ಪಿಳುಕಂ ಬೇಡಿತಿಗೆ ಸಲಹಲಿತ್ತೊಡೆ ಗೂಡಿನೊಳದು ಬಳೆದು ತಳೆದುದಂಗಚ್ಛವಿಯಂ (ಯಶೋಸ. ೩-೩೬). 'ಪಿಳುಗಾಡಿಸು', 'ಪಿಳ್ಳೆ' ಪರಾ. [<ಪ್ರಾ. ಪೀಲುಅ./ಸಂ. ಪೀಲುಕ]

ಪಿಳುಕು$_3$ (ನಾ). (ಸಸ್ಯದ) ಅಡಿಭಾಗ; ಬುಡದ ಭಾಗ; ಕೂಳೆ (?): ಮತ್ತಮಾಂಸಮದುಟಿಯೆ ಪಡಹದ ಪಿಳುಕುಟಿಯೆ ಕೊಳಂಬೆಯ ಕೂಕಂಬದ ಕೋಡಂಬೆಯ ಮುಡಿಗೆಯ ತಾಣಂಗಳೊಳ್ ಮೇದು ಮೆಯ್ವರ್ಚಿ ಸೊಪಡಿಂಗೆ ಸೋಲ್ತು ಕೂಡದೆ ಕವಲ್ದು ಮೇದು ತಣಿದು ಕೊಟ[ಣ]ಕಿಟ್ಟಾಡುವ ಮೃಗಂಗಳೊಳ್ (ಅನಂಪು. ೦೦-೩೯ ಪ). [?]

ಪಿಳುಗಾಡಿಸು, ಹಿಳುಗಾಡಿಸು (ಕ್ರಿ). ಮರಿಯನ್ನು ಆಡಿಸು,-ಮುದ್ದಾಡು: ಅಳಿಗಳ ರತ್ನಕದಂಬದ ಬೆಳಗಿಂ ಬಹುವರ್ಣಜಲಮನಾಂತ ಕಟಾಹಂಗಳ ನಡುವೆ ಪೆತ್ತ ಮಱಿಯಂ ಪಿಳುಗಾಡಿಸು[ಪಾಠಾಂ. ಬಳುಕಾಡಿಸು] ದಂತೆ ಸರಸಿ ಪಡೆದುದು ಪದಮಂ (ಅನಂಪು. ೬-೨೫; ಸೂಕ್ತಿಸು. ೦೨-೫ ನೋ); ಪಾಡಿ ನಲಿವಾಱಿಸಿ ತೋಱಿಸಿ ಸೋಂಕಿ ನೂಂಕಿ ಕೌಮುದಿಯೊಳದೇಂ ಚಕೋರಿ ಪಿ[ಪಾಠಾಂ. ಹಿ]ಳುಗಾಡಿಸಿದತ್ತೊ ನಿಜಾಗ್ರಶಾಬಮಂ (ಅನಂಪು. ೬-೮೦; ಸೂಕ್ತಿಸು. ೮-೨೯೬ ನೋ). ಹಿಳುಗಾಡಿಸು: ಮೇಲಿನ 'ಅನಂಪು. ೭-೮೧'ರ ಪ್ರಯೋಗದ ಪಾಠಾಂತರವನ್ನು ನೋಡಿ.

[<ಪಿಳುಕು$_2$+ಆಡಿಸು]

ಪಿಳ್ಕು, ಪಿಳಿಕು, ಪಿಳುಕು$_1$, ಹಿಳಕು, ಹಿಳಿಕು, ಹಿಳುಕು$_1$, ಹಿಳ್ಕು (ನಾ). ೧. ಗರಿಗಳಿಂದ ಕೂಡಿದ ಬಾಣದ ಭಾಗ: ಪುಂಖ: "ಪಿಳ್ಕೆಂದು ಸಾಯಕಪುಂಖಂ" (ಕಶಸಾ. ೫೨-೦೦೮); ವಿಕ್ರಮಾಸಾದಿತ ವಿಶ್ವಲೋಕ ವಿಜಯಂ ಕುಲಿಶಾಸ್ತ್ರದ ಪಿಳ್ಕು ನಾರಿಯೊಳ್ ಕೋದು ಕದಂಪನೆಯ್ದೆ ಧನುವಂ ತೆಗೆದರ್ವಿಸಿದು ಜನಾರ್ದನಂ (ಶಂಠಾಮಾ. ೦೯-೦೬೫); ಶರಮಂ ತೂಣೀರದಿಂದುರ್ಚಿ ತೊಟ್ಟನೆ ಪಿಳ್ಕಂ ತಿರುವಾಯ್ದೆದಂಯ ತೆಗೆದಾ ಕರ್ಣಾಂತಮಂ ತಾಗೆ ಕೋಲಿನ ಪಿಂತಂ ನೆಱೆ ಕೋಲ್ಗಳಟ್ಟುವಿನಮೆಚ್ಚಂ (ಮಜಾಪೇ. ೦೨-೦೦೯); ಪಿಳ್ಕು ಪೆಱಗಾಗಿ ಬರ್ಪ ಶರಮಂ ತನ್ನೊಂದಂಬಿನಿಂ ಮುಱಿದು (ರಾಮಾಕ್ಷ. ೦೯೫-೦೬). ೨. ಬಿಲ್ಲಿನ ತಂದಿ: ಕೊಪ್ಪು; ಗೊಲೆ: "ಕೊಪ್ಪು ಪಿಳ್ಕೆನೆ ಕೋಟಿಯು" (ಕಬ್ಬಿಮಂ. ೯೯). ೩. ಬಾಣ; ಅಂಬು; ಸರಳು: ಕಾದಲರಂ ಪಳಂಚಲೆದ ಪಂಚಶರಕ್ಕದಱಂಕುರಂ (ಪುಣಂ) ಬಾದುದು . . . ಪೂದೊಡಂಬೆ ಪಿಳ್ಕಾದುದು (ಪುಷ್ಪಪು. ೬-೮೦). ಪಿಳಿಕು:

೧. "ಬಾಣದ ಪಿಳಿಕದು ಪುಂಖಂ" (ಪಸ್ತುಕೋ. ೬೫-೦೯). ಪಿಳುಕು1: ೧. ಒರ್ಮೈ ಇರವಿನಿಂ ನೆಱ್ ನಿಂದು ಕೂರ್ಗಣೆ ಪಿಳುಕನಾಯತದಿ ತಿರುವಿನೆಡೆಯೊಳು ತೊಡಚಿ (ಸಾಳ್ಯಭಾ. ೫-೨೬) ; ಮರದ ಕೊಂಬು, ಸರಲ ಪಿಳುಕು (ಕಬ್ಬಾಸು. ೩೦೬ ವ್ಯಾಖ್ಯಾ) ; ಸೆಳೆಯ ಸವಿ ಬೇಱ್, ಪೊನ್ನ ಪಿಳುಕಿನ ಬಲ್ಗಣೆಯ ಸವಿ ಬೇಱ್ (ರಾಮಾಶ್ವ. ೦೫೩-೨೬). ಹಿಳಕು : ೩. ಎಲೆ ಧನಂಜಯ ನಿಲ್ಲು ನಿಲ್ಲೆನುತ ಕೋಪದಿಂ ಹಿಳಕ ಸುರಿದನು ಫಡಫಡೆಂದೆನುತ ರಾಧೇಯ (ಕುರಂಗ. ೬೯-೩೫). ಹಿಳಿಕು : ೧. "ತೆತ್ತಿಸುವ ಹಿಳಿ[ಪಾಠಾಂ. ಳು]ಕು ಕರ್ತರಿ ಪುಂಖಮಕ್ಕು" (ಪುಂಗರಾ. ೬೭-೩೯) ; ಕಾಮನ ಅಂಬಿನ ಕಣೆಯಲ್ಲಿ ಮೂವರು ಬಾಲೆಯರು ಹುಟ್ಟಿದ ವಿವರ ಹಿಳಿಕಿನಲ್ಲಿ ತಾಯಿ ಹುಟ್ಟಿದಳು (ಅಱಿಮಾ. ಳ. ೦೪೦-೫೩೬) ; ಎಸಳಂಬುಗಳ ಹಿಳಿಕು ಹಿಡಿದಾಗಳ್ ರಸದಾಳಿಯ ಬಿಲ್ ಬಾಗುವವೋಲ್ ನವರಸಿಕನ ರೂಪು ಕರಂ ಬಗೆದಾಗಳ್ ಪುಟ್ಟಿದ ಲಜ್ಜೆಯೊಳು ಪೊಸ ಜೌವನೆ ಸಿರಿಮೊಗ ಬಾಗಲು (ಜಯಾಶಾ. ೫-೫೯). ೨. ನಾರಿಯ ಹೂಳುವ ಹಿಳಿಕು ಹೋಳಾಯಿತ್ತು (ಪಸಶಾ. I, ೬೨-೦೦). ೪. ಒಂದು ಬಗೆಯ ಬಾಣ.—ಸರಳಂ: ಹಿಳಿ[ಪಾಠಾಂ. ಳು]ಕು ಕವಲಂಬು ಬೋಳೆವಿದಿರೆಲೆ ಮಿಟ್ಟೆಯಾ ಮೊಳೆ ತೊಡಕು ನಾರಾಚ . . . ಬಿಸುಗದಿರು ಸವಿವಾಯನೆಂಬ ನಾನಾ ಸರಳನು ಸೆಳೆದು (ಸೋಮಸ. ೫-೨೬). ಹಿಳುಕ್ಕು : ೧. ಅಂಬೊಂದು ಹಿಳುಕು ಮೂಱು ಅಲಗಾಱು ಮೊನೆಯೈದು (ಪುರುಪ. ಳ. ೪೨-೦೫೦) ; ಎಲವೊ ಪಿಡಿಪಿಡಿ ಧನುವ ತಿರುವಿಗೆ ಹಿಳುಕ ತೊಡುತೊಡು ಕಾದಲಾಪರೆ (ಕೌಶಿಂಗ. ೩-೦೬) ; ಸರಳ ಹಿಳುಕಿನ ಹೊಂಗಱಿಯ ತುದಿವೆರಳಲೊಯ್ಯಾರಿಸುತ ಬಾಣವ ತಿರುಪಿ ತಿದ್ದುತ ಕೂರಲಗು ಧಾರೆಯ ನಿರೀಕ್ಷಿಸುತ ಇರಲು ಸಾರಿದಳಿವಳು (ಕೊರಂಗ. ೩-೪-೦೫). ೨. ಹಿಳುಕ ಕೆನ್ನೆಗೆ ಸೇದಿ ಬೊಬ್ಬೆಯಬ್ಬರದಿಂದ ತಳುವದೆ ಖಾನಮಲ್ಲು ಕರು ನಿಲುನಿಲು ಹೋಗದಿರೆನುತೆಚ್ಚು ತಮ್ಮ ಕೈಯಳವ ತೋಱಿದರು ಬಾದುರಗೆ (ಕುರಾಸಾಂ. ೦೮-೦೪೨) ; ಹಿಳುಕ ಬಿಟ್ಟಂಬು ಹಿಂದಕೆ ತಿರುಗುವದೇಕೆ ಕಳಿತ ಹಣ್ಣುಗಳು ಕಾಯಹವೆ ಎಳೆಯ ಮಾನವರಾಗುವರೆ ವೃದ್ಧಾಪ್ಯರು (ಅಮುಸಾಂ. ೫-೦೬) ; ಹಿಳುಕ ಕೆನ್ನೆಗೆ ಸೇದಿ ತಾಗಿದನುಳಿದು ಸಹಭವನ (ಅಂಬಿಕಾ. ೦೭-೪೬). ೩. ಹಿಳುಕ ವಿಡಿದರಿಯ ವೋಲಧಿಕ ಚಾಪಮಂ ಬಿಡದೊತ್ತಿ ದೃಷ್ಟಿಯಂ ಕೀಲಿಸುತ ಮುಷ್ಟಿ ಶರಸಂಧಾನದಿಂದ ಬೊಬ್ಬಿಱಿದೆಚ್ಚನಾ ಮನ್ಮಥಂ (ಪೀಸ್ಕೃಪು. ೨-೪-೨೪) ; ಹಿಳುಕ ಹಿಳುಕಿಂದರಿದು ದೈತ್ಯನ ನಿಲುಕಿ ಷಣ್ಮುಖದೇವನೆಂದನು (ಅಂಬಿಕಾ. ೨೭-೪೭) ; ಪಾರ್ಥ ಭಾನುಜನ ಹಿಳುಕಿನೋಳ್ಕಡುನೊಂದು ಮೈಮರೆತು ಮೂರ್ಛೆಯೋಳ್ಮಲಗಿದನು (ಕುರಂಗ. ೬೯-೦). ಹಿಳ್ಕು: ೧. ಕದಿರೊಡೆದ ಬೆಳೆದ ಕಟವೆಯ ಕದಿರ್ಗಾಪಿಂಗೆಱಗಿ ಪಟಮೆಂಗಳ್ಮಱಿಯಿಸುಗುಂ ಮದನಂ ಮಡದಿ[ಲಿ]ಱಿದಿಟಿಪಿದ ಹೊದೆಯಂಬಿನ ಸರಲ ಗಱಿಯ ಹಿಳ್ಕಿನ ತೆಱನಂ (ಅಪಂಪು. ೦-೬೦).

ಹಿಳುಕುಹಿಳುಕು (ದ್ವಿರುಕ್ತಿ) : ಹಿಳುಕುಹಿಳುಕುಗಳಡಸಿ ದೆಸೆ ಕತ್ತಲಿಸಿ ಕೈಕೊಂಡವು ಪತತ್ರಾವಳಿಯ ಪವನನ ಹೊಯ್ಲಿನಲಿ ಬಾಯ್ದಾರೆ ಕಿಡಿಯೇಳೆ ಬಳಿಸರಳ ಬಿಲ್ಲಾಳ ದಡ್ಡಿಯ ಬಲುಹು ತಱುಬಿತು ಪಡಿಮುಖದ ಮಂಡಳಿಕರೆಸುಗೆಯನೆಮವು ಸಮತಳಿಸಿತ್ತು ರಣಕೇಳಿ (ಕುಷ್ಯಾಶೀ. ೬-೪೨); ಹಿಳುಕುಹಿಳುಕುಗಳೊರಸೊರಸು ಮುಂಕೊಳಿಸೆ ಹಿಂದಣಿಸಂಬನಂಬುಚ್ಚಳಿಸ ಲೆಚ್ಚನು ಭೀಮ ರವಿ ನಂದನನ ನಂದನನ (ಕುಷ್ಯಾಳ. ೨೦-೮). ಹಿಳುಕಿನೋಲೆ = ಬಾಣಕ್ಕೆ ಸಿಕ್ಕಿಸಿ ಕಳುಹಿಸುವ ಪತ್ರ ; ಬಾಣಕ್ಕೆ ಸಿಕ್ಕಿಸಿ ಕಳುಹಿಸುವ ಕಾಗದ : ಹಿಳುಕಿನೋಲೆಯ ತನ್ನಿರೆಂದಾ ಅಳುಕುತಳುಕುತೊಬ್ಬನದಱಿತ್ತಿಗೆಯ್ತಂದನೆಳಸಿ ಕೊಟ್ಟನು ಕರಣಿಕಗೆ (ಭರಸ. ೨೪-೪೦).

ಪಿಳ್ಕುಗೊಯ್ (ಕ್ರಿ). ಬಾಣದ ಗರಿಯನ್ನು ಕತ್ತರಿಸು : ಬಿಲ್ಲನೊರೆವ ಸರಳ ತಿದ್ದುವ ಪಿಳ್ಕುಗೊಯ್ವ ಸಂವಣಿ ಕೂಡೆ ಕರಮೆಸೆದುದು ದುರ್ಗದೊಳಗೆ (ಕುರಾಸಾಂ. ೩೭-೫೭). [ಪಿಳ್ಕು + ಕೊಯ್]

ಪಿಳ್ಕೆ, ಪಿಕ್ಕೆ1, ಹಿಕ್ಕೆ1 (ನಾ). (ಕುರಿ, ಆಡು, ಜಿಂಕೆ, ಇಲಿ ಮೊದಲಾದ) ಪ್ರಾಣಿಗಳ ಮಲ ; ಪಿಚಿಕೆ : ಕುಱಿಯ ಪಿಳ್ಕೆ [ಪಾಠಾಂ. ಕ್ಕೆ, ಳ್ಳೆ] ಯನಿಂತು ಭಾವಿಸಿ ಲಿಂಗಮಂ ಮಿಗೆ ಮಾಡಿದಂ (ಪ್ರಸಂ. ೬-೦೯). ಪಿಕ್ಕೆ1: ಹಡಪವಳನ ಹಡಪದೊಳಿರ್ದಡಕೆಗಳಂ ಮಾಡಿಯಾಡ ಪಿಕ್ಕೆಗಳಂ (ಪುಷ್ಪಾಸ್ತ್ರ. ೮-೩೬). ಹಿಕ್ಕೆ1: ಹಿಕ್ಕೆಯ ಹೆಡಿಗೆಯ ಬಿಟ್ಟು ಕಂದಲ ಹೊತ್ತು ಚಕ್ಕನೆ ಮುಂದಕೆ ನಡೆತರಲು (ಅಪಸಂ. ೩೦೦-೦೩೦೭) ; ಕಾಟಕೊಱಟನೆನಿಪ್ಪ ಗೊಲ್ಲರ ಮೇಟಿ ಆಡಿನ ಹಿಕ್ಕೆಯಂ ಶಶಿಜೂಟನೀಶ್ವರನೆಂದು ಪಾಲಂ ತಾನದಱ ಮೇಲೆ . . . ಎಱಿದು (ಬಸಪು. ೯-೦೨) ; ನೀರಿನಲ್ಲಿ ತೌಡು ಹೊಟ್ಟು ಕೋಳಿ ಹಿಕ್ಕೆಗಳನ್ನು ಕದರಿ ಆ ನೀರನ್ನು ದ್ರಾಕ್ಷಿಗಿಡವ ಬೇರಿಗೆ ಹಾಕಿದರೆ ವೃದ್ಧಿಯಂ ಹೊಂದುವದು (ಸೌಗಂಧಿ. ೪೩೪-೦೭); ಏನು ಅಂದದ್ದಕ್ಕೆ ಹುಲಿ ಹಾಕಿದ ಹಿಕ್ಕೆ ಎಂದರು (ಪ್ರಶ್ನೆ. ೯೮).

[ದೇ.॥ ತಮಿ. ಪಿಟುಕ್ಕೈ; ಮಲ. ಪಿಟುಕ; ತೆಲು. ಪಿಡಕ, ಪಿಡುಕ]

ಪಿಳ್ಗಿಸು, ಹಿಗ್ಗಿಸು (ಕ್ರಿ). ೧. ದೊಡ್ಡದನ್ನಾಗಿ ಮಾಡು ; ವಿಶಾಲವಾಗಿಸು : ದೆಸೆಯೆಂಟಂ ಪಿಳ್ಗಿಸುತ್ತಗ್ಗಳಮೆನೆ ಪರೆದಿರ್ಪಳ್ಳೆಗೊಂಬೇಟ್ಗೆಯಿಂದಾಗಸಮಂ ಪೊತ್ತಿರ್ಪ ಮೇಲ್ಗೊಂಬು (ದಕಳು. ೨-೪೬). ಹಿಗ್ಗಿಸು : ೧. ಹಲವು ಪದಗಳು ಬಳಕೆಯಾಗುತ್ತಿದ್ದ ಅರ್ಥವನ್ನು ಕ್ರಮೇಣ ಹಿಗ್ಗಿಸಿಕೊಂಡು ವಿಶಾಲಾರ್ಥವನ್ನು ಪಡೆಯಬಹುದು (ಸೌಂದಸ. ೪೨). ೨. (ಆಲಂ) ಹಿಗ್ಗುವಂತೆ ಮಾಡು ; ಸಂತೋಷಪಡಿಸು : ಪುತ್ರಲಾಭದ ಫಲವಿಶೇಷಿತ ಶಕುನ ಹಿಗ್ಗಿಸಿತವನಿಪನ ಮನವ (ಕೊರಂಗ. ೦-೬-೬). ೩. (ಎರಡು ಹೆಲಗೆಗಳ ನಡುವೆ ಉಳಿಯನ್ನಿಟ್ಟು ಬೇರ್ಪಡಿಸುವಂತೆ) ಬೇರ್ಪಡಿಸು; ಪ್ರತ್ಯೇಕಿಸು : (ಕ). ೪. (ಕಟ್ಟಿಗೆಯ ಹೊರೆಯ ಕಟ್ಟನ್ನು ಸಡಿಲಗೊಳಿಸುವಂತೆ) ಸಡಿಲಗೊಳಿಸು : (ಕ). [ಪಿಳ್ಗು + —ಇಸ್ಸು]

ಪಿಳ್ಗು, ಪಿಗ್ಗು, ಪಿರ್ಗು1, ಪಿಳಗು, ಪಿಳಿಗು, ಹಿಗ್ಗು1, ಹಿಳಗು, ಹಿಳ್ಗು1 (ಕ್ರಿ). ೧. ಬಿರಿ ; ಸೀಳು : ಹಿಸಿ ; ಒಡೆ : ಫಳರಸಂಗಳನೆ ತೆಗೆವಲ್ಲಿ ಹಿಟಿಯೆನೆ ಱಟಂ ಪಿಳ್ಗಿ ಬಿರಿವೆಡೆಯೊಳ್ ಕುಳಂ (ಸಂಜೀಪ. ೨೪). ೨. ದೊಡ್ಡದಾಗು ; ಅಗಲವಾಗು : ಎರಡಳ್ಳೆ ಪಿಳ್ಗಿ ತೇಗುಬ್ಬರಿಸಲ್ ಕುಳಿರ್ವಮಳಜಲಮನೀಂಟಿದೆಂ (ದಕಳು. ೪-೩೪) ; ನಿರಂತರಂ ಸುರಿವ ನುಣ್ದೆನೆಮಲ್ಗಳ ಧಾರೆಗೊಡ್ಡಿ ಚಂಚುರ ನಿಜಚಂಚುವಿಂ ಸವಿದು ಸಂತಸದಿಂದೆರಡಳ್ಳೆ ಪಿಳ್ಗಿ[ಪಾಠಾಂ. ಗ್ಗಿ]ಮಂದರಗತಿಯಿಂ ಮರಳ್ದು ಸುಟಿದಾಡುಗುಮಲ್ಲಿ ಮರಾಳಮಂಡಲಂ (ಕಾಪ್ಯಸಾ. ೦೦೪ ; ಧರ್ಮನಾ. ೨-೩೦ ನೋ). ೩. (ಆಲಂ) ಸಂತೋಷದಿಂದ ಉಬ್ಬು ; ಆನಂದಿಸು ; ಬೀಗು : ಪ್ರೌಢಿಗೆ ಪಿಳ್ಗುತ್ತರಸಂ ಗಾಢೋತ್ಸುಕನಾದನಾತ್ಮಜಾಲೋಕನದೊಳ್ (ಕಕವಿ. ೪-೫೯); ಸುಮ್ಮನದೊಳೆ ಪಿಳ್ಗಿ ನಲ್ಮೆಗಡಲೊಳ್ ಮುಟುಗಾಡಿ ವಿಚಿಂತನಾಗಿ ಕೆಮ್ಮನೆ ಸತಿಗೂಡಿಯಾಟ್ವೆ (ಪಸ್ತಪಂ. ೩-೨೪). ಪಿಗ್ಗು: ೨. ಸರ್ವಜನಂ ಬೆದಱಿ ಮನಂ ಮಱುಗುತಕಟಿದೇನಾಯ್ತೆನಲಳ್ಕದೆ ಸೇದಿರಾಜನಾನಂದವಿನಲಗಂ ನೋಡಿ ಮಚ್ಚಿ ಪಿಗ್ಗುತ್ತಿರ್ದಂ (ಕ್ರಿಪುವಿ. ೨೫-೩೩). ಪಿರ್ಗು1: ೨. ಬಲಿನಗರಕ್ಕೆ ಮೂಗೆನಿಸಿದಾ ತೃಪುರಾಂತಕದೇವತಾಲಯಾವಳಿ ಮುನಿವ ತ್ರಿಲೋಚನನ ಭೂಪತಿರಾಜಿಯ ಪಿಂದೆ ಪಿರ್ಗ್ಗಿ ಪಿತ್ತಲೆಸತೆಯಿಲ್ಲದಲ್ಲುಗುತಮಿಱ್ದುದನೀಕ್ಷಿಸಿ ಬಿರ್ಚ್ಚಿ ಮಾಡೆ ಮಂಡಲಿಕಲಲಾಮನೇಂ ನಿಲಿಸೆ ನಿನ್ದವೊ ಬೆಳ್ಳಿಯ ಬೆಟ್ಟ ನಿಲ್ವವೋಲ್ (ಸೌಇಇ. IX-i, ೦೬೦-೫೬; 1092). ೩. ಗೆಯ್ದ ಗೆಯ್ಮೆಗೆ ಪಿರ್ಗಿ, ಬಾಯ್ ಕೊರ್ಚಿ ನಲಿವಳ್ (ಅಂತಿಗೊ. ೨೨-೦೬೩); ನಗುಗೆ, ಪಿರ್ಗುಗೆ, ನಲಿಗೆ, ಅಣಕಿಸುಗೆ, ಇವನಟಲ್ಗೆ ಆ ಪಿರಿಯ ಸಜ್ಜನರ್ ! (ಅಶ್ವಶ್ವಾ. ೩೯-೦); ನಿನ್ನ ಈಗಳಿನ ದೆಸೆಗೆ ನೀನ್ ಪಿರ್ಗುವೋಲ್ ಕಂಡಪುದು

(ಶಿಕ್ಷಾ. ೩೦-೦೦೦೯). **ಪಿಳಗು :** ೧. ಒಡೆದುದೊ ಪದ್ಮಜಾಂಡಮವನೀ ವಳಯಂ ಪಿಳ [ಪಾಠಾಂ.ಳಿ]ಗಿತ್ತೊ ಮೇರು ಮೇಣ್ ಕೆಡೆದುದೊ ವಾರ್ಧಿ ಯುರ್ಕಿದುದೊ (ಸಂಪ್ರಪು. ೬-೩೦). **ಪಿಳಿಗು :** ೧. ಗೋತ್ರನಗಂ ಪಿಳಿಗಿತ್ತೊ ಸಾಗರಂ ತಳರ್ದುದೊ ಮೇರೆಯಿಂದಂ. . .ಎನಲ್ ವಿಘೂರ್ಣಿಸಿದುದಿರ್ಬಲ ದೊಳ್ ಸಮರಾನಕಸ್ವನಂ (ಪಂಠಾಪು. ೦೩-೩೫); ಕುಳಿಕಣ್ ಕುರ್ಗಿದ ನಾಸಿಕಂ . . .ಪಿಳಿಗಿರ್ದಂಘ್ರಿತಲು ಕೊರಂಟುದಲೆ ಕೊಕ್ಕೋಡಿರ್ದ ಗೋಣಿನ್ನನೊಳ್ ಕಟಿಯಲ್ ಪಾಪಮನರ್ಚಿಸಿರ್ದಬಲೆಯಕ್ಕುಂ ಮಿಕ್ಕಳೇನಕ್ಕುಮೇ(ಪುಜಾಪೇ ೩-೦೩೩). **ಹಿಗ್ಗು$_1$:** ೧. ತಗ್ಗಿದುದು ದಿಗ್ದಂತಿ ಭೋಗಿರಾಜನ ಕೊರಲ್ಕುಗ್ಗಿ ದುದು ಧರಣಿತಲಮಿಬ್ಭಾಗವಾಗಿ ಸಲೆ ಹಿಗ್ಗಿದುದು ಪೋಗೆನಲ್ಪೊಯ್ದನುರು ಗದೆಯಿಂದ ಪರಸೈನ್ಯಮಂ ಭೀಮಂ (ಶೈಮಿಭಾ. ೬-೪೬). ೨. ಬಾಗುತೆ ಬಲಿಯುತೆ ಪೊಳೆದಿನಿದಾಗುತೆ ದಳವೇಱುತಿಡಿದಿಡಿದು ಹಿಗ್ಗುತೆ ಪಣ್ಣಾಗುತೆ ಕಾಯ್ಗಳ್ ಪೂಱಮಡೆ ಬೀಗುತ್ತುಂ ಬೆಳೆದುವಲ್ಲಿ ಕದಳೀಷಂಡಂ (ಗಿರಿಕ. ೨-೩೦); ಕೊರಳ ಸೆರೆ ಹಿಗ್ಗಿದವು ಕಂಬನಿದುಱುಗಿದವು . . . ಆಕಸ್ಮಿಕದ ಭಯವಾಯ್ತು ಪಾರ್ಥಂಗೆ (ಕುಶ್ಯಾಪ್ರೋ. ೬-೬); ಹೃದಯ ಹಿಗ್ಗಿಕೊಂಡು, ರೋಗ ಪ್ರಬಲವಾದರೆ ಹೃತ್ಕ್ರಿಯೆ ನಿಂತು ಹೋಗುತ್ತದೆ (ಗೃಹವಿ. ೩೪). ೩. ಅಯ್ಯ ನೀ ನೋಡಿದರೆ ನೋಡು ನೋಡದಿದ್ದರೆ ಮಾಣು ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾಱೆನಯ್ಯ (ಪುಜಾದೇ. ಬ.೩೯-೫೩); ಭೀಮಸೇನನ ವಿಕಟಸಿಂಹಧ್ವನಿಯನಾಲಿಸಿ ಹಿಗ್ಗಿದನು ಪಾರ್ಥ (ಕುಶ್ಯಾಪ್ರೋ. ೦೩-೦೬); ಹಿಗ್ಗುವೆ ಯಾಕೋ ಈ ದೇಹಕ್ಕೆ ಹಿಗ್ಗುವೆ ಯಾಕೋ . . . ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ (ಪುರಂದ. ೦-೦೨೨ ಪಲ್ಲವಿ). **ಹಿಳಗು :** ೧. ಬಲಿತ ತೆಂಗಿನಕಾಯಿ ಬಿಸಿಲಿನ ಝಳಕ್ಕೆ ಹಿಳಗಿದೆ (ರೂಢಿ). **ಹಿಳ್ಗು$_1$:** ೩. ಹೃಷ್ಯತಿ=ಹಿಳ್ಗಿದಪಂ; ಹೃಷ್ಟಃ, ಹೃಷ್ಟವಾನ್, ಹರ್ಷಕಃ, ಹರ್ಷ್ಟಾ, ಹರ್ಷನ್—ಈ ೫ ಹಿಳ್ಗಿದಂ (ಕಾಕಳ್ಳ. ೦೯೩).

ಹಿಗ್ಗಿ ನುಗ್ಗೆಕಾಯಿಯಾಗು = (ಆಲಂ) ಅತಿಶಯವಾಗಿ ಆನಂದಿಸು ; ಆನಂದದಿಂದ ಉಬ್ಬು : ಸಣ್ಣದುರುಗಪ್ಪನು ಹಿಗ್ಗಿ ನುಗ್ಗೆಕಾಯಿಯಾದ (ಪಂದಪೇ. ೦೦೮). ಹಿಗ್ಗಿ ಹತ್ತಾಗು = ಹಿಗ್ಗಿ ನುಗ್ಗೆಕಾಯಿಯಾಗು : ಈ ಇಬ್ಬರು ಸ್ನೇಹಜೀವಿಗಳ ನಡುವಿನ ಅದೇ ಆ ಹಳೆಯ ನಗೆಯಾಟ ನಡೆದಾಗ ನನ್ನ ಹೃದಯ ಹಿಗ್ಗಿ ಹತ್ತಾಗುತ್ತದೆ (ಇಶ್ವಕ. ೩೭); ಭೂಪತಿಯು ಹಿಗ್ಗಿ ಹತ್ತಾಗಿ, ತನ್ನ ಉತ್ತರೀಯದ ಮುಸುಕಿನಿಂದ ತನ್ನ ಸ್ವಂತರಚನೆಯ ಪುಸ್ತಕ ಹೊರದೆಗೆದು ... ಎಂದನು (ಇಶ್ವಕ. ೨೬೬). ಹಿಗ್ಗಿ ಹೀರೇಕಾಯಾಗು, ಹಿಗ್ಗಿ ಹೀರೇಕಾಯಿ ಆಗು, ಹಿಗ್ಗಿ ಹೀರೇಕಾಯಿಯಾಗು = ಹಿಗ್ಗಿ ನುಗ್ಗೆ ಕಾಯಿಯಾಗು : ಪೋರ್ಚುಗೀಸ್ ರಾಜ ತನಗೆ ಬಂದ ವರದಿಗಳಿಂದ ಹಿಗ್ಗಿ ಹೀರೇಕಾಯಾದ(ಶ್ರಾಪಾ.II, ೨೦೦); ನೆಕ್ಲುದೋವನ ಎದೆ ಹಿಗ್ಗಿ ಹೀರೇಕಾಯಿ ಆಯಿತು (ಪುಪರು. ೩೦೦); ಕಾಮಾಕ್ಷಮ್ಮನ ಮುಖ 'ಹಿಗ್ಗಿ ಹೀರೇಕಾಯಿ' ಯಾಯಿತು (ಪಂದಪೇ. ೩೬). ಹಿಗ್ಗಿ ಹೆಬ್ಬಾಗಿಲಾಗು = (ಆಲಂ) ಅತಿಶಯ ವಾಗಿ ಆನಂದಿಸು ; ಆನಂದದಿಂದ ಉಬ್ಬು : ದ್ಯಾವೇಗೌಡರು ಚಿನ್ನಪ್ಪಗೌಡರ ಮಾತನ್ನು ನಂಬಿ ಹಿಗ್ಗಿ ಹೆಬ್ಬಾಗಿಲಾಗಿದ್ದರು (ಪಂಜಪಂ. ೩೯).

[< ಪಿಳ್ಳಿ$_2$]

ಪಿಳ್ಗೋಟೆ (ನಾ). ಸಣ್ಣ ಕೋಟೆ ; ಕಿರಿದಾದ ದುರ್ಗ : ರಕ್ಕಸರೊಳ ಪೊಗದಂತೆ ಪಿಳ್ಗೋಟೆಗೆ ಉಕ್ಕಿನ ತೆನೆ ಪೆಟಲಂಬು ಸಿಕ್ಕಿನ ಕತ್ತರಿ ದೆಸೆಗೆ ಹಸಿಯ ಶೂಲ ಸೊಕ್ಕಿದರಿಯ ಗೆಲ್ವ ತೆರದಿ (ಸೌಂದಕಾ. ೩-೩೯).

[< ಪಿಳ್ಳೆ + ಕೋಟೆ$_1$ (< ಕೋಂಟೆ)]

ಪಿಳ್ಜುಟ್ಟು, ಪಿಳ್ಳಂಜುಟ್ಟು, ಪಿಳ್ಳುಜುಟ್ಟು (ನಾ). (ಗಂಡಸರು) ತಲೆಯ ಹಿಂದೆ ಮೇಲ್ಭಾಗದಲ್ಲಿ ಬಿಡುವ ಸಣ್ಣ ಜುಟ್ಟು : ಅವರ ಪಿಳ್ಜುಟ್ಟು ಗಾಳಿಗೆ ಹಾರಾಡುತ್ತಿದೆ (ರೂಢಿ). **ಪಿಳ್ಳಂಜುಟ್ಟು :** ವಿಶಾಲ ವಾದ ಹಣೆ, ಮುಖದ ಅಂದವಾದ ನಿಲುವಿಗೆ ಒಪ್ಪುತ್ತಿದ್ದ ಪಿಳ್ಳಂಜುಟ್ಟು (ಬಸಕಂ. ೦೨೮). **ಪಿಳ್ಳುಜುಟ್ಟು :** ತಬಲಾ ಬಾರಿಸುವವನ ಪಿಳ್ಳುಜುಟ್ಟು ಹೇಗೆ ಹಾರಾಡುತ್ತಿದೆ ಎಂಬುದನ್ನು ನೋಡಲು ಬಂದಿದ್ದಾರೆ (ಸಾಡಿಗೇ. ೦೩೬) ; ವಜ್ರಮುಷ್ಟಿಗಳ ಮೊನೆಯಿಂದ ಪಿಳ್ಳುಜುಟ್ಟುಗಳು ಕುಣಿದಾಡುವ ಬೋಳುತಲೆಗಳ ಮೇಲೆ ಹೊಡೆದು (ಕಥಾಪುಂ. IV, ೨).

[< ಪಿಳ್ಳೆ + ಜುಟ್ಟು]

ಪಿಳ್ಪಿಳನೆ, ಪಿಳಪಿಳನೆ (ಅ). (ಆಶ್ಚರ್ಯ ಅಥವಾ ಅಸಹಾಯಕತೆ ಗಳಿಂದ) ಕಣ್ಣನ್ನು ಪಿಳಕಿಸುತ್ತ ; ಒಂದೇ ಸಮನೆ ರೆಪ್ಪೆಯನ್ನು ಬಡಿಯುತ್ತ : ಜನರು ಪಿಳ್ಪಿಳನೆ ನೋಡುತ್ತಿರುವರು (ಶುಂಗಭ. ೦೩೭). **ಪಿಳಪಿಳನೆ :** ಕ್ಷಣಕಾಲ ಆತೆ ಪಿಳಪಿಳನೆ ನನ್ನನ್ನೇ ನೋಡುತ್ತಿದ್ದುಬಿಟ್ಟಳು (ಬರಪಾ. ೦೪೭). [< ಪಿಳಪಿಳಿ + — ಅನೆ$_1$]

ಪಿಳ್ಳಂಗೋವಿ (ನಾ). ಒಂದು ಬಗೆಯ ಚಿಕ್ಕ ಊದುವ ವಾದ್ಯ ; ಕೊಳಲು : ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ (ಪುರಂದ. ೦-೦೩೬ ಪಲ್ಲವಿ) ; ಗೊಲ್ಲನ ಪಿಳ್ಳಂಗೋವಿಯಿಂದ ಆರಂಭವಾದ ಪುಟ್ಟಪ್ಪನವರ ಕವಿತಾವಿಲಾಸ . . . 'ಸೋವಿಯಟ್ ರಶಿಯಾ'ದ ವರೆಗೂ ಕೈ ಚಾಚಿದೆ (ಸಾಸಪು. ೬೭) ; ಕೊಳಲಿಗೆ ಪಿಳ್ಳಂಗೋವಿಯೆಂದೂ ಹೆಸರು (ಸಂಗೀತಂ. ೦೦೬).

[< ಪಿಳ್ಳೆ+ಕೋವಿ$_1$. / ತಮಿ. ಪಿಳ್ಳಾಂಕುಟಲ್; ತೆಲು. ಪಿಲ್ಲಂಗ್ರೋವಿ, ಪಿಲ್ಲಗ್ರೋವಿ, ಪಿಲ್ಲನಗ್ರೋವಿ]

ಪಿಳ್ಳಂಜುಟ್ಟು 'ಪಿಳ್ಜುಟ್ಟು' ನೋ.

ಪಿಳ್ಳಗುಸೆ (ನಾ). ಕೋಟೆಯ ದೊಡ್ಡ ಬಾಗಿಲಿನಲ್ಲಿರುವ ಚಿಕ್ಕ ಬಾಗಿಲು : ಸಮಸ್ತಕಾರ್ಯಕುಶಲರಿಂ ಕೋಟೆ . . . ಪಿಳ್ಳಗುಸೆ ದಿಡ್ಡಿ ಮೊಳೆಗದಂಗಳ್ ನಿರ್ಮಿತಮಾಗಲು (ಹಾಲಾಸ್ಯ. ೦-೪-೭೩ ಪ). [ಪಿಳ್ಳೆ + ಅಗುಸೆ]

ಪಿಳ್ಳಯ (ನಾ). ಒಬ್ಬಾತನ ಹೆಸರು : ಱೂಮಡಿಯ ತಳಾಱು ಮಿಣ್ಣ ಪೋದಿಯ ಪಿಳ್ಳಯ (ಎಕ. X, ಗೋರೀಪಿ. ೭೩-೪ ; ಸು. ೨೦೦).

[ಪಿಳ್ಳೆ + ಅಯ್ಯ$_1$ (< ಅಯ್ಯ$_{41}$)]

ಪಿಳ್ಳಾರಿ (ನಾ). ೧. ಚಿಕ್ಕದು ; ಸಣ್ಣದು. ೨. ಗಣೇಶ ; ಬೆನಕ: 'ಪಿಳ್ಳಾರಿಗೀತ' ಪರಾ.

ಪಿಳ್ಳಾರಿ ಜುಟ್ಟು = ಪಿಳ್ಜುಟ್ಟು : ಅವನ ಪಿಳ್ಳಾರಿ ಜುಟ್ಟನ್ನು ನೋಡಿ ಮಕ್ಕಳು ಗೇಲಿ ಮಾಡಿದರು (ರೂಢಿ).

[<ಪಿಳ್ಳೆ./ ತಮಿ. ಪಿಳ್ಳೈಯಾರ್; ಮಲ. ಪಿಳ್ಳಯಾರ್; ತುಳು. ಪಿಳ್ಳಾರಿ; ತೆಲು. ಪಿಳ್ಲಾರಿ]

ಪಿಳ್ಳಾರಿಗೀತ (ನಾ). ಕರ್ನಾಟಕಸಂಗೀತದಲ್ಲಿ ಪುರಂದರದಾಸರು ರಚಿಸಿದ (ಗಣಪತಿಯನ್ನು ಕುರಿತ) ಚಿಕ್ಕ ಗೀತೆ : ಪುರಂದರದಾಸರು ಸಂಗೀತಾಭ್ಯಾಸಕ್ರಮ ವ್ಯವಸ್ಥೆಗೊಳಿಸಿ, 'ಪಿಳ್ಳಾರಿಗೀತಗಳು' ಎಂಬ ಅಭಿ ಧಾನದಿಂದ ಕೆಲವಾರು ಗೀತಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ (ಸಂಗೀತಂ.೭೦); ಕರ್ನಾಟಕಸಂಗೀತಸಂಪ್ರದಾಯಕ್ಕೆ ಪಿಳ್ಳಾರಿಗೀತೆಗಳನ್ನು ಮಾತ್ರವಲ್ಲ ಪುರಂದರದಾಸನು ಸಾವಿರಾರು ರಸಾನುಗುಣವಾದ ತಾಲಭೇದವುಳ್ಳ ಪ್ರಬಂಧಗಳನ್ನು ಒದಗಿಸಿಕೊಟ್ಟನು (ಕಸಾತ. ೨೯೮). [ಪಿಳ್ಳಾರಿ + ಗೀತ]

ಪಿಳ್ಳಾರಿಗೀತೆ (ನಾ). = ಪಿಳ್ಳಾರಿಗೀತ : ಕರ್ನಾಟಕಸಂಗೀತ ಒಂದು ವೈಶಿಷ್ಟ್ಯ ಪೂರ್ಣವಾದ ರೂಪ. ಇದರಲ್ಲಿ ಪ್ರಮುಖವಾಗಿ ಕೀರ್ತನೆಗಳು, ಉಗಾ ಭೋಗ, ಸುಳಾದಿ, ಪಿಳ್ಳಾರಿಗೀತೆಗಳು ಎಂದು ನಾಲ್ಕು ರೂಪಗಳು ಕಾಣಿಸುತ್ತವೆ (ಹೇಮಕೂ. ೦೦೯) ; ದಾಸರ ಗೀತೆಗಳಲ್ಲಿ ಪಿಳ್ಳಾರಿಗೀತೆ ಮೊದ ಲಾದ ಕೆಲವು ಗೀತೆಗಳು ಮಾತ್ರವಲ್ಲದೆ ತಾನವರ್ಣಗಳಾಗಲೀ ದಾಸರ ತಿಲ್ಲಾನ ಗಳಾಗಲೀ ಈಗ ಉಪಲಬ್ಧವಿಲ್ಲ (ಕಲಪ. ೨೩೦). [ಪಿಳ್ಳಾರಿ + ಗೀತೆ]

ಪಿಳ್ಳಿಮಯ್ಯ (ನಾ). ಒಬ್ಬಾತನ ಹೆಸರು : ಆ ವಿಭುಗಾತ್ಮಜಂ ನೆಱೆಯೆ ಪುಟ್ಟದೆ ಪುಟ್ಟಿದ ಪಿಳ್ಳಿಮಯ್ಯಂ (ಎಕ. XI, ಪಕ್ರಮ. ೬೪-೬; ೨೬೩).

[< ಪಿಳ್ಳೆ + ಅಮ (< ಅಮ್ಮ$_1$) + ಅಯ್ಯ$_{41}$]

ಪಿಳ್ಳು 'ಪಿಳ್ಳೆ' ನೋ.

ಪಿಳ್ಳುಜುಟ್ಟು 'ಪಿಳ್ಜುಟ್ಟು' ನೋ.

ಪಿಳ್ಳೆ, ಪಿಳ್ಳು, ಹಿಳ್ಳು, ಹಿಳ್ಳೆ₁ (ನಾ). ೧. ಚಿಕ್ಕದಾಗಿರುವಂತಹಂದು; ಸಣ್ಣದು: (ಕ). ೨. (ಯಾವುದಾದರೂ ಪ್ರಾಣಿಯ) ಮರಿ; ಶಾಬ; ಪೋತ: ಕರಮೇಟ್ಗೆಯುಳ್ಳ ಪಿಳ್ಳೆಗಳೆರಡುಮನೋಲಗಿಸುವಂ ನೃಪಂಗಲ್ಲಿಯ ಮಾದರನಿತ್ತ ಚಂಡಕರ್ಮಂಗರಸನವಂಗೆ ನೋಡಿ ಸಲಹು ನೀನೆಂದಿತ್ತಂ (ಹುಕೋಕ. ೩-೭೭); ನೀಡುಂ ನೀಡದ ಪಕ್ಕಿಯು ಮೆನ್ನಂ ಬಂಜೆಯೆನುತೇಡಿಪಂತಿರೆನ್ನಿದಿರೊಳ್ ಪಿಳ್ಳೆಯಂ ಮುದ್ದುಗೆಯ್ಗುಂ (ರಾಮಾಶ್ವ. ೦೬-೬); ಕಳ್ಳನಿಗೆ ಒಂದು ಪಿಳ್ಳೆ ನೆವ (ಗಾರ). ೩. ಕೂಸು; ಮಗಂ; ಶಿಶು: ಜವನೊಳ್ ಸೆಱಗಿಲ್ಲದೆ ಪೋಗಿ ತಾಗಿ ತಂದಂ ಗಡ ವಿಕ್ರಮಾರ್ಜುನನೆ ಪಾರ್ವರ ಪಿಳ್ಳೆಯ ಪೋದ ಜೀವಮಂ (ಪಂಪಭಾ. ೬-೨); ಪರಿದಿಱಿದಂತಕನೊಳ್ ಪಾರ್ವರ ಪಿಳ್ಳೆಯ ಪೋದ ಜೀವಮಂ ತಂದಂ (ಗದಾಯು. ೨-೩೫); ನೀವು ಬೇಕಿದ್ದರೆ ಹೋಗಿ ಬನ್ನಿ . . . ಈ ಪಿಳ್ಳೆಗಳನ್ನು ಕಟ್ಟಿಕೊಂಡು ನಾನು ಎಲ್ಲಿಗೂ ಹೊರಡುವುದಿಲ್ಲ(ಪೇಪಹಂ ೨೫೩). ೪. ಗಣಪತಿ; ವಿನಾಯಕ: ಇಂದುವಕೌಳಿಯ ಹಿರಿಯ ಪುತ್ರನಾ ವಿಘ್ನೇಶ್ವರಂ ಗಜಾನನ ಸದ್ಗುಣಿ ಸೌಂದರ್ಯನಿಧಿಯಾತನಂ ಭಜಿಸಿ ಸುತನನಾನಂದದಿಂ ಪಡೆಯವೇಳ್ಕೆನುತ ದಂಪತಿಗಳುಱ ಬಂದರತಿವೈಭವದೆ ಬಂದು ವಿಪ್ರರು ಸಹಿತಲಾ ಪಿಳ್ಳೆಯರ ಭವನಕೆ (ವೀಕೃಪು. ೩-೦೫-೯). ೫. ಭೈರವ: (ಕ). ೬. ತೋಟಗಳಲ್ಲಿ ನೀರು ಹರಿಯಲು ಅನುಕೂಲವಾಗುವಂತೆ ತೋಡಿರುವ ಸಣ್ಣ ನಾಲೆ: ಪಿಳ್ಳೆ ದಾಟುವಾಗ ಜೋಪಾನ, ತುಂಬ ಜಾರುತ್ತದೆ (ಕೂರಿ). ಪಿಳ್ಳು: ೨. ಬಲೆಯಿಂ ತಪ್ಪಿದ ಮೊಲದಂತೆಯುಂ ಬಾಲಂ ಪಱಿದ ಪಿಳ್ಳಿನಂತೆಯುಂ . . . ಪಿಂದಿರುಗಿ ನೋಡದೆ ಓಡಿ ತನ್ನ ಬೀಡಂ ಸಾರ್ದಂ (ಕಸಪಂ. ೫೯-೬). (ಗು). ೭. ಚಿಕ್ಕದಾದ; ಸಣ್ಣ: 'ಪಿಳ್ಳುಜುಟ್ಟು' ಪರಾ. ಹಿಳ್ಳು: ೨. ಹದ್ದಿನ ಬರವ ಕಾಣುತ ಕೋಳಿಗಳ ಹಿಳ್ಳೆದ್ದೋಡುವಂತೆ[ಪಾಕಾಂ. ಕುಕ್ಕುಟಸರ್ಪಯೆದ್ದೋಡುವಂತೆ] ಭೂಭುಜರು ಬಿದ್ದ ಬಂಗಾರವ ಬಿಟ್ಟು ತೆರಳಿದರು (ರಾಮವಿ ೬-೦೭೭) ೮. ಒಂದು ಬಗೆಯ ಆಟ; ಚಿಣ್ಣಿಕೋಲಾಟ: ಗೋಪನಂದನರನು ಕೂಡಿ ಹಿಡಿಗವಡಿಕೆ ಹಿಳ್ಳು ಲಗ್ಗೆ ಸಡುಗುಡು ಮೊದಲಾದ ಮಕ್ಕಳಾಟವ ಕಡುಸಡಗರದಿಂದಾಡುತಿಹನು (ಪೇಮಸಂ. ೦೫-೦೦೭) ಹಿಳ್ಳೆ₁: ೨. ಒಂದು ಹಸ್ತದೊಳು ಮುಷ್ಟಿಗನ ಹಿಡಿದು ಮತ್ತೊಂದು ಕೈಯೊಳು ಮೊತ್ತಮೊದಲು ಅಂದದಿ ಹಿಡಿದ ಕೇಸರಿಯ ಹಿಳ್ಳೆಯ ಹೊಡೆವಂದದಿ ಹೊಡೆದಿಡಲಾಗ (ಪೇಮಸಂ. ೦೬-೦೩೦); ಗುಹೆವುಗುವ ಸಿಂಗ . . . ಹಸಿದು ಬಾಯಂ ಬಿಡುವ ಹಿಳ್ಳೆಗಳ ಬಳಿಗೆ ಹಾಱುವ ಸಾಳುವ . . . ತದ್ವನಾಂತದೊಳ್ ಸೊಗಯಿಸಿದುವು (ಸಮ್ಯಕೌ. ೦೦-೨೫).; ತಗರ ಪೊಯ್ಲಾಟ ಹಿಳ್ಳೆಗಳೋಟ ಸಿಪಿಲೆಗಚ್ಚುಗಳ ಸರಸಾಟ ಜಾಣಾಂಕಿಗಳ ಕೋಳಿಗಳೆಗ (ರಸ್ತ್ಯಾಶಾ. ೨೬-೫). ೯. ಮಕ್ಕಳು ಆಟಕ್ಕೆ ಬಳಸುವ ಮರದ ಸಣ್ಣ ತುಂಡು; ಚಿಣ್ಣಿ: ನಿಮ್ಮ ಧನುರ್ವಿದ್ಯಾಕೌಶಲವು ಈ ಭಾವಿಯಲ್ಲಿ ಬಿದ್ದಿರುವ ಹಿಳ್ಳೆಯನ್ನೂ ಉಂಗುರವನ್ನೂ ಎತ್ತದೆ ಇರುವುದರಿಂದ ವ್ಯರ್ಥವಾಗಿ ತೋರುತ್ತಲಿದೆ (ಕೃಪಾಅ. ೨೪೩).

ಪಿಳ್ಳನೆ = ಚಿಕ್ಕದಾದ; ಪುಟ್ಟ; ಸಣ್ಣ: ಟೋಪಿ ಪೇಟವ ತೊರೆದು ಪಿಳ್ಳನೆ ಜುಟ್ಟ ತೋರುವೆ ಊರೊಳು (ಗಶೇಶ. ೭೨-೬). ಪಿಳ್ಳೆ ಪೆಸರಿಲ್ಲದಂತು = ಹೆಸರು ಹೇಳಲಂ ಒಂದು ಮಗುವೂ ಉಳಿಯದಂತೆ; ನಿರ್ವಂಶವಾಗುವಂತೆ: ಮುನ್ನಂ ಪರಶುರಾಮನೀ ಪೆಲದೊಳುಳ್ಳರಸುಮಕ್ಕಳೆಲ್ಲರುಮನಿರ್ಪತ್ತೊಂದು ಸೂಟ್ವರೆಗಂ ಪಿಳ್ಳೆ ಪೆಸರಿಲ್ಲದಂತು ಕೊಂದು (ಗದಾಯು. ೬-೨೮ ಪ). ಪಿಳ್ಳೆ ಪೆಸರಿಲ್ಲಾಗು=ಹೆಸರು ಹೇಳಲು ಒಂದು ಮಗುವೂ ಉಳಿಯದಾಗು; ನಿರ್ವಂಶವಾಗು: ಪಿಳ್ಳೆ ಪೆಸರಿಲ್ಲಾಯ್ತೆ ಕೌರವಕುಲಶ್ರೀ! (ಅಶ್ವಥ್ಯಾ. ೩೪-೬೫೫).

[ದೇ.॥ ತಮಿ. ಪಿಳ್ಳೈ; ಮಲ. ಪಿಳ್ಳ; ತುಳು. ಪಿಳ್ಳೆ; ತೆಲು. ಕೋಲಾ. ನಾಯ್ಕಿ. ಪಿಲ್ಲ; ಗೊಂಡಿ. ಪಿಲಾ; ಕುರುಖ್. ಪೆಲ್ಲೋ; ಬ್ರಾಹುಈ. ಪಿಲ್ಲೋಟ; ಪರ್ಜಿ. ಪಿಲ್ಲಕ. ಪಿಲ್ಲಿಕ]

ಪಿಳ್ಳೆಕಾಲು, ಹಿಳ್ಳೆಗಾಲ್, ಹಿಳ್ಳೆಗಾಲಂ (ನಾ). ೧. ಮನೆಯ ಮೇಲ್ಛಾವಣಿಗೆ ಆಧಾರವಾಗಿ ಕೊಡುವ ತೊಲೆಯ ಮೇಲ್ಭಾಗದ ಸಣ್ಣ ಕಂಭ: ಈ ಛಾವಣಿಗೆ ನಾಲ್ಕು ಪಿಳ್ಳೆಕಾಲು ಕೊಡಬೇಕು (ಕೂರಿ). ಹಿಳ್ಳೆಗಾಲ್: ೨. ಸಣ್ಣಗಿರುವ ಕಾಲಂ; ಬಡಕಲಾದ ಕಾಲಂ: 'ಹಿಳ್ಳೆಗಾಲ' ಪರಾ. ಹಿಳ್ಳೆಗಾಲು: ೨. ಬತ್ತಿದ ಬಡ ಪೊಱವಾಱ ಬಲ್ಸೆರೆ ಸುತ್ತಿ ಹತ್ತಿದ ಹಿಳ್ಳೆಗಾಲುಗಳ . . . ನಳ್ಳಿಮೂಗಿನ ಭೂಕವೆ ನಡೆತಪ್ಪಂತೆ ಮನೆಗೆ ಬರಲು (ಪೇಮಸಂ. ೭-೦೦೯).

[ಪಿಳ್ಳೆ+ಕಾಲು₁ (<ಕಾಲ್₁)]

ಪಿಱಿ, ಪಿರಿ₂ (ನಾ). (ಹೆಣದ) ಬಾಡಂ; ಮಾಂಸ: ಪೊಯ್ದಾಡಿ ಮಡಿದ ಕಲಿಗಳ ಶರೀರಂಗಳಂ ಪೊಯ್ದೆಳೆದು ಪಿಱಿತಿಂಬ ಮರುಳ್ಗಳಂ . . . ಕಾಣುತೆ (ಕೃಮಭಾ. ೬-೩೩). ಪಿರಿ₂: 'ಪಿರಿತಿನಿ' ಪರಾ.

△ **ಪಿಱಿಚು** 'ಪಿರಿಚು' ನೋ.

ಪಿಱಿತಿನಿ, ಪಿರಿತಿನಿ (ನಾ). (ಹೆಣದ ಮಾಂಸವನ್ನು ತಿನ್ನುವ) ಮರುಳು; ದೆವ್ವ: "ಪಿಱಿತಿನಿಯೆಂದು ಮರುಳ್" (ಕಕಸಾ. ೬೫-೪೫೦); ಪಸಿದ ಪುಲ್ಮರುಳ್ ಪಿಱಿತಿನಿಗಳ್ ಬೇಯುತ್ತುಮಿರ್ದ ಪೆಣನಂ ನಾಯುಗಿವಂತುಗಿದು ತಿಂದುವೋರೊಂದೆಡೆಯೊಳ್ (ಕಾಪ್ಯಸಾ. ೫೩೬ ಕೂಪ್ರಳ); ಎಲೆ ಪಿಱಿತಿನಿ ಪೋ ಮುಟ್ಟದೆ ತೊಲಗು (ಪಂಪಭಾ. ೬-೪೩); ನೀಂ ಪಿಱಿತಿನಿಯಂ ಪಾಂಗಿನಿಂ ಎಲ್ಲಮಂ ತಿಂದು ಸಾವುದೆಂದು ಬೈದಂ (ರಾಮಾಶ್ವ. ೬೫-೯). ಪಿರಿತಿನಿ: "ಪಿರಿತಿನಿಯೆನಲ್ ಪಿಶಾಚಿಯ ನಾಮಮಕ್ಕು" (ಕಶರ. ೬೬); ಪಿರಿತಿನಿ ಖಗಪಕ್ಷವೀಜಿತಂಗಳನಾಗಳ್ ವರಚಂದನವಾರಿಗಳಿಂ ಸುರುಚಿರ ಸುರವೃಕ್ಷವಲ್ಕವೀಜಿತದೇಹರ್ . . . ಸುಂದರಿಯರ್ ತೋರಿಸೆ ಬೆರಳಿಂದಂ ಕಂಡರ್ ಸ್ವದೇಹಮಂ ಕೊಳುಗುಳದೊಳ್ (ರ್ಮಾಶ್ವಾಲೋ. ೦೮೯); ಪಿರಿತಿನಿಯ ನಾಲಗೆಗೆಲ್ಲಿ ಕೊನೆಗಂಡ ಮಚ್ಚು (ಕಾಲೂರ. ೦೮೫-೯೨೦).

ಪಿಱಿತಿನಿಯಾಳ್ಮ, ಪಿರಿತಿನಿಯಾಣ್ಮ, ಪಿಱಿತಿನಿಯಾಣ್ಮ=೧. ಮರುಳುಗಳ ಒಡೆಯಂ; ಶಿವ: "ಗನಹ ಮಾದೇವ ಕಣ್ಣಡಿಯ ಕಱಿಗೊರಲ ಪಿಱಿತಿನಿಯಾಳ್ಮ[ಪಾಕಾಂ. ಣ್ಮ]ದಪ್ಪಕವಗೆಯ . . . ಎಂದೆಂಬಿವೀಶ್ವರನ ನಾಮಂ" (ಶಬ್ದಮಂ. ೯); ಪಿರಿತಿನಿಯಾಣ್ಮನೆಂದರೆ ಚಂದ್ರಶೇಖರನಾದ ಚಂದ್ರನುಳ್ಳ ಈಶ್ವರನೆಂದು ಇರಬೇಕು (ಸಾಹಿಸಂ. ೦೮೨); "ಪಿಱಿತಿನಿಯಾಣ್ಮ . . . ಬೆಳ್ಳಡಿಯನೆನೆ ಶಿವಗೆ ಪೆಸರ್" (ಕಬ್ಬಳ್ಳ. ೫). ೨. ಗಣಪತಿ; ವಿನಾಯಕ: "ಪಿರಿತಿನಿಯಾಣ್ಮನೆಂದೆನಲದುಂ ಗಜಾನನಗೆ ಪೆಸರಕ್ಕು" (ಕಶರ. ೬೫). ಪಿಱಿತಿನಿಯೊಡೆಯ=ಪಿಱಿತಿನಿಯಾಳ್ಮ ೧: ಕೊಱತೆಗಳನಿಂತು ತಾಳ್ದಚ್ಯುತನಡಿಯ ನೀರ ಪಿಱಿತಿನಿಯೊಡೆಯನೇ ಪರಿಯೊಳು ಧರಿಸುವನೆ ತಾಂ (ನಿಶ್ಚೇಪು. ೬-೬೫). [ಪಿಱಿ+—ತಿನಿ₂]

△ **ಪಿಱುಚು** 'ಪಿರಿಚು' ನೋ.

ಪಿಟಿ, ಪಿಳಿ₁, ಹಿಳಿ₁, ಹಿಟಿ (ಕ್ರಿ). ೧. ಹಿಸುಕಿ ರಸವನ್ನು ತೆಗೆ; ಹಿಂಡು: ಎಳ್ಳ ಗಾಣಂಗಳೊಳಿಟ್ಟಯ್ನೂರ್ವರ್ ಋಷಿಯರ್ಕಳಂ ಪಿಟಿ[ಪಾಕಾಂ. ರಿ]ದು ಕೊಂದಂ (ಪಡ್ಡಾರಾ. ೦೭೮-೬); ಒಲ್ಲಣಿಗೆಯಂ ಪಿಟಿವಂತೆ ಪಿಂಡಿ ಪಿಟಿದ ಪಗೆಗೆ ರಥಚಕ್ರಮಂ ನುಂಗುವುದುಂ (ಪಂಪಭಾ. ೦೨-೨೦೬ ಪ); ಮಾಮರನೆಳದಳಿರ ರಸಮಂ ಪಿಟಿದು ಕಳಕಂಠನ ಕಂಠನಾಳಕ್ಕೆಱಿದುಬ್ಬಸಮಂ ಕಳೆದು (ರಾಮಾಶ್ವ. ೦೬-೦೫). ಪಿಳಿ₁: ೧. ಕಿವಿಯುಗಿದುಂ ಖೈರಂದಱಿದು ಗಾಣದೊಳ್ ಪಿಳಿದು (ರತ್ನಕ. ೨-೪ ಪ); ಬೆಳೆದ ಕಮ್ಮಂಗಳವೆ ಪೊಲದಿಂ ಪಿಳಿದರೊಮ್ಮನೆ ರಸವೊಗುವ ಕಡು ಬೆಳೆದ ಕಬ್ಬಿನ ಕೆಯಿಗಳಿಂ

ಸೊಗಯಿಸುವುದಾ ವಿಷಯ (ಶಾಕ್ಯಜಾ. ೦-೫೬). ೨. ಕರೆ : ಸುರಿಸು; ವರ್ಷಿಸು : ಕೊಳದಂಬು ಬತ್ತೆ ಬಾಯ್ಕೆಂದೊಳಗಣ ನಳಿನಾಳಿ ಲಿಕುವರಿಗು ವೆನುತ್ತಂ ಜಳಜಸಖು ಜಳಕಿರಣಾವಳಿಯಂ ಪಿಳಿದಂತೆವೋಲ್ ಮುರಿಚಿತೆ ಮೆಜ್ಜೆಗುಂ (ಶಾಶಕೇ. ೩-೩೮). ಹಿಳ್ಳಿ. ೧. ಪರಿತ್ಯಾಗಳುಪ ದವರ ಗಾಣದಲ್ಲಿಕ್ಕಿ ಹಿಳಿಯನೆ (ಶಾಕ. ೩೩೭) ; ಬಿಸಿಲಂ ಹಿಳಿಯಲ್ ಬೆನ್ನೀರೊಸರ್ವಂತಿರ್ದುದು ಮುರಿಚಿಕಾಜಲವೆತ್ತಂ (ಗಿಂಪ. ೯-೦೬); ಕಳಿದ ಹಲಸಿನ ಹಣ್ಣ ತೊಳಿಗಳಂ ಸಲೆ ಕಿವುಚಿ ಹಿಳಿದ ರಸದಲ್ಲಿ ಮತ್ತಾ ತೊಳೆಯ ಹಾಕ್ಕಿ ಪರಿವಳಿಸುವುದು (ಶಾಕಶಾ. ೩-೩೭). ೨. ಸಾಹಸ್ರಕೋಟಿಶುಭ್ರಾಂಶುಗಳ ರುಚಿರಸವನಾ ಹರಂ ಹಿಳಿದು ತನ್ನಯ ಕಳೆಯ ಕೂಡಿ ಕಣ್ಣಾಹಿನಿ ಫಟ್ಟಗೊಳಿಸಿದ ಪುಣ್ಯಘಟಕೆಯೋ . . . ಎನಲ್ ಕೈಲಾಸಪರ್ವತಂ ರಾಮಣೀಯಕವಾದುದು (ಕಬಪ್ರ. ೨-೦೦). ೩. (ಆಲಂ) ನಾಶಪಡಿಸು ; ಧ್ವಂಸಮಾಡು : ಹಾಳುಮಾಡು : ಧರಣಿಯನೊಕ್ಕಲಿಕ್ಕಿ ದಿಗಧೀಶರ ಗಂಟಲನೊತ್ತಿ ಮೆಟ್ಟಿ ಭೀಕರಘನಲೋಕಮಂ ಹಿಳಿದು ನಾಕಮನೋಡಿಸಿ . . . ನಿಗಳ್ದನಕ್ರಮಕಾರಿ ಜಿತಾರಿ ತಾರಕಂ (ಗಿಂಪ. ೬-೩) : ಎಲೆ ಕಕುತ್ಸ್ಥಜ ಕೇಳು ಲೋಕವ ಹಿಳಿವಳಿವಂದದಲಿ ಹಿಂದಣ ಬಲಿಯ ತಂಗಿ . . . ಕಡುಗಲಿಯೆ ಗೆಲಿದನು ಶಕ್ರನವಳನು (ಕೊಕಶಾ. ೦-೦೦-೦೦); ಈ ಪರಿಯಾಲವನಖಿಳಪರಿವನು ತಾ ಪಡೆದು ಸಂತಸದಿ ಸದ್ವಿರ್ಯೋರ್ವಪರಾಲಿತನಾಗಿ ಸಲಲಾವನಿಗಳನು ಹಿಳಿಯೆ (ಕೋಗಪು. ೯-೨೦). ೪. ನಾಶವಾಗು ; ಹಾಳಾಗು : ಮಳಿಗೆ ಹೆಚ್ಚಿದ ಧೂಳಿನಬ್ಬರವಳಿವಳೊಲು ವಿಜಯಾಸ್ಥಹಕ್ಕಿಯಲಿ ಹಿಳಿವ ಕರಿನರತುರಗದೊಡಲರುಣಾಂಬುಧಾರೆಯಲಿ ಕಳಚಿತೀ ಕೆಂಧೂಳಿ (ಶಾಪ್ಪಾ. ೨೪-೩೮). ೫. ಹೋಗಲಾಡಿಸು; ನಿವಾರಿಸು: ತುಳಿದನು ಭವಂಗಳಂ ತೊಳೆದನು ತಪಂಗಳಂ ಹಿಳಿದ ಸಂಶಯಂಗಳಂ ತಳೆದ ಮೋಕ್ಷಂಗಳಂ (ಪಂಪಾಕೋ. ೦೫೬-೦೪). ೬. ಕೊಲ್ಲು ; ಸಂಹರಿಸಂ: ಮೊಲೆಯನುಂಬುದೊಬ್ಬ ದನುಜೆಯಂ ಹಿಳಿದೊದೆದೆವು ಶಕಟನನು (ಶಾಪ್ಪಾ. ೦-೩೬); ಅಳಿವೆನೋ ಹದಿನಾಲ್ಕುಲೋಕವ ಹಿಳಿವೆನೋ ಹರಿಯಜಭವಮುಮ್ಮರ . . . ಎನುತಾರಿಗೊಳುವ ಕಡುಗೋಪದಲಿ ಕಿಡಿಕಿಡಿಯೋದನಸುರೇಂದ್ರ (ಕೊಪಾ. ೩-೬-೦೯). ೭. ಕದಿಗ್ಗು ; ನಿಸ್ಪತ್ವಗೊಳ್ಳು : ಹಿಳಿದ ಛಲದ ವಿಡಾಯಿ ಧೈರ್ಯದ ತಳಿದ ಭೀತಿಗೆ ಕಾಲುವೊಳಿಯಾದಳಿವಸನದ ಭೂಪಾಲನಿರವನು ಕಂಡನು ಪಾರ್ಥ (ಶಾಪ್ಪಾ-ಕ್ರೌ. ೦೬-೯). ಹಿಟ್ಟಿ: ೧. "ಹಿಟ್ಟಿ—ನಿರ್ದ್ರವಕರಣೇ (ಹಿಂದು), ದಲನಾರ್ಥೇ ('ಸೀಳು' ಎಂಬರ್ಥದಲ್ಲಿ) ತುಳಂ" (ಹುಣಾ) ; ತವಮಾಲವಾದಪವಪಲ್ಲವವಂ ಹಿಟ್ಟಿದೊಂದು ನಿರ್ಮಲೋಪಲತಲದಲ್ಲಿ ತದ್ರಸದಿನಾಗಳೆ ನೋಡಿ ನಿಜೋತ್ತರೀಯವಲ್ಕಲವಸನ್ಯೇದೇಶವನೆ ಸೀಳ್ದದಜಿರೊಳ್ ಬರೆದಂ (ಶಾಪಂಪು. ೬೧೭) : ಕೂತಸಿಗಳಿವೆತ್ತಿ ಕುತ್ತುವುದುಂ ಪಿರಿಯ ಗಾಣಂ ಳೊಳಿಕ್ಕಿ ಹಿಟ್ಟಿವುದುಂ . . . ಉಕ್ಕಿನ ಬಡಿಗೆಗಳಿಂ ಪೊಡೆಯೊಡನಾಡುವುದುಂ (ಶಾಅಚಿಕ್ಕ. ೯-೦೦೦ ಪ). ಪಿಟ್ಟಿದು ಪಿಂಡಿಸು=ಕುಗ್ಗಿಸು ; ದರ್ಬಲಗೊಳಿಸು : ಜರೆ ನಿಜ ಶಕ್ತಿಯಿಂ ಪಿಟ್ಟಿನು ಪಿಂ[ಶಾಪಾಂ.ಹಿಂ]ಡಿಸದನ್ನೆಗಮಾತ್ಮ ದೇಹದೊಳ್ನರೆ ತೆರೆದೋಱವನ್ನೆಗಂ . . . ಅರ್ಚಿಪುದರ್ಥಿಯಿಂ ಜಿನೇಶ್ವರನು (ಶಪುಕ. ೦-೦೦೫). ಪಿಟ್ಟಿದು ಪಿಂಡು, ಹಿಳಿದು ಹಿಂಡು=೧. ಅತಿಯಾಗಿ ಹಿಂಸಿಸಂ,– ನೋವುಂಟುಮಾಡು : ಈ ತೆಱದಿಂದಂ ನಿನ್ನಂ ಘಾತಿಸಿ ಬಿಡದಲೆದು ಪಿಟ್ಟಿದು ಪಿಂಡಿದ ದುಃಖವ್ರಾತವಿದು ಮಗಳೆ ನಿನ್ನ ಪುರಾತನದುಷ್ಕರ್ಮವಿಪಕ್ಕಫಲಂಗಳ್ (ಆದಪು. ೩-೩೯) : ಬಲವನರಿ ಭಟ ಸುಳಿದು ತುಳಿದನು ಹಿಳಿದು ಹಿಂಡಿದನು (ಶಾಶಾ. ೩೬-೦೭). ೨. ಬಲವಾಗಿ ಹಿಂಡು ; ಚೆನ್ನಾಗಿ ನುಲಿ; ತಿರಿಚಿ ಹಿಂಡು: ಬಗೆದ ನಾದ ವೆಯ್ದಿದವರ ಪಾಪ ಓಡಿಹೋಗಲೊಗೆದ ಏಳನಿಷ್ಪೆಯಿಂದ ತಿರಿಹಿ ಮುರಿಹಿ ಹಿಳಿದು ಹಿಂಡಿ ಮತ್ತೆ ಏಕನೆಳವನೆಂಬ ದಿಟದ ದಿಸೆಲೊಳೊಣಗಿಸುತ್ತೆ ವಾತ್ಸೆ (ಕಬುಕೋ. ಪಂ. ೨೩೩-೦೦) ; ತಳಿತ ತಲೆಯೋಡಿನೊಳು ಕೋಡಿತಜಲದ ಕಾಸಿದರೆಳೆಯ ಕರುಳನು ಹಿಳಿದು ಹಿಂಡಿದರು (ಶಾಪ್ಪಾ.ಪಂ. ೩-೩೮). ಹಿಳಿದುಕೊಳ್—(ರಸವನ್ನು) ಹಿಂಡಿಕೊಳ್ಳು : ದೋಸೆವದದಿ ಸೊಗಯಿಸುವ ಸಕ್ಕರೆಗಳೆನಾರ ಕಯಿದಿಳುಹಿ ತಣ್ಣಸವಾದ ತಾಣದೊಳಗಿರಿಸಿ ಮಜ್ಜುದಿನ ವೊಗಳ ಕಳೆದು ನಿಂಬೆಯ ಹಣ್ಣಿನಾ ಹೊಸ ಹುಳಿಯ ಹಿಳಿದುಕೊಂಬುದು (ಕೂಪಾಶಾ. ೨-೩೦). [ದೇ.ಪ ತವಿ.ಮಲ. ಪಿಲ್]

ಪಿಟ್ಟುನೀರು (ನಾ). ಹಿಂಡಿದ ನೀರಂ : ವಿಂದೊಳ್ಳಣಿಗೆಯ ಪಿಲ್ [ಶಾಶಾಂ. ಹಿಬು] ನೀರಿಂದಂ ಕಾಲ್ಗಚ್ಚಿ ನೆಲದೊಳಿರ್ದಾ ಕೊಬ್ಬಿನೀರಿಂದಂ ಪಾರ್ವರ ಮಡಗೂಬಿಂದಂ ಪಿತ್ಮತುಷ್ಟಿಯಕ್ಕುಮೆಂಬರ್ಪಾರ್ವರ್ (ಶಕುಶ. ೦೦-೦೫). [ಪಿಟ್ಟು + ನೀರು (<ನೀರ್)]

ಪಿಟ್ಟಿಯಿಸು, ಪಿಟ್ಟಿಸು, ಹಿಳಿಸು (ಕ್ರಿ). ಹಿಂಡುವಂತೆ ಮಾಡುಂ : ಹಿಂಡಿಸು : ಇಕ್ಷುಯಂತ್ರಂಗಳೊಳು ಕಡಿದು ಪಿಟ್ಟಿಯಿಸಿಯುಂ (ಶಾಪ್ಪಾ. ೩೦೭). ಪಿಟ್ಟಿಸು : ದಿನಂತರಸಂತ್ರಾಕಣಾಕಾರಿಗಳಪ್ಪ ಇಕ್ಷುಯಂತ್ರದೊಳ್ಕಿ ಪಿಟ್ಟಿಸುತ್ತುಂ (ಶಾಪ್ಪಾ. ೦೦-೦೦ ಪ). ಹಿಳಿಸು : ಕೊಳಲಿನ ಸರಗಳು . . . ಹೃದಯದಲ್ಲಿ ನರ್ತಿಸುತ್ತಾ ಬಗೆಬಗೆಯ ರಸವನ್ನು ಹಿಳಿಸುತ್ತಿವೆ (ಕೋಚಿ. vi ಮುಖ್ಯ). [ಪಿಟ್ಟು + ಇಸು]

ಪಿಟ್ಟಿಲ್, ಪಿಳಿಲ್ (ಕ್ರಿ). ಕೈಯಿಂದ ಬಿಡು,—ಎಸೆ : "ಪಿ(ಪಿ)ಟ್ಟಿಲ್—ಹಸ್ತೋನ್ಮುಕ್ತೌ" (ಕಪ್ರಾಕೃ.ಶಬ್ದ). ಪಿಳಿಲ್ : "ಪಿಳಿಲ್—ಹಸ್ತೋನ್ಮುಕ್ತೌ (ಕೈಯಿಂದ ಬಿಡು)" (ಶಬ್ದಾಕೃ) ಇಲ್ಲಿ ಶಬ್ದರೂಪ ನಿರ್ಧಾರವಿಲ್ಲದುದರಿಂದ ಎರಡೂ ರೂಪಗಳನ್ನೂ ಸೂಚಿಸಿದೆ. [?]

ಪಿಟ್ಟಿಸು 'ಪಿಟ್ಟಿಯಿಸು' ನೋ.

ಪಿಟ್ಟಿಕುಜ್ಜಿಕ್ಕಿ 'ಪಿಟ್ಟಿಕ್ಕುಜ್ಜಿಕ್ಕಿ' ನೋ.

ಪಿಟ್ಟಿಕ್ಕುಜ್ಜಿಕ್ಕಿ, ಪಿಟ್ಟಿಕ್ಕುಜ್ಜಿಕ್ಕಿ (ನಾ). ಒಂದು ಸ್ಥಳದ ಹೆಸರು : ಅರಕೆಱಿಯ ಪಿಟ್ಟಿಕ್ಕುಜ್ಜಿಕ್ಕೆಯೆ . . . ಪೊಲ ಮೇರೆ (ಕ್ಯುಶಾ. ೩೪೫೨. ೦೬-೬೬ ; ೩೦೬). ಪಿಟ್ಟಿಕ್ಕುಜ್ಜಿಕ್ಕಿ : ಸೀಯಮಾಂಗಲದ ಪೊಲ ಮೇರೆ ಇಸಾನದ ದೆಸೆ ನಡುಗಲ್ಲೆ ಅವ್ವಲತಿಣ್ಣೆಯಿನ್ತೆಂಕಾಯ್ ಪೇರೊಟ್ಟೆಯೆ ಅರಕೆಱಿಯ ಪಿಟ್ಟಿಕ್ಕುಜ್ಜಿಕ್ಕೆಯೆ (ಎಶ. X(೩). ೫೪೨. ೦೦೩-೬೬ ; ೩೦೦). ' ಪುಲಿಕುಜ್ಜುಕಿ ' ಪರಾ. [ಪಿಟ್ಟಿಕ್ಕೆ + ಕುಜ್ಜಿಕ್ಕಿ (<ಕುಜ್ಜಿ)]

Δ **ಪಿಟ್ಟುವಿ** 'ಪೃಥುವಿ' ನೋ.

ಪಿಟ್ಟುವಿರಾಜ್ಯಂಗೆಯ್ (ಕ್ರಿ). ಭೂಮಿಯನ್ನು ಆಳು ; ರಾಜ್ಯಭಾರ ಮಾಡುಂ : ಸ್ವಸ್ತಿ ಶ್ರೀಚತ್ಯವಾಕ್ಯವೆಮ್ಮಾಡಿ ಪಿಟ್ಟುವಿರಾಜ್ಯಂಗೆಯ್ದು (ಶಾ. V (೩), ಕರುಶಾ. ೩೦೩ ; ಸಾ. ೩೩೮ ಪು ೫೫). [ಪಿಟ್ಟುವಿ (<ಪೃಥುವಿ) + ರಾಜ್ಯಂಗೆಯ್]

ಪಿಟ್ಟುವಚ್ಚೆ (ನಾ). ಒಬ್ಬಾಕೆಯ ಹೆಸರು : ಕೋಸಗವಳ್ಳಿಯ ಕಣ್ಣವ್ವಂಗ ಪಿಟ್ಟುವಚ್ಚೆಗಂ ಪುಟ್ಟಿದ ಕನ್ನಯ್ಯನ್ (ಎಶ. VIII, ಶಿಕಪ್ರ. ೨೨-೩ ; ೨೭೩). [ಪಿಟ್ಟುವಿ (<ಪೃಥುವಿ) + ಅಚ್ಚೆ೩]

Δ **ಪಿಟ್ಟುವಿ** 'ಪೃಥುವಿ' ನೋ.

ಪಿಟ್ಟುವಿಗಂಗ (ನಾ). ಒಬ್ಬಾತನ ಹೆಸರು : ಸ್ವಸ್ತಿ ಅಸಗ ಗಂಗಯನ ಮಗಂ ಪಿಟ್ಟುವಿಗಙ್ಗಂ ಭಟ ಸ್ಮೃತಿ (ಎಶ.III(೩), ಕಂಚಿಪ್ರ. ೨೦೩-೨; ೨೫೫ ಪು ೫೫). [ಪಿಟ್ಟುವಿ (<ಪೃಥುವಿ) + ಗಂಗ]

ಪಿಟ್ಟುವಿಗಾವುಂಡ (ನಾ). ಒಬ್ಬಾತನ ಹೆಸರು : ಸಂಗವಾದ ಪೆಂರ್ಮಾನಡಿಗಾವುಂಡ್ಗರುಂ ರಣವಿಕ್ರಮಗಾವುಂಡ್ಗರುಂ . . . ಪಿಟ್ಟುವಿಗಾವುಂಡ್ಗರುಂ ಪೆರ್ಮ್ಯಯಲ ಕೆಲರುಂ ತನನ್ವಾಕರುಂ ಕೊಳವೆಲ್ಲೂರ ಸಾಲತ್ತರುಂ ವಾರದರುಂ ಎನೆವ್ವರೂ ನರಸಾಕ್ಷಿ (ಎಶ. IV, ಎಕರೊ. ೬೦-೬೦; ಸು. ೩೩೦). [ಪಿಟ್ಟುವಿ (<ಪೃಥುವಿ) + ಗಾವುಂಡ]

ಪಟ್ಟುವಿಪತಿ 'ಪೊಡವಿಪತಿ' ನೋ.

ಪಟ್ಟುವೆಯ್ಕ (ನಾ). ಒಬ್ಬಾತನ ಹೆಸರು: ಚೋಟರ ಪಟ್ಟುವೆಯ್ಕ ವೆರ್ವ್ಗಳ್ಳಿಯ ತುಱುಗೊಳೊಳ್ ಸ್ವರ್ಗಸ್ಥನಾದಂದು (ಎಳ. XI, ಹೊಳಕ್ಕ. ೬೫-೬; ೪೭೭). [ಪಟ್ಟುವಿ (<ಪೃಥುವಿ) + <ಅಯ್ಕ೬೧]

ಪೀ (ನಾ). ಹೇಲು; ಮಲ: (೫).

[ದೇ.॥ ತಮಿ. ಮಲ. ತುಳು. ನಾಯ್ಕ. ಹರ್ದಿ. ಗಡಬ. ಪೀ; ತೆಲು. ಪೀಯಿ, ಪೀಯ್ಕ; ಕೋಲಾ. ಪಯಾ]

ಪೀಕಜಾಲಿ (ನಾ). ಒಂದು ಬಗೆಯ ಜಾಲಿ: ಪೀಕದಾಲಿ, ತಂಬಟಿಜಾಲಿ (ಕೃಷಿ. ೦-೦೪). [ಪೀಕ + ಜಾಲಿ೧]

ಪೀಕದಾಣಿ 'ಪೀಕದಾನಿ' ನೋ.

ಪೀಕದಾನಿ, ಪೀಕದಾಣಿ, ಪೀಕುದಾನಿ (ನಾ). ಉಗುಳುವ ಪಾತ್ರೆ; ಥೂಕದಾನಿ; ಪಡಿಗ: ಹಾಸಿಗೆಯ ಕಾಲುದೆಸೆಯಲ್ಲಿ ಬೆಳ್ಳಿಯ ಪತದ್ಗ್ರಹ (ಪೀಕದಾನಿ) ಇಡಲ್ಪಟ್ಟಿತ್ತು (ಕಾಕಾ. ೪೦); ರಾಜನ ಎಡಗೈಯಲ್ಲಿ ಚಿನ್ನದ ಪೀಕದಾನಿ ಇತ್ತು . . . ತಾಂಬೂಲವನ್ನು ರಾಜ ಅದರಲ್ಲಿ ಉಗಿಯುತ್ತಿದ್ದ (ಕ್ರಕಾ. II, ೨೦೨). **ಪೀಕದಾಣಿ:** ಮಚ್ಚರ—ದಾಣಿ, ಗುಲಾಬ—ದಾಣಿ, ಪೀಕ—ದಾಣಿ, ಅತ್ತರ—ದಾಣಿ, ತಬಲ್—ಜಿ—ದಾಣಿ ಈ ಮೊದಲಾದವುಗಳಲ್ಲಿ ಕಂಡುಬರುವ ಪ್ರತ್ಯಯಗಳೂ 'ಪರರು' ಆಗಿವೆ (ಕಾಕಾಶಾ. ೦೬೬). **ಪೀಕುದಾನಿ:** ಮಗ್ಗುಲಲ್ಲಿರುವ ಪೀಕುದಾನಿಯೊಳಕ್ಕೆ ಉಗಿಯುತ್ತಾ (ಚಿಕಾಬಾ. ೦).

[← ಹಿಂ. ಪೀಕದಾನ್; ಮರಾ. ಪೀಕದಾನೀ, ಪೀಕದಾಣೀ]

ಪೀಕಲಾಟ, ಪಿಕಲಾಟ (ನಾ). ೧. ಪೇಚು; ತೊಂದರೆ; ಪೇಚಾಟ; ಒದ್ದಾಟ: ಕಾಕತಾಳೀಯದಂತೆ ನಿನ್ನ ಮಾತು ತಾ ಲೋಕದಲ್ಲಿ ಸಿದ್ಧವೊಂದು ವೇಳೆಯೈ ಪೀಕಲಾಟಮೆಯ್ದೆ ಬರ್ಕುಮಿಗಳೀ ಪೋಕು ನಿನ್ನವಲ್ತೆ ಸರ್ವಭೂಮಿಯೊಳ್ (ಕಾಕಾಶ್ಯ. ೯-೦೩-೪೦); ಇವರಿಗೇನು ಬಂದಿತಪ್ಪ ಅಂತಹ ಪೀಕಲಾಟ! (ಪುಂಗಾಕೃ. ೬೩). ೨. ಜಗಳ: (೫). **ಪಿಕಲಾಟ:** ೧. ಹೊಟ್ಟೆಗಿಲ್ಲದಿದ್ದರೂ ನಿಮ್ಮ 'ಪಿಕಲಾಟ' ಇದ್ದೇ ಇದೆ (ಜಾಬ. ೦೦); ಇದು ನಾನು ಕಂಡ ಪಿಕಲಾಟ! (ಕ್ಯಾಕಾ. ೦೩).

ಪೀಕಲಾಟಕ್ಕಿಟ್ಟುಕೊಳ್ಳು—ತುಂಬ ಇಕ್ಕಟ್ಟಿನ ಪ್ರಸಂಗವಾಗು: ಅಧಿಕಾರಿಗಳಿಗೆ ಪೀಕಲಾಟಕ್ಕಿಟ್ಟುಕೊಂಡಿತು (ಆಡ್ಯ. ೦೩); ತರಗತಿಯಲ್ಲಿ ಪ್ರಶ್ನೆ ಕೇಳಿದಾಗ ಪೀಕಲಾಟಕ್ಕಿಟ್ಟುಕೊಳ್ಳುತ್ತದೆ (ಶಾಪಮು. ೪೬).

[<ಪೀಕು೧ / ತೆಲು. ಪೀಕಲಾಟ]

ಪೀಕಿಸು (ಕ್ರಿ) (ಹಣ ಮೊದಲಾದುವನ್ನು) ಬಲಾತ್ಕಾರದಿಂದ ಕೊಡುವಂತೆ ಮಾಡು,—ತೆರುವಂತೆ ಮಾಡು: ಈ ದಿವಸ ಸಿನಿಮಾಕ್ಕೆ ಅವನ ಕೈಯಿಂದಲೇ ದುಡ್ಡು ಪೀಕಿಸುತ್ತೇನೆ (ಕೂಡಿ). [ಪೀಕು೧+—ಇಸು೫]

ಪೀಕು೧ (ಕ್ರಿ). ೧. ಹೊರಕೆ ಎಳೆ,—ಜಗ್ಗು: ಚತುಷ್ಪಾದಿಗಳನ್ನೆದೆ ಬಿಡಿಸಿದಿಲ ಬಳಗದಂತಾರ್ದು ತಾಕಿದವು ಘುಡುಘುಡಿಸಿ ಪೀಕಿದವು ಕಟಿನಿಕರವ (ಜೈಮು. ೨೦-೩೦). ೨. (ಕೂದಲು ವೇರಿಂತಾದುವನ್ನು ಎಳೆಯುವುದರಿಂದ) ನೋವಾಗು,—ಅಳುಕು: ಕೂದಲಿನ ಸಿಕ್ಕು ಬಿಡಿಸುವಾಗ ಪೀಕುತ್ತದೆ (ಕೂಡಿ). ೩. ಆವರಿಸು; ಆಕ್ರಮಿಸು: ಭುವರಲೋಕವ ತಾಕಿ ನಾಲ್ದೆಸೆ ಸುವರಲೋಕವ ಪೀಕಿ ಖಿತಿಯಿಂ ಕವರಿ ಪುಹಲೋಕವನು ಧಟ್ಟಿಸಿ ಒನರಿ ಲೋಕವನು ಕವಿದು ತಪಲೋಕಕ್ಕೆ ನಿಲುಕಿತು ಕವಕವಿಸಿ ನೆರೆ ಸತ್ಯ ಲೋಕಕೆ ಶಿವನಹಾದೇವೆಂದು ಶೋಣಿತಬೀಜಸಂತಾನ (ಅಂಬಿಕಾ. ೪೨-೪೩). ೪. ಹೊರದೂಡು; ಬಹಿಷ್ಕರಿಸು: (೫). ೫. ಕಪ್ಪಪಡು; ಹೆಣಗು: ಸಾಕು ರಣಸುಖವೆಂದು ವಿಸ್ಮಿನ ಲೋಕಪಾಲರು ಹರಿಭವಾದ್ಯರು ಪೀಕಿ ರಂಗದ ಕುರಿಗಳಾದರು ಏಳರ ತೋಟಿಯಲಿ (ಅಂಬಿಕಾ. ೪೨-೪೯). ೬. (ಹಣ ಮೊದಲಾದುವನ್ನು) ಬಲವಂತದಿಂದ ಕೊಡು,—ತೆರು: ಅವನು ಪಂದ್ಯದಲ್ಲಿ ಸೋತುದರಿಂದ ಹತ್ತುರೂಪಾಯಿಗಳನ್ನು ಪೀಕಬೇಕಾಯಿತು (ಕೂಡಿ). 'ಪೀಕಿಸು' ಪರಾ.

[ದೇ.॥ ತೆಲು. ಪೀಕು; ನಾಯ್ಕ. ಪೀಕ್]

ಪೀಕು೨ (ನಾ). ಬೆಳೆ; ವೈರು: ವೊನ್ನೆ ರೈತರು ಪೀಕನ್ನು ಮನೆಗೆ ತಂದು ಹಟ್ಟಿದರು (ಅಕಿಹಾ. ೬೦): ಸನ್ನ ಮಗನಿಗೆ ಮಠದ ಭೂಮಿಯಲ್ಲಿ ಬೆಳೆದ ಎಲ್ಲ ಪೀಕು ಸಲ್ಲತಕ್ಕದ್ದು (ಕುಪಕ. ೬೩).

[← ಹಿಂ. ಪೀಕಾ = ಬೆಗುರು; ಮರಾ. ಪೀಕ್]

ಪೀಕುದಾನಿ 'ಪೀಕದಾನಿ' ನೋ.

ಪೀಕೆ (ನಾ). ಬಾಣದ ಗರಿ: ಇಜುಬಿನೊಳು ಸಿಕ್ಕಿಸಿದೆ ಬಲುಗಡಂ ನೋಡೆನುತ ಪೀಕೆಯಿಂ ಸನ್ನೆಗೆಯ್ದು . . . ಪರಿಚರರು ನುಡಿವುತಿರ್ದರ್ (ಅಕಿಹಾ. ೨೩-೦೬). [<ಪಳ್ಕ]

ಪೀಚ (ನಾ). (ಆಲಂ) ಸಣ್ಣ ಮನುಷ್ಯ; ಅಲ್ಪನಾದವನು; ಕ್ಷುದ್ರ: ಭೂಚರರ ಗೋಚರರಗೊಳಿಸದಸುರಾನ್ನಯವ ಪೀಚನಲ್ಲ (ಕಕಮು. ೩೫-೦). [ಪೀಚು೨ + — ಅ೨]

ಪೀಚಕತ್ತಿ (ನಾ). ಚಿಕ್ಕ ಕಠಾರಿ; ಕಿರುಗತ್ತಿ: ನೀನು . . . ನಡುವಿಗೆ ದಟ್ಟಿಯನ್ನು ಬಿಗಿದು ಪೀಚಕತ್ತಿಯನ್ನು ಸಿಕ್ಕಿಸಿಕೊಂಡು ಬಂದೆ (ಕಡಾ. II, ೦೦೩); ದಟ್ಟಿಗೆ ಪೀಚಕತ್ತಿಯನ್ನು ಸಿಕ್ಕಿಸರಿಲ್ಲ (ಪುಂಕಾ. ೫).

[<ಪೀಚು೨ + ಕತ್ತಿ. / ತಮಿ. ಪೀಚ್ಚಾಕ್ಕತ್ತಿ. ಪೀಚ್ಚಾಕ್ಕತ್ತಿ: ಮಲ. ಪೀಚ್ಚಾಙ್ಙತ್ತಿ]

ಪೀಚಲು (ನಾ). ಚೆನ್ನಾಗಿ ಬೆಳೆಯದಿರುವುದು; ಬಡಕಲು: ಪೀಚಲಾದ ಸರಳವಾದ ಉಡುಪಿನ ಚಿಕ್ಕ ಮನುಷ್ಯನೊಬ್ಬನು . . . ಬಳಲಿದ ಕಣ್ಣುಗಳಿಂದ ನೋಡುತ್ತಿದ್ದಾನೆ (ಪಾಕಾ. ೦).

[ಪೀಚು೨ + — ಅಲು (< — ಅಲ್೩)]

ಪೀಚಾಡಿ 'ಪಿಚಾಡಿ' ನೋ.

ಪೀಚಾಳು (ನಾ). ಸರಿಯಾಗಿ ಬೆಳೆಯದ ವ್ಯಕ್ತಿ; ಸಣಕಲು ಮೈಕಟ್ಟಿನವನು: ಪೀಚಾಳೊಬ್ಬ ತನ್ನ ಕವಲುತೋಳಿನ ಅಂಗಿಯನ್ನು ಕಳಚಿ ಬಿಸಾಡಿ ಬಿಕ್ಕುತ್ತ ಬಂದು ಅವಳನ್ನು ಬಿಗಿದಪ್ಪಿಕೊಂಡನು (ಕುಪಕ. ೪೫೬).

[ಪೀಚು೨ + ಆಳು೩ (< ಆಳ್೩)]

ಪೀಚು೧ (ಕ್ರಿ). (ದ್ರವ ಪದಾರ್ಥಗಳನ್ನು) ಪಿಚಕಾರಿ, ಜೀಕಳಿ ಮೊದಲಾದುವುಗಳಿಂದ ಚಿಮ್ಮು.—ಚೆಂರುಕಿ ಬಿಡು: 'ಪೀಚುಗೊಳವಿ' ಪರಾ. [ದೇ. ॥ ತಮಿ. ಪೀಚ್ಚು, ಪೀಚ್ಚು; ಮಲ. ಪೀಚ್ಚು]

ಪೀಚು೨, ಪೀಚೆ, ಹೀಚು೨ (ನಾ). ೧. ಸಣ್ಣದಾಗಿರುವಿಕೆ: ಸರಿಯಾಗಿ ಬೆಳೆಯದಿರುವಿಕೆ: (೫). ೨. ಬಡಕಲು; ಸಣಕಲು: ಅವರ ಮಗು ತುಂಬ ಪೀಚು (ಕೂಡಿ). ೩. ಶೀರ ಎಳೆಯ ಕಾಯಿ; ಮಿಡಿ: "ಪೀಚಿನಲ್ಕೆರಕವುದು ಮಿಡಿಗೆ" (ಕಕ. ೬೬), ಚಿಗುರೆಲೆ ಪೀಚು ಕಾಯ್ ಬಲಿತ ದೋರೆಗಳುಂ ಕಿರಿವಣ್ಣಳಾಗಳುಂ ಸೊಗಬಿಸೆ (ಕಾಕಾಶ್ಯ. ೩-೦-೬) (ಗಂ). ೪. ಸಣಕಲಾದ; ಬಡಕಲಾದ: ಮಗುವಿಗೆ ರಿಕೆಟ್ಸ್ ತರಹ ಆಗಿರುವಂತಿದೆ; ತುಂಬಾ ಪೀಚುಮಗು (ಕಂಪಿಸಿ. ೦೨); ಆ ಜಾತಿಯಲ್ಲಿ ಪೀಚು ಮನುಷ್ಯನೊಬ್ಬ . . . ತಮಗೆಲ್ಲ ನಿಷ್ಕಾರಣವಾಗಿ ಕಠಿಣಹಿಂಸೆಯಾಗುತ್ತಿತ್ತೆಂದು ಹೇಳತೊಡಗಿದನು (ಪುಕಕ. ೨೩೫). **ಪೀಚೆ:** ೨. "ಅದೇನೂ ಪೀಚಿಯಲ್ಲ; ಸರಿಯಾದ ಎತ್ತರವೆ" ಎಂದು ಪರ್ತಕ ಉತ್ಸಾಹದಿಂದ ನೆಕ್ಕು ದೋಪ್ಪ ಕಿವಿಯಲ್ಲುಸುರಿದನು (ಪುಕಕ. ೬೬). ೪. ಆ ಪೀಚೆ ಮನುಷ್ಯ ನಿರಾಶೆಯಿಂದ ಚೀರಿದನು (ಪುಕಕ. ೨೩೫). **ಹೀಚು೨:** ೩. "ಎಳೆಗಾಯಿ ಮಿಡಿ ಹದಿರು ಹೀಚು" (ಕಬ್ಬಕು. ೨೩); ಬೀಜಕೆ ಬಿಡುವುದ ಹೀಚಿನೊಳಜಿಯೆಂಬುದೀ ಜಗದೊಳಗುಳ್ಳ ಗಾದೆ (ಕಕ. ೨೫-೪೬); ವೃಕ್ಷದ ಬುಡಕ್ಕೆ ನೀರನೆರೆದಲ್ಲಿ ಆ ಉದಕಸಾರವು ಎಲೆ, ಹೀಚು, ಕಾಯಿ ಹಣ್ಣುಗಳೊಳಗೆಲ್ಲ ವೇಧಿಸಿಕೊಂಡಿರುವ

ಹಾಗೆ (ಕೋಳಿಪು. ೦೨೦-೪೭೪ ಅರ್ಥ); ಹಣ್ಣಿನ ಗುಣವೆಲ್ಲ ಹೀಚಿನಲ್ಲಿ (ಪುಸಾಪ. ೦೪). (ನಾ). ೫. ಸಣಕಲು ವ್ಯಕ್ತಿ; ನರಪೇತಲ: ನಿನ್ನ ತಮ್ಮ ಹೀಚೇನೂ ಅಲ್ಲ. ನೋಡುವುದಕ್ಕೆ ಇಪ್ಪತ್ತೈದು ವರ್ಷದ ಆಳು (ಶಾಂಕಲಾ. ೦೯೦). ೬. (ಆಲಂ) ಅನುಭವವಿಲ್ಲದ ವ್ಯಕ್ತಿ: ಇದಕ್ಕೆಲ್ಲ ಕತೆ ಬರೆದ ಹೀಚುಗಳ ಅಮೋಘವಾದ ಅಪರಿಮಿತ ಅಜ್ಞಾನವೇ ಕಾರಣ (ಪುಹೋಸಂ. ೦೨೬). [ದೇ.ಸ ಮಲ. ಪೀಚ್ಚ]

ಪೀಚುಗಡ್ಡ (ನಾ). ಸರಿಯಾಗಿ ಬೆಳೆಯದ ಗಡ್ಡ; ಕುರುಚಲುದಾಡಿ: (ಕ). [ಪೀಚು$_2$ + ಗಡ್ಡ$_1$]

ಪೀಚುಗೊಳವಿ (ನಾ). ಪಿಚಕಾರಿ; ಜೀಕಳಿ; ಜೀರ್ಕೊಳವೆ: (ಕ). [ಪೀಚು$_1$ + ಕೊಳವಿ (< ಕೊಟವಿ)]

ಪೀಚೆ 'ಪೀಚು$_2$' ನೋ.

ಪೀಠ (ನಾ). ೧. (ಕುಳಿತುಕೊಳ್ಳಲು ಮಾಡಿದ) ಮಣೆ; ಆಸನ: "ವಿಷ್ಟರಂ, ಪೀಠಂ, ಆಸನಂ—ಈ ೩ ಮಣೆ" (ಪಂಚಾಯು. ೫೨-೦೫೫); "ಆಸಂದಿ ವಿಷ್ಟರಂ ವೇತ್ರಾಸನಕಂ ಪೀಠಮಾಸನಂ ಪೆಸರಿಂ" (ಪಸ್ತುಕೋ. ೪೯-೨೫). ೨. ದೇವರ ಪ್ರತಿಮೆಯನ್ನು ಇಡುವ ವೇದಿಕೆ: ಎಸೆವ ಪೀಠವನಿಳಿದು ರುದ್ರಾಣಿ ಬೆಚ್ಚರದೊಳ್ಳೆತಂದು ಕಯ್ಯ ಬಾಳು ಪಿಡಿದು . . . ಎರಡು ವರವನಿತ್ತಪೆನೆಂದಳು (ಕೃಪುಣಾ. ೩೦-೬೯). ೩. ದೇವರ ಮುಂದೆ ನೈವೇದ್ಯ, ಬಲಿ ಮೊದಲಾದುವುಗಳನ್ನು ಇಡುವ ವರ್ತುಲಾಕಾರದ ವೇದಿಕೆ: 'ಬಲಿಪೀಠ' ಪರಾ. ೪. ತಳಪಾಯ; ಬುನಾದಿ; ಅಡಿಪಾಯ. ೫. ಗುರುಗಳು, ಸ್ವಾಮಿಗಳು, ಅರಸರು ಮೊದಲಾದವರ ಗದ್ದುಗೆ,—ಅಧಿಕಾರಸ್ಥಾನ: ಪೀಠ ಮೂಢಗೆ ಹೊಲ್ಲ ಕೀಟ ನಿದ್ದೆಗೆ ಹೊಲ್ಲ (ಸರ್ವಜ್ಞ. ೫೩೦); ಪೀಠ ಸಿಕ್ಕಿದರೂ ಕಾಟಕತನ ಬಿಟ್ಟಾನೆಯೇ? (ಗಾರ). ೬. ವಿದ್ಯಾಕೇಂದ್ರ; ವಿದ್ಯಾಕ್ಷೇತ್ರ: ಮಯೂರಶರ್ಮನು ವ್ಯಾಸಂಗ ಮಾಡುತ್ತಿದ್ದುದು ಈ ಪೀಠದಲ್ಲಿಯೇ (ಕರ್ಣಾಲ. ೩). 'ವಿದ್ಯಾಪೀಠ' ಪರಾ. ೭. ವಿಶೇಷ ಅಧ್ಯಯನಕ್ಕಾಗಿ ಗೊತ್ತುಮಾಡಿರುವ ಒಂದು ಅಧಿಕಾರ,—ಪ್ರಾಧ್ಯಾಪಕಸ್ಥಾನ: ಜೈನ ಶಾಸ್ತ್ರಾಭ್ಯಾಸಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಪೀಠವಿದೆ (ರೂಢಿ). [ಸಂ.]

ಪೀಠಕ (ನಾ). ೧. ಆಸನ; ಮಣೆ. ೨. "ಸ್ಥಾನ" (ಅಂಕಾ. ಕೋಕ): ಅಂತೆ ಜನನೀಜಠರಪೀಠಕ[ಪಾಠಾಂ. ಪಿಠರ]ಮನೆಯ್ದನೋರಂತಿದುಂ ಪರಮಾರ್ಥ ಮಕ್ಕುಂ (ಆಂಕಾ. ೪-೪-೭೦). ೩. [ನಾಟ್ಯ] ನೃತ್ಯದಲ್ಲಿಯ ಒಂದು ಭಂಗಿ: ಕಾಲುಗಳು ಪೀಠಕದಲ್ಲೇ ನಿಂತಿರಬೇಕು . . . ಅವು ನೇರಾಗ ಕೂಡದು (ಬಿಲ್ಹಪು. ೦೩೭). [ಸಂ.]

ಪೀಠಮರ್ದ (ನಾ). [ಕಾವ್ಯಮೀ] ಶೃಂಗಾರವಿಷಯಗಳಲ್ಲಿ ನಾಯಕನಿಗೆ ಸಹಾಯಕರಾಗಿ ಬರುವ ನಾಗರಕ, ವಿಟ, ವಿದೂಷಕ ಮತ್ತು ಪೀಠಮರ್ದ ಎಂಬ ನಾಲ್ವರಲ್ಲಿ ಒಬ್ಬ; ೫ ಕೋಪಗೊಂಡ ನಾಯಿಕೆಯನ್ನು ಸಂತೈಸುವುದರಲ್ಲಿ ನಿಪುಣನಾದವನು: ಒಡನೊಡನೆ ಪೊರೆದು ಕುಳ್ಳಿರ್ದೆಡೆಯೊಳ್ತಂದೇಱಲಿಕ್ಕೆ ಕಾಲ ಪಿಡಿದೋಗಡಿಸದೆ ಮಿದಿಮಿದಿದಟ್ಟಿಯನೊಡರಿಸುತಿರ್ಪವನೆ ಪೀಠಮರ್ದನೆನಿಕ್ಕುಂ (ಶೃಂಗಾರ. ೪-೦೨); ಮಗುಳ್ದು ಸರಸೋಕ್ತಿಗಳ ವಿರಚಿಪಂ ನಾಗರಿಕನಂತೆ ಪೀಠಮರ್ದನ ಪಾಂಗಿನಿಂ (ಅಂಕಾ. ೪-೬-೩೬). [ಸಂ.]

ಪೀಠಮರ್ದಕ (ನಾ). = ಪೀಠಮರ್ದ: ತನ್ನಂ ಕಾಣಲೊಡಮಱಿದು ನುಡಿಯಿಸಿ ಮೆಚ್ಚಿ ಮೇಳದ ನಾಗರಿಕವಿಟವಿದೂಷಕಪೀಠಮರ್ದಕರ್ಕಳ್ವೆರಸು . . . ಸೂಳೆಗೇರಿಯೊಳಗನೆ ಬರ್ಪುದುಂ (ಸಂಪಣಾ. ೪-೬೯ ಪ); ದೀನಜನತಾ ಕಲ್ಪಾಂಘ್ರಿಪಂ ನಾಗರಕವಿಟವಿದೂಷಕ ಪೀಠಮರ್ದಕರ್ಕಳ್ವೆರಸು . . . ಬರ್ಪೊಂ (ಶಾಂತಿಪು. ೯-೬೨ ಪ); ಪೀಠಮರ್ದಕ ವಿಟ ಚೇಟ ವಿದೂಷಕರೆಂದು ಮುಂ ಪೇಟ್ಟವರಲ್ಲಿ ರಾಜನಿಂದಣಮೆ ಕಿಱಿದಾದ ಗುಣವಂತಂ ತನ್ನೃಪನ ಪೀಠಮನಣಿವುತ್ತೊತ್ತಿ ಕುಳ್ಳಿರ್ಪುದಱಿಂ ಪೀಠಮರ್ದಕಂ (ಕಸಕ. ೩-೯೫ ಪ). [ಸಂ.]

ಪೀಠಮರ್ದನ (ನಾ). = ಪೀಠಮರ್ದ: ಎಸೆವ ನಾಗರಿಕ ವಿಟ ವಿದೂಷಕ ಪೀಠಮರ್ದನ ನಟ ಗಮಕಿ ಗಾಯಕರು ಮಿಗೆ ಸಂಕಟಿಸಿ ಮೆಱೆದರು ಚಪ್ಪರದೊಳು (ಶೀಪಂಕ. ೬-೫೭); ಮೂಡಲದು ವಿಟನಿಂಗೆ ಬಡಗಲದು ವಿದುಷಕಗೆ ಪಡುವಲದು ನಾಗರಿಕಗಂ ತೆಂಕಲದು ಪೀಠಮರ್ದನಗೆ (ಸರ್ವಜ್ಞ. ೦೬೩೦). [ಸಂ.]

ಪೀಠವರ್ಧನ (ನಾ). = ಪೀಠಮರ್ದ: ಪೀನಕ್ಷು ರಕ್ತಕರ್ದಮನೂನ ಸುಗಂಧಾಧಿಕಾರಮರ್ದನಕುಶಲಂ ತಾನಿಂಗಿತಜ್ಞನುಂ ವಿಜ್ಞಾನಹಿತಂ ಶೌಚಿ ಪೀಠವರ್ಧನನೆನಿಕುಂ (ಪುಪಶಿ. ೦೦-೪೦); ಮನುಮಾರ್ಗಿ ಪರಹಿತಾವನಿ ಸತ್ಯವಾಣಿ . . . ಸಜ್ಜನನೆನಿಪ ಪೀಠವರ್ಧನನೊರ್ವ ಕೆಳೆಯುಂ (ಜಪಸ. ೯-೯); ವಿಟವಿದೂಷಕಪೀಠವರ್ಧನರೆಂದೆಂಬ ನಟನೆಯ ನಾಗಲಿಕರಿಗೆ ಘಟಿಕ ಕಾಮನು ಕಾವಲಿರಿಸಿದನೆಂಬಂತೆ ಕುಟಿಲಾಕ್ಷಿಯರ ಮೊತ್ತವೆಸೆಯೆ (ಅಲ್ಲಂಕಾ. ೩-೯೪). [< ಪೀಠಮರ್ದನ]

ಪೀಠಾಧಿಪತಿ (ನಾ). ಮಠದ ಅಧಿಕಾರವನ್ನು ವಹಿಸಿಕೊಂಡ ವ್ಯಕ್ತಿ; ಪೀಠಾಧಿಕಾರಿ; ಜಗದ್ಗುರು: ಮೊನ್ನೆ ಶಿವಗಂಗೆಯ ಪೀಠಾಧಿಪತಿಗಳ ಉಪನ್ಯಾಸವಿತ್ತು (ರೂಢಿ). [ಸಂ.]

ಪೀಠಿಕಾಪ್ರಕರಣ (ನಾ). ಆರಂಭದ ಘಟನೆ: ಧರಗವತರಿಸುವ ಲಕ್ಷ್ಮೀವರನವತಾರಕ್ಕೆ ಪೀಠಿಕಾಪ್ರಕರಣದಂತಿರೆ ಬಂದನಂತಭೋಗೀಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ (ಜಗಪ. ೨-೬೦). [ಸಂ.]

ಪೀಠಿಕಾಸಂಧಿ (ನಾ). (ಕಾವ್ಯದಲ್ಲಿ) ಆರಂಭದ ಸಂಧಿ; ಮೊದಲನೆಯ ಸಂಧಿ: ಪ್ರಾಚೀನಕವಿಗಳೆಲ್ಲ ತಮ್ಮ ಕಾವ್ಯದ ಪೀಠಿಕಾಸಂಧಿಯಲ್ಲಿ ತಮ್ಮ ಇಷ್ಟದೇವತೆಗಳನ್ನು ಸ್ಮರಿಸಿದ್ದಾರೆ (ರೂಢಿ). [ಸಂ.]

ಪೀಠಿಕೆ (ನಾ). ೧. ಆಸನ; ಪೀಠ: ಪ್ರತಿನಂದಿ . . . ಪೊಂದಾವರೆಯ ಪೂಗಳಿಂ ಪೀಠಿಕೆಯಂ ಸಮೆದು ಜಿನಪ್ರತಿಮೆಯನ್ನಲ್ಲಿ ನಿಲಿಸಿಯರ್ಚಿಸುತ್ತಿರ್ಪನ್ನೆಗಂ (ಪಂಚಾಪು. ೦೩-೬೫ ಪ). ೨. ಶಿವಲಿಂಗದ ಪಾಣಿವಟ್ಟಲು; ಪಾಣಿಪೀಠ; ಪಿಂಡಿಗೆ: ದೇಹವೇ ಪೀಠಿಕೆ [ಪಾಠಾಂ. ಪಿಂಡಿಗೆ, ಪೀಠಕ್ಕೆ, ಪೀಠಿಗೆ] ಜೀವವೇ ಲಿಂಗ (ಅಪಸಂ. ೪೩-೦೯೯). ೩. ಯಾವುದಾದರೊಂದು ವಿಷಯದ ಸಮಗ್ರವಿವರದ ಸಂಗ್ರಹ,— ಸಮಸ್ತವಿವರದ ಸಾರ. ೪. ಮುನ್ನುಡಿ; ಉಪೋದ್ಘಾತ: ಈ ಗ್ರಂಥದ ಪೀಠಿಕೆಯನ್ನು ಬರೆದವರು ದೊಡ್ಡ ವಿದ್ವಾಂಸರು (ರೂಢಿ).

ಪೀಠಿಕೆ ಹಾಕು—ಮುಂದಿನ ಕಾರ್ಯಕ್ಕೆ ಅನುಕೂಲವಾದ ಹಿನ್ನೆಲೆಯನ್ನು ರಚಿಸು; ಪೂರ್ವರಂಗವನ್ನು ನಿರ್ಮಿಸು: ಆ ಮನೆಯನ್ನು ಅವರ ತಲೆಗೆ ಕಟ್ಟುವುದಕ್ಕೆ ಏಜೆಂಟ್ . . . ಪೀಠಿಕೆ ಹಾಕಿದ್ದನು (ಹೋರಪು. ೨೫); ಅವರೇ ಜವಾಬುದಾರಿ ಹೊತ್ತು ಇವಳನ್ನು ಈ ಊರಿಗೆ ತಂದದ್ದಲ್ಲವೆ? ಎಂದು ಪೀಠಿಕೆ ಹಾಕಿ ಕತೆ ಹೇಳಿದ್ದ (ಮುಂಕುಣಾ. ೬೯). [ಸಂ. ಪೀಠಿಕಾ]

ಪೀಠೋಪಕರಣ (ನಾ). ಮಣೆ, ಕುರ್ಚಿ, ಮೇಜು ಮೊದಲಾದ ವಸ್ತುಗಳು: (ಮನೆಯ, ಕೊಠಡಿಯ,—ಕುರ್ಚಿ, ಮೇಜು, ಮೊ. ದ) ಪೀಠೋಪಕರಣ (Furniture, ಇಂಕಡಿ); ಅನಂತರ ಜಮಖಾನೆಗಳನ್ನೂ ಪೀಠೋಪಕರಣಗಳನ್ನೂ ಹೊರಗೆ ತರಲಾಯಿತು (ಪುಸರು. ೨೦೦). [ಸಂ.]

ಪೀಡ (ನಾ). ಒಂದು ಬಗೆಯ ಮರ; ಸರಳವೃಕ್ಷ: "ಪೀತಂಪದಾ ಅರಿದಳ; ಸುರಹೊನ್ನೆ, ಜೀರಗೆ, ಪೀಡ, ಅತ್ತಿ" (ಕಿಪಿಂ. ೯೯). [ಸಂ. ಪೀಡಾ]

ಪೀಡನ (ನಾ). ೧. ಹಿಸುಕುವುದು ; ಹಿಂಡುವುದು ; ಒತ್ತುವುದು : ಯಪಭಗೆ ಹರಣ ಹಿಂಡಿಮದವನ ಬಾಹುಪೀಡನದಿ (ಶ್ರೀರಾಮಾ. ೬೮೬-೨೨೦). ೨. ನೋಯಿಸುವುದು ; ಹಿಂಸಿಸುವುದು ; ಕಾಡುವುದು : "ನಿಗ್ರಹಂ ಪೀಡನಂ" (ಮಂಗರಾ. ೧೩೦-೦೭). ೩. ಹಿಡಿಯುವುದು : 'ಪಾಣಿಪೀಡನ' ಪರಾ. ೪. [ಕಾಮಶಾ] ಹನ್ನೆರಡು ಬಗೆಯ ಆಲಿಂಗನಗಳಲ್ಲಿ ಒಂದು : ಸಹಜಮೆಂಬ ತೆಱದಿ ನಡೆದು ಬಹಳಮೆನಿಪ ಮಂದಿಯೆಡೆಯ ಮಹಿಳೆಯೊಡಲನೊಲ್ಪು ಸೋಂಕಿ ತೆಕ್ಕೆಗಾನಿಸಿ ಅಹ ಇದಾರೆನಲ್ಕೆ ಬಿಡುವ ಬಹುವಿದಗ್ಧಪುರುಷನಿಂದ ಮಹಿಗೆ ಕಾಣಿಸಿದುದು ಪೀಡನಂ (ಅನಪ. ೭-೩); ಪುಷ್ಕರ ವಿವಿಧಕ ಧೃಷ್ಟಕ ಪೀಡನ ವೃಕ್ಷಾರೋಹಣ ಲತಾವೇಷ್ಟನ ತಿಲತಂಡು ಲಾಖ್ಯ ಕ್ಷೀರನೀರ ಊರೂಪಗೂಢ ಜಘನೋಪಗೂಢ ಸ್ತನಾಶ್ಲೇಷ ಲಲಾಟಕಮೆಂಬ ದ್ವಾದಶಾಲಿಂಗನಾಲಿಂಗಿಗಳಿಂ (ವಿವೇಕ. ೧೮೩); ಅಲ್ಲಿರ್ದ ಕಾಮಿನೀ ಸ್ತ್ರೀಪುರುಷರೋರೋರ್ವರನೊತ್ತಿಕೊಂಡು ಹೋಗಿ ಆ ಬಾಧೆಗೆ ಆಲಿಂಗನಂಗೈವುದಂ ಪೀಡನಮೆಂಬರು (ಕಾಮಶಾ. ೨೨೦). ೫. ದಂತಕ್ಷತದ ಭೇದಗಳಲ್ಲಿ ಒಂದು : ಎಡಗಲ್ಲದಲ್ಲಿ ಅಡಿಗಡಿಗೆ ದಂತಕ್ಷತಗೈವುದು ಪೀಡನ ಮೆಂಬುದು (ಕಾಮಶಾ. ೨೨೬). ೬. ಸುರತದ ಆಸನಗಳಲ್ಲಿ ಒಂದು : ಅವಳ್ಗೆ ದಣಿವಿಲ್ಲದೊಡೆ ಅವಳು ಮೇಲಪ್ಪುದು. ತಾಂ ಕೆಳಗಪ್ಪುದು. ಆ ಧ್ವಜಾಧಿಪ ಮೆಲ್ಲನವುಕೆ ಪೀಡನಂ (ಕಾಮಶಾ. ೨೩೮). [ಸಂ.]

ಪೀಡನಕ (ನಾ). ೧. = ಪೀಡನ ೪ : ನೆರವಿಯೊಳ್ ಪೊರ್ದಿ ಪೆಣ್ಣಂ ಸರಸಾಟದಿ ಭಿತ್ತಿಗೌಂಕಿಯಹಹಮೆನುತ್ತಾದರದಿಂ ಬಿಗಿಬಿಗಿದಪ್ಪುತ್ತಿರಲದೆ ಪೀಡನಕಮೆಂದೆನಿಪ್ಪಾಶ್ಲೇಷಂ (ಮನ್ಮಥ. ೦೦-೭). ೨. = ಪೀಡನ ೫ : ಎಡದ ಗಲ್ಲಮನೊತ್ತಿ ಪಿಡಿಯೆ ಪೀಡನಕಮದು (ಅನಪ. ೭-೩೦). [ಸಂ.]

ಪೀಡನೆ (ನಾ). ಕಾಟ ; ಹಿಂಸೆ ; ಪೀಡೆ : ಯುರೋಪಿಯನರ ಪೀಡನೆಗೊಳಗಾಗಿರುವ ರಾಷ್ಟ್ರಗಳಲ್ಲಿ ತಮ್ಮ ಶಕ್ತಿಯ ವಿಚಾರದಲ್ಲಿ ಒಂದು ಬಗೆಯ ನವೀನವಿಶ್ವಾಸವು ಹುಟ್ಟುವುದು (ಜಗಸಂ. ೩೬). [ಸಂ. ಪೀಡನ]

ಪೀಡಿ, ಪೀಢಿ (ನಾ). ಪೀಳಿಗೆ ; ಪರಂಪರೆ ; ತಲೆಮಾರು : ನೀವು ಪೀಡಿದರಪೀಡಿಯಿಂದ ಈವೂರಲ್ಲಿದ್ದವರು (ಶಕ್ರಪಾ. ೮೦). ಪೀಢಿ: ಹಳೆ ಹೆಂಗಸರಿಗೆ ಈ ತರುಣಪೀಢಿಯ ನಡತಿ ತಿಳಿಯೂದಿಲ್ಲ (ಗಂಮಾಯಿ. ೨೦).

[← ಮರಾ. ಪಿಢೀ]

ಪೀಡಿತ (ಗು). ೧. ನೋಯಿಸಲ್ಪಟ್ಟ; ಬಾಧೆಗೊಳಗಾದ ; ಹಿಂಸೆಗೆ ಗುರಿಯಾದ : ನಿಜವಕ್ಷೋಜನಿಕ್ಷಿಪ್ತಕ್ಷ್ವೇಡಪೀಡಿತಲೋಕಘಾತಿನಿಯಪ್ಪ ಪೂತನಿಯುಮಂ . . . ಕರೆದು (ಜಗಂ. ೩-೨೨). (ನಾ). ೨. ಪೀಡೆಗೊಳಗಾದವನು ; ನೊಂದವನು : ವಿದ್ಯಾಗರ್ವಗ್ರಹಪೀಡಿತರ್ ಸ್ವಪರ ಬಾಧಾಹೇತುವಂ ದುಸ್ತರೋದ್ಯೋಗಕ್ಲೇಶಿತರಾಗಿ ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ (ಶಂರಾಮಾ. ೦-೩೪) ; ಅವನುರುದೀಪ್ತಿಗೆ ಕೀರ್ತಿಗೆ ರವಿರಾಜರ್ ಕಂದಿ ಬಲ್‌ಕಱುಂಬಿದ ದೆಸೆಯಿಂದವಧಿಯನೆಂದುಂ ಕಾಣದೆ ತವೆ ರಾಹುಗ್ರಹಣಗಾಢಪೀಡಿತರಾದರ್ (ಹಸ್ಮಾಕ. ೨-೩೩). ೩. ನೋಯಿಸಲ್ಪಟ್ಟುದು : "ತುನ್ನಂ, ಪೀಡಿತಂ-ಈ ೨ ನೋಯಿಸಲ್ಪಟ್ಟುದು" (ಹಲಾಯು. ೦೨೬-೮೨); ಅತ್ಯಂತ ಪೀಡಿತವಾದ, ಅಶಾಂತವಾದ ಗುರುಚರಣರ ಹೃದಯದ ಮೇಲೆ ಗಿರೀಂದ್ರನ ಮಾತುಗಳು ಚೆನ್ನಾಗಿ ಮುದ್ರೆಯನ್ನು ಹಾಕುತ್ತಿದ್ದವು (ಶಂಚೇ. ೩೬). ೪. ನೋವು; ಬಾಧೆ; ಹಿಂಸೆ : "ಪೀಡಿತಂ ತುನ್ನಮೆನೆ ನೋವಕ್ಕು" (ಮಂಗರಾ. ೦೩೨-೨೬). ೫. [ಕಾಮಶಾ] ಚುಂಬನದ ಹನ್ನೆರಡು ಬಗೆಗಳಲ್ಲಿ ಒಂದು ; ೞ ಇದರ ಸಂಖ್ಯೆ ಮತ್ತು ಹೆಸರುಗಳಲ್ಲಿ ಭಿನ್ನಾಭಿಪ್ರಾಯಗಳಿವೆ : ಸ್ತ್ರೀಯೆರಡು ತುಟಿಯಂ ತನ್ನೆರಡುತುಟಿಯಿಂದೊತ್ತಿ ಪೀರ್ವುದು ತೋರ್ಪುದು ಬಲ್ಪಿಡಿವುದು ಚುಂಬಿಸುವುದು ಇದು ಪೀಡಿತಮೆಂಬ ಚುಂಬನ (ಕಾಮಶಾ. ೨೨೫). 'ಜಿಹ್ವಕ' ಪರಾ. ೬. ರತಿಬಂಧಗಳಲ್ಲಿ ಒಂದು : ಪೀನಸ್ತನದ್ವಯದೊಳಾನೆ ನಿನ್ನೆದೆಯನನುಮಾನವಿಲ್ಲದೆ ತಿವಿವೆನೆಂದೊಱಗಿದ ಮಾನಿನಿಯ ತೊಡೆಯನವಧಾನದಿಂ ಮೆಟ್ಟಿ ನೆರೆವಾ ನಿಪುಣನಿಂದೆ ಪೀಡಿತಮದಂ (ಅನಪ. ೯-೩೭); ಮೆಲ್ಲನೆ ಮಲಗಿರ್ದವಳು ಪುರುಷಂ ತನ್ನೆಡಗಾಲಿಂ ಮೆಟ್ಟಿ ರಮಿಸೆ ಪೀಡಿತಮೆಂಬ ಕರಣಂ (ಕಾಮಶಾ. ೨೩೬). [ಸಂ.]

ಪೀಡಿತಕ (ನಾ). – ಪೀಡಿತ ೫ : ಸವಡಿದುಟವಿಡಿದು ನಲ್ಲಂ ತವಕದಿ ನಂಗುಷ್ಠ ತರ್ಜನಿಗಳಿಂ ಸೊಗಸುಣ್ಮುವಿನಂ ತೊಡರ್ದೊತ್ತಂಬದೆ ಸವಿಯ.ಲ್ ಪೀಡಿತಕಚುಂಬನಂ ತಾನೆನಿಕುಂ (ಮನ್ಮಥ. ೦೨-೦೦). [ಸಂ].

ಪೀಡಿಸು (ಕ್ರಿ). ೧. ನೋಯಿಸು; ಬಾಧೆಗೊಳಿಸು : ಅಪಥ್ಯದಲುಂಬವನ ವ್ಯಾಧಿಗಳ್ ಪೀಡಿಸುವುವು (ಶಂಚಕಂ. ೦೬೯-೦೦); ಸರಸಿಜಾಕ್ಷನೆ ಸರಸ ನೀನಾದರೆ ದುರಿತಗಳೆನ್ನನು ಪೀಡಿಪುದುಂಟೆ (ಪುರಂದ. ೨-೭೦-೨); ಕಿಚ್ಚುಗಣ್ಣನ ತಪವಳಿವುದು ಪೂಗೋಲೊಳೆಚ್ಚು ಮನ್ಮಥ ಪೀಡಿಸಲು (ಮೋಹಕ. ೩-೦೯) ೨. ಕಾಡು; ಕಾಟ ಕೊಡು : ಮನುಷ್ಯರ ಪಿಡಿದು ಪೀಡಿಸಿ . . . ಈಡಾಡಿದ ಕೂಳಂಬಲಿಯನಾಯ್ದು ಕುಱುಕುವ ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡ ಎಲವೋ (ಐಸಪ. ೩೩೬); ಪುರುಷರಮೇಶ್ವರನ ಕಾಲಂ ಪಿಡಿದು ಬಿಡದೆಲ್ಲರ್ಗೆ ಪಲವು ದೇಶಂಗಳಂ ಕೊಟ್ಟರಿ ನಮಗೆ ಕಿಱಿದು ನಾಡಂ ಕುಡಿಮೆಂದು ಬೇಡಿ ಪೀಡಿಸುತ್ತಿರಲು (ಪುಷ್ಯಾಸ್ರ. ೦೦-೨೦೫); ಪುಟ್ಟಿಸಬೇಡೆಲೊ ದೇವ . . . ಪರರ ಪೀಡಿಸಿ ತಿಂಬ ಪಾಪಿಜೀವನವ (ಪುರಂದ. ೦-೦೬೪-೦). ೩. ಹಿಸುಕು ; ಹಿಂಡು ; ಒತ್ತು: ನೆಟ್ಟನೆ ಮೊಗ ನೋಡಿ ಮುದ್ದಿಪ ತರಳನ . . . ಬಾಯೊಳ ಬಾಯನಿಟ್ಟು ಗಲ್ಲವ ಪೀಡಿಪಳು (ಮೋಹಕ. ೦೦-೩೬); ತಕ್ಕೆಗೊಂಡೆನ ಪೀಡಿಸಬೇಡ ಕಡುಶೈತ್ಯವಕ್ಕೆಯೊಳಿರಿಸಿ (ಮೋಹಕ ೨೬-೩೯).

[ಪೀಡನ + — ಇಸ್ಸು]

ಪೀಡಿಸುಹ (ನಾ). ಕಾಡುವಿಕೆ; ಪೀಡನೆ : "ಅಭಿಯೋಗಃ–ಪೀಡಿಸುಹಂ" (ಪೀಡಿಪಾ. ೦೭-೩೭). [ಪೀಡಿಸು + — ಹ್ಯ (< — ಪ್ಯ)]

ಪೀಡೆ (ನಾ). ೧. ನೋವು; ಬಾಧೆ : "ಆಬಾಧಾ, ವೇದನಾ, ದುಃಖಂ, ಆರ್ತಿಃ, ಪೀಡಾ, ವ್ಯಥಾ—ಈ ೬ ದುಃಖಂ" (ಹಲಾಯು. ೦೦೩-೪) ಜ್ಞಾನಮಯಂ ತೇಜೋನಿಧಿ ತಾನಿರ್ದುಂ ತಾಯ ಗರ್ಭದೊಳ್ ಪೀಡೆಯ; ನಂತೇನಂ ಮಾಡಿದನಿಲ್ಲ (ಅದಿಪು. ೭-೩೨); ಇಂದು ಪಿಂಗಿದುವೆಮ್ಮ ಪೀಡೆ [ಪಾಠಾಂ. ದೇಸೆ, ಸೇದೆ]ಗಳಿಂದು ಸಾರ್ದುವು ಸಯ್ಪು (ಕಾಪ್ಯಾಪ. ೩೬೩). ೨. ಕಾಟ ; ತೊಂದರೆ : ಪುಣ್ಣನಂತೆ ನೋವಂ ಮಾಟ್ಟುದು ಗ್ರಹದಂತೆ ಪೀಡೆಯಂ ಮಾಟ್ಟುದು (ಧರ್ಮಾಮ್ಯ. ೪-೦೭೩) ; ಸದಾಶಿವನಿಗೆ ಅಣ್ಣನ ಪೀಡೆಯೆ ಅಧಿಕ (ತ್ಯಾಗಮ. ೦೮೩) ; ಸದ್ಯಕ್ಕಂತೂ ಪೀಡೆ ತಪ್ಪಿತಲ್ಲ! (ಪೆಟ್ಟಿಹೂ. ೬೩). ೩. ಅರಿಷ್ಟ ; ಅನಿಷ್ಟ : ವೆಂಕಮ್ಮ . . . ಪೀಡೆ ತಪ್ಪಿತು ಎಂದು ಬಾಯಿ ಬಿಟ್ಟು ಹೇಳಿದ್ದರು. ಆದರೆ ಪೀಡೆ ಅಷ್ಟು ಸುಲಭವಾಗಿ ತೊಲಗಿರಲಿಲ್ಲ (ಪದ್ಮಸ. ೩೦) ; ತನ್ನ ತಂದೆ ತಾಯಿಗಳನ್ನು ಕಳೆದುಕೊಂಡ ಈ ಪೋರ ಅನಿಷ್ಟವಾಗಿಯೇ ಅವಳಿಗೆ ಕಾಣುತ್ತಿದ್ದ. ಅದರಿಂದ ಇದೊಂದು ಪೀಡೆ ಎಂದೇ ಅವಳ ಭಾವನೆ (ಹೂಸಕ್ಷಿ. ೨೯). ೪. ಕಾಡುವ ವ್ಯಕ್ತಿ ; ಗೋಳು ಹೊಯ್ದುಕೊಳ್ಳುವ ವ್ಯಕ್ತಿ : ಕೋಡಿಗಾಸಿಸಿ ಕಾಡಿ ಬೇಡುವ ಪೀಡೆ ವೇಶ್ಯಾಮಾತೆ ದಿಟ್ಟಿಸಿ ನೋಡಿ ಅಳಿಯನ ಕೂಡೆ ತಾನಿಂತೆಂದಳಣಕದಲಿ (ಐಸಪು. ೪೨-೬); ನಾವು ಇಂತಹ ಪೀಡೆಯನ್ನು ಎಂದೂ ನೋಡಲಿಲ್ಲ (ಮುಶಾ. ೩೯); ೫. ಪಿಶಾಚಿ ; ಭೂತ. ೬. ಹಾಳು; ನಾಶ ; ಧ್ವಂಸ. ೭. ಅಡ್ಡಿ ; ತಡೆ. ೮. ಒಂದು ಬಗೆಯ ಮರ; ಸರಳದೇವದಾರು.

ಪೀಡೆ ಕೊಡು = ತೊಂದರೆಯನ್ನು ಕೊಡು ; ಬಾಧೆಯನ್ನುಂಟಂ ಮಾಡು : ನೋಡಲಿಕ್ಕೆ ಬೈರಾಗಿಗಳ ಹಾಗೆಯೇ ಇದ್ದವರು . . . ಹಾಗೇಂತ ಜನರಿಗೆ ಪೀಡೆ ಕೊಟ್ಟವರಲ್ಲ (ಮೂಳಕ್ಷ. ೨೦೯). ಪೀಡೆ ಮಾಡು=

ಪೀಡಿಸಂ ; ತೊಂದರೆ ಕೊಡು : ಎರಡನೆಯವರಿಗಾದರೂ ನೀನು ಪೀಡೆ ಮಾಡಬಾರದು (ಪುಂಜಾಲು. ೨-೧೪). [ಸಂ. ಪೀಡಾ]

ಪೀಡೆಗೆಯ್ (ಕ್ರ). ತೊಂದರೆಗೊಳಿಸಂ ; ಬಾಧಿಸಂ ; ಪೀಡಿಸಂ : ಆಶ್ವಯುಜಕಾರ್ತಿಕದೊಳ್ ಪತ್ಯಂ ವೆರ್ಚುಗುವಂತದು ಕುತ್ಸಕ್ಕೆಡೆಯಾಗಿ ಪೀಡೆಗೆಯ್ಗುಂ ಹಯವಂ (ಶಕ್ತಣ. ೬-೨೬). [ಪೀಡೆ + ಕೆಯ್$_1$]

ಪೀಡೆಗೊಳ್ (ಕ್ರ). ತೊಂದರೆಯನ್ನು ಅನುಭವಿಸು ; ಬಾಧೆಪಡಂ : ಅಪ್ರಸ್ತುತವಾದ (ಅಚೇತನ) ಕಬ್ಬಿನ ವರವಾಗಿ ಅರ್ಥಮಾಡುವಾಗ 'ಪೀಡೆಗೊಂಡು' ಎಂಬ ಲಕ್ಷ್ಯಾರ್ಥ ಸ್ಮರಿಸುತ್ತದೆ (ಕೃಷ್ಣಕೋ. ೪೪ ೩೩೮). [ಪೀಡೆ + ಕೊಳ್$_1$]

ಪೀಧಿ 'ಪೀಡಿ' ನೋ.

ಪೀತ$_1$ (ನಾ). ೧. ಅರಿಸಿನದ ಬಣ್ಣ ; ಹಳದಿ : "ಪೀತಂ, ಹಾರಿದ್ರಂ— ಈ ೨ ಅರಿಸಿನದ ಬಣ್ಣಂ" (ಹಡಾಹು. ೦೨೦-೩೦) ; ಶುಕ್ಲ ರಕ್ತ ಪೀತ ಕೃಷ್ಣ ಎಂಬ ನಾಲ್ಕು ಬಣ್ಣಗಳಿಂದ ಜಾತಿವಿಭಾಗವೆಂದು ಮಹಾಧಾಮ್ನದಿಂದ ತಿಳಿದುಬರುತ್ತದೆ (ಹಿಂರಸಾ. ೦೩೬). ೨. ನವರತ್ನಗಳಲ್ಲಿ ಒಂದು ; ಗೋವೇದಕ. ೩. ಗೋರೋಚನ. ೪. ಚಿನ್ನ ; ಬಂಗಾರ. ೫. ಒಂದಂ ಬಗೆಯಂ ಸಸ್ಯ ; ಹಳದಿಗೋರಂಟಿ : "ಪೀತಮಾ ಸಹ ಚರಿಯುಂ ಕೆಂಪುಗೋರಟೆ" (ಶುಂಗಶಾ. ೩೬-೨೨). 'ಪೀತೆ' ಪರಾ.

[ಸಂ. ಪೀತಾ]

ಪೀತ$_2$ (ಗು). ಕುಡಿದ ; ಹೀರಿಕೊಂಡ : ಚಳಚ್ಚಾಮರವಾತಪೀತನಿಜ ಘರ್ಮಾಂಭಃಕಣಂ . . . ಇರ್ದನಂದು ಸುಖದಿಂ ವಿದ್ವಿಷ್ಟವಿದ್ರಾವಣಂ (ಶಂಕಣ. ೩-೮೫). [ಸಂ.]

ಪೀತಕ (ಗು). ೧. ಅರಿಸಿನದ ಬಣ್ಣವುಳ್ಳ ; ಹಳದಿ ಬಣ್ಣದ. (ನಾ). ೨. ಜವೆಗೋಧಿ ; ಯವಧಾನ್ಯ : "ಯವವುಮದು ಪೀತಕಂ" (ಪಜ್ಞಕೋ. ೧೧-೦೭). [ಸಂ.]

ಪೀತಕಾಂತ (ನಾ). ನವರತ್ನಗಳಲ್ಲಿ ಒಂದು ; ಪುಷ್ಯರಾಗ : "ಪೀತಕಾಂತ ಮೆನೆ ಪುಷ್ಯರಾಗಂ" (ಪುಂಗಣ. ೩೦-೩). [ಸಂ.]

ಪೀತಗಂಧ (ನಾ). ಹಳದಿಬಣ್ಣದ ಚಂದನ : "ಮಾಧವಪ್ರಿಯಂ— ಪೀತಗಂಧ" (ಓಷಧಿ. ೦೨೩). [ಸಂ.]

ಪೀತದಾರು (ನಾ). ಒಂದಂ ಬಗೆಯ ಮರ ; ದೇವದಾರಂ : "ಚಕ್ರಪಾದಪಃ . . . ಪೀತದಾರು, ದಾರು, ಪೂತಿಕಾಷ್ಠಂ — ೭ ದೇವದಾರುವೃಕ್ಷದ ಹೆಸರು" (ಸಿಹ್ಯಂತಿ. ೦೨೪) ; ಪರ್ವತಗಳಲ್ಲಿ ಸಿಕ್ಕುವ ಪೈನ್ ಎಂಬ ಪೀತದಾರುವಿನಿಂದ ಸೊಗಸಾದ, ಮೃದುವಾದ ಮರ, ದಿವ್ಯ, ರಾಳ (Resin) ಸಿಕ್ಕುತ್ತವೆ (ಕೂಂಪ್ರ. ೨೬೩). [ಸಂ.]

ಪೀತದ್ರು (ನಾ). ೧. ಒಂದು ಬಗೆಯ ಎಲರ ; ಸರಳವೃಕ್ಷ : "ಸರಳಂ ಪೀತದ್ರು ಮಹಾತರುವಕ್ಕುಂ" (ಪಪ್ರಕೋ. ೩೩-೨೦). ೨. ಒಂದು ಬಗೆಯ ಮರ ; ಹರಿದ್ರೆ : "ಪೀತದ್ರುಃ . . . ಪರ್ಜನಿಃ — ೭ ಮರದರಿಸಿನ . . . ಕಾಡುಅರಿಸಿನ" (ಸಿಹ್ಯಂತಿ. ೦೩೩). [ಸಂ.]

ಪೀತನ (ನಾ). ೧. ಒಂದು ಬಗೆಯ ಮರ ಮತ್ತು ಅದರ ಕಾಯಿ ; ಅವಂಟೆ : "ಪೀತನಃ, ಕಪೀತನಃ, ಆಮ್ರಾತಕಃ—೩ ಅಂಬಟೀಗಿಡದ ಹೆಸರು" (ಸಿಹ್ಯಂತಿ. ೦೦೬). ೨. ಕುಂಕುಮಕೇಸರಿ ; ಕೇಶರ. [ಸಂ.]

ಪೀತನಕ (ನಾ). = ಪೀತನ ೧ : "ಆಮ್ರಾತಕ ಪೀತನಕಂ" (ಪಪ್ರಕೋ. ೩೩-೩) [ಸಂ.]

ಪೀತಪುಷ್ಪ (ನಾ). ಹಾಗಲ ಬಳ್ಳಿ : "ಹಾಗಲು ಪೀತಪುಷ್ಪ" (ಪುಂಗಣಾ. ೪೪-೪೪). [ಸಂ.]

ಪೀತಫೇನ (ನಾ). ಅರಿಟಾಳದ ಮರ ; ಅಂಟುವಾಳ : "ಅರಿಟಾಳ ಮದರಿಷ್ಕಕಂ ಪೀತಫೇನವೆನಿಸ್ಕುಂ" (ಪುಂಗಣಾ. ೪೨-೩೯). [ಸಂ.]

ಪೀತಲ, ಪೀತಳ (ನಾ). ೧. ಅರಿಸಿನದ ಬಣ್ಣ ; ಹಳದಿ : ಹೊಸ ಮಳೆಯಲ್ಲಿ ಎಂದ ಪ್ರಕೃತಿ . . . ಪೀತಲ ಪೀತಲತೆರವಾಗಿ ಶೋಭಾಯಮಾನವಾಗಿತ್ತು (ಕಶಬ. ೪೩೬). ೨. ಒಂದು ಬಗೆಯ ಲೋಹ ; ಹಿತ್ತಾಳೆ. ಪೀತಳ : ೧. ಬರೆವುದಂತೆ ಕರ್ಣಿಕೆಯಂ ಪೀತಳಿಸಕರಸದಿಂ (ತಾಣಾಸ್ಕ. ೪-೦೭-೦೪). [ಸಂ.]

ಪೀತವಸನ (ನಾ). ೧. ಪೀತಾಂಬರ ; ಪಟ್ಟೆವಸ್ತ್ರ : ಉಟ್ಟು ಮಲ್ಲಗಚ್ಚೆಯ ಪೀತವಸನಮಂ, ಶಿರುಗುತಿರೆ ಚಿತ್ರಾಂಗಿ, ಕಾನನದ ರಾಣಿ ತಾನೆಂಬವೊಲ್ (ಶಕ್ರಾಂಗ. ೩-೩೪). ೨. ಪೀತಾಂಬರವನ್ನುಟ್ಟವನು; ಪೀತಾಂಬರಧಾರಿ: ಪೀತವಸನಂ . . . ಉವೇಂದ್ರಂ ದುರ್ಜಯಂ ರಾಮಚಂದ್ರನ ಪಿಂದಂ ನಡೆತಂದನಾಯತಸಿತಾಂಭೋಜೇಕ್ಷಣಂ ಲಕ್ಷ್ಮಣಂ (ಪಂಪಾಭಾ. ೩-೩೭). [ಸಂ.]

ಪೀತವಾಸ (ನಾ). ೧. ಹಳದಿಯಂ ರೇಷ್ಮೆಬಟ್ಟೆ ; ಪೀತಾಂಬರ. ೨. ಪೀತಾಂಬರಧಾರಿ ; ವಿಷ್ಣು : "ವಿಷ್ಣುಃ . . . ಪೀತವಾಸಾಃ . . . ಗದಾಧರಃ — ಈ ೪೫ ನಾರಾಯಣನ ಪೆಸರ್" (ಹಡಾಹು. ೩-೨೨) ; ಪೀತವಾಸಃ ಕೃಷ್ಣನಾಗಿ ಕಿರಾತನೆಚ್ಚ ನಿಶಾತಶರನಿರ್ಘಾತವಾತದಿ ಮಡಿದನಲ್ಲಾ ಭೂತಳಾಗ್ರದೊಳು (ಬಸಪು. ೩೪-೩೯) ; ಧೃತ ಕೌಸ್ತುಭೋದ್ಭಾಸನಂ ಪೀತವಾಸನಂ ನುತಸಮಸ್ತಾಭರಣನಂ ಕೃಷ್ಣಚರಣನಂ ಕಲಿಸುಧನ್ವಂ ಕಂಡನು (ಕೃಪುಭಾ. ೦೩-೨೬). [ಸಂ. ಪೀತವಾಸಸ್]

ಪೀತಸಾರ (ನಾ). ೧. ಹೊನ್ನೆಮರ : "ಪೀತಸಾ(ಸ)ರಃ, ಅಸನಃ—ಈ ೨ ಹೊನ್ನೆ" (ಹಡಾಹು. ೩೩-೨೩). ೨. = ಪೀತಗರ್ಧ. ೩. ಗೋವೇದಕ. [ಸಂ.]

ಪೀತಸಾಲ (ನಾ). = ಪೀತಸಾರ ೧ : "ಪೀತಸಾ(ಸ)ರಃ, ಅಸನಃ — ಈ ೨ ಹೊನ್ನೆ" (ಹಡಾಹು. ೩೩-೨೩). [ಸಂ.]

ಪೀತಸಾಲಕ (ನಾ). = ಪೀತಸಾರ ೧ : "ಪೀತಸಾಲಕಃ, ಸರ್ಜಕಃ . . . ಜೀವಕಃ—೬ ಹೊನ್ನೇಮರದ ಹೆಸರುಗಳು" (ಸಿಹ್ಯಂತಿ. ೦೨೨). [ಸಂ.]

ಪೀತಳ 'ಪೀತಲ' ನೋ.

ಪೀತಾಂಬರ (ನಾ). ೧. ಹಳದಿಬಣ್ಣದ ಬಟ್ಟೆ. ೨. ಪಟ್ಟೆವಸ್ತ್ರ ; ರೇಷ್ಮೆಯಂ ಬಟ್ಟೆ : ನವನೀಲೋತ್ಪಲಸನ್ನಿಭಾಂಗರುಚಿಯಿಂ ಸಚ್ಚಿಂತಿರಾತೋದ್ಗಮಚ್ಛವಿಪೀತಾಂಬರಕಾಂತಿಯಿಂ . . . ಚಿಲ್ವಾದನಚ್ಛೋದರಂ (ಪಗಂ. ೦-೧೪) ; ಕಂಸಾಂತಕಂ . . . ಜಗುಳ್ದ ಪೀತಾಂಬರವನು ಅಂಸದೊಳ್ ಸಾರ್ದುತ ವರೂಥಮನಿಳಿದು . . . ಏತಂದನು (ಕೃಪುಭಾ. ೦೪-೫೬). ೩. (ಬೆಲೆ ಬಾಳುವ) ರೇಷ್ಮೆಯ ಸೀರೆ : ಬಣ್ಣಬಣ್ಣದ ಪಟ್ಟುವಸ್ತ್ರ ಪೀತಾಂಬರಗಳೂ, ಕುದುರೆ ಒಂಟಿ ಆನೆಗಳ ಮೇಲೆ ಹೇರಿ ಹೇರಿ ಬಂದುವು (ಪಾಂತಣ. ೦೦೦). ೪. (ಹಳದಿಯ) ಪಟ್ಟೆವಸ್ತ್ರವನ್ನು ಧರಿಸಿದವನು : ವಿಷ್ಣು : "ಶ್ರೀವತ್ಸಂ . . . ಪೀತಾಂಬರಂ ಚಕ್ರಭೃದ್ಯೋವಿಂದಂ" (ಪಪ್ರಕೋ. ೪-೨೨) ; ಸ್ಮರಿತೋದ್ಯತ್ಕನಕಪ್ರಭಾಪ್ರಸರದಿಂ ಪೀತಾಂಬರಂ ಪದ್ಮವಿಷ್ಟರದಿಂ ಪಂಕಜವಿಷ್ಟರಂ ನವನೀನೇಯಮ್ಮಾತಚೇತಸ್ತಮೋಹರನಾಗಿರ್ದುದಱಿಂ ಹರಃ ಭವಹರಂ (ಕಾಪು. ೦೬-೬) ; ವಿಧುರಾಪುರದ ಪೊಱವೊಟಲೊಳ್ ಪೀತಾಂಬರನಿರ್ದಂ (ಪಗಂ. ೯-೨೬). ೫. [ಜೈನ] ವಾಸುದೇವ : ಪರಾಭವಿಸಿದಂ . . . ಸುರೇಂದ್ರದತ್ತನು ಮೂಡಿದಂಬರ ಮನಂದು ಪೀತಾಂಬರಂ (ಪಂಪಾಭಾ. ೩-೦೦೦). [ಸಂ.]

ಪೀತಾಂಬರಧರ (ನಾ). = ಪೀತಾಂಬರ ೪ : ಪೀತಾಂಬರಧರನೆಂ ಪುರುಹೂತ ಶಿಲೀಪಮುಖನಿಕಾಯಮೆಱಗಿದುದು (ಪಗಂ. ೦೩-೧೦). [ಸಂ.]

ಪೀತಾಂಬ್ರ (ನಾ). = ಪೀತಾಂಬರ ೩ : ಪೀತಾಂಬ್ರ ೧೫೬. ತಟ್ಟು ಸೆಜ್ಜುಗು ಲತೆ ಹೂಗಳು ಸಹಾ ತೂಂಕ ೧೧೯೬ ವಿವರ (ಕೌಶಾ. IX-೫೫, ೩೮೬-೩ : 1682). [< ಪೀತಾಂಬರ]

ಪೀತಾಂಶುಕ (ನಾ). ೧.—ಪೀತಾಂಬರ ೪. ೨. ಹೊಂಬಣ್ಣದ ಕಿರಣಗಳುಳ್ಳವನು; ಅಗ್ನಿ. ೧, ೨: ದಂತವಕ್ತ್ರಂ ನಿಸರ್ಗವೈರದಿಂದ ಸುರವೈರಿಯ ಪೆಸರ್ಗಳೆ ತನಗಸಹ್ಯಂಗಳಾಗೆ ಹರಿನಾಮಯುಕ್ತನೆಂದು ಶಕ್ರನಾಲ್ಕಮಿಸಿಯುಂ ಪೀತಾಂಶುಕನೆಂದು ಪಾಪಕನಂ ಮೂವೀದಿವಡಿಸಿಯುಂ . . . ಕಾಳಿಯಸರ್ಪದರ್ಪದಳನನದಿರದಿದಿರೊಳ್ ಕಂಡು (ಜಗನಿ. ೯-೫೩ ಪ). [ಸಂ.]

ಪೀತೆ (ನಾ). ೧. ಅರಿಸಿನ: "ಪೀತಾಭಿಖ್ಯಂ ಹರಿದ್ರೆ" (ಪಸ್ತುಕೋ. ೩೬-೨೫). ೨. ಒಂದು ಬಗೆಯ ಗಿಡ; ಹಳದಿಗೋರಂಟೆ: "ಪೀತಾ, ಸಹಚರೀ—ಈ ೨ ಹೊಂಬಣ್ಣದ ಗೋರಂಟೆ" (ಹಲಾಯು. ೩೯-೫೨). [ಸಂ. ಪೀತಾ]

ಪೀನ (ಗು). ೧. ದಪ್ಪವಾದ; ಪುಷ್ಪವಾದ; ಸ್ಥೂಲವಾದ: ಉತ್ತುಂಗಪೀನನಿಜಾಂಸಾರ್ಪಿತಲಂಬಹಾರನವನಾ ಪಾಂಡ್ಯಂ (ಪಂಪಲಾ. ೩-೫೯); ಆ ನೃಪವೀರನುರಸ್ಥಳಕ್ಕೆ ಲಕ್ಷ್ಮೀವಧು ಪೀನಬಾಹುಯುಗಳಕ್ಕೆ ಜಯಾಂಗನೆ ತನ್ಮುಖಕ್ಕೆ ವಾಕ್‌ಶ್ರೀವಧುವಾಗಿ ರಂಜಿಸಿ ಮಹೋನ್ನತಿಯುಂ ಪಡೆದುದ್ಧ ಕೀರ್ತಿಲೀಲಾವತಿಯೆಂದು ಬಣ್ಣಿಪುದು ಲಚ್ಚಲದೇವಿಯನೀ ಜಗಜ್ಜನ (ಎಇ. XIII, ೦೨೦-೨೩; 1055); ಈ ಸುದೃಢಪೀನಪಯೋಧರಂಗಳ್ಗೀ ತೆಱನ ಕಂಪನಮೇತರ್ಕಾಯ್ತು? (ರಾಮಾಶ್ವ. ೦೯-೩೦). ೨. ದೊಡ್ಡ; ಘನವಾದ; ಮಹತ್ತಾದ: ಶಿವದಾಸಿಯರು ವಕ್ತ್ರಪದಂಗೆ ನೇಮಿಸಲು . . . ಕರೆದು ತಂದನು ಪೀನ[ಶಾಕಾಂ. ದಾನಿ]ಶಿವಶರಣವ್ರಜವನನುಮಾನಿಸದೆ ಗಂಗೆಯನು ಭಗಿರಥ ಕೊಂಡು ಬಂದಂತೆ (ಶಂಕಿಶಾ. ೯-೨೯). (ನಾ). ೩. ದೊಡ್ಡದು; ಸ್ಥೂಲವಾದುದು: "ಬಹುಳಃ, ಸ್ಥೂಳಃ, ಪೀನಃ, ಪೀವಾ, ಪೀವರಃ—ಈ ೫ ದೊಡ್ಡ(ತು)" (ಹಲಾಯು. ೫೭-೦೯೭); ಆ ನಗಚರಯುಗಮಲ್ಲಿಯುಮಾ ನಗದೊಳೆ ಕಲ್ಲೊಳಿರ್ದ ಸಲಿಲನಿಮಿತ್ತಂ ಪೀನಂಗಳ್ ಕಾದಲ್ ಸಲೆ ಕೀನಾಶನಿವಾಸಮೆಯ್ದಿತೊಂದಾಕ್ಷಣದೊಳ್ (ಸೇಮಿಪು. ೩-೬೯). ೪. ದಪ್ಪವಾಗಿರುವವನು; ಸ್ಥೂಲಕಾಯ: "ಪೀವರನೆನಲ್ ಸ್ಥೂಲನೆನೆ ಬಹುಲನೆನೆ(ಪೀನನೆನೆ) ದೊಡ್ಡತಪ್ಪುವನೆನಿಕ್ಕುಂ" (ಮಂಗರಾ. ೬೯-೦೦). [ಸಂ.]

ಪೀನಂ (ಅ). ಅಧಿಕವಾಗಿ; ವಿಶೇಷವಾಗಿ: ಹೆಚ್ಚಾಗಿ: ಪೀನಂ ಲಲಾಟಾಗ್ರದೊಳ್ ನೆಲೆಗೊಂಡೊಪ್ಪುವ ವೀರಪಟ್ಟಮಾದಯಂಗೆಯ್ವಿಂದುವಂ . . . ಗೆಲೆ ಪೋಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ (ಕಾವ್ಯಸಾಂ. ೫೨೫ ಶೂದ್ರಕ); ಅಲಸದೆ ಪೀನಂ ಪದೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತಪ್ಪದೆ ಬಗೆದು ಪೇಟ್ವುದು (ಕವಿರಾ. ೦-೯೯); ಲಯಮಂ ಕರ್ಮತಮಸ್ತಮಕ್ಕೆ ಜಯಮಂ ಧರ್ಮಕ್ಕೆ ಪೀನಂ ಪರಾಜಯಮಂ ದೋಷಗಣಕ್ಕೆ ಲಕ್ಕೆತೆಱದಿಂ ಮುಂ ಮಾಡಿ ಸರ್ವಾರ್ಥಸಿದ್ಧಿಯನೀಯಲ್ಕೆ . . . ಬಗೆದಂ ಸಂಸಾರಸಾರೋದಯಂ (ಆದಿಪು. ೬-೦೦೯); ಮಾನಸದ ನಲ್ಮೆಯಾಗುಂ ಮಾನಸರ್ಗಪವರ್ಗಸುಖಮನದಱೀವ ಗುಣಂ ಪೀನಂ ಪೆರ್ಚುಗುಮಮಲ ಗುಣಾನೀಕವಿಭೂಷರೊಳ್ ಸಮಾಗಮದಿಂದಂ (ನೀತಿಮಂ. II. ೩೦೯). [<ಪೀನ]

ಪೀನಕ್ಷು (ನಾ). ೧. ಡೊಳ್ಳುಹೊಟ್ಟೆ. ೨. ದೊಡ್ಡಹೊಟ್ಟೆಯವನು; ಮಹೋದರ: ಪೀನಕ್ಷು . . . ತಾನಿಂಗಿತಜ್ಞನುಂ ವಿಜ್ಞಾನಹಿತಂ ಶೌಚಿ . . . ಪೀಠವರ್ಧನನೆನಿಕುಂ (ಮದಕಿ. ೦೦-೯೦). [ಸಂ.]

ಪೀನಸ (ನಾ). ೧. ಶೀತಬಾಧೆ; ನೆಗಡಿ: "ಪೀನಸಮೆನೆ ನೆಗಡಿ ತಾಂ ಪ್ರತಿಶ್ಯಾಯಂ" (ಪಸ್ತುಕೋ. ೭೩-೩೫); ನಲ್ಲಲರ ಕಂಪು ಪೀನಸದಲ್ಲೊಂದಿದವಂಗೆ ಸೊಗಸದಿರೆ ಕೆಟ್ಟಪುದೇ (ಕಾಡ್ಕಟಿ. ೧-೦೭); ಗಂಧಕ, ಹುಲಿಯುಗುರು . . . ಅಜಮೂತ್ರದಲ್ಲಿ ಬೆರಸಿ ಅಟ್ಟು ನಸ್ಯಂಗೈಯ್ಯೆ ಪೀನಸಮಾಣ್ಗುಂ (ವಿಸ್ಯಾ. ೬೯); ಚೆಂಡಿಕೆಯ ಕೊಯ್ದಡಾ ಶಿರಬೇನೆ ಬಿಡುವುದೆ ಪೀನಸದ ವ್ಯಾಧಿ ಮೂಗರಿದಡಂ ಬಿಡುವುದೆ (ಪಕಿಂ. ೦೩-೨೯). ೨. ಮೂಗು ಕೊಳೆತು ಹೋಗುವ ಒಂದು ಬಗೆಯ ರೋಗ: ಹೂವುಗಳನ್ನು ಮೂಗಿಗೆ ತುಂಬಾ ಹತ್ತಿರದಲ್ಲಿಟ್ಟುಕೊಂಡು ಮೂಸಿ ನೋಡಿದರೆ ಪೀನಸ ಬರುತ್ತದೆಂದು ಹೇಳುತ್ತಾರೆ (ಕೂಡಿ). [ಸಂ.]

ಪೀನಸರೋಗ (ನಾ).=ಪೀನಸ ೨: ಪ್ರೀತಿಭೇದಗಳು ಮಾತು ತಪ್ಪಿದವಗೆ ಪೀನಸರೋಗ (ಕವಿಕ. ೦೯೨-೨); ಪೀನಸರೋಗದವರು . . . ವಿಷದರೋಗದವರು ಇವರಿಷ್ಟೂ ವಮನಯೋಗ್ಯರೆಂದರಿವುದು (ಸಕಪ್ಯ. ೨೫). [ಸಂ.]

ಪೀನಸಿ (ನಾ). ೧. ನೆಗ್ಗಡಿ ಬಂದವನು: ಗಂಧಕೆ ಪೀನಸಿಯ ಸಂಪದವನೊಂದಿಸಿ ರಸದ ಬಳಕೆಗೆ ಹದುಳದಿಂದವೆ ಕಾಷ್ಠಜಿಹ್ಮೆಯ ತೆರನನನುವಿಡಿದು (ಗಗಶಾ. ೦೬-೦೦). ೨. ಪೀನಸರೋಗದಿಂದ ಬಳಲುವವನು. [ಸಂ. ಪೀನಸಿನ್]

ಪೀನಾರಿ$_1$, ಪೇನಾರಿ (ನಾ). ಒಂದು ಬಗೆಯ ಮರ: ಪೇನಾರಿಮರ, ಪೀನಾರಿ, ಪಾತಾಳಮರ, ಭೇತಾಳ, ತೊಕಡಕನ ಮರ, ಭಾತಾಳ (ಮೃಕಿಗಿ. ೬೨-೦೯೭೨). **ಪೇನಾರಿ**: ಪೇನಾರಿಮರ . . . ತೊಕಡಕನ ಮರ, ಭಾತಾಳ (ಮೃಕಿಗಿ. ೬೨-೦೯೭೨). [ದೇ.॥ ತಮಿ. ಪೀನಾಱಿ; ಮಲ. ತುಳು. ಪೀನಾರಿ]

ಪೀನಾರಿ$_2$ (ನಾ). ಜಿಪುಣ; ಜೀನ; ಕೃಪಣ: ನನ್ನ ಭಾವ ಆಸೆಯ ಪೀನಾರಿಯಲ್ಲ. ಅವನು ಮಡಕೇರಿಯಲ್ಲಿ ದೊರೆಯುವ ಕಳ್ಳನ್ನೆಲ್ಲ ತಂದು ಗುಡಾಣಗಳಲ್ಲಿ ತುಂಬಿಸಿಟ್ಟಿದ್ದಾನೆ (ಹುಲಿಹಾ. ೨೨೫). 'ಪಿಸನಾರಿ' ಪರಾ. [←ತುಳು. ಪೀನಾರಿ]

ಪೀನಾಶಿ, ಪಿನಾಶಿ, ಪಿನಾಸಿ (ನಾ). ಮೂಗು ಕೊಳೆತು ಹೋಗುವ ಒಂದು ಬಗೆಯ ರೋಗ: ಪೂಜೆಗೈಯುವ ಪುಷ್ಪಗಳನು ಸೋಜಿಗದಿ ತಾ ಮೂಶಿ ನೋಡಿದ ಮೂಜಗದಿ ಪೀನಾಶಿವೊಂದುವನು (ಸಾಸಂಗ. ೨೦). **ಪಿನಾಶಿ**: ವಾಸನೆಯುಳ್ಳ ಹೂವುಗಳನ್ನು ಮೂಸಬೇಡ. ಪಿನಾಶಿ ಬರುತ್ತದೆ (ಕೂಡಿ). **ಪಿನಾಸಿ**: ಪೀನಸ ಎಂಬುದನ್ನೇ ಕೆಲವರು ಪಿನಾಸಿ ಎಂದು ಹೇಳುತ್ತಾರೆ (ಕೂಡಿ). [<ಪೀನಸ]

ಪೀನಾಸಿ (ನಾ). ೧. ದುರಾಸೆಯುಳ್ಳ ವ್ಯಕ್ತಿ: ಏನೇನ ತಂದರು ಸಾಲದೆ ಮಗಳೊಳು ಪೀನಾಸಿಯಿರಗೊಡಳೆಂದು ಆನೆಯ ಮುಂದಕೆ ಮುದಿಸೂಳೆಯ ನೆತ್ತಿ ತಾನಿಟ್ಟು ಸುಖದೊಳಗಿಹನು (ಕಾಸ್ಕಸ. ೦೯-೯೬). ೨. ಅತಿಯಾಗಿ ಕಾಡುವ ವ್ಯಕ್ತಿ: ಆ ಪೀನಾಸಿ ತನಗೆ ಬರಬೇಕಾದ ಹಣ ವಸೂಲು ಮಾಡುವುದರಲ್ಲಿ ತುಂಬಾ ಗಟ್ಟಿಗ (ಕೂಡಿ). 'ಪೀನಾರಿ$_2$' ಪರಾ. [?]

ಪೀನೋದರ (ನಾ). ೧. ದೊಡ್ಡ ಹೊಟ್ಟೆ; ಡೊಳ್ಳುಹೊಟ್ಟೆ. ೨. ದೊಡ್ಡ ಹೊಟ್ಟೆಯುಳ್ಳವನು; ಡೊಳ್ಳುಹೊಟ್ಟೆಯವನು: ದ್ರುತಯಾನೋತ್ಕಂಪಿಪೀನೋದರನವನಿಪನೊಡ್ಡೋಲಗಕ್ಕೈದೆ ಮಂದಂ ಪ್ರತಿಹಾರಂ (ಸಂದ್ರಪ್ರ. ೨-೬೯); ಚಂಚತ್ಕುಂಡಲಮಂಡಿತಂ ಗತಿಚಲತ್ಪೀನೋದರಂ ದೀರ್ಘದೇಹಂ . . . ಬಂದಂ ಪ್ರತೀಹಾರಕಂ (ರಾಜಕೇ. ೫-೨೩). [ಸಂ.]

ಪೀನೋಧ್ನಿ (ನಾ). ದೊಡ್ಡ ಕೆಚ್ಚಲುಳ್ಳ ಹಸು,—ಆಕಳು: "ಪೀನೋಧ್ನೀ, ಪೀವರಸ್ತನೀ—ಈ ೨ ಹೆಗ್ಗೆಚ್ಚಲಾವು" (ಹಲಾಯು. ೯೫-೩೦೦). [ಸಂ. ಪೀನೋಧ್ನೀ]

ಪೀಪ, ಪೀಪಾಯಿ, ಪೀಪು, ಪೀಪೆ (ನಾ). ಮದ್ಯ, ಎಣ್ಣೆ ಮೊದಲಾದ ದ್ರವಪದಾರ್ಥಗಳನ್ನು ತುಂಬಿಡಲು ಬಳಸುವ ಮರ ಅಥವಾ ಲೋಹದಿಂದ ಮಾಡಿದ ದೊಡ್ಡ ಆಕಾರದ ಸಾಧನ; ಡ್ರಮ್ಮು: ಹೇಸರಗತ್ತೆಯ ಮೇಲೆ ಬಂಗಿಯ ಹೇರು ಸಾಸಿರ ಗಂಗಸಾರಗಳ ಸೂಸುವ ಸಾರಾಯದ ಪೀಪಗಳ ಲೆಕ್ಕವೀಸೆಂದು ಪೇಳ್ವರಾರದನು (ಕಂಪಡಿ. ೦೦-೩೯); ಕೆಲಕೆಲವದರ ಬೆಲೆಯು ಸಹ ಪೀಪಗಳ ಮೇಲೆ ಇಲ್ಲವೆ ಪೆಟ್ಟಿಗೆಗಳ ಮೇಲೆ

ಇರುತ್ತದೆ (ಮುಂಬಿಪ್ಯಾ. ೨೩೭). ಪೀಪಾಯಿ : ಒಂದು ದೊಡ್ಡ ಪೀಪಾಯಿಯೊಳಗೆ . . . ನೀರು . . . ತುಂಬುತ್ತಾರೆ (ಮುಂಬಿಯಿ. ೪-೫೫); ಒಂದೊಂದು ಅಲೆಯೂ ಇವಳನ್ನು ಪೀಪಾಯಿಯಂತೆ ಎತ್ತಿ ಹಾಕುತ್ತಿದ್ದಿತು (ಜನುಹೊ. ೩೮೪). ಪೀಪು : ನೀರು ತುಂಬಿದ್ದೊಂದು ಪೀಪಿನೊಳಗೆ ಇಳಿದು ಕೂಡ್ರಲಾಗಿ (ಮುಂಬಿಯಿ. ೫-೬೬). ಪೀಪೆ : ಭೋಜನಸಮಾರಂಭವು ಮುಗಿಯಿತು. ಬೆಲೆಯುಳ್ಳ ಸಾರಾಯಗಳ ಪೀಪೆಗಳು ಹಾರಿ ಹೋದವು (ಪೀಠಬ. ೫೭). [← ಹಿಂ. ಪೀಪಾ; ಮರಾ. ಪೀಪ. / ಪೋರ್ಚು. pipa]

ಪೀಪರಿ (ನಾ). = ಪೀಪಿ ೧ : ನಿನ್ನೆ ಸಂಜೆ ನಿನ್ನ ಓಟೆ ಪೀಪರಿ ಸದುನಾಗಿ ಕೇಳಿಸಿತ್ತು ನನಗೆ (ಸ್ವಪ್ನಹೊ. ೦೪). [< ಪೀಪಿ]

ಪೀಪಾಯಿ 'ಪೀಪ' ನೋ.

ಪೀಪಿ (ನಾ). ೧. ಪೀ ಪೀ ಎಂದು ಶಬ್ದಹೊರಡಿಸುವ, ಸೀಟಿಯಂತೆ ಊದುವ ಒಂದು ಸಾಧನ : ನಾರಾಯಣಸ್ವಾಮಿ ಆ ಕೊಳಲನ್ನು ಕೈಯಲ್ಲಿ ತೆಗೆದುಕೊಂಡು ಪರೀಕ್ಷೆ ಮಾಡುತ್ತ "ಇದು ಏನು ? ಪೀಪಿ ಅಲ್ಲವೇ ?" ಎಂದು ಕೇಳಿದ (ಇಂದು. ೦೦೪). ೨. ನಾಗಸ್ವರ, ಶಹನಾಯಿ ಮುಂತಾದ ಊದುವ ವಾದ್ಯಗಳ ತುದಿಯಲ್ಲಿ, ನಾದವನ್ನು ಹೊಮ್ಮಿಸಲು ಸಿಕ್ಕಿಸುವ ಎರಡು ಚಪ್ಪಟೆಯಾದ ಬಿದಿರಿನ ಪಟ್ಟಿಗಳು : ಈ ವಾದ್ಯ ಸುಮಾರು ಎರಡು ಅಡಿಗಳಿಂದ ಎರಡೂವರೆ ಅಡಿಗಳ ಉದ್ದವಿದ್ದು...ಚೂಪು ಕೊನೆಯಲ್ಲಿ ಈ ವಾದ್ಯಕ್ಕೆ ಪೀಪಿ (reed) ಸೇರಿಸಿರುತ್ತದೆ (ಸಂಗೀತಂ. ೦೦೭). ೩. ಬಾಳೆ ಎಲೆ, ತೆಂಗಿನ ಗರಿಗಳನ್ನು ಸುತ್ತಿ, ನಾದ ಹೊಮ್ಮುವಂತೆ ಮಾಡಿದ ಸುರುಳಿ : ನಸ್ಯದ ಡಬ್ಬಿ, ಬಾಳೆಎಲೆ ಪೀಪಿ ಇವುಗಳಿಂದ . . . ಅಳುವ ಮಕ್ಕಳನ್ನು ಸಮಾಧಾನ ಪಡಿಸುವ ಕೆಲಸ ಇವರ ಮೇಲೆ ಬಿದ್ದಿರುತ್ತೆ (ನಾಡಗೇ. ೦೩೭). ೪. (ಆಲಂ) ಗಂಟಲು : ಆ ಸಂಗೀತಗಾರನ ಪೀಪಿ ಕುಗ್ಗಿಹೋಗಿದೆ (ರೂಪಿ). [← ತುಳು. ಪೀಪಿ./ಹಿಂ. ಪೀಪಿಯಾ]

ಪೀಪು 'ಪೀಪ' ನೋ.

ಪೀಪೆ 'ಪೀಪ' ನೋ.

ಪೀಯೂಷ (ನಾ). ೧. ಅಮೃತ ; ಸುಧೆ : "ಅಮೃತಂ, ತ್ರಿದಶಾಹಾರಃ, ಸುಧಾ, ಪೀಯೂಷಂ—ಈ ೪ ಅಮರ್ದಿನ ಪೆಸರ್" (ದಶಾಯು. ೨೨-೦೩೩); ಆ ತ್ರಿದಶಂಜಯಮಹೀಭುಜಂ . . . ಮುಕ್ತ್ಯಂಗನಾಭುಜಪಾಶಕ್ಕೊಳಗಾಗಿ ಪೀರ್ದನೊಲವಿಂ ತದ್ವಕ್ತ್ರಪೀಯೂಷಮಂ (ಶಂಶಾಮಾ. ೦೦ ೨೬೨); ಶಿವಕಥಾಪೀಯೂಷಮಂ ಕರ್ಣದಿಂ ಸವಿವುತ್ತಂ . . . ಪಧೂವಲ್ಲಭರಿರ್ದ ರುತ್ಸವಯುತರ್ (ರಾಜಕೇ. ೪-೬); ಮಿಯಿಸಿದರವನಂ ದಿವೋಧುನಿಯ ಪೀಯೂಷಶೀರ್ಥದಿಂ (ಶ್ರೀರಾಮಾ. ೦೬-೪೬೦). ೨. ಹಾಲು ; ಕ್ಷೀರ : ಜಗಮೆಲ್ಲಂ ... ಪೀಯೂಷದೆ ತಣಿದುದೊ ಬೆಳ್ದಿಂಗಳೊಳ್ ಸಂದುದೋ ಸಂದೆಗಮೇನೆಂಬಂತದೇಂ ಪರ್ವಿದುದೊ ನೃಪನಶಿಸ್ಫೂರ್ತಿಕೀರ್ತಿಪ್ರತಾನಂ (ಪುಷ್ಪಪು. ೩-೦೪); ಭೈರವಾಂಕ . . . ಪೀಯೂಷದಲ್ಲೀಶಗಭಿಷೇಕವೆಱೆದ (ಶೈರವೇ. ೪-೬೬). ೩. ಕರು ಹಾಕಿದ ಏಳು ದಿವಸಗಳೊಳಗಿನ ಆಕಳ ಹಾಲು ; ಗಿಣ್ಣುಹಾಲು : " ಪೀಯೂಷಃ, ಅಭಿನವಂಪಯಃ— ಈದ ೭ ದಿನಗಳ ಪಳಗಾಗಿ ಹಸುವಿನ ಗಿಣ್ಣುಹಾಲು " (ಸಿಷ್ಠಾಂಕಿ. ೨೯೦).

[ಸಂ.]

ಪೀಯೂಷಪಿಂಡ (ನಾ). ಒಂದು ಬಗೆಯ ಭಕ್ಷ್ಯ ; ಹಾಲುಂಡೆ : " ಪೀಯೂಷಪಿಂಡ[ಶಾಶಾಂ.ಪಿಷ್ಟ]ಮೆನೆ ಹಾಲುಂಡೆಯೆನಿಸಿಕ್ಕು " (ಮಂಗರಾ. ೬೪-೨). [ಸಂ.]

ಪೀಯೂಷಹಸ್ತ (ನಾ). ಅಮೃತಕಿರಣ ; ಚಂದ್ರ : ಈ ದೈತ್ಯಶತ್ರು ಮಹೀಭೃನ್ನುತಕರ್ಣಕಾಕುವಳಯಕ್ಕಾ ತನ್ನ ಪೀಯೂಷಹಸ್ತಮೆ ತಾನಾಶ್ರಯಮೆಂದೊಡೇವೊಗಟ್ಟುದೋ ಶ್ರೀವೀರಬಲ್ಲಾಳನಂ (ಶಾಶಮಂ. ೦೬೯-೯೯೬ ; 1183). [ಸಂ.]

ಪೀರ್, ಪೀರು$_1$, ಹೀರ್$_1$, ಹೀರು$_1$ (ಕ್ರಿ). ೧. ಹಾಲು, ನೀರು ಮೊದಲಾದ ದ್ರವಪದಾರ್ಥಗಳನ್ನು (ಬಾಯಿಯಿಂದ) ಸೇದಿಕೊಳ್ಳು,—ಎಳೆದುಕೊಳ್ಳು : ಪೀರೆ ತವಮಣ್ಮುವ ಸೌರಭಮೆಂದು ಪೀರ್ದು ಪೀರ್ದವಚಱದೇಂ ತೆಱಂದಿರಿದು ಪಾಯ್ದುವೊ ಕೇತಕಿಯೊಳ್ ಮದಾಳಿಗಳ್ (ಅಧಿಪು. ೦೦-೦೦೬); ರಕ್ತವರ್ಣದಿಂ ಕೂಡಿದ ಕಣ್ಗಳಿಂ ಶುಕನಿಕಾಯದ ಜೀವಮನೆಯ್ದೆ ಪೀರ್ವವೊಲ್ . . . ನೊಡಿದನಾ ಜರಚ್ಛಬರನಾಯಕಂ (ಶಾಪಂಪು. ೦೭೬); ಹಱಿಗಟ್ಟಲೆಯಂ ತವೆ ಪೀರುತುಂ . . . ಬಂದುದಯಾದ್ರಿಯನರ್ಕನೇಱಿದಂ (ಕುಸುಮಾ. ೦೪-೨೦). ೨. ಆಸ್ವಾದಿಸು; ಚಪ್ಪರಿಸು ಸವಿ : ಪಾಲ್ವೊರೆದ ನುಣ್ಬೆರಲಂ ಮೊಲೆಗಿತ್ತು ಪೀರ್ದು ಕಣ್ದೆಱೆಯದ ಕಂದನೆಂದೆನಗೆ ಕಣ್ದೆಱೆಯಿಪ್ಪನೊ ಮಂದಹಾಸಮಂ (ಅರ್ಥವೇ. ೦-೦೦೦); ಪಥಿಕನೊರ್ವ ತರುಣಿಯ ಲಾವಣ್ಯರಸಮನಕ್ಷಿಗಳಿಂದಂ ಬರೆ ಪೀರ್ದು ದಣಿದು ಬಟ್ಟೆಯ ಪರಿಶ್ರಮವ್ಯಥೆಯನಱಿಯದಿರ್ದಂ ಸುಖದೊಳ್ (ಗಿಂಕ. ೨-೨೩); ಪೊಸಗಂಪೇಱಿದ ಬಿಂಬಫಲವ ಗಿಳಿ ಮಸಗಿ ಸುತಸದಿ ಪೀರ್ವಂತೆ (ಕಂಪಸಿ. ೦೦-೪೦). ೩. ಕುಡಿ ; ಈಂಟು : ಜಿಗುಟೆಯಂತೆ ನೆತ್ತರನೆ ಪೀರ್ವ ಡಾಕಿನಿಯರಿಂ . . . ರಣದೇವತೆಯರಿಂದತಿಭಯಂಕರಾಕಾರಮಪ್ಪುದು (ಶಾಪ್ಯಸಾ. ೩೨೯ ಕೂಪ್ರಳ); ಯುವರಾಜನ ನೆತ್ತರಂ ಕುರುಧ್ವಜನಿಯೆ ನೋಡೆ ಪೀರ್ದು (ಪಂಪಭಾ. ೯-೩೨); ಹಂಸನೆಂತು ಪಾಲುಂ ನೀರುಂವೆರಸಿದಲ್ಲಿ ನೀರಿರೆ ಪಾಲನೆ ಪೀರ್ಗುಂ (ಶಾಪುಂಪು. ೬). ಪೀರು$_1$: ೧. ನೀರಧಿಯ ಪೀರುವವೊಲೈತಪ್ಪ ಮಾರುತಿಯ ನಿಟ್ಟಿಸುತ ನಕ್ರಕೂರ್ಮಂಗಳೆಲ್ಲ ತೋರಭಯದಿಂದೊಂದನೊಂದೊರಸಿ ವಿತಳವಂ ಸಾರುತಿರಲು (ವೆಂಕಾರಾ. ೫-೦-೨೬). ೩. ಅಂಬುಹಾರಗಳನೊಂದೆ ಗುಟುಕಿನೊಳ್ಪೀರಬೇಕು (ಪತುಪು. ೪-೦೫-೨೦). ಹೀರ್$_1$: ೨. "ಹೀರ್ (ಪೀರ್)— ರಸಾಸ್ವಾದನೇ, (ಭೂಷಣೇ ಚ)" (ಕಮರಾ). ಹೀರು$_1$: ೧. ತನ್ನನುದರದೊಳು ಗರ್ಭೀಕರಿಸಿಕೊಂಡಿರ್ದ ಮುನ್ನೀರನಾ ವಡಬಶಿಖಿ ಹೀರುವಂದದಿಂ . . . ಸನ್ನುತಗುಣಾಭರಣಭೂಷಿತಂಗಾ ದುಷ್ಟಮಾನಸಂ ಕೇಡನೆಣಿಸಿ (ಸಮ್ಯಕೌ. ೦೦-೫೯); ಬಣ್ಣದ ಚಿಟ್ಟೆ ಪುಷ್ಪದಿಂ ಪುಷ್ಪಕ್ಕೆ ಹಾರಿ ಬಂಡನು ಹೀರಿ ಕಂಗೊಳಿಸುತಿರೆ (ಜಿತ್ರಾಂಗ. ೪-೬೯); ಹತ್ತಿನಾರು ತಕ್ಕ ಮಟ್ಟಿಗೆ ಬೇಗ ನೀರನ್ನು ಹೀರುತ್ತದೆ . . . ಬಣ್ಣಗಳನ್ನು ಚೆನ್ನಾಗಿ ಹೀರುತ್ತದೆ (ಗೃಹಸಿ. ೬೨). ೨. ಕರಡಿ ತಣಿದಾಡಿ ಹೋದುದಿಲ್ಲಿ ನೆರೆದಿಱುಹೆಗಳ ಹೀರಲೊಡೆದ ಹುತ್ತವಿದೆ (ಸೋಮನ. ೨-೫). ೩. ಘೋರ ಪಾತಕಿ ದುಃಶಾಸನನ ರಕುತವ ಹೀರಿ ಮುದದಿ ಮುರವೈರಿಯ ಭಜಿಸಿದ (ಪುಕಂದ. ೦-೨೦೬-೨); ಮೊಲೆಯುಂಬಂದದಲಿ ಕೆನ್ನೆತ್ತರನು ಹರಿ ಹೀರೆ... ಬೆದಱಿ ಪೂತನಿ ಪೋಯ್ತುದೃಶ್ಯದಲಿ (ಸಾಳ್ವರಾ. ೨೦-೪೦); ಕಾಲಕೂಟವ; ನಿನ್ನ ತುಟಿಗೊತ್ತೆ ಕಾಲಂ, ಜುಣುಗದಲೆ ಹೀರದಂ (ಗಿಳಿಪಿ. ೦೨೨-೪೩).

ಹೀರಿ ಹಿಪ್ಪೆ ಮಾಡು, ಹೀರಿ ಹಿಪ್ಪೆಯ ಮಾಡು = ನಿಸ್ಸಾರಗೊಳಿಸು ; ಸತ್ತ್ವಹೀನವಾಗಿಸು : ಗೂಢಚಾರರು...ನಮ್ಮ ದೇಶದ ಸಾರವನ್ನು ಹೀರಿ ಹಿಪ್ಪೆ ಮಾಡುತ್ತಿರುವರು (ಪಿಶಾಪ. ೬೪); ಅರಿರಾಯರುಗಳೆಂಬ ನವಧವಳೇಕ್ಷುದಂಡವನು ತವಕದೆ ಹೀರಿ ಹಿಪ್ಪೆಯ ಮಾಡಿ (ಕಂಪಸಿ. ೨೨-೦೨); ಮಾಯೆಯೆಂಬ ರಕ್ಕಸಿ ಸಕಲಪ್ರಾಣಿಗಳ ಸಾರವ ಹೀರಿ ಹಿಪ್ಪೆಯ ಮಾಡಿ (ಅಪಂಚೇ. ೦೫-೨೦).

[ದೇ.॥ ತುಳು. ಹೀರು; ತೆಲು. ಪೀರುಚು, ಪೀರ್ಚು, ಪೀಲುಚು]

ಪೀರಖಾನಿ (ನಾ). ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ ಹದಿನಾರು ಬಗೆಯ ರೂಪಾಯಿಗಳಲ್ಲಿ ಒಂದು ಬಗೆ : ಸನ್ ೧೮೪೦ರ ವರೆಗೆ ಹದಿನಾರುಪ್ರಕಾರದ ರೂಪಾಯಿಗಳು ನಡಿಯುತ್ತಿದ್ದವು. ಅವು— ಔರಂಗಾಬಾದಿ...೧೫. ಗೋವಿಂದ ಬಕ್ಷಿ, ೧೬. ಪೀರಖಾನಿ (ಕಭಾಗ. ೨೯೦).

[?]

ಪೀರಿಯಡ್ಡು (ನಾ). ಶಾಲೆ, ಕಾಲೇಜುಗಳ ದೈನಂದಿನ ಪಾಠಕ್ರಮಕ್ಕಾಗಿ ವಿಭಾಗಿಸಿಕೊಂಡ (ಮುಕ್ಕಾಲುಗಂಟೆ, ಒಂದು ಗಂಟೆ ಮುಂತಾಗಿ ಅಧಿಕಾರ ವರ್ಗದವರು ತಮ್ಮ ತಮ್ಮ ಅನುಕೂಲತೆಯ ಮೇರೆಗೆ ನಿಗದಿಪಡಿಸಿಕೊಂಡ) ಪಾಠಕಾಲ : ಬುದ್ಧಪೂರ್ವಕಾಲದ ವಿವರವನ್ನು ೨–೩ ಪೀರಿಯಡ್ಡುಗಳಲ್ಲಿ ಮುಗಿಸಿಬಿಡುವುದು ಘೋರವಾದ ದೋಷವೆನಿಸುತ್ತದೆ (ಶಾಇಶ್ರ. ೫). [←ಇಂ. period]

ಪೀರು$_1$ 'ಪೀರ್' ನೋ.

ಪೀರು$_2$ 'ಪೀಱು$_1$' ನೋ.

ಪೀರೆ, ಹೀರೆ$_1$ (ನಾ). ಒಂದು ಬಗೆಯ ತರಕಾರಿಬಳ್ಳಿ ಹಾಗೂ ಅದರ ಕಾಯಿ : "ಪೀರೆ ಜಾಲಿನಿ" (ಪಸ್ತುಕೋ. ೩೬–೨೦) ; ನೆಲ್ಲಿಯ ಸೆಟ್ಟು...ಪೊಸಪೀರೆಯ ಬಿತ್ತಿನೊಳಾದ ಬೂದಿಯಂ ನಿಲ್ಲದೆ ಬಾವಿಯೊಳ್ ಕಲಸಲುಪ್ಪಿನ ಕೈಪೆಯ ಕಾ(ಖಾ)ರದೂಱಲೊ(ದೊ)ಳ್ ಪೊಲ್ಲವಿವೆಂಬ ಬಾವಿಗಳ ನೀರಮೃತೋಪಮದೊಂಗೆ (ಅಟ್ಟಮ. ೦೦–೬೩). 'ಕಾಟ್ವೀರೆ', 'ಕೈಪೆವೀರೆ' ಪರಾ. ಹೀರೆ$_1$: ಆ ರಾಜಗೃಹಾಂಗಣದೊಳ್ ಹೀರೆಯ ಹೂವಿಂದೆ ಸಮೆದ ಪೊಸಪೂವಲಿಯೊಳ್ ಕಾರಿಲ್ಲದೆಯುಂ ಕಜ್ಜಿದುವು ನೇರಾಣಿಯ ಹೊನ್ನ ಮಟ್ (ಅಪಂಪು. ೪–೬೮) ; ಹೀರೆಯೆಳೆಗಾಯ ಕುಯಿದಾಕ್ಷಣದಿ ತಂದದಱ ಧಾರೆಯಂ ಕೆತ್ತಿ ಸಂಬಳಿಸಿ (ಸೂಪಶಾ. ೫–೦) ; ಹೀರೆ ಸೌತೆ ಕೂಷ್ಮಾಂಡೆಳೆಗೂಗುರಿ...ಸಂಭಾರಂಬೊರೆದುಪ್ಪಿನಕಾಯಿಗಳೆಡೆ ಮಾಡಿದಳು (ಮದೇಪು. ೨೬–೬). [ದೇ.॥ ತಮಿ. ಪೀರೈ, ಪೀರ್, ಪೀರ; ಮಲ. ಪೀರ, ಪೀರಮ್; ತುಳು. ಪೀರೆ ; ತೆಲು. ಪೀರ ; ಕೋಲಾ. ಬೀರಾ; ಪರ್ಜಿ. ಬೀರ]

ಪೀರ್ತರ್ (ಕ್ರಿ). ಹೀರಲ್ಪಡು ; ಬರಿದಾಗು : ಮದನಾಗ್ನಿಜ್ವಾಲೆಯಿಂ ಮಗ್ಗಿದುದೊ...ಸುಯ್ಗೇಟ್ಟಂದ ಭೃಂಗಾವಳಿಯಿನಿರದೆ ಪೀರ್ತಂದುದೋ ಪೇಟ್ಟಿಮೆಂಬಂದದೆ ಲಜ್ಜಾಮಗ್ನೆಗೇನುಂ ನುಡಿ ಪೊಱಮಡದಾಯ್ತು (ಕಾದಂಕಾ. ೨೯೦). [ಪೀರ್ + ತರ್]

ಪೀಲಕ (ನಾ). ಕರಿಯ ಬಣ್ಣದ ದೊಡ್ಡ ಇರುವೆ ; ಕಟ್ಟಿರುವೆ. [ಸಂ.]

ಪೀಲಿ, ಹೀಲಿ (ನಾ). ೧. ನವಿಲುಗರಿ : ಎಮೆಯಿಕ್ಕದೆ ನೋಟ್ಟ ಕಣ್ಗೆ ಕಣ್ ಪೀಲಿವೊಲಾಗೆ ಬಂದು ಪೆಱತೊಂದು ಮನಂಬುಗೆ ಪತ್ತಿ ಚಿತ್ತದೊಳ್ ಕೀಲಿಸೆ ಕಾವನಂಬು (ಪಂಪಶಾ. ೪–೪೩); ಸೋಗೆಯ ಚೆಲ್ವು ಕಣ್ಡೆಱ್ದುದೋ ಪೇಟ್ಟಂಬಿನು ಪೀಲಿಗಳ್ತರದಿಂ ಕಣ್ಗೊಳಿಸಲ್ಕೆ ನರ್ತಿಸುಗು ಮುದ್ಯಾನಂಗಳೊಳ್ ಸೋಗೆಗಳ್ (ಕಾದಂಪೂ. ೨೯೭) ; ವನಲಕ್ಷ್ಮಿಗೆತ್ತಿದ ಪೀಲಿಯ ಸತ್ತಿಗೆಯೋ...ಎನೆ ಚೂತಮೊಪ್ಪುಗುಂ (ಗಿಂಕ. ೨–೩೪). ೨. ನವಿಲಿನ ಸೋಗೆ,— ತೋಕೆ : ನೀಲಮುತ್ತಿನ ಸರಿವಳೆಯೊಳು ಕೇಕಿಗಳ್ ಪೀಲಿಯನೆತ್ತಿ ಸಂತಸದಿ ಲೀಲೆಯಿಂ ಕುಣಿದುವು (ಅಪಂಪ. ೫–೨೦); ನವಿಲ್ ನೀಳ್ದ ಪೀಲಿಯ ಚವರಿಯಿಂದಮದೊ ಗುಡಿಸುತಿದೆ (ಕ್ರೀರಾಮಾ. ೦೩೨–೦೮೮). ೩. ನವಿಲುಗರಿಯಲ್ಲಿರುವ ಕಣ್ಣಿನಂತಿರುವ ನಡುವಿನ ಭಾಗ ; ಚಂದ್ರಕ : (ಕಿ). ಹೀಲಿ : ೧. ಶಿವ ನಿಮ್ಮ ನೋಡದವನ ಕಣ್ಣು ಹೀಲಿಯ ಕಣ್ಣು (ಸರ್ವಪ. ೦೬೮–೭೯೩); ಬಿರುದಿನ ಕತ್ತರಿಯ ಹೀಲಿಗಳ ಝಲ್ಲರಿ ಮುಸುಕಿದವು ಗಜವ (ಕುಪ್ಯಾಪ್ರೋ. ೩–೬); ಸುತ್ತಿ ಸುಳಿದು ತುಂಬಿಗಳು ಮೇಲೆ ಹೀಲಿಯ ಸತ್ತಿಗೆಯಂತೆ ರಾಜಿಸಲು (ಶರಸ. ೫–೪೪). ೨. ಹೀಲಿಯನಡ್ಡಗಟ್ಟಿ ಬಿಡದಾಡುವ ಪೆಣ್ಣವಿಲೆಂದು ಕೇಕಿ ಬಂದಾಲಲಿತೋಲ್ಲಸತ್ಕಬರಿಗೊಯ್ಯನೆ ಜೋಡಿಸೆ (ಶಾಧ್ಯಟಿ. ೨–೯೮).

[ದೇ.॥ ತಮಿ. ಮಲ. ತುಳು. ಕೊಡ. ತೆಲು. ಪೀಲಿ]

ಪೀಲಿಗಣ್ (ನಾ). ನವಿಲುಗರಿಯ ಮಧ್ಯದಲ್ಲಿರುವ ಕಪ್ಪುಬಿಂಬ : ಅಲರ್ದ ತಾವರೆಯ ತನಿವಂಡಿನ ಪನಿಗಳಿಂ ಪಸರಿಸುವ ಪೀಲಿಗಣ್ಗಳೊಳಂ . . ರಂಜಿಸುವುದು (ಕಾದಂಪೂ. ೦೦೭). [ಪೀಲಿ+ಕಣ್]

ಪೀಲಿಗರಗ, ಹೀಲಿಕರಗ (ನಾ). ನವಿಲುಗರಿಗಳಿಂದ ಅಲಂಕರಿಸಿದ ಕುಂಭ; ಪರಿಜನಂಗಳ್ ತಳಿವ ಪೀಲಿಗರಗದಾಲಿಗುಡುವ ನೀರ ತೋರವನಿಯ ತಂದ ಲೊಂದುಗೆಯೊಳಮೆಂತಾನುಂ ಹಮ್ಮದದಿನಗಲ್ದು (ಸಂಧ್ರಪು. ೫–೦೯ ಪ). ಹೀಲಿಕರಗ : ಬಿಜ್ಜಯದ ಹೀಲಿಕರಗದ ಬೋನದ ಪರಿಯಣದ . . . ನೆಲನನುಗ್ರಡಿಪ ಪಲವುಂ ನಿಯೋಗದನ್ವಯಾಗತೆಯರುಂ (ಸಂಧ್ರಪು. ೬–೯೫ ಪ).

[ಪೀಲಿ + ಕರಗ]

ಪೀಲಿಗೊಡೆ, ಹೀಲಿಗೊಡೆ (ನಾ). ನವಿಲುಗರಿಗಳಿಂದ ಮಾಡಿದ ಕೊಡೆ,—ಛತ್ರಿ : ಕಂಪಿಂಗೆಳಸಿ ಮುಡಿಗೆ ಮುಸುಱದ ಭೃಂಗಂಗಳ್ ನೆಗೆದ ಪೀಲಿಗೊಡೆಯನೆ ತೋರ್ಕುಂ (ಶಸರ. ೨–೯೭). ಹೀಲಿಗೊಡೆ : ಮುಡಿಯ ಬಾಸಿಗಗಂಪಿಗೆಳೆದುಂಬಿಯಾಡೆ ಬೆಳ್ಗೊಡೆ ಮೇಲೆ ಮೆಱೆಯೆ ಭಾವಜನು ಅಡಕಿಟ್ಟ ಬೆಳುಗೊಡೆ ಹೀಲಿಗೊಡೆಯ ನೆಳಲಡಿಯೊಳಿರ್ದ ನೊಯೆನಲೆಸೆದ (ಶರಸ. ೫೦ . ೯೫) [ಪೀಲಿ+ಕೊಡೆ$_2$]

ಪೀಲಿದಲೆ (ನಾ). ನವಿಲಿನ ಸೋಗೆಯಾಕಾರದ ಮುಡಿ,—ಕೂದಲು : ಬಂಡುಣಗುರುಳ್ಗಳ ಪರಪಕಾಲಾಪದ ಪೀಲಿದಲೆಯ ಲಲನೆಯನೀಕ್ಷಿಸಿದೆನು (ಪ್ರಶಂಸ. ೪–೦೯). [ಪೀಲಿ+ತಲೆ$_1$]

ಪೀಲಿದಳೆ 'ಪೀಲಿದಟ್' ನೋ.

ಪೀಲಿದಳೆವಿಡಿ (ಕ್ರಿ). ನವಿಲುಗರಿಗಳ ಕೊಡೆಯನ್ನು ಹಿಡಿ : ಪೀಲಿದಳೆ ವಿಡಿವಂತೆ ಮೈಗಂಪಿಗಳಿಕುಳಂ ಮೇಲೆತ್ತಿ ಬರೆ...ಒಂದು ಲೀಲಾಬ್ಜಮಂ ಪಿಡಿದು ಬರ್ಪಳೊಪ್ಪಿರ್ದಳು (ಸಂಪು. ೦೯–೨೩).

[ಪೀಲಿದಳೆ (<ಪೀಲಿದಟ್)+ಪಿಡಿ$_1$]

ಪೀಲಿದಟ್, ಪೀಲಿದಳೆ, ಹೀಲಿದಳೆ (ನಾ). ನವಿಲುಗರಿಗಳ ಕೊಡೆ ಪಿಂಛಾತಪತ್ರ : ಆ ಪುರದುಪವನದೊಳ್ . . . ವನದೇವತೆಗೆ ಪೀಲಿದಟ್ಟಿಯನೆತ್ತದ ಸೋಗೆನವಿಲ್ಗಳಿಲ್ಲ (ಪಂಶಾಮಾ. ೦–೦೦೭ ಪ); ಮಱದುಂಬಿಯ ಬಂಬಲ್ ಎತ್ತಿ ಪಿಡಿದ ಪೀಲಿದಟ್ಟಿಯಾಗೆ (ಕಬ್ಬಿಕಾ. ೯೭). ಪೀಲಿದಳೆ : ನೆಗೆದು ಸುತ್ತಂ ಪರಿಮಳಿಸುವ ಗಂಧಂಗಳೊಳು ಮುಡಿಗೆಱಗುವಳಿಕುಳಂಗಳ ಪೀಲಿದಳೆಯೊಳಗೆ . . . ಮೆಱೆವುತಿರೆ (ಮಾಂಕ್ರ. ದೇ. ೬೨–೦೯). ಹೀಲಿದಳೆ : ನೂತನೋದ್ಗತನರ್ತನಕ್ಕೆ ಮುಯ್ಯಾನುತುಂ ಕೂಡೆ ಹೀಲಿದಳೆಯಣುಕುಗಳ ನಡುವೆ ಮೆಱೆವುತುಂ (ಸಂಬರ. ೩–೬೩) ತಳಿತ ಬೆಳುಗೊಡೆಯ ತುಱುಗಿದ ಹೀಲಿದಳೆಯ ಮಂಡಳಿಸಿದಣುಕುಗಳ ನೆಳಲೊಳು . . . ನಡೆದನಪ್ರತಿಮನಚಳಿತಸಿದ್ಧನು (ಸಿದ್ಧರಾ. ೬–೨೦)

[ಪೀಲಿ+ತಟ್]

ಪೀಲಿದುಱುಬು (ನಾ). = ಪೀಲಿದಲೆ : ನಿಡುಗಣ್ಗಳ ನಿಬಿಡಸ್ತನಗಳ ಪಿಡಿ ನಡುವಿನ ಪೀಲಿದುಱುಬಿನ ಕಡುಚೆಲ್ವುವಡೆದ ಸೊಬಗುಗಾತಿ ಮೆಲ್ಲನೆ ನಡೆತಂದಳಾ ನೃಪನೆಡೆಗೆ (ನೇಮಿಸಂ. ೦೨–೫೦).

[ಪೀಲಿ+ತುಱುಬು$_2$ (<ತುಱುಂಬು$_2$)]

ಪೀಲಿಬಿಜ್ಜಣಿಗೆ 'ಪೀಲಿವಿಜ್ಜಣಿಗೆ' ನೋ.

ಪೀಲಿವಿಜ್ಜಣಿಗೆ, ಪೀಲಿಬಿಜ್ಜಣಿಗೆ (ನಾ). ನವಿಲುಗರಿಗಳಿಂದ ಮಾಡಿದ ಬೀಸಣಿಗೆ : ಪೀಲಿವಿಜ್ಜಣಿಗೆ ತಣ್ಪಿನ ನೀರ ಸೆಱೆಯಾದ ಪೊಂಗಳುತಿಗೆಯಿರೆ ಸಜ್ಜೆಯೋವರಿಯಿದೋವರಿ ಮಾಡಿತು ಕಂತುಗೆಮ್ಮುತುಂ (ಸಂಧ್ರಪು. ೯–೬೦). ಪೀಲಿಬಿಜ್ಜಣಿಗೆ : ಅನುನಯದಿಂ ವಾರವಿಲಾಸಿನಿಯರ್ ಮೆಲ್ಲೆಲರ ಪೀಲಿಬಿಜ್ಜಣಿಗೆಯನೊಯ್ಯನೆ ಬೀಸುತ್ತಿರೆ ನೃಪನಂದನನಿನಿಸಿನಿಸಂ ಬಚಲ್ಕೆಗಚ್ಚಿಯುತ್ತಿರ್ದಂ (ಕಾದಂಕಾ. ೪೫೫). [ಪೀಲಿ + ಬಿಜ್ಜಣಿಗೆ]

ಪೀಲಿವೊಜ್ (ನಾ). ನವಿಲುಗರಿಗಳ ಹೊರೆ,—ಪೆಂಡಿ : ಕರಿದಂತಂಗಳ ನಾಂತು ಪೀಲಿವೊಜ್ಜಿಯಂ ತಟ್ಕೈಸಿ ಗಂಧೇಭಮುಕ್ತಾಫಳಭಾರಮುಂ ತಳೆದು . . . ಬಂದರನೇಕರ್ ಬಟ್ಟಿಸಂದು ಕಾಡೊಡೆಯನಂ ಕಾಂತಾರದೊಳ್ ಲುಬ್ಧಕರ್ (ಕಾದಂಪೂ. ೦೬೯). [ಪೀಲಿ + ಪೊಜ್]

ಪೀಲು$_1$ (ನಾ). ೧. ಒಂದು ಬಗೆಯ ಮರ ; ಆಕ್ಷೋಟವೃಕ್ಷ; ಉಗುನಿ: "ಪೀಲುವೆನಲ್ ಗುಡಫಲಂ" (ಪಸ್ತುಕೋ. ೩೪-೩). ೨. ಹೂವು. ೩. ಬಾಣ. ೪. ಆನೆ : "ಪೀಲು ಪಿನದ್ವಿರದಾಂಕಂ" (ಪಸ್ತುಕೋ. ೦೩೦-೭೩); "ಪೀಲುಃ — ಪುಂಡೀಗಿಡ, ಆನೆ, ಸರಳು, ಹುವ್ವು" (ನಿಣ್ಣಂತಿ. ೪೦೯). ೫. ಹುಳು; ಕ್ರಿಮಿ. ೬. ಕಣ; ಅಣು : ಸೆರೆಮನೆ ಎನುವುದು ಏತಕೊ ಒಡಲಿಗೆ ಕಾಂಬುದು ಅರಮನೆ ತುಣುಕು ಅದು ಕೀಲುಕೀಲದಲಿ ಪೀಲುಪೀಲಿನಲಿ ರನ್ನದ ಕಣಕಣ ಮಿಣುಕುವದು (ಅರಳು. ೦೯೩-೯). ೭. ಹುಲ್ಲು : "ಹುಲ್ಲಿನಲ್ಲಿ ಮರದಲಿ ಪೀಲು" (ಮಂಗರಾ. ೦೪೩-೨೩). [ಸಂ.]

ಪೀಲು$_2$ (ನಾ). [ಸಂಗೀತ] ಒಂದು ರಾಗದ ಹೆಸರು : ಬರಖಿತ್ತುಲ್ಲಾ ಖಾನರು ಇವರ ಮನೆಯಲ್ಲಿ 'ಪೀಲು'ರಾಗವನ್ನು ನುಡಿಸಿದಾಗ (ಗಾಪಕ. ೨); ಅವನು ಪೀಲುರಾಗದಲ್ಲಿ ಕಟ್ಟಿದ ಪದವು ಹಳ್ಳಿಗಳಲ್ಲಿ ಎಷ್ಟೋ ದಿನ ಲೋಕಪ್ರಿಯವಾಗಿತ್ತು (ಗಂಪಾಯಿ. ೨೩೨). [←ಹಿಂ. ಮರಾ. ಪೀಲು]

ಪೀಲುಕ (ನಾ). ೧. ಒಂದು ಬಗೆಯ ಮರ : 'ಕಾಕಪೀಲುಕ' ಪರಾ. ೨. ಇರುವೆ. [ಸಂ.]

ಪೀಲುಪರ್ಣ (ನಾ). ೧. ಒಂದು ಬಗೆಯ ಸಸ್ಯ; ಹೆಗ್ಗುರುಟಿಕೆ : "ಮೂರ್ವಾ, ದೇವೀ . . . ಗೋಕರ್ಣೀ, ಪೀಲುಪರ್ಣೀ—೧೦ ಹೆಗ್ಗುರುಟಿಕೆಯ ಹೆಸರುಗಳು" (ನಿಣ್ಣಂತಿ. ೦೩೦). ೨. ತೊಂಡೆ ಗಿಡ : "ತುಂಡಿ ಕೇರೀ, ರಕ್ತಫಲಾ, ಬಿಂಬಿಕಾ, ಪೀಲುಪರ್ಣೀ—೪ ದೊಂಡೇಗಿಡದ ಹೆಸರು" (ನಿಣ್ಣಂತಿ. ೦೪೪). [ಸಂ. ಪೀಲುಪರ್ಣೀ]

ಪೀವ (ನಾ). ದೊಡ್ಡದು ; ಸ್ಥೂಲವಾದುದು : "ಬಹುಳಃ . . . ಪೀವಾ, ಪೀವರಃ—ಈ ೫ ದೊಡ್ಡಿ(ತು)" (ಹಲಾಯು. ೬-೦೬೭). [ಸಂ.]

ಪೀವಡಿ, ಪೆವಡಿ (ನಾ). ೧. ಅರಿಸಿನಬಣ್ಣದ ಮಣ್ಣು; ಹಳದಿ ಮಣ್ಣು : ಘಟಕ, ಮುಶಿಯ ಮಣ್ಣು, ಕುಂಬಾರರ ಮಣ್ಣು, ಕಾವಿ, ಪೀವಡಿ ಮುಂತಾದ ಮೃತ್ತಿಕೆಗಳು ಈ ಧಾತುವಿನಿಂದ (aluminium) ಹುಟ್ಟುತ್ತವೆ (ಮುಂಬಿಯಿ. ೬-೦೬). ಪೆವಡಿ : ೨. ಹಳದಿಬಣ್ಣ : ರತಲಿನ ಮೇಲೆ ಕಿಮ್ಮತ್ತು ಅಗತಕ್ಕ ಜೀನಸಗಳು. ೧. ಅಗರ . . . ೫೧. ಹಿತ್ತಾಳಿ ತಂತಿ; ೫೨. ಪೆವಡಿಬಣ್ಣ (ಹಳದಿಬಣ್ಣ) (ಮುಂಬಿಯಿ. ೦೨೯). [←ಮರಾ. ಪಿವಡೀ, ಪೇವಡೀ]

ಪೀವರ (ಗು). ೧. ಕೊಬ್ಬಿದ ; ಸ್ಥೂಲವಾದ ; ತೋರವಾದ : ಆಕೆಗಳ ಪೀವರತುಂಗನಿತಂಬಬಿಂಬದೊಂದಗಲದ ವೃದ್ಧಿ ಪೆರ್ಚಿ ನೆಲೆವೆರ್ಚಿದುದೀ ಕೊಳಂ (ಶಾಂತಿಪು. ೯-೨೬). 'ಪೀವರಸ್ತನಿ' ಪರಾ. (ನಾ). ೨. ದೊಡ್ಡದು ; ಸ್ಥೂಲವಾದುದು : "ಬಹುಳಃ, ಸ್ಥೂಳಃ . . . ಪೀವರಃ—ಈ ೫ ದೊಡ್ಡಿ (ತು)" (ಹಲಾಯು. ೫೬-೦೬೬); ಅತಿನಿಬಿಡಂಗಳ್ ವೃತ್ತೋನ್ನತಂಗಳತಿಪೀವರಂಗಳತಿಕಠಿನಂಗಳ್ . . . ಅವಳ ಕುಚಂಗಳ್ (ಗದಾಯು. ೯-೫೬). ೩. ಸ್ಥೂಲನಾದವನು ; ದಪ್ಪನಾದವನು : "ಪೀವರನೆನಲ್ ಸ್ಥೂಲನೆನೆ ಬಹುಲನೆನೆ (ಪೀನನೆನೆ) ದೊಡ್ಡಿತಪ್ಪವನೆನಿಕ್ಕುಂ" (ಮಂಗರಾ. ೬೯-೦೦). [ಸಂ.]

ಪೀವರಸ್ತನಿ (ನಾ). ೧. ಪುಷ್ಟವಾದ ಮೊಲೆಗಳುಳ್ಳವಳು. ೨. ದೊಡ್ಡ ಕೆಚ್ಚಲುಳ್ಳ ಹಸು : "ಪೀನೋಧ್ನೀ, ಪೀವರಸ್ತನೀ—ಈ ೨ ಹೆಗ್ಗೆಚ್ಚಲಾವು" (ಹಲಾಯು. ೪೫-೦೦೬). [ಸಂ. ಪೀವರಸ್ತನೀ]

ಪೀವರೋಧ್ನಿ (ನಾ). = ಪೀವರಸ್ತನಿ ೨ : "ಪೀವರಸ್ತನಿ ಪೀವರೋಧ್ನಿಯೆನೆ ಹೆಗ್ಗೆಚ್ಚಲಾವು" (ಮಂಗರಾ. ೫೪-೫). [ಸಂ. ಪೀವರೋಧ್ನೀ]

ಪೀಳಿಗೆ (ನಾ). ೧. ವಂಶ ; ಕುಲ : ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲದು (ಹಸಕಾ. ೬-೦೦) ದೇವಕೀಸುತನೇನು ಬಂಡಿಯ ಬೋವಗುಲದಲಿ ಜನಿಸಿದನೆ ಮೇಣಾ ವಿರಿಂಚಿಯದಾವ ಸಾರಥಿಕುಲದ ಪೀಳಿಗೆಯೊ (ಕುಪ್ಪಾಳ. ೫-೩೪); ತೆಗೆಸಿದನು ಬಳಿಕಿನಕುಲದ ಪೀಳಿಗೆಯ ನೃಪರಾರ್ಜಿಸಿದ ನಾನಾಯುಗ ಯುಗಂಗಳ . . . ನಾಣೆಯಂಗಳನಖಿಳವಸ್ತುಗಳ (ಕೊರೆಗಾ. ೦-೬-೪). ೨. ತಲೆಮಾರು : ತಲೆಯಿಂದ ತಲೆಗೆ, ಪೀಳಿಗೆಯಿಂದ ಪೀಳಿಗೆಗೆ . . . ಇಳಿಯುತಿದೆ ಯುಗದಿಂದ ಯುಗಕೆ ಮಾನವಧರ್ಮನಿಲದಮೃತಧಾರೆಯದು (ಪುಂಕುಳ. ೪೦೮); ಹಿಂದಿನವರ ಆದರ್ಶಗಳು ಬರುವ ಪೀಳಿಗೆಗೆ ಮೇಲ್ಪಂಗ್ತಿಯಾಗುತ್ತವೆ (ಶಿಕ್ಷದ. ೩೨೦). ೩. ವಂಶಕ್ಕೆ ಸೇರಿದವನು ; ವಂಶಜ : ನಿರೀಕ್ಷಿಸುತನಿಬರಿಂಗಿತವ ಮೇಲುಮೊಗದ ಗಭೀರಗತಿಯ ಛಡಾಳವನು ಕಂಡಿವರು ರಾಯರ ಪೀಳಿಗೆಗಳಹುದೆಂದು ನಿಶ್ಚೈಸಿದನು ಮನದೊಳಗೆ (ಕುಪ್ಪಾಳ. ೦೬-೨೬). 'ಪೀಟಿಗೆ' ಪರಾ.

ಪೀಳ್ಕುದುರೆ (ನಾ). [ಸಂಗೀತ] ಪಿಟೀಲಿನ ಧ್ವನಿಪೆಟ್ಟಿಗೆಯ ಮಧ್ಯಭಾಗಕ್ಕಿಂತ ಸ್ವಲ್ಪ ಮೇಲುಗಡೆಯಲ್ಲಿ ತಂತಿಗಳು ಹಾದು ಹೋಗಲು ಲಿಂಬವಾಗಿ ಅಳವಡಿಸಿರುವ ಕುದುರೆಗೆ ಸಿಕ್ಕಿಸುವ ಒಂದು ಉಪ ಕುದುರೆ ; ಪ್ರ ನಾದವನ್ನು ಕಡಮೆ ಮಾಡುವುದಕ್ಕಾಗಿ ಈ ಉಪ ಕುದುರೆಯನ್ನು ಸಿಕ್ಕಿಸುತ್ತಾರೆ : ಅವರ ಸಾಧಕ ಅತಿ ಗೋಪ್ಯ ಪಿಟೀಲಿಗೆ ಪೀಳ್‌ಕುದುರೆಯನ್ನು ಸಿಕ್ಕಿಸಿ ಸಣ್ಣನಾದದಲ್ಲಿ ಅಭ್ಯಾಸಮಾಡುತ್ತಿದ್ದರು (ಪಾಳಲಾ. ೨೦). [< ಪಿಳ್ಳೆ + ಕುದುರೆ]

ಪೀಱು$_1$, ಪೀರು$_2$ (ಕ್ರಿ). ಕೆದರು ; ಚೆದರು ; ಚೆಲ್ಲಾಪಿಲ್ಲಿಯಾಗು ; ಅಸ್ತವ್ಯಸ್ತವಾಗು : "ಪೀಱು—ವಿಕೀರ್ಣೇ" (ಶಮಾಗಾ. ೫); ತೊಡಂಕಿ ಪೀಱಿದ ಕುರುಳ್ಗಳೆ ಚಿತ್ತದೊಳಾದ ಬೇಸಱಂ ನುಡಿವವೊಲಾಗೆ ಬರ್ಪ ಕಮಳಾಯತನೇತ್ರೆಯನಿಂದುವಕ್ತ್ರೆಯಂ ಕಂಡು (ಪಂಪಭಾ. ೦೩-೯೯) ; ಸುರ್ಬುಗೊಂಡ ಗಡ್ಡಮುಮಂ ಮೀಸೆಯುಮನಗಲೆ ನೂಂಕಿ ಪೀಱಿದ ತಲೆಯೇಱಂತಿರ್ದ ಬಾಯೊಳಡ್ಡಗೈಯನಿಡುವುದುಂ (ಲೀಲಾವ. ೬-೫೬ ಪ). ಪೀರು$_2$: ಕಪ್ಪುಕುರುಳುಗಳಿಂದ ತಲೆಯ ಪೀರಿದರು ಒಪ್ಪುವೊಲು ತಾರೆಗಳ ನಡುವೆ ತೂರಿಹಳು ರಾತ್ರಿಯೆಂಬಿವಳಾವ ಧಾತ್ರಿ ? (ಬಾಸಿಗ. ೩೫-೯) [ದೇ.॥ ತಮಿ. ಪೀಱು = ಬಿರಿ, ಸೀಳು ; ಮಲ. ಪೀರು = ಹರಿ]

ಪೀಱು$_2$ (ನಾ). ೧. ಚೆದರುವಿಕೆ ; ಚೆಲ್ಲಾಪಿಲ್ಲಿಯಾಗುವಿಕೆ ; ಅಸ್ತವ್ಯಸ್ತವಾಗುವಿಕೆ : ಪಿಟ್ಟಾದ ಪೀಱಾದ ಸಿಂಧುರದಿಂ ತಟ್ಟಿದ ಮುಟ್ಟಿದನ್ಯರಥದಿಂ ಕಣ್ಗಂ ಮನಕ್ಕಂ ಭಯಂಕರಮಾದಾಜಿಯೊಳಟ್ಟಿ ತಿಂಬಜವನೆಂಬಂತಿರ್ದನಬ್ಜೋದರಂ (ಪಂಠಾಮಾ. ೯-೦೨೪). ೨. ಇರಚಲು ; ಇರಿಸಲು : ಪಾಱುವ ವಿಮಾನದೊಂದಳ್ಳೇಱಿಂ ಪಱಿದುಗುವ ಮುಗಿಲ ನೀರ್ಗಳ ಪಲವುಂ ಪೀ[ಪಾಶಾಂ. ಜೀ, ಬೀ]ಱುಗಳೊಳೆಳಸಿ ಖಚರರನಾಱಿಸಿದುದು ಗಗನದೊಳ್ ವಿಯತ್ತಳಪವನಂ (ಅದಿಪು. ೪-೫೬). [< ಪೀಱು$_1$]

ಪೀಟಿಗೆ (ನಾ). ಸಿಂಹಾಸನ ; ಪೀಠ : "ಪೀಠಿಕೆಗೆ ಪೀಟಿಗೆಯೆನಿಕ್ಕುಂ" (ಸಂಶೇವ. ೦೯) ; ನೀನುಳ್ಳೊಡುಂಟು ರಾಜ್ಯಂ . . . ನೀನುಳ್ಳೊಡುಂಟು ಪೀಟಿಗೆ ನೀನಿಲ್ಲದಿವೆಲ್ಲವೊಳವೆ (ಗದಾಯು. ೫-೨೦) ; ಬೇಡಿದೊಡೀಯನಾಂತಡಿಱಿಯಂ ಮಱಿವೊಕ್ಕೊಡೆ ಕಾಯನಂತವಂ ನಾಡರಸಾಗಿ ಪೀಟಿಗೆಯನೇಱಿದೊಡೇನವನಗ್ರಗಣ್ಯನೇ (ಸೂಕ್ತಿಸು. ೦೬-೨೩) ; ಪೀಠಿಕಾ—ಪೀಟಿಗೆ (ಶಪುರ. ೨೫೬ ಪ್ರಯೋ). 'ಪೀಳಿಗೆ' ಪರಾ. [< ಸಂ. ಪೀಠಿಕಾ]

—ಪು$_1$, —ಹು$_1$ (ಪ್ರ). ಪ್ರೇರಣಾರ್ಥದಲ್ಲಿ ಧಾತುಗಳ ಮೇಲೆ ಹತ್ತುವ ಒಂದು ಪ್ರತ್ಯಯ : 'ಅಱಿಪು', 'ತಿಳಿಪು$_1$', 'ನಡಪು$_1$' ಪರಾ. — ಹು$_1$: 'ಕಳುಹು', 'ತಿಳುಹು$_1$' ಪರಾ.

—ಪು$_2$, —ಹು$_2$ (ಪ್ರ). ಒಂದು ಭಾವನಾಮವಾಚಕಪ್ರತ್ಯಯ : 'ಒಳ್ಪು', 'ತೆಳ್ಪು', 'ನಣ್ಪು' ಪರಾ. —ಹು$_2$: 'ತೆಗಹು', 'ತೊಡಹು$_2$' ಪರಾ.

ಪುಂ (ನಾ). ೧. ಗಂಡಸು ; ಪುರುಷ : ಪುಂ ಪೆಂಗಳಿಂದ (ಪುಂ ಪೆಣ್ಗಳಿಂದ) ಪುಟ್ಟಿದ ದೇಹವನು ತಿಳಿ . . . ಇಂಪಾಗಿದೆಯೆಂದು ಹಿಗ್ಗದಿರೆಲವೊ ಹೊಲೆಗಂಪು ನಾರುವುದು ತೊಳೆಯದೆ ಇರಲು (ಶಿದಾಕ್ಯ. ೪-೦). ೨. ಗಂಡುಸಂತಾನವಿಲ್ಲದವರಿಗೆ ಪ್ರಾಪ್ತವಾಗುವುದೆಂದು ಹೇಳಲಾದ ಒಂದು ನರಕ. ೩. [ವ್ಯಾಕ] ಪುಲ್ಲಿಂಗ : ನೀನಱಿ ಕರ್ಣಾಟಕದೊಳ್. ಪೀನಂ ಸ್ತ್ರೀ ಪುಂ ನಪುಂಸಕೋಭಯ ಪುಂಸ್ತ್ರೀ ಸ್ತ್ರೀನಪ್ಸಮಸ್ತವಾಚ್ಯಾನ್ಯೂನಾಪ್ಯಯಮೆಂದು ಲಿಂಗಮೊಂಬತ್ತು ತೆಱಂ (ಶಮಾದ. ೬೮).

[ಸಂ. ಪುಂಸ್]

ಪುಂಕಿಸು (ಕ್ರಿ). ಧ್ವನಿ ಮಾಡು ; ಸ್ವರವನ್ನು ಹೊರಡಿಸು : ಸುಷಿರವಾದ್ಯವಾದನವಿಶಾರದನಪ್ಪ ಕಿನ್ನರಂ ತನ್ನಯ ಸೊಳಹೆಯೆಂಬ ವಾಸಮಂ ಕೊಂಡು ಹೆಲ್ಲಣಿಯಂ ಸುದ್ಧಮಾಗಿ ಪುಂಕಿಸಿ ಬಿಂಕಂಬಡೆಯೆ ಮುಹಚಾರೆಯಮಂ ಮಾಡಿ ರೂಢಿವಡೆದ ಮಧ್ಯಮಾದಿಯೆಂಬಾದಿರಾಗಮಂ ರೂಹುಗೊಳಿಪುದುಂ (ಶಾಂತೀಶ್ವ. ೦೬-೬೬ ಪ); ಪುಂಕಿಸಿದ ಮಾಂಸ [ವಾಂಶ] ಕಾರನ ಪುಂಕೃತಿಯುಂ ಶ್ರುತಿಯುಮೆಂದು ಭೇದಿಸಲಿನ್ನಾರ್ಗಂ ಕರಮರಿದೆನೆ ಭಾರತಿಯಿಂ ಕಿಱಿಯಳಿವಳ್ದಿರೆನಿಸಿ ಸಮಗಾಯಿನಿಯರ್ ತಾರಯ್ಸುವುದುಂ (ಪುಜಾಪೇ. ೪-೫೪).

[< ಪುಂಖಿಸು]

ಪುಂಕೃತಿ (ನಾ). ಸ್ವರ ; ನಾದ : ಪುಂಕಿಸಿದ ಮಾಂಸ [ವಾಂಶ] ಕಾರನ ಪುಂಕೃತಿಯುಂ ಶ್ರುತಿಯುಮೆಂದು ಭೇದಿಸಲಿನ್ನಾರ್ಗಂ ಕರಮರಿದೆನೆ ಭಾರತಿಯಿಂ ಕಿಱಿಯಳಿವಳ್ದಿರೆನಿಸಿ ಸಮಗಾಯಿನಿಯರ್ ತಾರಯ್ಸುವುದುಂ (ಪುಜಾಪೇ. ೪-೫೪). 'ಹುಂಕೃತಿ' ಪರಾ. [ಪುಂ + ಕೃತಿ$_1$]

ಪುಂಖ (ನಾ). ೧. ಬಾಣದ ಹಿಂಭಾಗ ; ಹಿಳಿಕು : "ಬಾಣದ ಪಿಳಿಕದು ಪುಂಖಂ" (ಪಸ್ತುಕೋ. ೬೫-೦೯) ; ವಿರಹಜ್ವರದಿಂ ಪುಳಕೋತ್ಕರಮೊಗೆದುವು ರೋಮಕೂಪಮೆನಿತನಿತಱೊಳು ಸ್ಮರನ ಸರಲ್ಗಳ್ ನಾಂಟಲ್ ಶರೀರಮಂ ಪತ್ತಿ ನಿಂದ ಪುಂಖಂಗಳವೋಲ್ (ಕಾದಂಪೂ. ೬೩೯) ; ಮಿಸುಪ ಕಲಧೌತ ಪುಂಖಪ್ರಸರಂ ಖದ್ಯೋತತತಿವೊಲಾದುದು ನಭದೊಳ್ (ಪಗಸಿ. ೦೨-೦೨). ೨. ಗಿಡುಗ. ೩. ಮಂಗಳಕಾರ್ಯ. ೪. [ಸಂಗೀತ] ನಾದ ; ಸ್ವರ : ಪುಂಖಶುದ್ಧಮೆನೆ ಭೋಂಕನೆ ಪುಂಖಿಸಿ ಮಧ್ಯಮಾದಿಯಂ ಚಾಳಿಸಿ . . . ಮೃದುಸ್ವರಂ ಪಾಳಿಯಿನೊಪ್ಪುವಂತೆಸೆಯೆ ಭಾಜಿಸಿದಳ್ ಸುವಿಲಾಸೆ ವೀಣೆಯಂ (ಸೂಕ್ತಿಸು. ೩-೦೯). [ಸಂ.]

ಪುಂಖಾನುಪುಂಖ (ನಾ). ಒಂದರ ಹಿಂದೆ ಒಂದರಂತೆ ಎಡೆಬಿಡದೆ ಬರುವ ಬಾಣಪರಂಪರೆ,—ಬಾಣಗಳ ಸಾಲು : ನೈಷ್ಠಿಕಮೆಂಬ ಮುಷ್ಟಿಯೊಳಂ ಪುಂಖಾನುಪುಂಖಮೆಂಬ ಶರಸಂಧಾನದೊಳವಯವದೊಳ್ ತೆಗೆದೊಡೆ (ಸಂಪಭಾ. ೨-೫೨ ಪ) ; ಏನ ಹೇಳುವೆ ಭಟನ ಶರಸಂಧಾನವನು ಪುಂಖಾನುಪುಂಖವಿಧಾನವನು ಝೇಂಕಾರಶರಜಾಳಪ್ರಸಾರಣವ (ಕುಪ್ಯಾಕ. ೩-೪೩).

ಪುಂಖಾನುಪುಂಖವಾಗಿ = ಒಂದರ ಹಿಂದೆ ಒಂದರಂತೆ ; ಎಡೆಬಿಡದೆ ; ನಿರಂತರವಾಗಿ : ವಿಚಾರಗಳು ಪುಂಖಾನುಪುಂಖವಾಗಿ ಏಳುತ್ತಿದ್ದವು (ಕಾಮಿಕಾಂ. ೪೬) ; ಇದರ ಅರ್ಥವಿವರಣೆಗೆ ತೊಡಗಿದರೆ ಪುಂಖಾನುಪುಂಖವಾಗಿ ಜಿಜ್ಞಾಸೆಯೇಳುವುದು ಸಹಜ (ಕಾವ್ಯಳು. ೦೮).

[ಸಂ.]

ಪುಂಖಾನುಪುಂಖಂ (ಅ). ಒಂದರ ಹಿಂದೊಂದು ಎಡೆಬಿಡದೆ ಬಾಣಗಳು ಬರುವಂತೆ : ಬಟಿಯಂ ಮೆಯ್ಗಂಡು ಪುಂಖಾನುಪುಂಖಮಿಸುತ್ತಿರ್ಪೆಡೆಯೊಳ್ ತೆರಳ್ಚಿದುವಗುರ್ವಿಂ ಪರ್ವಿ ಬಂದಿರ್ದ ಮೇಘಮುಖಾಹೀಂದ್ರರ ಪೊಂಕಮಂ ಜಯಕುಮಾರೋನ್ಮುಕ್ತಬಾಣಾಳಿಗಳ್ (ಅದಿಪು. ೦೩ ೬೦) ; ಅಂತು ಪುಂಖಾನುಪುಂಖಮಿಸುವುದುಂ (ಸಂಶಾಪಾ. ೦೪-೦೩೪ ವ).

[< ಪುಂಖಾನುಪುಂಖ]

ಪುಂಖಾನುಪುಂಖಿತೆ (ನಾ). ಎಡೆಬಿಡದಂತಿರುವ ಬಾಣಪ್ರಯೋಗ : ಎಕ್ಕಟಿಗ ಪುಂಖಾನುಪುಂಖಿತೆಯಿಕ್ಕಿ ಹಾಕಿದನೈದಿದಂಬುಗಳಿಕ್ಕಡಿಗೆ ತುಂಡಾಗು ತಿರ್ದವು ಪಾರ್ಥನೆಸುಗೆಯಲಿ (ಪಪಭಾ. ೪೩-೩೩).

[ಸಂ. ಪುಂಖಾನುಪುಂಖಿತಾ]

ಪುಂಖಿ, ಪುಂಗ (ನಾ). ಒಂದು ಬಗೆಯ ಮರ : "ಪುಂಡ್ರಃ—ತಿಲಕವೃಕ್ಷ, ಗೋಳಿಯ ಮರ, ಪುಂಖಿ, ಕೊಗ್ಗೆ" (ಪಿಹರಿ. ೦೦೦). ಪುಂಗ : ಪುಂಗ—Pongamia glabra (ಹೊಂಗೆ) (ಶಾಸಗಿ. ೯). 'ಹೊಂಗೆ$_1$' ಪರಾ.

[← ತಮಿ. ಪುಙ್ಕು]

ಪುಂಖಿತೆ (ನಾ). (ಬಾಣವನ್ನು ಬಿಡುವ) ಕೌಶಲ ; ಕೈಚಳಕ : ತೊಡುವ ಚಿತ್ಕಾರವನು ಬಾಣವ ಬಿಡುವ ಪುಂಖಿತೆಗಳನು ಕಣ್ಣೆವೆಯಿಡದೆ ನೋಡಿದರ ಮರಸಭೆಯೊಳಗೆಲ್ಲ ಕಾಣದಲೆ (ಪಪಭಾ. ೪೩-೩೪).

[ಸಂ. ಪುಂಖಿತ = ಬಾಣದಂತೆ ಗರಿಗಳಿಂದ ಕೂಡಿದುದು]

ಪುಂಖಿಸು (ಕ್ರಿ). = ಪುಂಕಿಸು : ಕಳೆಯ ಮಯಣಮಂ ನುಣ್ಪಾಗೆ ತಿರ್ದಿ ಪುಂಖಿಸಿ ಹೊ[ಹೆ]ಲ್ಲಣೆಯ ಶುದ್ಧಮಾಗಿ ಮುಹಚಾಳೆಯಮುಮಾಡಿ . . . ಸಮಯೋಚಿತರಾಗಮಂ ಸುವ್ಯಕ್ತಿವೆತ್ತು ನಿಡೆ ತೋರ್ಕೆಗೊಳಿಸುವುದುಂ (ಶಾಂತೀಶ್ವ. ೭-೯೩ ಪ) ; ಪುಂಖಶುದ್ಧಮೆನೆ ಭೋಂಕನೆ ಪುಂಖಿಸಿ ಮಧ್ಯಮಾದಿಯಂ ಚಾಳಿಸಿ . . . ಬಾಜಿಸಿದಳ್ ಸುವಿಲಾಸೆ ವೀಣೆಯಂ (ಸೂಕ್ತಿಸು. ೩-೦೯). [ಪುಂಖ + — ಇಸು$_3$]

ಪುಂಗ 'ಪುಂಖಿ' ನೋ.

ಪುಂಗವ (ನಾ). ೧. ಗೂಳಿ ; ಹೋರಿ ; ವೃಷಭ : ವೃಷಾಂಕಪುಂಗವ ವಿಘಟ್ಟಿತೋತ್ತೀರಮಂತದೊಂದೆಡೆ (ಕಾದಂಪೂ. ೬೪೦) ; ಒರ್ಮೆಯೆ ಮುಟ್ಟಿವಂದುದು . . . ಪುಂಗವಂ (ಪಗಸಿ. ೩-೩೬). ೨. (ಸಮಾಸದ ಕೊನೆಯಂ ಅಂಗವಾದಾಗ) ಒಡೆಯ ; ನಾಯಕ : "ಸ್ವಕುಲಪ್ರಧಾನ ಗಜನಾಜಿ ಕುಂಜರಂ ವಿಭು ವೃಷಾಖ್ಯ ಪುಂಗವಮಕ್ಕುಂ" (ಪಸ್ತುಕೋ. ೦೨೦-೦೬). 'ಮುನಿಪುಂಗವ' ಪರಾ. ೩. ನಂದಿವೃಕ್ಷ : "ಪುಂಗವಮೆನಲ್ ನಂದಿ" (ಮಂಗರಾ. ೩೬-೦೯). [ಸಂ.]

ಪುಂಗವಧ್ವಜ (ನಾ). ೧. ನಂದಿಯ ಚಿಹ್ನೆಯುಳ್ಳ ಬಾವುಟ : ಮುಂಗಡೆಯ ನವನೆಲೆಯ ಗೋಪುರ ಪುಂಗವಧ್ವಜಗುಡಿಗಳಿಂದಂ ರಂಗೊಳಿಪ ಶಿವಭವನಮಂ ನಲವಿಂದ ನೋಡಿದರು (ಕಂಳಿದಾ. ೨-೩೦). ೨. ನಂದಿಧ್ವಜವುಳ್ಳವನು ; ಶಿವ : ಪುರುಷಪುಂಗವಂ ಪುಂಗವಧ್ವಜಂ ಗಾತ್ಮಾರ್ಪಣಂಗೆಯ್ದಿನಿಸಾನುಂ ಪೊಳ್ತನಿಮಿಷಾಕ್ಷಿಯಿಂ ನಿರೀಕ್ಷಿಸಿ (ಶಾಪಕೇ. ೦೩-೫೪ ಪ). [ಸಂ.]

ಪುಂಗಳಿ (ನಾ). ಒಂದು ಬಗೆಯ ಸಸ್ಯ (?) : "ಬೀಳ ಪುಂಗ [ಪಾಕಾಂ. ಡ]ಳಿ ತಿಳುವನಿಯೆನಿಕ್ಕು" (ಮಂಗರಾ. ೪೦-೩೦). [?]

ಪುಂಗಿ (ನಾ). ೧. (ಸಾಮಾನ್ಯವಾಗಿ ಹಾವಾಡಿಗರು ಊದುವ) ಸೋರೆಬುರುಡೆಯಿಂದ ಮಾಡಿದ ಒಂದು ಬಗೆಯ ವಾದ್ಯ : ವಿಷ್ಣೂನ ಮಾತನ್ನು ಕೇಳುತ್ತ ಶೀನು ಸ್ತಂಭಿತನಾಗಿ ಕುಳಿತ. ಹಾವಾಡಿಗ ನೋರ್ವ ಪುಂಗಿಯನ್ನೂದಿದಂತಿತ್ತು (ಸಮಾಜೀ. ೯೮೦) ; ಪುಂಗಿ ನಾದಕನಾಗ ಹಿಂಗ ಹೆಡೆಯೆತ್ತಿದಂಗ (ಕನ್ನಡಾ. ೩೬೨). ೨. (ಆಲಂ) ಪ್ರಭಾವ ಬೀರಿ, ಮೋಹಗೊಳಿಸುವ ಯುಕ್ತಿ : ಮೊನ್ನೆ ಸಂಜೆಯಿಂದ ನಿಂತಿದೆ ಅವಳ ನಾಲಿಗೆಯ ಅಲೆದಾಟ, ಅವಳ ಮಾತಿನ ಪುಂಗಿ (ಕ್ಷಿತಿಪ. ೩೦). ೩. ಸೊನ್ನೆ ; ಶೂನ್ಯ : ಬೇಟಬೇಕಾದವರಿಗೆ ದುಂದು, ಮನೀಮಂದಿಗೆ ಮಾತ್ರ ಪುಂಗಿ (ಗಂಪಾಯಿ. ೪೭). [← ಮರಾ. ಪುಂಗೀ. / ಪ್ರಾ. ಪುಗ್ಗ]

ಪುಂಗಿಸೊಗೆ (ನಾ). ಒಂದು ಊರಿನ ಹೆಸರು : ಕುದುಗೂರ್ನಾಡೊಳ್ ಪೂರ್ವ್ವಮಧ್ಯದೇಶೇ ಪುಂಗಿಸೊಗೆನಾಮಗ್ರಾಮಂ(ಮಃ) (ಇಂ. XVIII. ೩೬೬-೦೩ ; ೩ಪಯ ಕಪ). [?]

ಪುಂಚ (ನಾ). (ಕರಾ) ಹುತ್ತ ; ವಲ್ಮೀಕ : ಅಲ್ಲಲ್ಲಿ ದೊಡ್ಡ ದೊಡ್ಡ ಪುಂಚ (ಹುತ್ತ) ಗಳನ್ನು ನೋಡಿದರೆ ಅರಿಯದವರಿಗೆ ಮೈ ನಡುಗು ಹುಟ್ಟುವುದುಂಟು (ಸಂಬಾಸಾ. ೦೭) ; ತೆಂಕಲಲ್ಲಿ ಒಂದು ಪುಂಚವಿತ್ತಂತೆ (ಒಡ್ಡಿಲಾ. ೦೩೫). 'ಪುತ್ತು$_1$' ಪರಾ. [← ತುಳು. ಪುಂಚ]

ಪುಂಚೈ, ಪುಂಜ$_1$, ಪುಂಜೈ$_1$, ಪುಣಜ, ಪುಣಜಿ, ಪುಣುಜಿ (ನಾ). ಒಣ ಭೂಮಿ ; ಖುಷ್ಕಿ ಜಮೀನು : ಚತುಸೀಮೆಗೆ ಸಲುವ ನಂಚೈ ಪುಂಚೈ ವಾನ್‌ಪಯಿರು ಪುಂಪೌರು . . . ಮುಂತಾದ ಸಕಲಸುವರ್ನಾದಾಯ ಸಕಲಭತಾದಾಯ . . . ಸೇರಿಸಿ (ಎಇ. XVII, ೦೦೫-೬೦; 1428). ☞ 'ಪುಂಚೈ' ಎಂಬ ಪದಪ್ರಯೋಗವು ತಮಿಳುನಾಡಿನ ಸಾಮೀಪ್ಯದ ಪ್ರಭಾವದಿಂದ ಆಗಿರಬಹುದು. **ಪುಂಜ$_1$** : ಎಲ್ಲ ನಂಜವಾ ? ಪುಂಜವಾ ? ಬೈಲುಗದ್ದೆ, ಬೆಟ್ಟುಗದ್ದೆ, ಕಾಡು, ಬೀಡು ಎಲ್ಲ ಕೂಡಿ ಅಷ್ಟಾಗುತ್ತದೆಯೊ ? (ಬಾಳಿಗಿ. ೦೫). **ಪುಂಜೈ$_1$** : ನಂಚೈ (ಜೈ) ಪುಂಜೆ (ಜೈ) ಕಮುಕು ರಣ್ಣ ವೈಪ್ಪು . . . ನಿಧಿನಿಕ್ಷೇಪ ಜಲಪಾಷಾಣ ಅಕ್ಷೀಣೆ ಆಗಾಮಿ ಸಿದ್ಧಸಾಧ್ಯಂಗಳುಂ (ಎಇ. XVIII, ೦೪೨-೪೬ ; 1434) : ಯೀ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾನ್‌ಪಯಿರು ಪುನ್‌ಪಯಿರು ವಾಸಿಲುವರಿ . . . ಹಲ ಉಪಾಧಿಗಳೂ ಸಹ ಸೇರ್ಸಿ ಕೊಟ್ಟೆವು (ಸೌಇಇ. IX-ii, ೪೬೩-೭ ; 1470) ; ನಂಜೆ ಪುಂಜೆ ವಾನ್‌ಪಯಿರು ಪುನ್‌ಪಯಿರು . . . ಮೊದಲಾದ ಹಲ ಉಪಾಧಿಗಳು ಸಹ . . . ಅನುಭವಿಸಿಕೊಂಡು (ಸೌಇಇ. IX-ii, ೪೬೬-೫; 1472). **ಪುಣಜ** : ಪೆರಿಯೆ ಪುಂಗಿಯೆ ಪೇರೊಬ್ಬೆಯೆ ಮುರಿದು ಕಿಡಿವ ಗುಣ್ಡೆಯೆ ಬಬ್ಬಾಗಿಲ ದ್ವಿಸನ್ದಿಯೆ ಪುಣಜ ಪರಳನ್ದಿಯ ನಾಡ . . . ಕೂಡಿತ್ತು (ಎಕ. III (R), ನಂಜನ. ೨೬೨-೨೪; 969). **ಪುಣಜಿ** : (ಕಿ). **ಪುಣುಜಿ** : (ಕಿ). 'ನಂಜೆ' ಪರಾ.

[ದೇ. ॥ ತಮಿ. ಪುಣ್ಚೈ, ಪುನ್‌ಚೆಯ್; ಮಲ. ಪುಣ್ಜ ; ತುಳು. ಪುಂಜೊ]

ಪುಂಜ$_1$ 'ಪುಂಚೈ' ನೋ.

ಪುಂಜ$_2$, ಹುಂಜ$_1$ (ನಾ). ೧. ಗಂಡುಕೋಳಿ : ಸುಪಕ್ಷದಿಂದೆ ರಂಜಿಸಿದುದು ಪುಂಜನಗ್ಗದ ಸುವಸ್ತುವಿನಂತಿರೆ ತಟ್ಟು ಹೇಂಟೆಯೊಳ್ (ಯಶೋಸ. ೩-೭೬). ೨. (ಆಲಂ) ಸಮರ್ಥ ; ಗಟ್ಟಿಗ : ಆಗ, ಇವ ಪುಂಜ. ಇವನ ಮೇಲೆ ಬಿದ್ದರೆ ಸಣ್ಣಕಲ್ಲು ದೊಡ್ಡ ಕಲ್ಲ ಮೇಗೆ ಬಿದ್ದಂಗೆ (ಶಾಲೀಮು. ೭೦) ; ಅವ ಪುಂಜ, ಅವನ್ಗೇನು, ನನ್ನ ಬಯ್ದು, ಹೊಡೆದ (ಶಾಲೀಮು. ೭೫). **ಹುಂಜ$_1$** : ೧. ಅಂತು ಗಂಡು ತೊಂಡೇಱಿದ ಹುಂಜನಂ ಕೊಂಡು ಪೋಗಿ ಶ್ರೇಣಿಕನ ಮುಂದೆ ಅಭಯಕುಮಾರೋಪದೇಶದಿಂ ಬಿಟ್ಟು (ಪುಷ್ಯಾಸ್ತ್ರ. ೩-೩೦ ವ) ; ಸಂಜೋಗದಶ್ವಗಳತ್ತಿತ್ತ ಕೋಳಿಯ ಹುಂಜನಂದದಿ ಪಾಱಿ ಹರಿಯೆ (ಶಕಸ. ೨೨-೨೦) ; ನಾನೊಂದು . . . . . ಕುದುರೆಯನ್ನು ಕಂಡೆ. ಅದು . . . ಹುಂಜದಂತೆ ತಲೆಯೆತ್ತಿಕೊಂಡು ಹೇಗೆ ನಡೆಯುತ್ತಿತ್ತು ಅಂತೀರಿ ! (ಅಕ್ರಮ. ೯೦).

[ದೇ. ॥ ತುಳು. ಪೂಂಜೆ ; ತೆಲು. ಪುಂಜು ; ಕೋತ. ಬೂಜ್ನ್]

ಪುಂಜ$_3$ (ನಾ). ೧. ಗುಂಪು ; ರಾಶಿ ; ಸಮೂಹ : "ನಿಕರಃ . . . ಪುಂಜಃ . . . ಸ್ತೋಮಃ—ಈ ೩೯ ಸಮೂಹಂ" (ಹಲಾಯು. ೦೦೪-೦) ; ತಳಿರ ಮುಗುಳ ಪನಲಶಾನಿಕುಂಜದಿಂ ಪ್ರಸೂನರಜದ ಪುಂಜದಿಂ (ಸಂಪಭಾ. ೦-೫೮ ರಗಳೆ) ; ಈ ಪುಣ್ಯದ ಪುಂಜವನೆನಗೆ ಕೊಟ್ಟೊಡೆ ನಿಮ್ಮ ಬಡತನಂ ತೀರ್ಪುದೆನ್ನ ಮನೋರಥವಪ್ಪುದು (ಸಂಬರ. ೨-೭೪) ; ಭೂಪನಿತೆಯ ಪುಣ್ಯದ ಪುಂಜ ಮಾನುಷಭಾವವ ಪಡೆದುದೆಂಬಂತೆ . . . ಎಸೆದನು ಚಿಕ್ಕ ದೇವರಾಜನು ತೇಜದೊಳು (ಹರಿಬ ೦-೦೦). ೨. ಮಗ್ಗದ ಹಾಸಿನಲ್ಲಿರುವ ರೇಷ್ಮೆಯ ಅಥವಾ ನೂಲಿನ ಲಡಿ, —ಎಪ್ಪತ್ತರಿಂದ ಎಂಬತ್ತು ಎಳೆಗಳ ಸಮೂಹ : 'ಪುಂಜಣಿಗ' ಪರಾ. [ಸಂ.]

ಪುಂಜಗೊಳ್ (ಕ್ರಿ). ಒಟ್ಟಾಗು ; ಒಂದಾಗಿ ಸೇರು ; ಒಗ್ಗೂಡು : ಕಣ್ಗೆ ಮುತ್ತಿಟ್ಟುದಿಕ್ಕೆಲದಲ್ಲಿ ತಾಯಕ್ಕರೆಯ ಸಕ್ಕರೆಯೆ ಪುಂಜಗೊಂಡಂತೆ ಪೋಲ್ ಚಿತ್ರಮಯಧವಳಿಮಪುಳಿನರಾಶಿ (ಶ್ರೀಕಾಪಾ. ೦೫೦-೨೦೯).

[ಪುಂಜ$_3$ + ಕೊಳ್$_1$]

ಪುಂಜಣಿಗ (ನಾ). ರೇಷ್ಮೆಯನ್ನು ಮಾರುವವನು ; ರೇಷ್ಮೆ ವ್ಯಾಪಾರಿ : ಪಿಂಜಾರ ಕರ್ಪಾಸ ಮಾರುವ ಪುಂಜಣಿಗ ರೇಶಿಮೆಯ ಮಾರುವ ರಂಜಿಸಿ ಜರತಾರ ಮಾಡುವ ಢಾಲು ಆಯುಧವ (ಸಂದಿಲೀ. ೯-೦೩).

[ಪುಂಜ$_3$ – < ಪಣಿಗ$_1$]

ಪುಂಜಿ (ನಾ). ಉಂಡೆ ; ಮುದ್ದೆ ; ಪಿಂಡ : ಪದಂಗಾಸಿದ ಪೊನ್ನ ಪುಂಜಿಯ ಪೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ (ಸಂಪಭಾ. ೩-೬೦). [ಸಂ.]

ಪುಂಜಿಕೆ (ನಾ). ೧. ಒಟ್ಟಿಲು ; ರಾಶಿ : ದೆಸೆಗಳ್ ನಿಜಾಂಶುವಿಂ ರಂಜಿಸುತಿರೆ ಪುಂಜಿಸಿದ ಪೊನ್ನ ಪುಂಜಿಕೆಯಿಂದಂ ಕೊಸಗಿನ ಮಾರದುಜುಗಲರಲ್ದೆಸೆವಂತೆಸೆ ದಿರ್ಪುದಲ್ಲಿ ಬಜ್ಜರವಸರು (ಜಗಪಿ. ೯-೦೦೭). ೨. ಗೊಂಚಲು ; ಕುಚ್ಚು : ತ್ರಿದಶಾಂಗನೆ ಜಿನಜನನಿಗೆ ಪದೆಪಿಂ ತಾರಾವತಂಸಮಂ ಭೂಷಿಸೆ ತಪ್ಪದ ನೇಂದುಮಂಡಲದ ಜೊನ್ನದ ಪುಂಜಿಕೆಯಂತಿರೆಸೆದುವೆರಡುಂ ಕೆಲದೊಳ್ (ಶಾಂತೀಶ್ವ. ೦೩-೨೦೬). [ಸಂ. ಪುಂಜಿಕಾ]

ಪುಂಜಿಗೆ, ಹುಂಜಿಕೆ (ನಾ). = ಪುಂಜಿಕೆ ೧ : ದಳ್ಳುರಿಯುಗ್ಗಡಂ ಪೊಗೆಯ ಕತ್ತಲೆ ಬೂದಿಯ ತೋರ್ಕೆವೆಟ್ಟು . . . ತಲೆಯ ಪುಂಜಿಗೆ ಕುಂದವು ತತ್ಪ್ರದೇಶದೊಳ್ (ಕಾವ್ಯಸಾ. ೫೩೦ ಶೂದ್ರಕ) ; ಆಗ್ನೇಯಕ್ಕೆ ಕಲ್ಲ ಪುಂಜಿಗೆ ತೆಂಕಲು ಲಿಂಗದ ಕಲ್ಲು . . . ಪಡುವ ಜಾಲಗಟ್ಟದ ಕೆಜ್ಜೆಯುಂ ಶೀ(ಸೀ)ಮೆ (ಎಇ. XIII, ೦೭೨-೪೨ : 1055). **ಹುಂಜಿಕೆ** : ಅಲ್ಲಿಂ ಮುಂತೆ ಹೆರಹಿನ ಕೋಡಿಯ ಕಲ್ಲ ಹುಂಜಿಕೆಯ ಮೇಲ್ ನಟ್ಟ ಕಲ್ (ಎಇ. XIII, ೩೦-೪೪ : 1204). [< ಸಂ. ಪುಂಜಿಕಾ]

ಪುಂಜಿಸು (ಕ್ರಿ). ೧. ಒಗ್ಗೂಡಿಸು ; ಒಟ್ಟು ; ರಾಶಿ ಹಾಕು : "ಪುಂಜಿಸು—ರಾಶೌ" (ಶಮಭಾ) ; ನಿತ್ಯದಾನಕ್ಕೆಂದು ನಿಯೋಗಿಗಳ್ ತಂದು ಪುಂಜಿಸಿದ ಪಂಚರತ್ನದ ಪೊನ್ನ ರಾಶಿಗಳನರ್ಥಿಜನಕ್ಕೆ ಗೋಸನೆಯಿಟ್ಟು ಕುಡವೇಟ್ದು (ಸಂಪಭಾ. ೦೨-೫೨ ವ) ; ತರವೇಟ್ ಮಾಣಿಕ್ಯಭಂಡಾರದ ಪುಡಿಕೆಗಳಂ ಪುಂಜಿಸವೇಟ್ ಸುವರ್ಣೋತ್ಕರಮಂ (ಕಾವ್ಯಾಪ. ೨೬೪) ; ಬಿಳಿಯ ಮುಗಿಲ್ಗಳ್ ಪಟ್ಟಿಯ ತೊಳೆಯಂ ಪುಂಜಿಸಿದ ಮಾಟ್ಕೆಯಿಂದುಬರದೊಳ್ ತೊಳತೊಳಗುವ ಮಿಂಚಿಂದಂದಿಳೆಯೊಳ್ ಜಲಪ್ರಳಯ ಮಪ್ಪಿನಂ ಮಟ್ಟೆ ಕೊಳ್ಗುಂ (ಅಟ್ಟಮ. ೯-೦೫). ೨. ಒಟ್ಟುಗೂಡಿಸು ; ಸಂಗ್ರಹಿಸು : ಅತ್ಯುತ್ಸವದಿಂದಂ ಮರ್ತ್ಯಭೋಗಂಗಳನನುಭವಿಸಲ್ ನೋಂತರಿಂತೀಗಳಿಂತುಂತವರಂತೇಂ ಪುಣ್ಯಮಂ ಪುಂಜಿಸಿದರೊ ಪರಿದುಂ ಶ್ರೀಮತೀ ವಜ್ರಜಂಘರ್ (ಅದಿಪು. ೪-೬೦). ೩. ಒತ್ತಿ ತುಂಬು ; ತುರಂಕು ; ಗಿಡಿ : ಮಸಿಯಂ ಪುಂಜಿಸಿದಂತುಟಪ್ಪ ತನು ನೀಳಾಂಭೋಧರಂ ದಾಡೆಗಳ್ ಪೊಸಮಿಂಚುಗ್ರವಿಲೋಚನಂ ದಿವಿಜಗೋಪಂ ಕಾರೊಮೇಣ್ ಕಾಳರಕ್ಕಸನೋ ಪೇಟ್ನೆ ಬಂದು ತಾಗೆ ಗದೆಯಂ ಕೊಂಡೆಯ್ದು ಭೀಮಂ . . . ಪೊಯ್ದನಿಳೆಯೊಳ್ ಕಿಮ್ಮೀರನಂ (ಸಂಪಭಾ. ೭-೨೬) ; ಕಂಜಭವಂ ಕರಂ ಕಮಲವೈರಿಗೆ ಕಾಯ್ದು ತದೀಯತೇಜಮಂ ಭಂಜಿಸಲೆಂದು ಕತ್ತಲೆಯನಂಜನದಿಂ ಮಿದಿದೆಯ್ದೆ ಲೋಕದೊಳ್ ಪುಂಜಿಸಿದಂ ತಿರರ್ವಿಸುವ ದುಸ್ತಮದೊಳ್ ಪೊಲಗೆಟ್ಟು ನಿಂದ ದಿಕ್ಕುಂಜರಯುಗ್ಮದಂತೆ ಬಳನುಂ ವಸುದೇವನುಮಿರ್ದರ್ (ಸೇಮಿಪು. ೬-೭೦) ; ಕಂಜಗರ್ಭನು ತಮೋಗುಣವನೀ ಲೋಕದೊಳು ಪುಂಜಿಸಿದನೋ ತಥ್ಯಮೆನಲಂಧಕಾರದಿ ಬ್ರಹ್ಮಾಂಡಲೋಕವೆಸೆಯೆ (ಸೌಂದಪು. ೦೭-೦೭). [ಪುಂಜ$_3$ + – ಇಸು$_3$]

ಪುಂಜೀಕರಣ (ನಾ). ಒಟ್ಟುವಿಕೆ ; ಒಗ್ಗೂಡಿಸುವಿಕೆ ; ರಾಶಿ ಮಾಡುವಿಕೆ : 'ಪುಂಜೀಕರಿಸು' ಪರಾ. [ಸಂ.]

ಪುಂಜೀಕರಿಸು (ಕ್ರಿ). ಒಗ್ಗೂಡಿಸು ; ಶೇಖರಿಸು : ಅಲ್ಲೊಂದು ಇಲ್ಲೊಂದು ಕಡೆ ನೋಡಿ ಮೆಚ್ಚಿ, ಶ್ಲಾಘಿಸಿದ ಅಂಶಗಳನ್ನೆಲ್ಲಾ ಪುಂಜೀಕರಿಸಿ ನಿರ್ಮಿಸಿದ ಸುಖನಿಕೇತನ ಅದು (ಸಂಬರು. ೦೬).

[ಪುಂಜೀಕರಣ + — ಇಸು$_2$]

ಪುಂಜೆ$_1$ 'ಪುಂಚೈ' ನೋ.

ಪುಂಜೆ$_2$ (ನಾ). ಒಂದು ಬಗೆಯ ಮರ : ಪುಂಜೆ (ಪೊಯಿ)—ಇಪ್ಪತ್ತು ಘೂಟಗಿಂತ ಯೆತ್ತರವಾಗುವದಿಲ್ಲ . . . ಕಟ್ಟಿಗೆಸಾಮಾನುಗಳನ್ನು ನುಣುಪು ಮಾಡುವುದಕ್ಕೋಸ್ಕರ ಇದರ ಎಲೆಗಳಿಂದ ತಿಕ್ಕುವರು (ಕಠಾಗ. ೪೩). [?]

ಪುಂಡ (ನಾ). ೧. ತುಂಟ ; ದುಷ್ಟ : ವೇದವೆಂಬುದು ಓದಿನ ಮಾತು ಶಾಸ್ತ್ರವೆಂಬುದು ಸಂತೆಯ ಸುದ್ದಿ ಪುರಾಣವೆಂಬುದು ಪುಂಡರ ಗೋಷ್ಠಿ (ಅವಸಂ. ೦೦೩-೪೬೫) ; ಇವನ ಹಿಡಕೊಂಡು ಹೋಗೆಲೊ ಜೋಗಿ ಇವನಮ್ಮ ಮಾತ ಕೇಳದೆ ಪುಂಡನಾದ (ಪುರಂದ. ೩-೦೯ ಅನುಪಲ್ಲವಿ) ; ಅವನ ಗೆಳೆಯರೆಲ್ಲಾ ಮನೆಮಾರಿನ ಯೋಚನೆ ಬಿಟ್ಟ ಹಳ್ಳಿಯ ಪುಂಡರು (ಶ್ಯಾಗಮ. ೨೯). ೨. ನೀತಿಗೆಟ್ಟವನು ; ನಿಯಮಬಾಹಿರ : (ಕ). (ಗು). ೩. ತುಂಟತನದ ; ಪೋಕರಿಸ್ವಭಾವದ : ಭೀಮಪ್ಪ ತೋಟದ ಕಬಜಾ ತಗೊಳ್ಳುವ ಬಗ್ಗೆ ಪುಂಡ ಜನರನ್ನು ಕೂಡಿಸ ತೊಡಗಿದನು (ಮನಸ. ೬); ದಾರಿಯಲ್ಲಿ ಪುಂಡಜನರ ಹಾವಳಿ (ಪೇಮಂಕ. ೨೮೫).

[ದೇ.ಪ ತುಳು. ಪುಂಡೆ ; ಕೊಡ. ಪುಂಡ. / ಮರಾ. ಪುಂಡ]

ಪುಂಡಗಂದಾಯ 'ಪುಂಡಂಗಂದಾಯ' ನೋ.

ಪುಂಡಗಾತಿ (ನಾ). ಹಾದರಗಿತ್ತಿ ; ಜಾರೆ : (ಕ). [ಪುಂಡ + — ಕಾತಿ$_5$]

ಪುಂಡಗಾರ 'ಪುಂಡುಗಾಱ' ನೋ.

ಪುಂಡಗಾರ್ತಿ (ನಾ). = ಪುಂಡಗಾತಿ : (ಕ).

[ಪುಂಡಗಾರ (<ಪುಂಡುಗಾಱ) + — ತಿ$_1$ (< — ಇತ್ತಿ)]

ಪುಂಡತನ 'ಪುಂಡುತನ' ನೋ.

ಪುಂಡರೀಕ (ನಾ). ೧. ಬಿಳಿಯ ತಾವರೆ ; ಬಿಳಿಯ ಬಣ್ಣದ ಕಮಲ : "ಪುಂಡರೀಕಮೆನಿಕುಂ ಸಿತಾಂಬುಜಂ" (ಪಸ್ತುಕೋ. ೨೫-೨೦). ೨. ಬಿಳಿಯ ಕೊಡೆ ; ಬೆಳ್ಗೊಡೆ : ಕನತ್ಕನಕದಂಡಮಂಡಿತಪುಂಡರೀಕನಿಕರವಾವರಿಸಿ ತಳರ್ದೆತ್ತಲುಂ (ಪೇಮಾಪು. ೯-೦೦೫ ಪ). ೩. ಹುಲಿ ; ವ್ಯಾಘ್ರ : "ವ್ಯಾಘ್ರಃ, ದ್ವೀಪೀ, ಪುಂಡರೀಕಃ . . . ಮೃಗಾರಿಃ—ಈ ೭ ಹುಲಿ" (ಹಲಾಯು. ೩೯-೭೩); ಲುಲಾಯ ಪುಂಡರೀಕಂಗಳಿಗಂ ತೆಕ್ಕದಿರುತಿರ್ಪ ದೀವಸ ಮಿಕ್ಕ ಮೃಗಂಗಳಲಿ ಭಯಮದಿನಿತಿಲ್ಲವನೊಳ್ (ಪಸ್ನಶಾ. ೫-೯೬). ೨, ೩ : ರಿಪುನಗರಂ ಕರಂ ವಿಜನವಾಗಿಯುವರ್ಜ್ಜುನರಾಜಿರಾಜಿತಂ . . . ಚಪಳಭುಜಂಗಭೀಮನಕುಳಾಶ್ರಯಮುದ್ಗತಪುಂಡರೀಕಮಿನ್ತುಪಮೆಗೆ ಚಿತ್ರವಾಯ್ತೆನಿಪುದೀ ವಿಭು ಕಾವಣದಂಡನಾಥನ (ಎಳ. XI, ದಾವಣ. ೪೪-೩೯ ; ಸಂ. 1180). ೪. ಹಣೆಯ ಮೇಲೆ ಇಟ್ಟುಕೊಳ್ಳುವ ಮತೀಯ ಗುರುತು ; ಪುಂಡ್ರ. ೫. ಕಪ್ಪೆ. ೬. ಕಲ್ಪವೃಕ್ಷ. ೧, ೨, ೩, ೬ : ಹರಿಸಂದೋಹವಿರಾಜಿತಂ ವಿವಿಧಪದ್ಮಾಲಂಕೃತಂ ಹಂಸಸಂಚರಣ ಪ್ರಉಡ ಉದಾತ್ತ ವಿಕ್ರಮಗುಣೋದ್ಯತ್ಪುಂಡರೀಕಾಂಕ(ಂ) ಸೌಂದರವಾಗಿರ್ಪುದ ಱಿಂದೆ ಪದ್ಮವನವಂದು ಭಾವಿಸಲ್ ವಿಷ್ಣುಭೂವರರಿರ್ಪ್ಪಾ . ಪುರಮುಂ ಸುರೇಂದ್ರಪುರಮುಂ ವಿದ್ವಿಟ್ಟುರಾನೀಕಮುಂ(ಎಳ. V, ಅರಿಸಿ.೩೯-೬; 1186). ೭. ಆಗ್ನೇಯ ದಿಕ್ಕಿನ ದಿಗ್ಗಜ : "ಐರಾವತಃ, ಪುಂಡರೀಕಃ 'ಕುಮುದಃ' ಸಾರ್ವಭೌಮಃ . . . ಸುಪ್ರತೀಕಃ—ಈ ೮ ಮೂಡಣಂ ಕ್ರಮದಿನಿರ್ದ ದೆಸೆಯಾನೆಗಳ್" (ಹಲಾಯು. ೦೯-೦೦೪) ; ಬೆದಱಿದುದಭ್ರಮೂರಮಣ ನೊಟ್ಟಿಜೆಗೆಟ್ಟುದು ಪುಂಡರೀಕಮಟ್ಟುದು ಕುಮುದಂ . . . ಅದಿರ್ದುದು ಸುಪ್ರತೀಕಮಿರದಾಲಿಸಿ ತತ್ಪಟಹಪ್ರಣಾದಮುಂ (ಪುಸ್ತಪು. ೫-೯); ಇಂದ್ರಾದಿ ದಿಕ್ಕೆಂಟಱಲ್ಲಿ ಕ್ರಮದಿಂದೈರಾವತ ಪುಂಡರೀಕ . . . ಸುಪ್ರತೀಕ ಮೆಂದೆಂಟು ದಿಗ್ಗಜಗಳಾದೊಡೆ . . . ಭೂಮಿಯಂ ವಹಿಸಿರ್ಪವು (ವಿಸೇಕ. ೦೪೯). ೩, ೭ : ಆ ವನಂ . . . ದಾನಧಾರೆಯಂತೆ ಪುಂಡರೀಕಗಂಡಕ ಮಂಡಿತಮುಂ . . . ಎನಿಸಿರ್ದುದು (ಶಾಸಿಕೇ. ೫-೬೪ ಪ). ೮. ಬಾವುಟ ; ಧ್ವಜ. ೯. ಬ್ರಹ್ಮ. ೧೦. ಕಂದುರೆಯ ಕೆನೆತ ; ಹೇಷಾರವ. ೧೧. ಒಂದು ಬಗೆಯ ಸಸ್ಯ. ೧೨. ಹುತ್ತ ; ಪಲ್ಮೀಕ : "ದಿಗ್ಗಜದೊಳು ಮುನೀಂದ್ರನೊಳು ಪುಲಿಯೊಳು ಸಿತಾಬ್ಜದೊಳು ಛತ್ರದೊಳು ಭೇಕದೊಳು ಸಲೆ ಪುಂಡರೀಕಮಕ್ಕು" (ಮಂಗಲಾ. ೦೪೯-೪೦); "ಹುತ್ತ ಹುಲಿ ಕಪ್ಪೆ ಕಮಲಂ ಸತ್ತಿಗೆ ಮುನಿ ವಿಷ್ಣು ಬ್ರಹ್ಮ ಸುರಕುಜ ಸುರಪಂ ಉತ್ತಮ ಕರಿ ಧ್ವಜ ಕಬ್ಬು ತತ್ತೇಜಿಧ್ವನಿ ಪುಂಡರೀಕ ತ್ರಿಪಂಚಂ" (ಶಾಸಾಳಂ. ೬).

[ಸಂ.]

ಪುಂಡರೀಕೋದ್ಭವ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದ ಖಂಡಪರಶುವು ರುದ್ರ ಭೂಮಿಯೊಳಂಡಲೆದು ತಿರುಗುವನು (ಹರಿಸಾ. ೬೨). [ಸಂ.]

ಪುಂಡರ್ಯ (ನಾ). ಒಂದು ಬಗೆಯ ಸಸ್ಯ ಮತ್ತು ಕಣ್ಣಿನ ರೋಗಗಳಿಗೆ ಔಷಧಿಯಾಗಿ ಬಳಸುವ ಅದರ ಗಡ್ಡೆ : "ಪೌಂಡರೀಕಂ, ಪುಂಡರ್ಯಂ— ೨ ಪುಂಡರೀಕವೆಂಬುವ ಗಂಧದ್ರವ್ಯದ ಹೆಸರುಗಳು" (ಸಿದ್ಧಾಂತಿ. ೦೪೦). [ಸಂ.]

ಪುಂಡಾಟ (ನಾ). ಪುಂಡುತನ; ತುಂಟತನ: ಇವನು ಅರಮನೆಯೊಳರಘಳಿಗೆಯಿರದೆ ಸ್ತ್ರೀಬೇಟೆಯೊಳು ಮೆರೆವುಶಿಹ ಪುಂಡಾಟಗಳನು (ಕಂದ್ರಾಪ. ೫೦) ; ಇನ್ನು ಪುಂಡಾಟ ಮಾಡಕೂಡದು (ಕಮಳ. ೦೬೯).

[ಪುಂಡು$_1$ + ಆಟ]

ಪುಂಡಾಟಿಕೆ (ನಾ). ೧. = ಪುಂಡಾಟ: ಅವಳ ಚಿಕ್ಕಂದಿನ ಪುಂಡಾಟಿಕೆ ನೆನೆದರೆ ಬಾಳಿನಲ್ಲಿ ತುಂಬ ಆಸ್ಥೆ ಇರಬೇಕಾದವಳು (ಮೂರುದಾ. ೦೨೦) ; ಇವನ ಪುಂಡಾಟಿಕೆಗೆ ಹೆದರಿಕೊಂಡರೆ ಈ ಊರಲ್ಲಿ ಬದುಕುವುದೇ ಕಷ್ಟ (ಪೇಪಹಂ. ೦೨೨). ೨. ಬಂಡಾಯ ; ದಂಗೆ : ಪಿತೂರಿ ಪುಂಡಾಟಿಕೆಗಳು ತಲೆಯೆತ್ತುವ ಲಕ್ಷಣಗಳು ಕಾಣಬರುತ್ತಿದೆ (ರೂಲೇಪಾ. ೦೯೫).

[ಪುಂಡಾಟ + — ಇಕೆ]

ಪುಂಡಿ, ಪಿಂಡಿ$_2$, ಪೂಂಡಿ, ಹಿಂಡಿ$_2$ (ನಾ). ೧. ಸಾಮಾನ್ಯವಾಗಿ ಹೊಲಗಳಲ್ಲಿ ಬೆಳೆದುಕೊಳ್ಳುವ ಸೆಣಬಿನಂತಹ ಒಂದು ಸಸ್ಯ ; ೫ ಇದರ ಸೊಪ್ಪನ್ನು ತರಕಾರಿಯಾಗಿಯೂ ಇದರ ಕಾಂಡವನ್ನು ನಾರಿಗಾಗಿಯೂ ಬಳಸಲಾಗುತ್ತದೆ : ಲೋಲತರ ಕಿರುಕಸಾಲೆಯ ಪುಂಡಿ ತುಂಬಿ ಬಸಳೆಯ ಭಂಗಿಸೊಪ್ಪುಗಳನು . . . ಬಿಟ್ಟನು ಗುರುವರಂ (ಮುಹಾವಿ. ೦೦-೩೫); ಪುಂಡಿ ಬೆಳೆದ ಭೂಮಿಯಲ್ಲಿ ಗೋದಿಯು ಎಂದಿಗೂ ಬೆಳೆಯಲಿಕ್ಕಿಲ್ಲ (ಮುಂಬಯಿ. ೬-೨೬೦) ; ಕಿವಿಯ ಹತ್ತಿರ ಏನೋ ನಾಲ್ಕಾರು ಕೂದಲು ಪುಂಡಿಯ ನಾರಿನಂತೆ ಸುರುಳಿ ಸುತ್ತಿವೆ (ಕುಂಹಿಂ. ೦೦೦). ೨. ಒಂದು ಬಗೆಯ ಸಸ್ಯ : (ಕ). ೩. ಒಂದು ಬಗೆಯ ಮರ : "ಪೀಲುಃ—ಪುಂಡೀಗಿಡ" (ಸಿದ್ಧಾಂತಿ. ೪೦೯). ಪಿಂಡಿ$_2$: ೨. (ಪ್ರುಕಿಗಿ. ೪೦-೬೦೪). 'ಪಿಂಡಿಸೊಪ್ಪು' ಪರಾ. ಪೂಂಡಿ : ೨. ಅಮಟೆ, ಪೂಂಡಿ (ಪ್ರುಕಿಗಿ. ೭೦-೦೪೬೬) ; ಸೊಪ್ಪುಗಳು : ಅಗಸೆ. . . ಕೊತ್ತಂಬರಿ, ಪೂಂಡಿ (ಪುಂಡ ರೀಕ), ಕೆಂಪು, ನುಗ್ಗೆ, ತುಂಬೆ (ಪಸ್ಮುಪು. ೨೩೭). ಹಿಂಡಿ$_2$: ೧. 'ದೊಡ್ಡಹಿಂಡಿಗಿಡ', 'ಹಿಂಡಿಸೊಪ್ಪು' ಪರಾ.

ಹಿಂಡಿಯ ಸೊಪ್ಪು = ಪುಂಡಿಸೊಪ್ಪಿನಿಂದ ತಯಾರಿಸುವ ಒಂದು ಬಗೆಯ ವ್ಯಂಜನಪದಾರ್ಥ : ಹಾಲು ಮೊಸರು ತುಪ್ಪ ಉದ್ದಿನ ಕಡುಬು ಹಿಂಡಿಯ ಸೊಪ್ಪು . . . ಇವಂ ಮಂತ್ರಸಹಿತಂ ಶಿಶುವಿಂಗೆ ಮೂಱುಸೂಳು ನಿವಾಳಿಸಿ (ಶಾಂಶ. ೦೩೫-೯) ; ಅಪ್ಪ ಕೊಳ್ಳೆಲವೊ

ಅಗ್ರಜ ಕೊಳ್ಳೊ ಹಿಂಡಿಯ ಸೊಪ್ಪು ಕೋ ಸುಲಿವಣ್ಗಳಿವೆ ಕೋ (ಕೋಪಕ. ೦೬-೬೮).

ಪುಂಡಿನಾರು (ನಾ). ಪುಂಡಿಗಿಡದ ಕಾಂಡದಿಂದ ತೆಗೆದ ನಾರು : ನಾಡಿಯೆಂದಡೆ ಪುಂಡಿನಾರಿನಂತಿಪ್ಪುದು (ಕಾರ್ಯೋಪ್ರ. ೩-೨೩-೦೬); ಕೂಡಲೆ ಪುಂಡಿನಾರಿನಂಥ ತಲೆ ರಂತಸೇವಳ ಹಿಂದೆ ಇಣುಕಿತು (ಪುಷರು. ೩೩೮).

[ಪುಂಡಿ + ನಾರು$_3$ (<ನಾರ್)]

ಪುಂಡು$_1$ (ನಾ). ೧. ಪುಂಡತನ ; ತುಂಟಾಟ : ಬೆಕ್ಕಿನುದದಿ ಪೋಗಿ ಮನೆಮನೆ ಪೊಕ್ಕು ಲೂಟಿಯ ಗೈವ ಸಮಯದಿ ತಕ್ಕ ಮಾಡದೆ ನೀವು ಪುಂಡಿಗೆಯಿಕ್ಕಿದಿರಿ ಪಥವ (ಸಂಪ್ರಾವ. ೬) : ಈ ಊರಲ್ಲಿ ಈ ದೊಡ್ಡ ಮನುಷ್ಯರ ಪುಂಡು ಅಡಗಬೇಕು (ಪುಕಳಿ. ೦೮೩). ೨. ಬಂಡಾಯ; ದಂಗೆ : ಅದೇ ಸಮಯದಲ್ಲಿ ಕೊಡಗರು ಯಾವತ್ತೂ ಪುಂಡುಎದ್ದು . . . ಸೀಮೆಯನ್ನು ಕಟ್ಟಿಕೊಂಡು ಇರುತಿರುವಲ್ಲಿ (ರಾಶೇಂದ್ರ. ೨೬); ಕೂಡಲೇ ರಾಯನು ಸೈನ್ಯವನ್ನು ಕಳುಹಿಸಿ ಅವನ ಪುಂಡನ್ನಡಗಿಸಿದನು (ಕೃಪಾಸ. ೦೬). (ಗು). ೩. ಪುಂಡಾಟಿಕೆಯುಳ್ಳ ; ಗೂಂಡಾಗಿರಿಯ ಸ್ವಭಾವದ : ಇಂಥ ಪುಂಡು ಉಪಾಧ್ಯಾಯರನ್ನು ಹತೋಟಿಗೆ ತಂದುಕೊಳ್ಳುವುದು ಹೇಗೆ ? (ರಂಗಳ. ೩೬). [ಪುಂಡ + – ಉ$_4$]

ಪುಂಡು$_2$ 'ಪುಣ್' ನೋ.

ಪುಂಡುಗಂದಾಯ, ಪುಂಡಗಂದಾಯ (ನಾ). ತುಂಟಾಟದಿಂದ ಶಾಂತಿಗೆ ಭಂಗ ತಂದವರ ಊರಿನ ಮೇಲೆ ಸರಕಾರದವರು ಹೇರುವ ಒತ್ತಾಯದ ತೆರಿಗೆ : ಪುಂಡುಗಂದಾಯ ಹೊರಿಸಿ ಕಾಂಗ್ರೆಸ್ಸಿನ ಸಂಪರ್ಕವಿರುವವರನ್ನು ಸಹ ಗತಿಹೀನರಾಗುವಂತೆ ಮಾಡಿಸದಿರಲಾರೆ (ಕುಸುಕಾ. ೦೨೨). **ಪುಂಡಗಂದಾಯ** : ೩೫೦೦೦ ರೂಪಾಯಿ ಪುಂಡಗಂದಾಯ (ಪ್ಯುನಿಟಿವ್ಟ್ಯಾಕ್ಸ್) ಅವರಿಂದ ವಸೂಲ ಮಾಡಲಾಯಿತು (ಕರಪೀ. ೨೩೦). [ಪುಂಡು$_1$ + ಕಂದಾಯ]

ಪುಂಡುಗರಡಿ, ಹುಂಡಗರಡಿ (ನಾ). ೧. ತುಂಟ ಕರಡಿ; ದುಷ್ಟಸ್ವಭಾವದ ಕರಡಿ : ಮೈದೋಱಿಪ್ಪುವು ಪುಂಡುಗರಡಿ ಶೈಲಾಂತರದೊಳ್ (ಸೂಕ್ತಿಸು. ೩-೦೫೦ **ಹುಂಡಗರಡಿ** : ೨. ಸ್ವೇಚ್ಛೆಯಾದ ಕರಡಿ : ನೀಲತನುಗಳ ಮಂಡಗರಡಿಗಳೋಲಗಿಸಿ ಬರೆ ರಾಘವೇಶ್ವರನೋಲಗಕೆ ಜಾಂಬವರು ಬಂದರು (ಉತ್ತಶಾ. ೨೬-೫೫). [ಪುಂಡು$_1$+ಕರಡಿ$_1$]

ಪುಂಡುಗಾರ 'ಪುಂಡುಗಾಱ' ನೋ.

ಪುಂಡುಗಾಱ, ಪುಂಡಗಾರ, ಪುಂಡುಗಾರ (ನಾ). ತುಂಟ; ದುಷ್ಟ : ಪುಂಡುಗಾಱರು ನಮಗಲ್ಲೆಂದು ಸಗ್ಗದ ಪುಂಡರೀಕಾಯತಾಕ್ಷಿಯರ ವಂಡೆಯೆಣಿಸಿ ಕೊಟ್ಟನು ರಣದೊಳು ಕಡಿಖಂಡವಡೆದು ಬಂದವರಿಗೆ (ಕುರಾಸಾಂ. ೦೨-೬೭). **ಪುಂಡಗಾರ** : (ಕಿ). **ಪುಂಡುಗಾರ** : ಪುಂಡುಗಾರನಾದ ಜಯಂತನಂ ಕೂಡಿ ನಲಕೂಬರನು ದೇವವೇಶಿಯರೊಡನೆ ಮನಸ್ಸು ಬಂದಂತೆ ಯೆಲ್ಲಿಗೊ ಪೊರಟುಪೋದರು (ಸೌಗಂಧಿ. ೩೩೨-೨೦); ಪುಂಡುಗಾರನವ ಭಂಡನ ಸುದ್ದಿಯ ಬಿಡುಬಿಡು ಪ್ರಿಯತಮ (ಪಪಣಾ. I,೪೦೬).

[ಪುಂಡು$_1$ + – ಕಾಱ]

ಪುಂಡುತನ, ಪುಂಡತನ (ನಾ). ತುಂಟತನ ; ಗೂಂಡಾಗಿರಿ : ಪರಸತಿಯ ಬೇಟೆಯ ಪುಂಡು[ಪಾಠಾಂ. ಡ]ತನದಲಿ ಹೆಂಡಿರನು ಬಿಟ್ಟಿರ್ಪ ಪೋಟರಿಗೆ . . . ಹೇಳದಿರು ಮಱೆದೀ ಅನುಭವಾಮೃತವ (ಅಪ್ಯುತ. ೨-೨); ಹೆಂಡತಿಗೆ ನೀನಳುಪಿ ಅಳುಪದ ಪುಂಡುತನವನು ತೋಱಿದ್ಯೆ (ಕೃಷ್ಣಾಕಾ. ೨-೨-೬); ಮಾಲೀಕನನ್ನು . . . ಪುಂಡುತನ ಮಾಡುವುದರಿಂದ ರೊಚ್ಚಿಗೆಬ್ಬಿಸಿದ್ದರು (ಅಪುಕ್ಕ. ೪೩). **ಪುಂಡತನ** : ಚಂಡಿತನವೆಂಬ ಹಿಂಡಿ ಇಡಬೇಕು . . . ಪುಂಡತನವೆಂಬೊ ಪಿಂಡಿ ರುಬ್ಬಿಡಬೇಕು (ಪುರಂದ. ೨-೫೫-೨); ಪುಂಡತನವೆಮ್ಮೊಡನೆ ಮಾಡ್ದವಂ ಫಲವನುಣಲಿ (ಕುರಂಗ. ೩-೪೬); ಇದು ಸಾಹುಕಾರ ಮಾಡಿಸುವ ಪುಂಡತನವೆಂದು ರಾಜಮ್ಮನಿಗೆ ತಿಳಿಯುವುದು ತಡವಾಗಲಿಲ್ಲ (ಬೀಮಕಾ. ೨೦೬); ಪುಂಡತನ ಮಾಡಿದವ ಭಂಡತನ ಬಿಟ್ಟಾನೇ ? (ಗಾದೆ). [ಪುಂಡು$_1$ + – ತನ]

ಪುಂಡುಪೋಕರಿ (ನಾ). ನೀತಿನಿಯಮಗಳಿಲ್ಲದವನು : ಪುಂಡುಪೋಕರಿ ಗುಂಟು ಹೆಂಡತಿಮಕ್ಕಳಿಗಿಲ್ಲೀ ಕಾಲ (ಪುರಂದ. ೦-೦೨೦-೦); ನೀನು ಮಾತ್ರ ಪುಂಡುಪೋಕರಿಯಾಗಿ ಸೋದರಿಯೊಬ್ಬಳನ್ನು ಛಲಿಸಲು ಮುಂದಾಗಬೇಕೆ ? (ರಂಗರೋ. ೦೦೯). [ಪುಂಡು$_1$ + ಪೋಕರಿ]

ಪುಂಡೆ (ನಾ). ಪುಂಡಾಟವಾಡುವ ಹೆಣ್ಣು : ಹೆಂಡತಿಯಿಲ್ಲದ ಪುಂಡ ಬಂದು ಅವನಂಗವ ಹೊಯ್ಯಲಾಗಿ ಕಂಡರು ಗ್ರಾಮದ ಪುಂಡೆ[ಪಾಠಾಂ. ಡಿ] ಯರೆಲ್ಲರೂ ಕೂಡಿ (ಮನುಗುಂ. ಳ. ೨೫೩-೨೯). [ಪುಂಡ + – ಎ$_2$]

ಪುಂಡೇಳ್ (ಕ್ರಿ). ದಂಗೆಯೇಳು ; ಬಂಡಾಯ ಹೂಡು : ಮೂಡದಿಕ್ಕಿನೊಳ್ ಶಬರರುಂ ಮತ್ತಂ ಕೆಲಂಬರ್ ತುಂಡುಮನ್ನೆಯರುಮೊಂದಾಗಿ ಪುಂಡೆದ್ದು ದಾಳಿವರಿದಾರಮಂ ಬಗೆಯದೆ ರಾಜ್ಯಮಂ ಬಾಧಿಸುತ್ತು ಮಿರಲ್ (ಕಳನ್ಕ. ೦-೬೨). [ಪುಂಡು$_1$+ಏಳ್$_1$ (<ಏಱ್$_1$)]

ಪುಂಡ್ರ (ನಾ). ೧. ಬಿಳಿಯಪಟ್ಟೆಗಳುಳ್ಳ ಒಂದು ಬಗೆಯ ಕೆಂಪುಬಣ್ಣದ ಕಬ್ಬು : 'ಪುಂಡ್ರೇಕ್ಷು' ಪರಾ. ೨. ಹಣೆಗೆ ಇಟ್ಟುಕೊಳ್ಳುವ ಗಂಧ, ವಿಭೂತಿ, ತಿಲಕ ಮೊದಲಾದ ಲಾಂಛನ : "ತಿಳಕಂ, ತಮಾಳಪತ್ರಂ, ಚಿತ್ರಕಂ, ವಿಶೇಷಕಂ ,ಪುಂಡ್ರಂ, ಲಲಾಟಿಕಾ—ಈ ೬ ಬೊಟ್ಟು" (ಹರಾಯು ೬೯-೩೬೬); ನೊಸಲಲಿ ಅನ್ಯ ಪುಂಡ್ರವ ಪಟ್ಟಿಕೊಂಡವ ಹೊಲೆಯ (ಪಸಾಸು. ೬೦-೩) ; ಮುಖದೊಳ್ ಪುಂಡ್ರಮನಿಟ್ಟು (ಸೌಗಂಧಿ. ೦೯೯-೦೬). ೩. (ಕಪ್ಪು, ಕಂದು ಮೊದಲಾದ ಬಣ್ಣದ) ಕುದುರೆಯ ಮೈ ಮೇಲಿರುವ ಬಿಳಿಯ ಪಟ್ಟೆ : ಕಟಿ ಶಂಖಕರ್ಣಮಸ್ತಕನಿಟಿಲತಟೀಪುಟದೊಳ್ ಶಶಾಂಕದ್ಯುತಿಯಿಂ ಘಟಿಯಿಸಿದ ಪುಂಡ್ರಮೊಳ್ಪಂ ಘಟಿಯಿಸುಗುಂ (ಅಶ್ವಶಾ. ೩-೬). ೪. ಒಂದು ದೇಶದ ಹೆಸರು ; ಇದು ಈಗಿನ ಬಂಗಾಳ, ಬಿಹಾರ ಪ್ರದೇಶ. ೫. ಚಿತ್ರ: "ಜನಪದದೊಳುಂ ತಿಲಕದೊಳಂ ಚಿತ್ರದೊಳಂ ಪುಂಡ್ರಮಕ್ಕು" (ಮಂಗರಾ. ೦೩೨-೫೬). ೬. ಹುಳು. ೭. ತಾವರೆ. ೮. ಬಿಳಿಯ ಕಮಲ : 'ಪುಂಡ್ರಾಂಬುಜ' ಪರಾ. ೯. ಹೊಳೆ ; ನದಿ : (ಕಿ). ೧೦. ಒಡವೆ : (ಕಿ). [ಸಂ.]

ಪುಂಡ್ರಕ (ನಾ). ೧. ಕೆಂಪು ಕಬ್ಬು. ೨. ಹಣೆಯ ಮೇಲಿಟ್ಟುಕೊಳ್ಳುವ ತಿಲಕ ಮೊದಲಾದುವು. ೩. ಪುಂಡ್ರವೆಂಬ ದೇಶ ಹಾಗೂ ಅಲ್ಲಿಯ ಜನ. ೪. ಒಂದು ಬಗೆಯ ಬಳ್ಳಿ : "ಅತಿಮುಕ್ತಃ ಪುಂಡ್ರಕಃ ವಾಸಂತೀ, ಮಾಧವೀ, ಲತಾ—೫ ಕಾಡುಯಿರುವಂತಿಗೆ ಹೆಸರುಗಳು" (ಸಿದ್ಧಾಂತಿ. ೦೨೬); ತವಕ್ಷೀರ, ಪುಂಡ್ರಕ, ಪದ್ಮಕ . . . ಇವಂ ಚೂರ್ಣವಂ ಮಾಡಿ ಹಾಕಿ ಹದದಲ್ಲಿಳುಹಿಕೊಂಡು ಆ ತುಪ್ಪವಂ ಪ್ರತಿದಿನವೂ ಸೇವಿಸೆ ಕ್ಷಯವ್ಯಾಧಿ . . . ಗುಣಮಕ್ಕುಂ (ಸಕಪ್ಯ. ೨೫೦). ೫. = ಪುಂಡ್ರ ೩ : ಆನನಮಲ್ಲದೆ ಧವಳಸ್ಥಾನು ತಾನಾದೊಡಕ್ಕುಮವ ಕಂಠತೆಯಂ ಸ್ಥಾನದೊಳಂಗದೆ ವಿರ(ಮ)ಳಸ್ಥಾನು ಪುಟ್ಟಿದೊಡೆ ಲಲಿತ ಪುಂಡ್ರಕ ನಾಮಂ (ಅಶ್ವಶಾ. ೩-೩). [ಸಂ.]

ಪುಂಡ್ರಲಕ್ಷ್ಮ (ನಾ). ಕುದುರೆಯ ಮೈಮೇಲೆ ಇರುವ ಬಿಳಿಯ ಪಟ್ಟೆಯ ಚಿಹ್ನೆ : ಚಾಪಂ ಶ್ರೀವೃಕ್ಷಂ ಸ್ರುವೆಯೂಪಂ ಸ್ವಸ್ತಿಕಮುದಗ್ರವಜ್ರಮುಮೊಂದಿ: ರೂಪಕದ ಪುಂಡ್ರಲಕ್ಷ್ಮನಿರೂಪಕಮಾ ವಾಜಿ (ಅಶ್ವಶಾ. ೩-೫).

[ಸಂ. ಪುಂಡ್ರಲಕ್ಷ್ಮನ್]

ಪುಂಡ್ರಾಂಬುಜ (ನಾ). ಬಿಳಿಯ ತಾವರೆ : ಶರನ್ನೀರದಸ್ತೋಮಂ ಪೋಬರುತಿರ್ಮದೀಗಳೆನಲುದ್ಯನ್ಮಾನಸಸ್ಥಾನದಿಂ ತಾಮೆಟ್ಟುಂದು ಮರಾಳ ಜಾಲಮೆನಸುಂ ಪೊರ್ದಿತ್ತು ಪುಂಡ್ರಾಂಬುಜೋದ್ದಾಮಶ್ರಿಯ ವಿಳಾಸಮಂ ದ್ವಿಗುಣಿಸುತ್ತಬ್ಜಾಕರತ್ರೇಣಿಯೊಳ್ (ಕುಸುಮಾ. ೬-೪೮). [ಸಂ.]

ಪುಂಡ್ರಿಕೆ (ನಾ). = ಪುಂಡಿ ೧ : ಹೊಲದ ಪುಂಡ್ರಿಕೆ, ಪುಂಡ್ರಿಕೆ, ಗೋಗು, ಪುಂಡಿ (ಪ್ರಾಕಿಗಿ. ೪೩-೬೫೦). [<ಸಂ. ಪುಂಡ್ರಕ?]

ಪುಂಡ್ರೇಕ್ಷು (ನಾ). = ಪುಂಡ್ರ ೧ : ಉಗುವೆಳನೀರಿಂದಂ ಕದಳಿಗಳಾ ಕದಳಿಗಳ ಪಣ್ಣ ರಸದಿಂ ಪುಂಡ್ರೇಕ್ಷುಗಳ್ . . . ಬಳೆಗಂ (ಗಿರಿಕ. ೨-೦೯.) [ಸಂ.]

ಪುಂಡ್ರೇಕ್ಷುಚಾಪ (ನಾ). ಮನ್ಮಥ ; ಕಾಮ : ಪುಂಡ್ರೇಕ್ಷುಚಾಪನ ಮರ್ದಪ್ಪಿ . . . ಮುಂಗುರುಳ್ತಿದ್ದಿ (ನವಮೋ. ೫-೨೫). [ಸಂ.]

ಪುಂಡ್ರೇಕ್ಷುದಂಡ (ನಾ). ಪಟ್ಟೆಕಬ್ಬಿನ ಜಲ್ಲೆ : ಪುಂಡ್ರೇಕ್ಷು[ಶಾಕಾಂ. ರಸದಿಕ್ಷು]ದಂಡದಿ ಪಣ್ಣನಱಸುವರೆ (ಸಂಬರ. ೦೩-೫) ; ಸೋಗೆವೆರಸಿದ ಪುಂಡ್ರೇಕ್ಷುದಂಡಗಳನಮರ್ಚಿ ಬಾಳವೇರ್ಗಳಿಂ ಬಿಗಿದು . . . ಅಳವಡಿಸಿದ ಸುರಯಿಯರಲ ಪರಾಗದ ಪೊಂಜಗಲಿಯ ಮೇಲಣಸುಗೆದಳಿರಲರ್ವಾಸಿ ನೊಳರಸಿವೆರಸಿ ಕುಳ್ಳಿರ್ದು (ರಾಜಶೇ. ೦೦-೩೦ ಪ). [ಸಂ.]

ಪುಂನಪುಂಸಕಲಿಂಗ (ನಾ). [ವ್ಯಾಕ] ಪುಲ್ಲಿಂಗ ಹಾಗೂ ನಪುಂಸಕ ಲಿಂಗ : ಪುಂನಪುಂಸಕಲಿಂಗಕ್ಕೆ—ರವಿ ಮೂಡಿದಂ, ರವಿ ಮೂಡಿದುದು (ಶಮದ. ೬೬ ಪ್ರಯೋ). [ಸಂ.]

ಪುಂನಪ್ಪು (ನಾ). = ಪುಂನಪುಂಸಕಲಿಂಗ : ಪುದಿಗುಮದಂತಕೆ ಪುಲ್ಲಿಂಗದ ಪೋಲ್ ಕಿಱಿದೆಡೆಗಳಲ್ಲಿಯೆಲ್ಲಂ ಸ್ತ್ರೀಲಿಂಗದೊಳಂ ಪುಂನಪ್ಪಿನೊಳಂ ಪುದಿಗುಂ ತಿಳಿ (ಶಮದ. ೦೨೦ ಪ). [ಪುಂ+ನಪ್ಪು]

ಪುಂಬುಚ್ಚ 'ಪೊಂಬುಚ್ಚ' ನೋ.

ಪುಂಭಾವ (ನಾ). ೧. ತಾನು ಪುರುಷನಾಗಿರಬೇಕಾಗಿತ್ತು ಎಂಬ ಭಾವನೆ; ಗಂಡಸಿನ ಮನೋವೃತ್ತಿ : ನಾಂದಮರೆ ಪತ್ತಿದಂಬರದಿಂ ದೆಸೆವರಸಿಯ ನಿತಂಬಬಿಂಬಮನಬಳಾವೃಂದಮದೀಕ್ಷಿಸಿ ಹೃದಯ ದೊಳಂದೇಂ ಪುಂಭಾವಮಂ ಪುದುಂಗೊಳಿಸಿದುದೋ (ಸಂದ್ರಪ್ರ. ೬-೦೩೧). ೨. [ಕಾಮಶಾ] ಪುರುಷಾಯತವೆಂಬ ಸುರತಬಂಧ : ಒರ್ವ ಗುರು ಕುಚೆ ವೃದ್ಧವಿಪ್ರನೊಳ್ ಪುಂಭಾವದಿ ಸುರತದೊಳಿರೆ (ಶ್ಯಾನಸ. ೩೯-೯೬). [ಸಂ.]

ಪುಂವೇದ (ನಾ). [ಜೈನ] ಗಂಡುಜೀವಕ್ಕೆ ಹೆಣ್ಣಿನ ಮೋಹವುಂಟು ಮಾಡುವ ಕರ್ಮ ; ಪ್ರ ಚಾರಿತ್ರಮೋಹನೀಯದ ಭೇದವಾದ ವೇದನೋಕಷಾಯದ ಉದಯದಿಂದ ಕಾಮಭಾವ ಹುಟ್ಟುತ್ತದೆ. ಪುಂವೇದ ಅಥವಾ ಪುರುಷವೇದದ ಉದಯದಿಂದ ಸ್ತ್ರೀಯ ಬಯಕೆಯೂ ಸ್ತ್ರೀವೇದದ ಉದಯದಿಂದ ಪುರುಷನ ಬಯಕೆಯೂ ಉಂಟಾಗುತ್ತದೆ : ಕಿಱಿಕಿಱಿದು ಬೇಗದಿಂ ಕ್ರಮಕ್ರಮದೊಳೆ ನಪುಂಸಕ ವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ . . . ಘಾತಿಸಿ (ಅನಿಪು. ೦೦-೦೯ ಪ) ; ಸಮನಂತರದೊಳ್ ಪುಂವೇದಪೂರ್ವಸತ್ಕರ್ಮಪರಂ ಪರಮೊಱಸಿ ಕಿಡಿಸಿದಂ ಹಾಸ್ಯರತ್ಯರತಿಶೋಕಭಯಜುಗುಪ್ಸೆಗಳಾಱಂ (ಸಂದ್ರಪ್ರ. ೦೯-೬೦). [ಸಂ.]

ಪುಂಶಿಲೆ (ನಾ). [ಶಿಲ್ಪಶಾ] ವಿಗ್ರಹನಿರ್ಮಾಣಕ್ಕಾಗಿ ಆಯ್ದುಕೊಳ್ಳುವ ಕಲ್ಲುಂಗಳಲ್ಲಿ ಒಂದು ಪ್ರಕಾರ ; ಗಟ್ಟಿಕಲ್ಲು : ಶಿಲೆಯಲ್ಲಿ ಪುಂಶಿಲೆ, ಸ್ತ್ರೀಶಿಲೆ, ನಪುಂಸಕಶಿಲೆಯೆಂದು ಮೂರುವಿಧ; ಕಂಚಿನ ತಾಳದ ನಾದ ದಂತೆ ಧ್ವನಿ ಕೊಡುವ ಶಿಲೆಯು 'ಪುಂಶಿಲೆ'ಯೆಂದೂ, ಘಂಟಾನಾದದಂತೆ ಧ್ವನಿತವಾಗುವ ಶಿಲೆಯು 'ಸ್ತ್ರೀಶಿಲೆ'ಯೆಂದೂ, ತಾಳವಿಹೀನವಾದ ಶಿಲೆಯು 'ನಪುಂಸಕಶಿಲೆ' ಯೆಂದೂ ಉಕ್ತಿಯಿದೆ. ಪುರುಷದೇವತಾವಿಗ್ರಹಗಳನ್ನು ಪುಂಶಿಲೆಯಿಂದಲೂ ಸ್ತ್ರೀದೇವತಾವಿಗ್ರಹಗಳನ್ನು ಸ್ತ್ರೀಶಿಲೆಯಿಂದಲೂ ಆಧಾರಪೀಠಾದಿಗಳನ್ನು ನಪುಂಸಕಶಿಲೆಯಿಂದಲೂ ಮಾಡಬೇಕೆ ದು ವಿಧಿಸಿದೆ (ಶಾಕರ. ೬೬). [ಸಂ. ಪುಂಶಿಲಾ]

ಪುಂಶ್ಚಲಿ, ಪುಂಶ್ಚಳಿ (ನಾ). ಹಾದರಗಿತ್ತಿ ; ಜಾರೆ : "ಪುಂಶ್ಚಲಿ ಕುಲಟೆಯಸತಿ ಕುಲಪಾಂಸುಳಿ ಬಂಧಕಿ ಜಾರೆ ಪಾಣ್ಪೆಯಿತ್ವರಿಕೆಯವಳ್" (ಪಸ್ತುಕೋ. ೫೨-೯); ಉಡಿಯಂ ಸಡಿಲಿಸಿಯುಡುವಡೆ ನಡೆ ನೋಟ್ಟಡೆ ತನ್ನ ಕಿವಿಯುಮಂ ತಲೆಯುಮನಂತಡಿಗಡಿಗೆ ತುಱಿಸಿಕೊಳ್ವಡೆ ಪಡಿಮಾತೇಂ ನಿರ್ವಿಚಾರ ಪುಂಶ್ಚಲಿಯಕ್ಕುಂ (ಪುಷ್ಪತಿ. ೬-೯೦); ಭಾವಕಸಖಿ ಸೋಲ್ತ ಕಣ್ಣಱಿದು ಪುಂಶ್ಚಲಿಯಂ ಜಡಿದಳ್ ರಹಸ್ಯದೊಳ್ (ಪುಷ್ಪಪ್ರ. ೫-೩೯). **ಪುಂಶ್ಚಳಿ** : "ಪಾಂಸುಳಾ, ಬಂಧಕೀ, ಸ್ವೈರಿಣೀ, ಅಸತೀ, ಪುಂಶ್ಚಳೀ... ಅಭಿಸಾರಿಕಾ—ಈ ೧೦ ಹಾದರಿಗಿತ್ತಿ" (ಹಲಾಯು. ೬೦-೩೯೨) ; ಪುಂಶ್ಚಳಿ ಯಂತೆ ನೀನೆಲ್ಲಿಗೆ ಪೋಗಿ ಬರ್ವೆ (ಕಾಪುಂಪು. ೯೦೭) ; ಪುಂಶ್ಚಳಿಯರ್ ಬಂದುವಕಾಂತಸೂಚಿತನಿಶಾಂತಾಂತಂಗಳಂ ಪೊದ್ದಿದರ್ (ಕಾಪಶಿ. ೦೦-೨೯). [ಸಂ. ಪುಂಶ್ಚಲೀ]

ಪುಂಶ್ಚಳಿ 'ಪುಂಶ್ಚಲಿ' ನೋ.

ಪುಂಶ್ಚಾಂಕ (ನಾ). ಲಿಂಗರೂಪಿಯಾದವನು : ಪುಂಶ್ಚಾಂಕ ಸದೃಕ್ತ ವಾತ್ಸಲ್ಯ ಭಜಕ ಜನರಿಚ್ಛಾಸುಫಲದಾಯಿ ಸಚ್ಚಿದಾನಂದರೂಪ . . . ಪೊರೆಗೆ (ಗುಕುಣಾ. ೦-೫). [ಸಂ.]

ಪುಂಸ (ನಾ). ೧. ಗಂಡಸು ; ಪುರುಷ : ಹಿಂಸಾನಂದ ಆಸ್ತೇಯಾನಂದ ಮೃಷೆ ಮತ್ತೆ ವಿಷಯಸಂರಕ್ಷಣಾನಂದ ಸಂಶಯವಿಲ್ಲದೆ ನಾಲ್ಕು ರೌದ್ರ ಧ್ಯಾನ ಪುಂಸರೆಯ್ದುವರು ನರಕಕೆ (ಧ್ಯಾದಶಾ. ೬-೬೯) ; ಆಸೆಯನು ನಿಜದಾಸಗೈದಿಹ ಪುಂಸರೆಲ್ಲರು ದಾಸರೆನಿಸುವರು (ಪಗಣಾ. ೫೬). ೨. ಗಂಡಸುತನ ; ಪುರುಷತ್ವ ; ಪುಂಸ್ತ್ವ : ಆ ಹೆಣ್ಣುಜನ್ಮದೊಳು ವಡೆದತಿಶಯವಾಕೆ ಪುಂಸವ ಪಡೆದುದಾಗಿರೆ ನಿಮ್ಮ ಸುತರವರಡಿಯ ಕಾಯ್ವರು (ಸಂಗಾಮ. ೦೩೫-೭೬). [ಸಂ. ಪುಂಸ್]

ಪುಂಸತ್ವ (ನಾ). ಪುರುಷತ್ವ ; ಗಂಡುತನ : ಅವುಗಳು ತಂತಮ್ಮ ಕೆಲಸ ವನ್ನು ಮಾಡದೆ ಹೋದರೆ . . . ಪುಂಸತ್ವ ಇಲ್ಲದಾಗುವುದು (ಶ್ರಾಂಪ್ರ. I, ೯೬೨). [<ಸಂ. ಪುಂಸ್ತ್ವ]

ಪುಂಸವನ (ನಾ). ೧. ಷೋಡಶಸಂಸ್ಕಾರಗಳಲ್ಲಿ ಒಂದು ; ಗರ್ಭಿಣಿ ಯಾದವಳಿಗೆ ಗಂಡುಮಗಂ ಆಗಲೆಂದು ಮಾಡುವ ಒಂದು ಶುಭ ಸಂಸ್ಕಾರ ; ಸೀಮಂತ : ಅವನೀಶ್ವರನಾಗಳ್ ಪುಂಸವನಂ ಮೊದ ಲಾದ ಸಕಲಮಾಂಗಲ್ಯಮಹೋತ್ಸವಮಂ ಮೆಱೆದಂ (ಸಂಗಾಮ. ೩-೦೦೩); ಇನಕುಲಾಧೀಶ್ವರಂ . . . ಪುಂಸವನಸೀಮಂತಮಂ ತಾಂ ಚಾರುಲೋಚನೆಗೆ ವಿಸ್ತರಿಸಿದಂ (ಶೈಮಿಭಾ. ೦೬-೩೬) ; "ಪುಂಸವನ" ವೆಂದರೆ ಗಂಡು ಮಗುವು ಆಗಬೇಕೆಂದು ಮಾಡುವ ಸಂಸ್ಕಾರವು (ಅರ್ಯರ. ೧೨೨). ೨. ಗಂಡಸಿನ ಸ್ನಾನ. ೧. ೨. ಸುವಿದಿತಮಿನಿತುದಿನಂ ಸ್ತ್ರೀಸವನಂ ನಿನಗೆಂದು ಕಾಂತೆ ಪುಂಸವನಂ ಮಾಡುವುದೊಂದರ್ಥಾಂತರದಿಂದ ವನೀಶಂ ಸರಸವಾಡಿ ಕಾಡುಗುಮೆಂದೋ (ಪುಷ್ಪಪ್ರ. ೩-೬೬). [ಸಂ.]

ಪುಂಸ್ಕೋಕಿಲ, ಪುಂಸ್ಕೋಕಿಳ (ನಾ). ಗಂಡುಕೋಗಿಲೆ. ಉನ್ಮದ ಮಧುಕರಝಂಕಾರಮಂ ಕೌಮುದೀಸಂಪದಮಂ ಪುಂಸ್ಕೋಕಿಲಾಲಾಪ ಮನಲೆವೆಲರಂ ಬಾರ್ತೆಗೆಯ್ಯಂ ಮನೋಜಂ (ಸುಲ್ಲಪ್ರ. ೩-೨೯); ತಿಳಿಪಲ್ ವಾಸಂತಿಯಂ ಸಂದಿಸಿ ಪುಗಲೆನೆ ಪುಂಸ್ಕೋಕಿಲಂ . . . ತಿಳಿಪಿದಂ ಪ್ರೇಮ ಕಾಂತಂ ವಸಂತಂ (ಅಸಂಪು. ೬-೬೯). **ಪುಂಸ್ಕೋಕಿಳ** : ಮಧುಕರ ನಿಕ ರಮುಂ ಪುಂಸ್ಕೋಕಿಳಕಳಾಪಮುಂ ರಾಜಕೀರಕದಂಬಕಮುಂ ಮುಂದೆ ನಡೆಯಱಿದೋಲಗಿಸುತ್ತುಂ ಬರೆ (ಶಾಂತಿಪು. ೬-೦೨೬ ಪ). [ಸಂ.]

ಪುಂಸ್ಕೋಕಿಳ 'ಪುಂಸ್ಕೋಕಿಲ' ನೋ.

ಪುಂಸ್ತ್ರೀಲಿಂಗ (ನಾ). [ವ್ಯಾಕ] ಪುಲ್ಲಿಂಗ ಹಾಗೂ ಸ್ತ್ರೀಲಿಂಗ : ಪುಂಸ್ತ್ರೀ ಲಿಂಗಕ್ಕೆ—ಇವರ್ ಪುರುಷರ್, ಇವರ್ ಸ್ತ್ರೀಯರ್ (ಶಮದ. ೬೬ ಪ್ರಯೋ). [ಸಂ.]

ಪುಂಸ್ತ್ವ (ನಾ). ೧. ಪುರುಷತ್ವ ; ಗಂಡುತನ. ೨. ವೀರ್ಯ; ರೇತಸ್ಸು. ೩. [ವ್ಯಾಕ] ಪುಲ್ಲಿಂಗ. [ಸಂ.]

ಪುಕಪುಕ (ನಾ). ಹೆದರಿಕೆಯಿಂದ ಎದೆ ಬಡಿದುಕೊಳ್ಳುವುದನ್ನು ಸೂಚಿಸುವ ಒಂದು ಅನುಕರಣಪದ : ಧೈರ್ಯ ಮಾಡಿ ಹೊರಟಿದ್ದೇನೋ ಸರಿ ; ಆದರೆ ಒಳಗೆ ಪುಕಪುಕ ಎನ್ನುತ್ತಲೇ ಇದೆ (ರೂಢಿ).

ಪುಕಸಟ್ಟೆ 'ಪುಕ್ಕಟೆ' ನೋ.

ಪುಕಸಾಟೆ 'ಪುಕ್ಕಟೆ' ನೋ.

ಪುಕಳಿ 'ಪುಕುಳಿ' ನೋ.

ಪುಕಾರಿಸು (ಕ್ರಿ). ೧. ಕೂಗು ; ಚೀರು ; ಕಿರಿಚು : ಆ ಪದಕಮಂ . . . ಪ್ರೀತಿಯಿಂ ಧರಿಸಲದು ಸಪಾಪಕೃತಿಯಾಗಿ ಪೂತ್ಕರಂಗೈಯಲದಂ ಬಿಸುಟೋಡಿ ಪುಕಾರಿಸಲ್ ಅರಸನರಿದು ಬೆರಗಾಗಿ (ರರ್ಮಾನ್ಯಾ. ೨೨೨-೦೪). ೨. ಸಾರು ; ಕೂಗಿ ಹೇಳು : ದುಡ್ಡಿನ ಚೀಲ ಹೊತ್ತುಕೊಂಡು ಸಾಲ ಬೇಕೆ ಎಂದು ಸವಾಲು ಪುಕಾರಿಸುತ್ತ ತಿರುಗುತ್ತಿದ್ದರೆ ? (ದೀಪಹ. I, ೦೦). [ಪುಕಾರು + — ಇಸ್ಯು]

ಪುಕಾರು, ಪುಕಾರೆ (ನಾ). ೧. ಗದ್ದಲ ; ಗಲಾಟೆ : ಕಿಲ್ಲೆದಾರರುಂ ಕೊತ್ವಾಲರುಂ ನಾಳೆ ಬರುವ ಬಳ್ಳಾರಿ ಲಷ್ಕರ ಸರಬರಾಯಿಯುಂ ತುಸ ಪುಕಾರಿಲ್ಲದಂತೆಸಗ ಪೇಳು (ಅರ್ಜಾನಿ. ೩೦-೩೯). ೨. ಆಕ್ಷೇಪಣೆ ; ತಕರಾರು ; ದೂರು : ಅವರ ಗೈರ್‌ಹಾಜರಿ ಕಾಲದಲ್ಲಿ ಪುಕಾರಿಲ್ಲದೆ ಕೆಲಸ ನಡೆಯಲು ತಮ್ಮ ಬಂಧುಮಿತ್ರರನ್ನು ತಮ್ಮ ಜವಾಬ್ದಾರಿಯ ಮೇಲೆ ನೇಮಿಸಬೇಕು (ಗ್ರಾಮಾಳ. ೬) ; ನಾಳೆಯ ದಿನ ಇಲ್ಲದ ಪುಕಾರುಗಳಿಗೆ ಅವಕಾಶವಾಗುತ್ತೆ (ಮರಳಿ. ೦೦) ; ಪ್ರತಿದಿನವೂ ಇವನ ಮೇಲೆ ಒಂದಲ್ಲ ಒಂದು ಪುಕಾರು ಇದ್ದೇ ಇರುತ್ತದೆ (ಕಲ್ಲಿಕಾ. ೬೪). ೩. ಅಪವಾದ ; ಆಡಿಕೆ : ಇನ್ನೂ ಏನೋ ಇರಬೇಕು, ಇಲ್ಲದಿದ್ದರೆ ಇಷ್ಟು ಪುಕಾರು ಹೇಗೆ ಹುಟ್ಟೀತು ? (ಅನಾಥ. ೩೯) ; ಪುಕಾರು ಇಲ್ಲದಂತೆ ನೋಡಿಕೊಳ್ಳಿ (ಸಾವಿತ್ರಿ. ೫೬). **ಪುಕಾರೆ** : ೧. ಕಳ್ಳರು ಬಂದಂತೆ ಏನಾದರೂ ಪುಕಾರೇ ಯುಂಟಾದ ಕೂಡ್ಲೆ . . . ತಾಕೀದ್ ಮಾಡುವದು ಸಹ ಪೋಲೀಸ್ ಪಟೇಲನ ಕಾರ್ಯವಾಗಿರತಕ್ಕದ್ದು (ಗ್ರಾಮಾಳ. ೪ ಬೀಳಿಕೆ). ೩. ನೀವೇ ಅವರಾಗಿ ಇದ್ದಿದ್ದರೆ ಈ ಏಲು ದೇಶದಲ್ಲೆಲ್ಲ ಪುಕಾರೆ ಎಬ್ಬಿಸುತ್ತಿತ್ತಲ್ಲ ! (ಸಿಷ್ಟಾಮ. ೦೪೭).

ಪುಕಾರಾಗು, ಪುಕಾರು ಆಗು = ಗಲಾಟೆಯಾಗು : ವಿಷಯವು ಬಯಲಾಗಿ ಎಲ್ಲರ ಕಿವಿಗೂ ಬೀಳು : ಈರ ಒಂದು ದಿನ. . . ಹೆಂಡತಿಯನ್ನು ಚೆನ್ನಾಗಿ ಬಡಿದ. ಅದು ಊರಲ್ಲೆಲ್ಲಾ ಪುಕಾರಾಯಿತು (ಶಿವರಾ. ೬೪) ; ಕಳಲೆಯ ನಂಜರಾಜನು ಮಾತ್ರ ಕೊಂಚವೂ ಪುಕಾರಾಗದಂತೆ ಹತ್ತುಸಹಸ್ರ ಸೈನ್ಯವನ್ನು ಸಿದ್ಧಗೊಳಿಸಿಬಿಟ್ಟನು (ಶ್ರೀರಾಯ. ೦೦೬) ; ಪುಕಾರು ಆಗದೆ ಇದ್ದ ಹಾಂಗೆ ಅವನ್ನ ಸುಟ್ಟು ಹಾಕಿ ಬಿಟ್ರಂತೆ ಕಾಡಿನಾಗೆ (ಮಲೆಮ. ೩೦೩). **ಪುಕಾರು ಮಾಡು** = ಗಲಾಟೆ ಮಾಡು ; ಕೂಗೆಬ್ಬಿಸು : ಗರಡಿಮನೆ ಹೊರಸೂರಿನಲ್ಲಿ ಬೆಂಕಿ ಉರಿ ಎದ್ದದ್ದು ಕಂಡು, ಪುಕಾರು ಮಾಡಿದ್ದರಿಂದ, ಬೆಂಕಿ ಹಾಕಿದವನು ಕಾಡೊಳಗೆ ಓಡಿಹೋದ (ರಾಜೇಂದ್ರ. ೨೬೩) ; ಉಣಲಿಕ್ಕೆಂದು ಕಾಡಿದೊಡೆ ಶಂಕೆಯಿಂದಿವರು ರಾಕ್ಷಸರುದಿಸಿದರೆಂದು ಪೋಡಿ ಪೋಗಿ ಪುಕಾರು ಮಾಡುವುದಂ ಜನರೆಲ್ಲಾ ನೆರೆದು ವಿಚಾರಿಸಿ (ರರ್ಮಾನ್ಯಾ. ೭-೧೩೮) ; ಮಾವನೂ ನೀನೂ ಸೇರಿಕೊಂಡು ಏನೇನೊ ಪುಕಾರು ಮಾಡ್ತಿದ್ದೀರಂತೆ ? (ಮಲೆಮ. ೫೩೦). [← ಹಿಂ. ಮರಾ. ಪುಕಾರ್]

ಪುಕಾರೆ 'ಪುಕಾರು' ನೋ.

ಪುಕುಳಿ, ಪುಕಳಿ (ನಾ). ೧. ಸ್ತ್ರೀಯ ಜನನೇಂದ್ರಿಯ ; ಯೋನಿ : (ಕ). ೨. ಮಲದ್ವಾರ : (ಕ). **ಪುಕಳಿ** : (ಕ). 'ಪೂಕು'. 'ಮುಕುಳಿ' ಪರಾ. [ದೇ. ॥ ತುಳು. ಪುಕುಳಿ]

ಪುಕ್ಕ$_1$ (ನಾ). ೧. ಹೇಡಿ ; ಅಂಜುಬುರುಕ : ಪಕ್ಕನೆ ನಕ್ಕರದಂ ಕಂಡಕ್ಕಜ ಮಿಗೆ ಗೊಳ್ಳನೆಲ್ಲರುಂ ಕೈಪೊಯ್ದುಂ ಪುಕ್ಕಮಹ ಜೈನಪತ್ರಿಕೆ ದಕ್ಕಂ ನೀಡಿದುದು ನಗ್ನಕುಲ್ಲಕಂ ಚಿತ್ರಂ (ಹಾಲಾಸ್ಯ. ೪-೦೩-೭೦) ; ನಾನು ಅವರ ಜೊತೆಗೆ ಹೋಗುತ್ತೇನೆ. ಅವರೇನೂ ನಿಮ್ಮಂತೆ ಪುಕ್ಕರಲ್ಲ (ಕೇಪ್ರಶ್ನೆ. ೦೦೮) ; ಅಷ್ಟು ಪುಕ್ಕನಾಗಿದ್ದರೆ ಉಮೇದಿನಿಂದ ಹೊರಟದ್ದು ಯಾಕೆ ನೀನು ? (ಮೂಳಕ್ಷ. ೬೦). (ಗು). ೨. ಅಂಜುವ ; ಹೆದರುವ : ಈ ಜನಸ್ಥಾನವು ನಮ್ಮಂಥ ಪುಕ್ಕಜನರಾದರೂ ನಿರ್ಭೀತಿಯಿಂದ ಸಂಚಾರ ಮಾಡಲಿಕ್ಕೆ ಯೋಗ್ಯವಾಗಿರುತ್ತದೆ (ಉರಾಜ. ೩೦) ; ನಿನ್ನ ಜಾತಿಯೇ ಪುಕ್ಕ ಜಾತಿ (ಬಾಜಿಲ. ೦೦೦). [ಪುಕ್ಕು$_1$ + — ಅ$_7$]

ಪುಕ್ಕ$_2$ 'ಪುಚ್ಚ$_2$' ನೋ.

ಪುಕ್ಕಟೆ, ಪುಕಸಟ್ಟೆ, ಪುಕಸಾಟೆ, ಪುಕ್ಕಟ್ಟೆ, ಪುಕ್ಕಸಾಟೆ, ಪುಗಸಟ್ಟೆ, ಪುಗಸಾಟೆ, ಪುಕ್ಕಟೆ (ಅ). ೧. ಬಿಟ್ಟಿಯಾಗಿ; ಉಚಿತವಾಗಿ; ಧರ್ಮಾರ್ಥವಾಗಿ : ಇಕ್ಕದೆಱೆಯದೆ ಬಿತ್ತಿ ಬೆಳೆಯದೆ ಪುಕ್ಕಟೆಯೆ ಸ್ವರ್ಗಾದಿ ಭೋಗವು ಸಿಕ್ಕಲರಿವುದೆ (ಕುಷ್ಠಾಉ. ೪-೯೬) ; ಪಕ್ಕಕೊಂದುಪವಾಸ ಪುಕ್ಕಟೆ ಶ್ರೀತೊಲಸಿ ಸಿಕ್ಕಿಸಿಕ್ಕಿದಲಿ ಹರಿನಾಮ ಭವಭವದಿ ಸಿಕ್ಕಿ ಸಾಯುವದು (ಸರ್ವಜ್ಞ. ೯೦೪) ; ನಾನು ಔಷಧಿಗೆ ಬಂದೆ . . . ನೀವೂ ಪುಕ್ಕಟೆ ಕೊಡಬೇಕಾಗಿಲ್ಲ (ಕುಸುಸಂ. ೮೦). ೨. ವ್ಯರ್ಥವಾಗಿ ; ಸುಮ್ಮಸುಮ್ಮನೆ ; ನಿಷ್ಪ್ರಯೋಜಕವಾಗಿ : ನೀವು—ನಿಮ್ಮ ಮಗ, ಮನಸಿನಿಂದ ಪ್ರೇಮದಿಂದ ಕಲಿಸುತ್ತೀರಿ, ಇತರರು ಏಕೆ ಪುಕ್ಕಟೆ ತಲೆಯೊಡಕೊಳ್ಳಬೇಕು (ಪ್ರೇಮಾಪ್ರ. ೨೪೭) ; ಇಲ್ಲಿಗೆ ಬಂದು ನಾನು ಪುಕ್ಕಟೆ ಮೆಯ್ಯುತ್ತಿರಲಿಲ್ಲ (ದೀಪಹ. II, ೨೬). **ಪುಕಸಟ್ಟೆ** : ೧. ಪಂಚಾಯ್ತಿಮೆಂಬರುಗಳಿಗೆಲ್ಲ ಪುಕಸಟ್ಟೆ ಕ್ಷೌರ ಮಾಡುತ್ತೇನೆ (ರಂಗಳ. ೬೩). **ಪುಕಸಾಟೆ** : (ಕ). **ಪುಕ್ಕಟ್ಟೆ** : ೧. ಸ್ವಾಮಿ, ಇವರು ಪುಕ್ಕಟ್ಟೆ ಕೆಲಸ ಮಾಡುತ್ತಿದ್ದಾರೆ (ಝಾರಾಜೆ. ೦೬೦) ; ಸಿಪಾಯಿಗಳಾದವರಿಗೆ ಪುಕ್ಕಟ್ಟೆ ಪ್ರಯಾಣದ ಸೌಕರ್ಯವಲ್ಲದೆ ಮತ್ಯಾವ ಸೌಕರ್ಯವನ್ನೂ ಒದಗಿಸುವುದಿಲ್ಲ (ಪ್ರವಾಇ. II, ೪೯೦). **ಪುಕ್ಕಸಾಟೆ** : ೧. ಅದೇನು ಪುಕ್ಕಸಾಟೆ ಬಂದು ಬಿಡುತ್ತೇನು ? (ರೂಢಿ). **ಪುಗಸಟ್ಟೆ** : ೧. ರಾಜಶ್ರೀಮಿಲ್ಲಿನ ಷೇರುಗಳನ್ನು ಪುಗಸಟ್ಟೆ ಕೊಟ್ಟರೂ ಕೊಳ್ಳುವವರಿರಲಿಲ್ಲ (ಸಾವಿಸ. ೨) ; ಸುಮ್ಮನೆ ಪುಗಸಟ್ಟೆ ಅನ್ನ ಹಾಕುತಾ ಇರಲಿಲ್ಲ (ಸಾಹೇಬ್. ೬೩). **ಪುಗಸಾಟೆ** : ೧. ಇನ್ನೊಂದು ಸಾರಿ ಹುಟ್ಟಿ ಬರಬೇಕು ಪುಗಸಾಟೆ (ದುಂಬಿಳ. ೧೦೩). **ಪುಕ್ಕಟೆ** : ೨. ಪುಕ್ಕಟೆ ಕಳೆದೆ ಕಾಲೇಜದಲ್ಲಿ ಸಮಯವನ್ನು (ಸ್ವಪ್ನಪ. ೦೦೯) ; ಬಂಜೆಯಾಗಿ ಬಂದ ಗಿರಿಜಾ ಸಪ್ತ ಅಪತ್ಯದ ಪುಕ್ಕಟೆ ಅಭಿಧಾನದಿಂದ ಖುಷಿಯಾಗುತ್ತಿದ್ದಳು (ದೀಪಹ. II, ೪೪೭).

ಪುಕ್ಕಟೆ ಬಸವ = (ಆಲಂ) ಬಿಟ್ಟಿಯಾಗಿ ಕೆಲಸ ಮಾಡುವ ವ್ಯಕ್ತಿ : ಬಿಟ್ಟಿ ಕೆಲಸವನ್ನು ಮಾಡಿಸಿಕೊಳ್ಳುವವರು ಈ 'ಪುಕ್ಕಟೆಬಸವ' ನಿಗಾಗಿ ಅಲೆದಲೆದು ಹುಡುಕಬೇಕಾಗಿರಲಿಲ್ಲ (ಬೆಳುಮ. ೩).

[← ಮರಾ. ಪುಕಟ್, ಪುಕಾಸಾರೀ./ತುಳು. ಪೊಕ್ಕಡೆ]

ಪುಕ್ಕಟ್ಟೆ 'ಪುಕ್ಕಟೆ' ನೋ.

ಪುಕ್ಕತನ (ನಾ). ಅಂಜುಗುಳಿತನ ; ಪುಕ್ಕಲು : ಅತಿಸೂಕ್ಷ್ಮತನವು ಪುಕ್ಕತನಕ್ಕಿಳಿಸುತ್ತದಲ್ಲವೆ ? (ಗಾಳಿಗು. ೭೮) ; ಮೊದಲಿನ ಪುಕ್ಕತನ ಈಗ ಅವನಲ್ಲಿ ಉಳಿದಿರಲಿಲ್ಲ (ಮಸಪ. ೧೩೮). [ಪುಕ್ಕ$_1$ + — ತನ]

ಪುಕ್ಕಲ (ನಾ). ಹೇಡಿ ; ಪುಕ್ಕ : ಮೊದಲು ಧೈರ್ಯದಿಂದಿದ್ದ ಕೆಲವರು ಈ ಗೋಶಾಟವನ್ನು ಕೇಳಿ ಪುಕ್ಕಲರಾಗುತ್ತಿದ್ದರು (ರಾವಿಜ. ೦೬೩). [ಪುಕ್ಕಲು + — ಅ$_7$]

ಪುಕ್ಕಲತನ 'ಪುಕ್ಕಲುತನ' ನೋ.

ಪುಕ್ಕಲಿ (ನಾ). ಹೆದರುವ ಸ್ವಭಾವದವಳು; ಅಂಜುಬುರುಕಿ : ಅಯ್ಯೋ ಪುಕ್ಕಲಿ, ಕೆನ್ನೆಗೆ ಅರಿಶಿನ ಹಚ್ಚಿಕೊಂಡು ಅಡಿಗೆಮನೇಲಿ ಬಿದ್ದಿರೋಕೆ ಸರಿ ನೀನು (ಕಂಳಣ. ೦೯೯). [ಪುಕ್ಕಲು + — ಇ$_2$]

ಪುಕ್ಕಲು (ನಾ). ೧. ಅಂಜಿಕೆ ; ಭಯ ; ಭೀತಿ : ಭರಮೈಹೆಗ್ಗಡೆಯವರು ಶ್ರೀಮಂತರಾಗಿದ್ದರೂ ಸರಕಾರ, ಪೋಲೀಸು ಎಂದರೆ ಅವರಿಗೆ ತುಂಬ ಪುಕ್ಕಲು (ಸುಲಿಸು. ೩೩೮). (ಗು). ೨. ಅಂಜಿಕೆಯುಳ್ಳ; ಹೆದರುವ : ಅಪರಾಧಿಗಳು ಯಾವಾಗಲೂ ಪುಕ್ಕಲು ಸ್ವಭಾವದವರು (ಶಿಸ್ಸಸೇ. ೦೮೯); ಈ ಪುಕ್ಕಲುಮಾತುಗಳು ನಿನಗೆ ಸಲ್ಲವು (ಶಾಂತಲಾ. ೨೯); ಮೊದಲೇ ಅವಳದ್ದು ಪುಕ್ಕಲು ಜೀವ. ಅದೂ ಆ ಹೊತ್ತಿನಲ್ಲಿ ಬಂದರೆ ಹೆದರುವುದು ಸ್ವಾಭಾವಿಕ (ದೇವಹಂ. ೨೧೩).

[ಪುಕ್ಕು$_1$ + — ಅಲು (< — ಅಲ್$_2$). /ತುಳು. ಪುಕ್ಕಲೆ; ಕೊಡ. ಪುಕ್ಕೀಲೇ]

ಪುಕ್ಕಲುತನ, ಪುಕ್ಕಲತನ (ನಾ). = ಪುಕ್ಕತನ : ಛೆ! ಎಲ್ಲಾ ಪುಕ್ಕಲುತನ (ಸುಖಸೂ. ೧೯೭); ವಾರ್ತಾಪತ್ರಿಕೆಗಳ ಪುಕ್ಕಲುತನವನ್ನೂ ಮುಂದಾಳುಗಳ ಡೋಲಾಯಮಾನವಾದ ನೀತಿಯನ್ನೂ ಕಂಡು, ಸ್ವತಂತ್ರವಾದ ಮತ್ತು ಧೈರ್ಯದಿಂದ ಕೂಡಿದ ಪತ್ರಿಕೆಯ ಅಗತ್ಯದ ವಿಷಯದಲ್ಲಿ ಅವನಿಗೆ ಸಂಶಯ ಉಳಿಯಲಿಲ್ಲ (ದಾದಾಸ. ೩೦). **ಪುಕ್ಕಲತನ** : ಅವಳ ಪುಕ್ಕಲತನಕ್ಕೆ ಚಪ್ಪಾಳೆ ತಟ್ಟಿ ನಗಬೇಕು! (ಸುರುಸ. ೦೦೨); ಅವಳ ತೌರುಮನೆಯವರೂ ಕೂಡ ಅವಳ ಈ ಅತಿಯಾದ ಪುಕ್ಕಲತನಕ್ಕೆ ಹಾಸ್ಯ ಮಾಡಿದ್ದುಂಟು (ಕಾಗಿಕ. ೦೧೧). [ಪುಕ್ಕಲು + — ತನ]

ಪುಕ್ಕಸಾಟೆ 'ಪುಕ್ಕಟೆ' ನೋ.

ಪುಕ್ಕಿ (ನಾ). = ಪುಕ್ಕಲಿ : ಕುಮುದಿನಿಯು ಎಷ್ಟಾದರೂ ಹೆಂಗಸು, ಆಕೆಯು ಪ್ರಸಂಗವಿಶೇಷದಲ್ಲಿ ಪುಕ್ಕಿಯಾದಳೆಂದೂ ಅನ್ನಬಹುದು (ಕುಮುದಿ. ೧೭೧)

[ಪುಕ್ಕ$_1$ + — ಇ$_2$]

ಪುಕ್ಕು$_1$ (ನಾ). ಅಂಜಿಕೆ ; ಹೆದರಿಕೆ ; ಭಯ : "ಭೀರುತ್ವದೊಳ್ ಯೋನಿಯೊಳ್ ಪುಕ್ಕು" (ಶಬ್ದಮಂ. ೭೯); ಇನ್ನು ತಾನೊಬ್ಬಳೇ ಹೋಗಬೇಕು. ಕೆಮ್ಮಣ್ಣು ಕಳಿಯುವವರೆಗೆ ಮಾತ್ರ ಸ್ವಲ್ಪ ಪುಕ್ಕು (ಹೊಸಕ್ಷ. ೪೯); ಜನ ರಸಿರೆಂದೆನಿಸಿದರೂ ಅವರಲ್ಲಿ ಬೇಗನೆ ಪುಕ್ಕು, ಹೇಡಿತನಗಳು ಮೆಲ್ಲನೆ ಸೇರಿಕೊಳ್ಳುವುವು (ಯಕ್ಷಪ್ರ. ೩೧).

ಪುಕ್ಕಾಗು = ಹೆದರು ; ಅಂಜು : ಬ್ರಾಹ್ಮಣರೆಲ್ಲ ಅದಕ್ಕೆ ಪುಕ್ಕಾಗಿ . . . ನಾರಣಪ್ಪನ ಮನೆಯೆದುರು ಬಂದು ನಿಂತು ತೆರೆದ ಹೆಬ್ಬಾಗಿಲನ್ನು ನೋಡಿ ಭಯಗ್ರಸ್ತರಾದರು (ಸಂಸ್ಕಾರ. ೫೬).

[ದೇ.॥ ತುಳು. ಪುಕ್ಕು, ಪುಕ್ಕ್; ಪರ್ಜಿ. ಪುರ್ಕಿ]

ಪುಕ್ಕು$_2$ 'ಪೂಕು' ನೋ.

ಪುಕ್ಕೊಳ್ಳಿ (ನಾ). ಒಂದು ಬಗೆಯ ಭೂಮಿ : ಸ್ವಸ್ತಿಶ್ರೀವನಿತಾಲಯರ ಆಬ್ದರಾನಾರದಿಗೆ ಕಕ್ಕಿವಳ್ಳಿಯೋನ್ ಪುಕ್ಕೊಳ್ಳಿ ಕೊಟ್ಟು ಸರ್ವ್ವಪರಿಹಾರಮ್ ಕೊಮ್ಬರ್ (ಎಕ. VI, ಮೂಡಗೆ. ೨೬-೪; ಸು. ೪೫೦ ?). [?]

ಪುಗಡಿ 'ಪುಗಡಿ' ನೋ.

ಪುಗರಿ (ನಾ). (?) : ಈಶಾನಂಗೆ ಸೀಮೆ ನೆಡುಮೊಜಡಿಯಾ ಪುಣುಸೆ ಪುಗರಿಯಾ ಎಡೆಯೆ ಬೀಟ್ಟಿನ್ನ ಪಳ್ಳಮೆ (ಎಕ. IX (೪), ಬೆಂಗಳೂ. ೧೫೧-೪೯; ೪೭೪). [?]

ಪುಗಲ್ 'ಪುಗಿಲ್$_2$' ನೋ.

ಪುಗಸಟ್ಟೆ 'ಪುಕ್ಕಟೆ' ನೋ.

ಪುಗಸಾಟೆ 'ಪುಕ್ಕಟೆ' ನೋ.

ಪುಗಿಯಿಸು 'ಪೊಗಿಸು' ನೋ.

ಪುಗಿಲ್$_1$, ಪುಗಿಲು$_1$, ಹುಗಲು, ಹುಗಿಲು, ಹುಗುಲು, ಹೊಗುಳು (ನಾ). ೧. ಪ್ರವೇಶ : ರಾಜಪುರುಷರ್ಗೆ ಪುಗಿಲಿಲ್ಲ (ಇಆ. X, ೧೬೭-೩ : 7ನೆಯ ಶತ) ; ರಸಭಾವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ. . . ಏನೆ ಪೊಸಯಿಸಿದಳಾಕೆ ನಾಚ್ಯಾಗಮಮಂ (ಆದಿಪು. ೯-೨೩); ರಸಭಾವದ ಕಾಟ್ಟುರಮೆನೆ ಪೊಸದೆಸೆಯ[ಂ]ಪೊಕ್ಕ ಪುಗಿಲಿದೆನೆ ಚಿತ್ರಮಿವಂ ಪೊಸಯಿಸಿ ನರ್ತಿಸಿದಳ್ (ವರ್ಧಮಾ. ೧೦-೪೯) ; ಪುದಿದ ನೆತ್ತರ ಕೆಂಪಾಗಸದೊಳ್ ತೋಱುವುದಿನ್ನುಂ ಕಿಸುಸಂಜೆಯ ನೆವದೆ ದಿನದ ರಾತ್ರಿಯ ಪುಗಿಲೊಳ್ (ಜಗದಿ. ೬-೪೯). ೨. ಬಾಗಿಲು ; ಪ್ರವೇಶದ್ವಾರ : ಆ ವ್ಯೂಹದ್ವಾರದೊಳ್ ಗುಹೆಯ ಪುಗಿಲೊಳ್ ಮಹೋಗ್ರಜರತ್ಸಿಂಹಮಿರ್ಪಂತಿರ್ದ ಭಾರದ್ವಾಜನಾಜಿವೀರನಭಿಮನ್ಯುಕುಮಾರನನೆಚ್ಚರವುಗಂಡಾಗಳ್ (ನೇಮಿಪು. ೦೨-೩೯ ಪ). ೩. ಆರಂಭ ; ಉಪಕ್ರಮ ; ಪ್ರಾರಂಭ : ಯಾತ್ರೆಗವನೀತಲಪತಿಯಂ ಪ್ರೇರಿಸಿತ್ತು ಪುಗಿಲೊಳ್ ಶರದಂ (ಶಾಂತಿಪು. ೧೧-೦೪೦); ಪೋದುದು ಸುಣ್ಣನಿ ನವಿಲ್ಗೆಂ ಶರದದ ಪುಗಿಲೋಳ್ (ಶಮರ. ೨೪೨ ಪ್ರಯೋ); ಹೇಮಳಂಬಿಸಂವತ್ಸರ(ದೊಳ್)ದಾ ಪುಗಿಲೊಳ್ ಮಟ್ಟ ಕೊಳ್ಗುಂ (ಅಬ್ಬಿಮ. ೭-೦೪). ೪. ಮುಂಭಾಗ ; ಮುಂದೆಸೆ : ಪುಗಿಲ ಪುಲ್ಲೆಯ ಮೊದಲುರಮುಮಂ ಪೆಱಗಣ ಪುಲ್ಲೆಯ ನಡುವುಮನಯ್ದಱೊಳ್ ಮೂಱುಮಂ ಮೂಱೊಳೆರಡುಮನೆರಡಱೊಳೊಂದುಮನೆಚ್ಚು ಬಿಲ್ಲ ಬಲ್ಮೆಯಂ ಮೆಱೆದು (ಸಂಸರಾ. ೩-೪೭ ಪ). ೫. ಸಂದರ್ಭ ; ಸಮಯ ; ಹೊತ್ತು : ನಡುವಗಲ ಪುಗಿಲ ಬಿಸಿಲೊಳ್ ಬಿಡೆ ನಾಲಗೆಗಿಟ್ಟು ತೇಂಕಿ ತನ್ನಯ ನೆಟಲಂ ಕಡುಗಪ್ಪಲೆಂದು ಪೊರಳಲ್ಕೊಡರಿಸಿ ಮೆಯ್ಯಿಕ್ಕಲಿರ್ದ ವನ್ಯಲುಲಾಯಂ (ಪುಷ್ಪಪು. ೯-೭೭); ಇಂದಿರೆ ಪದ್ಮಮಂದಿರದೊಳಿರ್ದು ಮಹಾಪ್ರಣಯಪ್ರಕೋಪದಿಂದೊಂದಿರುಳಿಕ್ಕೆ ಮುಚ್ಚಳವನಾ ಪುಗಿಲೊಳ್ ತೆಱಪಾಗೆ ಸೂಟ್ಗೆ ಕೃಷ್ಣಂ ದಯೆಯಿಂದೆ ಬಂದು ಬಿಗಿಯಪ್ಪೆ ಧರಾಂಗನೆಯಂ ತದಂಗಕಾರ್ಷ್ಣ್ಯಂ ದಿಟದಿಂ ಕವಲ್ತುದೆನೆ ಪರ್ವಿದುದುರ್ವಿಯ ಚಿತ್ತಮಂ ತಮಂ (ದಶಕು. ೩-೩೯). ೬. ಖಡ್ಗಯುದ್ಧದ ಒಂದು ವರಸೆ : ರೂಪುಗೊಂಡುದೆನೆ ಚಾರಿ ಪುಗಿಲ್ ನೆಲೆ ನೋರ್ಪು ದಂಡೆ ಸೂಟು ನಿಱಿಸು ನಿಘಾತಮಾಂಕೆ ಬಗೆ ಬಗ್ಗಣೆ ವಂಚನೆ ಬಂಧಮೆಂಬಿವಂ ಮೆಱೆ ಪೋವಜರ್ಕಳೇಂ ಕಲಿಸುತಿರ್ಪರೊ ಚಟ್ಟರನಟ್ಟಿವಟ್ಟರಂ (ಪುಷ್ಪಪು. ೨-೬೦). **ಪುಗಿಲು$_1$** : ೨. ಮತ್ತೊಂದಿನಂ ಪುಗಿಲಿನೊಳೆ ಕುಳಿತು ಧ್ಯಾನಾರೂಢನಾಗಿ . . . ಪ್ರಾಣ ನಿರ್ವಯಲಾಯಿತು (ಪ್ರಭುಪು. ೭-೦೬೮). ೭. ಆಶ್ರಯ ; ನೆಲೆ : ವಾರಣಾಸಿಗೆಯು ಮಿಗಿಲಾದ ಪಂಪಾಪುರಂ ಮಾರಾರಿಗಂತು ಪುಗಿಲಾದ ಪಂಪಾಪುರಂ (ಶರಸ. ೩೨೦-೯). ೮. ಕಾಂತಿ ; ಶೋಭೆ : ನೈದಿಲ ಸುಮಾಲಂಕೃತದಿ ಪುಗಿಲಿಂದೆ ಚಿತ್ರವರ್ಣದ ವಿಷ್ಟರಾಗ್ರಹದೊಳಗಿಹಂ (ಪ್ರಭುಪು. ೦-೪೦). 'ಪುಗಿಲುವೆಱು' ಪರಾ. **ಹುಗಲು** : ೯. ರಂಧ್ರ ; ತೂತು ; ಕಂಡಿ : ಹಸಿಯ ಜಾಲಿಯ ಕಟ್ಟಿಗೆಗಳನ್ನಾಗಲಿ ಬಸರಿಯ ಕಟ್ಟಿಗೆಗಳನ್ನಾಗಲಿ ತಂದು ಅವುಗಳಿಗೆ ಹುಗಲನ್ನು ಹೊಡೆದು (ಕೃಷಿಪ್ರ. ೪೦). **ಹುಗಿಲು** : ೭. ನಿಗಳದೊಳು ಸಿಕ್ಕಿದಗೆ ಕೊಳನ ಹುಗಿಲಿನೊಳು ಹೊಕ್ಕವಗೆ (ಸ್ವರೂಪಾ. ೩-೪); ಭಾಗವತಾಭಿಮಾನದ ಹುಗಿಲು ಪರಮಾನಂದರಸ ವಿಶ್ರಮದ ತನಿಮುಗಿಲು . . . ತಾನೆನಲೆಸವ ವೈಕುಂಠವನು ನೆಱೆ ಕಂಡ (ಏಶಾಗ. ೧೦-೩೩-೦೬). ೯. ಹೊಗಿಸಿದರು ಕಾಡೆಮ್ಮೆ . . . ದೊಡ್ಡೆಗಳ ವಿಗಡರಕ್ಕಸ ಭಟನ ಮೂಗಿನ ಹುಗಿಲಿನಲಿ (ಕೊರರಾ. ೬-೨೬-೩೮) ; ಕಾಮ್ಯಾರ್ಥವೆಂಬೆರಡು ನೊಗನ ಹುಗಿಲಾದವೈ (ವೀಶ್ಯಪು. ೨-೦೦-೦೦). ೧೦. ಸೀಳಿರುವ ಸ್ಥಿತಿ ; ಬಿರುಕು ; ಹೋಳು : 'ಹುಗಿಲುಗಳೆ' ಪರಾ. **ಹುಗುಲು** : ೯. ಹಸಿಯ ಬಸರೀಕಟ್ಟಿಗೆಗಳಿಗೆ ದೊಡ್ಡ ಹುಗುಲು ಹೊಡೆದು ಹಾಗು ಹಿಂದೆ ಮುಂದೆ ಗೂಟಗಳನ್ನು ಹೊಡೆದು (ಕೃಷಿಪ್ರ. ೦೦೬); [ಹಲಗೆ, ಮೊ.ಗಳ . . . ಬೆಣೆ, ಮೊ.ನ್ನು ಕೂರಿಸುವುದಕ್ಕಾಗಿ ಒಂದು ಚೌಕಟ್ಟಿನಲ್ಲಿ ಮಾಡಿರುವ] ವೆಜ್ಜ, ಉಗಿಲು, ಹುಗುಲು (Mortise. ೩೦೪೦). **ಹೊಗುಳು** : ೯. ತೋಡಿಗೆ ಹಾಕಿದ ಕಟ್ಟೆಯಲ್ಲಿ ಹೊಗುಳು ತಲೆದೋರಿದಾಗ, ಚಿಮ್ಮಿ ಹಾರುವ ಅವಿರತಜಲಧಾರೆಯಂತೆ, ದುರುಳರ ಸಮೂಹ ನೆಲ್ಲಕ್ಕಿ ಬಾಡೆಯೊಳಗೆ ನುಗ್ಗಿತು (ಹುಂಹಾ. ೬೦).

[ಪುಗು (< ಪೊಗು) + ಇಲ್$_2$. /ತಮಿ. ಪುಕ್ಕಿಲ್, ಪುಕಲ್]

ಪುಗಿಲ್$_2$, ಪುಗಲ್ (ನಾ). ೧. ಧ್ವನಿ ; ಸದ್ದು : 'ಪುಗಿಲ್ಗರೆ' ಪರಾ. ೨. ಕೋಗಿಲೆಯ ಧ್ವನಿ : "ಕುಕಿಲ್ತುದೆಂದುಂ ಪುಗಿಲ್ ಪುಗಿಲೆಂದುಂ ಕೋಕಿಲಾಲಾಪಂ" (ಕಪಾ. ೫೫-೨೦೬) ; ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ . . . ನೋಡಿ (ಶಂಪಭಾ. ೦-೦೦೫ ಪ) ; ಪುಗಿಲ್ ಪುಗಿಲೆಂಬ ಪಿಕಸ್ವನಂಗಳಂ ಮನಸಿಜನೊಲ್ದು ಕೇಳ್ದು (ರಾಜಶೇ. ೯-೭೪). **ಪುಗಲ್**: ೨. ಪೋ ಪು[ಗ][ಪಾಠಾಂ. ಗಿ]ಲ್ ಪು[ಗ]ಲೆನುತಿರ್ಪ ಪಕ್ಕಿ ಮನಮಂ ಕವರುತ್ತಿರೆ (ಶಂಪಭಾ. ೫-೩೫) ; ಭೋರ್ಗರೆದೆತ್ತಂ ಪುಗಲೆಂಬ ಕೋಕಿಲೆ . . . ಸುಸ್ವರದಿಂದೋದುವ ಕೀರಮಾರ ಬಗೆಗಂ ಸಮ್ಮೋಹಮಂ ಮಾಡವೇ (ಸುಳುಮಾ. ೦-೭೩); ಬನದಲ್ಲಿ ಪುಗಲ್ ಪುಗಲೆಂಬ ಗಂಡುಗೋಗಿಲೆ (ಶಪುರ. ೨೩೯ ಪ್ರಯೋ). [ದೇ.॥ ತಮಿ. ಪುಕಲ್ ; ಮಲ. ಪುಕಲು = ಹೇಳು]

ಪುಗಿಲ ? (ನಾ). (?) : ಪುಗಿಲಂ ಕ್ರೀಡನಶೀಲನಕ್ಕರಿಗನಾದಂ ಪಲ್ಲವ ಗ್ರಾಹಿ ವಾಸುಗಿ ನಮ್ಮಾದುದನಾಗಲುಂ ನಮೆಯಲುಂ ಮೆಯ್ದರ್ಕುಮೇ ತಾರನೆಂಬೆ ಗಡಾ (ಕಾಪ್ಯಾಪ. ೦೩೯). [?]

ಪುಗಿಲು$_1$ 'ಪುಗಿಲ್$_1$' ನೋ.

ಪುಗಿಲು$_2$ (ನಾ). (?) : ಪೆನನಿರಕ್ಕಂ ಪುಗಿಲುಮದಱ ಪವಣಂ (ಪಾ. ೦೯೪೭, ಪಾಪಗಲ್. ೨೨೯-೨೦ ; ?). [?]

ಪುಗಿಲುವೆಱು (ಕ್ರಿ). ಶೋಭಿಸು ; ಹೆಸರಾಗು ; ಪ್ರಸಿದ್ಧವಾಗು : ಅಗುಳುತಿರೆ ಕಾಮಾಟದವರುಮವರೊತ್ತಿನೊಳು ಪುಗಿಲುವೆತ್ತತಿಮಂತ್ರ ವಾದಿಗಳು ಮಂತ್ರಿಸಲುವಗಿದವರಿಗೆಯು ಮಹಾಭೂತ ಪೊಯ್ಯಲು (ಪ್ರಶುಪು. ೬-೨೫). [ಪುಗಿಲು$_1$ (< ಪುಗಿಲ್$_1$) + ಪೆಱು$_1$]

ಪುಗಿಲ್ಗರೆ (ಕ್ರಿ). ಧ್ವನಿ ಮಾಡು; ಸದ್ದು ಮಾಡು : ಮೆಯ್ಯ ಮಸಿ ಕೊರಲ ಬಕ್ಕಳೆ ಪೊಯ್ಯೆ ಪುಗಿಲ್ಗರೆವ[ಪಾಠಾಂ. ಕನಲ್ಗರೆವ, ಘರಿಲ್ಗರೆವ]ಕೆಯ್ಯ ಕಂಕರಿಕೆ ಕರಂ ರಯ್ಯಂ (ಕಾಪ್ಯಾಪ. ೩೦೯). [ಪುಗಿಲ್$_2$ + ಕರೆ$_1$]

ಪುಗಿಲ್ವಟ್ಟೆ (ನಾ). ಪ್ರವೇಶದ್ವಾರ ; ಕಂಡಿ : ಬಲಸಗ್ಗಂ ಗವಿಸಂದಿ ಡೋಣಿ ಪರಿಚಾರೇರುಂ ಪುಗಿಲ್ವಟ್ಟೆ ಮೇಖಳೆ ಶಾಳ್ಪಾಸಱ^2 ಗಂಡಶೈಲಮಡಕಿಲ್ಕೂಟಂ ಹರಲ್ಕಟ್ಟು . . . ಅಜಸ್ರಂ ರಯ್ಯಮಾ ಬೆಟ್ಟದೊಳ್ (ಸೂಕ್ತಿಸು. ೩-೨). [ಪುಗಿಲ್$_1$ + ಬಟ್ಟೆ$_1$]

ಪುಗಿಲ್ವಿಡು (ಕ್ರಿ). ಎಡೆ ಬಿಡು ; ಅವಕಾಶ ಕೊಡು : ಸಿಡಿಲ್ದನಿಪೊಯ್ಲಿನಿಂ ಪುಗಿ[ಪಾಠಾಂ. ಪೊಯ್ಲನಿಂಪುನಿ]ಲ್ವಿಡದೊಡೆದತ್ತು ತಟ್ಟ ಘನಮಂಡಲ ಮೆಂದೆನೆ ವಾರಿಧಾರೆಗಳ್ . . . ಸುರಿಯುತ್ತುಮಿರ್ದುದು (ಕಾಸುಮಾ. ೬-೨೭). [ಪುಗಿಲ್$_1$ + ಬಿಡು$_1$]

ಪುಗಿಸು 'ಪೊಗಿಸು' ನೋ.

ಪುಗು 'ಪೊಗು' ನೋ.

ಪುಗುಡಿ 'ಪುಗಡಿ' ನೋ.

ಪುಗುತರ್ 'ಪೊಗುತರ್' ನೋ.

ಪುಗುತೆ 'ಪೊಗುತೆ' ನೋ.

ಪುಗುದೆಸೆ, ಹೊಗದೆಸೆ (ನಾ). ಹೋಗಬೇಕಾದ ದಿಕ್ಕು ; ಪಾರಾಗುವ ಹಾದಿ : ಮುಱಿದುದೆಮ್ಮಯ ಸೇನೆ ಸಮರದೊಳ್ ಪೊಕ್ಕು ಮೈಗುಱುಹ ಕಾಣಿಸಿಕೊಂಬರಂ ಕಾಣೆವಗ್ನಿಜನ ಬಱಿದೆ ಕರೆತಂದೆವಕಟಕಟ ಪುಗುದೆಸೆ ಯಾವುದೆವುಗೆ (ಶಪು. ೩೯-೯). **ಹೊಗದೆಸೆ** : ಜಗವೆಲ್ಲವನೂರ ಮಾಡಿ ಊರೆಲ್ಲವ ಮನೆಯ ಮಾಡಿ ಹೊ[ಪಾಠಾಂ. ಹೋ]ಗದೆಸೆಯಿಲ್ಲದ ಸುಳುಹು ನೋಡಾ (ಅಪಶಂ ೨೬೯-೧೩೦೦) ; ಹೊಗದೆಸೆಯನು ಕಾಣದಬ್ದುಲ್ಲಖಾನ ಬಹುಬಗೆಯಲಿ ಕಂಗೆಟ್ಟಾಗ ಮಿಗೆ ಹುಲಿಯೂರ ಬಳಿಯ ಬಿಟ್ಟ ಪಾಳೆಯ ದೆಗೆದೋಡಿದನು (ಕಂಪಾ. ೦೬-೫೭). [ಪುಗು (< ಪೊಗು) + ದೆಸೆ$_2$]

ಪುಗುಳ್$_1$ (ಕ್ರಿ). ಗುಳ್ಳೆಯೇಳು ; ಬೊಕ್ಕೆಯಾಗು : ಓರೊರ್ಮೆ ಕುಳಿರ್ವ ಕಪ್ಪುರದ ಪಚ್ಚಮನಮರ್ಚಿ ಮನ್ಮಥಜ್ವಲನಪಾತದಿಂ ಮೆಯ್ ಮಿಗೆ ಪುಗುಳ್ತುದೆಂಬ ಸಂಕೆಯಂ ಕೆಳದಿಯರ್ಗೆ ಬಳಯಿಸುವಳ್ (ಪರ್ಯಪು. ೯-೫೬ ಪ) ; ಮುಳಿದುಟಿದೋಪರಳ್ಳೆರ್ದೆ ಪುಗುಳ್ತುರಿವಂತೆ ಮುಗುಳ್ತು ಸಂದ ನಾಣೊಳಗು ಸಡಿಲ್ವಿನಂ ಪೊರೆ ಸಡಿಲ್ದು ಕದಂಪು ಬೆಳರ್ತು ಬಾಡಿ ಪೊಟ್ಟಳಿಸಿ ಬೆಳರ್ತು ಮುದ್ರಿಸಿದ ಬಾಯ್ಗಳಲರ್ವಿರಿವಂತು ಕಂಪು ಕೈಕೊಳೆ ಬಿರಿದತ್ತು ತುಂಬಿ ನೆರೆವಲ್ಲಿಗೆ ಮಲ್ಲಿಗೆ ಸಂತೆಯಂತೆವೊಲ್ (ಅಪಂಪು. ೬-೯೯). [ದೇ.॥ ತಮಿ. ಮಲ. ಪೊಕ್ಕುಳಿ]

ಪುಗುಳ್$_2$, ಪುಗುಳು, ಪೊಕ್ಳ, ಹುಗುಳು (ನಾ). ಉಷ್ಣತೆಯಿಂದ ಅಥವಾ ಘರ್ಷಣೆಯಿಂದ ಮೈಮೇಲೆ ಹಾಗೂ ಬಾಯಲ್ಲಿ ಏಳುವ ಗುಳ್ಳೆ,—ಬೊಕ್ಕೆ : ಪಿರಿದಪ್ಪ ನಂಜುಪುಗುಳುರ್ಬಿದವಂಗಸಿತಾಹಿದಂಶ ಮಾದುದು ದಿಟಂ (ಕಾದಂಪು. ೬೬೩) ; ನಡೆದಡಿಗಳ್ ಪುಗುಳ್ನೆಗೆದುವುಗ್ಗಡ ಮಾಯ್ತು ನಿದಾಘಂ (ಪೀಲಾಪ. ೧-೯೭) ; ತಂಬುಲದ ಚೂರ್ಣದಧಿಕತೆಯಿಂ ಬಾಯ್ ನೆಱ^2 ಬೆಂದು ಪುಗುಳ್ಗಳಾದೊಡೆ . . . ತೈಲಮೊಂದಱಿಂದಂ ಕಿಡುಗುಂ (ಪಪುರ. ೨-೧೬೭). **ಪುಗುಳು** : ತಪನನ ಮೆಯ್ಯೊಳ್ ಪುಗುಳುಗಳು ಪಮಿಸೆ ಪಾವಕನ ತನುವಿನೊಳ್ ಮಹಾಸ್ಫೋಟಕವಾತಪದ ಕಡುಪಿಂದೆ ನೆಗೆತಂದಪುವೆನೆ ಬೇಸಗೆಯ ಬಿಸಿಲನದನೇನೆಂಬಂ (ಗಿರಿಕ. ೯-೨೬) ; ಅಂಬು ಜಾಕ್ಷಿಯರುಗಳಧರಚುಂಬನಕ್ಕೆ ಎನ್ನ ಜಿಹ್ವೆ ಹಂಬಲಿಸದ ಹಾಗೆ ಸೀಳಿ ಪುಗುಳವೇಳಲ್ಕೆ (ಸುಸಾರ. ೪೦-೯). **ಪೊಕ್ಳ** : ಗುಳಿ ಸೇರಿದ್ದ ಕೆನ್ನೆಗಳೂ ಉಬ್ಬಿದ್ದುವು—ಕೆಂಡ ಬಿದ್ದು ಬಂದ ಪೊಕ್ಳದಂತೆ (ಪಾಳಿಗಿ. ೦೦೬). **ಹುಗುಳು**: "ವಿಸ್ಫೋಟಃ. ಪಿಟಕಃ—ಈ ೨ ಹುಗುಳು" (ಪಾಪಾ. ೦೨೦) : ಕಿಟ್ಟಿಗೆ ಮೈಯಿ ಹುಗುಳುವುಟ್ಟಿತ್ತು ಉದಕಕ್ಕೆ ಭಳಿಯಾಗಿ ಸ್ಫಟಿಕಗಿರಿಯಲ್ಲಿ ಹಣ್ಣು ಹುಟ್ಟಿತ್ತು (ಅಪಶಂ. ೦೬೯-೬೦೩) ; ಕರ್ಪುರದ ಮಣಿಗಳನನುಕರಿಪ ಹುಗುಳು ಗಳು ಮೊಳೆಯೆ (ಪಸಪು. ೦೩-೨೦) ; ತೀಂಟೆಯಿಂತಪ್ಪ ತುಱಿಯ ಹುಗುಳು ಗಳೊಡೆಯೆ (ಪೀಶ್ಯಪು. ೯-೨೫-೭).

[< ಪುಗುಳ್$_1$ /ತಮಿ. ಪೊಕ್ಕುಳ ; ಮಲ. ಪೊಕ್ಕುಳ, ಪೊಕ್ಕಿಳ ; ಕೊಡ. ಪೊಕ್ಕಳ ; ಕೋತ. ಪೊಗ್ಲ್]

ಪುಗುಳು 'ಪುಗುಳ್$_2$' ನೋ.

ಪುಗುಳೇಳ್ 'ಪುಗುಳೇಟ್' ನೋ.

ಪುಗುಳೇಟ್, ಪುಗುಳೇಳ್, ಹುಗುಳೇಳಂ (ಕ್ರಿ). = ಪುಗುಳ್$_1$: ತದ್ವಿಷಾಗ್ನಿಯ ಕಿಡಿಯಿಂದೊಡನೆಯ ಗೋಪರ್ ತಂತಮ್ಮೊಡಲೊಳ್ ಪುಗುಳೇಟ^2 ಪೋಗಿ ಪುಯ್ಯಲ್ಚುವುದುಂ (ಪಗಸಿ. ೩-೮೬). **ಪುಗುಳೇಳ್** : ನೆಗೆದ ತುಂತುರ್ವನಿಗಳಂ ಮುಗಿಲ ಮೆಯ್ ಪುಗುಳೇಳೆ ಪುಷ್ಕರದಿಂ ಪೂತ್ಕರಿಸುವ . . . ಕಟ್ಟಣಕದ ದುಷ್ಟಗಜಮಂ (ಗಿರಿಕ. ೨-೦೦೫ ಪ). **ಹುಗುಳೇಳು** : ಇನ್ನಬರ ಹುಗುಳೆದ್ದು ನೋವುತಿರ್ಪುದೊ ತಳಂ (ಕಲಿಕಾ. ದೇ. ೩೦೦-೯); ಶಿವಶಿವೇಗುವೆ ನಿನ್ನು ಹುಗುಳೇಳುವವಲಾ ಶಿವನಂಗವೆನುತಂ ಶಿವನ ತನುವಂ ನೋಡಿ ತೂತೂ ಎಂದು ತೂಪಿಱಿದ (ಪಸಪು. ೦೩-೨೦). [ಪುಗುಳ್$_2$ + ಏಟ್$_1$]

ಪುಗುಳೊಡೆ (ಕ್ರಿ). = ಪುಗುಳ್$_1$: ಕಠಿನಭೂಮಿಯೊಳ್ ನಡೆದೊಡೆ ಕಿಱುಗಲ್ಗಳುಂ ಪೆಟ್ಟೆಗಳುಮಗುಟ್ಟು ಪುಗುಳೊಡೆದು (ಪಡ್ಕಾಲಾ. ೨೯-೦೦). [ಪುಗುಳ್$_2$ + ಒಡೆ$_1$]

ಪುಗುಳ್ಗುತ್ತ (ನಾ). ಮೈಮೇಲೆ ಬೊಕ್ಕೆಯಾಗುವ ಒಂದು ಬಗೆಯ ರೋಗ : ಗುರು ಮಂದ ಶುಕ್ರರೊ(ನೊ)ಡನಿರೆ ಸುರನದಿ ಹೈ(ಹಿ) ಮಾದ್ರಿಯೆಡೆಯ ನಾಡೊಳಗೆಲ್ಲಂ ಪಿರಿದು ಭಯಮಕ್ಕುಮಲ್ಲಿಯ ನರರ್ಗಂ ಪುಟುಗು(ಪುಗುಳ್ಗು)ತ್ತಮಕ್ಕುಮಿದು ಪರಮಾರ್ಥಂ (ಅಟ್ಟಿಪು. ೬-೫೫). [ಪುಗುಳ್$_2$ + ಕುತ್ತ]

ಪುಗ್ಗಾಯಿಲ, ಪುಗ್ಗಾಯ್ಲ (ನಾ). ಸೊಕ್ಕಿದವನು ; ಅಹಂಕಾರಿ ; ಗರ್ವಿಷ್ಠ : ಮನ್ನೆಯರ್ಕುಱುಂಬರ್ ಪುಗ್ಗಾಯಿಲರೆನಿಸುವ[ರ]ಸುಮಕ್ಕಳ್

ವಲರುಂ ಬುದಿರ್ದರಾ ನೃಪಾಸ್ಥಾಯಿಕೆಯೊಳ್ (ಕರ್ಣಪ. ೩-೫೨) ; ಆಯಿಲ ಪುತ್ಕಯಾಕ್ಕೆ—ಗೋಬಾಯಿಲು, ಪುಗ್ಗಾಯಿಲು (ತುಪ್ರ. ೨೦೫ ಕ್ರಿಪೀಠ) ; ತಾಯಂ ನಾಗನಿಂ ಕೊಲಿಸದೆ . . . ಬಾಯಿಂ ಸೈವರ ಪೊಸ ಪುಗ್ಗಾಯಿಲನಂ ಕೊಂದು ಕೂಗಿಸದೆ ಬಿದಿ ಸತತಂ (ಕಪಾಂ. ೬೮೨). **ಪುಗ್ಗಾಯ್ಲ** : " ಪುಗ್ಗಾಯ್ಲಂ—ಗರ್ವಿತಂ " (ತುಪ್ರ. ಪಂ. ೨) ; " ಗರ್ವಿತನಲ್ಲಿ ಪುಗ್ಗಾಯ್ಲ ನೆಂದಂ " (ಕಬ್ಬಿಕ್ಕೆ. ೬೬). [ಪುಗ್ಗು೨ + ಆಯಿಲ್೬]

ಪುಗ್ಗಾಯಿಲತನ (ನಾ). ಸೊಕ್ಕು ; ಗರ್ವ ; ಉದ್ದಟತನ : ಇನಿತೇಕೀ ಪುಗ್ಗಾಯಿಲತನಮಿದಱಿಂದಸ್ಮದಾಜ್ಞೆಯಂ ವಿಘಾಟಿಸಿದೆ ನೀಂ (ಪಜ್ಜಿಂ. ೪-೦-೦೫೫). [ಪುಗ್ಗಾಯಿಲ + — ತನ]

ಪುಗ್ಗಾಯ್ಲ 'ಪುಗ್ಗಾಯಿಲ' ನೋ.

ಪುಗ್ಗಿ 'ಪುಟ್ಟಿ' ನೋ.

ಪುಗ್ಗಿಡು ? (ಕ್ರಿ). (?) : ಪುಡುಕಾನೀರೊಳರ್ದಿಯುಂ ಪುಟಪಾಕಂ ಸುಡೆಯುಂ ಮತ್ತು ಪುಗ್ಗಿಡೆಯೆಯುಂ ಟಾಳಿತ್ತಿ ಸೀಳೆಯುಂ ಗುಗ್ಗುಳಂ ಬೊತ್ತಿಸೆಯುಂ (ಪಜ್ಜಿಂ. ೧೦-೦೦ ೪). [?]

ಪುಗ್ಗು೧ 'ಪುಟ್ಟು' ನೋ.

ಪುಗ್ಗು೨, ಹುಗ್ಗು೨ (ನಾ). ಸೊಕ್ಕು ; ಗರ್ವ ; ಅಹಂಕಾರ : "ಉಕ್ಕೆವಂ, ಬೀಱಂ, ಪುಗ್ಗು, ಪಂತ, ಹಪ್ಪಮ್ಮ, ಗಬ್ಬಂ, ಅವಟು—ಈ ೭ ಗರ್ವಂ" (ಶಪಾ. ೩೬-೨೬೦) ; "ಹಪ್ಪಮ್ಮದಟು . . . ಪುಗ್ಗುಪುಂಕ್ಕೆಪಮೆನ್ನಲ್ ಗಮ್ಮನೆ ಗರ್ವಮವಕ್ಕುಂ" (ಶವೈ೦ ೧೧೩) ; ಅಗ್ಗದ ಪುಗ್ಗಿನ ಚಂಪೇನನಜಿಸಿ . . . ಬಲ್ಲೊಗ್ಗಲ್ಗಳಂ ಶಿಜಯಾಯ್ಕೆ ಸಂಧಿಸುತೆಚ್ಚಂ (ಶಾವಶಾ. ೧೧೭-೦೦). ' ಪುಗ್ಗಾಯಿಲ ' ಪರಾ. **ಹುಗ್ಗು೨** : ' ಹುಗ್ಗಿಗ ' ಪರಾ. [ದೇ॰ ತವಿ. ಪುಲ್ಲು]

ಪುಗ್ಗೆ (ನಾ). ೧. (ಉಕ) ಕಡಲೆಹಿಟ್ಟಿಗೆ ಉಪ್ಪು, ಕಾರ ಮೊದಲಾದುವನ್ನು ಬೆರೆಸಿ ದೋಂಡಗೆ ಉಬ್ಬುವಂತೆ ಎಣ್ಣೆಯಲ್ಲಿ ಕರಿದು ಮಾಡುವ ಒಂದು ಬಗೆಯ ಖಾದ್ಯ ; ಬೂರಬೂರಿ : ಹಸುವಾಗಿದೆಯೆಂದು ಪುಗ್ಗೆ ಕೊಳ್ಳಲು ಗಂಗೆ ಕಳಿಸಿದಳು ಹೋಗಿದ್ದಾಳೆ (ಗಂಗಾಗೌ. ೦೦೯) ; ನಾಲ್ಕಾಣೆಯ ಪುಗ್ಗೆ ತಿಂದು ಪಾಯಿಸುವಷ್ಟರಲ್ಲಿ ಶಾಲೆ ಬಿಟ್ಟಿತು (ಗಾಶಿ. ೧೬೬). ೨. ಗಾಳಿ ತುಂಬಿ ಉಬ್ಬಿಸಿದ ರಬ್ಬರ್‌ಚೀಲ ; ಬಲೂನು : ಒಂದೇ ಒಂದಾದರೂ ಅಂತಹ ರಬ್ಬರ್ ಟ್ಯೂಬೋ ಪ್ಲಾಸ್ಟಿಕ್ ಹಕ್ಕಿಯೋ, ಬಣ್ಣದ ಪುಗ್ಗೆಯೋ ತನಗೆ ದೊರೆಯುವಾದರೆ (ಮುಂಗಾಮು. ೩೬) . ೩. (ಆಲಂ) ಉಬ್ಬು ; ಉತ್ಸಾಹ : ಪುಗ್ಗೆಯನ್ನಿತ್ತೆದೆಗೆ ಲೆಗ್ಗೆಯನು ಹಾಕಿದೆನು ; ಸಗ್ಗದಲ್ಲಿಹ ನೀನು ಬಗ್ಗಲಿಲ್ಲ ! (ತಂಬಾ. ೫೩). [← ದ॰ರಾ. ಪುಗಾ]

ಪುಚ್ಚ೧, ಹುಚ್ಚ೧ (ನಾ). ೧. ಬುದ್ಧಿಭ್ರಮಣೆಯಾದವನು ; ಉನ್ಮಾದರೋಗಿ : ಒರೊರ್ಮೆ ಪುಚ್ಚನಂತಚ್ಚರಿಯೊಳಾಡುವನದೋರೊರ್ಮೆ ಮಾತ್ಸರ್ಯಂತೊತ್ತರಿಸಿ ಮೇಲ್ವರಿಸಿನು (ಕಾಬ್ಯೂಕಾ. ೬ ೩೬). **ಹುಚ್ಚ೧** : ೧. " ಪ್ಯೋಡೀರಃ = ಹುಚ್ಚಂ " (ನಾಕೃ. ೦೩). ೨. ತಿಳಿಗೇಡಿ ; ಮಂದಬುಂಧಿ ; ದಡ್ಡ : ಹೆಚ್ಚಿನ ಸತಿಯರ ಕಚ್ಚಿಯ ಬಿಚ್ಚುವ ಹುಚ್ಚನೇನೆ (ಪ್ರಭಂದ. ೨-೪೩-೦) ; ಹುಚ್ಚರಿಗ ಚುಂದಾವಿರೆ ಬಿದಿರ ಸಾರುವರೆ (ಕ್ರಹಾಕೃ ೬-೦೦) ; ಓಗೆ ಹುಚ್ಚನಂತೆ ತಿರುಗಾಡುವುದು ತರವಲ್ಲ (ಮುಂಗಾಮು. ೩-೦೨೩). ೩. ವಿವೇಕಶೂನ್ಯನು ; ಮೋಹಿತನಾದವನು : ವಿವೇಕಾನಂದರು . . . ಸಂಬೋಧಿಸಿದ ರೀತಿ ಅಮೇರಿಕೆಯ ಜನತೆಯನ್ನು ಹುಚ್ಚರನ್ನಾಗಿ ಮಾಡಿತು (ಭಾಗಾಸಾ. ೯೯). (ಗು). ೪. ವಿವೇಕವಿಲ್ಲದ ; ಬುದ್ಧಿಗೇಡಿಯಾದ : ಅಪ್ಪ ಸತ್ತ ಆರುತಿಂಗಳಿಗೆ ಹುಚ್ಚವಾಪ ಬಂದು ಕೊರಳು ಕಟ್ಟಿಕೊಂಡು ಅತ್ತ (ಗಾಶಿ). [ಪುಚ್ಚು೧ (<ಪುರ್ಚು) + — ೩೧]

ಪುಚ್ಚ೨, ಪುಕ್ಕ೨, ಪುಚ್ಚು೨ (ನಾ). ೧. ಹಕ್ಕಿಯ ಗರಿ : ತುಪ್ಪಳು : ಹಾರುಹಕ್ಕಿಯ ಪುಚ್ಚವನೆಸಲೆಳಸಿದ ಬೆಡಗಿ ! (ಜಾಹ್ನವಿ. ೦೨-೩) ; ಸೀಗೆ ಹೂಣ್ಣಿಮೆಗಾ ಪುಸಾರಿಯುಂ ಹಸುರುಪುಚ್ಚವ ತೆರೆಯಿತು (ಕಿಷ್ಕಿಂ. ೦೩-೦೨) ; ಅಲರಲ್ಲೊಬ್ಬಳ ಮೈ ತುಂಬ ಪುಚ್ಚ ಹತ್ತಿದ್ದನ್ನು ಕಂಡೆ (ಕ್ಯಾ. ೨೫೬. ೨೫೮). ೨. (ಪಕ್ಷಿಗಳ) ಬಾಲದ ತುದಿ : "ಪುಚ್ಚ (ಕ್ಕ)— ಪುಚ್ಚ = ಬಾಲ" (ಕಬ್ಬಿಕ್ಕೆ. ೨೬) ; ಹೀಗಡೆ ಬಣ್ಣವ ಪುಚ್ಚವ ಹಬ್ಬು (ಕಪಕ್ಷಿ. ೦. ೧೫). **ಪುಚ್ಚ೩** : ೧. ದೈವಾಪೆಯಿಂದ ಆ ಮಹಾಪರ್ವತವು ಈಗ ತನ್ನಪ್ಪಕ್ಕೆ ಶಕ್ತಿಯ ಪೂರ್ಣದಪ್ಪು ಹಗುರವೂ ಮೃದುವೂ ಆಯಿತಲ್ಲವೆ! (ಶಾಂಕಶಾ. ೧೧) ; ಭವಿತವ್ಯತೆಯನುಂತೆ ಓಡಿ ತಪ್ಪಿಸಿಕೊಳ್ಳಲರಿದು ಹಕ್ಕಿಯ ಪೂರ್ಣ ಹತ್ತಿನ ಉರಿಯಂತೆ ಅದು ನಿನ್ನ ಬೆನ್ನಟ್ಟಿ ಬಹುದು (ಶಂಕಾಸ. ೦೦೬-೦೬). ೨. ಒಂದು ಆಶ್ಚರ್ಯಕರವಾದ ಪಕ್ಷಿಯಿಂದ: ಇದು ಕಾಡುಪಾರಿವಾಳದಷ್ಟಿದೆ . . . ಪುಕ್ಕ ಉದ್ದವಾಗಿರುವುದೆ (ಕ್ರಣಾಸ. II. ೦೩೨) ; ನವಿಲು ಆಡಿದರೆ ಕೆಂಬೋತ ಪುಕ್ಕ ತೆರಕೊಂಡಿತು (ಗಾಪ). **ಪುಚ್ಚ೨**.

ಪುಚ್ಚ ಎಣೆಸು = ಸಂಪೂರ್ಣವಾಗಿ ತಿಳಿ : ನಿನ್ನ ಪುಚ್ಚಾ ಎಣೆಸೂದು . . . ಶಕ್ಯ ಆಗಬಿತ್ತೇನು ? (ಅಚಪ. II. ೬೦೩). **ಪುಚ್ಚ ಬಲಿ, ಪುಚ್ಚಬಲಿ** = ೧. ಹಕ್ಕಿಯ ಗರಿಯಂತೆ ಬೆಳೆ : ಇನ್ನೂ ಪುಚ್ಚ ಬಲಿಯದ ಆ ಗುಬ್ಬಚ್ಚಿ ಹಾರಲಾಗದೆ ಒದ್ದಾಡುತ್ತಿದೆ (ಕೂಶಿ) ; ಅದಕ್ಕೆ ಇನ್ನೂ ಪುಚ್ಚು ಬಲಿತಿಲ್ಲ (ಮುಂಆಮು. ೩-೬೦೦). ೨. (ಆಲಂ) ಶಾಮರ್ಥ್ಯ ಹೆಚ್ಚಾಗಂ ; ಶಕ್ತಿ ವರ್ಧಿಸು : ಅವನಿಗೆ ಮುಂಗಿಲು ಮೂರೇ ಗೇಣಾ ಉಳಿದಂತೆ ಭಾಸವಾಯಿತು. ಅವನ ಪುಚ್ಚ ಬಲಿತಿತು (ಕ್ಯಾ. ೨೫. ೬೬೦).

[ಸಂ॰ < ಪುಚ್ಛ]

ಪುಚ್ಚಣಿ 'ಪುಚ್ಚಬ್ಬಿ೩' ನೋ.

ಪುಚ್ಚವಣ, ಪಚ್ಚವಣ, ಪುಚ್ಚವಣೆ (ನಾ). ೧. ಪರೀಕ್ಷಿಸುವಿಕೆ ; ಪರೀಕ್ಷೆ : "ಪುಚ್ಚವಣಾ = ಪರೀಕ್ಷೆ ; ಅಣ್ಮಾ " (ತುಪ್ರ. ಪಂ. ೨) ; ಪ್ರ[ಕಾಶಂ. ವ]ಚ್ಚವಣಾ ನೋಡುವೆನೆನ್ನಿಚ್ಛೆಯೋ ಮುನಿಯ ವರದ ಮಹಿಮೆಯುಂ (ಸಂಕಥಾ. ೧-೪೦) ; ಆಗಳ್ ಪುಚ್ಚವಣಮಾಗೆ ನೆರೆದ ಪಡಿಯಜಿತಿಯರ್—ಇವಂಗಿನ್ನೆವರಂ ಸ್ವರಜ್ಞಾನವೇ ಪುಟ್ಟಿತಿಲ್ಲವೆಂದು ತಳ್ಳಿದರ್ (ಕಶ್ಯಾಕ. ೨೭-೨೩) ; ದೈವವೆಂ ನೋಡೆ ಪುಚ್ಚವಣಮುಂ ಗೆಯ್ವನ್ನೆವುಂ ಕಾಣರೇಂ (ಪ್ರಸಾಪು. ೪-೨೬). ೨. ಪೌರುಷ ; ಶಕ್ತಿ ; ಸಾಮರ್ಥ್ಯ : "ಪುಚ್ಚವಣ = ಪರೀಕ್ಷೆ ; ಅಣ್ಮಾ" (ತುಪ್ರ. ಪಂ. ೨) ; "ಪುಚ್ಚವಣ—ಪುರುಷ = ಪೌರುಷ" (ಕಬ್ಬಿಕ್ಕೆ. ೨೬). **ಪಚ್ಚವಣ** : ೧. "ಪುಚ್ಚವಣ (ಪಚ್ಚವಣ)—ಪರೀಕ್ಷಣ" (ತಬ್ಬಿಕ್ಕೆ. ೨೬). ೨. "ಪೌರುಷಂ ಪಚ್ಚವಣಂ" (ಕರ್ಣಪ. ೨೩) ; ಪರಿದವಂ ಪಚ್ಚವಣಮುಂ ನೋಡಲಾ ಸಿದ್ಧಂ . . . ಪರಿತುಷ್ಟನಾಗುತ್ತೆ (ಅರಾತ. ೨-೧೩-೨೦). **ಪುಚ್ಚವಣೆ** : ೧. "ಪುಚ್ಚವಣೆಯ ಪರೀಕ್ಷೆಯಂ" (ತಪ್ರ. ೦೧೨). [< ಪ್ರಾ. ಪುಚ್ಛಣ-/ಸಂ. ಪುಚ್ಛನ]

ಪುಚ್ಚವಣಿಸು (ಕ್ರಿ). ಪರೀಕ್ಷಿಸು : ತಚ್ಛ್ರೀಲದಲಘುತರಮಹಿಮೆಯಂ ಪುಚ್ಚವಣಿಸಲ್ ಶಕ್ಯಮೇ ಸೂರಸಚಿವಾಗ್ರಣಿ (ಜಾಸೋಕ್ಷ. ೫-೧೨). [ಪುಚ್ಚವಣ + —ಇಸು೩]

ಪುಚ್ಚವಣೆ 'ಪುಚ್ಚವಣ' ನೋ.

ಪುಚ್ಚಳಿ೧ 'ಪುಚ್ಚಬ್ಬಿ೧' ನೋ.

ಪುಚ್ಚಳಿ೨ 'ಪುಚ್ಚಬ್ಬಿ೩' ನೋ.

ಪುಚ್ಚಳಿಸು 'ಪುಚ್ಚಬ್ಬಿಸಿಂ' ನೋ.

ಪುಚ್ಚಬ್ಬಿ೧, ಪುಚ್ಚಳಿ೧ (ಕ್ರಿ). ೧. ಹಾಳಾಗು ; ಕೆಡು ; ಭಂಗವಾಗಂ : ಶರದದ ಬಿಸಿಲಳುರೆ ಪೊನ್ಮಾದ ಘರ್ಮಬಿ.ದುಗಳಿಂ ನಾಂದು ಪುಚ್ಚಬ್ದರೆ ಪೊರೆನಾದ ಕುಟಿಲಮಪತ್ರಭಂಗದ ಕೊರಗಿದ ನಗೆಮೊಗಂಗಳುಂ . . . ಅಡಿಗಡಿಗೆ ತಡವತಪ್ಪ ನಡೆಗಳುಂ ಬೆರಸು (ಅಂಪು. ೦೦-೬೮೮) ; ಕಬ್ಬಿ ಪೂವಾಗಲೊತಂ ಪುಚ್ಚಬ್ಬಿದೊರ್ವನೆಯೆ ಪಾಜಿ ಪೋಪ ಕಂಪಿನ ತೆಱದಿಂ ಒಟಕುಬಪಾದೊಡಲಿಂ ಪಾಗಗುಬ್ಬಿಯದೆ ಪಣಿಪಟ್ಟು ಪೋದುದನು

ಮುನಿಪತಿ[ಯಾ] (ಪಭಾಮು. ೦೦-೫೯) ; ಕುತ್ತುವಿಲ್ಲದೆ ಬೇನೆಯಿಲ್ಲದೆಯೊಂದು ಕಣ್ಣಾ ನೀರ್ಸುರಿಗುಮಂತೊಪ್ಪೆತೆತ್ತವಿರ್ದೆಡೆಯುಂ ಪುಚ್ಚಬ್ಬಿದು ಬಿರ್ದಿರ್ದಂತೆ ಗೆದ್ದು ಕಿವಿಗಳಪ್ಪೆಡಂ . . . ಒಂದು ತಿಂಗಳಾಯು (ಕಶಾಪ. ೫೫೫). ೨. ಪ್ರತಿಜ್ಞೆ ಮೊದಲಾದುವನ್ನು ಮುರಿ,–ಕೆಡಿಸು,–ಭಂಗಿಸು: ಪೊಲ್ಲದು ಪೂಣ್ದು ಪುಚ್ಚಬ್ಬಿಪುದುರ್ಕಿದ ಕೌರವರಂ ಪೊರಳ್ಚಿ ಕೊಂದು ... ಎಲ್ಲವುಂ ನೆಜಪಿದೆಂ (ಕಂಪಾ. ೦೨-೦೬೦); ಶೀಲವತಿ ಸೀತೆ ಪೂಣ್ದಂದನೆಂತುಂ ಪುಚ್ಚಬ್ಬಿಪಳ್ (ಕಂಪಾಪು. ೦೬-೫೫). **ಪುಚ್ಚಳಿ** : ೨. ಬಾವರಲಕ್ಷ್ಮಿ ಚಾರೂಪಾರನೊಲ್ದ ಪಾಳ್ಕೆಯಿಂ ಭಾಸೆಪಡಿತ್ತು ಪುಚ್ಚಳಿವರಲ್ಲದೆ ಭಾಸೆಯಾಡುದ್ದರಿಪ್ಪರೇ (ಎಳ. ೯, ೭೦.೨೮೨. ೦೦೨-೦೦೪; ೧೭೨೦). [ಪುಚ್ಚು₂ (P ← ತೆಲು. ಪುಚ್ಚು = ಕೊಳೆತುಹೋಗು) + ಅಲ್ಲಿ₁]

ಪುಚ್ಚಬ್ಬಿ₂. ಪುಚ್ಚಣಿ, ಪುಚ್ಚಳಿ₂ (ನಾ). ಕೇಡು; ಹಾನಿ; ನಾಶ : "ಪುಚ್ಚಬ್ಬಿಯೆಂಬ ಕೇತು" (ಶಪ್ರಾ. ೬೫-೧೧೨); ಎಲೆಲೆ ಸಮ್ಮಂಗುಂದಿದ ಪುಚ್ಚಬ್ಬಿಯು ಬಾಯ್ಬಿಬಿದೆ! (ಶಾಪಪ್ರ. ೦೦೨-೦೫); ಅಲುಲಂ ಪೆಜಂಗೆ ದೊರೆಕೊಳಿಪಬಗೆಯ್ವುವಾನೆಸಗಲೆಣಿಸವೇತೆಣಪೊಡೆ ಕೇಳಲುಲಂ ನಿನಗೊದವಿಪ ಪುಚ್ಚಬ್ಬಿಯುನೊತರ್ಚೆಕ್ಕೆ ನೆನೆಗುಂದಾಗಳೆ ಧರ್ಮಂ (ಪಚಕಪಾಂ. II, ೦೬೪). **ಪುಚ್ಚಣಿ** : ನಚ್ಚಣಿಗರ ನಟನೆಗೆ ಮೀಟುವೊಡೆ ಪುಚ್ಚಣಿಯಹುದೆಂಬುದೊರ್ಮೆಳ್ ಮನಗ್ಗೆಯುಸುರಿದಳು ವಿಜಯೆ (ಕಯುನಾ. ೦೯-೩೦). **ಪುಚ್ಚಳಿ** : ಇಚ್ಛೆಗಳನುಗೆವೊಡೀಗಳ್ ಪುಚ್ಚಳಿ ನಿನಗಪ್ಪುದು (ಪಚಕ. ೬-೬೩); ಭೂಪಜನ . . . ಪುಚ್ಚಳಿಗಳಪ್ಪ ತೊಲಗೆ ಸುಖದಿಂದಿರ್ದನು (ಕಚರಿ. ೪-೫೦); ಅಂತು ಸಮನಿಸಿರ್ದ ಪುಚ್ಚಳಿ ಲೆಯಲ್ಲೆಲ್ಲರುಂ . . . ಸಮಾಧಾನಾಸ್ಪತಿಯೊಳಿರ್ದನಂ (ಪಾಶಾ. ೬-೩೭). [<ಪುಚ್ಚಬ್ಬಿ₁]

ಪುಚ್ಚಬ್ಬಿಸು. ಪುಚ್ಚಳಿಸು (ಕ್ರಿ). ೧. ಹಾಳಾಗು; ನಾಶವಾಗು : "ಪುಚ್ಚಬ್ಬಿಸು — ಲಯಿಸು (ಕರಗಿ ಹೋಗು, ನಾಶವಾಗು)" (ಶಪುರಾ). **ಪುಚ್ಚಳಿಸು** : ೧. ಆತ್ಮಂ ಸಲೆ ಸೂಕ್ಷ್ಮತನುವಂ ತಳೆದು ಶುಭಾಶುಭ ಕರ್ಮಗಳ ಫಲವನುಣುತೆ ತತ್ಸೂಕ್ಷ್ಮಾಂಗಮಿದ್ದೆ ಪುಚ್ಚಳಿಸೆ ದೋಕ್ಷದ ನೆಯ್ದು[ಯ್ದು]ತಿರ್ಪನಂ (ಣಾಪುಚಂ. ೯-೮೩). ಕಬ್ಬಗಂ ಕೀರಗಿರೆ ಪುಚ್ಚಳಿಸೆ ಭಾವಿಕಾಲಮೇ ಬರಿದಕ್ಕುಂ (ಸಚಕ. ೬-೦೦). ೨. ನಾಶಗೊಳಿಸು; ಧ್ವಂಸಮಾಡು; ಭಂಗಿಸು : ಅವಿಳಂಬಪ್ರಮಂ ಪುಚ್ಚಳಿಪುದು ಸರ್ವಕ್ಕೆ ಶಾಂ ಸಲೆ ಕಾರಣಮವೆನಿಸಿ . . . ಒಟ್ಟರ್ಪದು ತಿಳಿ ವಿಭೂತಿಯ ಫಲಮಂ (ಜಾತಿಪ್ರಭೆ. ೦೩-೦೦೦); ಹುಟೆಗೆ ನಾಡ ಹುರಿ ಪುಚ್ಚಳಿಸಿತು (ಕಾಯಾಪ್ರ. ೬೯-೦೪೬). [ಪುಚ್ಚಬ್ಬಿ₂ + – ಇಸು₅]

ಪುಚ್ಚಿ. ಪುಚ್ಚೆ. ಹುಚ್ಚಿ₂ (ನಾ). ೧. ಯೋನಿ : (೬). ೨. ಕುಂಡೆ : (೬). ೩. ಗೋಲಿಯಾಟದಲ್ಲಿ ಗೋಲಿಯನ್ನು ತಳ್ಳುವ ಕುಳಿ ; ಬದ್ದು. ೪. ಚಿಣ್ಣಿಕೋಲಾಟದಲ್ಲಿ ಚಿಣ್ಣಿಯನ್ನು ಇಟ್ಟು ಚಿಮ್ಮುವ ಪಡಕ್ಕಾಗಿ ನೆಲದಲ್ಲಿ ಮಾಡಿದ ಕುಳಿ. **ಪುಚ್ಚೆ** : (೬). **ಹುಚ್ಚಿ₂** : ೫. ಪಶುಗಳ ಯೋನಿ. [ದೇ.ಪ್ರ ತವಿ. ಪೊಚ್ಚು; ಮಲ. ಪುಚ್ಚಿ. ಪೂಚ್ಚೆ; ಕೊಂತ. ಪೂದ್; ಬ್ರಾಹುಈ. ಪೋಸ್]

ಪುಚ್ಚು₁ 'ಪುರ್ಚು' ನೋ.

ಪುಚ್ಚು₂ 'ಪುಚ್ಚ'₂ ನೋ.

ಪುಚ್ಚುಗೊಳಿಸು. ಪುಚ್ಚುಗೊಳಿಸು, ಹುಚ್ಚುಗೊಳಿಸು (ಕ್ರಿ). ಬುದ್ಧಿ ಭ್ರಮಣೆಯಾಗುವಂತೆ ಮಾಡು : ನಚ್ಚಿಸ ಮಂತ್ರೀಶ್ವರನಂ ಪುಚ್ಚುಗೊಳಿಸುವುದಿದಾವ ಮತಂ (ಪಚಕ. ೬-೬೩). **ಪುಚ್ಚುಗೊಳಿಸು** : ಅಡವಿಯಂ ಹೊಗಿಸಿತ್ತು ಹುಡುಕಿಸೀರಲಿದ್ದಿತ್ತು ಜಡಿಗಟ್ಟಿ ಭಸ್ಮವ ತೊಡಿಸಿತ್ತು ವಿವೆ ಪುಚ್ಚುಗೊಳಿಸಿತ್ತು (ಪಚಕ. ೨, ೨೬೬-೦೬). **ಹುಚ್ಚುಗೊಳಿಸು** : ಹಿವಿದೊತ್ತಿ ಕೇಶವ ಕೀಳಿಸಿತ್ತು ಹುಡಿ ಹುಚ್ಚುಗೊಳಿಸಿತ್ತು (ಪಚಕ. ೨, ೨೬೬-೦೬). [ಪುಚ್ಚು₂ (< ಪುರ್ಚು) + ಕೊಳ್₁ + – ಇಸು₅]

ಪುಚ್ಚುಗುನ್ನಿ, ಹುಚ್ಚುಕುನ್ನಿ (ನಾ). (ಆಲಂ) ತಿಳಿಗೇಡಿ; ಅವಿವೇಕಿ : ಪೊಗರಿಂವು ನುಣ್ಪಾ ಪೆಂಪನ . . . ಪದಲಂಕಾರಾದಿಗೆ ಸಲ್ವ ಚಿಲ್ವ ಕಾವ್ಯದ ಬಗೆಯಱಿಯದ ಪುಚ್ಚುಗುನ್ನಿ ಕೂಗಿದೊಡಳ್ಕೆಂ (ಕಮ್ಮಾ. ೦-೦೪). **ಹುಚ್ಚುಕುನ್ನಿ** : ಆ ಹುಚ್ಚುಕುನ್ನಿ ಮಾತು ಅಂದರೆ ಯಾರಿಗೆ ತಾನೆ ಲಕ್ಷ್ಯವಿರುತ್ತೆ? (ಮೂಡ). [ಪುಚ್ಚು₂ (< ಪುರ್ಚು) + ಕುನ್ನಿ₂]

ಪುಚ್ಚುಗೊಳ್ 'ಪುರ್ಚುಗೊಳ್' ನೋ.

ಪುಚ್ಚುಗೊಳಿಸು 'ಪುಚ್ಚುಗೊಳಿಸು' ನೋ.

ಪುಚ್ಚುತನ, ಹುಚ್ಚುತನ (ನಾ). ದಡ್ಡತನ; ಅವಿವೇಕ : ಇಚ್ಛೆಯಿಂ ಬಾಯ್ಗೆ ಬಂದಂತೆ ಗಳಪುವುದು ತಾಂ ಪುಚ್ಚ{ಚ್ಚು}ತನಂ (ಮಹಾಪ್ರ. ೦೪-೬೯). **ಹುಚ್ಚುತನ** : ನಿನ್ನ ಹುಚ್ಚುತನದಿಂದ ನೀನು ಹಾಳಾಗಬೇಡ (ಕಾಬಾಕ. ೦೫೭); ಅವನು...ತನ್ನ ಹುಚ್ಚುತನವನ್ನು ಆಲೋಚಿಸಿ ಕಣ್ಣೀರು ಸುರಿಸಲಾರಂಭಿಸಿದನು (ಪಾಚಕ. ೨೮). [ಪುಚ್ಚು₂(<ಪುರ್ಚು) + – ತನ]

ಪುಚ್ಚೆ 'ಪುಚ್ಚಿ' ನೋ.

ಪುಚ್ಚ (ನಾ). ೧. ಬಾಲ; ಲಾಂಗೂಲ : "ಪುಚ್ಛಃ...ವಾಲಧಿಃ — ಶ ಕುದುರೆ ಮುಂತಾದ ಜಂತುಗಳ ಬಾಲದ ಹೆಸರುಗಳು" (ಸಿಕ್ಕಾಂಶ ೨೩೦). ೨. ಪಕ್ಷಿಗಳ ಪುಕ್ಕ. ೩. ಹಿಂಭಾಗ. ೪. ತುದಿ ; ಕೊನೆ. ೫. ಅನುಬಂಧ : (Appendage. ಕಾಂಅ ೩). [ಸಂ.]

ಪುಚ್ಚದಂಡ (ನಾ). ಬಾಲ : ಜಘನದಿಂದೆ ಕೆಲಗಂ ಬಗೆ ಬಾಲು ಪುಚ್ಚದಂಡ ಮೆಂಬೀ ವೆಸರಿಂ (ಅಕ್ಕಶಾ. ೯-೧೩). [ಸಂ.]

ಪುಟ₁ (ನಾ). ಪುಟಿಗೆ ; ನೆಗೆತ ; ಪುಟಿದೇಳುವಿಕೆ : ಕುರುವಂಶಾಗ್ರಣಿ ಪೊಯ್ದ ಪೊಲ್ಲಿಂ ಕೆಡೆದಂ ಭೀಮಂ ರಣೋರ್ವೀತಳಂ ಬಿರಿಯಲ್ ಪಾಱುದನಂತದಕ್ಕೆ ಪ್ರ[ಪ್ರಾಣಾಂ. ಳಿ]ಟಮುಂ ದುರ್ಯೋಧನಂ (ಕುಪಾಪ್ರ. ೦೩-೨೪); ಪುಟದ ಕಂತುಕದಂತೆ ಫಣಿ ಲಟಕಟಿಸಲ್ಕೊಕಿತು (ಕಾಪಾ. ೬೦೩. ೦೯-೩೭). ' ಪುಟಂನೆಗೆ ' ಪರಾ. [<ಪುಟ₁]

ಪುಟ₂ (ನಾ). ಬರೆಯುವ ಅಥವಾ ಅಚ್ಚಿನ ಹಾಳೆಯ ಒಂದು ಮಗ್ಗುಲು,—ಪಕ್ಕ : ಗೀತೆಯ ಪುಟಗಳನ್ನು ಪುನಃ ಪುನಃ ತಿರುವಿದಾಗ ಮುಖ್ಯಸಂದೇಶ ' ಕರ್ಮಯೋಗ ' ಎಂಬುದು ಸ್ಪುಟವಾಗುತ್ತದೆ (ಕಬಾಗೀ. ೦೦೩); ಪುಟದಡಿಯ ಟಿಪ್ಪಣಿಗಳಲ್ಲಿ ಸಹ ಇವರು ಉಲ್ಲೇಖಿಸಿ ಬ್ಯವರು (ಣಾಕಪ್ರ. ೫೫೩). [<ಪ್ರಾ. ಪುಟ್ಕ·/ಸಂ. ಪೃಷ್ಠ·/ತವಿ. ಪುಟ, ಪುಟ್ಟೆ; ಮಲ. ಪುಟ; ತುಳು. ಪುಡೆ; ತೆಲು. ಪೆಡ]

ಪುಟ₃ (ನಾ). ೧. ಮಡಿಕೆ ; ಪದರ. ೨. ತಗ್ಗಾದುದು ; ಹಳ್ಳ. ೩. ಎಲೆಯಿಂದ ಮಾಡಿದ ಬಟ್ಟಲು ; ದೊನ್ನೆ : ನಳನದಳಪುಟದ ನೀರಂ ನಳಿನಗೆಳ್ವ ರೂಪುಗೊಂಡು ಸುರಿದಪುವು (ಕಾರಾಂಭೂ. ೬೩). ೪. ಎಲೆಯಿಂದ ಮಾಡಿದ ಪೊಟ್ಟಣ. ೫. ಆಳವಿಲ್ಲದ ಬಟ್ಟಲಂತಹ ಪಾತ್ರೆ. ೬. ಕೈಗಳಂತೆ ಜೋಡಿಸಿ ಮಾಡಿದ ರಚನೆ : 'ಕರಪುಟ' ಪರಾ. ೭. ಮುಚ್ಚಳ ; ಪಿಧಾನ : 'ಕವಾಟಪುಟ' ಪರಾ. ೮. ಗುಪ್ತಾಂಗವನ್ನು ಮುಚ್ಚುವ ಬಟ್ಟೆ ; ಕಟಿವಸ್ತ್ರ ; ಕೌಪೀನ : 'ಪುಟಗೋಸಿ' ಪರಾ. ೯. ಕಣ್ಣೆವೆ. ೧೦. ಸಸ್ಯಗಳ ಹೊಜ್ಜೆ. ೧೧. ಕರಂಡಕ; ಭರಣಿ; ಸಂಪುಟ. ೧೨. ಕುದುರೆಯ ಗೊರಸು; ಕೊಳಗ; 'ಖುರಪುಟ' ಪರಾ. ೧೩. ಜಾಜಿಕಾಯಿ. ೧೪. ಮೂಗಿನ ಹೊರಳೆ.—ಹೊಳ್ಳೆ : 'ನಾಸಾಪುಟ' ಹೋ. ೧೫. ಲೋಹಗಳನ್ನು ಕರಗಿಸಲು ಬಳಸುವ ಪಾತ್ರೆ : ಮೂಸೆ : ಪುಟಂಗಳಿಂ[ಪ್ರಾಣಾ. ಮಾಟ್ಟಿಗೆಯಿಂ]ಳ್ಚುತೆಗೆವುವುದುಂ (ಪಚಕಪಾ. ೧೬-೩೭). ೧೬. ಔಷಧಗಳ ಸಿದ್ಧತೆಯಲ್ಲಿ ಒಂದು ಸಲ ಕುದಿಸುವುದು,—ಭಟ್ಟಿಯಿಳಿಸುವುದು : ಮಾತಾಳಿಂಗಮಂ ನೆಜಿ ಮಗುಚ್ಚಿ ಪುಟದಿಂ ಮಂದಾನಳನಿಂದೆ ಸುಟ್ಟು ಮುಖದೊಳ್ ತೀದೊಡೆ ಮುಖವಾಸಮಿಂತಿದತಿಶಯಮಕ್ಕುಂ

(ಕೋಕೋಸ. ೬-೬). ೧೭. ಗೋಡೆ ಕಟ್ಟುವಾಗ ಒಂದು ಸಲಕ್ಕೆ ಹಾಕುವ ಮಣ್ಣಿನ ಸ್ತರ: (ಕ). ೧೮. ಚಿನ್ನವನ್ನು ಬೆಂಕಿಯಲ್ಲಿಟ್ಟು ಶುದ್ಧಗೊಳಿಸಿ ಹೊಳಪುಕೊಡುವಿಕೆ ಮತ್ತು ಅದರಿಂದಂಟಾಗುವ ಹೊಳಪು: "ಪುಟಂ = ಬಣ್ಣಂ" (ಶಾಕೃ. ೨೬೯); ದೇಹವು ಮಿಸುನಿಯಂದದಿ ಪುಟವನಿಟ್ಟುದು (ಶಾಶಿಪು. ೨೨-೬೯); ತೋಱಿದನು ತಾ ಬಳಿಕವಗೆ ಹದಿನಾಱುಬಣ್ಣದ ಪುಟದ ಚಿನ್ನಕೆ ನೂಱುಮಡಿಯೆನೆ ಹೊಳೆ ಹೊಳೆವ ಹೊಮ್ಮಱಿಯ ರೂಪಕವ (ಕೊರಾ. ೩-೬-೦೯); ಕಿಟ್ಟಗಟ್ಟಿದ ಕಬ್ಬಿಣಕ್ಕೆ ಪುಟವ ಹಾಕಿಸೊ ಉತ್ಕೃಷ್ಟ ಬಂಗಾರದೊಳು ಎನ್ನ ಸೇರಿಸೊ (ಪುರಂದ. ೨-೨೬-೩). ೧೯. [ನಾಟ್ಯ] ಕಾಲಿನ ಒಂದು ಭಂಗಿ: "ಪುಟವದೊತ್ತಿ ತೋಱುವ ಹಜ್ಜೆಯೆನಿಕ್ಕು" (ಪುಂಗಾ. ೨೩-೯). ೨೦. [ಛಂದ] ಪ್ರತಿಯೊಂದು ಚರಣದಲ್ಲಿ ಹನ್ನೆರಡು ಅಕ್ಷರಗಳಿರುವ ಸಮಪಾದವೃತ್ತಗಳಲ್ಲಿ ಒಂದು: ನನಮಯ ಗಣಮಿಂತೀ ನಾಲ್ಕುಮೆತ್ತಂ ಜನಿಯಿಸೆ ಯತಿ ಸಪ್ತಸ್ಥಾನದಿಂದಂ...ಈ ಪಾಂಗಿನೊಳ್ ಕಾಮಿನಿಬಗೆ ಪು[ಪಾಕಾಂ. ಘ್]ಟಂ (ಛಂದೋಂಬಾ. ೨-೦೩೬). ೨೧. (?): ಶ್ರೀರತೀಶ್ವರನಶೋಕೆಯ ತಳಿರ ಸರಳ್ಗಳಿಗೆಯೋರಂತೆ ಮಿರುಗುವ ನಿಷಂಗಮಂ ತೊಡಿಪಂತೆ ತಾರಾಳಿಯ ಮೊಗ್ಗೆ ಕಂಚುಕಿಯವ ತೊಡಿಸಿ ಪುಟಮಂ ಬಿಗಿದು ಬಂಧಿಸಿದರು (ಪಪಪೂ. ೨೩-೩೨).

ಪುಟ ಇಳಿಸು = ಭಟ್ಟಿ ಇಳಿಸು: ಅಷ್ಟಮಿಯ ರಾತ್ರಿ ಇಬ್ಬರು ಕುಳಿತು ಏನೋ ಪುಟ ಇಳಿಸುತ್ತಿದ್ದರು. ಮಡಕೆಯೊಂದಕ್ಕೆ ಮುಚ್ಚಳ ಹಾಕಿ . . . ಬೆಂಕಿಯ ಗುಳಿಯಲ್ಲಿ ಪುಟಕ್ಕೆ ಇಟ್ಟಿದ್ದರು (ಪಪೂಪ. ೦೨೯). **ಪುಟಕ್ಕೆ ಹಾಕು = ೧. ಚಿನ್ನ ಮೊದಲಾದುವನ್ನು ಬೆಂಕಿಯಲ್ಲಿಟ್ಟು ಹೊಳಪು ಕೊಡು**: ಅವಳ ಸೌಂದರ್ಯವು ಪುಟಕ್ಕೆ ಹಾಕಿದ ಚಿನ್ನದಂತೆ ಹೆಚ್ಚಿತು (ಪುಂಪಿಪು. ೬೯); ಬಂಗಾರ ಬೆಳ್ಳಿ ಮೊದಲಾದ ಪಂಚಲೋಹಗಳು ಪುಟಕ್ಕೆ ಹಾಕಿ ತೆಗೆಯದಿದ್ದರೆ ಅವುಗಳಿಗೆ ಕಾಂತಿ ಬರುತ್ತದೆಯೆ? (ಪ್ರಶಾಪ. ೩). ೨. ಮೂಸೆಯಲ್ಲಿಟ್ಟು ಸುಡು: ಕಬ್ಬಿಣದ ಕಿಟ್ಟ ತಂದು ಪುಟಕ್ಕೆ ಹಾಕಿ ಲೋಹಭಸ್ಮ ಮಾಡುವರು (ಪುಂಬಿಪು. ೯-೦೪೩). **ಪುಟ ಮಾಡು = ಹೊತ್ತಿದ ಬೆಂಕಿಯನ್ನು ಉಜ್ವಲಗೊಳಿಸು**: ಜಾಂಬವಾದಿಗಳ್ ಕುಂಡಮನಗುಟ್ಟು ಕಾಳಾಗರುಚಂದನಾದಿಯಿಂಧನಂಗಳಂ ಒಟ್ಟಿಯಗ್ನಿಯಂ ಪುಟ ಮಾಡಿ (ಪುಶ್ಶಾಸ್ತ್ರ. ೬-೨೯ ಪ); ಅವರು . . . ಸಡಗರದಿ ಪಂಜುಗಳ ಪುಟ ಮಾಡುತಂ (ಪ್ರಭುಪು. ೯-೨೦೨). [ಸಂ.]

ಪುಟಂನೆಗೆ, ಪುಟನೆಗೆ (ಕ್ರಿ). ಪುಟಚೆಂಡಿನಂತೆ ನೆಗೆ; ಟಣ್ಣನೆ ಹಾರು: ತನ್ನ ಮುಂ ನೆರಪಿದ ಪಾಪಮೆ ಕೋಪದಿಂ ಪೊಡೆಸೆಂಡುಪೊಡೆಯುತಿರ್ದು ದೆಂಬಂತೆ ಪೊಡರದೆ ಪುಟಂನೆಗೆದು ಮಗುಟ್ ಮಗುಟ್ಟಾ ಶಿಲೆಯ ಮೇಲೆ ನುಚ್ಚುನೂಱಾಗಿ ಬಿಟ್ಟುಂ (ಶಾಕೃಪ್ರ. ೬-೯೯ ಪ); ಒದೆದಿಳೆಯಂ ಪುಟಂನೆಗೆದು . . . ಅವ್ವಳಿಪ ಬಗ್ಗದ ಗಂಡಿಕೆಗಂಡು ನೆತ್ತಿಯಗ್ರದೆ ಮೊನೆಯುರ್ಚಿ ಕೆಯ್ಸುರಿಗೆಯಿಂದಿರದಿಕ್ಕಿದನಾ ಪನೇಚರಂ (ಕಲಕಂ. ೩-೩೯). **ಪುಟನೆಗೆ**: ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು (ಕೀಗಾಪ. ೨೦-೩೯); ಪುಟನೆಗೆದೆದ್ದು ವಳಯವ ಕೊಡಹಿ ನಿಂದವು ವೇದವಾಜಿಗಳು (ಶುಸ್ಕಾಗ. ೭-೨೨); ನೆಲಕತ್ತಿ ಹೊಡೆದರು ಮೇಲಕೆ ಪುಟನೆಗೆ ದೇಳುವ ಕಂದುಕದಂತೆ (ಶಾಶಾಪ. ೨೨೦-೯೩). [ಪುಟ$_1$ + ನೆಗೆ$_1$]

ಪುಟಕ (ನಾ). ೧. ಮಡಿಕೆ; ಪದರ. ೨. ಹಳ್ಳವಾಗಿರುವಂಥದು. ೩. ದೊನ್ನೆ. ೪. ಎಲೆಯ ಪೊಟ್ಟಣ. ೫. ಕರಂಡ; ಸಂಪುಟ. ೬. ತಾವರೆ; ಕಮಲ. ೭. ಜಾಜಿಕಾಯಿ. [ಸಂ.]

ಪುಟಕೊಡು 'ಪುಟಗೊಡು' ನೋ.

ಪುಟಕೋಸಿ 'ಪುಟಗೋಸಿ' ನೋ.

ಪುಟಕ್ಕನೆ (ಅ). ತಟ್ಟನೆ; ಕೂಡಲೆ: ಮಲ್ಲಿ ಬೆಂಕಿಪೆಟ್ಟಿಗೆ ಹೊರಗೆ ಒಗೆದು ಮತ್ತೆ ಪುಟಕ್ಕನೆ ಒಳಗೆ ಹೋದಳು (ಪಾಪರು. ೨೩).

[ಪುಟಕ್$_0$ + — ಅನೆ$_1$]

ಪುಟಗೈ (ಕ್ರಿ). ಬೆಂಕಿಯನ್ನು ಉಜ್ವಲಗೊಳಿಸು.—ಪ್ರಕಾಶಮಯವಾಗುವಂತೆ ಮಾಡು: ದೀಪಗಳನತಿಪುಟಗೈದು ನರವರಕುಮಾರಕರ ಚಿತ್ರಪಟನುಪೋದೊಂದ ತರುಣಿ ತೋರಲು ನೋಡಿ ನೋಡಿ ಬೇಸತ್ತುಂ (ಪಪಪೂ. ೨೬-೩೯). [ಪುಟ$_3$ + ಗೈ (<ಕೆಯ್$_1$)]

ಪುಟಗೊಡು, ಪುಟಕೊಡು (ಕ್ರಿ). ೧. (ಆಲಂ) ಬೆಂಬಲವಾಗು; ಪುಷ್ಟಿಕೊಡು: ಅವಳು ತನ್ನ ಮನೆಗಿಂತ ಹೊರಗಿನವಳಲ್ಲ ಎಂಬ ಭಾವನೆಗೆ ಇದು ಮತ್ತಷ್ಟು ಪುಟಗೊಟ್ಟಿತು (ಕ್ಷಾಗಸು. ೦೭೬); ವಾರ್ತಾಸಂಗ್ರಹದ ಪುಟವು ಮಾತ್ರ ಅವನಿಗೆ ಪುಟಗೊಡುತ್ತಿತ್ತು (ಕೂಪಾಶಾ. ೬೯), ರಾಯರ ಈ ದೊಡ್ಡ ನಡತೆಗೆ ಅವರ ಮನೆಯವರೆಲ್ಲ ಪುಟಗೊಟ್ಟು . . . ಕೂಡಿಕೊಳ್ಳುತ್ತಿದ್ದರು (ಶಂಬಹು. ೦೨೦). **ಪುಟಕೊಡು**: ೧. ಭಾವ ಕೃಷ್ಣರಾಯ ಈ ಯೋಚನೆಗೆ ಪುಟಕೊಟ್ಟ, ಅರ್ಥಾಂಗಿ ತಿದಿಯೂದಿದಳು (ಕುರುಶಾ. ೦೭೨); ಅವರು ಅವನಿಗೆ ಕಲಿಸುತ್ತಿದ್ದ ರೀತಿಯೂ ಅವನ ಉತ್ಸಾಹಕ್ಕೆ ಪುಟಕೊಡುವಂತಿತ್ತು (ಪಕಂಶಾ. ೦೦೭). ೨. ಲೋಹಗಳನ್ನು ಬೆಂಕಿಯಲ್ಲಿಟ್ಟು ಶುದ್ಧಗೊಳಿಸಿ ಹೊಳಪು ಕೊಡು: ಪರಾಕ್ರಮಶಾಲಿಗಳಿಗೆ ಯುದ್ಧವು ಸಂಭವಿಸಿದರೆ ಅಗ್ನಿಯಲ್ಲಿ ಚಿನ್ನಕ್ಕೆ ಪುಟಕೊಟ್ಟಂತಾಗುತ್ತದೆ (ಶ್ರೀರಾಯ. ೩೦೯). ೩. (ಬೆಂಕಿಯನ್ನು) ಪಟುಮಾಡು; ಉತ್ತೇಜಿಸು: ಫಕೀರಪ್ಪನು ಇಸ್ತ್ರಿಯ ಬೆಂಕಿಗೆ ಗಾಳೀ ಹಾಕಿ ಪುಟ ಕೊಡುತ್ತಿದ್ದನು (ದಾಸಹು. ೨೨). [ಪುಟ$_3$ + ಕೊಡು$_1$]

ಪುಟಗೊಳಿಸು (ಕ್ರಿ). ೧. ಬೆಂಕಿಯನ್ನು ಹೊತ್ತಿಸು; ಪಟುಮಾಡು: ಬರುಹಿಯಧ್ಮಸ್ರುವಗಳಿಂ ಸತ್ಕರಿಸಿ ವಿಧಿಪೂರ್ವಕದಿ ಮಖಬಾಧುರ ತರೇಂಧನದಿಂದ ಪುಟ [ಪಾಶಾಂ. ಪಟು] ಗೊಳಿಸಿದರು ಹುತವಹನ (ಕೊರಾ. ೦-೬-೯೩); ಅವನು ಆ ಒಲೆಯನ್ನು ಪುಟಗೊಳಿಸುತ್ತಿದ್ದನು (ಪುಪಸು. ೩೨೦). ೨. (ಆಲಂ) ಏರಿಸು; ವೃದ್ಧಿಗೊಳಿಸು: ಸ್ಥಳಮಹಿಮೆಗೆ ಸಂಬಂಧಿಸಿದ ದೇವಪ್ರೇಮವನ್ನು ಪುಟಗೊಳಿಸಿ ಪರಿಪೋಷಿಸುವ ಹಲವು ಯಕ್ಷಗಾನಗಳನ್ನು ಈ ಪಂಗಡಕ್ಕೆ ಸೇರಿಸಬಹುದು (ಯಕ್ಷಗಾ. ೦೯); ಆ ಆವರಣ ಅವನ ಮನಸ್ಸಿನ ವೇದನೆಯನ್ನು ಪುಟಗೊಳಿಸೀತು (ಕೂಪಸ. ೬೦).

[ಪುಟ$_3$ + ಕೊಳ್$_1$ + — ಇಸು$_3$]

ಪುಟಗೋಸಿ, ಪುಟಕೋಸಿ (ನಾ). ೧. ಲಂಗೋಟಿ; ಕೌಪೀನ: ಪುಟಗೋಸಿಗಿಂತ ದರಿದ್ರವಿಲ್ಲ, ಮರಣಕ್ಕಿಂತ ಶಿಕ್ಷೆ ಇಲ್ಲ (ಗಾಪ). (ಗೊ). ೨. ಚಿಕ್ಕವಯಸ್ಸಿನ: ಹತ್ತು ವರುಷದ ಪುಟಗೋಸಿ ಬ್ರಹ್ಮಚಾರಿ ದೇಖೀಲು ಶ್ರೀವೈಷ್ಣವರಿಗೆಲ್ಲರಿಗೂ ತೀರ್ಥಪ್ರಸಾದ ವಿನಿಯೋಗವಾದ ಮೇಲೆ ಬಾಕಿಯವರ ಮಾತು (ಕಂಪ. ೩೯೦). ೩. (ಆಲಂ) ಕೆಲಸಕ್ಕೆ ಬಾರದ; ಬೆಲೆಯಿಲ್ಲದ; ಕ್ಷುದ್ರವಾದ: ಈ ಪುಟಗೋಸಿ ವಿಷಯಕ್ಕೆ ಯಾಕೆ ತಲೆ ಕೆಡಿಸಿಕೊಳ್ಳುತ್ತಿದ್ದಿ? (ಕೂಪಿ). **ಪುಟಕೋಸಿ**: ೧. ಪುಟಕೋಸಿಗೂ ಗತಿಯಿಲ್ಲದವನು ಮಹಾಮಹಾ ಮಾತನಾಡುತ್ತಾನೆ (ಕೂಪಿ).

[ಪುಟ$_3$+ಗೋಸಿ (< ಗೋಚಿ)./ತೆಲು. ಪುಟ್ಟಗೊಂಚಿ]

ಪುಟದೋಷ (ನಾ). ರತ್ನದ ಒಂದು ದೋಷ, —ಅವಗುಣ: ಕರ್ಕರಂ ಕೋಮಲಂ ಮಂದದೀಪಿ ಹೊಗೆಯುಂ ನಕ್ಕಲಿನ ಬಣ್ಣಮಾದು ಮೂರು ರತ್ನಂಗಳೊಳು ಪೊಕ್ಕು ವಿಶ್ರಿತಮಾಗಿ ದೋಷಮುಮ್ಮೆಸಗಿತಾ ಮೂರರೊಳ್ ಬೇರೆ ಬೇರೆ ಅಕ್ಕರಿಂ ಧರಿಸಿದವರಿಗೆ ಫಲವ ಪೇಳುವೆಂ ಕರ್ಕರಕೆ ಭಿನ್ನವೆಂದೊಡದು ಹುಟಿದುದೆಂದು ಅಕ್ಕಜದ ಮೊರಬು ಬಳಿಯಾಣ ಸಸುನಗಳೆಂದು ಪುಟದೋಷವೆಂದಿರ್ಪುದು (ರತ್ನಶಾ. ೯-೩). [ಸಂ.]

ಪುಟದೋಱು (ಕ್ರಿ). (ಆಲಂ) ವ್ಯಕ್ತವಾಗು; ಪ್ರಕಟಗೊಳ್ಳು: ಸುಗುಣ ನಿನ್ನಯ ಕೆಂಬಲ್ಲ ಕೆಂಡ ಮುಗುಳ್ನಗೆಯಿಂದವೆ ಪರಿಪರಿವಾಳ ಪುಟದೋಱ

ಮಿಗೆ ಉರದೊಳು ಉರ ಒತ್ತಿಕೋ ಬಾ ಬಾ (ಶಿಪಗೀ. ೦೬೯-೮೨೩).

[ಪುಟ$_3$ + ತೋಱು]

ಪುಟನೆಗೆ 'ಪುಟಂನೆಗೆ' ನೋ.

ಪುಟಪಡು (ಕ್ರಿ). ಪುಟಕ್ಕೆ ಬೀಳು ; ಪುಟಕ್ಕೆ ಹಾಕಲ್ಪಡು : ಚಳಕಿ ಚಳವಾಗೆ ಪಾಱಂ ಸೆಳೆವೆಳವಂ ಪಟ್ಟಿಸಂಡಿ ಪುಟಪಟ್ಟಿರೆ ಕೆಚ್ಚಳುರ್ದಟಿಲೋಹದ ಪೊಲ್ ಕಂಕಳಲೋಹಂ ಕರಗಿ ಕೊರಗಿದಂ ಚಾಣೂರಂ (ಅರ್ಜುನೇ. ೮-೧೦೮).

[ಪುಟ$_3$ + ಪಡು$_1$]

ಪುಟಪಾಕ (ನಾ). ೧. ಬೇರೆ ಬೇರೆ ಔಷಧದ್ರವ್ಯಗಳನ್ನು ಎಲೆಗಳಿಂದ ಸುತ್ತಿ, ಮಣ್ಣು ಮೆತ್ತಿ ಬೆಂಕಿಯಲ್ಲಿ ಇಟ್ಟು ಬೇಯಿಸುವ ಒಂದು ಕ್ರಮ,—ವಿಧಾನ : ಪಸಿಯ ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ (ಅದಿಪು. ೫-೮೫ ಪ) ; ಕೆಂಗಲಿಸುವ ಕೆಂಡದೊಳ್ ಪೂಟ್ಟು ಪುಟಪಾಕಂ ಸುಡೆಯುಂ (ಪರ್ಶಪು. ೫ ೩೯ ಪ); ಕಾಯ್ದೆಣ್ಣೆಯೊಳದ್ದುವರು ಲೋಹರಸದೊಳು ತೊಯ್ದಿಕ್ಕಿ ಪುಟಪಾಕದಿಂದ ಒಯ್ದು ತಾಳಿಪರು ಕಾವಲಿಯೊಳು (ಪರ್ಶಪ. ೮-೮೯). ೨. (ಆಲಂ) ಒಳಗೊಳಗೇ ಬೇಯುವುದು : ಕಣ್ವಋಷಿಯ ಕರುಳಿನಲ್ಲಿ ಎಂತಹ ಪುಟಪಾಕ ನಡೆದಿತ್ತೆಂಬುದನ್ನು ಹೆಣ್ಣು ಹೆಡೆದವರೆಲ್ಲರೂ ಬಲ್ಲರು (ಗಾಳಿಪ. ೦೫೬). [ಸಂ.]

ಪುಟಪಾಕಂಗೈ (ಕ್ರಿ). ಪುಟಪಾಕ ಮಾಡು : ತಾಳೀಸಪತ್ರೆ, ಮೆಣಸು . . . ಸಮಸಕ್ಕರೆವೆರಸಿ ಪುಟಪಾಕಂಗೈದು (ಸಕಸ್ಯ. ೨೬೯).

[ಪುಟಪಾಕ+ಗೈ (<ಕೆಯ್$_1$)]

ಪುಟಪಾಕವಾನು (ಕ್ರಿ). (ಆಲಂ) ಬೇಯು ; ಶುದ್ಧಗೊಳ್ಳು : ಹೊಸ ಹೊಸಬನಾಗುವನನುಕ್ಷಣಂ ಮೊನವನು ವಸುಧೆಯೂ ಮೂಸೆಯಲಿ ಪುಟಪಾಕವಾಂತು ರಸಮೂರ್ತಿಯಾಗುವನು ಜಗದಾತ್ಮಮತಿ ಬೆಳೆಯೆ (ಮಂಕುಳ. ೬೦೯). [ಪುಟಪಾಕ+ಆನು$_1$ (<ಆನ್$_1$)]

ಪುಟಪುಟ (ನಾ). ಒಂದು ಅನುಕರಣ ಪದ : ಪುಟಪುಟನೆ' ಪರಾ.

ಪುಟಪುಟನೆ (ಅ). ಪುಟಪುಟ ಎಂದು : ರತ್ನದ ರಸದಾ ಕಾರಂಜೀಯೂ ಪುಟಪುಟನೆ ಪುಟದು (ಗಂ. ೦-೯). [ಪುಟಪುಟ$_+$—ಅನೆ$_1$]

ಪುಟಪುಟಿಸು 'ಪುಟುಪುಟಿಸು' ನೋ.

ಪುಟಬಾಳೆ 'ಪುಟ್ಟಬಾಳೆ' ನೋ.

ಪುಟಬೀಜ (ನಾ). ಒಂದು ಬಗೆಯ ಸಸ್ಯ : "ಪುಟಬೀಜಂ—ಹರಳು ವೀರೆ" (ಕಿಷಧ. ೦೦೦). [?]

ಪುಟಭೇದ (ನಾ). ೧. ನದಿ ಮೊದಲಾದ ಜಲಾಶಯಗಳಲ್ಲಿರುವ ತಿರುವು,—ಸುಳಿ,—ಚಕ್ರ : "ಚಕ್ರಾದಿ. ಪುಟಭೇದಃ—ಈ ೨ ತೋಯೆಯ ಮುರಿವು" (ಹಲಾಯು. ೦೦೦-೯೯). ೨. ನಗರ; ಪಟ್ಟಣ. ೩. ಒಂದು ಬಗೆಯ ವಾದ್ಯ. [ಸಂ.]

ಪುಟಭೇದನ (ನಾ). =ಪುಟಭೇದ ೨ : "ಪತ್ತನಂ ಪುಟಭೇದನಂ . . . ಪುರೀ—ಈ ೧೧ ಪಟ್ಟಣಂ" (ಹಲಾಯು. ೯೯-೦೩೦); ತನ್ನ ಪುಟಭೇದನಕೆ ಪೋದನು ಮೇಘಸಂಧಿಧರಾಧಿನಾಯಕನು (ತಿಮ್ಮಲಿ. ೭-೦೦). [ಸಂ.]

ಪುಟಮಿಕ್ಕು, ಪುಟವಿಕ್ಕು (ಕ್ರಿ). ಪುಟಕ್ಕೆ ಹಾಕು; ಹೊಳಪುಗೊಡು : ಪುಟಮಿಕ್ಕಿ ಮಿಱುಗುವ ಕಡೆಯಾಣೆಯ ಮಿಸುನಿಯಿಂ ಸಮದು ಥಳಥಳಿಸಿ ಪೊಳೆವ ನೆಲೆಮಾಡದ ಮೇಲೆ . . ಒಡ್ಡೋಲಗುಗೊಟ್ಟು ಲೀಲೆಯಿಂದಿರ್ಪುದುಂ (ಪಾರಪು. ೦೦-೦ ಪ). ಪುಟವಿಕ್ಕು : ಒರೆಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ (ಐಸ. ೨೫೦). [ಪುಟ$_3$+ಇಕ್ಕು]

ಪುಟಮಿಗು (ಕ್ರಿ). (ಆಲಂ) ಅಧಿಕವಾಗು; ಹೆಚ್ಚಾಗು; ಅತಿಶಯಿಸು : ಬೆಱಗಾಗಿ ಪುಟಮಿಗೆ ಡೆಂಡೆಯಿಸಿ ತೊದಲಿಸುತೆ ಭಕ್ತಿಕರಂಡ ಪೊಗಳಿದ ಪಾಡಿದಂ ಶ್ರೀ ಜಡೆಯ ಶಂಕರನ (ಶಂಕರಾ. ೫-೩). [ಪುಟ$_3$+ಮಿಗು]

ಪುಟವಾಳೆ 'ಪುಟ್ಟಬಾಳೆ' ನೋ.

ಪುಟವಿಕ್ಕು 'ಪುಟಮಿಕ್ಕು' ನೋ.

ಪುಟವಿಡು (ಕ್ರಿ). ೧. = ಪುಟಮಿಕ್ಕು : ಪುಟವಿಟ್ಟಳವಟ್ಟ ಮಿಸುನಿ ಪೊಲ್ ಮಂಗಳನಿರ್ಮಳರುಚಿರರೂಪೆ ಕಣ್ಗಸೆದಿರ್ದಳ್ (ಗಿರಿಕ. ೩-೨೯); ನೆನೆದ ಮಾತವನು ತನ್ನ ತಂದೆಯ ಮನದ ಮಚ್ಚದೊಳೊರೆದು ಕರ್ಣನ ನೆನಹಿನಲ ಪುಟವಿಟ್ಟು ಶಕುನಿಯ ನೀತಿಯಲಿ ನಿಗುಚಿ . . . ಮೈದುನನ ನುಡಿಯಲಿ ಬಣ್ಣವಿಟ್ಟನು (ಕುಪ್ಯಾಉ. ೨-೨೨); ನೆಱೆ ಪುಟವಿಟ್ಟ ಮಿಸುನಿಯ ಗುಬ್ಬಿಗಳ ಕಟ್ಟಿದ ಹೊಕ್ಕುಳ ಗುಟೆಯ ತೇಜಗಳಿಟ್ಟಣಿಸು ತಲೈದಿದುವು (ಕಂಸಪಿ. ೨೩-೯೯); ಕಾಳಿದಾಸನು ಜೀವಕಳೆ ತುಂಬಿ ನಿರ್ಮಿಸಿದ ಶಕುಂತಲೆ ಪುಟವಿಟ್ಟ ಸ್ವರ್ಣಪ್ರತಿಮೆ(ಶಾಕಿದ. ೯೬೬). ೨. (ಆಲಂ) ಉತ್ತೇಜನಗೊಳಿಸು; ಪ್ರೋತ್ಸಾಹಿಸು : ರಾಮಚಂದ್ರಗೆ ವನಿತೆಯನು ಕೊಡದಂತೆ ಮನದಲಿ ಖತಿಯ ಪುಟವಿಟ್ಟು ದಿನದಿನಂಪ್ರತಿ ವೈರಭಾವವನೆನಗೆ ಹುಟ್ಟಿಸಿ ಸಂಹರಿಸುವನು (ಕೌತಿರಾ. ೨೩-೦೬); ನಾರಾಯಣಮಾಸ್ತರ ರೊಡನೆ ವ್ಯತಿರಿಕ್ತವಾಗಿ ಕೂಡಿಕೊಂಡು ನಕ್ಕು, ಸಡಗರದಿಂದ ಮಾತನಾಡುವುದು ದಿನದಿಂದ ದಿನಕ್ಕೆ ಪುಟವಿಟ್ಟಂತಾಯ್ತು (ಶಾಸೇಂ. ೮೬).

[ಪುಟ$_3$ + ಇಡು$_1$]

ಪುಟವಿಳಿ (ಕ್ರಿ). ಬೆಂಕಿಯಿಂದ ಕಾಂತಿ ಪಡೆದು ಹೊರಬರು: ಬಿನ್ನಣದಿ ಪುಟವಿಳಿದ ಸೊನ್ನೆಯ ತಿರಸ್ಕರಿಪ ಚೆನ್ನೆಯರ್ . . . ನಡೆತಂದರು (ಸಂದಿಮಾ. ೯-೯). [ಪುಟ$_3$ + ಇಳಿ$_1$ (<ಇಱಿ$_1$)]

ಪುಟವೇರಿಸು (ಕ್ರಿ). ೧. ಬೆಂಕಿಯಲ್ಲಿ ಹಾಕು ; ಸುಡು ; ದಹಿಸು : ಅವರನ್ನು ಹಿಡಿದು ಪುಟವೇರಿಸೋಣ ! (ನಿಗಡ. ೫೨-೨೨). ೨. (ಆಲಂ) ಉತ್ಸಾಹಗೊಳಿಸು ; ಚೇತರಿಸು : ಸಾರಿ ನೀವೀಗಲು ಪರೀಕ್ಷಿತನ ಮನವ ಕಲಿಯೇರಿಸಿಯೆ ನೀತಿವಚನಂಗಳಿಂದಲವನ ಪುಟವೇರಿಸಿಯೆ ದುಗುಡವಂ ಬಿಡಿಸಿ(ತುರಂಗ. ೯೩-೨೨). [ಪುಟ$_3$ + ಏರಿಸು (<ಏಱಿಸು)]

ಪುಟವೇಳ್$_1$, ಪುಟವೇಳು (ಕ್ರಿ). ಪುಟಿದು ಏಳು ; ಮೇಲಕ್ಕೆ ಹಾರು : ಘಟಶತಘ್ನಗಳ ಗುಂಡುಗಳುಱೆ ಮೇಲಕ್ಕೆ ಪುಟವೆದ್ದು ನಡೆದುವು (ಕಂಸಪಿ. ೦೨-೦೮). ಪುಟವೇಳು : ಚೆಂಡು ತೂತಾಗಿರುವುದರಿಂದ ಪುಟವೇಳುತ್ತಿಲ್ಲ (ರೂಪಿ). [ಪುಟ$_1$ + ಏಳ್$_1$ (<ಏಱ್$_1$)]

ಪುಟವೇಳ್$_2$ 'ಪುಟವೇಱ್' ನೋ.

ಪುಟವೇಳು 'ಪುಟವೇಳ್$_1$' ನೋ.

ಪುಟವೇಱು (ಕ್ರಿ) ೧. (ಆಲಂ) ಕಾಂತಿಯನ್ನು ಹೊಂದು ; ಶೋಭೆಯನ್ನು ಪಡೆ : ಇನಿಸಿನಿಸಾ ಗರ್ಭಂ ಪ್ರತಿದಿನವೊಯ್ಯನೆ ಬಳೆಯೆ ನಯದೆ ಪುಟವೇಱೆ ನಿತಂಬಿನಿ ಕಾರೊಳೆಸೆವ ಕಾದಂಬಿನಿಯಂದದೆ ಮಂದಮಂದ ಗಮನದೆ ನಡೆದಳ್ (ಕಾದಂಪು. ೩೮೦). ೨. ಹೆಚ್ಚಾಗು ; ವೃದ್ಧಿಯಾಗು : ಪುಳಕಂ ಪುಟವೇಱೆ ಭೋಂಕನೆದ್ದುನ್ನತಾಸನವೇಱೆ (ಐಸ. ೦೦-೫). [ಪುಟ$_3$ + ಏಱು$_1$ (<ಏಱ್$_1$)]

ಪುಟವೇಱ್, ಪುಟವೇಳ್$_2$ (ಕ್ರಿ). (ಆಲಂ) ಉಬ್ಬು; ಉತ್ಸಾಹ ಪಡು: ಪೆರ್ಚುವನಪ್ಪುವಂ ನಲಿವಂ . . . ಪುಟವೇಟ್ಟನತಿಪ್ರಮೋದವಾಂತರ್ಚಿಪನುದ್ಭಟಕ್ಷಿತಿಪಂ (ಕಾದ್ಯಪಿ. ೦೦-೨). ಪುಟವೇಳ್$_2$: ಗಿರಿರಾಜನೊಡಂ ಬಟ್ಟಾದರದಿಂದಂ ಪುಳಕಿಸುತ್ತೆ ಪುಟವೇಳುತ್ತುಂ ಪರಿಚಾರಪಟುಗಳೆನಿಸುವ ತರುಣಿಯರಂ ಕೂಡಿ ಕೊಟ್ಟು ಸಂತಸದಿಂದಂ (ಗಿರಿಕ. ೩-೯); ಪೂಜೆಯಂ ಮಾಡಿ ಪುಟವೆದ್ದಾಡುವರ್ ಕೆಲರು (ಐಸ. ೭-೮೬). [ಪುಟ$_3$+ಏಱ್$_1$]

ಪುಟಸಂಸ್ಕಾರ (ನಾ). ಲೋಹಾದಿಗಳನ್ನು ಬೆಂಕಿಯಲ್ಲಿಟ್ಟು ಕಾಯಿಸಿ ಶುದ್ಧಗೊಳಿಸುವಿಕೆ ; ಪುಟಕ್ಕೆ ಹಾಕುವಿಕೆ : ನಿನಗುಳಿದ ಜಗವ ಮುಟ್ಟಿಪ ಸೇತು ಸಂಸಾರ ಮನಕೆ ಪುಟಸಂಸ್ಕಾರ (ಮಂಕುಳ. ೬೦೦). [ಸಂ.]

ಪುಟಸನ್ನೆಗೈ (ಕ್ರಿ). ಕೈಯಿಂದ ಚಪ್ಪರಿಸಿ ಸನ್ನೆ ಮಾಡು : ವಾಯುವೇಗದ ತುರಂಗಗಳನಡರ್ದು ಸಲ ವೈಯಾರದಿಂದ ಪುಟಸನ್ನೆಗೈದೊಲವಿ

ನಿಂದಾಯೆಸುತೆ ಕಂದಮಂ ತಟ್ಟುತ್ತೆ (ಶೂರಾಸು. ೧೨-೬).

[ಪುಟ್ಟ + ಸನ್ನೆಗೈ (< ಸನ್ನೆಗೆಯ್)]

ಪುಟಾಣ್ಣ[1] 'ಪುಟ್ಟಾಣಿ' ನೋ.

ಪುಟಾಣ್ಣ[2] 'ಪುಠಾಣಿ' ನೋ.

ಪುಟ್ಟ[1] (ಕ್ರಿ). ಮೇಲಕ್ಕೆ ಚಿಮ್ಮು; ನೆಗೆ ; ಹಾರು : ಕುಂದ ಮಂದರೆ ಇಳಿದು . . . ಗಂಧಮಾದನಗಿರಿಗೆ ಹಿಂಗದೆ ಪುಟಿದು ವಾರಿನಿಧಿಯ ನೆರೆದ ಗಂಗೆಗಾರುತಿಯ ಬೆಳಗಿರೇ (ಪಶಕೀ. ೦೭-೬); ಹಾಸ್ಯ ಅಂದರೆ ಬುಗ್ಗೆಯಾಗಿ ಪುಟಿಯುತ್ತದೆ (ಅಪೋಲೀ. ೧೩೭); ನೀರಿನ ಕಾರಂಜಿ ಪುಟಿಯುವುದನ್ನು ಈಕ್ಷಿಸುತ್ತ ರೇಣು ಕೇಳಿದಳು (ಹೇಮಂತ. ೨೪೬).

ಪುಟಿಪುಟಿ (ದ್ವಿರುಕ್ತಿ) : ಭರದೆ ವಾರಿಧಿಯಲ್ಲಿ ಹಾರಲು ಶಿರದ ಛಿದ್ರ ದ್ವಾರದಿಂದೆತ್ತರದೆ ನೀರ್ಪುಟಿಪುಟಿದು ಕಣ್ಣಿಗೆ ಚಂದಗಾಣುವದು (ಕಳುಪಂ. ೦೪೦-೧೦).

ಪುಟ್ಟ[2] (ನಾ). ಚಕ್ರದ ಆರೆಕಾಲು : ಜನಪದಸಾಹಿತ್ಯವೆನ್ನುವುದು ಜಾನಪದಚಕ್ರದ ಒಂದು ಪುಟ . . . ಹಲವು ಪುಟಿಗಳು ಕೂಡಿ ತಾನೆ ಒಂದು ರಥದ ಚಕ್ರ ? (ಸುವರ್ಣ. ೨೨). [?]

ಪುಟಿಕೆ (ನಾ). ೧. ಕರಂಡ; ಭರಣಿ; ಡಬ್ಬಿ: ಮದನನ ಸುಗಂಧಭಂಡಾರದ ಪುಟಿಕೆಗಳೆನಿಸಿ ಕಂಪು ಮಗಮಗಿಪಲರ್ವಚ್ಚದ ಪಡಲಿಗೆಗಳನೊಟ್ಟೈಸಿದನ ವನಚ್ಯುತನ ಮುಂದೆ ಮಾಲಾಕಾರಂ (ಪಗಂ. ೬-೧೬) : ತರವೇಟ್ಮಾಣಿಕ್ಯ ಭಂಡಾರದ ಪುಟಿಕೆಗಳಂ (ಶಮದ. ೨೯೯ ಪ್ರಯೋ). ೨. ದೊನ್ನೆ ; ಎಲೆಯ ಬಟ್ಟಲು : ಪೂವಿಗೆ ಪು [ಪಾಠಾಂ. ಘು]ಟಿಕೆಯ ಮಾಳ್ಪೆನೆಂದಾಗ ಜಯಾ ವತಿಯತಿಹರುಷದೊಳು ಆ ವನರುಹದೊಂದೆಲೆಗೊಯ್ಯೆ ಬೆಳ್ಗೊಡೆಯಾ ವಸುಧಾಪತಿಗಾಯ್ತು (ಕ್ರೀಪಾಠ. ೧೨-೪೮). 'ಪತ್ರಪುಟಿಕೆ' ಪರಾ. ೩. ಜಾಕಾಯಿ; ಜಾಯಿಕಾಯಿ : ಎಕ್ಕೆಹಾಲಿನಲ್ಲಿ ಚತುಷ್ಕಶಃ ಟಂಕಣ ವನ್ನಾಗಲೀ ಪುಟಿಕೆಯನ್ನಾಗಲೀ ಹಾಕಿ ಮರ್ದಿಸಿ ಗಜಪುಟವನ್ನು ೨೦ ಕೊಟ್ಟರೆ ಭಸ್ಮವಹುದು (ಪಿಸ್ಪಂ. ೨೨). ೪. ಏಲಕ್ಕಿ. [ಸಂ. ಪುಟಿಕಾ]

ಪುಟಿಗಾಲು (ನಾ). ನೆಗೆಯುವ ಕಾಲು ; ಪುಟಿದೇಳುವ ಕಾಲು : ನಿನ್ನ ಪುಟಿಗಾಲಿನಲಿ ಹರ್ಷ ದುಃಖದ ಋತು (ಪಂಪು. ೪೧-೩).

[ಪುಟ್ಟ + ಕಾಲು$_1$ (<ಕಾಲ್$_1$)]

ಪುಟಿಗೆ (ನಾ). ೧. ಪುಟಿಯುವಿಕೆ ; ನೆಗೆತ. ೨. ಮೀಟು ; ಜೀಕು : ಕಮಲಾಬಾಯರ ಕೈಗೆ ಪುಟಿಗೆ ಕೊಟ್ಟು ಉಷೆಯು ಸುಶೀಲೆಯೆಡೆಗೆ ಸಾಗರವರಿದಳು (ಸಪುಜೀ. ೬೨೪). 'ಮುಂಗಾಲ್ಪುಟಿಗೆ' ಪರಾ.

[ಪುಟ್ಟ + — ಗೆ]

ಪುಟಿತ (ಗು). ೧. ಹೆಣೆದ ; ಜೋಡಿಸಿದ. ೨. ಮಡಿಚಿದ. ೩. ಹೊಲಿದ ; ಕೂಡಿಸಿ ಕಟ್ಟಿದ. ೪. ಉಜ್ಜಿ ಪುಡಿ ಮಾಡಿದ; ಹುಡಿಗೊಳಿಸಿದ. ೫. ಸಂಕುಚಿತವಾದ ; ಸಂಕೋಚಗೊಳಿಸಿದ. ೬. ಪ್ರಕಟಿಸಿದ ; ವ್ಯಕ್ತಪಡಿಸಿದ. ೭. ಹೇಳಿದ; ನುಡಿದ. [ಸಂ.]

ಪುಟಿಯಿಸು, ಪುಟಿಸು (ಕ್ರಿ). ಚಿಮ್ಮಿಸು; ನೆಗೆಸು : ನಾಲ್ವತ್ತು ಗೆಳೆಯರ ಕೈ ಉಬ್ಬಿಸಿದವನ ತಲೆಯಿಂದ ನೆತ್ತರು ಪುಟಿಯಿಸದಿದ್ದರೆ ನಾನು ಜಾತಿವಂತ ಅಂಬಿಗನಲ್ಲ (ರಂಗರೋ. ೧೨). **ಪುಟಿಸು** : ನಮ್ಮ ಹಳ್ಳಿಗರು ಆಗಾಗ ಹಾಸ್ಯದ ಬುಗ್ಗೆಯಾಗಿ ಬೆಡಗುಗಳನ್ನೊಳಗೊಂಡ ಹಾಡುಗಳ ಕಾರಂಜಿಯನ್ನು . . . ರಸಕವಿಗಳಾಗಿ ಪುಟಿಸಿದ್ದಾರೆ (ಕನ್ನಣಾ. ೪೯) [ಪುಟ್ಟ + — ಇಸು$_3$]

ಪುಟಿಸು 'ಪುಟಿಯಿಸು' ನೋ.

ಪುಟೀಪು (ನಾ). ಗೋಡೆ ಅಥವಾ ಹಲಗೆಯ ಮೇಲೆ (ಚಿತ್ರ, ಸುಳುಹು ಮೊದಲಾದುವುಗಳ ರಚನೆಗಾಗಿ) ಸುತ್ತಣ ಮಟ್ಟಕ್ಕಿಂತ ಉಬ್ಬಾಗಿ ಅಥವಾ ತಗ್ಗಾಗಿ ಮಾಡಿದ ವಿಭಾಗ,—ಅಂಕಣ : ಇದನ್ನು ಮಹಡಿಯ ಮೆಟ್ಟಲುಗಳು ಪುಟೀಪುಗಳು (Panels) ಮತ್ತು ತೆಳುಗೋಡೆ ಗಳಲ್ಲಿಯೂ ಉಪಯೋಗಿಸುತ್ತಾರೆ (ಶಿಲ್ಪಸಾ. ೩೨೪) ; ಎರಡು ಪಟ್ಟಿಕೆ ಅಥವಾ ಪುಟೀಪುಗಳಲ್ಲಿ (Panels) ನಟರಾಜನ ನಾಟ್ಯಭಂಗಿಗಳು ಶಿಲ್ಪಿತ ವಾಗಿವೆ (ಪೂಳಂದಿ. ೯೬). [?]

ಪುಟು (ನಾ). ಒಂದು ಅನುಕರಣಪದ : 'ಪುಟುಗುಟ್ಟು' ಪರಾ.

ಪುಟುಗುಟ್ಟು (ಕ್ರಿ). ಪುಟುಪುಟು ಎಂದು ಬಡಿದುಕೊಳ್ಳು : ಪುಟು ಗುಟ್ಟುತ್ತಿರಲೆದೆ ತುಟಿ ಕಚ್ಚಿ ಹಿಡಿದಿದ್ದೆ ನನ್ನಲ್ಲೆ ನಾನಿಲ್ಲ ಎಂಬಂತಿರೆ (ಸಪೀಗೀ. ೨೯-೫೪೫). [ಪುಟು + ಕುಟ್ಟು$_1$]

ಪುಟುಪುಟಿಸು, ಪುಟಪುಟಿಸು (ಕ್ರಿ). ವಟಗುಡು ; ಗೊಣಗು : ಮೂರ್ತಿ ಮೆಲ್ಲಗೆ ನೆಲಕ್ಕೆ ಹಣೆ ಹಚ್ಚಿ ನಮಸ್ಕಾರ ಮಾಡಿ ಮನಸ್ಸಿನಲ್ಲಿಯೇ ಪುಟು ಪುಟಿಸಿದ (ಪರ್ಧೋಪಿ. ೨೦) ; ಭೀಮಪ್ಪ . . . ಬಾಯಲ್ಲಿಯೇ ಏನೇನೋ ಪುಟುಪುಟಿಸಿದ (ಮಾಸ್ಕಾಹ. ೧). **ಪುಟಪುಟಿಸು** : ಬಾಯಲ್ಲೇ ಏನೋ ಪುಟ ಪುಟಿಸುತ್ತ ಅಂಗಡಿಯತ್ತ ನಡೆದೇ ಬಿಟ್ಟರು (ಮೂರುದಾ. ೨೫೬).

[< ಪುಟು + — ಇಸು$_3$]

ಪುಟುವು (ನಾ). (ಆಲಂ) ಪ್ರೋತ್ಸಾಹ; ಬೆಂಬಲ: ಅವನ ಮದುವೆ ಮಾಡ ಬೇಕೆಂದು ರಾಯರ ಹಂಬಲ ; ಆಚಾರ್ಯರ ಪುಟುವು (ಕ್ರೀರಂಗ. ೧೯); ಅವರೇ ಶ್ಯಾಮರಾಯನಿಗೆ ಪುಟುವು ಕೊಡುತ್ತಿದ್ದ ವಾರ್ತೆ ಗೌಡರಿಗೂ ಹತ್ತಿತ್ತು (ದೀಪಹ. II, ೦೦೦). [< ಪುಟ್ಟ + — ವು]

ಪುಟೆಗಳ್ಳ (ನಾ). ಒಬ್ಬಾತನ ಹೆಸರು : ಅಯ್ಯಣಯ್ಯನ ಮಗಂ ಪುಟೆ ಗಳ್ಳನ್ನಾಗೆದೊಡೆ (ಶಾಇಇ. IX-1, ೬೫-೧೦; 947). [?]

ಪುಟ್ಟ[1] (ನಾ). ೧. ಚಿಕ್ಕವನು ; ಸಣ್ಣವನು : ಹೊಟ್ಟೆಯ ಕರುಳ ಹಾರವ ಮಾಡಿ ಪುಟ್ಟಗೆ ವರವ ಕೊಟ್ಟಾನ್ಮ್ಯಾ (ಕಪಳ. ೭೭-೪) ; ರತಿಯು ಪರಿಪಾಲಿ ಸುವ ಪುಟ್ಟನನ್ನು ಕರೆತರ್ಪುದು (ಪಪಮೋ. ೦೨-೩೦) ; ಹೋದ ಪುಟ್ಟ ಬಂದ ಪುಟ್ಟ, ಪುಟ್ಟನ ಹೆಜ್ಜೆ ಕಂಡೋರಿಲ್ಲ (ಗಾಪ). ೨. ಮಕ್ಕಳನ್ನು ಪ್ರೀತಿ ಯಿಂದ ಕರೆಯುವಾಗ ಬಳಸುವ ಒಂದು ಪದ : ಊಟ ಮಾಡು ಬಾ ಪುಟ್ಟ (ಕೂಡಿ). (ಗು). ೩. ಚಿಕ್ಕ ; ಸಣ್ಣ : ತರಳನ ಪುಟ್ಟ ಪಾದ ದೊಳಿರ್ದ ತಾವರೆಯರಲನು ನೊಸಲಿಗೊತ್ತುವಳು (ಪೋಹತ. ೦೭-೬೪) ; ಅರ್ಭಕನ ಕಣ್ಣೆ ಪುಟ್ಟ ಸಾಲಗ್ರಾಮದೊಂದು ರಮಣೀಯ ಶಿಲೆ ಕಟ್ಟಿಸಕ ದಿಂದೆ ಕಾಣಿಸಲದಂ ತಾನೆತ್ತಿಕೊಂಡು . . . ಬೈಚಿಟ್ಟುಕೊಂಬಂ ಬಾಯೊ ಳನವರತಂ (ಶೈಮಿಪಾ. ೨೯-೨೩) ; ನಂಜಮ್ಮ . . . ಮಗುವಿನ ಕೈಕಾಲು ಗಳಿಗೆ ಪುಟ್ಟ ಹೊನ್ನ ಬಳೆಗಳನ್ನು ತೊಡಿಸಿದಳು (ಜಾಹುತ್ತ. ೪೦).

ಪುಟ್ಟದು = ಚಿಕ್ಕದು ; ಸಣ್ಣದು : ಮಕ್ಕಳ ಕೈ ಪುಟ್ಟದು. ಅದರ ಗ್ರಹಣ ಶಕ್ತಿ ಅದಕ್ಕೆ ತಕ್ಕಂತೆ ಅಲ್ಪ (ಜೀಪಾತ್ಮ. ೦೭೩) ; ಬಿಲ್ಲಿನಂತೆ ಬಾಗಿದ್ದ ತುಟಿ; ಪುಟ್ಟದಾದ ಬಾಯಿ (ಕಳಹು. ೨).

[ದೇ.॥ ತುಳು. ಪುಟ್ಟ ; ತೆಲು. ಪೊಟ್ಟಿ, ಪೊಟಿ./ಸಂ. ಪುಟ್ಟ್ = ಚಿಕ್ಕದಾಗು]

ಪುಟ್ಟ[2] (ಗು). ೧. ಪೋಷಿತ ; ಪುಷ್ಟ : "ಪುಟ್ಟ — ಪುಷ್ಟ = ಪುಷ್ಟಿ ಯಾದ" (ಶಪ್ಕಳೋ. ೨೬). (ನಾ). ೨. ಪೋಷಣೆ ಹೊಂದಿದುದು : 'ಪರಪುಟ್ಟ' ಹೋ. [< ಸಂ. ಪುಷ್ಟ./ಪ್ರಾ. ಪುಟ್ಟ]

ಪುಟ್ಟಂಪುರಳೆ (ನಾ). ಒಂದು ಬಗೆಯ ತರಕಾರಿ ಸಸ್ಯ ; ಪುಳ್ಳಂಪುರಚಿ : ಉಪ್ಪು, ಉಪ್ಪಿನ ಸೊಪ್ಪು, ಪುಟ್ಟಂಪುರಳೆ, ಪುಳ್ಳಂಪುರಚಿಸೊಪ್ಪು, ಹುಳಿಚಿಕ್ಕ (ಪ್ರಾಸಿಗಿ. ೫೯-೨೦೭೭). [?]

ಪುಟ್ಟಗಾವುಂಡ (ನಾ). ಒಬ್ಬಾತನ ಹೆಸರು : ತೊಟ್ಟಿಲ ಪುಟ್ಟಗಾವುಣ್ಣನುಂ ಎಱೆಯಣ್ಣ ಪೆರ್ಮ್ಮಾಡಿ ಕೆಱೆಯ ಕಟ್ಟಿ ಕಲ್ಲ ತುಂಬನಿಕಿಸಿದ (ಪ್ರಾಅಂ. ೦೯೩೨, ೧೧-೪ ; ಸು. ೨೪೫ ಕತ). [ಪುಟ್ಟ$_1$ + ಗಾವುಂಡ (< ಗಾಮುಂಡ)]

ಪುಟ್ಟಗೆ 'ಪುಟ್ಟಿಗೆ$_3$' ನೋ.

ಪುಟ್ಟಜ, ಹುಟ್ಟಜೆ (ನಾ). ಹುಟ್ಟಿದ ಸ್ಥಳ; ತವರುಮನೆ; ಜನ್ಮಸ್ಥಾನ: ಮದನನ ಕೈದುವೆಲ್ಲಿದಂ . . . ಚೆದುರ ಪುಟ್ಟದನೆ{ಪುಟ್ಟಜವೆ}ಲ್ಲಿದಂ (ಪಂಪಭಾ. ೩-೦೫); ಸಿರಿಯು ತವರ್ಮನೆ ಹವಳದ ಹರವರಿ ಮುಕ್ತಿಯ ಪುಟ್ಟದಂ ಶಶಿಯಮ್ಮಂ ಹರಿಯಿಪ್ಪ ಸೆಜ್ಜೆವನೆ . . . ಎನಿಪಂಭೋನಿಧಿ ಸುತ್ತುವೊಪ್ಪೆ(ಪ್ಪ)ಶ್ರಿರ ಜಂಬೂದ್ವೀಪವೊಪ್ಪಿಪ್ಪುದು (ಶಾ. I. ೨೫-೯; 1180); ಜಗತೀಕಾಂತನ ಮಾದೇವಿ ಲಕ್ಷ್ಮಣಾದೇವಿ . . . ಚದುರ ಪುಟ್ಟಜ{ಪುಟ್ಟಜ}ವೆನಿಪಳ್ (ಪಂದ್ರಪು. ೦೦-೧೦). **ಹುಟ್ಟಜೆ**: ಸಿರಿಯು ತವರ್ಮನೆ ಹವಳದ ಹರವರಿ ಮುತ್ತುಗಳ ಹುಟ್ಟಜೆ ಚಂದ್ರನ ಕಾಯಿ ಹರಿಯಿರ್ಪ್ಪ ಸೆಜ್ಜೆವ[ನೆ] ರತ್ನರಾಶಿಯುವರ್ದಿನ ನಿಧಾನಂ . . . ಎನೆ ಚೆಲ್ವಿಂ ಜಳರಾಶಿ ಸುತ್ತುವರೆ ಜಂಬೂದ್ವೀಪವೊಪ್ಪಿಪ್ಪುದು (ಶಾಂಭ. XV, ೨೪೦-೫; 1174).

ಪುಟ್ಟಣೆ ' ಪುಠಾಣಿ ' ನೋ.

ಪುಟ್ಟಬಾಳೆ, ಪುಟಬಾಳೆ, ಪುಟವಾಳೆ (ನಾ). ಸಣ್ಣಗಾತ್ರದ ಹಣ್ಣುಗಳನ್ನು ಬಿಡುವ ಒಂದು ಜಾತಿಯ ಬಾಳೆ: ಬಾಳೆಯಲ್ಲಿ ಅನೇಕ ಜಾತಿಗಳಿವೆ ...ರಸಬಾಳೆ, ಚಂದ್ರಬಾಳೆ, ರಾಜಬಾಳೆ, ಪುಟ್ಟಬಾಳೆ, ವಿಲಕ್ಕಿಬಾಳೆ, ಮಧುರಂಗಬಾಳೆ, ಸೇಲಂಬಾಳೆ ಇವೇ ಮೊದಲಾದವು (ಕೃಷಿ. ೩೭); ಹಟ್ಟೀ ಕಲ್ಲೊಳ್ಗಿಗೆ ಬಟ್ಟುಗಂಧವನಿಟ್ಟು ಪುಟ್ಟಬಾಳೆ ಹಣ್ಣ ಸುಲಿದಿಟ್ಟು (ಕಾಕರ. ೧೫೪). **ಪುಟಬಾಳೆ**: ಹಟ್ಟಿ ಕಲ್ಲಿಗೆ ಪುಟ್ಟು ಗಂಧವನಿಕ್ಕಿ ಪುಟಬಾಳೇ ಹಣ್ಣಾ ಸುಲಿದಿಕ್ಕಿ ಒಳಗೀರೋ ನಿಸ್ಕೆ ಬಂದಕ್ಕಿ ತೊಳಿಸಾರೊ (ಹುಬ್ಬಹ ೩೦). **ಪುಟವಾಳೆ**: ರಸಪಾಳೆ ಪುಟವಾಳೆ ರಾಜವಾಳೆ ಸಕ್ಕರೆಯೆಸೆವಾ ದೇವಾಳೆ ಬಬ್ಬಾಳೆ ಹಸುರುಗುಂದದ ಪಚ್ಚೆನಾಡವು ಮಧುರಂಗ ಪಸರಿಸಿ ಮೆಱೆಸಿಮಂದರ್ತಿಯಲಿ (ಶಂಪ. ೩-೮೭).

[ಪುಟ್ಟ₁ + ಬಾಳೆ₁ (< ಬಾಪೆ). / ತಮಿ. ಪುಟ್ಟುವಾಱೈ]

ಪುಟ್ಟವಳ (ನಾ). ಹುಟ್ಟುವಳಿ; ಆದಾಯಂ; ಉತ್ಪನ್ನ: ಧಾರಾಪೂರ್ವಕಮ್ಮಾಡಿಕೊಟ್ಟು ಕೊನ್ದ ಪೊಂಗದ್ಯಾಣ ನೂಱು ಮೂಱು ಇತಿ ಪುಟ್ಟವಳದಲು ನಿಚ್ಚಂ ನಾಲ್ವರ್ಗ್ಗೆ ಸಕ್ಕರಂ ನಡೆವಂತಾಗಿ ಬಟ್ಟುಕೊಟ್ಟನು (ಶಾಸಾ. IX-I, ೦೯-೨೦; 1035); ಪಾಲಗಾಱ ಬರ್ಮಯ್ಯಮೊನ್ದು ವಸದನದ ಪುಟ್ಟವಳದಂ ಬಿಟ್ಟು (ಎಇ. XVI, ೩೩೧-೨೫; 1077).

[? / ಪುಟ್ಟು₁ + < ಪಣ್₃]

ಪುಟ್ಟಱಿವು, ಹುಟ್ಟರಿವು (ನಾ). ಹುಟ್ಟಿನಿಂದ ಬಂದ ತಿಳಿವಳಿಕೆ; ನೈಸರ್ಗಿಕವಾದ ಬುದ್ಧಿ: ಕೇಡದನೆ ಪುಟ್ಟಱಿವುಪಾಯಿದೆಯೆ ನೆಲೆತಪ್ಪ ಪೋಕುವರ್ (ಅಂತಿಗೊ. ೫೬-೩೮). **ಹುಟ್ಟರಿವು**: ಸ್ವ.ಸ್ವ ದೇಶ ಬಂಧುಗಳ ಹೃನಯದಲ್ಲಿ ಹುಟ್ಟರಿವಾಗಿ ಬಂದು, ಅವರ ಜೀವನಕ್ರಮವನ್ನೇ ವ್ಯಾಪಿಸಿ ನಿಯಂತ್ರಿಸುವ ನಂಬಿಕೆಗಳು—ದೇವರು . . . ಪರಲೋಕ ಇವುಗಳೆಂದು ಒಟ್ಟಿನಲ್ಲಿ ಹೇಳಬಹುದು (ಕಾಕತ ೪); ಪಾವುಗಳು ಸ್ವಪ್ರದೇಶಪ್ರೇಮಿಗಳು. ಆಗಂತುಕರನ್ನು ಶತ್ರುಗಳೆಂದೇ ಭಾವಿಸುವ ಹುಟ್ಟರಿವು ಇವುಗಳ ಸಹಜಸ್ವಭಾವ (ಕಸುಶಾ. ೬೬).

[ಪುಟ್ಟು₂ + ಅಱಿವು]

ಪುಟ್ಟಾಣಿ, ಪುಟಾಣಿ₁ (ನಾ). ೧. ಚಿಕ್ಕವನು; ಸಣ್ಣವನು: ಪುಟ್ಟಾಣಿ, ನಿನ್ನ ಹೆಸರೇನು? (ಕೂತಿ). (ಗ್ರಂ). ೨. ಎಳೆಯ; ಚಿಕ್ಕವಯಸ್ಸಿನ: ಅಳಿಯನನ್ನೇ ಮನೆಯಲ್ಲಿ ನಿಲ್ಲಿಸಿಕೊಳ್ಳುವೆ, ಈ ಪುಟ್ಟಾಣಿ ಮಗಳನ್ನು ಕಳಿಸುವುದಿಲ್ಲ (ಕತ್ಕಾಮ. ೫೬); ನೀನಿನ್ನೂ ಸಣ್ಣವನು. ನಿನ್ನ ಪುಟ್ಟಾಣಿ ಕೈಲಿ ಇಂಥಾ ಕೆಲಸ ಆಗುಲ್ಲ (ಪುಟ್ಕಥ. ೨೦). **ಪುಟಾಣಿ₁**: ೧. ಗಿಡ್ಡಪುಟಾಣಿ ಮಜ್ಜಿಗೆ ದೋಣಿ (ಗಾಣ). [< ಪುಟ್ಟ₁]

ಪುಟ್ಟಾರಿ (ನಾ). ಚಿಕ್ಕ ಮಗು: ಪುಟ್ಟಾರಿಗೆ ಎಳೆದುಕೊಂಡು ಆಡುವುದಕ್ಕೆ ಅವನ ತಂದೆ ಬಂದು ಕೈಬಾಡಿಯನ್ನು ತಂದುಕೊಟ್ಟಿದ್ದರು (ಕಂಗಿ. ೧೯೬). ' ಚಿನ್ನಾರಿ ' ಹೋ. [< ಪುಟ್ಟ₁]

ಪುಟ್ಟ₁, ಬುಟ್ಟ (ನಾ). ೧. ತೆಂಗು, ತಾಳೆಗಳ ಗರಿ ಅಥವಾ ಬಿದಿರಿನಿಂದ ಹೆಣೆದು ಮಾಡಿದ ಗೂಡೆ, ಮಂಕರಿ ಮುಂತಾದುವು. ಅನೇಕ ಸುರಭೀಸಮಾಜಂಗಳಂ ಸಜ್ಜುಮಾಡಿಪ್ಪುದಂ ಪುಟ್ಟಯೊಳ್ ತೀವಿಕೊಂಡು (ಪಂಚಕಂ. ೦೦೬-೬); ನೆತ್ತರ ಮಡು ನಾಡಿಗಳ ಸುತ್ತುವಳಿ ನರವಿನ ನೆಣದಂತ್ರ ಮಾಂಸದ ಪುಟ್ಟಯ ತೆಪ್ಪ . . . ಮೋಹದ ಬಲೆ ತೋಱಿ ಕೆಡುಪ ತನು ಇದು (ಪಚಕಂ. ೪೩-೬೫); ಹೊಟ್ಟೆಯಿಂದಲ ಪುಟ್ಟಸಿಂಗನ ಹುಟ್ಟವಿನೆ ಕೊರಳಾನೆ ಪುಟ್ಟಯ ಮೇಲಾನೆ ಲಟ್ಟದ ತಾಯಿತದಾನೆ (ಶ್ರೀಕೃಶಾ. ೬೬); ಪುಟ್ಟ ಕಿರಿದೇನು ಹೆಡಗೆ ಹೆಚ್ಚೀನು? (ಗಾಡ). ಬುಟ್ಟಿ: ೧. ಈಕೆಯ ತಲೆ ನೋಡು ಹೇಗೆ ಬುಟ್ಟಿ ಆಗಿದೆ! (ಕಾಗಿಡಾ. ೦೦೬); ಅನ್ನವ ರಾಶಿಗಾಗಿ ದೊಡ್ಡ ಬುಟ್ಟಿ ಬಾಯಿ ತೆರೆದು ನಿಂತಿತ್ತು (ಕಸ್ತೂ. ೫); ಕೆಲವರು ಹೆಗಸರು ತಲೆಯ ಮೇಲೆ ಬುಟ್ಟಿಗಳನ್ನು ಹೊತ್ತುಕೊಂಡು ಬರುತ್ತಿದ್ದರು (ಕಂಗಿ. ೫೭). ೨. ಬಿದಿರಿನ ಬುಟ್ಟಿಯಾಕಾರದ ನಾವೆ: ಬುಟ್ಟಿಯು ದೊಡ್ಡ ನೆಳಿನ ಸುಳಿಯನ್ನು ದಾಟಿ ಆಚೆಯ ದಂಡೆಯ ಸಮೀಪಕ್ಕೆ ಬಂದಿತ್ತು (ಕಥಾಸ. ೧೦೨).

ಬುಟ್ಟಿಗೆ ಹಾಕಿಕೊಳ್ಳು = (ಆಲಂ) ಉಪಾಯವಾಗಿ ಸ್ವಾಧೀನ ಪಡಿಸಿಕೊಳ್ಳು; ಯುಕ್ತಿಯಿಂದ ವಶಪಡಿಸಿಕೊಳ್ಳು: ಅವನು ವ್ಯವಹಾರಜ್ಞರು . . . ಹೇಗೋ ಅವಳನ್ನು ತನ್ನ ಬುಟ್ಟಿಗೆ ಹಾಕಿಕೊಂಡನು (ಪುಕಥ. ೯); ಲಿಪ್ಪನ ಬೇಳೆ ನ್ಯಾಯಾಧೀಶರ ಬಳಿ ಬೇಯುವಂತೆ ಹಾಗಿದ್ದರೆ ಅವರನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುತ್ತಿದ್ದನು (ಪಂಚಕಂ. ೨೦೯).

[ದೇ. ॥ ತಮಿ. ಪುಟ್ಟಿಲ್; ತುಳು. ಪುಟ್ಟ. ಬುಟ್ಟ; ತೆಲು. ಪುಟಿ, ಪುಟ್ಟ, ಬುಟ್ಟ, ಬುಟ್ಟಿ; ಕೂಗ. ಪುಟ]

ಪುಟ್ಟ₂ (ನಾ). ೧. ಚಿಕ್ಕವಳು; ಚಿಕ್ಕವಯಸ್ಸಿನವಳು. ೨. ಹೆಣ್ಣು ಮಗು: ಗಂಡುಮಕ್ಕಳಿಗೆ "ಪಾಣಿ", ಹೆಣ್ಣುಮಕ್ಕಳಿಗೆ "ಪುಟ್ಟಿ" ಯೆಂದೆನ್ನುವರು (ಕಾಗಿ. ೮೩). [ಪುಟ್ಟ₁ + −ಳ್₃]

ಪುಟ್ಟ₃ (ನಾ). ಒಂದು ಅಳತೆಯ ಪ್ರಮಾಣ: ಒಗೆ ಉತ್ಸಾಹಂಗ್ಗೆ ಒನ್ದೊಕ್ಕಲೊನ್ದು ಪುಟ್ಟಿಗೆ (ಆಸ. XIV, ೨೯೧ ೦೬; ೧೮೬); ಸಜ್ಜುರಕ್ಕೆ [ಪು]ಟ್ಟಿಗೆ ಒನ್ದರೆ ಮಳವೆಗೆ ವಜ್ರಿ ಪರಿನಾಜಾಪಲಂ (ಆಸ. IX, ೨೨-೬; ಸು. 800). [ದೇ.॥ ತಮಿ. ತೆಲು. ಪುಟ್ಟಿ]

ಪುಟ್ಟ₄, ಪುಟ್ಟು₄, ಹುಟ್ಟಿ, ಹುಟ್ಟು₄ (ನಾ). ೧. (ವಿಶೇಷವಾಗಿ) ಜೇನಿನ ಗೂಡು: ಪೊಮ್ಮ ಪೊಯ್ಗಳಿಂ ನೆಗೆದು ಮುಂಗಿಲ್ಗಳಿಟ್ಟಿಡೆಗಳೊಳ್ ತಲೆಗಳ್ ತೊಡರ್ದಿರ್ದ ಜೇನ ಪುಟ್ಟಗಳನೆ ಪೋಲ್ತುವೆ (ಪಂಪಭಾ. ೧೦.೬೦); ಪಂದಲೆಗಳ ಜೇನ ಪುಟ್ಟಯೆನೆ ಕೊರ್ವಿವ ಕೋಟಿಜಗಳ್ಗಿ ಪಕ್ಕಿವೋರ್ ಬಿಲಿಮಿಲಿಯೆಂದುಮೆರ್ದ ಕೋಲೆಗಳ್ಕುಣಪಾಲಯದಾಲದೋಳಿಯೊಳ್ (ಅರ್ಧನೇ. ೫-೩೭); ತಲೆ ಕೆಟ್ಟಗಾಗಿ(ರ್ದ) ವೆರ್ದೇನ ಪುಟ್ಟಗಳಂತಿರ್ದ ಪುಟ್ಟ(ಟ್ಟು)ಗಳೊಳ್ ಪುಟ್ಟ (ಪಚಮಂ. ೧೪-೦೦). **ಪುಟ್ಟು₄**: ೧. ಕಲ್ಲ ಪೊಗಱಿಯೊಳಿಟ್ಟ ಕಾರ್ಮುಗಿಲ ಮೊಟ್ಟೆಗಳ್ ತಾವೆನಿಸಿ ಪರ್ಜನ್ಯವು ವೆರ್ದೇನ ಪುಟ್ಟುಗಳ್ (ಅಪಂಭ. ೯-೨೬). **ಹುಟ್ಟಿ**: ೧. ಬಡವಮಜ ಹುಟ್ಟಿಯು ಕಿಣಕಿವಂತೆಯುಂ (ಎಳ. VIII. ಸೊರಬ. ೧೩೫-೬; 1156); ಪ್ರಸ್ಫಳುಗಳ ನಾಯ್ಕುಕೊಂಡು . . . ಜೇನ ಹುಟ್ಟಿ [ಕಾಡಾಂ. ಟಿಟ್ಟಿ]ಗಳನ್ಟಿಟ್ಟಿಲಸದೆ ಕಲಸಿ ತಣಿವಿನಂ ತಿಂದು ತೇಗಿ(ಗಿ)ದಂ (ಗದಿ. ೦.೧೨೯ ಪ). ೨. ಗೂಡು: ವಿಷದ ಹುಟ್ಟಿಯೊಳಿಜಗಿ ನೊಣ ಜೀವಿಸುವುದೇ (ಕಾಣ್ಕಾಲ್ಕೋ. ೬-೯೦). **ಹುಟ್ಟು₄**: ೧. ಜೇನ ಹುಟ್ಟಿನ ಹುಳುವಿನ ಬಡಿದ ಸಗಿಯತನ ಕಾಣೆನು ಚೂಣಿಯ ಸೇನೆಗಳೆಯ ಸಜಲರಾಯಿತೆ ಶೌರ್ಯಸಿರಿ ನಿಜಗೆ (ಕುವ್ಯಾಲೀ. ೯-೩೪); ಕೆಟ್ಟ ಮೈ ಹೆಂಗಸನು ಬಟ್ಟೆಯುರಿ ತುಱುಚಿಯುನು ಅಟ್ಟಿಪ್ಪ ಕವಿದ ಕತಪಸ ಹುಟ್ಟಿನ್ನು ಮುಟ್ಟುಬೇಡ (ಕುಸ್ತಿ. ೧೩೫); ಆ . . . ಟೊಂಗೆಯನ್ನು ಕಡಿಯುವಾಗ ತಪ್ಪಿ ನನ್ನ ಕಾಲಿಗೆ ಕುಡುಗೋಲು ಹಾತಿತು (ಕುಂಬಾಮ್ಮಿ ೦-೦೫).

ಪುಟ್ಟ5 (ನಾ). ಬಟ್ಟೆ; ವಸ್ತ್ರ : ಅಲ್ಲಿ ಮಹೇಶ್ವರಾಲಯದಂತೆ ಗೊರವು ... ಭೂಮಿ ಪರ್ವಿದಂತೆ ಸೀಗೆ ಪುಟ್ಟಯನಳೆವನಂತೆ ಮೊಗೆ ಕುರುಕಲ್ಕಿಕ್ಕುವ ಪಯಣದಂತಿರ್ಪೆಡು (ಜಂಹರಿ. ೨-೩೬ ಪ); ಮೂಲಾಶ್ವಾರಭ್ಯ-ಧ್ವಜದ ಮೂಲಂ ಮೊದಲುಗೊಂಡು ತತ್‌ಪಾರ್ಶ್ವೇ—ಆ ಶಿಪೆಯಿಕ್ಕೆಲದೊಳು ಕ್ರಮಹೀನಃ—ಕ್ರಮದಿಂ ಕುಂದುತ್ತಂ ಬಂದು ಅಗ್ರಪೌಷ್ಟಿಕಾತ್-ಕಡೆಯ ಪುಟ್ಟಯತ್ತಣಿಂದ (ಶ್ರೀಪತಿ. ೦೯-೦೯). [<ಪುಟ್ಟಗೆ2]

ಪುಟ್ಟಕೆ 'ಪುಡಿಕೆ' ನೋ.

ಪುಟ್ಟಗೆ1 'ಪುಡಿಕೆ' ನೋ.

ಪುಟ್ಟಗೆ2, ಪುಟ್ಟಗೆ, ಹುಟ್ಟಗೆ, ಹುಟ್ಟಿಗೆ, ಹುಟ್ಟುಗೆ (ನಾ). ೧. ಬಟ್ಟೆ; ಉಡುವ ವಸ್ತ್ರ : ವಿದ್ಯುಚ್ಛೋರರು . . . ಸ್ವಾಭಾವಿಕವುಪ್ಪ ಮುನ್ನಿನ ರೂಪು ಕೈಕೊಂಡು ಪುಟ್ಟಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು (ಪಜ್ಜಾರಾ. ೧೫೩-೧); ಇಂತುಟಪ್ಪ ಮೆಯ್ವಣ್ಣಕ್ಕಿಂತೀ ಪೂವಿನೊಳೀ ತುಡುಗೆಯೊಳೀ ಪುಟ್ಟಗೆಯೊಳ್ ಬೆಡಂಗುವಡೆದೆಸೆದಿರ್ಕುಂ (ಪಂಪಭಾ. ೩-೧೫)! ಪುಟ್ಟಗೆಯುಮಂ ಪೂವುಮಂ ತಳಿಗೆಯೊಳಿಟ್ಟುಕೊಂಡು ಪೋಪುದಂ ಕಂಡು (ಪಾಪಸಂ. ೨೨೬-೧೬). ಪುಟ್ಟಗೆ : ೧. ಆದರದಿಂದಂ ಭೂಮಿ ಪೊಂ ಪುಟ್ಟಗೆ ವಸು ಧನವುಂ ನೀಡುತಂ . . . ಧರೆಯೆಲ್ಲಂ ಮೆಚ್ಚಿ ನಿಚ್ಚಂ ಪೊಗಳೆ ನೆಗಳುತಂ ದೇವಲೋಕಕ್ಕೆ ಪೋದಳ್ (ಎಳ. IV, ಹೆಗ್ಗಡೆ. ೧೮-೨೬ ; 1057). ಹುಟ್ಟಗೆ : ೧. ಈಕೆ ಹುಟ್ಟುಗೆಟ್ಟ ಹುಟ್ಟಗೆಯಂತೆ ಹಡಣಂ (ಶೀಲಾಪ. ೨-೦೧೬ ಪ). ಹುಟ್ಟಿಗೆ : ೧. "ಹುಟ್ಟಿಗೆ, ದುಗುಲಂ, ಪಟ್ಟಣಿಗೆ, ಉಳ್ಳುಡಿಗೆ—ಈ ೪ ವಸನಕ್ಕೆ ಪೆಸರ್" (ಶಕಸಾ ೬೩-೩೧೨); ನಿನ್ನಯ ನಣ್ಪೆ ದಲೊಂದು ತಂದ ಹುಟ್ಟಿಗೆಯಿಟ್ಟೆದೇಟ್ಟೊಟಂಗಟ್ಟಿದು ಸೇದೆಯ ಬಾವಿಯೊಂ ಬಂದ ದಾವೆಯೋ (ಶೀಲಾಪ. ೨-೦೦೦) ; ಹುಟ್ಟಿಗೆಯ ನಿದ್ದಂತೆ ಕೊಡು ಕೊಡು ಹುಟ್ಟಿಗೆಯನಯ್ಯಂಗೆ ಕೊಟ್ಟೊಡೆ ಹುಟ್ಟಿ ವಿನ್ನಾವು (ಪಸಪು. ೧೧-೩೩). ೨. ದೇವತೆಯ ಹರಕೆಗಾಗಿ ಉಡುಗೆಯಂತೆ ಧರಿಸುವ ಬೇವಿನ ಸೊಪ್ಪು : ದೇವತೆಗೆ ಹರಿಕೆ ಹೊತ್ತವರು, ಮುಖ್ಯವಾಗಿ ಹೆಂಗಸರು, ಗುಂಧದ ಇಲ್ಲವೆ ಬೇವಿನ ಹುಟ್ಟಿಗೆಯ ಉಟ್ಟು ಕೊಂಡು ದರ್ಶನಕ್ಕೆ ಹೋಗುತ್ತಾರೆ (ಕಾಗಾ. ೩೦೬) ; ಪೂಜೆಯ ಕಾಲಕ್ಕೆ ಹುಟ್ಟಿಗೆ ಕಟ್ಟಿಕೊಳ್ಳುವ ವಾಡಿಕೆ ಅನೇಕ ಮನೆತನಗಳಲ್ಲಿವೆ (ಕಾಗಾಸ. ೪೯). ೩. ಬೇವಿನ ಸೊಪ್ಪಿನ ಉಡುಗೆಯನ್ನು ಧರಿಸುವ ಹಬ್ಬ : ಮನೆಯಲ್ಲಿ ಹುಟ್ಟಿಗೆ ಮಾಡುವುದರಿಂದ ತಮ್ಮೆಲ್ಲರನ್ನು ಕರೆದುಕೊಂಡು ಬರಬೇಕೆಂದು ಹಿರಿಯರು ಕಳಿಸಿಕೊಟ್ಟಿರುವರು (ಗ್ರಾಮಸಂ. ೩೬). ಹುಟ್ಟುಗೆ : ೧. "ಹುಟ್ಟುಗೆ ವಸ್ತ್ರದೊಳ್" (ಕಾಗಾಸ. ೨೯) ; "ಹುಟ್ಟುಗೆಯೆನೆ ಸೀರೆ" (ಕಸಂಪ. ೭೯).

[< ಸಂ.ಪುಟ್ಟಿಕಾ, ಪುಟ್ಟಕ./ತಮಿ. ಪುಟ್ಟಕ]

ಪುಟ್ಟಗೆ3 (ನಾ). ಆದಾಯ ; ಉತ್ಪನ್ನ (?) : ಎರಡು ಗದ್ಯಾಣಂ ಪೊನ್ನು ಇಪ್ಪತ್ತುಗಣ್ಡುಗಂ ಭಕ್ತಮುಂ ಇಕ್ಕೋದಿ ಕೆಜ್ಜೆಗೋಡು ಪುಟ್ಟಗೆಯುಂ ತಸ್ಯ ಸೀಮಾನ್ತರಂ (ಎಳ. XVI, ಗುಬ್ಬಿ. ೭೫-೪೯ ; 733).

[<ಪುಟ್ಟು1 ? + — ಗೆ]

ಪುಟ್ಟಗೋಲ್ (ನಾ). ಸಣ್ಣಕೋಲಂ,—ದಂಡ : ಮಜ್ಜೆಯದೆ ನಮಃ ಶಿವಾ ಎಂಬುದೆಂದೆನುತಲೆಚ್ಚಜ್ಜಿಸಿ ಭಸಿತದ ಪುಟ್ಟಗೋಲ ಳಿಂದಡಿಗಡಿಗೆ ಶಿವವರ್ಣರು ಚೋಳನ (ಶಾಪಸಂ. ೭-೬) ; ಮಿಸುನಿವೆಸದ ಪುಟ್ಟಗೋಲ್ಗಳಂ ಪಿಡಿದು ಜಡಿದೊಟ್ಟಜೆಯುಂದಿಟ್ಟಣಿಸಿ (ರಾಪರ. ೧೩-೬೩ ಪ).

[ಪುಟ್ಟ0 (ಪ ←ತೆಲು. ಪೊಟ್ಟ = ಸಣ್ಣದು) + ಕೋಲ್1]

ಪುಟ್ಟಿಸು, ಹುಟ್ಟಿಸು (ಕ್ರಿ). ೧. ಹುಟ್ಟುವಂತೆ ಮಾಡು; ಸೃಷ್ಟಿಸು ; ಜನ್ಮ ಕೊಡು : ನಿನ್ನಂ ಪುಟ್ಟಿಸಿದ ಬಿದಿ ನೆಗೞ್ತೆಯ ಚೆಟ್ಟಿಗನೊಳ್ ನೆರವುಗೀಗಳರಿಕೇಸರಿಯೊಳ್ (ಪಂಪಭಾ. ೩-೪೮) ; ನಿನ್ನನಿಂತು ಮಗುಟ್ಟುಂ ಮಗುಟ್ಟುಂ ಕೊಲವೇಟ್ಟುದೆಂದು ಪೇಟ್ಟೆನ್ನನಿದಿಂತು ಪುಟ್ಟಿಸಿದನೇ ವಿಧಿ ರಕ್ಕಸಿಯಾಂ (ಶಾದಂಶಾ. ೬೦) ; ಬಸನದ ಬಸದಿಂದ ಪುಟ್ಟಿಸಿದಂ ಜನಕನೆ ...ಅಜನಂ ತಿಳಿಪುವಾ ಮಹಾತ್ಮಂ ಜನಕಂ (ಪಪಪ. ೪-೧೨). ೨. ಉಂಟು ಮಾಡು ; ಬರಿಸು ; ಒದಗಿಸು : ಉಪಚಾರದ ನುಡಿ ಸಂದೇಹ ಬುದ್ಧಿಯಂ ಪುಟ್ಟಿಸದೇ (ಶಾದಂಶಾ. ೧೩೬), ಎನಿತು ಶಕ್ತಿಯು ಳ್ಳೊಡಮೌಷಧಂ ತಱಂಟುದಲೆಯೊಳ್ ರೋಮವುಂ ಪುಟ್ಟಿಸಲಾಱದು (ಕರ್ಮಸ್ಥು. ೬-೬೬) ; ಬಾಧರ್ಗ್ಗುತ್ಸವವಂಂ ಪುಟ್ಟಿಸಿದಂ (ಎಳ. VII, ಕಿಸಪಾ. ೪-೪೦ ; 1122) ; ಪರಿತಾಪವ ಪುಟ್ಟಿಸಿ ಪೋಗಬಂದೆಯ (ಪೋಪಚ. ೪-೮೨). ೩. ರಚಿಸು ; ನಿರ್ಮಿಸು: ಚೌಪಳಿಗಳ್ ಪಲವಂ ಸಮೆದಲ್ಲಿ ರತ್ನದಿಂ ಬೆರಸಿದ ಬಣ್ಣದೊಳ್ ಮೆಜ್ಜೆಯ ಕಟ್ಟಿಸಿ ಪುಟ್ಟಿಸಿ ರಂಗ ಭೂಮಿಯಂ (ಪಂಪಭಾ. ೩-೪೦). ಹುಟ್ಟಿಸು : ೧. ಏಕೆ ಹುಟ್ಟಿಸಿದೆ ಇಹಲೋಕದುಃಖಿಯ ಪರಲೋಕದೂರನ ಏಕೆ ಹುಟ್ಟಿಸಿದೆ (ಪಪಪ. ೬೯); ದೇವ ಇಂತಹ ಬಸುಜ್ಜೊಳೆನ್ನುವನು ನೀವು ಹುಟ್ಟಿಸಲಹುದೆ (ಪಪಪ. ೩೦-೬೯). ಆ ಮಹಾಮೃತ್ಯುವನು ಹುಟ್ಟಿಸಿದಾ ಮಹಾದೇವಾದಿದೇವರು ಕಾಮಿನಿಯ ಕಳುಹಲ್ಕೆ ಬಾರದೆನುತ್ತ ಬೋಧಿಸಲು (ಶುಣ್ಮಕ್ರೀ. ೬-೩೬); ಹುಟ್ಟಿಸಿದ ದೇವ ತಾ ಹೊಣೆಗಾಱನಾಗಿರಲು ಗಟ್ಟಾಗಿ ರಕ್ಷಿಪನು ಇದಕ್ಕೆ ಸಂಶಯವಿಲ್ಲ (ಶಪಶ.೬೧-೦); ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ? (ಗಾಪ). ೨. ನಾಸಿಕೇಂದ್ರಿಯ ನಿನ್ನ ತನುಗಂಧಕೆಳಸಿ ಮೇಲ್ಮೂಸಿದ ಪುಣಗು ಕಸ್ತೂರಿಯ ವಾಸನೆವಿಡಿಯದು ನೀನಗಲದೆ ಸಂತೋಷವ ನೆಱೆ ಹುಟ್ಟಿಸಿದಕೆ (ಶಂಪಪ. ೯-೦೬೨) ; ಆ ಕಲ್ಲುಗಳು ನನಗೆ ಒಂದು ತೆರನಾದ... ಅಸಹ್ಯವನ್ನು ಹುಟ್ಟಿಸಿದುವು (ಪಂಗಾಳ. ೪೦).

ಪುಟ್ಟಿಸಿದರ್ = ಹೆತ್ತವರು ; ಜನ್ಮದಿತ್ತವರು: ಪುಟ್ಟಿಸಿದರ್ ತಾವೆಂದು ಬಗೆದು ಮುದ್ದಾಡುವ ತಾಯ್ತಂದೆಗಳ ಮೊಗಮಂ ನೋಡಿ ನಗುವಂತೆ ಮುಗುಳ್ನಗೆ ನಗುತ್ತುಂ (ಪಂಪರಿ. ೨-೨). ಹುಟ್ಟಿಸಿಕೊಳ್ಳು. = ೧. ನಿರ್ಮಿಸಿಕೊಳ್ಳು; ಹುಟ್ಟುವಂತೆ ಮಾಡಿಕೊಳ್ಳು : ಉತ್ಪತ್ತಿಕಾರಣದ ಒಡೆಯನಾದಡೆ ಶಿರಸುವಂ ತಾನೊಡನೆ ಹುಟ್ಟಿಸಿಕೊಳ್ಳನೇ (ಪಪಪ. ೩೪-೬). ೨. ಇಲ್ಲದುದನ್ನು ಸೃಷ್ಟಿಸು ; ಕಲ್ಪಿಸು ; ಬನಾವಟೆ ಮಾಡು : ಅವನು ಹೇಳುವುದನ್ನು ನಂಬುವಿರಾ ? ಎಲ್ಲ ಹುಟ್ಟಿಸಿಕೊಂಡು ಹೇಳುತ್ತಾನೆ (ಕೂಪ).

[ಪುಟ್ಟು1 + — ಇಸು3]

ಪುಟ್ಟಿಹಣ್ಣು (ನಾ). ಸವತೆ ಜಾತಿಗೆ ಸೇರಿದ ಒಂದು ಬಗೆಯ ಹಣ್ಣು ; ಕೆಕ್ಕರ ಹಣ್ಣು ; ಕೆಕ್ಕರಿಕೆ : (ಗ). [ಪುಟ್ಟ0 + ಹಣ್ಣು3 (<ಪಣ್3)]

ಪುಟ್ಟು1, ಹುಟ್ಟು1 (ಕ್ರಿ). ೧. ಜನ್ಮ ತಾಳು ; ಜನಿಸು ; ಜನ್ಮಿಸು : "ಪುಟ್ಟು—ಉತ್ಪತೌ, ದಾರುಹಸ್ತೇ (ಚ ದೋಣಿ ನಡೆಯಿಸುವ ಮರಗೈ)" (ಸಮಾಂ); ಇದೊನ್ ಕೆಡಿಸಿದೊನ್ ಪಞ್ಚಮಹಾಪಾತಕನಕ್ಕು ತೆನೊಕ್ಕಲುಳ್ ಪೊತ್ತಿ ಮಕ್ಕಳ್ಪುಟ್ಟಿದೆ ಕೆಡುಗ (ಎಳ. III, ಮೃಗಸಂಹಿ.೫೫-೨೦; ಸಂ.740); ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮಾನಟ್ಟು ಬಡಿಸು ನಾವಮಜ್ಜಿಯ ದೆನಸುಂ ಸವಿಯುಂ ಪುಟ್ಟದಾರುಮಜ್ಜಿಯದದಱ ಪೆಸರೊಳಟ್ಟುದಂ ಪೇಜ್ಜೆ ಕೇಳ್ದೆನೆಂದಱಿಯೆಂ (ಕಪಾ. ೨-೦೪೭); ಚಿಃ ಸತ್ತರೇಂ ಪುಟ್ಟರೆ ಪೊಱಮಡು ನೀಂ ಕೈದುಗೊಳ್ (ಗದಾಯು.೬-೦೩). ೨. ಬೆಳೆ ; ಮೂಡು : ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ ಮರಗಳ್ ಪುಟ್ಟವೆ (ಸೋಮೇಶ. ೨೬). ೩. ಉಂಟಾಗು; ಒದಗು; ಉತ್ಪನ್ನವಾಗು: ಶಂಕೆ ಪುಟ್ಟದುದೀಗಳ್ (ಕಾದಂಪೂ. ೧೬೦); ಎರಡು ಪದಂಗಳ ನಡುವೆ ಬೇಱೊಂದು ದುಷ್ಟತೀಕಿ ಪುಟ್ಟುವೊಡೆ ಸಂಧಿಯಂ ಮಾಡಲಾಗದು (ಕಸುಸ. ೬೨-೨೬); ನಿಟ್ಟಿಸಲು...ಪುಟ್ಟತು ಗದ್ಗದ ಮೆಯ್ ಝುಮ್ಮು ಝುಮ್ಮೆಂದು ತಟ್ಟಿತು ಮನೆ ಮೂರ್ಛೆ ರಶಿಗೆ (ಪೋಪಚ. ೦೦-೯೨). ಹುಟ್ಟು1 : ೧. ಹೊಂದಿರೊಳ್ ಮನೆಗೊರ್ವ್ವರುದಾರೆಯರಣ್ಣ ಹುಟ್ಟರೇ (ಎಳ. VII, ಕಿಸಪಾ.

೬೯–೭೪; ೧೧೭೨): ಮುತ್ತು ನೀರಲಿ ಹುಟ್ಟಿ ಮತ್ತೆ ನೀರವ್ವುದೆ (ಪಡಿ. ೭೭೭): ರಾಜಕುಲದಲಿ ಹುಟ್ಟಿದರೆ ಕಲರೀಸು ಚಪಲತೆ ಯಾರಿಗುಂಟು (ಶಾಕ್ಕೊಸ್ತ್ರ. ೩-೬೪); ಹುಟ್ಟುಶ್ರಾ ತವ್ಮಾ, ಬೆಳೆದಂತೆ ದಾಯಾದಿ (ಗಾಡಿ). ೩. ಉಪಾದಲು ಹುಟ್ಟಿದ ಫಲವೆಲ್ಲವಂ ಸಕಳಾಯ ಸಹಿತ ತ್ರಿಭಾಗಮಾಡಿದ ಲ್ಲಿಮ ದೇವರ್ಗೊಂದು ಭಾಗ . . . ನಡೆಯಿಸುವರು (ಶ್ರೀಭಾ. IX—೧, ೫೮–೬೯; ೧೧೭೨); ನಿಟ್ಟಿಸಿ ನೋಡಿದ ಮೇಲ್ಗೆ ದಶಾವಸ್ಥೆ ಹುಟ್ಟುವುದು (ಗಿಸಾ. ೯-೨೪); ಲವಲವಿಕೆ ಅವನಲ್ಲಿ ಹುಟ್ಟಿತು (ಕುಂಪಾ. ೪-೫೦).

ಹುಟ್ಟಿಲಿಲ್ಲವ್ಮಿಸು=ಕೊಲ್ಲು; ಸಾಯಿಸಂ: ನೀನು ಹೀಗೆ ತೊಂದರೆ ಕೊಡುತ್ತಿದ್ದರೆ ನಿನ್ನನ್ನು ಹುಟ್ಟಿಲಿಲ್ಲವ್ಮಿಸಿಬಿಡುತ್ತೇನೆ (ಕೂಡ). **ಹುಟ್ಟಿದ ದಿನ**=೧. ಜನ್ಮದಿನ: ಶ್ರಾವಣಬಹುಳಅಷ್ಟಮಿ ಶ್ರೀಕೃಷ್ಣನ ಹುಟ್ಟಿದ ದಿನ (ಕೂಡ). ೨. (ಆಲಂ) ಅತ್ಯಂತ ಕಷ್ಟದ ಸಂದರ್ಭ; ಇಕ್ಕಟ್ಟು: ಮುಂದೆ ಮಂಡು ಹಿಂದೆ ತಗಡಾಯಿರಡಱಿಡೆಯಲ್ಲಿ ನಿಂದು ನಿಕ್ಕರಿಸ ಬಹುದೇ ಅದು ನಿಮಿತ್ರವೆಮಗಿಂದು ಹುಟ್ಟಿದ ದಿನಂ ಬಂದಿತೆಂದಾ ಜನಂ ತಳ್ಳಂಗೊಂಡುದು (ಹುಲ್ಮಾ. ೬-೨೦). **ಹುಟ್ಟಿದ ಹಬ್ಬ**—೧. ಜನ್ಮದಿನ: ಮಗುವಿನ ಹುಟ್ಟಿದ ಹಬ್ಬವನ್ನು ಅವರು ಸಡಗರದಿಂದ ಮಾಡಿದರು (ಕೂಡ). ೨. (ಆಲಂ) ಶಾಸ್ತಿ: ಅವ್ಮನಿಗೆ ಹೇಳಿ ನಿನಗೆ ಹುಟ್ಟಿದ ಹಬ್ಬ ಮಾಡಿಸುತ್ತೇನೆ (ಕೂಡ).

[ದೇ. ಟ ತಮಿ. ಪುಟಿ; ಮಲ. ಪೊಡಿ; ತುಳು. ತೆಲು. ಪುಟ್ಟು; ಕೊಡ. ಕೋಟಾ. ಇರುಳ. ಗೊಂಡಿ. ಪುಟ್ಸ್; ತೊದ. ಪುಟ್]

ಹುಟ್ಟು₁, ಹುಟ್ಟು₂ (ನಾ). ೧. ಹುಟ್ಟುವಿಕೆ; ಉದ್ಭವ; ಜನನ: ಸಾವುಂ ಪುಟ್ಟುವುರಿಲ್ಲದನಾದನವಂ ದೇವನಾತನೆಂದುದೆ ತತ್ತ್ವಂ (ಪಂಚಕ. ೦೫೦-೭); ದೇವಿ ತ್ವತ್ಪಾದಪೂಜೋದಮುನವರತಂ ಧ್ಯಾನಿಸುತ್ತಿರ್ಪ ಭಕ್ತರ್ ಸಾವುಂ ಪುಟ್ಟಿಂಬ ವಿದ್ಯುದ್ವದುಮನೆಯದಿರ್ದರ್ (ಕಾಕ್ಕಳ. ೩-೧೭); ಸಿರಿ ಬಡತನಕ್ಕೆ ಪುಟ್ಟುಂ ಮಾರಣಕ್ಕೆ . . . ಯೌವನಮದು ಮುಪ್ಪಿಂಗುರು ಕಾರಣಾ (ಜಾಕಥ. ೫-೧೭). ೨. ಬದುಕು; ಜೀವನ: ಕಾದಂಬರೀ ದೇವಿಯಾ ಚರಣೋಪಾಸನೆಯಿಂ ಪುಟ್ಟಿಸಿಹಾದಿಲ್ಲಮಿ ಪುಟ್ಟನೊಳ್ (ಕಾದಂಕಾ. ೫೬೭); ಪುಟ್ಟಿಂದು ಸಫಲವಾದುದು (ಪಾಪಂ. ೩-೪೯). ೩. ಹುಟ್ಟಿದ ಸ್ಥಳ.—ನೆಲೆ; ತವರು: ನರಕದ ನೆರೆ ವೇಸಿಕಗಳ ಕರು ಮಸಣದ ಪುಟ್ಟು ಪಾಪದೆಱೆ ಪಾತಕದಾಗರಮಾದು ನೆನೆವರ್ಗೆ ಭಯಂಕರ ಪತಿವಾಪಕರಮಾದುದುದ್ವೇಗಕರಂ (ಶಾಕಂಕಾ. ೭೫೬). **ಹುಟ್ಟು₂**: ೧. ಮುಂಡೆ ಬೋಳಾದೊಡೇನೊ ಹುಟ್ಟು ದೋಳಾಗದಷ್ಟಕ್ಕರ (ಅಜ. ೯-೦೫); ಸಮಾತಕವಚರ ಹುಟ್ಟು ಹುಡಿಹುಡಿಯಾಯ್ತು ದನುಜರ ಹುಟ್ಟುವುದುದು (ಶಾಕ್ಕಂ. ೧೩-೫೪); ಅವ್ಯಕ್ತವಾಗಿದ್ದ ಆತ್ಮ ದೇಹಸ್ಥವಾಗಿ ವ್ಯಕ್ತವಾಗುವುದು ಹುಟ್ಟು (ಪಾಕಥ. ೧೦೪). ೪. ವೇಷ; ಇರಸರಿಕೆ: ನಿನ್ನ ಹುಟ್ಟು ನೋಡಲಾರೆ (ಕೂಡ). ೫. ಹುಟ್ಟುವಳಿ; ಆದಾಯ; ಉತ್ಪನ್ನ: ಗಡಿ ನಿಡಿ ಹುಟ್ಟು ಕಟ್ಟಳೆಯ ವಿವರ (ಶ್ರೀಭಾ. IX—೩೫. ೪೭೮–೧೦ ; ೧೪೮೮); ಅದರಲ್ಲಿ ಒಂದು ಸರವನ್ನು ಇಟ್ಟುಕೊಳ್ಳುವ. ಉಳಿದವುಗಳನ್ನು ಪಾಲಿ ಹನ ಬಡ್ಡಿಗೆ ಕೊಟ್ಟರೆ ಅಷ್ಟಾದರೂ ಹುಟ್ಟು ಬಂದೀತು (ಮುಂಗಾಮು. ೬೦).

ಹುಟ್ಟುಹುಟ್ಟು (ದ್ವಿರುಕ್ತಿ): ಮುಂಬರಿದನನಾಸರಿಸುತಾ . . . ಪುಟ್ಟುವುಟ್ಟಂ ಬಿಡದೆ ಬೆಂಬತ್ತುವಾ ದಿವ್ಯಸಂಶಯದ ಭಾಯಶಕ್ತಿಯನ ಸುಜ್ಞೆಯೋಲ್ (ಶ್ರೀಣಾಮಾ. ೧೨೬-೧೪). **ಹುಟ್ಟು ಇಲ್ಲದಂತೆ ಮಾಡು**=ಸಾಯಿಸು: ಉಗ್ರಬಾಹುವಿನ ಹುಟ್ಟು ಇಲ್ಲದಂತೆ ಮಾಡಿ ಬಂದ ಪಂಪಾನುಭವ ನೀನಲ್ಲವೇ (ಶ್ರೀಗಂ. ೩೧೬-೦೭).

[<ಪುಟ್ಟು₂/ತೆಲು. ಪುಟ್ಟು; ಕೊಡ. ಪುಟ್ಸ್; ತೊದ. ಉಟ್]

ಹುಟ್ಟು₂, ಹುಟ್ಟು₃ (ನಾ). ೧. ಮರದ ಸವುಟು; ದಾರು: ಪುಟ್ಟುಳ್ಳಂತೆ ಕಯ್ ಬೇಗುಮೇ (ಜಾಂಕೃ. ೬-೨೩); ಪುಟ್ಟಂ ಸಟ್ಟುಗವಂ ಕೊಂಡಟ್ಟುವ ಜಾಳಿ ಬೋನವಿಟ್ಟು ಬಾದೆಯೊ (ಗಣಾಹು. ೬-೩೬); ಪುಟ್ಟಿರ್ದಂತೆ ಕಯ್ ಬೇಯಲೀಕೆಯೊ (ಜಾಕೃಗ್ರ. ೬-೨). ೨. ನಾವೆಯನ್ನು ನಡೆಸುವ ಕೋಲು: "ಪುಟ್ಟು-ಜುಕ್ಕತ್ತಾ, ದಾಮಹ್ಸೋ ಚೆ (ದ್ರೋಣಿ ನಡೆಯಿಸುವ ಮಾರಗೈ)" (ಜಾ:೫೨); ನೆರೆದು ನಿಶಾಟ್ಟರೆಲ್ಲುಬ್ಬಿಯೆ ತಿಂದ ಗಜಂಗಳೆ ನಾವೆಯಾಗೆ ಪುಲ್ಲರಾಳ ಕಟುಂಬವಮಂ ವೆಣದ ಕೈಗಳೆ ಪುಟ್ಟುಗಳಾಗೆ . . . ನೆತ್ತರ ತೊಱೆಯಂ ಮಾರಂಳ್ಕೊಂಡು ಪಾಯಿಸುತ್ತಿರ್ದವು ಯಮುದ್ದ ಭೂವಿಯೊಳ್ (ಪಂಚಮ. ೦೩-೭೩); ಗುಡಿಲಂತೆ ಬಾಗಿದ ಬೆನ್ನಂ ಪುಟ್ಟಿನಂತೆ ದೆರಲ್ಗಳಿಲ್ಲವ ತಳಮುಂ (ರಹಾಗ್ರ. ೪-೩೭); ಒರ್ವಂಬಿಗಪುತ್ರಿ ಕನ್ನಿಕೆಯರರ್ ಕಂಡಾಕೆಯಂ ಬೇಗದಿಂ ಕರೆದೀ ನಾವೆಗೆ ಪುಟ್ಟನಿಕ್ಕುವುದೆನಲ್ಕೆ (ರಹಾಗ. ೬-೨೩). 'ನೀರ್ವಟ್ಟಿ' ಪರಾ. **ಹುಟ್ಟು₃**: ೧. ಅಡಗೂನಾಯಿದು ಕೆದಱಿ ರಕ್ತವ ತುಡುಕಿ ಬೆಲ್ಲುವ ಕರಿಯ ಬರಿಕೈ ಬಿಡಿಸಿದವು ಹುಟ್ಟಾಗಿಯವುರಾಜನ ಮನೆಗ್ರಹಕೆ (ಶಾಕ್ಕಂ. ೧-೪೨); ಶಿವನು ಜಂಗಮಮಾಗಿ ಭಿಕ್ಷಕ್ಕೆ ಬಾದು ಹರಿ ಎನ್ನಲೊಡನೆ ಹರನ ಬಾಯು ಹುಟ್ಟಿನಲ್ಲಿ ತಿವಿದಳು (ಶಕಥ. ೦೪-೧೬); ಹುಟ್ಟು ಇರುವಾಗ ಕೈ ಸುಟ್ಟುಕೊಳ್ಳಬೇಕೆ? (ಗಾಡಿ). ೨. "ಅರಿತ್ಯಂ. ಕೇನಿಪಾತಕಃ—ಈ ೨ ನಾವೆ ನಡಸುವ ಹುಟ್ಟಿನ ಹೆಸರು" (ಜಾಕಡಾ. ೦೦೦); ಹಲುಗೋಲನೆ ಹಲುದು ಹುಟ್ಟು ಮುಱಿದು . . . ಕೆಱೆ ಬತ್ತಿ ಮೆಯ್ಮಲ್ದಲ್ಲದೆ ಆ ಮಹಾಘನವ ಕಾಣದಾರದು (ಅಗಸ. ೪. ೬೯-೭೫); ರತ್ನದಿಂ ನಿರ್ಮಿತವಾದ ನೀರು ತೆಗೆಯುವ ಹುಟ್ಟುಗಳಂ ಪಿಡಿದು (ಪಾಗಂ. ೦೦೦–೦೫); ಗಾಳಿಗೆಪ್ಪು ಹರಿದೀತು ಹಾಹೆ ಹುಟ್ಟಿಲ್ಲದಾಗೆ ಹಡಗ? (ಅಳು. ೪೦೯-೨).

ಹುಟ್ಟು₄ 'ಪುಟ್ಟಿ₄' ನೋ.

ಹುಟ್ಟುಂಗವಿ, ಹುಟ್ಟುಕವಿ (ನಾ). ಹುಟ್ಟಿನಿಂದಲೇ ಕವಿಯಾದವನು; ಅಜನ್ಮಕವಿ: ನರನ ತೊಡರ ಕಲಿಗಳೆಲ್ಲಂ ಬಳಿಯುಮಿಂ ಭುವನಂ ಪಡೆಯುತ್ತಿರ್ಪುದು ಪುಟ್ಟುಂಗವಿಗಳನೇ ಅಯೆಡೆ ಕವಿಶಾಸ್ತ್ರಗ್ರಮಾಗಲೆವೇಳ್ಕುಂ (ಪಂಚಪ. ೫-೬). **ಹುಟ್ಟುಕವಿ**: ಆ ಹುಟ್ಟುಕವಿ ... ಸರಸ್ವತೀಪ್ರಸಾದದ ಪೂರ್ಣರಮಣೀಯತೆಯನ್ನು ಸಹೃದಯರಿಗೆ ಅನುಭವ ಮಾಡಿಸಿ ಬಿಟ್ಟಿರುವರು (ಶಬಾ. XX ೦೦೫). [ಪುಟ್ಟು₂ + ಕವಿ₂]

ಹುಟ್ಟುಂಗುರುಡ, ಪುಟ್ಟುಗುರುಡ, ಹುಟ್ಟುಕುರುಡ, ಹುಟ್ಟುಗುರುಡ (ನಾ). ಹುಟ್ಟಿನಿಂದಲೇ ಕುರುಡನಾದವನಂ; ಜನ್ಮಾಂಧ: ಪುಟ್ಟುಂಗುರುಡಂ ಕಾಣ್ಬನೆ ಬಟ್ಟೆಯನವಳಾಕ್ಷನಂತೆ (ಅರ್ಥಪಂ. ೨-೩೫); ಪುಟ್ಟುಂಗುರುಡನಂಧಾಕರದ ಸಟ್ಟಿರುಳು ನೆಟ್ಟನೆ ಕಂಡನೆಂಬಂತೆ (ಪಾಗಪ. ೧೨೪); ಆ ಸುದತಿಗೆ ಪತಿಯಾದಂ ... ಧೃತರಾಷ್ಟ್ರನೆಂಬ ಪುಟ್ಟುಂಗುರುಡಂ (ಪಾಪಂ. ೬-೦೬). **ಪುಟ್ಟುಗುರುಡ**: ಪುಟ್ಟುಗುರುಡನಂತೇನುಮಂ ಕಾಣದೆ (ರಹಾಗ್ರ. ೨-೦೨೩); ರಕ್ಷಿಸೈ ಕಂಡು ಕಾಣದ ಪುಟ್ಟುಗುರುಡರಂ ರಕ್ಷಿಸೈ ಕೇಳ್ದು ಕೇಳದ ಮೂರ್ಖಬಧಿರರಂ (ಶಿಪು. ೫೦-೫೩). **ಹುಟ್ಟುಕುರುಡ**: ಶಿವಶಿವಾ ದತ್ತಾಪಹಾರದ ತವೆದಲಿ ನಿಜಬಂಧುವರ್ಗವ ಸವಱಿ ನೆಲೆದವು ಹುಟ್ಟುಕುರುಡನ ಕೈಯ ಕೋಲುಗಳ (ತಿಕ್ಕಾಣಾ. ೦-೭); ಅಂತರಂಗದಲ್ಲಿ ಹಾಯು ಕಾಣದವ ಹುಟ್ಟುಕುರುಡನೋ (ಶಕಥ. ೦೦೬). **ಹುಟ್ಟುಗುರುಡ**: ಹುಟ್ಟುಗುರುಡನ ಕಯ್ಗೆ ಕೋಲ ಕೊಟ್ಟು ನಡೆಸುವಂತೆ ನಡೆಸಯ್ಯಾ ಎನ್ನಾ (ಶಪ. ೨೬೫); ಈಗ ನಿನ್ನ ಕೃಪಾಪಲೋಕದಿ ಹುಟ್ಟುಗುರುಡಂಗೆ ಅಗಲಲರವೆ ವೃತ್ತಿಗಳು (ಶಕಥ. ೪೬-೬೬).

[ಪುಟ್ಟು₂+ಕುರುಡ]

ಹುಟ್ಟುಂಗುರುಡಿ, ಹುಟ್ಟುಕುರುಂಡಿ (ನಾ). ಹುಟ್ಟಿನಿಂದಲೇ ಕುರುಡಿಯಾದವಳಂ; ಜನ್ಮಾಂಧೆ: ಮಗಳ್ ದುರೂವೆ ದುರ್ವರ್ಗ್ಗ . . . ಪುಟ್ಟುಂಗುರುಡಿ ಪೊಲತಿಯಾಗಿ ಪುಟ್ಟಿ (ಶಾಕ್ಕಾಹಾ. ೯-೬). **ಹುಟ್ಟುಕುರುಡಿ**:

ಅವಳೊಬ್ಬಳು ಹುಟ್ಟುಕುರುಡಿ (ರೂಢಿ). [ಪುಟ್ಟು$_2$+ಕುರುಡಿ]

ಪುಟ್ಟುಗಣೆ (ನಾ). ಮೂಲನೆಲೆ,–ಸ್ಥಾನ: ಕನ್ನಡದ ಪುಟ್ಟುಗಣೆ [ಶಾಕಾಂ. ಪುಟ್ಟಗುಣೆ, ಪುಟ್ಟುಗುಣೆ] . . . ಎನ್ನದೀ ಕೃತಿಯನಿಳಿಪನ್ನರನೆ ಬಿದಿ ಮುನ್ನ ಬೆನ್ನೊರ್ದಲೆಯದಿರನು (ಪಪಶ. ೦-೨೩). [ಪುಟ್ಟು$_2$+ಕಣ್ಣೆ]

ಪುಟ್ಟುಗುರುಡ 'ಪುಟ್ಟುಂಗುರುಡ' ನೋ.

ಪುಟ್ಟುಗೆ (ನಾ). ಹುಟ್ಟುವಿಕೆ ; ಜನನ : ದೋಷಸಂಭವ:—ದೋಷದ ಪುಟ್ಟುಗೆ (ಶಿಕಾಶಾ. ೯-೦೦೭) ; ಸ್ಮರಪರಿತಾಪದಿಂ ನೆಱೆ ಮರುಳ್ತನದಿಂದಜ ತಾತನೆನ್ನೊಳಂ ಬೆರಸಿದನಿ: ವಧೂಭವದ ಪುಟ್ಟುಗೆ ಪೊಲ್ಲೆನುತಿಲ್ಲಿ ರಾಗದೊಳ್ ನಿರುಪಮನಪ್ಪ ಮಂಗವಿಭುವಾದಳೊ ಭಾರತಿ (ಪಪುದ. ೦೩-೨).

[ಪುಟ್ಟು$_1$ + – ಗೆ]

ಪುಟ್ಟುವೆಟ್ಟು (ನಾ). ಸೂರ್ಯನು ಮೂಡುವ ಪರ್ವತ ; ಉದಯಾದ್ರಿ : ಕಟ್ಟಿನಿಯಳ ಮುದ್ದುಸುರೆಂತಂತೆಲರ್ವಟ್ಟೆಯನೆಯ್ದಲ್ ಪುಟ್ಟುವೆಟ್ಟನಡರ್ವಿನಿಗದಿರೆಂತಂತೆ . . . ಈ ಕೃತಿ ಚತುರರ ಬಗೆಗೀಗೊಗು ವಿಗೆಯಂ (ಉಧೃರೇ. ೦-೨೮). [ಪುಟ್ಟು$_1$+ಬೆಟ್ಟು$_2$ (<ಬೆಟ್ಟ)]

ಪುಟ್ಟುಹ, ಹುಟ್ಟುಹ (ನಾ). ಜನನ; ಜನ್ಮ: (ನಾಸಂಕಾ. ೯). **ಹುಟ್ಟುಹ** : ಮರಳಿಮರಳಿ ಹುಟ್ಟುಹ (ಪಾಸಾಕ. ೯. ೦೦೪ ಟೀಕು).

[ಪುಟ್ಟು$_1$ + – ಹ್ಯ (< – ಪ್ಯ)]

ಪುಠಾಣೆ, ಪುಟಾಣ್ಯೆ$_2$, ಪುಟ್ಟಣೆ (ನಾ). ೧. ನೀರಿನಲ್ಲಿ ನೆನೆಸಿ ಹುರಿದ ಕಡಲೆ ; ಹುರಿಗಡಲೆ : ಹಸೀಕಡ್ಲಿ ಫಕ್ತ ಪುಠಾಣಿ ಮಾಡುವದರ ಸಲುವಾಗಿ ಜಾತ್ರಿ ಹಂಗಾಮಿನಲ್ಲಿ ಸ್ವಲ್ಪ ಖರ್ಚು ಆಗುತ್ತಿರುತ್ತದೆ (ಮುಂಬಪ್ರಾ. ೨೮೫) ; ಕೊನೆಗೆ ಮಂಡಕ್ಕಿ ಪುಠಾಣಿಗಳಿಂದ ಮಧ್ಯಾಹ್ನ ನೀಗಿಸುತ್ತಾ ಕಟ್ಟಕಡೆಗೆ ಅಖಂಡನಿರಾಹಾರವ್ರತವೇ . . . ಘಟಿಸಹಸ್ರಿತ್ತು (ಮೋಕೇವ. ೫). **ಪುಟಾಣ್ಯೆ$_2$** : ೧. ತೆಂಗಿನಕಾಯಿ ಚಟ್ನಿ ಮಾಡುವಾಗ ಸ್ವಲ್ಪ ಪುಟಾಣಿಯನ್ನು ಹಾಕಿದರೆ ಚೆನ್ನಾಗಿರುತ್ತದೆ (ರೂಢಿ). ೨. ಬಟ್ಟೆಯ ಮೇಲೆ ಕಡಲೆಯಾಕಾರದಲ್ಲಿ ನೇಯ್ದಿರುವ ನೇಯ್ಗೆ : ಅವಳು ಪುಟಾಣಿ ಸೀರೆ ಉಟ್ಟಿದ್ದಾಳೆ (ರೂಢಿ). **ಪುಟ್ಟಣೆ**: ೨. ಬಟ್ಟಕಾಚಿಯೊರ್ವ ಸತಿ ಪುಟ್ಟಣೆಯ ರವಿಕೆಯನು ತೊಟ್ಟು ಕಾಲಿನೊಳವಳು ಪಟ್ಟಿಸೀರೆಯನು ಪೊದೆದು ಬೆನ್ನೊಳು ನೃಪನ ಮುಖವ ನೋಡುವ ಭರದಿ ವದಗಿ ಮಾರ್ಗದಿ ಬರಲು (ಹಮಶ. ೨೪೫).

ಪುಠಾಣಿ ತಿಂದು ಬಿಡು = (ಆಲಂ) ಆಸೆಯನ್ನು ಬಿಡು : ಊರು ಬಿಟ್ಟು ಹೋದ ಉಡಾಳ ತಮ್ಮನು ತಮ್ಮ ಪಾಲಿಗೆ ಸತ್ತನೆಂದು ಅವರಿಬ್ಬರೂ ದಂಪತಿಗಳು ಪುಠಾಣಿ ತಿಂದು ಬಿಟ್ಟಿದ್ದರು (ಪಶ್ಚಿಹೊ. ೪೫).

[←ಮರಾ. ಫುಟಾಣಾ]

ಪುಡಪುಡ (ನಾ). ಸುಡುವುದನ್ನು ಸೂಚಿಸುವ ಒಂದು ಅನುಕರಣಪದ: 'ಪುಡಪುಡನೆ' ಪರಾ.

ಪುಡಪುಡನೆ (ಅ). ಪುಡಪುಡ ಎಂದು : ಸಂಗತಧೂಮಾವಳಿಯನಿಭಂಗಳೆ ಗತ್ತೊಳಱ ಪಾಯ್ದು ಪೊಗೆ ಪುಗೆ ಕಣ್ಣಂ ಸಿಂಗಂಗಳಳುರೆ ಗರ್ಜಿಸಿ ಲಂಗಿಸಿ ಪುಡಪುಡನೆ ಪುಟ್ಟಿ ಸತ್ತುವು ಪಲವುಂ (ಕಂಪಶಾ. ೫-೯೨).

[ಪುಡಪುಡ + – ಅನೆ$_1$]

ಪುಡವಿ 'ಪೃಥುವಿ' ನೋ.

ಪುಡವಿಪ 'ಪೊಡವಿಪ' ನೋ.

ಪುಡಾರಿ 'ಪುಢಾರಿ' ನೋ.

ಪುಡಿ, ಹುಡಿ (ನಾ). ೧. ಹಿಟ್ಟು ; ಚೂರ್ಣ : ಬದ್ದವಣದ ಪುಡಿಪೊಲ್ ಬೆನ್ನೊಳ್ ಬಿಡದಲುಗೆ ಕುಸುಮಕುಳರಜಂ (ಅರಿಪು. ೬-೬೩) ; ಪುಡಿಯ ಕತ್ತುರಿ ಕುಂಕುಮಕಪ್ಪುರವುಡಿ ಬಿಡುಮುತ್ತು ಪಾಣಿಕದೊಡನೆ ಹಿಡಿಹೊನ್ನ ಸೂಜಿಯ ಬಿಟ್ಟರಿಕ್ಕಿಲದಂಗಡಿಗರತಿಃವಪೋಪದಲಿ (ವೋಪಶ. ೪೨-೨೮); ಡಿ.ಡಿ.ಟಿ. ಡಬ್ಬಿಯಿಂದ ಪುಡಿಯನ್ನು ಸುತ್ತಲೂ ಚಿಮುಕಿಸಿ... ಮೈಯನ್ನು ಚಾಚಿದೆನು (ಪಂಟಿಬು. ೨೮). ೨. ರವೆಯಂತೆ ತರಿತರಿಯಾದ ಹಿಟ್ಟು; ತರಿ: ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿ[ಶಾಕಾಂ.೪]ಯೊಳಡಸಿದಲ್ಲವಲ್ಲಣಿಗೆಯ ಚಕ್ಕಣಂಗಳಂ ಸವಿಸವಿದು (ಪಂಪಶಾ. ೪-೬೭ಎ); ಕುಂಕುಮದ ಕತ್ತುರಿಯ ಪುಡಿಯಂ ಕನಕದ ಪುಡಿಯಿನಾಗ ಪಿಷ್ಟಾತಕಮಂ ಬಿಂಕದೆ ಕೆದಱಸುತಂ ನಡೆವಂ ಕಮಠಂ (ಪಾರ್ಶ್ವಪು. ೩-೫೦); ಘಟ್ಟಿಮೆಣಸುಳ್ಳಿ ಮೊದಲಾದ ಸಂಭಾರಗಳನಿಟ್ಟು ತಾಳಿಸಿದ ಪುಡಿಗಳನದ[ಜ್ಜೊ]ಳು ತುಂಬಲಿಟ್ಟು (ಸೂಪಶಾ. ೪-೧೯). ೩. ಸಣ್ಣಮರಳಿನಂತೆ (ಉದುರಾಗಿರುವ) ಮಣ್ಣು : ಏಗೆಯ್ದುಂ ಪರೆದ ಪುಡಿಯೆಲ್ಲಮುಂ ನೀರ್ ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ (ಕಲಿಗಾ. ೫-೧೫೦); ಆ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟೆಳವಾಱೆಯಂತೆ . . . ಬೇಟದೊಳ್ ಮಮ್ಮಲಮಱುಗುತ್ತಿರ್ದಳ್ (ಪಂಪಶಾ. ೫-೧೦೫); ದ್ರುಪದಾತ್ಮಜಾತನೋಪದೆ ಪುಡಿಯೊಳ್ ಪೊರಳ್ಚಿ ತಲೆಯಂ ತೆಗೆವಲ್ಲಿ ಪಿನಾಕವೆತ್ತವೋದುದೊ (ಗದಾಯು. ೪-೫೦); ಪುಡಿಯೊಳಗೆ ಪುಡಿಯ ಪುಡಿಯಾದೆನ್ ನಾಣ ನುಡಿಯಾದೆನ್ (ಅಶ್ವತ್ಥಾ. ೧೭-೩೬೬). ೪. ನಸ್ಯ : ಬೀಡಿ ಕಟ್ಟುವವನೂ ಪುಡಿ (ನಸ್ಯ) ಸೇದುವನು (ಸೂವಾದ. ೧೦೭). ೫. ಹೊಗೆಸೊಪ್ಪು : ಪುಡಿ ಕುಟ್ಟುವವನೂ ಬೀಡಿ ಬೇಡುವನು (ಸೂವಾದ. ೧೦೭). **ಹುಡಿ** : ೧. ಕರಿಬೇವು ಬಡಗಸಂಡಗೆಯಂಗು ಕಡಲೆವಿಟ್ಟುರಿಸಿನದ ಹುಡಿ . . . ಮೆಂತೆಯದ ಚೂರ್ಣ ಹಪ್ಪಳಂ ಸಂಭಾರವಸ್ತುವಹವು (ಸೂಪಶಾ. ೪-೦). ೨. ಎನ್ನಿಂದಲೆ ಆಯಿತ್ತು ಎನ್ನಿಂದಲೆ ಹೋಯಿತ್ತು ಎಂಬವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ದದೆ ಮಾಣ್ಬನೆ (ಬಸವ. ೨೨೫); ಇಟ್ಟೊರೆಸಿ ಹುಡಿಯಲಿ ಹೂಳಿದನು ಕಿಮ್ಮಿರದಾನವನ (ಕುಪ್ರಾಅ. ೧-೩೯); ಹುಡಿಯಲ್ಲಿ ಕಮಲ ಬೆಳೆದಂದು ಹೆಣ್ಣಿನ ನುಡಿಯ ನಂಬುವದು (ಸರ್ವಜ್ಞ ೦೭೭೦) ೪. "ಹುಡಿ . . . ನಸ್ಯ, ನಾಸೀಪುಡಿ" (ಸಿರಿಕೋ. ೩೫೦) ; ಕರಾವಳಿಯ ಜನ ನಶ್ಯವನ್ನು ಹುಡಿ ಎಂದು ಹೇಳುತ್ತಾರೆ (ರೂಢಿ).

ಪುಡಿಪುಡಿ, ಪುಡಿಪುಡಿ, ಹುಡಿಹುಡಿ (ದ್ವಿರುಕ್ತಿ) : ಅಂತಾತಂ . . . ನಡೆವ ತಳರ್ನಡೆಯೊಳ್ ಪುಡಿಪುಡಿಯಾದುವು ಶಿಲೆಗಳೊಡೆದು (ಪಂಪಶಾ. ೨-೩) ; ಕೆಡೆವ ಭಟಬ್ಬರ್ಟಾಂತ್ರವೃತ್ತದಿಂದಮುರುಳ್ವ ಹಯಂ ಹಯಾಳಿಯಿಂ ಪುಡಿಪುಡಿಯಾಗೆ ಮೆಟ್ಟುವ ಗಜಂ(ಎಳ. VIII, ಸೊರಬ. ೦೮೪-೯ ; 1033) ; ಬಸ್ಸಿನ ನುಗ್ಗಾಟದಲ್ಲಿ ಬಳೆಗಳೆಲ್ಲಾ ಪುಡಿಪುಡಿಯಾದುವು (ರೂಢಿ) ; ಕಾಯವನುರುಹಿ ಹುಡಿಹುಡಿ ಮಾಡಿ ಬಿಱುಗಾಳಿಯಲಿ ಚಲ್ಲು (ಬಸಪು. ೪೫-೩೧) ; ರಥಕುಳವೆಲ್ಲ ಹುಡಿಹುಡಿ ಪಾಯದಳ ನಿರ್ನಾಮವಾಯ್ತು (ಕುಪ್ರಾಅ. ೬-೨). **ಪುಡಿ ಮಾಡು, ಹುಡಿ ಮಾಡು** = ೧. ಹಿಟ್ಟಾಗುವಂತೆ ನುರಿಸು : ಪುಡಿ ಮಾಡಿದ ಉಪ್ಪು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ (ರೂಢಿ). ೨. ಧ್ವಂಸಮಾಡು : ಪುಷ್ಪಶರನಂ ಹುಡಿ ಮಾಡಿದ ವಿರೂಪಾಕ್ಷ (ಪುಂಡಿ. ೬) ; ಹುಡಿ ಮಾಡಿದನು ರಥವ (ಕುಪ್ರಾಅ. ೬-೧೬). **ಪುಡಿಯಾಗು, ಹುಡಿಯಾಗು** = ನುರಿದು ಹಿಟ್ಟಾಗು : ಒತ್ತಿ ಮೆಟ್ಟಿ ಪುಡಿಯಾಗಿರೆ ತಿನ್ನದೆ ಪೋಗಲೀವರೇ (ಧರ್ಮಪ್ರ. ೬-೧೩೪) ; ಮುನಿಗಳ ಧೈರ್ಯಭೂಮಿ ರಜಮಟ್ಟಿನೆಗಂ ಮನುಚೇತನಾದ್ರಿ ಭೋಂಕನೆ ಪುಡಿಯೆಟ್ಟನಂ . . . ರತೀಶನ ಚತುರಂಗಸೇನೆ ನಡೆದತ್ತು (ಗಿರಿಕ. ೯-೬) ; ಪಡೆಯ ಕಾಲ್ದುಳಿದಾಗ ಗಿಡು ಬಳ್ಳಿ ಪೆಮ್ಮರ ಪುಡಿಯಾಗೆ . . . ಚೆನ್ನಪಟ್ಟಣದ ಮುಂಗಡೆ ಬೀಡಿಳಿದನು (ಕಂಪರಾ. ೧೨-೬) ; ಹುಡಿಯಾಗಲುರ್ವಿ ಪರ್ವತ ಸಪ್ತಶರಧಿಗಳಡಿಮಳಲಾಗೆ . . . ಮಹೇಶ್ವರ ಓಡಿದನು ಪರತ್ರಿಶೂಲವ (ಕೋಪಶ. ೩೯-೩೮). **ಪುಡಿಯಾಳು** = ಕೆಲಸಕ್ಕೆ ಬಾರದವನು ; ಅಪ್ರಯೋಜಕ : ಅವನೊಬ್ಬ ಪುಡಿಯಾಳು (ರೂಢಿ). **ಹುಡಿಯ ಮುಕ್ಕು** = ೧. ಮಣ್ಣು ತಿನ್ನು. ೨. (ಆಲಂ) ಹಾಳಾಗು :

ಕಂಸನು ಹುಡಿಯು ಮುಕ್ಕುವನೆಂಬ ತೆಱದಿಂ ಮಡದಿ ದೇವಕಿ ಬಯಸಿ ಮಣ್ಣೆಂಬಳು (ಸಾಳ್ವಭಾ. ೨೧-೬). ಹುಡಿ ಹಾರಿಸು ೧. ಧೂಳೆಬ್ಬಿಸು. ೨. (ಆಲಂ) ಧನವ್ಯಯ ಮಾಡಿ ಆಡಂಬರದಿಂದ ಕಾರ್ಯವನ್ನು ನಡೆಸು : ಗಮ್ಮತ್ತಿನಲ್ಲಿ ಮಮವೆ ಹುಡಿ ಹಾರಿಸಿ. ನಮ್ಮ ಬಿಡಾರದಿಂದ ನರಹುಳುವೂ ಬರಲಾರದು (ಹೊಸಕ್ತಿ. ೬೮). ೩. ವೃಥಾಖರ್ಚು ಮಾಡು ; ಧಂದುವೆಚ್ಚಮಾಡು : ಅಚ್ಚುತನ ಕೈಯಲ್ಲಿ ಬಹಳ ದಮ್ಮಡಿಗಳು ಕುಣಿದಾಡುತ್ತಿರಲಿಲ್ಲ . . . ನಾಗರಾಜನಂತೆ ಬೀಡಾ ಸಿಗರೇಟುಗಳನ್ನು ಹುಡಿ ಹಾರಿಸಬೇಕೆಂಬ ಹಂಬಲವಿರಲಿಲ್ಲ (ಮುಗಿಯು. ೩).

[ದೇ. ೫ ತಮಿ. ಮಲ. ಪೊಟಿ ; ತುಳು. ಕೊಡ. ತೆಲು. ಪೊಡಿ]

ಪುಡಿಕಾಸು ' ಪುಡಿಗಾಸು ' ನೋ.

ಪುಡಿಕೆ, ಪುಟ್ಟಿಕೆ, ಪುಟ್ಟಿಗೆ$_1$, ಪುಡುಕೆ, ಬುಡಿಗೆ, ಬುಡುಕೆ, ಹುಡುಕೆ (ನಾ). ೧. ಕರಂಡ ; ಭರಣಿ ; ಡಬ್ಬಿ : ತಲೆದೆಸೆಯೊಳರ್ಚಿಸಿರ್ದ ಪುಡಿಕೆಯಂ ತೆಱೆದು ಹಾರಮಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ (ಪಡ್ಮಾರಾ. ೧೨೩-೧೨) ; ಆ ಕಳ್ಳರ್ . . . ಪೊನ್ನ ಪುಡಿಕೆಯುಮನುಳಿಯುಮಂ ಬಟಪಮುಮಂ ಅಲ್ಲಿ ಪಟ್ಟಿರ್ದ ಭಟ್ಟನ ಮುಂದೆ ತಂದಿಕ್ಕಿ (ಶಾಸಂ. ೨೩೨ ೬) ; ತರವೇಟ್ಮೂಣಿಕ್ಯಭಂಡಾರದ ಪುಡಿಕೆಗಳಂ (ಕಾವ್ಯಾವ. ೨೬೪). ೨. ಪೊಟ್ಟಣ : ಪುಷ್ಪದಾಭರಣವ ಪುಡಿಕೆಯೊಳಗೆ ತಂದು ಒಪ್ಪಿಸಿದರು ಜಿನಗವರು (ಅನಂತ. ೯-೭೫) ; ರಾಜೇಶ . . . ಪುಡಿಕೆಯನ್ನು ಬಿಚ್ಚಿ ಅವಳೆಡೆಗೆ ಓಡಿದ (ಸ್ವಪ್ನದ. ೦೪೯) ; ಖಾದರನು ಕೈಚೀಲದಲ್ಲಿ ಫೇಡೇದ ಪುಡಿಕೆಗಳನ್ನು ತಂದಿಟ್ಟನು (ಮುತ್ತ್ಯಾರ. ೧೬೭). ೩. ಕಂತೆ ; ಸಿವುಡು ; ಪಿಂಡಿ : ಪರತಪಮಂ ಕಸಬೆಂದಾ ಪುರಾಣಮಂ ಪುಸಿಯ ಪುಡಿಕೆಯೆಂದಂ ದವರಾಪ್ತರೆ ಠಕ್ಕರೆಂದು ಬಗೆವನೆ ನಿರುತಂ ದರ್ಶನಿಕನಪ್ಪನಲ್ಲದನಲ್ಲಂ (ಸಮಾಜ. ೪-೦೨೮) ; ೨೫೦ ಸೂಜಿಗಳಿಗೊಂದರಂತೆ ಪುಡಿಕೆಗಳನ್ನು ಕಟ್ಟುವನು (ಮುಂಬಯಿ. ೦-೦೫೫) ; ಅವನ ಪೆಟ್ಟಿಗೆಯಲ್ಲಿ ಎರಡು ಪುಡಿಕೆ ಪತ್ರಗಳಿದ್ದವು (ಇಪ್ಪಳ. ೩೮೭). **ಪುಟ್ಟಿಕೆ** : ೧. ಹೊಸ ಪುಟ್ಟಿಕೆಯಲ್ಲಿ ಒಂದು ಪಡೆ ಮಾತ್ರ ಮಿಗಿಸಿ ಮುಚ್ಚಿಟ್ಟು (ಕಥಾಮಂ. IV, ೧೫). **ಪುಟ್ಟಿಗೆ$_1$** : ೧. ' ಪೂಪುಟ್ಟಿಗೆ ' ಪರಾ. ೪. ದೊನ್ನೆ ; ಎಲೆವಟ್ಟಲು : ' ಪತ್ರಪುಟ್ಟಿಗೆ ' ಪರಾ. **ಪುಡುಕೆ** : ೧. ದೇಹಮುಂ ಧಾತುಗಳ ಪುಡುಕೆ ವಿದ್ಯುಲ್ಲತಾಸಂಚಳಂ ಜೀವನು (ಪಂಗಿಪು. ೯-೭೭) ; ಮಾರಕತದ ಪುಡುಕೆಯಲನರ್ಘ್ಯದ ಸಿರಿರತುನಗಳ ಶಿ ವಿ (ಸಾಳ್ವಭಾ. ೩೧-೦೯). ೩. ಅವನ ಜೇಬಿನಲ್ಲಿ ಯಾವಾಗಲೂ ನೋಟಿನ ಪುಡುಕೆಗಳಿರುತ್ತಿದ್ದವು (ರಕ್ತರ್ಯ. ೬೩). ೫. ಪೆಟ್ಟಿಗೆ ; ಸಂದೂಕ : ಭಂಡಾರದ ಮನೆಯೊಳ್ ಕನ್ನಮಿಕ್ಕಿಸಿ ಭಂಡಾರದ ಪುಡುಕೆಗಳಂ ಪೋಟ್ಟು [ದ್ರ]ಮ್ಮಮುಂ ಪೊನ್ನುಂ ತುಡುಗೆಗಳುಮಂ . . . ಕೊಂಡು ಪೋಗಿ (ಪಡ್ಮಾರಾ. ೧೭೭-೪) ; ಪುಡುಕೆಯ ಪೊಂಗಳಾರೊಡನೆ ಭೂತಳಮಾರೊಡನೆ . . . ವಿಭೂತಿಯಾರೊಡನೆ ಪೋದುವು (ಅಪಪು. ೨-೧೦೩). ೬. ಬುಟ್ಟಿ ; ಹೇಳಿಗೆ : ಉಡಿಯದ ಪಾಟ್ವನೆಯಿಲ್ಲಂ ಪಿಡಿದುರ್ಚುವ ತೆಱದಿನುರ್ಚಿ ರಿಪುಗಜರದಮಂ ಸಿಡಿಲಡಸಿ ಪೊಡೆದ ಜಂತ್ರದ ಪುಡುಕೆವೊಲಿರೆ ಪೊಡೆದೆನಹಿತರಥಸಂಕುಳಮಂ (ಪರ್ಶಪು. ೭-೩೦). **ಬುಡಿಗೆ** : ೭. ಕುಡಿಕೆ : ಮಡಿಕೆಗಳನ್ನೆಲ್ಲಾ ಮಾರಿಕೊಂಡು ಬುಡಿಗೆ ತುಂಬಿಸಬೇಕೆಂದು ಎಣಿಸಿಕೊಂಡೆಯೋ (ಕಥಾಮಂ. IV, 22). **ಬುಡುಕೆ. ಹುಡುಕೆ** : ೮. ನೆಲೆ ; ಆಶ್ರಯ : ಹಲವು ಹಡಿಕೆಯ ಹುಡುಕೆ ಕೇಳಿದು ಹೊಲಸಿನಾಲಯ (ಕಪಿ. III, ೨೪೪ ಸುಜ್ಞಾನಪಂಚಾಮಣಿ).

· **ಪುಡುಕೆಯ ಮೊಲ, ಬುಡುಕೆಯ ಮೊಲ**=ಅತ್ತಿತ್ತ ಹೋಗಲಾಗದೆ ಬುಟ್ಟಿಯಲ್ಲೇ ತೊಳಲುತ್ತಿರುವ ಮೊಲ : ಪುಡು[ಪಾಠಾಂ. ಡಿ]ಕೆಯ ಮೊಲನಂತೆ ಕುಂಬುತಿರ್ಪರ್ಪಗೆವರ್ (ಶಾಪುಂಪು. ೪) ; ನಿನ್ನ ಕೂರಸಿಯೆಂಬೀ ಪಡೆಮಾತುಗೇಳ್ದು ಗೋನುಗ ಪುಡುಕೆಯ ಮೊಲದಂತೆ . . . ಇರ್ಪರ್ ಮಲೆಪರ್ (ಎಕ. VIII, ಸಾಗರ. ೧೦೯-೦೯ 1042) ; ತೊಡರಲ್ಕಣ್ಮದೆ ಕೆಮ್ಮನೆ ಬುಡುಕೆಯ ಮೊದಲಂತೆ [ಮೊಲದಂತೆ] ಕುಂಬುತಿರ್ಪರನೇಕುಂಟೊಡೆತಾಗಿ ಮಾಚ್ಚರಯ್ವರುಮೊಡನೆನ್ನಯ್ದುಂ ಬೆರಲ್ಗೆ ನೆರೆದೊಡೆ ಸಾಲ್ಗುಂ (ಬಾಹಂ. ೦೦-೨೧). [<ಸಂ. ಪುಟಿಕಾ./ತೆಲು. ಬುಡಿಗ, ಬುಡಿಗೆ]

ಪುಡಿಖರ್ಚು (ನಾ). ಚಿಲ್ಲರೆವೆಚ್ಚ ; ಚಿಕ್ಕಪುಟ್ಟ ಮೇಲುಖರ್ಚು : ಪುಡಿಖರ್ಚಿಗಾಗಿ ಇಪ್ಪತ್ತುರೂಪಾಯಿಗಳನ್ನೂ ಹತ್ತರವಿಟ್ಟುಕೊಂಡನು (ಮುಸಿಮಾ. ೪೮). [ಪುಡಿ + ಖರ್ಚು (<ಕರ್ಚು$_4$)]

ಪುಡಿಗತ್ತುರಿ (ನಾ). ಕಸ್ತೂರಿಯ ಹುಡಿ ; ಕಸ್ತೂರೀಚೂರ್ಣ : ಪುಡಿಗತ್ತುರಿಯಂ ತಲೆಯೊಳ್ ತೀವೆ ಪೊಯ್ದು... ನೆಱೆಯ ಕೆಯ್ಗೆಯ್ದು ಬಂದು (ಶಂಶಭಾ. ೧೨-೦೦೮ ಪ); ಕಚಾವಳಿಗಳಂ ಬಗಿಬಗಿದು ಪುಡಿಗತ್ತುರಿಯ ನೆಯ್ದು ತಳಿದು . . . ಬಲ್ದುಱುಂಬಂ ನಿಮಿರ್ಚಿ (ಶಪ್ಮರಾ. ೩-೪೪).

[ಪುಡಿ + ಕತ್ತುರಿ]

ಪುಡಿಗಪ್ಪುರ, ಪುಡಿಗರ್ಪುರ (ನಾ). ಕರ್ಪೂರದ ಹುಡಿ,-ಚೂರ್ಣ : ಒನಕೆ ವಾಡಿನ ತಾಳಕ್ಕೆ ಕುಣುಕಿದ ಪುಡಿಗಪ್ಪುರದ ಕೈರದಂಬುಲವನ್ನು...ಆ ನಿನ್ನ ಬೋಡಬಾಯ್ಗೆ ಮೆಲ್ಲಮೆಲ್ಲಗೆ ಊಡಿ (ಮಂತ್ರಶ. ೬೧-೧೭). **ಪುಡಿಗರ್ಪುರ** : ಪುಡಿಗರ್ಪುರಂಬೊರೆದ ಚೆಂದುಟಿಯ ಕುಂಕುಮಂದೊಡೆದ ಪೆರ್ದೊಲೆಯ . . . ವಿಲಾಸಿನಿಯರೇಳ್ತಂದರು (ಸೌಂದಪು. ೬-೪೧).

[ಪುಡಿ + ಕಪ್ಪುರ]

ಪುಡಿಗರ್ಪುರ ' ಪುಡಿಗಪ್ಪುರ ' ನೋ.

ಪುಡಿಗಾಸು, ಪುಡಿಕಾಸು (ನಾ). ಚಿಲ್ಲರೆ ನಾಣ್ಯ : ತನ್ನ ಹತ್ತಿರ ಪುಡಿಗಾಸೂ ಇಲ್ಲವಲ್ಲಾ (ಸ್ವಾಮಿಸ್ವೇ. ೬೯); ಕಷ್ಟಪಟ್ಟು ಸಂಪಾದಿಸಿದ್ದ ಪುಡಿಗಾಸನ್ನು ಖರ್ಚುಮಾಡಿಯಾಗಿತ್ತು (ಪೂರ್ಗದ. ೨). **ಪುಡಿಕಾಸು** : ನಾಲ್ಕಾರು ತಿಂಗಳು ಕೈಯಲ್ಲಿ ಪುಡಿಕಾಸು ಓಡಾಡಿದಾಕ್ಷಣ 'ನಾನು ಪ್ರಬುದ್ಧೆ' ... ಎಂದು ನೀನು ಭಾವಿಸಿದೆಯೇನು ? (ಪಾತ್ಸಲ್ಯ. ೩೦೦) ; ಆದರೆ ಎಲ್ಲ ಯತ್ನಗಳೂ ಪರಿಚಯವಿದ್ದವರಿಂದೆಲ್ಲಾ ಪುಡಿಕಾಸು ಸಾಲ ಪಡೆಯುವುದರಲ್ಲೇ ಮುಕ್ತಾಯವಾಗುತ್ತಿದ್ದುವು (ರಂಗವ. ೩೭).

[ಪುಡಿ + ಕಾಸು$_2$]

ಪುಡಿಗಿರಾಕಿ (ನಾ). ಚಿಲ್ಲರೆ ಗಿರಾಕಿ; ಚಿಲ್ಲರೆಗ್ರಾಹಕ : ಈ ಅಂಗಡಿಕಾರನು ತನ್ನ ಸರಕುಗಳನ್ನು ದೊರಕಿಸುವುದು—ಇಡಿಯ ದರದ ಅಂಗಡಿಗಳಿಂದ ; ಆದರೆ ಅವುಗಳನ್ನು ಪೂರೈಸುವುದು ಪುಡಿಗಿರಾಕಿಗಳಿಗೆ (ಶಕ್ಕಡಿ. ೨೨).

[ಪುಡಿ + ಗಿರಾಕಿ]

ಪುಡಿಗುಟ್ಟಿಸು (ಕ್ರಿ). ಹಿಟ್ಟುಹಿಟ್ಟಾಗುವಂತೆ ಹೊಡೆಯಿಸು,—ಅರೆಯಿಸು : ಕಡಿದು ಕಿಱಿಕಿಱಿದನೆಲುವಂ ಪುಡಿಗುಟ್ಟಿಸಿ ತೊವಲನುಗಿದು ಕರುಳ ತೊಡಂಕಂ ಬಿಡಿಸಿ ನಡೆನೋಟ್ಟೆಂ (ಯಶೋಪ. ೪-೧೯).

[ಪುಡಿಗುಟ್ಟು + — ಇಸು$_3$]

ಪುಡಿಗುಟ್ಟು, ಹುಡಿಗುಟ್ಟು (ಕ್ರಿ). ೧. ಕುಟ್ಟಿ ಪುಡಿಮಾಡು : ಆ ಚಿತ್ರರಥನಂದನೆಯ ಮದನಾನಲಂ . . . ಎಡವಱಿಯದೆ ಪುಡಿಗುಟ್ಟಿದ ಮುತ್ತಿನ ಮಳಲ್ಗೆದಱಿದ ಮಣಿಕುಟ್ಟಿಮದೊಳಂ ಮಾಣದೆ(ಕಾವಂಲಾ. ೩೨೬); ಕಾಳಂ ಜಜ್ಜುತೆ. . . ಪುಡಿಗುಟ್ಟಿ ಕಾಸಿ ಪಿಱಿದುಂ ಶ್ರೀಖಂಡಖಂಡಂಗಳಂ ನೋಳುಂ ತೈಲವನೀವ ಜಂತ್ರಗಡಣಂ ಲೆಕ್ಕಕ್ಕೆ ಲಕ್ಕಂಗಳೇ (ಮೈಸೂಮ. ೩-೩೬). ೨. ನಾಶಗೊಳಿಸು ; ಧ್ವಂಸಮಾಡು : ಅನನ್ತವಾಳು . . . ಅಱಿಯಟ್ಟಿ ಕಟ್ಟಿದಿರೊಳೆಯ್ದಿದ ಕಂಟಕದನ್ತ × × ತಾಮ್ಮಿದಿ[ಱಾ]ಳಿಯೆಲ್ಲಮಂ ನಿಜಭುಜಾಗ್ರಾಳದಿಂ ಪುಡಿಗುಟ್ಟಿ ತೂಱಿದ (ಕಪಿ. V, ೦೪-೦೦; 1099); ಕೃಷ್ಣನು ತಾನಾಗಿ ಬಂದು ಬಾಣನ ಕೋಟೆಯನ್ನು ಪುಡಿಗುಟ್ಟುವನೆಂದು ತಿಳಿಸು! (ಗುರುಚೆ. ೦೦೩). **ಹುಡಿಗುಟ್ಟು** : ೧. ಮಾರನ ಗರ್ವ ಮೆಂಬ ವರಪರ್ವತಮಂ ಹು[ಪಾಠಾಂ. ಪು]ಡಿಗುಟ್ಟಿ ರಾಜಿತಾಚಾರವಿಶೇಷಮೆಂಬ ಕುಲಿಶಾಯುಧದಿಂದೆತಪಃಪ್ರಭಾವಮಂ ಧಾರಿಣಿಯೊಳ್ ಕರಂ ತಳೆದನುತ್ತಮ

ಭೂರಿಗುಣಾಶೋಭಿತಂ (ಶಾರಪ. ೦-೫೦) ; ನಿಜಗದೆಯಲಾತನ ರಥವ ಹುಡಿಗುಟ್ಟಿದನು (ಶುಗ್ರಾಕ್ರೋ. ೦೨-೧೬). ೨. ಧರೆಯ ಬೇಸಱನೆಯದು ದೋಷಮಂ ಹುಡಿಗುಟ್ಟಲೆಂದು ಪುಟ್ಟಿದ ನಿನ್ನ ನಾನಿಲ್ಲಿ ಮಡಗುವೆನೆ ಮಗನೆ (ಸಿದ್ಧರಾ. ೩-೧೬) ; ಹುಟ್ಟಿದ ದಿನವೇಳಱೊಳಗೆ ಷಣ್ಮುಖ ಹುಡಿಗುಟ್ಟಿದು ಶಾರಕಾಸುರನ ನೆಟ್ಟನೆ ಮುಱುದು ನಿರ್ಜರರಿಗೆ ಪಟ್ಟವ ಕಟ್ಟಿದ ಕತೆಯ ಕೇಳ್ದಱಿಯಾ (ಸೋಕತ. ೧೨-೧೬). [ಪುಡಿ+ಕುಟ್ಟು$_1$]

ಪುಡಿಗೂಡಿಸು, ಹುಡಿಗೂಡಿಸು (ಕ್ರಿ). ನಾಶಗೊಳಿಸು ; ಧ್ವಂಸಮಾಡು : ಆ ಗುಡ್ಡವನ್ನು ತಮ್ಮ ಸ್ವಾಧೀನ ಮಾಡಿಕೊಂಡರೆ ಮೈಸೂರು ಸೇನೆಯನ್ನು ಪುಡಿಗೂಡಿಸುವುದು ಸುಲಭ (ಶರಸ. ೦೬೦). **ಹುಡಿಗೂಡಿಸು** : ಕೈಯಲ್ಲಿ ಕಾಸಿದ್ದರೆ ಹುಡುಗರು ಕೋತಿಯಂತೆ ಕಟ್ಟಾಣಿಯನ್ನೂ ಹುಡಿಗೂಡಿಸುವರು (ಸುರುಸ. ೨೦) ; ತನ್ನ ಬಾಳು ಹುಡಿಗೂಡಿಸಲು ಅವಳನ್ನು ಪ್ರೇರೇಪಿಸಿದ್ದು ಇಂದಿನ ಸಮಾಜವಲ್ಲವೆ? (ಕಾಕ್ಷಸ. ೦೪). [ಪುಡಿ+ಕೂಡಿಸು]

ಪುಡಿಗೆಯ್, ಪುಡಿಗೈ, ಹುಡಿಗೆಯ್, ಹುಂಡಿಗೈ (ಕ್ರಿ). ೧. = ಪುಡಿಗುಟ್ಟು ೧: ಕಲ್ಪವೃಕ್ಷಮಂ ಕಡಿದರೇ . . . ಮಾಣಿಕವನು ಪುಡಿಗೆಯ್ದರೇ (ಶಿಪು. ೩೫-೨೪). **ಪುಡಿಗೈ** : ೨. = ಪುಡಿಗುಟ್ಟು ೨ : ವೀರಲಕ್ಷ್ಮಣನಿಸುವ ಕೂರಂಬನೆಲ್ಲಮಂ . . . ಧೀರಸಹ ಸೀತಾಕುಮಾರಕಂ ಸಾಯಕದ ಸಾರದಿಂ ಪುಡಿಗೈದನು (ಕೈಮಿಶಾ. ೨೦-೫೯) ; ಗರುವ ತರುವರಕುಲಂ ಮೂಲಮಂ ಕಿರಿಪಿ ಮೊಂಟಿದವೋಲ್ ನೆಲಕ್ಕುರುಳಿದವು, ಪೊದರ್ ಗಿಡುಗಳಂ ಪುಡಿಗೈದು (ಪತ್ರಾಂಗ. ೯೬-೦೬೧೫). **ಹುಡಿಗೆಯ್** : ೨. ಹೆಚ್ಚಿನ ಮರುಳಾಟದ ಮಱವಿಂ ಲೋಕಂಗಳನು ಹುಡಿಗೆಯ್ಯುತ್ತಿಹ ನರಸಿಂಹನ ಹಣೆಯಾ ಲಿಪಿ ತೊಡೆದಾ ವೀರೇಶನ ಲೀಲಾಕಥನವ ಪಡವಿಡುವೆನು (ಬೀರೇಶ. ೧-೬). **ಹುಡಿಗೈ** : ೨. ವಿರಾಗಿಯರ್ಜುನನೆದೆಯ ಕೋಂಟೆಯಂ ಹುಡಿಗೈದ ಶೃಂಗಾರವೈತರಲಿ (ಪತ್ರಾಂಗ. ೨೯-೬೯೩). [ಪುಡಿ+ಕೆಯ್$_1$]

ಪುಡಿಗೈ 'ಪುಡಿಗೆಯ್' ನೋ.

ಪುಡಿಚಂಡಿಕೆ (ನಾ). ಕುರುಚಲುಕೂದಲು : ಚಿಕ್ಕ ಚಂಡಿಕೆ : ಅವನ ಪುಡಿಚಂಡಿಕೆಗಳು ತಲೆಯ ಮೇಲೆ ಹೋಕಿನ ಗಡ್ಡದಂತೆ ಹಾರಾಡುತ್ತಿದ್ದವು (ಸಮಸಾ. ೩೯೯). [ಪುಡಿ+ಚಂಡಿಕೆ$_1$ (<ಚೆಂಡಿಕೆ)]

ಪುಡಿಚಟ್ಟಿ (ನಾ). ಕಡಲೆಬೇಳೆ, ಉದ್ದಿನ ಬೇಳೆ, ಮೆಣಸಿನಕಾಯಿ ಮೊದಲಾದುವನ್ನು ಹುರಿದು, ಕುಟ್ಟಿ, ವ್ಯಂಜನವಾಗಿ ಉಪಯೋಗಿಸುವ ಪುಡಿ : 'ಚಟ್ಟಿಪುಡಿ' ಪರಾ.

[ಪುಡಿ+ಚಟ್ಟಿ (<ಚಟ್ಟಣಿ)]

ಪುಡಿದುಡ್ಡು (ನಾ). = ಪುಡಿಗಾಸು : ಗೋಲಕದ ಪುಡಿದುಡ್ಡು ಇದೆಲ್ಲಾ ಸೂರಯ್ಯನಿಗೆ ದೊರೆಯುತ್ತಿತ್ತು (ಬೀಕಶಂ. 11. ೨೯); ಕೆಲವರು ತಮ್ಮಲ್ಲಿದ್ದ ಪುಡಿದುಡ್ಡುಗಳಿಗೆ ಎಣ್ಣೆಯನ್ನು ಕೊಂಡು ತಂದರು (ಶಾಟಕ. ೨೨). [ಪುಡಿ+ದುಡ್ಡು$_1$]

ಪುಡಿಯಾಟ, ಹುಡಿಯಾಟ (ನಾ). ೧. ಧೂಳೆಬ್ಬಿಸುವ ಆಟ ; ಧೂಳಾಟ : ಪುಡಿಯಾಟಮನಾಡಿ ಚರಾಚರಂಗಳಂ ಕರಿಮುರಿಯಪ್ಪಿನಂ ಹುರಿದ ಹಂಚುಪೊರ್ದೆಳೆಯೊಳ್ ಕೃತಾಂತನೆಚ್ಚುರಿಗಣೆಯಂತೆ ಬಂದುದು ಲಯಾನಿಳಕಲ್ಪನಿದಾಘಟಾನಿಳಂ (?) (ಅರ್ಥಸಂ. ೯-೬೯). **ಹುಡಿಯಾಟ** : ೨. ಧೂಳಿನಲ್ಲಿ ಆಡುವ ಆಟ ; ಮಣ್ಣಾಟ : ಮೊಲಿಹಾಲ ಕುಡಿದು ದಿನವೇಸು ತಂಗೆವ್ವ ಹುಡಿಯಾಟವಾಡಿ ದಿನವೇಸ (ಪುರ್ಕಿಗಾ. ೯೦-೯).

[ಪುಡಿ + ಆಟ]

ಪುಡಿಯಾಡು (ಕ್ರಿ). ಧೂಳಿನಲ್ಲಿ ಆಡು ; ಮಣ್ಣಾಟವಾಡು : ಪುಡಿಯಾಡುವ ತೊದಳೊದವೆ ನುಡಿವ ನಗಿಸುವ ಬಾಲಕ್ರೀಡೆ ಮುರಾರಿಯ ಬಾಲಕ್ರೀಡೆಯನನುಕರಿಪುದಾದುದರಿಕೇಸರಿಯಾ (ಪಂಪಭಾ. ೨-೭).

[ಪುಡಿ + ಆಡು$_1$]

ಪುಡಿಯಿಡು (ಕ್ರಿ). ಹೊಟ್ಟು ಹಾರು; ಹುರುಪು ಏಳು : ಪುಡಿಯಿಡುತ್ತಂ ವರಾಂಗಂ ಸುರುಳ್ಳಿಕ್ಕುಂ . . . ಮುಖಂ ಕಂದಿ ಕುಂದಿಕ್ಕುಂ (ಭುವನಿ. ೦೦-೩). [ಪುಡಿ + ಇಡು$_1$]

ಪುಡಿಯೇಳು, ಹುಡಿಯೇಳು (ಕ್ರಿ). ೧. ನಾಶವಾಗು ; ಧ್ವಂಸಗೊಳ್ಳು: ತಲೆ ಸೀಳಾಗಿ ಖುಡಿಸಿ ಸಿಂಗಾಡಿ ದೊಣೆಯಂಬು ಪುಡಿಯೆದ್ದು ದಿಂಡುರುಳಿತು ಪಾನರಾಜಿ (ಕುಸಂ. ೦೯-೭೯). **ಹುಡಿಯೇಳು** : ೨. ಪುಡಿಯಾಗು : ನಿಡಿಗಲ್ಲು ನಿಶಿತ ಹಾಸಱಗಲ್ಲು ಚೌಕದ ಬಡಿಗಲ್ಲು ಬಟುಗಲ್ಲು ಬೀಳೆ ತುಡುಕಿದ ವಜ್ರಮಾರ್ಗಣದಿಂದೆ ಶ್ರೀಕೃಷ್ಣ ಹುಡಿಯೇಳಲೆಚ್ಚು ಹಾಱಿದ (ಸೋಕತ. ೪೦-೭೩). [ಪುಡಿ + ಏಳು$_1$ (< ಏಟ್ಟು$_1$)]

ಪುಡಿವಡು (ಕ್ರಿ). = ಪುಡಿಯೇಳು ೨ : 'ಕರ್ಪೂರದ ಬಿಡುವೀಳೆಯ ದಂಬುಲ ವಿರಹಾಗ್ನಿಗೆ ಪುಡಿವಟ್ಟುದೇನ ಬಣ್ಣಿಸುವೆ (ಕಂಸಾ. ೯-೦೭೨).

[ಪುಡಿ + ಪಡು$_1$]

ಪುಡಿವಡೆ (ಕ್ರಿ). ೧. = ಪುಡಿಯೇಳು ೧: ಅವನ ಮಾಯೆಯಂ ತಡೆವರಿಲ್ಲಾ ಬಲಂ ಪುಡಿವಡೆದುದು (ಕೈಮಿಶಾ. ೯-೨೩). ೨. = ಪುಡಿಯೇಳು ೨ : ಮೈಗಳು ಸೋಂಕಿ ಪುಡಿವಡೆದ ಕುಂಕುಮಸುಗಂಧಾನುಲೇಪನದ ಚೂರ್ಣಂಗಳೋ . . . ಎಂಬಿನಂ . . . ಕೆಂಧೂಳಿ ಮಸಗಿತಾಗ (ಕೈಮಿಶಾ. ೦೨-೬).

[ಪುಡಿ + ಪಡೆ$_1$]

ಪುಡಿವಿಟ್ಟು (ನಾ). ನುಣ್ಣಗಿರುವ ಹಿಟ್ಟು : ಪಸಿವಾಗೆ ಮುನ್ನಿನ ತೆಱದೊಳಮೃತಾನ್ನವನು ಬೇಡಿ ಕಾಡಲಾ ವನಿತೆ ಪುಡಿವಿಟ್ಟನೊಳು ಪಸಿದನಿಗೆ ನೀರ್ವೆರಸಿ ಪಾಲಿದೆಯೆನುತ್ತಿತ್ತಳು (ಸೌಂದಪು. ೯-೩೬). [ಪುಡಿ + ಪಿಟ್ಟು]

ಪುಡಿವಿಡು (ಕ್ರಿ). ೧. = ಪುಡಿಯೇಳು ೧ : ಕದಡಿ ಪದಾತಿಘಟ್ಟನದೆ ಕೋಟ್ಯಶ್ವಸಱಾಗಿ ತುರಂಗಮಾಂಘ್ರಿಪಾತದೆ ಪುಡಿವಿಟ್ಟು ಕೂಡೆ ರಥಘಾತದೆ ತೀವಿ ಬಱಕ್ಕೆ ದಂಶಿದಾನದೆ ಕರಿದಾದುದಿಂತು ಯಮುನಾನದಿ ಕೆಮ್ಮನೆ ದೇಸಗಾಯ್ತು ಕರ್ಪಿದಱೊಳ್ (ಪಗಸಿ. ೦೬-೭೦). ೨. ನಿರ್ದ್ರವವಾಗು ; ಒಣಗು : ಕಡುವಿಸಿಲೊಳಿರ್ದು ತಾಳುಗೆ ಪುಡಿವಿಡೆ ಮುಖಮೊಣಗೆ . . . ತುರಗಕೆ ತಾಳುರೋಗಂ ತೋರ್ಕುಂ (ಪತ್ರಾಂ. ೦೯-೦).

[ಪುಡಿ + ಬಿಡು$_1$]

ಪುಡಿಸಕ್ಕರೆ (ನಾ). ಹಿಟ್ಟಿನಂತೆ ನಯವಾದ ಸಕ್ಕರೆ : (ಕ).

[ಪುಡಿ + ಸಕ್ಕರೆ]

ಪುಡಿಹಣ (ನಾ). = ಪುಡಿಗಾಸು : ಅವನು ಕೇಳಿದ ಪುಡಿಹಣಕ್ಕೆ ಅವಳೆಂದೂ ಅಡ್ಡಿಯಾಡಿರಲಿಲ್ಲ (ಸಿಕಲಿ. ೩೯). [ಪುಡಿ + ಹಣ (< ಪಣವು$_1$)]

ಪುಡುಂಕು, ಪುಡುಕು, ಹುಡುಕು$_1$ (ಕ್ರಿ). ೧. ಕೈಯಿಂದ ತಡಕಾಡು ; ತಡವರಿಸು : "ಪುಡುಕು, ಪುಡುಂಕು—ಕರಾನ್ವೇಷಣೇ" (ಕಸುಗಾ). ೨. ಅರಸು ; ಶೋಧಿಸು : "ಪುಡುಂಕೆನಲ್ಬುಡುಕುವುದಕಪ್ಪುದು" (ಶಕ. ೬೬); ಕಕ್ಕಸವೇಡನೋರ್ವನುಱ್ ಬೇಂಟೆಯನಾಡಲೊಡಂ ಪುಡುಂಕಿ ಬಲ್ಪಕ್ಕಿಗಳಂದು ಸಿಲ್ಕಿದುವು (ಹಮ್ಮೀರ. ೯-೬೨) ; ಭೂಮಿಯೊಳುಂಟಾದ ಪಾರ್ಥಿವರೆಲ್ಲರಂ ಮೂಱೀಳ್ವೇಳೆ ಪುಡುಕಿ ಪುಡುಂಕಿ ಸಂಹಾರಂಗೆಯ್ದನೋ ಆ ಬಗೆಯ ಕ್ರೋಧಾತ್ಮಂಗೆ ಸಾಷ್ಟಾಂಗಮಾಗಿ ನಮಸ್ಕಾರಂಗೆಯ್ದನು (ಭಾರಕಾಂ. ೩೨೯-೧೭). **ಪುಡುಕು** : ೨. "ಪುಡುಕೆಂದು ಅಱಸುವುದು" (ಶಕಾ. ೬೬-೩೧೬); ತಡವಡಿಸಿ ಪುಡುಕಿ ಪಂಜಿನ ನಡುಬೀದಿಯೊಳಿರ್ದು ಮಱುಗುತಿರೆ ಕಂಡು (ಸುಕುಸಾ. ೯-೩೬) ; ಮತ್ತೊಮ್ಮೆ ತೊಳಲಿ ನೋಡುವೆನೆನುತ ಪುಡುಕಲುಜ್ಜುಗಗೊಂಡನು (ಪಂಕಾಭಾ. ೩-೫-೦೬) ; ಮಡದಿ ಪಿಂದೆ ನಿನ್ನಂ ಪುಡುಕಿವರೆ ತೊಡಕಿ ಬಿಲ ಸಾರ್ದು ಸಂದೆಗಂಬಡೆ ಸಾರಿ ಪುತ್ರಿಮಂದಿರಕೈದಿ . . . ಬಂದು (ಶ್ರೀರಾಮು. ೩-೩೬). **ಹುಡುಕು$_1$**: ೧. ತಾನೊಡನೆ ಕರಯುಗದಿಂದೆ ಹುಡುಕುತ ಲಿಂಗಮೂರ್ತಿಯನಱಸುತವೆ ಮುನ್ನ

(ಶಾಪು. ೦೦-೬೮). ೨. "ಮೃಗಯತೇ = ಹುಡುಕಿದವುದು" (ಶಾಕ್ಷ. ೨೯೬); ಇರುವೆಗಳು ಯಾವಾಗಲೂ ಆಹಾರ ಹುಡುಕುತ್ತಿರುತ್ತವೆ(ಮುಂಇಯ. ೨-೯); ಅಚ್ಚರಿಯ ಬಚ್ಚಿಟ್ಟು ಹುಡುಕ ಹಚ್ಚಿದೆ ಬಾಳ ನೀಳವಯಾಣದ ಹಾದಿ (ಪಾಪಾಯ. ೬೬-೯).

[ದೇ. ೩ ತೆಲು. ಪುಡುಕು, ಪುಣುಕು; ಕೋಲಾ. ಪುಡ್ = ಮುಟ್ಟು; ಪಾಯ್ಕೆ. ಪುರ್ = ಮುಟ್ಟು]

ಪುಡುಂಕುನೀರ್ 'ಪುಡುಂಕುನೀರ್' ನೋ.

ಪುಡುಕು 'ಪುಡುಂಕು' ನೋ.

ಪುಡುಕುನೀರ್, ಪುಡುಂಕುನೀರ್, ಹುಡುಂಕುನೀರ್ (ನಾ). ಕುದಿಯುವ ನೀರು; ಸುಡುನೀರು: 'ಪುಡುಕುನೀರಟ್ಟು' ಪರಾ. **ಪುಡುಂಕುನೀರ್**: ಒದೆದು ಕಲಂಕಿ ಪಾಯ್ವ ಪದದೊಳ್ ಪದವೆತ್ತು ಪುಡುಂಕುನೀರನರ್ದಿ ದಳುಱ್ ಮೋದಿ ಮುಂದಲೆಗೆ ಪಾಯ್ದು ಪೊರಳ್ಚಿದಳ್ (ಲೀಲಾವ. ೦೩-೨೨). **ಹುಡುಕುನೀರ್**: ಅಡವಿಯ ಹೊಗಿಸುತ್ತು ಹುಡುಕುನೀರಲದ್ದಿತ್ತು... ಊರೊಳಗೆಲ್ಲ ಈ ಬೆಡಗಿನ ಮಾಯೆಯ ಬಡಿಹೋರಿಸಮಯಿಗಳ ನುಡಿಗೆ ನಾಚುವೆನು (ಪಪಶಾ. I. ೨೫೯-೦೬); ಮೂಡೆಗಟ್ಟಂ ಕಟ್ಟಿ ಹುಡುಕು ನೀರೊಳ್ ಮೆಟ್ಟಿ ಕಾಡುತಿಹ ಪಾಮರರ ಕೈವಿಡಿತೆಗೊಳಗಾಗಿ ... ಪುಲ್ಗರ್ಚಿ ಕಂಟಕಂಬಡೆದೆವು (ಶಾಪಕಂ. ೨-೮); ನಮ್ಮ ನಿಮ್ಮಂದಖಿಳಶುಭಪ್ರಯೋಜನ ವಿರಲು ನಿಮ್ಮುವಂ ಸೀಳಿ ಪೋಳ್ಗೈದು ಕುದಿಸುತ್ತಿಹರು ತಮ್ಮ ಮೂಗರಿದು ಮುಡಿಗಟ್ಟುತ್ತ ಹುಡುಕುನೀರೊಳಗದ್ದಿ ಬಳಲಿಸುತಿರೆ ಹೆಮ್ಮೆಯುಳಿದೀ ಲೋಕದೊಳಗಿಹುದೆ ಕಷ್ಟವೆಂದುಂ ಮುಳಿದು ಸ್ವರ್ಗಕೆ ಪರಿದು ಪೋಗುವ ತೆರದಿ ನೆಮ್ಮಿ ಗಗನವ ತುಡುಕಿ ಪುನ್ನಾಗ ನಾಗವಳ್ಳಿಯ ಪೊಲಂ ಕಂಗೆಸೆದುವು (ಪಪಮೋ. ೯-೩೦). ℗ "ಪಂಪನ ಪದ್ಯದಲ್ಲಿರುವ 'ಪುಡಪುಡನೆ' ಎಂಬ ಶಬ್ದ ಪುಡು ಎಂಬ ಮೂಲಧಾತುವಿದ್ದಿರ ಬೇಕೆಂಬುದನ್ನು ವಿಶದಗೊಳಿಸುತ್ತದೆ. ಇದರಿಂದಲೇ 'ಪುಡುಕು' ಎಂಬ ಧಾತು ಬಂದು ಕುದಿ, ಬೇಯು ಎಂಬರ್ಥವನ್ನು ಪಡೆದಿರ ಬೇಕೆಂದು ಅರಿವಾಗುತ್ತದೆ. ಪುಡುಕುನೀರ್ ಎಂದರೆ ಕುದಿನೀರು, ಬಿಸಿನೀರು, ಸುಡುನೀರು ಎಂದರ್ಥ" (ಕಶಾವಿ. ೦೩).

[< ಪುಟ್ಟು + ನೀರ್]

ಪುಡುಕುನೀರರ್ದು 'ಪುಡುಕುನೀರಟ್ಟು' ನೋ.

ಪುಡುಕುನೀರಟ್ಟು, ಪುಡುಕುನೀರರ್ದು, ಹುಡುಕುನೀರರ್ದು (ಕ್ರಿ). ಕುದಿಯುವ ನೀರಿನಲ್ಲಿ ಮುಳುಗಿಸು; ಬಿಸಿನೀರಿನಲ್ಲಿ ಅದ್ದು: ಸಮುದ್ರದೊಳ್ ಮಹಾಪಾತಾಳದ ಮೊದಲೊಳಿಕ್ಕಿ ಪುಡುಕುನೀರಟ್ಟು [ಶಾಕಾಂ. ರ್ದು] ತ್ತಂ ಪಿರಿದುಂ ಬೇಗಂ ದುಃಖಮನೆಯ್ದಿಸಿ ಕಾಡಿ ಕೊಲೆ (ಪಪ್ರಾರಾ. ೦೪೫-೦೨); ಮುಳಿಸಾಗೆ ಮಾಳವೇಶನ ಬಳಮೆಲ್ಲಮನುಯ್ದು ಪುಡುಕುನೀರಟ್ಟುವೆಂ (ರರ್ಮಾಮ್ಯ. ೯-೨೪೫). **ಪುಡುಕುನೀರರ್ದು**: ಪುಡುಕುನೀರರ್ದೆ [ಶಾಕಾಂ. ನೀರೊಳರ್ದೆ] ಯುಂ ಪುಟಪಾಕಂ ಸುಡೆಯುಂ (ಅಪಪು. ೦೦-೦೦ ವ); ಕಡುನೀಱ್ ಜಂತ್ರದಂಚೆಯನಡಿಗಡಿಗಾ ನೀರೊಳರ್ದಿದಳ್ ನಡವೆಡೆಯೊಳ್ ಗಡ ನಾಣ್ಚೆದೆ ಪುರುಡಿಪುದೆನ್ನೊಡನೆಂದುಯ್ದಲ್ಲಿ ಪುಡುಕು ನೀರರ್ದುವವೊಲ್ (ಪುಪ್ರಪು. ೬-೦೦೦); ಕೇಸರಿಗಳಂ ಪಿಡಿದು ಪುಡುಕು [ಶಾಕಾಂ. ಡಿತೆ]ನೀರರ್ದು[ಶಾಕಾಂ. ನೀರೊಳಟ್ಟು]ವಂತೆ . . . ಸುಟ್ ಗೊಂಡರ್ದುವ ಸುಟಿಗಳೊಳಂ (ಲೀಲಾವ. ೮-೪೮ ವ). **ಹುಡುಕುನೀರದ್ದು**: ಶಿವನಂ ನೆನೆಯುತಿಡೆಯೊಳನ್ಯಾಯಮಂ ಮಾಡಿ ಮತ್ತಂ ನೆನೆಯುತಿರ್ದೊಡಾ ಶಿವನ ನಾಮಂ ಹುಡುಕುನೀರದ್ದದಿಹುದೇ (ಸಿಪ್ಪಾ. ೬ ೧೮); ಸುಡುವೆ ಲಂಕೆಯ ಸಹಿತವೆಲ್ಲರ ಹುಡುಕುನೀರದ್ದುವೆನು (ಶಾಶಿರಾ. ೯ ೬೦); ಗಂಗೆಯ ನಡುಗಡಲಲೀಕ್ಷಣೆ ಮಳರನು ಹುಡುಕುನೀರದ್ದುವೆನು ಕೌರವ ಕುನ್ನಿಗಳನು (ನಶಾಗ. ೦೦-೮೬-೩೭). [ಪುಡುಕುನೀರ್ + ಅಟ್ಟು]

ಪುಡುಕೆ 'ಪುಡಿಕೆ' ನೋ.

ಪುಡುಕೆಗಟ್ಟಿಸು (ಕ್ರಿ). (ಆಲಂ) ಗಂಟು ಕಟ್ಟಿಕೊಂಡು ಓಡಿ ಹೋಗುವಂತೆ ಮಾಡು; ಎತ್ತಂಗಡಿ ಮಾಡಿಸು: ಮಾಳವಮೇಳುಮಂ ಪುಡುಕೆಗಟ್ಟಿಸಿದತ್ತಱಿಯಟ್ಟಿ ಚೇರನುಂ ಚೋಳನುಮಂ ಸಮುದ್ರ ದೊಳಗರ್ದ್ದಿದುದು . . . ಕೇಜದುರ್ಬ್ಬ (ಅಳ. VII, ೨೪೦. ೦೩೫-೦೬ : 1019). [ಪುಡುಕೆ (< ಪುಡಿಕೆ) + ಕಟ್ಟಿಸು]

Δ ಪುಡುಗ 'ಹುಡುಗ' ನೋ.

ಪುಡುತಕೇಶ, ಪುಡ್ತಕೇಶ (ನಾ). ಪೋರ್ಚುಗಲ್ಲು ದೇಶದವನು: ತುವ ಪರಾಯ ತಾಲ್ಲೂಕು ಪುಡುತಕೇಶನ ಆಶ್ರಯದಲ್ಲಿ ಇದ್ದೀರಿ(ರಾಶಂಇಪ್ರ. ೨೦೦). **ಪುಡ್ತಕೇಶ**: ಗೋವೆ ಪುಡ್ತಕೇಶ ಪಾವಂದ ಗವರ್ನರ ಹೆಸರಿಗೆ ಒಂದು ತಾಕೀತಿ ಆದರೆ ಆ ಅರಸುಗಳು ಇಲ್ಲಿಗೆ ಬಂದು ತಲಪ್ಪಾರು (ರಾಶಂಇಪ್ರ. ೨೦೩). 'ಪೋರ್ಚುಗೀಸ್' ಪರಾ.

[←ಇಂ. Portuguese/ತೆಲು. ಬುಡುತಕೇಚು]

ಪುಡುಪುಡನೆ (ಅ). ಪುಡುಪುಡು ಎಂದು: ಸಿಂಧುನಂದನನ ಕೋಪಶಿಖಿ ಶಿಖಾಕಳಾಪಂಗಳೊಳ್ ಪುಡುಪುಡನಟ್ಟಿ ಸಾಯಲೆಂದು ಪಾಯ್ವ ಪತಂಗಂಗಳಂತೆ ಸೋಮಕ ಶ್ರೀಜಯಪ್ರಮುಖನಾಯಕರೊಂದಕ್ಷೋಹಿಣೀ ಬಲಂಬೆರಸು ಭರಂಗೆಯ್ದಾಂತೊಡೆ (ಪಂಪಭಾ. ೧೦-೩೯ ವ); ಎನ್ನ ಮಕ್ಕಳು ಮಾನುಂ ದುಃಖಾಗ್ನಿಯೊಳ್ ಪುಡುಪುಡನೆ ಪುರ್ಗಿ ನಮೆವ ಪಾಪದ ಫಲಮಂ ನೀನಮೋಘಮುಣ್ಬೆ (ಸುಕುಮಾ. ೩.೭ ವ). [ಪುಡುಪುಡು + — ಅನೆ$_1$]

ಪುಡುಪುಡು (ನಾ). ಒಂದು ಅನುಕರಣಪದ: ನಡನಡನಡುಗಿ ಮಿಡುಮಿಡುಮಿಡುಕಿ ಪುಡುಪುಡು ಪುಗ್ಗಿ . . . ಪುಯ್ಮಲಿಡುತ್ತುಂ (ಅಪಪು. ೦೦-೦೦ ವ).

ಪುಡೆ (ಅ). ಸ್ಪಷ್ಟವಾಗಿ; ನಿಶ್ಚಿತವಾಗಿ: ಚಂಡಿಮಯ್ಯಂಗೆ ಶ್ರೀವನಿತೆಗೆ ತಾನಾಗಿ ಶ್ರೀವಿಶಾಲನೆ ಪುಟ್ಟುವಂತೆ ಪುಡೆ ಪುಟ್ಟಿದಂ ಚಾವು[ಂ]ಡ (ಕಇಸಿ. ೦೦-೯-೯೭; ಸು. 1093).

[< ಪ್ರಾ. ಪುಡ./ಸಂ. ಸ್ಫುಟ./ತಮಿ. ಪುಟೈ = ವ್ಯಕ್ತವಾಗು]

ಪುಡೆಯ 'ಪುಡೆಹ' ನೋ.

ಪುಡೆಹ, ಪುಡೆಯ (ನಾ). ಹಲಸು, ಕುಂಬಳ, ನೆಲ್ಲಿಕಾಯಿ ಮೊದಲಾದುವುಗಳಿಂದ ತಯಾರಿಸುವ ಒಂದು ಬಗೆಯ ಮೇಲೋಗರ: ಕಡುಮೆತ್ತನುಕ್ಕರಿಸಿಕೊಂಡ ಹಲಸಿನ ಕಾಯ ಕಡಲೆ ಯಂದದೊಳು ಕತ್ತರಿಸಿಯುಟ್ಟಿಂಗು ಹುಳಿಯೊಡನೆ ತುಪ್ಪವನೆಱೆದು ತಾಳಿಸಿಯವರೆಯಂತೆ ಕತ್ತರಿಸಿ ಬಲಿದ ಹಾಲ ಬಡಗಸಂಡಗೆಯುಳ್ಳಿ ತೆಂಗಾಯಿ ಶುಂಠಿಗಳ ಹುಡಿಯುವೆಲ್ಲವನು ತುಪ್ಪದಿ ಹುರಿದು ಹದಮೆಣಸ ಜಡಿದ ಮೊಸರಂ ಕಲಸಿ ತುಪ್ಪದೊಳಗಟ್ಟುವೊಗ್ಗರಿಸಿ ಪುಡೆಹ[ಶಾಕಾ. ಡಿಯು]ವ ಮಾಳ್ಪುದು (ಸೂಪಶಾ. ೫-೯೨). **ಪುಡೆಯ**: ನೆಱೆ ಸಣ್ಣನಾಗಿ ಕುಂಬಳಕಾಯನುತ್ತರಿಸಿ . . . ಸಂಭಾರಮಂ ತಳಿದುವೊಗ್ಗರಿಸಿ ಪುಡೆಯವ ಮಾಳ್ಪುದು (ಸೂಪಶಾ. ೫-೨೯); ಎಳೆಯ ಹಲಸಿನ ಕಾಯ ಸಿಪ್ಪೆಯಂ ತೆಗೆದು ಸಂಬಳಿಸಿ . . . ಬೇಯಿಸಿಕೊಂಡು ಬಳಿಕ ತಾಳಿಲ ಕೊಣಬು ಪುಡೆಯಂ ಮುಂತಾದ ಮೇಲೋಗರವನು ಮಾಳ್ಪುದು (ಸೂಪಶಾ. ೫-೩೬).

[?]

ಪುಡ್ತಕೇಶ 'ಪುಡುತಕೇಶ' ನೋ.

ಪುಢಾಕಾರ (ನಾ). ಮುಂದಾಳುತನ; ನೇತೃತ್ವ: ಈ ಎಲ್ಲ ಮಾತುಕತೆ ಗಳಲ್ಲಿ ತುಂಗಕ್ಕನದೇ ಪುಢಾಕಾರವಿತ್ತು (ಮೂಕುರಾ. ೧೯೦); ನಾಲ್ವತ್ತು ವರ್ಷ ವಯಸ್ಸಾಗುವವರೆಗೆ ಹೋಳೀಹುಣ್ಣಿವೆಯ ಚಟುವಟಿಕೆಗಳಲ್ಲಿ ಅವನ ಪುಢಾಕಾರವಿರುತ್ತಿತ್ತು (ಗಂಮಾಯಿ. ೫೪).

[←ಮರಾ. ಪುಢಾಕಾರ]

ಪುಢಾರಿ ಪುಡಾರಿ (ನಾ). ಮುಂದಾಳು ; ನೇತಾರ ; ಮುಖಂಡ : ಹಳ್ಳಿಯ ಪುಢಾರಿಗಳು—ಹಿರಿಯರು—ಹುಂಬರು ಎಲ್ಲಾ ಸೇರಿದ ಬ್ರಹ್ಮ ಸಭೆ ಅದು (ಕಂಠಹು. ೬೮) ; 'ಬರಾಕು'ಗಳ 'ಪುಢಾರಿ'ಗಳಲ್ಲಿ ಒಬ್ಬೊಬ್ಬರಾಗಿ ಮುಂದೆ ಬಂದು ಜಿಗಿಜಿಗಿದು ಭಾಷಣ ಮಾಡಿದುದಾಯಿತು (ಅಗಸ್ಟ್. ೩೫). **ಪುಡಾರಿ** : ದೇಶದ ಮುಖಂಡರೂ ಅವನಿಗೆ ಗೊತ್ತು ; ನಾಡಿನ ಪುಡಾರಿಗಳೂ ಅವನಿಗೆ ಗೊತ್ತು (ಅಕಿ. ೨೯) ; ಹೋಹಾಗ ಬರಂವಂತೆ ಬರುಮಾಗ ಹೋಹಂತೆ ತೋರ್ಪವರೀ ಮೂರು ನೋಡಿ ಒಬ್ಬ ಪುಡಾರಿ ಮತ್ತೊಬ್ಬಳು ವಯ್ಯಾರಿ ಮತ್ತಿನದಿನ್ನೊಂದು ಏಡಿ (ಇಂಪಾಪ. ೦೬೬-೦೬). [← ಮರಾ. ಪುಢಾರೀ, ಪುಢಾಕಾರೀ]

ಪುಢಾರಿಕೆ (ನಾ). ಮುಂದಾಳುತನ ; ಮುಖಂಡತ್ವ : ಅವನಿಗೆ ಜನತೆಯಲ್ಲಿ ಗಣ್ಯವಾದ ಸ್ಥಾನ ದೊರಕಿತ್ತು ; ದೇಶದಲ್ಲಿ ಪುಢಾರಿಕೆ ಬಂದಿತು (ಸ್ವಯಂವ. ೧೦). [ಪುಢಾರಿ + —ಇಕೆ]

ಪುಢಾರಿತನ (ನಾ). = ಪುಢಾರಿಕೆ : ಮಧ್ಯಮರು ಪುಢಾರಿತನದ ಯಜ್ಞದಲ್ಲಿ ಯಾರನ್ನೋ ದೂಗಿಸಿ . . . ಅವರು ಮೈಮರೆಸಿ ಕೊಳ್ಳುವುದು . . . ವಾಡಿಕೆಯದೇ ಆಗಿದೆ (ಕಂಪಪಂ. ೬ ಮುಸ್ಸುಂ). [ಪುಢಾರಿ+—ತನ]

ಪುಣ್, ಪುಂಡು$_2$, ಪುಣ್ಣು, ಹುಣ್, ಹುಣ್ಣು (ನಾ). ೧. ವ್ರಣ : "ಆರುಃ, ವ್ರಣಃ —ಈ ೨ ಪುಣ್ (ಹುಣ್ಣು)" (ಹಲಾಯು. ೦೦೯-೬); ಒಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳನೆಱೆದೊರಸಿ ಕರ್ಚುವರುಂ (ಅಂಪು. ೩-೬೩ ಪ); ಪುಣ್ಣೊಳ್ ನೊಣಂ ಪುಷ್ಪದೊಳ್ ಪ್ರಣಯಂ ಮಾಟ್ಟುದು ತುಂಬಿ (ಸೂಕ್ತಿಸು. ೧-೬೩) ; ಮನದೊಳ್ ದಯವಿಲ್ಲದವನ ಕಣ್ಣೇಂ ಪುಣ್ಣೇಂ (ಸಮರ. ೬೯ ಪ್ರಯೋ). ೨. ಗಾಯಂ ; ಏರು ; ಕ್ಷತ : ತಾಗದೆ ಪಲ್ಗಳ ತುದಿ ಪು[ಪಾಶಾಂ.ಹು]ಣ್ಣಾಗದೆ ನಡುಕಂದದೊಳಗು ನೋಯದೆ ಸವಿಗಿಂಬಾಗಿ ರತಿರಾಗದುರುಳಿವೊಲಾಗೆ ಕರಂ ಬೀಗಿ ಬಾಯ್ಗಳಂ ಚುಂಬಿಸಿದರ್ (ಕಾವ್ಯಸಾ. ೬೭೭ ಕೂರ್ಪ್ರ); ಚತುರ್ಬಲಂಗಳ ಮೆಯ್ಗಳೊಳ್ ಬಿಗಿದಸುಂಗೊಳೆ ಸುಯ್ದು ಕೆತ್ತುವ ಪುಣ್ಣ ಬಾಯ್ಗಳೆ ಬೀರಮಂ ಪೊಗಟ್ವ ಬಾಯ್ಗಳೆನಿಪ್ಪುವು (ಕಾವ್ಯಾವ. ೩೫). ಪುಂಡು$_2$: ೩. (ಆಲಂ) ವ್ಯರ್ಥ ; ವಿಫಲ : ಪದುಳಿದನಲ್ಲದನಂ ಕಲಿಸಿದೊಡಂ ತಿಳಿಪಿದೊಡಮೇಂ ನಿಲಲ್ಕಱಿಗುಮೆ ಚಿತ್ತದೊಳಾಪ್ತನ ವಚನಮದು ಪುಸಿದೊಡಂ ಪುಂಡಾಗಲೆಂತು ಮಱಿಯದ ತೆಱದಿಂ (ಸಮಪ. ೦೦-೦೩೯). ಪುಣ್ಣು : ೧. ಪುಣ್ಣಿನಂತೆ ನೋವಂ ಮಾಟ್ಟುದು (ರರ್ಮಾಮ್ಯ. ೯-೦೬೩). ೨. ಕಾಸಿದೆಣ್ಣೆಯ ಪೊಯಿಲ್ಗೆ ಪಟುಭಟರ ಮೈದೊಗಲ್ ಕೀಸಿದುದು ಮಳಲ ಮಳೆಯಿಂದೆ ಪುಣ್ಣಾದುವು (ಸಂಪು. ೯೨-೩೯). ಹುಣ್ : ೧. "ವ್ರಣಂ—ಹುಣ್" (ಕಾಶಕ್ಯ. ೨೯೦). ೨. ಸುಱಿದು ಕಿತ್ತುವ ಹುಣ್ಬೆರಸಾಡುವಟ್ಟೆಯಿಂ ಚರಮೆಸೆಯಲ್ಕೆ (ಎಇ. XVIII, ೨೦೩-೩೩;1162). ಹುಣ್ಣು : ೧. "ವ್ರಣಃ, ಈರ್ಮಂ, ಆರುಃ—ಈ ೩ ಹುಣ್ಣು" (ಪಾಪಕಾ. ೮೨೦); ಅಂಬುಳುವಾದಡೆ ಷಣ್ಮುಖನೆಂಬರು ಸೀವಳಿಗೆಯಾಗೆ ಸಲೆ ಮಾರಿಯ ಹುಣ್ಣೆಂಬರು ತುಱಿಯಾದಡೆ ಘಣೆಯೆಂಬರ್ ಮತಿಹೀನಜನರದೇನಂ ಮಾಡರ್ (ಸಮಪ. ೯-೨೬); ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ (ಬಸವ. ೩೦೬); ಬೆಂದ ಹುಣ್ಣಲಿ ಸಾಸಿವೆಯ ಬಳಿಯದಿರು ಸಂಜಯ (ಕುಪ್ಯಾದ್ರೋ. ೦-೮); ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ? (ಗಾರ).

[ದೇ. ॥ ತಮಿ. ಮಲ. ಕೋತ. ಪುಣ್ ; ತುಳು. ಪುಡಿ ; ಕೊಡ. ಪುಣ್ಣ್. ಪುಣ್ಣೇ ; ತೆಲು. ಪುಂಡು ; ಕೋಲಾ. ನಾಯ್ಕಿ. ಪುನ್ ; ಮಲ್ತೊ. ಪುನು]

ಪುಣಂಬು 'ಪುಳುಂಬು' ನೋ.

ಪುಣಗು 'ಪುಣುಗು' ನೋ.

ಪುಣಜ 'ಪುಂಚೈ' ನೋ.

ಪುಣಜಿ 'ಪುಂಚೈ' ನೋ.

ಪುಣಪುಣನೆ (ಅ). ಪುಣಪುಣ ಎಂದು : ಅಳಿಲು ಪುಣಪುಣನೆ ಮರ ಹತ್ತಿ ಬಾದಾಮಿ ಮತ್ತು ಖರ್ಜೂರಗಳನ್ನೆಲ್ಲ ಪಟಪಟ ಉದುರಿಸಿತು (ಪುಸ್ಕರ. ೨೯).

[ಪುಣಪುಣ$_0$ + —ಅನೆ$_1$]

ಪುಣಸುಗ (ನಾ). ಒಬ್ಬಾತನ ಹೆಸರು : ಅವಚವಾಡಿಯ ಪೆರ್ಮ್ಮಡಿ ಗಾವುಣ್ಡನ ಲಕೊಳಾದಿತ್ತನ ಮೆಳೆಯ ಪುಣಸುಗ ಸತ್ತಂ (ಎಕ. IV. ಪಾಮರಾ. ೦೩೯-೦೦; 893). [?]

ಪುಣಸೆ 'ಪುಳಿಸೆ' ನೋ.

ಪುಣಿ, ಹುಣಿ (ನಾ). (ಕರಾ) ಹೊಲಗದ್ದೆಗಳ ಬದು; ಒಡ್ಡು ; ಏರಿ : ಜಾರಪ್ಪ, ಆ ದೃಶ್ಯವನ್ನು ನೋಡಲಾರದೆ ಗದ್ದೆಯ ಪುಣಿಯ ಮೇಲೆ ಕುಸಿದು ಬಿದ್ದನು (ಪರಾವ. ೬೮) ; ಮೇಲಾಳುಗಳು ಒಬ್ಬೊಬ್ಬರಾಗಿ ಬಂದು ಗದ್ದೆಯ ಪುಣಿಯಲ್ಲಿ ನಿಂತರು (ಹುಂಪಾ. ೨೯). ಹುಣಿ : ನೀನು ಗಳಿಸುವುದು ಎಲ್ಲಿಂದ ? ಬಂದರಿನಲ್ಲಿ ಹೊರೆ ಹೊತ್ತೋ ? ಗದ್ದೆಯ ಹುಣಿ (ಏರಿ) ಕಡಿದೋ ? (ಸೋಲು. ೩೭) ; ಕೆಲವರು ಗದ್ದೆಯ ಹುಣಿಯಲ್ಲಿ, ಕೆಸರಲ್ಲಿ ಹೊರಳಾಡುತ್ತಲಿರುವರು (ಪಗುಬ. ೭). [← ತುಳು. ಪುಣಿ]

ಪುಣಿಚು 'ಪುಳಿಂಚು' ನೋ.

ಪುಣಿಚೇಟು 'ಪುಳಿಚೇಟು' ನೋ.

ಪುಣಿಜ (ನಾ). ಒಂದು ಬಗೆಯ ಕೀಟ : 'ಪಟ್ಟಪುಣಿಜ' ಪರಾಂ

[ದೇ. ॥ ತೆಲು. ಪುಣುಜು. ಪುಣುದು]

ಪುಣಿಜೆ 'ಪುಳಿಂಚೆ' ನೋ.

ಪುಣಿಲ್ 'ಪುಟಿಲ್$_2$' ನೋ.

ಪುಣಿವುಲ್ (ನಾ). ಒಂದು ಬಗೆಯ ಪಕ್ಷಿ : ಪರ್ದು ಮರವಂ ಮರ ಕುಟಗಂ ಪುಱಲೆ ಬುಱುಗಿ ಹಸುಬಂ ಪುಣಿವುಲ್ (ಸೂಕ್ತಿಸು. ೩-೧೯೬). [?]

ಪುಣಿಸೂರ್ (ನಾ). ಒಂದು ಊರಿನ ಹೆಸರು : ಪುಣಿಸೂರ್ಪೊಲನೆಲ್ಲು ಪಾಣ್ಡಿಯುವಳೆವದು ಸರ್ವಪರಿಹಾರ (ಮೈಅರಿ; ೦೯೩೦. ೩೬-೭; ೩ಪಯ ಕಸ).

[ಪುಣಿಸೆ (< ಪುಳಿಸೆ) + ಊರ್]

ಪುಣಿಸೆ 'ಪುಳಿಸೆ' ನೋ.

ಪುಣಿಸೆಯಮ್ಮ (ನಾ). ಒಬ್ಬಾತನ ಹೆಸರು : ಸತ್ತಿವಂಗಲದ ಸಾಮಿಯ ಸಮ್ಮನ್ದಂ ಮಾರಯ್ಯನುಂ ಪುಣಿಸೆಯಮ್ಮನುವಿಟ್ಟು ತಮ್ಮಲೋಪಾದಿಗೊಟ್ಟರ್ (ಎಕ. IX. ಹೂಸಕೋ. ೦೦೦-೭;997).

[ಪುಣಿಸೆ (<ಪುಳಿಸೆ) + ಅಮ್ಮ$_1$]

ಪುಣಿಸೆವಣ್, ಹುಣಸೆಹಣ್ಣು, ಹುಣಿಸೆವಣ್ಣು, ಹುಣಿಸೆಹಣ್ಣು (ನಾ). ೧. ಹುಣಿಸೆಮರದ ಹಣ್ಣು ; ತಿಂತ್ರಿಣೀಫಲ ; ಅಡುಗೆಯಲ್ಲಿ ಇದನ್ನು ವಿಶೇಷವಾಗಿ ಬಳಸುತ್ತಾರೆ : ಜೇನ್ಪುಣಿಸೆವಣ್ಪೊಸನಾರ್ . . . ಪೀಲಿಯೆಂಬಿವಂ ತುಂಬಿದ ಕಂಬಿಯಂ ತಳೆದದೇಂ ತಳರ್ದತ್ತೊ ಪುಳಿಂದಸಂಕುಳಂ (ರಾಜಶೇ. ೩-೦೦೯). ಹುಣಸೆಹಣ್ಣು : ೧. ಈಗ ಹುಣಸೆಹಣ್ಣು ತುಟ್ಟಿಯಾಗಿದೆ (ರೂಢಿ). ಹುಣಿಸೆವಣ್ಣು : ೧. ಒಂದು ಮಾನೆಣ್ಣೆಯೊಳು ಹುಣಿಸೆವಣ್ಣಿನ ಹುಳಿಯನೊಂದಿಸಿಯದನುವೊಲೆಯೊಳಿಂಗುಸಹಿತಂ ಕಾಸಿ (ಸೂಪಶಾ. ೩-೦೬). ಹುಣಿಸೆಹಣ್ಣು : ೧. ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದ ಹಾಗೆ (ಗಾರ). ೨. (ಆಲಂ) ಗರ್ವ ; ಸೊಕ್ಕು : ಅವನ ತಲೆಯಲ್ಲಿ ತುಂಬಿದ್ದ ಹುಣಿಸೆಹಣ್ಣು ಸ್ವಲ್ಪವೇ ? (ಸ್ವಶ್ಯಹೂ. ೧೭೪). [ಪುಣಿಸೆ (<ಪುಳಿಸೆ) + ಪಣ್$_3$]

ಪುಣುಂಬು 'ಪುಳುಂಬು' ನೋ.

ಪುಣುಗು, ಪುಣಗು, ಪುನಗು, ಪುನುಗು, ಪುಳಗು, ಪುಳುಗು (ನಾ). ಒಂದು ಬಗೆಯ ಕಾಡುಬೆಕ್ಕಿನ ಗುದಗ್ರಂಥಿಯಿಂದ ಪಡೆಯುವ ಸುಗಂಧದ್ರವ್ಯ ; ಜವಾದಿ : "ಪುಣುಗು ಮಾರ್ಜಾಲಿಯೆನೆ ಜವಾದಿಯೆನಿಕ್ಕು" (ಮುಗರಾ. ೯೯-೨೨); ಪುರದೊಳಗೆ ಉಳ್ಳ ಪುಣುಗೆಲ್ಲವಂ

ಶರಿಸುತಂ ಪುರಹರಗೆ ಸಹಸ್ರಾಭಿಷೇಕಮಂ ಮಾಡುತಂ (ತಿಪಸಂ. ೨೫೬-೦೦); ಕರ್ಪೂರ ಕಸ್ತೂರಿ ಜೀರ್ಣ ಜವಾಜಿ ಪುಣುಗು ಬಹುತೈಲ ಸೋಜಿಗವಡೆದ ಸುಗಂಧದಂಗಡಿಗಳು [ಗಾಜಿಸುತಿರ್ದುವಿಕ್ಕೆಲದಿ] (ಮೋಹತ. ೩-೦೮). **ಪುಣಗು :** ನಾಸಿಕೇಂದ್ರಿಯ ನಿನ್ನ ತನುಗಂಧಕೆಳಸಿ ಮೇಲೆ ಸೂಸಿದ ಪುಣಗು ಕಸ್ತುರಿಯ ಪಾಸವಿಡಿಯದು (ಕಂಪಪಿ. ೯-೦೮೨); ಮೆಯ್ಯ ಮೇಲೆಯಿಲಿಯ ಆಕಾರದ್ದು ಗಂಟುಗಳು ಯೇಳುವದು. ಮೈಯಲ್ಲಿ ಪುಣಗಿನ ಗಂಧವು ಮುಟಾಗಿಯಿಹುದು (ಪಿಸಿ. ೨೦ ೨). **ಪುನಗು :** ವಿನುತಕತ್ತುರಿ ಸಾದಿನಿಂದ ತಿದ್ದಿದ ಪಟ್ಟಿ ಪುನಗಿನಗ್ಗಣಿ ಚಳಿಗಳಿಂ ಮಿನುಗುತಿಹ . . . ರಂಗದಲ್ಲಿಯಿಂ (ಪಪಮೋ. ೧೭ ೫೪); ಪುನಗಿದ್ದರೆ ಎತ್ತಲಾಗಾದರೂ ಹಚ್ಚಿಕೊಳ್ಳಬಹುದು (ಹುಟ್ಟಿಹ. ೦೪೨). **ಪುನುಗು :** ಕಸ್ತೂರಿ. ಪುನುಗು . . . ಪನ್ನೀರು ಮುಂತಾದ ಸಹಜ ಸುಗಂಧದ್ರವ್ಯಗಳಲ್ಲಿ ಮುಳುಗಿ ತೇಲಿದವರು ಆ ಕಾಲದವರು (ಸಾಪಿಕೇ. ೫೨); ಹಚ್ಚಿಕೊಳ್ಳಿ ಪರಿಮಳಗಳಂ ಗಂಧ ಅತ್ತರು ಪುನುಗು ಕಸ್ತೂರಿ ಇತ್ಯಾದಿ ತರತರದ ಭೋಗಮಂ! (ಕೋಗಿಲೆ. ೧೯ ೨). **ಪುಳಗು :** 'ಪುಳಗುಕಾಪು' ಪರಾ. **ಪುಳುಗು :** 'ಪುಳುಗುಗಾಪು' ಪರಾ.

ಪುಣುಗಿನ ಚಟ್ಟು, ಪುಣುಗಿನ ಚೆಟ್ಟು ಪುಣುಗಿನ ಲೇಪನದ್ರವ್ಯ : ಪುಣುಗಿನ ಚಟ್ಟಿನ ಗುಣ . . . ತ್ರಿವಿಧ ವಿಷರೋಗಗಳೇ ಮೊದಲಾದವುಗಳನ್ನು ಹೋಗಲಾಡಿಸುವುದರಲ್ಲಿ ಬಹಳ ಪರಿಶ್ರಮವುಳ್ಳದ್ದು ಪುಣುಗು (ಸಕಸ್ಕೆ ೪೦); ಕತ್ತುರಿಯೇಣ ಪುಣುಗಿನ ಚೆಟ್ಟು ಹರಿಣಗೋರೋಜನ ಕೃಷ್ಣಾಜಿನ ಪುಲಿಚರ್ಮ ನರಿಗೊಂಬುಗಳನಿತ್ತರೊಲಿದು (ಮೋಹತ. ೧೯ ೭೫). **ಪುಣುಗಿನ ಬೆಕ್ಕು** = ಪುಣುಗನ್ನು ಒದಗಿಸುವ ಒಂದು ಬಗೆಯ ಬೆಕ್ಕು : ಕಸ್ತೂರಿಬೆಕ್ಕು : "ಗಂಧಮಾರ್ಜಾಲಃ—ಕಸ್ತೂರಿಬೆಕ್ಕು, ಪುಣುಗಿನ ಬೆಕ್ಕು" (ಸಿಹಂ. ೪೭).

[ದೇ.॥ ತಮಿ. ಪುನುಕು, ಪುಟುಕು ; ಮಲ. ಪುಟುಕು, ಪುಟು ; ತುಳು. ಪುಣುಂಗು, ಪುಣುಗು, ಪುನುಗು ; ತೆಲು. ಪುನುಂಗು]

ಪುಣುಗುಕಾಪು, ಪುಳಗುಕಾಪು, ಪುಳುಗುಗಾಪು (ನಾ). (ದೇವರಿಗೆ ಮಾಡುವ) ಪುಣುಗಿನ ಲೇಪನ : ತಿರುನಕ್ಷತ್ರ ೧೪ಕ್ಕೆ ಸಲ್ವುದು ಗ ೬೦ ಶ್ರೀ ಏಕಾದಶಿಯ ಪುಣುಗುಕಾಪು ವರುಷಪೊಂದಕೆ ೧೨೭ (ಎಕ. XIV, ಶ್ರೀರಂಗ. ೨೫೭-೬; 1564). **ಪುಳಗುಕಾಪು :** ಶ್ರೀಕಾಳಹಸ್ತಿಯೀಶ್ವರದೇವರಿಗೆ ಪುಳಗುಕಾಪುಗೂ . . . ಸಮರ್ಪಿಸ್ತ (ಸೌಇಇ. IX-ii, ೩೫೦-೩; 1562). **ಪುಳುಗುಗಾಪು :** ಪುಳುಗುಗಾಪಿಗೆ ತಿಂಗಳುತಿಂಗಳಿಗೆ ಮೃಗಶಿರಾನಕ್ಷತ್ರದಲ್ಲಿ ಅಭಿಷೇಕಕ್ಕೆ ಜೇನುತುಪ್ಪ ಪಡಿ ॥ (ಸೌಇಇ. IX-ii, ೩೫೦-೬; 1562).

[ಪುಣುಗು + ಕಾಪು]

ಪುಣುಜಿ 'ಪುಂಚೈ' ನೋ.

ಪುಣುಬು 'ಪುಳುಂಬು' ನೋ.

ಪುಣುಶೆಪಡಿ (ನಾ). ಒಂದು ಸ್ಥಳದ ಹೆಸರು : ಅನ್ನೆ ಬನ್ದು ಕೊಟ್ಟಲಿ ಪಳ್ಳದ ಅಲಕಿಱುಕೆಯೆ . . . ಕರ್ಗ್ಗಲೊಱ್ಟೆಯೆ ಪುಣುಶೆಪಡಿಯೆ ಪೊರಪಡಿಯೆ ಬಳಿಪುಣುಶೆಯೆ . . . ಕುಡಿತ್ತು (ಎಕ. XVI, ತಿಪಟೂ. ೦೪೦-೭೫; 900). [?]

ಪುಣುಸಿ 'ಪುಳಿಸೆ' ನೋ.

ಪುಣುಸೆ 'ಪುಳಿಸೆ' ನೋ.

ಪುಣುಸೆಪಟ್ಟಿ (ನಾ). ಒಂದು ಊರಿನ ಹೆಸರು : ಪುಣುಸೆಪಟ್ಟಿಸಹಿತಂ ಪಲ್ಲವತಟಾಕಮಿತಿ ಗ್ರಾಮಸ್ಯ ನಾಮಧೇಯಂ ಕೃತ್ವಾ . . . ಉದಕ ಪೂರ್ವ್ವನ್ದತ್ತಃ (ಎಕ. III, ಮಂಡ್ಯ. ೦೦೩-೩೬; 713).

[ಪುಣುಸೆ (<ಪುಳಿಸೆ) + ಪಟ್ಟಿ$_1$]

ಪುಣ್ಗಲೆ (ನಾ). ಗಾಯದ ಗುರುತು : ಬಿರುದಿನ ಬೀರದ ಪೆಸರಕ್ಕರಮಂ ಪರನೃಪರ ಮೆಯ್ಯ ಪುಣ್ಗಲೆಗಳ್ ಪೋಲ್ತಿರೆ ತೋಳ್ವಲಕ್ಕೆ ಪಡೆದಂ ನರಶಾಸನಮಂ ನರೇಂದ್ರಚೂಡಾರತ್ನಂ (ಮಲ್ಲಿಪು. ೩-೦೪); ಕವಿಲ ಬಿಸಿಲ್ಗಳೇಂ ಮಱಸಲಾರ್ತುವೊ ತೀವ್ರಕರಾಭಿಘಾತದಿಂದವನಿಯ ಬೇಂದ ಪುಣ್ಗಲೆಗಳೊಯ್ಯನೆ ಕೆಂಗಲೆಗಟ್ಟಿದಂದಮಂ (ಅಪಂಪು. ೭-೭೦).

[ಪುಣ್ + ಕಲೆ$_2$]

ಪುಣ್ಚು (ಕ್ರಿ). ಗಾಯಗೊಳಿಸು : ಜಾಣ್ಚದುರನೊದವಿಸುತ್ತಿರೆ ನಾಣ್ಚಲಮಂ ಪಡೆಯೆ ನೆಗಟ್ಟ ಗಂಡರನೆ ಕರಂ ಪುಣ್ಚುವುವುಟಿದವರಂ ಕಡೆ ಗಣ್ಚುವುವು (ಶಂಪಂ. ೧೧-೪೫). [ಪುಣ್ + – ಚು$_1$]

ಪುಣ್ಣಮಿ 'ಪುಣ್ಣಮೆ' ನೋ.

ಪುಣ್ಣಮಿವೆಱೆ 'ಪುಣ್ಣಮೆವೆಱೆ' ನೋ.

ಪುಣ್ಣಮೆ, ಪುಣ್ಣಮಿ, ಪುಣ್ಣವೆ, ಪುಣ್ಣೆಮೆ, ಪುಣ್ಣೆವೆ, ಪುಣ್ಣುಮೆ, ಪುಣ್ಣುವೆ, ಪುಣ್ಯಮೆ, ಪುನ್ನಮಿ, ಪೂರ್ಣಮಿ, ಹುಣೆಮೆ, ಹುಣೆವೆ, ಹುಣುಮೆ, ಹುಣ್ಣಮಿ, ಹುಣ್ಣಮೆ, ಹುಣ್ಣವೆ, ಹುಣ್ಣೆಮೆ, ಹುಣ್ಣೆವೆ, ಹುಣ್ಣುಮೆ, ಹುಣ್ಣುವೆ, ಹೂಣ್ಣವೆ (ನಾ). ಪೂರ್ಣ ಚಂದ್ರನು ಉದಯವಾಗುವ ದಿವಸ : ಪೌರ್ಣಮೆ : ಪ್ರಥಮ ವಿಜಯಸಮ್ವತ್ಸರಂ ಕಾರ್ತ್ತಿಗೆ ಪುಣ್ಣಮೆ ಅನ್ದು (ಎಕ. III, ತಿರುಮ. ೦-೪; 726); ಕಾರ್ತಿಕದ ಪುಣ್ಣಮೆಯ ಮೃಗಶಿರನಕ್ಷತ್ರಮುಂ ಸೌಮ್ಯಯೋಗಮುಮಾಗೆ (ಜಾಪುಂಪು. ೯೮); ಪುಣ್ಣಮೆಯಾದುದು ಮುಖಚುದ್ರಮಂಡಲ (ಮೋಹತ. ೦೩-೨೫). **ಪುಣ್ಣಮಿ :** ಸುಕುಮಾರಸ್ವಾಮಿಯುಂ . . . ಕಾರ್ತಿಕಮಾಸದ ಪುಣ್ಣಮಿಯಂದು ಸುಖದಿಂದೆ ಲುಂದಿರ್ದಂ (ಪಡ್ಡಾರಾ. ೨೫-೭); ಹೆರ್ಜ್ಜಗ್ಗಿಯ ಪುಣ್ಣಮಿ ಸೋಮವಾರದನ್ದಿನ ಶುಭಲಗ್ನದೊಳ್ (ಇಲ. X, ೨೫೨-೩೯; 1108); ಪಾಡಿದದೆಳೆವೆಱೆ ಪುಣ್ಣಮಿವರೆಗಂ ರೂಡಿಸಿ . . . ಬಳೆದು ಕುವಲಯಕಿತ್ಯಾನಂದಮನೀವಂದದೊಳು ನಾಡೆಱೆಯನ ಸುಕುಮಾರಂ . . . ವಿರಾಜಿಸಿದಂ (ಜಯಕಾ. ೨.೬೫). **ಪುಣ್ಣವೆ :** ರಮಣಿಯ ಮುಖಕ್ಕೆ ಮಣಿಮುಕುರಮನೊಪ್ಪಿರೆ ತೋರ್ಪ ದಿವಿಜವಧುಸಮ್ಮುಖಮಂ ಹಿಮಕಿರಣಂಗಂ ರವಿಗಂ ಸಮನಿಪ ಪುಣ್ಣವೆಯ ಸಂಜೆವೆಣ್ಣಂ ಪೋಲ್ತಳ್ (ಸಂಪ್ರಪು. ೧೦-೦೩೪); ಸಸಿಯಂ ಪುಣ್ಣವೆ ಪೊಂಗುವ ಪೊಸನೇಸಜನಾಂತು ಮೂಡದೆಸೆ ಮಸಗುವ ಪೊಲ್ ಬಸಿರ್ಪೊಕ್ಕು ಬಣ್ಣವೆಱುವ ಬಿಸಜಾಕ್ಷನಿನಮೃತಮಾಂಬೆ ಪೆಂಪಿಡಿದೆಸೆದಳ್ (ಪಕವಿ. ೪-೫). **ಪುಣ್ಣೆಮೆ :** ಕೈಳಾಸಕ್ಕೆ ವಂದು ಸಿದ್ಧಶಿಖರತಳದೊಳು ಪೌಷ್ಯಮಾಸದ ಪುಣ್ಣೆಮೆ [ಪಾಠಾಂ. ಣ್ಣಮಿ]ಯೊಳು ಅಪಗತವಿಹರಣನಾಗಿರ್ದಂ (ಜಾಪುಂಪು. ೮೩); ಪುಣ್ಣೆಮೆಯಂತಿರೆ ಶಶಿಮುಖಿ ನಡೆತಂದಳೊರ್ದಳ್ (ಧರ್ಮಾಮ್ಯ. ೭-೦೯೧). **ಪುಣ್ಣೆವೆ :** ಆಶ್ವಯುಜದ ಪುಣ್ಣೆವೆ ಸೋಮಗ್ರಹಣದಂದು (ಎಇ. XVI, ೭೦-೯; 1074); ದಿನದಿನದೊಳ್ವರ್ಚುತ್ತಿಹ ಜನಪ ಶ್ರೀಕೃಷ್ಣವಿಭುವ ಜಸಮನದಂ ಕಂಡನುಸರಿಸದ ಚಿಂತೆಯೊಳೇ ಮಿನುಗುವ ಪುಣ್ಣೆವೆಯ ಬಿದು ಕೃಶತ್ವಮನಾಂಪಂ (ಪರಸ. ೩೦-೫೭). **ಪುಣ್ಣುಮೆ :** ಕಾರ್ತಿಕದ ಪುಣ್ಣುಮೆ[ಪಾಠಾಂ. ಣ್ಣಮಿ]ಯೊಳಾ ವರುಷವರುಷಕ್ಕೆ ವರ್ತಿಸುವ ಕೌಮುದೀಪರ್ವ ಬರಲು (ಸಮ್ಯಕ್ತಾ. ೦-೩೨). **ಪುಣ್ಣುವೆ :** ಪುಣ್ಣುವೆಯ ಸಂಪೂರ್ಣ ಜೊನ್ನೊಡಲನುದಿಸಿ ಸಂಪನ್ನತೆಯೊಳು ಕ್ಷೀರಶರಧಿ ಪೆರ್ದೆರೆ ಪೆಚ್ಚಿ ಸಂತೋಷಿಸುವೊಲು (ಪಪಮೋ. ೦-೩). **ಪುಣ್ಯಮೆ :** ಪೌಷ್ಯ ಸುದ್ಧ ಪುಣ್ಯಮೆ ಸೋಮವಾರ ಸೋಮಗ್ರಹಣ ಸಂಕ್ರಾಂತಿ ನಿಮಿತ್ಯದಂದು (ಕಇಲ. ೩೩-೪೬-೦೯; 1097). **ಪುನ್ನಮಿ :** ಪುಷ್ಯಶುದ್ಧ ಪುನ್ನಮಿ ಸೋಮವಾರ ಪುತ್ತರಾಯಣಸಂಕ್ರಮಣದಂದು (ಶಾಸಪ. ೩೩-೩೦;†). **ಪೂರ್ಣಮಿ :** ದೈಶಾಖಪೂರ್ಣಮಿಗೆ ಜನಿಸಿ ಮೇಣಿಂದಿಗ್ಧದೆ ದೈಶಾಖಪೂರ್ಣಮಿಯೊಳಿರುಳು ಪರಿನಿರ್ವಾಣ ಹೊಂದುವೆನ್ನಾತನನ್ನಿರುಳುದ್ದ ಕೊನೆಗೊಮ್ಮೆ ಕಣ್ಬೇವೆ ಕಾಂಬೆನಿಂದು (ವೈಶಾಖ. ೭೯-೪೨೫). **ಹುಣೆಮೆ :** (ಕ).

ಹುಣಿವೆ : "ರಾಕಾ=ಹುಣಿವೆ" (ಕಾಶಕ್ಯ. ೨೭೮). ಹುಣುಮೆ : ಮಗನೆ ಕೇಳ್ ಚೈತ್ರಮಾಸದ ಹುಣುಮೆಗೆಲ್ಲರನ್ನೊಡಗೊಂಡು ಬಹುದು ಗಜಪುರಿಗೆ (ಕುರಂಗ. ೬೨-೧೩). ಹುಣ್ಣಮಿ : ಪೊಳೆವ ಪೊಂಗುಟಿಗಳಿಂ ದೊಪ್ಪುವಾನೆ ಕಂಗೊಳಿಸುತಿರ್ದುದು ಹುಣ್ಣಮಿಯ ಮುಳುಗುವ ನೇಸಱಿಂ ಮೂಡುವ ತಿಂಗಳಿಂ ಚೆಲುವನಾಂತಾಗಸದಂತೆ (ಕಂಪ್ರಸಾಂ. ೨೦-೩೩). ಹುಣ್ಣಮೆ : ಗಗನದೊಳಗೆ ಹುಣ್ಣಮೆ ಹೋದ ಮಱುದಿನ ಪಗಲೆಸೆದಿರ ಲಾತನೊಡಲ ಮೃಗಮೊಲಗುಂಡು ಮೊಗ್ಗಿಸುವೊಂದಂದದಿ ಮೊಗವೆತ್ತಿ ಗಳಹುತೆಯ್ದುದುವು (ಮೋಹಕ. ೧೯-೦೩) ; ಹುಣ್ಣವೆಕಿ[ಶಾಕಾಂ. ವೆ]ಯ ಶಶಿಯಂತೆ ಚೆಲುಚೆಲುವೆಣ್ಣುಗಳು ಸಹ ಬಂದನೆಂದೀಕ್ಷಿಸಿತು ಪುರಜನವು (ಸಾಳ್ಕಶಾ. ೦೮-೯೬). ಹುಣ್ಣವೆ : ಹು[ಶಾಕಾಂ. ಪು]ಣ್ಣವೆಯಲ್ಲಿ ಚಂದ್ರ ಮುಖಿಯರ್ ನೆಲೆಮಾಡದ ಚೂಳಿಕಾಗ್ರದೊಳ್ ತಣ್ಣೆಲರಾಸೆಯಿಂದಿರೆ ನಿಶೀಥಿನಿಯೊಳ್ ಖಳರಾಹು ಬಂದು . . . ತನ್ಮುಖೇಂದುಗಳನೀಕ್ಷಿಸಿ ಶಂಕೆಯನೆಯ್ದಿದಂ ಕ್ಷಣಂ (ಶಾಪಶ. ೪-೩೯); ಮುನ್ನ ಸುರತೆತ್ತೀಸವೃಂದವು ಹುಣ್ಣವೆಯ ಪ್ರತಿಮಾಸಪೂಜೆಗೆ ಭಿನ್ನವಿಲ್ಲದೆ ಲೋಕ ಹೋಗಲು ದೈತ್ಯ ನೊಬ್ಬವನು ಬೆನ್ನ ಬಂದಪನು (ಸಂಪಶ. ೧೩-೪೯); ಸವೆಯದ ಕರ್ಗತ್ತಲೆಯ ತುಂಬಿದಳು ಹುಣ್ಣವೆಯ ಬೆಳ್ದಿಂಗಳ ಕಿಡಿಸಿ (ಮೋಹಕ. ೨೯-೮). ಹುಣ್ಣಮೆ : ಎಸೆದಿರೆ ನಂದೀಶ್ವರಮಂ ಬಸಂತದೊಳ್ ಮಾಡಿ ಬಟಿಕ ಹುಣ್ಣಮೆ[ಶಾಕಾಂ. ಪುಣ್ಣಮಿ, ಪೌರ್ಣಮಿ]ಯೊಳ್ ದೇವಸಮಾಜ ಮೋಕುಳಿಯನಾಡೆ ಸಿಂಪಿಣಿಯದೆಂದು ಮಾಡುವರ್ ತದ್ದಿನದೊಳ್ (ಸಮಾಪ. ೨-೪೩); ನುಣ್ಮುತ್ತಿನಕ್ಷತೆಯ ತಿಲಕ ಹುಣ್ಣಮೆಯ ಸಂಧ್ಯಾಲಕ್ಷ್ಮಿ ಚಂದ್ರ ಮಂಡಲ ಸೂರ್ಯಮಂಡಲವನು ತಳೆದಂತೆ (ಸೌಂದಪು. ೬-೨೩). ಹುಣ್ಣವೆ : ಚೈತ್ರಶುದ್ಧಹುಣ್ಣವೆ ಹನುಮಂತದೇವರ ಜನ್ಮದಿವಸ (ಶಾಹಣ್ಯ. ೬೬). ಹುಣ್ಣುಮೆ : "ಪೂರ್ಣಮಾ-ಹುಣ್ಣುಮೆ" (ಕಾಶಕ್ಯ. ೩೫); ಸೂರ್ಯನು ತನ್ನ ಸುಷುಮ್ನೆಯೆಂಬ ಕಿರಣಸೂತ್ರದಿಂದಾ ಚಂದ್ರನಂ ಶುಕ್ಲ ಪಕ್ಷದ ಪಾಡ್ಯಂ ಮೊದಲು ಹುಣ್ಣುಮೆಯ ಪರ್ಯಂತರಂ ದಿನದಿನಕ್ಕೆ ವರ್ಧಿಸುತ್ತಿರ್ಪಂ (ಪಿಪೇಕ. ೨೧೯); ಕಾಮನ ಹುಣ್ಣುಮೆಗೆ ಕಲಕುನೀರು (ಗಾಪ). ಹುಣ್ಣುವೆ : ಹಾಲಂತೆ ಹಳಹಳಚನೆ ಹೊಳೆವ ಹುಣ್ಣುವೆ ಶಾಕಾಂ. ಣ್ಣಮೆ]ಯ ತಿಂಗಳ ಬೆಳಗಿನೊಳ್ ... ನಡೆತಂದರಾ ಮಹೀವಲ್ಲಭ ನುಮಾ ಸಚಿವನು (ಸಮ್ಮಾಕ್ಷಿ. ೨-೧೦೨) ; ಹುಣ್ಣುವೆ ಅಮವಾಸಿಯಲ್ಲಿ ಯೆರಡಷ್ಟಮಿಗಳಲ್ಲಿ ಪಾಡ್ಯದಲ್ಲಿ ಸಾಧನೆಯು ... ಮಾಡಲು ತಕ್ಕಂಥಾದ್ದಲ್ಲ (ಐಷ್ಟಿಪ. ೩-೮೦). ಹೂಣ್ಣವೆ : ರಕ್ಕತಕ್ಷಿಸಂವಛರದ ಪ್ರಥಮ ಪಡ ಶ್ರಾವಣದ ಹೂಣ್ಣವೆ ಸೋಮಗ್ರಹಣಂ ಪ × ಹರಿಹರದೇವರ × × × ದಲು (ಸೌಇಇ. IX-i, ೨೬೪-೩ ; 1144).

ಹುಣ್ಣಮೆಯಾಳ್ಪ=ಪೌರ್ಣಮೆಯ ಅಧಿಪತಿ ; ಚಂದ್ರ : ಹುಣ್ಣಮೆ ಯಾಳ್ಪ ತನ್ನೆಸಕವನವರೆಸಳ್ಗಣ್ಣೊಳು ಸಾರ್ಚಿದಂತಿಹುದು (ಮೋಹಕ. ೦೯ ೬೨). [< ಸಂ. ಪೂರ್ಣಮಾ, ಪೂರ್ಣಮಾ]

ಪುಣ್ಣಮೆವೆಱ್. ಪುಣ್ಣಮಿವೆಱ್ (ನಾ). ಹುಣ್ಣಮೆಯ ಚಂದ್ರ ; ಪೂರ್ಣಚಂದ್ರ : ತಳತ್ತಳಿಸುವ ಪುಣ್ಣಮೆವೆಱ್ಪೊಗದ ಮಿಸುಪ ಚೆನ್ನೇಸಱಿದಿರ ಕುಂದಣದಾಮರೆಪೊಗದ . . . ಕಡುಮುಗುದೆಯರಾ ಶುಕವಚನೆ ಸುಲೋಚನೆಯೊಡನೊಲ್ದೆಯ್ದಿದರು (ಪಯಶಾ. ೩-೩೩). ಪುಣ್ಣಮಿವೆಱ್: ಒಣ್ಣೆಗೆಗಾಲ ಪುಣ್ಣಮಿವೆಱ್ಪೊಗದೆಳೆವೆಣ್ಣುಗಳೆಯ್ದುಂದ ರೊಡನೆ (ಪಂಪ್ರಸಾಂ. ೧೨-೦೯೦). [ಪುಣ್ಣಮೆ + ಪೆಱ್]

ಪುಣ್ಣವೆ 'ಪುಣ್ಣಮೆ' ನೋ.

ಪುಣಿವೆ 'ಪುಣ್ಣಮೆ' ನೋ.

ಪುಣ್ಣಿವೆ 'ಪುಣ್ಣಮೆ' ನೋ.

ಪುಣ್ಣು 'ಪುಣ್' ನೋ.

ಪುಣ್ಣುಮೆ 'ಪುಣ್ಣಮೆ' ನೋ.

ಪುಣ್ಣುವೆ 'ಪುಣ್ಣಮೆ' ನೋ.

ಪುಣ್ಬಡಿಸು (ಕ್ರಿ). ಗಾಯಗೊಳಿಸು : ವಿಜಿಗೀಷು ಬಲ್ಪಿನಿಂ ಋಕ್ಷಜನಂ ಸೆಱೆವಿಡಿಯೆ ಕಂಡು ಕಾಯ್ದೆಱಗಿದ ಸೂರ್ಯಜನಂ ಪುಣ್ಬಡಿಸಿದಂ (ಸಂರಾಪು. ೦೦-೦೬೦). [ಪುಣ್ಬಡು + — ಇಸು$_3$]

ಪುಣ್ಬಡು (ಕ್ರಿ). ಗಾಯಗೊಳ್ಳು : × ಮಟ್ಟ ವಕ್ಕದೊಡ್ಡು ಪುಣ್ಬಡುವಿನ ವಿಟ್ಟು ಸನ್ದು ಸವಕಟ್ಟಱಿದಲ್ಲಿಗೆ ನೂಂಕಿ ಬೀರಮಚ್ಚಟಿರ್ವಿನವಮಾಮೆ ತಳ್ತಱಿದು ಗೆಲ್ದೆವರಾತಿಯನೆನ್ದು ಪೊಚ್ಚಱಿ ನುಡಿವಱಿಗಣ್ಡರಂ ನಗುವ ದೊಟ್ಟಜಿ ಮಾವನ ಗನ್ಧಹಸ್ತಿಯಂ (ಎಳ. II. ೦೩೯-೪೯ ; ಸು. 982); ಕಿಱಿದು ಸಮಯದಿನಾ ವಿರಾಟನ ಬಲಂ ಪುಣ್ಬಟ್ಟು ಚಲಂಗೆಟ್ಟು ತೊಲಗುವುದುಂ (ಪೇಪಿಪು. ೦೦-೦೯೮ ಪ) ; ನುಣ್ಬಣೆ ಮೆಲ್ಗದವು ಮರಲ್ಗಣ್ ಬಾಯ್ದೆಱ್ ತುಂಬುಗಂದಮಿಂಬಿಡಿದೆರ್ದೆಗಳ್ ಪುಣ್ಬಡುವಿನೆಗಂ ಬಿಗಿದು (ಕಳಪಿ. ೬-೨೦೩). [ಪುಣ್ + ಪಡು$_1$]

ಪುಣ್ಬಡೆ (ಕ್ರಿ). = ಪುಣ್ಬಡು: ಪೂತೆಲವಕ್ಕೆ ಪೌರವನಭೂರುಹಂ . . . ಸಂಧ್ಯಾತಪನಂಗೆ ತೋರಣಕನನ್ಮುಕುರಂ ದೊರೆಯಾಗಿ ತೋಱಿದತ್ತಾತ ನೊಳಾಂತು ಪುಣ್ಬಡೆದ ಖೇಚರಸೇನೆಯ ರಕ್ತಸೇಕದಿಂ (ಕಂಪ್ರಪು. ೬-೩೬). [ಪುಣ್ + ಪಡೆ$_1$]

ಪುಣ್ಬು 'ಪುಳುಂಬು' ನೋ.

ಪುಣ್ಬೆಱು (ಕ್ರಿ). =ಪುಣ್ಬಡು : ಇಸೆ ಲಕ್ಷ್ಮಣಂ ವಿಯಚ್ಚರಸೈನ್ಯಂ ಸತ್ತುದು ಪುಣ್ಬೆತ್ತುದು ಬೆನ್ನಿತ್ತುದು (ಸಂರಾಪು. ೯-೬೯). [ಪುಣ್ + ಪೆಱು$_1$]

ಪುಣ್ಬೊಲಸು (ನಾ). ಹುಣ್ಣಿನ ಕೊಳೆ,-ಹೊಲಸು : ಎಱಗುತ್ತುಮಿರ್ಪ ನೊಟಮುಣ್ಮುವ ಪುಣ್ಬೊಲಸೆಂಬಿವೆಯ್ದೆ ಕೊಕ್ಕರಿಕೆಯನೀಯೆ (ಕಂಪ್ರಪು. ೦೦-೦೦೬). [ಪುಣ್ + ಪೊಲಸು]

ಪುಣ್ಮುವೆಣ (ನಾ). (?) : ಸಾಹಸಭೀಮ . . . ನಿಜಭುಜಾಗ್ರಗದಾಪರಿಘ ಪ್ರಹಾರದಿಂ ಪಱಿವಱಿಯಾಗಿ ಪುಣ್ಮು[ಶಾಕಾಂ. ಣ್ಣು]ವೆಣನಾಗಿ ಮರುಳ್ಗುಣಿ ಸಾಗಿ ಯುದ್ಧದೊಳ್ ಕುಱಿದಱಿಯಾಗಿ ಬಿಟ್ಟರಿಬಲಂಗಳೆ ಪೇಱವೆ ನಿನ್ನ ಬೀರಮಂ (ಗದಾಯು. ೨-೩). P ಇಲ್ಲಿ ಪಾಠಕ್ಲೇಶವಿದೆ. 'ಪುಣ್ಮುವೆಣ' ಎಂಬುದು ಹೆಚ್ಚು ಸ್ವೀಕಾರಾರ್ಹವಾದ ಪಾಠವೆನ್ನಬಹುದು. [?]

ಪುಣ್ಯ (ಗು). ೧. ಚೆಲುವಾದ ; ಸುಂದರವಾದ ; ಮೋಹಕವಾದ : ಏಕಕಾಲಕಳಿತ ಚಕ್ರಧರತೀರ್ಥಕರಕುಸುಮಶರಾಗ್ರಗಣ್ಯಪುಣ್ಯತನುವಪ್ಪ ಶಾಂತೀಶ್ವರಂ . . . ದ್ವಾದಶಗಣವಿನೇಯಜನಂಗಳಂ ನರನಾಕನಾಗಲೋಕೆ ಗಮನಕ್ಕೆ ಪರಸಿ ವಿಸರ್ಜಿಸಿ (ಶಾಂಕಿಪು. ೧೨-೨೯ ಪ). ೨. ಒಳ್ಳೆಯ ; ಶ್ರೇಷ್ಠವಾದ ; ಉತ್ಕೃಷ್ಟವಾದ : ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು ಪುಣ್ಯಪದವಿಯ ಬಯಸಿದರೆ ಭವಮಾಲೆಯ ಭರವು ತಪ್ಪದು (ಬಸವ. ೦೨೮) : ಅರ್ಜುನನ ಮುಖವನ್ನು ಇಂದ್ರನು ಪ್ರೇಮದಿಂದ ತನ್ನ ಪುಣ್ಯಗಂಧವುಳ್ಳ ಕೈಯಿಂದ ತಡವುತ್ತಾ . . . ಇದ್ದನು (ಪಚಶಾ. ೦೨೭). ೩. ಪವಿತ್ರವಾದ ; ಪಾವನವಾದ ; ಶುದ್ಧವಾದ : ನಿಸ್ಪೃಹತೆಯನಾ ಮಹೀಪತಿಗೆ ತಂದುದು ಭವ್ಯತೆ ಪುಣ್ಯಜೀವಮಂ ಸಹಜಸುಖಾಸ್ಪದಂ ಬರೆಗಮುಯ್ಯನಮಲ್ಲಿ ತೊಡಂಕಲೀಗುಮೇ (ಅಬಿಪು. ೬-೨೩) ; ಬಸವನ ಪುಣ್ಯಕೀರ್ತಿಲತೆ ಬೇರ್ವರಿಯಿತ್ತುರಗೇಂದ್ರಲೋಕದೊಳ್ ದೆಸೆಗಳನಗ್ಗಳಂ ಮುಸುಕಿ ಪರ್ವಿಮದಾಗಳೆ ಮರ್ತ್ಯಲೋಕದೊಳ್ (ಬಸರ. ೧೨ ಸೂಚನೆ). ೪. ಧರ್ಮಿಷ್ಠವಾದ; ಸದ್ಗುಣಯುಕ್ತವಾದ. ೫. ಮಂಗಳಕರವಾದ; ಶುಭಕರವಾದ. ೬. ಸಂತೋಷಮಯವಾದ. (ನಾ). ೭. ಸದಾಚಾರ, ಪರೋಪಕಾರ ಮೊದಲಾದುವುಗಳಿಂದ ಆತ್ಮನಿಗೆ ದೊರೆಯುವ ಫಲ ; ಸೈಪು ; ಸುಕೃತ : "ಧರ್ಮಃ, ಪುಣ್ಯಂ, ವೃಷಃ, ಶ್ರೇಯಃ

ಸುಕೃತಂ—ಈ ೫ ಪುಣ್ಯದ ಪೆಸರ್" (ಹಲಾಯು. ೨೦-೦೨೫) ; ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲದೊಡಾಳ್ದನಾಳ್ ಸರೋಗನರೋಗಂ . . . ಎಂಬೀ ಲೋಕಯಾತ್ರೆ ಕಿಡದೆ ಮಹಾತ್ಮಾ (ಶಾಂತಿಪು. ೬-೦೪೦) ; ನೀನೊಲಿಯಿತ್ತೇ ಪುಣ್ಯ ನೀನೊಲ್ಲದುದೇ ಪಾಪ ಕಂಡಯ್ಯಾ (ಬಸವ. ೩೦೭) ; ಒರ್ವನ ಪುಣ್ಯದ ಫಲವಂ ಪಲರನುಭವಿಸುವರ್ (ಶಾರ್ಕ್ಯಪು. ೧೫-೯೯). ೮. ಪವಿತ್ರವಾದುದಂ ; ಪಾವನವಾದುದಂ: "ಶುಚಿ, ಮೇಧ್ಯಂ, ಪವಿತ್ರಂ, ಪುಣ್ಯಂ, ಪಾವನಂ—ಈ ೫ ಶುದ್ಧಮಪ್ಪ ವಸ್ತು" (ಹಲಾಯು. ೨೨-೧೩೨) ; ಪುಣ್ಯವಹುದೆಮ್ಮ ಧರೆ ವಲ್ಲಭನ ಪದಧೂಳಿಯಿಂ (ಕತ್ರಾಂಗ. ೬೦-೦೬೪೨). ೯. ಒಳ್ಳೆಯ ಕರ್ಮದ ಫಲವಾಗಿ ಬರುವ ಸುಖ ; ಭಾಗ್ಯ : ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ (ಹನಕಾ. ೯-೦೦) ; ಅಂದಿನಾನಂದ ದೊಂದೊದವಿಂಗಂದಿನ ಪುಣ್ಯಕಂದಿನೆಸಕಕ್ಕುಂತಾವಳುಂ ನೋಂತಳೇ (ಪುಷ್ಪಪು. ೦೦-೬೧) ; ಒಳ್ಳೆಯ ಕಾರ್ಯ ಮತ್ತು ಅದರ ಫಲವಾದ ಸುಖ—ಇವುಗಳ ಸಂಕೀರ್ಣಸಂಬಂಧಕ್ಕೆ ಪುಣ್ಯವೆಂದೂ . . . ಹೆಸರು (ನಿಕೆಉ. ೨೩೬). ೧೦. ಧರ್ಮ ; ದಾನ : ಪುಣ್ಯಕ್ಕೆ ಸೀರೆ ಉಡಿಸಿದರೆ ಹನ್ನೆರಡು ಮೊಳ ಅಂದಳು (ಗಾರ). ೧೧. ಭಾಗ್ಯವಂತ ; ಅದೃಷ್ಟಶಾಲಿ : ಪಾಡುವರು ಕೆಲರಲ್ಲಿ ಹರಿಯನು ನೋಡುವರು ನಿಜದೃಷ್ಟಿ ದಣಿಯಲು ಆಡುವರು ತಮ್ಮಿಂದ ಪುಣ್ಯರದಾರು ಲೋಕದಲಿ (ಶಾಂತಿಪು. ೪೪-೦೩). ೧೨. ಸಜ್ಜನ ; ಪುಣ್ಯಪುರುಷ : ತರುಣಿಯರ ಬಾಯಿಗೆಂಪಂ ಸರಿಮಾಟ್ಟರ್ ಕವಿಗಳಾಗೆ ಪುಣ್ಯರೆನುತ್ತಂ ಪರಿಹಾಸ್ಯ ಮಾಟ್ಟ ವಿಕಸಿತಸರಸಪ್ರಸವಂಗಳಿಂದೆ ಬಂದುಗೆಯೆಸಗುಂ (ಮಲ್ಲಿಕಾ. ೯-೪೯೯). ೧೩. ಶುಚಿ ; ನೈರ್ಮಲ್ಯ. ೧೪. ಶುಭ ; ಮಂಗಳ. ೧೫. ಚೆಲುವು ; ಸೌಂದರ್ಯ. ೧೬. ಪ್ರಖ್ಯಾತಿ ; ಪ್ರಸಿದ್ಧಿ. ೧೭. ಮನೆ ; ಆವಾಸ. ೧೮. [ಜೈನ] ನವಪದಾರ್ಥಗಳಲ್ಲಿ ಒಂದು : ಜೀವಾಜೀವಪುಣ್ಯಪಾಪಾಸ್ರವಸಂವರನಿರ್ಜರಬಂಧ ಮೋಕ್ಷಮೆಂದಿಂತು ನವಪದಾರ್ಥಂಗಳುಂ (ಪಡ್ಡಾರಾ. ೬-೦೯) ; "ಅಕಳಂಕ ಯುದ್ಧದೊಳು ಸೌಮ್ಯದೊಳು ಧರ್ಮದೊಳು ಸುಕೃತದೊಳು ಪುಣ್ಯಮಕ್ಕುಂ" (ಮಂಗರಾ. ೦೫೨-೫೬) ; "ಧರ್ಮ ಸುಕೃತಂ ಪ್ರಖ್ಯಾತ ನೈರ್ಮಲ್ಯ ಚೆಲ್ವಾವಾಸಂಗಳು ಪುಣ್ಯಮಕ್ಕು" (ಪಾಪಾರ. ೬೯).

ಪುಣ್ಯ ಕಟ್ಟಿಕೊಳ್ಳು = ಉಪಕಾರ ಮಾಡಿ ಪುಣ್ಯವನ್ನು ಗಳಿಸಿಕೊಳ್ಳು : ವಿದ್ಯಾಭ್ಯಾಸಕ್ಕೆ . . . ಪ್ರತಿವರ್ಷವೂ ಎರಡುಸಾವಿರರೂಪಾಯಿಗಳನ್ನು ಕೊಡಲು ಕೋರ್ಟಿನವರು ಒಪ್ಪುವಂತೆ ಮಾಡಿ ಆ ಲಾಯರ್ ಪುಣ್ಯ ಕಟ್ಟಿಕೊಂಡರು (ದೂರನ. ೪೩). [ಸಂ.]

ಪುಣ್ಯಂಗೆಯ್, ಪುಣ್ಯಂಗೈ (ಕ್ರಿ). ಸತ್ಕಾರ್ಯವನ್ನು ಮಾಡು : ಪುಣ್ಯ ಬರುವ ಕೆಲಸವನ್ನು ಮಾಡು : ಎನಿತು ಪುಣ್ಯಂಗೆಯ್ದೆವೋ ಮಜ್ಜನನಸಾಫಲ್ಯತ್ವವಾಯ್ತು (ಬಸವ. ೩-೫೦). ಪುಣ್ಯಂಗೈ : ಸುಂದರಿಯೆ. ಪೇಳಾವ ಪುಣ್ಯಂಗೈದುದಾ ಬಯಕೆ (ಕತ್ರಾಂಗ. ೩೬-೯೭೬).

[ಪುಣ್ಯ+ಕೆಯ್$_1$]

ಪುಣ್ಯಂಗೈ 'ಪುಣ್ಯಂಗೆಯ್' ನೋ.

ಪುಣ್ಯಂಗೊಳ್ (ಕ್ರಿ). ಸುಕೃತವನ್ನು ಹೊಂದು.—ಪಡೆ : ಅಹ, ಧೃಷ್ಟದ್ಯುಮ್ನ. ಗುರುವನಿಂತಲ್ತೆ ಕೊಱೆದು ಪುಣ್ಯಂಗೊಂಡೆ! (ಅಶ್ವತ್ಥಾ. ೩-೫೦). [ಪುಣ್ಯ+ಕೊಳ್$_1$]

ಪುಣ್ಯಕರ್ಮ (ನಾ). ಶ್ರೇಯಸ್ಸನ್ನುಂಟುಮಾಡುವ ಕೆಲಸ ; ಸುಕೃತ : ಮುಂ ಪುಣ್ಯಕರ್ಮಮನಂತಾಗಿರೆ ಮಾಡದೀಗಳಬಲಿಂ ಪೇಟಿಂತಬುತ್ತಿರ್ಪಳಕ್ಕುಮೆ (ಕಾರುಪೂ. ೩೪೭) ; ಸಚಿಂತೆಯೆಂದೂ ಸವಿಶೇಷಚಿಂತೆಯೆಂದೂ . . . ಭಕ್ತಿಜ್ಞಾನವೈರಾಗ್ಯಚಿಂತೆಯೆಂದೂ — ಇವು ಮನಸ್ಸಿನಿಂದ ಮಾಡಲ್ಪಟ್ಟಂಥ ಪುಣ್ಯಕರ್ಮವೆನಿಸುವುದು (ವೇಸಾರ. ೨೦).

[ಸಂ. ಪುಣ್ಯಕರ್ಮನ್]

ಪುಣ್ಯಕಾರಿ (ನಾ). ಒಳ್ಳೆಯ ಕಾರ್ಯ ಮಾಡುವವನು : ಅಕ್ಕ ಧಾರುಣಿಯೊಳವ ಪುಣ್ಯಕಾರಿ (ಕಂಕ. ೩೦-೩) ; ಪುಣ್ಯಕೋಟಿಯು ನಲಿದು ಕರುವಿಗೆ ಪುಣ್ಯಕಾರಿ ಎನುತ ಬೇಗದಿ ಚಿನ್ನಗೌಡನ ಕಂಡು ತಾನು ಉನ್ನತಾದಿಂದೆಂದಿತು (ಗೋಹಾಡು. ೦೦೮). [ಸಂ. ಪುಣ್ಯಕಾರಿನ್]

ಪುಣ್ಯಕಾಲ (ನಾ). ಪವಿತ್ರವಾದ ಸಮಯ : ಪುಣ್ಯಕಾರ್ಯಕ್ಕೆ ಪ್ರಶಸ್ತವಾದ ಕಾಲ : 'ದಕ್ಷಿಣಾಯನಪುಣ್ಯಕಾಲ' ಪರಾ. [ಸಂ.]

ಪುಣ್ಯಕ್ಷಯ (ನಾ). ಗಳಿಸಿದ ಪುಣ್ಯ ತೀರಿಹೋಗುವಿಕೆ: ಪುಣ್ಯಕ್ಷಯದೊಳ್ ತನ್ನ ವಿದ್ಯೆಗಳುಂ ತನಗೆ ಬೆಸಕೆಯ್ಯದಿರೆ (ಅಂಪು. ೨-೦೪ ಪ). [ಸಂ.]

ಪುಣ್ಯಕ್ಷೇತ್ರ (ನಾ). ಪವಿತ್ರಸ್ಥಳ : ಪಾವನವಾದ ಯಾತ್ರಾಸ್ಥಳ : ಇದು ಪುಣ್ಯಕ್ಷೇತ್ರಮೀ ಇರ್ದುದೆ ದುರಿತಹರಕ್ಷೇತ್ರಮೀ ಮೆಯ್ಯೊಳೀ ತೋರ್ಪುದೆ ಸಿದ್ಧಕ್ಷೇತ್ರಂ (ಸುಳುಮಾ. ೪-೪೬). [ಸಂ.]

ಪುಣ್ಯಚರಿತೆ (ನಾ). ೧. ಪಾವನಗೊಳಿಸುವ ಕಥೆ: ಪುಣ್ಯಕಥೆ : ಮೇದಿನಿಯೊಳೀ ಪುಣ್ಯಚರಿತೆಯನಾದರಿಸಿ ಬರೆದೋದಿ ಕೇಳುವ ಸಾಧುಸಜ್ಜನರಾದವರಿಗಹುದಖಿಳಕೈವಲ್ಯ (ಪಳಸ. ೯-೭೨). ೨. ಉತ್ತಮವಾದ ನಡವಳಿಕೆಯುಳ್ಳವಳು; ಶುದ್ಧವಾದ ಜೀವನವನ್ನು ನಡೆಸುವವಳು: ಆ ಪುಣ್ಯಚರಿತೆಯ ಭುವನಮಾತೆಯನುಪಚರಿಸಿಕೊಂಡಿರ್ದನೊಲವಿನಲಿ (ತೊರರಾ. ೦-೩-೬). [ಪುಣ್ಯ + ಚರಿತೆ]

ಪುಣ್ಯಜನ (ನಾ). ೧. ಒಳ್ಳೆಯ ಮನುಷ್ಯ ; ಸಜ್ಜನ. ೨. ಕುಬೇರನ ಸೇವಕ ; ಯಕ್ಷ : 'ಪುಣ್ಯಜನೇಶ್ವರ' ಪರಾ. ೩. ನೈಋತಿ : "ರಾಕ್ಷಸಃ, ಕೋಣಪಃ . . . ಪುಣ್ಯಜನಃ, ನೈರೃತಃ, ಯಾತು, ರಕ್ಷಃ—೧೫ ನೈಋತಿ ಹೆಸರುಗಳು" (ಸಿದ್ಧಾಂತಿ. ೭೪). ೪. ರಾಕ್ಷಸ : "ರಕ್ಕಸರಲ್ಲಿಯುಂ ಪುಣ್ಯಜನಮೆಂಬುದು" (ಹಲಾಯು. ೦೩೦-೪). [ಸಂ.]

ಪುಣ್ಯಜನೇಶ್ವರ (ನಾ). ಯಕ್ಷರಾಜನಾದ ಕುಬೇರ : "ಐಳಬಿಲಃ . . . ಪುಣ್ಯಜನೇಶ್ವರಃ—ಈ ೧೭ ಕುಬೇರನ ಪೆಸರ್" (ಹಲಾಯು. ೦೪-೭೯): ಶಿವಾನುಬಂಧಸಯುಕ್ತನಾಗಿಯುಂ ದಶಾನನಾಸ್ತಂಗತಪ್ರಾಭವನಲ್ಲದ ಪುಣ್ಯಜನೇಶ್ವರನುಮೆನಿಸಿ ದೇವತಾಸ್ವರೂಪನಾದಂ (ಪುಷ್ಪಪು. ೩-೨೦ ಪ). [ಸಂ.]

ಪುಣ್ಯಜಲ (ನಾ). ಪವಿತ್ರವಾದ ನೀರು ; ತೀರ್ಥ : ಉದ್ದಾಮಮುನಿಜನರಚಿತ ಮಂತ್ರಸ್ತೋಮಪುಷ್ಕಲಪೂತಪುಣ್ಯಜಲಾಭಿಷೇಚನದ ಶ್ರೀಮುಡಿಗೆ ಕೈಯಿಕ್ಕಿದನು (ಕುಷ್ಠಾಸ. ೦೪-೬೬). [ಸಂ.]

ಪುಣ್ಯತಿಥಿ (ನಾ). ಶ್ರಾದ್ಧದ ದಿನ : ಹಿರಿಯರ ಪುಣ್ಯತಿಥಿಯಂದು ಮಕ್ಕಳಿಗೆ ಸಿಹಿಯನ್ನು ಹಂಚಿದರು (ರೂಢಿ). [ಸಂ.]

ಪುಣ್ಯದಿನ (ನಾ). ೧. ಶುಭದಿವಸ ; ಮಂಗಳಕರವಾದ ದಿವಸ : ಅಕ್ಷಯತೃತೀಯೆಯೆಂದಖಿಳಕ್ಷಿತಿಗಂ ನೆಗಟ್ಟುದಲ್ತೆ ತತ್ಪುಣ್ಯದಿನಂ (ಅಂಪು. ೦೦-೬); ಪುಶ್ಯದಮಾಸೆ ಸೂರ್ಯಗ್ರಹಣ ಸಂಕ್ರಾಂತಿ ಬ್ಯತೀಪಾತಗಳೆಂಬ ಸಕಳ ಪುಣ್ಯದಿನಂ ದೊರೆಕೊಣ್ಡಂದು (ಎಕ. XII, ಗುಬ್ಬಿ. ೦೦-೪೩ ; 1226). ೨. ಆಚಾರ್ಯಪುರುಷನು ಅವಸಾನ ಹೊಂದಿದ ದಿನದ ನೆನಪಿಗಾಗಿ ಮತೀಯ ಆಚರಣೆಯನ್ನು ಮಾಡುವ ದಿನ : ಇಂದು ಟೀಕಾಚಾರ್ಯರ ಪುಣ್ಯದಿನ (ರೂಢಿ). [ಸಂ.]

ಪುಣ್ಯದೇವತೆ (ನಾ). ಪುಣ್ಯದ ಅಧಿದೇವತೆ : ಇರೆ ಹರಿಯ ಪುಣ್ಯದೇವತೆಯಿರಲೆಡೆಯುಂ ಪೇಟ್ಟು ತಾನೆ ಮಾಡುಗುಮೆನೆ ತನ್ನಿರವದ್ಯನ ಸೂಕ್ತಿಯನಾದರದಿಂದಾಂತರ್ ಮಹತ್ತರರ್ ಭೂಕಾಂತರ್ (ಶೇಖಪು. ೭-೨೪).

[ಸಂ. ಪುಣ್ಯದೇವತಾ]

ಪುಣ್ಯನದಿ (ನಾ). ಪವಿತ್ರವಾದ ಹೊಳೆ : ಪಾವನವಾದ ನದಿ : ಪುಣ್ಯನದೀನದನಗ[ಲಾ]ವಣ್ಯವಿಭೂಷಣೆಯನೊಲ್ದು ನೋಡುತ್ತುಮಿಳಾ ಪುಣ್ಯಸ್ತ್ರೀಯಂ ಸಂಚಿತಪುಣ್ಯರ್ ಪಾಂಚಾಲದೇಶಮಂ ಪುಗುತಂದರ್ (ಶಂಪಭಾ. ೩-೩೬). [ಸಂ. ಪುಣ್ಯನದೀ]

ಪುಣ್ಯಪದಾರ್ಥ (ನಾ). [ಜೈನ] ನವಪದಾರ್ಥಗಳಲ್ಲಿ ಒಂದು : ಜೀವಪದಾರ್ಥಮಜೀವಪದಾರ್ಥಂ . . . ಪುಣ್ಯಪದಾರ್ಥಂ ಪಾಪ ಪದಾರ್ಥಮೆಂಬ ನವಪದಾರ್ಥಮುಮಂ . . . ಕೈಕೊಂಡು (ಶುಕಸಪ್ತ. ೩-೩೯ ಪ). [ಸಂ.]

ಪುಣ್ಯಪಾಠಕ (ನಾ). ಶುಭವನ್ನು ಕೋರುವವನು ; ಮಂಗಳಪಾಠಕ ; ಸ್ತೋತ್ರಪಾಠಕ ; ವಂದಿ : ಕುಬ್ಜವಾಮನಬಧಿರಮೂಕಕಿರಾತೋನ್ಮತ್ತ ಜಡಜನಂಗಳುಮಂ ಗಾಯಕವಾದಕನರ್ತಕಕಥಕಪುಣ್ಯಪಾಠಕವೈತಾಲಿಕ ನಿಕರಮುಮಂ ಕೊಟ್ಟು (ಆದಿಪು. ೪-೩೧೨) ; ಭಜಿಯಿಸುವ ಪುಣ್ಯಪಾಠಕರ ಪರಕೆಗಳೊಳಗೆ . . . ಬರುತಿರ್ದನಪ್ರತಿಮಸುಕುಮಾರಶೇಖರಂ (ಪಂಪ. ೩-೩೦). [ಸಂ.]

ಪುಣ್ಯಪ್ರವರ (ನಾ). ೧. ಮಹಾಪುಣ್ಯಶಾಲಿ : ಶಿವನ ಕರುಣಾಲಾಭ ಪುಣ್ಯಪ್ರವರವಾರ್ಧನ ಮುನ್ನಿನಂದದಲವನಿಗಿಹುದ ನಿಖಿಲದಿವ್ಯಾಯುಧದ ವೇದಿಕೆಗೆ (ಕುವಾಕ್ರೋ. ೯-೬). ೨. ಅತ್ಯಂತ ಪವಿತ್ರನಾದವನು : ಪಾಂಡವರಿಗಾವುದು ಕೊಱತೆ ಪುಣ್ಯಪ್ರವರ ಗದುಗಿನ ವೀರನಾರಾಯಣನ ಕರುಣದಲಿ (ಕುವಾಗ. ೪-೬೦). [ಸಂ.]

ಪುಣ್ಯಫಲ (ನಾ). ಒಳ್ಳೆಯ ಕಾರ್ಯಾಚರಣೆಯಿಂದ ಬರುವ ಫಲ : ಶರನಿಧಿಯ ವಡವಾನಳನ ದಳ್ಳುರಿಯ ವರ್ಮವ ತಿವಿವ ತುಂಬಿಗೆ ಮರಳುದಲೆಯುಂಟಾದಡದು ಭವಭವದ ಪುಣ್ಯಫಲ (ಕುವಾಕ್ರೋ. ೪-೪೬), ಅನ್ನಪಾನವ ನೀಡಿ ವಿಪ್ರರಿಗೊಲಿಯುವಿಷ್ಟಾಪೂರ್ತಗಳ ಮುಗಿಸಿ ಖೋಡಿಯಲ್ಲದ ಪುಣ್ಯಫಲ ಕೈಗೂಡೆ (ಅಮ್ಮ. ೨-೦೦೦). [ಸಂ.]

ಪುಣ್ಯಭೂಮಿ (ನಾ). ಪವಿತ್ರವಾದ ಭೂಮಿ : ಆರ್ಯಾವರ್ತ : "ಆರ್ಯಾವರ್ತಃ = ಪುಣ್ಯಭೂಮಿ" (ಶಾಶಬ್ಧ. ೦೬೭) ; "ಆರ್ಯಾವರ್ತಃ. ಪುಣ್ಯಭೂಮಿಃ—ವಿ . . . ವಿಂಧ್ಯಪರ್ವತಕ್ಕೂ ಹಿಮಗಿರಿಗೂ ಮೂಡಲು ಪಡುವಲು ಕಡಲುಗಳಿಗೂ ನಡುವೆಯಿರುವ ಭೂಮಿ" (ವಿಶ್ವಾಂಶಿ. ೯೪). [ಸಂ.]

ಪುಣ್ಯಮೆ 'ಪುಣ್ಣಮೆ' ನೋ.

ಪುಣ್ಯಯಜ್ಞ (ನಾ). [ಜೈನ] ದೀಕ್ಷೆಗೊಂಡವನು ಮಾಡುವ ಚತುರ್ದಶ ಪೂರ್ವಗಳ ಪಠಣ ಹಾಗೂ ಶ್ರವಣ : ದೀಕ್ಷಾನ್ವಯಕ್ರಿಯೆಗಳಲ್ಲಿ ಆರನೆಯದು : ಅವತಾರವೃತ್ತಿಲಾಭ ಸ್ಥಾನಲಾಭಗಣಗ್ರಹಣಪೂಜಾರಾಧ್ಯ ಪುಣ್ಯಯಜ್ಞದೃಢಚರ್ಯೋಪಯೋಗತ್ವಮೆಂಬೀಟುಂಬೆರಸು . . . ನಾಲ್ತ್ತೈಟು ದೀಕ್ಷಾನ್ವಯಕ್ರಿಯೆಗಳುಮಂ (ಆದಿಪು. ೦೩-೧೬ ವ) ; ಪೂಜೋಪವಾಸಪೂರ್ವಕಂ ಬ್ರಹ್ಮಚಾರಿಯಾಗಿ ಪೂರ್ವಂಗಳಂ ಕೇಳ್ವುದು ಪುಣ್ಯಯಜ್ಞಕ್ರಿಯೆ (ಶಾಪುಂಚ. ೨೨೩). [ಸಂ.]

ಪುಣ್ಯಲೋಕ (ನಾ). ಪುಣ್ಯವಂತನು ಸೇರುವ ಲೋಕ : ದೇವಲೋಕ : ಸ್ವರ್ಗ : ಭಕ್ತಿಬಲದೀ ಪುಣ್ಯಲೋಕವ್ಯಕ್ತಿಯಂ ತೋರುವುದು (ಗಗಶಾ. ೧೦-೧೬). [ಸಂ.]

ಪುಣ್ಯವಂತ (ನಾ). ಪುಣ್ಯಸಂಪಾದನೆ ಮಾಡಿದವನು : ಪುಣ್ಯಶಾಲಿ : ಭರತಂ ಶ್ರೇಯಾಂಸನಂ ನೀನೆ ಪುಣ್ಯವಂತನೆಯೆಂದು ಪೊಗಟ್ಟು ಪೂಜಿಸಿ ಪೋದಂ (ಶಾಪುಂಚ. ೯೦) ; ನಯವಿದರೆಲ್ಲಪಲ್ಲಿಯೆ ಕಳಾನ್ವಿತರಲ್ಲಿಯೆ ಪುಣ್ಯವಂತರಲ್ಲಿಯೆ . . . ಎಂಬಿನೆಗಮಾ ಮಹಿ ಪೋಲ್ತುದು ಭೋಗ ಭೂವಿಲಯಂ (ಪುಕೃಪು. ೯-೦೬). ೨. ಅದೃಷ್ಟಶಾಲಿ ; ಭಾಗ್ಯವಂತ : ಸುಬ್ಬೈವಿ : ಅವರು ಗತಿ ಇಲ್ಲದ ಜನ. ತಾವು ಪುಣ್ಯವಂತರು (ಸಬ್ಬಳ. ೧, ೧೩) : ಈಗಿನ ಕಾಲದಲ್ಲಿ ಹೆಣ್ಣು ಹೆತ್ತೋರೇ ಪುಣ್ಯವಂತರು (ಕಂಗಳೂ. ೬). [ಸಂ. ಪುಣ್ಯವತ್]

ಪುಣ್ಯವಂತೆ (ನಾ). ೧. ಸಜ್ಜನೆ ; ಒಳ್ಳೆಯ ನಡತೆಯುಳ್ಳವಳು. ೨. ಅದೃಷ್ಟವಂತೆ ; ಭಾಗ್ಯವಂತೆ : ಒಂದು ವಿಷಯದಲ್ಲಿ ಸಜ್ಜನಂತಲೂ ನೀನು ಪುಣ್ಯವಂತೆ (ಆಶ್ರಗೀ. ೧೦). [ಪುಣ್ಯವಂತ + —ಎ]

ಪುಣ್ಯವತಿ (ನಾ). = ಪುಣ್ಯವಂತೆ ೧ : ಆ ಪುಣ್ಯವತಿಯರ್ಪಿರ್ದರುಮಾ ಪರಮೇಶ್ವರನ ಮನಮನಿರ್ಕುಬಿಗೊಳಿ ಮತ್ತಾ ಪೀನವೃಷಸ್ಕಂಧನುಮಾ ಪದ್ಮಾಸ್ಯೆಯರ ಮನಮನಿರ್ಕುಬಿಗೊಂಡಂ (ಆದಿಪು. ೪-೨೬) ; ಪುಣ್ಯವತಿ ನೃಪೇಂದ್ರಕಾಂತೆ ನವಕಲ್ಪಲತಾಕೃತಿಯಿಂದಮೊಪ್ಪಿದಳ್ (ಶಾಂಶಿ. ೯-೨೦೦). [ಸಂ. ಪುಣ್ಯವತೀ]

ಪುಣ್ಯವಾಸರ (ನಾ). = ಪುಣ್ಯದಿನ ೧ : ತತ್ಪೂಜಕರಣಪುಣ್ಯವಾಸರಂಗ ಳೊಳುಪವಾಸನಿರತಂ . . . ಅಭಿಷೇಕಂಗೆಯ್ದು (ಆದಿಪು. ೧೬-೦ ವ) ; ಬಂದು ಪುಣ್ಯವಾಸರಪ್ರಥಮಪ್ರಹರದೊಳ್ . . . ತಾನಿರ್ದನಾಸ್ಥಾನಿಯೊಳಮಳ ಸರಃಕಲ್ಪದೊಳ್ ರಾಜಹಂಸಂ (ಶಂಪ್ರಶಿ. ೨-೭೨). [ಸಂ.]

ಪುಣ್ಯಶ್ಲೋಕ (ನಾ). ೧. ಯಾರ ಸ್ತುತಿಯಿಂದ ಪುಣ್ಯ ಬರುವುದೋ ಅಂತಹವನು ; ಸತ್ಕೃತಿಗಳಿಂದ ಪ್ರಸಿದ್ಧನಾದವನು : ಪರಮಪುಣ್ಯ ಶ್ಲೋಕ ಜಯ ಜಗಭರಿತ ನಿರ್ಮಳರೂಪ ಜಯ ಜಯ ಕರುಣ ರಕ್ಷಿಸು (ಕುವಾಅ. ೨೬-೩೩). ೨. ಹರಿಶ್ಚಂದ್ರ, ನಳ, ಪುರುಕುತ್ಸ, ಪುರೂರವ, ಸಗರ ಮತ್ತು ಕಾರ್ತವೀರ್ಯ ಎಂಬ ಆರು ಜನ ಚಕ್ರವರ್ತಿಗಳಲ್ಲಿ ಪ್ರತಿಯೊಬ್ಬನಿಗೂ ಇರುವ ಹೆಸರು : "ವಿಪರಿಸೆ ಹರಿಶ್ಚಂದ್ರ ನಳ . . . ಕಾರ್ತವೀರ್ಯರೆನಿಪ್ಪರಱುವರತ್ಯವಿರಳದ ಚಕ್ರವರ್ತಿಗಳಕ್ಕವರ್ಗೆ ಪುಣ್ಯಶ್ಲೋಕರೆಂಬ ನಾಮಂ" (ಮುಂಗಡಾ. ೬೯-೨) ; ಸೋಕಿತೇ ಕಡುನಿಂದೆ ಪುಣ್ಯಶ್ಲೋಕನಿ[ಪಾಠಾಂ. ರಿ]ಗೆ (ತೊಡಗ. ೩-೨-೦೬). ☞ 'ಪುಣ್ಯಶ್ಲೋಕ' ಎಂದು ಧರ್ಮರಾಜನಿಗೂ ಜನಾರ್ದನನಿಗೂ ಹೇಳಲಾಗುತ್ತಾರೆ. [ಸಂ.]

ಪುಣ್ಯಶ್ಲೋಕೆ (ನಾ). ಪವಿತ್ರವಾದ ನಡವಳಿಕೆಯಿಂದ ಖ್ಯಾತಳಾದವಳು ; ಸದಾಚಾರಸಂಪನ್ನೆ : ಬಲ್ಲಿಂ ಬಲ್ಲಿನವಳೆಯೋನಿಜೆಯಿಂಬುದಂ ಪಾವನೆಯೆಂಬುದಂ ಪುಣ್ಯಶ್ಲೋಕೆಯೆಂಬುದಂ (ರಾಮಾಶ್ವ. ೨೩-೨೬). ☞ ಇದು ಸೀತೆ ಹಾಗೂ ದ್ರೌಪದಿ—ಈ ಇಬ್ಬರಿಗೂ ಅನ್ವಯಿಸುತ್ತದೆ. [ಸಂ. ಪುಣ್ಯಶ್ಲೋಕಾ]

ಪುಣ್ಯಸ್ತ್ರೀ (ನಾ). ಮುಡದಿ ; ಹೆಂಡತಿ : ಖಡ್ಗಿಯ ಹಿಡಿದವ ಬಳಿಕಲಾರಸುಂಪಡಿಯ ಪುಣ್ಯಸ್ತ್ರೀಯಂ ಕೊಲುವಾಯತದಲ್ಲಿದಿನವನು ಬನವನು ಜನಕಸಂದನೆಯ (ತೊಡಗ. ೬-೧೩-೨೯) ; ಪೋಳಿಗೆಪೂರಯ್ಯಗಳ ಪುಣ್ಯಸ್ತ್ರಿ ಪಚಿಸ (ಸರ್ವಜ್ಞ. ೦೬೪). [ಸಂ.]

ಪುಣ್ಯಾಂಗನೆ (ನಾ). ಸಚ್ಚರಿತೆ ; ಸಜ್ಜನೆ : ಮುಪ್ಪುರ ಪಡಿಬರಿಸಿ ಪೋರಿದುದು ಪುರದೊಳಗಿರ್ಪ ಪುಣ್ಯಾಂಗನೆಯರ ಸಚ್ಚರಿತದ ಸಲಿಗೆಯಿಂದೆಸೆ (ಹರಿಶ. ೨-೪೬). [ಸಂ. ಪುಣ್ಯಾಂಗನಾ]

ಪುಣ್ಯಾತಗಿತ್ತಿ, ಪುಣ್ಯಾತ್ಗಿತ್ತಿ (ನಾ). = ಪುಣ್ಯಾಂಗನೆ : ನಮ್ಮ ಗೆಣೆಕಾತಿ ಹೊನ್ನೂರ ಬಣಜಿಗಿತಿ ಪುಣ್ಯಾತಗಿತ್ತಿ ಪುರುಷರ ತೊಡೆ ಮ್ಯಾಲೆ ನಮು ಹಂಬಲಪ ಪುರತಳೆ (ಶಾಕದ. ೬೯) ; ಪುಣ್ಯಾತಗಿತ್ತಿ ಎರಡು ಹೆಜ್ಜೆ ಒಂದು ಕಡೆ ಇಟ್ಟು ನಿಂತಿದ್ದರೆ ತಾನೇ ಕೇಳುವುದು (ರೂಪಕ. ೩೩೬) · ಪುಣ್ಯಾತ್ಗಿತ್ತಿ : ನನಗೆ ಬಂದ ತೊಂದರೆಯೆಲ್ಲಾ ಆ ಪುಣ್ಯಾತ್ಗಿತ್ತಿಯಿಂದ ಪರಿಹಾರವಾಯಿತು (ರೂಪಿ). [<ಪುಣ್ಯಾತ್ಮ + —ಗಿತ್ತಿ]

ಪುಣ್ಯಾತ್ಗಿತ್ತಿ 'ಪುಣ್ಯಾತಗಿತ್ತಿ' ನೋ.

ಪುಣ್ಯಾತ್ಮ (ನಾ). = ಪುಣ್ಯವಂತ : ಆ ಪುಣ್ಯಾತ್ಮನನ್ನು ತಂಪುಹೊತ್ತಿನಲ್ಲಿ ನೆನೆಯಬೇಕು (ರೂಪಿ). [ಸಂ. ಪುಣ್ಯಾತ್ಮನ್]

ಪುಣ್ಯಾರ್ಥ (ನಾ). ಪುಣ್ಯವನ್ನು ಗಳಿಸಬೇಕೆಂಬ ಗುರಿ, —ಉದ್ದೇಶ : ಏಳಿಸಿ ಪುಣ್ಯಾರ್ಥದಿಂ ವಂದನೆ ನಿಮಿತ್ತ ಗುರುನಿಳಯಕ್ಕೆ ಶಿಷ್ಯನೆಯ್ತಪ್ಪುದಕೆ ಸಾಹಸದ ಬಲವೇಕೆ ತಂದೆ (ಹಕಶಾ. ೬-೬). [ಸಂ.]

ಪುಣ್ಯಾಸ್ರವ (ನಾ). ೧. ನಾಗರಾಜಕವಿಯು ರಚಿಸಿದ ಒಂದು ಕನ್ನಡ ಕಾವ್ಯದ ಹೆಸರು : ವಿನಯನಿಧಿ ನಾಗರಾಜಂಗನುಪಮಗುಣನಿಧಿಯನಂತ

ವೀರ್ಯಬ್ರತಿಪಂ ಮನವೊಲಿದು ಪೇಟ್ಟ ತೆಱದಿಂ ಜನಹಿತಮಂ ಪೇಟ್ಟೆ ನೊಲಿದು ಪುಣ್ಯಾಸ್ರವಮಂ (ಪುಣ್ಯಾಸ್ರ. ೦-೩೪). ೨. [ಜೈನ] ಪುಣ್ಯವು ಜೀವನಲ್ಲಿ ಕೂಡಿಕೊಳ್ಳುವಿಕೆ ; ಪುಣ್ಯಸಂಪಾದನೆ: ಆಸ್ರವಮೆರಡು ತೆಱಂ ಪುಣ್ಯಾಸ್ರವಮೊಂದದಱ ವೈಪರೀತ್ಯಭವಂ ಪಾಪಾಸ್ರವಂ (ಶಾಂತಿಪು. ೦೨-೪); ಜಿನಸ್ತವಂಗಳೊಳಗೊಂಡಂ . . . ಒಱಲ್ದು ಚಿಂತಿಸಿದವಂಗಂ ಸಾರ್ವ ಪುಣ್ಯಾಸ್ರವಂ ಪವಣಿಲ್ಲ (ಸುಳುಮಾ. ೦-೩೯). [ಸಂ.]

ಪುಣ್ಯಾಹ (ನಾ). ೧.=ಪುಣ್ಯದಿನ : ಮಾಘಶುದ್ಧದಶಮೀಪುಣ್ಯಾಹಯುಕ್ತಂ ಪ್ರಜಾಪತಿಯೋಗಂ ಬೆರೆದಂದು ರೋಹಿಣಿಯೊಳ್ . . . ಆದುದಂದಜಿತ ತೀರ್ಥೇಶಾಬ್ಜಮಿತ್ರೋದಯಂ (ಅಜಪು. ೩-೨೨). ೨.=ಪುಣ್ಯಾಹವಾಚನ : ಗಣಕಗಣ ಪುನಃಪುನರುಚ್ಚರಿತ ಪುಣ್ಯಾಹಪ್ರಶಸ್ತರವದೊಡನೆ . . . ಪುಣ್ಯಾಂಗನಾಜನದಾಶೀರ್ವಾದನಾದಮೊದವೆಯುಂ (ಸಂರಾಮಾ. ೫-೦೨೮ಪ); ಚೈತ್ರಸಿತಪಂಚಮಿಯಲುತ್ತರಪೂರ್ವವೇದಿಯ ವಿಮಲಪುಣ್ಯಾಹದ ಮಹಾವಾಚನೆಯ ವಿಸ್ಮರಿಸಿ (ತೂರರಾ. ೦-೭-೪೦). [ಸಂ.]

ಪುಣ್ಯಾಹವಾಚನ (ನಾ). ಮದುವೆ ಮೊದಲಾದ ಮಂಗಳಕಾರ್ಯಗಳ ಆರಂಭದಲ್ಲಿ ಮಾಡುವ ಒಂದು ಶುಭಕರವಾದ ಧಾರ್ಮಿಕವಿಧಿ ; ಸ್ವಸ್ತಿವಾಚನ : ಪುಣ್ಯಾಹವಾಚನಕ್ಕೆ ಕುಳಿತ ಮನೆಯ ಯಜಮಾನನಂತೆ ಅವನು 'ಮಮ' ಎನ್ನುವುದನ್ನು ಅಷ್ಟೇ ರೂಢಿಸಿಕೊಂಡಿದ್ದ (ದೀಪಹ. I, ೬೫). [ಸಂ.]

ಪುಣ್ಸೆ 'ಪುಳಿಸೆ' ನೋ.

ಪುತಪುತನೆ (ಅ). ಒಂದು ಅನುಕರಣಾವ್ಯಯ : ಭೀಮಸೇನನು . . . ಮರವನ್ನು ಒದ್ದು ಅಲ್ಲಾಡಿಸುವನು ; ಹಣ್ಣುಗಳು ಪುತಪುತನೆ ಉದುರುವುವು (ಪಸರಾ. ೦೬). [ಪುತಪುತ$_0$+—ಅನ್ನೆ$_1$]

ಪುತಲಿ 'ಪುತ್ಥಳಿ' ನೋ.

ಪುತಳಿ 'ಪುತ್ಥಳಿ' ನೋ.

ಪುತುಗು (ಕ್ರಿ). ಚಡಪಡಿಸು ; ಕಳವಳಿಸು : ಮನದಲಿದ್ದಾಶೆಯಲಿ ಬಾಡಿದ ವದನಕಮಲದಲಿ ಮನದೊಳಗೆ ಪುತುಗುತ್ತ ನಿಲ್ಲದೆ ಮನಕತದಿ ಬಾಗಿಲಿಗೆ ಬರುತಾ ವನಿತೆ ಬಳಲಿದಳು (ವಿಭಾಗ. ೦೦-೦೫-೨). [?]

ಪುತ್ತ 'ಪುತ್ತು$_1$' ನೋ.

ಪುತ್ತರಿ, ಹುತ್ತರಿ (ನಾ). ೧. ಹೊಸ ಅಕ್ಕಿ : ಹುತ್ತರಿ ಅಥವಾ ಪುತ್ತರಿ ಎಂದರೆ ಹೊಸ ಅಕ್ಕಿ ಎಂದು ಅರ್ಥ (ಕಪಪು. ೪-೬೩). ೨. ಕೊಡಗರು ಹೊಸ ಅಕ್ಕಿಯನ್ನು ಮನೆಗೆ ತರುವಾಗ ಆಚರಿಸುವ ಹಬ್ಬ ; ಸುಗ್ಗಿ: ಪುತ್ತರಿಯ ದಿನ ಮುಂಜಾನೆಯೇ ಗ್ರಾಮದೇವಾಲಯದ ಅರ್ಚಕ ಮನೆಯೊಳಗೆ ತೀರ್ಥಜಲವನ್ನು ಪ್ರೋಕ್ಷಿಸಿ ಶುದ್ಧಿಗೊಳಿಸಿ ಹೋಗಿದ್ದ (ಹುಲಹಾ. ೦೬೬). **ಹುತ್ತರಿ** : ೧. ಹುತ್ತರಿ . . . ಎಂದರೆ ಹೊಸ ಅಕ್ಕಿ (ಕಪಪು. ೪-೬೩). ೨. ಹುತ್ತರಿ ಹತ್ತಿರ ಬಂದಂತೆ ಮನೆಯಲ್ಲಿ ತಿಂಗಳುಗಟ್ಲೆ ಅಕ್ಕಿಯ ದರ್ಶನವಾಗುತ್ತಿರಲಿಲ್ಲ (ಮಸಕೂ. ೦೬) ; ಹುತ್ತರಿಹಬ್ಬವು ಕೊಡಗರ ಸುಗ್ಗಿಯ ಹಬ್ಬ (ಕಪಪು. ೪-೬೩).

[ದೇ.॥ ಮಲ. ಪುತ್ತರಿ ; ಕೊಡ. ಪುತ್ತರಿ, ಪುತ್ತೇರಿ]

ಪುತ್ತಲಿ, ಪುತ್ತಳಿ (ನಾ). ೧. ಬೊಂಬೆ : ವಿಗ್ರಹ : ಮೂರ್ತಿ : ನವಕುಮಾರನು ಯಂತ್ರದ ಪುತ್ತಲಿಯಂತೆ ಅವಳ ಸಂಗಡ ನಡೆದನು (ಕಶಾಕುಂ. ೨೦). **ಪುತ್ತಳಿ** : ೧. "ಪುತ್ತಳಿಯೆನೆ ಪುತ್ರಿಕೆ" (ಕವಿಕಂ. ೦೯೩) ; ಹೊಗೆ ಹತ್ತಿದ ಪುತ್ತಳಿಯಂತೆ ಬಂದನುದ್ಯಾನವನೊಪ್ಪದಿಂ ಕಳೆದು ರಾಜಕುಮಾರನಪಾರಚಿಂತೆಯಿಂ (ಪಂಬರ. ೬ ಸೂಚನೆ); ಪುತ್ತಳಿಯನೊಯ್ವಂತೆ ಯಾನದಿಯೆತ್ತಿ ತಂದರು ಖಳರು ಮೂದಲಿಸುತ್ತ ತೋಱಿದರಿರುಳು ರಣರೌರವವನವನಿಜೆಗೆ (ಕೌತಿರಾ. ೨೯-೦) ; ಹುಡುಗಿ ಬೆಳೆದಳು ; ಯೌವನ ಬಂದು ಬಂಗಾರದ ಪುತ್ತಳಿಯಂತೆ ಶೋಭಿಸುವ ಹಾಗಾದಳು (ಪಸರಾ. ೦೬೬). ೨. ಬಂಗಾರ ; ಚಿನ್ನ : ಪರುಷದ ಪುತ್ತಳಿಯ ಇರವಿನಂತೆ . . . ಅನಲನ ನುಂಗಿದ ಶಿಲೆಯಂತೆ ಅರುಣನ ಕಿರಣವ ಕೊಂಡ ದ್ರವ್ಯದಂತೆ ಇನ್ನೇನುಪಮಿಸುವೆ (ಮೋಳಮಾ. ೬-೨೨).

[ಸಂ. ಪುತ್ತಲೀ./ ತುಳು. ಪುತ್ತೊಳಿ ; ತೆಲು. ಪುತ್ತಳಿ, ಪುತ್ತಡಿ]

ಪುತ್ತಲಿಕೆ (ನಾ). ಬೊಂಬೆ ; ಪುತ್ಥಳಿ. [ಸಂ. ಪುತ್ತಲಿಕಾ]

ಪುತ್ತಲಿಗೊಂಬೆ, ಪುತ್ತಳಿಗೊಂಬೆ (ನಾ). ಲೋಹ, ಮರ ಮೊದಲಾದುವುಗಳಿಂದ ಮಾಡಿದ ಗೊಂಬೆ : ನಮ್ಮೂರಿಗೆ ಹೆಣ್ಣು ವೇಷದವರು, ಪುತ್ತಲೀಗೊಂಬೆ ಆಟದವರು, ಚಕ್ಕಳಗೊಂಬೇ ಆಟದವರು ಮುಂತಾದವರು ಬರುತ್ತಿದ್ದರು(ಹುಟ್ಟಹ. ೬೦). **ಪುತ್ತಳಿಗೊಂಬೆ** : (+). 'ಪುತ್ಥಳಿಬೊಂಬೆ' ಪರಾ. [ಪುತ್ತಲಿ+ಗೊಂಬೆ$_1$]

ಪುತ್ತವುಗು 'ಪುತ್ತುವೊಗು' ನೋ.

ಪುತ್ತಳಿ 'ಪುತ್ತಲಿ' ನೋ.

ಪುತ್ತಳಿಗೆ 'ಪುತ್ಥಳಿಕೆ' ನೋ.

ಪುತ್ತಳಿಗೆಲಸ (ನಾ). ಬೊಂಬೆಯಾಕಾರದ ಸುಳಿವುಗಳನ್ನು ಕಂಡರಿಸುವಿಕೆ: ಪುತ್ತಳಿಗೆಲಸದ ಬಾಗಿಲು ಕಾಂಚನಭಿತ್ತಿ ಮಾಣಿಕದ ಕಂಬಗಳು (ಭರಸ. ೪೭-೫೮).

[ಪುತ್ತಳಿ (=ಪುತ್ತಲಿ) + ಕೆಲಸ]

ಪುತ್ತಳಿಗೊಂಬೆ 'ಪುತ್ತಲಿಗೊಂಬೆ' ನೋ.

ಪುತ್ತಳಿಬಣ್ಣ (ನಾ). ಚಿನ್ನದ ವರ್ಣ ; ಹೊಂಬಣ್ಣ : ಪುತ್ತಳಿಬಣ್ಣದ ಚಿತ್ರಶಾಲಿಯನುಟ್ಟು ಹಸ್ತಕಂಕಣ ನಲಿವುತ ಮದುವಳಿಗೆ ಮುತ್ತಿನಾರುತಿ ಬೆಳಗಿರೆ (ಲೋಕಗೀ. ೦೩). [ಪುತ್ತಳಿ (=ಪುತ್ತಲಿ) + ಬಣ್ಣ]

ಪುತ್ತಳಿಬೊಂಬೆ (ನಾ). ಚಿನ್ನದ ವಿಗ್ರಹ : ಕೌಶಿಕಾದೇವೀ ಪುತ್ತಳಿಬೊಂಬೆ ಯಂದದಿ ತೊಳಗಿದಳು ತಾನತ್ಯಂತಲಾವಣ್ಯದಿಂದ (ದೇವೀಪ್ರ. ೪೬).

[ಪುತ್ತಳಿ (=ಪುತ್ತಲಿ) + ಬೊಂಬೆ]

Δ **ಪುತ್ತಳಿ** 'ಪುತ್ಥಳಿ' ನೋ.

Δ **ಪುತ್ತಳಿಗೆ** 'ಪುತ್ಥಳಿಕೆ' ನೋ.

ಪುತ್ತಾರು (ನಾ). ಗೌರವಸೂಚಕವಾದ ಒಂದು ವಸ್ತು: ಸಾಧಾರಣ ಬಿರುದುಗಳು . . . ಪಂಚದೀವಟಿಗೆ, ಪೆಂಡ್ಯ, ಪಾದುಕೆ, ಪುತ್ತಾರು, ಅಂಬುಲಾಕುಳ, ಹಡವೆ (ಗುರುದ. ೦೦). [?]

ಪುತ್ತಿಕೆ (ನಾ). ೧. ಒಂದು ಬಗೆಯ ದುಂಬಿ : "ಪತಂಗಿಕಾ, ಪುತ್ತಿಕಾ-೨ ಹೆಣ್ಣುಪತಂಗದ ಹುಳುವಿಗೂ, ಈಚಲುಹುಳಕ್ಕೂ, ದೊಡ್ಡ ಜೇನು ನೊಣಕ್ಕೂ ಹೆಸರು" (ಸಿದ್ಧಾಂತಿ. ೦೬೦). ೨. ಬಿಳಿಇರುವೆ ; ಗೆದ್ದಲು ; ಒರಲೆ. ೩.=ಪುತ್ತಿಗೆ. [ಸಂ. ಪುತ್ತಿಕಾ]

ಪುತ್ತಿಗೆ (ನಾ). ಬೊಂಬೆ ; ವಿಗ್ರಹ : "ಪುತ್ತಿಗೆನೆ ಪುತ್ರಿಕೆಯೆ" (ಕರ್ಣಾಶಿ. ೩೮); ಪುತ್ರಿಕಾ—ಪುತ್ತಿಗೆ (ಶಮದ. ೨೬೦ ಪ್ರಯೋ). [< ಸಂ. ಪುತ್ರಿಕಾ]

ಪುತ್ತಿಡು, ಹುತ್ತಿಡು (ಕ್ರಿ). ಹುತ್ತವನ್ನು ಕಟ್ಟು : ಮೆಯ್ಯ ಮಣ್ ಕೊರಲ್ಗೆ ಪುತ್ತಿಡೆ ಪರ್ಬಿದ ಬಳ್ಳಿ ಸುತ್ತಲುಂ ಸೊಗಯಿಸೆ . . . ಜಾನಿಸುತ್ತಗಲದೆ ನಿಂದನೊರ್ವ ಸವಣಂ (ಕಲ್ಯಾಕಾ. ೨೨೬); ಒಱಲೆ ತಗುಳ್ದು ಪುತ್ತಿಡುವುದೆಯ್ದೆ . . . ಮುನೀಂದ್ರನ ನಿಶ್ಚಲಾಂಗದೊಳ್ (ರಸರ. ೨-೦೨೨). **ಹುತ್ತಿಡು** : ಗುಡುಗು ಬಿಡದಲೆ ಮೊಳಗೆ ಹುತ್ತಿಡಲೊಱಳೆ ಮಾಳದ ಬೆಕ್ಕು ಪೊಱಲುತಿರೆ (ಕೌತಿರಾ. ೦೪-೫). [ಪುತ್ತು$_1$+ಇಡು$_1$]

ಪುತ್ತು$_1$, ಪುತ್ತ, ಹುತ್ತ, ಹುತ್ತು (ನಾ). ೧. ಗೆದ್ದಲುಗಳು ಕಟ್ಟುವ ಮಣ್ಣಿನ ಗೂಡು ; ಹಾವು ವಾಸಿಸುವ ಗೂಡು : ಕೊಲ್ಲೆಂ ಬಿಸುಡಾಯುಧಮಂ ಪುಲ್ಲಂ ಕರ್ಚೇಱು ಪುತ್ತಂ (ಕವಿರಾ. ೬-೨೦೦) ; ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯನಾಗಳಾಗಳೆ . . . ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀಟ್ ನೆತ್ತರೊಱೆದುರ್ಜುಗೆ ಕೊಂಡುದು ತತ್ತಪಸ್ವಿಯಂ (ಅಜಪು. ೨-೪೦) ; ಬೆರಲಂ ಕರ್ಚುವ ಪುತ್ತಂ

ಪೊಂಗುಪ್ಪೆ (ನಾ). ಚಿನ್ನದ ಜಾಡಿ ; ಬಂಗಾರದ ಹೂಜಿ : ಪರಿಮಳಿಪ ಸೀತಳೋದಕವ ಪೊಂಗುಪ್ಪೆಯೊಳು ತುಂಬಿಡುತ್ತೆ (ಪಡಪೋ. ೦೯-೦೬).

[ಪೊಂ (< ಪೊನ್) + ಕುಪ್ಪೆ$_3$ (< ಕುಪ್ಪಿ$_1$)]

ಪೊಂಗುಬ್ಬಿ (ನಾ). ಚಿನ್ನದ ಗುಬ್ಬುಟ್ಟು.—ಗುಮಟ್ಟು : ಅಂಗದೊಳ ಗಮರ್ದ ಬಣ್ಣಬಗೆಗಳ ಬಿಗಿಪೊಂಗುಬ್ಬವರಿಗೆಯಂ ತೊಡೆ ಚಾಟು ಗೊಳುತೆ (ಪಂಪ. ೧೬-೩೦). [ಪೊಂ (< ಪೊನ್) + ಗುಬ್ಬಿ$_1$]

ಪೊಂಗುರು, ಪಿಂಗಂರು, ಪೆಂಗುರು, ಹೆಂಗಂರು, ಹೊಂಗರಿ$_3$, ಹೊಂಗುರು (ನಾ). ಕೊಕ್ಕರೆಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ : ಕೋಗಿಲೆ ಚಾದಗೆ ಪೋದಗೆ . . . ಕಾಗೆ ಪೂರ್ವಕ್ಕೆ ಪೊಂಗುರು ಗೂಗೆ ಮುಳುಂದಂ ಬಲಾಕೆ ಲಾವುಗೆ ಸೇನಂ (ಕಾಕ್ಕಣ. ೦೦೪೪ ಕೂಕ್ಕಳ್). **ಪಿಂಗುರು** : ಪೂರ್ವಕ್ಕೆ ಪಿಂಗುರು[ಕಾಕಣ. ೮] ಗೂಗೆ ಮುಳುಂದ ಬಳಾಹಕ (ಸೂಕ್ಷ್ಮ. ೬-೦೪೪). **ಪೆಂಗುರು** : ಗಿಳಿ ಪುರುಳಿ ಪೆಂಗುರು[ಕಾಕಣ. ಪಿಂಗುರಿ] ಕಾರಂಡವಾಂದೆ ಮೊದಲಾಗೊಡೆಯ ಗಗನಚರಂ ಪಂಚೇಂದ್ರಿಯಂ ಗಳುಮಾಗಿ (ಪಪ್ಪಾಕ್ಕ. ೧೬-೯). **ಹೆಂಗುರು** : ಬಾನಾಡಿ ಪೆರ್ಬಕ್ಕಿ ಹೆಂ[ಕಾಕಣ. ಹಿಂ]ಗುರು ಕಾಕಂ . . . ಇರ್ದಾ ತದ್ವನಾಗೌಘದೊಳ್ (ಕಾಕಪೆ. ೬-೩೯); ಕಾಕೆಂ ಬಕಂ ಕೊಂಚೆ ಹೆಂಗುರು . . . ಚಾತಕಮವಿರ್ಕುಂ ತಕ್ಕರು ವ್ರಾತದೊಳ್ (ಪಾಪಪಂ. ೪-೧೬); ಪಾರಾವತಂ ಹೆಂಗುರು ಟೀವಂ ಟಿಟ್ಟಿಭಂ . . . ತದ್ವನಾಂತಸ್ಥಮಿರ್ಕುಂ (ಪಪಪು. ೬-೬೬). **ಹೊಂಗರಿ$_3$** : ಹೊಂಗರಿ ಚರಣಾಯುಧಂ ಗಿಡುಗ ಗೀಜಿಗನಾ ಗಿಳಿ ಕಾಡ ಗುಬ್ಬಿಗಳ್ ಬರುತಿರೆ (ಪಪ್ಪಾ. ೬-೨೧೬). **ಹೊಂಗುರು** : ಹೊಂ[ಕಾಕಣ. ಹೆಂ]ಗುರು ಚರಣಾಯುಧಂ ಶಕುನ . . . ತಿತ್ತಿರಿ ಗಿಡುಗಂಗಳೆಂಬ ಖಗವೃಂದದಿನಲ್ಲಿಯರಣ್ಯಮೊಪ್ಪುಗುಂ (ಗಂಗ. ೦-೬೯ ; ಕುಗ್ಗಾ. ೪-೦೪೦ ನೋ) : ಹರಡೆ ಹಸುಬು . . . ಹೊಂಗುರುವಕ್ಕಿಯೆಸೆದವಂದಲ್ಲಿ (ಶ್ರೀಪಾಂ. ೬-೦೬).

[<ಪ್ರಾ. ಪೋಕ್ಖರ./ಸಂ. ಪುಷ್ಕರ./ತೆಲು. ಪೆಗ್ಗುರು, ಬೆಗ್ಗುರು]

ಪೊಂಗುರುಜು (ನಾ). ಬಂಗಾರದ ಮಂಟಪ : ಕೇರಿಕೇರಿಯಲಿ ಪನ್ನೀರ ಚಳಯ ರನ್ನದೋರಣ ಪೊಂಗುರುಜುಗಳು ಮೇರೆಯಿಲ್ಲದ ಕಾಂತಿ ವಿಡಿದುವು (ಕಂಪಪಂ. ೨೬-೫೬). [ಪೊಂ (< ಪೊನ್) + ಕುರುಜು]

ಪೊಂಗುಲ (ನಾ). ೧. ಚಿನ್ನದ ಕೆಲಸ ಮಾಡುವವರ ಕುಲಕ್ಕೆ ಸೇರಿದವನು ; ಅಕ್ಕಸಾಲಿಗ : ಕಡಕೊಳಂದ ಮಣ್ಣಿಗಪ್ಪೊಂಗುಲಂ ಕೊಡಲಿಯಂ ಬಲ್ಲುಸಿಯ ಕಮ್ಮಟಂ ಮುಟ್ಟಗೆವಿಡೊಂ ಓದಲಪೋಲೆಯಂ ಮುಚ್ಚಳಂ (ಪು.ಕ.ಅ. ೦೯೩೪, ೩೮-೨೨ ; ಪು. 11೩೮ ೫೫). ೨. ಒಬ್ಬಾತನ ಹೆಸರು : ಸಾಕ್ಷಿ ಕೂಡಲೂರ್ ಪೊಣ್ಣುಲರು ಎಳ್ಕಡಿಯರು ಬದಿರಿಯರುಮ್ (ಪು.ಕ.ಅ. ೦೯೦೩, ೦೩-೯ ; 726). [ಪೊಂ (< ಪೊನ್) + ಕುಲ]

ಪೊಂಗುಲ್ವಟ್ಟಿ (ನಾ). ಒಂದು ಪ್ರದೇಶದ ಹೆಸರು (?) : ತೆನ್ನಣ ಕೊನೆದು ಪೊನ್ಗುಲ್ವಟ್ಟಿಯ ತೆನೊಳ್ಳೆ ತೆನ್ನಣಸೀಮೆ (ಪು.ಕ.ಅ. ೦೯೨೬, ೦೨೨-೩೦ ; 808 ೯). [?]

ಪೊಂಗುಳ (ನಾ). ಚಿನ್ನದ ಕುಳ.—ಗುಳ : ಪೊಂಗುಳಂಗಳಂ ಕಬ್ಬಿಣದ ಗುಳವೆಂದು ಕೈಯಲೀಯೆ (ಪಪುಪು. ೬-೬-೨). [ಪೊಂ (< ಪೊನ್) + ಕುಳ$_1$ (< ಕುಟು)]

ಪೊಂಗುಳಿಗೆ (ನಾ). ಚಿನ್ನದ ಗುಳಿಗೆ : ಪೊಂಗುಳಿಗೆಗಳ ಪರಿಯೊಳೆಂಗುಷ್ಣಂಗಳೊಪ್ಪುಗು ನಿಮಿರ್ದ ಕೋಮಳದಂಗುಳಂಗಳು ಮೆಱಿವವುಡುಗಣದೊಲು ಪದನಪಾಳಿ (ಪಪಪು. ೯-೦೬). [ಪೊಂ (< ಪೊನ್) + ಗುಳಿಗೆ$_1$]

ಪೊಂಗುಱುವ (ನಾ). ಚಿನ್ನದ ದ್ವೀಪ : ಪಾಲ್ಗಡಲೊಳಗಣ ಪೊಂಗುಱುವಂ ಗಡವೆನಿಸಿದುದಮರನಗಮಿದೇನಚ್ಚರಿಯೋ (ಪರ್ಗಪು. ೦೨-೩೬). [ಪೊಂ (< ಪೊನ್) + ಕುಱುವ$_1$]

ಪೊಂಗೆಜ್ಜೆ, ಹೊಂಗೆಜ್ಜೆ (ನಾ). ಚಿನ್ನದ ಗೆಜ್ಜೆ : ಮಧುಪಾನದಿಂ ಸೊಕ್ಕಿದ ಮುತ್ತಂಬೆಯ ಧ್ವನಿಗಳಂತೆ ಜರ್ಝರವಾದ ಪೊಂಗೆಜ್ಜೆಗಳ ದೆಬ್ಬುಲಿಯೊಳಂ (ಗಿಪಪಂಪು. ೬೬) ; ಪೊಂಗೆಜ್ಜೆಯುಲಿಪು ನೆಲಪುಗ್ಗಡಿಸುತ್ತಂದೆಯೆ . . . ನಡೆತರುತಿರ್ದಳ್ (ಗಿಶಪ. ೩-೦೦೬) ; ಪೆಱತೆಯರೊಡ್ಡಾಣದ ಪೊಂಗೆಜ್ಜೆಗಳ ದನಿ . . . ಪಾಪಮತ ಪಿರಿದು ಸಂಧ್ಯಪ್ರಭ ಬೀಱಿದರು (ಗಿಪಪಂ. ೫೦-೦೦೦). **ಹೊಂಗೆಜ್ಜೆ** : ಹೊಂಗೆಜ್ಜೆಗಳ ದುಸರದ ಘಂಟೆಗಳ . . . ವದ್ಯಮಯಧಾರೆಗಳಲೆಸೆದುದು ಭದ್ರದುಂಬುಹ (ಶಾಕ್ಷ. ೦೪-೦೨); ಪುಟ್ಟಪಾದಗಳ ಹೊಂಗೆಜ್ಜೆಗಳ್ ಘಲಿರೆನೆ ದಟ್ಟಿಡಿಯಿಡತೊಡಗಿದನು (ಕೋಪಪ. ೦೬-೬೨); ಸಂಗತಿಗುಲಿವ ಹೊಂಗೆಜ್ಜೆಗಳ ರಭಸದಿಂದೆಸೆವ ನಿರ್ದೂಷ ವಾಜಿಯಂ ಸುವೇಗಂ ತುದು ನಿಲಿಸಿದಂ (ಕೃಅಶಾ. ೬-೦೦).

[ಪೊಂ (< ಪೊನ್) + ಗೆಜ್ಜೆ$_1$]

ಪೊಂಗೆಲಸ, ಹೊಂಗೆಲಸ (ನಾ). ಚಿನ್ನದ ರೇಕಿನ ಕೆಲಸ : ಪೊಸ ಪೊಂಗೆಲಸದ ಯೂಪಸ್ತಂಭಂಗಳ ಭಂಗಿಯನನುಕರಿಸಿದುವುಳ್ದೊಡೆಯಾ ಕವುಲ ದಳಾಂಬಕಿಗೆ (ಪಪುಶಾ. ೬-೬೦). **ಹೊಂಗೆಲಸ** : ತೀವಿದವು ಹೊಂಗೆಲಸ ಗತಿಯಲಿ ಲೋವೆಗಳು (ಶಾಕ್ಷ. ೦೪-೯) ; ಹೊಂಗೆಲಸದ ಪೊಚ್ಚದುಮ ವಿಟ್ಟರದೊಳು ಮಂಗಲಮಜ್ಜನಗೆಮ್ಮು (ಪೋಪಪ. ೨೦-೬).

[ಪೊಂ (< ಪೊನ್) + ಕೆಲಸ]

ಪೊಂಗೇದಗೆ, ಹೊಂಗೇದಗೆ (ನಾ). ಒಂದು ಬಗೆಯ ಕೇದಗೆ ; ಹೊಂಬಣ್ಣದ ತಾಳೆಹೂವು : ದುಗಮಗಿಪ ಜಾದಿ ಪೊಗೆ:ದಗೆ ಮಲ್ಲಿಗೆ ಯೆಂಬ ಪಲವು ಪೂಮಾಲೆಗಳಂ ಬಗೆಯಱಿದೊಲಗಿಪುದು ಮಾಲೆಗಾಱನಂ ಪೋಲ್ತುದಗ್ರಮಾಲ್ಯವಮಹೀಜಂ (ಕಾಪು. ೩-೬೬) ; ಸೋರ್ಮುಡಿಯಿಂ ಸೂಸಿದ ಪೊಂಗೇದಗೆಯ ಕುತ್ತುಂಗಱಿ (ಪಂಗಾಪಪ. ೨-೦೬ ಪ) ; ವನಮನಾಱಿ ಬಳಸಿ ಕಂಗೊಳಿಪ ಪೊಂಗೇದಗೆಗಳೊಪ್ಪಿದುವು (ಪಂಪ. ೨೩-೦೬). **ಹೊಂಗೇದಗೆ** : ಕುರವಕದ ವಕಳಿದೆಳೆಗೊಂಗಿನ ಹೊಂಗೇದಗೆಯ ಬಳಸಿ ನೊಳಂ . . . ಲತಾವಿಂಟಪಂಗಳ್ ಮನಂಗೊಳಿಪುವು (ಕಾದಂಪು. ೯೭) ; ಈಗಿ ಹೊಂಗೇದಗೆಯ ಕಂಚಿಯ . . . ತಿತ್ತೊರಸಿ ಹುಡಿಹುಡಿ ದೂಡಿದನು (ಗಿಶಾಕಾ. ೦೦-೨೦) ; ಹೊಂಗೇದಗೆಯೆಸಳಂ ವಾಸಿಸಿ (ಪಪುಶಾ. ೨-೦೪).

[ಪೊಂ (< ಪೊನ್) + ಕೇದಗೆ]

ಪೊಂಗೊಡ, ಹೊಂಗೊಡ (ನಾ). ಚಿನ್ನದ ಕೊಡ ; ಸ್ವರ್ಣಕುಂಭ : ಪೊಂಗೊಡಂ ತವಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕ ವಮಾಂತುದು ಕರ್ಪನಾಕೆಯಾ(ಪಂಪಪಾ. ೦-೦೨೬) ; ಬಿಳಿಯ ಸಾಸವೆ ಪೊಂಗೊಡ ನಷ್ಟಶೋಭೆ ಕನ್ನಡಿ . . . ಎಲ್ಲೆಡೆಗಳೊಳಲ್ಲಿಗಲ್ಲಿಗಧಿಕಂ ಪಡೆದತ್ತು ಜನಾನುರಾಗಮಂ (ಕಾಪಾ.ಕ. ೬೬) ; ತೀಲಾಲಮನುಱಿ ಸಾಸಿರಸೂಳ್ಪೊಂಗೊಡನಿಂ ತಂದು . . . ಅಭಿಷೇಕಂಗೆಯ್ದುಂ (ಕಾಪ್ಯಕೇ. ೪-೧೩). **ಹೊಂಗೊಡ** : ತೊಳೆದ ಹೊಂಗೊಡದೊಳಗ್ಗಣಿಗಳಂ ತುಂಬಿ ತಂದಿಳುಹಿದರು ಕಾವಿನಿಯರು (ಪಪಣಾ. ೪-೪೭) ; ಹೊಂಗೊಡನ ಹಿಡಿದೈತರಲಿ ನಾರಿಯರು (ಶಾಕ್ಕಾಕ್ಕೂ. ೦-೪೬) ; ಮಜ್ಜನಕುಣ್ಮನಜಲ ಹೊಂಗೊಡದಲಿಳುಹಿದವು (ಪೂಪಕಾ. ೪-೪-೪೪). [ಪೊಂ (<ಪೊನ್) + ಕೊಡ$_3$]

ಪೊಂಗೊಡೆ (ನಾ). ಚಿನ್ನದ ಛತ್ರಿ ; ಬಂಗಾರದ ಸತ್ತಿಗೆ : ಶಕ್ರಂಗೆತ್ತಿದ ಮಾಣಿಕಗೊಡೆ ಪೊಂಗೊಡೆ ಬೆಳ್ಗೊಡೆಯೆನಿಸುವುದು ಶಶಿಬಿಂಬಂ (ಪಗಂ. ೦೬-೦೦೬) ; ಚೈತ್ರನೆತ್ತಿದ ಪಲವುಂ ಪೊಂಗೊಡೆಗಳೆನಿಸಿ ಪೂತು ಮನಂಗೊಳಿಸಿದುವೆಸೆವ ಕರ್ಣಿಕಾರಕುಜಂಗಳ್ (ಶಾಸುಚಿ. ೩-೨೦). [ಪೊಂ (<ಪೊನ್) + ಕೊಡೆ$_3$]

ಪೊಂಗೊಳಗು (ನಾ). ಪಶುಗಳ ಗೊರಸಿಗೆ ತೊಡಿಸುವ ಚಿನ್ನದ ಆಭರಣ : ಪೊಂಗೋಡು ಪೊಂಗೊಳಗು ಪೊಂಗೆಜ್ಜೆ ಘಂಟೆಗಳು ಪೊಂಗಲಶ ಪೊನ್ನ ಬಾಸಿಗ ತಂದು ವೃಷಭನಂ ಸಿಂಗರಿಸಿ (ಸಿಂಗಾರ. ೩-೦೩).

[ಪೊಂ (<ಪೊನ್) + ಕೊಳಗು]

ಬೆಲೆವೆಣ್ಗಳೆಸೆದರ್ (ಕುರಾಸಾಂ. ೨೬-೬೬). 'ಪುತ್ತುರಿ' ಪರಾ. [?]

ಪುತ್ತೂರ್ (ನಾ). ಒಂದು ಊರಿನ ಹೆಸರು : ಪುತ್ತೂರಾ ಜೆಟ್ಟಿಮು ಗೊಳುತ್ತಿಟ್ಟು ಪುತ್ತೂರತ್ತಾಣಿಗೆ ಅಯ್ದೂಮ್ಬು ಕಟನಿಯುಂ ಅಯ್ದೂಮ್ಬು ತೊಟ್ಟಪ್ಪಟ್ಟುಂ ಕೊಟ್ಟರ್ (ಎಕ. x. ಕೋಲಾರ. ೨೨೯-೩; ಸು. 750); ಪುತ್ತೂರುಡೆ ಶಿವಮಾರಮ್ಮಂ . . . ಬಾಳೆ ತೊಟ್ಟಪಟ್ಟು ಬ್ರಹ್ಮದೇಯಂ ಕೊಟ್ಟೊದು (ಎಕ. x. ಕೋಲಾರ. ೨೩೦-೨; ಸು. 800 ?). 'ಹುತ್ತೂರು' ಪರಾ. [? + ಊರ್]

ಪುತ್ತೇಱು (ಕ್ರಿ). (ಯುದ್ಧದಲ್ಲಿ ಸೋತು) ಶರಣಾಗುವುದನ್ನು ಸೂಚಿಸುವುದಕ್ಕಾಗಿ ಹುತ್ತದ ಮೇಲೆ ನಿಲ್ಲು : ಪುತ್ತೇಱಿದನಂ ಕೈದುವನಿತ್ತನನೇರ್ಪೆತ್ತನಂ ರಣಾಂಗಣದೊಳ್ ಬೆನ್ನಿತ್ತನನಿಱಿಯರ ಮೋಘಂ ಮತ್ತೆನಿಸದೆ ತುಟಿಲ ಸಂದ ಜನಮಂ ಜಗದೊಳ್ (ಶಂಶಕಂ. ೨೪೪-೦೩). [ಪುತ್ತು$_1$ + ಏಱು$_1$ (<ಏಱ್$_1$)]

ಪುತ್ಥಳಿ, ಪುತಲಿ, ಪುತಳಿ, ಪುತ್ತಟಿ (ನಾ). ೧. ಬೊಂಬೆ; ವಿಗ್ರಹ; ಮೂರ್ತಿ: ಅರಗಿನ ಪುತ್ಥ[ಪಾಠಾಂ. ತ್ತ]ಳಿಯನುರಿಯ ನಾಲಗೆ ಹೊಯಿದು ಮಾತಾಡುವ ಸರಸ ಬೇಡ (ಶಸವ. ೬೬೦ ೮); ಅಱಿವು ಮಯಣಾಮಯದ ಭಕ್ತಿಯೊಳಱಗಿಸಿದ ಪುತ್ಥಳಿಯವೊಲು ಕಡುಬೆಱಗ ಕೇಣಿಯ ಕೊಂಡು ಮೌನದೊಳಿದ್ದನಾ ವಿದುರ (ಕುಪ್ಯಾಉ. ೬-೧೩); ವಾರಿಕಲ್ಲು ಪುತ್ಥಳಿ ಅಪ್ಪುವನೊಡಗೂಡಿದಂತೆ ಮಾಡಿತ್ತೆನ್ನ . . . ನಿಮ್ಮ ವಚನೋಪದೇಶ (ಅಖಂಡೇ. ೨೦-೧೦). **ಪುತಲಿ** : ೨. ಹಳೆಯ ಕಾಲದ ಒಂದು ಚಿನ್ನದ ನಾಣ್ಯ ; ವರಹ : ಇನ್ನೂ ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದುವು. ಯಾವುವೆಂದರೆ—೧ ಗಬರು . . . ೧ ಪುತಲಿ (ಶಕ್ರಪಾ. ೧೦೯). **ಪುತಳಿ** : ೧. ನೂಲಿನ ನಂಬರ ೪೦. ಬಿಳೇದು . . . ಗೌಳಿಗಿತ್ತಿ ಛಾಪ, ಪುತಳಿಛಾಪ, ಚಕ್ರಛಾಪ (ಮುಂಬಪ್ಯಾ. ೦೦೦). ೨. ನಾನು ನಿನಗೆ ಎರಡು ಪುತಳಿಗಳನ್ನು ಕೊಡುತ್ತೇನೆ . . . ವೆಚ್ಚ ಮಾಡಿಕೋ (ಮುಂಬಯಿ. ೫-೨೬೦). ೩. ಚಿನ್ನದ ನಾಣ್ಯಗಳಿಂದ ಮಾಡಿದ ಸರ : ಬಂಗಾರ ಬಂಗಾರ ಅನಲಿಕ್ಕೇನಂ ? ನಾಲ್ಕು ತೊಲೆ ಪುತಳಿ ಅವ. ಆರ ತೊಲೆ ಪಾಟಲಿ ಅವ (ಆಕೋಕ. ೧೧೯). Δ **ಪುತ್ತಟಿ** : ೧. "ಪುತ್ತಳಿಗೆಯೆಂದು ಪುತ್ತಟಿ" (ಕಶಸಾ. ೬೬-೯೬೮); ಸಿರಿಕಂಡದ ಕೋಟ್ಕೆಸಱಿಂ ಪುದಿದು ಜಂತದಿಂ ಕಡೆದು ಕಂಡರಿಸಿದ ಪುತ್ತಟಿಯಂತಿರ್ಪಳ್ (ಕಬ್ಬಿಗಾ. ೩೧೫); ಲೆಪ್ಪದ ಬೊಂಬೆಯನೆರಕಂಬೊಯ್ದೊಪ್ಪಂಬೂಸಿದ ಪುತ್ತಟಿಯಂ ಬೇಱಾಗಿ ತೋಱುಗುಮಲ್ತೆ (ರಾಮಾಶ್ವ. ೦೧-೨೦).

ಪುತ್ಥಳಿ ಬೊಂಬೆ=ಸಂಂದರವಾದ ವಿಗ್ರಹ : ಸಾಧುಸಜ್ಜನರ ಚಿತ್ತದಿ ಹೊಳೆವ ಪುತ್ಥಳಿಬೊಂಬೆ (ಪುರಂದ. ೧-೨೦೧-೩). ಪುತ್ಥಳಿಯ ಸರ=ಚಿನ್ನದ ನಾಣ್ಯಗಳಿಂದ ಮಾಡಿದ ಸರ : ಅದರಲ್ಲಿನ ವಸ್ತು ಒಡವೆಗಳು . . . ಬಂಗಾರದ ಕೈಬಳೆ, ಪುತ್ಥಳಿಯ ಸರ, ಗುಂಡಿನ ಟಿಕ್ಕೆ, ತೋಳಬಂದಿ, ಚಿಂತಾಕು (ಮಡ್ಡುಹ. ೨೦). [<ಸಂ. ಪುತ್ತಲೀ]

ಪುತ್ಥಳಿಕೆ, ಪುತ್ತಳಿಗೆ, ಪುತ್ತಟಿಗೆ (ನಾ). = ಪುತ್ತಲಿಕೆ : ತಳತಳಿಸಿ ತೊಳಗುವ ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ (ಕಾದಂಪೂ. ೬೬೬). **ಪುತ್ತಳಿಗೆ** : "ಪುತ್ತಳಿಗೆಯೆಂದು ಪುತ್ತಟಿ" (ಕಶಸಾ. ೬೬-೯೬೬); ದೂಳಿಗೊಂಡ ಪುತ್ತಳಿಗೆ ಮಂಜುಗೊಂಡಬ್ಜಿನಿ ಕಾರ್ಮುಗಿಲೊಳಕೊಂಡಳ ವೆಱೆಯೆನೆ ಮೃಗಲೋಚನೆ ಸೀತೆ ನಾಡೆ ಪಾಡಟಿದಿರ್ದಳ್ (ಪಂರಾಮಾ. ೧೧-೬೩); ಕತ್ತುರಿಯ ಬೊಟ್ಟೆ ಮೇಣಿದು ಪುತ್ತಳಿಗೆಯೊ ನೀಳಮಣಿಯ ತೋಳ್ಗಮ್ಬುದೊಳೇಂ ತೆತ್ತಿಸಿದುದೆನಿಸಿ ಧರೆಯಂ ಪೊತ್ತುದು ಭುಜವಜ್ರ ಕೋಟಿ ಸಿರಿವಲ್ಲಹನಾ (ಎಕ. VIII. ನಗರ. ೩೭-೯೬; 1147 ; ಶಾಪಮಂ. ೫೦೦ ನೋ). Δ **ಪುತ್ತಟಿಗೆ** : "ಪಾಂಚಾಲಿಕಾ, ಪುತ್ರಿಕಾ—ಈ ೨ ಪುತ್ತಟಿಗೆ" (ಹಲಾಯು. ೬೦-೩೩೯). [<ಸಂ. ಪುತ್ತಲಿಕಾ]

ಪುತ್ರ (ನಾ). ೧. ಮಗ; ಕುಮಾರ : "ನಂದನ ತನುಜನ್ಮ ತೋಕ ಸುತ ಪುತ್ರ ತನೂಭವ ಸೂನುನಾಮಕಂ ತನಯಂ" (ಪಸ್ತುಕೋ. ೫೪-೦೭); ಇಳಾಪ್ರಭುವೊಗೆದನುದಿತ ಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ (ಪಂಪಶಾ.೦-೦೨೬); ಪುತ್ರಕಳತ್ರ ಪರಿಗ್ರಹಗಾತ್ರಧನೈಶ್ವರ್ಯಮೆಂದಿ ವಾರ್ಗಮನಿತ್ಯಂ (ಪುತ್ರಪು. ೦೩-೨೬). ೨. (ಪ್ರಾಣಿಗಳ) ಮರಿ; ಪೋತ. ೩. ಚಿಕ್ಕವರನ್ನು ಪ್ರೀತಿಯಿಂದ ಸಂಬೋಧಿಸಂವಾಗ ಬಳಸುವ ಶಬ್ದ. ೪. (ಸಮಾಸದ ಕೊನೆಯಲ್ಲಿದ್ದಾಗ) ಚಿಕ್ಕದು, ಸಣ್ಣದು ಎಂಬರ್ಥದಲ್ಲಿ ಬರುವ ಶಬ್ದ. ೫. [ಜ್ಯೋತಿ] ಜನ್ಮಕುಂಡಲಿಯಲ್ಲಿ ಐದನೆಯ ಸ್ಥಾನ : 'ಪುತ್ರಮಂದಿರ' ಪರಾ. [ಸಂ.]

ಪುತ್ರಂಜಿ 'ಪುತ್ರಂಜೀವಿ' ನೋ.

ಪುತ್ರಂಜೀವ (ನಾ). ಒಂದು ಬಗೆಯ ಸಸ್ಯ; P ಇದರ ಹೂವು ಅಥವಾ ಬೀಜಗಳಿಂದ ಮಾಡಿದ ಹಾರವನ್ನು ಧರಿಸುವುದರಿಂದ ಮಕ್ಕಳು ಆರೋಗ್ಯವಂತರಾಗಿ ಬದುಕುವರೆಂಬ ಭಾವನೆ ಇದೆ : ಪುತ್ರನಿಗೆ ಜೀವದಾನ ಮಾಡುವ ಗುಣ ಇದರ ಬೀಜಗಳಿಗಿವೆಯೆಂಬ ನಂಬಿಕೆ ಅವರಲ್ಲಿ ಊರಿತ್ತು. ಆದ್ದರಿಂದ ಮರಕ್ಕೆ ಪುತ್ರಂಜೀವ ಎಂದು ನಾಮಕರಣ ಮಾಡಿದರು (ಪಸುಹೂ. ೩೦). [ಸಂ.]

ಪುತ್ರಂಜೀವಿ, ಪುತ್ರಂಜಿ, ಪುತ್ರಜೀವಿ (ನಾ). = ಪುತ್ರಂಜೀವ : "ಪುತ್ರಂಜೀವಿ, ಮೆಣಸಿನ ಕಾಳೆ" (ಸಸ್ಯಶಿ. ೦೦೦) ; (ಮೃಜಗಿ. ೬೫-೦೩೨೬). **ಪುತ್ರಂಜಿ** : ಪುತ್ರಂಜಿ—ಮಧ್ಯಮ ಆಕಾರದ್ದು...ಇದರ ಕಾಯಿಗಳನ್ನು ಹುಡುಗರ ಕೊರಳಲ್ಲಿ ಕಟ್ಟಿದರೆ ಬೇನೆ ಬರುವುದಿಲ್ಲವಂತೆ. ಅದರಿಂದ "ಪುತ್ರಜೀವಿ" ಎಂಬ ಹೆಸರು ಬಂದಿದೆ (ಕಶಾಗೆ. ೯೩). **ಪುತ್ರಜೀವಿ** : "ಪುತ್ರಜೀವಕಂ—ಪುತ್ರಜೀವಿ" (ಓಷಧಿ. ೦೦೦) ; ಪುತ್ರಜೀವಿಯ ಮಣಿಯಂ ಸೀಗೆಕಾಯ ರಸದಲ್ಲಿ ಅರೆದು ಅಲ್ಪ ಕಾಸಿ ಕುಡಿಯಿಸಲು ಗುರುಗಂಜಿಯ ವಿಷ ಮಾಣ್ಗುಂ (ಎನ್ನಪಿ. ೬೦) ; ಪುತ್ರಜೀವಿ ಬೀಜದ ತಿರುಳು ತಣ್ಣೀರಿನಲ್ಲಿ ಅರೆದು ನಸ್ಯ, ಅಂಜನ, ಪಾನ, ಲೇಪನಗಳಂ ಮಾಡಿಸಲು ಸಕಲವಿಷ ದೋಷಂಗಳು ಪರಿಹರವಹವು (ವೈದ್ಯಸಾ. II. ೦೬೭).

[<ಸಂ. ಪುತ್ರಂಜೀವ]

ಪುತ್ರಂಬಡೆ (ಕ್ರಿ). ಮಗನನ್ನು ಪಡೆ ; ಪುತ್ರನನ್ನು ಹೊಂದು : ಪುತ್ರಂಬಡೆದೆನೆ ಪರಮಪವಿತ್ರೀಕೃತಭವಸುಖಾಮೃತಕ್ಕಾನೀಗಳ್ ಪಾತ್ರಂ ಬಡೆದೆಂ (ಸುಕುಮಾ. ೧೦-೨೯). [ಪುತ್ರ + ಪಡೆ$_1$]

ಪುತ್ರಕ (ನಾ). ಮಗ : ಕೌರವರು ತಾಮಸರು ಸುತರಲ್ಲವವರೆನಗೆ... ಅತಿಪ್ರೇಮದಿಂ ಪುತ್ರಕನು ನೀನೆನಗೆ (ತಿಮ್ಮಸ್ತ್ರೀ. ೨-೪೪). [ಸಂ.]

ಪುತ್ರಕಾಮೇಷ್ಟಿ (ನಾ). ಮಗನನ್ನು ಪಡೆಯಬೇಕೆಂಬ ಉದ್ದೇಶದಿಂದ ಮಾಡುವ ಯಜ್ಞ : ಸಂತತಿಯ ಸೌಭಾಗ್ಯಸಿರಿಯ ನಿತಾಂತಕಿದೆಲಾ ನಿನಗೆ ಸಪ್ತಸುತಂತು ನಿರುಪಮ ಪುತ್ರಕಾಮೇಷ್ಟಿ ಪ್ರಸಿದ್ಧಕದ (ಶೋಕಾ. ೧-೪-೦೦); ಅಯೋಧ್ಯಾಪುರದೊಳವತರಿಸಿದಂ ಮಹಾವಿಷ್ಣು ಸುತರೂಪದಿಂ ರಾಮಾಭಿಧಾನದೊಳ್ ಪುತ್ರಕಾಮೇಷ್ಟಿಯಿಂ ದಶರಥಂಗೆ (ಶೈಮಿಪಾ. ೦೯-೦); ಗುರುವಸಿಷ್ಠಂ ಪುತ್ರಕಾಮೇಷ್ಟಿಯಂ ಪೇಳ್ದು...ಯಜ್ಞಶಾಲೆಗೆ ನಡೆದನಲ್ಲಿಂದೆ (ಶ್ರೀರಾಮಾ. ೯-೨೩೪). [ಸಂ.]

ಪುತ್ರಕಾಮ್ಯ (ನಾ). ಮಗನನ್ನು ಪಡೆಯಬೇಕೆಂಬ ಅಪೇಕ್ಷೆ,—ಆಸೆ : ನಿನ್ನನುಗ್ರಹವಾದುದಾದರೆ ತದ್ವಿಧಾನದಲಾದರಿಸುವೆನು ಪುತ್ರಕಾಮ್ಯವನು (ಕುಪ್ಯಾಲ. ೪-೩೪). [ಸಂ. ಪುತ್ರಕಾಮ್ಯಾ]

ಪುತ್ರಘಾತಿನಿ (ನಾ). ಮಗನನ್ನು ಕೊಲ್ಲುವವಳು ; ಶಿಶುಹತ್ಯ ಮಾಡುವವಳು : ತಡೆ, ಪುತ್ರಘಾತಿನಿ! ಅದನ್ನು ಕೊಲ್ಲಬೇಡ! (ಪಂಪಾ. ೨). [ಸಂ. ಪುತ್ರಘಾತಿನೀ]

ಪುತ್ರಜೀವಿ 'ಪುತ್ರಂಜೀವಿ' ನೋ.

ಪುತ್ರದಾತ್ರಿ (ನಾ). (ಬಂಜೆತನವನ್ನು ನಿವಾರಿಸುವುದೆಂದು ನಂಬಲಾದ) ಒಂದು ಬಗೆಯ ಔಷಧೀ ಸಸ್ಯ ; ಶ್ವೇತಪುಷ್ಪಿಕೆ : "ವಾತಾರಿಃ—ಗಂಟು ಭಾರಂಗಿ, ಸೂರಣ, ಬಿಳಿಯೌಡಲ, ಪುತ್ರಧಾ[ದಾ]ತ್ರೀ" (ಓಷಧಿ. ೦೫೦); "ವೇಶೀಜಾತ–ಪುತ್ರಧಾ[ದಾ]ತ್ರಿ" (ಓಷಧಿ. ೦೫೬). [ಸಂ. ಪುತ್ರದಾತ್ರೀ]

ಪುತ್ರದೆ (ನಾ). ಒಂದು ಬಗೆಯ ಔಷಧೀಸಸ್ಯ; ವಂಧ್ಯಾಕರ್ಕೋಟಕಿ : "ದೃಷ್ಟಿಪ್ರಭಾ—ಪುತ್ರದೆ" (ಓಷಧಿ. ೭೯). [ಸಂ. ಪುತ್ರದಾ]

ಪುತ್ರದೋಹದ (ನಾ). ಗಂಡುಮಗುವನ್ನು ಪಡೆಯಬೇಕೆಂಬ ಬಯಕೆ ; ಗಂಡುಮಗುವು ಹುಟ್ಟಬೇಕೆಂದು ಉಂಟಾಗುವ ಹಂಬಲ : ಹರಿಹರದೇವಿಗೆ ಪುತ್ರದೋಹದ [ಶಾಕಾಂ. ಮೋಹವು]ಬಂದು ಭರದಿಂದ ಪುಟ್ಟಿತೆದೆಯೊಳು (ಕುಲಾಸಾಂ. ೭ ಸೂಕನೆ). [ಸಂ.]

ಪುತ್ರದೋಹಳ (ನಾ). =ಪುತ್ರದೋಹದ : ತಮ್ಮ ಮೆಯ್ಮಱಿವಿನ ಮಿರ್ಬರುಂ ನಮೆದರೇನವರ್ಗಾದುದೊ ಪುತ್ರದೋಹಳಂ (ಸಂಶಭಾ. ೦-೦೩೫); ತಾನುಂ ಪುತ್ರದೋಹಳಕುತೂಹಳೆಯುಮಾಗೆ (ಮಲ್ಲಿಪು. ೩-೦೦೫). [ಸಂ. ಪುತ್ರದೋಹಲ]

ಪುತ್ರದೌಹೃದ (ನಾ). = ಪುತ್ರದೋಹದ : ಇವು ಮೊದಲಾಗೆ ಪಲವುಂ ಪುತ್ರದೌಹೃದಂಗಳಂ ಪಂಬಲಿಸುತ್ತುಮಿರ್ದಳ್ (ಪುತ್ರಪು. ೩-೯೯ ವ). [ಸಂ.]

ಪುತ್ರಮಂದಿರ (ನಾ). [ಜ್ಯೋತಿ] ಜನನಕುಂಡಲಿಯಲ್ಲಿ ಐದನೆಯ ಸ್ಥಾನ ; ಜಾತಕನಿಗೆ ಪುತ್ರಪ್ರಾಪ್ತಿಯನ್ನು ಸೂಚಿಸುತ್ತದೆಂದು ನಂಬಲಾದ ಸ್ಥಾನ : ಮೇಣ್ ಬರೆ ತದ್ದ್ವಿತೀಯಮೆನಿಪಾ ದ್ರೇಕ್ಕಾಣಮಾ ಪುತ್ರಮಂದಿರದೊಳ್ ಮೇಣ್ ಬರೆ ತತ್ತೃತೀಯಮೆನಿಪಾ ದ್ರೇಕ್ಕಾಣಮಾ ಧರ್ಮಮಂದಿರದೊಳ್ ವಾಕ್ಪತಿಯಿರ್ದನೆಂದಱಿಗೆ (ಜಾತತಿ. ೨೪-೨). [ಸಂ.]

ಪುತ್ರವಂತ (ನಾ). ಗಂಡುಸಂತತಿಯುಳ್ಳವನು. [ಸಂ. ಪುತ್ರವತ್]

ಪುತ್ರವತಿ (ನಾ). ಮಗನನ್ನು ಪಡೆದವಳು : ಪುತ್ರವತಿಯಹುದು ಜನ್ಮಾಂತರದ ಪುಣ್ಯಮೈಸಲೆ ಪೆಣ್ಗೆ (ಸ್ವೈಮಿಶಾ. ೦೬-೦೯); ಪುತ್ರವತಿಯಾದ ಶಕುಂತಳೆಯನ್ನು . . . ದುಷ್ಯಂತನು ಪರಿಗ್ರಹಿಸಿದನು (ಶಾಕುಂತ. ೦೦೫-೧೨). [ಸಂ. ಪುತ್ರವತೀ]

ಪುತ್ರವಧು (ನಾ). ಮಗನ ಹೆಂಡತಿ : ಸೊಸೆ : " ಸ್ನುಷಾ, ಜನೀ, ಪುತ್ರವಧೂಃ, ವಧೂಃ—ಈ ೪ ಸೊಸೆ " (ಹಲಾಯು. ೬೩-೩೫೦). [ಸಂ. ಪುತ್ರವಧೂ]

ಪುತ್ರವಾತ್ಸಲ್ಯ (ನಾ). (ಹಿರಿಯರಿಗೆ) ಮಕ್ಕಳ ಮೇಲಿರುವ ಪ್ರೇಮ,–ಅಕ್ಕರೆ : ಎಲೈ ಮಿತ್ರನೆ, ಮಾತೃಶ್ರೀಯವರಿಗೆ ನಿನ್ನಲ್ಲಿ ಪುತ್ರವಾತ್ಸಲ್ಯ ವಿರುವುದು (ಶಾಕುಂತ. ೨೯-೧೫); ಮುಪ್ಪಿನ ತಂದೆಯು . . . ಪುತ್ರವಾತ್ಸಲ್ಯದಿಂದ ಆ ದುಃಖವನ್ನು ಮರೆತು ನನ್ನನ್ನು ಸಾಕಿಕೊಂಡಿರಲಾಗಿ (ಪಶಕಾ. ೩). [ಸಂ.]

ಪುತ್ರವಿಹೀನ (ನಾ). ಮಗನಿಲ್ಲದವನು ; ಗಂಡುಸಂತಾನವಿಲ್ಲದವನು : ಕುಂಬಿನಿಯೊಳೆಮ್ಮ ಕುಲದೆ ತಿಲಾಂಬುವ ಮುಂದಕಟ ಕುಡುವನಾವನೆ ನುತ್ತುಂ ನಾಂ ಬಿಡೆ ಪುತ್ರವಿಹೀನಂ ಕಂಬನಿದೊಳೆದುಳಿದ ಜಲವ ಪಿತೃಗಳ್ ಪೀರ್ಪರ್ (ಶಾಕುಂತ. ೯೪-೧೫೬). [ಸಂ.]

ಪುತ್ರಸಂತತಿ (ನಾ). ಗಂಡುಸಂತಾನ : ಗಂಡುಮಕ್ಕಳ ಜನನ : ಗಾಂಧಾರಿ ಗಾದುದು ಪುತ್ರಸಂತತಿ (ಕುಪ್ಯಾಲ. ೪-೩೦). [ಸಂ.]

ಪುತ್ರಸಂತಾನ (ನಾ). ಪುತ್ರಸಂತತಿ : ಗುರು ವಸಿಷ್ಠಂ . . . ಪುತ್ರಸಂತಾನವಹುದೆಂದು ನಂಬಿಗೆಗೊಟ್ಟು ಸಂತೈಸಿ ಯಜ್ಞಶಾಲೆಗೆ ನಡೆದನಲ್ಲಿಂದೆ (ಶ್ರೀರಾಮಾ. ೯-೨೩೫) ; ಸ್ಕಂದವರ್ಮನಿಗೆ ಪುತ್ರಸಂತಾನವಿದ್ದಿಲ್ಲ (ಕರ್ಣಾಲ. ೧೪೦). [ಸಂ.]

ಪುತ್ರಸ್ವೀಕಾರ (ನಾ). ಬೇರೆಯವರ ಮಗನನ್ನು ತನ್ನ ಮಗನೆಂದು ಸ್ವೀಕರಿಸುವುದು,–ದತ್ತು ತೆಗೆದುಕೊಳ್ಳುವುದು : ನಾಲ್ವಡಿ ಕೃಷ್ಣರಾಜ ಒಡೆಯರು ಜಯಚಾಮರಾಜರನ್ನು ಪುತ್ರಸ್ವೀಕಾರ ಮಾಡಿಕೊಂಡು ಯುವರಾಜನನ್ನಾಗಿ ಮಾಡಿದರು (ಕೂಡಿ). [ಸಂ.]

ಪುತ್ರಾಂತರಾಯ (ನಾ). ಮಕ್ಕಳಾಗುವುದಕ್ಕೆ ಇರುವ ವಿಘ್ನ : ಈ ಪುತ್ರಾಂತರಾಯಂ ಪುರಾತನ ದುಷ್ಕರ್ಮವಿಪಾಕವೋ ಬೆಸಸಿಂ (ಸುಕುಮಾ. ೯-೦೦೯). [ಸಂ.]

ಪುತ್ರಿ₁ (ನಾ). ಮಗನನ್ನುಳ್ಳವನು ; ಪುತ್ರವಂತ : ಸುವಿನೀತರ್ಕವಿತಾ ಪ್ರವೀಣರಭಿರೂಪರ್ಸರ್ವಶಾಸ್ತ್ರಜ್ಞರಿಂತಿವರಿಂದೈಸೆ ಜಗಕ್ಕೆ ಸೌಮ್ಯ ನರಸಿಂಹಾರ್ಯೋತ್ತಮರ್ ಪುತ್ರಿಗಳ್ (ಮಿತ್ರಗೋ. ೩-೪). [ಸಂ. ಪುತ್ರಿನ್]

ಪುತ್ರಿ₂ (ನಾ). ೧. ಮಗಳು ; ಕುವರಿ : " ದುಹಿತೃ ನಂದನೆ ಪುತ್ರಿ ತನೂಜೆ ಸೂತಿ ತಾನೆನಿಕ್ಕುಂ " (ವಸ್ತುಕೋ. ೫೪-೦೭); ವರಪುತ್ರೀಸ್ಥಿರ ಭಾವಕಾಮ್ಯವಿಲಸತ್‌ಸನ್ಮಾನ್ಯೆಯಂ ಯಾನೆಯಂ . . . ಗಿರಿರಾಜಂ ಕಳಿಪುತ್ತುಮಿರ್ದನತಿಯೋಗಧ್ಯಾನೆಯಂ ಮೇನೆಯಂ (ಗಿರಿಕ. ೩-೦೦). ೨. (ಸಮಾಸದ ಕೊನೆಯಲ್ಲಿ ಬಂದಾಗ) ಚಿಕ್ಕದು ಎಂಬರ್ಥದ ಶಬ್ದ : 'ಅಸಿಪುತ್ರಿ' ಪರಾ. [ಸಂ. ಪುತ್ರೀ]

ಪುತ್ರಿಕೆ (ನಾ). ೧. ಪುತ್ರಿ; ಮಗಳು : ದುರ್ವಿನೀತನ ತಾಯಿಯಾದ ಜ್ಯೇಷ್ಠಾದೇವಿಯು ಪುನ್ನಾಡ ಸ್ಕಂದವರ್ಮನ 'ಪುತ್ರಿಕೆ' (ಕರ್ಣಾಲ. ೦೪೦). ೨. ಬೊಂಬೆ ; ವಿಗ್ರಹ : "ಪಾಂಚಾಲಿಕಾ, ಪುತ್ರಿಕಾ – ಈ ೨ ಪುತ್ತಱಿಗೆ" (ಹಲಾಯು. ೮೧-೩೩೯); ಮೆಲ್ಲನೆ ನಡೆತರ್ಪ ನೀಲಮಣಿಪುತ್ರಿಕೆಯಂದದಿನಾದ ಮೊಪ್ಪಿದಳ್ (ಕಾದಂಪೂ. ೩೮); ನೀಂ ಪರವೆಣ್ಗಳನಪ್ಪುವುದನೆ ಬಯಸುತಿರ್ಪೆಯಪ್ಪೆಂದು ಕರಂ ಚಪ್ಪರಿಸಿ ನಾರಕರ್ ತಂದಪ್ಪಿಸುವರ್ ಕಾಯ್ದ ಲೋಹಮಯಪುತ್ರಿಕೆಯಂ (ಸುಕುಮಾ. ೦೦-೪೩); ಪೊಳೆವ ಮುತ್ತಿನ ಬೊಂಬೆಯೋ ತಿಂಗಳ ತಿರುಳ ಪುತ್ರಿಕೆಯೊ ಕಪ್ಪುರವಳುಕಿನಲಿ ಬಿದಿ ಕಡೆದು ತಿದ್ದಿದ ಸಾಲಭಂಜಿಕೆಯೋ (ಸಾಳ್ವಭಾ. ೩೨-೪೫). ೩. ನಕಲು ; ಪ್ರತಿರೂಪ; ಪಡಿಯಚ್ಚು : ಇದು ಕೂಡ ಪುಪನ ಮಾತೃಕೆಗೆ ಪುತ್ರಿಕೆಯಂತಿದೆ (ಸಾಹಿಸಂ. ೬೭) ; ನಮ್ಮ ಛಂದಸ್ಸು . . . ಆ ಲಲಿತರಗಳೆಯದೇ ನೆಟ್ಟನೆಯ ಪುತ್ರಿಕೆಯಲ್ಲದೆ ಸರ್ವಥಾ ಆಂಗ್ಲ ಸರಳರಗಳೆಯ ಅನುಕರಣೆಯಲ್ಲ (ಗೊಲ್ಗೊಥಾ. ೩೫ ಮುನ್ನುಡಿ). ೪. (ಸಮಾಸದ ಕೊನೆಯಲ್ಲಿ ಬಂದಾಗ) ಚಿಕ್ಕದು ಎಂಬರ್ಥದ ಶಬ್ದ. [ಸಂ. ಪುತ್ರಿಕಾ]

ಪುತ್ರೀಧರ್ಮ (ನಾ). ಮಗಳು ಪಾಲಿಸಬೇಕಾದ ಧರ್ಮಾಚರಣೆ : ತಂದೆಯನ್ನು ಪ್ರೀತಿಸುವುದು ಪುತ್ರೀಧರ್ಮ (ಕವಿಕ. ೪೦). [ಸಂ.]

ಪುತ್ರೇಷಣ (ನಾ). ಮಗನಾಗಬೇಕೆಂಬ ಹಂಬಲ : ಪುತ್ರೇಷಣ ವಿತ್ತೇಷಣ ದಾರೇಷಣಂಗಳೆಂಬ ಈಷಣತ್ರಯವನುಳಿದು (ಅದವ. ಮು. ೯೦-೦೫೦) : ದಾರೇಷಣ, ಪುತ್ರೇಷಣ, ವಿತ್ತೇಷಣವೆಂಬ ಈಷಣತ್ರಯದಲ್ಲಿ ಆತ್ಮ, ಅಂತರಾತ್ಮ, ಪರಮಾತ್ಮನೆಂಬ ರೂಪತ್ರಯಗಳಿಂದ ವಾಸ ಮಾಡುವನು (ಹಸಾರ. ೨೪-೧೦ ತಾತ್ಪರ್ಯ). 'ಈಷಣತ್ರಯ' ಪರಾ. [ಪುತ್ರ + ಈಷಣ₁]

ಪುತ್ರೇಷ್ಟತೆ (ನಾ). ಪುತ್ರಲಾಭದ ಅಪೇಕ್ಷೆ : ಸಾವಧಾನದಲಿ ದುಃಖಾಶ್ರುವಂ ತೊದೆದು ಪುತ್ರೇಷ್ಟತೆಯ ಭಾವವರಿದುಯಿಂತೆಂದನು (ನವಮೋ. ೦೦-೦೨). [ಸಂ. ಪುತ್ರೇಷ್ಟತಾ]

ಪುತ್ರೋತ್ಸವ (ನಾ). ೧. ಮಗನು ಹುಟ್ಟಿದ ಸಂತೋಷದಿಂದ ಆಚರಿಸುವ ಉತ್ಸವ : ರಂಗರಸರ ಮನೆಯ ಪುತ್ರೋತ್ಸವದಲಿ ಕಲುರೆಱೆಯ ಮಹಾಜನಂಗಳು ಕೂರ್ತು ಅನಂತತೀರ್ಥದೇವರಿಗೆ ಕೊಟ್ಟ . . . ತೋಟ ೧ (ಸೌಇಇ. XX, ೨೦೬-೩; 1250); ಪುತ್ರೋತ್ಸವಂ ಮಾಡಿ ಕೆಲವು ದಿನಮಿರೆ . . . ಧರಿತ್ರೀಶ್ವರನ ರಾಜ್ಯಮಂ

ತೆಗೆದುಕೊಂಡಓತರಾಳ್ದರು (ಕೈಮಿಶಾ. ೨೬-೦೩). ೨. ಮಗನ ಜನನ ; ಗಂಡುಮಗುವಿನ ಜನನ : ಪುತ್ರೋತ್ಸವಂ ಸೂತ್ಸವಂ ಕೆಳೆಯೇ ಸರ್ವರೊಳುತ್ತಮಂ (ಸೋಮೇಶ. ೦೪); ಹರಿದು ಪುತ್ರೋತ್ಸವದ ನುಡಿ ಗಜಪುರದೊಳ್ಬರವಾಯ್ತು ಪಾಂಡುವಿನರಸಿಯಲಿ ಸಂತಾನ ಜನಿಸಿದುದೆಂದು ಜನಜನಿತ (ಕುಮ್ಮಾ.೮-೪೦); ವಂಶಿಗೆ ಪುತ್ರೋತ್ಸವವಾಗಲು ಮೊದಮೊದಲು ಅವನ ಮನಸ್ಸಿನೊಳಗೆ ತುಸು ಈರ್ಷೆಯ ವೇದನೆ ಹುಟ್ಟಿತ್ತು (ಇಪ್ಪಕ. ೪೦೭). [ಸಂ.]

ಪುದಳ್‌ನಾಡು (ನಾ). ಒಂದಂ ಸ್ಥಳದ ಹೆಸರು : ಪುದಳ್‌ನಾಡ ರಾಷ್ಟ್ರೇ ಕೊಳಿನ್ನೂರ್‌ನ್ನಾಮ ಗ್ರಾಮ (ಮೈಲಿಂ. ೧೯೦೬, ೧೨-೩೦ : ೧೫ನೆಯ ಶತ).

[ಪುದಳ್ಗ + ನಾಡು]

ಪುದಾರು (ನಾ). ಒಂದಂ ಬಗೆಯ ಭೂಮಿ : ಕುಮ್ಬಿಸೆಯಾ ಸಾಸಿರ್ವ್ವರ ಮಗತಿನ್ ಕೋಸಿಗರಾ ಜಯಮೆಲ್ಲ ಏಮ್ಮೋನ್ ಗೋಸಾಸಿ ಪುದಾರುಂ ಬೆದೆಮತ್ತಲುಂ ಪದಲ್ಪಾಣಮುಮ್ ಕೊಟ್ಟೋನ್ (ಎಕ. VIII. ಸೊರಬ. ೯೦-೩ ; ಸು. 910). [?]

ಪುದಿ₁. ಹುದಿ₁ (ಕ್ರಿ). ೧. ಒಳಸೇರು ; ಒಳಗೊಂಡಿರು : ಪುದಿದ ತಾವರೆವಳ್ಳಿಯ ತಟ್ಟಿಸಿಂ ಪಸುರ್ಪಾಗೆ ನಿರಂತರಂ ಸೊಗಯಿಸಿರ್ಪುವು ಪೆರ್ಗೆಱೆಗಳ್ ನಿರಂತರಂ (ಪದ್ಮಸಾ. II, ೮೯). ೨. ಅಂಟಿಕೊಳ್ಳು ; ಹತ್ತು : ಮೊಲೆಯುಂಬ ಕುಮಾರನ ಕಣ್ಣ ಕಜ್ಜಳಂ ಪುದಿಯದುರೋಜ ಮೇಕೆ (ಅನಂಪು. ೧೨-೪೯). ೩. ತಾಕು ; ತಗಲು : ದಿಗುವಸನರಡಿಗಳು ನೆಲನಮೊ[ನೊ]ಯ್ಯಗೆ ಪುದಿವುತಿರೆ ಚಂದ್ರಗತಿಯಿಂ ಸಂಗುಣಭೂಷಣ ಕುಕ್ಕುಟಾಸನ ದೇವನೇಳ್ತಂದ (ಸಾಳ್ವಭಾ. ೩-೪). ೪. ಕೂಡಿಕೊಂಡಿರು; ಬೆರೆತುಕೊಂಡಿರು ; ಸೇರಿರು : ಕ್ರಿಯಾಕಾರಕದೊಳ್ ಪುದಿದರ್ಥವ್ಯಕ್ತಿಯ ನೀವುದು ಗದ್ಯಮನೇಕರೂಪಭೇದವಿವಿಕ್ತಂ (ಕವಿರಾ. ೦-೨೫) ; ಮಲೆವ ಪೊಸಗಂಪಿನೊಳ್ ಪುದಿದಲೆವೆಲರಾಱಿಪುದು ಖಚರದಂಪತಿಶತಮಂ (ಆದಿಪು. ೦-೬೮) ; ಪೆರ್ಬುಸಿಯೊಳ್ ಪುದಿದಿರ್ದಧರ್ಮನಂದನನನೆ ಧರ್ಮನಂದನನೆನಲ್ದೊರೆ (ಗದಾಯು. ೩-೩೨) ; ಅನೇಕಾಕ್ಷರದೊಳ್ ಪುದಿಯೆ ಲಘೂಪದೆ ಕೆಲಕೆಲವೊದವಿರ್ಕುಂ . . . ಶಿಥಿಲತೆಯಂ (ಶಮದ. ೪೩). ೫. ಆಗು ; ಒದಗು ; ಉದ್ಭವಿಸು : ಪುದಿದ ಪುಳಕಂಗಳಡ್ಡೈಸದಿರವೆನುತ್ತಂಜಿದಂತೆ . . . ಕಾಂತೆ ಹೃದಯದಿಂದಪ್ಪಿದಳುತ್ಸುಕೆಯಾಗಿ (ಕಾದಂಉ. ೮೬) ; ತುದಿಯೊಳ್ ದೀರ್ಘಾದೇಶಂ ಪೊದಟ್ಟು ಷಷ್ಠೀವಿಭಕ್ತಿ ಗರೆಬರ ಮತದಿಂ ಪುದಿದಿರ್ಕುಂ (ಕಾವ್ಯಾವ. ೦೩೬) ; ಪುದಿದ ರೋಮಾಂಚದದ್ಭುತದ ಸೊಗಸಿನ ಮೋಹನದ . . . ನವರಸವನುಱೆ ಸವಿದು ಸೊಕ್ಕಿ ಮಱೆದರನ್ಯೋನ್ಯಭಾವವನವರ್ಗಳು (ಕೈಮಿಶಾ. ೦೦-೨೩). ೬. ಹೊದಿಸು; ಆಚ್ಛಾದಿಸು : "ಪುದ-ಆಚ್ಛಾದನೇ, ದ್ವಾದಶಾರ್ಶ್ವೇ ಚ" (ಶಮರಾ) ; ಕರಡಿಯ ತೊವಲೊಳ್ ಪುದಿದ ಕರ್ಬೊನ್ನ ರಥಮುಂ (ಪಂಪಭಾ. ೦೨-೭ ವ) ; ಲಲಿತಚಂಪಕದಳಕೆ ಬೆಳುದಿಂಗಳ ತಗಡ ಪುದಿದಂತೆ (ಪೇವಂತ. ೮-೩). ೭. ವ್ಯಾಪಿಸು ; ಆವರಿಸು : ನಿಜಕೀರ್ತಿ ಲೋಕಮಂ ಪುದಿದಿರೆ ಪೊಕ್ಕನಂದು ನಿಜಮಂದಿರಮಂ ಪರಸೈನ್ಯಭೈರವಂ (ಪಂಪಭಾ. ೩-೦೦೩) ; ಗದೆ ಗದೆಯಂ ಘಟ್ಟಿಸೆ ಪುಟ್ಟಿದ ಕೆಂಡದ ಕಿಡಿಯ ಕುಂಡವೆಂಟುಂದೆಸೆಯಂ ಪುದಿಯೆ (ಗದಾಯು. ೮-೦೩) ; ಉತ್ಕಟಕೋಪಹೂಂಕೃತಂ ವನಜಭವಾಂಡಮಂ ಪುದಿಯೆ (ಜಗವಿ. ೦೩-೩). ೮. ಆವೃತವಾಗು ; ವ್ಯಾಪ್ತವಾಗು : ನಟ್ಟ ಕೂರ್ಗಣೆಯ ಬಿಣ್ಪೊಱೆಯಿಂದೆ ಬಟಲ್ದನುರ್ವಿ ಪೆರ್ವಿದಿರ ಸಿಡಿಂಬಿನೊಳ್ ಪುದಿದದೊಂದು ಕುಳಾಚಳದಂತೆ ಸಿಂಧುಜಂ (ಪಂಪಭಾ. ೦೦-೪೩); ಸ್ಮರರಿಪುಲಲಾಟನೇತ್ರಸ್ಫುರದುರುಹುತವಹನಿನೆಯ್ದೆ ಬೇವುತ್ತಿರ್ದಾ ಸ್ಮರನ ಪೊಗೆಯಿಂದೆ ಪುದಿದಿರ್ದ ರತಿಯವೊಲ್ಕಾಂತೆ . . . ಎಸೆದಿರ್ದಳ್ (ಕಾದಂಪು. ೪೩) ; ಕಾಮಿನಿ ತನ್ನ ತುಂಗಕುಚತಟದ ಕಸ್ತೂರಿಯೊಳ್ ಪುದಿದ ಪ್ರಿಯನಂಗಮಂ ಕಂಡಿದೇತಕೆ ಕೃಷ್ಣರೂಪಾದೆ ನೀನೆಂದು ಬೆಸಗೊಳಲ್ಕೆ (ಕೈಮಿಶಾ. ೨೬-೨೦). ೯. ಹುದುಗಿಸು ; ಮುಚ್ಚು : ತನ್ನ ಪಱಿದು ಬಿಸುಟ ಸಹಸ್ರಕುಂತಳಂಗಳಂ ತನ್ನ ತಳದೊಳ್ ತೆಮಳ್ಚಿ ಕೊಂಡು ತುಂಬಿಯ ಬಂಬಲ್ಗಳಂ ಕೆಂದಾವರೆಯರಲ್ಗಳೊಳ್ ಪುದಿದುಯ್ವಂತುಯ್ಪು (ಆದಿಪು. ೨-೩೯ ವ) ; ಇಂದ್ರಿಯಕ್ಷರಣೆಯಾದೊಡದನೊಂದು ಕದಳೀಪತ್ರದೊಳ್ ಪುದಿದು . . . ಓಪಳಲ್ಲಿಗಟ್ಟಿದೊವೆ (ಪಂಪಭಾ. ೧-೬೮ ವ). ೧೦. ಅವಿತುಕೊಳ್ಳು ; ಅಡಗು ; ಬಚ್ಚಿಟ್ಟುಕೊಳ್ಳು : ರಸಾತಳಂಬರಂ ಬೆವಕಿಯುಮೆಂತುಮಪ್ಪಳಿಸಿ ಕೊಂದಪೆನೇಟ್ಟು[ಪಾಠಾಂ. ಟ್ವು] ದಿದೇಂ ಸುಯೋಧನಾ (ಪಂಪಭಾ. ೧೩-೮೦) ; ಕರುವಿಟ್ಟರೆ ತಾ ಬಿಟವಲ್ಲ ತನ್ನೊಳ್ಪುದಿದಿರೆ ಅದು ನಿಜವಲ್ಲ ಪುನರಪಿಯೊಳಿಂತಿರೆ ಅದು ಸಹಜವಲ್ಲ (ಸರ್ವವ. ೭೯-೪೩೯); ಚಂದ್ರವದನೆಯರಂತರಂಗದೊಳ್ ಪುದಿದ ಕೆಚ್ಚಂ ದ್ರವಿಸುವಂತೆ ರಂಜಿಸಿ ರಮಿಸುತಿಹ ಪುರುಷರಾ ಪುರದೊಳೆಸೆದಿರ್ದರು (ಕೈಮಿಶಾ. ೨೬ ೦೭). ೧೧. ಹೊಂದು ; ತಾಳು ; ಪಡೆ : ಮದಿರಾರಸದಿಂದಂ ಬಾರ್ಚಿದರೋ ಪೇಟೆಸಿಸಿ ಪೊಳೆವ ತಲೆದುಡಿಗೆಯಾ ರನ್ನದಿನೊಸರ್ವ ರಾಗರುಚಿಯುಂ ಪುದಿದೆಸೆದುದು ಕೇಶಪಾಶಮಾ ಕಾಮಿನಿಯಾ (ಕಾದಂಉ. ೨೦). ೧೨. ತುಂಬು; ಇಡುಗು : ನೆಱೆದಟ್ಟಿ ಭಕ್ತಿ ದಯೆ ಪುದಿದಱಿವೌದಾರ್ಯಂ ಕ್ಷಮಾಗುಣಂ ಶಕ್ತಿಯುಮೆಂಬಱಿಕೆಯ ಗುಣ ದೋಟಱೊಳಂ ನೆಱೆದಿತ್ತರ್ ಮುನಿಯುಗಕ್ಕೆ ದಾನಮನವರ್ಗಳ್ (ಆದಿಪು. ೪-೯೭); ಪುದಿದಟ್ಟಿಯಿಂದೆ ಪೊಡೆಮಡುವುದು ದಯೆಗೆಯ್ ಮಹಾಪ್ರಸಾದಮೆಂಬುದು (ಸುಕುಮಾ. ೧೦-೩); ಮದನಯಶಃಪಟಹಧ್ವನಿ ಪುದಿಯೆ ವಿಯಚ್ಚರನ ಕರ್ಣಮುಂ ಹೃದಯಕ್ಕೆಯ್ದಿದುದಿಲ್ಲ ದಿವ್ಯವಚನಂ (ಪಂಠಾಮಾ. ೯-೯೪); ಅಂಗಲತೆಯೊಳ್ ಪುದಿದ ಸಕಲಪರಿಮಳಕೆಱಗುವಳಿಮಾಲೆ ಮೇಲೆ ಮಂಡಳಿಸಿ ನಿಲೆ (ಪಂಪು. ೭-೪). ೧೩. ಹೆಚ್ಚಾಗು; ಅಧಿಕವಾಗು; ಅತಿಶಯವಾಗು: ಆ ಕಂಪುಂ ಮನಸ್ತಾಪಮುಂ ಪುದಿದೆತ್ತಂ ಬರೆ ಸುಯ್ ಪೊದಟ್ಟು ಬಿಸಿದುಂ ಕಮ್ಮಿತ್ತುಮಾಯ್ತೋಪಳಾ (ಕಾವ್ಯಸಾ. ೩೮೦ ಕೂದ್ರಳ); ಪುದಿದವ್ವಳಿಪೆನ್ನ ಕಾಯ್ಪು ಪೋಪಿನಮಿರದೀಗಳೀಂಟುವೆನೊ ದಾಂಟುವೆನೋ ಲವಣಾಂಬುರಾಶಿಯಂ (ಆದಿಪು. ೧೨-೭೦); ಪುದಿದ ಸುತಮೋಹದಿಂದೆ . . . ಅಱಿಯದೆ ದುಷ್ಟಕಷ್ಟರೊಡನಾಡಿಸಿದೆಂ (ಧರ್ಮಾಮೃ. ೨-೮೦). ೧೪. ತುಂಬಿಸು ; ತುಂಬಿಕೊಳ್ಳುವಂತೆ ಮಾಡು : ಅಖಂಡಲಸುತನೆಯ್ದಿ ನಭೋಮಂಡಲಮಂ ಪುದಿದನೆಯ್ದೆ ಶರಪಂಜರದಿಂ (ಜಗವಿ. ೦೩-೩); ಸುಕಂಠೆ ಪಾಡಿ ಪುದಿದಳ್ ಮುದಮಂ ನರನಾಥಚಿತ್ತದೊಳ್ (ಕುಸುಮಾ. ೧-೩೭). ೧೫. ಹೊದೆ ; ತೊಡು : ಅಸ್ಥಿ ಚರ್ಮವ ಪುದಿದ ಮಱೆಯ ಹರಿಗೆಯೊಳು ಅಸುಭಟನೆಂಬ ಬಂಟ (ಸುಂಕಶಾಂ. ಕ. ೬೬೬-೬೭). ೧೬. ಒದಗಿಸು ; ಪೂರೈಸು : ಕಿನ್ನರ ಪನ್ನಗ ಖೇಚರಾಮರಪ್ರಮದೆಯರೀಕ್ಷಣಾಳಿನಿಕರಕ್ಕೆ [ನವೀನಸುಮ]ಪ್ರತಾನದಿಂ ಪ್ರಮದಮನಾವಗಂ ಪುದಿವ ಪಾವನವೃಕ್ಷಸಮಾವೃತೋಲ್ಲಸತ್ಪ್ರಮದವನಂಗಳೋಳಿ ಪೊಳೆದೊಪ್ಪುವುದಲ್ಲಿಯ ಚೈತ್ಯಧಾತ್ರಿಯೊಳ್ (ಶಾಂತೀಶ್ವ. ೦೬-೩೭). ೧೭. ಮೂಡು ; ಕೆತ್ತನೆಯಾಗು : ಸಿರಿಗಾವುಣ್ಣನ ಎಟ್ಟು ಪುಡಿ[ದಿ ?]ದುದು (ಇಲ. XII. ೨೦೯-೨೩ ; 814). ಹುದಿ₁ : ೧. ಸುಬುದ್ಧಿಯ ರಸವು ಹಾಱಿತು ಹುದಿದ ರಾಗದ್ವೇಷವಹ್ನಿಯಲಿ (ಕುವ್ಯಾಸ. ೧೩-೪೪) ೮. ಕೆದಱುಗೇಶದ ಕಾಂತೆ ಹುದಿದಳು ಹರುಷಪುಳಕದಲಿ (ಕುವ್ಯಾಸ. ೦೩-೩೨). ೧೦. ಹಿಮಗಿರಿಯ ಕುಕ್ಷಿಯಲಿ ಹು[ಪಾಠಾಂ. ಪು]ದಿದ ನಾನಾದ್ರೋಣಿಗಳ ಮಧ್ಯದ ಕಿರಾತಪುಳಿಂದನಿಚಯವ ಸದೆದು ಹತ್ತಿದನಗ್ರಶಿಖರಕೆ ಪಾರ್ವತೀಪಿತನ (ಕುವ್ಯಾಸ. ೩-೨೯) ; ಈ ವರದಕರಮೆ ಮುನಿಹೃದಯಾವರಣದೆ ಹುದಿದು ನಿಂದು . . . ನಲಿಯಿಕುಮೆಮ್ಮಂ (ವಸ್ತವಂ. ೮). ೧೩. ಹುದಿದ ಮಱುಭೂಮಿಯಲಿ ಮಾನ್ಯನು ಖದಿರನಲ್ಲಿಗೆ ಗೂಗೆ ಕೋಗಿಲೆ (ಕುವ್ಯಾಸ.

೦೦-೩೯). ೧೪. ಕೇಳಿ, ಎದೆಯಲಿ ಹದಿಯರಿ—ಹೊಸ ಆಳ ಬಾಳಲಿ ಹುದಿಯಿರಿ (ಹೊಂಗಳು. ೨-೦೨). ೧೫. ರಾಯನ ಹುದಿದ ಕವಚವ ಭೇದಿಸಿದವೊಳಬಿದ್ದಪಂಬುಗಳು (ಕುಮಾಕ. ೦೦-೫೪). ೧೮. ಕೆಚ್ಚು; ಮೆಟ್ಟು; ಕೂರಿಸು: ಈ ಉಂಗುರಕ್ಕೆ ಅನೇಕ ವಜ್ರಗಳನ್ನು ಹುದಿದಿದ್ದಾರೆ (ಕೂಡಿ). 'ಪುದುಗು₁', 'ಪೊದೆ₁' ಪರಾ.

[ದೇ. ॥ ತಮಿ. ಪುತೈ; ಮಲ. ಪುದಯು]

ಪುದಿ₂, ಹುದಿ₂, ಹೊದಿ₂ (ನಾ). ೧. ಬಾಗಿಲಿನ ಪಕ್ಕ; ದ್ವಾರಪಾರ್ಶ್ವ: "ಪುದಿ-ಆಚ್ಛಾದನೇ, ದ್ವಾರಪಾರ್ಶ್ವೇಚ" (ಕಮರಾ); ಮದಿಲೊಳು ಮಣಿವಾಡದೊಳು ಪೊಂಬಾಗಿಲ ಪು[ಶಾಶಾಂ. ತು]ದಿಯೊಳು ಪಟ್ಟಶಾಲೆಯೊಳು ಮದನನ ಪೆಂಡ ವಾಸವೆನಲಾ ಪುರಸುದತಿಯರವನ ನೋಡಿದರು (ಶ್ರೀಪಾಲ. ೦೩-೩೯); ಮರಳಿ ಗೂಡಂ ಸಾರ್ದು ತಿರುಗಿ ಪುದಿಯಲ್ಲಿ ನಿಂದು ಮತ್ತೆ ನೋಡುವುದೊಮ್ಮೆ (ಪಂಪು. ೪೬-೬); ಆತಪತ್ರವನ್ನು ದೇಹಳಿಯ ಹೊರಗೆ ಕೊಡಕೊಡಹಿ, ಪುದಿಗೆ ಒರಗಿಸಿ ನಿಲಿಸಿ (ಮಂತ್ರಶ. ೩೦-೫). **ಹುದಿ₂:** ೧. ಸುಗ್ಗವ್ವೆ ಮಗನ ಬರವಂ ಪಾರ್ದು ಹೊಱಗೆ ಬಾಗಿಲ ಹುದಿಯನು ಹತ್ತಿ ನಿಂದಿರ್ದು . . . ಮಱುಗುತ್ತಮಿರಲು (ಸಿದ್ಧರಾ. ೨-೪೩); ಬಾಗಿಲ ಹುಡಿ[ದಿ]ಯಲ್ಲಿ ಭಂಗಿ ವಡೆದಂಗನೆ ನಿಂದು . . . ಒಪ್ಪಿದಳ್ (ಶಾಂತೀಶ್ವ. ೦೦-೬೯). ೨. ನೆಲೆ; ಆಶ್ರಯಂ; ಬೀಡು: ಹುರುಡಿನ ಹುತ್ತು ಹುಸಿಯ ಹುದಿ ಗದುಕಿ [ಶಾಶಾಂ. ಗಿ]ನ ಗರುಡಿ ಗನ್ನದ ಗಡಿ . . . ಎನೆ ಕಣ್ಗಲ್ಲಿ ಕರಮೆಸೆದುದು ಸೂಳೆಗೇರಿ (ಕುರಾಸಾಂ. ೯-೧೦೨). ೩. (ಮಣ್ಣಿನ) ದಂಡೆ; ಕಟ್ಟೆ; ದಿಂಡು: ಮೆಣಸಿನ ಗಿಡಕ್ಕೆ ಹುದಿ ಏರಿಸುವುದಕ್ಕೆ ಹೋದವಳು . . . ಅಗಸೇ ಬಾಗಲಾಗೆ ಹಾದು ಬರಬೇಕೋ? (ಬೆಳುಮ. ೨೫). **ಹೊದಿ₂:** ೪. ಪಕ್ಕ; ಪಾರ್ಶ್ವ: ಭೋಗದೇವರಿಗೆ ಆ ತಿರುವಿಡಯಾಡದೆ ಮೂಡಣ ಹೊದಿಯಲು ಗದ್ದೆ ಕಂ ೯೦೦ . . . ಸಲುಉದು (ಎಕ. XIV. ಎಳಂದೂ. ೧೭೦-೬; ಸು. 1376). [< ಪುದಿ₁/ತಮಿ. ಪುದವು, ಪುದ = ಬಾಗಿಲು]

ಪುದಿನ 'ಪುದೀನ' ನೋ.

ಪುದಿಯಣ್ಣ (ನಾ). ಒಬ್ಬಾತನ ಹೆಸರು: ಮಾಚರಸರ ಮಗಂ ಪುದಿಯಣ್ಣ ಗಂಗೇಶ್ವರಕ್ಕೆ ಬಿಟ್ಟ ದೇವಭೋಗದ ಗಟ್ಟಿ ಮೂಗಣ್ಡುಗಂ (ಎಕ. X. ಶ್ರೀನಿವಾ. ೧೭-೦೬; ಸು. 1015). [ಪುದಿ₀ + ಅಣ್ಣ₁]

ಪುದಿವಟು 'ಪುದಿವಟ್ಟು' ನೋ.

ಪುದಿವಟ್ಟು, ಪುದಿವಟು, ಪುದಿವೆಟು, ಪುದಿವೊಟ್ಟು, ಪುದುವಟ್ಟು (ನಾ). ದೇವಾಲಯ, ಕೆರೆ, ಕಟ್ಟೆ ಮೊದಲಾದುವುಗಳ ಜೀರ್ಣೋದ್ಧಾರ ಇತ್ಯಾದಿ ಸಾರ್ವಜನಿಕಕಾರ್ಯಗಳಿಗಾಗಿ, ಉದಾರಿಗಳಿಂದ ದತ್ತಿಯಾಗಿ ಬಂದ (ಬಡ್ಡಿಯ ಉತ್ಪನ್ನವನ್ನು ಉಪಯೋಗಿಸಿ ಕೊಳ್ಳಬಹುದಾದ) ಕೂಡಿಟ್ಟ ನಿಧಿ, –ಸಂಪತ್ತು, –ಠೇವಣಾತಿ: ನಂಜಪ್ಪಯ್ಯನ ಪುತ್ರನಾದ ಕಪ್ಪಯ್ಯನು ಬರಕೊಟ್ಟ ಪುದಿವಟ್ಟಿನ ಬಿನ್ನವತ್ತಳೆ (ಎಕ. V. ಬೇಲೂರು. ೨೯-೯; 1717); ನಂಜುಂಡೇಶ್ವರನಿಗೆ ಮುತ್ಯಾಲಸೆಟ್ಟಿಯ ಹೆಸರಿನಲ್ಲಿ ಒಂದು ಸೇವೆ ನಡೆಯುವಂತೆ . . . ಮುನ್ನೂರುವರಹಗಳನ್ನು ಅದಕ್ಕೆ ಪುದಿವಟ್ಟಾಗಿಡುತ್ತೇನೆ (ಶೀತಿಪಂ. XI. ೧೬). **ಪುದಿವಟು:** ಮುದ್ದ ರಾಜುಅಯ್ಯನವರು ಕೊಟ್ಟ ಪುದಿವಟು ಕಂ ಗ ೩೦ ಮುವ್ವತ್ತುವರಹಾ (ಎಕ. IV. ಎಳಂದೂ. ೦೭-೦೯; 1667). **ಪುದಿವೆಟು:** ವಿಠಲದೇವರ ಅಮ್ರುತಪಡಿ ಪುದಿವೆಟು ನೈವೇದ್ಯಕೆ (ಸೌಇಇ. IX-II. ೬೫೩-೧; 1554). **ಪುದಿವೊಟ್ಟು:** ಲಕ್ಷ್ಮೀನರಸಿಂಹಸ್ವಾಮಿಯವರ ಶ್ರೀಭಂಡಾರಕೆ ಧಾರಾದತ್ತವಾಗಿ ಸಮರ್ಪಣೆ ಮಾಡಿದ ಪುದಿವೊಟ್ಟಿನ ದ್ರವ್ಯದಲಿ ದೇವಸ್ಥಾನಕೆ ಕ್ರಯಲಬ್ಧವಾಗಿ ತೆಗೆದು ಕೊಂಡ ವೃತ್ತಿಗಳ ವಿವರಕೆ ಬರಸಿದ ಶಾಸನ (ಎಕ. XII. ತುಮಕೂ. ೪೬-೮೯; 1719). **ಪುದುವಟ್ಟು:** ಪುಟ್ಟದೇವರಾಜೈಅರಸಿನವರು ೧೦೦ ವರಹ ಹಾಕಿರುವ ಪುದುವಟ್ಟಿನ ಸೇವೆಗೆ ಭದ್ರಂ ಭೂಯಾದ್ (ಎಕ. II. ೨೨೩-೨೯; 1827); ಸಾವಿರರೂಪಾಯಿ ಪುದುವಟ್ಟು ನಮ್ಮಪ್ಪನ ಹೆಸರಿನಲ್ಲಿ ಮಂಜುನಾಥನಿಗೆ ಕೊಟ್ಟುಬಿಡೋದು (ಒಡೆಮು. ೯೨); ಒಂದು ದೇವಸ್ಥಾನವನ್ನೂ ಒಂದು ಸತ್ರವನ್ನೂ ಕಟ್ಟಿಸಿ ಅವಕ್ಕೂ ತಕ್ಕಷ್ಟು ವರಮಾನ ದೊರೆಯುವಂತೆ ಪುದುವಟ್ಟು ಹಾಕಿ ಸಮಿತಿಗಳನ್ನೇರ್ಪಡಿಸಿದನು (ಗುಣಪಾ. ೮೩). 'ಪುಲಿವೆಟ್ಟು' ಪರಾ. [ಪುದಿ₁ + ಪಟ್ಟು₄]

ಪುದಿವು (ನಾ). ೧. ಹೊಂದಿಕೆ; ಕೂಡಿಕೆ; ಸೇರುವಿಕೆ: ಕವಚನವರತ್ನದೀಧಿತಿನಿವಹಾರುಣಧವಳಕಿರಣಮಪರಾಜಿತನುತ್ತವಳನಿಸೆ ದೂರ ಪಾತೇಷುವೇಧದೊಳ್ ಪುಣ್ಣ ಸರಲ ಪುದಿವಂ ಪೋಲ್ಗುಂ (ಶಾಂತಿಪು. ೩-೦೦೦). ೨. ಗುಂಪು; ಸಮೂಹ: ಮಾಕಂದನಂದನದ ಬಳಸಿನೊಳಮಶೋಕವನದ ಪುದಿವಿನೊಳಂ ನಾಗಚಂಪಕವನದ ಸುತ್ತಿನೊಳಮತಿರಮಣೀಯಮಾಗಿ (ಪಂರಾಮಾ. ೯-೧೨೮ ಪ); ಸಂಜನಿತಮುದರಲ್ಲಿ ಸುತ್ತಿದ ಘನಸಾರದ ಪುದಿವನಡರ್ದ ಲತೆಗಳ ಮನೆಯೊಳ್ ಪೊಕ್ಕಿರೆ (ಪೇಮಿಪು. ೫-೩೧); ಪಂದಳಿರ ತೋರಣಂ ತಳ್ತೊಂದಿದ ಕೆಂಗುಡಿಯ ಪುದಿವು ಮುತ್ತಿನ ಕಡೆ ಚೆಲ್ವಿಂದೆಸೆವ ಮಂಗಳಾನಕದೊಂದು ರವಂ ಬಗೆಗೆವಂದು ದಂದರಮನೆಯೊಳ್ (ಕಾವ್ಯಾವ. ೨೩೯). ೩. ಮುಚ್ಚುವಿಕೆ; ಹೊದಿಸುವಿಕೆ; ಆಚ್ಛಾದನೆ: ಉದಿರ್ದ ಘನಸಾರನಿಚಯದ ಪುದಿವುಮನಲ್ಲೊಕ್ಕ ಮಲ್ಲಿಕಾಕುಟ್ಮಳದೊಂದೊದವುಮನುದಾತ್ತಮೃಗಮದದುದಿತ ಸುಸೌರಭದ ಭಾರಮಂ ತಳೆದುದುಮಂ ಕಂಡು (ಪೇಮಿಪು. ೪-೨೯). ೪. ಸುತ್ತಿಕೊಳ್ಳುವಿಕೆ; ಹೆಣೆದುಕೊಳ್ಳುವಿಕೆ: ಚದುರ ನಲ್ಲರ ಬಂಧ ಘಣಿಗಳ ಪುದಿವು (ಶಾಕ್ಯಭಾ. ೨೨-೭೦). [ಪುದಿ₁ + –ವು]

ಪುದಿವೆಟು 'ಪುದಿವಟ್ಟು' ನೋ.

ಪುದಿವೊಟ್ಟು 'ಪುದಿವಟ್ಟು' ನೋ.

ಪುದೀನ, ಪುದಿನ (ನಾ). ಔಷಧಿ, ಅಡುಗೆ ಮುಂತಾದುವಕ್ಕೆ ಬಳಸುವ, ವಾಸನೆಯುಳ್ಳ ಒಂದು ಬಗೆಯ ಸಸ್ಯ: ಪುದೀನ, ಚಟ್ಣಿಸೊಪ್ಪು (ಮೈಪಿಗಿ. ೫೩-೦೦೭೦). **ಪುದಿನ:** (ಕಿ).

[← ಪಾರ. ಪೂದಿನ; ಹಿಂ. ಪುದೀನಾ, ಪೂದನಾ, ಪೋದೀನಾ; ಮರಾ. ಪುದಿನಾ, ಪುದಾನಾ, ಪುದಾಣಾ]

ಪುದು 'ಪುದುವು' ನೋ.

Δ **ಪುದುಂಗಿಸು** 'ಪುದುಗಿಸಂ' ನೋ.

Δ **ಪುದುಂಗು** 'ಪುದುಗು₁' ನೋ.

ಪುದುಂಗುಳಿಸು 'ಪುದುಂಗೊಳಿಸು' ನೋ.

ಪುದುಂಗೊಳ್, ಪುದುಗೊಳ್ (ಕ್ರಿ). ಹೊಂದಿಕೊಳ್ಳು; ಕೂಡಿಕೊಳ್ಳು; ಬೆರೆತುಕೊಳ್ಳು: ಪಟಗನ್ನಡಂ ಪುದುಂಗೊಳೆ ಕೊಟ್ಟ ಸಕ್ಕದಮಂ ತಗುಳ್ಚಿ ಜಾಣ್ಕೆಡೆ ಮುತ್ತಂ ಮೆಟಸಂ ಕೋದಂತಿರೆ ಪೇಟ್ವಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ (ಕಾವ್ಯಾವ. ೫೫); ಯಮುನಾಪ್ಲವಮಂ ಗಂಗೆಯ ವಿಮಲಪ್ಲವಮೊಂದಿದಂತೆ ಸಭೆಯಂ ಪುದಿದಂಗ ಮರೀಚಿಯನುಜ್ಜ್ವಲದಂತಮರೀಚಿ ಪುದುಂಗೊಳಲ್ಕೆ ಕೃಷ್ಣಂ ನುಡಿದಂ (ಜಗವಿ. ೦೫-೫೭); ಬಗೆಯೆಂತಂತು ಪಾಡು ಪಾಡೆಂತಂತು ಹಾವಂ ಹಾವ ಮೆಂತಂತು ಭಾವಂ ಪುದುಂಗೊಳೆ . . . ಆಡುವ ನಟ್ಟವಿಗರ ಕೂಟದಿಂ (ರಾಮಾಶ್ವ. ೨೩-೦೬). **ಪುದುಗೊಳ್:** ಕೊಲಿಸುವ ಕೊಲ್ವ ಶಾಠ್ಯಪರವಾಗಿಸುವಾಗುವ ಕಳ್ವ ಕಳ್ವರೊಳ್ ಸಲೆ ಪುದುಗೊಳ್ವ ಪಾದರಮನಾಡಿಸುವಾಡುವ ಕಾಂಕ್ಷೆಯೊಳ್ ಮನಂ ಸಲಿಸುವ ಸ್ವಲ್ಪಪಾಪಪರನುಂ ಶಠನುಂ ಖಳನುಂ ಕೃತಘ್ನನುಂ ಕಲುಷಿಯುಮಟ್ಟುಮುಗ್ರನರಕಾಬ್ಧಿಗಭೀರಮನೆಯ್ದುವನ್ನೆಗಂ (ಸುಕುಮಾ. ೫-೪೯). [ಪುದು (< ಪುದುವು) + ಕೊಳ್₁]

ಪುದುಂಗೊಳಿಸು, ಪುದುಂಗುಳಿಸು, ಪುದುಗೊಳಿಸು (ಕ್ರಿ). ೧. ಕೂಡಿಸು; ಸೇರಿಸು; ಹೊಂದಿಸು: ಪಂಚರತ್ನಂಗಳುಮಂ ಪುದುಂ

ಗೊಳಿಸಿ ಪೊಂಗಳಸಂಗಳೊಳರ್ದ ಪುಣ್ಯತೋಯಂಗಳೊಳ್ಮುಱುಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ (ಪಂಪಭಾ. ೧೦-೨೫); ಅಜಸಂ ಪಾಳಿಯುಮಂ ಪುದುಂಗೊಳಿಸಿಕೊಂಡೀ ಭೂಮಿಯುಂ ಭೂಮಿಪರ್ ನೆಱೆಯಾಳ್ಗೆಂದುಮಿಳಾತಳಂ ಬೆಳೆಯುತಿರ್ಕೆ (ಪಂದೋಂಬಿ. ೬-೨೬೮). ೨. ಬೆರೆತುಹೋಗು; ಕೂಡಿಕೊಳ್ಳು; ಒಂದಾಗು: ಮಲಯ ಸಮೀರಣೇರಣಚಲತ್ತರುಶಾಖೆಗಳೊರ್ಮೆಗೊರ್ಮೆ ನೀರೊಳಗೆ ಬಱಲ್ದು ಹೇಮಸರಸೀಜರಜಾರುಣವಾರಿಯುಂ ಪುದುಂಗೊಳಿಸಿ . . . ತಣ್ಪು ವೆಸಕೆಯ್ವುವು ತೀರವನಾಂತರಾಳದೊಳ್ (ಆದಿಪು. ೦೦-೬೪); ಕನ್ನಡಿಯ ಕಲಶದ ಬಣ್ಣಪುರದಾರತಿಗಳೆಡೆಗೆಡೆಗಿಡಿಸಿದ ಪಂಚರತ್ನದ ಕದಿರ ಪೊದಱೊಳ್ ಪುದುಂಗೊಳಿಸಿ ನೆಗೆವ ಜಾಗದ ಪಡಲಿಗೆಗಳ ಆಗೆಯ ತುಱುಗಲಿಂ (ಆಸಂಪು. ೬-೪೦ ಪ). ೩. ಒತ್ತಾಗು; ದಟ್ಟವಾಗು: ಅಳವಿಗಱಯೆ ಬಳೆದು ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳ್ ಕಡಿವ ಪೋಡುಂಗಾಱನಂತೆ (ಪಂಪಭಾ. ೦೭-೧೬೬ ಪ); ಬಳಿಯಲರ್ಗಣ್ಗಳ್ ಬೆಳ್ಪಂ ಲಲನಾಜನದಧರ ಮಣಿಗೆ ಕೊಟ್ಟದಱ ಪುದುಂಗೊಳಿಸಿದ ಕೆಂಪಂ ನೀರ್ಪೋಕುಳಿಯೊಳ್ ಮಾಱುಮಾಡಿ ಕೊಂಡ ತೆಱದಿಂ ತೋರ್ಕುಂ (ಶಾಸ್ತ್ರಪ. ೬೦೬). ೪. ಮುಸುಕು; ಮುಚ್ಚು; ಆವರಿಸು: ವಜ್ರದಂತನ ವಜ್ರದಂತೆ ಪೊಳೆವ ದಂತ ಪಂಕ್ತಿಗಳ ಕಾಂತಿಯಾ ಕಾಂತೆಯಂ ಪುದಿದು ಪುದುಂಗೊಳಿಸೆ ವಜ್ರದಂತನೆಂಬ ವೆಸರಂ ನನ್ನ ಮಾಡಿ (ಆದಿಪು. ೩-೪೯ ಪ). ೫. ತುಂಬು: ಬಱಲ್ಮುಡಿಯಂ ಸಡಿಲಿಸಿ ವನಮಂ ತನಿಗಂಪಿನಿಂ ಪುದುಂಗೊಳಿಸುತುಂ (ಶಾಂತೀಶ್ವ. ೦೫-೦೦೧ ಪ). ೬. ಆಶ್ರಯ ಕೊಡು: ನಾಗಪಾಶಮನಶ್ರಮದೊಳ್ ಪಱದು ಬಲದ ಕೆಯ್ಯೊಳ್ ನಿಜಪ್ರಾಣವಲ್ಲಭೆಯರಂ ಪುದುಂಗೊಳಿಸಿ (ಶಾಂತಿಪು. ೬-೩೦ ಪ); ಉಲಿವ ತಳಿರೆಲೆಯ ದನಿಗೆ ಬೆರ್ಚುವ ಶಿಶುವನಾತ್ಮಪಕ್ಷಪುಟದೊಳ್ ಪುದುಂಗೊಳಿಸಿಯುಂ (ಪಂಪಪು. ೩-೦೦೫). ೭. ಉಂಟುಮಾಡು; ಹುಟ್ಟಿಸು: ಮರುಳ್ಗಳಾಟಮಂ ಪಳಪಳನೆಮೆಯಿಕ್ಕದೆ ನೋಡಿ ಮುಗುಳ್ನಗೆ ನಗುಪ ವೀರಭಟರ ಪಂದಲೆಗಳುಂ . . . ರೌದ್ರರಸಂಗಳಂ ಪುದುಂಗೊಳಿಸೆ (ಪಂಪಭಾ. ೧-೧೦೬ ಪ); ರೂಪು ನೋಟಕರ ಕಣ್ಗಮೃತಾಂಜನಪುಂಜಮಂ ಪುದುಂಗೊಳಿಸೆ ನೃಪೇಂದ್ರನೋಲಗದೊಳಿರ್ದುದು ವಾರವಿಲಾಸಿನೀಜನಂ (ಆಸಂಪು. ೨-೨೦). ೮. ಪಡೆ; ಹೊಂದು; ತಾಳು: ತೊಂಬತ್ತೊಂಬೈ ಸಾಸಿರ ಯೋಜನಮಂ ನೆಗೆದೀ ಸುರಗಿರಿ ಪೆಂಪನೇಂ ಪುದುಂಗೊಳಿಸಿದುದೊ (ಆದಿಪು. ೭-೬೪); ಆರೋಗ್ಯಂ ಮಾಟ್ಟಮೃತಾಹಾರಮನಂಬಿಕೆಗೆ ಬೋನಮೆತ್ತುವ ದಿವಿಜಸ್ತ್ರೀರುಚಿರಭೋಜನಾಂಗಲತಾರಮಣೀಯತೆಯನೇಂ ಪುದುಂಗೊಳಿಸಿದಳೋ (ಶಾಂತಿಪು. ೯-೦೬೯); ನಾಂದಮರೆ ಪತ್ತಿದಂಬರದಿಂದೆಸೆ ವರಸಿಯ ನಿತಂಬಬಿಂಬಮನಬಳಾವೃಂದಮಂದಿಕ್ಷಿಸಿ ಹೃದಯದೊಳಂದೇಂ ಪುಂಭಾವಮಂ ಪುದುಂಗೊಳಿಸಿದುದೋ (ಸಂಪ್ರಪು. ೭ -೧೩೦). **ಪುದುಂಗುಳಿಸು:** ೮. ತನು ರುಜೆಯಂ ಪುದುಂಗುಳಿಸೆ ಸಂಸೃತಿಭೋಗಮಸಾರಮೆನ್ದು ನಿಚ್ಚಿನಿಸಿ (ಪಶ. VII. ೩ಕಾಂ. ೩೦೯-೩೨; 918). **ಪುದುಗೊಳಿಸು:** ೧. ಕರಸ್ಥಳದಲ್ಲಿಪ್ಪ ಇಷ್ಟಲಿಂಗಲಕ್ಷಣವೆಂಬ ಕುಮಾರಮೂರ್ತಿಯಲ್ಲಿ ಪುದುಗೊಳಿಸಿ ಆ ಚಿತ್ಕಲಾ ಲಿಂಗವನ್ನು ಕೊಟ್ಟು ಸಂಬಂಧವ ಮಾಡಿತ್ತು (ಪಶಕಾ. II. ೩೬); ಪುದುಂಗೊಳಿಸಿದಂ, ಪುದುಗೊಳಿಸಿದಂ (ಶಬಾವ. ೦೬೬ ಪ್ರಯೋ).

[ಪುದುಂಗೊಳ್ + — ಇಸು₃]

ಪುದುಕುಱಿ (ಕ್ರಿ). ಕೂಡಿ ಯೋಚಿಸು; ಜೊತೆಯಾಗಿ ವಿಚಾರ ಮಾಡು: ನಾಮಿರ್ವರ್ ಪುದುವಾಱಿಮ್ ನಾಮಿರ್ವರ್ ಪುದುಕುಱಿಯೆಮ್ (ಅಂತಗೊ. ೦೬-೩೬೪). [ಪುದು (< ಪುದುವು) + ಕುಱಿ₁]

ಪುದುಗಳ್ಳ (ನಾ). ಜೊತೆಯ ಕಳ್ಳ: ವನಿತೆಯ ಮೋಹದಿಂ ಸುತರ ಮೋಹದಿನಿಪ್ಪರೊಳಾವ ಮೋಹದಿಂ ಧನಮನುಪಾರ್ಜಿಸಲ್ಮಱುಗುಮಂ ಕಳವಿಂ ಧನಲಾಭಮಾದೊಡಾ ವನಿತೆಯುಮಿಪ್ಪರುಂ ಸುತರುಮಾಣ್ಟೆಯೊಳ್ ಪುದುಗಳ್ಳನೆಂದು ಭೋಂಕನೆ ಕಡಿದಿಕ್ಕೆ ಪೆರ್ದೆಸೆಯೊಳಲ್ಲಿದ [ಯಂ] ವರ್ಪುದು ವಾಗಳಾ [ಲಾ] ರ್ವರೇ (ರರ್ಮಾಮ್ಯ. ೬-೦೩೬).

[ಪುದು (< ಪುದುವು) + ಕಳ್ಳ₁]

ಪುದುಗಿಸು. ಪುದುಂಗಿಸು, ಹುದುಗಿಸು (ಕ್ರಿ). ೧. ಬೆರಸು; ಕೂಡಿಸು; ಸೇರಿಸು: ಅದಕೆ ಸ್ಫುರೆಯಿಕ್ಕಿ ಯಾಲಕ್ಕಿಹುಡಿಯುಮಂ ಪುದುಗಿಸುವುದು (ಸೂಪಣ. ೨-೩೬). ೨. ಮುಚ್ಚು; ಅಡಗಿಸು: ಮರೆಮಾಡು: ತೊಟ್ಟಿಲೆಳವಕ್ಕಳನೌಂಕಿ ಚಿವುಂಟಿ ವಸ್ತ್ರಮಂ ಪುದುಗಿಸಿ ತಾಯೊಳಾ ತೊರೆದ ಬೀಳ್ಮೊಲೆಯುಂ ಸವಿಮರ್ಬಿ ಕೊರ್ಬುಗುಂ (ಸಕಸಾ. ೩-೩೬); ಒಂದು ಚೆಟಿಕೆ ನೀಡದೊಳಿರ್ದುಂ ಕಿಱುಮಱಿಯುಂ ಕುಟುಂಕಿತ್ತೆ ಱುಂಕೆಯೊಳ್ ಪುದುಗಿಸಿಯುಂ (ರಾಮಕ್ರ. ೦೬-೨). △ **ಪುದುಂಗಿಸು:** ೩. ಇರಿಸು: ಇವಂ . . . ಭಕ್ತಿಯಂ ಪುರುಷೋತ್ತಮನೊಳ್ ಪುದುಂಗಿಸಿ ಪದುಳದೊಳಿರ್ಪಂ (ಸಕಸಾ. ೩-೧೧). ಹುದುಗಿಸು: ೨. ಪದುಮಕುಟ್ಟಲ ದೊಳಗೊಂದಱ ಲೆಕ್ಕವ ಹುದುಗಿಸಿ ಬರೆದವನಾರೊ ಚತುರೆ ನೀ ಪೇಳು (ಕಂಪಸಿ. ೬-೧೬೨); ಬೂದಿಯೊಳು ಹುದುಗಿಸುತ ವೇದಿಸುತ ಮಱೆ ಮಾಡಿ ಕಾದಿರ್ದ ಚಿನ್ನದೊಳು ಬೆರಸಿ ಬರೆ ಹಚ್ಚಿ ಊಮತಲೆ ಟೊಣೆವ (ಸರ್ವಜ್ಞ. ೦೪೦೪); ಒಲೆಯ ಬದಿಯಲಿ ತಲೆಯ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ ಕನಸಿನಲ್ಲಿಯು ಇಲಿಯು ಬಾರದು (ವೆಮಂ. ೧೩-೦). ೪. ಕುಂದಣಿಸು; ಕೆಚ್ಚು; ಕೀಲಿಸು: ಗದಗದಿಪ ನವರತ್ನನಿಚಯವ ಹುದುಗಿಸಿದ ಸೌವರ್ಣ ಕಲಶದಿ ಮದನನಾ ನೆಲೆಯೆನಿಸಿ ಮೆಱೆದುದು ಪರಪರೂಢವದು (ಪಶಸ. ೯-೦೯). [ಪುದುಗು₁ + — ಇಸು₃]

ಪುದುಗು₁. ಪುದುಂಗು, ಹುದುಂಗು, ಹುದುಗು₁ (ಕ್ರಿ). ೧. ಸೇರು; ಕೂಡು: ಒಳಗೆ ಪುದುಗಿರ್ದ ಪರಿಮಳದೊಳೊಪ್ಪುವ ಲತಾಂತಕುಟ್ಮಲ ದಂತೆ ಪರಗರ್ಭಲಾಂಛನದ ಕಾಂತಿಯಂ ತಳೆವುದು (ಶೈಮಾಭಾ. ೦೬-೦೯); ಸವಿರಸ ಪುದುಗಿದ ಕಡುಫಲ ಸಹ ಪಲಸಿಹುವು (ಕಂಪಸಿ. ೩-೩೩). ೨. ಅಡಗು; ಮರೆಯಾಗು: ಕುತುಬಲಾಂಭೋರಾಶಿಯೊಳ್ ಸೈಂಧವಂ ಪುದುಗಲ್ ಬಾಟ್ಟುನೆ (ಸೋಮೇಶ. ೩೭); ಎತ್ತ ಬಲ್ಲರ್ ಸುಜನರೆಲೆ ಪಾರ್ಥ ಕಪಟಿಗಳ ಚಿತ್ತದೊಳ್ ಪುದುಗಿರ್ದ ಮಾಟವಂ (ಶೈಮಾಭಾ. ೨೯-೩೬); ಬೆದಱಯಾ ಮಾಧವಿ ಕುಶಲವತಿಯರ್ ಪೊನ್ನಂ ಕೊಂಡೋಡಿ ಕಡಗೋಣಿಯೊಳ್ ಪುದುಗಿದರ್ (ಪಕಸಿ. ೬-೨೬೨ ಪ). ೩. ತುಂಬಿಕೊಂಡಿರು; ಹೆಚ್ಚಾಗಿ ಸೇರಿರು: ಪದಕಚಪರಿಯಂತ ಕಟ್ಟಾಣಮುತ್ತುಗಳ್ ಪುದುಗಿದಾಭರಣ ಗಳಿಟ್ಟು ವಿಧುಮುಖಿಯೊರ್ವಳೊಪ್ಪಿದಳಾಗ ಬೆಳುದಿಂಗಳಧಿದೇವತೆ ಯಂದದಲಿ (ಕಂಪಸಿ. ೬-೦೦೦). ೪. ಉಂಟಾಗು; ಒದಗು; ಹುಟ್ಟು: ಇದು ಗಿಳಿದೇರನ ದಾಳಿಯ ಭೀತಿಗೆ ಪುದುಗಿದ ನಡುಕವೊ (ಇಯಾ. ೯-೦೯). ೫. ಒಳಸೇರಿಸು; ತುಂಬಿಸು; ಕೂಡಿಸಿ ಇಡು: ರಕ್ತಾರ್ದ್ರಮುಕ್ತೋತ್ಕರವಂ ಮತ್ತಾಯ್ದು ಪುಣ್ಣೆತ್ತಿಯೊಳ್ ಪು[ಪಾಣಾಂ. ಹು]ದುಗಿ . . . ದುಃಖೋದ್ರೇಕದಿಂದಂ ಬಸೆ ಪರಪಸೆ ಬೀಸಿತ್ತು ಕರ್ಣಾಗ್ರದಿಂದಂ (ಶೆಶಾ ೨೦); ತಲೆಯೊಳು ಬಿಲ್ವದಳಗಳಂ ಪುದುಗಿ ಬಾಯಲ್ಲಿಯುದಕವನು ಮುಕ್ಕುಳಿಸಿ ಕೊಂಡೆಯ್ತಂದು (ಪಾಸೋಕ್ತಿ. ೯-೪೦). ೬. ಅಡಗಿಸು; ಮುಚ್ಚು; ಮರೆಮಾಡು: ಹಿಡಿಮಿಗವಕ್ಕಿಯ ತುಂಡುತುಂಡುಗಳನು ಸಡಿಲದೆ ಸೊಪ್ಪಿನೊಳ್ ಪುದುಗಿ ದಡಿಗಿಕ್ಕಿ ಹೊತ್ತವರನಿತಿನಿತೆಂಬುದ ಪಡಿ ಗಾಣ್ಬೊಡೆ ಶಕ್ಯವಲ್ಲ (ಪೋಹತ. ೦೯-೬೬); ವಾಯಸಪ್ರತತಿ ಗಱಿಗಳು ಪೊದಿಸಿ ಮಗ್ಗುಲೊಳಿಟ್ಟು ಕೋಗಿಲೆಯ ಮಱಿಗಳು ಮೈಯೊಳ್ ಪುದುಗಿಕೊಂಡು ಮಱುಕದಿಂದೈದೆ ಪಾಲಿಸುತಿರ್ದುವು (ಶೈಮಾಭಾ. ೨೬-೯). △ **ಪುದುಂಗು:** ೧. ನೀಸವನ ಗಂಟಲೊಳು ಸಿಕ್ಕಿ ಕೇಟರಿಸಿಯುಗುಳಲ್ ಶ್ಲೇಷ್ಮದೊಳ್ ಪುದುಂಗಿ ನಾನಾನಿರೋಧದಿಂ ಪೊರಳುತಿರೆ (ಅಕ್ಕಪು. ೩ ೬-೩); ಪೊರೆದರ್ ಕೊಂಗಣಿವರ್ಮರಾ ಬಟ್ಟೆಕೆ ಬಲ್ಲಾಳರ್ ಕುಱುಂಬರ್ ತೆಲುಂಗರು

ಮಾಂದಿಂಗವರೊಳ್ ಪುದುಂಗದೆರವೆಂಬುತೆರ್ಮ ಸಾದರದಿಂ ಕನ್ನಡರಾಯ ರಾಳ್ವನೆಗಮಾ ಕರ್ನಾಟದೇಶಂ ಕರಂ ಹರಿಸುವೆತ್ತುದು (ಅಪ್ರತಿ. ೧೯ ೨೨). ೨. ಇದಕಿನ್ನುಪಾಯವಾವುದು ನಮ್ಮ ಯಂತ್ರಮಂತ್ರದ ಬಲ್ಪು ಮೆಲ್ಪಾಯ್ತು ತಂತ್ರವೆಲ್ಲಂ ಪುದುಂಗಿದುದು (ಶಾಂಪು. ೦೨-೮೩); ಮಯಣ ದೊಳ್ ಪುದುಂಗಿದ ಚಿನ್ನದೊರೆವುಡಿಯಂತೆ ರೂಪಚ್ಛಿದರ್ ಬದ್ಧಾತ್ಮ ವರ್ಗದ ದುರ್ಗತಿಯಂ ಕಳೆಯಲೆಂದು . . . ಎಳಸಿ (ಪಂಪ. ೦-೬೦). **ಹುದುಂಗು** : ೨. ಪುಲ್ಲೆಯ ಹಿಂಡನೊಂದು ಪುಲಿ ಗೆಂಟಜೊಳೊಯ್ಯನೆ ಕಂಡು ಪಜ್ಜೆಯಂ ಮೆಲ್ಲನೆ ಮೆಟ್ಟಿ ಪುಲ್ಲೊಳೆ ಹುದುಂಗಿ ಹುದುಂಗಿ . . . ಕೊರಲ್ಗೆ ಪಾಯ್ದು . . . ಎಟ್ಟಿದಿಕ್ಕಿದುದಿಕ್ಕೆದಾಣದೊಳ್ (ಪಕಾಂ. ೨-೧೦೬). **ಹುದುಗ್ಗು₁** : ೧. ತಂಪಿನಗ್ಗಳಿಕೆಯ ವಿಘಾತಿಯ ಝೊಂಟನಲಿ ಹುದುಗಿದ ಮಹೀಶನ ಕಂಡನಾ ಪಾರ್ಥ (ಕುಮಾಸ. ೧೬-೩). ೨. ಬ್ರಹ್ಮನ ಕರಕಮಂಡಲದೊಳಗೆ ಹುದುಗಲಿ ರವಿಯ ಮಜ್ಜೆಹೊಗಲಿ . . . ಕೊಲುವೆನು ವೈರಿ ಸ್ಕಂಧವನ (ಕುಮಾರ್ಕ್ರೀ. ೯-೩೩) ; ಹರಿಗಂಡ ಕರಿಯಂತೆ ಹುದುಗುತಿರಲು (ಪ್ರಭುಲಿ. ೩.೨೨) ; ಹೃದಯದಲ್ಲಿ ಹುದುಗಿದ್ದ ಗರ್ವ ತಲೆಯೆತ್ತಿ ನಿಂತಿತು (ಶಾಕಾಶ. ೬೨). ೩. ಕದಡಿತೆನ್ನಯ ಹೃದಯ ಹೃದಯವ ಹುದುಗಿತಳ್ಳ (ತೆಲಂಗಾ. ೨ ೩-೧೩) ; ಕದನಕರ್ಕಶಕರಿತುರಂಗವಾಹರೊಡನೆ ಹುದುಗಿ ಬರೆ ನೆಲನೀದ ತೆಱದಿ (ಸಮ್ಮಕಾ. ೮ ೨೩). ೫. ಕುಂಭಗಳ ಹುದುಗಿಕ್ಕಿದ ಕಿಚ್ಚು ಆ ಕುಂಭಂಗಳಿಗೆ ಒಳಗೆ ಮುಟ್ಟಿದಡೂ ಹೊಱಗೆ ಮುಟ್ಟಿದಡೂ ಪಾಕಪ್ರಯತ್ನ ತಪ್ಪದು (ಸಂಕೀಸ. ೨೬೬-೨೬) ; ಹುತವಹ ನೆಡೆಯೊಳು ಹುದುಗಿರ್ದ ಚಿನ್ನಕ್ಕೆ ಹಿತವಾಗಿ ಬಣ್ಣ ಬಂದಂತೆ ಚಿತಭಸ್ಮಲಿಪ್ತ ದೇಹವಿರ್ದುದು ಪೂರಿತ ಹೇಮಕುಂಡಲದಂತೆ (ಸೋಕತ. ೯-೨೦) ; ಕಂಜಾಜಿಯ ದಿವ್ಯಸೌರಭ್ಯವನಪರಂಜಿಯೊಳಗೆ ಮಿಗೆ ಹುದುಗಿ ಕಂಜಜ ಕೈಗೈದ ಜೀವಪುತ್ತಳಿಯೊಲು ರಂಜಿಸಿದರು ಕೋಮಲೆಯರು (ಕಂಪಂ. ೨೯-೬). ೬. "ಹುದುಗು—ಗೋಪನೇ (ಮುಚ್ಚು)" (ಕಮರಾ) ; ಪೃಥ್ವಿಗೆ ಅಪ್ಪುವಿನ ಅಧಿಕವ ಮಾಡಿದರು ಅಗ್ನಿಯ ಹುದುಗಿದರು ವಾಯುವ ಬೀಱಿದರು ಆಕಾಶದಲ್ಲಿ (ಲಂಗಪ. ೪. ೬೪-೫೪). ೭. ತಡೆದು ನಿಲ್ಲಿಸು ; ಸ್ತಂಭಿಸು: ಪ್ರಾಣಾಪಾನವಾಯುವ ಹುದುಗುವನು . . . ಅವನಿಗದರಿದೆ (ಪರಸ. ೭೫-೬೫).

ಹುದುಂಗಿಕೊಳ್ಳು, ಹುದುಗಿಕೊಳ್ಳು = ೧. ಅವಿತುಕೊಳ್ಳು; ಮರೆಯಾಗು : ಅಂತು ಪಾರಸಿಗಂ ವೇಟ್ಟುಪಾಯದಿಂ ಪೊಕ್ಕು ಹುದುಂಗಿ ಕೊಂಡಿರ್ಪುದುಂ (ಸುಕಾಪರಿ. ೪-೧೧೨ ಪ); ನೀನೆಲ್ಲಿ ಹುದುಗಿಕೊಳ್ಳೆ (ಕೇಸರಾ. ೨೦-೨೬) ; ನನಗೆ ಭೂಮಿಯೊಳಗೆ ಹುದುಗಿಕೊಂಡುಬಿಡುವಷ್ಟು ನಾಚಿಕೆಯಾಯಿತು (ಶಾಲಿಪಾ. ೦೬೯). ೨. ಸೇರಿಕೊಳ್ಳು ; ಕೂಡಿಕೊಳ್ಳು : ಈ ವಿಶಾಲವಾದ ಪ್ರೇಮಭಾವನೆಯಲ್ಲಿಯೇ ದಯೆ, ಮಮತೆ, ಸಹನೆ, ಸಹಾನುಭೂತಿ, ಸಮತೆ, ಸಹಿಷ್ಣುತೆ—ಇವೆಲ್ಲ ಹುದುಗಿಕೊಂಡಿವೆ (ರಮಣಾ. ೬). **ಹುದುಗಿರಿಸು** = ಅಡಗಿಸಿಕೊಳ್ಳು ; ತಾಳಿಕೊಳ್ಳು ; ಸಹಿಸು : ಮುಕ್ತಾಯಿ ಹುದುಗಲಾರದ ವಿರಹದುಃಖವನ್ನು ಹುದುಗಿರಿಸುತ್ತ ಗಂಡನ ಮನೆಗೆ ಹೊರಟುಹೋಗಳು (ಕರ್ಣಾಗ. ೦೧೫). **ಹುದುಗಿಸಿಕೊಳ್ಳು**=ಹುದುಗಿರಿಸು : ತಾಯಿಯ ಎದೆಗೆ ಮುಖವನ್ನಿಟ್ಟು ತನ್ನ ದುಃಖವನ್ನು ಹುದುಗಿಸಿಕೊಂಡಳು (ಬೀಸುಣಾ. ೨೦೦). [ದೇ. ಹ ತಮಿ. ಪೊತುಕ್ಕು ; ಮಲ. ಪೊದಿಯುಂ, ಪೊದಿಕ್ಕ ; ತೆಲು. ಪೊದುಗು, ಪೊದುವು]

ಪುದುಗ್ಗು₂, ಹುದುಗ್ಗು₂ (ನಾ). ೧. ಅಧಿಕವಾದುದು ; ಹೆಚ್ಚಾದುದು : ಸೂಳೆಯರ್ಗೆ ಬೊಜ್ಜಸಿಂ ಪೊನ್ನಂ ಸೊಗಮುಂ ಬರ್ಕಂ ಅದಱೊಳ್ ಸೊಗಮಿಪರ್ಗಂ ಪುದುಗಾದುದಱಿಂದದರ್ಕೆರ್ವರುಂ ಪೂಣ್ದಪರ್ (ಪಂಪ. ೬-೧೫೪ ತ್ರಿಪದಿಗಳ ಸಂಕರದ ಪದ). **ಹುದುಗ್ಗು₂**: ೨. ಹೊಂದಿಕೆ; ಜೋಡಿ; ಸಾಮರಸ್ಯ : ಇವರೆಲ್ಲರು ಹುದುಗಿದ ಗಂಡಂದಿರು ಭೀಮಗೆ ಹೇಳಿ ಕಂಡುದ ಕಾಚೆನು (ಶೃಂಗಸಾ. I. ೦೦೩). ೩. ಕೂಟ ; ಸಂಬಂಧ ; ಸ್ನೇಹ : ಪದವನಱಿಯದ ವಾಚಕ ಘಾತಕನ ಇರವು . . . ಈ ಅಱಿವಿನ ಒಳಗನಱಿಯದ ಜೂಜಿನ ಹುದುಗಿಂಗೆ ಬಾದು ಸುರಿಗಾಯ ಸುರಿವವನ ವಿಧಿಯಂತೆ (ಕುಮಾಗುಂ. ೪. ೨೬೩-೭೩); ಕುಜನರ ಹುದುಗು ಮಾಳ್ಪುದಱಿಂದ ಭಾವಿಪಡದು ಮಹಾಸಜ್ಜನವಿರೋಧವದೊಳ್ಳಿತು (ಪಪು. ೩೮-೭೩). ೪. ಬಯಕೆ ; ಆಸೆ : ಬಂದ ಬಂದವರೆಲ್ಲರೂ ಅವಳ ಕಂಡು ಮನಸೋತು ಗಂಡನ ಕೊಂದು ಅವಳ ಕೊಂಡುಹೋಹಾಗ ಹುದುಗು ಹಿಂಗದೆ ಇವರೆಲ್ಲರೂ ಕೊಂದಾಡಿ ಸತ್ತರು (ಪುಮಗುಂ. ೪. ೨೪೯-೦೨). ೫. ಇಡ್ಡಲಿ, ದೋಸೆ ಇತ್ಯಾದಿಗಳು ಮೃದುವಾಗಲು ಹುಳಿ ಬರುವಂತೆ ಬಳಸುವ (ನೀರಿನಲ್ಲಿ ನೆನೆಸಿದ) ಉದ್ದು, ಮೊಂತ್ಯ ಮುಂತಾದ ಪದಾರ್ಥಗಳನ್ನು ರುಬ್ಬಿದಾಗ ಉಕ್ಕುವ ವಸ್ತು ; ಸರಿ. 'ಒದಗ್ಗು₂' ಪರಾ.

ಹುದುಗು ಬರು=ಇಡ್ಡಲಿ, ದೋಸೆ ಇತ್ಯಾದಿಗಳನ್ನು ತಯಾರಿಸುವಾಗ ಉದ್ದು, ಮೊಂತ್ಯ ಮುಂತಾದ ಪದಾರ್ಥಗಳನ್ನು ಸೇರಿಸಿ ರುಬ್ಬಿದಾಗ, ಹಿಟ್ಟು ಹುಳಿ ಬರು,—ಉಕ್ಕಿ ಬರು: ಹದವಾಗಿ ಹುದುಗು ಬಂದರೆ ಇಡ್ಲಿ, ದೋಸೆ ಮೃದುವಾಗಿರುತ್ತದೆ (ಕೂಡಿ). ಹುದುಗು ಹಾಕು =ಇಡ್ಡಲಿ, ದೋಸೆ ಇತ್ಯಾದಿಯನ್ನು ತಯಾರಿಸುವಾಗ ಹಿಟ್ಟು ಹುಳಿ ಬರಲು ಉದ್ದು, ಮೊಂತ್ಯ ಮುಂತಾದ ಪದಾರ್ಥಗಳನ್ನು ಸೇರಿಸು,—ಹಾಕು : ಹುದುಗು ಹಾಕುವಾಗ ಹೆಚ್ಚು ಕಡಿಮೆಯಾದರೆ ಕಾವಲಿಯಿಂದ ದೋಸೆ ಏಳುವುದೇ ಇಲ್ಲ (ಕೂಡಿ). [<ಪುದುವು]

ಪುದುಗುಡು (ಕ್ರಿ). ಪಾಲು ಕೊಡು ; ಭಾಗವನ್ನು ಕೊಡು : ಪುದುಗುಡದಾರ್ಗ್ಗವೀ ಧರೆಯನೊರ್ವನೆ ದೋರ್ವ್ವಲದಿಂದೆ ಪಾಳಿಪೊಂದದಱನಳರ್ಕ್ಕೆಯಿಂ . . . ಪುರೂರವನೆಂಬುದು ರಾಮಚಂದ್ರನೆಂಬುದು ಪೆಱತೊಂದನೆಂಬುದೆ ನೆಗರ್ತ್ತೆಯ ವಿಕ್ರಮಚಕ್ರವರ್ತ್ತಿಯ (ಕೊಂಗಾಂ. ೬-೬ ; 1128). [ಪುದು (<ಪುದುವು) + ಕುಡು₁ (<ಕೊಡು₁)]

ಪುದುಗೂಡು (ಕ್ರಿ). ಜೊತೆಗೂಡು ; ಒಂದರೊಡನೊಂದು ಹೊಂದಿಕೊಳ್ಳು : ಮೃದುನುಡಿಗಳ ರಾಜಕೀರ ಕೋಕಿಲಸ್ವರ ಪುದುಗೂಡಿದಂತೆ ಗಾನೆಯರ ಮಧುರಾಳಾಪಗೀತವ ಕೇಳ್ದು ಖಳರಾಯ ಚತುರ ಮೆಯ್ಯುರಿದೆದ್ದನೊಲಿದು (ಸೋಕತ. ೨೨-೩೬).

[ಪುದು (<ಪುದುವು) + ಕೂಡು₁]

ಪುದುಗೊಳ್ 'ಪುದುಂಗೊಳ್' ನೋ.

ಪುದುಗೊಳಿಸು 'ಪುದುಂಗೊಳಿಸು' ನೋ.

ಪುದುಮನೆ, ಹುದುಮನೆ (ನಾ). ಬಚ್ಚಿಟ್ಟುಕೊಳ್ಳುವ ಜಾಗ ; ಮರೆಯಾಗುವ ಸ್ಥಳ : ಬನಕೆ ಮರಳ್ಳೆ ಮರುಳೆ ನೀ ಪುದುಮನೆಯ ಹಾವನು ಹದ್ದು ಹಿಡಿದರೆ ಮನಕತವ ಮಾಡುವರೆ (ಕುಮಾಶಾ. ೨೦-೩೩). **ಹುದುಮನೆ** : ಬಗೆಯ ಮಡಿ ಮಸಳಿಸು ವಿರಕೆ [ಶಾಕಾಂ. ಚಿತ್ತಕೆ, ಬೆರಕೆಯ] ಬೆಗಡು ಹುದುಮನೆಯಾಯ್ತು (ಕುಮಾಗ. ೨-೦೩). [<ಪುದುಗ್ಗು₁+ಮನೆ]

ಪುದುಮಾಡ (ನಾ). ಜೊತೆಜೊತೆಯಾಗಿರುವ ಮಹಡಿಯ ಮನೆ ; ಸಾಲುಪ್ಪರಿಗೆ : ಇಲ್ಲಿ ದಿಕ್ಪತಿಗಳೆಲ್ಲರು ಬಾದು . . . ಆಡುವ ಪಾಡುವಗ್ಗಳಿಕೆಯೊಳ್ ಚೂಡಾಮಣೀಜ್ಯೋತ್ಸ್ನೆಯೊಳ್ ಪುದುಮಾಡುಗಳ ಮೇಲೆ ಚುಂಚುಲೋವೆಯೊಳ್ ವಿದ್ಯುಲ್ಲತಾಲಾಸ್ಯಮಂ (ಪಪಂಪು. ೦೦-೨೯).

[ಪುದು (<ಪುದುವು) + ಮಾಡ₁]

ಪುದುವಟ್ಟು 'ಪುದಿವಟ್ಟು' ನೋ.

ಪುದುವಯಕೆ (ನಾ). ಒಳಗಿನ ಆಸೆ : ಅಂತರಂಗದ ಅಪೇಕ್ಷೆ ; ಮನಕೆ ಪುದುವಯಕೆ ಪುದುಂಗೊಳೆ ಸೀತೆ ಬಸಱಿಯಾದಳ್ (ರಾಪಾಕ್ಷ. ೨೨-೦೦).

[<ಪುದುಗ್ಗು₁+ಬಯಕೆ]

ಪುದುವರ್ (ಕ್ರಿ). ಹೊಂದು; ಕೂಡು : ಮಸಕಂಬೆತ್ತ ಮತಿಪ್ರಕಾಶ

ಮನಲಂಪಿಂದಿತ್ತು ಮತ್ತಾವ ದುರ್ವ್ಯಸನಂಗಳ್ ಪುಗದಂತೆ ಪೂಣ್ದು ಪುದುವಂದೇಕಾಂಗದಿಂ ತಾನೆ ಮಾನಸದೊಳ್ ನಿಂದು ಜಿತಾರಿಪಕ್ಷನದಜಂ ಯಕ್ಷೋತ್ತಮಂ ಕೂರ್ತು ರಕ್ಷಿಸುಗೆ (ರರ್ಮಾ. ೦-೯); ಪುದುವಂದುದೆಂದು ನೆಲೆವರ್ಚಿರೆ ಭಾವರಸಂ ರಸಜ್ಞೆಯೊಳ್ ಮೃದುಪದವಿಟ್ಟಳಕ್ಕುಮೆನೆ ಭಾರತಿ ಬಂದು ಕಳಾವಿಳಾಸನಾ (ರರ್ಮಾ. ೦ ೭೨).

[ಪುದು (<ಪುದುವು) + ವರ್]

ಪುದುವಾಳ್$_1$ 'ಪುದುವಾಟ್' ನೋ.

ಪುದುವಾಳ್$_2$, ಪುದುವಾಳು (ನಾ). ಕೂಡಿಕೊಂಡು ಬಾಳುವಿಕೆ; ಹೊಂದಿಕೊಂಡು ಬದುಕುವಿಕೆ: ಭವವೇಕಾನೇಕಸತ್ತ್ವಾದಿಗುಣದ ಪುದುವಾಳೇಕದಾನೇಕೆ ಕಾಮೋತ್ಸವವೇಕಾನೇಕೆ (ರಕ್ಷಾಕ. ೫೬); ಪುದುವಾಳ್ಗಾಣದವರ್ಗೆ ತಂಬಿಸಿಲೆನಿಪ ಬಾಲವೆಣ್ಗಳ್ ಗಮಕದಿಂ ತಳರ್ದರು (ಉದ್ಯರೇ. ೩-೨೦). **ಪುದುವಾಳು**: ತರುಚರರ ಪುದುವಾಳು ಲೇಸೇ (ಕೌಶಿರಾ. ೦೯-೬೫); ಆ ಖೂಳನ ಕೊರಲ ಕೊಯ್ಸದೊಡೆ ಹೇಳಲೇನವನೊಳಗೆನಗೆ ಬಳಿಕ ಪುದುವಾಳೆ (ಕುರಾಸಾಂ. ೫೫ ೭೬).

[ಪುದು (< ಪುದುವು) + ಬಾಳ್$_2$ (< ಬಾಟ್$_2$)]

ಪುದುವಾಳು 'ಪುದುವಾಳ್$_2$' ನೋ.

ಪುದುವಾಳ್ಕೆ 'ಪುದುವಾಟ್ಕೆ' ನೋ.

ಪುದುವಾಳ್ತನ (ನಾ). = ಪುದುವಾಳ್$_2$: ಪುದುವಾಳ್ತನಂ ಗಡ ಸಖರ್ಗೆಂತಾದೊಡಂ ಮಿತ್ರರೊಳ್ (ರಾಜಶೇ. ೧೩-೨೭).

[ಪುದುವಾಳ್$_2$ + — ತನ]

ಪುದುವಾಟ್, ಪುದುವಾಳ್$_1$, ಹುದುವಾಳ್ (ಕ್ರಿ). ೧. ಕೂಡಿ ಬಾಳು; ಸಹಜೀವನ ನಡೆಸು: ಆ ಪಣ್ಣಮಹಾಪಾತಕನ ಊರಿ[ಂ] ಕಳೆಪುದು ಊರಾತನೆಂದಾತಂ ಪುದುವಾಟ ಸಲ್ಲಂ (ಸೌಇಇ. IX - i, ೨೯-೫೬; 936); ಉಡಿಸಿಯುಮೂಡಿಸಿಯುಮಟ್ಟಿಯನೆಡೆಯುಂಡುಗದೆ ಸಲಿಸಿ ಪಲಪುಕಾಲಂ ಪುದುವಾಟ್ದೊಡಲಾತ್ಮನೊಡನೆ ಪೋಗದೆ ಕಡೆಗಣಿಸುವುದೆಂದೊಡುಟಿದರಂ ನಂಬುವುದೇ (ಆದಿಪು. ೩-೬೦); ಸಾದಿಸುವೆಂ ಫಲ್ಗುಣನಂ ಸಾದಿಸುವೆಂ ಪವನಸುತನ ಬಸಿಱಿಂ ಹಾ ಕರ್ಣಾ ಮಶ್ಶಾಸನ ತೆಗೆವೆಂ ನಿರ್ದೋಷಿಗಳಿಕ್ಕೆ ಯಮಜನೊಳ್ ಪುದುವಾಟ್ಟೆಂ (ಗದಾಯು. ೯-೦೦); ರಾವಣನೊಳ್ ಪುದುವಾಟ್ದ ದೋಷಹರಣಕ್ಕೆ ವಿಭೀಷಣನಮರನದಿಯೊಳಘಮರ್ಷಣಮಿರ್ದಪೊಲಿರ್ದನಧಿಪನಂಗ ಪ್ರಭೆಯಿಂ (ಪಂಠಾಮಾ. ೦೨-೬೯). ೨. ದಾಂಪತ್ಯ ನಡೆಸು; ಸಂಸಾರ ಮಾಡು: ಪಿರಿಯರಸಿಯ ಪಟವೇಟದ ಪರಿವಿಡಿ ಮಗುಟ್ಟುಂ ಕೊನರ್ತುದಾ ಸತಿಯೊಡನಿಂ ನರಪತಿ ನಿನ್ನಂಗಾಲೊಳ್ ನರೆ ಬರ್ಪಿನಮುತ್ತರೋತ್ತರಂ ಪುದುವಾಟೂ (ಶಾಂತಿಪು. ೯-೫೨); ಪುದುವಾಟ್ವೆನಕ್ಕೆ ಮುಕ್ತ್ಯಂಗನೆಯೊಳ್ (ಅಜಿಪು. ೨-೭೫); ಆತಂಗೆ ಸರಸೆಯೆಂಬಳ್ ಪಾತಕಿ ಕುಲವನಿತೆ ಯೆನಿಸಿ ಕಯನೆಂಬ ಮಹಾಪಾತಕನೊಳ್ ಪುದುವಾಟ್ದಳ್ (ಪಂಠಾಮಾ. ೬ ೫೫); ನಾಲ್ವರೊಳ್ ಮಱಿವಾಟ್ದು ಕೊಂತಿ ಪಾಂಡುರಾಜಂಗೆ ಕುಲಸ್ತ್ರೀಯೆಂದು ಮನ್ನಿಸಿಕೊಂಬುದೆತ್ತ . . . ದ್ರೌಪದಿ ಪಾಂಡವರಯ್ವರೊಳ್ ಪುದುವಾಟ್ದಳೆಂಬುದೆತ್ತ (ಬಂಹರಿ. ೦-೨೯ಪ). **ಪುದುವಾಳ್$_1$**: ೧. ಚಿಃ ಸವತಿಯೊಳ್ಪುದುವಾಳ್ವುದು ಕಷ್ಟಂ (ಎಇ. XVI, ೬೦-೫೨; 1081); ಸದಮಲಮಪ್ಪ ಭೂಚರರೊಳು ಮುದದಿಂ ಪುದುವಾಳ್ವೆನು (ಸೇಮಿಸಂ. ೩-೫೭). ೨. ಒರ್ವಳೊಳ್ ಪುದುವಾಳಲಱಿಯದೆಕ್ಕತುಳಗೆಯ್ದೊರ್ವಳಂ ತರಲ್ (ಉದ್ಯರೇ. ೪-೨); ದೇವ ನಿನ್ನೊಳು ಪುದುವಾಳ್ದು ಮೆಱಿವವರ್ಗ ಶಿಪುಣ್ಯ ಬೇಕು (ಭರತ. ೨೦-೦೧೫). **ಹುದುವಾಳ್**: ೧. ಅದು ಇದು ಎಂಬುದೆಲ್ಲ ಹದವರಿತಿಲ್ಲಿ ಹುದುವಾಳ್ಗೆ! (ಸಂಸು. ೭೦-೯).

[ಪುದು (< ಪುದುವು) + ಬಾಟ್$_1$]

ಪುದುವಾಟ್ಕೆ, ಪುದುವಾಳ್ಕೆ, ಹುದುವಾಳಿಕೆ, ಹುದುವಾಳಿಗೆ (ನಾ). ೧. = ಪುದುವಾಳ್$_2$: ಪುದುವಾಟ್ಕೆಗೊಡಂಬಡಲೊಲ್ಲದಿನ್ನುಮವ್ವಳಿಸುವನೀಗಳಾತನನೆ ನೀಂ ಬೆಸಗೊಳ್ ಪುಸಿಯಂ ಸುಯೋಧನಂ (ಪಂಪಭಾ. ೦೩-೯೯); ನಾಂ ಗಡ ಮಧ್ಯಸ್ಥಂ ನುಡಿವಂ ಗಡ ಪುದುವಾಟ್ಕೆಯೆನಗಮ ಪರ್ಗಂ ಸಂಧಾನಂ ಗಡ (ಗದಾಯು. ೭-೯೯). ೨. ದಾಂಪತ್ಯಜೀವನ; ಗಂಡ ಹೆಂಡಿರಾಗಿ ಬಾಳುವಿಕೆ: ಅವಳೆನ್ನಂ ಪರಿಗ್ರಹಿಸಿ ಧನಮಿತ್ರನ ನುದಾಸೀನಂಗೆಯ್ದುದಱಿನಾನವಳೊಳ್ ಪ್ರೀತಿಯಿಂ ಪುದುವಾಟ್ಕೆಯಿಂದಿಳಲ್ (ಪಕಳು. ೬ ೬೫ ಪ). **ಪುದುವಾಳ್ಕೆ**: ೧. ಬನ್ನಿಮೆನ್ನೊಡನೀಗ ಬೇರೊಂದು ಪುದುವಾಳ್ಕೆಗೆ (ಶಾಂಪಿ. ೫೬-೬೯). **ಹುದುವಾಳಿಕೆ**: ೧. ಹೀಗೆ ಹುದುವಾಳಿಕೆಯಲ್ಲಿದ್ದ ಮಾಚಯ್ಯನಿಗೆ ಅಂತರಂಗದಲ್ಲಿ ಆವುದೋ ಅತೃಪ್ತಿ (ಕರಸ. ೯೦೫). **ಹುದುವಾಳಿಗೆ**: ೧. ಮನವೇ ಸರ್ವತನುವೇ ಹೇಳಿಗೆ ಹಾವಿನೊಡತಣ ಹುದುವಾಳಿಗೆ (ಬಸಪ. ೧೬೦). [ಪುದುವಾಟ್ + —ಕೆ]

ಪುದುವಿರ್ (ಕ್ರಿ). = ಪುದುವಾಟ್ ೨: ಆಕೆ ಗಾಳಿಯೊಳ್ ಪುದುವಿರ್ದಳೆಂಬುದೆತ್ತ ಗಾಳಿಗಮಾಕೆಗಂ ಭೀಮಂ ಪುಟ್ಟಿದನೆಂಬುದೆತ್ತ (ಬಂಹರಿ. ೧-೨೯ ಪ).

[ಪುದು (<ಪುದುವು) + ಇರ್$_1$]

ಪುದುವೀ (ಕ್ರಿ). ಹಂಚಿ ಕೊಡು; ಪಾಲು ಮಾಡಿಕೊಡು: ಧರೆಯಂ . . . ಕೈತವದಿಂದೈವರ ಕೆಯ್ಯೊಳೆಟ್ಟಿದುಕೊಂಡುಂ ಕುರುರಾಜಂ ಮತ್ತಮವರ್ಗೆ ಪುದುವಿತ್ತಪನೇ [ಪಾಠಾಂ. ಪುದು ಮಾಡುವನೇ] (ಗದಾಯು. ೯-೦೦).

[ಪುದು (<ಪುದುವು) + ಈ$_2$]

ಪುದುವು, ಪುದು, ಹುದು$_1$, ಹುದುವು$_1$ (ನಾ). ೧. ಗುಂಪು; ರಾಶಿ; ಸಮೂಹ: ಅರಮೆ ಅರಲ್ದ ಬಯಲ್ದಾವರೆಗಳ ಪುದುವುಗಳೊಳರಮೆ ಎಳದಳಿರ ಲತಾಂತರದೊಳುಟಿದುಟಿದು ಕಾಡುಗುಮಿರುಳಪ್ಪಿನಮಱಸುವಿನಿಯಳಂ ಚಕ್ರಾಹ್ವಂ (ಕಾಪ್ಯಾಪ. ೯೭). **ಪುದು**: ೧. ಜಳದೇವತೆಗೆತ್ತಿದ ಪಚ್ಚೆಯ ಸತ್ತಿಗೆಗಳ ಪುದುವೆನಿಪುದು ವನಜವನದ ಕೊಡೆಯೆಲೆ ಪಲವುಂ (ಆದಿಪು. ೦೦-೬೩); ಮುನಿಪತಿಯ ತೋರ್ಪ ಬರಿಯೆಲ್ವಿನ ಪುದುವಿಂ ಬೂದಿವಾಱುತ್ತಿರ್ಪರವಿಂ ಕಾಮನ ಸುಟ್ಟ ಕಾಡಿದೆನೆ ಕರ್ಗನೆ ಕನಿತುದು ಮಲದ ಮಸಿಯ ಮಸಕದಿನಂಗಂ (ಅರ್ಧನೇ. ೦-೮೬); ನನೆಗಳ ಪೊಸ ಪೂಗಳ ಕಾಯ್ಗಳ ಪುದುವಿಂದೆಸೆದುದಾ ವಿನೂತಂ ಚೂತಂ (ಶಾಂತೀಶ್ವ. ೦೦-೦೦೯). ೨. ಕೂಡುವಿಕೆ; ಸೇರುವೆ; ಹೊಂದಿಕೆ: ಉಟಿದ ಮೂವತ್ತುಗಳೊಳಮ್ಪುದುವಿನೊಳೆ ಪತ್ತೊನ್ದಿಯನಿಕ್ಕಿ ಊರ್ಗ್ಗೆ ಅಳವಿಯನಿಕ್ಕಿ ಉಣ್ಬೊ (ಎಕ. III, ಮಂಡ್ಯ. ೦೯-೮; 907); ಉದಯಿಸುಗುಂ ಶೂಲಂ ವಾತದಿಂ . . . ಆ ತ್ರಿದೋಷದ ಪುದುವಿಂದಾಮಿಶ್ರಮಾಗಿ ತೋರ್ಕುಂ ತಮ್ಮೊಳ್ (ಶೋಕೋಪ. ೯-೩); ಮೆಯ್ನವಿರ ತುಱುಗಲೊಳ್ ತೊಡರ್ದೊಗೆದ ಬೆಮರ ಬಿಂದುಗಳ ಪುದುವಿಂ ಪನಿಪುಲ್ಪೊರೆದ ಶಾಡ್ವಲ ಸ್ಥಳಿಯನಿಟಿಕೆಯ್ವಳ್ (ಪರ್ಧಪು. ೯-೫೮ ಪ). ೩. ಸಹವಾಸ; ಸಂಬಂಧ; ನಂಟು: ಈ ದುರಾತ್ಮನೊಳ್ ಪುದುವೆನಗೇವುದೆಂದು ಬರುತಿರ್ದಪನಲ್ತೆ ಶರಣ್ಬುಗಲ್ . . . ಆ ವಿಭೀಷಣಂ (ಪಂಠಾಮಾ. ೦೨-೬೬); ಆ ದುರ್ಮದನಶ್ವಗ್ರೀವನಾ ಕೋಟಲೆಯ ಪುದುವದೇತರ್ಕೆ (ಶಾಂತೀಶ್ವ. ೨-೦೦೬); ಪಾವಿನ ಪುದುವೊಳ್ಳಿತು ಮದಕಳದಂತಾವಳನೊಳು ಕೂಟ ಪತಿಲೇಸು . . . ಕುಲಟೆಯೊಳೋವಿ ಬಾಳ್ವ ಬಲ್ಲಿದನಾರೊ (ಸೊಬಸೋ. ೦೬-೬೯); ಮೊದಲು ಸಿಕ್ಕಿದುದೆ ಸಾಕೆಮಗಧಿಃರೊಳೇಕೆ ಪುದು ಭರತ. ೯೩ ೫೫). ೪. ಒಂಟಿ ಒಡೆತನ ಅಥವಾ ಸಾಮೂಹಿಕ ಸ್ವಾಮಿತ್ವಕ್ಕೆ ಒಳಪಟ್ಟುದು,—ಅಳವಟ್ಟುದು: ಪೊಲ್ಲವೆಯುಂ ಗುಣಮುಂ ತಮಗಲ್ಲದೆ ಪುದುವಲ್ಲ ಮತ್ತೆ ತನಗುಂ ಪೆಱರ್ಗಂ (ಕವಿರಾ. ೩-೦೭೯); ಇರ್ವರ್ ವಣಿಕ್ಪುತ್ರರ್ ಪುದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನಂ ಪಡೆದು ಮಗುಟ್ಟು ಬಂದು (ಪಂತಕು. ೦೭೦-೯); ಪುದುವೇಕನ್ಯರ್ಗ್ಗಮಾನೊರ್ಬ್ಬನೆ

ತಳೆಯಲವಂ ಸಾಲ್ವೆನೆನ್ದು . . . ಅಖಿಳಧರಾಭಾರಮಂ ತನ್ನ ವಿಕ್ರಾನ್ತದ ಬಲ್ಪಿಂ ತನ್ನ ತೋಳೊಳ್ಪಮಳಮಿರಿಸಿದಂ ವಿಕ್ರಮಾದಿತ್ಯದೇವಂ (ಎಳ. VII, ಶಿಶಾರಿ. ೦೨೯-೯ ; 1077); ತೇಜಂ ಪುದುವಿಲ್ಲೆನಿಸಿ ವಿರಾಜಿಸೆ ಪರರಾಜಮಂಡಲಂ ತನ್ನಿಂ ನಿಸ್ತೇಜಂಬೆತ್ತಿರೆ ಬೆಳಗಿದನೀ ಜಗಮಂ ಭಾನುವೆಂಬಿನಂ ಭಾನುರಥಂ (ಸಂರಾಮಾ. ೨ ೬೬). ೫. = ಪುದಿವಟ್ಟು : ಮುದದಿಂದಯ್ನೂರ್ವ್ವರ್ಪ್ಪುದು ಮೊದಲರ್ತ್ತ ಮನಿತ್ತರೊಲ್ಪು ಸೋಮೇಶಂಗೆ (ಸೌಇಇ. IX-1, ೦೬೩ ೬೧ ; 1099). ೬. ಸಾಟಿ ; ಸಮಂ ; ಸದೃಶವಾದುದು : ತಿಳಿಗೊಳದೊಳಗೆಡೆಯಾಡುವ ಕಳಹಂಸನ ಬಾಳಕೇಳಿ ಪುದುವೆನೆ ಮಧುಪಾಟಳನೇತ್ರಂ ಧವಳಾಂಗಂ ಪಳಿಕಿನ ಕುಟ್ಟಿಮದ ಮೇಲೆ ದಟ್ಟಡಿಯಿಟ್ಟಂ (ಸಂರಾಮಾ. ೩-೦೨೬) ; ಕರಿ ಕೊಲೆಯೊಳ್ ಜವಂಗೆ ಪುದು ಕಾಯ್ದಿನೊಳಗ್ನಿಗೆ ದಾಯಿಗಂ ಸಹೋದರವಳವಿಂ ಸಿಡಿಲ್ಗೆ ಮದದೊಳ್ ಕೆಳೆ ಕಾಳಿಗೆ (ಅರ್ಥಸೇ. ೬-೫೬) ; ವೀರತೆಯುಂ ಶೂರತೆಯುಂ ರುಚಿರೋದಾರತೆಯುಂ ಗುಣಗಂಭೀರತೆಯುಂ ಧೀರತೆಯುಂ ಪುದುವಿಲ್ಲೆನೆ ತನ್ನೊಳು ಕೌಸಲ್ಯೆಯ ತನಯಂ ರಾರಾಜಿಸಿ [ಸೆ] (ಕುಮುರಾ. ೪-೨೮). ೭. ಹೊಂದಿಕೊಳ್ಳುವ ವ್ಯಕ್ತಿ : ಎನಗೆಕ್ಕಬಾಗೆ ನೋಡೀಗಳಿಳಾಲತಾಂಗಿ ಪುದುವಲ್ಲಳ್ (ಸಂಪಶಾ. ೯-೪೬). ೮. (ಸುಖ, ರಾಜ್ಯ ಮುಂತಾದುವುಗಳ) ಪಾಲು ; ವಿಭಾಗ ; ಹಿಸ್ಸೆ : 'ಪುದುಗುಡು' ಪರಾ. ೯. ಪ್ರಭಾವ ; ವರ್ಚಸ್ಸು : ನಿನ್ನ ದಂಡನೀತಿಯಿ ಪುದುವೆ ಪಲಂ ದಂಡರತ್ನಮೆಂಬುದು ಪೆಱತೇ (ಅದಿಪು. ೦೩ ೨೬). ಹುದು$_1$: ೨. ಹುದು ನಡೆಯದಿವರೊಡನೆ ನಮ್ಮಲಿ ಕದನವೇ ಕೈಗಟ್ಟುವುದು (ಕುಪ್ಯಾಅ. ೬-೬); ಬಾಳ ಬೆಲೆ ಹುದುವೆಂದು ಕಲಿತು, ರಲೆತು (ಹೊಂಗಳು. ೩-೦೬). ೩. ಮೀಸಲು ಮುರಿಯದ ಒಲವಿಗೆ ಬಾಯ್ಬಿಡದೆ ಕಣ್ಣೊಡ್ಡಿ ಹುದುವಿನ ಸವಿ ಬೇಡಿದೆ (ಸಖೀಗೀ. ೦೦-೦೦೯). ೪. ಕೌರವನೊಳೆಮಗೀ ವಸುಧೆ ಹುದುವಲ್ಲ ನೆಲನೇಕಾಧಿಪತ್ಯವಲೆ (ಕುಪ್ಯಾಪ. ೨-೩೩). ೬. ಹೆಣ್ಣಕ್ಕಳಿಬ್ಬರೆನ್ನಿದಿರಿನಲಿ . . . ಇಬ್ಬರೂ ಹುದುವಲ್ಲದಾಕಾರ (ಪಾರನಿ. ೯-೨೦೨). ೮. ಎಲವೊ ಮಾರುತಿ ನಿಮ್ಮೊಳಗೆ ಕೋಮಳೆಯ ಹುದುವನು ಮೆಚ್ಚಿ ನಮ್ಮೊಳಗಿಳೆಯ ಹುದುವನು ಬಯಸಿದೈ (ಕುಪ್ಯಾಪೀ. ೩-೦೨). ಹುದುವು$_1$: ೨. ಧರೆ ಸಿರಿಗಳಿರ್ವರುಂ ನರರ್ಗೆ ಹುದುವಾಗಲೆಲೆ ಹರಿ ನಿನ್ನ ಭಕ್ತರಕ್ಷಣೆಗೆ ಬಲವು ನೆರೆಯದಿರಲೆಂದತ್ರಿ ವರಸೂನು ಹರಿಗಿತ್ತಿವೆರಡುಶಾಪವನೊರೆದ (ಸಾಪಂಪ. ೨-೬೯). ೪. ನಡುವಣ ಹುದುವಿನ ಹೊರದ ಮಣ್ಣು (ಪ್ರಾಅರಿ. ೦೯೩೩, ೩-೧೩ ; 1160); ಹೆಣ್ಣು ಹೊನ್ನು ಮಣ್ಣೆಂಬ ಜಗದ ಹುದುವಿನ ಒಡವೆಗೆ ಹೊಡೆದಾಡಲೇಕೆ (ಮೋಳಿಮಾ. ೦೬೭-೬೨೯) ; ಹುದುವಿನ ಗಂಡುತನವಿದನು ಶಶಿವದನೆ ಸುಡು (ಕುಪ್ಯಾಪಿ. ೩-೯೩).

ಪುದು ಮಾಡು, ಹುದು ಮಾಡು = ಹೊಂದಿಸು ; ಕೂಡಿಸು : ಸಂಬಂಧ ಮಾಡು : ದಮ್ಮಯ್ಯ ಎಂದು ಪುದು ಮಾಡಬೇಕಾದ ನೆಂಟಸ್ತಿಕೆ ಸೆಟ್ಟರೇ (ದೇಪಮ. ೦೦೨) ; ಸದುಹೃದಯನ ತಂದು ನಿನ್ನವಯವದಲ್ಲಿ ಹುದು ಮಾಡಿದವೆನು (ಪೋಹತ. ೨೮ ೩೭). ಪುದುವಾಗು = ೧. ಅತಿಶಯವಾಗು ; ಹೇರಳವಾಗು : ಪುದುವಾದ ರಾಗಸಂಪದವು ಹೃದಯದೊಳೆಸೆಯೆ (ಅರುಶಾ. ೩೯-೨). ೨. ಸೇರು ; ಈಡಾಗು : ಮದದಿ ತ್ರಿದಶದ್ವೇಷದಿಂದಳಿದಧೋಗತಿಗೆ ಪುದುವಾದರು (ಪವಮೋ. ೦೮-೭). ಹುದು ಹಾಕು = ಜೊತೆ ಮಾಡು ; ಕೂಡಿಸು : ಇದಕ್ಕೆ ಮತ್ತೆ ಬೇರೆ ಮಾತುಗಳನ್ನು ಹುದು ಹಾಕಬಹುದು (ಸಾಹಿಸಂ. ೦೨೯).

[ದೇ.೩ ತಮಿ. ಪೊತು ; ಮಲ. ತುಳು. ಪೊದು ; ತೆಲು. ಪೊತ್ತು]

ಪುದುವುಗು (ಕ್ರಿ). ಕೂಡಿಕೊಳ್ಳು ; ಹೊಂದಿಕೊಳ್ಳು : ಸಜ್ಜನಸುಭಾಷಿತದೊಳ್ ಪುದುವೊಕ್ಕು ಸೇಸೆಯಂ ಮನಮೊಸೆದಾಂತು . . . ವಿದೇಹಿಯುಂ ಜನಕನುಮೇಱಿದರ್ ಮಣಿವಿತಾನವಿರಾಜಿತಮಂ ವಿಮಾನಮಂ (ಸಂರಾಮಾ. ೬-೪೩) ; ನಳಿನವಿಕಸನದೊಳ್ ಸೂರ್ಯೋದಯಕೆ ಸಹಾಯತ್ವಮನೂದುವ ತಣ್ಣೆಲರುಮಲಸದೇಂ ಪುದುವುಗದೇ (ಲೀಶಾಪ. ೪-೩೩).

[ಪುದು (< ಪುದುವು) + ಪುಗು (< ಪೊಗು)]

ಪುದುವೆನಿಸು (ಕ್ರಿ). ಸಮಾನವೆಂದು ತೋರು ; ಸದೃಶವಾಗಿ ಕಾಣು : ತಾರಾವಳಿಯಂ ತಳೆದ ನಭೋರಂಗದ ಭಂಗಿ ತನಗೆ ಪುದುವೆನಿಸಿದುದಂ ಪೇರುರಮನದೇಂ ಮೆಱೆದನೊ ಹಾರಮನೋಸರಿಸುವಂತೆ ನೃಪಸುತನೊರ್ವಂ (ಸಂರಾಮಾ. ೩ ೩೩). [ಪುದು (< ಪುದುವು) + ಎನಿಸು$_1$]

ಪುದುವೆಱು (ಕ್ರಿ). ಸಮಾನವಾಗು ; ಸರಿಜೋಡಿಯಾಗು : ಪುದುವೆತ್ತೆಕ್ಕಟಿಗಾಳೆಗಂ ಸಮನಿಸಿತ್ತೆಮ್ಮೀ ಗದಾಯುದ್ಧಮಂ ತ್ರಿದಶರ್ ನೋಡಲೆ ಕೌತುಕಂಬೆರಸಿ ಬಂದಿರ್ದರ್ (ಗದಾಯು. ೬-೬೮).

[ಪುದು (< ಪುದುವು) + ಪೆಱು$_1$]

ಪುದುವೋಗು (ಕ್ರಿ). ಹೊಂದಿಕೊಂಡು ಹೋಗು ; ಜೊತೆಯಲ್ಲಿ ಬಾಳು : ಹೇರೂರ ಹೆಂಗೂಸು ಭವಿಗೆ ಸತಿಯಾಗಳೆ ಎಲೆ ವೈಜಕ್ಕವ್ವೆ ತಾಂ ಭವಿಗೆ ಪುದುವೋಗಳೇ ಎಲೆಲೆ ಮಂಗಕ್ಕರಸಿ ಪಾಂಡ್ಯನೊಳು ಕೂಡಳೇ (ಪುದೇರ. ೩-೦೬೯). [ಪುದು (< ಪುದುವು) + ಪೋಗು$_1$ (< ಪೋ$_1$)]

ಪುದ್ಗಲ, ಪುದ್ಗಳ (ಗು). ೧. ಸುಂದರವಾದ ; ರಮಣೀಯವಾದ. (ನಾ). ೨. ಅಣುವಿನ ತೀರ ಚಿಕ್ಕಭಾಗ ; ಪರಮಾಣು. ೩. ದೇಹ ; ಜಡಸತ್ತ್ವ : ಭಿಕ್ಷುವು ತನ್ನ ಚಿತ್ತದಿಂದ ಇತರ ಸತ್ತ್ವಗಳ, ಪುದ್ಗಲಗಳ ಚಿತ್ತಗಳನ್ನು ಹೊಕ್ಕು ತಿಳಿಯುವನು (ಬುದ್ಧಪ. ೦೯೯). ೪. ಜೀವಾತ್ಮ ; ಸಂಸಾರಿಯಾದ ಆತ್ಮ : "ಪುದ್ಗಲಃ—ಜೀವನು, ಪರಮಾಣುವು" (ಸಿದ್ಧಾಂತಿ. ೯೩೦). ೫. [ಜೈನ] ಪರಮಾಣುಗಳ ಸಂಯೋಗದಿಂದ ಉಂಟಾದ ಹಾಗೂ ಸ್ಪರ್ಶ, ರಸ, ಗಂಧ ಮತ್ತು ವರ್ಣಗಳನ್ನು ಹೊಂದಿದ ಅಜೀವತತ್ತ್ವ : ಚೇತನಾರಹಿತಮಜೀವತತ್ತ್ವಂ ಅದು ಗತಿಸ್ಥಿತ್ಯವಗಾಹಶರೀರಾದಿವರ್ತನಾಹೇತು ಧರ್ಮಾಧರ್ಮಾಕಾಶಪುದ್ಗಲ ಕಾಲಭೇದದಿಂ ಪಂಚವಿಧಂ (ಅದಿಪು. ೦೦-೬೩ ಪ); ಅನಂತವರ್ಗಸ್ಥಾನಂ ಪೋದಲ್ಲಿ ಪುದ್ಗಲರಾಶಿ (ಎಂಬುದು) ಪುಟ್ಟುಗುಂ (ಶಾವುಂಪು. ೨೭೦); ಬಲಾಕೊಡದೊಳು ತುಂಬಿದುದಕದಂದದೊಳು ಪುದ್ಗಲ ವಸ್ತುಲೋಕ ತುಂಬಿಹುದು (ಭರಪ. ೬೬-೩೮); ಅಜೀವವು ಪುದ್ಗಲ . . . (ವಿಶ್ರಾಂತಿಯನ್ನುಂಟು ಮಾಡುವ ವಸ್ತು), ಆಕಾಶ ಮತ್ತು ಕಾಲ ಎಂದು ಐದು ವಿಧ (ಭಾತತ್ತ್ವ. ೨೩೬). ಪುದ್ಗಳ : ೫. ನೆಲಸದ ಯೋನಿ ಮುಟ್ಟದೆಡೆ ಕಾಣದ ಕಾಲ ಮತತ್ತ್ವದೊಳ್ ಮನಂ ನಿಲಿಸದ ಭಾವಮಳ್ಳಿಸದ ಪುದ್ಗಳಮಿಲ್ಲೆನೆ ಕರ್ಮಬಂಧದಿಂ . . . ತಿರಿತಪ್ಪುವು ಜೀವರಾಶಿಗಳ್ (ಸುಕುಮಾ. ೩-೩೨). [ಸಂ.]

ಪುದ್ಗಲದ್ರವ್ಯ (ನಾ). [ಜೈನ] ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲಗಳೆಂಬ ಆರು ಬಗೆಯ ದ್ರವ್ಯಗಳಲ್ಲಿ ಒಂದು : ಜೀವದ್ರವ್ಯ ಪುದ್ಗಲದ್ರವ್ಯ ಧರ್ಮದ್ರವ್ಯ ಅಧರ್ಮದ್ರವ್ಯ ಆಕಾಶದ್ರವ್ಯ ಕಾಲದ್ರವ್ಯಮೆಂಬ ಷಡ್ದ್ರವ್ಯಂಗಳ ಗುಣಪರ್ಯಾಯಮುಮಂ . . . ವ್ಯಾಖ್ಯಾನಂಗೆಯ್ಯಲ್ (ಸುಕುಮಾ. ೩-೩೯ ಪ); ಅಣುಗಳ ಪುಂಜವೇ ಪುದ್ಗಲದ್ರವ್ಯವು (ಹಿಂದಸಾ. ೬೦). 'ಷಡ್ದ್ರವ್ಯ' ಪರಾ. [ಸಂ.]

ಪುದ್ಗಲಪುಂಜ (ನಾ). [ಜೈನ] ಪುದ್ಗಲಪರಮಾಣುಗಳು ಸೇರಿ ಉಂಟಾದ ದ್ರವ್ಯ : ಪುದ್ಗಲ ಪರಮಾಣುಗಳು ಒಂದಕ್ಕೊಂದು ಸೇರಿದರೆ, ಪುದ್ಗಲಪುಂಜಗಳೆನಿಸುವುವು. ಇವುಗಳಿಗೆ ಪುದ್ಗಲಸ್ಕಂದಗಳೆಂದೂ ಕರೆಯುವರು (ಸೈನಪ. ೯೨೦). [ಸಂ.]

ಪುದ್ಗಲವಿಪಾಕಿ (ನಾ). [ಜೈನ] ಮೂರು ಬಗೆಯ ನಾಮಕರ್ಮಗಳಲ್ಲಿ ಒಂದು ಪ್ರಕಾರ : ಜೀವವಿಪಾಕಿಯುಂ ಪುದ್ಗಲವಿಪಾಕಿಯುಂ ಕ್ಷೇತ್ರವಿಪಾಕಿಯುಮೆಂದಿಂತು ನಾಮಕರ್ಮಂ ತ್ರಿವಿಧಮಕ್ಕುಂ (ಗೊಮ್ಮಸಾ. ೨-೭).

[ಸಂ. ಪುದ್ಗಲವಿಪಾಕಿನ್ ?]

ಪುದ್ಗಲಾಸ್ತಿಕಾಯ (ನಾ). [ಜೈನ] ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಎಂಬ ಐದು ಬಗೆಯ ಅಸ್ತಿಕಾಯಗಳಲ್ಲಿ ಒಂದು : ಜೀವಾಸ್ತಿಕಾಯಂ ಪುದ್ಗಲಾಸ್ತಿಕಾಯಂ ಧರ್ಮಾಸ್ತಿಕಾಯಂ ಅಧರ್ಮಾಸ್ತಿಕಾಯಂ ಆಕಾಶಾಸ್ತಿಕಾಯಮೆಂಬ ಪಂಚಾಸ್ತಿಕಾಯನಿಕಾಯಮುಮಂ . . . ವ್ಯಾಖ್ಯಾನಂಗೆಯ್ಯಲ್ (ಸುಕುಮಾ. ೩-೩೯ಅ). 'ಪಂಚಾಸ್ತಿಕಾಯ' ಪರಾ. [ಸಂ.]

ಪುದ್ಗಳ ' ಪುದ್ಗಲ ' ನೋ.

ಪುನಃ (ಅ). ಮತ್ತೆ ; ಮರಳಿ : ನೀನು ಪುನಃ ಇಲ್ಲಿಗೆ ಬಂದು ಹೋಗು (ಕೂಡಿ).

ಪುನಃಪುನಃ (ದ್ವಿರುಕ್ತಿ) : ಗೀತೆಯ ಪುಟಗಳನ್ನು ಪುನಃಪುನಃ ತಿರುವಿದಾಗ ಮುಖ್ಯಸಂದೇಶ ' ಕರ್ಮಯೋಗ ' ಎಂಬುದು ಸ್ಫುಟವಾಗುತ್ತದೆ (ರರ್ಮಗೀ. ೦೧೩). [ಸಂ. ಪುನರ್]

ಪುನಃಶ್ರವಣ (ನಾ). ಮತ್ತೆ ಕೇಳುವುದು ; ಇನ್ನೊಂದು ಸಾರಿ ಕೇಳುವುದು : ಹಿಂದೆ ಹೇಳಿದ ಎಷ್ಟೋ ಕತೆಗಳ ಪುನಃಶ್ರವಣವಾಯಿತು (ಮೂರುಮಾ. ೦೪೦). [ಸಂ.]

ಪುನಃಸಮಾಗಮ (ನಾ). ಮರಳಿ ಕೂಡುವಿಕೆ ; ಪುನರ್ಮಿಲನ : ಹೇಮಕೂಟದ ದಿವ್ಯಾಶ್ರಮದಲ್ಲಿ ದಂಪತಿಗಳ ಪುನಃಸಮಾಗಮ (ಕಾವ್ಯಸ. ೩೦). [ಸಂ.]

ಪುನಃಸ್ವಯಂವರ (ನಾ). ಒಮ್ಮೆ ಸ್ವಯಂವರವಾಗಿ ಮದುವೆಯಾದ ವಳಿಗೆ ಮತ್ತೊಮ್ಮೆ ನಡೆಸುವ ಸ್ವಯಂವರ : ಸೃಜಿಸಿದನು ಸುದ್ಧಿಯನು ನೃಪಭೂಭುಜರ ನಗರಂಗಳಲಿ ನಿಷಧನ ನಿಜಪನಿತೆಗೆ ಪುನಃಸ್ವಯಂವರವೆಂದು (ತೊರಣಾ. ೩-೨-೧೭). [ಸಂ.]

ಪುನಕಾಲ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಜಗನಜ × × ಬಟಿಯ ಪುನಕಾಲರ ಮಗಂ ಜೂನಿಕವನ ತಮ್ಮಂ ಚೋಟಪೆರ್ಮ್ಮಡಿಯರ ಮಱುಲಾದ ಗಣ್ಡ × × ಸಾವಿತರದೇವ (ಎಕ. II. ೩೭೬-೨ ; ಸು. 1015). [?]

ಪುನಗು 'ಪುಣುಗು' ನೋ.

ಪುನರಪಿ$_1$ (ನಾ). ೧. ಮತ್ತೊಂದಾವರ್ತಿ ; ಇನ್ನೊಂದು ಸಲ,—ಬಾರಿ : ಬಟ್ಟೆಯ ಮೆಟ್ಟಿ ಹೋಗಿ ಪುನರಪಿಯಾಗಿ ತಿರಿಗಿದಲ್ಲಿ ಊರ ಬಾಗಿಲ ಬಟ್ಟೆಯೊಂದಱಲ್ಲಿಯೇ ಹೋಗಬೇಕು (ಮರೇಸ. ೨೮೭-೬೬); ಹಿತ್ತಲ ಸೊಪ್ಪಿಂಗೆ ನೀರ ಹೊಯಿದು ಮತ್ತೆ ಪುನರಪಿಯಾಗಿ ಕೊಯಿವಪನಂತೆ ಭಕ್ತರಿಗೆ ಬೋಧೆಯ ಹೇಳಿ ಚಿತ್ತವೃತ್ತಿಯನಱಿದು ಬೇಡುವಂಗೆ ಇನ್ನೆತ್ತಣ ಮುಕ್ತಿ (ಅಂಬಿಗ. ೪. ೩೮೯-೦೮). ೨. ಮತ್ತೆ ಮಾಡುವ ಪರಾಮರ್ಶೆ ; ಪುನರ್ವಿಮರ್ಶೆ : ಕುಱುಹಿನಿಂದ ಅಱಿದಿಹೆನೆಂದಡೆ ಆ ಅಱಿವು ಪುನರಪಿಗೊಳಗಾಯಿತ್ತು (ಸೋಳಕಾ. ೭೩-೨೮೭). [< ಪುನರಪಿ$_2$]

ಪುನರಪಿ$_2$ (ಅ). ಮರಳಿ ; ಮತ್ತೆ ; ಪುನಃ : ಜನಮೇಜಯನು ಮುನ್ನಿತ್ತ ಅಗ್ರಹಾರವಿದಂ ಪುನರಪಿ ಸಮಗ್ರದಲ್ಲುದ್ಧರಿಸಿ (ಭಸಪು. ೩೬-೧೩) ; ಕರ್ಣನು ಭೀಮಸೇನನ ರಥವನಱಸುತ ಬಂದು ಪುನರಪಿ ಕಾಳಗವ ಹಿಡಿದ (ಕುಸ್ವಾಪ್ರೀ. ೦೩-೪೦) ; ನಾನು ಪುನರಪಿ ಅಲ್ಲಿಗೆ ಹೋದರೆ ಫಲವೇನು? (ಮಂಜುಸಿ. ೨೬). [ಸಂ.]

ಪುನರಾಗಮನ (ನಾ). ಮರಳಿ ಬರುವಿಕೆ : ಬೇಸರಿನ ಮಳೆಗಾಲ ದಂತಿರ್ದಳಾ ಲಲನೆ ಸರಸ ಪುನರಾಗಮನದ ಶರತ್ಸಸ್ನತೆಗೆ ತಪಮಿರ್ದ ನೆಲವೆಣ್ಣಿನಂತೆ (ಜಕ್ಕಾಂಗ. ೩೯-೦೬೦೮). [ಸಂ.]

ಪುನರಾವರ್ತನೆ (ನಾ). ಮತ್ತೊಂದು ಸಲ ಮಾಡುವುದು ಅಥವಾ ಆಗುವುದು : ಪಾಠದ ಪುನರಾವರ್ತನೆಯನ್ನು ಪ್ರಶ್ನೋತ್ತರಗಳ ಮೂಲಕವಾದರೂ ಮಾಡಿಸಬಹುದು (ಶಿಕ್ಷರ. ೨೨೯). [ಸಂ. ಪುನರಾವರ್ತನ]

ಪುನರಾವರ್ತಿಸು (ಕ್ರಿ). ಮಾಡಿದುದನ್ನೇ ಮತ್ತೆ ಮಾಡು ಅಥವಾ ಆದುದೇ ಪುನಃ ಆಗು : ಆ ಅಂತಸ್ತುಗಳನ್ನೆಲ್ಲಾ ಇಂದಿನವರೂ ಪುನರಾವರ್ತಿಸುವುದು ವ್ಯರ್ಥ (ಶಿಕ್ಷರ. ೦೨೩). [ಪುನರಾವರ್ತನೆ+—ಇಸು$_3$]

ಪುನರಾವೃತ್ತಿ (ನಾ). ಮತ್ತೊಂದು ಸಲ ಮೊದಲಿನಂತೆ ಆಗುವಿಕೆ ಅಥವಾ ಮಾಡುವಿಕೆ : ಸಾಗರದ ಸುಪರಿಪೂರ್ಣಜಲದೊಳ್ಕೆರೆದ ನದಿಗಳಿಗನ್ನು ಪುನರಾವೃತ್ತಿದೋರದ ತೆರದಿ (ಗಗಶಾ. ೦೭-೩೭) ; ಇಂತಹವರ ಪುನರಾವೃತ್ತಿಯಾಗದಂತೆ ಎಚ್ಚರ ತೆಗೆದುಕೊಳ್ಳಿರಿ (ರಂಗಗೀ. ೬೦). [ಸಂ.]

ಪುನರುಕ್ತ (ಗು). ೧. ಮತ್ತೆ ಹೇಳಿದ ; ಪುನಃ ನುಡಿದ. (ನಾ). ೨. ಇನ್ನೊಮ್ಮೆ ಹೇಳಿದುದು ; ಮತ್ತೆ ನುಡಿದುದು : ಮರನಲ್ಲದೆ ತಿಲಕಂ ಪೇಚರರ್ಗಂ ನೃಪನದಱ ಮೇಗೆ ಚಕ್ರಂ ಪುಟ್ಟಿರ್ದಿರೆ ಮೊದಲಗಣ್ಣ ಪುಣ್ಯಾಂತರಕ್ಕೆ ಪುನರುಕ್ತವಾದುದೇಂ ವಿಸ್ಮಯವೋ (ಶಾಂತಿಪು. ೨-೩೯) ; ಪೋಗೆ ಸಿರಿ ಬಂಧುವಧೂಕತಿ ವೃದ್ಧರಾಜ್ಯಮೆಂದೆಳಸದೆ ಕೂಡೆ ಬೇರ್ಪಡೆ ಬಟ್ಟಿಕ್ಕಿವನಾನುಟ್ಟೊಂದು ಮಾತು ಭೂತಳಭರಧಾರಣಕ್ಷಮಭುಜಾಬಳ ಪೇಟ್ಟು ಪುನರುಕ್ತಮಲ್ಲವೇ (ಶಾಂಪ್ರಪು. ೨-೩೦). ೩. = ಪುನರುಕ್ತಿ ೨ : ಪುನರುಕ್ತಂ ಸಂಧಿದೋಷಂ ಸ್ವರತತಿ ಪದಪೂರ್ಣೋಕ್ತಿದೋಷಂಗಳೆಂದೆಂಬಿನಿತುಂ ದೋಷಂಗಳು ಬಿಟ್ಟು (ಸೂಕ್ತಿಸು. ೦೬-೩೯). [ಸಂ.]

ಪುನರುಕ್ತಿ (ನಾ). ೧. ಹೇಳಿದುದನ್ನೇ ಮತ್ತೆ ಹೇಳುವುದು. ೨. [ಕಾವ್ಯವಿಾ] ಒಂದು ವಾಕ್ಯದೋಷ; ಅನಗತ್ಯವಾದ ಶಬ್ದಾರ್ಥಗಳ ಪುನರುಚ್ಚರಣೆ : ಪುನರುಕ್ತಿ—ವಿಶೇಷ ಪ್ರಯೋಜನವೇನೂ ಇಲ್ಲದೆ ಒಂದೇ ಅರ್ಥವುಳ್ಳ ಒಂದೇ ಪದವನ್ನು ಅನೇಕ ಸಾರಿ ಉಪಯೋಗಿಸುವುದು (ಕೃಪಿಶಾ. ೨೨೬). ೩. (ಆಲಂ) ಬೇರೆ ಮಾತು : ನಾಲಗೆಗೆ ಪುನರುಕ್ತಿಯಾಗೆ ಪುರುಧ್ರಿ ನಗುವಳೆಲೆ ಮೇಲೆ ನಾವ್ ನುಡಿದೆಡಹೆಂಬುದು ಮೇಲು ಮಾತಾಗಿಹುದು (ತೊರಣಾ. ೩-೬-೪೦). [ಸಂ.]

ಪುನರುಚ್ಚರಿಸು (ಕ್ರಿ). ಹೇಳಿದುದನ್ನು ಹೇಳಿದಂತೆಯೇ ಮತ್ತೆ ಹೇಳು : ಪರದೇಶದವರೂ ಅವರ ಅಭಿಪ್ರಾಯವನ್ನು ಮಕ್ಕೀಕಾಮಕ್ಕಿ ಪುನರುಚ್ಚರಿಸುವ ನಮ್ಮ ದೇಶದವರೂ ಹೇಳುವ ಮಾತುಗಳನ್ನು ನಾವು ನಂಬಬೇಕಾಗಿಲ್ಲ (ರೇಕೃಸ್ಮೃ. ೪೨); ಬಲೆನಿನ್ ಸಂತೋಷದಿಂದ ಆ ಮಾತುಗಳನ್ನೆಲ್ಲಾ ತನ್ನಷ್ಟಕ್ಕೆ ತಾನು ಪುನರುಚ್ಚರಿಸಿಕೊಂಡನು (ಮಲಿಶಾ. ೨೦೦). [ಸಂ. ಪುನರುಚ್ಚರಣ + — ಇಸು$_3$]

ಪುನರುಜ್ಜೀವನ (ನಾ). ಮತ್ತೆ ಏಳಿಗೆಯಾಗುವಂತೆ ಮಾಡುವಿಕೆ ; ಪುನರುದ್ಧಾರ : ಕೋರಿಯದಲ್ಲಿ ಲೋಕಮತಾನುಸಾರವಾಗಿ ಕೋರಿಯದ ರಾಜಮನೆತನದ ಪುನರುಜ್ಜೀವನಕ್ಕೊಪ್ಪಬೇಕಾಯಿತು (ಜಗಂ. ೬೦). [ಸಂ.]

ಪುನರುಜ್ಜೀವಿತ (ನಾ). ಪುನರುದ್ಧಾರ ಹೊಂದಿದುದು ; ಏಳಿಗೆಯನ್ನು ಪಡೆದುದು : ಆರ್ಯಸಂಸ್ಕೃತಿಯು ಪುನರುಜ್ಜೀವಿತವಾಗಿ . . . ಪುರುಷರತ್ನಗಳು ಎಲ್ಲಾ ವಿಧವಾದ ಕಾರ್ಯಗಳಲ್ಲೂ ಪ್ರವರ್ತಿಸತೊಡಗಿದರು (ರಾಕ್ಷೋದ. IV ಪ್ರಸ್ತಾವನೆ). [ಸಂ.]

ಪುನರುಜ್ಜೀವಿಸು (ಕ್ರಿ). ಮತ್ತೆ ಪ್ರಚಾರಕ್ಕೆ ತರು ; ಪುನಶ್ಚೇತನಗೊಳಿಸು : ಆ ಮತ್ತು ಟ ಕಾರಗಳನ್ನು ಪುನರುಜ್ಜೀವಿಸುವ ವಿನಮ್ರ ಪ್ರಯತ್ನಗಳು . . . ಪಾಂಡಿತ್ಯಪ್ರಿಯಮಂಡಿತಮಂಡಳಿಯಿಂದ ನಡೆದಿವೆ (ದ್ರಾವಿಸಾ. ೩೩೬). [ಪುನರುಜ್ಜೀವನ + — ಇಸು$_3$]

ಪುನರುತ್ಥಾನ (ನಾ). ಚೈತನ್ಯವನ್ನು ಹೊಂದುವಿಕೆ ; ಅಭಿವೃದ್ಧಿಗೆ ಬರುವಿಕೆ : ಧಾರ್ಮಿಕಕ್ಷೇತ್ರದಲ್ಲಿ ದಕ್ಷಿಣಹಿಂದುಸ್ಥಾನದಲ್ಲಿ ಹಿಂದೂ ಧರ್ಮದ ಪುನರುತ್ಥಾನವು ಜೋರಿನಿಂದ ನಡೆದಿತ್ತು (ಸಾಜಿಸ. ೦೩೯) ; ಹಿಂದೂಧರ್ಮವು ಪುನರುತ್ಥಾನವಾದ ಮೇಲೆ ಅಲ್ಲಿಗೆ ವೈದಿಕಮತವೂ ಹೋಗಿ, ಅಲ್ಲಿ ಹಿಂದೂರಾಜರು ರಾಜ್ಯ ಕಟ್ಟಿದರು (ಬಿಭಸ. ೨೯). [ಸಂ.]

ಪುನರ್ಘಟನೆ (ನಾ). ಮರಳಿ ವ್ಯವಸ್ಥೆಮಾಡುವಿಕೆ : ಹೊಸ ಸಾಧಾರಣ ಚುನಾವಣೆ ನಡೆದು ಪರಿಷತ್ತಿನ ಪುನರ್ಘಟನೆಯಾಗುವವರೆಗೆ ರಾಜ್ಯಪಾಲರು . . . ನಿರ್ದಿಷ್ಟವಾಗಿರುವ ಕಾರ್ಯಕ್ರಮವನ್ನು ಕೈಕೊಳ್ಳಬಹುದು (ಭಾರಾಸ. ೨೬೪); ಆರ್ಥಿಕ, ಸಾಮಾಜಿಕ ಹಾಗು ರಾಜಕೀಯ ಪುನರ್ಘಟನೆಯಾಗದೆ ಹೋದರೆ ನವ್ಯಜೀವನಸಾಹಿತ್ಯಗಳ ವಿಕಾಸ ಬರಿ ಒಂದು ಮಧುರಸ್ವಪ್ನ. ಆದರೆ ಈ ಪುನರ್ಘಟನೆಯ ರೀತಿ ಯಾವುದು ? (ಸಪ್ಯಕಾ. ೧೬).

[ಸಂ. ಪುನರ್ಘಟನಾ]

ಪುನರ್ಜನ್ಮ (ನಾ). ಮರುಹುಟ್ಟು ; ಮತ್ತೊಂದು ಜನ್ಮ : ಮುನಿ ದೀಶಂ ತವೆ ಸುಟ್ಟು ಮುಂ ಕರುಣದಿಂದಿತ್ತಂ ಪುನರ್ಜನ್ಮಮಂ ನಿನಗೆ (ಸಂಪಣಾ. ೪-೩೧) ; ನಿರ್ಜರೇಂದ್ರನ ಸೂನು . . . ಮೈಮಱೆದು ಬಿದ್ದನಿಳೆಯೊಳ್ ಪುನರ್ಜನ್ಮಮೆನೆ ಕೂಡೆ ಚೇತರಿಸಿ ನರನೆಚ್ಚು ಕಡಿದನಾತನ ಧನುವನು (ಕೈಲಾಪಾ. ೨೩-೩೩) ; ಪುನರ್ಜನ್ಮ ಪಡೆಯಿತು ! ಹರಿದು ಹಂಚಿ ಹೋದ ನಾಡು ಮತ್ತೆ ಒಂದಾಯಿತು ! (ಪಿಪಿದ. ೬೯-೦).

[ಸಂ. ಪುನರ್ಜನ್ಮನ್]

ಪುನರ್ಜಾತ (ಗು). ೧. ಮರಳಿ ಹುಟ್ಟಿದ ; ಹೊಸಜನ್ಮವನ್ನು ಪಡೆದ. 'ಅಪುನರ್ಜಾತ' ಹೋ. (ನಾ). ೨. ಸಂಸ್ಕಾರದಿಂದ ಹೊಸ ಜೀವನವನ್ನು ಪಡೆದವನು : "ಪುನರ್ಜಾತಃ—ಶಿವದೀಕ್ಷೆ ಹೊಂದಿದವನು, ಗುರುಕೃಪೆ ಪಡೆದವನು" (ಶರಸಾ. ೨೪-೭) ; ಪೂರ್ವವಳಿದು ಪುನರ್ಜಾತರ ಮಾಡಿದೆವೆಂಬಿರಿ ಪೂರ್ವವಳಿದುದಕ್ಕೆ ಭವ ಹಿಂಗಬೇಕು (ಸೋಳಿಮಾ. ೩೯-೦೬೩) ; ನರ ಪಶು ಪ್ರಾಣಿಗಳಿಗೆ ಸುಜ್ಞಾನದೀಕ್ಷೆಯನಿತ್ತು ಪೂರ್ವಗುಣವಳಿದು ಪುನರ್ಜಾತರೆನಿಪ (ಪಪಸೋ. ೦೮-೧೬). [ಸಂ.]

ಪುನರ್ದತ್ತಿ (ನಾ). ಮರಳಿ ಮಾಡುವ ದಾನ ; ಪುನಃ ಕೊಡುವ ದಾನ : ಆನೆಸೆಜ್ಜೆಯ ಬಸದಿಗೆ ತಾಂಬ್ರಶಾಸನಮರ್ಯ್ಯಾದೆಯಿಂದಾಳ್ದ ಗುಡಿಗೆಱೆಯ ಕಮ್ಮತವಳಗಾಗಿಯಿಱೆ ಪೊಲನುಳ್ಳನಿತುಮನಿನ್ನಿಲಿಂ ಮೇರೆಯಮ್ಮ ಧರ್ಮಮಾಗಿ ಪುನರ್ದ್ದತ್ತಿ ಮಾಡಿ ಶ್ರೀನನ್ದಿಪಣ್ಡಿತದೇವರ್ಗ್ಗೆ ಹಸ್ತೋದಕಂಗೆಯ್ದು ಕೊಟ್ಟೆವು (ಸೌಇಇ. XX, ೪೬-೪೦ ; 1072); ಪುನರ್ದ್ದತ್ತಿಯಾಗಿ ನಾಲ್ಕುಂ ಸುಂಕದೊಳವೆರಡೊಲ್ದೆಱೆ ಕೊಡವೀಸವ ಸಹಿತಮಾಗಿ ಬಿಟ್ಟ ಉಪ್ಪಿನ ಪೆ[ಂಟಿ] ಅಱುವತ್ತು (ಸೌಇಇ. XX, ೬೦-೨೪ ; 1088). [ಸಂ.]

ಪುನರ್ದರ್ಶನ (ನಾ). ಮತ್ತೆ ಕಾಣುವಿಕೆ ; ಪುನಃ ಮಾಡುವ ಭೇಟಿ : ಪುನರ್ದರ್ಶನಮಕ್ಕೆಂದುಂ ಯಶಮಕ್ಕೆ ವಿಜಯಮಕ್ಕೆಂದೊಳ್ಪಕ್ಕೆಂದು . . . ಅಚ್ಯುತಕಲ್ಪಕಚ್ಯುತೇಂದ್ರಂ ಪೋದಂ (ಶಾಂತಿಪು. ೭-೧೦೬). [ಸಂ.]

ಪುನರ್ಧಾರೆ (ನಾ). ಮರಳಿ ಧಾರೆಯೆರೆದು ಕೊಡುವಿಕೆ ; ಪುನರ್ದತ್ತಿ : ಶ್ರೀಮೂಲಸ್ಥಾನಭೋಗೇಶ್ವರದೇವರಿಗೆ ಸರ್ವ್ವನಮಸ್ಯವಾಗಿ ಪುನರ್ದ್ಧಾರೆಯ ಮಾಡಿದರು (ಸೌಇಇ. XX, ೦೯೫-೮ ; 1215).

[ಸಂ. ಪುನರ್ಧಾರಾ]

ಪುನರ್ನವ (ಗು). ೧. ಮತ್ತೆ ಹೊಸತಾಗುವ. (ನಾ). ೨. ಮರಳಿ ಹೊಸತಾದುದು ; ಪುನಃ ಹುಟ್ಟಿ ಬೆಳೆದುದು : ಉಡಿದೀ ನಮ್ಮಿರ್ವರ ತೊಡರ್ಪಿಂದು ನೀಂ ಪುನರ್ನವಂ ಮಾಡಿನ್ನುಂ (ಶಾಂತಿಪು. ೭-೦೦೪). ೩. ಹೊಸ ಚೈತನ್ಯವನ್ನು ಪಡೆದವನು : ದಿನದಿನದ ಜಾಡ್ಯದಲ್ಲಿ ಹೊಸತೇನೊ ಒಂದು ಚೈತನ್ಯ ಚಿಗುರಿ ಪುನರ್ನವನಾಗಿ ಅವನು ಕೆಲಸಕ್ಕೆ ಮರಳಿದರೆ ಶ್ರೇಯವಲ್ಲದೆ ? (ಗಾಳಿಪ. ೫೬). ೪. ಉಗುರು ; ನಖ : "ಕಾಮಾಂಕುಶಾಃ, ಕರರುಹಾಃ (ಪುನರ್ನವಾಃ) . . . ನಖರಾಃ—ಈ ೫ (೬?) ಉಗುರ್" (ಹಲಾಯು. ೪೯-೩೫೭). [ಸಂ.]

ಪುನರ್ನವಿ (ನಾ). ಒಂದು ಬಗೆಯ ಸಸ್ಯ ; ಬಿಳಿಯ ಗಣಜಿಲೆ ; ಕೊಮ್ಮೆಗಿಡ: "ಗಣಜಿಲೆ ಪುನರ್ನವಿ ಶಿವಾಟಿಕೆಯೆನಿಕ್ಕು" (ಮಂಗರಾ ೪೦-೩೦); ಕನಕದ ಕಾಯನೊಂದುದೆವಸಂ ತಿಱಿದಟ್ಟುಱೆ ಸುಣ್ಣದೂಱಲೊಳ್ ದಿನಮಿರಿಸಿಟ್ಟು ಕರ್ಚಿ ಗುರುಗುಂಜೆ ಪುನರ್ನವಿ ಪದ್ಮಪತ್ರಮೊಂಬಿನಿತುಮನಿಕ್ಕಿ ಸುಣ್ಣದೊಳವಂ ಪದಪಿಂ ತೆಗೆಪುತ್ತೆ . . . ಅಡುಗಾವ ಜಾಡವಂ (ಕೋಕೋಪ. ೬-೩೦). [< ಸಂ. ಪುನರ್ನವಾ]

ಪುನರ್ನವೆ (ನಾ). = ಪುನರ್ನವಿ : "ಪುನರ್ನವಾ, ಶೋಧಳ್ಳೀ—೨ ಕೊಮ್ಮೆಗಿಡ" (ಸಿದ್ಧಾಂತಿ. ೦೪೬). [ಸಂ. ಪುನರ್ನವಾ]

ಪುನರ್ಭರಣ (ನಾ). ಮರಳಿ ನೆಲೆಗೊಳಿಸುವಿಕೆ ; ನವೀಕರಣ ; ಜೀರ್ಣೋದ್ಧಾರ : ಪ್ರಘಟ್ಟದಿಂ ಕೆಟ್ಟ ಸಮ್ಮನ್ಧಿಯಿಂ ಪುನರ್ಬ್ಭರಣಂ ಮಾಡಿ (ಎಇ. XV, ೭೯-೦೬; 1050) ; ಪುರಿಗೆಱೆಯೊಳ್ಪೆರ್ಮಾಡಿಯ ಪುರವರಮಳಿದಿಱ್ದುದಂ ಗಜಾರಿಧ್ವಜನಾದರದಿನ್ದಮೆ ನೋಡಿ ಪುನರ್ಬ್ಭರಣಂ ಮಾಡಲ್ಕೆವೇಡಿ ಜಯಕೇಶಿನ್ರಿಪಂ . . . ಮಾಡಿದಂ ತತ್ಪುರಮಂ (ಸೌಇಇ. XX, ೪೭-೩೩ ; 1074); ರಾಯಮುರಾರಿ ಸೋವಿದೇವ . . . ಮಣಿಯೊರಂ ಪುನರ್ಬ್ಭರಣಂ ಮಾಡಿ ಮುತ್ತಗೆಯ ನಡುವಣ ದಕ್ಷಿಣ ಮುಖ ಶ್ರೀಚಿನಕೇಶವರ್ಗೆ ಧಾರಾಪೂರ್ವ್ವಕಂ ಕೊಟ್ಟಂ (ಕೊಲ್ಲಾಶಾ.೯-೪೫ ; 1170). [ಸಂ.]

ಪುನರ್ಭವ (ನಾ). ೧. ಮರುಹುಟ್ಟು ; ಪುನರ್ಜನ್ಮ : ಜಾನಿಸುತ ಪರಪದದಲ್ಲಿ ಕೂಡಿರ್ದನಾದೊಡೀ ರಸೆಯೊಳಾತಂಗಂ ಪುನರ್ಭವಮದಿಲ್ಲಂ (ಪಿಕೈಪು. ೬೩-೭೨). ೨. ಉಗುರು ; ನಖ : "ಪುನರ್ಭವಃ, ಕರರುಹಃ, ನಖಃ, ನಖರಃ . . . ೪ ಉಗುರುಗಳ ಹೆಸರುಗಳು" (ಸಿದ್ಧಾಂತಿ. ೦೯೩). ೩. ಕೂದಲು.

ಪುನರ್ಭವನಾಗು=ಮರಳಿ ಹುಟ್ಟುವವನಾಗು; ಸಾಯು : ದಿವಸಕರ ಚಂದ್ರಯುತ ಭಾರ್ಗವನಂ ಜನ್ಮಾವಸರದೊಳೀಕ್ಷಿಸುವಡೆ ದೇವವಿನೂತಂ ಪುಟ್ಟಿದ ಮಾನವನಿರದೆ ನವಾಬ್ದದಿಂ ಪುನರ್ಭವನಕ್ಕುಂ (ಜಾತಕಿ. ೬-೨೯). **ಪುನರ್ಭವನೆನಿಸು**=ಪುನರ್ಭವನಾಗು : ನಿಲೆ ತದಂಶಾಧೀಶ್ವರಂ ಷಷ್ಠಗೇಹದೊಳಾ ಲಗ್ನಭವಂ ಪುನರ್ಭವನೆನಿಕ್ಕುಂ ತತ್ತ್ವಮಾಣಾಹವಿಂ (ಜಾತಕಿ.೬-೩೭).

[ಸಂ.]

ಪುನರ್ಭವಿಸು (ಕ್ರಿ). ಮತ್ತೆ ಹುಟ್ಟಿ ಬರು : ನಿನ್ನ ಪತಿ . . . ದಹನವಾದಾ ನೀನು ಬಂದೆರಗಲಾವಿತ್ತಯಾಶೀರ್ವಚನಮೇನು ಪುಸಿಯದು ಪುನರ್ಭವಿಸಿ ಬಂದವನು (ಪಪಸೋ. ೭-೪೩). [ಪುನರ್ಭವ + — ಇಸ್ಸು]

ಪುನರ್ಭೂ (ನಾ). ೧. ಮರಳಿ ಹುಟ್ಟಿ ಬಂದುದು ; ಪುನರ್ಜನ್ಮ ಹೊಂದಿದುದು. ೨. ಮರುಹುಟ್ಟು ; ಪುನರ್ಜನ್ಮ. ೩. ಮರು ಮದುವೆಯಾದವಳು ; ಎರಡನೆಯ ಸಲ ಮದುವೆಯಾದವಳು : "ಪುನರ್ಭೂಃ, ದಿಧಿಷೂಃ—ಈ ೨ ಮಱುವಾಱವಳ್" (ಹಲಾಯು.೮೦-೩೩೦) ; ಪುನರ್ಭೂ ಎಂದರೆ ಮೊದಲು ಒಬ್ಬನನ್ನು ಮದುವೆಯಾಗಿ ಆಮೇಲೆ ಮತ್ತೊಬ್ಬನನ್ನು ಮದುವೆ ಮಾಡಿಕೊಂಡವಳು (ಅರ್ಯಾಧ. ೦೫೦). [ಸಂ.]

ಪುನರ್ಮಿಲನ (ನಾ). ಪುನಃ ಭೇಟಿಯಾಗುವಿಕೆ ; ಪುನಃಸಮಾಗಮ : ದುಷ್ಯಂತ . . . ತಮ್ಮ ಪುನರ್ಮಿಲನದ ಗುರುತಾಗಿ ಅದನ್ನು ತೊಡಿಸಲು ಬರುತ್ತಾನೆ (ರರ್ಮಸಾ. ೭೩). [ಸಂ.]

ಪುನರ್ರಚನೆ (ನಾ). ಇದ್ದುದನ್ನು ನವೀಕರಿಸಿ ಪುನಃ ನಿರ್ಮಿಸುವಿಕೆ ; ಪುನರ್ನಿರ್ಮಾಣ : ಶಿಕ್ಷಣದ ಪುನರ್ರಚನೆಯಲ್ಲಿ ರಾಷ್ಟ್ರ ಈಗ ಎರಡು ಮುಖ್ಯ ಮುಂಬುಗಳಲ್ಲಿ ಹೆಜ್ಜೆಯಿಡುತ್ತಿದೆ (ಶಿಕ್ಷದ. VIII ಮುಮ್ಮಕಿ).

[℘ 'ಪುನಾರಚನೆ' ಎಂಬುದು ಇದರ ಶುದ್ಧರೂಪ]

ಪುನರ್ರಚಿಸು (ಕ್ರಿ). ಮರಳಿ ನಿರ್ಮಿಸು ; ಪುನಃ ರಚಿಸು : ಪದಗಳ ಧ್ವನಿರೂಪವನ್ನು ಪುನರ್ರಚಿಸಲು ಈ ಎಲ್ಲ ದ್ರಾವಿಡಭಾಷೆಗಳ ರೂಪಗಳನ್ನು ತುಲನೆ ಮಾಡಿ ನೋಡಬೇಕು (ದ್ರಾವಿಡ. ೦೦ ಹಿಸ್ಸಲಿ).

℘ ವ್ಯಾಕರಣದ ಪ್ರಕಾರ ಇದು ಅಸಾಧುರೂಪವಾದರೂ ಈಚೆಗೆ

ಇಂತಹ ಶಬ್ದಗಳು ಅಧಿಕವಾಗಿ ಪ್ರಯೋಗಗೊಳ್ಳುತ್ತಿವೆ. ಉದಾಹರಣೆಗೆ 'ಅಂತರ್ರಾಷ್ಟ್ರೀಯ' ಇತ್ಯಾದಿ. [ಪುನರ್ರಚನೆ + —ಇಸ್ಯು]

ಪುನರ್ವರಣ (ನಾ). = ಪುನರ್ಭರಣ : ರುದ್ರಶಕ್ತಿಪಣ್ಡಿತರ್ಗ್ಗೆ ಧಾರಾಪೂರ್ವ್ವಕಂ ಸರ್ವ್ವನಮಶ್ಯಂ ಪುನರ್ವ್ವರಣಮ್ಮಾಡಿ ಕೊಟ್ಟ ಪೂರ್ವ್ವವೃತ್ತಿಯಗರ್ದ್ದೆ ಮತ್ತರೆರಡು (ಪ್ರಾಶಿ. ೧೯೨೯, ೬೩-೩೬ ; 1025).

[ಇದು 'ಪುನರ್ಭರಣ' ಎಂಬುದರ ಅಪಲಿಖಿತವಿರಬಹುದು]

ಪುನರ್ವಸತಿ (ನಾ). (ಪುನಶ್ಚೈತನ್ಯವನ್ನು ಪಡೆಯಲು ಒದಗಿಸುವ) ಮರುವಸತಿ : ಕಾಯಿಲೆಯಿಂದ ನರಳಿದ ರೋಗಿಗಳಿಗೆ ಪುನರ್ವಸತಿಯನ್ನು ಮಾಡಿಕೊಡಬೇಕು (ಕೆಂಕೋ. ೯೭). [ಸಂ.]

ಪುನರ್ವಸು (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರರಾಶಿಗಳಲ್ಲಿ ಏಳನೆಯದು ಮತ್ತು ಆ ರಾಶಿಯಲ್ಲಿ ಬರುವ ಮಳೆ : ಪುನರ್ವಸುಃ, ಅದಿತಿಃ, ಆದಿತ್ಯಂ, ಅಧಿದೈವತಂ ಈ ೪ ಪುನರ್ವಸು ನಕ್ಷತ್ರಕೆ ಪೆಸರು (ಶಾಸ್ತ್ರ. ೬೨-೯). [ಸಂ.]

ಪುನರ್ವಿಮರ್ಶೆ (ನಾ). ಮರಳಿ ಪರಾಮರ್ಶಿಸುವುದು : "ಪುನಶ್ಚರಣ, ಪುನರ್ವಿಮರ್ಶೆ" (Revision. ಪತ್ರಿಕಿ. ೭೦). [ಸಂ. ಪುನರ್ವಿಮರ್ಶ]

ಪುನರ್ವಿವಾಹ (ನಾ). ಮರುಮದುವೆ : ಕೆಲವು ಸಂದರ್ಭಗಳಲ್ಲಿ ಪುನರ್ವಿವಾಹವು ಯುಕ್ತವೆಂದು ಹೇಳಲ್ಪಟ್ಟಿದೆ (ಶಾರದ. ೩೩). [ಸಂ.]

ಪುನರ್ವ್ಯವಸ್ಥೆ (ನಾ). ಮೊದಲಿದ್ದುದನ್ನು ಬದಲಿಸಿ ಮರಳಿ ಮಾಡಿದ ಏರ್ಪಾಟು : ಮುಂದಿನ ನಮ್ಮ ಶಾಲೆಗಳು ಪುನರ್ವ್ಯವಸ್ಥೆಯಾಗಬೇಕಾಗಿದೆ (ಶಿಕ್ಷದ. ೦೭೨) ; ತನ್ನ ಬಾಹ್ಯಜೀವನವನ್ನೆಲ್ಲ ಪುನರ್ವ್ಯವಸ್ಥೆಗೊಳಿಸಬೇಕೆಂದು ನೆಕ್ಲುದೋವ್ ಉದ್ದೇಶಿಸಿದ್ದನು (ಪುಸರು. ೦೯೯).

[ಸಂ. ಪುನರ್ವ್ಯವಸ್ಥಾ]

ಪುನಶ್ಚರಣೆ (ನಾ). ಮಂತ್ರವನ್ನು ಪುನಃಪುನಃ ಉಚ್ಚರಿಸುವಿಕೆ ; ಜಪಿಸುವಿಕೆ : ಮಂತ್ರ ಕಲಿತಡೇನು ಪುನಶ್ಚರಣೆ ಮಾಡಿದಲ್ಲದೆ ಸಿದ್ಧಿಸದು (ಅಪಸಂ. ೧೯೩-೮೭೬) ; ವಸುರಜತಸ್ಫಟಿಕಮೃತ್ತಿಕಾಶಿಲಾಮಯಲಿಂಗಮಸುವಿಟ್ಟು ಪೂಜಿಸುತೆ ತೇಜಪುನಶ್ಚರಣೆಯಿಂ ಪರಿಶುದ್ಧಿಯೊಡೆದು (ಪಪಮೋ. ೨-೩೬). [< ಸಂ. ಪುರಶ್ಚರಣ]

ಪುನಶ್ಚೇತನ (ನಾ). ಮರಳಿ ಚೈತನ್ಯವನ್ನು ಹೊಂದುವಿಕೆ : ಶ್ರೀಮತಿ ರುಕ್ಮಿಣಿದೇವಿ ಮುಂತಾದವರು ಕಲಾಸಂಪ್ರದಾಯಗಳನ್ನು ಪುನಶ್ಚೇತನಗೊಳಿಸಿ ಬೆಳೆಸಲು ಪ್ರಶಂಸನೀಯವಾದ ಸೇವೆಯನ್ನು ಸಲ್ಲಿಸಿದರು (ಶಾರದ. ೩೩೨). [ಸಂ.]

ಪುನಶ್ಚೇತನಗೊಳ್ಳು (ಕ್ರಿ). ಮರಳಿ ಚೈತನ್ಯವನ್ನು ಪಡೆ,—ಉತ್ಸಾಹವನ್ನು ಹೊಂದು : ಮಳೆಯಿಂದ ಪುನಶ್ಚೇತನಗೊಂಡ ತೋಟ ಹೊಲಗಳ ದೃಶ್ಯದಿಂದ ಅವನು ಆನಂದಪುಲಕಿತನಾದನು (ಪುಸರು. ೪೬೬).

[ಪುನಶ್ಚೇತನ + ಕೊಳ್ಳು$_1$ (< ಕೊಳ್$_1$)]

ಪುನಸ್ಸ್ವಯಂವರ (ನಾ). ≡ ಪುನಃಸ್ವಯಂವರ : ಎನಗೆಯನ್ನು ಪುನಸ್ಸ್ವಯಂವರ ಮನದೊಳುಂಟೇ ನೀವು ಬರಬೇಕೆನುತ ವಾರ್ತೆಯ ಕಲ್ಪಿಸಿದೆ (ಪಳಸ. ೬-೫೬). [ಸಂ.]

ಪುನಹ (ಅ). ಮತ್ತೆ ; ಪುನಃ ; ಮರಳಿ : ಮನಸ್ಸು ತೃಪ್ತಿಗೊಳ್ಳದೆ ಪುನಹ ಅದೇ ಪ್ರಶ್ನೆಯನ್ನು ಹಾಕುತ್ತಿತ್ತು (ಪಡೆದಾ. II, ೯೪೬). [< ಪುನಃ]

ಪುನಾರಚನೆ (ನಾ). ಮರಳಿ ರಚಿಸುವುದು ; ಪುನರ್ನಿರ್ಮಾಣ : ಶರೀರದ ಬೆಳವಣಿಗೆ ಮತ್ತು ಪುನಾರಚನೆಗೆ ಅವಶ್ಯವಾದ ಕಚ್ಚಾಮಾಲನ್ನೊದಗಿಸುವುದು—ಮುಖ್ಯವಾಗಿ ಸಸಾರಜನಕಗಳು ಮತ್ತು ವಿವಿಧ ಜಾತಿಯ ಲವಣಗಳು—ಈ ಕೆಲಸವನ್ನು ಮಾಡುತ್ತವೆ (ಅಡುಸೌ. ೩೬).

[ಸಂ. ಪುನಾರಚನ]

ಪುನಾಲಿ (ನಾ). ಒಂದು ಬಗೆಯ ಔಷಧೀಸಸ್ಯ : ಚೀನಾಬಿಳಿಮರ, ಪುನಾಲಿ, ಹುದಿಬಳ್ಳಿ (ಪ್ರಾಸಿಗಿ. ೨೯-೩೬೯). [?]

ಪುನೀತ (ಗು). ೧. ಪವಿತ್ರವಾದ ; ಶುದ್ಧವಾದ : ಆತನಂ ನೋಡಿದೊಡೆ ಸಾಕು ಪುನೀತಭಕ್ತಿ ಗುಣತ್ವಪಹುದು (ಪಸಪು. ೬-೦೩) ; ಆ ಪ್ರೇಮವೆಂಬ ಪುನೀತವಸ್ತುವಿಗೆ ಪಕ್ಷಪಾತವಿಲ್ಲ, ತಾರತಮ್ಯವಿಲ್ಲ (ಸುಂದರಿ. ೦೪). (ನಾ). ೨. ಪರಿಶುದ್ಧವಾದುದು : ಪಾವನ : ಸದ್ಗುಣಚರಿತ್ರನಾಮಾಳಿಯಿಂ ಜಗಮಂ ಪುನೀತಮಂ ಮಾಳ್ಪ ನಿನ್ನೇಳಿಗೆಯನವನೆತ್ತ ಬಲ್ಲಂ (ಶ್ರೀಮಾ. ೦೬-೪೩). ೩. ಪರಿಶುದ್ಧನಾದವನು : ಉತ್ತಮಕುಲದೊಳೊಗೆದು ಪುನೀತನಾಗಿ . . . ಬಾಳ್ದು (ಪಸಪು. ೩-೩೬) ; ಮಂದಬುದ್ಧಿಯವರೂ ಶಿಕ್ಷಣದಿಂದ ಪುನೀತರಾಗುವಂತಾಯಿತು (ಶಿಕ್ಷದ. ೬೯೯). [ಸಂ.]

ಪುನೀತೆ (ನಾ). ಪರಿಶುದ್ಧಳಾದವಳು ; ಪಾವನೆ : ಆತನುತ್ತಮಸತಿ ವಿಶೇಷಪುನೀತೆ ಮಾದಾಂಬಿಕೆ ಸವಿನಯಾನ್ವಿತೆ ಸತ್ಕುಲಜಾತೆ (ಪಸಪು. ೨-೪೭).

[ಸಂ. ಪುನೀತಾ]

ಪುನುಗು 'ಪುಣುಗು' ನೋ.

ಪುನುವಲವಳ್ಳಿ (ನಾ). ಒಂದು ಊರಿನ ಹೆಸರು : ಪ ಸೊರಬ ತಾಲ್ಲೂಕಿನ ಈಗಿನ ಹುನವಳ್ಳಿ : ಬಳಗಾಱರ ಕೋಕರಂ ಪುನುವಲವಳ್ಳಿಯಲ್ಲಿಟ್ಟು ಪುಯ್ಯಲಂ ಪರಿದು ಮಾರ್ಬ್ಬಲಮಂ ತಳ್ತಿಱಿದು ಸ್ವರ್ಗಾಲಯಕ್ಕೆ ಸನ್ದಂ (ಎಕ. VIII, ಸೊರಬ. ೩೩೦-೬ ; 979).

[ಪುನುವಲ$_0$ + ಪಳ್ಳಿ$_1$]

ಪುನೆ (ನಾ). ಒಂದು ಬಗೆಯ ಸಸ್ಯ : ಸುರಗಿ, ಗರ್ದುಂಡಿ, ಪುನ್ನಾಗ, ಪುನೆ (ಪ್ರಾಸಿಗಿ. ೩೭-೦೦೪೩). [?]

ಪುನ್ನಮಿ 'ಪುಣ್ಣಮೆ' ನೋ.

ಪುನ್ನಾಗ (ನಾ). ೧. ಪುರುಷರಲ್ಲಿ ಶ್ರೇಷ್ಠನಾದವನು. ೨. ಗಂಡು ಆನೆ. ೩. ಬಿಳಿಯ ಆನೆ. ೪. ಪಟ್ಟದ ಆನೆ. ೫. ಕೋಣ. ೬. ಹಾವು. ೭. ಒಂದು ಬಗೆಯ ಮರ ಮತ್ತು ಅದರ ಹೂವು ; ಸುರಹೊನ್ನೆ : "ಪುನ್ನಾಗಃ. ಸುರಪರ್ಣಿಕಾ—ಈ ೨ ಸುರಹೊನ್ನೆ" (ಹಲಾಯು. ೩೫-೩೫) ; ಅಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಮೆಂದಾಗಡೆ . . . ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್ (ಸಂಪರಾ. ೪-೦೭) ; ಮುಳಿದು ಸ್ವರ್ಗಕೆ ಪರಿದು ಪೋಗುವ ತೆರದಿ ನೆಮ್ಮಿ ಗಗನದ ತುಡುಕಿ ಪುನ್ನಾಗ ನಾಗವಳ್ಳಿಯ ವೊಲಂ ಕಂಗೆಸೆದುವು (ಪಪಮೋ. ೪-೩೦). ೧, ೩, ೭ : ಮಿಗುವ ದ್ವಿಜಪರಿವಾರಿತಮಗಣಿತ ಪುನ್ನಾಗಸೇವ್ಯಮಾನಂ ವಂಶೋಪಗತಮೆನಿಸಿರ್ದ ಬೆಟ್ಟಂ ಸೊಗಯಿಸಿದುದು ರಾಜನಂತೆ ಲಕ್ಷ್ಮಿಯ ಪೆರ್ಚಿಂ (ಪಾರಪು. ೦೦-೦೪೩). ೨, ೬, ೭ : ಪುನ್ನಾಗವಿರಾಜಿತಮಿದು ಪನ್ನಗವಧುವಂ ಕರೇಣುವಂ . . . ನೆನೆಯಿಪುದಖಿಳಮೃಗಶರಣ್ಯಮರಣ್ಯಂ (ಪುಸ್ಪಪು. ೩-೬೬) ; "ನರಶ್ರೇಷ್ಠಾವನೀಜಾತಭೇದ ಲುಲಾಯಂ ಫಣಿ ಪಟ್ಟವರ್ಧನಗಜಂ ಪುನ್ನಾಗಮಕ್ಕುಂ" (ಪಾಪಾರ. ೬೨). [ಸಂ.]

ಪುನ್ನಾಗತೋಡಿ (ನಾ). [ಸಂಗೀತ] ಒಂದು ರಾಗದ ಹೆಸರು : ರಾಗ ಪುನ್ನಾಗತೋಡಿ, ಆದಿತಾಳ (ಹಸುಸು. ೭೪). [ಸಂ. ಪುನ್ನಾಗತೋಡೀ]

ಪುನ್ನಾಗವರಾಲಿ, ಪುನ್ನಾಗವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಪುನ್ನಾಗವರಾಲಿಯಾದರೋ (೨) ಷಡ್ಜಗ್ರಹಸಹಿತವಾದುದು, ಸರ್ವಕಾಲವೂ (ಗಾನಯೋಗ್ಯವಾದುದು) (ಸಂಗೀತ. ೦೩೩). ಪುನ್ನಾಗವರಾಳಿ : ಪುನ್ನಾಗವರಾಳಿ : ಇನೇ ಮೇಳಕರ್ತ ಹನುಮತೋಡಿಯಲ್ಲಿ ಜನ್ಯ (ಸಂಗೀಸಂ. ೦೩೨) ; ಇವರು ಪುನ್ನಾಗವರಾಳಿರಾಗವನ್ನು ನುಡಿಸಿ, ಹುತ್ತಗಳಲ್ಲಿ ಮಲಗಿದ್ದ ಹಾವುಗಳನ್ನು ಮೇಲಕ್ಕೆ ಸೆಳೆದು, ತಮ್ಮ ಮುಂದೆ ಹೆಡೆಯಾಡಿಸಿ ನರ್ತನ ಮಾಡುವಂತೆ ಮಾಡಿದ್ದಾರೆ (ಸಂಗೀತ. ೯೨).

[ಸಂ. ಪುನ್ನಾಗವರಾಲೀ]

ಪುನ್ನಾಗವರಾಳಿ 'ಪುನ್ನಾಗವರಾಲಿ' ನೋ.

ಪುನ್ನಾಟ (ನಾ). ಒಂದು ನಾಡಿನ ಹೆಸರು : ಶ್ರೀಮತ್ಕೊಡ್ಡಾಣ ಮಹಾಧಿರಾಜಸ್ಥಾಪನೀತನಾದ್ದು [: ಪುತ್ರೇಣ ಪುನ್ನಾಟರಾ[ಜ]ಸ್ಯನ್ವವರ್ಮ್ಮಪ್ರಿಯಪುತ್ರಿಕಾಜನ್ಮನಾ . . . ಸಮಸ್ತ ವಾಣ್ಣಾಟ ಪುನ್ನಾಟಾಧಿಪತೀನಾ (ಕ್ಯಾಂ. ೦೯೯೦, ೦ ೫೪; 7ಹಗ). [< ಪುನ್ನಾಡು]

ಪುನ್ನಾಡಿ (ನಾ). ದೇಹದಲ್ಲಿರುವ ಪನ್ನೆರಡೂ ನಾಡಿಗಳಲ್ಲಿ ಒಂದು : ೧. ಇಡಾನಾಡಿಯಲ್ಲಿ ಮಂದಾಕಿನೀ ... ೭. ಪುನ್ನಾಡಿನಾಡಿಯಲ್ಲಿ ಗಂಡಿಕೆ ... ೧೧. ವಾರುಣಿ–ಗೋದಾವರಿ, ೧೨. ಪೂಷಾ –ಪಯಸ್ವಿನೀ (ಹೂಗಿ. ೯-೦೯ ೫೫೬ಹುಗ). [ಸಂ.]

ಪುನ್ನಾಡು, ಪೂನಾಡು (ನಾ). ಒಂದು ನಾಡಿನ ಹೆಸರು; ಕಾವೇರಿ ವೇತ್ರ ಕಪಿನಿ ನದಿಗಳ ನಡುವೆ ಇರುವ, ನಂಜನಗೂಡು, ಹೆಗ್ಗಡದೇವನಕೋಟೆ ತಾಲ್ಲೂಕುಗಳ ಸುತ್ತಮುತ್ತಲಿರುವ ಜಾಗ : ಶ್ರೀಮತ್ಕೊಂಗಣಿ ಮಹಾಧಿರಾಜಸ್ಯ ಅವಿನೀತನಾಮ್ನಃ ಪುತ್ರೇಣ ಪುನ್ನಾಡರಾಜಸ್ಯನ್ವವರ್ಮ್ಮಪ್ರಿಯಪುತ್ರಿಕಾಜನ್ಮನಾ . . . ಬೆಮ್ಮರೀಶ್ವರಸ್ಥಾನಮುದಳ ಪೂರ್ಬ್ಬ ದತ್ತ (ಇಆ. ೪. ೦೩೯–೩; 513); ಸ್ವಸ್ತಿಶ್ರೀ ಶಿವಮಾರ ಪೃಥುವೀ ರಾಜ್ಯಂಕೆಯೆ ಪುನ್ನಾಡಱುಸಾಸಿರಕ್ಕೆ ಎಜಿಯರ್ . . . ಸ್ತಿಱಿಯು ಮರಿಯಾದೆ ಕೊಟ್ಟರ್ (ಎಳ. III, ೫೦೩೫. ೩೬-೨; ಸು. 810); ಪುನ್ನಾಡರಸರಾ ಮಗನ್ದಿರ್ ಸೀಮರಸ × × × (ಎಳ. IX, ಡೇವಪ. ೪೦ ೨; ಸು. 900 ?). **ಪೂನಾಡು :** ತಳವನಗರ ಶ್ರೀವಿಜಯಜಿನಾಲಯಕ್ಕೆ ಪೂನಾಡು ಧಾಸಹಶ್ರ ಎಡೆನಾಡು ಸಪ್ತರಿ ಮಧ್ಯೆ ಬದಗೆಗುಪ್ಪೆ ನಾವ್ಯ ಮಹಾಧಿರಾಜೇನ ದತ್ತೇನ ಪಡಿಯೇಱಱಿಂಳಂ (ಎಳ. I (R). ೦-೦೮; 466 ಕ್ಯಾ); ಬೂತರಸ ಯುವರಾಜ ಪಥಮುಳ್ ನಿನ್ದು ಕೊಜ್ಜಳ್ನಾಡು ಪೂನಾಡವನಾಳುತಿಪ್ಪು (ಎಳ. III, ೫೦೩೪. ೭೫-೬; 870).

[ದೇ.ಕ ತವಿ. ಪುನನಾಟು; ಮಲ. ಪುನ್ನಾಡು]

ಪುನ್ನಾಹ (ನಾ). ಒಂದು ಬಗೆಯ ಕುದುರೆ: ಇಂದಿನಸಕ್ಕು ಪೂಷಕ ವ್ಯೇದಚ್ಛಾಯಾವಿರಾಜಿತಂ ಕರ್ಗಲ್ಬಣ್ಣಂದದ ಕೇಸರಮಾ ನೊರೆಯಂದ ಮನನುಕರಿಸಿ ತೋರ್ಪೊಡದು ಪುನ್ನಾಹ (೦೫ಕಾ. ೨-೨೯). [?]

ಪುನ್ನಿ (ನಾ). ಒಬ್ಬಾತನ ಹೆಸರು : ಕೊಟಿಯಮ್ಮನ ಅಳಿಯಂ ಚಪ್ಪಯ್ಯನ ಮಗಂ ಪುನ್ನಿ ಗೋಸಾಸಿ ಕೆಱಿಯಂಮ್ಮಾಡಿಸಿ ಕೊನಲ್ಲಿಯ ಮಹಾಜನಕೆ ಗೋಸಾಸಮಿಟ್ಟು (ಎಳ. VIII, ಹಾಗಿ. ೦೦೦-೭; ೨೫೦). [?]

ಪುನ್ಪಯಿರು (ನಾ). ಒಣಭೂಮಿ ಮತ್ತು ಅದರ ಮೇಲಿನ ಕಂದಾಯ; ಖುಷ್ಕಿಬೆಳೆ ಮತ್ತು ಅದರ ಮೇಲಿನ ಸುಂಕ : ಯಿ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾನ್ಪಯಿರು ಪುನ್ಪಯಿರು . . . ಉಂಟಾದ ಹಲ ಉಪಾಧಿಗಳೂ ಸಹ ಸೇರ್ಸಿ ಕೊಟ್ಟೆವು (ಕಾಇ. IX–ii, ೪೬೬–೭; 1470); ನಂಜೆ ಪುಂಜೆ ವಾನ್ಪಯಿರು ಪುನ್ಪಯಿರು . . . ಮೊದಲಾದ ಹಲ ಉಪಾಧಿಗಳು ಸಹ (ಕಾಇ. IX–ii, ೪೬೬–೭; 1472). [← ತವಿ. ಪುನ್ಪಯಿರ್]

ಪುನ್ಪುಲ 'ಪುನ್ಪೊಲ' ನೋ.

ಪುನ್ಪೊಲ, ಪುನ್ಪುಲ (ನಾ). ಒಣಭೂಮಿ; ನೀರಾವರಿಯಿಲ್ಲದೆ ಬೆಳೆಯುವ ಭೂಮಿ : ಕೊಟ್ಟೊದು ಬರನೂರಾಯು ತೆಱಿಯುಂ ಪುನ್ಪೊಲಮು × ನ್ನ × × (ಎಳ. X (೭), ಮುಳಿಬ. ೦೮೮–೬; ೨೫೦ ೫೫). **ಪುನ್ಪುಲ :** ಕಱುವೆನ್ನಿರ್ವ್ವರ್ಕ್ಕಮ್ಬನ್ಪುಲೆಮೆಲ ಪತ್ತೊನ್ದಿವಿ × (ಎಳ. XIV, ತಮಿಪು. ೨೫೨–೬; ?). [← ತವಿ. ಪುನ್ಪುಲ]

ಪುಪ್ಪೆ, ಪುಪ್ಪಿ, ಪುಬ್ಬಿ (ನಾ). ಹೂವು ; ಪುಷ್ಪ : 'ಪುಪ್ಪಸರ', 'ಪುಪ್ಪಿಡಿ' ಪರಾ. **ಪುಪ್ಪಿ :** ಪುಪ್ಪಕ್ಕೆ ಕೊಟ್ಟ ಗದ್ಯಾಣ ೧ (ಇಂ II, ೬೨೬ ; 1075) ; ಶ್ರೀಸಂಡಾದೀವಿಗೆಗಂ ಶ್ರೀಪದಪುಪ್ಪಕ್ಕಂ ನಂದನವನಕಂ . . . ಸಮಸ್ತವಸ್ತುಸಂಕವನಾಚೆಂದ್ರಾರ್ಕತಾರಂಬರಂ ಸಧರ್ಮವು ಪ್ರತಿಪಾಲಿಸಿದವಂ (ಎಳ. XIV, ಶ್ರೀಕಂಗ. ೨೫೫ ೫; ಸು. 1177). **ಪುಬ್ಬೆ :** ಆ ದೇವರ ಪೂಜೆಯ ಪುಬ್ಬಕ್ಕೆಂದು . . . ಹೂದೋಟಂ ಮತ್ತರು ೧ (ಸಿಇಇ. XX, ೦೦೯–೨೬ : 1148).

[<ಪ್ರಾ. ಪುಪ್ಪ . / ಸಂ. ಪುಷ್ಪ]

ಪುಪ್ಪಸರ (ನಾ). ಹೂವಿನ ಬಾಣವನ್ನು ಹೊಂದಿದವನು : ಮನ್ಮಥ : ಪುಪ್ಪಸರನ ರಾಣಿಗೆ ಮೆಯ್ದೊಡವನುಪೊಪ್ಪಿಸಿ ತುತಿಯು ಮಾಡಿದರು (ವೀಚಕ. ೦೭-೧೩). [ಪುಪ್ಪ+ಸರ]

ಪುಪ್ಪಟ (ನಾ). ಬಾಯಲ್ಲಿ ಆಗುವ ಒಂದು ಬಗೆಯ ಹುಣ್ಣು : 'ತಾಲುಪುಪ್ಪಟ', 'ದಂತಪುಪ್ಪಟ' ಪರಾ. [<ಸಂ. ಪುಪ್ಪಟ]

ಪುಪ್ಪಿಡಿ (ನಾ). ಹೂವಿನ ಹುಡಿ ; ಪುಷ್ಪರಜ : ಕರಿಯ ಮಲ್ಲಿಗೆಯ ಪಾವಸಕುಸುಮಪರಿಮಳವನುಂಡು ಶನ್ಮಕರಂದದೊಳ್ ವಿಂದು ಪುಪ್ಪಿಡಿಯೊಳು ಮನವೊಲ್ದು ಪೊರಳ್ದಂದಿನಿಂದ ಕಪ್ಪಾಗಿ . . . ಸಂಚರಿಪ ಪಟ್ಟದಿಗಳನುರಾಗಿಸುತ್ತಿರ್ದುವಾ ಪರವನಾಂತದೊಳ್ (ಪಂದಿಪು. ೩-೨೪) ; ತೆಂಬೆಲರಿಂದಲ್ಲಾಡುವ ತಳರ್ತೆಳವಾವಿನ ಪೂಗೊಂಚಲ ಪುಪ್ಪಿಡಿಯ ಮೊತ್ತದಿಂ ತಬ್ಬಿ ಕಾರ್ವಾರಿಗಳಿಂ . . . ಕಣ್ಗೊಳಿಕುಂ (ಪಾತ್ರಗೋ. ೦೨-೦೨).

[< ಪುಪ್ಪ + ಪುಡಿ]

ಪುಪ್ಪಿಸ 'ಪುಪ್ಪಿಸ' ನೋ.

ಪುಪ್ಪಿಸರೋಗ (ನಾ). ಶ್ವಾಸಕೋಶದ ರೋಗ ; ಉಬ್ಬಸ : ಅವಕ್ಕೆ ಬರುವ ಸಾಮಾನ್ಯರೋಗಗಳಲ್ಲಿ . . . ಶ್ವಾಸಕಾಂಗಗಳಿಗೆ ಸಂಬಂಧಪಟ್ಟ ಕಪಮ್ಮು, ಪುಪ್ಪಿಸರೋಗಗಳೂ ಮುಖ್ಯವಾದುವು (ಕಾಕೋ. I, ೭೫೯).

[ಪುಪ್ಪಿಸ (< ಪುಪ್ಪಿಸ) + ರೋಗ]

ಪುಪ್ಪಿಸರೋಗಿ (ನಾ). ಪುಪ್ಪಿಸದ ರೋಗವುಳ್ಳ ವ್ಯಕ್ತಿ : ಪುಪ್ಪಿಸ ರೋಗಿಗಳ ಉಗುಳಲ್ಲೂ ಎಲ್ಲರ ಕರುಳುಗಳಲ್ಲೂ ಈ ಅಣುಬೆಗಳು ಸಾಮಾನ್ಯವಾಗಿ ಇದ್ದೇ ಇರುವುವು (ಕಾಕೋ. I, ೭೭೬).

[< ಸಂ. ಪುಪ್ಪಿಸರೋಗಿನ್]

ಪುಪ್ಪಿಸ (ನಾ). ೧. ಶ್ವಾಸಕೋಶ. ೨. ಕಮಲದ ಹೂವಿನ ಬೀಜಕೋಶ. [ಸಂ.]

ಪುಬ್ಬ ' ಪುಬ್ಬೆ ' ನೋ.

ಪುಬ್ಬಾಮಿಗ (ನಾ). ಒಬ್ಬಾತನ ಹೆಸರು : ತೊಣಪಳ್ಳಿಯ ಗುಡ್ಡದ ಪುಬ್ಬಾವಿಗಂಗೆ ಮಾಳಿಂಗಿಗಾವಿಗಿತ್ತಿಪೂಗೆ ಪುಟ್ಟಿದ ಶ್ರೀಮಾತಂ (ಎಳ. VII, ೫೫೦. ೫೬೩ ೯ : ಸು. 810). [?]

ಪುಬ್ಬು 'ಪುರ್ವು' ನೋ.

ಪುಬ್ಬೆ, ಉಬ್ಬೆ, ಪುಬ್ಬ, ಪೂರ್ಬ, ಪೂರುವ, ಪುಬ್ಬೆ (ನಾ). ೧. [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಹನ್ನೊಂದನೆಯದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ಪೂರ್ವಫಲ್ಗುಣಿ : ಪೂರ್ವೆ-ಪುಬ್ಬೆ (ಕಮಪ. ಮು. ೫೮೪ ಕ್ರಯೋ); ಪುಬ್ಬೆ ೨ ವೃತ್ತಿ ಮಂಚೆದ ಪಾವದ ಹಾಗೆ (ಬಾಸ್ಕರ. ೬೦-೪); ಪುಬ್ಬೆ ಪಸೆ ಉಬ್ಬುಬ್ಬಿ ಹುಬ್ಬುರೂ ಗುಬ್ಬಿ ಪುಕ್ಕ ಸೆನೆಯದು (ಗಾಡಿ). **ಉಬ್ಬೆ :** ೧. ಉಬ್ಬೆಪಸೆ ಅಬ್ಬೇ ಪಾಲು (ಗಾಡಿ). **ಪುಬ್ಬ :** ೧. ತ್ರಿಕೋಣದ ಕರ್ಣದ ಮೇಲಿನ ನಕ್ಷತ್ರ ಪುಬ್ಬ. ಕೆಳಗಿನದು ಉತ್ತರಾ (ನಕ್ಷತ್ರ. ೬೯). ೨. [ಜೈನ] ಒಂದು ದೊಡ್ಡ ಕಾಲಮಾನ ; ಎಪ್ಪತ್ತುಲಕ್ಷ ಐವತ್ತಾರುಸಾವಿರಕೋಟಿ ವರ್ಷಗಳ ಅವಧಿ : ತೊಲಗದು ಪುಬ್ಬಕೋಟಿವರಿಸಂಖ್ಯೆವರಂ ಪರಮಾಯುಂ (೦೦೫. ೧-೩೫); ನೀನುಮೊಂದು ಪುಬ್ಬಕೋಟಿಕಾಲಮರಸುಗೆಯ್ವ . . . ದೇವನಾದ್ಯೆ (ಪಂಪಾಮಾ. ೬-೩೭ ೫) ; ಮೂವತ್ತಾಜುಲಕ್ಕಪುಬ್ಬಂ ರಾಜ್ಯಂಗೆಯ್ದೆ (ಪೂಪಕಿ. ೦೬). **ಪೂರ್ಬ :** ೧. ಸರಟಪುರದ ಅಬ್ಬುದಿವ್ಯಗ್ರಾ ×

ಯಾನು ಪುರ್ಬುದಿನ್ದ ತುಪ್ಪದೆ[ಜಿ]ನುಟಿದೋನ್ (ಶಾಶಾ. XI-1. ೦೨-೦೩ ; ೫೦7). ೨. ಮಹಾಬಲಖಚರೇಂದ್ರಂ . . . ಮೂಪತ್ರಾಙುಲಕ್ಕೆಪುರ್ಬಂ [ಪಾಶಾಂ. ಬ್ಬಂ] ರಾಜ್ಯಂಗೆಯ್ದೆ (೮೦ಪು. ೨-೨೩ ಪ). ಪೂರುವ : ೩. ಹಿಂದಿನ ಕಾಲ ; ಪೂರ್ವಕಾಲ : ಆರು ನಿನ್ನಂದದಲಿ ತವವನು ಪೂರುವದಲಾಚರಿಸಿದವರು (ತಿಪುಗಾ. ೬ ೨ ೫೪). ಹುಬ್ಬೆ : ೧. ಪೂರ್ವ—ಹುಬ್ಬೆ (ಶಪುಪ. ೨೬೦ ಪ್ರಹೋ.); ಅಬ್ಬವದು ರಕ್ತಾಕ್ಷಿಯಪರದ ಹುಬ್ಬೆಯಲಿ ರವಿಯಿರಲಿಕಾತನ ಸರ್ಬಸೈನ್ಯದ ರಕ್ತದಿಂದವೆ ಹುಟ್ಟಿತಾ ನದಿಯು (ಸಂಪಶ. ೨೬-೩೪).

[<ಸಂ. ಪೂರ್ವ]

ಪುಮಪತ್ಯ (ನಾ). ಗಂಡುಮಗು. [ಸಂ.]

ಪುಮಾಂಸ (ನಾ). ಗಂಡಸು ; ಪುರುಷ : ಕುಶಲರಾ ಗತಿಗಿಂದ ಕಿಂಚಿತ್ಕುಶಲವಿಲ್ಲೆಣಸಲ್ಕೆ ವಿಷಯಾವಶರ ಸಂಗತಿಯೊಂದಿಗಾಗುವದೊ ಪುಮಾಂಸರಿಗೆ (ಪಶಕಾ. ೦೨-೦೦). [<ಸಂ. ಪುಮಾನ್]

ಪುಮ್ಮೆ (ನಾ). ಒಂದು ಬಗೆಯ ಆಟ : "ಚಿಟ್ಟುಮಾರಿ ಪುಮ್ಮೆಯೊಳಕ್ಕುಂ" (ಕವಿಕಾ. ೨೨೬). [?]

ಪುಯ್, ಪುಯ್ಯಿ (ನಾ). ಹುಸಿ ; ಮಾಯೆ : ವಸುಧೆಯ ಭಾರಮಾನಿಟ್ಟಪದೆ ಸಿಸುತನದಿಂ ಪೊಟ್ಟುಗಳೆವ ಪುಯ್ಯಂ ಕಂಡೆಟ್ಟಿಸಿ ಬಿಸರುಹನಾಭನೊಳಿಂತು ಸಿರ್ದರ್ ಬಿಡುಗಣ್ಣರುಚಿತಕಾರ್ಯೋದಯಮಂ (ಗಿಕಗೋ. ೬-೦೬).

ಪುಯ್ಯಿ : 'ಪುಯಿನಡು' ಪರಾ. 'ಪುಸಿ₂' ಹೋ.

[ದೇ.॥ ತಮಿ. ಮಲ. ಕೋತ. ಪೊಯ್]

ಪುಯಲ್ 'ಪೊಯಲ್' ನೋ.

ಪುಯಲ್ಟು 'ಪುಯ್ಯಲ್ಟು' ನೋ.

ಪುಯಲ್ದೋರು (ಕ್ರಿ). ಕೂಗಿಬ್ಬಿಸು ; ಹುಯ್ಯಲಿಡು : ಬೊಬ್ಬಿರಿದು ಬಹುರವದಿ ಪುಯಲ್ದೋರುತಿರಲಕಿಕಠೋರಧ್ವಾನ ಕರ್ನಯುಗದಲಿ ಪೊಕ್ಕು ಹೃದಯ ಕಂಡ ಕಡೆಗೆ ಪರಿದೋಡುತಿರೆ ಶಬರಾಳಿ ರಭಸದಿಂದೆ (ಪಪಪೋ. ೧೬. ೨೦). [ಪುಯಲ್ (<ಪೊಯಲ್) + ತೋರು (<ತೋಱು)]

ಪುಯ್ಯಿ₁ 'ಪೊಯ್₁' ನೋ.

ಪುಯ್ಯಿ₂ 'ಪುಯ್' ನೋ.

ಪುಯಿನಡು (ನಾ). ಊಹೆ ಮಾಡಿಕೊಳ್ಳಬೇಕಾಗಿರುವಷ್ಟು ತೆಳ್ಳಗಿರುವ ನಡು : ಪುಸಿನಡುವಿನ ಪುಯಿನಡುವಿನ ಕಣ್ಣೆ ಕಾಣಿಸದ ನಡುವಿನ ಮೋಹಿಸುವ ಅಸಿಯ ನಡುವಿನಂಗುರವಿಡಿನಡುವಿನ ಪೊಸಜವ್ವನೆಯರೆಯ್ದಿದರು (ಕುರಾಸಾಂ. ೨೧-೧೫). [ಪುಯ್ಯಿ₂ (<ಪುಯ್) + ನಡು₂]

ಪುಯಿಲ್ 'ಪೊಯಿಲ್' ನೋ.

ಪುಯಿಲಿಡು, ಹುಯಿಲಿಡು (ಕ್ರಿ). ೧. ಗರ್ಜಿಸು ; ವೀರಾವೇಶದಿಂದ ಕೂಗು : ಇಟ್ಟಡಿಯ ನೆಟ್ಟನೆನಿಸಂ ಪಿಮ್ಮೆಟ್ಟಿ ದಟಪಟ್ಟಡರೆಯಟ್ಟಳೆವರಂ ಕೈಗೊಟ್ಟು ಪುಯಿಲಿಟ್ಟರೆನೆ ದಿಟ್ಟತನಮೊಂತೋ (ಶಕಪ. ೨-೧೩). ಹುಯಿಲಿಡು : ೨. (ರಕ್ಷಣೆಗಾಗಿ) ಮೊರೆಯಿಡು : ಸೆರೆ ಬಿದ್ದಿಪ ಕಾಲ ಹುಯಿಲಿಡುವುದೊ ಏನೆ ಜೆರ್ರನೆ ಜೀರುಂಡೆಯ ಮೇಳ ! (ಗಕೇಕ. ೨೬-೬).

[ಪುಯಿಲ್ (<ಪೊಯಿಲ್) + ಇಡು₁]

ಪುಯಿಲ್ಟು (ಕ್ರಿ). ೧. = ಪುಯಿಲಿಡು ೧ : ರಾಘವರ್ಪರಿಂದಿವರ್ ಬೇಸಜಿದಾಂಧ್ರಾವನಿಪಾಲಮೂಲಸೈನ್ಯಂ ಬಜಾವಪ್ಪಂತೆ ಪುಯಿಲ್ಟಿ ಪೊಯ್ದುಗೆಲ್ದರ್ (ಶಕಪ. ೨-೩೦). ೨. (ರಕ್ಷಣೆಗಾಗಿ) ಮೊರೆಯಿಡು : ಇದು ವಸಂತಕನ ದನಿಯಂತಿರ್ಪುದು . . . ಸಾಸಿಗನಿಂ ಮೋಸಂ ಬಂದುದರ್ಕೆ ಪುಯಿಲ್ಟುವನಾಗಬೇಟ್ಟುದಾ (ಶಕಪ. ೬-೭೦ ಪ).

[ಪುಯಿಲ್ (<ಪೊಯಿಲ್) + —ಟು₁]

ಪುಯ್ಯಲ್ 'ಪೊಯಲ್' ನೋ.

ಪುಯ್ಯಲಿಕ್ಕು, ಪುಯ್ಯಿಕ್ಕು, ಹುಯ್ಯಲಿಕ್ಕು (ಕ್ರಿ). ೧. (ರಕ್ಷಣೆಗಾಗಿ) ಮೊರೆಯಿಡು ; ಗೋಳಿಡು : ನಾಗನಿಕರಮುಂ ಮರ್ತ್ಯನಿಕರಮುಂ ತರದಿಂ ದೇವನಿಕರಮುಂ ನಿಮ್ಮೊಳಿಗಮನೆ ಭರದಿಂ ಪುಯ್ಯಲಿಕ್ಕೆ ಕಳುಪಿದರೆನ್ನಂ (ಗಿರಿಕ. ೬-೨೩) ; ಅಱುದಿಂಗಳು ಮೊದಲೀ ತಾಣದೊಳು ಬಂದು ಮಱೆಯದೆ ಪುಯ್ಯಲಿಕ್ಕುವೆನು (ನಾಗಕು. ೦೩-೧೨). ಪುಯ್ಲಿಕ್ಕು : ೧. ಕುಕ್ಕುಟೋರಗ ಕೊಂದುದೆಂದು ಸುತಾರೆಯು ಪುಯ್ಲಿಕ್ಕುವಂದದಿ ವೈತಾಳಿಯೊಳು ಅಕ್ಕಟ ಪ್ರಾಣಕಂಟಕಮಾದುದೆಂಬಂತೆ ಠಕ್ಕ ಮಾಡಿರಿಸಿರಲಾಗ (ಶಾಂಕೀಕ. ೦-೬೭). ಹುಯ್ಯಲಿಕ್ಕು : ೨. ಗದ್ದಲ ಮಾಡು ; ಹುಯ್ಯಲೆಬ್ಬಿಸು : ಕಳ್ಳಗೆ ಸುದು ಕೊಟ್ಟು ಒಡವೆಗೆ ಹುಯ್ಯಲಿಕ್ಕಿದ (ಗಾರ). [ಪುಯ್ಯಲ್ (<ಪೊಯಲ್) + ಇಕ್ಕು]

ಪುಯ್ಯಲಿಗ (ನಾ). ಮೊರೆಯಿಡುವವನು ; ಗೋಳಿಡುವವನು : ಧರ್ಮಜಂ ಮೆಚ್ಚಿ ನರನ ಕಜ್ಜಮನೆ ಕೆಯ್ಕೊಂಡು ಬೇಗಮೆರ್ದು ತಂತಮ್ಮಾಯುಧಂಗಳಂ ಕೊಂಡು ನಡೆಗೊಂಡು ಪುಯ್ಯಲಿಗರೊಡನೆ ಪೊಱಮಟ್ಟು ವಿರಾಟನ ಪೆಱಗಂ ಬರೆ (ಪಂಹರಿ. ೦೨-೧೨ ಪ).

[ಪುಯ್ಯಲ್ (<ಪೊಯಲ್) + —ಇಗ]

ಪುಯ್ಯಲಿಡು, ಪುಯ್ಲಿಡು, ಹುಯ್ಯಲಿಡು, ಹೊಯ್ಲಿಡು (ಕ್ರಿ). ೧. = ಪುಯ್ಯಲಿಕ್ಕು ೧ : ಬಿ[ರ್ದಿ] ಮನೆಯ ಮೇಗೇಱಿ ಕಳ್ಳರೆಂದು ಪುಯ್ಯಲಿಟ್ಟಾಗಳನಿಬರುಂ ತ್ರಸ್ತಾಭಿಭೂತರಾಗಿ ಪಟ್ಟನೆ ಪಾಱಿಯೋಡಿ . . . ಪಗೆಸಾಱರ್ದರ್ (ಪಡ್ಡಾರಾ. ೦೬-೨೫) ; ಸುಯೋಧನನ ಮಹಾದೇವಿ ಭಾನುಮತಿ ಬಾಯಱಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ ಕವಿದು ಪಟ್ಟು (ಪಂಪಭಾ. ೬-೩೩ ಪ); ತನ್ನ ಮೂಗನಕಾರಣಂ ಕೊಯ್ದನೆಂದು . . . ಹಾಹಾಕ್ರಂದನರವದಿಂ ಪುಯ್ಯಲಿಡುವ ಕರುಣಾರವಮುಂ ಶಳವಾಱಂ ಕೇಳ್ದು (ಪಂಪಕಂ. ೭೬ ೨೨). ೨. ಒದರು ; ಅರಚು ; ಕಿರಿಚು : ತೊಲತೊಲಗಿ ವಿರಹಿಗಳ್ಬೆಚ್ಚರದೊಳೆಂದೆತ್ತಲುಂ ಪುಯ್ಯಲಿಡುವಂತೆ ಕೂಗುತಿವೆ ಕೋಗಿಲೆಗಳು (ಸ್ವಪ್ನಭಾ. ೩-೨೪). ಪುಯ್ಲಿಡು : ೧. ದುಷ್ಟಬುದ್ಧಿ ಮುನ್ನಮೆ ಹಾಹಾ ಕೆಟ್ಟೆನೆಂದು ಬಾಯಂ ಬಸಿಱಂ ಪೊಯ್ದುಕೊಂಡು ಪುಯ್ಲಿಟ್ಟು . . . ಕಾತರಿಸಿ ನುಡಿಯೆ (ಪಂಪಕಂ. ೦೭೦-೬). ಹುಯ್ಯಲಿಡು: ೧. ಕೆಟ್ಟೆನನ್ನೇವೆನೆನ್ನಣುಗಸಡವಿಯೊಳು ಹೊಲಗೆಟ್ಟನೋ . . . ಬಟ್ಟೆಯೊಳು ಕಳ್ಳರಿಂ ಹಿಡಿವಡೆದನೋ ಹುಯ್ಯಲಿಟ್ಟಾರ್ಗಿದಂ ಪೇಳ್ವೆನು (ಸಿದ್ಧರಾ. ೨-೧೩) ; ಹುಯ್ಯಲಿಟ್ಟಳುಪೊಡೆ ಕೇಳುವರಿಲ್ಲೆಂದು ಬಾಯ ಬಿಟ್ಟಿತು ಕಪೋತಕನು (ಶಪೋಕ. ೦೨-೧೨) ; ಚಳಿಗಾಲ ಕೊಣಗಿ ಬರಡಾದ ಗಿಡಗಂಟೆಯಲಿ ಹುಯ್ಯಲಿಟ್ಟಿತು ಗಾಳಿ ಈಸು ದಿವಸ (ಪಶಾಸಾ. ೧೬-೦೦). ಹೊಯ್ಲಿಡು : ೧. ಹೊಯ್ಲಿಟ್ಟ ಖಡಿಗಳ ಮಾತ ಕೇಳ್ದು ರಘುನಂದನನು ನಸುನಗುತ ಬೆದರದಿರಿ . . . ಎಂದೊಡಂಬಡಿಸಿ (ವಾಲಿಕಾ. ೩). [ಪುಯ್ಯಲ್ (<ಪೊಯಲ್) + ಇಡು₁]

ಪುಯ್ಯಲಿಸು (ಕ್ರಿ). = ಪುಯ್ಯಲಿಕ್ಕು ೧ : ನೆಗೞ್ದೆನ್ನ ಗುಣಮಾಲಂಘ್ಯಂ ಜಗದೊಳವಂ ಕಿಡಿಸಿದಪ್ಪನೀ ನೃಪನೆಂದಟ್ಟಿಗದೊಳೆ ಪುಯ್ಯಲಿಪಂತೆ ಪೊಲೊಗೆದುದು ಚಲದನಿಲಹತಪಯೋನಿಧಿನಾದಂ (ಆದಿಪು. ೦೨-೭೬) ; ಲೋಕಕೋಟರಮಂ ತೀವಿದುದಂದು ಪುಯ್ಯಲಿಪವೋಲ್ ಮೂಲೋಕದೊಳ್ ಚಕ್ರಿಗೀ ಧುರದೊಳ್ ನೆಟ್ಟನೆ ಕೇಡು ತಪ್ಪದೆನುತುಂ ಗಂಭೀರ ಭೇರೀರವಂ (ಸೇಕಾಪು. ೦೧-೧೯).

[ಪುಯ್ಯಲ್ (<ಪೊಯಲ್) + —ಇಸು₃]

ಪುಯ್ಯಲ್ಟು, ಪುಯಲ್ಟು (ಕ್ರಿ). = ಪುಯ್ಯಲಿಕ್ಕು ೧ : ಶ್ರೀವಿಜಯನ ವೆಸರ್ಗೊಂಡು ಪುಯ್ಯಲ್ಟುವ ಪನಿತಾಕ್ರಂದನಮುಂ ಕೇಳ್ದು (ಶಾಪುಂಪು. ೩೬); ಎಮಗಿನ್ನಾರ್ ಶರಣೆಂದು ಪಾಂಡಲಿಕರುಂ . . . ವಿಲಾಸಿನಿಯರುಂ ಬಾಯ್ವಿಟ್ಟು ಪುಯ್ಯಲ್ಟೆ (ಹಂಪಾಹಾ. ೨-೪೯) ; ಗಿರಿಜೆಯ ಪದಯುಗದೊಳ್ ರತಿ ಪೊರಳ್ದು ಪುಯ್ಯಲ್ಟಿ ಪೆರ್ಚಿದಳಲಿರ್ಮಡಿಸುತ್ತಿರೆ ಪಳಯಿ

ಸುತುಂ (ಗಿರಿಕ. ೯-೭೯). **ಪುಯಲ್ಚು** : "ಪುಯಲ್ಚು-ಆಕ್ರೋಶಧ್ವನೌ" (ಶಬುರಾ). [ಪುಯ್ಯಲ್ (< ಪೊಯಲ್) + —ಚು$_1$]

ಪುಯ್ಯಲ್ವರಿ (ಕ್ರಿ). ದಾಳಿಗೆ ನುಗ್ಗು ; ಕಾಳಗಕ್ಕೆ ನಡೆ : ಪೆರ್ವ್ವಯಲ ಕೊಙ್ಗುಣಿ ಪುಯ್ಯಲ್ವರಿದು ಬಯಲ್ನಾಡಿನುಳ್ಳಾದಿ ತುಱುವನಿಕ್ಕಿಸಿ . . . ಪೆರ್ಮ್ಮಾನಡಿಗಾಮುಣ್ಡನ ಮಗಂ ರಾಮನಲ್ಲಿ ಸತ್ತೊಡೆ (ಎಕ. IV. ಹಗ್ಗಡ. ೦೦೩-೬; ಸು. 910); ಸಱಕ್ಕನೂರ ಎರ್ಮ್ಮೆ ತುಱು ಪರಿದಟ್ಟಿ ಪುಯ್ಯಲ್ವರಿದು ವಗರೆಯಲ್ದಟ್ಟಿ ಕಾದಿ ತುಱುವಂ ಮಟ್ಟಿ (ಎಕ. IX. ಹೊಸಕೋ. ೦೦-೦೦; 1041). [ಪುಯ್ಯಲ್ (<ಪೊಯಲ್) + ಪರಿ$_2$]

ಪುಯ್ಯಲ್ವೋಗು (ಕ್ರಿ). = ಪುಯ್ಯಲ್ವರಿ : ಗಂಗೆಸೆಟ್ಟಿ ಕಳಸ್ಯಜ್ ಪನಟಿಯ ತುಱುಗೊಳೊಳ್ಕೊಂಡು ಪುಯ್ಯಲ್ವೋಗಿ ಅನ್ತಿಱಿಡು ಸಗ್ಗಮೇಱಿದವರ್ (ಎಕ. X. ಕೋಲಾರ. ೨೬೩-೩; 966); ಪುಯ್ಯಲ್ಗೆ ಪೋದಂ — ಪುಯ್ಯಲ್ವೋದಂ [ಪಾಠಾಂ. ಪುಯಲ್ಗೆ ಪೋದಂ—ಪುಯಲ್ವೋದಂ] (ಶಪುಪ. ೦೬೨ ಪ್ರಯೋ). [ಪುಯ್ಯಲ್ (<ಪೊಯಲ್) + ಪೋಗು$_1$ (<ಪೋ$_1$)]

ಪುಯ್ಯೆನಿಸು (ಕ್ರಿ). ಸುಳ್ಳೆನಿಸು ; ಹುಸಿಗೊಳಿಸು ; ವ್ಯರ್ಥಗೊಳಿಸು : ಪೆತ್ತ ಗೆಲ್ಲಮಂ ಪೆಱಸಾರ್ಚಿದಂ ಪೊತ್ತ ಜಸಮಂ ಪು[ಪಾಠಾಂ. ಪೊ]ಯ್ಯೆನಿಸಿದಂ ಪತ್ತಿದೇಟ್ಗಿಯಂ ಬಯಲ್ಗೆಯ್ದಂ (ಪಕಪಂ. ೩೯ ೬).

[ಪುಯ್$_2$ + ಎನಿಸು$_1$]

ಪುಯ್ಯೇಟಿಸು (ಕ್ರಿ). ಗೋಳಾಡಿಸು ; ಗೋಳು ಹೊಯ್ದುಕೊಳ್ಳು : ಅನಿತಱೊಳವಳ ಬಾಜಿಪ ಕೈಗಳಂ ಪಿಡಿದು ನಿಲಿಸಿ ಈ ಪೆಣಗುವ ಕಂಠಾಶ್ಲೇಷ ಪ್ರಣಯಿಯನೀ ತೆಱದೆ ಪೊಯ್ದು ಪುಯ್ಯೇಟಿಪರೇ ಎಂದನಿಬರಂ ನಗಿಸಿ ಕುಳ್ಳಿರಿಸಿ (ಪಕಪಂ. ೬-೦೩೩). [<ಪುಯ್ಯಲ್ + ಏಟಿಸು]

ಪುಯ್ಯೋಲಗ (ನಾ). ಕಪಟದ ಓಲಗ : ಪೊಸಯಿಸಿ ಪುಯ್ಯೋಲಗಮಂ ಪೊಸಕುದುರೆಯವರ್ ಪೊಣರ್ಚಿ ಮಹಿಶೂರವರುಂ ವಸುಧಾರೆಯಿಟ್ಟರೆಂದೇ ಬಸವಟಿದಂ ಬೆರ್ಚಿ ಬೆದಱಿ ಬಿದಿರೂರ್ಬಸವಂ (ಅಪ್ರತಿ. ೬೯-೭).

[ಪುಯ್$_2$ + ಓಲಗ$_1$]

ಪುಯ್ಲಿಕ್ಕು 'ಪುಯ್ಯಲಿಕ್ಕು' ನೋ.

ಪುಯ್ಲಿಡು 'ಪುಯ್ಯಲಿಡು' ನೋ.

ಪುಯ್ವಗೆ (ನಾ). ಕಪಟದ ಮನಸ್ಸು ; ಕುಟಿಲಬುದ್ಧಿ : ನಗೆಮೊಗ ಸವಿನುಡಿ ಸಿರಿಮೆಯ್ಸೊಗಸುಗಳಿಂ ಮೋಸಗೊಳಿಪ ಗೋಪಾಲನ ಪುಯ್ವಗೆಯಂ ಬಯಲೆನಿಸುತೆ ಪಡಿಮೊಗದೊಳ್ ಮೂದಲೆಯ ಮುಂದುಗೆಯ್ದುಳ್ ಮತ್ತಂ (ಗೀತಗೋ. ೨೩-೪೩); ವ್ಯರ್ಥವಾಗಿ ವನಮಂ ದಹಿಸಿದವರುಂ ಪುಯ್ವಗೆಯಿಂದು ಬಿಜ್ಜೆಗಳು ಕಲ್ತವರುಂ (ಶಾರಶಾಂ. ೨೪೩-೩೪).

[ಪುಯ್$_2$ + ಬಗೆ$_3$]

ಪುರ$_1$, ಹುರ$_1$, ಹೂರ$_1$ (ನಾ). ಹೊನಲು ; ಪ್ರವಾಹ ; ನೆರೆ : "ಪುರ [ಪಾಠಾಂ. ಹೂರಂ]ಹೊನಲ್" (ಕಬ್ಬಿಳ್ಳಿ. ೦೨); "ಪುರ ಹೊನಲ್" (ಕಬ್ಬಿಪುಂ. ೩೬) 'ಕಾಟ್ಟುರ' ಪರಾ. **ಹುರ$_1$** : ದಿವಿಜಾವಳಿಯ ದುಂದುಭಿರವದಲುಬ್ಬಿದ ಸಾಧುವಾದಗಳ ಕಳಕಳದ ಕೊಲ್ಲಣಿಗೆಯಲಿ ಹೂಮಳೆಯ ಹುರದ ಹೊನಲಿನಲಿ[ಪಾಠಾಂ. ಪೂವಳೆಯ ಪೂರದ ಹರಹಿನಲಿ]ಜನ ಮುಳುಗಿತು (ಕುಪ್ಯಾಲ. ೧೩-೩೦); ಉರಿಗಣ್ಣ ಜ್ವಾಲೆ ದಳ್ಳಿಸೆ ನಿಚ್ಚ ಪಚ್ಚದ ಪಂದಲೆ ತೊಂಗಲಾಡೆ ಸಿರದ ಹುರಂ ಸೀಱುಂಬುಳಾಡೆ . . . ಮಾರುತಿಗೈಪೊಗಂ ಮುಮ್ಮೊಗನಾಗಿ ಜಡಿದಂ (ರಾಮಾಶ್ವ. ೦೩೨-೯). **ಹೂರ$_1$** : "ಹೂರಮೆಂದು ಹೊನಲ್" (ಕಶಸಾ. ೭೦-೩೯೪); ತಕ್ಕ ಸನ್ಮಾನವನು ಕೈಕೊಂಡೆಕ್ಕತುಳದಲಿ ಬಂದನಮರರ ಹೆಕ್ಕಳದ ಹೂಮಳೆಯ ಹೊನಲಿನ ಹೂ[ಪಾಠಾಂ. ಪೂ]ರದಲಿ ಹನುಮ (ಕೊರರಾ. ೩ ೯-೬); ಪೊಸನೀರ ಹೂರದೊಳಗೆ ಮಱಿಮಿನ್ಗಳು ಮಸಗಿ ಮುಂ ಪೊಳೆದಾಡುವಂತೆ ಮಿಸುಗುವ ವರಲಾವಣ್ಯಾಂಬುದಲಿ ಕಣ್ಗೆಸೆದುವು ಪೊಳಪೇಱ್ ನಗುತ (ಕಾಂಪಿ. ೦೦-೩೯). [<ಸಂ. ಪೂರ]

ಪುರ$_2$ (ನಾ). ೧. ಕೋಟೆ ; ದುರ್ಗ. ೨. ಪಟ್ಟಣ ; ನಗರ : "ಪತ್ತಪನಿಗಮ ನಗರ ಪುಟಭೇದನ ನಗರೀ ಪೂಃ ಸಮಾಹ್ವಯಂ ಪುರಮಕ್ಕುಂ" (ಪಸ್ತುಕೋ. ೪೬-೩); ಪುಣ್ಯದ ಬೀಡೆನಿಪುದು ಪುರಮಿದಂಬರೇಚರಪತಿಯಾ (ಶಾಂತಿಪು. ೩-೯); ಹರನ ಸಾಹಸಕಂಜದೆ ಪಲವಗಲು ಮುಪ್ಪುರ ಪಡಿಬರಿಸಿ ಪೋರಿದುದು ಪುರದೊಳಗಿರ್ಪ ಪುಣ್ಯಾಂಗನೆಯರ ಸಚ್ಚರಿತದ ಸಲಿಗೆಯಿಂದೈಸೆ (ಹರಿಬ. ೨-೪೯). ೩. ಮನೆ ; ಬೀಡು. ೪. ದೇಹ ; ಶರೀರ : "ತನುಃ . . . ಪುರಂ, ಪಿಂಡಂ . . . ಮೂರ್ತಿಃ—ಈ ೧೭ ಶರೀರಂ" (ಹಲಾಯು. ೯೪-೩೩೬). ೫. ಲಿಂಗಭೇದ ; ಲಿಂಗ ವಿವರ : (ಕ). ೬. ಗುಗ್ಗುಳ : "ಪುರಾಖ್ಯಂ . . . ಫಲಾರಷಃ—ಈ ೪ ಗುಗ್ಗುಳಂ" (ಹಲಾಯು. ೦೦೦-೯೬೬). 'ಪುರವಂತ' ಪರಾ. ೭. ನಾಗರಮುಸ್ತೆ : ಮೊ(ಪೊ)ರಕೆಯ ಬೂದಿಯಂ . . . ಕೋಡಸಾಲೆಯುತ್ತರಣೆ ಪುರಂಗಳೆಂಬಿನಿತುಮಂ ತಿಲತೈಲದೊಳಟ್ಟು ಪೂಸುಗೆ (ಲೋಕೋಪ. ೯-೨೦೬). ೮. ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಎಂಬ ಮೂರು ಜನ ದೈತ್ಯರು ಕಟ್ಟಿಕೊಂಡ ಚಿನ್ನ, ಬೆಳ್ಳಿ ಮತ್ತು ಕಬ್ಬಿಣದ ಮೂರು ಪಟ್ಟಣಗಳು ; ತ್ರಿಪುರ : 'ಪುರವಿಜಯ', 'ಪುರಹರ' ಪರಾ. ೯. ದಾನವಾಗಿ ಕೊಟ್ಟ ಗ್ರಾಮ : ಅನ್ತೆರಡುಂ [ಪುರದ] ಸಾಸಿರ್ವ್ವರುಂ ಪುರಸ್ಸರರಾಗಿ ನಡೆದು (ಪೌಷಪು. XI-1, ೬೪-೦೯; 1028); ಆ ಚವಡಿಸೆಟ್ಟಿಯರ ನಿಯಾಮದಿಂ ನಾಗರಸರು ಪುರದಿಂ ಪಡುವಲು . . . ಕೊಟ್ಟ ಸಾಸನ (ಎಷ. XXI. ೨-೬೭; 1260). ೧೦. ಪಟ್ಟಣದಲ್ಲಿ ನಿರ್ಮಿಸಿದ ವಿಸ್ತರಣ, ಬಡಾವಣೆ ಎಂಬ ಅರ್ಥದಲ್ಲಿ ಹೆಸರಿನ ಕೊನೆಯಲ್ಲಿ ಸೇರುವ ಶಬ್ದ. ೧೧. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : "ಪುರ ವಹ್ನಿ ತ್ರಯ ಮೂಱು" (ಪುಂಗರಾ. ೦೦೩-೪). 'ಪುರನಯನ' ಪರಾ. [ಸಂ.]

ಪುರಂ (ಅ). ೧. ಮೊದಲು ; ಪೂರ್ವದಲ್ಲಿ : "ಆದಿಃ, ಅಗ್ರಂ, ಪು(ರಾ)ರಂ . . . ಪುರಃ — ಈ ೭ ಮುನ್ನಂ" (ಹಲಾಯು. ೦೦೭-೨೨); "ಅಗ್ರಂ ಪುರಂ ಪ್ರಥಮಮಾದಿ ಪ್ರಾಕ್ ಪುರಮೆಂದನುಗ್ರಹಿಸೆ ಪೂರ್ವಕ್ಕೆ ಪೆಸರಕ್ಕು" (ಪುಂಗರಾ. ೦೨೭-೪). ೨. ಪೂರ್ವ ದಿಕ್ಕಿನಲ್ಲಿ. [ಸಂ. ಪುರಸ್]

ಪುರಂತ$_1$ (ನಾ). ಪ್ರಾಚೀನ ಶಿವಶರಣ : ಇಂತು ಮೌನದೊಳಿಹುದುಚಿತವೆ ಪುರಂತರಾಣೆನ್ನಾಣೆ (ಬಸಪು. ೬೦-೩೯). 'ಪುರಾತ' ಪರಾ. [<ಪುರಾತನ]

ಪುರಂತ$_2$ (ನಾ). [ವೀಶೈ] ಮಠಮಾನ್ಯಗಳನ್ನು ಹೊಂದಿ ಒಂದು ಸ್ಥಾನದಲ್ಲಿ ನೆಲಸಿರುವ ಜಂಗಮ : ಆ ಪುರಂತರು ಒಡವ ಹೇಳೂತ ನಡೆದಾರ (ಲೋಕೋ. ೩೬); ಪುರಂತರು ಪ್ರೀತಿಯಿಂದ ಹೇಳುವ ವಚನಗಳಿವು (ಕರಸ. ೭೩೯). [<ಪುರವಂತ]

ಪುರಂದರ (ನಾ). ೧. ಶತ್ರುಗಳ ನಗರಗಳನ್ನು ನಾಶ ಮಾಡಿದವನು ; ಇಂದ್ರ : ಉಜ್ಜ್ವಳಪುಚರತ್ನಭಾಸುರಸದನಂಗಳಿಂ ನೆಱೆದುದಂ ಸಮೆದು ಪುರಮಂ ಪುರಂದರಂ (ಅಪಿಪು. ೬-೯೯); ಕರಮೊಪ್ಪಿದುದಂದು ಪುರಂದರನೀಯೆ ಪುಳೋಮಸುತೆಯ ಕಟ್ಟಿದ ಕಂಠಾಭರಣಕ್ಕೆ ತಗುಳ್ಚಿದ ಪದ್ಮರಾಗ ನಾಯಕಮಿದೆಂಬಿನು ರವಿಬಿಂಬಂ (ಶಾಂತಿಪು. ೯-೦೦೪); ಮಿಂದು ಕಡು ಶುಚಿಯಾಗಿ . . . ಪುರಂದರನ ನೆನೆದಳು ಮುನೀಂದ್ರನ ಮಂತ್ರಶಕ್ತಿಯಲಿ (ಕುಪ್ಯಾಲ. ೪ ೩೯). ೨. ಶಿವ. [ಸಂ.]

ಪುರಂದರಚಾಪ (ನಾ). ಇಂದ್ರಚಾಪ ; ಕಾಮನ ಬಿಲ್ಲು : ಅಂಬರಮಹಾಂಬುಧಿಪಾರದಪಾರರತ್ನರುಗ್ವಿಸರಮೊ ಭಾವಿಪಂದಿದು ವಿಯಚ್ಚುಕಕಂಠದ ವರ್ಣರಾಜಿಯೊಂದೆಸಕಮೊ ತಾನಿದೆಂದೆನಿಸಿತಂದು ಪುರಂದರಚಾಪವಿಭ್ರಮಂ (ಸಂಪ್ರಪು. ೪-೩೦). [ಸಂ.]

ಪುರಂದರಮಹ (ನಾ). ಇಂದ್ರನ ಆರಾಧನೆಗಾಗಿ ಮಾಡುವ ಉತ್ಸವ;

ಇಂದ್ರಪೂಜೆ : ನಂದಾದಿಗೋಪರಿಂದು ಪುರಂದರಮಹಮೆಂದು ಹರ್ಷದಿಂ ಸಂಭ್ರಮಿಸಲ್ (ಹಗಿ. ೪-೭೬). [ಸಂ.]

ಪುರಂದರವಂದ್ಯ (ನಾ). ೧. ಇಂದ್ರನಿಂದ ವಂದನೆಯನ್ನು ಪಡೆಯ ತಕ್ಕವನು. ೨. ಗುರು ; ಬೃಹಸ್ಪತಿ : ಪುರಂದರವಂದ್ಯಂ ಪದಿನೈದು ದೈತ್ಯಗುರುವಿಪ್ಪತ್ತೊಂದು ಸಂವತ್ಸರಂ ಪರಮೋಚ್ಚಾಂಶದೊಳೊಂದಿ ನಿಂದೊಡದು ಪಿಂಡಾಯುಷ್ಯಮಕ್ಕುಂ ಧ್ರುವಂ (ಜಾತಕ. ೬-೦೧). [ಸಂ.]

ಪುರಂದರಾರ್ಚಿತ (ನಾ). ೧. ಇಂದ್ರನಿಂದ ಪೂಜೆಗೊಂಡವನು : ಅರವಿಂದನಾಭ ಪುರಂದರಾರ್ಚಿತ ನಂದನಂದ . . . ರಕ್ಷಿಸು ನಮ್ಮನನವರತ (ಪರಿಸಾ. ೦೨). ೨. ಗುರು ; ಬೃಹಸ್ಪತಿ : "ಪುರಂದರಾರ್ಚಿತ—ಗುರು" (ಜಾತಕ. ಪರಿ. ೬೮೦). [ಸಂ.]

ಪುರಂಧ್ರಿ (ನಾ). ೧. (ಗಂಡನೂ ಮಕ್ಕಳೂ ಉಳ್ಳ) ಹಿರಿಯಂ ಮುತ್ತೈದೆ : ಪೂರ್ಣಕಳಶಕಳಮಾವೃತಕರಪಲ್ಲವೆಯರಪ್ಪ ಪುರಂಧ್ರಿಯರುಂ ಬದ್ದವಣದ ಪಱೆಗಳುಂಬೆರಸಿದಿರ್ವಂದು ಪೊಟಲಂ ಪುಗಿಸೆ (ಪಂಪಭಾ. ೩-೨೫); ಪುರಪುರಂಧ್ರಿಯರುಂ ಪುರೋಹಿತಪುರಸ್ಸರಂ ಧರಾಮರರುಂ ಪರಸಿ ಸೇಸೆಯನಿಕ್ಕೆ (ಪುಸ್ತಪು. ೬-೬೨೫) ; ಪುರಂಧ್ರಿಯರು ಮಂಗಳಾರತಿಯನ್ನು ಮಾಡತೊಡಗಿದರು (ಶುಳಸೀ. ೭೯). ೨. ಹೆಂಗಸು ; ಸ್ತ್ರೀ : "ಭಾಮಿನಿ ನಿತಂಬಿನಿ . . . ಪುರಂಧ್ರಿ ವಧು ಯುವತಿಯಂಗನೆ . . . ಮಹಿಳೆಯ ಬಳಿ ರಾಮೆ ಪರವರ್ಣಿನಿಯೆನಲ್ಕೆ ಹೆಂಗೂಸನಿಕ್ಕು" (ಮಂಗಶಾ. ೬೯-೧) ; ಮಕರಕೇತನರಾಜ್ಯಾಧಿದೇವತೆಯರುಮಪ್ಪ ನಿಜಾಂತಃಪುರಪುರಂಧ್ರಿಯರ್ವೆರಸು ಪೋಗಿ ಜಲಕ್ರೀಡೆಯಾಡುತಿರ್ಪುದುಂ (ಪಂಪತಂ. ೧೨೯-೬); ನಿಜಾಂತಃಪುರಪುರಂಧ್ರಿಯರ ಅಗಣ್ಯಲಾವಣ್ಯರಸವಿಸರದೊಳು (ಮಲ್ಲಿಪು. ೬-೯೩). ೩. ಹೆಂಡತಿ; ಪತ್ನಿ : "ಸಹಚರಿ ಭಾರ್ಯೆ . . . ಪುರಂಧ್ರಿ ಕಳತ್ರಂ ಗೃಹಿಣಿ ಗೃಹಂ ಸಜ್ಜನಕ್ಕೆ ಪೆಸರಿಂತಿನಿಸುಂ" (ಪಸ್ತುಕೋ. ೩೨-೩); ರಕ್ಷಿಸಿದ ಧನದಿಂ ಪುರಂಧ್ರಿಯ ರಕ್ಷಿಸುವುದು ಪುರಂಧ್ರಿಯಿಂದವೆ ರಕ್ಷಿಸುವುದಾತ್ಮನನು (ಕುಪ್ಯಾಲು. ೩-೩೦); ನಮ್ಮಯ ಲೋಲಲೋಚನೆಗಾಡಿದುಕ್ತಿಯ ನಾಲಗೆಗೆ ಪುನರುಕ್ತಿಯಾಗೆ ಪುರಂಧ್ರಿ ನಗುವಳಲೆ (ತೊರಶಾ. ೩-೬-೪೦).

[ಸಂ. ಪುರಂಧ್ರೀ]

ಪುರಃಪ್ರದರ್ಶಿತ (ಗು). ಮುಂದಾಗಿ ತೋರಿಸಿದ ; ಮುಂದೆ ಬಂದು ವಿವರಿಸಿದ : ವನಪಾಲಪುರಃಪ್ರದರ್ಶಿತಾನಂತತರುಲತಾಸಂದೋಹಸಂದರ್ಶನಾನಂದಕಂದಳಿತಹೃದಯಾರವಿಂದನುಂ . . . ಆಗಿ ನಡೆತರ್ಪಾಗಳ್ (ರಾಜಶೇ. ೦೦-೦೩ ಪ). [ಸಂ.]

ಪುರಃಸರ (ಗು). ೧. ಮುಂದಾಗಿ ನಡೆಯುವ,-ಹೋಗುವ ; ಮುಂಭಾಗದಲ್ಲಿ ಚರಿಸುವ. (ನಾ). ೨. ಮುಂದಾಗಿ ಬಂದು ತಿಳಿಸುವ ಆಳು ; ವಾರ್ತಾಹರ ; ಸಂದೇಶವಾಹಕ. ೩. ತಾನೇ ಮುಂದಾಗಿ ನಡೆದು ಇತರರಿಗೆ ಮಾರ್ಗದರ್ಶನ ಮಾಡುವವನು; ಮುಂದಾಳು ; ಮುಖಂಡ: 'ಪುರಸ್ಸರ' ಪರಾ. [ಸಂ.]

—ಪುರಕ '—ಪುರುಕ' ನೋ.

ಪುರಕ್ಷಯ (ನಾ). ತ್ರಿಪುರಗಳನ್ನು ನಾಶಮಾಡಿದವನು ; ಶಿವ : ಇಕ್ಷುಕೋದಂಡಕ್ಷಯಾಯ ಪುರಕ್ಷಯಾಯ ಸಮಕ್ಷಗತ ಮದ್ರಕ್ಷಣಾಯ ನಮೋ ನಮೋ ಗುರು ಸಂಗಮೇಶಾಯ (ಬಸಪು. ೬೧-೪೬). [ಸಂ.]

ಪುರಗಣ (ನಾ). ದೇವಾಲಯದ ಸೇವಾವರ್ಗ ಮತ್ತು ಅವರಿಗಾಗಿ (ದೇವಾಲಯದ ಸುತ್ತಣ ಪೌಳಿಯ ಗೋಡೆಯ ಒಳಗೆ ಇರುವ ಬಯಲುಪ್ರದೇಶದಲ್ಲಿ) ನಿರ್ಮಿಸಿದ ವಸತಿಸ್ಥಾನ,-ಬಡಾವಣೆ ; ಪುರವರ್ಗ (?) : ಪುಡಿತಯ್ಯ ಗೋಪರಸ ಬಿಟ್ಟ ಕೆಯಿ ಹುಳಿಯರೆ ಮತ್ತ ೧ ಮೊದಲೇರಿಯ ಆಲದ ಗದೆ ಕಂಬ ೫೦ ದೇವರ ಸುತಲು ಪುರಗಣಯಿಂತೀ ಬಿಟ್ಟ ಧರ್ಮ್ಮವಂ ಪ್ರತಿಪಾಳಿಸುವರು (ಸೌಇಇ. IX-i, ೨೬೯-೪೪ ; 1154). [ಸಂ.]

ಪುರಜನ (ನಾ). ಪಟ್ಟಣದ ಜನ ; ನಾಗರಿಕರ ವರ್ಗ : ಜನಪತಿಗೆ ಒಸಗೆಯಂ ಪುರಜನಮೆಲ್ಲಂ ಬೀಱುತ್ತಿರ್ಪರ್ (ಕವಿರಾ. ೧-೯೬) ; ಪುರಜನ ಮಟ್ಟಿಯಿಂ ಮುಡಿವ ಕೂಡೆ ತುಱುಂಬುವ ಕಿಂಕಿರಾತಶೇಖರರಜದಿಂದಮಾದ ಪಟವಾಸದ ಧೂಳಿಯ ಪರ್ವಿನಿಂದಮಾಭರಣದ ಮಾಣಿಕಂಗಳ ಪೊದಟ್ಟರುಣಾಂಶುಗಳಿಂದಮಂದು ಪಿಂಜರಿತಪಿಶಂಗಿತಾರುಣಿತದಿಙ್ಮುಖಮಾದುದು ತನ್ಮಹೋತ್ಸವಂ (ಆದಿಪು. ೭-೦೦೯); ಪುರಜನಮುಂ ಪರಿಜನಮುಂ ನೆರೆದು ಮನಂಗೊಂಡು ಕೂರ್ತು ಕೀರ್ತಿಸೆ ಧರಣೀಶ್ವರರಯ್ನೂರ್ವರ್ . . . ದೀಕ್ಷೆಯಂ ಕೈಕೊಂಡರ್ (ಸುಕುಮಾ. ೬-೩೯). [ಸಂ.]

ಪುರಟ (ನಾ). ಚಿನ್ನ ; ಬಂಗಾರ : ಹರೆಯದ ಸುಖಮುಹೂರ್ತವೀಶಗಱುಹಲ್ ಪಂಚಶರನಂಗಲಾವಣ್ಯಜಲಭಾಂಡದಲ್ಲಿಟ್ಟ ಪುರಟ ನಿರ್ಮಿತಮಾದ ಗಳಿಗೆವಟ್ಟಲೊ ಪಯೋಧರಗಿರಿಗಳು ನೋಳ್ಪರ ಉರುದಿಟ್ಟ ಜಱುದು ಬೀಳುವ ಗುಳಿಯೊ . . . ಎನಲ್ ಕಣ್ಗೆವಂದುದು ನಿಮ್ನತರ ನಾಭಿ ಶ್ರೀಪಾರ್ವತೀದೇವಿಯಾ (ಪಂದಿಮಾ. ೬-೨೨). [ಸಂ.]

ಪುರಟಪುರಾಣ (ನಾ). ಸುಳ್ಳುಕಥೆ ; ಹುಟ್ಟಿಸಿಕೊಂಡು ಹೇಳುವ ಕಥೆ : ಅವನಪ್ಪ ಸತ್ತದ್ದು, ಜವಾಬ್ದಾರಿ ಹೊರಿಸಿದ್ದು—ಈ ಪುರಟಪುರಾಣ ಎಲ್ಲ ಯಾರಿಗೆ ಬೇಕು ? (ಮಹಾಗ. ೧೩೬).

[ಪುರಟ್ಟ (ಪ←ತಮಿ. ಪುರಟ್ಟು=ಮೋಸ, ವಂಚನೆ) + ಪುರಾಣ]

ಪುರಟವಸನ (ನಾ). ಚಿನ್ನದ ಎಳೆಯುಳ್ಳ ಬಟ್ಟೆ ; ಜರತಾರಿವಸ್ತ್ರ : ಪುರಟವಸನದ ಮಧ್ಯ ಹೊಳೆವ ನಾನಾಭರಣ ಕರಕಂಜ ಕಂಬುಕಂಠ ಸರಸಮುಖಚಂದ್ರಶೋಭನಮೂರ್ತಿ ಹಯವದನ (ಪಾರಿಕೀ. ೪೯-೩). [ಸಂ.]

ಪುರಡಿ (ನಾ). ಒಂದು ಬಗೆಯ ಪಕ್ಷಿ : ಭೇರುಂಡ ಬೆಳುವ ಸಾಳುವ ಹದ್ದು . . . ಸೋಗೆನವಿಲು ಪುರಡಿ [ಪಾಠಾಂ. ಪೂರುಡಿ] ಗವುಜ ಕರ್ಕರಲಾವುಗೆ ಗುಬ್ಬಿ ಆರಣ್ಯದೊಳಗವರಾಟ (ಪಿಸಸಂ. ೦-೩೯). 'ಪುರುಳ್ಳಿ' ಪರಾ. [?]

ಪುರತ್ರಯ (ನಾ). =ಪುರ್ ೮ : ತಿರುಗುವ ಪುರತ್ರಯವನಹಿಕಾಂತಕಟಕನು ಬೇಗೆಯಿಂ ಸುಡುವಂತೆ ಸುಟ್ಟನಲಾ (ಬಸಪು. ೫೪ ೫೯). [ಸಂ.]

ಪುರತ್ರಯದಾಹ (ನಾ). ತ್ರಿಪುರಗಳನ್ನು ಸುಟ್ಟವನು ; ಶಿವ : ಮದನಾಂತಕ ಪುರತ್ರಯದಾಹ ಹರಶಂಕರ ಮಹೇಶ ತ್ರಾಹಿ (ಕುಪ್ಯಾಕ. ೬-೪೫). [ಸಂ.]

ಪುರದರ್ಮ (ನಾ). ಒಂದು ಬಗೆಯ ಸುಂಕ : ಪರಿಕಿಸದೀ ಧರ್ಮ್ಮದೊಳರಸರ ಕಾಣಿಕೆ ಕೊಳ್ಳಿಯರುವಣಂ ಕಿಱುಸುಂಕಂ ಪುರದ[ಧ]ರ್ಮ್ಮಂ ಬಣ್ಣಿಗೆಯಂದರೆವೀಸಮನಳಿಪಿ ಕೊಣ್ಡವಂ ಚಾಣ್ಡಾಳ (ಎಇ. XXVII, ೬೯-೫೯; 1114). [ಪ ಇದು 'ಪುರದ್ರಮ್ಮ' ಎಂಬುದರ ತಪ್ಪುರೂಪ]

ಪುರದಾನಿಕೆ (ನಾ). ಒಂದು ಬಗೆಯ ತೆರಿಗೆ : ಸ್ಮರರೂಪಂ ಪೆರ್ಮ್ಮಾಡಿಯ ಪುರವರದೊಳ್ ನಡೆವ ಮನ್ನೆಯದ ಕಿಱುದೆಱೆಯಂ ಪುರದಾನಿಕೆಯಳ್ವ ದೀಪಂ ಪರಿಹಾರಂ ಬಿಟ್ಟು ಮಾಡಿದು ತತ್ಪುರಮಂ (ಸೌಇಇ. XX, ೪೬-೩೪ ; 1074). [?]

ಪುರದೇವತೆ (ನಾ). ಊರಿನ ದೇವತೆ ; ಗ್ರಾಮದೇವತೆ : ಪುರದೇವತೆಗಳ್ ಮುನಿಸಿಂ ಪರಿತಂದು ದುರಾತ್ಮನೆರಡುಕಣ್ಗಳುಮಂ ನಿಷ್ಠುರಮಾಗಿ ಪೊಯ್ಯೆ ತೊಟ್ಟನೆ ಕುರುಡಾದಂ (ಧರ್ಮಾಮೃ. ೧೧-೦೬೫).

[ಸಂ. ಪುರದೇವತಾ]

ಪುರದ್ರಮ್ಮ (ನಾ). =ಪುರದರ್ಮ : ಆನೆಗೋಸನೆ ಸಲ್ವನ್ನೆಗಂ ಹಲವಣವುಂ ಪುರದ್ರಮ್ಮಮುಂ ಕೊಳ್ಲ ಸಲ್ಲು[ದು] (ಕಇಆ. ೪೬-೬೧೫ ; ಸು. 1151).

[ಪುರ್ + ದ್ರಮ್ಮ]

ಪುರದ್ವಾರ (ನಾ). (ಪಟ್ಟಣದ) ಹೆಬ್ಬಾಗಿಲು ; ಗೋಪುರ

"ಗೋಪುರಂ, ಪುರದ್ವಾರಂ—ಈ ೨ ಬಾಗಿಲುವಾಡಂ" (ಹರಾಯು. ೪೯-೦೩೩); ಅಡಿ ಮಗುಂಚಿ ಬಿದ್ದಳು ಪುರದ್ವಾರದ ಮಹಾಸೌಧ ಹುಡಿಗೆದಱ (ಕೂರಂಗಾ. ೩-೨-೦೦). [ಸಂ.]

ಪುರಧ್ವಂಸಿ (ನಾ). ತ್ರಿಪುರಗಳನ್ನು ನಾಶಮಾಡಿದವನು; ಶಿವ. [ಸಂ. ಪುರಧ್ವಂಸಿನ್]

ಪುರನಯನ (ನಾ). ಮೂರು ಕಣ್ಣುಗಳುಳ್ಳವನು; ಶಿವ: ಪುರನಯನ . . . ಪೊರೆವುದೀಕ್ಷಣವೆನ್ನ (ಶ್ರೀಕಂಠಾ. ೦-೩೦). [ಸಂ.]

ಪುರಭೃತ್ತು (ನಾ). ಪುರದ ಒಡೆಯ, – ದೊರೆ: ಪೇಚರಸೈನ್ಯಂ ವಿಜಯೂರ್ಧಾಚಲತಟಧಾತುರೇಣುಾರಕ್ತಂ ಪುರಭೃದ್ಗೋಚರಕೋಪಾಗ್ನಿ ಶಿಖಾರೋಚಿಃಪಟಳೋಪಲಿಪ್ತವೆನಿಸಿದುದಾಗಳ್ (ಶಾಂತಿಪು. ೯-೬). [ಸಂ. ಪುರಭೃತ್]

ಪುರಮಥನ (ನಾ). ೧. ತ್ರಿಪುರಗಳನ್ನು ನಾಶ ಮಾಡಿದವನು; ಶಿವ: ಪುರಮಥನರೂಪದಿಂ ನೀಂ ಮರುಳ್ಗಳೊಡನಾಡಿದೈ (ಜಗಪ. ೯-೧೦೯); ಪುರಮಥನನ ವರಕೀರ್ತ್ಯಂಕುರವಿಾ ಗಿರಿಸುತೆಯ ವದನದೊಳ್ ಬೊಳೆತುದು ಸಾದರದಿಂ ತಾನೆಂಬಂತಿರೆ ಕರದೆಸೆದುದು ವಿಮಳಮೌಕ್ತಿಕಂ ನಾಸಿಕದೊಳ್ (ಗಿರಿಜಾ. ೩-೩೩). ೨. [ಛಂದ] 'ಗುರು' ಎಂಬುದರ ಸಂಕೇತ (—): ಸುರರ ಪಡೆ ನೆರೆದಿರಲು . . . ಪದಾಂತಂ ಪುರಮಥನ ಪಡೆ ಬಬುಕ ನೆರೆದು ಯತಿ ದಶಮದೊಳೆ (ಛಂದೋಂಬು. ೩-೨೦೩). [ಸಂ.]

ಪುರಮರ್ದನ (ನಾ). = ಪುರಮಥನ ೧: ಪುರಮರ್ದನಾಗೇಂದ್ರನಂ ನಿಂದು ಬೆಜಗಾಗಿಸಿತ್ತಮಲ ಧರ್ಮಜನ ಕೀರ್ತಿ (ಕೈಲಾಸಾ. ೨-೦೨). [ಸಂ.]

ಪುರರಿಪು (ನಾ). ತ್ರಿಪುರಗಳ ವೈರಿ; ಶಿವ: ಪುರರಿಪು ಸಾಮವೇದಿಯ ಪೊಳಲ್ವರಸೊಯ್ಯನೆ ತನ್ನ ಲೋಕಕಟ್ಟರಿಯೆನೆ ಘಂಟೆಗೂಡಿ ಎಸು ಪೋಹಿಲನಂ ರಜತಾಚಲಕ್ಕೆ ಬಿತ್ತರದೊಳ್ ಕೊಂಡುಪೋಗನೆ (ಸ್ವಪ್ನ. ೩೬-೦೨೩). [ಸಂ.]

ಪುರಲಿ 'ಪುಱಲಿ' ನೋ.

ಪುರಲು 'ಪುರುಳ್' ನೋ.

ಪುರಲೆ, ಪುರುಳೆ (ನಾ). ೧. ಒಣಗಿದ ಹುಲ್ಲು, ಸೌದೆಯ ಚಿಕ್ಕ ತುಂಡು ಮೊದಲಾದ ಉರುವಲು: ಗಿಡದಿಂದ ಅಡಿಗೆಗೆ ಬೇಕಾದ ಸೌದೆಯನ್ನೂ ಪುರಲೆಯನ್ನೂ ಆಯ್ದುಕೊಂಡು ಬರುವುದು (ಕೈಸರ್ವ. ೧೬); ಅವಳು ನೀರಿನ ಒಲೆಗೆ ಪುರಲೆಯನ್ನು ಹಾಕುತ್ತಿದ್ದಳು (ಪಮ್ಮೂರ. ೩); ಮನೆಯ ಕಡೆ ತರಲೆ, ಹೊಲದ ಕಡೆ ಪುರಲೆ (ಗಾದೆ). ೨. (ಆಲಂ) ಒಣಮಾತು; ಜಳ್ಳುನುಡಿ: ಸಂಗೀತದಲ್ಲಿ ಓಡದಿದ್ದ ಅವರ ಬುದ್ಧಿ ಪಿಸುಣತನದಲ್ಲಿ ಚುರುಕಾಯಿತು. ಅವರು ದಿನಕ್ಕೊಂದು ಪುರಲೆ ಹಾರಿಸತೊಡಗಿದರು (ಕೂಪಸ. ೦೩೯). **ಪುರುಳೆ**: ೧. ಪುರುಳೇ ಸೌದೆ ಇಲ್ಲದೆ ದೊಡ್ಡ ಸೌದೆ ಉರಿಯುತ್ತದೆಯೇ (ಹುಚ್ಚಿಹ. ೦೯೨). 'ಪುಳ್ಳಿ' ಪರಾ.

ಪುರುಳೆ ಹಚ್ಚಿಡು = (ಆಲಂ) ಮನಸ್ತಾಪವನ್ನು ಉಂಟುಮಾಡು; ಜಗಳ ಹಚ್ಚಿಸು: ಆ ಈರಿಸ್‌ದೇವತೆಗೋ ಮೊದಲೇ ಅನ್ಯೋನ್ಯವಾಗಿದ್ದವರ ಮಧ್ಯೆ ಪುರುಳೆ ಹಚ್ಚಿಡುವ ಸ್ವಭಾವ (ಕಣ್ಣಿಗಾ. ೦೬೯).

ಪುರವಂತ (ನಾ). ೧. ಗುಗ್ಗುಳದ ಉತ್ಸವದ ಸಂದರ್ಭದಲ್ಲಿ ಮಾಡುವ ವೀರಭದ್ರನೃತ್ಯ: ಒಡ್ಡಿ ಬಾಜೆತ್ರೀಲಿ ಪುರವಂತನಾಡಸ್ತ ಐಸೀರಿಲ್ಲೊಂಟಾರಲ್ಲ (ಮಲ್ಲಿಗೆ. ೩೬). ೨. ವೀರಭದ್ರನೃತ್ಯವನ್ನು ಮಾಡುವವನು; ಪ ಕುಣಿತದ ಮಧ್ಯೆ ಮಧ್ಯೆ ಒಡಪುಗಳನ್ನು ಹೇಳುವುದು ಈತನ ಸಂಪ್ರದಾಯ. ವಚನಗಳನ್ನೂ ಹಾಡುವುದುಂಟು: ಪುರವಂತರು ವೀರಭದ್ರನ ಅವತಾರವೆಂಬ ನಂಬಿಕೆಯಿದೆ (ಕಇಸ. ೦೦೨). [ಪುರ + — ವಂತ]

ಪುರವಂತಿಕೆ (ನಾ). ಶಿವಭಕ್ತನಾದ ಪುರವಂತನಿಂದ ನಡೆಯುವ ಒಂದು ಬಗೆಯ ನಾಟ್ಯಕಲೆ: ಉತ್ತರಕರ್ನಾಟಕದಲ್ಲಿ ಪ್ರಚಲಿತವಿರುವ ಶೈವ ಪರಂಪರೆಯ ವಿಶಿಷ್ಟವಾದ ಧಾರ್ಮಿಕ ಕಲೆ 'ಪುರವಂತಿಕೆ' (ಕಇಸ. ೦೦೨). [ಪುರವಂತ + — ಇಕೆ]

ಪುರವಟೆ 'ಪುರವಠೆ' ನೋ.

ಪುರವಠೆ, ಪುರವಟೆ, ಪುರೋಠೆ, ಪೂರೋಟೆ (ನಾ). ೧. (ಉಕ) ಪೂರೈಕೆ; ಸರಬರಾಜು: ಒದಗಿಸುವಿಕೆ: ಬೇಕಾದಾಗ ಹಣದ ಪುರವಠೆಯನ್ನು ತಮಗೆ ಮಾಡಬೇಕೆಂದು ಅವರು ಬರೆದಿರುವರು (ಶಿಧಿಸ್ಥ. ೩೬); ಅವನ ನಿತ್ಯಾವಳೀ ಮನೆಯ ಗಂಡುಪಾಗಾಕ್ಕೆ ಜೋಡಿ ಒಂಟಿ ಲೆಕ್ಕದಿಂದ ಯಜ್ಞೋಪವೀತದ ವಾರ್ಷಿಕ ಪುರವಠೆಯಾಗಬೇಕು (ರೀಪಹ. II, ೯೬). ೨. ಸಮೃದ್ಧವಾಗಿರುವಿಕೆ; ವಿಪುಲವಾಗಿರುವಿಕೆ; ಸುಗ್ಗಿ: ನೀರು ಪುರವಠೆ ಆವ್ರ ಒಂದು ಮಗಿ ಎಲಿಬಳ್ಳಿ ಬೆಳೆಸೋಣ (ಬಾಬಾ. ೬); ಕಮಲಜ್ಜಿಗೆ ಈಗ ಎಂಬತ್ನಾಲ್ಕು ವರುಷಗಳು. ಆಕೆಯು ನಿದ್ದೆಯ ಪುರವಠೆಯಲ್ಲಿ ಈಗ ಒಣಗಿದ್ದರೂ ನೆನಪಿನ ಶಕ್ತಿಯು ಮಾತ್ರ ಹಚ್ಚ ಹಸುರಾಗಿತ್ತು (ಶಪ್ರಳ. ೬೬). **ಪುರವಟೆ**: ೧. ವಿದೇಶೀಬಟ್ಟೆಯನ್ನು ಸಂಪೂರ್ಣವಾಗಿ ಬಹಿಷ್ಕರಿಬೇಕಾದರೆ ಪ್ರತಿವರ್ಷ ೧,೫೦೦ ದಶಲಕ್ಷ ಯಾರ್ಡು ಬಟ್ಟೆಯ ಪುರವಟೆಯಾಗಬೇಕು (ಜಾತಿಸಾ. ೧೬). **ಪುರೋಠೆ**: ೧. ಲೋಕಲ್ ಫಂಡು . . . ಇವರ ಹಣದಿಂದ ಶಿಕ್ಷಣ, ಹೊಸಮಾರ್ಗಗಳು, ನೀರಿನ ಪುರೋಠೆ, ಕಾವಲಿಗಳು, ಧರ್ಮಶಾಲೆ, ವೈದ್ಯಶಾಲೆಗಳು ಮುಂತಾದ ಸಾರ್ವಜನಿಕಹಿತದ ಕೆಲಸಗಳಾಗುತ್ತಿರುತ್ತವೆ (ಕಜಾಗೆ. ೩೯೩). **ಪೂರೋಟೆ**: ೨. ಒಂದು ಬಾರಿ ನೀರು ಎಲ್ಲಾ ಕಡೆ ಪೂರೋಟೆ ಆಗಬೇಕಲ್ಲರಿ (ಬಾಬಾ. ೦೩). [← ಮರಾ. ಪುರವಟಾ, ಪುರವಠಾ]

ಪುರವಣಿ (ನಾ). ಪೂರಕಪತ್ರ; ಅನುಬಂಧ; ಪರಿಶಿಷ್ಟ: ಅವಕ್ಕೆ ಎರಡು ನೂರು ಪುಟದ ಪುರವಣಿಯನ್ನು ಜೋಡಿಸಬೇಕಾಗಿದೆ (ಮಹಾಹಿ. ೯); ಹೊಸ ಉಲ್ಲೇಖಗಳ ಪುರವಣಿಗಳನ್ನು (Supplements) ಕಾಲಕಾಲಕ್ಕೆ ಮುದ್ರಿಸಿ ಸೂಚಿಯ ನವೀನತೆಯನ್ನು ಕಾಯ್ದುಕೊಳ್ಳಹತ್ತಿದವು (ಗ್ರಂಥಾಲಾ. ೧೨); ಪಾರ್ಸೀ ಪತ್ರಿಕೆಯಲ್ಲಿ ಒಂದು ಇಂಗ್ಲೀಷ್ ಪುರವಣಿ ಭಾಗವೂ ಇರುತ್ತಿತ್ತು (ಪತ್ರಿಕಾ. ೨೬). [← ಮರಾ. ಪುರವಣೀ]

ಪುರವರ (ನಾ). ಶ್ರೇಷ್ಠವಾದ ಪಟ್ಟಣ, —ನಗರ: ನಿಡಿಯಲರ್ಗಣ್ಗಳ ಬೆಡಂಗಿಯರ್ಕಳನರ್ಕಂ ನಡೆ ನೋಡಿ ಪೋಗಲಾಱದೆ ತಡೆಯೆ ಪಗಲ್ ಪಿರಿಯವಪ್ಪುವಾ ಪುರವರದೊಳ್ (ಕಾಸ್ವಗಾ. ೦೩೯ ಕಾಪ್ರಳ); ಆ ಕೋಟೆಯೊಳಗೆ . . . ಏಕದ್ವಿತ್ರಿಚತುಶ್ಶಾಲಾಕೀರ್ಣಂ ಪುರವರಂ ಕರಂ ಸೊಗಯಿಸುಗುಂ (ಶಾಂತಿಪು. ೯-೦೯೬). [ಸಂ.]

ಪುರವರ್ಗ (ನಾ). ದೇವಾಲಯದ ಸೇವಾವರ್ಗ ಮತ್ತು ಅವರಿಗಾಗಿ ನಿರ್ಮಿಸಿದ ವಸತಿಸ್ಥಾನ, — ಬಡಾವಣೆ: ಮನ್ನೆಯದೊಳಗೆರಡು ಪೊನ್ನುಮಂ ದೇವರ ಪುರವರ್ಗ್ಗಪಳೆಯ ಭತ್ತಮುಮಂ . . . ಹನ್ದರ ಹಣಮುಮಂ ಬಿಟ್ಟರು (ಕಇ. IV, ೩೯-೨೬; 1111); ಜನನಿಗೆ ಚಂದಲೇಶ್ವರಮನೆತ್ತಿಸಿದಂ ಪುರವರ್ಗ್ಗಮಂ ಜಗಜ್ಜನನುತಮಾಗೆ ಕಾಮನೆಱ ವಟ್ಟಿನೆ ಮಾಡಿಸಿದಂ . . . ಕಾಮಿನಿಯರನಾಯ್ದು ತಂದು ಪುರವರ್ಗ್ಗದ ಸೂಳೆಯರಾಗೆ ಮಾಡಿದಂ (ಎಇ. XIII, ೯೬-೬೩; 1112); ಗುಂಮ್ಮಂಣ್ಣನ ಹೆಸರಲಿ ಪುರವರ್ಗ್ಗವಾಗಿ ಸಂಭುದೇವರ ಮುಂದೆ ಅಯ್ದುಮನೆಯಂ ಕೊಟ್ಟು (ಮೈಶಾ. ೦೯೧೩, ೦೯-೦೦; 1318). [ಸಂ.]

ಪುರವಾಸಿ (ನಾ). ಪಟ್ಟಣದ ನಿವಾಸಿ; ಪಟ್ಟಣಿಗ; ನಗರವಾಸಿ: ಕರೆತಂದರ್ ಪುರವಾಸಿಗಳ್ ದೊರೆಯನುದ್ಯತ್ಸಾರಸೌರಂಭದಿಂ (ಹಾಶಾಸ್ತ್ರ. ೦-೩-೦೯). [ಸಂ. ಪುರವಾಸಿನ್]

ಪುರವಿಜಯ (ನಾ). ತ್ರಿಪುರಗಳನ್ನು ಗೆದ್ದವನು; ಶಿವ: ಪುರವಿಜಯಂಗೆ ತನ್ನ ಸುತೆಯಪ್ಪುವೆಯಂ ನಲಮಿಮಿತ್ತು ಭೂಧರಪತಿ ಮಾವ

ನೆಂದೆನಿಸಿದಂದದಿನೆನ್ನಯ ಕನ್ನೆಯಂ . . . ನಿಮ್ಮಡಿಗೆ ಕೊಟ್ಟು ವಿವಾಹ ಮನೊಪ್ಪಿ ಮಾಳ್ಪೆಂ (ತ್ರಿಪುರ. ೩೩.೦೩೯). [ಸಂ.]

ಪುರವೈರಿ (ನಾ). ತ್ರಿಪುರಗಳ ಶತ್ರು ; ಶಿವ : ಪುರವೈರಿ ಪೆಳರ್ದು ನಿಜ ಮಂದಿರದ ಕವಾಟದೊಳೆ ತಳ್ತ ಬೀಯಗಮನದಂ ಪರಿಹರಿಸಿ ತೆಗೆದು ಪುಳಿಲನೆ ಸರಭಸಮಾ ಜವಳಿಪಡಿಯನೇಂ ಬರ್ಚಿದನೊ (ಪ್ರಸಂ. ೦೭-೪೦). [ಸಂ. ಪುರವೈರಿನ್]

ಪುರತಾಸನ (ನಾ). ತ್ರಿಪುರಗಳನ್ನು ದಂಡಿಸಿದವನು ; ಶಿವ. [ಸಂ.]

ಪುರಶ್ಚರಣ (ನಾ). ದೇವರ ಹೆಸರನ್ನು ಅಥವಾ ಮಂತ್ರವನ್ನು ಜಪಿಸುವುದು : ಪುರಶ್ಚರಣಂಗೈಯದೆ ಸಂಖ್ಯಾನಿಯತಮಾಗಿ ದೇಹಾಂತ ಪರ್ಯಂತ ಮಾಳ್ಪುದೇ ನಿತ್ಯಜಪವಹುದು ಕನಿಷ್ಠವೆನಿಸುವುದು ಪುರಶ್ಚರಣಂ ಮಾಡಿ ಬಿಡುವುದೇ ಪುರಶ್ಚರಣಜಪವದು ಮಧ್ಯಮವೆನಿಸುವುದು ಪುರಶ್ಚರಣಂಗೈದು ಮೇಲೆ ಸಂಖ್ಯಾನಿಯಮದಿಂ ಪ್ರಾಣಾವಧಿ ಮಾಳ್ಪುದೇ ಪುರಶ್ಚರಣ ಪೂರ್ವಕ ನಿತ್ಯಜಪವದುತ್ತಮವೆನಿಸುವುದು (ವಿವೇಕ. ೬೭). [ಸಂ.]

ಪುರಶ್ಚರಣೆ (ನಾ). ಮತ್ತೆ ಮತ್ತೆ ಜಪಿಸುವುದು,-ಹೇಳುವುದು : ನಿಶ್ಚಲಹೃದಯನಾಗಿ ವಿಷ್ಣುನಾಮಂಗಳ ಪುರಶ್ಚರಣೆಯಿಂದವಂ ಸುಖದೊಳಿರುತಿರೆ (ಶ್ರೀಪಾ. ೦೦.೩೯); ಅವನು ಆಕೆಯ ಕನ್ಯಾವಸ್ಥೆಯಲ್ಲಿ . . . ಸೂರ್ಯನ ಮಂತ್ರದ ಪುರಶ್ಚರಣೆಯ ಪ್ರಭಾವದಿಂದ ಹುಟ್ಟಿದವನು (ಶಿಗಟ್ಟು. ೨೦). [ಸಂ. ಪುರಶ್ಚರಣ]

ಪುರಸತ್ತು, ಪುರಸೊತ್ತು, ಪುರುಸತ್ತು, ಪುರುಸೊತ್ತು (ನಾ). ಬಿಡುವು ; ವಿರಾಮ : ವೀರರಾಜೇಂದ್ರಪೇಟೆ ಉಗ್ರಾಣಕ್ಕೆ ದಿವಾರಾತ್ರಿಯಲ್ಲೂ ಪುರಸತ್ತು ಇಲ್ಲದೆ, ಅಕ್ಕಿ ಹೊರುತ್ತಾರೆ (ರಾಶೇಂದ್ರ. ೦೩೭) ; ಪುರಸತ್ತಾದರೆ ಮಧ್ಯಾಹ್ನ ಅಕ್ಕನ ಮನೆಗೆ ಬರುತ್ತೇನೆ (ಮೂರುದಾ. ೦೩೯); ಅವನಿಗೆ ಯೋಚನೆ ಮಾಡಲು ಆಗ ಪುರಸತ್ತಿರದು (ರಾಷ್ಟ್ರಾಂಗ. ೦೨೩). **ಪುರಸೊತ್ತು** : ವರ್ಷಕ್ಕೆ ಆರುತಿಂಗಳು ರೈತರಿಗೆ ಕೆಲಸ. ಮಿಕ್ಕ ಸಮಯ ಪುರಸೊತ್ತಿನಿಂದಿರುತ್ತಾರೆ (ಗಂಗಾಳ. ೦೨) ; ರಸ್ತೆಯಲ್ಲೋ ಮಸ್ತು ಜನ, ಇಲ್ಲ ಪುರಸೊತ್ತು (ಸಂಪಮ. ೩೨-೦೨) ; ನಾವು ಪುರಸೊತ್ತೇ ಇಲ್ಲದೆ ಕೆಲಸ ಮಾಡುತ್ತಾ ಇದೀವಿ (ಮುನಿಮಾ. ೧೧೩). **ಪುರುಸತ್ತು** : ಹೆಂಗಸರಿಗೂ ಪುರುಸತ್ತಿಲ್ಲ, ಗಂಡಸರಿಗೂ ವಿರಾಮವಿಲ್ಲ (ಹುಟ್ಟಿಹ. ೭೦); ಚಹವನ್ನು ಕುಡಿದುಕೊಂಡು ಹೋಗುವುದಕ್ಕೂ ಬಾಳುವಿಗೆ ಪುರುಸತ್ತಿರಲಿಲ್ಲ (ಶಂದುಪ. ೩೯); ಅವಳು ಚೆಲುವೆಯೇ ಅಲ್ಲವೇ ಎಂದು ನಿಂತು ನೋಡುವುದಕ್ಕೆ ಪುರುಸತ್ತಿಲ್ಲ (ರಾಮಾನ. ೦೦೨). **ಪುರುಸೊತ್ತು** : ನನಗೆ ಮಧ್ಯಾಹ್ನ ಹನ್ನೆರಡು ಗಂಟೆಯವರೆಗೆ ಪುರುಸೊತ್ತೇ ಇಲ್ಲ (ರಾರಥಿ. ೪) ; ನಿನ್ನ ಜೊತೆ ಮಾತಾಡೋಕೆ ಪುರುಸೊತ್ತಿಲ್ಲ (ಮಾಮಸ. ೩) ; ಉಸಿರಾಡಿಕೊಳ್ಳಲಿಕ್ಕೆ ಸ್ವಲ್ಪ ಪುರುಸೊತ್ತು ಕೊಡು (ಮಹಾಲಿ. ೪೬).

[← ಅರ. ಹಿಂ. ಪುರಸತ್, ಪುರ್ಸತ್; ಮರಾ. ಪುರಸತ್, ಪುರ್ಸತ್, ಪುರಸೂತ್, ಪುರ್ಸತೀ]

ಪುರಸಭೆ (ನಾ). ಸ್ಥಳೀಯ ಅಧಿಕಾರವುಳ್ಳ, ಚುನಾಯಿತ ಸದಸ್ಯರನ್ನು ಹೊಂದಿದ ಪಟ್ಟಣದ ಸಂಸ್ಥೆ ; ನಗರಸಭೆ ; ಪೌರಸಭೆ : ಪುರಸಭೆ ಯಟ್ಟಿದ ನಾಯಿಗಾಡಿಯ ನೋಡಿ ಶುನಿ ಗಲ್ಲಿ ಬಿದ್ದೋಡುವಂತೆ ತನ್ನನ್ನು ಬೆನ್ನಟ್ಟಿ ಬಂದರೆಂದೀ ಖೋಡಿ ಅವಿತು ಕದ್ದೋಡುವನಲ್ತೆ (ಕಂದ್ರಪ್ರ. ೦೬೯-೬೪). [ಸಂ. ಪುರಸಭಾ]

ಪುರಸೊತ್ತು 'ಪುರಸತ್ತು' ನೋ.

ಪುರಸ್ಕರಿಸು (ಕ್ರಿ). ೧. ಮನ್ನಿಸಂ ; ಗೌರವಿಸು ; ಆದರಿಸು : ಪಾಂಡು ಪುತ್ರರ ಸುಗುಣಗಳನ್ನು ಕಂಡು ಪ್ರಜೆಗಳು ಅವರನ್ನು ಅಖಂಡವಾಗಿ ಪ್ರೀತಿಸಿ ಪುರಸ್ಕರಿಸುತ್ತಿದ್ದರು (ಹಿಂಕಿರು. ೨); ನನ್ನನ್ನು ಪುರಸ್ಕರಿಸಲು ಸಾವಿರ ಜನರು ಮುಂದೆ ಬಂದಾರು (ರಂಗರೋ. ೦೦೦); ಆ ಬ್ರಾಹ್ಮಣ . . . ನಾನು ದೇವಸ್ಥಾನಕ್ಕೆ ಬರಬೇಕೆಂದೂ, ಸಕಲಮರ್ಯಾದೆಗಳೊಡನೆ ಪುರಸ್ಕರಿಸುವನೆಂದೂ ಹೇಳಿದನು (ಸಂಗಾಳ್ಯ. ೫೦೨). ೨. ಬೆಂಬಲಿಸು ; ಪ್ರೋತ್ಸಾಹಿಸು : ಈ ಪತ್ರಿಕೆಯು ಪುರಸ್ಕರಿಸುತ್ತಿದ್ದ ಆಯರ್ಲಂಡದ ಸ್ವಾತಂತ್ರ್ಯಚಳುವಳಿಯ ಬಗ್ಗೆ ಭಾರತದಲ್ಲಿಯ ಆಂಗ್ಲರಿಗೆ ಒಳ್ಳೇ ಅಭಿಪ್ರಾಯವಿರಲಿಲ್ಲ (ಪತ್ರಿಕಾ. ೨೫). [ಪುರಸ್ಕರಣ್ಯ + — ಇಸ್ಯು]

ಪುರಸ್ಕರ್ತ (ನಾ). ಬೆಂಬಲಿಸುವವನು ; ಸಮರ್ಥಿಸುವವನು ; ಅನುಯಾಯಿ : ಆಧುನಿಕಕಾಲದೊಳಗಿನ ಸಮತೆಯ ಪುರಸ್ಕರ್ತರೂ ತಿಳಿದೂ ತಿಳಿಯದೆಯೂ ಇದೇ ಶ್ರದ್ಧೆಯ ಸ್ವೀಕಾರವನ್ನು ಮಾಡುತ್ತಿರುವರು (ಪ್ರಜಂಧ. ೦೦೪) ; ಆಕ್ಸ್‌ಫರ್ಡಿಗೆ ಬಂದ ತಿಂಗಳೆರಡು ತಿಂಗಳಲ್ಲಿಯೇ ನಿಯೋಗಿಯು ಒಂದು ವಿಶಿಷ್ಟ ಧೋರಣದ ಪುರಸ್ಕರ್ತನಾದ (ಸಮಜೀ. ೬೬೯). [< ಸಂ. ಪುರಸ್ಕರ್ತೃ]

ಪುರಸ್ಕಾರ (ನಾ). ೧. ಗೌರವ ; ಸನ್ಮಾನ ; ಮರ್ಯಾದೆ : ಹಳ್ಳಿಗೆ ಒಳ್ಳೆಯ ಪುರಸ್ಕಾರ ದೊರೆತ ಹಾಗಾಯಿತು (ರೂಪಸಂ. ೫೩); ನಿಸರ್ಗ ವಿಜ್ಞಾನಕ್ಕೆ ಹೆಚ್ಚಿನ ಪುರಸ್ಕಾರ ದೊರೆಯಿತು (ತಿಕ್ಷದ. ೨೯). ೨. ಸ್ವೀಕಾರ : ವ್ಯಕ್ತಿತ್ವದ ವರ್ಗೀಕರಣವಿಧಾನಯತ್ನ ಅಷ್ಟಾಗಿ ಪುರಸ್ಕಾರ ಪಡೆದಿಲ್ಲ (ತಿಕ್ಷದ. ೬೩೯). ೩. ಬಹುಮಾನ ; ಇನಾಮು : ರವಿಯ ಹಣವನ್ನು ಕಳವು ಮಾಡಿದ ವ್ಯಕ್ತಿಯೇ ಆ ಮಗುವಿನ ಕೊರಗನ್ನು ಕಂಡು ಮನಕರಗಿ ಬಾಲಕಿಗೆ ಪುರಸ್ಕಾರವಾಗಿ ಇವನ್ನು ಕಳುಹಿಸಿರಬಹುದೇ ? (ಮೊಗ್ಯು. ೦೩); ಮೋತಿಯು ಕಾಗದವನ್ನು ತಂದವನಿಗೆ ಸ್ವಲ್ಪ ಪುರಸ್ಕಾರ ಮಾಡಿ ಕಳುಹಿಸಿಕೊಟ್ಟು . . . ಕಾಗದವನ್ನೋದಿ ಹೇಳಿದಳು (ಕಪಾಳುಂ. ೬೦). [ಸಂ.]

ಪುರಸ್ಕೃತ (ಗು). ೧. ಮುಂದೆ ಇಟ್ಟ ; ಮುಂದು ಮಾಡಿದ. ೨. ಗೌರವವನ್ನು ಪಡೆದ ; ಸನ್ಮಾನಿತ ; ಪೂಜಿತ. (ನಾ). ೩. ಶತ್ರುಗಳಿಂದ ಆಕ್ರಮಿಸಲ್ಪಟ್ಟವನು. ೨, ೩ : ನಾಡಿಗರೊಳೆಲ್ಲರುಂ . . . ಪುರಸ್ಕೃತರಭಿವನ್ನರಲ್ತು (ರಾಮಾಶ್ವ. ೬-೨೩). [ಸಂ].

ಪುರಸ್ಸರ (ಗು). ೧. ಮುಂದೆ ಬರುವ ; ಅಗ್ರೇಸರವಾದ ; ಶ್ರೇಷ್ಠವಾದ : ವಿಜಯಾರಂಭಪುರಸ್ಸರವಿಜಯಗಜಂಗಳನೆ ಪಿಡಿದು ಘೂರ್ಜರ ರಾಜಧ್ವಜಿನಿಯನಿಱಿದೋಡಿಸಿ (ಸಂಪಶಾ. ೦-೩೬). (ನಾ). ೨. ಸಹಿತವಾದುದು ; ಸಮೇತವಾದುದು : ವಿಶ್ರುತಶ್ರುತಕೀರ್ತ್ಯಾಚಾರ್ಯ ಪುರಸ್ಸರಮಪ್ಪಾಚಾರ್ಯಪರಂಪರೆಯೆ ಕುಡುಗೆ ಭವ್ಯೋತ್ಸವಮಂ (ಅದಿಪು. ೧-೧೨). 'ಪುರಃಸರ' ಪರಾ.

ಪುರಸ್ಸರವಾಗಿ = ಕೂಡಿಕೊಂಡು ; ಸಮೇತವಾಗಿ ; ಸಹಿತವಾಗಿ: ಬಾಚಿಮಯ್ಯನುಂ ಮಗ ಮಲ್ಲಿಯಂಣನುಂ ಪುರಸ್ಸರವಾಗಿ ಮಲ್ಲಿಕಾರ್ಜ್ಜುನ ದೇವರ್ಗ್ಗೆ . . . ಬಿಟ್ಟ ಗದ್ದೆ (ಸೌಇಇ. IX-1, ೨೯೦-೨೬; 12ನೆಯ ಕಡ) ; ವಾತ್ಸಲ್ಯದಿಂದಲೂ ಅಧ್ಯವಸಾಯ ಪುರಸ್ಸರವಾಗಿಯೂ ಯುಧಿಷ್ಠಿರಾದಿ ಕುಮಾರರನ್ನು ಲಾಲಿಸಿ ಪಾಲಿಸಿದುದನ್ನೂ ನೆನೆನೆನೆದು ಅವನು ಕಣ್ಣೀರ ತುಂಬಿದನು (ರೀಸ್ಯಶ. ೬೨). [ಸಂ.]

ಪುರಸ್ಸರಂ (ಅ). ಸಹಿತವಾಗಿ ; ಸಮೇತವಾಗಿ ; ಪೂರ್ವಕ : ಪರಸ್ಪರ ಕ್ಷೇಮಕುಶಲಭಾಷಾಪುರಸ್ಸರಂ ಅಮರ್ದವ್ವೆ (ಸಂಶಾಮಾ. ೦೦-೫೫ ಪ); ಸುಶ್ರುತನಂ ತಾಂಬೂಲದಾನಪುರಸ್ಸರಂ ವಿಸರ್ಜಿಸಿ (ಕಂದ್ರಪು. ೩-೩೬ ಪ). [< ಪುರಸ್ಸರ]

ಪುರಸ್ಸರತೆ (ನಾ). ಕೂಡಿಕೊಂಡಿರುವಿಕೆ; ಸಹಿತವಾಗಿರುವಿಕೆ : ಚತುರ್ವಿಧಾರಾಧನಾಪುರಸ್ಸರತೆಯಿಂ ಸಮಾಧಿವಿಧಿಗೇಂ ಮನಂದಂದಳೋ (ಸುಳುಮಾ. ೯-೦೫). [ಸಂ. ಪುರಸ್ಸರತಾ]

ಪುರಹರ (ನಾ). ತ್ರಿಪುರಗಳನ್ನು ನಾಶ ಮಾಡಿದವನು; ಶಿವ : ಪುರಹರ

ಸೂಡೆ ಮುನ್ ತ್ರಿಪುರಮಂ ಪಲಕಾಲಮುಪೋಷಿತ ಪ್ರತಾಚರಣ ದೊಳಿರ್ದನೀಗಳುಪವಾಸದ ಪಾರಣೆ ವಾಯುಪುತ್ರನಿಂ ದೊರೆಕೊಳೆ ಲಂಕೆಯಂ ಶಿಖಿ ಶಿಖಾವಧಿಯಪ್ಪಿನಮುಂಡು ತೇಗುವಂತಿರೆ ಪೊಱಪೊಣ್ಮೆದತ್ತು ಧಗಿಲೆಂಬ ಧಗದ್ಧಗಿಲೆಂಬ ನಿಸ್ವನಂ (ಸಂಶಾಮಾ. ೦೦-೦೪೬); ಪುರಹರನಿರ್ದಪಂ ನಿರುಪಮಾನತಪೋಮಯನಾಗಿ (ಗಿರಿಕ. ೬-೧೩). 'ತ್ರಿಪುರಹರ' ಪರಾ.

ಪುರಹರನಯನಮಣಿ = ರುದ್ರಾಕ್ಷಿ : ನಿರಘಭಸಿತ ಪುರಹರನಯನಮಣಿ ವಿಸರಪರಂ . . . ಶರಣನೆಸೆದಂ (ಹಾಲಾಸ್ಯ. ೦-೪-೬). [ಸಂ.]

ಪುರಹರಸುತ (ನಾ). ೧. ಶಿವನ ಮಗ; ಸ್ಕಂದ. ೨. ಸ್ಕಂದನ ಅವತಾರವೆನಿಸಿದ ತಿರುಜ್ಞಾನಸಂಬಂಧ ಎಂಬ ಪುರಾತನ ಶಿವಶರಣ : ಪುರಹರಸುತ ನೀನೆರೆದರ್ಗಿರದಿಷ್ಟವನೀವುದುಳ್ಳೊಡಿಂದೆನ ಗೊಲವಿಂದೆರೆದುದನೀವುದು (ತ್ರಿಪುರಿ. ೩೩-೧೩೬). [ಸಂ.]

ಪುರಹರವಕ್ತ್ರ (ನಾ). ೧. ಶಿವನ ಮುಖ. ೨. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಪುರಹರವಕ್ತ್ರಂ ಪಂಚಂ . . . ಪುರವೈರಿಮುಖಂ ಗಳೈದಱ ನಾಮಂ (ವ್ಯವಹಾ. ೯-೩). [ಸಂ.]

ಪುರಳಿಮರ (ನಾ). ಒಂದು ಬಗೆಯ ಸಸ್ಯ : ಪಾದರ್ಕಿಕಾಲಾದ್ರಿ, ಪುರಳಿ ಮರ, ಕಲಿಹುಟ್ಟು, ಕಲ್ಲುಉದಿ (ಮೃತಿಗಿ. ೬೨-೧೪೭೭). [ಪುರಳ್ಳಿ + ಮರ$_1$]

ಪುರಾಂಗನೆ (ನಾ). ಪುರದಲ್ಲಿಯ ಹೆಂಗಸು ; ಪುರಸ್ತ್ರೀ : ಓಲಗಶಾಲೆ ಪೂಗಿಡುಗಳೋಳಿಗೆ ನಾಟ್ಯಶಾಲೆ ಕುಸುಮಾಪಚಯಪ್ರಚಳತ್ಪುರಾಂಗನಾ ಲೋಲಕಟಾಕ್ಷಲಕ್ಷ್ಮಿಗೆನಲೊಪ್ಪುವುವಲ್ಲಿಯ ಪುಷ್ಪವಾಟಿಗಳ್ (ಪುಷ್ಪಪು. ೦೨-೩೦). [ಸಂ. ಪುರಾಂಗನಾ]

ಪುರಾಂತಕ (ನಾ). = ಪುರಹರ : ಪುರಾಂತಕಧ್ಯಾನದಲಿ ವಿಮಲಸ್ವಾಂತ ನೇಕಾಗ್ರದಲಿ ಭಜಿಸಿದನಿಂದುಶೇಖರನ (ಕುಪ್ಯಾಲಿ. ೨೨-೪೩). [ಸಂ.]

ಪುರಾಕೃತ (ಗಂ). ೧. ಹಿಂದೆ ಮಾಡಿದ ; ಪೂರ್ವಜನ್ಮಗಳಲ್ಲಿ ಮಾಡಿದ : ವಾಂಛೆಯಿಲ್ಲದ ಜೀವಿತಮುಂ ಮುನ್ನೆಂಬುದಿಲ್ಲದ ವಿಕ್ರಮಮುಂ ಓಗಡಿಸಿದನುಭವಮುಂ ಪಗೆಯಿಂ ಪೊಗಳಿಸುವ ಧೈರ್ಯಮುಂ ಪುರಾಕೃತ ಸುಕೃತ ಫಲಂಗಳ್ (ಶಾಂತಿಪು. ೪-೭೯ ಪ) ; ತನ್ನನಿಂದ್ರನಾಗೆ ಬಗೆದು . . . ಪುರಾಕೃತ ಪುಣ್ಯದಿಂ ಸುಖಮನನುಭವಿಸುತ್ತಿರೆ (ಸಂಶಾಮಾ. ೦೦-೦೩೪ ಪ); ಹಗೆಯೊಳೆಮ್ಮವರೊಳಗೆ ಎದೆಗಿಚ್ಚುಗಳ ಖುಲ್ಲಕುಠಾರರಪನಂಬುಗೆಯ ಬಳಸಿದರಮ ಪುರಾಕೃತಕರ್ಮದವಶೇಷ (ಕುಪ್ಯಾಕಾ. ೬-೦೦). (ನಾ). ೨. ಪೂರ್ವಜನ್ಮದಲ್ಲಿ ಮಾಡಿದ ಕರ್ಮ : ಒಳ್ಳಿತ್ತ ಕೆಯ್ವೊರಾರ್ಪ್ಪೊಲ್ಲದುಮದ ಱಂತೆ ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತಮಿಲ್ಲಿ ಸಂಧಿಕ್ಕುಂ (ಇಆ. X, ೬೦-೯; ಸು. ೧೦೦); ಪುರಾಕೃತ ತಪ್ಪದೇನಾದುದಾಗಲಿ (ಸವಮೋ. ೩-೦೦) ; ಅನುಬಂಧ ಜೀವಜೀವಕೆ ಪುರಾಕೃತದಿಂದ (ಮಂಕುಕ. ೧೬೬). [ಸಂ.]

ಪುರಾಟಕ (ನಾ). [ನಾಟ್ಯ] ಮೂವತ್ತೈದು ದೇಶೀಯಭೌಮಚಾರಿಗಳಲ್ಲಿ ಒಂದು ; ☞ "ಕಾಲುಗಳನ್ನು ಮೇಲಕ್ಕೆತ್ತಿ ಒಂದನ್ನೊಂದು ತಟ್ಟುತ್ತಿರುವುದು" (ಲಾಸ್ಯರು. ೩೨೩ ಗದ್ಯಾನುವಾದ) : ರಥಚಕ್ರ, ಪರಾವೃತ್ತ ತಲ . . . ಪುರಾಟಕ, ಅರ್ಧಪುರಾಟಕ . . . ಸಮಸ್ಖಲಿತ; ಈ ಮೂವತ್ತೈದು ದೇಶೀಯಸಂಬಂಧದ ಭೌಮಚಾರಿಗಳು (ಲಾಸ್ಯರಂ. ೬-೦೭ ಪ). [ಸಂ.]

ಪುರಾಣ (ಗು). ೧. ಹಳೆಯ ಕಾಲದ ; ಪ್ರಾಚೀನಕಾಲಕ್ಕೆ ಸಂಬಂಧಿಸಿದ; ಪುರಾತನವಾದ : ದೊರೆಕೊಂಡಿರೆ ಸೊಗಯಿಸುಗುಂ ಪುರಾಣಕಾವ್ಯ ಪ್ರಯೋಗದೊಳ್ತತ್ಕಾಲದ ವಿರಸಂ ಕರಮವು ದೇಸಿಗೆ ಜರದ್ವಧೂವಿಷಯ ಸುರತರಸರಸಿಕತೆಪೊಲ್ (ಕವಿರಾ. ೦-೩೦) ; ನೆರೆದಿಸುತಿರೆ ತೋಲ್ವುಲ್ಲೆಯ ನಿರದದು ಬಿಟ್ಟೊಡೆ ಪುರಾಣಕೂಪದೊಳ್ (ಸಂಪಸಾ. ೨-೩೦) ; ಕತೆಯೊಳಗಱಿಯದ ವಿಪರೀತತೆಯಿಂದಂ ಪೇಟ್ಟ ಕೃತಿಗಳಿರ್ಕೆ ಪುರಾಣಸ್ಥಿತಿಯೊಳೆ ಕವಿರತ್ನನಿನನ್ವಿತಮಾದುದು ಸಗರಚಕ್ರವರ್ತಿಯ ಚರಿತಂ (ಅಜಿಪು. ೦೨-೨೮). ೨. ಉದ್ದವಾದ ; ದೀರ್ಘವಾದ : "ಆದಿಕಥೆಯೊಳು ದೀರ್ಘದೊಳು ಜೀವದೊಳು ಪುರಾಣಂ" (ಪುಂಗರಾ. ೦೩೦-೩೩). ೩. ಜರ್ಜರಿತವಾದ; ಜೀರ್ಣವಾದ. (ನಾ). ೪. ಹಳೆಯದು : ಪುರಾತನವಾದುದು: "ಜೀರ್ಣಂ, ಜರತ್, ಪುರಾಣಂ, ಪ್ರತ್ನಂ, ಪ್ರತನಂ, ಪುರಾತನಂ-ಈ ೬ ಪ(ಹ)ಟದು" (ಹಲಾಯು. ೦೦೬-೨೬); "ಜೀರ್ಣಮಾ ಜರತ್ಪ್ರತನಮರ್ಣವ ಮನವ್ಯಂ ಪುರಾಣಂ ಪುರಾತನಮೆನಲು ಹಟಿತಿಂಗೆ ನಾಮಮಕ್ಕುಂ" (ಪುಂಗರಾ. ೦೨೯-೦೩). ೫. ಪೂರ್ವಕಾಲದಲ್ಲಿ ನಡೆದು ಹೋದ ಕಥೆ ; ಪ್ರಾಚೀನವಾದ ಚರಿತ್ರೆಯನ್ನು ಹೊಂದಿದ ಕಾವ್ಯಪ್ರಕಾರ : ಅಸಮ ಬಸವಪುರಾಣವಂ ಪಸರಿಸುವವಂ ಪಾಪಂಗಳಂ ಪ್ರಹರಿಸುವಂ (ಬಸಪು. ೬೦-೭೯); ಇಂದಿನ ಬಾಳು ನಾಳೆಗೆ ಚರಿತ್ರೆ, ನಾಡಿದ್ದಿಗೆ ಪುರಾಣ (ಸಾಹಿಜೀ. ೩೩). ೬. ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತ ಎಂಬ ಪಂಚಲಕ್ಷಣಗಳನ್ನು (ಅಥವಾ ಇನ್ನು ಕೆಲವರು ತಿಳಿಸುವಂತೆ ಸರ್ಗ, ವಿಸರ್ಗ, ವೃತ್ತಿ, ರಕ್ಷಾ, ಅಂತರ, ವಂಶ, ವಂಶಾನುಚರಿತ, ಸಂಸ್ಥೆ, ಹೇತು ಮತ್ತು ಅಪಾಶ್ರಯವೆಂಬ ದಶಲಕ್ಷಣಗಳನ್ನು) ಉಳ್ಳ ಪ್ರಸಿದ್ಧವಾದ, ವ್ಯಾಸಪ್ರಣೀತವೆಂದು ತಿಳಿಯಲಾದ ಹದಿನೆಂಟು ಮಹಾಪ್ರಬಂಧ : "ಜಗತ್ತಿನ ಉತ್ಪತ್ತಿಯನ್ನೂ ನಾಶವನ್ನೂ ವಂಶವನ್ನೂ ವಂಶಾನುಚರಿತವನ್ನೂ ಮನ್ವಂತರಗಳನ್ನೂ ಹೇಳುವ ಪ್ರಬಂಧವು ಪುರಾಣವೆನಿಸುಗು" (ಪಾಸಿರಾ. ೯೪) ; ಪುರಾಣದ ಭಟ್ಟವ್ರಿತ್ತಿಗೆ ಸರ್ಬ್ಬನಮಸ್ಯಮಾಗಿ ಪಡೆದ ರೇವದಾಸಭಟ್ಟರ ಕೆಯ್ಯಿಂ ಬಡಗ ಬಿಟ್ಟ ಪಿರಿಯ ಕೋಲ ಮತ್ತ[೫] (ಸೌಇಇ. XX, ೭೨-೦೦ ; 1111); ಶಾಸ್ತ್ರ ಪುರಾಣವ ಕೇಳಿದೊಡೇನು . . . ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ (ಬಸವ. ೧೮೬) ; ಹಲವು ವೇದ ಪುರಾಣ ಶಾಸ್ತ್ರವ ತಿಳಿದು ನೀ ಮರುಳಾದೆ (ಕೌಕಿರಾ. ೩೭-೦೬). 'ಅಷ್ಟಾದಶ ಪುರಾಣ' ಪರಾ. ೭. (ಆಲಂ) ವೈಯಕ್ತಿಕವಾದ ದೀರ್ಘಕಥೆ : ನಿನ್ನ ಪುರಾಣ ಇರಲಿ, ಮೂರ್ತಿ, ಚಹಾ ಎಂದೋ ಆರಿಹೋಗಿದೆ, ಮೊದಲು ಕುಡಿದು ಮಾತನಾಡು (ಪರ್ಯೋಸಿ. ೩) ; ಶ್ರೋತಾಮಂಡಳಿ ಬಸವಂತಿಯ ಪುರಾಣವನ್ನು ಖಾಸಗೀ ಆಗಿ ನಡೆಸಿತ್ತು (ದೀಪಹ. II, ೦೪೮). ೮. ಹರಟೆ; ರಗಳೆ. ೯. [ಜೈನ]ಲೋಕಾಕಾರಕಥನ, ದೇಶನಿವೇಶವರ್ಣನ, ನಗರವರ್ಣನ, ರಾಜ್ಯವರ್ಣನ, ತೀರ್ಥಮಹಿಮೆ, ಚತುರ್ಗತಿಸ್ವರೂಪವಿವರಣೆ, ತಪೋದಾನವಿಧಾನ, ತಪಃಫಲವರ್ಣನೆ—ಎಂಬ ಎಂಟು ಅಂಗಗಳನ್ನು ಒಳಗೊಂಡ, ಅರ್ಹಂತನೇ ಮೊದಲಾದ ತ್ರಿಷಷ್ಟಿಶಲಾಕಾಪುರುಷರ ಕಥೆ : ಆ ಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂಪತ್ಪರಿವರ್ಣನಮುಂ ರಾಜ್ಯ ರಾಮಣೀಯಕಾಖ್ಯಾನಮುಂ ತೀರ್ಥಮಹಿಮಾಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವಿಧಾನವರ್ಣನಮುಂ ತತ್ಫಳಪ್ರಾಪ್ತಿಪ್ರಕಟನಮುಮೆಂದಿಂತಪಯವಂಗಳೆಂಟಕ್ಕುಂ (ಆದಿಪು. ೧-೪೨ ಪ) ; ಸದ್ಧರ್ಮಕಥಾಥನನಿಬದ್ಧಗ್ರಂಥಂ ಪುರಾಣಮಿತಿಹಾಸಾಖ್ಯಂ (ಸಾಸ್ತ್ರಕೋ. ೨-೯). [ಸಂ.]

ಪುರಾಣಕವಿ (ನಾ). ೧. ಹಿಂದೆ ಆಗಿ ಹೋದ ಕವಿ ; ಪೂರ್ವಕಾಲದ ಕವಿ : ಪುರಾಣಕವಿ ಪ್ರಭು ಪ್ರಯೋಗಾವಿಳ ಸದ್ಗುಣೋದಯಮನಾಯ್ದ ವಱಿಂ ಸಮೆದೊಂದು ಕಾವ್ಯದಿಂ . . . ಮುದಮಂ ತನಗಾಗಿಸಿದು ಕವೀಶ್ವರಂ (ಕವಿರಾ. ೨-೦೩೫) ; ಕವಿಗಳೊಳಾ ಪುರಾಣಕವಿಪುಂಗವರೊಳ್ಳಿದರೀ ಗಳಿಲ್ಲ (ಗದಾಯು. ೧-೪೭). ೨. ಪುರಾಣವನ್ನು ರಚಿಸಿದ ಕವಿ : ವಾಕ್‌ಶ್ರೀಸುಭಗಂ ಪುರಾಣಕವಿಯುಂ ಧರೆಗಾಗಿರೆಯುಣ್ಮಿ ಪೊಣ್ಮುವೀ ದೇಸಿಗಳುಂತೆ ನಾಡೊವಜನಾದನೊ ಪೇಟ್ ಕವಿತಾಗುಣಾರ್ಣವಂ (ಸಂಪಸಾ. ೦೪-೬೨). [ಸಂ.]

ಪುರಾಣಚೂಡಾಮಣಿ (ನಾ). ಪುರಾಣಗಳಲ್ಲಿ ಅತ್ಯುತ್ತಮವಾದುದು ; ಶ್ರೇಷ್ಠವಾದ ಪುರಾಣ : ಶಾಂತಿಜಿನಜನ್ಮಜಲಧಿಗೆ ಶಾಂತಿಪುರಾಣಮೆ

ಪುರಾರ್ಥರತ್ನವಿದಂ ಪೇಳ್ದಂತು ಕವಿಚಕ್ರವರ್ತಿಯೆ ನೋಂತಂ ಪೆಸರಿಂ ಪುರಾಣಚೂಡಾಮಣಿಯಂ (ಶಾಂತಿಪು. ೦-೧೨). [ಸಂ.]

ಪುರಾಣಜ್ವರ (ನಾ). ಬಹಳ ದಿನಗಳಿಂದ ಇರುವ ಜ್ವರ ; ಹಳೆಯ ಜ್ವರ : ಏಳು ರಾತ್ರಿ ಪರ್ಯಂತರ ತರುಣಜ್ವರವೆನಿಸಿಕೊಂಬುದು. ಹತ್ತು ರಾತ್ರಿ ಪರ್ಯಂತರ ಮಧ್ಯಮಜ್ವರವೆನಿಸಿಕೊಂಬುದು. ಅದಱ ಮೇಲೆ ಪುರಾ[ಣಶಾಂ. ಹಳೇ]ಜ್ವರವೆನಿಸಿಕೊಂಬುದು (ವೈದ್ಯಶಾ. I. ೭೩); ಈ ಮಾತ್ರೆಗಳನ್ನು ಕೊಬ್ಬರಿರಸದಲ್ಲಿ ಕೊಡಲು ಜ್ವರಾತಿಸಾರ, ಪುರಾಣ ಜ್ವರಗಳು ಸಹ ನಿಲ್ಲುವುವು (ಸಕ್ಷೈ. ಪಂ. ೯೭೦). [ಸಂ.]

ಪುರಾಣಪುರುಷ (ನಾ). ೧. ಮುದುಕ ; ವೃದ್ಧ : ಗಂಭೀರಸ್ವರದೊಳಂ ಭವ್ಯಾಕಾರದೊಳಮಿತಂ ಕಾರಣಪುರುಷನಾಗಲೆಬೇಟ್ಟುವೆಂದು ನಿಶ್ಚಯಿಸಿ ಪುರಾಣಪುರುಷನೊರ್ವನಿಂತೆಂದು (ಪಂಕಾಪು. ೮-೩೬ಪ). ೨. ಆದಿಪುರುಷ ; ವಿಷ್ಣು : ತಪನಕುಲಜಾತರ್ ಪುರಾಣಪುರುಷೋತ್ತಮನ ವಿಪುಲಸಂತತಿಯವರ್ (ಕೃಷ್ಣಶಾ. ೨೧-೨೯); ನಾರದನುಂ ಪರ್ವತನುಂ ಪುರಾಣಪುರುಷನು ಕಂಡೆಱಗುತ (ಅಧ್ಯಾತ. ೧೩.೯); ಶ್ರೀಕೃಷ್ಣನು ಪುರಾಣಪುರುಷನೂ ನಿಜ ; ಐತಿಹಾಸಿಕವ್ಯಕ್ತಿಯೂ ನಿಜ (ಶಾರದ. ೦೦೯). ೩. ಶಿವ ; ಈಶ್ವರ. [ಸಂ.]

ಪುರಾಣಮಾರ್ಗ (ನಾ). ಪ್ರಾಚೀನಕಾಲದಿಂದ ನಡೆದು ಬಂದ ರೀತಿ, ಸಂಪ್ರದಾಯ: ಉಚಿತಪುರಾಣಮಾರ್ಗಪದಪದ್ಧತಿಬಂಧುರಬಂಧಮೆಂಬಿನಂ ರಚಿಯಿಸೆ . . . ಕಾಳಿದಾಸನುಮನೇಳಿಸಿದ: ಕೃತಿ ನಾಗವರ್ಮನಾ (ರಂಗೋಂಬಾ. ೦-೬). [ಸಂ.]

ಪುರಾಣವಾಕ್ಯ (ನಾ). ೧. ಬಹುಕಾಲದಿಂದ ಬಂದಿರುವ ಮಾತು; ಗಾದೆ : ಶರೀರಮಾದ್ಯಂ ಖಲುಧರ್ಮಸಾಧನಂ ಎಂಬ ಪುರಾಣವಾಕ್ಯ ಮುಂಟು (ಪಂಶತಂ. ೦೦೩-೧೩); ಕೇನಾಪ್ಯುಪಾಯೇನ ಫಳಂ ಹಿ ಸಾಧ್ಯಂ ತಾನೆಂಬುದುಂಟಲ್ತೆ ಪುರಾಣವಾಕ್ಯಂ (ಸುಕಾಮಾ. ೩-೩೨). ೨. ಪುರಾಣದಲ್ಲಿರುವ ಮಾತು : ಬಿಸರುಹಾಕ್ಷನ ಹರನಿಱಿದನೆಂದುಸುರಲೊಲ್ಲನು ಸಹಜವಾದ ಪುರಾಣವಾಕ್ಯವನು (ಬಸಪು. ೩೭-೨೨). [ಸಂ.]

ಪುರಾಣಶ್ರವಣ (ನಾ). ಪುರಾಣವನ್ನು ಕೇಳುವಿಕೆ : ಮಠದಲ್ಲಿ ಶ್ರಾವಣಮಾಸದಲ್ಲಿ ಪುರಾಣಶ್ರವಣ ನಡೆಯುತ್ತದೆ (ರೂಢಿ). [ಸಂ.]

ಪುರಾಣಿ (ನಾ). ಪುರಾಣ ಹೇಳುವವನು ; ಪುರಾಣಿಕ : ಯಥಾರ್ಥವ ನೊರೆಯಲೊಲ್ಲನು ಪಕ್ಷಪಾತಿ ಪುರಾಣಿ [ಪಾಣಾಂ. ಣಿ]ಭಟ್ಟನಲಾ (ಬಸಪು. ೩೭-೨೮); ಪೇಳಿದ ಪರಮ ಪುರಾಣಿ ರಾಯಗೆ ಶರಣಾಳಿಯ ಮೆಲ್ಗತೆಗಳನು (ಪೂಳಿಪು. ೨-೭೬). [<ಪುರಾಣ]

ಪುರಾಣಿಕ (ನಾ). ೧. ಪುರಾಣಗಳನ್ನು ಚೆನ್ನಾಗಿ ಓದಿ ತಿಳಿದವನು. ೨. ಪುರಾಣಗಳನ್ನು ವಿವರಿಸಿ ಹೇಳುವವನು ; ಪೌರಾಣಿಕ : ಅವನಿಪನ ನಗರಾಗ್ರದಲಿ ಪೊಂದಿವಸಪೋದುತ ಸತ್ಯವ ಹೇಳುವ ಪುರಾಣಿಕನಂತೆ ಕೆಲಬರು ಕೇಳುತಿರಲಾಗಿ (ಬಸಪು. ೩೭-೨೦); ಇಂದ್ರಲೋಕವು ಪುರಾಣಿಕರ ವರ್ಣನೆಯಂತೆ ಇರುವುದಾದರೆ ಅದು ಎಂದೋ ಸಿಗುವುದು (ಸಿತ್ಕಾಮ. ೯). [<ಸಂ. ಪೌರಾಣಿಕ]

ಪುರಾತ (ನಾ). =ಪುರಾತನ ೪: ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು (ಬಸವ. ೩೯೯); ಪುರಾತರೊಳಗೊಲವಿಂ ಮಹಿಳೆ ಯರನಾತ್ಮಭವರಂ ತಮ್ಮುವಂ ಕೊಟ್ಟವರೊಳರು ಶತಕೋಟಿಕೋಟಿಗಳು (ಬಸಪು. ೨೫-೧೭). 'ಪುರಂತ$_1$' ಪರಾ.

ಪುರಾತಭಕ್ತರು =ಪ್ರಾಚೀನ ಶರಣರು : ಮುನ್ನೆ ಪುರಾತಭಕ್ತರು ವರಂಬಡದೀ ಸ್ಥಳವೆಂದು ಕೀರ್ತಿಯಂ ಬಿನ್ನವಿಸಲ್ಕೆ (ಸೌಇ. XX. ೧೩೮-೦೬ ; 1192). [<ಸಂ. ಪುರಾತನ]

ಪುರಾತನ (ಗು). ೧. ಹಳೆಯ ಕಾಲದ ; ಪ್ರಾಚೀನ ; ಪೂರ್ವಕಾಲದ : ಉನ್ನವೆಂ ಪುರಾತನ ಭವಸಂಬಂಧವೇದಿನಿ (ಶಾಂತಿಪು. ೬-೦೨ ಪ); ಬುಧರಿರ್ದು ನೋಟ್ಟುದು ಪುರಾತನ ನೂತನ ಕಾವ್ಯರೇಖೆಯಂ (ಗದಾಯು. ೦-೯೬); ನಮ್ಮ ಜನರಲ್ಲಿ ಬಹು ಪುರಾತನ ನಡತೆಗಳೆಚ್ಚೋ ಉಂಟು (ಪುಂಬಾಶಾ. ೪-೧೮೩). (ನಾ). ೨. ಹಳೆಯದು; ಪೂರ್ವಕಾಲಕ್ಕೆ ಸಂಬಂಧಿಸಿದುದು; ಪ್ರಾಚೀನವಾದುದು : "ಜೀರ್ಣಂ, ಜರತ್, ಪುರಾಣಂ, ಪ್ರತ್ನಂ, ಪ್ರತನಂ, ಪುರಾತನಂ—ಈ ೬ ಪ(ಹ)ಬದು" (ಹಶಕೋಷ. ೧೦೮-೨೬); "ಜೀರ್ಣಮಾ ಜರತ್ಪ್ರತನಮರ್ಣವಮನಸ್ಯಂ ಪುರಾಣಂ ಪುರಾತನಮೆನಲು ಹಬಿತಿಂಗೆ ನಾಮಮಾಕ್ಕುಂ" (ಪುಂಗಶಾ. ೦೨೯-೧೩); ಪುರಾತನದ ಕಥೆ ಕಿರಾತ ಏನು ಬಲ್ಲ ? (ಗಾಪ). ೩. ಪೂರ್ವಕಾಲದವನು; ಹಿಂದಿನವನು ; ಪೂರ್ವಿಕ : ರಸವತ್ಕಾವ್ಯವಿದರ್ ಪುರಾತನರೊಳಾದುಂ ಪೂಣ್ಕೆಯುಂ ಪೇಳ್ದು ಜೋಯಿಸಗಬ್ಬಂಗಳನೆಸ್ದು ರುಜಿಸಿದರಾರ್ (ಜಾಕಥಿ. ೨೪.೪೦) ; ಪೂರ್ವದ ಪುರಾತನರ ವಿಧಿಯ ವಿಸ್ತರಿಸುವೆವು ಕೇಳ್ಳೆ (ಗಗಶಾ. ೧೮ ೪೩); ಈ ಕಥೆಗಳ ಮೂಲಕವಾಗಿ ಮಗು ಪುರಾತನರೊಡನೆ ಪ್ರೀತಿಯ ಸಂಬಂಧವನ್ನು ಬೆಳೆಸಿಕೊಳ್ಳುವನು (ಕಥಕ. ೩೭). ೪. [ವೀಶೈ] ಪೂರ್ವ ಕಾಲದಲ್ಲಿ ಆಗಿ ಹೋದ, 'ಅರುವತ್ತುಮೂವರು ಪುರಾತನ' ರೆಂದು ಪ್ರಸಿದ್ಧಿ ಪಡೆದ ಶಿವಭಕ್ತರ ಗಣಕ್ಕೆ ಸೇರಿದವನು ; ಪ್ರಾಚೀನ ಶಿವಶರಣ : ಮೃಡನೇ ನಿಮ್ಮ ಪುರಾತನರ ಕಾಣುತ್ತ ಇಡೆಯದೆ ಇದಿರೆದ್ದು ಪೊಡಮಡೆನಾಗಿ ಬಿಡದು ನಾಚಿಕೆ (ಅಪಕಂ. ೦೬೨-೭೩೯); ಬಂದಹರಯ್ಯಾ ಪುರಾತನರೆನ್ನ ಮನೆಗೆ ಬಂದಹರಯ್ಯಾ ಶರಣರೆನ್ನ ಮನೆಗೆ (ಬಸವ. ೩೭೦); ಶಿವಭಕ್ತಿಪಂಥವು . . . ತಮಿಳುನಾಡಿನಲ್ಲಿ ೬೩ ಮಂದಿ ಪುರಾತನರಿಂದ ಪ್ರಾರಂಭವಾಗುತ್ತದೆ (ಶಾರದ. ೩೦೬). [ಸಂ.]

ಪುರಾತನಜ್ವರ (ನಾ). = ಪುರಾಣಜ್ವರ : ಅರಳಿಮರದ ಒಳನಾರನ್ನು ಕಷಾಯವಿಕ್ಕಿ ಕೊಡಲು ದಾಹಸಹಿತವಾದ ವಿಷಮಜ್ವರ, ಪುರಾತನಜ್ವರ, ಜ್ವರಾತಿಸಾರ ಸಹ ಶಮನವಹುದು (ಸಕ್ಷೈ. ೦೦೩). [ಸಂ.]

ಪುರಾತನಪುರುಷ (ನಾ). = ಪುರಾಣಪುರುಷ ೨ : ಪುರಾತನಪುರುಷ ಪುಂಡರೀಕಾಕ್ಷನೆ ಪುರಂದರವಿಠಲನೆ ದಯಮಾಡೊ (ಪುರಂದ. ೨-೦೫೨-೩). [ಸಂ.]

ಪುರಾತನಮತ (ನಾ). ಪ್ರಾಚೀನರ ಅಭಿಪ್ರಾಯ,—ಮಾರ್ಗ,—ಸಂಪ್ರದಾಯ ; ಆದಿಮಾರ್ಗ : ವ್ಯವಹರಿಪುವೆರಡು ರೂಪಿಂದವಕ್ಕರಂ ಶ್ರಾವಣಂ ಸ್ವನೈಕಾಕಾರಂ ವಿವಿಧಾಕಾರಂ ಲಿಪಿಭೇದವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ (ಕವಿದ. ೩). [ಸಂ.]

ಪುರಾತವಳಿ (ನಾ). ಪುರಾತನ ಶರಣರ ಪರಂಪರೆ : ಗುರುಲಿಂಗ ಜಂಗಮಕೆ ಪರೀಕ್ಷೆ ಉಂಟಾಗಿಯೆ ಆತ ಮಾಹೇಶ್ವರ ಪುರಾತವಳಿ ಎಂಬ ಪರಮಬಂಧುಗಳಾತನ ನೆನೆದು ಬದುಕುವರು (ಬಸವ. ೬೭೬).

[ಪುರಾತ + ಬಳ್ಳಿ$_3$ (< ಬಳ್ಳಿ$_3$)]

ಪುರಾಧೀಶ (ನಾ). ಊರಿನ ಒಡೆಯ ; ಪಟ್ಟಣಾಧಿಪತಿ : ತತ್ಪುರಾಧೀಶಂ ದೃಢ(ಧೃತ)ಸೇನಂ ನಿಲಿಸಿ (ನಿಱಿಸಿ) ಭಕ್ತಿಪೂರ್ವಕದಿಂದ ಮಾಹಾರಂಗುಡೆ ಕೊಂಡು ಭಟ್ಟಾರಕನುಮಾತನಂ ಪರಸಿ ಬಿಜಯಂಗೆಯ್ದುದಂ (ಶಾಂತಿಪು. ೯-೨೦ ಪ). [ಸಂ.]

ಪುರಾಭವ (ನಾ). ಹಿಂದಿನ ಜನ್ಮ ; ಪೂರ್ವಜನ್ಮ ; ಜನ್ಮಾಂತರ : ಅಬೋಧಪೂರ್ವಕಂ ನೆನೆವಜನಂತು ಭಾವದೊಳೆ ನಟ್ಟ ಪುರಾಭವ ಸೌಹೃದಂಗಳು (ಶಾಕುಂತ. ೬೦-೧೦೨). [ಸಂ.]

ಪುರಾರಿ (ನಾ). ೧. ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಯೆಂಬ ಮೂವರು ರಾಕ್ಷಸರ ಶತ್ರು ; ತ್ರಿಪುರಾರಿ ; ಶಿವ : ಸಿರಿವಿರಿಂಚಿ ಮರುತ್ಸುಪರ್ಣ ಪುರಾರಿವಂದಿತ ಚರಣಸರಸಿಜ (ಪುರಂದ.ರಾ. ೩-೦೧೬ ಅಷ್ಟಪದಿ). ೨. ವಿಷ್ಣು. ೩. [ಛಂದ] ನಡುವೆ ಗುರುವಿರುವ

ನಾಲ್ಕು ಮಾತ್ರೆಗಳ ಗಣ ; ಜಗಣ (∪—∪) : ಶಶಿಪುರವಿಷಯಾದ್ರಿ ಯೊಳಿರದಿರ್ಕೆ ಪುರಾರಿಯೆಂಬ ಗಣಮಬ್ಬಮುಖೀ (ರಂದೋಂಬಾ. ೪-೨೨೬). [ಸಂ.]

ಪುರಾರ್ದನ (ನಾ). ತ್ರಿಪುರಗಳನ್ನು ನಾಶಮಾಡಿದವನು ; ಶಿವ : ಕಾಲವೈರಿಪುರಾರ್ದನಾ . . . ಚಂದ್ರಶೇಖರ ಪಾಲಯ (ಹಬ್ಬಾರ. ೬-೪೭). [ಸಂ.]

ಪುರಾವೃತ್ತ (ನಾ). ೧. ಹಿಂದಿನ ನಡತೆ ; ಪೂರ್ವಪದ ತಿ : (ಕ). ೨. ಪೂರ್ವಕಾಲದಲ್ಲಿ ನಡೆದು ಹೋದ ಸಂಗತಿ ; ಪುರಾಣ : ಪರಮಾತ್ಮನೇ ವ್ಯಾಸರೂಪಿಯಾಗಿ ಅವತರಿಸಿ ಭಾರತ ಪುರಾಣಾದಿಗಳನ್ನು, ಬ್ರಹ್ಮಸೂತ್ರಗ್ರಂಥವನ್ನು ರಚಿಸಿದನೆಂದು ಪುರಾವೃತ್ತಗಳು ತಿಳಿಸುತ್ತವೆ (ಭಾರದ. ೨೬೯). [ಸಂ.]

ಪುರಾವೆ (ನಾ). ಪ್ರಮಾಣ : ಆಧಾರ; ನ್ಯಾಯನಿರ್ಣಯಕ್ಕೆ ಸಹಾಯಕವಾದ ಸಾಕ್ಷಿ ಮೊದಲಾದ ಸಹಾಯಕಸಾಮಗ್ರಿ : ಸರಿಯಾಗಿ ಪುರಾವೆಯಾದರೆ . . . ದಂಡವನ್ನು ಮಾಡಲಿಕ್ಕೂ ಮಾಜಿಸ್ಟ್ರೇಟನಿಗೆ ಅಧಿಕಾರವಿರುತ್ತದೆ (ಕಪಾಗೆ. ಪಂ. ೦೯) ; ಸಂಶಯವನ್ನು ಸಿದ್ಧಪಡಿಸಿ ಕೊಡುವ ಯಾವ ಪುರಾವೆಯೂ ಸಿಗಲಿಲ್ಲ (ರಂಗಪ. ೨೬೨); ಏನೂ ಪುರಾವೆ ಇಲ್ಲದೇ ತುಂಗಕ್ಕ ಅಷ್ಟು ಧೈರ್ಯದಿಂದ . . . ಮಾತನಾಡಬಹುದೆಂದು ನನಗಂತೂ ಅನಿಸುವುದಿಲ್ಲ (ಮೂರುದಾ. ೦೬೦). [←ಮರಾ. ಪುರಾವ್, ಪುರಾವಾ]

ಪುರಿ₁, ಹುರಿ₁ (ಕ್ರಿ). ೧. ಬಾಣಲೆ, ಓಡು ಅಥವಾ ಹಂಚಿನ ಮೇಲಾಗಲಿ, ಕಾಯಿಸಿದ ಮರಳಿನಲ್ಲಾಗಲಿ, ಕಾಳು, ಬೇಳೆ, ಬತ್ತ ಮೊದಲಾದುವನ್ನು ಕಾಯಿಸಿ ಹದಗೊಳಿಸು ; ಅರಳು ಮಾಡು : ನೆಲ್ಲಂ ಪುರಿದು ಮಾಱದೆ ಕಾಣದಂತಿರಿಸಂಗಡಿಯೊಳ್ (ಕವಿರಾ. ೨-೦೩೭); ಪುರಿದಂತಾದುವು ಪೂವಿನಂಬುವಿನಿವಿಲ್ ನಿಸ್ಸಾರಮಾದತ್ತು (ಸಂರಾಮಾ. ೦-೦೬); ಎಕ್ಕಸರಂಗಳ ತೋರಮುತ್ತುಗಳ್ ಪುರಿದವೊಲಾದುವು (ಕಬ್ಬಿಕಾ. ೩೦೩). ೨. ಕಾಯಿಸು ; ತಪ್ತಗೊಳಿಸು : ಸರೋವರದ ಮಳಲ್ ಪುರಿಗಡಲೆಗೆ ಪುರಿದ ಮಳಲ್ಕಾಯ್ವ ತೆಱದೆ ಕಾಯ್ದತ್ತೆತ್ತಂ (ಗದಾಯು. ೭-೦೬) ; ಪುರಿದ ಮಣಲೊಳಂ ಪೂಣಿಸಿದ ಗಾಣದೊಳಂ ಬಿರ್ಚಿದ ಬೇರ್ಕೆಯೊಳಂ . . . ನೋಡಲರಿದೆನಿಸಿದ ಮಕರಮುಖದಾಡಾಯಗ್ಗದಗ್ಗಳಿಕೆಯಂ ಕಂಡು (ಅಪಂಪು. ೦೦-೬೨ ಪ); ಸುಣ್ಣವನೊರಸಿ ಮಿಗೆ ಪು[ಪಾಠಾಂ. ಹು]ರಿದ ಬಿಸಿಯ ಮಳಲಂ ತರಿಸಿ ಬಾಯ್ದುಂಬಿಸಿದವೆಂ (ಬಸಪು. ೦೦-೦೯). ೩. ಸೀದು ಹೋಗು ; ಕರಿಕಾಗು ; ಸುಟ್ಟುಹೋಗು : ಒಕ್ಕಲುಳ್ಪೊತ್ತಿನ್ನಕ್ಕಳ್ಪುಟ್ಟಿಲ್ಕಂ ಪುಟ್ಟಿದೊಂದು ಪುರಿಗ (ಎಕ. IV, ಹೆಗ್ಗಡ. ೬೭-೦೩ ; ಸು. 700). ೪. ಜಿಡ್ಡನ್ನು ಸವರಿ ತಾಳಿಸು,—ಬಾಡಿಸು : ತುಪ್ಪದೊಳ್ಪುರಿದಚ್ಚ ಗಂಪಮರಲ್ . . . ಅಟ್ಟಿ ತಂದು ಮಡಂಗಿದಕ್ಷುಣ್ಣಮಾಂಸನಿಕಾಯ ವೊಪ್ಪಿದುದು (ಉದ್ಯಪ. ೩-೬೬). ೫. (ಹಪ್ಪಳ ಮೊದಲಾದುವುಗಳನ್ನು) ಕೆಂಡದ ಮೇಲಿಟ್ಟು ಸುಡು : (ಕ). ೬. ಎಣ್ಣೆ ಅಥವಾ ತುಪ್ಪದಲ್ಲಿ ಕರಿ : 'ಪುರಿಗಡುಬು' ಪರಾ. ಹುರಿ₁ : ೧. "ಹುರಿ-ನಿರ್ದ್ರವಕರಣೇ" (ಶಮಧಾ) : ಚರಾಚರಂಗಳಂ ರರಿಮುರಿಯಪ್ಪಿನಂ ಹುರಿವ ಹಂಚು ವೊಲಿರ್ದೆಳೆಯೊಳ್ ಕೃತಾಂತನೆಚ್ಚುರಿಗಣೆಯಂತೆ ಬಂದುದು ಲಯಾನಿಳಕಲ್ಪ ನಿದಾಘಜಾನಿಳಂ (ಅರ್ಥಪೇ. ೪-೬೪) ; ಹುರಿದು ಬಿತ್ತಿದ ಬೀಜ ಮೊಳೆವುದೆ (ಭರತ. ೨-೩೩) ; ಉದ್ಯೋಗವಿಲ್ಲದ ತೊತ್ತು ಉದ್ದು ಹುರಿದು ತಿಂದಳು (ಗಾದೆ). ೨. ಕೆಲಬರು ಹುರಿದ ಮರಳನು ಮೇಲೆ ಚೆಲ್ಲಲು ಹರಹಿ ಸಾಸಿವೆ ರಸಗಳನುಪ್ಪು ಮೆಣಸುಗಳ ಹಿರಿಯ ಮೂಗಿನ ಹೋರು ತುಂಬಲು (ಕೌತಿಶಾ. ೨೪-೩) ; ಹುರಿದ ಮಳಲಂ ಹುಯ್ದು ಹುಲ್ಲ ಕಿಚ್ಚಂ ಹಿಡಿದು ಹರಿವ ಹಾವಂ ಹಾಕಿ ಕಾಸಿದಂಬಲಿಯೆಱೆದು . . . ಹತ್ತುವಾಳ್ಗಳಂ ಧರೆಗುರುಳ್ವ ತೆಱದಿ ಕೊಂದಿಕ್ಕಿದರ್ (ಸಮ್ಯಕೌ. ೮-೩೩); ಹುರಿವ ಮಳಲಿನ ಕಾಸುವಂಬಲಿಯ ಬಿಸಿಯೆಣ್ಣೆವರವಿಗಳ ಪುದಿದ ಪುಲ್ದೊಂದೆಗಳ . . . ಮೊತ್ತಂಗಳುಳ್ವೇರಿಯೊಳ್ ಪಸರಿಸಿದುವು (ಶಿಪಪು. ೪೨-೦೦). ೩. ಎಮ್ಮ ಭಾಗ್ಯದ ಬಿತ್ತು ಹುರಿದರೆ ಬಿರುದ ಭಟರಿದ್ದೇನ ಮಾಡುವರು (ಕುಪ್ಯಾಕ. ೦-೨೦) ; ಹುರಿದುದು ಭವಬೀಜದುಷ್ಕರ್ಮದಂಕುರ ಹಱಿದುದು ಕಪಟದ ಬೇರು ಸುರಿದುದಾನುದಾಶ್ರು (ಪೋಹತ. ೪೨-೩೦). ೪. ಉಳ್ಳಿ ಶುಂಠಿ ಕೇದಗೆಯ ಹೂ ಹುರಿದ ಕರಿಬೇವು ಮಾದಲದ ಸೊಪ್ಪಿಕ್ಕಿ (ಸೂಪಕಾ. ೩-೨೮). ೬. 'ಹುರಿಗಡುಬು' ಪರಾ. ೭. (ಆಲಂ) ನಾಶಪಡಿಸು; ನಿವಾರಿಸು : ಕಂಗಳ ಕರುಳ ಕೊಯ್ದವರ ಮನದ ತಿರುಳ ಹುರಿದವರ ಮಾತಿನ ಮೊದಲ ಬಲ್ಲವರನೆನಗೊಮ್ಮೆ ತೋಱಾ (ಅಪಕಂ. ೦೦೦-೪೩೦). ೮. ನಾಶವಾಗು ; ಇಲ್ಲವಾಗು : ಹುರಿದ ಧೈರ್ಯದ ತಳ್ಳವಾಱುವ ತರಳಹೃದಯದ ದೇವರಿಂದ್ರನನಱಸಿ ಕಂಡರು (ಕುಪ್ಯಾಕ. ೬-೦೨).

ಹುರಿದುಕೊಂಡು ತಿನ್ನು=(ಆಲಂ) ಪೀಡಿಸು ; ಗೋಳಾಡಿಸು ; ಹಿಂಸಿಸು; ಗೋಳು ಹುಯ್ದುಕೊಳ್ಳು: ಮಲಮಗಳು ಇದ್ದಷ್ಟು ದಿನವೂ ಹುರಿದುಕೊಂಡು ತಿನ್ನುತ್ತಿದ್ದಳು (ರೂಠಿ). ಹುರಿದು ತಿನ್ನು=ಹುರಿದುಕೊಂಡು ತಿನ್ನು : ರಾಜೇಶ್ವರಮ್ಮನು ಪ್ರತಿದಿನವೂ ಮಾತು ಮಾತಿಗೂ ಸೊಸೆಯ ದೋಷಗಳನ್ನು ಎಣಿಸಿ ಹುರಿದು ತಿನ್ನುತ್ತಿದ್ದಳು (ಲಕ್ಷ್ಮೀಪ್ರ. ೪೩). ಸಮಾಜವನ್ನು ಆಕ್ರಮಿಸಿ ಹುರಿದು ತಿನ್ನುತ್ತಿದ್ದ ಸಹಸ್ರರಾವಣರ ಸಂಹಾರ ಮಾಡಬಲ್ಲ ರಾಮನೊಬ್ಬನನ್ನು ಸೃಷ್ಟಿಸಬೇಕೆಂದು ನಿರ್ಧರಿಸಿದ (ಭಾರದ. ೪೬೦). ಹುರಿದು ಮುಕ್ಕು = ಹುರಿದುಕೊಂಡು ತಿನ್ನು : ಹುರಿದು ಮುಕ್ಕುವಂತಹ ಹವೆಯು ವಿಸ್ಫೋಟಿಸುತ್ತಿದ್ದಿತು (ಝಾರಾಣಿ. ೩೮೯).

[ದೇ.॥ ತಮಿ. ಪೊರಿ ; ಮಲ. ಪೊರಿಯು ; ತುಳು. ಪೊರಿ, ಪೊರಿಪು, ಪೊರಿಯು]

ಪುರಿ₂, ಪೊರಿ (ನಾ). ೧. ಹಂಚಿನಲ್ಲಿ ಅಥವಾ ಮರಳಲ್ಲಿಟ್ಟು ಕಾಯಿಸುವಿಕೆ, -ಹುರಿಯುವಿಕೆ : (ಕ). ೨. ಮಂಡಕ್ಕಿ; ಚುರುಮುರಿ : ನಿಮಗೆ ಹಾಲೂ, ಹಣ್ಣೂ, ಕಡಲೆಕಾಯಿ, ಪುರಿ—ಮೊದಲಾದುವನ್ನು ಕೊಡಿಸುತ್ತೇನೆ (ರಂಗಕ. ೬೭). ಪೊರಿ : ೨. ಎಳ್ಳ ಪೆಱಿಂಗೆ ಬ ೧॥ ಮಾಱುವ ಪೊರಿಗಳ್ಗೆ ವಿ ೧ (ಕಇಅ. ೦೦೩-೦೯-೩೭; 1057).

[< ಪುರಿ₁./ ತಮಿ. ಮಲ. ತುಳು. ಕೊಡ. ಪೊರಿ]

ಪುರಿ₃, ಹುರಿ₃ (ನಾ). ೧. (ದಾರ ಅಥವಾ ಹಗ್ಗದಂತೆ) ಹೊಸೆಯುವಿಕೆ ; ನುಲಿಯುವಿಕೆ : 'ಮುಪ್ಪುರಿ'₁ ಪರಾ. ೨. ಹೊಸೆದು ಮಾಡಿದ ನೇಣು,-ಹಗ್ಗ,-ರಜ್ಜು : ಅಸಗೆಟ್ಟುವೊ ಪುರಿ ಹೆರೆಯೆಣ್ಣೆ ತೀದುದೊ ಅಸಮಾಶ್ವಗಳು ಬಾಂದೊಱೆಯ ಕೆಸಱೊಳು ಬಿದ್ದೇಳಲಾ ಱದಾದುವೊ ಎಂದು ಬಿಸಜಾಕ್ಷಿ ರವಿಯ ನೋಡಿದಳು (ಪೋಹತ. ೨೬-೦೯); ಹೊಸೆದ ಕಾಲ್ಗಣ್ಣಿವಲೆ ತಳ್ಳುವಲೆ ಪುರಿಯೊಕ್ಕಣ್ಣಿವಲೆ (ಸಾಳ್ವಭಾ. ೩-೧೬). ೩. ಕೆಚ್ಚು; ಬಲ; ಗಟ್ಟಿತನ : 'ಪುರಿಗಣೆ', 'ಪುರಿಯೇಱು' ಪರಾ. ೪. ಪ್ರೋತ್ಸಾಹ ; ಮೆಚ್ಚಿಕೆಯ ಕೊಂಡಾಟ : 'ಪುರಿಯಿಡು', 'ಪುರೆ₁' ಪರಾ. ಹುರಿ₂ : ೧. ಹರಿತಂದು ಬಂಡಿಯ ಶಿರದ ಹಲಗೆಯ ನಡರಿದನು ಬಲುಹುರಿಯ ಹಗ್ಗವ ಹಿಡಿದು ಜಡಿದನು ಹೂಡಿದೆತ್ತುಗಳ (ಕುಪ್ಯಾಕ. ೦೦-೨೭); ಹಗ್ಗ ಸುಟ್ಟರೆ ಹುರಿ ಹೋದೀತೇ? (ಗಾದೆ). ೨. "ಹುರಿ-ನಿರ್ದ್ರವಕರಣೇ, ರಜ್ಜುಭ್ರಮಣಕ್ರಿಯಾಯಾಂ" (ಶಮಧಾ. ಪ); ಕಾಳರಕ್ಕಸಿಯ ಮಗುವು ಚಂದ್ರ ಸೂರ್ಯರ ಜಾಟಳದ ಹುರಿಯೊಳಗೆ ತಿರುಗಿತ್ತು (ಅದಪ. ೦೩-೩೨); ಚಳಹಯಂಗಳು ಹುರಿಯ ವಾಘೆಯನಳವಡಿಸೆ ಬಲನೆಡಕೆ ವಾಜಿಯ ಸುಳಿಸಿ ಸಾರಥಿತನದ ತೋಱಿದನಂದು ಕಲಿ ಶಲ್ಯ (ಕುಪ್ಯಾಕ. ೮-೨೩); ತೆಗೆದು ಡೊಂಬನು ಹುರಿಯ ಸುಂಬನು ಬಿಗಿದು ಬಟ್ಟಲನೇರಿಸಿ . . . ನೆಗೆದು ಕುಣಿದನು ಧಿಮಿಧಿಮಿ (ಕಎಪು. ೩೮-೮). 'ಬೆನ್ನುಹುರಿ' ಪರಾ. ೩. ಹೂಣಿಗರು ಹುರಿ ಬಲಿದು ಹಾಣಾಹಾಣಿಯಲಿ

ಹೊಯ್ದಾಡಿದರು (ಕರ್ಣ.೦೯. ೦-೦೩); ಹೇವದ ಹುರಿ ಬಲಿದುದೀತಂಗೆ ಹರಿಬದ ಸೂಳೆಬಂಟಿಕೆಯ ಧುರಕೆ ನಿಂದವು (ಕೊಡಗ. ೨-೨·೨೬). ೫. ಹೊಸೆದು ಮಾಡಿದ ನಾರು, ಸೆಣಬು, ಕಾತಿ ಮೊದಲಾದುವುಗಳ ದಾರ : ಗುಂಡನು ಅದ್ಕೆ ಒಂದು ಹುರಿ ಕಟ್ಟಿ ಚೀಲವನ್ನು ಎಳೆಯುತ್ತ ಮನೆಗೆ ಹೋದನು (ಕಪಪು· ೩ ೧೩); ಹೂ ಮಾರಿದ ಊರಲ್ಲಿ ಹುರಿ ಮಾರಬಾರದು (ಗಾಣ). ೬. (ಮೋಸದ) ಕಟ್ಟು : ಪಾಶ : ಬಲೆ : ನಿಮ್ಮರಸುಗಳು ಛೀಮಂಗೆ ಮಾಡಿದ ಹುರಿಯನಾ ಹರಿ ಹಱದ ಪರಿಯನು ಮುತ್ತೆ ಕೇಳು (ಕಂಚಿಕ. ೦೭ ೩೪)· ೭. (ಹಗ್ಗದ ಎಳೆಗಳಂತೆ ಒತ್ತಾಗಿ) ಸೇರಿದುದು : ಹೇಡಿಕೊಂಡುದು : ಮೊಱೆದೆದ್ದು ಸಕಲರಾಣಾವಳಿಯೊಂದು ಹುರಿಯಾಗಿ[ಜಾಣಾ.ಗೂಡಿ] ಪುರವರದೊಳಿತ್ತಿ ಹದಿಯೆಯನು ತದ್ದಿತ್ತದಿಂ ನರರೂಪನೊಂದನನುಗೆಯ್ದಿ ಮಾಣದೊಡವಿಟ್ಟ ಬಳಿಕೊಂದು ರಥದ ಮೇಲೆ ಇರಿಸಿ (ಕಬ್ಬಿಗ. ೨ ೩೯); ನಿಸ್ಸಯ ಮನೋವಾಕ್ಕಾಯವೊಂದು ಹುರಿ ಬೂಯ್ದು (ಅಗಪ್ರ. ೩-೦೦); ಮಾದಿವಿ ಆಗದಿದ್ರ ಇಬ್ಬರೂ ಕೂಡಿ ಬೊಂತೀ ವಳಗ ಹಾರಿಕೊಳ್ಳೋಣ ಅಂತ ಹೊಂಟಿದ್ದುವು ಅವೆರಡೂ· ಅಟು ಒಂದೇ ಹುರಿ ಜೀವನ (ಪಪಪು· ೧, ೬೨೨). ೮. ಬಿಗಿಪು : ಬಿಗುವು: ಅರ್ತ ಕದಪು ಒತ್ತಿದ ಕಾಲುಂ ಹುರಿಯಟ್ಟಿದಟ್ಟಿಮಿಳಿಯೆಸವ[ಯೆಸಕದ] ಸೆರೆಯುಂ (ಕಪುಪ. ೨೪೦ ಕ್ರ ಹೋ); ಎಸೆವ ದಾಡೆಯ ಹುರಿಯ ಹುಬ್ಬುಗಳ ಇಡಿದ ಹೊಗರಿನ ಜವ್ವನದ . . . ರಕ್ಕಸರಾಯನೆಸೆದಿರ್ದ (ಕೊಡಗ. ೩-೬ ೩)· ೯. ಬಲವುಳ್ಳದು : ಸತ್ತ್ವಶಾಲಿಯಾದುದು : ದೃಢವಾದುದು : ಸ್ನಾಯುಗಳು ಹುರಿಪೂಗಿ, ಶರೀರವು ಅಂದವಾಗಿಯೂ, ಬಲಾಢ್ಯವಾಗಿಯೂ ಕಾಣುವುದು (ಕಪ್ರಜಾ. ೩೩). 'ಹುರಿಕಟ್ಟು' ಪರಾ. ೧೦. ಉತ್ಸಾಹ : ಹುರುಪು : 'ಹುರಿಗಟ್ಟು' ಪರಾ.

ಹುರಿ ಮಾಡು=ಹೊಸೆ : ನುಲಿ : ತೀಡು : ಕಮ್ಮಾರಿಗಳ ಹುರಿ ಮಾಡಿ (ಪಾಗಂಂ. ೫೦-೦೪); ದೇಸಾಯಿಗೂ ಅಮ್ಮು ಗೊಶ್ಕಾಗಿ ಎಂದು ಮಿಸಟಿನ್ನು ಹುರಿ ಮಾಡಿಕೊಂಡನು (ಗಂಹುಾಜು. ೦೯೬)· ಹುರಿಯಾಗು =ಉತ್ಸಾಹಗೊಳ್ಳು : ಹುರುಪುಗೊಳ್ಳು : ವಿಶ್ರಾಂತಿ ಪಡೆದು ಹುರಿಯಾಗುವಷ್ಟರಲ್ಲಿ ಜೂನತೀರಗಳು ಬಾದಿತ್ತು (ಕ್ರೀಚಾಗ· ೧೬೨); ಬಿಸಿಬಿಸಿ ಟೀ ಬಂಡಿದ ನಂತರ ಅವರ ರಕ್ತ ಕಾವೇರಿ ಮೈ ಹುರಿಯಾಯಿತು (ಪುಸಜು· ೩೭೦); ಪ್ರತಿಭಾ ಹುರಿಯಾದಳು (ಪಾಬಚಿ· ೧೨).

[ದೇ.॥ ತಮಿ. ಮಲ. ತುಳು. ತೆಲು. ಪುರಿ. ಪರಿ]

ಪುರಿ₄ (ನಾ)· ಪುರ : ಪಟ್ಟಣ: ನಗರ : "ಪತ್ತನಂ . . . ಪುರಂ. ಪುರಿ—ಈ ೧೧ ಪಟ್ಟಣಾ" (ಹರಾಹಜು· ೪೯-೧೬೦) : ಗುರುಲಾಲಾದ್ಯರ ಪುರಿಗಳಿಂ ಘನಕಪೀಶರ ರಾಜಧಾನಿಗಳಿಂ . . . ದೇಶಂ ಸಮಗ್ರಹಾತ್ಮಕ ವೆನಿಸಿತು (ಕಾವಚಂ· ೨-೬)· [ಸಂ.]

ಪುರಿ₅ 'ಪೂರಿ' ನೋ.

ಪುರಿಕರನಗರ 'ಪುಲಿಕರನಗರ' ನೋ.

ಪುರಿಗಡಲೆ, ಪುರಿಗಡಲೆ (ನಾ)· ನೀರಿನಲ್ಲಿ ನೆನೆಯಿಟ್ಟು, ಕಾದ ಮರಳಿನಲ್ಲಿ ಅರಳುವಂತೆ ಹುರಿದ ಕಡಲೆ : ಪುಟಾಣಿ : ಭೀಮಕೋಪಶಿಖಿ ಮುಟ್ಟಿ ಸರೋವರದ ಜಲಲ್ ಪುರಿಗಡಲೆಗೆ ಪುರಿದ ಜಳಲ್ಕಾಯ್ತ್ತ ತೆಜದ ಕಾಯ್ದುತ್ತೆತ್ತಂ (ಗದಾಪ.೨. ೬-೦೭)· **ಹುರಿಗಡಲೆ** : ಹುರಿಗಡಲೆ ಬೀಂಜಾನಂ ಕಾಯ್ವಾಜದೋಡಿನ ಜೋಳದೊಳ್ಕರಲುರುವಂತಾನಂ . . . ಪೆಯಿಂ ಬೆರ್ಚುಬೆರ್ಚಿನೆ ನಿಬ್ಬರು ಬಿರಿದೊಳಜುಗುಂ (ಕಾಂಚಿಪು· ೬-೯೨) ; ಹಂಚಿನ ಹುರಿಗಡಲೆಪೊಲೊಡೆದು ಪಾಱಿದುವು ಬೆಟ್ಟಗಳ್ (ಜಗಂ. ೦೬-೬೨): ಬದಿಯಲ್ಲಿದೇ ಮಂಡಕ್ಕಿ ಹುರಿಗಡಲೆಯ ರಾಶಿಗಳು ಇದ್ದವು (ಕಪಪು· ೩-೨೬)· [ಪುರಿ₁+ಕಡಲೆ]

ಪುರಿಗಡುಬು, ಹುರಿಗಡುಬು (ನಾ)· ತುಪ್ಪ ಅಥವಾ ಎಣ್ಣೆಯಲ್ಲಿ ಕರಿದ ಕಡುಬು : ಪುರಿಗಡುಬು ತಱಗು ಚಕ್ಕುಲಿ ಕರಂಜಿಗಾಯ್ತಿರಸಂ ಬೆಗುಳಿ ಲಡ್ಡುಗೆ . . . ನೀಂ ಬಯಸೆ ಪೋಗಿ ತಂದವೆನೀಗಳ್ (ಕೃಪಪ. ೯-೬೮); ಸಕ್ಕರೆ, ಜೇನು, ಬಾಳೆಹಣ್ಣು, ಪುರಿಗಡುಬು . . . ಏನೇರನೆ —ಏವು ಬೇಕು ಹೇಳು ತಂದೆ (ಪಪ· ೨೨). **ಹುರಿಗಡುಬು** : ಹಬ್ಬಕ್ಕೆ ಹುರಿಗಡುಬು ಮಾಡಬೇಕು (ಕೂಪ)· 'ಕರಿಗಡುಬು' ಪರಾ·

[ಪುರಿ₁+ಕಡುಬು (< ಕಡುಂಬು)]

ಪುರಿಗಣೆ (ನಾ)· ಅತಿಶಯವಾದ ಶಕ್ತಿಯಿಂದ ಕೂಡಿದ ಬಾಣ : ವಿಶೇಷ ಶಕ್ತಿಯಿಂದ ಕೂಡಿದ ಬಾಣ : ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್ (ಪಂಚಾ· ೦೨-೦೯ ೫); ಪುರಿಗಣೆಯಪ್ಪ ಕಾರಣದಿನಂತದು ತಪ್ಪಿದೆನೆಂದು ನೊಂದು ಪಲ್ಮೊರೆದಹಿ ರೂಪದಿಂ ಮಗುಚ್ಚು ಬಂದು (ಪಂಚಾ· ೦೨-೨೦೩); ಕೊಂತಿ ಬೇಡ ಬೆಚ್ಚದೆ ಕೊಟ್ಟಯ್ ಪು[ಜಾಣಾ· ಹು]ರಿಗಣೆಯಂ (ಗದಾಪು· ೩-೨೩); "ಪುರಿಗಣೆಯಪ್ಪ=ದಿವ್ಯಾಸ್ತ್ರವಾಗಿರುವ (?)" (ಕಂಪರಾ. ೩೦೨); "ಪುರಿಗಣೆ—ಸುಡುವ ಬಾಣ (?). ಒಂದು ಬಗೆಯ ದಿವ್ಯಾಸ್ತ್ರ" (ಗದಾಸಂ· ೩೪೬· ೦೧೩)·

[ಪುರಿ₃ + ಕಣ್₁]

ಪುರಿಗೆಯ್, ಹುರಿಗೈ (ಕ್ರಿ)· ೧. ಹೊಸೆ : ತಿರುವು : ಹುರಿಮಾಡು : ಮಿಸಿಗಳಂ ಪುರಿಗೆಯ್ದು ಕಣ್ಗಳಿದೆ ಭುಗಿಲಿಡುತ್ತೆ, ಸೂಸೆ ಕಿಡಿಗಳ್ . . . ಅಭಮುಖಿರಾಗಿ ನಿಂದರತಿಮುಷ್ಕರದಿಂದೆ ತುರುಷ್ಕರ್ಲ್ಲದಾರ್ (ಜಪಾ. ೨-೦೦೬)· **ಹುರಿಗೈ** : ೧. ಅವನಂ . . . ಚಾಟಿಯಂತೆ ಹುರಿಗೈದ ಕುಡಿವಾಸೆಯ ತೇಜ;ಪುಂಜಮುಖದ ಅಧಿಕಾರಿಯೊಬ್ಬನನ್ನು ನೋಡಿದನು (ಕುಸರು· ೩೦೨)· ೨. ಉತ್ಸಾಹಗೊಳಿಸು : ಹುರಿದುಂಬಿಸು : ಓಡುವ ಸುರಾಳಿಯುಂ ಕೂಡಿ ಹುರಿಗೈದನಂದು (ಕಣಪ. ೩೦-೨೬).

[ಪುರಿ₃ + ಕೆಯ್₁]

ಪುರಿಗೆ₂ 'ಪುಲಿಗೆಜೆ' ನೋ.

ಪುರಿಗೊಳ್, ಹುರಿಗೊಳ್, ಹುರಿಗೊಳ್ಳು (ಕ್ರಿ)· ೧. (ಹುರಿಯುಂತೆ ಹೊಸೆದು) ಕೂಡಿಸು : ಹೊಂದಿಸು : ಸೇರಿಸು : ಬಸವನು ಪಿರಿದು ಭಯಮುಮನತಿಸುಭಕ್ತಿಯುಮುಂ ಚಿತ್ತದೊಳು ಪುರಿಗೊಂಡು . . . ನವಿಸಿ (ಪಪಪು.೪-೩೬). ೨. ಕೂಡಿಕೊಳ್ಳು : ಹೊಂದಿಕೊಳ್ಳು; ಸಮನ್ವಯವಾಗು : ಕೊರಲ ನುಣ್ಣನಿ ಬೀಡೆಯಿಂಚರಂ ಪುರಿಗೊಳೆ, ಮರ್ದಳೆಯ ತಾಳದ ಲಯಂ ಜತಿಗೂಡೆ (ಕಾಮಾಶ್ವ. ೨೩-೯)· **ಹುರಿಗೊಳ್**: ೨. ಹೊರಯಿಲ್ಲದೆ ಮರುತೇಂದ್ರಿಯ ಸಾಶಯ ಕರಣಂಗಳು ತವ್ಮೊಳಗೆ ಪರಃಪುರ ಹುರಿಗೊಂಡೇಕತ್ವದ ಸಮರಸದಿಂದಿಹವಶ್ರಾಂತದೊಳು (ಹೋಗಾಂಂ. ೨-೦೬). ೩. ಉತ್ಸಾಹಗೊಳ್ಳು; ಹುರುಪನ್ನು ಪಡೆ : ಸದ್ವೀರರನೆಬ್ಬಿ ಕೊಂದೆನೆವ ಮಿಸಿಗಳಿ ಹುರಿಗೊಂಡ ಗಂಡಪೆಂಡಾರವ ನಾಳ್ದ ಸೀವಕುಳವಮಂಡನನೊಳ್ಪಡಿಯಪ್ಪ ಗಂಡರಾರ್ (ಎಇ XX. ೦೬-೨೪; 1167); ವಿಘಾತಿಯಾಲಳಿದು ಹುರಿಗೊಂಡೊಡಗಿ ಹಾಣಾಹಾಣಿಯಲಿ ಹೊಯ್ದಾಡಿತುಭಯಬಲ (ಕಾಣಾಕ್ಕೋ. ೨-೨೩). ೪. ಬಲವಾಗು : ಶಕ್ತಿಗೊಡು : ಹುರಿಗೊಂಡುದಾತನ ಸತ್ವವಾತನ ದಂಡಿಯಲಿ ಬಹರಾರು (ಕಾಪ್ರಗ. ೪-೬)· **ಹುರಿಗೊಳ್ಳು** : ೨. ಜ್ಞಾನದೇವನ ಮನೆತನದಲ್ಲಿ ವಿಠ್ಠಲಭಕ್ತಿಯೂ ನಾಥದೀಕ್ಷೆಯೂ ಮೊದಲೇ ಹುರಿಗೊಂಡು ಬಂದಿದ್ದವು (ಪುಚಾಸಿ. ೦೩)· ೩. ಅವರೆಲ್ಲರೂ ಮತ್ಸರ ಹುರಿಗೊಂಡರು (ಕೃಪುಚ. ೬೫).

[ಪುರಿ₃ + ಕೊಳ್₁]

ಪುರಿಗೊಳಿಸು, ಹುರಿಕೊಳಿಸು, ಹುರಿಗೊಳಿಸು (ಕ್ರಿ)· ೧. ಗಟ್ಟಿಗೊಳಿಸು; ದೃಢಗೊಳಿಸು : ಭಿತ್ತಿಯಿಲ್ಲದೆ ಬರೆವಂತೆ ಚಿತ್ರವ ಬಗೆವೆತ್ತು ಪುಸಿಯ ಪುರಿಗೊಳಿಸಿ ಬಿತ್ತರಿಸಿದಳು ರಾಯನ ಮನಂದಾಕೆಯ ವೆತ್ತಜಾವನೆಂದಱಿಯೆ (ಕಾಣಾಂ. ೩೪-೬೬)· **ಹುರಿಕೊಳಿಸು** : ೨.

ಹುರಿದುಂಬು ; ಉತ್ಸಾಹಿಸು : ಮರಳಿಯೊಂಭತ್ತನೆಯ ಮನು ತಾ ಹುರಿಕೊಳಿಸಿ ವರಯಜನ ಮೊದಲಾದುರುತರದ ಷಟ್ಕರ್ಮವೆಲ್ಲದ ಧರಣಿಸುರರಿಂದ ರೂಢಿ ಮಾಡಿದ (ಸಂಭವ. ೪-೫೩) ; ರಿಪುಂದಮರು ಹತ್ತಿದರು ಹರಪರ್ವತವ ಹುರಿಕೊಳಿಸಿ [ಪಾಠಾಂ. ಹುರಿಕಟಿಸಿ, ಹುರಿಗೊಳಿಸಿ, ಸರಕಟಿಸಿ] (ಶೂರರಾ. ೪-೯-೨೬). **ಹುರಿಗೊಳಿಸು** : ೧. ಪರಿವಿಡಿಗಳಿಂ ತನ್ನ ನೂಲಿಂ ತೆರೆಯವೊಲು ಮೇಲ್ಕಟ್ಟಿನಂದದಿ ಪರಿವೃತೋನ್ನತವೃಕ್ಷಗುಲ್ಮಲತಾತೃಣಂಗಳಲಿ ಹುರಿಗೊಳಿಸಿ ಮೇಲಕೆ ಕಪೋತವನಿರೆ ರಚಿಸಿ ಕರುವಿಟ್ಟು . . . ಶಿಖರವಂ ನಿಲಿಸಿ (ಪಸಪು. ೧೮-೩೮); ಲಲಾಟೇಕ್ಷಣಾಗ್ನಿಯಂ ಹುರಿಗೊಳಿಸಿ ಪಾಶುಪತಬಾಣಮಂ ಬಿಡೆ . . . ಉರಿಪಿದುದು ತತ್ಪುರಂಗಳ ಪರಿಕರಂಗಳಂ (ಪಸಪು. ೪೪-೪೬). ೩. ಹೊಸೆದು ಬಿಗಿಮಾಡು ; ಹುರಿಹಾಕು : ಕಣ್ಣಿದ್ದವರು ಮುತ್ತು ಹುಡುಕಿ, ಹಸುವಿದ್ದವರು ಹೊಸ ಎಳೆಯ ಹುರಿಗೊಳಿಸಿ, ನೋಡಿ ಗಾತ್ರ (ಸಂಪು. ೨೩-೦೨). ೪. ಹೊಂದಿಸು; ಅಳವಡಿಸು : ಸಕಳಮಂ ಹುರಿಗೊಳಿಸಿ ಲೀಲಾಸುಕರ ದಿಚ್ಛಾಮಾತ್ರದಿಂದಂ ವಿಕೃತಿಗಳನೆಯ್ದಿಸುವ ಮಹಿತಮಹಾಮಹಿಮನೀತ (ಪಸಪು. ೫೦-೪೫) ; ಅಲ್ಲಮಪ್ರಭು ಲಿಂಗಸಂಗವನು ಹೃದಯದೊಳು ಹುರಿಗೊಳಿಸುವೊಡೆ ಬಳಿಕದಱ ಮಹಿಮೆಯನೇನ ಹೇಳುವೆ (ಪ್ರಶುಂ. ೩-೨೦). ೫. ಹುರಿದುಂಬಿಸು ; ಉತ್ಸಾಹಗೊಳಿಸು ; ಹುರುಪು ಕೊಡು : ಸಾತ್ಯಕಿಯು ಅವರನ್ನು ಹುರಿಗೊಳಿಸಲು ದ್ರವಿಡಾಂಧ್ರನಿವಾಸಿಗಳಾದ ಬಲಗಳು ಒಮ್ಮಡಿಯಾಗಿ ಆ ಕರ್ಣನನ್ನು ಸುತ್ತ ಮುತ್ತಿಕೊಂಡಿರಲು (ಕೃವಾಳ. ೬೦); ಅರ್ಜುನನು ಶಿಖಂಡಿಯನ್ನು ಹುರಿಗೊಳಿಸುತ್ತ . . . ಎಂದನು (ಪಸಪಾ. ೨೬೫) ; ರಣರಂಗದಲ್ಲಿ ವೀರಾಗ್ರೇಸರರನ್ನುದ್ರೇಕಿಸಿ ಹುರಿಗೊಳಿಸುವುದು ಸಂಗೀತವೇ ಅಲ್ಲವೇ? (ಬಗಪಾ. ೬೨).

[ಪುರಿಗೊಳ್ + —ಇಸು$_3$]

ಪುರಿನೇಣ್, ಹುರಿನೇಣು (ನಾ). ಹೊಸೆದ ಹಗ್ಗ; ಹುರಿ ಮಾಡಿದ ಹಗ್ಗ : ನೆನೆಯ ಮತ್ತವನ ತಾಯ್—ಪೆಂಡತಿಯನ್!—ಇರ್‌ಮೊಱೆಯ ಪೆಸರನ್! — ಪುರಿನೇಣಿನುಸಿರ್ದಿರಿಚಿ ಪೊಲೆಗೆಯ್ದು ಬಾಱನೀಡಾಡಿದಳ್ (ಅಂತಿಗೂ. ೩-೯೫). **ಹುರಿನೇಣು** : ತರಿಸಿ ಹುರಿನೇಣುಗಳನೀತನ ಕರವೆರಡ ನೊಡೆಬಿಗಿದಡವದಿರು ಕೆರಳಿ ಮಾಡುವುದಾವುದು (ಕುಮ್ಮಾಲಾ. ೯-೪೦).

[ಪುರಿ$_3$ + ನೇಣ್$_1$]

ಪುರಿಯಿಡು (ಕ್ರಿ). ಹುರಿದುಂಬಿಸು ; ಪ್ರೋತ್ಸಾಹಿಸು : (ಮೆಚ್ಚಿ) ಕೊಂಡಾಡು : ಭೃಂಗೀಶಮುಖ್ಯರಂ ಪುರಿಯಿಟ್ಟು ಸತ್ಕೃಪಾಪಾಂಗದಿಂ ನಿಜಕುಮಾರನ ಗುಹನನೀಕ್ಷಿಸುತ್ತಂಗಜಾರಾತಿ ಬೊಮ್ಮನ ನೋಡಲೆದ್ದು ಕರಕಮಲಮಂ ಮುಗಿದು ನಿಂದ (ಭಾಪಸಂ. ೧ ೩೭); ನಾಟಕದ ಹರುಷದಿಂ ನೋಡಿ ಪುರಿಯಿಟ್ಟಂಗಚಿತ್ತಮಂ ಕರುಣಿಸಿದನಂದಿನೊಡ್ಡೋಲಗದೊಳು ಶೂಲಿ (ಸಂದಿಪೂ. ೩-೪೫). 'ಪುರೆಯಿಡು' ಪರಾ. [ಪುರಿ$_3$ + ಇಡು$_1$]

ಪುರಿಯೇಱು, ಹುರಿಯೇರು, ಹುರಿಯೇಱು (ಕ್ರಿ). ೧. ಬಲವಾಗು ; ದೃಢವಾಗು ; ಗಟ್ಟಿಗೊಳ್ಳು : ನೆವಮಿಲ್ಲದಿರ್ಪ ಹರಿಕೃಪೆ ಪವಣಿಲ್ಲದೆ ಪಾಯ್ದು ಕವಿಯೆ ಪರಿಹರಿಸುವರಾರ್ ಭುವನದ ಪುಣ್ಯದ ಪುಂಜಂ ಸವನಿಸಿ ಪುರಿಯೇಱೆ ಬಿರ್ಚಿ ಸಡಿಲಿಸುವರದಾರ್ (ಪಸಪಿ. ೩-೧೦೫). **ಹುರಿಯೇರು** : ೧. ಅಂತಃಕಲಹವು ಹುರಿಯೇರುತ್ತಿತ್ತು (ಸಾಪೋಪ. ೩೨೬). ೨. ಹುರಿದುಂಬು ; ಉತ್ಸಾಹಗೊಳ್ಳು ; ಉಬ್ಬು : ಬೊಗರಿ ಚಂಡಾಟ ಗುರಿ ಸರ್ವಿಮಿಗಿಲು ಚಿಣಿಘಣೀ ಚಮರಂಗ ಪಗಡೆಗಳ ಮಿರುಗೊಳಿಸಿ ಹುರಿಯೇರು ತಾಡುತ್ತೆ ಗೆಲ್ದವಂ ಮಂದಿರಕ್ಕೈತಪ್ಪನು (ಪರಸು. ೪-೯). **ಹುರಿಯೇಱು** : ೧. ಕೆರಳಿದರೆ ಕಾಳಹುದು ಭೀಮನ ದುರುಳತನವೀ ಕೌರವೇಂದ್ರನ ಹುರುಡು [ಪಾಠಾಂ. ಳು] ಹುರಿಯೇಱುವುದು ಮತವಲ್ಲೆಂದನಂಧನೃಪ (ಕುಮ್ಮಾಲಾ. ೦೬-೨೨). ೨. ತವತವಗೆ ಧುರತೋರಹತ್ತರು ತವಕಿಸುತ ಹುರಿಯೇಱಿದರು ಕೌರವರು ಕರ್ಣನ ಹರಿಬದಾಹವವೆಮಗೆ ತಮಗೆನುತ (ಕುಮ್ಮಾಲಾ. ೧೯-೪೩); ಹರಿಕರಾಬ್ಜಸ್ಪರುಶಸುಖದಲಿ ಕರಗಿ ಮನ ಹಂಕುರಿಸಿ ಪುಳಕದ ಹರಹಿನಲಿ ಹುರಿಯೇಱೆ ಹೊಂಪುಳಿಯೋಗಿ ಬೆಱಗಾಗಿ . . . ಭಕ್ತಾಭರಣನಿದ್ದನು ಪರಮಭಕ್ತಿಯ ಪಾರವಶ್ಯದಲಿ (ನಿಶಾಗ. ೬-೮-೪೪).

[ಪುರಿ$_3$+ಏಱು$_1$ (< ಏಱ್$_1$)]

ಪುರಿಯೋಡು, ಹುರಿಯೋಡು (ನಾ). ಹುರಿಯುವುದಕ್ಕಾಗಿ ಬಳಸುವ ಲೋಹದ ಅಥವಾ ಮಣ್ಣಿನ ಬಾಣಲೆ : "ಸಿರಿವಂತಿಗೆಯೆಂದೆನಲ್ಕೆ ಪುರಿಯೋಡಕ್ಕುಂ" (ಕರ್ಣಾನಿ. ೩೨) ; ಬಱುಗೊಡನೆಣ್ಣೆ ಪಟ್ಟಿ ನುಲಿ ನೇಣ್ ಬಡಿಕೋಲ್ ಬಲೆಯಿರ್ದಿಲೆಲ್ವು ಸಾವಱೆ ಪುರಿಯೋಡು ಸುಟ್ಟಡಗು . . . ಇದಿರೊಳ್ ಬರೆ ಕಾಣಲುಮಾಗದು (ಶೋಕೋಪ. ೧೨ ೦೦); ದೇವಂದಿಟದಿಂ ನಿರುತಮಿವನೆಂದು ಬಣ್ಣಿಸುತಿರೆ ಗುಣಮಂ ಬಿಟ್ಟು ಕೆಟ್ಟು ಪುರಿಯೋಡಾದೈ (ರರ್ಮಾಪ್ಕು. ೬ ೧೨೬). **ಹುರಿಯೋಡು** : "ಸಿರಿವಂತಿಗೆಯೆಂದೆ [ನ]ಲ್ಕೆ ಹುರಿಯೋಡಕ್ಕು" (ರನ್ನಕಂ. ೨); ಮಸಿಯೆಂಬುದು ಹುರಿಯೋಡಿಂಗೆ ಪಣೆಕಟ್ಟೆಂಬುದು ಪೆಟವಲೆಟ್ಟಿಂಗೆ (ಅನುಪು ೨-೨೮ ಪ); ಹುರಿಯೋಡಿನಂತಾದುದು ನೆಲನಾ ಗಿರಿವರನೊಳೇಳುವ ಕಿಚ್ಚಿನಿಂದ (ನೇಮಿಸಂ. ೦೧-೪೦).

[ಪುರಿ$_1$ + ಓಡು$_2$]

ಪುರಿವರಲ್ (ನಾ). ಕಾದ ಕಲ್ಲು ; ಸುಡುವ ಕಲ್ಲು : ನಾನಲುಮಂ ಬಾನಲುಮಂ ಸಡಿಂಬಮನಿಡಿಂಬಮಂ ಪರಲುಮಂ ಪುರಿವರಲುಮಂ ಕಿಸುಗಾಡುಮಂ ನೆಗ್ಗಿಲ್ಗಾಡುಮಂ . . . ಕಳೆಮ ಪೋಗಿ (ಲೀಲಾವ. ೬ ೦೬ ಪ).

[ಪುರಿ$_1$ + ಪರಲ್]

ಪುರಿವಳಲ್, ಹುರಿಮರಳು, ಹುರಿಮಳಲು (ನಾ). ಚೆನ್ನಾಗಿ ಕಾದ ಮರಳು ; ಸುಡುವ ಮರಳು : ಸಱಿವಳೆಯಿಂ ಬಿಸದುರಿಯಂ ಬಿಡದು ಗುಳ್ವುರಗಗಳಿಂ ಸೂಸುವ ಪುರಿವಳಲಿಂ ಮಸೆದಸಿಯಿಂ . . . ಆ ಬಿಜ್ಜೋದರಿ ಮಸಗಿ ಕರಂ ದಾರುಣತರಮಪ್ಪುಪಸರ್ಗಂ ಮಾಡಿದಳು (ಪಯಾಕಾ. ೦೬-೧೪). **ಹುರಿಮರಳು**: ಕರಿಯ ಮದ್ದಿನ ಪೊಟ್ಟಣ ಕಟ್ಟಿದಂಬಿನ ಹೊಱೆ ಹುರಿಮರಳಿನ ರಾಶಿ ಅರೆದ ಸಾಸವೆಗೊಡ ಕಾದಡವಿಯ ಬಹು ಹರವಿಗಳೊಪ್ಪಿದುವಾಗ (ಕಂಪಪಿ. ೦೧-೦೧೩) **ಹುರಿಮಳಲು** : ಕಾಸುವೆಣ್ಣೆ ಹುರಿಮಳಲು ಕವಣೆದಸಿ ಸಾಸಿರಮುಖವಾಗಿಹವು (ಅಂಪಪ. ೩ ೦೩).

[ಪುರಿ$_1$+ ಮಳಲ್$_2$ (< ಮಣಲ್)]

ಪುರಿವಿಳಂಗಾಯಿ (ನಾ). ೧. ತುಪ್ಪದಲ್ಲಿ ಕರಿದು ತಯಾರಿಸುವ ಒಂದು ಬಗೆಯ ಸಿಹಿ ಭಕ್ಷ್ಯ : ಹೆಸರುಬೇಳೆಯ ಹುರಿದು ಬೇಯಿಸಿಕೊಂಬುದು, ದೊಡ್ಡ ಸಜ್ಜಿಗೆಯ ಬೇಯಿಸಿಕೊಂಬುದು, ತೆಂಗಿನ ಕಾಯ ಹೆಸರ ತೋರದಲಿ ಕೊಯಿದು ಹಾಕಿ ಸಕ್ಕರೆಯ ಹಾಕಿ, ಮೆಣಸು ಏಲಕ್ಕಿ ಕರ್ಪೂರವ ತಳಿದು ಕಲಸುವುದು, ಅಡಕೆಯ ತೋರ ಉಂಡೆಯ ಮಾಡಿ, ಅಕ್ಕಿಯ ಹಿಟ್ಟ ಸಣ್ಣವಾಗಿ ಅರೆದು, ಗಟ್ಟಿಯಾಗಿ ಕಲಸಿ, ಈ ಉಂಡೆಗಳ ಆ ಹಿಟ್ಟಿನೊಳಗೆ ಅದ್ದಿ, ಕಾದ ತುಪ್ಪದಲ್ಲಿ ಹಾಕಿ ತೆಗೆವುದು. ಇದು ಪುರಿವಿಳಂಗಾಯಿ ಯೆನಿಸಿಕೊಂಬುದು (ಭೀಪುಸೂ. ೨೪). ೨. ಹೆಸರುಹಿಟ್ಟಿನಿಂದ ತಯಾರಿಸುವ ಒಂದು ಬಗೆಯ ಸಿಹಿಭಕ್ಷ್ಯ,—ಉಂಡೆ. 'ಪುಳ್ಳಂಗಾಯಿ ಉಂಡೆ' ಪರಾ. [ದೇ.॥ ತಮಿ. ಪೊರಿವಿಳಙ್ಕಾಯ್, ಪೊರಿವಿಳಾಙ್ಕಾಯ್; ತೆಲು. ಪೊರಿವಿಳಂಗಾಯಲು]

ಪುರಿಸ (ನಾ). ಅಮೇಧ್ಯ; ಮಲ : ಮುನಿರಾಯ ಕೇಳೆನ್ನ ತನು ಪೊಲಸು ಪುರಿಸವೇ ವಿನಯದಿಂ ನೋಡೆಂದುರವ ಬಗೆದು ತೋಱೆ ಘನ ತನಿವಾಲು ಸೂಸೆ (ಪ್ರಶುಪು. ೨-೪೦). [< ಸಂ. ಪುರೀಷ]

ಪುರಿಸಂಡಗೆ, ಹುರಿಸಂಡಗೆ (ನಾ). ಒಂದು ಬಗೆಯ ಸಂಡಗೆ : ಎಣ್ಣೆಯಲ್ಲಿ ಹುರಿಯುವ ಬತ್ತದ ಅರಳಿನ ಸಂಡಿಗೆ : ತೆಗೆ ತಿಲದನೌಪಾಸನದ ಕೊಳವಿಗಳ . . . ಹಪ್ಪಳವ ಪುರಿ[ಪಾಠಾಂ. ಮಿರಿ]ಸಂಡ[ಪಾಠಾಂ. ಡಿ]

ಗೆಯ ಹೂರಿಗೆಯ (ಕೊರಣ. ೩-೬-೭೦). **ಹುರಿಸಂಡಗೆ :** ನೊರೆಸಂಡಗೆಯನು ಹುರಿಸಂಡಗೆಯ ಬಾಳಕವನು ತಪ್ಪದೆಲ್ಲಾ ಸಾಧನವನು ಸಂವರಿಸಿ ತಂದೊಪ್ಪಿಸಿದಡೆ (ಸಿದ್ಧರಾ. ೬-೫೨). [ಪುರಿ$_1$ + ಸಂಡಗೆ]

ಪುರೀತತ್ತು (ನಾ). ಕರುಳು : "ಅಂತ್ರಂ, ಪುರೀತತ್—ಈ ೨ ಕರುಳ್" (ಹಲಾಯು. ೦೦೯-೦೩). [ಸಂ. ಪುರೀತತ್]

ಪುರೀಷ (ನಾ). ೧. ಹೇಲು ; ಮಲ : "ವರ್ಚಃ . . . ಪುರೀಷಂ, ಶಮಲು, ಮಲಂ—ಈ ೧೩ ವಿಷ್ಠೆ" (ಹಲಾಯು. ೧೦೫-೦೫) ; ಆರಯೆ ಮೂತ್ರ ಪುರೀಷಾಗಾರಂ ಸಂಪ್ರಾಪ್ತಸಪ್ತಧಾತುವಿಕಾರಂ ಚಾರುಗುಣದೂರಮತಿ ವಿಷದಾರು ಶರೀರಂ ದುರಂತದುಃಖಾಧಾರಂ (ಅಪಪು. ೨-೩೦). ೨. ಕೊಳೆ ; ಹೊಲಸು : ಸಿಂಬುಟು ಕೀವು ಕೆರಂಕಸೃಗಂಬು ಮಲಂ ಮೂತ್ರಮಾ ಪುರೀಷಂ ಜೀವಂ ಬೆಂಬಿಡದೀ ಪಂದೊವಲ ಪಸುಂಬೆಯೊಳೀಯೊಡಲೊಳಾವ ಸುಖಕಿರ್ದಪುದೋ (ಅಪಪು. ೬-೫೫) ; ಕೀವಿನ ರುಧಿರ ಪುರೀಷದ ಬಾವಿಯೊಳಾವಾಸಮಾಗಿ ನೆಲಸಿಹ ನಾನಾಜೀವಿಗಳ ನೋವ ನೋಡುತ್ತಾ ವಿಭು ಸಾನಂದತಂದೆ ಮಱುಗುತ್ತಿರ್ದಂ (ಪನ್ನಾ. ೩-೦೩೦). [ಸಂ.]

ಪುರು (ಗು). ೧. ಹೇರಳವಾದ ; ವಿಪುಲವಾದ ; ಅಧಿಕವಾದ : ಪುರು ಪುಣ್ಯಂ ವಿಮಳೋರುಕೀರ್ತಿ . . . ನಾಕಿಗಂ (ಪರ್ಧಮಾ. ೦-೩೦) ; ಪರಮಾರ್ಥಂ ಪುರುಧರ್ಮದಾನಫಲದಿಂ ಸ್ವರ್ಗಾಪವರ್ಗಕ್ಕಮೀಶ್ವರನಪ್ಪಂ ವರಪಾತ್ರ ಸಂತತಿಗೆ ದಾನಂಗೆಯ್ವುದಾನಂದದಿಂ (ಶಾಂತೀಶ್ವ. ೬-೦೦೮). ೨. ಮಹತ್ತಾದ ; ವಿಶಾಲವಾದ : ಪ್ರತ್ಯಹದೊಪ್ಪುಗುಂ . . . ಆದಿತ್ಯಪುರಂ ಪುರಂದರಪುರಪ್ರತಿಮಂ ಪುರುರತ್ನಗೋಪುರಂ (ಸಂಪ್ರಪು. ೬-೩). (ನಾ). ೩. ಹಿರಿದು ; ದೊಡ್ಡದು : "ಬೃಹತ್, ಉರು, ಗುರು, ವಿಸ್ತೀರ್ಣಂ, ಪುರು . . . ವರಿಷ್ಠಂ—ಈ ೧೨ ಹಿರಿದು" (ಹಲಾಯು. ೧೦೬-೦೯) ; "ಬೃಹದುರು ಪುರು ಪೃಥುಳ ಪೃಥು ವಿಶಾಲಮುಮಾ ಗುರು ಮಹದತಿ ವ್ಯೂಢಮೆನೆ ವಿಸ್ತೀರ್ಣಮೆಂದೆನಿಕು" (ಮಂಗರಾ. ೧೨೮-೮). ೪. ಚಂದ್ರ ವಂಶದ ಒಬ್ಬ ಪ್ರಸಿದ್ಧನಾದ ಅರಸು ; ಯಯಾತಿಯ ಮಗ ; ಕೌರವ, ಪಾಂಡವರ ವಂಶದ ಮೂಲಪುರುಷ : ಸರಿಯೆ ಪೇಳ್ನಿನಗಿದು ಭೂಪ ಓಹೋ ಪುರುವಂಶದೀಪ (ಶಾಕುಂತ. ೬೮ ಅಡಿಟಿ). 'ಪುರುಕುಲ' ಪರಾ. ೫. [ಜೈನ] ಮೊದಲನೆಯ ತೀರ್ಥಂಕರನಾದ ವೃಷಭನಾಥ ; ಆದಿತೀರ್ಥಂಕರ : ಪುರುಪರಮೇಶ್ವರನಿಳೆಗವತರಿಸಿದಂ (ಆದಿಪು. ೬-೩೭) ; ಪುರುವಂಶದ ಕುರುವಂಶದ ಹರಿವಂಶದ ನಾಥವಂಶದುಗ್ರಾನ್ವಯದುರ್ವರೆಯೊಡೆಯರಾದಿಯಾಗಿರೆ ನರನಾಥಸುತರ್ಕಳೆನಿಬರಾನುಂ ಬಂದರ್ (ಶಂರಾಮಾ. ೩-೩೬) ; ಪುರುವಂಶಾಭರಣಂ ತ್ರಿಪಿಷ್ಟನೃಪನಾ ವಿದ್ಯಾಧರೇಂದ್ರಂಗೆ ಸಾದರದಿಂ ತಾನಿದಿರ್ವಂದು (ಶಾಂತೀಶ್ವ. ೯-೨೦೩). [ಸಂ.]

–ಪುರುಕ, –ಪುರಕ (ಪ್ರ). ಭಾವನಾಮವಾಚಕವಾದ ಒಂದು ತದ್ಧಿತ ಪ್ರತ್ಯಯ : 'ಅಂಜುಪುರುಕ', 'ಅಳುಬುರುಕ' ಪರಾ.—**ಪುರಕ :** 'ಅಳುಬುರಕ', 'ಆಸೆಬುರಕ' ಪರಾ.

–ಪುರುಕಿ (ಪ್ರ). ಭಾವನಾಮವಾಚಿಯಾದ ಒಂದು ತದ್ಧಿತಪ್ರತ್ಯಯ : ಕುಳಿ ಪ್ರತ್ಯಯವು ಯಾವ ಅರ್ಥದಲ್ಲಿ ಬರುತ್ತದೆಯೋ ಅದೇ ಅರ್ಥದಲ್ಲಿ ಪುರುಕಿ ಪ್ರತ್ಯಯ ಬರುತ್ತದೆ (ಹೂಪಗ. ೬೯). 'ಅಂಜುಪುರುಕಿ' ಪರಾ. [–ಪುರುಕ + – ಇ$_2$]

ಪುರುಕುಲ (ನಾ). ಪುರುಮಹಾರಾಜನ ವಂಶ : ಎಲೆ ಪುರುಕುಲೋತ್ಪನ್ನನೆ . . . ಇಂಥ ಕಠಿನೋಕ್ತಿಗಳಿಂದ ತಿರಸ್ಕರಿಸುವುದು ನಿನಗೆ ಯುಕ್ತವಲ್ಲವಲ್ಲಾ ? (ಶಾಕುಂತ. ೬೮-೦೩). [ಸಂ.]

ಪುರುಚಲಿಗಿಡ (ನಾ). ಒಂದು ಬಗೆಯ ಸಸ್ಯ : ಹೇನುಕುರುವಿನ ಗಿಡ, ಪುರುಚಲಿಗಿಡ, ಪುಲ್ಸಾರೆ (ಮೃತಿಗಿ. ೫೫-೦೦೦೬). [ಪುರುಚಲಿ$_0$ + ಗಿಡ (< ಗಿಡು)]

ಪುರುಚಲು (ನಾ). ಕೆದರಿದುದು : ಕೂದಲು ಪುರುಚಲು ಪುರುಚಲಾಗಿದೆ (ಕೂಡಿ). [ಪುರುಚು ? + – ಅಲು (< – ಅಲ್$_2$)]

ಪುರುಜ (ಗು). ಅಧಿಕವಾದ ; ಅನೇಕವಾದ. [ಸಂ.]

ಪುರುಡಿ$_1$ (ನಾ). ಮತ್ಸರವುಳ್ಳವಳು ; ಅಸೂಯೆಪಡುವವಳು ; ಈರ್ಷ್ಯೆಯುಳ್ಳವಳು : ಅವನ ಸತಿ ಪುರುಡಿ ನೆವದಿಂ ಬವರಮನೆ ಪೊಣರ್ಚಿ ಮಾರಿದತ್ತಾಖ್ಯೆ ಮಹಾಹವಶೀಲೆ ತನ್ನ ಮನೆಯಿಂದವೆ ಪೊಱಮಡಿಸಿದಳ್ ಕನಲ್ದು ಪದ್ಮಾವತಿಯಂ (ಪುಷ್ಪಾಸ್ತ್ರ. ೨-೯೩). [ಪುರುಡು$_1$ + – ಇ$_2$]

ಪುರುಡಿ$_2$? (ನಾ). (?) : ಕರ ಚರಣವನು ಮಿಸುಕಲಮ್ಮದೆ ಗರುಡಿಯೋಜನು ಪು [ಪಾಠಾಂ. ಪ]ರುಡಿಯನು ಮರವಂತೆ ನಿಂದಿರ್ದ (ಸಾಳ್ವಾ. ೩೦-೬೨). [?]

ಪುರುಡಿಗ, ಹುರುಡಿಗ (ನಾ). ಹೊಟ್ಟೆಕಿಚ್ಚಿನವನು ; ಈರ್ಷ್ಯೆಪಡುವವನು : ಮತ್ಸರಬುದ್ಧಿಯವನು : ಆಗಮಾರ್ಥಮನೇನೆಂದಱಿಯದರೊಳ್ ಪುರುಡಿಗರೊಳ್ ಬಱುದಲೆಯೆಂದೆಳಸಿ ಕೇಳಲಾಗದು ಪುರುಷಂ (ಧರ್ಮಾಮೃ. ೬-೨೧೩) ; ಪಾಱಿಪ ಪುರುಡಿಗನಂ ಪೂಣ್ದು ಬೇರ್ಕೆಯ್ವಲೋಭೋಜ್ವಳನಂ ಱೋಡಾಡಿ ಪೋಗಾಡುವ . . . ಚಾತುರ್ಯದ ಪೊಸಬಗೆಯೆನ್ನೊಳ್ ನಿತಾಂತಂ ನಿಸರ್ಗಂ (ಪ್ರಕಟ. ೨೯-೨೪). **ಹುರುಡಿಗ :** "ಈರ್ಷ್ಯಾಳುಃ, ಕುಹಕಃ—ಈ ೨ ಹುರುಡಿಗಂ" (ಹಲಾಯು. ೬೩-೨೨೯) ; ಹುರುಡಿಗರನೇಕಾಂತದೊಳಗಾದರಿಸುವರು ಭೇದಕರ ಬುದ್ಧಿಗೆ ತೆಱಹುಗೊಡುವರು . . . ಈ ಧರೆಯರಸುಗಳಿಗಿದು ಸಹಜ (ಕುಪ್ಯಾಸ. ೦-೩೩). [ಪುರುಡು$_1$ + – ಇಗ]

ಪುರುಡಿಸು, ಹುರುಡಿಸು (ಕ್ರಿ). ೧. ಸ್ಪರ್ಧಿಸು ; ಪೈಪೋಟಿ ನಡೆಸು : ಸ್ಥಿರನೇ ಮೇರುಗಿರೀಂದ್ರದೊಳ್ಸೆಣಸುವಂ ಗಂಭೀರನೇ ವಾರ್ದ್ಧಿಯೊಳ್ ಪುರುಡಿಪ್ಪಂ (ಎಕ. VII, ಶಿವಮೊ. ೦೦-೨೬ ; 1085 ?) ; ಉದಾರಗುಣದೊಳ್ ಪುರುಡಿಸುವಂ ಕಲ್ಪವೃಕ್ಷದೊಳ್ತದ್ವಣಿಜಂ (ಧರ್ಮಾಮೃ. ೦-೯೦) ; ಹರಿಚಂದನ ಪಾರಿಜಾತ ಮಂದಾರದ ತರುಚಯದಿಂ ಸಿದ್ಧರಸದ ಸರಸಿಗಳಿಂದಾ ಗಿರಿ ಗೀರ್ವಾಣರ ಪುರದೊಡನವು ಪುರುಡಿಪುದು (ಕುರಾಸಾಂ. ೨-೦೯). ೨. ಹೊಟ್ಟೆಕಿಚ್ಚು ಪಡು ; ಮತ್ಸರಿಸು ; ಅಸೂಯೆ ಪಡು : ವಜ್ರದಾಡಂ ಕೇಳ್ದು ಮನದೊಳ್ ಮುಳಿದು ಪುರುಡಿಸಿ . . . ಬಾವಿಯ ಬಾಗಿಲೆಲ್ಲಮಂ ನಿಶ್ಚಿದ್ರಮಾಗಿ ಮುಚ್ಚಿ ಕವಿದಿಕ್ಕಿ ಪೋದಂ (ವಡ್ಡಾರಾ. ೧೩೭-೨೩) ; ನರನಂದನನಂ ಕಂಡು ವಿಕ್ರಮಕ್ಕಂ ಕ್ರಮಕ್ಕಂ ಪುರುಡಿಸುವ ಸುಯೋಧನನ ಮಕ್ಕಳ್ . . . ನೂರ್ವರುಮೊಂದಾಗೆ ಬಂದು ತಾಗಿದಾಗಳ್ (ಪಂಪಾ. ೦೦-೯೯ ಪ) ; ಸವತಿಗೆ ಸವತಿ ಪುರುಡಿಪಳ್ (ಕಮಾದ. ೧೩೦ ಪ್ರಯೋ) ; ಗುಣಕೆ ಪುರುಡಿಪರೊಳರೇ (ರಸರ. ೦-೬). **ಹುರುಡಿಸು :** ೧. ಕೈಲಾಸವದಕೆ ಹುರುಡಿಸುತಲಿರ್ಪುದು ನೋಡ ಮೇಲೆನಿಪ ಮೇರು ಸೆಣಸುತ್ತಿರ್ಪುದುಂ ನೋಡ (ತಿರುರ. ದೇ. ೩-೨೦) ; ಎಳೆಯ ಮಿಂಚಿಫ ಕುಡಿಯ ಸೂಸುವ ನಳಿನದೃಶೆಯರು ಶಶಿಯ ಬಿಂಬವ ಹಳಿವ ಹುರುಡಿಸುವಬುಜಮುಖಿಯರು ಕೋಮಲಾಂಗಿಯರು . . . ಕುರುರಾಯ ನೆಡವಂಕದಲಿ ಮೋಹಿವರು (ಕುಪ್ಯಾಲು. ೬-೯೯) ; ಚಕ್ರವರ್ತಿಯ ಸೇವೆಯೆಂದು ಪುಷ್ಪ ಪುಷ್ಪವೂ ಹುರುಡಿಸುತ್ತಿದೆಯೋ ಎಂಬಂತೆ ಪಾರಿಜಾತ, ಜಾಜಿ . . . ಜಲಜಗಳು ತಮ್ಮ ತಮ್ಮ ಸುಗಂಧವನ್ನು ಸೂರೆಗೊಡುತ್ತಿವೆ (ವಡಿಡಾ. II, ೦೯೭೯). ೨. ಒಸೆದು ಕಮಲಿನಿ ನಗಲು ಮಿಗೆ ಹುರುಡಿಸುತ ಪೂರ್ವದಿಶಾನಿತಂಬಿನಿ ನಿಶಿತಕೋಪದ ಕಿಡಿಯನುಗುಳಿದಳೆನಲು ರವಿ ಮೆಱೆದ (ಕುಪ್ಯಾಮ್ರೋ. ೨-೦೩). [ಪುರುಡು$_1$ + – ಇಸು$_2$]

ಪುರುಡು$_1$, ಹುರುಡು$_1$ (ನಾ). ೧. ಸ್ಪರ್ಧೆ ; ಪೈಪೋಟಿ ; ಮೇಲಾಟ : ಖೇಚರನುಂ ಕುಮಾರನಂ ಕಂಡು ಪುರುಡಿಂ ಮುಳಿಸು ಪೆರ್ಚಿ . . .

ಕೊಲ್ವೆನೆಂದು ಕಿಬ್ಬ ಬಾಳ್ವೆರಸು ಬಂದೆಯಿಗಿ ಇಱಿದು (ವಡ್ಡಾ. ೫೯-೩೬); ಎಸುತಾಸುಂ ತೆಜದೊಳಳಿವಿನ ಲಲ್ಲಿಪು ಬಿಲ್ಲದ ಪುರುಡಿನ ಪುಳಿಸಿನ ನೆವದ ಪಡೆಪೊತ್ತುಗಳಂ ನುಡಿದುಂ ಕಾಲ್ತಡಿದುಮುಚಳಿತಧೈರ್ಯನ ಮನಮುಂ ಚಳಿಯಿಸಲಾಜದೆ (ಪಂಪಭಾ. ೬-೧೪೨) : ನಿನಗಂ ಮದನಂಗಂ ರೂಪಿನ ಪುರುಡುಂಟು (ಅಜಿಪು. ೬-೩೬). ೨. ಹೊಟ್ಟೆಕಿಚ್ಚು; ಈರ್ಷ್ಯೆ; ಮತ್ಸರ: ಅತನ ಪ್ರಾಣೇಶ್ವರಿ ಪದ್ಮಮಾಳಿನಿ ಕಂಡು ಪುರುಡುಮಾಬಿಲುಮೊಡವಳೆಯೆ ನಿತಿತಾಸಿ ಧೇನುವಂ ಕಿಬ್ಬು ಬೆಸ್ಸಟ್ಟ ಮುಟ್ಟಿ ಬಿಱಿಗಿಲ್ಲದಾತನ ಬೆಸ್ಸಂ ಎಸ್ಸಿವರವಿಕ್ಕಿದಂ ತಿರೆ ಪೊಯ್ಕೆ (ಪಾಪಪು. ೪-೧೬ ಪ); ಪುರುಡಿಂ ಭಾರತೀಶನಂ ಸೋಂಕಳೆ . . . ಮೀನಕನಂ ದೂರದಿಂ ನೋಡಿ ಪಾತಕನಿವನೆಂದು ತೀದು ಪೋಗಳಿಂದಿರೆ ನಂಬದಿರ್ (ಕಾಡಂಪು. ೩೪೯); ಉರ್ವಿಯೊಳ್ ಸಿಖಿಲಪುಣ್ಯಾಂಭೋಧಿಯಪ್ಪಾತನಂ ಪುರುಡಿಂದಂ ಕೊಲಲೆಂದು ಕಾಯ್ವ ನರಸುಂ ಗಾಪಂ ಪೆಱರ್ ಗಾಪರೇ (ದರ್ಮಾಪ್ರ. ೧೦-೨೦೬). ೩. ಪಟ; ಛಲ; ಏರೆದಾಗ ಕೊಡದಿಹುದು ನೆಲದ ಕ್ಷುಲ್ಲೆಗೇನು ಮಾರುಳಿ ಕರೆಯದೆ ಕೊಡುವ ಪುರುಡೇಕೆ ಬೆಡದು ? (ಕಾಂಬರ. ೩೭-೪೦). **ಹುರುಡು**$_1$: ೧. ಕಮಳಪ್ರಭೆಗಂ ತನಗಂ ಹುರುಡಿಂದಮೇ ಪರಸ್ಪರಾನುರಾಗಮಳವಿಗಟ್ಟಿಯೆ (ಅರಿಕೇ. ೩-೧೦೭ ಶ); ಹುರುಡು ಜಾಣುಮೆ ಚಳಬಳಿಕೆ ಚವ್ವರಣಿ ಪಂಚನೆ ನೇಹಪೇಬೀ ಪರಿಯಮಾಯಾಮಯದ ಮಹಿಳಾಜನ ವಿರಾಜಿಸಿತು (ತೊಡಬ. ೧-೩ ೩೨); ಒಂದೊಂದು ಸಲ ಹೆಣ್ಣಾಳುಗಳಿಗೂ ಗಂಡಾಳುಗಳಿಗೂ ಹುರುಡು ಬಂದು ಬಡಿತ್ತಿತ್ತು (ಪಪುಸ್ತ್ರೀ. ೦೪೨). ೨. ಹುಸಿಯಿಲ್ಲ ಹುರುಡಿಲ್ಲ . . . ಮತ್ಸರವಿಲ್ಲ ನೆರವಿಲ್ಲ ಪಸುಧೆಯೊಳು ಸಿದ್ಧರಾಮಂಗೆಬು ಕೀರ್ತಿ ಪಸರಿಸಿತು ಮೂಲೋಕದೊಳಗೆ (ಸಿರ್ಚ. ೬-೨೩); ಹುರುಡೇಕೆ ಗುಣದೊಳಗೆ (ಶಾಸ್ತ್ರಿ. ೧-೨೩); ಹುರುಡು ಹುಟ್ಟಿದಪೊಲು ಸಕಲಕಾಂತೆಯರೊಳು ಪಿಣಿಪಿಸಿರುತಿಹನಾಗಿ ಪುರುಷರೊಳುತ್ತಮನೀತನೆಂದಾತಗೆ ಪುರುಷೋತ್ತಮನೆಂಬ ನಾಮ (ಶಪಚ. ೧೩-೦೭). ೩. ಗುರುಗಳಿಂದ ಸಹಭಾಸಗಿರಿ ಪಡೆಯುಬೇಕೆಂಬ ಹುರುಡು ಸಂಜೀವಯ್ಯನಿಗೆ ಹತ್ತಿತ್ತು (ಕಾಗಿಚ. ೫೬). ೪. ಆಸೆ; ಬಯಕೆ; ಇಚ್ಛೆ: ಇಂತಪ್ಪ ಸರಿಯನಾಂ ಪಡೆದೊಸೆದು ಸತ್ಪುತ್ರಸಂತತಿಗೆ ದಾನವಾಂ ಕೊಡುವೆನೆಂದೆಂಬ ಹುರುಡಂತರಂಗದೊಳು ಸಂಜನಿಯಿಸಲ್ (ಪಮ್ಮಾ. ೧೧-೬). ೫. ಲಪಲಪಿಕೆ; ಉತ್ಸಾಹ: ಎನ್ನನ್ನು ಮನ್ನಿಸುವ ದೊರೆಯಿಲ್ಲ ಹರಣದಲ್ಲಿ ಹುರುಡಿಲ್ಲ ಕರಣದಲ್ಲಿ ದೃಢವಿಲ್ಲ (ಪಠಕ. ೨೪).

ಹುರುಡು ಮಾಡು = ೧. ಸ್ಪರ್ಧಿಸು; ಪೈಪೋಟಿ ಮಾಡು: ಸ್ವಯಂವರಮಂದಿರದೊಳಗೆ . . . ಒಬ್ಬರೊಡನೆ ಒಬ್ಬರು ಹುರುಡು ಮಾಡುತ್ತಾ ಎಲ್ಲ ರಾಜರೂ ಕುಳಿತಿದ್ದರು (ಪಚಾಂ. ೩೦); ಇಬ್ಬಣವರೂ . . . ಹುರುಡು ಮಾಡುತ್ತಿರುವುದೂ ಈ ಕಾಲದ ವಿಶೇಷ ಲಕ್ಷಣ (ಪಚಾಂ. ೪. ಪೀಠಿಕೆಯ ಪುಟ). ೨. ಉತ್ಸಾಹಗೊಳಿಸು; ಹುರಿದುಂಬಿಸು; ಚುರುಕುಗೊಳಿಸು; ಪ್ರಚೋದಿಸು: ಯುಧಿಷ್ಠಿರನು . . . ತಮ್ಮ ಸೈನಿಕರನ್ನು ಕರೆದು ಭೀಷ್ಮನನ್ನು ಸುತ್ತ ಮುತ್ತಿಕೊಂಡು ಸಂಹರಿಸುವುದಕ್ಕಾಗಿ ಹುರುಡು ಮಾಡಿದನು (ಕೃಚಾಂ. ೦೩೩).

[ದೇ. ॥ ಕೊತ. ಪುರ್ಡ್; ತೆಲು. ಪುರುಡು]

ಪುರುಡು$_2$ (ನಾ)· ೧. ಮಗುವಿನ ಜನನಸಂಬಂಧವಾದ ಮೈಲಿಗೆ; ಹುಟ್ಟುಸೂತಕ; ಜಾತಾಶೌಚ; ವೃದ್ಧಿ: ದೇವಿಯು . . . ಅವಳ ಜವಳಿ ಗಂಡುಮಕ್ಕಳೆನ್ನು ಹೆತ್ತಳು. ಪುರುಡಿನ ದಿವಸಗಳು ಕಳೆದ ನಂತರ ಮಕ್ಕಳಿಗೆ ನಾಮಕರಣವಾಯಿತು (ಕೋಬಿ. ೩). ೨. ಮರಣಕ್ಕೆ ಸಂಬಂಧಪಟ್ಟ ಮೈಲಿಗೆ; ಮೃತಾಶೌಚ; ಸೂತಕ: ಹತ್ತುದಿವಸದವರೆಗೆ ಪುರುಡು. ಹತ್ತನೇ ದಿವಸ ಶುದ್ಧಕರ್ಮಾರ್ಹರಾಗಳು (ಪಣಾಕ್ಕ. ೨೦೬); ಬಿಗಿದುಡೆಯ ಬಡಳದಲೊ ಹುಟ್ಟು ಸಾವುಗಳಿಂದ ಆಗಳುಂ ಪುರುಡಾಗಿ ನೆಲೆವೆಣ್ಗೆ ಏಮಾಪು (ಕಾಂಬರ. ೪೬ ೬೩).

[ದೇ. ॥ ತಮಿ. ಪುರುಟು; ತೆಲು. ಪುರುಡು]

ಪುರುಡುಗೆಯ್ (ಕ್ರಿ)· ಆಸೂಯೆಗೊಳ್ಳು; ಮತ್ಸರಿಸು: ವಂಚಿಸದೆ ಪುಸಿಯುವಳುವದೆ ಸಂಚೇಸದೆ ಪುರುಡುಗೆಯ್ಯದಾರದಿರದೆ ಕರಂ ಬಂಚಿಸದೆ ಬಳಲಿಸದುಬ್ಬುಗಿಸುವಂ ಚದುರಂ ಸಜ್ಜನಂಗಳಂ (ಪ್ರಬೋ. ೪-೧೩).

[ಪುರುಡು$_1$ + ಕೆಯ್$_1$]

ಪುರುಡುದೋಱು (ಕ್ರಿ)· ಹೊಟ್ಟೆಯುರಿಯನ್ನು ವ್ಯಕ್ತಪಡಿಸು; ಮಾತ್ಸರ್ಯವನ್ನು ತೋರಿಸು: ಇಂತು ಪಲ್ದಿಂದು ಗಜಜ್ಞಿ ಗರ್ಜಿಸಿ ಪುರುಡುದೋಱೆ ಬಾಯ್ಗೆ ಬಂದಂತೆ ಗಳಪಿ ಮಾನಸಿಧಿಯಾದ ಮಲ್ಲಗಣಂ ಮಲ್ಲಗಣಿಯ ಮಾತೆ ಮನೆಯಿಂ ಪೊಱಮಡಿಸಿ (ವೃಷಪ. ೨೯-೨೬ ವ).

[ಪುರುಡು$_1$ + ತೋಱು]

ಪುರುಡುಮಾತು (ನಾ)· ಸ್ಪರ್ಧೆಯ ಮಾತು; ಪೈಪೋಟಿಯಂ ನುಡಿ: ಸಾರ್ದೆಳಸುತ್ತುಂ ಪೋರ್ವ ಬಿಂಕಂ ಪದಯುಗದೊಳವಿಸಾ ವಿಶ್ವತೋಪಾದನೊಳ್ ಸಂಗಳಿಸಿತ್ತೀ ವಿಶ್ವತೋವಕ್ತ್ರನೊಳೆ ಪುರುಡುಮಾತೆನ್ನದೋ ಮದ್ವಿಮೋಹಂ (ಕಬಕಂ. ೪-೦೩೦). [ಪುರುಡು$_1$ + ಮಾತು$_1$]

ಪುರುಪಕ್ಷ (ನಾ)· ದೊಡ್ಡ ರೆಕ್ಕೆಯನ್ನುಳ್ಳುದು: ನವಿಲು: "ಚಲ್ಪುಶ್ಯ್ರವಾಶಂ ಕಳಾಪಿ ಶಿವಿ ಕೇಕಿ ಪುರುಪಕ್ಷಿಂ ಮಯೂರಂ ಶಿಖಂಡಿ ಹರಿಕಂಠಂ ಶಿಖಾವಳಂ ನವಿಲಿನಿಕ್ಕುಂ" (ಪುಗಗಾ. ೩೦-೨). [ಸಂ.]

ಪುರುಪಾತ್ರ (ನಾ)· ಅಗಲವಾದ ಪಾತ್ರೆ: ಹರಿವಾಣ: "ಪುರುಪಾತ್ರ ಮೆನೆ ಪರಿಯಾಣಮರ್ಕ್ಕು" (ಪುಗಗಾ. ೭೭-೨೩). [ಸಂ.]

ಪುರುಪೃಷ್ಠ (ನಾ)· ಹಾವು; ಸರ್ಪ: "ಭುಜಂಗಮಂ ಪುರುಪೃಷ್ಠನಹಿ ಚಕ್ರಿ . . . ಎನಲು ಸರ್ಪಂಗೆ ನಾಮಂ" (ಪುಗಗಾ. ೦೦೮-೦). 'ದೀರ್ಘ ಪೃಷ್ಠ' ಪರಾ. [ಸಂ.]

ಪುರುಲೆ$_1$ 'ಪುಜಲೆ' ನೋ.

ಪುರುಲೆ$_2$ (ನಾ)· ಒಂದು ಬಗೆಯ ಹೆಲ್ಲು: 'ಅಂಟುಪುರುಲೆ' ಪರಾ.[?]

ಪುರುವಳ್ಳಿ, ಪುರುಳಿ$_1$, ಪುರುವಲ್ಲಿ, ಹುರುವಳ್ಳಿ, ಹುರುಳಿ (ನಾ)· ಒಂದು ಬಗೆಯ ದ್ವಿದಳಧಾನ್ಯ; ಕುಲತ್ಥ: ಜ್ವರದೇಬ್ಗಿಯೊಳ್ ಕವುಡೆಯ ರಸಮಕ್ಕೆ ಲೊಕ್ಕಿಯನರಿಷ್ಟಫಲಂಗಳನಕ್ಕೆ ಪಂದಿಗಡ್ಡೆಪು ಪುರುವಳ್ಳಿಯೂಷ ಜಳಮರ್ಮಪಯೋಗಿಸಿದಂದು ಮಟ್ಟುಗುಂ (ಶೋಳೋಚಿ. ೯-೨೦೩); ಮೇಟಿ ಪುರುವಳ್ಳಿ ಎಲೆಯುತ್ಪಾಟಿಸುಗುಂ ನಸ್ಯಕರ್ಮದೊಳ್ ವಿಷಮುಂ (ಶಪುದ. ೬-೯೯). **ಪುರುಳಿ**$_1$: "ಶುಕ ಕುಳುತ್ಥಗಳೊಳಂ ಪುರುಳಿ" (ಕಬಕಂ. ೦೦೪); ಪೆಸಱು ಕಡಲೆಯುರ್ದು ನೆಲ್ ಗೋದುವೆ ಜವೆ ತಕ್ಕವರೆ ತೊಗರಿ ಪುರುಳಿಯುಮಿಕ್ಕಲಿಪಂ ಸವಿದು ಸವಿವು ನುಂಗಿದನಾಗಳ್ (ಹಾಣಾಸ್ಕ. ೦-೬-೨೦). **ಹುರುವಲ್ಲಿ** : ·ಗೋಧಿ . . . ಉದ್ದು ತೊಗರಿ ಹುರುವಲ್ಲಿ ಮುಂತಾದ ಧಾನ್ಯಕ್ಕೆ (ಎಳ. ೪. ೫೦೦೩೮. ೬೫-೧೩; ೧೯೫೭). **ಹುರುವಳ್ಳಿ** : ಯವ-ಯವೆ. ಸರ್ಪಪ—ಸಾಸವೆ . . . ಕುಲತ್ಥ-ಹುರುವಳ್ಳಿ (ಕೃಚಿಪ್ರ. ೪-೨೬); ಬಿತ್ತುಗೆ ಹೆ(ಪ)ಸಱು ಹಸ್ಸ(ದಿ)ದೆ ಮತ್ತಂ ಸಲೆ ಪೂರ್ವಪಾಡ(ದ)ಲಸಂದೆಗಳಂ ಸತ್ಕ ಮನಸಾರಾಧೆಯೊಳೆ ತಾಂ ಬಿತ್ತುಗೆ ಹುರುವಳ್ಳಿಯಗಸೆಗಶ್ವಿನಿಯಳ್ಕುಂ (ಅಷ್ಟಕು. ೯-೪೭) : ಹುರುಳಿಯ ವಿಷಕ್ಕೆ—ಹುರುವಳ್ಳಿ[ಕಾಣಾಂ. ಹುರಿವಳಿ, ಹುರುಳಿ]ಯ ಸೊರ್ಕಿಂಗಂ ಹರೀತಕೀಯಾಕ್ಕವೇಳನಾದಿಯುಮಾಂ ಮೇಣ್ ವರ ಹಿಂಗು ವಿಳಂಗವುನಿರದರೆದೀಂಟಲ್ ಪಾಲೊಳುವಪಿಷಂ ತಾಂ ಧರೆಯೊಳ್ (ಕಚಿತ. ೨-೦೭೦). **ಹುರುಳಿ** : ಕರಿಬೇವು ಬಡಗಸಂಡಗೆಯುಂಗು . . . ಹುರುಳಿ ಸಾಸುವೆ ಮೆಂತೆಯದ ಚೂರ್ಣ ಹವ್ಪಳಂ ಸಂಭಾರವಸ್ತುವಹವು (ಹೂಕಣಾ. ೪-೦); ಹುರುಳಿ ಗುಗ್ಗುರಿ ಮುಕ್ಕಿ ಮೇಲೆ ಮಜ್ಜಿಗೆ ಕುಡಿದು ಹಿರಿಯ ಹೆಬ್ಬುಲಿಯಂತೆ ನಿದ್ರಿಪ ಮೋಡಿ (ಪ್ರಬಾಹ. ೨-೨೬-೪); ಕುರುಡ ಕುದುರೆಗೆ ಹುರಿದ ಹುರುಳಿ (ಗಾಡ).

ಪುರುಷ (ನಾ). ೧. ನರ ; ಮನುಷ್ಯ ; ಮಾನವ : "ಮನುಷ್ಯಃ, ಮಾನುಷಃ . . . ಪುರುಷಃ, ಪೂರುಷಃ, ವಿಟ್—ಈ ೧೨ ಮಾನಸರ್" (ಶಂಕಾಯು. ೩೩-೦೭೬); ಪುರುಷಂ ಧನಮೆನಗುಂಟೆಂದಿರಲಾಗದು ದ್ರವ್ಯಮುಳ್ಳೊಡಂ ದ್ರವ್ಯಮನಾರ್ಜಿಪುದು (ಸರ್ಮಾಸ್ಯು. ೦-೯೩). ೨. ಮನುಷ್ಯ ಜಾತಿ; ಮಾನವಕುಲ. ೩. ಗಂಡಸು : " ಮಾನವಂ . . . ಪುರುಷನಾ ಪಂಚಜನಮಾ ನೃ ಮನುಜಂ ಗಂಡುಗೂಸಕ್ಕು " (ಸುಂಗಾ. ೬೬-೦) ; ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು ನೋಡಾ (ಸುಜಾರೇ. ೩. ೫೯-೦೯೭) ; ಪುರುಷರ್ ವಧುಗಳ್ಗೆ ವಧೂತ್ಕರಮಾ ಪುರುಷರ್ಗೆ ಸೋಲ್ವುದುಚಿತಮದು (ಗಿಂಕ. ೭-೨೫). ೪. ಗಂಡ; ಪತಿ: ಸಂಸ್ಕಾರಿಸಲೀ ವನಿತೆಯರ್ಗವರವರ ಪುರುಷರಂ ಕುಡವೇಟ್ಕುಂ (ಸಂಪಕಾ. ೧೯-೮); ಅರಸನ ಕಂಡು ತನ್ನ ಪುರುಷನ ಮಱೆದಡೆ ಮರನನೇಱಿ ಕೈ ಬಿಟ್ಟಂತಾದೆನಯ್ಯ (ಬಸ. ೯೨೫) ; ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು ದೇವಾಂಗವನ್ನುಟ್ಟು ಪುರುಷ ಬಾರಾ (ಸಂಪಕಾ. ೩. ೦೯೦-೩೨೦); ಪುರುಷ ಸುಳ್ಳವಳು ನಾ ಪುರುಷರು ಕೇಳ್ಯಾರು ಗುಱುತು ಕಂಡರೆ ಕೊಲೆಯ ಕೊಂದಾರು (ಪುರಂದ. ೩-೬೯.೨). ೫. ಒಬ್ಬ ಮನುಷ್ಯನ ಎತ್ತರದಷ್ಟು ಪ್ರಮಾಣ ; ಸುಮಾರು ಆರು ಅಡಿ ; ಆಳುದ್ದ : ಕಂಟಕಕುಜ ವನದೊಳ್ ನಿಷ್ಕಂಟಕಕುಜಮಾಗೆ ಮೇಣ್ ವಿಕಂಟಕವನದೊಳ್ ಕಂಟಕಮಹೀಜಮಾದೊಡಮುಂಟೆಂದಱಿ ಪಡುವಲಯ್ದು ಪುರುಷ ದೊಳುದಕಂ (ಕೋಕೋಶ. ೩-೦೬); ಅತ್ತಿಯ ಪಡುವಲ್ ಮೂಗಯ್ಯತ್ತಲ್ ನೀನಗುಱಿಸಿರದೆ ಪುರುಷದೆ ಏರುಂ ಮತ್ತೊಂದು ಪುರುಷದೊಳ್ ಭುಜಗೋತ್ತಮನಂತಪ್ಪ ಕರಿಯ-ಕಲ್ ಪಡುವ ಜಲಂ (ಅಶ್ವಸು. ೦೦-೯) ; ೧೦ ೨ "ಪುರುಷ"ಗಳ ಅಳತೆಯುಳ್ಳ ಹಗ್ಗದಿಂದ ೨೦ ಚದರ ಪುರುಷಗಳೂ (ಚಜ್ಜಾಕದ ಸೆಲೆ); ೨೦ ಪುರುಷಗಳ ಅಳತೆಯುಳ್ಳ ಹಗ್ಗದಿಂದ ೬೦ ಚದರ ಪುರುಷಗಳೂ ಉಂಟಾಗುತ್ತವೆ (ಗಸ್ತ. ೦೯೯). 'ಪುರುಷಪ್ರಮಾಣ' ಪರಾ. ೬. ಪರಾಕ್ರಮಿ; ಗಂಡುಗಲಿ: ಪುರುಷರ ಪುರುಷನಲ್ಲಾ ಭೀಪು ತನ್ನಯ ಪರಮಸುಕೃತೋದಯವಲಾ ನೀನೊಬ್ಬನು (ಕುಷ್ಠಾಪ. ೩-೭೬). ೭. ಗಂಡುತನ ; ಪೌರುಷ ; ಪುರುಷಶಕ್ತಿ : ಪುರುಷಮಂ ಸಮಕಟ್ಟುವಮಪ್ಪೊಡೆ ಪೊಕ್ಕಿಱಿಯಲಣ್ಮುವರಿಲ್ಲ (ಸಂಪಕಾ. ೬-೬೭ ಪ). ೮. ಆತ್ಮ; ಜೀವಾತ್ಮ: "ಆ ವಸ್ತು ಸಂಸಾರಿ ಚೇತನಂ ಕ್ಷೇತ್ರಜ್ಞ ಪುರುಷನೆನಲಾತ್ಮನಕ್ಕುಂ" (ಸುಂಗಾ. ೯-೨೯); ಸೂಜಿಕಲ್ಲಿನ ಸನ್ನಿಧಿಯಲೇ ಸೂಜಿ ಚಲಿಸಿದಂತೆ ಪುರುಷನ ತೇಜದಿಂದಲಿ ಪ್ರಕೃತಿ ಚರಿಸುತ್ತಿಹುದು (ಶ್ರಾಪಸಿಂ. ೨೬-೨೨). ೯. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳಲ್ಲಿ ಪ್ರತಿಯೊಬ್ಬ: ಪುರುಷರ್ಮೂವರೊಳೊರ್ಬನೆಂಬರ ಸುರಪ್ರಧ್ವಂಸಿಯೆಂಬರ್ಜಗದ್ಗುರುವೆಂಬರ್ಪೆಱರ್ಗೆಕೆ ತೇರನೆಸವಂ(ಗದಾಯು. ೩-೯೩). ೧೦. ಪರಮಾತ್ಮ : ಅನಂತನಾದುದರಿಂದಲೂ ಪೂರ್ಣನಾದುದರಿಂದಲೂ ಪುರುಷನೆಂದು ಪರಮಾತ್ಮನಿಗೆ ಹೆಸರು (ಪಸಾರ. ೬-೩ ಶಾಕ್ಷರ್ಯ). 'ಪುರುಷಸೂಕ್ತ' ಪರಾ. ೧೧. ಸುರಗಿ ಮರ ; ಪುನ್ನಾಗವೃಕ್ಷ : "ಪುನ್ನಾಗಃ, ಪುರುಷಃ, ತುಂಗಃ, ಕೇಸರಃ, ದೇವವಲ್ಲಭಃ—೫ ಸುರಗೀಮರ, ಸುರಹೊನ್ನೆ ಮರಕ್ಕೂ ಹೆಸರುಗಳು" (ಸಿದ್ಧಾಂತಿ. ೦೦೭). ೧೨. ಗಂಡಸಿನ ಜನನಾಂಗ : 'ಪುರುಷ ವ್ಯಾಧಿ' ಪರಾ. ೧೩. [ಸಾಂಖ್ಯ] ಇಪ್ಪತ್ತೈದು ತತ್ವಗಳಲ್ಲಿ ಒಂದು : ಹೊಂದುತಿಹರಾ ಪುರುಷತತ್ವದಿ ನಿಂದು ತೋರುತಲಿರ್ಪ ಭುವನವ . . . ಪಾಶುಪತರಾದಿಯರು (ಗಗತಾ. ೩-೬೩) ; ಪಂಚ ವಿಂಶತಿತತ್ತ್ವಗಳು—೧ ಪ್ರಧಾನ, ೧ ಮಹತ್ತತ್ತ್ವ, ೧ ಅಹಂಕಾರ ತತ್ತ್ವ, ೫ ಭೂತತನ್ಮಾತ್ರೆಗಳು, ೫ ಮಹಾಭೂತಗಳು, ೧೦ ಇಂದ್ರಿಯಗಳು, ೧ ಪುರುಷ (ಅಸ್ಮೃತ. ೩-೦೩೦ ಅಪಿ). ೧೪. [ವ್ಯಾಕ] ಪುರುಷ ವಾಚಕ ಲಿಂಗ ; ಪುಲ್ಲಿಂಗ: ಪುರುಷ ಪರಮಾದೊಡತ್ವಂ ದೊರೆಕೊಳ್ಗುಂ (ಕಸುದ. ೦೦೦). ೧೫. ಸರ್ವನಾಮಗಳಲ್ಲಿ ಒಂದು ಪ್ರಕಾರ ; ಪುರುಷವಾಚಕ ಸರ್ವನಾಮ : ೫ ಇದು ಉತ್ತಮ, ಮಧ್ಯಮ ಮತ್ತು ಪ್ರಥಮ ಎಂದು ಮೂರು ಬಗೆ. ನಾನು, ನಾವು—ಇವೆರಡು ಉತ್ತಮಪುರುಷ. ನೀನು, ನೀವು—ಇವೆರಡು ಮಧ್ಯಮ ಪುರುಷ. ಉಳಿದುವೆಲ್ಲ ಪ್ರಥಮಪುರುಷ : ಅವಱೊಳಗೆ ನಪುಂಸಕಲಿಂಗವಿಷಯಮಾದಲ್ಲಿ ಮೊದಲ ಪುರುಷಂಗುದುವೆಂಬುವೆ ದಲ್ ಸಮನಿಸುಗುಂ (ಕಾಸ್ಯಾಪ. ೩೯೦) ; ತಿಳಿ ತಾಂ ನೀನಾನೆಂಬರ್ಥಳಂಬಿಗಳ್ ಪ್ರಥಮ ಮಧ್ಯಮೋತ್ತಮ ಪುರುಷಂಗಳ್ (ಕಸುದ.೨೨೪). 'ಪುರುಷ ತ್ರಯ' ಪರಾ. [ಸಂ.]

ಪುರುಷಕಾರ (ನಾ). ೧. ಮನುಷ್ಯಪ್ರಯತ್ನ : ಪುರುಷನ ಸಾಹಸ : ಪುರುಷಕಾರದ ಪೆಂಪಂ ಚಿಂತಿಸಿ ತರಿಸಿ ಮಹೀಶನನೆಂತಪ್ಪೊಡಂ (ಶಂಕಾ. ೭-೩೯) ; ದೈವವಿಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೇ (ಜಗಾ. ೩-೦೯) ; ಪುರುಷಕಾರಮೆ ಬಿದಿಗೆ ಬಾಳುಸಿರ್ (ಶ್ರೀಕಾಪಾ. ೬೨-೦೦೯). ೨. ಪೌರುಷ ; ಪರಾಕ್ರಮ : ನಿಮ್ಮೊಳಗೆ ನೀಂ ಮುಳಿಯಲ್ವೇಡ ನಿಮ್ಮ ಪುರುಷಕಾರಮನೆ ಬಗೆದು ನೆಗೞ್ವುದು (ಸಂಪಕಾ. ೦೨-೯೬ ಪ); ಪುರುಷಾಕಾರಮಧಿಲ್ಲೈ ಹರಿ ನಿನ್ನೊಳ್ ಪುರುಷಕಾರಮಂ ಕಾಣೆಂ (ಗದಾಯು. ೬-೩೦) ; ಪುರುಷಕಾರದ ತಾಯ್ಗುರು ಪೆಂಪಿನಾಗರಂ . . . ನೆಗಳ್ದ ಜಕ್ಕಣನೆಂದಡದಾರೊ ಪೋಲ್ತಪರು (ಕಇ. IV, ೦೦-೩೫; 1121). [ಸಂ.]

ಪುರುಷಗುಣ (ನಾ). ಗಂಡುತನ ; ಗಂಡಸಿಗೆ ಯೋಗ್ಯವಾದ ಗುಣ ; ಪೌರುಷ : ಅಬಲೆಯರಳ್ಳೆರ್ದೆಗಳ್ ಪುರುಷಗುಣಮನಱಿದೆಱಗುಗುಮೇ (ಅದಿಪು. ೦೨-೦೬) ; ಪುಟ್ಟಿದುದು ಪುಂಗನೂರೊಡಪುಟ್ಟಿದುದಪರಿಮಿತ ಪುರುಷಗುಣಗಣಮೆರ್ದೆಯೊಳ್ ಪುಟ್ಟಿದುದು ಜಿನಮತಂ ಗುಡಿಗಟ್ಟಿದುದಿಳೆ ಪುಟ್ಟಿ ನಾಗಮಯ್ಯನಜಯ್ಯಂ (ಶಾಂತಿಪು. ೦-೯೫) ; ಪುರುಷಗುಣಾಭರಣಾ ಕುಡಲಾರ್ಪ್ಪಿನಧಿಕವ × × × ಯೆನ್ದು ಪೊಗಳ್ದು ಧರೆ ಕಾಳಿಗನೆಸೆವನಾರ್ಪ್ಪನೊಳ್ಪ ಗುಣಮಂ (ಸೌಇಇ. XX, ೨೯-೦೯; 1034). [ಸಂ.]

ಪುರುಷತನ (ನಾ). ೧. ಗಂಡುತನ ; ಗಂಡಸುತನ ; ಪುರುಷತ್ವ : ಕೆಟ್ಟುದು ಪುರುಷತನವಿಂದ್ರಂಗಹಲ್ಯಾದೇವಿ ಶಿಲೆಯಾಗಿ ಧರಿಸಿದಳು ನಿಜತನುವನು (ಕೊರಣಾ. ೦-೦೨-೦೮). ೨. ಗಂಡಸಿನ ರೂಪ ; ಪುರುಷಾಕೃತಿ: ಹರನ ಹಣೆಗಣ್ಣಿನ ಮಹಾನಲನುರಿಯ ಹೊಯ್ಲಲಿ ಸಾಯಲಾಱದೆ ಪುರುಷತನವನು ಬಿಸುಟು ಮಂಡೋದರಿಯ ರೂಪತವ ಧರಿಸಿದನೊ ಕಂದರ್ಪನೆನೆ . . . ಮೆಱೆದಿರ್ದಳಾ ಕಾಂತೆ (ಕೊರಣಾ. ೫-೨-೭೬). ೩. ಮನುಷ್ಯತ್ವ ; ಸಜ್ಜನಿಕೆ : ಪರಮಮಾಹೇಶ್ವರರು ನೀವೆಂದಾಂ ನಮಿಸೆ ಲೇಸಾಗಲೀ ಎಂದು ಹರಸಲೊಲ್ಲದೆ ಸುಮ್ಮನಿಹುದಿದು ಪುರುಷತನವೇ ಗುಣವೆ ಪೆಂಪೇ (ಬಸಪು. ೯೬-೦೦). [ಪುರುಷ + — ತನ]

ಪುರುಷತ್ರಯ (ನಾ). ೧. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳು : ದೇವ ಪುರುಷತ್ರಯಾಕಾರಪ್ರಧಾನ ಜಯ (ಜಗತಿ. ೩-೦೦೩ ರಗಳೆ). ೨. ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಮೂರು ವರ್ಗಗಳ ಮನುಷ್ಯರು: ಕ್ಷಿತಿಯೊಳುತ್ತಮ ಮಧ್ಯಮಾಧಮಗತಿಯ ಪುರುಷತ್ರಯವನವರಿಂಗಿತವನವರಾಯತವನಱಿವೈ ಭೂಪ (ಕುಷ್ಠಾಉ. ೩-೨೬). ೩. [ವ್ಯಾಕ]ಉತ್ತಮ, ಮಧ್ಯಮ ಮತ್ತು ಪ್ರಥಮ ಎಂಬ ಮೂರು ಬಗೆಯ ಪುರುಷವಾಚಕ ಸರ್ವನಾಮ : ಅಮರಯಿರೆನೆವುಗಳಕ್ಕುಂ . . . ಆಖ್ಯಾತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ (ಕಸುದ. ೨೦೭). [ಸಂ.]

ಪುರುಷತ್ವ (ನಾ). ೧. ಗಂಡುತನ ; ಪುಂಭಾವ : ಭ್ರಮರಕೀಟನ್ಯಾಯ

ಧಾವದಿ ರಮಣಿಯೊಬ್ಬಳು ತನ್ನಿನಿಯನು ಕ್ರಮದಿ ನೆನೆಯಲು ನೆನೆಯಲಾ ಪುರುಷತ್ವವಳಪಟ್ಟು ನಿಮಿರ್ದ ರತಿಕೇಳೀವಿನೋದದಿನಮರ್ದುದಕ್ಕೆನ್ನಂತ ರಾಯತ್ವಮಪಹುದೊ ತನಗೆನುತ . . . ಇನಿಯನಂ ತಾ ನೆನೆಯಲಂಜುತ ನೆನೆವುತಂಜುತಲಿನಿಯಳಿದ್ದಳು (ಶಸಪು. ೩೫-೨೫). ೨. ಶಕ್ತಿ ; ಪೌರುಷ : ಹೆಗಡೆಯ ಹತ್ತಿರ ಹೋರಾಡುವುದಕ್ಕೆ ನಿಂತ ಮೇಲೆ ನಾವು ಗೆಲ್ಲಬೇಕು. ಇಲ್ಲವಾದರೆ ಪುರುಷತ್ವಕ್ಕೆ ಏನು ಬಂತು ಗೌರವ ? (ದೇವಹೆ. ೨೦೪). [ಸಂ.]

ಪುರುಷದೋಷ (ನಾ). ಮನುಷ್ಯನಿಂದ ಆಗುವ ತಪ್ಪು ; ಮನುಷ್ಯನ ಕೈವಾಡದಿಂದ ಉಂಟಾಗುವ ದೋಷ : ವೇದವು ಅನಾದಿಕಾಲದಿಂದ ಏಕರೀತಿಯಲ್ಲೇ ಇರುವುದರಿಂದ ಪುರುಷಸಂಬಂಧವಿಲ್ಲ, ಪುರುಷದೋಷವೂ ಇಲ್ಲ (ಹಿಂದಸಾ. ೦೩೭). [ಸಂ.]

ಪುರುಷದ್ವೇಷಿ (ನಾ). ಗಂಡಸರನ್ನು ಕಂಡರಾಗದವಳು ; ಗಂಡಸರನ್ನು ದ್ವೇಷಿಸುವವಳು : ಬಾಲ್ಯದಲ್ಲಿ ನಡೆದ ಘಟನೆಗಳ ಪರಿಣಾಮವಾಗಿ ಅವಳು ಪುರುಷದ್ವೇಷಿಯಾಗಿಯೇ ಬೆಳೆದಳು (ರೂಢಿ). 'ಸ್ತ್ರೀದ್ವೇಷಿ' ಪರಾ. [<ಸಂ. ಪುರುಷದ್ವೇಷಿಣೀ]

ಪುರುಷದ್ವೇಷಿಣೆ (ನಾ). = ಪುರುಷದ್ವೇಷಿ : ಸಂಧ್ಯಾನಗರಪುರಾಧಿಪತಿ ಸಿಂಹೋದರನೆಂಬೊನಾತನ ಮಗಳ್ ಹಿಡಿಂಬೆಯೆಂಬೆನಾಂ ಪುರುಷ ದ್ವೇಷಿಣೆಯೆಂ (ಬಾಹಂ ೦೦-೬ ಪ). [ಸಂ. ಪುರುಷದ್ವೇಷಿಣೀ]

ಪುರುಷಧರ್ಮ (ನಾ). ೧. ಮನುಷ್ಯಧರ್ಮ : ಆಕೆಯ ಅಂತಸ್ತಿನ ಭವಿಷ್ಯವೆಲ್ಲ ನನ್ನ ಕೈಯೊಳಗಿರುವಾಗ್ಗೆ ನಾನೀಗ ಆಕೆಯನ್ನು ನಡುನೀರಲ್ಲಿ ಕೈಬಿಡುವುದೆ ? ಅದು ಪುರುಷಧರ್ಮವಲ್ಲ (ವಡರಾ. II, ೯೭೦). ೨. ಗಂಡ ನಾದವನು ಪಾಲಿಸಬೇಕಾದ ವ್ರತ ; ಪತಿಧರ್ಮ : ಪರಪರಿಗ್ರಹೀತೆ ಗಳಿಪಂ ತರೆ ಪುರುಷಂ ಪುರುಷಧರ್ಮಮಱಿಗುಂ ಪಱಿಗುಂ ಧರೆ ದುರ್ಗತಿ ಸಮನಿಸುಗುಂ (ಪಂಠಾಮಾ. ೯-೦೯೨). [ಸಂ.]

ಪುರುಷನಾಡಿ (ನಾ). ದೇಹದ ಬಲಭಾಗದಲ್ಲಿರುವ ನಾಡಿ : ಎಡಭಾಗದ ನಾಡಿಗಳು ಸ್ತ್ರೀನಾಡಿಗಳೆಂತಲೂ, ಬಲಭಾಗದ ನಾಡಿಗಳಿಗೆ ಪುರುಷನಾಡಿ ಗಳೆಂತಲೂ ಹೆಸರು (ಹಸಾರ. ೪-೩ ತಾತ್ಪರ್ಯ). [ಸಂ.]

ಪುರುಷನಿಧಿ (ನಾ). ಪರಾಕ್ರಮದ ನೆಲೆ : ಪೌರುಷದ ಆಕರ : ಪುರುಷನಿಧಿಯೆನಿಷನನ್ನಂ ಧರೆ ನಿಲ್ವಿನಮಿಾ ಸ್ವಯಂಭುಸೋಮೇಶ್ವರದೇವರ ಮುನ್ದೆ ಭಕ್ತಿಯಿಂದಚ್ಚರಿಯಾಗಿರೆ ಸೂಳೆಕೇರಿಯಂ ಮಾಡಿಸಿದ (ಸೌಇಇ. XX, ೭೪ ೨೭ ; 1112). [ಸಂ.]

ಪುರುಷನಿರ್ವಾಣ (ನಾ). ಗಂಡನ ಸಾವು ; ಪತಿಯ ಮರಣ : ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ ಪರಿಪರಿಯಲಿ ಬಣ್ಣಿಸಲು ಬಹು ದಲ್ಲದೆ ಪುರುಷನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕು ತೋಱಲು ದಾರದು (ಶಸವ. ೬೭೮). [ಸಂ.]

ಪುರುಷಪಕ್ಷಿಗ್ರಹ (ನಾ). ಬಾಲಗ್ರಹದಲ್ಲಿಯ ನಾಲ್ಕು ಬಗೆಯ ಪಕ್ಷಿ ಗ್ರಹದೋಷಗಳಲ್ಲಿ ಒಂದು : ಕಣ್ಣುಗಳು ಗುಳಿ ಬೀಳುವವು. ಮೈ ತಾಱುವದು. ತಾಪ ಉಂಟಾಗಿಹದು. ಹಸುರಾಗಿ ಉಚ್ಚುವದು. ಬಾಯಾಱಿಕೆ ಉಂಟಾಗಿಹುದು. ನಾಲಿಗೆ ನೀಡಿಕೊಂಬುದು . . . ಇದು ಪುರುಷಪಕ್ಷಿ ಗ್ರಹಶಂಕೆ ಎಂದಱಿವುದು (ವೈದ್ಯಸಾ. II, ೦೩). 'ಪಕ್ಷಿಗ್ರಹ' ಪರಾ. [ಸಂ.]

ಪುರುಷಪ್ರಮಾಣ (ನಾ). ಒಂದಾಳು ಎತ್ತರದಷ್ಟು ಅಳತೆ ; ಸುಮಾರು ಆರುಅಡಿ: ಪುರುಷಪ್ರಮಾಣಮೆಂತೆನೆ ಪುರುಷಂ ತನ್ನೆರಡು ಕೆಯ್ಯ ಮೇಲ ಕ್ಕೆತ್ತಲ್ ಪುರುಷಪ್ರಮಾಣಮೆನಿಸುಗು (ವ್ಯವಹಾ. ಅನುಬಂಧ. ೯) ; ಮಂದಿರದ ಮಧ್ಯದಲ್ಲಿ ಪುರುಷಪ್ರಮಾಣಕ್ಕಿಂತಲೂ ದೊಡ್ಡದಾದೊಂದು ಕರಾಳ ಕಾಳಿಕಾಮೂರ್ತಿಯು ಪ್ರತಿಷ್ಠಿತವಾಗಿದ್ದಿತು (ಕಪಾಕುಂ. ೩೦). [ಸಂ.]

ಪುರುಷಪ್ರಯತ್ನ (ನಾ). ಮನುಷ್ಯನ ಯತ್ನ.–ಸಾಹಸ ; ಪೌರುಷ : ಶತ್ರುಜಯಕ್ಕೆ ಪುರುಷಪ್ರಯತ್ನವೇ ಕಾರಣವಾಗಿರುವುದು (ಕೃಪಾಸ. ೨೭); ಪುರುಷಪ್ರಯತ್ನಮಂ ಬರ್ದುಕುವಾಸೆಯ ಕೂಡೆ ನೀಗಿ, ಕೈಮುಗಿವೆನಾ ವ್ಯೋಮಕ್ಕೆ ದೇವರಂ ಬೇಡಿ (ಶ್ರೀಕಾಮಾ. ೭೭-೬೨೩). [ಸಂ.]

ಪುರುಷಬ್ರತ (ನಾ). ೧. ಬ್ರಹ್ಮಚರ್ಯವ್ರತ : ರಾವಣನು ಕೊಂದು ಜಯಶ್ರೀವಧುವಂ ತಾಳ್ದಿ ಮುಯ್ಪಿನೊಳ್ ವರಸೀತಾದೇವತೆಯಂ ತರ್ಪನ್ನೆಗಮೋವದೆ ಪುರುಷಬ್ರತೋಚಿತಂ ವಿರರಸಂ (ಕವಿರಾ. ೩-೦೯೦). ೨. ಪತಿವ್ರತೆಯ ಆಚಾರ ; ಪತಿವ್ರತಾಧರ್ಮ (?): ಆತನ ಸತಿ ದೇವಿಯಕ್ಕಂ ಪುರುಷಬ್ರತಮಂ ಕೈಕೊಂಣ್ಡು ಮಂಡಲಿ ಸಾಸಿರದ ಎಡತೊಱೆನಾಡ ಉತ್ತವದ ಗ್ರಾಮದಲು ಸುರಲೋಕಪ್ರಾಪ್ತಳಾದಳ್ (ಎಕ. VII, ಶಿವಮೊ. ೩೨-೮ ; 1134 ?). 'ಪುರುಷವ್ರತಿ' ಪರಾ. [<ಸಂ. ಪುರುಷವ್ರತ]

ಪುರುಷಭಾಷೆ (ನಾ). ಪೌರುಷದ ವಾಣಿ; ಪುರುಷಪ್ರಯತ್ನದ ಮಾತು: ಸತ್ಯದನ್ನವನೆ ಉಂಡು ಬಾಳಿ ಎನ್ನುವುದು ಪುರುಷಭಾಷೆ (ಸೂರ್ಯಪಾ. ೦೬-೦೮). [ಸಂ. ಪುರುಷಭಾಷಾ]

ಪುರುಷಭಿಕ್ಷ (ನಾ) ಗಂಡನನ್ನು ಉಳಿಸಿ ಕೊಡುವುದು ; ಪತಿಭಿಕ್ಷೆ : ಪುರುಷಕಾರದ ಪೆಂಪು ಚಿಂತಿಸಿ ತರಿಸಿ ಮಹೀಶನನೆಂತಪ್ಪೊಡದೆನಗೆ ಪುರುಷಭಿಕ್ಷಮನಿಕ್ಕಿಂ (ಪಂಪಭಾ. ೭-೩೪); ವನದೇವಿಯರಿರಾ ನೆರೆದೆಲ್ಲರು ದೆನಗೆ ಪುರುಷಭಿಕ್ಷಮನಿಕ್ಕಿಂ (ಕಾಪಂಪೂ. ೯೨೫); ಮುಳಿಸಂ ಪಿಂದಿಕ್ಕಿಯುಮಿಾ ಘಣಿಯಂ ಕೊಂದಿಕ್ಕದಿರಿಕ್ಕೆಮಗೆ ಪುರುಷಭಿಕ್ಷಮಂ (ಪಗವ. ೩-೦೦೦). [ಸಂ. ಪುರುಷಭಿಕ್ಷಾ]

ಪುರುಷಭೈಕ್ಷ (ನಾ). = ಪುರುಷಭಿಕ್ಷ : ಎನಗಟ್ಕಿಱಿಂ ಪುರುಷಭೈಕ್ಷಮನಿಕ್ಕು (ಅರ್ಧನೇ. ೦-೯೦). [ಸಂ.]

ಪುರುಷಭೈಕ್ಷೆ (ನಾ). = ಪುರುಷಭಿಕ್ಷ: ಪ್ರಿಯಮಿತ್ರೆಯಕಳುಕಾಚಾರಸಾರನಪ್ಪ ಮೇಘರಥನರೇಂದ್ರಂಗೆ . . . ನಿಮ್ಮಡಿಗಂ ಕೈಯನೊಡ್ಡಿ ಪುರುಷ ಭೈಕ್ಷೆಯಂ ಬೇಡಿ ದೀಕ್ಷೆಯುಮಂ ನಿಸರ್ಗಸ್ನೇಹಿತೆಯಾದ ಕಾರಣಮುಮನಿದ ನಱಿಯೆ ಬೆಸಸುವುದೆನೆ (ಶಾಂತಿಪು. ೯-೬೩ ಪ). [ಸಂ. ಪುರುಷಭೈಕ್ಷ]

ಪುರುಷಮಿಗ (ನಾ). = ಪುರುಷಾಮೃಗ : ಕಳಕಳಿಸಿ ನಗುತೆ ಕುಕ್ಕಿಲಿಲೆಯೆಂದುಯಿರದೆ ಕೂಗುತ್ತಡವಿಶಬರಿಯರು ಪುರುಷ ಮಿಗಮಂರೆಯಟ್ಟಿ ಸರಳ್ಗರೆವ ಮಾಳ್ಕೆಯಿಂ ತರುಣಿಯರು ತವಕದಿಂ ನೀರ್ಗರೆವುತೆ ಬರುತಿರಲು (ಪವಮೋ. ೦೦-೬೨). [<ಸಂ. ಪುರುಷಮೃಗ]

ಪುರುಷಮೃಗ (ನಾ). ೧. ಒಂದು ಬಗೆಯ ಜಿಂಕೆ. ೨. ಗಂಡು ಜಿಂಕೆ. ೩. = ಪುರುಷಾಮೃಗ : ಪುರುಷಮೃಗಂಗಳಲ್ಲಮಿವರಪ್ಪೊಡೆ ದಿವ್ಯ ಮುನೀಂದ್ರರೆಚ್ಚೊಡರಿ ಶರವಿದು ತಾಗಲಣ್ಮದಿವರಂ (ಅರ್ಧನೇ. ೩-೬೮); ನರಿ ಶಶಕಂ ವೃಕಂ . . . ಸೈರಿಭಂ ಪುರುಷಮೃಗು ಗಜು ಶರಭ ಸಿಂಹದಿ ನೊಪ್ಪುವುದಲ್ಲಿ ಕಾನನಂ (ಮಲ್ಲಿಕಾ. ೩-೦೩೯); ಅಲ್ಲಿ ಕಸ್ತೂರಿಮೃಗ ಚಮರೀ ಮೃಗ ಪುರುಷಮೃಗ ಸುವರ್ಣಮೃಗ . . . ಸಿದ್ಧಿಮೃಗಾದಿ ದೇವಾರ್ಹ ರಾಜಾರ್ಹ ಶಾಸ್ತ್ರೀಯಸಾಧುಪವಿತ್ರಮೃಗಜಾತಿಗಳುಂ (ಏವೇಕ. ೨೦೨). [ಸಂ.]

ಪುರುಷಮೇಧ (ನಾ). ಮನುಷ್ಯನನ್ನು ಬಲಿ ಕೊಡುವ ಯಜ್ಞ ; ನರಬಲಿಯನ್ನು ಕೊಡುವ ಯಾಗ. [ಸಂ.]

ಪುರುಷಯುಕ್ತ (ನಾ). [ಕಾಮಶಾ] ಒಂದು ಬಗೆಯ ರತಿಬಂಧ; ಸ್ತ್ರೀಯು ಪುಂಭಾವದಿಂದ ರಮಿಸುವಿಕೆ ; ಪುರುಷಾಯಿತ : ನಿದ್ದೆ ಗೈವಳು ತಾನು ಅವನ ನಿದ್ರೆಗೈಯಲೀಸಳು. ತಾಡನಂಗೈವಳು ರೇತಃಪತನಮಂ ನಿಲ್ಲಿಸಲರಿಯದೆ ಕೋಪಮಂ ಸೈರಿಸಲಾರದೆ ಅಂತರವಂ ಮಾಡಿರ್ದೊನಾದೊಡೆ ಅವನ ಮೇಲೆ ರಮಿಸುವಳು. ಇದು

ಪುರುಷಯುಕ್ತಂ (ಕಾರಣ. ೫೫೮). [ಸಂ.]

ಪುರುಷಯುಗಕರಣ (ನಾ). [ಕಾಮಶಾ] ಒಂದು ಬಗೆಯ ರತಿಬಂಧ : ಒರ್ವಂ ಮೆಲ್ಲನೆ ಮಲಗಿರೆ ಆತನ ಮೇಲೇರಿ ರವಿಸುತ ನಿಂದಿರ್ದ ಮತ್ತೊರ್ವ ಪುರುಷನ ಲಿಂಗಮುಂ ತನ್ನ ಬಾಯೊಳಗಿಕ್ಕಿ ಮುಖಿಸುರತಗೈಯುತ್ತಾಯಿರೆ ಪುರುಷಯುಗಕರಣಂ (ಕಾಮಶಾ. ೫೬೭). [ಸಂ.]

ಪುರುಷರತುನ (ನಾ). = ಪುರುಷರತ್ನ ೧ : ಪುರುಷರತುನಂ ಪುರಾತನ ಚರಿತಂ ಜನಚರಣಕಮಲಭೃಂಗಂ ಸತ್ಯಾಭರಣಂ ದಯಾಂಬುನಿಧಿ (ಕರ್ಣಾಟ್ಕ. ೭-೫೬). [<ಸಂ. ಪುರುಷರತ್ನ]

ಪುರುಷರತ್ನ (ನಾ). ೧. ಶ್ರೇಷ್ಠನಾದ ಮನುಷ್ಯ ; ನರೋತ್ತಮಂ ; ಪುರುಷಾಗ್ರಣಿ : ಸ್ತ್ರೀರತ್ನವಿಭಾಗಳೀಕೆಯೆ ಧಾರಿಣಿಯೊಳ್ ಪುರುಷರತ್ನ ವಿಭಾತನೆ ಸದ್ಭಾಕಾರರ್ (ಆದಿ. ೭-೫೯); ಪುರುಷರತ್ನಕ್ಕೆ ಸ್ತ್ರೀರತ್ನವಲ್ಲದೆ ಸಾಮಾನ್ಯಮಣಿಯುಂ ಪಸುರ್ವಣಿಯುಂ ದೊರೆಯಲ್ಲುಂ (ಶಾಂತಿಪು. ೭-೬೪ ೫). ೨. ಒಂದು ಬಗೆಯ ಸಸ್ಯ : (ಕುಸಿಗ. ೪೬-೧೦೬). [ಸಂ.]

ಪುರುಷರಾಗ (ನಾ). [ಸಂಗೀತ] ರಾಗಗಳಲ್ಲಿ ಒಂದು ವರ್ಗ ; ಭೂಪಾಲಿ, ಭೈರವಿ, ಶ್ರೀರಾಗ, ಫಲವಂಜರಿ, ವಸಂತ, ಮಾಲವ, ಬಂಗಾಲ ಮತ್ತು ನಾಟ ಎಂಬುವು ಎಂಟು ಪುರುಷರಾಗಗಳು : ಸ್ತ್ರೀರಾಗಚತುರ್ವಿಂಶತಿಸೌರಾಷ್ಟ್ರಗಭೀರಪುರುಷರಾಗಗಳಂ ಮಾರಿಜ ಮುಖಿಯರ್ ಪಾಡಿದರ್ (ಕರ್ನಾಕ. ೨-೯೫).

ಪುರುಷರಾಶಿ (ನಾ). [ಜ್ಯೋತಿ] ಜ್ಯೋತಿಶ್ಶಾಸ್ತ್ರದಲ್ಲಿರುವ ಹನ್ನೆರಡು ರಾಶಿಗಳಲ್ಲಿ ಆರು ರಾಶಿಗಳ ಒಂದು ವಿಭಾಗ; ಜ್ಯೋತಿಶ್ಶಾಸ್ತ್ರದಲ್ಲಿ ಹನ್ನೆರಡುರಾಶಿಗಳನ್ನು ಪುರುಷರಾಶಿ ಮತ್ತು ಸ್ತ್ರೀರಾಶಿ ಎಂದು ಎರಡು ವಿಭಾಗ ಮಾಡುತ್ತಾರೆ. ಮೇಷ, ಮಿಥುನ, ಸಿಂಹ, ತುಲಾ, ಧನುಸ್ಸು, ಕುಂಭ ಈ ಆರೂ ಪುರುಷರಾಶಿಗಳು. ವೃಷಭ ಕರ್ಕಟಕ, ಕನ್ಯಾ, ವೃಶ್ಚಿಕ, ಮಕರ, ಮೀನ ಈ ಆರೂ ಸ್ತ್ರೀರಾಶಿಗಳು. ಜಾತಕನಿಗೆ ಪುರುಷರಾಶಿಗಳು ಕ್ರೂರವೆಂದೂ ಸ್ತ್ರೀರಾಶಿಗಳು ಸೌಮ್ಯವೆಂದೂ ನಂಬಲಾಗುತ್ತದೆ : ಹರಿ ಮಿಥುನ ತುಲಾಜ ಧನುರ್ಧರ ಘಟಮಿವು ಪುರುಷರಾಶಿಗಳ್ ಕ್ರೂರಂಗಳ್ (ಜಾತಕ. ೦-೫೫). [ಸಂ.]

ಪುರುಷರೂವು (ನಾ). ಪುರುಷಾಕಾರ; ಪುರುಷಾಕೃತಿ : ಪುರದ ಪೆಣ್ಮಂ ಪುರುಷರೂಪಿಂದೆ ಪೋಗುತಿದೆ (ಪಡಣಾ. ೯-೦೦). [ಪುರುಷ + ರೂವು]

ಪುರುಷವಶ್ಯ (ನಾ). ಗಂಡಸನ್ನು ವಶಮಾಡಿಕೊಳ್ಳುವುದು ; ಪುರುಷ ವಶೀಕರಣ : ವೃತ್ಯಕಾಚೆ ಮುಟ್ಟವೆಯಾ [ಕಾಣಾಂ. ಲಿನ] ನೆತ್ತರಿಂ ಭಾವನೆಯಸಿತ್ತ ಗೋರೆಯೋಚನವಾನದಿ ತೇದಾ ಪತ್ತಕ್ಕೆ ಬರ್ಪನಂ ಚಿತ್ತದೊಳ್ ನಿಲಿಸಿ ನೆನೆವುತ್ತುಮಾ ತಿಲಕವಿಡೆ ಪುರುಷವಶ್ಯಂ (ಕಸವ. ೦೩-೬೩); ಕಿಱು ನೆಲ್ಲಿಯ ಅರ್ಚನೆ ಮಾಡಿ ತಂದು ಚೂರ್ಣಿಸಿ . . . ಅದನ್ನು ಬೆಣ್ಣೆಯಲ್ಲಿ ಕಲಸಿ ತುಪ್ಪವ ಕಾಸಿ ಊಟದಲ್ಲಿ ಆ ತುಪ್ಪವನಿಕ್ಕಲು ಹೆಂಡತಿಯನೊಲ್ಲದ ಪುರುಷನೊಲಿವನು. ಪುರುಷವಶ್ಯ ತಪ್ಪದು (ಪಪ್ಪ. ೨೦೦). [ಸಂ.]

ಪುರುಷವಾಚಕ (ನಾ). ೧. [ವ್ಯಾಕ] ಪುಲ್ಲಿಂಗಸೂಚಕವಾದ ಪದ : ಸಮುಚ್ಚಯದಿಂ ಅಪತ್ಯ, ಕಳತ್ರ—ಎಂಬ ಶಬ್ದಂಗಳ್ ಸ್ತ್ರೀವಾಚಕವಾಗಿಯುಂ, ಜನಪಬ್ದ ಲೋಕಶಬ್ದಂಗಳ್ ಪುರುಷವಾಚಕಂಗಳಾಗಿಯುಂ ನಪುಂಸಕಂ (ಶಬ್ದಾನು. ೦೩೩ ಕ್ರಿಯೋ). ೨. ಉತ್ತಮ, ಮಧ್ಯಮ ಮತ್ತು ಪ್ರಥಮ ಎಂಬ ಮೂರು ಸರ್ವನಾಮಗಳಿಗೆ ಅನುಕ್ರಮವಾಗಿ ಸೇರುವ ಆಖ್ಯಾತಪ್ರತ್ಯಯಗಳು : ಪುರುಷವಾಚಕಪ್ರತ್ಯಯಗಳು ವಚನವನ್ನೂ (ಪ್ರಥಮಪುರುಷದಲ್ಲಿ) ಲಿಂಗವನ್ನೂ ತಿಳಿಸುತ್ತವೆ (ಕೃವಿ. ೭೩). ೩. ಉತ್ತಮ, ಮಧ್ಯಮ ಹಾಗೂ ಪ್ರಥಮಪುರುಷದ ಸರ್ವನಾಮ : ಈ ಮೂರು ಬಗೆಯ ಸರ್ವನಾಮಗಳನ್ನೂ ಒಟ್ಟಿಗೆ ಪುರುಷವಾಚಕಸರ್ವನಾಮಗಳೆಂದು ಕರೆಯುತ್ತಾರೆ (ಪುಕೃಪು. ೩೦). [ಸಂ.]

ಪುರುಷವೇದ (ನಾ). [ಜೈನ] ಮೋಹನೀಯಕರ್ಮದ ಇಪ್ಪತ್ತೆಂಟು ಪ್ರಕಾರಗಳಲ್ಲಿ ಒಂದು ; ಗಂಡಿಗೆ ಹೆಣ್ಣಿನ ಮೋಹವನ್ನುಂಟು ಮಾಡುವ ಕರ್ಮ : ಪುರುಷವೇದಮುಂ ಸಂಜ್ವಳನಚತುಃಕ್ರೋಧ ಮಾನಮಾಯಾಲೋಭಂಗಳನೊರ್ಮೆಯೆ ನಿರ್ಮೂಲಿಸಿ ತಳೆದನಜೇಯುಂ ಜಯಾಂಗನಾಲಿಂಗನಮುಂ (ಪಾರ್ಶ್ವ. ೦೪-೬೩) ; ಸ್ತ್ರೀವೇದಂ ಪುರುಷಾಭಿಲಾಷೆಯುಂ ಮಾಲ್ಪುದು ಪುರುಷವೇದಂ ಸ್ತ್ರೀಯಾಭಿಲಾಷೆಯುಂ ಮಾಲ್ಪುದು ನಪುಂಸಕವೇದಮುಭಯಾಭಿಲಾಷೆಯುಂ ಮಾಲ್ಪುದು (ಕರ್ಣಾ. ೦೨). [ಸಂ.]

ಪುರುಷವ್ಯಾಧಿ (ನಾ). ಗಂಡಸರಿಗೆ ತಗುಲುವ ಗುಹ್ಯರೋಗ,—ಲೈಂಗಿಕ ರೋಗ : ಪುರುಷವ್ಯಾಧಿಗೆ . . . ರಸ, ಹೊನ್ನೇತೊಕ್ಕು, ತುತ್ತ, ಪಟಿಕ ಮೂಱು ವರಹ ತೂಕ, ಮುಸ್ತಕಿ ಐದು ವರಹ ತೂಕ, ಧೂಪವ ಹಳುರು ಮೂಱು ವರಹ ತೂಕ . . . ಇವ್ವನ್ನೂ ಒಳ್ಳೇಎಣ್ಣೆಯಲ್ಲಿ ಮರ್ದಿಸಿ, ಅಲ್ಲ. ಬಿಸಿನೀರ ಬಿಟ್ಟು ಕೊಂಬುದು. ಇದು ಪುರುಷವ್ಯಾಧಿಗೆ ಸಿದ್ಧ ಪ್ರಯೋಗ (ಲಕ್ಷ. ೬೦). [ಸಂ.]

ಪುರುಷವ್ರತ (ನಾ). ೧. ಬ್ರಹ್ಮಚರ್ಯ : ಅಂಗಜೋತ್ಪತ್ತಿಸುಖಕ್ಕೆ ಸೋಲಲಬಾಗುಂ ಪುರುಷವ್ರತಂ (ಕಂಕಣಾ. ೦ ೬೩); ಬಿಸುಡೆಂ ಮದೀಯ ಪುರುಷವ್ರತಮೊಂದುಮುಂ (ಕಂಕಣಾ. ೦-೮೩). ೨. ಇಂದ್ರಿಯನಿಗ್ರಹ : ಪುರುಷವ್ರತಕ್ಕೆ ಭಂಗಂ ವರವಧೂವಂ ನೋಡಿದಂದುಮಳಿವಿಂ ಪರಸುಂದರಿ ನೀನೆಂಬುದನೀ ಕಾತರತೆಯೆ ಪೇೞ್ದಪುದು ಬಾಗು ಪಾತಕಿ ಬೇಗಂ (ಅಣಾಪ. ೦೪-೦೦೬). ೩. ಪಾತಿವ್ರತ್ಯ ; ಪತಿನಿಷ್ಠೆ : ಗಿರಿಜೆಯ ಪಾದವದ್ಮವಿಗಳ ಜ್ವಳದಿಂದಮೆ ಕೊರ್ಬ ನೀತಿ ವಿಸ್ತರಿಸಿರೆ ಸೊಂಪುವೆತ್ತು ಪುರುಷವ್ರತದಿಂ ದಳವೇೞ್ದ ಭಾಗ್ಯಮಂದಿರಗಳನಾನ್ತು ರಂಜಿಸುವ ಶಾಂತಲದೇವಿಯ ರೂಪು ಕಲ್ಪವಲ್ಲರಿಯಡರ್ದ್ದತ್ತು ವಿಷ್ಣುನ್ರಿವನೆಂಬ ಸಮುನ್ನತಕಲ್ಪವೃಕ್ಷಮಂ (ಎಳ. v, ಹಾಸವ. ೦೦೬-೩೦ ; ೧೧೭೩). [ಸಂ.]

ಪುರುಷವ್ರತಿ (ನಾ). ಪತಿವ್ರತಾಧರ್ಮವನ್ನು ಪಾಲಿಸುವವಳು ; ಪತಿವ್ರತೆ : ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ ಪರಿಪರಿಯಲಿ ಬಣ್ಣಿಸಲು ಒಹುದಲ್ಲದೆ ಪುರುಷನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕು ತೋಱಲು ಬಾರದು . . . ಇಂತೀ ಅರಿಬಿರುದಿನ ಬಂಟರು ಪುರುಷವ್ರತಿಯರು ಪುರಾತನರು ಬಱಿಯ ಮಾತನಾಡಿ ಹೋಗಿ ಮೆಱಿವರಲ್ಲ (ಕಸವ. ೬೭೬). [< ಪುರುಷವ್ರತ]

ಪುರುಷಶೀಲೆ (ನಾ). ಗಂಡಸಿನ ಸ್ವಭಾವವುಳ್ಳವಳು ; ಗಂಡುಬೀರಿ : ಜಲಜಸಖಿಸೂನು ಮಧ್ಯಮಬಲನೆನೆ ಬಲರಹಿತರೆನೆ ಸಿತೇಂದುಜಶಶಿಗಳ್ ಬಲಯುಕ್ತರನ್ಯರೆನೆ ವಿಷಮಬಲಗ್ನಮೆನೆ ವನಿತೆ ಪುರುಷಶೀಲೆಯೆನಿಕ್ಕುಂ (ಜಾತಕ. ೨೨-೨೨). [ಸಂ. ಪುರುಷಶೀಲಾ]

ಪುರುಷಸೂಕ್ತ (ನಾ). ಪರಮಾತ್ಮನ ವಿರಾಟ್‌ಸ್ವರೂಪವನ್ನು ವಿವರಿಸುವ ಒಂದು ವೇದಭಾಗ : ಸಾಹಸ್ರಶೀರ್ಷಾ ಪುರುಷನೆಂದೇ ಪುರುಷಸೂಕ್ತಂ (ಗಗಣಾ. ೦೬-೨೦) ; 'ಪುರುಷಸೂಕ್ತ'ದಲ್ಲಿ ದೇವತಾಭಾವನೆ ಇನ್ನೊಂದು ರೂಪದಲ್ಲಿದೆ. ವಿಶ್ವವನ್ನೇ ಒಬ್ಬ ಪುರುಷನೆಂದು ಭಾವಿಸಿ, ಅವನನ್ನೇ ದೇವತೆಗಳು ಪಶುವನ್ನಾಗಿ ಮಾಡಿ ಒಂದು ಮಹಾಯಜ್ಞವನ್ನು ನಡೆಸಿದ್ದರಿಂದ ಈ ವಿಶ್ವವು ಸೃಷ್ಟಿಯಾಯಿತು ಎಂಬ ಒಂದು ಅದ್ಭುತಕಲ್ಪನೆ ಇದೆ (ಶಾಸಿದ. ೫೬). [ಸಂ.]

ಪುರುಷಾಂಗ (ನಾ). ಪೌರುಷ ; ಪುರುಷತನ : ಹೆಂಗುಸುಗಳಾವ್ ಬಲ್ಲೆವೇ ಪುರುಷಾಂಗ ನಿಮ್ಮದು ಪೌರುಷಾಂಗದ ತುಂಗಬಲರಿದೆ ನಿಮ್ಮ ಬಳಿಯಲಿ ಲಕ್ಕಸಂಪ್ಯೆಯಲಿ (ತೊರಣಾ. ೪-೦೦-೨೬). [ಸಂ.]

ಪುರುಷಾಂತರ (ನಾ). ೧. ಇನ್ನೊಬ್ಬ ಗಂಡಸು ; ಪರಪುರುಷ : ಪುರುಷಾಂತರಕ್ಕೆಳಸಿ ಪುಷ್ಪಶರತಾಪದಿಂ ಕರಗಿ ಕಾತರಿಸಿ ಮೆಲ್ಲನೆ ದೂತಿಯೊರ್ವಳಂ

ಕರೆದೊಡಂಬಡಿಸಿ . . . ಮದನಕೇಳಿಗೆ ಸಂದು ಮರಳಿ ಮಾನಿನಿಯರಂತಿರ ಬಲ್ಲರವರೆ ಜಾರೆಯರ್ (ಕೈಲಿಪಾ. ೩-೫೯). ೨. (ಯೋಗ್ಯ ಮತ್ತು ಅಯೋಗ್ಯರಾದ) ಪುರುಷರ ನಡುವಣ ಭೇದ,—ತಾರತಮ್ಯ : ಅಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ ಪುರುಷಾಂತರಂಗಳಾ (ಗದಾಯು. ೯-೩); ಮರುಳೆ ಮದಾಂಧತೆಯೊಳುಲಿವೆ ಪುರುಷಾಂತರವನರಿಯದೆಯ್ದಿದ ಧರಣಿಪನ ನೆರೆಯದಾದಳ್ ತರುಣಿಯೆಂದೆನುತೆ ನಿನ್ನಂ ನಗರೇ ಸರಿಯ ಸೂಳೆಯರೆಲ್ಲರ್ (ಕುಮಾಪು. ೩-೭೯). [ಸಂ.]

ಪುರುಷಾಂತರಸಂಧಿ (ನಾ). [ರಾಜನೀ] ಸಂಪ್ರದಾನ, ಕಪಾಲ, ಉಪಹಾಸನ, ಸಂತಾನ, ಸಂಗತ, ಉಪನ್ಯಾಸ, ಪ್ರತೀಕಾರ, ಸಂಯೋಗ, ಪುರುಷಾಂತರ, ಅದೃಷ್ಟಪುರುಷ, ಅದುಷ್ಟ, ಆತ್ಮಾಮಿಷ, ಉಪಗ್ರಹ, ಪರಿಕ್ರಮ, ಅರಿಪರದೂಷಣ ಮತ್ತು ಸ್ಕಂಧೋಪನಯ ಎಂಬ ಹದಿನಾರು ಬಗೆಯ ಸಂಧಿಗಳಲ್ಲಿ ಒಂದು : ನಿನ್ನ ಸೇನಾನಾಯಕರಿಂದೆನ್ನ ಕಾರ್ಯಮಂ ಸಾಧಿಸಿದೊಡೆ ನುಡಿದ ಪಣಮಂ ಕುಡುವೆನೆಂಬುದು ಪುರುಷಾಂತರಸಂಧಿಯೆಂಬುದಕ್ಕುಂ (ಪಂಚತಂ. ೨೨-೦೩). [ಸಂ.]

ಪುರುಷಾಕಾರ (ನಾ). ಗಂಡಸಿನ ರೂಪ; ಗಂಡುರೂಪು : ಪುರುಷಾಕಾರಮದಿಲ್ಲೈ ಹರಿ ನಿನ್ನೊಳ್ ಪುರುಷಕಾರಮಂ ಕಾಣೆಂ (ಗದಾಯು. ೭-೩೦); ನಿನ್ನ ಪುರುಷಾಕಾರಮುಂ ಮನೋಹರಾಕಾರಮುಮ ವಾರ್ಯವೀರ್ಯಮುಮಿನ್ನೆವರಂ ಶ್ರವಣಭೂಷಣಮಾಗಿರ್ದುವೀಗಳೆಮಗೆ ಪ್ರತ್ಯಕ್ಷಮಾದುವು (ಪಂಠಾಮಾ. ೦೨-೩೩ ಪ); ಪುರುಷಾಕಾರದೊಳ್ ಪುರುಷಕಾರದೊಳಾರುಂ ನೆಗೞ್ದೀಶ್ವರಾರ್ಯ್ಯನಂ ಪೋಲ್ತಪರೇ (ಎಕ. VII, ಶಿಕಾಂ. ೦೩೨-೩೩; 1104). [ಸಂ.]

ಪುರುಷಾಕೃತಿ (ನಾ). ೧. = ಪುರುಷಾಕಾರ: ತಮ್ಮ- ದಿವ್ಯಾಯುಧಂಗಳನೆಲ್ಲಮಂ...ಶಮೀವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇಲ್ಗಟ್ಟೆ (ಪಂಶಪಾ. ೮-೩೨ ಪ); ಪೊಂಪುಱಿಪೋಯ್ತು ದೀಪ್ತತಪಮೆಂಬಿನಮರ್ಕಕರಂಗಳತ್ತಮಿತ್ತಂ ಪುದಿದುಷ್ಣರಶ್ಮಿ ಪುರುಷಾಕೃತಿಯಂತಿರೆ ನಿತ್ಯಯೋಗನಿಷ್ಕಂಪಂ (ಶಾಂಶಿಪು. ೯-೦೦೬); ಪುರುಷಾಕೃತಿಯಿಂ ತಾನವತರಿಸಿದ ಶಶಿಯೆಂದು ಬಂದು ಬಳಸಿದ ತಾರಾಪರಿಕರಮೆನೆ ಕಣ್ಗೆಸೆದುದು ಪಿರಿದುಂ ಬಾಲಕನ ಮೌಕ್ತಿಕದ ಕಟಿಸೂತ್ರಂ (ಶಾಂಶೀಶ್ವ. ೪-೮೬). ೨. ಗಂಡಸಿನಂತೆ ಆಕಾರವುಳ್ಳವಳು : ಪುರುಷಂಬೊಲೀಕೆ ಕರಂ ಪುರುಷಾಕೃತಿಯೆಂಬುದಿಂತು ನಾನಾಲಿಂಗಂ (ಕಲಿಪಾ. ೩-೮೯). [ಸಂ.]

ಪುರುಷಾಣು (ನಾ). ವೀರ್ಯದ ಅಣು; ಶುಕ್ಲಾಣು : ತಾಯಿ ಗರ್ಭಧರಿಸಿದಾಗ ತಾಯಿಯ ಗರ್ಭಕೋಶದಲ್ಲಿರುವ ತತ್ತಿಯು ತಂದೆಯಿಂದ ಬಂದು ಸೇರಿದ ಪುರುಷಾಣುವಿನೊಡನೆ ಸಂಯೋಗ ಹೊಂದುವುದು (ಗೃಹಿ. ೦೧೬); ಪುರುಷಾಣುವಿನ ಸಂಬಂಧವಿಲ್ಲದೆಯೆ...ಸಂತಾನೋತ್ಪತ್ತಿಯನ್ನು ಮಾಡುವುದು ಎಷ್ಟೋ ಕೀಟಗಳಲ್ಲಿ ಕಂಡುಬರುತ್ತದೆ (ಕೀಟಿಶಿ. ೭). [ಸಂ.]

ಪುರುಷಾದ (ನಾ). ಮನುಷ್ಯಭಕ್ಷಕ; ನರಮಾಂಸಭಕ್ಷಕ. [ಸಂ.]

ಪುರುಷಾದಕ (ನಾ). = ಪುರುಷಾದ : ರಕ್ಕಸರನಿಬರೆಲ್ಲರುಂ ದೀರ್ಘದೇಹಿಗಳ್ ವೆಕ್ಕಸದ ಕೋಪಿಗಳ್ ಮೇಲೆ ಪುರುಷಾದಕರ್ (ಕೈಲಿಪಾ. ೦೬-೨೨). [ಸಂ.]

ಪುರುಷಾಧಮ (ನಾ). ನೀಚಮನುಷ್ಯ; ಕೀಳಾದ ವ್ಯಕ್ತಿ : ನಿಮಗೆ ಪೌರುಷವಿಲ್ಲ ನಳನಾಕ್ರಮಿಸಿಕೊಂಡನು ಸತಿಯ ಪುರುಷಾಧಮರು ನಿಮಗಿನ್ನೇಕೆ ಕೊಡಿ ಪಟುವೇಷವನು ನಮಗೆ ಕಮಲಮುಖಿಯನು ನಿಮಗೆ ಪಟ್ಟದ ರಮಣಿಯನು ಮಾಡುವೆನು (ನಳಕ. ೪-೦೦). [ಸಂ.]

ಪುರುಷಾಮೃಗ (ನಾ). ಅರ್ಧ ಮನುಷ್ಯನಂತೆಯೂ ಅರ್ಧ ಮೃಗದಂತೆಯೂ ದೇಹವಿರುವುದೆಂದು ನಂಬಲಾದ ಒಂದು ಬಗೆಯ (ಪೌರಾಣಿಕ) ಪ್ರಾಣಿ : ಎಂಜಲಿನ ಶುದ್ಧತೆಗೆ ಹೇಳಿದಕೆ ಬುದ್ಧಿಯೆನೆ ಶದ್ವನಮಾಲಿ ಪುರುಷಾಮೃಗವನಿಲ್ಲಿಗೆ ನಾಳೆ ಭೀಮನ ಕಳುಹಿ ತರಿಸೆನಲು (ಕುಪ್ಯಾಸ. ಓಂಇ. ೭-೬); ಇದಿರ ಮೃಗವೇನಾನುವವೆ ಕೆರಳಿದರೆ ಪುರುಷಾಮೃಗದ ಗಾವಳಿಗೆ (ಕೂರಾ. ೬-೩೦-೪೪); ಪರಿವ ಪುರುಷಾಮೃಗಂಗಳಿಂ ನೆರೆದು ಪರಿವ ಕರಿಗಳಿಂ ... ಸರ್ವಪರ್ವತಸಾರ್ವಭೌಮನಖರ್ವಸಂಪದಂಮಿಗೆ ಮೆಱೆವುತಿರ್ದುದು (ರಾಜಕೇ. ೦-೦೩೫ ಪ). [<ಪುರುಷ+ಮೃಗ]

ಪುರುಷಾಮ್ರಕ (ನಾ). = ಪುರುಷಾಮೃಗ : ಹಿರಿಯ ಆರತಿ ೮ ಪುರುಷಾಮ್ರಕದ ಆರತಿ ೩ ನಾಗಾರತಿ ೧ ಧೂಪಾರತಿ [೧] . . . ಅಂತು ಆರತಿ ೨೫ (ಸೌಇಇ. IV, ೨೭೩-೪೦; 1513).

[< ತಮಿ. ಪುರುಚಾಮಿರುಕಮ್./ ಸಂ. ಪುರುಷಮೃಗ]

ಪುರುಷಾಯಿತ (ನಾ). [ಕಾಮಶಾ] ಒಂದು ಬಗೆಯ ರತಿಬಂಧ; ೫ ಸ್ತ್ರೀಯು ಪುರುಷನ ಸ್ಥಾನವನ್ನು ವಹಿಸಿ ನಡೆಸುವ ಸಂಭೋಗ; ವಿಪರೀತರತಿ : ಪೊದಟ್ಟಿ ಕಬರೀಭರಂ ಪರೆದು ಪರ್ವೆ ತುಂಗಸ್ತನಂ ಕದಕ್ಕದಿಸೆ ಕಣ್ಮಲರ್ ಪೊಳೆಯೆ ಕಾಂತನು ಮೆಚ್ಚಿಸಲ್ ವಿದಗ್ಧೆ ಪುರುಷಾಯಿತಂ ತಗುಳೆ ನರ್ತಕೀಲೀಲೆಯಿಂದದೊಂದು ಪೊಸಗಾರ ಸೋಗೆ ನವಿಲಾಟಮಂ ತೋಱಿವಳ್ (ಅಂಪು. ೦೨-೦೪); ಪೆರ್ಮೊಲೆಗಳ್ ಕದಕ್ಕದಿಸೆ ನರ್ತಿಸೆ ಕುಂಡಲಂ . . . ತನ್ವಿ ಪುರುಷಾಯಿತದೊಳ್ ಪ್ರಿಯನಂ ಮಗುಟ್ಟಿದಳ್ (ಸೂಕ್ತಿಸು. ೦೪-೫೦); ಪುರುಷಾಯಿತದೊಳಾರು ತೊಡಗುವರವರಿಗೆ ಜಘನಭಾರದ ಸೇದೆಯಿರದು (ಗಾಭಾಸ. ೪೯-೯೬). [ಸಂ.]

ಪುರುಷಾರ್ಥ (ನಾ). ೧. ಮನುಷ್ಯನು ಸಾಧಿಸಬೇಕಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪರಮಧ್ಯೇಯ : ಪುರುಷಾರ್ಥನಿಧಿ ಪುರಂದರಪರಮಪ್ರಿಯಮಿತ್ರನೋರ್ವನುದಯಿಸಿದಂ . . . ಹಂಸಂ (ಕಾರಂಪೂ. ೭೦೦); ಸುರಧೇನುಸ್ತನಭಾರದಂತೆ ಪುರುಷಾರ್ಥಂ ಮೂರ್ತಿಗೊಂಡಂತೆ ನಾಲ್ವರುಮೊಂದಾಗಿರೆ ನಂದನರ್ ದಶರಥಂ . . . ಉತ್ಸಾಹಮುಶಾಳ್ದಿದಂ (ಪಂಠಾಮಾ. ೩-೦೪೩); ಸ್ನೇಹಪೂರ್ವಕದಿಂದ ಮನದೊಳಗಾಹಿಸಲು ಲಕ್ಷ್ಮೀಶನವರಿಗೆ ಬೇಹ ಪುರುಷಾರ್ಥಂಗಳಹವೆಲ್ಲಿದ್ದರಲ್ಲಲ್ಲಿ (ಕುಪ್ಯಾಕಾ. ೩-೦೨೦). ೨. ಮೋಕ್ಷಮಾರ್ಗ : ಮುಕ್ತಿಪಥ : ಕುಲಿಶಾಸ್ತ್ರೋತ್ತಂಸಿತ ಪದನಲಿನಂಗೆ ತನುಜರಾಗಿ ಪುರುಷಾರ್ಥಮನುಜ್ಜಳಿಸದೆ ಮಾಣ್ಬಮೆ (ಅಂಪು. ೦೪-೩೩); ರಾಜ್ಯಲೋಭವಶದಿಂ ಪುರುಷಾರ್ಥಮನೊಕ್ಕು ಪಾರ್ಥಿವಾಗ್ರಣಿಗಳ ನೇಕರುಂ ಜವನ ದಾಡೆಯೊಳಟ್ಟಿದರ್ (ಪುಷ್ಪಪು. ೦೩-೭೪); ಬ್ರಹ್ಮದ ಅರಿವೇ ಪುರುಷಾರ್ಥವು (ಬ್ರಹ್ಮಶಾ. ೦೪). ೩. ಯೋಗ್ಯವಾದುದು; ಸಾರ್ಥಕವಾದುದು: ಮತ್ಸರಮಹೋರಗಕ್ಕಮಾಗ್ರಹಮಹಾಗ್ರಹಕ್ಕಂ ಕೋಪಮದಾನೇಕಪಕ್ಕಂ ಪಕ್ಕಾಗೆ ತನ್ನನೊಪ್ಪಿಸುವುದು ಮತಿವಂತಂಗೆ ಪುರುಷಾರ್ಥಮಲ್ತು (ಶಾಂಶಿಪು. ೩-೭೨ ಪ); ಪುರುಷಾರ್ಥಮಲ್ತು ಪರನಿಂದೆಯುಮಾತ್ಮಗುಣಪ್ರಶಂಸೆಯುಂ (ಪಂಠಾಮಾ. ೩-೨೪); ದಿವೌಕಸರ ಸಮ್ಮೇಳವೇ ಪುರುಷಾರ್ಥತನಗೆ (ಕುಪ್ಯಾರ್ಪ್ರೋ. ೭-೦೬). ೪. ಮನುಷ್ಯಪ್ರಯತ್ನ : ಪುರುಷಾರ್ಥಂ ತನಗುಳ್ಳ ಮಾನವನವಂ ತಾನೆಂತುಮಿರ್ಕು (ಪೇಂಪು. ೭-೦೩೭). ೫. ಸಂಪತ್ತು; ಧನ; ಹಣ: ಖಳರ ಪುರುಷಾರ್ಥಮಂ ಕಾಮಿಸುವ ಯಾಚಕಾವಳಿಯಂತೆ ಪೊಳಲಿಂದೆ ಪೊಱಮಟ್ಟು ಸರಸಿಯೊಳ್ ಮುಳುಗುತಿರ್ಪಾನೆಗಳ ದಾನಾಭಿಲಾಷೆಯಂ ಬಿಟ್ಟಳಿಕುಳಂ ತೊಲಗಲು (ಕೈಲಿಪಾ. ೩-೩೯). ೬. ಉಪಕಾರ; ಸಹಾಯ : ಇದ್ದಪರೆ ಮಱೆದು ಪುರುಷಾರ್ಥಮಂ ಮಾಡಿದರನುದ್ದಾಮಗುಣಮುಳ್ಳ ಜೀವಿಗಳ್ (ಕೈಲಿಪಾ. ೩-೩೦). ೭. ವಿಶೇಷವಾದ ಫಲ; ಹೆಚ್ಚಿನ ಪ್ರಯೋಜನ : ಗೋವಿಂದಭಟ್ಟನ ಅವಲಕ್ಷಣತನ . . . ತಿಳಿದ ಬಗ್ಗೆ ಸಾಕ್ಷಿ ಸಾರುವುದರಲ್ಲಿ ಈಗ ಪುರುಷಾರ್ಥವೇ ಇರಲಿಲ್ಲ (ದೀಪಹ. II, ೭); ಪುಣ್ಯವಿಲ್ಲ, ಪುರುಷಾರ್ಥವಿಲ್ಲ (ಹಸುಹೂ. ೩೪೦). [ಸಂ.]

ಪುರುಷಾರ್ಥಿ (ನಾ). ೧. ಉತ್ತಮವಾದ ಧ್ಯೇಯಗಳಿಗಾಗಿ ಶ್ರಮಿಸಂ ವವನು; ಸತ್ಪುರುಷ; ಸಜ್ಜನ : ದುರ್ಜನರು ಪುರುಷಾರ್ಥಿಗಳೆ ಹಾವಿಂಗ ನಿಲಸೇ ಆಹಾರವಾದಡೆ ಬಿಟ್ಟುದೇ ವಿಷಮ (ಶುಕ್ಷಾಕ. ೬ ೪); ಪೊಲೆಗೊಟ್ಟಳಸು ಗುಡಿದವಂ ಪುರುಷಾರ್ಥಿಯಾದವನೆ (ಶೈಶಿಶಾ. ೬-೫೩). ೨. ಬಲಶಾಲಿ; ಸತ್ತ್ವಶಾಲಿ : ನೀವು ಪುರುಷಾರ್ಥಿಗಳೂ ಮತ್ತು ಸ್ವತಂತ್ರರೂ ಆಗಬೇಕೆಂದು ಇಚ್ಛಿಸುವಿರೇನು ? (ಬ್ರಹ್ಮಸೇ. ೬). [ಸಂ. ಪುರುಷಾರ್ಥಿನ್]

ಪುರುಷೋತ್ತಮ (ನಾ). ೧. ಮನುಷ್ಯರಲ್ಲಿ ಶ್ರೇಷ್ಠನಾದವನು; ನರಶ್ರೇಷ್ಠ; ಮಹಾಪುರುಷ : ಆ ಪುರುಷೋತ್ತಮಂ ತಿಳಿಪಿದಂ ಕನಸಂ ನೆನಸಾಗೆ ರಾಗದಿಂ (ಶಾಂತಿಪು. ೯-೨೦೯); ಪುರುಷೋತ್ತಮನಾದರದಿಂ ಪರೋ ಪಕಾರಾರ್ಥಮಿತ್ತನಾತ್ಮೀಯಕಳೇಬರಮುಂ ಸುತರಕ್ಷಾರ್ಥಂ ಶರೀರಮುಂ ಜನಕ ನೀವುದಾವುದು ಚೋದ್ಯಂ (ಪಂಪತಂ. ೦೭೬-೫). ೨. ವಿಷ್ಣು; ನಾರಾಯಣ : "ವನಜಾಕ್ಷಂ ಪುರುಷೋತ್ತಮಂ ನಗಧರಂ . . . ವೈಕುಂಠನಬ್ಜೋದರಂ" (ಪಸ್ತುಕೋ. ೯-೨೦); ನೆಗಚ್ತಿಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ . . . ಕುಂತಿ (ಪಂಪಭಾ. ೦-೬೮); ಆ ಮಹಾರ್ಣವಂ . . . ಪುರುಷೋತ್ತಮನಂತೆ ಶಂಖಚಕ್ರಾಂಕಿತಮುಂ (ಜಗವಿ. ೦-೯೯ ಪ); ಪುರುಷೋತ್ತಮಂಗೆ ಕಮಲಂ ಕಣ್ (ಸೋಮೇಶ. ೬೬). ೧, ೨ : ಅಬ್ಜಾಯತ ನೇತ್ರನಾದಿಪುರುಷಂ ಪುರುಷೋತ್ತಮನೀ ಚಳುಕ್ಯನಾರಾಯಣದೇವ ನೀಗೆಮಗೆ ಮಂಗಳಕಾರಣಮುತ್ಸವಂಗಳಂ (ಗದಾಯು. ೦-೦). ೩. [ಜೈನ] ವಾಸುದೇವ; ಲಕ್ಷ್ಮಣ : ಪುರುಷೋತ್ತಮನಿಸೆ ದಶಕಂಧರನಂ ಕೂರ್ಗಣೆ ಗಳುರ್ಚಲಾಱವೆ (ಪಂಠಾಪಾ. ೦೯-೦೫೯). [ಸಂ.]

ಪುರುಸ (ನಾ). ೧. ಮಾನವ; ಮನುಷ್ಯ : ಇದೇಂ ಗುಣವಂತನಿದೇಂ ಪುರುಸರನ್ನನೋ ಗಡ ಪುನ್ನಂ (ಶಾಂತಿಪು. ೦-೩೯); ಇದು ಮೇರುವಿಗೆಣೆ ಪುರುಸರೆಲ್ಲ ಸಾಱದ ಕಾರಣ ಧಾರುಣಿಯೊಳಗಣ ಜಂಗಮದಾರಾಧನೆ ಇಂದಯೆ ಸಇತೀ ಜಗಕೆಲ್ಲಂ (ಎಕ. XI. ದಾಪಣ. ೦೭೦-೯; 1266). ೨. ಗಂಡ; ಪತಿ : ಮಾದಮ್ಮ ಪುರುಸಾಗೆ ಹೇಳು ತರುತಾನೆ (ಹಳ್ಳಿಪ. ೧೦೫).

[<ಪ್ರಾ. ಪುರುಸ./ಸಂ. ಪುರುಷ]

ಪುರುಸತ್ತು 'ಪುರಸತ್ತು' ನೋ.

ಪುರುಸೊತ್ತು 'ಪುರಸತ್ತು' ನೋ.

ಪುರುಹ (ನಾ). ಅಧಿಕವಾದುದು; ವಿಪುಲವಾದುದು : "ಪ್ರಭೂತಂ, ಪ್ರಚುರಂ . . . ಪುರುಹಂ, ಪುರು, ಭೂಯಿಷ್ಠಂ, ಸ್ಫಾರಂ, ಭೂಯಃ, ಭೂರಿ — ೧೨ ಅಧಿಕವಾದದ್ದರ ಹೆಸರುಗಳು, ಬಹಳವಾದ್ದು" (ಸಿದ್ಧಾಂತಿ. ೩೯೦). [ಸಂ.]

ಪುರುಹೂತ (ನಾ). ಅನೇಕರಿಂದ ವಿಶೇಷವಾಗಿ ಪ್ರಾರ್ಥಿಸಲ್ಪಟ್ಟವನು; ಇಂದ್ರ : "ಪುರುಹೂತಂ ಮಘವಂ ದಿವಸ್ಪತಿ . . . ವಾಸವಂ" (ಪಸ್ತುಕೋ. ೬-೩೩); ಉತ್ಪತ್ಸ್ಯಮಾನ ಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು (ಆದಿಪು. ೬-೬೬ ಪ); ಮರುದೇವಿಗೆ ಪುಟ್ಟಿದಪಂ ಪುರುದೇವಂ ಬಂದು ದಿವದಿನೆಂಬವಧಿಯಿನಾ ಪುರುಹೂತನಱದಯೋಧ್ಯಾ ಪುರಮಂ ನಾಡಾಡಿಯಲ್ಲದಂತಿರೆ ಪಡೆದಂ (ಪಂಠಾಪಾ. ೦-೯೯). [ಸಂ.]

ಪುರುಹೂತಗಣ (ನಾ). [ಛಂದ] ಮೂರು ಅಂಶಗಳ ಗಣ; ವಿಷ್ಣು ಗಣಕ್ಕೆ ಸಮಾನವಾದ ಗಣ; ℙ ತೆಲುಗಿನಲ್ಲಿ ಇದನ್ನು 'ಇಂದ್ರಗಣ' ವೆಂದು ಕರೆಯುತ್ತಾರೆ : ಪುರುಹೂತಗಣಗಳಾಱುಂ ಸರಸಿಜಸಖಗಣ ಗಳೆರಡು ಸಂಧಿಸಿ ಬರ್ಕುಂ ಚರಣಕ್ಕೆ ಸೀಸದಂತದೊಳೊರಗಿಂತಹ ಸರಳ ತನ್ನೊಳೊಪ್ಪುವ ತೆಱದಿಂ (?) (ಕೃಶಿಶಿ. ೦೫೦). [ಸಂ.]

ಪುರುಹೂತಜಾತ (ನಾ). ೧. ಇಂದ್ರನ ಮಗ. ೨. ವಾಲಿ : ಸಂಭ್ರಮ ವಾರೆ ನೋಡಿದರ್ ಪುರುಹೂತಜಾತನಂ . . . ಇಳೆಗುರುಳ್ದು ಬಿಳ್ದಾತನಂ (ಶ್ರೀಕಾಪಾ. ೩೦೨-೨೯೩). [ಸಂ.]

ಪುರುಳ್, ಪುರಲು, ಪುರುಳು, ಪೊರಳ್ಳು, ಪೊರುಳ್, ಹುರುಡ್ಡು, ಹುರುಳ್, ಹುರುಳು (ನಾ). ೧. ವಸ್ತು; ಪದಾರ್ಥ : ನಾಣನೆಳ್ಳ ನಿತುಂ ಕಾದೆನೆ ಬೇಡಿದೊಂದು ಪುರುಳಂ [ಪಾಕಾಂ. ಬೇಡಿದೊಂದೊಡ ಮೆಯಂ] ಮಾರ್ಕೊಂಡೆನೇ . . . ಆನೆರೆದಟ್ಟಿಯುಂ ಬಗೆಯನೇ ಗಂಡಂ ಮನಂಗೊಂಡನೋ (ಆದಿಪು. ೦೨-೩೬); ಮನಮಿಚ್ಚಿವಟ್ಟ ಪುರುಳಂ ಬೇಡಿ ಪೊಚ್ಚಮಿಲ್ಲದ ರಾಗರಸದಿಂ ಕುಳಿರ್ಕೋಡಿ . . . ಪೊಚ್ಚುಗಳೆವುದು ನೃಪನ ಪೆಂಡವಾಸಂ ಕೂಡಿ (ಪುಷ್ಪಪು. ೨-೯೯); ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ! ಬೇಡಿದ ಪುರುಳನುಱದಿಂ ತಂದೀಗುಂ (ರಾಮಾಶ್ವ. ೦೦೫-೨೯). ೨. ಸತ್ತ್ವ; ಸಾರ; ತಿರುಳು : ದೊರೆಯಲ್ಲದಂಗೆ ನುಡಿವುದು ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ (ಆದಿಪು. ೦೯-೬೦); ಮರುಳ ಮಾತಿನೊಳ್ಪುರುಳೇನೆಂದರಸಂ ಪೋಗೆಪೋಗೆ (ಗದಾಯು. ೯-೯೩ ಪ); ಆನುಂ ನೋಟ್ಟಿಂ ಕತೆಯ ಪುರುಳೆಂತಿರ್ಕುಮೆಂದು (ರಾಮಾಶ್ವ. ೫-೨೬). ೩. ಕೆಚ್ಚು; ಶಕ್ತಿ; ಚೈತನ್ಯ : ಅದಟನ ಪುರುಳಂ ಪೊಣರ್ದಾ ಗಳಱವೆನುಗ್ರಾಹವದೊಳ್ (ಆದಿಪು. ೦೨-೯೯); ತೆರಳ್ದ ಮೊಗಂ ಕರ್ಗಿದ ಬಾಯ್ ಪುರುಳಿಲ್ಲದ ಮಿಳ್ಳೆಗಾಲ್ (ಧರ್ಮಾಮೃ. ೬-೨೨೯). ೪. ಬೆಲೆ; ಮೌಲ್ಯ. ೨, ೪: ಪುರುಳುಂ ಲಕ್ಕಣಮುಂ ಮೆಯ್ಸಿರಿಯುಂ ತಳ್ತೆಸೆಯೆ ಪೇಟ್ದ ಕಬ್ಬಮದೆಂತುಂ ಪುರುಳುಂ ಲಕ್ಕಣಮುಂ ಮೆಯ್ಸಿರಿಯುಂ ತಳ್ತೆಸೆವ ರನ್ನದಂತೆರ್ದೆವುಗದೇ (ಕಬ್ಬಿಕಾ. ೬). ೫. ಧನ; ದ್ರವ್ಯ; ಹಣ : ಪರವಧುಗೆ ಸೋಲ್ತು ತಮ್ಮಯ ಪುರುಳಿಲ್ಲಮನಿತ್ತು ರಾಗದಿಂದಂ ದವರೊಳ್ ನೆರೆದು (ಸಮಪ. ೫-೬೬); ಪುರುಳನಲ್ಲದೆ ಪುರುಷನನನುಭವಿಸ ಬಲ್ಲರೇ ಬೆಲೆವೆಣ್ಗಳ್ (ಅನಂಪು. ೬-೨೫); ಪುರುಳಂ ಪಡೆದೊಳ್ಗೆಯ್ಮೆಯೊಳೆ ರೆವರ್ಗಿತ್ತುಟ್ಟು ತೊಟ್ಟು ಪೆಂಡಿರ್ ಮಕ್ಕಳ್ವೆರಸು . . . ಪದುಳ ದೊಳಿರ್ಕುಂ (ಪಕವಿ. ೩-೧೯೦). ೬. ಸಂಪತ್ತು; ಐಶ್ವರ್ಯ : ನೆಲನಿಮ ನೆಲನಂ ಪಾಲಿಸು ನೆಲದಿಂ ಪುರುಳಕ್ಕುಮಾರ್ ನೆಲಕ್ಕೆಱಗದವರ್ (ಕಾಪ್ಯಾಪ. ೬೬); ತಮ್ಮ ಪುರುಳೆಂಬರ್ ತಮ್ಮಕ್ಕಳನ್ (ಕುಱಳ್. ೦-೭-೩). ೭. ಒಳಿತು; ಲೇಸು : "ಪುರುಳೆನಲೊಳ್ಳಿತು" (ಶಾಸಂ. ೦೯); ಪುರುಳಿಲ್ಲದಂಗೆ ಜೈನಂ ದೊರೆಕೊಂಡುಂ ದುಶ್ಚರಿತ್ರಮಂ ಬಿಡದುದಱಿಂ ಚಿರಕಾಲಂ ನಿಲಲ ರಿಯದು ಪರಿಕಿಸುವೊಡದಂತೆ ನಾಯ್ಗೆ ನೆಯ್ಯಕ್ಕುಗುಮೇ (ಸಮಪ. ೯-೩೯); ಸುಜನರ್ಬ್ಬವ್ಯರೆ ತನಗವರಜಸ್ರಮುತ್ತಂಸಮಪ್ಪ ಪುರುಳಿಂ ಬೊಪ್ಪಂ ಸುಜ ನೋತ್ತಂಸನೆನಿಪ್ಪಂ ಸುಜನರ್ಗ್ಗುತ್ತಂಸಮೆಂಬ ಪುರುಳಿಂದೆನಿಸಂ (ಎಕ. II. ೨೩೯-೬೬; ಸು. 1180). ೮. ಚೆಲುವು; ಚಂದ : "ಪುರುಳೆನೆ ಚಂದ ಮಕ್ಕು" (ಕಶರ. ೦೩೭). ೯. ಫಲ; ಪ್ರಯೋಜನ : ತನುಗೆ ಪೊಱಿ ತುಡುಗೆ ನವಲೇಪನಮೆ ಮಳಂ . . . ಇಂತಿನಿತಱೊಳವೊಂದಱೊಳ್ ಪುರುಳುಂಟೇ (ಆದಿಪು. ೯-೫೫); ನಾಲಗೆಯುಂ ಪಲ್ಲುಂ ತವುವನ್ನೆಗವೋದಿ ದೊಡಂ ಕುತತ್ವದೊಳ್ ಪುರುಳುಂಟೆ (ಸುಕುಮಾ. ೩-೯೯); ಈ ಪುರುಳಿಲ್ಲದ ನಾಯೊಡಲಂ ಮರುಳೇ ಕರವೊಲ್ದು ಕೂರ್ಪ ಮಾನಿಸರೊಳರೇ (ಧರ್ಮಾಮೃ. ೭-೧೯೨). ೧೦. ಬುದ್ಧಿವಂತಿಕೆ; ಜ್ಞಾನ : ಪುರುಳಂ ಮರುಳಂ ಮಾಟ್ಟಂ ಶರನಿಧಿಯಂ ಬೆಂಚೆ ಮಾಡುವಂ ಕೇಸರಿಯುಂ ನರಿ ಮಾಟ್ಟಂ . . . ಕುಸುಮಪತಾಕಂ (ಲೀಶಾವ. ೯-೨೫). ೧೧. ಜ್ಞಾನಿ; ತಿಳಿವಳಿಕೆಯುಳ್ಳ ವನು : ಪುರುಳಾಗು, ಮರುಳಾಗು, ಕಲಿಯಾಗು, ಪೇಡಿಯಾಗಣ್ಣ, ನೀನೊರ್ವನಿರ್ದಪಯ್ (ಆಕೃತ್ಯಾ. ೨೦-೯೦೯). ಪುರಲು : ೧೨. ಶೋಭೆ; ಕಾಂತಿ : ಎರಡು ತಿಂಗಳ ಹರೆಯ ಮಂಗಳ ಬರಲು—ತುಂಬಿತು ವತ್ಸಗೇ ಬಿರುಮನಂಗಳ ಸಿರಿಯು, ಕಂಗಳ ಪುರಲಿದೇ ಕಡೆಕಂಜಿಯು (ಕಎಪು. ೨೦-೩೯). ಪುರುಳು : ೧. ನಿನ್ನ ಪುರುಳಿಲ್ಲವನು ಬೀದಿಗಿಡು ಮಾರಿಬಿಡು ನಿನ್ನ ಸಿರಿಯೆಲ್ಲವನು ಬಡವರಿಂಗೆರೆದು ಬಿಡು (ಕಗದ್ಯ. ೬೨). ೨. ನೀನುವಱುಹಿನ ತಿರುಳು ನಾನು

ಮಱವೆಯು ಪುರುಳು (ಪ್ರಭುಪು. ೬-೦೯೨) ; ಎನ್ನ ಪ್ರಾಣದ ಪುರುಳನೆನ್ನ ಜೀವನರುಚಿಯನೆನ್ನ ಗರಿಮೆಯು ತೆನೆಯು ಕಾಣುತಿಹೆ ಸುಖಿವ (ಪಿಸೀಗೀ. ೪೦-೩). ೮. ಪರಿಪರಿಯಾಗಿ ಸಿಂಗರಿಸಲೇಕಹುದೆಂದು ಪುರುಳಾಗಿ ಸಿಂಗರಿಸಿದರು (ಶರಶ. ೩೦-೪೯) ; ಪಪಣಿಗೆಯೊಪ್ಪೆ ಪುರುಳು ಪೊಗರೇಱಿಯಂಗವಿಸೆ ಯಲಂಕಾರಗಳು ಕವಿದು ಪರಿಯೆ ರಸದೊಳ್ಗಂಪು [ಕ]ಮ್ಮನೆ ಕವಿತೆಯೊಂದನು ಪೇಳಿಸಿಂದು (ಪಚಾ. ೦-೨೬). ೧೩. ಆಶಯ ; ಅಪೇಕ್ಷೆ ; ಉದ್ದೇಶ : ಒಳ್‌ಬಗೆಯೊಳು, ಮಗನ, ನನ್ನ, ಮನೆಯ, ಹರಸಿ ನುಡಿದಿರಿ. ನಿಮ್ಮ ಪುರುಳು ನಡೆಯಲಣ್ಣ. ಹರಕೆಯಿಡಲು ತೆರಳುವೆ (ಶಾರಸಿ. ೦೦-೨೪೦). ೧೪. ಶಬ್ದದ ಅಭಿಪ್ರಾಯ ; ಅರ್ಥ : "ಅನೇಕಾರ್ಥಾಃ—ಪಲವು ಪುರುಳುಳ್ಳವಾಗಿ" (ಶಾಶಕ್ಷ. ೦) ; ಪುರುಳೊಂದೆಡೆ ಪದಮೊಂದೆಡೆ ಸಂಬಂಧದಿರವೊಂದೆಡೆಯೆನೆ ಕೃತಿಯ ವಿರಚಿಸಿ ಕುಕವಿಜನಗಳೇಕೆ ಮಾಳ್ಪರೊ ಶಿರಕೆ ಬೇನೆಯ ಸುಕವಿಗಳ (ಕುಂಬಾಸಾಂ. ೦-೬೨). **ಪೊರಳ್ಳು₂** : ೬. ಅಲಜಣವುಂ ಅಪುತ್ರಕ ಪೊರಳುಮಾನ್ ವಿಚ್ಚಾರ್ (ಇಅ. XIX. ೦೪೪-೬; 680). **ಪೊರುಳ್** : ೫. ನೆಲ್ಲಿಗೆಱೆಯ ಕೆಱೆಗಂ ಕೊಟ್ಟ . . . ನಾಲ್ವತ್ತೆರಡು ಪೊರುಳುಂ ಬ್ರಾಹ್ಮಣರ್ಗ್ಗಂ ತಪಸಿಯರ್ಗ್ಗಂ ಕೊಟ್ಟ ಪೊರುಳು ಮೂವತ್ತೇಳುಂ (ಎಕ. IX, ಹೊಸಕೋಟೆ. ೦೦-೦೪ ; 1023). **ಹುರುಡು₂** : ೨. ಇದಱೊಳು ಹೊಕ್ಕು ವಿಚಾರಿಸಿದೊಡೆ ಹುರುಡಿನಿತುಂಟೇ (ಕೈಕಪ. ೨-೬ ಪಲ್ಲವಿ) ; ಈ ಗರುಡನ ಹುರುಡು ಗೊತ್ತಿಲ್ಲವೆಂದು ಕಾಣುತ್ತದೆ ಈ ಜನರಿಗೆ (ಇಸಾಸಾ. ೫). **ಹುರುಳ್** : ೨. ನೀತಿಯೆಂಬುದು ನೀರ ಮೇಲೆ ತೇಲುವ ತೆಪ್ಪ ಮಾತ ಬಲ್ಲವರೆತ್ತ ತೆಗೆದಂತೆ ಬಹುದದು ಕೇಳಿದರೆ ಹುರುಳಾಗದು (ಸಮ್ಯಕ್ತಾ. ೯-೦೮). ೬. ಗಂಡುಳಿದು ಸಿತಗರೆಲ್ಲಂ ಪೆಂಡಿರವೊಲು ಕರುಳ ಬೆರಳ ಹುರುಳಂ ಕೊಟ್ಟುಂ ಕಂಡುಂ ನಡೆವರು ಸಿತಗರ ಗಂಡಂ ಶ್ರೀಮಾಚಿ ಜಡಿವನಸಿಯನೆನುತ್ತಂ (ಎಕ. VII, ಶಿಕಾಂ. ೨೫೬-೯ ; 1174 ; ಶಾಪಸಂಂ. ೦೪೬ ನೋ). ೭. ನಿನ್ನಿಂದಂ ಸಕಳಜಗಂ ಸುಖದಿಂದಿರ್ಪೊಡೆ ಹರಣದೊಂದು ಹುರುಳಱಸುವರೇ (ಗಿಂಕ. ೭-೩೨) ; ತರುಣನೆನ್ನೊಳು ತರಳನೆನ್ನೊಳು ದುರುಳನೆನ್ನೊಳು ಮರುಳನೆನ್ನೊಳು ಹುರುಳದೇನುಂಟೈ ಪರೀಕ್ಷಿಸೆ (ಸಾಪುಪ. ೯-೧೦೬). **ಹುರುಳು** : ೧. ಧರಧುರದೊಳಭಿಮಾನಹಾನಿಯ ಹುರುಳಹುದು ಬಿಲುಹೋರಟೆಗೆ ನಿಲಲರಿದೆನುತ್ತಂ ಗಮನಿಗುಂದಿತು ನೆರೆದ ನೃಪನಿಕರ (ಕುಪಾಭ. ೦೯-೦೬). ೨. ಗಱೆ ತೋಱೆ ಗಂಡರೆಂಬವರ ಕಾಣೆ ನಿಱೆ ಸೋಂಕಲು ಮುನಿಯಿಲ್ಲ ನೋಡಯ್ಯಾ . . . ಹುಲ್ಲ ಕಿಚ್ಚು ಹೊಲೆಯನ ಮೇಳಾಪ ಅಲ್ಲಿ ಹುರುಳಿಲ್ಲ (ಬಸವ. ೦೦೨) ; ಸತ್ಯದ ಹುರುಳನಱಯದೆ ಕಾಳುಗೆಡೆದರೆ ಕಾರ್ಯವೆಂತಹುದು (ಕುಪಾಭ. ೦೭-೦೭) ; ಆ ಮಹಾತ್ಮನ ಹುರುಳ ನಾನೆಂತಱಪೆನೆನುತಲಿ ಬಸವ ಚಿಂತಿಸಿದ (ಪ್ರಭುಲೀ. ೨೦-೭). ೩. ಹುರುಳು ಬಲ್ಲೆವು ಸಾಕು ಹೋಗು (ಕೌಶಿಂಗಾ. ೨೦-೨೦) ; ದಿಗ್ವಿಜಯದ ಪರಾಕ್ರಮದ ಹುರುಳು ನಿನಗುಂಟೆಂಬುದದ ಕೆಲಕಿರಿಸು (ಶೂಕರಗಾ. ೦-೯-೩೦) ; ಪುರುಷರಲಿ ಹುರುಳಿಲ್ಲ ಸಲಹೆಂದೊರಲಲಕ್ಷಯವೆಂದು ವಸ್ತ್ರವ ಕರುಣಿಸಿದ (ಕೋಗಹು. ೦೫-೩೦). ೭. ತುದಿಗೊನೆಯ ಚೆಂದೊಗು ಖರ್ಜೂರದಲಿ ಕಾಣೆನು ಹುರುಳ ನಾರುಗದ ವಿರಾಮವನೇನನೆಂಬೆನು ನಿಮಿಷಮಾತ್ರದಲಿ (ಕುಪಾಭ. ೦೯-೩೬) ; ಬಿಚ್ಚಿ ಹೇಳಲು ಹುರುಳ ಕಾಣೆನು ತುಚ್ಛತನುವಿದನು (ಅಮೃತ. ೨-೬೯). ೮. ಧಿಗಿಲೆಂದುದು ಧರಾಧೀಶ್ವರನ ತಂದೆಯ ಹೃದಯದಲಿ ಹುರುಳೇನು ಬಳಿಕಾಳಿವವರ ಮೋಱೆಗಳ (ಕುಪಾಭ. ೦-೨). ೯. ಓಂದಿನ ಹಳೆಯ ಕತೆಯನ್ನು ಕೆದರುವುದರಲ್ಲಿ ಹುರುಳಿಲ್ಲ (ಹಾಹುತ್ತ. ೯೦). ೧೩. ಮರುಳಲಾ ಮಱುಮಾತು ಕಡುವೃದ್ಧರಿಗದೇಕೆಂಬಂತೆ ಚಿತ್ತದ ಹುರುಳ ಬಲ್ಲೆನು ಪಥಪ ಬಿಡಿ ಕೆಲಸಾರಿ ಸಾಕು (ಕುಪಾಭ್ರೂ. ೦೫-೦೫). ೧೫. ನೆಲೆ ; ಬೀಡು ; ಆಶ್ರಯ : ಈ ಚರಾಚರ ನೆರೆದು ನಿಮ್ಮಯ ರೋಮಕೂಪದ ಹೊಱೆಯೊಳಗೆ ಹೊಳೆವಾಡುತಿಹುದೆಂಬಗ್ಗಳಿಕೆಗಳಿಗೆ ಹುರುಳೆನಿಪ ಹೇರಾಳದಂಗದ ಸಿರಿಯ ತೋಱೈ ಕೃಷ್ಣ (ಕುಪಾಭೀ. ೩-೬೨). ೧೬. ಮರ್ಮ ; ರಹಸ್ಯ : ಶ್ರೀಕಂಠಶಾಸ್ತ್ರಿಗಳು ಸುಭಗೆಯೊಡನೆ ಅಧಿಕಪ್ರಾಸಂಗಿಕವಾಗಿ ವರ್ತಿಸಿದುದಕ್ಕಾಗಿ ತಮ್ಮ ಹುರುಳನ್ನು ಅವಳು ಬೈಲಿಗೆಲ್ಲಿ ಎಳೆಯುವಳೋ ಎಂಬ ಭಯದಿಂದ ರಾತ್ರಿಯೆಲ್ಲ ನಿದ್ರೆ ಮಾಡಿದ್ದಿಲ್ಲ (ಗಂಗಾಸಾ. ೯೯). ೧೭. ನಾಯಕ ; ಒಡೆಯ ; ಮುಂದಾಳು : ಎಲೆಲೆ ವಿಲಯಕೃತಾಂತನೋ ನಮ್ಮಳವು ಕೊಳ್ಳದೂ ಬೆಂಗೊಡಲಿ ಮುಂಕೊಳಸದಿರಿ ಮರುಳಾಗದಿರಿ ಹುರುಳಾಗಿ ಹೊಡಿರಿಗೆ (ಕುಪಾಭೀ. ೩-೦೦) ; ವ್ಯಾಸಸೃಷ್ಟಿಗೆ ನಡೆಕೋಲಾದನೆ ಮರುಳ್ಗಳ ಹುರುಳೇ ಎಡರಾಳುವನೇ ಏ ಬಿನದಕಿ ನನ್ನೆಡೆಗೈತಂದೆ (ಗಜೇಕ. ೨-೪೬). ೧೮. ಸತ್ವಶಾಲಿಯಾದವನು (?) : ಧರೆಯೊಳು ಮೈಸೂರವರ ಕೂಡೆ ವೈರವ ಬೆರಸಿದವರು ಹುರುಳಹರೆ (ಕಂಪಂ. ೩-೪೭).

[ದೇ.॥ ತಮಿ. ಮಲ. ಪೊರುಳ್ ; ತುಳು. ಪೊರ್ಲು ; ತೆಲು. ಪುರುಲು ; ಕೋತ. ಪೊರ್ಲ್]

ಪುರುಳಿ₁ 'ಪುರುವಳ್ಳಿ' ನೋ.

ಪುರುಳಿ₂ (ನಾ). ೧. ಹೆಣ್ಣು ಗಿಳಿ ; ಸಾರಿಕೆ : "ಪುರುಳಿಯೆಂದುಂ ಸಾರಿಕೆಯೆಂದುಂ ಪೆಣ್ಗಿಳಿ" (ಕಕಸಾ. ೫೫-೨೦೩) ; ಕಲ್ಕೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ (ಕವಿರಾ. ೦-೦೦) ; ತುಂಬಿ ಗಿಳಿ ಪುರುಳಿ ಕೋಗಿಲೆಯೆಂಬಿವುವೆರಸಖಿಲತರುಗಳಿಂದ್ರನ ಬೆಸದಿಂದಂ ಬಂದುವೆಂದೊಡುವಪನಮಂ ಬಣ್ಣಿಸಲೆನಗೆ ನಾಡೆಯುಂ ಕುಱಿಪಲ್ತೇ (ಅರಿಪು. ೬-೯೨) ; ಕೂರ್ತ ಧೂರ್ತ ಸುರಮಿಥುನಂಗಳ್ ನೆರೆದಳಸುಗಲಿಸೆ ಗಿಳಿಯುಂ ಪುರುಳಿಯುಂ ಮಳಸುವುವು ದೇವಭಾಷೆಗಳಳಸಂ (ಕಾಪ್ರಾಪ. ೬೫೦). ೨. ಗಿಳಿ ; ಶುಕ : "ಕನ್ನಡವಕ್ಕಿ ಪುರುಳಿ ಪಂಡಿತವಕ್ಕಿಯೆನಲು ಗಿಳಿ" (ಕಬ್ಬಿಳ್ಳಿ. ೨೩) ; "ಕನ್ನಡವಕ್ಕಿ ಪುರುಳಿ ಪಂಡಿತವಕ್ಕಿ ಗಿಳಿಯಕ್ಕು" (ಶಬ್ದಮಂ. ೨೯). ೩. ಗಿಳಿಯ ಮರಿ ; ಮರಿಗಿಳಿ ; "ಗಿಳಿವಱೆ" (ಕಕಸಾ. ಕಿ. I, ೨೦).

ಪುರುಳಿ₃ (ನಾ). ಹಸು : ಪರವತ್ಸಂಗಳ ಬಱೆಯಂ ಪರಿಗೊಳುತ್ತುಂ ತೋಱೆದ ಗೊಂತಮಂ ಬಿಡುತುಂ ಹೂಂಕರಿಸುತ್ತುಂ ಪೋಪಗ್ಗದ ಪು[ಪಾಶಾಂ. ಮ] ರುಳಿಗಳಂ ಮಿಗೆ ಮರಲ್ದು ನೋಡಿದನರಸಂ (ಲೀಲಾವ. ೫-೯೦). [?]

ಪುರುಳು 'ಪುರುಳ್' ನೋ.

ಪುರುಳುಗಾಣು 'ಪುರುಳ್ಗಾಣ್' ನೋ.

ಪುರುಳುಗೆಡಿಸು, ಹುರುಳುಗೆಡಿಸು (ಕ್ರಿ). ೧. ಬಲಗುಂದಿಸು ; ನಿಸ್ತೇಜಗೊಳಿಸು ; ನಿಶಕ್ತಗೊಳಿಸು ; ನಿಸ್ಸಾರವೆನ್ನುವಂತೆ ಮಾಡು : ವರುಣನ ಪುರುಳುಗೆಡಿಸಿ ವಾಯುವ್ಯನ ಮರುಳುಮಾಡುತ ಧನದನನು ದೊರಗೆಡಿಸಿದನು (ಕೃಷ್ಣಶಾಂ. ೬-೬೬). ೨. ಹೀಯಾಳಿಸು ; ಧಿಕ್ಕರಿಸು : ಪುರುಳಿಯ ಪುರುಳುಗೆಡಿಪ ನುಡಿ ಕವಳೀಸ್ತಂಭಮನೇಳಿಸುವೂರುಗಳೊಪ್ಪಿದುವಾ ಸತಿಗೆ (ಇಯುಶಾ. ೨-೬). **ಹುರುಳುಗೆಡಿಸು** : ೧. ಬಾಹ್ಲಿಕ ದುರುಳ ಸೌಬಲ ಸೋಮದತ್ತರ ಹುರುಳುಗೆಡಿಸಿದನೊಬ್ಬ ಶಿಶು ಗೆಲಿದನು ಮಹಾರಥರ (ಕುಪಾಕ್ರೂ. ೫-೨೬) ; ವಿವಿಧ ವಿಟರನು ಹುರುಳುಗೆಡಿಸುವ ನವಯವ್ವನಭರದ ವನಿತೆಯರೊಪ್ಪಿದರು (ತೋರಗಾ. ೦-೫-೨೬) ; ಆ ಸುರಾಧಿಪನ ಹುರುಳುಗೆಡಿಸುವೆನು (ಉತ್ತರಾ. ೬-೯). ೨. ಹುರುಳುಗೆ[ಪಾಶಾಂ-ಗಿ]ಡಿಸು ವಿರಾವು ನುಡಿದೊಡೆ ಕರಗಿ ಕುಂತಿ:ಮಕ್ಕಳೆಂದೊಡೆ ಹರಹಿಕೊಂಬರಿ (ಕುಪಾಕಾಂ. ೫-೧೮) ; ಹರುಹುಗೆಟ್ಟುದು ತೇರು ಸಾರಥಿ ಹುರುಳುಗೆಡಿಸಿಯೆ ನುಡಿದ ನಂಬಿನ ಕೊಱತೆ ತಾ ಮುನ್ನಾಯ್ತು ದೈವದ್ರೋಹಿಗಳು ನಿಮಗೆ ಅರಿವಿಜಯವೆಲ್ಲಿಯದು (ಕುಪಾಭೀ. ೦-೦೫). ೩. ಮನಸೋಲಿಸು : ಹರಿ ಹರ ಬ್ರಹ್ಮಾದಿ ದೇವರು . . . ಸುಮನಸರೆಲ್ಲರನು ಬಿಡದೆ ಹುರುಳುಗೆಡಿಸುವೆ ಸಾಕು ನಳಭೂವರನ ಮಾತೇನಿನ್ನು (ನಳಚ. ೯-೯). ೪. ಪೋಲುಮಾಡು ; ಹಾಳುಮಾಡು : ವ್ಯರ್ಥಗೊಳಿಸು : ಆತನೆಚ್ಚದು ಪಾಶುಪತವದ

ನಾತುಕೊಂಬವರಾರು ಬಱದೆ ಧಟಾತಿಶಯವನು ಹುರುಳುಗೆಡಿಸುವಿರಿ (ಶಾಣ್ಮಾಕ್ರೋ. ೦೩-೦೯). [ಪುರುಳುಗೆಡು + — ಇಸ್ಸು$_3$]

ಪುರುಳುಗೆಡು, ಹುರುಳುಗೆಡು (ಕ್ರಿ). ೧. ಶಕ್ತಿಗುಂದು; ನಿಃಸತ್ತ್ವವಾಗು; ಬಲಹೀನವಾಗು: 'ಪುರುಳುಗೆಡಿಸು' ಪರಾ. **ಹುರುಳುಗೆಡು**: ೧. ಅಭಿಮಾನ್ಯವಿನ ಹೊಯ್ಲಲಿ ಹುರುಳುಗೆಟ್ಟುದು ಹೆಸರ ನಾಯಕವಾದಿ (ಶಾಣ್ಮಾಕ್ರೋ. ೩-೩೩); ಮಹಾಮುನಿಯ ಪರಮಶಾಪವದೊಂತು ನೃಪನಲಿ ಹುರುಳುಗೆಟ್ಟುದು (ಭಾಗ. ೯-೩-೩). ೨. ಅವಹೇಳನವಾಗು; ಅವಮಾನವಾಗು: ದುರಾಳತನದಿಂದಣ್ಣದೇವನ ಹುರುಳುಗೆಡೆ ನುಡಿದನು (ಶಾಣ್ಮಾಕ. ೦೨-೩೦). [ಪುರುಳು (< ಪುರುಳ್) + ಕೆಡು$_1$]

ಪುರುಳುಗೊಳ್ 'ಪುರುಳ್ಗೊಳ್' ನೋ.

ಪುರುಳುಗೊಳಿಸು (ಕ್ರಿ). ಅರ್ಥಪೂರ್ಣವಾಗುವಂತೆ ಮಾಡು; ಸಾರವತ್ತಾಗಿ ಮಾಡು: ಅರಸಿಯರನಿಬರುಮಾದರದಿಂದೆನ್ನ ಸರಸಕಾವ್ಯವ ಸವಿವಂತೆ ಪರಮಪತಿವ್ರತೆಯರ ನಡತೆಯನಿಲ್ಲಿ ಪುರುಳುಗೊಳಿಸಿ ಪೊಗಳುವೆನು (ಹರಿಶ. ೦-೧೭). [ಪುರುಳುಗೊಳ್ (< ಪುರುಳ್ಗೊಳ್) + —ಇಸ್ಸು$_3$]

ಪುರುಳೆ 'ಪುರಲೆ' ನೋ.

ಪುರುಳ್ಗಾಣ್, ಪುರುಳುಗಾಣು (ಕ್ರಿ). ೧. ಪ್ರಯೋಜನವನ್ನು ಕಾಣು; ಫಲವನ್ನು ಪಡೆ: ನಾಡಿಗರೆ ದಿನದಿನಂ ಬೇಳ್ಪೊಂದು ಹವ್ಯಮನುಂಡು ಸವಿಗೊಂಡ ಬೋಱಿಯರೆತ್ತಾನುಮೊರ್ವನೀ ನಿಚ್ಚವಲಿಯೆಡೆಯಿಂ ಪುರುಳ್ಗಾಣದೆ ಪಡ್ಡೆವಿಟ್ಟು ಶಿರುಳಂ ಸಮಂತು ಪುರುಳಂ ತೋಱೆಪ ಜೋಗವೆಣ್ಗೆ ಸಂಚುಗೈಯಲೊಡಂ ಕಱುಂಬಿ ನಿರ್ನೆರಮಿಾವುಜ್ಜುಗಕ್ಕೆ ತಡೆವರ್ಪರ್ (ರಾಪಾಶ್ವ. ೫೫-೩೦). **ಪುರುಳುಗಾಣು**: ೨. ಧನವನ್ನು ಕಾಣು; ಐಶ್ವರ್ಯವನ್ನು ಪಡೆ: ಪುಟ್ಟಿದಂದಿಂದ ಪುರುಳುಗಾಣದವರು ನೆಟ್ಟನೆ ನಿಧಿಯ ಕಂಡಂತೆ ಕಟ್ಟೆಱಕದೊಳಿನಿಯನ ಕಾಣುತ ಮರವಟ್ಟು ಮೈಮಱೆತು ನಿಟ್ಟಿಪಳು (ಹರಿಶ. ೭-೯೦).

[ಪುರುಳ್ + ಕಾಣ್]

ಪುರುಳ್ಗೊಳ್, ಪುರುಳುಗೊಳ್, ಹುರುಳುಗೊಳ್ಳು (ಕ್ರಿ). ೧. ಸತ್ತ್ವಯುತವಾಗು; ಹುರಿಯೇರು; ಕೆಚ್ಚುಗಟ್ಟು: ಮಹಾಸ್ವಾಮಿಯವರ ಸೊಮ್ಮಿನ ಸಯ್ಪಿನ ಬಿರುದು ಕುಬೇರನನ್ನೂ ಕಲ್ಪವೃಕ್ಷ ಕಾಮಧೇನು ಚಿನ್ತಾಮಣಿಗಳನ್ನೂ ನಾಚಿಸುತ್ತ ಪುರುಳ್ಗೊಂಡಿರುವುದು ವಿಶ್ವವಿದಿತವಾಗಿದೆ (ಪಟ್ಟಣ. ೧೨-೬). ೨. ಧನವನ್ನು ಪಡೆ; ಹಣವನ್ನು ಗಳಿಸು: ಪುಯಿಲನೆಸಗುವಲ್ಲಿಯುಂ ಪೊಡವಿಯುಂ ಪೊರೆವಲ್ಲಿಯುಂ ಪುರುಳ್ಗೊಂಬಲ್ಲಿಯುಂ ಪುಸಿವುಗದೆ ಧರ್ಮಮನಾರಯ್ದು ನಡೆವುದು (ಪಶಪಂ. ೩೩-೦೦). **ಪುರುಳುಗೊಳ್**: ೧. 'ಪುರುಳುಗೊಳಿಸು' ಪರಾ. ೨. ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ ದಿಟ್ಟ ಗಂಡುಗಳಂತಿರಲಿ ಕೊಟ್ಟುದಱಿಂದ ತಣಿವ ಕುಬೆರಗೆ ಮನಮುಟ್ಟಿ ಕೊಡುವುದು ಕೋವಿದರು (ಹರಿಶ. ೩-೦೦). **ಹುರುಳುಗೊಳ್ಳು**: ೧. ಹುರುಳುಗೊಂಡ ತಿರುಳಿನಲ್ಲಿ ನನ್ನ ರುಚಿಯ ನೀನು ಕಂಡು ನಿನ್ನ ಸವಿಯ ನಾನು ಉಂಡು (ಅರಳು. ೧೧೬-೦೩). [ಪುರುಳ್ + ಕೊಳ್$_1$]

ಪುರುಳ್ಕೊಡವು (ನಾ). ಅರ್ಥಾಲಂಕಾರ: ನೂಱುಂ ಪುರುಳ್ಕೊಡವುಗಳಂ ಬೇಱೆನೆ ಬಣ್ಣಿಸಿದನವಱ ಭೇದಂಗಳುಮಂ (ಅಕ್ಷತಿ. ೦-೦೭).

[ಪುರುಳ್ + ತೊಡವು]

ಪುರೆ$_1$ (ನಾ). ಭಲೆ, ಶಹಬ್ಬಾಸ್ ಎಂಬರ್ಥದ ಒಂದು ಹೊಗಳಿಕೆಯ ನುಡಿ,—ಮೆಚ್ಚುಗೆಯ ಮಾತು: "ಅರರೇ ಭಾಪುರೆ ಮಱು . . . ಧಿರುರೇ ಪುರೆಯೆನೆ ಕೊಂಡಾಟಂ" (ಪಶಪಂ. ೫೫); ಪುರೆ ಮಱು ದಾನವೆ ದಾತೃವೆ ಪಾತ್ರವೆ ಸರಿಯುಂಟೆ ನಿನಗೆ (ಧರ. ೩-೦೦೦); ಹರ ಮೆಚ್ಚೆ ಹೋಹೊ ಭಾಪುರೆ ಪುರೆ ಪುರೆಯೆನೆ ಸುರಿವರ್ಷಮಳೆಯ ನಿರ್ಜರರು (ಧ್ವನ್ಯಾ. I, ೨೫೬). 'ಪುರ್ರಿ', 'ಪುರೆಯಿಡು' ಪರಾ.

[ದೇ.॥ ತಮಿ. ಪುರೈ = ತಕ್ಕುದಾಗು, ಒಪ್ಪು; ತೆಲು. ಪುರೆ, ಪುರೇ]

ಪುರೆ$_2$ (ನಾ). (ಕರಾ) ಭಾವಣೆ; ಸೂರು: ಮಳೆಗಾಲ ಆರಂಭವಾಗಲು ಹಡಗಸಂಚಾರ ನಿಂತು ಹೋಯಿತು. ಮಂಜಿ ಪತ್ತೆಮಾರುಗಳನ್ನು ದಡಕ್ಕೆ ಎಳೆದು ಮಳೆಯಿಂದ ಒದ್ದೆಯಾಗದಂತೆ ಪುರೆ ಕಟ್ಟಿದರು (ಕೋಲಾ. ೬).

[← ತುಳು. ಪುರೆ, ಪೊರೆ]

ಪುರೆ$_3$ 'ಪೂರಿ' ನೋ.

ಪುರೆ$_4$, ಪುರೇ (ಅ). ಸಾಕು, ಇನ್ನು ಬೇಡ ಎಂಬರ್ಥದ ಮಾತು: ಶ್ರೀಕಂಠ ಹೋ ಪುರೆ ಸಾಕು ನಿಲ್ಲು ಎನುತ (ಕೃಷ್ಣಲೀ. ೦-೨೬೮); ಪುರೆ ಸಾರು ನಿಲ್ಲು ಕುಳ್ಳಿರು ತೊಲಗೆಂದು ನಿರ್ಜರವೇತ್ರಧರರು ತಿದ್ದಿದರು (ಧರ. ೫೯-೦೩). **ಪುರೇ**: ಹೋಹೋ ಪುರೇ ಪುರೇ ಸಾಕುಸಾಕೈ ನಿನ್ನ ಸಾಹಸದ ಭಕ್ತಿಗೆಮ್ಮಯ ಮನಂ ಮಚ್ಚಿತು (ಕಂಪು. ೦೯-೦೬).

[← ಮರಾ. ಪುರೇ]

ಪುರೆಕಾಮ (ನಾ). ಒಬ್ಬಾತನ ಹೆಸರು: ಬಾಣಸಾಮಿ ಮಗನ್ ಪುರೆಕಾಮನ್ . . . . ಅಱದಿಯೊಳ್ಸತ್ತನ್ (ಎಳ. ೫, ಶೌಂಗಾ. ೧೫-೬; ಸು. ೫೫೦?). [? + ಕಾಮ]

ಪುರೆಯಿಡು (ಕ್ರಿ). ಭಲೆಯೆನ್ನು; ಕೊಂಡಾಡು: ನಿಮ್ಮ ದೊರೆಯೆಂತು ನಡೆದನಂತವನೆ ಪುರೆಯಿಟ್ಟು ಪೊಗಳ್ವಿರಿ (ಧರ. ೯೭-೧೦); ಕೆದಱ ಜಂತ್ರದ ಪುಷ್ಪವೃಷ್ಟಿಕಳಾಸವ ಸುದಶಿರನ್ನಳು ಪುರೆಯಿಟ್ಟು ಮದನಮಂಜರಿಯಂತ್ ಕೈನೀಡೆ ಕೊಟ್ಟಳಾ ಚೆದುರೆ ಮಂದಾರಮಾಲೆಯನು (ಭಾಗಳು. ೨೨-೦೦೬). 'ಪುರಿಯಿಡು' ಪರಾ. [ಪುರೆ$_1$ + ಇಡು$_1$]

ಪುರೇ 'ಪುರೆ$_4$' ನೋ.

ಪುರೋಕ್ತ, ಪುರೋಕ್ತು, ಪ್ರೋಕ್ತು (ನಾ). ಮಾರಾಟ; ಬಿಕರಿ; ವಿಕ್ರಯ: ಅಮಾನೀ ದವಸ . . . ಜತನದಿಂದ ಇರಿಸಿ ಗಿರಾಕಿ ಬಂದ ಬಂದ ಪ್ರಕಾರ ಸರಕಾರಕ್ಕೆ ನಿರಖು ಜಾಸ್ತಿ ಕೂಡಿ ಬರುವ ಮೇರೆ ಪುರೋಕ್ತ ಮಾಡಬೇಕು (ಪಮಾಪಂ. II, ೭೩). **ಪುರೋಕ್ತು**: (ಕ). **ಪ್ರೋಕ್ತು**: (ಕ).

[← ಪಾರ. ಹಿಂ. ಫರೋಖ್ತ್]

ಪುರೋಕ್ತಾನಿ (ನಾ). ಎರಡನೆಯ ಸಲ ಆಗುವ ಮಾರಾಟ,—ಬಿಕರಿ: ಪುರೋಕ್ತಾನಿ ಆದ ದವಸ ಹೋಗಲಾಗಿ ಬಾಕಿ ನಿಂತ . . . ದವಸಕ್ಕೆ . . . ಬಂದೋಬಸ್ತು ಮಾಡಬೇಕು (ಪ.ಹಾಪಂ. II, ೭೩).

[← ಪಾರ. ಫರೋಖ್ತಾನೀ]

ಪುರೋಗ (ಗು). ೧. ಮುಂದಿರುವ; ಅಗ್ರೇಸರ; ಮುಖ್ಯವಾದ. (ನಾ). ೨. ಮುಂದಾಳು; ನೇತಾರ; ಪ್ರಮುಖನಾದವನು: "ಅಗ್ರ್ಯಂ, ಪ್ರಧಾನಂ, ಪ್ರಮುಖಂ, ಪುರೋಗಂ, ಮುಖ್ಯಂ . . . ಅಗ್ರಣೀಃ — ಈ ೧೩ ಮುಖ್ಯಂ" (ಪಶಾಮು. ೦೦೩-೩). [ಸಂ.]

ಪುರೋಗಮ (ನಾ). ಮುಂದಾಳು; ಮುಖಂಡ; ಪ್ರಮುಖ: "ಅಗ್ರೇಸರಂ ಪುರಸ್ಸರನಗ್ರಣಿ ಮುಖ್ಯಂ ಪುರೋಗಮಂ" (ಸಕ್ತಿಕೋ. ೮೩-೯); ಮುಕುಂದಂ . . . ಮುಂದೆ ನಿಂದಿರ್ದ ನಂದಗೋಪ ಪುರೋಗಮರನನುರಾಗದಿಂ ನೋಡಿ (ಹರಿ. ೯-೮೦ ಪ). [ಸಂ.]

ಪುರೋಗಾಮಿ (ನಾ). ೧. ಮುಂದೆ ಹೋಗುವವನು; ಅಗ್ರಗಾಮಿ: ಕೈಲಾಸದಲ್ಲಿ ಕಮ್ಯುನಿಷ್ಟರನ್ನು ಕಂಡು ಪುರೋಗಾಮಿಗಳಂತೆಯೇ ಪ್ರತಿಗಾಮಿಗಳೂ ಹೌಹಾರಬಹುದು (ಕೈಲಾಕ. ೧ ಮುನ್ನುಡಿ). ೨. ಮುಖಂಡ; ಮುಂದಾಳು. ೩. ಮುಂಭಾಗದಲ್ಲಿ ನಡೆಯುವ ಸೇವಕ: "ಪುರೋಗಃ, ಅಗ್ರೇಸರಃ...ಪುರೋಗಮಃ, ಪುರೋಗಾಮೀ—೭ ಮುಂದುಕಡೆ ನಡೆಯುವ ಊಳಿಗದವನು" (ಸಿದ್ಧಾಂತ. ೨೫೮). ೪. ಮೊದಲು ಬಂದುದು; ಪೂರ್ವಭಾವಿಯಾದುದು: ಡಾ॥ ವ್ಹಿಟ್ನೆ ಅವರ ಪ್ರಕಾರವಂತೂ ಕ್ರಿಯಾ

ರೂಪಗಳೇ ಭಾಷೆಯ ಪುರೋಗಾಮಿಗಳು (ಭಾಷಾಶಾ. ೨೭೬).

[ಸಂ. ಪುರೋಗಾಮಿನ್]

ಪುರೋಚಿ (ನಾ). ೧. (ಉಕ) (ಕಲಿಯಬೇಕಾದ ಮಗ್ಗಿ, ಕೋಷ್ಟಕ ಮೊದಲಾದುವುಗಳನ್ನು ಕಂಠಪಾಠ ಮಾಡುವ ಉದ್ದೇಶದಿಂದ ಬೇಗಿನಲ್ಲಿ ಹಾಗೂ ಸಾಯಂಕಾಲದಲ್ಲಿ) ಪುನಃ ಪುನಃ ಸಾಮೂಹಿಕವಾಗಿ ಹೇಳುವುದು; ಸಂತೆ ಹೇಳುವುದು; ಪುರಶ್ಚರಣ: ಎಲ್ಲ ವಿದ್ಯಾರ್ಥಿಗಳನ್ನು ಸಾಲಾಗಿ ನಿಲ್ಲಿಸಿ "ಪುರೋಚಿ" ಹೇಳಿಸುವಾಗ ನನಗೆಂಶಹ ಉಬ್ಬು! (ಗಾಗಶ. ೬೬). ೨. ನಡೆದು ಹೋದ (ದುಃಖದ) ಸಂಗತಿಯನ್ನು ಪುನಃ ಹೇಳುವುದು; ಪುನರಾವರ್ತನೆ: ಅಣ್ಣ ತಂದೆ ತಾಯಿಗೆ ಕಾರು ಕೊಟ್ಟೆ. ಅವರೂ ಬಂದರು. ಹೈದ್ರಾಬಾದಿನ ಕತೆಯ ಪುರೋಚಿಯಾಯಿತು (ರೀಕಶ. ೦೬೬); ಎಲ್ಲವನ್ನೂ ಮುಂಚಿನಿಂದ ನಾನು ಮತ್ತೆ ಪುರೋಚಿ ಪಾಚಿಸಿದೆ (ರೀಕಶ. II. ೦೮೫).

[← ಮರಾ. ಪರವಚಾ, ಪರವಾಚಾ, ಪರೋಚಾ]

ಪುರೋಚೆ 'ಪುರವಣೆ' ನೋ.

ಪುರೋಡಾಶ (ನಾ). ೧. ಯಜ್ಞಯಾಗಾದಿ ಶ್ರೌತಕರ್ಮಗಳಲ್ಲಿ ದೇವತಾಪ್ರೀತ್ಯರ್ಥವಾಗಿ ಕೊಡುವ ಹವಿಸ್ಸು; ತುಪ್ಪದಲ್ಲಿ ಹುರಿದು ನೀರಲ್ಲಿ ನೆನಸಿದ ಹಿಟ್ಟು: ಆದರಿಸಿ ಪರಿಚಾರಕರು ಸಂಪಾದಿಸಿದ ಘೃತ ಚರು ಪುರೋಡಾಶಾದಿ ಸಂಭಾರೌಘವನುವಾಯಿತ್ತು ನಿಮಿಷದಲಿ (ಕುಮಾಸಂ. ೬.೨೨); ಚರು ಪುರೋಡಾಶ ತಂಡುಲ ತಿಲ ವ್ರೀಹಿ ಘೃತದುರು ಹವಿರ್ಧೂಮದಿಂದರುಣಲೋಚನನಾಗಿ . . . ಯಜ್ಞಶಾಲೆಯೊಳಧ್ವರದೀಕ್ಷೆಯಿಂದೆ ಕುಳ್ಳಿರ್ದೆಸೆವ ರಾಮನಂ ಕಂಡು ಚರರಿಂತೆಂದರು (ಕೃಷ್ಣಾ. ೨೦-೩೩). ೨. ಹೋಮ ಮಾಡಿ ಉಳಿದ ಹವಿಸ್ಸು; ಹುತಶೇಷ: ಅಂತು ಪುರೋಡಾಶಪವಿತ್ರೋದರನುಂ ಸೋಮಪಾನಕಪಾಯಿತೋದರನುಮಾಗಿ ಮೂವತ್ತೆರಡುದಿವಸದೊಳ್ ಕ್ರತುವಂ ನಿರ್ವರ್ತಿಸಿ (ಸಂಪಶಾ. ೬-೩೬ ಪ); ಪುರೋಡಾಶಭೋಜನಪವಿತ್ರೀಕೃತಗಾತ್ರನುಂ . . . ದೇವಶರ್ಮನೆಂಬ ವಾರ್ವನಿರ್ವಂ (ಪಾಶಕಂ. ೦೮೯-೬). [ಸಂ.]

ಪುರೋದ್ಯಾನ (ನಾ). ನಗರದ ಉಪವನ; ನಗರೋದ್ಯಾನ: ಪಾಳೆಯಂ ಬಿಟ್ಟುದು ಪುರೋದ್ಯಾನವೀಥಿಗಳೊಳ್ (ಕೃಷ್ಣಾ. ೦೭-೦೦); ಪುರೋದ್ಯಾನ ವೀಥಿಯೊಳ್ ಪಾಳೆಯಂ ಬಿಟ್ಟುದರ್ಜುನನ ಸೇನೆ! (ಜಕ್ರಾಭಗ. ೬೨-೦೯೬೪).

[ಸಂ.]

ಪುರೋಧ (ನಾ). ಪುರೋಹಿತ: "ಸೌವಸ್ತಿಕಂ ಪುರೋಧಂ ಪುರೋಹಿತನಲ್ಕುಂ" (ಮಂಗಶಾ. ೬೯-೩). [ಸಂ. ಪುರೋಧಸ್]

ಪುರೋಧಸ (ನಾ). ೧. ರಾಜಪುರೋಹಿತ. ೨. ಪುರೋಹಿತ: ಅಂತು ಬಿನ್ನವಿಸಿದ ಪುರೋಧಸಪುರಸ್ಸರಂ . . . ರಾಜ್ಯಾಭಿಷಚನಮಂಡಪದೊಳ್ ಮಂಗಳವಿಧಾನಮನವ್ಯವಧಾನಂ ಮಾಡಿಮೆಂದು ಕಟಿಸಿದಾಗಳ್ (ಅಪಂಪು. ೩-೧೨ ಪ); ಶರ್ಯಾತಿರಾಜಂ . . . ಜನ್ನಕ್ಕೆ ತನ್ನಳಿಯನನೆ ಪುರೋಧಸನಾಗೆ ಬರವೇಟ್ಟು (ರಾಮಸ್ಕ. ೬೯-೨೫). [ಸಂ. ಪುರೋಧಸ್]

ಪುರೋಪಕಂಠ (ನಾ). ಪಟ್ಟಣದ ಹತ್ತಿರದ ಪ್ರದೇಶ: ದನುಜಪುರೋಪಕಂಠದ ಕೂಲವತಿಗಳ ತೀರದಲಿ ಬಿಡಿಸಿದನು ಪಾಳೆಯವ (ಕುಮಾಸಂ. ೦೨-೦೩); ರಾಜಶಿರೋಮಣಿಯು ಟಕಾಯ ಬಿಟ್ಟುದು ಬಳಿಕ . . . ಪುರೋಪಕಂಠದಲಿ (ಕೊಕಶಾ. ೦-೬-೦೨). [ಸಂ.]

ಪುರೋಭಾಗ (ನಾ). ೧. ಮುಂಭಾಗ; ಮಂದಣ ಪ್ರದೇಶ: ಅನಿಂದ್ಯರಾಜಭವನಪುರೋಭಾಗದೊಳರ್ಮ ನಡೆದೆರೆದರ(ವ)ನರೆನಿಸಿ ಲೋಭಕ್ಕಸರಪಸರಮಿಲ್ಲದಿರ್ದ ಬಚ್ಚರ ಪಸರಂಗಳುಮಂ . . . ತೋಱುತ್ತುಂ ಬಂದು (ಶಾಂತಿಪು. ೩-೭೫ ಪ); ಭಗವದಿಂದುಮಪೌಳಿಯ ಪುರೋಭಾಗದೊಳ್ ನಿಂದು ಪೊಡಮಟ್ಟು (ಶಾಂಪು ೬೮೩); ಚಂದ್ರಾರ್ಕರಂ ಗೆಲೆ ವಂದಾ ಬರುತಿರ್ಪವರ್ ಭರತ ಶತ್ರುಘ್ನರ್ ಪುರೋಭಾಗದೊಳ್ (ಪಂಪಾಮಾ. ೩-೦೦೦). ೨. ಮುಂಭಾಗದ ಸೈನ್ಯ; ಮುಂಚೂಣಿ: ಕಲಿಭೀಮನೆಡದಲಿ ಕಲಕಿದನು ಬಲವಂಕದಲಿ ಕೈವಳಿಸಿ ಕೊಂದನು ವರ ಪುರೋಭಾಗವ ವಿಭಾಡಿಸಿದ (ಕುಮಾಸಂ. ೧೩-೦೯). ೩. (ತನಗೆ) ಸಂಬಂಧವಿಲ್ಲದ ವಿಷಯದಲ್ಲಿ ಬಾಯಿ ಹಾಕುವಿಕೆ; ಅಧಿಕಪ್ರಸಂಗತನ. ೪. ಹೊಟ್ಟೆಕಿಚ್ಚು; ಮತ್ಸರ. [ಸಂ.]

ಪುರೋಭಾಗಿ (ಗು). ೧. ಅಧಿಕಪ್ರಸಂಗ ಮಾಡುವ. ೨. ಕುಹಕ ಬುದ್ಧಿಯುಳ್ಳ; ರಂಧ್ರಾನ್ವೇಷಿಯಾದ; ಹುಳುಕುಗಳನ್ನು ಹುಡುಕುವ ಸ್ವಭಾವದ. (ನಾ). ೩. ಮತ್ಸರಬುದ್ಧಿಯುಳ್ಳವನು; ದೋಷೈಕದೃಷ್ಟಿಯವನು: ಛಿದ್ರಾನ್ವೇಷಿ: "ದೋಷಗ್ರಾಹಿ ಪುರೋಭಾಗಿ" (ಪಸ್ತುಕೋ. ೦೦೦-೦೭). ೪. ಎರಡುನಾಲಗೆಯವನು; ಸುಳ್ಳುಗಾರ: "ಎರಡು ನುಡಿವವ ಪುರೋ[ಪಾಠಾಂ.ಪರೋ]ಭಾಗಿ ದ್ವಿಜಿಹ್ವಕಂ" (ಪುಂಪಾ. ೬೮-೯). [ಸಂ. ಪುರೋಭಾಗಿನ್]

ಪುರೋಭಿವೃದ್ಧಿ (ನಾ). ಮುಂದಿನ ಏಳಿಗೆ; ಉತ್ತರೋತ್ತರ ಉನ್ನತಿ,—ಶ್ರೇಯಸ್ಸು: ಅವನು ಎಷ್ಟರ ಮಟ್ಟಿಗೆ ಪುರೋಭಿವೃದ್ಧಿ ಹೊಂದುವುದು ಸಾಧ್ಯವೋ ಅಷ್ಟು ಮಟ್ಟಿಗೆ ಪುರೋಭಿವೃದ್ಧಿ ಹೊಂದುವುದಕ್ಕಾಗುವುದಿಲ್ಲ (ಕ್ರಿಯಾಶಿ. ೦೫೯); ವ್ಯಕ್ತಿಯ ಪುರೋಭಿವೃದ್ಧಿ . . . ರಾಷ್ಟ್ರದ ಅಖಂಡ ಹಿತ (ಕಿಷ್ಕಿದ. ೨೬). [ಸಂ.]

ಪುರೋಹಿತ (ಗು). ೧. ಮುಂದೆ ಇರಿಸಿದ.—ಇಟ್ಟ. ೨. ನೇಮಕ ಮಾಡಿದ; ನಿಯಮಿಸಿದ. (ನಾ). ೩. ಕಾರ್ಯನಿರ್ವಹಣೆಗಾಗಿ ನಿಯಮಿತನಾದವನು. ೪. (ಒಂದು ಮನೆತನದ) ಎಲ್ಲ ಧಾರ್ಮಿಕ ವ್ರತಾದಿಗಳನ್ನು ತಾನೇ ಮುಂದಾಗಿ ನಿಂತು ಮಾಡಿಸುವವನು: "ಪ್ರಶಾಂತಹಿತಾನುಷ್ಠಾನರತಂ ಕೃತಶಾಂತಿವಿಧಾನಂ ಸೌವಸ್ತಿಕಂ ಪುರೋಹಿತನಾತಂ" (ಪಸ್ತುಕೋ. ೬೦-೫೯); ಪುರೋಹಿತಂ . . . ಅಟ್ಟಲೆವೇಟ್ಟನವರ್ಗಶಾಸನಹರಂ (ಆದಿಪು. ೦೯-೩೦); ನಾಮಕರಣೋತ್ಸವಮುಂ ಮಾಡಲೆಂದು ಗಾರ್ಗ್ಯನೆಂಬ ಪುರೋಹಿತಂ . . . ಪರಸಿ ಪೋಪುವುಂ (ಪಾಪಿ. ೩-೨೬ ಪ); ಪೊಡವಿಯೊಳಗೆ ಪುರೋಹಿತರನವಗಡಿಸಿ ಧರ್ಮದ ಬಲದಿ ನಾಕಕೆ ನಡೆವ ರಾಯರ ಹೊಯಿದಿಳಿಯಲಿಕ್ಕುವರಧೋಗತಿಗೆ . . . ನಿರ್ಜರರು (ಕುಮಾಸಂ. ೯-೭೭). [ಸಂ.]

ಪುರೋಹಿತಪ್ರಭುತ್ವ (ನಾ). ಧರ್ಮಾಧಿಕಾರಿಗಳ ಅಧಿಕಾರ: "(ಧರ್ಮ ವಿಷಯಗಳಲ್ಲಿ) ಪುರೋಹಿತಪ್ರಭುತ್ವ" (Hierarchy. ೩೦೪೫). [ಸಂ.]

ಪುರೋಹಿತರತ್ನ (ನಾ). [ಜೈನ] ಚಕ್ರವರ್ತಿಗೆ ಒದಗುವ ಏಳು ಜೀವರತ್ನಗಳಲ್ಲಿ ಒಂದು; ಉತ್ತಮನಾದ ಪುರೋಹಿತ: ಶಾಂತಿಕಪೌಷ್ಟಿಕಕ್ರಿಯಾಕುಶಲನುಂ ಧರ್ಮಕಾರ್ಯಾದಿಕುಶಲನುಮಪ್ಪ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ . . . ಮನೋಹರಮಪ್ಪ ಸ್ತ್ರೀರತ್ನಮುಮೆಂದಿಂತು ಜೀವಾಜೀವರತ್ನಂಗಳಂ . . . ಪೂಜಿಸಿ (ಅಪಂಪು. ೦೦-೩ ಪ); ಚಕ್ರವರ್ತಿಯನೆಯ್ದಲೀಯದೆ ರಾಜ್ಯತಂತ್ರವೆಲ್ಲಮಂ ಸಂತಯ್ಸಿ ನಡೆಯಿಸುವ ಪುರೋಹಿತರತ್ನಮುಂ (ಜಸಂಸಂ. ೦೭-೨೩). [ಸಂ.]

ಪುರ್ಗಿ 'ಪುಟ್ಗಿ' ನೋ.

ಪುರ್ಗು 'ಪುಟ್ಗು' ನೋ.

ಪುರ್ಚು, ಪುಚ್ಚು, ಹುಚ್ಚು (ನಾ). ೧. ಮರುಳು; ಬುದ್ಧಿಭ್ರಂಶ; ಮತಿಭ್ರಮಣೆ: ಸಂಭವಿಸಲ್ ವಾರುಣಿಯೊಂದೆ ಪುರ್ಚು ದಿನವಂ ತಾಂ ಬಿಳ್ದನಸ್ತಾದ್ರಿಯೊಳ್ (ಕಂದ್ರಶ್ಯ. ೦೦-೩); 'ಇಂತೆಮಗೆ ಪೆರ್ಕೊರಗು —ಆ ಪುರ್ಚು ಪಱಿದೊಡಂ (ಅಶ್ವತ್ಥಾ. ೦೦-೨೩೩). 'ಪುರ್ಚುಗೊಳ್' ಪರಾ. ೨. ಮರುಳಂ ಹಿಡಿದ ವ್ಯಕ್ತಿ; ಬುದ್ಧಿಭ್ರಂಶವಾದವನು: ಅಕಟಾ, ಮನವೇ, ನೀಂ ಪುರ್ಚಲಾ! (ಪುಸೋಸಂ. ೦-೯ ಪೀಠಿ).

೩. ಹೆಚ್ಚಳ; ಆಧಿಕ್ಯ : 'ಪುರ್ಚುವೊಳೆ' ಪರಾ. **ಪುಚ್ಚು**$_1$: ೧. ಎಲ್ಲಿಯ ಗಂಗೆ ನೀನಾರು ವಿಚಾರವೇನಿಲ್ಲವೆ ಗಿರಿಜೆಯ ಮಾಸಲ ಪುಲ್ಲಾಳಿಯು ಮೆಚ್ಚಿಸೆ ಪುಚ್ಚು ಪೆಚ್ಚಿತೆ (ಕೊಮಸೇ. ೦೨-೬೮); ಕಚ್ಚಿದುದಾ ಪೊಲ್ಕಿತನ ತಕ್ಷಕನಂತದು ಪೋಗೆ ಚಿತ್ತದೊಳ್ ಪುಚ್ಚಿಡೆಗೊಂಡ ಮಾಳ್ಕೆಯೊಳು ಭೂಮಿಯೊಳ್ಪುರಗಂಗಳೆಲ್ಲ ಕಣ್ಮುಚ್ಚಿಕೊಳ್ಳುತ್ತಲಂದು ಜನಮೇಜಯನಿಂ ಹತವಾದುದಿಲ್ಲವೇ ಕಿಚ್ಚಲಿ (ಕಹಳಿಂ. ೨೯). ೪. ಆಸಕ್ತಿಯನ್ನುಂಟು ಮಾಡುವಂತಹುದು ; ಮೋಹಕವಾದುದು : ಬುಧಜನರಿಗೆ ಪೆಚ್ಚು ದುರಿತವನಕೆ ಕಾಳ್ಕಿಚ್ಚು ವಿರಹಿಗಳಿಗೆ ಪುಚ್ಚು ವೀರರ್ಗೆ ನುಚ್ಚು ಕೇಳ್ವರಿಗಿದು ಕನಿಪೆಲ್ಲದಚ್ಚು (ಸೋಕಕ. ೦-೩೯). **ಹುಚ್ಚು** : ೧. ಶರಧಿಗೆ ಮಿಗೆ ಪೆಚ್ಚಂ ರಥಾಂಗಕ್ಕೆ ಹುಚ್ಚಂ ಪಿರಿದ [ದಿ] ತ್ತುದ್ಭಾವಿಸಿತ್ತು ... ಸುಧಾಸೂತಿಬಿಂಬಂ (ಶ್ರೀಪ್ರ. ೨೪-೦೩೯); ರಚ್ಚಿನಿಂ ಕನಕಕಶ್ಯಪ ರಕ್ತಗುಡಿಯಲುರೆ ಹುಚ್ಚು ಪರಿವೇಷ್ಟಿಸಿತು ಜಾಣ್ವೆಕೆಯು ಗತವಾಗಿ ತಿರ್ಯಕ್ಕು ಮೃಗವಾದೆಲಾ (ಪಂಚು. ೩-೦೭). ೨. ಮಾನಿನಿಯರಾತನ ರೂಪ ಕಂಡುದುಂಟಾದಡೆ ತಮ್ಮ ಗಂಡರ ಮಱೆದು ಹುಚ್ಚಹರು (ಸೋಕಕ. ೨೯-೨೬). ೫. ಪೆಚ್ಚು ಮಾತು ; ಬುದ್ಧಿವಂತಿಕೆಯಿಲ್ಲದ ಬಾಲಿಶವಾದ ನುಡಿ : ಮೆಚ್ಚಿದಿ ನಿಯಳೊಂದು ಹುಚ್ಚ ನುಡಿದರೆ ನೊಚ್ಚಗಾಗಿಹುದು ನಲ್ಲರಿಗೆ (ಪಂಚ. ೦೦-೩೯). ೬. ಗೀಳು ; ಆತ್ಯಾಸಕ್ತಿ ; ವ್ಯಾಮೋಹ : ಅನುಗಾಲ ಕಿಚ್ಚು ಭವದೊಳಗ್ಗಚ್ಚು ಅನುಭವದ ಕಿಚ್ಚು ಸವಿ ನೋಡೋ ಹುಚ್ಚು (ಪುರಂದ. ೨ ೩೩-೩); ವಿಜಯದಾಸರ ತಾತ ಮುತ್ತಾತಂದಿರಿಗಿದ್ದ ಈ ಹುಚ್ಚು ಅಚ್ಚಳಿಯದೆ ಇವರಿಗೂ ಅಂಟಿಕೊಂಡಿತ್ತು (ಕಂಪಿಮ. ೦). 'ಪಿಚ್ಚ$_1$', 'ಪೆಚ್ಚು$_4$' ಪರಾ.

ಹುಚ್ಚುಹುಚ್ಚು, ಹುಚ್ಚುಚ್ಚು (ದ್ವಿರುಕ್ತಿ) : ಅವನು ಯಾವಾಗಲೂ ಹೀಗೇ, ಹುಚ್ಚುಹುಚ್ಚು (ರೂಢಿ); ಹುಚ್ಚುಚ್ಚಾಗಿ ಮಾತಾಡಬೇಡ (ರೂಢಿ). **ಹುಚ್ಚಾಗು** = ಬುದ್ಧಿಗೇಡಿಯಾಗು ; ವಿಚಾರಶಕ್ತಿಯನ್ನು ಕಳೆದುಕೊಳ್ಳು : ಹುಚ್ಚಾಗಬೇಡ ಕಾಳಗದೊಳು ನೀನೆಂದಚ್ಚರಿಯಾಗಿ ನುಡಿದನು (ಅಕಂಸ. ೨೫-೩೭); ಅವರಿವರನು ಕಂಡು ಹುಚ್ಚಾಗದಿರು ಜೋಕೆ (ಇಂಗಾಸ. ೦೦೭-೨೩). **ಹುಚ್ಚುಚ್ಚಾರ** = ಮನಸ್ಸಿಗೆ ಬಂದಂತೆ ನಡೆದುಕೊಳ್ಳುವುದು; ಹತೋಟಿಯಿಲ್ಲದಂತೆ ಇರುವುದು : ಇಲ್ಲಿ ನಿಮ್ಮ ಹುಚ್ಚುಚ್ಚಾರವನ್ನು ಕಟ್ಟಿಡಿರಿ (ಇಂಪಕೆ. ೪೪); ನನಗೆ ಈಗಿನ ಹುಚ್ಚುಚ್ಚಾರ ಎಷ್ಟೂ ಸೇರಿಕೆ ಬರೂದಿಲ್ಲ (ಅಪಾ. ೨೪೭). **ಹುಚ್ಚು ಮಾಡು** = ಬುದ್ಧಿಭ್ರಮಣೆಯಾಗುವಂತೆ ಮಾಡು ; ದಿಕ್ಕುಗೆಡಿಸು : ಪೆಣಗಳು ಪೆಚ್ಚಿದರ್ ಭೂತವೇತಾಳಸಂಕುಲಕೆ ನೆಱೆ ಹುಚ್ಚು ಮಾಡಿದರೊಂದು ನಿಮಿಷದೊಳ್ ದಿವಿಜರಂ ಖಳಭಟರ್ (ತೆಪು. ೪೨-೩೩). **ಹುಚ್ಚುಹುಚ್ಚಾಗು** = ಕಳೆಗುಂದು; ವಿವರ್ಣವಾಗು : ಏನ್ನ ಮುಖವೇಕೆ ಹೀಗೆ ಹುಚ್ಚುಹುಚ್ಚಾಗಿದೆ (ಇಂಗಾಳ. ೪೫).

[ದೇ. ೩ತಮಿ. ಮಲ. ಪಿಚ್ಚು ; ತೆಲು. ಪಿಚ್ಚ; ಕೋಕ. ಪುಚ್]

ಪುರ್ಚುಕುಣಿತ, ಹುಚ್ಚುಕುಣಿತ (ನಾ). ಅವೇಶದ ಕುಣಿತ ; ಮನಸ್ಸು ಬಂದಂತೆ ಕುಣಿಯುವಿಕೆ : ಮುಂಗಾರ ಭೈರವಂ . . . ಧಿಮ್ಕೆಂದು ಧೀಂಕಿಟ್ಟು ಪದಮೆತ್ತಿ ಪದಮಿಟ್ಟು ಪುರ್ಚುಕುಣಿತಂ ಕುಣಿದನಾ ತಲ್ಲಣಿಸಲಂಕೆ ! (ಶ್ರೀರಾಮಾ. ೩೩೯-೨೦೨). **ಹುಚ್ಚುಕುಣಿತ** : ಏ ರಘು, ಏನೋ ಅದು ಹುಚ್ಚುಕುಣಿತ ! (ಕುಂಗಳ. ೨). [ಪುರ್ಚು + ಕುಣಿತ]

ಪುರ್ಚುಗೊಳ್, ಪುಚ್ಚುಗೊಳ್, ಹುಚ್ಚುಗೊಳ್ (ಕ್ರಿ). ೧. ಹುಚ್ಚು ಹಿಡಿ ; ಮತಿಭ್ರಂಶವಾಗು : ನೀಲಿಯ ಕನಕದ ಬೇರಂಕೋಲೆಯ ಬೇರೆಂಬಿವಂ ಸಮಂಗೊಂಡರೆ ನೀಂ ಪಾಲಿಂದೆ ಕುಡಿಸಲಂತದು ಸೋಲಿಸುಗುಂ ಪುರ್ಚು[ಜಾಣಾಂ. ಚ್ಚು]ಗೊಂಡ ನಾಯ್ಗಳ ವಿಷಮಂ (ಪಮಸ. ೦೩-೫೯); ಬಲ್ಲವೆ ಗಾನಮಂ ಬಧಿರಂ . . . ಪುರ್ಚುಗೊಂಡ ಮನುಜಂ ಶಿವತತ್ವಸದರ್ಥಸಾರಮಂ ಬಲ್ಲನೆ (ಶ್ರೀಕ. ೧೦-೩೯). **ಪುಚ್ಚುಗೊಳ್** : ೧. ಪುಚ್ಚುಗೊಂಡ ನಾಯಿ ಬಲ್ಲುದೇ ಸಾಕಿದೊಡೆಯನ (ಪುಕಸಾ. ೦೩-೦೬). **ಹುಚ್ಚುಗೊಳ್** : ೧. ಪಚ್ಚಿವಿಲ್ಲಣ್ಣನೇನಾದ ಹುಚ್ಚುಗೊಂಡಂತೆಮ್ಮ ಬಿಸುಟು ಹೋದನೆ (ಪಂಚ. ೩೨-೩೬). ೨. ಗೀಳು ಹಿಡಿ ; ಮೋಹವುಂಟಾಗು : ಮಚ್ಚ ಜಿಹ್ವಾಲಂಪಟದಿ ಗಜ ಕಚ್ಚೆಯಲಿ ನೇತ್ರದಲಿ ಶಲಭ ಶ್ರುತೇಚ್ಛೆಯಲಿ ದರ್ವೀಕರನು ಘ್ರಾಣೇಚ್ಛೆಯಲಿ ಭ್ರಮರ ಹುಚ್ಚುಗೊಂಡೊಂದೊಂದು ವಿಷಯಕೆ ಮೆಚ್ಚಿ ಕೆಟ್ಟವು ವಂಚವಿಧವಿಷಯೇಚ್ಛೆಯಲಿ ತಗಲಿರ್ಪ ಮನುಜನು ಕೆಡುವುದೇನರಿದು (ಅಮೃತ. ೨-೬೯). ೩. ಮೋಹಗೊಳ್ಳು ; ಮನಸೋಲು ; ಮರುಳಾಗು : ಹುಚ್ಚುಗೊಂಡುದು ನೃಪರ ತಿಂಥಿಣಿ ಅಚ್ಚರಿಯ ಗಂಧರ್ವದತ್ತೆಯ ವೀಣೆಯನು ಕೇಳಿ (ಜಾಕೃಜಾ. ೦೮-೬).

[ಪುರ್ಚು + ಕೊಳ್$_1$]

ಪುರ್ಚುವೊಳೆ, ಹುಚ್ಚುಹೊಳೆ (ನಾ). (ಒಮ್ಮಿಂದೊಮ್ಮೆಲೆ) ಮಹಾಪೂರ ಬಂದ ಹೊಳೆ; ಉಕ್ಕಿ ಹರಿಯುವ ತೊರೆ : ಬಿದ್ದುದೆ ತಡಂ ಪೊಡೆಗೆ ಮದ್ದು ನೆಗೆದುದು, ನನ್ನ ಪೊರಗೆ ! ಪರಿದುದು ಪುರ್ಚುವೊಳೆಯಂತೆ (ಶ್ರೀರಾಮಾ. ೩೭೩-೩೦೯). **ಹುಚ್ಚುಹೊಳೆ** : ಹುಚ್ಚುಹೊಳೆ ಮತ್ತತ್ತಣಿಂದಕುಣುಕಿದುದು (ಪಂಚ. ೦೩-೨೩); ಎಲ್ಲವನ್ನೂ ಕೊಚ್ಚುತ್ತೇನೆಂದು ಹೊರಟ ಈ ಹುಚ್ಚುಹೊಳೆಯನ್ನು ಲೋಕೋಪಕಾರಿಯಾಗುವಂತೆ ಮಾಡುವ ಮಾರ್ಗವೇನಾದರೂ ಇದೆಯೇ ? (ಪಶಂಪಾ. ೦೫೬).

[ಪುರ್ಚು + ಪೊಳೆ$_4$ (< ಪೊಱೆ$_1$)]

ಪುರ್ಚೋಟ್, ಹುಚ್ಚೇಳು (ಕ್ರಿ). ೧. ಮರುಳು ಹಿಡಿ ; ಬುದ್ಧಿ ಕೆಟ್ಟುಹೋಗು : ತಣಿವೆಂಬುದೇ ಇದರ ತೊನಸೆಯಾ ಕೊರ್ಮೊನೆಯ ಕುಟುಕಿಂದೆ ಪುರ್ಚುಪುರ್ಚೆಟ್ಟು ನೆಗೆನೆಗೆದು ಓಡಿದೆನ್ ಸೆನ್‌ಕ್ರಿಯದ ತಣ್ಪೆಱೆವ ಪೊನಲೆಡೆಗೆ (ಪಧಕ್ರ. ೩೬-೬೬೨). **ಹುಚ್ಚೇಳು** : ೧. ಕೃಷ್ಣನು ಹೇಳಿದ ಗೀತೆಯ ಪಾರ್ಥನು ಕೇಳಿದನಾಕಾಲ ನೀಗಿ ಅಭಿಮನ್ಯು ಮಡಿದಾಗ ಮಾತ್ರ ಹುಚ್ಚೆದ್ದನು (ಇಂಗಾಸ. ೦೪೬-೩೦). ೨. ಆವೇಶವು ಹೆಚ್ಚಾಗು; ಉದ್ರಿಕ್ತವಾಗು : ಕ್ರಾಂತಿ ಎಂಬುವ ಭೂತ ತಲೆಗೆದರಿ ಹುಚ್ಚೆದ್ದು ಸುತ್ತುತ್ತಿದೆ ಭೀಮಭಾಯೆಯ ಚೆಲ್ಲಿ (ಪಾಂಕಪಾ. ೫೨-೬); ಕೊಲೆ ಮಾಡಿದ ಆರೋಪಿಗಳಿಗೆ ಶಿಕ್ಷೆಯಾದ ಸುದ್ದಿ ಕೇಳಿ ಲಕ್ಷ್ಮಣ ಹುಚ್ಚೆದ್ದು . . . ಕುಣಿದಾಡಹತ್ತಿದನೆಂದು ಕೇಳಿದೆ (ಪುಸಸ. ೨೯). [ಪುರ್ಚು + ಏಟ್$_1$]

ಪುರ್ತಿಯ (ನಾ). ಒಬ್ಬಾತನ ಹೆಸರು : ನೋನ್ತು ತಾಮ್ ತಮಗೆ ಮೃತ್ಯುವರವಾನಱೆದಂ ಶ್ರೀ ಪುರ್ತ್ತಿಯ (ಎಳ II, ೦೦೫-೩ ; ಸಿ. 700).

[?]

ಪುರ್ಪಾಲಿ (ನಾ). ಒಂದು ಬಗೆಯ ಸಸ್ಯ : ಪುರ್ಪಾಲಿ, ಮುಳ್ಳು ಹಣ್ಣು (ಕ್ಯುಸಿಗಿ. ೬೯-೦೬೨೮). [?]

ಪುರ್ಬ 'ಪುಬ್ಬೆ' ನೋ.

ಪುರ್ಬಿಕ್ಕು 'ಪೂರ್ವಿಕ್ಕು' ನೋ.

ಪುರ್ಬು 'ಪೂರ್ವ' ನೋ.

ಪುರ್ಬೇಱಿಸು, ಹುಬ್ಬೇರಿಸು (ಕ್ರಿ). (ಆಶ್ಚರ್ಯ, ಗರ್ವ, ಕೋಪ ಇತ್ಯಾದಿಗಳಿಂದ) ಹುಬ್ಬನ್ನು ಎತ್ತರಿಸು : ಸಿರಿಮೊಗವಂ ನಸು ಬಾಗಿ ಕರಂ ಭೂವರನಂ ಪುರ್ಬೇಱಿಸಿ ನಡೆ ನೋಡುವ ತರುಣಿಯ ನಡುಗಣ್ಣೆಳಗು . . . ಕರವೆಸೆದುದು (ಪಜುಶಾ. ೪-೦೩). **ಹುಬ್ಬೇರಿಸು** : ಅವಳು ಹುಬ್ಬೇರಿಸಿ, ಏಕೆ, ಯಾರದೇನು ಹೆದರಿಕೆ ? ... ಎಂದಳು (ಶ್ರೀಕಾಪ್ರ. ೨೨).

[ಪುರ್ಬು (<ಪುರ್ವು) + ಏಱಿಸು]

ಪುರ್ರನೆ (ಅ). ಒಂದು ಅನುಕರಣ ಪದ : ಪುರ್ರನೆ ಪಾರುತ ಕಿರ್ರನೆ ಕಿರುಚುತ . . . ಚಿರ್ರನೆ ಚೀರುತಲಿ (ಪಮಸ. ೦೯). [ಪುರ್$_0$ + -ಅನೆ$_1$]

ಪೂರ್ವಸಿದ್ಧಾಯ (ನಾ). ಪೂರ್ವಕಾಲದಿಂದ ಕೊಡುವ ತೆರಿಗೆ : ಕೊಪುಜ ಗೆಱೆಯ ಗವ್ಯೂಡ ಬಳ್ಳಜ್ಜನ್ತನ್ನ × [ಮ]ಡಿಪಿದ ದೇಗುಲಕೆ ಚಿಟ್ಟು ಕೆಯಂ

ಪುರ್ವ್ವಸಿ[ದ್ಧಾ]ಯ ಕಟ್ಟಿದು[ಕೊ]ಣ್ಡರಪ್ಪಡೆ . . . ಲೋಕಕೆ ಸಲ್ಗು (ಸೌಪ. XI.i, ೩೫-೪; 933). [<ಪೂರ್ವ + ಸಿದ್ಧಾಯ]

ಪುರ್ವಿಕ್ಕು, ಪುರ್ಬಿಕ್ಕು, ಹುಬ್ಬಿಕ್ಕು (ಕ್ರಿ). ೧. ಹುಬ್ಬು ಹಾರಿಸು ; ಹುಬ್ಬಿನಿಂದ ಸನ್ನೆ ಮಾಡು : ತನ್ನೊಳೋತಿರ್ದವರ್ ಕಟ್ಟಿದಂದಾಕ್ಷಣದೊಳ್ ಧರಾರಮಣಿ ಮತ್ತೊರ್ವಂಗೆ ಪುರ್ವಿಕ್ಕುವಳ್ (ಶಂಶಾಮ. ೬-೬೯). ೨. ಹುಬ್ಬುಗಳನ್ನು ಎತ್ತರಿಸು ; ಹುಬ್ಬುಗಳ ಚಲನೆ ಮಾಡು ; ಹುಬ್ಬೇರಿಸು : ಬೆಟ್ಟುವನೇಡಿಸುತುಂ ಪುರ್ವಿಕ್ಕುವೊಡಂ ಕಣ್ಮುಚಿಲೆಯಂತದಾಗಳೆ ಮಾಣ್ಗುಂ (ಭೋಗೋಪ. ೯-೫೯) : ಬೆರಲನಾಡಿಸುತ್ತುಂ ಪುರ್ವಿಕ್ಕುತ್ತುಂ ಸೊಕ್ಕಿದರಂತೆ ಮಾರಳ್ಗೊಂಡವರಂತೆ ದೆಸೆಯಂ ನೋಡುತ್ತುಂ (ಧರ್ಮಾಮೃ. ೩-೦೩೬). **ಪುರ್ಬಿಕ್ಕು** : ೨. ಪುರ್ಬಿಕ್ಕಿ ಪಲ್ಗಿರಿದು ಹುಱ್ಱಿಂದು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟ ಪ್ರಕರದಿಂ (ಗಿರಿಕ. ೦-೦೨೬ ಪ); ಪುರ್ಬಿಕ್ಕಿ ಪಲ್ಗಳಂ ಕಿರಿದು . . . ಬಿಸಿಲ್ ಪರ್ಬಿರೆ ಕಾಯುತ್ತಿರ್ದುದು ಕೊರ್ಬಿದ ವೃಕ್ಷಾಗ್ರದಲ್ಲಿ ಮರ್ಕಟರಾಜಂ (ದಶಕು. ೨-೬೭); ಕೊಂಬನೇಱಿ ಪುರ್ಬಿಕ್ಕುವ ಮರ್ಕಟಂ ನಗದ ತಾಪಸರಂ ನಗಿಸಿತ್ತರಣ್ಯದೊಳ್ (ಕಾವ್ಯಸಾ. ೦೦೦೬). **ಹುಬ್ಬಿಕ್ಕು** : ೨. ನೆಗೆನೆಗೆದು ನಭಕುಪ್ಪರಿಸಿ ತಾರೆಗಳ ತಿಱಿದಂಭೋಜಮಿತ್ರನ ಮೊಗಕೆ ಹುಬ್ಬಿಕ್ಕುವವು (ತೊರಣಾ. ೬-೬-೩೪). [ಪುರ್ವು+ಇಕ್ಕು]

ಪುರ್ವು, ಪುಬ್ಬು, ಪುರ್ಬು, ಹುಬ್ಬು, ಹುರ್ವು (ನಾ). ಎರಡೂ ಕಣ್ಣುಗಳ ಮೇಲ್ಭಾಗದಲ್ಲಿ ಹಣೆಗೆ ಹೊಂದಿದಂತೆ ಇರುವ ಕಿರಂಗೂದಲಿನ ಸಾಲು ; ಭ್ರೂ : "ಪುರ್ವೆನೆ ಭ್ರೂಲತಾಹ್ವಯಂ" (ಶಬ್ದಾನು. ೩೭); ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್ (ಅಂಪು. ೯-೩೨) ; ಪುರ್ವಿನ ಗಂಟುಂ ಕಣ್ಣೊಳ್ ಪರ್ವಿದ ಕಿಸುಸೆರೆಗಳುಂ...ಕರಮರ್ವಿಸೆ ಮುನಿಸಿಂ ಕುಮಾರನಂದಿಂತೆಂದಂ (ಶಂಶಾಸಾ. ೬೦-೦೨); ಪುರ್ವಿನ ಕೊರ್ವು ಕರ್ವುವಿಲ್ಲಂ ಕೀಳ್ಮಾಡೆ (ಗಿರಿಕ. ೨-೦೦೫ ಪ). **ಪುಬ್ಬು** : ಬಲದ ಕಣ್ಪುಬ್ಬು ಮೆಯ್ವೆಱ್ಚಿ ಕೆತ್ತುತ್ತಮಿರೆ (ಕಾಶಿ. ದೇ. ೦೨೮-೦೯). **ಪುರ್ಬು** : "ಪುರ್ಬುವಲ್ಲಿ ತಾಂ ಭ್ರೂನಾಮಂ" (ಪಸ್ತುಕೋ. ೭೦-೦೮); ಜರೆಯಿಂದಂ ಪುರ್ಬು ಜೋಲಲ್ (ಕಾರಂಭಾ. ೦೭೫); ಕರ್ಬಿನ ಬಿಲ್ಲಂ ಗೆಲೆ ಪುರ್ಬು . . . ದೇಸೆ ಪೊಚ್ಚ ಪೊಸತಾಯ್ತು (ಗಜಾಯು. ೦-೬); ನೋಟದಲಿ ಮಾತಾಡಿ ಪುರ್ಬಿನ ಬೇಟದಲಿ ಬೆಳ್ಮಾಡಿ . . . ಬೇಟಕಾತಿಯರೊಪ್ಪಿದರು ನರನಾಥನಿದಿರಿನಲಿ (ಕೊಂಗಾ. ೦-೩-೩೦). **ಹುಬ್ಬು** : ಬಿಟ್ಟ ಕಣ್ಣು ಬಿಗಿದ ಹುಬ್ಬು ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ ಕೂಡಲಸಂಗಮದೇವ ಹಿಡಿವಡೆದ (ಬಸವ. ೬೦೪) ; ಕೆಂಪ ಕಾಱಿದವಾಲಿಗಳು . . . ಗಂಟಿಕ್ಕಿದನು ಹುಬ್ಬುಗಳ (ಕುಮಾರಿ. ೩-೨೬) ; ನೋಟದಲಿ ಮದನಾಸ್ತ್ರವೆದೆಯಲಿ ನಾಟಿದವು ಎಟರುಗಳ ಹುಬ್ಬಿನ ಬೇಟದಲಿ ಬೆಂಡಾದರಗ್ಗದ ನಿರ್ಜಿತೇಂದ್ರಿಯರು (ತೊರಣಾ. ೦-೦೯-೨೪). **ಹುರ್ವು** : ಹುರ್ವ್ವಿನ ಜರ್ವ್ವು ವಿಶಿಷ್ಟರ ಹರ್ವ್ವಿದ ಬಡತನದ ಕೊರ್ವ್ವನುಡುಗಿಸು ಮದಱಂ ಹುರ್ವ್ವಿನವರೆಂಬ ನಾಮದಗುರ್ವ್ವಿನ ಗೋವರ್ದ್ಧನಂಗೆ ನಂದನನೆನಿಪ . . . ನಾಗದೇವಂ (ಎಇ. V, ೦೭ ೨೫ ; 1142).

ಪುರ್ವು ಗಂಟಿಕ್ಕು, ಪುರ್ಬು ಗಂಟಿಕ್ಕು, ಹುಬ್ಬು ಗಂಟಿಕ್ಕು=ಕೋಪದಿಂದ ಮುಖವನ್ನು ಸಿಂಡರಿಸು : "ಭ್ರುಕುಟಿಃ, ಭ್ರೂಕುಟಿಃ—ಈ ೨ ಹ.ಬ್ಬು (ಪುರ್ವು) ಗಂಟಿಕ್ಕುವುದು" (ಹಲಾಯು. ೦೨೬-೯೯) ; ಬಳಿಕೊರ್ವಳಪರಾಧ ರಮಣನಂ ಕಂಡು ನೆಲೆದೊಲೆ ನಡುಗೆ ಪುರ್ಬು ಗಂಟಿಕ್ಕಿ . . . ತಿಳಿವಲೆಂದೆಱಗಿದಿನಿಯನನೊದೆಯೆ (ಸಪಪು. ೦೦-೩೯) ; ಪೋರದೆ ಪುರ್ಬು ಗಂಟಿಕ್ಕದೆ ಪುಸಿಯದೆ ಸೇರಿ ಸೇವೆಯನೆಸಗುವುದು (ಹರಿಹ. ೦-೨೫) ; ಹುಬ್ಬು ಗಂಟಿಕ್ಕಿದ ಮುಖ ಪುನಃ ಅರಳಿಕೊಂಡಿತು (ತೇಮೋಡ. ೦೦೦); ಪೋಡಂ ಮತ್ತೆ ಹುಬ್ಬು ಗಂಟಿಕ್ಕಿ ನುಡಿದರು (ದೂಪಿಟ್ಟ. ೦೭). **ಹುಬ್ಬಾಡು** = ಹುಬ್ಬನ್ನು ಅಲುಗಾಡಿಸು : ಆಡುಗೆ ಆರ್ಕೋಟಿ ಕೋಡಗಕ್ಕೊಂದು ದಿನ ಕೋಡಗವು ಕೋಟಿ ಮಾಡಿದಲ್ಲಿ ಬಳ್ಳು ಹುಬ್ಬಾಡ ಹೊತ್ತಿಲ್ಲ (ಸರ್ವಜ್ಞ. ೨೫೬). **ಹುಬ್ಬು ಕುಣಿಸು**=ಹುಬ್ಬನ್ನು ಎತ್ತರಿಸು ; ಹುಬ್ಬು ಹಾರಿಸು. **ಹುಬ್ಬುಗಂಟು ಹಾಕು**=ಪುರ್ವುಗಂಟಿಕ್ಕು : ಆಗ ಆವನು ಹುಬ್ಬುಗಂಟುಹಾಕಿಕೊಂಡು ನನಗೆ ಬಹಳ ಕೆಲಸವದೆ . . . ಎಂದು ಓಡ ಹತ್ತಿದನು (ಮುಂಬಯಿ. ೯-೩೭); ಆ ರಾಕ್ಷಸನು . . . ಹುಬ್ಬುಗಂಟುಹಾಕಿಕೊಂಡು ಅವುದು ಕಚ್ಚಿ,ಇದು ಯಾರು ಎಂದು ಗರ್ಜಿಸಿದನು (ವಸಕಾ. ೯೭). **ಹುಬ್ಬುಗೈಹಚ್ಚು** = (ದೂರದ ವಸ್ತುವು ಚೆನ್ನಾಗಿ ಕಾಣದಾದಾಗ) ಹುಬ್ಬಿನ ಬಳಿ ಅಂಗೈಯನ್ನಿಟ್ಟು ನೆರಳು ಮಾಡು : ದೂರದಲಿ ಯಾರೋ ಮುಬ್ಬುಗತ್ತಲಲಿ ಹುಬ್ಬುಗೈಹಚ್ಚಿ ನೋಡುತಿದ್ದಾರೆ ಹೊರಳಿ ಹೊರಳಿ (ಸಂಮು. ೧೭-೨೦). **ಹುಬ್ಬು ಹಾಱಿಸು, ಹುಬ್ಬು ಹಾರಿಸು** = ಹುಬ್ಬನ್ನು ಕುಣಿಸು : ಮೋಱಿಯೊಲೆದು ನೋಡಿ ನೃಪಸುತರಿಗೆ ಹುಬ್ಬು ಹಾಱಿಸುವಳು ನಸುನಗುತ (ಭರತ. ೦೨-೬೦); ಚೆಲುವಾದ ಪೋರಿ ಎಂದೊಬ್ಬ ಹುಬ್ಬು ಹಾರಿಸಿದನು (ಪುಪರು. ೦೩೯)

[ದೇ. ॥ ತಮಿ. ಪುರುವಮ್, ಪುರೂರ ; ಮಲ. ಪುರಿಗ; ತುಳು. ಪುರುಬು, ಪುರ್ಬು. / ಸಂ. ಭ್ರೂ]

ಪುಲ್, ಪುಲು, ಪುಲ್ಲು, ಹುಲು, ಹುಲ್ಲು (ನಾ). ೧. ಗರುಕೆ; ತೃಣ; ಪ ಸಾಮಾನ್ಯವಾಗಿ ದನ, ಕರು ಮುಂತಾದುವುಗಳ ಆಹಾರ : ಬೆಳೆಯೊಳ್ ಪುಲ್ಗಳ್ ಪಲವಕ್ಕುಂ (ವಡ್ಡಾರಾ. ೮೬-೦೯); ಶತಬಿಂದುವಿನ ಮಕ್ಕಳಪ್ಪಯ್ವರು ಗಾಳಿಗೊಡ್ಡಿದ ಪುಲ್ಲ ಬಿಂದುಗಳಂತೆ ನಕುಲಂ ನೆಲಕ್ಕೆ ಸೋವತಂ ಮಾಡಿದಂ (ಪಂಪಭಾ. ೧೩-೪೦ ಪ); ಪಲ್ಲಂ ಸುಲಿವೊಡಂ ಕಿವಿ ತೀಂಬೊಡೆ ತುಱಿಸುವೊಡಂ ಪುಲ್ಲಿಂದೆನಿತುಂ ಪ್ರಯೋಜನಮುಂಟು(ಪಂಪಕಂ. ೩೯-೦೪). ೨. (ಆಲಂ) ಬೆಲೆಯಿಲ್ಲದ ವಸ್ತು; ನಿಕೃಷ್ಟವಾದುದು; ಕ್ಷುದ್ರವಾದುದು ; ಅಲ್ಪವಾದುದು : ಅವನಂ ಪುಲ್ಲಂ ತಿಳಿದಂ . . . ಸ್ಮರಂ ಹರನಂ ಪುಲ್ಗೆ ಬಗೆದಂ (ಶಪ್ಪಾಸು. ೨೦೯ ಪ್ರಯೋ). **ಪುಲು** : ೧. ಕ್ಷೀರಶರಧಿಯೊಳಿಪ್ಪ ಹಂಸಂ ಕ್ಷಾರನೀರಂ ಸೇವಿಪುದೆ ಕಂಠೀರವಂ ಪುಲು[ಪಾಠಾಂ. ಲ್] ಮೇವುದೇ (ಬಸಪು. ೧೦-೦೦); ಸುತನ ಸಾವಂ ಲೋಗರಱಿಯದ ಗತಿಯೊಳಾ ಗೋದಣದೊಳಗದಂ ಹಾಯ್ಕಿ ಪು[ಪಾಠಾಂ.ಹು]ಲು ಮುಚ್ಚಿ (ಬಸಪು. ೨೯-೩೭). ೨. 'ಪುಲುಬೂತು' ಪರಾ. **ಪುಲ್ಲು** : ೧. ವ್ಯಳಕಟ್ಟೂಡರ ತಟ್ಟಿಯೂರಾಳ ಆವುಕ್ಕ ಇಯೂರೆ ಪಣ ಪುಲ್ಲು (ಎಕ. IV, ಗುಂಡ್ಲುಪೇ. ೬೬-೪; ಸು. 750); ಪಶುಗಳು ಬೆಳೆದ ಹೊಲದತ್ತ ತೆಗೆಯಲು ಸರಸಿಗಳು ತುಂಬಿರ್ದ ಬೆಂಚೆಗಳ ಒತ್ತಿನಲಿ ನಿಲಿಸಿದಡೆ ಬಾಯ್ದೆಱಿಯಿತ್ತೆ ಪುಲ್ಲಿಗೆ ಮೋಱಿಯಂ ನೀಡಿತ್ತೆ ನೀರಿಂಗೆ (ಬಸಪು. ೬೦-೨೩). **ಹುಲು** : ೧. ಎಂದಿನಂತುದಯಕಾಲದೊಳೆದ್ದು ಹುಲು ಹುಳ್ಳಿಗೆಂದರಣ್ಯಕ್ಕೆ ನಡೆದು (ಪಶಕಾ. ೦೨-೭). ೨. ಘಾಸಿಯಾದನು ದೈತ್ಯ ಲಜ್ಜೆಯ ನೀಗಿ ಹುಲುವಾಗಿ . . . ನಾಚಿ ಲಂಕೆಯ ಹೊಕ್ಕ ರಾವಣನು (ಕೌಶಿರಾ. ೨೨-೫೫); ನಂಟತನ ಕೂಡಿ ಬರುವ ಹುಲು ಆಸೆ ನಿನಗಿನ್ನು ಬೇಡ (ಕುರುಕಾ. ೦೬). 'ಹುಲುಮನುಜ' ಪರಾ. **ಹುಲ್ಲು** : ೧. ಹುಲ್ಲ ಕಿಚ್ಚು ಹೊಲೆಯನ ಮೇಳಾಪ ಅಲ್ಲಿ ಹುರುಳಿಲ್ಲ (ಬಸವ. ೧೦೨); ಹಳೆಯಮ್ಮ ಗೌಜವ ಸುಟ್ಟಂದಾಸರಕೆತ್ತಿ ನಡೆವ ಬೀಡ ನಡೆಯಲೀಯದೆ ಕಾದುತ್ತಿರಲು . . . ಹುತ್ತಮೇಱಿ ಹುಲ್ಲಂ ಕಚ್ಚಿದರ ಕೊಲಲೊಲ್ಲದೆ ಕಾಯ್ದು ಕಳಿಸಿ ಸತ್ತು ಸುರಲೋಕಪ್ರಾಪ್ತನಾದ (ಪ್ರೃಕಂ. ೦೯೩೦, ೬೬-೯; 1164); ಹೂವ ತರುವರ ಮನೆಗೆ ಹುಲ್ಲ ತರುವ ಅವ್ವೆ ಲಕುಮಿಾರಮಣ ಇವಗಿಲ್ಲ ಗರುವ (ಪುರಂದ. ೦-೦೪೭ ಪಲ್ಲವಿ); ಹುಲ್ಲಾಗು ಬೆಟ್ಟದಡಿ. ಮನೆಗೆ ಮಲ್ಲಿಗೆಯಾಗು (ಮಂಕುಶ. ೭೯೯); ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ ?

(ಗಾದೆ). ೨. ನಿಮ್ಮ ಮಂಡೆಗೆ ಹೂವ ತಹೆಸಲ್ಲದೆ ಹುಲ್ಲ ತಾರೆನು (ಸುಹಾರೇ. ಬ. ೬೦-೦೪೯). **ಪುಲ್ಲಂ ಕರ್ಚು**= (ಶರಣಾಗತಿಯನ್ನು ಸೂಚಿಸುವ ಸಲುವಾಗಿ) ಬಾಯಲ್ಲಿ ಹುಲ್ಲನ್ನು ಕಚ್ಚಿ ಹಿಡಿ : ಪುಲ್ಲಂ ಕರ್ಚೀಜು ಪುತ್ತನಡಿಗೆಱಗು (ಕವಿಗಾ. ೩-೦೯೯); ಕೆಲರ್ ಶರಣೆಂದು ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚಿ ಪೊಡೆವಟ್ಟರ್ (ವಡ್ಡಾಕಾ. ೬೨-೦೫). **ಪುಲ್ಲ ನೀರ್**=ಹುಲ್ಲಿನಲ್ಲಿ ನಿಂತಿರುವ (ಮಂಜು, ಮಳೆಹನಿ ಮೊದಲಾದುವುಗಳ) ನೀರು : ಪನಿವ ಪುಲ್ಲ ನೀರ್ಗಳ್ದೆರಸಲರುಮುರುತ್ತಮಿರ್ದುವಂತಾ ಕ್ಷಣದೊಳ್ (ಕಾರಂಪೂ. ೦೯೯). ' ಪನಿನೀರ್ ' ಪರಾ. **ಪುಲ್ಲ ಬೆಂಟೆ**=ಹುಲ್ಲಿನ ಹಗ್ಗ : ಪುಲ್ಲ ಬೆಂ[ಪಾಶಾಂ. ಪುಲ್ಲ ಬೆರ, ಪೊಲ್ಲ ಬೆಂ]ಟೆಯುಂ ಪೊಸೆದು ಕಿಚ್ಚುವೆಣ್ಣೆಯ ಕೊಡನುಂ ಬೆಂಟೆಯುಮುಂ ಕೊಂಡು ಪೋಗಿ (ವಡ್ಡಾಕಾ. ೦೫೩-೦೦). **ಪುಲ್ಲ ಮುಱಿ**=ಹುಲ್ಲಿನ ತುಂಡು ; ಗರುಕೆಯ ತುಂಡು : ಪುರಹರನಿಟ್ಟ ಪುಲ್ಲ ಮುಱಿಯುಂ ಮುರವೈರಿ ವಿರಿಂಚಿಮುಖ್ಯನಿರ್ಜರರದನೆತ್ತಲಾಱದೆ ಪಲಂ ಧೃತಿಗುಂದಿದರ್ (ರಾಪಶೇ. ೦೩-೨೯).

[ದೇ. ॥ ತಮಿ. ಮಲ. ಕೋತ. ತೊದ. ಪುಲ್; ತುಳು. ಪುಲ್ಲು ; ಕೊಡ. ಪಿಲ್ಲ್; ತೆಲು. ಪುಲು, ಪುಲ್ಲು, ಪಿಲ್ಲು]

ಪುಲ. ಪುಳ್ $_2$ (ಗು). ೧. ದೊಡ್ಡ ; ಬೃಹತ್ತಾದ. (ನಾ). ೨. ಗಾತ್ರ ; ಆಕಾರ. ೩. ನವಿರೇಳುವಿಕೆ ; ಪುಳಕ. **ಪುಳ್** $_2$: ೩. ಕಸ್ತೂರಿಗೆ 'ತಾಯಿ' ಎಂಬ ಶಬ್ದ ಪುಳವನ್ನುಂಟುಮಾಡಿತು (ಶಂರಹಸಿ. ೦೨೬). [ಸಂ.]

ಪುಲಕ. ಪುಳಕ $_1$ (ನಾ). ೧. ಮೈನವಿರೇಳುವಿಕೆ : ರೋಮಾಂಚನ : ಪುಲಕಂ ಜಾನಕಿಗುತ್ಸವಂ ಜನಕರಾಜಂಗೆ . . . ಆಯ್ತೋಱಿಸಿ ನೀವಿ ಜೇವೊಡೆಯೆ ವಜ್ರಾವರ್ತಮುಂ ರಾಘವಂ (ಪಂರಾಮಾ. ೩-೯೯) ; ತೃಣರಾಶಿ ಮೈದೋರೆ ಪಚ್ಚೆಯ ಪುಲಕವಂತೆ (ಪತ್ರಾಂಗ. ೬೦-೦೬೬೩). ೨. (ಪ್ರಾಣಿಗಳ ಮೈಗೆ ಅಂಟಿಕೊಳ್ಳುವ) ಕ್ರಿಮಿ. ೩. ಅನ್ನದ ಉಂಡೆ. ೪. ಹಾರಕ ಮೊದಲಾದ ತೃಣಧಾನ್ಯ. **ಪುಳಕ $_1$** : ೧. "ಪೊಂಪುಱಿಯೆನೆ ಪುಳಕಾಖ್ಯಂ" (ಪತಾಸಿ. ೯); ತಿಳಿಪಲಡಿಗೆಱಗಿದೋಪನ ತಳಂಗಳಾ ತೀಟದಿಂ ಪದಂಗಳೊಳೊಗೆದಾ ಪುಳಕಚಯಂಗಳ್ ಕಳೆದುವು ಮುಳಿಸಂ ನಲ್ಲಳ್ಗೆ (ಕವಿಗಾ. ೩-೦೦೯); ಪುಳಕಂ ಪುದಿದಿರೆ ರಾಗಂ ಪೊಳೆಪು ತನುರುಚಿಗೆ ಮಾಡೆ . . . ಕಳಿಕೆಯೊಳೆ ತುಱುಗಿ ತಳಿರೊಳೆ ತಳತಳಿಸಿದದೊಂದಶೋಕಲತೆಯನೆ ಪೋಲ್ತಳ್ (ಆದಿಪು. ೬-೨೯); ಮನ ಮನ ಬೆರಸಿದಲ್ಲಿ ತನು ಕರಗದಿದ್ದರೆ ಸೋಂಕಿನಲ್ಲಿ ಪುಳಕಂಗಳು ಹೊಱಹೊಮ್ಮದಿದ್ದರೆ . . . ಎನ್ನಲ್ಲಿವಿಲ್ಲವಾಗಿ ಆನು ಡಂಭಕ ಕಾಣೆರೇ (ಜಸವ. ೩೭೬). "ಅನ್ನದಗುಱಲ್ಲಿ ಧಾನ್ಯದಲಿ ಪುಳ[ಪಾಂಕಾಂ. ಳು]ಕಮೊಂದೆನಿಕ್ಕು" (ಮಂಗರಾ. ೦೪೩-೨೨). ೫. ಅಕ್ಕರೆ; ಕಕುಲಾತಿ: ಈವತ್ತು ಒಮ್ಮೊಂದೊಮ್ಮೆಲೆ ಆ ಚಂದ್ರಭಾಗಕ್ಕನ ಬಗ್ಗೆ ಇಷ್ಟೊಂದು ಪುಳಕವೇಕೆ ? (ಮೂಕುಂದಾ. ೩೦); ಆ ಹುಡುಗಿಯ ಬಗ್ಗೆ ಇಷ್ಟೇಕೆ ಪುಳಕವೋ (ಮೂಕುಂದಾ. ೦೪೩). ೬. ಒಂದು ಬಗೆಯ ರತ್ನ. "ಪುಳಕಮೆನಿಕ್ಕುಂ ರತುನೋಪಳಮುಂ . . . ಕೀಟಕಮುಂ" (ಪಸ್ತುಕೋ. ೦೨೯-೬೮). [ಸಂ.]

ಪುಲಕಂಗೂಡು (ಕ್ರಿ). ನವಿರೇಳು ; ರೋಮಾಂಚಿತವಾಗು : ನಿಮಿರ್ದೆತ್ತಿದೊಂದು ಪುರ್ವಿಂ ಮೆರೆವಿ ವದನಂ ಪುಲಕಂಗೂಡಿದ ಕದಪಿಂ ಕನ್ನಡಿಪುದೆನ್ನೊಳಿಪಂಗಭಿರತಿಯಂ (ಶಾಕುಂತ. ೩೮-೬೬). [ಪುಲಕ + ಕೂಡು $_1$]

ಪುಲಕವೇರು (ಕ್ರಿ). ೧. ರೋಮಾಂಚನ ಹೊಂದು. ೨. (ಆಲಂ) ಚಿಗುರು ; ಮೊಳಕೆಯೊಡೆ : ನನ್ನ ಶರೀರ, ಮನಸ್ಸು ವಸಂತದ ಮಲಯಪವನಕ್ಕೆ ಪುಲಕವೇರುವ ಬಕುಲಪನದ ನವಪಲ್ಲವರಾಶಿಯ ಹಾಗೆ ಕಂಪಿಸಿ ಕಂಪಿಸಿ ತತ್ತರಿಸಿ ಹೋಯ್ತು (ಇಷ್ಟಕ. ೪೪೬).

[ಪುಲಕ + ಏರು $_1$ (< ಏಱು $_1$)]

ಪುಲಕಾಂಕುರ. ಪುಳಕಾಂಕುರ (ನಾ). = ಪುಲಕ ೧ : ಪುಲಕಾಂಕುರಮೊಗೆತರೆ ಕೋಮಲೆಯಪ್ಪಿದ ಕಾಂತಕುರವಕಂ ಕಣ್ದೆಱೆದಾ ಕುಲಟೆಯೆ ತಳ್ತಳಿಗೆತ್ತುಮ್ಮಳಿಸಿದನಿಂತಪ್ಪ ಪಾಪಭೀರುಗಳೊಳರೇ (ಲೀಲಾವ. ೦೪-೦೩೦). **ಪುಳಕಾಂಕುರ** : ಒದವೆ ಪುಳಕಾಂಕುರಂಗಳ್ . . . ಇದಿರೆಟ್ಟಿಳ್ ತರಳನಯನೆ ಸಂಭ್ರಮದಿಂದಂ (ಕಾಪಂಕಾ. ೩೫); ಕೈಗನ್ನಡಿಯವೊಲೆಲ್ಲರ ಕೈಗೊಪ್ಪುವ ಮಗನನೆತ್ತಿ ಪುಳಕಾಂಕುರಮಂ ಮೈಗಗ್ಗಳಿಸವ ಕಾಂತೆಯ ಕೈಗವುದೇಂ ಭೀದಮುಂಟೆ ಸೀರೆಯ ಕೈಗಂ (ಪುಲಿಪು. ೩-೧೦೫) ; ನೆಗೆದ ಪುಳಕಾಂಕುರದ ನೆಱೆ ಮುಗುಳ್ದಕ್ಷಿಯ ಮಿಡುಕದಂಗದಿಳಿದೇಱದೆ ನೆಟ್ಟಗೆ ನಿಂದ ಸುಯ್ಯ ಸುಳಿಯದ ಬಗೆಯ ಪೊಡರ್ಪೆಸೆಯೆ ತಾಪಸಂ ತಪಮಿರ್ದಂ (ಪಶಿಂ. ೨-೯೯). [ಸಂ.]

ಪುಲಕಿತ, ಪುಳಕಿತ (ಗು). ೧. ರೋಮಾಂಚನ ಹೊಂದಿದ ; ರೋಮಾಂಚಿತವಾದ : ದಶರಥಮಹೀನಾಥು ಸುತಮುಖನಿರೀಕ್ಷಣಭರದಿಂ ಪಾರಿಜಾತಂ ಕೋರಕಿತಮಾವಂತೆ ಪುಲಕಿತಶರೀರನಾಗಿ (ಪಂರಾಮಾ. ೩-೦೦೭ಎ). (ನಾ). ೨. ರೋಮಾಂಚನಗೊಂಡ ವ್ಯಕ್ತಿ : ಅತ್ತಿಮಬ್ಬೆ ಪುಲಕಿತಳಾಗಿ ನುಡಿದಳು (ದಾನಶಾ. ೦೭೭); ತುಂಗಕ್ಕ . . . ತುಸು ಸಮಯದ ಮೇಲೆ ಥಟ್ಟನೆ ಹೊಳೆದ ಒಂದು ಹೊಸ ವಿಚಾರದಿಂದ ಪುಲಕಿತಳಾದಂತೆ ತುಟಿ ಕಚ್ಚಿಕೊಂಡಳು (ಮೂಕುಂಜಾ. ೩೦). **ಪುಳಕಿತ** : ೧. ಪುಳಕಿತಕಪೋಳಫಳಕಂ ವಿಳಸಿತಮದಿರಾರುಣೇಕ್ಷಣಾಂ ಸ್ಫುರಿತೋಷ್ಠಂ ಕೆಳದೀ ನಿನ್ನ ಮುಖಂ ತಳಮಳಗೊಳಿಸುಗುಮಿಂತು ನಿಭೃತಶೃಂಗಾರರಸಂ (ಕವಿರಾ. ೩-೦೯೨); ಮುನಿಕಾಂತಾದರ್ಶನೋತ್ಕಂಠೆ ಪುಳಕಿತಸರ್ವಾಂಗಿ ಇಂತಾತುರದೊಳಿರ್ದಳ್ (ರಾಮಾಶ್ವ. ೩೯-೪). ೩. ರೋಮಾಂಚಿತವಾದುದು: ಆಲಿಕಲ್ಲ ರೂಹಿನಂತೆ ಅರಗಿನ ಪುತ್ತಳಿಯಂತೆ ತನು ಪುಳಕಿತವಾದ ಬೆಮರುಬಿಂದುಗಳೆಲ್ಲಾ . . . ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ (ಜಸವ. ೪೯೩) ; ಇಳೆಯೊಳ್ ಪಾರ್ವತಿಯುಂದಯಿಸೆ . . . ಪುಳಕಿತಮಾಯ್ತಿಂದುಧರನ ವರವಾಮಾಂಗಂ (ಗಿರಿಕ. ೩-೪೬). [ಸಂ.]

ಪುಲಕಿತಗೊಳ್ಳು (ಕ್ರಿ). ರೋಮಾಂಚನ ಹೊಂದು ; ಜುಮ್ಮೆನ್ನು : ಹದಿನಾರನೆಯ ಶತಮಾನದ ಉತ್ತರಾರ್ಧ ಮತ್ತು ಹದಿನೇಳನೆಯ ಶತಮಾನದ ಪೂರ್ವಾರ್ಧಗಳು ನೂತನ ಕಾವ್ಯಪ್ರವಾಹದಿಂದ ಪುಲಕಿತಗೊಂಡವು (ರಾವಗೀ. ೫೩). [ಪುಲಕಿತ + ಕೊಳ್ಳು $_1$ (<ಕೊಳ್ $_1$)]

ಪುಲಕಿಸು, ಪುಳಕಿಸು (ಕ್ರಿ). ೧. ಪುಲಕಿತಗೊಳ್ಳು ; ರೋಮಾಂಚಿತವಾಗು : ಅಲ್ಲಿ ಕುಳಿತನು ದೆಲ್ಲನೆಯು ತನುವೆಲ್ಲ ಪುಲಕಿಸಲು (ಗಗಶಾ. ೨-೨೨). **ಪುಳಕಿಸು** : ೧. ಗಿರಿರಾಜನೊಡಂಬಟ್ಟುವರದಿಂದಂ ಪುಳಕಿಸುತ್ತೆ ಪುಟವೇಳುತ್ತುಂ ಪರಿಚಾರಪಟುಗಳೆನಿಸುವ ತರುಣಿಯರಂ ಕೂಡಿಕೊಟ್ಟು ಸಂತಸದಿಂದಂ (ಗಿರಿಕ. ೩-೯). ೨. ಸಂತೋಷಪಡು ; ಉತ್ಸಾಹಿಸು : ಹರನ ಕೃಪೆಯಾಯಿತೆಂದೆನುತೆ ಪುಳಕಿಸುತಿರಲು (ಬಸಕ. ೦-೩೨); ಚೆಲುವಲರಿ ಪೋಪಂತೆ ಭಕ್ತರು ಪುಳಕಿಸುತ ಕೇಳಿಕೆಗಳಿಂ ತಾವಳವಡಿಸುತಾಡುತ್ತ ಪಾಡುತ ಹೋಗುತಿರಲು(ಬಸಪು. ೩೭-೪೬) ; ಗಂಗಾತನುಜನುಚಿತೋಕ್ತಿಗಳನೆನೆವಡಿಗಡಿಗೆ ಪುಳಕಿಸುತ ವಿನುತಮತಿ ನಡೆತರಲು (ಕುಮಾರಿ. ೨-೨೯).

[ಪುಲಕ + — ಇಸು $_3$]

ಪುಲಕೇಶಿ 'ಪುಲಿಕೇಶಿ' ನೋ.

ಪುಲವಡು (ನಾ). ಹುಲ್ಲುಗಾವಲು ; ಗೋಮಾಳ : ದೇವರ್ಗ್ಗೆ ಸಾಸಿರ ಬಳ್ಳಿಯ ತೋಂಟ ದೇವರ ಸಾಕ್ಷಣ ಬೆದ್ದಲೆ ತೋಟಗಟ್ಟು ಪುಲವಡು ಕೆಂಗಾಡು (ಸೌಇಇ. IX-I. ೨೦೬-೨೬ ; 1122). 'ಪುಲ್ಪಡಿ' ಪರಾ.

[?. / ತುಳು. ಪುಲವಾಡೆ, ಪುಲಾಡಿ]

ಪುಲಾಕ (ನಾ). ೧. ಜೊಳ್ಳಾದ ಕಾಳು. ೨. ಅನ್ನದ ಮುದ್ದೆ.— ಪೀಡೆ : "ಪಳದುರ್ವಿದ ತುಷ ಧಾನ್ಯಾವಳಿ ಭಕ್ತಸಿಕ್ಥಕವಿವೆ ಪುಲಾ

ಕಾಖ್ಯಂಗಳ್" (ವಸ್ತುಕೋ. ೦೨೯-೬೮). ೩. ಸಂಕ್ಷೇಪ; ಸಂಗ್ರಹಗೊಳಿಸಿದುದು. ೪. ಅಕ್ಕಿಯ ಗಂಜಿ. ೫. [ಜೈನ]ಐದು ಬಗೆಯ ಮುನಿವರ್ಗಗಳಲ್ಲಿ ಒಂದು; p ಉತ್ತರಗುಣಭಾವನಾರಹಿತರೂ ವ್ರತಗಳಲ್ಲಿ ಪರಿಪೂರ್ಣತೆಯನ್ನು ಹೊಂದದೆ ಇರುವವರೂ ಆದ ಮುನಿಗಳು ಅಶುದ್ಧವಾದ ಪುಲಾಕ(=ಅನ್ನದ ಮುದ್ದೆ)ದಂತೆ ಇರುವುದರಿಂದ ಈ ಹೆಸರನ್ನು ಪಡೆದಿದ್ದಾರೆ: ಎತ್ತಾನುಂ ಅಪರಿಪೂರ್ಣವ್ರತರುಂ ಉತ್ತರಗುಣಭಾವನಾರಹಿತರುಂ ಅಪ್ಪ ಪುಲಾಕರುಂ (ತತ್ತ್ವಪ್ರ. ೩೫೬); ಮುನಿಗಳಲ್ಲಿ ಪುಲಾಕ, ಬಕುಶ, ಕುಶೀಲ, ನಿರ್ಗ್ರಂಥ, ಸ್ನಾತಕ ಎಂದು ಐದು ಪ್ರಕಾರಗಳು (ಶೈಪರ. ೯೯). [ಸಂ.]

ಪುಲಾವು 'ಪಲಾವ್' ನೋ.

ಪುಲಿ, ಹುಲಿ₁ (ನಾ). ೧. (ಅರಣ್ಯದಲ್ಲಿ ಬೇಟೆಯಾಡಿ ಜೀವಿಸುವ, ಮೈ ಮೇಲೆ ಕರಿಯ ಪಟ್ಟೆಗಳುಳ್ಳ ಹಳದಿಬಣ್ಣದ) ಒಂದು ಬಗೆಯ ಕ್ರೂರಮೃಗ; ವ್ಯಾಘ್ರ: ಪುಲಿ ಪುಲಿ ಪರಿಪರಿ ಪೋಪೊ ಗೆಲೆ ಎಲೆ ಪೆಱಪಿಂಗು (ಕವಿರಾ. ೨-೨೬); ತಮ್ಮಗವುಣ್ಣನು ಪುಲಿಯನ್ ಇಱಿದು × × × ಸತ್ತೊಡೆ (ಮೃಲಿಂ. ೦೯೨೭. ೪೪ ೩; 855); ಪೊಯ್ವ ಸಿಡಿಲ್ ತಿಂಬರೆವಾವು ಪಾಯ್ವ ಪುಲಿಯೆಂಬೀ ಬಾಧೆಯೊಳ್ ಮೆಯ್ಯನೊಡ್ಡಿಸೆ (ಅಪಿಪು. ೬-೩೪); ಈಂದ ಪುಲಿಯಾ ಪೋಲಿರ್ದಳ್ (ತಮಿಪ. ೦೦೮ ಪ್ರಯೋ). ೨. ಒಬ್ಬಾತನ ಹೆಸರು: ಪೆರ್ಗಡೆಗೌಡ ಶ್ರೀ ಪುಲಿ ಅಗಳಿ ಪನ್ನೆರಡುಮಾಳೆ ಪಾಳುಕೋಡ ಕೆಱೆಯು ಆಯ್ದೊನ್ದಿ ಕಾಡು ಪತ್ತೊನ್ದಿ ಪ್ರಸಾದಂಗೆಯ್ದೊರ್ (ಮೃಲಿಂ. ೦೯೨೬, ೦೦೦ ೩; ೨ನೆಯ ಶತ). (ಗು). ೩. (ಆಲಂ) ದೊಡ್ಡದಾದ; ದೊಡ್ಡ: 'ಪುಲಿವಲೆ' ಪರಾ. ಹುಲಿ₁: ೧. "ವ್ಯಾಘ್ರಃ, ದ್ವೀಪೀ . . . ಮೃಗಾರಿಃ—ಈ ೭ ಹುಲಿ" (ಹಲಾಯು. ೬೩-೭೩); ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗೆ ಉಣಬಾರದು (ಬಸವ. ೬೬೩) ಹುಲಿಯ ಮುಱಿದೊತ್ತಿದೊಡೆ ಪಶುಸಂಕುಲಕೆ ಸಂಕಟವೇನು (ಕುಮಾಲ. ೨೦-೩೦). ೪. ಒಂದು ಬಗೆಯ ಸಸ್ಯ: ಹುಲಿಯ ಬೀಜ, ಕರ್ಕಾಟಕ ಶೃಂಗಿ, ರಕ್ತಗಂಧಕ (ಪಿನೈಪಿ. ೯೨).

ಪುಲಿಯ ಬಾಲ=ಒಂದು ಬಗೆಯ ಆಭರಣ: ಕುಜುಹಿನ ಪಟ ಕಿಱು ಘಂಟೆ ಪುಲಿಯ ಬಾಲ ಮೆಱೆಯೆ ಗಡೆಯರೆಯ್ತಂದು . . . ಇಱಿದಾಡಿದರು ರಣದೊಳಗೆ (ಕುರಾಸಾಂ. ೦೨-೬೩). **ಹುಲಿಕುರಿ ಆಟ**=ನಾಲ್ಕು ಕಲ್ಲುಗಳನ್ನು ಹುಲಿಗಳಾಗಿಯೂ ಹದಿನೆಂಟು (ಹುಣಿಸೆ) ಬೀಜಗಳನ್ನು ಕುರಿಗಳಾಗಿಯೂ ಇಟ್ಟುಕೊಂಡು ಆಡುವ ಒಂದು ಬಗೆಯ ಆಟ: ಹಳ್ಳಿಗರು ಚೌಕಾಬಾರ, ಹುಲಿಕುರಿ ಆಟ ಮೊದಲಾದ ಆಟಗಳನ್ನು ಆಡುತ್ತಾರೆ (ಕೂಡಿ). **ಹುಲಿಮನೆಯಾಟ**=ಹುಲಿಕುರಿಯಾಟ: (ಕಿ). **ಹುಲಿಯ ಜಂಗುಳಿ, ಹುಲಿಯ ಜ್ಯಗುಳೆ**=ಒಂದು ಬಿರುದು: ಸೊರಬದ ಹುಲಿಯ ಜಂಗುಳಿ ಬೀರಣನ ಮಗ (ಎಕ. VIII, ಸೊರಬ. ೪೬-೪; 1018 ?); ಭಾಸೆಗೆ ತಪ್ಪುವ ಲೆಂಕರ ಗಂಡ ಹುಲಿಯ ಜ್ಯಗುಳೆಯ ಮೊತ್ತದ ಸೇನಾನಾಯಕಂ (ಎಕ. III, ಮಂಡ್ಯ. ೬೩-೨೬; 1305 ?).

[ದೇ. ॥ ತಮಿ. ಪುಲಿ, ಪುಲ್; ಮಲ. ಕೊಡ. ತೆಲು. ಪುಲಿ; ತುಳು. ಪಲಿ; ಕೋತ. ಪುಜ್; ಕೋಲಾ. ನಾಯ್ಕಿ. ಪುಲ್; ಗೊಂಡಿ. ಪುಲ್ಲೀ]

△ **ಪುಲಿಂಗಿಲ್** 'ಪುಲಿಗಿಲ್' ನೋ.

ಪುಲಿಂದ, ಪುಳಿಂದ (ನಾ). ೧. ಕಾಡಿನಲ್ಲಿ ವಾಸಿಸುವ ಒಂದು ಜನಾಂಗ; ಭಿಲ್ಲಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದವನು; ಬೇಡ; ಶಬರ: 'ಪುಲಿಂದಿನಿ' ಪರಾ. **ಪುಳಿಂದ**: ೧. "ಕಿರಾತಃ, ಶಬರಃ, ನಿಷ್ಟೂಃ, ಪುಳಿಂದಃ, ನಾಹಳಃ, ಭಟಃ, ಮಾಳಾ, ಮ್ಲೇಚ್ಛಃ—ಈ ರ ಬೇಡರ್ ಮೊದಲಾಗುಳ್ಳಂತ್ಯಜಾತಿಗಳ್" (ಹಲಾಯು ೯೬-೪೪೩); ಅವಯವದೆರ್ದೆಗೊಳ್ಳುದಿದಾರುವನೆಂದೊಡೆ ಬಾಣಕೃತಿ ಪುಳಿಂದನ ಸಂಧಾನವನೆಯ್ದಿದತ್ತು ಮತ್ತಿನ ಕವಿಕುಳದೆರ್ದೆಗೊಳ್ಳುದೆಂಬುದೊಂದಚ್ಚರಿಯೇ (ಕಾದಂಪೂ. ೪); ಆ ಮರದೊಳಿರ್ಪ ಕಪೋತಶಿಖಾಮಣಿ ಕಂಡು ಕರುಣರಸಾರ್ದ್ರಹೃದಯನಾಗಿ . . . ಚಂಚೂಪುಟದಿನೊಂದು ಕೊಳ್ಳಿಯಂ ಕರ್ಚಿ ತಂದು ಪುಳಿಂದನ ಮುಂದಿಟ್ಟು (ಪಂಚತಂ. ೨೪೩-೧೭). ೨. ನಾವೆಯ ಒಂದು ಭಾಗ; ನೌಕಾಶಿರ: "ಪುಳಿಂದಃ, ಮಂಗಃ—ಈ ೨ ನಾವೆಯ ಬಿಸುಱು" (ಹಲಾಯು. ೦೦೧-೩೦); "ಹಡಗಿನಿದ್ದೆಸೆ ಪುಳಿಂದ[ಪಾಠಾಂ. ಪುಳಿಂಗಂ, ಪುಳಿನು] ಮಂಗಮಕ್ಕು" (ಮಂಗರಾ. ೦೨೦-೩). [ಸಂ.]

ಪುಲಿಂದಿನಿ, ಪುಳಿಂದಿನಿ (ನಾ). ೧. ಬೇಡರವಳು; ಬೇಡಿತಿ; ಶಬರಿ: ಉಳಿದು ಪುಲಿಂ[ಪಾಠಾಂ. ಳಿಂ]ದಿನೀವಿಹಿತವಿಭ್ರಮಮಂ ಸುರಕಾಮಿನೀಜನಂ ಬಳಸಿರೆ ತಾನುಮಂತೆ ನಗನಂದನೆ . . . ನೆಲಸಿರ್ದಳುದಾರಶೋಭೆಯಿಂ (ಶಬಕಂ. ೩-೦೩). **ಪುಳಿಂದಿನಿ**: ೧. ಗಂಡನಂ ತೊಲಗದೆ ಪಿಂದೆ ಬಿಲ್ವಿಡಿದು ಬರ್ಪ ಪುಳಿಂದಿನಿಯೊರ್ವಳೊಪ್ಪಿದಳ್ (ಹಾರಪು. ೧೦-೧೦೬); ಅಚಲೇಂದ್ರ ಮೆಸೆದಿರ್ದುದು ಪುಳಿಂದಿನೀತನುಗಂಧಬಂಧುರದೊಳು (ಶೈಪುರಾ. ೦೦-೪). ೨. [ಸಂಗೀತ] ಒಂದು ರಾಗದ ಹೆಸರು: ಕೌಶಿಕಿ ವೇಳಾವಳಿ . . . ಪುಳಿಂದಿನಿ . . . ಎಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದುವು (ಪಿವೇಕ. ೨೩೪). [< ಸಂ. ಪುಲಿಂದೀ]

ಪುಲಿಕಡ್ಡ (ನಾ). ಒಬ್ಬಾತನ ಹೆಸರು: ಕಿತ್ತರಸಂ ವಟಿಗಟ್ಟನ ಮಗ ಪುಲಿಕಡ್ಡಅರಸರ್ ಸಿಯಗೆಲ್ಲರ್ಕ್ಕಾಗಿ ಕೊಮಾರನ್ ಕಿರ್ಕ್ಕೊಳತ್ತುಒಗ ಬಳ್ಳಿಯುಳೆಱಿದು ವಿಟ್ಟೊಂ (ಎಕ. XVI, ತುಮಕೂ. ೯೦-೯; ಸು. 775). [?]

ಪುಲಿಕರನಗರ, ಪುರಿಕರನಗರ (ನಾ). ಒಂದು ಊರಿನ ಹೆಸರು; p ಧಾರವಾಡಜಿಲ್ಲೆಯ ಈಗಿನ ಲಕ್ಷ್ಮೇಶ್ವರ: ಪುಲಿಕರನಗರಸ್ಯ ಶಂಖತೀರ್ತ್ಥವಸತೇಃ (ಇಲ. VII, ೦೦೭-೦೪; 10ನೆಯ ಶತ); ಪುಲಿಕರನಗರ ತ್ರಿಶತ್‌ಗ್ರಾಮಾಂತರ್ವರ್ತ್ತಿ ಹುಲ್ಲುಂಗೂರು ಮುಖ್ಯ ಬಹುವಿಷಯಂ ಸಿಂಹಣರಾಯಾಲ್ಲಬಧ್ವಾ (ಕಇ. IV, ೫೪-೨೪; 1245). **ಪುರಿಕರನಗರ**: ಶ್ರೀ ಬಿಕ್ಕಿರಾಣಕೇನ ಪುರಿಕರನಗರೇ . . . ಸೆಂಬೊಳಲ ನಾಮಗ್ರಾಮಂ ಸರ್ವ್ವಬಾಧಾಪರಿಹಾರಂ ದದೌ (ಸೌಇಇ. XX, ೩ ೨೬; 723); ಶ್ರೀಮತ್ ಪುರಿಕರನಗರ ಪ್ರಖ್ಯಾತ ಶ್ರೀಶಂಖಜಿನೇಂದ್ರ ನಿತ್ಯನೈಮಿತ್ತಿಕ ಪೂಜಾನಿಮಿತ್ತಂ . . . ಕದ್ದಮಗ್ರಾಮಂ ದತ್ತವಾನ್ (ಸೌಇಇ. XX, ೬-೦೯; 730). 'ಪುಲಿಗೆಱೆ' ಪರಾ.

[p ಇದು 'ಪುಲಿಗೆಱೆ' ಎಂಬ ಶಬ್ದದ ಸಂಸ್ಕೃತೀಕರಣ]

ಪುಲಿಕಲ್ಲದಿ (ನಾ). ಒಬ್ಬಾತನ ಹೆಸರು: ಕೊಙ್ಗುಣಮುತ್ತರಸರ್ಕ್ಕೆ ಇರ್ಪ್ಪತ್ತಾವಿಟಿಣನ ವರ್ಷದುಳ್ ಪುಲಿಕಲ್ಲದಿ ಆಪ್ತದ ವಾರ್ಕೆಉಳ್ ಸೆಗುಣ್ಣನೊಳ್ ಎಱಿದು ವಿಟ್ಟೊಂ (ಎಕ. X (8), ಕೋಲಾರ. ೬೬-೨; ಸು. 752). [?]

ಪುಲಿಕಲ್ಲು, ಹುಲಿಕಲ್ಲು (ನಾ). ಎರಡು ಅಥವಾ ಮೂರು ಕಲ್ಲುಗಳನ್ನು ಹುಲಿಗಳಾಗಿಯೂ ಅವುಗಳಿಗಿಂತ ಚಿಕ್ಕವಾದ ಹನ್ನೆರಡು ಅಥವಾ ಹದಿನೈದು ಕಲ್ಲುಗಳನ್ನು ಕುರಿಗಳಾಗಿ ಅಥವಾ ಬೇಟೆಗಾರರಾಗಿಯೂ ಇಟ್ಟುಕೊಂಡು ಆಡುವ ಒಂದು ಬಗೆಯ ಆಟ; ಹುಲಿಘಟ್ಟದ ಆಟ; ಹುಲಿಮನೆ ಆಟ: (ಕಿ). **ಹುಲಿಕಲ್ಲು**: ಹುಲಿಕಲ್ಲೋ, ಚೌಕಾಬಾರವೋ ಯಾವುದು ಆಡೋಣ? (ಕೂಡಿ). [ಪುಲಿ+ಕಲ್ಲು(<ಕಲ್ಲ್₃)]

ಪುಲಿಕುಜುಕಿ, ಪುಲಿಕುಜುಕ್ಕಿ (ನಾ). ಒಂದು ಊರಿನ ಹೆಸರು: ಕಾಳೆಗದುಳ್ ಗಾರವರಾಳ್ ಅವಧೀರರಾ ಮಗನ್ ಚಾತಗುದ್ದಿಯಾರುಮ್ ಪುಲಿಕುಜುಕಿಯರಾ ದುಗ್ಗಮಾರನ್ . . . ಆನ್ನಿಱಿದು ಸತ್ತರ್ (ಎಕ. X, ಶ್ರೀನಿವಾ. ೪೦-೩; ಸು. 900). **ಪುಲಿಕುಜುಕ್ಕಿ**: ಬಾಣರಸರಾ ದಣ್ಡು

ಪುಲಿಕಾಱುಕ್ಕಿಯುಳ್ಳೆ ಎರಡು ದಣ್ಡು ಕಿಟ್ಟಿ ಎಱೆಯುತ್ತಿರೆ (ಎಇ. X, ಕೋಣಾರ. ೨೦೦-೬ ; ಸು. 890 ?). [ಪುಲಿ+ಕಾಱುಕಿ]

ಪುಲಿಕಾಱುಕ್ಕಿ 'ಪುಲಿಕಾಱುಕಿ' ನೋ.

ಪುಲಿಕೇಶಿ, ಪುಲಕೇಶಿ, ಪುಲಿಕೇಶಿ, ಪೊಲಕೇಶಿ, ಪೊಲಿಕೇಶಿ, ಪೊಲೆಕೇಶಿ, ಪೊಲೆಕೇಸಿ (ನಾ). ಕನ್ನಡನಾಡನ್ನು ಆಳಿದ ಸುಪ್ರಸಿದ್ಧನಾದ ಒಬ್ಬ ಅರಸನ ಹೆಸರು; ☞ ಇದು ಇಬ್ಬರು ಅರಸುಗಳ ಹೆಸರು. ಬಾದಾಮಿ ಚಾಳುಕ್ಯವಂಶದ ದೊರೆಗಳಲ್ಲಿ ಒಬ್ಬನಾದ ಒಂದನೆಯ ಜಯಸಿಂಹನ ಮಗ ಒಂದನೆಯ ಪುಲಿಕೇಶಿ (ಕ್ರಿ. ಶ. ೫೫೦) ; ಈತನ ಮೊಮ್ಮಗ ಅಂದರೆ ಒಂದನೆಯ ಕೀರ್ತಿವರ್ಮನ ಮಗ ಎರಡನೆಯ ಪುಲಿಕೇಶಿ (ಕ್ರಿ. ಶ. ೬೦೯-೬೪೨) : ಪುಲಿಕೇಶಿವಲ್ಲಭಮಮಹಾರಾಜಸ್ಯ ಪುತ್ರಃ (ಎಇ. XXVII, ೩೯-೬ ; 552). **ಪುಲಕೇಶಿ** : ಶ್ರೀ ಪುಲಕೇಶಿವಲ್ಲಭಮಹಾರಾಜಸ್ಯ ಪ್ರಪೌತ್ರಃ (ಎಇ. XXVII, ೦೦೭-೬; 597); ವಾತಾಪಿಪುರವರೇಶ್ವರನುಂ . . . ದ್ವೀಪಾಂತರಪ್ರಕಟಪ್ರಭಾವನುಮೆನಿಸಿದ ಪುಲಕೇಶಿದೇವನಿಂ (ಗದಾಯು. ೨-೭೨). **ಪುಲೆಕೇಶಿ**: ಶ್ರೀಮಾಂ ಸತ್ಯಾಶ್ರಯ ಪುಲೆಕೇಶಿವಲ್ಲಭಮಹಾರಾಜರಾಜ್ಯೇ ವರ್ತಮಾನೇ ಲಿಖಿತಮಿದಂ (ಎಇ. V, ೯-೩; ಸು. 650). **ಪೊಲಕೇಶಿ** : ಧರಾಚಕ್ರಮೆಂ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಶಿವಲ್ಲಭಂ (ಶಾಸ್ತ್ರಾ ೯೫೫). **ಪೊಲಿಕೇಶಿ** : ಶ್ರೀಪುಲಿಕೇಶಿವಲ್ಲಭ ಮಹಾರಾಜಸ್ಯ ಪ್ರಿಯಸೂನುಂ (ಇಇ. VII, ೦೦೬ ೩೯ ; 10ನೆಯ ಶತ). **ಪೊಲೆಕೇಶಿ** : ತನೂಜಃ ಪೊಲೆಕೇಶಿ (ಎಇ. VI, ೩-೩; 634). **ಪೊಲೆಕೇಸಿ** : ಪೊಲೆಕೇಸಿಅರಸರ × × × (ಎಇ. VII, ಶಿಲಾಂ. ೦೦-೨; ಸು. 640 ?); ಪೊಲೆಕೇಸಿಯ ಮೇಲೆ ಪೋಗಿ ಪುಲಿಮಟ್ಟಿಯಲ್ ಕಾದಿ (ಕ್ರಿಅಂ. ೦೯೨೮, ೩೦-೦೧ ; 1056). [?]

ಪುಲಿಕ್ಕಲಯ್ಯ (ನಾ). ಒಬ್ಬಾತನ ಹೆಸರು : ಶ್ರೀಪುಲಿಕ್ಕಲಯ್ಯ (ಎಇ. II, ೪೬೯, ಸು. 1000). [?+ಅಯ್ಯ$_{1}$]

ಪುಲಿಗಾರ (ನಾ). ಒಂದು ಸ್ಥಳದ ಹೆಸರು : ಪುಲ್ಪದಿಯೇ ಎಱಗಲ್ಲೇ ಪುಲಿಗಾರದ ಗೆಱ್ಱ ಮುಕುಡಲ್ (ಇಇ. XII, ೦೬-೨೦; 813). [?]

ಪುಲಿಗಿಲ್, ಪುಲಿಂಗಿಲ್, ಪುಲಿಗಿಲು, ಪುಲಿಗಿಲೆ, ಹುಲಗಲಿ, ಹುಲಗಿಲ್, ಹುಲಗಿಲು, ಹುಲಿಗಿಲ್, ಹುಲಿಗಿಲಿ, ಹುಲಿಗಿಲು, ಹುಲುಗಲ; ಹುಲುಗಿಲು (ನಾ). ಹೊಂಗೆಮರ; ತಮಾಲವೃಕ್ಷ: ಪುಲಿಗಿಲ ಕೆಲದೊಳ್ ಪನ್ನಗ ನಿಲಯಂ ಸಮನಿಸಿದೊಡದಱ ತೆಂಕಣದೆಸೆಯೊಳ್ ಜಲಮಕ್ಕುಂ (ಲೋಕೋಪ. ೩-೨೨) ; ಸಮನಾಗಿರೆ ಪೂಸುಗೆ ಪುಲಿಗಿಲೆಣ್ಣೆಯಂ ಸುಣ್ಣಮುಮಂ (ಅಕ್ಷರ. ೦೩-೨೦). **Δಪುಲಿಂಗಿಲ್**: ಹೊನ್ನೆ ಚೆನ್ನೆ ಕವಳಂ ಕಾರಾಚಮಾಚಂ ಪುಲಿಂಗಿಲೆರಂ ಗುರ್ಗುಳದುತ್ತಿ ಮತ್ತಿ ಮಧುಕಂ (ರಾಜಕೇ. ೩-೩೬). **ಪುಲಿಗಿಲು** : ನೆಗಟ್ಟ ಪುಲಿಗಿಲೇಶಾನ್ಯದೊಳೆ (ದಲ್ಲು) ಬಿಳಿಯ ಬಲ್ ಕೂಡೆ ಪುತ್ತಿರ್ದಾಗಳ್ (ಬಗೆಯೆ) ನಡುವೊಪ್ಪುರುಪಪ್ರಮಾಣದೊಳ್ ಪಡುವ ಕುಸುಮದಂತೆ ಮಣ್ಣೆರ್ಕುಂ (ಅಶ್ವಮೆ. ೦೦-೦೩). **ಪುಲಿಗಿಲೆ** : ಪುಲಿಗಿಲೆ ಮಾವು ಬೇವು ಬೆಳಲಂಬಟೆ ನಿಂಬೆ . . . ಎತ್ತಲುಂ ಕಲಸಿರೆ ಕಾಡು ಕಳ್ಳಲಿಸಿ ಕಂಗಳನಪ್ಪಿದುದು (ಜಾಲಾಸ್ಯ. ೦ ೯-೪). **ಹುಲಗಲಿ** : ಹುಲಗಲಿ (ಕರಂಜ) —ಎತ್ತರವಾಗಿ ಬೆಳೆಯುತ್ತದೆ. ಕಟ್ಟಿಗೆ ಹಗುರು (ಕಾಗಾ. ೩೦); ಮೈಸೂರು ಸೀಮೆಯಲ್ಲಿ ಹುಲಗಲಿಯ ಹಿಂಡಿಯನ್ನು ಹೊಲಗಳಿಗೆ ಹಾಕುತ್ತಾರೆ (ಮುಂಬಯಿ. ೬-೨೯೨). **ಹುಲಗಿಲ್** : ಕಂಚಿಯಾಲದ ಗಡಣಂ ಕೊಸಗಿಡೆ ಬಸಿಱೀ ಹುಲಗಿಲ್ಗೊರವಿ . . . ಹೊನ್ನೆಯ ತರುಗಳ್ (ಹಂಪ. ೯-೬೮). **ಹುಲಗಿಲು** : ಹುಲಗಿಲ ಬೇರ್ ತವಸದ ತಿಗುಡು ಲಕ್ಕಿ ರಡಸಿಗೆಯ ಬೇರ್ ಮರುಂಗುಳಿಯೊಳಗಗ್ಗಲಿಸಿರೆ . . . ಬಲವರ್ಧನಮಕ್ಕುಮಗ್ನಿದೀಪನ ಮಕ್ಕುಂ (ಕಲ್ಯಾಣಾ. ೯-೨೨) ; ತೊಟ್ಟುಚ್ಚುತ ತೊಟ್ಟಿಡುತಿದೆ ಮೊಗ್ಗನು ಹೂ ಹಾಸಿ ಹುಲಗಿಲು ಗಾನನಿಮಗ್ನಧ್ಯಾನದ ಹೊಸ ದಾಸಿ (ಅರಳು. ೦೩೨-೦೦). **ಹುಲಿಗಿಲ್**: ಹುಲಿಗಿಲ್ ತಂಡಸು ನುಗ್ಗಿ . . . ಉತ್ತರಣೆಯಂ ಚೂರ್ಣಂಗಳಂ ಮಾಡಿ (ಖಮದ. ೦೬-೫೯); ಬರಿವದಣೆ ಲೊಕ್ಕಿಲೋಯಿ (ಹಿ) ಸರಮಣಿಲೆ ಗುಳೂಚಿ ಪಿಪ್ಪಲಿ ಹುಲಿಗಿಲ್ ವಿಷನಾಗರ ಲಶುನಂಗಳೊಳುಪ್ಪಂ ಬೆರಸುಗೆ ಪವಣಱೀಗೆ ಪಿಂಡಮಾರೋಗ್ಯಕರಂ (ಅಕ್ಷಣಾ. ೭-೫೫). **ಹುಲಿಗಿಲಿ** : "ಚಿರಿಬಿಲ್ವ, ನಕ್ತಮಾಲಃ, ಕರಜಃ, ಕರಂಜಕಃ—ಳ ಹುಲಿಗಿಲಿಮರದ ಹೆಸರು" (ಸಿಂಹಾಂತಿ. ೦೨೩) ; ಹೊಂಗೆ, ಕರಂಜ, ಹುಲಿಗಿಲಿ ಮರ (ಕ್ರಿಶಿಗಿ. ೬೯-೦೨೯೯). **ಹುಲಿಗಿಲು** : ಹುಲಿಗಿಲ ಸೊಪ್ಪು ಗುಗ್ಗುಳಮಿವಂ ಧೂಪವಿಕ್ಕುವುದು (ಜಾಂಶಾ. ೦೨೬-೦೨). **ಹುಲುಗಲ** : ಚಿಗುರಿತು ಈ ಹುಲುಗಲ (ಶಿಲಾಮು. ೯-೦). **ಹುಲುಗಿಲು** : 'ಬಿಳಿ ಹುಲುಗಿಲು' ಪರಾ.

ಪುಲಿಗಿಲು 'ಪುಲಿಗಿಲ್' ನೋ.

ಪುಲಿಗಿಲೆ 'ಪುಲಿಗಿಲ್' ನೋ.

ಪುಲಿಗೆಱೆ, ಪುರಿಗೆಱೆ, ಪೊರಿಗೆಱೆ, ಹುಲಿಗೆಱೆ (ನಾ). ಒಂದು ಊರಿನ ಹೆಸರು ; ☞ ಧಾರವಾಡಜಿಲ್ಲೆಯ ಈಗಿನ ಲಕ್ಷ್ಮೇಶ್ವರ : ಗಜ್ಜಾಪುರ್ ಪುಲಿಗೆಱೆ ಗಣ್ಡಾವಗ್ರಾಮ(ಮಾ) ಇತಿ ಅಸ್ಯಭುಕ್ತಿ(ಕ್ತಿಃ) (ಇಇ. VIII, ೨೪೩-೦೬ ; ೫೫೩) ; ಅದಱೊಳಗಂ ಕಿಸುವೊಬಲಾ ವಿದಿತ ಮಹಾಕೊಪಣ ನಗರದಾ ಪುಲಿ[ಜಾಕಾಂ. ರಿ]ಗೆಱೆಯಾ ಸದಭಿಸ್ತುತಮಪ್ಪೊಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ (ಕವಿಗಾ. ೦-೩೭); ಪುಲಿಗೆಱೆನಗರಾತ್ ಪೂರ್ವಸ್ಯಾಂ ದಿಶಿ (ಇಇ. VII, ೦೦೩-೨೩ ; 10ನೆಯ ಶತ). **ಪುರಿಗೆಱೆ** : ಪುರಿಗೆಱೆಯಾ ಮೂಲಜಱ್ಕೇರಿಯಾ (ಎಇ. VI, ೦೬೬-೬; ಸು. 763) ; ಪುರಿಗೆಱೆಯಿಂ ಬನ್ದ ಪೊಲೆಯಣ್ಣನ ಶಿಲಾಕರ್ಮ್ಮ (ಸೌಇಇ. XI—i, ೦೦.೨೬; 865); ಶ್ರೀಮತ್ ಕುಂಕುಮಮಹಾದೇವಿ ಪುರಿಗೆಱೆಯಲು ಮಾಡಿಸಿದ (ಇಇ. VII, ೩೯-೨೦; 999). **ಪೊರಿಗೆಱೆ** : ಪೊರಿಗೆಱೆಯಾ ಮಹಾಜನಕ್ಕುಂ (ಎಇ. XIV, ೦೯೦-೨; 725). **ಹುಲಿಗೆಱೆ** : ಹುಲಿಗೆಱೆಯ ಸೋಮನಾಥ ದೇವರ ಕ್ಷೇತ್ರ(ಎಇ. VII, ಶಿಸಂಗಿ. ೩೨-೦೩೫; ಸು. 1050?). 'ಪುಲಿಕರನಗರ' ಪರಾ.

ಪುಲಿಗೆಱೆಮೂನೂಱು, ಹುಲಿಗೆಱೆಮೂನೂಱು — ಹುಲಿಗೆರೆಯೇ ಮುಖ್ಯವಾದ ಮುನ್ನೂರು ಹಳ್ಳಿಗಳ ನಾಡು : ಪೆರ್ಮ್ಮಾಡಿ ಬೂತಾಯ್ಯರ್ಂ ಗಂಗವಾಡಿ ತೊಂಭತ್ತಱುಸಾಸಿರಂ ಬೆಳ್ವೊಲಮೂನೂಱುಮ (ನಾಳು) ಪುಲಿಗೆಱೆಮೂನೂಱುಮನಾಳುತ್ತಿರೆ (ಸೌಇಇ. XI—i, ೩೬-೩; 942); ಶ್ರೀಸೋಭನರಸರು ಹುಲಿಗೆಱೆಮೂನೂಱ ಬೆಳುವಲ ಮೂನೂಱುಂ ಹಲಸಿಗೆ ಪನ್ನಿರ್ಬ್ಬಾಸಿರಮುಮನಾಳುತ್ತಮಿರೆ (ಸೌಇಇ. XI—i, ೩೦.೦೨; 1050). [ಪುಲಿ + ಕೆಱೆ]

ಪುಲಿಗೋಣ (ನಾ). (ಹುಲಿಯಂತೆ) ಬಲಿಷ್ಠವಾದ ಕೋಣ : ಆಯೆಯ್ ಪಾವಂ ಪಗೆ ಮಿಗೆ ತಿಂದುದು ಮೇಪಂತಿರೆ ಪುಲ್ಲ ಸರವಿಯಂ ಪುಲಿ[ಜಾಕಾಂ. ಬಲ್]ಗೋಣಂ (ಯಶೋಧ. ೩-೪೫). [ಪುಲಿ + ಕೋಣ$_{1}$]

ಪುಲಿಚರ್ಮ, ಹುಲಿಚರ್ಮ (ನಾ). ಹುಲಿಯ ತೊಗಲು ; ವ್ಯಾಘ್ರಚರ್ಮ : ಕೆಂಜೆಡೆಯ ಚಂದ್ರಕಳೆಯರಸನೊಪ್ಪುತ್ತಿರಲು ರಂಜಿಸುವ ಪುಲಿಚರ್ಮದಭವನೊಪ್ಪುತ್ತಿರಲು (ಜಸ. ೧-೬); ಹರಿಣ ಗೋರೋಜನ ಕೃಷ್ಣಾಜಿನ ಪುಲಿಚರ್ಮ ನರಿಗೊಂಬುಗಳನಿತ್ತರೊಲಿವು (ಪೋಜಸ. ೦೯-೬೫). **ಹುಲಿಚರ್ಮ**: ದಕ್ಷಿಣದವರಲ್ಲಿ ಕಂಬಳಿಯ ಕೋರೆ, ನಿಲುವಂಗಿ, ಕೊರಳಲ್ಲಿ ಭಂಡಾರ ಇಡುವ ಹುಲಿಚರ್ಮದ ಚೀಲ . . . ಕೈಯಲ್ಲಿ ಡಮರುಗ, ತ್ರಿಶೂಲ—ಇವು ಮುಖ್ಯವಾದುವು (ಕಇಳ. ೬೮). [ಪುಲಿ+ಚರ್ಮ]

ಪುಲಿದೊಗಲ್ 'ಪುಲಿದೋಲ್' ನೋ.

ಪುಲಿದೊಗಲು 'ಪುಲಿದೋಲ್' ನೋ.

ಪುಲಿದೊಡೆಯ (ನಾ). ವ್ಯಾಘ್ರಾಸುರನನ್ನು ನಾಶಮಾಡಿದವನು; ಶಿವ .

ಜನಿಸಿದಣಾಗಂಗಮೃತಶರನಿಧಿಯನೆಱೆದರ್ಗೆ ತವನಿಧಿಯ ಮೆಚ್ಚಿತ್ತು ಮೆಱೆದೆ ಪುಲಿದೊಡೆಯ[ಶಾಣಾಂ. ಮೆಱೆದೈ ಪುಲಿತ್ತೊಡೆಯ]ಶರಣಾ (ಶಾಪಾಂ. ೬-೭). [ಪುಲಿ + ತೊಡೆ$_1$ + —ಅ$_7$]

ಪುಲಿದೊವಲ್ 'ಪುಲಿದೋಲ್' ನೋ.

ಪುಲಿದೊವಲು 'ಪುಲಿದೋಲ್' ನೋ.

ಪುಲಿದೋಲ್, ಪುಲಿದೊಗಲ್, ಪುಲಿದೊಗಲು, ಪುಲಿದೊವಲ್, ಪುಲಿದೊವಲು, ಹುಲಿದೊಗಲು, ಹುಲಿದೊವಲು (ನಾ). = **ಪುಲಿಚರ್ಮ** : ಮಾರುಳೊಡನಾಡುವಂ ಮಸಣದೊಳ್ಪಡುವಂ ಪುಲಿದೋಲನುಟ್ಟು ಭೀಕರಕರಿಚರ್ಮಮಂ ಪೊದೆವಂ (ಸಮಸ. ೦-೬೨). **ಪುಲಿದೊಗಲ್** : ಪ್ರಭುದುಕೂಲದಂತಿರ್ವ ಪುಲಿದೊಗಲಿಂದೊಪ್ಪಿ ಪಶುಪತಿ ಬಸವನ ಮನದ ಮೊನೆಯೊಳೊಪ್ಪೆ ಮೂರ್ತಿಗೊಂಡು (ಬಸರ. ೪-೨೦). **ಪುಲಿದೊಗಲು** : ಪುಲಿದೊಗಲ ಕೆಂಜೆಡೆಯ ಕೇವಣದಿಂದುಘಣಿಪತಿಯ . . . ಅಭಯದ ವರದಕರಪರಿಕಲಿತನೆಸೆದನು ಶಂಭು ಸದ್ಯೋಜಾತ ವಲ್ಲದಲಿ (ಕುಪ್ಪಾಲಿ. ೬-೬೯); ಕಳಿದರೀ ಚಂಡಾಂಶುವಂಶೋಜ್ವಲರು ಬಳಿಕಾ ಹಿಮಸಮಯವನು ಪುಲಿದೊಗಲ ಹರಿಣಾಜಿನದ ಹಾಸಿಕೆಯ ಹೊದಕೆಯಲಿ (ತೊರರಾ. ೩-೨-೩). **ಪುಲಿದೊವಲ್** : ಉಡುವೊಡೆ ಸಂತತಂ ಪುಲಿದೊವಲ್ ನಿಮಗಲ್ಲದೊಡಾ ದಿಗಂಬರಂ ಪಡುವೊಡೆ ರುದ್ರಭೂಮಿ ನಿಮಗಲ್ಲದೊಡಾ ನಿಗಮೋತ್ತಮಾಂಗಂ (ಸಂಪಾಶ. ೨೦); ಪುಲಿದೊವಲ ಜೋಗವಟ್ಟಿಗೆ . . . ಮಾಯವ ಕುಂಚಂ ನೆಲನನಲೆವುಡಿಗೆ ರಂಜಿಸೆ ನಲವಿಂ ಮಾಯಾವಿಯೆಯ್ದಿದಂ ನೃಪಸಭೆಯಂ (ದಶಕು. ೬-೦೩೦); ಪುಲಿದೊವಲಂ ಗಜದಜಿನಮನೆಲೆ ನೀನುಡದಿರ್ಬಿಡೆಂದು ಬಿಡಿಸುತೆ ಮೃಡನಂ ಸುಲಲಿತದಿವ್ಯಾಂಬರಮಂ ನಲಿದುಡಿಸುವ ದೂಸಿಗರ್ ಕರಂ ನೆಲಸಿರ್ಪರ್ (ರಾಜಶೇ. ೨-೯೬). **ಪುಲಿದೊವಲು** : ಪೂಸಿದ ವಿಭೂತಿ ಕಯ್ಯೊಳು ಪಾತ್ರೆಯೇಕಜೆಡೆ ಭಾಸುರದ ಪುಲಿದೊವಲು ಲಾಕುಳಂ ಚೆಲುವ ನಡೆ ಎಸೆವ ಭಕ್ಷುಕಶೇಷಮುಮನೊಪ್ಪೆ ಕೈಕೊಂಡು (ಕಿರುರ. ಬೇ. ೦೦-೦೦); ತೊಟ್ಟ ಬಿಳಿಯ ಜೋಡು ಮೆಯ್ವಣ್ಣ ಬರಹದೊಳುಟ್ಟ ಕಾಸೆಯ ಪುಲಿದೊವಲು ಮುಟ್ಟಿ ಗಜಾಸುರನೊಳು ಕಾದಿ ಕೆಡಪುವ ಕಟ್ಟಾಳು ಹರನಂತೆ ಮೆಱೆದ (ಪರ್ಶ. ೬-೦೦೩). **ಹುಲಿದೊಗಲು** : ಸನ್ಯಾಸಿಯು . . . ನೆಲದ ಮೇಲೆ ತನ್ನ ಹುಲಿದೊಗಲು ಹಾಸಿ ಗಂಟು ತಲೆದಿಂಬಿಗೆ ಇಟ್ಟುಕೊಂಡು . . . ಅಡ್ಡಾದನು (ಮುಂಬಿಯ ೪-೦೩೦). **ಹುಲಿದೊವಲು** : ಹುಲಿದೊವಲನುಟ್ಟು ಮುಡಿಗೆದರಿದ ಉನ್ಮಾದಮೂರ್ತಿ ಅರೆಮಬ್ಬಿನಲ್ಲಿ ಮೂಡಿ ಅಭಿನಯಿಸುತ್ತಾನೆ (ಶಾಂಶಾ. ೦೩-೦).

ಪುಲಿದೊವಲುಡೆ=ಹುಲಿಚರ್ಮದ ಉಡುಗೆ : ಪುಲಿದೊವಲುಡೆ ಭಸಿತಂ ಕುಂಡಲಮುಗ್ರತ್ರಿಶೂಲ ಡಮರುಗಂ ಕಿಱುಜೆಡೆಗಳ್ ಸಲೆ ಮೆಱೆದ ರುದ್ರನಂ ಕಂಡೊಲವು ಮಿಗಲ್ ಚರಣಕೆಱಗಿದಂ ಸಿರಿಯಾಳಂ (ತ್ರಿಪುತಿ. ೦೦-೪೩). **ಪುಲಿದೊವಲುಡೆಯ**=ಹುಲಿಯ ಚರ್ಮವನ್ನು ಉಟ್ಟಿರುವವನು ; ಶಿವ : ಪುಲಿದೊವಲುಡೆಯಂಗೆ ಪುನರಪಿ ರತ್ನಪ್ರಜ್ವಲ ದಾರತಿಗಳ ಬೆಳಗಿ ಸಲಿಲಜ ಮಂದಾರ ಮಲ್ಲಿಗೆ ಪುಷ್ಪಾಂಜಲಿಯ ಮಾಡಿದ ಮಹೋತ್ಸವದಿ (ಮೋಹಶ. ೨೦-೯೩). [ಪುಲಿ + ತೋಲ್$_1$]

ಪುಲಿನ, ಪುಳಿನ (ನಾ). ೧. ಮರಳಿನಿಂದ ಕೂಡಿದ ನದಿ, ಸಮುದ್ರ ಮುಂತಾದುವುಗಳ ತಟ, —ದಂಡೆ. ೨. ನೀರು ಕಡಮೆಯಾದಾಗ ನದಿಯ ಒಡಲಲ್ಲಿ ಅಥವಾ ದಂಡೆಯಲ್ಲಿ ಉಂಟಾಗುವ ಮಣ್ಣಿನ ದ್ವೀಪ ; ಸೈಕತದ್ವೀಪ. ೩. ನದೀತಟ; ನದೀತೀರ. ೪. ಮರಳು. **ಪುಳಿನ** : ೧. "ಸೈಕತಂ ಪುಳಿನಂ ದ್ವೀಪಂ (ಸಿಕತಾ)—ಈ ೩ ಮಳಲ ದೀಣೆ (ದಿಣ್ಣೆ)" (ಶಲಾಮು. ೦೦೦-೪೬); ಕುಳಿರ್ವ ಪುಳಿನಂಗಳೊಳಂ ಕೋಡುವ ಧಾಲಾಗೃಹಂಗಳೊಳಂ ವಿಶ್ರಮಿಸಿ ಶಾರವಾತಪಪರಿಶ್ರಮಮಂ ಕಳೆಯೆ (ಅಂಪು. ೦೦-೬೨ ಪ). ೨. ನೀರೆಂಬ ಸೀರೆಯಂ ಪೆಱಸಾರಿಸುತುಂ ಪುಳಿನಮೆಂಬ ಜಘನಸ್ಥಳದಿಂ ನಾರಿಯವೊಲ್ ನದಿ ಮೆಱೆಗುಂ ಶಾರದಸಮಯಂ ದಲೆಂಬ ವಿಟಸನ್ನಿಧಿಯೊಳ್ (ಶಾಧಪು. ೪-೬೯). ೩. ಗಂಗಾನದೀಪುಳಿನ ಪರಿಸರಪ್ರದೇಶದೊಳ್ ಮಱೆದೊಱಗುವೈರಾವತದಂತೆ ಪವಡಿಸಿ (ಸಂಸರಾ. ೪-೦೦೦ ಪ). ೪. ಪಶ್ಚಿಮಾಂಭೋಧಿಯ ಪುಳಿನಚಯಂ ಬೆಳ್ಪನಾಳ್ದಿರ್ದುವಾಗಳ್ (ಕಾಮಂಪು. ೦೪೨) ; ಕಣ್ಗೆ ಮುತ್ತಿಟ್ಟುದಿರ್ಕೆಲದಲ್ಲಿ . . . ಧವಳಿಮ ಪುಳಿನರಾಶಿ (ಶ್ರೀರಾಮಾ. ೦೩೦-೨೨೦). [ಸಂ.]

ಪುಲಿನಖ, ಹುಲಿನಖ (ನಾ). ೧. ಹುಲಿಯ ಉಗುರು. ೨. (ಮಕ್ಕಳಿಗೆ ತೊಡಿಸುವ) ಹುಲಿಯುಗುರಿನಿಂದ ಮಾಡಿದ ಅಥವಾ ಹುಲಿಯುಗುರಿನಾಕಾರದ ಒಂದು ಆಭರಣ : ಬಿಂದಿಲರಳೆಲೆ ಗೆಜ್ಜೆಯನ್ನು ಪಾಲ್ಗಡಗ ಪೊಕ್ಕುಳ ಘಂಟೆ ಪುಲಿನಖಮನೂನಕಟಿಸೂತ್ರ ಮಾಗಾಯಿ ಮಣಿಮಯಮುದ್ರೆಗಳ ಬೆರಳ್ಗಳಿಗಮರ್ಚಿ (ಸವಸೋ. ೦೨-೦೬). **ಹುಲಿನಖ** : ೩. ಒಂದು ಬಗೆಯ ಔಷಧೀಸಸ್ಯ ; ಗರುಡಮೂಗು : ಹುಲಿನಖ, ಗರುಡಮೂಗು (ಪ್ರೃತಿಗಿ. ೩೨-೦೦೩೩). [ಪುಲಿ + ನಖ]

ಪುಲಿನಾಡು (ನಾ). ಒಂದು ಊರಿನ ಹೆಸರು : ದೊಸಿ ಅರಸರಾ ಕಳಿ ಪುಲಿನಾಡಱುವತ್ತುಂ ಪಡೆದು ಕೊಟ್ಟೊಡುಂ (ಎಕ. X, ಮುಳಬಾ. ೨೪೪-೯; ಸು. ೩೨೦); ಪುಲಿನಾಡು ರಾಸಮಯ್ಯ ಹಟಿಯೂರರಸರಂ ದಣ್ಡು ವೆಱ್ದೊಡೆ (ಎಕ. X, ಶ್ರೀನಿವಾ. ೬೩-೪; ಸು. ೨೦೦?). [ಪುಲಿ+ನಾಡು]

ಪುಲಿಪಟು 'ಪುಲಿವೆಟ್ಟು' ನೋ.

ಪುಲಿಮುಖ, ಹುಲಿಮುಖ (ನಾ). ಕೋಟೆಯ ಹೆಬ್ಬಾಗಿಲು,—ಪ್ರವೇಶದ್ವಾರ : ೪ ಕೋಟೆಯ ಹೆಬ್ಬಾಗಿಲಿನಲ್ಲಿ ಸಾಮಾನ್ಯವಾಗಿ ಹುಲಿಯ ಮುಖದ ಆಕಾರದಲ್ಲಿರುವ ಒಂದು ಶಿಲ್ಪದ ಮಾದರಿ : ಪುಲಿಮುಖ ಚೋರ್ಕಂಡಿ ದಿಡ್ಡಿಗಳಿಂದ ಪೊಳಲ ನಾಲ್ದೆಸೆಯೊಳಲೆವುತಲಲಿತಗೋಪುರ ತೋರಣಗಳಿಹವು (ಜೀವಂಸಾಂ. ೦-೪೦); ಗಜದ ಭಾರಿಯಂ ಮಾವುತರ್ ಪುಲಿಮುಖ[ಪಾಠಾಂ. ಮೊಗ]ಕೆ ನೂಂಕಿದರ್ (ಸಪಪು. ೪೨-೨೬); ಆಗಸವ ಸೋಂಕಿ ಸನ್ನುತಂ ಪಬ್ಬುವ ಪತಾಕೆ ಮುರಿಮುರಿದ ಕೊತ್ತಳ ಪುಲಿಮುಖಗಳಿಂದ (ರುಕ್ಮಾಂಗ. ೩-೩). **ಹುಲಿಮುಖ** : ದುರ್ಗದ ಹಿರಿಯ ಹುಲಿಮುಖದೊಳಗೆ ಹೊಯ್ದರು ಬೇಹ ಬೇಹವರ (ಕುಪ್ಪಾಕ. ೭-೩೦); ಬಲಿದುದನಿತಕೆ ಕೋಟೆ ಪರಿಘಾವಳಿಯ ರಚನೆಯಲಾಳುವೇರಿಯ ಹುಲಿಮುಖದ ಮುಗಿಲಟ್ಟಳೆಯ ಸಾಲುಗಳ ಸೊಗಸಿನಲಿ (ತೊರರಾ. ೦-೦೩-೨); ಮಲೆತೀ ಪುರಕೃತಹ ರಿಪುನೃಪಪಶುಕುಲಸಮೂಹವನಗಿದುಗುಳ್ದ ಸಲೆ ಶಾರ್ದೂಲವದನವೆನೆ ಹುಲಿಮುಖ ಬಲುಭಯಾಂಕುರವ ಬೀಱುವುವು (ಕುಪಪಿ. ೨-೬೪). [ಪುಲಿ + ಮುಖ]

ಪುಲಿಮೊಗ, ಹುಲಿಮೊಗ (ನಾ). ೧. ಹುಲಿಯ ಬಾಯಿ : ಆ ಪುರದ ಮಿಸುಪ ಹುಲಿಮೊಗಮೊಪ್ಪಿದುದರಿಧರಣೀಪಾಲಪಶುಗಳಂ ನುಂಗುವ ಪುಲಿಮೊಗವೆಂಬುತೆ (ಇಪುಕಾ. ೦-೩೪). ೨. =ಪುಲಿಮುಖ : ಗೊಂಟು ಗೊಂಟಿನೊಳ್ ಬಳಸಿದ ಕೊತ್ತಳಂ ಸೊಗಯಿಪಾಳ್ವೇರಿ ಡೆಂಕಣಿ ಸಾರಮಾರಿಯಗ್ಗಳಿಸುವ ಗೋಪುರಂ ಪುಲಿಮೊಗಂ ಮೆಱೆಗುಂ ಪುರದೊಳ್ ನಿರಂತರಂ (ಗಿರಿಕ. ೨-೭೯); ಆಗಳಾಳ್ವೇರಿ ಕೋಟೆಕೊತ್ತಳ ನೆಲದಿಡ್ಡಿ . . . ಪಲ ಪುಲಿಮೊಗಗಳನನುಮಾಡಿಸಿದನು (ಕುರಾಸಾಂ. ೩೭-೩೧); ಸಮಸ್ತಕಾರ್ಯಕುಶಲರಿಂ ಕೋಟೆ ಕೊತ್ತಳ ಮುಗಿಲಟ್ಟಣೆ ಬುರುಜು ಪುಲಿಮೊಗ ಡೆಂಕಣಿಯಗಳಾಳ್ವೇರಿ ಪಿಳ್ಳಗುಸೆ ದಿಡ್ಡಿಮೊಳಗದುಗಳ್ ನಿರ್ಮಿತಮಾಗಲೊಡನೆ (ಹಾಲಾಸ್ಯ. ೦-೪೮೬ಪ). **ಹುಲಿಮೊಗ** : ೨. ಕೋಂಟೆ ಹೋಯ್ತೇಳೇಳಿಯೆನುತಿರದೆ ಕುಲಿಲಿಯೆಂದಾರಿ ಕೊಬ್ಬಿಱಿದು ಹುಲಿಮೊಗದೊಳಗೆ ಹೊಗಲೊಡನೆ ಸೂತ್ರವಿಡಿದು (ಸಮ್ಯಾಕೌ. ೬-೩೬) ; ತನ್ನಿದಿರ್ವರೆ ಪಿಡಿದು ಉಲಿದು ಹೊಯುವೆನೆಂಬ ರೌದ್ರದಿಂ ಕೋಟೆಯ ಹುಲಿಮೊಗ

ಕಣ್ಗೆ ತನ್ನಿದಿರ್ವರೆ ರಂಜಿಸಿತು (ಪೋಷಕ. ೩-೯). [ಪುಲಿ + ಮೊಗ]

ಪುಲಿಯಣ್ಣ (ನಾ). ಒಬ್ಬಾತನ ಹೆಸರು : ಕವುಳನ್ದೆಯಾರುಂ ಕಣ್ಣ್ಯಾ ಕುಳ್ಳಿಯುಂ ಪಾಣಿದರುಂ ಅಕ್ಕಶಾಲೆಯರು ಪುಲಿಯಣ್ಣಂಗಳು ಎರೆಕಾಡನಳ ದೊರ್ (ಸೌಇಇ. IX-i, ೪೭-೦೫; ಸು. ೨೫ಯ ಶತ). [ಪುಲಿ + ಅಣ್ಣ$_1$]

ಪುಲಿಯುಂಡಿಗೆ (ನಾ). ಹುಲಿಯ ಚಿತ್ರವುಳ್ಳ ಮುದ್ರೆ : ಅವನಿನ್ದಿತ್ತಣ ತತ್ಕುಲದವನೀಶಗ್ಗಾರ್ಯುಂ ಹೊಯ್ಸಳಾಖ್ಯಂ ಮತ್ತಂತವರ್ಗೆ ಪುಲಿಯುಣ್ಡಿಗೆಯುವಾದಿ(ರ)ವಿಜಾರ್ಚ್ಚಿತೆಯೆನಿಪ ಶಶಪುರಾಂಬಿಕೆಯೊಲವಿಂ (ಎಕ. XI, ಪತ್ರಮ. ೬೯-೦೦; 1214 ?). [ಪುಲಿ+ಉಂಡಿಗೆ$_3$]

ಪುಲಿಯುಗುರ್, ಪುಲಿಯುಗುರು, ಹುಲಿಯುಗುರ್, ಹುಲಿಯುಗುರು (ನಾ). ೧. ಹುಲಿಯ ಪಂಜದ ಉಗುರು ; ವ್ಯಾಘ್ರನಖ : ಪುಲಿಯುಗುರೆಯ್ದೆ ನಾಂಟಲುರವಂ ಮುಳಿದೆಯ್ದೆ ಪುಳಿಂದನೊತ್ತೆ ಗಂಟಲನದು ಪಾಯೆ (ಪುಲ್ಲಾ. ೩-೩೦೯). ೨. (ಮಕ್ಕಳಿಗೆ ತೊಡಿಸುವ) ಹುಲಿಯ ಉಗುರಿನಿಂದ ಮಾಡಿದ ಅಥವಾ ಹುಲಿಯ ಉಗುರಿನಾಕಾರದ ಒಂದು ಆಭರಣ : ಅರಳೆಲೆ ಪೊಂಗುನೂಲ್ ಪುಲಿಯುಗುರ್ ಮಣಿಕಿಂಕಿಣಿ ಗೆಜ್ಜೆ . . . ಮನಂಗೊಳೆ ಭುವನೈಕಮಂಡನನೊಳೇನೆಸೆದಿರ್ದುದೊ ಬಾಲಮಂಡನಂ (ಅಪಪು. ೩-೬೨); ಅರಳೆಲೆ ಮತ್ತಿಗಾಯ್ ಪುಲಿಯುಗುರ್ ನವರತ್ನದ ಕಂಕಣಂಗಳ್ . . . ಒಪ್ಪಿರೆ ಪಿತೃಮಾತೃಗಳ್ಗೆ ಪಡೆದರ್ ತನಯರ್ ನಯನೋತ್ಸವಂಗಳು (ಪಂಚಾಮಾ. ೩-೦೯೧); ಒಡವುಟ್ಟಿದ ಕೌಸ್ತುಭಮಿರ್ಪೆಡೆಗಂ ದಾಯಾದನಪ್ಪೆನೆನ್ನೆಗಮೊಂದಂದುಡು ಪತಿಕಳೆ ನೆಲೆಸಿತ್ತೆನೆ ಪೊಡೆಯರಲನ ಕೊರಲ ಪುಲಿಯುಗುರ್ ಕರಮೆಸೆಗುಂ (ಪಗಿ. ೩-೪೪). **ಪುಲಿಯುಗುರು** : ೨. ಬಾಲಶಶಾಂಕನಂದದ ಪುಲಿಯುಗುರನು ಢಾಳಿಪ ಬಂದಿ ರಂಜಿಸಿತು (ಅಂಪಸ. ೪-೪೪); ಅರಳೆಲೆ ಮಾಗಾಯ್ಪುಲಿಯುಗುರೊಲಿಯುತ ಚರಣದಂದುಗೆ ಗೆಜ್ಜೆಗಳು ಕರದ ಕಂಕಣಗಳು ಘಲಿಘಲಿರೆನಲಾಡಿ ಬರುವಳು ತಂದೆಯ ಬಳಿಗೆ (ಕರ್ಣಾಕ. ೨೧೬). **ಹುಲಿಯುಗುರ್** : ೨. ಬಳೆದೋಳ ಭಾಗ್ಯನಿಧಿ ಹುಲಿಯುಗುರ ಸುಲಭಿಗಂ ನಳನಳಿಪ ಲಾವಣ್ಯದಿಂದೆಸೆವ ಬಣ್ಣಿಗಂ (ಬಸರ. ೦-೦೫೦) **ಹುಲಿಯುಗುರು** : ೧. ನಮ್ಮ ದೇಶದ ಜನರು . . . ಹುಲಿಯುಗುರಿನ ಆಭರಣ ಮಾಡಿಸಿ ಮಕ್ಕಳ ಕೊರಳೊಳಗೆ ಹಾಕುತ್ತಾರೆ (ಮುಂಬಿಯಿ. ೪-೩೬); ತನ್ನ ಮೈಯೆಲ್ಲ ಹುಲಿಯುಗುರುಗಳ ಗಾಯದಿಂದ ಕೆಂಪಾಗಿದೆ (ಕಾಸೂರು. ೨೯೩). ೨. ಕರದಲ್ಲಿ ಕಂಕಣ ಬೆರಳಲ್ಲಿ ಉಂಗುರ ಕೊರಳಲ್ಲಿ ಹಾಕಿದ ಹುಲಿಯುಗುರಮ್ಮ ಅರಳೆಲೆ ಕನಕಕಂಡಲ ಕಾಲಲಂದುಗೆ ಉರಗ ಶಯನ ಬಂದ ಕಾಣಿರೇನೆ (ಪುರಂದ. ೦-೦೪೦-೨); ಕತ್ತಿನಲ್ಲಿ ಅಡ್ಡಿಕೆ . . . ಹನುಮನ ತಾಳಿ, ಹುಲಿಯುಗುರು (ಮುಲ್ಲಿ. ೪೦). ೩. ಸುಗಂಧವುಳ್ಳ ಒಂದು ಬಗೆಯ ಔಷಧೀ ಸಸ್ಯ : ಗಂಧಕ, ಹುಲಿಯುಗುರು, ಬಜೆ . . . ಪದಕ, ಎಣ್ಣೆ, ಅಜಮೂತ್ರದಲ್ಲಿ ಬೆರಸಿ ಅಟ್ಟು ನಸ್ಯಂಗೈಯೆ ಪೀನಸ ಮಾಣ್ಗುಂ (ಶಿಸ್ತಿ. ೬೬).

ಪುಲಿಯುಗುರ ಪಟ್ಟು = ಒಂದು ಬಗೆಯ ರೇಷ್ಮೆ ವಸ್ತ್ರ : ನೇತ್ರಾವಳಿಯು . . . ಗಜದಾಳ ಪುಲಿಯುಗುರ ಪಟ್ಟಿಂದ್ರರಾಗಂ ಲಲಿತವೀಣಾವಳಿಯು (ಪಸಪು. ೦೦-೨೫). [ಪುಲಿ + ಉಗುರ್]

ಪುಲಿಯುಗುರು 'ಪುಲಿಯುಗುರ್' ನೋ.

ಪುಲಿಯೂಟು 'ಪುಲಿವೆಟ್ಟು' ನೋ.

ಪುಲಿವಟ 'ಪುಲಿವೆಟ್ಟು' ನೋ.

ಪುಲಿವಟೆ 'ಪುಲಿವೆಟ್ಟು' ನೋ.

ಪುಲಿವಟ್ಟಿ (ನಾ). ಒಂದು ಊರಿನ ಹೆಸರು : ಮೂಗುನ್ದಪನ್ನೆರಡು ಪುಲಿವಟ್ಟಿಪನ್ನೆರಡುಂ ಕಲ್ವತ್ತಿಯೇಟುಂ ಸಾನ್ತಳಿಗೆಸಾಯಿರಮುಮಂ ದುಷ್ಪಾಟವಿಕನಿಮ್ಮೂಳನಂಮ್ಮಾಡಿ ಸುಖದಿಂ ರಾಜ್ಯಂಗೆಯ್ಯುತ್ತಿಟ್ಟು (ಎಕ. VIII, ಸೊರಬ ೪೭೭-೨೩ ; 991). [ಪುಲಿ + ಪಟ್ಟಿ$_1$]

ಪುಲಿವಟ್ಟೆ 'ಪುಲ್ಲಿಪಟ್ಟೆ' ನೋ.

ಪುಲಿವರೆ (ಕ್ರಿ). (?) : ಮದನಂ ಶ್ರೀಮಲ್ಲಿಭಟ್ಟಾರಕನ ವಿಮಳಬೋಧಾನಳಜ್ವಾಳೆಗಳ್ ಸೋಂಕದ ಮುನ್ನಂ ತತ್ತಪೋರಾಶಿಗೆ ಪುಲಿವರೆ[ಶಾಕಾಂ.ರ] ದತ್ತೆಂಬಿನಂ ಬೂದಿಯಾಗಿರ್ಪುದುಮಾಗಳ್ ಮೋದಿಕೊಂಡಳ್ ರತಿ ಮತಿ ಮಱೆದಳ್ ಮೆಯ್ಯನೀಡಾಡಿದಳ್ (ಪುಲ್ಲಿಪು. ೦೪-೪೫). 'ಹುಲಿವಿರಿ' ಹೋ. [?]

ಪುಲಿವಲೆ. ಹುಲಿಬಲೆ (ನಾ). ಒಂದು ಬಗೆಯ ದೊಡ್ಡ ಬಲೆ : ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣಿ ತೊವಲ್ವಲೆ ಸಿಕ್ಕು ದಕ್ಕು ಪೆರ್ಮೊಲವಲೆ ಸಂದ ಹಾಸುವಲೆ ನೀರ್ವಲೆ ಮೇಲ್ವಲೆ . . . ಎಂಬಿನಿತಂ ಪೊಱೆಗಟ್ಟಿ ಕಾನನ ಸ್ಥಲದೊಳಗಲ್ದು ತೋಹುವಿಡಿದೊಡ್ಡಿದರೆಯ್ದೆ ಪುಳಿಂದನಾಯಕರ್ (ದಕಳು. ೨-೦೦೫). **ಹುಲಿಬಲೆ** : ಅದಱೊಳಗಡಗಿಪ್ಪರೈವರು ಕಳ್ಳರು ಒಬ್ಬ ನರಿಬಲೆಯವನೊಬ್ಬ ಹುಲಿಬಲೆಯವ (ಕಣ್ಯಾಕಾಂ. ೦೦೯-೦೬).

[ಪುಲಿ + ಬಲೆ$_1$]

ಪುಲಿವಾಲ್ (ನಾ). ಹುಲಿಯ ಹಾಲು : ಪುಲಿವಾಲಂ ಕುಡಿವಲ್ಲದೆ ಕಲಿಯಾಗಂ ಪುತ್ರನ್ (ಎಕ. XI, ದಾವಣ. ೪೩-೨೬ ; 1164); ಪುಲಿವಾಲಂ ನಲಿದುಣ್ಡ ಶಕ್ತಿ (ಎಇ. XIV, ೨೬೨-೨೯ ; 1173). [ಪುಲಿ + ಪಾಲ್$_1$]

ಪುಲಿವಾಲ (ನಾ). ಹುಲಿಯ ಬಾಲ : ಪುದಿದು ತಳಿರುಡೆ ಸುರಗಿ ಪುಲಿವಾಲದಲಿ ವಿರಚಿಸಿದ ಹದುರುಗಂಕಣ ಖಡೆಯ ಪೆಂಡೆಯದೊದವಿನಿಂ . . . ಬಲೆವಿಡಿದಿಹರು ಬಿಯದರು (ಸಾಳ್ವಭಾ. ೩-೭). [ಪುಲಿ + ಬಾಲ]

ಪುಲಿವುತು (ನಾ). ಒಂದು ಸ್ಥಳದ ಹೆಸರು : ಪೂರ್ವೋತ್ತರದಿಗ್ಭಾಗೇ ಸಿರಿಗಾಳುಗ್ರಾಮಸೀಮ್ನಿ ಪುಲಿವುತು ತತ ಆಗತ್ಯ ಕವ್ವೆಸುರಿಗೊಳಂ ತತಃ ಪೆರ್ಬ್ಬುತ್ತು (ಎಕ. XI, ದಾವಣ. ೬೬-೩೦ ; 694). [?]

ಪುಲಿವೆಟ್ಟು, ಪುಲಿಪಟು, ಪುಲಿಯೂಟು, ಪುಲಿವಟ, ಪುಲಿವಟೆ, ಪುಲಿವೇಟು, ಪುಲ್ಲಿವೆಟು, ಪುಲ್ಲಿವೇಟು (ನಾ). ದೇವಾಲಯ, ಕೆರೆ, ಕಟ್ಟೆ ಮುಂತಾದುವುಗಳ ಜೀರ್ಣೋದ್ಧಾರ ಇತ್ಯಾದಿ ಸಾರ್ವಜನಿಕ ಕಾರ್ಯಗಳಿಗಾಗಿ ಉದಾರಿಗಳಿಂದ ದತ್ತಿಯಾಗಿ ಬಂದು, (ಬಡ್ಡಿಯ ಉತ್ಪನ್ನವನ್ನು ಉಪಯೋಗಿಸಿಕೊಳ್ಳಬಹುದಾದ) ಕೂಡಿಟ್ಟ ನಿಧಿ,-ಸಂಪತ್ತು,-ಠೇವಣಾತಿ : ೧೦೦ಱುವರಹಂನು ಕೊಟ್ಟು ದೇವರ ಗುಡಿಯಲ್ಲೂ ಮಾಡಿಸಿದ ಪುಲಿವೆಟ್ಟು (ಸೌಇಇ. IX-ii, ೩೬೬-೪ ; 1534). **ಪುಲಿಪಟು**: ಶ್ರೀವಿಠಲದೇವರ ಅಮ್ರುತಪಡಿಗೆ ಪುಲಿಪಟು ನೈವೇದ್ಯಕೆ . . . ಧಾರಾಗ್ರುಹೀತವಾಗಿ ಬಂದ ತೆಕ್ಕಲಕೋಟೆಸೀಮೆವೊಳಗಣ ನಿಟೂರಗ್ರಾಮ ೧ (ಸೌಇಇ. IX-ii, ೬೦೬-೨ ; 1543). **ಪುಲಿಯೂಟು** : ನಮ್ಮ ಧರ್ಮವಾಗಿ ಸ್ವಾಮಿಯ ಸನ್ನಿಧಿಯಲೂ ಪುಲಿಯೂಟಾಗಿ ನಡವ ಕಟ್ಟಳೆಯ ವಿವರ (ಎಕ. XIV, ಶ್ರೀರಂಗ. ೨೫೬-೬ ; 1544); ಶ್ರೀಚಲಪಿಳೆರಾಯರ ಸನ್ನಿಧಿಯಲಿ ನಡವ ಪುಲಿಯೂಟ ಕಟ್ಟಳೆಯ ವಿವರ (ಎಕ.XIV, ಶ್ರೀರಂಗ. ೨೬೦-೩ ; 1551). **ಪುಲಿವಟ** : ಪುಲಿವಟವಾಗಿ ಶ್ರೀವಿಠಲದೇವರ ಭಂಡಾರಕ್ಕೆ ಸಮರ್ಪಿಸ್ತಧು ಘಟಿವರಹಯಿಂನೂಱು (ಸೌಇಇ. IV, ೨೬೪-೦೫; 1530). **ಪುಲಿವಟೆ** : ಶ್ರೀವಿಠಲದೇವರ ಭಂಡಾರಕೆ ಪುಲಿವಟೆ ಆಗಿ ಸಮರ್ಪಿಸಿದ ರೊಕ್ಕ ವರಹಗ 100 ಱು (ಸೌಇಇ. IX-ii, ೩೬೬-೩ ; 1534). **ಪುಲಿವೇಟು** : ಶ್ರೀವಿಠಲದೇವರಿಗೆ . . . ಪುಲಿವೇಟುಗಳಿಗೆ ಸಮರ್ಪಿಸಿದ ಗದೆಯ ಬಳಿಯಲೂ ಸಮರ್ಪಿಸಿದ ಬೀಜವರಿ ಗದ್ದೆ (ಸೌಇಇ. IV, ೨೬೩-೩; 1561). **ಪುಲ್ಲಿವೆಟು** : ಯಿಾ ಪುಲ್ಲಿವೆಟು ನಯಿವೇದ್ಯವಾದ ಖಜಾಯ ಪ್ರಸಾದ ಪಲ್ಲ ನಯಿವೇದ್ಯ ಶ್ರೀವಿಠಲದೇವರ ಭಂಡಾರದವರಿಗೆ ಪ[ಕ್ಕೆ] ಪಾಲು (ಸೌಇಇ. IV, ೨೬೩ ೬ ; 1561). **ಪುಲ್ಲಿವೇಟು** : ಉದಗಿರಿ ತಿಂಮರಾಜಯ್ಯನವರು ಮಾಡಿಸಿದ ಪುಲ್ಲಿವೇಟು (ಸೌಇಇ. IV,

೨೭೫-೪; 1561). 'ಪುದಿವಟ್ಟು' ಪರಾ. [ದೇ.॥ ತಮಿ. ಪೊಲಿವೀಟು, ಪೊಲಿವೇಟು, ಪೊಲಿಯೂಟ್ಟು; ತೆಲು. ಪೊಲಿಪೆಟ್ಟು]

ಪುಲಿವೇಟು 'ಪುಲಿಪೆಟ್ಟು' ನೋ.

ಪುಲಿಸಮ್ಮ (ನಾ). ಹುಲಿಯ ತೊಗಲು : ಪುಲಿಸಮ್ಮದುಡುಗೆಯ ತೆಗೆದ ನೆಂಬುದ ಕೇಳಿ ಬಲಿಸುತ ಶಿವಪೂಜೆಗೆಯ್ದು . . . ಹೊಱವಟ್ಟ ಕಲಿಗಳ ದೇವ ಕಾಳೆಗಕೆ (ನೋಹತ. ೪೦-೪); ಜನನಿಯುಳ್ಳೊಡೆ ಸರ್ಪನಾಭರಣಂಗಳಂ ತಲೆಮಾಲೆಯಂ ತನಯನಂ ತೊಡಲೀವಳೇ . . . ಕರಿಕೃತ್ತಿಯಂ ಪುಲಿಸಮ್ಮಮಂ ತನುಗೆ ತಾಂ ಪೊದೆವಂತೆ ಮಾಳ್ಪಳೆ (ವೃಷಪ. ೯-೦೦೪).

[ಪುಲಿ+ಸಮ್ಮ$_2$ (<ಚಮ್ಮ)]

ಪುಲಿಸು, ಪುಲುಸು, ಹುಲಸು, ಹುಲಿಸು$_2$, ಹುಲುಸು (ನಾ). ೧. (ಪೈರಿನ) ಹೆಚ್ಚಳ; ಸಮೃದ್ಧಿ; ಸೊಂಪು : ಧರೆಯೊಳೆ ಸಜ್ಜನಪ್ರತತಿ ಯೆಂಬುರು ಬಲ್ಲಸಿಸಂಚಮಂ ನರೇಂದ್ರರ ಮನೆದೀಪದಂತೆ ಧನರಾಸಿ ಯನಾ ಪುಲಿಸಿಂದಲೀಯದೇ (?) (ಮಲ್ಲಿಕಾ. ೦ ೩೪); ಪಿರಿದಂಚೆಯೋಗಿ ಕಿಡು ತಿರ್ಪುರುಗರ್ದೆಯನೊಲ್ದು ಪೊಕ್ಕೊಡದು ಫಲಮಕ್ಕುಂ ನಿರುತಂ ಪುಲಿಸಪ್ಪುದು (ತ್ರಿಪುಪ. ೦೪-೩); ಫಳಿಕುಂ ತ್ರಿವರ್ಗಮುಂ ಕೈಗೊಳಿಕುಂ ತಶ್ಸಾಧನಂಗಳುಂ ಸಂಗತಿಯಿಂ ತಿಳಿವಲ್ಕೆಂದೀ ರೀತಿಯನಳವಂ ಕಡೆಗಣಿಸಿತಲ್ತೆ ಬೆಳೆಸುಂ ಪುಲಿಸುಂ (ಪಕಪ. ೪-೭೯). ೨. ಒಕ್ಕದೆ ಇರುವ ತೆನೆ : ಪುಲಿಸಂ ಪೊತ್ತಾತನೆ ಕಳದಲು ಪಡುವುದು ಭತ್ತಮಳತೆ ಯಪ್ಪಿನಮತ್ತಂ ತೊಲಗಲು ಸಲ್ಲದು (ಸಮಾಪ. ಅನುಬಂಧ. I, ೭೮೨-೪೩). **ಪುಲುಸು** : ೧. ಆರಿನಿಂದುಬರುಬುವರ್ ಮಚಿಯೆಂಬ ವರುಮಾನ ಪುಲುಸುಗುಂದಿದುದು (ಕುಱಳ್. ೦-೨-೪). **ಹುಲಸು** : ೧. ಬೆಳಸು ಹುಲ ಸಾತ ಜಗದಾಗ (ಜನಗೀ. ೭೩); ಹರಿಯುವ ಹೊಳೆಗೊಂದು ಕಟ್ಟೆಯ ವಿರಚಿಸಿ ಕೊಂಡರೆ ಕೃಷಿಕರ್ಮ ಹುಲಸು (ಇಂಶಾಪ. ೦೭೮-೭೭). **ಹುಲಿಸು$_2$** : ೧. ಅಧರಕ್ಷತಮಂ . . . ಚುಂಬನವಳಯಂಗಳಂ ಪ್ರತಿಸಲಚ್ಚಣದಿಂ ಪ್ರತಿ ಯಿಟ್ಟು ನೊಂಡಿ ಕಾಮಿನಿ ಹುಲಿ[ಪಾಠಾಂ. ರಿ] ಸಾದ ಬೇಟವೆಳಸಂ ಕಡು ಸಂತಸವಂತಮೆಯ್ದಿದಳ್ (ಸೂಕ್ತಿಸು. ೦೪-೪೪); ಕಾಲನ ಹೆಬ್ಬೆಳಸು ಹುಲಿ [ಪಾಠಾಂ. ಲು] ಸಾಯ್ತು (ಕುಪ್ಕಾರಿ. ೪-೦೨); ಮಾರಿಯ ಹೆಬ್ಬೆಳಸು ಹುಲಿ ಸಾಗಿ ಹಸರಿಸಿವ ಕಣನೆನಿಸಿ ಕಾಣಿಸಿತು ಸಮರಾಂಗಣವು (ಉತ್ತರಾ. ೨೨-೦೮). **ಹುಲುಸು** : ೧. ಫಲಪುಷ್ಪಗಳ ಬೆಳಸು ಹುಲುಸಾಯ್ತು (ರಿಲೀಪ. ೨ ೦೪); ಭಾರತದಲ್ಲಿ ಅನುಭಾವವಿದ್ಯೆಯು ಬಲು ಹುಲುಸಾಗಿ ಬೆಳೆಯಿತು (ತತ್ವಪ್ರಾ. ೩೩೩). ೨. ಒಕ್ಕಲಿಗನು ಕಣದ ಹುಲುಸನ್ನು ದನದ ಸೆಗಣಿಯ ರೂಡ ಹೊರಗೆ ಒಗೆಯಬಾರದು (ಕನ್ನಪಾ. ೦೩೩).

[ದೇ.॥ ತಮಿ. ಪೊಲಿಚ್ಚೆ=ಲಾಭ; ಮಲ. ಪೊಲಸ = ಬಡ್ಡಿಯಾಗಿ ಕೊಡುವ ಭತ್ತ; ತುಳು. ಪೊಲ್ಲುಸು=ಲಾಭ]

ಪುಲಿಸುದಳೆ (ಕ್ರಿ). ಸಮೃದ್ಧಿಯನ್ನು ಹೊಂದು; ಹುಲುಸಾಗಿ ಬೆಳೆ; ಸೊಂಪಾಗಿ ಬೆಳೆ : ಈಗಳ್ ಕೆಯ್ಗಳ್ ಪುಲಿಸುದಳೆದತ್ತೀಗಳಗ್ಗಂ ಪೊದಟ್ಟತ್ತೀಗಳ್ ಸರ್ವಂ ಸಫಲಮೆನಿಸಿತ್ತೀಗಳಾಯ್ತೆಲ್ಲ ಗೆಲ್ಲಂ (ಪಕಪ. ೩-೦೦೦). [ಪುಲಿಸು+ತಳ್$_1$]

ಪುಲು 'ಪುಲ್' ನೋ.

ಪುಲುಗರ್ಚು 'ಪುಲ್ಗರ್ಚು' ನೋ.

ಪುಲುಗುಡಿತೆ, ಹುಲುಗುಡಿತೆ (ನಾ). ಒಂದು ಬಗೆಯ ಕೀಟ (?) : ವಿಲಸನ್ಮಂತ್ರಯುತಂ ಕೊಂದಲ ನೇಣಿಂ ಮುಸಲ ಮಂಥಮಂ ಪೊರೆ ಪುದುಲೂಖಲಮಂ ಮೇಣ್ ಬಾಸುಬ್ಬಳ್ ಪುಲುಗುಡಿತೆಯ ಮೆಯ್ಯೊಳೇ ಬುಗುಂ ತತ್ಕ್ಷಣದಿಂ (ಐಮಧ. ೦೬-೯೨). **ಹುಲುಗುಡಿತೆ** : ಒಸೆದೀ ಮಂತ್ರದೊಳಂ ಮಂತ್ರಿಸಿಕೊಂಡಿಡೆ ಭಸ್ಮಮಂ ತವೀಯಾಲಯದಾ ದೆಸೆಗಂ ಹುಲುಗುಡಿತೆಗಳುಂ ಮಿಸುಕದೆ ಚಕಿತರ್ಕಳಾಗಿ ತೊಲಗುಗುಮದಱಿಂ (ಐಮಧ. ೦೬-೯೩). [?]

ಪುಲುದೇಗುಲ 'ಪುಲ್ದೇಗುಲ' ನೋ.

ಪುಲುದೊಂದೆ 'ಪುಲ್ದೊಂದೆ' ನೋ.

ಪುಲುಬೂತು (ನಾ). ಅಲ್ಪನಾದ ಯಾಚಕ : ಪಾವಿನಂತೆ ಗೀತಕ್ಕೆಱಗದೆ ಪುಲುಬೂತಿನಂತೆ ಕಂಡರನೇನಾನುಮಂ ಬೇಡುತ್ತಿರದೆ (ರರ್ಮಾಮ್ಯ. ೩-೯೯).

[ಪುಲು (<ಪುಲ್)+ ಬೂತು$_1$]

ಪುಲುಮನೆ 'ಪುಲ್ವನೆ' ನೋ.

ಪುಲುಮೃಗ 'ಪುಲ್ಮೃಗ' ನೋ.

ಪುಲುವಟ್ಟೆ 'ಪುಲ್ವಟ್ಟೆ' ನೋ.

ಪುಲುವಿಲು, ಹುಲಿವಿಲಿ, ಹುಲಿವಿಲು, ಹುಲುವಿಲು, ಹುಲುವಿಲೆ (ನಾ). ಒಂದು ಬಗೆಯ ಮರ : ಬೇಲವರುಟಾಳ ಪುಲುವಿಲುಯೆ ನಂದಿ[ಪಾಠಾಂ. ಹಲಸೆಲವ ಕಿಱಿಸಂದಿ] ಚಂದನ ಕಕ್ಕೆ ಬಿಕ್ಕೆ ತಱಿಯ . . . ನಾನಾಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದು (ಸೋಮನ. ೩-೨). **ಹುಲಿವಿಲಿ** : "ಚುಕ್ರಸಂದರಣಃ_ಹುಲಿವಿಲಿ" (ಓಷಧಿ. ೩೬). **ಹುಲಿವಿಲು** : "ರಥಿಕ_ಹುಲಿ(ಗಿ)ವಿಲು" (ಓಷಧಿ. ೦೩೩). **ಹುಲುವಿಲು** : "ಅಶ್ಮಗರ್ಭಂ-ಹುಲುವಿಲು, ಪಚ್ಚೆ" (ಓಷಧಿ. ೩). **ಹುಲುವಿಲೆ** : ಹುಲುವಿಲೆ ಮರ ಪ್ರಿಯಂಗು ದಾಳಿಂಬ ಮೊದಲಾದ ವೃಕ್ಷಂಗಳು (ಸೌಗಂಧಿ. ೪೨೩-೦೨). 'ಪುಲಿಗಿಲ್' ಪರಾ. [?]

ಪುಲುವೀಡು (ನಾ). ಹುಲ್ಲಿನ ಮನೆ; ಹುಲ್ಲುಜೋಪಡಿ : ಪುಲುವೀಡೊಳ್ ಪಲವುಂ ಪಗಲ್ ಪರದನಿರ್ದಾದಾಯಮಂ ಪೆತ್ತು ಬಾಳ್ನೆಲೆಯುಳ್ಳೊಂದೆಡೆ ಗೈದಲಾ ನೆಲೆಯವರ್ ನೋವಂತೆ (ರತ್ನಾಕ. ೦೩).

[ಪುಲು (<ಪುಲ್) + ಬಿಡು$_2$]

ಪುಲುಸು 'ಪುಲಿಸು' ನೋ.

ಪುಲುಸೋಗು (ಕ್ರಿ). ಆಧಿಕ್ಯವು ಕುಂದು,-ಕಡಮೆಯಾಗು : ಒಡೆಯದ ಕಂತುಮುದ್ರೆ ಪುಲುಸೋಗದ ರಾಗದ ರಾಶಿ ನಿರ್ಜರರ್ ಕಡೆಯದ ಪಾಲ್ಗಡಲ್ ಗಿಳಿ ಕರ್ದುಂಕದ ಪಣ್ಗೊನೆ . . . ಕಾದಿ ಕೋಳ್ವಡೆಯದ ದುರ್ಗದಂತೆಸೆಯುತಿರ್ಪಳು ಕನ್ನೆ ಕುಲಾಭಿಮಾನದಿಂ (ಮಲ್ಲಿಕಾ. ೬-೬೦).

[ಪುಲುಸು (<ಪುಲಿಸು) +<ಪೋಗು$_1$]

ಪುಲೆಕೇಶಿ 'ಪುಲಿಕೇಶಿ' ನೋ.

ಪುಲ್ಕಸ (ನಾ). ೧. ನಿಷಾದಜಾತಿಯವನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು. ೨. ಮಾದಿಗ; ಶ್ವಪಚ : "ಶ್ವಪಚಃ, ಪುಲ್ಕಸಃ, ಮಾತಂಗಃ, ಪ್ಲವಕಃ_ಈ ೪ ಮಾದಿಗಂ" (ಹಲಾಯು. ೯೮-೪೪೪); ಪರದೇವತೋಪಹಾರಕ್ಕತಿಥಿತರ್ಪಣಕೆ ವರವೈಶ್ವದೇವರ್ಗೆ ಪ್ರಾಣಾಗ್ನಿ ಹೋತ್ರಕ್ಕೆ ಪಿರಿದು ಧರ್ಮಕ್ಕನರ್ಹಂ ಮತ್ತೆಯುಂ ಕೇಳಿರೆಲೆ ವಿಪ್ರ ಪುಲ್ಕಸರಿರ (ಆರಾಪ. ೦-೩ ೩೩); ಕ್ರೂರಮಾದ ಕರ್ಮಗಳಿಂದ ರಜಕರಾಗಿ ಕುಂಭಕರಾಗಿ ಸಾವರ್ನಕರಾಗಿ ಕುಮಿಂದರಾಗಿ ಪುಲ್ಕಸರಾಗಿ ಕಿರಾತರಾಗಿ . . . ಪುಟ್ಟುವರು (ಶೇಷಧ. ೧೮). [ಸಂ].

ಪುಲ್ಕೊಂಥಬೋಯ (ನಾ). ಒಬ್ಬಾತನ ಹೆಸರು : ಪುಲ್ಕೊನ್ದ ಬೋಯಸ್ಯ ಕಾಶ್ಯಾ(ಶ್ಯ)ಪಗೋತ್ರ (ಇಲ. VII, ೦೮೮-೪೯; ೮೮೮).

[ಪುಲ್ಕೊಂಥ$_0$+ಬೋಯ]

ಪುಲ್ಗಚ್ಚು 'ಪುಲ್ಗರ್ಚು' ನೋ.

ಪುಲ್ಗರ್ಚು, ಪುಲುಗರ್ಚು, ಪುಲ್ಗಚ್ಚು, ಹುಲುಗಚ್ಚು (ಕ್ರಿ). ೧. ಹುಲ್ಲು ಕಡ್ಡಿಯನ್ನು ಬಾಯಲ್ಲಿ ಕಚ್ಚಿ ಹಿಡಿ : ಪುಲ್ಗರ್ಚಿದ ಪುಲ್ಲೆಯಂ ಕುಜದ ಕೊಂಬಂ ಸಾರ್ವ ಸತ್ವಕ್ಷಿಸಂಕುಲಮಂ ಕುಂದದೆ ಕೊಂದಘಕ್ಕಿದೆ ಫಲಂ ನೋಡೆಂಬವೊಲ್ ಬೇಡರಂ ಬಲಿಗೊಂಡತ್ತು...ಉಗ್ರಕಂಠೀರವಂ (ರಾಜಶೇ. ೩ ೦೨೨). ೨. (ಆಲಂ) ಹುಲ್ಲು ಕಚ್ಚಿ ಹಿಡಿಯುವುದರ ಮೂಲಕ

ಶರಣಾಗತಿಯಂನ್ನು ಸೂಚಿಸು,– ಸೋತೆನೆಂದು ತಿಳಿಸು : ಕರುಣಿಸಲೆ ಶಬರ ತಃಡದಿನು ಸತಲಂ ನೀನೆಂದೆನುತ್ತೆ ಪುಲ್ಗರ್ಚಿದವೋಲ್ ಮುರವಟ್ಟು ಸೃಕ್ಕದೂರ್ವಾಂಕುರನಾಗಿರ್ದಾದು ಭಯಾತ್ಕರಣಂ ಹರಿಣಂ (ಕ:ಶಾಮ. ೧೪–೧೨); ಪುಲ್ಗರ್ಚಿದರುಮಂ ಪುತ್ತನೇಱಿದರುಮಂ . . . ತಲೆಗಾದು ಮನ್ನಿಸಿ (ಚಕವಂ. ೪೦–೩). **ಪುಲುಗರ್ಚು** : ೨. ದೇಸಿಗನಪ್ಪನಂ ಭಯದಿನೋಡುವನಂ ಕರುಮಂಜಿದಾತನಂ . . . ಪುಲುಗರ್ಚಿದನಂ ಕೊಲಲಾಗದೆಂಬವಂ ವೇಸದೆ ಪಱಿವುಳ್ಳನಿನಿತುಳ್ಳ ಮೃಗಂಗಳನೆನುತು ಕೊಲ್ವನೋ (ಕಸಾಕ. ೨೯೮). **ಪುಲ್ಗಚ್ಚು** : ೨. ದೊರೆದೊರೆಗಳುಂ ವಲಾಯನಮನನುಕರಿಸಿ ಕಡುಭೀತಿಯಿಂದೆ ಜಲದೊಳ್ ಮುಳುಂಗಿ ಪುಲ್ಗಚ್ಚಿ ವೆರ್ಮರ ಪುತ್ತುಗಳನೇಱಿ ಕೈಗಳಂ ಮುಗಿದು . . . ಹಾಯ್ದರ್ ಕಂಡ ಕಡೆಗೆ (ತೆಂಪು. ೩೨–೧೨). **ಹುಲುಗಚ್ಚು** : ೧. ಉಚ್ಚಳಿಸುತಪ್ಪಳಿಸುತಂ ಹು[ಕಾಕಾಂ. ಹ]ಲುಗಚ್ಚಿ ಹಾಯ್ಕುತ ವೆಲುಕಿಱಿದು . . . ನೆಗವುತಂ ಗೂಱಿಸಾಡುತಂ ನೆಲನ (ಚಸಪು. ೩೨–೨೬). [ಪುಲ್ + ಕರ್ಬು$_1$]

ಪುಲ್ಗರ್ಬು, ಹುಲ್ಲುಗಬ್ಬು (ನಾ). ಒಂದು ಬಗೆಯ ಕಬ್ಬು : ತವ್ಮಲ್ಲಿ ಪುಲ್ಗರ್ಬನಾವಗಮೊಂದಂ ಸವಿವಂತೆ ತಾವೆ ಜಗಳ್ಳಲ್ಲಂ ದೇವರೆಂಬಂತೆ ತೀವ್ರಗುಮುತ್ತಾನಿತವಿಕ್ಷೇಯಾತ್ಮನಿನೆದಂ ದಿಕ್ಕಾವಿನೀಕರ್ಣಮಂ (ಪುರ್ಗಪು. ೨.೧೪). **ಹುಲ್ಲುಗಬ್ಬು** : ಕಬ್ಬಿನ ಜಾತಿಗಳು–ರಸದಾಳಿ, ರಾವುಗಬ್ಬು . . . ಬೆತ್ತಗಬ್ಬು ಅಥವಾ ಹುಲ್ಲುಗಬ್ಬು ಎಂದು ಅನೇಕವುಂಟು (ಪುಂಜಾಹು. ೩-೨೦೦). [ಪುಲ್ + ಕರ್ಬು (<ಕರ್ವು$_1$)]

ಪುಲ್ಲಲಿ, ಹುಲುಗಲಿ (ನಾ). ಕ್ಷುದ್ರನಾವ ಯೋಧ; ನಾಡಾಡಿ ಬಂಟ : ಕಜ್ಜಮಂ ಕಾಲಮಂ ಪಾರ್ವ ಕಜ್ಜಗಲಿಗಳುಮಂ ಮಾರ್ಗವಿಯಾದ ಬಿದಿರಿದ ಲೋಭಗಲಿಗಳುಮಂ ನೊಂದು ಪಲ್ಗಿರಿದೋಡುವ ಪುಲ್ಲಲಿಗಳುಮಂ ಮೋದಿ ಮೆಯ್ಯೊಳ್ ನಿಂದಿಱುಪರಿಗಲಿಗಳುಮಂ . . . ನೋಡಿ (ಗಶಾಯು. ೯-೪೪ ಪ). **ಹುಲುಗಲಿ** : ಇವನೆಂದರೆ . . . ಹೊರಗಣವರಿಗೂ ಅವೊಬ್ಬ ದಳವಾಯಿಯಲ್ಲಿದ್ದ ಭಯಗೌರವಗಳೂ ಇಲ್ಲ.— ಆ ತೂಕದ ಹುಲುಗಲಿಯೆನಿಸಿಕೊಂಡಿದ್ದಾನೆ (ಪುಂಕ್ರಕ. ೬೬–೦೩). [ಪುಲ್ + ಕಲಿ$_3$]

ಪುಲ್ಲಸ (ನಾ). ಹುಲ್ಲು ಮೊದಲಾದ ಕಳೆ : ಕೆಯ್ಯ ದುರಗಸಂ ಪುಲ್ಲಸ ಮೆಂಬೆರಡುಮಂ ಕಳೆದು ಪದದೊಳ್ ಬಿತ್ತದೊಡಂ ಮನದೊಳುಳ್ಳ ರಾಗದ್ವೇಷಮೆಂಬೆರಡುಮಂ ಕಳೆದು ಶುದ್ಧಚಾರಿತ್ರದೊಳೆ ಪತ್ತದೊಡಮಾತಂಗೆ ಬೆಳಸುಮಾತಂಗೆ ಸುಗತಿಯುಮೆಂತಕ್ಕುಮೆಂಬುವಂ ಬಗೆವುದು (ಜಪಶಂ. ೪೭-೦೪). [ಪುಲ್ + ಪಸ]

ಪುಲ್ಲಾಡು (ನಾ). ಹುಲ್ಲು ತುಂಬಿರುವ ಕಾಡು : ಲಂಡಿಯೊಳ್ ಕಡೆಕುತ್ತೆಲ್ಬ್ಬಿಸು ನೋಲೆ ಪಾಯ್ವ ಪುಲಿಯಂ ಪುಲ್ಲಾಡೊ[ಕಾಕಾಂ. ನೊ]ಳ್ (ಸೂಕ್ಷ್ಮಸು. ೩–೦೦೩). [ಪುಲ್ + ಕಾಡು$_3$]

ಪುಲ್ಲಿಚ್ಚು, ಹುಲ್ಲಿಚ್ಚು (ನಾ). (ಹುಲ್ಲಿಗೆ ಬಿದ್ದ ಬೆಂಕಿಯಂತೆ) ಬೇಗನೆ ಆರಿ ಹೋಗುವ ಬೆಂಕಿ : ಸಿರಿಯಪ್ಪೊಡೆ ಪುಲ್ಲಿಚ್ಚಿನ ದೊರೆ ರಾಜ್ಯವಿಭೂತಿ ಮುಗಿಲ ನೆಟಲ ಸಮಾನು (ಕರ್ಣಾಮ್ಮ. ೩–೦೩೯). **ಹುಲುಗಿಚ್ಚು** : ಹೊಲೆಯಗಿತ್ತಾ ಸಾಲ ಒಲೆಯ ಮೇಲಿನ ಹುಲು ಲಲನೆಯರ ಒಲುಮೆ ಹುಲುಗಿಚ್ಚು ಇವು ನಾಲ್ಕು ನಿಲಲಿಲ್ಲವಯ್ಯ (ಸರಣ್ಣ. ೮೯೮೩). [ಪುಲ್ + ಕಿಚ್ಚು]

ಪುಲ್ಲುಡಿ (ನಾ). ಹುಲ್ಲಿನ ಗುಡಿಸಲು; ಪರ್ಣಶಾಲೆ : "ತೃಣಕುಟಿ ಪುಲ್ಲುಡಿ" (ಪಾಕೋ. ೪೬–೯). [ಪುಲ್ + ಗುಡಿ$_3$]

ಪುಲ್ಲುಡಿಸಲ್ 'ಪುಲ್ಲುಡಿಸಿಲ್' ನೋ.

ಪುಲ್ಲುಡಿಸಿಲ್, ಪುಲ್ಲುಡಿಸಲ್, ಪುಲ್ಲುಡಿಸಿಲು, ಹುಲುಗುಡಿಸಿಲು, ಹುಲ್ಲುಗುಡಿಸಲು (ನಾ). = ಪುಲ್ಲುಡಿ : ಪುಲ್ಲುಡಿಸಿರಿಮೊಳರ್ವಂಗೆ ಮನೆಮಾಡಮಾದಂತೆ ನಾಯಕತನಂಗೆಯ್ದುಂಗ ಚಕ್ರವರ್ತಿತ್ವಮಾದಂತೆ (ಧರ್ಮಾಪ್ಯ. ೦೦–೨೬೭); ಜಗಮಿಸೇಱುಮದೊಂದು ಪುಲ್ಲುಡಿಸಿಲಂತಳ್ಮಾಡೆ ಕಲ್ಪಾಂತದೊಳ್ ನೆಗೆವೊಂದಗ್ನಿಯೊಳಿಂತಿದೊಂದಿಸಕವಿಲ್ಲೆಬನ್ನೆಗಂ . . . ಜ್ವಾಲೆಯುಂ ಪೊಗೆಯುಂ ತಳ್ಕೊಗೆವೀ ಶಿಪಾಸ್ತ್ರಕರನೀ ವೇಷಸ್ಥಿತಂ ಪಾವಕಂ (ಜಗಪ. ೦೩-೬೭). **ಪುಲ್ಲುಡಿಸಲ್** : ಕರುಮಾಡಮಂ ಬಿಟ್ಟು ಪುಲ್ಲುಡಿಸಲನಾಶ್ರಯಿಸುವಂತೆ . . .ಸದ್ಧರ್ಮಮಾ ಬಿಟ್ಟು ವಿಮಿಥ್ಯಾತ್ವಪ್ರೀತನಾಗಿರ್ಪುದುಂ (ಧರ್ಮಾಪ್ಯ. ೦೦–೦೬೨). **ಪುಲ್ಲುಡಿಸಿಲು** : ತಂದೆ ತಾಯಿಲ್ಲದ ಅನಾಥನ್, ಅಜ್ಜಿಯೊಡನಿಹನಂತೆ, ಆ ಪಾಳ್ಮಡಿಯ ಬಳಿಯ ಪುಲ್ಲುಡಿಸಿಲಲ್ಲಿ (ಕಂಪ್ರಕ. ೦೪–೨೪). **ಹುಲುಗುಡಿಸಿಲು** : ನೋಡಿರೆ ಹುಲುಗುಡಿಸಿಲಾತನ ರೂಢಿ ವಿಭವಗಳಿದಕೆ ಕಾರಣವು ನಾಡೆ ಏನೆನಲೊಳಗಣಾ ಕಳಿಯಿದಕೆ ಕಾರಣವು (ಸ:ಕಕ. ೨೪-೬೩). **ಹುಲ್ಲುಗುಡಿಸಲು** : ಹುಲ್ಲುಗುಡಿಸಲು ಅಲ್ಲಲ್ಲಿ ಸೋರತೊಡಗಿ, ಮನುಷ್ಯರಲ್ಲಿ ಕೆಲವರು ಸ್ಥಳ ಬದಲಿಸಬೇಕಾಯಿತು (ಚಾಕೂರು ೦೧೪). [ಪುಲ್ + ಗುಡಿಸಿಲ್]

ಪುಲ್ಲುಡಿಸಿಲು 'ಪುಲ್ಲುಡಿಸಿಲ್' ನೋ.

ಪುಲ್ಲೊನರ್ (ನಾ). ಹುಲ್ಲಿನ ಚಿಗುರು.—ಕಂಡಿ : ಗಿಳಿಯೆಜ್ಜಾಕೆಯ ಬಣ್ಣದ ಪುಲ್ಲೊನರ್ ಪೊವಟ್ಟುದು ಪೊಲದೊಳ್ (ಜಗಪ. ೪-೬). [ಪುಲ್ + ಕೊಸರ್$_3$]

ಪುಲ್ಲೇಡು (ನಾ). ಒಂದು ಊರಿನ ಹೆಸರು : ಅದಱ ಪೊಲಮೇರೆ ಮುಂಡಣದಸೆ ಪೆಣ್ಣೆಲ್ಬಿನ್ತೆ ಪುಲ್ಲೇಡು ಉದಿಚೇಡು ಬೀರಳಚಿನ್ತೆ (ಎಳ್. XII, ನಿಡು. ೩೮–೩೩ ; ೪೭೮). [?]

ಪುಲ್ದಂಡೆ (ನಾ). ಒಂದಂ ಬಗೆಯ ಬೇಟೆಯ ಸಾಧನ ; ಹುಲ್ಲಿನ ಹಗ್ಗ : ಬಡಿಕೋಲ್ ಕಿರ್ಗಟ್ಟು ಹಾಸಂ ಶುನಕವಿತತಿ ಹೇರಿಟ್ಟ ಕೂರಂಬುಗಳ್ ಕೆಯ್ಪೊಡೆ ಬರ್ ಪುಲ್ದಂಡೆ ಬೆಳ್ಳಾರ್ವಟುವೆರಲಿಗಳ್ ಸಾಳುವಂ ಕೂಳೆಗಾಳಂ ಗಿಡುಗಂ ಬಲ್ವಿಂದಿಯೊಳ್ ದೀಹವ ಪುಲಿ ನಿಶಿತಾಸ್ತ್ರಂಗಳುಗ್ರತ್ವವಂ ಸಂಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡಿದುದುದ್ಧತ್ ಕಿರಾತಪ್ರಜಾತಂ (ಗಬಿಳ. ೦-೭೯). [ಪುಲ್ + ದಂಡೆ$_1$]

ಪುಲ್ದೇಗುಲ, ಪುಲುದೇಗುಲ (ನಾ). ಹುಲ್ಲಿನ ಛಾವಣಿಯಿರುವ ದೇವಾಲಯ : ಆಗಲೊಂದು ಪುಲ್ದೇಗುಲಮನವರವಸರವಸರದಿಂ ರಚಿಯಿಸಿ ಬಳ್ಕಮನೊಂದಂ ತಂದವಾಹ್ಯಾಲಿಯಾಗಿ ನಟ್ಟು ಕಾಡಲರ್ಗೊಂಚಲ್ಗಳಿಂ ಪೂಜೆಗೆಯ್ದು ಲಿಂಗಮಿಯೆಂಡೆಲೊಳ್ನಿನ್ನ ಪುಣ್ಯದಿನಿರ್ದುದೆಂದು ಶಿಟ್ಟೆಯಂ . . . ಒಳಗಣ್ಗೆ ಪುಗಿಸಲೊಡನೆ (ಕ್ಕಸಂ. ೬–೯ ಪ). **ಪುಲುದೇಗುಲ** : ಶಿವಲಿಂಗದರ್ಶನನಿಯತಿ ತಪ್ಪಿದೊಡೆ ಜೀವವಂ ತಾಂ ತ್ಯಜಿಸುವಂ ಗಡ ಭಾವನೆಂದತಿಕಾಟಲಚಿತ್ತದ ಗಾವಿಲರು ಪುಲುದೇಗುಲವನೊಂದಂ ರಚಿಸಿ (ಚಸಪ್ರ. ೯–೬). [ಪುಲ್ + ದೇಗುಲ]

ಪುಲ್ದೊಂದೆ, ಪುಲುದೊಂದೆ (ನಾ). ಹುಲ್ಲಿನ ಸಿವುಡಿನಿಂದ ಮಾಡಿದ ಪಂಜು,—ಸೂಟಿ : ಸುಡುವ ಮಳಲ ರಾಸಿ ಕಾಸುವಂಬಲಿಯೆನ್ನೆಗೊಡ ಸುಣ್ಣವರಲ ಕೊಪ್ಪರಿಗೆ . . . ಪುಲ್ದೊಂದೆ ಬಿಡದೆಸೆದವು ದುರ್ಗದೊಳಗೆ (ಋಣಾಸಂ. ೪೨–೩೬); ಬಿಸಿಯೆನ್ನೆವರವಿಗಳ ಪುದಿದ ಪುಲ್ದೊಂದೆಗಳ ತರತರದೊಳಿರಿಸಿರ್ದ ಬಲ್ಗೊಲೆಯ ಡೆಂಕಣೆಯ . . . ಮೊತ್ತಂಗಳಾಳ್ವೇರಿಯೊಳ್ ಪಸರಿಸಿದುವು (ತೆಂಪು. ೪೨–೦೦). **ಪುಲುದೊಂದೆ** : ತೋಲೆ ಪಂದಿ ಪೊಟ್ಟಿಟ್ಟ ಭಂಡಿ ಡೊಂಕಣೆ ಪಂದಿದರೆ ಭೀಮಗದೆ ಬಿಡದುರಿವ ಪುಲುದೊಂದೆ ಪುರಿದ ಮಳಲುಗಳಿಂದೊಳಗಣ ಕಲಿಗಳಳುಕದೆ ಕಾದಿದರು (ಋಣಾಸಾಂ. ೪೫-೬). [ಪುಲ್ + ದೊಂದೆ]

ಪುಲ್ಪಡಿ, ಪುಲ್ಪದಿ (ನಾ). ಹುಲ್ಲುಗಾವಲು : ಕೊರಮಂಗಲ ಕೆಱೆ ಪಳ್ಳವ ಪುರ್ಪಡಿಯಿನ್ ಪಡುವಾಯೊಳ್ಪಿ (ಕ್ಕಶಂ. ೦೯೪೯. ೬೦-೦೦೦; ೭೦೦); ಆನೆದಳೊಗೆಜಿಪಿ ಪುಲ್ಪಡಿಯೇ ಎಬಗಲ್ಲೇ ಪುರಿಗಾವದ ಗೆಜಿ

ಮುಕೂಡಲ್ ತತಃ ಪೂರ್ವ್ವತಃ ನಿಡುವಿಳಿಂಕ್ಕೆ × × ದವಿನ ಪುಲ್ಪಡಿಯೇ ಕನ್ಚಗಾಱಗಲ್ಲೇ (ಇಅ. XII, ೦೬-೨೦; 813). **ಪುಲ್ಪದಿ :** ಮೂಡಾಯ್ಮುದುವುಳಿಯ ಪೇರೊಟ್ಟೆ ತೆಜ್ಕಾಯ್ತು ಕಂಬಳ್ಳಂ ಪಡುವಾಯ್ಸುವಣಱಿಯುಂ ಪುಲ್ಪದಿಯುಂ (ಎಕ. IX, ಸಂಪಂ. ೬೦-೭೨; 802).

[ಪುಲ್ + ಪಡಿ$_0$ (ಪ ← ತಮಿ. ಪಟಿ=ಭೂಮಿ)]

ಪುಲ್ಪದಿ 'ಪುಲ್ಪಡಿ' ನೋ.

ಪುಲ್ಪಾಸು (ನಾ). ಹುಲ್ಲಿನ ಹಾಸುಗೆ; ದರ್ಭಶಯನ : ಭರತನಂ ಪುಲ್ಪಾಸಿನೊಳ್ ಬಿಟ್ಟು ಗುರುಪಾದಕೆರಗಿ ಮಂತ್ರಿಗೆ ಮೆಚ್ಚನುಚ್ಚರಿಸಿ (ಶರಶ. ೩೦೩). [ಪುಲ್ + ಪಾಸು$_2$]

ಪುಲ್ಪೊದಱು, ಹುಲುವೊದಱು (ನಾ). ಹುಲ್ಲಿನ ಪೊದೆ : ತರುತತಿ ಬಳ್ಳಿ ಪುಲ್ಪೊದಱು ಪಕ್ಕಿ ಮೃಗು ಘಣೆ ಜೇನ್ ಮೃಗವ್ಯಂ . . . ಕಿನ್ನರ ಮಿಥುನಾಳ್‌ಗಳ್ ವಿಷಯಮಾಗಿರೆ ತೀರ್ಪುದು ಶೈಲವರ್ಣನಂ (ಸೂಕ್ತಿಸು. ೩-೦). **ಹುಲುವೊದಱು :** ಹೊಲಮೇರೆಗಳೊಳುಬ್ಬರದ ಹುಲುವೊದಱುಗಳೊಳಗಲಕೆ ಹರಿದು ಹೊರಟೆಗುಟ್ಟಿದನು ಹೊಮ್ಮಱಿಯ ಬೆನ್ನಿನಲಿ (ತೊರಣಾ. ೩-೬-೩೭). [ಪುಲ್ + ಪೊದಱು (<ಪೊದಱು)]

ಪುಲ್ಪೊಱೆ 'ಪುಲ್ವೊಱೆ' ನೋ.

ಪುಲ್ಬಂಟ (ನಾ). ಕ್ಷುದ್ರನಾದ ಯೋಧ; ತೀರ ಸಾಮಾನ್ಯನಾದ ಸೈನಿಕ : ಪುಲ್ಬಂಟನು ನುಬಿ ಬಲ್ಬಂಟನು ಬಿಡುವ ಪಗೆಗಾಱನುಮಂ . . . ತಣ್ಬಂ ಬಿಟ್ಟು ಬಿಸಿಲಂ ಕಾಯ್ವ ಪಿತ್ತಾಧಿಕನುಮಂ ಪೋಲ್ವೆಂ (ರರ್ಮಾಮ್ಯ. ೬ ೩೨). [ಪುಲ್ + ಬಂಟ$_1$]

ಪುಲ್ಬಗೆ 'ಪುಲ್ವಗೆ' ನೋ.

ಪುಲ್ಮನೆ 'ಪುಲ್ವನೆ' ನೋ.

ಪುಲ್ಮರುಳ್ (ನಾ). ಕ್ಷುದ್ರ ಪಿಶಾಚಿ; ಕ್ಷುಲ್ಲಕವಾದ ಭೂತ : ಸೀಯೆ ತಲೆ ಬೇಯೆ ಮೆಯ್ ಮೇಲ್ವಾಯೆ ಕರಂಪಸಿದ ಪುಲ್ಮರುಳ್ ಪಿಱಿತಿನಿಗಳ್ ಬೆಯುತ್ತುಮಿರ್ಪ ಪೆಣನಂ ನಾಯುಗಿವಂತುಗಿದು ತಿಂದುವು (ಕಾಸ್ಯಸಾ. ೩೩೬ ಕೂತ್ರಳ); ಆಂ ಮರುಳನೊ . . . ನೀಂ ಮರುಳೆಯೊ ಪೇಟ ಪೇಟ ದೊಡೆ ಪೋಗದಿರೀಶ್ವರನಾಣೆಯೆಂದು ಪುಲ್ಮರುಳಿನಿಸಾನುಮಂ ತೆಗೆದು ಕಾಡಿದುದಲ್ಲಿ ಘಣೇಂದ್ರಕೇತುವು (ಸಂಸಣಾ. ೦೩-೩೩); ಮರುಳ್ಗಳ ಮೇಳವಲಿ ಪೆರ್ಮರುಳೊಂದಿರುತ್ತಿರಲ್ ಕಂಡು ಭಯಭಕ್ತಿಯಿಂ ಚರಣ ಕೆಱಗಿದುದೊಂದು ಪುಲ್ಮರುಳ್ ಶಿವನೆಂದು (ಶಿಪಿಪು. ೪೦-೨೬).

[ಪುಲ್ + ಮರುಳ್$_2$]

ಪುಲ್ಮಾನಸ 'ಪುಲ್ವಾನಿಸ' ನೋ.

ಪುಲ್ಮಾನಸಿಗ (ನಾ). ಕ್ಷುದ್ರನಾದ ಮನುಷ್ಯ; ಹುಲುಮನುಜ : ರಾಮನೆಂಬೊಂ ಪುಲ್ಮಾನಸಿಗನಪರಿಮಿತಬಲಂಬೆರಸು ಎಮ್ಮ ಮೇಲೆ ಬಂದಪ್ಪನೆಂದು ಕೇಳ್ದೆಂ (ಜಾಪುಂಪು. ೩೦೦). [ಪುಲ್ + ಮಾನಸಿಗ]

ಪುಲ್ಮಿಗ (ನಾ). ೧. ಹುಲ್ಲು ತಿಂದು ಬದುಕುವ ಪ್ರಾಣಿ; ಕ್ಷುದ್ರವಾದ ಪ್ರಾಣಿ : ಮೇಪಿಂ ಪುಲ್ಮಿಗಮುಂ ಬೆಳ್ಮಿಗಮುಂ ಪಲ್ಮಿಗಮುಂ ತಣಿದುವೆಯ್ದೆ ಕಾಪಿನ ಪೊಲದೊಳ್ (ಅಸಂಪು. ೦೦-೩೯). ೨. ಜಿಂಕೆ; ಹರಿಣ : ಮಹಾದಂತಿಗಳಂ ಬೆಗಳ್ಗೊಳಿಪ ಸಿಂಹಕೆ ಲಕ್ಷ್ಯಮೆ ಪುಲ್ಮಿಗಂ (ರಾಜಶೇ. ೫-೦೩೦). [ಪುಲ್ + ಮಿಗ]

ಪುಲ್ಮೃಗ, ಪುಲುಮೃಗ, ಹುಲುಮೃಗ (ನಾ). ೧. = ಪುಲ್ಮಿಗ ೧ : ಪುಲ್ಮೃಗಮುಂ ಬೆಳ್ಮೃಗಮುಂ ಬಲ್ಮೃಗಮುಂ ಶಿಲೆಗುಹೆಯೊಳಾದೊಡಂ ಪಿಡಿದಪ್ಪೆಂ (ಸೂಕ್ತಿಸು ೩-೯೦). **ಪುಲುಮೃಗ :** ೧. ಪಲುಮೃಗ ಬೆಳ್ಮಿಗ ಪುಲುಮೃಗ ಬಂದವು ನಲವಿಂದ ಕಾಪಿನ ಪೊಲಕೆ (ಅಸಂಪ. ೦೬-೯). **ಹುಲುಮೃಗ :** ೨. = ಪುಲ್ಮಿಗ ೨ : ಹುಲುಮೃಗವ ಪಿಡಿವುಜ್ಜುಗದಿ ಪೆರ್ಬುಲಿ ಹುದುಗುವೊಲು ದುರ್ಜನಂ ಮಿಗೆ ಹುದುಗಿಕೊಂಡಿಹ (ಶಂಕರಾ. ೦೬-೪೭). [ಪುಲ್ + ಮೃಗ]

ಪುಲ್ಲ (ಗು). ೧. ಅರಳಿದ; ವಿಕಸಿತವಾದ: (ಕ). (ನಾ). ೨. ಹೂವು; ಪುಷ್ಪ : ಕುಳ್ಳಿರ್ದು ಬೆಳಗ ನೋಡುತ್ತಲ್ಲಾಡದೆ ಮುಗಿದ ಕೆಯ್ಗಳಂ ನೊಸಲಲಿಡುತ್ತಲ್ಲಿಯೆ ನಡುವುಂ ಬಾಟಿಯ ಪುಲ್ಲದವೊಲಿಟಿಯ ದಿರ್ದೊಡಱಿಯಱುದಿಂಗಳ್ (ಪಸಾರ. ೩೬೦); ಇಱಿಭಕ್ತನಂ ದಿವ್ಯನೆ ನಾರುವಂ ಕೊಂದು ಬಱಿದಿರ್ದಪುದು ಕರಂಡದ ಪುಲ್ಲವಂ ಚೆಲ್ಲಿ ಕೊಱಚಾಡು ತಿರ್ಪ ಗಜಮಂ ದ್ರೋಹಿಯಂ (ಅಂಗಪು. ೨೯-೨೯). 'ಪುಲ್ಲಂಬ' ಪರಾ. [< ಸಂ. ಪುಲ್ಲ]

ಪುಲ್ಲಂಗ (ನಾ). ಒಂದು ಬಗೆಯ ಔಷಧೀಸಸ್ಯ : ಕಳ್ಳಂಗಡಲೆ, ಬೋಳಂಗಡಲೆ, ನಾಗಮುತ್ತು, ಪುಲ್ಲಂಗ . . . ಮರದರಿಶಿನ ಇವುಗಳನ್ನು ಸಮಭಾಗವಾಗಿ ಕಷಾಯವಿಕ್ಕಿ ಕೊಡಲು ಪಂಚಾಹಿಕಜ್ವರ ಗುಣಮಕ್ಕುಂ (ಸಕಪ್ಯ. ೦೦೬). [?]

ಪುಲ್ಲಂಪುರಚಿ 'ಪುಳ್ಳುಂಪುಣಿಸೆ' ನೋ.

ಪುಲ್ಲಂಪುರುಚಿ 'ಪುಳ್ಳುಂಪುಣಿಸೆ' ನೋ.

ಪುಲ್ಲಂಬ (ನಾ). ಹೂವಿನ ಬಾಣಗಳುಳ್ಳವನು; ಮನ್ಮಥ : ಮೆಲ್ಲನೆ ಕಳಹುಸ ತುಗೊಳವನಿಳಿವಂತೆ ಪುಲ್ಲಂಬನರಸಿಯೈತಂದೊಂದು ಮೆಟ್ಟಿಗೆಯೊಳಲ್ಲಿ ಮುಡಿಸಿ (ಪವಪೋ. ೬-೩೬). [ಪುಲ್ಲ + ಅಂಬು$_2$ + —ಅ$_2$]

ಪುಲ್ಲಗ (ನಾ). ಒಂದು ಮನೆತನದ ಹೆಸರು : ಜ್ಯೇಷ್ಠದ ಪುಣ್ಣಮೆ ಆದಿತ್ಯವಾರದನ್ದು ಮಿದಿಯ ಪುಲ್ಲಗರಣ್ಣಮಸೆಟ್ಟಿಯ ಮಗು ಪೆದ್ದಣ್ಣಂ ತುಱುಗೊಳಳ್ ಕಾದಿ ಸತ್ತು ದೇವಲೋಕಕ್ಕ ಸನ್ದಂ (ಎಕ. VIII, ಸೊರಬ. ೩೬೬-೩; 1004). [?]

ಪುಲ್ಲಡಕಿ (ನಾ). ಹುಲ್ಲು ಹೊರುವವನು; ಹುಲ್ಲುಹೊರೆ ತುದು ಉಪಜೀವನ ಸಾಗಿಸುವವನು : ರಾಜಕುಮಾರರ ಕೆಳೆಯಂ ಬಿಟ್ಟು ಪುಲ್ಲಡಕಿಯೊಳ್ ಕಳೆಗೊಳ್ವಂತೆ . . . ಸದ್ಧರ್ಮಮಂ ಬಿಟ್ಟು ಮಿಥ್ಯಾತ್ವ ಪ್ರೀತನಾಗಿರ್ಪುದುಂ (ರರ್ಮಾಮ್ಯ. ೦೦-೦೬೨).

[ಪುಲ್ + ಅಡಕು$_1$ (<ಅಡುಕು) + —ಇ$_3$]

ಪುಲ್ಲಡಿಗ (ನಾ). (?) : ಪುಲ್ಲಡಿಗ[ಶಾಕಾಂ.ಗೆ] ರೇಚಯ್ಯ ಮಲ್ಲಣ ಮೊಲ್ಲೆಯರ ಬೊಮ್ಮಯ್ಯ ಮಲ್ಲಣ ತಲ್ಲಿಗೇಶನ ಮಸಣಹುಳ್ಳಿಯ ಮಾರತಂದೆಗಳು (ಶಾಸಂಪ. ೯-೭೯). [< ಪುಲ್ಲವಡಿಗ ?]

ಪುಲ್ಲತ್ತಿ (ನಾ). ಒಂದು ಊರಿನ ಹೆಸರು; ಪ ಬೆಳಗಾವಿಜಿಲ್ಲೆಯ ಈಗಿನ ಹುಲ್ಲತ್ತಿ : ಮುದುಗೆಱಿಯ ಪೂರ್ವ್ವಶೃಂಘ(ಗ)ದ ಪುಲ್ಲತ್ತಿಎ(ಯ) (ಇಅ. VIII, ೨೦೯-೩೬; 10ನೆಯ ಶತ ?). [?]

ಪುಲ್ಲಪ್ಪ (ನಾ). ಒಬ್ಬಾತನ ಹೆಸರು : ಶ್ರೀ ಪುಲ್ಲಪ್ಪನ್ ಶ್ರೀ (?)ಮಾ(?)ಣದೇವಃಕ(ಕ)ಟಿತಪ್ರತಿಮಾ (ಇಅ. X, ೦೬೬; ಸು. 8ನೆಯ ಶತ).

[? + ಅಪ್ಪ$_1$]

ಪುಲ್ಲಮಂಗಲ (ನಾ). ಒಂದು ಊರಿನ ಹೆಸರು : × × × ವರಸರು × × × ಕಡುಕಲ್ಲ ಪುಲ್ಲಮಂಗಲ ತೆಱಿದಾರ ಪುನ್ನಾಡನಾಳ್ (ಎಕ. IX, ಬೇಪಸ. ೪೩ ೬; ಸು. 900 ?). [ಪುಲ್ಲ + ಮಂಗಲ]

ಪುಲ್ಲವಟುಕ (ನಾ). ಹೂವನ್ನು ಮಾರುವ ಹುಡುಗ; ಹೂವಾಡಿಗ : ಸುರವತಿಯೆಱಿವಸನರ್ಹತ್‌ಪರಮೇಶ್ವರಪಾದಸೇವೆ ಪಾಲಾ ಅಮರ್ದಾಪಿರಿದು ಗಡಿದೆನಿಸಿ ತಂದರ್ ಸುರವಟುಕರ್ ಪುಲ್ಲವಟುಕರಂತಿರೆ ಪೂವಂ (ಅಪಪು. ೩-೭೭). [ಪುಲ್ಲ + ವಟುಕ]

ಪುಲ್ಲವಡ (ನಾ). ಹೂವು ಮಾರುವವನು; ಹೂವಾಡಿಗ : ಕಱಿಗೊರಲನ ಪುಲ್ಲವಡ[ಶಾಕಾಂ. ಪುಲ್ಲವಳ, ಪುವ್ವಾಳ]ರೊಳು ವನಜನೆಂಬವನೊರ್ವನಾನು (ಸೊಬಸೋ. ೦೨-೨೦). [ಪುಲ್ಲ + — ವಡ್ಯ]

ಪುಲ್ಲವಡಕಾಱ (ನಾ). = ಪುಲ್ಲವಡ : "ಮಲರ್ವಡಿಗನೆನಲ್ ಪುಲ್ಲವಡ

ಕಾಱ ಪೂವಳನೆಂದು ಪೂವಡಿಗನೆಂದೆನಿಕ್ಕುಂ" (ಕಬ್ಬಿಕ್ಕ. ೩೯); ಇರಿಸಿದೆನ ವಳಡಿಯಲಿ ಜಾಜಿಯ ಚೌಸರವನೆಂದನು ಪುಲ್ಲವಡಕಾ[ಪಾಕಾಂ.ವಡಿಗಾ, ಪೊಡೆಕಾ, ಶರಕಾ]ಱ (ಸೊಬಸೋ. ೦೨-೬೨). [ಪುಲ್ಲವಡ + — ಕಾಱ]

ಪುಲ್ಲವಡಿಗ (ನಾ). = ಪುಲ್ಲವಡ : "ಪೂವಡಿಗ ಪುಲ್ಲವಡಿಗಂ" (ಕವಿಕಂ. ೨೬೬); ಕುಂಚವಡಿಗಂ, ಪುಲ್ಲವಡಿಗಂ (ಶಮದ. ೦೯೬ ಪ್ರಯೋ); ಕುಸುಮಪುರದ ಪುಲ್ಲವಡಿಗಂ ಕುಸುಮದತ್ತನೆಂಬವಂ . . . ಮಂದಸಮಂ ಕೊಂಡು ಬಂದು ನಿಜವಧುವಪ್ಪ ಕುಸುಮಾವಳಿಗೆ ಕುಡುವುದುಂ (ಪುಣ್ಯಾಸ್ರ. ೨-೩೦ ವ).

[ಪುಲ್ಲ + — ವಡಿಗ]

ಪುಲ್ಲವಡಿಗಿತಿ (ನಾ). ಹೂವಾಡಗಿತ್ತಿ; ಮಾಲೆಗಾತಿ : ಪುಲ್ಲವಡಿಗಿತಿಯರ ಪಸರದಿನಂದಂಬಡೆದ ಸೂಳೆಗೇರಿಯ ಕೆಲದಲ್ಲಿ ಗರುವರ ಗೊಟ್ಟಿಗಾಱರ . . . ಆಗರಮೆನೆ ಪೆಂಪುಸೊಂಪನೊಳಕೊಂಡೆಸೆದಿರ್ಪುವು ಸೂಳೆಗೇರಿಗಳ್ (ಕಬ್ಬಿಕಾ. ೪೦). [ಪುಲ್ಲವಡಿಗ + — ಇತ್ತಿ$_1$ (< — ಇತ್ತಿ)]

ಪುಲ್ಲವಡಿತಿ (ನಾ). = ಪುಲ್ಲವಡಿಗಿತಿ : ಬಂದುಗೆಯೊಳ್ ನಯನದ್ಯುತಿ ಬಂದುಗೆ ಮಲ್ಲಿಗೆಯ ಪೂಗಳೆಂದೀವರ್ ಕಂಪಂ ದಳವೇಱಿಪರಳಿಗಿಂಪಂ ದಳವಡೆ ಪುಲ್ಲವಡಿತಿಯರ್ ಸೊಗಯಿಸುವರ್ (ಜಗವಿ. ೨-೨೭).

[ಪುಲ್ಲವಡ + — ಇತ್ತಿ$_1$ (< — ಇತ್ತಿ)]

ಪುಲ್ಲವಡುಗ (ನಾ). = ಪುಲ್ಲವಡ : ಪುಲ್ಲವಡುಗರೊಕ್ಕಲುಂ ಕಲುಕುಟಿಗರೊಕ್ಕಲುಂ ಸರ್ವ್ವಮಾನ್ಯವಾಗಿ ಬಿಟ್ಟರು (ಸೌಇಇ. IX — 1, ೦೦೬-೩೯; ಸು. 1057); ಕಂಬೆ ಸ್ವರದೇವರ ಪುಲ್ಲವಡುಗ ನಾಗಂಣಂಗೆ ಮತ್ತ ೩ [ಇ] (ಸೌಇಇ. IX — 1, ೦೩೩-೦೪; ಸು. 1086).

[ಈ ಇದು 'ಪುಲ್ಲವಡಿಗ' ಎಂಬುದರ ಅಪಲಿಖಿತವಿರಬಹುದು]

ಪುಲ್ಲವಿಸು (ಕ್ರಿ). ಉತ್ಸಾಹಗೊಳ್ಳು (?): ನಲ್ಲ ಶ್ರೀಚಿಕದೇವನಾಥ ನಿನಗೊಲಿದೆನ್ನ ಮೆಲ್ಲೆರ್ದೆಯ ಹರುಷವೀ ಮೇರೆ ಎಂದು ಸೊಲ್ಲುವವಳೊಡನೊಡನೆ ಪುಲ್ಲವಿಸಿ (ಚಕಸ. ೪೬). [ಪುಲ್ಲ + — ಇಸ್ಸು$_3$]

ಪುಲ್ಲಶರ (ನಾ). ಪುಷ್ಪಬಾಣ; ಮನ್ಮಥ : ಪುಲ್ಲಶರನಂಜಿ ಕರ್ಬಿನ ಬಿಲ್ಲಂ ತಲೆಚಮರಿವೆರಸು ಬಿಸುಟಂತೆ ತಪೋವಲ್ಲಭನ ಕೆಲದ ವೇತ್ರಲತೋಲ್ಲಸಿತ ಕಳಾಪಗುಚ್ಛಮೆಸೆದುದು ತುಚ್ಛಂ (ಅಪಂಪು. ೩-೪೮). [<ಸಂ. ಪುಲ್ಲಶರ]

ಪುಲ್ಲಶರಹರ (ನಾ). ಮನ್ಮಥನನ್ನು ನಾಶ ಮಾಡಿದವನು; ಶಿವ : ಬಲ್ಲವರು . . . ಪುಲ್ಲಶರಹರಲಿಂಗಮರ್ಚಿಪರು (ಪವಪೋ. ೨-೩೯).

[< ಸಂ. ಪುಲ್ಲಶರಹರ]

ಪುಲ್ಲಸೊಜ್ಜಿಗೆ (ನಾ). ನೆನೆದು ಅರಳಿದ ರವೆ : ಬಿಸಿನೀರನೆಱೆದು ಕಿವಿಚಿದ ಪುಲ್ಲ[ಪಾಕಾಂ. ಪುಲ್ಲ, ಪುಟ್ಟ] ಸೊಜ್ಜಿಗೆಯ ರಸದೊಳಗೆ ಅರೆದಕ್ಕಿಯ ಸಮಂಗೂಡಿ (ಸೂಪಶಾ. ೦-೩೬). [ಪುಲ್ಲ + ಸೊಜ್ಜಿಗೆ (< ಸಜ್ಜಿಗೆ)]

ಪುಲ್ಲಾಯಟ್ (ನಾ). ಒಂದು ಊರಿನ ಹೆಸರು (?) : ಪ್ರಾಚೀದೆಸೆ ಪನೆಡ್ಗುಣ್ಟೆಯಿನ್ಮೂಡಾಯ್ ಕಡೆ ಆಗ್ನೇಯದೆಸೆ ಪುಲ್ಲಾಯಟ್‌ದಕ್ಷಿಣದೆಸೆತಳ (?) ಅಣ್ಣಯ್ ನೈರಿತ್ತೆದೆಸೆ ನೆಲಮುಟ್ಟುಗೂರ್ (ಎಕ. X (8), ಮುಳಪಾ. ೩೨೬-೩೦; ಸು. 650; ಪ್ರೆಕಾ. ೦೯೦೭, ೯-೩೦ ನೋ). [?]

ಪುಲ್ಲಿ (ನಾ). ಒಂದು ಬಗೆಯ ಬಟ್ಟೆ : ಅಲ್ಲಲ್ಲಿ ಕಟ್ಟಿದ ಪುಲ್ಲಿಯ ಪಟ್ಟೆಗಳ ಮೇಲೆ ಮೇಘವಣ್ಣಿಗೆಯ ಚೌಕದ ವಿಳಾಸದ ಕಥಾಯಿಯ ಸುಚ್ಛವಿಯನೀವ ಪಚ್ಚೆಯ ಪಟ್ಟೆಗಳ . . . ಸಕಲಸೌಂದರ್ಯಮನೊಳಕೊಂಡ ಮೇಲ್ಕಟ್ಟಿನ ಬೆರಕೆವೆಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವೆ (ಗಿಂಕ. ೦೦-೨೬ ವ); ತೋರಮುತ್ತುಗಳ ಹಾರಮುರಸ್ಥಳದೊಳ್ ಪ್ರಕಾಶಮಂ ಪಸರಿಸೆ ಪಂಚವಣ್ಣಿಗೆಯ ಪುಲ್ಲಿಯ ಚಲ್ಲಣದಿಂ ಕಟೀತಟು ನಸುನಗೆ (ಮಹಾಪೇ. ೬-೭೦); ಪಳಿ ಪಟ್ಟೆ ಪುಲ್ಲಿ ಚೀನಾಂಬರ ದಸರಿ ಗಬ್ಬುಳಗಂದಿ ಮೇಘವಣ್ಣಿಗೆಯಾ ತಲೆಯ ಮೇಲೆಲ್ಲರ್ಗೆ ಕಱೆದರು ವಸ್ತ್ರದ ಮಳೆ ತಾನೆ ಕಱೆದುದೆಂಬಂತೆ (ಭರತ. ೭೩-೦೦೩). [?]

ಪುಲ್ಲಿಊರ್ (ನಾ). ಒಂದು ಊರಿನ ಹೆಸರು : ಕೊರಿಕುನ್ದಭಾಗೇ ಪುಲ್ಲಿಊರನ್ನಾಮ ಗ್ರಾಮೇ ಮಹಾತಟಾಕಸ್ಯಾಧಸ್ತಾತ್ ಮೂಲಾಭ್ಯಾಶೇ ಶ್ರಮಣಕೇದಾರಸಹಿತಂ ಸಪ್ತಕಣ್ಡುಕಾವಾಪಮಾತ್ರಂ ಕ್ಷೇತ್ರಂ . . . ಪಾನೀಯಪಾತಪುರಸ್ಸರನ್ದತ್ತಂ (ಪ್ರೆಕಾ. ೦೯೩೬, ೦-೨೫; ಸು. 570).

[ಪುಲ್ಲಿ$_0$ + ಊರ್]

ಪುಲ್ಲಿಂಗ (ನಾ). [ವ್ಯಾಕ] ಪುರುಷರನ್ನು ಸೂಚಿಸುವ ಲಿಂಗ; ಪುರುಷವಾಚಕಲಿಂಗ : ಪುರುಷರೆ ಪುಲ್ಲಿಂಗ ಸ್ತ್ರೀಯರೆ ತಾಂ ಸ್ತ್ರೀಲಿಂಗ ಮುಟಿದುವೆಲ್ಲಂ ನಪ್ಪಾಗಿರೆ ಸಲ್ಗುಂ ಕನ್ನಡದೊಳ್ (ಶಮರ. ೯೦); ಗಂಡಸರನ್ನು ಹೇಳುವ ಪದಗಳಿಗೆ ಪುಲ್ಲಿಂಗವೆಂದೂ ಹೆಂಗಸರನ್ನು ಹೇಳುವ ಪದಗಳಿಗೆ ಸ್ತ್ರೀಲಿಂಗವೆಂದೂ ಹೆಸರು (ಮರ್ಯಮ. ೩೦). [<ಸಂ. ಪುಂಲಿಂಗ]

ಪುಲ್ಲಿಕೆ 'ಪುಲ್ಲಿಗೆ$_2$' ನೋ.

ಪುಲ್ಲಿಗೆ$_1$ (ನಾ). ೧. ಊಟದ ಎಲೆ : ರಸಂ ಬಂದೊಡೆ ತಂಬುಲಮಂ ಎಳ್ ಬಂದೊಡೆ ಕೊದಳಿಯಂ ಬೆಳಸು ಬಂದೊಡೆ ನೆಲನಂ ಸಾಲಂ ಬಂದೊಡೆ ಒಟ್ಟೆಗುತ್ತನಂ ಕೂಟನುಂಡೊಡೆ ಪುಲ್ಲಿಗೆಯಂ[ಪಾಕಾಂ. ಪತ್ಥಳೆಯಂ] ಬಿಡುವಂತೆ ತನ್ನ ಕಾರ್ಯಂ ತೀರ್ದ ಬಳಿಕ್ಕೆ ಕಡೆಯೊಳ್ ಶರೀರಮುಮಂ ಪರಿಗ್ರಹಮುಮಂ ತ್ರಿಶುದ್ಧಿಯಿಂ ಬಿಟ್ಟು ಪರಿಚ್ಛೇದಿಯಪ್ಪುದು (ಧರ್ಮಾಮ್ಯ. ೦೪-೦೩೯). ೨. ಎಲೆಯ ಹೊದಿಕೆ,—ಮುಸುಕು : ನಾರು ಸುತ್ತಿ ಮಾದಳದ ತಳಿರ ಪುಲ್ಲಿಗೆಗಳಂ ಹೊದ್ದಿಸಿ ನೆಲದೊಳಗೆ ಪುಟವಿಕ್ಕಿ ಬಿಸಿಯಂ ಮಾಳ್ಪುದು (ಸೂಪಶಾ. ೩-೪೭); ನೆಲದ ಸೆಖೆಯಿಂದ ಬೆಂದ ಕಾಯ ತೆಗೆದು ಪುದಿದೆಲೆಯ ಪುಲ್ಲಿಗೆಯುಮಂ ಬಿಸುಟು (ಸೂಪಶಾ. ೩-೪೮). [←ತೆಲು. ಪುಲ್ಲಿಯ, ಪುಲ್ಲೆಯ]

ಪುಲ್ಲಿಗೆ$_2$, ಪುಲ್ಲಿಕೆ (ನಾ). ಒಂದು ಬಗೆಯ ಸಿಹಿಭಕ್ಷ್ಯ; ಹೋಳಿಗೆ : "ಪುಲ್ಲಿಗೆ—ಪೋಲಿಕಾ = ಒಂದು ಭಕ್ಷ್ಯ" (ತರ್ಕಕೋ. ೨೭); ಪುಲ್ಲಿಗೆಯ ತತ್ಸವಿಯ ಮಂಡಿಗೆಯಲ್ಲಿ ನವಘೃತಸೂಪದುಂಶಕದಲ್ಲಿ ನೋಡಲಿ ನಮ್ಮನೆಂದುದು ಧೂರ್ತವಟುನಿಕರ (ಕುವ್ಯಾಲ. ೧೫-೭); ಮಲ್ಲಿಗೆಯರಳಂತೆ ಬಿಚ್ಚೋಗರ ಮೊಸರೊಳ್ಳೆಯ ಬಹಳುಪ್ಪುಗಾಯಿ ಘಲ್ಲಿಸಿ ಗಟ್ಟಿಯ ಕಟ್ಟಿದ ಪಿರಿಯರು ಪುಲ್ಲಿಗೆಗಳು ತರತರಿಸೆ ರಸರಸಾಯನದ ಚಪ್ಪರಿದು ನೀರ್ಮಜ್ಜಿಗೆ ಹಸಗೆಯ್ದುರಲೀಂಟಿದರು (ಪೋಹತ. ೩-೫೬). **ಪುಲ್ಲಿಕೆ** : ತಾರವಣ್ಣದ ಬಟುವ ಕೀರವಣ್ಣದ ಕಟು ನೀರಜದ ಕೈತೊಡವ ಹೂರಣದ ಪ[ಪು]ಲ್ಲಿಕೆಯನಾರೋಗಣೆಗೆ ನೀಡಲು (ಲಂಗಪು ೬-೯). 'ಪೋಳಿಗೆ$_1$' ಪರಾ.

[< ಸಂ. ಪೂಲಿಕಾ]

ಪುಲ್ಲಿಗೆ$_3$ (ನಾ). = ಪುಲ್ಲಿ : ಎರಲ್ವಟ್ಟೆಗೆತ್ತಿ ಸುಟ್ಟಿಸಿದ ಕೆಯ್ಯ ಸುಯ್ಯ ಭರದೊಳ್ ಸುಱಿದು ಸೂಸುವ ಪುಷ್ಕರದ ತುಂತುಱಿಂ ತುಱುಗಿ ಸುತ್ತಿದ ಪಂಚಾಯುಧದ ಪುಲ್ಲಿಗೆಯ ತೊಂಗಲ ಸೆಱಂಗು ನಾಂದು ಪಿಣಿಲೇಱಿದೆ ಟಲ್ಚಿದ ವೇಣಿಯೊಳ್ಪೆಣೆದು . . . ಮೇಲೆ ಮೆಱೆಯೆಯುಂ (ಅಪಂಪು ೨-೨೯ವ). [< ಪುಲ್ಲಿ]

ಪುಲ್ಲಿದೊಂಗಲ್ (ನಾ). ಒಂದು ಬಗೆಯ ಕೊಡೆ; ಪುಲ್ಲಿಯೆಂಬ ಬಟ್ಟೆಯಿಂದ ಮಾಡಿದ ಛತ್ರಿ,—ಸತ್ತಿಗೆ : ಮತ್ತವರ್ಗವರ್ಗೆ ಪಿಡಿದ ಮೇಘಡಂಬರದ ಝಲ್ಲರಿಯ ಪ[ಪು]ಲ್ಲಿದೊಂಗಲ ಚೌಕಸತ್ತಿಗೆಯ ಕೊಡೆಯ ಗಡಣಂಗಳುಂ (ಶಂಭುಪು. ೭-೬೦ವ). [ಪುಲ್ಲಿ + ತೊಂಗಲ್]

ಪುಲ್ಲಿಪಟ್ಟೆ, ಪುಲಿವಟ್ಟೆ (ನಾ). = ಪುಲ್ಲಿ : ಮಕರತೋರಣ ಓರಣಂಗೊಂಡವಲ್ಲಲ್ಲಿ ಸುಕರಮೆನೆ ಪುಲ್ಲಿಪಟ್ಟೆಗಳಿ[ಪಾಕಾಂ. ಪಲ್ಲಯಿಸಿ]ರ್ದವಲ್ಲಲ್ಲಿ ಹೊನ್ನಿಂ ವಿವಾಹವೇದಿಕೆ ಸವೆದುದಂತಲ್ಲಿ (ಪೂಪರ. ದೇ. ೦೬೪-೧೬); ಅಲ್ಲಲ್ಲಿ ಕಟ್ಟಿದ ಚಿತ್ರಪಟಗಳಿಂದ ಝಲ್ಲಿಗಳಿಂದ ರಾಜಿಸುವ ಪುಲ್ಲಿ[ಪಾಕಾಂ. ಲ್ಲೆ]ಪಟ್ಟೆಯ ನೇಜೆಯದಿಂದಲದ ತಳುವಿಲ್ಲದೆ ಸಿಂಗರಿಸಿದರು (ರಾಮಾಪ. ೬-೮೪); ಪುಲ್ಲಿಪಟ್ಟೆಯೊಳು ಸಂಧ್ಯಾರಾಗದೊಳು ಕಾಗಿನಲ್ಲಿ ದುರುಂಗಿ ಪಟ್ಟೆಯೊಳು ಚಲ್ಲಣ . . . ಚಲ್ಲಕಾಶಿಯರಿಗೊಪ್ಪಿದುವು (ಭರತ. ೦೩-೪೯). **ಪುಲಿಪಟ್ಟೆ** : ಜಲಧರ

ಬಣ್ಣದ ವರದೇವಾಂಗದ ಪುಲಿವಟ್ಟ [ಟ್ಟಿ]ಯ ಪಠ್ಠಾವಳಿ ಮಂಜಿಷ್ಠಿಯ (ಣಾಗಸಂ. ೬-೭೩). [ಪುಲ್ಲಿ + ಪಟ್ಟಿ]

ಪುಲ್ಲಿವೆಟು 'ಪುಲಿವೆಟ್ಟು' ನೋ.

ಪುಲ್ಲಿವೇಟು 'ಪುಲಿವೆಟ್ಟು' ನೋ.

ಪುಲ್ಲು 'ಪುಲ್' ನೋ.

ಪುಲ್ಲುಂಗೂರ್ (ನಾ). ಒಂದು ಊರಿನ ಹೆಸರು ; ಇದು ಧಾರವಾಡ ಜಿಲ್ಲೆಯ ಈಗಿನ ಹುಲಗೂರಂ : ಮೂಡ ಬನ್ದಿಗಾವುಣ್ಡನ ಕೆಯಿ ತೆಂಕ ಪುಲ್ಲುಂಗೂರ ಬಟ್ಟೆ ಪಡುವ ಬಸದಿಯ ಕೆಯ್ಯು[ಂ] (ಇಇ. XVIII, ೩೯-೨೬ ; ೨೨೨). [? + ಊರ್]

ಪುಲ್ಲುಣಿ (ನಾ). ಒಂದು ಊರಿನ ಹೆಸರು : ಬ್ರಂಹ್ಮರಾಸಿಮ್ಮೆತರ್ಗ್ಗೆ . . . ಕೊಟ್ಟಂ ಪುಲ್ಲುಣಿಯ ಮರ್ಯ್ಯಾದೆ ಸಿರಿಗೆಱೆ ಪೊಸವೂರು ಸವಣೂರು ಕೆಱಂಗೇರಿ ಇವು ಪೂರ್ವ್ವಮರ್ಯ್ಯಾದೆ (ಎಇ. XI, ರಾಪಶಿ. ೦೦೯-೦೯ ; ೨೨೭). [?]

ಪುಲ್ಲುರಿ (ನಾ). ಹುಲ್ಲಿನ ಉರಿ,—ಜ್ವಾಲೆ : ಸಾಡೊಳಗೆ ಮಿಸೆದೆಱೆಯಂ ಬೇಡಿಸುವಂ ಬೀರರರಸಿಯರವೆಸರಂ ಕೂಸಾಡಿಸಲೀಯಂ ಪು[ಲ್ಲುರಿ. ಹು]ಲ್ಲುರಿಯಾಡಿಸುವಂ ತೇಜದುರಿಯಿನರಮಿಸೆಗಳಂ (ಅರ್ಧನೇ. ೬-೬೦).

[ಪುಲ್ + ಉರಿ$_2$]

ಪುಲ್ಲುಟ್ಟು (ನಾ). ಒಂದು ಬಗೆಯ ತೆರಿಗೆ : ಪುಲ್ಲುಟ್ಟು ಬಾಲವಣಮು ಮಾಯಿಲದೆಱೆಗಳುಮೆನ್ನಲದ ನೇಸಱ ಉಳ್ಳನೆಗ ಬಿಟ್ಟ ಇದು ಬಲ್ಲಹನ ದತ್ತಿ (ಸೌಇಇ. IX-i, ೩೯-೩ ; ೨೫೮ ಕಕ). [?]

ಪುಲ್ಲೆ$_1$, **ಹುಲ್ಲೆ** (ನಾ). ಚಿಗರೆ ; ಜಿಂಕೆ ; ಎರಳೆ : ಒಡನೆ ನೆರೆದರಸುಮಕ್ಕಳ ನಿಡುಗಣ್ಗಳ ಬಳಗಮೆಱೆಗೆ ತನ್ನಯ ಮೆಯ್ಯೊಳ್ ನಡೆ ಬಳಸಿ ಪಲರುಮಂಬಂ ತುಡೆ ನಡುವಿರ್ದೊಂದು ಪುಲ್ಲೆಯಿರ್ಪಂತಿರ್ದಳ್ (ಪಂಪಭಾ. ೩-೩೦) ; ಪುಲ್ಲೆಯ ನೋಟದಂತೆ ಸಂಚಳನಾಗದೆ (ರರ್ಮಾಮ್ಯ. ೦೧-೩೭) ; ಪುಲ್ಲಂ ಕಚ್ಚಿದ ನರನಂ ಕೊಲ್ಲಂ ಭಟನಿವರ ಬಾಯೊಳಂ ಬಸಿಱೊಳಗುಂ ಪುಲ್ಲೆ ಗಡ ಬಗೆವಡದಱೆಂ ಪುಲ್ಲೆಗಳೆನಿಸಿರ್ದುವಕ್ಕಟವನೇಕೆಚ್ಚೆಱ (ಬಂಹಿ. ೦೦-೬). **ಹುಲ್ಲೆ** : ಹುಲಿಯ ಬೆನ್ನಿನಲ್ಲಿ ಒಂದು ಹುಲ್ಲೆ ಹೋಗಿ ಮೇದು ಬಂದೆನೆಂದರೆ ಇದ ಕಂಡು ಬೆಱಗಾದೆ (ಅವಸಂ. ೭-೨೭) ; ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾದೆನ್ನೆ (ಕುಮಾಸ. ೦೯-೦೨೨) ; ನಂದನನ ಕಾಣದೆ ಕಂಗೆಟ್ಟು ಹೊರಳ್ದಳು ಮುಮ್ಮೊನೆಬಾಣ ತಾಗಿದ ಹುಲ್ಲೆಯಂತೆ (ಮೋಕಶ. ೨-೭೯).

ಪುಲ್ಲೆಯ ಬಯಲ್, ಹುಲ್ಲೆಯ ಬಯಲ್ = ಜಿಂಕೆಗಳು ಓಡಾಡುವ ಪ್ರದೇಶ : ಜಿಡ್ಡುಳಿಗೆ ೭೦ ಱ ಬಳಿಯ ರಾಜಧಾನಿ ಬಳ್ಳಿಗಾವೆಯ ಪುಲ್ಲೆಯ ಬಯಲೊಳ್ ಭೀರುಣ್ಡಗಳೆಯೊಳ್ ಕೊಟ್ಟ ಗಟ್ಟಿ (ಎಇ. VII, ಶಿಶಾಂ. ೦೨೦-೦೬ ; ೧೦೪೮) ; ಬಳ್ಳಿಗಾವೆಯ ತಳದ ಹುಲ್ಲೆಯ ಬಯಲೊಳ್ ಕಚ್ಚವಿಯ ಗಡಿಂಬದ ಗಳೆಯೊಳಳೆದು ಕೊಟ್ಟ ಗಟ್ಟಿ ಮತ್ತರೆರಡು (ಪ್ರಾಶಿ. ೦೯೨೯, ೬೩-೯ ; ೧೦೭೪). **ಪುಲ್ಲೆಯ ಮೊನೆ** = **ಪುಲ್ಲೆಯ ಬಯಲ್** : ವಿದ್ಯಾರ್ತ್ಥಿಮಾಣಿಯಗ್ಗೆ ಪುಲ್ಲೆಯ ಮೊನೆಯಿಂ ಪಡುವಲ್ ಮತ್ತರ್ಪ್ಪದಿನಾಱು (ಸೌಇಇ. IX-i, ೦೦೬-೩೯ ; ೧೦೭೫). **ಹುಲ್ಲೆಯ ತೆವರ್** = **ಪುಲ್ಲೆಯ ಬಯಲ್** : ಹುಲ್ಲೆಯ ತೆವರಲಬ್ಬೆಯನವರ ಕೆಯಿಂ ಮೂಡಲುಕೇರಿಯ ಎಱಕನವರ ಕೆಯಿಂ ತೆಂಕಲು . . . ಮತ್ತರು ೧೨ ಶ್ರೀಮಾನ್ಯ (ಸೌಇಇ. IX-i, ೩೭೦-೩೯ ; ೧೨೫೮). [ದೇ.ಸ ತಮಿ. ಪುಲ್ವಾಯ್ ; ತುಳು. ಪುಲ್ಲೆಮೃಗ]

ಪುಲ್ಲೆ$_2$ (ನಾ). (?) : ಬೆಳ್ಳಿಬಸವನ ಆಭರಣದ ಲೊಟ್ಟಾ . . . ಪುಲ್ಲೆಕಡೆ ಸಾಮಾನು ೦೬ ಶಾಳಿಗಳು ೨ ಯಿದರ ಹಗ್ಗದ ಪಟ್ಟಿ (ಎಇ. XIV, ಸಂಇಸ. ೨೮೯,೩೫೮ ಕಲಂ ; ಸಂ. 1848). [?]

ಪುಲ್ಲೆಗಣ್, **ಹುಲ್ಲೆಗಣ್**, **ಹುಲ್ಲೆಗಣ್ಣು** (ನಾ). ೧. ಜಿಂಕೆಯ ಕಣ್ಣು. ೨. ಜಿಂಕೆಯ ಕಣ್ಣಿನಂತಿರುವ (ಚೆಲುವಾದ ಮತ್ತು ಚಂಚಲವಾದ) ಕಣ್ಣು : ಪು[ಣಾಗಂ. ಹು]ಲ್ಲೆಗಂಗಳ ಕೊಲ್ಲಿನೋಟದ ಮಲ್ಲಿಗೆಯ ಮೊಗ್ಗೆಗಳ ದಂತದ . . . ವಟಫಲಾಧರೆ ನಿಲ್ಲಲೆಸೆದಳು (ಣಾಗಸ. ೨-೦೩). **ಹುಲ್ಲೆಗಣ್** : ೨. ತವಕದಿ ಹುಲ್ಲೆಗಣ್ಣವಳೊರ್ವಳುದಕವನುಲ್ಲಸದಿ ಚೆಲ್ಲಿದಳು (ಕೀಪಂಕ. ೦೬-೬೦) ; ಚೆಲ್ಲೆಗಣ್ಣವರರಳ್ಗಣ್ಣವರ್ ನಿಡಿಗಣ್ಣ ಹುಲ್ಲೆಗಣ್ಣವರ್ ... ತೋರಧಮ್ಮಿಲ್ಲೆಯರೆಯ್ದುತೊಗ್ಗಿನಲಿ (ಮೋಕಶ. ೨೯-೦೨). **ಹುಲ್ಲೆಗಣ್ಣು** : ೨. ಹುಲ್ಲೆಗಣ್ಣುಗಳಿಂದ ನಲ್ಮೆನೋಟಗಳಿಂದ ಗೆಲ್ದ ಕರುಣೆಗಳಿಂದ ಬೆಳೆವ ಮೂರುತಿಯೆ ನಿನ್ನ ಕರುಣೆಯಿನೆನ್ನ ತೊಳೆದು ಹೋಗೈಯ (ಏಸೀಗೀ. ೨೫-೦೩).

ಪುಲ್ಲೆಗಣ್ಣಳ್ = ಜಿಂಕೆಯ ಕಣ್ಣಿನ ಹಾಗಿರುವ ಕಣ್ಣುಗಳುಳ್ಳವಳು; ಹರಿಣನೇತ್ರೆ : ಪುಲ್ಲೆಗಣ್ಣಳೆ ಕೇಳು (ಪಪಕೋ. ೦೦-೨೬).

[ಪುಲ್ಲೆ$_1$ + ಕಣ್]

ಪುಲ್ಲೆಗೋಡು (ನಾ). ೧. ಜಿಂಕೆಯ ಕೊಂಬು,—ಕೋಡು. ೨. ಜಿಂಕೆಯ ಕೊಂಬಿನಾಕಾರದ ಒಂದು ಬಗೆಯ ಆಭರಣ : ವನಸಿರಿ ಮುತ್ತಗಶಿಶುಗಂದನುನಯದಿಂ ಪುಲ್ಲೆಗೋಡು ಪುಲಿಯುಗುರ್ಗಳನೊಲ್ದ ನುರಾಗದಿಂದೆ ಕಟ್ಟಿದಳೆನೆ ನನೆ ಕೆಲವೆಸೆಯುತಿರ್ಪುವಾ ಮುತ್ತುಗದೊಳ್ (ಪುಣಾ. ೩-೩೭೬). [ಪುಲ್ಲೆ$_1$ + ಕೋಡು$_5$]

ಪುಲ್ಲೆಮಱಿ 'ಪುಲ್ಲೆವಱಿ' ನೋ.

ಪುಲ್ಲೆವರಿ 'ಪುಲ್ಲೆವಱಿ' ನೋ.

ಪುಲ್ಲೆವಱಿ, **ಪುಲ್ಲೆಮಱಿ**, **ಪುಲ್ಲೆವರಿ**, **ಹುಲ್ಲೆಮರಿ** (ನಾ). ಜಿಂಕೆಯ ಮರಿ ; ಚಿಗರೆಯ ಮರಿ : ಅಸು ಪೋಪ ಪುಲ್ಲೆವಱಿಯಂ ಕೈಯಿಂದದಂ ಕೊಂಡು ಬೇಡನಗುರ್ವಿಂ ನಡೆಗೊಂಡಂ (ಕುಸುಪಾ. ೦೯-೩೩). **ಪುಲ್ಲೆಮಱಿ** : ಬವರಂಗೆಯ್ದ ಗಜಂಗಳ ನಿವಹದ ನಿಗ್ಗವಮದುಡಿದು ಸೂಸಿರೆ ನೆಲದೊಳ್ ತವೆ ಪಸಿದ ಪುಲ್ಲೆಮಱಿಗಳ್ ತವಕದೆ ಬಿಸಮೆಂದು ತುಡುಕುಗುಂ ತದ್ವನದೊಳ್ (ರಾಶಕೇ. ೩-೭೦). **ಪುಲ್ಲೆವರಿ** : ಪುಲಿಯೊಡನೆ ಕಲಹವೇ ಪುಲ್ಲೆವರಿಗೆ (ಕೇಸರಾ. ೦೭-೩೩). **ಹುಲ್ಲೆಮರಿ** : ಅವನು ಹುಲ್ಲೆಮರಿಯನ್ನು ಅಟ್ಟಿಸಿಕೊಂಡು ಹೋಗಿ ದಟ್ಟವಾದ ಕಾಡಿನೊಳಗೆ ಸಿಕ್ಕಿಬಿದ್ದನು (ಕೂಸಿ).

[ಪುಲ್ಲೆ$_1$ + ಮಱಿ]

ಪುಲ್ಲೆವೆಚ್ಚು (ನಾ). ಜಿಂಕೆಯಂತೆ ಗಾಬರಿಯಾಗುವಿಕೆ : 'ಪುಲ್ಲೆವೆಚ್ಚುವೆಚ್ಚು' ಪರಾ. [ಪುಲ್ಲೆ$_1$ + ಬೆಚ್ಚು$_3$ (< ಬೆರ್ಚು$_3$)]

ಪುಲ್ಲೆವೆಚ್ಚುವೆಚ್ಚು (ಕ್ರಿ). ಜಿಂಕೆಯಂತೆ ಗಾಬರಿಯಾಗು : ಕದನದೊಳನ್ದು ನಿನ್ನ ತರವಾರಿಯ ಬಾರಿಗೆ ಮೆಯ್ಯನೊಡ್ಡಲಾಱದೆ ನಳಿದಿನ್ನುವನ್ತದನೆ ಜಾನಿಸಿ ಜಾನಿಸಿ ಗಂಗ ತನ್ನ ನಮ್ಬಿದ ಸುವತೀಕದಮ್ಬದೆರ್ದೆ ಪೌವನೆ ಪೋಗಿರೆ ಪುಲ್ಲೆವೆಚ್ಚುವೆಚ್ಚಿದವನಹರ್ನಿಶಂ ತಿಗುಳ ದಾಮನರಣ್ಯಶರಣ್ಯ ವೃತ್ತಿಯಿಂ (ಎಇ. II, ೨೪೦-೨೯ ; ಸಂ. 1175).

[ಪುಲ್ಲೆವೆಚ್ಚು + ಬೆಚ್ಚು$_1$ (< ಬೆರ್ಚು$_1$)]

ಪುಲ್ಲೋರಿ (ನಾ). ಹೋರಿ ಕರು : ಕೆಲವ ಕೇಸಿಗ ನಿಱಿಪ ಹಂಡ ಹಾಱುವ ಚಿಂಚ ಮಲೆವ ಪುಲ್ಲೋರಿ ಬೆಚ್ಚುವ ಬೆಳ್ಳೆ . . . ನಾನಾಪರಿಯ ಕಬ್ಬುಸಿಗಳೊಳಗಾದ ಪಲವುಪರಿಯೆತ್ತು ತೊಂಭತ್ತಾಱುಲಕ್ಷ ಮೇಳ್ಳೆಸಿ ಪಿಡಿದುವುಗೆಲ್ಲಕೆ (ಸಿಂಗಿಭಾ. ೩೫-೭). [ಪುಲ್ + < ಪೋರಿ$_2$]

ಪುಲ್ವಕಿ 'ಪುಲ್ವಕ್ಕಿ' ನೋ.

ಪುಲ್ವಕ್ಕಿ, **ಪುಲ್ವಕಿ** (ನಾ). ಒಂದು ಪ್ರದೇಶದ ಹೆಸರು : ತಮ್ಮಪರ್ ಪರಿದು ಪುಲ್ವಕ್ಕಿಯಲ್ಲಿ ಕಾದಿ ತುಱುವಮ್ ಮಗುಟ್ಟಿ (ಪ್ರಾಶಿ. ೦೯೨೯, ೯೯-೩ ; ?). **ಪುಲ್ವಕಿ** : ದುಗ್ಗಮಾರೆಱೆಯಪ್ಪೊ ಕೊವಳಾಲನಾಡು ಮೂನೂಱುಂ . . . ಪುಲ್ವಕಿನಾಡುಸಾಸಿರಮು ಬೆಪ್ಪೋದು ಸಾಸಿರಮು

× × × ನಾಡಱುವತ್ತುಮಾನಾಳುತ್ತಿರೆ (ಎಕ. X, ಶ್ರೀಕಣಾ. ೭೬-೩; ಸು. 770).

[?]

ಪುಲ್ಲಗೆ, ಪುಲ್ಬಗೆ (ನಾ). ಹೀನವಾದ ವಿಚಾರ ; ಕೀಳಾದ ಯೋಚನೆ : ಅವರ ಮನದ ಪುಲ್ಲಗೆಯುಂ ಪೊಲ್ಲಮೆಯುಮನಱಿಯದೆ ಸಮಸ್ತ ಬಳೋದ್ಯುಕ್ತನಾಗಿ . . . ಮದಗಜೇಂದ್ರಪುರಮನೆಯ್ದೆ ಬರೆ (ಪಂಪಭಾ. ೬-೬೮ ಪ); ಮಾರಂ ವಿದ್ಯಾಪ್ರೀತನಪ್ಪುದಱಿಂ ತನ್ನ ನುಡಿಯುಂ ಕಡೆಗಣಿಸ ದೊಡಂಬಡುಗುಮೆಂಬ ಪುಲ್ಲಗೆಯಿನಾ ಪಾಣ್ಡೆಯಿಂತೆಂದರ್ (ಸೇಕುಪು. ೭-೦೪೬ ಪ). **ಪುಲ್ಬಗೆ** : ಅವರ ಪುಲ್ಬಗೆಯನ್ನೂ ಪೊಲ್ಲದೆಯನ್ನೂ ಅರಿಯದೆ ಅವನು ಹಸ್ತಿನಾಪುರಕ್ಕೆ ಬರುವನು (ಕಸಭಾ. ೬೯). [ಪುಲ್ + ಬಗೆ$_2$]

ಪುಲ್ವಟ್ಟೆ, ಪುಲುವಟ್ಟೆ, ಹುಲುವಟ್ಟೆ (ನಾ). ೧. ಸಣ್ಣಹಾದಿ; ಕಿರುದಾರಿ; ಕಾಲುದಾರಿ : ನೆತ್ತರುಂ ಬಸಿವುತ್ತಿರ್ಪುದು ಪೋದವಿಕ್ಕೆ ಮಱಿಯಂ ಪುಲ್ಲ[ಲ್ವ]ಟ್ಟೆಯೊಳ್ ಪುಲ್ಲೆಗಳ್ (ಕಾದಂಪು. ೦೫೬); ಕಿರಾತರಾಜನಾ ಕನ್ನೆಯ ಪಾದಂಗಳು ಪಲತೆಱದಿಂದರ್ಚಿಸಿ. . .ಪುಲ್ವಟ್ಟೆಯಿಂ ಪೇರಡವಿಯಿಂ ಪೊಱಮಡಿಸಿ ಕಿಱಿದುಂ ದೂರಂ ಪೋಗಿ (ಧರ್ಮಾಮೃ. ೩-೦೦೫); ನೆಟ್ಟನೆ ಸತ್ಯಥಂಬಿಡದು ಪೋಪ ನರಂ ಮತಿಗೆಟ್ಟು ಪಾಯ್ದು ಪುಲ್ವಟ್ಟೆಯನೆಯ್ದಿ ಪೋಗುತಿರೆ ಕಾನನದೊಳ್ (ಧರ್ಮಶ. ೦-೬೯). **ಪುಲುವಟ್ಟೆ** : ೧. ಒರ್ವ ವನಚರಂ ಮಹಾವನದೊಳ್. . .ಒಂದು ಮಹಾಹಿ ತೊಟ್ಟಗೆ ಬರೆ ಪುಲುವಟ್ಟೆಯೊಳ್ ತೊಲಗಲಿಂಬಿಲ್ಲದೆ ಬಿಲ್ಲಂ ಕೊಂಡು ವಿಷದೂಷಿತ ಮಪ್ಪಂಬಂ ತೊಟ್ಟಿಸುವುದುಂ (ಪಂಚತಂ. ೩೦೦-೦೯). **ಹುಲುವಟ್ಟೆ** . ೧. ಹುಲುವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನೀಂದ ಹುಳ್ಳಿಹೊಱೆಯಂ ಕಂಡಳು (ಹಸಭಾ. ೦೨-೨೦); ಪರಿಕಿಸಲು ಸ್ವರ್ಗಕ್ಕೆ ಪರಿವ ಹುಲುವಟ್ಟೆಗಳಪರಿಮಿತಂ ವಿಪ್ಲುಧಯವೀವವನಿತುಂ (ಶಾಪಂಚ. ೩-೩). ೨. ಕ್ಷುದ್ರವಾದ ಹಾದಿ ; ಕೆಟ್ಟ ಮಾರ್ಗ: ಧರ್ಮಪಥ ಹುಲುವಟ್ಟೆಯೆನಿಸಿದ ಹಮ್ಮಿನಲಿ ಕೆಡಬೇಡ (ಕುಮಾಕಾ. ೯-೦೩). [ಪುಲ್ + ಬಟ್ಟೆ$_1$]

ಪುಲ್ವಟ್ಟೆವಿಡಿ(ಕ್ರಿ). ಕಿರುದಾರಿಯನ್ನು ಅನುಸರಿಸು; ಕಾಲುದಾರಿಯನ್ನು ಹಿಡಿ : ಆ ಮಹಾಟವೀಮಧ್ಯದೊಳೊಂದು ಪುಲ್ವಟ್ಟೆವಿಡಿದು ನಡೆಯೆ (ಕಂಪ್ರಭಾ. ೩-೩೨ ಪ); ಕಟ್ಟೊಲ್ಲೆಯೊಳೆವೆಯಲುಗದೆ ನೀಡುಂ ನಿಟ್ಟಿಪ ನೀಜನ ಬಗೆ ದಾಸೆಯ ಪುಲ್ವಟ್ಟೆವಿಡಿದು ನಡೆಯುತ್ತಿರೆ (ಕಾಯಾಭಾ. ೯-೦೦); ಅವನಲ್ಲಿಂದ ಪುಲ್ವಟ್ಟೆವಿಡಿದು ನಿಲ್ಲದೆ ಪೋಗಿ ಕಂಡನು ಕಾನನಮಧ್ಯದಲ್ಲಿ ಮಹಾಸರೋವರವ (ಜಾಗಳು. ೦೦-೬೬). [ಪುಲ್ವಟ್ಟೆ + ಪಿಡಿ$_1$]

ಪುಲ್ವನೆ, ಪುಲುಮನೆ, ಪುಲ್ಮನೆ, ಹುಲ್ಲುಮನೆ (ನಾ). ಹುಲ್ಲಿನ ಮನೆ; ಗುಡಿಸಲು ; ಪರ್ಣಕುಟಿ : ಕಲ್ಪಾಟ್, ಪುಲ್ವನೆ, ನೀರ್ವಾವು (ಪಾಪಾಪು. ೩೦ ಆಶಾ). **ಪುಲುಮನೆ** : ಚಂದನೆಯುಂ . . . ಶೃಂಖಳಾಬಂಧನೆಯುಂ ಮಾಡಿ ತಲೆವಾಗಿಲ ಕೆಲದ ಪುಲುಮನೆಯೊಳಿರಿಸಿ ಕೊಚ್ಚನಿಕ್ಕಿ ನಡಸುತ್ತುಮಿರ್ದರ್ (ಪರ್ಶು. ೦೭-೩೯ ಪ). **ಪುಲ್ಮನೆ** : ಪುಲ್ಮನೆಯೊಳಿರ್ದವಂ ಕಿರ್ಚಿನ ಪೆರ್ಚನಿಚ್ಚೈಸಿದೊಡಂ ಸಂಸಾರದೊಳಗಿರ್ದಾತಂ ಕಷಾಯಂಗಳ ಪೆರ್ಚನಿಚ್ಚೈಸುವೊಡಂ ಆಯಿರ್ವರುಂ ಬೇವುದುಂ ನೋವುದುಂ ಏಂ ಪಿರಿದೆ? (ಜೀವಸಂ. ೦೪೩-೦೦). **ಹುಲ್ಲುಮನೆ** : ಕೆಳಕಾನೂರಿನ ಹುಲ್ಲುಮನೆಯ ಮುಂದುಗಡೆ . . . ಸೇರೆಗಾರರೂ ಹೂವಯ್ಯನೂ ಉದ್ವೇಗದಿಂದ ಮಾತಾಡುತ್ತಿದ್ದರು (ಕಾಪೂಕು. ೪೦೦) ; ಸಿದ್ದಣ್ಣನ ಹುಲ್ಲುಮನೆ ಸ್ಮಶಾನದಂತಾಗಿತ್ತು (ಪುಸಕಾ. ೭೦). [ಪುಲ್ + ಮನೆ]

ಪುಲ್ವರಿ (ನಾ). ಒಂದು ಬಗೆಯ ತೆರಿಗೆ ; (ದನಗಳನ್ನು) ಹುಲ್ಲು ಮೇಯಿಸಿದುದಕ್ಕಾಗಿ ಕೊಡುತ್ತಿದ್ದ ತೆರಿಗೆ : ಇಡತೊರೆ ಪುಲ್ವರಿ ಮುಂದೈಕಂಢೆ(ಡೆ) (ಎಇ. XVIII, ೦೪೨-೩೦: 1434).

[ಪುಲ್ + ವರಿ$_1$./ತಮಿ. ಪುಲ್ವರಿ, ಪುಲ್ಲರಿ ; ತೆಲು. ಪುಲ್ಲರಿ]

ಪುಲ್ವಾನಿಸ, ಪುಲ್ಮಾನಸ, ಹುಲುಮಾನಿಸ (ನಾ). ಅಲ್ಪನಾದ ವ್ಯಕ್ತಿ ; ಕ್ಷುದ್ರಮನುಷ್ಯ : ಕೆಟ್ಟೊಡಲಾಂತು ಕರ್ಮಭೋಗಂಗೆಯ್ದು ಕುತ್ತದಿಂ ಮಡಿವ ಪುಲ್ವಾನಿಸರುಮಂ ಕ್ಷುದ್ರದೈವಮಂ ಪೊಗಳ್ದು ಮುನ್ನುಳ್ಳ ಮತಿಯಂ ಕೆಡಿಸಿಕೊಳ್ವಧಮಕವಿಗಳ ಮಾತವೇಕೆಲ್ಲಿ (ಪಚ್ಚಾ. ೦-೯೭). **ಪುಲ್ಮಾನಸ** : ಇಕ್ಷ್ವಾಕುವಂಶತಿಳಕನಪ್ಪ ರಾಮನಂ ಪುಲ್ಮಾನಸನೆಂದೇಕೇಳಿಸಿ . . . ನಾಣ್ಬದೆಂತು ನುಡಿವೆ (ಶಾಪುಂಪು. ೩೦೨) ; ಕಲ್ಮಷರಹಿತಂಗೆ ತಿಕ್ಕರಾಜಂ ಗುಳಿದೀ ಪುಲ್ಮಾನಸರಂ ದೊರೆಯೆನೆ ಕಲ್ಮಾಣಕದನ್ತುಟೆಂದಡೆಂತಂತೆ ದಿಟಂ (ಎಕ. VII, ಶಿಕಾಂ. ೦೯-೩೬ ; 1181) ; ಪುಲ್ಮಾನಸನಾದ ಚಂಡಶಾಸನ ವೆಸರಂ ಚಾಂಡಾಲ ನೀರೊಳೀಂತರ್ದುವರೇ (ಶಪಂಪು. ೦೦-೩೨). **ಹುಲುಮಾನಿಸ** : ಕಾಲಂಗಸದಳದ ಕಲ್ಪಾಂತರುದ್ರನ ವಿಷಮನಯನಜ್ವಾಲೆಗಳುಕದ ವೀರಭಟರೊಡನೆ ಉಸುರಬಹುದೇ ಜೀಯ ಹುಲುಮಾನಿಸರ ಮೃದುರಣರಾಜಕಾರ್ಯವ (ತೊರಣಾ. ೬-೨-೦೨).

[ಪುಲ್ + ಮಾನಿಸ$_1$ (<ಮಾನುಸ)]

ಪುಲ್ವಿಡಿ, ಹುಲುವಿಡಿ (ಕ್ರಿ). (ಆಲಂ) ಹುಲ್ಲನ್ನು ಕಚ್ಚಿ ಹಿಡಿಯುವುದರ ಮೂಲಕ ಶರಣಾಗತಿಯನ್ನು ಸೂಚಿಸು : ಪುಲ್ವಿಡಿಯೆ ಸಚಿವತನಯಂ ಕಾಲ್ವಿಡಿಯೆ ನಿಜೇಶಂ ... ಪಲಗೆವಿಡಿದಳ್ ಕಲ್ಯಾನಸೆ (ಲೀಲಾವ. ೦೯-೨೯) . **ಹುಲುವಿಡಿ** : ಬೊಮ್ಮನ ಮಡದಿಯ ನಾಸಿಕಪರೆಯಾಗಲಿ ಮಿಕ್ಕರು ಹುಲುವಿಡಿಯಲಿ ದಿಗಧೀಶರು ಭಂಗಿತರಾಗಲಿ (ಪೀಠೇಶ. ೦-೩೦).

[ಪುಲ್ + ಪಿಡಿ$_1$]

ಪುಲ್ಪೊಱೆ, ಪುಲ್ಪೊಱೆ, ಹುಲ್ಲುಹೊರೆ (ನಾ). ಹುಲ್ಲಿನ ಕಂತೆ,–ಕಟ್ಟು : ಕಲ್ಪೊಱೆಯು ಸದೆಸಟ್ಟು ಪುಲ್ಪೊಱೆಗಳಾಂತವರ್ ನಿಲ್ಕಿದರ್ ಪುರದಗಳಂ (ಶಿಪು. ೧೨-೨೯) ; ಮಡಿದ ಪೆಣಗಳನೆಳೆದು ತುಂಬಿದರ್ ಪುಲ್ಪೊಱೆಗಳಂ ಕೊಱೆಯುಗಳನೊಟ್ಟಿದರ್ ಕಲ್‌ಗುಂಡು ಮಣ್ಗಳಂ ಸುರಿದು ನೆಲಸರಿಮಾಡಿದರ್ (ಶಿಪು. ೧೨-೩೦). **ಪುಲ್ಪೊಱೆ** : ಪುಲ್ಪೊಱೆವೊತ್ತು ಶ್ರೀಪತೀಶನ ಪುರಕೆ ನಡೆಯುತಿರಲು (ಆರಾಶ. ೦-೯-೩). **ಹುಲ್ಲುಹೊರೆ** : ತೃಣ್ಯಾ, ತೃಣಾನಾಂ, ಸಂಹತಿಃ—ಹುಲ್ಲ ಪಾವೆ, ಹುಲ್ಲುರಾಶಿ, ಹುಲ್ಲುಹೊರೆ, ಹುಲ್ಲ ಮೆದೆ, ಹುಲ್ಲುಮೂಟೆ, ಹುಲ್ಲಡಕ (ಸಿದ್ಧಾಂತಿ. ೦೩೨) ; ದೋಸೆ ತಿನ್ನುವ ಆಸೆಯಿಂದ ಬೇಗ ಹುಲ್ಲುಹೊರೆ ಹೊತ್ತುಕೊಂಡು ಸುಗ್ಗಿಗದ್ದೆಯಿಂದ ಮನೆಗೆ ಬಂದಿದ್ದಳು (ಪಚ್ಚಸ. ೩೬). [ಪುಲ್ + ಪೊಱೆ]

ಪುಲ್ಸರವಿ, ಹುಲುಸರವಿ (ನಾ). ಹುಲ್ಲನ್ನು ಹೊಸೆದು ಮಾಡಿದ ಹಗ್ಗ : ಪಲವು ಪುಲ್ಸರವಿಗಳ್ ಕೂಡಿ ದೃಢಮಪ್ಪೊಂದು ಲಳಿತರಥಪಾಶಕ್ಕೆ ಪಾಸಟೆಯೆನಿಕ್ಕುವೋ (ಆರಾಶ. ೩-೨-೯). **ಹುಲುಸರವಿ** : ನಿಮ್ಮ ನಂಬಿ ನಂಬದವನ ಬಾಳುವೆ ಹೊಲೆಯರ ನಾಯಿ ಹುಲುಸರವಿಯಿಂದ ಕರ ಕಪ್ಪ (ದೇರಾವ. ೨೦-೩೬) ; ಹುಲುಸರವಿಗಳನೆಯ್ದು ಹೊಸೆಹೊಸೆದು (ಪಸಪು. ೦೬-೨೦). [ಪುಲ್ + ಸರವಿ$_2$]

ಪುಲ್ಸಾರೆ (ನಾ). ಒಂದು ಬಗೆಯ ಔಷಧೀಸಸ್ಯ : " ಬೆಟ್ಟದುರುಳಿ, . . . ಪುರುಚಲಿಗಿಡ, ಪುಲ್ಸಾರೆ " (ಸಸ್ಯಸಿ.೧೨); ಹೇನುಕುರುವಿನ ಗಿಡ, ಪುರುಚಲಿಗಿಡ, ಪುಲ್ಸಾರೆ (ಪ್ರಾಕಿಗಿ. ೫೫-೦೦೦೬). [?]

ಪುವಗಾಮ (ನಾ). ಒಂದು ಊರಿನ ಹೆಸರು : ಶ್ರೀಪುರುಷಮಹಾರಾಜ ಪ್ರಿತುವೀರಾಜ್ಯಂಕೆಯೆ . . . ಮುದುಗುನ್ದೂರ ಸಿಙ್ಗಡಿಅರಸ ಪುವಗಾಮ ಮಾಳ್ದುವಿದ್ದರ್ (ಎಕ. VII (R), ಮುಳಕ. ೦೨೨-೬ ; ಸು. 740).

[? + ಗಾಮ]

ಪುವ್ವು 'ಪೂ$_2$' ನೋ.

ಪುಷ್ಕರ (ನಾ). ೧. ನೀಲಿಬಣ್ಣದ ತಾವರೆ. ೨. ಪದ್ಮ ; ಕಮಲ : " ಸಹಸ್ರಪತ್ರಂ . . . ಪುಷ್ಕರಂ, ರಾಜೀವಂ, ಅರವಿಂದಂ, ಪದ್ಮಂ, ಪಂಕಜಂ —ಈ ೧೭ ತಾವರೆ " (ಹಲಾಯು. ೦೦೨-೫೬) ; ಮಾರಹರಂ ಪೂಜೆಗೆಯ್ದವಸರದೊಳೊಂದು ಪುಷ್ಕರಮಿಲ್ಲದಿರೆ ನೋಡಿ ತನ್ನ ಬೆಳತಿಗೆಗಣ್ಣಿನಿರದೆ

ಕಿತ್ತಭವನಂಭ್ರಗೆ ಪೂಜೆಗೆಯ್ದುಱಗಿ (ಆರಾಶ. ೦-೩-೨೨). ೩. ಒಂದು ಬಗೆಯ ಮೂಲಿಕೆ; ಚಂಗಲಕೋಷ್ಠ: ಕೋಪ್ಪಂ ಪದ್ಮಕಂ ಕರ್ಪೂರ ಬಾಳದ ಬೇರು ಪುಷ್ಕರಂ ಭದ್ರಮುಸ್ತೆಯಿವಂ ಸರಿಗೊಂಡು . . . ಪೂಸಲು ಯೋನಿದೋಷ ಕೆಡುವುದು (ಶಾಪಾಶಾ. ೨೭೩). ೪. ಆನೆಯ ಸೊಂಡಿಲಿನ ತುದಿ: "ಕರಾಗ್ರಂ, ಪುಷ್ಕರಂ—ಈ ೨ ತುದಿಗೈ" (ಹಶಾಯು. ೩೭-೬೬); ಕರಿಗಳ್ ಕೇಸರಿಗಳ್ಗೆ ಪುಷ್ಕರಧೃತಸ್ವಚ್ಛಾಂಬುವಂ ನೀಡೆ (ಅಂಪು. ೯-೯೭); ಕರಪುಷ್ಕರಂಗಳಿಂ ತಂದು ಪೂಗಿಡುಗಳ್ಗೆ ನೀರೆಱೆವ ಮಱಯಾನೆಗಳಿಂ (ಶಾಕಂಪೂ. ೨೨೦); ಜಲಕರಿನಿಕರಂ ಪುಷ್ಕರಮಲರೆ ಕರಂ ನಿಮಿರೆ ಪೂತ್ಕರಿಸೆ ಸಿಡಿದ ಲಸಜ್ಜಲಕಣಮನಮಳಮುಕ್ತಾಫಳಮೆಂದುಱೆ ಮುಗ್ಧಖಚರಿಯರ್ ಕೈಯಿಡುವರ್ (ರಾಶಕೇ. ೦-೯೩). ೫. ಚರ್ಮವಾದ್ಯದ ಮುಖ. ೬. ಒಂದು ಬಗೆಯ ಚರ್ಮವಾದ್ಯ; ನಗಾರಿ: ನವಮೇಘಧ್ವನಿ ಪುಷ್ಕರಧ್ವನಿ ಲಸತ್ತಾರಾಳಿ ಪುಷ್ಪೋಪಹಾರವಿಲಾಸಂ (ಅಂಪು. ೬-೭೨). ೭. ಡಮರುಗ: ನಯನತ್ರಯಾಂಚಿತವಪುಷ್ಕರ ಪುಷ್ಕರಪುಷ್ಕರಾಂಕ (ರಾಶಕೇ. ೦೩-೩೨). ೮. ಪಾತ್ರೆ; ಭಾಂಡ. ೯. ಕೊಕ್ಕರೆ; ಸಾರಸಪಕ್ಷಿ: "ಪುಷ್ಕರಂ ಸಾರಸಂ" (ಪಂಗಣಾ. ೩೦-೬). ೧೦. ಬಾಣ; ಅಂಬು. ೧೧. ಕತ್ತಿ; ಖಡ್ಗ. ೧೨. ಕತ್ತಿಯ ಅಲಗು,-ಧಾರೆ. ೧೩. ಕತ್ತಿಯ ಒರೆ; ಖಡ್ಗದ ಕೋಶ. ೧೪. ಯುದ್ಧ; ಕದನ. ೧೫. ಗಗನ; ಆಕಾಶ: "ಸುರಸರಣಿ ವಿಷ್ಣುಪದಮಂಬರಂ ವಿಯತ್ ಖಂ ವಿಹಾಯಸಂ ಗಗನಂ ಪುಷ್ಕರಮಾಕಾಶಂ" (ಪಾಸ್ತುಕೋ. ೦೦-೩೭); ಮೊಱೆವ ದುಂದುಭಿರಭಸದಲಿ ಪುಷ್ಕರಕೆ ಪುಷ್ಕಲವಡರಿದುದು (ತೊರಣಾ. ೬-೩೯-೦೦); ಖಣಿಖಟಿಲೆಂಬ ಶಬ್ದವತಿ ಪೂರಿಸೆ ಪುಷ್ಕರ ಭೂತಳಂಗಳಂ ಮಣಿದವು ಕೂಡೆ ದಿಗ್ಗಜ ಫಣೀಂದ್ರ ಮಹಾಕಮಠಂಗಳ್ (ಹಶಾಕ್ರ. ೩-೯೭). ೧೬. ನೀರು; ಜಲ. ೧೭. ಕೊಳ; ಸರೋವರ. ೧೮. ಒಂದು ಬಗೆಯ ಹಾವು,-ಸರ್ಪ. ೧೯. ಮದ; ಉನ್ಮಾದ. ೨, ೪, ೧೯: ಸಿರಿಗೆಡೆಯಾದ ಪುಷ್ಕರದೊಳೊಂದಿದ ದೀರ್ಘಸುವೃತ್ತಹಸ್ತದಿಂ . . . ಈ ನರಸಿಂಹಭೂಭುಜಂ ಪರಿಚಿತಭದ್ರಲಕ್ಷಣದಿನೊಪ್ಪುವ ಬಪ್ಪನ ಗನ್ಧವಾರಣಂ (ಎಳ. V, ಶಿಲಾಶಾ. ೦೯೩-೩೦; 1161). ೨೦. ಕೆಂಪುಬಣ್ಣ: ಪಶ್ಚಿಮದಲ್ಲಿ ಕಂಡ ಪಚ್ಚೆಯ ಕಲ್ಲ ಉತ್ತರದಲ್ಲಿ ಕಂಡ ಪುಷ್ಕರದ ಕಲ್ಲ ಪೂರ್ವದಲ್ಲಿ ಕಂಡ ಬಿಳಿಯ ಕಲ್ಲ ಮೂಱೂ ಕೂಡಿ ಮಡಿಕೆಯ ಮಂಡೆಯ ಮೇಲಿರಿಸಲಾಗಿ ಕಂಡಿತ್ತು ಕಲ್ಲಿನ ಇರವು (ಶಿಲಾಶಾ. ೦೮೦-೬೬೯). ೨೧. ಶಿವನ ಒಂದು ಹೆಸರು: ನಯನತ್ರಯಾಂಚಿತವಪುಷ್ಕರಪುಷ್ಕರಾಂಕ (ರಾಶಕೇ. ೦೩-೩೨). ೨೨. ಕೃಷ್ಣನ ಒಂದು ಹೆಸರು. ೨೩. ವರುಣನ ಮಗ. ೨೪. ನಳಮಹಾರಾಜನನ್ನು ದ್ಯೂತದಲ್ಲಿ ಸೋಲಿಸಿ ರಾಜ್ಯವನ್ನು ಕಿತ್ತುಕೊಂಡ ಅವನ ದಾಯಾದಿಯ ಹೆಸರು: ನಳನೃಪತಿಯ ದಾಯಾದಂ ಸಲೆ ಬಡವಟ್ಟರ್ಪನಲ್ಲಿ ಪುಷ್ಕರನೆಂಬಂ (ಪಳಕಂ. ೩೦೩). ೨೫. ಸೂರ್ಯ. ೨೬. ಗುಹೆ; ಗವಿ. ೨೭. ಭಾಗ; ವಿಭಾಗ. ೨೮. ಪವಿತ್ರ ಕ್ಷೇತ್ರಗಳಲ್ಲಿರುವ ನದಿ, ಸರೋವರ ಮುಂತಾದವು; ಪುಣ್ಯತೀರ್ಥ. ೨೯. [ಜ್ಯೋತಿ] ಕೆಲವು ಗ್ರಹಗಳ ಕೂಟದಿಂದ ಉಂಟಾಗುವ ಅಶುಭಯೋಗ. ೩೦. [ಜೈನ] ಕಾಲೋದಧಿಯ ಆಚೆಗೆ ಇರುವ ಒಂದು ದ್ವೀಪ: ಕಾಳೋದಕಜಲಧಿ ಬೆಡಂಗಾಗೆ ತದ್ಬಾಹ್ಯದೊಳ್ ಪುಷ್ಕರನಾಮದ್ವೀಪಮೆರ್ಕುಂ (ಪ್ರಪ್ರಪು. ೦-೯೦). ೩೧. [ಕಾವ್ಯಮೀಮಾ] ಚಿತ್ರಕಾವ್ಯದಲ್ಲಿ ಒಂದು ಬಗೆ; ಪುಷ್ಕರವೆಂಬ ವಾದ್ಯದ ಆಕಾರದಲ್ಲಿ ಬರೆಯುವ ಪದ್ಯ: ಶರಶೂಲಚಾಪ ಚಕ್ರಾಸಿ ರೂಪಂ . . . ಮುರಜಂ ಗೋಮೂತ್ರಿಕೆ ಪುಷ್ಕರಮರ್ಧಭ್ರಮಣ ಸರ್ವತೋಭದ್ರಂಗಳ್ (ಕಾಪ್ರಾಪ. ೩೭೯). "ಅಸಿಯೊಳು ಸುತೀರ್ಥದೊಳು ವಾದ್ಯಘಟತುಂಡದೊಳು ಬಿಸಜದೊಳು ಗಜಹಸ್ತದಗ್ರದೊಳು ಗಗನದೊಳು ಕುಶದೊಳೌಷಧದೊಳಾ ಪುಷ್ಕರಾಖ್ಯಂ" (ಪುಂಗಣಾ. ೦೪೬-೩೨); "ಕಮಲ ನಭ ವಾದ್ಯ ಭಾಂಡಂ ಉಮೆಯರಸು ಸರ್ಪ ಮದಂ ಖಡ್ಗಂ ತೀರ್ಥೋತ್ತಮ ಭೇಷಜ ಕರಿಕರತುದಿ ಕ್ರಮದಿಂ ಪನ್ನೊಂದು ಪುಷ್ಕರಾಂಕಿತ ಶಬ್ದಂ" (ನಾಶಾಕಂ. ೨೮). [ಸಂ.]

ಪುಷ್ಕರಚಿಕುರ (ನಾ). ಆಕಾಶವೇ ಕೂದಲಾಗುಳ್ಳವನು; ವ್ಯೋಮಕೇಶ; ಶಿವ: ಶರಣು ಪುಷ್ಕರಚಿಕುರ ಶಿವಭಕ್ತಿಮುಖಮುಕುರ (ಶಕಂ. ೦೦-೦). [ಸಂ.]

ಪುಷ್ಕರಜ (ನಾ). ೧. ನೀರಿನಲ್ಲಿ ಹುಟ್ಟಿದುದು; ಕಮಲ. ೨. ಕಮಲದಲ್ಲಿ ಹುಟ್ಟಿದವನು; ಬ್ರಹ್ಮ. ೧, ೨: ಹರಿ ಹುಸು ಕವಿ ಕೌಶಿಕಂ ಶಿಖಿ ಮಹೀಜಾತಂ ಶುಕಂ ಭೃಂಗ ಪುಷ್ಕರಜಂ ಚಕ್ರವಿನಾಯಕಂ . . . ರಂಜಿಸುತ್ತಿರ್ಪ ಶಂಕರನಾಸ್ಥಾನದ ಮಾಳ್ಕೆಯಿಂದೆ ಪಿರಿದೊಪ್ಪುತ್ತಿರ್ದುದಂತಾವನಂ (ತ್ರಿಪುಪ. ೨-೦೨೬). [ಸಂ.]

ಪುಷ್ಕರಮಿತ್ರ (ನಾ). ತಾವರೆಯ ಗೆಳೆಯ; ಸೂರ್ಯ: ಪುಷ್ಕರಮಿತ್ರನಂದುದಯಪರ್ವತಮಂ ಪರಿವೇಱೆ ತಾರೆಗಳ್ ನಿಷ್ಕಳೆಯಾಗಿ ಪೋಗೆ ಪೊಗೆ ಸುತ್ತಿದ ಮುತ್ತಿನೊಲಿರ್ದುವಾಗಳಾ ಪುಷ್ಕರದೊಂದು ಪಾಂಡುರುಚಿಯಂ ತಳೆದಿರ್ದುದು ಮೂಡಣಾಗಸಂ (ಪುಲಿಕಾ. ೯-೩೨). [ಸಂ.]

ಪುಷ್ಕರಮೂಲ (ನಾ). ಒಂದು ಬಗೆಯ ಮೂಲಿಕೆ: ಚಂಗಲಕೋಷ್ಠ: "ಪುಷ್ಕರಂ, ಕಾಶ್ಮೀರಂ, ಪದ್ಮಪತ್ರಂ, ಈ ೩ ಪುಷ್ಕರಮೂಲ" (ಧಾಶಾ. ೦೦೦); ಶುಂಠಿ, ಪುಷ್ಕರಮೂಲ . . . ಇಷ್ಟನ್ನು ಕಷಾಯವ ಕಾಸಿ ಕುಡಿಸಲು ಕಾಸ, ಶ್ವಾಸ ... ವಿಹರವಹವು (ಶ್ರೀಧಶಾ. II, ೬೦); ಶುಂಠಿ, ಪುಷ್ಕರಮೂಲ, ನೆಲಗುಳ್ಳ . . . ಕಷಾಯ ಕಾಯಿಸಿ ಜೇನುತುಪ್ಪಗೂಡಿ ಸೇವಿಸೆ ಶ್ಲೇಷ್ಮಜ್ವರ ಗುಣವಾಗುವುದು (ಸಳಪ್ರ. ೦೮). [ಸಂ.]

ಪುಷ್ಕರವಾಣಿ (ನಾ). ಆಕಾಶದಿಂದ ಕೇಳಿ ಬರುವ ಮಾತು; ಆಕಾಶವಾಣಿ: ಪುಷ್ಕರವಾಣಿ ನುಡಿದುದೆಲೆ ಸುಸ್ಥಿರಭೂಪತಿ ಕೇಳೆನುತ್ತೆ (ಪಾಲಾಸ್ಯ. ೦-೪-೯೭). [ಸಂ.]

ಪುಷ್ಕರಾವರ್ತಕ (ನಾ). ಅತಿಯಾಗಿ ಮಳೆಯನ್ನು ಸುರಿಸುವ ಮೇಘಗಳ ಒಂದು ಗುಂಪು: ಜಗಕೆ ಜಗತ್ಪ್ರಳಯಂಬರಮೊಗೆದೊಡೆ ಸಂವರ್ತ ಪುಷ್ಕರಾವರ್ತಕಮಲ್ಲಿಗಮೊಂದೆ ಮಾಬ್ಕೆಯಿಂ ನೆಟ್ಟಗೆ ಕಱೆಗುಂ ಜಲಧಿ ಜಲಧಿಯೊಳ್ ಕೂಡುವಿನು (ಪಪ್ರಪು. ೯-೦೦). 'ಪುಷ್ಕಳಾವರ್ತಕ' ಪರಾ. [ಸಂ.]

ಪುಷ್ಕರಿ (ನಾ). ಆನೆ; ಹಸ್ತಿ. [ಸಂ. ಪುಷ್ಕರಿನ್]

ಪುಷ್ಕರಿಣಿ (ನಾ). ೧. ಹೆಣ್ಣಾನೆ. ೨. (ತಾವರೆಯ) ಕೊಳ; ಕಲ್ಯಾಣಿ: "ಖಾತಾ, ಪುಷ್ಕರಿಣೀ—ಈ ೨ ಹೊಕ್ಕರಣೆ" (ಹಶಾಯು. ೦೦೦-೩೪); ಸಲಿಲರ್ತುಕವನದಿಂ ದೀರ್ಘಿಕೆಯಿಂ ಪುಷ್ಕರಿಣಿಯಿಂ ಸರೋವರದಿಂ ಕೌತುಕಮನವರ್ಕಂಡರ್ಕೌತುಕಮಂಗಳಪುರಮಂ (ಶಂಶಾಮಾ. ೩-೩೪); ಅವಗಾಹಿತಪಥಿಕಜನಮನಕರುಣಿಗಳೆನಿಪ ಪುಷ್ಕರಿಣಿಗಳುಂ . . . ಅನೂನ ಶೋಭೆಯುಂ ಪಡೆಯೆ (ಪ್ರಪ್ರಪು. ೯-೨೨ ಪ); ಗಂಗೆಯ ನೀರು ಹರಿದು ಬಂದು ನಮ್ಮ ತೋಟದ ಪುಷ್ಕರಿಣಿಯಲ್ಲಿ ಝರಿಯಂತೆ ಧುಮುಕುತ್ತಿತ್ತು (ಶಿಶಾಧ. II, ೩). [ಸಂ. ಪುಷ್ಕರಿಣೀ]

ಪುಷ್ಕಲ, ಪುಷ್ಕಳ (ಗು). ೧. ಹೇರಳವಾದ; ಸಮೃದ್ಧವಾದ; ವಿಪುಲವಾದ: ಭೂಮಿಯಿಂದ ಪುಷ್ಕಲಬೆಳಸು ಬರಲು ಏನೇನನ್ನು ಮಾಡಬೇಕೋ ಎಲ್ಲವನ್ನೂ ಮಾಡಿದ ಹೊರತು ಅವನು ಏಳಿಗೆಗೆ ಬಾರನು (ಹಶಪ್ರ. ೦೩೩); ಶಿವಾಜಿಯು ಗೋಲ್ಕೊಂಡಕ್ಕೆ ದಂಡೆತ್ತಿ ಹೋಗಿ ಸುಲ್ತಾನನಿಂದ ಪುಷ್ಕಲಧನವನ್ನು ಕೈಗೆ ಹಾಕಿಸಿಕೊಂಡು ರಾಯಗಡಕ್ಕೆ ತಿರುಗಿದನು (ರಶಪ್ರ. ೦೨೩). ೨. ಉತ್ತಮವಾದ; ಶ್ರೇಷ್ಠವಾದ. (ನಾ). ೩. ಹೇರಳವಾದುದು; ಸಮೃದ್ಧವಾದುದು. ೪. ಶ್ರೇಷ್ಠನಾದವನು: "ಶ್ರೇಯಾನ್, ಶ್ರೇಷ್ಠಃ, ಪುಷ್ಕಲಃ, ಸತ್ತಮಃ, ಅತಿಶೋಭನಃ—೫

ಬಹಳ ಶ್ರೇಷ್ಠನಾದವನ ಪೆಸರುಗಳು" (ಸಿದ್ಧಾಂತಿ. ೩೩೬). ೫. ಶಿವ; ವರವೇಶ್ವರ. ೬. ರಾಮನ ತಮ್ಮನಾದ ಭರತನ ಮಗನ ಹೆಸರು: ಪುಷ್ಕಲಂ, ಆಗಳೆ ತಂದೆತಾಯ್ವೆರಡಿಯಾಣತಿವಡೆದು ಕಿಱಿಯಯ್ಯನ ಬೆಂಬಲಕ್ಕೆಂದು ಸಾಯುಕಂಗಳನ್ನೆತ್ತಿ ಪೋಪವಸರದೊಳ್ (ರಾಮಾಶ್ವ. ೪೬-೦೯). ಪುಷ್ಕಳ: ೩. ರಾಯರು ... ನನ್ನ ಜತೆಯಲ್ಲಿಯೇ ಪುಷ್ಕಳವಾದ ಭೋಜನವನ್ನು ಮುಗಿಸಿದರು (ರಾಯಶ. ೪); ನಾನು ಅದನ್ನು ಪುಷ್ಕಳವಾಗಿ ತಿಂದೆ (ಗಂಶ್ರ. ೬). [ಸಂ.]

ಪುಷ್ಕಲಾವರ್ತ, ಪುಷ್ಕಳಾವರ್ತ (ನಾ). =ಪುಷ್ಕರಾವರ್ತಕ: ಅಮರ ಸಮಿತಿಯ ತಂದ ಪಾಲ್ಗಡಲ ಪುಷ್ಕಲಾವರ್ತ ಬಲಾಹಕಾಂಬುದಂಗಳ್ ಕನಕಾಚಳಚೂಳಿಕೆಯೊಳ್ ಸುರಿವುತಿರ್ಪಂತಿಂದ್ರರುಂ ಭಗವದುಷ್ಣೀಷದೊಳ್ ಸುರಿಯೆ (ಶಾಂತಿಪು. ೦೦-೧೩ ಪ). ಪುಷ್ಕಳಾವರ್ತ: ಪೌಳೋಮಿಪತಿ... ವಿಳಯಕಾಳಾಂಬುದದಂತೆ ಮೊಱಗುವಂ ಸಿಡಿಲ ಬಳಗಮನೊಳಕೊಂಡ ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸುವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್ (ಪಂಪಭಾ. ೩-೧೩ ಪ); ಆವರಿಸಿದವು ಪುಷ್ಕಳಾವರ್ತಾವಳಿಗಳೆನೆ ಬಹಳವಿಷಧೂಮಾವಳಿಯಲೇ ಧಾತುಗೆಟ್ಟುದು ಸಕಳಭುವನಜನ (ಕುಮಾರ. ೨೩-೭). [ಸಂ.]

ಪುಷ್ಕಳ 'ಪುಷ್ಕಲ' ನೋ.

ಪುಷ್ಕಳಂ (ಅ). ಅಧಿಕವಾಗಿ; ಅತಿಶಯವಾಗಿ: ಅಲಘುಭುಜಪ್ರತಾಪಂ ... ಪುಷ್ಕಳಂ ಪುಷ್ಕಳನಂ ನೋಯಿಸಿದಂ (ರಾಮಾಶ್ವ. ೦೪೩-೩). [<ಪುಷ್ಕಲ]

ಪುಷ್ಕಳಭೋಜನ (ನಾ). ಸಮೃದ್ಧವಾದ ಊಟ,—ಭೋಜನ: ಎಲ್ಲಾ ಇಂದಿರಮ್ಮನ ದೆಶೆಯಿಂದ ನಮಗೆ ಪುಷ್ಕಳಭೋಜನವೆಂದುಕೊಂಡಿದ್ದಾರೆ (ಕೊಪೆಬೆ. ೦೦೩). [ಸಂ. ಪುಷ್ಕಲಭೋಜನ]

ಪುಷ್ಕಳಾವರ್ತ 'ಪುಷ್ಕಲಾವರ್ತ' ನೋ.

ಪುಷ್ಕಳಾವರ್ತಕ (ನಾ). =ಪುಷ್ಕರಾವರ್ತಕ: ಭೂಧರವಿರೋಧಿ ಭೂಧರ ಧರಂಗೆ ಕ್ರುದ್ಧನಾಗಿ ಪುಷ್ಕಳಾವರ್ತಕನಿಕಾಯಮಂ ಕರೆದು (ಜಗಪ. ೪-೬೪ ಪ). [ಸಂ. ಪುಷ್ಕಲಾವರ್ತಕ]

ಪುಷ್ಟ (ಗು). ೧. ಚೆನ್ನಾಗಿ ಬೆಳೆಸಿದ,—ಪೋಷಿಸಿದ. ೨. ಶಕ್ತಿಸಂಪನ್ನವಾದ. ೩. ವಿಪುಲವಾದ; ಹೇರಳವಾದ; ಅಧಿಕವಾದ. ೪. ಸಮೃದ್ಧವಾದ; ಶ್ರೀಮಂತ. ೫. ಶ್ರೇಷ್ಠವಾದ; ಉತ್ತಮವಾದ. (ನಾ). ೬. ಹೆಚ್ಚಳ; ಆಧಿಕ್ಯ: "ಬಹುಳಂ ಪ್ರಭೂತಂ ಪ್ರಭೂತಿ ಬಹು ಪುಷ್ಕಳಂ ಪುಷ್ಪಮೆನೆ ಮೊತ್ತಮಕ್ಕುಂ" (ಕುಂಗಾ. ೦೨೬-೬). ೭. ಶಕ್ತಿವಂತ; ಸಮರ್ಥ: ಪ್ರಮದಾವಲ್ಲಭನಂತಮಧ್ಯ ಸುಖಿ ಪುಷ್ಟಂ ತ್ಯಾಗಿ ... ಈಕ್ಷೋದ್ಭವಂ (ಜಾಕಶಿ. ೦೭-೨). [ಸಂ.]

ಪುಷ್ಟಿ (ನಾ). ೧. ಬೆಳೆಸುವಿಕೆ; ಪೋಷಿಸುವಿಕೆ. ೨. ಆಧಾರ; ಊರೆ. ೩. ಚೆನ್ನಾಗಿ ಬೆಳೆದ ಸ್ಥಿತಿ; ಕೊಬ್ಬಿರುವಿಕೆ. ೪. ಬೆಳವಣಿಗೆ; ಏಳಿಗೆ; ಅಭಿವೃದ್ಧಿ: ವಚನಕಾರರಿಂದ ಕನ್ನಡಭಾಷೆಗೆ ಒದಗಿದ ಪುಷ್ಟಿ ಎಷ್ಟು ವಿಧವಾದುದು (ಕೂಸ್ಕಳಾ. ೦೩೬). ೫. ಒದಗಿಸುವಿಕೆ; ಪೂರೈಕೆ: ನಾಗರಿಕಮಾನವನ ರಕ್ತದ ರುಚಿಯೋ ... ಆಹಾರದ ಪುಷ್ಟಿಗೋ ಮೋಹಿಸಿ ಅವನ ಜೊತೆಗೇ ತಾವೂ ಬಿಡಾರ ಹೂಡಿ ಕಾಡುವ ಅಲ್ಪಜಂತುಗಳು ಅನೇಕ ಇವೆ (ಸಂಬರು. ೪೨). ೬. ಪೂರ್ಣತೆ; ಪೂರ್ಣವಾಗಿ ಪ್ರಾಪ್ತವಾಗುವಿಕೆ: ಅನಂತಚತುಷ್ಟಯಪುಷ್ಟಿಪರಪುಷ್ಟ[ನುಂ] ... ಅಪ್ಪ ಶಾಂತೀಶ್ವರನಕಲಂಕಾಚಾರಸಾರಂ (ಶಾಂತಿಪು. ೦೨-೨೯ ಪ). ೭. ಐಶ್ವರ್ಯ; ಸಂಪತ್ತು: ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್ ... ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ (ಪಂಪಭಾ. ೦೯-೬೩). ೮. ಸಂಪತ್ತಿನ ಸುಖಪ್ರಾಪ್ತಿಗಾಗಿ ಆಚರಿಸುವ ಒಂದು ಬಗೆಯ ಧಾರ್ಮಿಕಕರ್ಮ: ಅಥರ್ವಣವೇದವು ಯಾಗಕ್ಕೆ ಉಪಯೋಗವಿಲ್ಲ. ಅದರಲ್ಲಿ ಶಾಂತಿ ಪುಷ್ಟಿ ಮೊದಲಾದ ಕರ್ಮಗಳ ವಿಧಿಯಿರುತ್ತದೆ (ಹಿಂದೂ. ೦೩೭); ದಿನವೂ ಒಂದಲ್ಲ ಒಂದು ಶ್ರಾದ್ಧ—ಶಾಂತಿ, ಪುಷ್ಟಿ, ಹೀಗೆ ಅವರಿಗೆ ಕಾದಿದ್ದದ್ದೇ (ಹೊಸಕ್ಷಿ. ೨೯). ೯. ಶಕ್ತಿ; ಸಾಮರ್ಥ್ಯ. ೧೦. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು: ಚಂದ್ರನಾದೊಡೆ ಅಮೃತಾ ಮಾನದಾ ಪೂಷಾ ತುಷ್ಟಿ ಪುಷ್ಟಿ ರತಿ ಧೃತಿಶಶಿನಿ ಚಂದ್ರಿಕಾ ಕಾಂತಿ ಜ್ಯೋತ್ಸ್ನಾ ಶ್ರೀ ಅಂಗದಾ ಪೂರ್ಣಾ ಪೂರ್ಣಾಮೃತಾ ಕಾಮದಾಯಿನಿಯೆಂಬ ಷೋಡಶಕಲೆಗಳಿಂ ಭರಿತನಾಗಿ ಧವಳವರ್ಣ ಶರೀರದಿಂ ... ರಂಜಿಸುತ್ತಿರ್ಪಂ (ಏವೇಕ. ೨೬೬). [ಸಂ.]

ಪುಷ್ಟಿಕರ (ಗು). ೧. ಶಕ್ತಿದಾಯಕವಾದ; ಪೋಷಕವಾದ. (ನಾ). ೨. ಶಕ್ತಿದಾಯಕವಾದುದು: ನಮ್ಮದು ಮೊದಲೇ ಪುಷ್ಟಿಕರವಾದ ಆಹಾರಾಂಶಗಳೆಲ್ಲಾ ಇಲ್ಲದಿರುವ ಜನಾಂಗ (ಕರಕ. ೬೩). [ಸಂ.]

ಪುಷ್ಟಿಕಾರಕ (ಗು). ಶಕ್ತಿಯನ್ನೊದಗಿಸುವ; ಪೋಷಣೆಯನ್ನುಂಟುಮಾಡುವ; ಸತ್ತ್ವಯುಕ್ತವಾದ: ಅಪು ತಿಂಬುವವರಿಗೆ ಹಾಲು ತುಪ್ಪ ಮುಂತಾದ ಪುಷ್ಟಿಕಾರಕ ಪದಾರ್ಥಗಳು ... ಇಲ್ಲದೆ ಹೋದರೆ ... ಬೈ ಬಣಗಿ ಹೋಗುವದು (ಮುಂಬಯಿ. ೪-೧೦). [ಸಂ.]

ಪುಷ್ಟಿಕಾರಿ (ನಾ). =ಪುಷ್ಟಿಕರ ೨: ಆತ್ಮಗುಪ್ತಾ ... ಮರ್ಕಟೀ—ನಸಗುನ್ನೀಗಿಡ, ಕಪಿತುರಚೀಗಿಡವೆಂದು ಕೆಲವರನ್ನುವರು, ಇದರ ಬೀಜ ಪುಷ್ಟಿಕಾರಿ (ಸಿದ್ಧಾಂತಿ. ೦೩೨) [ಸಂ. ಪುಷ್ಟಿಕಾರಿನ್]

ಪುಷ್ಟಿಕೊಡು (ಕ್ರಿ). ೧. ಬೆಳೆಯಲು ಸಹಾಯ ಮಾಡು; ಬೆಳಸು. ೨. ಬೆಂಬಲಿಸು; ಸಮರ್ಥಿಸು; ಬಲಪಡಿಸು: ಆಂಗ್ಲರಾಜನೀತಿಜ್ಞರು ನಿರೂಪಿಸಿದ ವಿದ್ಯಾಭ್ಯಾಸವಿನ್ಯಾಸ ಇವೆರಡಕ್ಕೂ ಪುಷ್ಟಿ ಕೊಟ್ಟಿತು (ಶುಕ್ಲಾರ. ೦೦೯ ಬೆಂಕಿ); ಆ ಶಂಕೆಗೆ ಪುಷ್ಟಿ ಕೊಡಲು ಯಶೋದೆಯ ವರ್ತನೆಯೂ ಬಹುಮಟ್ಟಿಗೆ ಕಾರಣವಾಯಿತು (ವಾತ್ಸಲ್ಯ. ೨೪೦). [ಪುಷ್ಟಿ+ಕೊಡು$_1$]

ಪುಷ್ಟಿಗೊಳಿಸು (ಕ್ರಿ). =ಪುಷ್ಟಿಕೊಡು ೨: ಕೆಂಪುದೇವಯ್ಯನು ರಾಜಮರ್ಯಾದೆಯೊಡನೆ ಅರಮನೆಗೆ ಹೋಗುತ್ತಿದ್ದುದೂ ಆ ವಾರ್ತೆಯನ್ನು ಪುಷ್ಟಿಗೊಳಿಸಿದುವು (ಪದೇವ. ೩೭). [ಪುಷ್ಟಿ+ಕೊಳ್$_1$+—ಇಸು$_3$]

ಪುಷ್ಟಿಮಾರ್ಗ (ನಾ). ಪರಮಾತ್ಮನ ಅನುಗ್ರಹಸಂಪಾದನೆಯೇ ಮುಖ್ಯವೆಂದು ಪ್ರತಿಪಾದಿಸುವ ವೈಷ್ಣವಮತ; ವಲ್ಲಭಾಚಾರ್ಯರು ಸ್ಥಾಪಿಸಿದ ಮತ: ಈಶ್ವರಾನುಗ್ರಹ ಸಂಪಾದಿಸಬೇಕಾದರೆ ಜೀವಿ ... ಸರ್ವಸ್ವವನ್ನೂ ಅವನಿಗೆ ಅರ್ಪಿಸಬೇಕು. ಆಗ ಅವನು ಜೀವಿಯ ವಶವಾಗುತ್ತಾನೆ. ಇದಕ್ಕೆ ಅನುಗ್ರಹ, ಪುಷ್ಟಿ, ಪೋಷಣ ಎಂದು ಹೆಸರು. ವಲ್ಲಭಾಚಾರ್ಯರ ಮತವನ್ನು ಶುದ್ಧಾದ್ವೈತವೆಂದೂ ಪುಷ್ಟಿಮಾರ್ಗವೆಂದೂ ಕರೆಯುತ್ತಾರೆ (ಭಾರತ. ೨೯೯). [ಸಂ.]

ಪುಷ್ಟೀಕರಿಸು (ಕ್ರಿ). ಬಲಪಡಿಸು; ಬೆಂಬಲಿಸು; ಸಮರ್ಥಿಸು: ನಾನು ಅವರ ಅಭಿಪ್ರಾಯವನ್ನು ಪುಷ್ಟೀಕರಿಸಿದೆ (ಪಂಗಾಳ್ಳ. ೩೯೬); ಕ್ಯಾಂಬೆಲ್‌ನು ... ಸಸ್ಯಗಳ ಬಗ್ಗೆ ನಡೆಸಿದ ಸಂಶೋಧನೆಗಳಿಂದ, ತನ್ನ ಹೊಸ ತತ್ವಗಳನ್ನು ಪುಷ್ಟೀಕರಿಸಿದನು (ಸಸ್ಯಕ. ೩೩). [ಪುಷ್ಟೀಕರಣ$_0$+—ಇಸು$_3$]

ಪುಷ್ಪ (ನಾ). ೧. ಹೂವು; ಕುಸುಮ: "ಪ್ರಸವಂ ಪ್ರಸೂನಕಂ ಸುಮನಸಂ ಪುಷ್ಪಮೆನೆ ಕುಸುಮವವು" (ಪಂಗಾಳ. ೩೨-೫); ಲಳಿತವಿಚಿತ್ರಪತ್ರಫಲಪುಷ್ಪಯುಂತಾಟವಿ ಸೊರ್ಕಿದಾನೆಯಂ ಬೆಳೆವುದು (ಪಂಪಭಾ. ೦-೩೯); ಭೂಜಾಳಿ ... ಪತ್ರಪುಷ್ಪಫಲಭಾರಾಕ್ರಾಂತಮಾಗಿರ್ದುವು (ಜಗಪ. ೩-೬೬); ಪರಿಪರಿಯ ಪುಷ್ಪಮಂ ಸಿರಿಮುಡಿಯೊಳಗೆ ಸೂಡಿ (ಸಂಬರ. ೩-೩೬). ೨. ಮುಟ್ಟು; ಋತುಸ್ರಾವ: ಪುಷ್ಪ ನಷ್ಟವಾದರೆ—ಎಕ್ಕೆಯ ಹಾಲು ಹನಿಸಿ ಬೆಲ್ಲವ ಬೆರಸಿ ಮೆದ್ದು ಮಧುರಾಹಾರವನುಣ್ಣೆ ೭ ದಿನಕ್ಕೆ ಮುಟ್ಟುಗಾಂಬರು (ಏನ್ಯಪ. ೯೦). ೩. ಒಂದು ಬಗೆಯ ಕಣ್ಣಿನ ರೋಗ. ೪. ಒಂದು ಬಗೆಯ ನೇತ್ರಾಂಜನ,—ಕಣ್ಣಿಗೆ ಲೇಪಿಸುವ ಕಾಡಿಗೆ:

"ಪುಷ್ಪಾಂಜನಂ—ಪುಷ್ಪ" (ಲಿಕಧಿ. ೦೦೦). 'ಕುಸುಮಾಂಜನ' ಪರಾ. ೫. ಕುದುರೆಯ ಮೈಮೇಲೆ ಇರುವ ಒಂದು ಬಗೆಯ ಚಿಹ್ನೆ : ತುರಗದ ಮೆಯ್ಯೊಳ್ ಪುಷ್ಪಂ ಕರಿದಾದಂದಶುಭಮಾವ ಬಣ್ಣದೊಳಂ ಪಾಂಡರಮಾದೊಡೆ ಶುಭಮದನಾದರಿಪುದು ಪರಿಹರಿಪುದಸಿತಪುಷ್ಪಾದಿಗಳಂ (ಅಶ್ವಶಾ. ೩-೦೨). ೬. ಒಂದು ಬಗೆಯ ನಾಣ್ಯ : ಪಂಚಪುಷ್ಪಾಣಿ ದೇಯಾನಿ ವಿವಾಹೇ ಸತಿ ತಜ್ಜನ್ಯೈಃ (ಎಇ. IV, ೬೦-೬೯; 945). ೭. ಒಂದು ಬಗೆಯ ರತ್ನ ; ಪುಷ್ಪರಾಗ.

ಪುಷ್ಪದಂಬಿನ ಚೆಲುವ = ೧. ಮನ್ಮಥ. ೨. ಮನ್ಮಥನಂತೆ ಸುಂದರನಾದವನು : ಕೇಶವ ಪುಷ್ಪದಂಬಿನ ಚೆಲುವ ಸರ್ವಜ್ಞನೆಸೆದಿರ್ದ (ಪಶಾಗ. ೦೦-೦೩-೩). [ಸಂ.]

ಪುಷ್ಪಂಗತಿ (ನಾ). ಔನ್ನತ್ಯ ; ಊರ್ಧ್ವಮುಖತ್ವ: 'ಪುಷ್ಪಂಗತಿವೆಱು' ಪರಾ. [ಸಂ.]

ಪುಷ್ಪಂಗತಿವೆಱು (ಕ್ರಿ). ಉನ್ನತವಾಗಿರು; ಊರ್ಧ್ವಮುಖವಾಗಿರು : ಲಿಂಗದ ಭಕ್ತನಾಗಿ ಪೊಸಬೋನಮನರ್ಪಿಸಿಯೊಕ್ಕುದುಂಡು ಪುಷ್ಪಂಗತಿ ವೆತ್ತು ಬಾಳ್ವುದರಿದಲ್ಲೆನುತಂ ಘನಭಕ್ತಿಭಾವದಿಂ . . . ಅಮರನೀತಿಗಳ ಚರ್ಚಿಸುತಿರ್ಪರಾವಗಂ (ಶ್ರೀಪಾ. ೯-೮). [ಪುಷ್ಪಂಗತಿ + ವೆಱು$_1$]

ಪುಷ್ಪಕ (ನಾ). ೧. ಹೂವು ; ಕುಸುಮ : 'ಹೇಮಪುಷ್ಪಕ' ಪರಾ. ೨. ಒಂದು ಬಗೆಯ ಕಣ್ಣಿನ ರೋಗ. ೩. ಒಂದು ಬಗೆಯ ನೇತ್ರಾಂಜನ. ೪. ಹಿತ್ತಾಳೆ. ೫. ಮಣಿ; ರತ್ನ. ೬. ಬಿಸಿಲು. ೭. (ಕರಿಯಲಂ ಬಳಸುವ) ಬಾಣಲೆ. ೮. ಬಾಣಂತಿ. ೯. ಕೈಬಳೆ ; ಕಂಕಣ. ೧೦. ಕುಬೇರನ ಒಳಿಯಲ್ಲಿದ್ದು, ಅವನಿಂದ ರಾವಣನಿಗೆ ವಶವಾಗಿದ್ದ ಸ್ವಯಂಚಾಲನಶಕ್ತಿಯುಳ್ಳ ವಿಮಾನ : "ಚೈತ್ರರಥಮೆಂಬುದು ಕುಬೇರನ ಬನಂ ಪುಷ್ಪಕಮೆಂಬುದಾತನ ವಿಮಾನಂ" (ಹಲಾಯು. ೦೩-೫೩); ರಕ್ಕಸರಾಯ ಪುಷ್ಪಕವೇಱಿ ನಭದಲಿ ನೋಡಲೈತಂದ (ಗೌಶಿಗಾ. ೦೭-೦೯); ತರಿಸಿ ಧನಪನ ಪುಷ್ಪಕವ ಮುಂದಿರಿಸಿ ಬಿಜಯಂಗೈವುದೆಂದನು ನರಪತಿಗೆ ಕೈಮುಗಿದು ಲಂಕಾನಾಥನೊಲವಿನಲಿ (ಶಿಂಶಿಗಾ. ೬-೩೯-೩). ೧೧. ಆಕಾಶದಲ್ಲಿ ಉಡ್ಡಾಣ ಮಾಡುವ ದೇವವಿಮಾನ ; ಕಾಯವೀಗದೆ ಪುಷ್ಪಕವ ಕಂಡ ನಮ್ಮ ಬಸವಯ್ಯನು (ಶಿಲಿಪ.ಶ. ೦೯-೩೬) ; ಆ ಸಮಯದೊಳ್ಗಂಡ ಹೆಂಡತಿಗೆ ತನಯಂಗೆ ಭಾಸುರದ ಪುಷ್ಪಕಂಗಳ್ ಬಂದುವು (ಇಳಿ. ಚಿ. ೩೬-೨); ನೋಡುತಿರೆ ಪುಷ್ಪಕಮೋರ್ದುದಂಬರಕೆ ಜನತೆಯುತ್ಕಂಠೆಯಲಿ ! (ಕಪ್ಪಾಂಗ. ೯೦-೨೯೦). ೧೨. ಹೂವುಗಳಿಂದ ಅಲಂಕರಿಸಿದ ರಥ: ಪುಷ್ಪರಥ : "ಅನೇಕವಿಧಕೇಳೀವಿಳಸನಹೇತು[ಪುಷ್ಪ]ಕಂ ಪುಷ್ಪರಥಂ" (ಪಸ್ತುಕೋ ೫೬-೨೬). ೧೩. ಕುಬೇರ. ೧೪. ಕುಲಪರ್ವತಗಳಲ್ಲಿ ಒಂದು : ಸುಗಂಧಿ ಶಿಖಿ ತ್ರಿಶೃಂಗಿ ಪುಷ್ಪಕ ಸುಪಕ್ಷ ಕಂಕಶೈಲ ವೈಡೂರ್ಯ ಕಪಿಲ ಭದ್ರ ಕುಮುದ ಮಧುಮಾನ್ ಅಂಜನ ಮಕುಟ ಪಾಂಡುರ ಸಹಸ್ರಶಿಖರಿ ಪಾರಿಜಾತಮೆಂಬ ಹದಿನಾಱು ಕುಲಾಚಲಂಗಳೇ ಪೂರ್ವೋತ್ತರವಿಪುಳವೆಂಬ ಕೀಲಕಪರ್ವತಕ್ಕೆ ಪಶ್ಚಿಮದಿಕ್ಕಿನಲ್ಲಿಹವು (ಪಶಿಕೇ ೨೦೩). ೧೫. ಅರಮನೆಯ ಒಂದು ಭಾಗ : ಪರಿಮಳದ ಪೂರಾಯವೆಸುವ ಹಿರಿಯ ಪುಷ್ಪಕದೊಳಗೆ ಹೊಕ್ಕನು ಧರಣಿಜಾತೆಯನಱಸುತಿರೆ ಹನುಮಂತ (ಗೌಶಿಗಾ. ೦೦-೯೦). "ಹಿತ್ತಾಳೆಯೊಳು ನಯನರೋಗದೊಳು ಬಾಣಲೆಯೊಳು ಕುಬೇರನೊಳು ರತ್ನದೊಳು ಕಂಕಣದೊಳು ಅಯನದ ವಿಮಾನದೊಳು ಪುಷ್ಪಕಮೆನಿಕ್ಕುಂ" (ಶುಂಗಭಾ. ೧೩೨-೬೩); "ರೀತಿಕೆಯಕ್ಷಿರೋಗ ಧನದಂ ಮಣಿ ಸೂತಕಿ ಕಂಕಣಂ ವಿಮಾನಾತಪಯಂಬರೀಷಕುಸುಮಾಂಗಳು ಪುಷ್ಪಕಮಕ್ಕುಂ" (ಶಾಖಾಕ. ೦೨೯). [ಸಂ.]

ಪುಷ್ಪಕರಂಡ (ನಾ). ೧. ಹೂವಿನ ಪಾತ್ರೆ; ಹೂವನ್ನಿಡುವ ಬುಟ್ಟಿ. ೨. ಅಲಂಕಾರಕ್ಕಾಗಿ ಮೇಜುಗಳ ಮೇಲೆ ಜೋಡಿಸಿ ಇಡುವ ಹೂದಾನಿ; ಪುಷ್ಪಪಾತ್ರೆ : ಪುಷ್ಪಕರಂಡದಲ್ಲಿ ಜೋಡಿಸಿಟ್ಟ ಗುಲಾಬಿಗಳಿಂದುಂಟಾಗುವ ಅನುಭವ ನಿಜಕ್ಕೂ ಬೇರೆಯಾಗಿರುತ್ತದೆ (ಶ್ರೀಕೃಷ್ಣ. ೦೦). [ಸಂ.]

ಪುಷ್ಪಕವಿಮಾನ (ನಾ). ೧. ರಾವಣನ ವಶಕ್ಕೆ ಬಂದ ಕುಬೇರನ ವಿಮಾನ : ಪುಷ್ಪಕವಿಮಾನದ ರತ್ನವಿಚಿತ್ರಪುತ್ರಿಕಾಸಂಕುಲಮಟ್ಟೊಡಟ್ಟುವು ಬೆಮರ್ತೊಡೆ ಕೂಡೆ ಬೆಮರ್ತುವು (ಕಂಗಾಪ. ೯-೦೦೯) ; ರಾವಣನು ಅವನ ಪುಷ್ಪಕವಿಮಾನವನ್ನು ಅಪಹರಿಸಿದನು (ಪಶಗಾ. ೯೦೯). ೨. ಇಂದ್ರನ ವಿಮಾನ : ವ್ಯಾವರ್ಣಸಲ್ ಬಲ್ಲನೇ ಮಹಿಯೊಳ್ ಮಾನವನೊಂದೆ ನಾಲಗೆಯೊಳಂತಾ ಭೂಭುಜಾಗಾರಮಂ ಬಹುವಿಸ್ತಾರಮನಿಂದ್ರಪುಷ್ಪಕ ವಿಮಾನಾಕಾರಮಂ (ಜಿಸಂ. ೨-೩೬). [ಸಂ.]

ಪುಷ್ಪಕಳಂಬ (ನಾ). ೧. ಹೂವಿನ ಬಾಣ. ೨. ಹೂವಿನ ಬಾಣಗಳನ್ನುಳ್ಳವನು ; ಮನ್ಮಥ : ಜೇವಣಶಾಲೆ ತುಂಬಿಗಳ ಪುಷ್ಪಕಳಂಬನ ಶಸ್ಯಶಾಲೆ . . . ಮಧುಭೂಭುಜನೋಲಗಶಾಲೆ ಮಾಮರಂ (ಶಾಪಂ. ೯-೩೩). [ಸಂ. ಪುಷ್ಪಕಲಂಬ]

ಪುಷ್ಪಕಾಸೀಸ (ನಾ). ೧. ಕಣ್ಣಿನ ದೋಷವನ್ನು ಪರಿಹರಿಸುವ ಒಂದು ಬಗೆಯ ಔಷಧದ್ರವ್ಯ,—ನೇತ್ರಾಂಜನ ; ಹಳದಿಬಣ್ಣದ ಕಾಸೀಸ "ವಿಸದಂ—ಪುಷ್ಪಕಾಸೀಸ" (ಲಿಕಧಿ. ೦೩೩). ೨. ಒಂದು ಬಗೆಯ ಔಷಧೀಸಸ್ಯ: ಪುಷ್ಪಕಾಸೀಸ ಸಸ್ಯ . . . ಈ ಗಿಡವು ಜವುಗುಪ್ರದೇಶದಲ್ಲಿ ಬೆಳೆಯುತ್ತದೆ (ಸಸ್ಯಶಾ. ೯೬). [ಸಂ.]

ಪುಷ್ಪಕೇತು (ನಾ). ೧. = ಪುಷ್ಪಾಂಜನ : "ರೀತಿಪುಷ್ಪಂ, ಪುಷ್ಪಕೇತುಃ, ಪೌಷ್ಪಕಂ, ಕುಸುಮಾಂಜನಂ—೪ ಕುಸುಮಾಂಜನದ ಹೆಸರು" (ಸಿಚಿಂಶಿ. ೩೦೩). ೨. ಹಿತ್ತಾಳೆಯ ಭಸ್ಮ. ೩. ಕಾಮ ; ಮನ್ಮಥ. [ಸಂ.]

ಪುಷ್ಪಗಣೆಯ (ನಾ). ಹೂವಿನ ಬಾಣಗಳನ್ನುಳ್ಳವನು ; ಮನ್ಮಥ : ತ್ರಿಣಯನುರಿ ಹಣಿಗಿಚ್ಚಿನಿಂದ ಬೆಂದನಾ ಪುಷ್ಪಗಣೆಯಂಗೆ ಮೊಂದೆ ನಿಮಿಷಂ ದುಃಖ ಯೊ ರತಿವನಿತೆಯಳಿಗಾವರಿಸಿದತುಳದುಃಖಾನಲನು ಕೊಲ್ಲದೆ ಜೀವದೊಡನೆ (ಪಪಚೂ. ೬-೩೩). [ಪುಷ್ಪ + ಕಣೆ$_1$ + — ಅ$_7$]

ಪುಷ್ಪಚಾಪ (ನಾ). ೧. ಹೂವಿನ ಬಿಲ್ಲು : ಅತಿಮೃದುಪುಷ್ಪಚಾಪದಳಿನೀ ಗುಣಟಂಕೃತಿರಾವಮಾಗಮಾಮೃತಪರಿಪೂರ್ಣಕರ್ಣಯುಗನಂ ಸಲೆ ಕೇಳಿಸದು (ಕಂಪ್ರಪು. ೦-೨೬). ೨. ಮನ್ಮಥ ; ಕಾಮ : ಪೊಸತಂ ಸ್ತ್ರೀರಾಜ್ಯಮಂ ಮೇಣ್ ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ ಪೊಸತೀಗಳ್ ಬಂದು ಬೆಳ್ಗಂಗೆದುದೊ ಗಣಿಕಾಸೃಷ್ಟಿಯಾಂ ಪುಷ್ಪಚಾಪಂ ಪೊಸತಂ ಮಾಡಿಟ್ಟನೋ (ಅರಿಪ. ೦-೦೨); ಅದೇಂ ಮಾಡಿದನೊ ವಿರಹ ಸಂತಾಪಮಂ ಪುಷ್ಪಚಾಪಂ (ಶಾಪಂಪು. ೦೩೬). [ಸಂ.]

ಪುಷ್ಪಣಂದಿ (ನಾ). ಒಬ್ಬ ಜೈನಯಂತಿಯ ಹೆಸರು : ಶ್ರೀ ಪುಷ್ಪಣನ್ದಿ ನಿಸಿಧಿಗೆ (ಎಇ. II (R), ೯೩; ೩೫೮ ೫೫). [ಪುಷ್ಪ + < ನಂದಿ]

ಪುಷ್ಪದಂತ (ನಾ). ೧. ಶಿವನ ಪರಿಚಾರಕರಲ್ಲಿ ಒಬ್ಬ. ೨. ಅಷ್ಟದಿಗ್ಗಜಗಳಲ್ಲಿ ಒಂದು ; ವಾಯವ್ಯದಿಕ್ಕಿನ ಆನೆ : "ಐರಾವತಃ . . . ಪುಷ್ಪದಂತಃ, ಸಾರ್ವಭೌಮಃ, ಸುಪ್ರತೀಕಃ—ಈ ೮ ಮೂಡಣಂ ಕ್ರಮದಿನಿರ್ದ ದೆಸೆಯಾನೆಗಳ್" (ಹಲಾಯು. ೦೯-೦೦೯) ; ಬೆದಱುದುದಧ್ರ ಮೂರಮಾಣಂ . . . ದಿವಿರ್ದುದು ಪುಷ್ಪದಂತಮತಿವಿಹ್ವಲಮಾದುದು ಸಾರ್ವಭೌಮಂದದಿರ್ದುದು ಸುಪ್ರತೀಕಮಿರದಾಲಿಸಿ ತತ್ಪಟಹಪ್ರಣಾದಮಂ (ಪುಷ್ಪಪು. ೩-೬). ೩. ಸೂರ್ಯ ಮತ್ತು ಚಂದ್ರರಿಬ್ಬರಿಗೂ ಒಟ್ಟಾಗಿ ಇರುವ ಹೆಸರು : "ಚಂದ್ರ ಸೂರ್ಯರ್ಕಳನೊಂದಾಗಿ ಪೇಟ್ಟೊಡೆ ಪುಷ್ಪದಂತರೆಂಬುದು" (ಹಲಾಯು. ೨೦-೦೨೦). ೪. [ಜೈನ] ವರ್ತಮಾನ ಕಾಲದ ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಒಂಬತ್ತನೆಯವನು : ಅನಶ್ವರಸುಖಧಾಮಮನೆಮಗೀಗೆ ಪುಷ್ಪದಂತಜಿನೇಂದ್ರಂ (ಶಾಪಂಪು.

೦೨೬); ವರಪುಷ್ಪದಂತಜಿನಪತಿ ಪರಮಶ್ರೀಮುಕ್ತಿಲಕ್ಷ್ಮಿಯಂ ಕೆಯ್ಕೊಂಡಂ (ಪುಷ್ಪಸ್ರ. ೦೯-೫೩). [ಸಂ.]

ಪುಷ್ಪದರ್ಶನ (ನಾ). ೧. ಹೂವನ್ನು ನೋಡುವಿಕೆ. ೨. ಮುಟ್ಟಾಗುವಿಕೆ ; ರಜಸ್ವಲೆಯಾಗುವಿಕೆ : ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದಿಕ್ಷುಪುಷ್ಪದವೊಲೆನ್ನಯ ನಿಷ್ಫಲಪುಷ್ಪದರ್ಶನಂ (ಶಂಕರಾ. ೦-೦೦೬). ೧, ೨ : ಪುಷ್ಪದರ್ಶನದಿಂ ಕೆಯ್ಮಾಸಿದನೆಂಬುದೀಕೆಗೆ ಪಾಱಯೆ ವಲಮೆಂದು ವಕ್ರೋಕ್ತಿಯಂ ನುಡಿದು (ಶಾಂತಿಪು. ೯-೬೨ ಪ). [ಸಂ.]

ಪುಷ್ಪದಾಮ (ನಾ). ಹೂವಿನ ಸರ ; ಹೂಮಾಲೆ: ರತ್ನಾಭರಣತೋರಣ ಘಂಟಾಜಾಲಮುಕ್ತಾಲಂಬನಪುಷ್ಪದಾಮಾಷ್ಟಮಂಗಲನವನಿಧಿಪ್ರಧಾನಂಗಳುಂ (ಅಜಿಪು. ೦೦-೩೨ ಪ) ; ಲಲನೆಯರ್ಗಂಗರಾಗಮುದು ದುರ್ವಹಮಾಂಶುಕ ಭಾರವಂಗಸುಚಲತೆಗೆ ಕಾರಣಾ ಕುಸುಮಮಾಲಿಕೆಯುಂ ಪೊಱ ಪುಷ್ಪ ದಾಮಮೇಖಲೆ ನಡೆಗಡ್ಡಿ . . . ಎಂದೊಡಱಯೆಂ ಪೊಗಟರ್ ಸುಕುಮಾರವೃತ್ತಿಯಂ (ಶಾಂಪು. ೦೦೦೩) ; ಧರಣಿಸುತ ನವಪುಷ್ಪದಾಮವ ಹರಿಯ ಕಂಠದಲಿಕ್ಕೆ ಮಂಗಳಮಹಿಮನೊಪ್ಪಿದನು (ಗೌತಿಗಾ. ೨-೪೯). [ಸಂ. ಪುಷ್ಪದಾಮನ್]

ಪುಷ್ಪಧನು (ನಾ). (ಮನ್ಮಥನ) ಹೂವಿನ ಬಿಲ್ಲು : ರತಿಯಾರ್ತದಿಂದತನು ಪುಷ್ಪಧನುವಂ ಕೊಂಡು ಪತಿಯನಲ್ಲಡಸಿ ಮನದೊಳಗಸಲು ಪೂಗೊಂಡು (ಕರುಗ. ರೇ. ೬-೨೦). [ಸಂ. ಪುಷ್ಪಧನುಸ್]

ಪುಷ್ಪಧನ್ವ (ನಾ). = ಪುಷ್ಪಚಾಪ ೨ : "ಪ್ರದ್ಯುಮ್ನಃ . . . ಪುಷ್ಪ ಧನ್ವಾ, ಮನೋಭವಃ— ಈ ೨೮ ಕಾಮ(ದೇವ)ನ ಪೆಸರ್" (ಹಲಾಯು. ೬-೩೯); ಪುಷ್ಪಧನ್ವನ ಕೃತಪುಣ್ಯಪುಂಜಮೆನೆ ಕಣ್ಗೆಸೆದಿರ್ದುದು ಚಂದ್ರ ಮಂಡಲಂ (ಸೂಕ್ತಿಸು. ೯-೨೩೦). [ಸಂ. ಪುಷ್ಪಧನ್ವನ್]

ಪುಷ್ಪಪುಟ (ನಾ). ೧. ಹೂವಿನ ಕೋಶ. ೨. [ನಾಟ್ಯ] ಹದಿಮೂರು ಬಗೆಯ ಸಂಯುತಹಸ್ತಗಳಲ್ಲಿ ಒಂದು ; ಅರಳಿದ ಹೂವಿನಾಕಾರ ವಾಗುವಂತೆ ಎರಡಂ ಅಂಗೈಗಳನ್ನೂ ಜೋಡಿಸಿ ಹಿಡಿಯುವುದು : ಮಿಗೆ ಕೈಗಳಂ ಕುಚದಲ್ಲಿ ಪುಷ್ಪಪುಟದಂತಿರಿಸಿ (ಶಾಸ್ತ್ರಂ. ೯-೯೩), ಪುಷ್ಪಪುಟಹಸ್ತದಿಂ ಪುಷ್ಪಾಂಜಲಿಯುಂ ಕೆದರ್ದು (ರಾಜಶೇ. ೩-೦೯೫). [ಸಂ.]

ಪುಷ್ಪಫಲ (ನಾ). ಬೇಲದ ಮರ ; ಕಪಿತ್ಥವೃಕ್ಷ : "ಕಪಿತ್ಥಃ . . . ಪುಷ್ಪಫಲಃ, ದಂತಶಠಃ— ೭ ಬ್ಯಾಲದ ಮರಕ್ಕೆ ಪೆಸರುಗಳು" (ನಿಘಂಟು. ೦೦೬). [ಸಂ.]

ಪುಷ್ಪಬಾಣ (ನಾ). ೧. (ಮನ್ಮಥನ) ಹೂವಿನ ಬಾಣ : ಸುಗ್ಗಿ ಬರ್ಪುದನೇ ನಂದನಕಾನೆ ಮುಂದುದೆಗೆದೆಂ ಪುಷ್ಪೇಷುಗಂ ಪುಷ್ಪಬಾಣದ ಮುಂಗಾಣಿಕೆಗೊಟ್ಟೆಂ (ಪಂಪ. ೦೯-೬೩); ಮದನಂ ಪುಷ್ಪಬಾಣಂಗಳಂ ಹೂಡಿದ ಬಿಲ್ಲಂ ಪೊತ್ತು ಪಿಂದಂ ಬರೆ (ಗಿರಿಕ. ೯-೯೬). ೨. ಹೂವಿನ ಬಾಣಗಳನ್ನುಳ್ಳವನು ; ಮನ್ಮಥ ; ಕಾಮ : ನಲ್ಲಂಬಿಂದಿಸೆ ಪುಷ್ಪ ಬಾಣನೆರ್ದೆಯಂ (ಕಾವ್ಯಸಾ. ೫೫೦ ಕೂರ್ಮ). [ಸಂ.]

ಪುಷ್ಪಮಂಜರಿ (ನಾ). ೧. ಹೂವುಗಳ ಗೊಂಚಲು ; ಪುಷ್ಪಗುಚ್ಛ : ಪುಷ್ಪಮಂಜರಿಯಂ ತನ್ಮುನಿಕರ್ಣಪೂರಕಮನಸ್ತ್ಯಾಶ್ಚರ್ಯದಿಂ ನೋಡಿದೆಂ (ಶಾಕುಂಪು. ೬೯೦); ಅಮರಸ್ತ್ರೀನಿಚಯಂ ವಿಚಿತ್ರಲತೆಯಂ ಧತ್ರಾಳಿ ಭೂಜಂ ಗಳಂ ಚಮರೀಜಾವಳಿ ಪುಷ್ಪಮಂಜರಿಯಂ . . . ಪೋಲೆ ವಿಭ್ರಮದಿಂ ಬಂದನದೊಂದು ನಂದನವನಂ ಬರ್ಪಂತೆ ಸಂಕ್ರಂದನಂ (ಪುಷ್ಪಸ್ರ. ೦೯-೯೫); ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾಕ್ಷಣಮೆ ತಳ್ತಡರ್ದಾ ಕಿರಾತನ ಮಂಡೆಯಲಿರೆ (ಕಂಪಂ. ೯-೦೦೮). ೨. ಒಂದು ಬಗೆಯ ಭತ್ತ,—ನೆಲ್ಲು : ಸೋಮಶಾಲಿಯು ಬಿಳುಮಲ್ಲಿಗೆ ಕೆಂಬೂತಿ ಹೇಮವರ್ಣದ ಕೊನೆವಾಳೆ ರಾಮಣೇಯಕವಾದ ಪುಷ್ಪಮಂಜರಿಯು ಸನಾಮದ ತೆನೆಗಳೊಪ್ಪಿಹುವು (ಕಂಪಂ. ೩-೬೯). [ಸಂ. ಪುಷ್ಪಮಂಜರೀ]

ಪುಷ್ಪಮಂಟಪ (ನಾ). ಹೂವುಗಳಿಂದ ಅಲಂಕರಿಸಿದ ಮಂಡಪ : ಆ ವನಂಗಳಲ್ಲಿ ಚಿತ್ರಶಾಲೆ ಚಂದ್ರಶಾಲೆ ಶಿಶಿರಶಾಲೆ ಸುರಭಿಶಾಲೆಗಳಲ್ಲಿ ಪುಷ್ಪ[ಶಾಕಾಂ. ಲತಾ]ಮಂಟಪ . . . ತರುವಾಟಗಳ ಶಣ್ಮೆಳಲ್ಗಳೊಳಗೆಯುಂ (ಪಿಸಳ. ೨೦೩); ಒಂದು ಪುಷ್ಪಮಂಟಪವನ್ನು ಕಟ್ಟಿ ಅದರಲ್ಲಿ ಭಗವಾನ್ ವಿಶ್ವಾಮಿತ್ರರನ್ನು ಕುಳ್ಳಿರಿಸಿ ನಾವೆಲ್ಲರೂ ಆ ರಥವನ್ನು ಎಳೆದುಕೊಂಡು ಹೋಗಬೇಕು (ಪುಹಾಶಾ. ೩೦೦). [< ಸಂ. ಪುಷ್ಪಮಂಡಪ]

ಪುಷ್ಪಮಾರ್ಗಣ (ನಾ). ೧. ಹೂವಿನ ಬಾಣ. ೨. ಹೂವಿನ ಬಾಣಗಳ ನ್ನುಳ್ಳವನು; ಮನ್ಮಥ : ಮಣಿಯನೆ ಕಾತ ಕಲ್ಪಲತೆ ಸಿಂಜಿನಿಯಂ ತೆಗೆದಿಟ್ಟ ಪುಷ್ಪಮಾರ್ಗಣನ ಧನುಃಶಲಾಕೆ . . . ತಾನೆನಿಸುತ್ತೆ ತಾಳ್ದ ಸನ್ಮಣಿ ಪೊಲಿಲಚ್ಚಮುತ್ತು ಕನಕಾಂಬರದಿಂ ಕಮಳಾಕ್ಷಿ ತೋಱಿದಳ್ (ರಾಜಶೇ. ೦೦-೦೬). [ಸಂ.]

ಪುಷ್ಪಮಾಲೆ (ನಾ). ೧. ಹೂವಿನ ದಂಡೆ,—ಮಾಲೆ ; ಹೂವಿನ ಹಾರ : ಹತ್ತಿರ ನಿಂತಿದ್ದ ಮಾಚಿಕಬ್ಬೆ ಮಗಳ ಕೈಗೆ ಪುಷ್ಪಮಾಲೆಯನ್ನು ತೆಗೆದು ಕೊಟ್ಟರು (ಶಾಂತಿಶಾ. ೦೦೯). ೨. ಒಂದು ಬಗೆಯ ಭತ್ತ,—ನೆಲ್ಲು : ಕುಂದದ ಚಂದ್ರಲೇಪೆ ನಸುಗುಂದದೆ ರಂಜಿಪ ಪುಷ್ಪಮಾಲೆ ಕಂದೊಂದದ ಸೋಮಶಾಲೆ . . . ನಿರಂತರಮೊಪ್ಪುವ ಧರ್ಮಗುತ್ತಿಯೆಂಬಂದದನೇಕ ನಾಮವೆಸೆಗುಂ ಮೃದುಬಂಧುರ ಗಂಧಶಾಲಿಗಳ್ (ಪಾಲಾ. ೯-೬೮). [ಸಂ. ಪುಷ್ಪಮಾಲಾ]

ಪುಷ್ಪಮಾಸ (ನಾ). ಗಿಡಬಳ್ಳಿಗಳು ಹೂವು ಬಿಡುವ ಸಮಯಂ: ವಸಂತ ಕಾಲ ; ಚೈತ್ರಮಾಸ : ಪುಷ್ಪಮಾಸವು ಕಳೆಯೆ ಪುಷ್ಪವಿರಹಿತೆಯಾಗ ಭೂಷಣವ ಕಳೆದಿಟ್ಟ ಕಾಂತೆಯಂತಿಹಳು (ಧರ್ಮಾಭ್ಯು. ೬೭). [ಸಂ.]

ಪುಷ್ಪರಥ (ನಾ). (ಸಂತೋಷವಿಹಾರಕ್ಕಾಗಿ) ಹೂವುಗಳಿಂದ ಸಿಂಗರಿಸಿದ ಬಂಡಿ : "ವಿನೋದದ ರಥಮಂ ಪುಷ್ಪರಥಮೆಂಬುದು" (ಹಲಾಯು. ೬೬-೨೯೨); ಮರುದಿನ ಪುಷ್ಪರಥವು ಸಿದ್ಧವಾಯಿತು (ಪುಹಾಶಾ. ೩೦೨). [ಸಂ.]

ಪುಷ್ಪರಸ (ನಾ). ೧. ಹೂವಿನಲ್ಲಿರುವ ಸಾರವೆತ್ತಾದ ದ್ರವ; ಮಕರಂದ : "ಮಕರಂದಃ, ಪುಷ್ಪರಸಃ—೨ ಹುವ್ವಿನ ಜೇನು, ಹುವ್ವಿನ ಬಂಡು" (ನಿಘಂಟು. ೦೦೩). ೨. ಜೇನುತುಪ್ಪ : "ಸಾರಘಂ, ಮಾಕ್ಷಿಕಂ, ಕ್ಷೌದ್ರಂ, ಮಧು, ಪುಷ್ಪರಸಃ—ಈ ೫ ಜೇನ ತುಪ್ಪಂ" (ಹಲಾಯು. ೦೦೨-೯೬೬). [ಸಂ.]

ಪುಷ್ಪರಾಗ (ನಾ). ನವರತ್ನಗಳಲ್ಲಿ ಒಂದು ; ನಸುಹಳದಿಬಣ್ಣದ ಒಂದು ಬಗೆಯ ಹರಳು ; ಪುಷ್ಯರಾಗ : "ಪೀತಮಣಿಃ—ಪುಷ್ಪರಾಗ" (ಕಿಪಂ. ೯೯). [ಸಂ.]

ಪುಷ್ಪರಾಜ (ನಾ). ೧. = ಪುಷ್ಪರಾಗ. ೨. ಹೂವುಗಳ ಅರಸ; ವಸಂತ (?) : ಆ ಲಲಿತಕುಸುಮತತಿಯಾ ಬಾಲಕಪದಪದ್ಮಮೂಲಮಂ ಬಳಸಿದುವೊಡ್ಡೋಲಗಕೆ ಪುಷ್ಪರಾಜನನೋಲಗಿಸಲ್ ಬಂದ ಪುಷ್ಪನಿಚಯದ ತೆಱದಿಂ (ಶಾಂತಿಪು. ೦೦-೬೦). [ಸಂ. ಪುಷ್ಪರಾಜನ್]

ಪುಷ್ಪಲತೆ (ನಾ). ಹೂವಿನ ಬಳ್ಳಿ : ಕಾಮಚಾಪದಿಂ ಜನಿಯಿಸಿದಿಕ್ಷು ಚಂದ್ರನಮರ್ದಿಂ ಮಡುಗೊಂಡ ಕೊಳಂ ದಿವಂ ತವರ್ಮನೆ ತನಗೆಂಬ ಪುಷ್ಪಲತೆ ಕಲ್ಪಮಹೀಜದ ಬೀಜದುಳ್ಪಾಪಂ (ಪುಷ್ಪಸ್ರ. ೨-೩೬). [ಸಂ. ಪುಷ್ಪಲತಾ]

ಪುಷ್ಪಲಾವ (ನಾ). ಹೂವುಗಳನ್ನು ಆಯ್ದು ತರುವವನು: ಹೂಮಾಡಿಗ. [ಸಂ.]

ಪುಷ್ಪಲಾವಕ (ನಾ). = ಪುಷ್ಪಲಾವ : ಹರಿಯಂ ಕಾಣ್ಬುದುಮಾದುದು ಪರಮಜ್ಞಾತ ಪುಷ್ಪಲಾವಕಂಗಮಿದೇನಚ್ಚರಿ (ಪಂಗಾ. ೬-೦೯). [ಸಂ.]

ಪುಷ್ಪಲಾವಿ (ನಾ). ಹೂವಾಡಿಗಿತ್ತಿ ; ಹೂವಡಿತಿ : ಮಾಲೆವೂವಂ ನೆಗಪಿ ಸೊಗಯಿಕುಂ . . . ಪುಷ್ಪಲಾವೀಕದಂಬು (ಸಂರಾಮಾ. ೦-೦೨೦); ಮಾಲೆಗಳುಂ ತೋಳ್ಗಳುಮೊಪ್ಪೆ ಕಣ್ಗೊಳಿಸುತಿರ್ಕುಂ ಪುಷ್ಪಲಾವೀಜನಂ (ಜಗಿ. ೯-೦೦೩). [ಸಂ. ಪುಷ್ಪಲಾವೀ]

ಪುಷ್ಪಲಾವಿಕೆ (ನಾ). = ಪುಷ್ಪಲಾವಿ : ಮದನನ ಪರಿಚಾರಿಕೆಯರಂಬೆತ್ತುವಂತೆ ಪೂವನೆತ್ತುವ ಪುಷ್ಪಲಾವಿಕಾಚತುಷ್ಪಥದೊಳ್ (ಶಾಂತಿಪು. ೬-೬೨ ಪ). [ಸಂ. ಪುಷ್ಪಲಾವಿಕಾ]

ಪುಷ್ಪಲಿಹ (ನಾ). ದುಂಬಿ ; ಭ್ರಮರ : "ಅಳಿ ಚಂಚರೀಕಮಿಂದಿಂದಿರಂ ತುಂಬಿ ಪುಷ್ಪಲಿಹಂ . . . ಭ್ರಮರಮಕ್ಕುಂ" (ಪುಂಗರಾ. ೫೨-೦೦). [ಸಂ. ಪುಷ್ಪಲಿಹ್]

ಪುಷ್ಪವಂತ (ಗು). ೧. ಹೂವುಗಳುಳ್ಳ ; ಹೂವು ಬಿಡುವ : ಪುಷ್ಪವಂತ ಸಸ್ಯಗಳು . . . ಈ ಸಸ್ಯಗಳು ಹೂವುಗಳನ್ನು ಬಿಡುತ್ತವೆ(ಸಸ್ಯಶಾ. ೩). (ನಾ). ೨. ಹೂವುಗಳಿಂದ ಅಲಂಕಾರಮಾಡಿಕೊಂಡವನು. ೩. ಸೂರ್ಯ ಮತ್ತು ಚಂದ್ರರಿಬ್ಬರಿಗೂ ಕೂಡಿ ಇರುವ ಒಂದೇ ಹೆಸರು : ಅವನ ಮೆಯ್ವೊಗರಿಂ ಈ ಪುಷ್ಪವಂತರ್ಗೆ ಪೊಳೆಪೊದವಿದತ್ತೋ . . . ಆ ವನಜಾಕ್ಷನ ದಿವ್ಯಮೂರ್ತಿಯಂ ಕಣ್ ತಣಿಯೆ ಕಂಡು (ಅಧ್ಯಾತ. ೬-೦೬). [ಸಂ. ಪುಷ್ಪವತ್]

ಪುಷ್ಪವತಿ (ನಾ). ೧. ಮುಟ್ಟಾದವಳಂ ; ಋತುಮತಿ ; ರಜಸ್ವಲೆ : "ಅವೀಃ, ಉದಕ್ಯಾ, ರಜಸ್ವಲಾ, ಆತ್ರೇಯಿಕಾ, ಪುಷ್ಪವತೀ — ಈ ೫ ಮುಟ್ಟುವೆಗಂಡವಳ್" (ಹಲಾಯು. ೮೦-೩೩೯); ಒಂದು ದಿವಸಂ ದೇವಕೀ ದೇವಿ ಪುಷ್ಪವತಿಯಾಗಿ (ಜಗಿ. ೨-೫೯ ಪ); ನೀ ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರುರಾಯಭವನದಲಿ (ಕುಪ್ಯಾಸ. ೦೯ ೬೫). ೨. ಹೂವುಗಳನ್ನು ಉಳ್ಳ ಬಳ್ಳಿ; ಹೂವುಬಿಟ್ಟ ಬಳ್ಳಿ : "ಪುಷ್ಪವತೀ = ಹೂತ ಬಳ್ಳಿ" (ಕಾಶಕ್ಯ. ೦೬೩). ೧, ೨: ವರಾಂಗಿ ಲತೆಯಂತೆ ಪುಷ್ಪವತಿಯಾಗಿರ್ಕುಂ (ಲೋಕೋಪ. ೯-೦೬೯); ಸಲೆ ವಂಧ್ಯಾಲಯವಂತಿರೆ ಪಲಕಾಲಂ ಪುಷ್ಪವತಿಯೆನಾದಪೆನೆಂದುಂ ಫಲವತಿಯಾದಪೆನಿಲ್ಲೆಂದು ಲತಾಲಲಿತಾಂಗಿ ಬಾಡಿ ಪಾಡಟಿದೆಂಗುಂ (ಸುಕುಮಾ. ೯-೯೮); ವರಪುಷ್ಪವತಿಲತೆ ಬಾಗಿ ತಬ್ಬಿದಳೆಂದು ಮಿಂದೆದ್ದು ವಿಮಲವಾರಿಯನು ಮತ್ತೆ ಸೋಂಕುವಳೆಂದು ಅಂಜಿ ಮಾರುತನಿಂದು ಮೆಲ್ಲಮೆಲ್ಲನೆ ಬರುತಿಹನು (ಇಂಪಾಪ. ೯೭-೬೨). [ಸಂ. ಪುಷ್ಪವತೀ]

ಪುಷ್ಪವರ್ಷ (ನಾ). ಹೂವಿನ ಮಳೆ; ಪುಷ್ಪವೃಷ್ಟಿ : ಜಯನಿನದಂ ಸುರದುಂದುಭಿಚಯನಿನದಂ ಪುಷ್ಪವರ್ಷಮೊರ್ಮೆಯೆ . ಸಕಲೋರ್ವಿಯನೆಯ್ದೆ ಪರ್ವತಿರೆ ಚಿತ್ತೆಯ ಸರಿಯಂತೆಱಗಿ ಪೋದುದಮರಸಮಾಜಂ (ಅಪಿಪು. ೦೯-೦೯೭); ಕರಂ ಸೊಗಯಿಪನ್ನೆಗಮಾಗಳೆ ತೋಱಿ ತನ್ನ ರೂಪಂ ಕಱೆದಂ ಬಱಿಕ್ಕಳವಿದಪ್ಪಿದ ಹರ್ಷದೆ ಪುಷ್ಪವರ್ಷಮಂ (ಸಂಧ್ರಪು. ೫-೬೧). [ಸಂ.]

ಪುಷ್ಪವಸೆ (ನಾ). ಹೂವಿನ ಹಾಸುಗೆ; ಪುಷ್ಪಶಯ್ಯೆ : ಕೆಲವೆಡೆಗೆ ಕೆಂದಳಿರ ಹಸೆಗಳು ಕೆಲವು ಕೆಲವೆಡೆ ಪುಷ್ಪವಸೆಗಳು (ಕೌಕಿರಾ. ೦೦-೨೨). [ಪುಷ್ಪ + ಪಸ್ಯೆ]

ಪುಷ್ಪವಾಟ (ನಾ). ಹೂವಿನ ತೋಟ ; ಹೂದೋಟ : ಇಕ್ಷು ಪುಷ್ಪವಾಟಂಗಳಿನಾವ ಮಂಡಲಮುಮಂ ಗೆಲೆವಂದುದು ಮೆಗಿಮೆಂಡಲಂ (ಅಪಿಪು. ೦-೨೦); ಪುಷ್ಪವಾಟದಿನಗಲ್ದಬ್ಬಾಕರಕ್ಕಾಗಿ ಪೊರ್ದುವ ಮತ್ತ ಭ್ರಮರಾಳಿ . . . ಎತ್ತಲುಂ ಸೊಗಯಿಕುಂ ಚಂಪಾಪುರೋಪಾಂತದೊಳ್ (ಸುಕುಮಾ. ೯-೯೩). [ಸಂ.]

ಪುಷ್ಪವಾಟಿ (ನಾ). = ಪುಷ್ಪವಾಟ : "ಹೂವಿನ ತೋಂಟಮಂ ಪುಷ್ಪವಾಟಿಯೆಂಬುದು" (ಹಲಾಯು. ೩೬-೬೦); ಆಗಳುಂ ಮುಸುಱಿ ನಿಂದಳಿ ಮಾಲೆಯ ಗೀತನಿಸ್ವನಾಭೋಗದೆ ಪುಷ್ಪವಾಟಿ ಬಗೆಗೊಳ್ವುದನುಗನ ಗೀತಶಾಲೆವೋಲ್ (ಜಗಿ. ೯-೯೩); ಅಲರ್ಗಣೆ ಪುಷ್ಪವಾಟಿಕುಲದೊಳ್ ಬಳೆದಿಪ್ಪುವು ಮಿಾನಕೇತುಗಳ್ ಜಲರುಹಷಂಡದೊಳ್ ಮೆಱೆವುತಿರ್ದಪುವು (ಅಪಂಪು. ೩-೬). [ಸಂ. ಪುಷ್ಪವಾಟೀ]

ಪುಷ್ಪವಾಟಿಕ (ನಾ). = ಪುಷ್ಪವಾಟ : ಲಿಂಗಂಗಳಿಗೆ ಕೂರ್ತು ತಂದು ಪೂಜಿಪ ಪುಷ್ಪವಾಟಿಕವೃಂದಮುಂ ಲಿಂಗಂಗಳಿಗೆ ನಯಮೊಂದಿ ಧೂಪವನೀವ ಗುಗ್ಗುಳತರುಸಮುಚ್ಚಯವು (ಬಸಪು. ೦೯-೬೦). [ಸಂ. ಪುಷ್ಪವಾಟಿಕಾ]

ಪುಷ್ಪವಾಟಿಕೆ (ನಾ). = ಪುಷ್ಪವಾಟ : ಪುಷ್ಪವಾಟಿಕೆಗಳು ಮುರುಟಿದವು ಪಶುಗಳಱಚಿದುವು (ಬಸಪು. ೫೬-೯೮); ಪೂಗಳಿಂದ ತಮ್ಮವಯವ ಸೌಂದರ್ಯವಂ ವಿಟರಿಗೆ ತೋರಿಸುವಂತೆ ಮಾರುವ ಮಾಲೆಕಾರನ ಬಾಲೆಯರಿಂ ಮನೋಹರಮಾದ ಪುಷ್ಪವಾಟಿಕೆಗಳಿಂ (ಸೌಗಂಧಿ. ೫-೦); ತುಂಬಿಗಳು ಪುಷ್ಪವಾಟಿಕೆಯ ಬಳಿ ಹಾಡುತ್ತಿವೆ (ಶಾಖಕ್ರ. ೬). [ಸಂ. ಪುಷ್ಪವಾಟಿಕಾ]

ಪುಷ್ಪವಾಸ (ನಾ). ಹೂವಿನ ವಾಸನೆ ; ಪುಷ್ಪಗಂಧ : ಸುಕುಮಾರಂ . . . ಪುಷ್ಪವಾಸದಕ್ಕಿಯ ಕೂಟನಲ್ಲದೆ ಮತ್ತಿನಾಹಾರಮನುಂಡಱಿಯಂ (ಜೀವಸಂ. ೦೦೬-೩೫ ಪ). [ಸಂ.]

ಪುಷ್ಪವೃಷ್ಟಿ (ನಾ). = ಪುಷ್ಪವರ್ಷ : ಆ ರಾಜಭವನದೊಳ್ ವಸುಧಾರೆಯ ತಣ್ಣೆಲರ ಪುಷ್ಪವೃಷ್ಟಿಯ ಸುರಭೇರೀರವದ ಪೊಗಟ್ವ ದೇವರಹೋರಭಸದ ಪುದುವಿನಾಯ್ತು ಪುಚಾಶ್ಚರ್ಯಂ (ಪುಷ್ಪಪು. ೦೯-೦೦); ಅಂತರಿಕ್ಷದಲ್ಲಿ ಅಮರರು ನೋಡಿ ಆಗ ಪುಷ್ಪವೃಷ್ಟಿಯನ್ನೆ ಕಱೆಯಲು (ಪುರಂದ. ೯-೬-೬); ಆಕಾಶವಲ್ಲಿ ದೇವತೆಗಳೂ ಋಷಿಗಳೂ ಅಪ್ಸರೆಯರೂ ಪುಷ್ಪವೃಷ್ಟಿ ಕರೆದು ಇವನು "ಭೀಷ್ಮ!" ಎಂದು ಹೊಗಳಿದರು (ಪಸಭಾ. ೯). [ಸಂ.]

ಪುಷ್ಪಶಯನ (ನಾ). ಹೂವಿನ ಹಾಸುಗೆ : ಇದು ತಾನಾಕೆ ಪೊರಳ್ದ ಪುಷ್ಪಶಯನಂ . . . ಇದು ಹಸ್ತಾಬ್ಜದೆ ಜಾರಿದಾಕೆಯ ಮೃಣಾಳೀಕಂಕಣಂ (ಶಾಕುಂತ. ೯೩-೬೬). [ಸಂ.]

ಪುಷ್ಪಶಯ್ಯೆ (ನಾ). = ಪುಷ್ಪಶಯನ : ಜನತಾಸೇವೆಯೆಂದರೆ ಪುಷ್ಪಶಯ್ಯೆಯಲ್ಲ, ಮುಳ್ಳಿನ ಹಾಸಿಗೆ (ಜತೆಸ. ೦೦೦). [ಸಂ. ಪುಷ್ಪಶಯ್ಯಾ]

ಪುಷ್ಪಶರ (ನಾ). ೧. (ಮನ್ಮಥನ) ಹೂವಿನ ಬಾಣ : ಪುಷ್ಪಶರತೀವ್ರತೆಯೆಂತು ರವಿಪ್ರತಾಪಮೆಂತಳಿಕುಳದಂಗನೀಳರುಚಿಯೆಂತು ನಿಜಂ ತನಗಂತು ಸದ್ಗುಣಾವಳಿ ಸಹಜಾತಂ (ಶಾಂತಿಪು. ೬-೦೦೯). ೨. ಮನ್ಮಥ ; ಕಾಮ : ಜಿತಕಾಮರ್ ಮರುಳಾದರ್ ಪುಷ್ಪಶರನ ಪಡೆ ನಡೆವಾಗಳ್ (ಗಿಂಕ. ೬-೬). [ಸಂ.]

ಪುಷ್ಪಸಮಯ (ನಾ). ೧. ಹೂವು ಬಿಡುವ ಕಾಲ ; ವಸಂತಮಾಸ : "ವಸಂತಃ, ಪುಷ್ಪಸಮಯಃ, ಸುರಭಿಃ—೩ ವಸಂತಋತುವಿನ ಹೆಸರುಗಳು" (ಸಿದ್ಧಾಂತಿ. ೯೦). ೨. ಮುಟ್ಟಾಗುವ ಕಾಲ; ಋತುವಾಗುವ ಸಮಯ : ಮೂಡಿದ ಮೊಡವಿ ಮುಗುಳ್ಮೊಗವೀಡಿ ಱವುನ್ಮಂಜರೀಸ್ತನಂ ತೋಳ್ಮೊದಲೊಳ್ ತೀಡುವ ನಱುಗಂಪೇಂ ಪಿಸುಣಾಡಿದುದೋ ಸತಿಗೆ ಪುಷ್ಪಸಮಯೋದಯಮಂ (ಪುಷ್ಪಪು. ೩-೦೦೫). [ಸಂ.]

ಪುಷ್ಪಸಾಯಕ (ನಾ). ೧. (ಮನ್ಮಥನ) ಹೂವಿನ ಬಾಣ : ಪುಳಿಂದರಾರ್ದಿಸೆ ಸಿಡಿಲ್ದುಗುತಂದುವು ಪುಷ್ಪಸಾಯಕಂಗಳ ಪೊಗರ್ವಟ್ಟು ಚಂದ್ರಿಕೆಯ ಬಿಟ್ಟು . . . ಎಂಬ ವಾರಿಧರವಾರಣವೇಣುವರಾಹಮೌತ್ತಿಕಂ (ಜಗಿ. ೦೬-೨೮). ೨. ಕಾಮ ; ಮನ್ಮಥ : ಬಿಲ್ ಪುರ್ವು ಬಾಣಂ ನಿಜಾಕ್ಷಿವನಕ್ರೀಡೆಗೆ ಪುಷ್ಪಸಾಯಕನಿಭಂ ತನ್ನಾಯಕಂ ನಿಲ್ವುದುಂ (ಶಾಂತಿಪು. ೬-೦೦); ಇಂದುಪಯೋಜಜಂಗೆ ಕೃತಕೃತ್ಯತೆ ಸಾರ್ದುದು ಪುಷ್ಪಸಾಯಕಂಗಿಂದೊಳ

ಸೋರ್ಮದೇಸುವೆಸಂ . . . ಎಂದು ನೋಡಿವರ್ (ಸಂಪ್ರಪು. ೬-೭೯); ಪುಷ್ಪಸಾಯಕ ಜಗದೇಕವೀರನ ಮದಂಗಿಡೆ ಮರ್ದಿಸಿದ ಪ್ರತರ್ಕ್ಯನೊಳ್ . . . ಎಚ್ಚು ಗೆಲ್ವ ಬಗೆಯಾಂತೆನಿದೆನ್ನಯ ಮೋಹಮೆಂತುಟೋ (ಶಬಕಂ. ೯-೦೨೬). [ಸಂ.]

ಪುಷ್ಪಸ್ರಜ (ನಾ). ಹೂವಿನ ಮಾಲೆ: ಅನಲ್ಪಕಲ್ಪಲತಿಕಾಪುಷ್ಪಸ್ರಜಾ ಮೋದಂ . . . ಸೌಗಂಧ್ಯಮಂದೀಕೃತಭ್ರಮರಂ ತೆಕ್ಕನೆ ತೀವೆ ಗಂಧ ಮಯಮಾಯ್ತಂದಾ ಮಹಾಮಂಡಪಂ (ಪುತ್ಸಪು. ೦೦-೯೦). [ಸಂ. ಪುಷ್ಪಸ್ರಜ್]

ಪುಷ್ಪಹೀನೆ (ನಾ). ಮುಟ್ಟು ನಿಂತು ಹೋದವಳು; ಮಕ್ಕಳಾಗುವ ವಯಸ್ಸನ್ನು ಮೀರಿದವಳು: "ಪುಷ್ಪಹೀನಾ, ನಿಷ್ಕಳಾ – ಈ ೨ ಮುಟ್ಟವೆ ಮಾಣ್ದವಳ್" (ಹಲಾಯು. ೮೦-೩೩೩). [ಸಂ. ಪುಷ್ಪಹೀನಾ]

ಪುಷ್ಪಾಂಜನ (ನಾ). ಹಿತ್ತಾಳೆಯ ಭಸ್ಮದಿಂದ ತಯಾರಿಸಿದ ಒಂದು ಬಗೆಯ ನೇತ್ರಾಂಜನ,-ಕಣ್ಣಿಗೆ ಲೇಪಿಸುವ ಕಾಡಿಗೆ: "ಪುಷ್ಪಕೇತು-ಪುಷ್ಪಾಂಜನ" (ಕಿಷಂ. ೦೦೦). 'ಕುಸುಮಾಂಜನ' ಪರಾ. [ಸಂ.]

ಪುಷ್ಪಾಂಜಲಿ, ಪುಷ್ಪಾಂಜಳಿ (ನಾ). ೧. ಬೊಗಸೆಯ ತುಂಬ ಇರುವ ಹೂವು. ೨. ಬೊಗಸೆಯಲ್ಲಿ ಹೂವುಗಳನ್ನು ತಂದು ಅರ್ಪಿಸುವಿಕೆ; ೩ ನೃತ್ಯ, ನಾಟಕಪ್ರಯೋಗಗಳ ಆರಂಭದಲ್ಲಿ ರಂಗಪೂಜೆಯ ಅಂಗವಾಗಿ, ರಂಗಭೂಮಿಯ ಎಲ್ಲ ಭಾಗಗಳಿಗೂ ಬೊಗಸೆಯಿಂದ ಹೂವುಗಳನ್ನು ಚೆಲ್ಲುವ ಪರಿಪಾಟಿಯು 'ಪುಷ್ಪಾಂಜಲಿ' ಯೆನಿಸಿ ಕೊಂಡಿದೆ: ಕಂತು ಪುಷ್ಪಾಂಜಲಿಯಂ ಸೂಸಿದ ಪದದೊಳ್ ಸಭೆಗಂ ಸೂಸಿದನೊಡನೊಡನೆ ನನೆಯ ಮೊನೆಯಂಬುಗಳಂ (ಅಪು. ೯-೩೦); ಬಸವ ರಾಜಂ ನಲಿದು ಪುಷ್ಪಾಂಜಲಿಯನೀಯೆ (ಬಸರ. ೬೯೦೨೦); ನಾಟ್ಯಕಾರರು ಪುಷ್ಪಾಂಜಲಿಯೊಡನೆ ಪ್ರಾರಂಭಿಸುತ್ತಾರೆ (ಭಾರತ. ೫೫೬). ಪುಷ್ಪಾಂಜಳಿ: ೨. ನಾಟಕಾರಂಭಪ್ರಸ್ತುತಪವಿತ್ರಸೂತ್ರಧಾರನೆ ಮುಂದೆ ನಿಂದು ಪುಷ್ಪಾಂಜಳಿಯಂ ಕೆದಱ (ಶಾಂತಿಪು. ೦೦-೬೦ ಪ); ಸುರದ್ರುಮಪುಷ್ಪಪ್ರಕರದೆ ರಂಗಮಧ್ಯದೊಳ್ ಮಾಡಿ ಮುಂದೆ ಪುಷ್ಪಾಂಜಳಿಯಂ (ಅಪು. ೫ ೩೦); ಇದು ಸಾಂಧ್ಯತಾಂಡವಾರಂಭದೊಳೀಶ್ವರಬಾಹುನರ್ತನಕ್ಷೇಪದೊಳುಣ್ಮಿದ ಪುಷ್ಪಾಂಜಳಿಯೆನಲೇನುದಯಿಸಿದುದೊ ಗಗನದೊಳಗೆ ತಾರಾನಿಕರಂ (ಪುತ್ಸಪು. ೯-೦೦೨). [ಸಂ.]

ಪುಷ್ಪಾಂಜಳಿ 'ಪುಷ್ಪಾಂಜಲಿ' ನೋ.

ಪುಷ್ಪಾಂಜುಲಿ, ಪುಷ್ಪಾಂಜುಳಿ (ನಾ). ೧. = ಪುಷ್ಪಾಂಜಲಿ ೧: ಒಲವು ಮಿಗೆ ಲಲಿತಾರ್ಘ್ಯಪುಷ್ಪಾಂಜುಲಿ[ಪಾಠಾಂ. ಳಿ]ಯನರ್ಪಿಸಿ (ಬಸಪು. ೬೦-೫೦). ೨. = ಪುಷ್ಪಾಂಜಲಿ ೨: ಒಲವಿನಿಂದಾ ಮೆಲ್ಲಡಿಗಳಂ ತೊಳೆದು ಪುಷ್ಪಾಂಜುಲಿ[ಪಾಠಾಂ.ಳಿ]ಗಳಂ ಕೈಗೊಳಿಸಿ (ಬಸಪು. ೩೨-೩೦); ಪುಷ್ಪಾಂಜುಳಿ: ೨. ಎಡೆವಿಡದ ಪುಷ್ಪಾಂಜುಳಿಗಳೆ ಆಗ ಪೆರ್ಮಳೆಯಾಗೆ (ರಾಘವ. ೯-೯). [< ಪುಷ್ಪಾಂಜಲಿ]

ಪುಷ್ಪಾಂಜುಳಿ 'ಪುಷ್ಪಾಂಜುಲಿ' ನೋ.

ಪುಷ್ಪಾಪಚಯ (ನಾ). ಗಿಡಬಳ್ಳಿಗಳಿಂದ ಹೂವುಗಳನ್ನು ಬಿಡಿಸುವುದು,—ತಿರಿಯುವುದು: ಮೆ.ಘರಥಂ ವನವಿಹಾರದೊಳಿರೆ ತದೀಯಾಂತಃಪುರಾವರೋಧಜನಂ ಪುಷ್ಪಾಪಚಯಾಸಕ್ತಿಯಿಂ ವನಮಂ ತೊಟಲುತ್ತುಂ(ಶಾಂತಿಪು. ೯-೭೬ ಪ); ಅಂತು ನಿರ್ವರ್ತಿತ ಪುಷ್ಪಾಪಚಯವಿನೋದೆಯರಾಗಿ (ಜಗಪಿ. ೦೯-೯೯ಪ). [ಪುಷ್ಪ+ಅಪಚಯ]

ಪುಷ್ಪಾಯುಧ (ನಾ). ಹೂವಿನ ಬಾಣಗಳನ್ನುಳ್ಳವನು; ಕಾಮ; ಮನ್ಮಥ: "ಮನಸಿಜಂ ಮನ್ಮಥಂ ಕಂದರ್ಪನಂಗಜಂ . . . ದರ್ಪಕಂ ಪುಷ್ಪಾಯುಧಂ" (ಮಂಗರಾ. ೭-೨೨); ಪುಷ್ಪಾಯುಧನ ಕೊಂದ ಕೊಳ್ಗೊಳನಂ ಪೋಲ್ತು ಪೂಗೊಳದೊಳ್ ಸೌಜನ್ಯಕಂದಾಂಕುರನುಮಪ್ಪ ವಜ್ರಾಯುಧಂ . . . ಜಳಕ್ರೀಡಾವಿನೋದದೊಳಿರೆ (ಶಾಂತಿಪು. ೬-೯೭ ಪ); ಅಂಗಜುಗೀ ತ್ರಿಜಗಮುಮಿದಿರಿಲ್ಲೆಂಬಿನಂ ಪೂವಿನಂಬಂ ತಿರುವಾಯೊಳ್ಪೂಡಿ ಪುಷ್ಪಾಯುಧನಿರೆ ಕೆಲದೊಳ್ ಲೀಲೆಯಿಂ ಬಾಲೆಯಿರ್ಪಳ್ (ಜಗಪಿ. ೦೦-೦೭); ನೋಡು ನೋಡಿದು ಪುಷ್ಪಾಯುಧಪದ್ಮರಾಗಮುಕುರಪ್ರದ್ಯೋತಮೋ . . . ಎಂಬ ಸಂಪದಮುಂ ಬೀಱಿದುದಿಂದ್ರದಿಗ್ವಿಪರದೊಳ್ ಚಂದ್ರದ್ಯುತಿ ಪ್ರಾಭವಂ (ಗಿಂಳ. ೯-೯೯). [ಸಂ.]

ಪುಷ್ಪಾಯುಧಕೇಳಿ (ನಾ). ಕಾಮಕೇಳಿ; ಸಂಭೋಗ: ಮತ್ತೇಯಸಿಯಿಂಪುವೆತ್ತ ತುಟಿಯಂ ದಯೆಯಿಂದಮೆ ಪೀರ್ದೆನಲ್ತೆ ಪುಷ್ಪಾಯುಧಕೇಳಿಯೋಳ್ (ಶಾಕುಂತ. ೯೦-೦೫೦). [ಸಂ. ಪುಷ್ಪಾಯುಧಕೇಲಿ]

ಪುಷ್ಪಾಯುಧವೈರಿ (ನಾ). ಕಾಮನ ಶತ್ರು; ಶಿವ: ಪೊಱಮಟ್ಟದಟಂ ನಡೆಗೊಂಡಲ್ಲಿ ಪುಷ್ಪಾಯುಧವೈರಿಯುಘ್ರಗಳನಾಂತೆರ್ದೆಯೊಳ್ಮಿಗೆ ರಾಜಶೇಖರಂ (ರಾಜಶೇ. ೦೯-೯೩). [ಸಂ. ಪುಷ್ಪಾಯುಧವೈರಿನ್]

ಪುಷ್ಪಾರ್ಘ್ಯ (ನಾ). ಹೂವುಗಳ ಕಾಣಿಕೆ,—ಅರ್ಘ್ಯ: ಬಂದಿದಿರ್ಗೊಳ್ವಂತಾಯ್ತು ಕಲ್ಪಕ್ಷಿತಿರುಹಬಹುಪುಷ್ಪಾರ್ಘ್ಯದಿಂದೆಂಬಿನಂ ಚಿಲ್ಲಿದ ರ್ಗೊಂಡತ್ತಿಂದ್ರಶೈಲಕ್ಕತಿಶಯಮಹಿಮಂ ಬಂದೊಡಂದಾದಿದೇವಂ (ಅಪು. ೭-೬೦). [ಸಂ.]

ಪುಷ್ಪಾಸವ (ನಾ). ಹೂವಿನ ರಸ; ಜೇನು; ಮಕರಂದ: ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತಾಲಿಯುತೋನ್ಮಾದೆಯ . . . ಸೀತೋದೆಯಿ ಪೋಲ್ವೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ (ಅಪು. ೦-೫೯); ಪುಷ್ಪಾಸವವನ್ನು ಕಳುವ ತೊತ್ತಿನ ಕೂಸಾದ ಈ ದುರುದುಂಬಿ ತುಂಬಿಯು ಪೂಜ್ಯಳಾದ ಈಕೆಯ ಮುಖಕ್ಕೆ ಎರಗುವುದು (ಶಾಕುಂತ. ೯೦-೦೬). [ಸಂ.]

ಪುಷ್ಪಾಸಾರ (ನಾ). ಹೂಮಳೆ; ಪುಷ್ಪವೃಷ್ಟಿ: ನುತ ಪುಷ್ಪಾಸಾರ ಮುದ್ಯದ್ದಿವಿಜಜಯನಿನಾದಂ . . . ಚಾರುಸಿಂಹಾಸನಮೆನೆ ನೆಗೞ್ದೀ ಪ್ರಾತಿಹಾರ್ಯಾಷ್ಟಕಂ ವಿಶ್ರುತಮಾಗಿರ್ಕುಂ ಸುರೇಂದ್ರೋಪಕೃತಮೆನಿಸಿ (ಸುಕುಮಾ. ೯-೫೦). [ಸಂ.]

ಪುಷ್ಪಾಸ್ತ್ರ (ನಾ). ೧. (ಕಾಮನ) ಹೂವಿನ ಬಾಣ: ಇದು ನಿನ್ನರ್ಚಿಸು ವಿಕ್ಷುಚಾಪಮಿದು ನಿನ್ನೀ ಲೋಕಮಂ ಕೈಗೆ ಮಾಡಿದ ಪುಷ್ಪಾಸ್ತ್ರಂ (ಅಪು. ೦೦-೦೭). ೨. ಕಾಮ; ಮನ್ಮಥ. [ಸಂ.]

ಪುಷ್ಪಿಣಿ (ನಾ). ೧. ಹೂವು ಬಿಟ್ಟುದು; ಹೂತುದು. ೨. ಮುಟ್ಟಾದವಳು; ಋತುಮತಿ: "ಪುಷ್ಪಿಣೀ-ರಜಸ್ವಲೆ" (ಕಾಶಕ್ಕೆ. ೦೬೩). ೧, ೨: ಆವಗಂ ಪುಷ್ಪಿಣಿಯರಾಗಿರ್ಪರಿಲ್ಲಿಯ ಲತಾವಧುಗಳಿವರ ಸೋಂಕಲೆ ಬಾರೆದೆಂದು ರಾಜೀವಮಿತ್ರಂ ತನ್ನ ನಿರ್ಮಲಕರಂಗಳಂ ಪೆಱದೆಗೆದಂ (ಶೈಪುಭಾ. ೩-೨೩). [ಸಂ. ಪುಷ್ಪಿಣೀ]

ಪುಷ್ಪಿತ (ಗು). ೧. ಹೂವು ಬಿಟ್ಟ; ಹೂವರಳಿದ: ಏರಿದನು ಸೌಮಿತ್ರಿ . . . ವಿರಳ ಪರ್ಣದ್ರುಮದ ಪುಷ್ಪಿತಶರೀರದಾ ಸ್ವರ್ಗಚುಂಬಿತಸಾಲಮನ್ನತ ಶಿರದ ಕರದ ಗೋಪುರಕೆ (ಶ್ರೀರಾಮಾ. ೦೫೭-೦೯೬). (ನಾ). ೨. ಹೂವು ಬಿಟ್ಟುದು; ಹೂತುದು: ಒದೆದಶೋಕೆಯಂ ಬಕುಳಮಂ ಮುಕ್ಕುಳಿಸಿ ಮದ್ಯದಿಂದೆ . . . ಪುಷ್ಪಿತಂ ಮಾಡಿ ತೋಱಿದರಂಬುಜಾಕ್ಷಿಯರ್ (ಶೈಪುಭಾ. ೮-೦೬). [ಸಂ.]

ಪುಷ್ಪಿತಾಗ್ರ (ನಾ). [ಛಂದ] ಅರ್ಧಸಮವಾದ ಅಕ್ಷರವೃತ್ತಗಳಲ್ಲಿ ಒಂದು: ಪುಷ್ಪಿತಾಗ್ರಃ—ಇದರ ವಿಷಮಪಾದಗಳಲ್ಲಿ ನನರಯ ಗಣಗಳೂ ಸಮಪಾದಗಳಲ್ಲಿ ನಜಜರ ಗಣಗಳೂ ಒಂದು ಗುರುವೂ ಬರುವುವು (ಶೈಪಿಡಿ. ೬೯). [ಸಂ. ಪುಷ್ಪಿತಾಗ್ರಾ]

ಪುಷ್ಪಿತೆ (ನಾ). = ಪುಷ್ಪಿಣಿ ೨: "ತುಱುಮಿಂಡಿಯೊಂದು ಪುಷ್ಪಿತಯಾದ ಕಾಂತೆ" (ಶಕಸಾ. ೬೨-೩೬೨); ಮೈನೆರೆಯದೆ ಬಹುಕಾಲ ಕಳೆದ ಸ್ತ್ರೀಯು ಈ

ಚೂರ್ಣವಂ ಸೇವಿಸೆ ಪುಷ್ಪಿತೆಯಹಳು (ಸಳವ್ರ. ೧೪೬). [ಸಂ. ಪುಷ್ಪಿತಾ]

ಪುಷ್ಪಿಸು (ಕ್ರಿ). ಹೂವು ಬಿಡು; ಪುಷ್ಪಿತವಾಗು : ಅಲಕ್ತಕರಂಜಿತವಾದ ಚರಣಸ್ಪರ್ಶದ ಮಹಿಮೆಯಿಂದ ಪುಷ್ಪಿಸಿ ಸರ್ವದಾ ಪರಿಮಳಯುಕ್ತಮಾಗಿರುವುದುಮಯಿದು (ಸೌಗುಂ. ೨೬೨-೦೬); ಪುಷ್ಪಿಸಿದ, ಮರಗಳ ಮಧ್ಯದಲ್ಲಿ ಪರಾವಸುವಿನ ಹೆಂಡತಿ ತನಿಯಾಗಿ ನಡೆಯುತ್ತಾ ಇದ್ದಳು (ಜೈಮಿ. ೦೭೦). [ಪುಷ್ಪ + — ಇಸ್ಯು$_3$]

ಪುಷ್ಪೇಷು (ನಾ). ೧. (ಕಾಮನ) ಹೂವಿನ ಬಾಣ : ಇವು ಕಂದರ್ಪಂಗೆ ದೋರ್ದರ್ಪವಂ . . . ಅಡರಿಸುಗುಂ ತಮ್ಮ ಪುಷ್ಪೇಷುವಿಂ ತಮ್ಮ ವಿಕಾಸೋಲ್ಲಾಸದಿಂ ತಮ್ಮ ಚಿಲ್ವಿಂದೆನಲ್ ಜಾತಿವನೇ ಜಾತಪ್ರಸೂನಾವಳಿಯನಿಟ್ಟಿಸಿ ಸಂಪತ್ತುವೆತ್ತಿರ್ದುದೆತ್ತಂ (ಪಗಪ. ೯-೬೩). ೨. ಕಾಮ; ಮನ್ಮಥ : ಅದೆ ಕಂದರ್ಪಂಗೆ ದೋರ್ದರ್ಪದ ಮೊದಲದೆ ಪುಷ್ಪೇಷುಗೀ ಲೋಕಮಂ ಗೆಲ್ದದೆಂದೆತ್ತಿರ್ಪ ಚೈತ್ರಧ್ವಜಂ (ಅಪಪು. ೨-೧೬). [ಸಂ.]

ಪುಷ್ಪ (ನಾ). ೧. ಹೂವು; ಪುಷ್ಪ. ೨. ಪುಷ್ಯರಾಗವೆಂಬ ರತ್ನ. ೩. ಚಾಂದ್ರಮಾನತಿಂಗಳುಗಳಲ್ಲಿ ಹತ್ತನೆಯದು : ಅಮರ್ದಿರೆ ಪುಷ್ಪ ಪೂರ್ಣಮೆಯೊಳಂ ನಯಮಂತತಿಶುದ್ಧಮಪ್ಪ ಕುಂಕುಮಮನ ಪೂರ್ವಮಪ್ಪ ಫಲಮಂ . . . ಪಿಡಿದಿರ್ದು ಮಾಱಲಾ ಕ್ರಮದೊಳಗಕ್ಕುಮೂಱನೆಯ ತಿಂಗಳೊಳಯ್ವಡಿಲಾಭಮುತ್ತಮಂ (ಅಜಿಪು. ೬-೪೦); ಆ ಮಾಸವೇ ಚೈತ್ರ ವೈಶಾಖ . . . ಪುಷ್ಯ ಮಾಘ ಫಾಲ್ಗುಣಮೆಂದು ಹನ್ನೆರಡು ತೆಱನಾಗಿಹುದು (ಪಏಕೇ. ೩೨೦); ಪುಷ್ಯಪ್ರಭಾತದೊಳ್ ಕ್ರೌಂಚ ಪಕ್ಷಿಯ ಪಂಕ್ತಿ ನೆರೆದು . . . ದನಿಸಂತೆಗೈವಂತೆವೋಲ್! (ಶ್ರೀರಾಮಾ. ೧೦-೩೫೯). ೪. ಪೂಜೆ; ಅರ್ಚನೆ. ೫. ಬೆಲೆ; ಕ್ರಯ. ೬. ಶೂನ್ಯ; ಅಮಂಗಳ : "ಬೆಲೆ ಶೂನ್ಯ ಮಾಸ ತಾರಕಿ ಕಲು ಪೂಜೆಯುಮಾಱು ಪುಷ್ಯ ಶಬ್ದಮದಕ್ಕುಂ" (ಪಾಪಾಕಂ. ೦೩೨); "ಶಿಳೆಯುಂ ತಾರಗೆ ಮಾಸಭೇದ ಬೆಲೆ ಶೂನ್ಯಂ ಪುಷ್ಯಮಕ್ಕುಂ" (ಪಾಪಾರ. ೦೩೦). ೭.[ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಎಂಟನೆಯದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : "ಪುಷ್ಯಂ ತಿಷ್ಯಮೆಂದೆನಿಕ್ಕುಂ" (ಮಂಗಗಾ. ೦೨-೬); ಪುಷ್ಯ ಅಂಗೀರಸ ತಿಷ್ಯಂ ಬಾಚಸ್ಪತಿ ಬೃಹಸ್ಪತಿ—ಈ ೫ ಪುಷ್ಯನಕ್ಷತ್ರಕ್ಕೆ ಹೆಸರು (ಭಾಸ್ಕರ. ೬೨-೦); ಪುಷ್ಯ ಪುಸಿಯದ ಹಾಳೆ (ಗಾದೆ). [ಸಂ.]

ಪುಷ್ಯಮಾಸ (ನಾ). ೧.=ಪುಷ್ಯ ೩: "ಪುಷ್ಯಮಾಸಮಂ ಸಹಸ್ಯಮೆಂಬುದು" (ಹರಿಹಾಯು. ೦೯-೦೦೬). ೨. ಮಂಗಳಕಾರ್ಯಗಳು ನಡೆಯದ ತಿಂಗಳು; ಶೂನ್ಯಮಾಸ : ಪುಷ್ಯಮಾಸವೆಂದರೆ ಶೂನ್ಯಮಾಸ. ಮಂಗಳಕಾರ್ಯಗಳಿಗೆ ಪ್ರಶಸ್ತವಲ್ಲದ ತಿಂಗಳು (ರೂಢಿ). [ಸಂ.]

ಪುಷ್ಯಮಿ (ನಾ). ೧.=ಪುಷ್ಯ ೨ : ಆ ಖಗೋಳದಲ್ಲಿ ಅಶ್ವಿನಿ ಭರಣಿ ಕೃತ್ತಿಕಾ ರೋಹಿಣಿ ಮೃಗಶಿರಾ ಆರ್ದ್ರಾ ಪುನರ್ವಸು ಪುಷ್ಯಮಿ . . . ರೇವತಿ ಗಳೆಂಬಿಪ್ಪತ್ತೇಳು ತಾರೆಗಳು (ಪಏಕೇ. ೨೫೦); ಕಟಕದ ದೇಹವೇ ನಮ್ಮ ಪುಷ್ಯಮಿನಕ್ಷತ್ರ (ಪಕ್ಷತ್ರ. ೭೬); (ಎಸಕ್ಯು. XV. ೩೦). 'ಪಾಡ್ಯಮಿ' ಪರಾ. [< ಪುಷ್ಯ]

ಪುಷ್ಯರಾಗ (ನಾ). ೧. ಹಳದಿಬಣ್ಣದ ಒಂದು ಬಗೆಯ ರತ್ನ : "ಪೀತಕಾಂತಮೆನೆ ಪುಷ್ಯರಾಗಂ" (ಮಂಗಗಾ. ೩೦-೬); ವಜ್ರದ ಕಂಬ ವಿದ್ರುಮದ ತೊಲೆ ಪುಷ್ಯರಾಗಮೊಪ್ಪುವ ಜಂತೆ ಮರಕತದ ಲೋವೆ ಮುತ್ತಿನ ಸೂಸಕ (ಹಕಗಾ. ೯-೬); ಸಲೆ ಪುಷ್ಯರಾಗದ ತೊಲೆಗಳೆಸೆವ ಮಾಣಿಕಂಗಳ ಲೋವೆ ಮುತ್ತುಗಳ ಸೂಸಕಂ . . . ರಂಜಿಸಿತು ಚಾವಡಿಯ ಚೌರಸದೆಡೆಯೊಳು (ಶೈಪುಶಾ. ೦೬-೨೩). ೨. ಒಂದು ಕುಲಪರ್ವತದ ಹೆಸರು : ಶಂಖಕೂಟ . . . ಪುಷ್ಯರಾಗ . . . ಶೈಲೇಂದ್ರಮೆಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವವೆಂಬ ಕೀಲಕ ಪರ್ವತಕ್ಕೆ ಬಡಗಣದಿಕ್ಕಿನಲ್ಲಿಹವು (ಪಏಕೇ. ೨೦೬). [ಸಂ.]

ಪುಸ್ (ನಾ). ಒಂದು ಅನುಕರಣ ಪದ : ಮಳೆ ಬಂದು ಪಟಾಕಿಗಳೆಲ್ಲ 'ಪುಸ್' ಎಂದುವು (ರೂಢಿ).

ಪುಸಕಿ (ನಾ). ಕೈಲಾಗದವನು; ದುರ್ಬಲ : ಹೋಗೋ ಲೇ. ಹೋಗೋ . . . ಕರೀ ಕುರೀ. ಹೆಣ್ಣಾ ಪುಸಕೀ. ಕೈಲಾಗದವನೇ! (ಪಡೆಗಾ. I, ೩೨೩). [← ಮರಾ. ಪುಸಕಾ]

ಪುಸಕ್ಕನೆ (ಅ). ಕೂಡಲೆ; ಒಮ್ಮೆಲೆ; ಒಮ್ಮಿಂದೊಮ್ಮೆಲೆ : ನಿನ್ನವ್ವ ಮನೇಲೇ ಇರಬಹುದಾಗಿತ್ತು. ಪುಸಕ್ಕನೆ ತೌರುಮನೆಗೆ ಹೊರಟುಹೋದರು (ಪಂಕಪಂ. ೯೧). [ಪುಸಕ್$_0$ + — ಅನ್ನೆ$_1$]

ಪುಸಲತ್ತು, ಪುಸಲತ್ತು (ನಾ). ೧. (ಉಕ) ಸಲಿಗೆ; ಸದರ. ೨. ಬೆಂಬಲ; ನೆರವು; ಪ್ರೋತ್ಸಾಹ : ನಿನ್ನ ಪುಸಲತ್ತಿನಿಂದಲೇ ಈ ನಿನ್ನ ಬಂಧುವು ನನಗೆ ಕುಚೇಷ್ಟೆ ಮಾಡುತ್ತಿರುವನು (ಕುಳಿಗೀ. ೬೭); ಅತ್ತೆಯವರು ತಾವಾಗಿ ಹೊಗ ಇರವಲ್ಲರ್ಯಾಕ. ನೀವೂ ಅಷ್ಟು ಪುಸಲತ್ತು ಕೊಟ್ಟು ನನ್ನ ಕಿರಿಭಾವಿ ಪಾಲಾಗೂ ಹಂಗ ಮಾಡಬ್ಯಾಡಿರಿ (ಗಂಪಾಯು. ೦೫೫). **ಪುಸಲತ್ತು**: ೨. ಆಕೆಗೆ ನಿಮ್ಮ ಗೆಳತಿಯರ ಪುಸಲತ್ತು ಬಹಳ ಆದ (ಶಾಕ್ತಗ. ೬೮); ಗಂಡನ ಪುಸಲತ್ತು ಇದೆ. ಆದಕ್ಕೆಂತಲೇ ಪಾರ್ವತಿ ಹೀಗೆ ಮಾಡುವಳು (ಪಬ್ಬಹೂ. ೬೦). [←ಹಿಂ. ಪುಸಲಾನಾ=ಸವಿಮಾತುಗಳಿಂದ ಮನವೊಲಿಸು]

ಪುಸಲಾಯಿಸು (ಕ್ರಿ). ೧. ಸವಿಮಾತುಗಳಿಂದ ಮನವೊಲಿಸು,—ಪ್ರೇರಿಸು : ನಾವು ಇದಕ್ಕೂ ಸೊಗಸಾದ ಮತ್ತೊಂದು ಊರಿಗೆ ಹೋಗೋಣವೆಂದು ಮೆಲ್ಲನೆ ಪುಸಲಾಯಿಸುವನು (ಭಾಶಾಪ್ರ. ೬); ರಾಜಣ್ಣ ಗೋಗರೆಯುವ ದನಿಯಲ್ಲಿ ಪ್ರಮಿಲಳನ್ನು ಪುಸಲಾಯಿಸತೊಡಗಿದ (ಮರಳಿ. ೫೭). ೨. ಎತ್ತಿ ಹಾಕು; ಕಳವು ಮಾಡು : ಮನೆಮಕ್ಕಳು ಅಟ್ಟದ ಮೇಲಣ ಡಬ್ಬದಿಂದ ಲಾಡುಗಳನ್ನು ಪುಸಲಾಯಿಸಲು ಸದ್ದಿಲ್ಲದೆ ಮೆಲ್ಲಮೆಲ್ಲನೆ ಹೆಜ್ಜೆ ಹಾಕಿ ಹೋಗುವಂತೆ, ನಾವಿಬ್ಬರೂ ಕ್ಲಬ್ಬಿಗೆ ಹೋಗಲು ಸದ್ದಿಲ್ಲದೆ ಹೆಜ್ಜೆಯನ್ನು ಹಾಕಲು ಪ್ರಾರಂಭಿಸಿದೆವು (ಪಡೆಗಾ. II, ೬೬೦). [ಪುಸಲಾ$_0$ (ಗ್ರಾ ← ಹಿಂ. ಪುಸಲಾನಾ) + — ಇಸ್ಯು$_3$]

ಪುಸಲಾವಣೆ (ನಾ). ಸವಿಮಾತುಗಳನ್ನಾಡಿ ವಶಪಡಿಸಿಕೊಳ್ಳುವಿಕೆ,—ತನ್ನ ಪಕ್ಷಕ್ಕೆ ಸೇರಿಸಿಕೊಳ್ಳುವಿಕೆ : ಅವರ ಪುಸಲಾವಣೆಗೆ ಮರುಳಾದವನಂತೆ ನಟಿಸಿ, ಅವರ ಮಾತನ್ನೆಲ್ಲಾ ಕೇಳಿ ನನಗೆ ವರದಿ ಮಾಡಬೇಕು (ಕಂಪ. ೦೦೦); ಇದೆಲ್ಲ ಎರಡನೆಯವರ ಪುಸಲಾವಣೆಯ ಫಲ (ಪ್ರೇಮಶಾಪ್ರ. ೯೨); ಈ ಪುಸಲಾವಣೆಯ ವಿಷಯವನ್ನು ಇವರು ತಮ್ಮ ನಿಶೆಯ ಗುಂಗಿನಲ್ಲಿ ಸಾಹೇಬಜನರಿಗೆ ಹೇಳಿದರೆ ಎಲ್ಲ ದೋಷ ನಿಮ್ಮ ಮೇಲಲ್ಲವೇ? (ಭಾರಕಿ. ೬೦). [ಪುಸಲಾಯಿಸು + — ಅಣ್ಕೆ./ಮರಾ. ಪುಸಲಾವಣೇ]

ಪುಸಿ$_1$, ಹುಸಿ$_1$ (ಕ್ರಿ). ೧. ಸುಳ್ಳಾಗು; ನಿಷ್ಫಲವಾಗು; ವ್ಯರ್ಥವಾಗು : ಪುಸಿಗುಮೆ ದೇವ ಮಂತ್ರಮೂಲೋಹವಿಜಯ ಎಂಬೀ ವಾಕ್ಯಂ (ಪಂಪಕಂ. ೨೦೦-೯); ಋಷಿಗಳಾಡಿದ ಮಾತು ಪುಸಿಯದು (ಕ್ರಿಪುಶಾ. ೩೦-೩೬); ಶಿವನ ಬೆಸನದು ಪುಸಿವುದೇ (ಪಪಮೋ. ೯-೩೮). ೨. ಕೊಟ್ಟ ಮಾತಿಗೆ ತಪ್ಪು; ಕೈಕೊಂಡ ಪ್ರತಿಜ್ಞೆಯನ್ನು ಈಡೇರಿಸದಿರು; ವಚನಭಂಗ ಮಾಡು : ಚಾಳುಕ್ಯವಂಶದೊಳೆಲ್ಲಿಯುಮಿನ್ನೆವರೆಗಂ ನುಡಿದು ಪುಸಿವುದುಂ ಆಡಿ ಅಳುವುವುದುಂ . . . ಕನಸಿನೊಳಪ್ಪೊಡಮಿಲ್ಲಂ (ಗರಾಯು. ೨-೭ ಪ); ಖಿಣ್ಣಳಿ ವಾಸುದೇವ ಮೂಳಭದ್ರೋದ್ಭವನ್ ನುಡಿದು ಪುಸಿಯುತ್ತೊದಟ್ಟು ಕುಸಿಯುಂ ಮಹಾಸಮುದ್ರದನ್ತೆ ಮೇರೆದಪ್ಪರ್ಬಲದಲ್ ಮಹೇಶ್ವರನನ್ನೆರ್ (ಎಕ. IV. ಹೆಗ್ಗಡ. ೦೭-೦೨; 1033); ವಂಚಕನಂ ನುಡಿದು ಪುಸಿವನಂ ಸಂಗರದೊಳ್ ಹಿಂಚುವನಂ ಪುಟುಗೊಂಡದ ಸಂಚದೊಳಿಕ್ಕಾವ ಕಾಲಮೇಟದ ತೆಱದಿಂ (ಪಕಗಾ. ೩-೦೬). ೩. ಸುಳ್ಳು ಹೇಳು; ಅಸತ್ಯವನ್ನು ನುಡಿ: ಪುಸಿಯದುದು ಪರಾಂಗನೆಗಾಟಸದುದು ಕೊಲ್ಲದುದು

ಮೋಹಮಿಲ್ಲದುದಱಿವಂ ಪೊಸಯಿಸುವುದು ವೈರಾಗ್ಯದ ದೆಸೆಗೆಸುವುದು ಧರ್ಮಂ (ಅದಿಪು. ೩-೭೯); ಇಲ್ಲದುದನೆಂತು ಪುಸಿದುಂಟೆಂಬೆಂ (ಸುಳುವಪಿ. ೬-೪೬); ಕಡುಗಾಯ್ದು ಪಾರೆಯೆಂತುಂ ಸುಡಲರಿಯದು ಸತ್ಯಮುಳ್ಳನಂ ಪುಸಿವವನಂ ಸುಡುವುದು (ರನರ್ಮಮ್ಯ. ೬-೦೪೦); ಪರಪ್ರಾಣಾರ್ಥಂ ಪುಸಿದೊಡೆ ದೋಷಮಿಲ್ಲ (ರಕಶು. ೨-೦೩೬ ಪ). ೪. ಮೋಸಗೊಳಿಸು; ವಂಚಿಸು: ಬಂಚಿಸಿ ತನ್ನನುಜೆಯ ಧನಮಂ ಚಪಲಂ ಕೊಂಡು ಪುಸಿದು ಕಳವಳಿಸಿ ಖಳಂ . . . ಈಗಳಲ್ತೆ ವಾನರನಾದಂ (ಅದಿಪು. ೩-೦೦); ಕೊಂದರಿಂದಿಂತೀಗಳ್ ಪುಸಿದೀ ಘಟೋದ್ಭವನನಾ ಕೌಂತೇಯರ್ (ಸಂಸಭಾ. ೧೨ ೪೬). ಹುಸಿ: ೧. ಆಡಿ ಹುಸಿಯಲ್ಕೆಚ್ಚು ತಪ್ಪಲು ಪೋಡಿಗಾಂಬುದು ಲೋಕ (ಸಂಪತ. ೨೦-೪೩); ಮುನಿವಚನವಿದು ಹುಸಿಯ[ಶಾಶಾಂ. ತಪ್ಪ] ದಾಸುರಜನನ ತಪ್ಪದು ನಿಮಗೆ (ಕೊರಣಾ. ೦ ೬-೨೦); ಸುಕ್ಷೇತ್ರದೊಳು ಬಿತ್ತಿದ ಬೀಜ ಹುಸಿವುದೆ (ಪರಸ.-೩-೪೬). ೨. ನುಡಿದು ಹುಸಿವನೆ ಶರಣನು (ಬಸವ. ೬೭೩); ತತ್ವಮಸಿ ಹುಸಿದಿಹರೆ ಉತ್ತಮರು ಕುಸಿದಿಹರೆ ನಿತ್ಯರು ಕೇಡ ಬಗೆದಿಹರೆ ಸತ್ಯವನೆತ್ತಲಱಸುವುದು (ಸರ್ವಜ್ಞ. ೦೨೬೦). ೩. "ಹುಸಿ—ಅನೃತೇ" (ಕಪುರಾ); ಹುಸಿಯದ ಬೇಹಾರಿಯೇ ಇಲ್ಲ (ಸಂಸಕಂ. ೦೭೭-೦೦); ಒಡಲುಗೊಂಡವ ಹುಸಿವ ಒಡಲುಗೊಂಡವ ಹುಸಿವ ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ (ರೇಣಾಸ. ೩೯-೦೨೩); ಆರು ಕೊಟ್ಟರು ಶರವನಿದ ಮದನಾರಿಯೋ ನಿಮ್ಮಯ್ಯನಹ ಜಂಭಾರಿಯೋ ಮೇಣ್ ಕೃಷ್ಣದ್ರೋಣರೊ ಹೇಳು ಹುಸಿಯದಿರಾ (ಕುಣ್ಯಾಪ್ರೋ. ೦೯-೦೩).

ಪುಸಿದು ನುಡಿವರ ಗಂಡ = ಮಾತಿಗೆ ತಪ್ಪುವವರನ್ನು ಮೆಟ್ಟುವ ವೀರ; ಒಂದು ಬಿರುದು: ಸತ್ಯರಾಧೇಯ ಪುಸಿದು ನುಡಿವರ ಗಂಡ (ಕಾ. IV, ೪೬-೨೪; 1247). ಪುಸಿವರ ಶೂಲ, ಹುಸಿವರ ಶೂಲ, ಹುಸಿವರ ಸೂಲ = ಮಾತಿಗೆ ತಪ್ಪುವವರಿಗೆ ಶೂಲದಂತೆ ಇರುವವನು; ಒಂದು ಬಿರುದು: ಒಳ್ಪಿನ ಕಣಿ ನಿರ್ಮಲಕೀರ್ತಿನೇಮಿ ಪುಸಿವರ ಶೂಲಂ (ಅಲ್ಕಪು. ೦-೨೪); ಹುಸಿವರ ಶೂಲ ನಿಗಳಂಕಮಲ್ಲ ಚಲದಂಕರಾಮ ರಾಯಗಂಡರ ದಾವಣಿ ಕಲಿಗಬ(ಳ) ಮೊಖದ ಕೈ ಸುಭಟಚೂಡಾಮಣಿ (ಎಇ. XXVII, ೧೬೦-೦೭; 1256); ಹುಸಿವರ ಸೂಲಂ ಗಂಡರ ದಾವಣಿ ನಿಗಳಂಕಮಲ್ಲ ಚಲದಂಕರಾಮ ನಿಸ್ಸಂಕಮಲ್ಲರುಂ (ಕಾ. IV, ೪೬-೩೬; 1247); ಕಲಿಗಳ ಮುಖದ ಕೈ ಕಟಕಸೂಱೆಕಾಱ ಹುಸಿವರ ಸೂಲ ಕಡಿತಲೆಯ ಮಲ್ಲಂ . . . ಸಂಗಿರಾಯ ಒಡೆಯರು ದಳವತಿ ನಡದು ಬಟ್ಟಕಳದಲ್ಲಿ ಕೂಡಿದಲ್ಲಿ (ಕಾ. I, ೪೦-೬; 1415).

[ದೇ.ಕ ತಮಿ. ಪೊಯ್; ಮಲ. ಕೊಡ. ಪೊಯ್ = ಸುಳ್ಳು, ಭ್ರಮೆ; ಗೊಂಡಿ. ಬುಸಾನಾ]

ಪುಸಿ₂, ಹುಸಿ₂ (ನಾ). ೧. ಸುಳ್ಳು; ಸಟೆ; ಅಸತ್ಯ: "ತೊದಳ್ ನೂಳೆಂದು ನೆಱೆ ಪುಸಿಯೆನಲ್ಕನೃತಮಕ್ಕು" (ಕಬ್ಬಿಕ್ಕ. ೩೯); ಕುಸುಮಂ ಗಳೆಂಬ ಮಾತದು ಪುಸಿ ದಹನಮಯಂಗಳೆಂಬುಗಳ್ ಮನಸಿಜನಾ (ಕಬಿಂ. ೩-೦೬೪); ಸತ್ತನೆ ಮತ್ತೆ ಪುಟ್ಟುವಂ ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ (ಅದಿಪು. ೨-); ಪುಸಿ ಠಕ್ಕು ಠವುಳಿಗಳಲ್ಲಿ ಕಟ್ಟಿ ಎಸೆದು ಕೊಲ್ಲುವರೊ ನಿನ್ನವರು ಕೇಳಲ್ಲಿ (ಪುರಂಪ. ೨-೩೯-೪). ೨. ತೋರಿಕೆ; ಕೃತ್ರಿಮತೆ; ಸೋಗು: ಬಸವರಾಜಂ ಪುಸಿಯ ತಾಯ್ತಂದೆಗಳ್ ಪೋದುದಂ ಕಂಡಾದರಂ ಮಿಕ್ಕು ಸಂಸಾರದ ಭಾರವಿಳಿದು ನಲಿನಲಿದಾಡಿ (ಜಸ. ೨-೬); ಕೂಡೆ ಮಮ್ಮಲಮಱುಗಿ ಪುಸಿಗೆ ನಸುನಗುತೆ . . . ನಿನ್ನ ಸುತನು ಕುಡು ಮೂಡಿತುತ್ಸವಮೊಂದನಾ ದುಷ್ಟಬುದ್ಧಿ (ಕೃಬಿಶಾ. ೨೯-೩೪); ಮುಂಗುರುಳಗರ ಕಣ್ಣಮೊಳೊತ್ತಿ ಜಲವನು ಹಿಂಗದೆ ತಂದುಕೊಂಡಾಗ ಅಂಗನೆ ಪುಸಿಗೆ ದುಃಖಿಸುತೈದಿಯಾತನ ಮುಂಗಡೆಯಡ್ಡಗಟ್ಟಿದಳು (ಕಂಪಪಿ. ೬-೦೬೬). ೩. ಸಾರವಿಲ್ಲದುದು; ನಿಸ್ಸತ್ತ್ವವಾದುದು; ನಿಷ್ಪ್ರಯೋಜಕವಾದುದು: ನಿನ್ನ ನಾಥಿ ವಳಯಕ್ಕೆ ಪೂಗೊಳಂ ಪುಸಿ ನಿನ್ನ ನಿತಂಬಕ್ಕೆ ಪುಳಿನಸ್ಥಳಂ ಪಳಿವು (ಸಂಬರ. ೦೯-೦೬). ೪. (ಆಲಂ) ಅಸಾಧ್ಯ; ಅಸಂಭವ: ಇಂದಿನ ದಿನಂ ಸಕಲಜಗಕೆ ಕಡೆಗಾಲಮೇಂ ಬಂದುದೋ ಕಟಕಟಾ ಮತ್ಸುಭಟನಾವವಂ ನಿಂದು ಕಾದುವನವನ ತಾಯ್ ಪುಸಿ (ಶಿಪು. ೪೯-೬). ಹುಸಿ₂: ೧. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ (ಶಿಸಪ. ೨೩೩); ಕಂದನಶ್ವತ್ಥಾಮ ಹುಸಿಯೆನಗಿಂದು ಬೇಹ ಕುಮಾರ ನೀ ನಿನ್ನಿಂದ ತನ್ನಯ ಕೀರ್ತಿ ಮೆಱೆವುದು ಮೂಱುಲೋಕದಲಿ (ಕುಣ್ಯಾಪ್ರೋ. ೬-೩೦); ಬಲ್ಲೆನೆಂಬುವ ಮಾತು ಎಲ್ಲವೂ ಹುಸಿ ಕಾಣೊ ಬಲ್ಲರೆ ಬಲ್ಲೆನೆನಬೇಡ ಸುಮ್ಮನಿರಬಲ್ಲವನೆ ಬಲ್ಲ (ಸರ್ವಜ್ಞ. ೩೬೩). ೩. ಇವಳ ಕೆಣಕಿದು ಜೀವದಲಿ ಬದುಕುವ ಭವಬ್ರಹ್ಮಾಮರೇಂದ್ರರ ಹವಣು ಹುಸಿ (ಕೊರಣಾ. ೦-೦೦-೬). ೪. ಎಮ್ಮಯ ಪುರವನೊಂದಂಬಿನಲಿ ಗೆಲುವನೆ ತಾಯಿ ಹುಸಿ (ಕುಣ್ಯಾಕ. ೬-೯). ೫. ಪುಸುಕಲು; ಲೊಡ್ಡು; ಪಿಸುಗು: ಪ್ರೆಸ್ಸಿನ ಕಟ್ಟು ಸಡಿಲವಾಗಿದ್ದರೆ, ಹಗ್ಗ ಹುಸಿಯಾಗಿದ್ದರೆ, ಒಳಗಿರುವ ಹಾಳೆಗಳೂ ಗಿಡ ಮಾದರಿಗಳೂ ಚಲ್ಲಾಪಿಲ್ಲಿಯಾಗಿ ಚೆದುರಿ ಕೈಗೆ ಸಿಕ್ಕದೆ ಹೋಗುತ್ತವೆ (ಪಸುಹೂ. ೩೨೬). 'ಪುಯ್' ವರಾ.

ಪುಸಿಗೆಗೊಯ್ದೊಂ = ಒಂದು ಬಿರುದು: ಕೊಮರವಿಳಾಸಂ ತಿಱ್ದಾನೆ ಮಲ್ಲ ನೊಟಮ್ಬರ ಭೀಮಂ ಪುಸಿಗೆಗೊಯ್ದೊಂ ರಾಜರಾಜಾಶ್ರಯಂ ಶ್ರೀಮತ್ಪೊಟಲ್ಲೋರದೇವಂ (ಶಾಶಾ. IX-1, ೩೦-೩೨; 985). ಪುಸಿಗೆ ಪೇಸುವಂ, ಪುಸಿಗೆ ಪೇಸುವೊಂ = ಅಸತ್ಯವನ್ನು ಕಂಡರೆ ಹೇಸುವವನು; ಒಂದು ಬಿರುದು: ಅದಟಜ್ಞಗಳ್ಳನ್ ಅಯ್ಯನ ಚಕ್ರಿ ಪುಸಿಗೆ ಪೇಸುವನ್ ಓಟಕ್ಕೆ ನಾಣ್ಜುವನ್ (ಪ್ರಿಅಂ. ೦೯೦೬; ೦೩. II, ೯; 900); ಚಂಗಗಾವುಣ್ಡಂ ಪುಸಿಗೆ ಪೇಸುವೊಂ ಪಿಸುಣ್ಗೆ ಕಾಯ್ವ (ಶಾಶಾ. IX-1, ೬೬-೯; 984). ಪುಸಿ ಪೊರ್ದು = ಹುಸಿ ಹೋಗು; ವ್ಯರ್ಥವಾಗು; ತಪ್ಪು: ಪುಸಿ ಪೊರ್ದದ ತನ್ನೊಂದು ಬಾಣದಿಸುಗೆಯಿಂ ರಾವಣ ಕುಂಭ ಕರ್ಣ ಮಾರೀಚ ಸುಬಾಹುಪ್ರಭೃತಿದಾನವರಂ ತತ್ತಱದಱಿದ ರಾಮನೇಂ ಗಾವಿಲನೇ (ರಾಮಾಕ್ಷ. ೦೨೬-೬). ಪುಸಿ ಮಾಡು, ಹುಸಿ ಮಾಡು = ೧. ಸುಳ್ಳಾಗಿಸು: ಕುರುಕುಲಶೋಣಿತಪಾದವದ್ಮತಳಂ ತಳೋದರಿಗೆ ವೃಕೋದರನಾಗಿಪಂ ಕಚಬಂಧಬಂಧುರತೆಯನಾತನ ಪೂಣ್ದ ಪೂಣ್ಕೆ ತಿಲಾ ತಳಾಕ್ಷರಮೆನಿಸಿರ್ವ ಜನೋಕ್ತಿಯಂ ಪುಸಿ ಮಾಟ್ಪನೇ (ಗದಾಯು. ೦-೬೦); ಎಡೆವಱಿಯದೆ ವಾಚ್ಯಮನಾ ಹಾಚಕಮೊಡವೆರೆದಲ್ಲದೆ ಬೇರ್ವಡಿಸಿರದೆಂದಡಿ ಗಡಿಗುಸಿರ್ವ ಬುಧರ ಬಲ್ಲವಿಕೆಯ ನುಡಿಯಂ ಹುಸಿ ಮಾಡಿ (ಜಯಕಾ. ೩-೩೩). ೨. ಸುಳ್ಳೆಂದು ಸಾಧಿಸು: ಇದುಚಿತಕವಿಪರಿಚಿತಜಾಟುಜಾವಳಮಿದೆಮ್ಮ ಮನಮನಾರಯ್ವ ನಿನಗೆ ನೆವಮಪ್ಪುದೆಂದು ಪುಸಿ ಮಾಡಿ ನಸುನಗುವುಪೇಂದ್ರನ ಮುಖೇಂದುಗಿಂದು ಮಂದಸ್ಮಿತದಂದ್ರಿಕೆಯನೋಲಗಿಸಿ (ಪರ್ವಪು. ೪-೦೪೫). ಪುಸಿಯಾಗು, ಹುಸಿಯಾಗು = ಸುಳ್ಳಾಗು; ವ್ಯರ್ಥವಾಗು; ನಿಷ್ಫಲವಾಗು: ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕಮಿಗಳಾ ನುಡಿ ಪುಸಿಯಾಯ್ತು (ಸಂಪಣ. ೦೩-೪); ಸ್ಥಿರಸತ್ಯವ್ರತಿಯೆಂದು ಧರ್ಮರುಚಿಯೆಂದಾ ಧರ್ಮಪುತ್ರಂ ದಯಾಪರನೆಂದೆಲ್ಲರ ಪೇಟ್ದ ಮಾತು ಪುಸಿಯಾಯ್ತು (ಗದಾಯು. ೩-೨೩); ಮೇಲುಜಗವೇಳೋಡಿದವು ಧ್ರುವನಾಲಯಕೆ ನೆಲೆದಪ್ಪಿದುದು ಗ್ರಹಮಾಲೆ ಶಾರಾರಾಸಿ ಜೋಯಿಸರೋದು ಹುಸಿಯಾಯ್ತು (ಕುಣ್ಯಾಪ್ರೋ. ೦೯-೦೯); ಭೂಮಿಯಲ್ಲಿ ಬೆಳೆ ಹುಸಿಯಾದೀತು (ಕಾಂಸಂ. ೮೬-೩). ಪುಸಿಯಿಲ್ಲದಾತಂ = ಸುಳ್ಳಾಡದವನು; ಸತ್ಯವಂತ; ಒಂದು ಬಿರುದು: ಮಹಾಸಾಮನ್ತಂ ಪ್ರತ್ಯಕ್ಷಭೂರಿಶ್ರುವಂ ಪುಸಿಯಿಲ್ಲದಾತಂ × × × ಗಣಂ

ಕನ್ನನ ಬಂಟಂ ಕಟಕಪ್ರಾಕಾರಂ ಗಿರಿದುರ್ಗಮಲ್ಲಂ ರಣವೀರಂ (ಸೌಇಇ. XI-i, ೪೯-೪ ; 1002) ; ಪ್ರತ್ಯಕ್ಷಭೂರಿಶ್ರವಂ ಪುಸಿಯಿಲ್ಲದಾತಂ ಕಂನನ ಬಂಟಂ ಕಟಕಪ್ರಾಕಾರಂ (ಸೌಇಇ. XI-i, ೩೦-೦೦ ; 1005). ಪುಸಿಯುಳ್ಳಂ = ಸುಳ್ಳುಗಾರ ; ಅನೃತವಾದಿ : ಪುಸಿಯುಳ್ಳಂ ಕರಡಿಯಾಗಿಯುಂ ಹಿಂಸಾನಂದಮುಳ್ಳಂ ಕುಱಿಯಾಗಿಯುಂ . . . ನರಕದೊಳ್ ಪುಟ್ಟಿ ಪಲಕಾಲಂ ಸೈರಿಸಲ್ಬಾರದ ಮಹಾದುಃಖಕ್ಕೆ ಭಾಜನರಪ್ಪರ್ (ರರ್ಮಾಪ್ಯ. ೬-೦೬೬). ಪುಸಿವಂ = ಸುಳ್ಳು ಹೇಳುವವನು : ಅಸ್ಥಿರಂ ವಾಚಾಳಂ ಪುಸಿವಂ ಮೂರ್ಖಂ . . . ಪಿಶಾಚಸತ್ತ್ವಂ ಮನುಜಂ (ಲೋಕೋಪ. ೦೧-೩೯) ; ಪುಸಿವಂಗೆ ಮಾಡಿದ ಹಿತಮುಂ ಕಳ್ಳಂಗೆ ಮಾಡಿದುಪಕಾರಮುಂ . . . ವೃಥೆ (ರರ್ಮಾಪ್ಯ. ೦೨-೬೦). [<ಪುಸ್ಸಿ./ತಮಿ. ಮಲ. ಕೊಡ. ಪೊಯ್]

ಪುಸಿಕ, ಹುಸಿಕ (ನಾ). ೧. ಸುಳ್ಳು ಹೇಳುವವನು ; ಸುಳ್ಳುಗಾರ : ಇಲ್ಲದ ಗುಣಮುಂ ಪೆಱರೊಳ್ ಸೊಲ್ಲಿಸುವಂ ತನ್ನೊಳುಳ್ಳ ಗುಣಮುಂ ತಾನಿಲ್ಲೆಂದಾಡುವ ಪುಸಿಕಂಗೆಲ್ಲಿಂದಂ ಬಂದುದಮಮ ಸುಜನತೆ ಚಿತ್ರಂ (ಪುಷ್ಪಕ್ರ. ೦-೩೬); ಹೆಂಗೊಲೆಗಂಜದಂ ಪಿಸುಣನತ್ಯಧಮಂ ಪುಸಿಕಂ . . . ಸಾರ್ವೆಡೆಯಲ್ಲವೆ ವಾಜಿಮುಂದುರಂ (ಪಳಸಂ. ೬೩೩); ಪುಸಿಕನಿವಂ . . . ಪೆರ್ಬುಸಿಯನೆ ಪೇಳ್ದಪಂ (ವೃಷಪಿ. ೩೯-೦೨೨). ಹುಸಿಕ : ೧. ಕುಶಲರೇ ಭೀಮಾರ್ಜುನರು ಪಾಲಿಸುವ ಬಿರುದೇ ಕೃಷ್ಣನದು ಹರಿ ಹುಸಿಕನೋ ಬೆಸಗೊಂಬೆವೆನುತಱಿಯಟ್ಟಿದನು ದ್ರೋಣ (ಕುಷ್ಠಾಪ್ರೋ. ೦೭-೨೭); ತನುರುಚಿಯ ಮುಂದಿನನ ರುಚಿ ಕಪ್ಪನುಪಮಾಕಾರದಲಿ ಹೃಷ್ಟಾತನು ಕುರೂಪನು ಶಾಂತದಲಿ ಶಶಿ ಬಿಸಿ . . . ಸತ್ಯದಲಿ ಧರ್ಮನು ಹುಸಿಕನತಿ ರೋಷದಲಿ ತಣ್ಣನೆ ದವಾನಳನೆಂದೊಡರಸನ ಪೊಗಳ್ವನಾರ್ (ಜೀವಂಸ. ೨-೪೨); ಒಸೆದಣ್ಣಗೆಱಗಿ ಬಂದವೆನೆಂದು ನಮ್ಮ ಚಾಳಿಸಿ ಪೋದ ನಿಮ್ಮ ಕುಮಾರ ಹುಸಿಕಗೆ ದೀಕ್ಷೆ ಸಲ್ವುದೆಯೆಂದು ಮಾವಾಜಿಗುಸುರ್ವೆವು (ಭರಸ. ೩೨-೭೭). ೨. ವಂಚಕ ; ಕಪಟಿ : ಹಸಿದ ದಿಂಡುಕಂಗೆ ಭಕ್ತಂಗೆ ಎಸರದ ಧ್ಯಾನ ಉಂಟೇ . . . ಹುಸಿಧ್ಯಾನದಿಂದ ಜೀವದ ಅಸುಗಳ ಕೊಂಬವು ಇಂತಿವರಂತೆ ಹುಸಿಕರ ಭಕ್ತಿ ಕಿಸುಕುಳರ ವಿರಕ್ತಿ ಇವು ಹುಸಿ ಎಂದೆ (ಪೋಳಿಮಾ. ೩೭-೨೩೬) ; ಸಕಲಮುನಿಜನದ ನಡುವಿತ್ತಿಳೆಯನಿತ್ತು ದಿಲ್ಲೆಂದು ನುಡಿವಂತಾ ಹುಸಿಕನೇ[ಪಾಠಾಂ. ನುಡಿದು ಹುಸಿವಂತಾಗಿ] ನೀನು (ಪಚಶಾ. ೬-೩೯). [ಪುಸ್ಸಿ + — ಕ್ಕ]

ಪುಸಿಗ, ಹುಸಿಗ (ನಾ). = ಪುಸಿಕ ೧ : ಪಲಬರ್ ಜೀಯೆನೆ ನನ್ನಿಯಂ ನುಡಿವನಂ ಪುಸಿಗನೆಂಬರ್ ಪುಸಿವಾತುಗನು ನೆಲದೊಳೀತನೆ ಪುಸಿಯಿಲ್ಲದವನೆಂಬರರಸುಗಳ್ಗಿದು ನೈಜಗುಣಮಾಗಿರ್ಕುಂ (ಪಂಚತಂ. ೩೦-೬) ; ಅನೃತಕ್ಕೆ—ಅಟ ಮಟಗಂ, ಮಾಳಿಗಂ, ಪುಸಿಗಂ (ಕಪುದ. ೦೯೭ ಪ್ರಯೋ) ; ಪುಸಿಗನನೆಗ್ಗನಂ ಪುರುಡುಗಾಱನಂ . . . ಬಱುದೂಱುಗಾಱನಂ ಕಸಗಳೆದಿತ್ತು ಮನ್ನಿಪರ ಮಕ್ಕಳ ಪಟ್ಕಿಗೆ ತಂದು ಸೊರ್ಕಿಸಾ (ಪಳಸಂ. ೬-೦೦೯). ಹುಸಿಗ : ನಿನ್ನ ನಡೆಗೆ ನಲ್ಲರು ನಾರಿಯರೊಲಿವರು ಹುಸಿಗ ನಾನಲ್ಲ ರಾಜೇಂದ್ರ ನಿನ್ನಾಣೆ (ಭರಸ. ೬೬-೩೯) ; ಹುಸಿಗನನ್ನು ದೂರದಲ್ಲಿಯೆ ಬಿಟ್ಟು ಕಳೆ (ಪಟ್ಟಿಲಿ. ೦೦೦-೦೩). [ಪುಸ್ಸಿ + — ಗ್ಯ]

ಪುಸಿಗಂಡು (ನಾ). ತೋರಿಕೆಯ ಪರಾಕ್ರಮ ; ಸುಳ್ಳುಕಲಿತನ : ಪುಸಿಗಣ್ಡೆಂದಿದಿರಾನ್ತರಂ ತಮಿಸಿ × × × ಸದ್ಭಕ್ತಿಯಿಂ ಬೆಸನೇಂ ನೀಂ ಶರಣೇಂದು ಬಂದ ರಿಪುಭೂಪಾಳರ್ಕ್ಕಳಂ ಕಾದು (ಕಾಲ. ೯೦-೦-೦೯ ; 1082). [ಪುಸ್ಸಿ + ಗಂಡು]

ಪುಸಿಗಾಣು (ಕ್ರಿ). ೧. ಸುಳ್ಳೆಂದು ಭಾವಿಸು. ೨. ಮಾಯೆಯೆಂದು ತಿಳಿ : ಪ್ರಕೃತಿಯನೆ ಪುಸಿಗಾಣುವೀ ಚಿನುಮಯ ಗುರುಸಿದ್ಧನವಶೇಷವಾನೆಂಬುವನುಭೂತಿಸಾಮ್ರಾಜ್ಯಪರವಶಲಹರಿಯೆ (ಕೈಕಪ. ೩-೪೫-೩). [ಪುಸ್ಸಿ + ಕಾಣು (<ಕಾಣ್)]

ಪುಸಿಗಾಳೆಗ, ಹುಸಿಕಾಳಗ (ನಾ). ತೋರಿಕೆಯ ಯುದ್ಧ ; ಸುಮ್ಮನೆ ಮಾಡುವ ಕದನ : ಕೇಳೆಲವೊ ಸುಗ್ರೀವ, ನೀಂ ತಮ್ಮನೆಂಬೊಲವರಕೆ . . . ಪುಸಿಗಾಳೆಗಂಗೊಟ್ಟೊಡತಿ ಮಲೆತು ಕೊಬ್ಬಿದೆಯಲಾ ! (ಶ್ರೀರಾಮಾ. ೩೦೬-೦೪೨). ಹುಸಿಕಾಳಗ : ಕರ್ಣನು ಎರಡು ಸಾರಿ ಗುರಿಯಿಟ್ಟು ಬಾಣ ಸಂಧಾನ ಮಾಡುವುದಿಲ್ಲ ; ನಮ್ಮಂಥವರು ಹುಸಿಕಾಳಗವನ್ನು ಮಾಡರು (ಪಕಶಾ. ೨೯೯). [ಪುಸ್ಸಿ + ಕಾಳೆಗ]

ಪುಸಿಗಾಱ (ನಾ). = ಪುಸಿಕ ೧ : ವಂಚಕನಾಗಿ ನಡೆದುಕ್ಕೊಂಡ ಬಳಿಕ್ಕಂ ನಿನ್ನನ್ನರಪ್ಪ ಪುಸಿಗಾಱರ ಸಮೀಪದೊಳಾನೊಂದು ನಿಮಿಷಮಾತ್ರಮಂ ನಿಲಲಾಱಿಂ (ಶಾಕಶಾಂ. ೨೩). [ಪುಸ್ಸಿ + — ಕಾಱ]

ಪುಸಿಗೂರ್ಮೆ (ನಾ). ತೋರಿಕೆಯ ಪ್ರೇಮ ; ಕಪಟಸ್ನೇಹ : ಈತಂಗೆ ಪೊನ್ನೆತ್ತಣಿಂ ಬರ್ಪುದಿದನಾರಯ್ವೆನೆಂದು ಪುಸಿಗೂರ್ಮೆಯಿಂದನೇಕ ಚಾಟುಕಾರದಿಂ ನಂಬಿಸಿ ಮೆಲ್ಲನೆ ಬೆಸಗೊಳ್ವುದುಂ (ರರ್ಮಾಪ್ಯ. ೨-೦೧೬) ; ಬಕವೇಸಿತನದಿಂದೊಡಲ ಸೂಡಿಂಗಿರಲಾಱದೆ ಪುಸಿಗೂರ್ಮೆಯಿಂದೋಪಳ ನಪ್ಪಿಕೊಂಡು ಮೆಲ್ಲನಿಂತೆಂದಂ (ರರ್ಮಾಪ್ಯ. ೩-೩೩). [ಪುಸ್ಸಿ + ಕೂರ್ಮೆ]

ಪುಸಿಗೆಯ್, ಪುಸಿಗೈ (ನಾ). ೧. ಮೋಸಗೊಳಿಸುವುದಕ್ಕಾಗಿ ಮಾಡಿದ ಹಸ್ತಚಲನೆ,—ಕೈಸನ್ನೆ : ಇದಿರ್ಚಿ ನಿಂದ ಚಳಕದೊಳ್ ಪುಸಿಗೆಯ್ಯಂ ತೋಱಿ ಅದರ್ಕವಂ ತನ್ನುಳ್ಳ ಬಲ್ಪನಿತಱೊಳಂ ಮುಂತಣ್ಗೆ ನಿಂತು ತುಂಬುಗೆಯ್ಯಿಕ್ಕುವಿನಂ (ಪಳಸಂ. ೦೬೪-೦೩). ಪುಸಿಗೈ : ೨. ದುರ್ಬಲವಾದ ತೋಳು ; ಸತ್ತ್ವಹೀನವಾದ ಬಾಹು : ನಿನ್ನಯ ಸತ್ತ್ವಸಮೃದ್ಧಿಯಪ್ಪಿನಂ ಮಣಿಯದೆ ಪೊತ್ತುದಿನ್ನೆವರಮಿಾ ಪುಸಿಗೈಯದಱೊಂದು ಪೇದಮುಂ ಕ್ಷಣದೊಳೆ ತೂಳ್ದಿ ತಾಳ್ದುವುದು ಪಿಂಗದೆ ಪುತ್ರಸಮಸ್ತ ಧಾತ್ರಿಯಂ (ಸಂತ್ರಪ್ರ. ೪-೦೯). [ಪುಸ್ಸಿ + ಕೆಯ್ಯ್ಯ]

ಪುಸಿಗೆಳೆ (ನಾ). ಸುಳ್ಳು ಗೆಳೆತನ ; ಕಪಟಸ್ನೇಹ : ಒಳಗೊಳಗೆ ಕಳ್ದರಂ ಪುಸಿಗೆಳೆಯಿಂದೊಳಗೊಳಗೆ ಸುಟಿದು ಪರವನಿತಾಸಂಕುಳದೊಳ್ ನೆರೆದರನ ವರಘಮೊಳಗೊಳಗಿಱಿಗುಂ ವಿಚಿತ್ರರೋಗಚ್ಛಲದಿಂ (ಪರ್ಶಪು. ೦೦-೨೬). [ಪುಸ್ಸಿ + ಕೆಳ್ಳ್]

ಪುಸಿಗೈ 'ಪುಸಿಗೆಯ್' ನೋ.

ಪುಸಿಚರಿತ್ರ (ನಾ). ಕಪಟದ ನಡವಳಿಕೆ ; ವಂಚಿಸುವ ನಡವಳಿಕೆ ; ಮೋಸದ ವ್ಯವಹಾರ : ಪುಸಿದೈವದ ಪುಸಿಯಱಿತದ ಪುಸಿಧರ್ಮದ ಪುಸಿಚರಿತ್ರದಾಗಮದೆಡೆಯೊಳ್ ಪುಸಿಯೆನಿಪ[ಪಾಠಾಂ. ಪುಸಿವ ಬಲ್ಮೆಯೋದುಗಳಂ ತಾಂ ಪಸರಿಸುವ] ಠಕ್ಕಸಮಯದ ದೆಸೆವೋಗರದೆಂತುಮಾವ ತೆಱದಿಂ ಜೈನರ್ (ಸಮಪ. ೬-೭೩). [ಪುಸ್ಸಿ + ಚರಿತ್ರ]

ಪುಸಿದೈವ (ನಾ). ಕ್ಷುದ್ರದೇವತೆ ; ಕೀಳುದೇವತೆ : ಪುಸಿದೈವದ ಪುಸಿಯಱಿತದ ಪುಸಿಧರ್ಮದ ಪುಸಿವ ಬಲ್ಮೆಯೋದುಗಳಂ ತಾಂ ಪಸರಿಸುವ ಠಕ್ಕಸಮಯದ ದೆಸೆವೋಗರದೆಂತುಮಾವ ತೆಱದಿಂ ಜೈನರ್ (ಸಮಪ. ೬-೭೩). [ಪುಸ್ಸಿ + ದೈವ]

ಪುಸಿಧರ್ಮ (ನಾ). ಹೀನವಾದ ಧರ್ಮ ; ಹೇಯಧರ್ಮ : ಪುಸಿಧರ್ಮದ ಪುಸಿಚರಿತ್ರದಾಗಮದೆಡೆಯೊಳ್ . . . ದೆಸೆವೋಗರದೆಂತುಮಾವ ತೆಱದಿಂ ಜೈನರ್ (ಸಮಪ. ೬-೭೩). [ಪುಸ್ಸಿ + ಧರ್ಮ]

ಪುಸಿನಡು, ಹುಸಿನಡು (ನಾ). (ಇಲ್ಲವೇ ಇಲ್ಲವೆಂದು ಭಾಸವಾಗುವಷ್ಟು) ತೆಳುವಾದ ಸೊಂಟ : ಬಡನಡುವಿನ ಬಳುಕುವ ನಡುವಿನ ಸೆಳೆನಡುವಿನ ಸಿಂಗವಸುಳೆನಡುವಿನ ಪುಸಿನಡುವಿನ ಸಂದೆಗನಡುವಿನ ಪಿಡಿನಡುವಿನ . . . ಮದಯೌವನೆಯರು ನಡೆದರು (ಪಯಶಾ. ೫-೩೩); ಸಸಿಮೊಗದ ಕಿಸುವಾಯ ಪುಸಿನಡುವಿನರಸಿ (ರಾಮಾಶ್ವ. ೬೭-೨೩). ಹುಸಿನಡು : ಹುಸಿನಗೆ ನಗುತ ಗಂಡನ ಕೂಡೆ ನುಡಿವರಾ ಹುಸಿನಡುವಿನ ಸೊಬಗೆಯರು (ಭರಸ. ೪-೩೦). [ಪುಸ್ಸಿ + ನಡು]

ಪುಸಿನಲ್ಮೆ (ನಾ). = ಪುಸಿಗೂರ್ಮೆ : ತೆತ್ತುತನಕ್ಕೆ ತೆತ್ತುತನಮಂ ಪುಸಿನಲ್ಮೆಗೆ ದೋದಿ ನಲ್ಮೆಯಂ ಜತ್ತುಕಱಿಂಗೆ ಜತ್ತುಕಱು . . . ಪೊಣರ್ಚುತ್ತುಮುಪಾಯದಿಂ ಕಳಿಯೆ ಕೂಡುವನಂ ವಿಭು ಕಂಡು ಮೆಚ್ಚಿದಂ (ಕಾವ್ಯಕಾ. ೧೮೫ ಕೂಪ್ರಳ); ಕೊಯ್ಯದೆ ಮಾಣನೊಂದಿರುಳೆ ಕುಂತಳಮಂ ಪುಸಿನಲ್ಮೆದೋಱಿ (ಸುಲ್ಲಿಪು. ೭-೧೩). [ಪುಸಿ$_2$ + ನಲ್ಮೆ]

ಪುಸಿನಿದ್ದೆ, ಹುಸಿನಿದ್ದೆ (ನಾ). ಸುಳ್ಳುನಿದ್ದೆ; ನಿದ್ರೆಯ ಸೋಗು; ಠಕ್ಕುನಿದ್ದೆ : ಬಗೆ ಗೆಲಲೆಂದು ಕಾದಿ ಪುಸಿನಿದ್ದೆಯೊಳಾನಿರೆ ಲಲ್ಲೆಗೆಯ್ದು . . . ಮೊಗಂ ಮೊಗದತ್ತ ಸಾರ್ಚಿ ಬೆಚ್ಚಗೆ ನಿಡುಸುಯ್ದ ನಲ್ಲಳ ಮುಖಾಂಬುಜಸೌರಭದೊಳ್ ಪೊದಟ್ಟದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ (ಸಂಪಶಾ. ೪-೦೬). **ಹುಸಿನಿದ್ದೆ** : ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು (ಅರಳು. ೦೭೭-೭). [ಪುಸಿ$_2$ + ನಿದ್ದೆ]

ಪುಸಿನುಡಿ$_1$, ಹುಸಿನುಡಿ$_1$ (ಕ್ರಿ). ಸುಳ್ಳು ಹೇಳು ; ಸುಳ್ಳಾಡು : ಜಿನದೇವನ ಬಯಕೆಯಂ ಮಱೆಯಿಸಿ ಪುಸಿನುಡಿದ ಧನದೇವನ ಜಿಹ್ವೋತ್ಪಾಟನಂಗೆಯ್ವುದುಮಂ (ಕಾವುಂಪು. ೬೬); ರಾಮಂ ಕಲಿಸಿದ ತೆಱದಿಂ ಈಮೆಗೆ ಪುಸಿನುಡಿದು ರಥಮನೇಱಿಸಿಕೊಂಡಾ ಭೀಮಾಟವಿಯಂ . . . ಕೃತಾಂತಮುಖನೆಯ್ತಂದಂ (ಪಂಚಾಮ. ೧೫-೭೫) ; ಪುಸಿನುಡಿವಂಗೆ ಬಾಯ್ನಿ ನಗಮೆಯ್ದುದು ನಾಲಗೆಯೊಂದು ಸಾಲವೆಂದೆಸಟಿಸಟಾಗಿ ಸೀಳ್ದು ನಿಡು ನಾಲಗೆಯಂ ಕಟದೆಲ್ವು ಸೀಳೆ ಸೀಳಿಸಿ ಕಟವಾಯ್ಗಳಂ ಹುಸಿಯೊಳಾದ ಫಳಂ ಸವಿನೋಡಿದೆಂದು ಗಾತ್ರಿಸುವರನೇಕರೂಕ್ಷವಿಷತಿಕ್ತ ಕಠೋರಮೆನಿಪ್ಪ ಖಾರಮಂ (ಅಪಂಪು. ೯-೩೬). **ಹುಸಿನುಡಿ$_1$** : ಅರವರಿಸದೀ ಸಭೆಯೊಳೆನ್ನಯ ಸಮಕ್ಷದೊಳು ಹುಸಿನುಡಿವರೇ ಕುಡದೆ ಎನ್ನಯ ಕುಮಾರಂಗೆ(ಬಸರ. ೦. ೫೯). [ಪುಸಿ$_2$ + ನುಡಿ$_1$]

ಪುಸಿನುಡಿ$_2$, ಹುಸಿನುಡಿ$_2$ (ನಾ). ಸುಳ್ಳುಮಾತು ; ಅಸತ್ಯದ ನುಡಿ : ಪುಸಿನುಡಿಯ ವಿಷ[ಪಾಠಾಂ. ಪುಸಿಯನೆ ನುಡಿವ]ವಿಪಾಕದ ಮಸಕದೆ ಮುಖ ರೋಗಮಾದವೋಲಿನಿತಾನುಂ ಬಸವಲ್ಲದುಸಿರ್ವರೆಂದುಂ ಪೊಸಸಿರಿಯಿಂ ಮೈಮೆವೆತ್ತ ಮಾಯ್ದ ಮನುಷ್ಯರ್ (ಕಾದಂಪೂ. ೫೬೨); ದೇವಿಯರ್ಗೆನ್ನ ದೂಸಱಿಂ ಪುಸಿನುಡಿಯಂ ಮದೀಯ ಜನಕಂ ನುಡಿದಂದು ಜನಾಪ ವಾದವೆಣ್ಣೆಸೆಗಮನರ್ಗಳಂ ಪರೆಗುಂ (ಪಂಚಾಮ. ೬-೦೦೪); ಶಿವಶರಣರಿಂದೆ ಪುಸಿನುಡಿ ಬರ್ಪುದೆ (ಸಂಪು. ೪-೨೪). **ಹುಸಿನುಡಿ$_2$** : ಅವನ ಹುಸಿನುಡಿಗಳನ್ನು ಕೇಳಿ ನನಗೆ ಬೇಸರವಾಗಿದೆ (ಕೂಡಿ). [ಪುಸಿ$_2$ + ನುಡಿ$_2$]

ಪುಸಿಬಸನ (ನಾ). ಸುಳ್ಳು ಹೇಳುವ ಚಟ ; ಸುಳ್ಳಾಡುವ ದುರ್ವ್ಯಸನ : ಪುಸಿಬಸನಮೆಂದು ಕೆಲಬರ್ ಕುಸಿವರ್ ನಾಲಗೆಯನಿಕ್ಕುಟಿಕೊಳ್ ಪರವಧುದುರ್ವ್ಯಸನಂ ನಿನಗೆಂದಮರ್ದಪ್ಪಿಸುವರ್ ಕೆಂಪೆಸೆಯೆ ಕಾಯ್ದುಯಃ ಪುತ್ರಿಕೆಯಂ (ಅದಿಪು. ೫. ೮೭). [ಪುಸಿ$_2$+ಬಸನ (<ಬೆಸನ$_2$)]

ಪುಸಿಬಾದಿ (ನಾ). ಸುಮ್ಮನೆ ವಾದ ಮಾಡುವವನು ; ವಿತಂಡವಾದಿ : ಕಡುಚಾಗಿ, ಕಡುಗೆಲಸಿ, ಪುಸಿಬಾದಿ, ಬಲ್ಲುಜ್ಜುಗಿ (ಕಬ್ಬಾಪು. ೩೨೯ ಪ್ರಯೋ). [ಪುಸಿ$_2$+ಬಾದು$_1$+ —ಇ$_3$]

ಪುಸಿಮಾತು 'ಪುಸಿವಾತು' ನೋ.

ಪುಸಿಮುಳಿಸು (ನಾ). ೧. ಸುಳ್ಳುಕೋಪ ; ತೋರಿಕೆಯ ಮುನಿಸು : ಅವಳೆನ್ನಂ ವಂಚಿಸಿದಪರಾಧಮನಾಂ ಸೈರಿಸುವೆನೆ ನೋಡೆನುತಮೆಟ್ಟು ಪುಸಿಮುಳಿಸಿಂದಂ (ಕಾದಂಪೂ. ೭೭೯); ಒರ್ವನಳವಿದಪ್ಪಿ ಕೂರ್ತೆಳೆಯಳಂ ಪಟಿಕೆಯ್ದೆಯೆಂದು ಪುಸಿಮುಳಿಸಂ ತಳೆವುದುಮವಳ್ ಬೆಚ್ಚಿ ಕಾಲ್ಗೆಱಗುವುದುಂ (ಸಂಪ್ರಪು. ೬-೫೨ ಪ). ೨. ನಿಷ್ಕಾರಣವಾದ ಕೋಪ : ಈ ಪುಸಿಮುಳಿಸೇಕೆ ಪೇಟ್ ಕೆಳೆಯ ನಿನ್ನಯ ಕೂರ್ಮೆಯದೆತ್ತವೋಯ್ತು ನೋಯಿಸದಿನಿಸೆಟ್ಟು, ನೋಡಿ ನುಡಿ (ಕಾದಂಪೂ. ೯೦೩). 'ಹುಸಿಮುನಿಸು' ಪರಾ. [ಪುಸಿ$_2$ + ಮುಳಿಸು$_2$]

ಪುಸಿಯಮೆ (ನಾ). ಸುಳ್ಳಾಡದಿರುವಿಕೆ ; ಸತ್ಯವಂತಿಕೆ : ಪುಸಿಯಮೆಯನ್ನ ಪೊಗಟಿಲ್ಲಂ ನೋಯದವೊಲೆಲ್ಲಾ ಅಱಮುಮಂ ಕೊಡುಗುಂ (ಕುಱಳ್. ೦-೩೦-೬). [ಪುಸಿ$_1$ + — ಅಮೆ$_2$]

ಪುಸಿಯಳವು (ನಾ). ತೋರಿಕೆಯ ಸಾಮರ್ಥ್ಯ : ತವಕದೊಳ್ ಪುಸಿಯಳವು ತಕ್ಕೆಯೊಳ್ಳಳವು ಮಿಱುವ ನೇಹದೊಳ್ನುಸುಳು . . . ಸೇರುವೆಯಾಗಿ ನೆಲೆಗೊಂಡ ಗಣಿಕೆಯರ ತಂಡಮಿಾ ತೆಱದೆ ಚೆಲ್ವಂ ಪಡೆದುದು (ಕೃಷ್ಣಾ. ೬-೩೪). [ಪುಸಿ$_2$ + ಅಳವು]

ಪುಸಿಯಳಿಪು (ನಾ). ಸುಳ್ಳು ಪ್ರೀತಿ ; ತೋರಿಕೆಯ ವ್ಯಾಮೋಹ : ಪುಸಿಯಳಿಪಂ ನಿಮಿರ್ಚಿ ತಮಗಿಲ್ಲದ ಬೇಂಟಮನುಂಟುಮಾಡಿ ಕೂರಿಸಿ ಕೂರ್ತರಂತೆ ಪುರುಡಂ ಪೊಸೆದು . . . ಮುಟ್ಟದ ಮುನ್ನಮೆನ್ನರಂ ದೆಸೆವಲಿಗೆಯ್ದರೇನೊ ಕಡುಢಾಳೆಯರೊಂದಿರುಳಲ್ಲಿ ಸೂಳೆಯರ್ (ಪರ್ಮಾಪು. ೫-೦೦೩). [ಪುಸಿ$_2$ + ಅಳಿಪು$_3$]

ಪುಸಿಯಾಡು, ಹುಸಿಯಾಡು (ಕ್ರಿ). ಸುಳ್ಳು ಹೇಳು; ಸಟೆಯಾಡು : ಅಱಿಪದೆ ನಿನ್ನಂ ಪುಸಿಯಾ[ಪಾಠಾಂ. ಮಾ]ಡಿ ಕಾಡಲೆನಗೇಂ ದೊರೆಯೇ (ಪಂಪಶಾ. ೬-೪). **ಹುಸಿಯಾಡು** : ಹುಸಿಯಾಡಬೇಡ ಸುಳ್ಳ! (ಸಂಪ್ರಸ. ೦೦೦-೦೦). [ಪುಸಿ$_2$ + ಆಡು$_1$]

ಪುಸಿಯುಸುಬು (ನಾ). (ಮೇಲುನೋಟಕ್ಕೆ ಗಟ್ಟಿಯಾಗಿ ಕಂಡರೂ) ಕೆಳಗೆ ಕುಸಿಯುವ ಮರಳು; ಹುಸಿಮರಳು : ಕೆಸರಿನೊಳ್ ನೀರಿನೊಳ್ ಪುಸಿಯುಸುಬಿನೊಳ್ ಸಿಲ್ಕಿದಾ ಕಪಿಕಟಕದ ಪ್ರಕಟಸಂಕಟವನೇನೆಂದೆನಕಟಾ ದಶಗ್ರೀವಸುತಶ್ರೇಷ್ಠಕೂಟವಿದ್ಯಾಟೋಪದಿಂ ! (ಶ್ರೀರಾಮಾ. ೬೩೪-೦೩೬). [ಪುಸಿ$_2$+ಉಸುಬು (<ಉಸುಕು)]

ಪುಸಿಯೊಲವು (ನಾ). =ಪುಸಿಗೂರ್ಮೆ : ಪುಸಿಯೊಲವಿಂದಮೆನ್ನನಿರದೊಪ್ಪಿಸಿ ತೋರ್ಪುದಱಿಂದಮಾಂ ಪ್ರತಾರಿಸಿದವನಾಗದಿರ್ದಪನೆ ದೇವಿಯ ಚಿತ್ತಮಂ (ಕಾದಂಉ. ೪೦೩). [ಪುಸಿ$_2$+ಒಲವು$_1$]

ಪುಸಿಯೋತ (ನಾ). ಸುಳ್ಳಾದುದು ; ಅಸತ್ಯವಚನ : ಪುಸಿಯೋತದ ಮಾತಿನೊಂದು ಭೀತಿಯಿಂ ಮಾತೆಯಂ ತೋಱಿದೆನಾಣ್ಮನೊಳ್ ದ್ರೋಹದೆಣಿಕೆಯಿನಲ್ತು (ರಾಮಾಶ್ವ. ೬೫-೦೦). [ಪುಸಿ$_2$+ಓತ$_1$]

ಪುಸಿವಡೆ (ನಾ). ಕೃತಕಸೇನೆ; ಮಾಯಾಸೈನ್ಯ : ನಾಲ್ಕುಂ ತೆಱದ ಪುಸಿವಡೆಯಂ ಬಿಜ್ಜೆಯಿಂ ಪುಟ್ಟಿಸಿ (ಕಬ್ಬಿಗಾ. ೦೧೬); ತಿಸುಳಿ ಬೇಗದಿಂ ಪುಟ್ಟಿಸಿದಂ ಪುಸಿವಡೆಯಂ (ಕಬ್ಬಿಗಾ. ೨೪೯). [ಪುಸಿ$_2$+ಪಡೆ$_2$]

ಪುಸಿವಾತು, ಪುಸಿಮಾತು, ಹುಸಿಮಾತು (ನಾ). ಸುಳ್ಳು; ಸಟೆ; ಅನೃತವಚನ : ವಿಪ್ರನತಿಧೈರ್ಯತೆಯಂ ಮುಂತಿಟ್ಟು ಗಿರಿಜೆಯೊಡನು ಸಿರ್ದಂ ತಡಬಡಿಸುತೆ ಮಿಸುಪ ಪೊಸ ಪುಸಿವಾತಂ (ಗಿರಿಕ. ೯ ೯೯) ; ಪುಸಿವಾತಿನಿಂದ ಬಹುಶಿಶುವಧೆಯು ಕರಲೇಸು (ಪವಮೋ. ೫-೮). **ಪುಸಿಮಾತು** : ಕೊಟ್ಟೆನೆಂದಾ ವೃಷಭಮುಖನಲ್ಲಿ ನುಡಿವುತಿರೆ ಕೊಟ್ಟುದಿಲ್ಲೆನಗೆ ಪುಸಿಮಾತ ದೇಕೆನುತಮಿರೆ (ಬಸರ. ೦-೪೮). **ಹುಸಿಮಾತು** : ಅವರ ಹುಸಿಮಾತುಗಳನ್ನು ನಂಬಿ ಎಲ್ಲರೂ ಮೋಸ ಹೋದರು (ಕೂಡಿ). [ಪುಸಿ$_2$+ಮಾತು$_1$]

ಪುಸಿವಾತುಗ (ನಾ). ಸುಳ್ಳು ಹೇಳುವವನು; ಸುಳ್ಳ; ಹುಸಿಕ : ಪಲಬರ್ ಜೀಯೆನೆ ನನ್ನಿಯಂ ನುಡಿವನಂ ಪುಸಿಗನೆಂಬರ್ ಪುಸಿವಾತುಗನಂ ನೆಲದೊಳೀತನೆ ಪುಸಿಯಿಲ್ಲದವನೆಂಬರರಸುಗಳ್ಗಿದು ನೈಜಗುಣಮಾಗಿರ್ಕುಂ (ಪಂಚತಂ. ೫೦-೬). [ಪುಸಿವಾತು + —ಗ$_2$]

ಪುಸಿವಾರ್ತೆ (ನಾ). ಸುಳ್ಳುಸುದ್ದಿ : ಮುನ್ನೆ ಬಂದೀತನೆನಗೆ ಸೇನಾಭಂಗಮುಂ ಮನೋಭಂಗಮುಮಪ್ಪಂತು ಪುಸಿವಾರ್ತೆಯಂ ಪೇಟ್ದನೀ ಪುಸಿವನಂ ಕುಸಿಯೊತ್ತಿ . . . ದಸಿಯೊಳ್ತೆಗೆಯಿಂ (ಸುಳುಮಾ. ೭-೫ ಪ). [ಪುಸಿ$_2$+ವಾರ್ತೆ]

ಪುಸಿವುಗು (ಕ್ರಿ). ಅಪ್ರಾಮಾಣಿಕವಾಗು ; ವಂಚನೆ ಮಾಡು : ಪುಲಿಯಲೆಸೆ ಗುವಲ್ಲಿಯುಂ ಪೊಡವಿಯುಂ ಪೊರೆವಲ್ಲಿಯುಂ ಪುರುಳ್ಗೊಂಬಲ್ಲಿಯುಂ ಪುಸಿವುಗದೆ ಧರ್ಮಮನಾರಯ್ದು ನಡೆವುದು (ಶಿಸಂ. ೩೨-೦೦).

[ಪುಸಿ + ಪುಗು (< ಪೊಗು)]

ಪುಸಿವೇಳ್ (ಕ್ರಿ). ಸುಳ್ಳು ಹೇಳು ; ಸುಳ್ಳಾಡು : ಅಜಗಳಸ್ತನದಂತೆಸೆವ ನಿನ್ನ ಪೌರುಷಂ ನಿಜವಾದೊಡಾಂ ಸೈರಿಸುವೆನಲ್ಲದಿರ್ದೊಡಾ ರಜದಿಂದೆ ಪುಸಿವೇಳ್ದ ನಾಲಗೆಯನರಿವೆನು (ಕೈಲಾಸ. ೨೦-೩೬).

[ಪುಸಿ + ಪೇಳ್ (< ಪೇಱ್)]

ಪುಸಿವೋಗು. ಹುಸಿಹೋಗು (ಕ್ರಿ). ನಿಷ್ಫಲವಾಗು; ವ್ಯರ್ಥವಾಗು; ಬರಡಾಗು : ಬಱಂ ಪೆಱವುಂ ಭಯಂಗಳಾಕುಲತೆಗಳಿಲ್ಲ ಧಾತ್ರಿ ಪುಸಿ ವೋಗದು . . . ಎಂದೊಡಿನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹವುಂ (ಅಂಪಿ. ೦-೩೨); ಧರೆ ಪುಸಿವೋಗದೆ ಬೆಳಗೀ ಧರೆಯಂ ಭುಜಬಳದಿನಾಳ್ಗೆ ಭುಜಬಳಗಂಗಂ (ಎಳ. VII. ೩೨೫. ೯೭-೫೦; 1113). **ಹುಸಿಹೋಗು** : ದುಷ್ಟಬುದ್ಧಿಯ ಮತ್ತೊಂದು ಪ್ರಯತ್ನವೂ ಹುಸಿಹೋಗಿ ಅದಕ್ಕೆ ಮದನನೇ ಬಲಿಯಾದನು (ಕರ್ಣಾಳ. ೨೬೮); ಹೀಗೆ ಮಾಡಿದರೆ ಬೀಜವು ಹುಸಿಹೋಗದೆ, ನಾಟ ದೊಡ್ಡ ಬೆಳಸೂ ಬರುವದೆಂಬ ನಂಬಿಗೆಯೂ ಅವನಿಗಿದೆ (ಕನ್ನಡಾ. ೦೭೬); ಹುಸಿಹೋಗದೆಂಬ ಖಾತ್ರೀ ಇದ್ದ ಒಂದು ಮಹಾಸ್ತ್ರವನ್ನೂ ಅಭಿಮಂತ್ರಿಸಿ ಎಸೆದೆ (ರೀಕಹ. II, ೦೬೬).

[ಪುಸಿ + ಪೋಗು₁ (< ಪೋ₁)]

ಪುಸುಕಲು (ನಾ). ೧. ಜಾಳುಜಾಳಾದುದು; ಜಾಳುಜಾಳಾದ, ಪುಸುಕಲಾದ (Sleazy. ೧೦೪೫). ೨. ದುರ್ಬಲನಾದ ವ್ಯಕ್ತಿ ; ಅಶಕ್ತ : ಒಂದು ದಿನದ ಜ್ವರಕ್ಕೇ ಇಷ್ಟು ಸೊರಗಿ ಹೋಗಿದ್ದಿ, ತುಂಬಾ ಪುಸುಕಲು ನೀನು (ಕೂಡ). [←ಮರಾ. ಪುಸಕಾಲ್]

ಪುಸುಗೂರ್ (ನಾ). ಒಂದು ಊರಿನ ಹೆಸರು : ಬ್ರಹ್ಮಶಿವಬಟರರು ಪುಸುಗೂರ ಆಳೆ (ಎಳ. X, ೨೬೨. ೫೯-೩; ಶು. ೨೦೦). [? + ಊರ್]

ಪುಸ್ಕು (ನಾ). ಏನೂ ಆಗದಿರುವುದು ; ವಿಫಲತೆ : ಅವರೇ . . . ಇನ್ಸ್‌ಪೆಕ್ಟರರಿಗೆ ಶರಾಬು, ಕೋಳಿ, ದಾಳಿಗೊನೆಗಳ ಸಮಾರಾಧನೆ ಮಾಡಿಸಿ ನಂಬ್ರ 'ಪುಸ್ಕು' ಮಾಡಿಸಿದ್ದು (ಜಾಪ. ೦೦೩). [←ತುಳು. ಪುಸ್ಕು, ಪುಸ್ಕೂ]

ಪುಸ್ತ (ನಾ). ೧. (ಬಣ್ಣ ಮೊದಲಾದುವನ್ನು) ಬಳಿಯುವುದು ; ಲೇಪನ; ಲೆಪ್ಪದ ಕೆಲಸ : "ಪುಸ್ತಂ—೧. ಲೇಪ್ಯಾದಿಕರ್ಮಣಿ_ಬೊಳಿಯ ಮೆತ್ತುವ ಕೆಲಸ" (ಸಿದ್ಧಾಂತಿ. ೩೭೫). ೨. ಬರೆವಣಿಗೆ; ಬರೆಹ ; ಲೇಖನ. ೩. ಮರ, ಲೋಹ, ಮಣ್ಣು, ಗಾಜು ಮೊದಲಾದುವುಗಳಿಂದ ತಯಾರಿಸಿದ ವಸ್ತು : "ಪುಸ್ತ = ಮಣಿ ಗಾಸ ಮೊದಲಾದವಱಿಂದ ಮಾಡಿದ ಪುತ್ಥಳಿ" (ಶಾಸಾ. ೯); ನೇಪಥ್ಯವು ಪುಸ್ತ, ಅಲಂಕಾರ, ಅಂಗ ರಚನಾ, ಸಜ್ಜೀವ ಎಂದು ನಾಲ್ಕು ವಿಧ. ವಾಹನ, ವಿಮಾನ, ಬಂಡೆ ಬೆಟ್ಟ, ಧ್ವಜ ಕವಚಾದಿ ಪದಾರ್ಥಗಳು 'ಪುಸ್ತ' (ಶಿಸಂಶಾ. ೦೨). ೪. ಪುಸ್ತಕ; ಗ್ರಂಥ. [ಸಂ.]

ಪುಸ್ತಂಗ (ನಾ). ಒಂದು ಬಗೆಯ ಅಲಂಕಾರದ ವಸ್ತ್ರ : ಮುತ್ತಿನ ದಗಲೆ ವಜ್ರದ ಜೋಡು ಸಿರದಲಿ ಚಿತ್ರರವಹ ಸೀಸಕದ ಪುಸ್ತಂಗ ತೊಡರಾ ಗಾವಳಿಯಿಂದ ಭೂಪೋತ್ತಮ ನಡೆದನುಬ್ಬಿನಲಿ (ಕಂಪಿ. ೦೩-೦೨).

[←ತೆಲು. ಪುಸ್ತಂಗು]

ಪುಸ್ತಕ (ನಾ). ೧. ಕೈಬರೆಹದ ಅಥವಾ ಅಚ್ಚಾದ ಗ್ರಂಥ; ಹೊತ್ತಗೆ; ಬುಕ್ಕು : "ಶ್ರುತಂ ಲೇಪೆ ಭಿತ್ತಿಯೆನೆ ಪುಸ್ತಕಂ" (ಸುಂಗಾ. ೦೦೬-೦೩); ಅವಳ ಕಯ್ಯ ಪುಸ್ತಕದೊಳ್ಪರ್ವುವೆ ಲೋಕದ ಸಾರಸೂಕ್ತಿ . . . ಅ ವಧುಗೆ ಕಾವ್ಯದ ನಾಂದಿಯೊಳ್ಪರ್ವುವೆತ್ತುಮೆ (ಸೂಕ್ತಿಸು. ೦-೬); ರಾಯ ಕೇಳ್ಪೆ ನಿಮ್ಮ ಪಾಂಡವರಾಯಚರಿತವನೆಂದು ವೈಶಂಪಾಯನಗೆ ಬೆಸಸಿದನು ಕೊಟ್ಟನು ಬಳಿಕ ಪುಸ್ತಕವ (ಕುಮಾಕ. ೨-೯); ಅಸ್ತಮಯಕೆ ಉಣ್ಣಾ ಬಾರದು ಎಂದೆಂಬ ಪುಸ್ತಕವನು ಪಿಡಿಕೊಂಡು ವಿಸ್ತರಿಸುತವೋದುವಾರು ಹ್ಯರು ತಮ್ಮ ಬಸ್ತಿಯೊಳಗೆ ರಾಜಿಸಿದರು (ಅಭಿಯಾ. ೩-೦೨೦). ೨. [ಜೈನ] ಮುನಿಗಳ ಒಂದು ವರ್ಗ : ಗಚ್ಛಗಳು : ಪೊಗರಿ, ಪುಸ್ತಕ . . . ಮೋಘ, ಪಾಷಾಣ (ಕಶಾಂ. ೯೬).

ಪುಸ್ತಕದ ಬದನೆಕಾಯ್, ಪುಸ್ತಕದ ಬದನೆಕಾಯಿ = ಪ್ರಯೋಗಕ್ಕೆ ಸಾಧ್ಯವಾಗದ ಜ್ಞಾನ,_ ತಿಳಿವಳಿಕೆ._ ಅರಿವು : ಸಕಲಲಕ್ಷಣಕಾಗಿ ಬಿಱುಸು ಮಾಡಿದರೆ ಪುಸ್ತಕದ ಬದನೆಕಾಯಹುದು (ಶಶ. ೦-೯); ಬರಿಯ ಪುಸ್ತಕದ ಬದನೆಕಾಯಿ ಹೇಳುವವನಾದರೆ ಪ್ರಯೋಜನವಿಲ್ಲ (ಶೋರಪು. ೨೬). **ಪುಸ್ತಕದ ಹುಳು**= ಪುಸ್ತಕಕೀಟ : ಅವನೊಬ್ಬ ಪುಸ್ತಕದ ಹುಳು, ಯಾರ ಜೊತೆಯೂ ಸೇರುವುದಿಲ್ಲ (ಕೂಡ). **ಪುಸ್ತಕ ನುಂಗು** = ಪುಸ್ತಕ ವನ್ನೂ ಪೂರ್ಣವಾಗಿ ಓದು : ಅವನೆಂದರೆ ನನ್ನ ಜನಾರ್ದನ. ಪುಸ್ತಕ ನುಂಗುವುದರಲ್ಲಿ ಬಕಪಕ್ಷಿ (ಸೂಳಶ್ರ. ೦೩). **ಪುಸ್ತಕ ನೋಡಿಸು** = ಭವಿಷ್ಯ ಸೂಚನೆಗಾಗಿ ಪುಸ್ತಕದಲ್ಲಿ ಕಡ್ಡಿ ಹಾಕಿ ಓದಿಸಿ ತಿಳಿದುಕೊಳ್ಳು : 'ಪುಸ್ತಕನೋಟ' ಪರಾ. [ಸಂ.]

ಪುಸ್ತಕಕೀಟ (ನಾ). ಯಾವಾಗಲೂ ಓದುವುದರಲ್ಲೇ ಕಾಲ ಕಳೆ ಯುವವನು ; ಓದುವುದೊಂದನ್ನೇ ಹವ್ಯಾಸವಾಗಿಟ್ಟುಕೊಂಡಿರು ವವನು : ಅವನೊಬ್ಬ ಪುಸ್ತಕಕೀಟ. ವ್ಯವಹಾರಜ್ಞಾನ ಏನೇನೂ ಸಾಲದು (ಕೂಡ). ☞ ಇದು 'Book-worm' ಎಂಬ ಇಂಗ್ಲಿಷ್ ಶಬ್ದದ ಅನುವಾದ. [ಸಂ.]

ಪುಸ್ತಕಕ್ರಿಮಿ (ನಾ). = ಪುಸ್ತಕಕೀಟ : "ಪುಸ್ತಕಕ್ರಿಮಿ ; ಪುಸ್ತಕಪಿಶಾಚಿ ; ಓದುಕುಳಿ ; ಗ್ರಂಥವ್ಯಸನಿ" (Book-worm. ೨೦೪೫). [ಸಂ.]

ಪುಸ್ತಕಗಚ್ಛ (ನಾ). = ಪುಸ್ತಕ ೨ : ಅಲ್ಲಿಯ ದೇಸಿಗಗಣದ ಪುಸ್ತಕಗಚ್ಛದ ಬೋಧವಿಭವದ ಕುಕ್ಕುಟಾಸನ ಮಲಧಾರಿದೇವರ ಶಿಷ್ಯರ್ (ಎಳ. II, ೬೩-೩೦ ; 1118). [ಸಂ.]

ಪುಸ್ತಕಪೀಠ (ನಾ). = ಪುಸ್ತಕ ೨ : ಶ್ರೀಮೂಲಸಂಗದೇಸಿಯಗಣ ಪುಸ್ತಕ ಪೀಠ ಕೊಂಡಕುಂದಾನ್ವಯ ಇಂಗುಳೇಸ್ವರದ ಬಳಿಯ . . . ಪ್ರಭಾಚಂದ್ರ ದೇವರ ನಿಸಿಧಿ (ಎಳ. I (R), ೯೯-೦ ; 1044).

[☞ ಇದು 'ಪುಸ್ತಕಗಚ್ಛ' ಎಂಬುದರ ಅಪಲಿಖಿತ]

ಪುಸ್ತಕನೋಟ (ನಾ). ಇಕ್ಕಟ್ಟಿನ ಪ್ರಸಂಗಗಳಲ್ಲಿ ಮಾರ್ಗದರ್ಶನಕ್ಕಾಗಿ ಜ್ಯೋತಿಷ್ಯದ ಬದಲಾಗಿ, ರಾಮಾಯಣದಂತಹ ಪುಸ್ತಕದಲ್ಲಿಯೋ, ಭವಿಷ್ಯಸೂಚಕವಾದ ವಾಕ್ಯಗಳಿರುವ ಪುಸ್ತಕದಲ್ಲಿಯೋ ಕಡ್ಡಿ ಹಾಕಿ, ಆಯಾ ಪುಟದಲ್ಲಿರುವ ಮಾತುಗಳಿಂದ, ಸಂದರ್ಭಕ್ಕೆ ತಕ್ಕಂತೆ ಅರ್ಥ ವನ್ನು ತಿಳಿದುಕೊಳ್ಳುವಿಕೆ : ಈ ಮೇರೆ ಹದಿನೈದು ದಿವಸ ಕಟ್ಟಿದಾಗ್ಯೂ ನಿಲ್ಲದಿರಲು, ಇದೇನಾಶ್ಚರ್ಯವೆಂದು ಪುಸ್ತಕನೋಟ, ಶಕುನ ಮೊದಲಾ ದ್ದನ್ನು ನೋಡಿಸಲಾಗಿ (ಪ್ರತ್ರಾ. ೬). [ಪುಸ್ತಕ + ನೋಟ]

ಪುಸ್ತಕಪಟ್ಟಿ (ನಾ). "(ಸಾ., ಅಕಾರಾದಿಯಾಗಿ ಅಥವಾ ವಿಷಯಾನು ಕ್ರಮವಾಗಿ, ಕೆಲವು ಸಂದರ್ಭಗಳಲ್ಲಿ ಸ್ವಲ್ಪ ವಿವರಣೆಯನ್ನು ಸೇರಿಸಿ ರಚಿಸಿದ) ಪೂರ್ಣಪಟ್ಟಿ ; ಪುಸ್ತಕಪಟ್ಟಿ" (Catalogue. ೨೦೪೫).

[ಪುಸ್ತಕ + ಪಟ್ಟಿ₂]

ಪುಸ್ತಕರ್ಮ (ನಾ). ಬಳಿಯುವುದು ; ಸಾರಣೆ ; ಲೇಪನಕಾರ್ಯ : "ಲೆಪ್ಪ ಮೊದಲಾಗುಳ್ಳ ಕೆಲಸಮುಂ (ಹ)ಪುಸ್ತಕರ್ಮ ಎಂಬುದು" (ಹಲಾಯು. ೯೭-೨೩೭). [ಸಂ. ಪುಸ್ತಕರ್ಮನ್]

ಪುಸ್ತಕವಲ್ಲಿ (ನಾ). ಒಂದು ಬಗೆಯ ಸಸ್ಯ : "ದ್ರುವಣ ಪುಸ್ತಕವಲ್ಲಿ" (ಸುಂಗಾ. ೯೯-೫೫). [?]

ಪುಸ್ತಿ, ಪುಸ್ತೆ (ನಾ). ೧. ಶಾಲೆಯಲ್ಲಿ ಮಕ್ಕಳ ಬರೆವಣಿಗೆ ಎಷ್ಟು ಪ್ರಗತಿ

ಯಾಗಿದೆಯೆಂಬುದನ್ನು ತಿಳಿದುಕೊಳ್ಳಲಂ ನಿರ್ದಿಷ್ಟ ಹಾಗೂ ನಿಯತ ಕಾಲದಲ್ಲಿ ಅವರಿಂದ ಬರೆಯಿಸಿ ತೆಗೆದುಕೊಳ್ಳುವ ಶುದ್ಧಲೇಖನದ ಕಾಗದ ಮತ್ತು ಶುದ್ಧಲೇಖನ: ಅದರ ಮೇಲೆ ನಾನು ದಸರೆಯ ಹಬ್ಬದ ದಿನ ಒಂದು ಪುಸ್ತಿ ಬರೆಯುತ್ತೇನೆ (ಮುಂಬಯಿ. ೦-೩೦). ೨. ಬರವಣಿಗೆಗಾಗಿ ಇಟ್ಟುಕೊಂಡ ಒತ್ತುಕಾಗದಗಳ ಕಟ್ಟು: ಇವು ನಿಮ್ಮ ಪುಸ್ತಿಗಳಲ್ಲವೇ? (ರೂಢಿ). ೩. ಕೊರಳಲ್ಲಿ ಹಾಕಿಕೊಳ್ಳುವ ಒಂದು ಬಗೆಯ ಆಭರಣ: ಹಾರ ತಿಸರ ಪದಸರ ಕಂಠ ಮಾಲೆಯ ಚಾರುಪದಕ. ಬಂದಿ ಲುಳಿಯ ತೋರ ಮುತ್ತಿನ ಹತ್ತೆಗಟ್ಟು ಪುಸ್ತಿಯ[ಪಾಠಾಂ. ತಾತಿಯ]ನಂದಾ ರಾಯನಿತ್ತ ನಂದನೆಗೆ (ರಾಮಪಿ. ೬-೪೭); ವಸ್ತುಕ ವರ್ಣಕಕೃತಿಯ ಲಿಪಿಯ ಸಾಲು ಪುಸ್ತಕದೊಳಗೆಸೆವಂತೆ ಪುಸ್ತಿಯ ಚಿಂತಾಕು ಮಣಿಸರ ಬಂದಿ ಪ್ರಶಸ್ತಿ ಪಡೆದವು ಕಂಠದೊಳು (ಶರಸ. ೪೦-೫೪); ನವರತ್ನದ ಪುಸ್ತಿ ಕಟ್ಟಾಣಿಮುತ್ತಿನ ಖವಖವಿಸುವ ಪಂಚಸರದ . . . ಪದಕದೆ ಕುವಲಯನೇತ್ರೆಯೊಪ್ಪಿದಳು (ಕಂಪಪಿ. ೯-೭೨). ಪುಸ್ತೆ: ೩. ಸುರಸತಿಯರು ಪುಸ್ತೆ[ಪಾಠಾಂ. ಸ್ತಿ] ಲುಳಿಯಾಣಿಮುತ್ತಿನ ಸರ ಬಣ್ಣಸರ ಬಂದಿ ಪದಕ . . . ಮಂಟಿಕೆಗಳ ಪರಮನ ಜನನಿಗಿಕ್ಕಿದರು (ಶಂಪ್ರಸಾಂ. ೨೩-೯೮). [<ಪುಸ್ತ. / ತೆಲು. ಪುಸ್ತೆ]

ಪುಸ್ತಿಕೆ (ನಾ). ಚಿಕ್ಕ ಪುಸ್ತಕ; ಪುಟ್ಟಗ್ರಂಥ: ಈ ಅವಧಿಯಲ್ಲಿ ೭೦ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ (ಪರಜೀ. III, ಮುಮ್ನುಡಿ); ಈಗ ಈ ಮಾಲೆಯಲ್ಲಿ ಪ್ರಕಟವಾಗಿರುವ ಪುಸ್ತಿಕೆಗಳೆಲ್ಲ ಅಂಥವೇ (ಮುದ್ರಕ. III, ಮುಮ್ನುಡಿ). [ಸಂ. ಪುಸ್ತಿಕಾ]

ಪುಸ್ತೆ 'ಪುಸ್ತಿ' ನೋ.

ಪುಸ್ಯ, ಪೋಷ್ಯ (ನಾ). ೧.=ಪುಷ್ಯ ೪: ಪುಸ್ಯವು ಹುಸಿದರೆ ಸೆಸ್ಯವು ಸಾಯಿತು ಎಂದೂ . . . ಪುನರ್ವಸು ಮಳೆಯು ಗುಡುಗಿದರೆ ಸುವೃಷ್ಟಿಯಾಗುವುದೆಂದೂ ತಿಳಿದಿದ್ದರು (ಹುಬೃಹ. ೭೨). ಪೋಷ್ಯ: ೨.=ಪುಷ್ಯ ೫: ತದ್ವರಿಷಾಭ್ಯನ್ತರದ ಪೋಷಸುದ್ದಪಞ್ಚಮಿ ಈ ಬೃಹಸ್ಪತಿವಾರಮುತ್ತ ರಾಯಣದ ಸಂಕ್ರಾನ್ತಿಯನ್ದು ಶ್ರೀಮತ್ × × × ಳೋಕಯ್ಯ . . . ಆಳುತ್ತಿರೆ (ಎಕ. XI, ಹೊಳಲ್ಕೆ. ೩೦-೨; 964). [<ಸಂ. ಪುಷ್ಯ]

ಪುಸ್ಸನೆ (ಅ). 'ಪುಸ್' ಎಂಬ ಶಬ್ದದೊಡನೆ: ದಾರ ಬಿಚ್ಚಿಕೊಂಡ ಬಲೂನಿನಿಂದ ಗಾಳಿ ಪುಸ್ಸನೆ ಹೊರಕ್ಕೆ ಹೋಯಿತು (ರೂಢಿ).

[ಪುಸ್ + ಅನೆ$_1$]

ಪುಳ್ಳ$_1$ (ಗು). ೧. ಸ್ಫುಟವಾದ; ಸ್ಪಷ್ಟವಾದ: ಗುಳಿಗೆ ವರಾಳಂ ರಗಳೆ ಪುಳಂ—ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುಳಂಗಳಾದುವು (ಶಮಿದ. ೨೨ ಸೂತ್ರ) (ನಾ). ೨ ನಿರ್ಮಲವಾದುದು; ಸ್ವಚ್ಛವಾದುದು: ಸುಖಜಲಮಾ ನೇತ್ರದಿಂ ಜಾರೆ ಚಿತ್ತಂ ಪುಳಮಾಗಲ್ ಬಾಹುಜಂ ತಾನರರೆ ಮನದೆ ವೈಕುಂಠಸಂಗಂಬೊಲಿರ್ದಂ (ಕಂದ್ರಕ್ಕು. ೩-೪೯).

ಪುಳಮಾಗಿ = ಸ್ಫುಟವಾಗಿ: ಇದೆ ಕೊಳ್ಗಿಳಿವಱಿ . . . ಮೆಲ್ನುಡಿಗೊಂಡಂದದೆ ಪುಳಮಾಗಿಲ್ಲಿ ನುಡಿಗುಂ (ಪುತ್ರಗೋ. ೨೪-೪೨).

[< ಪ್ರಾ. ಪುಲ. / ಸಂ. ಸ್ಫುಟ]

ಪುಳ್ಳ$_2$ 'ಪುಲ' ನೋ.

ಪುಳಂಪುಣಿಸೆ 'ಪುಳ್ಳುಂಪುಣಿಸೆ' ನೋ.

ಪುಳಂಪುರುಚೆ 'ಪುಳ್ಳುಂಪುಣಿಸೆ' ನೋ.

ಪುಳಂಬು 'ಪುಳುಂಬು' ನೋ.

ಪುಳಕ$_1$ 'ಪುಲಕ' ನೋ.

ಪುಳಕ$_2$ (ನಾ). (ಕರಾ) ಗಂರಿಕಾರ; ಮುಖಂಡ. [?]

ಪುಳಕಪ್ರಭೇದನ (ನಾ). ರೋಮಾಂಚನವಾಗುವಿಕೆ; ನವಿರೇಳುವಿಕೆ: ಇದು ಪಿರಿದುಂ ಬುಧಾವಳಿಗೆ ಕರ್ಣರಸಾಯನಮಾತ್ತಚಿತ್ತಸಮ್ಮದಜನಕಂ ಮುದಶ್ರುಜಲಕರ್ತೃಲಸತ್ಪುಳಕಪ್ರಭೇದನಪ್ರದಗುರು ಮಸ್ತಕಪ್ರಚುರ ಕಂಪನಶಿಕ್ಷಕನೆಂಬಿನಂ ಪ್ರಯತ್ನದೆ ಕೃತಿವೇಟ್ಟುದು (ಸಂಪ್ರಶು. ೦-೪೯).

[ಸಂ. ಪುಲಕಪ್ರಭೇದನ]

ಪುಳಕಬಿಂದು (ನಾ). ಬಹಳ ಸಂತೋಷದಿಂದ ಹೊಮ್ಮಿದ ಕಣ್ಣೀರಿನ ಹನಿ; ಆನಂದಬಾಷ್ಪದ ಬಿಂದು: ತ್ರಿಪುರಸಂಹಾರವ ಮಾಡುವಲ್ಲಿ ಶಿವನ ಉನ್ಮಿಷೋನ್ಮೀಲನದೃಷ್ಟಿಯಿಂ ಪುಳಕಬಿಂದು ಕಚ್ಚಟೆಯ ಮೇಲೆ ಬೀಳಲುಣ್ಮಿದ ರುದ್ರಾಕ್ಷಿ ಸರ್ವಕಾರಣಾಧಿಕ್ಯವೆಂಬುದನಱಿದು ರುದ್ರಾಕ್ಷಿಯ ಧರಿಸಿದಾತನೇ ಸರ್ವತೋರುದ್ರನಪ್ಪುದು ತಪ್ಪದು (ಅದನ. ೦೯-೪೬).

[ಸಂ. ಪುಲಕಬಿಂದು]

ಪುಳಕಾಂಕುರ 'ಪುಲಕಾಂಕುರ' ನೋ.

ಪುಳಕಿತ 'ಪುಲಕಿತ' ನೋ.

ಪುಳಕಿಸು 'ಪುಲಕಿಸು' ನೋ.

ಪುಳಗಣ್ (ನಾ). ಒಂದು ಸ್ಥಳದ ಹೆಸರು: ಮಣ್ಣುಲೋರ ಮಿಾಕೆಗಾಳೊಳ್ಳಾದಿ ಪುಳಗಣ್ನೊಳು ಸತ್ತು ಸಗ್ಗಿಯಾದಂ (ಎಕ. X (೪), ಮುಳಬಾ. ೦೬೭-೦೩; 820). [?]

ಪುಳಗು 'ಪುಣುಗು' ನೋ.

ಪುಳಗುಕಾಪು 'ಪುಣುಗುಕಾಪು' ನೋ.

ಪುಳಗುಳಕಲ್ (ನಾ). ಒಂದು ಪ್ರದೇಶದ ಹೆಸರು: ಸುದ್ಧ ಪವುಷಮಾಸದೊಳ್ ಪುಳಗುಳಕಲ್ಲ ಮೇಗಿಟ್ಟ ಪಿರಿಯ ಮೆಟಪಿಗೆ × × × ಪಾದಪಂ ಯಾರವ × × × ಯನಟಿ (ಸೌಇಇ. IX-1, ೩೨-೦೩; ಸು. 10ನೆಯ ಶತ).

[ಪುಳಗುಳ್$_0$ + ಕಲ್$_3$]

ಪುಳಯಿಸು (ಕ್ರಿ). ನಿಲ್ಲಿಸು; ಸ್ಥಾಪಿಸು: ಕೆಲೆಯಬ್ಬೆಯ ಮಗ ಮಾರಾಜ . . . ಇದಿರ್ಚ್ಚಿದ ಬಲಮಂ ಕೊನ್ದು ಸತ್ತಡೆ × × × ಸಂದಂ ಗುಜ್ಜಮ್ಮಡಿಗಾವುಂಡಂ ಕಲ್ಲಂ ಪುಳಯಿಸಿದ ಪರೋಕ್ಷದಲು (ಎಕ. V, ಮುಂಜರಾ. ೪೪-೦೭; 1027 ?). [ಇದು 'ಪೂಣಿಸು' ಎಂಬುದರ ಅಪಲಿಖಿತ ವಿರಬಹುದು].

ಪುಳವಿ (ನಾ). [ಜೈನ] ಲೋಕಗಳನ್ನು ಒಳಗೊಳ್ಳುವ ಚೀಲಗಳಂತೆ ಇರುವ ಅತ್ಯಂತ ಬೃಹದಾಕಾರದ ಅವಕಾಶ; ಇವುಗಳಿಗೆ 'ನಿಗೋದ' ಎಂಬ ಹೆಸರೂ ಉಂಟು: ಸ್ಕಂಧಂಗಳ್ ಅಸಂಖ್ಯಾತ ಲೋಕಮಾತ್ರಂ ಏಕೈಕಸ್ಕಂಧದೊಳ್ . . . ಅಸಂಖ್ಯಾತಲೋಕಮಾತ್ರ ಪುಳವಿಗಳ್ ಒಂದೊಂದು ಪುಳವಿಯೊಳ್ ಅಸಂಖ್ಯಾತ ಲೋಕಪ್ರಮಿತ ನಿಗೋದಶರೀರಂಗಳ್ (ತತ್ವಾಸ್ತ್ರ. ೩೩೦). [ಸಂ. ಪುಲವಿ ?]

ಪುಳ್ಳಿ$_1$ (ಕ್ರಿ). ಹುಳಿಯಾಗು; ಹುಳಿಯೊಡೆ: ಮಧು ಸೀತುಂ ಕಟು ಸೀದು ಪೋ ಪುಳಿತ ಕಳ್ಳಲ್ತುಂ ಕರು ಕಯ್ತು ಬರ್ಪುದು (ಪುಪಬಾ. ೪-೬೬).

[ದೇ. ॥ ತಮಿ. ಮಲ. ಕೋತ. ತೊದ. ಪುಳಿ; ತುಳು. ಪುಳಿ, ಪುಲಿ; ತೆಲು. ಪುಳಿಯು, ಪುಲಿಯು]

ಪುಳ್ಳಿ$_2$ 'ಪುಟಿ' ನೋ.

ಪುಳ್ಳಿ$_3$, ಹುಳ್ಳಿ$_2$ (ನಾ). ೧. ಹುಳಿಯಾಗಿರುವಿಕೆ; ಆಮ್ಲತ್ವ: (ಕ). ೨. ನಿಂಬೆ ಹಣ್ಣು, ಹುಣಿಸೆಹಣ್ಣು ಮೊದಲಾದುವುಗಳ ಆಮ್ಲರಸ; ಷಡ್ರಸಗಳಲ್ಲಿ ಒಂದು: ಪಾಲುಂ ಪುಳಿಯೊಳ್ ಬೆರಸಿದೊಡಿನಿದಕ್ಕುಮೆ (ಜಿನಸಂ. ೦೬೦-೨೦); ಬದಗುಳಿಗನ ತೋಳ್ಮುಟ್ಟಿದ ಸುದತಿಯೊಳಿಂಬಾಗದಂತೆ ಕೆಟ್ಟುದು ಪುಳಿ ಮುಟ್ಟಿದ ದುಗ್ಧದಂತೆ ನೀರ್ಮುಟ್ಟಿದ ಜೇನೆಯ್ಯ ತೆಱದೆ ಪತಿಗೆ ಶಯ್ಯಾತಳದೊಳ್ (ಯಶೋಕ. ೨-೫೯); ಪುಳಿಯಿಂದೆ ಪಾಲ್ ಬಹುಳಕೋಪದೆ ತಪಃಫಲಮುಂ . . . ಸಲೆ ಕಿಡುವವೋಲ್ ಕಿಡುವುದರ ಸಾಳ್ವ ಧರೆ ಪಿಸುಣರಿಂ (ಶಬಿಪು. ೬-೩). ೩. ಹುಣಿಸೆಹಣ್ಣು: ಪುಳಿಯೊಳಲೆದ ಪವಳದ ಬಟ್ಟಿನಂತೆ ಸೊಗಯಿಸುವ ಸಾರೋದಯನ

ಬೀಬಾಧರಮನಂಗಶಾಗರಸದುರುಳಿಯಂತಾದುದು (ಶಂಪಭಾ. ೨-೩೯ ವ). ೪. ಹುಣಿಸೆಹಣ್ಣು ಸೇರಿಸಿ, ಬೇಳೆ, ತರಕಾರಿಗಳ ಸಹಿತವಾಗಿ ಮಾಡುವ ಮೇಲೋಗರ; ಆಮ್ರ : ಮಿಗಿಲೆನಿಸುವ ಪೊಸ ಸುಣ್ಣದೊಳಂಗುರ್ವಲ್ಲಿಯ ಬೇರನಿಕ್ಕಿ ಗರ್ದುಗಿನ ಕೊನೆಯಂ ತೆಗಪಿ ಪುಳಿಯಡುಗೆ ಮೇಣ್ ಸಂಡಗೆಯಿಡುಗಾ ತೆಱದಿನವಱ ಬೀಜಂಗಳುಮಂ (ಲೋಕೋಪ. ೯-೨೪); ಲೊಕ್ಕಿಯ ಕೊನೆಯನಕ್ಕೆ ಮೇಣ್‌ಕಳ್ಳಿಯ ಕೊನೆಯಂ ತೆಗಪಿ ಪುಳಿಯನಡೆ ಸವಿಯಕ್ಕುಂ (ಲೋಕೋಪ. ೯-೨೬). ಹುಳಿ$_2$: ೧. ಹುಲಿಯ ಹುಲ್ಲೆಯ ನೇಹ ಬಿಱುಗತ್ತಲೆಯ ಬೆಳಗಿನ ಮೈತ್ರಿ ಮಧುರದ ಹುಳಿಯ ಪರಿಸಂಬಂಧವಿದ್ದುವು ಬನದೊಳಾ ಮುನಿಯ (ತೊರರಾ. ೦-೫-೪೩). ೨. ಕೆಡುಗು ಹುಳಿಯೆನಲಕಟ ಜಡವೆನಿಪ ಪಾಲ್ಗಡಲು (ಸಾಪಂತ. ೦ ೪೫); ಹುಳಿಗೆ ಹಾಲಳುಕಿದರೆ ಹಾಲಿನ ಜಲಧಿ ಕೆಡುವುದೆ (ಕುಸ್ಯಾಅ. ೨೦-೭); ಒಗರುಪ್ಪು ಸಿಹಿ ಕಹಿ ಹುಳಿ ಕಾರಗಳ ತೆಗೆತೆಗೆದೀವುತಿಹನು ನಾಲಗೆಗೆ ದೃಗವಬೋಧನಶಕ್ತಿ ಸುಖವನಾತ್ಮಗೆ ಬಗೆಬಗೆದೀವುತಿಹನು ಭಾವದೊಳು (ಭರಶ. ೪-೯೩). ೩. ಉಪ್ಪು ಹುಳಿ ಮೆಣಸು ಸಂಬಾರ (ಸೌಷಪ. ಮಂಗಳೂರು. ೪೬೫-೩೪ ; 1312); ಉಪ್ಪು ಹುಳಿ ಬೆಲ್ಲ ಯೆಂಣೆ . . . ಜವಳಿ ಮುಂತಾಗಿ (ಎಕ. VII, ಶಿವಮೊ. ೨೯-೦೬; 1670); ಕಳ್ಳ ಕಳ್ಳಗೆ ನಂಟು, ಹುಳಿ ಮೆಣಸಿಗೆ ನಂಟು (ಗಾದೆ). ೪. ಗುಗಾದೇವಿಯ ಹುಳಿ ಕಾಸಿ ಗೌರೀದೇವಿಯ ಕೂಳನಟ್ಟು ಭಕ್ತನ ಬಾಡನಟ್ಟು ದೇವನ ಸಾಸವೆಗಲಸಿ . . . ಉಣಾಲಿಕ್ಕಿ ಕೈಕಾಲು ಮುಱಿಯಿತ್ತು (ಅನಶಂ. ೦೨೫-೫೬೬); ಅವರೆಲ್ಲ . . . ತಟ್ಟೆಗಳಲ್ಲಿ ಅನ್ನ, ಪಾತ್ರೆಗಳಲ್ಲಿ ಹುಳಿ ತುಂಬಿಕೊಂಡು ಬಡಿಸುವುದಕ್ಕೆ ಸಿದ್ಧವಾಗಿ ನಿಂತಿದ್ದರು (ರಂಗಕ. ೯೦); ಹರಿವೆಯ ಸೊಪ್ಪಿನ ಹುಳಿ ಗುಟಲ ಕೆಳಗೆ ಇಳಿಯಲೇ ಇಲ್ಲ (ದೇವಹು. ೨೦೦). ೫. ಒಂದು ಬಗೆಯ ಸಸ್ಯ : ಕಿರೀಹುಳಿಪ, ಹುಳಿ, ಮುರ್ಗಿನ ಕೋಡುಸೊಪ್ಪು, ಸಣ್ಣಗೂಗೆ, ಬಿಳಿಕೊಮ್ಮೆ (ಮೈಸಿಗಿ. ೯-೧೨೭). ೬. (ಆಲಂ) ಪೊಗರು; ಸೊಕ್ಕು; ದರ್ಪ : ಶೀನಮಯ್ಯನ ಹುಳಿ ಕುಗ್ಗುವ ರೀತಿಯಲ್ಲಿ ತಾನೊಂದು ಉಪ್ಪರಿಗೆಮನೆಯನ್ನು ಕಟ್ಟಿಸಬೇಕು (ಮರಮ. ೦೩೯). ೭. ಹುಳಿ ಹಿಂಡುವವನು ; ಕೆಡುಕ : ಯಾವನನು ಅಲ್ಲೆಂದಡೆ ಹದಿನೆ[ಂ]ಟ್ಟು ಸಮಯಕ್ಕೆ ಹೊಱಗೂ ದೇಸಕ್ಕೆ ಹುಳಿ (ಸೌಇಇ. IX-1, ೩೭೯-೨೭ ; 1279). (ಗು). ೮. ಹುಳಿಯಾಗಿರುವ ; ಹುಳ್ಳಗಿರುವ : 'ಹುಳಿದಾಳಲು', 'ಹುಳಿನೀರು' ಪರಾ.

ಹುಳಿ ಮುಟ್ಟಿದ ಹಾಲು=ಒಡೆದ ಹಾಲು ; ಕೆಟ್ಟುಹೋದ ಹಾಲು: ಹುಳಿ ಮುಟ್ಟಿದ ಹಾಲಿನಂತಾದ ಮೇಲೆ ಅವಳ ಮೈ ತನ್ನ ಬೆನ್ನಿಗೆ ಆಕಸ್ಮಿಕವಾಗಿ ಸೋಕಿದ ಮಾತ್ರಕ್ಕೆ ಕರ್ಕಶಸ್ಪರ್ಶವಾಗುವುದು (ಕಾನ್ಯಸ. ೬೨). ಹುಳಿಯನ್ನು ಹಿಂಡು=ಸ್ನೇಹ, ಸೌಹಾರ್ದ ವಾತಾವರಣವನ್ನು ಕೆಡಿಸು: ಇವೆಲ್ಲವೂ ನಮ್ಮ ನಿಮ್ಮಲ್ಲಿರುವ ಸಂಬಂಧಕ್ಕೆ ಹುಳಿಯನ್ನು ಹಿಂಡಲೋಸುಗ ಕಲ್ಪಿತವಾಗಿರುವ ಒಂದು ನಾಟಕ (ಬ್ರೋಕನ್ಯ. ೨೬೮). [<ಪುಳಿ$_1$. / ತಮಿ. ಮಲ. ತೆಲು. ಪುಳಿ ; ತುಳು. ಪುಳಿ, ಹುಳಿ]

ಪುಳಿಂಚು, ಪುಣಿಚು, ಪುಳಿಚು (ನಾ). ೧. ಆರ್ದ್ರಪದಾರ್ಥವು ಒಣಗಿ ಏಳುವ ಹಕ್ಕಳೆ; ಹುರುಪು: ಬಿಗಿದೊಗೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪ[ಗಿಲ್ತಿ]ರಲೆಡೆಯಾದಗಲುರಮ ನೆನಗೆ ಪಡೆದಜನೊಗಸುಗಮಲ್ತೆಲಗೆ ನಿನ್ನನೆನಗೆಯೆ ಪಡೆದಂ (ಶಂಪಭಾ. ೯-೬೬); ಇಂಚರದಮರ್ದಿನ ಸವಿಯ ಪುಳಿಂಚಿನ ಕಿವಿಗಳ್ಗೆ ವೃತ್ತಕುಚೆ ಪತಿಯುರಮಂ ಮಿಂಚಿನವೊಲಪ್ಪಿ ಮಿಡಿದ ವಿಪಂಚಿಯೆನೆ ಪುಳಿಂದಿ ಪಾಡಿದಳ್ ಮಾನವನಂ (ಲೀಲಾವ. ೯-೩೪); ಎಸೆದುವು ತನುಲಕ್ಷ್ಮಿ ನಲಿದು ಗುಡಿಗಟ್ಟಿದಂದದಿಂ ಪೂಸಿದ ಚಂದನದ ಪುಳಿಂಚುಗಳಂ ಪೊತ್ತು ನೆಗೆದ ಪುಳಕಾಂಕುರಂಗಳರಸನ ಮೆಯ್ಯೊಳ್ (ಸಂದ್ರಪು. ೦೨-೦೬). ಪುಣಿಚು : ೨. ಹಲ್ಲಿನ ಕಿಟ್ಟ,-ಕೊಳೆ : 'ಪುಣಿಚೇಟ್' ಪರಾ. ಪುಳಿಚು : ೧. 'ಪುಳಿಚೇಟ್' ಪರಾ. [?]

ಪುಳಿಂಚೆ, ಪುಣಿಜೆ (ನಾ). ಬೇಡರ ಹೆಂಗಸು ; ಬೇಡಿತಿ (?) : ಪಂಚಮಮಂ ಪೊರೆದಮರ್ದ ಪುಳಿಂಚೆಯ ನುಣ್ಚರಮಗಲ್ದ ಪುಂಸ್ಕೋಕಿಲಗಳ್ ತಾಂ ಚೇಗದೆ ಪೆಣ್ಕೋಗಿಲೆಯಿಂಚರಮೆಂದಲ್ಲಿ ಸುತ್ತಿ ಮುತ್ತುಗುಮನಿತಂ (ಉದ್ಭಟ. ೨-೯೪). ಪುಣಿಜೆ : ದಂಗಟನ ಪುಣಿ[ಪಾಠಾಂ. ಣ]ಜೆಯರು ಹೊಂಗಱಿಯ ಬಿಲ್ಲುಕೋಲನೊಂದು ಕೈಯಲಿ ಪಿಡಿದು ಒಂದು ಕೈಯಲಿ ಬಿದಿರಕ್ಕಿಯ ಹಿಡಿದು ಮುಂದೆ ಬಂದಾಡುತಿರೆ (ಪನ್ನವ. ಕ. ೦೪೬-೩೩೨); ಬಯಸುವರು ಗೋಪಿಯರದಾವನ ಪಾದರೇಣುಗಳ ಬಯಸುವರು ಪುಣಿಜೆಯ [ಪಾಠಾಂ. ಪೂಜೆಯ, ಪೂಜಿಪ]ರು ತೃಣಸಂಚಯನಿಹಿತಪದರೇಣುಗಳನವ್ಯಯನನಾವಗಲುವೆವದೆಂತೆಂದರು ಮಹಾತ್ಮೆಯರು (ಪಿಭಾಗ. ೧೦-೭೪-೫೬). [<ಪುಳಿಂದಿ ?]

ಪುಳಿಂದ 'ಪುಲಿಂದ' ನೋ.

ಪುಳಿಂದಕ (ನಾ). ಬೇಡರವನು; ಶಬರ : ಧುರಕ್ಕೆ ದಶರಥನೃಪತಿ ಸುತರಂ ಭರದೆ ಕಳುಹುಗುವೆಂಬ ಶಂಕೆಯಿನಿರದೆ ಕೆಟ್ಟುದು ಶಬರಬಲವೆಂದಂ ಪುಳಿಂದಕನು (ಕುಮುರಾ. ೪-೩೯); ಕಾಣಿಕೆಯ ಕೈಕೊಂಡು ಶಬರ ಶ್ರೇಣಿಯನು ಮನ್ನಿಸಿದನುಚಿತದ ವಾಣಿಯಲಿ ವೈವಸ್ವತಾನ್ವಯನಾ ಪುಳಿಂದಕರ (ತೊರರಾ. ೩-೩-೫). [ಸಂ. ಪುಲಿಂದಕ]

ಪುಳಿಂದಿ (ನಾ). ಬೇಡರ ಹೆಂಗಸು ; ಬೇಡಿತಿ ; ಶಬರಿ : ವನಚರನಾಗಿ ಶಂಭು ಗಿರಿಜಾತೆಯನೋತು ಪುಳಿಂದಿ ಮಾಡಿ ನಚ್ಚಿನ ಗುಹನ ಕಿರಾತಬಲ ನಾಯಕನಾಗಿರೆ ಮಾಡಿ . . . ಕವಿದನಾ ಬನಮಂ (ಶಂಪಭಾ. ೯-೦೯); ಚಂಚಲಕಪಾಂಗದ ಪುಳಿಂದಿಯರ್ ತಮ್ಮ ತಮ್ಮ ಓಪರಂ ಬಳಿವಿಡಿದು ಬರುತಿರ್ದರಾಗ (ಸೈಪಾಭಾ. ೨೯-೪೨); ಪುಳಿಂದಿಯರಾದರಮರ್ತ್ಯಕಾಂತೆಯರ್ (ಕಬಕಂ. ೩-೯). [ಸಂ. ಪುಲಿಂದೀ]

ಪುಳಿಂದಿನಿ 'ಪುಲಿಂದಿನಿ' ನೋ.

ಪುಳಿಕೆ (ನಾ). ಒಂದು ಬಗೆಯ ಔಷಧೀಸಸ್ಯ : ಬಿಳಿಪೊಳಿಕು, ಬೂದಿತಾಳೆ, ಪುಳಿಕೆ, ಬಿಳಿತಾಳೆ, ತೆಲ್ಲಪುನಿ (ಮೈಸಿಗಿ. ೩೯-೭೭೩). 'ಹುಳಿಗ' ಪರಾ. [?]

ಪುಳಿಗರ್ಚು (ಕ್ರಿ). ಹುಳಿ ಹಚ್ಚಿ ತೊಳೆ ; ಹುಳಿ ಹಾಕಿ ಬೆಳಗು,- ಬೆಳ್ಳಗೆ ಮಾಡು : ಕೊರ್ಬೆಂಬ ಕಿಟ್ಟಮುದುರೆ ಪಸುರ್ವಣ್ಣವೆಂಬ ಕಾಳಿಕೆ ಕಟಲೆ ವಿರಹಾಗ್ನಿಯಿಂ ಕಾಯ್ಸಿ . . . ಬೆಳ್ದಿಂಗಳಿಂ ಪುಳಿಗರ್ಚಿ ಕುಸುಮಶಯನ ಶಾಣದೊಳ್ ಪೊಸವೆಳ್ಪು ಪಸರಿಸಿ ಕುಸುಮಶರನೆ ಮಿಸುಗೆ ಮಸೆದಸಿಯಂತಿರೆಸೆವಸಿಯ ಮೆಯ್ಗೆ ಮೆಯ್ಸಿರಿಯಾದ ಬೆಳ್ವಸನದಿಂ (ಲೀಲಾವ. ೧೦-೩೭ ವ); ಪುಳಿಗರ್ಚಿದಂಗಜಾಸ್ತ್ರಂಗಳ ಬಳಗಮಿದೆಂಬ ತೆಱದಿನಾರ್ದ್ರತೆವಡೆದುಜ್ಜ್ವಳಿ ಪಂಗಾವಳಿಯಿಂ ಕಣ್ಗೊಳಿಸಿರ್ದುದು ಬಳಸಿ ವಾರನಾರೀನಿವಹಂ (ಕುಸುಮಾ. ೫-೦೫೯). [ಪುಳಿ$_3$ + ಕರ್ಚು$_2$ (<ಕಟ್ಟು)]

ಪುಳಿಗೂಟ್ (ನಾ). ಹುಳಿ ಇರುವ ಆಹಾರ ; ಹುಳಿಯಂಬಲಿ : ಪುಳಿಗೂಟಂ[ಪಾಠಾಂ. ಹಳಿಗೂಳಂ]ತದಿಕಿನ ಕೆಂದಳಿರಂ ಪಾಲ್ಗೆನೆಯನೆಳೆಯ ಪುಲ್ಲು ಕಬ್ಬಂ ಬಲವಂತನಕ್ಕುಮೆಂದುಜ್ವಲಚಿತ್ತಂ ತಂದು ಪೊರೆವುದುಂ ಗಜಶಿಶುವಂ (ರರ್ಮಾಮ್ಯ. ೦೨-೦೨೯); ಬೀಳಂಬಲಿಯೊಳ್ ಕಲಸಿದ ಜೋಳದ ಪುಳಿ[ಪಾಠಾಂ. ರಿ]ಗೂಟನಿಕ್ಕಿಮೊಡಲಿಡಿಯದವೋಲ್ ಕೇಳೆಲಗೆಯಿದು ಮಱವಡೆ ಮೇಳಿಸುಗುಂ ನಿನಗೆ ಕಾಷ್ಠದಂಡದ ಘಾಯಂ (ಪುಷ್ಯಾಸ್ತ್ರ. ೯-೭). [ಪುಳಿ$_3$ + ಕೂಟ್$_1$]

ಪುಳಿಚಾರು 'ಪುಳಿಚಾಱು' ನೋ.

ಪುಳಿಚಾಱು, ಪುಳಿಚಾರು, ಪುಳ್ಚಾರು, ಹುಳಿಸಾರು (ನಾ). ೧. ಹುಣಿಸೆ ಹಣ್ಣಿನ ರಸ, ಸಂಬಾರದ್ರವ್ಯಗಳನ್ನು ಸೇರಿಸಿ ಮಾಡುವ ಸಾರು: ಬೆಂದ ಕುಂಬಳದ ಕಾಯ್ಗಳ ಪಲವು ತೆಱ ಪಾಡಿಯೊಂದು ಪು[ಪಾಠಾಂ.ಹು]ಳಿಚಾಱುಗಿಯೊಂದು ಸಿಹಿಗಾಯಾಗಿಯೊಂದು ದಧಿಸಾರಿಕೆಯುಮಾಗಿ ಮತ್ತೊಂದು ದುಸ್ಸಾಯಭಂಗಿಯನೆ ಮಾಡಿ . . . ಒಂ[ದಕೊಂ]ದೊಂದು ತೆಱದ

ಪರಿಮಳವಿಕ್ಕಿ ಪೊಡ್ಡಣಿಗೆಯಂ ಕೊಟ್ಟು ಹಸ ಮಾಳ್ಪುದು (ಸೂಕಶಾ. ೩-೩೨); ಪುಳಿಚಾಱು ಪೂರ್ಣವ[ಟಿ ಭುಕ್ತಭಂಜಿತ]ಶಾಕ ತುಳುವದಾಳಿಲ ಶಾಕವಂಗಿ ಶೂಲ್ಯಕ ಮನಂಗೊಳಿಪ ದಧಿಸಾರಿಕೆ ವಿಚಿತ್ರಪಾಕಂ ಕಹರಿಯಡಕೆತಾಳಿಲವೆಸರನು ತಳೆದ ಪಾಕಂಗಳು (ಸೂಕಶಾ. ೬-೦೩). **ಪುಳಿಚಾರು** : ೨. ಸಸ್ಯಾಹಾರ : ಪುಳಿಚಾರು ಊಟ ಮಾಡಿದರೆ (ಶಾಲಿಶಾಂ. ೦೭೩); ಎಂಟು ಹತ್ತು ದಿನಗಳಿಂದ ಪುಳಿಚಾರು ತಿಂದೂ ತಿಂದೂ ಬಾಯಿ ಕೆಟ್ಟುಹೋಗಿರುತ್ತದೆ ಎರಡೂ ಕಡೆಯವರಿಗೂ (ಸಮ್ಮೇಳ. ೦೦೨). ೩. (ಆಲಂ) ಶಾಕಾಹಾರಿಯಾದ ಬ್ರಾಹ್ಮಣ : ಪುಳಿಚಾರು ಕುಟುಂಬಗಳಾದುದರಿಂದ ಸಹಿಸಿಕೊಂಡು ಸುಮ್ಮನಾದರು (ಸಮ್ಮೇಳ. ೬). ೪. ಧೈರ್ಯವಿಲ್ಲದವನು; ಪುಕ್ಕ : ಬೆದರಿಕೆಗೆ ಅಡಗುವ ಪುಳಿಚಾರುಗಳೇ ಹೆಚ್ಚು ಈ ಗುಂಪಿನಲ್ಲಿ (ಸೂಕಶಾ). **ಪುಳ್ಚಾರು** : ೩. ಶ್ವಾನುಭೋಗರು ಪುಳ್ಚಾರು (ಕ್ರಸಂಪ. ೦೩). **ಹುಳಿಸಾರು** : ೫. ಹುಣಿಸೆಹಣ್ಣನ್ನು ಕಿವಿಚಿ ಅದರ ರಸಕ್ಕೆ ಉಪ್ಪು, ಕಾರ ಹಾಕಿ (ಬೇಳೆಯಿಲ್ಲದೆ) ಮಾಡುವ ಸಾರು; ಗೊಡ್ಡುಸಾರು : ಹುಳಿಸಾರು ಮಾಡದವ ನಳಪಾಕ ಮಾಡಿಯಾನೆ? (ಗಾಥ).

ಪುಳಿಚಾಱು ಬದನೆಯ ಕಾಯಿ = ಬದನೆಕಾಯಿಯಿಂದ ಮಾಡುವ ಒಂದು ಬಗೆಯ ಭಕ್ಷ್ಯ; ಸಕ್ಕರೆಬದನೆಕಾಯಿ : ಉದಕದೊಳು ಹುಣಿಸೆಯ ಹುಳಿಯ ಹಾಕಿ ಸಲೆ ಕಿವುಚಿ ಹದನಱಿದು ಸಕ್ಕರೆಯನಿಕ್ಕಿ ಶುಂಠಿಯ ಹಾಕಿ . . . ತುಪ್ಪದೊಳುಕ್ಕರಿಸಿ ಸವಿಯುವಂ ಹಡೆದ ಬದನೆಯೆಳೆಗಾಯ ಹೋಳಂ ಹಾಕಿಕೊಂಡು ತುಪ್ಪದೊಳು ಪರಿಮಳವಿಕ್ಕಿ ಪೊಡ್ಡಣಿಗೆಯಂ ಕೊಟ್ಟು ಸವೆ ಹೋಗದಂತಿರಿಸಲು ಅದುವೆ ಪುಳಿಚಾಱು ಬದನೆಯ ಕಾಯಿ ಕನ್ನಡಿಗರದನು ಸಕ್ಕರೆಬದನೆಗಾಯೆಂದು ಹೆಸರಿಡುವರು (ಸೂಕಶಾ. ೪-೬).

[ಪುಳಿ$_3$ + <ಸಾಱು$_3$/ತಮಿ. ಪುಳಿಚ್ಚಾಱು; ಮಲ. ಪುಳಿಞಾಱು; ತುಳು. ಪುಳಿಚಾರ್]

ಪುಳಿಚು 'ಪುಳಿಂಚು' ನೋ.

ಪುಳಿಚೇಳ್ 'ಪುಳಿಚೇಟ್ಟು' ನೋ.

ಪುಳಿಚೇಟ್ಟು, ಪುಣಿಚೇಟ್ಟು, ಪುಳಿಚೇಳ್, ಪುಳ್ಚೇಟ್ಟು (ಕ್ರಿ). ೧. (ದ್ರವವು ಒಣಗಿ) ಹಕ್ಕಳೆಯೇಳು,—ಪದರ ಪದರವಾಗಿ ಮೇಲೇಳು : ಮೆಯ್ಯೊಂಕೆಯಿಂದೊಳಗು ಕಂದೆ ಕತ್ತುರಿಯ ಪಳಿಕಿನಂತೆ ಪು[ಪ:ಕಾಂ. ಹ] ಳಿಚಿರ್ದ ಚಂದನದಣ್ಪುವೆರಸು ಪತ್ತಿದ ಪರಿಮಳಮಂ (ಲೀಲಾಕ. ೧೦-೬೪ಪ). ೨. (ಬೊಬ್ಬೆಯುಂಟಾಗಿ) ಹೊಪ್ಪಳೆಯೇಳು; ತೊಗಲು ಸುಲಿದು ಬರು : ಬಿಸುಸುಯ್ ನೀಳ್ದ ಲತಾಂಗವಿರ್ಪಱಿದು ಬಾಷ್ಪಂ ಕಾಟ್ಟುರಂಗೊಡ ವಕ್ತ್ರಸರೋಜಂ ಪೊಳಪೋಡಿ ಬಾಡಿ ಪುಳಿಚಿಟ್ಟೊಡ್ಡೀಷ್ಟಂ ಕುರುಳ್ ಸೂಸುವೇಣಿ ಸಡಿಲ್ದೊಳ್ಕುಡೆ ಜೋಲ್ವ ಮೆಲ್ಲರ್ದೆಯಿಮಿಂತಾಗಲ್ಕೆ . . . ಅಬಲೆ ಮೆಯ್ಯಕ್ಕಿರ್ದಳಾ ಶಯ್ಯೆಯೊಳ್ (ಶಾಸುಪ್ರಾ. ೦೩-೦೦೬); ಕಡುಗಾಯ್ದುಗ್ರಾತಪಪ್ರಾಳೆಗೆ ಮಿಗೆ ಪುಳಿಚೇಟಲ್ಕೆ ಬೆಂಬೆಂದು ಬಾಯಂ ಬಿಡುತುಂ ತೇಕಣ್ಣೆ ಜಿಹ್ವಾಲತೆಯೆಟಲೆ ಜವಂಗುಂದುತುಂ . . . ಇರ್ದುಬೆತ್ತಂ ಬಿಡದಡವಿಗಳೊಳ್ ಸ್ವೈರದಿಂ ಸೈರಿಭಂಗಳ್ (ಶಾಂತೀಶ್ವ. ೧೨-೩೬); ಎಲೆಯಿಕ್ಕಿ ಪೆರ್ಮರಂ ತಾಱದವಿಲ್ಲರಣ್ಯಮೃಗಯೂಥದ ಬೆನ್ ಪುಳಿಚಿರ್ದು [ಶಾಶಾಂ. ಪುಳಿಲೆರ್ದು, ಪುಣಿಚೆರ್ದು, ಪುಣಿಲೆರ್ದು] ಬಾಯ್ಗುಳಿರ್ಪಾಱದವಿಲ್ಲ . . . ಅದೇಂ ಪ್ರಳಯಕಾಲವೊ ತೀವ್ರನಿದಾಘಕಾಲವೋ (ಸೂಕ್ತಿಸು. ೦೦-೦೦೦). **ಪುಣಿಚೇಟ್ಟು** : ೩. (ಹಲ್ಲು) ಕಿಟ್ಟದಿಂದ ಕೂಡಿರು; ನೆಕ್ಕ ಕದಂಪು ಪತ್ತಿ ಪೆಡೆಗೊಂಡ ಕೊರಲ್ಬುಣಿಚೆರ್ದ ಕೀನಿವಲ್ ಪೊಕ್ಕಡಗಿರ್ದ ಕಣ್ಮುರುಳಿಗೊಡರೆಬತ್ತಿದ ಬಾಯ್ . . . ಅಗುರ್ವಿಸೆ ಬಂದನ ದೊರ್ವ ಪಾರ್ವಂ (ಲೀಲಾಕ. ೬-೩೬). **ಪುಳಿಚೇಳ್** : ೩. ನೊಳವೆಱದ ಕೊಳೆವಾಯ ಬಳರುಂ ಪುಳಿಚೆಳ್ದ ಕೀಸೆವಲ್ಲ ಪುರುಷಾಧಮರುಂ (ಕ್ರಸಂ. ೩೩-೩೩ ಪ). **ಪುಳ್ಚೇಟ್ಟು** : ೧. ಪೂಸೆಯುಂ ಕಾಯ್ದುರದೆಟ್ಟೂ ಚಂದನಾಲೇಪದ ತೆಗಳಿಕೆಗಳ್ ತಂಗದಿರ್ಪಾಱು ಪುಳ್ಚಿ[ಳ್ಚಿ]ರ್ದರುಣೋಷ್ಮಂ ಮುಚ್ಚಿದ ನಯನಯುಗಂ ಹೃತ್ಪತಿನ್ಯಸ್ತ ಹಸ್ತಾಂಬುರುಹ ವ್ಯಸ್ತಾಳಕಂಗಳ್ಪ ರಸಲರ್ವಸೆಯೊಳ್ ಕಾಂತೆಯುಂತಿರ್ದಳಾಗಳ್ (ಶಾಸುಪ್ರಾ. ೦೩-೩೯).

[ಪುಳಿಚು (< ಪುಳಿಂಚು) + ಏಟ್ಟು$_1$]

ಪುಳಿಚೋರಯ್ಯ (ನಾ). ಒಬ್ಬಾತನ ಹೆಸರು : ಪುಳಿಚೋರಯ್ಯಂ ಮಾಹಧ್ವಜದೋಜ × × ಮಣಿವಿತಾನದೋಜತೇಜಂ (ಎಕ. II, ೪೭೯-೦; ಸು. 1000). [? + ಅಯ್ಯ$_1$]

ಪುಳಿಚ್ಚುತ (?) ಬದನೆಗಾಯ್ (ನಾ). ಬದನೆಕಾಯಿಯಿಂದ ಮಾಡಿದ ಒಂದು ಬಗೆಯ ವ್ಯಂಜನಪದಾರ್ಥ : ಬದನೆಯೆಳಗಾಯ್ಗೆ ಕರಿದೇವು ಹೊಸತುಪ್ಪಯಿನಿಸುದಕ ನೀರುಳ್ಳಿಯಿಟ್ಟುದಕವಿಂಗುವ ತೆಱದಿ ಹದನಾಗಿಯುಕ್ಕಱಿಸಿ . . . ತುಪ್ಪದೊಳೊಗ್ಗರಿಸಲ್ಕಂತದು ತಿಗುಳಿನೊಳು ಪುಳಿಚ್ಚುತ [ಶಾಶಾಂ. ಪುಳಿಚತ್ರ, ಪುಚ್ಚುತ್ರ] ಬದನೆಗಾಯೆಂದು ವೆಸರನೊಲವಿಂ ಕರೆವುದು (ಸೂಕಶಾ. ೪-೦೩). P 'ಪುಳಿಚ್ಚುತ' ಎನ್ನುವ ಶಬ್ದವು ತಮಿಳಿನ 'ಪುಳಿಚ್ಚಲ್=ಹುಳಿಯಾದುದು' ಎಂಬುದಕ್ಕೆ ಸಂಬಂಧಿಸಿರಬಹುದು.

[ಪುಳಿಚ್ಚುತ್ರ + ಬದನೆ + ಕಾಯ್$_3$]

ಪುಳಿದೇಗು, ಹುಳಿತೇಗು, ಹುಳಿದೇಗು (ನಾ). ಹೊಟ್ಟೆಯಲ್ಲಿ ಆಮ್ಲತೆ ಹೆಚ್ಚಾಗಿ ಬರುವ ತೇಗು; ಅಜೀರ್ಣದ ತೇಗು : ನೆತ್ತರಂ ಕುಡಿದು . . . ನುಂಗಿ ಮಿದುಬಂ ತಣಿವಿಂ ಪುಳಿದೇಗುದೇಗುತ್ತುಮಿರ್ಪುವದಱೊಳ್ ರಜನೀಚರಕೋಟಿಗಳ್ (ಶಾಸ್ಮೃಪ. ೮೨೩). **ಹುಳಿತೇಗು** : ಹೊಟ್ಟೆಯಲ್ಲಿನ ಆಮ್ಲದ್ರವವು ಹೆಚ್ಚಾಗಿ ಹುಳಿತೇಗು ಬರುತ್ತಿದೆ (ಪುಸೋಸಂ. ೦೨೦); ಹುಡುಗರು ಇವಳನ್ನು ಹುಳಿ-ತೇಗಿನ ಲಕ್ಷ್ಮೀದೇವಮ್ಮನೆಂದು ಕರೆಯುತ್ತಾರೆ (ಸಂಸ್ಮೃಪ. ೪೩). **ಹುಳಿದೇಗು** : ಶುಂಠಿ, ಭದ್ರಮುಸ್ತೆ, ಅತಿಬಲೆ, ಲವಂದರ ಬಳ್ಳಿ ಇವಂ ಸಮಭಾಗವಾಗಿ ಕಷಾಯವಿಕ್ಕಿ ಕೊಡಲು ಆಮಗ್ರಹಣಿ, ಅಗ್ನಿಮಾಂದ್ಯ, ಹುಳಿದೇಗು ಮುಂತಾಗಿ ಗುಣಮಕ್ಕುಂ (ಸಳ್ವ. ೩೩೩). [ಪುಳಿ$_3$ + ತೇಗು$_3$]

ಪುಳಿದೊಡೆ (ಕ್ರಿ). ಹುಳಿ ಹೆಚ್ಚು,—ಲೇಪಿಸು : ಚಿನ್ನಾಗಿ ಪುಳಿದೊಡೆದೊಪ್ಪವಿಕ್ಕಿದ ಚೊಕ್ಕಚಿನ್ನದ ಪ್ರತುಮೆಗಳೆಂತೆ ರನ್ನದ ಮುತ್ತ ಹಾರವನಿಟ್ಟು ಸುಗುಣಸಂಪನ್ನೆಯರಿರ್ದರಿಕ್ಕಿಲದಿ (ಸೋಪಶ. ೦೮ ೩೬).

[ಪುಳಿ$_3$ + ತೊಡೆ$_1$]

ಪುಳಿದೊಳೆ (ಕ್ರಿ). = ಪುಳಿಗರ್ಚು : ಮಳಯಜಗಂಧಿ ಮಜ್ಜನದ ಮಂದಿರದೊಳ್ ಪೊಸಪೊನ್ನ ಬೊಂಬೆಯಂ ಪುಳಿದೊಳೆದೊಪ್ಪವಿಟ್ಟ ತೆಱದಿಂ ತನುಕಾಂತಿದುಕೂಲದಿಂದಮುಚ್ಚಳಿಸೆ . . . ಬಂದೊಳಪುಗುವಂದು (ಶಾಸ್ಮಾ. ೩೪೪); ಪುಳಿದೊಳೆದೊಪ್ಪವನಿಕ್ಕಿದ ಹೊನ್ನ ಪುತ್ತಳಿಯಂತೆ ಮಾದವಕ್ಕಳೊಲಿದು ಗಳಿಲನೆ ಬಂದು ಶ್ರೀಕೃಷ್ಣದೇವರಾಯನ ಪಾದನಳಿನಕ್ಕೆ ಶಿರವ ಚಾಚಿದರು (ಸೋಪಶ. ೪-೨೨). [ಪುಳಿ$_3$ + ತೊಳೆ$_1$]

ಪುಳಿನ 'ಪುಲಿನ' ನೋ.

ಪುಳಿನತಳ (ನಾ). ಮರಳುದಿಣ್ಣೆ; ಪುಲಿನಸ್ಥಳ : ಉದ್ಯಾನದೊಳೊಂದು ದಿವಸಂ ತೊಟಲ್ದು ನೋಡುತ್ತುಂ ವೈಶ್ರವಣನಿವಿತ್ತಮೊಂದು ಪುಳಿನತಳೋದ್ದೇಶದೊಳ್ ಕುಳ್ಳಿರೆ (ಶಾಂತಿಪು. ೬-೯ ಪ); ಪುಳಿನತಳಂಗಳೊಳ್ ಸೆಳೆವ ನುಣ್ಮಳಲುಂ ಜಳಶೀಕರಂಗಳುಂ ತಳಿದು . . . ಪೂಗೊಳದೊಳಗಲ್ಪ ಕೋಕವನಿತಾವ್ಯಥೆಗಿಂ ಶಿಶಿರೋಪಚಾರದೊಳ್ ಕೆಳದಿಯರಾದುವಾ ತಳರ್ವ ತಣ್ಣೆಲರಿಂ ತರಲೋರ್ಮಿಮಾಲೆಗಳ್ (ಅಪಂಪು. ೬-೬೦).

[<ಸಂ. ಪುಲಿನಸ್ಥಲ]

ಪುಳಿನಸ್ಥಳ (ನಾ). = ಪುಳಿನತಳ : ದೇವಾರಣ್ಯಂ ದೇವರ ದೇವನ

ಮನಕಿಂಬನೀಯೆ ತನ್ನಂದನದೊಳ್ ದೇವರ್ ಸಿವಿಗೆಯನಾ ಪ್ರಸ್ತಾವನೆಯಂ ಕಟಿಪದಿಟಿಪೆ ಪುಳಿನಸ್ಥಳದೊಳ್ (ಶಾಂತಿಪು. ೯-೦೨೨); ಪುಳಿನಸ್ಥಳಮಂ ಮಜ್ಜಿಯಿಸಿ ತೊಳೆಗುವ ನಕ್ಷತ್ರಮಾಲೆಯಂತಿರೆ ಮಣಿಮೇಖಳೆ ಮದನ ಕುಂಭಿಕುಂಭಸ್ಥಳಮಂ ನೆನೆಯಿಸುವುದಸಿಯಳಲಘುನಿತಂಬಂ (ಶುಗ್ಗಿಪು. ೩-೬೦). [ಸಂ. ಪುಲಿನಸ್ಥಲ]

ಪುಳಿಬೋರೆ (ನಾ). ಬೋರೆಯಲ್ಲಿ ಒಂದು ಬಗೆ; ಹುಳಿಎಲಚಿ ಹಣ್ಣು ಮತ್ತು ಅದರ ಮರ: ಬೋರೆಯರಬೋರೆ ಪುಳಿಬೋರೆ ಸೀಬೋರೆಯಿಂ ರಾಯಬೋರೆಯು (ಸಪಸೋ. ೨೪-೫೦).

[ಪುಳಿ$_3$ + ಬೋರೆ$_2$]

ಪುಳಿಮಾವು, ಹುಳಿಮಾವು (ನಾ). ಮಾವಿನಲ್ಲಿ ಒಂದು ಬಗೆ; ಹುಳಿ ಮಾವಿನ ಹಣ್ಣು ಮತ್ತು ಅದರ ಮರ: ಮಾವು ಗೇರ್ಮಾವು ಪುಳಿ ಮಾವು ಭಾವಿಸಲಡಿಕೆಮಾವು ಗಿಳಿಮಾವು ಬೈತಲೆಮಾವು (ಸಪಸೋ. ೨೪-೪೯). **ಹುಳಿಮಾವು**: "ಅಮ್ಲವಾಲುಕಃ —ಹುಳಿಮಾವು" (ಓಪಂ. ೬); ನನಗೆ ಹುಳಿಮಾವಿನ ಹಣ್ಣು ಅಂದರೆ ಇಷ್ಟ ಅಲ್ಲವೇ? (ಪುರಮ. ೨೯).

[ಪುಳಿ$_3$ + ಮಾವು]

ಪುಳಿಮೂಟೆ (ನಾ). (ಆಲಂ) ಠೊಣಪನಾದ ವ್ಯಕ್ತಿ; ಧಡೂತಿ ಆಸಾಮಿ: ಅವಳೊಡನೆ ಪ್ರತಿನಿತ್ಯವೂ ಒಂದು ಗಂಟೆ ಮಾತನಾಡುವ ಭಾಗ್ಯ ಈ ಪುಳಿಮೂಟೆಗೆ ಸಿಕ್ಕಿದೆ (ಶೂನಷ್ಟ್ಯ. ೦೭೨).

[ಪುಳಿ$_3$ + ಮೂಟೆ (< ಮೂಡೆ)]

ಪುಳಿಮೊಸರ್, ಹುಳಿಮೊಸರು (ನಾ). ಹುಳಿಯಾಗಿರುವ ಮೊಸರು: ಕಟ್ಟುಮೊಸರ್ ಸುಱುವ ಮೊಸರ್ ಘಟ್ಟಮೊಸರ್ ಕೆನೆಮೊಸರ್ ಕರಂ ತೊಳೆಮೊಸರಿಂ ಪಿಟ್ಟಮೊಸರ್ ಪುಳಿಮೊಸರೆಂದಿಟ್ಟರ್ ಬಟ್ಟಲ್ಗಳಿಂ ಸರೋಜಾನನೆಯರ್ (ನಳಕಂ. ೪೬೦). **ಹುಳಿಮೊಸರು**: ಎಳೆಯ ಬೆಳಸಿಯಿಂದ ನನ ಹೊಟ್ಟೆ ತುಂಬಿಲ್ಲ ಹುಳಿಮೊಸರು ಅನ್ನ ಉಣನೀಡು (ಸಿದ್ಧಪು. ೩-೬೫). [ಪುಳಿ$_3$ + ಮೊಸರ್]

ಪುಳಿಯಣ್ಣ (ನಾ). ಒಬ್ಬಾತನ ಹೆಸರು: ಪೊರವಕ್ಕನುಂ ಸೆಮ್ಬಕ್ಕನುಂ ಪಾಟಿಯಕ್ಕನ ಕೆಳದಿಯು ಪುಳಿಯಣ್ಣನೀ ಧರ್ಮಂ ನಡಯಿಸು × × × (ಎಳ. VIII, ಪಗರ. ೪೫-೦೩; ಸು. 950); ಪುಳಿಯಣ್ಣ (ಎಳ. II, ೪೩೭; 1000). 'ಪುಲಿಯಣ್ಣ' ಪರಾ. [ಪುಳಿ$_7$ + ಅಣ್ಣ$_1$]

ಪುಳಿಯಣ್ಣನಂದಿ (ನಾ). ಒಬ್ಬಾತನ ಹೆಸರು: ಐನೂವ್ವಾಚಾರಿಯ ಮಗಂ ಪುಳಿಯಣ್ಣನನ್ದಿಯ ಎಕಣದ ಬಾಗಿಯುಲಗನಾಗೆ × ಕ್ಕಟ್ಟು ಪಡೆದ ಸ್ಥಿತಿ (ಎಳ. X (ಪ), ಪಕ್ಕಬ. ೨೬-೯; ೨ಪೆಯ ಕಕ).

[ಪುಳಿಯಣ್ಣ + ನಂದಿ]

ಪುಳಿಯನ್ನ, ಹುಳಿಯನ್ನ (ನಾ). ೧. ಹುಣಿಸೆಯ ಗೊಜ್ಜಿಗೆ ಸಂಬಾರ ಪದಾರ್ಥಗಳನ್ನು ಸೇರಿಸಿ ತಯಾರಿಸಿದ ಅನ್ನ; ಪುಳಿಯೋಗರೆ: ತಾನುಂಡು ಮಿಕ್ಕ ಪುಳಿಯನ್ನಗಳ ಸುಪವಿತ್ರದುಂಡೆಗಳ ಭಕ್ತರ್ಗೆ ಕೊಡಿಸುತಿರ್ಪನು ರಂಗಧಾಮನು (ಅರ್ಜಾವಿ. ೦-೦೨೬). **ಹುಳಿಯನ್ನ**: ೨. ಹುಣಿಸೆಯ ಗೊಜ್ಜಿಗೆ ಸಂಬಾರಪದಾರ್ಥಗಳನ್ನು ಬೆರಸಿ ತಯಾರಿಸುವ ಚಿತ್ರಾನ್ನದಂಥ ಅನ್ನ: ಮಧ್ಯಾಹ್ನ ಮಾಡಿಟ್ಟಿದ್ದ ಹುಳಿಯನ್ನವನ್ನೂ ಇನ್ನೊಂದು ತಟ್ಟೆಯಲ್ಲಿ ಮೊಸರನ್ನವನ್ನೂ ತಂದು . . . ಇಟ್ಟಳು (ಪುಸೋಪಂ. ೯೩). ೩. ಬೇಳೆ, ತರಕಾರಿಗಳನ್ನು ಹಾಕಿ ತಯಾರಿಸಿದ ಹುಳಿಯಲ್ಲಿ ಕಲಸಿದ ಅನ್ನ: ಹುಳಿಯನ್ನವನ್ನು ಉಣ್ಣುತ್ತ ಪಕ್ಕದ ಬ್ರಾಹ್ಮಣ ಹೇಳಿದ (ಸಂಸ್ಕಾರ. ೧೩೯).

[ಪುಳಿ$_3$ + ಅನ್ನ$_3$]

ಪುಳಿಯಬ್ಬೆ (ನಾ). ಒಬ್ಬಾಕೆಯ ಹೆಸರು: × × × ಪುಳಿಯಬ್ಬೆಗೆ × × × (ಸೌಇಇ. XX, ೦೭-೦೬; 904). [ಪುಳಿ$_7$ + ಅಬ್ಬೆ$_1$]

ಪುಳಿಯಳೆ, ಪುಳ್ಳಳೆ (ನಾ). ಹುಳಿಯಾದ ಮಜ್ಜಿಗೆ: ಕಳಹಂಸನೆತ್ತ ಪುಳಿಯಳೆಯೆತ್ತ ಬಿಸಿಲುಗ್ರಕಳೆಯೆತ್ತ ಜೊನ್ನವಕ್ಕಿಯದೆತ್ತ (ಸಂಧಿಪಾ. ೯-೬೬). **ಪುಳ್ಳಳೆ**: ಲವಣಂ ಪಿಪ್ಪಲಿ ಬಜೆ ಸಾಸಿವೆ ಬವ(ಬೋ)ನಂಗಾರೆ ಶುಂಠಿ ಪುಳ್ಳಳೆ ಕಟಿ (ತಿಲ)ತೈಲವೆನಿಪ್ಪವಱಿಂದು ನಸ್ಯವನಶ್ವಾವಳಿಗೆ ಮಾಡಿ (ಲೋಕೋಪ. ೯-೨೨೮); ಅಂತು ಪುಳ್ಳಳೆ ಪಾಲಂ ಕಿಡಿಸುವಂತುಗ್ರಸೇನನಂ ಕಿಡಿಸಿ . . . ಕಂಸಂ ವಸುದೇವನಂ ಬರಿಸಿ ಸಿಂಹಾಸನಾಲಂಕೃತನಂ ಮಾಡಿ (ಅರ್ಧನೇ. ೬-೭೪ ಪ). [ಪುಳಿ$_3$ + ಅಳೆ$_2$]

ಪುಳಿಯೋಗರೆ, ಪುಳಿಯೋರೆ (ನಾ). = ಪುಳಿಯನ್ನ ೧: ಅವರ ಮಡಿ ಮತ್ತು ಆಚಾರಗಳಿಗೆ ನಾನೇಕೆ ಅಡ್ಡಿ ಬರಲಿ? ಪುಳಿಯೋಗರೆ ಕಟ್ಟಿಕೊಂಡು ಬಂದಿರಬಹುದು (ರಂಗಳ. ೮೬); ಲಕ್ಷ್ಮಿ ಮಾಡಿಟ್ಟ ಉಳುಂದೋಗರೆ, ಪುಳಿಯೋಗರೆಗಳನ್ನು ಸವಿದು ಪ್ರಭುಗಳು ಬೆಪ್ಪಾಗಿ ಹೋಗಿದ್ದರು (ಶಾಂತಲಾ. ೧೨೩). **ಪುಳಿಯೋರೆ**: ಪುಳಿಯೋರೆಯಿರದೆ ಮೊರೆಯದ ಶಾತ್ತುಮೊರೆಗು ಕಣ್ಮುಚ್ಚಿ ಕೈಮುಗಿದು ಕೂಳ್ ಕಾಯ್ವ ನಿಮಗು ಮುಗಿಯದೇ ನಿಮ್ಮ ಮರೆಯೊಳು ಬಾಳ್ವ ನನಗು! (ಗಣೇಶ. ೭೦-೬); ಸರಸಮ್ಮ ಮಾಡಿದ್ದ ಪುಳಿಯೋರೆಯು ಅಷ್ಟೇ ರುಚಿಯಾಗಿತ್ತು (ಶುಸಂಸಂ. ೦೫೩). [ದೇ.॥ ತಮಿ. ಪುಳಿಯೋಕರಮ್, ಪುಳಿಯೋರೈ; ತೆಲು. ಪುಲಿಯೋಗಿರ, ಪುಲಿಯೋರ]

ಪುಳಿಯೋರೆ 'ಪುಳಿಯೋಗರೆ' ನೋ.

ಪುಳಿಯ್ಯಮ್ಮ (ನಾ). ಒಬ್ಬಾತನ ಹೆಸರು: ಶ್ರೀಮತ್ ಪೆಗ್ಗಡೆ ಪುಳಿಯ್ಯಮ್ಮ ತಾನಾಗುನ್ದೂರ್ಕೈಱಿಯಂ ಕಟ್ಟಿಸಿ (ಎಳ. VII, ಶಾಂಗಿ. ೦೯೪-೦೦; 935). [<ಪುಳಿ$_7$ + ಅಮ್ಮ$_1$]

ಪುಳಿಲ್ 'ಪುಟಿಲ್$_2$' ನೋ.

ಪುಳಿಲು 'ಪುಟಿಲ್$_2$' ನೋ.

ಪುಳಿವಿಳಿ (ಕ್ರಿ). ಹುಳಿಯನ್ನು ಹಿಂಡು, —ಬೆರಸು: ಕೆನೆವಾಲ ಕಡೆದು ನವನೀತಮಂ ತೆಗೆದು ಬಾಯ್ಗಿನಿದಾಗಿ ಸವಿಯದದಱೊಳಗೆ ಪುಳಿವಿಳಿ [ಹಾಕಾಂ.ಡಿ]ದು ರಸವನೆ ಕಿಡಿಸಿದೊಡೆ ಕಱಿದ ಸುರಭಿಗವ್ವುದೆ ಕೊಱತೆ (ಕೈವಿಂಪಾ. ೦-೭). [ಪುಳಿ$_3$+ಪಿಳಿ$_1$ (<ಪಿಟಿ)]

ಪುಳಿವುಲ್ (ನಾ). ಒಂದು ಬಗೆಯ ಹುಲ್ಲು: ಮಜ್ಜಿಗೆಹುಲ್ಲು: ಪುಳಿವುಲ್ಕಱುಂಕೆ ಮೊಡೆಗುಜಳಿ ಕಣ್ಣಿಗೆ ಮಾರವಳ್ತಿ . . . ಬೆಳೆದೊಪ್ಪುವ ಗಲಗುವೆಸರ ಪುಲ್ಲೆಸೆದಿರ್ಕುಂ (ಕ್ರಿಪುಪಿ. ೨೭-೨೦). [ಪುಳಿ$_3$ + ಪುಲ್]

ಪುಳಿಸೆ, ಪುಣಸೆ, ಪುಣಿಸೆ, ಪುಣುಸಿ, ಪುಣುಸೆ, ಪುಣ್ಸೆ, ಪುಳುಂಸೆ, ಹುಣಚಿ, ಹುಣಸಿ, ಹುಣಸೆ, ಹುಣಿಚಿ, ಹುಣಿಚೆ, ಹುಣಿಸೆ, ಹುಣುಸೆ, ಹುಳಿಸೆ (ನಾ). ೧. ಒಂದು ಬಗೆಯ ಮರ ಮತ್ತು (ಅಡಿಗೆಗೆ ಬಳಸುವ) ಅದರ ಹುಳಿಹಣ್ಣು; ತಿಂತ್ರಿಣಿ: ಸೂರಣದ ಗಡ್ಡೆಯಂ ಸೌವೀರದೆ ಮೇಣ್ ಕಲಸಿಕೊಂಡು ಪುಳಿಸೆಯ ಚಿಗುರಿಂ ನೀರೊಳ್ ಕುದಿನಲ್ಕದು ಸಂಹಾರಿಕುಮಂತದಱ ವಿಷಮನಾ ಕ್ಷಣದಿಂದು (ಲೋಕೋಪ. ೬-೨೬). **ಪುಣಸೆ**: ೧. ಸಯ್ಕನೆ ಬನ್ದು ಪೊಲ ಪುಣಸೆ ಎವ ಕೀಲೆ ಅನ್ತೆ ಪೋಯಿ ಏ ಬಿದಿರೂರ್ಗ್ಗೆಱ ಮುಕೂಡಲ್ (ಇಲ. XII, ೦೬-೦೯; 813); ಪಲಕಾಲದ ಪುಣಸೆಯ ಪಣ್ಣ ಲೇಹ್ಯಮಂ ಮಾಡೆ (ಶಲ್ಯಾಗಾ. ೩-೫೦). **ಪುಣಿಸೆ**: ೧. ಮಲ್ಲದೇವನ್ ಕೊಟ್ಟ ಪ್ರಮ್ಮಧಯ ಬಾಣರಸನ್ ಇತ್ತ ಕೆಯು ಕೆಱಿಯು ನಾಲ್ವತ್ತು ಪುಣಿಸೆ (ಸೌಇಇ. IX-1, ೦-೩; ೨ಪೆಯ ಕಕ?); ಊರ ಮುಂದಿರ್ದ ಪುಣಿಸೆಯ ಮರದ ಪಿರಿದಪ್ಪ ಪೊಬಲೊಳಡಂಗಿರ್ದಳ್ (ಪಂಚಕಂ. ೦೫೫-೬); ಪುಣಿಸೆಯಪೂವೆಲ್ಲಂ ಕಾಯಪ್ಪುವೇ ನೆಲನನಗುಬ್ದರೆಲ್ಲಂ ನಿಧಾನಮಂ ಕಾಣ್ಬರೇ ಕೈಕಾಲುಳ್ಳರೆಲ್ಲಂ ಚಕ್ರವರ್ತಿಗಳೇ (ರರ್ಮಾಮ್ಯ. ೩-೨೩೯); ೨. ಇಂಥ ಮರಗಳು ಬೆಳೆದಿರುವ ಸ್ಥಳ,—ಜಾಗ: ದೇವರ ಕೆರೆಯ

ಪುಣಿಸೆಯ ಮಧ್ಯದಿ ಭೂಮಿಯಂ ಮಾಱುಗೊಂಡ × × × ನೂಱೆಂಪ್ಪತ್ತು ಮತ್ತಮದಱ ಹತ್ತಸಿನ ತನ್ನ ಬಳದೊಳಗೆ ಬರ್ಮ್ಮಯ್ಯಂ ವಿದ್ಯಾದಾನಕ್ಕೆ ಕೊಟ್ಟು ಮತ್ತಪ್ಪರ್ನೆರಡು (ಸೌಇಇ. IX-i. ೦೦೯-೦೬; 1046). **ಪುಣಾಸಿ :** ೨. ಪುಣಾಸಿಗೆ [ಪೆಜ್ಜ]ಣ ಪಳ್ಳಂ ಸೊಗಿಲ್ಲಪಳ್ಳವೆ ಗುಡ್ಡೆ (ಸೌಇಇ. XI-i. ೯-೩೯; 862). **ಪುಣಾಸೆ :** ೧. ಹಡುವ ಲಾಲದ ಮರಂ ಮೇರೆ ಬಡಗಲು ಪುಣಾಸೆಯ ಮರಂ ಮೇರೆ (ಸೌಇಇ. XI-ii. ೦೨೬-೨೦; 1082). ೨. ತೇನನ್ದಾಕಕೊಳ್ಳಾಲೆಯುಳ್ ಕುಡಿತ್ತು ಎರಟ್ಟೆಪುಣಸೆವಿ ಮೂಡಾಯ್ನೋಡಿ ನೀರಿಟ್ಟೆ ತಾಱ್ಟೆವಿ (ಎಳ. XVI. ಗುಟ್ಟ. ೭೭-೩೨; 733); ಚಾಲದಿನ್ದೆ ಬೆಳದ ನೆಪಿ ಪುಣಾಸೆಯಿನ್ದೆ ನಕ್ಕೆ ಕುಣ್ಟೆಯಿನ್ದೆ (ಪ್ರಾಕಾ. ೧೯೦೯, ೧೩-೬೯; 806); ಊರಿಂ ಮೂಡ ಲಡ್ಡಮೆಟ್ಟದ ಮೂಡಣ ಮೊನೆಯ ಪುಣಾಸೆಯ ಕುಪ್ಪೆ (ಸೌಇಇ. XI-i. ೦೦೬-೨೩; 1075). **ಪುಣ್ಣೆ :** ೧. ಭತ್ತ ಭ ೧ಕ್ಕಂ ಹೆರ್ಜಂಕಂ ಪುಣ್ಣೆ . . . ಮೆಣಸಿನ ಭಾರಕ್ಕ ಗ ೧ ಅಡಿಕೆಯ ಹೇಱು ಹತ್ತಕ್ಕಂ × × × (ಸೌಇಇ. IX-ii. ೯೦೦-೦೬; 1366). **ಪುಳುಂಸೆ :** ೩. ಒಂದು ಊರಿನ ಹೆಸರು (?) : ದೋಣೆಯ ಅಱ್ಟೆ ಆಲುಕುರಕೆಱ್ಟೆ ಕುಸುಗಕೆಱ್ಟೆಯ ಪುಳುಂಸೆ ಅಳರಿ ಅತ್ತಿನೆಲ್ಲಾಗಿಲ್ಲೆಱ್ಟೆಯು (ಇಇ. XIV. ೨೩೩-೬೦; ಸು. ೨೭೫ ಕ). **ಹುಣಚಿ :** ೧. ಬಸರಿ, ಹುಣಚಿ, ಅರಳೆ, ಆಲ, ನೇರಲ (ಶಶಾಗ. ೩೩); ಹಲಸು, ಹುಣಚಿ, ಬದಾಮು ಮುಂತಾದ ಫಲವೃಕ್ಷಗಳು (ಮುಂಬಯಿ. ೬-೨೬೬). **ಹುಣಸಿ :** ೧. ಹೊತದ ಹುಣಸಿಯಾ ಚಿಗುರು (ಸಜಗೀ. ೮೨-೨). **ಹುಣಸೆ :** ೧. "ಆಮ್ಲ-ಹುಣಸೆ" (ಬಿಹಾ. ೦೦); ಅತ್ತಿಯ ಹಣ್ಣು ಹುಣಸೆಯ ಹಣ್ಣು ಜೇನೆಯ ಹಣ್ಣುಮಿಪ್ಪೆಯ ಹಣ್ಣದಱ ಹೂ ಮಧುರ ಮಧುವುಂಟು (ಬಸಪು. ೦೯-೨೬); ಹುಣಸೆ- ಈ ಹಣ್ಣು ಸುಣ್ಣ ಸಹ ಕಲಸಿ ಮೆಲ್ಲಲು ಕೆಮ್ಮು ಗುಣ (ಪಿಸ್ಪಿ. ೬); ಹುಣಸೆ ಮುಪ್ಪಾದರೆ ಹುಳಿ ಮುಪ್ಪೇ? (ಗಾಪ). **ಹುಣೆಚಿ :** ೧. ಹುಣೆ[ಪಾಠಾಂ. ಣ]ಚಿಯ ಮರದ ಲ್ಲೊಂದು ಹುಣೆ[ಪಾಠಾಂ. ಣ]ಚಿಯ ಬೆರಳಿಟ್ಟು ಹೋದಲ್ಲಿ ಆ ಹುಣಚಿಯ ಮರ ಹಣಚಿಯ ಮರವಾಗಿ ತಾ ಕಣಚಿ ಹೋದುದ ಕಂಡೆ (ಸಿದ್ಧಪ. ೪. ೨೩೩-೩೨). **ಹುಣೆಚೆ :** ೧. ಸಕ್ಕರೆಯು ಸೀ, ಬೇವು ಕಹಿ, ಹುಣೆಚೆ ಹುಳಿ (ಪಮಂತ. ೩೨೩). **ಹುಣೆಸೆ :** ೧. "ಹುಣಿಸೆ ತಿಂತ್ರಿಣೀ ಚಿಂಚಾಹ್ವಂ" (ಪಸ್ಪುಶೋ. ೩೯-೦೬); ಏನಾನುಂ ಬಾರ್ತೆಗಲ್ಲದೆನಿಪರಳಿಗೊಲ್ದು ಪೊಡೆ ವಡುವ ನರಂ ಚಿಗುರಿಂ ಪೂವಿಂ ಕಾಯಿಂ ಸೊಗಲಿಪ ಮಾವಿಂಗೆ ಹು[ಪಾಠಾಂ. ಪು]ಣಿಸೆಗೆಱಗಲ್ವೇಡಾ (ಸಮಸ. ೯-೩೬); ಹುಣಿಸೆಯ ಕಾಯಂ ತಿಂದರಂತೆ ಚಳಿತು ಪಣ್ಣ ಕಬ್ಬಿನಂತೆ ನೆಲನಂ ಪತ್ತಿ (ಧರ್ಮಾಮೃ. ೦ ೦೬೬); ನಾರು ಬಲಿಯದ ಹುಣಿಸೆ ಕಾಯ ಮಾವಿನ ಕಾಯನಾರೈದು ಕೆತ್ತಿ ಕಿಱಿದಾಗಿ ಹೋಳಿಸಿ ಸುಣ್ಣನೀರಿಂದೆ ಹುಳಿಯ ತೆಗೆದಟ್ಟಿ ಪಾಯಸಮಾಡಱ ಹೆಸರ ಪಾಯಸಮಾದುದು (ಸೂಪಶಾ. ೩-೦೦). ೨. ಸಿವಮ್ಮೆಯನಾಯಕನು ದೇವರ ನಿವೇದ್ಯಕ್ಕೆ ಕಟ್ಟೆಯಿಂದೊಳಗೆ ಹುಣಿಸೆಯ ಗದ್ದೆ ಕಂಬ ಎಳನೂಱ ಹದಿನಾಕುಮಂ ಧಾರಾಪೂರ್ವ್ವಕಂ ಮಾಡಿ ಬಿಟ್ಟರು (ಸೌಇಇ. IX-i. ೨೩೯-೬೦; 1148). **ಹುಣಾಸೆ:** ೧. ಹುಣುಸೆ ಮುಪ್ಪಡಸಿದಡೆ ಹುಳಿ ತಗ್ಗದು (ಕಕಸು. ೯-೯). **ಹುಳಿಸೆ :** ೧. "ತಿಂತ್ರಿಣೀ-ಹುಳಿಸೆ" (ಶಾಕಶ್ಯ. ೨೩೩); ಫಲದಿ ಪುಪ್ಪದಿ ತೆನೆಗಳಿಂದವೆ ತಳಿರ ತೋರಣದಂತೆ ಮೆಱೆದಿಹ ಹುಳಿಸೆಗಳ ತನಿವಣ್ಣು ತುಂಬಿದ ಮರನ ಕಪಿ ಮುಱಿದ (ಶಾಕಿಶಾ. ೦೦-೦೬).

ಪುಣಾಸೆಯ ಗಂಗ = ಒಬ್ಬಾತನ ಹೆಸರು : ಶ್ರೀ ಪುಣಾಸೆಯ ಗಂಗ ಪ್ರಥಮನಾಮಧೇಯಃ ಕಲಿಯುಗಭೀಮಾಪರನಾಮಾ (ಪ್ರಾಕಾ. ೦೯೨೦, ೦೦-೦೦೨; 987). 'ಪುಟಿಯ ಗಂಗ' ಪರಾ.

[< ಪುಳ್ಕಿ. / ತುಳು. ಪುಣಿಕೆ]

ಪುಳಿಹೀರೆ, ಹುಳಿಹೀರೆ (ನಾ). ಒಂದು ಬಗೆಯ ಹೀರೆಕಾಯಿ ವಂತ್ತು ಅದರ ಬಳ್ಳಿ : ಬೇರೂಱೆರ್ದಾ ಪುಳಿಹೀರೆಯಂ ನಯದೊಳಂ ತಂದಿರ್ದುದಂ ಪುತ್ರವಿಂ ಪೇಱಲ್ಕಾವಿಕಗವ್ಯಮಾಹಿಷಮೆನಿಪ್ಪೀ ಕ್ಷೀರದಿಂದಟ್ಟು ಮೆಯ್ದೋಱಲ್ ತದ್ವಿಷಹಂ ಜಲಾಂಜನಲಸನ್ನಸ್ಯಪ್ರಯೋಗಂ ಹಿತಂ (ಪಮಂ. ೬-೦೦). **ಹುಳಿಹೀರೆ :** "ಕಂಪಿಲ್ಲಃ, ಕಂಪಿಲ್ಲಕಃ-ಅರಗು, ಹುಳಿಹೀರೆ" (ಲಿಕಂ. ೨೦). [ಪುಳ್ಕಿ + ಹೀರೆ (< ಪೀರೆ)]

ಪುಳು 'ಪುಟು' ನೋ.

ಪುಳುಂಗಾಱ (ನಾ). ಬಲೆಯನ್ನು ಬೀಸಿ ಹಕ್ಕಿಗಳನ್ನು ಹಿಡಿಯುವವನು: ಚಂಪಾನಗರದೊಳೊರ್ವಂ ಪುಳುಂ[ಪಾಠಾಂ. ಪೋಡುಂ]ಗಾಱಂ ಗರುಡವೇಗ ನೆಂಬೊಂ . . . ಕೊರಸುಃ ಮೊದಲಾಗೊಡೆಯ ಪಕ್ಷಿಜಾತಿಗಳಂ ಬಲೆಯ ನೊಡ್ಡಿ ಪಿಡಿದು (ಪಚ್ಚಾಕಾ. ೦೩೦-೨೨).

[ಪುಳ್ಕಿ (ಪ ← ತಮಿ. ಮಲ. ಪುಳ್=ಪಕ್ಷಿ) + – ಕಾಱ]

ಪುಳುಂಬು, ಪುಣಂಬು, ಪುಣುಂಬು, ಪುಣುಬು, ಪುಣ್ಬು, ಪುಳಂಬು, ಹುಣುಬು (ನಾ). ೧. ಬಾಣ; ಅಂಬು; ಶರ : ಪೊಸನನೆಯ ಪುಳುಂಬಂ ಪೊಸೆದು ಸಲಿಸಿ . . . ಪೊಲಗೆಟ್ಟ ಕಾವುದೇವನಂತೆ ವಸುದೇವನಾ ವನದೊಳಗೆ ವರ್ಪಾಗಳ್ (ಅರ್ಧನೇ. ೩-೩೩ ಪ); ಅಡಿಯಲ್ಲಿ ಸಿಲ್ಕಿದ ಮುಳ್ಳಗಳಂ ನಿಲ್ಲದೊತ್ತಿ ಪುಳುಂಬಿನಿಂ ಕಳೆಯುತ್ತೆ . . . ಅರಣ್ಯ ಸಂಚರನೊಪ್ಪಿದಂ (ಉತ್ತಪು. ೪-೧೨೦); ಮನ್ಮಥನೆಚ್ಚ ಪೂವಿನ ಪುಳುಂಬಿಂ ನೊಂದು ಪುಲ್ಗೊಂಡು ದೂಱುವ ಪೆಣ್ಬುಯ್ಯಲೆ ಪುಯಲಲ್ಲದಱ್ಯೆಂ ಮತ್ತಾವ ಬಯ್ಬು [ಬಲ್ಬು] ಯ್ಯಲಂ (ಧರ್ಮಾಕಾ. ೩-೨೨). ೨. (?) : ಕಂಬಿಯ ಬಿಲ್ಲುಂ ಪಿಡಿದ ಪುಳುಂಬಿನ ಮೂಱುಂಬು ಪೆಗಲ ಬಲೆ . . . ತನಗಿರೆ ಶಂಬರರಿಪುವಂದು ಕೂಡೆ ವನಚರನಾದಂ (ಪಂಪಿಪು. ೭-೦೩೬); ಕುಟ್ಮಿತಚಂಪಕನಿಕಾಯಮುಂ ಕಾಮನಿಸುವ ಕಾಯ್ದ ಪುಳುಂಬಿನಂಬುಗಳ [ಪಾಠಾಂ. ಪುಣಾಂಬುಗಳ] ಪೊಡರ್ಕೆಯೊಂದು ವೆಡಂಮೆಟ್ಟುತಂ (ಶಾಸಂಪಾ. ೦೨. ೦೩೬ ಪ; ಶಾಂತೀಶ್ವ. ೦೦-೬೩ ಪ ನೋ). **ಪುಣಂಬು:** ೧. "ಕಣೆ ಕೋಲ್ ಪುಣಂಬು ಸರಲೆನಲಂಬು" (ಕಬ್ಬಮಂ. ೪೪). **ಪುಣಾಂಬು:** ೧. "ಪುಣಾಂಬು, ಸರಲ್, ಕಣೆ, ಕೋಲ್—ಈ ೪ ಅಂಬಿಗೆ ಪೆಸರ್" (ಶಕಸಾ. ೩೨-೦೦೯); ಕಾಯ್ದ ಪುಣಾಂಬುಗಳಂ ಕುಸುಮಾಸ್ತ್ರನಿಸಾತಮಿರ್ದಪಂ (ಶಾಕಂಪು. ೬೩೬); ವಿರಹಿಗಳಂ ತಾಗಿ ಘಟ್ಟುರ್ಚಿ ಮತ್ತಂ ಬೆನ್ನೊಳ್ ತಪ್ಪಕ್ತದಿಂ ತೊಯ್ದು ಗಿದಲರ ಪುಣಾಂಬಂ ರತಿಪ್ರೌಢಿಯಿಂದಂ ಚಿನ್ನಪ್ಪಂತೈದೆ ತಾಂ ಕ್ಷಾಳಿಸುವ ಪೊಲೆಳೆವೆಣ್ಣೊರ್ವಳಂದೊಲ್ದು ಪೊಯ್ದಳ್ ಬೆನ್ನೀರಂ (ಶಾಧ್ಯಪಿ. ೯-೨೦); ಈ ಪುಣಾಂಬರಿಯದಿರ್ದೊಡೆ ನಿನ್ನ ಶರಮಂ . . . ಕಾಪುರುಷನಘಮೆನ್ನ ನಂಟುವುದು (ಕೇಶಾ. ೦೦-೩೯). **ಪುಣಾಬು :** ೧. "ಪುಣಾಬು ಕಣೆಯಂಬು ಸರಲ್ ತಾವಕ್ಕು ಶರಸಮಾಹ್ವಯಂ" (ಶಬಕಂ. ೬೨). **ಪುಣ್ಬು:** ೧. "ಕೋಲುಂ ಸರಲ್ ಪು[ಪಾಠಾಂ. ಪೂ]ಣ್ಬು ಮೇಣ್ ಕಣೆಯೆನಲ್ಕಂಬಕ್ಕು" (ಶಬ್ದಕ. ೩೯). **ಪುಳಂಬು :** ೧. ಪರಿಸಬೋಳೆಯ . . . ಸುಸಂಪಗೆಯ ಮುಗುಳಂಬು ದೊರೆವಡೆದ ಕಣಗಿಲ ಪುಳಂ[ಪಾಠಾಂ. ಳುಂ]ಬವು ತರದಿವಿದಿರೆಲೆಸರವಿ ವಂತಿಳ್ತಿರಿಸಿದಾ ಬಟ್ಟಳಿಕೆಗಳು ನೆರೆದಿರ್ದುವವರಲ್ಲಿ (ಸಾಳ್ವಭಾ. ೩-೦೯). **ಹುಣುಬು :** ೧. ಕೋಸಲಧರಿತ್ರೀಪಾಲಸುತ ಸುರವಂಶಕುಲ ಹೃತ್ಕೂಲ ನೆದೆಯಲಿ ಹುಣುಬುದೋಱೆತು ಹಗೆಯ ಹಮ್ಮುಗೆಯ (ತೊಕಥಾ. ೬-೨-೦).

[?]

ಪುಳುಂಸೆ 'ಪುಳಿಸೆ' ನೋ.

ಪುಳುಕೊಂಡ 'ಪುಳುಗೊಂಡ' ನೋ.

ಪುಳುಗು 'ಪುಣುಗು' ನೋ.

ಪುಳುಗುಂಡ (ನಾ). ಹುಳುಗಳು ತುಂಬಿದ ಗುಣಿ.—ಹೊಂಡ; ಒಂದು ನರಕ : ಲಿಂಗಜಂಗಮಕ್ಕೆ ನೀಡದೆ ಜಂಗಮಲಿಂಗಕ್ಕೆ ಕೊಡದೆ ತಾನೆ ಕೊಂಡಡೆ ಪುಳುಗುಂಡದೊಳಗಿಕ್ಕುವನು ಕೂಡಲ ಚೆನ್ನಸಂಗಮದೇವ

(ಕನ್ನಪ. ೦೩-೪); ಪುಳುಗುಂಡದೊಳು ಹಾಕಿದರು ತನ್ನಯ ಗೆಳೆಯನ ಬಿಟ್ಟು ಪೋದವನ (ಸನ್ನಕಾ. ೨-೪೦). [ಪುಳು (< ಪುಟು) + ಕುಂಡ$_1$]

ಪುಳುಗುಗಾಪು 'ಪುಣುಗುಕಾಪು' ನೋ.

ಪುಳುಗೊಂಡ, ಪುಳುಕೊಂಡ, ಪುಳ್ಕೊಂಡ, ಹುಳುಗೊಂಡ (ನಾ). = ಪುಳುಗುಂಡ : ಯಿಾ ಸ್ಥಾನದಲು ಮಾನ್ಯವಾಗಿ ಊರುಗಳಂ ಭೂಮಿಗಳಂ ಧನಂಗಳಂ ಈ ಲಿಂಗಕ್ಕೆ ಹಸ್ತೋದಕವಂ ಮಾಡಿ ಕೊಟ್ಟುದುವಂ ಮನಂ ಪೇಸದೆ ಶೆಳೆದುಕೊಂ[ಡವೆ]ನೆಂಬಾತನ ಆತನ ಮಾತಾಮಾತಾಪಿತ್ರುಗಳೆಲ್ಲ ಯೆಪ್ಪತ್ತೇಳುಕೋಟಿವರ್ಷಂಬರಂ ಪುಳುಗೊಂಡದ ನರಕದೊಳಗಿಕ್ಕಿ ನೀನಾ ಹುತಿಗೊಂಡಿರು ಕಂಡಾಯೆಲೆ ಪಾಪವೇ (ಸೌಇಇ. XX, ೦೭೭-೦೨; 1190); ಚಿತ್ರತರನರಕದೊಳಗಾಳುತೇಳುವ ಪ್ರಾಣಿಮಾತ್ರಮಂ ತೆಗೆದು ಪುಳುಗೊಂಡಮಂ ತೊಳೆವುದಕೆ ನೇತ್ರತ್ರಯಂಗೆ ಸಾವಿರ ಸೊಲಿಗೆ ತುಪ್ಪದಿಂ ಸ್ನಾನಮಂ ಮಾಡಿಸಿದಪಂ (ಸಿದ್ಧರಾ. ೬-೩೭); ಆ ಯಮನ ಪಟ್ಟಣದೆ ಪುಳುಗೊಂಡವಾದಿ ಯಗಣಿತಕೋಟಿಯವಱೊಳಗೆ ತಿಳಿಯಲೆಪ್ಪತ್ತೆಂಟುಕೋಟಿನಾಯಕನರಕಂ (ಸೆಬಪು. ೨೦-೧೦); ಮಾಚಕನಂ ನುಡಿದು ಹುಸಿವನಂ ... ಪುಳುಗೊಂಡದ ಸಂಚದಲಿರಿಸುವನು ಕಾಲನೇಳದ ತೆರದಿಂ (ವೀತಿಸಾ. ೪೪೪). **ಪುಳುಕೊಂಡ :** ಉಱದೆ ನಿಜದಂಮ್ಮಮಂ ಮೇಣಾ ಕಱುಪಿಂದ ಪೆಱರ ದಮ್ಮಮಂ ಮೇಣಳಿವಂ ತೆಱೆಗೊಳುವಂ ಪುಳುಕೊಂಡ್ದದೊಳಱುವತ್ತುಸಹಸ್ರಮುದು ಭವಿಸಿತು (ಎಳ. VI, ತರೀಕೆ. ೬೨-೨೭; 1104 ?). **ಪುಳ್ಕೊಂಡ :** ನಿಜ ಧರ್ಮ್ಮಮಂ ಮೇಣ್ ಕಱುಪಿನ್ದಂ ಹೆಱರ ಧರ್ಮ್ಮಮಂ ಮೇಣಳಿವಂ ತೆಱೆಗೊಳ್ದಂ ಪುಳ್ಕೊಂಡದೊಳಱವತ್ತುಸಹಸ್ರವರ್ಷವಾಳುತವಿಕ್ಕುಂ (ಎಳ. VI. ಕಡೂರು. ೦೩೭-೭೯; 1191). **ಹುಳುಗೊಂಡ :** ಭವಿಯ ಮನೆಯ ಅನ್ನ ಸವಿಯಾಯಿತ್ತೆಂದು ಉಂಡ ಭಕ್ತಂಗೆ ಅಘೋರನರಕ ತಪ್ಪದು ಆಗಳಂತೆ ಆ ಭವಿಗೆ ಮಾಡಿದ ಹುಳುಗೊಂಡವು ಆ ಭಕ್ತಂಗಪ್ಪುದು ತಪ್ಪದು (ರೇದಾಪ. ೩೨-೦೦೪); ಉದ್ದಂಡತನದಲ್ಲಿ ನಡೆವ ಭಂಡರಂ ಹುಳುಗೊಂಡದಲ್ಲಿಕ್ಕುವ ಸೊಡ್ಡಳದೇವ (ಸರ್ವಪ. ೦೬೯-೭೯೩). [ಪುಳು (< ಪುಟು) + ಕೊಂಡ$_2$]

ಪುಳುವಗೆ 'ಪುಟುವಗೆ' ನೋ.

ಪುಳುವಚ್ಚೆ 'ಪುಟುವಚ್ಚೆ' ನೋ.

ಪುಳ್ಕೊಂಡ 'ಪುಳುಗೊಂಡ' ನೋ.

ಪುಳ್ಕೊಟ್ಟೆ (ನಾ). ಹುಣಿಸೆಬೀಜ : ಬಾಯೊಳಗೆ ಪುಳ್ಕೊಟ್ಟೆ ಹಾಕಿ ಕೊಂಡಿದ್ದಿಯಾ ಏನು ? ಹೇಳು (ಬಾಳಿಗಿ. ೦೦೬).

[ದೇ. ॥ ತಮಿ. ಪುಣಿಕ್ಕೊಟ್ಟೈ = ತೊಗಟೆ ಮತ್ತು ಬೀಜಗಳನ್ನು ತೆಗೆದು ಮುದ್ದೆ ಮಾಡಿದ ಹುಣಿಸೆಹಣ್ಣು ; ತುಳು. ಪುಣಿಕೊಟ್ಟೆ, ಪುಲ್ಕೊಟ್ಟೆ, ಪುಳ್ಕೊಟ್ಟೆ]

ಪುಳ್ಗಿ 'ಪುಟ್ಗಿ' ನೋ.

ಪುಳ್ಗಿಗ (ನಾ). (?) : ಬಗೆಯದೆ ಪೆಱವಟಿಮರ್ದಂ ಸುಗಂಧಿ ಕಲ್ಲುಪ್ಪು ಪುಳ್ಗಿಗಂ ಪುಳ್ಳಕೆ [ಶಾಕಾಂ. ಪುಗ್ಗಿಗಂ ಪುಳಕೆ] ಜೀರಗೆಯೆಂಬಿನಿತ್ತುಮಂ ಪೂಸುಗೆ ಕಱುವಂ ನಕ್ಕಲೊಡನೆ ಪಸು ಕಱುಗೊಳ್ಗುಂ (ಲೋಕೋಪ. ೯-೦೯೩).

[?]

ಪುಳ್ಗಿಯೋಗರ (ನಾ). ಹುಗ್ಗಿಯ ಅನ್ನ ; ಹುಗ್ಗಿ ; ಪೊಂಗಲು : ಓಗರದ ಪುಳ್ಗಿ[ಶಾಕಾಂ. ಪುಲ್ಲಿ, ಹುಳಿ]ಯೋಗರದ ಪಲತೆಱದ ಪಾಲೋಗರದ ಕಟ್ಟೋಗರದ ಸೊಗಸುವಡೆದ ನೀರೋಗರದ ಮಿಸುಗುವಂಬಲಿಯ ವಿಧಮಂ ವಧೂಜನವಱಿವ ತೆಱದಿನೊರೆವೆಂ (ಸೂಪಶಾ. ೩ ಸೂಪಪ).

[ಪುಳ್ಗಿ (< ಪುಟ್ಗಿ) + ಓಗರ]

ಪುಳ್ಗೆ 'ಪುಟ್ಗಿ' ನೋ.

ಪುಳ್ಚಾರು 'ಪುಳಿಚಾಱು' ನೋ.

ಪುಳ್ಚೇಟು 'ಪುಳಿಚೇಟು' ನೋ.

ಪುಳ್ಳಂಗಾಯಿಉಂಡೆ (ನಾ). ಹೆಸರುಹಿಟ್ಟಿನೊಡನೆ ಬೆಲ್ಲ ಮುಂತಾದುವನ್ನು ಸೇರಿಸಿ ಮಾಡುವ ಒಂದು ಬಗೆಯ ಉಂಡೆ : ಎದುರಿಗೆ ತಟ್ಟೆಯಲ್ಲಿ ಗರಿಗರಿಯ ಚಕ್ಕುಲಿ, ಖಾರವಾದ ತೇಂಗೊಳಲು, ಎರಡು ಪುಳ್ಳಂಗಾಯಿಉಂಡೆ ಹದವಾಗಿ ಹೊಳೆಯುತ್ತಿದ್ದುವು (ವೃದ್ಧವಿ. ೦೦೯). 'ಪುರಿವಿಳಂಗಾಯಿ' ಪರಾ. [ಪುಳ್ಳಂಗಾಯ್ಯಿ + ಉಂಡೆ]

ಪುಳ್ಳಂಪುರಚಿ 'ಪುಳ್ಳುಂಪುಣಿಸೆ' ನೋ.

ಪುಳ್ಳಂಪುರಿಚೆ 'ಪುಳ್ಳುಂಪುಣಿಸೆ' ನೋ.

ಪುಳ್ಳಗತಿ (ನಾ). (?) : ಪುಳ್ಳಗತಿಯ ಹೇಳಿ ನೀಚಜಾತಿಗಳನು ಒಳ್ಳೆವರೆನಿಸಿ ಲೋಕದೊಳು (ಶಿಷ್ಟರಾ. ೯-೭೩). [?]

ಪುಳ್ಳಪುರಸಿ 'ಪುಳ್ಳುಂಪುಣಿಸೆ' ನೋ.

ಪುಳ್ಳಳೆ 'ಪುಳಿಯಳೆ' ನೋ.

ಪುಳ್ಳಿ, ಪುಳ್ಳೆ, ಹುಳ್ಳಿ, ಹುಳ್ಳೆ (ನಾ). ೧. ಮರದಿಂದ ಉದುರಿದ ಚಿಕ್ಕ ಚಿಕ್ಕ ಒಣ ಕಡ್ಡಿ ; ಚೂರು ಪಾರು ಸೌದೆ ; ಪುಡಿಸೌದೆ : ಧರ್ಮಬುದ್ಧಿ ಪುಲ್ಲಂ ಪುಳ್ಳಿಯಂ ತರಿಸಿಯಾ ಪೊಟಲೊಳಗಡಸಿ ತುಂಬಿ ... ಕಿಚ್ಚನಿಕ್ಕಲೊಡಂ (ಪಂಪತಂ. ೦೭೭-೦೭). ೨. ಸೌದೆ ; ಕಟ್ಟಿಗೆ ; ಉರುವಲು : ಕಾಷ್ಠಕೂಟನೆಂಬ ಬೆಸದವಂ ಪುಳ್ಳಿಯ ಪೊಱೆಯಂ ಪೊತ್ತು ಪೊಟಲ್ಗೆ ವರ್ಪೊನಂ ಕಂಡು (ವಡ್ಡಾರಾ. ೭೬-೨೩); ನೆತ್ತಿ ತಱಂಟಾಗೆ ಪುಳ್ಳಿಯನಡಕುವ ಬಡವರ್ಗಂ ಬಟ್ಟೆಗಟ್ಟಿ ಬಡಿವ ಬೇಡರ್ಗಂ ಸಿರಿಯೇಕಾಗದು (ರರ್ಮಾಮ್ಯ. ೬-೦೩೩); ಪುಳ್ಳಿಗಳ ತಂದದನು ಮಾಱುವ ಗಳ್ಳಗತಕವ ಬಲ್ಲೆಯಲ್ಲದೆ ಬಿಲ್ಲುವಿದ್ಯ ವಿದೇಕೆ ನಿನಗೆ (ಜೀವಂಸ. ೦೩-೪೬). 'ಪುಳ್ಳಿಗಡಿ' ಪರಾ. ೩. (ಆಲಂ) ಕ್ಷುದ್ರವಾದುದು ; ಹೀನವಾದುದು ; ಕ್ಷುಲ್ಲಕವಾದುದು : 'ಪುಳ್ಳಿವೇಡ' ಪರಾ. **ಪುಳ್ಳೆ** : ೧. ಮೂಡಣ ಗೋಪುರಮಂ ಪೊಕ್ಕು ಪುಲ್ಲು ಪುಳ್ಳೆಯ ಹೊರೆಗಳನ್ನಿಳುಹಿ (ರರ್ಮಾಮ್ಯ. ೨-೩೦). ೨. ಪಾತಕಜೀವಂಗಳ್ ಎಳ್ಳಿನಂತೆ ಗಾಣಕ್ಕೆ ವಂದು ಕಳ್ಳರಂತೆ ಶೂಲಕ್ಕೆ ವಂದು ಪುಳ್ಳೆಯುಂತೆ ಕಿಚ್ಚಿಂಗೆ ವಂದು . . . ತಿಱ್ಱನೆ ತಿರಿವುವು (ರರ್ಮಾಮ್ಯ. ೩-೭೭). **ಹುಳ್ಳಿ** : ೧. ಉದಯಕಾಲದೊಳೆದ್ದು ಹುಲುಹುಳ್ಳಿಗೆಂದರಣ್ಯಕ್ಕೆ ನಡೆದು (ಹಸಕಾ. ೦೨-೭). ೨. ಕಲ್ಲಿನೊಳಗಣ ದಳ್ಳುರಿಯು ಹುಳ್ಳಿಯ ಕಿಚ್ಚಿನಂತೆ ಅಲ್ಲಿಯೇ ಉರಿಯ ಬಲ್ಲುದೆ (ಪೋಳಿಮಾ. ೦೮೩-೬೯೦); ಹುಳ್ಳಿಯ ಹೊಱೆಯಂ ಹಲವಂ ತಂದು ಬಳಸಿನೊಳೆಡದೆಱಪಿಲ್ಲದಿರಿಸಿ . . . ಆ ಖಳನೋವದೆ ಬಲ್ಗಿಚ್ಚಂ ನಾಲ್ದೆಸೆಯೊಳಗಿಟ್ಟುರುಪಿದನು (ಜಯಕಾ. ೦೩-೪೩). **ಹುಳ್ಳೆ** : ೨. ನಾನು ಹೊತ್ತ ಹುಳ್ಳೆಯ ಹೊಱೆಯನಂಬಲಿಗೆ ಕೊಂಬವರಿಲ್ಲ (ಬಸವ. ೪೭೦); ಹುಳ್ಳೆ [ಶಾಕಾಂ. ಳ್ಳಿ]ಯ ಹೊಳಲೊಳು ಮಾಱುವೆನು (ಜೀವಂಸಾಂ. ೨-೨೭). 'ಪುರಲೆ' ಪರಾ.

ಪುಳ್ಳೆ ಇಡು = (ಆಲಂ) ನಾಶಮಾಡು : ಅದರಾಶೆಗೆ ನಾನು ಪುಳ್ಳೆ ಇಟ್ಟೆ, ನನ್ನಾಶೆಗೆ ದೇವರು ಮಣ್ಣೆರಚಿದ (ಉಮಾಶಿ. ೯೦).

[ದೇ. ॥ ತುಳು. ಪುಲ್ಲೆ; ಕೊಡ. ಪುಳ್ಳಿ; ತೆಲು. ಪುಲ್ಲ]

ಪುಳ್ಳಿಗಡಿ (ಕ್ರಿ). ಸೌದೆಯನ್ನು ಸೀಳು : ಆ ತಾಪಸಂ ಎರ್ದು ಮುಳಿದು ನಿಚ್ಚಂ ಪುಳ್ಳಿಗಡಿವ ತನ್ನ ಕೊಡಲಿಯಂ ಕೊಂಡು . . . ಕಿಚ್ಚಿನೊಳ್ ಬೇವ ಸಮಿಧೆಯೊಳಗಣ ಪೋಟಲೊಳಗೆ ಸೀಳ್ದು ನೋಡೆ (ಬಂಡಂ. ೩-೩೩ ಪ).

[ಪುಳ್ಳಿ + ಕಡ್ಡಿ$_2$]

ಪುಳ್ಳಿಯಣ್ಣ (ನಾ). ಒಬ್ಬಾತನ ಹೆಸರು : ಪುಳ್ಳಿಯಣ್ಣನ ಮಗಂ ರಾಚೆಯಂ (ಎಳ. XI, ಪತ್ರದು. ೭೩-೦೨; 941). [ಪುಳ್ಳಿ? + ಅಣ್ಣ$_1$]

ಪುಳ್ಳಿಯಯ್ಯ (ನಾ). ಒಬ್ಬಾತನ ಹೆಸರು : ತಾಟಿವಡುಗುಡ್ಡಿಗಳ ಮಗಂ ಪುಳ್ಳಿಯಯ್ಯಂ ಮಾಡಿಸಿದ ತೂಮ್ಬು (ಎಳ. X (೮). ಮಾಲೂರು. ೦೬೦-೪; 10ನೆಯ ಶತ). [ಪುಳ್ಳಿ? + ಅಯ್ಯ$_1$]

ಪುಳ್ಳಿವೇಡ (ನಾ). ಕ್ಷುದ್ರನಾದ ಶಬರ ; ನಾಡಾಡಿಯಾದ ಬೇಡ : ಕುರುಪತಿ ತನ್ನಾತ್ಮಜೆಯಂ ಸುರಪತಿನಿಭನಪ್ಪ ತನ್ನ ಪಿರಿಯ ಮಗಂ

ಗಾದರದಿಂ ಕುಡಲೆಂದೊಯ್ಯುತ್ತಿರೆ ಕಂಡಲೆ ಪುಳ್ಕಿವೇಡ ಸುಂಕಂ ಬೇಡುವ್ಪೆನೆ (ಕಂಹರಿ. ೯-೧೬). [ಪುಳ್ಕಿ + ಬೇಡ್ದ]

ಪುಳ್ಕುಂಪುಣಿಸೆ, ಪುಲ್ಲಂಪುರಚಿ, ಪುಲ್ಲಂಪುರುಚಿ, ಪುಳಂಪುಣಿಸೆ, ಪುಳಂಪುರುಚೆ, ಪುಳ್ಕಂಪುರಚಿ, ಪುಳ್ಕಂಪುರಿಚೆ, ಪುಳ್ಕಪುರಸಿ, ಹುಳಿಹುಣಿಚೆ (ನಾ). ಒಂದು ಬಗೆಯ ಸಸ್ಯ: ಹುಳಿಸೊಪ್ಪು: "ಆಲೋಣಕೆ ಕ್ಷುಲ್ಲಕಾಮ್ಲಿ ಪುಳ್ಕುಂಪುಣಿಸೆ" (ಪುಂಗಣಾ. ೮೨-೩೯); ಪುಳ್ಕುಂಪುಣಿಸೆಯುಮುಂ ಕೂಡೊಳ್ಕಿದುವೆನಿಸಿರ್ಪ ಗೋಬಿಯುಂ ಕುಡು . . . ಕಣಗಿಲುಗ್ರತರವಿಷಮುಬ್ಬಗುಂ (ಪಕುವ. ೨ ೩೬). **ಪುಲ್ಲಂಪುರಚಿ**: "ಚಾಂಗೇರೀ . . . ಅಮ್ಲಲೋಣಕಾ-ಪಿ ಪುಲ್ಲಂಪುರಚೀಸೊಪ್ಪಿನ ಹೆಸರುಗಳು" (ಸಿಧ್ಕಾಂಚಿ. ೧೪೪). **ಪುಲ್ಲಂಪುರುಚಿ**: ಯಚ್ಚಿಮಧುಕ, ಪುಲ್ಲಂಪುರುಚಿ, ಸೈಂಧವಲವಣ . . . ಇವುಗಳಲ್ಲಿ ನಾಲಿಗೆಗೆ ಗಂಡೂಷವನ್ನು ಮಾಡಲು ಪಿತ್ತಜ್ವರ . . . ನಿಷ್ಠಾರೋಗ ಇವುಗಳೇ ಮೊದಲಾದುವು ಗುಣವಾಗುವುವು (ಸಶಕೃ. ೬೩). **ಪುಳಂಪುಣಿಸೆ**: ಚಂಡಾತ ಕಣಗಿಲು ಚಾಂಗೇರಿ ಪುಳಂಪುಣಿಸೆ (ಶಾಂಪಾ. ೦೦-೨೪). **ಪುಳಂಪುರುಚೆ**: ಚಿಲುಕೀರೆಸೊಪ್ಪು ಸಿಹಿಪಾಲೆಸೊಪ್ಪು ಚಕ್ರವರ್ತಿ ಪುಳಂಪುರುಚಿ ಜಾಂಗಲಮಾಂಸ . . . ಯಿವ್ವು ಪಥ್ಯಕರವಹುದು (ವಕಚಿ. ೦೩-೯). **ಪುಳ್ಕಂಪುರಚಿ**: ಹೊನ್ನಗನ್ನಿಸಪ್ಪು ಬಲಿತ ಕಾರಿಸಪ್ಪು ಪುಳ್ಕಂಪುರಚಿಸಪ್ಪು . . . ಇವಿಷ್ಟು ಶೋಣಿತವಾತಕ್ಕೆ ಶಮನ (ಬ್ರಿಕೃಚಿ. ೩-೯). **ಪುಳ್ಕಂಪುರಿಚೆ**: ಕೊಡಸೀಗೆಯ ಬೆರಚಿಲ್ಲಿಯ ಕಡುಗಾಯ್ದು ಕಷಾಯದಲ್ಲಿ ಪಂಧುಘೃತಯುಕ್ತಂ ಕೊಡು ಜೋಳದ ಕೂಳ್ಕೊಸರಂ ಕೊಡು ಪುಳ್ಕಂಪುರಿಚೆ ವೆರಸು ಬಸುರಿಂಬಳಿಕ್ಕುಂ (ಗೋವೈದ್ಯ. ೧೪೯-೨೬). **ಪುಳ್ಕಪುರಸಿ**: (ಮೃಚಿಗ. ೬-೧೨೦). **ಹುಳಿಹುಣಿಚೆ**: (ಶ). [<ಪುಳ್ಕಿ + ಪುಣಿಸೆ (<ಪುಳಿಸೆ)]

ಪುಳ್ಕಿ 'ಪುಳ್ಕಿ' ನೋ.

ಪುಳ್ಕಿಮಾತು (ನಾ). ಒಣಮಾತು; ಉಪಯೋಗವಿಲ್ಲದ ಮಾತು: (ಶ). [ಪುಳ್ಕಿ (<ಪುಳ್ಕಿ) + ಮಾತು]

ಪುಜಲೆ, ಪುರಲಿ, ಪುರುಲೆ, ಪುಜುಲೆ, ಬುರಲೆ, ಬುಜುಲೆ (ನಾ). ಒಂದು ಬಗೆಯ ಪಕ್ಷಿ: "ಚಂಚಲಂ ಪುಜಲೆಯಕ್ಕುಂ" (ಪುಂಗಣಾ. ೩೨-೯); ಪುರುಳಿ . . . ವರ್ದಂ ಮಾರವಂ ಮಾರಕುಟಿಗಂ ಪುಜಲೆ ಬುಜುಗಿ ಹಸುಬುಂ ಪುಣಿವುಲ್ (ಸೂತ್ರಸ್ಥ. ೩-೦೪೬). **ಪುರಲಿ**: ಪಶ್ಚಿಮವಲಯದ ಪುರಲಿಗಳು ಒಂದೇ ರೀತಿಯುಪು . . . ಅವುಗಳ ಮೇಲ್ಕೊಕ್ಕಿನಲ್ಲಿ ಹಲ್ಲಿನಂತಹ ಒಂದು ರಚ್ಚು ಇದೆ (ಪಕ್ಷಿ. ೧೩೦). **ಪುರುಲೆ**[1]: ಪಟಪಟನೆ ಹಾರಿ ಬಹ ಹೊರಸುಗಳ ಸಮುದಯಂ: ಪುರುಲೆಗಳ ವೆರ್ದಂದೆ (ಪಶ್ಯಾಂಗ. ೩೩-೦೪೪೬). **ಪುಜುಲೆ**: 'ಕಾಮುಜುಲೆ' ಪರಾ. **ಬುರಲೆ**: ಬುರಲೆ ಟಿಟ್ಟಿಭ ಕೊಂಚೆ ಕೊಳವರ್ಕಿಗಳು . . . ಸುಚಕ್ರವಾಕಗಳರಿದೆನಿಪ ಪಕ್ಷಿಗಳ ಭಾವದ ಪ್ರತಿವಿಂಬಿಸೆದಿಹವು (ಶೋಗಹ. ೩-೩೩). **ಬುಜುಲೆ**: ತಾಜಿರ್ದ ಮಾರಂಗಳ ತೂಜುಲ ತುದಿಗೋದೊಳಿರದೆ ಬುಜುಲಿಗಳಡ್ಡಂಬಾಜುದುವು (ಪಗಡ ೧೭-೩೩); ಗಳಿಗಳಂಟಿಗೆ ಸಿಲುಕಿದವು ಟಿಕ್ಕುಳಿಗ ಪಿಂಜರ ಮಂಜರಿಗ ವಿಮಾನ್ಬಲಿಗ ಲಾವುಗೆ ಸರಲೆ ಬುಜುಲಿಗಳು (ಕಿಹರಾ. ೩-೩-೦೮); ಪರಿಪರಿದು ಗಳರವದ ಶಿಶ್ತಿರಿ ಕೊಂಚೆ ಬುಜುಲಿಗಳ . . . ಕಂಡನಾ ರಾಮ (ಉತ್ತರಾ. ೩೮-೭). 'ಪುರುಳಿ' ಪರಾ. [?]

△ **ಪುಜುಕು** 'ಪುರುಕು' ನೋ.

ಪುಜುಲೆ 'ಪುಜಲೆ' ನೋ.

ಪುಜ್ಜ 'ಪುಪ್ಪ' ನೋ.

ಪುಟಲೂರ್ (ನಾ). ಒಂದು ಸ್ಥಳದ ಹೆಸರು: ತೇಜಾದೆಸೆಗೆ ಸೀಪೆಂ ಪುಟಲೂರ್ಬಾನ ಪುಣುಸೆಯಾ ತೆಂಕಣ ಕೋಡ ಕಟಗೆ ಪಡುವ ನೋಡಿ ಪರಿದ ಪೇರೊಲ್ಬೆಯೆ (ಎಕ. IX (೪). ಕಣಗಳಿ. ೧೩೦-೩೩ ; ೩೭೮). ಪುಟೊಲೂರ್ ' ಪರಾ. [? + ಊರ್]

ಪುಟಿ. ಪುಳಿ[2], ಪುಳಿ[1], ಪುಟಿ (ಕ್ರಿ). ೧. (ಕೊಳೆತು) ಹುಳು ಹಿಡಿ; ಹುಳುಗಳಿಂದ ತುಂಬು; ಹುಳರಿ ಬೀಳು: ಪಿದುಂಬರಕುಷ್ಮಮಾಗಿ ಪುಟಿತು ನಮೆದು . . . ಸತ್ತು ಜಾತ್ಯಂಧೆ ಪೊಲೆಯರ ಮಗಳಾಗಿ ಪುಟ್ಟಿದಳ್ (ಕಡ್ಡಾಣಾ. ೦೦-೩); ಆ ನಾಯ್ . . . ಪುಟಿತು ಸಶ್ತಿತ್ಪಂತೆ ಕಾಲಾಂತದೊಳ್ (ಸುಳುಮಾ. ೩-೨೦); ಪಾತಕಿ ಪುಟುತೊಡಲ್ಲದೇಂ ಸತ್ಪಪಳೇ (ಪುಟೋಚ. ೩-೩೩). ೨. (ಹುಳುಹಿಡಿದ ವಸ್ತುವಿನಂತೆ) ನಿರುಪಯುಕ್ತವಾಗು: ದೇವತೆಗೇಕೆ ವೇಬುಲ್ ಪರಸಿ ಗಂಡಂ ಬೇಡಿಕೊಂಡೆನ್ನ ವೆಂಡತಿಗಿತ್ತೈ ಪುಟಿತೊಂದು ಪೆಣ್ಣಂ (ಪರ್ಗಕ. ೬.೩೦). **ಪುಳಿ**[2]: ೨. ಖರನಂ ಸೌಮಿತ್ರಿ ಪುಳಿತ ಕವಡೆಗೆ ಬಗೆದಂ (ಕಣ್ಣಪು. ೨೦೯ ಕ್ರಹೋ). **ಹುಳಿ**[1]: ೧. ಒಬ್ಬಳವನೆ ಬಿತ್ತಿ ಒಬ್ಬಳವನೆ ಬೆಳೆವಡೆ ಭಿಬ್ಬುನ ಹುಳಿವಡಿನ್ನೇವೆ ರಾವು ನಾಥಾ (ರಿಂಬಾಕ. ೩೮-೩೩); ಇಳೆಯ ಮತ್ಕರ್ಯರು ಶಿವಶಿವಾ ತೆಗೆ ಫಲು ಗುಣಗೆ ಸರಿಯೆಂಬವರ ಬಾಯ್ ಹುಳಿ[ಣಾಣಂ. ಳು]ವುದೋ ಗುಣಕೇಕೆ ಮತ್ಸರ (ಳುಣ್ಣಂ. ೮-೩೭); ಬಾಯಿ ಹುಳಿವುದು ಇಂಥ ಬಯಲ ನುಡಿದರೆ (ಕುಶಂಗ. ೩೫-೩೪). ೨. ಹುಳಿತಿತೇ ಬೇಟವಂದ? (ಪಣಾವ. ೩೭-೬). **ಹುಟಿ**: ೧. ತಲೆ ಹುಟಿತ ನಾಯ ಸುಡು (ಪೂಳ್ಕಪು. ೮-೧೨೩).

ಹುಳಿದಾಡು = ಹುಳುವಿನಂತೆ ತೆವಳು: ಕಮಿಟಿದೀ ದೊನ್ನೆಯಂ ಬಾನೆಂಬರಿಯೆ, ಅಳಿದುಳಿದು ಹುಳಿದಾಡುತಿಹೆವಿದರ ಮರೆಯೆ (ಗಿಳಂ. ೦೨೨-೩೮). P ಜ್ಞಾತಿಶಬ್ದಗಳಲ್ಲಿ ಈ ಧಾತುರೂಪವು 'ಪುಟು' ಎಂದಿದೆಯಾದರೂ ಕನ್ನಡದಲ್ಲಿ ಇದರ ಬಳಕೆಯಿಲ್ಲ.

[ದೇ.॥ ತಮಿ. ಮಲ. ಪುಟು]

ಪುಟಿದೆಗಾವುಂಡ (ನಾ). ಒಬ್ಬಾತನ ಹೆಸರು: [ಕದಲೆಕಳಿ]ವಾಣ್ಣಾ ಎಜಿಯಮ್ಮಂ ನಿವುದಿ ತುರುಗೊಳಿಂಳ್ ಕಾದಿ ಸತ್ತೊಂ ಈ ಕಲ್ಲ ಪುಟಿದೆಗಾವುಣ್ಣಂ[ನ] ತಮ್ಮ ಗುಟಿಯುಮ್ಮ ನಿಱಿಸಿದೊ (ಎಇ. XXI. ೨೦೬ ೯ ; ಸು. ೮೮೨). [ಪುಟಿದೆ + ಗಾವುಂಡ (<ಗಾವುಮುಂಡ)]

ಪುಟಿಯಗಂಗ (ನಾ). ಒಬ್ಬಾತನ ಹೆಸರಂ: ಕೋಟಿಯ ಕೊಳ್ಳನ್ದು ಶಿಂಗವೆಣ್ಣಮ ಪುಟಿಯಗಂಗ ಪ್ರಭುಮಲ್ಲನೊಬ್ಬಾಗುಣ್ಣನಳಿಯಮ್ಮಡ ಗಲು ಕೊಳ್ಳುತ್ತಿರೆ × × × ಕೊನ್ದು × × × (ಎಳಿ. XII, ೫೪೬. ೪೭-೭ ; ಸು. ೮೫೦). [? + ಗಂಗ]

ಪುಟಿಲ್[1] (ನಾ). ಮರಗಳ ಗುಂಪು; ತೋಟ; ಉಪವನ: ವಿಲಾಲವಂಗ ಕುಸುಮಾರಡೋಧೂಸರಮಬಾಲಕಸಂಚಲತರಲಂ ಪುಟಿಲೊಳಗೆ ಸುಟಿವುದುವವನವನು (ಆದಿಪು. ೬-೦೦೦); ಕುಳಿರ್ವ ಪುಟಿಲ್ಗಳಿಕ್ಕೆಗೆ ಲತಾಳಯದೋವರಿಗಳ್ಗೆ . . . ಶೀತಶೀತಳಿಕೆಯ ಬೀಜನಕ್ಕೆ ಗುಟಿಯಾಯುತ್ತು [ವಿ]ಯೋಗಿಜನಂ ಬಸಂತದೊಳ್ (ಪರ್ಗಕ. ೦೦-೨೮); ತವಿರ್ದ ಲತಾಗಾರದ ಪುಟಿಲೆಡೆಯಂ ಸೀತಾರಮಣಿಗೆ ಸುಟ್ಟಿ ತೋಜಿದಂ ರಘುವೀರಂ (ಪಂಠಾಮಾ. ೦೩-೩೪); ಅದಾರ ಕೂಗು ಪುಟಿಲ ನಡುವೆ ಕೇಳ್ವುದು ? (ಅಕ್ಕಣ್ಣಾ. ೩೬-೬೧೬). [ದೇ.॥ ತಮಿ. ಮಲ. ಪೊಟಿಲ್]

ಪುಟಿಲ್[2], ಪುಣಿಲ್, ಪುಳಿಲ್, ಪುಳಿಲಂ (ನಾ). ೧. ಉಸುಕು; ಮರಳು: ಪುಳಿನಂ-ಪುಟಿಲ್ (ಕಮುಕ. ೨೦ ಕ್ರಹೋ). ೨. ಮರಳು ದಿನ್ನೆ: "ಪುಟಿಲಿಂದು ಮಳಲೊಟ್ಟಿಲ್" (ಶಕಾ. ೩೩-೦೩೪); ಪಾಡುವ ತುಂಬಿ ಕೋಡುವ ಪುಟಿಲ್ ನಡವಾಡುವ ರಾಜಹಂಸೆ ಆರೆರ್ದಗವಾರ ವನಕ್ಕ ವನಂಗರಾಗವಂ ಮಾಡೆ ವನಕ್ಕೆ ಬಂದುವರೋಸರಿಗಳ್ಗಿಯ ನಂದನಾಳಿಗಳ್ (ಪಂಕಥಾ. ೩-೩೭); ತಾವರೆಯ ರಜಂಗಳೆಂಬ ಪೊಸನುಣ್ಮಳಿಂದೆ ಪುಟಿಲ್ಗಳಂ ಮನೋಹರಕೃತಕವ್ರವಾಹಿನಿಯೊಳಂಗನೆ ಮಾಡಿಸುತಿರ್ದ ಳರ್ಥಿಯಂ (ಕಾದಂಕಾ. ೨೪); ನನೆಗಣೆಯನ ಗರುಡಿಯಂತಿರ್ದ ಪುವಿನ ಪುಡಿಯ ಪುಟಿಲ್ಗಳಿಂ (ಅರ್ಜನ. ೪-೩೬ ಪ). **ಪುಣಿಲ್**: ೨. ವಾಜುವ ಪಳಿನೀತತಿ ಹಂಸಂ ರಥಾಂಗವಿಸಾ ತಾವರೆಯಿಂದಾ ತಾವರೆಗೀ ತಡಿಯಿಂದಾ

ತಡಿಗೀ ಪುಣಿಲಿನಾ ಪುಣಿಲ್ಗಾ ಕೊಳನೊಳ್ (ಸುಗ್ಗಿ. ೯-೦೬೬). **ಪುಳಿಲ್ :** ೨. ತೀರಭಾಸುರತರತಾಳನಂದನದಲಂಪು ಪುಳಿಲ್ಗಳಡರ್ಪು ಚಿಲ್ವ ಬಿತ್ತರಿಸೆ . . . ಬಗೆಗೊಂಡುದು ಪೂರ್ಣಗುಣಂ ಮಹಾರ್ಣವಂ (ಶಜಿಕಂ. ೦-೩೯); ಮುಕುಳಂ ಕುಚಮುದ್ಧತರಂಗಸಂಚಯಂ ಪಳಿ ಜಘನಂ ಪುಳಿಲ್ (ಸಂಪ್ರಶ್ನು. ೩-೨೦). **ಪುಳಿಲು :** ೧. "ಪುಳಿಲೆನಲು ಮರಳು" (ಕಬ್ಬಿಳ್ಳೆ. ೦೨). ೨. ತದ್ವನಲಕ್ಷ್ಮಿಯ ಮುಂದೆ ಮಂಗಳಂಬಾಡುವ ತುಂಬಿ ಕೋಡುವ ಪುಳಿಲು ನಡೆದಾಡುವ ಹಂಸೆ ರಾಗದಿಂದಾಡುವ ಸೋಗೆ (ಸೌಷಾ. IX-i. ೨೬೭-೨೩; 1160); ಪುಳಿಲೆಡೆಯಿಂದ ಹಂಸಿಯುತ್ತುಂಗ ಕೊಳನ ಪೊಗುವಂತೆ (ಅಪಂತೆ. ೩-೬೯). [?./ಸಂ. ಪುಲಿನ]

ಪುಟಿಲ್ಗಟ್ಟು (ಕ್ರಿ). ಮರಳಿನ ಸಾಲಾಗು; ಮರಳಿನ ಕಟ್ಟೆಯುಂಟಾಗು: ಮೊದಲೊಳ್ ವಾಗ್ದೇವಿಯನೊಲಿಸಿದ ತಿಲಕಂ ತಾನಿದೆನಿಪ ತಿಲಕಂ ನಪಭಸ್ಮ ದಿನೆಸೆಯಲವು ಪುಟಿಲ್ಗಟ್ಟಿದ ಗುಗೆಯ ಪೊನಲನಿನಿಸನನುಕರಿಸಿರ್ದಂ (ಕಾಸಂಪು. ೬೩೦); ಕರ್ಪೂರದ ರಜದ ಜಗುಲಿಯೊಳ್ ಜಗುಟ್ಟು ಮುಡಿಯ ಮುಗುಳ್ಗಳಿಂ ಕಡೆಯಿಕ್ಕಿಯುಮದಱ ಕೆಲದೊಳ್ ಕೆಟಗೆ ಪುಟಿಲ್ಗಟ್ಟಿದ ಮುತ್ತಿನ ಪುಡಿಯ ನುಣ್ಮಳಲೊಳ್ (ಲೀಲಾವ. ೦೦-೬೩ ಪ). [ಪುಟಿಲ್$_2$+ಕಟ್ಟು$_1$]

ಪುಟಿಲ್ದಾಣ (ನಾ). ಉಪವನ; ನಂದನ: [ಊರೂರೊಳ್ ಪ]ರಿಪಕ್ವ ಶಾಳಿವನಮೂರೂರೊಳ್ ಪುಟಿಲ್ದಾಣಮೂರೂರೊಳ್ ಪತ್ತಿಱಿದಿರ್ದ ಪೂಗೊಳಗಳೂರೂರೊಳ್ ಮಹೋದ್ಯಾನಂ . . . ಎನೆ ಪೇಟಾರ್ ಮೆಚ್ಚರಾ ದೇಶಮಂ (ಪರ್ಗಮಾ. ೦೧-೬). [ಪುಟಿಲ್$_1$+ತಾಣ]

ಪುಟಿಲ್ದೊಱೆ (ನಾ). (ಒಣಗಿ) ಮರಳಿನಿಂದ ತುಂಬಿದ ಹೊಳೆ: ಪೆರ್ದೊಱೆ ಕಾಲ್ದೊಱೆಯುಂ ಕಿಱುದೊಱೆ ಪುಟಿಲ್ದೊಱೆಯುಮಾಯ್ತು ನಾಡುಂ ಕಾಡುಂ ಬೀಡುಂ ಸೂಡಿಂ ಸೀಕರಿಪೋಯ್ತು (ರಾಮಾಕ್ಷ. ೩೩-೦). [ಪುಟಿಲ್$_2$+ತೊಱೆ$_2$]

ಪುಟಿಲ್ವಜ್ಜೆ (ನಾ). ಮರಳಿನ ಮೇಲೆ ಮೂಡಿದ ಹೆಜ್ಜೆ: ದರಿಯಂ ಮಿಱಿರ್ದ ನೀರೊತ್ತಿಱಿತರೆ ತೊಱೆಗೆಲ್ಲಂ ಪುಟಿಲ್ವಜ್ಜೆ ಮೆಯ್ದೋಱಿರೆ ಸೈವಾಳಂ ಮಳಲ್ದೀಂಟೆಗಳೆಸೆಯೆ . . . ತಿಳಿದತ್ತಂದು ಸಿಂಧುಪ್ರತಾನಂ (ಜಗವಿ. ೯-೬೨). [ಪುಟಿಲ್$_2$+ಪಜ್ಜೆ]

ಪುಟಿವಾಳಬಾಟ್ (ನಾ). ಒಂದು ಊರಿನ ಹೆಸರು: ಶ್ರೀಮತು [ಪು]ಟಿವಾಳಬಾಟ ಗ್ರಾಮ (ಸೌಷಾ. IX-i, ೨೯-೦೯; 936). [?]

ಪುಟು, ಪುಳು, ಹುಳ, ಹುಳು, ಹುಟು (ನಾ). ೧. ಕ್ರಿಮಿ; ಕೀಟ: "ಕೃಮಿಃ, ಕೀಟಃ, ನಿ ಲಂಗುಃ, ಪುಲ್ಲಕಃ—ಈ ೪ ಪು[ಹು]ಟು" (ಹಲಾಯು. ೦೦೩-೦೯); ಇತ್ತೊದಾನಟಿಪೊನ್ ಪಞ್ಚಮಹಾಪಾತಕನಕುಂ[ಕ್ಕುಂ] ಏಟನೆಯಾ ನರಕದಾ ಪುಟು ಆಕು[ಕ್ಕು]ಮ್ (ಇಲ. X. ೬೦-೯; 578); ಚಾಗದೊಳ್ಪಿನಚ್ಚೊತ್ತದೆ ಮಾಣ್ದು ಬಾಟ್ವ ಪುಟುವಾನಸನೆಂಬನ ಜಾಂಡಮೆಂಬುದೊಂದತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ (ಸಂಪಶಾ. ೩-೬೩); ನೀರಂ ಸೋಧಿಪುದಿಂಬಾಗಾರೈವುದು ಪುಳ್ಳಿ ಬೆರಟಿಯೊಳಗಣ ಪುಟುವಂ ಸಾರೈಸುವಲ್ಲಿ ದಯೆಯಿಂದಾರೈವುದೆನಿಪ್ಪ ಮನೆಗಳಲ್ಲವೆ ತೀರ್ಥಂ (ಸಮಪ. ೬-೯೯). ೨. (ಆಲಂ) ಕ್ಷುದ್ರವಾದುದು: 'ಪುಟುವಗೆ' ಪರಾ. **ಪುಳು :** ೧. ಬಳಿಕೆ ಪಞ್ಚಾವಟದೊಳ್ಪುಳುವಾಗಿ ನಮೆಗುಂ (ಎಳ. VIII, ಪಗರ. ೬೦-೦೦; 897); ಭೂರಿಭೂಜಂ ಪುಳು ಖಗಮೃಗವಾಗುತ್ತುಮೆಂತಕ್ಕೆ ಬಂದೆಂ ನರಜನ್ಮಕ್ಕಯ್ಯ (ರಕ್ಷಾಕ. ೨); ಇಂದ್ರಗೋಪದ ಪುಳುವುದುರಿದುವು (ಮೋಹತ. ೯-೩೬). ೩. ಕ್ಷುದ್ರವ್ಯಕ್ತಿ; ಕ್ಷುಲ್ಲಕನಾದವನು: ದ್ರುಪದ ವಿರಾಟರೆಂಬೀ ಪು[ಪಾಠಾಂ. ಹು]ಳುಗಳವರಂತೋರೆಗೆಡೆದರು (ಕುಷ್ಠಾಣ. ೨-೯೦). **ಹುಳ :** ೧. ಹೊನ್ನ ಹುಳವ ಕಂಡು ನರಿ ತನ್ನ ಬಾಲದ ಹುಣ್ಣ ಮಾಡಿಕೊಂಡರೆ ಹೋಲ ಬಹುದೆ (ಬಸವ. ೨೬೬); ಒಂದು ಹುಳವು ಕಾಣಿಸಿಕೊಳ್ಳಲು ಆ ರಾಮನು . . . ಈ ಹುಳವಾದರೂ ತಕ್ಷಕನಾಗಿ ಕಚ್ಚಲಿ' ಅನ್ನಲು (ಕೃಷ್ಣಾ. ೬೬); ಒಂದು ಸಣ್ಣ ಹುಳವಾದರೂ ಈ ಮನೆಯ ಕರ್ತನಾದ ದೇವರಿಂದ ರಕ್ಷಿಸಲ್ಪಡದೇ ಇರುವುದಿಲ್ಲ (ಮುಂಬಯಿ. ೯-೩೯); ಅತ್ತೀಯ ಹಣ್ಣು ಅತಿ ಕೆಂಪು ಇದ್ದರು ಒಡೆದು ನೋಡಿದರ ಹುಳ ಭಾಳ (ಗರತಿ. ೦೨೯). **ಹುಳು :** ೧. ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆಱನಂತೆ (ಮಹಾರೇ. ೨. ೦೩-೦೬); ಜೇನ ಹುಟ್ಟಿನ ಹುಳುವ ಬಡಿದ ಸಗಾನತನ ತಾನೇನು ಚೂಣಿಯ ಸೇನೆಗೀನೆಯ ಸದಱಲಾಯಿತೆ ಶೌರ್ಯಸಿರಿ ನಿನಗೆ (ಕುಷ್ಠಾಣ. ೯-೩೯); ಮನದ ಕರಿನೆರೆಯ ಹುಳುಗಳೆಲ್ಲ ಹೊತ್ತೇರಿ ನಿದ್ದೆ ತಿಳಿಯೆ (ಅಕಳು. ೦೯೦-೨); ಒಂದು ಎಲೆಯಂತೆ ಇನ್ನೊಂದಿಲ್ಲ. ಕೆಲವನ್ನು ಹುಳುಗಳು ತಿಂದಿವೆ. ಕೆಲವಕ್ಕೆ ಕಜ್ಜಿ (ರಾಮಾಕ. ೦೦೩). ೩. ಆವ ಬಲ್ಲವ ನಿನ್ನ ಮಹಿಮೆಯನಾವ ದೇವರು ನೆನೆಯಬಲ್ಲರು ಜೀವರಾಶಿಯೊಳೊಂದು ಹುಳು ತಾನೇನ ಬಲ್ಲವನು (ಸಂಭವ. ೯-೬೬). ೪. ಹಾವು; ಸರ್ಪ: ಕಡಿಕ ಹುಳು ಕಚ್ಚಿತು ಮಗನಂ (ಐಸಪು. ೯೮-೯). **ಹುಟು :** ೧. 'ಪಡ್ಬಿಂದು ಹುಟು' ಪರಾ.

ಪುಟು ಪತ್ತು, ಹುಳ ಹತ್ತು, ಹುಳು ಹತ್ತು = ೧. ಹುಳು ಹಿಡಿ; ಹುಳುವುಂಟಾಗು: ಅದಱಡಗು ಮುಗ್ಗಿ ಪುಟು ಪತ್ತಿದೊಡಾಱಲ್ ಪರಪೆ ಕಾಗೆಯುಂ ನಾಯುಂ ಮುಟ್ಟಿದುದನೆ ಶುದ್ಧಮಂ ಮಾಟ್ಟುದನಿಂತೆಂದೋದಿದರ್ ಪುರೋಹಿತರೆಲ್ಲರ್ (ಯಕೋಕ. ೩-೩೬); ಚೀಲದಲ್ಲಿದ್ದ ಕಾಳಿಗೆ ಹುಳ ಹತ್ತಿ ಹಾಳಾಗಿವೆ (ರೂಢಿ); ಗಿಡಕ್ಕೆ ಹುಳು ಹತ್ತಿದೆ (ರೂಢಿ). ೨. ಹಾಳಾಗು; ನಿಸ್ಸತ್ವವಾಗು: ವಂಚಕರಿಗಾದರೂ ... ಮೋಸ ಮಾಡಿದ ಗಳಿಗೆಯಿಂದ ಅವರ ವಿವೇಕಕ್ಕೆ ಹುಳ ಹತ್ತಿಬಿಡುತ್ತದೆ (ಭೂಮಿತಾ. ೬೯). **ಹುಳ ಹುಪ್ಪಡಿ ಹುಳು ಹುಪ್ಪಟೆ, ಹುಳು ಹುಪ್ಪಡಿ** = ಕ್ರಿಮಿ ಕೀಟ: ಹುಳ ಹುಪ್ಪಡಿ ಮುಂತಾದವುಗಳು ಕಾಣಿಸದೆ, ಹೊಟ್ಟೆಯೊಳಗೆ ಹೋಗಿ ಬಾಧಿಸುತ್ತವೆ (ಮುಂಬಯಿ. ೩-೦೬೨); ಮನೆಯನ್ನು ಪರಿಶುದ್ಧವಾಗಿಟ್ಟುಕೊಳ್ಳುವುದರಿಂದ ಹುಳು ಹುಪ್ಪಟೆಗಳು ಸೇರಲು ಅವಕಾಶವಿರುವುದಿಲ್ಲ (ಗೃಹವಿ. ೦೬೨); ಹುಪಾರು, ಹುಳು-ಹುಪ್ಪಡಿ ಇದ್ದೀತು (ಮಾರ್ಗದ. ೬೭); ಮಣ್ಣು ಹುಳು ಹುಪ್ಪಡಿಯ ಅನ್ನ. ಹುಳು ಹುಪ್ಪಡಿ ಹಕ್ಕಿ ಪಕ್ಕಿಗಳ ಅನ್ನ (ವಿಜಾಮಂ. ೩೩) [ದೇ. ॥ ತಮಿ. ಮಲ. ಪುಟು; ತುಳು. ಪುರಿ; ಕೊಡ. ಪುಳು; ತೆಲು. ಪುರುಗು, ಪುರ್ಗು, ಪುರುವು, ಪುರ್ವು, ಪ್ರುವ್ವು; ಕೋಲಾ. ನಾಯ್ಕು, ಪುರ್ಪು; ಗೊಂಡಿ. ಪುರೀ; ಪರ್ಜೆ. ಪುರುತ್; ಗಡಬ. ಪುಡುತ್; ಕುಣ. ಪಿರು]

ಪುಟುಂಕು (ನಾ). ಕೊಳೆ; ಪಿಚ್ಚು; ಪಿಸುರು: 'ಕಣ್ಬುಟುಂಕು' ಪರಾ. [←ತುಳು. ಪುಳ್ಕು, ಪುರ್ಕು]

ಪುಟುಕ, ಹುಳುಕ (ನಾ). (ಆಲಂ) ಕ್ಷುದ್ರನಾದ ವ್ಯಕ್ತಿ: ಕ್ಷುಲ್ಲಕ ಮನುಷ್ಯ; ಕೀಳಾದವನು: ಪರನೃಪರನಲ್ಲದೀ ಪುಟು[ಪಾಠಾಂ. ಟು] ಕರನಿಱುವುದೆ ಮದ್ಭುಜಾಸಿ (ಯಕೋಕ. ೨-೩೯). **ಹುಳುಕ** ಭವಿ ಹೆಣ್ಣುಗಳ ಕೂಡುಂಡ ಬಾಯ ಹುಳುಕ ನಾನೆಯ್ಯ (ವಸವಾ. I. ೨೬೬-೬); ಆ ಹುಳುಕರನ್ನು ಕೊಲ್ಲುವುದಕ್ಕೂ ಅವನು ಹೇಸಿದನು (ಕಾಸ್ಮಸ. ೬೨). [ಪುಟುಕು + —ಅ$_7$]

ಪುಟುಕು, ಹುಳುಕು (ನಾ). ೧. ಹುಳು ಹಿಡಿದ ವಸ್ತು; ಹುಳು ತಿಂದು ಕೆಟ್ಟುದು. ೨. ಹುಳು ಹಿಡಿದಿರುವಿಕೆ; ಕೆಟ್ಟುಹೋಗಿರುವ ಸ್ಥಿತಿ. ೩. ಕ್ಷುದ್ರತನ; ಕ್ಷುಲ್ಲಕಸ್ವಭಾವ: 'ಪುಟುಕ' ಪರಾ. ೪. ಹುಣ್ಣು; ವ್ರಣ: (ಕಿ). (ಗು). ೫. ಕ್ಷುದ್ರವಾದ; ನೀಚವಾದ: ಎನಗಪ್ಪೊಡೆ ಮುನ್ನಿನ ಜವ್ವನಮುಂ ಲಾವಣ್ಯಮುಂ ವಿಳಾಸಮುಮಿಲ್ಲೀ ಪನಿತೆಯಿರಲೋವೋ ಪೆರ್ಗಣಮನಿಕ್ಕಿ ಮನೆಮಾಡುವಂದಮಳುಂ ಕಡೆಯೊಳ್ [ಎಂದು ತನ್ನ ಪುಟುಕುಮನದಿಂ]ದಿರಿಸಿ

ಕೊಳ್ಳಲಣ್ಮದೆ ವ್ಯಾಳಿಯೆಂಬ ಕುಂಟಣಿಗೆ ಮಾಱುವುದುಂ (ರರ್ಮಾಸ್ಯ. ೩-೦೨೩). ಹುಳುಕು : ೧. ಬಿಲ್ವಪತ್ರಮಂ ಹುಳುಕುಯಿಲ್ಲದೆ ಕೋಮಲವಾಗಿ ಯಿರುವುದಂ ನೋಡಿ ಸಂಗ್ರಹಿಸಿ ನನಗೆ ಸಮರ್ಪಿಸಲು ಕೋಟಿಯಜ್ಞವಂ ಮಾಡಿದ ಫಲವು ಲಭಿಸುವುದು (ಸೌಗಂಧಿ. ೩೬೦-೩); ಮಕ್ಕಳ ಮನಸ್ಸು . . . ಹುಳುಕು, ಕೊಳಕಾಗಿ, ತೇಜೋಹೀನವಾಗಿ ಅಪವಿತ್ರವಾಗಬಹುದು (ಶ್ಯಾಮಶಾ. ೪). ೩. ಖಳರ ಹೃದಯದ ಕಾಳಕೂಟದ ಹುಳುಕು ಬಲ್ಲರೆ ಮಾನ್ಯರು (ಕುಮ್ಮಾಸ. ೦೩-೦೪) ; ಹೊಳಲು ಬೇವಂದಿವನ ಮಂದಿರವುಳಿದು ದಂದೇ ಅಱಿತೆ ನಿನ್ನಯ ಹುಳುಕನೆಲವೋ ನಿನ್ನ ರಾಮನ ಕೊಂಡು ಬಾಯೆಂಬೆ (ಕೌಶಿಕಾ. ೦೪-೩೪). (ನಾ). ೬. ಕುಂದು; ದೋಷ; ಲೋಪ; ತಪ್ಪು : ಭ್ರಷ್ಟನಾದ ನೀನು ಮತ್ತೊಬ್ಬರ ಹುಳುಕನ್ನು ಹುಡುಕಿಕೊಂಡು ಹೋಗುತೀಯೆ (ಶೀತಿಸಂ. XIII. ೦೬) ; ಕುಳಿತರೆ ನಿಂತರೆ ಹುಳುಕನೆ ಬಗೆವೆ (ಬಲುಮೆ. ೨೬-೭). [< ಪುಟು]

ಪುಟುವಗೆ, ಪುಳುವಗೆ (ನಾ). ಹೀನವಾದ ವಿಚಾರ ; ಕ್ಷುದ್ರವಾದ ಯೋಚನೆ : ಕೃತಾಂತಂ ಬಗೆದಂ ಪೆಱತೊಂದನಾರ ಪುಟುವಗೆಯುಮವಂ ಬಗೆಯದಿರೆ ನಿಮಿರ್ಗುಮಾತಂ ಬಗೆದೊಡೆ ಬಗೆದಂತೆ ಬಗೆದ ಬಗೆ ನಿಮಿರ್ದ ಪುದೇ (ಶಾಂತಿಪು. ೬-೦೦) ; ಇಂತಪ್ಪುದೆಲ್ಲಮಂ ನೀನಱಿದಿರ್ದೆನ್ನುಮಂ ಸಾಕ್ಷಿ ಮಾಡಿ ನುಡಿಸಿ ಕೆಡಿಸಲ್ಬಗೆದ ನಿನ್ನ ಪುಟುವಗೆ ನಮ್ಮ ಕುಲಮನೆಲ್ಲಮನಟಿಪ ಬಗೆ (ಶಂಸಕಂ. ೦೭೩-೬) ; ಬಟಿಯಟ್ಟಿ ಬಂದು ಮುನ್ನಂ ಪುಟುವಗೆಗೊಳ ಗಾದಳೆಂದು ಸಾವಾಸಿಗಳಂ ಕಟಿಪಿದನೆಲ್ಲಂ ತಲೆಯಂ ಬಟಿಯಟ್ಟಿದನೆಂದು ಪೋದುದಸು ಶಶಿದುಃಖಿಯಾ (ಅದಂಪು. ೦೨ ೩). **ಪುಳುವಗೆ** : ಪುಸಿ ಪೃಥಿವಿಗೆ ಪುಳುವಗೆಯಾ ಪುಸಿ ನರಕದ ಕಾರಾಗಾರ ಪುಸಿ ಪುಳುವಿನ ಕೊಂಡಕೆ ಸಂಗಡಂ (ಪಡುಕಾ. ೦೦-೦೦). [ಪುಟು + ಬಗೆ$_2$]

ಪುಟುವಚ್ಚೆ, ಪುಳುವಚ್ಚೆ (ನಾ). ದಂಬಿಯ ಹಸುರುಬಣ್ಣದ ರೆಕ್ಕೆ. **ಪುಳುವಚ್ಚೆ**:

ಪುಟುವಚ್ಚೆಯ ಬೊಟ್ಟು, **ಪುಳುವಚ್ಚೆಯ ಬೊಟ್ಟು** = ದಂಬಿಯ ಹಸುರು ಬಣ್ಣದ ರೆಕ್ಕೆಯ ತಿಲಕ : ಕೇತಕಿಪತ್ರದೋಲೆ ಗುರುಗುಂಜಿಯ ದಂಡೆ ಕಳಾಪಗಂಕಣಂ ಸಯ್ತೆಳವುಲ್ಲ ಬಂದಿ ಪುಟುವಚ್ಚೆಯ ಬೊಟ್ಟು ವನಾಂತಪುಷ್ಪದಿಂ ಜೋತ ತುಱುಂಬು (ಮಲ್ಲಿಕಾ. ೯-೯೩) ; ಪ್ರವಾಳಮಂಜರಿ ಯವತಂಸಮಚ್ಚ ಪುಳುವಚ್ಚೆ[ಶಾಖಾಂ.ಪಳುವಚ್ಚೆ]ಯ ಬೊಟ್ಟುದುರಲ್ಕೆ ಬಿಲ್ಸರಂವೆರಸಿ ಕಿರಾತೆಯಾದ ಶಿವಮೋಹಿನಿ ರಕ್ಷಿಸಲಬ್ಜಜಾಂಡವಂ (ಸೂಪಿಸೋ. ೨-೯೬); ಸೂಡಿದುತ್ಪಳದಳಮಾಲೆ ತಾಳ್ದ ಪುಳುವಚ್ಚೆಯ ಬೊಟ್ಟು . . . ಒಪ್ಪಿರೆ ಪುಳಿಂದಿಯರಾದರಮರ್ತ್ಯಕಾಂತೆಯರ್ (ಕಂಕಂ. ೩-೯).

[ಪುಟು+ಪಚ್ಚೆ, (<ಪಸ್ಸು$_3$)]

ಪುಟುವಾನಸ, ಪುಟುವಾನಿಸ (ನಾ). ಕ್ಷುದ್ರಮನುಷ್ಯ ; ಅಲ್ಪನಾದ ವ್ಯಕ್ತಿ : ಸಂಪನ್ನಯೋಗನಿಯೋಗದಿಂದಮರಣ್ಯದೊಳ್ ನೆಲಸಿರ್ದುಣಲ್ ಬನ್ನಮಿಲ್ಲದೆ ಬಾಟ್ಟುದೇಂ ಪುಟುವಾನಸಂಗೆನಗಕ್ಕುಮೇ (ಪ.ಪಶಾ. ೯-೦೭); ವಿಶ್ವಮೆಲ್ಲಂ ನಿನ್ನಾಣತಿಯೊಳಿರ್ಪಿನಂ ಪುಟುವಾನಸರ್ ದೂಱಲಾರ್ಪರೆ ! (ರಾಮಾಶ್ವ. ೨೪-೦) ; ಪುಟುವಾನಸರ್ ಇನ್ನೆಗಂ ರಕ್ಕಸರೊಳ್ ಪೊಣರ್ದು ಗೆಲ್ಲಂಗೊಂಡುದುಂಟೇ ! (ಅದ್ಭುತ. ೯೭-೨೨). **ಪುಟುವಾನಿಸ** : ಪದಪದವಾಗಿ ಪಾಂಗಱಿದು ಬರ್ದೆಯರಂ ತನಗಾಗುಮಾಡಲಾಱದೆಯುಮಲಂಪು ಪೋಗೆ ಕುಡಲಾಱದೆಯುಂ ಬಸವಂ ನಿಮಿರ್ಚಲಾಱದೆಯುಮದೆಂತೊ ಕೆಮ್ಮನೆ ಕೆಲರ್ ಪುಟುವಾನಿಸರಕ್ಕಟಾ ಚದುರ್ ಚದುರೆನುತಿರ್ಪರ್(ಸೂಕ್ತಿಸು. ೬-೩೬೩).

[ಪುಟು+ಮಾನಸ$_1$ (<ಮಾನುಸ)]

ಪುಟುವಾನಿಸ 'ಪುಟುವಾನಸ' ನೋ.

ಪುಟ್ಟೊಲೂರ್ (ನಾ). ಒಂದು ಊರಿನ ಹೆಸರು : ಪುಟ್ಟೊಲೂರ್ ಬೋಯಸ್ಯ ಪುತ್ರ ವಾಸುಶರ್ಮಣ (ಇಆ. VII. ೦೬೭-೩೦ ; ೬೦೩). 'ಪುಟಲೂರ್' ಪರಾ. [? + ಊರ್]

ಪುಟ್ಗಿ, ಪುಗ್ಗಿ, ಪುರ್ಗಿ, ಪುಳ್ಗಿ, ಪುಳ್ಗೆ, ಹುಗ್ಗಿ, ಹುಗ್ಗೆ (ನಾ). ೧. ಅಕ್ಕಿಯೊಡನೆ ಹೆಸರು ಮೊದಲಾದ ಬೇಳೆಗಳನ್ನೂ ಇತರ ಪರಿಕರಗಳನ್ನೂ ಸೇರಿಸಿ ಮಾಡಿದ ಕಾರ ಅಥವಾ ಸಿಹಿಯ ಒಂದು ಬಗೆಯ ಅನ್ನ ; ಪೊಂಗಲ್ : "ಪುಟ್ಗಿ — ಉರ್ದು ತೊವರಿ ಹೆಸರು ಮೊದಲಾಮವನಿಕ್ಕಿ ಅಟ್ಟ ಕೂಟು" (ಕಮದ. ಪಂ. ೨೯೬) ; "ಪುಟ್ಗಿಯೆನಲ್ ಮುದ್ದಾನ್ನಂ" (ಕರ್ಣಾಪಿ. ೩೩); ಕಿಱಿಕಿಱಿದಾಗಿರೆ ಮೆಯ್ಯಂ ಕೊಱ್ಕೊಱ್ದುಂ ಪುಟ್ಗಿಯಟ್ಟು . . . ಕಿಚ್ಚಿನೊಳಿಡುವರ್ (ರರ್ಮಾಸ್ಯ. ೩-೩೯) ; ಇದು ಮೊದಲಾಗೆ ಬಿನ್ನನೆ ನಿನ್ನನೆ ಕರೆವೆಡೆಯೊಳಂ ತಿಂಬ ಪುಟ್ಗಿಯೊಳೊಗ್ಗರಿಸಿದ ಕಡಲೆಯಂತೆಡೆಗೆಡೆಗೆ ಬಾಯ್ಗೇಱಿವಂದಪುದೈಸೆ (ರಾಮಾಶ್ವ. ೦೩೯-೦೩). **ಪುಗ್ಗಿ** : ೧. ಪುರ್ಗಿ — ಪುಗ್ಗಿ (ಕಮದ. ೨೬೦ ಪ್ರಯೋ) ; ಮಳಲ ಪುಗ್ಗಿಯೊಳಱಸುವರೆ ಕಲ್ಗಳನು ನಿಂಬೆಯ ಪಣ್ಣಿನೊಳು ಕಡುಪುಳಿಯ ನೋಳ್ಪರೆ ಬೇವಿನೊಳು ಕಹಿಯಂ ವಿಚಾರಿಪರೆ (ಶಂಕರಾ. ೬. ೬). **ಪುರ್ಗಿ** : ೨. (ಉಕ) ಗೋದಿಯನ್ನು ನೆನಸಿ ಬೆಲ್ಲದೊಡನೆ ಕುದಿಸಿ ಮಾಡುವ ಪಾಯಸದಂತಹ ಒಂದು ಬಗೆಯ ಪಕ್ವಾನ್ನ : ತನ್ನುರು ರಸನೆಗುರು ಸವಿಯದಾಗಲಾ ಪುರ್ಗಿಯಂ ಮುಚ್ಚಿ ಸದ್ವಸ್ತ್ರದಿಂದೆ ವರ ಭೀಮನಾಥಗೀ ಯೆಂದು ತೊಳ್ತಿನ ಕೆಯ್ಯೊಳಿರದಿತ್ತು ಕಳುಪಲು (ಕುಮಾಪು. ೯-೩೦). **ಪುಳ್ಗಿ** : ೨. ಪುಳ್ಗಿಯಂ ತಂದು ತಮ್ಮವರು ಪೊಂಬಟ್ಟಲೊಳು ನೀಡಿಯುಣಲೆಂದು ಕೊಟ್ಟೋಸರಿಸಿ ಪೋಗಲು (ರಾಘಶ. ೦೨-೩೦); ಪುಳ್ಗಿಯನದಂ ಸದ್ವಸ್ತ್ರವಿಂ ಮುಚ್ಚಿ ಭಾಳಾಕ್ಷಂಗೀವುದೆನುತ್ತೆ ಚೇಟಿಯ ಕರಾಂಭೋಜಾತದಿಂದಟ್ಟಿದಳ್ (ಸ್ವಕಪ. ೨೨-೦೨). **ಪುಳ್ಗೆ** : ೧. ಮಾಡಿದ ಪುಳ್ಗೆ ಕಜ್ಜ ತೊಗೆ ತುಪ್ಪೊಡೆ . . . ಇಂತಿವರ ಭೋಜನಕಾರ್ಗುಱಿಯೈ ಮವೀಶ್ವರಾ (ಹಾರಾಸ್ಯ. ೦-೬-೩). **ಹುಗ್ಗಿ** : ೧. ಬೇಯದ ಹುಗ್ಗಿಯನುಂಬ ಕಾದ ನೀರ್ಗುಡಿವ ಬಯಲ್ಗಳೊಳ್ ಪಡುವ ಬೇವಸಮೋಲಗಿವಂಗೆ ದುಡಿನೊಳ್ (ಸೂಕ್ತಿಸು. ೦೬-೩೦); ಕಾರ ಹುಣ್ಣಿಮೆಯು ದನಗಳ ಹಬ್ಬ. ಅಂದು . . . ಎತ್ತು ಮೊದಲಾದವುಗಳಿಗೆ ಹುಗ್ಗಿಯನ್ನುಣಿಸುತ್ತಾರೆ (ಕನ್ನಡಾ. ೦೭೯). ೨. ಹೋಮದ ಹುಗ್ಗಿಯ ತಿಂದಾ ದೇವರ್ಕಳ ನೆಱ್ ಹೊಡೆದು (ವೀರೇಶ. ೨-೦೩); ಹುಗ್ಗಿಯು ತುಪ್ಪವು ಮನೆಯೊಳಗಿರಲಿಕ್ಕೆ ಗುಗ್ಗುರಿಯನ್ನವ ತಿಂದ್ಯಲ್ಲೊ ಪ್ರಾಣಿ (ಪುರಂದ. ೦-೬೭-೨); ಹುಗ್ಗಿ ಕಿಚ್ಚಡಿಯೆರೆಯುವ್ವ ಸೇವಗೆ ಹಿಂಡಿ ಗುಗ್ಗುರಿ ಸೂಸಲುಂಡಲಿಗೆ . . . ಲಗ್ಗೆಯಾಹುತಿಯೊಪ್ಪಿತಲ್ಲಿ (ಭರತ. ೨೦-೦೨೬). **ಹುಗ್ಗೆ** : ೧. ದೇವರ ಹಿಟ್ಟು ಹುಗ್ಗೆ ತೆಱಗೇನು ಬಿಟ್ಟು (ಎಕ. VI. ಸಕ್ಕಮ. ೯೬-೦೯ ; 1549). [<ಪುಟ್ಗು]

ಪುಟ್ಗು, ಪುಗ್ಗು$_1$, ಪುರ್ಗು (ಕ್ರಿ). ೧. ಸುಡು ; ದಹಿಸು : "ಪುಟ್ಗು— ದಹನಕ್ರಿಯಾಯಾಂ (ಉರಿಸು)" (ಶಸಂಧಾ). ೨. ಸುಟ್ಟು ಹೋಗು : ಪೊಗೆ ಪುಗೆ ಕಣ್ಣಂ ಸಿಂಗಂಗಳಳುರೆ ಗರ್ಜಿಸಿ ಲಂಗಿಸಿ ಪುಡುಪುಡನೆ ಪುಟ್ಗಿ ಸತ್ತುವು ಪಲವುಂ (ಶಂಪಭಾ. ೩-೯೨). **ಪುಗ್ಗು$_1$** : ೨. ಸುಡುಮಿಡುವಂದು ನಡನಡನಡುಗಿ ಮಿಡು ಮಿಡುಮಿಡುಕಿ ಪುಡುಪುಡು ಪುಗ್ಗಿ ತಡತಡದಡಿಸಿ ಬೀಟುತ್ತುಮೇಟುತ್ತುಂ (ಅಪಪು. ೦೦-೦೦ ವ). **ಪುರ್ಗು** : ೨. ಪುಡುಪುಡನೆ ಪುರ್ಗಿ ಜೋಲ್ದೆಟಲ್ಪಡಗಾಗಿ ಸುರುಳ್ದು ಸುರುಳ್ದು ಬಾಯ್ವಿಟ್ಟಿಕ್ಕುಂ (ಸುಕುಮಾ. ೩-೦೩).

[ದೇ.II ತಮಿ. ಪುಟುಱ್ಕು, ಪೊಚುಱ್ಕು, ಪೊಚುಕ್ಕು ; ಮಲ. ಪುಟುಕ್ಕು, ಪುಟುಕು, ಪುಟುಞ್ಞು]

ಪುಟ್ಟಿ (ನಾ). ಒಂದು ವಂಶದ ಹೆಸರು : ಪೇರಮಸರು . . . ಬೆಳ್ಳೆಮಣಿ ಯರುಂ ಸನ್ದಿಗಾಲಾ. ಪುಟ್ಟರುಂ ಬಟ್ಟವರುಂ ಪಸುನ್ಗಾಯ ಕಟಿಷ್ಟಾತರು ಬಿರದರುಂ ಇ ಪೊಲನಂ ನಡಯಿಸಿದೋರ್ (ಎಕ. XVI. ಗುಲ್ಕ. ೬೩-೩೯ ; 733). [?]

ಪುಲ್ಪ 'ಪುಷ್ಪ' ನೋ.

ಪೂ$_1$, **ಹೂ**$_1$ (ಕ್ರಿ)· ಪೂತ$_1$, ಹೂತ$_1$ (ಭೂತಕೃ) : ಪೂತು$_1$, ಹೂತು$_1$ (ಭೂತನ್ನೂ) ; ಪೂವ$_1$ (ಭವಿಕೃ)· ೧. (ಮರ, ಬಳ್ಳಿಗಳಲಿ) ಹೂವಿನಿಂದ ತುಂಬು ; ಹೂವು ಬಿಡು : "ಪೂ—ಪುಷ್ಪಸಂಭವೇ. ಪುಷ್ಪೇ ಚ" (ಪುರಂ) ; ಎಯ್ದೆ ಪೂತು ಕಿಕ್ಕಿಜಿಗಿಜಿದಿರ್ದ ಪಾದರಿಯಿಂ . . . ಒಪ್ಪಿ ತೋಱುಗು[ಂ] (ಎಸ. XIII, ೫೩೦–೩೭ : ೮೭೨) ; ಮನದೊಳಲಂಪನಾಳ್ದನಿಯನಪ್ಪಿದ ದೂದರ ಪೀಯನಪ್ಪ ಪಾತಿನ ರಸದೊಳ್ ಕೊನರ್ವುದು ತಳರ್ವುದು ಪೂವುದು ಕಾಯ್ವುದು . . . ಮನದೊಳ್ ತೊದಳಿಲ್ಲದ ನಲ್ಮೆಯೆಂಬ ನಂದನವನವೋಪರೊಳ್ ನೆರೆದೊಡಂತು ರಸಂಬಿಡೆ ಪಣ್ತಾದಾಗದೇ (ಕಂಗಣ. ೪-೦೦೨) ; ಮಜ್ಜಿದುಂಬಿ ಪೂತ ಚೂತದೊಳಿಜಿಗುಗುಮೆಱಿಗುಗುಮೆ ಸಲ್ಲಕೀಪಲ್ಲವದೊಳ್ (ಪಾಂಚಾಪ. ೩–೨೯) ; ಆವ ಮರುದು . . . ಸಕಲರಿತುಮೊಳು ಪೂವ ಪಣ್ಣ ಪಂಪೆನು ? (ನಿಘಂ. ೨೪–೪೮). **ಹೂ**$_1$: ೧. ಎಲವದ ಮರ ಹೂತು ಫಲವಾವ ತೆಱನಂತೆ ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ (ಬಸವ. ೦೨೦) ; ಹೂತ ಸಂಜಗೆವನವನಳಿಸಂಘಾತ ಮುಕ್ತಿವತೆನು . . . (ಕುಷ್ಠಿಗ. ೦೩–೬) ; ಎನಿತು ಮಳಿಗರಿದೊಡೇಂ ಹಬ್ಬಿ ಹೂವ್ದೆದೇ ದೇವ (ಪಚ್ಚೆ. ೦೯–೬೦)· ೨. ಅರಳು : ವಿಕಾಸವಾಗು : ಹೆಚ್ಚಿದಾನಂದಾತಿರೇಕಕೆ ಚಿತ್ತ ನೆಱಿಯದು ಹೂತು ಹಿಗ್ಗುವ ಪುಳಕರಾಜಿಗೆ ದೇಹ ತಿಱಿದು (ಕುಷ್ಠಿಗ್ರೋ. ೦೩–೨). **ಹೂತ ಹೊಕ್ಕುಳ ಮಗ**=(ಪುರಾಣಗಳಲ್ಲಿರುವಂತೆ, ವಿಷ್ಣುವಿನ) ನಾಭಿಕಮಲದಿಂದ ಹುಟ್ಟಿದವನು ; ಪದ್ಮನಾಭನ ಮಗ ; ಬ್ರಹ್ಮ : ಹೂತ ಹೊಕ್ಕುಳ ಪಾಗನು ಬಂದನು ತಂದೆಯಿದ್ದೆಡೆಗೆ (ಕಣಗ. ೬–೦೪–೨೬). [ದೇ. ॥ ತವಿ. ಮಲ. ಪರ್ದಿ· ಪೂ]

ಪೂ$_2$, **ಪುವ್ವ**, ಪೂವು. ಹುವ್ವ, ಹೂ$_2$, ಹೂವು (ನಾ)· ೧. ಅರಳು ; ಮಲರು ; ಕುಸುಮ ; ಪುಷ್ಪ : ಸುವರ್ಣಪೂರ್ಣಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಪೂಗಾಫಲಮುಂ ಪೊದಲಾಗೊಡೆಯು ನೇಕಾರ್ಚನೆಯಿಂದಿದಿರಂ ಬಂದು ನಿಱಿಸಿ ಬಲಗೊಂಡು ಬಂದು (ನಚ್ಚಾರಾ. ೬೦–೬) ; ತನ್ಮನಿಗಳ ಪಾದಪ್ರಕ್ಷಾಳನೋದಕದೊಳ್ ಪೊರಳ್ದು ಪುಷ್ಪವರ್ಷ ಪೂಗಳೊಳ್ ಪದಿದು . . . ಉಪಶಮಭಾವಮುಂ ತಾಳ್ದಿ (ಅಪಪ್ರ. ೩–೨ ಪ) ; ಇಂಪಿಲ್ಲದ ಕೇದಗೆಯುಂ ಕಂಪಿಲ್ಲದ ಪೂ ಸುಪತ್ರಸಿಲ್ಲದ ಭವನಂ . . . ಏನೊಪ್ಪುಗುಮೇಂ (ಅಪಪ್ರ. ೬–೯೨) ; ಕಂಪಳ್ಳ ಸಂಜಗೆಯ ಪೂಗಳಂ ತಿಱುತಂದು ಹೆಂಪಿನಿಂ ಶಶಿಧರನ ಸಿರಿಮುಡಿಗೆ ಬೇಕೆಂದು (ಬಸವ. ೦–೨೬). ೨. ತಾವರೆ ; ಕಮಲ : 'ಪೂಗೊಳ' ಪರಾ. ೩. ಕಣ್ಣಾಗುಡ್ಡೆಯ ಮೇಲೆ ಉಂಟಾಗುವ ಬಿಳಿಯ ಚುಕ್ಕೆ ವಕ್ಕುತ್ತು ಹಾಗೆ ಚುಕ್ಕೆ ಬಿದ್ದು ಉಂಟಾಗುವ ನೇತ್ರರೋಗ; ಕಾಚೆ ; ಮೋತಿಬಿಂದು : ಅರಿದಿಂಟಾಗಿರೆ ತಾಜಿಯ ತಿರುಳಂ . . . ಜೇನೆಯ್ದಂ ಕಪ್ಪುರಮುಂ ಬೆರಸಿಟ್ಟೆ ಕಣ್ಣ ಪೂಗಳ್ ಕಿತಮಗುಂ (ರಸರತ್ನಾಕ. ೯–೭೭); ಕಣ್ಣೊಳ್ನೀತಜ ಪೂ . . . ಎಂದು ಬಾಯಂ ತಿಸಿದಳ್ (ರಾಪತಿಕೃ. ೮೭–೨೬). 'ಪೂಗಣ್' ಪರಾ. ೪. (ಆಲಂ)ಹಿತವಾದುದು; ಸುಖಿಕರವಾದುದು: 'ಪೂಗನಸು' ಪರಾ. **ಪುವ್ವ** : ೧. ಕಪ್ಪುರ ಕೆಸನ್ನನ ಪಾಗಳ್ × ಲಜಿಬದ ಜಟ್ಟಿ ಪುವ್ವ ಶಾಲೆ ಕಂಪುವಳ್ಳಿ ಆಮೂ ಸಾಸಿವ್ವಗರ್ಗಾಂ ಸಾಲೆ (ಎಕ. VII, ೪೫೨. ೪೩b–೬ ; ಸು. ೪೦೦ ?); ಪುವ್ವಿ[ಣಾಣಾಂ. ಪೂವಿ]ನೊಳ್ ಕಂಪ (ಣಾಣಾಪೂ. ೪–೮೮ ಪ್ರಥೋ). **ಪೂವು** : ೧. ಪೂವಿನಿಂ ಸವೆಂದ ಪಕ್ಕಿಯಿದಿಂಬಿಸವಾಗಳೊಂದು ಸಾರಿಕೆ ವರಿತಂದುದು (ಣಾದಂಬು. ೬೦); ಈಕೆಯು ನಳತೋಳಿಂಗೊಲ್ದು ತವ್ಮ ಚಿಲ್ವಿಕೆಯಂ ಕಂಡೆಳಲತೆಗಳ್ ಪೂವುಗಳಂ ತಳೆದಿರ್ದುಂ ತಳೆಯದಿರ್ಪವಾ ಫಲಿನತೆಯಂ (ಧರ್ಮಾಕ್ಯು. ೩–೦೫೩) ; ಪೂಜ್ಯವು, ಪೂಜಕ, ಪೂಜೆಯು, ಪೂವು ರೂಪರೂಪಗಳು ನಾವೂ ನೀವು (ಅಳಪ್ರ. ೦೭೯–೦೦). **ಹುವ್ವ** : ೧. ಚಿನ್ನವಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮುಂತೆಗೆ ಹುವ್ವ[ಣಾಣಾಂ. ಹೂವ] ತಾಹೆಸಲ್ಲದೆ ಹುಲ್ಲ ತಾರೆನು (ಪುಷಾದೇ. ಬ.೭೦–೦೪೬); ಹುವ್ವ[ಣಾಣಾಂ. ಪೂವ] ತರುವರ ಪುಸಿಗೆ ಪುಲ್ಲ ತರುವ ಅವ್ವೆ ಲಕುವಿಹಾರಮಂ ಇವಗಿಲ್ಲ ಗರುವ (ಪುರಂದ. ೦–೦೪೭ ಕ್ಷಣ) : ಸುರರು ದುಂದುಭಿ ಮೊಳಗೆ ಹುವ್ವಿ[ಣಾಣಾಂ. ಹೂವಿ]ನ ಅರಳು ಸುರಿದರು (ಣಾಪಪ. ೩೨–೦೦೭); ನಿನಗೆ ವೈಜಯಂತಿಯಿಂದು ಒಂದು ದಿವ್ಯವಾದ ತಾವರೇ ಹುವ್ವಿನ ಮಾಲೆಯನ್ನು ಕೊಡುತ್ತಿದ್ದೇನೆ (ಕೃಪಾಪ. ೯೪). **ಹೂ**$_2$: ೧. ಹೂ ಬಾಡಿದಲ್ಲಿ ಪರಿಮಳ ವನಜಿಸುವರೆ (ಬಸವ. ೦೫೭) ; ಒಂದರಳು ಪುಲ್ಲಿಗೆ ಒಂದು ಹೂ ಮುಂದಾರ ಪುಷ್ಪಲ ಒಂದು ಚೆನ್ನೆಯ್ದಿಲು ಬಕುಳ ಒಂದೊಂದು ಅರವಿಂದ (ಬಸಪು. ೦೯–೭೩). ೨. 'ಹೂಗೊಳ' ಪರಾ. ೩. ಆಲಿ ನೋಡುದೊ ಕಣ್ಣ ಬೇಸಯೊ ಮೈಲಗೆಯೊ ಹೂ ಹುಟ್ಟಿದುದೊ (ಬಸಪು. ೦೭–೭೭)· ೫. (ಕಾಗದ, ಬಟ್ಟೆ, ಟಟ್ಟೆ ಮುಂತಾದುವುಗಳ ಮೇಲೆ ರಚಿಸುವ) ಹೂವಿನಾಕಾರದ ಚಿತ್ರ : ಕರಿಪು ಪಾಪುರಿನ ಮೇಲೆ ತಾನೇ ಹೂ ಹಾಕಿದ ಪತ್ತಲದ ಸುಳಿವೇ ಅಲ್ಲಿರಲಿಲ್ಲ (ಪುಂಕೃ. ೨೪). ೬. ಎಳೆಯುದು : ಕೋಮಲವಾದುದು ; ಮೃದು : 'ಹೂಮರಿ' ಪರಾ. **ಹೂವು** : ೧. ಸಿರಿಮುಡಿಗೆ ಹೂವನಡಕುತ್ತಮಿರು ನೀನು (ಪಂಪಿಕೆ ೦–೩೩) ; ಕಳೆದ ಹೂವಿನ ತೊಡಬೆಯೋ ಕುಸಿದಲೆಯು ಬಿಟ್ಟಿಯು ಭಾರವೋ . . . ನಳಿನಾಭನ ಮಾತು ಹಿಂಚಿತು ಕಳಚಿದವು ಕೈದುಗಳು (ಕುಪಾಕ್ರೋ. ೦೯–೩೦); ಜಡೆಗಳೊಳಗೆ ಮಲ್ಲಿಗೆಯು ಹೂವಿನ ಸರ ಬಿಡದುಟ್ಟ ಸಾರಿಯು ಸೀರೆ ಕಡುಪರಿಮಳವಾಂತ ದಿವ್ಯಾಂಗದ ಚೆಲ್ವು ಪಂಡದಿರನ್ನೆಯರೊಪ್ಪಿದರು (ಕಂಪಪ. ೨–೧೦) ; ಒಂದಾರ ಕೊಳಲಿಲ್ಲ ಲೋಕದ ಮುಂದಿ ನಿಂದಾವ ಲೋಕದ ಬಲು ಹೂವು ಎಂದೇನೊ (ಣಾಸಿಗ. ೨೦–೨೦).

ಪೂಗಳನಿರು = ಪುಷ್ಪರಸ ; ಮಧು ; ಮಕರಂದ : "ಮಧು ಮಕರಂದಮೆನಲು ಪೂಗಳಿನಿದಕ್ಕುಂ" (ಪುಂಗಣಾ. ೪೪–೬). **ಪೂವಿನಂಬು**= (ಮನ್ಮಥನ) ಹೂವಿನ ಬಾಣ: ಮದನನ ಪೂವಿನಂಬುಗಳ ಪೆಣ್ಣಾರಿಜೆಂಬ ಬೆಡಂಗನುಂಟುಮಾಡಿದ . . . ರಾಜಕನ್ಯಕೆಯರು ಪಲರಂ ತನಯಂಗೆ ಮಾಡಿದಂ (ಪುಭಾಪ. ೪-೦೪೦); ಅವನ ಪೂವಿನಂಬಿದಟರು ತಲೆವಾಗಿಸುತಿರ್ಪುದು . . . ಆತನೀಗಾವಗಮೆನ್ನ ಜಾಣ್ಮುಡಿಗೆ ಮೆಯ್ಸಿರಿಯುಂ (ಕಬ್ಬಿಣಾ. ೦). **ಪೂವಿನ ಪೊಬ್ಬು, ಹೂವಿನ ಹೊತ್ತು**=(ಸಾಮಾನ್ಯವಾಗಿ) ಹೂವುಗಳು ಅರಳುವ ಸಮಯ ; ಸಾಯಂಕಾಲ : ಆಗಳಾ ಪೂವಿನ ಪೊಬ್ಬನೊಳ್ ದೇವಕೀನಂದನಂ ಮಾಲೆಗಾಜಗೇರಿಯೊಳ್ ವಿಚಾರಿಸುತ್ತುಂ ಬಂದು (ಪಗಪ. ೬–೦೦ ವ); ಪೂವಿನ ಪೊಬ್ಬು ಸಾರಿವರೆ ಸೀಗರಗೈದನುರಾಗದಿಂ ಪ್ರಿಯಂ ಭಾವಜನವ್ಯಕೇಳಿಗೃಹಮುಂ ಪುಗುತಂದು (ಪುನ್ನಪ. ೦೦-೯); ಪಗಲೊಳೆ ಚಂದದಿಂ ಮಲಗಿ ಹೂವಿನ ಹೊತ್ತಿನೊಳೆದ್ದು . . . ಒರ್ವಳ ದೊತ್ತಿಗೆಯ್ದುದಳ್ (ಪುಭಾಣ. ೬-೧೪೬); ಸರಸಿದಾಕ್ಷಿಯರು ಹೂವಿನ ಹೊತ್ತಿನೊಳಗಾಗ ಚರಿಸುವರಾ ಬೀದಿಯೊಳಗೆ (ಕಂಪಪ. ೬-೦೦೨). **ಪೂವಿನ ಸುಗ್ಗಿ** = ಹೂವುಗಳ ಸಮೃದ್ಧಿಯ ಕಾಲ ; ವಸಂತಕಾಲ : ಪೂವಿನ ಸುಗ್ಗಿಯಲ್ಲಿ ಪೂಸವೇಟಂ (ವೀಣಾಪ. ೦೪-೨೭). **ಹೂವಾಗು**=೧. ಅರಳು ; ವಿಕಸಿತವಾಗು : ಮುತ್ತುಗನಿಡುಗೊನೆ ನಿಕರ ಹೂವಾದಂತೆ ನೆತ್ತರ ಬಣ್ಣ ತೋಱಿಸಲು ಚಿತ್ರಜನಾತ್ಮಸಂಭವನ ಕೀರ್ತಿಸಿದ ಖಳೋತ್ತಮ ಕಡುಮೆಚ್ಚಿ ನಗುತೆ (ಮೋಪಪ. ೩೫-೪೦). ೨. ನಲಿ ; ಸಂತೋಷಪಡು : ಹೊಸಮನೆ ಹೂಡಿ ಸುಖಿಸುವ ನನ್ನ ಆಸೆ ಪೂರೈಸಿತೆಂದು ಹಿಗ್ಗಿ ಹೂವಾಗುತ್ತಿದ್ದೆ (ಕೂಪಸಂ. ೦೩). ೩. ಮೈದಾಳಾಗು : ಮಗಳ ಪರಿಸ್ಥಿತಿಯನ್ನು ಕೇಳಿ ತಂದೆಯು ಮನಸ್ಸು ಹೂವಾಯಿತು (ಕೂಪ). **ಹೂವಿನಕಾರ**=ಹೂವಾಡಿಗ (?) : ಶ್ರೀನಖರೇಶ್ವರದೇವರಲಿ ಮಾಡಿದ ಧರ್ಮ್ಮದ ವಿವರ . . . ಹಲರ ದೇವಸ್ವದ ಗಡಿಯಿಂದಂ ಪಡುವಲು

ತೆಂಕಲು ಮೂರು ಕೇರ್ಯ್ಯ ಹಲರ ಹೂವಿನಕಾರ ದುಗುಣಸೆಟ್ಟಿಯ ಗಡಿಯಿಂದಂ ಬಡಗಲು ಪಡುವಲು (ಸೌಕಾ. IX-ii, ೪೪೪-೦೨ ; 1433). ಹೂವಿನ ಕೆಲಸ = ಕಲ್ಲು, ಮರ, ಬಟ್ಟೆ, ಗೋಡೆ ಮೊದಲಾದುವುಗಳ ಮೇಲೆ ಹೂವು, ಎಲೆ ಮೊದಲಾದ ಚಿತ್ರಗಳನ್ನು ಬಿಡಿಸುವ ಕೆಲಸ : ಕಡಕತೂರ ಸೇನಬೋವ ರಾಮರಸರ ಮಗ ಲಖಯನೂ ಜನಾರ್ದನ ದೇವರಿಗೆ ಹೂವಿನ ಕೆಲಸ ಮಾಡಿಸಿದನು (ಮೈಕಂ. ೦೯೩೬, ೬೨-೨ ; 1754). ಹೂವಿನ ಕೋಲು = ೧. ಹೂವಿನಿಂದ ಅಲಂಕೃತವಾದ ಕೋಲು. ೨. ಯಕ್ಷಗಾನ ಬಯಲಾಟಗಳಲ್ಲಿ ಒಂದು ಪ್ರಕಾರ; ಈ ಕಲೆಯನ್ನು ಅಭ್ಯಾಸ ಮಾಡಿದವರು ಶಿಷ್ಯರೊಂದಿಗೆ ನವರಾತ್ರಿಗೆ ಮನೆ ಮನೆಗೆ ಹೋಗಿ, ಪ್ರದರ್ಶನ ಮಾಡಿ ತೋರಿಸುತ್ತಾರೆ : ಆ ಶಿಷ್ಯರ ಕೈಯಲ್ಲಿ ಬೆಂಡಿನ ಹೂವುಗಳಿಂದ ಅಲಂಕೃತವಾದ ಒಂದೊಂದು ಕೋಲು ಇರುತ್ತದೆ. 'ಹೂವಿನ ಕೋಲು' ಎಂದು ಹೆಸರು ಇದಕ್ಕೆ. ಈ ಪ್ರದರ್ಶನ ಸಂಪ್ರದಾಯಕ್ಕೂ ಹೂವಿನ ಕೋಲು ಎಂದು ಹೆಸರು ಬಂದಿದೆ (ಯಕ್ಷಬ. ೨೦). ಹೂವಿನ ಪಡಿ, ಹುವಿನ ಪಡಿ = ಹೂವಾಡಿಗರಿಗೆ ಕೊಡುವ ಸಂಭಾವನೆ : ಶ್ರೀಗೋಮ್ಮಟದೇವರ ಪಾರಿಶ್ವದೇವರಿಗೆ ಪರ್ಷನಿಬನ್ಧಿಯಾಗಿ ಹೂವಿನ ಪಡಿಗೆ ಜಾತಿಹವಳಕ್ಕೆ ತೊಲೆಗೆ ತಾ ೧ . . . ಯಿದ ಆಚಂನ್ದ್ರಾರ್ಕ್ಕ ತಾರಂಬರಂ ಸಲಿಸುವರು (ಎಳ. II, ೨೪೦-೨ ; ಸು. 1175) ; ಶ್ರೀ ಗೊಮ್ಮಟದೇವರಯರ್ಚ್ಚನೆಗೆ ಹುವಿನ ಪಡಿಗೆ ಶ್ರೀಮನ್ಮಹಾಮಣ್ಡಲಾಚಾರ್ಯ್ಯರು (ಎಳ. II, ೨೩೬-೩ ; 1198 ?). ಹೂವಿನ ಮಕ್ಕಳ ಕುಣಿತ = ಒಂದು ಜಾನಪದ ಕಲೆ ; ಈ ಇದರಲ್ಲಿ ಕಲಾವಿದರು ಜಾತ್ರೆಯ ಸಮಯದಲ್ಲಿ ಕೆಂಪು ಹೂವಿನಿಂದ ಉದ್ದವಾದ ಮಾಲೆಯನ್ನು ಕಟ್ಟಿ ತಲೆ, ಕೊರಳು, ಮುಂಗೈ, ತೋಳು ಮೊದಲಾದುವುಗಳಿಗೆ ಹೂವಿನ ಅಲಂಕಾರ ಮಾಡಿ ಕೊಂಡು, ಹೂವಿನ ಹಾರ ಸುತ್ತಿದ 'ಅಂಬುಗತ್ತಿ'ಯನ್ನು ಹಿಡಿದು, ಕಲಶಗಳನ್ನು ಹೂವಿನಿಂದ ಸಿಂಗರಿಸಿ, ಡೋಲಿನ ಬಡಿತಕ್ಕೆ ಸರಿಯಾಗಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕುತ್ತಾ ವೃತ್ತಾಕಾರವಾಗಿ ಕುಣಿಯುವರು : ಉತ್ತರಕನ್ನಡಜಿಲ್ಲೆಯಲ್ಲಿ ವಾಸವಾಗಿರುವ 'ಪಟಗಾರ'ರಲ್ಲಿ ಮಾತ್ರ ಕಂಡುಬರುವ ಕಲೆ 'ಹೂವಿನ ಮಕ್ಕಳ ಕುಣಿತ' (ಕಜಿಕೆ. ೦೯೦). ಹೂವಿನ ಮಳೆ = ಪುಷ್ಪವೃಷ್ಟಿ : ನಳನೃಪನ ಕರೆಸಿದರು ಹೂವಿನ ಮಳೆಯ ಕಱೆದರು ದೇವದುಂದುಭಿ ಮೊಳಗಲರಸನ ಕೊರಳಿಗಿಟ್ಟಳು ಪುಷ್ಪಮಾಲಿಕೆಯ (ನಳನ. ೩-೬೬). ಹೂವಿನ ಹಬ್ಬ = ವಸಂತಕಾಲ : "ಹೂವಿನ ಹಬ್ಬ ಸುಗ್ಗಿ ಬಂದುದು ಬಸಂತಂ ದಲೆಂದೆನೆ ವಸಂತಕ್ಕೆ ಮಿಸುಗುವ ಪೆಸರ್" (ಕ್ರಿಸ್ತಿ. ೦೬) ; "ಹೂವಿನ ಹಬ್ಬವೆಂದು ಸುಗ್ಗಿಯು ಬಸಂತನುಮಂದು ಪೆಸರು ತಾನೊಂದುಗು ವಸಂತಾಖ್ಯದಲ್ಲಿ" (ಶಬ್ದಮಂ. ೨೧). ಹೂವಿನ ಹಾಸಿಗೆ = ೧. ಹೂವುಗಳಿಂದ ಮಾಡಿದ ಹಾಸುಗೆ ; ಪುಷ್ಪಶಯ್ಯೆ : ಶಶಿಕಾಂತ ವೇದಿಕೆಗಳಲ್ಲಿ ಹೂವಿನ ಹಾಸಿಗೆ[ಹಾಶಾಂ. ಕೆ]ಗಳಲ್ಲಿ . . . ನೆರೆದು (ಎವೇಳ. ೦೬೦). ೨. (ಆಲಂ) ಸುಗಮವಾದುದು; ಸುಲಭವಾದುದು ; ಸುಖಮಯವಾದುದು : ಜೀವನವೆಂದರೆ ಹೂವಿನ ಹಾಸಿಗೆಯಲ್ಲ (ಕೂಡಿ).

[<ಪೂ₁ ./ ತಮಿ. ತುಳು. ಪೂ ; ಮಲ. ಪೂ, ಪೂವು ; ತೆಲು. ಪೂ, ಪುವ್ವು, ಪೂವು ; ಕೋಲಾ. ಪೂವ್ ; ಗಡಬ. ಪೂ, ಪುವ್ವು ; ಮಲ್ತೊ. ಪೂಪು]

ಪೂಂಡಿ 'ಪುಂಡಿ' ನೋ.

ಪೂಂಬಳಿ ? (ನಾ). ಹೂವಿನ ಕಾಣಿಕೆ; ಪುಷ್ಪೋಪಹಾರ (?) : ಒರ್ವಳ್ ಮುನಿದಿನಿಯನಂ ತಿಳಿಪಲ್ ಕೆಳದಿಯಂ ನಂಬದೆ ತೆಂಬೆಲರ್ಗೆ ಪೂಂಬಳಿಯಂ ಬಟಿಯಟ್ಟುವಂತೆ ತನ್ನ ತಂಗಿಯನೆ ಬಟಿಯಟ್ಟಿ (ಅನಂಪು. ೯-೦೦ ನ).

[<ಪೂ₂ + ಬಳಿ₃ (=ಬಲಿ₃)]

ಪೂಂಬೆ (ನಾ). (ಕರಾ) ಬಾಳೆಯ ಹೂವು₂ — ಮೋತೆ : ಬಾಳೆಗಿಡದ ಗೊನೆಯ ತುದಿಯಲ್ಲಿದ್ದ ಪೂಂಬೆಯನ್ನು ತಂದು ಅದನ್ನಾದರೂ ಬಜ್ಜಿ ಮಾಡೋಣ (ಬಾಳಗಿ. ೦೩೩) ; ಬಾಳೆಗೊನೆಯ ಕುಂಡಿಗೆಗೆ ನಮ್ಮಲ್ಲಿ 'ಪೂಂಬೆ' ಎಂಬ ಹೆಸರು (ಶಾರ್ಕಿಸು. ೪೫). [←ತುಳು. ಪೂಂಬೆ]

ಪೂಂಬೆಕಿರೀಟ (ನಾ). ಬಾಳೆಯ ಮೋತೆಯ ಆಕಾರದ ಕಿರೀಟ : 'ಪೂಂಬೆಯಂತಿರುವ ಕಿರೀಟ' ಎಂಬ ಅರ್ಥದಲ್ಲಿ 'ಪೂಂಬೆಕಿರೀಟ' ಎಂದೂ ಆಡುತ್ತಾರೆ (ಶಾರ್ಕಿಸು. ೪೫). [ಪೂಂಬೆ + ಕಿರೀಟ]

ಪೂಂಬೊಲ (ನಾ). ಹೂವಿನ ತೋಟ ; ಹೂದೋಟ : ಬಸವಸೆಟ್ಟಿ ಪದಿನಯ್ಗಳ ನೀರ್ಮ್ಮಣ್ಣು ಅಯ್ಗುಳ ಪೂಮ್ಬೊಲನುಂ . . . ದೇಗುಲಕ್ಕೆ ಬಿಟ್ಟಂ (ಎಳ. IV, ಹಗ್ಗಡ. ೦೬-೦೦ ; 1021) ; ಶ್ರೀದೇಕಬ್ಬೆ ಮಹಾದೇವರ್ಗ್ಗೆ ಬಿಟ್ಟ ಪೂಂಬೊಲಂ ತೋಣ್ಬಖಣ್ಡಮುಮಂ . . . ಈ ವಂಸದ[ಲ್] ಪುಟ್ಟಿದವರ್ ಕಾ[ದ]ಳಿಸುಗೆ (ಎಇ. VI, ೨೦೭-೫೩ ; 1057). [<ಪೂ₂ + ಪೊಲ]

ಪೂಕರೆ (ನಾ). (ಕರಾ) ಅಲಂಕಾರದ (ಬಾಳೆಯ) ಕಂಬ : ಬುದ್ಧಿವಂತನ ಗದ್ದೆಯ ಬಿತ್ತವನ್ನು ದಂಡಿಗೆಯಲ್ಲಿಯೂ, ಬಿಲ್ಲರ ಗದ್ದೆಯ ಬಿತ್ತವನ್ನು ಕುಕ್ಕೆಯಲ್ಲಿಯೂ ತಂದು ಬಿತ್ತಿ, ಬಾಳೆಯ ಪೂಕರೆಯನ್ನು ಹಾಕಿದರು (ಕೋಟಿಪ. ೯); "ಗದ್ದೆ ಬಿತ್ತಿದ ತರುವಾಯ ಅದರ ಮಧ್ಯದಲ್ಲಿ ಒಂದು ಬಾಳೆಯ ಗಿಡವನ್ನು ತಂದು ಅಲಂಕರಿಸಿ ನಡುವ ಸಂಭ್ರಮ" (ಕೋಟಿಪ. ಕೋಶ). [←ತುಳು. ಪೂಕರೆ]

ಪೂಕು, ಪುಕ್ಕು₂ (ನಾ). ಸ್ತ್ರೀಯ ಜನನೇಂದ್ರಿಯ ; ಯೋನಿ : (ಕ). ಪುಕ್ಕು₂ : "ಭೀರುತ್ವದೊಳ್ ಯೋನಿಯೊಳ್ ಪುಕ್ಕು" (ಶಬ್ದಮಂ. ೬೯).

[ದೇ. ॥ ತೆಲು. ಕೊಂಡ. ಪೂಕು]

ಪೂಕುತಿತ್ತಿ (ನಾ). ಶರಾಯಿ ; ಇಜಾರ ; ಚಲ್ಲಣ : (ಕ). [?]

ಪೂಗ (ನಾ). ೧. ಗುಂಪು ; ಸಮೂಹ ; ಸಮುದಾಯ : "ನಿಕರಃ, ನಿಕಾಯಃ ... ಕದಂಬಕಃ, ಪೂಗಃ ... ಸ್ತೋಮಃ—ಈ ೩೯ ಸಮೂಹಂ" (ಹಲಾಯು. ೦೦೯-೦) ; ಪೂಗದ ನವನಾಗಲತಾಪೂಗದ ಫಲಪತ್ರದೊಡನೆ ಬಹುವಿಧಫಲದಿಂ ರಾಗಯುತಕ್ರಮವಿರಹನ ರಾಗಯುತಕ್ರಮಮನ ವನಿಭುಜನರ್ಚಿಸಿದಂ (ಪುಷ್ಪಪು. ೦೯-೬); ರಾಘವನು ಮೈಮಱೆದ ಲಕ್ಷ್ಮಣ ಯೋಗನಿದ್ರೆಯ ತಾಳ್ದ ಕಪಿಗಳ ಪೂಗ ಜೀವನ್ಮುಕ್ತವಾದುದು (ಕೌಶಿರಾ. ೨೮-೬೩) ; ಶಿವಾಗಮಪೂಗದರ್ಥಮಂ ವಿವರಿಪ ಶೈವವರ್ಯವರರಿಂ ಮೆಱೆದತ್ತು ಪುರಂ (ರ.ಪಿಶೇ. ೨-೯೩) ; ಇಂದ್ರಿಯಸುಖದ ಪೂಗಮಂ ಮೀರದ ಪೊಲ್ ನೆಗಳ್ವುದವಿರುದ್ಧಂ (ಸಂಪ್ರಭು. ೦೨-೦೬). ೨. ಸಂಘ; ಸಮಿತಿ; ಮಂಡಳಿ: ಗುಂಪುಗಳ ಅಭಿಪ್ರಾಯದ ಮೇಲೆ ರಚಿಸಲ್ಪಟ್ಟ ಪೂಗ, ಶ್ರೇಣಿ, ಕುಲ ಎಂಬ ವಿಚಾರಣಾಸಮಿತಿಗಳಿದ್ದುವು. ರಾಜನ ನ್ಯಾಯಾಲಯವು ಈ ವಿಚಾರಣಾಸಮಿತಿಗಳ ಕಾರ್ಯಗಳನ್ನು ಪರಿಶೀಲಿಸುತ್ತಿತ್ತು (ಪಾರರ. ೫೬). ೩. ಅಡಕೆ ; ಕ್ರಮುಕ : "ಪೂಗಂ ವ್ರಜಮುಂ ಕೌಂಗುಂ" (ಪಸ್ತುಕೋ. ೦೨೬-೫೦) ; ಬಾಲಸಹಕಾರತರು ನವಮಾಲಿಕೆಗತಿಲಲಿತಪೂಗಭೂಜಾತಂ ತಾಂಬೂಲಲತೆಗೆಂಬವೋಲ್ ಸ್ಮರಲೀಲಂ ನಿಜತನಯನೆನ್ನ ತನುಜೆಗೆ ತಕ್ಕಂ (ಅದಿಪು. ೯-೨೮) ; ಲಸತ್ಪುಳಿನಮೇ ಪುನ್ನಾಗಮೇ ಪೂಗಮೇ . . . ಕಂಡಿರೆ ಪೇಟಿಮೆಮ್ಮ ಪತಿಯಂ (ಸುಳುಮಾ. ೦೨-೨೦) ; ತುದಿಗೆ ಪರ್ವಿದೆಳೆವಳ್ಳಿಯಿಂದೆಸೆವ ಪೂಗಂ ನಾಡೆ ಕೊರ್ವಿ ತಿಂತಿಣಿವಣ್ಗಳಾಂತ ಕದಳಂ . . . ನಾಡೆ ಸಾರ್ವಕಾಲಂ ಕುಂದವು (ಕಬಿಪು. ೦೦-೨೨). ೪. ಒಂದು ಬಗೆಯ ಸಸ್ಯ ; ಹೂವರಸೆ ಗಿಡ : "ತೂದಃ, ಪೂಗಃ, ಕ್ರಮುಕಃ, ಬ್ರಹ್ಮಣ್ಯಃ, ಬ್ರಹ್ಮವಾರು, ತೂಲಂ—೬ ಹುವ್ವರಿಸೆಗಿಡ, ಬೀಜವಿರುವ ಹುವ್ವರಿಸೇಗಿಡವೆಂದು ಕೆಲವರನ್ನುವರು" (ಸಿದ್ಧಾಂತಿ. ೧೨೦). [ಸಂ.]

ಪೂಗಂಪು, ಹೂಗಂಪು (ನಾ). ಹೂವಿನ ವಾಸನೆ; ಪುಷ್ಪಗಳ ಸುಗಂಧ,— ಸೌರಭ: ಪಾದರಿಪೂಗಂಪಿಂಗೆಱಪಾದರಿಪಳಿಗಳ ಕಂಳಕ್ಕೆ ನಿರವಧಿರಾಗೋತ್ಪಾದ ಪಟುವಾಯ್ತು ವಿಳಸತ್ಪಾದಪಜಾತಿಯೊಳದೊಂದೆ ಸುಂದರಮಲ್ತೇ (ಪರ್ಸಾ.

೨-೯) ; ಸರದ ಪೂಗಂಪುಗಳ ಸೊಂಪುಗಳ ತಂಪುಗಳ ಸಿರಿಗಂಧ ಪನ್ನೀರೊಳು ಬೆರಸಿರ್ಪ ಚಳೆಯದ . . . ಕೇರಿಗಳ ಭೂರಿಗಳ ಭೇರಿಗಳ ರಭಸದಿಂ ಪುರ ಮೆಸೆದುದು (ಶಂಪು. ೩-೩) ; ಸತತಕುಸುಮಿತತರುಲತಾಳಿಗಳ ಪೂಗಂಪ . . . ಪೊಚ್ಚ ಪೊಂದಾವರೆಗಳ ಧೂಳಿಗಳ ತನಿಗಂಪನುಂಡು ಮಿಂಡೆದ್ದ ಭೃಂಗಾಳಿಗಳ ಬಳಗಂ ಪರಿಯಲು (ಶೃಂಪುಶಾ. ೩-೬). **ಹೂಗಂಪು :** ಅಸುಕೆಯ ಬನದ ಕಡೆಯಿಂದ ಉತ್ತಮದ ಹೂಗಂಪು ಬರುತಿರಲು (ಕೌಶಿಕಾ. ೧೦-೪೯).

[ಪೂ$_2$ + ಕಂಪು]

ಪೂಗಟ್ಟು, ಹೂಕಟ್ಟು, ಹೂವುಕಟ್ಟು$_1$ (ಕ್ರಿ). ಹೂವುಗಳನ್ನು ಮಾಲೆಯಾಗಿ ರಚಿಸು,—ಹೆಣೆ : ಎರಡಕ್ಕಮಾಜದೊಂದಱೊಳೆ ನೆಗಟ್ಟು ನಿರಂತರ ಸುಖಮಂ ಪಡೆವೆನೆಂಬ ನಿರ್ಬುದ್ಧಿ . . . ನಾರಿಲ್ಲದೆ ಪೂಗಟ್ಟುವೆನೆಂಬ ಪೆರ್ಗಾವಿಲನಂ ಪೋಲ್ಕುಂ (ರಪೂರ್ಮ್ಯ. ೩-೧೦೬). **ಹೂಕಟ್ಟು :** ಹೂಕಟ್ಟುವುದನ್ನು ನಿಲ್ಲಿಸಿ, ಹೂಮಾರಿಗಳನ್ನು ನೋಡಲು ಓಡಿ ಹೋಗಿದ್ದ ಚಿನ್ನಮ್ಮನಿಗೆ ಅವಳ ಅಜ್ಜಿ . . . ಆಜ್ಞೆ ಮಾಡಿದಳು (ಮುಲಮು. ೨೭೦) **ಹೂವುಕಟ್ಟು$_1$:** ಮನೆಯ . . . ಒಂದು ಮೂಲೆಯಲ್ಲಿ ಚಿನ್ನಮ್ಮ ಹೂವುಕಟ್ಟುವ ಕಾರ್ಯದಲ್ಲಿ ನಿರತಳಾಗಿದ್ದಳು (ಮುಲಮು. ೨೬೯).

[ಪೂ$_2$ + ಕಟ್ಟು$_1$]

ಪೂಗಣ್, ಹೂಗಣ್ಣು, ಹೂವುಗಣ್ಣು (ನಾ). ೧. ತಾವರೆಯಂತೆ ಚೆಲುವಾದ ಕಣ್ಣು : 'ಪೂಗಣ್ಣ' ಪರಾ. ೨. ಹೂವು ಬಿದ್ದ ಕಣ್ಣು ; ಮೋತಿಬಿಂದುವಿರುವ ಕಣ್ಣು. ೧, ೨ : ಅಸಿದೊಡಲ ಪೂಗಣ್ಣ ಪೆಣ್; ಸಸಿಮೊಗದ ಕಿಸುವಾಯ ಪುಸಿನಡುವಿನರಸಿ (ರಾಮಾಶ್ವ. ೬೭-೨೩). **ಹೂಗಣ್ಣು :** ೨. ಹೂಗಣ್ಣಿಗೆ ನಾಟ ಔಷಧಿ ಮಾಡಲು ಹೋಗಬಾರದು (ಕೊಡಿ). **ಹೂವುಗಣ್ಣು :** ೨. ಹೂವುಗಣ್ಣಿಗೆ : — ನೀಲಿಯ ರಸಮಂ ಹಚ್ಚಿದರೆ ಹೂವುಗಣ್ಣು ಮಾಣ್ಗುಂ (ಕೆಸ್ಪಿ. ೬೯). [ಪೂ$_2$+ಕಣ್]

ಪೂಗಣ (ನಾ). ಹೂಗೊಂಚಲು ; ಪುಷ್ಪಗುಚ್ಛ : ಸ್ಥಿರ ಹರಶಕ್ತಿ ದೇವಮುನಿಪೋತ್ತಮಹಸ್ತದೆ ದಾನದೀಕ್ಷೆಯಂ ಸುರಕುಜವೀಕ್ಷಿಸಲು(ಲ್) ತಳೆದಪೋಲೆಸುಗುಂ ಸುರಶೈಳದಲ್ಲಿ ಬಂಧುರತರವಪ್ಪ ಕೆಂದಳಿರೆ ಕೆಂಜೆಡೆ ಪೂಗಣ ಲಾಕುಳಂ ಸುಭಾಸುರವೆನಿಪಾ ವಿಭೂತಿಯೆ ಪರಾಗವಿಭೂತಿ ಫಳಂ ಕಮಂಡಳವು(ಂ) (ಕಾ. IV, ೦-೯೦ ; 1204). [ಪೂ$_2$+ಗಣ]

ಪೂಗಣೆ, ಹೂಗಣೆ, ಹೂವುಗಣೆ (ನಾ). (ಮನ್ಮಥನ) ಹೂವಿನ ಬಾಣ : ಅಂತು ತೊಟ್ಟ ಪೂದುಡುಗೆ ಮದನನ ತೊಟ್ಟ ಪೂಗಣೆಗೆಣೆಯಾಗಿರೆ (ಪಂಪಭಾ. ೨-೧೬ ಪ) ; ಪೂಗಣೆ ನಾಂಟಿದಂತೆ ತನು ಕಂಪಿಸುತಿರ್ದುದು (ಕಾದಂಪೂ. ೬೧೭) ; ಮನ್ಮಥನಾಗ ಪೂಗಣೆಗಳನು ಸಂಧಿಸಿಯೆಚ್ಚನಂಗನೆಯ (ಪಳಸ. ೦-೩೭). **ಹೂಗಣೆ :** ಎನ್ನ ತರಳಕಟಾಕ್ಷೇಕ್ಷಣಯುಗಮಿರ್ದಂತೀ ಹೂ[ಣಾಶಾಂ. ನನೆ, ಪೂ]ಗಣೆಗಳ ಪರ್ಯಂತವೇಕೆ ಮಕರಪತಾಕಾ (ಗಿಂಕ. ೭-೬೩) ; ಮದನ ಮಸೆದೋಱಿದನು ಹೂಗಣೆ ಹೃದಯವನು ತಾಗಿದುದು (ಕುಪ್ಯಾಪಿ. ೨-೬) ; ಹೂಗಣೆಯ ಹರವರಿಯನುಗುಳುವ ಸೋಗೆಗಂಗಳ ಬೆಳಗ ಹಸರಿಸಿ ರಾಗರಸದೊಳು ಮೂಡಿ ಮುಳುಗಾಡಿದಳು ಜನದತ್ತೆ (ಸಾಳ್ವಶಾ. ೩ ೨೩). **ಹೂವುಗಣೆ :** ಬನವೆಣ್ಣೆ, ನಿನ್ನೊಳೇನಿದೆ ಎನಗೆ ಏಣೆಯಾಗಿ ? ಮೇಣೆನ್ನೆರ್ದೆಗೆ ಹೂವುಗಣೆಯಾಗಿ ? (ಶಿಶ್ರಾಂಗ. ೨೪-೬೬೮).

ಪೂಗಣೆಯವ = ಪೂಗಣೆಯ : ಪೂಗಣೆಯವನ ಕಿಚ್ಚು ನೂರ್ಮಡಿಯಾಗಿ ಮುಂದೆಯಪಾಯವಂ ಪರಿಯೋಗಿಸುವುದದನಱಿದು ಕೋಮಳೆ . . . ಮಱುಗಿ (ಬಸಪು. ೪೫-೩). [ಪೂ$_2$ + ಕಣೆ$_1$]

ಪೂಗಣೆಯ, ಹೂಗಣೆಯ (ನಾ). ಹೂವಿನ ಬಾಣಗಳುಳ್ಳವನು ; ಮನ್ಮಥ : "ಪೂಗಣೆಯನಿಂಗೋಲ್ವಿಲ್ಲನಕ್ಕುಂ" (ಕರ್ಣಾಪ. ೯) ; ಪೂಗಣೆಯನ ಚಾಮರಮಂ ಸೀಗುರಿಯಂ ಪಿಡಿವಳಂತೆ ಸೆಳೆಗೊಂಬುಗಳಿಂಬಾಗೊತ್ತಿ ಗುಜ್ಜುಮಾವಿನ ಪೂಗೊಂಚಲನುಡಿದು ಪಿಡಿದಳಳಿ ವೆರಸೊರ್ವಳ್ (ಲೀಲಾವ. ೦೩-೬೨) ; ಮುಟ್ಟಿತು ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ (ಗಿಂಕ. ೬-೪೭); ಎಸೆದುದು ಪೂಗಣೆಯನಾಡುಂಬೊಲನವೊಲು ತತ್ಪುರೋದ್ಯಾನ (ಶೂರರಾ. ೦-೯-೦೩). **ಹೂಗಣೆಯ :** ಸುಗ್ಗಿಯಲಿ ತುಂಬುವೆರೆ ತೆಂಗಾಳಿ ಹೂಗಣೆಯರೊಡ್ಡಿದುರುಳಿಗೆ ಸಿಲುಕಿ ಅಳುಕದೆ ಇಹರು ಉಂಟೇ (ಸಂಧ್ರಸ. ೬೬-೦೭). [ಪೂಗಣೆ + — ಅ$_7$]

ಪೂಗಣ್ಣ (ನಾ). ೧. ತಾವರೆಯಂತೆ ಚೆಲುವಾದ ಕಣ್ಣುಗಳುಳ್ಳವನು ; ಕಮಲಲೋಚನ ; ವಿಷ್ಣು. ೨. ಕಣ್ಣಲ್ಲಿ ಹೂವು ಬಿದ್ದವನು ; ಕಣ್ಣಿನ ಕಾಚರೋಗವುಳ್ಳವನು. ೧, ೨ : ಅಳಿಯಂ ಪೂಗಣ್ಣನೆನ್ನೀ ಮಗಳ ಚಪಳೆ ಪುತ್ರಂ ಕರಂ ರಾಜಯಕ್ಷ್ಮಾಕುಳನೆನ್ನೈಶ್ವರ್ಯಮಂ ನಿರ್ಜರರೆ ಕವರ್ದರ್ . . . ಎಂದೆಂದೊಳಗಂಭೋರಾಶಿ ಚಿಂತಾಗ್ನಿಯನೆ ತಳೆದಪೋಲೌರ್ವನಂತಸ್ಥಮಿರ್ಕುಂ (ರಾಜಕೇ. ೦-೦೦೨). [ಪೂಗಣ್ + —ಅ$_7$]

ಪೂಗನಸು, ಹೂಗನಸು (ನಾ). ಹಿತಕರವಾದ ಸ್ವಪ್ನ ; ಸುಖಕರವಾದ ಕನಸು : ಪಣ್ಣಾಗಲಿರ್ಪೊಂದು ಸಿರಿಯ ಪೂಗನಸಿಂದು ತನ್ನಿಷ್ಟದಾದರ್ಶಮಂ ಪೂಜಿಸೋಲೈಸಿ ಬೆಂಬಾಲಿಪುದೊ (ಶ್ರೀರಾಮಾ. ೦೨೬-೬೨). **ಹೂಗನಸು :** ಇಡಿ ವರುಷದ ಹೊಸ ಹರುಷಕೆ ಹೂಗನಸಿನ ತೇರು (ಸಂಮು. ೯ ೩).

[ಪೂ$_2$ + ಕನಸು]

ಪೂಗಫಲ, ಪೂಗಫಳ (ನಾ). ಅಡಕೆ ; ಕ್ರಮುಕ : ಅತಿಮಧುರ ಪೂಗಫಲಂಗಳೊಳಂ ಸರಸನಾಗವಲ್ಲೀದಳಂಗಳೊಳಮೆಸೆವ ತಾಂಬೂಲಿಕಾ ನಿಕೇತನಂಗಳೊಳ್ (ಪುಸ್ತಪು. ೨-೬೦ ಪ). **ಪೂಗಫಳ :** ಕುಲುಸೆಯ ದುಗ್ಧದೊಳೊಂದಿರೆ ಪಲವುಂ ಸೂಱ್ ತೊಯ್ದ ಪೂಗಫಳಮಂ ಮೇಣ್ ಪಿಪ್ಪಲಿಯಂ ಬಿಸುನೀರೊಳ್ ಕುಡಿಯಲೊಡಂ ಪ್ಲೀಹಾದಿ ಜಠರರೋಗಂ ಕೆಡುಗುಂ (ಲೋಕೋಪ. ೯-೦೨೩) ; ಗಿಳಿ ಗಿಳಿವೆಣ್ಗೆ ಪೂಗಫಳಮಂ ಕಳಹಂಸಿಗೆ ಹಂಸನಬ್ಜಕಂದಳಮನಿಭಂ ಕರೇಣುಗೆ ಲವಂಗದಳಂಗಳನೀವ ಚಿತ್ರಮಂ ತಳೆದು ವಿಳಾಸಮಂ ತಳೆದ . . . ಮಣಿಭಿತ್ತಿ ಚೆಲ್ವನೊಳಕೊಂಡೊಳಕೊಂಡುದಪೂರ್ವಭಿತ್ತಿಯಂ (ಸುಲ್ಲಪು. ೨-೬೩). [ಸಂ.]

ಪೂಗಫಳ 'ಪೂಗಫಲ' ನೋ.

ಪೂಗರಡಿಗೆ (ನಾ). ಹೂವಿನ ಬುಟ್ಟಿ ; ಪುಷ್ಪಕರಂಡಕ : ಲಿಂಗಮಂ ಮೆಟ್ಟಿ ಪುಷ್ಪದ ದಂಡಿ ಲಿಂಗಮಂ ಪೂಗರಡಿಗೆಯಲಿ ಬಡಿದು ಅಂಗುಗಯ್ಯನ ಗುರುವ ಶಿವ ತೋಱ್ (ಶಬಪು. ೫೭-೪೭). [ಪೂ$_2$ + ಕರಡಿಗೆ (<ಕರಂಡಿಗೆ)]

ಪೂಗಲ್ಲು, ಹೂಗಲ್ಲು (ನಾ). ಹೂವಿನಾಕಾರದ ಪಾಣಿಪೀಠದ ಕಲ್ಲು : ಆಗಳುಂ ನಿಮ್ಮುತ್ತಮಾಂಗದ ಭಾಗಕೀ ಕಲ್ಲುಗಳ ಪೂ[ಣಾಶಾಂ. ಹೂ]ಗಲ್ಲಾಗಿಯೆಲ್ಲಾ ದೇಗುಲಂಗಳೊಳಿರಿಸಿ ಪೊರೆ (ಬಸಪು. ೫೦ ೬೫); ಗಮನಿಸುವ ಲಿಂಗಸಮುಚ್ಚಯಂ ಪೂಗಲ್ಲನುಱ್ ಕೆಡೆನೂಂಕಿ ಪೊಱಮಡುವ ಅಚ್ಚಲಿಂಗವು (ಬಸಪು. ೫೭-೪೩). **ಹೂಗಲ್ಲು :** ಶಿವನ ಸದ್ಭಕ್ತನೆಂದೆನಿಪ ವೀರಣ್ಣನುಱ್ ಶಿವನಿಳಯದಲ್ಲಿರ್ದು ಹೂಗಲ್ಲ ಹಾಱಿಸುತೆ ಶಿವಲೋಕಕೈದಿದೆಡೆಯಂ ನೋಡಿ (ಸಿದ್ಧೇಪು. ೫-೨). [ಪೂ$_2$ + ಕಲ್ಲು (<ಕಲ್$_3$)]

ಪೂಗವನ (ನಾ). ಅಡಕೆಯ ತೋಟ : ಆ ಪುರದುಪವನದೊಳ್ . . . ಪಂಚಬಾಣ ಕೃಪಾಣ ಪಟ್ಟದೊಡನೆ ಕೊನೆಯ ಬಿಣ್ಬಂ ತೊನೆದು ತೂಗದ ಪೂಗವನಮಿಲ್ಲ (ಸಂರಾಮಾ. ೧-೦೦೭ ಪ) ; ಫಳಭರದಿಂ ಮನಂಗೊಳಿವ ಪೂಗವನಂ . . . ಬನವಾಸಿದೇಸದೊಳು (ಎಳ. VIII, ಸೂರಪ. ೨೭೭-೧೫ ; ಸು. 1165) ; ಪರಿವಚ್ಛಾಂಬುವನೂಡಿ ಪೂಗವನಮಂ ಕಿಚ್ಚಿತ್ತಿ . . . ಮೆಱ್ದುದುರ್ವೀಬಂಧುರಂ ಸಿಂಧುರಂ (ಪುಸ್ತಪು. ೫-೭೯). [ಸಂ.]

ಪೂಗವಸರ (ನಾ). ಅಡಕೆಯ ಅಂಗಡಿ : ನಾಗವಲ್ಲಿಯ ದಲದೊಡಗೂಡಿ ನಲ್ಲರ ಬಾಯ್ದೆಱ್ಗಳ ರಾಗಮಾಡುವ ಪೂಗವಸರ (ಪರ್ಧಸ. ೦-೦೦೨).

[ಪೂಗ + ಪಸರ]

ಪೂಗಾರ, ಹೂಗಾರ (ನಾ). ಹೂವು ಮಾರುವವನು; ಹೂವಾಡಿಗ : ಪೂಗಾರಗೊಲಿದ ಬಂಡುಗಾರ ಗೊಲ್ಲ (ಕಿರಾಳ್ಯ. ೦೫೫-೫); ಪೂಗಾರಗೊಲಿದ ಭಂಡುಗಾರ ಗೋವ (ಕಿಸ್ತೋಸು. ೨೬-೫). **ಹೂಗಾರ** : ಗೊರವರು—ಇವರಿಗೆ ಕೆಲವು ಕಡೆಯಲ್ಲಿ ಜೀರರೆಂತಲೂ ಕೆಲವು ಕಡೆಯಲ್ಲಿ ಹೂಗಾರರೆಂತಲೂ ಅನ್ನುವರು (ಕಥಾಗ. ೦೦೬); ಆ ಹೂಗಾರವನು ಅವರಿಗೆ ಇರಲಿಕ್ಕೆ ಒಂದು ಕೋಣೆಯನ್ನು ಕೊಟ್ಟನು (ರಾಪಹಂ. ೦೬); ಹಳೆಯ ಕವಿತೆಯ ಬಂಧವು ಹೂಗಾರನು ಕಟ್ಟಿದ ಬಾಸಿಂಗವಂತಹವು (ಸಾಹಿಪ ೯೭).

[ಪೂ$_2$ + —ಬಾರ$_1$ (< —ಕಾಱ)]

ಪೂಗಿ (ನಾ). ಅಡಕೆಯ ಮರ : ನಾಳಿಕೇರ ಪೂಗಿಯ ಫಲ ಪನಸೀಳೆ ಬಾಳೆ ಮಾವು ಮಾತುಳುಂಗ ಶಾಲಿಯಾದಿ ವನವೆಲ್ಲಾ ಕಡೆಯಲಿ ಲೀಲೆಯಿಂದ ಬಳಸಿಹವು (ದ್ವಾದಶಾ. ೦೦-೧೧೩). [ಸಂ. ಪೂಗೀ]

ಪೂಗಿಡ 'ಪೂಗಿಡು' ನೋ.

ಪೂಗಿಡು, ಪೂಗಿಡ, ಹೂಗಿಡ, ಹೂಗಿಡು (ನಾ). ಹೂವಿನ ಗಿಡ ; ಹೂವು ಬಿಡುವ ಸಸ್ಯ : ಕರಪುಷ್ಕರಂಗಳಿಂ ತಂದು ಪೂಗಿಡುಗಳ್ಗೆ ನೀರೆಱೆವ ಮಱಿಯಾನೆಗಳಿಂ (ಕಾಲಂಪು. ೨೨೦); ಪೂಗಿಡುವೆಂಬ ಪೆಸರಿಂಗೆ ಕೊಳವಳ್ಳಿಯ ಗಿಡುಗಳಂ ನಟ್ಟು ನೀರೆಱೆದು ನಡೆಪೆ ಮಲ್ಲಿಗೆಯ ಪೂವಿನಂತಾಗಲಱಿಯದು (ಕರ್ಮಾಪ್ಯು. ೬-೬೯); ಓಲಗಶಾಲೆ ಪೂಗಿಡುಗಳೋಳಿಗೆ ಜೇವಣಶಾಲೆ ಮತ್ತ ಭೃಂಗಾಳಿಗೆ . . . ಎನಲೊಪ್ಪುವುವಲ್ಲಿಯ ಪುಷ್ಪವಾಟಿಗಳ್ (ಪುಷ್ಪಪು. ೨-೫೦). **ಪೂಗಿಡ** : ಪೂಗಿಡದೊಳ್ ಸಿಲ್ಕದೊಡು ನಾರುಡೆಯುಂ ಬಿಡಿಸುತ್ತೆ ತಿರುಗಿ ನೋಡಿದಳೆನ್ನಂ (ಶಾಕುಂತ. ೨೬-೧೭). **ಹೂಗಿಡ** : ನಲ್ಲೆಯಂ ನಗುನಗುತ ಹೂಗಿಡಂ ತಲೆದೂಗುತಿಲ್ಲಿ ಬಾಬಾರೆಂದು ಕರೆಯುತಿಹುವಲ್ಲಿ (ಕಾಲೂರ. ೦೦೨-೨೬೨). **ಹೂಗಿಡು** : ಕೆಱೆಬಾವಿ ಹೂಗಿಡುಮರಂಗಳಲ್ಲಿ ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣಪ್ರದೇಶದಲ್ಲಿ ಹಿರಿಯಾಲದ ಮರದಲ್ಲಿ ಮನೆಯ ಮಾಡಿ (ಬಿಸಪ. ೫೫೬); ಆವ ಗಿಡುವಂ ನೋಯಿಸಿದಡಂ ಭಾವಿಸುವಡಿದು ಹಿಂಸೆಯನುತಂತೋವಿ ಹೂಗಿಡುಗಳ ಕೆಳಗೆ ಸುತ್ತುವರೆ ಸಾರಿಸುತ . . . ತಮತಮಗೆ ಧರೆಯ ಮೇಲೆ ಬಿದ್ದೊಂದೊಂದರಳನಾಲ್ಲೋಲಮನಡಲಿ ತಂದು ತಿವಸಂ ಕಾಲ ವೇಳೆಯನಱಿದು ಪೂಜಿಪನು (ಬಿಸಪು. ೩೪-೦೦). [ಪೂ$_2$ + ಗಿಡು]

ಪೂಗಿಱು (ಕ್ರಿ). ಹೂವೆಂದು ಭ್ರಮಿಸು ; ಪುಷ್ಪವೆಂದು ಭಾವಿಸು : ಪೂಗೊಯ್ವ ಖಚರ ಶಿಖರದ ಪೂಗಿಡುಗಳ ಕೊಂಬಿನಲ್ಲಿ ತೊಡರ್ದಿರೆ ಮಿನ್ಗಳ್ ಪೂಗೆತ್ತು ತುಡುಂಕುವಳ್ (ಲೀಲಾವ. ೯-೩೯). [ಪೂ$_2$ + ಗಿಱು]

ಪೂಗು, ಹೂಗು (ನಾ). ಹೂವು; ಪುಷ್ಪ : ಉಡಿಯ ಲಿಂಗದ ಬೋಳುದಲೆಗಳ ಪಿಡಿದರಿಸಿನದ ಪಾತ್ರೆ ಕಿವಿಯೊಳು ಜಡಿವ ಪೂಗಿನ ಕಂಬಳಿಯ ಟೊಪ್ಪಿಗೆಯ ಮೈಲಾರ . . . ಗೊರವರ ಗಡಣವೀರರು ದೀವಟಿಗೆಯರು ಪೊಗ್ಗತತಿ ಗೂಡಿ ಬಂದು (ಸಂಳಿಪಾ. ೦೩-೩೪). **ಹೂಗು** : " ಹೂಗೆಂಗುಂ ಹೂವಿಂಗೆ " (ಪಪಸಂ. ೦೬). [< ಪೂ$_2$]

ಪೂಗುಡಿ (ನಾ). ೧. ಹೂವಿನ ತುದಿ, —ಕೊನೆ : ರತಿಗವತಂಸಮಾದ ತಳಿರಾವ ಮರಕ್ಕೊಳವೆನ್ನ ಬಿಲ್ಗೆ ಸಂಗತಶರಮಾದ ಪೂಗುಡಿಸಳಾವ ಮರಕ್ಕೊಳವು . . . ಎಂದು ಮನ್ಮಥಂ ಸ್ತುತಿಯಿಸಿ ಮಾಮರಕ್ಕೆ ಕುಜರಾಜಸಮಾಖ್ಯೆಯನಿತ್ತನಟ್ಟಿಯಿಂ (ಕಂದ್ರಪು. ೭-೧೫). ೨. ಹೂವಿನ ಗೊಂಚಲು; ಪುಷ್ಪಸ್ತಬಕ : ಪದಿನಾಱುಂ ಚಮರಜಮಂ ಪದಿನಱುವರ್ ಖಚರಕನ್ಯೆಯರ್ ಪೂಗುಡಿವೇಱಿದ ಜಂಗಮಾಲತೆಗಳೆನಲ್ ಬಿದಿರ್ದಿಕ್ಕಿದೆ ರೊಡನೆ ಮದನನಂಬಿಕ್ಕುವಿನಂ (ಪಂಠಾಪಾ. ೦೨-೨೫); ಆಗಳೆಡೆಗಿಱಿದ ಪೂಗುಡಿಯ ಗುಡಿಗಳೊಳು . . . ಪಾದರಿಯ ಚೌಕಿಗೆಗಳೊಳಂ ಬಿಟ್ಟ ಬೀಡು ಬರೆದಂತೆ ಕಂಡರಿಸಿದಂತೆ ಕಣ್ಗೆಸದಿರ್ದುದು (ಕಬ್ಬಿಕಾ. ೨೩೬); ಪಲ್ಲಟಿಸಿತ್ತು ಪೂಗುಡಿಗಳಂ ಗಿರಿಮಲ್ಲಿಗೆ ಬೀತು ಬಿನ್ನನಾಯ್ತೊಳ್ಳಿಹ ಮೊಲ್ಲೆ ಸೋಗೆನವಿಲೊಲ್ಲದೆ ಮಾಣ್ದುದು ನವ್ಯನಾಟ್ಯಮಂ . . . ಶರದಾಗಮನ ಪ್ರವೇಶದೊಳ್ (ಬಾರಪು. ೯-೬೫). [ಪೂ$_2$ + ಕುಡಿ$_2$]

ಪೂಗುವರ (ನಾ). ಕಮಲದ ಹೂವಿನ ಪುತ್ರ ; ಬ್ರಹ್ಮ.

ಪೂಗುವರತತ್ತಿ — ಬ್ರಹ್ಮಾಂಡ : ನೀರ್ಮಗಳ ಗಂಡನಂ ಪೆಂಡತಿಯೊಳಾಳ್ದ ಪನ್ನತಿಕೆಯಿಂ ಪರಿಜುವೆತ್ತ ಬಿಸುಗೊರಲ ರಕ್ಕಿಸು ಪೂಗುವರ ತತ್ತಿಯಂ (ಬಿಕೋಪು. ೩-೩). [ಪೂ$_2$ + ಕುವರ$_2$]

ಪೂಗೊಂಚಲ್, ಪೂಗೊಂಚಲು, ಹೂಗೊಂಚಲು (ನಾ). ಹೂವುಗಳ ಗುಚ್ಛ : " ಆ ಗುಚ್ಛ ಗುಚ್ಛಕಂ ಸ್ತಬಕಮೊಂದೆನಲು ಪೂಗೊಂಚಲಕ್ಕು " (ಶುಂಗರಾ. ೩೩-೬); ಮಾಧವೀಲತೆಯನೆ ಸಂದದಿರ್ಮುತ್ತೆಯ ಪೂಗೊಂಚಲ ಪುದುವಿನೊಳೆಱಿಗಿದ ಮದಾಳಿಗಳ್ ಮಱೆದಪುವೇ (ಅಂಪು. ೦೦-೦೦೬); ಪೂಗೊಂಚಲಿಂದೆಯ್ದೆ ಹೇಮನಿಭದ್ಯೋತದಿನೊಪ್ಪುತಿರ್ಪ ಕಳಮಕ್ಷೇತ್ರಂಗಳಾ ದೇಶದೊಳ್ (ಕುಸುಪಾ. ೨-೧೨); ಲಂಚಮಿಾದೆಂ ಪುರುಳಿ ನಿನಗೆ ಪೂಗೊಂಚಲಂ (ಕಬ್ಬಿಕಾ. ೩೦೬). **ಪೂಗೊಂಚಲು** : ಮುಂದೆ ಕಂಡನು ದೂರದಲ್ಲಿಹ ನಂದನದ ಮೆಳೆ ತರುನಿಕಾಯದ ಸಂದಣಿಯ ಪೂಗೊಂಚಲಿನ ಪಲ್ಲವನಿಕಾಯದಲಿ ಗೊಂದಣದ ತರುಮಧ್ಯದಲ್ಲಿಹುದೊಂದು ಜಂಬೂವೃಕ್ಷ ಮೆಱೆದಿರೆ ನಿಂದು ನೋಡಿದ ಭೀಮ (ಕುಪ್ಪಾಲಿ. ೩-೦೨); ಪರಿಮಳಿತ ಪೂಗೊಂಚಲಿನ ಕೆಂಪೊರೆದ ಕಿಸಲಯ ವಲ್ಲರಿಯ . . . ಕೊಂಡಾಡಿದನು ಮನದಣಿಯೆ (ಕೊರರಾ. ೫-೦-೯೦); ಕರುಳ ಪೂಗೊಂಚಲು ಖಂಡದ ಕಳಿಕೆ ಜುಧುರದೆಲು ಶಾಖೆಗಳಾಗೆ ಪಿರಿದು ಚೆಂದೊರಳೆದಳಿರ ಕಬಂಧದ್ರುಮ ಮೆಱೆದುವು ಖಡ್ಗಚೈತ್ರದಲಿ (ಕಂಪಪ. ೦೫-೫೦). **ಹೂಗೊಂಚಲು** : ಕರುಳ ಹೂಗೊಂಚಲಿನ ಮೂಳೆಯ ಬಿರಿಮುಗುಳ ನವಖಂಡದಿಂಡೆಯ ಕರತಳದ ತಳಿರೆಲೆಯ . . . ರಣವನ ವೆಸೆದುದೀತನ ಖಡ್ಗಚೈತ್ರದಲಿ (ಕುಪ್ಪಾರ್ಪ್ರೋ. ೬-೧೨); ನಿನ್ನ ಸ್ಪರ್ಶ ಮಾತ್ರದಿಂದ ಪಲ್ಲವ — ಪುಲಕ ಪಡೆದೆ, ಕಂಪಿನ ಕಂಪನ ಪಡೆದೆ, ಹೂಗೊಂಚಲ ರೋಮಾಂಚನ ಪಡೆದೆ ! (ಕರ್ಮೋರಿ. ೨೬-೨೬). [ಸಂ.]

ಪೂಗೊಂಚಲು 'ಪೊಗೊಂಚಲ್' ನೋ.

ಪೂಗೊಯ್, ಹೂಕೊಯ್, ಹೂಕೊಯ್ಯು (ಕ್ರಿ). ಹೂವುಗಳನ್ನು ಬಿಡಿಸು, —ತಿರಿ : ಮರನ ಮೇಗಿರ್ದು ಪೂಗೊಯ್ವ ವಸಂತಕನೆಂಬ ಮಾಲೆಗಾಱನರಸನ ಸಾವಂ ಕಂಡು . . . ಭಯಸ್ಥನಾಗಿ (ಪಡ್ಮಾರಾ. ೦೬೦-೨೫); ನಿಲುಕಿ ಪೂಗೊಯ್ವ ಲಲಿತಾಂಗಿಯ ಬಟ್ಟಬಲ್ಮೊಲೆಗಳಂ ಪೊಱಲಾಱದಸಿಯ ಸೆಳೆನಡುದಮಿ ಶಿಥಿಲು (ಕೈಪುಪಾ. ೬-೦೯); ಪೂಗೊಯ್ದು ಸರಸಿಜಾನನೆ ಪೋಗಲ್ ನೆರೆ ಮುಗಿದುದಿಲ್ಲ ಬಂಧನಕೋಶಂ . . . ನಾಡೆ ಕಾಣಿಪುದಿನ್ನುಂ (ಶಾಕುಂತ. ೩೩-೫೭). **ಹೂಕೊಯ್** : ಹೊಲಮನೆಯೊಳೊಲವುಗಳ ಕುಣಿ ಕುಣಿಸಿ ಹೂಕೊಯ್ದು . . . ಮುಡಿಯುವಳ್ ನೇದು (ಕಾಲೂರ. ೩೩-೩೨). **ಹೂಕೊಯ್ಯು** : ನಾನು ಮಾಮರವನಪ್ಪಿರುವ ಮಲ್ಲಿಗೆಯ ಹೊದರ ಬಳ್ಳಿಯಲಿ ಹೂಕೊಯ್ಯುತಿದ್ದಾಗ ಆಲಿಸಿದೆ (ಕಂದ್ರಸ. ೬೩-೩).

[ಪೂ$_2$ + ಕೊಯ್]

ಪೂಗೊಳ, ಹೂಗೊಳ (ನಾ). ತಾವರೆಗಳುಳ್ಳ ಕೊಳ; ಕಮಲಸರೋವರ : ತಿಳಿಗೊಳನಂ ಪೂಗೊಳನನದಂ ನೆಗಟೆ ಮುಳಿದು ಕೊಳ್ವ ಬಳಸೆ ನಾನದಂ (ಕವಿರಾ. ೨-೦೩೬); ಎಂಟು ಕೋಡವಱೊಳಂತೊಂದೊಂದಱೊಳ್ ಪೂಗೊಳು ನೆಗಟ್ದೊಂದೊಂದೆಸೆದಿರ್ಕುಂ (ಅಂಪು. ೭-೫೩); ಸಿರಿಯ ಮೊಗರಸದ ಪೊಸ ಮೈಸಿರಿಯೆನಿಕುಂ ಪೂಗೊಳುಗಳ್ (ಪಂಠಾಪಾ. ೦-೬೪). **ಹೂಗೊಳ** : ಸುಳಿದುದಾ ಮೃಗಪೋತ . . . ಅವನೀನಂದನೆಯ ಹೂ[ಪಾಠಾಂ. ಪೂ]ಗೊಳನ ಹೊರೆಗಾಗಿ (ಕೊರರಾ. ೩-೬-೦೮). [ಪೂ$_2$ + ಕೊಳ್$_2$]

ಪೂಗೋಲ್, ಪೂಗೋಲು (ನಾ). ಹೂವಿನ ಬಾಣ ; ಪುಷ್ಪಬಾಣ : ಎಲ್ಲರುಂ ಬಾಯ್ವಡೆ ಗಡಣದ ಪೂಗೋಲ್ಗಳೈತಂದುವಾಗಳ್ (ಕಬ್ಬಿಕಾ. ೩೦೩);

ಗಿಳಿದೇಜಿಗಳೆಲ್ಲಿ ಕರ್ವಿಲ್ಲು ಮೊರೆವ ಬಾಲಳಿವೆದೆ ಪೂಗೋಲ್ಗಳೆಲ್ಲಿ (ಪೋಹತ. ೬-೭); ಖಳಂ ಕೈಮಾಡುವಂಗಜನ ಪೂಗೋಲ ಗಾಯದಿಂ ಮೈಮಱೆದು . . . ಐಮೊಗನ ರಾಣಿಯಂ ನುಡಿಸಿದೊಡೆ (ಸೈಮಿಣಾ. ೦೫-೨೬). **ಪೂಗೋಲು :** ಕಿಚ್ಚುಗಣ್ಣನ ತಪವಳಿವುದು ಪೂಗೋಲೊಳೆಚ್ಚು ಮನ್ಮಥ ಕೀಡಿಸಲು (ಪೋಹತ. ೩-೦೬); ಬಾಳುಬಟ್ಟಲ ಪಿಡಿದೊಮ್ಮೊಮ್ಮೆ ಪೊನ್ನ ಪೂಗೋಲು ಪೊಂಬರಿಗೆಯಾಂತೊಮ್ಮೆ ಕಾಲಿಟ್ಟು ಹೊಳೆವುತಿದ್ದರು ಮನಸಿಜನ ಮಾಸಾಳುಗಳಂತೆ ದಿಟ್ಟೆಯರು (ಭರತ. ೦೨-೯೦). [ಪೂ$_2$ + ಕೋಲ್$_1$]

ಪೂಗೋಲ (ನಾ). ಹೂವಿನ ಬಾಣಗಳುಳ್ಳವನು; ಮನ್ಮಥ: "ಮನ್ಮಥನೊಳಂ ಪೂಗೋಲನೆಂದಾಯ್ತು" (ಕರ್ಣಾಪ. ೯೨); ಪೊಸ ಪೂಗೋಲನಂತೆಸೆವ ಜೀವಕನನು ಶಶಿಮುಖಿ ಕಂಡು ಮದನನ ಕುಸುಮಶರಗಳಿಗೆ ತನುವಿತ್ತು ವಿರಹದುಬ್ಬಸದೊಳಗವಳೊಱಗಿದಳು (ಜೀವಂಸಾಂ. ೦೬-೦೬); ಬಾಯೆನುತೆ ಪೂಗೋಲನ ಬಿಗಿಯಪ್ಪಿ ಮುಂಗಾರಿಯದಾಗ ಮಾಂತರವ ಪೇಳಿದಳು (ಪೋಹತ. ೦೦-೭೪); ಕಾಮಿನಿಯೊರ್ವಳ್ ಲೀಲೆಯಿನಲರ್ವಿಲ್ಲಂ ಪೂಗೋಲಂಗಿರದೆತ್ತಿ ಕೊಡುವ ರತಿಯಂ ಪೋಲ್ತಳ್ (ಸೈಮಿ. ೯-೬೬). [ಪೂಗೋಲ್ + —ಅ$_7$]

ಪೂಗೋಲು 'ಪೂಗೋಲ್' ನೋ.

ಪೂಗೌಂಗು (ನಾ). ಮೃದುವಾದ ಅಡಕೆ: ಉತ್ತಮವಾದ ಅಡಕೆ: ಲತೆಯೆಳಲತೆ ಮಾವಿಮ್ಮಾವು ತೆಂಗು ಚೆಂದೆಂಗು ಕೌಂಗು ಪೂಗೌಂಗು . . . ಪಲಸು ಬಕ್ಕೆವಲಸಾ ಬನದೊಳ್ (ಜಗಪ. ೨-೦೯).

[ಪೂ$_2$ + ಕೌಂಗು (<ಕವುಂಗು)]

ಪೂಚಂಡು 'ಪೂಚೆಂಡು' ನೋ.

ಪೂಚೆಂಡು, ಪೂಚಂಡು, ಹೂಚೆಂಡು (ನಾ). ೧. ಹೂವುಗಳಿಂದ ರಚಿಸಿದ ಚೆಂಡು; ಹೂವಿನ ಚೆಂಡು: ಕಟ್ಟಲುಜ್ಜುಗವೆತ್ತ ಪೂಚೆಂಡು ಪನ್ನೀರ ಪೊಟ್ಟಣ ಯಕ್ಷಕರ್ದಮವ ಬಟ್ಟ ಕಂತುಕದಿಂದೆ ಬಲ್ಮೊಲೆ ಬಿದಿರುವಂತಿಟ್ಟಾಡಿದೊಡು ಸಖಿನಿವಹ (ಪೋಹತ. ೦೯-೭೬). **ಪೂಚಂಡು :** ೨. ಹೂವಿನ ಗೊಂಚಲು; ಪುಷ್ಪಗುಚ್ಛ: ಮೆಟ್ಟಿದ ಪೊನ್ನ ಪಾವುಗೆ ಕರದೊಳಗಳವಟ್ಟ ಸಂಪಗೆಯ ಪೂಚಂಡು ತೊಟ್ಟ ಮುತ್ತಿನ ಪೈಠಣೆಯಿಂದ ಚಿಲುವಿನ ಕಟ್ಟೆಱಕದೆ ನಡೆತಂದ (ಕಂಪಪ. ೯-೯೯). **ಹೂಚೆಂಡು :** ೨. ಮೇಲು ಮುತ್ತಿನ ಗೊಂಡೆ! ಮಲ್ಲಿಗೆಯ ಹೂಚೆಂಡೆ! ಹಾಳಾದೆ ಅಕಟ-ನಾ-ನಿಂದೆಗೀಡಾದೆ (ಕಪಿಪು. ೯೨-೦). [ಪೂ$_2$+ಚೆಂಡು (<ಸೆಂಡು)]

ಪೂಜಕ (ಗು). ೧. ಪೂಜಿಸುವ; ಆದರಿಸುವ: ಪೂಜಿತನಪ್ಪ ಶಿವಲಿಂಗಕ್ಕೆ ಸಂತತವು ನಮಿಸಿ ಪೂಜಿಸಿ ಉಂಬ ಪೂಜಕಸಮಿತಿ ದೊರೆಯೇ (ಬಸವು. ೩೯-೨೯). (ನಾ). ೨. ಪೂಜೆ ಮಾಡುವವನು; ಆರಾಧಿಸುವವನು: ಸ್ಥಾವರಜಂಗಮವಱಿಯದ ಪೂಜಕ ನಾನು (ಬಸವ. ೩೬೯); ಲೌಕಿಕಾರ್ಚನೆಯ ಮಾಡುವ ಪೂಜಕರ ಮೆಚ್ಚನೆಂದ . . . ನಿಃಕಳಂಕ ಮಲ್ಲಿಕಾರ್ಜುನಾ (ಪೋಳಿಮಾ. ೬೦ ೨೩೦); ಸಾಧ್ಯ ಸಾಧಕ ಪೂಜ್ಯ ಪೂಜಕ ದೇವ ದೇಹಿಕ ಎಂಬವರಾರೂ ಇಲ್ಲದ ಎರಡಿಲ್ಲದ ನಿರಾಳ ನೀನೆ (ಸಿದ್ಧೇಪ. ೦೬೭-೩೭೦). [ಸಂ.]

ಪೂಜನ (ನಾ). ೧. ಪೂಜಿಸುವುದು; ಆರಾಧಿಸುವುದು. ೨. ಆರಾಧನೆ; ಪೂಜೆ: ಸಿದ್ಧಕೂಟದ ಜಿನಬಿಂಬಪೂಜನಾ [ಶಾಕಾಂ. ಪೂಜಾ] ನಂತರಂ . . . ಆಕಾಶಚಾರಣಮುದ್ಧಿಪ್ರಾಪ್ತರಾಗಿರ್ದು (ಶಾಪುಂಪು. ೦೩೯). [ಸಂ.]

ಪೂಜನೆ (ನಾ). = ಪೂಜನ ೨: ಬೇಗಬೇಗ ಅರ್ಚನೆ ಪೂಜನೆಯ ಮಾಡುವುದು (ಬಸವ. ೦೭೩). [ಸಂ. ಪೂಜನಾ]

ಪೂಜಲ್ಲಿ, ಹೂಜಲ್ಲಿ (ನಾ). ಹೂವಿನ ಕುಚ್ಚು: ರಂಗವಲ್ಲಿಗಳನಿಟ್ಟು ಪೂಜಲ್ಲಿಗಳಂ ಬಿಟ್ಟು (ಅಮೃತ. ೦೦-೨೬). **ಹೂಜಲ್ಲಿ :** ಬಳ್ಳಿ ಬಳ್ಳಿ ಹೂಜಲ್ಲಿಯಲ್ಲಿ ಮುಂಬನಿಯ ತುಳುಕಿ ಚೆಲ್ಲು (ಕಮೇಘ. ೭-೨೦). [ಪೂ$_2$ + ಜಲ್ಲಿ$_2$]

ಪೂಜಾಕಾರಿ (ನಾ). ಅರ್ಚಕ; ಪೂಜಾರಿ: ನಖರ ಜಿನಾಲಯದ ಪೂಜಾಕಾರಿಗಳು ಒಡಮ್ಬಟ್ಟು ಬರಸಿದ ಸಾಸನದ ಕ್ರಮವೆನ್ತೆನ್ದಡೆ (ಎಕ. II, ೩೩೬-೬; 1279); ಕೊಡಕಣಿಯ ರಾಮಯಿದೇವರ ಪೂಜಾಕಾರಿ ರಾಮಯಿದೇವನ ಅಳಿಯ ಬೊಮ್ಮಿದೇವಗೆ ಕನ್ಯಾದಾನವಾಗಿ ಮದುವೆಯನು ಮಾಡಿ (ಎಕ. VIII, ಸೊರಬ. ೦೬-೩೧; 1449). [ಸಂ. ಪೂಜಾಕಾರಿನ್]

ಪೂಜಾಗಜ (ನಾ). ರಾಜನ ಪಟ್ಟಾಭಿಷೇಕಕಾಲದಲ್ಲಿ ಪೂಜೆ ಮಾಡಿಸಿ ಕೊಳ್ಳುವ ಆನೆ; ಪಟ್ಟದಾನೆ; ಪಟ್ಟವರ್ಧನ: "ಪೂಜಾಗಜಮೆನಲ್ ಪಟ್ಟವರ್ಧನಾಖ್ಯಂ" (ಕಬ್ಬಿಕ್ಕೆ. ೯೦); "ಪೂಜಾಗಜಮೆಂದೆನಿಪ್ಪುದಾ ಪಟ್ಟವರ್ಧನ ನಾಮ" (ಶಬ್ದಮಂ. ೩೯). [ಸಂ.]

ಪೂಜಾಗಾರ (ನಾ). ದೇವರ ಪೂಜೆ ಮಾಡುವ ಸ್ಥಳ; ದೇವಾಲಯ: ನಗರಗಳಲ್ಲಿ (ಬಹುಮಟ್ಟಿಗೆ ಹಳ್ಳಿಗಳಲ್ಲಿಯೂ) ಮೂರ್ತಿಯುತ ಅಥವಾ ಮೂರ್ತಿಗಳಿಲ್ಲದ ಪೂಜಾಗಾರಗಳಿದ್ದುವು. ಇವುಗಳಿಗೆ ಆಯತನ ಅಥವಾ ಚೈತ್ಯಗಳೆಂಬ ಹೆಸರಿತ್ತು (ಕತ್ಯಪ್ರಾ. ೭೦). [ಸಂ.]

ಪೂಜಾದ್ರವ್ಯ (ನಾ). ಅರ್ಚನೆಗೆ ಬಳಸುವ ನೀರು, ಹೂವು, ಗಂಧ, ಪತ್ರೆ, ಧೂಪ, ದೀಪ ಮೊದಲಾದ ಪರಿಕರ: ಅರಮನೆಯ ಸುಮಂಗಲೆಯರೂ ಬ್ರಾಹ್ಮಣರೂ ವೇದಘೋಷಗಳೊಡನೆಯೂ ಪೂಜಾದ್ರವ್ಯಗಳೊಡನೆಯೂ ನಂದಿನಿಯ ಬಳಿ ಸಾರಿದರು (ಮಹಾಣ. ೨೯). [ಸಂ.]

ಪೂಜಾಫಲ (ನಾ). ಪೂಜೆ ಮಾಡುವುದರಿಂದ ಉಂಟಾಗುವ ಪರಿಣಾಮ,—ಸಂಪಾದಿಸುವ ಪುಣ್ಯ: ನಹುಷಾವನೀಶನೆಂಬವನಿತ್ತಲ್ ಪೂಜಾಫಲದಿಂ ಸಗ್ಗಕ್ಕೋಜೆಯಿನೆಯ್ತರ್ಪ ಸಮಯದೊಳ್ (ಹಾಲಾಸ್ಯ. ೦-೨-೩೬); ಹಾಗಾದರೆ ಪೂಜಾಫಲದಲ್ಲಿ ನನಗೂ ಅರ್ಧ (ಶಾಕುಂತ. ೬೦-೯). [ಸಂ.]

ಪೂಜಾಮಂದಿರ (ನಾ). ದೇವರ ಪೂಜೆಯನ್ನು ಮಾಡಲು ಇರುವ ಕೋಣೆ: ಬೆಳಕಿನ ಮೋಡದ ನಡುವೆ ತೂಗುವ ಹಸಿರು ಮನೆಯಲ್ಲಿ ಮೇನಕೆಯು ತನ್ನ ಪೂಜಾಮಂದಿರವನ್ನು ಕಟ್ಟಿದ್ದಾಳೆ (ಮಹಾಣ. ೦೬೮).

[ಸಂ.]

ಪೂಜಾಮದ (ನಾ). [ಜೈನ] ಎಂಟು ಬಗೆಯ ಮದಗಳಲ್ಲಿ ಒಂದು; ತಾನು ಪೂಜ್ಯನೆಂಬ ಗರ್ವ: ಪೂಜಾಮದ . . . ತನಗೆ ಮಾನ ಮರ್ಯಾದೆಗಳು ದೊರಕಿದವೆಂಬ ವಿಷಯದಲ್ಲಿ ಹಲವರಿಗೆ ಸೊಕ್ಕು ಬರುತ್ತದೆ. ಇಂಥ ಸೊಕ್ಕನ್ನು ಸಮ್ಯಗ್‌ದೃಷ್ಟಿಯು ಮಾಡುವದಿಲ್ಲ (ಶ್ರಾವಕಾ. ೬೦). [ಸಂ.]

ಪೂಜಾಯ (ನಾ). ಅರ್ಚನೆಯ ಕ್ರಮ; ಪೂಜಾವಿಧಿ: ರಾಯನು ರಾಯನ ಸುತರು ವಸ್ತುಗಳ ಪೂಜಾಯವಱಿದು ನೀಡಿ ಕೊಡಲು ತಾಯಿ ಪೂಜಿಸಿದಳಾ ಸ್ವಾಮಿಯನು (ಭರತ. ೩೯-೨೦). [ಸಂ.]

ಪೂಜಾರಾಧನ (ನಾ). [ಜೈನ] ನಲವತ್ತೆಂಟು ಬಗೆಯ ದೀಕ್ಷಾನ್ವಯ ಕ್ರಿಯೆಗಳಲ್ಲಿ ಒಂದು; ಗುರುಮುಖದಿಂದ ಧರ್ಮವನ್ನು ತಿಳಿಯುವುದು: ಎರಡನೆಯ ದೀಕ್ಷಾನ್ವಯಕ್ರಿಯೆಯೊಳಗವತಾರಮುಂ ವೃತ್ತಿ(ಧೃತಿ)ಲಾಭಮುಂ ಸ್ಥಾನಲಾಭಮುಂ ಗುಣಗ್ರಹಣಮುಂ ಪೂಜಾರಾಧನ [ಪಾಕಾಂ. ಪೂಜಾರಾಧ್ಯ]ಮುಂ . . . ಉಪಯೋಗಿತ್ವಮೆಂಬೆಂಟು ಗರ್ಭಾನ್ವಯ ಕ್ರಿಯೆಯೊಳ್ ಪೇಟ್ದು ಉಪನೀತಂ ಮೊದಲಾಗೆ ನಿವೃತ್ತಿಪರ್ಯಂತಮಪ್ಪ ನಾಲ್ವತ್ತುಮಂತು ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಯೊಳ್ (ಶಾಪುಂಪು. ೨೦೨). [ಸಂ.]

ಪೂಜಾರಿ (ನಾ). ಅರ್ಚಕ; ಪೂಜಕ: "ಪೂಜಕಃ, ಪೂಜಾರೀ, ಪೂಜಾಕಾರಃ—ಈ ೩ ಅರ್ಚಕಂ" (ಶಾಶಕ್ಕ. ೨೬೩); ದೇವರ್ಗ್ಗೆ ಭಕ್ತರಪ್ಪರನೆ ಪೂಜಾರಿ ಮಾಡಿ . . . ನಡಸುವುದು (ಕೊಲ್ಹಾಶಾ. ೯-೦೯; 1083); ಅಚ್ಚಗುಗ್ಗುಳಮನರ್ಪಿಸುತೋಹಿಲದೇವನುದ್ದಂಡಭಕ್ತಿಯಿನಾ ಸೋಮೇಶ್ವರನ ಪೂಜಾರಿಗಳ್ಕಂಡು (ಉದ್ಯಟಿ. ೦೦-೯೩ ಪ); ಪೂಜಾರಿಯು ಕರ್ತವ್ಯ

ಭ್ರಷ್ಟನಾದರೆ ಅವನನ್ನು ದೇವರು ಶಿಕ್ಷಿಸುತ್ತಾನೆ (ಹಬ್ಬಿ. ೨೯) ; ದೇವರು ವರ ಕೊಟ್ಟರೂ ಪೂಜಾರಿ ಕೊಡ (ಗಾಡ). [<ಸಂ. ಪೂಜಾಕಾರಿನ್. / ಹಿಂ. ಮರಾ. ಪೂಜಾರೀ./ತೆಲು. ಪೂಜಾರಿ]

ಪೂಜಾರಿಕೆ (ನಾ). ಅರ್ಚಕನ ಕೆಲಸ ; ಪೂಜೆ ಮಾಡುವ ವೃತ್ತಿ : ನಖರಂಗಳ ಆಯಿನೂರ್ಬ್ಬರ ಸಮಕ್ಷದಲ್ಲಿ ಕೊಟದು ೧೧ ಪೂಜಾರಿಕೆಗೆ ೧ (ಸೌಇಇ. XX, ೦೦೨-೧೯ ; 1132) ; ನಿಮ್ಮ ಓರಿಯವರೇನೋ ನೀಲಕಂಠನ ಗುಡೀಲಿ ಪೂಜಾರಿಕೆ ಮಾಡ್ತಿದ್ದರಂತಲ್ಲ (ಬೆಳುಮ. ೯೯). [ಪೂಜಾರಿ+—ಇಕೆ]

ಪೂಜಾರ್ಹ (ನಾ). ೧. ಪೂಜೆಗೆ ಯೋಗ್ಯವಾದುದು : ಕಳಾಹೀನವಾದ ಆ ಮೂರ್ತಿಯು ಪೂಜಾರ್ಹವಾಗುವುದಿಲ್ಲ (ಭಾರಪ. ೭೯). ೨. ಮಾನ್ಯನಾದವನು ; ಪೂಜೆಗೆ ಯೋಗ್ಯನಾದವನು : ಎಲೈ ಅಗ್ನಿಯೇ, ನೀನು ಅಲೌಕಿಕವಾದ ಪ್ರಕಾಶವುಳ್ಳವನು. ಪೂಜಾರ್ಹನು (ಹುಕ್ಕಾರ. ೨೩). [ಸಂ.]

ಪೂಜಾವಚನ (ನಾ). ಗೌರವಾರ್ಥವಾಗಿ ಬಳಸುವ ಮಾತು : "ತತ್ರಭವಾನ್ ಭಗವಾನ್—(ಇವೆರಡುಂ) ಈ ೨ ಪೂಜಾವಚನಂ. ಪಾದಃ, ದೇವಃ, ಭಟಾರಕಃ—ಈ ಮೂಱುಂ ಪೆಸರ ಕಡೆಯೊಳ್ ಪೂಜಾವ(ಚ)ನಂ" (ಹಲಾಯು. ೨೫-೦೫೯). [ಸಂ.]

ಪೂಜಾವಾಜಿ (ನಾ). (ರಾಜನ ಪಟ್ಟಾಭಿಷೇಕಕಾಲದಲ್ಲಿ) ಪೂಜೆ ಮಾಡಿಸಿಕೊಳ್ಳುವ ಕುದುರೆ ; ಪಟ್ಟದ ಕುದುರೆ : ಪೂಜಾವಾಜಿ ವಿಲೋಚನವಿಗಳದಶ್ರುಬಿಂದುಗಳನಾನಂದಾಶ್ರುಬಿಂದುಗಳೆಂದುಂ . . . ಅಭೂತಪೂರ್ವಮಪ್ಪುತ್ಪಾತಂಗಳನೇನುಮಂ ಬಗೆಯದೆ ಕೋಪಮನೆ ಬಗೆದು (ಶಂಠಾಮಾ. ೦೯-೧೨೯ ವ). [ಸಂ.]

ಪೂಜಾವಿಧಾನ (ನಾ). ಪೂಜೆ ಮಾಡುವ ಕ್ರಮ : ಇಂದ್ರ ಚಕ್ರವರ್ತ್ಯಾದಿ ನಿತ್ಯನಿರ್ವರ್ತ್ಯಮಾನಂ ಮಹಾಮಹಸರ್ವತೋಭದ್ರಾದಿಕಂ ಪೂಜಾವಿಧಾನ ಮನೇಕವಿಧಂ (ಶಾಂತಿಪು. ೬-೯೯ ವ). [ಸಂ.]

ಪೂಜಾವಿಧಿ (ನಾ). ಆರಾಧನೆ; ಪೂಜಾಕಾರ್ಯ : ದ್ವಿಜರಿಂ ಪೂಜಾವಿಧಿ ಮಂತ್ರಪೂರ್ವಕಂ ಬಾಗಿಲೊಳ್ ತೋರಣಂಗಟ್ಟಿ . . . ಗೃಹವೇದಿಗಳಿಂ ಪ್ರಯೋಗಿಸುವುದು ಪ್ರೀತಿಕ್ರಿಯೆ (ಶಾವುಂಪು. ೨೦೩) ; ಯಾರ ಹೆಸರಿನಲ್ಲಿ ಅಷ್ಟೆಲ್ಲ ಪೂಜಾವಿಧಿಗಳು ಜರುಗುತ್ತಿದ್ದುವೋ ಅವೆಲ್ಲ ಆ ಯೇಸುವಿನ ಮುಖಕ್ಕೆಸೆದ ಪರಿಹಾಸವಂತೆ ಮೈತಳೆದ ಪಾಷಂಡಿತನವಂತಿದ್ದುವು (ಪುನರು. ೦೬೯). [ಸಂ.]

ಪೂಜಿ (ನಾ). ೧. ಬಿಂದು ; ಅನುಸ್ವಾರ : ಜಾಜಿ ಪ್ರಶ್ನಾರ್ಥಕವು, ವಿಷ್ಣುಕ್ರಾಂತಿ ವಿಸರ್ಗ, ಪಾರಿಜಾತವೆ ಪೂಜಿ, ಅನುಸ್ವಾರವು ! (ಕರುಶ್ರಾ. ೨೫-೦೨). ೨. ಸೊನ್ನೆ ; ಶೂನ್ಯ : ಉತ್ತರ ನೂರು ಬರಬೇಕು. ಹತ್ತು ಬರೆದಿರುವಿ. ಮುಂದಿನ ಪೂಜಿ ಸ್ವಲ್ಪ ಅಳಿಸಿದ್ದೀತು! (ನಿರಾಶ. ೬೬) ; ಅವನ ಸಂಬಳ ದೊಡ್ಡದು, ಭೂಮಿಯ ಉತ್ಪನ್ನ ಬೇಕಾದಷ್ಟು, ಆದರೆ ಉಳಿಕೆ ಮಾತ್ರ ಪೂಜಿ (ಪವನ. ೫೦). [<ಪೂಜೆ]

ಪೂಜಿಗ (ನಾ). ಅರ್ಚಕ ; ಪೂಜಾರಿ : ಆ [ಪೂ]ಜಿಗಂಗ ಮದ್ದಳೆ ಕಾಱರಿರ್ವ್ವರ್ಗ್ಗೆ ಎರೆ ಮತ್ತರ ೨೭ ಮೊಗೆ ಮತ್ತ ೨೦ (ಸೌಇಇ. XX, ೩೦೦-೯ ; 12ನೆಯ ಶತ). [ಪೂಜೆ + — ಇಗ]

ಪೂಜಿತ (ಗು). ೧. ಅರ್ಚನೆಯನ್ನು ಪಡೆದ; ಪೂಜೆ ಮಾಡಿಸಿಕೊಂಡ: ಈ ವಿಚಾರಶಾಸ್ತ್ರವೂ ವೇದದಂತೆ ಪೂಜ್ಯವಾದುದರಿಂದ ಪೂಜಿತ ವಿಚಾರ ಶಾಸ್ತ್ರವೆಂದು ಇದನ್ನು ಕರೆಯುತ್ತಾರೆ (ಒಂದಸಾ. ೦೯೯). (ನಾ). ೨. ಪೂಜೆಯನ್ನು ಪಡೆದುದು : ಸುರಪತಿಪೂಜಿತಂ . . . ಜಿನಸೇನಮು ನೀಂದ್ರಪದಾಂಬುಜದ್ವಯಂ (ಲಕಪು. ೧-೭). ೩. ಪೂಜೆಯನ್ನು ಹೊಂದಿದವನು ಪೂಜ್ಯ : "ಪೂಜಿತಃ, ಅಪಚಿತಃ—ಈ ೨ ಪೂಜೆ ಪಡೆದವಂ" (ಹಲಾಯು. ೬೩ ೨೨೯) ; ಈ ದಿವ್ಯತೂರ್ಯಸ್ವರವೊ, ದಿವ್ಯಗಾಯನವೊ ಇವುಗಳಿಂ ಸುಗತನಿದೊ ಸತ್ಕೃತಂ, ಗುರುಕೃತಂ, ಮಾನಿತಂ, ಪೂಜಿತಂ ತಾನಲ್ಲ! (ವೃಕಾಪಿ. ೭೫-೩೦೨). ೪. ಗೌರವ; ಮರ್ಯಾದೆ : 'ಪೂಜಿತ ಗೆಡಿಸು' ಪರಾ. [ಸಂ.]

ಪೂಜಿತಗೆಡಿಸು (ಕ್ರಿ). ಗೌರವವನ್ನು ಇಳಿಸು ; ಮರ್ಯಾದೆ ಕೆಡಿಸು; ಅಗೌರವಕ್ಕೆ ಗುರಿಮಾಡು : ರಾಜವಂಶೋದ್ಭವರನು ರಾಜರೆನ್ನದೆ ಪೂಜಿತಗೆಡಿಸಿ ಪೇಳ್ವಾಗ ರಾಜತ್ವಕದು ಭಂಗವಲ್ಲವೆ (ಭರತ. ೩೯-೦೦೦). [ಪೂಜಿತ + ಕೆಡಿಸು$_1$]

ಪೂಜಿಸು (ಕ್ರಿ). ೧. ಅರ್ಘ್ಯ, ಪಾದ್ಯ, ಗಂಧ, ಮಾಲೆ ಮೊದಲಾದುವುಗಳಿಂದ ಸತ್ಕರಿಸು ; ಪೂಜೆ ಮಾಡು : ಪ್ರತಿಮಾಯೋಗಂ ನಿಂದೊರು ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯುಂ ಮಾಡಿಯರ್ಚಿಸಿ ಪೂಜಿಸಿ ಬಂದಿಸಿದೊಡೆ (ವಡ್ಡಾರಾ. ೭೯-೨೬) ; ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ (ಬಸವ. ೯೯) ; ಕರ್ಣನಾಯುಧ ಶಾಲೆಯಲಿ ಶುಚಿಯಾಗಿ ಶಸ್ತ್ರಾಸ್ತ್ರವನು ಪೂಜಿಸಿದ (ಕುಮಾಕ. ೯-೭) ; ಪೂಜಿಸುವರೆಲ್ಲರೂ ಪೂಜ್ಯರೆನಗೆ : ಪೂಜ್ಯರನು ಪೂಜಿಸುವುದೂ ಪೂಜೆ ನಿನಗೆ ! (ಅನಿಕೇ. ೫೬-೦). ೨. ಗುಣಿಸು; ಗುಣಾಕಾರಮಾಡು : "ಕಾದಿಸು ಪೂಜಿಸು ಉತ್ತಮದಿಂ ಪೇಟ್ ಮೊದಲ ಗುಣಕಾರಂಗಳ್" (ವೃವಜಾ. ೦೦-೦೦). [ಪೂಜನ + — ಇಸ್ಸು$_2$]

ಪೂಜು (ಕ್ರಿ). ೧. ಪೂಜೆಮಾಡು ; ಅರ್ಚಿಸು : ಹವಣಿಗಾರನು ಕಾರ್ಯ ಮಾಳ್ಪರೆ ಜವದಿ ಹರಿಯನು ಪೂಜಿ ನುತಿಸುವ ಕವಡು ಕುಟಿಲ ಗಳಿಲ್ಲ ಮನದೊಳು ಅರಸಿ ನೋಡಿದಡೆ (ಹಮಸ. ೦೦೬). ೨. ಗೌರವಿಸು; ಮನ್ನಿಸು: ತನ್ನ ಮನೆಯ ಮದುವೆಯೊಳು ಮಂಗಲದೊಳು ತನ್ನ ಬಾಂಧವರೆಲ್ಲರನು ಅನ್ನಪಾನಂಗಳಿಂದಾದರಿಪುದು ಮತ್ತೆ ಪೊನ್ನುಡೆಯಿತ್ತು ಪೂಜುವುದು (ಹರಿಂ. ೯-೫೯). [< ಪೂಜೆ]

ಪೂಜೆ (ನಾ.) ೧. ಅರ್ಚನೆ; ಆರಾಧನೆ : ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯುಂ ಮಾಡಿ (ವಡ್ಡಾರಾ. ೭೯-೨೬); ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಟ್ತಿ ಲಾಭಮೆಂಬಿವೆ ವಲಂ (ಆರಿಪು. ೦-೫೬); ಒಲವಿಲ್ಲದ ಪೂಜೆ ನೇಹವಿಲ್ಲದ ಮಾಟ ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ (ಬಸವ. ೦೨೬). ೨. ಗೌರವ ; ಮನ್ನಣೆ : ಸೆಣಸಿ ಶೂರ ಸಂಗ್ರಾಮದಲಿ ಬಿಳ್ದೊಡಂ ಬಳ್ದೊಡಂ ಸನ್ಮಾನ್ಯನಾ ಕಲಿಯೆ, ಮೇಣುಳಿದ ಪಂದೆಗಳಿಗಾ ಪೂಜೆ ಸಲ್ಲದೈ (ಶಾಸ್ತ್ರಾಂಗ. ೭೯-೨೧೯೬). ೩. ಸೊನ್ನೆ; ಶೂನ್ಯಚಿಹ್ನೆ: ಎಲ್ಲಕ್ಕೂ ಹತ್ತರಿನ ನಕ್ಷತ್ರವನ್ನು ಹೇಳಬೇಕಾದರೆ ಎರಡರ ಮುಂದೆ ಹದಿಮೂರು ಪೂಜೆಗಳನ್ನಿಡಬೇಕಾಗುವುದು (ಜ್ಯೋತಿಶಾ. ೦೨). ೪. (ಆಲಂ) ಶಾಸ್ತಿ ; ಶಿಕ್ಷೆ : ನಿಮ್ಮ ತಂದೆಯವರಿಗೆ ಹೇಳಿ ಬಿಡುತ್ತೇನೆ, ನಿನಗೆ ಪೂಜೆ ಆಗುತ್ತದೆ (ರೂಢಿ).

ಪೂಜೆ ಪುನಸ್ಕಾರ, ಪೂಜೆ ಪುರಸ್ಕಾರ = ಅರ್ಚನೆ ; ಆರಾಧನೆ : ಸನ್ದಿವಿಗ್ರಹಿ ನಾಗದೇವಯ್ಯಂ . . . ಮೂಲಸ್ಥಾನದೇವರ್ಗ್ಗಂ ಮಲ್ಲಿಕಾರ್ಜುನದೇವರ್ಗ್ಗಂ ಪೂಜೆ ಪುನಸ್ಕಾರ ನಿವೇದ್ಯಕ್ಕಮಿವು ಬಿಟ್ಟದತ್ತಿ (ಎಕ. VI, ಕಡೂರು. ೦೯೨-೦೭; 1196); ತೌರುಮನೆಯಲ್ಲಿದ್ದರೆ ಏನೋ ಒಂದಿಷ್ಟು ಪೂಜೆ ಪುರಸ್ಕಾರಗಳನ್ನಾದರೂ ಮಾಡಬಹುದು (ಶಾಡಿಬ. ೯೯). P ಇದೊಂದು ಕೂಡುನುಡಿ. ಪೂಜೆ ಮಾಡು = ೧. ಅರ್ಚಿಸು; ಪೂಜಿಸು; ಆರಾಧನೆ ಮಾಡು: ಶಾಂತಲೆ ಲಕ್ಷ್ಮಿಯರಿಬ್ಬರೂ ಸಹಸ್ರಸಹಸ್ರಪುಷ್ಪಗಳಿಂದ ಪರಮಾತ್ಮನ ಪೂಜೆ ಮಾಡಿ ಧನ್ಯರಾದರು (ಶಾಂತಲಾ. ೦೩೦); ಹುತ್ತಕ್ಕೆ ಹಾಲು ಹೊಯ್ದು ಪೂಜೆ ಮಾಡಿದರಂತೆ (ನವ್ನೂರು. ೩೦). ೨. (ಆಲಂ) ಶಾಸ್ತಿ ಮಾಡು: ಪಾಠ ಓದದೆ ಇದ್ದುದಕ್ಕೆ ಮೇಷ್ಟರು ಪೂಜೆ ಮಾಡಿದರು (ರೂಢಿ). ಪೂಜೆ ಹಾಕು = ೧. ತಾಂತ್ರಿಕ ಪೂಜೆ ಮಾಡಿ ಮೆಟ್ಟಿಕೊಂಡ ದೆವ್ವವನ್ನು ಬಿಡಿಸು : ಪೂಜೆ ಹಾಕಿದ

ನಂತರ ಅವಳಿಗೆ ಅರ್ಧ ಘಂಟೆ ಎಚ್ಚರ ತಪ್ಪಿತ್ತು (ಕೂಗ). ೨. ಮಂತ್ರ ಹಾಕು; ಮಂತ್ರಿಸು : ರೋಗಿಯನ್ನು ಕೂರಿಸಿ ೧೦೮ ಬಿಂದಿಗೆ ನೀರನ್ನು ರವರವ ಅಂತ ಎರಚಿ ಸ್ನಾನ ಮಾಡಿಸುತ್ತಿದ್ದರು; ಅನಂತರ ಪೂಜೆ ಹಾಕುತ್ತಿದ್ದರು (ಸುಸೋಪಂ. ೫೫೫). [ಸಂ. ಪೂಜಾ]

ಪೂಜೆಗ (ನಾ). (ಅಲಂ) ಸತ್ವವಿಲ್ಲದವನು : ಅರಸುಗಳ್ಗೆ ವಿರಸಮಾದವ ಸರದೊಳ್ ಜಾಗಿಯಂ ಲುಬ್ಧನೆಂಬರ್ ಭೋಗಿಯುಪ್ಪನಂ ಪೂಜೆಗನೆಂಬರ್ ಸೌಭಾಗ್ಯಮುಳ್ಳವನಂ ಪಾಣ್ಡನೆಂಬರ್ ತ್ಯಾಗಿಯಂ ಅರ್ಥದೂಷಕನೆಂಬರ್ ಅರ್ಥದೂಷಕನಂ ತ್ಯಾಗಿಯೆಂಬರ್ (ಶಂಕರ. ೩೦-೦೦). 'ಹೂಜೆಗ' ಹೋ. [ಪೂಜೆ + -ಗ$_3$]

ಪೂಜೆಗಟ್ಟು (ಕ್ರಿ). ಪೂಜೆ ಮಾಡು; ಅರ್ಚಿಸು : ಪೂಜೆಗಟ್ಟುವ ಪೂಜಾರಿಗವಲ್ಲಿ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ಬೆರ್ದ್ದಲೆ ಮತ್ತ ೫ (ಸೌಪ. IX—i, ೦೦೩-೦೨; 1054). [ಪೂಜೆ + ಕಟ್ಟು$_1$]

ಪೂಜೆಗೆಯ್, ಪೂಜೆಗೈ (ಕ್ರಿ). — ಪೂಜೆಗಟ್ಟು : ಅಗ್ಗಣಿಹೂಗಳಂ ಬೇಗಂ ತಂದಂತಂತೆ ಪೂಜೆಗೆಯ್ದು (ಪಸಂ. ೯-೨೦); ನೀನಲ್ಲದನ್ಯದೈವವ ಪೂಜೆಗೆಯ್ದು ಮತ್ತೇನ ಕಂಡರು ಖಳಾಧಮರು (ಸೋಪಶ. ೨೦-೬೨). ಪೂಜೆಗೈ : ಸಂಗಮೇಶ್ವರಂಗೆ . . . ಒಡೆಯಂ ಪೂಜೆಗೈದು ಪ್ರಸಾದಕಾಯನಾಗಿ ಸುಖದೊಳಿಪ್ಪುದು (ಪಸಂ. ೨-೬೮); ಪೂಜೆಗೈದು ಮೊರೆಯಿಡುವಿಹರೆಲ್ಲ ಭಕುತರನೇ ಬೇಡಲು ಬಾಯಿಲ್ಲ (ಗಪಂ. ೨-೨೫). [ಪೂಜೆ + ಕೆಯ್$_1$]

ಪೂಜೆಗೈ 'ಪೂಜೆಗೆಯ್' ನೋ.

ಪೂಜೆಗೈಸು (ಕ್ರಿ). ಪೂಜೆ ಮಾಡಿಸು; ಅರ್ಚಿಸುವಂತೆ ಮಾಡು : ಕುತಃಪಕಾಲಮಂ ಮಾಱಲೀಯೆ ನಾಂ ಬಂದ ವಿಪ್ರರನಾದರಿಸಿ ಪೂಜೆಗೈಸದಿರೆನು (ಕೃಷ್ಣಿಜಾ. ೦೦-೨೯). [ಪೂಜೆ + ಕೈಸು (< ಕೆಯ್ಸು)]

ಪೂಜೆಗೊಡಗಿ (ನಾ). ದೇವರ ಪೂಜೆಗಾಗಿ ಕೊಟ್ಟ ಭೂಮಿ.—ಉಂಬಳಿ : ಚಮೆಯನಾಯಕಂಗೆ ಚತುರಣಸೀಮೆಯೊಳಗಾಗಿ ಕೊಟ ಪೂಜೆಗೊಡಗಿಯ ಕ್ರಮ (ಎಇ. XVI, ತುಮಕೂ. ೮೫-೦೯ ; ?). [ಪೂಜೆ + ಕೊಡಗಿ (< ಕೊಡಂಗೆಯ್$_2$)]

ಪೂಜೆಗೊಳ್ (ಕ್ರಿ). ಪೂಜಿಸಿಕೊಳ್ಳು ; ಪೂಜೆಯನ್ನು ಹೊಂದು : ಇಂತೀ ದ್ವಿವಿಧ ಒಂದಾಗದ ಮುನ್ನ ಕೂಡಲಸಂಗಮದೇವರು ಪೂಜೆಗೊಂಡರು (ಪಸಂ. ೧೩೬); ಪೂಜೆಗೊಳಲ್ಕೆ ಬಂದು ನಿಜಮಂದಿರೆಮಂ ನೆಲೆವೀಡುಗೊಂಡು ರಾರಾಜಿಪ ನಂದನಂದನನ ಚಂದಮನೊಂದಿಸಿ ಚಿತ್ತ ಭಿತ್ತಿಯೊಳ್ (ಶಾಕಾ. ೩-೦೯). [ಪೂಜೆ + ಕೊಳ್$_1$]

ಪೂಜೆವಂತ (ನಾ). (ಆಡಂಬರದ) ಪೂಜೆ ಮಾಡುವವನು: ಗುಣವನಱಯರಾಗಿ ಶೀಲವಂತಂಗೆ ನೇಮವಿಲ್ಲ ಘಾತಕಂಗೆ ಭಕ್ತಿಯಿಲ್ಲ ಪೂಜೆವಂತಂಗೆ ಲಿಂಗವಿಲ್ಲ ತ್ರಿವಿಧವ ಮಱೆಯದವಂಗೆ ಜಂಗಮವಿಲ್ಲ (ಸೋಕಾಮ. ೩೨-೨೦೬). 'ಪೂಜ್ಯವಂತ' ಪರಾ. [ಪೂಜೆ + -ವಂತ]

ಪೂಜೆವಡೆ (ಕ್ರಿ). ಪೂಜೆಯನ್ನು ಹೊಂದು ; ಪೂಜಿಸಿಕೊಳ್ಳು : ಈ ಮಹಾತ್ಮಂ ಧರೆಗಱ್ಚರಿಯಾಗೆ ಭಕ್ತಿಯಿಂದಂ ಸುರರಿಂದಂ ಪೂಜೆವಡೆದಂ (ಕರ್ಣಾಟ್ಯ. ೮-೨೬೫); ಈ ಪೊಡವಿಯೊಳಜಂ ಪೂಜೆವಡೆಯನೆ ಬೇಗುಲದೊಳರ್ದು (ಜಪು. ೩೯-೬). [ಪೂಜೆ + ಪಡೆ$_2$]

ಪೂಜೋತ್ಸಾಹ (ನಾ). ೧. ಪೂಜೆ ಮಾಡುವುದರಲ್ಲಿರುವ ಉತ್ಸುಕತೆ. ೨. ಆರಾಧನೆಯಲ್ಲಿ ಉತ್ಸುಕನಾದವನು : ಷಟ್ಕರ್ಮನಿರತರಶಿಥಿ ಅಧ್ಯಾಗತವಿಸಿಷ್ಟಜನಪೂಜೋತ್ಸಾಹವ್ಯವಹಾರಚತುರ್ಮುಖರ್ . . . ಅಪ್ಪ ಶ್ರೀಮತ್ ಪಟ್ಟಲನಾಲ್ಕೂಱ್ಪ್ಪದಿಂಬರ್ (ಸೌಇಇ. XX, ೫೬-೯; 1084). [ಸಂ.]

ಪೂಜೋಪಕರಣ (ನಾ). ಪೂಜೆ ಮಾಡಲು ಬೇಕಾಗುವ ಸಾಧನ.—ಸಲಕರಣೆ : ಚಿನ್ನ ಬೆಳ್ಳಿಗಳ ಪೂಜೋಪಕರಣ, ಸೇವೋಪಕರಣ . . . ಇವುಗಳನ್ನು ಒಪ್ಪಿಸಿ ದೇವತಾಸೇವೆಯನ್ನು ಮಾಡಿದರು (ಸುಜಾಸಂ. II, ೦೨೯). [ಸಂ.]

ಪೂಜ್ಯ (ಗು). ೧. ಗೌರವಕ್ಕೆ ಯೋಗ್ಯವಾದ ; ಮಾನ್ಯ ; ಆದರಣೀಯ. (ನಾ). ೨. ಪೂಜೆಗೆ ಅರ್ಹನಾದವನು ; ಪೂಜನೀಯ ವ್ಯಕ್ತಿ : "ಪ್ರತೀಕ್ಷ್ಯಃ, ಪೂಜ್ಯಃ—ಈ ೨ ಪೂಜಿಸಲ್ತಕ್ಕವಂ" (ಕಣಾಸು. ೬೩-೨೨೯); ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು ಕಂಥೆಯೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದರೆ ಪಂಚಮಹಾಪಾತಕ (ಪಸಂ. ೨೦೦); ಪೂಜ್ಯರೆ, ತಮ್ಮಾಜ್ಞೆಯೇನು ? ಕರುಣಿಸಬೇಕು (ಶಾಕುಂತ. ೨೬-೨೦); ಪೂಜ್ಯನನ್ನು ಮಹನೀಯನೆಂದು ತಿಳಿಯುವುದೇ ಭಕ್ತಿ ಎನಿಸುವುದು (ಕಕ್ಕಿ. ೬೯). ೩. ಪತ್ನಿಯ ಅಥವಾ ಪತಿಯ ತಂದೆ ; ಮಾವ. ೪. ಆದರಣೀಯವಾದುದು ; ಮನ್ನಣೆಗೆ ಯೋಗ್ಯವಾದುದು : ಆಗಸದೊಳು ಚರಿಸುವ ಸುರಸತಿಯರ ಸೋಗೆ ಮುಡಿಗೆ ಪೂಜ್ಯವಾಗಿ ಆಗರಳಿದ ಕಸ್ತೂರಿ ಹೊಂದಾಳೆಯ ಪೂಗ ವೃಕ್ಷಗಳೊಪ್ಪುತಿಹುವು (ಕಂಪಂ. ೨-೨೦); ಪ್ರಕೃತಿಹಿತಾರ್ಥಂ ಕ್ಷಿತಿಪಾಲಕರುದ್ಯೋಗಿಸುಗೆ ಪೂಜ್ಯಮೆನಿಸುಗೆ ಜಗದೊಳ್ ಸುಕವಿಗಳ ಸೂಕ್ತಿ (ಶಾಕುಂತ. ೦೦೬-೨೧೬). ೫. ಸೊನ್ನೆ ; ಶೂನ್ಯ : ರಾಜ್ಯಗೋಮಿನಿಯೊಳು ನೆಲಸಿರ್ದೆನೆಂದೊಡೆ ರಾಜ್ಯವು ಶಾಪದಸ್ಥಿರವು ಪೂಜ್ಯವಾಗಿರಬೇಕೆನಲಾಯುಷ್ಯವು ಪೂಜ್ಯವಲ್ಲದೆ ಚಿರವಲ್ಲ (ಅಪಂಕ. ೬-೦೩೦) ; ಜನಾರ್ದನನ ಆಡಳಿತದಲ್ಲಿ ಸಂಪಾದನೆಯು ಪೂಜ್ಯವಾದುದರಿಂದ ಸಂಸಾರದಲ್ಲಿ ವ್ಯಾಜ್ಯಗಳೂ ದಿನದಿನಕ್ಕೆ ಅಧಿಕವಾಗತೊಡಗಿದುವು (ಸುರಕುಂ. ೦೦೯). [ಸಂ.]

ಪೂಜ್ಯತೆ (ನಾ). ಗೌರವ ; ಮನ್ನಣೆ : ಪೂಜ್ಯಪದರನಾರಾಧಿಪ ಜನಕ್ಕೆ ಪೂಜ್ಯತೆಯರಿದೇ (ಶಾಕ್ಯಕೃ. ೦೯-೦೦೬); ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹಾಪುರುಷರ ಆದರ್ಶದಲ್ಲಿ ಯುವಕರಿಗೆ ಪೂಜ್ಯತೆಯೂ ಆಸಕ್ತಿಯೂ ಇರುವುದರಿಂದ ಅವರ ಜೀವನಕಥನಗಳೂ ತತ್ವದೃಷ್ಟಿಗಳೂ ಪಠ್ಯವಸ್ತುವಿನಲ್ಲಿ ಅಳವಡಬೇಕು (ಕಿಷ್ಕಿ. ೦೬೦). [ಸಂ. ಪೂಜ್ಯತಾ]

ಪೂಜ್ಯಪದ (ನಾ). ೧. ಗೌರವದ ಸ್ಥಾನ; ಆದರಣೀಯವಾದ ಪದವಿ : ನನ್ನನ್ನು ಯಾವ ಗೃಹಿಣೀಪದದಿಂದ ನೀಚನಾದ ನೀನು ಒಮ್ಮೆ ಭ್ರಷ್ಟಗೊಳಿಸಿರುವೆಯೋ ಆ ಪೂಜ್ಯಪದವು ಜನ್ಮಜನ್ಮಾಂತರದಲ್ಲಿಯೂ ನನಗೆ ದುರ್ಲಭವಾಗಿಬಿಟ್ಟಿತು (ಅಂಬಿಕ. ೦೬). ೨. ಆದರಣೀಯವಾದ ಪದವಿಯಲ್ಲಿರುವವನು ; ಪೂಜನೀಯ ವ್ಯಕ್ತಿ : ಹರಿವಧು ನೂಪುರಮಂ ಜಿನಚರಣದೊಳಳವಡಿಸಿ ತಳೆಯೆ ಶಿರದೊಳ್ ಮಣಿಶೇಖರಮೆನಿಸಿತಂತೆ ಪೂಜ್ಯಪದರನಾರಾಧಿಪ ಜನಕ್ಕೆ ಪೂಜ್ಯತೆಯರಿದೇ (ಶಾಕ್ಯಕೃ. ೦೯-೦೦೬). [ಸಂ.]

ಪೂಜ್ಯಪಾದ (ನಾ). ೧. ಧರ್ಮಬೋಧಕರು, ಸಂನ್ಯಾಸಿಗಳು ಮುಂತಾದವರನ್ನು ಸಂಬೋಧಿಸುವಾಗ ಗೌರವಕ್ಕಾಗಿ ಬಳಸುವ ಶಬ್ದ : ಪೂಜ್ಯಪಾದ ಶ್ರೀ ಶಿವಾನಂದಸ್ವಾಮಿಯವರು ಈ ಪೀಠದಲ್ಲಿ ಕುಳಿತುಕೊಳ್ಳಲಿ (ಕೂಗ). ೨. (ಕ್ರಿ. ಶ. ೬೦೦ರಲ್ಲಿ ಇದ್ದ, ಪ್ರಸಿದ್ಧನಾದ) ಒಬ್ಬ ಜೈನಮುನಿಯ ಹೆಸರು : ಪೂಜ್ಯಪಾದಸ್ವಾಮಿಗಳ ಪದಂಗಳೀಗೆ ಶಾಶ್ವತಪದವಂ (ಅಪಿಪು. ೦-೦೦); ಸುಕವಿಪ್ರಣತವ್ಯಾಕರಣಕರ್ತೃಗಳ್ ಗಗನಗಮನಸಾಮರ್ಥ್ಯರ್ ತಾರ್ಕಿಕತಿಳಕರೆಂದು ಪೊಗಟ್ಟುದು ಸಕಳಜನಂ ಪೂಜ್ಯಪಾದಭಟ್ಟಾರಕರಂ (ಶಾಪುಂಪು. ೨). [ಸಂ.]

ಪೂಜ್ಯಪಾದತೆ (ನಾ). ೧. ಪಾದಗಳಿಗಿರುವ, ಪೂಜೆಯನ್ನು ಪಡೆಯುವ ಘನತೆ. ೨. ಪೂಜ್ಯಪಾದಮುನಿಯಂತೆ ಇರುವಿಕೆ. ೧, ೨ : ಕ್ಷಿತಿನಾಥವ್ರಜಪೂಜ್ಯಪಾದತೆ ನಿಜಾಚಾರ ಪ್ರತೀತಾಕಳಂಕತೆ ವಿದ್ವನ್ನುತ ವೀರಸೇನತೆ ನಿಜಂ ತಾಂ (ಕಂಪ್ರಕೃ. ೦-೩೦). [ಸಂ. ಪೂಜ್ಯಪಾದತಾ]

ಪೂಜ್ಯಭಾವ (ನಾ). ಗೌರವದ ಭಾವನೆ : ಆದರಭಾವ : ಅವಳ ಅಕ್ಕ

ಸುಂದರಿಯು . . . ಗುಣಶಾಲಿನಿಯಾಗಿದ್ದದ್ದರಿಂದ ಚಂದ್ರಶೇಖರನ ಯೋಗ್ಯತೆಯನ್ನು ಗ್ರಹಿಸಿ ಅವನನ್ನು ಪೂಜ್ಯಭಾವದಿಂದ ಕಾಣುತ್ತಿದ್ದಳು (ಪಂಕಸಾ. ೨೦೦). [ಸಂ.]

ಪೂಜ್ಯಭಾವನೆ (ನಾ). = ಪೂಜ್ಯಭಾವ : ಗಡ್ಡವು ಎದೆಯವರೆಗೂ ಬೆಳೆದಿದ್ದು ನೋಡುವವರಿಗೆ ಒಂದು ಪೂಜ್ಯಭಾವನೆಯನ್ನುಂಟುಮಾಡುತ್ತಿದ್ದುದು (ಕಳಹು. ೦). [ಸಂ. ಪೂಜ್ಯಭಾವನಾ]

ಪೂಜ್ಯವಂತ (ನಾ). ಗೌರವಾನ್ವಿತನಾದವನು ; ಮಾನ್ಯ : ಪೂಜೆಯಿಂದ ತಾ ಪೂಜ್ಯವಂತನಾದಿಹೆನೆಂದು ಮಾಡುವನಿರವು ಹೊಲಶಿ ತನ್ನ ಹೊಲೆಯ ಮಜ್ಜೆಯ ಶುದ್ಧ ನೀರ ಮಿಂದೆನೆಂದು ಕೆಲವರ ಮುಟ್ಟುವಂತೆ ಆ ವಿಧಿನಿಸಗಳಿಯತ್ತು ತ್ರಿಕರಣಶುದ್ಧವಿಲ್ಲದ ಪೂಜೆ (ಪೋಗವಾ. ೩೯-೧೬೨). [ಸಂ. ಪೂಜ್ಯವತ್]

ಪೂಜ್ಯೆ (ನಾ). ಗೌರವಾರ್ಹಳಾದವಳು ; ಆದರಕ್ಕೆ ಯೋಗ್ಯಳಾದವಳು; ಮಾನ್ಯೆ : ದಯೆಯ ತವರ್ಮನೆ ಭವ್ಯಪ್ರಿಯೆ ... ಭುವನೈಕ ಪೂಜ್ಯೆ ಚೇಳಿನ ಧರೆಯೊಳ್ (ಧರ್ಮಾಮೃ. ೭-೯) ; ಪೂಜ್ಯೆಯಾದ ದ್ರೌಪದಿಯಣಿ ಹೇಳಿದುದು ನನ್ನ ಕೋರಿಕೆಯೇ ಅಲ್ಲವೆ ? (ಭಾಶಾಂತ. ೦೦೩-೯) ; ಪೂಜ್ಯೆಯಂ ಪ್ರಾಣವಲ್ಲಭೆಯಾಗಿ ಪಡೆದ ನಾಂ ಧನ್ಯನೈ (ಶ್ರೀಕಾಪಾ. ೭೨೭-೩೦೬). [ಸಂ. ಪೂಜ್ಯಾ]

ಪೂಟ, ಪೂಟಿ, ಹೂಟ, ಹೂಟಿ, ಹೂಟೆ (ನಾ). ೧. ಏರ್ಪಾಟು ; ಯೋಜನೆ : ಇನ್ನುಮೊಂದಂ ಬಯಸಿ ಪೂಟಮಂ ಪೂಡಿದರ್ (ಹೊಂಗಳು ೩೭-೦). ಪೂಟ : ೨. ಬಂಡಿ, ರಥ, ಕುಂಟೆ, ನೇಗಿಲು ಮೊದಲಾದುವುಗಳನ್ನು ಎಳೆಯುವುದಕ್ಕಾಗಿ ಎತ್ತು, ಕುದುರೆ ಮೊದಲಾದುವುಗಳನ್ನು ಅಳವಡಿಸಿ ಕಟ್ಟುವಿಕೆ,—ನೊಗ ಹೇರುವಿಕೆ : ಚಿತ್ರಂ ಪೂಟಿಯ ಬೆಳ್ಗುದುರೆಯ ತನ್ನ ರನ್ನದೇರಂ ನೂಂಕಿ ಕೋಲ ಹಂದರಮನೊಡ್ಡಿ ... ನಿಲ್ಲೆಂದು ತಡೆದಂ (ರಾಮಾಶ್ವ. ೯೭-೩). ಹೂಟ : ೧. ಹೂಟ ಇನ್ನೇನು ಗೆದ್ದಿತು ಎನ್ನುವ ಹೊತ್ತಿನಲ್ಲಿ ಅದು ಹೀಗೆ ಕಾಲು ಜಾರಬೇಕೆ ? (ಪಶಕಾ. ೩೩೦) ; ಕಾಳು ಮನೆಗೆಯ್ದು ಮದುವೆಯ ಹೂಟಮಂ ತಿಳಿಸಿ ಕೇಳಿದಂ ಕಡೆಗೆ ಕಾಲ್‌ಗುಟ್ಟಲಿಹ ಕೇಡು (ಕಾಲಾಗ. ೦೪೦-೩೦೬). ೨. ಧರ್ಮಃ. ಧೌರೇಯಃ—ಈ ೨ ಹೂಟದೆತ್ತು (ಹಲಾಯು. ೪೯-೦೦೦) ; ಹೂಟದೊಳು ಏರಂಡ ಕಿಟ್ಟದೊಳು ಹೆಟ್ಟಂ (ಶಬ್ದಮಂ. ೯೦). ೩. ತೋರಿಕೆ ; ನಟನೆ : ಶಿವನತ್ತ ಕಾಲಾಗಿ ಮಜ್ಜಿದು ಹೂಟದ ಹೆಣನ ಮಾಳ್ಕೆಯಿಂದಿರ್ಪನಂ ಅಜ್ಜಿಯಟ್ಟಿ . . . ಕಾಲ್ಗೆಯೆನಲು (ಏಕಶ್ರೃ. ೯-೬-೯). ೪. ಕುಯುಕ್ತಿ ; ಪಿತೂರಿ ; ಸಂಚು ; ಜಾಲ : ನಮ್ಮ ತಪವನು ಕೆಡಿಸೆ ಸುರರು ಹೂಡಿದ ಹೂಟ—ಇಂತಿಲ್ಲದಿನ್ನಿಲ್ಲ—ಬಲ್ಲೆ ನಾನವರಾಟ (ಇಂಶ್ರೃ. ೪೯-೯); ಎಲ್ಲ ತರಹದ ಹೂಟ ಆವುಟಗೂ ನಿಷ್ಫಲವಾದಾಗ ಅವನನ್ನು ಹಿಡಿದೆಳೆದು ರಂಪ ಮಾಡುವುದೆ (ಪಂಕಾಂತ. ೭೭). ಅವನನ್ನು ಕಳಿಸಿಬಿಡಲು ಹೂಡಿದ ಹೂಟ ಅದು (ಭಾಂಕಲಾ. ೩೭೭) . ೫. ರಚನೆ ; ಬಂಧ ; ಸೇರುವೆ : ಸರಳ ಹರಹಿನ ಹೂಟವನು ಕಾಹುರದ ಕಡುಹಿನಲೊದೆದು ಬೊಬ್ಬಿಜ್ಜಿ ದುರವಣಿಸಿದನು ಪಾರ್ಥನು (ಭಾಪ್ರಾಶ. ೦೪-೩೦). ಹೂಟ : ೨. 'ಎಳ ಹೂಟೆ' ಪರಾ. ಹೂಟೆ : ೨. ಧೃತಿಗೆಡಿಸಿ ಹೋರಿಗಳ ಓಡಿಸುವುಗಳ ಬಡಿದ ಸುನ್ನತ ಬಾಜೆಯಾಕಳಂ ಹೂಟೆಯಂ ಹೇಜುವಾಶ್ರಿತರ ರಕ್ಷಿಸಲಜ್ಜಿಯನು (ಲಕಿಶಾಂ ೩೯-೨೦) ; ಮತ್ತೆ ಕಡಿದನು ರಥದ ಚಾಪವ ಮತ್ತೆ ಹೊಸ ಹೂಟೆಯೊಳು ಹೊಕ್ಕರು ತೆತ್ತು ಸವೆಯರು ಶೌರ್ಯದಭಿಮಾನವನು ಪಟುಭಟರು (ಭಾಪ್ರಾಗೀ. ೬-೩೯). ೬. ಉಳುಮೆ; ಬೇಸಾಯ; ಸಾಗುವಳಿ : ಯೂರಯಾರ ಹೂಟೆಯಲುಂ ಗ್ರಾಮಶಾನ್ತಿಯಲುಂ ದೇವರ್ಗ್ಗೆ ಸಹಸ್ರ ಗಡುಗೆ ಪೂಜೆ ನಿವೇದ್ಯಕ್ಕೆ . . . ಯೆರೆ ಮತ್ತ ೧ ಕಂ ೪೫೦ (ಶಾಸಾ. IX—1. ೨೭೬- ೭; 1183); ಜಡಿಮಳೆಯಾದುದರಿಂದ ಯಾರೂ ಹೂಟೆಗೆ ಹೊರಡುವ ಹಾಗಿರಲಿಲ್ಲ (ನಡಿಗಾ. II. ೦೨೨೭) ; ಬೀಜ ಬಿತ್ತಿಸುವ ಸಮಯವಾಗಲಿಲ್ಲವೆ ? ಗದ್ದೆ ಹೂಟೆಯಾಗಬೇಡವೇ? (ಪುಗಿಯು. ೪೩). ೭. ಭಾರ; ಹೇರು : ಭಣ್ಡಿಗೆ ದಣ್ಡಿಗೆ ಪೊಂದು ಸೆವೆಯಯ್ದು ಹೂಟೆಯೆರಡರ್ಕ್ಕಂ ದಣ್ಡಿಗೆಪೊಂಡು(ದು)ಸೆವೆಯೆರಡು (ಎಇ. XIX. ೩೯-೩೨; 1135). ೮. ಕಟ್ಟು; ಬಂಧನ : ಇಕ್ಕೆಲದೊಳು ಕಬ್ಬಿಯೊಳು ಕಟ್ಟಿ ನೇಲುತಿರ್ಪುಕ್ಕಿನ ಗುಂಡುಗಳಿಂದ ದಿಕ್ಕುದಿಕ್ಕಿನ ಹಗ್ಗದ ಹೂಟೆಯಿಂದತಿಕಕ್ಕಸದಿಂ ನಡೆಯಿಪರು (ಕುಗಾಣಾಂ. ೯-೪೬). ೯. (ಉದ್ಯೋಗದಲ್ಲಿ ಬಂಡವಾಳವನ್ನು) ತೊಡಗಿಸುವಿಕೆ ; ಹೂಡುವುದು : ಖಾಸಗಿ ಉದ್ಯಮಗಳಲ್ಲಿ ಬಂಡವಾಳ ಹೂಟೆಯು ಬೆಳೆಯುವುದಕ್ಕೆ ಉತ್ತೇಜನ ಕೊಡುವುದರ ಮೂಲಕ ಪ್ರಪಂಚದ ಆರ್ಥಿಕಾಭಿವೃದ್ಧಿಗೆ ಸಹಾಯ ನೀಡುವುದೇ ಕಾರ್ಪೊರೇಷನ್ನಿನ ಉದ್ದೇಶವಾಗಿದೆ (ಅಂಶಸಂ. ೦೦೪).

ಹೂಟೆ ಹಾರು = ಬಂಡಿಯ ಹಿಂಬದಿಗೆ ಭಾರ ಜಾಸ್ತಿಯಾಗಿ ನೊಗದ ಭಾಗ ಕಳಚಿಕೊಂಡು ಮೇಲಕ್ಕೆ ನೆಗೆ : (ಕ).

[< ಪೂಡು]

ಪೂಟರ್ಜೆ (ನಾ). ಸಾರಾಂಶವನ್ನು ಒಳಗೊಂಡ ಅರ್ಜಿ : (ಕ).

[ಪೂಟು (< ಪೂಟು$_1$) + ಅರ್ಜಿ$_2$]

ಪೂಟಲಾಯರಿ 'ಪೂಟ್‌ಲಾಯರಿ' ನೋ.

ಪೂಟೆ 'ಪೂಟ' ನೋ.

ಪೂಟು 'ಪೂಟು$_1$' ನೋ.

ಪೂಟುಲಾಯರು 'ಪುಟ್‌ಲಾಯರು' ನೋ.

ಪೂಡಿಸು, ಹೂಡಿಸು (ಕ್ರಿ). ೧. ತೊಡಿಸು; ಸೇರಿಸು; ಹಾಕು : ಸೊಕ್ಕಿದರವನ ಭೃತ್ಯರವರೆಲ್ಲರಂ ತಂದು ಕಾರಾಗಾರದೊಳ್ನಿಗಳಮಂ ಪೂಡಿಸುವೆನು (ಕೃಪುಶಾ. ೨೯-೨೩). ೨. (ಬಂಡಿಯ ಮೇಲೆ ಹೇರಿ) ಸಾಗಿಸು; ರವಾನಿಸು : ಎಣ್ಡೆಸಯ ಸೀಮೆಗಳನೊತ್ತಿದಂ ಪೂಡಿಸಿದ ನವರವರ ಮನೆಗಳ ಸುವಸ್ತುಜಾಲಂಗಳಂ ತನ್ನ ಪುರಕೆ (ಕೃಪುಶಾ. ೨೯-೯). ೩. ನಿರ್ಮಾಣ ಮಾಡಿಸು ; ರಚನೆಗೊಳಿಸು : ಧರಣಿ ಬೋಯಿತಿ ಧರೆಯೊಳ್ ಹೊಡೆಹುಲ್ಲ ಬೀಸಿ ಪೂಡಿಸಿ ಪಡೆದಳು ತುಂಗಭದ್ರ ಮಧ್ಯದ ಮೊಜನಂ (ಎಇ. VII. ಹೊನ್ನಾಳಿ. ೬-೦೩; 1220). ೪. ತಂದು ಒದಗಿಸು; ತರಿಸು : ಶಕಟಸಂದೋಹದಿಂ ಪೂಡಿಸುವ ಸಂಭಾರನಿಕರಕಧಿಪತಿಯಾದನನಿರುದ್ಧನು (ಕೃಪುಶಾ. ೩೯-೭). ಹೂಡಿಸು : ೨. ಆಂಧ್ರ ಜಾಳಾಂದ್ರಾಳಿಗಳನಪ್ಪಳಿಸಿ ಹೂಡಿಸಿದನು ಮಹಾಧನವ (ಭಾಪ್ರಾಸ. ೯-೦೦); ರೂಢಿಗುತ್ತರಕುರುಗಳರ್ಥವ ಹೂಡಿಸಿದನರಮನೆಗೆ ದೈತ್ಯರ ಬೀಡ ಬಜ್ಜಿಗೈದನು (ಭಾಪ್ರಾಅ. ೭-೯). ೩. ಕಂದರ್ಪಾಂಧಕನನುಳುಹುವೊಡೆ ತನಗಿನ್ನಿಂಧನವ ಹೂ[ಪಾಕಾಂ. ಮಾ]ಡಿಸುವುದೈಸಲೆಯೊಂದನಾ ಭೀಮ (ಭಾಪ್ರಾಅ. ೨೨-೩೭), ೫. (ಕುದುರೆಗಳನ್ನು ಬಂಡಿಗೆ ಹೂಡಿ) ಅಣಿಗೊಳಿಸು; ಸಿದ್ಧಪಡಿಸು : ಈ ರಥವನೇ ಹೂಡಿಸಿದೆನೀ ಸಾರಥಿಯ ಬೆಸಸಿದೆನು (ಭಾಪ್ರಾಅ. ೦೨-೦೦). ೬. ನೊಗವನ್ನು ಹೇರಿ, ಎಳೆಯಲು ತೊಡಗಿಸು,...ಎಳೆಯಿಸು : ಅವನಿಸುರರೊಳೀ ಸೋಮಯಾಜಿಯೆನಿಪ್ಪನಂ ಕೊಯ್ದು ಇನಿತು ನೀರಂ ತೋಜ್ಜಿರೇ ಧಿಕ್ಕನೆ ಇದಕೆ ಆಜಡೆ ನಿಮ್ಮುವನಿ ನಿಬರಂ ಪಟ್ಟಣದ ಸುತ್ತೆಳೆಹೂಟೆ ಹೂಡಿಸುವೆ [ಪಾಕಾಂ. ಹೂಟೆಯೊಳೆಳಸುವೆ] (ಪಪುಶಾ. ೩೭ ೬೦). ೭. ತೊಡಗಿಸು; ಆರಂಭಿಸು: ಬೇರೆ ಹವ್ಯಾಸ ಪೂಡಿಸಬೇಕು (ಪುಸಿಪಾ. ೬೧). [ಪೂಡು + — ಇಸು$_3$]

ಪೂಡು, ಹೂಡು$_1$ (ಕ್ರಿ). ೧. ಬಂಡಿ, ರಥ, ರೆಂಟೆ, ಕುಂಟೆ ಮೊದಲಾದುವುಗಳನ್ನು ಎಳೆಯುವುದಕ್ಕಾಗಿ ಅವುಗಳಿಗೆ ಎತ್ತು, ಕುದುರೆ ಮೊದಲಾದುವನ್ನು ಹೊಂದಿಸು, —ಕಟ್ಟು ; ನೊಗ ಹೇರು : ಬೆಳ್ಗಟ್ಟಿ ಪೂಡಿದ ಪೊನ್ನ ರಥಮಂ ಬೆಳ್ಗಟ್ಟಿಯನರಸರ್ಕಳೇ

ಱುವುದುಮಂ . . . ಕಂಡೆಂ (ಪಜ್ಜುನಾ. ೬೫ ೩೦) ; ಆ ರಥದೊಳೊಡಂಬಡೆ ಪೂಡಿದ ಕುದುರೆಗಳುಂ . . . ಅಸದಳವೆಸೆಯೆ (ಪಂಪಭಾ. ೦೦-೩೨ ಪ) ; ಸಂಜೀವಕ ನಂದಕಾಖ್ಯ ವೃಷಭಂಗಳನಿಂಬೆನೆ ಪೂಡಿ . . . ತಳರ್ದಂ ವಣೆಗ್ವರಂ (ಪಂಚತಂ. ೨೩-೬)· ೨. ಅಣಿಗೊಳಿಸು ; ಸಿದ್ಧಗೊಳಿಸು : ಗಿಳಿಯ ಬಣ್ಣದ ಕುದುರೆಗಳೊಳ್ ಪೂಡಿದಜಿತಂಜಯುವೆಂಬ ರಥಮನೇಱಿ (ಅರಿಪು. ೦೨ ೭೯ ಪ) ; ಎಯ್ದೆ ಪೂಡಿ ತರವೇಟ್ಟೇರೆಲ್ಲಮಂ (ಅರ್ಜುನ. ೨-೩೩) ; ಪಲ್ಲಣಿಸು ಕುದುರೆಯಂ ಪೂಡು ತೇರಂ ಭಟರ್ ಕೈದುಗಳಂ ಕೈಕೊಳ್ಳಿಂ (ಜಗನ. ೬-೬೩)· ೩. (ಬಂಡಿಗಳಲ್ಲಿ ಸರಕುಗಳನ್ನು ಹೇರಿ)ಸಾಗಿಸು; ರವಾನಿಸು; ಕಳಿಸು : ನಿಚ್ಚಮೊಂದು ಮನೆಯೊಳೆರಡೆಮ್ಮೆ ಪೋರಿಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂಚುಮಾ[ನ]ದರ್ಕೆ ತಕ್ಕ ಪರಿಕರಮುಮನೊರ್ವ ಮಾಸಂ ಕೊಂಡು ಪೋಪು (ಪಂಚತಂ. ೩-೨೫ ಪ). ೪. (ಬಂಡಿಯ ಮೇಲೆ) ಸಾಗು ; ರವಾನೆಯಾಗು : ಹರಿಯಜಪುರಧ ಸರಕುಗಳ್ ಪೂಡಿದುವು ಶಿವಲೋಕಕೆ (ಶಿಪು. ೧೦-೩೦)· ೫. ಜೋಡಿಸು ; ಸೇರಿಸು : ಕರಿಯ ರದನಂಗಳ್ಗೆ ತಲೆಯೋಡ ಸೊರೆಗಟ್ಟಿ ನರದ ತಂತ್ರಿಯ ಪೂಡಿ ದಂಡಿಗೆವಿಡಿದು ಪಾಡಿದುವು ಕೆಲವು (ಕೃಷ್ಣಾ. ೨೨-೨೯)· ೬. ಬಿಲ್ಲಿಗೆ ಬಾಣವನ್ನು ತೊಡು ; ಶರಸಂಧಾನ ಮಾಡು : ಪೂಡು [ಶಿತ]ಶರಸಂತತಿಯಂ ಬಿಲ್ಲೊಳ್ (ಪಂಪಭಾ. ೩-೬೩) ; ಅರ್ಜುನನದ್ರಿ ಬಾಣಮಂ ಪೂಡಿದಂ (ಕೃಷ್ಣಾ. ೦೩-೦೩) : ಮದನಶಬರ ಸಂಯಮಿಮೃಗ ಗಳಿಗಾಗ ಕದುಬಿ ಪೂಡಿದ ಪೂಸರಕೆ ಪುದುಗಿದ ಮಿಂಟಿಗಳೆನೆ ಪರಡುಗಳತಿ ಮುದವನಿತ್ತುವು ನೋಳ್ಪರಿಗೆ (ಕಂಸಪ. ೯-೦೯). ೭. ತೊಡಿಸು ; ಅಳವಡಿಸು : ಕುಳಿಂದನಂ ದಂಡಿಸಿದನಾ ದುಷ್ಟಬುದ್ಧಿ . . . ಸೆಱೆಮನೆಗಿಕ್ಕಿ ನಿಗಳಮಂ ಕಾಲ್ಗೆ ಪೂಡಿ (ಕೃಷ್ಣಾ. ೩೦-೨೬)· ೮. (ಆಟ, ಕೆಲಸ ಮುಂತಾದುವನ್ನು) ಹಮ್ಮಿಕೊಳ್ಳು : ಪಿಂಗಾಕ್ಷನಕ್ಷಕ್ರೀಡೆಯಂ ಶಕುನಿಯೊಳ್ ಸಮಕಟ್ಟಿ ಪೂಡಲ್ಕೆಟ್ಟು (ಪಂಪಭಾ. ೬-೬೯ಪ). ೯. ತೊಡಗು ; ಮೊದಲಾಗು ; ಆರಂಭವಾಗು : ಪೂಡಿದುದು ಕರ್ಕಶದ ಕಾಳೆಗಂ ಸವ್ಯಸಾಚಿಗೆ ಬಭ್ರುವಾಹನನ ಕೂಡೆ (ಕೃಷ್ಣಾ. ೦೭-೭೫)· ೧೦. ಉಂಟುಮಾಡು ; ಆಗಿಸು : ಕಲೆಗಳ ವಿಲಾಸಮಂ ಪೂಡುತ್ತೆ ಕೂಡುತ್ತೆ ಕಣ್ಗೆಸೆದರೆಳವೆಣ್ಗಳು (ಕೃಷ್ಣಾ. ೩೦-೦೮)· ೧೧. ಗುರಿಯಿಡು ; ಚಾಚು : ನಿನ್ನನಿಲ್ಲಿ ಕೊಲ್ಲದೆ ಮಾಣೆನೆಂದು ಸುರಗಿಯಂ ಕಿಟ್ಟು ಗಂಟಲ್ಗೆ ಪೂಡು [ಪಾಣಾಂ. ಮೋದು]ವುದುಂ (ರಗಳೆಸ್ಯ. ೨-೦೨೯)· ೧೨. ಮುಚ್ಚು ; ಹಾಕು : ಕೂಡೆ ಗಜಬಜಮಾಯ್ತು ಮನೆಮನೆಯ ಕವಗಳಂ ಪೂಡಿದರ್ (ಶಿಪು. ೨೯-೨೫) ; ನಳಿನಾಳಿ...ಬಾಗಿಲ್ಗಳಂ ಪೂಡಿಕೊಳುತಿರ್ಪುವೆಂಬಂತೆ ಮುಗಿಯು ತಿರ್ದುವು (ಕೃಷ್ಣಾ. ೦೭-೨೦)· ೧೩. ಪ್ರಯೋಗಿಸು ; ಪ್ರಯೋಗ ಮಾಡು : ಸುಂಕಿಗನಂತಿರೆ ಪೂ[ಪಾಣಾಂ. ಹೂ]ಡಿ ರೇಖೆಯಂ ಭೋರೆನ ಲೊಡ್ಡಿ . . . ಧಾಪ್ಪೆನಿಸಲಾಡಿದರ್ವರಿಗೇನೊ ಕೌತುಕಂ (ಭಾಷ್ಯಸ್ತ್ರ. ೯-೦೬)· ಹೂಡು² : ೧. ಅರಿಷಟ್ಕವರ್ಮಮಂ ತಂದು ಹೂಡುವೆತ್ತಂ ಮಾಡಿ (ಇಗಳ. ಸಂ. ೯೬-೦೩) ; ಆ ರಥಾಗ್ರಕೆ ವೇದ ನಾಲುಂ ವಾರುವಂಗಳ ಹೂಡಿದರು (ಕುಣ್ಡಾಳ. ೬-೩). ೨. ಬಂಡಿ ಹೂಡುವರಂತೆ ತೋರಣಂ ಗಟ್ಟುಪರಂತೆ ಬಾಗಿಲ್ಕಾಡುವರಂತೆ . . . ಮುನ್ನಿನ ದರ್ಶನಮುಂ ನಿಶ್ಶಂಕೆ ಯುಮೆಂಬೆರಡುಂ ಲೇಸು ಮಾಡುವುವು (ರಗಳೆಸ್ಯ. ೨-೯) ; ಬಱೆದೆ ಸೈನ್ಯವ ಹೂಡಿ ಹಲಬರ ಕೊಲಿಸಿ ಬಲವಕ್ಕಾಡೆ ಕುರುಪತಿ ಕಟ್ಟುವಡೆಯನೆ ಕಳನ ಮಧ್ಯದಲಿ (ಕುಣ್ಡಾಳ. ೯-೨೬). ೩. ಸಾರಥಿಗಳನು ಹೂಡಿತಂತಕಪುರಿಗೆ ತೇಜಿ ಗಳಸುವ ಕಾಱೆದವು (ಕುಣ್ಡಾಳ. ೯-೯೦). ೫. "ಹೂಡು-ಯೋಜನೇ" (ಕಸುಣಾ) ; ಧರಣೀಪತಿ ನಿನ್ನಿಂದ ಕರ್ಣನ ತುರಗವಾಹ್ಯೆಯ ಚಮ್ಮಟಿಗೆಗೀ ಕರವು ಹೂಡು[ಪಾಣಾಂ. ಹೊದ್ದು]ವುದಾಯ್ತು(ಕುಣ್ಡಾಳ. ೩-೨೯) ; ಹೂಡಿದೆಲು ಮರಮುಟ್ಟು ಮಾಂಸದ ಗೋಡೆ . . . ನರವಿನ ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು (ಹರಿಶಾ. ೬೩) ; ಮುಖದಲ್ಲಿ ನಗೆಯನ್ನು ಹೂಡಿದ್ದರೂ ಕೈಗಳು ಕಂಪಿಸುತ್ತಿದ್ದುವು (ಪುಸೋಸಂ. ೦೩೩) ೬. ಮದನಂ ಪುಷ್ಪಬಾಣಂಗಳಂ ಹೂಡಿದ ಬಿಲ್ಲಂ ಪೊತ್ತು ಪಿಂದಂ ಬರೆ (ಗಿರಿಶ. ೯-೯೬) ; ಗಾಂಡೀವದಲಿ ಹೂಡಿದನು ಫಲುಗುಣ ಪಾಶುಪತಶರವ (ಕುಣ್ಡಾಕ್ರೀ. ೦೯-೩೯) ; ಹೂಡಿದ ಕೂರ್ಗಣೆಯಿಂದೆ ದೈತ್ಯನ ಮೆಯ್ಯ ತೋಡಿದನೈದಂಬಿನಲಿ (ಪೋಹಕ. ೩೯ ೦೯). ೭. ಎನ್ನ ಮನೆ ಎಂಬವಂಗೆ ಬ್ರಹ್ಮನಿಕ್ಕಿದ ಕೋಳವಾಯಿತ್ತು ಎನ್ನ ಸ್ತ್ರೀ ಎಂಬವಂಗೆ ವಿಷ್ಣುವಿಕ್ಕಿದ ಸಂಕಲೆ ಹೂಡಿತ್ತು (ಪನ್ನವ. ೪. ೨೯೩-೩೩೦); ಒಂಭತ್ತು ಬಾಗಿಲ ಕದವನಿಕ್ಕಿ ಬಲಿದು ಬೀಗವ ಹೂಡಿ ನವಸಾಸಿರ ಮಂದಿಯ ಕೊಂದುಳಿದನು ಗುಹೇಶ್ವರ (ಅಪಸಂ. ೦೦೯-೩೯). ೮. ತಪ್ಪದೆ ಬಾಲಕೇಳಿಯೊಳು ಮೇಗುಲುಗುಲುಗುಪ್ಪಂಡೆಯ ಹೂಡಿದಂತೆ ಒಪ್ಪುವಡೆದ ಹಿಮದಿಂಡೆಗಳೆಸೆದುವು (ಪೋಹಕ. ೬.೩೦); ಮಕ್ಕಳು . . . ಹೊಸ ಹೊಸ ಕೆಲಸಗಳನ್ನು ತಾವೆ ಹೂಡಬಯಸುವಂತೆ ಮಾಡಬೇಕು (ಕ್ರಿಯಾಶಿ. ೯)· ೯. ಚತುರ್ವಿಧ ಸೃಷ್ಟಿಯೊಡ್ಡಣೆ ನಿಗಮಮತದಲಿ ಹೂಡಿತು(ಕುಣ್ಡಾಅ. ೦೯-೩೫). ೧೦. ಲಜ್ಜೆಗೆ ನೆಲೆಯ ಮಾಡಿದೆ ಹೂಡಿದ್ದೆ ದುರಿಯಶವನೆನಗೆ (ಕುಣ್ಡಾಕ್ರೀ. ೬-೩೯). ೧೧. ಕೃಪಾಣವ ಜಡಿದು ಗಂಟಲ ಬಳಿಗೆ ಹೂಡಿದನರಿವುದಕೆ ಕೊರಳ (ಕುಣ್ಡಾಕ್ರೀ. ೦೯-೦೦) ; ದೆಸೆಯಿಂದೆ ದೆಸೆಯಾವ ತಾಣಕ್ಕೆ ಹೂಡಿದ ಹೊಸಮಸೆವೆತ್ತ ಖಡ್ಗದಲಿ ಕುಸಿವೆತ್ತು ಖಳನ ಮಸ್ತಕವ ಕೇಳ್ದಡಿಸಿ ರಂಜಿಸೆ ಕಾಮದೇವ ನಿಟ್ಟಿಸಿದ (ಪೋಹಕ. ೦೦-೩೩). ೧೨. ಜಗದರಾಜಕ ವಾಯ್ತು ಕುಮುದಾಳಿಗಳ ಬಾಗಿಲು ಹೂಡಿದವು ಸೂಱೆಗರು ಕವಿದುದು ತುಂಟಿಗಳು ಸಿರಿವಂತರರಮನೆಯ (ಕುಣ್ಡಾಕ್ರೀ. ೦-೯೩)· ೧೩. ಶಿವ ಶರಣೆಂಬ ದಂಡೆಯ ಹೂಡಿ ಗಣಮೇಳಾಪವೆಂಬಲಗಿನಿಂದಿಱಿವೆ (ಪಸಪ. ೬೯೯) ; ತೋಳ ಮೊದಲ ಚಪ್ಪಳಿಗೊಳಿಸಿ ದಂಡೆಯ ಹೂಡಿ ನಿಂದಿರುವೊಪ್ಪವನೇನ ಬಣ್ಣಿಪೆನು (ಪೋಹಕ. ೦೨-೬೯). ೧೪. (ಬಲೆಯನ್ನು) ಬೀಸು ; ಒಡ್ಡು : ಸಿಲುಕುವವು ಮೃಗಪಕ್ಷಿ ಹೂಡಿದ ಬಲೆಗಳಲಿ ಕಾಡಾನೆ ಬೀಸಿದ ಬಲೆಯ ಕೊಂಬುದೆ (ಕುಣ್ಡಾಳ. ೦೩-೦೯). ೧೫. ಆರಂಭಿಸು ; ಉಪಕ್ರಮಿಸು : ಖಂಡೇರಾಯನು ಮುಂದಾಗಿ ಕದನವನ್ನು ಹೂಡಿ ಹೈದರನನ್ನು ಚೆನ್ನಾಗಿ ಸೋಲಿಸಿಬಿಟ್ಟನು (ಟಿಪೆ. ೯೦) ; ಅಂತೂ ಮನೆ ಮಾಡಿಯಾಯಿತು—ಸಂಸಾರ ಹೂಡಿದೆವು (ಕೂಪಸಂ. ೦೦). ೧೬. ರಚಿಸು ; ನಿರ್ಮಾಣಮಾಡು : ಕೊಳನ ತಡಿಯಲಿ ಹೂಡಿದನು ಶರವಳಯವಲಿ ಚಪ್ಪರವನು (ಕುಣ್ಡಾಕ್ರೀ. ೦೦-೩೩) ; ಹೂಡುವ ಜಗವನೊಂದೆವೆಯಾಟದೆ ಬಯಲ್ಮಾಡುವ ಮಾರಳಿ ಸೃಷ್ಟಿಸುವ . . . ಒಳ ಹೊಱಗಾಡುವ ಚೇಷ್ಟಕನೀತ (ಪೋಹಕ. ೦೩-೭೯) ; ತ್ರಿಪುಟಿಯೆಂಬ ಬಲೆಯ ಹೂಡಿ . . . ಮಹಾಜ್ಞಾನವೆಂಬ ಪಾಶವ ಮಾಡಿ (ಅಪಂಡೇ. ೩೦೯-೦೨). ೧೭. ಉಳು ; ನೇಗಿಲು ಹೊಡೆ : ಗೌಡಬಸವಪ್ಪಯಂಬವನು ಗದ್ದೆ ಹೂಡಿಕೊಂಡು ಕೃಷಿರೂಪದಿಂದ ಕಾಲಕ್ಷೇಪ ಮಾಡಿಕೊಂಡು (ಕೆಳಂ. ೦-೩); ನಿನ್ನಪ್ಪನೂ ನಾನೂ ಹೂಡುತ್ತೇವೆ ; ನಡುತ್ತೇವೆ (ಸ್ವಪ್ನಹೂ. ೩) ; ಫಲ ನೋಡದೆ ಕೆಟ್ಟಿತು, ಹೊಲ ಹೂಡದೆ ಕೆಟ್ಟಿತು (ಗಾಡಿ)· ೧೮. ಊರು ; ನೆಡು : ಹುರುಳುಗೆಡದೆಜ್ಜಾಡಿದರು ಫಲುಗುಣನ ರಥದಲಿ ಹೂಡಿದರು ಹೊಗರಂಬುಗಳನುಟ್ಟೆದ್ದು ತಮತಮಗೆ (ಕುಣ್ಡಾಕ್ರೀ. ೦-೬೬) ; ನೆಲದೊಳ ಗೊತ್ತಿ ಹೂಡಿದ ಕೈಗೋಲು ಹೊತ್ತು ಬೆಳ್ಳರೆಕೂದಲಾ ಮುದಿಸೂಳೆಯರ ಮೊತ್ತಮೊಪ್ಪಿದುದು (ಕುಸಂ. ೬-೦೯೦)· ೧೯. ಸಿದ್ಧಗೊಳ್ಳು ; ಅಣಿಯಾಗು : ನಿಮಿಷೆ ಹೂಡಿದವು ತೇರುಗಳು (ಕುಣ್ಡಾಕ್ರೀ. ೨-೦೯). ೨೦. (ಬ್ಯಾಂಕು, ವ್ಯಾಪಾರ, ವ್ಯವಹಾರ ಮೊದಲಾದುವುಗಳಲ್ಲಿ ಹಣವನ್ನು) ತೊಡಗಿಸು ; ವಿನಿಯೋಗಿಸು : ಹಣವಿರುವವರು ದೊಡ್ಡ ಕೆಲಸಗಳಿಗೆ ಹಣ ಹೂಡುವರು (ಹಣಪ್ರ. ೩).

[ದೇ.॥ ತಮಿ. ಮಲ. ಪೂಟ್ಟು]

ಪೂಡೆ (ನಾ). ಒಂದು ಬಗೆಯ ಖಾದ್ಯ ; ೯ ಅಕ್ಕಿಯ ನುಚ್ಚಿನಂತೆ ಸಣ್ಣಗೆ ಕತ್ತರಿಸಿದ ಬದನೆಕಾಯಿಯ ಚೂರುಗಳನ್ನು ಬೇರೆ ಬೇರೆ ಭಾಗ ಮಾಡಿ, ಒಂದೊಂದಕ್ಕೆ ಒಂದೊಂದು ಬಗೆಯ ಸಂಬಾರವನ್ನು ಸೇರಿಸಿ, ಚೆನ್ನಾಗಿ ಬೆರಸಿ, ಒಗ್ಗರಣೆ ಕೊಟ್ಟು ಒಂದೊಂದಕ್ಕೂ ಒಂದೊಂದು ಬಗೆಯ ಸುವಾಸನೆಯನ್ನು ಕೊಟ್ಟು ಬಿಸಿ ಆರದಂತೆ ಅರಿಸಿನದ ತರಗೆಲೆಯಲ್ಲಿ ಪ್ರತ್ಯೇಕವಾಗಿ ಕಟ್ಟಿ ಇರಿಸಿದುದು : ಕಡಿಯಕ್ಕಿಯಂತೆ ಕತ್ತರಿಸಿ ಬದನೆಯ ಕಾಯ . . . ಅರಿಸಿನದ ತಱಗಿಂದವಂ ಕಟ್ಟಿ ಬಿಸಿಯಾಱದಂತಿರಿಸಲವು ಪೂಡೆವೆಸರಂ ಪಡೆದವು (ಸೂಪಶಾ. ೯-೨೩).

[< ಪೂಡು ?]

ಪೂಣ್$_1$, ಹೂಣು$_1$ (ಕ್ರಿ). ೧. ಹೂಡು ; ತೊಡು : ಕಬ್ಬುವಿಲ್ ತುಂಬಿವೆದೆ ಪೂಸರಲ್ ಪೂಣ್ದಸಲ್ನಿಬ್ಬರಮಿದೆಂದು ಮದನಂ ಮಾಲೆಗಾರ್ತಿಯರ ಹುಬ್ಬೆಂಬ ಚಾಪಮಂ . . . ಅಳವಡಿಸಿಕೊಂಡು ಬಿಡದಬ್ಬರಿಸಿ . . . ಕೆಡಪುತಿಹನಲ್ಲಿ ವಿಟರಕ್ಷಿಮೃಗಕುಲವನು (ಶೈಪುಶಾ. ೬-೦೭). ೨. ಹೊಂದಿಸು ; ಅನ್ವಯಂಗೊಳಿಸು : ರಸಪ್ರಸರದೊಳು ಸವಿ ಸಂಗಳಿಪಂತೆ ಪೂಣ್ದು ಪೇಟ್ವುದು ಕೃತಿಯಂ (ಕುಸುಮಾ. ೦-೩). ೩. ಅಳವಡು ; ಹೊಂದಿಕೆಯಾಗು ; ಕೂಡಿಕೊಂಡಿರು : ಜಾಣ್ ಮನಂಗೊಳಿಸೆ ಪೂಣ್ದೆರದರ್ಥಕೃತಿಪ್ರಬಂಧಮಂ ಕಿವಿಗಿನಿದಾಗೆ . . . ಪೇಟಲೊಡರ್ಚಿದೆನೀ ಪ್ರಬಂಧಮಂ (ಧಂತೋಂಶಾ. ೦-೦೧) ; ಇಟ್ಟ ನವಚಂದನದ ಬೊಟ್ಟಳವಟ್ಟಿರಲು ಪೂಣ್ದೆಣ್ಣೆಗಂಟಿನ ತೊಟ್ಟ ಱವಕೆಯ . . . ಉಟ್ಟ ಸಾಲೆಯ ಮೇಲುದೊಪ್ಪಿರೆ ದಿಟ್ಟೆಯೊರ್ವಳು ನಿಂದಳಂಗಜನಲಗಿನಂದದಲಿ (ಜೀವಂಶ. ೦೭-೩೩). ೪. ಪಡೆ ; ಹೊಂದು : ಆ ಪೇಚರೇಂದ್ರಂಗಮೇಂ ಬೆರಲಿಂದ ಗ್ಗಳಮಿಾವ ಕಾವ ಗುಣಮಂ ಪೂಣ್ದಿಂದಭೂಪಾಳಕ (ಎಇ. XXVII, ೬೨-೩೦ ; 1114) ; ಬಂದುದತಿಮೃದುಗತಿಯಿಂ ಪೂಣ್ದೆಸೆವ ... ಬಟ್ಟದೊಡೆಗಳಬಲಾನೀಕಂ (ಜಗವಿ. ೯-೦೦೮). ೫. ತೊಡಗಿಸು ; ಯೋಜಿಸು:ಬಲಸ್ಥನೊಳ್ ಬಲಮನೆ ಪೂಣ್ವುದುಂ [ಪಾಕಾಂ. ಮಾಟ್ಟುದುಂ, ಮಾಣ್ಬುದುಂ] ಪರಿಭವಕ್ಕೆ ಮೊದಲ್ (ಆದಿಪು. ೦೨-೦೦೩). ೬. ಉಂಟುಮಾಡು ; ಆಗಿಸು : ಪ್ರಭು ಕಿಱಿಯಾತನಂ ನಿಱಿಸಿ ರಾಜ್ಯದೊಳೆನ್ನನವಸ್ತು ಮಾಡಿ ಪೂಣ್ದಭಿಭವಮಿಾಗಳೀ ಭವದೊಳಿಂತಿದು ನೀಗದು (ಆದಿಪು. ೨-೩೯). ೭. ಸುತ್ತುಗಟ್ಟು ; ಆವರಿಸು ; ಮುಚ್ಚು ; ಕವಿ : ಮೊನೆಯಂಬುಗಳೊಳೆ ಪೂಣ್ದಪನನಿಬರುಮಂ ಕಿಱಿದು ಬೇಗದಿಂ ಹರಿಗನವರ್ಕೆನಗೆಡೆವೇಟ್ಟುಮೆ ಎಂಬವೊಲನಿಬರುಮಂ ಪೂಣ್ದನ[ತನು] ನನೆಯಂಬುಗಳಿಂ (ಪಂಪಶಾ. ೩-೩೨) ; ಪಾರ್ಥಂ . . . ಶಲ್ಯನ ಪದಾತಿಯಂ ಪೂಣ್ದನುಗ್ರಶರಸಂಹತಿಯಿಂ (ಮಹಾವೇ. ೦೨-೬೨). ೮. ಉಪಕ್ರಮವಾಗು ; ಆರಂಭವಾಗು ; ತೊಡಗು : ತಪನಸುತನುದನ ಸುಧನ್ವರ್ಗೆ ಕಾಳೆಗಂ ಪೂಣ್ದುದು (ಶೈಪುಶಾ. ೦೨ ಸೂಪನ). ೯. ಒಪ್ಪಿಕೊಳ್ಳು ; ಸಮ್ಮತಿಸು ; ಒಡಂಬಡು : ಇಱಿಯಲ್ಲೇಡೆಮ್ಮನೆಮ್ಮುಳ್ಳುದಂ ನೆಱೆ ಕೊಂಡೆಮ್ಮಯ ಬಾಟ್ವೆಯೊಳ್ ನಿಱಿಸುವಂ ನೀನೆಂದು ತಂದಿತ್ತು ಕೆಯ್ಸೆಱೆಯಂ ಕೊಟ್ಟಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆಱಗಿತ್ತಂತರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ (ಪಂಪಶಾ. ೬-೩೦); ಎನ್ನಾಳ್ದನಪ್ಪ ಮೃಗಾಧಿರಾಜಂ ಪಿಂಗಳಕನಂ ಕಾಣದೆಯುಂ ಆಳ್ತನಕ್ಕೆ ಪೂಣದೆಯುಮಿಲ್ಲಿ [ಪಾಕಾಂ. ಪೂಣ್ದೆಲ್ಲಿಯುಂ] ನಿನ್ನ ಬಾಟ್ವುಪಾಯಮಾವುದು (ಪಂಪಕಂ. ೪೯-೦೩); ನಗರನಾಯಕನುನ್ನತಿ ತನ್ನಂ ಮುನ್ನಲೆಯುತ್ತಿರೆ ಮಂದರಂ. . . ಸೇವಾವೃತ್ತಿಗೆ ಪೂಣ್ದು ನಿತಾಂತಮೋಲಗಿಸಲಟ್ಟಿದ ಸಾನುವದೆತ್ತಂ ಬಂದೆಳಸಿರ್ಪುದೆಂಬಿನಂ ಸೊಗಯಿಪ್ಪುದು ಪೊಮ್ಮದಿಲ್ (ಪುಷ್ಪಪು. ೨-೯೦). ೧೦. (ಕೆಲಸ, ವ್ರತ, ನಿಯಮ ಮೊದಲಾದುವನ್ನು) ಕೈಕೊಳ್ಳು ; ಸ್ವೀಕರಿಸು : ಇರು ಮೌನವ್ರತಮಂ ಪೂಣ್ದ[ಪಾಕಾಂ. ಕೊಂಡ, ತಳೆದ] ರಣ್ಯದೊಳಗಾರ್ಗೆ ಮೆಱೆದಪ್ಪೆ ನಿನ್ನೆಸೆಮಿಂಚರಮಂ ಕಳಕೋಕಿಳ (ಆದಿಪು. ೦೦-೦೩೨) ; ಬೆಸನೆಂದು ಪೂಣ್ದು ದೇವರ ಬೆಸನಂ ಸುಕುಮಾರರೆನಿಪ ರಾಜಕುಮಾರರ್ ಬೆಸದಪ್ಪಿದರ್ (ಆಜಪು. ೦೦-೩೨); ಆ ವಿಪಶ್ಚಿತ್ತವಂ. . . ಮಾಸತ್ರಯಂಬರಂ ಪ್ರಾಯೋಪಗಮನವಿಧಿಯಂ ಪೂಣ್ದು(ನೇಮಿಪು. ೨-೬೪ವ) ೧೧. ದೃಢವಾಗು ; ಸ್ಥಿರವಾಗು : ಪರಭೂಪಾಳಕರುರ್ಕಡಂಗೆ ಪಣರ್ವ್ವರ್ [ತ]ಮ್ಮಿರ್ಕ್ಕಿಯೋಳ್ ಸುರ್ಕ್ಕಿ ಮಯ್ಗರೆಯಲು ಗಣ್ದಿನ ತೊಣ್ದನಂಕದಧಟಲ್ಪೊಂಕ್ಕಾಳ್ತನಂಬೂಣೆ ದಿಗ್ಭರಿತಾತ್ಮೋಜ್ವಳಕೀರ್ತಿ ಪರ್ವ್ವತಿರೆ ಲೋಕಾಲೋಕಮಮ್ (ಜೈಆಸಿ. XIII, ೨೬-೬೩; 1090). ೧೨. ಆಣೆಮಾಡು; ಪ್ರತಿಜ್ಞೆಮಾಡು; ಶಪಥಮಾಡು: "ಪೂಣ್–ಪ್ರತಿಜ್ಞಾಯಾಂ" (ಶಪಃಧಾ) ; ಪಾಯ್ದು ಮಾಗಧನನೀಗಳೆ ಕಟ್ಟುವೆನಿಲ್ಲಿ ಪೂಣ್ದು ನಿಲ್ವನಿತುವರಂ ಸುರುಗಹನಮೇ (ಆದಿಪು. ೦೨-೭೦); ಸಮಸ್ತಲೋಕಮಱಿದಂತಿರೆ ಪೂಣ್ದೆನಗಾಗದಂಗ ಜೋತ್ಪತ್ತಿಸುಖಕ್ಕೆ ಸೋಲಲ್ (ಪಂಪಶಾ. ೦-೭೩) ; ಕುರುನಂದನರು ಕೊಂದು ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂಣ್ದೆರಡಂ ತೀರ್ಚಿದೆಂ (ಗದಾಯು. ೦-೬೯). ೧೩. ವಚನ ಕೊಡು ; ಭಾಷೆ ಕೊಡು; ಮಾತು ಕೊಡು: ಉಱಿಯಲಾಗದು ನೆಟ್ಟನೆ ಪೂಣ್ದುದಂ ಪುಸಿವರಾಗಿರದೆ ಮಾನಸರ್ (ಕವಿರಾ. ೦-೧೩೩); ಎನ್ನ ಬೇಡಿದುದನೀವೊಡೆ ನಿನ್ನಂ ಕಾವೆನೆಂದೊಡಾಕೆಯುಮಿಾವೆನೆಂದು ಪೂಣ್ದೊಡೆ (ವಡ್ಡಾರಾ. ೦೩-೨೩) ; ಇಂತಪ್ಪ ಬನಮನಿದನಿ[ನ್ನೆ]ಂತನಲನನೂಡಲೆಂದು ಪೂಣ್ದಯ್ ಮುಂ ಪೂಣ್ದಂತೂಡು (ಪಂಪಶಾ. ೩-೬೩) ; ಪೂಣ್ದುದು ವಿಫಳಮೆನಿಸವೇ ನೀತಿವಪ್ಪದಿಂ ನೆಗಟ್ಗೆ ಬಲ್ಲವೋಲ್ ನಿನ್ನರಸಂ (ವರ್ಧಪು. ೬-೬೦). ೧೪. ನಿರ್ಧಾರಮಾಡು; ನಿರ್ಣಯಿಸು: ತನುವಂ ತೆಯ್ದಪ್ಪಳಕ್ಕಂ ಬ್ರತದೊಳೆನುತೆ ಕನ್ಯಾಬ್ರತಕ್ಕಂತೆ ಪೂಣ್ದೆರ್ದೆಂ (ಕಾಮಂಶಾ. ೩೯) ; ಈ ಕುಮಾರನಖಿಳೋರ್ವಿಗದೊರ್ವನೆ ವಲ್ಲಭಂ ಪ್ರತಾಪದೆ ಪೆಱನಿಲ್ಲೆನುತ್ತೆ ನೆಱೆ ಪೂಣ್ದು ವಿರಾಜಿಪ ರಾಜ್ಯಲಕ್ಷ್ಮಿ ರಾಗದೆ ಬೆರಲೆತ್ತಿದಂತೆ . . . ನವೀನಚೀನಚೀಲದ ಗುಡಿ ಕಣ್ಗೆವಂದುದು (ಕುಸುಮಾ. ೬-೭೭) ; ಬರ್ದಿಲದ ನಾಡ ಕಟ್ಟಕಡೆ ಬೀದಿಯ ಹಾದಿಯೊಳೊರ್ಮೆ ಸಲ್ವೆವೆಂದೆರ್ದೆಯೊಳೆ ಪೂಣ್ದವರ್ ಪಡದ ಪಾಡುಗಳಾವುದುಮಿಲ್ಲ (ಜಕವಿ. ೦-೬೯). ಹೂಣು$_1$: ೧. ಅಲಗು ಮುಱಿಯಿತ್ತು ಗಱಿ ಜಾಱಿತ್ತು ನಾರಿಯ ಹೂಣುವ ಹಿಳುಕು ಹೊಳ್ಳಾಯಿತ್ತು ಗೊಹೇಶ್ವರನ ಶರಣ ಅಲ್ಲಮ ಹಿಡಿದ ಬಿಲ್ಲು ಮುಱಿಯಿತ್ತು (ಸರ್ವಸ. ೩೯-೦೬೯). ೨. ವೀಣೆಯ ನುಡಿಸುತ ಪಾಡಿದರಿವಳೀಗ ವೀಣೆಗಳೆರಡನೊಂದಾಗಿ ಹೂಣಿ ನುಡಿಸುತ್ತಿದ್ದಳೆಂಬೊಲಿಹುದು (ಭರತ. ೦೦-೭) ; ಅಣವಾದಿಯೊಳಿರಲು ಹೂಣಿ ಲಿಂಗದಿ ಮನವ ಕೇಣವಿಡದಿಹನು ವಿರತಿಯಲಿ ದೇಹದಿಹ ಪ್ರಾಣಲಿಂಗಿಯು ತಾ (ಸರ್ವಜ್ಞ. ೦೩೬). ೧೪. ಹೂಣೆ ಛಾಂದಸರ ನಟ್ಟದೆ ಕಾಮನೆಡೆಗೆ ಪ್ರವೀಣ ದಕ್ಷಿಣನನಟ್ಟಿದನು (ಭರತ. ೪೭-೬೦). ೧೫. ಒದಗು; ಉಂಟಾಗು : ಅತಿ ಚಿಂತಾತುರ ಹೂಣಿದುದಾ ಕಾಮಿನಿಗೆ (ಅಂಜಪ. ೬-೨); ವಿಣಾಕ್ಷಿಯರನೆಣಿಸಿಯೆದೆಗೆಟ್ಟ ಮೋಹಿಗಳು . . . ಉರ್ವೀತಳದೊಳಪಕೀರ್ತಿ ಹೂಣಿ ಹಬ್ಬುವುದೆಂಬುದಂ ನೆನೆಯರು (ಸಮ್ಯಕೌ. ೯-೨೨). ೧೬. ಎದುರಿಸು; ಹೋರಾಡು : ಹೂಣಿ ಹಿಡಿದು ಮೋಹಮಲ್ಲನ ಕೆಡಹಿ . . . ಗೋಣ ಮುಱಿದು ಹಾಕಿದ ಬಲ್ಲಿದನ ನಿರ್ವಾಣಪೂಜೆಯ ಮಾಡಿದರು (ಶ್ರೀಪಾಲ. ೦೯-೯೩). ೧೭. ಹೇರು ; ಹೊರಿಸು : ಹೂಣಿದ ಹೊಱೆ ಜಾಱಿದಂತಾದುದೆನಗೆ (ಭರತ. ೬-೬).

ಪೂಣೆ ಪುಗು, ಪೂಣೆ ಪೊಗು, ಹೂಣ ಹೊಗು, ಹೂಣೆ ಹೊಗು, ಹೂಣೆ ಹೊಗು, ಹೂಣೆಯ ಹೊಗು = ೧ ಸುತ್ತುಗಟ್ಟಿ ದಾಳಿ ಮಾಡು.— ರಭಸದಿಂದ ನುಗ್ಗು : ಅರಾತಿಕಾಳಾನಳಂ . . . ತಾನುಂ ಭೀಮಸೇನನುಂ ದಿವ್ಯಶರಾಸನಂಗಳಂ, ಕೊಂಡು ಪೂಣೆ ಪುಗುವರಾತಿಬಲಮಂ ಮಾರ್ಕೊಂಡು ತೆಗೆನೆಱೆದಿಸೆ (ಪಂಪಶಾ. ೩-೬೯ ವ); ಹೂಣಿ ಹೊಕ್ಕನು ಹಿಡಿದು ವೈರಿಕ್ಷೋಣಿಪನ ತಱುಬಿದನು (ಕುಮ್ಮಾಬ್ರೋ. ೯-೬); "ಹೂಣೆ

ಹೊಕ್ಕೆಂದಮೆನೆ ಸತ್ರಾಣದಿನೊಳಪೊಕ್ಕನೆಂಬುದು" (ಶಶಾಸ. ೨೦೭); ಮಗ ನಳಲು ಮಿಗೆ ಹೂಣೆ ಹೊಕ್ಕನು ಮಗುಳಲಱಿಯನು ತಮ್ಮನೆನುತ ವನೀಶ ಚುಂಬಿಸಿದ (ಶಾಪ್ರೂ. ೦೨೦); ಪ್ರಾಣನಾಯಕ ನಿನ್ನ ಸವಿನುಡಿ ಯಲ್ಲದೆ ವೀಣಾದಿಗಾನರವಗಳು ಸಾಣೆವಿಡಿದ ಶಲ್ಲಯಂತೆ ಕಿವಿಯೊಳು ಹೂಣೆ ಹೊಕ್ಕುವು ನಿನ್ನಾಣೆ (ಶಾಪ. ೯-೦೬೦). ೨. ಪೂರ್ತಿಯಾಗಿ ಒಳಪಡು (?) : ನೋಡಿದ ಮೊಡರೆಲ್ಲಂ ಕಾಮದೇವನೆಂಬ ಬೇಂಟೆ ಕಾಱಂಗೊಡ್ಡಿದ ಪುಲ್ಲೆಗಳಂತರಲಂಬಿನ ಮೊನೆಗೆ ಪೂಣೆ ಪೊಕ್ಕು ಪಕ್ಕಾಗಿರೆ (ಶಂಪಭಾ. ೪-೩೯ ಪ). ೩. ಒಂದಾಗು ; ತಲ್ಲೀನವಾಗು ; ತನ್ಮಯ ವಾಗು : ಆವುದು ನಿಮಿತ್ತವಾದೊಡಂ ಬ್ರಹ್ಮದೊಳು ಹೂಣ ಹೊಗಲಾ ಬ್ರಹ್ಮವಪ್ಪನು (ಪಂಚತಂ. ೩ ೬-೨೦); ಚಿನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಹೂಣೆ ಹೊಕ್ಕು ಬದುಕು ಕಂಡಾ ಮನವೆ (ಪಾಶಾಸೇ. ೪. ೩೦-೭೯); ಕಾಣಲಿಕೆ ಬಯಲೆಂಬ ಮೂರುತಿಯು ತಾನಲ್ಲ ಹೂಣೆ ಹೊಕ್ಕಿರಡಳಿದ ಲಿಂಗೈಕ್ಯನು (ಶಿಪಗೀ. ೫೮-೨೮೬); ಚತುರ್ವಿಧ ಫಲ ಪದಂಗಳಲ್ಲಿ ಹೂಣೆಯ ಹೊಗದೆ ಸುಖದುಃಖ ಆತುರಂಗಳಲ್ಲಿ ಭೇದಿಸಿ ಕೊಳ್ಳದೆ (ಸಗಸೂ. ೪. ೬೩೩-೧೩)· ೪. (?) : ಸಲಪ್ರಾಣಿಗಳಲತ್ಯಧಿಕ ನಾಗಿರುತಿರ್ದು ಜಡತೆಯಲಿ ಕೇಣವನು ಕೈಕೊಂಡು . . . ಮರುಳಹ ಹೂಹೆ [ಣೆ] ಹೊಕ್ಕಿರುತಿರ್ಪ ಪರಿಯೇನು (ಪಭಾಗ. ೦೦-೦೩-೯)·

[ದೇ.॥ ತಮಿ. ಪೂಣ್, ಪೂಣಿ ; ಮಲ. ಪೂಣ್ ತೆಲು. ಪೂನು]

ಪೂಣ್$_2$ 'ಪೂಟ್' ನೋ.

ಪೂಣ್$_3$, ಹೂಣೆ (ನಾ). ೧. ಪ್ರತಿಜ್ಞೆ; ಶಪಥ : "ಪೂಣೆಂದು ಪ್ರತಿಜ್ಞೆ" (ಶಕಾಸಾ. ೩೯-೨೮೦)· **ಹೂಣೆ :** ೨. ಮಾತು; ವಚನ; ನುಡಿ : ಹೂಣೆಯೇಕವರೊಡನೆ ಸೆಣಸಿನ ಸಾಣೆಯಿಕ್ಕುವ ಮಸೆವ ಕದನವ ಕಾಣೆವೆಮ್ಮಱಿಕೆಯಲಿ . . . ಬಹೆವರಸ ನಿಮ್ಮಡಿಯಾಣೆಯೆಂದೊಡಬಡಿ ಸಿದರು (ಶಾಪ್ರಾಶ. ೬೦೨-೦೯-೨೩); ಶರಣಸಿಹ ಮರ್ತ್ಯವನು ಹರನ ಕೈಲಾಸವನು ಹಿರಿದು ಕಿರಿದಿನ ಹೂಣೆಯಿಂದೆ ಪ್ರಮಥರ್ಗೂಡಿ ಪರಿಕಿಸಲ್ ಬೇಕೆಂದು ನವಸೂತ್ರಧರ್ಮಚಿಂತಾಲಿನಿಂ ತೂಗಲೊಡನೆ (ಸ್ಮಶಾರ. ೩-೦೯)· ೩. (?) : ದಿನಗಳೆದು ದುರ್ವ್ಯಸನದಿಂ ಪಿರಿಯ ಹೂಣೆಯಂ ನೆನೆದು ... ಅಣ್ಣನಂ ನೋಯಿಪನುಜರ್ಗ ... ತಪ್ಪದೆಂದೆಂದಿಗುಂ ನರಕವು (ಶ್ರೀರಾಪು. ೯-೯೯); "ಹೂಣೆಯ-ತ್ಸ. ವೈಶೂನ್ಯ. ಹೊಟ್ಟೆಯ ಕಿಚ್ಚು" (ಶ್ರೀರಾಪು. ೬೯೫ ೨೭). [< ಪೂಣ್$_1$]

ಪೂಣೆಕೆ 'ಪೂಣ್ಕೆ' ನೋ.

ಪೂಣಿಗ, ಹೂಣಿಗ, ಹೂಣೆಗ (ನಾ). ೧. ಬಾಣವನ್ನು ಹೂಡುವವನು; ಬಿಲ್ಲುಗಾರ; ಧನುರ್ಧರ : ಎಚ್ಚು ಕಾದಿದುಮ ತಗುಳ್ದು ಬಿಲ್ವಡೆ ಪಡಲ್ವಡೆ ಮಾಣದೆ ನಿಂದು ಪೂಣಿಗರ್ (ಶಂಪ್ರಭಾ. ೦೦-೬೮); ಪೂಣಿಗರೆನಿಸಿದರಱಿಕೆಯ ಪ್ರಾಣದ ಬಿಲ್ದೆಗೆದ ಬಲ್ಮೆಯಂತಾಱುವವೋಲ್ ಬಾಣಾ ನೆಱೆಗೊಳೆ ತೆಗೆದರ್ ಪ್ರಾಣಮನವಯವದಿನೆಚ್ಚು ರಿಪುನೃಪಬಲದೊಳ್ (ಪಾರ್ಶ್ವಭು. ೩-೦೦೮); ಲವಣಾಂತಕನಂತಕನಂತೆ ಕನಲ್ದು ತೇರನೇಱಿ ಬಂದು ಕಟ್ಟಿದಿರ ಪೂಣಿಗನು ಕೆಂಡು (ರಾಪಶಾಸ್ತ್ರ. ೦೩೭-೬). ೨. ಹೋರಾಟಗಾರ; ಸಾಹಸಿ ; ಶೂರ : ಪಿರಿಯರಂ ಪೂಣಿಗರಂ ಬಿರುದರನದಟಿನೊಳುಬ್ಬರಮುರಿವರ ನಾಯ್ದಱಸಿಕೊಂಡುವರಿಗನ ಕಣಿಗಳ್ (ಶಂಪಭಾ. ೦೨-೦೮೯); ಪೂಣಿಗರಂ [ತ]ಜೇಯರಧಟರ್ ಪುಗ್ಗಾಯಿಲರ್ ಜೆಟ್ಟಿಗರ್ ಚಲಮಂ ಪೂಣ್ದೆದರಳ್ಕಿ . . . ಶರಣೆಂದು ಬಂದೆಱಗಿದರ್ ಚಕ್ರೇಶ ಪಾದಂಗಳೊಳ್ (ಪರ್ಶಾಪ್ರ. ೯-೬೦). ೩. ಹಟಮಾರಿ ; ಛಲವಾದಿ ; ತನ್ನ ರೀತಿಯೇ ಸರಿಯೆಂದು ವಾದಿಸುವವನು : ಜಾಣರ್ಕಳಲ್ಲದವರುಂ ಪೂಣಿಗರಱಿಯದೆಯುಮಱಿಪ ವೋಲವಗಱಿದಾ ತಾಣಮನಿನಿಸೆಡವೆತ್ತೊಡೆ ಮಾಣದೆ ಪಿಡಿಧಧನೆ ಕೃತಿಗಳಂ ಕೆಡೆನುಡಿವರ್ (ಕಾಶಾ. ೦-೯೦). ೪. ರಚಿಸುವವನು ; ನಿರ್ಮಾಪಕ : ಕರ್ತೃ : ಕಾಣನೇಗೆಯ್ದುಂ ತನ್ನ ದೋಷಮುಂ ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯುಂ ಪೂಣಿಗನಾದುದಱಿಂ ಪೆಱರಿಂ ಜಾಣರಿನೋದಿಸಿ ಪೇಳ್ವುದು ಕಬ್ಬಮಂ (ಶಪಾ. ೦-೯೩). **ಹೂಣಿಗ :** ೧. ಅರರೆ ಕವಿಕವಿದಂಬು ಕಡಿದವು . . . ಹೊಡೆಗಡೆಹಿದವು ಹೊಕ್ಕೆಸೆವ ಹೂಣಿಗರ (ಶಾಪ್ರಾಶೀ. ೪-೦೩); ದ್ರೋಣ ಭೀಷ್ಮರ ವೋಲು ನೆಟ್ಟನೆ ಹೂಣಿಗರು ರಾಧೇಯ ಮಾದ್ರಕ್ಷೋಣಪತಿಯೆಂದೆಂಬ ನುಡಿಯುಂಟೆರಡು ಥಟ್ಟನಲಿ (ಶಾಪ್ರಾಶ. ೩ ೦೬)· ೨. "ಹೂಣಿಗನೆನೆ ಸಾಹಸಿಗಂ" (ಶಾಸಂ. ೨೬); ಸಾಣೆಗಂಡಲಗಿವನು ಸಮರಕೆ ಹೂಣಿಗನು (ಶಾಪ್ರಾಶ. ೦೬-೨೧) ; ಆತನುರವಣಿಸೆ ಹೂಣಿಗರು ನೆರೆ ಮುಸುಕಿತು (ಶಸಂಗಾ. ೫೫-೯೯). ೩. ಜಾಣೆ ಗುಡ್ಡವ್ವೆಗಳು ವೀರಂ ಹೂಣಿಗಂ ಹೆಂದಯ್ಯನೋವದೆ ಕೇಣಿಗನ ಕೊಂದೆಸೆದ ಸಗರದ ಬೊಮ್ಮಿತಂದೆಗಳುಂ (ಶಾಪಂಸ. ೯-೬೩) ; ನೀವು ಹೂಣಿಗರಾಗಿ ರಿಪುವನು ಕಾವಡಿತ್ತಲೆ ತೊಲಗುವೆನು (ಶಾಪ್ರಾಪ್ರೂ. ೯-೫೦). ೫. ಪ್ರಯೋಗ ಸಾಧನ,—ಸಲಕರಣೆ : ಅಱಿ ಹೊದೆದ ಗೋಣ ಹೂಣಿಗನಾಯ್ತು ಕೊಲೆಗೆ ಸಲೆ ಉಱಿದಱಿಸಿಕೊಂಡ ತಲೆಗುಱಿ ನೆಱೆಯಿತಿಲ್ಲಿಗೆ (ಶಾಪಂಸ. ೪-೨೨೫); ಶಿವನ ಘಾಟದ ಶರ ಚತುರ್ದಶ ಭುವನಭಂಜನವಿದು ಮದೀಯಾಹವಕೆ ಹೂಣಿಗನಾಯ್ತಲಾ ಹೇರಾಳ ಸುಕೃತವಿದು (ಶಾಪ್ರಾಶ. ೦೨-೬೪). **ಹೂಣಿಗ :** ೨. ಬಿರುದ ಭಟರಿಗೆ ಬೆಱಗು ಬಲಿದುದು ಹೂಣಿಗರ ಹೋರಟೆಗಳಳುಕಿದವು (ಶಾಪ್ರಾಶೀ. ೬-೬).

ಪೂಣಿಗಳ್ = ಪ್ರತಿಜ್ಞಾಬದ್ಧಳಾದವಳಂ : ಪೂಣಿಗಳಾಗಿ ಬರ್ದು ಪೊಗೞ್ದಿಪ್ಪ ವಿದಗ್ಧೆಯಾನೆಲ್ಲಿಮಾತನಂ ಕಾಣಲೊಡಂ ಕರಂ ಬಯಸಿ ತಾಮೆಱೆದಟ್ಟುವರಟ್ಟಿ ಕೂಡೆಯುಂ ನಾ[ಣಿ]ಲಿವನ್ನರಾದರೆನುತೊಂದು ವಿದಗ್ಧತೆಯಿಲ್ಲ ಬದ್ದಿನೊಳ್ ಪೂಣಿಕೆಯಿಲ್ಲ ಬಾಲಕಿಯೆ ಯೆಂತುಗೆ ಕೂಡುತೆ ಗೆಲ್ದೆಯಾತನಂ (ಪಂಪಂ. ೩-೬೦). [ಪೂಣ್$_1$ + — ಇಗ]

ಪೂಣಿಗತನ, ಹೂಣಿಗತನ (ನಾ). ಸಾಹಸ; ಶೌರ್ಯ : ಪಲವು ದಿವಸಮಾಹಾರಂಬಡೆಯದೆ ಕೆಂಗೋಲ್ಕಸಗಿದ ಸಿಂಹಕ್ಕೆ ಪೂಣಿಗತನದಿಂದೇನಾ ನುಮೊಂದಂ ನುಡಿದೆನಪ್ಪುಡೆನ್ನನೆ ಮುನ್ನಮಾಪೋಶನಂಗೊಳ್ಗುಂ (ಪಂಪಸಂ. ೦೬೩-೨೦). **ಹೂಣಿಗತನ :** ಇವನ ಹೂಣಿಗತನವನಿವನಾಹವದ ಹೊಱಿಗೆಯನಿವನ ಭಾರಿಯ ವೆಗ್ಗಳೆಯತನವ ದಿವಿಜರಾನಲು ನೂಕದಿದು ನಮ್ಮವರ ಪಾಡೇನೈ (ಶಾಪ್ರಾಪ್ರೂ. ೦೬-೦೯). [ಪೂಣಿಗ + — ತನ]

ಪೂಣಿಸು$_1$, ಹೂಣಿಸು$_1$ (ಕ್ರಿ). ೧. (ಬಿಲ್ಲಿಗೆ ಬಾಣವನ್ನು) ಹೂಡು,—ಸಂಧಾನಿಸು : ಧೃಷ್ಟದ್ಯುಮ್ನಂ ಪೂಣಿಸಿ ಕರ್ಣನ ಶಿರುವಾಯ್ಗಾಣಲೊಡಂ ಶೀವಿ ತೆಗೆದು ಪೊಱಮುಯ್ದುವರಂ ದ್ರೋಣನ ನೆಚ್ಚಂ (ಪಾಪಾಸೇ. ೦೨-೨೦೩) ; ಶಂಬರಸೂದನನಾರ್ದೈದಂಬುಗಳ್ಳೆ ಸಾಸಿರಂಬೆನಲ್ ಪೂಣಿಸಿಯಾರ್ಪಿಂ ಬಿಡದೆಚ್ಚವನೆನ್ನಂ (ಪಶಳು. ೯-೨೬೪). ೨. ಹೊಂದಿಸು ; ಸಜ್ಜುಗೊಳಿಸು : ಅಳವಡಿಸು : ಪೊಯ್ದು ಬೊಬ್ಬಱಿಪ ಪಱೆಯೊಳಂ ತೆನೆಯಂ ತಳ್ತ ಪರಿಗೆಯೊಳಂ ಮೊನೆಯಂ ಪೂಣಿಸಿದ ಕೊಂತದೊಳಂ ಕೈಗೆಯ್ದು (ಅಪಂಪ್ರ. ೦೦-೮೨ ಪ). ೩. ಕೊಡು ; ನೀಡು ; ಅನುಗ್ರಹಿಸು : ಅವರ ದೇಶನಾಮಕುಲ ಗೋತ್ರಂಗಳನಱಿಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣಿಸಿ ಸನ್ಮಾನ ದಾನಾದಿಗಳೊಳ್ ಸಂತಸಂಬಡಿಸಿ ತಂತಮ್ಮ ನೆಲೆಗಳ್ಗೆ ಪೋಗಲ್ವೇೞ್ದು (ಅಪಪ್ರ. ೦೩-೯೦ ಪ); ಮಾಣದಿತ್ತಳು ಮಾಂಗಲ್ಯಪಾಶಕಿಯುರಿಗೇಣಲೋಚನೆ ಕರೆಕರೆದು ಪೂಣಿಸಿ ಕೊಟ್ಟಳಾರತಿಯೆತ್ತಿದವರ್ಗೆಲ್ಲ ಜಾಣೆ ರನ್ನದ ಭೂಷಣಗಳ (ಅಪಂಪ. ೬-೦೩೯). ೪. ನಿಯಮಿಸು ; ಆಜ್ಞಾಪಿಸು : ಬೆಸನನಿರ್ಮೆ ಕೇಳದಂತು ಪೂಣಿಸಿ ಕಱುಪಿ (ಅಪಪ್ರ. ೦೩-೯೦ ಪ); ಪೆಱಗಣ ಕಾಪನೆನ್ನನೆ ಮಹೀಪತಿ ಪೂಣಿಸಿ ಪೋದಂ (ಪಂಪಭಾ. ೯-೯೬)· ೫. ತಡೆ ಗಟ್ಟು; ಎದುರಿಸು : ಎದುರುಬೀಳು : ಮಾರ್ಬಲಮಂ ಕಂಡು ಪೂಣಿಸಿ

ಜೀವ ಕಡುಗಲಿಗಳುಮಂ . . . ನೋಡಿ (ಗಡಾಹು. ೯-೩೯ ವ); ಕಾಣದೆ ದೆಸೆಯು ಬಂದಕ್ಷೋಣಿಯಂ ಚಂಚುಯಾಗ್ಮದಿಂ ಘಾತಿಸೆ ತತ್ಕಾಣಂ ತಿದಿಯಂ ಬಿಸುಟುಂ ಪೂಣಿಸಿ ತಗುಳ್ದಿಯ್ದಿ ಮತ್ತೆ ತಿದಿಯಂ ಪಿಡಿಗುಂ (ವಿಜಿಪು.೪-೧೦೭). ೬. ಲಕ್ಷ್ಯವಿಡು ; ಗುರಿಯಿಡು : ನರನೆಚ್ಚೊಡೆ ಪಜ್ಜರು ಕರಂ ಕರವಾಳೊಡನವರೆ ಕಾಸಿ ಬೆಚ್ಚಂತೆ ವಸುಂಧರೆಯೊಳ್ ಬಿಟ್ಟುರ್ದುದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ (ಕಂಕಣಾ. ೦೦-೦೪೦) ; ಬಾಚಿಯಿಂ ತಡಂಗಡಿದುಂ ಕೊಂತದಿಂ ತಗುಳ್ದಿಜ್ಜುದುಂ ಏಡ್ಗದಿಂ ಪೂಣಿಸಿ ಬಿಸುಟುಂ ಪೊಯ್ದುಂ (ರಣ್ಣಾಪ್ಪ. ೩-೬೩) ; ಪೂಣಿಸಿ ಕಠಮಂ ತಿರಿಪಿ ಚಕ್ರದೊಳಟ್ಟೊಡೆ . . . ಶಿರಂ ಕವಿಯಿಂದೆ ನೆಲಕ್ಕೆ ಬೀಟು (ಕಂಪ್ರಕೃ. ೧೦-೦೦೩). ೭. ಶಪಥ ಮಾಡಿಸು ; ಪ್ರತಿಜ್ಞೆ ಮಾಡಿಸು : ಆನಿನಿತಂ ನಿಮ್ಮ ಪೂಣಿಸಲೆ ಬಂದೆಂ (ಕಂಕಣಾ. ೦೦-೯೪ ವ). **ಹೂಣಿಸು₁** : ೨. ಜಾಣಂದ ತಮ್ಮ ವಿಮಾನವ ಹೂಣಿಸಿ ಮಾಣದೆ ಮತ್ತೆ ನೋಡಿವರು (ಅಚಿಚಿ. ೦೦-೦೩೭). ೩. ವಾಣಿ ಕಲ್ಯಾಣಿ ಕಟ್ಟಾಣಿ ಮಾತಿನೊಳು ಸುಪ್ಪಾಣಿ ತಂದಿರಿಸು ನಿಲ್ಲಿಸದೆ . . . ಕಡುಜಾಣನುಡಿಯ ತಂದು ಹೂಣಿಸು ಕೃತಿಗೆ ಮಂಗಳದಿ (ಸೌಂದಣಾ. ೦.೬). ೫. ಆರು ಲಕ್ಷಿಸಬಹುದು ಹೂಣಿ[ಪಾಣಾಂ.೪]ಸಿದಾರುಭಟೆಗಳ (ತೊಡಣ. ೬-೩೦-೦೬); ಭೂತೇಶ ತಾನಡ್ಡಬಂದು ಶ್ವೇತೋರಸ್ಥಲ ಬಲರಾಮ ತೊಲಗೆಂದು ಪೀತಾಂಬರಗೆ ಹೂಣಿಸಿದ (ಪೋಷಕ. ೩೯-೨೦). ೬. ನೀಜಿ ನೂಕದಿರೆನ್ನ ಮನ ಮುಮ್ಮಾಜುವೋದುದು ನೀಸು ಚಿತ್ತವ ಸೂಜಿಗೊಂಡೀ ಪದನ ಸಂಬಂಗೊಡಲ ಹೂಣಿಸುವೆ (ಶಾಬ್ಯಾ.೨- ೨-೩೯) ; ಅಲಗಂ ಪಿಡಿಯೊಳಳವಡಿಸಿ ತಳತಳಿಸಿ ತನ್ನ ಕಂಠಕೆ ಹೂಣಿಸುತ್ತ ಶಿವಶಿವ ಕೊಜಿಯಲನುಗ್ಗೈದನು (ವಿಚಿಪು. ೯-೦೦); ಹೂಣಿಸಿ ಕೂರ್ಗಣಿಯಿಂದೆಚ್ಚು ಬಜ್ಜಿಗಾಯಂಗಾಣಿಸಿದರು (ಪೋಷಕ. ೩೩-೦೨). ೭. ಹೂಣಿಸುತ್ತಿಂದು ತಾರಕನಡಗ ನಿನ್ನ ನಿಜಬಾಣ ಕಿಹುತಿಯು ಕೊಟ್ಪೆಮ್ಮನುಳಿಸು (ಕಿಪು.೩೮-೨೦). ೮. ಕೂಡಿಸು; ಸೇರಿಸು; ಬೆರಸು : ರಿವುಶ್ರೇಣಿಯ ತಜ್ಜಿದ ರೋಹಿತದಿ ಹೂಣಿಸಿ ಕೆಸರ್ಗೂಡಿ ಕೋಟೆಯು ರಚಿಸಲ್ಕೆ ಶೋಣಿತಪುರವೆಂಬುದಾಯ್ತು (ಪೋಷಕ. ೨೦-೩) ; ಕ್ಷೋಣಿಯೊಳು ಸತ್ಕೀರ್ತಿ ಬಪ್ಪೊಲು ಹೂಣಿಸುವೆನಗ್ನಿಯೊಳ್ ತನುವನು ಪ್ರಾಣವಾಯುವೆಂದರ್ಕವಿಹುದೆ ತಾಯೆ (ಜಾಕ್ಷಪ.೪೩-೧೦). ೯. ಆಕ್ರಮಿಸು ; ದಾಳಿಮಾಡು : ಕಾಳರಕ್ಕಸಿ ತಿರುಗಿ ಹನುಮಾಸ ಮೇಲೆ ಹೂಣಿಸೆ ಹನುಮನಾಬೆಯ ಕಾಲಿರಡ ಹಿಡಿದಭ್ರಮಂಡಲಕಿಟ್ಟನಬ್ಬರಿಸಿ (ತೊಡಣ. ೩-೧-೪). ೧೦. ಸ್ಪರ್ಧಿಸು ; ಪುರುಡಿಸು : ಜಾಣೆ ನಿನ್ನಯ ನಿಜವೇಷ ಮಾಣದೆ ನಿಂದ ವಿಲಾಸ ಹೂಣಿಸಿ ಬಲಿದ ಪ್ರಕಾಶ ನೆಜಿ ಕಾಣಿಸುತಿದೆ ಕೈಲಾಸ (ಶಿವಗೀ. ೦೬೬-೬೭೩) ; ಎರಡು ಚೂಣಿಯ ಭಟರು ಹೂಣಿಸಿ ಬೆರಸಿ ಹೊಯ್ದಾಡಿತ್ತು (ಕಾಚಿಣಾ. ೩೬-೦೩); ಕಾಣುತ ಬೇಡರ ಪಡೆ ಹೆದೆವಿಲ್ಲಿಗೆ ಬಾಣವ ಹೂಡಿ ಬೊಬ್ಬಿಜ್ದು ಹೂಣಿಸಿ ಕವಿದೆಸೆಯಲು ಮಥನನು ಬೆಂಗಾಣಿಸಿ ಮರಳಿದ ಪುರಿಗೆ (ಪಾವಪಾಖಂ. ೯-೨೪) ; ಕ್ಷೋಣಿಯೊಳೀ ಬಲ್ಬಿಸಿಲಿಂದೆ ಕಡುಗಾದ ಬಾಣಲಿಯೆಣ್ಣೆಯೊಳಬುದಿ ಹೂಣಿಸಿ ಕುದಿಗೊಂಡು ಮರಳ್ದುದು (ಪೋಷಕ. ೦೯-೮೩). ೧೧. ಆಣೆ ಮಾಡು ; ಶಪಥ ಮಾಡು : ಶೂಲಿಯೊಳು ತಾ ಹೂಣಿಸಿದ ಹೀಹಾಳಿಯನು ಮಜ್ಜುಳಿಸಿ . . . ತಬ್ಬಬ್ಬಪೋಗುತಲಿರ್ದಳಾ ಮಾಯೆ (ಕ್ರಭೀ. ೬-೨೬). ೧೨. ಪಂಗಿಸು; ಮೂದಲಿಸು : ಹೂಣಿಸಿ ಪೆಣ್ಣುಸುರಿದೊಡದಸಾಲಿಪುದೇಣಾಂಕಾಂಕನವರ್ಗಿಸ್ವೀ ಸುಡು ನಾಣಿಲಿತನವಿದೆನುತೆ (ಉತ್ತರೀ. ೩-೬೨). ೧೩. ಉಂಟಾಗು ; ಹುಟ್ಟು : ಕಾಣುತವೆ ರಾಯಸವ ದೊರೆಗಳು ಕ್ಷೋಣಿಪತಿಗಂಜುವವೋಲಾಗಳು ಹೂಣಿಸಿದ ಭೀತಿಯಿಂದ ಹೂಣಿಕೆಯು ನಾಯಕರು ಸಹಿತ (ಕಿಪು.೩೨೬). [ಪೂಣ್₁ + — ಇಸ್ಸು]

ಪೂಣಿಸು₂, ಹೂಣಿಸು₂, ಹೂಳಿಸು (ಕ್ರಿ). ೧. ನೆಡು ; ನಿಲ್ಲಿಸು : ಪುಂದ ಮಣಲೊಳಂ ಪೂಣಿಸಿದ ಗಾಣದೊಳಂ . . . ಮೊನೆಯಂ ಪೂಣಿಸಿದ ಕೊಂತದೊಳಂ ಕೈಗೆಯ್ದು (ಅಪಂಪು. ೦೨-೮೨ ವ). **ಹೂಣಿಸು₃** : ೨. (ಆಲಂ) ಅಡಗಿಸು ; ನಾಶಮಾಡು : ದೈತ್ಯನ ಮಹಾಗರ್ವವ ಹೂಣಿಸಿ ಎನ್ನ ಮೊಮ್ಮಗೆ ತಕ್ಕ ಸತಿ ಕಟ್ಟಾಣಿರತ್ನವ ತಂದೆ ಜೀಯ (ತೋಡಕ. ೪೨-೩೩). **ಹೂಳಿಸು** : ೨. ನಿಮ್ಮ ಮಾವನ ಆಶೆ ಯಾಕೆ ? ಇನ್ನು ಸಾಯಂಕಾಲ ದೊಳಗೆ ಅವನನ್ನು ಹೂಳಿಸಿ ಬಿಡುತ್ತೀನಿ (ಕಂಗಾಳ್ಕ. ೪೩೬). ೩. ಹುದುಗಿ ಹೋಗುವಂತೆ ಮಾಡು ; ಮುಚ್ಚಿಸು : ಅಬುಧಿಯು ಹರುಹ ಹೇಳ ದಿರೊಂದುನಿಮುಷಕೆ ಹೂಳಿಸುವೆನು (ತೊಡಣ. ೬-೪-೨); ಹೂಳಿಸಿ ಹುತ ವಹಕುಂಡವನು (ಭಾರಾಸಾಂ. ೩೬-೦೬೬).

[ಪೂಣ್₂(<ಪೂಟು) + — ಇಸ್ಸು]

ಪೂಣ್ಕೆ, ಪೂಣಿಕೆ, ಹೂಣಿಕೆ (ನಾ). ೧. ಪರಿಶ್ರಮ ; ಸಾಧನೆ : ಕುಲಮಿಲ್ಲೆಯೋ ನಮಗೆ ದಾಯಿಗರಲ್ಲರೂ ಶಸ್ತ್ರವಿದ್ಯೆಯೊಳ್ ಪೂಣ್ಕೆ ಗಳಿಲ್ಲೆಯೋ (ಕಂಕಣಾ. ೨-೯೦) ; ಪಲವುಂ ಪೂಣ್ಕೆಗಳಿಂದು ಚಲದಿಂದ ಸಹಾಯವಿಕ್ರಮಂ ತನ್ನಳವಂ ಕಲಿತನಮಂ ನಂಬಿ (ರಣ್ಣಾಪ್ಪ. ೦೨-೦೯). ೨. ಸಮಗ್ರತೆ ; ಸಮಷ್ಟಿ ; ಸಾಕಲ್ಯ ; ಶಾಸ್ತ್ರದರ್ಥವಂ ಬಸುಡದೆ ಪೂಣ್ಕೆಯಿನೋದುವೇಟ್ಪೊಡಾರ್ ವೆಚ್ಚರಿದಂ (ಜಾಕತಿ. ೦-೦೨). ೩. ಆಣೆ ; ಶಪಥ ; ಪ್ರತಿಜ್ಞೆ : "ಪೂಣ್ಕೆಯದು ಪ್ರತಿಜ್ಞೆಯೊಳಕ್ಕುಂ" (ಕವಿಂ. ೦೨೯) ; ಆ ಕನ್ನೆಗೆ ಯೌವನಂ ನೆಜಿದುದು ಪುದುವೆಯಾದೊಡೆ ತನ್ನ ಪೂಣ್ಕೆ[ಪಾಣಾಂ. ಪೂಣ್ದ ಪ್ರತಿಜ್ಞೆ]ಯಂ ನೆನೆದು . . . ಮೈದುನ ನಿರ್ದಾಪಣಕ್ಕೆ ಪೋವನ್ನೆಗಂ (ವಡಾ.೦೩. ೦೩-೨೯); ಕಾದಿಯೆಯ್ದಿತ್ತೆನೆನ್ನ ಪೂಣ್ಕೆ ನಿನಗಂ ಪೂರ್ಕೊದಯಾ ಸಾರ್ಚಿ ಬಂದುದು (ಅಂಪು. ೪-೦೬) ; ಆತನ ಪೂಣ್ದ ಪೂಣ್ಕೆ ಶಿಲಾತಳಾಕ್ಷರಂ (ಗಡಾಹು. ೦-೭೦). ೪. ದೃಢನಿರ್ಧಾರ; ಸಂಕಲ್ಪ : ಪೂಣ್ಕೆಯರಿದೋ ಮೆಚ್ಚಿದಂತೆ ನಡವುದರಿದೋ (ರಣ್ಣಾಪ್ಪ. ೬-೬೦). **ಪೂಣಿಕೆ** : ೧. ವಿದಗ್ಧತೆಯಿಲ್ಲ ಬದ್ದಿನೊಳ್ ಪೂಣಿಕೆಯಿಲ್ಲ ಬಾಲಕಿಯೆಯೆಂತುಗೆ ಕೂಡುತೆ ಗೆಲ್ದಯಾತನಂ (ಪಾಕಂ. ೩-೭೦). **ಹೂಣಿಕೆ**; ೩. ಹೂಣಿಕೆಯ ಸಬಳಿಗರೊಳಮ್ಮೈಗಾಣಿಕೆಯ ಬಲುಸೂತರಥಿಕರ ಜಾಣತಿಯ ಬಿಲ್ಲವರ ಧಾಳಾಧೂಳಿ ಬಲುಹಾಯ್ತು (ಭಾಶಾ.೪. ೨-೦೪); ಆಯಿತೇ ಕಡಯಾಟ ಹೂಣಿಕೆ ಹೋಯಿತೇ ಹುಸಿಯಾಗಿ (ಕ್ರಭೂಂ. ೭-೩೯); ಕರ್ಣಾಸು ಬಲ್ಪಿಡಿಯದ ಹೂಣಿಕೆ ಮಾಡುತ್ತಾನೆ (ತಪೂ. ೬೭). ೫. ಹವಣಿಕೆ; ವಿರ್ಮಾಡು ; ಯೋಜನೆ : ಕಟ್ಟಿಗೆಯ ಹೊರೆ ಹೊತ್ತು ಮಾರಿ ಜೀವನ ನಿರ್ವಹಿಸುವ ಹೂಣಿಕೆಯನ್ನು ಸ್ವಯಂವ್ಯೇರಣೆಯಿಂದ ಅರಿಸಿಕೊಂಡ ಕಾರಣದಿಂದ ಆದು ಆತನಿಗೆ ಸಹನೀಯವಾಯಿತು (ಪಾಳಂ. ೩೩) ; ನಮ್ಮ ಅಂತಶ್ಶತ್ರುಗಳಾದ ಗಂಗರಾಜಾದಿಗಳು ಅಂಥದೇ ಹೂಣಿಕೆಯನ್ನು ಬೇರೊಂದು ಒಗೆಯಲ್ಲಿ ಪೋಣಿಸುತ್ತಿದ್ದಾರೆ (ಜಠಪಂ. ೬).

ಪೂಣ್ಕೆಯಾಳ್ = ದೃಢಸಂಕಲ್ಪವುಳ್ಳ ಸೇವಕ : ಕುದಾನಪ್ರೀತಿಯೆಂಬ ಪೂಣ್ಕೆಯಾಳ್ವೆರಸು ದುರ್ಬುದ್ಧಿಯೆಂಬ ಪೊಲಂಬಿಗರ್ವೆರಸು ನಿಲ್ಲದೆಲ್ಲಿಯುಂ ಬೆನ್ನಟ್ಟಿ ತಗುಳ್ದು (ರಣ್ಣಾಪ್ಪ. ೦೦-೬೭). [ಪೂಣ್₂ + — ಕೆ]

ಪೂಣ್ಕೆಗೆಯ್, ಪೂಣ್ಕೆಗೈ (ಕ್ರಿ). ಆಣೆ ಮಾಡು ; ಶಪಥ ಮಾಡು ; ಪ್ರತಿಜ್ಞೆ ಮಾಡು: ತದೀಯ ಪ್ರಿಯಮಂ ನಿಮಿರ್ಚ್ಚದೊಡೆ ಮನ್ಮಿತ್ರತ್ವಮೇ ಬಾಲ್ಚಿತ್ತ ತತ್ಸಖಿಯಂ ತಂದವನೆಂದು ಮಂತ್ರಿತನಯಂ ತಾಂ ಪೂಣ್ಕೆಗೆಯ್ವಾಗಳುಣ್ಮೆತ್ತು . . . ಭೇರೀಗಭೀರಸ್ವರಂ (ಭಾಸುವಪ್ರ. ೦೦-೦೦೪). **ಪೂಣ್ಕೆಗೈ**: ನಿನ್ನನರೆನಿವಿಸದೊಳಗೆ ಧರೆಗೆ ನಾಂ ಕೆದಹದಿರಲು . . . ದುರಿತಲಂಪಟನಾದ ದುರ್ಮತಿಯಘಂ ಘಟಿಸಲೆನಗೆಂದು ಪೂಣ್ಕೆಗೈದು (ಶಕಥಾ. ೩೦-೦೪).

[ಪೂಣ್ಕೆ + ಕೆಯ್₂]

ಪೂಣ್ಕೆಗೈ 'ಪೂಣ್ಕೆಗೆಯ್' ನೋ.

ಪೂಣ್ಕೆದಪ್ಪು (ಕ್ರಿ). ಪ್ರತಿಜ್ಞೆಯನ್ನು ವಿಮಾರು: ಕದನೋದ್ಯೋಗದಿನಾಳ್ದನೆತ್ತಿ

ಬರೆಯುಂ ಬೆಳ್ಕುತ್ತು ಬೆನ್ನಿತ್ತನಿಲ್ಲ ದೃಢಾತ್ಮಂದಳೆದಂ ಪಲರ್ಪೊಗಳ್ವೆನಂ ನಿಶ್ಶಂಕೆಯುಂ ಪೂಣ್ಕೆದಪ್ಪಿದನಿಲ್ಲ (ಪಂಡಾಪಾ. ೬ ೩೬). [ಪೂಣ್ಕೆ+ತವ್ಪು$_1$]

ಪೂಣ್ಕೆವತ್ತಳೆ (ನಾ). ಪ್ರತಿಜ್ಞೆಯ ಕಾಗದ; ಪ್ರತಿಜ್ಞಾಪತ್ರ: ಪೂಣ್ಕೆವತ್ತಳೆಯನ್ನೂ ಮುದ್ರೆಯನ್ನೂ ಲಿಂಗರಾಜನ ಬಗಸೆಗಿರಿಸುವನು (ಪುಂಶ್ರೀಕ. ೧೭೬-೨೯). [ಪೂಣ್ಕೆ+ವತ್ತಳೆ$_1$]

ಪೂಣ್ಕೆವೆಱು (ಕ್ರಿ). ಪಟ್ಟುಬಿಡಿ; ಹಟತೊಡು: ಅಂತೆಸಗಿದೆನಪ್ಪೊಡೋವದೆ ಖಳರ್ನೆರೆತಂದು ಕಱುತ್ತು ಪೂಣ್ಕೆವೆತ್ತೊಸೆದೊಳಗಾಗಿ ಮೂಗನರಿದೀ ವಿಧಿಯಾಗಿರೆ ಮಾಡಿರ್ದರೇ (ಸುಳುವಪಾ. ೭-೩೩).

[ಪೂಣ್ಕೆ+ವೆಱು$_1$]

ಪೂಣ್ಗೊಳ್ (ಕ್ರಿ). ನಿರ್ಧಾರ ಮಾಡು; ದೃಢನಿಶ್ಚಯವನ್ನು ಕೈಕೊಳ್ಳು: ಪೂಣ್ಗೊಂಡಕೃಟಾ ಸಾರಿದುಂ ನಡೆನೋಡರ್ಚಿಸು ಕೀರ್ತಿಸಾದರಿಸು . . . ಎಂದುಂ ವಿರೂಪಾಕ್ಷನಂ (ಪಂಶಾಕ. ೬೨). [ಪೂಣ್$_3$+ಕೊಳ್$_1$]

ಪೂತ$_1$ 'ಪೂ$_1$' ಪರಾ.

ಪೂತ$_2$ (ಗು). ೧. ಶುದ್ಧಿಗೊಳಿಸಿದ; ಸ್ವಚ್ಛ ಮಾಡಿದ. ೨. ಧಾನ್ಯದ ಜಳ್ಳು ಹೋಗುವಂತೆ ಒಕ್ಕಿದ, ತೂರಿದ. ೩. ಪವಿತ್ರವಾದ; ಪಾವನವಾದ; ಪುಣ್ಯಕರವಾದ: ಶಿವಕಥಾಪೂತಪೌರಾಣವನಿವಂ ಬೇಳಿಸಿದನತಿಪ್ರೀತಿಯಿಂದಂ (ಪಂಪಭಾ. ೫೬-೦೭); ಆತನಂಗನೆ ಸೀತಮಾಂಬೆಯ ಪೂತಗರ್ಭದೊಳುದಿಸಿ ಕನ್ನೆಯ ರೀತಿಯಾನುತಲಿರ್ದಳೀ ಚೆಲ್ವಾಂಬೆ ಧರೆಯೊಳಗೆ (ಶಬ್ದಾಳ. ೩೦೦). (ನಾ). ೪. ಒಕ್ಕಿದ ಧಾನ್ಯ; ತೂರಿದ ಧಾನ್ಯ: "ಪೂತಂ, ಬಹುಳೀಕೃತಂ—೨ ತೂರಿಕ್ಕಿದ ಧಾನ್ಯ" (ಸಿದ್ಧಾಂತಿ. ೨೮೦). ೫. ಪವಿತ್ರವಾದುದು; ಪಾವನವಾದುದು: "ಪವಿತ್ರಂ ಪೂತಂ" (ಪಸ್ತುಕೋ. ೦೦೬-೬೦); ವನಜಾಕ್ಷಖ್ಯಾತಿಪೂತಂ ಕಥೆ ಕವಿ ಕವಿರಾಜಂ (ಜಗವಿ. ೦-೨೨). ೬. ಪವಿತ್ರಾತ್ಮ; ಪುಣ್ಯವಂತ: ಪಾಪಿಯ ಪೀಡಿಪ ಪುರುಷನು ಪೂತನೆಂತೋ (ಶಶಸಾಂ. ೭೬-೯೦); ಆತನ ವ್ರತದ ನಿಟ್ಟೆಯ ಕಂಡು ಪಲಬರು ಪೂತರಾದರು (ತರ್ಕಶಾ. ೦೨-೪೯). [ಸಂ.]

ಪೂತಕ್ರತಾಯಿ (ನಾ). ಇಂದ್ರನ ಹೆಂಡತಿ; ಶಚೀದೇವಿ: ಮಾಯಾಶಿಶುವಂ ತಂದಿಟ್ಟಾಯೆಡೆಯೊಳ್ ಬೇಗನೆತ್ತಿಕೊಂಡಳ್ ಭುವನತ್ರಾಯಿಯನಾ ಜಿನ ಶಿಶುವಂ ತಾಯಿಲೆ ಪೂತಕ್ರತಾಯಿ ದಾದಿಯ ತೆಱದಿಂ (ವರ್ಧಮಾ. ೧೨-೮).

[ಸಂ. ಪೂತಕ್ರತಾಯಿ]

ಪೂತತೆ (ನಾ). ಪವಿತ್ರತೆ; ಪಾವನತೆ: ಸೊಡರವೊಲನೂನಕಾಂತಿಯ ಕುಡಿಯಿಂದಂ ನಾಕದಂತೆ ಮಂದಾಕಿನಿಯಿಂ ನುಡಿಜಾಣಂ ವಿಬುಧನವೊಲ್ ಪಡೆದಂ ಪೂತತೆಯನಂತೆ ಶೋಭೆಯನವಳಿಂ (ಧರ್ಮಾಕೋ. ೨೦೯).

[ಸಂ. ಪೂತತಾ]

ಪೂತನಾಂತಕ (ನಾ). ಪೂತನೆಯೆಂಬ ರಾಕ್ಷಸಿಯನ್ನು ಕೊಂದವನು; ಕೃಷ್ಣ: ದಾರುಣಾಕೃತಿಪೂತನಾಂತಕನಾದಿಂ . . . ಮುರಾರಿ ಕೈವಱಿಗಾಡಿದಂ (ಜಗವಿ. ೩-೩೬). [ಸಂ.]

ಪೂತನಿ (ನಾ). ೧. (ಕೃಷ್ಣನು ಶಿಶುವಾಗಿದ್ದಾಗ ವಿಷವುಣಿಸಿ ಕೊಲ್ಲಲೆಂದು ಕಂಸನ ಆದೇಶದ ಮೇರೆಗೆ ಬಂದು, ಕೃಷ್ಣನಿಂದಲೇ ವಧೆಯಾದ) ಒಬ್ಬ ರಾಕ್ಷಸಿಯ ಹೆಸರು: ನಿಜವಕ್ಷೋಜನಿಕ್ಷಿಪ್ತಕ್ಷ್ವೇಡಪೀಡಿತ ಲೋಕಘಾತಿನಿಯಪ್ಪ ಪೂತನಿಯುಮಂ . . . ಬೆಸಸಿ (ಜಗವಿ. ೩-೨೨ ಪ); ಶತಪ್ರಳ್ಳ ಲಕ್ಷ್ಮಣಗರ್ಭಪಿಳಸೇನೆ ಭಾವಿಸೆ ತವಾಕೃತಿಯ ಬಾಲಕರ ದೆಸೆಯಿಂದ ಗೋವರ್ಧನಂಗೆ ಮೊಲೆಗೊಟ್ಟ ಪೂತನಿವೊಲಾಯ್ತು (ಕೃಷ್ಣಾಭಾ. ೨೦-೩). ೨. ಪಿಶಾಚಿ; ರಕ್ಕಸಿ; ರಾಕ್ಷಸಿ: ಸಂದಣಿಸಿ ಹರಿದೇಱ ಬಾಯ್ಗಳೊಳೊಂದಿ ಬಾಯ್ಗಳನಿಡುವ ಪೂತನಿವೃಂದವನು ಕಂಡೋಸರಿಸುವನದೊಂದು ದೆಸೆಗಾಗಿ (ಶುಭ್ರಾಗ. ೩-೦೦). [< ಸಂ. ಪೂತನಾ]

ಪೂತನೆ (ನಾ). ೧. = ಪೂತನಿ ೧: ಪೂತನೆಯಂ ಕೊಂದಾಸ್ತ್ರೀಘಾತುಕವೃತ್ತಿಯುಮನೆನ್ನೊಳೇಂ ತೋಱಿದಪ್ಪೆ ಪೂತನೆಯ ತೆಱದೆ ನಿನಗಾನೇತಱ ಪೊಲ್ಲಮೆಯನರಸ ಬಗೆದಂ ಬಗೆಯೊಳ್ (ಜಗವಿ. ೦೨ ೯೬). ೨. = ಪೂತನಿ ೨. ೩. ಒಂದು ಬಗೆಯ ಮರ ಮತ್ತು ಅದರ ಕಾಯಿ; ಅಳಿಲೆ: "ಅಘಯಾ, ಅನ್ಯಥಾ, ವಘ್ನಾ, ವಯಸ್ಥಾ, ಪೂತನಾ, ಅಮೃತಾ . . . ಶಿವಾ—೧೧ ಅಳಲೇಗಿಡದ ಹೆಸರು; ಅಳಲೇಕಾಯಿ ಪ್ರಸಿದ್ಧವು" (ಸಿದ್ಧಾಂತಿ. ೦೨೩). ೪. ಮಕ್ಕಳು ನವೆದು ಅಶಕ್ತರಾಗುವ ಒಂದು ಬಗೆಯ ರೋಗ; ಹಕ್ಕಿರೋಗ; ಬಾಲಗ್ರಹ. ೫. ಬಾಲಗ್ರಹಕ್ಕೆ ಕಾರಣಳಾದವಳೆಂದು ಭಾವಿಸಲಾದ ದೇವತೆ.

[ಸಂ. ಪೂತನಾ]

ಪೂತಾಚರಣ (ನಾ). ಪರಿಶುದ್ಧವಾದ ಆಚಾರವುಳ್ಳವನು; ಸರಿಯಾದ ನಡವಳಿಕೆಯವನು: ಸಮರಜಿತಭೂಪ ಜೀವಪ್ರದನುಂ ಅತಿಪೂತಾಚರಣಾರಿಪುಖಡಕಿರಣಂ (ಎಳ. III, ಮಂಡ್ಯ. ೬೮ ೬; 1022). [ಸಂ.]

ಪೂತಾತ್ಮ (ನಾ). ಪರಿಶುದ್ಧವಾದ ಮನಸ್ಸುಳ್ಳವನು: ಪೂತಾತ್ಮಂ ಪರಿತೋಷಪಂಡಿತವರಂ . . . ರಾಜೇಂದ್ರಚೆಕ್ರೇಶ್ವರಂ (ಪಚಕ್ರೇ. ೧. ೨೬).

[ಸಂ. ಪೂತಾತ್ಮನ್]

ಪೂತಿ (ಗು). ೧. ಹೊಲಸುವಾಸನೆಯುಳ್ಳ; ದುರ್ಗಂಧಮಯವಾದ: 'ಪೂತಿಗಂಧ' ಪರಾ. (ನಾ). ೨. ಕೊಳಕುನಾತ; ದುರ್ಗಂಧ; ದುರ್ವಾಸನೆ. ೩. ದುರ್ಗಂಧವುಳ್ಳ ದ್ರವ; ಕೀವು. ೪. (ದುರ್ಗಂಧಮಯವಾದ) ಒಂದು ನರಕದ ಹೆಸರು: ಕೊಳ್ವೋರುಂ ಕೊಣ್ಡು ಉಣ್ವೋರುಂ ಪಞ್ಚಮಹಾಪಾತಕಸಂಯುಕ್ತನಾಗಿ ಪೂತಿ ಎನ್ನ ನರಗಕ್ಕೆ ಸಲ್ಗೆ (ಎಳ. VI, ಕೊಪ್ಪ. ೩೬-೬; ಸು. 675 ?). ೫. ಒಂದು ಬಗೆಯ ಸುಗಂಧ ದ್ರವ್ಯ; ಪುಣುಗು: ಕತ್ತುರಿ ಕಾಲಾಗುರು ಚಂದನಂ ಹಿಮಕರಂ ಜಾತೀಫಳಂ ಪೂತಿ . . . ಚೂಡಾರತ್ನಮೆಂಬೀ ವನಾಂತರಸಂಜಾತಮನಾತನೋಲಗಿಸಿದಂ (ಶಾಸ್ತ್ರಪು. ೩-೦೦೨); ಪೂತಿ ಎಂಬ ಹುಲ್ಲುಜಾತಿಯನ್ನೂ ಒಳಗೊಂಡಿದ್ದ ಹಳ್ಳಿಯನ್ನು . . . ಗೋವಿಂದಚಂದ್ರದೇವನು ದಾನವಾಗಿ ಇತ್ತ (ಶಾಸಗಿ. ೬).

ಪೂತಿಯ ಬೆಕ್ಕು=ಪುಣುಗಿನ ಬೆಕ್ಕು: ಪೂತಿಯ ಬೆಕ್ಕೆರಳೆಯ ಮಱೆ ಮಾತಂಗದ ಮುತ್ತು . . . ಎನಿಪ್ಪುವನಾಂತು ಕಿರಾತರ ನಿಜಪಕ್ಕಣಕ್ಕೆ ನಡೆತರುತಿರ್ದರ್ (ಕ್ರೈಶಾ. ೨೬-೧೩). [ಸಂ.]

ಪೂತಿಕ (ಗು). ೧. ದುರ್ಗಂಧವುಳ್ಳ; ದುರ್ವಾಸನೆಯುಳ್ಳ. (ನಾ). ೨. ತವಸಿ ಗಿಡ: "ಪ್ರಕೀರ್ಯಃ, ಪೂತಿಕರಜಃ, ಪೂತಿಕಃ, ಕಲಿಕಾರಕಃ—೪ ತವಸೀಗಿಡದ ಹೆಸರುಗಳು" (ಸಿದ್ಧಾಂತಿ. ೦೨೩). ೩. ಮಲ; ವಿಷ್ಟೆ. [ಸಂ.]

ಪೂತಿಕರಜ (ನಾ). ಒಂದು ಬಗೆಯ ಸಸ್ಯ; ತವಸಿಗಿಡ: "ಪ್ರಕೀರ್ಯಃ, ಪೂತಿಕರಜಃ, ಪೂತಿಕಃ, ಕಲಿಕಾರಕಃ—೪ ತವಸೀಗಿಡದ ಹೆಸರುಗಳು" (ಸಿದ್ಧಾಂತಿ. ೦೨೩). [ಸಂ.]

ಪೂತಿಕಾಷ್ಠ (ನಾ). ೧. ಒಂದು ಬಗೆಯ ಮರ; ದೇವದಾರುವೃಕ್ಷ: "ಸರಳಮದು ಪೂತಿಕಾಷ್ಠಮೆನಿಕ್ಕುಂ" (ಮಂಗಣಾ. ೩೯-೨೮). ೨. ಒಂದು ಬಗೆಯ ಮರ; ಪೀತದಾರು; ಪೈನ್‌ಮರ. [ಸಂ.]

ಪೂತಿಗಂಧ (ನಾ). ೧. ದುರ್ವಾಸನೆ; ದುರ್ಗಂಧ: ಆ ವಿವಿಧ ಭಕ್ಷೋಪದಂಶಪ್ರಾಯಮಪ್ಪ ದಿವ್ಯಾಹಾರಮೆತ್ತಲೀ ಕ[ನಿ]ತ ಪೂತಿಗಂಧಮಪ್ಪ ಮೃಗಪಿಶಿತವೇಶಿಯೆತ್ತಲ್ (ವರ್ಧಮಾ. ೬-೪ ಪ); ಆಮೋದ ಗಂಧದೊಳ್ ಪೊರೆದಾ ಮಣ್ಣಂ ತಳಿಯೆ ಪೂತಿಗಂಧದ ಗಿಡುಗಳ್ ಗೋಮಯತೋಯಮಮೆಱೆಯಲ್ಕಾಮೋದಸುಗಂಧಪುಷ್ಪಮಾಗಳೆ ಬರ್ಕುಂ (ಲೋಕೋಕ. ೬-೩೦). ೨. ದುರ್ಗಂಧದ ವಸ್ತು: "ಪೂತಿಗಂಧಃ, ದುರ್ಗಂಧಃ—೨ ಕೆಟ್ಟನಾತವುಳ್ಳ ವಸ್ತುವಿನ ಹೆಸರುಗಳು" (ಸಿದ್ಧಾಂತಿ. ೪೭). ೩. ಗಾರೆಗಿಡ; ಇಂಗುದೀ ವೃಕ್ಷ. [ಸಂ.]

ಪೂತಿಗಂಧಿ (ಗಂ). ದುರ್ಗಂಧವುಳ್ಳ. [ಸಂ.]

ಪೂತಿದ್ರವ (ನಾ). ಹೊಲಸು ನಾರುವ ಕೀವು ಮೊದಲಾದ ದುರ್ಗಂಧ ದ್ರವ : ನವವಿವರಾವೃತಪೂತಿ[ಪಾಠಾಂ. ತ]ದ್ರವ ಶ್ವಗಾವೃತವಿಮಿಶ್ರ ಮಾಂಸೋಪಚಿತಮಧ್ರುವಮಸುಚಿತ್ರಭ್ರಮಿತಕ್ರಿವಹಂ ಮೆಯ್ ಬಗೆ ಪೊಡಿಂತು ಕಿಸುಗುಳಮಾದಂ (ಕವಿರಾ. ೩-೦೧೬). [ಸಂ.]

ಪೂತಿನಾಶಕ (ಗು). ೧. ಹುಣ್ಣು, ಗಾಯ ಮುಂತಾದುವು ಕೊಳೆತು, ಕೀವಾಗುವುದನ್ನು ತಡೆಯುವ : ರೋಗಿಯ ಕೊಠಡಿಯಿಂದ ಹೊರಬಂದ ನಂತರ ಕೂಡಲೆ ಪೂತಿನಾಶಕದ್ರಾವಕದಲ್ಲಿ (Anti-Septic Lotion) ಕೈತೊಳೆಯಬೇಕು (ಕಲರೋ. ೩). (ನಾ). ೨. ಹುಣ್ಣು, ಗಾಯ ಮುಂತಾದುವು ಕೊಳೆಯುವುದನ್ನು ತಡೆಗಟ್ಟುವಂಥ ವಸ್ತು : ಪೂತಿನಾಶಕ(ಆ್ಯಂಟಿಸೆಪ್ಟಿಕ್)ದ ಮಹದುಪಕಾರದಿಂದ ಪಿರೊಗೋವ್‌ನಿಗೆ ಅಶಕ್ಯವಾದಂತಹ ಶಸ್ತ್ರಕ್ರಿಯೆಗಳನ್ನು ಕೂಡಾ ಈಗ ಸರ್ಜನರು ಮಾಡುತ್ತಿರುವರು (ಹುತ್ತಮ. ೩೯). [ಸಂ.]

ಪೂತಿಫಲಿ (ನಾ). ಒಂದು ಬಗೆಯ ಔಷಧೀಸಸ್ಯ ; ಬಾಹುಜಿಗೆ ; ಸೋಮವಲ್ಲಿ : "ಅವಲ್ಗುಜಃ ... ಕೃಷ್ಣಫಲಾ, ವಾಗುಜೀ, ಪೂತಿಫಲೀ — ರ ಬಾಹುಜಿಗೆಯ ಹೆಸರುಗಳು" (ಸಿದ್ಧಾಂತಿ. ೦೩೩). [ಸಂ. ಪೂತಿಫಲೀ]

ಪೂತಿಬೆಕ್ಕು 'ಪೂತಿವೆಕ್ಕು' ನೋ.

ಪೂತಿಮಾಂಸ (ನಾ). ೧. ಕೊಳೆತ ಮಾಂಸ ; ಹೊಲಸು ನಾರುವ ಮಾಂಸ. ೨. ಒಂದು ನರಕದ ಹೆಸರು : ಕ್ರತು ಪೂತಿಮಾಂಸ . . . ಉಚ್ಛ್ವಾಸವೆಂಬೈದು ಮಂತ್ರಿನರಕಂಗಳಿಂ ಕೂಡಿ ಕಾಲಾತ್ರವೆಂಬರಸುನರಕ ವಿಹುದು (ಏಪೇಕ. ೦೬೦). [ಸಂ.]

ಪೂತಿರಸ (ನಾ). = ಪೂತಿದ್ರವ : ಸಪ್ತಧಾತುಮಯಮುಂ ಅವಸ್ಕರದ ಪೋಲ್ ಮೂತ್ರ ಪುರೀಷಾದಿ ಮಲಭಾಜನಮುಂ ಅಲ್ಲಿ ಪೂತಿರಸನಿಷ್ಯಂದಿ ಶ್ರವಣಾದಿ ನವರಂಧ್ರಪರೀತಮುಂ . . . ಅಪ್ಪ ಶರೀರಮುಂ (ಶಕ್ತ್ಯಪ್ರ. ೩೨೯). [ಸಂ.]

ಪೂತಿವಕ್ತ್ರ (ನಾ). ಒಂದು ನರಕದ ಹೆಸರು : ಪೂತಿವಕ್ತ್ರ ರಕ್ತಪೂತಿ ಮೃತ್ತಿಕೆ ಕಣ ಧೂಮವೆಂಬೈದುಮಂತ್ರಿನರಕಂಗಳಿಂ ಸುತ್ತಿ ಭೀಮವೆಂಬರಸು ನರಕವಿಹುದು (ಏಪೇಕ. ೦೬೦). [ಸಂ.]

ಪೂತಿವೆಕ್ಕು, ಪೂತಿಬೆಕ್ಕು (ನಾ). ಪುಣುಗಿನ ಬೆಕ್ಕು ; ಕಸ್ತೂರಿಬೆಕ್ಕು : ಪೊಂಬುಲಿಸಮ್ಮ ಮಾನೆದಲೆಮುತ್ತು ಮೊಲಂಗಳ ಬಿಕ್ಕು ಪೂತಿವೆಕ್ಕು . . . ಪೀಲಿಯೆಂಬಿವಂ ತುಂಬಿದ ಕಂಬಿಯುಂ ತಳೆದದೇಂ ತಳರ್ದತ್ತೊ ಪುಳಿಂದಸಂ ಕುಳಂ (ರಾಜಶೇ. ೩-೦೦೪); ಮರೆ ನರಿ ಪೂತಿವೆಕ್ಕು ನಕುಲಂ ಮರವಾವುಗಳೆಂಬಿ ವಾಗಳುಂ ಕರಮೆಸೆದಿರ್ಪಿನಂ ಮೆಱೆದುದಾ ವಿಪಿನಂ (ಶಂಕಂ. ೩-೩೪). **ಪೂತಿಬೆಕ್ಕು** : ಸಿಂಗದುಗುರಂ ವ್ಯಾಘ್ರಚರ್ಮಮಂ ಕ್ರೋಡಶಾಬಂಗಳಂ ಪೂತಿಬೆಕ್ಕಂ ಹರಿಶ್ಚಂದ್ರರಾಯಂಗೆ ಕಾಣಿಕೆಯನಿತ್ತಡಿಗೆಱಗುತಿರ್ದರಗ್ಗದ ಬೇಡವಡೆಯೊಡೆಯರು (ಹಪಕಾ. ೩-೩). [ಪೂತಿ + ಬೆಕ್ಕು (< ಬೆರ್ಕು)]

ಪೂತು$_1$ 'ಪೂ$_1$' ಪರಾ.

ಪೂತು$_2$ (ನಾ). ಭಲೆ, ಭಾಪು ಎಂಬಂತೆ ಬಳಸುವ ಒಂದು ಕೊಂಡಾಟದ ಮಾತು,—ಉದ್ಗಾರ : ಆ ಮಾಳವಚಕ್ರವರ್ತ್ತಿ ಜಗದೇವನೆ ತಂನ ಮದಾಂಧಸಿಂಧುರಂ ಕೀಳಿಡೆ ಪೂತು ರಾವುತೆನೆ ರಾವುತನಲ್ಲೆನಿದಿರ್ಚ್ಚು ವೀರಬಲ್ಲಾಳೆನೆನೆಂದು ಮೆಟ್ಟಿ ತಿವಿದಾಳ್ತನವಚ್ಚರಿಯಾಯ್ತು ಧಾತ್ರಿಯೊಳ್ (ಎಕ. VI, ತರೀಕೆ. ೪೩-೨೪; 1196); ನಿಘರ್ಜನಾರ್ಭಟಿಸುತ್ತುಂ ಪೂತು ಮಜ ಬಾವೆನುತ್ತುಂ ಶಾತಾಸಿಯನಾಂತು ಸವಱತೊಡಗಿದನಾಗಳ್ (ಉದ್ಯಟ. ೪-೬೦); ಪೂತು ಸಾರಥಿ ಭಾಪು ಮಝರೇ ಸೂತ ಧಿರುಧಿರು ಎನುತ ರಥಿಕವ್ರಾತ ಮಿಗೆ ಬೋಳ್ಳೈಸಿ ಕೊಂಡರು ಹಯದ ವಾಘೆಗಳ (ಕುಮ್ಮಾಧೀ. ೪-೯೩).

ಪೂತುರೆ (ನಾ). = ಪೂತು$_2$: "ಅರರೇ ಭಾಪುರೆ ಮಝ ಪೂತುರೆ ಭಲರೇ ಲೇಸು ಜಾಗುಮಾ ಧಣು ಧಿರುರೇ ಪುರೆಯೆನೆ ಕೊಂಡಾಟಂ" (ಪತುಸಿ. ೩೫) ; ಭಾಪುರೇ ಕಣ್ಣಂದ ಪೂತುರೇ ಕಣ್ಣಂದ ಭಾಪು ಮಝ ಭಾಪು ಮಝ ಭಾಪುರೇ ಕಣ್ಣಂದ (ಕಣ್ಣರ. ದೇ. ೦೪೯-೦೭) ; ನೆರೆದ ನುಸಿಗಳು ಗಿರಿಯ ಕಾಡುವ ಪರಿಯ ನೋಡೈ ಪೂತುರೆ (ಕುಮ್ಮಾಧ್ರೋ. ೨-೭೫). [<ಪೂತು$_2$]

ಪೂತೆ (ನಾ). ೧. ಪರಿಶುದ್ಧಳಾದವಳು ; ಪವಿತ್ರವ್ಯಕ್ತಿ : ಮುನ್ನಂ ಲಂಕೆಯೊಳ್ ನೀನೆ ಪೇಟ್ಟಿಯಲ್ತೆ ಸೀತೆ ಪೂತೆ, ಅವಳು ಕೈಕೊಳ್ವುದೆಂದು (ರಾಮಾಶ್ವ. ೨೫-೫); ಮಲ್ಲಮ್ಮ ನಾರೀಲೋಕದ ದಾರಿದೀಪ, ನಾರೀಕುಲಕ್ಕೆಲ್ಲ ಗೌರವ ತಂದ ಮಹಾಮಾತೆ, ಪೂತೆ, ಖ್ಯಾತೆ (ಕರಪ. ೬೬೬). ೨. ದುರ್ಗೆ. [ಸಂ. ಪೂತಾ]

ಪೂತ್ಕರಿಸು (ಕ್ರಿ). ಬಾಯಿಂದ ಊದಿ ಶಬ್ದಮಾಡು : ಬುಸುಗುಡು : ಎಸೆದುದಾ ಮಣಿಖಚಿತಕಿರಣಪ್ರಸರಮುದ್ರಿಕೆ ಪೂತ್ಕರಿಸಿ ಲಳಿಮಸಗಿದಱಿವನ ಪೆಡೆವಣಿಯವೊಲು ಕರವಲನಿಲಜನ (ತೊರಂಶಾ. ೪-೬-೦೭) ; ಈ ಸುರಭಿತ ಸುಮಮಂಜರಿಯ ಹಿಂಜಿ ಪೂತ್ಕರಿಸುವ ಕಾಳಸರ್ಪ ! (ಕಲ್ಯೋಂ. ೨೫-೦೩). 'ಪೂತ್ಕರಿಸು' ಪರಾ. [ಪೂತ್ಕರಣ್$_0$ + — ಇಸು$_3$]

ಪೂತ್ಕೃತಿ (ನಾ). ಪೂತ್ಕರಿಸುವಿಕೆ ; ಊದಿ ಶಬ್ದ ಮಾಡುವಿಕೆ ; ಪೂತ್ಕಾರ : 'ಪೂತ್ಕೃತಿಗೈ' ಪರಾ. [ಸಂ.]

ಪೂತ್ಕೃತಿಗೈ (ಕ್ರಿ). = ಪೂತ್ಕರಿಸು : ಪೂತ್ಕೃತಿಗೈದು ಸುಭಟನ ಸಿಂಹನಾದಕೆ ಮುಯ್ದೆಗೆದು ಕರಿ ಕಾದುತಿರ್ದುದು ಭೀಮಸೇನನಲಿ (ಕುಮ್ಮಾಧ್ರೋ. ೩-೩೬). [ಪೂತ್ಕೃತಿ + ಕೈ$_1$ (<ಕೆಯ್$_1$)]

ಪೂದಂಡೆ (ನಾ). ಹೂಮಾಲೆ ; ಹೂವಿನ ಸರ ; ಪುಷ್ಪಮಾಲೆ : ಮುತ್ತೈದೆವೆಂಗಳು ಸಿರಿಮುಡಿಯ ಪೂದಂಡೆಗಳೊಡನೆ ಹಿಡಿಯಕ್ಕಿದಳೆದು ಬಂದರು ಮುತ್ತಿನಾರತಿವಿಡಿದಾ ರತಿದೇವಿಯೊಡನೆ (ಪೋಹತ. ೦೭ ೪೬). [ಪೂ$_2$ + ದಂಡೆ$_1$]

ಪೂದಂದಲ್ (ನಾ). ಹೂವಿನ ಮಳೆ ; ಪುಷ್ಪವೃಷ್ಟಿ : ಎಸಗಿತ್ತಂದನು ಕೂಲಮಂದಪವನಂ ಪೆಣ್ದುಂಬಿಗಳ್ ಮುತ್ತುತುಂ ಮುಸುಱುತ್ತುಂ ಬರೆ ಬಂದುದಿಂದ್ರವನದಿಂ ಪೂದಂದಲ್ (ಪಂಪಭಾ. ೯-೯೬). [ಪೂ$_2$ + ತಂದಲ್]

ಪೂದಳೆ (ಕ್ರಿ). ಹೂವನ್ನು ತಾಳು, — ಧರಿಸು : ಪೂದಳೆದುದೆನಿಪ ಪುರ್ಬಿನ ಕುಡಿವೆರಸು ತೂಕಡನೊಳಕೊಂಡ ಜಾಡ್ಯಮುಂ . . . ಎಂತು ದೊರೆಕೊಳ್ಗುಮೆಂದು ಭಾವಿಸಿ (ಕಾದಂಪೂ. ೭೫೯). [ಪೂ$_2$ + ತಳೆ$_1$]

ಪೂದಿಂಗಳ್, ಹೂದಿಂಗಳ್ (ನಾ). ಹೂವು ಬಿಡುವ ಕಾಲ ; ವಸಂತ ಮಾಸ : ಕೋದು ಪೂಮಿಡಿ ತಳಿರ ಕಾಡು ನರುವೊಗರಿನಿಂ ಪೂದಿಂಗಳರಸನಂ ಕರೆಯುಗುಂ ತುಳಿಲ್ಗೆ (ಕಾಲೂರ. ೦೦೯-೨೪೬). **ಹೂದಿಂಗಳ್** : ಹೂದಿಂಗಳೈತರಲ್ಕೊಸಗಯಿಂ ಬನದೇವಿ ದೀಪೋತ್ಸವಂಗೈವಳೆಂಬಂತೆ ಮೊಗ್ಗುಗೊಳ್ಳಿಗಳಿಂದೆ ಪೊಂಜಿನುರಿವೂವಿಂದೆ ರಂಜಿಸುವ ಮುತ್ತುಗದ ಮರಗಳು : ನೆನೆ, ಮನವೆ (ಶ್ರೀರಾಮಾ. ೦೪೦-೪೦೮). [ಪೂ$_2$ + ತಿಂಗಳ್]

ಪೂದಿಸು (ಕ್ರಿ). ಪೂಜೆ ಮಾಡು; ಪೂಜಿಸು; ಅರ್ಚಿಸು : ಉಚ್ಚೆಯ ಬಚ್ಚಲ ಕೊಚ್ಚೆಯ ತಾವ ಪೂದಿಸುವ[ಪಾಠಾಂ. ಪೂಜಿಸುವ, ಪೂಸುವ] ನಿಶ್ಚಯರಿಗೆ ಮಱೆಮಾಡುವ ಮೆಚ್ಚುನುಂಗಿಗೇಕೆ ನಿಶ್ಚಯದ ಅಱಿವು (ಸಗಬೊ. ಕ. ೬೨೪-೦೭೬೨) ; ಇ[ವರ] ದೇವಸ್ತಾನಮಂ ಬ್ರಾ(ಂ)ಹ್ಮಣರು ಪೂದಿಸುವರು (ಸೌಇಇ. IX—1, ೨೬೨-೨೩; ಸು. 1173); ಈ ದಿವ್ಯಲಿಂಗಮಂ ಭಕ್ತಿಯಿಂದಂ ಕೂರ್ತು ಪೂದಿಸಿರೆ ನೀವಖಿಳರು (ವೀಶ್ಯಪು. ೬-೩-೫೦). [<ಪೂಜಿಸು]

ಪೂದಿಱಿ, ಹೂದಿಱಿ (ಕ್ರಿ). ಹೂವುಗಳನ್ನು ಕೊಯ್ಯು,—ಬಿಡಿಸು : ತರಳಿಕೆ ದೇವತಾರ್ಚನಕೆ ಪೂದಿಱಿಯುತ್ತಿರಲಾಗಳೀಕೆಯುಂ ಕರೆದು (ಕಾದಂಉ. ೩೩೭); ನಿನ್ನಬಲಾಳಿ ಪೂದಿಱಿವುದಂ ನೋಡಿಂ ವನಕ್ರೀಡೆಯೊಳ್ (ಜಗಂ. ೦೪-೪೬); ವರಭಕ್ತಂ ಪೂದಿಱಿಯಲ್ ಕರಂಡಮಂ ಕೊಂಡು

ಪುಷ್ಪವನಕೇಳ್ತಂದಂ (ಪೃತಪ. ೬-೦೩). **ಹೂದಿಱಿ :** ತಾನೆ ಬಿತ್ತಿದ ಪುಷ್ಪವಾಟಿಗಾದರದೊಳುದಕವನೆತ್ತಿ ಹೊರೆದು ಹೂದಿಱಿವ ಜಾಣ್ಮೆಯನದೇವಣ್ಣಿಸುವೆನು (ಸಿರ್ಧಾ. ೪-೩೫). [ಪೂ$_2$ + ತಿಱಿ]

ಪೂದುಡುಗೆ 'ಪೂದೊಡಿಗೆ' ನೋ.

ಪೂದುಱುಂಬು, ಹೂದುಱುಬು (ನಾ). ಹೂವುಗಳನ್ನು ಮುಡಿಸಿದ ತುರುಬು; ಪುಷ್ಪಗಳಿಂದ ಅಲಂಕೃತವಾದ ಹೆರಳು : ಪೂದುಱುಂಬಿನ ಪುಣ್ಯವತಿಯರಂದುಗೆಯ ಭಂಗಿಯರುಂ ನಗೆಗಣ್ಗಳ ನೀಱಿಯರುಂ ಗಿರಿಜೆಯ ಚರಣಕಮಲಕ್ಕೆ ಭರದಿಂದೆಱಗುತ್ತುಂ (ಗಿಂಳ. ೪-೨೦ ಪ). **ಹೂದುಱುಬು :** ನನೆಯ ಕಂಚುಳಿಕೆಗಳ ಹೂದುಱುಬಿನ ಹಿಣಿಲ್ಗಳ ದಂಡೆಗಳ . . . ಕನಕರತ್ನಾಭರಣಕಾಂತಿಯ ವನಿತೆಯರು ಬಳಸಿದರು (ತೊರರಾ. ೦-೦೬ ೫೨). [ಪೂ$_2$ + ತುಱುಂಬು$_2$]

ಪೂದುಱುಗಲ್, ಹೂದುಱುಗಲು (ನಾ). ಹೂವುಗಳ ರಾಶಿ,–ಒಟ್ಟಿಲು : ಮೇಡಿನಿ ಬೆಂಗೆ ಬಿಟ್ಟ ಮುಡಿಯಂತೆಸೆದಿರ್ಪುದು ಪುಷ್ಪಿತಂ ತಟೀಪಾದಪವೀಥಿ ಪಂತಿಗುರುಳಂತಿರೆ ಸಂಚಳಮಿನಸಂಚಯಂ ಪೂದುಱುಗಲ್ ತಡಂ ತೊಡರ್ದು ತೋರ್ಪವೊಲೊಪ್ಪಿರೆ ಕೊಂಕುವೆತ್ತ ಸೀತೋದೆ ಸಡಿಲ್ದು ನೀಳ್ದ ಶರದಿಂ ನಿಱಿಗೊಂಡು ಬಟಲ್ದ ಭಂಗಿಯಿಂ (ಅರ್ಥನೇ. ೧-೬೦). **ಹೂದುಱುಗಲು :** ಮೆಱಿದುದಸುರನ ಹಸ್ತದಲಿ ಹೂದುಱುಗಲಿನ ಗಂಧಾಕ್ಷತೆಯ . . . ಶೂಲ ಮಹೋಗ್ರತೇಜದಲಿ (ತೊರರಾ. ೬-೪೯-೩೫). [ಪೂ$_2$ + ತುಱುಗಲ್ (< ತುಱುಂಗಲ್)]

ಪೂದುಱುಬು (ಕ್ರಿ). ಹೂವುಗಳನ್ನು ಮುಡಿದುಕೊಳ್ಳು : ಕಸ್ತೂರಿ ಪುಣುಗು ಜವಾದಿ ಮುಂತಾದ ಸುವಸ್ತುವ ತೊಡೆದು ಪೂದುಱುಬಿ ವಿಸ್ತಾರದಿಂದ ಪಾಡಿಸಿಕೊಂಡಳಾಗ ಸಮಸ್ತಭೃಂಗಗಳಿಂದ ತನ್ನ (ಶರತ. ೦೦-೭೭).

[ಪೂ$_2$ + ತುಱುಬು$_1$ (< ತುಱುಂಬು$_1$)]

ಪೂದೂಳಿ, ಪೂಧೂಳು (ನಾ). ಹೂವಿನ ಹುಡಿ ; ಪುಷ್ಪಪರಾಗ : ಪವನಂ ಪೂದೂಳಿಯಿಂ ರಂಗಮಂ ಕ್ರಮದಿಂ ಮಾಳ್ಪುದು ಕೇಕಿ ಬರ್ಹದೆಲರಿಂ ಹೋಮಾಗ್ನಿಯಂ ವರ್ಧಿಕುಂ (ಶಬಶಂ. ೨-೭೨). **ಪೂಧೂಳು :** "ಪರಾಗಃ, ಕೌಸುಮೇರೇಣುಃ—ಪೂಧೂಳು" (ಸಿದ್ಧಾಂತಿ. ೩೭೭).

[ಪೂ$_2$ + ದೂಳಿ]

ಪೂದೇರ್, ಹೂದೇರ್ (ನಾ). ೧. ಹೂವುಗಳಿಂದ ಅಲಂಕರಿಸಿದ ರಥ ; ಪುಷ್ಪರಥ : ಮಾಲೆಗಾಱ ಪೂದೇರುಳ್ಳನ್ನೆಗಂ ಸಲ್ಗೆ (ಹೈಆಂ. ೦೮೩೬, ೨೬-೫೫; 876 ; ತೊಂಡೆದುಟಿಯ ತರುಣೀರತ್ನದ ನುಣ್ಮಂಡೆ ಮನೋಭವನೇಱುವ ಪೂದೇರಂದದಿನೊಪ್ಪಿದುದು (ಜಯಕಾ. ೫-೬); ಮಿಸುಪ ಕೇದಗಿಯೆಸಳ ಕಿಗ್ಗಟ್ಟ ಕಟ್ಟಿ ರಂಜಿಸುವ ಪೂದೇರನಾ ರತಿಯ ಕೈವಿಡಿದತರಿ ಬಿಸಜಾತ ಪತ್ರಂಗಳಿಂದೆ ಪೊಂಬಾಳೆಗಳ ಚಮರದಿಂ ರಂಜಿಸಿದನು (ಸಬಪು. ೩೫-೬). ೨. ಪುಷ್ಪಕವಿಮಾನ : ರಾಮಂ . . . ಪೂದೇರೊಳ್ ಸರ್ವರಿಂ ಕೂಡಿ, ನಿಜನಗರಿಯಂ ಪದಿನಾಲ್ಗಾಲಂ ಸಮೆಯೆ ಪುಗುತೆ (ಅದ್ಭುತ. ೩೭-೨೯). **ಹೂದೇರ್ :** ೧. ಸುದತೀಮಣಿ . . . ಅರಸಂಚೆಯ ಕಿಱುದುಪ್ಪುಳುವಾಸಂ ಪರಿಸದಿನೇಱಿದಳಂಗೋದ್ಭವನಡರ್ದರಗಿಳಿ ಹೂಡಿದ ಹೂದೇರೇಱುವ ರತಿಯೆಂಬಂದದೊಳು (ಜಯಕಾ. ೨-೫೨). [ಪೂ$_2$ + ತೇರ್$_2$]

ಪೂದೊಂಗಲ್, ಪೂದೊಂಗಲು (ನಾ). ಹೂವಿನ ಗೊಂಚಲು; ಪುಷ್ಪಮಂಜರಿ : ಪುಷ್ಪಪರಾಗಮಲ್ಲುಗುವಿನಂ ಪೂದೊಂಗಲಲ್ಲಾಡಿ ತೋಱುವಿನಂ . . . ಲೀಲೆಯಿನಾ ಪ್ರದೇಶದೊಳದಾರ್ ತನ್ವಂಗಿಯರ್ ಕ್ರೀಡಿಪರ್ (ಜಗಪಿ. ೧೦ ೬೬). **ಪೂದೊಂಗಲು :** ಕಂಗೊಳಿಸುವ ಕಾಮಗೆ ಬೃಹಸ್ಪತಿ ಪೂದೊಂಗಲನಿತ್ತು ಸಂಧಿಸಿದ (ಪೋಹತ. ೫-೪೩) ; ಸುರಿವ ಪೂದೊಂಗಲ ತುಷಾರದಿಂ . . . ತಿರದಿಂಪೆಲ್ಲಿಯುಂ ನಂದನದೊಳು (ಸ್ವಿಮಿಶಾ. ೩-೨೯).

[ಪೂ$_2$ + ತೊಂಗಲ್]

ಪೂದೊಂಗಲು 'ಪೂದೊಂಗಲ್' ನೋ.

ಪೂದೊಂಬೆ (ನಾ). = ಪೂದೊಂಗಲ್ : ಪೂದೇರ ಬಲಬಂದ ಪೊಣರ್ವಕ್ಕಿ ಗಾಲಿಯ ಪೂದೊಂಬೆಯಿಂದ ಪೂಜಿಸಿದ ಪಾದಕೆ ನಮಿಸುತ ಗಿಳಿಗುದುರೆಯ ಮಾರನಾದರದೊಳಗೇಱಿ ನಡೆದ (ಪರ್ಧಶ. ೦೦-೧೦೩) ; ನಗೆ ಮಲ್ಲಿಗೆ ಮೊಗದಾವರೆ ಕಣ್ಗಾಡಿ ಸೊಗಸುವ ಕನ್ನೈದಿಲಾಗೆ ಮುಗುಳಂಬನ ಮುಡಿಗ ಮರಿದ ಪರಿಮಳವೊಗುವ ಪೂದೊಂಬೆಯಂತಿಹರು (ಕಂಸಪ. ೬-೯೯).

[ಪೂ$_2$ + ತೊಂಬೆ$_1$]

ಪೂದೊಡಂಬೆ$_1$ (ನಾ). ಹೂವಿನ ದೇಟು,—ತೊಟ್ಟು : "ಪ್ರಸವಬಂಧಂ ವೃಂತದೆನೆ ಪೂದೊಡಂಬೆಗಳ ಪೆಸರಕ್ಕು" (ಮಂಗರಾ. ೩೩-೫); ಕೆಂದಳಿರ್ ಮಿಸುಪ ಕೆಂಗಱಿಯಾದುದು, ಪೂದೊಡಂಬೆ ಪಿಳ್ಳಾದುದು (ಶಮದ. ೨೪೨ ಪ್ರಯೋ). [ಪೂ$_2$ + ತೊಡಂಬೆ$_1$]

ಪೂದೊಡಂಬೆ$_2$, ಹೂದೊಡಬೆ (ನಾ). = ಪೂದೊಂಗಲ್ : ಬಂದಲೆದುದು ಪಶ್ಚಿಮಾನಿಳನಮರ್ಚಿತು ಕೇತಕಿ ಪೂದೊಡಂಬೆಯಂ (ಗಿಂಳ. ೯-೩೬); ಮುಗುಳ್ತುದು ಜಾದಿ ಕದಂಬಕೋರಕಂ ಬಲಿದುದು ಪೂದೊಡಂಬೆಗಳ ನಾಂತುದು ಕೇತಕಿ (ಏಷ್ಮುಪು. ೫-೨-೯೦); ಸುತ್ತಿಡಿದ ಕೆಂದಳಿರ ಕೆಂಗಾವಿಗಾಸೆ ತಾನಿತ್ತಂಡಮಾಗಿ ನೇಲುವ ಪೂದೊಡಂಬೆಗಳ್ ಮತ್ತೆ ಝುಲ್ಲಿಗಳ್ (ಮಹಾಪಿ. ೨೬-೩೯). **ಹೂದೊಡಬೆ :** ತಲ್ಲಣದ ತೋಪಿನ ವಿಷಾದದ ವಲ್ಲರಿಯ ಹೂದೊಡಬೆಗಳ ಹೊಯ್ವಳ್ಳೆಗಳ ಮುನಿಜನವ ಕಂಡರು ಪಾಂಡು ನಂದನರು (ಕುಮ್ಮಾಲಿ. ೨೨-೨೨). [ಪೂ$_2$ + ತೊಡಂಬೆ$_2$]

ಪೂದೊಡವು (ನಾ). ಹೂವಿನ ಆಭರಣ,–ಒಡವೆ : ಉಟ್ಟ ನವಾಂಬರಕ್ಕ ಮರೆ ಪೂದೊಡವಂ ತುಡುವೊಂದು ಕೌತುಕಂ ಪುಟ್ಟೆ ಮುರಾರಿಗೀಯಲರ ಕಂಪನೆ ಕಾಣಿಕೆಯಾಗಿ ಪೋಗಿ ನೀಂ ಕೊಟ್ಟೊಡಗೊಂಡು ಬರ್ಪುದು (ಜಗಪಿ. ೬-೦೨); ಒಳ್ಪಿಂ ಸಮೆದಚ್ಚಪೂದೊಡವನೋರಂತಿಟ್ಟು ನಾನಾ ವಿಳಾಸಂದೋಱುತ್ತಿನಿಯರ್ಗೆ ರಂಜಿಪುದಜಸ್ರಂ ಖೇಚರೀಸಂಚಯಂ (ಶಬಶಂ. ೨-೩೯). [ಪೂ$_2$ + ತೊಡವು]

ಪೂದೊಡಿಗೆ, ಪೂದುಡುಗೆ, ಹೂದುಡಿಗೆ, ಹೂದೊಡಿಗೆ (ನಾ). = ಪೂದೊಡವು : ಮಧುಕರಿಕೆಯಂ ಪೂದೊಡಿಗೆಯಂ ಮಾಡಲುಂ ಮಯೂರಿಯಂ ಕಿನ್ನರಮಿಥುನಂಗಳಂ ಸಂಗೀತಶಾಲೆಗೆ ಕಳುಪಲುಂ . . ಪೆಸರ್ವೆಸರೊಳೆ ಕರೆದು ಪೇಟ್ವ ಮನೋಹರಾಲಾಪಂಗಳಂ ಕೇಳುತ್ತಂ ಪೋಗೆಪೋಗೆ (ಕಾದಂಪೂ. ೦೦೦೬). **ಪೂದುಡುಗೆ :** ಬಗೆಗೆ ವಂದ ಪೂಗಳೊಳ್ ಪೂದುಡುಗೆಯಂ ಮಾಡಿ ವಸಂತಕಾಂತೆಯರಂತೆ ನೆಱಿಯೆ ಕೆಯ್ಗೆಯ್ದಾಗಳ್ (ಆದಿಪು. ೦೦-೦೨೪ ಪ); ಪೂದುಡುಗೆಯಿಂ ಚೆಲ್ವಾದರಾ . . . ಬಾಲೆಯರ್ (ಶಾಂತಿಪು. ೮-೧೫). **ಹೂದುಡಿಗೆ :** ವಾಸಂತಋತುಕಾಲಸಮಯ ಕುಸುಮವನಾ ವಿಳಾಸಿನೀಜನ ತೊಡಿಗೆಯಂ ಮಾಡಿ ತಂದೊಲ್ದು . . . ಶಿವಾರ್ಪಿತಂ ಮಾಡಿ ಹೂದು [ಪಾಠಾಂ. ದೊ]ಡಿಗೆದೊಟ್ಟು (ಹಸಕಾ. ೩-೪೯). **ಹೂದೊಡಿಗೆ :** ಎಲೆ ಮುಗ್ಧೆ . . . ನಿನ್ನ ಸೌಕುಮಾರ್ಯಕ್ಕೆ ಹೂದೊಡಿಗೆ ಹೊಱಿ (ನಂಬರ. ೦೪-೦೩). [ಪೂ$_2$ + ತೊಡಿಗೆ (< ತೊಡುಗೆ)]

ಪೂದೊಣೆ$_1$ (ನಾ). ಹೂವುಗಳಿಂದ ತುಂಬಿದ ಕೊಳ; ಹೂಗೊಳ : ನೈದಿಲಿಂ ಮೆಱಿವ ಪೂದೊಣೆಗಳಿಂದೆಸೆದತ್ತು . . . ರಜತಶೈಲಂ (ಭಾವತಾ. ೦-೨೬). [ಪೂ$_2$ + ದೊಣೆ$_1$]

ಪೂದೊಣೆ$_2$ (ನಾ). ಹೂಬಾಣಗಳ ಬತ್ತಳಿಕೆ : ಮನೋಜನಸ್ತೃತತಿ ಗೊಪ್ಪುವ ಪೂದೊಣೆಯಕ್ಕುಮಿಾಕ್ಷಿಸಲ್ ಮಂಜುಳದಾಡಿಮಿಾಕುಸುಮ ಮೆಂದಱಿದೊರ್ವ ಸುಧಾಂಶುವಕ್ತ್ರೆ . . . ಕರು ತಿಱಿದಳ್ಬೆಡಂಗಿನಿಂ (ಕಾದ್ಯಟಿ. ೯-೬೦). [ಪೂ$_2$ + ದೊಣೆ$_2$ (< ತೊಣೆ$_2$)]

ಪೂದೋಂಟ, ಪೂದೋಟ, ಹೂದೋಂಟ, ಹೂದೋಟ (ನಾ). ಹೂವುಗಳನ್ನು ಬೆಳೆಯುವ ತೋಟ ; ಪುಷ್ಪೋದ್ಯಾನ : ದೇಗುಲದ

ಬಡಗಣ ಪೂದೋಂಟ (ಮೃಅಂ. ೦೯೨೯, ೬೫-೯; 1024) ; ಮತ್ತೊರ್ವ ಚೆನ್ನೆ ಪೊನ್ನ ಕರುಮಾಡಮಂ ಬಳಸಿ ಬೆಳೆದ ಪೂದೋಂಟಮಂ ಪೊಕ್ಕು ಮೆಯ್ಗರೆದ ನಲ್ಲನಂ ನೆವದಿನಿಂತೆಂವಳ್ (ಕಸ್ತೂರಿ. ೬೪) ; ಅಲ್ಲಲ್ಲಿ ಪೂದೋಂಟವಲ್ಲಲ್ಲಿ ಕೊಳಗಳಂತಲ್ಲಲ್ಲಿ ಕರ್ವಿನ ಪೊನಲು (ಪರ್ಧಶ. ೦-೫೩). **ಪೂದೋಟ :** "ಪುಷ್ಪವಾಟಿ ತಾಂ ಪೂದೋಟಂ" (ಪಸ್ತುಕೋ. ೩೨-೦೨) ; ಪೂದೋಟಮಂ ವಾಜಿಯಂ . . . ತಿಳಿಯಲ್ ಸ್ವಪ್ನದಿ ಲೇಸಲ್ಪೆ (ಸೋಮೇಶ. ೬೯) ; ಸೌರಭ್ಯವ ತಾಳಿದನೇಕ ಪೂದೋಟ ಕೇಳಿಯ ವನಗಳಿದ್ದುವು ಪುರಲಕ್ಷ್ಮಿಯ ತಾಳಿಯ ಮರಕತದಂತೆ (ಪೋಹತ. ೨-೫೩) ; ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ತೊತ್ತಳದುಳಿವುದು (ಶೃಂಪಾ. ೨೦-೬). **ಹೂದೋಂಟ:** ಪಡುವಲು ಹೂದೋಂಟ (ಸೌಷಇ. XI-ii, ೦೨೨-೧೩ ; ಸು. 1072) ; ಹೂದೋಂಟಗಳನುಱ ಹೊಕ್ಕು ಚೆಲುವನಾಗಿ ಪರೀಕ್ಷಿಸುತ್ತಂ (ಬಸಪು. ೨೨-೬). **ಹೂದೋಟ :** ಹಲವು ಹೂದೋಟಗಳವರ್ಜಿಸಿ . . . ಹೂಗಳನೆಯ್ದೆ ಕುಯಿತಂದು (ಬಸಪು. ೨೨-೨೫); ಪರಿಪರಿಯ ಹೂದೋಟಗಳ ಹೊಯ್ದೊರಸಿದನು . . . ಲಾಂಗೂಲದಲಿ ಕಲಿ ಹನುಮ (ಶೂರರಾ. ೫-೯ ೦೩) ; ಇಂತಹ ದಾಂಪತ್ಯ ಪ್ರಣಯಲೀಲೆ ಗಾಳಿ ಬೀಸದ ಹೂದೋಟ (ಕಸ್ತೂಪಾ. ೦೦೯).

[ಪೂ$_2$ + ತೋಂಟ]

ಪೂದೋಟ 'ಪೂದೋಂಟ' ನೋ.

ಪೂದೋಱಿಸು (ಕ್ರಿ). ಹೂವು ಬಿಡುವಂತೆ ಮಾಡು ; ಪುಷ್ಪಿಸುವಂತೆ ಮಾಡು : ಮಿಂಡೆದ್ದ ಹೆಣ್ಗಳುಪವನಕ್ಕೆ ನಡೆತಂದು . . . ಕಂಡಕಂಡವನಿ ಜಾತಂಗಳು ಚಿಗುರಿಸಿದರೊಡನೆ ಪೂದೋಱಿಸಿದರು (ಶೃಂಪಾ. ೩೦-೫).

[ಪೂ$_2$ + ತೋಱಿಸು]

ಪೂಧೂಳು 'ಪೂದೂಳಿ' ನೋ.

ಪೂನಾಡು 'ಪುನ್ನಾಡು' ನೋ.

ಪೂನಿಱು (ಕ್ರಿ). ಹೂವುಗಳನ್ನು ಹೆಣೆ,—ಮಾಲೆಕಟ್ಟು : ಲಂಜಿಗೇಸರಂ ದೇವರ್ಕೆ ಪೂನಿಱುವ ಮಾಲ (ಲಾ) ಕಾರಗ್ಗೆ ಅರ್ದ್ಧ ವಿಸದಿ (ಇಲ. X, ೬೬-೨; 578). [P ಇದು 'ಪೂ ನಿಱಿ' ಎಂಬುದರ ಅಪಲಿಖಿತವಿರಬಹುದು]

ಪೂನೀರ್, ಹೂನೀರು (ನಾ). ಹೂವಿನ ರಸ ; ಮಕರಂದ ; ಪುಷ್ಪರಸ : ತಳಿರಂ ತೂಗಿ ಪರಾಗಮಂ ಪಿರಿದು ಪೂನೀರಂ ತಡಂಗೂಡಿ ಗುಗ್ಗುಳ ನಿರ್ಯಾಸಮನಾಂತು . . . ಏಂ ಗಂದಿಗರಂತೆ ಬಂದೊಲೆದುದೋ ಮತ್ತೊಂದು ಮಂದಾನಿಳಂ (ಅರ್ಧನೇ. ೫-೯೭). **ಹೂನೀರು :** ನೀರಿನೊಂದು ನೀರಜಾತ ಬೆಳಕಿಗಾಗಿ ಕೆರಳಿತು ಈ ಕಿರಣಕರಳಿತು ಹೂವ ಹೊಕ್ಕ ಕಿರಣವಾಗ ಹೂನೀರ ನೆಕ್ಕಿತು (ಗಂಗಾತ. ೦೫-೦೫). [ಪೂ$_2$ + ನೀರ್]

ಪೂಪ (ನಾ). ಹಿಟ್ಟಿನಿಂದ ಮಾಡುವ ದೋಸೆ, ಇಡ್ಲಿ, ಹೋಳಿಗೆ ಮುಂತಾದ ಮೃದುವಾದ ಭಕ್ಷ್ಯ : "ಪೂಪಃ, ಅಪೂಪಃ, ಪೂಫಳಿಕಾ —ಈ ೩ ಪಕ್ವಾನ್ನಂ" (ಹಲಾಯು. ೫೩-೦೬೪) ; ವ್ಯಕ್ತ ಕೀರಾನ್ನಮಂ ಘೃತದುಗ್ಧಶರ್ಕರೆಯ ಧ್ಯಕ್ತಿಯಿಂಗೈದ ಕಜ್ಜಾಯಮಂ ಪೂಪಮಂ ಮುಕ್ತ ಭವಜಾಲನಾ ಶಿವಲಿಂಗನಾರೋಗಿಸಿದನು (ದುರಪು. ೬-೫೨) ; ಲಡ್ಡು ಚಕ್ಕಲಿ ತರಗು ಪೂಪವ [ಪಾಶಾಂ. ತುಪ್ಪವ] ಬಡ್ಡಿಸಿದ ಪೊಂದಟ್ಟೆಯನು ಮುಂದೊಡ್ಡಿ (ಪಾಶಾಂ. ೧೬೬-೨೯). 'ಅಪೂಪ' ಪರಾ. [ಸಂ.]

ಪೂಪಲಿಕೆ (ನಾ). = ಪೂಪ : "ಪೂಪಲಿಕಾ ಪೂಪನಾಮಂ" (ಪಸ್ತುಕೋ. ೯೪-೦೨). [ಸಂ. ಪೂಪಲಿಕಾ]

ಪೂಪುಟ್ಟಿಗೆ (ನಾ). ಹೂವಿನ ಬುಟ್ಟಿ ; ಪುಷ್ಪಕರಂಡ : ಪೂಪುಟ್ಟಿಗೆ ಪನ್ನೀರ್ಗುಪ್ಪಿಗೆ . . . ಕರ್ಪುರ ಕರಡಿಗೆಯಿರ್ದವು (ಸೊಬಸೋ. ೨೩-೩೨).

[ಪೂ$_2$ + ಪುಟ್ಟಿಗೆ$_1$ (< ಪುಡಿಕೆ)]

ಪೂಪುಣುಂಬ (ನಾ). ಹೂವುಗಳನ್ನು ಬಾಣಗಳಾಗಿ ಉಳ್ಳವನು ; ಮನ್ಮಥ : "ಇಂಗೋಲ್ವಿಲ್ಲಂ . . . ಪೂಪುಣುಂಬು . . . ಗಿಳಿದೇರು — ಇವು ೧೩ ಕಾಮದೇವಂಗೆ ಪೆಸರ್" (ಕಸಾ. ೪೭-೦೩) : "ಕುಡುವಿಲ್ಲ ಸಿಂಗರ ಪೂಪುಣುಂಬ ಮಿಾಂಬಟಿಗೆಯ ಪೆಣ್ಬಡೆಯನೈಸರಲ ಕಾವ ಜತಿಗಳವಗೆಯ ನೆನೆ ಮನ್ಮಥನ ನಾಮಮಕ್ಕುಂ" (ಕಬ್ಬಿಕ್ಕ. ೯). [ಪೂಪುಣುಂಬು + — ಅ$_7$]

ಪೂಪುಣುಂಬು (ನಾ). ಮನ್ಮಥನ ಹೂವಿನ ಬಾಣ, — ಪುಷ್ಪಾಸ್ತ್ರ : ಕಯ್ಪುಱಿಗುಟ್ಟಿಯಾಡಿದರ್ ; ಪೂಪುಣುಂಬು ; ಪಲ್ಪಱಿಗುಟ್ಟಿದಂ (ಶಮದ. ೬೭ ಪ್ರಯೋ) ; ಭಾವಜನಾರ್ಪಿಂ ಪೂಪುಣುಂಬಂ[ಶಾಶಾಂ. ಪೂವಿನಂಬಂ] ಪೂಡಿದಂ (ದಶಾವ. ೬-೬೦ ಪ). [ಪೂ$_2$ + ಪುಣುಂಬು (< ಪುಳುಂಬು)]

ಪೂಪುರುಳ್ (ನಾ). ಹೂವಿನ ಸತ್ತ್ವ ; ಮಕರಂದ : ಪೊಂಬೆಳ್ಳಿ ಪೂಪುರುಳ್ ಬೆಳ್ದಿಂಗಳಿನ ಬಿತ್ತೆ ತುಂಬಿದಿರ್ಪಿನ ಬಗೆಯ ಬರೆಹದೊಳ್ಪಲ್ತೆ ? (ಕಾಲೂರ. ೬೫-೦೦೨). [ಪೂ$_2$ + ಪುರುಳ್]

ಪೂಪೊಡೆಯ, ಹೂಪೊಡೆಯ (ನಾ). ಹೊಕ್ಕುಳಲ್ಲಿ ತಾವರೆಯ ಹೂವುಳ್ಳವನು; ಪದ್ಮನಾಭ; ವಿಷ್ಣು : "ವಿಷ್ಣು ಪೂಪೊಡೆಯನೆಂದೆನಲ್" (ಕರ್ಣಾಶಿ. ೧೫). **ಹೂಪೊಡೆಯ :** ಹರನ ಹೆಟ್ಟುಗೆ ಹೂಪೊಡೆಯನೋಪಳ ನಜನರಸಿಯನಂಗಸಕಥವನ ತರುಣಿಯರನು ಗೆಲ್ದಳು ಗಾಡಿ ಸಿರಿಜಾಣ್ಮೆ ಪಿರಿದಪ್ಪ ರೂಪಿನಿಂದವಳು (ಶ್ರೀಶಾಂ. ೩-೭೦). [ಪೂ$_2$ + ಪೊಡೆ$_3$ + — ಅ$_7$]

ಪೂಬನ (ನಾ). = ಪೂದೋಂಟ : ಬಾಲಕರೆಮ್ಮಯ ಪೂಬನದಿ ಆಡಲು ಬಂದು ನುಡಿವರು (ಗಿಳಿಪಿ. ೦೪-೫೨). [ಪೂ$_2$ + ಬನ$_1$]

ಪೂಬಾಣ, ಹೂಬಾಣ (ನಾ). ೧. ಹೂವಿನ ಬಾಣ ; ಮನ್ಮಥನ ಬಾಣ. ೨. ಮನ್ಮಥ ; ಕಾಮ : ಬಾಣಪುತ್ರಿಯ ಕೆಳದಿಯರ ನೋಡಿದರು ಪೂಬಾಣಗೆಣೆಯ ಸದ್ವಿಟರು (ಪೋಹತ. ೨೯-೨೦). **ಹೂಬಾಣ :** ೩. ಸ್ಫೋಟವಾದಾಗ ಮೇಲಕ್ಕೆ ಸಿಡಿದು ಹೂವಿನಾಕಾರದ ಕಿಡಿಗಳನ್ನು ಸೂಸುವ ಒಂದು ಬಗೆಯ ಸುಡುಮದ್ದು : ಈ ಜಾನಸಾಲೆಯಲ್ಲಿ ಹಗಲುಬತ್ತಿ, ಹೂಬಾಣ, ಆಕಾಶಕೊಳವಿ . . . ಉತ್ಸವಗಳ ಕಾಲದಲ್ಲಿ ಹತ್ತಿಸುವಂತೆ ಕಟ್ಟಲೆ ಮಾಡಿದರು (ಸುಹಾಪಂ. I, ೦೨೬) ; ಎಡವೂರ ತಳದಲ್ಲಿ ಏನೇನ ಶಡಗರ . . . ಹಾರೂವ ಹೂಬಾಣ ಹೂಬತ್ತಿ ಕಂಡಿರಿ (ಕಸ್ತೂಪಾ. ೯). [ಪೂ$_2$ + ಬಾಣ$_2$]

ಪೂಬಿಡು, ಹೂಬಿಡು (ಕ್ರಿ). ಹೂವುಗಳನ್ನು ಹೊಂದು ; ಪುಷ್ಪಿತವಾಗು : ಪೂಬಿಡುವ ವಸಂತದಾ, ಪಣ್ ಬಿಡುವ ಗ್ರೀಷ್ಮದಾ, ಮುನ್ನಱಿವು ಇರ್ದುದಿಲ್ಲಂ (ಬಿಕ್ಕಪ್ರ. ೨೯-೫೦೬). **ಹೂಬಿಡು :** ಒಂದೂವರೆ ತಿಂಗಳಿಗೆ ಸಸಿಗಳು ದೊಡ್ಡವಾಗಿ ಹೂಬಿಡುತ್ತವೆ (ಮುಂಬಿಯು. ೯-೨೭) ; ಗಿಡ ಹಬ್ಬುವುದು ; ಚಿಗುರುವುದು ; ಹೂಬಿಡುವುದು ; ಹಣ್ಣು ಬಿಡುವುದು (ಸಾಹಿಪೀ. ೮೦). [ಪೂ$_2$ + ಬಿಡು$_1$]

ಪೂಮಡಿ (ನಾ). ಹೂವಿನ ಮಡಿಕೆ ; ಹೂದಂಡೆ : ತಲೆವಿಕ್ಕಿ ಕಟ್ಟಲೆಗಮಿಂದು ಮರೀಚಿಗಮಾಯ್ತು ನಾಡೆ ಕಣ್ಗಳವಡೆ ಮಲ್ಲಯುದ್ಧಮೆನೆ ದೇಸೆಯ ಪೂಮಡಿಯಂ ತೊಡರ್ಚಿದರ್ (ಕಂದ್ರಪು. ೬-೬೪). [ಪೂ$_2$ + ಮಡಿ$_2$]

ಪೂಮರ (ನಾ). ಹೂವು ಬಿಡುವ ವೃಕ್ಷ ; ಹೂವಿನ ಮರ : ತಳ್ತೆರಟ್ಟಡಿಯ ಪೂಮರದಿಂ ಕಟಿವೂಗಳತ್ತಮಿತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ (ಆದಿಪು. ೦-೬೦) ; ಪೂಮರನಂ ಕೋಡೆಗ ವೇಱಿದಂತೆ ಕಬ್ಬಿನ ತೋಂಟಮಂ ನರಿ ಪೊಕ್ಕಂತೆ (ಧರ್ಮಾಮೃ. ೨-೬೦).

[ಪೂ$_2$ + ಮರ$_1$]

ಪೂಮಲಗು (ನಾ). ಹೂವಿನ ದಿಂಬು ; ಹೂವುಗಳಿಂದ ರಚಿಸಿದ ಮೆತ್ತೆ : ಪೂಗೋಲ ತೂಗುತೆ ತೆಳಿರ ಪಾದಾಸನ ಮೇಗೆ ಕಾಲಿಟ್ಟು ಪೂಮಲಗ ರಾಗದೊಳೊಱಗಿ ತಾವರೆಗದ್ದುಗೆಯೊಳಿರ್ದ ಪೂಗೋಲನು (ಪರ್ಧಶ. ೧೦-೬೭).

[ಪೂ$_2$ + ಮಲಗು$_2$ (< ಮಲಂಗು$_2$)]

ಪೂಮಳೆ 'ಪೂವಟಿ' ನೋ.

ಪೂಮಳೆಗಱ 'ಪೂವಟಿಗಱ' ನೋ.

ಪೂಮಟ್ಟ ‘ಪೂವಟ್ಟ’ ನೋ.

ಪೂಮಾಲೆ, ಹೂಮಾಲೆ (ನಾ). ಹೂವಿನ ಹಾರ, — ದಂಡೆ; ಪುಷ್ಪಮಾಲೆ: ನಿನ್ನಾಜ್ಞೆ ಪೂಮಾಲೆಯಂದದೆ ನಿಂದಿರ್ಪುದು ಮತ್ಕಿರೀಟದೊಳ್ (ಅಭಿ. ೦೩-೦೬); ಕಪಿಯು ಕೊರಲೊಳ್ ಪೂಮಾಲೆಯಿಕ್ಕಿದಂ ತಾನುಮಕ್ಕುಂ (ರರ್ಮಾಮ್ಯ. ೦-೦೦೬); ಕಂಠದೊಳೊಂದಿಸಿದ ಕೊರಲಗುಮಂ ಪೂಮಾಲೆಯಂ ಮಾಡಿ ಅಕ್ಷಯಂ ನಿಟಲಾಕ್ಷನಭವಂ . . . ಆಕ್ಷಣದೊಳುರು ಮೋಕ್ಷವಂ ಕೊಡಲು (ಬಸವ. ೨೭-೩೦). **ಹೂಮಾಲೆ:** ಹೂಮಾಲೆಗಳ ಸಿಂಪಿಸಿದ ಗಂಧದ ಬಂಧದಕ್ಷತೆಯ ಕೀಲಣೆಯ ಮಣಿವೆಳಗುಗಳ ಹರಿದಾಳಿಯಲಿ . . . ಎಸೆದುದಂಕುಶ ಭಟನ ಮುಷ್ಟಿಯಲಿ (ಶಾಸ್ತ್ರಕ್ರೀ. ೩-೩೬); ಎತ್ತಿದ ಹೂ[ಹ.ಕಾಂ. ಪೂ]ಮಾಲೆ ಬಿಲ್ಲಿನಂತಿರಲಾಗ ಮುತ್ತುವಾಱಡಿ ಹೆದೆಯಾಗೆ ಚಿತ್ತಭವಗೆ ಪುಷ್ಪಚಾಪವನೀವೊಲು ಬಿತ್ತರದೊಳಗೊರ್ವಳೆಸೆಗು (ಪರ್ಧಾಸ. ೦-೦೦೩); ಕೋತಿಯು ಕೈಯಲ್ಲಿ ಹೂಮಾಲೆ ಕೊಟ್ಟ ಹಾಗೆ (ಗಾಪ).

[ಪೂ$_2$ + ಮಾಲೆ]

ಪೂಮಾಲೆಗಾರ್ತಿ (ನಾ). ಹೂವು ಮಾರುವವಳು; ಹೂವಾಡಿಗಿತ್ತಿ: ಮಲ್ಲಿಗೆಯಲರ್ದಂಡೆವಿಡಿಯೆ ಬಂದೆಱಗುವ ಜಿಲ್ಲಿದುಂಬಿಗೆ ಬೆರ್ಚಿ ನಿಂದು ಸೊಲ್ಲಿಪ ಪೂಮಾಲೆಗಾರ್ತಿ ಕಾವನ ಕಬ್ಬುವಿಲ್ಲಿನಂತಿರ್ದಳು (ಪೋಷಕ. ೩-೦೬).

[ಪೂಮಾಲೆ + — ಕಾಱ + — ತ್ತಿ$_1$ (≷ — ಇತ್ತಿ)]

ಪೂಮಾಱು, ಹೂಮಾರು (ಕ್ರಿ). ಹೂವುಗಳನ್ನು ವಿಕ್ರಯಿಸು,— ಮಾರು: ಇದು ಮನೆಯಾಣ್ಮನಂ ಮಾಱುವಂದಮಲ್ಲದೆ ಪೂಮಾಱುವಂದಮಲ್ತು (ಪಂಪಭಾ. ೯-೬೧ ಪ). **ಹೂಮಾರು:** ಹೂಮಾರುವ ಅಂಗಡಿಯಲ್ಲಿ ಹುಲ್ಲು ಮಾರುವುದುಂಟೆ? (ನಾಗಚಂ. ೦೨೨) · ·ಹೂಮಾರಿದ ಕೈಲಿ ಹುಲ್ಲು ಮಾರಿಸಬಾರದು (ರರ್ಮಾರ ೬೬). [ಪೂ$_2$+ಮಾಱು$_2$]

ಪೂಮಿಡಿ, ಹೂಮಿಡಿ (ನಾ). ತೀರ ಎಳೆಯ ಕಾಯಿ; ಚಿಕ್ಕ ಮಿಡಿ: ಮರ್ಮರಪತ್ರಮಂಜುತಳಮಂ ನಡುವಂತಿರೆ ನಟ್ಟೊಡೆತ್ತ ಬೀಟ್ಟರ್ಮಗುಟ್ಟಿತ್ತ ಪೂಮಿಡಿಯ ಪೂವಿನ ಕಾಯ್ಗಳ ಕಯ್ದುವುಳ್ಳುಗುಂ (ಶಾಂತಿಪು. ೬-೯೯); ಸುತ್ತಿಟ್ಟು ಪರ್ಬಿದುದು ಮದವೇರಿ ಪೂಮಿಡಿಗಳೆತ್ತಲುಂ (ಮಲ್ಲಿನಾ. ೦೯-೩); ಕೋದು ಪೂಮಿಡಿ ತಳಿರ ಕಾಡು ನರುವೊಗರಿನಿಂ ಪೂದಿಂಗಳರಸನಂ ಕರೆಯುಗುಂ ತುಳಿಲ್ಗೆ (ಕಾಲೂಕ. ೦೦೯-೨೯೬). **ಹೂಮಿಡಿ:** ಹೂಮಿಡಿಯ ಹಱಿದು ಒತ್ತಿ ಹಣ್ಣಾ ಮಾಡಿದೆನೆಂದರೆ ಹಣ್ಣಾಗಬಲ್ಲುದೆ (ಅಪಸಂ.೨೨೬-೦೦೩೯); ಎಳೆಯ ಹೂಮಿಡಿಗಳು ಹಱಿದು ಹಣ್ಣಂ ಮಾಡಲಳವೆ (ಶಿಪು. ೬-೯); ಗೋದಿ ಹೊಡೆಗಟ್ಟಿರಲು ಕಡಲೆಯ ಮಡಿಲು ಹೂಮಿಡಿ ತುಂಬಿತು (ಪಂಪು. ೧೨-೦೨). [ಪೂ$_2$+ಮಿಡಿ$_4$]

ಪೂಮುಡಿ$_1$, ಹೂಮುಡಿ$_1$, ಹೂವುಮುಡಿ (ಕ್ರಿ). ಹೂವುಗಳನ್ನು ಧರಿಸು,—ಮುಡಿದುಕೊಳ್ಳು: ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳ್ (ಗದಾಯು. ೬-೩೦). **ಹೂಮುಡಿ$_1$:** ಹಸುರೆಲ್ಲವು ಕುಸುರಾಯಿತು ಹೂಮುಡಿಯಿತು ಬೇಲಿ (ಪಂಪು. ೭-೨೨); ನೀಳ್ಕೊಂಬಿನಿಂ ಮಾವು ಹೂಮುಡಿಯುಂ ತಿಹುದು (ಕಾಲೂಕ. ೦೦೩-೨೩೯). **ಹೂವುಮುಡಿ:** ಹೂವುಮುಡಿಯುವ ಹಕ್ಕು ಹೆಂಗಸರಿಗೆ ಜನ್ಮಸಿದ್ಧವಾದುದು (ಡೂಪಶ್ಯ. ೬೦). [ಪೂ$_2$ + ಮುಡಿ$_1$]

ಪೂಮುಡಿ$_2$, ಹೂಮುಡಿ$_2$ (ನಾ). ೧. ಹೂವುಗಳನ್ನು ಮುಡಿದುಕೊಂಡ ಹೆರಳು.—ಜಡೆ: ಬಟಲ್ಮುಡಿಯ ಸೋರ್ಮುಡಿಯ ಪೂಮುಡಿಯ ನಿಱುದಲೆಯ ಸುಱಿಗುರುಳ . . . ವಿದ್ಯಾಧರವಾರನಾರೀಕದಂಬಂ (ರರ್ಮಾಮ್ಯ. ೬ ೦೧೬); ತರುಣಿಯರ ಪೂಮುಡಿಯ ಕಂಪಿಂದೆ ಸೌರಭ್ಯಧರನಾಗಿ . . . ಮಾರುತಂ ಸುಳಿದನು (ಶಿಪು. ೦೦-೬). **ಹೂಮುಡಿ$_2$:** ೧. ಅವನ ಹೆಂಡತಿ ಐವತ್ತೈರಡು ಕಣ್ಣುಳ್ಳವಳು ಅವಳು ತನ್ನ ಹೂಮುಡಿಯ ಬಿಟ್ಟು ಅತ್ತಾಳು (ಬಸವ. ೧೩೨). ೨. ಹೂವನ್ನು ಹೆಣೆದ ಜಡೆ; ಮೊಗ್ಗಿನ ಜಡೆ: ಪೊರವಾರ್ಗಳಂ ಮಿಡಿವ ಹೂಮುಡಿಯ ಪಿಡಿಯಲೆನೆ ಸೆರಗು ದಡದಡಿಸುತಿರೆ ಚಿತ್ತೈಯರ್ ಮೆರೆದು ತರಿವಿಂಡಿಯರ್ ನಡೆದರ್ (ಕಾಂಪ. ೦೨೯-೨೬೦). [ಪೂ$_2$+ಮುಡಿ$_3$]

ಪೂಯ (ನಾ). ೧. ಗಾಯಗಳಿಂದ ಹೊರಡುವ ಬಿಳಿಯ ದ್ರವ: ಕೀವು. ೨. ಊತ; ಬಾವು: "ಪೂಯಂ, ಪೂಯಿಃ, ಪೂಯುಃ, ಪೂಯನಂ, ಪೂಯನೀಯಂ ಈ ೫ ಬಾವು" (ಶಾಕಶ. ೦೦೦). [ಸಂ.]

ಪೂರ$_1$ (ನಾ). ೧. ತುಂಬುವುದು; ತುಂಬಿಸುವುದು; ಪೂರ್ಣಗೊಳಿಸುವುದು. ೨. ತೃಪ್ತಿಗೊಳಿಸುವುದು; ಸಂತೋಷಗೊಳಿಸುವುದು. ೩. ಸುರಿಯುವುದು. ೪. ನದಿ, ಸಮುದ್ರ ಮೊದಲಾದುವು ಉಕ್ಕಿ ಹರಿಯುವುದು; ನೆರೆ: "ಪೂರಯೆಂಬುದು ತೊಱೆಯ ಭೂ(ಬೂ)ರಂ" (ಪಂಪಭಾ. ೦೦೦-೪೬); ಮಳೆಗಾಲದಲ್ಲಿ ಗಂಗಾನದಿಗೆ ಪೂರ ಬಂದ ಸಮಯದಲ್ಲಿ ಹುಮಾಯೂಸನು ದಿಲ್ಲಿಯ ಕಡೆಗೆ ತಿರುಗಿದನು (ಹಿಂಪುಸ. ೯೯). ೫. ಹರಿವು; ಪ್ರವಾಹ: ಬಿಡದಱಲ್ಲ ಬಂಧುಜನದೊಟ್ಟುಡಿಯದ ಕಣ್ಣೀರ ಪೂರಮಾ ಪ್ರೇತವನೋಗಡಿಸದೆ ಸುಡುವುದು ಗಡ (ಪಂಪಭಾ. ೨-೨೬); ಕಣ್ಣೀರ ಪೂರದಗುರ್ವಿಂ ದೆಸೆಗಾಣದಂದೆಡವುತಂ . . . ಪೋದೆಂ (ಕಾದಂಪೂ. ೯೦೪); ಪಾವಂರೀಮುಖಶಶಿಗೊಸರ್ವಿಂದುಗ್ರಾವನಿರ್ಮಳಜಲದ ಪೂರದಿಂ ಬೆಳೆವುತಿಹ ಶಾಳಿಗಳ್ ಕಣ್ಗೆಸೆದುವು (ಪಂಪಭಾ. ೦೦-೬). ೬. ನೀರಿನ ಸಮೂಹ; ಜಲಾಶಯ: ‘ಪೂರಾಂಬು’ ಪರಾ. ೭. ಹುಣ್ಣು, ಗಾಯ ಮೊದಲಾದುವನ್ನು ತೊಳೆದು ಶುದ್ಧಗೊಳಿಸುವುದು. ೮. ಹಿಟ್ಟಿನಿಂದ ಮಾಡಿದ ರೊಟ್ಟಿ, ದೋಸೆ ಮೊದಲಾದ ಖಾದ್ಯ. ೯. ಮಾದಳದ ಗಿಡ; ಮಾತುಲುಂಗವೃಕ್ಷ. ೧೦. [ಯೋಗ] ಪ್ರಾಣಾಯಾಮದ ಒಂದು ಅಂಗ; ಮೂಗಿನಿಂದ ಉಸಿರನ್ನು ನಿಧಾನವಾಗಿ ಒಳಗೆ ಎಳೆದುಕೊಳ್ಳುವುದು: ‘ಪೂರಕ’ ಪರಾ. [ಸಂ.]

ಪೂರ್ಣ, ಪೂರಾ(ಅ). ತುಂಬ; ತೀರ; ಪೂರ್ತಿಯಾಗಿ; ಬಹಳವಾಗಿ: ಕಾಲುಗಳು ಪೂರ ಸೋತುವು (ಪಂಚಮ. ೩೦); ರಾಮೂಗೆ ಪೂರ ಕೋಪ ಬಂತು (ಪರಾಕ. ೦೨೯). **ಪೂರಾ:** ನಾನು ಹೇಳುವ ಮಾತನ್ನು ಪೂರಾ ಕೇಳಬಾರದೆ? (ಕೇಪಕೌ. ೦೯); ನಿನ್ನ ತಿಳಿವಳಿಕೆ ಪೂರಾ ತಪ್ಪಲ್ಲ (ಅಕ್ರಮ. ೨೦).

ಪುಟ್ಟಪೂರಾ, ಪುಟ್ಟಾಪೂರಾ (ದ್ವಿರುಕ್ತಿ): ಮಿಂಚುಬಳಗ ತೆರೆತೆರೆಗಳಾಗಿ ಅಲೆಯುವುದು ಪುಟ್ಟಪೂರಾ (ಹ್ಯದಸ. ೧-೨); ಛಲಬಲ ಇದ್ದು ಧೀರಾ ಎಂಥ ಶೂರಾ ಆಸಕ್ತಿ ಇಲ್ಲದಾ ವೀರಾ ಪುಟ್ಟಪೂರಾ (ಸಾಹೇ.ಗಾ. ೨೦-೦೬); ಕೃಷ್ಣದೇವರಾಯನು . . . ಮುಸಲ್ಮಾನರನ್ನು ಈ ಯುದ್ಧದಲ್ಲಿ ಪುಟ್ಟಾಪೂರಾ ಸೋಲಿಸಿದ ಕಾರಣ ಮುಸಲ್ಮಾನರು ವಿಜಯನಗರದ ರಾಜ್ಯದ ಕಡೆಗೆ ಆತನ ಕಾಲದಲ್ಲಿ ಇಣಿಕಿ ನೋಡಲಿಲ್ಲ (ಕಕಶ. ೦೨೨). [<ಪೂರ$_1$]

ಪೂರಂಗವಿ (ಕ್ರಿ). ಹೆಚ್ಚಾದ ನೆಲೆ ಬಂದು ಆವರಿಸು; ಮಹಾ ಪೂರವು ಬಂದು ಮುಸುಕು: ಸಭೆಯೆಲ್ಲಂ ಹೊನ್ನ ನೀರಿಂದರೆ ಬಳೆದವೊಲಿರ್ದಪ್ಪುದೇಕೀ ಜಗದ್ವಲ್ಲಭನಂಗಚ್ಛಾಯೆ ಪೂರಂಗವಿದ ಪಸರದಿಂದೆ (ಅಸಂಪು. ೦೦-೩೯). [ಪೂರ$_1$+ಕವಿ$_1$]

ಪೂರಂಗೊಳ್ (ಕ್ರಿ). ಪ್ರವಾಹವಾಗಿ ಹರಿ; ಧಾರೆಗಟ್ಟಿ ಸುರಿ: ಮುದಶ್ರುಗಳ್ ನಯನದಿಂ ಪೂರಂಗೊಳಲ್ . . . ರಥಾಂಗರಾಜಿ ನೆರೆದತ್ತು (ಕುಸುಮಾ. ೦-೩೩); ಹೃಷಯೋದ್ಭೂತನವಪ್ರಸನ್ನಸುಧಾಪೂರಂಗೊಂಡುದು (ಕುಸುಮಾ. ೯-೦೦೩). [ಪೂರ$_1$+ಕೊಳ್$_1$]

ಪೂರಂಬರಿಸು (ಕ್ರಿ). ತುಂಬಿ ಹರಿಯುವಂತೆ ಮಾಡು; ಉಕ್ಕೇರಿಸು: ನೀರ್ಗಾಯ್ಗಳಿಂ ಭೋರ್ಗಱೆದುಗುವೆಳನೀರಂ . . . ಅತುಳಾವಾಳ ಪಾತಂಗಳಿಂ ಶೀವಿ ನಿಶಾಂತಂ ಸುತ್ತಿ ಪೂರಂಬರಿಪುವದಱೊಳೇ ನಾರಿ ಕೇಳಾಂಭ್ರಪಂಗಳ್ (ಕುಸುಮಾ. ೦-೦೬). [ಪೂರ$_1$+ಪರಿಸು (<ಪರಿಯಿಸು)]

ಪೂರಕ (ಗು). ೧. (ಅರೆಯನ್ನು) ತುಂಬುವ; (ಕೊರೆಯನ್ನು)

ಪೂರ್ತಿಮಾಡುವ. ೨. ಸಹಾಯಕವಾದ ; ಸಹಕಾರಿಯಾದ : 'ಪೂರಕಪರೀಕ್ಷೆ' ಪರಾ. ೩. ತೃಪ್ತಿಗೊಳಿಸುವ. (ನಾ). ೪. ಪೂರ್ಣಗೊಳಿಸುವಂತಹುದು ; ಪೂರ್ತಿಗೊಳಿಸುವ ಭಾಗ : ಮೊದಲನೆಯ ಕ್ರಮಕ್ಕೆ ಎರಡನೆಯ ಕ್ರಮ ಪೂರಕದಂತಿದೆ (ಕಿಷ್ಕಿಂ. ೨೩೬) ; ಈ ಜ್ಞಾನಮೂಲಗಳು ಪರಸ್ಪರ ಪೂರಕಗಳಾಗಿವೆ (ತತ್ತ್ವಶ್ರಾ. ೩೭೦) ; ಅನೇಕ ಸಂದರ್ಭಗಳಲ್ಲಿ ಒಂದು ದರ್ಶನವು ಮತ್ತೊಂದು ದರ್ಶನಕ್ಕೆ . . . ಪೂರಕವಾಗಿಯೂ ಇರುತ್ತದೆ (ಸಾಹಿತ್ಯ. II ಪ್ರಸ್ತಾವ). ೫. ಮಾದಲದ ಗಿಡ ; ಮಾತುಲುಂಗವೃಕ್ಷ. ೬. ಶ್ರಾದ್ಧದಲ್ಲಿ ಪಿತೃಗಳಿಗೆ ಅರ್ಪಿಸುವ ಪಿಂಡ. ೭. ರೊಟ್ಟಿ, ದೋಸೆ ಮೊದಲಾದ ಹಿಟ್ಟಿನಿಂದ ಮಾಡಿದ ಖಾದ್ಯ. ೮. [ಯೋಗ] ಪ್ರಾಣಾಯಾಮದ ಒಂದು ಅಂಗ ; ಮೂಗಿನಿಂದ ವಾಯುವನ್ನು ಒಳಗೆ ಎಳೆದುಕೊಳ್ಳುವುದು : "ನಾಸಿಕದಿ ನಿಂದಾನಿಲಂ ಕುಂಭಕಮೆನಿಕ್ಕು ನಾಸಿಕದಿ ಬಿಡುವಾನಿಲಂ ರೇಚಕಮೆನಿಕ್ಕು ನಾಸಿಕದಿ ಸೇದುವನಿಲಂ ಪೂರಕಮೆನಿಕ್ಕು" (ಪುಂಗವರಾ. ೦೬-೦೯) ; ಕುಂಭಕ ಸಂರೇಚಕ ಪೂರಕಂ ಪರಿಮಳೋನ್ನಿಶ್ರಂ. . . ನಂಜಿನ ಸುಯ್ಯ ಗಾಳಿ ನೃಪನಂ ಕೊಂದಿಕ್ಕಿತು (ಶಾಂತಿಪ. ೬-೧೩) ; ಅಣುವಿನಲಿ ಲಘುವಿನಲಿ . . . ವಶಿತ್ವದಲಿ ದೆಂಟಣಿಸಿ ರೇಚಕ ಪೂರಕವ ರಿಂಗಣವನಱಿವುದು ಯೋಗಸಿದ್ಧಿಗೆ ಲಕ್ಷಣವನು (ಕುಮಾ. ೮-೯). ೯. = ಪಾದಪೂರಕ : ಮತ್ತೆಂಬ ಪೂರಕದ ಬಟಿ (ಎಂಬ) ಅವ್ಯಯಂ ಱಟಂ (ಕಬಡ. ಕ. ಪುಟ ೩೭). ೧೦. [ಗಣಿತ] ಗುಣಿಸುವ ಸಂಖ್ಯೆ ; ಗುಣಕ. [ಸಂ.]

ಪೂರಕಪರೀಕ್ಷೆ (ನಾ). ೧. ಮುಖ್ಯಪರೀಕ್ಷೆಯಲ್ಲಿ ತೇರ್ಗಡೆಯಾಗದ ವಿಷಯಗಳಿಗಾಗಿ ಪುನಃ ನಡೆಯಿಸುವ ಪರೀಕ್ಷೆ : ಸೆಪ್ಟೆಂಬರಿನಲ್ಲಿ ಪೂರಕಪರೀಕ್ಷೆ ನಡೆಯಿತು (ಕೂಡಿ). ೨. ವಾಕ್ಯಗಳಲ್ಲಿ ಬಿಟ್ಟುಹೋಗಿರುವ ಭಾಗವನ್ನು ಸರಿಯಾಗಿ ಊಹಿಸಿ ತುಂಬುವ ಪ್ರಶ್ನೆಗಳನ್ನೊಳಗೊಂಡ ಪರೀಕ್ಷೆ : ಪೂರಕಪರೀಕ್ಷೆ—ಉದಾಹರಣೆ ೧. ಹಿಂದೂಸ್ಥಾನ . . . ಖಂಡದಲ್ಲಿದೆ. ಮೇಲಿನ ಪ್ರಶ್ನೆಗಳಲ್ಲಿ ಒಂದೊಂದು ಪದ ಬಿಟ್ಟುಹೋಗಿದೆ. ವಿದ್ಯಾರ್ಥಿಗಳು ಅದನ್ನು ಸ್ಮರಣೆಗೆ ತಂದುಕೊಂಡು ಅದನ್ನು ಬಿಟ್ಟಿರುವ ಸ್ಥಳದಲ್ಲಿ ಬರೆದು ಪೂರೈಸಬೇಕು (ಕಿಷ್ಕಿಂ. ೩೫೯). [ಪೂರಕ + ಪರೀಕ್ಷೆ]

ಪೂರಣ (ನಾ). ೧. (ಅರಕೆಯನ್ನು) ತುಂಬುವುದು.—ಭರ್ತಿಮಾಡುವುದು : ಸಾಹಿತ್ಯದಲ್ಲಿ ಅಪ್ರತ್ಯಕ್ಷತೆಯ ಅಭಾವವನ್ನು ಪೂರಣಮಾಡಬೇಕು (ಶಿಬಂಧ. II, ೨೬೬). ೨. ಸಹಾಯಕವಾದುದು; ಪೂರಕವಾದುದು : ಆರೋಗ್ಯ ಆಯುಸ್ಸು ಐಶ್ವರ್ಯವೆಂಬ ಈ ಮೂರುವಿಧ ವಸ್ತುಗಳು ನಾರಾಯಣನ ಭಜಕರಾದವರ ಸಾಧನೆಕೆ ಪೂರಣವಾಗಿಪ್ಪವೊ (ಪಗಣಾ. ೦೩೨). ೩. ಪೂರ್ಣತೆ ; ತುಂಬಿರುವಿಕೆ : ಸೋರುವಾನಂದಾಶ್ರುಪುಳಕದ ಪೂರಣದಲೆತ್ತಿದನು ಪವನಕುಮಾರಕನ ಮಸ್ತಕವ ನಲಿದೊಲಿದ ಬಾಜಭವಸೂನು (ತೊರಣಾ. ೩-೯-೬) ; ಕೆಡೆದೊಡಲ ಸೀಳಿಂದೆ ಕಡಿವಡೆದ ತೋಳಿಂದೆ . . . ಇಡಿದಿರ್ದುದಾ ರಣದಲೋರಣದ ಮೂರಣದ ಕಾರಣದ ಪೂರಣದೊಳು (ಕೃಷ್ಣಾಶ್ವ. ೦೨-೨೨). ೪. (ನದಿ, ಸಮುದ್ರಗಳ ನೀರು) ಉಕ್ಕುವುದು ; ಹೆಚ್ಚುವುದು. ೫. ನೆರವೇರಿಸುವುದು ; ಮುಗಿಸುವುದು ; ಮುಕ್ತಾಯ : ನಮ್ಮ ಬಾಳ್ ಬರಿ ಸಮಸ್ಯೆಯೆ ? ಅದರ ಪೂರಣವದೆಲ್ಲಿ ? (ಸಂಸಾಶ. ೩೩). ೬. ಹಿಟ್ಟಿನಿಂದ ಮಾಡಿದ ಒಂದು ಬಗೆಯ ಖಾದ್ಯ. ೭. ಕಡುಬು ಮೊದಲಾದುವುಗಳಲ್ಲಿ ತುಂಬುವ ಹುದುಗಲು : 'ಪೂರಣಗಡುಬು', 'ಹೂರಣ' ಪರಾ. ೮. (ಸುಷಿರವಾದ್ಯಗಳನ್ನು) ಊದುವುದು.—ಬಾಜಿಸುವುದು : 'ಪೂರಿಸು' ಪರಾ. ೯. ಬೂರುಗದ ಮರ ; ಶಾಲ್ಮಲಿ. ೧೦. ಪೂರ್ಣಗೊಳಿಸುವ ಸಂಖ್ಯೆ. ೧೧. ಬಿಲ್ಲನ್ನು ಬಾಗಿಸುವಿಕೆ. ೧೨. [ಗಣಿತ] ಗುಣಾಕಾರ. [ಸಂ.]

ಪೂರಣಂಗೆಯ್ (ಕ್ರಿ). ತುಂಬು ; ಭರ್ತಿಗೊಳಿಸು : ಕಿಕ್ಕಿಂದದಿಂ ಪೂರಣಂಗೆಯ್ದಲ್ಲಿ ಸಗಣ ಪ್ರಚ್ಛನ್ನ ನೆಮ್ಮುಗೆಗಳೊಳಗಡೆ ಶಬ್ದವು (ಕಬ್ಬಕುಂ. ೧೨). [ಪೂರಣ+ಕೆಯ್$_1$]

ಪೂರಣಗಡುಬು (ನಾ). ಹೂರಣವನ್ನು ತುಂಬಿಸಿ ಮಾಡಿದ ಕಡುಬು : ದೇವಿ ಮುಳಿಸನುಱಿದು . . . ತನ್ನ ಕಯ್ಯಿಂದಮೆ ಪೂರಣಗಡುಬನಿತ್ತಳ್ (ಶಿವ್ರಗೋ. ೩೦-೦೩) ; ನಿನಗಾವ ಭಕ್ಷ್ಯದೊಳಿಷ್ಟಂ ? ಪೂರಣಗಡುಬ ನೀವೆನೊ ಚಕ್ಕುಲಿಯಂ ? (ರಾಮಾಶ್ವ. ೧೦-೦). 'ಹೂರಣಗಡುಬು' ಪರಾ. [ಪೂರಣ+ಕಡುಬು (<ಕಡುಂಬು)]

ಪೂರಣೆ (ನಾ). ಬೂರುಗದ ಮರ ; ಶಾಲ್ಮಲೀವೃಕ್ಷ : "ಪಿಚ್ಚಿಲಾ ಪೂರಣೇ, ಮೋಚಾ, ಚಿರಾಯುಃ, ಶಾಲ್ಮಲೀ—೫ ಬೂರುಗದ ಗಿಡ" (ನಿಘಂಟು. ೦೨೨). [ಸಂ. ಪೂರಣೇ]

ಪೂರಣೆ (ನಾ). ೧. ಪರಿಸಮಾಪ್ತಿ ; ಮುಕ್ತಾಯ : ಕ್ಷೀರಂ ದಧಿ[ಘೃ]ತಸಿತ ಮಧುಧಾರಾಳಿಯಃ ಲಕ್ಕಿಗಡುಗಿಗೊಟ್ಟ [ಸೊಂ]ಟಿಗೆ ಕರ್ಪೂರದಿ ಪೂರಣೆ ಮಾಡಿ ಮನೋರಾಗದೆ ಚಿತ್ರವಿಧದ ಪೂಜಾವಿಧಿಯಂ ಅನ್ತು ಮಹಾಪೂಜೆಯಂ ಮಾಡಿ (ಸೌಷ. XX, ೪೯-೩೨ ; ಸಂ. 1076 ?). ೨. ಅರ್ಚನೆ ; ಪೂಜೆ (?) : ಅರಲಿಂ ಕುಂಕುಮದಿಂ ಕರ್ಪೂರದಿಂ ತೀರ್ಥಕರದಿವ್ಯಚೈತ್ಯಾವಳಿಯಂ ಸರಸಿಜನೇತ್ರೆಯ ಮುಂದಾದರದಿಂ ಲೇಸಾಗಿ ಮಾಡುವಂ ಪೂರಣೆಯಂ (ಧರ್ಮಾಮೃ. ೦೦-೨೩). [ಸಂ. ಪೂರಣ]

ಪೂರತಿ (ನಾ). ಪರಿಸಮಾಪ್ತಿ ; ಕೊನೆ : ಕುಜನರ ಪಾಪ ಪೂರತಿಯಾಗುವ ತನಕ ಅಜನಯ್ಯ ಎನಗೆ ಈ ಮಾತು ದೊರಕುವದೇನೊ (ಶೂಕ್ಷಿಂ. ೬ ೩). [<ಸಂ. ಪೂರ್ತಿ]

ಪೂರತೆ 'ಪೂರ್ತೆ' ನೋ.

ಪೂರಯಿಕೆ 'ಪೂರೈಕೆ' ನೋ.

ಪೂರಯಿಸು 'ಪೂರಿಸು' ನೋ.

ಪೂರವಟ (ನಾ). ಒಂದು ಊರಿನ ಹೆಸರು (?) : ಇತ್ತೊಡು ಪೂರವಟ ಗೋಸಾಸಿಗರಾ ಮಱುಧರ್ಮ್ಮ ತುಸವಿನ್ ಪಡೆದು (ಇಅ. VIII, ೨೬೩-೩ ; 706). [?]

ಪೂರವಾರ (ನಾ). ದಡವನ್ನು ಸೂಸಿ ನೀರು ಹರಿಯುವಿಕೆ ; ಮಹಾಪೂರ : ಧರೆಯೊಳ್ ಶಾಲೂರಸಂಘಂ ಪವನಪಥದೊಳಂ ಭೋಧರಾನೀಕಂ . . . ತಟಿನೀಯ್ಯಹದೊಳ್ ಪೂರವಾರಂ . . . ರುತಂ ಪರ್ವಿಸುತ್ತಿರ್ದುವೆತ್ತಂ (ಶಾದಂಉ. ೩೩೨). [ಸಂ.]

ಪೂರವಿಸು 'ಪೂರಿಸು' ನೋ.

ಪೂರಾ 'ಪೂರ್ಣ$_2$' ನೋ.

ಪೂರಾಂಬು (ನಾ). ಜಲಾಶಯದ ನೀರು : ನೊರೆವುಲ್ಲಂ ದೋದೆರಟ್ಟಿಣ್ ತುಮುಟ್ ಕುಡಿದು ಪೂರಾಂಬುವಂ . . . ಮಾಹಿಷೀಸಂತತಿ ವಿಹಿನಭವಂ ಕಣ್ಗಗುರ್ವಾಯ್ತು ಕಾರೊಳ್ (ಶಂದ್ರಪ್ರ. ೪-೪೬). [ಪೂರ$_1$+ಅಂಬು$_3$]

ಪೂರಾಯ (ನಾ). ೧. ಸಂಪೂರ್ಣತೆ ; ಸಮಗ್ರತೆ : ಪೂರಾಯದಲಿ ನುಂಗಿದುದು ಕತ್ತಲೆ ನಿಮಿಷದಲಿ ಜಗವ (ಕುಷ್ಠಾಳ. ೪-೩೯) ; ಕೆಲ ಕೆಲರು ಪೂರಾಯದಿಂ ಪೊಯ್ದ ಘಾಯಂಗಳಿಂ ನೋವಿನೊಳ್ ಪೊರಳಿದರುರ್ವಿತಳಕೆ (ಕುರುಂಗ. ೩೦-೩೬). ೨. ನೆರವೇರುವಿಕೆ ; ಪೂರ್ಣಗೊಳ್ಳುವುದು : ಬಲ್ಲಿದರೊಡನೆ ಬವರವಾದಡೆ ಗೆಲಲುಂಟು ಸೋಲಲುಂಟು ಕಳ್ಳನೊಡನೆ ಭಾವೆ ಪೂರಾಯವೆ ಅಯ್ಯಾ (ಪಸವ. ೦೫೦). ೩. ಅತ್ಯಧಿಕವಾದುದು ; ಅತಿಶಯವಾದುದು : ರಾಯನೊಡ ಹುಟ್ಟಿದರಲಾ ಪೂರಾಯವಿವದಿರ ಕೈ ಮಹಾದೇವಾಯುಧದ ಮಳೆಗಱ^{3}ದರ್ಕೆ (ಕುಮಾಸ್ತ್ರೋ. ೦೩-೨೯) ; ಕೋಪಾಗ್ನಿ ಪರ್ಬಿ ಪೂರಾಯವಾಗಲ್ಕೆ (ಕಬಪು.

೨೩-೨೩). (ಗಂ). ೪. ಪೂರ್ಣವಾದ ; ಸಮಗ್ರವಾದ ; ಸಂಪೂರ್ಣವಾದ : ನೀರುನೀರಾಗಿ ಬೆರಸಿ ಪಾದೋದಕಧಾರೆಯ ಕಡಲೋಕುಳಿಯಲ್ಲಿ ಪೂರಾಯ ಸನ್ಮತವಾಗಿ ಮುಳುಗಿ ಕೂಡಲಸಂಗನ ಕೃಪೆಯಿಂದುಳಿದೆ (ಶಿವಗೀ. ೦೦೬-೩೩೦). ೫. ಅಧಿಕವಾದ ; ಅತಿಶಯವಾದ : ಸರಸಸೌಗಂಧಿಕದ ಪುಷ್ಪೋತ್ಕರಕೆ ಪವನಜ ಹೋದನೆಂಬುದನರಸಿಯಿಂದಱಿದವನಿಪತಿ ಪೂರಾಯ ದುಗುಡದಲಿ . . . ಚಿಂತಾಭರಿತನಿದ್ದನು ಭೀಮಸೇನನ ಕಾಂಬ ತವಕದಲಿ (ಕುಣ್ಣಾಂ. ೦೦-೨) ; ಆ ಯುವತಿ ಕಣ್ಣೀರಿನಲಿ ಪೂರಾಯಶೋಕದೊಳೆಂದಳಾ ತರಳಾಯತಾಕ್ಷಿಗೆ ತನ್ನ ವೃತ್ತಾಂತವನು ಬಿಸುಸುಯ್ದು (ಪಳಸ. ೩ ೩೩). [ಪೂರ$_1$+_ಆಯ್ಕ]

ಪೂರಾಯಗಾಯ, ಪೂರಾಯಘಾಯ (ನಾ). ಆಳವಾದ ಪೆಟ್ಟು,-ಏಟು ; ತೀವ್ರವಾದ ಕ್ಷತ :. ಕಾರಮೇಘವೆದ್ದು ಧಾರಾವರ್ತಸುರಿವಾಗ ಧಾರಿಣಿಯೆಲ್ಲವು ಮುಳುಗಿತ್ತು ನೋಡಾ . . . ಪೂರಾಯಗಾಯದಲ್ಲಿ ಸಾಯ ಕೊಂದಲ್ಲದೆ ಸೂರ್ಯರನೇಕರು ಮಡಿಯರು ಗುಹೇಶ್ವರ (ಅಪಸಂ. ೭೬-೩೪೦) ; ನಾರಾಯಣ ಮಹಾರೋಕ್ಷದಿಂದೆಸುತಿರ್ಪತೋರಾಯದೆಸುಗೆಯಿಂ ತರಹರಿಸದಾಕ್ಷಣಂ ಪೂರಾಯಗಾಯದಿಂ ಬಲಮಳಿಯೆ (ಕಬಪು. ೩೨-೬) ; ಪೂರಾಯಗಾಯದಿಂದಿರದೆ ಶತ್ರುಘ್ನಂ ಮಹೀತಳಕೆ ರಥದಿಂದೆ ಬೀಳ್ವನಿತಱೊಳ್ (ಕೈಬುಣಾ. ೨೦-೩೦). **ಪೂರಾಯಘಾಯ** : ಎನ್ನವರೆನಗೊಲಿದು ಹೊನ್ನ ಶೂಲದಲಿಕ್ಕಿದರಯ್ಯಾ ಅಹಂಕಾರ ಪೂರಾಯಘಾಯದಲಿ ಅನೆಂತು ಬಡುಕುವೆನೆಂತು ಜಿ ವಿಸುವೆ (ಬಸವ. ೩೬೭) ; ಬಿಜ್ಜಳನ ಕಾಯದಲಿ ಒಂದೆರಡುಮೂರ್ಪೂರಾಯಘಾಯದೊಳಿಱಿದು ಕೆಡಹಿ (ಬಸಪು. ೬೦-೩೦) ; ಐದಾಱು ಶರದಲಿ ಕರ್ಣನೆದೆಯನು ಡೋಱುಗಳೆಯಲು ಬಳಲಿದನು ಪೂರಾಯಘಾಯದಲಿ (ಕುಪ್ಪಾಕ್ರೋ. ೩-೨೬). [ಪೂರಾಯ+ಗಾಯ]

ಪೂರಾಯಗೆಯ್ (ಕ್ರಿ). ಮುಗಿಸು ; ಪೂರೈಸು : ಪೂರ್ಣಗೊಳಿಸು : ಕುಮಾರತಿಯರು ಶಿವಾರ್ಚನೆಯ ಪೂರಾಯಗೆಯ್ದು ಸದ್ಭಕುತಿಯನಾಂತು ಕೈವಾರಿಸುತಿರ್ದರು (ಪೋಹತ. ೨೭-೨೩). [ಪೂರಾಯ + ಕೆಯ್$_1$]

ಪೂರಾಯಘಾಯ 'ಪೂರಾಯಗಾಯ' ನೋ.

ಪೂರಾಯತ (ಗು). ಸಂಪೂರ್ಣವಾದ ವಿಸ್ತಾರವುಳ್ಳ ; ಸಮಗ್ರತೆಯುಳ್ಳ : ಸ್ಥಾಯಿಸಂಚಾರಿಗಳ ಸರಿಗಮಪಧನಿಯ ಸರದಾಯತದ ಶುದ್ಧ ಸಂಕೀರ್ಣ ಸಾಳಗದ ಪೂರಾಯತ ಸುತಾನಂಗಳಂ . . . ಗೇಯರಸಮೊಸರೆ ಪಾಡಿದರವರ್ (ಕೈಬುಣಾ. ೨೦-೩೬). [ಸಂ.]

ಪೂರಿ, ಪುರಿ$_5$, ಪುರೆ$_3$ (ನಾ). ಕಣಿಕವನ್ನು ಲಟ್ಟಿಸಿ ಎಣ್ಣೆ ಅಥವಾ ತುಪ್ಪದಲ್ಲಿ ಕರಿದು ಮಾಡುವ ಒಂದು ಬಗೆಯ ಖಾದ್ಯ : ಮಸಾಲ್‌ದೋಸೆ, ಚಪಾತಿ, ಪೂರಿ, ರವೆಇಡ್ಲಿ ಏನು ಕೊಡಲಿ ಸಾರ್? (ಮಹಾಲಿ. ೪೬). **ಪುರಿ$_5$** : ಖೀರು – ಪುರಿ ಅಂದಿನ ಮುಖ್ಯಭೋಜನವಾಯಿತು (ಸ್ವಪ್ನದ. ೦೩೩) ; ಶ್ರೀಖಂಡ ಪುರಿಯನ್ನು ಬಕ್ಕರಿಸುವೆಯಂತೆ ಏಳು ! (ಭಾರಥಿ. ೩೩). **ಪುರೆ$_3$** : ಅಂದು ಮನೆಯಲ್ಲಿ ಪುರೆ-ಸುಧಾರಸವಾಗಿತ್ತು (ಸಮಜೀ. ೦೦೦) ; ಪುರೆ; ಶ್ರೀಖಂಡ, ಸಿರ, ಅವಲಕ್ಕಿ . . . ಇತ್ಯಾದಿಯಿಂದ ದೊಡ್ಡ ಬಾಳೆಯೆಲೆ ಭರಗಚ್ಚಾಗಿ ತುಂಬಿದ್ದವು (ಅಸ್ಮ. ೨೩೩). 'ಪೂರಿಗೆ' ಪರಾ. [←ಹಿಂ. ಪೂರೀ : ಮರಾ. ಪುರೀ]

ಪೂರಿಗ (ನಾ). ಕಠೋರನಾದವನು ; ಕಠಿಣಸ್ವಭಾವದವನು : "ಪೂರಿಗೆ[ಗ]ನೆ ಕಠೋರಂ" (ಕಾರಸಿ. ೩೯). [?]

ಪೂರಿಗೆ, ಹೂರಿಗೆ (ನಾ). ತುಪ್ಪವನ್ನು ಸವರಿ ಹಂಚಿನ ಮೇಲೆ ಬೇಯಿಸಿ ಮಾಡುವ ಒಂದು ಬಗೆಯ (ಸಿಹಿಯಾದ) ಭಕ್ಷ್ಯ : ಪೂರಿಗೆಯಿಡ್ಡಲಿಗೆ . . . ಮಂಡಿಗೆ ಮೊದಲಾಗೊಡೆಯಪದಿನೆಂಟುಂ ತೆಱದ ಭಕ್ಷರೂಪ ಗಳುಮಂ...ಬಡ್ಡಿಸಿದೊಡೆ(ಪಡ್ಡಾರಾ. ೭೬-೦೬); ಕಲ್ಲುರಿಗನೊಯ್ಯನೆ ಪೂರಿಗೆಗೊಟ್ಟೈದಾಱನೆ ಕೊಂಡವನಟ್ಟಿಯಿಂದೊರಸಿ ನೋಟ್ಟುದುಂ (ಅಬಪು. ೩-೦೯); ಮಿದಿದಿಂದಾಗಿರೆ ಖರ್ಜೂರದ ಪಣ್ಣಂ ನಾರಿಕೇಳಮಂ ಶರ್ಕರೆಯುಂ ಪುದಿದಡುಗೆ ಕಣಿಕದೊಳ್ ತುಪ್ಪದೊಳದು ರಸಭರಿತಮಪ್ಪ ಪೂರಿಗೆಯಕ್ಕುಂ (ಶೋಕೋಪ. ೬-೬) ; ರುಚಿವೆರಸಿದ ಲಡ್ಡುಗೆ ಚಕ್ಕುಲಿ ಗಾರಿಗೆ ಪೂರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ಆಜ್ಯಯುತಮಪ್ಪುವಂ ಮೆಲ್ದು (ಪರ್ಷಾಸ್ತು. ೦-೦೪೭). **ಹೂರಿಗೆ** : ಗಾರಿಗೆಯ ಅಳಸುಗಳ ಕುತ್ತಱಿಗಳಲ್ಲಲ್ಲಿ ಹೂರಿಗೆಯ ಲಡ್ಡುಗೆಯ ಬೆಟ್ಟಂಗಳಲ್ಲಲ್ಲಿ (ಬಸರ. ೭-೦೦) ; ಶೋಧಿಸಿದ ತನಿಬೆಲ್ಲವಿಕ್ಕಿದ ಹೂರಿಗೆಯ ಮೆದೆಯಲ್ಲಿ . . . ನವಘೃತಸೂಪದಂಶಕದಲ್ಲಿ ನೋಡಲಿ ನಮ್ಮನೆಂದುದು ಧೂರ್ತವಟುನಿಕರ (ಕುಪ್ಪಾಅ. ೦೩-೭) ; ಅರೆದ ತೆಂಗಾಯ ಪಿಂಡದೊಳು ಚಿಲುಪಾಲಿನೊಳು . . . ಹೆಱೆದುಪ್ಪ ಸಕ್ಕರೆಯ ಬೆರೆಸಿದಾ ಹೂರಣವನಿರದಿಕ್ಕಿ ಹೂರಿಗೆಯ ಮಾಡಿಕೊಂಡವಱವಱ ಹೆಸರ ಹೂರಿಗೆಯೆಂಬುದು (ಸೂಪಣಾ. ೦-೨೭).

[< ಸಂ. ಪೂರಿಕಾ]

ಪೂರಿತ (ಗು). ೧. ತುಂಬಿದ ; ಭರ್ತಿಮಾಡಿದ ಪೂರ್ಣಗೊಳಿಸಿದ. ೨. (ಸುಷಿರವಾದ್ಯವನ್ನು) ಊದಿದ ; ಬಾಜಿಸಿದ : ಪೂರಿತ ರಣ ಶಂಖಗಂಭೀರಾರಾವಂ ದೆಸೆಯ ಕೋಣ ಕುಸುಕುಱ ಗಜಘಂಟಾರವ ಮನುಱದೆ ಪೆಱಗಿಡೆ ಭೈರವಮೆಸೆದತ್ತು ಚರದ ಬಲಜಲನಿಧಿಯೊಳ್ (ಶಾಂತಿಪು ೩-೧೭). (ನಾ). ೩. ಪೂರ್ಣತೆ : "ಪೂರಿತೆನಲದು ಪೂರ್ಣಂ" (ಪಶುಸಿ. ಕಿ. I, ೬೦). [ಸಂ.]

ಪೂರಿತಗೆಯ್ (ಕ್ರಿ). ಪೂರ್ಣಗೊಳಿಸು ; ಪೂರ್ಣವಾಗಿ ಸಿದ್ಧಪಡಿಸು : ಗಾಡಿಕಾಱನ ತಾವರೆಗೋಲ್ಗೆ ಚಾಪವ ಮಾಡಿ ಪೂರಿತಗೆಯ್ದು ತೆಱದಿ ಜೋಡಿಯಿಲ್ಲದೆ ರತಿದೇವಿಯ ಕಣ್ಣಿಗೆ ಕಾಡಿಗೆವಿಡಿದೆಚ್ಚಿದರು (ಪೋಹತ. ೦೭-೪೩). [ಪೂರಿತ + ಕೆಯ್$_1$]

ಪೂರಿಸು, ಪೂರಯಿಸು, ಪೂರವಿಸು, ಪೂರೈಸು (ಕ್ರಿ). ೧. ತುಂಬು ; ಭರ್ತಿಮಾಡು : ಪಲಕಾಲದೊಳಱಶಿರ್ದಾಮಲಕದ ಪಣೆಯಂ ಕುಣಾರದಿ ಸೀಳ್ದದಱೊಳ್ ತಿಲ ಮಧು ಘೃತಮಂ ಪೂರಿಸೆ ಫಲಮಾ ಮರದೆಲೆಗಳಿಂದಮವು ಪಿರಿದಕ್ಕುಂ (ಶೋಕೋಪ. ೬-೩೯) ; ಆರ ಮೃದೂಕ್ತಿಯಂ ಬಯಸಿ ಕೇಳ್ದು ತನೂಜ ಮದೀಯಕರ್ಣದೊಳ್ ಪೂರಿಪೆನಿ ರಸಾಯನಮಂ (ಸಂಪ್ರಪು. ೩-೦೭) ; ಮಿಸುವ ಕಾಂಚನಪಾತ್ರೆಯಲಿ ಪೂರಿಸಿದ ಪರಮಾನ್ನವನು ಬೊಮ್ಮದ ರಸದ ಪರಿಪೂರ್ಣವನು . . . ಒಲಿದಿತ್ತುದಾ ನಿಜಮೂರ್ತಿ ದಶರಥಗೆ (ಕೂರಂಗಿ. ೦ ೭-೩೩). ೨. ಮುಸುಕು ; ಕವಿ ; ವ್ಯಾಪಿಸು : ಮುಸುಕಿದುದು ದುಂದುಭಿಧ್ವನಿ ದೆಸೆಯಂ . . . ತಂಖಧ್ವನಿ ಪೂರಿಸಿದುದು ತಳ್ಳೊಯ್ದು ರೋದಸೀಮಂಡಳಮಂ (ಸಂಪ್ರಪು. ೬-೭೨); ಧಾರುಣಿ ನಭ ದೆಸೆಗಳನು ಪೂರಿಸಿದೆಂತಂಧಕಾರ ದಟ್ಟೈಸಿರೆ (ಕೈಕಪೇ. ೩-೦೬). ೩. ತುರುಕು ; ಗಿಡಿ ; ಒತ್ತಿ ತಳ್ಳು ; ಒಳಸೇರಿಸು : ನಟ್ಟುರಿವೀ ವನವಹ್ನಿವಕ್ತ್ರದೊಳ್ ಪೂರಿಪೆನೋ ಕಱುತ್ತುಗಿದು ಕತ್ತಿಗೆಯಿಂದೆರಡಾಗಿ ಪೋಟ್ಟೆನೋ . . . ಈತನಂ (ಸಂಪ್ರಪು ೩-೩೭). ೪. ತುಂಬಿಡು ; ಕೂಡಿಡು ; ಸಂಗ್ರಹಿಸು : ಜವೆಯಂ ನೆಲ್ಲಂ ಕುಂದದೆ ಪೂರಿಸೆ ಕಾರ್ತಿಕೆಯಂದಿಗೆ(ನ)ಮಾಱಿಂಗೆ ಮಾಱ(ಱು)ಮುಮ್ಮಡಿ ಲಾಭಂ (ಅಸ್ವಪು. ೬-೩೪). ೫. ತುಳುಕು ; ಹೊರಸೂಸು ; ಅಧಿಕವಾಗು ; ಹೆಚ್ಚಾಗು : ಆನಂದಾಶ್ರುಸಲಿಲಂ ಕಂಗಳಲಿ ಪೂರಿಸಲು (ಬಸಪು. ೩೭-೬೨) ; ಚಾರಿವರಿದು ಚಂದ್ರಸುರಧೇನು ಕೂರ್ತು ಚಕೋರವತ್ಸಗೆ ಮೊಲೆಗುಡಲುಪೂರಿಸಿ ಕಡೆವಾಯೊಳಿಳಿವ ತಣ್ಬಾಲೆನೆ ಸೋರಿತು ಬೆಳ್ದೆಂಗಳಿಳೆಗೆ (ಪೋಹತ. ೦೬-೩೫). ೬. ಪೂರ್ತಿಮಾಡು ; ಪೂರ್ಣಗೊಳಿಸು : ಸಮಸ್ಯಮಂ ಕೊಡಲೊಡನೆ ಪೂರಿಸುವ . . . ನವರಸರಸಿಕರ್ (ಕಬಪು. ೭-೦೦). ೭. ಪುಷ್ಪವಾಗು ; ವರ್ಧಿಸು : ಪೂರಿಸುವುದೊರ್ಮೆ ವಿಗತಾಹಾರದೆ ಗಟಿಯಿಸುವುದೊರ್ಮೆ ತಾನೀ

ವೈಯ್ಯೊಳ್ (ಜೀವಸಂ. ೨೦೯-೨೦). ೮. (ಬಾಯಿಂದ) ಊದು ; ಊದಿ ಬಾಜಿಸು : ಪರಸೈನ್ಯಭೈರವಂ . . . ದೇವದತ್ತಶಂಖಮಂ ಪೂರಿಸಿ (ಶಂಪಭಾ. ೦೦-೬೪ ಪ) ; ಶಾರ್ಙ್ಗಮನಂದೇಱಿಸಿದಪನಹಿಶಯ್ಯೆಯನೇಱಿದ ನಯ್ವಾಯ ಶಂಖಮಂ ಪೂರಿಸಿದಂ (ಕಾಪ್ಯಾಪ. ೨೬೯) ; ಬಿಸಜಾಕ್ಷಂ ಶಂಖಮಂ ಪೂರಿಸೆ (ಜಗಂ. ೬-೨೪). ೯. ನಾಟು ; ನಡು : ಮಾರನ ಸರಳು ಸಮೀರ ಕುಮಾರನ ಚಾರುತನುವಿನೊಳಗೆಯ್ದೆ ಪೂರಿಸಲವ ಬೆದಱುತ ರವಿಪುರವಿಷ್ಟ ದಾರಿಯನುದು ನೋಡಿದನು (ಶಂಪಸ. ೬-೦೬೦) ; ಓರೋರ್ವರ ಮೆಯ್ಸೋಂಕಿಂದ ಪುಳಕಗಳೋರೋರ್ವರ ಮೈಯೊಳಗೆ ಪೂರಿಸಲು (ಕುರಾಸಾಂ. ೬-೦೯). ೧೦. ಆಗು ; ಒದಗು ; ಬರು : ಕೂರ ಪ್ರಾಕಾರಂಗಳ ಮೇರೆಯ ರೇಫಕ್ಕೆ ತರದೆ ಱ ಟ ಲತ್ವಂಗಳ್ ಪೂರಿಪುವಸ್ವರ ವಿಧಿಯಿಂ (ಶಪುದ. ೨೯೦(೩)). **ಪೂರಯಿಸು** : ೫. ಆ ಮಾತಿಂಗೆ ನಸುನಾಣ್ಚಿ ಹೃದಯಾರವಿಂದದುಲ್ಲಾಸ ಪೂರಯಿಸಿ ಚಂದನಸೌರಭ್ಯವಡೆದ ವಿಗ್ರಹಜಾತ ಸಂದೋಹ ಗುಡಿಗಟ್ಟಿತವಳ (ಪೋಹಸ. ೨೬-೩೬). ೬. ಆ ಕೆಱೆಯನೂ ಪೂರಯಿಸಿ ಆ ಕೆಱೆಯ ಕೆಳಗೆ (ಸೌಹಿ. ೦೯೩೯, ಪುಂಗಪೂರು. ೦೩೬-೬ ; 1419) ; ಈ ಕಾರ್ಯದ ಜವಾಬ್ದಾರಿಯನ್ನು ಕೈಕೊಂಡಿರುವ ಮಹನೀಯರು ಅದನ್ನು ಆದಷ್ಟು ಬೇಗ ಪೂರಯಿಸಿಕೊಡಬೇಕೆಂದು ಬೇಡುತ್ತೇನೆ (ಸಾಹಿಶ. ೬೬). ೮. ಭು ಭೂ ಭೂ ಎಂದು ಪೂರಯಿಸಿದುದು ಶಂಖಂ (ಶಪುದ. ೦೦ ಪ್ರಯೋ) ; ಭು ಭೂ ಭೂ ಎಂದು ಪೂರಯಿಪ ಶಂಖದ ಧಟಂ ಧಟಂ ಧಟಮೆಂದು ಮೊಟಗುವ ಭೇರಿಯ . . . ಬಲ್ಲುಲಿಯೊಳ್ ಮಾಪೂಜೆ ಸಮಸಂದುದು (ರಾಮಾಶ್ವ. ೬೬-೩). ೧೧. ಮುಗಿ ; ಮುಕ್ತಾಯ ವಾಗು ; ಸಮಾಪ್ತಿ ಹೊಂದು : ಸ್ತೋತ್ರವು ಪೂರಯಿಸಿದ ಬಳಿಕ ವಂಶ ಲೋಚನರೆಂದರು (ಎರಸ. ೨೬). ೧೨. ಬಳಿ ; ಹಚ್ಚು ; ಲೇಪಿಸು : ಹಣೆಗೆ ರಾರಾಜಿಪ ತಿಲಕವನಿಟ್ಟು ಗಂಧವ ಪೂರಯಿಸಿದನು ನುಣ್ಮೆಯ್ಗೆ (ಪೋಹಸ. ೦೨-೪೬). ೧೩. ನೀಡು ; ಕೊಡು ; ಒದಗಿಸು : ಹಿಂದೂ ಸ್ತಾನದಲ್ಲಿ ಬಂದು ನಿಂತುಕೊಳ್ಳುವ ಪೋರ್ತುಗೀಜ ಮತ್ತು ಇಂಗ್ಲೀಷರ ಬಗ್ಗೆ ಇವನು ಸಾಕಷ್ಟು ಲಕ್ಷ್ಯ ಪೂರಯಿಸಲಿಲ್ಲ (ಹಿಂಮುಸ. ೦೨೦). **ಪೂರವಿಸು** : ೨. ಉಗಿದರೋ ಕತ್ತುರಿಯ ತವಲಾಯಿಗಳ ಮುಚ್ಚಳವೆನೆ ಕವಾಟವ ತೆಗೆಯೆ ಕವಿದರು ದಿವ್ಯಪರಿಮಳಸಾರ ಪೂರವಿಸೆ . . . ಅಂಕಕಾತಿಯರಿಂದ್ರನೋಲಗದ (ಕುಪ್ಯಾಶಿ. ೬-೮೯). ೫. ಚೀರದಲಿ ನೆಱೆ ತುಂಬಿದಂತಿರೆ ಪೂರವಿಸಿ ಬುದಿಲೆನಿಸಿ ಭಸಿತದ ಧಾರೆ ಪೊಱಮಡೆ ಜಿ.ಕೊಳವೆಯಲಿ ಚಿಮ್ಮಿದಂತಾಯ್ತು (ಬಸಪು. ೪೪-೦೫). ೮. ಜಂಗಮ ಸ್ತೋಮ . . . ಭೋರೆನಲಿಂದುಭಯಶಂಖವ ಪೂರವಿಸಿಕೊಳುತೆದ್ದು ಹೋದರು (ಪ್ರಭುಲೀ. ೨೩-೦೦). ೧೨. ಪೂರವಿಸಿದನು ಗಂಧವನು ಸರಳೋರೆಪೋರೆಯ ಮೈಯ ಘಾಯದ ಹೇರುಗಳ ಹೂಳಿದನು ವರ ಕಸ್ತೂರಿಯ ಸಾರದಲಿ (ಕುಪ್ಯಾಗ. ೫-೪೦). ೧೪. ತೃಪ್ತಿಗೊಳಿಸು ; ತಣಿಸು : ಸಂದಿರುಳು ರತಿ ಪೂರವಿಸದೋ ಬಂದು ಕಾಮನು ಕೈವಿಡಿ ದಡೋ ಬಂದಿತೆಂದೋ . . . ಇದಱ ಚಂದವೆಲ್ಲಂ ಹೇಳದಡೆ ಗುಣವೃಂ. ನಿಮ್ಮಡಿಯಾಣೆಯೆನಲ್ (ಬಸಪು. ೪೩-೦೪). ೧೫. ನೆರವೇರಿಸು ; ಈಡೇರಿಸು : ಸಾರವಿಮಲಪ್ರಾಣಪದದಲಿ ಸೇರಿದೋಗರವಂ ಸಮರ್ಪಿಸಿ ಪೂರವಿಸುವುಪಚಾರವುಪಚಾರಂ ಶಿವಂಗೆ (ಬಸಪು. ೩೫-೦೫). **ಪೂರೈಸು** : ೧. ಹರಭಕ್ತಿ ಪೂರೈಸೆ ಪರಮಸುಖ ಕೋರೈಸೆ ಎಸೆದಿರ್ದ ನಮ್ಮಮ್ಮ ಬಾಹೂರ ಬೊಮ್ಮಯ್ಯ (ಬಾಹೂರ. ಹ. ೩೦೬-೦೨) ; ಆ ಬುದ್ಧ ಸಂಘನಂ ವರವೈಶ್ಯಸಮಿತಿಯಂಗದೊಳಸುವಂ ಪೂರೈಸಿ . . . ಪೂಜಿಸಿದ ರಳ್ತಿಯಿಂ (ಸಪ್ಯಾಳೌ. ೯-೪೯). ೨. ನಾನಾರವದ ವಾದ್ಯನಿರ್ಘೋಷವಾ ದಿಕ್ತಟವ ಪೂರೈಸಿ (ಶಪುದ. ೫೬-೪೬); ರಥೌಘದ ಚೀತ್ಕಾರರವಂ ದಿಶಾ ವಿವರಮಂ ಪೂರೈಸೆ (ಪ್ರಸಂ. ೫-೨೨). ೫. ಸೋರಿದುವಮೃತಪಾಷಾಣ ಪಾಲ್ಗಡಲಂತೆ ಪೂರೈಸಿತು ಚಂದ್ರಕಿರಣ (ಪೋಹಸ. ೨೬-೨೩). ೬. ಇವಂ ತಿರ್ಯಕ್ತ್ವದೊಳ್ನಿಲ್ವನೆನ್ನೆಗ[ಮಾಯುಷ್ಕರಮಾದ ಯಜ್ಞಮನಿದಂ ಪೂರೈಸದಾನಿರ್ಪೆಂ] (ಕಾಪಂಕಾ. ೬೬೪); ಆ ಗರುವಮುನಿಮಂತ್ರದಿಂದ . . . ಯಾಗವನು ಪೂರೈಸಿದನು(ಪಳಸ. ೦-೩೦); ತನ್ನ ಕೆಲಸ ಪೂರೈಸಿ ಹರಿಕುಲಿಶನು ಹಿಂದಿರುಗಿದನು (ಪುಜಿಸ. ೧೫). ೮. ಪಲತೆಱದ ಪಱೆಗಳಂ ಪೊಯ್ಸಿಯುಂ ಶಂಖಂಗಳಂ ಪೂರೈಸಿಯುಂ . . . ಎಂತುಂ ಪೊಱಮಡಿಸ ಲಾಱದೆ (ಗಣಾಯು. ೬-೦ ಪ); ಬಿರುದೆತ್ತಿ ದೆಸೆದೆಸೆಗೆ ಕರೆವ ಕಹಳೆಗಳೊಳಗೆ ನೆರೆದು ನೆಱೆ ಪೂರೈಪ ಶಂಖಧ್ವನಿಗಳೊಳಗೆ . . . ಬರುತಿರ್ದನಪ್ರತಿಮ ಸುಕುಮಾರಶೇಖರಂ (ಸಂಬರ. ೫-೬೪); ಫಲುಗುಣಂ ಪೂರೈಸಿದಂ ದೇವ ದತ್ತಮಂ (ಶೈಮಿಶಾ. ೨೫-೩೪). ೧೨. ಬಣ್ಣ ಬಂಗಾರವನುಡತೊಡ ಕೊಟ್ಟು ಹೊಂಬಣ್ಣಚಂದನವ ಪೂರೈಸಿ (ಪೋಹಸ. ೦೦-೭೩). ೧೩. ನಿಮ್ಮ ಕುಟುಂಬಕ್ಕೆಬೇಕಾದ್ದನ್ನೆಲ್ಲನಾನು . . . ಪೂರೈಸಿ ಕೊಡುವೆನು (ಮುಂಬಯಿ. ೪-೭೬); ಕಾಗದ ಪೂರೈಸುವವರ ಕಡೆಯಿಂದ ವಕೀಲನ ಮುಖಾಂತರ ಪತ್ರ ಬರಲು ಭೂಪತಿಯು ಬೆರಗಾಗಿ ಬಿಟ್ಟನು (ಇಪ್ಪಳ. ೨೬೦). ೧೫. ಜನದ ಮನದಾಸೆಯಂ ತಾನಿನಿಸುಂ ಪೂರೈಸದಾತನರ್ಥಂ ವ್ಯರ್ಥಂ (ಪುರಪು. ೫-೨೭); ಭಾಷೆಯಂ ಪೂರೈಸದಿಹನೇ ಕಾಶಿನಾಥನು (ಬಸಪು. ೫೯-೫); ಈತನಿಂದು ನಳಿನನಾಭನ ಮುಂದೆ ಭಾಷೆಯಂ ಪೂರೈಸಿ ಕೊಳುಗುಳದೊಳಳಿದನು (ಶೈಮಿಶಾ. ೦೩-೬೦). ೧೬. ಸರಿದೂಗು ; ಸಾಕಷ್ಟಾಗು: ಮೇಲೆ ಬರೆದಂತೆ ಅಡತಿ ಮತ್ತು ಮಜೂರಿ ತೆಗೆದುಕೊಂಡರೆ ಸಹ ನಮಗೆ ಪೂರೈಸುವದಿಲ್ಲ (ಮುಂಬಪ್ಯಾ. ೦೯೯). ೧೭. ನೀಗಿಸು; ಸಾಗಿಸು: ಹೋರುವ ಸತಿಯಿಂದ ಸೋರುವ ಮನೆಯಿಂದ ಪೂರೈಸ ದವನ ಬದುಕಿಂದ ಕೊಂಡೊಯ್ವ ಮಾರಿ ಲೇಸು (ಸರ್ವಜ್ಞ. ೦೩೨೯) ; ಬೆಕ್ಕಿಗೆ ಶಿಕ್ಷಾಕಲಿಸಿ ಯಾರು ಪೂರೈಸಾರು (ಬಾಸಹು. ೪೦). ೧೮. ಸಂಪೂರ್ಣ ವಾಗು ; ಸಮಗ್ರವಾಗು : ಪೂರೈಸಿ ವೇದಮೋದಿದನನೂಚಾನನಕ್ಕು (ಮಂಗರಾ. ೬೪-೩) ; ಪೂರೈಸಿ ತುರುಕರು ಕಂಠೀರವೇಂದ್ರನ ಕೂರಸಿಯಲಿ ನುಗ್ಗಾಯ್ತು (ಕಂಪಂ. ೦೫-೫೯). [ಪೂರಣ + — ಇಸ್ಸು]

ಪೂರುವ 'ಪುಬ್ಬೆ' ನೋ.

ಪೂರುಷ (ನಾ). ಪುರುಷ ; ಮನುಷ್ಯ : "ಮನುಷ್ಯಃ, ಮಾನುಷಃ. . . ಪುರುಷಃ, ಪೂರುಷಃ, ವಿಟ್—ಈ ೧೨ ಮಾನಸರ್" (ಪರಾಯು. ೫೫-೦೬೬); "ಮಾನವಂ ಮರ್ತ್ಯಂ ಮನುಷ್ಯಂ ನರಂ ಪುಮಾನ್ ಮಾನುಷಂ ಪೂರುಷಂ ...ಗಂಡುಗೂಸಕ್ಕು" (ಮಂಗರಾ. ೬೬-೦). [ಸಂ.]

ಪೂರುಷತನ (ನಾ). ಪರಾಕ್ರಮ; ಪೌರುಷ : ಕೆಲಬಲದಿಂದುಮುಖಿಯರ ನೋಡಿದನು ನಲವಿಂದ ನುಡಿದನು ತನ್ನ ಪೂ[ಪಾಶಾಂ.ಪೌ]ರುಷತನದ ಪರಿಣತೆಯ (ಕುಪ್ಯಾಪಿ. ೫-೦೫). [ಪೂರುಷ + — ತನ]

ಪೂರೈಕೆ, ಪೂರಯಿಕೆ (ನಾ). ೧. ಈಡೇರಿಕೆ ; ನೆರವೇರಿಕೆ : ಕಾವೇರಿ ತನ್ನ ಬಯಕೆಯ ಪೂರೈಕೆಗಾಗಿ ಬೇರೆ ಗಂಡನ್ನು ಹಿಂಬಾಲಿಸಲು ಸಾಧ್ಯವೇ (ಕಾಪೇಂ. ೬೫). ೨. ಒದಗಿಸುವಿಕೆ; ಸರಬರಾಜು : ಹಾಲ್ಲು ಮಧ್ಯಾಹ್ನದ ತಿಂಡಿ, ವೈದ್ಯಪರೀಕ್ಷೆ, ಚಿಕಿತ್ಸೆ ಮತ್ತು ಇತರ ಪೂರೈಕೆಗಳು—ಇವಕ್ಕೆ ಪಾಶ್ಚಾತ್ಯದೇಶಗಳಲ್ಲಿ...ವೆಚ್ಚ ಆಗುತ್ತಿದೆ (ಶಿಕ್ಷದ. ೦೫೬). ೩. ಸಾಮಗ್ರಿಯ ಸಮೃದ್ಧಿ : ತನ್ನದೂ ಒಂದು ಸಂಸಾರ, ಹೆಂಡತಿ, ಹೊಲ, ಇತರ ಪೂರೈಕೆ ಸಾಕಷ್ಟು ಇದೆ ಎಂದು ನಂಬಿ ಅಭಿಮಾನದಿಂದ ಸುಬ್ಬ ಸುಧಾರಿಸಿದ್ದ (ಹೊಸಕ್ಷಿ. ೬೯). **ಪೂರಯಿಕೆ** : ೨. ಸಿದ್ಧವಾದ ಉಡುಪುಗಳು ವಿತರಣೆ ಗೋಸುಗ ಪೂರಯಿಕೆಯ ಮಂದಿರಗಳಿಗೆ ಹೋಗುತ್ತಿದ್ದುವು (ಕಾಂಯಾ. ೯೯). [ಪೂರೈಸು (< ಪೂರಿಸು) + — ಕೆ]

ಪೂರೈಸು 'ಪೂರಿಸು' ನೋ.

ಪೂರೋಟೆ 'ಪುರುವಠೆ' ನೋ.

ಪೂರ್ಣ (ಗು). ೧. ತುಂಬಿದ ; ಭರ್ತಿಯಾದ ; ಪೂರ್ತಿಯಾದ : ಪುಣ್ಯಾಂಬುಪೂರ್ಣಕುಂಭಾಗ್ರಮುಚಿತಕಂಕೇಲಿಪಲ್ಲವೋಲ್ಲಾಸರಚಿತಂ (ಅಪು. ೮-೩೦ ಗಳ). ೨. ಸಮಗ್ರವಾದ ; ಎಲ್ಲ ; ಇಡಿಯಾದ. ೩. ನೆರವೇರಿದ ; ಈಡೇರಿದ. ೪. ತುಂಬುದನಿಯುಳ್ಳ ; ನಾದಮಯವಾದ. ೫. ಸಮರ್ಥ ; ದಕ್ಷ ; ಬಲವುಳ್ಳ. ೬. (ಬಿಲ್ಲಿನಂತೆ) ಎಳೆದು ಬಾಗಿಸಿದ. ೭. ಮುಗಿದ ; ಮುಕ್ತಾಯವಾದ. (ನಾ). ೮. ಕಡುಬು, ಹೋಳಿಗೆ ಮೊದಲಾದುವುಗಳ ಹುದುಂಗು; ಹೂರಣ: (ಕ). ೯. ಸಂಕೀರ್ಣವಾದುದು ; ಸಂದಣಿ : "ಆಚಿತಂ, ನಿಚಿತಂ . . . ಪೂರ್ಣಂ—ಈ ೯ ಸಂದಣಿ" (ಹಲಾಯು. ೦೦೬-೦೭). ೧೦. ಸಮಗ್ರತೆ; ಸಂಪೂರ್ಣತೆ : ಕೊಂಚಕೊಂಚಗಳರಿವು ಪೂರ್ಣದರಿವಾದೀತೆ ? (ಪುಂಕುಳ. ೩೨೦). ೧೧. [ನಾಟ್ಯ] ಕಪೋಲದ ಆರು ಭೇದಗಳಲ್ಲಿ ಒಂದು: "ಕೆನ್ನೆಗಳನ್ನು ಸ್ವಲ್ಪ ಉಬ್ಬಿಸುವುದು, ರೋಷ, ಹರ್ಷ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಶಾಸ್ತ್ರಕಂ. ೨೬೫ ಗದ್ಯಾನುವಾದ) : ಕುಂಚಿತ, ಕಂಪಿತ, ಪೂರ್ಣ, ಕ್ಷಾಮ, ಫುಲ್ಲ, ಸಮ—ಈ ಆಱುಂ ಗಲ್ಲದ ಭೇದಂಗಳ್ (ಶಾಸ್ತ್ರಕಂ. ೩-೬೯ ಪ).

ಪೂರ್ಣವಾಗು = ಪೂರೈಸು ; ಪೂರ್ತಿಯಾಗು : ಅದರ ಬೆಳವಣಿಗೆ ಪೂರ್ಣವಾಗಲಿಕ್ಕೆ ಐದು ವರ್ಷ ಹತ್ತುವದು (ಪುಂಬಿಯು. ೯-೯೬). [ಸಂ.]

ಪೂರ್ಣಕಂಠ (ನಾ). ತುಂಬುಶಾರೀರ ; ತುಂಬು ಧ್ವನಿ : ಪೂರ್ಣಕಂಠದಿಂದ (ಧಾತು ಮತ್ತು ಮಾಟು) ಮಹಾವೈದ್ಯನಾಥಅಯ್ಯರ್ ಅವರು ಹಾಡುತ್ತಿದ್ದರು (ಸಂಗೀತ. ೯). [ಸಂ.]

ಪೂರ್ಣಕಾಮ (ನಾ). ೧. ಇಷ್ಟವನ್ನು ಈಡೇರಿಸಿಕೊಂಡವನು. ೨. ಭಗವಂತ; ಪರಮಾತ್ಮ : ಕರ್ಣ ಕರ್ಣಕಠೋರಸಾಹಸ ನಿರ್ಣಯಿಸು . . . ಪೂರ್ಣಕಾಮನು ನೀನು ಕುರುಬಲಕರ್ಣಧಾರನು ನೀನು (ಕುಷ್ಠಾಪ್ರೋ. ೦-೦೭). [ಸಂ.]

ಪೂರ್ಣಕುಂಭ (ನಾ). ೧. (ನೀರು ಮೊದಲಾದ ದ್ರವದಿಂದ) ತುಂಬಿದ ಕೊಡ—ಕಲಶ : ಕಳಸಂ ಕನ್ನಡಿ ತೋರಣಂ . . . ರತ್ನಂ ದಧಿ ಪೂರ್ಣಕುಂಭಮಿನಿತುಂ ಪೊ ಪುಗೆ ಬರ್ಪಂಗನಾಕುಳದಿಂ ಕಟ್ಟಿದಿರ್ವಂದೊಡಿಷ್ಟ ಫಲಮಂ ಶ್ರೀಶಿಷ್ಟಕಲ್ಪದ್ರುಮಾ (ಲೋಕೋಪ. ೦೨-೯). ೨. ಮಂಗಳ ಸೂಚಕವಾಗಿ ಬಾಗಿಲಲ್ಲಿ ಇಡುವ ನೀರು ತುಂಬಿದ ಕೊಡ : "ಭದ್ರಕುಂಭಃ, ಪೂರ್ಣಕುಂಭಃ—೨ ಅರಮನೆಯ ಬಾಗಿಲು ಮುಂತಾದವುಗಳಲ್ಲಿ ಮಂಗಳಕರವಾಗಿ ಇರಿಸತಕ್ಕ ಪೂರ್ಣಕಲಶಗಳ ಹೆಸರು" (ಸಿದ್ಧಾಂತಿ. ೨೯೫); ಬಿಗಿದೊಗೆದಾತ್ಮತುಂಗಕುಚಕುಂಭಮನೊಡ್ಡಿಪ ಪೂರ್ಣಕುಂಭಮಂ . . . ಅಂಬುಜವದನೆ ಕಂಡಳ್ (ಪುಷ್ಪಪು. ೯-೦೦೦); ಊರ ಬಾಗಿಲಲ್ಲಿಯೂ, ಊರ ಒಳಗೂ ಅಲ್ಲಲ್ಲಿ ಮಂಗಳಾರ್ಥವಾಗಿ ಪೂರ್ಣಕುಂಭಗಳನ್ನು ಇಟ್ಟಿದ್ದರು (ಪತಭಾ. ೩೩೦).

ಪೂರ್ಣಕುಂಭಮರ್ಯಾದೆ = ದೊಡ್ಡವ್ಯಕ್ತಿಗಳನ್ನು ಎದುರುಗೊಳ್ಳುವಾಗ ಮಠ, ದೇವಸ್ಥಾನಗಳಲ್ಲಿ ಪೂರ್ಣಕುಂಭಸಹಿತವಾಗಿ ಮಾಡುವ ಸ್ವಾಗತ : ರಾಷ್ಟ್ರಪತಿಗಳನ್ನು ರಾಮೇಶ್ವರದೇವಸ್ಥಾನದಲ್ಲಿ ಪೂರ್ಣಕುಂಭ ಮರ್ಯಾದೆಯೊಂದಿಗೆ ಎದುರುಗೊಳ್ಳಲಾಯಿತು (ಕೂಠಿ). [ಸಂ.]

ಪೂರ್ಣಕ್ರಿಯಾಪದ (ನಾ). [ವ್ಯಾಕ] ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಕ್ರಿಯಾಪದ : ಧಾತುಗಳಿಗೆ ಕೆಲವು ಆಖ್ಯಾತಪ್ರತ್ಯಯಗಳು ಸೇರಿ ಪೂರ್ಣಕ್ರಿಯಾಪದಗಳಾಗುತ್ತವೆ (ಕೃಶಿಡಿ. ೯೯); 'ಒಂದು' ಕಾಲವನ್ನಾಗಲಿ, 'ಅರ್ಥ' ವನ್ನಾಗಲಿ ಸೂಚಿಸುವ ಕ್ರಿಯಾಪದವನ್ನು ಉಪಯೋಗಿಸಿದರೆ ವಾಕ್ಯದ ಅರ್ಥವು ಪೂರ್ಣವಾಗುತ್ತದೆ. ಉದಾಹರಣೆಗೆ, ಅವನು ಮನೆಯಿಂದ ಹೊರಡುತ್ತಾನೆ . . . ಈ ಬಗೆಯ ಕ್ರಿಯಾಪದಗಳಿಗೆ ಪೂರ್ಣಕ್ರಿಯಾಪದಗಳೆಂದು ಹೆಸರು (ಪುರ್ಯಪು. ೬೯). [ಸಂ.]

ಪೂರ್ಣಗರ್ಭಿಣಿ (ನಾ). ತುಂಬಿದ ಬಸಿರಿ ; ಗರ್ಭವು ಸಂಪೂರ್ಣವಾಗಿ ಬೆಳೆದು, ಹೆರಿಗೆ ಸನ್ನಿಹಿತವಾಗಿರುವ ಹೆಣ್ಣು : ಎಮ್ಮಣ್ಣನಾಣತಿಗಿವಳಂ ವನದೊಳಿರಿಸಿ ಪೋಪೆಂ ಪೂರ್ಣಗರ್ಭಿಣಿ ಕಾಯಿರಿ ನೀಮೆಲ್ಲರ್ ಕಾವಲಿರ್ದು (ರಾಮಾಶ್ವ. ೩೯-೫); ಪೂರ್ಣಗರ್ಭಿಣಿಯಾದೀ ಹುಲ್ಲೆಗೆ ಯಾವಾಗ ಸುಖ ಪ್ರಸವವಾಗುವುದೋ ಆಗ ನನಗೆ ಕುಶಲಪತ್ರಿಕೆಯನ್ನು ಕಳುಹಿಸಬೇಕು (ಶಾಕುಂತ. ೫೫-೫). [ಸಂ. ಪೂರ್ಣಗರ್ಭಿಣೀ]

ಪೂರ್ಣಗೊಳಿಸು (ಕ್ರಿ). ಪೂರ್ತಿ ಮಾಡು ; ಮುಂಗಿಸು ; ಪರಿಸಮಾಪ್ತಿ ಮಾಡು : ಅಂಗವಿಜ್ಞಾನಿ ಹಾರ್ವೆಯು ರಕ್ತಪರಿಚಲನಾಸಂಶೋಧನೆಯನ್ನು ಪೂರ್ಣಗೊಳಿಸಿದನು (ಏಕಾಸ. ೦೯); 'ಪರಿಶಿಷ್ಟ' ವು (Supplement) ಹೊರಬಿದ್ದು ಅದನ್ನು ಪೂರ್ಣಗೊಳಿಸಿತು (ಸಮಾಲೋ. ೨೬೫).

[ಪೂರ್ಣ + ಕೊಳ್$_1$ + – ಇಸು$_3$]

ಪೂರ್ಣಗೊಳ್ಳು (ಕ್ರಿ). ಮುಗಿ ; ಸಮಾಪ್ತವಾಗು : ಈ ಕೊವೆಯವರಿಬ್ಬರ ಆಡಳಿತದಲ್ಲೇ ನಿಘಂಟು ಪೂರ್ಣಗೊಂಡದ್ದು (ಸಮಾಲೋ. ೨೬೦).

[ಪೂರ್ಣ + ಕೊಳ್ಳು$_1$ (< ಕೊಳ್$_1$)]

ಪೂರ್ಣಗ್ರಹಣ (ನಾ). ಸೂರ್ಯ ಅಥವಾ ಚಂದ್ರನು ಪೂರ್ತಿಯಾಗಿ ಮರೆಯಾಗುವ ಗ್ರಹಣ ; ಖಗ್ರಾಸಗ್ರಹಣ : ಚಂದ್ರಗ್ರಹಣ ಪೂರ್ಣಗ್ರಹಣವಾದರೂ ಆಗಬಹುದು, ಅರ್ಧಗ್ರಹಣವಾದರೂ ಆಗಬಹುದು (ಆಕಾಶ. ೯೨). [ಸಂ.]

ಪೂರ್ಣಚಂದ್ರ (ನಾ.) ೧. ಹದಿನಾರುಕಳೆಗಳಿಂದ ಕೂಡಿದ ಚಂದ್ರ ; ಹುಣ್ಣಿಮೆಯ ಚಂದ್ರ : ಉದಯಂಗೈಯಲಿರ್ದ ಪೂರ್ಣಚಂದ್ರನನೊಳಕೊಂಡು ಬೆಳ್ಪೆಸೆವ ವಾಸವದಿಗ್ವನಿತಾನನಂಬೊಲಾನನರುಚಿ ಚೆಲ್ವನೇಂ ನೆಱೆಯೆ ತಾಳ್ದಿದುದೋ ಬಿಸಕಾಂಡಪಾಂಡುರಂ (ಅಪು. ೬-೯೬). ೨. [ಕಾಮಶಾ] ಸ್ತ್ರೀಯರ ಯೋನಿಯಲ್ಲಿರುವ ಒಂದು ನಾಡಿ : ಮದನಾಂದೋಳನ ಮದನಚ್ಛತ್ರ ಪೂರ್ಣಚಂದ್ರಾದಿ ನಾಡೀಮರ್ಮಜ್ಞರಿಂ (ಏಪೇಳ. ೨೩೦) ; ಭಗಕ್ಕೆ ಕೊಂಚ ದೂರದಿಂ ಕಾಮಜಲ ತುಂಬಿರ್ಪುದು ಪೂರ್ಣಚಂದ್ರಮೆಂಬ ನಾಡಿಯುಂಟು (ಕಾಮಶಾ. ೨೩೦). [ಸಂ.]

ಪೂರ್ಣಚಂದ್ರನಾಡಿ (ನಾ). = ಪೂರ್ಣಚಂದ್ರ ೨ : ತುಟಿತುದಿಯಿಂ ಪೂರ್ಣಚಂದ್ರನಾಡಿಯಂ ಮರ್ದಿಸಿ ಪಲ್ಗಳಿಂ ಕಾಮಾತಪತ್ರದ ನಾಡಿಯ ಈಷನ್ಮರ್ದನ. ನಾಲಿಗೆಯ ತುದಿಯಿಂ ಮದನಾಂದೋಳಿಕನಾಡಿಯಂ ಹಲವು ಬಾರಿ ಅಲ್ಲಾಡಿಸುವದು (ಕಾಮಶಾ. ೨೩೯). [ಸಂ.]

ಪೂರ್ಣಚಂದ್ರಿಕೆ (ನಾ). [ಸಂಗೀತ] ಒಂದು ರಾಗದ ಹೆಸರು : ಪೂರ್ಣಚಂದ್ರಿಕೆ—೨೯ನೇ ಮೇಳಕರ್ತ ಧೀರಶಂತರಾಭರಣದಲ್ಲಿ ಜನ್ಯ (ಸಂಗೀತಂ. ೦೯೮) ; ಪಟ್ಣಂ ಸುಬ್ರಮಣ್ಯಅಯ್ಯರ್ ಅವರು ಪೂರ್ಣಚಂದ್ರಿಕಾರಾಗವನ್ನು ಹಾಡಿದ ರೀತಿಯಲ್ಲಿ ತಮ್ಮದೇ ಆದ ವೈಶಿಷ್ಟವನ್ನು ತೋರುತ್ತಿದ್ದರು (ಸಂಗೀತ. ೨೬). [ಸಂ. ಪೂರ್ಣಚಂದ್ರಿಕಾ]

ಪೂರ್ಣಜಠರ (ನಾ). ೧. ತುಂಬಿದ ಹೊಟ್ಟೆ. ೨. [ನಾಟ್ಯ] ನರ್ತನದಲ್ಲಿ ತೋರುವ ಕ್ಷಾಮ, ಖಲ್ವ, ಪೂರ್ಣ, ರಿಕ್ತಪೂರ್ಣ ಎಂಬ (ಉದರಭಾಗದ) ನಾಲ್ಕು ಪ್ರಕಾರಗಳಲ್ಲಿ ಒಂದು ; ಹೊಟ್ಟೆಯನ್ನು ಮುಂದಕ್ಕೆ ಚಾಚುವುದು : ಪೂರ್ಣಜಠರಮೆಸೆಗುಂ ಪೊಡೆಯುಬ್ಬರ ರೋಗದನೊಳ್ ತೋಱುತ್ತುರುಜಠರನೊಳೆಯ್ದೆ ತೋರ್ಪ ನೆಗಳ್ದೂಟದನೊಳ್ (ಶಾಸ್ತ್ರಕಂ. ೨-೦೩೫). [ಸಂ.]

ಪೂರ್ಣಜ್ವರ (ನಾ). ಅತ್ಯಧಿಕವಾದ ಜ್ವರ : ಶುಂಠಿಯಂ ಸೈಂಧವದುಪ್ಪಿನಲ್ಲಿ ಬಿಸಿನೀರು ಕೂಡಿಸಿ ತುಪ್ಪವು . . . ನೆಲಗುಳ್ಳ ಇವುಗಳ ಕಷಾಯದಿಂದ ಸಿದ್ಧಮಪ್ಪುದಂ ಕುಡಿಯಲು ಪೂರ್ಣಜ್ವರ, ಹಲವು ಕಾಲದ ಜ್ವರ, ಕೆಮ್ಮು, ಶೂಲೆ, ಊರ್ಧ್ವತೃಷೆ, ಮಂದಾಗ್ನಿ, ಗ್ರಹಣಿ, ಸಂಗ್ರಹಿಣಿ, ಈ ವ್ಯಾಧಿಗಳೊಳು ಹಿತಮಪ್ಪುದು (ಏಪ್ರಿಂ. ೦೦). [ಸಂ.]

ಪೂರ್ಣತಟಾಕ (ನಾ). ತುಂಬಿದ ಕೆರೆ : ಕೊಳನಂ ತಾವರೆಯಂ . . . ಪೂರ್ಣತಟಾಕಮಂ ಕುಮುದಮಂ ದೇವರ್ಕಳಂ ತುಂಬಿಯಂ ತಿಳಿಯಲ್ ಸ್ವಪ್ನದಿ ಲೇಸೆಲ್ಲೆ (ಸೋಮೇಶ. ೬೯); ಕೊಳರ್ವಕ್ಕಿಯಿಂದೊಪ್ಪುವ ಪೂರ್ಣತಟಾಕಂಗಳಿಂ (ಪಂಚರ. ೦೨-೨೬). [ಸಂ.]

ಪೂರ್ಣತೆ (ನಾ). ೧. ಸಮಗ್ರತೆ; ಪೂರ್ತಿಯಾಗಿರುವಿಕೆ. ೨. ಸಮೃದ್ಧಿ. [ಸಂ. ಪೂರ್ಣತಾ]

ಪೂರ್ಣತ್ವ (ನಾ). ಎಲ್ಲ ಬಗೆಯ ಶಕ್ತಿಗಳಿಂದ ಕೂಡಿರುವಿಕೆ ; ಸರ್ವಸಮರ್ಥತೆ : ಶಿವನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು . . . ಕ್ರಮೇಣ ಪಂಚಕಂಚುಕಗಳಾಗುತ್ತವೆ (ಭಾರದ. ೨೦೪). [ಸಂ.]

ಪೂರ್ಣದೃಷ್ಟಿ (ನಾ). ಎಲ್ಲವನ್ನೂ ಚೆನ್ನಾಗಿ ಹೊಂದಿಸಿ ನೋಡುವ ಮನೋಧರ್ಮ ; ಸಮಗ್ರದೃಷ್ಟಿ ; ಸಾಕಲ್ಯದೃಷ್ಟಿ : ವಿಜ್ಞಾನಿಗಳಲ್ಲಿ . . . ಗಭೀರವಾದ ವಿಶ್ವದ ಮೂಲಸಮಸ್ಯಾಪರಿಹಾರಕ್ಕೆ ಆವಶ್ಯಕವಾದ ಪೂರ್ಣದೃಷ್ಟಿ ಇರಲಿಲ್ಲ (ಪುಕ್ಕಾರ. ೨೬ ಬೀಕಿಳ). [ಸಂ.]

ಪೂರ್ಣಪಾತ್ರ (ನಾ). ೧. ಮಂಗಳವಸ್ತುಗಳಿಂದ ತುಂಬಿದ ಪಾತ್ರೆ ಅಥವಾ ಪೆಟ್ಟಿಗೆ. ೨. ಒಂದು ಬಟ್ಟಲಿನಷ್ಟು ಪ್ರಮಾಣ. ೩. ಇನ್ನೂರುಐವತ್ತಾರು ಮುಷ್ಟಿಗಳಷ್ಟು (ಕಾಳಿನ) ಅಳತೆ ; ೫ ಎಂಟು ಮುಷ್ಟಿ = ೧ ಕಿಂಚಿತ್ (ಅಥವಾ ಕುಂಚಿ), ೮ ಕಿಂಚಿತ್ = ೧ ಪುಷ್ಕಲ, ೪ ಪುಷ್ಕಲ=೧ ಪೂರ್ಣಪಾತ್ರ. ೪. ಯಜ್ಞಸಮಾಪ್ತಿಯಾದಾಗ ಬ್ರಾಹ್ಮಣರಿಗೆ ಕೊಡುವ ದಕ್ಷಿಣಾರೂಪವಾದ ಇನ್ನೂರೈವತ್ತಾರು ಮುಷ್ಟಿ ಅಕ್ಕಿ. ೫. ಹೋಮಕಾರ್ಯದಲ್ಲಿ ಬಳಸುವ ತುಪ್ಪದ ಪಾತ್ರೆ : ಚಮಸ ದರ್ವೀ ಆಜ್ಯಸ್ಥಾಲೀ ಪ್ರೇಕ್ಷಣಪಾತ್ರ ಪೂರ್ಣಪಾತ್ರ ಪ್ರಮುಖಪಾತ್ರವಿಶೇಷಂಗಳಿಂ (ವಿಪೇಕ. ೦೩೫). ೬. ಪುತ್ರ ಜನನ ಮೊದಲಾದ ಸಂತೋಷಸಮಾರಂಭಗಳಲ್ಲಿ ಅಥವಾ ಒಳ್ಳೆಯ ವರ್ತಮಾನವನ್ನು ಕೇಳಿದ ಸಮಯದಲ್ಲಿ ಪರಿಜನರಿಗೆ ಪಾರಿತೋಷಕವಾಗಿ ಕೊಡುವ ವಸ್ತ್ರ, ಆಭರಣ ಮೊದಲಾದುವನ್ನು ತುಂಬಿದ ಪಾತ್ರೆ ಅಥವಾ ಪೆಟ್ಟಿಗೆ; ೫ ಪರಿಜನರೂ ಬಂಧುಮಿತ್ರರೂ ಯಜಮಾನನಿಂದ ಈ ವಸ್ತ್ರಾಭರಣಗಳನ್ನು ತಾವಾಗಿ ಎಳೆದು ತೆಗೆದುಕೊಳ್ಳುತ್ತಾರೆ : ಮಹಾತ್ಮಜಾತಜನನೋತ್ಸವದೊಳ್ . . . ಪೂರ್ಣಪಾತ್ರಹರಣವಿಲುಠ್ಯಮಾನವಸನಭೂಷಣಮುಂ (ಕಾದಂಪು. ೪೦೦); ಒಸೆದೀ ವಾರ್ತೆಗೆ ಪೂರ್ಣಪಾತ್ರಮಿದು ದೇವರ್ ಮನ್ನಿಸಲ್ವೇಟ್ಕುಮೆಂದು ಸಮಂತೀಟ್ಕುಳಿಗೊಂಡಳಾಕೆ ನೃಪಕಂಠೋದ್ದೇಶದಿಂ . . . ಹಾರಮಂ (ಪುಷ್ಕಪು. ೪-೨೬). [ಸಂ.]

ಪೂರ್ಣಪ್ರಜ್ಞ (ನಾ). ೧. ಸಮಗ್ರವಾದ ಜ್ಞಾನವುಳ್ಳವನು; ಸರ್ವಜ್ಞ : ಅರ್ಜುನನು ಪಾರ್ಥಿವಪ್ರಜ್ಞೆಯ ಪಾರ್ಥ; ಶ್ರೀಕೃಷ್ಣನು ಪೂರ್ಣಪ್ರಜ್ಞನಾದ ಅಧ್ಯಾತ್ಮಶಕ್ತಿಯ ಪ್ರಭು (ಭಾರದ. ೦೦೧). ೨. ದ್ವೈತಮತಪ್ರವರ್ತಕರಾದ ಮಧ್ವಾಚಾರ್ಯರ ಹೆಸರುಗಳಲ್ಲಿ ಒಂದು : ಯತ್ಯಾಶ್ರಮವನ್ನು ಸ್ವೀಕರಿಸಿದ ಕೆಲವು ದಿನಗಳಲ್ಲಿಯೇ ಪೂರ್ಣಪ್ರಜ್ಞರ ಯಶಸ್ಸು ಎಲ್ಲ ದಿಕ್ಕುಗಳಿಗೂ ವ್ಯಾಪಿಸಿತು (ಭಾರದ. ೨೬೦); ಮಧ್ವಾಚಾರ್ಯರು ಈ ಕಾಲದಲ್ಲಿ ಜನ್ಮತಾಳಿದರು; ಆನಂದತೀರ್ಥರೆಂತಲೂ ಪೂರ್ಣಪ್ರಜ್ಞರೆಂತಲೂ ಅವರನ್ನು ಕರೆಯುತ್ತಾರೆ (ಕರ್ನಾಕ. ೩೭). [ಸಂ.]

ಪೂರ್ಣಫಲ (ನಾ). ೧. ಸಂಪೂರ್ಣವಾದ ಸಿದ್ಧಿ; ಪೂರ್ಣತ್ವ : ವಾರಣಾಸಿಯ ವಿಶ್ವೇಶ್ವರನ ದರುಶನದಿಂದ ಮಾತ್ರ ಪೂರ್ಣಫಲ ಪ್ರಾಪ್ತವಾಗದು (ನವರಿ. ೦೬). ೨. ಒಡೆಯದೆ ಇರುವ ತೆಂಗಿನಕಾಯಿ : ಪಂಡಿತರು ಮಗಳ ಕೈಗೆ ಪೂರ್ಣಫಲವಿತ್ತು . . . ಧಾರೆಯೆರೆದು ಕೊಟ್ಟರು (ಶಾಂತಲಾ. ೦೦೨). [ಸಂ.]

ಪೂರ್ಣಮಾಸ (ನಾ). ೧. ಚಂದ್ರ. ೨. ಹುಣ್ಣಿಮೆ : ಅದು ಪೂರ್ಣಮಾಸ. ಹೀಗಾಗಿ ದೇವಸ್ಥಾನದಲ್ಲಿ ವಿಶೇಷಕಟ್ಟೆ (ಪೂಪಕ್ಷಿ. ೦೩). ೩. ಹುಣ್ಣಿಮೆಯ ದಿನ ಮಾಡುವ ಯಾಗ (ಆಗ್ನೇಯ, ಅಗ್ನಿಷೋಮೀಯ ಮತ್ತು ಉಪಾಂಶುಯಾಜ — ಎಂಬ ಯಾಗಗಳನ್ನೊಳಕೊಂಡುದು) : "ಕೃಷ್ಣಪಕ್ಷ ಮುಗಿಯುವಾಗ ಮಾಡತಕ್ಕ ಯಾಗಕ್ಕೆ ದರ್ಶವೆಂತಲೂ, ಶುಕ್ಲಪಕ್ಷ ಮುಗಿಯುವಾಗ ಮಾಡತಕ್ಕ ಯಾಗಕ್ಕೆ ಪೂರ್ಣಮಾಸವೆಂತಲೂ ಹೆಸರು" (ಸಿದ್ಧಾಂತಿ. ೨೩೦). [ಸಂ.]

ಪೂರ್ಣಮಾಸಿ (ನಾ). ಹುಣ್ಣಿಮೆ; ಪೂರ್ಣಿಮೆ. [ಸಂ-ಪೂರ್ಣಮಾಸೀ]

ಪೂರ್ಣಮಿ 'ಪುಣ್ಣಮೆ' ನೋ.

ಪೂರ್ಣಮೆ (ನಾ). = ಪೂರ್ಣಮಾಸಿ : ಕಾರ್ತ್ತಿಕಮಾಸದ ಪೂರ್ಣ್ಣಮೆ ತಲೆದಿವಸಮಾಗೆ . . . ಬಿಟ್ಟ ಧರ್ಮಸ್ತಿತಿಕ್ರಮಂ (ಪ್ರುಂಅ. ೦೯೪೬; ೨೯-೪; 1032). [ಸಂ. ಪೂರ್ಣಮಾ]

ಪೂರ್ಣವರ್ತಮಾನಕಾಲ (ನಾ). [ವ್ಯಾಕ] ಕ್ರಿಯೆಯು ಸಂಪೂರ್ಣವಾಗಿದೆ ಎಂಬುದನ್ನು ತಿಳಿಸುವ ಕಾಲ : ಒಂದು ಧಾತುವಿನ ಭೂತನ್ಯೂನರೂಪಕ್ಕೆ 'ಇರು' ಧಾತುವಿನ ವರ್ತಮಾನಕಾಲದ ವಿಶೇಷರೂಪಗಳನ್ನು ಹತ್ತಿಸಿದರೆ ಪೂರ್ಣವರ್ತಮಾನಕಾಲವ ರೂಪಗಳಾಗುತ್ತವೆ (ಮರ್ಕ್ಯಮ. ೦೦೦). [ಸಂ.]

ಪೂರ್ಣವಿರಾಮ (ನಾ). ೧. ವಾಕ್ಯವು ಮುಗಿದುದನ್ನು ಸೂಚಿಸುವ ಚುಕ್ಕೆಯ ಗುರುತು (.) : ಅಲ್ಪವಿರಾಮ, ಅರ್ಧವಿರಾಮ, ಪೂರ್ಣವಿರಾಮಗಳನ್ನು ಅರಿತುಕೊಳ್ಳಬೇಕು (ಮುಂಬಯಿ. ೨-೬). 'ಅರ್ಧವಿರಾಮ', 'ಅಲ್ಪವಿರಾಮ' ಪರಾ. ೨. (ಆಲಂ) ಮುಕ್ತಾಯ; ನಿಲುಗಡೆ; ಕೊನೆ : ಗಂಡ ಲಕ್ಷೋದಿಂದ ಮರಳಿ ಬರುವ ತನಕ ಯಶೋದೆಯ ಕಾಲೇಜುವ್ಯಾಸಂಗದ ಕುರಿತಾದ ಚಿಂತೆಗೆ ಪೂರ್ಣವಿರಾಮ (ಪಾತ್ಸಂ. ೬೯); ಮುದುಕಿ ಮಾತ್ರ ತನ್ನ ಕಥನಕ್ಕೆ ಪೂರ್ಣವಿರಾಮ ವಿತ್ತಿರಲಿಲ್ಲ (ಹಳ್ಳಿಹಾ. ೦೦೩). [ಸಂ.]

ಪೂರ್ಣಷಡ್ಜ (ನಾ). [ಸಂಗೀತ] ಒಂದು ರಾಗದ ಹೆಸರು : ಪಲ್ಲವಿ ಶೇಷಯ್ಯರ್ ಅವರು ನಾದನಾಮಕ್ರಿಯಾ, ಭೈರವಿ, ಕೀರವಾಣಿ, ಪೂರ್ಣಷಡ್ಜಂ, ಗೌರೀಮನೋಹರಿ . . . ಷಣ್ಮುಖಪ್ರಿಯರಾಗಗಳಲ್ಲಿ ರಚಿಸಿರುವ ಕೃತಿಗಳು ಮನಮೋಹಕವಾಗಿವೆ (ಸಂಗೀತ. ೪೬). [ಸಂ].

ಪೂರ್ಣಸಮಾಧಿ (ನಾ). [ಯೋಗ] ವ್ಯಷ್ಟಿ, ನಿಶ್ಚಿತ, ವಿಲಕ್ಷಣ, ನಿರ್ವಿಷಯ, ಸಮಷ್ಟಿ ಮತ್ತು ಪೂರ್ಣ ಎಂಬ ಆರು ಬಗೆಯ ಸಮಾಧಿಗಳಲ್ಲಿ ಒಂದು : ಪೂರ್ಣಸಮಾಧಿಯೆಂಬುದು ವಿಕಸನಂಗೈದರಿವನುನ್ಮುನಿ ಸುಖಸಮಗ್ರವನೆಸಗಿ ತನುಮೋಹವನು ಮರಸುವುದು (ಗಗತಾ. ೦೩-೩೦). [ಸಂ.]

ಪೂರ್ಣಾಂಕ (ನಾ). [ಗಣಿತ] ಪೂರ್ಣವಾದ ಸಂಖ್ಯೆ ; ದುಂಡಂಕೆ ; ವಿಭಾಗವಾಗದ ಮೊತ್ತ : ಅಳತೆಯಲ್ಲಿ ಸರಪಣಿ ಸಂಪೂರ್ಣವಾಗಿ ಆದಲ್ಲಿ ಒಂದು ಪೂರ್ಣಾಂಕವೆಂತಲೂ . . . ಲೆಕ್ಕವಿಡಬೇಕು (ಭೂಮಿತ. ೪). [ಸಂ.]

ಪೂರ್ಣಾಯುಸ್ಸು (ನಾ). ಜೀವಿತದ ಸಮಗ್ರ ಅವಧಿ; ದೀರ್ಘಾಯುಷ್ಯ; ನೂರುವರ್ಷಗಳ ಜೀವನಕಾಲ : ನಿನಗೆ ದೇವರಂಥಾ ಪೂರ್ಣಾಯುಸ್ಸಿನ ಗಂಡ ಸಿಕ್ಕಲಿ (ನೀರಯೋ. ೦೦೩). [ಸಂ. ಪೂರ್ಣಾಯುಸ್]

ಪೂರ್ಣಾವತಾರ (ನಾ). ದೈವತ್ವವು ಪೂರ್ಣವಾಗಿ ಪ್ರಕಟವಾಗುವ ಭಗವಂತನ ಅವತಾರ ; ೫ ನರಸಿಂಹಾವತಾರ, ರಾಮಾವತಾರ ಹಾಗೂ ಕೃಷ್ಣಾವತಾರಗಳು ಪೂರ್ಣಾವತಾರಗಳೆಂದು ಗಣಿಸಲ್ಪಟ್ಟಿವೆ; ಅದರಲ್ಲಿಯೂ ಕೃಷ್ಣಾವತಾರವು ಪರಿಪೂರ್ಣವೆನಿಸಿದೆ : ಯಾರಲ್ಲಿ ದೈವತ್ವವು ಅತ್ಯಂತಪ್ರಕಾಶಮಾನವಾಗಿ ಮೆರೆಯುತ್ತದೊ ಅಂಥವರದು

ಪೂರ್ಣಾವತಾರ; ಯಾರಲ್ಲಿ ಅದು ಯಾವುದೇ ಒಂದು ವಿಶಿಷ್ಟಮುಖದಲ್ಲಿ ಪ್ರಕಟವಾಗುತ್ತದೋ ಅಂಥವರದು ಅಂಶಾವತಾರ; ಇನ್ನೂ ಕಡಿಮೆ ಯಾಗಿದ್ದರೆ ಅಂಥವರದು ಕಲಾವತಾರ (ಶಕ್ತಿಶ್ರಾ. ೦೨೯). 'ಅಂಶಾವತಾರ' ಪರಾ. [ಸಂ.]

ಪೂರ್ಣಾಹುತಿ (ನಾ). ೧. ಯಜ್ಞಾದಿಗಳಲ್ಲಿ ದರ್ವಿ ಅಥವಾ ಸವುಟನ್ನು ಪೂರ್ತಿಯಾಗಿ ತುಂಬಿಕೊಂಡು ಕೊಡುವ ಆಹುತಿ. ೨. ಯಜ್ಞದಲ್ಲಿ ಅಗ್ನಿಗೆ ಕೊನೆಯಲ್ಲಿ ಒಪ್ಪಿಸುವ ಬಹುಮುಖ್ಯವಾದ ಬಲಿ; ಯಜ್ಞವನ್ನು ಪೂರ್ಣಗೊಳಿಸುವ ಆಹುತಿ : ಭೂಪತಿಯ ರಣಯಜ್ಞ ಮುಖಕೆ ನಿಜಾಪಘನಪೂರ್ಣಾಹುತಿಯಲೇ (ಕುಣ್ಯಗ. ೦-೨೬); ಚಂದ್ರ ಹಾಸಂ . . . ಪೂರ್ಣಾಹುತಿಗೆ ಶಿರವನರಿದವೆನೆಂದು ಖಡ್ಗಮಂ ಗೋಣ್ಗೆ ಪೂಡಿ . . . ಅರಿಯಲನುವಾದನು (ಸ್ವಪ್ನಾ. ೩೦-೬೬); ಪೂರ್ಣಾಹುತಿ ಗೊಂಡು ವಿಜೃಂಭಿಸಿ ಶಾಂತನಾಗುವ ಯಜ್ಞೇಶ್ವರನಂತೆ ಸುತ್ತಮುತ್ತಲೆಲ್ಲ ಏನೋ ಶಾಂತಿ ತಲೆದೋರಿತು (ಮಹಾಶ. ೦೬೯). ೩. (ಆಲಂ) "ಒಟ್ಟಿಗೆ ಕೊಟ್ಟ ಬಲಿ; ಸರ್ವನಾಶ" (Holocaust. ಇಂಕಪಿ). [ಸಂ.]

ಪೂರ್ಣಿಮಾಂತ (ಗು). ೧. ಹುಣ್ಣಿಮೆಗೆ ಕೊನೆಗೊಳ್ಳುವ. (ನಾ). ೨. ಹುಣ್ಣಿಮೆಯ ಕೊನೆ,—ಮುಕ್ತಾಯ. [ಸಂ.]

ಪೂರ್ಣಿಮಾಂತಮಾಸ (ನಾ). ಹುಣ್ಣಿಮೆಗೆ ಮುಗಿಯುವ ತಿಂಗಳು; ಹುಣ್ಣಿಮೆಯಿಂದ ಹುಣ್ಣಿಮೆಯವರೆಗೆ ಎಂದು ಎಣಿಸುವ ತಿಂಗಳು; ಚಾಂದ್ರಮಾನಮಾಸ : ಕೃಷ್ಣಪ್ರತಿಪದೆಯಿಂದ ಪೂರ್ಣಮೆಯ ತನಕ; ಇದಕ್ಕೆ ಪೂರ್ಣಿಮಾಂತಮಾಸವೆಂಬ ಹೆಸರು (ಮುಂಬಯಿ. ೬-೬೮). 'ಅಮಾಂತಮಾಸ' ಪರಾ. [ಸಂ.]

ಪೂರ್ಣಿಮೆ (ನಾ). ಚಂದ್ರನು ಹದಿನಾರುಕಳೆಗಳನ್ನೂ ಹೊಂದಿ ಪೂರ್ಣವಾಗಿರುವ ತಿಥಿ; ಹುಣ್ಣಿಮೆ : ಅನುಮತಿಯೆನಿಕುಂ ಪೂರ್ಣಿಮೆ ಯಿನಿಸಾನುಂ ಕುಂದಿ ತೋಱುತಿರೆ ಚಂದ್ರಂ (ಪಸ್ತುಕೋ. ೦೬-೯); ಮಾರ್ಗಶಿರ ಪೂರ್ಣಿಮೆಯು ಸಾಮಾನ್ಯವಾಗಿ ಡಿಸೆಂಬರ್ ಮಧ್ಯಭಾಗದಲ್ಲಿ ಬರುತ್ತದೆ (ಪಕ್ಷಶ್ರ. ೭). [ಸಂ. ಪೂರ್ಣಿಮಾ]

ಪೂರ್ಣೆ (ನಾ). ೧. ಪೂರ್ಣತಿಥಿ; ೫ ಪಂಚಮಿ, ದಶಮಿ ಮತ್ತು ಹುಣ್ಣಿಮೆ—ಇವು ಪೂರ್ಣತಿಥಿಗಳು. ೨. ಚಂದ್ರನ ಹದಿನಾರು ಕಳೆಗಳಲ್ಲಿ ಒಂದು; ಅಮೃತ ಪೂಷ ... ಪೂರ್ಣೆ . . . ಕಾಮದಾಯಿನಿ ಯೆಂಬ ಷೋಡಶಕಲೆಗಳಿಂ (ಏಪೇಕ. ೨೬೭). ೩. [ಸಂಗೀತ] ಮಧ್ಯಮ ಸ್ವರದಿಂದ ಹುಟ್ಟುವ ನಾಲ್ಕುಶ್ರುತಿಗಳಲ್ಲಿ ಒಂದು : ರಂಜಕಿ ಪೂರ್ಣೆ ಅಲಂಕಾರಿಣಿ ವಾಂಶೆಯೆಂಬ ನಾಲ್ಕುಶ್ರುತಿಗಳೆ ಮಧ್ಯಮಸ್ವರದಿಂ ಪುಟ್ಟಿದವು (ಏಪೇಕ. ೨೬೨). [ಸಂ. ಪೂರ್ಣಾ]

ಪೂರ್ಣೇಂದು (ನಾ). =ಪೂರ್ಣಚಂದ್ರ ೧ : ಸೌಂದರವೆರುಮಾಳೆ . . . ರಾತ್ರಿಯಂ ಬೆಳಗಲಿರ್ದ ಪೂರ್ಣೇಂದುವಿನಂತೆ ದಿವಮಂ ಧವಳಿಸಲಿರ್ದ ಸಹಸ್ರಕರನಂತೆ ಇರ್ದಪಂ (ಸಂಬರ. ೪-೦೬); ಕಂದ ಬಾರೋ ಎನ್ನ ಮನಕಾನಂದ ಬಾರೋ' ಬಾಲಕರ ಪೂರ್ಣೇಂದು ಬಾರೋ (ಕುಪ್ಯಾಪ್ರೂ. ೬ ೨೦). [ಸಂ.]

ಪೂರ್ಣೋಪಮೆ (ನಾ). [ಕಾವ್ಯಮೀ] ಉಪಮೇಯ, ಉಪಮಾನ, ಸಾದೃಶ್ಯವಾಚಕ ಮತ್ತು ಸಾಧಾರಣಧರ್ಮ ಎಂಬ ನಾಲ್ಕೂ ಅಂಗಗಳನ್ನು ಸ್ಪಷ್ಟವಾಗಿ ಹೇಳಿರುವ ಉಪಮೆ : ತಾಯಂತೆ ಪೊರೆದು ತಂದೆವೊಲಾಯತಿಯೊಳ್ ಹಿತಮನೆಣಿಸಿ ಚಿಕದೇವಮಹಾ ರಾಯಂ ಪ್ರಜೆಯನಿತಂ ನಾರಾಯಣನಂತೆ ಟಿಕ್ಗೆವಡಿಸಿಯಾಳ್ಗುಂ ಸೊಗ ದೊಳ್ ಇವಱೊಳ್ 'ಚಿಕದೇವಮಹಾರಾಯಂ' ಎಂದು ಉಪ ಮೇಯಮಂ, 'ತಾಯ್ತಂದ ನಾರಾಯಣರ್' ಎಂದು ಉಪಮಾನಂಗಳಂ, 'ಪೊರೆದು' 'ಹಿತಮನೆಣಿಸಿ' 'ಎಟ್ಗೆವಡಿಸಿ' ಎಂದು ಸಮಾನಧರ್ಮ ಗಳಂ 'ಅಂತೆ', 'ವೊಲ್' ಎಂದು ಉಪಮಾವಾಚಕಪದಂಗಳುಮಂ ಪೇಳ್ದು ರ್ಪುದಱಿಂದಿದು ಪೂರ್ಣೋಪಮಾಲಂಕಾರಮೆನಿಪುದು (ಅಶ್ವತಿ. ೩೩-೦೭); ಬಳಸಿ ಸುಟಿದಾಡಿ ಕಾಲ್ವಿಡಿದೆಳಸಿ ಕಲಾಲಾಪಮೊದವೆ ಜನನಿಯ ಮೊಲೆ ವಾಲ್ಗಳನುಣ್ಬ ಶಿಶುಗಳಂತಿರೆ ಕಳವೆಯ ಪಾಲ್ದೆನೆಯ ಪಾಲನುಂಡುವು ಗಿಳಿಗಳ್—ಈ ಪದ್ಯದಲ್ಲಿ ಗಿಳಿಗಳೆಂಬ ಉಪಮೇಯವೂ ಶಿಶುಗಳೆಂಬ ಉಪ ಮಾನವೂ 'ಅಂತಿರೆ' ಯೆಂಬ ಉಪಮಾವಾಚಕವೂ ಸಹ . . . ಸ್ಪಷ್ಟವಾಗಿ ಉಕ್ತವಾಗಿರುವುದರಿಂದ ಈ ಹೋಲಿಕೆ ಪೂರ್ಣೋಪಮೆ (ಕೃಷಿ. ೨೫೬). [ಸಂ. ಪೂರ್ಣೋಪಮಾ]

ಪೂರ್ತ್₁ (ಗು). ೧. ಎಲ್ಲ; ಸಂಪೂರ್ಣವಾದ; ಸಮಗ್ರವಾದ. ೨. ತುಂಬಿದ; ಭರ್ತಿಯಾದ. (ನಾ). ೩. ಪೂರ್ಣಗೊಳಿಸುವಿಕೆ; ಪೂರೈಕೆ; ನೆರವೇರಿಕೆ. ೪. ಬಾವಿ, ಕೆರೆಗಳ ನಿರ್ಮಾಣ, ಯಾತ್ರಾರ್ಥಿ ಗಳ ಸೌಕರ್ಯಕ್ಕಾಗಿ ಉದ್ಯಾನವನ, ಅನ್ನಸತ್ರ, ಅರವಟ್ಟಿಗೆ, ದೇವಾಲಯ, ಧರ್ಮಶಾಲೆ ಮೊದಲಾದುವುಗಳನ್ನು ಏರ್ಪಾಟು ಮಾಡುವುದು ಮುಂತಾದ ಧರ್ಮಕಾರ್ಯ : ಇಷ್ಟಂ ಯಾಗಾರ್ಥ ದೊಳುತ್ಯಷ್ಟಂ ಪೂರ್ತಂ ವದ[ದಾ]ನ್ಯಹೇತುವಿಕೀರ್ಣಂ ಇಷ್ಟಾಪೂರ್ತಂ ಗಳವುತ್ಯಷ್ಟಶ್ರೇಯೋನಿಮಿತ್ತಮಕ್ಕುಮವೆರಡುಂ (ಪಸ್ತುಕೋ. ೫೯-೪೩); ಮಾಡಿ ಷೋಡಶದಾನವನು ಮನ ಬೇಡಿದಂದದಲನ್ನಪಾನವ ನೀಡಿ ವಿಪ್ರರಿಗೊಲಿಯುತಿಷ್ಟಾಪೂರ್ತಗಳ ಮುಗಿಸಿ ಖೋಡಿಯಲ್ಲದ ಪುಣ್ಯಫಲ ಕೈಗೂಡೆ (ಅಪ್ಯುತ. ೨-೦೦೦). [ಸಂ.]

ಪೂರ್ತ್₂ (ಅ). ಪೂರ್ಣವಾಗಿ; ಪೂರ್ತಿಯಾಗಿ; ಸಂಪೂರ್ಣವಾಗಿ : ಪೂರ್ತ ಕೂಲಿ ಅವಳಿಗೆ ಕೊಟ್ಟರು (ಕೊಪಸೇ. ೨೨೧); ಸಾಮಾನುಗಳನ್ನು ಪೂರ್ತ ಹಿಂದಿರುಗಿ ಕೊಟ್ಟಿರಲಿಲ್ಲ (ಪ್ರಣಾ. II. ೨೨೦). [<ಪೂರ್ತ್₁]

ಪೂರ್ತಗೊಳಿಸು (ಕ್ರಿ). ಪೂರೈಸು; ಪೂರ್ಣ ಮಾಡು; ಮುಗಿಸು : ಈ ಕೆಲಸವನ್ನು ಇಂದೇ ಪೂರ್ತಗೊಳಿಸಬೇಕು (ಕೂಡಿ). [ಪೂರ್ತ್₁+ಕೊಳ್₁+_ಇಸು₃]

ಪೂರ್ತತೆ (ನಾ). ಪೂರ್ಣತೆ; ಪರಿಪೂರ್ಣತೆ : ಜೀವನದಲ್ಲಿ ಗೌರೀಶ, ನಿನಗೆ ಆತ್ಮಸಿದ್ಧಿ ದೊರೆಯಲಿ, ಪೂರ್ತತೆ ನಿನ್ನ ಪಾಲಿಗೆ ಬರಲಿ (ಮುಕ್ತಿ. ೨೫೩); ದೈವದೊಳಗೆ ಪೌರುಷದ ಪೂರ್ತತೆಯಿರುವುದು (ಪ್ರಬಂಧ. ೩೨). [ಸಂ. ಪೂರ್ತತಾ]

ಪೂರ್ತಾನುಪಾಲನ (ನಾ). 'ಪೂರ್ತ' ವೆಂಬ ಹೆಸರಿನ ದಾನದತ್ತಿಗಳನ್ನು ನಿರಂತರವಾಗಿ ನಡಸಿಕೊಂಡು ಬರುವುದು,—ರಕ್ಷಣೆ ಮಾಡುವುದು : ಪೂರ್ವದಿಂದ ನಡೆದು ಬರುತ್ತಿರುವ ದೇವದಾಯ ಬ್ರಹ್ಮದಾಯ ಧರ್ಮದಾಯ ಪೂರ್ತಾನುಪಾಲನ ಸರ್ವಮಾನ್ಯ ಭಟ್ಟಮಾನ್ಯ . . . ಮುಂತಾದುವೇನೂ ಹೆಚ್ಚುಕಡಿಮೆಯಾಗದಂತೆಯೂ ಆವೊಂದೂ ಈ ಪೌಜುಗಂದಾಯಕ್ಕೆ ಒಳಸೇರದಂತೆಯೂ ನಮ್ಮ ಕರಣಿಕರು ಎಚ್ಚತ್ತಿರ ಬೇಕು (ಬಸುಗಂ. ೩೬-೨೦). [ಸಂ.]

ಪೂರ್ತಿ₁ (ನಾ). ೧. ತುಂಬುವುದು; ಭರ್ತಿಮಾಡುವುದು. ೨. ಮುಗಿಸು ವುದು; ಮುಕ್ತಾಯಗೊಳಿಸುವುದು. ೩. ಪೂರ್ಣಗೊಳಿಸುವುದು; ಪೂರೈಸುವುದು : ವಸುಧೆಯೊಳಿಷ್ಟಾರ್ಥಪೂರ್ತಿಯ [ಶಾಕಾಂ. ಮಂ ತವೆ] ನೆಗಳ್ಚುವನ ಬಹುವಿಧದ ಧರ್ಮಂಗಳಂ ರಚಿಸುವನ ಮನೆಯೊ ಳಿಂದಿರೆ ಬಿಡದೆ ನೆಲಸಿರ್ಪಳು (ಸ್ವಪ್ನಾ. ೫-೬೬). ೪. ಪೂರ್ಣಗೊಳ್ಳು ವುದು; ಪೂರ್ಣತೆ. ೫. ತಣಿವು; ತೃಪ್ತಿ. [ಸಂ.]

ಪೂರ್ತಿ₂ (ಅ). ಸಂಪೂರ್ಣವಾಗಿ; ಪೂರಾ : ಇಲ್ಲಿಯ ಪರಿಸ್ಥಿತಿ ಪೂರ್ತಿ ಹದಗೆಟ್ಟುಹೋಗಿದೆ (ಕೂಡಿ). [<ಪೂರ್ತಿ₁]

ಪೂರ್ತಿಗೊಳಿಸು (ಕ್ರಿ). ೧. ಮುಂಗಿಸು; ಮುಕ್ತಾಯಗೊಳಿಸು : ಈ ಕೆಲಸವನ್ನು ಪೂರ್ತಿಗೊಳಿಸದೆ ಇಂದು ಮನೆಗೆ ಹೋಗುವಂತಿಲ್ಲ (ಕೂಡಿ).

೨. ಈಡೇರಿಸು ; ನೆರವೇರಿಸು ; ಕೈಗೂಡಿಸು : ಈಗ ನನ್ನ ಮನೋಭಿಲಾಷೆಯನ್ನು ಪೂರ್ತಿಗೊಳಿಸು (ಪುಷಿಸ. ೬೫).

[ಪೂರ್ತಿ$_1$+ಕೊಳ್$_1$+ —ಇಸ್ಸು$_3$]

ಪೂರ್ತಿಸು (ಕ್ರಿ). ೧. ಮುಗಿಸು ; ಮುಕ್ತಾಯಗೊಳಿಸಂ : ಕುಂದದನುದಿನ ವಶನನಿದ್ರಾಮಂದತೆಯನುಳಿದಧಿಕಜಾಗ್ರತೆಯಿಂದ ವನವಾಸವನು ಪೂರ್ತಿಸಿ ಬಹುದು ನೀನು (ಅಸಂಶಾ. ೨-೦-೬೭) ; ಸಂಜೆಗಿಂತ ಮೊದಲೆ ಆಹಾರವನ್ನು ಪೂರ್ತಿಸಬೇಕೆಂಬುದು...ಸ್ವತಃ ಬಂಕೆಯನಿಗೇ ನೆನಪಾಗಲಿಲ್ಲ (ಶಿಂಕಾಂ. ೦೦). ೨. ಈಡೇರಿಸು ; ಕೈಗೂಡಿಸು : ಚೆಲುವನ್ನೇ ಮೂರ್ತಿಸಿ ಬಯಕೆಗಳನು ಪೂರ್ತಿಸಿ ಬರಲಿ ದೇವ—ದ್ವೀಪನೀ ಬಾರೆ ದಾ ಮನೋನ್ಮನೀ (ಹೃದಸ. ೨೦-೬). [ಪೂರ್ತಿ$_1$+—ಇಸ್ಸು$_3$]

ಪೂರ್ಬ (ಗು). ೧. ಹಿಂದಿನ ; ಪ್ರಾಚೀನ : 'ಪೂರ್ಬಮರ್ಯಾದೆ' ಪರಾ. (ನಾ). ೨. ಮೂಡಣದಿಕ್ಕು ; ಪೂರ್ವದಿಕ್ಕು : 'ಪೂರ್ಬಾಭಿಮುಖ' ಪರಾ. [<ಸಂ. ಪೂರ್ವ]

ಪೂರ್ಬಮರ್ಯಾದೆ (ನಾ). ಹಿಂದಿನಿಂದ ನಡೆದು ಬಂದ ಕ್ರಮ ; ಪರಂಪರಾನುಗತವಾದ ನಿಯಮ : ಹಾರಮರವೂರ ಕೋಟೆಯ ಪೂರ್ಬ್ಬಮರ್ಯಾದೆಯ ಚತುಸ್ಸೀಮೆ ಗದ್ದೆ ದೆದ್ದಲು ಸೀಮೆ . . . ಕೊಟ್ಟೆವು (ಎಳ. IX. ಸಂಗಳೂ. ೩೦-೦೨ ; 1340). [ಪೂರ್ಬ+ಮರ್ಯಾದೆ]

ಪೂರ್ಬಾಭಿಮುಖ (ನಾ). ಮೂಡಣದಿಕ್ಕಿಗೆ ಎದುರಾಗಿರುವುದು; ಪೂರ್ವಕ್ಕೆ ಅಭಿಮುಖವಾಗಿರುವುದು: ಸರೋವರದ ಪಶ್ಚಿಮತಟದಲ್ಪೂರ್ಬ್ಬಾಭಿಮುಖವಾಗಿಟ್ಟು ಶಿವಾಲಯಂ ಪ್ರದಕ್ಷಿಣಂ ಬಂದು ಶ್ರೀಸೋಮೇಶ್ವರದೇವರಂ ಕಂಡು (ಶಾಶಾ. XX. ೪೯-೪೯ ; ಸು. 1076).

[<ಪೂರ್ವಾಭಿಮುಖ]

ಪೂರ್ಬಾಯ (ನಾ). ಒಂದು ಬಗೆಯ ತೆರಿಗೆಯಿಂದ ಬರುವ ಆದಾಯ : ನಾಡುಮರಿಯಾದೆಯಲ್ಲಿ ಪೂರ್ಬ್ಬಾಯವೇನು ಬಂದಡೆ ಆ ಸ್ಥಾನದವರು ತೆಱುವರು (ಎಳ. III. ಕಿರುಮ. ೦೦೦-೩೫ ; 1281) ; ಪಂಚಕಾರುಕ ಆಲೆದೆಱೆ ಮುಕುಡಿದೆಱೆ ಜೆಟ್ಟಿದೆಱೆ ಕೊನೆದೆಱೆ ಖಾಣಸಂಬಳವೊಳಗಾದ ಪೂರ್ಬ್ಬಾಯ ಅಪೂರ್ಬ್ಬಾಯ . . . ಎಲ್ಲವನೂ ಕಾರುಣ್ಯಂಮಾಡಿ ಧಾರಾಪೂರ್ಬ್ಬಕಂ ಮಾಡಿ ಕೊಟ್ಟರು (ಎಳ. VI. ಕಡೂರು. ೪೯-೪೨ ; 1291). [<ಪೂರ್ವಾಯ]

ಪೂರ್ಬಿಗ, ಪೂರ್ವಿಗ, ಪೂರ್ವೀಕ (ನಾ). (ವಂಶದ) ಹಿರಿಯ ; ಪೂರ್ವಿಕ : ಅಡಗಿನ ಬಸನಿಗರ್ಗ್ಗಂ ಕಳ್ಗುಡಿವವರ್ಗ್ಗಂ ವೃತ್ತಿಲೋಪ ಮೆಂಬಿ: ನುಡಿಯಂ ಕಡೆಗಣ್ಗಣಿಸದೆ ಮೊದಲಿಂದೆ ಕಿಡಿವುದದಂ ಸ್ಥಾನಗುರುಗಳುಂ ಪೂರ್ಬ್ಬಿಗರುಂ (ಸೌಇಇ. IX-i. ೦೦೭-೩೯ ; ಸು. 1055). **ಪೂರ್ವಿಗ** : ಬಿಂಬಿರನೂರ ಪೂರ್ವ್ವಿಗರ ಗೊಲುಕಿಗಾವುಣ್ಡನ ಮಗ ಸೆಲಿಯಮ್ಮಗಾವುಣ್ಡನು (ಎಳ. IX (ಪ). ಹೊಸಕೋ. ೨೦೭-೪ ; ಸು. 900) ; ಜಗವಱಿಯೆ ನಮ್ಮನ್ವಯದ ಪೂರ್ವಿಗನಲಾ ನಹುಷಂಗೆ ಬಂದುಬ್ಬೆಗದ ಹದನಿದು (ಕುಪ್ಯಾಲ. ೦೩-೭೦). **ಪೂರ್ವೀಕ**: ಅವರ ಪೂರ್ವೀಕರೆಲ್ಲ ಒಳ್ಳೆಯ ವಿದ್ವಾಂಸರಾಗಿದ್ದರು (ಕೂಕಿ). [< ಸಂ. ಪೂರ್ವಿಕ]

ಪೂರ್ಯ (ಗು). ೧. ತುಂಬಬೇಕಾದ. ೨. ತೃಪ್ತಿಗೊಳಿಸಬೇಕಾದ. ೩. ಅಧಿಕವಾದ ; ಅತಿಶಯವಾದ : ಗದ್ಗದಕಂಠವೆಸೆಯಲು ಪೂರ್ಯಹರುಷಸಮುದ್ಗತಾಪ್ತಾಶಳಕ್ಷಿಗಳೊಳುಗಲು (ಐಸಪು. ೬-೬) ; ಸ್ಥೈರ್ಯಶೌರ್ಯಂ ವರಕ್ಷಮಾನಿಧಿ ಪೂರ್ಯಧೈರ್ಯಂ . . . ಧೂಜನ ನಮಸ್ಕಾರ್ಯನೆನಲೆಸೆದ (ಐಸಪು. ೨೨-೨೪). [ಸಂ.]

ಪೂರ್ವ (ಗು). ೧. ಹಿಂದಣ ; ಪ್ರಾಚೀನ : ನಿಮ್ಮಯ ಪೂರ್ವಪೃಥ್ವೀಪಾಲಾದ್ದರು ಗುಪುತದಿಂದ ವಿಕಾಟನಗರಿಯಲಿ (ಕುಪ್ಯಾಲಿ. ೨-೦). 'ಪೂರ್ವಕಾಲ' 'ಪೂರ್ವಾಚಾರ್ಯ' ಪರಾ. ೨. ಮೊದಲಿನ ; ಎಳೆಯ : 'ಪೂರ್ವವಯಸ್ಸು' ಪರಾ. ೩. ಇಂದಿಗೆ ಹಿಂದಿನ ಕಾಲಕ್ಕೆ ಸೇರಿದ : ಇಂದಿಗೆ ಮುಂಚಿನ ಸಮಯದ. ೪. (ಅನುಕ್ರಮದಲ್ಲಿ) ಮೊದಲನೆಯ ; ಅಗ್ರೇಸರ ; ಪ್ರಥಮ. ೫. ಮೂಡಣ ; ಮೂಡಣದಿಕ್ಕಿನಲ್ಲಿರುವ : ಪೂರ್ವದಿಕ್ಕಿಗೆ ಸಂಬಂಧಿಸಿದ. (ನಾ). ೬. ಹಿಂದಣಕಾಲ ; ಪ್ರಾಚೀನಕಾಲ : ಖ್ಯಾತಸಲ್ಲಾ ರಾಯರಲಿ ನಳನಾತ ಗಾದಾವತ್ತ ಬಲ್ಲೈ ಕೇಳಿ ಪೂರ್ವದಲಿ (ಹೊರಣಾ. ೩-೨-೦೩) ; ತ್ರಿಮೂರ್ತಿಗಳು . . . ಅತ್ರಿಯ ಸತಿಗನುಸೂಯದೇವಿಗೆ ಪುತ್ರರಾದರು ಪೂರ್ವದೊಳು (ಹರಿಪ. ೨-೪೬). ೭. ಹಿಂದೆ ನಡೆದು ಹೋದ ಸಂಗತಿ ; ಪೂರ್ವಕಾಲದ ಘಟನೆ : ನಂಬಿಯಣ್ಣಂ ಪೂರ್ವಮಂ ನೆನೆದು ಪರಿತಂದು ಚರಣದೊಳು ಬಿಳುತುಂ (ಸಂಬರ. ೬-೨೨೭). ೮. ಮೊದಲು ಇರುವಂತಹುದು ; ಮೊದಲಿನದು : "ಆದಿಃ, ಪೂರ್ವಃ, ಪೌರಸ್ತ್ಯಃ, ಪ್ರಥಮಃ, ಆದ್ಯಃ—೫ ಮೊದಲನೆ ದರ ಹೆಸರುಗಳು" (ಸಿದ್ಧಾಂತಿ. ೩೪೪) ; ವಿದಿತ ಸಮಾಸಂಗಳ ಪೂರ್ವದಕ್ಕರಂ ಹ್ರಸ್ವಮದಱ ಪರದಕ್ಕರಮಂತದು ದೀರ್ಘಂ (ಕಸುಪ. ೯). ೯. ಹಿಂದಿನ ಭಾಗ ; ಹಿಂಭಾಗ : ಆದೇಶಮಾಗಿ ಮುಂಗಳ್ಗಾದರುವದು ನಿಲ್ಕುಮಿರ್ಗಮೆವುಗಂ ಪೂರ್ವಕ್ಕೆ (ಕಸುಪ. ೨೨೦). ೧೦. ಮೂಡಣದಿಕ್ಕು : "ಪ್ರಾಚಿಯೆನೆ ಪೂರ್ವನ್ನೊಂದ್ರಿಯೆನೆ ಮೂಡಲೆನಿಕ್ಕು" (ಸುಂಗರಾ. ೦೭-೦೯). ೧೧. ಹಿಂದಿನವನು . ಹಿರಿಯ : "ಪೂರ್ವಃ-೧ ಮೂಡಲಲ್ಲಿರುವಂಥಾದ್ದು, ಪೂರ್ವಕಾಲ, ಮೂಡಲಲ್ಲಿ ಹುಟ್ಟಿದವರು, ಪೂರ್ವಕಾಲದಲ್ಲಿ ಹುಟ್ಟಿದವರು" (ಸಿದ್ಧಾಂತಿ. ೪೦೫) ; ಅರಸ ದೂರಾಗತರ ಪೂರ್ವರ ಚಿರಸಮಾಶ್ರಿತರೆನಿಪ ಧರಣೀಸುರರ ಸಲಹಲು ಸಮನೆನಿಸುವೀ ಮೂಱು ತೆಱದವರ . . . ರಕ್ಷಿಸುತಲಿರಬೇಕು (ತಿಪ್ಪುಲ. ೩-೩೬). ೧೨. [ಜೈನ] ಹನ್ನೆರಡನೆಯ ದೃಷ್ಟಿವಾದದ ಅಂಗಗಳಲ್ಲಿ ಬರುವ, ಶ್ರುತಾಂಗಗಳ ವಿವರಣೆಯನ್ನು ನೀಡತಕ್ಕ ಉತ್ಪಾದಪೂರ್ವ, ಅಗ್ರಾಯಣೀಯಪೂರ್ವ, ವೀರ್ಯಾನುವಾದಪೂರ್ವ, ಅಸ್ತಿನಾಸ್ತಿಪ್ರವಾದಪೂರ್ವ, ಜ್ಞಾನಪ್ರವಾದಪೂರ್ವ, ಸತ್ಯಪ್ರವಾದಪೂರ್ವ, ಆತ್ಮಪ್ರವಾದಪೂರ್ವ, ಕರ್ಮಪ್ರವಾದಪೂರ್ವ, ಪ್ರತ್ಯಾಖ್ಯಾನಪೂರ್ವ, ವಿದ್ಯಾನುವಾದಪೂರ್ವ, ಕಲ್ಯಾಣವಾದಪೂರ್ವ, ಪ್ರಾಣಾವಾಯುಪೂರ್ವ, ಕ್ರಿಯಾವಿಶಾಲಪೂರ್ವ ಮತ್ತು ಲೋಕಬಿಂದುಸಾರಪೂರ್ವ ಎಂಬ ಹದಿನಾಲ್ಕು ಆಗಮಗ್ರಂಥಗಳು : ಪ್ರಥಮಾನುಯೋಗಮುಮಂ ಪದಿನಾಲ್ಕುಪೂರ್ವಂಗಳುಮನಯ್ದು ಚೂಳಿಕೆಯುಮಂ . . . ಪೆಸರ್ಗೊಂಡು (ಅಂಪು. ೩-೪೦೫) ; ಅಂಗಗಳಿಗಿಂತ ಮುಂಚೆ ಶಾಸ್ತ್ರಜ್ಞಾನವು ಶ್ರುತರೂಪದಿಂದ ಪ್ರಚಾರದಲ್ಲಿತ್ತು. ಆಗ ಅದು ಹದಿನಾಲ್ಕು ಪೂರ್ವಗಳ ರೂಪದಲ್ಲಿ ಪ್ರಚಲಿತವಾಗುತ್ತಿತ್ತು (ಸೈಪಶ. ೦೩೪). 'ಚತುರ್ದಶಪೂರ್ವ' ಪರಾ. ೧೩. ದೀರ್ಘವಾದ ಒಂದು ಕಾಲಮಾನ : ಎಪ್ಪತ್ತುಲಕ್ಷದ ಐವತ್ತಾರುಸಾವಿರ ಕೋಟಿ ವರ್ಷ : ಲಕ್ಕೆಯ ಲೆಕ್ಕದೊಳೊಂದಿ ಪೂರ್ವಮಿರ್ಪತ್ತು ನಿರಂತರಂ ನಡೆದುದಾ ವೃಷಭಂಗೆ ಕುಮಾರಕಾಲದೊಳ್ (ಅಂಪು. ೬-೬೦); ಎರಡುಲಕ್ಷಪೂರ್ವಂ ಪರಮಾಯುಷ್ಯನುಂ . . . ಧವಳವರ್ಣನಮಾಗಿ ಬಳೆದಯ್ವತ್ತುಸಾಸಿರಪೂರ್ವಂ ಕುಮಾರಕಾಲಂ ಪೋಗೆ ರಾಜ್ಯಾಭಿಷೇಕಮಾಗಿ (ಶಾಪುಂಪು. ೦೨೬). ೧೪. ಹದಿನಾಲ್ಕು ಎಂಬ ಸಂಖ್ಯೆಯ ಸಂಕೇತ. ೧೫. [ಯೋಗ] ಉಚ್ಛ್ವಾಸ ನಿಶ್ವಾಸಗಳ ಒಂದು ಬಗೆ : "ನಾಸಿಕದಿ ನಿಂದಾನಿಲಂ ಕುಂಭಕಮೆನಿಕ್ಕು . . . ಅನವರತ ಸಂಚರಿಸೆ ಪೂರ್ವಮಕ್ಕುಂ" (ಸುಂಗರಾ. ೧೬-೦೪).

ಪೂರ್ವಪೂರ್ವ — ೧. ಹಿಂದು ಹಿಂದಿನ ; ಹಿಂದಿನದಕ್ಕಿಂತ ಹಿಂದಿರುವ : ಹೀಗೆ ಉತ್ತರೋತ್ತರಾವಸ್ಥೆಗಳಿಂದ ಉತ್ಪತ್ತಿವ್ಯವಹಾರಗಳು, ಪೂರ್ವಪೂರ್ವಾವಸ್ಥಾವಿನಾಶದಿಂದ ವಿನಾಶವ್ಯವಹಾರ (ಹಿಂದಸಾ. ೬೩). ೨. ಹಿರಿಯರಿಗೆ ಹಿರಿಯ; ಪುರಾತನರಿಗೆ ಪುರಾತನನಾದವನು;

ಆದಿಪುರಂಷ ; ಪರಮೇಶ್ವರ : ನಿಜನಿರ್ಮಲಿತರೂಪನಂ ಪೂರ್ವ ಪೂರ್ವನಂ . . . ದೇವದೇವನಂ ಭಜಿಸಿದಳಗಡೆ ಬನದೊಳು (ಶೈಶಿಶಾ. ೦೩-೨೩). ಪೂರ್ವದ ಹಳಗನ್ನಡ = ಹಳಗನ್ನಡಕ್ಕೂ ಹಿಂದಿನ ಅತಿ ಪ್ರಾಚೀನವಾದ ಕನ್ನಡಭಾಷೆಯ ರೂಪ : ಹಳಗನ್ನಡಕ್ಕೂ ಹಿಂದೆ ಕನ್ನಡಕ್ಕೆ ಒಂದು ರೂಪವಿತ್ತು. ಅದನ್ನು "ಪೂರ್ವದ ಹಳಗನ್ನಡ" ವೆನ್ನುತ್ತಾರೆ (ಕೃಶಿಶಾ. ೦). ಪೂರ್ವಾಪರ = ೧. ಮೊದಲಿನ ಮತ್ತು ಅನಂತರದ. ೨. ಹಿನ್ನೆಲೆಯಿಂದ ಪರಿಣಾಮದ ವರೆಗಿನ ಸಮಸ್ತ ವೃತ್ತಾಂತ; ಹಿಂದುಮುಂದಿನ ಸಮಗ್ರವಿಷಯ : ಎಲೆ ಮುನೀಶ್ವರ ಪೇಳು ಪೇಳೆನೆ ತಿಳುಹಿ ಪೂರ್ವಾಪರವ ರಾಮಗೆ ಬಳಿಕಹಲ್ಯಾದೇವಿಯರ್ತಿಯ ಸಲಿಸಿ ಬೀಳ್ಕೊಂಡ (ಕೌತಿಶಾ. ೦-೯೬); ಪೂರ್ವಾಪರಗಳನ್ನು ಅರಿಯದ ಮಾನವರ ಕಣ್ಣಿಗೆ ನಾವು ಹುಚ್ಚರು (ಶುಹಾಪ. ೦೩೬). ೩. ಹಿಂದೆ ಇರುವುದು ಮತ್ತು ಮುಂದಿರುವುದು : ಪರಿಗೀತಾರ್ಥಂ ಪೂರ್ವಾಪರದೊಳ್ ಬಗೆವಾಗಳೆಂದುಮೊಂದಱೊಳೊಂದುಂ ದೊರೆಕೊಂಡೊಂದ ದೊಡದು ದುಷ್ಕರಮೆ ವಿರುದ್ಧಾರ್ಥಮೆಂಬುದಾದು ದೋಷಂ (ಕಂಶಾ. ೦-೬೦). ೪. ಸಂಬಂಧ. ಪೂರ್ವಾಪೂರ್ವ = ಬಹಳ ಹಿಂದಿನ : ಪ್ರತಿಕ್ಷಣಂ ವಿಶರಾರುಗಳ್ ಚಿತ್ತಕ್ಷಣಂಗಳ್ ಪೂರ್ವಾಪೂರ್ವಚಿತ್ತವಿಶೇಷ ಪ್ರಭವಂಗಳ್ ಪ್ರಬಂಧದಿಂದಂ ಪ್ರವರ್ತಿಸುವುವು (ಶಾಂತಿಪು. ೬-೦೪೨ ಪ). ಪೂರ್ವೋತ್ತರ = ಮೊದಲಿನ ಮತ್ತು ಅನಂತರದ; ಮುಂಚಿನ ಹಾಗೂ ಕೊನೆಯ : ಪೂರ್ವೋತ್ತರಕಾಲವ್ಯಾಪ್ತಿ ಜೀವತತ್ತ್ವಮೊಂದುಂಟಿಂಬರದೊಂದುಮಿಲ್ಲ (ಶಾಂತಿಪು. ೬-೦೪೨ಪ) : ವಿದಿತಪೂರ್ವೋತ್ತರದ ಯದು ವಂಶದ ಕಥಾವಿಸ್ತಾರವನು ಹೇಳಿದನು ದುಷ್ಯಂತನಲಿ ಶಾಕುಂತಲೆಯ ಕಥೆಸಹಿತ (ಕುಸ್ಕಾಲ. ೨-೦೬). [ಸಂ.]

ಪೂರ್ವಂ (ಅ). ಮುಂಚೆ; ಮುನ್ನ; ಮುಂಚಿತವಾಗಿ : "ಆದಿಃ, ಅಗ್ರಂ, ಪು(ರಾ)ರಂ, ಪೂರ್ವಂ, ಪ್ರಥಮಂ, ಪ್ರಾಕ್, ಪುರಃ —ಈ ೭ ಮುನ್ನಂ" (ಹಲಾಯು. ೦೦೭ ೨೨); ಪೂರ್ವಂ ದೇವೇಶನಿಂ ನಿರ್ಮಿತ ತುರಗಚಯಂ ಲಾಯದೊಳ್ ಕಟ್ಟಿರುತ್ತುಂ . . . ಪರ್ವಿತ್ತಾ ಪಟ್ಟಣಾದ್ಯಂತದೊಳ್ (ಹಾಲಾಸ್ಯ. ೯-೦೨-೨). [ಸಂ.]

ಪೂರ್ವಕ (ಗು). ೧. ಮುಂಚಿನ ; ಮೊದಲಿನ : ಹಿಂದಣ. ೨. ಸಹಿತವಾದ : ಕೂಡಿಕೊಂಡ : ಆದರಪೂರ್ವಕ ವಿಜ್ಞಾಪನೆಗಳು (ಕೂಡಿ). (ನಾ). ೩. ಪೂರ್ವಜ ; ಪೂರ್ವಿಕ. ೪. ಸಹಿತವಾದುದು; ಕೂಡಿಕೊಂಡಿರುವುದು : ದೃಷ್ಟಿಗಳಿಗೆಯ್ದಿಸದವಂ ನಿಜದೃಷ್ಟಿಪೂರ್ವಕವಾಗಿ ನೋಡಲು ದೃಷ್ಟವಾದವನಱುಹಿದವೆನೆಂದವರನಱಿಸುವವ (ಜಸಪು. ೩೧-೪೯). [ಸಂ.]

ಪೂರ್ವಕಂಕಣ (ನಾ). [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು : ಚಂಚತ್ಪುಟ . . . ಪೂರ್ವಕಂಕಣ ಕಾಮ್ಯಕಂಕಣ . . . ಜಯಾಳಮೆಂಬಿವು ಮೊದಲಾದ ನೂಱೆಂಟು ತಾಳಂಗಳುಂ (ಏಕೇಳ. ೨೩೬). [ಸಂ.]

ಪೂರ್ವಕಕ್ಷೆ (ನಾ). ವಾದದಲ್ಲಿ ಮಂಡಿಸುವ ಮೊದಲನೆಯ ಆಕ್ಷೇಪಣೆ : ಇಂತೀ ಸ್ಥಲಂಗಳಲ್ಲಿ ಸ್ಥಿರೀಕರಿಸಿ ಆರೋಪಿಸಿ ಪೂರ್ವಕಕ್ಷೆಯಂ ಕಂಡು . . . ಉತ್ತರಕಕ್ಷೆಯ ಕೂಡಿದಲ್ಲಿ ಆಱುಸ್ಥಲದ ಸೋಂಕಿಲ್ಲ (ಮೋಳಿಪಾ. ೦೩೯-೩೩೬); ಜಾತಿಭೇದಂಗಳಂ ಸಪ್ತಶೈವಂಗಳಂ ಪ್ರೀತಿಯಿಂದಾ ತ್ರಿಶೈವಂಗಳಂ ವೀರಶೈವಾತಿಶಯಕಂ ಪೂರ್ವಕಕ್ಷೆಯೊಳಗೆಂದವಂ ಬಿತ್ತರಿಸಿದಂ ದೇಶಿಕಂ (ಏಕೇಶಿಪು. ೭-೨ ಸೂಸಪ). [ಸಂ. ಪೂರ್ವಕಕ್ಷಾ]

ಪೂರ್ವಕರ್ಮ (ನಾ). ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ ಮತ್ತು ಅದರ ಫಲ : ಪೂರ್ವಕರ್ಮವ ಕೆಡಿಸಿದನೆನ್ನ ಗುರು ಉಭಯಕರ್ಮವ ಬಿಡಿಸಿ ತೋಱಿದ ಶರಣರವರಿಂದ ಬದುಕಿದೆನು (ಸಕಪ. III. ೦೩೩-೨೩೯); ಅಂಗ ಮೆಂಬುದು ಪೂರ್ವಕರ್ಮಾಸಂಗಶೇಷವು ಪುಣ್ಯಪಾಪೋತ್ತುಂಗನಿಳಯಂ ಸುಕೃತದುಃಕೃತಗತಿಗಳಾತ್ರಯವು (ಜಸಪು. ೩೦-೨೬). [ಸಂ. ಪೂರ್ವಕರ್ಮನ್]

ಪೂರ್ವಕಲ್ಪನೆ (ನಾ). ೧. ಮೊದಲು ಮಾಡಿದ ಕಲ್ಪನೆ; ಮುಂಚೆ ಮಾಡಿದ ಊಹೆ : ಅವರು ಬಹಳ ಅಹಂಕಾರಿಗಳೆಂಬುದು ನನ್ನ ಪೂರ್ವಕಲ್ಪನೆಯಾಗಿತ್ತು (ಕೂಡಿ). ೨. ಪುರಾಕೃತಕರ್ಮ : ಪೂರ್ವಕಲ್ಪನೆಯ ಮೀಱುವರಾರ್ (ಕಱಿಕಾ. ೦೦). [ಸಂ. ಪೂರ್ವಕಲ್ಪನಾ]

ಪೂರ್ವಕಲ್ಯಾಣಿ (ನಾ). [ಸಂಗೀತ] ಒಂದು ರಾಗದ ಹೆಸರು : ಪೂರ್ವಕಲ್ಯಾಣಿ-೫೩ನೇ ಮೇಳಕರ್ತ ಗಮನಶ್ರಮದ ಜನ್ಯ. ಪ್ರಾಚೀನ ರಕ್ತಿರಾಗ. ಕರುಣಾರಸಪ್ರಧಾನರಾಗ (ಸಂಗೀಸಂ. ೦೩೩). [ಸಂ. ಪೂರ್ವಕಲ್ಯಾಣೀ]

ಪೂರ್ವಕಾಲ (ನಾ). ೧. ಮುಂಚಿನ ಕಾಲ; ಹಿಂದಿನ ಕಾಲ; ಪ್ರಾಚೀನ ಕಾಲ : ಪೂರ್ವಕಾಲದಲ್ಲಿ ಈ ಪ್ರಾಣಿಗಳು . . . ಕಮಲಗಳನ್ನು ಮುತ್ತಿ ಸುತ್ತುತ್ತಿದ್ದವು (ಗಾಳಿಸ. ೨೦೬). ೨. [ವ್ಯಾಕ] ಭೂತಕಾಲ : ಇಕಾರ ಮುಮುಕಾರಮುಂ ಪೂರ್ವಕಾಲಕ್ರಿಯೆಯೊಳಕ್ಕುಂ (ಕಪುಪ. ಪ. ೨೪೭ ಸೂತ್ರ). [ಸಂ.]

ಪೂರ್ವಕೋಟಿ (ನಾ). ೧. ಪೂರ್ವಪಕ್ಷ ; ವಾದದ ಪ್ರಾರಂಭದಲ್ಲಿ ಮಂಡಿಸುವ ಪ್ರಶ್ನೆ. ೨. [ಜೈನ] ಅತಿದೀರ್ಘವಾದ ಒಂದು ಕಾಲ ಪ್ರಮಾಣ ; ಒಂದು ಕೋಟಿ ಪೂರ್ವವರ್ಷ : ಪೂರ್ವಕೋಟ್ಯಾಯ ತಾಯುರ್ಮಿತಿವೃತ್ತಂ ಷಡ್ವಿಧೇತಿಪ್ರತತಿನಿಯತಮೈನೂಱುಬಿಲ್ ಮರ್ತ್ಯ ಮೂರ್ತ್ಯುನ್ನತಿಯೆಂದುಂ ತನ್ನೊಳೆಂಬೀ ಸ್ತುತಿವಡೆದುದು ಸೌಖ್ಯಾವಗಾಹಂ ವಿದೇಹಂ (ಸಂಪ್ರಪು. ೦-೭೬) ; ಪೂರ್ವಗಳು ಒಂದು ಕೋಟಿಯಾವರ್ತಿಯಾದರೆ . . . ಪೂರ್ವಕೋಟಿ (ಪುರುಪ. ೦೬). [ಸಂ.]

ಪೂರ್ವಕ್ರೀ (ನಾ). ಹಿಂದೆ ನಡೆದು ಹೋದ ಸಂಗತಿ; ಪೂರ್ವಚರಿತ್ರೆ : ಶಾಸ್ತ್ರ ಬಲ್ಲಿತ್ತೆಂಬೆನೆ ಶಬ್ದಕ್ರೀ ಪುರಾಣ ಬಲ್ಲಿತ್ತೆಂಬೆನೆ ಪೂರ್ವಕ್ರೀ [ಶಾಕಾಂ. ಕ್ರಿ] (ಜಸಪ. ೩೩೨) ; ಮುತ್ತು ರತ್ನಸಿತಕೆ ಘೃತಕೆ ಮತ್ತೆ ಪೂರ್ವಕ್ರೀ [ಶಾಕಾಂ. ಕ್ರಿಯೆ]ಗಳುಂಟೆ ನಿತ್ಯಮುಕ್ತಶರಣಗುಂಟೆ ಮತ್ತೆ ಪೂರ್ವಚರಿತವು (ಶಿಪಗೀ. ೦೨-೪೯೪). [<ಸಂ. ಪೂರ್ವಕ್ರಿಯಾ]

ಪೂರ್ವಗಿರಿ (ನಾ). ಮೂಡಣ ದಿಕ್ಕಿನ ಬೆಟ್ಟ : ಸೂರ್ಯನು ಹುಟ್ಟಿ ಬರುವ ಸ್ಥಾನವೆಂದು ನಂಬಲಾದ ಪರ್ವತ ; ಉದಯಾಚಲ : ಪೂರ್ವಗಿರಿಯ ಶಿಖರಾಂತರದ ಪದ್ಮರಾಗದ ಕಳಸಮೆನೆ ಸೂರ್ಯಮಂಡಲಂ ರಂಜಿಸಿದುದು (ಸಂಪು. ೪೭-೪೭). [ಸಂ.]

ಪೂರ್ವಗುಣ (ನಾ). ಹಿಂದಿದ್ದ ಸ್ವಭಾವ. —ಪ್ರಕೃತಿ : ಅರಾಧ್ಯ ಪ್ರಾಣಲಿಂಗವೆಂದಱಿದು ಪೂರ್ವಗುಣವಳಿದು ಪುನರ್ಜಾತನಾದ ಬಳಿಕ ಸಂಸಾರಬಂಧುಗಳೆನ್ನವರೆಂದೊಡೆ ನಂಟಭಕ್ತಿ ನಾಯಕನರಕ (ಜಸಪ. ೬೯). [ಸಂ.]

ಪೂರ್ವಗ್ರಹ (ನಾ). ಯಾವುದಾದರೊಂದ ವಸ್ತು, ವಿಷಯ ಅಥವಾ ವ್ಯಕ್ತಿಯ ವಿಷಯಕವಾಗಿ, ಪರಿಶೀಲನೆಗೆ ಮುಂಚಿತವಾಗಿಯೇ ಮಾಡಿಕೊಂಡ (ಅನುಕೂಲವಾದ ಅಥವಾ ಪ್ರತಿಕೂಲವಾದ) ಅಭಿಪ್ರಾಯ : ಅವಿಚಾರಕಲ್ಪಿತಅಭಿಪ್ರಾಯ ; ಅಭಿನಿವೇಷ : ಅದು ಅನಾರ್ಯಪದ್ಧತಿ ಎಂಬ ಪೂರ್ವಗ್ರಹವನ್ನು ನಾದೇಕೆ ಒಪ್ಪಬೇಕು ? (ಪಂಕಸ್ಯ. ೬೨) ; ವಿಮರ್ಶಕನ ಮನಸ್ಸಿನ ಸ್ವಾಸ್ಥ್ಯವನ್ನು ಎಲ್ಲಕ್ಕಿಂತಲೂ ಮಿಗಿಲಾಗಿ ಕೆಡಿಸತಕ್ಕದ್ದು ಪೂರ್ವಗ್ರಹ (ಏಪುರ್ಕೆ. ೦೭).

ಪೂರ್ವಗ್ರಹಪೀಡಿತ = ಯಾವುದಾದರೊಂದು ವಸ್ತು, ವಿಷಯ ಅಥವಾ ವ್ಯಕ್ತಿಯ ವಿಷಯವಾಗಿ, ಪರಿಶೀಲನೆಗೆ ಮುಂಚಿತವಾಗಿಯೇ (ಅನುಕೂಲವಾದ ಅಥವಾ ಪ್ರತಿಕೂಲವಾದ) ಅಭಿಪ್ರಾಯವನ್ನು ಹೊಂದಿದ ವ್ಯಕ್ತಿ ; ಅವಿಚಾರಕಲ್ಪಿತಅಭಿಪ್ರಾಯವನ್ನುಳ್ಳವನು : ಪೂರ್ವಗ್ರಹಪೀಡಿತರಾದವರಿಂದ ಯಾವ ವಿಚಾರದಲ್ಲಿಯೂ ನಿರ್ದುಷ್ಟವಾದ ಪರಿಶೀಲನೆ ಸಾಧ್ಯವಿಲ್ಲ (ಕೂಡಿ). [ಸಂ.]

ಪೂರ್ವಗ್ರಹಿಕೆ (ನಾ). = ಪೂರ್ವಗ್ರಹ : ಆದರ್ಶವಾದಿ ಎಷ್ಟೋ ಸಲ ತನ್ನ ವಿಶ್ವದ ಪರಿಚಯವನ್ನೆ ಸಂಪೂರ್ಣವಾಗಿ ಮಾಡಿಕೊಂಡಿರುವುದಿಲ್ಲ. ಪೂರ್ವಗ್ರಹಿಕೆಯ ಬಣ್ಣದ ಕನ್ನಡಕದಲ್ಲಿಯೆ ಎಲ್ಲವನ್ನೂ ನೋಡುತ್ತಾನೆ (ರೇಸ್ಮೃ. ೬). [ಸಂ. ಪೂರ್ವಗ್ರಹಿಕಾ]

ಪೂರ್ವಚಿಂತನೆ (ನಾ). ಮೊದಲಿನ ಆಲೋಚನೆ : ಪೂರ್ವಚಿಂತನೆಯಿಂದ ಕಂಡು ಉತ್ತರಚಿಂತನೆಯಿಂದ ಖಂಡಿಸಿ . . . ಪುರಾಣಾಗಮಂಗಳೆಲ್ಲವೂ ನಾನಾರೆಂಬುದ ತಿಳಿವುದಕಿಕ್ಕಿದ ಭಿತ್ತಿ (ಸಕಸ III. ೨೬೩-೩೦೩). [ಸಂ. ಪೂರ್ವಚಿಂತನಾ]

ಪೂರ್ವಜ (ಗು). ೧. ಮೊದಲು ಹುಟ್ಟಿದ ; ವಯಸ್ಸಿನಲ್ಲಿ ಹಿರಿಯ. ೨. ಬಹು ಹಿಂದಣ ಕಾಲಕ್ಕೆ ಸೇರಿದ ; ಪುರಾತನ ; ಪ್ರಾಚೀನ : ಬಹುಶಃ ಅವುಗಳ ಪೂರ್ವಜ ಕೀಟಗಳಿಗೆ ರೆಕ್ಕೆಗಳು ಇಲ್ಲದೆ ಇದ್ದಿರಬಹುದು (ಕೀಟಶಾ. ೦೯). (ನಾ). ೩. ಹಿರಿಯ ಸೋದರ ; ಅಣ್ಣ : "ಅಗ್ರಜಃ, ಪೂರ್ವಜಃ, ಶ್ರೇಷ್ಠಃ—ಈ ೩ ಅಣ್ಣಂ" (ಹಶಾಯು. ೬೩-೩೦). ೪. ವಂಶದಲ್ಲಿ ಹಿಂದೆ ಆಗಿಹೋದವನು ; ಮೂಲಪುರುಷ ; ಪೂರ್ವಿಕ : ಅವರ ಪೂರ್ವಜರಪ್ಪರಸುಗಳೊಳಗಯೋಧ್ಯಾಪುರಪರಮೇಶ್ವರನುಂ ಸತ್ಕಾದಿ ಗುಣಾಶ್ರಯವಲ್ಲಭನುಮತಿಪ್ರೌಢದಿಶಾದಂತಿಪ್ರಕಟಪ್ರಭಾವನಪ್ಪ ಸತ್ಕಾಶ್ರಯದೇವನಿಂ (ಗಣಾಯು. ೨-೬ ಪ) ; ನಮ್ಮ ಪೂರ್ವಜರ ಪುಣ್ಯದಿಂದ ಕೆಲವು ಸಂಪ್ರದಾಯ ಇನ್ನೂ ಬದುಕಿದ್ದು ನಮ್ಮ ವಿನೋದಪ್ರವೃತ್ತಿಗೆ ಆಗಾಗ ಅನುವು ಮಾಡಿಕೊಡುತ್ತವೆ (ಗಾಇಶ. ೪೩). ೫. (ಚಂದ್ರಲೋಕದಲ್ಲಿ ವಾಸಿಸುವ) ಪಿತೃ. [ಸಂ.]

ಪೂರ್ವಜನ್ಮ (ನಾ). ಹಿಂದಿನ ಜನ್ಮಗಳಲ್ಲಿ ಯಾವುದಾದರೊಂದು : ಪೂರ್ವಜನ್ಮನಿವೃತ್ತಿಯಾಗಿ ಗುರುಕರುಣವಿಡಿದಂಗೆ ಬಂಧನವೆಲ್ಲಿಯದೊ (ಬಸಪ. ೬೭೦) ; ಅರೇನು ಮಾಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮವಿಧಿ ಬೆನ್ನ ಬಿಡದು (ಪುರಂದ. ೨-೬೦ ಪಲ್ಲವಿ). [ಸಂ. ಪೂರ್ವಜನ್ಮನ್]

ಪೂರ್ವತತ್ತು (ನಾ). ಮೊದಲಿನ ಸಂಬಂಧ ; ಪೂರ್ವಾಶ್ರಯ : ಪೂರ್ವತತ್ತು ಬಿಟ್ಟುದು ಭಕ್ತಿಸ್ಥಲ ಮಧ್ಯದ ಭಾವವ ಬಿಟ್ಟುದು ಮಹೇಶ್ವರಸ್ಥಲ ತ್ರಿವಿಧವ ಕೂಟವ ಬಿಟ್ಟುದು ಪ್ರಸಾದಿಸ್ಥಲ (ಶೂಇಶಾ. ೦೩೯-೩೩೬). [ಪೂರ್ವ + ತತ್ತು]

ಪೂರ್ವದಿಕ್ಕು (ನಾ). ಮೂಡಣ ದೆಸೆ : ಈ ಕೋಲರು ಕೇವಲ ಭಾರತದ ಪೂರ್ವದಿಕ್ಕಿನಲ್ಲಿ ಮಾತ್ರ ನೆಲಸಿದಂತೆ ತೋರುತ್ತದೆ (ಭ್ರಾಮಿ. ೩೦) ; ನಾವು ಪೂರ್ವದಿಕ್ಕಿನ ಕಡೆ ನಮ್ಮ ಮುಖ ತಿರುಗಿಸೋಣ . . . ಚಂದ್ರನು ನಮ್ಮ ಗಮನವನ್ನು ಕೂಡಲೆ ಸೆಳೆಯುತ್ತಾನೆ (ಸಕ್ಷತ್ರ. ೯). [ಪೂರ್ವ + ದಿಕ್ಕು]

ಪೂರ್ವದಿಕ್ಪತಿ (ನಾ). ಮೂಡಣ ದಿಕ್ಕಿನ ಒಡೆಯ ; ಇಂದ್ರ : "ಇಂದ್ರಃ . . . ಪೂರ್ವದಿಕ್ಪತಿಃ . . . ಮೇಘವಾಹನಃ—ಈ ೩೯ ದೇವೇಂದ್ರನ ಪೆಸರ್" (ಹಶಾಯು. ೦೦-೩೩). [ಸಂ.]

ಪೂರ್ವದೀರ್ಘ (ನಾ). [ವ್ಯಾಕ] ಹಿಂದಿನ ಸ್ವರ ದೀರ್ಘವಾಗಿರುವ ಶಬ್ದ : ಪೂರ್ವದೀರ್ಘವಾದೊಡಾ ಅವ್ಯಯವಾದೊಡಂ ಅನೇಕಾಕ್ಷರವಾದೊಡಂ ದ್ವಿತ್ವವಿಲ್ಲ (ಕಸುಪ. ೬೯ ಸೂತ್ರ). [ಸಂ.]

ಪೂರ್ವದೇವ (ನಾ). ೧. ಹಿಂದೆ ದೇವತೆಗಳಾಗಿದ್ದು, ಅನ್ಯಾಯ, ಅಕೃತ್ಯಗಳಿಂದ ಹಾಗು ದ್ವೇಷದಿಂದ ದೇವತ್ವವನ್ನು ಕಳೆದುಕೊಂಡ ವರ್ಗ. ೨. ದೇವತೆಗಳ ಶತ್ರು ; ರಾಕ್ಷಸ : "ಅಸುರಃ, ದಾನವಃ . . . ಪೂರ್ವದೇವಃ, ಶುಕ್ರಶಿಷ್ಯಃ, ಪಾತಾಲನಿಲಯಃ (ಸ್ಮೃತಾಃ)—ಈ ೮ ಅಸುರರ ಪೆಸರ್" (ಹಶಾಯು. ೨-೩); ಅವೇಯಂ ಸಕಲನೃಪ ಕುಲಜ್ಯಾಯನಾಂ ಪೂಜನೀಯಂ ಸಮಾನಾವಂ ಪೂರ್ವದೇವಂಗೆನಗೆ (ಜಗಾ. ೦೩-೬೦). ೩. ಅನಾದಿದೇವ ; ಪುರಾತನಪುರುಷ ; ವಿಷ್ಣು. ೧, ೩ : ಈ ಮಹಾಪುರುಷಂ . . . ಸಪ್ತಾರ್ಚಿಯಾಗಿಯುಂ ಹುತವಹನಲ್ತು ಸಮವರ್ತಿಯಾಗಿಯುಂ ದಕ್ಷಿಣದಿಕ್ಪಾಲಕನಲ್ತು ಪೂರ್ವದೇವನಾಗಿಯುಂ ನೈಋತನಲ್ತು (ಜಗಾ. ೯-೦೦ ಪ). [ಸಂ.]

ಪೂರ್ವದ್ರಾವಿಡ (ನಾ). ದ್ರಾವಿಡಭಾಷೆಗಳಿಗೆ ಮೂಲವಾಗಿ ಇದ್ದಿರಬಹುದಾದ ಪ್ರಾಚೀನ ಭಾಷಾರೂಪ ; ಮೂಲದ್ರಾವಿಡ: ಕ್ರಿ.ಪೂ. ೫೦೦–೬೦೦ ವರುಷಗಳಿಂದಲೂ ಈ ದ್ರಾವಿಡಭಾಷೆ ಬೆಳೆದುಬಂದಿರಬೇಕೆಂದು ಹೇಳಲು ಸಾಧ್ಯವಿದೆ. ಆಗಿನ ದ್ರಾವಿಡಭಾಷೆಯನ್ನು ಮೂಲದ್ರಾವಿಡ ಅಥವಾ ಪೂರ್ವದ್ರಾವಿಡ ಅಥವಾ ಪ್ರಾಕ್‌ದ್ರಾವಿಡವೆಂದು ಕರೆಯಲಾಗಿದೆ (ದ್ರಾವಿಭಾ. ೩೨). [ಸಂ.]

ಪೂರ್ವಧರ (ನಾ). [ಜೈನ] ಪೂರ್ವಗಳೆಂಬ ಆಗಮಗಳನ್ನು ಚೆನ್ನಾಗಿ ತಿಳಿದವನು ; ಚತುರ್ದಶಪೂರ್ವಗಳಲ್ಲಿ ಪಾರಂಗತನಾದವನು : ಎಣ್ಬತ್ತುನಾಲ್ವರ್ ಗಣಧರದೇವರುಂ ನಾಲ್ವಾಸಿರದೇಳ್ನೂಱಯ್ವದಿಂಬರ್ ಸಕಲಪೂರ್ವಧರರುಂ ನಾಲ್ವಾಸಿರದೈನೂಱಯ್ವದಿಂಬರ್ ಶಿಕ್ಷಕರುಂ (ಆದಿಪು. ೦೬-೯೦ ಪ); ಇರ್ವತೆಣ್ಬರ್ ಗಣಧರರುಂ ಅಯ್ನೂಱಯ್ವದಿಂಬರ್ ಪೂರ್ವಧರರುಂ (ಪುಣ್ಣಪು. ೦೯-೦೬೯). [ಸಂ.]

ಪೂರ್ವನಾಡಿ (ನಾ). ದೇಹದೊಳಗಿನ ನಾಡಿಗಳಲ್ಲಿ ಒಂದು : ಮಯೂರನಾಡಿ . . . ಉತ್ತರನಾಡಿ ಪೂರ್ವನಾಡಿ ಪಶ್ಚಿಮನಾಡಿ ಗಜಗಮನನಾಡಿ, ಅಚ್ಚೊತ್ತುನಾಡಿ . . . ಸಂತೋಷನಾಡಿ ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋಱುವ ನಾಡಿ ಜೀರ್ಣಪರ್ಣದಂತೆ (ಶರಶ. ೯೬೦). [ಸಂ.]

ಪೂರ್ವನಿರ್ದಿಷ್ಟ (ಗು). ಮುಂಚೆ ನಿಶ್ಚಯಿಸಿದ : ಮೊದಲು ನಿರ್ಧಾರ ಮಾಡಿದ ; ಪೂರ್ವನಿಶ್ಚಿತ : ಈ ಷಡ್ದರ್ಶನಗಳೂ ಅಲ್ಲಲ್ಲಿ ತಮ್ಮ ಪೂರ್ವನಿರ್ದಿಷ್ಟಉದ್ದೇಶದಿಂದ ಭಿನ್ನವಾದ ಅಡ್ಡದಾರಿ ಹಿಡಿದಂತೆ ಕಾಣುತ್ತದೆ (ಶಾರದ. ೦೨೦). [ಸಂ.]

ಪೂರ್ವನಿರ್ದೇಶಿತ (ಗು). ಮುಂಚೆ ತೋರಿಸಿದ,—ತಿಳಿಸಿದ : ಇವೆಲ್ಲವನ್ನೂ ಪೂರ್ವನಿರ್ದೇಶಿತ ರೂಪದಲ್ಲಿ ನಡೆಸಬೇಕು (ಶಿಕ್ಷಪ. ೬೩೭). [ಸಂ.]

ಪೂರ್ವನಿಶ್ಚಯ (ನಾ). ಮೊದಲೇ ಮಾಡಿದ ನಿರ್ಣಯ ; ಮುಂಚಿತವಾಗಿ ಮಾಡಿಕೊಂಡ ತೀರ್ಮಾನ : ಅವರು ಪೂರ್ವನಿಶ್ಚಯವಿಲ್ಲದೆ ಯಾವ ಕಾರ್ಯದಲ್ಲೂ ತೊಡಗುವುದಿಲ್ಲ (ಕೂಪ). [ಸಂ.]

ಪೂರ್ವನಿಶ್ಚಿತ (ಗು). ೧. ಮೊದಲೇ ನಿರ್ಧಾರವಾದ,—ನಿಗದಿಯಾದ. (ನಾ). ೨. ಮೊದಲೇ ನಿರ್ಣಯಿಸಿದುದು : ಅನುಭವಾನ್ನ ಹುಡುಕಿಕೊಂಡು ಹೋದರೆ, ಸಿಗೋದು ಪೂರ್ವನಿಶ್ಚಿತವಾದದ್ದು (ಹೂಸಕ್ಷಿ. ೨೨೬). [ಸಂ.]

ಪೂರ್ವನೇತ್ರ (ನಾ). ಕಣ್ಣಿನ ಕುಣಿಕೆ : "ಅಕ್ಷಿಮೂಲಂ ಪೂರ್ವನೇತ್ರವೆಂಬ ಮೊದಲಗಣ್" (ಸುಂಗಣಾ. ೯೯-೩). [ಸಂ.]

ಪೂರ್ವಪಕ್ಷ (ನಾ). ೧. ತಿಂಗಳಿನ ಮೊದಲನೆಯ ಹದಿನೈದು ದಿನಗಳ ಅವಧಿ ; ಶುಕ್ಲಪಕ್ಷ. ೨. ವಾದವನ್ನು ಮಂಡಿಸುವ ಮೊದಲ ಭಾಗ. ೩. ಶಾಸ್ತ್ರಸಿದ್ಧಾಂತವನ್ನೂ, ಪ್ರಮೇಯವನ್ನೂ ವಿರೋಧಿಸುವುದಕ್ಕಾಗಲಿ ಅಥವಾ ಸಂಶಯಗಳ ಪರಿಹಾರಕ್ಕಾಗಲಿ ಹೂಡುವ ಪ್ರಶ್ನಸಹಿತವಾದ ಯುಕ್ತಿ : ಇಲ್ಲಿಗೇವಿಧೇಯಂ ಮಾಱ್ಬುದೆಂದು ಪೂರ್ವಪಕ್ಷದ ಪಕ್ಷಸಿದ್ಧಿಯ ವಿಸ್ತಾರಕ್ಕವಕಾಶವುಪ್ಪಂತು ನುಡಿದು (ಶಾಂತಿಪು. ೨-೩೩ ಪ) ; ಪೂರ್ಣವಾಗಿ ವಿಚಾರ ಮಾಡದೆ ಇರುವಾಗ ತೋರುವ ಪಕ್ಷವೇ ಪೂರ್ವಪಕ್ಷವು (ಪ್ರಶ್ನಕಾ. ೩೭-೨) : ಅವಳು ಹೀಗೆ ತನ್ನ ಇಡೀ ಪೂರ್ವಪಕ್ಷವನ್ನೇ . . . ವಿರೋಧಿಸುತ್ತಾಳೆಂದು ಅವನು ಬಗೆದಿರಲಿಲ್ಲ (ದೂರಶ. ೨೨೯). ೮. ಹೇಳಿಕೆ; ಪ್ರತಿಪಾದನೆ. ೫. ವಿರುದ್ಧವಾದ ಹೇಳಿಕೆ : ನಿಮ್ಮಯ ಪೂರ್ವಪಕ್ಷವುಮಾಗಾದುದೇ ವಲಂ ಸಿದ್ಧಾಂತಂ (ಗಣಾಯು. ೯-೮). [ಸಂ.]

ಪೂರ್ವಪಕ್ಷಿ (ನಾ). ಪೂರ್ವಪಕ್ಷವನ್ನು ಮಂಡಿಸುವವನು: ಸಿದ್ಧಾಂತವನ್ನು ವಿರೋಧಿಸಿ ಪ್ರಶ್ನಿಸುವವನು : ಸಿದ್ಧವಸ್ತುವು ಪ್ರತ್ಯಕ್ಷಾದಿಗಳಿಗೆ ವಿಷಯವಾಗುವುದರಿಂದ ಶಾಸ್ತ್ರಕ್ಕೆ ಅನುವಾದ ತತ್ತ್ವವು ಬರುವುದೆಂಬ ದೋಷವನ್ನು ಇಲ್ಲಿ ಪೂರ್ವಪಕ್ಷಿಯು ತೆಗೆದಿರುತ್ತಾನೆ (ಶ್ರಿಕೃಶಾ. ೩೨ ಟೀ). [ಸಂ. ಪೂರ್ವಪಕ್ಷಿನ್]

ಪೂರ್ವಪದ (ನಾ). [ವ್ಯಾಕ] (ಸಮಾಸದಲ್ಲಿ) ಮೊದಲು ಇರುವ ಪದ : ಪರಪದಪೂರ್ವಂ ದ್ವಿತ್ವಾಕ್ಷರವಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರವಾಗೆ ಸಂಧಿಯೊಳಂ (ಕಬಿಪ್ರ. ೫೯) ; ಉತ್ತರಪದವೆಂದರೆ ಮುಂದೆ ನಿಲ್ಲುವ ಪದ; ಹಿಂದೆ ನಿಲ್ಲುವ ಪದಕ್ಕೆ 'ಪೂರ್ವಪದ' ಎಂದು ಹೆಸರು. 'ಮಳೆಗಾಲ' ಎಂಬುದರಲ್ಲಿ 'ಮಳೆ' ಪೂರ್ವಪದ; 'ಕಾಲ' ಉತ್ತರಪದ (ಕುಸ್ಕಾಪ್ರ ೨೦ ೧೩೫). [ಸಂ.]

ಪೂರ್ವಪರಾಮರ್ಶೆ (ನಾ). ಹಿಂದಿನ ಸಂಗತಿಯ ಸ್ಮರಣೆ; ಪೂರ್ವಸ್ಮರಣೆ : ಆಯೆಂಬುದು ಪೂರ್ವಪರಾಮರ್ಶೆಗವೊದವುಗುಂ (ಕಬುದ. ೦೬೯). [ಸಂ. ಪೂರ್ವಪರಾಮರ್ಶ]

ಪೂರ್ವಪರಿಷ್ಕಾರ (ನಾ). ಮುಂಚೆ ಮಾಡಿಕೊಳ್ಳಬೇಕಾದ ಅವಶ್ಯಕ ಬದಲಾವಣೆ, ಹೊಂದಾಣಿಕೆ, ಸಿದ್ಧತೆ ಮೊದಲಾದ ಕಾರ್ಯ : ಭಿನ್ನಶ್ರುತಿಪ್ರಮಾಣವಿರುವ ವಾದ್ಯಸಮೂಹವು ಪ್ರಬಲವಾಗಿ ರಚನೆಗಳಲ್ಲಿಯೂ, ಪ್ರಯೋಗದಲ್ಲಿಯೂ ಪೂರ್ವಪರಿಷ್ಕಾರದ ಅವಶ್ಯಕತೆಯು ಹೆಚ್ಚಿ . . . ಸಂಗೀತವು ಒಂದು ಮೂರುಕಾಲಿನ ಓಟದಂತೆ (Three legged race) ಆಗಿದೆ (ಪಾಪ್ರ. ೩೩೬). [ಸಂ.]

ಪೂರ್ವಪರ್ವತ (ನಾ). ಮೂಡಣದಿಕ್ಕಿನ ಬೆಟ್ಟ : ಸೂರ್ಯನು ಹುಟ್ಟುವ ಪರ್ವತ ; ಉದಯಾಚಲ : "ಉದಯಃ. ಪೂರ್ವಪರ್ವತಃ– ೨ ಉದಯಃಪರ್ವತದ ಹೆಸರುಗಳು. ಮೂಡಲಲ್ಲಿ ಸೂರ್ಯನು ಮೂಡುವುದಕ್ಕೆ ಸಂಧ್ಯಾಸ್ಥಾನವಾದ ಪೂರ್ವಾದ್ರಿ" (ಸಿಕಾ.೦೬. ೦೦೬). [ಸಂ.]

ಪೂರ್ವಪುಣ್ಯ (ನಾ). ಮುಂಚಿನ ಜನ್ಮಗಳಲ್ಲಿ ಗಳಿಸಿದ ಪುಣ್ಯ : ಕನ್ನಡದೊಳಗೆನಗಧಿರುಚಿ ಬೆಳೆಯಿತು ಪೂರ್ವಪುಣ್ಯದ ಫಲದ ತೆರದೆ (ಜಂಶಾಕ. ೨೩೪). [ಸಂ.]

ಪೂರ್ವಪ್ರಕೃತಿ (ನಾ). ಮೊದಲಿನ ಸ್ಥಿತಿ; ಮುಂಚಿನಿಂದಲೂ ಬಂದ ಸಹಜಸ್ಥಿತಿ ; ಅರಳಿದೆ ವಂಧುವಾಸ ವಾಣಲಿ ವರುಷಮಿರುತುವೇ ಸಾಕು ಜಾತಿಗೆ ಜಾಡರೆವಾಗಿನ್ನೇನು ಪೂರ್ವಪ್ರಕೃತಿ ವನವಾಸ (ಕುಜಾ.೪. ೦೬ ೬೨). [ಸಂ.]

ಪೂರ್ವಪ್ರಜ್ಞೆ (ನಾ). ಮುನ್ನರಿವು ; ಮುಂಗಾಣ್ಕೆ; ಪೂರ್ವಸೂಚನೆ : ಸ್ನಾನ ಮಾಡುವಾಗ, ದೇವರಪೂಜೆಗೆ ಕುಳಿತಾಗ ಕೇಳಿಲಿರುವ ಯಾವುದೋ ಕೆಡತನ ಪೂರ್ವಪ್ರಜ್ಞೆಯಿಂದ ಎಬ್ಬಿಸಿತೆ ಜೀವ ನಡುಗಿತು (ಕುಸಮಕಾ. ೦೧). [ಸಂ. ಪೂರ್ವಪ್ರಜ್ಞಾ]

ಪೂರ್ವಪ್ರತ್ಯಯ (ನಾ). [ವ್ಯಾಕ]ಶಬ್ದಗಳ ಆದಿಯಲ್ಲಿ ಸೇರಿ ಪದವನ್ನು ಸಿದ್ಧಗೊಳಿಸುವ ಪ್ರತ್ಯಯ; ಉಪಸರ್ಗ: ಪೂರ್ವಪ್ರತ್ಯಯ (ಪ್ರಸಿಕ್ಷಾ). ಪರಪ್ರತ್ಯಯ(ಸಪಿಕ್ಷಾ). ಆಂತಃಪ್ರತ್ಯಯ(ಇನ್‌ಫಿಕ್ಷಾ) (ಕರ್ನೋ I. ೬೬೩). [ಸಂ.]

ಪೂರ್ವಫಲ್ಗುನಿ (ನಾ). ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಹನ್ನೊಂದನೆಯದು. [ಸಂ. ಪೂರ್ವಫಲ್ಗುನೀ]

ಪೂರ್ವಭವ (ನಾ). –ಪೂರ್ವಜನ್ಮ ; ಶಾರ್ದೂಲನ ಪೂರ್ವಭವವೃತ್ತಾಂತಮುಮುಂ . . . ಅಱಿಪಿ (ಆದಿಪು. ೬ ೧೦ ಕ); ನಿನ್ನ ತಪಕ್ಕೆ ವೇಟ್ಟಿ ವರವಿತ್ತಂ ಶ್ರೀವರಂ ತಾನೆ ನಂದನನಪ್ಪಂ ನಿನಗೆಂದು ಪೂರ್ವಭವದೊಳ್ (ಪಾಪು. ೨-೬೯). [ಸಂ.]

ಪೂರ್ವಭಾಗ (ನಾ). ೧. ಮೊದಲನೆಯ ವಿಭಾಗ—ಖಂಡ : ವೇದದಲ್ಲಿ ಪೂರ್ವಭಾಗ, ಉತ್ತರಭಾಗವೆಂದು ಎರಡು ವಿಭಾಗ (ಟಂಕಶಾ. ೨೯೩). ೨. ಮೂಡಣದಿಕ್ಕಿಗಿರುವ ಪ್ರದೇಶ ; ಪೂರ್ವಪಾರ್ಶ್ವ : ಬೆಟ್ಟದ ಪೂರ್ವಭಾಗದಲ್ಲಿ ಒಂದು ಆಳವಾದ ಕಮ್ಮರಿಯಿದೆ (ಕೂಪ). ೩. ಮುಂಭಾಗ: ಮುಂದಿನ ಪ್ರದೇಶ. [ಸಂ.]

ಪೂರ್ವಭಾವಿ (ಗು). ೧. ಮುಂಚೆ ಇರುವ ; ಮೊದಲೇ ಇರುವ. ೨. ಮುಂಚೆ ಆಗಬೇಕಾದ ; ಮೊದಲೇ ಮಾಡಬೇಕಾದ: ಈ ಕೆಲಸಕ್ಕೆ ಕೆಲವು ಪೂರ್ವಭಾವಿ ಸಿದ್ಧತೆಗಳನ್ನು ಮಾಡುವುದು ಅಗತ್ಯ (ಕುಪ್ರಳ. ೬೯). (ನಾ). ೩. ಮೊದಲನೆಯದು ; ಮುಂಚಿತವಾದುದು : ಪ್ರತಿಷ್ಠಾಪನೆಗೆ ಪೂರ್ವಭಾವಿಯಾದ ವಿಧಿಗಳೆಲ್ಲ ಸಾಂಗವಾಗಿ ನಡೆದುವು (ಪಾಂಕಲಾ. ೦೨೯) : ಓದು ಬರಹ, ಲೆಕ್ಕಗಳನ್ನು ಹೇಳಿಕೊಡದಿದ್ದರೂ ಅವುಗಳನ್ನು ಕಲಿಯಲು ಅವಶ್ಯಕವಾದ ಪೂರ್ವಭಾವಿಯಾದ ಶಿಕ್ಷಣವೀಯಬಹುದು (ಶಿಕ್ಷಪ್ರ. ೦೨೬). [ಸಂ. ಪೂರ್ವಭಾವಿನ್]

ಪೂರ್ವಭಾಷಿ (ನಾ). (ಗೌರವಸೂಚಕವಾಗಿ) ಬೇಗೆಯಮರನಂ ನಾನೇ ಮೊದಲುಂ ಮಾತನಾಡಿಸಂವ ವ್ಯಕ್ತಿ. [ಸಂ. ಪೂರ್ವಭಾಷಿನ್]

ಪೂರ್ವಮರ್ಯಾದೆ (ನಾ). ಹಿಂದಿನಿಂದ ನಡೆದು ಬಂದ ಕ್ರಮ : ಸಂಪ್ರದಾಯ : ನಾಲ್ಕು ನಾಡ ಸಂಕಮಂ ಪೂರ್ವಮರ್ಯಾದೆಯಂ ಪ್ರತಿಪಾಲಿಸಿ ಕೊಟ್ಟ ಸಾಸನಂ (ಶಾಶಾ. ೦೦೩–೦೯-೨೫; 1057). [ಸಂ. ಪೂರ್ವಮರ್ಯಾದಾ]

ಪೂರ್ವಮೀಮಾಂಸೆ (ನಾ). [ತತ್ತ್ವಶಾ] ಸಾಂಖ್ಯ, ವೈಶೇಷಿಕ ಮೊದಲಾದ ಆರು ದರ್ಶನಗಳಲ್ಲಿ ಒಂದು ; ಕರ್ಮಮೀಮಾಂಸೆ : ವೇದಗಳಲ್ಲಿ ಉಕ್ತವಾದ ಕರ್ಮಾಚರಣೆ ಹಾಗೂ ವೇದಪಾಠಗಳನ್ನು ಕುರಿತ ನಿರ್ಣಯಗಳನ್ನೊಳಗೊಂಡು ಜೈಮಿನಿಮುನಿಗಳಿಂದ ರಚಿತವಾದ ದರ್ಶನ : ಪೂರ್ವಮೀಮಾಂಸೆಯು ತಾತ್ಪರ್ಯನಿರ್ಣಯಕವಾದ ಉಪಕ್ರಮಾದಿ ಷಡ್ವಿಧಲಿಂಗಂಗಳಂ ವೇದವಾಕ್ಯವಿಚಾರಪೂರ್ವಕಮಾಗಿ ಜ್ಯೋತಿಷ್ಟೋಮಾದಿ ಯಾಗಪ್ರಮುಖವಿಧಾನಕ್ರಮವಂ ನಿರ್ಣಯಿಸುವುದರಿಂದ ಕರ್ಮಕಾಂಡದೆನಿಪುದು (ಪಪೀಳ. ೯) : ಜೈಮಿನಿಸೂತ್ರಕ್ಕೆ ಪೂರ್ವಮೀಮಾಂಸೆ, ಧರ್ಮಮೀಮಾಂಸೆಯೆಂದೂ, ಬಾದರಾಯಣಸೂತ್ರಕ್ಕೆ ಉತ್ತರಮೀಮಾಂಸೆ, ಬ್ರಹ್ಮಮೀಮಾಂಸೆಯೆಂದೂ ವ್ಯವಹಾರ (ಹಿಂದಸಾ. ೦೬೯). [ಸಂ. ಪೂರ್ವಮೀಮಾಂಸಾ]

ಪೂರ್ವರಂಗ (ನಾ). ೧. ಪೂರ್ವಸಿದ್ಧತೆ ; ಪೂರ್ವಭಾವಿವ್ಯವಸ್ಥೆ : ಜಿನಜನ್ಮಾಭಿಷವಂ ನರ್ತನದಿಂ ಸೊಗಯಿಸುವುದಂತದಂ ಸುರರಾಜಂ ಪುನರುಕ್ತಂ ಮಾಡೆ ಜಿನೇಂದ್ರನ ವಿಹರಣಪೂರ್ವರಂಗಮೇನೊಪ್ಪದುದೋ (ಪಾಂಚಪ್ರ. ೦೨-೦೭). ೨. [ನಾಟ್ಯ] ನೃತ್ಯ ಅಥವಾ ನಾಟಕವು ಆರಂಭವಾಗುವುದಕ್ಕೆ ಪೂರ್ವಭಾವಿಯಾಗಿ ರಂಗಸ್ಥಳದಲ್ಲಿ ನಡೆಸತಕ್ಕ ರಂಗಪೂಜೆ, ನಾಂದಿ ಮೊದಲಾದ ಕಾರ್ಯಕ್ರಮ : ಶುದ್ಧಚಿತ್ರ[ಪಾಣಂ. ಪವಿತ್ರ, ವಿಚಿತ್ರ]ಮೆಂಬ ಪೂರ್ವರಂಗಪ್ರಸಂಗದೊಳ್ ಜರ್ಜರಪೂಜಾಮಂಗಲಪದೋಚ್ಚಾರಣಪುಷ್ಪಾಂಜಲಿವಿಕ್ಷೇಪಣಾದಿ ನಾಂದೀವಿಧಿಯುಂ ನಿರ್ವರ್ತಿಸಿ (ಆದಪು. ೬-೦೦೬ ಕ) ; ಪೂರ್ವರಂಗಪ್ರಸಂಗದೊಳುರ್ವಿಂದಂ ಕೂಡೆ ಬಿಲ್ಲಿ ಪುಷ್ಪಾಂಜಲಿಯುಂ ಸರ್ವಜ್ಞಂಗೆಱಗಿ ಮುಂದಂ ಪರ್ವಿನ್ನಂ ನಡೆದು ಬಂದು ರಂಗಮಂದೊಕ್ಕಂ (ಪಾಪು. ೯.೦೦) ; ಪೂರ್ವರಂಗವೆಂದರೆ ನಾಟಕದ ಕಥೆ ಕ್ರಮವಾಗಿ ಆರಂಭವಾಗುವುದಕ್ಕೆ ಮುಂಚೆ ರಂಗಸ್ಥಾನದಲ್ಲಿ ನಟರು ನಡಸ ತಕ್ಕ ಕಾರ್ಯಗಳು (ಕೈಬಿ. ೨೦೨). ೩. ಮೊದಲನೆಯ ನೃತ್ಯ : " ಮೊದಲ ನಾಟ್ಯಮಂ ಪೂರ್ವರಂಗಮೆಂಬುದು " (ಪಶಾಪ್ರಾ. ೦೬-೧೩). [ಸಂ.]

ಪೂರ್ವರಾಗ (ನಾ). [ಕಾವ್ಯಮೀ] ನಾಯಕನಾಯಿಕೆಯರ ಸಮಾಗಮಕ್ಕೆ ಪೂರ್ವದಲ್ಲಿಯೇ ಅವರಿಬ್ಬರಲ್ಲಿ ಉಂಟಾಗುವ ಪರಸ್ಪರ

ಪ್ರೇಮಭಾವ,-ಅನುರಾಗ ; ಕಣ್ಬೇಟ, ಕಿವಿಪೇಟಗಳಿಂದ ಉದ್ಭವಿಸುವ ಅನುರಾಗ : ಸೀತೆಯ ಮನಸ್ಸಿನಲ್ಲಿ 'ಪೂರ್ವ-ರಾಗ'ವನ್ನು ಉದ್ದೀಪನಗೊಳಿಸುವುದು ಕವಿಯ ಅಭೀಷ್ಟವಾಗಿದೆ (ಕ್ರೇಕೃಪ್ರ. ೨). [ಸಂ.]

ಪೂರ್ವರಾತ್ರಿ (ನಾ). ಸಾಯಂಕಾಲದಿಂದ ಮಧ್ಯರಾತ್ರಿಯ ವರೆಗಿನ ಸಮಯ : ಇರುಳಿನ ಪೂರ್ವಾರ್ಧ : ಪೂರ್ವರಾತ್ರಿಯಲ್ಲಿ ಬೇಗನೆ ಮಲಗಿಕೊಂಡು, ಬೆಳಗ್ಗೆ ಬೇಗ ಏಳುವುದು ಬಹಳ ಒತವು (ಮ.ಂಬಯಾ. ೪-೨೫). [ಸಂ.]

ಪೂರ್ವರಾತ್ರೆ (ನಾ). = ಪೂರ್ವರಾತ್ರಿ : ತುರಗಂ ಮಾಯಾಸ್ಯದಿಶಾಂತರದೊಳ್ ಘನರವದೆ ಪಲವು ಸೂಲಂ ಕಿಳಿಱುತ್ತಿರೆ ಪೂರ್ವರಾತ್ರೆಯೊಳ್ ತನ್ನರಸನ ಪೆರ್ಗಡೆಗೆ ಮರಣಮಂ ಪ್ರಾಟಿಸುಗುಂ (ಅಕ್ಕಶಾ. ೪ ೫೩). [ಸಂ. ಪೂರ್ವರಾತ್ರ]

ಪೂರ್ವರೂಪ (ನಾ). ೧. ಮೊದಲು ಇದ್ದ ರೂಪ,-ಆಕಾರ; ಹಿಂದಿನ ರೂಪ. ೨. ಹಿಂದಿರುವ ಅಕ್ಷರದ ರೂಪ : ನಿರುತಂ ಚಟತಪಂಗಳಪರದ ದಕಾರಕ್ಕೆ ಪೂರ್ವರೂಪಮದಕ್ಕುಂ (ಶಮದ. ೨೪೦). ೩. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು: ಒಂದು ವಸ್ತುವು ತನ್ನ ಗುಣವನ್ನು ಬಿಟ್ಟು ಬೇರೆ ಗುಣವನ್ನು ಹೊಂದಿದ್ದರೂ ಕಾರಣಾಂತರದಿಂದ ಪುನಃ ತನ್ನ ಮೂಲಗುಣವನ್ನೇ ಪಡೆಯುವುದು : ಒಂದು ವಸ್ತುವಿನ ಗುಣಂ ಪೆಱತೊಂದು ತೆಱನಾಗಿ ತೋಱಿ ಮಗುಟ್ಟಿಂದಿನಂತಾದುದೆಂಬುದು ಪೂರ್ವರೂಪಂ ಎಂತೆನೆ ಐಗೂರರಸನ ಪೆಂಡಿರ ಮೂಗುತಿ ಕಣ್ಬನಿಯೊಳಿಟಿದ ಕಾಡಿಗೆಯಿಂ ಕರ್ಪಾಗಿ ಬಟಿಕುಗುವ ತನಿನೀರ್ ತಾಗುವಿನಂ ತೊಳಗಿತೆಂದಿನಂತಪ್ರತಿಮಾ (ಅಪ್ರತಿ. ೦೦-೯೯). [ಸಂ.]

ಪೂರ್ವರೂಪಾಲಂಕಾರ (ನಾ). = ಪೂರ್ವರೂಪ ೩ : ತನ್ನ ಗುಣವನು ಬಿಟ್ಟ ಅಂತಹ ಅನ್ಯಗುಣವನು ಹೊಂದಿ ಮತ್ತೆ ತನ್ನ ಪೂರ್ವಗುಣವನು ಹೊಂದಿದಡೆ ಪೂರ್ವರೂಪಾಲಂಕಾರ (ಕುಪಲ. ೦೪೦). [ಸಂ.]

ಪೂರ್ವಲಿಖಿತ (ನಾ). (ಆಲಂ) ಹುಟ್ಟುವುದಕ್ಕೆ ಮುಂಚೆಯೇ ನಿರ್ಧಾರವಾದುದು : ಹಣೆಬರಹ ; ವಿಧಿಲಿಖಿತ : ಮಾಣದೆ ಅರಳೆಯ ತಿಟ್ಟನೆ ತಿರುಗುವ ಗಾಣದೆತ್ತಿನಂತೆ ಪೂರ್ವಲಿಖಿತ ಮುಂದುಗಾಣಲೀಯದು (ಜಸಪ. ೬೮೦) ; ಪೂರ್ವಲಿಖಿತವಿದಾಯಿತು (ಜಸಪ. ೪೮-೦೨). [ಸಂ.]

ಪೂರ್ವವಯಸ್ಸು (ನಾ). ಎಳೆಯ ವಯಸ್ಸು; ತಾರುಣ್ಯ; ಯೌವನ : ಪೂರ್ವವಯಸ್ಸಿನ ಪರಿಶುದ್ಧಪರಿಸ್ಥಿತಿಯನ್ನವಳು ಪಡೆಯಬೇಕೆಂಬುದೂ ಅವನ ಇಚ್ಛೆಯಾಗಿತ್ತು (ಪುಸರು. ೧೯೬). [ಸಂ. ಪೂರ್ವವಯಸ್]

ಪೂರ್ವವರ್ಣ (ನಾ). ಹಿಂದಿರುವ ಅಕ್ಷರ : ಲಘ್ವಾದಿಯೂ ದ್ವಿಲಘುಸ್ವರಯುಕ್ತವೂ ಆದ ಧಾತುವಿನ ಅಂತ್ಯಾಕ್ಷರವು ಗು, ಸು, ಡು, ಱು ಆಗಿದ್ದರೆ ಆ ಅಕ್ಷರಗಳಿಗೆ ಕ್ರಮವಾಗಿ ಕ್, ಚ್, ಟ್, ತ್‌ಗಳೂ ಪ್ರತ್ಯಯಕ್ಕೆ ಪೂರ್ವವರ್ಣವೂ (ಕ್, ಚ್, ಟ್, ತ್) ಆದೇಶವಾಗುತ್ತವೆ (ಕೃಪಿತಿ. ೪೭). [ಸಂ.]

ಪೂರ್ವವಾಸನೆ (ನಾ). ೧. ಹಿಂದಿನ ಜನ್ಮದ ನೆನಪು ; ಪೂರ್ವಜನ್ಮದ ಸ್ಮರಣೆ : ಮೆಲ್ಲಮೆಲ್ಲನೆ ಪೂರ್ವವಾಸನೆ ಮನಕೆ ತೋಱೆ ಇಲ್ಲಿ ಪುಟ್ಟಿದುದೆಲ್ಲ ಕನಸಿನಂದದೆ ತೋಱೆ (ಶಂಬಕ. ೭-೦೦೯). ೨. ಪೂರ್ವಜನ್ಮದ ಸಂಸ್ಕಾರ : ಈ ಬುದ್ಧಿ ಅವನವನ ಪೂರ್ವವಾಸನೆಗಳಿಂದ . . . ಅಲ್ಲಿ ಪ್ರಧಾನವಾದ ತಾಮಸ ಅಥವಾ ರಾಜಸಗುಣಗಳ ಪ್ರಬಲತೆಗೆ ಅವಕಾಶ ಮಾಡುತ್ತದೆ (ಸೌಂದಸ. ೦೦೦). [ಸಂ. ಪೂರ್ವವಾಸನಾ]

ಪೂರ್ವವಿದೇಹ (ನಾ). [ಜೈನ] ಸುಮೇರುಪರ್ವತದ ಪೂರ್ವದಿಕ್ಕಿನಲ್ಲಿ ಇದ್ದ ಕಚ್ಛ ಮೊದಲಾದ ಹದಿನಾರು ಕ್ಷೇತ್ರಗಳ ಪ್ರದೇಶ ; P "ಜಂಬೂದ್ವೀಪದ ಸಪ್ತಕ್ಷೇತ್ರಗಳಲ್ಲಿ ಒಂದು ; ಮಂದರದ ಪರ್ವತದ ಪೂರ್ವಕ್ಕೆ ಇದೆ" (ಕೈಸಕೋ. ೦೭೨) : ಅಪೂರ್ವಸಂಪತ್ಸಾರಸರ್ವಸ್ವಗೇಹಮಾದ ಪೂರ್ವವಿದೇಹಮಹೀಮಧ್ಯದೊಳ್ (ಸಂದ್ರಪು. ೦-೮೦ ಪ); ಪೋಡಶಮಹಾವಿಷಯಂಗಳಿನೊಪ್ಪಿ ಮಾಟ್ಟುದುರ್ವಿಗೆ ಮುದಮಂ ಸುಖೈಕನಿಧಿ ಪೂರ್ವವಿದೇಹಮುಖರ್ವಸಂಪದಂ (ಪುಸ್ವಪು. ೨-೬). [ಸಂ.]

ಪೂರ್ವವಿರೋಧ (ನಾ). ಮೊದಲಿನಿಂದಲೂ ಇರುವ ಹಗೆತನ : ಪೂರ್ವವಿರೋಧದಿಂ ನಿಜಪರಾಕ್ರಮದಿ ಪರರಾಜ್ಯಕಾಂಕ್ಷೆಯಿಂ . . . ಮಾಳವಭೂಮಿಪಾಲಕಂ ಸರ್ವಬಲಾನ್ವಿತಂ ನಡೆದು ಮಾಗಧನೊಳ್ ಮುಳಿದೊಡ್ಡನೊಡ್ಡಿದಂ (ದಶಕು. ೨-೧೪). [ಸಂ.]

ಪೂರ್ವವೃತ್ತಿ (ನಾ). ಮೊದಲಿನ ಉದ್ಯೋಗ ; ಪರಂಪರೆಯಿಂದ ಬಂದ ಉದ್ಯೋಗ : ತಾಂಬೂಲಾದಿ ದಾನಸನ್ಮಾನಪುರಸ್ಸರಮವರ ಪೂರ್ವವೃತ್ತಿಯುಮಂ ಕಮ್ಮವಟ್ಟಿಯುಮನಿತ್ತು (ಸುಳುವಾ. ೨-೧೩ ಪ). [ಸಂ.]

ಪೂರ್ವವೇದಿ (ನಾ). ಯಜ್ಞಕುಂಡದ ಮುಂದಿರುವ ಜಗಲಿ : ಯಮನಂದನನು ವೈಶಾಖದ ಚತುರ್ದಶಿದಿನದಲುತ್ತರಪೂರ್ವವೇದಿವರಾಭ್ಯುದೈಕ್ಯದಲಿ . . . ಮಱುದಿನ ಯಜ್ಞದೀಕ್ಷಿತನಾದನೊಲವಿನಲಿ (ಕುಪ್ಯಾಸ. ೭-೨೬). [ಸಂ. ಪೂರ್ವವೇದೀ]

ಪೂರ್ವವೈಭವ (ನಾ). ಹಿಂದಿನ ಕಾಲದ ಸಂಪತ್ತು, ಯಶಸ್ಸು ಮುಂತಾದುವುಗಳ ಸಮೃದ್ಧಿ : ಶೈಲಪನು . . . ತನ್ನ ಮನೆತನದ ಪೂರ್ವವೈಭವವನ್ನು ಸಂಪಾದಿಸಿದನು (ಕರ್ಪಾಲ. ೫೧). [ಸಂ.]

ಪೂರ್ವವೈರ (ನಾ). = ಪೂರ್ವವಿರೋಧ : ಪೂರ್ವವೈರಮಂ ಮನಸ್ಸಿನೊಳ್ ವಿಚಾರಿಸುತ್ತೆ ಬಂದೊರ್ವನಿಲ್ಲಿ ಸಿಲ್ಕಿದು (ರರ್ಮಾಪ. ೦ ೬೬). [ಸಂ.]

ಪೂರ್ವಶಾಸ್ತ್ರ (ನಾ). ಪ್ರಾಚೀನಕಾಲದಿಂದ ನಡೆದು ಬಂದ ಶಾಸ್ತ್ರ ; ಪರಂಪರಾಗತಶಾಸ್ತ್ರ : ಅಱಿದು ಪೀನು ಮಾರ್ಗಗತಿಯಂ ತಱಿಸಲಲಾಗದಾರ್ಗಂ ಬಹುವಿಕಲ್ಪದೊಳ್ ಕುಱಿತು ಪೂರ್ವಶಾಸ್ತ್ರಪದವಿಧಿಯಂ ತೆಱಿದಿರೆ ಪೇಟ್ವಿನಿನಿಸಂ ಕನ್ನಡದೊಳ್ (ಕಬಾ. ೨-೪೬). [ಸಂ.]

ಪೂರ್ವಶೈವ (ನಾ). ಶೈವದ ಪ್ರಭೇದಗಳಲ್ಲಿ ಒಂದು : ಶುದ್ಧಶೈವವ ಹೊದ್ದದೆ ಪೂರ್ವಶೈವವನಾಚರಿಸದೆ ಮಾರ್ಗಶೈವವ ಮನ್ನಣೆಯ ಮಾಡದೆ ವೀರಶೈವವನಾಧರಿಸದೆ ಆದಿಶೈವವನನುಕರಿಸದೆ ಭೇದಿಸಬಾರದ ಲಿಂಗಕರದಲ್ಲಿದ್ದು ಕಂಗಳಿನಲ್ಲಿ ನಿಂದು ಮನದಲ್ಲಿ ಸಿಂಹಾಸನಂಗೈದು ಸಕಲೇಂದ್ರಿಯವ ಮಱೆದು ಕಾಯದ ಜೀವದ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ ಬೇಱೆಂದ ಅಱಸಲಿಲ್ಲವಾಗಿ ಬಯಕೆ ಅಱತು ಭವ ಹಿಂಗಿ ತಾನೆನ್ನದೆ ಇದಿರೆನ್ನದೆ ಏನುವೆನ್ನದ ಲಿಂಗೈಕ್ಯಂಗೆ ಸ್ವಾನುಭಾವದಿಂದ ನಮೋ ನಮೋ ಎಂಬೆ (ಮೋಳಿಮಾ. ೦೨೬-೪೯೦); ಶುದ್ಧ ಮಿಶ್ರ ಸಂಕೀರ್ಣ ಪೂರ್ವಮಾರ್ಗಶೈವಂಗಳಲ್ಲಿ ಕರ್ಮಭಕ್ತಿಯಲ್ಲದೆ ನಿರ್ಮಳಸದ್ಭಕ್ತಿ ಎಲ್ಲಿಯದೋ (ಅದಸ. ಮು. ೪೫-೭೭). [ಸಂ.]

ಪೂರ್ವಸಾಸನ (ನಾ). ಹಿಂದಿನ ಕಾಲದ ರಾಜಾಜ್ಞೆ ; ಪೂರ್ವಕಾಲೀನ ಶಾಸನ : [ಪೆ]ರ್ಗ್ಗಡೆ ವಾಸುದೇವಯ್ಯನುಂ ಮಲ್ಲಯ್ಯನುಂ ಪೂರ್ವ್ವಸಾಸನಮರ್ಯ್ಯಾದೆ ಕೊಟ್ಟಿರ್ದ್ದುದೆಂದು ಬಿನ್ನಪಂಗೆಯ್ಯಲು (ಸೌಇಇ. XX, ೬೦-೨೦; 1088). [<ಸಂ. ಪೂರ್ವಶಾಸನ]

ಪೂರ್ವಸಿದ್ಧತೆ (ನಾ). ಮುಂಚಿತವಾಗಿ ಮಾಡಿಕೊಳ್ಳಬೇಕಾದ ಏರ್ಪಾಡು,-ತಯಾರಿ : ಈ ಪೂರ್ವಸಿದ್ಧತೆ ಪ್ರದರ್ಶಕರ ಕಡೆಯಿಂದ, ಅದಕ್ಕಿಂತೆ ಹೆಚ್ಚಾಗಿ ಪ್ರೇಕ್ಷಕರ ಕಡೆಯಿಂದ ಆದಾಗ ಮಾತ್ರ ಆ ಪ್ರದರ್ಶನ ಸಂಪೂರ್ಣ ಫಲದಾಯಿ (ರಾಮರಾ. ೬೦). [ಸಂ. ಪೂರ್ವಸಿದ್ಧತಾ]

ಪೂರ್ವಸಿದ್ಧಾಯ (ನಾ). ಒಂದು ಬಗೆಯ ತೆರಿಗೆ : ರುದ್ರದೇವಂ ಪತಿಬೆಸಸಿದ ಧರ್ಮೋಕ್ತಿಯಿಂ ಪೂರ್ವಸಿದ್ಧಾಯದೊಳೊಲ್ದಯ್ವತ್ತು ಪೊಂನಂ ನಿಯ[ಮ]ದ ಪುರಾಣಕ್ಕೆ ಭೋಗಕ್ಕೆಂದು ... ಪೂಣ್ದು ...ಧಾರಾ

[ಪೂ]ರ್ವ್ವಕಂ ಮಾಡಿ ಕೊಟ್ಟರ್ (ಕಇ. V. ೨೯-೪೦; 1138). [ಸಂ.]

ಪೂರ್ವಸುರ (ನಾ). = ಪೂರ್ವದೇವ ೨ : "ಸುರವೈರಿಗಳು . . . ಅಸುರರು ಪೂರ್ವಸುರರೆನಲು ದೈತ್ಯರು" (ಕುಂಗರಾ. ೩-೯). [ಸಂ.]

ಪೂರ್ವಸೂಚನೆ (ನಾ). ೧. ಮುಂಚಿತವಾಗಿ ಸೂಚಿಸುವುದು,—ತಿಳಿಸುವುದು; ಮುನ್ಸೂಚನೆ : 'ಪೂರ್ವಸೂಚನೆಗೆಯ್' ಪರಾ. ೨. ಮುಂದೆ ಒದಗಲಿರುವ ಘಟನೆಗಳ ವಿಚಾರವಾಗಿ ಮುಂಚೆಯೇ ತಿಳಿದು ಬರುವ ಕುರುಹು : ಅಪಘಾತದ ಪೂರ್ವಸೂಚನೆ ಸಿಕ್ಕಿದ ತಕ್ಷಣ ವಿಮಾನಚಾಲಕ ಪ್ರಯಾಣಿಕರಿಗೆಲ್ಲ ಎಚ್ಚರಿಕೆಯನ್ನು ನೀಡಿದನು (ಕೂಪ). [ಸಂ. ಪೂರ್ವಸೂಚನ]

ಪೂರ್ವಸೂಚನೆಗೆಯ್ (ಕ್ರಿ). ಮುಂಚಿತವಾಗಿ ತಿಳಿಸು ; ಮುನ್ಸೂಚನೆ ಕೊಡು : ಇದೆಲ್ಲವುಂ ದೇವರ್ಗೆ ಪೂರ್ವಸೂಚನೆಗೆಯ್ದು ಬಬಿಕ್ಕೊಡ ಗೊಂಡು ಬರ್ಪೆಂ (ಪಂಪಕಂ. ೩೩-೦೪). [ಪೂರ್ವಸೂಚನೆ + ಕೆಯ್$_1$]

ಪೂರ್ವಸ್ಥಿತಿ (ನಾ). ಮೊದಲು ಇದ್ದ ರೀತಿ ; ಮೊದಲಿನ ಕ್ರಮ : ಅವಾಸಿತವಿಜಯಕಟಕನಾಗಿ ಪೂರ್ವಸ್ಥಿತಿಯೊಳ್ ಪೋಗಿ (ಅಂಪು. ೦೩-೩ ಪ). [ಸಂ.]

ಪೂರ್ವಸ್ಮರಣ (ನಾ). ಹಿಂದಿನದನ್ನು ನೆನೆಸಿಕೊಳ್ಳುವುದು ; ಹಿಂದಾದುದನ್ನು ನೆನೆಯುವುದು : ಆ ಎಂಬುದು ಪೂರ್ವಸ್ಮರಣದೊಳಂ ಪ್ರಸಿದ್ಧಿಯೊಳಮುಂಟು (ಕಮದ. ೦೬೯ ವೃತ್ತಿ). [ಸಂ.]

ಪೂರ್ವಸ್ಮರಣೆ (ನಾ). ಹಿಂದಿನ ಕಾಲದ ನೆನಪು : ಸ್ವಾಮಿಯಡಿಗೆ ಶಿರ ಬಾಗಿ ಬಂದೆವಿದೊ ಎಲ್ಲ ಸೀಮೆಯಿಂದ, ಅರಿವು-ಮರೆವು ಕಣ್ದೆರೆದು ಕರೆದ ಆ ಪೂರ್ವಸ್ಮರಣೆಯಿಂದ (ಪಂಮು. ೩೯-೨). [ಸಂ. ಪೂರ್ವಸ್ಮರಣ]

ಪೂರ್ವಸ್ವರ (ನಾ). [ವ್ಯಾಕ] ಸಂಧಿ ಮಾಡಬೇಕಾದಾಗ ಸಂಧಿಸ್ಥಾನ ದಲ್ಲಿರುವ ಎರಡುಸ್ವರಗಳಲ್ಲಿ ಮೊದಲು ಇರುವ ಸ್ವರ : ಸ್ವರಮಿರೆ ಪರದೊಳ್ ಪೂರ್ವಸ್ವರಲೋಪಂ ಕೃತವಿಭಕ್ತಿಗಕ್ಕುಂ ಪ್ರಕೃತಿಸ್ವರದೊಳುದೇ ದಂತಕ್ಕಾಚರಿಸುವರವಿನಷ್ಟನಾಮಭಾಗಸ್ಥಿತಿಯೊಳ್ (ಕಾವ್ಯಾಪ ೩೨); ವಿಧು ಇದು, ಕವಿ ಆರ್ ಎಂಬಿವನ್ನು ವಿಧಿದು, ಕವಾರ್ ಎಂದು ಪೂರ್ವಸ್ವರಕ್ಕೆ ಲೋಪಮಾಡಿ ಕೂಡಿಸಿದರೆ ಅರ್ಥಕ್ಕೆ ಹಾನಿ ಬರುತ್ತದೆ (ಕೃಬಿಡಿ. ೭). [ಸಂ.]

ಪೂರ್ವಹಗೆ (ನಾ). ಮೊದಲಿನ ದ್ವೇಷ; ಮುಂಚಿನ ವೈರ : ಅಂತರಿಸದೆ ಕೊಲ್ಲಿಯೆಂದು ಕಳುಹಿದ ಎಂತವನಿಗೆ ಪೂರ್ವಹಗೆಯೊ (ಬಿಷ್ಟರಾ. ೬-೯). [ಪೂರ್ವ + ಹಗೆ$_2$ (< ಪಗೆ$_2$)]

ಪೂರ್ವಾಂಗ (ನಾ). ೧. ಮೊದಲನೆಯ ಭಾಗ; ಪೂರ್ವಾರ್ಧ : ನಾಟ್ಯ ಶಾಸ್ತ್ರದ ಪ್ರಕಾರ ಶಾಂಡವವು . . . ನಾಟಕದ ಪೂರ್ವಾಂಗವಾಗಿ ಅಭಿನಯಿ ಸಲ್ಪಡುತ್ತಿತ್ತು (ಭಾರದ. ೩೩೨). ೨. ಅಂಗೈ ಮತ್ತು ಮಣಿಕಟ್ಟಿನ ಮಧ್ಯಭಾಗ : ಸೆಳೆಯುತ್ತಿರ್ಪಂತರಿಂ ಮೌರ್ವಿಯ ಕಠಿನತೆವೆತ್ತಿರ್ಪ ಪೂರ್ವಾಂಗದಿಂ ಕಂಗೊಳಿಸುತ್ತುಂ (ಶಾಕುಂತ. ೨೨-೩೬). ೩. [ಜೈನ] ಎಂಬತ್ತುನಾಲ್ಕುಲಕ್ಷ ವರ್ಷಗಳ ಅವಧಿ : ರಾಜ್ಯದೊಳ್ನಿಂದುಮಯ್ದು ಲಕ್ಕೆಯುಮಱುನೂಱುಪೂರ್ವಮಿಪ್ಪತ್ತುನಾಲ್ಕುಪೂರ್ವಾಂಗಮುಂ ರಾಜ್ಯ ಕಾಲಂ ಸಲೆ (ಶಾಪುಂಪು. ೦೨೨); ಎಂಬತ್ತುನಾಲ್ಕುಲಕ್ಷವರುಷಗಳಾದರೆ ಪೊಂದು ಪೂರ್ವಾಂಗವೆಂದು ಹೇಳುವರು (ಪುರುಪ. ೦೬). [ಸಂ.]

ಪೂರ್ವಾಚಲ, ಪೂರ್ವಾಚಳ (ನಾ). = ಪೂರ್ವಗಿರಿ : "ಮೂಡವೆಟ್ಟೆಂದು ಪೂರ್ವಾಚಲಂ" (ಕಶಸಾ. ೪೯-೩೦); ಬೀಡುಗೊಂಡಿರ್ದ ಕತ್ತಲೆಯ ಪಾಳೆಯ ಮೆತ್ತಲೋಡಿದುದೋ ನೋಡಿದವೆನೆಂದು ಪೂರ್ವಾಚಲದ ಕೋಡುಗಲ್ಲಂ ಪತ್ತುವಂತೆ ಮೆಱೆದಂ ಪ್ರಭೆಯೊಳೌನ್ನತ್ಯನಾದಿತ್ಯನು (ಕೃಮಿಭಾ. ೨-೬೩). ಪೂರ್ವಾಚಳ : "ಪೂರ್ವಾಚಳಮೆ ಮೂಡವೆಟ್ಟೆಂದಕ್ಕುಂ" (ಕವಿಕಂ. ೪೯); ಮಣಿಖಚಿತಾಸನದೊಳ್ ಮುನಿಗಣಪತಿಯುಂ ನೃಪತಿ ತಂದು ಕುಳ್ಳಿರಿಸೆ ನಭೋಮಣಿ ಪೂರ್ವಾಚಳಚೂಡಾಮಣಿಯೆನಿಸಿದನೆನೆ ಪೊದಟ್ಟುದಪಘನ ಕಿರಣಂ (ಸುಲ್ಲಿಪು. ೦೯-೩); ಸುರುಚಿರ ಪೂರ್ವಾಚಳದೊಳ್ ಗುರುತರ ಪೂರ್ಣೇಂದುವುದಯಿಪಂತಿರೆ ರಾತ್ರೀಶ್ವರವದನೆ ಗಿರಿಜೆ ಭರದಿಂ ಗಿರಿರಾಜನ ತೊಡೆಯ ಮೇಲೆ ಬಿಜಯಂಗೆಯ್ದಳ್ (ಗಿಸಿ. ೯-೪೯). [ಸಂ.]

ಪೂರ್ವಾಚಳ 'ಪೂರ್ವಾಚಲ' ನೋ.

ಪೂರ್ವಾಚಾರ (ನಾ). ಹಿಂದಿನ ಕಾಲದಿಂದ ಬಂದ ನಡವಳಿಕೆ ; ಸಂಪ್ರದಾಯ : ಶ್ರೀಪ್ರಭುಮಾಣಿ ಪರಮಸುಭಗನ್ . . . ಪೂರ್ವ್ವಾಚಾರದಾ ತೆಱಯಪ್ಪೈ ಈಯೆಮೆನ್ದೊಡೆ ಪೊನ್ನೆಱನುಂ ಚೋಲಮಹಾರಾಜನುಂ ಮೂವದಿಮ್ಬುರ್ಪ್ಪರ್ವರಾನ್ಕೊನ್ದಾ × ಶ್ರೀಧನಪತಿಆಚಾರಿಮಾ (ಎಕ. XVI. ಸುದ್ದಗಿ. ೦೦೬-೩ ; ೩ಪಯ ಕಥ) ; ವಿಷ್ಣಾಖಂಡದ ಜನರು ಪೂರ್ವಾಚಾರಗಳಲ್ಲಿ ಬಹುಪ್ರೀತಿಯುಳ್ಳವರಾಗಿದ್ದಾರೆ (ಕೂಗೋಳ. ೨೦). [ಸಂ.]

ಪೂರ್ವಾಚಾರ್ಯ (ನಾ). ಹಿಂದಿನ ಕಾಲದ ವಿದ್ವಾಂಸ,—ಪಂಡಿತ : ಪೂರ್ವಾಚಾರ್ಯರ್ ದೇಸಿಯನೆ ನಿಱಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (ಕವಿರಾ. ೦-೭೩); ಹದಿಮೂರುವಿಧವಾದ ಸನ್ನಿಪಾತ ಗಳಿಗೂ ಆಯುಃಪ್ರಮಾಣಂಗಳ ಅವಧಿಯು . . . ಪೂರ್ವಾಚಾರ್ಯರಿಂದ ಪೇಳಲ್ಪಟ್ಟಿರುವುದು (ಸಕವೃ. ೦೬೯). [ಸಂ.]

ಪೂರ್ವಾದತ್ತ (ಗು). ಹಿಂದೆ ಗಳಿಸಿಕೊಂಡ,—ಸಂಗ್ರಹಿಸಿದ : ಪೂರ್ವ ಸಂಚಿತವಾದ : ಜಲಧಿಯಲಿ ಘಣಿವದನದಲಿ ರಿಪುಬಲದ ಮುಖದಲಿ ಸಿಡಿಲ ಹೊಯ್ಲಲಿ . . . ಸಿಲುಕಿದಡೆ ಬಿಡಿಸುವವಲೇ ಪ್ರತಿಫಲಿತ ಪೂರ್ವಾದತ್ತ ಪುಣ್ಯಾವಳಿಗಳು (ಕುಸ್ಯಾಗ. ೯-೨೩). [ಸಂ.]

ಪೂರ್ವಾದ್ರಿ (ನಾ). = ಪೂರ್ವಗಿರಿ : ಪೂರ್ವಾದ್ರಿಯೊಳಪರಾದ್ರಿಯೆ ನಿರ್ವಂದದೆ ತಾಗುವಂತೆ ತಾಗಿದುವು ಗಜಂ (ಪಾರ್ಶ್ವಪು. ೩-೦೨೬). [ಸಂ.]

ಪೂರ್ವಾನುಭವ (ನಾ). ಹಿಂದೆ ಅನುಭವಿಸಿದುದು : ಇಂದ್ರಿಯ ಮೂಲಕವಾಗಿ ಅಥವಾ ಮಾನಸಿಕವಾಗಿ ಈ ಮುಂಚೆ ಪಡೆದ ಅನುಭವ : ಮತ್ತೊರ್ವಂ ಪೂರ್ವಾನುಭವಮಂ ನೆನೆದು . . . ಕೆಳದಿಯೊಳ್ ನುಡಿದಂ (ಸಂದ್ರಶು. ೬-೭೯ ಪ). [ಸಂ.]

ಪೂರ್ವಾನುರಾಗ (ನಾ). [ಕಾವ್ಯಮೀ] ಪೂರ್ವಾನುರಾಗ, ಮಾನ, ಪ್ರವಾಸ ಮತ್ತು ಕರುಣಾತ್ಮಕ ಎಂಬ ನಾಲ್ಕು ವಿಪ್ರಲಂಭಶೃಂಗಾರ ಪ್ರಭೇದಗಳಲ್ಲಿ ಒಂದು ; ಪ್ರಿಯೆ, ಪ್ರಿಯಕರರು ಒಂದುಗೂಡುವ ಉತ್ಸುಕತೆಯಲ್ಲಿದ್ದರೂ ಅದು ಸಾಧ್ಯವಾಗದೆ ಉಂಟಾಗುವ ಮರುಕ: ಸಮಸಂದು ನೋಡಿ ಮೇಣ್ನುಡಿದು ಮೇಣ್ಮನಂಗೊಂಡು ಕೂರ್ತು ಕೂಟಂ ತನ್ನೊಳ್ ಸಮನಿಸದೆ ಮಱುಗುವಾ ಮಱುಕಮುಮದು ಪೂರ್ವಾನುರಾಗಮೆನೆ ಪೆಸರ್ವಡೆಗುಂ (ಶೃಂಗಾರ. ೯-೪೦) ; ಪೂರ್ವಾನುರಾಗ ಮೆಂಬುದಭಿಲಾಷೆ ಅದು ದೈವ ಪಾರವಶ್ಯಮೆಂದಿರ್ತೆಱಂ (ರಸರ. ೦-೩೯ ಪ). [ಸಂ.]

ಪೂರ್ವಾಭಾದ್ರ (ನಾ). ಇಪ್ಪತ್ತೇಳು ನಕ್ಷತ್ರರಾಶಿಗಳಲ್ಲಿ ಇಪ್ಪತ್ತೈದನೆಯದು : ಪೂರ್ವಾಭಾದ್ರಾ ಅಜಪಾದ ಪೂರ್ವ ಪ್ರೋಷ್ಠಪದ ಯಿಾ ೪ ಪೂರ್ವಾಭಾದ್ರನಕ್ಷತ್ರಕ್ಕೆ ಪೆಸರು (ಭಾಸ್ಕರ. ೬೩-೭). [ಸಂ.]

ಪೂರ್ವಾಭಾದ್ರಪದೆ (ನಾ). = ಪೂರ್ವಾಭಾದ್ರ : ಪುಬ್ಬೆಯುತ್ತರೆ ಶತವಿಶಾಖೆ ಸಂದ ಪೂರ್ವಾಭಾದ್ರಪದೆ ಮೂಱಹವು (ಮಂಗರಾ. ೦೯-೨). [ಸಂ. ಪೂರ್ವಾಭಾದ್ರಪದಾ]

ಪೂರ್ವಾಭಾದ್ರೆ (ನಾ). = ಪೂರ್ವಾಭಾದ್ರ : ಅಶ್ವಿನಿ ಭರಣಿ . . . ಪೂರ್ವಾಭಾದ್ರೆ . . . ರೇವತಿಗಳೆಂಬಿಪ್ಪತ್ತೇಳು ತಾರೆಗಳು (ವಿವೇಕ. ೨೩೮). [ಸಂ. ಪೂರ್ವಾಭಾದ್ರ]

ಪೂರ್ವಾಭಿಮುಖ (ನಾ). ೧. ಮೂಡಣದಿಕ್ಕಿಗೆ ಎದುರಾಗಿ ಇರುವವನು ; ಪೂರ್ವದಿಕ್ಕಿಗೆ ಮುಖ ಮಾಡಿದವನು : ಯೋಗ ಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ

(ಅಂಪು. ೧೬-೪೦ ಪ); ಪೂರ್ವಾಭಿಮುಖಂ ಜಿನಶಿಶು . . . ಕನಕೋರ್ವೀಧರ ಶಿಖರವಂತೆ ಮಿಗೆ ಸೊಗಯಿಸಿದಂ (ಪರ್ಶ. ೦೪-೧೩) ೨. ಪೂರ್ವ ದಿಕ್ಕಿಗೆ ಎದುರಾಗಿರುವುದು : ವಿಂಧ್ಯಪರ್ವತಗಳು . . . ನರ್ಮದಾ ನದಿಯ ಉತ್ತರದಲ್ಲಿ ಪೂರ್ವಾಭಿಮುಖವಾಗಿ ಹಾಯುತ್ತವೆ (ಭೂಗೋಳ. ೩೧). [ಸಂ.]

ಪೂರ್ವಾಮರ (ನಾ). = ಪೂರ್ವದೇವ ೨ : ಪೂರ್ವಾಮರರೊಳಾದುದು ಧುರ ಮಹಾದ್ಭುತಮಾಗಿ (ಕೌಶಿಲಾ. ೦-೨೬); ಮಥಿಯಿಸಿದೊಡಂ ತತ್ಸಿಂಧು ಪೂರ್ವಾಮರಾಮರರ ಬಲ್ವಾವ ಪಿಡಿಸುತುಚ್ಛೈಶ್ರವಮೆನಿಪ್ಪ ಹಯವ ಸರ್ವಬಾಧೆಯೊಳಿತ್ತಂ (ಶಾಪಸಿಂ. ೭-೦೨). [ಸಂ.]

ಪೂರ್ವಾಯ (ನಾ). = ಪೂರ್ಬಾಯ : ರಾಮನಾಥದೇವರಿಗೆ ಆಗುವ ಚಿಕ್ಕ ಕೊಡಲಿಯ ಹನಸವಾಡಿಯ ಪೂರ್ವ್ವಾಯ ಅಪೂರ್ವ್ವಾಯ ಅಳುಯನ್ಯಾಯ ಯೇನುಯಿಲ್ಲೆಂದು ಧಾರಾಪೂರ್ವ್ವಕ ಮಾಡಿದ ಧರ್ಮ್ಮ (ಎಳ. VII. ಶಿವಮೊ. ೬೮-೩ ; 1313); ರಾಮದೇವರಂಗಭೋಗಕ್ಕೆ ಕೊಟ್ಟ ಧರ್ಮವಿದಕೆ ಪೂರ್ವ್ವಾಯವಪೂರ್ವ್ವಾಯವೊಂದಿಲ್ಲ (ಎಳ. VII. ಶಿವಮೊ. ೬೯-೨೬; 1320). [ಸಂ.]

ಪೂರ್ವಾರ್ಜಿತ (ಗು). ೧. ಹಿಂದೆ ಗಳಿಸಿದ ; ಪೂರ್ವಜನ್ಮದಲ್ಲಿ ಸಂಪಾದಿಸಿದ : ಯಥಾಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕಾವಿಪಾಕ ರೂಪದಿಂ ಪೂರ್ವಾರ್ಜಿತಕರ್ಮನಿರ್ಜರಣಂ ನಿರ್ಜರೆಯೆಂಬುದು (ಅಂಪು. ೧೦-೬೩ ಪ) ; ಗಣಪತಿಯಷ್ಟು ನಿಷ್ಠೆಯಿಂದ ಅಷ್ಟೊಂದು ದೀರ್ಘಕಾಲ ಸಾಧನೆಮಾಡಿದ ಒಬ್ಬನನ್ನೂ ಅವರು ಕಂಡಿರಲಿಲ್ಲ. ಅದಕ್ಕೆ ಪೂರ್ವಾರ್ಜಿತ ಪುಣ್ಯವಿಶೇಷ ಬೇಡವೆ? (ಹೊಸಕ್ಷ. ೩೯). ೨. ಹಿರಿಯರು ಗಳಿಸಿ ಕೊಟ್ಟ; ಪೂರ್ವಜರಿಂದ ಸಾಗಿ ಬಂದ : ಅವರಿಗೆ ಪೂರ್ವಾರ್ಜಿತ ಆಸ್ತಿ ಏನೂ ಇರಲಿಲ್ಲ, ಸ್ವಂತ ಪರಿಶ್ರಮದಿಂದಲೇ ಅವರು ಮುಂದೆ ಬಂದರು (ಕೂಡಿ). (ನಾ). ೩. ಹಿಂದೆ ಗಳಿಸಿದುದು ; ಪೂರ್ವಸಂಚಿತವಾದದು : ಸಮ್ಯಗ್ದರ್ಶನ ಜ್ಞಾನಚಾರಿತ್ರವಿಷಯಮಪ್ಪಱಿವು . . . ಅದೆಂತೋ ಪೂರ್ವಾರ್ಜಿತಮಪ್ಪ ಮಹಾಸುಕೃತವಿಶೇಷದಿಂ ಪ್ರಾಪ್ತಮಾದುದು (ಜೀವಸಂ. ೦೬೬-೨೩). ೪. (ಆಲು) ಹಣೆಬರಹ : ಪಣೆಯೊಳಂ ಪೂರ್ವಾರ್ಜಿತಂ ಹಾಗಿರಲ್ ಕೊಲನೇ ಕ್ಷುದ್ರ ಸಮರ್ಥನಂ (ಸೋಮೇಶ. ೩೦). [ಸಂ.]

ಪೂರ್ವಾರ್ಣವ (ನಾ). ಮೂಡಣ ಕಡಲು ; ಪೂರ್ವಸಮುದ್ರ : ಪೂರ್ವಾರ್ಣವಮಂ . . . ನೋಡಿದಂ ಚಕ್ರನಾಥಂ (ಅಂಪು. ೦೨-೭೦). [ಸಂ.]

ಪೂರ್ವಾರ್ಧ (ನಾ). ಮೊದಲನೆಯ ಅರ್ಧಭಾಗ : ಕಂದದ ಪೂರ್ವಾರ್ಧದೊಳನು ಸಂದಿಸಲಾರ್ಯಾಪರಾರ್ಧಮದನುಕ್ರಮದಿಂದೊಂದಿರ್ದೊಡೆ ಸಂಕೀರ್ಣಕಂ (ಭಂಪೋಂಬು. ೪-೨೩೪) ; ಈ ಶತಮಾನದ ಪೂರ್ವಾರ್ಧಕ್ಕಿಂತಲೂ ಉತ್ತರಾರ್ಧದಲ್ಲಿ ಭಾಷಾವಿಜ್ಞಾನದ ದೃಷ್ಟಿಯಿಂದ. . .ಒಳ್ಳೆಯ ಕೆಲಸ ನಡೆಯುತ್ತಿದೆ (ಪ್ರಾಬಿಪ. ೦೩೨). [ಸಂ.]

ಪೂರ್ವಾರ್ಧಗೋಳ (ನಾ). ಭೂಮಂಡಲದ ಪೂರ್ವಭಾಗ : ಪಶ್ಚಿಮಾರ್ಧಗೋಳದಲ್ಲಿರುವ ಭೂಮಿಯ ಎರಡರಷ್ಟಕ್ಕಿಂತಲೂ ಪೂರ್ವಾರ್ಧಗೋಳದಲ್ಲಿರುವ ಭೂಮಿಯು ಹೆಚ್ಚಾಗಿದೆ (ಭೂಗೋಳ. ೦೩). [ಸಂ. ಪೂರ್ವಾರ್ಧಗೋಲ]

ಪೂರ್ವಾಶ್ರಮ (ನಾ). (ಸಂನ್ಯಾಸಕ್ಕೆ) ಮುಂಚಿನ ಆಶ್ರಮ ; ಬ್ರಹ್ಮಚರ್ಯ ಅಥವಾ ಗೃಹಸ್ಥಾಶ್ರಮ : ಶೈವಪಂಥೀಯಸಂನ್ಯಾಸಿಗಳು ತಮ್ಮ ಪೂರ್ವಾಶ್ರಮದ ಮನೆಯನ್ನು ಅಪರಿಚಿತಸ್ಥಳವೆಂದು ತಿಳಿಯುತ್ತಾರೆ (ಆಶ್ರಮ. ೨೪). [ಸಂ.]

ಪೂರ್ವಾಶ್ರಯ (ನಾ). ಹಿಂದಿನ ಇರವು ; ಮೊದಲಿನ ಅಸ್ತಿತ್ವ : ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದರೆ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ ಆಚಾರದ್ರೋಹ ಪ್ರಸಾದದ್ರೋಹ (ಬಸವ. ೭೬೬); ಇಂತಪ್ಪ ಪದಾರ್ಥದ ಪೂರ್ವಾಶ್ರಯವನು ಶಿವಮಂತ್ರ ಶ್ರೀವಿಭೂತಿಯಿಂದೆ ಕಳೆದು ಶುದ್ಧಸಂಸ್ಕಾರವೆನಿಸಿ . . . ಶಿವಲಿಂಗಕ್ಕೆ ಅರ್ಪಿಸಿದಲ್ಲಿ ಶಿವಪ್ರಸಾದವೆನಿಸಿತ್ತು (ಅಪಂಚೇ. ೦೬೨-೨೪). [ಸಂ.]

ಪೂರ್ವಾಷಾಢ (ನಾ). ಇಪ್ಪತ್ತೇಳುನಕ್ಷತ್ರಗಳಲ್ಲಿ ಇಪ್ಪತ್ತನೆಯದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ಆರ್ದ್ರೆ ಪೂರ್ವಾಷಾಢ . . . ಮಖೆಯೆಂಬುವೇ ಕ್ರಮದಿಂದ ಷಡ್ಜಾದಿ ಸ್ವರಂಗಳ ಜನ್ಮನಕ್ಷತ್ರಂಗಳು (ಪಿನೇಳ. ೨೩೦). [ಸಂ. ಪೂರ್ವಾಷಾಢಾ]

ಪೂರ್ವಾಸನ (ನಾ). ಮುಂದಿನ ಆಸನ; ಪೂರ್ವಪೀಠ : ಪೂರ್ವಾಸನದೊಳ್ ಪದೆಪಿಂ ಪಾರ್ವತಿಯುಂ ಹರ್ವವೇಱೆ ಬಿಜಯಂಗೆಯ್ಯುತ್ತ . . . ಪರ್ವತರಾಜಂ ಪುರಕ್ಕೆ ತಿರುಗಿದನಾಗಳ್ (ಗಿಂಳ. ೩-೦೦೨); ಮಹಾದೇವಿ ಶರ್ವಾಣಿ ಸಮಸ್ತಾಧಿಕ್ಕೆ ಪೂರ್ವಾಸನದೊಳಿರೆ ಬರುತ್ತೊಪ್ಪಿದಂ ಶೈಳಪು (ಗಿಂಳ. ೩.೦೦೩). [ಸಂ.]

ಪೂರ್ವಾಹ್ಣ (ನಾ). ಸೂರ್ಯೋದಯದಿಂದ ಮಧ್ಯಾಹ್ನದ ವರೆಗಿನ ಕಾಲ; ಹಗಲಿನ ಪೂರ್ವಾರ್ಧ : ಪೂರ್ವಾಹ್ಣದೊಳಾಂ ಕಂಡ ಬಲಾಕೆಯ ಮತ್ತೊಂದಿದಲ್ತು (ತತ್ತ್ವಶ್ರ. ೫೬); ಅಯೇಷೆಯ ಸೌಂದರ್ಯ ಪೂರ್ವಾಹ್ಣದ ಸೂರ್ಯರಶ್ಮಿಯಂತೆ (ಬಂಕಿಮ. ೦೫೬). [ಸಂ.]

ಪೂರ್ವಿ (ನಾ). [ಸಂಗೀತ] ಒಂದು ರಾಗದ ಹೆಸರು : ಪೂರ್ವಿ ರಾಗವು ರಕ್ತದ ಒತ್ತಡವನ್ನೂ . . . ಗುಣಪಡಿಸುವುವೆಂಬ ಭಾವನೆ ಉತ್ತರ ಭಾರತದಲ್ಲಿದೆ (ಭಾರದ. ೩೪೪); ಆನಂದಭೈರವಿ ಮುಗಿಯುವುದೇ ತಡ ನೇರವಾಗಿ ಪೂರ್ವಿರಾಗವನ್ನೆತ್ತಿಕೊಂಡ (ಸಂಧ್ಯಾರಾ. ೦೬೬). [ಸಂ. ಪೂರ್ವೀ]

ಪೂರ್ವಿಕ (ಗು). ೧. ಹಿಂದಿನ; ಪೂರ್ವಕಾಲದ ; ಪೂರ್ವಕಾಲದಿಂದ ಬಂದ. (ನಾ). ೨. ಹಿರಿಯ; ಪೂರ್ವಜ; ವಂಶದ ಹಿಂದಿನ ವ್ಯಕ್ತಿ : ನನ್ನ ಪೂರ್ವಿಕರನು ಕುರಿತೀಗ ಹೇಳುವೆ ತಿಳಿದಷ್ಟು ಸಂಗತಿಗಳನು (ಇಂಶಾಪ. ೪-೦೦); ಮೊದಲು ಮಗುವಿನ ಪೂರ್ವಿಕರ ಇತಿಹಾಸವನ್ನು ಸಂಗ್ರಹಿಸಬೇಕು (ಶಿಕ್ಷದ. ೯೬). [ಸಂ.]

ಪೂರ್ವಿಗ 'ಪೂರ್ಬಿಗ' ನೋ.

ಪೂರ್ವೀಕ 'ಪೂರ್ಬಿಗ' ನೋ.

ಪೂರ್ವೆ (ನಾ). ೧. ಮೂಡಣ ದಿಕ್ಕು : "ಐಂದ್ರೀ, ಪೂರ್ವಾ, ಪ್ರಾಚೀ— ಈ ೩ ಮೂಡಣ ದೆಸೆ" (ಹಠಾಯು. ೧೭-೦೦೦). ೨. ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು; ಪುಬ್ಬೆ ನಕ್ಷತ್ರ ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ಭರಣಿ ಮಘೆ ಪೂರ್ವೆ ಕೃತ್ತಿಗೆ . . . ಎಂಬೇಟುಂ ವೈಶ್ವಾನರ ಮಂಡಳಮೆಂಬ ನಾಮಮಂ ತಳೆದಿರ್ಕುಂ (ಲೋಕೋಪ. ೪-೬೦); ಮಖಾ ಪೂರ್ವಾ ಉತ್ತರಾನಕ್ಷತ್ರಗಳ ಮಳೆಗೆ ಹತ್ತಿಯ ಬಿತ್ತಿಗೆಯಾಗುತ್ತದೆ (ಮುಂಬಯಿ. ೪-೨೬). [ಸಂ. ಪೂರ್ವ]

ಪೂರ್ವೇತರ (ಗು). ಪಶ್ಚಿಮದ; ಪಡುವಣ ದಿಕ್ಕಿನ : ಘನಸಂಧ್ಯಾರಾಗತೀವ್ರಾನಲನೊಳೊಲವಿನಿಂ ಕಾಸಿ ತಿಗ್ಮಾಂಶುವೆಂದೆಂಬ ನವೀನ ಸ್ವರ್ಣಸತ್ಪಿಂಡಮಂ . . . ಪೂರ್ವೇತರಶರನಿಧಿಯೊಳ್ ಕಾಣಿಂದೋ ಜನಳ್ದಲ್ಲನಿಸುರ್ಬೇಳ್ದುದೋ ಕಾರ್ಬೊಗೆಯೆನೆ ದೆಸೆದೀವಿತ್ತು ಘೋರಾಂಧಕಾರಂ (ರಾಜಶೇ. ೦೦-೦೯). [ಸಂ.]

ಪೂರ್ವೇತಿಹಾಸ (ನಾ). ಹಿಂದಿನ ಕಥೆ : ಪೂರ್ವಚರಿತ್ರೆ : ತುಸು ನೀಳವಾಗಿಯೆ ಮನದೊಳು ಮೂಡಿತು ಪೂರ್ವೇತಿಹಾಸದ ನೆಳಲು (ಇಂಶಾಪ. ೬೦-೯೯). [ಸಂ.]

ಪೂರ್ವೋಕ್ತ (ಗು). ೧. ಹಿಂದೆ ಹೇಳಿದ ; ಮೊದಲೆ ತಿಳಿಸಿದ,— ನಿರೂಪಿಸಿದ : ಆ ವಾಕ್ಯಮುಂ ವಿಜ್ಞಾನಮೆಂಬೆಯಪ್ಪೊಡೆ ಪೂರ್ವೋಕ್ತ

ದೋಷಪಾಷಾಣಸಂಚೂರ್ಣಿತಮತಿಯೈ ಏನನೇತಱೊಳ್ ನಿಶ್ಚಯಿಸುವೈ (ಅಪಿಪು. ೨-೦೦ ಪ); ಪೂರ್ವೋಕ್ತಸ್ಥಿತಿಯೊಳ್ ಪಜ್ರಕವಾಟೋದ್ಘಾಟನಂಗೆಯ್ದು (ಕಾಂತಿಪು. ೦೦-೬೭ ಪ). (ನಾ). ೨. ಮುಂಚೆ ಹೇಳಿದುದು; ಮೊದಲು ನಿರೂಪಿತವಾದುದು : ವಿಶ್ವಸಾರೋತ್ತರಾಗ್ರನಿರ್ಮಳಸೂತ್ರದಿಂದ ಪೂರ್ವೋಕ್ತವಹ ಕಾರ್ಯಂಗಳೊಳು ಶಬ್ದವೃತ್ತಿ ತೋಱುತ್ತವಿರ್ದುದಲ್ಲಿ (ಪೀಕೈಪು. ೬-೨-೩೮); ಎದುರುಗೋಡೆಯಲ್ಲಿ ಪೂರ್ವೋಕ್ತವಾದ ಕಿಟಕಿಗಳ ಮಧ್ಯೆ . . . ಗಡಿಯಾರವಿದೆ (ಪೀರಯೋ. ೧). [ಸಂ.]

ಪೂರ್ವೋದಿತ (ಗು). = ಪೂರ್ವೋಕ್ತ ೧ : ಪುನರುಕ್ತಮೆಂಬುದಕ್ಕುಂ ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂದಿನಿಸುಂ ವಿಶೇಷಮಿಲ್ಲದೆ ಜನಿಯಿಸಿದ ಪದಾರ್ಥಂ (ಕಪಾ. ೦-೬೯). [ಸಂ.]

ಪೂರ್ವೋಪಾರ್ಜಿತ (ಗು). = ಪೂರ್ವಾರ್ಜಿತ ೧ : ಅಂತವರ್ ಕರ್ಕಟಕೇಶಚರ್ಮರಾಗಿ ಪುಟ್ಟಿ ಪೂರ್ವೋಪಾರ್ಜಿತಸುಕೃತಮಹೀರುಹನಿಶಾಕರನಿಜಾಂಗುಳಿನಿಸ್ರವದ್ದುಗ್ಧಾಜ್ಯಧಾರೆಯ ಸವಿಯಂ ಸೇವಿಸಲೇಱೆಱುದೆವಸಂಗಳುಂ ಪೋಗೆವೋಗೆ (ಶಾಂತಿಪು. ೬-೦೦೬ ಪ); ನೀಳನೆಂಬ ಮಾದೆಗಂಗಂ ಕೌಶಂಬಿಯೆಂಬ ಮಾದೆಂಗಿಗಂ ಮಗಳಾಗಿ ಪೂರ್ವೋಪಾರ್ಜಿತ ಶುಭಾನು ಪೂರ್ವಿನಾಮಕರ್ಮೋರ್ವೀರುಹಪರಿಪಾಕಫಳಮನನುಭವಿಸುತ್ತುಂ (ಸುಳುಪಾ. ೩-೨೧ ಪ). [ಸಂ.]

ಪೂಲತೆ (ನಾ). ಹೂವು ಬಿಟ್ಟಿರುವ ಬಳ್ಳಿ : ಪೂಲತೆ ಪೂಗಿಡು ಪೂಮರ ಸಾಲಿಂದಲ್ಲಲ್ಲಿ ಕೇರಿಕೇರಿಗಳೊಳ್ ಚೈತ್ಯಾಲಯದ ಮುಂದೆ ತುಂಬಿಯ ಜಾಳಂ ಮದಮೇಱೆ ಮೆಱೆವವಾ ಪರಿಮಳದೊಳ್ (ಎಳ. VIII. ಸೊರಪ. ೨೬೦-೨೨ ; 1408). [ಪೂ$_2$+ಲತೆ]

ಪೂಲಿ$_1$, ಹೂಲಿ$_1$ (ನಾ). ಒಂದು ಬಗೆಯ ಸಸ್ಯ : ಪೂಲಿಯ ಪಣ್ಣಂತೆ ಪೊಱವಾಯ್ವ ಕೀವುಂ (ರರ್ಮಾಪ್ಯು. ೯-೬೩); ಅದಱ ಬಱಿವಿಡಿದು ಬೆಳೆದ ಬಳ್ಳಿಯ ಪಸಿಯ ಪುಲ್ಲ ಪೂಲಿಯ ನಾನಲನಱಿದು ನಡೆವಾಗಳ್ (ಲೀಲಾವ. ೬ ೯೨ ಪ). ಹೂಲಿ$_1$: "ಶಂಬಾ ಸುಖಿನಿ ಹೂಲಿಯಕ್ಕುಂ" (ಮಂಗಣಾ. ೩೭-೨೦); ಪರಿವತಿಸಾರಂ ಪಿರಿದಾಗಿರೆ ಹೂಲಿಯ ಬೇರ ತಿಗುಡನೆಮ್ಮೆಯ ಮೊಸರೊಳ್ ಬೆರಸಿಟ್ಟು ಸೈಂಧವಂ ಕೂಡಿರೆ ಮೆಲುವುದು ದಿವ್ಯಯೋಗಮಿದು ಪರಿಹರಿಕುಂ (ಕಲ್ಯಾಕಾ. ೯-೧೩); ಹೂಲಿ ಮಾಲಿನಿ ಬನ್ನಿ ಹೊನ್ನೆ . . . ನಾನಾಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದು (ಸೋಮಪ. ೩-೨). [ದೇ.॥ ತಮಿ. ಪೂಳ ; ತೆಲು. ಪೂಲಿ./ಹಿಂ. ಪೂಲೀ, ಪೂಲಾ]

ಪೂಲಿ$_2$, ಹೂಲಿ$_2$ (ನಾ). ೧. ಒಬ್ಬಾತನ ಹೆಸರು: ಪೂಲಿಯೂ ಕೊಂಗಿಯೂ ಕಾಲಿಯಮ್ಮನೂ ಇಟ್ಟು ಕೊಟ್ಟರ್ (ಎಳ. VIII. ಸೊರಪ. ೨೨-೦೦; ಸು. 800). ೨. ಒಂದು ಊರಿನ ಹೆಸರು : ಅರವಡ್ಡಗಿಯರವದರ್ಪೂಲಿಯರ್ಮಾಡಿದ ಸಿಲಾಕರ್ಮ್ಮ (ಎಳ. VIII. ಸೊರಪ. ೨೨-೧೦ ; ಸು. 800); ಸ್ವಯಂಬುದೇವರ ದೇಗುಲದ ಪೂಲಿಯ ಪಣ್ಡಿತರ ವಿದ್ಯಾಶಿಷ್ಯರ್ಕೊಪ್ಪಿನ ವಕ್ಖಾಣಿಜೀಯರ ಶಿಷ್ಯರಪ್ಪ ಕಾಳಗ್ನಾನಿ ವಕ್ಖಾಣಿಜೀಯರ್ಗ್ಗೆ ಧಾರಾಪೂರ್ವ್ವರಂ ವಿದ್ಯಾದಾನವಾಗೆ (ಸೌಇಇ. XI-1, ೪೯-೯; 1002); ಪಡುವಲು ಪೂಲಿಯ ದಶಕಂ ಒಡ[ಗಲು] ಪೆರ್ವ್ವಟ್ಟೆ (ಸೌಇಇ. XV. ೩೦-೯೯; 1142). ಹೂಲಿ$_2$: ೨. ಅಬ್ಬಗರ್ಭಸಹಿತಂ ಶ್ರೀಹೂಲಿಗೆಯ್ತಂದು ನಿನ್ದಾರಾಧ್ಯಂ ಕರುಣಾರಸಾರ್ದ್ರಹೃದಯಂ ರಕ್ಷಿಕ್ಕೆ ಸಾಸಿರ್ವ್ವರಂ (ಕಇ. I. ೨೬-೩ ; 1162) : ಆ ಸಿದ್ಧೇಶ್ವರಾಚಾರ್ಯ ಚಂದ್ರಭೂಷಣದೇವರು ಹೂಲಿಯ ಯಿಶ್ವರಭಟ್ಟರ ಕೈಯಿಂ ××× ಗೆ ಕೊಟ್ಟ . . . ವೊಂದು (ಕಳುಂ. ೩-೬೭ ; ?).

ಪೂಲಿ$_3$ (ನಾ). ಒಂದು ಬಗೆಯ ಚಿನ್ನದ ನಾಣ್ಯ : (ಕಿ). 'ಕಾಲ್ಪೋಲಿ ರೂಪಾಯಿ' ಹೋ. [ದೇ.॥ ತೆಲು. ಪೂಲಿ]

ಪೂಲಿಕುಂಟೆ, ಹೂಲಿಕುಂಟೆ (ನಾ). ಒಂದು ಊರಿನ ಹೆಸರು : ಆಗ್ನೇಯದ ಎಲಂಟೆಕೊಣ್ಟೆಯಿನ್ದೆ ಪೂಲಿಕುಣ್ಟೆಯಿನ್ದೆ ಪೆರ್ಬಳದೊಳಗಣ ಚಾದುಪೊಲದಿನ್ದೆ ಪಿರಿಯೊಟ್ಟೆಯ ಕೈವರದೊಳ್ ಒನ್ದು ಮಾನ್ಯಂ (ಎಳ. X (8), ಸಕ್ಕಪ. ೦೦೬-೭೦ ; 850). ಹೂಲಿಕುಂಟೆ : ಹೂಲಿಕುಂಟೆ ಚಂದನಾಯಕನ ಮಗ ತಳಪಾಱ ದೊಡ್ಡಗೆ ಕಾಚಪೊಡೆಯ ಆಗಳಿ ತಳವಾಱಿಕೆನೂ ಆಚಂದ್ರಾ(ಂ)ರ್ಕಸ್ತಾಇಯಾಗಿ ಕೊಟ ಶಾಸನ (ಸೌಇಇ. IX-11, ೬೦೯-೧; ?). [ಪೂಲಿ$_2$+ಕುಂಟೆ$_3$]

ಪೂಲಿಕೆಱೆ (ನಾ). ಒಂದು ಊರಿನ ಹೆಸರು : ಪೂಲಿಕೆಱೆ ಕಾದವರ್ ಕಣ್ಮೊರೈಡಿ (ಪ್ಯುಅಕಿ. ೦೯೨೯, ೬೦-೦೧೦; 799). [ಪೂಲಿ$_2$+ಕೆಱೆ]

ಪೂಲು (ನಾ). ಸಂಕ ; ಸೇತುವೆ ; ಕಟ್ಟೆ : ಹರಿಹರದ ಹತ್ತರ ಈ ಹೊಳೆಗೆ ದೊಡ್ಡ ಪೂಲು ಕಟ್ಟಿದ್ದಾರೆ (ಕಥಾಗೆ. ೧೨) ; ಅಪ್ಪಣ್ಣನು ಲೋಕಾಪುರದ ಹಳ್ಳದ ಪೂಲಿನ ಮೇಲೆ ಬರುತ್ತಿದ್ದನು (ಕಲಿಕು. ೦೩೬). [←ಪಾರ. ಹಿಂ. ಪುಲ್ ; ಮರಾ. ಪೂಲ]

ಪೂವ (ನಾ). ಒಂದು ಬಗೆಯ ಔಷಧೀಸಸ್ಯ : ರಜನಿ ಕೃತಾಂಜಲಿ ಕಳವಿಗೆ ಬಜೆ ಗಂಧಕ ಪೂವಮೆಂಬಿವಂ ತವೆ ತಿಲತೈಲಜಳಾನ್ವಿತಘೃತದಿಂದಂಬುಜಾಕ್ಷಿಯರ್ಗೆಱೆಯೆ ನಸ್ಯಮಂ ಮೊಲೆ ಬರ್ಕುಂ (ರೋಕೋಪ. ೯-೦೬೦). "ಸುಗಂಧಿ" (ರೋಕೋಪ. ಟೀಕು). [ದೇ.॥ ತಮಿ. ಮಲ. ಪೂವ=ಅರಗಿನ ಮರ]

ಪೂವಂಡು (ನಾ). ಹೂವಿನ ರಸ ; ಮಕರಂದ ; ಪುಷ್ಪರಸ : ಅಂಚೆ ಕೊಂಚೆ ಪೂವಂಡು ಗಿಳಿವಿಂಡು ರಂಜಿಸುವ ಕಾದಲರೆಲರ್ ಸವಿಮಾವು ಪೂವು . . . ಸೊಂಪು ಪೆಂಪಿಂದೀ ಪುರೋಪವನಮೆಸೆದಿರ್ಪುದು (ಕಪಾ. ೧೦-೨೦) ; ಬರೆ ಪೀರಿ ಪೂವಂಡನುರೆ ಸೊಕ್ಕಿ ರ್ಝೇಂಕರಿಪ ಮರಿದುಂಬಿಗಡಣದಿಂ . . . ಒಪ್ಪುವೊಂದುದ್ಯಾನಮಲ್ಲಿರ್ದುದು (ಶೇಷರಾ. ೯-೩೬). [ಪೂ$_2$+ಬಂಡು$_2$]

ಪೂವಕ್ಕಿ, ಹೂವಕ್ಕಿ (ನಾ). ೧. ದುಂಬಿ ; ಭ್ರಮರ : ಕುರುಳೊ ಪೂವಕ್ಕಿಗಳ ಬಳಗವೊ ಅರೆವೆಱೆಯೊ ಪಣೆಯೋ . . . ಪೇಳಲೇನೆಂದ (ಸವತ್ಯು. ೦೩-೯೬); ತೀಡೆ ತಂಗಾಳಿ ಪರಿದಾಡೆ ಪೂವಕ್ಕಿ ದನಿಮಾಡೆ ಪರಪುಟ್ಟ . . . ಅರ್ಯಮನುದಿಸಿದಂ (ಗುರುಣಾ. ೩-೦೯). ಹೂವಕ್ಕಿ : ೨. ಒಂದು ಬಗೆಯ ಹಕ್ಕಿ : ಹೂವಕ್ಕಿಯ ಇಂಚರ ಟೂವ್ವಿಟ್ಟುವೊ (ಅಪಿಕೇ. ೩೦-೬). 'ಅಲರ್ವಕ್ಕಿ' ಪರಾ. [ಪೂ$_2$+ಪಕ್ಕಿ]

ಪೂವಟ್ಟೆ (ನಾ). ಹೂವುಗಳನ್ನು ಪಟ್ಟಿಗಳಂತೆ ಜೋಡಿಸಿ ರಚಿಸಿದ ಚಿತ್ರ,—ಹಸೆ : ಕತ್ತುರಿಯ ಸಾರವಣೆ ಬಿಡುಮುತ್ತಿನ ಕಡೆ ಕಂಪು ವಿಡುವ ಕಪ್ಪುರವುಡಿಯಿಂದೊತ್ತಿದ ಲತೆ ಪೂವಟ್ಟೆಯಿನೊತ್ತಿರಿಸಿದ ಬಂಧವೆಸೆಯೆ ದೇವಿಯ ಗೃಹದೊಳ್ (ಲೀಲಾವ. ೦೦-೯). [ಪೂ$_2$+ಪಟ್ಟೆ$_2$]

ಪೂವಡಿ (ನಾ). ಹೂವಿನಂತೆ ಕೋಮಲವಾದ ಪಾದಗಳುಳ್ಳ ವ್ಯಕ್ತಿ : ಶಾಂಭವಲೋಕದ ಗಂಭೀರ ಪೂವಡಿ ಜಂಬೂದ್ವೀಪಕೆ ಕೆ ಪೋಪೆ (ಕೋಡಪ. ೦-೯೪). [ಪೂ$_2$+ಅಡಿ$_1$]

ಪೂವಡಿಗ, ಹುವ್ವಾಡಿಗ, ಹೂವಡಿಗ, ಹೂವಾಡಿಗ (ನಾ). ಹೂವುಗಳನ್ನು ಕಟ್ಟಿ ಮಾರುವವನು ; ಹೂವಿನ ವ್ಯಾಪಾರಿ : "ಪೂವಡಿಗಂ ತಾಂ ಪುಲ್ಲವಡಿಗನೆಂದು ತಿಳಿವುದು" (ಕಕುಪಿ. ೦೦೦) ; ಅಡಿಗ ಪ್ರತ್ಯಯಕ್ಕೆ—ದೇವಡಿಗಂ, ಪಾವಡಿಗಂ, ಪೂವಡಿಗಂ (ಕಪುಪ. ೨೦೩ ಸ್ತ್ರಯೋ) ; ಪೊಸ ಪೂವಡಿಗರ ಗರವಟಿಗರ ಕೊಲ್ಲಾಯ್ತರ ನುಡಿಗಾಱರ ಮಾಸ್ವಾರರ ಸಂದಣಿ ಸಲೆ ಸೊಗಯಿಸಿತಾಗ (ಜಯಕಾ. ೦೨-೦೯) ; ಈ ಧರ್ಮವತೀ ಪಟ್ಟಣವು ಸೋಮಸೂರ್ಯವೀಧಿಗಳಿಂದಲೂ . . . ಪೂವಡಿಗರ ಸಾಲಿನಿಂದಲೂ ಒಪ್ಪುತ್ತಿರುವುದು (ಶೈಪಸು. ೬). ಹುವ್ವಾಡಿಗ : "ಮಾಲಾಕಾರಃ, ಮಾಲಿಕಃ—೨ ಹುವ್ವಾಡಿಗನ ಹೆಸರುಗಳು" (ಸಿದ್ಧಾಂತಿ. ೩೦೯) ; ಹುವ್ವಾಡಿಗರು ಬಚ್ಚಣಿಯ ಕೆಲಸದವರು ಚಿಪ್ಪಿಗರು . . . ಮುಚ್ಚಿಗರು ಮೊದಲಾದ ನಾನಾಜಾತಿಯವರಿಗೆ ಬೇರ್ಬೇರೆ ಬೀದಿಗಳಂ ಹಂಚಿ (ಸೌಗಂಧಿ.

೦೩೫-೭). **ಹೂವಡಿಗ** : ಹಡಪಿಗರು ಚಾಮರಿಗರೆಡೆಯಾಡುವವರು ಹೂವಡಿಗರು ಸುಮಾರರರಸಾಳುಗಳು . . . ಇಡಿಕಿಱಿದು ಸೊಗಯಿಸಿದರು (ಸೌಂದಪು. ೬ ೫೯); ಹೂವು ಯಾವ ತೋಟದಲ್ಲಿ ಬೆಳೆಯಿತು ಎಂಬ ಚಿಂತೆಯನ್ನು ಹಚ್ಚಿಕೊಳ್ಳದೆ ರಸಿಕರು . . . ಮುಡಿದು ನಲಿಯಲಿ ಎಂಬ ಹೂವಡಿಗನ ನಿಲವು ನನ್ನದು (ಇಂಪಾಪ. VI. ಅಂಕ). **ಹೂವಾಡಿಗ** : "ಹೂವಾಡಿಗನೆನಲ್ಕೆ ಹೂ ಮಾರುವವನು" (ಕಸರ. ೧೧೫); ಹೂವಾಡಿಗನ ಪುತ್ರಿಯರಿಬ್ಬರು ಜಿನದೇವನ ಹೊಸ್ತಿಲ ಮೇಲೆ ಹೂವನರ್ಚಿಸಿದ ಫಲದಿ ಸ್ವರ್ಗದಿಂದ್ರಂಗೆ ದೇವಿಯರಾಗಿ ಪುಟ್ಟಿದರು (ದ್ವಾರಶಾ. ೦೦-೬೬೯).

[ಪೂ$_2$ + — ಅಡಿಗ$_2$]

ಪೂವಡಿಗವೆಣ್ (ನಾ). ಹೂವನ್ನು ಕಟ್ಟಿ ಮಾರಂವ ಹೆಣ್ಣು : ಹೂವಾಡಿಗಿತ್ತಿ : ಕುಸುಮದ ಪಸರದೊಳೊಪ್ಪಿದರಲ್ಲಿ ಪೂವಡಿಗವೆಣ್ಗಳದ ನೇವೇಳ್ವೆನು (ಸ್ವಮಿಶಾ. ೬-೧೬). [ಪೂವಡಿಗ + ಪೆಣ್]

ಪೂವಡಿಗಿತಿ, ಪೂವಾಡಗಿತ್ತಿ, ಹೂವಾಡಗಿತ್ತಿ (ನಾ). = ಪೂವಡಿಗವೆಣ್ : ಪೂವಡಿಗಿತಿ, ಪೂವಡಿಗಿತಿ, ಮಾಲೆವಡಿಗಿತಿ (ಶಬ್ದಾಮ. ೦೯೨ ಪ್ರಯೋ). **ಪೂವಾಡಗಿತ್ತಿ** : ವಾಸವರಾಯನ ಹಿರಿ ಹೂವು ಎಂದು ದೇಶವತಿರುಗಿದರು ಪೂವಾಡಗಿತ್ತೇರು (ಜಾನಿಗ. ೨೦-೦೦). **ಹೂವಾಡಗಿತ್ತಿ** : ಬಾಗಿಲಲ್ಲಿ ಹೂವಾಡಗಿತ್ತಿಯೊಬ್ಬಳು ಸೊಗಸಾದ ಮಲ್ಲಿಗೆಮಾಲೆಗಳನ್ನು ಹೆಣೆದುಕೊಂಡು ಬಂದಳು (ಕಮಸ. ೦೩೦).

[ಪೂವಡಿಗ + — ಇತಿ$_1$ (< — ಇತ್ತಿ)]

ಪೂವಡೆ (ನಾ). ಒಂದು ಬಗೆಯ ವಸ್ತ್ರ (?) : ಕುಡುಗುಂ ಚಿತ್ರಾವಳಿ ಪಳಿಯಡವಟ್ಟೆ ಸುವರ್ಣಚೇಲಮುಂ ತಿವಟಂ ಪೂವಡೆ ಕರ್ಮಂ ನೆರೆವಂ ಮಣಲೆಡೆಯಂ ರತ್ಯಂಗವಸನಮಂ ವಸನಾಂಗಂ (ಶಾಂತಿಪು. ೬-೦೦೦). [?]

ಪೂವಣಿಗ (ನಾ). = ಪೂವಡಿಗ : ಪೂವಣಿಗಂ ಪಱಿಗಂ (ಶಬ್ದಾಮ. ೪೦೬ ಪ್ರಯೋ). [ಪೂ$_2$ + — ವಣಿಗ$_2$ (< — ವಳಿಗ$_2$)]

ಪೂವರಸೆ (ನಾ). ಒಂದು ಬಗೆಯ ಕಣ್ಣಿನ ರೋಗ : ಅರಿಪಾಳಿ ಪಟೋಲಂ . . . ತಮಸ್ತಿಮಿರಂ ಪೂವರ[ಪಾಠಾಂ ಮರಿ]ಸೆ ನರೆಯೆಂಬ ಪಲವಕ್ಷಿರೋಗಮುಂ ಕಳೆಗುಮಂಜನಂ (ಅಶ್ವಶಾ. ೦೫-೦೫). [?]

ಪೂವಲಿ, ಪೂವಳಿ, ಹೂವಲಿ (ನಾ). ೧. ರಂಗವಲ್ಲಿಯಂತೆ ರಚಿಸಿದ ಹೂವುಗಳ ಅಲಂಕಾರ : ಗಂಧಾಂಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್ . . . ಚೆಲ್ವನಗ್ಗಳಿಸುತ್ತಿತ್ತುವು ತತ್ಪುರಕ್ಕೆ ಸುರರಾಜುವಾಸ ಸಾಮ್ರಾಜ್ಯಮಂ (ಆದಿಪು. ೭-೦೦೩); ಇದಱ ತಪನೀಯಸಾನುಗಳ್ ಜಿನಸವನ ಗಂಧೋದಕಂಗಳಿಂ ಪೂವಲಿಯಂ ಮುದದೆ ತಲೆಯೊಳ್ ಪೊತ್ತಂತಿರ್ಪುವು (ಶಾಂತಿಪು. ೧೦-೬೬); ಸೊಗಯಿಪ ಸುಧಾಬ್ಧಿಮೋಹದೊಳಿಂದು ಬಂದೆನ್ನ ಮಗನು ದಟ್ಟಡಿಯಿಡುವ ರಾಜಾಂಗಣವಿದಂದು . . . ಸಮ್ಮಾರ್ಜನೆಯ ಮಾಡಿ ಮಲ್ಲಿಗೆಯ ಪೂವಲಿಯ ಕೆದಱ ಗಗನವನಲಂಕರಿಸಿದಳೊಯೆನಿಪ್ಪಂತೆ . . . ಮೃಗಧರಂ ಕಣ್ಗೆಸೆದುದು (ಹನಕಾ. ೩-೬೦). ೨. ರಂಗವಲ್ಲಿ : "ಕಡೆಯುದೆಂದುಂ, ಪೂವಲಿಯೆಂದುಂ ರಂಗವಲಿ" (ಕಶಪಾ. ೬೩-೯೦೪). ೩. ಹೂವುಗಳ ಮಳೆ ; ಪುಷ್ಪವೃಷ್ಟಿ : ಸುರವೈರಿಯ ವಧದಿನದೊಳ್ ಧರೆಗುದಿರ್ದುವು ತಾರಕಂಗಳೆನೆ ಪೂವಲಿ ಭಾಸುರಮಾಯ್ತು ಮಲ್ಲರಂಗದೊಳ್ (ಜಗವಿ. ೬-೪೦); ಮಲಯಾದ್ರಿಗಂಧವಹನರ್ತಕನು ತಳಿರೆಂಬ ಕರಗಳಿಂ ಪೂವಲಿಯ ಸಲೆ ಸೂಸಿ (ಸ್ವಾಪಸಂ. ೦-೬೦); ಸೂಸಿ ಪೂವಲಿಯನಾಹ್ವಾನಗೈವಳಿದೊ ಈ ವಿಪಿನರಾಜೇಶ್ವರಿ (ಶ್ರೀರಾಮಾ. ೦೯೫-೨೬). **ಪೂವಳಿ** : ೧. ಸಾರಣೆಯ ಕಾರಣೆಯ ಗಂಧೋದಕದ ಚಳೆಯಗಳ ಸೌರಭದ ಪೂವಳಿಗಳಲಿ ಶೃಂಗಾರಿಸಿದ ಬೀದಿಗಳ ಸೊಬಗಿನ ಸಾರದಲಿ ಸಮನಿಸಿದುದತಿ ಸೌರಂಭ ಬನವಸೆಯ (ಸಂಗಂ. ೩-೪). ೩. ಇಳೆಯಂ ಪಾದಾಬ್ಜರಾಗಂ ಪಟರುಚಿ ಘುಸೃಣಾಂಭಶ್ಚಟಾಸಕ್ತಿಯಿಂ ಪೂವಳಿಯಿಂ ದಿಕ್ಚಕ್ರಮಂ . . . ಪೂರಿಸೆ ನೆರೆದುದಜಸ್ರಂ ಪುರಸ್ತ್ರೀಸಹಸ್ರಂ (ಜಗವಿ. ೦೬-೬೯). **ಹೂವಲಿ** : ೧. ಹೂವಲಿಯ ವೀಥಿಗಳ ನವರತ್ನಾವಳಿಯ ಸೂಸಕದ ಭದ್ರದ ಲೋವೆಗಳ ಲಂಬಳದಲೆಸೆದವು ಕೇರಿಕೇರಿಗಳು (ಕುಮ್ಮಾವಿ. ೧೦-೪೭); ಹೂವಲಿಯ ಪುರರಚನೆಗಳ ಸಂಭಾವನೆಯನೆಸಗುವುದು (ವಿಧಾಗ. ೧-೭-೯).

[ಪೂ$_2$ + ಬಲಿ$_3$]

ಪೂವಲಿಗೆದಱ್, ಪೂವಲಿಗೆದಱು (ಕ್ರಿ). ಹೂವುಗಳನ್ನು ಚೆಲ್ಲು; ಪುಷ್ಪಗಳನ್ನು ಹರಡು : ಪೂವಲಿಗೆದರ್ದ ಸಂಪಗೆಯೆಸಟ ಪ್ರಸರದಿಂ ಸುವರ್ಣದ್ವೀಪದಂತೆಯುಂ . . . ಅಪ್ಪ ಮಾರ್ಗಮಂ ನೋಡುತೆ (ಕಾದಂಪು. ೦೦೧೦); ನಲಿದು ನರ್ತಿಸುವ ಪೂವಲಿಗೆದರ್ದ . . . ಪೂಗಳ ಬೊಂಬೆಗಳ ಸಾಲ್ಗಳಿಂದೆ ಚೆಲ್ವಾದುದಾ ಬನಂ (ಸಂಪು. ೪೫-೨೬). **ಪೂವಲಿಗೆದಱು** : ಪೂವಲಿಗೆದಱಿದ ಪೊಂಗೇದಗೆಯ ಗಱಿಯ ಕಿಱುಮುಳ್ಗೆ ಬಱಿದೆ ಬೈಗುಳಂ ಮಾಡಿಯುಂ . . . ಎಂತಾನುಂ ತತ್ಕಾಂತೆ ಒಂದೆರಡಡಿಯನಿಡುವಲ್ಲಿ (ಕಾದಂಶು. ೩೬); ಅವಱಿಡೆಯೆಡೆಯೊಳ್ ಪೂವಲಿಗೆದಱಿದಂದದಿಂ ಪ್ರಕೀರ್ಣಕಂಗಳಿರ್ಪುವು (ವರ್ಧಪು. ೦೦-೩ ಪ); ಕತ್ತುರಿಯ ಕೆಸಱಿನಲಿ ಸಾರಿಸಿ . . . ಸುರಕುಜಕುಸುಮದಲಿ ಪೂವಲಿಗೆದಱಿ . . . ಸೇವೆಯ ಮಾಳ್ಪರಮರಿಯರು (ಸಾಳ್ವಭಾ. ೩೨-೩೩). [ಪೂವಲಿ + ಕೆದಱ್$_1$]

ಪೂವಲಿಗೆದಱು 'ಪೂವಲಿಗೆದಱ್' ನೋ.

ಪೂವಲಿಗೆಯ್ (ಕ್ರಿ). = ಪೂವಲಿಗೆದಱ್ : ಪೂವಲಿಗೆಯ್ದ ಪೂವಿನ ತೊಡಂದೆಯ ನಿಬ್ಬರಮಪ್ಪ ಸೋಂಕಿನೊಳ್ ನೋವುವೆನಿಪ್ಪ ಮೆಲ್ಲಡಿಯ ನೆಂಶಿಡುವಂ ಮಹಿಪಂ ತಪೋವನಸ್ರಾವವಿಕೀರ್ಣಮಪ್ಪೆಡೆಯೊಳ್ (ಮಲ್ಲಿಪು. ೧೦-೩೫); ಸ್ತನಕಲಶಂ ಕದಕ್ಕದಿಸೆ ಸೋರ್ಮುಡಿ ಪೂವಲಿಗೆಯ್ಯೆ . . . ತಾಂ ತಳರ್ದತ್ತು ವಿಲಾಸಿನೀಜನಂ (ಕುಸುಮಾ. ೩-೯೯).

[ಪೂವಲಿ + ಕೆಯ್$_1$]

ಪೂವಲಿಗೊಡು (ಕ್ರಿ). = ಪೂವಲಿಗೆದಱ್ : ಮಣಿಮಯಕಳಶವೆತ್ತದ ವಿಷಣಿ ನಿರ್ಜನದೆಡೆ ಕುರೂಪಾದ ಲಲನೆ ಪೂವಲಿಗೊಡದ ಮಾರ್ಗಸ್ಥಳದ ಕೋವಿದಮನುಜರಿಲ್ಲೆನೆ ಹೊಳಲ ಮಹದೈಶ್ವರ್ಯವನು ವರ್ಣಿಸುವರಾರು (ಜೀವಂಸ. ೨-೨೩). [ಪೂವಲಿ + ಕೊಡು$_1$]

ಪೂವಲ್ಲಿ (ನಾ). ಹೂವು ಬಿಡುವ ಬಳ್ಳಿ; ಪುಷ್ಪಲತೆ : ಪೂವಲ್ಲಿ ಹಾಳಾಗಿ ಮಾವುಫಲಗಳು ಪೋಗಿ ಗೋವುಗಳೆಲ್ಲವು ಪಾಲು ಕೊಡದಾಗ ಜಗದೊಳಗೆ ಸಾವು ಪೆಚ್ಚುವುದು (ಕಾಲಸಂ. ೬೬-೧೦೦); ಪಿರಿದೆನಿಸುವ ಕಲ್ಪವೃಕ್ಷ ನಾನಾಬಗೆ ಪರಿಮಳಪೂವಲ್ಲಿಗಳು ವರದಿವ್ಯಸರಸಿಯ ಬಳಸಿದುದ್ಯಾನದೆ ಮೆಱೆದುವು (ಕಂಪಂ. ೨೩-೩೩). [ಪೂ$_2$ + ವಲ್ಲಿ$_2$]

ಪೂವಸರ (ನಾ). ಹೂವು ಮಾರುವ ಅಂಗಡಿ : ಪ್ರೀತಿ ಮಿಗೆ ಮಾಲೆ ಗಾರ್ತಿಯರುಸಿರುತಿರ್ಪ ಸವಿವಾತೆನಲ್ ಮಧುಪರವಮೊಡಗೂಡಿ ಕಂಪುಗಳ ಜಾತಿಯಂ ಬೇಱೆಬೇಱೈದಿಸುತೆ ಸುಳಿಗಾಳಿ ಪೂವಸರದೊಳ್ ಮೆಱೆದುದು (ಸಂಪು. ೦೦-೩); ಮದಹಸ್ತಿಗಮನೆ ಮತ್ತೋರ್ವಳಾ ಪೂವಸರಸವನಕ್ಕೆ ಮುಂಗಡೆ(ಯೊಳಿಟ್ಟು) ಸಾಣೆಯನು ಮೃಗಮದಕುಂಕುಮಂಗಳಂ ಧರಿಸಿ ಪೋಷಣೆಗೆಯ್ಯೆ (ವಂಕಾರಾ. ೦-೪-೨೬). [ಪೂ$_2$ + ಪಸರ]

ಪೂವಸೆ (ನಾ). ಹೂವಿನ ಹಾಸುಗೆ; ಪುಷ್ಪಶಯ್ಯೆ : ಕೋಮಲ ವೀಣಾರುತಿಗೇಳ್ವ ಪೂವಸೆಗಳೊಳ್ ಪಟ್ಟಿರ್ಪ ಸೌಖ್ಯಾಳಿ ದೋಹಲಕೇಳೀ ಮುದಮಂ ಸಮಂತು ತಳೆದಳ್ ತತ್ಕಾಂತೆಯಿಂತಾವಗು (ಕುಸುಮಾ. ೦೨-೨೯); ಪೊಸಸುಸಿಲೊಳ್ ನೃಪಾತ್ಮಜೆಯೊಳಿಂತು ವರಂ ಪಡೆಯಲ್ಕೆ ಕೂರ್ತು ಪೂವಸೆಗೆಸೆವಾಕೆಯಂ ಬರಿಪುದುಂ (ರಸರ. ೦-೫೯); ಕೂರ್ಪಳ ಕೈವಿಡಿದೆಯ್ದಿ ಪಲ್ಲವಪ್ರಸರಸಮೇತಮಾದ ಮೆಳೆಯೊಳ್ ಪೊಸ ಪೂವಸೆಯಲ್ಲಿ ಕೂಡಿದಂ (ರಾಜಶೇ. ೫-೦೦೫). [ಪೂ$_2$ + ಪಸೆ$_2$]

ಪೂವಳ, ಹೂವಳ (ನಾ). = ಪೂವಾಡಿಗ : "ಅಲೆರ್ವಡಿಗನೆನಲ್

ಪುಲ್ಲವಡಕಾಱ ಪೂವಳನೆಂದು ಪೂವಡಿಗನೆಂದೆನಿಕ್ಕುಂ" (ಕಬ್ಬಿಕ್ಕ. ೩೯); ಒಂದುದಿವಸಂ ಪೂವಳಂ ಶೈಲಜಾತೆಗಾ ಮಾಲೆಯಂ ಕೊಡುತಿರಲ್ಕೆ (ಶಾಸಿ. ೪೫-೩). **ಹೂವಳ :** ಮಡದ್ದಿ ಮುಡಿದಿರುವ ಹೂ ಯುವಕಂಗೆ ಚೆಂದ ಗುಡಿಯೊಳಗೆ ಕೊಡುವ ಹೂ ದೈವಭಕ್ತಗೆ ಚೆಂದ ಬಿಡಿಗಾಸು ಹೂವಳಗೆ (ಮಂಕುಳ. ೩೦೦). [ಪೂ$_2$ + — ವಳ]

ಪೂವಳಿ 'ಪೂವಲಿ' ನೋ.

ಪೂವಳೆ 'ಪೂವಟ^3' ನೋ.

ಪೂವಟ^3, ಪೂಮಳೆ, ಪೂಮಟ^3, ಪೂವಳೆ, ಹೂಮಳೆ (ನಾ). ಮಳೆಯಂತೆ ಹೂವು ಸುರಿಯುವಿಕೆ; ಹೂವಿನ ಮಳೆ; ಪುಷ್ಪವೃಷ್ಟಿ : 'ಪೂವಟ^{3}ಗಱ^3' ಪರಾ. **ಪೂಮಳೆ :** ದುಂದುಭಿಗಳೆಸೆಯ ಪೂಮಳೆ ಸುರಿಯೆ (ಸಿದ್ಧರಾ. ೦-೩೬); ಅಬುಜಾಸನ ಸುರೇಂದ್ರಾದಿಗಳು ಜಯಜಯ ನಿನದದಲಿ ಸೂಸಿದರು ಸುಮ್ಮಾನದಲಿ ಪೂಮಳೆಯ (ಕೊರಾ. ೦-೦೦-೨೩); ಚಿಣ್ಣರಂಗದ ಮೇಲೆ ಮೆಚ್ಚಿ ಪೂಮಳೆಗಳು ಕಱ^{3}ದರಮರರ್ (ಸ್ವಪಾ. ೨೦-೧೨). **ಪೂಮಟ^3 :** ಪೂಮಟ^{3}ಯ ಕಂಪನಿತಿಂಪು ಪೊದಟ್ಟು ಬಂದು ಬಂಧುರಹಿಮಮಂದಗಂಧವಹಮೆಟ್ಟಱಿಸಿತ್ತಮೃತಾಂಶುವಕ್ತ್ರೆಯಂ (ಅಪಿಪು. ೩-೨೨); ನಭದೊಳ್ ಪೂಮಟ^3 ಭೂಮಿಯೊಳ್ ಮರುತಕಂ ದಿಗ್ಭಿತ್ತಿಯೊಳ್ ದೇವದುಂದುಭಿನಾದಂ . . . ಒಪ್ಪುತಿರೆ ಬಂದಂ ಲೋಕನಾಥಂ (ಶಾಂತಿಪು. ೮-೫೦); ಪೂಮಟ^{3}ಯಂತಲ್ಲೊಕ್ಕುವು ಪೂಮರಗಳ ಪೂಗಳ್ (ಸಂಶಾಸಾ. ೦೦-೦೩). **ಪೂವಳೆ :** ಸರಿದುದು ಪುಸಿವೇಷದ ತೆರೆ ಸುರಿದುದು ಕಯ್ನಾರ ತೆಱದ ಪೂವಳೆ (ಗಿರಿಕ. ೯-೧೨೦); ಸುರಿದುದು ಪೂವಳೆ ಕಾಮಗೆ ನೇತ್ರದೆ ಸುರಿದುದಾನಂದಾಶ್ರು ರತಿಗೆ (ಮೋಹತ. ೦೨-೬೯); ದೇವಗಂಧರ್ವಸಂದೋಹ ಚದುರಿಂದ ಪೂವಳೆಯ ಕರೆದು ಪಾಡಿದರಾ ಮರುತ್ಸುತನ ಕೀರ್ತಿಗಳನು (ವಂಕಾರಾ. ೩-೦-೨೯). **ಹೂಮಳೆ :** ಹೂಮಳೆಗಳೆಱಗಿ ಸುರಿದವಾತನ ಮೇಲೆ (ಇಹರ. ಪೇ. ೪೫-೦); ಎಕ್ಕತುಳದಲಿ ಬಂದನಮರರ ಹೆಕ್ಕಳದ ಹೂ ಮಳೆಯ ಹೊಯ್ಲಿನ ಪೂರದಲಿ ಹನುಮ (ಕೊರಾ. ೩-೯-೬); ದೇವತೆಗಳು ಹೂಮಳೆ ಕರೆದರು (ಪ್ರಾಸಿ. ೧೩). [ಪೂ$_2$ + ಮಟ^3]

ಪೂವಟ^{3}ಗಱ^3, ಪೂಮಳೆಗಱ^3, ಹೂಮಳೆಗಱ^3 (ಕ್ರಿ). ಮಳೆಯಂತೆ ಹೂವುಗಳನ್ನು ಸುರಿಸು ; ಪುಷ್ಪವೃಷ್ಟಿ ಮಾಡು : ಅಱಿವುದುಮ ಘಾತಿಗಳ್ ಪೂವಟ^{3}ಗಱ^{3}ದುದು ನಭದಿಂ (ಶಾಂತಿಪು. ೦೨-೩೩); ಸುರರ್ ಪೂವಟ^{3}ಗಱ^{3}ದರ್ (ಶಣ್ಮಾಸು. ೦೦೩ ಪ್ರಯೋ). **ಪೂಮಳೆಗಱ^3 :** ಸುರರು ಪೂಮಳೆಗಱ^{3}ದರು (ಕೊರಾ. ೯-೦೨-೩೩); ದೇವದುಂದುಭಿ ಮೊಳಗೆ . . . ಪೂಮಳೆಗಱ^{3}ಯೆ (ಶ್ರೀಶಾಪ. ೩-೧೦). **ಹೂಮಳೆಗಱ^3 :** ದೇವದುಂದುಭಿ ವೃಂದವುಲಿಯಲು ತೀವಿ ಹೂಮಳೆಗಱ^{3}ಯೆ . . . ಪ್ರಮಥರುತ್ಸವಿಸೆ (ವಿಸಪು. ೦೬ ೭೬); ನಾಕಜನಿವಹ ಹೂಮಳೆಗಱ^{3}ದು ಹರುಷಿಸಿ ಪವನಜನ ತಾಯ್ ಭೀಮಸೇನನುಯೆಂದು ಹೆಸರಿಡಲು (ಸಂಪಕ. ೦೩-೩೬); ಅವರಿರ್ವರಿಗೆ ಹೆಱ^{3}ನೊಸಲಮರಾಂಗನೆಯರು ಹೂಮಳೆಗಱ^{3}ದರು ರಣ ರಂಗದೊಳಗೆ (ಮೋಹತ. ೩೯-೦೯). [ಪೂವಟ^3 + ಕಱ$^3_1$]

ಪೂವಾಡಗಿತ್ತಿ 'ಪೂವಡಿಗಿತಿ' ನೋ.

ಪೂವಾಸು$_1$ (ಕ್ರಿ). ಹೂವಿನ ಹಾಸುಗೆಯನ್ನು ರಚಿಸು : ಚಂದನದೆಳ ದಳಿರ್ಗಳಂ ಪಾಸಿ ಮಲ್ಲಿಗೆಯಲರ್ಗಳಂ ಪೂವಾಸಿ (ಸಂಪಕಾ. ೩-೬ ಪ).

[ಪೂ$_2$ + ಪಾಸು$_1$]

ಪೂವಾಸು$_2$ (ನಾ). = ಪೂವಸೆ : ಪೂವಾಸಿಗೆ ತಿಱಿವರೆಂಬ ಭಯದಿಂ ಮುಟುಂಗಿದ ಚೆನ್ನೆಯ್ದಿಲ್ಗಳಂತಿರೆ ನಿರಂತರಾಶ್ರುಪಾತದಿಂ ಕೆಂಪುದಳೆದ ಕಣ್ಮಲರನೊಳಕೆಯ್ದುಪವನದ ತಿಳಿಗೊಳಂಗಳೊಳು ಪುಗುವಳ್ (ಕಾದಂಕಾ. ೩೩೯); ತರಳೆ ನಿನ್ನಯ ವಿರಹದಿಂದ ಪೂವಾಸಿನೊಳು ಪೊರಳಿ ಮತ್ತಲ್ಲಿ ಸೈರಿಸಲಾಱದೆರ್ದು ಕುಳ್ಳಿರಲ್ (ಭಕ್ತಾಸ. ೨-೨೯); ಪಾಸಿದ ಪೂವಾಸಿನೊಳು ಸ್ಮರಾಸಿಯೆಂದದಿ ಮಲಗಿಹಳೀ ಮಡದಿ (ಶಾಕುಂತ. ೩೩ ೮೩೮).

[ಪೂ$_2$+ಪಾಸು$_2$]

ಪೂವಿನಪಿಪ್ಪರಗೆ (ನಾ). ಒಂದು ಊರಿನ ಹೆಸರು ; ಪ್ರ ಈಗಿನ ವಿಜಾಪುರಜಿಲ್ಲೆಯ ಬಾಗೆವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗೆ ಎಂಬ ಊರು : ಪೂವಿನ ಪಿಪ್ಪರಗೆ[ಯ] ನಾಲ್ಕು ದೆಸೆಯ ಪೊಲ ಮೇರೆಯಂ [ನ]ಡುಸರಿಯಾಗಿ ನಡದು[ಂ] ಕೊಟ್ಟರ್ (ಸಿಇಇ. XI-1, ೯-೨೩; 862). [<ಪೂ$_2$+ಪಿಪ್ಪರಗೆ]

ಪೂವಿನಪುಲ್ಲಿಮಂಗಲ (ನಾ). ಒಂದು ಊರಿನ ಹೆಸರು : ಬೆಂಪೂರು ತೊವಗೂರು ಪೂವಿನಪುಲ್ಲಿಮಙ್ಗಲ . . . ಪರಪೂರು ಕೂಡಲೆ ಇನಿತು ಮಮ್ ಪೊಲಮೇರೆ ಸಹಿತಂ ಇತ್ತನ್ ಎಱ^{3}ಯಪಂ ಶೇವುಚರನ್ ನಾಗ [ತ್ತ]ರಙ್ಗ (ಎಕ. IX. ಸಂಗಳೂ. ೬೩-೬ ; ಸು. 890).

[<ಪೂ$_2$+<ಪುಲ್ಲಮಂಗಲ]

ಪೂವಿಲ್, ಪೂವಿಲು, ಪೂವಿಲ್ಲು (ನಾ). ಹೂವಿನ ಧನುಸ್ಸು ; ಮನ್ಮಥನ ಬಿಲ್ಲು : 'ಪೂವಿಲ್ಲ' ಪರಾ. **ಪೂವಿಲು :** 'ಪೂವಿಲುಗಾಱ' ಪರಾ. **ಪೂವಿಲ್ಲು :** ಸ್ಮರನಿಗೆ ಪೂವಿಲ್ಲನು ಕೊಡುವಂದದಿ ವರಗುಣ ಮಾಲೆಯು ತನ್ನ ಹರಣದೊಡೆಯನ ಕೈಯಲಿ ಪೂಮಾಲೆಯಾದರದಿಂದಿತ್ತಳು (ಜೀವಂಸಾಂ. ೦೬-೨೯); ಕಾವನ ಪೂವಿಲ್ಲ ಗೊಂಡೆಯಗಳನೊರ್ವ ಭಾವಕಿ ವಂಚಿಸಿ ತಂದು ಪೂವಿನಂಗಡಿಯೊಳಿರಿಸಿ ಮಾಱುವೊಲು ಪೊಸ ಸೇವಂತಿಯರಲ ಮಾಱುವಳು (ಅಂತಸ. ೩-೬೯); ಪೂವಿಲ್ಲನೇರಿಸಿ ಕಾವನು ಕಣೆಗೊಂಡು ಟಂಕಾರ ಮಾಡಿದನಲ್ಲ (ಇಂಪಾಪ. ೦೯೯-೯). [ಪೂ$_2$+ಬಿಲ್$_2$]

ಪೂವಿಲು 'ಪೂವಿಲ್' ನೋ.

ಪೂವಿಲುಗಾಱ (ನಾ). ಹೂವಿನ ಬಿಲ್ಲಿನಲ್ಲಿ ಹೂಬಾಣಗಳನ್ನು ಹೂಡುವ ಬಿಲ್ಲುಗಾರ ; ಮನ್ಮಥ ; ಪುಷ್ಪಬಾಣ : ನಾಡಿಮೂಲವ ತಿಳಿದು ಗೆಲವಿತ್ತು ಸುಸಿಲಿಂಪುಗಲಿಸಿ ಕಾಣಿಪರು ಪೂವಿಲುಗಾಱನಾಗ ಮಾರ್ಥವನು (ಶ್ರೀಕವೇ. ೨-೦೦೩). [ಪೂವಿಲು (<ಪೂವಿಲ್) + —ಕಾಱ]

ಪೂವಿಲ್ಲ (ನಾ). ಕಾಮ ; ಮನ್ಮಥ : "ಅಲರಂಬಂ ನನೆವಿಲ್ಲ ಬಲ್ಲಹ ನೆನಲ್ ಪೂವಿಲ್ಲ ಕಾವಂ" (ಕರ್ಣಾನಿ. ೮); ಪುಣ್ಣಿಲ್ಲದೆಯುಂ ಪೂವಿಲ್ಲನ ಶರಹತಿಯಿಂ ನೋವನೆ ತಳೆದಪುದಿದೆನ್ನ ಹೃದಯಂ (ಶಾಕ್ಷ್ಯಪು. ೦೦-೬೦); ಪೂವಿಲ್ಲನ ಚಾಪಸಂಜನಿತಮೋಹನನಾದಮೊ ಸೋಮರಾಜಭೂವಲ್ಲಭ ನಿಂಪುವೆತ್ತ ವಚನಾಮೃತಮೋ ವಿಬುಧಾನುರಾಗಮೋ (ಉಪ್ಪಟಿ. ೦-೩೩); ಹೊಲ್ಲೆಹದೊಂದು ಪೆಣ್ಮೇನು ಕಂಡೆಱಗಿ ಪೂವಿಲ್ಲನ ನೆಱ^3 ನುಂಗಿತಾಗ (ಮೋಹತ. ೧೨-೬). [ಪೂವಿಲ್+—ಅ$_7$]

ಪೂವಿಲ್ಲು 'ಪೂವಿಲ್' ನೋ.

ಪೂವು 'ಪೂ$_2$' ನೋ.

ಪೂವುಟ್ಟಿ, ಹೂಬುಟ್ಟಿ (ನಾ). ಹೂವಿನ ಕರಂಡ,—ಬುಟ್ಟಿ : ರಾಣಿ ಕೋದಿದ್ದ ಹಾರವನ್ನು . . . ಅದೇ ಪೂವುಟ್ಟಿಯಲ್ಲಿರಿಸಿದಳು (ಸಪಕಿ. ೨೯೨). **ಹೂಬುಟ್ಟಿ :** ದೇವರ ಪೂಜೆಗೆಂದು ಅವರು ಹೂಬುಟ್ಟಿಯ ತುಂಬ ಸಂಪಿಗೆಹೂವುಗಳನ್ನು ತಂದಿದ್ದಾರೆ (ಕೂರಿ). [ಪೂ$_2$+ಪುಟ್ಟಿ$_1$]

ಪೂವುಡಿ (ನಾ). ಹೂವಿನ ಧೂಳು,—ಪರಾಗ : ಅಲರ್ಗುಡಿ ಚಾಮರಂ ನೆಗೆವ ಪೂವುಡಿ ಸೀಗುರಿ ತುಂಬಿಯಿಂಚರಂ ಸುಲಲಿತಗಾನಂ . . . ಆಗೆ ಬನಮೋಲಗಶಾಲೆವೊಲಾಯ್ತು ಕಾವನಾ (ಪ್ರಕಪಿ. ೯-೩೫); ತನಿಯುಸಿರ ಪೂವುಡಿಯ ಪೊಸಸೋನೆಯೆನಿತು ? (ಕಾಲೂರ. ೦೨೦-೨೫೦); "ಉದಿರ್ದ ಪೂವುಡಿ ಬನರಾಣಿಯ ಮೊಗವಾಡದ ಪಳಿಕಿನ ಪೊಸಂತಿಲೊಳ್ ಬರೆದ ರಂಗವಲ್ಲಿ"ಯಂತಿದ್ದಿತು (ಹಸುಹೊ. ೨೩೯). [ಪೂ$_2$ + ಪುಡಿ]

ಪೂವೃಷ್ಟಿ (ನಾ). = ಪೂವಟ^3 : ನಿಟ್ಟಿಸಿ ಬೀಗಾಮ ಗಜವದನರಿಗೆ ಪೂವೃಷ್ಟಿಯ ಸುರರು ಚೆಲ್ಲಿದರು (ಮೋಹತ ೩೯-೬೯). [ಪೂ$_2$ + ವೃಷ್ಟಿ]

ಪೂವೆಂಚೆ (ನಾ). ತಾವರೆಯಿಂದ ತುಂಬಿದ ಸರೋವರ; ಹೂಗೊಳ : ಪೂವೆಂಚೆಯಿಂ ಪೊಱಮಟ್ಟಿಂಚರಮನುಡುಗದೆ ಪರಿದು ಮುತ್ತುವ ಮತ್ತಮರುಳಂಗಳುಮಂ (ಲೀಲಾವ. ೫-೭೨ ಪ). [ಪೂ$_2$ + ಬೆಂಚೆ]

ಪೂವೆತ್ತು, ಹೂವೆತ್ತು (ಕ್ರಿ). ೧. ಹೂವಿನ ಮಾಲೆಯನ್ನು ಮೇಲೆತ್ತು,–ಎತ್ತಿ ಹಿಡಿ : ಚಲ್ಲಮಾಡಿ ಪೂವೆತ್ತುವ ಮಾಲೆಗಾರ್ತಿಯರ ನಂದರಿಕೇಸರಿ ನಿಂದು ನೋಡಿದಂ (ಸಂಶಾ. ೯-೮೦). ಹೂವೆತ್ತು : ೨. ಹೂವನ್ನು ಕೀಳು,– ತಿರಿ : ಬೆಳಗ್ಗೆ ಪೂಜೆಗೆ ಹೂವೆತ್ತುವುದು ಅವರ ಪ್ರತಿದಿನದ ಕಾರ್ಯಕ್ರಮ (ಕೂಡಿ). [ಪೂ$_2$ + ಎತ್ತು$_1$]

ಪೂವೊರ್ಕುಟ (ನಾ). ಹೊಕ್ಕುಳಲ್ಲಿ ತಾವರೆಯುಳ್ಳವನು : ಪದ್ಮನಾಭ : ವಿಷ್ಣು : ಬೊಮ್ಮಂ ಪೂವೊರ್ಕುಟನ ಗಂಗಾವರ್ತಸನಾಭಿಯೊಳ್ ನಾಭಿಯೊಳ್ ಪುಟ್ಟಿಯುಂ ಸತ್ಯಲೋಕಕ್ಕೊಡೆಯನಾದಂ (ರಾಮಾಶ್ವ. ೦೪೦-೨). [ಪೂ$_2$ + ಪೊರ್ಕುಟ್ (< ಪೊಕ್ಕುಟ್) + – ಅ$_7$]

ಪೂಷ (ನಾ). ೧. ಸೂರ್ಯ : "ರವಿ ಮಾರ್ತಂಡಂ ಪತಂಗಂ ತಪಿ ತಪನನಿನಂ ಭಾನು ಪೂಷಂ ... ಆದಿತ್ಯನಕ್ಕುಂ" (ಪಸ್ತುಕೋ. ೦೦-೬೪); ಅಘತಿಮಿರಪೂಷನತಿವಿಗತದೋಷ . . . ಪಂಪಾವಿರೂಪಾಕ್ಷನೆಮಗೀಗೆ ಭಕ್ತಿಜ್ಞಾನಸಂಪದವನು (ಹಕಣಾ. ೦-೯); ಹರಿಯ ಶಿರವರಿದು ಸಿರಿ ಮುಂದಲೆಯ ತಱಿದುಯಾ ವರುಣನಂ ಮೆಟ್ಟಿ ಪೂಷನ ಪಲ್ಗಳಂ ಕುಟ್ಟಿ . . . ವೀರನಿಂ ಭಂಗಂಬಟ್ಟರೆನೆ ಜಿನವಾದಿ ಬಂದು ನುಡಿದಂ (ಸತಿಂ. ೩-೦೦೯). ೨. ವಿಶ್ವರಕ್ಷಕ; ಜಗತ್ಪಾಲಕ : ಎಲೈ ಸವಿತೃವೇ . . . ನಿನ್ನ ಸಂಚಾರಕಾರ್ಯಗಳಿಂದ ನೀನೇ ಪೂಷನೆನ್ನಿಸಿಕೊಳ್ಳುತ್ತೀಯೆ (ಋಕ್ಸಾರ. ೦೭೩). ೩. ಒಬ್ಬ ವೈದಿಕದೇವತೆ : ಜಗನ್ನಿರ್ಮಾತ್ರಿಯಾದ ರಾತ್ರಿಗೆ ಪತಿಯಾದ ಪೂಷನನ್ನು ನಾನು ಸ್ತುತಿಸುತ್ತೇನೆ. ಸಹೋದರಿಯಾದ ಉಷಸ್ಸಿಗೆ ಉಪಪತಿಯಾದ ಪೂಷನು ನಮ್ಮ ಸ್ತುತಿಗಳನ್ನು ಕೇಳಲಿ (ಋಕ್ಸಾರ. ೦೭೬). ೪. ಹನ್ನೆರಡು ಜನ ಆದಿತ್ಯರಲ್ಲಿ ಒಬ್ಬ : ಧಾತಾ ಅರ್ಯಮಾ ಮಿತ್ರ ವರುಣ ಇಂದ್ರ ವಿವಸ್ವಾನ್ ಪರ್ಜನ್ಯ ಪೂಷ ಅಂಶುಮಾನ್ ಗಭಸ್ತಿಮಾನ್ ತ್ವಷ್ಟೃ ವಿಷ್ಣುಗಳೆಂಬವರೇ ಕ್ರಮದಿಂ ದ್ವಾದಶಾದಿತ್ಯರು (ವಿಷ್ಣ. ೨೬೬). ೫. ಭೂಮಿ. [ಸಂ. ಪೂಷನ್]

ಪೂಷಕ (ನಾ). ಸೂರ್ಯ : ಪೂಷಕ ನಿಶೇಶಾಕ್ಷಿಯಾಶಾಂತ ಭಾಸುಯಶ ಶೇಷ . . . ನಂಜೇಶ ಜಯತು (ಗುರುಪಾ. ೦೩-೦). [ಸಂ.]

ಪೂಷಣ (ನಾ). ಸೂರ್ಯ : "ಸೂರಃ, ಸೂರ್ಯಃ . . . ಅರುಣಃ, ಪೂಷಣಃ, ದ್ಯುಮಣಿಃ . . . ರವಿಃ–೩೭ ಸೂರ್ಯನ ಹೆಸರುಗಳು" (ಸಿದ್ಧಾಂತಿ. ೩೨). [ಸಂ.]

ಪೂಷೆ (ನಾ). ೧. ಮನುಷ್ಯಶರೀರದಲ್ಲಿರುವ ಒಂದು ನಾಡಿ : ತರಳ ತಿಳಿ ನಾಡಿಗಳ ಚೌದಶಗಳಿಗೆ ನಾಮಗಳಾಯುರು ಸುಷುಮ್ನೆಯು ಪಿಂಗಳೆಯು ಯಿಡಾ ಸರಸ್ವತಿ ಪೂಷೆ ವಾರುಣಿ ಮೆರೆವ ಹಸ್ತಿನಿ ಜಿಹ್ಮೆಯಾ ಅಶ್ವಿನಿ ಅಲಂಬುಸೆಯು . . . ಗಂಧವಾರಿಯು ವರಸೆದಪ್ಪದೆಯಿರುವವು (ಗಗತಾ. ೯-೦೦). ೨. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು : ಅಮೃತಾ ಮಾನದಾ ಪೂಷಾ ತುಷ್ಟಿ ಪುಷ್ಟಿ ರತಿ ಧೃತಿ ಶಶಿನಿ ಚಂದ್ರಿಕಾ ಕಾಂತಿ ಜ್ಯೋತ್ಸ್ನಾ ಶ್ರೀ ಅಂಗದಾ ಪೂರ್ಣ ಪೂರ್ಣಾಮೃತಾ ಕಾಮದಾಯಿನಿಯೆಂಬ ಷೋಡಶಕಲಾಭರಿತನಾಗಿ (ವಿಷ್ಣ. ೨೦೯). [ಸಂ. ಪೂಷಾ]

ಪೂಷ್ಣ (ನಾ). = ಪೂಷಣ : "ನಿಶಿವೈರಿ ಮಿಹಿರಂ ವಿರೋಚನಂ ಭಾಸ್ಕರಂ . . . ಸಹಸ್ರಾಂಶು ಪೂಷ್ಣನೆನೆ ಸೂರ್ಯನಕ್ಕುಂ" (ಮುಂಬಣಾ. ೦೦-೨); ಕೃಷ್ಣಂಗೀ ಯಾತ್ರಾಟನೆ ಪೂಷ್ಣಂಗಂ ಕೃಷ್ಣವರ್ತ್ಮಕೃಷ್ಣರ್ಗಂ ಮೇಣುಷ್ಣಾರ್ಜನೆಯೊಳ್ಕೃತ್ನಂ ವಿಷ್ಣುತ್ವಾರ್ಜನೆಯ ಯತ್ನವೆಂಗುಂ ವಿಬುಧರ್ (ಸ್ತುಕೂಮು. ೩-೦೬೬). [< ಸಂ. ಪೂಷಣ]

ಪೂಸ, ಹೂಸ (ನಾ). (ಆಲಂ) ಒಳಗೊಂದು, ಹೊರಗೊಂದು ನಡವಳಿಕೆ ಇರುವ ವ್ಯಕ್ತಿ; ಡಂಭಾಚಾರಿ : ಭಕ್ತಿಢಾಳಕರ ದರ್ಶನ ಚೋರಕರ ವಾಚಾರಚನೆಗರ ಬಱಿಮಾತಿನ ಪೂಸರ ಈಶ್ವರಭಕ್ತರ ಪರಮೇಶ್ವರನ ರೂಪು ಎನೆಲಾಱೆ (ಬಾಸೊಮ್ಮ. ಕ. ೩೬೦-೨೭); ಹಂದೆಯ ಶೃಂಗಾರ ಪೂಸನ ಕಠಿನದಂದ ಅಱಿವಿಲ್ಲದವನ ಸಂಗ (ಮಮಗುಂ. ಕ. ೨೫೬-೩೮); ವಿರುತಿಗಳ ನಿಜವನಱಿದು ಪೂಸರ ಆಸೆಯನಱಿದು ವೇಷಗಳ್ಳರ ನಿಹಿತವ ನೋಡಿ (ಸರ್ವಪ. ೦೨೨-೬೨೯). ಹೂಸ : 'ಹೂಸತನ' ಪರಾ.

ಹೂಸಹುಂಡ = ತೋರಿಕೆಯವನು; ಡಂಭಾಚಾರಿ : ಹೂಸಿ{ಸ} ಹುಂಡನೆಂದಾಡಿದ ಮಾತೆ ನಿರ್ವೃಜಿನನಪ್ಪ ಜಿನೇಂದ್ರನೊರ್ಮೆ ಕೂರ್ತುಕೊಂಡಾಡಿದೊಡಣ್ಣ ಮುಕ್ತಿ ಮನೆದೊಟ್ಟಿನೆ ಮಚ್ಚಿ ಮರಲ್ದು ಬಾರಳೇ (ಧರ್ಮನಾ. ೧-೩೩); ಮರ್ತ್ಯರ ಹೂಸಿ{ಸ}ಹುಂಡರ ನಡೆವಳಿಯ ನೀನೊಪ್ಪವಿಟ್ಟೆಯಲಾ (ಪ್ರಭುಲೀ. ೦೫-೦೨); ಮಾಡಬಾರದು ಮಾಡಬಾರದು ಹುಸಿಡಂಭಕ ಹೂಸ ಹುಂಡರ ಸಂಗವ (ಅಪಂಡೇ. ೦೨೯-೯೩). [ಪೂಸು$_1$ + – ಅ$_7$]

ಪೂಸಂತೆ (ನಾ). ಹೂವನ್ನು ಮಾರುವ ಅಂಗಡಿಗಳ ಸಾಲು : ಇನಿತು ಸೊಬಗಂ ಪಡೆದ ಪೂಸಂತೆಯಿಂ ಮುಂದೆ ನೆನೆವವರ ಚಿತ್ತಮೆಲ್ಲಂ ಪರಿಮಳಂ (ಕಬಿಪು. ೦೦-೫). [ಪೂ$_2$ + ಸಂತೆ$_1$]

ಪೂಸಣಂಬ, ಪೂಸಣಬ, ಹೂಸಣಂಬ (ನಾ). ಒಂದು ಬಗೆಯ ಸಿಹಿಯಾದ ಭಕ್ಷ್ಯ (?) : ಸರವಳಿಗೆ ಸಣ್ಣಸರವಳಿಗೆ ಮಣಿಸರವಳಿಗೆ ವರಮಧುರ ಪೂಸಣಂಬಂ ಸಮೆದವಂತೊಳಗೆ (ಬಸರ. ೬-೦೯). ಪೂಸಣಬ : ಅಂಗಾರಕಂ ಕ್ಷೀರಪೂರಿಗೆಯಂ ಪೂಸಣಬಾದಿ ಭಕ್ಷ್ಯಚಯಮಂ ತಂದಿಕ್ಕಿ ದರ್ಕಾಂತೆಯರ್ (ಧರ್ಮಪ. ೨-೩೯). ಹೂಸಣಂಬ : ಹಾಲಲವುಗು ಹಾಲಲುಂಡೆ ಹಾಲ ಮಂಡಿಗೆಗಳನಟ್ಟು ಮೇಲೆನಿಪ್ಪ ತಱಗ ಹೂಸಣಂಬ[ಪಾಠಾಂ. ಪೂಷಣಂಬು]ಮಂ ತೆರಳ್ಕೆ ಇಟ್ಟು (ಸ್ವಕ್ಷ. ಹ. ೨೬೬-೨); ತಱಗು ಚಕ್ಕುಲಿ ಹೂಸಣಂಬ ಹೂರಿಗೆಗಳಂ ... ಕಱೆಕಂಠನಾರೋಗಿಸಿದೊಡೆ ಇನಿದಾವರಿಸಿಗರಳ ಸುಧೆಯಂತಿರ್ದುದು (ಸಿದ್ಧರಾ. ೬-೬೫). [?]

ಪೂಸಣಬ 'ಪೂಸಣಂಬ' ನೋ.

ಪೂಸತನ, ಹೂಸತನ (ನಾ). ದಂಭ; ದಂಭಾಚಾರ : ಆಸೆಯೆಂಬ ಕತ್ತೆಯ ಮೇಲೆ ಪೂಸತನವೆಂಬ ಸೆಟ್ಟಿವೇಷ ವೇಷಲಾಂಭನದ ತನ್ನಾತ್ಮವಾಸದ ಪಾಶವನೆತ್ತಿ ಈಶನಱಿಯದ ಸೆಟ್ಟಿ ವಿಷಕ್ಕಾಗಿ ಕೈಯಾಂತು ತನ್ನ ಬೆವಹಾರಕ್ಕೆ ನಷ್ಟ ಬಂದಿತ್ತು ಬಂಕೇಶ್ವರಲಿಂಗಕ್ಕೆ ಲಾಭವಾಯಿತ್ತು (ಸುಂಕಣಂ. ಕ. ೬೫೯-೨೫); ಪೂ[ಪಾಠಾಂ. ಹೂ]ಸತನದಂದವ ಹೇಳಿ ಎಡಗಾಲ ಸಂಧಿಯ ಮಚ್ಚಿ ಅನಂಗನ ಬಲೆಯೊಳಗಾದವರಿಗೆ ಘನಲಿಂಗನ ಶುದ್ಧಿಯೇಕೆ (ನಗೆಮಾ. ಕ. ೯೨೦-೩೯). ಹೂಸತನ : ಮೇಲಿನ 'ನಗೆಮಾ' ಪ್ರಯೋಗದ ಪಾಠಾಂತರವನ್ನು ನೋಡಿ. [ಪೂಸ + – ತನ]

ಪೂಸತ್ವ (ನಾ). = ಪೂಸತನ : ಕೂಪರ ಕೈಯಿಂದ ಘಾತಕತನದಿಂದ ವ್ಯಾಪರಿಸುತ್ತ ಸುಡು ಅದೇತಱ ವಿರಕ್ತಿ ಮಾತಿನ ಮಾಲೆಯ ಪೂಸತ್ವ ಇದ ನಿಹಿತ ಲಿಂಗಾಂಗಿಗಳೊಪ್ಪರು (ಬಾಸೋಸಂ. ಕ. ೩೬೦-೩೦). [ಪೂಸ+–ತ್ವ]

ಪೂಸರ (ನಾ). ೧. ಹೂವಿನ ಹಾರ : ಹೂಮಾಲೆ : ಬಲಗೈಯ ಪೂಸರದೊರ್ವ ವನಿತೆ ನಿಂದಿರ್ದಳುತ್ಸವದಿ (ಮೋಹತ. ೫-೩೬); ಅವನ ಕರಾಬ್ಜದೆ ಪರಿಮಳವನು ನಿನ್ನ ಜವಳಿಮೊಲೆಗಳ ಮಧ್ಯದಲಿ ತವೆ ತಿಗುರಿಸಿಕೊಂಡು ಮುಡಿಗೆ ಪೂಸರವ ಬಲ್ತವಕದೆ ಬಿಗಿದು ಸುತ್ತುವುದು (ಕಂಪಿ. ೬-೦೩೮); ತುರು ನಡೆವ ದೆಸೆಗೊಲ್ದು . . . ಸರಳಿಸುತುಮಾಡುತುಂ ಕರು ಪಿಂತನೆಯೆ ಪೋಪ ಪಾಂಗಿನಿಂ ಪೂಸರದ ಪಥಕೆ ಪೊರಮಟ್ಟೆ ನಾಂ (ಸಂಸಪ. ೨೮-೬). ೨. ಹೂವಿನ ಬಾಣ; ಪುಷ್ಪಬಾಣ; ಮದನಾಸ್ತ್ರ : ಅಚ್ಚರಿವಡೆದ ಭ್ರೂಲತೆ ಸಿಂಗಾಡಿಗಳೊಚ್ಚೀರೆಗಣ್ಣ ಪೂಸರದಿ ಎಚ್ಚಱುವರ ಜಿತೇಂದ್ರಿಯರೆರ್ದೆಯನು ತಟ್ಟುರ್ಚಲು ವನವಧೂಟಿಯರು (ಮೋಹತ. ೦೯-೬೨); ಕಬ್ಬಿನ

ಬಿಲ್ಲಲರ್ವಕ್ಕಿಯ ತಿಬ್ಬಂ ಒಲಿದತನು ಪೂಸರಂಗಳನಿಸಲಾ ಉಬ್ಬೆಗೆ ಕೊಬ್ಬಿದ ಪೆಣ್ಣಂ ತಬ್ಬಿದೊಡದಱಬ್ಬು ನಿಲ್ಕುಮಿಂತಿದು ಸುಖಮೇ (ಶಬ್ದಾನು. ೩೦ ಪ್ರಯೋ); ಮದನಶಬರಸಂಯಮಿಮೃಗಗಳಿಗಾಗ ಕದುಬಿ ಪೂಡಿದ ಪೂಸರಕೆ ಪುದುಗಿದ ಮಿಂಟೆಗಳೆನೆ ಪರಡುಗಳತಿಮುದವನಿತ್ತುವು ನೋಳ್ಪರಿಗೆ (ಕಂಪಪಿ. ೯-೧೯). ೩. ಕಾಮ; ಪುಷ್ಪಾಸ್ತ್ರ; ಮನ್ಮಥ: ಎಳೆದೇರ ನನೋಡಿವೆನೆಂದು ಪೂಸರಂ . . . ಪಡೆಯೆಲ್ಲಮಂ ಪಲವುಂ ಸನ್ನಣದಿಂ ಬರಲಿಮೆಂದು ಪೇಟ್ (ಕಬ್ಬಿಗಾ. ೧೦೩); ವಾಸರವಾಹದಹನ ಪೂಸರನಂಗ ದಹನಕರ . . . ಲೋಕಾಧ್ಯಕ್ಷ ಸಲಹೆಮ್ಮನು (ಸಂಪು. ೨೦-೦); ಚೆನ್ನಿಗನೆ ಸೂಸಿ ನಿನ್ನಯ ರತಿಸುಖದ ವಿಲಾಸದ ಪೂಸರನುಱುಬ ನೀ ಬಿಡಿಸೊ (ಕಂಪಪಿ. ೦೦-೩೨). [ಪೂ$_2$ + ಸರ$_3$]

ಪೂಸರಂಬಡೆ (ಕ್ರಿ). ಹೂವಿನ ಗುಚ್ಛಗಳನ್ನು ಹೊಂದು; ಹೂಮಾಲೆಯನ್ನು ಧರಿಸು: ನಿನ್ನಡಿಯಂ ನೆರವಿಲ್ಲದೆ ನಂಬಿದೆವೆಂಬರಸರ ಚೆನ್ನ ಪೊನ್ನ ನೆಲೆವಾಡದಂತೆ ಪೂಸರಂಬಡೆದ ಕೊಸಗಿನ ಮರಂಗಳೊಳಂ (ಕಬ್ಬಿಗಾ. ೬೯). [ಪೂಸರ + ಪಡೆ$_1$]

ಪೂಸರಗರ್ಭಿಣಿ (ನಾ). ಮನ್ಮಥನನ್ನು ಗರ್ಭದಲ್ಲಿ ಧರಿಸಿದವಳು; ರುಕ್ಮಿಣಿ: ಮಾಣಿಕ್ಯಸಿಂಹಾಸನದೊಳು ಕೃಷ್ಣ ಕುಳಿತು ಪೂಸರಗರ್ಭಿಣಿ ಮೊದಲಾದ ರಾಣೀವಾಸಕ್ಕೆ ವನವನೊಪ್ಪಿಸಿದ (ಮೋಹತ. ೯-೩೬). [ಪೂಸರ + ಗರ್ಭಿಣಿ]

ಪೂಸರದಹನ (ನಾ). ಕಾಮದಹನ: ಪೂಸರದಹನ ಕಾಮೋತ್ಪತ್ತಿ ವರಶಂಬರಾಸುರವಧೆ ಕಂತುಸುತನ ಭಾಸುರಲೀಲೆ ಬಾಣನ ಗೆದ್ದ ಜಯಲಕ್ಷ್ಮೀಶನ ಕೃತಿಯ ವರ್ಣಿಪೆನು (ಮೋಹತ. ೦ ೩೩). [ಪೂಸರ + ದಹನ]

ಪೂಸರಲ್, ಪೂಸರಲು, ಪೂಸರಳು (ನಾ). ಹೂವಿನ ಬಾಣ; ಕಾಮನ ಬಾಣ: ಇಂದು ನೀನೆನಗೋಸುಗ ಧೂರ್ಜಟಿಯ ಮೇಲೊಂದು ಪೂಸರಲಿಂದಲೆಸೆಯೊ ನೊಂದು ಲಲಾಟನೇತ್ರವ ತೆಱೆದರೆ ನೀನು ಬೆಂದು ಹೋದಪೆ ಬೇಡ ಮಗನೆ (ಮೋಹತ. ೭-೨೬); ಕಬ್ಬುವಿಲ್ತುಂಬಿವೆದೆ ಪೂಸರಲ್ಪೂಣ್ದಿಸಲ್ ನಿಬ್ಬರಮಿದು (ಸ್ವಿಮಿಶಾ. ೬-೦೭). **ಪೂಸರಲು**: ಕಾಣದಾರದು ಪುಂಡ್ರೇಕ್ಷುಕೋದಂಡನೊ ಬಾಣ ಪೂಸರಲುಗಳಿಲ್ಲ . . . ಜಾಣನಾರೆಂದು ನೋಡಿದರು (ಮೋಹತ. ೦೬-೬೦). **ಪೂಸರಳು**: ಪೂಸರಳಿಂದೆ ಶಿವನ ತಟ್ಟನೆ ತಾಗಲಿಕ್ಕುವೆನೆಂದು ಬಾಸೆಯ ಕೊಟ್ಟ ಮನ್ಮಥ ಜೀವನಿಗೆ (ಮೋಹತ. ೩-೬೦). [ಪೂ$_2$ + ಸರಲ್$_1$]

ಪೂಸರಲ, ಪೂಸರಳ (ನಾ). ಹೂವುಗಳ ಬಾಣವುಳ್ಳವನು; ಮನ್ಮಥ: ತೊಳಪ ತೋರಮೊಲೆಗಳೆಂಬ ಪೂಗೊಂಚಲ್ ಪೂಸರಲನೆಂಬ ತುಂಬಿಗಿಂಬಾಗೆಯುಂ (ಕಬ್ಬಿಗಾ. ೦೨೩); ಪೂಸರಲನ ಜಸಮಂ ದೂಸರಮಂ ಗೆಯ್ದನ . . . ದಿವಿಚಾಸುರನತಪದನಂ . . . ನುತಿಸಿದ ವನಭವನ (ಉದ್ಯದೇ. ೬-೦೯); ಸೂಸುಮೋಹನದ ಸಿಂಗರದೊಟ್ಟು ತನ್ನ ವಿಲಾಸಿನಿಯರ ಬಳಸಿನೊಳು ಪೂಸರಲನ ಪುಣ್ಯದೇವತೆಯಂತಿರ್ದ ಭಾಸುರಾಂಗಿಯ ಕಂಡರಾಗ (ಶರಸ. ೪೦-೪೯). **ಪೂಸರಳ**: ಮೈಸೂರಧಿಕಾರಿಯಿವನೀಗ ಚಿತ್ತೈಸು ಪೂಸರಳನ ಪಟ್ಟದಾನೆ (ಕಂಪಪಿ. ೨೩ ೬೦). [ಪೂಸರಲ್ + — ಅ$_7$]

ಪೂಸರಲು 'ಪೂಸರಲ್' ನೋ.

ಪೂಸರಳ 'ಪೂಸರಲ' ನೋ.

ಪೂಸರಳು 'ಪೂಸರಲ್' ನೋ.

ಪೂಸರಿ (ನಾ). ಹೂವಿನ ಮಳೆ; ಪುಷ್ಪವೃಷ್ಟಿ: ಮೊನೆಧರಗೀಶ ಪ್ರತ್ಯಕ್ಷವಾಗಿ ಸುರದುಂದುಭಿಯೊಳು ಪೂಸರಿಯೊಳು ಕೈಲಾಸಗಿರಿಗೆ ಕೊಂಡೊಯ್ದ ಸೋಮೇಶ (ಶೈರವೇ. ೧-೨೮೯). [ಪೂ$_2$ + ಸರಿ$_6$]

ಪೂಸಿ 'ಪೂಸು$_3$' ನೋ.

ಪೂಸಿಕೆ (ನಾ). ಬಳಿಯಂವಿಕೆ; ಹಚ್ಚುವಿಕೆ; ಲೇಪನ: ಭರದ ತೊಲೆ ನಿಡುಗಂಭ ಜಂತೆಯಸ್ಥಿಗಳುಮಾ ನರಗಳೇ ಕಟ್ಟುವಿಂಡಿಗೆ ಮಾಂಸ ಪಂಕದಾ ಸಱಿಯ ಪೂಸಿಕೆ (ಲಿಶಿಸಂ. ೩೯-೪೨). [ಪೂಸು$_1$ + — ಇಕೆ]

ಪೂಸಿಮಾತು (ನಾ). ಪುಸಲಾವಣೆಯ ಮಾತು; ರಮಿಸುವ ಮಾತು: ಅವಳು ಅಳುವ ಹುಡುಗನನ್ನು ಪೂಸಿಮಾತುಗಳಿಂದ ಸಮಾಧಾನಗೊಳಿಸಿದಳು (ರೂಢಿ). [ಪೂಸಿ (<ಪೂಸು$_3$) + ಮಾತು$_1$]

ಪೂಸು$_1$, ಹೂಸು$_1$ (ಕ್ರಿ). ೧. ಬಳಿ; ಸವರು; ತೊಡೆ; ಲೇಪಿಸು: "ಪೂಸು—ವಿಲೇಪನೇ, ಅಪಾನವಾಯೌಚ" (ಶಮರಾ); ಏವಿರಿದಿದೆನ್ನ ಭುಜಾಸಿಗೆ ತೇದು ಪೂಸಲುಂ ನೆಱೆಯದು ನೀನಿರಾನೆ ರಿಪುಸೇನೆಗೆ ಸಾಲ್ಕೆಂ (ಕಾವ್ಯಸಾ. ೪೦೦ ಶೂದ್ರಕ); ಎಮ್ಮ ಮಾದಂ . . . ಕೆಱೆಗೆವೋಗಿ ಮಿಾದಾಗಳ್ ತಲೆಯಂ ಪೂಸಲೆಣ್ಣೆಯನಪ್ಪೊಡಮೆಱೆಯಿಸಿಯುಮಱಿಯಂ (ಪಡ್ಡಾರಾ. ೪-೦೬); ಪೂಸಿದರು ಸೇವಕರು ಪರಿಮಳ ವಾಸಿಸುವ ಸಿರಿಗಂಧವನು (ತೊರಗಾ. ೬-೨೬-೬೦). ೨. ತೊಳೆ; ಪ್ರಕ್ಷಾಲನ ಮಾಡು: 'ಬಾಯ್ಮೂಸು' ಪರಾ. ೩. ಪರಿಮಳವನ್ನು ಕೊಡು; ಸುವಾಸನೆಯನ್ನು ಕೊಡು: ಅರೆದ ತೆಂಗಾಯ ಸವಿಹಾಲು ಸಕ್ಕರೆ ಬೆಣ್ಣೆವೆರಸಿ ಪಾಕಂ ಮಾಡಿ ಪೂಸಿದ[ಪಾಕಾಂ. ಪೂವಿನೊ, ಹುವ್ವಿನೊ]ಗ್ಗರಣೆಯಂ ಕೊಟ್ಟು ಪರಿಮಳವಿಡುವುದು (ಸೂಪಶಾ. ೪-೭೨). ೪. (ಆಲಂ) ಸಲ್ಲಿಸು; ಕೊಡು: ಘಾಸಿಯ ನೀ ಮಾಡುತೆನ್ನನು ಪೂಸೆಂದರೆ ಧನವನೆಲ್ಲಿ ನಾ ತರಲೀಗಂ (ಹಮಸ. ೬೩). ೫. (?): ಇದಾನಟಿತ್ತೋನ್ಪಣ್ಚಾಮಹಾ ಪಾತಕನಾಗಿ . . . ಆಟ್ಟುವೆಣ್ಣೆತ್ತಲ ಪೂಸುವೋನಕ್ಕು (ಎಕ. III. ಪಂಜಪ. ೨೬-೭; ಸು. 810). **ಹೂಸು$_1$**: ೧. ಹಂದಿ ಶ್ರೀಗಂಧವ ಹೂಸಿದಡೇನು ಗಂಧರಾಜನಾಗಬಲ್ಲುದೇ (ಬೇದಾಪ. ೨೨-೩೯); ದೂಪಿಸಿದ ಬಿಳಿದುಗುಳ ನುಟ್ಟನು ಲೇಪನಂಗಳ ಹೂಸಿ ಮಧುರಾಳಾಪದಲೆ ಬೋಳೈಸಿ ಸಾರಥಿ ಗಜಹಯಾವಳಿಯ (ಕುಮ್ಮಾಗ. ೦-೨೬); ಎಣ್ಣೆಮಜ್ಜನವಿಲ್ಲದವಳ ತಲೆ ಮಾಸಿಹುದೊ ಹೂಸಿ ಎರೆವನು ತನ್ನ ಕೂಸು ಬರಲಿ (ಶಿಪಾಸೆ. ೩೩-೦೯). ೪. ಬೊಪ್ಪಣಾಗೆ ಹಿಟ್ಟಂ ಹೂಸಿ ಗೆಜ್ಜೆಯ ಹಳ್ಳಿಯೊಂದು (ಇಎ. ೦೯೩೦, ಹಾನಗಲ್. ೬೦-೩೭; 1026). ೬. ಲೇಪಿಸಿಕೊಳ್ಳು; ಬಳಿದುಕೊಳ್ಳು: ಒಲೆಯ ಬೂದಿಯ ಬಿಲಿಯಲು ಬೇಡ ಒಲಿದಂತೆ ಹೂಸಿಕೊಂಡಿಪ್ಪುದು ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ (ಬಸವ. ೦೧೯).

ಪೂಸಿಕೊಳ್, ಪೂಸಿಕೊಳ್ಳು = ೧. ತೊಡೆದುಕೊಳ್ಳು; ಬಳಿದುಕೊಳ್ಳು: ಇದು ಪೇಲಿದು ಮೆಯ್ನೀರೆಂಬುದನಱಿಯದೆ ಮೆಯ್ಗೆ ಪೂಸಿಕೊಳ್ಳುವು ಮಕ್ಕಳ್ (ರವರ್ಷಾಸ್ಕ. ೩-೧೭೬); ಪೂಸಿಕೊಂಬ ಅನುಲೇಪನ ಮೊದಲಾಗಿ (ಗಣಿಶಾ. ೨೩೨-೩). ೨. ತೀಡಿಕೊಳ್ಳು; ನೀವಿಕೊಳ್ಳು: ಪಕ್ಷಿಗಳು . . . ತಮ್ಮ ಗರಿಗಳನ್ನು ಪೂಸಿಕೊಳ್ಳುತ್ತಿದ್ದವು (ಇದುಇ. ೩). **ಹೂಸಿಹುಂಡನ ಮಾಡು, ಹೂಸಿಹುಂಡನೆ ಮಾಡು** = ತೋರಿಕೆಯನ್ನು ಮಾಡು; ಡಂಭಾಚಾರವನ್ನು ಮಾಡು: ಹೂಸಿಹುಂಡನ ಮಾಡಿ ಕಂಗೆಟ್ಟೋಸರಿಸದಸ್ರಾಂತಲಕ್ಷ್ಯವನಾಸುರತೆಯಿಂ ತೊಡರಿ ಬಿಡದಂತ ಡಗದನ್ಯೋನ್ಯವಾಸಿಯಾಗಿರುತಿರಲು (ಸದ್ಗುರು. ೨ ೬); ನಾನೀಸುದಿನ ಪರಿಯಂತರಂ ಬಹಿಃಕ್ರಿಯೆಗಳಿಂ ಹೂಸಿಹುಂಡನ ಮಾಡಿ ಹೊಱಗೆ ನಾಂ ಪೂಜಿಸೆ ವೃಥಾ ದಿನಂಗಳು ಸವೆದುವು (ಸಂಪು. ೬-೦೦); ಹೂಸಿಹುಂಡನೆ ಮಾಡಿ ಬಾಯ ಸವಿಯ ನುಡಿವರೆಲ್ಲಾ ಭಕ್ತರಪ್ಪರೆ (ಇಪಸಂ. ೨೨೩-೦೦೦೦). [ದೇ. ॥ ತಮಿ. ಮಲ. ಪೂಚು; ತುಳು. ಪೂಜು; ತೆಲು. ಪೂಯು]

ಪೂಸು$_2$, ಹೂಸು$_2$ (ಕ್ರಿ). ಅಪಾನವಾಯುವನ್ನು ಬಿಡು: "ಪೂಸು ವಿಲೇಪನೇ, ಅಪಾನವಾಯೌಚ" (ಶಮರಾ). **ಹೂಸು$_2$**: "ಹೂಸು—ಅಧೋವಾಯೌ" (ಶಮರಾ); ಹೂಸಿದವರ್ಯಾರು ಅಂದ್ರೆ ಹಳೇಸೀರೆಯವರು (ಹುಸ್ಕಿಹ. ೦೩೦).

[ದೇ. ೩ ಮಲ. ಪೂಚ್ಚಿ = ಅಪಾನವಾಯು ; ತುಳು. ಪೂವು]

ಪೂಸ್ಯ, ಪೂಸಿ (ನಾ). ೧. ಬಳಿಯುವಿಕೆ; ಲೇಪನ : ಹಾಸು ಇಲ್ಲದ ನಿದ್ರೆ ಪೂಸು ಇಲ್ಲದ ವಿಾಹ ಭಾಷೆಯಱಿಯುವಳಗೆ ಗೆಳೆತನವು ಮೋಟ ಕೈ ಬೀಸಿ ಕರೆದಂತೆ (ಸರ್ವಜ್ಞ. ೦೫೦೩) ; ಚಿನ್ನಂ ಮಣಿ ಮುತ್ತುಡೆ ಕಾಡಿಗೆ ಬಾಯನ್ನದ ಪೂಸು (ಶಾಕುಂತ. ೬ ಸಂ). **ಪೂಸಿ** : ೨. (ಅಲಂ) ಮೆಚ್ಚುಗೆಯನ್ನು ಪಡೆಯಲು ಹೊಗಳಿ ಉಬ್ಬಿಸುವಿಕೆ ; ಮರ್ಜಿ ಓಡಿಯುವಿಕೆ : 'ಪೂಸಿ ಮಾತು' ಪರಾ.

ಪೂಸಿ ಮಾಡು = ೧. ಉಬ್ಬಿಸು ; ಹೊಗಳು ; ಮರ್ಜಿ ಓಡಿ : ಆಸೆಯೊಂಬ ವೆಸಿ ಆರನಾದರೂ ತನ್ನತ್ತ ಕರೆವಳು ಯಾ ಆಸೆಯೊಂಬವಳು ಆರನಾದರೆಯೂ ಪೂಸಿ ಮಾಡಿ ತನುಮನದ ಪ್ರಯತ್ನ ಮಾಡಿದಳು (ಶರಗೋ. ೨೨೬-೫೦) ; ಒಂದೊಂದು ದಿನ ಏನೇನೋ 'ಪೂಸಿ' ಮಾಡಿ ಸೆಳೆದೇ ತರಬೇಕಾಗಿತ್ತು ಮನೆಗೆ (ರಂಗನಾ. ೯೪) ; ಹೀಗೆ 'ಪೂಸಿ' ಮಾಡಿದರೆ ಮರ[illegible] ನಂಬರು ಕೊಡೋಳಲ್ಲ ನಾ[illegible] (ಪಂಚಸಿ. ೬೦). ೨. ಮಾದ್ದು ಮಾಡು ; ಅಚ್ಚೆ ಮಾಡು ; ರಮಿಸು : ಶ್ರೀಧರನು ಗೋಪುವನ್ನು ಪೂಸಿ ಮಾಡುವುದು ಒಳ್ಳೆಯದೆಂದೂ . . . ಕ್ಷೇಮವೆಂದೂ ಅವನನ್ನು ಎತ್ತಿಕೊಂಡು ಸರೋಜಳನ್ನು ನಿಧಾನವಾಗಿ ಹಿಂಬಾಲಿಸಿದನು (ಪಾಳಹಾ. ೦೨೩). **ಪೂಸಿ ಹೊಡೆ** = ಪೂಸಿಮಾಡು ೧ : ಅವನು ಹಣಕ್ಕಾಗಿ ಅವರನ್ನು ಪೂಸಿ ಹೊಡೆಯುತ್ತಿದ್ದಾನೆ (ರೂಢಿ). [< ಪೂಸ್ಯ$_1$]

ಪೂಳ್ 'ಪೂಟ್' ನೋ.

ಪೂಳಿ 'ಪೂಟ್' ಪರಾ.

ಪೂಳು 'ಪೂಟ್' ನೋ.

ಪೂಳ್ದು 'ಪೂಟ್' ಪರಾ.

ಪೂಜಿ, ಪೂಜೆ (ನಾ). ತಿಗ ; ಪಿರ್ರೆ ; ಕುಂಡೆ : ಪೃಷ್ಠ : ಪೂಜಿವಕೆಯಂ ತರವೇಟೆನೆ (ಪಂಪ. ಸ. ೭೨ ಪ್ರಯೋ). ಪ ಇದು ಅಸಹ್ಯೋಕ್ತಿಗೆ ಕೊಟ್ಟಿರುವ ಉದಾಹರಣೆ. **ಪೂಜಿ** : ಎನಗಿಲ್ಲಳ ಪೂಜಿ ತೋಜಿ ಪೇಟುಪ್ತಿರಲಾಸೆಯಂ ಬಿಸುಟು ನೀಂ ಕಳೆ ಪಾಂಟಿವುತಕ್ಕೆ ಸೈರಿಸೆಂ (ಶಾಪ್ಯಾ. ೪೫೦).

[ದೇ.॥ ತಮಿ. ಪೂಜು ; ಮಲ. ಪೂಜಿ. ಪೂಜು ; ತೆಲು. ಪೂಡ]

ಪೂಜಿವಕೆ (ನಾ). ಹೂವಿನ ಚಿತ್ರಗಳುಳ್ಳ ಕುಪ್ಪಸ : ಪೂಜಿವಕೆಯಂ ತರವೇಟೆನೆ (ಪಂಪ. ಸ. ೭೨ ಪ್ರಯೋ). [ಪೂ$_2$ + ಜವಕೆ (< ಜವಿಕೆ)]

ಪೂಜೆ 'ಪೂಜಿ' ನೋ.

ಪೂಟ್, ಪೂಣ್$_2$. ಪೂಳ್, ಪೂಳು, ಹೂಣ್$_2$, ಹೂಳ್, ಹೂಳ್$_1$ (ಕ್ರಿ). ಪೂಟ್ಟಿ, ಹೂತ$_2$, ಹೂಳ್ದ (ಭೂತಕೃ). ಪೂಟ್ಟು, ಪೂಳಿ, ಪೂಳ್ದು, ಹೂಣಿ, ಹೂತು$_2$, ಹೂಳಿ, ಹೂಳ್ದು (ಭೂತನ್ಮೂ). ೧. (ನೆಲದಲ್ಲಿ) ಹುಗಿ; ಅಡಗಿಸು; ಬೈಚಿಡು: ಕಳ್ಳಂ ಕಸವರಂಗಳೆಲ್ಲಮಂ ಪೂಟ್ಟಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ (ಪಾಪ್ಯಾ. ೦೨೨ ೫೦); ಇಳೆಯಂ ಘಾತಿಸಿ ತಕ್ಕರಂ ಕಟರ್ಮಕೊಂಡಾಪರ್ಥಮಂ ಪೂಟ್ಟು ಮಿಳ್ಳಿಳ ನೋಡುತ್ತುಂ (ಆದಿಪು. ೨-೦೫) ; ಮುನ್ನಿನ ತಮ್ಮ ವಿದ್ಯಾಧರರಾದಂದಿನ ಮಹಾವಿದ್ಯೆಗಳ್ . . . ಮುಂ ಪೂಟ್ಟಿ ನಿಧಾನಂ ಸುಕೃತಮಾನಂಗೆ ಕೊಳೆಪಂತಾನುಂ ಸಮಸಿಸೆ (ಶಾಂತಿಪು. ೨-೨೬ ಪ). ೨. ತಗ್ಗು, ಕುಳಿ, ಬಾವಿ ಮೊದಲಾದುವುಗಳನ್ನು ಮಣ್ಣು, ಕಲ್ಲು ಮೊದಲಾದುವುಗಳಿಂದ ತುಂಬು. – ಮುಚ್ಚು : ಸೈನ್ಯದೊಳಾವರಿಸಿದ ಧೂಳಿ ಪೂಟ್ಟುವಂಭೋನಿಧಿಯಂ (ಆದಿಪು ೦೩.೭೪) ; ಸೇನಾಪದೋದ್ಧೂತ ಧೂಳಿ ... ಪಿಯನ್ನದಿಯಂ ಪೂಟ್ಟುಱೆ ಸತ್ಯಲೋಕಮೊದವಂ ವಿಾಱಿತ್ತ ಗರ್ಬಪ್ಪಿನಂ (ಪಶಾಸಂ. ೩-೬) ; ಅಂದಾ ರಣಧೂಳಧೂಳೊಳಗಟಂ ಪೂಟ್ಟಿಂ (ಕಇಕ. ೨.೦೦೨). ೩. ಮುಳುಗುವಂತೆ ಮಾಡು ; ಮುಳುಗಿಸು : ಗೀತವಾದಿತರವವೇಳ್ವುದೊ ಸಭೆಯಂ ರಸದೊಳ್ ಪೂಟ್ಟುವೊಲೆನಿಪತ್ತು (ಆಪು. ೯-೦೯) ; ಅಶೋಕಮೆ ವಾಪಾಪಾದಿಂದೊದೆದುದೊ ಕೇಸರಮ್ಮುಮಮೆ ನಿನ್ನಮನಾನನಸಿಂಧುವಿಂದೆ ಪೂಟ್ಟುದೊ (ಆಪು. ೦೦-೦೨೭). ೪. ಕವಿ : ಮುಚ್ಚು ; ಹೊಚ್ಚು : "ಪೂಟ್ಟಿ-ಆಚ್ಛಾದನೇ" (ಕಪಾಣಿ) : ಮುಸಿಯಿಂದಂ ಜಗಮೆಲ್ಲಮಂ ದಿಶಿಸುತಂ ಮುಂ ಪೂಟ್ಟನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ (ಪಂಪಭಾ. ೯.೫೯) ; ಏಕೆಲವೊ ಕೊಯ್ದುಪೆ ನೆಯ್ದುಲನೆಂದು ಪೂಟ್ಟುವೋಲ್ ನೆಯ್ದುಲ ಮಾಲೆಯಿಂ ಕಳಮಗೋಟಿಮಂರಿಕ್ಷೆಸೆ (ಲೀಲಾವ. ೩-೭೨). ೫. ಮುಳುಗು : ಕತ್ತುರಿಯಿಯಮಂ ಮೆಱೆದು ಕತ್ತುರಿಯೊಳ್ ಪೂಟ್ಟು ಕತ್ತುರಿಮಿಗದಂತಿರ್ಪ ಕತ್ತುರಿಬೊಜಂಗರುಂ (ಪಾಪ್ಯಾ. ೯-೬೭ ಪ) : ವಮಿತಾರಿಗೆ ಉಟ್ಟ ಸುಟ್ಟುಂಬೆಯ ನೆಱಲೊಳ್ಳಂದುಮುಗುಱೆಸೊಳ್ ಪೂಟ್ಟುಂ ಘ್ರಾಲತಾ ಪ್ರತಾನದೊಳ್ ಕಟ್ಟುಂ ಕಿಟ್ಟಿಟ್ಟುವಿರ್ಪುಮುಚಿತಮಲ್ತು (ಶಾಂತಿಪು. ೯-೬೨ ಪ). ೬. ತುಂಬಿ ಹೋಗು; ಆವರಿಸಲ್ಪಡು; ಮುಚ್ಚಿ ಹೋಗು : ಅಂಬರ ದೊಳ್ಲಮಂಬಿನೊಳ್ ಪೂಟ್ . . . ಪೂರ್ಣವಾಗಿ ಸರಿಯಲ್ಲದೆ ವಿಕ್ರಮಾರ್ಜುನ (ಪ.ಪಾಪ್ಯಾ. ೦೦-೯೨). ೭. ನೆನಪಿನಿಂದ ಮರೆಯಾಗು; ಮರೆತು ಹೋಗು: ಏಸೆಯಂದೆ ಪೂಟ್ಟು ಕೆಟ್ಟು ಪಟಗಟ್ಟುವುನಾವಗಮೆಮ್ಮುವೆಂದು ಬಾಚಿಸಿ ವೆಱರ್ಗಿತ್ತುವಲ್ಲದೆ . . . ರಂಜಿಸುವರ್ದೆಗೊಳ್ಳದೀಗಡಿನ ಕಟ್ಟಿಗವಂ ಗಳೊಂದವಿಂದಿಗಳ್ (ಶಾಂತಿಪು. ೦೨-೭೭). **ಪೂಣ್**$_2$: ೨. ಕೂರಂಬಿನಿಂದಂಬು ನಿಧಿಯ ಪೂಣ್ಣು[ಪಾಪ್ಯಾ. ಳ್ದು]ವೆ ತಮಗೆ ದಾರಿಯಾಗಲ್ ನಡೆದು . . . ಪೊಣ್ಕಿ ಬೊಟ್ಟಿಱೆಪುತಿರಲು (ಪಾಪ್ಯಾಂ. ೫-೦೯). **ಪೂಳ್** : ೧. ಮುನ್ನಿಲ್ಲದಾದ ನುಡಿಮಳ್ಳುವಂ ಪೂಳ್ದು ಮುಲ್ಲುಹೊಲನೆಲ್ಲವಂ ಪೊಗಳಿ ಸುಧೆಯೊಳಗೆ ನಂಜೆಡುವಂತೆ ಮೇಳವಿಸಿ ಪೇಳೆ ನಾನು (ಸಿದ್ಧಾಂ. ೦-೫) : ಮಾಸಿನ ಬೀಜ ಮತ್ತೊಂದು ಶಿಶುವಾಗಲೆನುತ ಬಿತ್ತಲುದ್ಯೋಗಿಪ ತೆಱದಿಂದೆ ಪೂಳ್ದರು ಚಿತ್ರಾಯುವೆಲ್ಲ ಪೊಮ್ಮೊಗೆಯ (ಪೋಷಕ. ೦೭-೨೨). ೨. ಶರಧಿಯಂ ಪೂಳ್ದರ್ಗೆ ಪುರದಗಳ ಪೂಳ್ದುದೇನರಿದು (ತಿಪು. ೯೨-೩೦). ೬. ಭವಜಾಟಳದ ಬಾವಿ ಘ್ ತಂಗೆಟ್ಟು ಪೂಳ್ದುವುದೊ ಎಂಬಂತೆ ಗಂಭೀರನಾಭಿ ನೆಱೆ ಗುಣ್ಣಳಿದುದು (ಸಿದ್ಧಾಂ. ೦-೯೯); ಪೂಳ್ದುವು ದಿಶಾವನಿಭೋಮಂಡಲಂ ಗಳ್ ಜಗುಳ್ದುವಾ ತಾರಾಗ್ರಹಾಳಿಗಳ್ (ಪಂಪ ೯೯-೦೨). **ಪೂಳು** : ೧. ಏಳುದಿವಸ ಧರೆಯೊಳು ಪೂಳ್ದರ್ ತರುಣನ ಪಡೆದ ಕದಿರೆ ರೇವುತಂದೆ (ಶ್ರೀಧರೇ. ೯.೦೦೦). ೨. ಧೃತಿಯಂ ಮಾನಕ ಪೇಳಿ ಚಿಂತಾಬ್ಧಿಯುಂ ಪೂಳಿ ಯೊಡೆದುವ ಪಟುಭಟಾಳಿಯುಂ ಮಾರಿ ಬರವೇಳೆಯೆಂದುಸಿರಿ . . . ಹರಿ ನಡೆದನು (ತಿಪು. ೩೦-೫೭). ೪. ಪೂಳುವರ್ ಕೋಲ್ಗಳಿಂದಹಿತರು ಪ್ರದ್ಯುಮ್ನ ಪಾರ್ಥಸುತರು(ತ್ರಿಪುಣಾ. ೨೨-೩೦). **ಹೂಣ್**$_2$: ೧.ಒಡಲೊಳು ಮೊದಲು ಹೂಣೆವ ವೈರಾಗ್ಯದೊಳೊಡವೆಯು ತೆಗೆದು ವಲ್ಲಭನ ಮಾಡದಿ ಯೊಡುಬಡಿಸುತ ಜಿನದೀಕ್ಷೆಯನು ಕಮಠೇಗದಿಂ ಕೊಂಡಾಗ (ಪೇಕುಸಂ. ೫-೫೫) ; ಪರಮನ ದಿವ್ಯನಿರೂಪಮೆಂಬುದು ಕರ್ಮಧರಣಿಯೊಳಗೆ ಹೂಳ್ದ ಹೋದ ಪರಮಾತ್ಮನಿಧಿಯು ಕಾಣಿಸುವ ದಿವ್ಯಾಂಜನದಿರವಾಗುತದೆ ನವಗೆಲ್ಲ (ಪರಿ.೬೯-೦೫೦). ೨. ಅಸಿ ಮುಸುಂಡಿಮುದ್ಗರಗದಾವಳಿಯಿಂದೆ ಬೊಬ್ಬಿಱಿದು ಹೂಣಿಡುತಿರ್ದರಾಸುರಭಟರ್ ಸುರಭಟರನು (ಕಪಪು. ೯೨-೫೬). ೮. ಸಮಾಧಿ ಮಾಡು ; ಶವಸಂಸ್ಕಾರವನ್ನು ಮಾಡು : ಆ ಭವಿಗೆ ಉಪದೇಶವಿಲ್ಲ ಉಪದೇಶವ ಮಾಡಬಾರದು ಸತ್ತರೆ ಹೂಣಬಾರದು (ಅಪಶ. ೦೦ ೦೬). **ಹೂಳ್** : ೧. ತಾವು ಹೂಳ್ದ ನಿಧಾನ ತಮಗಹುದೇನು ವಿಸ್ಮಯ (ಪ್ರಭುಲಿಂ. ೯-೨೬); ಭೂಮಿಯೊಳಗೆ ಹೂಳ್ದ ಲೋಹ ಮಣ್ಣೆಡಿವುದು ಹೇಮ ಮಣ್ಣೆಡಿವುದೇ (ಶರಗ. ೨-೩೨). ೨. ಅಬ್ಧುದಲ್ಲಿ ತಾರೆಯ ತೇರುಗಳು ಹರಿವ ಮಂಜಿನ ನದಿಯು ಹೂಳ್ದವು (ಶಾಕ್ಷಾಪ್ರೇ. ೯-೦೨). ೬. ಎಳವಾಳುಗಳ ಬೀಡೆ ಹೂಳಿ ಕೋಗಿಲೆಯು ಕೊರಲೊಳಗು ತೆಱವಾಗೆ...ಪುತುಸುಂಧಿಯಳವು

ಮೆಱೆಯುತ್ತು (ಪಪಕಾ. ೩-೦೯). ಹೂಳು$_1$: ೧. ಬೀದಿಯಲ್ಲಿ ಬಿದ್ದ ಮಾಣಿಕ್ಯವ ಹೂಳಿರ್ದ ನಿಧಾನವಾರಿಗೂ ಕಾಣಬಾರದು ನೊಡ (ಅಪಕಂ. ೨೨೬-೦೦೩೨); ಒರೆಸಿ ಹುಡಿಯುಲಿ ಹೂಳಿದನು ಕಿವ್ಮೊರದಾನವನ (ಕುಮಾಸಂ. ೦-೩೯); ಭೃತ್ಯಭರಣ ಧಾನ್ಯ ಬೇಳ್ವುದೆ ಮಣ್ಣು ಸತ್ತವರನು ಹೂಳಿಸುಡುವುದೆ ಮಣ್ಣು (ಪುರಂದ. ೨೦೦-೩). ೨. ಸಲೆ ಸುರಂಗಗಳ ಘಾತವ ಹೂಳಿದರಾಗ ತಳುವದೆ ಹೊಜಿಕಾಹಿನವರು (ಕಂಪಪ. ೦೯-೯೩). ೩. ವಾರಣೌಘವ ಸೀಳಿದನು ಹೂಳಿದನು ರಕುತದಲಿ (ಕುಮಾಕ. ೨೦-೨೨). ೪. ಹಗಲ ಹೂಳಿದರಮವು ಬಾಣಾಳಿಗಳಲಸಮವುಮಹಾರಥರು (ಕುಮಾಂಭಾ. ೯-೯೬); ಹೊಗರುಗಣೆ ಹೂಳಿದುವು ಗುರುಸುತನಂಬಿನಂಬುಧಿಯ (ಕುಮಾಕ. ೩-೩). ೫. ಉಗಿವ ಹುಂಗಳ ಬಾಯಿದೊಱೆದುಗುವ ನೆತ್ತರಿಂ ಹೂತೊಱಗಿ ಬಂದುಗೆ ವೊಲೊಱಗಿದಂ ಕಲಿ ಸಂಕನು (ಸೌಪ. XX. ೦೨೩-೦೦; 1186); ಆಲಿ ಹೂಳಿದವಶ್ರುಜಲದಲಿ (ಕುಮಾಸ್ತೋ. ೦೩-೦); ಹೊಲೆದಾಸ್ಯಪಂಕದಲಿ ಹೂಕಿರುವೆವು (ಪಸಿಕಗೀ. ೦೨೦-೨೦). ೬. ಮಹಾರಥರೆಸುಗೆಯಲಿ ಹೂಳಿದುವು ನಭ ನುಗ್ಗಾಯ್ತು ನೆಲ ಚತುರಂಗಪದಹತಿಗೆ (ಕುಮಾಕ. ೦೦-೦೨); ಅಲ್ಲಿಯ ಹೂಳಿ ಹೋದನು ಕವಣೆಗಲ್ಲಲಿ (ಪ್ರಭುಲಿಂ. ೦೩-೧೬); ಹೂಳಿತಂಬರ ರತ್ನಮಯ ಕಲಶಾಳಿ ಸತ್ತಿಗೆಗಳಲಿ (ತೆಂಕರಾ. ೬-೨೦-೩೯). ೯. ತುಂಬು ; ಗಿಡಿ ; ಭರ್ತಿ ಮಾಡು : ಹೊಟ್ಟೆಯ ಹೂಳಲಿಕೆ ಹಿಂಸೆಯನು ಮಾಡುವ ಹೊಲಬು ತಾನಲ್ಲ (ಪ್ರಭುಲಿಂ. ೦-೦೨); ಜೋಗಿ ಕಡುದರವೇಸಿ ಜಂಗಮರು ಹೆಡಗೆಯೊಳಗೆ ಹೂತು ಕೊಡುವನ್ನಪಾನದೆ ಬಿಡದೆ ಸಂತುಷ್ಟಿಪಡೆದರು (ಕಂಪಪ. ೨೦-೦೦). ೧೦. ಇಂಗಿಸು ; ಪರಿಹರಿಸು ; ನಾಶಪಡಿಸು : ರಾಮಾಯಣವನಾ ಮುನಿ ಹೇಳಿದನು ಹೂಳಿದನು ಭೂಪನ ಮಾನಸ ವ್ಯಥೆಯ (ಕುಮಾಕ. ೨೩-೦); ವಿಷಯವ ಹೂಳುವದು ನಿಜಮುಕ್ತಿಕಾಂತೆಯ ನಾಳುವದು (ಹಂಗಾ. ೦೦೨); ಕರಣಂಗಳನು ಆಳು ಕಾಮಂಗಳನು ಹೂಳು (ಇಂಗಾಪ. ೦೩೩-೩೨). ೧೧. ಅಡಗು ; ಹುದುಗು ; ಮರೆಯಾಗು ; ಕಾಣದಾಗು : ಹೂಳಿಹೋಯಿತನ್ನಪಾನವ ಮೇಲಣೆಚ್ಚೆ (ಪ್ರಭುಲಿಂ. ೬-೦೯); ಮುಚ್ಚಿದೆರಡುತುಟಿಗಳಲ್ಲಿ ಅರ್ಥವೆಲ್ಲ ಹೂಳಿದೆ (ಅರಳು. ೨೩-೬). ೧೨. (ಕಣ್ಣು, ಕಿವಿ, ಬಾಯಿ ಮುಂತಾದುವನ್ನು) ಮುಚ್ಚು ; ಮುಚ್ಚಿಕೊಳ್ಳು : ಕಾಳಿ ನಿರ್ವಾಣದಾಕೃತಿಯ ತಾಳಿ ಬಂದಿದಿರಾಗಿ ನಿಲಲಚ್ಚುತ ನೋಡಿ ಹೂಳಿದ ದೃಗ್ಯುಗಳವನು (ಪೂಜಕಥ. ೩೬-೨೯). ೧೩. ಹೊಗು ; ಪ್ರವೇಶಿಸು : ಹೂಗಣೆ ಹೃದಯವನು ಹೂಳಿದವು [ಪಾಠಾಂ. ತಾಗಿದುದು] (ಕುಮಾಸಂ. ೨-೬).

ಹೂಳಿಡು, ಹೂತಿಡು = (ನೆಲದಲ್ಲಿ) ಮಣ್ಣಿಡು ; ಬಚ್ಚಿಡು : ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ . . . ಹತ್ತುಸಾವಿರಹೊನ್ನು ತಿಪ್ಪೇಲಿ ಹೂಳ್ಟು ಮತ್ತೆ ಉಪ್ಪಿಲ್ಲದೆ ಉಂಡ್ಕಲ್ಲೊ ಪ್ರಾಣಿ (ಪುರಂದ. ೦-೬೭ ೦); ಹೆಗ್ಗುಸರೆಂದರೆ 'ಗೃಹಸ್ವಾಮಿನಿಯರು', ಎಂಬ ಚೆಂದವಾದ ಹೆಸರಿನಿಂದ ಅವರನ್ನು ಅಡುಗೆಯ ಮನೆಯಲ್ಲಿ ಹೂಳಿಡುವ ಕಾಲವು ಮುಗಿದು ಹೋಯ್ತು (ಯಕ್ಷಪ್ರ. ೦೪೦); ಹಣವನ್ನು ಹೂಳ್ಟು, ಅದರ ಮೇಲೆ ಗೋಣೆತಟ್ಟನ್ನು ಹಾಸಿಕೊಂಡು ಯಾವಾಗಲೂ ಅಲ್ಲಿಯೇ ಕೂತಿರುತ್ತಿದ್ದನು (ಪಂಚತಂ. X. ೩); ಗೆದ್ದವರು ಬಳೆಗಾಜನ್ನು ಹೂತಿಡುವ ಕೆಲಸವನ್ನು ಮಟಿಸಬೇಕಾಗುತ್ತದೆ (ಕಲಿಕೋ. I. ೬೦೩); ನೆಲದಲ್ಲಿ ರೂಪಾಯಿ ಹೂತಿಟ್ಟರೇನು ಫಲ? (ಪಪಕಾ. I, ೩೭೦).

[ದೇ.-ತ ಮಲ. ಪೂಟು, ಪೂಣು ; ಕೊಡ. ಪುಳ್ ; ತೆಲು. ಪೂಡುಚು, ಪೂಡ್ಚು ; ಗಾಯ್ಕಿ. ಪುರ್ಗ್ ; ಕೋತ. ಪುಗ್]

ಪೂಟ್ಕೆ (ನಾ). ಶವವನ್ನು ಹೂಳುವುದು,–ಸಮಾಧಿ ಮಾಡುವುದು : ಇನ್, ಅವಳ ಮೇಲೆಯುಮ್ ಪೂಟ್ಕಿಸಿದಪೆನ್. ಈ ಪೂಟ್ಕೆಯಾ ಸಂಚಿನೊಳಗೆ ಸರಿಪಾಲ ತಪ್ಪನ್. ಕರೆತನ್ನಿಮವಳನ್ (ಅಂತಿಗೂ. ೨೩-೧೩೬).

[ಪೂಟ್ + – ಕೆ]

ಪೂಟ್ಟಿ 'ಪೂಟ್ಟು' ಪರಾ.

ಪೂಟ್ಟು 'ಪೂಟ್' ಪರಾ.

ಪೃಕ್ತಿ (ನಾ). ಸ್ಪರ್ಶ ; ಸಂಪರ್ಕ : "ಸ್ಪೃಷ್ಟಿಃ, ಪೃಕ್ತಿಃ – ೨ ಮುಟ್ಟುವಿಕೆ, ಸೋಂಕುವಿಕೆ" (ಸಿದ್ಧಾಂತಿ. ೩೭೭). [ಸಂ.]

ಪೃಚ್ಛಕ (ನಾ). (ಪ್ರಶ್ನೆಯನ್ನು) ಕೇಳುವವನು : 'ಪೃಚ್ಛಕಲಗ್ನ' ಪರಾ. [ಸಂ.]

ಪೃಚ್ಛಕಲಗ್ನ (ನಾ.) [ಜ್ಯೋತಿ] ಪ್ರಶ್ನಿಸುವ ಕಾಲ : ದಿವಾಕರನುಂ ಪೃಚ್ಛಕಲಗ್ನದೊಳ್ ನೆಲಸೆ ಮತ್ತಂ ಗ್ರೀಷ್ಮಮಾ ಕಾಲಮುಂ (ಶಾಕಂ. ೨೯-೬); ಪೃಚ್ಛಕಲಗ್ನದಿಂ ಸರುತದಿಂದಾರೂಢದಿಂ ನೋಡಿದಾ ಬೋಧಂ . . . ಭೋಂಕನೆ ಪೇಳ್ವ ಜೋಯಿಸಮಮಾರ್ಗಂ ಮರ್ತ್ಯರೊಳ್ ದುರ್ಲಭಂ (ಸುಳಾಸಂ. ೩-೨೦). [ಸಂ.]

ಪೃಚ್ಛನೆ (ನಾ). ೧. ಕೇಳುವುದು ; ಪ್ರಶ್ನಿಸುವುದು. ೨. ವಿಚಾರಣೆ. ೩. [ಜೈನ]ವಾಚನ, ಪೃಚ್ಛನೆ, ಅನುಪ್ರೇಕ್ಷೆ, ಆಮ್ನಾಯ, ಧರ್ಮೋಪದೇಶ—ಎಂಬ ಪಂಚವಿಧಸ್ವಾಧ್ಯಾಯಗಳಲ್ಲಿ ಒಂದು; "ಶಬ್ದಾರ್ಥಗಳೆರಡರಲ್ಲಿಯೂ ಪ್ರಶ್ನೆಗಳನ್ನು ಮಾಡಿ ನಿರ್ಣಯ ಮಾಡಿಕೊಳ್ಳುವುದು" (ಶೈನಶೋ. ೦೬೨) : ವಾಚನೆಯುಂ ಪೃಚ್ಛನೆಯುಮನುಪ್ರೇಕ್ಷೆಯುಮಾಮಾಯಮುಂ ಧರ್ಮೋಪದೇಶಮುಮೆಂಬ ಪಂಚವಿಧಸ್ವಾಧ್ಯಾಯದೊಳಂ ನೆಱೆದು (ಇಷಪ್ರ. ೧೨-೪ ೨); ವಾಚನಾ – ವಕ್ಖಾಣಿಸುವುದುಂ, ಪೃಚ್ಛನಾ–ಬೆಸಗೊಳ್ವುದುಂ . . . ಧರ್ಮೋಪದೇಶಾ–ಧರ್ಮಮನುಪದೇಶಂಗೆಯ್ವುದುಂ ಎಂಬಯ್ದುಸ್ವಾಧ್ಯಾಯವಿಕಲ್ಪಂಗಳೆಪ್ಪುವು (ತತ್ವಾರ್ಥ. ೩೯೯); ಸ್ವಾಧ್ಯಾಯವು ವಾಚನೆ, ಪೃಚ್ಛನೆ, ಅನುಪ್ರೇಕ್ಷೆ, ಆಮ್ನಾಯ, ಧರ್ಮೋಪದೇಶ ಎಂದು ಅಯ್ದು ಬಗೆಯಾಗಿದೆ (ಶೈನರ. ೬೦).

[ಸಂ. ಪೃಚ್ಛನ]

ಪೃಚ್ಛಿಸು (ಕ್ರಿ). ಪ್ರಶ್ನೆಮಾಡು ; ಪ್ರಶ್ನಿಸು : "ಗಾಂಧಾರೀನೂ ರಾಜರ ತಾಯಿನ ಅಲ್ಲ ಏನರೀ ?" ವಿಶ್ವಾಸ ಪೃಚ್ಛಿಸಿದ (ರೀಕಹ. I. ೪೭).

[<ಪೃಚ್ಛನೆ + – ಇಸು$_3$]

ಪೃಚ್ಛೆ (ನಾ). ೧. ಕೇಳುವುದು; ಪ್ರಶ್ನೆಮಾಡುವುದು; ಪ್ರಶ್ನಿಸುವುದು : "ಪ್ರಶ್ನಃ, ಅನುಯೋಗಃ, ಪೃಚ್ಛಾ–೩ ಕೇಳುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೩೨). ೨. ಪ್ರಶ್ನೆ : ಪರಮಹಂಸಂ ಬಂದು ಕುಳ್ಳಿರ್ದೊಡಿತ್ತು ಬಹುಶಿಷ್ಯರ್ಕ್ಕಮನೆಯ್ದು ನೀವೆಂಮಗೆ ಪೇಳುಂ ಸ್ವೇಚ್ಛೆಯಿಂ ಪೃಚ್ಛೆಯಂ (ಸುಳಾಸಂ. ೩-೬). ೩. ವಿಚಾರಣೆ ಮಾಡುವುದು; ವಿಚಾರಿಸುವುದು.

ಪೃಚ್ಛಾಪೃಚ್ಛೆ (ದ್ವಿರುಕ್ತಿ) : ನೀವಿಷ್ಟು ಪೃಚ್ಛಾಪೃಚ್ಛೆ ಮಾಡಿದ ಕಾರಣವೇನೆಂದು ನಮಗಿನ್ನೂ ಹೇಳಲಿಲ್ಲವಲ್ಲ ? (ಕಂಬಹಾ. ೦೯); ಭಾರತೀಯರು, ಇಲ್ಲದ ಪೃಚ್ಛಾಪೃಚ್ಛೆ ಮಾಡದೆ, ಎಷ್ಟೋಸಲ ವಿಚಾರ ಸಹ ಮಾಡದೆ, ಪರಾತ್ಪರಸತ್ಯವನ್ನು ಒಪ್ಪಿ ಸ್ವೀಕರಿಸಿ ಬಿಡುತ್ತಾರೆ (ಸಾಹಾಯೋ. ೦೩೯).

ಪೃಚ್ಛೆ ಮಾಡು = ಪೃಚ್ಛಿಸು : ಸಾಮ್ಯವಾದದ ಪ್ರವೃತ್ತಿಗಳ ರಸವೇನು ಎಂದು ಪೃಚ್ಛೆಮಾಡಿ ಆತ್ಮನಲ್ಲಿ ಅವುಗಳ ಉಗಮವನ್ನು ತೋರಿಸಲು ಯತ್ನಿಸುವನು (ಸಾಹಿಲಿ. ೬೯). [ಸಂ. ಪೃಚ್ಛಾ]

ಪೃಚ್ಛ್ಯ (ಗು). ೧. ಕೇಳಬೇಕಾದ ; ಪ್ರಶ್ನಿಸಬೇಕಾದ. ೨. ವಿಚಾರಣೆ ಮಾಡಬೇಕಾದ; ವಿಚಾರಿಸಬೇಕಾದ. [ಸಂ.]

ಪೃತನಾಜಾಳ (ನಾ). ಸೇನೆಯ ಸಮೂಹ,–ಗುಂಪು : ಗಿರಿರಾಜೋದಗ್ರಸಿಂದೂರಿತಕರಟಿಘಟಾಟೋಪಮಂ . . . ಚಿತ್ರನೇತ್ರಾಂಬರನಾನಾ ಹೇಕಿಹಸ್ತೋದ್ಭಟಭಟಪೃತನಾಜಾಳಮಂ ಚಿತ್ತದೊಳ್ ವೀರರಸಂ ಕೈಗಣ್ಣ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ (ಆದಿಪು. ೦೯-೬೭).

[ಸಂ. ಪೃತನಾಜಾಲ]

ಪೃತನೆ (ನಾ). ೧. ಸೈನ್ಯ; ಪಡೆ : "ಪೃತನಾ, ಸೇನಾ . . . ಅನೀಕಂ

—ಈ ೧೦ ಪಡೆ" (ಹಲಾಯು. ೭೫-೩೦೩); ಪತ್ತಿಯೆಂದುಂ ಸೇನೆಯೆಂದುಂ ಸೇನಾಮುಖಮೆಂದುಂ ಗುಲ್ಮಮೆಂದುಂ ವಾಹಿನಿಯೆಂದುಂ ಪೃತನೆಯೆಂದುಂ ಚಮುವೆಂದುಮಾನೀಕಿನಿಯೆಂದುಮಿಂತೆಂಟುತೆಱದಿಂ ಪಡೆಗೆ ಪೆಸರಕ್ಕುಂ (ಶಂರಾಮಾ. ೦೩-೪ ಪ); ಫಣಿಪತಿ ಪೃತನಾಭರದಿಂ ಪ್ರಭಗ್ನಫಣನಾದುದು ಸೂನೃತಮೆಂದು ಸೂಚಿಪಂತದ್ಭುತವಾದುದು ಬಾಣಗಮನದೊಳ್ ಭೂಕಂಪಂ (ಜಗಂ. ೦೬-೪೫); ಅತ್ತಲಾ ತೆರೆತೆರೆ ತೆರಳ್ದುದದ್ಭುತಪೃತನೆ (ಶ್ರೀರಾಮಾ. ೭೫೨-೪೬). ೨. ೨೪೩ ಆನೆಗಳು, ೨೪೩ ರಥಗಳು, ೭೨೯ ಕುದುರೆಗಳು ಮತ್ತು ೧೨೧೫ ಕಾಲಾಳುಗಳಿಂದ ಕೂಡಿದ ಒಂದು ಸೇನಾವಿಭಾಗ : ಆನೆ ೨೪೩ ರಥ ೨೪೩ ಕುದಿರೆ ೭೨೯ ಕಾಲಾಳು ೧೨೧೫ಯಿದು ೧ ಪೃತನೆಯೆಂಬ ಬಲ (ವೃಪಹಾ. ಅಮಾಂಠ. ೦-೦೨). ೩. ಕದನ; ಯುದ್ಧ. [ಸಂ. ಪೃತನಾ]

ಪೃಥಕ್ಕರಣ (ನಾ). ಬೇರೆಬೇರೆ ಮಾಡುವಿಕೆ ; ವಿಂಗಡಿಸುವಿಕೆ : ವಿಂಗಡಣೆ : ಕಲೆಯು ವೈಜ್ಞಾನಿಕಪೃಥಕ್ಕರಣಕ್ಕೆ (Scientific analysis) ತಲೆಬಾಗುವ ಶಾಸ್ತ್ರವಲ್ಲ (ಶಾಸ್ತ್ರ. ೦೨). [ಸಂ.]

ಪೃಥಕ್ಕರಣೆ (ನಾ). = ಪೃಥಕ್ಕರಣ : ಈ ವಿಷಯದಲ್ಲಿ ಶ್ರೀಗೋವಿಂದ ಪೈಗಳು ಮಾಡಿದ ಪೃಥಕ್ಕರಣೆ ಯೋಗ್ಯವೇ ಆಗಿದೆ (ಕಸಾಸ. ೬೬); ಈ ಕವಿಯ ಕಾಲಕ್ಕಾಗಲೇ ಭಾಷಾಕ್ಷೇತ್ರದ ಪೃಥಕ್ಕರಣೆ ನಡೆದಿತ್ತೆಂಬುದು ಸಂತೋಷದಾಯಕವಾದ ಮಾತು (ಬ್ರಾಪಿಪಿ. ೦೨ ಹಿನ್ನೆಲೆ). [ಸಂ. ಪೃಥಕ್ಕರಣ]

ಪೃಥಕ್ಕರಿಸು (ಕ್ರಿ). ವಿಂಗಡಿಸು ; ವಿಭಾಗಿಸು : ಕಥೆ ಮತ್ತು ರೇಖಾಚಿತ್ರಗಳ . . . ಸಾಮ್ಯ ವೈಷಮ್ಯಗಳನ್ನು ಬರಹಗಾರರೇ ನೇರವಾಗಿ ಪೃಥಕ್ಕರಿಸದೆ, ಬೇರೊಬ್ಬರ ಬಾಯಿಂದ ಹೇಳಿಸಿರುವ ರೀತಿ ಮನೋಜ್ಞವಾಗಿದೆ (ಶ್ರೀಷ್ಠಪ್ರ. iv ಮುನ್ನುಡಿ); ಕಾದಂಬರಿಗಳಲ್ಲಿ ಪಾತ್ರ ಮೇಲ್ಮಟ್ಟದ ಹುಡುಗ—ಹುಡುಗಿಯರ ಗುತ್ತೆಯಲ್ಲ. ಕೇವಲ ಅವರ ಮುಳ್ಳು ಪರಚಿದ ಸಂಕಷ್ಟಗಳನ್ನು ಹೇಳುತ್ತ, ವರ್ಣಿಸುತ್ತ, ಪೃಥಕ್ಕರಿಸುವುದೊಂದೇ ಕಾದಂಬರಿಯ ವಸ್ತುವಲ್ಲ (ರಕ್ತರೂ. ಪ್ರಸ್ತಾಪ). [ಪೃಥಕ್ಕರಣ + —ಇಸ್ತು]

ಪೃಥಕ್ತ್ವ (ನಾ). ೧. ಬೇರೆಯಾಗುವಿಕೆ; ಹೊರತಾಗಿರುವಿಕೆ; ಪ್ರತ್ಯೇಕತೆ. ೨. = ಪೃಥಕ್ತ್ವವಿತರ್ಕವೀಚಾರ : ಇರ್ವರುಪಶಮಕರ್ಗಂ ನಾನಾಜೀವಾಪೇಕ್ಷೆಯಿಂ ಸಾಮಾನ್ಯದವೊಲ್ ಏಕಜೀವಾಪೇಕ್ಷೆಯಿಂ ಜಘನ್ಯದಿಂ ಅಂತರ್ಮುಹೂರ್ತಂ ಉತ್ಕೃಷ್ಟದಿಂ ಪಲ್ಯೋಪಮಶತಪೃಥಕ್ತ್ವಂ (ತತ್ತ್ವಪ್ರ. ೪೦). [ಸಂ.]

ಪೃಥಕ್ತ್ವವಿತರ್ಕವೀಚಾರ (ನಾ). [ಜೈನ] ಎಂಟನೆಯ ಗುಣಸ್ಥಾನದಿಂದ ಹನ್ನೆರಡನೆಯ ಗುಣಸ್ಥಾನದ ಕೆಲವು ಭಾಗಗಳವರೆಗೆ ನಡೆಯುವಂತಹ ಶುಕ್ಲಧ್ಯಾನ; ಪ್ರಥಮಶುಕ್ಲಧ್ಯಾನ; ಪ್ರ "'ವಿತರ್ಕ' ಎಂದರೆ ಶಾಸ್ತ್ರ, 'ವೀಚಾರ' ಎಂದರೆ ವಿಪರೀತವರ್ತನ" (ಶೈನಕೋ. ೧೬೨); "ಮೊದಲ ಶುಕ್ಲಧ್ಯಾನದಲ್ಲಿ ೮ನೆಯ ಗುಣಸ್ಥಾನದಿಂದ ೧೨ನೆಯ ಗುಣಸ್ಥಾನದ ಕೆಲವು ಭಾಗದವರೆಗೆ ನಡೆಯುವಂಥದು" (ಪಡ್ಡಾರಾ. ಶೈನಪಾರಿಭಾಷಿಕಶಬ್ದಕೋಶ); "ಗುಪ್ತಿ ಮುಂತಾದವುಗಳ ಅಭ್ಯಾಸ ಮಾಡಿದವನು ಮತ್ತು ದ್ರವ್ಯಪರ್ಯಾಯಗಳ ಚಿಂತನೆಯಲ್ಲಿ ನಿಪುಣರಾದ ಮುನಿಗಳು ಅರ್ಥ, ವ್ಯಂಜನ, ಕಾಯಯೋಗ, ವಚನಯೋಗ ಇವುಗಳ ಪೃಥಕ್ ಪೃಥಕ್‌ರೂಪದಿಂದ ಸಂಕ್ರಮಣ ಮಾಡುವ ಮನಸ್ಸಿನ ಮುಖಾಂತರವಾಗಿ ಮೋಹನೀಯ ಕರ್ಮ ಪ್ರಕೃತಿಗಳ ಉಪಶಮ ಅಥವಾ ಕ್ಷಯ ಮಾಡುವುದಕ್ಕೋಸುಗ ಉದ್ಯುಕ್ತರಾಗುತ್ತಾರೆ. ಅಂಥವರಲ್ಲಿ ಈ ಶುಕ್ಲಧ್ಯಾನವು ಉದಯವಾಗುತ್ತದೆ" (ಅಪಿಪು. ಶೈನಪಾರಿಭಾಷಿಕಶಬ್ದಕೋಶ) : ಪೃಥಕ್ತ್ವವಿತರ್ಕವೀಚಾರವೆಂಬ ಪ್ರಥಮಶುಕ್ಲಧ್ಯಾನದೊಳ್ ಕೂಡಿಯುಪಶಾಂತಗುಣಸ್ಥಾನದೊಳಿರ್ದು ರತ್ನತ್ರಯಮಂ ಸಾಧಿಸಿ ಸಯಸತ್ತಮದೇವನಾಗಿ ಪುಟ್ಟಿದೊಂ (ಪಡ್ಡಾರಾ. ೨೯-೧೫); ಪೃಥಕ್ತ್ವವಿತರ್ಕವಿ[ವೀ]ಚಾರವೆಂಬ ಮೊದಲ ಶುಕ್ಲಧ್ಯಾನದೊಳ್ ಸಮಾಹಿತನುಪಶಾಂತಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದು ಸರ್ವಾರ್ಥಸಿದ್ಧಿಯೊಳಹಮಿಂದ್ರನಾದಂ (ಅಧಿಪು. ೬-೩೪ ಪ); ಪೃಥಕ್ತ್ವವಿತರ್ಕವೀಚಾರವೆಂಬ ಪ್ರಥಮಶುಕ್ಲಧ್ಯಾನಪರಿಣತಿಯಿಂ ಕ್ಷೀಣಕಷಾಯವೀತರಾಗಛದ್ಮಸ್ಥಗುಣಸ್ಥಾನವ್ಯವಸ್ಥಿತನಾಗಿ (ಸುಕುಮಾ. ೮-೬೨ ಪ). [ಪೃಥಕ್ತ್ವ + ವಿತರ್ಕ + ವೀಚಾರ ?]

ಪೃಥಕ್ಪರ್ಣೆ (ನಾ). ಒಂದು ಬಗೆಯ ಸಸ್ಯ ; ನರಿಹೊನ್ನೆಗಿಡ : "ಪೃಶ್ನಿಪರ್ಣೀ, ಪೃಥಕ್ಪರ್ಣೀ, ಚಿತ್ರಪರ್ಣೀ, ಅಂಘ್ರಿಪರ್ಣಿಕಾ—೪ ಕೋಲಿಪೊನ್ನಯೆಂಬುವದು, ನರಿಹೊನ್ನೇಗಿಡ, ನಕ್ಕಚಿಕ್ಕನಾಕು" (ಸಿದ್ಧಾಂತಿ. ೦೩೩). [ಸಂ. ಪೃಥಕ್ಪರ್ಣೀ]

ಪೃಥಗರ್ಥ (ನಾ). ಬೇರೆಯ ಅರ್ಥ : ಪೆಸರೊಳಸಂಭವಮೆನಿಸುಗುಮ ಸಂಭವಂ ತದ್ವಿಶೇಷಣಂ ಪೃಥಗರ್ಥಂ ಪೊಸಯಿಸೆ ಭಿನ್ನರಸಂ ಸುಪ್ರಸಿದ್ಧವಾಚ್ಯದೊಳದಲ್ತೆ ವಕ್ರೋಕ್ತಿ ಕರಂ (ಕಾವ್ಯಾಪ. ೭೬೫); ಏಗಂ ವಲಂ ವೆಱಂ ದಲ್ ತಾಗುಗುಮತಿನಿಶ್ಚಯಾರ್ಥಮಂ . . . ಬೇಱೆಬೇಱೆಯೆನೆ ಪೃಥಗರ್ಥಂ (ಕಮಪ. ೩೦೬). [ಸಂ.]

ಪೃಥಗ್ಜನ (ನಾ). ೧. ತಿಳಿವಳಿಕೆ ಇಲ್ಲದವನು ; ದಡ್ಡ ; ಪಾಮರ : "ಪ್ರಾಕೃತನಪಶದಂ ಪೃಥಗ್ಜನನಿತರಂ ಪಾಮರನೆನಿಪ್ಪನಕ್ಕುಂ ಜಾಲ್ಮಂ" (ಪಸ್ತುಕೋ. ೬೪-೭೨); ಪೃಥಗ್ಜನವಂತುದಾತ್ತಚಿತ್ತಂ ಜನಪತಿ ಧೈರ್ಯಾಂಬುರಾಶಿ ಚಳಿಯಿಸಿದವನೆ (ಅಪಿಪು. ೦೦-೪೮). ೨. ನೀಚ ; ದುಷ್ಟ : "ವಿವರ್ಣಃ, ಪಾಮರಃ, ನೀಚಃ, ಪ್ರಾಕೃತಃ, ಪೃಥಗ್ಜನಃ . . . ಇತರಃ—೧೦ ನೀಚನ ಪೆಸರು" (ಸಿದ್ಧಾಂತಿ. ೩೦೨). [ಸಂ.]

ಪೃಥಗ್ಭಾವ (ನಾ). ಬೇರೆಯೆಂಬ ಭಾವನೆ,—ಆಲೋಚನೆ ; ಬೇರೆ ಎಂಬ ಕಲ್ಪನೆ : ಅನೇಕ ಪ್ರಕಾರಕಪಟೋಪಾಯಂಗಳಿಂದತಿಸ್ನೇಹಿತರೊಳ್ ಪೃಥಗ್ಭಾವಮಂ ಮಾಟ್ಟುದೇ ಭೇದಮೆಂಬುದು (ಪಂಚತಂ. ೨೦-೨೨) ; ನೀವು ನಾಮೆಬೀ ಪೃಥಗ್ಭಾವಾವಲಂಬನವೇಕೆ ನಿಮ್ಮಲಿ ನಾವು ನಮ್ಮಲಿ ನೀವೆಯೆಂದನು ನಗುತ ಕುರುರಾಯ (ಕುಪ್ಯಾಸ. ೧೩-೩೬) ; ಭಾವಿಸಲು ಯಾದವರೊಳು ಪೃಥಗ್ಭಾವದಲಿ ಸಂಕರುಷಣಾಖ್ಯೆಯನೀ ವಿಬುಧನುತನೆಯ್ದುವನು (ವಿಭಾಗ. ೦೦-೬-೪೦). [ಸಂ.]

ಪೃಥಗ್ವಿಧ (ನಾ). ಬೇರೆ ಬೇರೆಯ ರೀತಿ,—ವಿಧ : "ವಿವಿಧಃ, ಬಹುವಿಧಃ, ನಾನಾರೂಪಃ, ಪೃಥಗ್ವಿಧಃ—೪ ಬೇರೆ ಬೇರೆ ರೂಪವುಳ್ಳದ್ದು, ನಾನಾರೂಪವಾಗಿರುವಂಥಾದ್ದು" (ಸಿದ್ಧಾಂತಿ. ೩೪೮). [ಸಂ.]

ಪೃಥವಿ (ನಾ). ಭೂಮಿ; ಧರೆ: ಪೃಥವಿಗೊಱಗಿದುವೆಂಟುಸಾವಿರಪೃಥುಳಹಯನುಗ್ಗಾಯ್ತು ಗಣನೆಯ ರಥ ಪದಾತಿಯೊಳಿತ್ತಲೆನೆ ಸವಱದನು ಪರಬಲವ (ಕುಪ್ಯಾಗ. ೧-೦೨). [ಸಂ. ಪೃಥವೀ]

ಪೃಥಾಕು (ನಾ). ಹಾವು ; ಸರ್ಪ : "ವಿಷಧರಃ, ದಂದಶೂಕಃ. . . ಪೃಥಾಕುಃ, ಕಾಕೋದರಃ . . . ಭುಜಂಗಮಃ—ಈ ೨೫ ಪಾವಿನ ಪೆಸರ್" (ಹಲಾಯು. ೦೦೫ ೦೬) ; ಪೃಥಾಕು ಸನ್ಮಂಡನನೈಕ್ಯಮಂ ವಿಧಿಸುವೀ ಕೃತಿಯಂ ಕಿಱಿದೆನ್ನಬಪ್ಪುದೇ (ಪತಿಂ. ೦ ೦೮). [ಸಂ.]

ಪೃಥಾಸುತ (ನಾ). ಕುಂತಿಯ ಮಕ್ಕಳಲ್ಲಿ ಒಬ್ಬ ; ಭೀಮ : ರಥವಾಜಿಗಳೊಂದೆಸೆಯೊಳ್ ರಥಂಗಳೊಂದೆಸೆಯೊಳುರುಳ್ದು ಕೆಡೆದುವು ನೋಡಾ . . . ಪೃಥಾಸುತಪೃಥಿತ ಪೃಥುಗದಾಪ್ರಹರಣೆಯಿಂ (ಗದಾಯು. ೩-೬). ಪ್ರ ಧರ್ಮರಾಯ, ಭೀಮ, ಅರ್ಜುನ ಈ ಮೂವರೂ ಕುಂತಿಯ ಮಕ್ಕಳಾದರೂ ಅರ್ಜುನನೊಬ್ಬನಿಗೇ ವಿಶೇಷವಾ. ಈ ಹೆಸರನ್ನು ಅನ್ವಯಿಸುವುದುಂಟು ಮತ್ತು ಪಾಂಡವರಲ್ಲಿ ನಕುಲ ಸಹದೇವರು ಮಾದ್ರಿಯ ಮಕ್ಕಳಾದರೂ ಒಟ್ಟು ಪಾಂಡವರೈವರಿಗೂ ಅನ್ವಯಿಸಿ ಹೇಳುವುದು ಬಳಕೆಯಾಗಿದೆ.

ಪೃಥಾಸುತರ್ —ಕುಂತಿಯ ಮಕ್ಕಳು ; ಪಾಂಡವರು: ನಿರ್ದೋಷಿಗಳೊಳ್ ಪೃಥಾಸುತರೊಳಿಂ ಮಗುಟ್ಟುಂ ಪುದುವಾಟ್ನೆಂಬೆನೇ (ಸಂಪಣಾ. ೦೩-೦೯) ; ಅಗಡು ಮಾಡಿದ ನಿಮ್ಮ ಮಕ್ಕಳ ವಿಗಡತನಕಂಜಿದರೊ ದುರಿತದ ಸೊಗಡಿಗಂಜಿದರೋ ಪೃಥಾಸುತರೆಂದಳಿಂದುಮುಖಿ (ಕುಪ್ಯಾಸ. ೦೩-೪೬). [ಸಂ.]

ಪೃಥಿವಿ (ನಾ). ೧. ಪಂಚಭೂತಗಳಲ್ಲಿ ಒಂದು ; ನೆಲ ; ಧರೆ ; ಭೂಮಿ : "ಭೂಃ, ಭೂಮಿಃ, ಪೃಥಿವೀ . . . ಧರಾ, ಆಧಾರಾ—ಈ ೩೭ ಭೂಮಿಯ ಪೆಸರ್" (ಹಲಾಯು. ೨೬-೦) ; ಸೊಗಯಿಸವೆಂದು ಪೃಥಿವ್ಯಾದಿಗಳೆನಿಸುವ ಪಂಚಭೂತಮೆಲ್ಲವನುಟಿದಾವಗಮುಜ್ಜ್ವಳಾಂಗಿಯಂ ಧವಳಗುಣದೆ ನಿರ್ಮಿಸಿದನಾಗವೇಟ್ಕುಂ ಧಾತ್ರಂ (ಕಾದಂಪು. ೬೬೦) ; ಪೃಥಿವಿ ನೆಗ್ಗಿತು ಹೊತ್ತ ಕಮಠನ ವ್ಯಥೆಯನಾರುಸುರುವರು ಸುಮಹಾರಥರ ಹೊದಱಲಿ ಹೊಕ್ಕನುರಿ ಬಲುಮೆಳೆಯ ಹೊಕ್ಕಂತೆ (ಕುಪ್ಯಾಸ್ತ್ರೋ. ೨-೩೦) ; ಮತ್ತಂ ಪೃಥ್ವಂಶಮರ್ಧಮುಂ ಮಿಕ್ಕ ಭೂತಂಗಳಷ್ಟಮಾಂಶಂಗಳ್ ನಾಲ್ಕುಂ ಕೂಡಿ ಪೃಥಿವಿಯೆನಿಕ್ಕುಂ (ಕಳಿಪ. ೨೮ ಪ). ೨. ಮಣ್ಣು.

ಪೃಥಿವಿಯಾತ್ಮಜೆ—ಭೂಮಿಯಲ್ಲಿ ಜನಿಸಿದವಳು ; ಸೀತೆ : ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು ಪಥಮಾವುದೆಂದು ದೆಸೆದೆಸೆಗಳು ನೋಡಿ . . . ಹಲುಬಿದಳ್ಕಲ್ಮರಂ ಕರಗುವಂತೆ (ಸೈಮಿಭಾ. ೦೯-೩೬). [ಸಂ.]

ಪೃಥಿವಿಜೆ (ನಾ). ಭೂಮಿಯಲ್ಲಿ ಹುಟ್ಟಿದವಳು ; ಸೀತೆ : ಪೃಥಿವಿಜೆಯನಱಸಲ್ಕೆ ವೀರಹನುಮಂತನಂ ಕಳುಹಿದಂ ಕಾಕುತ್ಸ್ಥನು (ಸೈಮಿಭಾ. ೦೮-೩). [ಸಂ. ಪೃಥಿವಿಜಾ]

ಪೃಥಿವಿಪ (ನಾ). ಭೂಮಿಯ ಒಡೆಯ; ಪೃಥ್ವೀಪತಿ : ಬಂದುದೇ ಪೃಥಿವಿಪನ ಮಖಕೆಡರಕಟಯೆನುತೆ ಮನದೊಳಗೆ ಕೃಷ್ಣನಂ ಧ್ಯಾನಿಸಿದನು (ಸೈಮಿಭಾ. ೦೩-೨೦). [ಸಂ.]

ಪೃಥಿವಿಪಂಚಕ (ನಾ). [ವೇದಾಂತ] ಭೂಮಿಯ ಅಂಶದಿಂದ ಉತ್ಪನ್ನವಾದ ವಾಕ್ಕು, ಪಾಣಿ, ಪಾದ, ಪಾಯು ಮತ್ತು ಉಪಸ್ಥೆಗಳೆಂಬ ಐದರ ಗುಂಪು : ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥಗಳೈದನ್ನು ಇವು ಪೃಥಿವಿಯ ಆಯಿದುಭಾಗಗಳಿಂದ ಉತ್ಪನ್ನವಾದವುಗಳು, ಇವು ಪೃಥಿವಿ ಅಂಶವಾದ್ದರಿಂದ ಇವುಗಳನ್ನು ಪೃಥಿವಿಪಂಚಕವೆಂದು ಹೇಳುವರು (ವೇದಾಂತ. ಸಾಂಖ್ಯಾಸೂತ್ರ). [ಸಂ.]

ಪೃಥಿವಿಪತಿ (ನಾ). ಭೂಮಿಯ ಒಡೆಯ ; ರಾಜ : ಪೃಥಿವಿಪತಿ ಕೇಳೆದೆಯ ಮೇಲೆ ಕೋಲ್ಕೀಲಿಸಲ್ ವ್ಯಥಿಸಿ ಮೈಮಱೆದನು (ಸೈಮಿಭಾ. ೬-೩೯). [ಸಂ.]

ಪೃಥಿವಿಪಾಲ (ನಾ). =ಪೃಥಿವೀಪಾಲ. [ಸಂ.]

ಪೃಥಿವೀಚಕ್ರ (ನಾ). ಭೂಮಂಡಲ ; ಭೂಭಾಗ : ಪೃಥಿವೀಚಕ್ರಂ ಪ್ರಕಂಪಾಕುಳಿತಮುದಧಿಸೀಮಾತಿಮಾತ್ರಂ ಘನಾಧ್ವಂ ಮಥಿತಾಂಭೋವಾಹಮಪ್ಪಂತೊದವೆ ಬಹುಳಪಕ್ಷಾನಿಳಂ ಕೂಡೆ ಬಂದಂ . . . ಆ ವೈನತೇಯಂ (ಇಗಪ. ೦೦-೯೦). [ಸಂ.]

ಪೃಥಿವೀಧಾತು (ನಾ). [ತತ್ತ್ವಶಾ] ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಮತ್ತು ಋತುಗಳೆಂಬ ಆರು ಧಾತುಗಳಲ್ಲಿ ಒಂದು : ಪೃಥಿವೀಧಾತು . . . ಋತುಧಾತು ಇವುಗಳೇ ಆರು ಧಾತುಗಳು. ಇವುಗಳಲ್ಲಿ ಪೃಥಿವೀಧಾತುವು ಅಂಕುರದಲ್ಲಿ ಕಾಠಿಣ್ಯವನ್ನು ಮತ್ತು ಗಂಧವನ್ನು ಹುಟ್ಟಿಸುವುದು (ಶಾತತ್ತ್ವ. ೨೦೮). [ಸಂ.]

ಪೃಥಿವೀಪತಿ (ನಾ). ಭೂಮಿಯ ಒಡೆಯ ; ರಾಜ : ಪೃಥುಲಯಶನಮಿತತೇಜಂ ಪೃಥಿವೀಪತಿನತಕಿರೀಟಮಣಿಗಣಕಿರಣಗ್ರಥಿತಪದಪೀಠನಾಗಳ್ ರಥನೂಪುರಚಕ್ರವಾಳಪುರಮಂ ಪೊಕ್ಕಂ (ಶಾಂತೀಶ್ವ. ೬-೦೩೩). [ಸಂ.]

ಪೃಥಿವೀಪಾಲ, ಪೃಥಿವೀಪಾಳ (ನಾ). ಭೂಮಿಯನ್ನು ಪಾಲಿಸುವವನು ; ಭೂಮಿಯ ರಕ್ಷಕ ; ರಾಜ. ಪೃಥಿವೀಪಾಳ : ಪೃಥಿವೀಪಾಳಸಹಸ್ರಂ ಪ್ರಥಿತಮಹೀನಾಥನಂತೆ ದೀಕ್ಷೆಯನಾಂತೇಂ ಕಥಿಯಿಪೊಡೆಯಥಾರಾಜಾ ತಥಾಪ್ರಜಾಯೆಂಬ ನೀತಿಯಂ ಪ್ರಕಟಿಸಿತೋ (ಶಾಸ್ತ್ರಗೃ. ೦೨-೩೦). [ಸಂ.]

ಪೃಥಿವೀಪಾಳ 'ಪೃಥಿವೀಪಾಲ' ನೋ.

ಪೃಥಿವೀರಾಜ್ಯಂಗೆಯ್ (ಕ್ರಿ). ಭೂಮಿಯನ್ನು ಆಳು ; ರಾಜ್ಯಭಾರ ಮಾಡು : ಗಂಡತ್ರಿಣೇತ್ರ ಶ್ರೀಬೆಯ್ದುಂಬಮಹಾರಾಜರ್ ಪೃಥಿವೀರಾಜ್ಯಂಗೆಯೆ (ಎಇ. XXIV. ೨೬-೪ ; ಸು. ೮೮೮). [ಸಂ. ಪೃಥಿವೀ + ರಾಜ್ಯಂಗೆಯ್].

ಪೃಥಿವೀಶ್ವರ (ನಾ). ಭೂಮಿಯ ಒಡೆಯ ; ರಾಜ : ಆ ಪೃಥಿವೀಶ್ವರಂ ಪಗಲ ತಿಂಗಳನಚ್ಚರಿವಟ್ಟು ನೋಡಿದಂ (ಸಂಪ್ರಪು. ೯-೬). [ಸಂ.]

ಪೃಥು (ಗು). ೧. ವಿಸ್ತಾರವಾದ ; ವಿಶಾಲವಾದ. ೨. ದೊಡ್ಡದಾದ ; ಗಾತ್ರವಾದ : ಪೃಥುಕಮಲಪರಿಮಲಪರಾಗಭರಕಲಿಲದಿಂ . . . ಪರಮಜಿನರಾಜನಂ ದುರಿತಾಬ್ದರಾಜನಂ ಪೂಜಿಸಿ (ಸಂಪ್ರಪು. ೬-೦೦೦ ಕಗಳೆ) ; ಪಾಂಡುಸುತರೈವರು ನಡೆಯಲು . . . ಆ ಪೃಥುಕುಕ್ಕುರನು ಸಪ್ತಮವಾಗಿ ತಾನನುಸರಿಸಿದುದು (ಕಿಮ್ಮನು. ೦-೦೯). ೩. ಅಸಂಖ್ಯವಾದ ; ಲೆಕ್ಕವಿಲ್ಲದ ; ಹೇರಳವಾದ. ೪. ವಿವರವಾದ. ೫. ಮಂಖ್ಯವಾದ. ೬. ವಿವಿಧವಾದ; ಬೇರೆಬೇರೆಯ. ೭. ಚುರುಕಾದ; ಕುಶಲತೆಯುಳ್ಳ. (ನಾ). ೮. ವಿಶಾಲವಾಗಿರುವಿಕೆ ; ವಿಸ್ತಾರವಾಗಿರುವಿಕೆ : "ಬಹು ಭೂಯಿಷ್ಟಮದಭ್ರಂ ಬಹುಳಂ . . . ಪೃಥು ಗುರು ಮಹದ್ವಿಶಾಳಂ ವಿಶಂಕಟಂ ವಿಸ್ತೀರ್ಣಂ" (ಪಸ್ತುಕೋ. ೦೦೬-೩೩) ; "ಬೃಹದುರುಪುರು ಪೃಥುಳ ಪೃಥು . . . ವ್ಯೂಢಮೆನೆ ವಿಸ್ತೀರ್ಣಮೆಂದೆನಿಕು" (ಮಂಗಣಾ. ೦೨೯-೬). ೯. ದೊಡ್ಡದಾಗಿರುವುದು ; ಹಿರಿದಾದುದು : "ಬೃಹತ್ . . . ಪೃಥು, ಪೃಥುಳು . . . ಭದ್ರಂ, ವರಿಷ್ಟಂ—ಈ ೧೨ ಹಿರಿದು" (ಹಲಾಯು. ೦೦೬-೦೯). ೧೦. ಒಂದು ಬಗೆಯ ಜೀರಿಗೆ ; ಕರಿಜೀರಿಗೆ : "ಸುಷವೀ, ಕಾರವೀ, ಪೃಥ್ವೀ, ಪೃಥುಃ, ಕಾಲಾ, ಉಪಕುಂಚಿಕಾ—೬ ಕರೀಜೀರಿಗೆ" (ನಿಘಂಕ. ೨೮೯). ೧೧. ಹಿಂಗಿನ ಮರ : "ಕಾರವೀ, ಪೃಥ್ವೀ, ಬಾಷ್ಪಿಕಾ, ಕಬರೀ, ಪೃಥುಃ—೫ ತತ್ಪತ್ರೀ—ಆ ಹಿಂಗಿನ ಮರದ ಹೆಸರುಗಳು" (ನಿಘಂಕ. ೨೮೩). ೧೨. ಅಗ್ನಿ. ೧೩. ವಿಷ್ಣು. ೧೪. ಮಹಾದೇವ ; ಶಿವ. ೧೫. ಅಷ್ಟವಸುಗಳಲ್ಲಿ ಒಬ್ಬ. ೧೬. ಅಫೀಮು. ೧೭. ಪ್ರಸಿದ್ಧರಾದ ಹದಿನಾರು ಜನ ಚಕ್ರವರ್ತಿಗಳಲ್ಲಿ ಒಬ್ಬ ; ೯ ಭೂಮಿಯನ್ನು ಆಳಿದ ಮೊದಲನೆಯ ರಾಜ ಇವನೇ ಎಂದೂ ಇವನಿಂದಲೇ ಭೂಮಿಗೆ 'ಪೃಥ್ವೀ' ಎಂಬ ಹೆಸರಾಯಿತೆಂದೂ ನಂಬಿಕೆಯಿದೆ : ಮಹಿಯೊಳುಳಿದರೇ ಪೃಥುಪುರೂರವ ಹರಿಶ್ಚಂದ್ರಾದಿ ನರಪತಿಗಳು (ಸೈಮಿಭಾ. ೦೮-೩೯). [ಸಂ.]

ಪೃಥುಕ (ನಾ). ೧. ಅವಲಕ್ಕಿ : "ಪೃಥುಕಮೆನಲವಲಕ್ಕುಂ" (ಪಸ್ತುಕೋ. ೯೮-೦೨) ; "ಅವಲಕ್ಕಿ ಪೃಥುಕಮಕ್ಕು" (ಮಂಗಣಾ. ೦೦೦-೬). ೨. ಯಾವುದೇ ಪ್ರಾಣಿಯ ಮರಿ ; ಶಾಬ. ೩. ಮಗು ; ಶಿಶು : "ಬಾಳಃ, ...ಪೋತಃ, ಪೃಥುಕಃ, ಶಿಶುಃ, ಶಾಬಃ, ಡಿಂಬಃ— ಈ ೯ ಮಗುವು" (ಹಲಾಯು. ೦೩-೩೪೮). ೪. ಒಂದು ಬಗೆಯ ರತ್ನ ; ಪಚ್ಚೆ : ಪಿತ್ತಕವೆಂಬುವದು ಗಿಣಿಯ ರೆಕ್ಕೆಯಂತೆ ಇರುವುದು . . . ಪೃಥುಕವೆಂಬುವದು ತಾವರೆಯ ಎಲೆಯ ವರ್ಣವಾಗಿಯಿರುವುದು (ಸೌಗಂಧಿ. ೩೬೭-೦೬). [ಸಂ.]

ಪೃಥುಕತ್ವ (ನಾ). ಎಳೆತನ ; ಬಾಲ್ಯ ; ಶೈಶವ : ದೊರೆವೆತ್ತುದು ಪೃಥುಕತ್ವಂ ಪರಮನೊಳಾತ್ಮೀಯಜನನಿಯುದರದೊಳಿರ್ದುಂ ಪರಿಕಿಪೊಡಾಕ್ರಾಂತಚರಾಚರಗೋಚರಸಕಳಭುವನನಾದುದಱಿಂದಂ (ಸಂಪ್ರಪು. ೦೨-೦೬೬). [ಸಂ.]

ಪೃಥುಕುಂಭ (ನಾ). ವಿಶಾಲವಾದ ಕುಂಭಸ್ಥಳಪ್ರದೇಶ : ಪೃಥುಕುಂಭಂ ದೀರ್ಘಹಸ್ತಂ ವಿಪುಳತರರದಂ ಪೀನಬದ್ಧೋದರಂ . . . ಮೇಚಕೋಚ್ಚಂಡಚಂಚತ್‌ಪೃಥುವೀಭೃತ್ಸಾಮ್ಯಕಾಯಂ ಘನನಿನದಮದೇಂ ಬಂದುದೋ ದಂತಿಜಾಳಂ (ಶಾಶಕ. ೦೩-೬೭). [ಸಂ.]

ಪೃಥುತ್ವ (ನಾ). ವಿಶಾಲವಾಗಿರುವಿಕೆ ; ವಿಸ್ತೀರ್ಣತೆ : "ಪೃಥುತ್ವಮೆಂಬುದಕ್ಕುಂ ಪೃಥಿಮಂ" (ಸಪ್ತಶೋ. ೦೦೭-೨೬). [ಸಂ.]

ಪೃಥುನಿತಂಬಿನಿ (ನಾ). ವಿಶಾಲವಾದ ನಿತಂಬವನ್ನು ಉಳ್ಳವಳು : ಲಳಿತವಿಲಾಸಿನಿಯಂ ಕೋಮಳಾಂಗಿಯಂ ಪೃಥುನಿತಂಬಿನಿ[ಶಾಕಾಂ. ಪೃಥುನಿತಂಬಬಿಂಬಿ]ಯನುಟ್ಟಿದಂ (ಶಕಾಂ. ೩-೦೦). [ಸಂ. ಪೃಥುನಿತಂಬಿನೀ]

ಪೃಥುನಿತಂಬೆ (ನಾ). = ಪೃಥುನಿತಂಬಿನಿ : ಆ ಪೃಥುನಿತಂಬೆ ನಿತಂಬಭರಪರಿಸ್ಖಲಿತಪದವಿನ್ಯಾಸದಿಂದಂಚೆಯಂ ಪಳಂಚಲೆದ ತಣ್ಪುಟ್ಟಿಲ ತಾಣಮುಮಂ . . . ಅವಲೋಕಿಸುತ್ತುಂ (ಶಂಶಾಮಾ. ೯-೦೨೦ ಪ); ಪೆಱತೊಂದೆಡೆಯೊರ್ವ ಪೃಥುನಿತಂಬೆ . . . ಆ ತಳಿರಂ ತನ್ನ ಸೋರ್ಮುಡಿಯೊಳ್ಮುಡಿದು (ಶಾಶಕ. ೦೦-೯೯ ಪ).

[ಸಂ. ಪೃಥುನಿತಂಬಾ (ಪೃಥು + ನಿತಂಬ + —)]

ಪೃಥುಯಶ (ನಾ). ೧. ಅತಿಶಯವಾದ ಕೀರ್ತಿ. ೨. ಅತಿಶಯವಾದ ಕೀರ್ತಿಯನ್ನು ಹೊಂದಿದವನು : ಸಾಹಿತ್ಯನಟೀಶೈಲೂಷನತ್ಯೂರ್ಜಿತ ಶುಭಚರಿತಂ ಸಜ್ಜನಾಧಾರನಿರ್ದಂ ದ್ಯುನದೀಫೇನಪ್ರಕಾಶಪ್ರಥಿತಪೃಥುಯಶಂ ಭಾರತೀಕರ್ಣಪೂರಂ (ಶಂಶಾಮಾ. ೬-೦೬೦). [ಸಂ. ಪೃಥುಯಶಸ್]

ಪೃಥುರೋಮ (ನಾ). ಮೀನು. ತಿಮಿಂಗಿಲ ಮೊದಲಾದ ಜಲಚರ ಪ್ರಾಣಿ : "ಮೀನಂ ಶಫರಂ ತಿಮಿ ಪಾಠೀನಂ ಝಷಮನಿಮಿಷಂ ವಿಶಾರಂ ಮತ್ಸ್ಯಂ ಮೀನವೆಸರ್ ತದ್ಭೇದಮನೂನತಿಮಿತಿಮಿಂಗಿಳಾದಿ ಪೃಥುರೋಮಂಗಳ್" (ಸಪ್ತಶೋ. ೨೨-೩) ; ಪೃಥುರೋಮೇಶ ತಿಮಿಂಗಿಲಂ ತಿಮಿಯ ನೂರಲ್ ಸಿಂಧು ತಾನುಕ್ಕದೇ (ಸೋಮೇಶ. ೬೬) ; ಪ್ರಸಾದವ . . . ಪೃಥುರೋಮ ಭುಂಜಿಸಲು ಜಾಲವನಿಕ್ಕಿಯದನೊಯ್ದು ಧೀವರಂ ಭಕ್ಷಿಸಿದನೀರ್ವರ್ಗೆ ಪದಪಿಂದೆ ಶಿವಲೋಕವಾದುದು (ರಾಶಕ. ೦೨-೨೦).

[ಸಂ. ಪೃಥುರೋಮನ್]

ಪೃಥುಲ, ಪೃಥುಳ (ಗು). ೧. ವಿಶಾಲವಾದ ; ವಿಸ್ತಾರವಾದ : ಶ್ರೀವಧೂಚಂಚತ್ಕುಂಚನಲೀಲಾಮಂದಿರ ಶ್ರೀನಿಲಯ ಪೃಥುಲವಕ್ಷಸ್ಥಲಂ ತೀರ್ಥನಾಥಂ (ಅಪಪು. ೩-೯೯). ೨. ದೊಡ್ಡದಾದ; ಗಾತ್ರವಾದ : ನುತಸುವರ್ಣದ ಚಿತ್ರಮಂಟಪದ ಮಧ್ಯದೊಳು ಪೃಥುಲನವರತುನಮಣಿಖಚಿತಸಿಂಹಾಸನದಿ . . . ಸಿದ್ಧನುಜೇಶಗುರುಮೂರ್ತಿಯೊಪ್ಪಿರ್ದನು (ಗುರುಚಾ. ೦-೯೦) ; ಪೃಥಿವಿಗಿಳಿದತ್ತತುಲವಾ ಪೃಥುಲಪುಷ್ಪರಂ(ಶ್ರೀರಾಮಾ ೨೦೬-೧೯೬). ೩. ಅಸಂಖ್ಯವಾದ ; ಲೆಕ್ಕವಿಲ್ಲದ. ೪. ಅಧಿಕವಾದ ; ಅತಿಶಯವಾದ : 'ಪೃಥುಲಯಶ' ಪರಾ. (ನಾ). ೫. ದೊಡ್ಡವನು; ಹಿರಿಯ : ಸೃಷ್ಟಿಮೂಲಪ್ರಥಮನಾಂ, ಸ್ಫೂರ್ತಿಯಾಂ, ಪೃಥುಲನವ್ ಸುಖದುಃಖಪಾಶದಿಂ ಜೀವರನು ಬಂಧಿಸುವೆನಾಂ ಭಾಪಜಾ! (ಜಗ್ರಾಂಗ. ೨೬-೬೨೬). **ಪೃಥುಳ** : ೧. ಪೃಥುಳಭುಜದಿಂ ಪೃಥ್ವೀಶಂ ತಾನ್ದೆಂ ನೆಲ ನೆಲ್ಲಮಂ (ಕಾಂಪು. ೦೬). ೨. ಅಂಗರುಚಿ ಶರಭಬಲಮಂ ಬಲದ ವಾಜಿಕರಣಂಗಳಂ ಲೋಹಿತಾಕ್ಷಿಗಳತುಳಭೂಧರಶೃಂಗಮಂ ಪೃಥುಳಕಂಧರ ಮೃಗಲುಲಾಯರಿತುಮಹಿಷಿಗಳ ನಡುವಿರ್ದುದು (ಹಜಕಾ. ೩-೩೮) ; ಪೃಥುಳಕರ್ಕಶಕುಚಂಗಳ ನಿಮ್ನನಾಭಿಯ ಕೃಶಸುಮಧ್ಯದ ತನುಲತೆಯ ಗಜಗಮನೆಯಂ ನೋಡಿ (ಪಶಪು. ೦೨-೩); ಪೃಥವಿಗೊಱಗಿದವೆಂಟುಸಾವಿರ ಪೃಥುಳಹಯ ನುಗ್ಗಾಯ್ತು ಗಣನೆಯ ರಥ ಪದಾತಿಯೊಳಿತ್ತಲೆನೆ ಸಪಱದನು ಪರಬಲವ (ಕುಮಾಗ. ೦-೦೨). ೪. ಪೃಥುಳಬಳವಾಜಿಗಳ್ ಮಱ ರಥಂಗಳಾಪರಿಸುತಿರದೆ ಪರಿದುವು ರಣದೊಳ್ (ಕ್ರಿಪು. ೨೯-೩೦೯). 'ಪೃಥುಳಬಲ' ಪರಾ. ೬. ವಿಶಾಲವಾಗಿರುವಿಕೆ : ವಿಸ್ತಾರವಾಗಿರುವಿಕೆ : "ಬೃಹದುರುವುರು ಪೃಥುಳ ವೃಥು . . . ವ್ಯೂಢಮೆನೆ ವಿಸ್ತೀರ್ಣಮೆಂದೆನಿಕು" (ಸುಂಗಠಾ. ೦೨೬-೬). ೭. ದೊಡ್ಡದು; ಗಾತ್ರವಾದುದು : "ಬೃಹತ್, ಉರು, ಗುರು, ವಿಸ್ತೀರ್ಣಂ, ಪುರು, ವೃಥು, ವೃಥುಳಂ . . . ವರಿಷ್ಠಂ—ಈ ೧೨ ಹಿರಿದು" (ಹಠಾಯು. ೦೦೬-೦೪). [ಸಂ.]

ಪೃಥುಲಯಶ (ನಾ). ಅತಿಶಯವಾದ ಯಶಸ್ಸನ್ನು ಹೊಂದಿದವನು ; ಅಧಿಕವಾದ ಕೀರ್ತಿಯನ್ನು ಪಡೆದವನು : ಪೃಥುಲಯಶನಮಿತತೇಜಂ . . . ರಥನೂಪುರಚಕ್ರವಾಳಪುರಮಂ ಪೊಕ್ಕಂ (ಶಾಂಚಿತ್ರ. ೬-೧೩೮).

[ಸಂ. ಪೃಥುಲಯಶಸ್]

ಪೃಥುಲೆ (ನಾ). ಪಾರ್ವತಿ ; ಶಿವೆ : ಶರ್ವಾಣಿ ಮೃಡೆ ರುದ್ರಾಣಿ ಪೃಥುಲೆ ನಿಗಮಾಲಯೆ ಸಹಸ್ರಭುಜಸಂಯುಕ್ತೆ (ಶಕ್ತಿಸ. II. ೬-೯).

[ಸಂ. ಪೃಥುಲಾ]

ಪೃಥುವಿ, ಪಿಟ್ಟುವಿ, ಪಿಟ್ಟುವಿ, ಪುಡವಿ, ಪೊಡವಿ, ಪ್ರಿತುವಿ, ಪ್ರಿಥುವಿ (ನಾ). = ಪೃಥಿವಿ ೧ : ಶ್ರೀಪೃಥುವಿಸಾಗರ ಶ್ರೀಮದಿಳಾವೇನ್ದ್ರ ಸೋಮವಂಶೋದ್ಭವಕುಲತಿಲಕನ್ (ಎಇ. IX, ೨೦-೦ ; ಸಾ. 800); ಪೃಥುವಿ ನೆಗ್ಗಲು ಸುಭಟಸಾಗರಮಥನ ಕರ್ಣನು ಭೀಮಸೇನನ ರಥವನಱಸುತ ಬಂದು ಪುನರಪಿ ಕಾಳೆಗವ ಹಿಡಿದ (ಕುಮಾಪ್ರೋ. ೦೩-೯೦) ; ರಥಕರಿಬ್ಬರು ಮಲತು ನಿಲಲು ಬೊಬ್ಬಿರಿದು ಸಾರಥಿಗಳಿಬ್ಬರು ತೇರ ತೇಜಿಯಂ ಚಪ್ಪರಿಸಿ ಪೃಥುವಿ ನೆಗ್ಗಲ್ಸುಭಟರುದ್ದಂಡಕಾರ್ಮುಕವನೊದರಿಸುತ ಹೂಂಕರಿಸುತ (ಕುರುಂಗ. ೫೫-೫೦). △ **ಪಿಟ್ಟುವಿ** : 'ಪಿಟ್ಟುವಿರಾಜ್ಯಂಗೆಯ್' ಪರಾ. △ **ಪಿಟ್ಟುವಿ** : 'ಪಿಟ್ಟುವಿಪತಿ' ಪರಾ. **ಪುಡವಿ** : ಪುಡವಿಯೊಳಗ್ಗಳನ್ ನೆಗೞ್ದು ದಾನಿಗಳಿನ್ನಿವರನ್ನರ್ ಆರೊ ಪೇೞ್ (ಎಇ. IV. ಚಾಗಸೂ. ೦೯-೪೮ ; 1118 ?) ; ಚರಿಸಿದೆವು ಸತ್ಯಕಂ ಪು[ಶಾಕಾಂ. ಪೊ]ಡವಿಯೋಳ್ಳಾವು (ಕುರುಂಗ. ೪೩-೩೬). **ಪೊಡವಿ** : ಪೊಡವಿ ಪಟ್ಟಂಡಕ್ಕಡಿಯಿಡುವಡಿಗಳು ತೊಳಗಿ ಬೆಳಗುವ ಪೆಱೆನೊಸಲಂ ಪಡೆದ . . . ಬಾಲಕನಂ . . . ಎತ್ತಿಕೊಂಡಿಂದ್ರನ ದೇವಿ ಬಂದಳ್ (ಶಾಂಶಿಪು. ೦೦-೯); ಹಗೆ ಕೆಡಲಿ ಕೌರವರಾಯನಾಳಲಿ ಪೊಡವಿಯನು ಪರಿತೋಷವಾಗಲಿ ನೃಪನ ಮಿತ್ರರಿಗೆ (ಕುಮಾಪ್ರೋ. ೩-೫೭); ಸುಡುವರೆ ಪಂಜಿಹುದು ಬಡಿಯೆ ಭೇರಿಯು ಇಹುದು ಪೊಡವಿಯಾಳುವರ ಮಾದುವೆಯ ವೆಚ್ಚಕೊಂಡಡಿಕೆಲೆಯು ಬೇಡ (ಸರ್ವಜ್ಞ. ೭೪೭); ಪೊಡವಿಯಲ್ಲಿದ್ದವಗೆ ಅಡವಿ ಗೊಡವೆ ಯಾಕೆ? (ಗಾಪ). **ಪ್ರಿತುವಿ** : ಹೊಣಸಳ ಶ್ರೀ ವೀರಬಲಾಳದೇವರು ಪ್ರಿತುವಿ ರಾಜ್ಯಂಗೆ ಉತಿರಲು (ಎಇ. X (೫). ಕೋಲಾರ. ೩೨-೯ ; 1342). **ಪ್ರಿಥುವಿ** : ದೋರು ಪ್ರಿಥುವಿರಾಜ್ಯಂಕೆಯೆ (ಎಇ. VI. ೦೬೩-೦; 780). ☞ 'ಪೃಥುವಿ' ಎಂಬುದರ ಜೊತೆಗೆ ಪರ್ಯಾಯರೂಪವಾಗಿ ಬಂದಿರುವ ಈ ಎಲ್ಲಾ ಶಬ್ದರೂಪಗಳಲ್ಲಿ 'ಪುಡವಿ', 'ಪೊಡವಿ' ಎಂಬ ಎರಡು ರೂಪಗಳನ್ನು ಬಿಟ್ಟು ಮಿಕ್ಕುವೆಲ್ಲ ಅಪಲಿಖಿತಗಳು.

[< ಸಂ. ಪೃಥ್ವೀ./ಪ್ರಾ. ಪುಢವಿ, ಪುಢವೀ]

ಪೃಥುವೀರಾಜ್ಯ (ನಾ). ವಿಸ್ತಾರವಾದ ಸಾಮ್ರಾಜ್ಯ : ಸ್ವಸ್ತಿಶ್ರೀಸಾನ್ತರಸ ಪೃಥುವೀರಾಜ್ಯದುಳ್ . . . ಬೆಸಗೆಯ್ವಲ್ಲಿ ಮಾರಲಿ ಬಟಾರಿಂಗೆ ಕೊಟ್ಟಾರ್ (ಎಇ. VI, ಕೊಪ್ಪ. ೩೯-೨; ಸಾ. 700); ಸ್ವಸ್ತಿಶ್ರೀಕೊಂಗುಣಿಮಹಾರಾಜ ಶ್ರೀಪುರುಷ ಪೃಥುವೀರಾಜ್ಯ ವಿಜಯವತ್ಸರ ಇರ್ವ್ವದಾ ಎಣ್ಣುನೆಯೊಳು (ಎಇ. X. ಕೋಲಾರ. ೬-೦; 753). [< ಸಂ. ಪೃಥ್ವೀರಾಜ್ಯ]

ಪೃಥುಶ್ರೋಣಿ (ನಾ). ವಿಶಾಲವಾದ ಜಘನವನ್ನುಳ್ಳವಳು : ಆತನರ್ಧಾಂಗಿ . . . ಪರಮಕಲ್ಯಾಣಿ ಭವಪಾತಕಾತೀತೆ ತತ್ವಾನುಭವಿ ಮಾವರಹಿತೆ ಆತತಪೃಥುಶ್ರೋಣಿಯರುಣಪಲ್ಲವಪಾಣಿಯಾ ವಿಮಲ ರುದ್ರಾಣಿಯು (ರಾಶಕ. ೦-೯೩). [ಸಂ. ಪೃಥುಶ್ರೋಣೀ]

ಪೃಥುಸತ್ವ (ನಾ). ೧. ಹೆಚ್ಚಾದ ಬಲ,—ಸಾಮರ್ಥ್ಯ; ಪರಾಕ್ರಮ. ೨. ಹೆಚ್ಚಾದ ಸಾಮರ್ಥ್ಯವನ್ನುಳ್ಳ ವ್ಯಕ್ತಿ: ಪರಾಕ್ರಮಿ: ಪೃಥುಸತ್ವಂ . . . ಜಗತ್ಪಥಿತಕ್ಷತ್ರಗುಣಂ ಭವತ್ಪದಪದ್ಮೋಪಜೀವಿತಾಂತಿಕ ಕೃತ್ಪದಂ ಪೃಥಿವೀಪಾಲನೃಪಾಲನುಜ್ಜ್ವಲಯಶಂ ಮತ್ಸಾವಿ ಸತ್ಯೇವುದಿಂ (ಸಂದ್ರಕ. ೯-೧೬); ಪೃಥುಸತ್ವಂ ದೇವದೈತ್ಯರ್ ತವುಗಭವುತ ವುಗಲ್ಕೆ ಸಂರಂಭವಿಂದಂ ಪುಥುಸರ್ ವುಂಗಲ್ಕವಸ್ತುಪ್ರಕರವುನವುತಾ ಹಾರವುಂ ಕೊಟ್ಟು . . . ಕ್ರಮ್ಯಾತಿವೆತ್ತಂ ಸಲೆ ಜಲಚರಸಂಘಾತರೌದ್ರಂ ಸವುುದ್ರಂ (ಧಶಃ. ೬-೭). [ಸಂ.]

ಪೃಥುಸ್ಕಂಧ (ನಾ). ೧. ದೊಡ್ಡ ಭುಜಗಳನ್ನುಳ್ಳುದು; ಅಗಲವಾದ ಹೆಗಲನ್ನುಳ್ಳುದು: ದೀರ್ಘವಾಲು ಪೃಥುಸ್ಕಂಧಂ . . . ಸುನಾಸಾಪುಟವು ವುರ್ದ ತುರಂಗಂಗಳಂ ಕಾಣ್ಕೆಗೆಯ್ದಂ (ಶಾಶಕಂ. ೦೨-೦೦೦). ೨. ದೊಡ್ಡ ಕೊಂಬೆಗಳನ್ನುಳ್ಳುದು: ಕಾಂತಾರಾಂತದೊಳ್ . . . ಅತಿದೀರ್ಘ ಪೃಥುಸ್ಕಂಧವುುವುಪ್ಪುದೊಂದು ವುಹಾವಟವಿಟಪಿಯೊಳನೇಕವಿಹಗಕುಳಂ ಗರ್ಜಿಪ್ಪವು (ಪಂಚಕಂ. ೨೬೦-೨೨). ೩. ಹಂದಿ; ವರಾಹ. [ಸಂ.]

ಪೃಥುಳ 'ಪೃಥುಲ' ನೋ.

ಪೃಥುಳಗತಿ (ನಾ). ಸರ್ವಾಂತರ್ಯಾಮಿ; ಪರಮಾತ್ಮ: ಶಿತಿಕಂಠ ಪೃಥುಳಗತಿ ವರದಹತವುಲವಿರತವಿತತಿ ಹೃನ್ನಳಿನಭೃಂಗ . . . ವುಾಯಾದೂರ ಸತತ ರಕ್ಷಿಸುಗೆವ್ಮುವಂ (ಂಳಃಂಕಿ. ೦-೬). [ಸು. ಪೃಥುಲಗತಿ]

ಪೃಥುಳಬಲ, ಪೃಥುಳಬಳ (ನಾ). ೧. ಹೆಚ್ಚಾದ ಬಲ; ಅತಿಶಯವಾದ ಶಕ್ತಿ: ಪರಾಕ್ರಮ. ೨. ಹೆಚ್ಚು ಶಕ್ತಿಯುಳ್ಳವನು; ಪರಾಕ್ರಮಿ. ಬಳರಥಿಕರೀಶನ ಬಿಟ್ಟು ಹಾದ್ದುರು ಪೃಥುಳಬಲನೈ ಭೀವುನೆಚ್ಚನುಗುರುತನೂಭವನ(ಕುಾಕಾ. ೩-೨೩). **ಪೃಥುಳಬಳ**: ೨. ಪೃಥುಳಬಳವುಾದಿ ಕೂರ್ವಂ . . . ವಿಥಿಳಾಪುರದರಸನೆಂಬ ವುಹಿವುಾವರ್ವಂ(ದಶಳು. ೦೦-೩). [ಸಂ. ಪೃಥುಲಬಲ]

ಪೃಥುಳಬಳ 'ಪೃಥುಳಬಲ' ನೋ.

ಪೃಥ್ವಿ (ನಾ). ೧. ಪಂಚಮಹಾಭೂತಗಳಲ್ಲಿ ಒಂದು; ಧರೆ; ಭೂವಿ: "ಭೂಃ, ಭೂವಿಃ . . . ಪೃಥ್ವೀ, ಪೃಥಕೀ . . . ಧರಾ, ಅಧಾರಾ—ಈ ೩೭ ಭೂವಿಯ ಪೆಸರ್" (ಹಲಾಯು ೨೬-೦); ಪೃಥ್ವಿಯೊಳಗಿಲ್ಲ ಆಕಾಶದೊಳಗಿಲ್ಲ ಚತುರ್ದಶಭುವನಾದಿ ಭುವನಂಗಳೊಳಗೆಯೂ ಇಲ್ಲ ಹೊಱಗೆಯೂ ಇಲ್ಲ ಏನಾಯಿತ್ತೆಂದಱಿಯೆನಯ್ಯ (ಅಡಕಂ. ೩೬-೬೨೦); ನವದ್ವಾರಗಳ ವುುಚ್ಚಿ ಶಿವಧ್ಯಾನದೊಳಗಿರಲು ನವಖಿಂದ ಪೃಥ್ವಿಯೊಳಗಣ ವಾತೆಲ್ಲ ಕಿವಿಯೊಳಗೆ ಇಹುದು(ಸರ್ವಜ್ಞ. ೩೮೯); ಗಗನವುಂ ಪೃಥ್ವಿಯುಂ ವಾರ್ಧಿಯುಂ ಪರ್ವತಾರಣ್ಯ ವಿಸ್ತಾರಧೀರೋದಾತ್ತಗಾಂಭೀರ್ಯವುಂ . . . ಧ್ಯಾನಿಸುತೆ ಭಾವಿಸುತೆ ರೂಪಿಸುತೆ ಕಾವಿುಸಿದನಾ ಧೂವಿುಪಂ (ಶ್ರೀಶಾಪು. ೦೨-೩೦೭). ೨. ಕರಿಜೀರಿಗೆ: "ಸುಷವೀ, ಕಾರವೀ, ಪೃಥ್ವೀ, ಪೃಥುಃ, ಕಾಲಾ, ಉಪಕುಂಚಿಕಾ—೬ ಕರಿಜೀರಿಗೆ" (ಸಿಧಾ೦ಕಿ.೨೪೮). ೩. ದೊಡ್ಡ ಏಲಕ್ಕಿ. ೪. ಹಿಂಗಿನ ವುರ: "ಕಾರವೀ, ಪೃಥ್ವೀ, ಬಾಷ್ಕಿಕಾ, ಕಬರೀ, ಪೃಥುಃ — ೫ ತತ್ಪರ್ಯೀ—೩ ಹಿಂಗಿನ ವುರದ ಹೆಸರುಗಳು" (ಸಿಧಾ೦ಕಿ.೨೪೩) .೫. [ಛಂದ] ಪಾದದಲ್ಲಿ ಹದಿನೇಳು ಅಕ್ಷರಗಳಿರುವ, ಅತ್ಯಷ್ಟಿಛಂದಸ್ಸಿನ ಒಂದು ವೃತ್ತದ ಹೆಸರು: ಇವಾನಿಲ ದಿನೇಶ ಪಾತುುತಪಯೋಲಗಂಗಳ್ಪೆಡಂಗನವಾಳ್ದು ನಿಲೆ ವಿಶ್ರವುಂ ವಸುಗಳಲ್ಲಿ ಜಿಶ್ಣುಗೆ ನೀಲನೀರಜವಿಲೋಚನೇ ಬಗೆದು ಕೇಳಿದಂ ಪೃಥ್ವಿಯೆಂಬ ಪಾವುದಿನಿದಲ್ಲೆ ಸಂದುವು ನಿರಂತರು ಪೃಥ್ವಿಯೊಳ್ (ಕುಕೋಂಪು. ೨-೦೬೪); ಜಸಂಜಸಯಲಂಗವೊಂದಿದೊಡೆ ಪೃಥ್ವಿಯೆಂಬರ್ ಬುಧರ್ (ಲೃಚಿ. ೮೩). ೬. [ಜೈನ] ಪದ್ಧ್ರವ್ಯಗಳಲ್ಲಿ ಒಂದು: ದ್ರವ್ಯಗಳು ಆರು ವಿಧಗಳೆಂದು ವಿಭಾಗ ವುಾಡಿರುವುದರಿಂದ ಪೃಥ್ವಿ ಜಲ ತೇಜಸ್ಸು ವಾಯು ವುನಸ್ಸು ಎಂಬ ಐದು ದ್ರವ್ಯಗಳು ವುುನ್ಗಲದಲ್ಲಿ ಸೇರಿದುವು (ಸಿಂರಾಜ. ೮೦). 'ಷಡ್ದ್ರವ್ಯ' ಪರಾ. [ಸಂ. ಪೃಥ್ವೀ]

ಪೃಥ್ವಿಕೆ (ನಾ). ೧. ದೊಡ್ಡಜಾತಿಯ ಏಲಕ್ಕಿ: "ಪೃಥ್ವಿಕಾ, ಚಂದ್ರ ಬಾಲಾ, ಏಲಾ, ನಿಷ್ಕುಟಿ, ಬಹುಲಾ—೫ ದೊಡ್ಡಯಾಲಕ್ಕೀ ಹೆಸರುಗಳು" (ಸಿಧಾ೦ಕಿ. ೨೪೧). ೨. ಜೀರಿಗೆ: "ಜೀರಿಗೆಯುಜಾಜಿ ಪೃಥ್ವಿಕೆಯಕ್ಕುಂ" (ಕುಂಗಣಾ. ೪೦ ೭೫). [ಸಂ. ಪೃಥ್ವಿಕಾ]

ಪೃಥ್ವಿತತ್ವ (ನಾ). ವಂಣ್ಣಿನ ಸ್ವಭಾವ; ಭೂವಿಯ ಗುಣ: ಘಟತತ್ವ ಪೃಥ್ವಿಭೇದವಾಗಿ ಆತ್ಮತತ್ವ ಅಪ್ಭೇದವಾಗಿ ತೇಜತತ್ವ ಅಜುವು ಭೇದವಾಗಿ . . . ಪೃಥ್ವಿತತ್ವವ ಕೂಡಲಾಗಿ ಉತ್ಪತ್ತಿ ಎಲ್ಲಿ ಅಡಗಿತ್ತು (ಪೂಃಕಟಾ. ೭-೨೫). [<ಸಂ. ಪೃಥ್ವೀತತ್ವ]

ಪೃಥ್ವಿಮಂಡಲ (ನಾ). ಭೂವುಂಡಲ; ಭೂಗೋಳ: ವಜ್ರದಿಂದಂಕಿತವುಪ್ಪ ನಾಲ್ಕು ರೇಪೆಗಳನ್ನುಳ್ಳುದು ಹೊಂಬಣ್ಣವಾಗಿರ್ಪುದು ಪೃಥ್ವಿ ವುಂಡಲಂ (ಕ್ಷತ್ರಾ. ೦೦-೩೨). [<ಸಂ. ಪೃಥ್ವೀಮಂಡಲ]

ಪೃಥ್ವಿವಲ್ಲಭ (ನಾ). ದೊರೆ; ರಾಜ: ಶ್ರೀಪೃಥ್ವಿವಲ್ಲಭ ವುಹಾರಾಜಾಧಿರಾಜಪರವುೇಶ್ವರ ಪರವುಭಟಾರಕಂ ಸತ್ಯಾಶ್ರಯಕುಳತಿಳಕಂ . . . ಆಚನ್ದ್ರಾರ್ಕತಾರಂಬರಂ ಸಲುತ್ತವಿರೆ (ಸೌಾಇ. XX. ೪೬-೩; 1072). [<ಸಂ. ಪೃಥ್ವೀವಲ್ಲಭ]

ಪೃಥ್ವಿಗೋಳ (ನಾ). = ಪೃಥ್ವಿವುಂಡಲ: ಪಾಠಶಾಲೆಗಳಲ್ಲಿರುವ ಒಂದು ಅಡಿ ವ್ಯಾಸದ ಪೃಥ್ವಿಗೋಳದಲ್ಲಿ ಅತ್ಯಂತ ಎತ್ತರವಾದ ಪರ್ವತವೆಂದು ತೋರಿಸಲು ಒಂದು ಸಣ್ಣ ವುರಳುಕಣವನ್ನು ಉಪಯೋಗಿಸಿರುವರು (ಕೂಂಪ. ೪). [ಸಂ. ಪೃಥ್ವೀಗೋಲ]

ಪೃಥ್ವೀತತ್ವ (ನಾ). = ಪೃಥ್ವಿತತ್ವ: ಅವಳ ವುಾಂಸಲದೇಹವು ಪೃಥ್ವೀತತ್ವಕ್ಕೆ ದೋತುಬಿದ್ದು ಕುಡಚಿಯನ್ನು ಒಮ್ಮೆ ಪ್ರಭು ಎಂದು ಒಪ್ಪಿಕೊಂಡಿತ್ತು (ಸಬುಚ. ೧೩೦). [ಸಂ.]

ಪೃಥ್ವೀಧವ (ನಾ). ಭೂವಿಯನ್ನು ಆಳುವವನು; ಭೂವಿಯ ಒಡೆಯ; ದೊರೆ; ರಾಜ: ಶಿವಶಿವಾ ಪವಡಿಸಿತೆ ಚತುರರ್ಣವವಿವರಿಪರಿಧಾನ ಪೃಥ್ವೀಧವನ ಬಾಳಿಕೆ ನಿಃರೊಳೆಂದಳಲಿದನು ಗುರುಸೂನು: (ಭಾಷ್ಯಗ. ೯-೬); ಪ್ರಣತಪ್ರತ್ಯರ್ಥಿಪೃಥ್ವೀಧವನಿವಹಕಿರೀಟಾಗ್ರವುಾಣಿಕ್ಯವುಾಲಾಳ್ಪೃಣಿ ಚಂಚಚ್ಚಂಚಲಾಂಚಚ್ಚುರಪವುಣಿವುಹಾಪೀಠವೇಳಿಸ್ಥಪಾದಂ . . . ಲಸದ್ಭಕ್ತನಾ ರಾಜ ಚೂಡಾವುಣಿ ಪೆಂಪಂ ತಾಳ್ದು ಕಣ್ಗೊಪ್ಪಿದಂ (ರಾಶಕಂ. ೩-೦೬). [ಸಂ.]

ಪೃಥ್ವೀಪಾಲ (ನಾ). ಭೂವಿಯ ರಕ್ಷಕ; ದೊರೆ; ರಾಜ: ಖೂಳ ಗೋವರಹಳ್ಳಿಯಲಿ ಕಟ್ಟಾಳಲಾ ಬಳಕೇನು ಪೃಥ್ವೀಪಾಲರೀತಗೆ ಸರಿಯೆ ದಿಟದಿಟವೆಂದನಾ ಚೈದ್ಯ (ಕಃಪ್ರಾಕ. ೦೦-೦೩); ನೆರೆದ ಪೃಥ್ವೀಪಾಲರಿಗೆ ವಿಪ್ರರಿಗೆ ವುಣಿವುಯದಾಲಯಂಗಳು ಸವದವೈಗಾವುದದಱತೆಯಲಿ (ತೂಚಾ. ೦-೦೩-೦). [ಸಂ.]

ಪೃಥ್ವೀರಾಮ (ನಾ). ಒಬ್ಬಾತನ ಹೆಸರು: ಶ್ರೀವುದವುರೇಂದ್ರವಿಭವೋದ್ದಾವುಂ ಸಂಗ್ರಾವುರಾವುನೂರ್ಜಿತತೇಜಂ ಭೀವುಪರಾಕ್ರವುನೆನಿಸಿದನೀ ವುಹಿಯೊಳ್ ಪೃಥ್ವೀರಾವುನನುಪವುರೂಪಂ (ಪೌಇಇ. XX. ೦೮-೦೦; 980). [ಸಂ.]

ಪೃಥ್ವೀವಲ್ಲಭ (ನಾ). = ಪೃಥ್ವೀಧವ: ಶ್ರೀಪೃಥ್ವೀವಲ್ಲಭಂ ವುಹಾರಾಜಾಧಿರಾಜಂ ದ್ವಾರಾವತೀಪುರವರಾಧೀಶ್ವರಂ ವಿಷ್ಣುವಂಶೋದ್ಭವಂ (ಕೂಶ್ರಾಚ. ೦೬-೪೬; 1180); ಶ್ರೀಪೃಥ್ವೀವಲ್ಲಭ ವುಹಾರಾಜಾಧಿರಾಜಪರವುೇಶ್ವರ ಪರವುಭಟ್ಟಾರಕಂ ಸತ್ಯಾಶ್ರಯಕುಳತಿಳಕಂ (ಪೌಇಇ. XX. ೫೦-೨; ?). [ಸಂ.]

ಪೃಥ್ವೀಶ (ನಾ). = ಪೃಥ್ವೀಧವ : ಪೃಥ್ವೀಶಕೋಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂಭಾರಚ್ಛೇದವಿನೋದಿ ಕೃಷ್ಣನೆಮ ಗೀಗಾನಂದಸಂದೋಹಮಂ (ಪಗಂ. ೦-೦). [ಸಂ.]

ಪೃಥ್ವೀಶ್ವರ (ನಾ). = ಪೃಥ್ವೀಧವ : ಅಖಿಳಪೃಥ್ವೀಶ್ವರರ ಬಹಳಾಸ್ಥಾನದಲಿ ಮೋಹರಿಸಿದರು ಮೋಹನದ ಮೋಡಾಮೋಡಿಯಬಲೆಯರು (ಕುಪ್ಯಾಅ. ೦೩-೪೪). [ಸಂ.]

ಪೃಥ್ವೀಸ್ವರ (ನಾ). (ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶಗಳೆಂಬ ಪಂಚಭೂತಗಳಿಗೆ ಸಂಬಂಧಿಸಿದ ನಾಳಗಳಿಂದ ಹೊರಡುವ) ಪಂಚಸ್ವರಗಳಲ್ಲಿ ಒಂದು (?) : ಇಡೆ ಪಿಂಗಳೆಂಬೆರಡು ನಾಡಿಗಳಿಂದೊಡಗೂಡಿದೆರಡು ನಾಳಗಳಹವು ಅವುಗಳೊಳಗೊಂದೊಂದು ನಾಳದಲ್ಲಿ ಪೃಥ್ವೀಸ್ವರ ಅಪ್ಪುಸ್ವರ ತೇಜಸ್ಸಿನ ಸ್ವರ ವಾಯುವಿನ ಸ್ವರ ಆಕಾಶಸ್ವರ ಇಂತೀ ಪಂಚಸ್ವರಸಂಜ್ಞೆಯಂ ತಾಳಿ ಕಾಲಕ್ಲುಪ್ತಿಯಿಂ ಉಚ್ಛ್ವಾಸ ನಿಶ್ವಾಸವಾಯುವೇ ಸಂಚರಿಸುತ್ತಿಹುದು (ಪಿವೇಳ. ೦೫೭). 'ಆಕಾಶಸ್ವರ' ಪರಾ. [ಸಂ.]

ಪೃದಾಕು (ನಾ). ೧. ಹಾವು ; ಸರ್ಪ : "ಉರಗಂ . . . ಪೃದಾಕು ಭುಜಗಂ ಕುಂಭೀನಸಂ ಪನ್ನಗಂ ಮರುದಾಶಂ ಶನಿಗೂಢಪಾದ್ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ" (ಪಸ್ತುಕೋ. ೦೯-೬). ೨. ಚೇಳು ; ವೃಶ್ಚಿಕ. ೩. ಹುಲಿ; ವ್ಯಾಘ್ರ. ೪. ಆನೆ; ಗಜ. ೫. ಚಿರತೆ. ೬. ಒಂದು ಬಗೆಯ ಮರ. [ಸಂ.]

ಪೃಶ್ನಿ (ಗಂ). ೧. ಚಿಕ್ಕ ; ಕುಳ್ಳಾದ ; ಕುಬ್ಜ. ೨. ದುರ್ಬಲವಾದ ; ಕ್ಷೀಣವಾದ. ೩. ಚುಕ್ಕೆಗಳಿಂದ ಕೂಡಿದ. ೪. ಬೇರೆಬೇರೆಯ ; ವಿಭಿನ್ನವಾದ. (ನಾ). ೫. ಕುಳ್ಳಾಗಿರುವವನು ; ಕುಬ್ಜ : "ಗಡುಳಂ ತಾಂ ಕುಬ್ಜನಲ್ಪಸತ್ವನುಪರಿಗತಂ ಪೃಶ್ನಿ[ಯಾತಂ] ಕಿರಾತಂ" (ಪಸ್ತುಕೋ. ೭೪-೪೦). ೬. ಕದಿರು ; ಕಿರಣ. ೭. ಭೂಮಿ. ೮. ನಕ್ಷತ್ರಗಳಿಂದ ತುಂಬಿದ ಆಕಾಶ. ೯. ಮೋಡ ; ಮೇಘ. ೧೦. ಕೃಷ್ಣನ ತಾಯಿ; ದೇವಕಿ. ೧೧. ಹಾಲು; ಕ್ಷೀರ. ೧೨. ಮೈಮೇಲೆ ಮಚ್ಚೆಗಳಿರುವ ಹಸು. [ಸಂ.]

ಪೃಶ್ನಿಪರ್ಣಿ (ನಾ). ಒಂದು ಬಗೆಯ ಸಸ್ಯ ; ನರಿಹೊನ್ನೆಗಿಡ : "ಪೃಶ್ನಿಪರ್ಣಿ ಫಣಿರ್ಜಕಂ" (ಪಸ್ತುಕೋ. ೩೭-೨೫). 'ಪೃಥಕ್ಪರ್ಣಿ' ಪರಾ. [ಸಂ. ಪೃಶ್ನಿಪರ್ಣೀ]

ಪೃಷತ (ನಾ). ೧. ಮೈಮೇಲೆ ಚುಕ್ಕೆಗಳಿರುವ ಚಿಗರೆ.— ಎರಳೆ; ಸಾರಂಗ : "ಸಾರಂಗಃ, ರು(ಋ)ಷ್ಯಃ, ಪೃಷತಃ, ರುರುಃ — ಈ ೪ ಸಾರಂಗಂ" (ಹಲಾಯು. ೩೯-೭೭). ೨. ತುಂತುರು ; ಹನಿ : "ಪೃಷತ ವಿಪ್ರುಟ್ಸಂಜ್ಞಂ" (ಪಸ್ತುಕೋ. ೨೪-೧೪). [ಸಂ.]

ಪೃಷತ್ಕ (ನಾ). ಬಾಣ; ಶರ : "ಕಂಕಪತ್ರಃ . . . ಪೃಷತ್ಕಃ, ಪತ್ರೀ, ಖಗಃ, ಶಿಳೀಮುಖಃ, ರೋಪಃ.—ಈ ೧೬ ಅಂಬು" (ಹಲಾಯು. ೭೭-೩೦೨); ಉತ್ಕೋಪದಹನದೊಡನೆ ಪೃಷತ್ಕಂಗಳ್ ಕೋಟಿಗಣಿತದಿಂದುಱುವಿನಂ... ಎಚ್ಚಂ (ಶಂಶಣಾ. ೦೨-೬) ; ಇರದೆ ವಿಯಚ್ಚರಾಧಿಪತಿಯೆಚ್ಚ ಕೃಶಾನು ಪೃಷತ್ಕಮಂ ಪಯೋಧರಶರದಿಂ ಅಜಿತಸೇನನಡುರ್ತಿರದೆಚ್ಚು ತೂಳ್ದಿದಂ (ಕಂದ್ರಪು. ೬-೩೯). [ಸಂ.]

ಪೃಷದಶ್ವ (ನಾ). ದೇಹದಲ್ಲಿ ಬೇರೆ ಬೇರೆ ಬಣ್ಣಗಳನ್ನುಳ್ಳ ಕುದುರೆಗಳನ್ನು ಹೊಂದಿರುವಂತಹುದು ; ಗಾಳಿ ; ವಾಯು : "ಪವನಃ, ಶ್ವಸನಃ . . . ಪೃಷದಶ್ವಃ, ಪವಮಾನಃ . . . ಮಹಾಬಲಃ—ಈ ೨೦ ಗಾಳಿಯ ಪೆಸರ್" (ಹಲಾಯು. ೦೪-೭೫) ; ವಿಶ್ವಮೂರುತಿ ಗಗನ ಶಿಖಿ ಪೃಷದಶ್ವ ಜಲತತ್ವಾತ್ಮನಾಗಿರೆ ಕಂಡನಸುರೇಂದ್ರ (ಕೊರಾ. ೬-೫೦-೪೪). [ಸಂ.]

ಪೃಷದಶ್ವಸಖ (ನಾ). ವಾಯುಸಖ ; ಅಗ್ನಿ : ಅಶ್ವತಾಭರಣ ಪ್ರಭಾಸ್ವರ ಶಶಾಂಕಪೃಷದಶ್ವಸಖ ಚಂಡಸಪ್ತಾಶ್ವಲೋಚನ . . . ಜಯ ಶಶ್ವದಗಣಿತ ಚಿತ್ಸುಖ (ಕಾರ್ಯದೇ. ೬-೩೦). [ಪೃಶದಶ್ವ+ಸಖ]

ಪೃಷದಾಜ್ಯ (ನಾ). (ಹೋಮಕ್ಕೆ ಉಪಯೋಗಿಸಲೆಂದು ಸಿದ್ಧಪಡಿಸುವ) ಮೊಸರಿನೊಂದಿಗೆ ಬೆರಸಿದ ತುಪ್ಪ : "ಪೃಷದಾಜ್ಯಂ . . . ಮೊಸರಿನಿಂದೊಡಗೂಡಿದ ತುಪ್ಪ, ಮೊಸರು ಬೆರೆತ ತುಪ್ಪ" (ಸಿದ್ಧಾಂತಿ. ೨೨೦) ; ಗುರುಸೂನು . . . ಸೆರೆನರಂಗಳ ದರ್ಭೆ . . . ವಿಶಾಳದನು ಮಜ್ಜೆಗಳ ಪೃಷದಾಜ್ಯ ಅರುಣಜಲದಾಜ್ಯಾಹುತಿಯ ವಿಸ್ತರವ ವಿರಚಿಸಿ ನಿಗಮಮಂತ್ರೋಚ್ಚರಣೆಯಲಿ ಪೂರ್ಣಾಹುತಿಗೆ ತನ್ನೊಡಲನೊಪ್ಪಿಸಿದ (ಕುಪ್ಯಾಗ. ೯-೨೨). [ಸಂ.]

ಪೃಷಿತ (ನಾ). ಸುರಿಯುತ್ತಿರುವ ಹನಿ ; ತುಂತುರು ಮಳೆ : "ಪೃಷಿತಂ, ಪೃಷತಮೆನೆ ಕೆದರ್ದ ಕಿಱುವನಿಗಳಕ್ಕು" (ಮಂಗಣಾ. ೦೨೯-೦೫). [ಸಂ.]

ಪೃಷ್ಠ (ನಾ). ೧. ಹಿಂಬದಿ ; ಹಿಂಭಾಗ : 'ಪೃಷ್ಠಭಾಗ' ಪರಾ. ೨. ಶರೀರದ ಹಿಂಭಾಗ; ಬೆನ್ನು : "ಪೃಷ್ಠಂ, ಪಶ್ಚಿಮಭಾಗಃ—ಈ ೨ ಬೆನ್" (ಹಲಾಯು. ೫೭-೩೭೪); "ಬೆನ್ನದು ಪಶ್ಚಿಮಂ ಪೃಷ್ಠಮಕ್ಕು" (ಮಂಗಣಾ. ೯೭-೦೩). ೩. ಪಿರ್ರೆ ; ಕುಂಡೆ : ಆಸನದ ಪೊಱಗೆ ಪೃಷ್ಠಮದೀಸೆನಿಪಾ ಪೆಸರದಕ್ಕುಂ (ಅಶ್ವಶಾ. ೯-೪೪). ೪. ಪುಟ ; ಹಾಳೆ : ಹಾಳೆ ಅಥವಾ ಪತ್ರಸಂಖ್ಯೆಯನ್ನು ದಕ್ಷಿಣದಲ್ಲಿ ಪೃಷ್ಠ ಅಥವಾ ಪ್ರಥಮಪುಟದ ಮೇಲೂ ಇತರ ಕಡೆ ಎರಡನೆಯ ಪುಟದ ಮೇಲೂ ಗುರುತಿಸಿರುತ್ತದೆ (ಭಾರತ. ೨೦).

ಪೃಷ್ಠಮಾಂಸಾದನ = ಒಬ್ಬ ವ್ಯಕ್ತಿಯ ಬೆನ್ನ ಹಿಂದೆ ಆಡಿಕೊಳ್ಳುವಿಕೆ : (*). [ಸಂ.]

ಪೃಷ್ಠಕ (ನಾ). ೧. ಹಿಂಭಾಗ ; ಬೆನ್ನು. ೨. [ಜೈನ] ಅರುವತ್ತು ಮೂರು ದೇವವಿಮಾನ ಅಥವಾ ಇಂದ್ರಕಗಳಲ್ಲಿ ಒಂದು ; P "೧. ಋತು, ೨. ವಿಮಳಂ, ೩. ಚಂದ್ರಂ, ೪. ವಲ್ಕು, ೫. ವೀರಂ, ೬. ಅರುಣಂ, ೭. ನಂದನಂ, ೮. ನಳಿನಂ, ೯. ಕಾಂಚನಂ, ೧೦. ಲೋಹಿತಂ, ೧೧. ಚಂಚನ್ನಾಮಂ, ೧೨. ಮರುತಂ, ೧೩. ಋದ್ವಿಷಂ, ೧೪. ವೈಡೂರ್ಯಂ, ೧೫. ರುಚಕಂ, ೧೬. ರುಚಿರಂ, ೧೭. ಅಂಕಂ, ೧೮. ಸ್ಫಟಿಕಂ, ೧೯. ತಪನೀಯಂ, ೨೦. ಮೇಘಂ, ೨೧. ಅಭ್ರಂ, ೨೨. ಹಾರಿದ್ರಂ, ೨೩. ಪದ್ಮಂ, ೨೪. ಲೋಹಿತಂ, ೨೫. ವಜ್ರಂ, ೨೬. ನಂದ್ಯಾವರ್ತಂ, ೨೭. ಪ್ರಭಾಕರಂ, ೨೮. ಪೃಷ್ಠಕಂ, ೨೯. ಗಜಂ, ೩೦. ಮೈತ್ರಂ, ೩೧. ಪ್ರಭಾ, ೩೨. ಅಂಜನಂ, ೩೩. ವನಮಾಲಕಂ, ೩೪. ನಾಗಂ, ೩೫. ಗರುಡಂ, ೩೬. ಲಾಂಗಲಂ, ೩೭. ಬಲಭದ್ರಂ, ೩೮. ಚಕ್ರಂ, ೩೯. ಅರಿಷ್ಟಂ, ೪೦. ಸುರಸಮಿತಂ, ೪೧. ಬ್ರಹ್ಮಂ, ೪೨. ಬ್ರಹ್ಮೋತ್ತರಂ, ೪೩. ಬ್ರಹ್ಮಹೃದಯಂ, ೪೪. ಲಾಂತವಂ, ೪೫. ಶುಕ್ರಂ, ೪೬. ಶತಾರಂ, ೪೭. ಆನತಂ, ೪೮. ಪ್ರಾಣತಂ, ೪೯. ಪುಷ್ಪಕಂ, ೫೦. ಶತಾಕಂ, ೫೧. ಆರಣಂ, ೫೨. ಅಚ್ಯುತಂ, ೫೩. ಸುದರ್ಶನಂ ೫೪. ಅಮೋಘಂ, ೫೫. ಸುಪ್ರಬುದ್ಧಂ, ೫೬. ಯಶೋಧರಂ ೫೭. ಸುಭದ್ರಂ, ೫೮. ಸುವಿಶಾಲಂ, ೫೯. ಸುಮನಸಂ, ೬೦. ಸೌಮನಸ್ಯಕಂ, ೬೧. ಪ್ರೀತಿಂಕರಂ, ೬೨. ಆದಿತ್ಯಂ, ೬೩. ಸರ್ವಾರ್ಥಸಿದ್ಧಿ — ಎಂಬಿವು ಅನುಕ್ರಮದಿಂ ಅಱುವತ್ತುಮೂಱು ಇಂದ್ರಕಂಗಳ ಪೆಸರ್ಗಳ್" (ಶಕ್ರಸ್ತ್ರ. ೨೦೩). [ಸಂ.]

ಪೃಷ್ಠಗ್ರಂಥಿ (ನಾ). ಬೆನ್ನಿನ ಮೇಲೆ ಏಳುವ ಗಂಟು,—ಕುರು: "ಪೃಷ್ಠಗ್ರಂಥಿಃ, ಗಡುಃ —ಈ ೨ ಬೆನ್ನ ಕುಱು" (ಹಲಾಯು. ೯೯-೪೫೦). [ಸಂ.]

ಪೃಷ್ಠಚಕ್ಷು (ನಾ). ಏಡಿ; ನಳ್ಳಿ. [ಸಂ. ಪೃಷ್ಠಚಕ್ಷುಸ್]

ಪೃಷ್ಠದ್ವಾರ (ನಾ). ಗುದದ್ವಾರ : ನಿರ್ದ್ರವಮಪ್ಪುದೇ ಕಾರಣಮಾಕಿ

ಕಡುವಿಸಿಲಿಂಗೆ ತಟ್ಟಾಱದ ಚರ್ಮದಿಂ ಪೃಷ್ಠದ್ವಾರಂ ಮುಚ್ಚಲಾ ಜಂಬುಕಂ ತನಗೆಲ್ಲಿಯುಂ ಪೋಗಲಿಂಬಿಲ್ಲದೆ ಚಿಂತಾಕ್ರಾಂತನಾಗಿರಲ್ (ಶಂಕರಂ. ೦೯-೨೦). [ಸಂ.]

ಪೃಷ್ಠನಾಳ (ನಾ). ಗುದನಾಳ : ಅಡವಿಯಲ್ಲಿ ಒಂದು ನರಿಯಾಹಾರಂಬಡೆಯದೆ ಬರಬರುತ್ತೆ ಒಂದು ಸತ್ತ ಎತ್ತಂ ಕಂಡು ಸಡಗರಿಸಿ ಅದರ ಪೃಷ್ಠನಾಳದಿನೊಡಲೊಳಪೊಕ್ಕು ತಿನುತಿರ್ಪನ್ನೆವರು (ಶಂಕರಂ. ೦೯-೯). [ಸಂ. ಪೃಷ್ಠನಾಲ]

ಪೃಷ್ಠಭಾಗ (ನಾ). ೧. ಹಿಂಭಾಗ ; ಬೆನ್ನಿನ ಭಾಗ : ನೀವೀ ಪಶುವಿನ ಪೃಷ್ಠಕುಷ್ಠೋದಕಮಂ ತಂದೆಱೆದು ದೂರಂ ಪೋಗಿಮೆನಲಾ ಶ್ವಪಚಕರ್ ಬೆದಱಿಯಾ ಗೋವಿನ ಪೃಷ್ಠಭಾಗಕ್ಕೆ ಕಾಯ್ದು ನೀರಂ ತಂದೆಱೆದು (ಶಂಕರಂ. ೦೯-೦೯); ತಳಮನಹೀಂದ್ರರುಂದ್ರಘಣಮೆಂದು ಧನುರ್ಗುಣ ವೇಗತಾಡನಾಕಳಿತವಿಕೀರ್ಣಕೋಷ್ಠಮೆನೆ ಕೂರ್ಮವಿನಿಷ್ಠುರಪೃಷ್ಠಭಾಗಮೆಂದು. . .ಧರಿತ್ರಿ ಬಂದು ನಿಶ್ಚಳತೆಯನಿರ್ಪಳಲ್ತೆ ಭುಜಮಂಡಳದೊಳ್ ವಸುಧಾಧಿನಾಥನಾ (ಸಂದ್ರಪ್ರ. ೩-೨೦). ೨. ಮೇಲ್ಭಾಗ ; ಮೇಲ್ಮೈ : ಸಮುದ್ರದ ಪೃಷ್ಠಭಾಗದ ಮೇಲೆ ಬೇಕಾದಂಥ ಅಲ್ಲೋಲಕಲ್ಲೋಲವಾದರೂ ಗುಡ್ಡದಂಥ ತೆರೆಗಳಿದ್ದರೂ ಸಮುದ್ರವು ತತ್ತ್ವತಃ ಸಮುದ್ರವೆ ಇರುವದು (ಪಚರ. ೯). [ಸಂ.]

ಪೃಷ್ಠವಾಹ್ಯ (ನಾ). ಹೊರೆಯನ್ನು ಹೊರುವ ಎತ್ತು : "ಪೃಷ್ಠವಾಹ್ಯಂ ಸ್ಥೌರಿಯೆನಿಕ್ಕುಂ" (ಪಸ್ತುಕೋ. ೯೯-೨); "ಸ್ಥೌರೀ, ಪೃಷ್ಠವಾಹ್ಯಃ —ಈ ೨ ಹೇಱುವೆತ್ತು" (ಪಠಾಯು. ೪೪-೦೦೦). [ಸಂ.]

ಪೃಷ್ಠಸ್ವಸ್ತಿಕ (ನಾ). [ನಾಟ್ಯ] ನೃತ್ಯದ ಒಂದು ಭಂಗಿ ; ನೂರೆಂಟು ಕರಣಗಳಲ್ಲಿ ಒಂದು : ೯ "ಕೈಗಳನ್ನು ಉದ್ವೇಷ್ಟ ಮಾಡಿ ಮೇಲಕ್ಕೆತ್ತಿ ಅಪಕ್ರಾಂತಚಾರಿಯನ್ನು ಮಾಡಿ, ಕೈಗಳನ್ನು ಆವೇಷ್ಟನ ಮಾಡಿ ಎದೆಯ ಹತ್ತಿರಕ್ಕೆ ತರುವಾಗ ಸೂಚೀಚರಣಗಳನ್ನು ಸ್ವಸ್ತಿಕದಂತಿರಿಸಿ ಕೈಗಳನ್ನೂ ಸೂಚೀಮುಖಹಸ್ತದಲ್ಲಿ ಸ್ವಸ್ತಿಕದಂತೆ ಹಿಡಿಯುವುದು" (ಲಾಸ್ಯರಂ. ಗದ್ಯಾಸುಪಾದ ೨೮೯) : ಉರು ಪೃಷ್ಠಸ್ವಸ್ತಿಕಮುಂ ತರುಣೇ ಕೇಳ್ ಸ್ವಸ್ತಿಕಂ ಸಮಂತಂಚಿತಮುಂ ಪಿರಿದಪವಿದ್ದಂ ಸಮನಖಕರಣಂ ಕೇಳ್ ಮತ್ತಮೆಂಬ ಕರಣಂಗಳಿವುಂ (ಲಾಸ್ಯರಂ. ೪-೨೬); ತಲಪುಷ್ಪಪುಟ . . . ದಿಕ್ಸ್ವಸ್ತಿಕ, ಪೃಷ್ಠಸ್ವಸ್ತಿಕ... ಗಂಗಾವತರಣ—ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ಪ) : ಈ ನಟರಾಜ 'ಪೃಷ್ಠಸ್ವಸ್ತಿಕ' ಭಂಗಿಯಲ್ಲಿ ನೃತ್ಯ ಮಾಡುವಂತೆ ಶಿಲ್ಪಿತವಾಗಿದೆ (ಕೊಳಂಬಿ. ೯೫). [ಸಂ.]

ಪೃಷ್ಠಾನುಸಾರಿ (ನಾ). [ನಾಟ್ಯ] ತೋಳಿನ ಚಲನೆಯ ಒಂದು ಭಂಗಿ ; ೯ "ಬೆನ್ನಿನ ಮೇಲೆ ತೋಳನ್ನಿರಿಸುವುದು" (ಲಾಸ್ಯರಂ. ಗದ್ಯಾಸುಪಾದ ೨೬೦) : ಊರ್ಧ್ವ, ಅಧೋಮುಖ . . . ಉದ್ವೇಷ್ಟಿತ, ಪೃಷ್ಠಾನುಸಾರಿ . . . ಉತ್ಸಾರಿತ—ಈ ಹದಿನಾಱು ತೋಳ ಭೇದಂಗಳ್ (ಲಾಸ್ಯರಂ. ೨-೦೨೨ ಪ). [ಸಂ. ಪೃಷ್ಠಾನುಸಾರೀ]

ಪೃಷ್ಠಾಸ್ಥಿ (ನಾ). ಬೆನ್ನಿನ ಮೂಳೆ ; ಕಶೇರುಕ : "ಪೃಷ್ಠಾಸ್ಥಿಯೆ ಕಶೇರುಕಂ ನಿಟ್ಟೆಲುವು" (ಮಂಗಠಾ. ೦೦೭-೭). [ಸಂ.]

ಪೃಷ್ಠೋತ್ಕ್ಷೇಪ (ನಾ). [ನಾಟ್ಯ] ನೃತ್ಯದ ಒಂದು ಭಂಗಿ; ಆಕಾಶಚಾರಿಗಳಲ್ಲಿ ಒಂದು : ೯ "ಉತ್ಕ್ಷೇಪಚಾರಿಯನ್ನು ಹಿಂಭಾಗದಲ್ಲಿ ಮಾತ್ರ ಮಾಡುವುದು" (ಲಾಸ್ಯರಂ. ಗದ್ಯಾಸುಪಾದ ೩೨೯) : ಮಿಗೆ ವೇಷ್ಟನ ಮುದ್ವೇಷ್ಟಂ ನೆಗಳ್ದೆಸೆವುತ್ಕ್ಷೇಪವೊಸೆವ ಪೃಷ್ಠೋತ್ಕ್ಷೇಪಂ . . . ಇವುಂ ಮಿಸುಗುವ ಪತ್ತೊಂಬತ್ತುಂ ಪಸರಿಸುವಾಕಾಶಚಾರಿವೆಸರಿಂದೆಸೆಗುಂ (ಲಾಸ್ಯರಂ. ೬-೦೬). [ಸಂ.]

ಪೃಷ್ಠೋತ್ತಾನತಲ (ನಾ). [ನಾಟ್ಯ] ನೃತ್ಯದ ಒಂದು ಭಂಗಿ ; ಇಪ್ಪತ್ತುಮೂರು ಬಗೆಯ ದೇಶೀಯಸ್ಥಾನಕಗಳಲ್ಲಿ ಒಂದು ; ೯ "ಒಂದು ಕಾಲಿನ ಬೆರಳಂಗಳನ್ನು ಮಡಿಸಿ ಹಿಂದುಗಡೆ ನೆಱದ ಮೇಲೂರಿ ಇನ್ನೊಂದು ಪಾದವನ್ನು ಮುಂದೆ ಸಮವಾಗಿರಿಸುವುದು" (ಲಾಸ್ಯರಂ. ಗದ್ಯಾಸುಪಾದ ೩೩೦) : ಸ್ವಸ್ತಿಕ, ವರ್ಧಮಾನ, ನಂದ್ಯಾವರ್ತ, ಸಂಹತ, ಸಮಪಾದ, ಏಕಪಾದ, ಪೃಷ್ಠೋತ್ತಾನ [ತಲ], ಚತುರಸ್ರ, ಪಾರ್ಷ್ಣವಿದ್ಧ, ಪಾರ್ಷ್ಣಪಾರ್ಶ್ವಗತ, [ಏಕಪಾರ್ಶ್ವಗತ], ಏಕಜಾನುಗತ, ಪರಾವೃತ್ತ, ಸಮಸೂಚೀ, ವಿಷಮಸೂಚೀ, ಖಂಡಸೂಚೀ, ದ್ರಾಹ್ಮ, ವೈಷ್ಣವ, ಶೈವ, ಗರುಡ, ಕೂರ್ಮ, ನಾಗಬಂಧ, ವೃಷಭಾಸನ—ಈ ಇಪ್ಪತ್ತಮೂಱು ದೇಶೀಯಸ್ಥಾನಕಂಗಳ್ (ಲಾಸ್ಯರಂ. ೭-೦೨ ಪ). [ಸಂ.]

ಪೃಷ್ಠ್ಯ (ನಾ). ಹೊರೆಯನ್ನು ಹೊರುವ ಕುದುರೆ: "ಸ್ಥೌರಿ ಪ್ರಥಿತಾಖ್ಯಂ ತಾಂ ಪೃಷ್ಠ್ಯಂ" (ಪಸ್ತುಕೋ. ೬೬-೨೬). [ಸಂ.]

—ಪೆ (ಪ್ರ). ಒಂದು ಕೃದಂತಭಾವನಾಮಪ್ರತ್ಯಯ : 'ಕೇಳ್ಪೆ' ಪರಾ.

ಪೆಂ, ಹೆಂ (ಸಪೂರೂ). ಸಮಾಸದಲ್ಲಿ 'ಪೆಣ್' ಎಂಬ ನಾಮವಾಚಕಕ್ಕೆ ಬರುವ ಆದೇಶರೂಪ: 'ಪೆಂಗೂಸು', 'ಪೆಂಗೊಲೆ' ಪರಾ. ಹೆಂ : 'ಹೆಂಗುಱಿ' ಪರಾ. [< ಪೆಣ್]

ಪೆಂಕುಳಿ, ಪಿಂಕುಳಿ, ಪೇಂಕುಳಿ, ಪೇಕುಳಿ, ಹೇಕುಳಿ (ನಾ). ೧. ಹೆಣ್ಣಿಗ ; ಹೇಡಿ : ಎಲವೊ ಪೆಂಕುಳಿಯೆ ಪಡಿಯರಸವೋಲೇಕಿಲ್ಲಿ ನಿಂದಿರ್ಪೆ (ಶೇಷರಾ. ೦೦-೦೭). ೨. ಹುಚ್ಚುನಾಯಿ : "ಅಲರ್ಕಾಖ್ಯೆ ಮಿಕ್ಕ ಪೆಂಕುಳಿಯಕ್ಕುಂ" (ಪಸ್ತುಕೋ. ೯೦-೦೦). ೩. ಹುಚ್ಚು ; ಮರುಳುತನ : "ಪೆಂಕುಳಿಯೆಂದು ಮರುಳ್ತನಂ" (ಕಸಾ. ೭೦-೬೨೬) ; ದಿಂಡುಕಂ, ಪೆಂಕುಳಿ, ದಾಲಕಂ (ಕಣ್ಣಾಸು. ೪೪೦ ಪ್ರಯೋ). ೪. ಹುಚ್ಚೆ ; ಮರುಳ : "ಹುಚ್ಚನಭಿಧಾನ ಪೆಂಕುಳಿ" (ಕಸ. ೬೯) ; ಪೇರೊಡಲ ಪೆಂಕುಳಿಗಳುಂ . . . ಮಸಕಂಗೊಂಡು (ಪ್ರಸಂ. ೩೫-೫೫ ಪ). ಪಿಂಕುಳಿ ; ೩. "ಪಿಂಕುಳಿ ಮನೋಭ್ರಮೆಯಕ್ಕುಂ" (ಕಸ. ೬೬). ಪೇಂಕುಳಿ: ೩. "ಪೇಂಕುಳಿಯೆನೆ ಮರುಳ್ತನಂ" (ಕಬ್ಬಿಸಂ. ೫೦) : "ಮರುಳ್ತನಕಂ ಬುಧರಿನಕ್ಕು ಪೇಂಕುಳಿಯೆಂದುಂ" (ಕಸಿಕಂ. ೨೪೦). ೪. "ಪೇಂಕುಳಿಯೆನಲ್ ಮರುಳನುಂ" (ಕಬ್ಬಿಕ್ಕೆ. ೬೪). ೫. ಪಿಶಾಚಿ; ಭೂತ: ಅಱವಟಿಗೆಗೊಂಟಿನೊಳ್ ಪೇಂಕುಳಿಯುಂತೆ ಕುಳ್ಳಿರ್ದ ಭಕ್ತನಂ ನೋಡಿ (ಪಾಲಾಸ್ಯ. ೩-೦೦-೨೦ ಪ). ೬. ಆವೇಶ; ಕೋಪೋದ್ರೇಕ : ಕುಳಿ ಪ್ರತ್ಯಯಕ್ಕೆ—ಮಱುಕುಳಿ, ಪೇಂಕುಳಿ (ಕಸುಧ. ೨೦೩ ಪ್ರಯೋ). ಹೇಕುಳಿ : ೩. ಎಕ್ಕೆಯ ಕೋರಕಮಂ ತಂದಿಕ್ಕುಗೆ . . . ಮಾಣ್ಗುಂ ಪೇಕುಳಿ[ಪಾಶಾಂ. ಪೆಕ್ಕುಳ, ಪೇಕುಳ]ಯುಕ್ಕಿದ ತುನಕನ ವಿಷಂ (ಐಪುದ. ೦೩-೨೬). ಹೇಕುಳಿ : ೪. ಶ್ರೀಕಂಠನಂ ಬಿಟ್ಟು ಹೇಕುಳಿಗಳಖಿಳಶ್ರುತಿ ವೈಕುಂಠನಂ ಪೇಳ್ವವೆಂದೂಳ್ವರು (ಸಂಸುಸ. ೨-೦೯೩).

ಪೆಂಕುಳಿಯ ನಾಯ್ = ಹುಚ್ಚು ಹಿಡಿದ ನಾಯಿ : "ಪೆಂಕುಳಿಯ ನಾಯುಂ ಅಲರ್ಕಮೆಂಬುದು" (ಪಠಾಯು. ೪೭-೦೨೭). ಪೆಂಕುಳಿರಾಯ = ಹೆಣ್ಣಿಗರಾಯ ; ಹೇಡಿ : ದಿನಪತಿಯ ಪೆಂಕುಳಿರಾಯನೇಂ ಕಟ್ಟುಗುಂ ! (ರಾಮಾಶ್ವ. ೬೨-೩).

[ದೇ.॥ ತಮಿ. ವೆಕುಳಿ; ತೆಲು. ವೆಂಗಲಿ, ವೆಂಗಳಿ, ವೆಕಲಿ]

ಪೆಂಕುಳಿಗ (ನಾ). ಹುಚ್ಚು ಹಿಡಿದ ನಾಯಿ; ಹುಚ್ಚುನಾಯಿ : ಕನಕದ ಬೇರುಂ ಶರ್ಕರೆಯನುಪಮಮೆನಿಸಿರ್ದ ತುಪ್ಪಮಿಂತಿವನೊಸೆದಿಂಪಿನ ಪಾಲೊಳ್ ಕುಡಿಸಿದೊಡಂ ಶುನಕನ ಪೆಂಕುಳಿಗನಧಿಕ[ಪಾಶಾಂ. ಪೆಕ್ಕುಳಿಗನಗಿದ, ಪೇಕುಳಿಕಗಳಧಿಕ]ವಿಷಮನದಬೆಗುಂ (ಐಪುದ. ೦೩-೨೯). [ಪೆಂಕುಳಿ + —ಗ್ಯ]

ಪೆಂಕುಳಿಗಲಿ (ನಾ). ಆವೇಶಗೊಂಡ ಶೂರ,—ವೀರ : ಬಿಟ್ಟು ಕಣ್ಣುಂ ಬಿಗಿದ ಮೊಗಮುಂ ಕರ್ಚಿದವುಂಡುಂ ಕಡಿತಲೆಯುಂಬೆರಸು ಮೊಱೆಯುತ್ತುಂ ಪರಿವ ಪೆಂಕುಳಿಗಲಿಗಳುಮಂ (ಲೀಲಾಪ. ೫-೦೦೪ ಪ).

[ಪೆಂಕುಳಿ + ಕಲ್ಲಿ]

ಪೆಂಕುಳಿಗೊಳ್, ಪೇಕುಳಿಗೊಳ್, ಹೇಕುಳಿಗೊಳ್ (ಕ್ರಿ). ೧. ಆವೇಶಗೊಳ್ಳು; ಉದ್ರೇಕಗೊಳ್ಳು : ಧರ್ಮಪುತ್ರಂ ಶಿಖಂಡಿಯಂ ಮುಂದಿಟ್ಟು ಕೊಂಡು ಬಂದು ಪೆಂ[ಪಾಠಾಂ. ಪೇಂ]ಕುಳಿಗೊಂಡ ಸಿಂಹಮಂ ಮುತ್ತುವಂತೆ ಸುತ್ತಿ ಮುತ್ತಿದಾಗಳ್ (ಸಂಸಭಾ. ೦೦-೪೦ ಪ); ಪೆಂಕುಳಿಗೊಂಡ ಮದೇಭವೈರಿವೋಲ್ ಕೆಳರ್ದು (ಸಂಪಾ. ೦೦-೦೦೩); ಕೇಸರಿ ಪೆಂಕುಳಿಗೊಂಡಂ ತಾಸುರನತ್ಯುಗ್ರದಿವ್ಯಬಾಣಾಳಿಗಳಿಂ ಪೇಸೇಟ್ ಕೊಂದಂ (ಸೇತಿಪು.೦೨-೦೦೦). ೨. ಹುಚ್ಚು ಹಿಡಿ; ಹುಚ್ಚಾಗು : ಪೆಂಕುಳಿಗೊಂಡರೋ ತಿಳಿಯದೈ ಶ್ರೀಪಾರ್ವತೀವಲ್ಲಭಾ (ಪಾಪಶ. ೩೮). **ಪೇಕುಳಿಗೊಳ್** : ೨. ಆ ನಾಯ್ . . . ಬಾಯ್ವಿಟ್ಟು ಘೋಳಿಟ್ಟು ಪೇಕುಳಿಗೊಂಡಾದ ವಿಷಾದದಿಂ ಪುಟಿತು ಸತ್ತಿತು (ಸಂಕುಮಾ. ೩-೨೦); ಕನಕದ ರಸಮಂ ಗುಡಮಂ ವಿನುತಕ್ಷೀರದೊಳವಿರ್ಪಲಮನೀಂಟಲ್ಕಂ ಶುನಕಂ ಪೇಕು[ಪಾಠಾಂ. ಪೇರ್ಕು(ಕ್ಕು)]ಳಿಗೊಂಡುದು ತಿನೆ ಶದ್ವಿಷಮಟಿಗುಂ (ಪಮದ. ೦೩-೨೯). **ಹೇಕುಳಿಗೊಳ್** : ೨. ಅಲರ್ಕ, ಯೋಗಿತ—ಮದ್ದಿಂದ ಮರುಳಾಗಿ ಹೇಕುಳಿಗೊಂಡಿದ್ದ ನಾಯಿ (ಪಾಪಶಾ. ೪). [ಪೆಂಕುಳಿ + ಕೊಳ್$_1$]

ಪೆಂಕುಳಿನಾಯ್, ಪೇಕುಳಿನಾಯ್ (ನಾ). = ಪೆಂಕುಳಿಗ : ಬಡಿಗೊಂಡು . . . ಪೆಂಕುಳಿನಾಯಂ ಬಡಿವಂತಿರೆ ಪಾಟುಡುವಂ ಬಡಿವಂತಿರೆ ಬಡಿದ ನನಿಬರಂ ಕೌರವರಂ (ಗಣಾಯು. ೩-೦೦); ಶಿರೀಷಮೊಂದನೆ ಜಲದಿಂದೆ ಪೂಸುಗದು ಪೆಂಕುಳಿನಾಯ ವಿಷಾಪಹಾರಕಂ (ಶೋಕೋಪ. ೦೦-೩೫); ಪೆಂಕುಳಿನಾಯ ವಿಷಕ್ಕೆ—ಕನಕದ ಬೇರುಂ ಶರ್ಕರೆಯಮುಪಮಮೆನಿಸಿರ್ದ ತುಪ್ಪಮಿಂತಿವನೊಸೆದಿಂಪಿನ ಪಾಲೊಳ್ ಕುಡಿಸಿದೊಡಂ ಶುನಕನ ಪೆಂಕುಳಿಗನಧಿಕವಿಷಮನದಟಿಗುಂ (ಪಮದ. ೦೩-೨೪). **ಪೇಕುಳಿನಾಯ್** : ಪಳಿಯೆಂದೊಡಂಜುಗುಂ ಪೇಕುಳಿನಾಯೊಳಗಾಗಿ ಖಳನದೇಂ ಕಷ್ಟನೊ (ಧರ್ಮಪಾ. ೦-೬೩). [ಪೆಂಕುಳಿ + ನಾಯ್]

ಪೆಂಗ್‌ನಾಮ 'ಪಂಗನಾಮ' ನೋ.

ಪೆಂಗ, ಪೆಗ್ಗ, ಹೆಗ್ಗ$_1$, ಹೇಗ (ನಾ). ಪೆದ್ದ; ದಡ್ಡ ; ತಿಳಿಗೇಡಿ ; ಮರುಳ ; ರಾಘು ಪೆಂಗನಂತೆ . . . ಕಣ್ಣು ಹೊರಳಿಸುತ್ತ ಹೊರಬಂದನು (ಮೂಲಾಪ. ೨೦೦) ; ಬುದ್ಧಿ ಕೆಟ್ಟುಹೋಗ್ತದೆ; ಪೆಂಗ ಆಗ್ತೀಯೆ (ಪಂಗೂಲ. ೧೫); ಲಿಂಗವೇ ಗತಿಯೆಂದು, ಪೆಂಗ ಕುರುಬರಿಗೆಂದ (ಕನ್ನಪಾ. ೦೯೨). **ಪೆಗ್ಗ** : ಪೆಗ್ಗನಾದರೂ ಅಗ್ಗದಲ್ಲಿ ತಂದ (ಗಾಪ). **ಹೆಗ್ಗ$_1$** : ಹೆಗ್ಗ ಬುದ್ಧಿಯ ಬಲ್ಲನೇ ಅಯ್ಯ (ಸಿದ್ಧೇಪ. ೨೦೬-೬೪೫); ಲವಲೇಶ ಮೌಲ್ಯವಿಲ್ಲದೆಯರ್ಥಮಂ ಪಡೆವೆನೆಂದೆಂಬ ಕಡುಹೆಗ್ಗ [ಪಾಠಾಂ. ಹೆಡ್ಡ, ಹೆಬಗ]ನುಂ (ಸಮ್ಯಕೌ. ೦೨-೬); ಕುನ್ನಿ ಮರುಳ ಜೋಗಿ ಹೆಗ್ಗ . . . ಎನ್ನಿಸಿ ನಾಮವೆತ್ತಿಹ ಪರವಳಿವರ್ಗೆ ನಿನ್ನೊಲವುಂಟೆ (ಶಕಸಾಂ. ೦೨-೬೫). **ಹೇಗ** : ಹೇಗರಿರ . . . ಬಸದಿಗಳನೆಲ್ಲವ ಬೇಗದಿಂ ಹಿರಿಹಿರಿದು ಕೆಡೆ ಹಾಯ್ಕಿಸುವೆನು (ಬಸಪು ೩೦.೩೨); ಹೇಗರೆನಿಸುವ ಸವಣರುಗಳು ಶಾಸ್ತ್ರದೆ ವಾದವಾಗಿ ಸೋಲ್ತೊಡೆ (ಸಿದ್ಧೇಪು. ೬ ೨೬); ತಾಗಿ ಬಾಗುವರಿಂದ ತಾಗದಿರುವುದು ಲೇಸು ತಾಗಿ ಮೂಗೊಡೆದು ಬುಗುಟೆದ್ದು ಬಾಗುವದು ಹೇಗದ[ನ] ಗುಣವು (ಸರ್ವಜ್ಞ. ೦೫೫೩). 'ಎಗ್ಗ', 'ಹೆಬಗ' ಪರಾ. [ದೇ. ॥ ತುಳು. ಪೆಂಗೆ; ತೆಲು. ಪೆಂಕೆ]

ಪೆಂಗಣಿಸು, ಪಿಂಕಣಿಸು, ಪಿಂಗಳಿಸು (ಕ್ರಿ). ಅಗಲವಾಗಿ ತೆರೆ; ಅಗಲಿಸು : ಕುರುಡುಗಣ್ಣಿನಿತು ಪೆಂಗಣಿಸೆ ಕಾಣದ ತೆಱದೆ ಕರುಮವನಿತೆಸಗಿದರು ವಸ್ತು ತೋಱುವುದೆ (ಕೈಕಪ. ೩-೩-೩). **ಪಿಂಕಣಿಸು** : ಕಣ್ಪಿಂಕಣಿಸುತೊಲೆವ ಶಿರ ಸವಿವ ಜಾಯಧರಧರಮಂ ಕಡಿವುತ (ಪಪಮು. ೦೦-೦೪). **ಪಿಂಗಳಿಸು** : ಮತ್ತೆ ಅವನು ಕಣ್ಣನ್ನು ಪಿಂಗಳಿಸಿ ನೋಡಿದನು (ಮರಪಾ. ೪೪). [? + —ಇಸ್ಸು$_3$]

ಪೆಂಗಿನಾಮ 'ಪಂಗನಾಮ' ನೋ.

ಪೆಂಗು$_1$, ಪೆಗ್ಗು (ನಾ). ೧. ದಡ್ಡತನ; ಮುಕುತನ : ಯಾಕೆ ಹೀಗೆ ನಿನ್ನ ಪೆಂಗು ತೋರಿಸಿಕೊಳ್ಳುತ್ತಿದ್ದೀಯಾ ? (ಕೂತಿ). ೨. ಪೆದ್ದ ; ದಡ್ಡ : ಇಷ್ಟು ಹೊತ್ತಾದರೂ ನಿನಗೆ ಜ್ಞಾಪಕ ಬರಲಿಲ್ಲವೆ ? ಅಯ್ಯೋ ಪೆಂಗೆ ! (ಅಪ್ಪಾಪ. ೬೨) ; ಪೆಂಗಿನ ಹಾಗಾಡಬೇಡ (ಮಾಸುಪ. ೨) ; ಹೋಗೊ, ಹೋಗೊ, ಪೆಂಗೆ ! (ಪಡೆಪಾ. II, ೯೨೫). **ಪೆಗ್ಗು** : ೧. 'ಪೆಗ್ಗ' ಪರಾ. [ಪೆಂಗ + —ಉ$_4$]

ಪೆಂಗು$_2$ (ನಾ). ದ್ರಾವಿಡಭಾಷಾವರ್ಗಕ್ಕೆ ಸೇರಿದ ಒಂದು ಭಾಷೆ : ಪೆಂಗು ಎಂಬುದೂ ದ್ರಾವಿಡಗುಂಪಿಗೆ ಸೇರಿದ ಭಾಷೆಯಾಗಿದ್ದು . . . ಒರಿಸ್ಸಾಸುಸ್ಥಾನದ ಕೊರಾಪುತ್‌ಜಿಲ್ಲೆಯ ಉತ್ತರಭಾಗಕ್ಕೆ ಇರುವ ಜನರು ಆಡುತ್ತಾರೆ (ದ್ರಾವಿಡ. ೦೭೨).

ಪೆಂಗುರು 'ಪೊಂಗುರು' ನೋ.

ಪೆಂಗುಸು 'ಪೆಣ್ಗೂಸು' ನೋ.

ಪೆಂಗೂಸು 'ಪೆಣ್ಗೂಸು' ನೋ.

ಪೆಂಗೊಲೆ 'ಪೆಣ್ಗೊಲೆ' ನೋ.

ಪೆಂಗೊಲೆಯ (ನಾ). ಹೆಣ್ಣನ್ನು ಕೊಲೆ ಮಾಡುವವನು ; ಸ್ತ್ರೀಹತ್ಯೆ ಮಾಡುವವನು : ವಿರಹದಿಂದುಗನೆ ಬಳಲ್ದು . . . ಪೆಂಗೊಲೆಯರಿವರೆಂದು ಶಪಿಸಿಯುಂ ತಣಿಯದೆ ವಿಹಂಗಪತಿಯಬ್ಧಿ ಪರಶಿವ ಬ್ರಹ್ಮರಂ ಬೈದಳೇನೆಂಬೆನಚ್ಚರಿಯನು (ಪಂಪು. ೧೦-೬೫). [ಪೆಂಗೊಲೆ (<ಪೆಣ್ಗೊಲೆ) + —ಅ$_7$]

ಪೆಂಗ್ವಿನ್ (ನಾ). "(ನೀರೊಳಗೆ ಈಜಾಡಲು ಉಪಯೋಗವಾಗುವ ಹುಟ್ಟುಗಳಂಥ ರೆಕ್ಕೆಗಳುಳ್ಳ, ದಕ್ಷಿಣಾರ್ಧಗೋಳವಾಸಿಯಾದ) ಒಂದು ಜಾತಿಯ ಕಡಲ ಕೋಳಿ" (Penguin. ೩೦೪೨) : ದಕ್ಷಿಣ ಶೀತವಲಯದಲ್ಲಿ 'ಪೆಂಗ್ವಿನ್' ಗಳ ಸಮೂಹವೂ ಅಟ್ಲಾಂಟಿಕ್ ಕಡಲಿನಲ್ಲಿ 'ಪಫ್ಟಿನ್' ಗಳ ಸಮೂಹವೂ ಕೋಟಿಸಂಖ್ಯೆಯನ್ನು ಮೀರುತ್ತದೆ (ಪಕ್ಷಿ. ೩೬). [← ಇಂ. Penguin]

ಪೆಂಚರಿ (ನಾ). "ಒಂದು ಬಗೆಯ ಹಾವು" (ಅನಂಪಾ). [ದೇ. ॥ ತೆಲು. ಪೆಂಚೆರ]

Δಪೆಂಚು 'ಹೆಂಚು$_2$' ನೋ.

ಪೆಂಚೆ 'ಪಿಂಚೆಯ' ನೋ.

ಪೆಂಚೆಯ 'ಪಿಂಚೆಯ' ನೋ.

ಪೆಂಜಱ 'ಪೆಂಜಱುವು' ನೋ.

ಪೆಂಜಱುವು, ಪೆಂಜಱ, ಪೆಂಜಱೆವು, ಪೆಂಜೆಱು, ಹೆಂಜಱ, ಹೆಂಜೆಱು (ನಾ). ೧. ಒಂದು ಸ್ಥಳದ ಹೆಸರು ; ೫ ಮಡಕಶಿರಾ ತಾಲ್ಲೂಕಿನ ಈಗಿನ ಹೆಂಜೇರು : ಪೆಞ್ಜಱುವಿನ ಪಞ್ಚಮಟಸ್ಥಾನಮುಂ ಮಹಾನಖರಮು ಸಕಿಯಾಗಿ ಬರಗೂರ ಮಹೇನ್ದ್ರೇಶ್ವರದೊಳಗೆನ್ದು ಕೊಟ್ಟುದು (ಎಕ. XII, ಶಿರಾ. ೩೯-೪೪ ; 920) ; ಪೆಞ್ಜಱುವಿನ ನೊಟಪ್ಪುಗಾವುಣ್ಣನು (ಎಕ. XII, ಶಿರಾ. ೨೯-೪೬ ; 943). **ಪೆಂಜಱ** : ೧. ಸ್ವಸ್ತಿಶ್ರೀ ಶಿವಮಾರ ಮಹಾರಾಜ ಪೃಥುವೀರಾಜ್ಯಂಗೆಯ ಕಾಡುಪಟ್ಟಿ ಪೆಞ್ಜಱಕೆ ಕನ್ದಳ್ಳಿಯ ರಾಜಿಗದೊಳ್ತ × × ಚ್ಚನ್ ಕವಿತ್ತೊರನ್ ಪಸುವಟಿಧನುವೆಟ್ಟ ಕೊನ್ದು ಬಿಟ್ದೂರ್ (ಎಕ. IX (8). ಹೊಸಕೋ. ೦೬೯-೨; ಸು. 800). **ಪೆಂಜಱೆವು** : ೧. ಪೆಂಜಱೆವಂ ಕಾವ ತಳಱ ಬಟ್ಟೆರೇಚಯ್ಯನೆಂಬ ತೈಲಕಟೇಲಿ ದೇವಕೆಱೆಯ ಕಟ್ಟಿ . . . ಬಿಟ್ಟ ಭೂಮಿ (ಎಕ. XII, ಶಿರಾ; ೩೩-೬ ; ಸು. 1100 ?). **ಪೆಂಜೆಱು** : ೧. ಪೊಗಟಿವೆಱೆಗನ ಜಾತಲ್ಲು ಕೇಳ ಪೆಂಜ್ಜೆಱೆಲ್ಲಂ ಪೊಗಟಲ್ಕೆ ವೀಱನ ಸಾವು ಕತೆಯಾಗಿ ಪರೆದುದು (ಸೌಇಇ. IX-1, ೩೦-೦೪; 966). **ಹೆಂಜಱ** : ೧. ಹೆಞ್ಜಱಸಮರದೊಳ್ಮುರಾರಿ ಮಾರನಾಗಿ ಗುದುರೆಯ ಪಾಯಿಸಿ (ಎಕ. III, ಸಂಪಸ. ೦೨೨-೧೪ ; 266 ? ಕೃಶಾ);

ದಿಗ್ವಿಜಯಯಾತ್ರಾಂ ಬಿಜಯ ಕರೆಮಿ ಹೆಂಜಱಗ್ರಾಮಾತು ಕಟಕ ಮುಕುಲೀತಪ್ (ಇಅ. VIII, ೯೪ ೦; 444 ಕ್ಕಶಾ). ೨. ಒಬ್ಬಾತನ ಹೆಸರು : ಮಧಿಗವುಡನ ಶುಪುತ್ರ ರಾಮಧೇವನು ಹೆಣ್ಣಱನಿಱಿದು (ಎಕ. VII, ಶಿಕಾಂ. ೫೨-೦೨; 357 ? ಕ್ಕಶಾ). ಹೆಂಜೆಱು : ೧. ಕೊಯತೂರ ತುಳಿವ ಹೆಂಜೆಱು ದಿಸಾಪಟ್ಟಸಂಗ್ರಾಮ ಜತ್ತಲಟ್ಟ ಪಾಂಡ್ಯನಂ ಬೆಂಕೊಂಡ (ಎಕ. II, ೦೪೩-೫೬; 1131). [?]

ಪೆಂಜಱ್ವು 'ಪೆಂಜಱುವು' ನೋ.

ಪೆಂಜೆಱು 'ಪೆಂಜಱುವು' ನೋ.

ಪೆಂಟೆ$_1$ 'ಪೆಂಟೆ$_1$' ನೋ.

ಪೆಂಟೆ$_2$, ಪೆಂಟೆ$_3$, ಪೆಂಡಿ$_2$, ಪೆಂಡೆ$_3$(ನಾ). ೧. ಮೂಟೆ; ಗಂಟು: ಪುನರ್ದ್ದತ್ತಿಯಾಗಿ ನಾಲ್ಕುಂ ಸುಂಕದೊಳವೆರಡೊಲ್ದೆಱ್ ಕೊಡವೀಸವ ಸಹಿತಮಾಗಿ ಬಿಟ್ಟ ಉಪ್ಪಿನ ಪೆ[ಂಟೆ] ಅಱುವತ್ತು (ಸೌಷಾ. XX, ೬೦-೨೫; 1088). **ಪೆಂಟೆ$_3$** : ೨. ಹೊರೆ; ಸಿವುಡು; ಪಿಂಡಿ : ವಿರಹಭರೋತ್ಕಂಠ ಮನೋಹರಿಯ ಕಪೋಳಂಗಳಂತೆ ನಿಬ್ಬರಿಸಿದ ಬೆಳ್ಕರಿಸಿದೆಲೆಗಳಿನದೆಲೆಗಳ ಬರಿಸುವುದನುನಯದೆ ಪೆಂಟೆ ಗೆಂಟಱ ವಿಟರಂ (ಪುತ್ವಪು. ೨-೮೨). **ಪೆಂಡಿ$_2$** : ೨. ಕದಿರು ಸೂತ್ರ ದಾರ ಬಲುಗಣಿಕೆಯ ಪೆಂಡಿ ಹೂಡುಗೋಲುಗಳನು ಒಲಿದು ಕಟ್ಟಿದನು ಆ ಶರಣ (ಅಮುಸಾಂ. ೫-೫); ಒಣಗಿ ತಾರವಾದ ಸಿಬರಿನ ಪೆಂಡಿಯನ್ನು ತೆಗೆದು, ಮೊದಲು ಸೂಜಿಯಂತಹ ಸಿಬರು ಹೆಚ್ಚಿಟ್ಟುಕೊಳ್ಳುತ್ತಾನೆ (ದೀಪಹ. II, ೩); ಎಲ್ಲಾರು ಕಟ್ಟ್ಯಾರ ಮಲ್ಲಿಗ್ಹೂವಿನ ದಂಡಿ ಬೀಗುತಿ ಕಟ್ಟ್ಯಾಳ ಹುಲ್ಲ ಪೆಂಡಿ (ರೋಕಗೀ. ೨೫). **ಪೆಂಡೆ$_3$** : ೨. ಚಂಡಿತನವೆಂಬ ಹಿಂಡಿ ಇಡಬೇಕು ದಿಂಡತನವೆಂಬ ಪೆಂಡೆಮೇವು ಪುಂಡತನವೆಂಬೊ ಪಿಂಡಿ ರುಬ್ಬಿಡಬೇಕು (ಪುರಂದ. ೨-೫೫-೨); ಹೊಲ ಕೊಯ್ಯುವವರಿಗೆ ಅವರು ಕೊಯ್ದ ಪೆಂಡೆಗಳನ್ನೇ ಕೂಲಿಯಾಗಿ ಕೊಡುತ್ತಾರೆ (ಮುಂಬಯಿ. ೫-೦೯೭); ಬಲಗಡೆ ನಾರಿನ ಪೆಂಡೆಯಿತ್ತು (ಪ್ರೇಮತ. ೮೭). [<ಸಂ. ಪಿಂಡಿ]

ಪೆಂಟೆ$_1$, ಪಿಟ್ಟೆ$_1$, ಪೆಂಟೆ$_1$, ಪೆಂಡಿ$_1$, ಪೆಟ್ಟ, ಪೆಟ್ಟೆ$_1$, ಪೆಟ್ಟೆ$_1$, ಹೆಂಟೆ$_1$, ಹೆಂಡೆ$_1$, ಹೆಟ್ಟ$_1$, ಹೆಟ್ಟೆ (ನಾ). ೧. (ಮಣ್ಣು, ಬೆಲ್ಲ ಮೊದಲಾದುವುಗಳ) ಮುದ್ದೆ; ಉಂಡೆ : "ಪೆಟ್ಟೆಯೆ ತಾಂ ಪೆಂಟೆಯಕ್ಕುಂ" (ಕವಿಕಂ. ೨೨೮); ಪೆಂಟೆಯ ಅಂಟುವಲೆಯ . . . ಬಿಲ್ಲಂಬುಗಳ ಬಲ್ಪೊಱ್ಪೊತ್ತು (ರಾಮಾಶ್ವ. ೮೩-೨೪); ಈ ಕಿಟ್ಟವು ಆರಿ ಕಲ್ಲಿನಂತೆ ಭಾರವುಳ್ಳ ಪೆಂಟೆಯಾಗುತ್ತದೆ (ಮುಂಬಯಿ. ೪ ೦೪೪). **ಪಿಟ್ಟೆ$_1$** : ೧. ಕಲ್ಲು ಜಳ್ಳು ಪಿಟ್ಟೆಗಳನ್ನು ನಾವೇ ಇದರಿಂದ ಹೆಕ್ಕುತ್ತೇವೆ (ನಾಡೋಜ. ೫೫). ೨. (ಮಣ್ಣಿನ) ರಾಶಿ; ಗುಪ್ಪೆ; ದಿಬ್ಬ : ನಾಲ್ಬಟ್ಟೆಯ ಪಿಟ್ಟೆವೊಲ್ ಕುಲನಗೌಘಂ ನುರ್ಗಿದತ್ತು (ಜಗವಿ. ೧-೫೦). ೩. (ಶರೀರದಲ್ಲಿ ರೋಗದ ಪರಿಣಾಮವಾಗಿ ಬೆಳೆಯುವ) ಗಡ್ಡೆ; ಗಂಟು : ಕಾವೇರಿಯ ಹೊಟ್ಟೆಯಲ್ಲಿ ಅನ್ನದ ರಸ ಹೋಗಿ ಪಿಟ್ಟೆ ಬಂದಿತ್ತು (ಕಾವೇರಿ. ೨೦೨). **ಪೆಂಟೆ$_1$** : ೧. ಬೆಲ್ಲದ ಪೆಂಟೆಯ ಅವಲ್ಲಿ ಕಚ್ಚಿ ನೋಡಿದಡೆಯೂ ರುಚಿಕರವಾಗಿ ತೋರುವದಲ್ಲದೆ ವಿಷವಾಗಿ ತೋರದು (ಪಶಣಾ. II, ೦೯೩-೬೨ ಅರ್ಥ). **ಪೆಂಡಿ$_1$**: ೨. "ಪೆಂಡಿ—ಪಿಂಡಿ=ಕಣಿಗಾಲು, ಗುಂಪು" (ಶಬ್ದಕೋ. ೨೬). **ಪೆಟ್ಟ**: ೧. "ಪೆಟ್ಟವೆನೆ ಲೋಷ್ಟ" (ಕಪರ. ೬೯); ನೇಗಿಲೊಳುಕ್ಕೆಯನುಳುವ ಕುಡಿಯನಂ ಕಂಡುಮಿಾ ಹಲಕ್ಕೆನಿತು ಪೆಟ್ಟಯೆಂ[ಪಾಶಾಂ. ಹೊಲಕ್ಕೆ ಪೆಟ್ಟೆಯೆನಿತೆಂ, ಹಳ್ಳಕ್ಕೆನಿತು ಪೆಂಟೆಯೆಂ]ದು ಬೆಸಗೊಳುತ್ತಲ್ಲಿಂ ಪೋಗಿ (ಪುಷ್ಕಾಸ್ತ್ರ. ೩-೦೨ ಪ). ೪. ವ್ಯವಸಾಯದ ಒಂದು ಉಪಕರಣ ; ಮಣ್ಣಿನ ಗಟ್ಟಿಯನ್ನು ಒಡೆಯಲು ಬಳಸುವ ಸಾಧನ : 'ಪೆಟ್ಟವೆಱ್' ಪರಾ. **ಪೆಟ್ಟೆ$_1$** : ೧. "ಪೆಟ್ಟೆಯೆಂದು ಹೆಂಟೆ" (ಕಪಸಾ. ೬೦-೬೦೬). **ಪೆಟ್ಟೆ$_1$** : ೧. "ಪೆಟ್ಟೆಯೆ ತಾಂ ಪೆಂಟೆಯಕ್ಕುಂ" (ಕವಿಕಂ. ೨೨೮); ದಿವ್ಯಮಪ್ಪ ಶಯ್ಯಾತಳದೊಳ್ ನಿದ್ರೆಗೆಯ್ವಾರಿನಯ್ ಈಗಳ್ ಪೆ[ಪಾಶಾಂ. ಬೆ, ವೆ]ಟ್ಟೆಗಳುಂ ಕಿಱುಗಲ್ಗಳುಮೊತ್ತೆ ನಿದ್ರೆಗೆಯ್ವೆಯಾದಯ್ (ಪಣ್ಣಾರಾ. ೦೪೦-೨); ಕಡುಕುಂ ಪೆಟ್ಟೆ[ಪಾಶಾಂ. ಪಿಟ್ಟೆ]ಯುಮೊತ್ತೆ ಮೆಲ್ಲಡಿಗಳಂ (ಸಂಪಭಾ. ೩-೯); ಆಕೆ ಕೆಕ್ಕಳಗೆಳರ್ದಿಟ್ಟರ್ಗಾಱದೆ ಪೆಟ್ಟೆಯಂ [ಪಾಶಾಂ. ಹೆಂಟೆಯಂ, ಪೆಂಟೆಯಂ] ಕಚ್ಚುವಂತೆ . . . ಆ ಕಪ್ಪಡಮನೆರಟ್ಕಡಿಯಾಗೆ ಸಱ್ರನೆ ಸೀಳ್ದೀ ಡಾಡುವುದುಂ (ಅರ್ಥನೇ. ೭-೯ ಪ); ತನ್ನ ನೆಳಲಂ ಪ್ರತಿಗಜವೆಂದುಱದೆ ಕಱುತ್ತೆಱಗಿ ಬೆಟ್ಟದ ಪೆಟ್ಟೆ[ಪಾಶಾಂ. ಪೆಂಟೆ] ಗಳನೆತ್ತಿಯೆತ್ತಿ ಕೋಪಮಾಱದೆ (ಗಿಂಕ. ೦-೦೨೮ ಪ). **ಹೆಂಟೆ$_1$** : ೧. "ಮಣ್ಣಿನ ಹೆಂಟೆ-ಲೋಷ್ಟ" (ಪಾಶಾ.ಕಿ); ಕಲ್ಲು ಹೆಂಟೆ ಹೋರಿಯಾಡಿ ಕಲ್ಲು ಕರಗಿ ಹೆಂಟೆ ಉಳಿಯಿತು (ಮಮಗುಂ. ಕ. ೨೪೯-೦೩); ತಾನಿರ್ಪ ನೆಲದ ಡೊಗಱ್ಗೊಳಗೆ ಹೊಕ್ಕಗೆಯುತ್ತುಮಿರೆ ಜಱಿದು ಬಲು ಹೆಂಟೆಯಾಗಿ ಮೇಲಿಪ್ಪೆರೆಯ ಮಣ್ಣಿನ್ನ ಬೆನ್ನನೋಪದೆ ಮುಱಿದುದು (ಸಮ್ಮಕೌ. ೨-೪೩); ಬೇಸಾಯಗಾರನು . . . ಕುಂಟೆಯಿಂದ ಹೆಂಟೆ ಒಡೆದು ಪುಡಿ ಮಾಡಿ (ವಿಬಂಧ. II, ೨೭೨). ೪. 'ಹೆಂಟೆಗೊಡತಿ' ಪರಾ. ೫. ಹಸಿಯ ಇಟ್ಟಿಗೆ; ಸುಡದೆ ಇರುವ ಇಟ್ಟಿಗೆ : ಕೆಮ್ಮಣ್ಣಿನ ಹೆಂಟೆಯನ್ನು ಕೆಂಪಾಗಿ ಸುಟ್ಟು, ನೀರಲ್ಲಿ ಹಾಕಿ, ಆರಿದ ನೀರಂ ಕುಡಿಯಲು ಪಿತ್ತ ಭರ್ದಿ ಮಾಣ್ಗುಂ (ಸಕವೈ. ೨೬೫); ಒಂದು ಹೆಂಟೆಯದಾದರೂ ಸುಂದರವಾದ ಮನೆಯೂ ಇತ್ತು (ಪ್ರೇಮಾಶ್ರ. ೪೯). **ಹೆಂಡೆ$_1$** : ೧. "ಹೆಂಡೆ[ಪಾಶಾಂ. ಹೇಂಟೆ] ಲೋಷ್ಟಂ" (ಮಂಗರಾ. ೦೦೯-೨); ಖಂಡ ಸಕ್ಕರೆ ಹಣ್ಣ ಕೊಟ್ಟರೊಲ್ಲದೆ ಮಣ್ಣ ಹೆಂಡೆಯನು ಬೇಡಿ (ಪುರಂದ. ರಾ. ೩-೦೦೭-೨); ಹೆಂಡೆ ಕಲ್ಲಿನೊಳಿಟ್ಟು ಕೊಲಲಿ (ಅಮುಸಾಂ. ೩-೦೩೦). **ಹೆಟ್ಟ$_1$**: ೪. 'ಹೆಟ್ಟಹೊಡೆ' ಪರಾ. ೬. ಉಳುಮೆ ; ಹೂಟೆ. ೭. ಹರಳಿನಿಂದ ಎಣ್ಣೆಯನ್ನು ತೆಗೆದ ಮೇಲೆ ಉಳಿಯುವ ಹಿಂಡಿ,—ಗಷ್ಟು : "ಲೋಷ್ಟದೊಳು ಹೂಟದೊಳುಯೇರಂಡಕಿಟ್ಟದೊಳು ಹೆಟ್ಟಂ" (ಶಬ್ದಮಂ. ೯೦). **ಹೆಟ್ಟೆ** : ೧. "ಲೋಷ್ಟಕಃ, ಲೋಷ್ಟಂ—ಈ ೨ ಹೆಟ್ಟೆ" (ಹರಾಯು. ೯೪-೪೨೨); ತೊಟ್ಟನೆ ಪಲ್ವಲಾಂಬು ತವೆ ಬತ್ತಿಮದಾಕ್ಷಣವೆಟ್ಟ ಹೆಟ್ಟೆ[ಪಾಶಾಂ. ಟ್ಟೆ]ಕಾಯ್ದಿಟ್ಟಿಗೆಯುಂದಮಾಯ್ತು (ಕುಸುಮಾ. ೬-೦೨೪); ಮಣ್ಣಿನ ಹೆಟ್ಟೆಯೊಂದನ್ನೆತ್ತಿ ನೀರಿಗೆ ಒಗೆದ (ಮೂರುದಾ. ೨೯೫).

[ದೇ.॥ ತುಳು. ಹೆಂಟೆ. ಎಂಟೆ ; ತೆಲು. ಪೆಂಟ, ಪೆಡ್ಡ, ಬೆಡ್ಡ./ಪ್ರಾ. ಪೇಂಡ./ಸಂ. ಪಿಂಡ]

ಪೆಂಟೆ$_2$, ಹೆಂಟೆ$_2$, ಹೇಂಟೆ, ಹೇಟೆ, ಹೇಟೆ (ನಾ). ೧. (ಕುದುರೆ, ಕತ್ತೆ ಮುಂತಾದ) ಪ್ರಾಣಿಗಳಲ್ಲಿ ಹೆಣ್ಣು : ಅಂತು ಪೆಂಟೆಗಳಂ ದಾಂಟ ಕೆಡವುತ್ತುಂ ಕಡವಂಗಳಂ ಕರ್ಚಿ ಕೆಡವುತ್ತುಂ . . . ಕೇಳ್ದರೆರ್ದೆ ತೆಱ್ವಿನ ಮೊಳಱ್ ಪೆಂಟೆ[ಪಾಶಾಂ. ಪೆಟ್ಟ, ಪೆಟ್ಟೆ]ಯ ಪೊಟ್ಟೆಯಂ ಕರ್ಚಿ ಸೆಳೆಯೆ (ಅರ್ಥನೇ. ೭-೯೧ ಪ). **ಹೆಂಟೆ$_2$** : ೨. "ಹೆಣ್ಣುಕೋಳಿ" (ಪಾಶಾಕ. ೨೫೭) **ಹೇಂಟೆ** : ೨. ಚಂದ್ರಮನಂತೆ ಸುಪಕ್ಷದಿಂದೆ ರಂಜಿಸಿದುದು ಪುಂಜನಗ್ಗದ ಸುವಸ್ತುವಿನಂತಿರೆ ತಟ್ಟು ಹೇಂಟೆಯೊಳ್ (ಯಶೋಸ. ೩-೭೮); ತನ್ನ ಹೂಮರಿಗಳೊಡನೆ ನೆಲವನ್ನು ಕೆದರಿ ಗಲೀಜು ಮಾಡುತ್ತಿರುವ ಹೇಂಟೆ (ಕಾಮೂರು. ೩೬). **ಹೇಟೆ** : ೨. ಪೇಳಲಿನ್ನೇಂ ಸಿದ್ಧರಾಮ ಹೇಟೆಯ ಮರುಳ ಕೋಳಿಗಳ ಮೇಲೆ ತನ್ನಯ ಹೇಟೆಯಂ ಬಿಟ್ಟು ಕಾಳಗದಿನೆಲ್ಲವಂ ಗೆದ್ದುಕೊಂಡು (ಸಂಪು. ೬೩-೨೭). **ಹೇಟೆ** : ೨. ಹೇಟೆಯ ಮಗ್ಗುಲಲ್ಲಿನ ಕೋಳಿಮರಿಗಳಂತೆಯೂ . . . ಹೋದರು (ಕೋಟಿಕೆ. ೪೭).

[ದೇ.॥ ತಮಿ. ಪೆಟ್ಟೈ, ಪೆಟ್ಟೈ, ಪೇಟು, ಪೇಟೈ ; ಮಲ. ಪೆಟ್ಟ, ಪೆಡ, ಪೇಡ, ಪಿಡ ; ತುಳು. ಪೆರಡೆ ; ತೆಲು. ಕೋಲಾ. ಪೆಟ್ಟ]

ಪೆಂಟೆ$_3$ 'ಪೆಂಟೆ$_2$' ನೋ.

ಪೆಂಟೆ$_4$ 'ಪೆಟ್ಟೆ$_3$' ನೋ.

ಪೆಂಟೆಗಟ್ಟು (ಕ್ರಿ). ಮುದ್ದೆಯಾಗು ; ಉಂಡೆಯಾಗು : (ಕಿ). [ಪೆಂಟೆ$_1$ + ಕಟ್ಟು$_1$]

ಪೆಂಟೆಬೆಲ್ಲ (ನಾ). ಮುದ್ದೆಯಾಗಿರುವ ಬೆಲ್ಲ ; ಉಂಡೆಬೆಲ್ಲ : ಒಂದು ದೊಡ್ಡ ಕೊಪ್ಪರಿಗೆಯಲ್ಲಿ ಕಬ್ಬಿನ ಹಾಲನ್ನು . . . ಚೆನ್ನಾಗಿ ಕುದಿಸಿ ಪೆಂಟೆಬೆಲ್ಲವನ್ನು ಮಾಡುತ್ತಿದ್ದರು (ಕಪಪು. ೩-೮೨). [ಪೆಂಟೆ$_1$ + ಬೆಲ್ಲ]

ಪೆಂಡ, ಹೆಂಡ (ನಾ). ಈಚಲು, ತೆಂಗು, ಬಗನಿ, ತಾಳೆ ಮೊದಲಾದ ಮರಗಳಿಂದ ಇಳಿಸಿ ತೆಗೆದ ರಸ ; ಮದ್ಯ : "ಮದ್ಯಂ = ಪೆಂಡು" (ಕಾಶಳ್ಯ. ೦೯೦) ; ಕಂಡವರೆಲ್ಲರು ಉಗುಳಿ ಓಕರಿಪಂತೆ ಪೆಂಡದ ಗಡಿಗೆ ಮುಂದಿಟ್ಟು (ಬಿಸ್ಕಾಂ. ೮-೭೩). **ಪೆಂಡ** : ಬೆಳದಿಂಗಳಲ್ಲಿ ನಿಂದು ಹೆಂಡವ ಕೊಂಬವಂಗೆ ಲಿಂಗದ ಸಂದನೇನ ಬಲ್ಲ (ಪೋಳಿಮಾ. ೬೬-೨೬೮) ; ಲಡ್ಡುಗೆಯಂ ಬೆಸಕಂಗೆ ಹೆಂಡಮಂ ಮಾರಿಗೆ ಬೊಮ್ಮಯಂಗೆ ಚರುವಂ ಪದೆದೆತ್ತುವೆಂ (ಸೂಕ್ತಿಸು. ೮-೮೪) ; ಹೇರೂರ ನಾಗಣ್ಣ ಹೆಂಡದಾ ಮಾರಯ್ಯನು (ಗ.ರುಜಾ. ೯-೬೩).

ಹೆಂಡದ ಬುರುಡೆ = ಹೆಂಡವನ್ನು ತುಂಬಿಡುವ ಒಣ ಸೋರೆಕಾಯಿಯಿಂದ ಮಾಡಿರುವ ಉರುಟುಪಾತ್ರೆ : (ಕಿ).

[ದೇ.॥ ತುಳು. ಹೆಂಡ ; ಗಡಬ. ಪೆಂಡೂಮ್./ಪ್ರಾ. ಪೇಂಢಾ]

ಪೆಂಡತಿ 'ಪೆಂಡಿತಿ' ನೋ.

ಪೆಂಡತಿವಂತ (ನಾ). ಹೆಂಡತಿಯುಳ್ಳವನು ; ಮದುವೆಯಾಗಿರುವವನು : ಪೆಂಡತಿವಂತನೀತಂ (ಶಪ್ಯಾಮ. ೪೦೨ ಪ್ರಯೋ).

[ಪೆಂಡತಿ (< ಪೆಂಡಿತಿ) + — ವಂತ]

ಪೆಂಡಯ 'ಪೆಂಡೆಯ' ನೋ.

ಪೆಂಡವಾಸ (ನಾ). ೧. ಅಂತಃಪುರ ; ರಾಣಿವಾಸ : "ರಾಣಿವಾಸಕ್ಕೆ ಪೆಂಡವಾಸವದೆನಿಸುಗುಂ" (ಶಪ್ಯಾಮಾ. ೩೮) ; ಧಾರಿಣಿಮಹಾದೇವಿಯ ಯ್ನೂರ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂ ಬೆರಸು . . . ಪೊಕ್ಕು (ಪಡ್ಕಾಂ. ೮೦-೯) ; ಪೆಂಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್ (ಅಪಪು. ೦೦-೪೦) ; ಪಲುಂಬಿ ಪಂಬಲಿಸುವ ಪೆಂಡವಾಸದ ತಂಡಮಂ ಕಂಡು (ಅನಂಪು. ೩-೦೦೨ ಪ). ೨. ಅಂತಃಪುರದಲ್ಲಿ ವಾಸಮಾಡುವ ಸ್ತ್ರೀಯರು : "ಪೆಂಡವಾಸಮೆಂದು ಅಂತಃಪುರಸ್ತ್ರೀಯರ್" (ಕಶಸಾ. ೬೦-೩೨೦) ; ಅಂತು ಪೆಂಡವಾಸಮುಂ ಪುರಪುರಂಧ್ರಿಯರುಂ . . . ಕುಮಾರರುಂ ಬೆರಸು ಧಾರಿಣೀಮಹಾದೇವಿಯುಂ ತಾನುಂ ಗಂಧಸಿಂಧುರಾರೂಢರಾಗಿ (ರರ್ಮಾಮ್ಯ. ೦೩-೦೮) ; ಪಣ್ಯವೀಧಿಯೊಳ್ ನಡೆದುದು ಪೆಂಡವಾಸಮತಸುಧ್ವಜಿನೀರಥಯೂಥಮೆಂಬಿನಂ (ಪರ್ಸಪು. ೫-೩೯). ೩. ಸೂಳೆ ; ವೇಶ್ಯೆ : 'ಪೆಂಡವಾಸಗೇರಿ' ಪರಾ. [< ಪೆಣ್ + ವಾಸ$_2$]

ಪೆಂಡವಾಸಗೇರಿ (ನಾ). ವೇಶ್ಯೆಯರು ವಾಸಿಸುವ ಬೀದಿ ; ಸೂಳೆಗೇರಿ ; ವೇಶ್ಯಾವಾಟಿ : ಆ ಪೆಂಡವಾಸಗೇರಿಯೊಳಗೆ ಸೌಭಾಗ್ಯದ ಭೋಗದ ಚಾಗದ ರೂಪುಗಳ್ ಮಾನಸರೂಪಾವಂತೆ (ಶಂಪಭಾ. ೪-೮೬ ಪ) ; ಪೆಂಡವಾಸಗೇರಿಯೊಳಗನೆ ಬರೆವರೆ (ಶಾಂತಿಪು. ೮-೭೫ ಪ). [ಪೆಂಡವಾಸ + ಕೇರಿ]

ಪೆಂಡಾರ (ನಾ). ೧. ಕಾಲಿಗೆ ಧರಿಸುವ ಒಂದು ಬಗೆಯ ಆಭರಣ : ಅಂದುಗೆ : ಉರಗೆಜ್ಜೆ ದಂಡೆ ಪೆಂಡಾರ ಬಾಸಿಗವನಾವರದಿ ರುದ್ರಾಕ್ಷೆಯೊಳಲಂಕರಿಸಿ ಭಸಿತದಿಂ ಹೊರೆದ ಹೊಸ ಹೋರಿಯೆತ್ತುಗಳ ನೊತ್ತಂಬದಿಂ ದೂಡಿದಂ ಗಾಡಿವಡೆದು (ಸಿದ್ಧರಾ. ೬-೨೯). ೨. ಶ್ರೇಷ್ಠನಾದ ವೀರನಿಗೆ ಶೌರ್ಯಸೂಚಕವಾಗಿ ಒಡೆಯನು ಕೊಡುವ ಬಿರುದು ಮತ್ತು ಅದನ್ನು ಸೂಚಿಸುವ ಆಭರಣ : ಎಡಗಾಲೊಳ್ ಪೊಸತಪ್ಪ ಪೊಂಬೆಸದ ಪೆಂಡಾರಂ ಭುಜದ್ವಂದ್ವದೊಳ್ ಕುಡುಮಿಂಚಂ ಕೊನರಿಪ್ಪ ವಜ್ರವಳಯಂ (ಮಹಾಪೇ. ೬-೪೦). 'ಗಂಡಪೆಂಡಾರ' ಪರಾ. ೩. (ಆಲಂ) ಶ್ರೇಷ್ಠನಾದವನು ; ಹಿರಿಮೆಯುಳ್ಳವನು : ಗಂಭೀರಾಭೀರಪ್ರಚಂಡಪೆಂಡಾರ ವೀರಲಕ್ಷ್ಮೀದೇವ . . . ಪ್ರತಿಜ್ಞಾಪರಶುರಾಮ ಇತ್ಯಾದಿ ನಾಮಾವಳೀವಿರಾಜಮಾದ ಶ್ರೀಮತು ಪ್ರೌಢಪ್ರತಾಪ ಚಕ್ರವರ್ತಿ (ಕಇ. V. ೪೨-೦೨ ; 1239) ; ಗಂಭೀರಾಭೀರಪ್ರೆಚಂಡಪೆಂಡಾರ ನಿಖಿಲಕುಲಕಾಂತಾರವಂಸಾವಳಿದಹನ (ಮೃಅಂ. ೦೯೨೯. ೬೯-೦೪ ; 1276).

[ದೇ.॥ ತೆಲು. ಪೆಂಡಾರ, ಪೆಂಡರ, ಪೆಂಡೆರ, ಪೆಂಡೇರ]

ಪೆಂಡಾರಿ 'ಪಿಂಡಾರಿ' ನೋ.

ಪೆಂಡಾರೆ (ನಾ). (ಕಣ್ಣಿನ ಬೇನೆಗೆ ಮದ್ದಿನಂತೆ ಉಪಯೋಗಿಸುವ) ಒಂದು ಬಗೆಯ ಔಷಧೀಸಸ್ಯ : (ಕಿ). [< ಸಂ. ಪುಂಡರ್ಯ]

ಪೆಂಡಾರೆಗಡ್ಡೆ (ನಾ). ಪೆಂಡಾರೆಗಿಡದ ಗಡ್ಡೆ ; ಬಿಳಿನೈದಿಲೆಗಡ್ಡೆ : "ಪ್ರಪೌಂಡರೀಕಂ, ಪೌಂಡರ್ಯಂ—೨ ಪುಂಡರೀಕಮೆಂಬುವ ಗ್ರಂಥದ್ರವ್ಯದ ಹೆಸರುಗಳು. ಪೆಂಡಾರೆಗಡ್ಡೆ, ಪಾಂಡವರ ಮದ್ದು, ಇದು ಬಿಳೀನೈದಿಲೆಗಡ್ಡೆ" (ಸಿದ್ಧಾಂತಿ. ೦೯೦). [ಪೆಂಡಾರೆ + ಗಡ್ಡೆ]

ಪೆಂಡಾವಾಸ (ನಾ). = ಪೆಂಡವಾಸ ೨ : "ಪೆಂಡಾವಾಸಮುಮೆನಲ್ಕೆ ಯಂತಃಪುರದೊಳ್ ಗುಂಡುಗೊಂಡಿರ್ಪ ಸತಿಯರ್" (ಕಪಕಂ. ೦೯೬).

[P ಇಲ್ಲಿ 'ಪೆಂಡವಾಸ' ಎಂಬ ಶಬ್ದವನ್ನು ಛಂದಸ್ಸಿಗಾಗಿ 'ಪೆಂಡಾವಾಸ' ಎಂದು ಮಾಡಿಕೊಂಡಿದೆ]

ಪೆಂಡಾಳ (ನಾ). ದರೋಡೆ ಮಾಡುವವನು ; ಕಳ್ಳ : ಜಾರಚೋರಶಿಖಾಮಣಿಯಾದ ಕೃಷ್ಣನುಂ ಪೆಂಡಾಳರುತೆ ಕುದುರೆಯನ್ನೇರಿ (ಅರ್ಜಾಪಿ. ೨೬-೨೮ ಪ). 'ಪೆಂಡಾರಿ' ಪರಾ. [< ಪಿಂಡಾರಿ]

ಪೆಂಡಿ$_1$ 'ಪೆಂಟೆ$_1$' ನೋ.

ಪೆಂಡಿ$_2$ 'ಪೆಂಟೆ$_2$' ನೋ.

ಪೆಂಡಿ$_3$ (ನಾ). ಕುಲ ; ಮನೆತನ : 'ಅರಸುಪೆಂಡಿ', 'ರಾಜಪೆಂಡಿ' ಪರಾ. 'ಪೀಡಿ' ಹೋ. [← ಹಿಂ. ಪೀಢೀ]

ಪೆಂಡಿಕ್ಕಿಱು (ನಾ). ಒಂದು ಸ್ಥಳದ ಹೆಸರು (?) : ಆಂಗಾರಸಿಂಗ ಪೆಣ್ಡಿಕ್ಕಿಱುಮಂ ಕಾಳಾ ಉದುಗುಱಿಯನುಟ್ಟುಕೊಳ್ವ (ಎಕ. VIII. ಸೊರಬ. ೨೨-೩ ; ಸು. 800). [?]

ಪೆಂಡಿತಿ, ಪೆಂಡತಿ, ಹೆಂಡತಿ, ಹೆಂಡತ್ತಿ, ಹೆಂಡಿತಿ (ನಾ). ೧. ಮಡದಿ ; ಪತ್ನಿ : ಆತನ ಪೆಂಡಿತಿ ಪೃಥುಶ್ರೀಯೊಬಳ್ (ಶಾಂತಿಪು. ೪-೬೬ ಪ) ; ಪೆಂಡಿತಿಯ ಮಂಗಳಸೂತ್ರವದು ಮೊದಲು ಇಂದು ನಾಳೆನ್ನದೆ ದಿನಂಪ್ರತಿಯಿಂದೆ ಧನವಂ ಸಲಿಸಲು (ಬಸಪು. ೨೬-೯) ; ಕನಕಂ ನೀರಕ್ಕರಂ ಪೆಂಡಿತಿ ಕನಸು (ರತ್ನಾಕ. ೩೦). **ಪೆಂಡತಿ** : ೧. ಕಾಷ್ಠಕೂಟಂ ತನ್ನ ಪೆಂಡತಿ ಜಯಘಂಟೆಯೆಂಬೊಳನಿಂತೆಂದು ಕಲ್ಪಿಸಿದಂ (ಪಡ್ಕಾಂ. ೬೬-೫) ; ಕಿಟ್ಟಿಲ್ಲದಡುಗೆಯುಂ ನಚ್ಚಿಲ್ಲದ ಪೆಂಡತಿಯುಂ . . . ಒಪ್ಪಲಾರ್ಕುಮೆ (ರರ್ಮಾಮ್ಯ. ೦-೬೫). ೨. ಹೆಣ್ಣು ; ಸ್ತ್ರೀ : ಆರಾತಿಗಳ್ಗಳ್ಕಿಂ ತನ್ನ ಕುಲಮುಂ ಚಲಮುಂ ದೊರೆಯುಂ ಕಿಡೆ ಬಾಟ್ವಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ (ಅದಿಪು. ೦೨-೯೬). **ಹೆಂಡತಿ** : ೧. ರಾಮಧೇವನು ಹೆಣ್ಜಜನಿಱಿದು ರಾಜಮಲ್ಲನ ಹೆಣ್ಡತಿ ಭಣ್ಪರವನು ಬಲ್ವಳಾತಿನ್ದೊಪ್ಪಿಸಿದಲ್ಲಿಗೆ ಮೆಚ್ಚುಗೊಟ್ಟ ಭೂಮಿ (ಎಕ. VII. ಶಿಕಾಂ. ೩೨-೦೨ ; 357 ? ಕ್ಯಾಂ) ; ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ . . . ಇದ್ದರೇನೊ ಶಿವಶಿವಾ ಹೋದರೇನೊ (ಬಸಪ. ೦೦೯) ; ಹೆಂಡತಿ ಪ್ರಾಣ ಹಿಂಡುತಿ ದೊಡ್ಡ ಕೊಂಡಕೋತಿಯಂತೆ ಕುಣಿಕುಣಿಸುತ್ತ (ಪುರಂದ. ೪-೦೫ ಪಲ್ಲವಿ) ; ನನ್ನ ಹೆಂಡತಿ ಪ್ರಶ್ನೆ ಕೇಳುವುದರಲ್ಲಿ ನಿಸ್ಸೀಮಳು (ಮಹಾಶ್ಯಾ. ೦೦). **ಹೆಂಡತ್ತಿ** : ೧. ಆತನ ಹೆಂಡತ್ತಿ ಸೋಮವೆ (ಎಕ. VII. ಕನ್ನಗಿ. ೩೨-೨೩೭ ; ಸು. 1050 ?). **ಹೆಂಡಿತಿ** : ೧. "ದಾರಾಃ, ಕ್ಷೇತ್ರಂ . . . ಗೃಹಿಣೀ, ಗೃಹಾಃ—ಈ ೧೩ ಹೆಂಡಿತಿ" (ಹಲಾಯು. ೮೦-೩೪೦) ; ಮಾಟಕುಟಿಲಗಳಿಂದ ನನ್ನನ್ನು ನೀನು ಹೆಂಡಿತಿಯನ್ನಾಗಿ ಮಾಡಿಕೊಂಡೆ (ಆರ್ಯಕ. ೬೯). [< ಪೆಣ್ + — ಇತ್ತಿ$_1$ (< — ಇತ್ತಿ)]

ಪೆಂಡಿಲ್ಚಿಂತೆ (ನಾ). ಒಂದು ಸ್ಥಳದ ಹೆಸರು : ಮುಡಣದೆಸೆ ಪೆಣ್ಡಿಲ್ಚಿನ್ನೆ

ವುಲ್ಬೇಡು ಉದಿಚೇಡು ಚೀರಳಚಿನ್ತೆ (ಎಳ. XII, ತಿರಾ. ೩೮-೩೩; 878).

[?]

ಪೆಂಡೆ₁ 'ಪೆಂಡೆಯ' ನೋ.

ಪೆಂಡೆ₂ (ನಾ). ಹೆಣ್ಣು : ಸಮಶೀಲರೊಳು ಪೆಂಡೆ ದೊರಕಲು ನಾಡೆ ಸಮನಿಲ್ಲದ ಸುಖವಹುದು ಸಮಾನಿಲ್ಲದರೊಳು ನಂಟು ದುಃಖಗಳ ನಮಗಿರಿಸುವುದು ಚಿತ್ತದೊಳು (ತರ್ಕಾ. ೦೯-೩೦). [< ಪೆಣ್]

ಪೆಂಡೆ₃ 'ಪೆಂಟೆ₂' ನೋ.

ಪೆಂಡೆಯ, ಪೆಂಡಯ, ಪೆಂಡೆ₁, ಪೆಂಟೆಯ₁ (ನಾ). ೧. ಕಾಲಿಗೆ ತೊಡುವ ಒಂದು ಬಗೆಯ ಆಭರಣ ; ಗೆಜ್ಜೆಗಳಿಂದ ಕೂಡಿರುವ ಕಾಲುಬಳೆ,—ಅಂದುಗೆ : "ಪೆಂಡೆಯುಂ ಪಾಯವಟ್ಟಂ" (ಮುಂಗರಾ. ೦೦೦-೩೦) ; ಬಾಲೆ ಮಾಣಿಕವನುಡು ಸಾದ ಕಿವಿಯಲಿ ಕೂಡು ಕಾಲ ಪೆಂಡೆಯವ ಮುಡಿ (ಹನಕಾ. ೯-೯೯) ; ಪೆಂಡೆಯಮರಳೆಲೆಯೆಟಲ್ವ ಕಿಱುಪುಲಿಯುಗುರ್ಗಳ್ . . . ಆತ್ಮಜಂಗೆ ರಂಜಿಸುತಿರ್ಕುಂ (ದಕಳು. ೨-೭೩). ೨. = ಪೆಂಡಾರ ೨: ಮುತ್ತಿನ ಪೆಂಡೆಯುಂ ಮುರಹರಂ ಕನಕಾದ್ರಿಯೊಳಂದು ಶೇಷನಂ ಸುತ್ತಿದ ಭಂಗಿಯಿಂದಮೆಸೆದಿರ್ಪುದು (ಎಳ. V, ಸೇಂಡಿರು. ೦೦೨-೭೩; ಸು. 1220 ?) ; ಕಾಲ ಕಡೆಹದ ಪೆಂಡೆಯುಂಗಳ . . . ಸರವಳಿ ಜಾಳದಾಭರಣಂಗಳ ಧರಿಸಿ (ಬಸಪು. ೬೦-೨೭) ; ಪೆಂಡೆಯದ ಪಾಮಾಂಘ್ರಿ ಮೆಱೆದಿರೆ (ಕೌತಿರಾ. ೪೦-೩). ೩. ಒಂದು ಬಗೆಯ ಆಯುಂಧ ಮತ್ತು ಅದನ್ನು ಹಿಡಿದು ಮಾಡುವ ಸಾಧನೆ (?) : ಜಟ್ಟಿಸಾಧಕ ಬಿಲ್ಲು ವಿದ್ಯೆ ಕತ್ತಿ ಕಠಾರಿ ಪೆಂಡೆಯ ನೆಟ್ಟಿ ತಿರುಗುಚಕ್ರ ಗಂಡುಕೊಡಲಿ ಮೊದಲಾದ ಸಾಧಕಗಳನು ಕಲಿತು (ಪಸಕಾ. ೮). 'ಪಟ್ಟೆಯ₁' ಹೋ. ಪೆಂಡಯ : ೧. ಮುತ್ತಿನ ದಂಡೆ ಮುತ್ತಿನ ಲಸತ್ತಿಲಕಂ ಸುರಿಮುತ್ತಿನೋಲೆಯೊಳ್ ಮುತ್ತಿನ ಪೆಂಡ[ಪಾಠಾಂ. ಡೆ]ಯುಂ . . . ಪಿಲ್ಲಿಯೆಂಬ ಸದಲಂಕರಣಂಗಳನೆಯ್ದೆ ತೊಟ್ಟು (ಬಾರಪು. ೬-೦೦೭). ಪೆಂಡೆ₁ : ೧. ಮಿರುಪ ಮುತ್ತಿನ ಪೆಂಡೆ ಚರಣದಿ . . . ಧರಿಸಿ (ಜಪಧಾ. ೦೯-೯೯) . . ೨. ಬಿರಿದೀನ ಕಾಲ ಪೆಂಡೆಯು (ಸೌಂದಕಾ. ೫-೬೯). ಪೆಂಟೆಯ₁ : ೧. ನೇವಳದ ಪೆಂಟೆಯವ (ರೇಪಜಿ. ೬೫-೨೨) ; ಹರಳೋಲೆ ಕಟ್ಟಾಣಿ ಮುತ್ತಿನ ಪೆಂಟೆಯ ಮಿಱುಗುವ ಚಿನ್ನಸರಗಳು ತುಱುಗಿದ ದಿವ್ಯಕಾಂತಿಯ ಮೂಕುತಿಯಿಂದ ಸರಸಿಜಗಂಧಿಯೊಪ್ಪಿದಳು (ಕಂಪಪಿ. ೯-೬೫).

[ದೇ. ॥ ತಮಿ. ಪೆಣ್ಟೈಯ, ಪೆಣ್ಟಯ ; ತೆಲು. ಪೆಂಡಿಯ, ಪೆಂಡೆ]

ಪೆಂಪಾನ್ (ಕ್ರಿ). ಚೆಲುವನ್ನು ಹೊಂದು ; ಶೋಭಿಸು : ವಕ್ರದ ಪೆಂಪಾಂತ ಕೋಱದಾಡೆಗಳು ನುಂಪಿನ ಬೆಳ್ಪಾಂತ ಮೈಸಿರಿ ರೌದ್ರದ ಜೊಂಪಿನ ಸಿಂಗವೆಸೆದುದು (ಪರ್ಗಸ. ೯-೪೬). [ಪೆಂಪು+ಆನ್₁]

ಪೆಂಪಿಡಿ (ಕ್ರಿ). ಹಿರಿಮೆಯಿಂದ ಕೂಡಿರು; ಘನತೆಯನ್ನು ಹೊಂದಿರು : ಪೆಂಪಿಡಿದೊಪ್ಪಿಪ್ಪಿನಮೂರ್ಜಿತೋಜ್ವಳಯಶಶ್ರೀಕಾನ್ತನಾಗಿಱ್ದು (ಎಳ. XVI, ಸಕ್ಕಸಾ. ೯೦-೯೬ ; 1169); ನೆಱೆಯೆ ನವಿರ್ ಪೆಂಪಿಡಿದೆಡೆದೆಱಪಿಲ್ಲದೆ ನೆರದ ಪ್ರಕೃದಿಂ ಸೊರ್ಕುತುಂ (ಜಕಪಿ. ೬-೨೨೯). [ಪೆಂಪು+ಇಡಿ₂]

ಪೆಂಪು, ಪೆಣ್ಪು, ಹೆಂಪು (ನಾ). ೧. ಹಿರಿಮೆ ; ಘನತೆ ; ಶ್ರೇಷ್ಠತೆ : "ಪೆಂಪೆಂದೆನಲ್ಗೌರವಂ" (ಕರ್ಣಾಪಿ. ೬೨) ; ಸುನ್ದರವೆಮ್ಬುದುಗ್ರತಪ (ಎಳ. II, ೭೯-೦ ; ಸು. 750) ; ಮಿಗೆ ಮನದ ಪೆಂಪುಮಂ ಕೈಮಿಗೆ ವಿಭವದ ಪೆಂಪುಮಂ ವಿಶೇಷಿಸಿ ಪೇಟಲ್ ಬಗೆವುದುದಾತ್ತಾಲಂಕಾರಗುಣೋದಯಂ (ಕಪಿರಾ. ೩-೦೭೩) ; ಕುಡವೇಟ್ವನ ಕುಡುವನ ಕುಡೆ ಪಡೆವನ ಪೆಂಪೇಂ ನೆಗಟ್ತೆವಡೆಗುಮೊ (ಪಂಪಭಾ. ೬-೯೯). ೨. ಕೀರ್ತಿ ; ಯಶಸ್ಸು ; ಖ್ಯಾತಿ : ಪಡೆದಂ ಬ್ರಹ್ಮಂ ಜಗಮಂ ಪಡೆಯಲ್ ತಾನಾರ್ತನಿಲ್ಲ ಪೆಂಪಂ ನಿಮ್ಮಂ ಪಡೆದಲ್ತೆ ಪಡೆದನೆನಿಸಿದ ಕಡುಪೆಂಪಿನ ಪೊಱೆಗೆ ನೀವು ಮೊದಲಿಗರಾದಿರ್ (ಪಂಪಭಾ. ೬-೦೨); ಪೆಂಪಿನುಚ್ಚಂಗಿಯು ಕೋಟೆಯುಂ . . . ಕೊಣ್ಡ ನೆಗಟ್ತೆ (ಎಳ. II, ೫೯-೯೨; 974); ತನಗೆ ವಲ್ಲಭೆ ಲಕ್ಷ್ಮಿಯೆನಿಪ್ಪ ಪೆಂಪು (ದಕಳು. ೦-೦೯). ೩. ಆಧಿಕ್ಯ ; ಹೆಚ್ಚಳ; ಅತಿಶಯ : "ಉಬ್ಬರಂ . . . ಪೆಂಪು . . . ಪೆರ್ಚುಗೆ—ಈ ೧೯ ಅತಿಶಯಂ" (ಕಶಸಾ. ೫೭-೨೩೯); ಕಂಪಿನ ಪೆಂಪು ಪೊಂಪುಟಿಯೆನಲ್ (ಶಾಂತಿಪು. ೫-೩೩); ಆ ಕುಮಾರರ್ಗೆ ಪೆಂಪಿಂದ ಮದುವೆಯಂ ಮಾಡಿದಂ (ಭಾಪಸಂ. ೫-೩೦); ಧನದ ಪೆಂಪನು ಹೊಗಳಲೇಂ (ಸಾಳ್ವಭಾ. ೦೭-೭). ೪. ಶೋಭೆ; ಸೊಗಸು; ಚೆಲುವು: ಮೃಡಗಣಾವಳಿಸಹಿತ ಪೆಂಪಂ ಪಡೆದು (ಬಸಪು. ೩೨-೩೯); ಪೆಂಪೊಗುವ ತಾವರೆಗೊಳಂಗಳ . . . ಸೊಂಪು ಸೆಳೆದುದು ಮನವನು (ಕುಪ್ಯಾಕ. ೯-೩೭); ಪೆಂಪಿಂದೆ ಪುರವನಿತೆ ಗಹಗಹಿಸಿ ನಗುವಂತೆಸೆವ ಸೌಧಂಗಳ ಮರೀಚಿ ನೋಡೆಂದನು (ಸೈಪಿಪಾ. ೩ ೦೫); ತಂಗದಿರ ಬೆಂಗದಿರನುದಯಾಸ್ತಂಗಳ ಪೆಂಪು (ಪತ್ರಾಂಗ. ೨೯-೬೦೭). ೫. ಎತ್ತರ ; ಔನ್ನತ್ಯ : ತೊಂಭತ್ತೊಂಬೈಸಾಸಿರ ಯೋಜನಮಂ ನೆಗೆದೀ ಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ (ಅಪಿಪು. ೬-೬೯); ತುತ್ತತುದಿ ರುತು ವಿಮಾನಮನೊತ್ತಿರ್ದುದು ನಗದ ಪೆಂಪನದನೇವೊಗಟ್ತೆಂ (ಅಪಿಪು. ೦೦-೬); ಗೋಪಾಮುಖವಿಲಸನದಿಂ ತಾನೆ ಮೇಲಾದ ಪೆಂಪಿಂ ಮುಗಿಲಂ ಮುಟ್ಟಿರ್ದುದೆಂಬಂತಿರೆ ಕರಮೆಸೆಗುಂ ವಿಶ್ರುತೋತ್ತುಂಗವಪ್ರಂ (ಸುಳುಮಾ. ೦೦-೫೨). ೬. ಏಳಿಗೆ ; ಅಭಿವೃದ್ಧಿ : 'ಪೆಂಪೇಱಿಸು' ಪರಾ. ೭. ಹೆಮ್ಮೆ ; ಜಂಭ : ಅವರ ಪೆಂಪುಗಳನುರ್ಕೆವದೆ ತನ್ನ ಒರ್ಪಗಲ ಪುಟುಗಳ್ಗೆ ಬಯಲ್ ಗೈದವನ್ (ಬಿರ್ಮಪ್ರ. ೫೦-೦೦೬೬). ಪೆಣ್ಪು : ೧. ಅಮರಶೈಳದ ಪೆಣ್ಪಂ ತಳೆದಯ್ವದಿಂಬರೇಂ ಕೇವಳಮೇ (ಸೌಇಇ. XI—ii, ೦೯೯-೦೨; 1098) ; ಪೆಣ್ಪಿನ ಕಣಿಯೆಂದು . . . ಪೊಗಳುತಿರ್ಪುದು (ಸೌಇಇ. IX—i, ೨೭೬-೨೨; 1183). ಹೆಂಪು : ೧. ವೇದವಲಿ ಹಿರಿದು ಹೆಸರಾದ ಹೆಂಪುಳ್ಳ ಶಿವನಾದಿನಾಮವು ನೋಡು ಪಂಚಾಕ್ಷರಿ (ಶಿಪಗೀ. ೧೯-೫೦); ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ (ತಿರುವಾ. ಹ. ೦೦೬-೬); ದೇವ ನಾವ ಭಯವನು ಬೇಡಲು ನೀವೊಲಿದು ಕೊಡದಿಹುದು ಹೆಂಪೇ (ಬಸಪು. ೪೬-೪೭). ೩. ವೀರಭಕ್ತಿಯ ಹೆಂಪು ಧೀರೋದ್ಧಾರತೆಯ ಸೊಂಪು (ಬಸಪು. ೩೬-೨೯); ಆ ದೇವಮುನಿ ಪೊಗಳುತ್ತಲಿರ್ದನು ಹೊಱದ ಹರುಷದ ಹೆಂಪಿನುಬ್ಬಿನಲಿ (ಕೊರಣಾ. ೬-೫೦-೦೦). ೪. ಎನ್ನ ಭಕ್ತಿ ಎಲವದ ಕಾಯ ಫಲದಂತೆ ನೋಡಯ್ಯ ಹೊಱಗೆ ಹೆಂಪು ಒಳಗೆ ಬೂರವಯ್ಯ (ಬಸಹೆ. ೨೪೬); ಕುಸುಮದ ಕಳಿಕೆಗಳ ಹೆಂ[ಪಾಠಾಂ. ಹಿಂ]ಪಿನಲಿ . . . ತಂಬೆಲರ ತಂಪಿನಲಿ ಸಲಿಸಿತಾ ಸಹಕಾರ ಸೊಗಸಿನ ಸುಲಭತೆಯನರಸಂಗೆ (ಕೊರಣಾ. ೩-೬ ೬೨); ಮನಸ್ಸನ್ನು ಮರುಳುಗೊಳಿಸುವ ಬೆಳದಿಂಗಳ ಹೆಂಪೂ . . . ಅನುರಾಗದ ಮೊಳಕೆಯನ್ನು ನಾಟಿದುವು (ಭಾರಪೀ. ೦೩). ೫. ಪರಮಾಣು ಮೇರುವಿನ ಹೆಂಪಿಗೆ ಮುಳಿವಂತೆ (ಪೀರರ. ಹ. ೯೯೯-೨೦); ಸುರಗಿರಿಯ ಸೌಭಾಗ್ಯವನು ಹರಗಿರಿಯ ಹೆಂಪನು ಮಂದರಗಿರಿಯ ಸೊಂಪನು (ಪಿಠಾಗ. ೬-೨-೦೦). ೬. ಕಿಱುವಳ್ಳಿಯಾಗಿಯು ಕಣ್ಗೆ ಮೆಱೆದು ಹೆಂಪಿನೊಳಿರ್ಪುದು (ಸಿದ್ಧರಾ. ೦-೩೦) ; ತಳಿದನಿಳೆಯೊಳು ಭಕ್ತಿಬೀಜಮನಳಿದನಾ ಕಬ್ಬಿಲರ ಹೆಂಪಂ (ಬಸಪು. ೫೯-೫೯). ೮. ಸಂತೋಷ ; ಹಿಗ್ಗು : ಕಂಪುಳ್ಳ ಸಂಪಗೆಯ ಪೂಗಳಂ ತಿಱಿತುಂದು ಹೆಂಪಿನಿಂ ಶಶಿಧರನ ಸಿರಿಮುಡಿಗೆ ಬೇಕೆಂದು . . . ಕೊಡಲು (ಬಸರ. ೦-೨೮); ಶಿವಕವಿಗಳ ಮನದಿಂಪು ಭುವನಜನರ ಹೆಂಪು ಲಿಂಗನ ಕೃತಿ (ಕಪಿಸ. II, ೨೦೫ ಕೋಳಲಾಜಸಾಂಗತ್ಯ). ೯. ವಿಲಾಸ ; ಬೆಡಗು : ಕಳಿದ ಹೂವಿನಲ್ಲಿ ಕಂಪನುಳಿದ ಸೂಳೆಯಲ್ಲಿ ಹೆಂಪ ಕೊಳಚೆಯ ನೀರಿನಲ್ಲಿ ಗುಂಪನಱಸುವಿರಿ (ಬಸಪ. ೫೬೯) ; ಮತ್ತವಳಿವಕ್ರತೆಯನೀವ ವಹಣಿ ತರಂಗಿಸುವ ತಿರುಪು ಸುಳಿಗೊಳ್ವ ಹೆಂಪು (ಗಿಂಕ. ೨-೦೦೫ ಪ).

[< ಪಿರಿದು₁ + ಪು₂. / ತೆಲು. ಪೆಂಪು, ಪೆನುಪು]

ಪೆಂಪುಂಗಾಱ 'ಪೆಂಪುಗಾಱ' ನೋ.

ಪೆಂಪುಗಾಱು, ಪೆಂಪುಂಗಾಱು (ನಾ). ಹಿರಿಮೆಯುಳ್ಳವನು; ಘನತೆಯುಳ್ಳವನು: ಪೆಂಪುಗಾಱು, ಪೆಂಪುಂಗಾಱು . . . ಬೇಹುಗಾಱುಂ (ಶಾಕಾಭೂ. ೦೧೨ ಪ್ರಯೋ). **ಪೆಂಪುಂಗಾಱ**: ಮೇಲಿನ ಪ್ರಯೋಗವನ್ನು ನೋಡಿ. [ಪೆಂಪು + ಗಾಱ]

ಪೆಂಪುಗಿಡು 'ಪೆಂಪುಗೆಡು' ನೋ.

ಪೆಂಪುಗೆಡು, ಪೆಂಪುಗಿಡು (ಕ್ರಿ). ೧. ಹಿರಿಮೆಯು ಹಾಳಾಗು,-ನಾಶವಾಗು: ದಿವಾಕರನಂ ಪೋಲ್ಪವರೆ ಪೆಂಪುಗೆಟ್ಟಣ್ಣಲೆಗಳ್ (ಹಾಕಾ. XX. ೪೯-೪೯; 1076): ಬಡತನದೊಳದವಿಂದನ್ನಂಬಡೆಯದೆ ಮಱುಗಿ ಕರನ್ನೋವಿಂ ಪೆಂಪುಗೆಟ್ಟು ನಮೆಯುತ್ತಿರ್ದರ್ (ಧರ್ಮಾಮೃ. ೯-೨೬೦). **ಪೆಂಪುಗಿಡು**: ೨. ಘನತೆಯನ್ನು ಕಳೆದುಕೊಳ್ಳು: ಕಿರಿಯವಿಂದು ಪೆಂಪುಗಿಡೆ ಪೆಱಂಗೆಱಗುವುದೇ (ಅಭಿಪ್ರ. ೦೨-೦೦೦). [ಪೆಂಪು+ಕೆಡು$_1$]

ಪೆಂಪುಗೊಳ್, ಪೆಂಪುಗೊಳು (ಕ್ರಿ). ೧. ಅಧಿಕಗೊಳ್ಳು; ಹೆಚ್ಚಾಗು: ಕಡಂಗಿ ಬಾಯ್ದೆಱೆಯನೊಲ್ದು ಕರ್ದುಂಕಿ ಕರ್ದುಂಕಿ ಪೀರ್ದು ಪೀರ್ದೊಡ ನಡಸಿರ್ಪ ಬಾಯಱಕೆಯಂ ತವಿವೆಂ ಸವಿಪೆಂಪುಗೊಂಬಿನಂ (ಶಕಾ. ೬-೨೦೨). **ಪೆಂಪುಗೊಳು**: ೨. ಘನತೆಯನ್ನು ಪಡೆ; ಹಿರಿಮೆಯನ್ನು ಹೊಂದು: ಬಿಡುವಂ ಈ ಬಾಳ್ ಅದೇಕೆಂಬ ಚರ್ಚೆಯ; ನಾವು ದುಡಿವಂ ಅದು ಪೆಂಪುಗೊಳೆ (ಸುಂಕಾಚ. ೬೦೯). [ಪೆಂಪು + ಕೊಳ್$_1$]

ಪೆಂಪುಗೊಳು 'ಪೆಂಪುಗೊಳ್' ನೋ.

ಪೆಂಪುವಡೆ (ಕ್ರಿ). ೧. ಹಿರಿಮೆಯನ್ನು ಹೊಂದು; ಘನತೆಯನ್ನು ಪಡೆ: ಚಿತ್ರರಥನೆಂಬನೊರ್ವಂ ಪುತ್ರಂ . . . ಪೆಂಪುವಡೆದು ಜಗತ್ತ್ರಯಮಿಳ್ಯಾತ ಕೀರ್ತಿ ಮುನಿಗುದಯಿಸಿದಂ (ಶಾಂಪುರಾ. ೭೦೯); ಜಿನದತ್ತಂ ಗುಣವಾರ್ಧಿ ತಪ್ಪಲಱಯಂ ಜೀವಾದಿಗಳ್ಗೆಂಬ ಭಾವನೆಯಿಂದಾನಿನಿತೊಂದು ಪೆಂಪುವಡೆದೆಂ (ಧರ್ಮಾಮೃ. ೨-೨೩); ಭೂತಳದಲ್ಲಿ ಪೆಂಪುವಡೆದಂ ಭವ್ಯಾದಿ ಭಾಳೇಕ್ಷಣಂ (ಪಂಚಾಮೃ. ೦೨-೦೦೩). ೨. ಖ್ಯಾತಿಯನ್ನು ಪಡೆ; ಯಶಸ್ಸಿನಿಂದ ಕೂಡಿರು: ಪೆಂಪುವಡೆದ ಗೋಲ್ಕಣವಿಭುಗಂಗನುಕೂಳಮಂತ್ರಿ ನರಸಿಂಗನಾಯಕಂ ಶಿಷ್ಟತುಷ್ಟಿದಾಯಕನೆಸೆದಂ (ಕಾಚ. ೭೩-೦೨-೩೭; 1170); ಈ ರೀತಿಯ ಪೆಂಪುವಡೆದ . . . ತಾತಾಚಾರಿಯ ರಡಿಗೆಱಗುವೆನು (ಸೋಪಶ. ೦-೪); ಪರಮಪುಣ್ಯನಾಮನೆನಿಸುವ ಸಿದ್ಧವೀರೇಶನೆಸೆದನಂದವನಿಯೊಳು ಪೆಂಪುವಡೆದು (ಪಂಪಿ. ೦-೨೦). ೩. ವೈಭವದಿಂದ ಕೂಡಿರು: ಜಗತ್ಕೃತಿಚೋದ್ಯಾವಹಮಾಗೆ ಪೆಂಪುವಡೆದತ್ತಂತಾತ್ಮಜನ್ಮೋತ್ಸವಂ (ಅಭಿಪ್ರ. ೭-೩೯); ಭಯಹರಗೆ ಕರಸರಸಿಜವನಾ ಪರವೆ ಮುಗಿದು ನಿಲಲಂದು ಮೇಳಂ ಪೆಂಪುವಡೆದಿರ್ದುದು (ಸೌಂದಪು ೯-೩). ೪. ಚೆಲುವಾಗಿರು; ಶೋಭಿಸು: ಸೂಳೆಗೇರಿಯಂಗಡಿಯ ವಗುಂತಿ ಪೆಂಪುವಡೆದಾ ಪೊಚಲೊಳ್ ನೆಱೆದೊಪ್ಪಿ ತೋಱುಗುಂ (ಪಾಂಡಿತಿ. ೯-೦೪೭). [ಪೆಂಪು+ಪಡೆ$_1$]

ಪೆಂಪುವೆಱು (ಕ್ರಿ). ೧. ಹಿರಿಮೆಯನ್ನು ಹೊಂದು; ಶ್ರೇಷ್ಠತೆಯನ್ನು ಪಡೆ: ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆತ್ತುದು (ಶಾಪಶಾ. ೯-೨೦); ಪೆಂಪುವೆತ್ತ ಮಹಿಮೋನ್ನತಿ ಮೇರುಗೆ ಮಂಡಪಂ ದಲಾಗೆಸೆವುದು(ಎಳ. VII. ಶಿವಪೂ. ೯-೬೩; 1122); ವರಸೌಂದರ್ಯಗಭೀರವಾರಿನಿಧಿಯೋ . . . ತಾನೆನೆ ಪೆಂಪುವೆತ್ತುದವನೀಶೋದ್ಯತ್ಸಭಾಮಂಡಲಂ (ಕುಸುಮಾ. ೩-೧೦). ೨. ಕೀರ್ತಿಯನ್ನು ಹೊಂದು; ಪ್ರಸಿದ್ಧವಾಗು: ಸಕಳವರ್ಣಶ್ರೇಷ್ಠಮಿಾ ವರ್ಣಮೊಂದೆನೆಸುಂ ಕೈಕೊಳೆ ಪೆಂಪುವೆತ್ತು ನೆಗೞ್ದತ್ತಂಭೋಜಜನ್ಮಾನ್ವಯಂ (ಕಾಇ. ೩-೨-೩೭; 1058); ತೊಡವಾರ್ಹತಕೈನೆ ಜನಂ ಭೂಭಾಗದೊಳ್ಪೆಂಪುವೆತ್ತುದು ಸೂರಸ್ಥಗಣಂ (ಹಾಕಾ. Xi-I. ೦೦೦-೦೯; 1071). ೩. ಅತಿಶಯವಾಗು; ಅಸಾಧಾರಣತೆಯಿಂದ ಕೂಡಿರು: ಪೆಂಪುವೆತ್ತ ತಪಃಪೋತದಿನಣ್ಣ ನೀಂ ತಡಿಯನೆಯ್ದು (ಅಭಿಪ್ರ. ೩-೩೬); ಕಟ್ಟಾಯದ ಮೆಪ್ಪ ಶಕ್ರನೊಡನೇಱೆದ ಪೆಂಪುವೆತ್ತು ನಿಟ್ಟಾಯುಗಳಾಗಿ ನಿನ್ನೊಳಮರ್ದಿರ್ದುವು (ಶಂಕಪಾ. ೦೯-೦೩); ತನ್ನೃಪವರನ ಯತಿಯ ಮೆಪ್ಪುವೆತ್ತೊಪ್ಪಿ ತೋರ್ಕುಂ (ಉಂಗ್ರಟಿ. ೦-೦೦೦). ೪. ಅಂದವನ್ನು ಪಡೆ; ಶೋಭೆಯನ್ನು ಹೊಂದು: ಪೆಂಪುವೆತ್ತಗಱ್ ಬಿಸರುಹಮುಳ್ಳರಲ್ದು ಸಿರಿ ಕಣ್ದೆಱೆವಂತಿರೆ (ಶಾಂಕಾಮಾ. ೩-೩೩); ಪೆಂಪುವೆತ್ತೆಸಕದಿನರ್ದ ಸಂಪಗೆಯ ಪೂವಿನೊಳಾದ ಬೆಡಂಗು ನಾಡೆ ರಂಜಿಸೆ (ಧರ್ಮಾಮೃ. ೦೩-೦೩). [ಪೆಂಪು + ಪೆಱು]

ಪೆಂಪುವೇಟ್ಟು (ಕ್ರಿ). ಹಿರಿಮೆಯನ್ನು ಹೇಳು,-ಸಾರು: ಎರೆದನ ಪೆಂಪುವೇಟ್ಟೊಡನಲಂ ಪೊಣರ್ವಾತನ ಪೆಂಪುವೇಟ್ಟೊಡಾ ಸುರಪತಿ (ಶಂಕಪಾ. ೩-೬೩). [ಪೆಂಪು + ವೇಟ್ಟು]

ಪೆಂಪೇಱಿಸು (ಕ್ರಿ). ೧. ಏಳಿಗೆಯನ್ನುಂಟುಮಾಡು; ಅಭಿವೃದ್ಧಿಗೊಳಿಸು: ತತ್ತತ್ಕುಲಧರ್ಮದೊಳ್ ಸ್ವಜನಮಂ ಪೆಂಪೇಱಿಸು (ಶಾಕಾ. ೩-೦೨೦). ೨. ಹೆಚ್ಚು ಮಾಡು; ವೃದ್ಧಿಪಡಿಸು: ಎನ್ನ ಮುತ್ತಿನ ಮಣಿಯೋ ಬಿನ್ನಣಮಂ ಪೆಂಪೇಱಿಸಿ ತನ್ನೂಱೊಗವಿತ್ತು ಮನ್ನಿಪಂ ನಿನ್ನಿನಿಯಂ (ಶಾಕಾ. ೬-೨೨೯). [ಪೆಂಪೇಱು + ಇಸು$_3$]

ಪೆಂಪೇಱು (ಕ್ರಿ). ೧. ಹೆಚ್ಚು; ಅಭಿವೃದ್ಧಿಗೊಳ್ಳು: 'ಪೆಂಪೇಱಿಸು' ಪರಾ. ೨. ಕಾಂತಿಯನ್ನು ಪಡೆ; ಸೌಂದರ್ಯವನ್ನು ಹೊಂದು; ಚೆಲುವಾಗು: ಸಕಳಜಗು ಮೆಂ[ಶಾಕಾಂ. ಹೆಂ]ವೇಱಿತು ಪದ್ಮಮಿತ್ರನುದಯಿಸುವಾಗಳ್ (ಗಿರಿಕ. ೩-೪); ಪೆಱತೊಂದು ಪೆಂಪೇಱುವರ್ದೆಯ ಮಿಱುಪ ಮೆಯ್ಯ . . . ಕುಱಿತು ನೋಡುವ ನೋಟದ ಕೊಮರಿಯ ಬಗೆಯಱಿತೆಱಕದೊಳೆಱಗುವುದು (ಪಂಪಿ. ೬-೦೭).

[ಪೆಂಪು + ಏಱು$_1$ (< ಏಱ್$_1$)]

ಪೆಂಬಿದಿರ್ (ನಾ). ಒಂದು ಸ್ಥಳದ ಹೆಸರು: ಗಾವುಣ್ಡುಗಳೆ ಸೀಮೆದೋಱಿದ ಕ್ರಮ ತೊಳಂಚೆಯದ ಪೆರ್ಗೆಯ್ವಾಡಿಯ ಸೂಱುಳ್ಗದ ಪೆಂಬಿದಿರಿನ ಮೆಪ್ಪು ತೊ× (ಎಳ. XII. ಕಾಸಪ. ೨೬೯-೯೦; 904). [?]

ಪೆಂಬುಯ್ಯಲ್ 'ಪೆಣ್ಬುಯ್ಯಲ್' ನೋ.

ಪೆಕರ 'ಪೆಕ್ರ' ನೋ.

ಪೆಕ್ಕ (ನಾ). ಆಧಿಕ್ಯ; ಹೆಚ್ಚಳ: ಸುಡುವಡಗಿಂ ಕರಂ ಪೊಗೆವ ಪರ್ಬುವ ಕರ್ಬೊಗೆ ಪೆಕ್ಕಮಪ್ಪ ಪೆರ್ಬಡಿಕೆಯ ನಾತಂ (ಲೀಲಾವ. ೬-೩೩). 'ಪೆಕ್ಕಳ$_1$' ಪರಾ. [ದೇ. ಪ ತೆಲು. ಪೆಕ್ಕು, ಪೆಕ್ಕುವ]

ಪೆಕ್ಕಣ್ಣ, ಪೆಕ್ಕಣ, ಪೆರ್ಕಣ (ನಾ). ೧. (ನಾಟಕದಂಥ) ನೋಟ; ಕಾಣ್ಕೆ; ದೃಶ್ಯ: "ಪೆಕ್ಕಣಮೊಂದು ಪ್ರೇಕ್ಷಣಂ" (ಕವಿಗಾ. ೬೬-೩೦೯); ಕೂಗುವ ಬೇಡರ ತಂಡಮೂರ್ವ ಜಾಯಿಲಗಳಗುರ್ವಿನಿಂದೆಸೆಯೆ ಪೆಕ್ಕಣದಿಂದೆಸೆದತ್ತು ಪೆಕ್ಕಣಂ (ಕ್ರಿಶಾಪ. ೨೬-೩೯). ೨. ನೃತ್ಯ; ಕುಣಿತ: ಕಳ್ಳರೊಡಲ್ಗಳೊಟ್ಟು ರಜನೀಚರಿಯರ್ಕಳ ಮಿಕ್ಕ ಪೆಕ್ಕಣಂ (ಶಾಕೃಶಾ. ೩೩೦ ಕೂರ್ಮಪು); ಹೃದ್ಯ ವಾದ್ಯ ಲಯದೋಡೆಯಿನೊಂದೆ ಲಯಕ್ಕೆ ಲಕ್ಕೆಯಂ ಮೆಟ್ಟುವ ಪೆಕ್ಕಣಂ . . . ಲೀಲೆಯಂ ಪುಟ್ಟಿಸೆ (ಸುಂಪ್ರ. ೯-೪೦); ಗಂಧರ್ವಾಮರರ್ ಪಾಡೆ ಪೆಕ್ಕಣಮಂ ದೇವಿಯರಾಡೆ . . . ಕಣ್ಗೇಂ ಬೆಡಂಗಾದುದೋ (ಕಂಪ್ರಕೃ. ೦೨-೬೩); ಬಿರುದರ ಕೂರಲಗಿನೆಸೆವ ನಾದಮೆ ತಾಳು ನರರಟ್ಟೆಯ ಪೆಕ್ಕಣದಿಂ ಕರಮೆಸೆದುದು (ಎಳ. VI, ಕಡೂರು. ೦೯೯-೩೦; 1205). ೩. ಒಂದು ಬಗೆಯ ನೃತ್ಯ; ತಾಂಡವ, ನಾಟ್ಯ, ನೃತ್ಯ, ಲಾಸ್ಯ, ಗುಂಡಿಲ, ಪೆಕ್ಕಣ, ಲಚ್ಚಣ, ಅಪರಿಪಾತ್ರ, ಸುಪಾತ್ರ ಮತ್ತು ಸರ್ವತೋಭದ್ರವೆಂಬ ಹತ್ತು ಬಗೆಯ ನೃತ್ಯಪ್ರಭೇದಗಳಲ್ಲಿ ಒಂದು: ತಾಂಡವ ನಾಟ್ಯ ನೃತ್ಯ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರಸರ್ವತೋಭದ್ರವೆಂಬ ದಶವಿಧ ಪಾತ್ರಂಗಳಂ ತೋಱಿ ರಂಜಿಸುವ ನರ್ತಕಿಯರಿಂ (ಏಕೇಶ. ೦೧೨); ಪೇರಣಂ ಪೆಕ್ಕಣಂ ಗುಂಡಲಂ ಸದಮಲದ ದಂಡಲಂ ಲಾಸ್ಯಮೆಂದೆಱವಂ ತೋಱುತಿರ್ದಂ ಮಹೇಶಂ (ಶಿವಮ. ೦೦-೩೯); ಪೇರಣ ಪೆಕ್ಕಣ ಗುಂಡಲಂಗಳಂ ಬಲ್ಲ

ಸಾತ್ವಿಕ ಆರಭಟಿ ಕೌಶಿಕಿಯೆಂಬ ಪಾತ್ರಂಗಳಿಂ (ದಶಾವ.೨-೦೦ ಪ). ಪೆಕ್ಕಣ: ೪. ಮದ್ದಲೆಯನ್ನು ಬಾರಿಸುವ ಒಂದು ಕ್ರಮ : ಆ ಸಮಯದೊಳ್ ಮದ್ದಳಿಗಂ ಮದ್ದಳೆಯುಂ . . . ಪಡಣಱಿದು ಪೆಕ್ಕಣ ಪಣ್ಣಿಯೊಳ್ಕಕ್ಕ ನೆನಿಸಿ ಲಾಗು ಮೋಡಿ . . . ಪಹರಣಿಗಳೆಂಬ ನಾನಾಶಬ್ದಂಗಳಂ ಬಾರಿಸಿ (ರಘುವಂ. ೨-೨೩ ಪ). ಪೆರ್ಕಣ : ೧. ಬೆತ್ತಗಣ್ಣಿವಲೆಯಂ ಸಮಕಟ್ಟುವ ಬೆಟ್ಟುಗೊಂಟಮುಂ ಬಸಿವ ಪುಳಿಂದಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ (ಪಂಪ್ರಬು. ೩-೫೯).

[< ಸಂ. ಪ್ರೇಕ್ಷಣ. / ಪ್ರಾ. ಪೇಕ್ಖಣ. / ತೆಲು. ಪೆಕ್ಕಣ, ಪ್ರೆಕ್ಕಣ]

ಪೆಕ್ಕಣ₂, ಪೆಕ್ಕಳ₂ (ನಾ). ಬೇಡರು ವಾಸಿಸುವ ಹಳ್ಳಿ : ಬೇಡರ ಬಿಂದ ಮೊಪ್ಪಿತಾ ಪೆಕ್ಕಣದೊಳು (ಸಕ್ಕಾಕೃ. ೦೦-೨೬); ಗುಂಜಾಭರಣವಾಂತಾ ಲೀಲೆಯಿಂ ಶಬರಿಯಾಸೆದರಾ ಪೆಕ್ಕಣದೊಳಂದು (ನಾಳ್ಕಣಾ. ೩-೬); ತನುಜೆಯಹ ಪೊಲತಿಸತಿಯಳ ಕೊಂಡು ಬೇಗ ಪೋಗುತ್ತ ಕೈರಾತದೇಶ ದೊಳ್ ಒಂದು ಪೆಕ್ಕಣವ ಸಾರಲು (ಕಸಾಪು. ೩-೩-೬೦). ಪೆಕ್ಕಳ₂ : ವ್ಯಾಧರೆಕ್ಕತುಳದಿಂದಿರ್ಪ ಪೆಕ್ಕಳ ವರ್ಣಸಲ್ ಮುಗ್ಧಣ್ಣಗಳವಲ್ಲ (ಕುಕ್ಕಾಂಗ. ೦೦-೨೦). [<ಸಂ. ಪಕ್ಕಣ]

ಪೆಕ್ಕಣಂಗೆಯ್ (ಕ್ರಿ). ನೃತ್ಯ ಮಾಡು ; ಕುಣಿ : ಪೆಕ್ಕಣಂಗೆಯ್ವ ಸೋಗೆ ಗಳಿಂದೆ . . . ತಂಬೆಲರಿಂದೆ ತಾಮ್ಮನೋಹರದ ವನಮಧ್ಯದೊಳ್ ಸರಸಿ ಮೆಱೆದುದು ಕೂಡೆ ಸೊಗಸುವೆರಸಿ (ಕೇಕಸು. ೬-೦೬).

[ಪೆಕ್ಕಣ₁ + ಕೆಯ್₁]

ಪೆಕ್ಕವಿ (ನಾ). ಒಂದು ಸ್ಥಳದ ಹೆಸರು : ಅರಿಉರ್ವ್ವನ್ನಿರ್ವ್ವರು ತೊಱೆ ಕ್ಕಾರಾಟ್ಟಿಉ ಪೆಕ್ಕವಿಯ ಮುಂದಲ್ಪೋಗೆಯು ಕೂಡಲೂರು ಇನೆತ್ತು ಮೂರ್ ನೆರ ಸಾಸನಮಾಗ ಕುದಿಯ್ಕ ಕೊXX ಲುX (ಎಇ. IV, ಗುಂಡ್ಮಿಶೇ. ೬೯-೩ ; ಸು. 750). [?]

ಪೆಕ್ಕಳ₁, ಪೆರ್ಕಳ, ಹೆಕ್ಕಳ, ಹೆಗ್ಗಳ (ನಾ). ೧. ಹೆಚ್ಚಳ ; ಅತಿಶಯ : ಚಿಕ್ಕದೇವೇಂದ್ರನಿಗೆ ಸಿರಿಯನೇಱುಗೆಗೊಳಿಪ ಪೆಕ್ಕಳದೊಳಿಸವ ಪೊಸಬಿನ್ನಣಕೆ ಮಂಗಳಂ (ಗೀತಗೋ. ೩೫-೯); ಸೊಕ್ಕುಜವ್ವನದ ಲಲಿತಾಂಗಿ ಯರುರದ ಮೋಲೆ ಪೆಕ್ಕಳದೊಳಿಟ್ಟ ಚಂದನದ (ಕುಕ್ಕಾಂಗ. ೩-೦೨). △ಪೆರ್ಕಳ : ೧. ತರ್ಕಂಗಲಿಸುವರುಂ ಮಿಗೆ ಪೆರ್ಕಳದಿಂ ರಾಯನೆಡೆಗೆ ಪೇಟ್ಟರ್ (ಕಸಾಪ. ೪-೯೯); ಕುಳಿಕನಂ ಗುಳಿಗೆಗಟ್ಟುವ ಪೆರ್ಕಳದ ಕಾಲಾಳ್ಗಳ ಪಡೆಯ (ರಾಮಾಶ್ವ. ೯೪ ೦೭). ೨. ಹಿಗ್ಗು ; ಸಂತೋಷ : ಇದೆ ಬಂದ ನೆಂದು ಕೇಳ್ದಿದಿರ್ಗೊಂಡು ಪೆರ್ಕಳದೆ ಪದಕಱಿಗಿ (ಕಸಾಪ. ೬-೦೩೩). ಹೆಕ್ಕಳ : ೧. ಚೈದ್ಯನಿಂದುಬ್ಬಸವ ಮಾಡಿದೊಡೆಮ್ಮ ಕೈಯಲಿ ಹರಿವ ಹೆಕ್ಕಳವೆ (ಕುಣ್ಣಾಶ. ೦೦-೦೫); ಜನಪತಿಯ ಮಗಳೆಂಬ ಹೆಕ್ಕಳ ಹೆಮ್ಮೆ (ಪ್ರಭುಲಿಂ. ೩ ೨೫); ಹುಲುನೃಪಾಲನ ಹಗೆತನದ ಹೆಕ್ಕಳವ ಹೇಳುವ ಹುಂದೆಗಳ ಬಾಯ್ಗಳನು ಹೊಯ್ (ತೊಕಣಾ. ೬-೦ ೨೪); ತಾಯಿಗೆ ಮಕ್ಕಳ ಸುಖವೇ ಹೆಕ್ಕಳ (ತಿರುಣಾ. ೩೯). ೨. ವರತನೂಭವೆ ಬಂದಳೆಂಬ ಹೆಕ್ಕಳದಿ ಮಣಿಮಯನಿಳಯದೊಳಗಣಿಂದ ಪರಿದು ಬಂದು (ರಾಶಕ. ೧೬-೦); ಆ ವೈಭವವನಾಲೊ ಕಿಸುತಲಾ ಹೆಚ್ಚಿ ಹೆಕ್ಕಳದೊಳಿರೆ (ಕಸಾಪು. ೩-೩-೯). ೩. ಗರ್ವ ; ಜಂಭ : ಅಳಿಬಲದ ಹೆವಱಸಿದ ಹೆಕ್ಕಳವೇಕೆ ಸಾರೆನುತ ತುಳುಕಿದನು ಕೆಂಗೋಲ ಜಲಧಿಯ (ಕುಣ್ಣಾಶ. ೬-೧೯); ಅಳಿಗಬ್ಬಿಗನ ಹೆಕ್ಕಳದ ಕೃತಿಯವೊಲು (ತೊಕಣಾ. ೩-೦೦-೯). ೪. ಠೀವಿ; ಗಾಂಭೀರ್ಯ: ಘುಳುಘುಳಿಸಿ ಪರಿತಂದು ಉಂಗುಟದಿಂ ಭಾಳಾಗ್ರಂಬರಂ ಪೋಳ್ದೆತ್ತಿ ತನ ಗಿದಿರು ಕಾಣದೆ ಹೆಕ್ಕಳದಿಂ ಕೆಕ್ಕಳಿಸಿ ನೋಡುವೆಕ್ಕಲಂಗಳುಮಂ (ಪಂಪರ ೦೯-೦೯); ಹೆಕ್ಕಳದೊಳಾತನಂ ಬೀಳ್ಕೊಂಡು ಭೀಷಣಂ ಮುಳಿದೆದ್ದು ನಡೆಯುತಿರಲು (ಕೈಪುಶಾ. ೦೬-೩೦). ೫. ಉಬ್ಬರ ; ಉಕ್ಕುವಿಕೆ : ಉಕ್ಕಿದುದು ಪೆಱೆಗಂಡ ಕಡಲಿನ ಹೆಕ್ಕಳದವೊಲು ಹರುಷರಸ (ತೊಕಣಾ. ೦-೦೫-೪೩). ಹೆಗ್ಗಳ : ೧. ಅಂಬನು . . . ಬಿಡಲಾಗಿ . . . ಬಸವ ನೆಂದಱಿದು ಮಱುಗಿ ಹೆಗ್ಗಳದೋಷವಾದುದೆಂದು (ರೀಕೃಪು. ೪-೬-೩೮); ಹೆಗ್ಗಳವಾದ ಹೃದಯತಾಪದಿಂದ . . . ಅಳುತ್ತಿರುವ ಮಾದ್ರಿಯನ್ನು ನೋಡಿ (ಕೃಪಾಶ. ೨೨೯). 'ಪೆಗ್ಗಳ' ಪರಾ.

ಪೆರ್ಕಳವಾಗು = ಅಧಿಕವಾಗು; ಮೀರು : ಇಂತಳವಿಗಱದ ಸೊಬಗಿನ ಸೊಂಪು ಪೆರ್ಕಳವಾಗಿರ್ಪುದುಂ (ಕಶಾಕಾ. ೦೨೩). [<ಪೆಕ್ಕ ?]

ಪೆಕ್ಕಳ₂ 'ಪೆಕ್ಕಣ₂' ನೋ.

ಪೆಕ್ಕಳಿಗ 'ಪಿಕ್ಕುಳಿಕ' ನೋ.

ಪೆಕ್ಕಳಿಸು, ಪೆರ್ಕಳಿಸು, ಹೆಕ್ಕಳಿಸು (ಕ್ರಿ). ೧. ಅಧಿಕವಾಗು ; ಉಲ್ಬಣಿಸು : ಆ ರಣಾಗ್ರದೊಳ್ಪೆಕ್ಕಳಿಸಿದುಕ್ಕಂದದಟಿಂದೆ ಸುರಧನಱಸಿ ದನಚ್ಯುತಾರ್ಜುನರನು (ಕೈಪುಶಾ. ೦೪-೬). △ಪೆರ್ಕಳಿಸು : ೧. ಅಂದಿಂಗೆ ಪುಯಿಲ್ ಪೆರ್ಕಳಿಸಿ ಪರಿಯದಿರೆ (ಕಸಾಪ. ೨-೯೦). ೨. ಹಿಗ್ಗು; ಉಬ್ಬು; ಸಂತೋಷಗೊಳ್ಳು : ರಾಯನ ಕುವರಿ ಬಳಿಸಲ್ವ ದಾದಿಯ ಬನ್ನಣನುಡಿಗೆ ಪೆರ್ಕಳಿಸುತ್ತೈದಿದಳಾ ಸಭೆಗೆ (ಕರ್ಣಪ. ೩-೦೨); ದೇವರಿಲ್ಲಿಗೆಯ್ತಂದುದರ್ಕೆ ಪೆರ್ಕಳಿಸಿ ದೇವರ ಕುಶಲಮಂ ತಿಳಿಯಲ್ಬಾವುಡಮಂ ಕೊಟ್ಟೆನ್ನಂ ಕಳುಹಿದರ್ (ಕಸಪಂ. ೦೬-೯). ೩. ಗರ್ವಿಸು ; ಅಹಂಕಾರಪಡು ; ಹೆಮ್ಮೆಪಡು : ಸಕಲಲೋಕ ಸ್ತುತೆಯಿಂ ಗೌರಿಯನಾಯ್ತುದನೀಗಳ್ ಜಾರಿಸಲತಿಜಡರಿದೇಕೆ ಪೆರ್ಕಳಿ [ಪಾಶಾಂ. ರ್ಗಲಿ]ಸುವರೋ (ಶಿಶಾಪ. ೦೪-೦೦೬); ಈ ಮೆಯ್ಯಂ ನಿಚ್ಚಮೆಂದೆ ನಂಬಿ ಸೊಮ್ಮಿಂ ಪೆರ್ಕಳಿಸುವಂ ಗಾಂಪನಲೇ! (ರಾಪಾಶ್ವ. ೬೫-೬) 'ಪೆರ್ಗಲಸು' ಪರಾ. ೪. ಎರಗು ; ಆತುರದಿಂದ ಬರು ; ಮುನ್ನುಗ್ಗು : ಪೆರ್ಕಳಿಸುವ ರಕ್ಕಸವಡೆಯುರ್ಕಂ ಮುಱಿದಿಕ್ಕೆ ತಕ್ಕನ ಚ್ಯುತನೊರ್ವಂ (ಅಪ್ರತಿ. ೬೦-೬); ಕಿವಿವೇಟದ ಬಗೆ . . . ಅನಿತುಂ ಬೂಟಕ ಮಿಾಯಾಟಮುಂ ವಿಟಂ ಕೇಳ್ದು ಪೆರ್ಕಳಿಸಿ ಬರ್ಕೆಂದು ಬನ್ನಂಬಡುವ ಬಗೆಯೆಂಬುದುಂ (ಕಸಾಪ. ೬-೦೫೭ ಪ). ಹೆಕ್ಕಳಿಸು : ೧. ಲೋಲಲೋಚನೆ ಯಳಲು ಮಿಗೆ ಹೆಕ್ಕಳಿಸುತಡಿಗಡಿಗೆ (ಕುಣ್ಣಾಶ.೨-೦೬); ನಕ್ಕಳಗಡೆ ಮಹೇಶ್ವರನ ಹಗೆ ಹೆಕ್ಕಳಿಸಲು (ಪಭಾಗ. ೦೦-೨೯-೦೫); ಅಂಗನೆಯುತ್ಸಂಗದೊಳು ಅಂಗವನೀಡಾಡಿಯವಳ ಸಂಗತಿಯೊಳೆ ಹಿಂಗದೆ ಹೆಕ್ಕಳಿಸುವುದು (ಕಸಾಪ. ೬-೦೫೭ ಸಾಂಗತ್ಯ). ೨. ನಿನ್ನ ಕಂದಾ ಪಡೆದು ನಾಂ ಸುಖಿಯಾದೆ ನೆಂದುಡಲಿತ್ತ ಹೆಕ್ಕಳಿಸಿ (ಕೌಕಿಶಾ. ೨೦-೨) ; ಕಂಗಳು ಹೊಳೆಯೆ ಮಱು ಮಿಾನೆಂದು ಹೆಕ್ಕಳಿಸಿದರು ಹಿಡಿಹಿನಲಿ (ಕುಣ್ಣಾಶ. ೦೦-೨೬) ; ಹೊಳಲು ಹೊಸ ರೀತಿಯಲಿ ಮಿಗೆ ಕಂಗೊಳಿಸುತಿರ್ಪುದು . . . ಹೆಕ್ಕಳಿಪ ಕೋಗಿಲೆಗಳಲಿ ಮೊರೆವಳಿಕುಳದ ಮೇಳದಲಿ (ತೊಕಣಾ. ೧-೯-೦೧). ೩. ಜಗ ತನ್ನದೆಂಬ ಹೆಮ್ಮೆಗೆ ಹೆಚ್ಚಿ ಹೆಕ್ಕಳಿಸಿ ಮುಗಿಲುಂದ್ದವಾಗಿ (ಪಂಪಾಪ. ೦-೦೬) ; ಹೆಕ್ಕಳಿಸಿ ಜಱೆದನು ಕರ್ಣ ಶಲ್ಯನನೆಲವೊ ಘಡ ನೋಡೆನುತ ತೆಗೆದೆಚ್ಚನು ಧನುಂಜಯನ (ಕುಣ್ಣಾಶ. ೨೪-೨೬) ; ಹೆಮ್ಮೆವಾತಾಡದೆ ಹೆಕ್ಕಳಿಸದೆ ಚಿತ್ತಸಮ್ಮತಿ ಯಱುತಿಸಗುವುದು (ಪಂಪಾ. ೪-೦೩). ೪. ಪರಬಲಕೆ ಜಾಱುವ ಜಯ ಸಿರಿಯ ಮುಂದಲೆಯ ಹಿಡಿಹಿಡಿಯೆನುತ ಹೆಕ್ಕಳಿಸಿದನು ಕುರುರಾಯ (ಕುಣ್ಣಾಶ. ೨-೩೦) ; ಹೆಕ್ಕಳಿಸಿ ಹರಿ ತಿವಿದ ಘಾತಕೆ ಕುಕ್ಕುರಿಸಿ ಕೆಡೆದು (ಅಕ್ಷಾಪ. ೬-೩೦). ೫. (ಆಲಂ) ಹೆದರು; ಹಿಂಜರಿ: ಲಕ್ಕಕುದುರೆಯ ಧಾಳಿಯ ಕಂಡು ಮನದೊಳು ಹೆಕ್ಕಳಿಸಿದನೆ ಬಾದುರನು (ಕುಣಾಸಾಂ. ೦೯-೦೫೫) ; ಮುಕ್ಕಳಿಸಿ ಮೇಲುಗುಳ್ದಪನೇನನಾದೊಡು ಮಾಡುವಂ ನೀನದಕ್ಕೆ ಹೆಕ್ಕಳಿಸಿ ಹಿಮ್ಮೆಟ್ಟದಿರ್ದೊಡೆ (ಕೈಪುಶಾ. ೩-೨೯). ೬. ಅಧಿಕವಾಗಿ ತೋರು ; ಮೇಲಾಗು : ಸಿಡಿಲ ಬೊಬ್ಬೆಯ ಧಾಳಿಯಲಿ ನಡನಡಿಸಿ ತಾಗಿ ನಿದಾಘಧಾಪನ ಹಿಡಿದು ಹೆಕ್ಕಳಿಸಿದನು ಮೇಘಾಗಮಮಹೀಪಾಲ (ತೊಕಣಾ. ೪-೬-೯). ೭. ಹುರಿದುಂಬಿಸು ;

ಪ್ರೌತ್ಸಾಹಿಸು : ಅವಂ ಕಂಡು ಕಂಸಂ ಪಂದಿಗೆಯಿಗಿದ ನಾಯಂ ಹೆಕ್ಕ [ಪಾಣಾಂ. ಪೆಕ್ಕು]ಳಿಸುವಂತೆ ತೊಡೆಯನಪ್ಪಳಿಸಿ (ಅರ್ಜುಪಂ. ೬-೦೦೬ ಪ); ಕವಿವ ಕಣೆ ಕಿಱುಗಣೆಯು ಮುಕ್ಕುಳಿಸಿದವು ಹೆಕ್ಕಳಿಸಿದವು ಹಂದೆಗರ (ಕುಪಾ.೨೮. ೪-೦೪). ೮. ಅಗಲವಾಗಿ ತೆರೆ : ಪಿಂಗದಸುರರ ಬಲವ ಪಾಱಿಸುತ್ತೇ ಱಿಸುತ ಕಂಗಳಂ ಕೆಕ್ಕಳಿಸಿ ಕಿವಿಗಳಂ ಹೆಕ್ಕಳಿಸಿ (ಕಪುಚ ೩-೬-೭೬). ೯. ಸಿಡಿ ; ಚಿಮ್ಮು : ಹಾರಂ : ಸೀಸಿಳಿಧ್ವನಿ ಮಸಗೆ ತಿಲ ಹೆಕ್ಕಳಿಸಿದವು ರುಮ್ಮೆಂದು ಸವಿಧಾವಂಗಳಬ್ಬರಿಸಿದವು ಛಟಛಟಿಛಟಿನಿನಾದದಲಿ (ಕೂಹರಿ. ೦-೭-೮೯). [ಪೆಕ್ಕಳ್ + — ಇಸು]

ಪೆಕ್ಕಣ 'ಪೆಕ್ಕಣ್' ನೋ.

ಪೆಕ್ಕ, ಪೆಕರ (ನಾ). ದಡ್ಡ ; ತಿಳಿಗೇಡಿ : ನಿಮಗೆ ಮಾದುವೆಯಾಗಿರ ಬೇಲ್ಲವ? . . . ನಾನೊಬ್ಬ ಪೆಕ್ಕನ ಹಾಗೆ ಕೇಳುತ್ತಿದ್ದೇನೆ? (ಸಂಸ್ಕೃತ. ೦೦೪). **ಪೆಕರ** : ಅವನೊಬ್ಬ ಪೆಕರ (ಕೂಪ). [?]

ಪೆಗಲ್, ಪೆಗಲು, ಹೆಗಲ್, ಹೆಗಲು (ನಾ). ೧. ಸ್ಕಂಧ ; ಭುಜ : "ತೆಗಳ್=ಪೆಗಲ್" (ಕಪುಪ ೫೦ ೨); ಬಲದೇವಂ ದುರ್ಯೋಧನನಾಯು ಬರ್ಪಂತೆ ಪೆಗಲೊಳ್ ಹಲಾಯುಧವನಿಕ್ಕಿಕೊಂಡು ಜಗವು ಪರ್ವತವೆ ಬರ್ಪಂತೆ ಬಂದು (ಕುಪಾ. ೦೩-೮೮ ಪ); ನೇಹದಿಂದಾ ಮಾತಂ ಪೇಳ್ದ ತುಂಬುರನ ಪೆಗಲೊಳ್ ಕಯ್ಯಿಕ್ಕಿ (ಪಂಪಪು. ೪-೪೮) ; ಕಾಮಮಂಜರಿ ಮುನಿಪನ ಪೆಗಲೊಳ್ ಕೆಯ್ಯನಿಟ್ಟಿರ್ದಳ್ (ಪಪಳು. ೬ ೬೦ ಪ); ಜನ್ನವಿತಮಂ ಪೆಗಲೊಳ್ ತೆಗೆದಿಕ್ಕಿ (ಕಾಪ್ಪಾ. ೩೩೬). **ಪೆಗಲು** : ೧. ಮುಂಜೆತಗ ನಿರಿವಿಡಿದು ಪೆಗಲೆತಡ ಸುತ್ತಿ (ಕಾಂಪಪ. ೧೪೮-೩೨೨). **ಹೆಗಲ್**: ೧. ಸೊಡ್ಡಳ ಬಾಚರಸರ ಹೆಗಲ ಮೇಲೆ ಹಸ್ತಮಂ ಮಡಗಿ (ಕೂಪ್ಪಸಂ. ೨೦೦-೨); ಹೆಗಲ ಕಂಬಳಿ ಕೈಯ ಕಲ್ಲಿಯೋಗರದಿಂದೆ ... ಎಸವುತಿರೆ (ಬಸಪು. ೯-೮೩) ; ಹೆಗಲಡ್ಡವರಿಗೆಯ ನೀಡಿ ವೈಮನಿವೌಕಿ ತಿವಿವಾಡಿದರು ಸಬಳಿಗರು (ಕುಪಾ.೨೮. ೯-೦೩). ೨. ಎತ್ತು, ಆನೆ ಮುಂತಾದವುಗಳ ಹೆಗ್ಗತ್ತು–ಬೆನ್ನಿನ ಮೇಲೆ ಇರುವ ಏಣು : "ಸ್ಕಂಧವೇಶ. ಪಹ– ಈ ೨ ಹೆಗಲ್" (ಪಣಾಪು. ೪೪-೦೦೨). **ಹೆಗಲು**: ೧. ಅರಮನೆಳು ವಾಲಿಗಳ ಹೆಗಲಲಿ ಮುರಿದ ಗೋಣಿನ . . . ಅರಸನನು ಕಂಡಳಿದನು (ಕುಪಾ.೪ ೦೦-೫೫) ; ಅಕ್ಷಯಮೂಡಿಗೆಯು ದಕ್ಷಿಣದ ಹೆಗಲಿಗೇಱಿಸಿ (ಕೂಪಂಪ ೩-೬೬-೬); ಹೆಗಲ ಹಸಿಬೆಯೊಳಗಿಟ್ಟ ಮಡಿಯನುಟ್ಟು (ಪುರಂತ. ೨-೩೮-೧) ; ಹೆಗಲ ಮೇಲೆ ಹೊದೆದಿದ್ದ ಒಂದು ಉತ್ತರೀಯ (ಕಕಪು. ೧). ೨. "ಹೆಗಲು=ಸ್ಕಂಧಪ್ರದೇಶ, ಪಹ" (ಪಾಣಾಂ. ೬) ; ದಂತಿಗಳ ಹೆಗಲಲಿ ನಿಡುನೊಗನ ಕಟ್ಟಿದರು (ಕುಪಾ.೪೮೨.೨. ೬-೪೩) ; ಅಗಣಿತಲೋಕಾದಿ ಲೋಕಂಗಳುದರದಿ ಸೊಗಯಿಪ ನಾರಾಯಣನ ಹೆಗಲೊಳು ಹೊತ್ತು ಪೇಚರದೆ ಸಂಚರಿಸುವ ಖಗರಾಜ ಕರುಣೆವುದು (ಪೂಚಹ. ೦-೦೩); ಸೀಹವ . . . ಗೋಣು ಹೆಗಲುಗಳ ಮೇಲೆ ಬರುಸುಗೂದಲು ಉದ್ದವಾಗಿ ಬೆಳೆಯುವವು (ಪುಬಂಪಂ. ೪-೨೦೩).

ಪೆಗಲೆಣೆ, ಹೆಗಲೆಣೆ=ಸರಿಸಮಾನ ; ಸಾಟಿ : ಅವನ ಪೆಗಲೆಣೆಯ ಕೆಳೆಯರನ್ ಟಾಟರನ್ ಗವಿಗಟ್ಟಲೆಯಿರ್ಪುಳ್ ಮುಟ್ಟಿ ಮುಸುಕಿರ್ದವುದು (ಬಧ್ಕಕ್ರ. ೦೩-೨೬೩) ; ಜಸದೊಳು ಪತಮರೋಹಿಣಿಗೆ ಹೆಗಲೆಣೆ . . . ಚಂದ್ರಮತಿ (ಪಪಕಾ. ೦-೪೪). **ಹೆಗಲ ಕೆಲಸ**=ಭುಜದ ಸಹಾಯದಿಂದ ಮಾಡುವ ಕೆಲಸ ; ಹೊರುವ ಕೆಲಸ : ಬುದ್ಧಿಯ ಕೆಲಸ ಶ್ರೇಷ್ಠ ... ಕಾಲ್ಕೆಲಸ ಹೆಗಲ ಕೆಲಸಗಳು ಅಧಮ (ಪಪಕಾ. ೩೩೬). **ಹೆಗಲ ಮೇಲೆ ಬೀಳು**=ಹೊಣೆ ಹೊರುವಂತಾಗು ; ಭಾರ ಬೀಳು : ಆತನ ಹೆಗಲ ಮೇಲೆ ಬಿದ್ದಿದ್ದ ಜವಾಬ್ದಾರಿ ಎಷ್ಟು ಗುರುತರವಾಗಿತ್ತು (ಕ್ಯರಪ. ೦೨). **ಹೆಗಲು ಸಾಳುವ**=ಬೇಟೆಗಾರರು ಬೇಟೆಗೆ ಹೊರಡುವಾಗ ಭುಜದ ಮೇಲೆ ಕೂಡಿಸಿಕೊಂಡು ಹೋಗುವ ಸಾಕಿದ ಗಿಡುಗ : ಹಿಡಿನಾಯಿಗಳು ಹೆಗಲ ಸಾಳು[ಪಾಣಾಂ. ೪]ವಂ ... ಪರಿಪರಿಯ ಹಕ್ಕ ವರಸಡವಿಗಂತಕರಂತೆ ನಡೆವ ಶಬರರ ಕೊಡನು (ಕೂಪಪಪ. ೩-೪). **ಹೆಗಲಿಗೆ ಹೆಗಲು ಕೊಡು**=ಜೊತೆಯಾಗಿರು ; ಸಮಸಮವಾಗಿರು : ಶಿಷ್ಯರ ಹೆಗಲಿಗೆ ಹೆಗಲು ಕೊಟ್ಟು ನಾನು ದುಡಿಯುತ್ತೇನೆ (ಪಪ್ಪಕೊ. ೩೦) ; ನನ್ನ ಹೆಗಲಿಗೆ ಹೆಗಲು ಕೊಟ್ಟರಿ, ಹಿಂದೆ ಬೆಂಬಲವಾದಿರಿ (ಪಂಪಭು. ೩೨-೦೩). **ಹೆಗಲು ಕೊಡು** = ಸಹಾಯ ಮಾಡು ; ನೆರವು ನೀಡು : ನಿರಹೊರೆಯವರು ಸಹಾಯ ಬೇಡಿದರೆ ಎಷ್ಟು ಶ್ರಮವಾದರೂ ಹಿಂಜರಿಯದೆ ಹೆಗಲು ಕೊಡುವನು (ಹೋಚಕ್ಷ. ೬೪) ; ಬಾ ಬಂಧು, ಹೆಗಲು ಕೊಡು, ನಡುದಾರಿಯಲಿ ನಿಂತ ಈ ರಥವ ಸಾಗಿಸೋಣ (ಪಂಪಭು. ೦೪-೩೨). **ಹೆಗಲು ತೊಳೆ** = ಜವಾಬ್ದಾರಿ ಇಲ್ಲದಂತೆ ಮಾಡು : ನನಗಂತೂ ಸಾಧಿಸುವದಿಲ್ಲ, ನನ್ನ ಹೆಗಲು ತೊಳೆದು ಬಿಡಿರಿ (ಪಬ್ಬಕೊ. ೦೩). **ಹೆಗಲೆಣೆಯಾಗು** = ಸರಿಸಮಾನವಾಗು ; ಸಾಟಿಯಾಗು : ಅವಳಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಮತ್ತೊಬ್ಬ ವ್ಯಕ್ತಿಯಿಂದರೆ ಮುಕ್ತಾಯಕ್ಕ (ಕೂಪ್ಪಳು. ೦೦೩) ; ಮಾನವನಿಗೆ ಸೌಂದರ್ಯದರ್ಶನವೃಷ್ಟಿ ಲಭಿಸಿದಾಗ ಅವನು ದೇವತೆಗಳ ಹೆಗಲೆಣೆಯಾಗಿ ನಿಂತು ಅಮರನಾಗುತ್ತಾನೆ (ಕ್ಯಾಂಪ. ೪೯).

[ದೇ.॥ ತಮಿ. ಪಿಚಲ್ ; ತುಳು. ಪುಗೆಲ್, ಪುಗ್ಗೆಲ್ ; ಕೋತ. ಪೆಯ್ಲ್, ಪೆಯ್ಗ್]

ಹೆಗಲಿಕ್ಕು (ಕ್ರಿ). ಹೆಗಲಿನ ಮೇಲೆ ಇಡು.—ಇರಿಸು : ಬಲಗ್ಗೆಯ ಪೆಗಲಿಕ್ಕಿ ಬಪ್ಪ ಯೋಗೀಂದ್ರರ ಸುಳುಹುಗಾಣದೆ ಚಿಂತೆ ಮಾಳ್ಪ (ಪುಪ. ೩-೩೫). [ಪೆಗಲ್ + ಇಕ್ಕು]

ಹೆಗಲೀ (ಕ್ರಿ). ಹೆಗಲನ್ನು ಕೊಡು : ಪೆಗಲಿತ್ತು ಪೊತ್ತು ಜವದಿಂ ಎಗೆ ಪರಿಯೆ ವಿರಾಜಿಸಿರ್ದ ಗೋರಥಮಂ ಪೆಂಪಗಲದೂಡನೇಱಿ (ಪ್ರಪಂ. ೩೪-೭೦). [ಪೆಗಲ್ + ಈ]

ಹೆಗಲು 'ಪೆಗಲ್' ನೋ.

ಪೆಗಲೇರು 'ಪೆಗಲೇಱು' ನೋ.

ಪೆಗಲೇಱು, ಪೆಗಲೇರು, ಹೆಗಲೇರು, ಹೆಗಲೇಱು (ಕ್ರಿ). ೧. ಭುಜವನ್ನು ಹತ್ತು ; ಭುಜದ ಮೇಲೇರು : ಸಮನಾಗಿ ವೇಳಾದೊಳ್ ಕಾಳಮಹಾಕಾಳರ್ಕಳವರ ಪೆಗಲೇಱಿದ ವಿಭ್ರಮದಿಂ ನೋಡು ವರ್ಗನ್ವರ್ಥವಾದುದಾ ವೇಳಾಧರಥನ ವೆಸರಂಬರದೊಳ್ (ಪಾಂಪಕ್ಷ. ೯-೭೯). ೨. ಹೆಗ್ಗತ್ತಿನ ಮೇಲೆ ಏರು,—ಹತ್ತು : ಸಿಂಗನ ಪೆಗಲೇಱಿ ಸಾಗೆ ಕರಿ (ಪುರಂಪ. ೨-೭೪-೩). **ಪೆಗಲೇರು** : ೧. ಬಡಬಡಿಪ ಪರೆಗಳುಂ ಪೆಗಲೇರೆ (ಕಾಂಪಪ. ೦೩೦-೩೩೦). **ಹೆಗಲೇರು** : ೧. ವುಂಗ ಡೊಂಬರವನ ಹೆಗಲೇರಿ ಕುಳಿತುಕೊಂಡಿತು (ಪಪಕ). **ಹೆಗಲೇಱು** : ೧. ಪಾಪ ಪುಣ್ಯಗಳೆರಡು ವ್ಯಾಪಿಸುತ ಬೆಂಬಿಡದು ಪಾಪ ಮಾಡಿದನ ಹೆಗಲೇಱಿ ರಾಜಶುಲದೀಪ ಬರುತಿಹನು (ಕಪಣ್ಣಾ. ೬೫೩).

ಹೆಗಲೇಱಿಸಿಕೊಳ್ = ಹೆಗಲಿನ ಮೇಲೆ ಕೂಡಿಸಿಕೊಳ್ಳು : ಸುಖದೋಱಿ ಲೋಕವಱಿಯಲ್ ಪೆಗಲೇಱಿಸಿಕೊಂಡು ಪೋದಂ (ಪುಪಾಪ. ೬೪); ಪೆಗಲೇಱಿಸಿಕೊಂಡೆನ್ನಂ ವಿಗೆ ನಿಮ್ಮೋಲಗಕೆ ಬರ್ಪನತಿಸಾಭ್ರಮದಿಂದಗಲದನುದಿನಮುಂ (ಪ್ರಪಂ. ೩೨-೪೦). [ಪೆಗಲ್+ಏಱು$_1$ (<ಏಱು$_2$)]

ಪೆಗಲ್ಕೊಟ್ಟು (ನಾ). ಹೆಗಲ ಮೇಲಿಟ್ಟುಕೊಂಡು ಹೋಗುವ ಬಾಷ್ಪ: ಹರಿ ಗೋಪಾಲರೊಳಾಡಿದೊಂದೆ ಪೆಗಲ್ಕೊ[ಪಾಣಾಂ. ಪಸಲ್ಕೊ]ಟುಂಡ ತಾನಂ . . . ತನ್ನದೀತೀರದೊಳ್ ತರದಿಂ ರಂಜಿಪುವು (ಪಪಳು. ೦೪-೬). [ಪೆಗಲ್+ಕೂಟ್$_1$]

ಪೆಗಲ್ಕೊಟ್ಟಿ (ನಾ). ಹೆಗಲಿನ ಮೇಲೆ ಹೊತ್ತುಕೊಂಡಿರುವ ಹೊರೆ : ಪಟು ಕೊಟ್ಟಿಗೆ ಪೆಗಲ್ಕೊಟ್ಟಿ . . . ಅಪ್ಪವರ್ಗಂ ಸಹಿತವನಿಪನುಂ ಸೇನೆಯುಂ ಕೊಟ್ಟು (ಪಪಳು. ೬-೬). [ಪೆಗಲ್+ಪೊಟ್ಟಿ]

ಪೆಗೆವೆಗೆ (ನಾ). ಒಂದು ಸ್ಥಳದ ಹೆಸರು : ಗೆಚ್ಚಿವಡಿಗೆ ಪೆಗೆವೆಗೆಯ ಎಬ್ಬದಿವ್ಬಗ್ಗೆ ಎಳಚಾಗಪಳ್ಳಿಯ ಮಾರಯ್ಯ . . . ಕವ್ಬಳದೆಳೆವೆಟ್ಟಿ ಕೊಟ್ಟ (ಎಳ. III, ಕಣಸ. ೧೯–೨; ೮೪೯ ?). [?]

ಪೆಗೋಡ 'ಪಗೋಡ' ನೋ.

ಪೆಗ್ಗ 'ಪೆಂಗ' ನೋ.

ಪೆಗ್ಗಡೆ 'ಪೆರ್ಗಡೆ$_1$' ನೋ.

ಪೆಗ್ಗಣ 'ಪೆರ್ಗಣ' ನೋ.

ಪೆಗ್ಗಟಯ್ಯ (ನಾ). ಒಬ್ಬಾತನ ಹೆಸರು : ವಚ್ಚಪಯ್ಯನ ಮಗ ಶ್ರೀ [ಕೂ]ನ್ತದ ಪೆಗ್ಗಟಯ್ಯಂ (ಜೈಇ. XI–1, ೪೩–೦೧; ೦೨೦). [? + ಅಯ್ಯ$_{61}$]

ಪೆಗ್ಗಟ್ಟಿ, ಪೆಗ್ಗದ್ದಿ (ನಾ). ದೊಡ್ಡ ಗದ್ದೆ; ವಿಸ್ತಾರವಾದ ಗದ್ದೆ : ದೇಗುಲಕೆ ಸಲ್ವುದು ದೇವರ ಕೆಜೆಯ ಮೂಡಣ ಕಡೆಗೋದಿನಲಿ ಪೆಗ್ಗಟ್ಟಿ (ಎಳ. IX, ಕಾಗಡಿ. ೭೫–೨೦; ೨೦೮). **ಪೆಗ್ಗದ್ದಿ** : ವಿಷ್ಣುಭಟ್ಟೋ ಪಾಧ್ಯಾಯರಿಂಗೆ . . . ಮೂಡಣ ಪೆಗ್ಗದ್ದಿ ಅದಱ ಮೇಗಣ ಕೊಡಂಗೆ ಎರಡಱಲ್ಲಿಯೂ ಮೂಡೆ ೨ (ಎಇ. XXVII, ೨೯–೪೪; 1256). [<ಪರಿದು$_1$ + ಗಟ್ಟಿ^{2}]

ಪೆಗ್ಗು 'ಪೆಂಗು$_1$' ನೋ.

ಪೆಗ್ಗೂರಿಡು 'ಪೆರ್ಗೂರಿಡು' ನೋ.

ಪೆಗ್ಗೂರು 'ಪೆರ್ಗೂರು' ನೋ.

ಪೆಗ್ಗೊಲ್ಲಿ 'ಪೆರ್ಗೊಲ್ಲಿ' ನೋ.

ಪೆಗ್ಗೋಳಿ 'ಪೆರ್ಗೂಣೆ' ನೋ.

ಪೆಚ್ಚ (ನಾ). ದಡ್ಡ; ತಿಳಿಗೇಡಿ: "ಎಗ್ಗ, ಹುಂಬ . . . ಪೆಚ್ಚ "(ಶಾಪುಹು. ೬೯); ಶುದ್ಧ ಪೆಚ್ಚ ನಾನು (ಪ್ರಕ್ಷ. ೬೯). 'ಪಿಚ್ಚ್$_1$' ಪರಾ. [ಪೆಚ್ಚು$_3$ + – ಅ$_7$]

Δಪೆಚ್ಚಳೆ$_1$ 'ಹೆಚ್ಚಳ' ನೋ.

ಪೆಚ್ಚಳ್ಳ$_3$ 'ಪಚ್ಚಳ್ಳ$_2$' ನೋ.

Δಪೆಚ್ಚಳಿಸು 'ಹೆಚ್ಚಳಿಸು' ನೋ.

ಪೆಚ್ಚಾಟ (ನಾ). ತಿಳಿಗೇಡಿತನ; ಹುಚ್ಚಾಟ; ಅವಿವೇಕ: ಈಚೆಚೆಗಂತೂ ಅವನ ಪೆಚ್ಚಾಟ ಹೇಳತೀರದು (ಕೂಡ). [ಪೆಚ್ಚು$_3$ + ಆಟ]

ಪೆಚ್ಚಿ (ನಾ). ದಡ್ಡ ಹೆಂಗಸು; ಪೆದ್ದಿ : ಅವಳೊಬ್ಬಳು ಪೆಚ್ಚಿ. ಬಾಯಿಗೆ ಬಂದ ಹಾಗೆ ಹರಟುತ್ತಿದ್ದಾಳೆ (ಕೂಡ). [ಪೆಚ್ಚ + – ಇ$_2$]

ಪೆಚ್ಚಿಸು 'ಪೆರ್ಚಿಸು' ನೋ.

ಪೆಚ್ಚು$_1$ 'ಪೆರ್ಚು$_1$' ನೋ.

ಪೆಚ್ಚು$_2$ 'ಪೆರ್ಚು$_2$' ನೋ.

ಪೆಚ್ಚು$_3$ (ಗು). ೧. ಏನೂ ತಿಳಿಯದ; ಮೂಢತನದಿಂದ ಕೂಡಿದ : ಏನೋ ಪೆಚ್ಚು ಹುಡುಗಿ. ಕನಿಕರದಿಂದ ಹಾಗೆ ಆಡುತ್ತಾಳೆ (ಪಣಕ. ೭೩). (ನಾ). ೨. ದಡ್ಡತನ; ತಿಳಿಗೇಡಿತನ : 'ಪೆಚ್ಚ', 'ಪೆಚ್ಚಿ' ಪರಾ. ೩. ಹುಚ್ಚು; ಮರುಳು : "ಪೆಚ್ಚು (ಪುಚ್ಚು) – ಪಿತ್ತ = ಧಾತುವಿಕಾರ" (ಕಠ್ಯಕೋ. ೨೭). ೪. ಕಾಂತಿಹೀನವಾದುದು; ಮಂಕು : ನವಶಾಸ್ತ್ರ ದೊರೆಸಾನಿ ಇವಗಚ್ಚುವೆಚ್ಚು ವೇದವೇದಾಂತಗಳೆ ಅವಾದಿರಾ ಪೆಚ್ಚು ! (ಗಹಕ. ೭೦–೦೨). ೫. ದಡ್ಡವ್ಯಕ್ತಿ; ತಿಳಿಗೇಡಿಯಾದ ವ್ಯಕ್ತಿ : ಅಯ್ಯೋ ಪೆಚ್ಚೆ . . . ನಿನಗೆ ಗೊತ್ತೇ ಆಗಿಲ್ಲ (ಪಡಣಾ II, ೧೧೩); ಪೆಚ್ಚುಗಳು ಲಲಿತ, ನರಸಮ್ಮ (ಪಡಣಾ. II, ೦೦೩೨).

ಪೆಚ್ಚಾಗು = ತಬ್ಬಿಬ್ಬಾಗು; ಕಂಗಾಲಾಗು; ಮಂಕು ಕವಿ : ಅವಳು ಮಾತನಾಡಿದ ಧಾಟಿಗೆ ಆನಂದ ಪೆಚ್ಚಾಗಿ ಕುಳಿತ (ಕೂಡಕ. ೬೭); ರಂಗನಾಥನು ಬಹಳ ಪೆಚ್ಚಾಗಿದ್ದನು (ಪಂಚಮಂ. ೮೬೩); ಪೆಚ್ಚಾಗಿ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ (ಶಂಚಿಲೂ. ೩೯). **ಪೆಚ್ಚುಪೆಚ್ಚಾಗು** = ಪೆಚ್ಚಾಗು : ಏನೇ ಪೆಚ್ಚುಪೆಚ್ಚಾಗಿ ನಿಂತಿದ್ದೀಯಾ ? (ಕೂಗ್ಯಾ. ೦೬). **ಪೆಚ್ಚುಬೀಳು** = ಪೆಚ್ಚಾಗು : ಹಿಂದೆ ಕೆಲವು ಸಲ ಇವರ ಮಾತಿನಂತೆ ನಡೆದು ಪೆಚ್ಚು ಬಿದ್ದಿದ್ದ ತಂಗವೇಲು ಆಗಡಿಯವನನ್ನು ಕೇಳುವುದಕ್ಕೆ ಹಿಂಜರಿದ (ಹುಹೂ. ೦೪೬). **ಪೆಚ್ಚು ಮಾಡು** = ಮಂಕು ಕವಿಸು ; ತಬ್ಬಿಬ್ಬುಗೊಳಿಸು : ಭೋಳೆಮನುಷ್ಯರೆಂದು ನಮ್ಮ ನಂದಬಾಬುಗಳನ್ನು ಪೆಚ್ಚು ಮಾಡಿದ (ಶಾಂಹೀ. ೪೬). **ಪೆಚ್ಚೆನ್ನಿಸು** = ತಬ್ಬಿಬ್ಬಾಗು; ಮಂಕಾಗು : ಈ ನಾಮಕರಣದ ವರಿಯನ್ನು ಕಾಣದವರ ಮಾತು ಹಾಗಿರಲಿ, ಕಂಡವರಿಗೂ ಸ್ವಲ್ಪ ಪೆಚ್ಚೆನ್ನಿಸದೇಕು (ಪಹ್ಮಕು. ೨೬೨).

ಪೆಚ್ಚುಗೆ 'ಪೆರ್ಚುಗೆ' ನೋ.

ಪೆಚ್ಚುತನ (ನಾ). ೧. ದಡ್ಡತನ; ಅವಿವೇಕ : ನಿನ್ನ ಪೆಚ್ಚುತನದಿಂದ ಕೆಲಸ ಹಾಳಾಯಿತು (ಕೂಡ). ೨. ಹುಚ್ಚುತನ : "ಉನ್ಮಾದ, ಚಿತ್ತ ವಿಭ್ರಮ . . . ಪೆಚ್ಚುತನವು" (ಸಿರಾ.ಅಕ. ೬೬). [ಪೆಚ್ಚು$_3$ + – ತನ]

ಪೆಜ್ಜುಂಕ 'ಪೆರ್ಜುಂಕ' ನೋ.

ಪೆಜ್ಜೆ 'ಪಜ್ಜೆ' ನೋ.

ಪೆಜ್ಜೆಗೆದು 'ಪಜ್ಜೆಗೆದು' ನೋ.

ಪೆಜ್ಜೆವಿಡು (ಕ್ರಿ). ದಾರಿ ಬಿಡು ; ಕ್ರಮವನ್ನು ಮಿಮು : ನಾಡಿಗರ್ ದಿನದಿನಂ ಬೇಳ್ಪೊಂದು ಹವ್ಮವನುಂಡುಂಡು ಸವಿಗೊಂಡ ಬೋಟ್ಯೆಯ ರೆಕ್ಕಾನುಮೊರ್ವನೀ ನಿಚ್ಚವಲಿಯೆಡೆಯಂ ಪುರುಳ್ಗಾಣದೆ ಪೆಜ್ಜೆವಿಟ್ಟು . . . ತಡೆವರ್ಪರ್ (ರಾಪಶಾಕೃ. ೫೫ ೭೦). [ಪೆಜ್ಜೆ (<ಪೆಜ್ಜ) + ಬಿಡು$_1$]

ಪೆಟಲ್, ಪೆಟಲ, ಪೆಟಲು, ಪೆಟ್ಟಲು, ಪೆಟ್ಲು (ನಾ). ೧. ಯುದ್ಧದಲ್ಲಿ ಮದ್ದನ್ನು ಸಿಡಿಸಲು ಉಪಯೋಗಿಸುತ್ತಿದ್ದ ಒಂದು ಬಗೆಯ ಸಾಧನ; ತುಪಾಕಿಯಂತಹ ಸಾಧನ : ಹೂಡಿದುವು ಪೆಟಲ್ಗಳಿಕ್ಕುವ ದಸಿಗಳಾಗಳೋಲಾಡಿದುವು (ಪಂಪಿ. ೪೨-೩೨). **ಪೆಟಲ** : ೧. ಹಾರೆ ಬರಿ ಕೊಱಿಡು ಪೆಟಲ ತಿರುಗುಣಿ ಬೀಸುವಲೆ ತಳಿಯ ವಜರದ ಗೊಂದಣದ ಸಂವರಣೆಯಿಂದಾ ಕೋಂಟೆ ಕಣ್ಗೊಟ್ಟತು (ಪಕ್ಕಳಿ. ೪-೨೮); ಗುಂಡು ಪೆಟಲ ತಿರುಗುಣಿ ಜಾಲದ ಶಲ್ಯಗೆಂಡ . . . ಡಾಣೆಯ ಕಂಡತಂಡದಿಂದೆಸೆದುದಾ ಕೋಟೆ (ಪಂಕ್ರಶಾಂ. ೪-೦೦). **ಪೆಟಲು** : ೧. ಸುಡುವ ಪೆಟಲು ಕೂಡೆ ನೆಗೆವ ಗುಂಡಿ ಕೇತು ತೋರಣದಿಂದ ವಾಯ್ದಳವೆಲ್ಲ ಸಡಗರ ಗೊಂಡುದು (ಪರಪ. ೪೬-೨೨); ಪೆಟಲು ಡಮ್ಮೆನೆ ಗುಂಡು ಸಿಡಿದು ಪೋಪಂತೆ (ಪ್ರಕುಶ್ರಿ. ೬-೦೭೬); ಸುಭಟರ ಹರಣಗೊಳುವ ಪೆಟಲುಗಳ ಕಱಿವ ಗುಂಡಿನ ಮಳೆಯೂರೊಳಗೆಸೆದುದು (ಪಂಪಪು. ೦೬ ೪೬); ಛಿಟಿ ಛಿಟಿಲುಛಿಟಿಲೆಂದು ನಾದಿಸೆ ಪೆಟಲಿನಿಂ ಸಿಡಿವ . . . ಗುಂಡುಗಳು (ಅಪಂರಾ. ೪-೨. ೬). **ಪೆಟ್ಟಲು** : ೧. ಇಡುವ ಪೆಟ್ಟಲು ಕೊಡಬ್ಬರಿಸುವ ಬಾಣ . . . ತರಿಗೆಗಳ ಕಡುಗಲಿಛಟೆಯ ಛೀಯೆ..ದಾರ್ದು ರಿವುಗಳ ತುಡುಕಿದರು (ಪಂಪವಿ. ೩-೬೫). ೨. ವಕ್ಕಳು ಆಟಿಕೆಯಾಗಿ ಬಳಸುವ ತುಪಾಕಿಯಂಥ ಒಂದು ಸಾಧನ: (೪). **ಪೆಟ್ಲು**: ೨. ಪೆಟ್ಲಿಗೆ ಗಜ ಒದಗಿಸುತ್ತಿದ್ದವರು ರಾಗಜ್ಞ (ಪ್ರಕ್ಷ. ೨೭); ಉಡುಪಿಯಲ್ಲಿ ಕೃಷ್ಣಜಯಂತಿಯಂದು ಯಾವ ಹುಡುಗರ ಕೈಯಲ್ಲಿ ನೋಡಿದರೂ ಪೆಟ್ಲು ಇರುತ್ತದೆ (ಕೂಡ) ೩. ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ; ಕ್ರಿಮಕ್ಕಳು ಈ ಕಾಯಿಯನ್ನು ತುಪಾಕಿಯಂತಿರುವ ಸಾಧನದಲ್ಲಿ ಹಾಕಿ 'ಟಪ್' ಎಂದು ಸದ್ದಾಗುವಂತೆ ಹೊಡೆಯುತ್ತಾರೆ : ಉಸುವುಮಾನಿ, ಹೂವುಮ್ಮಗುಳಿ, ಪೆಟ್ಲು, ಗೋರಿ (ಪಹ್ಮಕು. ೨೬೯).

ಪೆಟಲ ಕಂಡಿ = ಯುದ್ಧಕಾಲದಲ್ಲಿ ಕೋಟೆಯಲ್ಲಿ ಮರೆಯಾಗಿ ನಿಂತು ತುಪಾಕಿಯನ್ನು ಹೊಡೆಯುವುದಕ್ಕಾಗಿ ಮಾಡಿಕೊಂಡಿರುವ ಕಂಡಿ : ಎಸುವಂಬುಗಂಡಿ ಪೆಟಲ ಕಂಡಿ . . . ಲಾಳವುಂಡಿಗೆ ಕಣ್ಣೆಸೆದವು

ಕುಮ್ಮಟದೊಳಗೆ (ಕುರಾಸಾಂ. ೩೭-೩೨). ಪೆಟಲ ಗುಂಡು = ಪೆಟಲಿಗೆ ಹಾಕುವ ಗುಂಡು.—ಗೋಲಿ: ಪಿಂಗದಿಡುವ ಚೆಂಡು ಪೆಟಲ ಗುಂಡಿನ ಸಮಭಂಗಿಯಂತೆದೆಗೆಡಿಸಿದುದು (ಕುರಾಸಾಂ. ೩೧-೧೧೦); ತೂಳಿಸು ಪೆಟಲ ಗುಂಡುಗಳನೆಂಬಸುರರ ಕೋಳಾಹಳವೊಪ್ಪಿತು (ಕಂಪಪಿ. ೦೯-೩). ಪೆಟಲವರ್, ಪೆಟಲವರು = ತುಪಾಕಿಯನ್ನು ಹಿಡಿದಿರುವವರು: ಪೆಟಲವರ್ ಥೆರೆ ಮಾಲೆಯೊಳ್ ಪರಿದರು (ರಕ್ಷಾಪಾ. ೧-೨೧); ಸುತ್ತ ಬಳಸಿ ಪೆಟಲವರು ಕೋವಿಗಳನು ತೆತ್ತಿಸಲು (ಕುರಾಸಾಂ. ೦೦-೩೩).

[ದೇ. ॥ ತಮಿ. ಪೊಟ್ಟಿಲ್; ತುಳು. ಪೆಟ್ಲ, ಪೇಟ, ಪೇಟ್ಲ, ಪೇಟ್ಲೆ; ತೆಲು. ಪೆಟಲು, ಪೆಟಲು, ಪೆಟುಲು, ಪೆಟ್ಲು]

ಪೆಟಲ 'ಪೆಟಲ್' ನೋ.

ಪೆಟಲಂಬು (ನಾ). = ಪೆಟಲ್ ೧: ಪೆಟಲ ಕೋವಿಯ ಬಂಡಿ ಪೆಟಲಂಬಿನ ಬಂಡಿ . . . ಕಟಕದೊಳೆಯ್ದಿದವು (ಕುರಾಸಾಂ. ೪೦-೪೯); ಪೆಟಲಂಬು ಗುಂಡುಗಳಾಂತು ರಕ್ಕಸರು . . . ಕೋಂಟೆಗಾಳಗವನುಱ್ ಮಾಡುತಿರೆ (ಪೀಕ್ಕೃಪು. ೨-೦೧-೨೦). [ಪೆಟಲ್ + ಅಂಬು$_2$]

ಪೆಟಲು 'ಪೆಟಲ್' ನೋ.

ಪೆಟಲುಪ್ಪು, ಪೆಟ್ಲುಪ್ಪು (ನಾ). ೧. ಒಂದು ಬಗೆಯ ಉಪ್ಪು; ಬಂದೂಕಿಗೆ ಹಾಕುವ ಮದ್ದು: ಪೆಟಲುಪ್ಪು ಗುಂಡು ದಸಿ ಬಿತ್ತರಿಸಲೇಂ (ಪಸ್ತಾ. ೩-೨೦); ಪೆಟಲ ಬೆಣೆಯ ಬಂಡಿ ಪೆಟಲುಪ್ಪಿನ ಬಂಡಿ ಕಟಕದೊಳೆಯ್ದಿದವು (ಕುರಾಸಾಂ. ೪೦-೪೯). ೨. ಒಂದು ಬಗೆಯ ಉಪ್ಪು; ಕಡ್ಡುಪ್ಪು: ಪಿ[ಪೆ]ಟಲುಪ್ಪನ್ನು ಸಣ್ಣನಾಗಿ ಪುಡಿ ಮಾಡಿ . . . ನಿಂಬೇಹುಳಿಯನ್ನು ಬಿಟ್ಟು ಕಲಸಿಕೊಂಡು ನುಂಗುವುದು (ವಿಸ್ತಪಿ. ೯೯). ಪೆಟ್ಲುಪ್ಪು: ೧. ಉಣ್ಣೆ, ಪೆಟ್ಲುಪ್ಪು, ಎಣ್ಣೆಕಾಳುಗಳು, ಪರಿಮಳದ್ರವ್ಯಗಳು ಪರನಾಡುಗಳಿಗೆ ಹೋಗುವುವು (ಮುಂಬಯಿ. ೪-೦೩೭); ಈ ದಹನಕಾಲದಲ್ಲಿ ಅಂಗಾರ, ಗಂಧಕ, ಪೆಟ್ಲುಪ್ಪು ಮೊದಲಾದುವು ಆಮ್ಲಅನಿಲದೊಡನೆ ಸೇರಿ ಕೆಲವೊಂದು ಅನಿಲಗಳು ಉಂಟಾಗುವುವು (ಶಾಲಪ್ರ. II, ೦೦೦೬). ೨. "ಪಾಂಡುಜಃ—ಪೆಟ್ಲುಪ್ಪು" (ಓಷಧಿ. ೯೪); ಪೆಟ್ಲುಪ್ಪು ಗ ೧ ತೂಕಮಂ ನರಮೂತ್ರದೊಳರೆದು ಕೊಡಲು ಆ ಕ್ಷಣವೇ ಮೂತ್ರ ಬಿಡುವುದು (ಸಕಸ್ಯ. ೩೭೪).

[ಪೆಟಲ್ + ಉಪ್ಪು$_1$./ತಮಿ. ಪೊಟ್ಟಿಲುಪ್ಪು; ತುಳು. ಪೆಟ್ಲುಪ್ಪು, ಪಟ್ಲುಪ್ಪು; ತೆಲು. ಪೆಟ್ಲುಪ್ಪು]

ಪೆಟಲುಯಂತ್ರ (ನಾ). ಪೆಟಲನ್ನು ಅಳವಡಿಸುವ ಯಂತ್ರವಿಶೇಷ: ದಡಿ ದಸಿ ಕವಣೆ ಕೈಕಲ್ಲೆತ್ತುಗುಂಡಾರ್ದಿಡುವ ಪೆಟಲುಯಂತ್ರ . . . ಎಸೆದವು (ಕುರಾಸಾಂ. ೩೭-೩೪). [ಪೆಟಲು (< ಪೆಟಲ್) + ಯಂತ್ರ]

ಪೆಟಲ್ಗೋವಿ (ನಾ). = ಪೆಟಲ್ ೧: ನಾಸಿಕದಿರವು ಹೊಂಚಂಪಕವೊ ಹೇಮದಿ ವಿರಚಿತದ ಪೆಟಲ್ಗೋವಿ ಕೇಳಲರಂಬನಾಡುತಿಹ ಪರಿಯೊಳೆಸದಿಹುದು (ಪಸಪಾ. ೦೬-೩೯). [ಪೆಟಲ್ + ಕೋವಿ$_1$]

ಪೆಟಾರಿ 'ಪಿಟಾರಿ' ನೋ.

ಪೆಟಾರಿಗೆ 'ಪಿಟಾರಿ' ನೋ.

ಪೆಟ್ಟ 'ಪೆಂಟ್ಟೆ$_1$' ನೋ.

ಪೆಟ್ಟಣಿಗೆ (ನಾ). ನೆಲವನ್ನು ಧಮ್ಮಸ್ಸು ಮಾಡಲು ಉಪಯೋಗಿಸುವ ಒಂದು ಬಗೆಯ ಮರದ ಸಾಧನ; ಬಡಿಮಣೆ: "ಪೆಟ್ಟಣಿಗೆ [ಪಾಠಾಂ. ತೇಱಣಿಗೆ] ಕರಪೀಠವಕ್ಕು" (ಮಂಗರಾ. ೪೭-೬). [?]

ಪೆಟ್ಟಮೆಟಿಸು, ಹೆಟ್ಟವೆಳಸು (ಕ್ರಿ). ಹೆಂಟೆಯೊಡೆಯುವ ದಿಮ್ಮಿಗೆ ಕಟ್ಟಿ ಎಳೆಯಿಸು: ಬೆಟ್ಟೇಱ ಬೀಟ್ವರಂ ಪೆಟ್ಟಮೆಟಿಸಿಕೊಳ್ವರಂ . . . ನೆರೆದು ನೋಡುವರಂತೆ (ರಮಾಕ್ಯ. ೯-೨೩). ಹೆಟ್ಟವೆಳಸು: ಕೆಡಹಿ ಮೂಗನರಿದೆಳೆಹೂಟೆಯಂ ಕಟ್ಟಿ ಹೆಟ್ಟವೆಳಸುವೆ ಬಟ್ಟಬಯಲೊಳು (ಹಪಕಾ. ೬-೦೩). [ಪೆಟ್ಟ (< ಪೆಂಟ್ಟೆ$_1$) + < ಎಟ್ಟಿಸು]

ಪೆಟ್ಟಮೆಟ್, ಪೆಟ್ಟವೆಟ್ (ಕ್ರಿ). ೧. ಹೆಂಟೆ ಒಡೆಯುವ ದಿಮ್ಮಿಗೆ ಕಟ್ಟಿ ಎಳೆ; ೨ ಇದನ್ನು ಅಪರಾಧಕ್ಕೆ ಶಿಕ್ಷೆಯಾಗಿ ಪ್ರಯೋಗಿಸುತ್ತಿದ್ದರು: ಪಿಡಿ ಪಿಡಿ ಕಟ್ಟು ಪೆಟ್ಟಮೆಟ್ ಕೋಲುಗಿ (ಪರ್ಯಮಾ. ೩-೨೮); ಈ ಪುಸಿವನಂ ಕುಸಿಯೊತ್ತಿ ಬಟ್ಟೆಯೊಳ್ ಪೆಟ್ಟಮೆಟ್‌ದು ಬಳಸಿದ ದಸಿಯೊಳ್ತೆಗೆಯಿಂ (ಸುಳುಮಾ. ೭-೩ ಪ). ಪೆಟ್ಟವೆಟ್: ೨. (ಆಲಂ) ನೆಲಸಮಂ ಮಾಡು; ನಾಶಮಾಡು. ೧, ೨: ಮೂವತ್ತಾಱುಂ ಗುಣದಿಂ ಭಾವಜನಂ ಕಟ್ಟಿ ಪೆಟ್ಟವೆಟ್ [ಪಾಠಾಂ. ಪಟ್ಟವೆಟ್, ಪೆಟ್ಟವೇಳ] ದರ್ ವೃಷದಿಂ (ಪಂಠಾಮಾ. ೧-೦೯). [ಪೆಟ್ಟ (< ಪೆಂಟ್ಟೆ$_1$) + ಎಟ್ಟ$_1$]

ಪೆಟ್ಟಯ, ಪೆಟ್ಟಿಯ (ನಾ). ಪೆಟ್ಟಿಗೆ; ಸಂದೂಕ: "ಪೇಟಾ, ಮಂಜೂಷಾ—ಈ ೨ ಪೆಟ್ಟಯಂ" (ಪಲಾಯು. ೩೨-೦೩೭). ಪೆಟ್ಟಿಯ: "ಪೆಟ್ಟಿಗೆ(ಯ)—ಪೇಟಿಕ (ಪಿಟಕ)" (ತದ್ಭಕೋ. ೨೭). [< ಪ್ರಾ. ಪೇಡಿಆ./ತಮಿ. ಮಲ. ಪೆಟ್ಟಕಮ್; ತೆಲು. ಪೆಟ್ಟಿಯ; ಪರ್ಜಿ. ಪೆಟಿಯ]

ಪೆಟ್ಟಲು 'ಪೆಟಲ್' ನೋ.

ಪೆಟ್ಟವೆಟ್ 'ಪೆಟ್ಟಮೆಟ್' ನೋ.

ಪೆಟ್ಟಾರಿ 'ಪಿಟಾರಿ' ನೋ.

ಪೆಟ್ಟಿ$_1$ 'ಪೆಂಟ್ಟೆ$_1$' ನೋ.

ಪೆಟ್ಟಿ$_2$ (ನಾ). ಒಂದು ಬಗೆಯ ಪಕ್ಷಿ: ಪರಡೆ ಪಸುಂಬಂ ಮೈನಂ ಎರಳೆ ನವಿಲ್ಕಾಗೆ ಪೆಟ್ಟಿ ಪೋದಗೆ ಕರಭಂ ಶರಕಮಿವು ಪೋಗೆ ಶಾರುಂ ಬರೆಯೆಡಕೆಯಂದೂರೊಳೊಳ್ಪುಂ (ಲೋಕೋಪ. ೦೨-೦೭).

[ದೇ. ॥ ತೆಲು. ಕೋಲಾ. ಪಿಟ್ಟ; ಗೊಂಡಿ. ಪಿಟೆ, ಪಿಟ್ಟೆ, ಪಿಟ್ಟೇ]

ಪೆಟ್ಟಿ$_3$, ಪೆಂಟ್ಟೆ$_4$, ಪೆಟ್ಟೆ$_2$ (ನಾ). ೧. = ಪೆಟ್ಟಯ: ಮುಱಿತಂದ ಪೆಟ್ಟಿ[ಪಾಠಾಂ. ಪಚ್ಚೆ]ಯಂ . . . ಎನುತ ಸಖಿಯರು ನೆರೆದು ಪೆಟ್ಟಿಗೆಗಳು ಮನೊಡೆದು (ಪಂಠರ. ೦೩-೬೩); ಚಂದ್ರಾನನೆ ತೊಡವಿನ ಪೆಟ್ಟಿಯ ನಾನಂದದಿನೀಯಲ್ (ದಶಕು. ೬-೦೦೪); ಅವರ ಕನಸಿನೊಳು ಶಂಕರ ನಿರಿಸಲಾ ಪುಸ್ತುಕವನೆದ್ದು ಪೆಟ್ಟಿಯೊಳ್ಕಂಡು (ವೀಕ್ಕೃಪು. ೭-೦೭-೬). ೨. (ಹಾವುಗಳನ್ನಿಡುವ, ಬಿದಿರಿನಿಂದ ಮಾಡಿದ) ಬುಟ್ಟಿ; ಹೇಳಿಗೆ: ಪಾವುಗಳಿಗಾದೊಡಂ ಸುಖವುಂಟೆ . . . ಜೋಗಿಗಳು ಮಂತ್ರದಿಂ ಪಿಡಿದು ಪೆಟ್ಟಿಯೊಳು ಮುದುಡಿ ತುಂಬಿ (ವೀಕ್ಕೃಪು. ೪-೨೩-೬೦). ೩. ಭರಣಿ; ಕರಂಡ: ಅಲ್ಲಿರ್ದ ಪೆಟ್ಟಿಯೊಳಗಣ ಸಲ್ಲಲಿತಕ್ರಮುಕಪತ್ರಕರ್ಪೂರಮನಾಂ ಬಲ್ಲನಿತಂ ಕೊಂಡು (ದಶಕು. ೬-೩೦೩). ಪೆಂಟ್ಟೆ$_4$: ೪. ಧಾನ್ಯಗಳನ್ನು ತುಂಬುವ ಗಳಗೆ; ತೊಂಬೆ; ಮೂಡೆ: ಧಾನ್ಯವನ್ನು ಪೆಂಟೆಯಲ್ಲಿಟ್ಟರೆ ಹುಳು ಬೀಳುವುದಿಲ್ಲ (ಕೂಡಿ). ಪೆಟ್ಟೆ$_2$: ೧. ಪರಿಪರಿಯ ವಸ್ತುಗಳಂ ತುಂಬಿರುವ ಪೆಟ್ಟಿಗಳ ಪೆಸರ ದುಕೂಲಗಳ ಪಿಂಡಿಗಳ್ (ಭಕ್ತಿಸ. ೪-೩೭-೩). ೪. ಹಗ ಪೆಟ್ಟಿ ಕಣಜದೊಳಿಹ ಬಹುಧಾನ್ಯವ ಬಗೆಯದೆ ಸೂಱೆಯ ಕೊಟ್ಟು . . . ಜನವಂಜಿ ಜಗುಳಿದರು (ಕುಪಪಿ. ೦೦-೪೮).

[< ಸಂ. ಪೇಟೀ./ತಮಿ. ಪೆಟ್ಟಿ, ಪೊಟ್ಟಿ; ಮಲ. ಪೆಟ್ಟಿ; ಕೊಡ. ಪೊಟ್ಟಿ; ತೆಲು. ಪೆಟ್ಟೆ]

ಪೆಟ್ಟಿಕಾಳಿ (ನಾ). ಪೆಟ್ಟಿಗೆಗಳ ಸಾಲು.—ಪಂಕ್ತಿ: ಮುಂದೆ ಸುವರ್ಣದ ಪೆಟ್ಟಿಕಾಳಿಯಗ್ಗಳಿಸಿ ಬರುತ್ತಮಿರೆ (ಪಂಠರ. ೦೩ ಸೂಪಪ).

[< ಸಂ. ಪೇಟಿಕಾಲಿ]

ಪೆಟ್ಟಿಕ್ಕು (ಕ್ರಿ). ಏಟು ಕೊಡು; ಹೊಡೆ; ಬಡಿ: ನೆತ್ತಿಯನು ನೀರ್ವಿಂದಿಗೆಯೊಳು ಟೊಂಗುಟೊಂಗೆನಲ್ಪೆಟ್ಟಿಕ್ಕಿ (ಪುದೇಪು. ೨೩-೩೦).

[ಪೆಟ್ಟು$_2$ + ಇಕ್ಕು]

ಪೆಟ್ಟಿಗೆ, ಪೆಡಗೆ, ಪೆಡಿಗೆ, ಪೇಳಿಗೆ, ಪೇಳ್ಗೆ, ಹೆಡಗೆ, ಹೆಡಿಗೆ, ಹೇಳಿಗೆ (ನಾ). ೧. (ವಸ್ತುಗಳನ್ನು ತುಂಬಿಡಲು ಮಾಡಿದ, ಲೋಹ ಅಥವಾ ಮರದ) ಸಂದೂಕ: ಪೇಟಿಕಾ—ಪೆಟ್ಟಿಗೆ (ಕಮಪ. ೨೩೩ ಪ್ರಯೋ);

ಪೆಟ್ಟಿಗೆಯೊಳಗಿನ ಅಷ್ಟಾಭರಣ ನೀನೆ (ಪುರಂದ. ೦-೧೪೬-೦); ನನ್ನ ಬಳಿಯಲ್ಲಿ ಒಂದು ಇಂಥಾ ದೊಡ್ಡ ಪೆಟ್ಟಿಗೆಯುಂಟು (ಮುಂಬಯಿ. ೪-೧೭೮). ೨. ಭರಣಿ; ಕರಂಡಕ: ಸಾದಿನ ಪೆಟ್ಟಿಗೆಗಳ ಮೃಗಮದದ ಕೊಂಬುಗಳ (ಗಿರಿಕ. ೧೦-೭೯ ಪ); ಸಾರಪರಿಮಳವಸ್ತುಗಳ ಬಲುಭಾರಣೆಯ ಪೆಟ್ಟಿಗೆಗಳೊಟ್ಟಿತು (ಕುಷ್ಠಾಲ. ೦೭-೨೮); ಬಾರಿಸಿದ ಬಲು ಹೊಱೆಯ ಬಂಡಿಗಳೋರಣಿಸಿದವು ಪಯಣದಲಿ ಕರ್ಪೂರ ಕಸ್ತುರಿ ಕುಂಕುಮದ ಪೆಟ್ಟಿಗೆಯ ಸಾಲಿನಲಿ (ಕೊರರಾ. ೦-೬-೩). ಪೆಡಗೆ: ೩. (ದೊಡ್ಡ) ಕುಕ್ಕೆ; ಗೂಡೆ: ಪೊಱಗೊಂದು ಪೆ[ಶಾಕಾಂ. ಹೆ]ಡಗೆ ಮಣ್ಣಂ ನೆಱೆ ಶೌಚಂಗೆಯ್ವರೊಳಗೆ ಪಲತೆಱದಡಗಂ ತುಱುಕುವರಿಂತುಟು ಶೌಚದ ತೆಱಂ (ಸಮಪ. ೧೪-೦೫೦); ಪರದರ ಪುತ್ರಿಗೆತ್ತಣದೊ ವೀಣೆಯ ಜಾಣಱಿವಂತು ಬಳ್ಳವೊ ಪರಿಕಿಸೆ ಮಾನವೋ ಪೆಡಗೆಯೋ (ಮಹಾಪೇ. ೪-೦೦೨); ಮತ್ತೊಂದುದಿವಸಂ ಪೆಡಗೆಯೊಳೆಳ್ಳಂ ತುಂಬಿ ಆವ ಮಾನದೊಳಳದುಕೊಂಡಪರಾ ಮಾನದೊಳೆಣ್ಣೆಯನಳದು ಮಗುಟ್ಟಟ್ಟುವುದೆನಲ್ (ಪುಷ್ಪಾಸ್ರ. ೩-೩೦ ಪ). ಪೆಡಿಗೆ: ೩. ಸಕಲಪುಷ್ಪಂಗಳಂ ಪೆಡಿಗೆಯೊಳುಮುಲ್ಲಾಸದಿಂ ತುಂಬಿ . . . ಕಳುಪಿದಳು (ಪ್ರಶುಪು. ೩-೯೩). ಪೇಳಿಗೆ: ೧. ಭೂಷಣಾದಿಗಳಂ ಪೇಳಿಗೆವೆರಸಿ ತೋರ್ಪ ಭಂಡಾರಿಗನೆನಿಸಿದನಮರನಜರನಾಸ್ಥಾಯಿಕೆಯೊಳ್ (ಶಾಂತಿಪು. ೦೦-೦೭೨); ದೇವಶರ್ಮಂ ತನಗೆ ತಕ್ಕನಿತು ದ್ರವ್ಯಮಂ ದಾನಂಗೆಯ್ಯಲ್ವೇಟ್ಟುಮೆಂದು ದೇವರ ಪೇಳಿಗೆಯೊಳಿಕ್ಕಿ (ಪಂಚತಂ. ೭೦-೦೬); ಪಳಿಕಂ, ಪೇಳಿಗೆ . . . ಪುಳಂ— ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುಳಂಗಳಾದುವು (ಶಮಾ. ೨೨ ಸೂತ್ರ). ೨. ಮಗಮಗಿಪ ಬಹುವಿಧಪರಿಮಳದ್ರವ್ಯಂಗಳ ಪೇಳಿಗೆಗಳಿಂದೆಯುಂ . . . ಸೊಗಯಿಸುತಿರ್ಪುದು (ಮುಂಡ. ೭-೬ ಪ). ೪. (ಹೂಳುವುದಕ್ಕೆ ಮುಂಚೆ) ಹೆಣವನ್ನಿಡುವ ಪೆಟ್ಟಿಗೆ: ಒಡಲ ಪೇಳಿಗೆಯಲಿ ಒಪ್ಪ ಮಾಡಲು ಇಲ್ಲ (ಇಂಗೀತ. ೦೯-೯). ೫. (ಹಾವುಗಳನ್ನಿಡುವ) ಬಿದಿರಿನಿಂದ ಮಾಡಿದ ಬುಟ್ಟಿ: "ಪೇಟಿಕೆ ಪೇಳಿಗೆ" (ಪತುನಿ. ೦೩); ಪಾವಿನ ಪೇಳಿಗೆಯಂ ಬಿಟ್ಟು ನೋಡಿದ ಮರ್ಕಟನಂತೆ (ಪಂಚತಂ. ೬೫-೬); ಫಣಿವಲ್ಲಿಯ ಪೇಳಿಗೆಯುಮೆನಿಸಿದ ದೇವರಮಣೋದ್ಯಾನಮಂ . . . ಪುಗುತರ್ಪಾಗಳ್ (ಶಾಂತೀಶ್ವ. ೦೦-೭೮ ಪ); ಪೇಳಿಗೆಯ ಪಾವಿನೊಂದು ಮಾಟಕ್ಕೆಯಿಂ ತಡೆಗಟ್ಟುವಟ್ಟರಾಗಿ ಮರಳ್ದು (ರಾಮಾಶ್ವ. ೬೭-೯). ಪೇಳ್ಗೆ: ೫. ವಿಟರೆರ್ದೆವಾವುಗಳ್ಗಿಟ್ಟ ಪೇಳ್ಗೆ (ಶಾಸ್ತ್ರದೇ. ೫-೨೦). ಹೆಡಗೆ: ೩. ಒಂದು ಬೀಜವ ಬಿತ್ತಿದಡೆ ಮೂಱು ಫಲವಾಯಿತ್ತು . . . ಹೆಡಗೆಗೆ ಅಳವಡಿಸುವಾಗ ಐವತ್ತೊಂದು ಕೊಳಗವಾಯಿತ್ತು (ಪೋಳಿಮಾ. ೨೦೭-೭೭೦); ಮಾಱುವ ಹೆಡಗೆಯ ಹಣ್ಣು ಹುಪಲ್ ಬಾಡುಕಾಯ್ಗೆ . . . ಕೊಟ್ಟರ್ (ಎಇ. V. ೨೦-೬೯; 1161); ಒಂದು ಹೆಡಗೆಯ ಬತ್ತವಂ ಭರದಿಂದ ಕಳುಹಲು (ಬಸಪು. ೨೩-೭). ಹೆಡಿಗೆ: ೩. ಹಿಕ್ಕೆಯ ಹೆಡಿಗೆಯ ಬಿಟ್ಟು... ಮುಂದಕೆ ನಡೆತರಲು (ಅಪಕಂ. ೩೦೦-೯); ಮಾಱ ಬಂದ ಹಣ್ಣು ಹೆಡಿಗೆ ಸೂಱೆಗೊಂಬ (ಪುರಂದ. ೦-೧೦೯-೯); ಹಿಂಡಿಯ ಹೆಡಿಗೆಗೆ ಕೋಣನೆ ತಂದು (ಸರ್ವಜ್ಞ. ೦೬೬೫). ಹೇಳಿಗೆ: ೫. "ಸರ್ಪಪರ್ಯಂಕಮೆನೆ ಹೇಳಿಗೆ" (ಮಂಗರಾ. ೧೦೫-೬); ಮನವೇ ಸರ್ಪ ತನುವೇ ಹೇಳಿಗೆ (ಬಸವ. ೦೬೦); ರವಿಕುಲದ ವೈರಿಗಳ ಶುಭಕೀರ್ತಿಶಶಿಯಂ ಪಿಡಿವ ರಾಹುವಿಪ್ಪ ಹೇಳಿಗೆಯೊ (ಹಡಕಾ. ೦-೩೬); ಹೇಳಿಗೆಯ ಮುಚ್ಚುಳ ಜಾಱಿಸಿದ ಫಣಿಯಂತೆ ಭುಲ್ಲವಿಸಿತ್ತು ಕುರುಸೇನೆ (ಕುಷ್ಠಾಕ. ೨೩-೩೮). [< ಸಂ. ಪೇಟಿಕಾ. / ತುಳು. ಪೆಟ್ಟಿಗೆ]

ಪೆಟ್ಟಿಗೆಗಾಡಿ (ನಾ). ಮುಂಚ್ಚುವ ಮರದ ಬಾಗಿಲುಗಳುಳ್ಳ ಗಾಡಿ,— ಬಂಡಿ: ಸಾರೆಟ್, ಬಗ್ಗಿ, ಪೆಟ್ಟಿಗೆಗಾಡಿ ಮುಂತಾದ್ದು ಕಲಶಕುಚ್ಚಿನ ಗೆಜ್ಜೆ ತೇರಿಗೂ ಹೆಸರು (ಸಿದ್ಧಾಂತಿ. ೨೫೨); ಘೋಷಾಪದ್ಧತಿಯಿರುವ ಕೆಲವರು ಹಿಂದೆ ಪೆಟ್ಟಿಗೆಗಾಡಿಗಳಲ್ಲಿ ಹೋಗುತ್ತಿದ್ದರು (ಕೊಡಿ). [ಪೆಟ್ಟಿಗೆ + ಗಾಡಿ₃]

ಪೆಟ್ಟಿಗೆಬಂಡಿ (ನಾ). = ಪೆಟ್ಟಿಗೆಗಾಡಿ: ಪೆಟ್ಟಿಗೆಬಂಡಿಗಳು ೪. ಚಕ್ಕಡಾ ಬಂಡಿಗಳು ೫೦ ((ಗುರುದ. ೦೦). [ಪೆಟ್ಟಿಗೆ + ಬಂಡಿ₁]

ಪೆಟ್ಟಿಯ 'ಪೆಟ್ಟಿಯಂ' ನೋ.

ಪೆಟ್ಟಿಲು (ನಾ). (?): ಯೆರಡು ಮುಡಿ ತಾಡೆ ಪೆಟ್ಟಿಲ ಭೂಮಿಯಿಂದ (ಸೌಇಎ. ೦೯೩೦, ಮಂಗಳೂರು. ೫೨೬-೨೨; 1375). [?]

ಪೆಟ್ಟಿಸು, ಹೆಟ್ಟಿಸು (ಕ್ರಿ). ೧. (ನಾಣ್ಯವನ್ನು) ಮುದ್ರಿಸು,— ತಟ್ಟಿಸು: ಸೇದಿರಾಜನು ಸೂಕರನಂಗ ಸುವರ್ಣವಾಗಲು ಕಂಡು ಹೊನ್ನ ಪೆಟ್ಟಿಸಿ [ಶಾಕಾಂ. ಘಟ್ಟಿಸಿ, ಪುಟ್ಟಿಸಿ] ವರಹನೆಂದು ಪೆಸರಿಟ್ಟು (ಶೃಕಸೂ. I, ೨೩೬); ಈ ನಾಣ್ಯಗಳಲ್ಲಿ ಪರದೇಶದಿಂದ ಇಲ್ಲಿಗೆ ಬಂದ ಮತ್ತು ನಮ್ಮ ದೇಶದಲ್ಲಿಯೇ ಪೆಟ್ಟಿಸಿದ ನಾಣ್ಯಗಳೆರಡೂ ಸೇರಿವೆ (ಪ್ರಶಾಇ. I, XI ಪ್ರಸ್ತಾವನೆ). ಹೆಟ್ಟಿಸು: ೨. ತಿವಿಸು: ಚುಚ್ಚಿಸಂ: ಕಂಡವರ ಕೈಯಲ್ಲಿ ಎದೆಯ ಹೆಟ್ಟಿಸಿಕೊಂಬಂತೆ (ಕೋರಿಶಾಂ. ಕ. ೦೯-೬೨). [ಪೆಟ್ಟು₁ + — ಇಸು₃]

ಪೆಟ್ಟು₁, ಹೆಟ್ಟು (ಕ್ರಿ). ೧. (ಕೈ, ದೊಣ್ಣೆ, ಸುತ್ತಿಗೆ ಮುಂತಾದುವುಗಳಿಂದ) ಹೊಡೆ,— ಬಡಿ: ಗುಡಿಯನೆತ್ತುವರಂತೆ ಗೂಂಟಮಂ ಪೆಟ್ಟುವರ್ (ಧರ್ಮಾಮ್ಯ. ೩-೭೩); ತೊಲೆಯಂ ಹೇಱೆ ಕಬ್ಬುನವ ಪೆಟ್ಟಿ ಸಂಕಲೆಗೆಯ್ದು (ಸಿದ್ಧೇಪು. ೧೯-೪೭); ಕುದುರೆಯ ಗೂಟವನ್ನು ನೆಲದ ಮೇಲೆ ಇರಿಸಿ ಗಟ್ಟಿಯಾಗಿ ಪೆಟ್ಟಿದನು (ಪತ್ರಶಾ. ೦೧). ೨. ಚುಚ್ಚು; ಇರಿ: ನಾಟುವಂತೆ ಮಾಡು: ಸಂದುಸಂದುಗಳೊಳ್ ಸೂಜಿಯುಂ ಪೆಟ್ಟಿಯುಂ (ಧರ್ಮಾಮ್ಯ. ೩-೭೩); ಒಣಗಿದ ಮರದ ಮೊನೆಯ ಕೊಂಬಂ ತಂದು ಮುನೀಶ್ವರನ ಜಂಘೆಯೊಳ್ ಪೆಟ್ಟುವುದುಂ (ಪುಷ್ಪಾಸ್ರ. ೩-೬೫ ಪ). ೩. (ನಾಣ್ಯವನ್ನು) ಮುದ್ರಿಸು: ಪೆಟ್ಟೆಂಬ ನುಡಿ ಟಂಕದೊಳಗೆ... ಅಲ್ಲದೆ ಬೇಱೆ ದಿಟ್ಟಿಸಲಾ ನಾಡೊಳಿಲ್ಲ (ಕಂಪಪಿ. ೨-೦೫). 'ಪೆಟ್ಟಿಸು' ಪರಾ. ೪. ಸಂಭೋಗಿಸು: (ಕಿ). ಹೆಟ್ಟು: ೨. ಹೆಟ್ಟಿ ಮರ್ಮದಲ್ಲಿ ಲೋಹಜಾದಿರಸವನೆಱೆದು ಸುಡುವರೆಯ್ದೆ (ಸಾವಂತ. ೬-೦೯೪); ಅಟ್ಟಿ ಬಹ ವಾಸವನ ಕೊಂತದಿ ಹೆಟ್ಟಿದನು (ಅಂಬಿಕಾ. ೨೨-೦೨); ಬೇಗ ಬೇಗ ಹೆಜ್ಜೆ ಇಡುವ ಅಂದರೆ ಮುಳ್ಳು ಹೆಟ್ಟಿದ ನೋವು (ಪದ್ಮಸ. ೬೪). ೪. (ಕಿ). ೫. ಬಲವಂತದಿಂದ ಒಳಸೇರಿಸು; ತುರುಕು: ಕೆಡಹಲರಿದೀ ಖಳನನೆನೆ ಕೇಳ್ದೊಡನೆ ರಾಘವ ಕಡಿದು ಬಸುಱೊಳು ತಲೆಯ ಹೆಟ್ಟಿದನು (ಕೌಕಿರಾ. ೫-೩೦); ಅಗುಳು ನುಂಗಲಿಕ್ಕೆ ತೀರದವನ ಬಾಯಲ್ಲಿ ಕಡುಬು ಹೆಟ್ಟಿದ (ಗಾರ). ೬. ಮುಷ್ಟಿಯಿಂದ ಕುಟ್ಟು; ಗುದ್ದು: ಮಕ್ಕಳ ಮಂಡೆ ಬೋರೆಹೋಹಂದದಿ ಹೆಟ್ಟಿ (ಪೇಲುಸಂ. ೧೫-೦೦೭); ನೊಸಲೊಡೆವಂತೆ ಹೆಟ್ಟಿದ ವಜ್ರಮುಷ್ಟಿಯಲಿ (ಮೋಹತ. ೦೨-೮೮); ನೆತ್ತಿಯ ಮೇಲೆ ಹೆಟ್ಟಿ ನೀನುದಕಮಂ ತಂದೀವುದೆನೆ (ಗುರುಣಾ. ೫-೬೫).

[ದೇ.ಪ ತೆಲು. ಪೆಟ್ಟು; ಕೋತ. ಪೆಟ್]

ಪೆಟ್ಟು₂ (ನಾ). ೧. ಏಟು; ಹೊಡೆತ; ಪ್ರಹಾರ: ಪೆಟ್ಟನಿಕ್ಕನೆ ಪ್ರಲಂಬಾಸುರನ ಬಾಳಹರಣಗಳೌಂಕಿ ಮಿಗೆ ಕೂಸಾಟದಿ (ಮುರೇಪು. ೦೯-೦೨); ಸಾಯದರಿಲ್ಲ ಖಂಡೆಯದ ಪೆಟ್ಟಲಿ (ಕಂಪಪಿ. ೦೫-೪೮); ನಿಪುಣಿಕೆಯ ಕಠೋರಧಿಕ್ಕಾರವಾಕ್ಯಗಳ ಪೆಟ್ಟನ್ನು ಕ್ಷಣಕಾಲವೂ ಮರೆಯಲಾಗಲಿಲ್ಲ (ಬಾಣಲ. ೩೦೨). ೨. (ಆಲಂ) ನೋವು; ಅಳಲು; ವ್ಯಥೆ: ನೀವು ಪೆಟ್ಟನ್ನು ಅನುಭವಿಸಿದ್ದು ನನಗೆ ತುಂಬಾ ದುಃಖದ ಸಂಗತಿಯಾಗಿದೆ (ರಂಗಕೋ. ೦೦).

[< ಪೆಟ್ಟು₁. / ತುಳು. ಕೊಡ. ಕೋಲಾ. ಪೆಟ್; ತೆಲು. ಪೆಟ್ಟು]

ಪೆಟ್ಟು₃ (ನಾ). ೧. ಸಾಹಸ; ಪರಾಕ್ರಮ: "ದಪ್ಪ ಪೆಟ್ಟದಟಾರ್ಪು ಸಾಸ ಪೆರ್ಚುಬ್ಬಟೆಯದಪ್ಪುದು" (ಕಬ್ಬಮಂ. ೩೮); "ಪನ್ನತಿಕೆ ಪೆಟ್ಟು . . . ಅಣ್ಮೆಂದೆನ್ನಲ್ ಪರಾಕ್ರಮಾಖ್ಯಂ" (ಕಲಿಕಂ. ೦೨೫). ೨. ಸೊಕ್ಕು; ಗರ್ವ: "ಅದಟು ದಪ್ಪಂ ಪೆಟ್ಟು[ಶಾಕಾಂ. ಪೆಂಪು] ಪೆರ್ಚೆಂದು ಗರ್ವಮಪ್ಪುದು" (ಕಬ್ಬಕ್ಕೆ. ೬೫). 'ಪೆಟ್ಟುವೆರ್ಚು₁' ಪರಾ.

ಪೆಟ್ಟುಗೆ, ಹೆಟ್ಟಗೆ, ಹೆಟ್ಟಿಗೆ$_1$, ಹೆಟ್ಟುಗೆ (ನಾ). ೧. ಹೆಂಡತಿ ; ಪತ್ನಿ : ಜೆಟ್ಟಿಗ ಕಾಳಿಮಯಂಗಂ ಪೆ[ಟ್ಟು]ಗೆ ಶುಚಿ ಮಾರಕಬ್ಬೆಗಂ . . . ಪುಟ್ಟಿದ ನೊಳ್ಗಣ್ಡನೆನಿಸಿ ತಿಪ್ಪಗವುಂಣ್ಡ (ಕಾ. I, ೨೯-೨೭ ; 1148). **ಹೆಟ್ಟಗೆ** : ೨. ಹೆಂಗಸು ; ಸ್ತ್ರೀ : ಜಗದೊಳಿನ್ನಾವ ಹೆಟ್ಟಗೆ ಪಡೆದಳೊ (ಪಂಕಾರಾ. ೬-೯-೯). **ಹೆಟ್ಟಿಗೆ$_1$** : ೧. ಭೂಪಾಲರೆಲ್ಲರು . . . ಹೆಟ್ಟಿಗೆಯರ ಹಂಗು ಬಿಟ್ಟೋಡಿ ಭೀಕರಡವಿಯ . . . ಹೊಕ್ಕು (ಶೈರವೇ. ೦-೨೪೦). ೨. ಹೆಟ್ಟಿಗೆಯರಮಳ ಶಶಿಮೊಗದ ಬೆಳಗಿಂದೆ ಪೊರಮಟ್ಟು ಬರುತಿರ್ವರು (ಪಪಮೋ. ೦೦-೨೭). **ಹೆಟ್ಟುಗೆ** : ೧. ಹೆಟ್ಟುಗೆಗೆ ಗುಜ್ಜುಗರೆದುದು ಮೆಟ್ಟುವ ಮೆಲ್ನಡೆ (ಅಪಂಪು. ೦೨-೭೫) ; ಹೆಟ್ಟುಗೆಗೆ ಪೇಟ್ಟ ಮಾತಂ ಪೊಟ್ಟೆಯ ಶಿಶು ಕೇಳ್ದುದೆಂಬುದಿದು ವಿಪರೀತಂ(ರರ್ಮಾಪ. ೭-೯). ೨. "ಹೆಟ್ಟುಗೆಯೆಂದು ವನಿತೆ" (ಕಪಾ.೬೨-೩೮೯); ಹೆಟ್ಟುಗೆಯರೆಲ್ಲ ಮೂದಲಿಸಿ ಮುಮ್ಮೊಳಿಗೊಂಡು (ಹಪಕಾ. ೩-೫೦) ; ಅಜಂ ಕಪ್ಪಿನ ನಲ್ಬೊಟ್ಟಿಟ್ಟಂತೆವೊಲಂತಾ ಹೆಟ್ಟುಗೆಯ ಕನೀನಿಕಂಗಳ್ (ಉಪ್ಪಟ. ೬-೦೦೮). ೩. ಗೆಳತಿ ; ಸಖಿ : "ಗೆಳತಿ ಹೆಟ್ಟುಗೆ ಸಖಿಗೆ ತೋರ್ಪ ನಾಮಂ" (ಕಬ್ಬಿಗೆ. ೨೮) ; "ಗೆಳತಿ ಹೆಟ್ಟುಗೆಯೆನಲ್ ಸಖಿ" (ಕಬ್ಬಿಮಂ. ೬೫). ೪. ಕನ್ಯೆ : ಹೆಟ್ಟುಗೆಗೆ ಶಿವಯೋಗರಾಜ್ಯದ ಪಟ್ಟಗಟ್ಟುವರಂತೆ ನೊಸಲಿನೊಳಿಟ್ಟರಮಲವಿಭೂತಿಯನು . . . ಸುಮತಿ ನಿರ್ಮಳರು (ಶ್ರಮಂಕ. ೯-೩). ೫. ಹೆಣ್ಣುಮಗಂ.—ಕೂಸು : ಪುತ್ರನನು ಬೇಡಿದೊಡೆ ದೇವತೆಯಿತ್ತಳೇ ಹೆಟ್ಟುಗೆಯನು (ಸಾಳ್ವಭಾ. ೨೦-೨೦).

ಪೆಟ್ಟುಮಣೆ, ಪೆಟ್ಟೆಮಣೆ (ನಾ). ೧. = ಪೆಟ್ಟಣಿಗೆ : (ಕಿ). **ಪೆಟ್ಟೆಮಣೆ** : ೨. (ರಥದ) ಚಕ್ರಗಳ ವೇಗವನ್ನು ತಡೆಯುವ ಒಂದು ಬಗೆಯ ಸಾಧನ ; ಗೊದಮ : ಅವನ ಆತುರತೆಯ ತೇರಿನ ಗಾಲಿಗೆ ಬಲವಾದ ಪೆಟ್ಟೆಮಣೆ ಹಾಕಿದಂತಾಗಿತ್ತು ಹೆಂಡತಿಯ ಹೇಳಿಕೆ (ಮಲೆಮ. ೨೯೯). [ಪೆಟ್ಟು$_1$ + ಮಣೆ]

ಪೆಟ್ಟುವೆರ್ಚು$_1$ (ಕ್ರಿ). ೧. ಅಹಂಕಾರಪಡು ; ಗರ್ವಿಸು ; ಸೊಕ್ಕು : "ಪೆಟ್ಟುವೆರ್ಚು (ಪೆಟ್ಟುವೆರ್ಚು) — ದರ್ಪೇ (ಗರ್ವಪಡು), (ಬೆಟ್ಟುವೆರ್ಚು)" (ಕಮಧಾ) : ಮರಗಳೆ ಮುನ್ನಿತ್ತಿನಿಸಂ ಮರವಟ್ಟವು ಪೆಟ್ಟುವೆರ್ಚಿ ಕುದಿದಿತ್ತೊಡವಿಾ ಧರಣಿತಲಕ್ಕವಿವೇಕಿಯಮರವಾನಸನೀವ ಚಾಗಮೇಂ ನಿಮಿರ್ದಪುದೇ (ಅದಿಪು. ೬-೫೦) ; ಪೆಟ್ಟುವೆರ್ಚಿ ಕಡುವೆಸನಂ ಮಾಟ್ಟಿ ಸೊಸೆ ಮಾವನೆ ಮಂಡೆಯಂ ಬೋಟಿಸಿದಳೆಂಬಂತೆ (ರರ್ಮಾಪ್ಕು. ೬-೫೯). ೨. ದೊಡ್ಡದಾಗು ; ಉಬ್ಬು : ಬೆಂದ ಮುತ್ತುಗಳಂತೆ ಪೆಟ್ಟುವೆರ್ಚದೆ (ರರ್ಮಾಪ್ಕು. ೦೦-೩೭). [ಪೆಟ್ಟು$_3$ + ಪೆರ್ಚು$_1$]

ಪೆಟ್ಟುವೆರ್ಚು$_2$ (ನಾ). ಅತ್ಯಧಿಕವಾದ ಸಾಹಸ,—ಕೆಚ್ಚು : "ಪನ್ನತಿಕೆ, ಪೆಟ್ಟುವೆರ್ಚು, ತಕ್ಕು . . . ಅಣ್ಮು— ಈ ೮ ಪರಾಕ್ರಮಂ" (ಕಪಸಾ. ೫೯-೩೬೩). [ಪೆಟ್ಟು$_3$ + ಪೆರ್ಚು$_2$]

ಪೆಟ್ಟೆ$_1$ 'ಪೆಂಟೆ$_1$' ನೋ.

ಪೆಟ್ಟೆ$_2$ 'ಪೆಟ್ಟೆ$_3$' ನೋ.

ಪೆಟ್ಟೆಮಣೆ 'ಪೆಟ್ಟುಮಣೆ' ನೋ.

ಪೆಟ್ರೋಮ್ಯಾಕ್ಸ್ (ನಾ). ಸೀಮೆಎಣ್ಣೆಯ ಸಹಾಯದಿಂದ (ಉಜ್ವಲವಾಗಿ) ಉರಿಯುವ ದೀಪ : ಪೆಟ್ರೋಮ್ಯಾಕ್ಸ ಹಚ್ಚಿಸಿ ತರಿಸಲಾಯಿತು (ತುಂಬಿಕೊ. ೯೩). [← ಇಂ. Petro + ?]

ಪೆಟ್ರೋಲ್ 'ಪೆಟ್ರೋಲು' ನೋ.

ಪೆಟ್ರೋಲಿಯಂ (ನಾ). ಒಂದು ಬಗೆಯ ಖನಿಜತೈಲ : ಕರೆಯು ಹೋಗದಿದ್ದರೆ . . . ಬಿಳಿ ಪೆಟ್ರೋಲಿಯಂ ಅಥವಾ ಬೆನ್‌ಝಿನ್ ಉಪಯೋಗಿಸಿ ಎಣ್ಣೆ ಜಿಡ್ಡನ್ನು ತೆಗೆಯಬಹುದು (ಗೃಹವಿ. ೯೦). [←ಇಂ. Petroleum]

ಪೆಟ್ರೋಲು, ಪೆಟ್ರೋಲ್ (ನಾ). (ಮೋಟಾರು ಮುಂತಾದ ಸ್ವಯಂ ಚಾಲಿತ ವಾಹನಗಳಿಗೆ ಉಪಯೋಗಿಸುವ) ಶುದ್ಧೀಕರಿಸಿದ ಪೆಟ್ರೋಲಿಯಂ ಎಣ್ಣೆ ; ಕಲ್ಲೆಣ್ಣೆ : ಪೆಟ್ರೋಲು ತುಂಬಿಸಿಕೊಳ್ಳುವುದಕ್ಕಾಗಿ ಧಾರವಾಡದಲ್ಲಿ ಮೋಟಾರು ನಿಂತುಕೊಂಡಿದ್ದಾಗ ಆಕೆಯ ಚಿತ್ತ ಹೊಯ್ದಾಡತೊಡಗಿದ್ದಿತು (ಮೋಹವಿ. ೪೨೬) ; ಹುರಿದ ಬಿತ್ತವನೆತ್ತಿ ಚೆಲ್ಲಿ . . . ಪೆಟ್ರೋಲ ಸುರಿದೆಲೆಲೆ ಗಿಡವಾಗಿ ನಳನಳಿಸಿ ಬೆಳೆ ಮರವಾಗಿ ಎನುವ ಗೆಳೆಯನೆ ! (ಪಶಿಬಂ. ೮೪-೫). **ಪೆಟ್ರೋಲ್** : ಇವನಪ್ಪ ಕೆಂಪೇಗೌಡನ ರಸ್ತೆ ಪೆಟ್ರೋಲ್ ಪಂಪಿನಾಗೆ ಕಸ ಗುಡಿಸುತ್ತಿದ್ದುದು ನಾನರಿಯೆನಾ ? (ಬೆಂಗಬಿ. ೨೬). [←ಇಂ. Petrol]

ಪೆಟ್ಲು 'ಪೆಟಲ್' ನೋ.

ಪೆಟ್ಲುತುರುವೆ (ನಾ). (ಪೆಟಲಿಗೆ ಹಾಕಲು ಬಳಸುವ ಕಾಯಿಗಳನ್ನು ಬಿಡುವ) ಒಂದು ಬಗೆಯ ಸಸ್ಯ : (ಕಿ).

[ಪೆಟ್ಲು (<ಪೆಟಲ್) + ತುರುವೆ$_2$ (<ತುಱುವೆ)]

ಪೆಟ್ಲುಪ್ಪು 'ಪೆಟಲುಪ್ಪು' ನೋ.

ಪೆಠಾರಿ 'ಪಿಟಾರಿ' ನೋ.

ಪೆಡ, ಹೆಡ$_1$ (ಸಪೂರೂ). 'ಪೆಱಗು' ಎಂಬ ನಾಮಪದಕ್ಕೆ ಸಮಾಸದಲ್ಲಿ ಬರುವ ಆದೇಶರೂಪ : ಪೆಡವೆಂಬಾದೇಶಂ ಬಂದೆಡೆಗೊಳ್ಗುಂ ಪೆಱಗೆನಿಪ್ಪ ಶಬ್ದದೊಳ್ (ಶಮದ. ೦೭೩). 'ಪೆಡಂಗೆಯ್', 'ಪೆಡಂಮಗುಟು' ಪರಾ. ℘ 'ಡ', 'ಟ'ಕಾರಗಳಿಗಿರುವಂತೆ ವ್ಯಾಕರಣಬದ್ಧವಾದ ಹತ್ತಿರದ ಸಂಬಂಧವು, 'ಡ', 'ಱ'ಕಾರಗಳಿಗಿಲ್ಲದಿರುವುದರಿಂದ, 'ಪೆಱಗು' ಶಬ್ದದ 'ಸಪೂರೂ'ಗಳಾದ 'ಪೆಡ', 'ಪೆಱ' ರೂಪಗಳನ್ನು ಪ್ರತ್ಯೇಕವಾಗಿ ಕೊಟ್ಟಿದೆ. **ಹೆಡ$_1$** : 'ಹೆಡಕತ್ತು' ಪರಾ.

ಪೆಡವೆಡಸಾರ್ = ಹಿಂದೆ ಹಿಂದೆ ಹೋಗು ; ಹಿಂಬಾಲಿಸು : ಪೆಡವೆಡಸಾರ್ದು ಸಾರ್ದವನ ನೇಹಿಗರೊಳ್ ನೆಱ^3 ನೇಹವಾಂತು (ಭಕವಿ. ೬-೦೬೦). [<ಪೆಱಗು. / ತೆಲು. ಪೆಡ; ಪರ್ಜಿ. ಪಿಚ್ತೆಲ್]

ಪೆಡಂಗಯ್ 'ಪೆಡಂಗೆಯ್' ನೋ.

ಪೆಡಂಗಲಸು (ಕ್ರಿ). ಮುಗ್ಗರಿಸು ; ನಡೆಯು ಕುಂಠಿತವಾಗು : ಕಿಱುವೇಂಟೆಯ ನಾಯ್ಗಳಿಂದ [ಮು]ಟ್ಟುಪಟ್ಟ ಪೆಣ್ಮೊಲನಂತೆ ಭಯಮನೆಡಗಲಿಸಿ ಬೆಳ್ಳೋಟಮೋಡಿ ಜಪಂಗೆಟ್ಟು ಕಾಲ್ ಪೆಡಂಗಲಸೆ ಬೀಟುತ್ತು ಮೇಟುತ್ತುವೆಂತಾನುಮೆಯ್ದಿ (ಶಾಂತಿಪು. ೭-೯೧ ವ). 'ಎಡಗಲಿಸು' ಪರಾ.

[ಪೆಡ (<ಪೆಱಗು) + ಕಲಸು$_1$]

ಪೆಡಂಗಾಲ್, ಪೆಡಗಾಲ್ (ನಾ). ೧. ಪಾದದ ಹಿಂಭಾಗ ; ಹಿಂಗಾಲು. ೨. ಚತುಷ್ಪಾದಿಗಳಿಗೆ ಇರುವ ಹಿಂಭಾಗದ ಕಾಲು : ಪೆಡಂಗಾಲೊಳಡುಗಿದ ಬಾಲಮುಂ ಬಟ್ಟತ್ತಾದ ಬರಿಯುಂ . . . ತೋಱುತ್ತುಂ ಸರಳಿಸಿ ಪಾಯ್ದು ಪೋಪ ಪೊಳ್ಳೆವಂದಿಯು ಕಂಡು (ಲೀಲಾವ. ೬-೦೬ ವ). **ಪೆಡಗಾಲ್** : ೧. ಪೆಡಗಾಲ್, ಪೆಡಗಯ್ (ಶಬ್ದಾನು. ೩೬೯ ಪ್ರಯೋ).

[ಪೆಡ (<ಪೆಱಗು) + ಕಾಲ್$_1$]

ಪೆಡಂಗೆಯ್, ಪೆಡಂಗಯ್, ಪೆಡಗಯ್, ಪೆಡಗೆಯ್, ಪೆಡಗೈ, ಹೆಡಗಯ್, ಹೆಡಗೈ (ನಾ). ಕೈಯ ಹಿಂಭಾಗ; ಹಿಂಗೈ: ಆತನುಂ ಪೋಗಿಯ ಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಡಂಗೆಯ್ಯುಡಿಯೆ ಕಟ್ಟಿ (ವಡ್ಡಾರಾ. ೫೦-೨೫) ; ಅಂತೊರ್ವನು ಪೆಡಂಗೆಯ್ಯುಡಿಯಲ್ಕಟ್ಟಿ ಪೊಟಲ ಜನಂಗಳೆಲ್ಲಂ ನೆರೆದು ನುಡಿಯುತ್ತುಂ (ಸುಕುಮಾ. ೬-೫೩ ವ). **ಪೆಡುಗಯ್** : ಗಂಡನುಮಂ ಪೆಂಡತಿಯನೊಡಗೂಡಿ ಇರ್ವರುಮಂ ಪೆಡಂಗಯ್ಯುಡಿಯೆ ಕಟ್ಟಿಕೊಂಡು ಪೋಪರಂ ಕಂಡು (ವಡ್ಡಾರಾ. ೨೦-೨೫) ; ಪೆಡಮಾದೇಶಕ್ಕೆ—ಪೆಡಂಗಯ್, ಪೆಡಂದಲೆ (ಶಮದ. ೦೭೩ ಪ್ರಯೋ). **ಪೆಡಗಯ್** : ತಳಾಜರ್ ಪರಿತಂದು ಪರದನು ಪಿಡಿದು ಪೆಡಗಯ್ಯಂ ಕಟ್ಟಿ ಧರ್ಮಾಧಿಕರಣರಲ್ಲಿಗುಯ್ಯೆ (ಪಂಕತಂ. ೦೯೨-೩) ; ಅಬಿಂದುವಿಗೆ—ಪೆಡಗಯ್, ಪೆಡದಲೆ (ಶಮದ. ೦೭೩ ಪ್ರಯೋ) ; ಪೆಡಗಯ್ಯ ಕಟ್ಟಿಸಿ . . . ನಡೆಯಿಸಿದನು

(ಭಾಷಾಸಂ. ೬೬-೬೮). **ಪೆಡಗೆಯ್** : ಪೆಡಗೆಯ್ಯಂ ಪಿಡಿದೀಬ್ದು ಕಟ್ಟಿ . . . ಕರಸಿಮೆಂದಂ (ಪಡಬು. ೦೨-೯೮). **ಪೆಡಗ್ಯೆ** : ಆ ಪಾರ್ವನು ಪಿಡಿದು ಪೆಡಗ್ಯೆಯಂ ಕಟ್ಟಿ ತಂದೊಪ್ಪಿಸುವುದುಂ (ಪಂಚತಂ. ೦೦೨-೦೬) ; ಮೋಹಾಸುರನ ಪೆಡಗ್ಯೆಯನು ಕಟ್ಟಿ . . . ಕೆಡಹಿದರು (ಕೃಷ್ಣಾಂ. ೨೬-೨೫೬) : ವ್ಯಾಡನೆಲ್ಲರಂ ಕರಸಿ ಪೆಡ್[ಡ]ಗ್ಯೆಗಳಂ ಬಿಡಿಸೆ ಸ್ವತಿಸಿದರ್ ಭಕ್ತಿಯಿಂದ (ಪಂಪಭಾ. ೩೨-೬೬). **ಪೆಡಗೆಯ್** : ಮತ್ತೊಂದು ಬಾಣವ ಬಿಡಲಾಗಿ ವಪ್ಪನಾಭನ ಪೆಡ್[ಡ]ಗೆಯ್ಯ ಕಟ್ಟಿತ್ತು (ಸಭಾಪ. ೬೬-೦೬೯) ; ಕಟ್ಟಿ ಪೆಡಗೆಯ್ಯನೆಂಬುವುದ ಹೊಸನೂಲಿಂದೆ (ಪಂಭಾಪ. ೦೬-೬೩) ; ಪೆಡಗೆಯ್ಯ ಬಿಗಿದ ನೇಣಂ ಕೊಯ್ದು ಬಸುಟು (ಪಡಬಾ. ೦೩-೦೨). **ಪೆಡಗ್ಯೆ** : ನೀನಮುಂಪಿ ಪೆಡಗ್ಯೆಯ ಬಿಡು (ಭಾಷಾಕೃ. ೨೦-೪) ; ಪೆಡಗ್ಯೆಯ ಬಿಗಿದು ಕಟ್ಟಿದ ಕಳ್ಳಗಾಟ್ಟು ಸಡಲಿದಪ್ಪಕೆ ಸುಖವಪ್ಪುದು (ಪಡಕ. ೦೮-೪೩) ; ಒರ್ವ ಕಳ್ಳನ ಪಿಡಿದು ಪೆಡಗ್ಯೆಯ ಕಟ್ಟಿ ಕೊಂಡೊಯ್ದುತಿರಲು (ಗುರುಚಾ. ೬-೪೦) .

[ಪೆಡ(<ಪೆಱಗು)+ಕೆಯ್[2]]

ಪೆಡಂಗೈಸು (ಕ್ರಿ). ಓಮ್ಮುಖವಾಗಿ ಮಾಡು : ಮುಳಿಸಿಂದಂ ಭೂತವ್ಯಂದಂ ಕೊಳುಗುಳದೆಡೆಯೊಳ್ ಸಿಲ್ಕಿದಸ್ವಪ್ನರಂ . . . ತತ್ಕೇಶದಿಂದಂ ಬಿಗಿದಿಗಿದುರದಾರ್ದುಂ ಪೆಡಂಗೈಸಿ ನಿಂಕಾಗಳೆ ಕಟ್ಟುತ್ತುಂ (ಪಂಪಭಾ. ೦೨-೬೯).

[ಪೆಡ (< ಪೆಱಗು) + ಕೈಸು (< ಕೆಯ್ಸು)]

ಪೆಡಂದಲೆ, ಪೆಡತಲೆ, ಪೆಡದಲೆ, ಹೆಡತಲೆ, ಹೆಡದಲೆ (ನಾ). ೧. ತಲೆಯ ಹಿಂಭಾಗ; ಹಿಂದಲೆ : ಪೆಡಮಾದೇಶಕ್ಕೆ—ಪೆಡಂಗಯ್, ಪೆಡಂದಲೆ (ಕಬಾಪ. ೮೬೩ ಕ್ರಿಪೂ). **ಪೆಡತಲೆ** : ೧. ಪಡಿಯಜ್ಞನಿಂದಮೆಬೆಯಿಸಿ ಪೆಡತಲೆಯುಂ ಪಿಡಿದು ನೂಂಕುತ್ತುಮಿರವುನೆಯಿಂದಂ ಪೊಜಮಡಿಸಿ (ಪಡಾಭಾ. ೦೪೭-೨); ನುಡಿಯೆ ನುಡಿಯೆ ನಾಲಗೆಯಂ ಪಿಡಿದು ಪೆಡತಲೆಯಿಂದುರ್ಚುವರುಂ (ಆದಿಪು. ೩-೮೫ ಪ); ನೀವಿತ್ತಂ ಬರಲಾಗದೆಂದು ಪೆಡತಲೆಯುಂ ಪಿಡಿದು ನೂಂಕಿ (ಪುಣ್ಯಸ್ರ. ೯-೩ ಪ); ಬಡಾಗೋಪದಿಂದ ತನ್ನಯ ಪೆಡತಲೆಯುಂ ಪೊಡೆದು ಕಡವೆನೆಂದೆನುತಿರ್ದಾ ಕೊಡಲಿಯ ಕೈಯುಂ ಪಿಡಿದಂ ವ್ಯಾಡಂ (ಕೃಷ್ಣಂ. ೨೨-೨೪). ೨. ಕಶ್ಮಿನ ಹಿಂಭಾಗ; ಹೆಡಕು; ಹೆಗ್ಗತ್ತು : ಸತಿಗೆ ಭಂಗವುಂ ಮಾಡಿದನಂ . . . ಪೆಡತಲೆಯಂ ಮೆಟ್ಟಿ ಕಿಬ್ಬುಕೊಳ್ವೆಂ ತಲೆಯುಂ (ಪಂರಾಪು. ೯-೯೯). **ಪೆಡದಲೆ** : ೧. ಪೆಡದಲೆಯ ಪಾವು ಸೋಂಕಿಲ ಕಿಡಿ ನಣ್ಪಿನ ವ್ಯಾತ್ಮ (ಪಗಂ. ೫-೬೦); ಅವಿಂದುವಿಗೆ ಪೆಡಗಯ್, ಪೆಡದಲೆ (ಕವಾಪ. ೦೬೩ ಕ್ರಿಪೂ). ೨. ಚರಣಂ ಪೆಡದಲೆಯಂ ಪಿಡಿದು ನೂಂಕಿಸಿದನವನೀಶಂ (ಪಪಭಾ. ೯-೩೦೯). ೩. ಹಿಂಭಾಗಕ್ಕೆ ತಿರುಗಿಕೊಂಡಿರುವ ತಲೆ; ಹಿಮ್ಮುಖವಾಗಿರುವ ತಲೆ : ಎಮ್ಮಂತಲ್ಲ ಪರ ರೂಪು . . . ಕೆಲರ್ಗೆ ಪೆತದಲೆ ; ಕೆಲರ್ಗೆ ಬಡುದಲೆ (ಕಬ್ಬುಕ. ೧೧-೪). **ಹೆಡತಲೆ** : ೧. ಹೆಡತಲೆಯು ಮಾತ ಬಲ್ಲರೆ ಪ್ರಸಾದಿ (ಸಭಾಪ. ೦೬೦-೬೦೩); ಹೆಡತಲೆಗೆ ವೋಹಿ ಕಯ್ಮೆತ್ತಿ ಕಂಧರ ಹಱಯೆ ಹೊಡೆಯಲನುವಾದಂ (ಪಡಾಭಾ. ೦೩-೦೨); ಸರಸಿಜಾಸನನಂದು ನೊಸಲಲಿ ಬರೆದ ಲಿಪಿ ಹೆಡತಲೆಗೆ ಹೋಹುದೆ (ಪಪಪು. ೪೬-೦೩); ಹೆಡತಲೆಯು ತಱಿಸುವರೆ ಹಾವಿನ ಹೆಡೆಯನಕಟಾ (ಭಾಷಾಸಂ. ೦೪-೩೭); ಮುನಿವನಾತ್ಮರದಲಗು ಚೆನ್ನಲಿ ಮೂಡಿದುದು ಹೆಡತಲೆಗೆ ಸಾರ್ದುದು (ಪಪಕಾ. ೦-೪-೨೬). ೪. ಹಿಂಭಾಗ; ಹಿಂದುಗಡೆ; ಹಿಂಬದಿ : ಅರ್ತಿಯಾಗಿದ ಬದುಕು ಸಾವು ಲಾಜಿನು ಎನಲು ವ್ಯಾತ್ಮ ಹೆಡತಲೆಯಲ್ಲಿ ಸಗುತಿರ್ಪಳಯ್ಯ (ಪುರಂಪ. ೨-೬೦-೪); ಮೊಗಲರು ಹೆಡತಲೆಯ ಗಂಡವನ್ನು ಮರೆತು ಮನೆಗಳನ್ನು ಸೂರೆಗೊಳ್ಳುವುದ್ಕೆ ಹೊರಟರು (ಪಕ್ರಪ. ೬೬). **ಹೆಡದಲೆ** : ೧. ಶಬರ ಸಂಕುಲವ ಸೀಳಿ ಹೆಡದಲೆಯಿಂದಲುಗಿಪೆನು ನಾಲಗೆಯನು (ಪೀದಂಕ. ೬-೬).

[ಪೆಡ (< ಪೆಱಗು) + ತಲೆ[1]]

ಹೆಡಂಬಾಯ್ (ಕ್ರಿ). ಹಿಂದಕ್ಕೆ ನೆಗೆ.—ಹಾರು.—ಜಿಗಿ : ಮತ್ತಮವ ಱೊಳಗೊಂದು ಜಾತಿಜಾಯಿಲಂ ಪೋಗನೆ ನಿಂದು ಮುಳಿದಟ್ಟಿ ತಿರುಗಿ ನೋಡುತ್ತೆ . . . ಪೆಡಂಬಾಯ್ದಳಲಿಂ ಬಳಸುತ್ತಿರೆ (ಗಿಂಕೃ. ೦-೦೦೯).

[ಪೆಡ(<ಪೆಱಗು)+ಪಾಯ್[1]]

ಪೆಡಂಭೂತ (ನಾ). ೧. ಭಯಂಕರವಾದ ದೊಡ್ಡ ಭೂತ : ಪೆಡಂಭೂತಗಳು ಕುಣಿಯುವುವು.—ತೆರೆಗಳ ಹೆಡೆಗಳ ಮೇಲೆ (ಪಂಪಕ. ೨-೦೮); ಸ್ಕೂಲ್‌ನಲ್ಲಿ ಪ್ರತಿಯೊಬ್ಬರನ್ನೂ ಪರೀಕ್ಷೆಯ ಪೆಡಂಭೂತ ಹಿಡಿದುಕೊಂಡು ಬಿಟ್ಟತ್ತು (ಸ್ವಾಪ್ರಸ್ವ. ೪೮). ೨. ತುಂಬ ದೊಡ್ಡದು: ಅತ್ಯಲ್ಪವನು ಪೆಡಂಭೂತಮನೆ ಮಾಡಿದಿರಿ (ಕುಸುಪಾ. ೦೦೯-೬೯೯). ೩.. ಪ್ರಾಚೀನ ಕಾಲದಲ್ಲಿ ಇತ್ತೆಂದು ನಂಬಲಾದ ಬೃಹದಾಕಾರದ ಒಂದು ಪ್ರಾಣಿ.[←ತೆಲು. ಪೆನ್ಮೃತ. ☞ ಪೆಡ<ಪೆಱಗು ಅಥವಾ ಪೆಡ<ಪರಿದು—ಹೀಗೆಯೂ ವ್ಯುತ್ಪತ್ತಿಗೊಂಡಿರುವುದು ಸಾಧ್ಯ.]

ಪೆಡಂಮಗುಳ್ 'ಪೆಡಂಮಗಂಟುಳ್' ನೋ.

ಪೆಡಂಮಗುಳಿಸು (ಕ್ರಿ). ಹಿಂದಕ್ಕೆ ಬರುವಂತೆ ಮಾಡು: ಹಿಂದಿರುಗಿಸು: ತೀರ್ದಯ್ಯನುಸಿರನೆಂತುಂ ಪೆಡಂಮಗುಳಿಸುವುದಸದಳಂ(ಶ್ರೀಕಾಪು. ೦೦೦-೩೬೦).

[ಪೆಡಂಮಗುಳ್ (<ಪೆಡಂಮಗುಟ್ಟು)+—ಇಸು]

ಪೆಡಂಮಗುಟ್ಟು, ಪೆಡಂಮಗುಳ್, ಪೆಡಮಗುಟ್ಟು (ಕ್ರಿ). ೧. ಹಿಂದಕ್ಕೆ ಚಲಿಸು.—ಹೋಗು : ನೆರೆದರಸುಮಕ್ಕಳೆಲ್ಲರಾ ಬಿಲ್ಲಂ ಕಂಡು ಬಲ್ಲಂದಂ ಪೊಡೆದಂತೆ ಪೆಡಂಮಗುಟ್ಟಿ (ಕಂಕಾಪು. ೩-೮೨ ಪ), ಪಟಯಿಗೆ ದಾಂಗೆ ಪೆಡಂಮಗುಟ್ಟಿ ಸೂತರ್ ಗತ್ತಿರೆ ವಾಹಂಗಳತಿಜವದೆ ಪರಿಯೆ ರಥಂಗಳ್ ಪರಿದುವು (ಪಗಂ. ೬-೬೨); ರಣರಭಸೋತ್ಕಟಂ ಧರೆ ಪೆಡಂಮಗುಟ್ಟಂತೆ (ಆದಿಪು. ೦೦-೬೯). ೨. ಹಿಂದಕ್ಕೆ ತಿರುಗಿ ಅಕ್ರಮಿಸು,—ಎದುರಿಸು : ಅಗಳಾ ಕಳಕಳಕ್ಕೆ ಮುನ್ನೀರೆ ಮೇರೆದಪ್ಪಿದಂತೆ ದೆಂದಗುಳ್ದ ಬರ್ಪ ಮಾರ್ವಡೆಗೆ ಕಡಿಗಾಲದ ಕೃತಾಂತನಂತೆ ಪೆಡಂಮಡುಟ್ಟಿ (ಕಂಕಾಪು. ೬-೩೯ ಪ). ೩. ಅಡಿಮೇಲಾಗು; ಬೋರಲಾಗಿ: ನೆಲಂ ಪೆಡಂಮಗುಟ್ಟು ಕವಿದಿಕ್ಕಿದಂತೆ ತೊಟ್ಟನೆ ಪುಟ್ಟಿದತಿಭಯದಿಂ ವಿಭಂಗಮನರಾಗಿ . . . ಮೂದಲಿಸುತ್ತುಂ (ಭಾಷಾಪಾ. ೦೦-೯೩ ಪ). ೪. (ಆಲಂ) ಕುಸಿ: ಕುಗ್ಗು : ಉರಗೇಂದ್ರಂ ವೆಡೆಗಳ್ ಪೆಡಂಮಗುಟ್ಟಿನಂ ಪೊತ್ತಿರ್ದ ವಿಶ್ವಂಧರಾಧರಮುಂ ತನ್ನ ಭುಜಾಗ್ರದೊಳ್ಕಳೆದು (ಪಬ್ಬಪು. ೬-೦೩). **ಹೆಡಂಮುಗುಳ್** : ೧. ವೋದಿದ ತಾಳವಟ್ಟದೊಳ್ಬಂದ ವೆಣ ಪೆಡಂಮಗುಳೆ ಕಣ್ಗೆಸೆಗುಂ ಜವ ನೇಱಿದೊಂದು ಜಕ್ಕಂದೊಳದಂತೆ ಸೇವುಣಫರಟ್ಟನ ವೀರವಿಳಾಸುಂಧುರಂ (ಎಳ. VI. ೬೯೪. ೮೫-೯೬; ೨೨೦೦). **ಪೆಡಮಗುಟ್ಟು** : ೧. "ಪೆಡಮಗುಟ್ಟು (ಪೆಡಂಮಗುಟ್ಟು)—ಪರಾಙ್ಮುಖೇ (ಹಿಂದಿರುಗು) " (ಶಬ್ದಾ).

[ಪೆಡ (<ಪೆಱಗು)+ಮಗುಟ್ಟು]

ಪೆಡಂಮೆಟ್ಟು[1], **ಪೆಡಮೆಟ್ಟು**[1] (ಕ್ರಿ). ಹಿಂದಕ್ಕೆ ಸರಿ: ಹಿಮ್ಮೆಟ್ಟು : "ಅಕ್ಕುಂಸಿತೆಂದುಂ . . . ಪೆಡಂಮೆಟ್ಟಿತೆಂದುಂ - . . ಪಾರಗೆಯ್ಕೆಂದುಂ—ಈ ೧೩ ಅವಸರಣಕ್ಕೆ ಪೆಸರ್" (ಶಬಾ. ೬-೬೯೯); ಮುಳಿಸಿಂ ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುಱಿ ಕಿರ್ಗುಟ್ಟುತೆ ಮುಂದಟ್ಟಿ ಪೆಡಂಮೆ [ಪಾಣಾ.ಮುಂ]ಟ್ಟುತೆ ಸೂಕರನಡರ್ದಾ ಸಾರ್ದುದು ಮೆಳೆಯಂ (ಗಿಂಕೃ. ೦-೦೦೪); ಚಂದ್ರಮಣಿಕಟ್ಟಿಮಂಗಳಂ ತಿಳಿಗೊಳಂಗಳೆಂದಡಿಯಿಡಲಂಜಿ ಪೆಡಂಮೆಟ್ಟುವ ಕೆಱುವೆಂಡಿರಂ (ಪಾಪಭಾ. ೨-೦೪೬ ಪ). **ಪೆಡಮೆಟ್ಟು**[1] : ಪೆಡಮೆಟ್ಟದನಾಂಧ್ರಂ ವಂಗಧಂ ವಂಜಿಗಡಗೆ ಜಗುಳ್ದಂ (ಪಪುಚಾ. ೬-೯); ಉರಿಯನುಗುಳುವ ಘಣಿಯ ಗರಳವನು ಕಾಣಲ್ಕೆ ಗರುಡ ಶಾನಾದಡಂ ಪೆಡಮೆಟ್ಟುವಂ (ಪ್ರಾಪಪ. ೯-೦೦೦): ಪೆಡಮೆಟ್ಟದೊಂದಡಿಯನಾದೊಡಂ ರಣದಲ್ಲಿ ಹೊಡೆದಾಡುವುದು (ಪೀಪಂಕ. ೨-೪೯). [ಪೆಡ (<ಪೆಱಗು)+ಮೆಟ್ಟು[1]]

ಪೆಡಂಮೆಟ್ಟು[2], **ಪೆಡಮೆಟ್ಟು**[2], **ಹೆಡಮೆಟ್ಟು** (ನಾ). ಹಿಂದುಗಡೆ: ಹಿಂಭಾಗ; ಹಿಂಬದಿ : "ಪೆಱತು ಪಿಂಗಡೆ ಪೆಡಂಮೆಟ್ಟುಱ್ ಪೆಱುಂ

ಪಂತೆ ಪಂತಿಲಿನೆ ಹಿಂದೆನಿಕುಂ" (ಕವಿಕಂ. ೦೯೬). **ಪೆಡಮೆಟ್ಟು₂**: "ಪೆಡವೆಟ್ಟು, ಪೆಱಗು, ಪೆಱತು, ಪಂತಿಲ್—ಈ ೪ ಪಿಂಗಡೆಗೆ ಪೆಸರ್" (ಕಕಾಗ. ೬೩-೪೫೫): ಆ ಪದಾತಿಬಲದ ಪೆಡಮೆಟ್ಟಿನೊಳ್ ಹೂಡಿದ ಕುದುರೆಯು ನೀಡಿ ನೆಗೆದ ಪಳವಿಗೆಯು (ಗಂಗ. ೬-೫೫ ಕ). **ಪೆಡಮೆಟ್ಟು** : ತುರಗದ ಪೆಡ[ಡ]ಮೆಟ್ಟಿನ ಗಜಘಟೆಯ ಸಂದಣಿಸಿದ ರಥತತಿ ಮೆಱೆಯರ್ (ಪಂಡಿಪ. ೨-೫೫): ಪೆಡಮೆಟ್ಟಿನೊಳಗುಗಂ ಕೊಂಡೆಯ್ತಂದೊಡನೆ ಬೆರಸಿ ಕಲಕಿಲಬರ್ಬೀರರ ಕಡಿಮಿಂಡವ ಮಾಡಿದಂ (ಭಾಷುಣ. ೯-೫೦). [<ಪೆಡಂಮೆಟ್ಟು₁]

ಪೆಡಕಟ್ಟು 'ಪೆಡಗಟ್ಟು' ನೋ.

ಪೆಡಕು, ಪೆಡಕು (ನಾ). ೧. ಕಶ್ತಿನ ಹಿಂಭಾಗ ; ಪೆಗ್ಗತ್ತು : ಕಡಲು ದಾಟಿದ ಬಲುಧೀರನೆ . . . ಪೆಡಕಿಲಾಸನವಿತ್ತೆ ದಾತಗೆ (ಕ್ರಸಂಪ. ೫-೩). **ಪೆಡಕು** : ೧. "ಘಾಟಾ, ಅವಟುಃ, ಕೃಕಾಟಿಕಾ — ಈ ೩ ಪೆಡಕು" (ಪಠಾಮು. ೬೭-೩೭೦) : ಫಣಿರಾಜನೆಂಬನ ಪೆಡಕು ಮಾಣಿಮುದು (ಸಂಚಿಪ. ೨೦-೭೯) : ಹಾಲಿನ ಸವಿಯಂ ನೋಡುವೆ ಬಡಿಗೆಗಾಣದೆ ಪೆಡಕ ವೋಹಿವ ರಾವುಟಾಣವಿರೆ (ಶಾಶಿಕಾ. ೦೬-೪೯) : ತುಡುಗುಣಿಗಳು...ಹವಿಗೊಂಬವರ ನಿಕರದ ಪೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತ್ರಗಳ (ಕೊಡಾ. ೦-೧೦-೬). ೨. (ಕೋಟೆ ಮುಂತಾದುವುಗಳ ತುದಿಯ) ಹಿಂಭಾಗ,—ಹಿಂಬದಿ : ಕೇಳು ಬಳಿಕಕ್ಷೀಣಬಲಂ . . . ಘುಡುಘುಡಿಪ ಕೋಪದಲಿ ದುರ್ಗದ ಪೆಡಕು ಪರಿಯಂತೇಜ್ ಪುರ ಗಡಬಡಿಸಿ ಬೆಚ್ಚಿತು (ಕೊಪಾ. ೪-೬-೨೦). [ದೇ.॥ ತಎಾ. ಪಟಹಾಮ್ : ತುಳು. ಪೆದಂಗ್]

ಪೆಡಕೆಡಪು (ಕ್ರಿ). ಹಿಂದಕ್ಕೆ ತಳ್ಳಿ : ಹಿಮ್ಮುಖವಾಗಿ ಬೀಳಿಸು : ನಡೆಸಾರಂ ನೆಲವಂಗಳ ಪೆಡಕೆಡಪುವ ಡೆಗ್ಗಿ (ಕ್ರಿಕಂ. ೫-೦೦).

[ಪೆಡ (< ಪೆಱಗು) + ಕೆಡಪು]

ಪೆಡಗಟ್ಟು, ಪೆಡಕಟ್ಟು, ಪೆಡಕಟ್ಟು₂, ಪೆಡಗಟ್ಟು (ನಾ). (ಶಿಕ್ಷೆಗಾಗಿ) ಕೈಗಳನ್ನು ಬೆನ್ನಿನ ಹಿಂದೆ ಸೇರಿಸಿ ಕಟ್ಟುವ ಕಟ್ಟು; ಹೆಡಮುರಿಗೆ : ಹಿಂಗಟ್ಟು : ಶೇಷಂ . . . ಅಲಘುಬಲೇಶಯವಾಶದಿನೋವದೆ ಬಲಯುತ ರವಿಕೀರ್ತಿಯ ತೋಳಂ ಪೆಡಗಟ್ಟಂ ಕಟ್ಟಿದನು (ಜಯಾಶ. ೬-೪೬) : ಕಟ್ಟು ನುಡಿದ ಪೊಳಲಧಿಕಾರಿಯ ಪೆಡಗಟ್ಟಿನಿಂತುದೊಪ್ಪಿಸಿದರು (ಭಾಶಾಸಾಂ. ೦೦-೩೨). **ಪೆಡಕಟ್ಟು** : ಪೆಡಕಟ್ಟ ಕಟ್ಟಿ ಮಂಡೆಯ ಕೆದಱಿಕೊಂಡು ಕಡಿವೆವು ತಲೆಯನೆಂದೆನುತ (ಕ್ರಕಂಪ. ೨-೦೪೭). **ಪೆಡಕಟ್ಟು₂** : ಸಂಕೋಲೆ ಪೆಡಕಟ್ಟು ಹಾಕಿದ್ದಾಗ ಕಂಡರೆ ಆರೋಗ್ಯ . . . ಬಲಿತ ವೈರುವುಳ್ಳ ಭೂವಿಯಂ ಕಂಡರೆ ಐಶ್ವರ್ಯವು (ಸಾಗಂರಿ. ೫೯೧-೦೯); ಗಂಗಾತೀರದಲ್ಲಿ ನಿದ್ರೆಹೋಗುವ ಭೀಮನನ್ನು ಪೆಡಕಟ್ಟಾಕಿ ಗಂಗೆಯ ಮಧ್ಯದಲ್ಲೆತ್ತಿ ಹಾಕಲು (ಕೃಹಾಕ. ೮೬). **ಪೆಡಗಟ್ಟು** : ಪುಷ್ಪೋದ್ಭವ ಪೆಡಗಟ್ಟಿಗೀಡಾದ (ಪೋಳಕು. ೦೯೬-೬೨೯) ; ಕರವು ಪೆಡ[ಪಾಶಾಂ. ಪೆಡೆ] ಗಟ್ಟಿನಿಂ ಕೈಸಂಕಲೆಗಳು ವಿಗೆ . . . ನಡೆಗುಱಿಗಳಂ ಪೂಡಿ (ಪಾಪಂಚ. ೪-೦೮೦); ರಾಯ ಕೋಪಾಟೋಪನಾಗಿ ತನ್ನ ಶಕ್ತಿಯಿಂದ ಅವನ ಮಾಯೆಯ ಗೆದ್ದು . . . ಪೆಡಗಟ್ಟ ಕಟ್ಟಿ (ಜೈಭ. ೬೪).

[ಪೆಡ (< ಪೆಱಗು) + ಕಟ್ಟು₂]

ಪೆಡಗಡೆ (ನಾ). ಹಿಂಬದಿ : ಹಿಂಭಾಗ : ಪೆಡಗಡೆ ಸಾರ್ಚಿದೋದು ಕರದಿಂದೆಳೆದೋರೆದುಱುಬಂ (ಜಾಬಿ. ೬-೨೦೨). [ಪೆಡ < ಪೆಱಗು) + ಕಡೆ₃]

ಪೆಡಗೆಯ್ 'ಪೆಡಂಗೆಯ್' ನೋ.

ಪೆಡಗಾಲ್ 'ಪೆಡಂಗಾಲ್' ನೋ.

ಪೆಡಗುಡಿ, ಪೆಡಗುಡಿ (ನಾ). ೧. =ಪೆಡಗಟ್ಟು : ಬಟ್ಟೆಯೊಳೊರ್ವ ಪ್ರಾಯದವನಂ ಪೆಡಗುಡಿಯಂ ಕಟ್ಟಿ ಕೊಲಲ್ಕೊಯ್ಗುತ್ತಿರೆ (ಕುಶಾಸ್ತ್ರ. ೬-೬ ಕ) ; ಕವುಲಜಮುಖ್ಯರಂ ವೀರಭದ್ರನತಿಕೋಪದಿಂ ಪೆಡಗುಡಿಯ ಕಟ್ಟಿ ಭೂತಾಳಗಳ ಮಹಿತ್ಸನು (ಕಲಪು. ೬೦ ಸೂಸಂ). **ಪೆಡಗುಡಿ** : ೧. ದೃಢವಿರಬೇಕು ಲಿಂಗಾರ್ಚನೆಯಲ್ಲಿ ದೃಢವಿಲ್ಲದವನ ಪೆಡಗುಡಿಯ ಕಟ್ಟಿ ಎಡಹಿ ಬಿಡುವ ಭವದಡಿಗೆ (ಶಿಕ್ಷ.ಕ.ಳ. ೦೩೫-೬೦೩) ; ಹೊಡೆಯಲಿಂದತಿ ವೀರ್ಯನನುಗೆಯ್ಯಲು ತಡೆಯದಾಗಳೆ . . . ಹೊಡೆಮು ಪೆಡಗುಡಿಯ ಕಟ್ಟಿದನಾತನಂ (ಕಾಮುಣಾ. ೬-೪೫) ; ದೈತ್ಯನ ಜಡಿದು ವಾರುಣವಾಶದಲಿ ಪೆಡಗುಡಿಯ ಬಿಗಿದನು (ಶಿಪಾಗ. ೪-೦೬-೨೦). ೨. ಹಿಂಭಾಗ ; ಹಿಂಬದಿ : ನುಡಿಯದಬು ವರ್ಣಗ್ರಹದ ಪೆಡಗುಡಿಯುಲಿದ್ದುದು ರಾಯ ಕುಲವು (ಕುಶಾ.ಕ. ೬-೪೩). [ಪೆಡ (<ಪೆಱಗು) + ಕುಡಿ₃ ?]

ಪೆಡಗುಡಿಗಟ್ಟು, ಪೆಡಗುಡಿಗಟ್ಟು (ಕ್ರಿ). ಕೈಗಳನ್ನು ಹಿಮ್ಮುಖವಾಗಿ ಕಟ್ಟು ; ಪೆಡಮುರಿಗೆ ಹಾಕು : ಪಿಡಿದೆಬತಂದು ಮುಂದಲೆಯನಾಗ್ರಹದಿಂ ಪಿಡಿದೊತ್ತಿ ಹಗ್ಗದಿಂ ಪೆಡಗುಡಿಗಟ್ಟಿ (ಪುಕಾಸ್ತ್ರ. ೫-೩೦) : ಅಂತ್ಯಜನ ನನುನಯದೆ ಪಿಡಿದು ಪೆಡಗುಡಿಗಟ್ಟಿ ತನ್ನಿ (ಆಶಾಕ. ೦೦ ೬-೨೫) : ರಥಾಶ್ವಮಂ ಕೊಟ್ಟಿ ಪೆಡ[ಡ]ಗುಡಿಗಟ್ಟಿ ವಿಧಿಯನಂಬು ಮತ್ತೆ ವೀರ ಭದ್ರಂ ಕರಳುತ್ಪೈತಂದನು (ಶಿಪು. ೩೦-೩೨). **ಪೆಡಗುಡಿಗಟ್ಟು** : ನಾ ನಿನ್ನ ಪೆಡಗುಡಿಗಟ್ಟಿ ನಿನ್ನಳುಗಳಿಯುತಿರಲು (ಜೀಪಂಪ. ೦೩-೧೬) ; ದಿಂಡು ಗೆಡೆವಂತೆ ಒಳಗುದ್ದು ಹೊಱಗುದ್ದಿಕ್ಕಿ ದಂಡಿಸಿ ಬಳಿಕ್ಕ ಬಲುಹೊಸಿ ಪೆಡಗುಡಿಗಟ್ಟಿ[ಜಾಪಾಂ. ಪೆಡಗೈಗಟ್ಟಿ, ಪೆಡೆಗೈಕಟ್ಟಿ]ಕೊಂಡು ಬರ್ಪಾಗಳು (ಪಪ್ಪಾಶ್ರ. ೪-೦೯). [ಪೆಡಗುಡಿ + ಕಟ್ಟು₂]

ಪೆಡಗೆ 'ಪೆಟ್ಟಿಗೆ' ನೋ.

ಪೆಡಗೆಹಾಗು (ನಾ). ಬುಟ್ಟಿಯಾಕಾರದಲ್ಲಿರುವ ರುಮಾಲು.—ಮುಂಡಾಸು : ಪೆಡಗೆವಾಗು ದಡಿದೋತ್ತದ . . . ಹಂಡಹುಂಡ ಪುಟ್ಟಗರೆಸೆದರ್ (ಪಪಾಕ್ಕ. ೬-೦೪). [ಪೆಡಗೆ (< ಪೆಟ್ಟಿಗೆ) + ವಾಗು₁]

ಪೆಡಗೆಯ್ 'ಪೆಡಂಗೆಯ್' ನೋ.

ಪೆಡಗೆಯ್ಗಟ್ಟು (ನಾ). = ಪೆಡಗಟ್ಟು : ನಿನ್ನ ಪೆಡಗೆಯ್ಗ[ಟ್ಟ]ಂ ಶರದಿಂ ಪಿಡಿಸಿದನಲ್ಲನೆ ಸರಿತ್ಪುತಂ (ಕಂಪಾರಾ. ೬-೫೩).

[ಪೆಡಗೆಯ್ (< ಪೆಡಂಗೆಯ್) + ಕಟ್ಟು₂]

ಪೆಡಗೈ 'ಪೆಡಂಗೆಯ್' ನೋ.

ಪೆಡಗೈಗಟ್ಟು (ಕ್ರಿ). = ಪೆಡಗುಡಿಗಟ್ಟು : ಪೆಂಡಿರೆಲ್ಲಂ ಪರಿಚಾರಕಿಯರಂ ಕೂಡಿಕೊಂಡಜ್ಜಗಾಪಿನಜ್ಜರಂ ಪಿಡಿದುರುಳ್ದಿ ಚೆನ್ನಸಂಕಲೆಯಿಂ ಪೆಡಗೈಗಟ್ಟಿ (ಅರ್ಗಪ್ರ. ೫-೨ ಕ) ; ಪಿಡಿದು ಪನ್ನಗವಾಶದಿಂ ಪೆಡಗೈಗಟ್ಟಿ (ಕಬಾಸಂ. ೦೯-೦೬೬). [ಪೆಡಗೈ (< ಪೆಡಂಗೆಯ್) + ಕಟ್ಟು₂]

ಪೆಡಗೊಳ್ (ಕ್ರಿ). ಕುಗ್ಗು : ಕುಸಿ : ನೆ[ಪಾಶಾಂ. ಪೊ]ಕ್ಕ ಕದಂಪು ಪತ್ತಿ ಪೆ[ಪಾಶಾಂ.ದೆ]ಡೆ[ಡ]ಗೊಂಡ ಕೊರಲ್ . . . ಅಕ್ಕುಟ್ಟಿಸಿದರ್ ಪೆರ್ಬಸಿಱ ಗುರ್ವಿಸೆ ಬಂದನದೊರ್ವ ವಾರ್ವಂ (ಪಂಪಾಚ. ೬-೫೬).

[ಪೆಡ (< ಪೆಱಗು) + ಕೊಳ್₂]

ಪೆಡತಲೆ 'ಪೆಡಂದಲೆ' ನೋ.

ಪೆಡದಲೆ 'ಪೆಡಂದಲೆ' ನೋ.

ಪೆಡಪೌಜು (ನಾ). ಯುದ್ಧದಲ್ಲಿ ಹಿಂಭಾಗದಲ್ಲಿ ನಿಲ್ಲುವ ಸೈನ್ಯ ; ಹಿಂಚೂಣಿ : ಪೆಡಪೌಜನೊಳೊಟ್ಟಿಸಿದ ಮಂದಮಾತಂಗದ ಬಲ್ವಿಣಲಿ.ಱಿದ ಕದನೋದ್ಧತವಾನುಷರೆನಿಪಗ್ಗದ ಮಾವತಿಗರ್ . . . ಹಾಣಾಹಣಿಯಿಂದ ನಿರ್ಮಿರ್ದರು (ಕಹುಣಾ. ೬-೪೬).

[ಪೆಡ (< ಪೆಱಗು)+ಪೌಜು (< ಫೌಜು)]

ಪೆಡಮಗುಟು 'ಪೆಡಂಮಗುಟು' ನೋ.

ಪೆಡಮೆಟ್ಟಿಸು (ಕ್ರಿ). ಹಿಮ್ಮೆಟ್ಟಿಸು ; ಹಿಂಜರಿಯುವಂತೆ ಮಾಡು : ಅಡಕೆ ನಿಲ್ಲದಾಸೆ ಮನವಮಂ ಪೆಡಮೆಟ್ಟಿಪ ಲಜ್ಜೆ (ಕಳಿ. ೪-೦೨೬).

[ಪೆಡಮೆಟ್ಟು₁ (< ಪೆಡಂವೆಟ್ಟು₁) + — ಇಸು₅]

ಪೆಡಮೆಟ್ಟು₁ 'ಪೆಡಂವೆಟ್ಟು₁' ನೋ.

ಪೆಡಮೆಟ್ಟು₂ 'ಪೆಡಂಮೆಟ್ಟು₂' ನೋ.

ಪೆಡಲು (ನಾ). ಬೈಸಿಕಲ್ಲನ್ನು ನಡೆಸುವವನು ಕಾಲು ಇಡುವುದಕ್ಕೂ ತುಳಿದು ಅದನ್ನು ಮುನ್ನಡೆಸುವುದಕ್ಕೂ ಅಳವಡಿಸಿರುವ ಸಾಧನ : ತನ್ನ ಕಾಲೊಂದನು ಪೆಡಲಿನ ಮೇಲಿಟ್ಟು...ಸೈಕಲ್ಲಿನಿಂದಿಳಿದಿಳಿಯದಂತಿರ್ಪನು ನಿಟ್ಟಿಸುತಾಕೆ ಬರ್ಪುದನು (ಶಂಪ್ರಪ್ರ. ೦೬೯-೫೩). [← ಇಂ. pedal]

ಪೆಡಸರ (ನಾ). ಸೊಕ್ಕು ; ಗರ್ವ : ಅಪ್ಪಾಜಿಯವರ ಗೆಳೆಯ ಅಂತ ಅವರದು ಆಸು ಪೆಡಸರ (ಸಕಾ. ೦೧೯). [← ತೆಲು. ಪೆಡಸರ]

ಪೆಡಸಾರ್ (ಕ್ರಿ). ಹಿಂದಕ್ಕೆ ಹೋಗು ; ಹಿಂಜರಿ : ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ (ಶಂಪಭಾ. ೦೩-೫೬ ಪ); ಪೆಡಸಾರ್ದಂ ನೆಲೆವಿಡಿದಂ ಪಡಿಬರಿಸಿದುಟಿಯದೋಡಿದಂ ನಿಡುವಯಣಂ (ಅಪ್ರತಿ. ೩೦-೩). [ಪೆಡ (<ಪೆಱಗು) + ಸಾರ್₁]

ಪೆಡಸು, ಪೆಟಸು, ಹೆಡಸು (ನಾ). ೧. (ಲೋಹದಂತೆ) ಗಡುಸಾಗಿರುವುದು ; ಬಿರುಸಾಗಿರುವುದು : ಪೆಡಸಾದ ಲೋಹವಾದರೂ ಕರಗಿ ಗಟ್ಟಿಯಾಗುವಾಗ. ವಿಕಾಸಗೊಳ್ಳುವ ಗುಣವನ್ನು ಪಡೆದಿದೆ (ಕಂಕೋ. I. ೦೯೬). ೨. ಭಂಗುರತೆ : ನೀರೆಲ್ಲ ಮೈಯುಂಡು ಸೂಜಿಗಳ ಪೆಡಸು ಕಡಿಮೆಯಾಗುತ್ತದೆ (ಮುಂಬಯಿ. ೯. ೯-೦೫೬). ೩. ಕಾಠಿಣ್ಯ ; ನಿಷ್ಠುರತೆ ; ಒರಟುತನ : ಮಮತೆಯನ್ನುಳಿದು ಪೆಡಸಿಂದಿರಲು ಒರ್ವೆಯಿಂತೆಂದಳು (ಪಂಕಾರಾ. ೩-೦೦-೦೦) ; ನಿನ್ನದೂ ಬಲು ಪೆಡಸು ! (ಎಳೆಕ. ೩೬). ೪. ಕಷ್ಟ ; ಎಡರು ; ಬಿಕ್ಕಟ್ಟು : ಪೆಡಸಿನ ಹಾದಿಗೆ ಪೆಟರಲ್ ಚಲದಂಕರೊಲ್ದು ಬೂಡಿಗೆ ಸಲೆ ನಡೆವರ್ (ಪ್ರುಸೂಪು. ೬-೦೬); ದಾರಿ ಬಹಳ ಪೆಡಸು (ಶಾಸಾಶಾ. ೬). ಪೆಟಸು : ೩. ಇನ್ನೆಬರಂ ಕೊನೆವರಿದು ನೀಟ್ಟರಿಸಿದ ಬಟಿಯ ಬಟಿಯಾಗಳ್ ತನ್ನೊಳ್ ತಡೆದುದೊಂದು ಬಾಗುಳ ಪೆಟಸಿನಗವಟ್ಟಾಗಳುಮಿ ಕತದೊಳೆ ಬಗೆಗಟ್ಟಿರ್ವರಾಯನೋಲಗಕೊರ್ಮೆ ಜಾಬಾಲಿಮುನಿಪು ಬಿಜಯಂಗೈದಂ (ರಾಪಾಸ್ತ. ೦೦೯-೨೦). ೫. ಕದನ : ಹೋರಾಟ (?) : "ಪೆಟಸೆಂದು ತೋಟಿಯೊಳ್" (ಕಪಾಗಿ. ೬೯). 'ಪೆಣಸು'₁ ಪರಾ. ಹೆಡಸು: ೬. ಬಿಂಕ ; ಗರ್ವ : ತಾವೇ ಅಪ್ಸರೆಯರೆಂದುಕೊಂಡು ಕೆಲವು ಹೆಣ್ಣುಮಕ್ಕಳು ಹೆಡಸಿನಿಂದ ತಿರುಗಾಡುತ್ತಾರೆ (ಅಂಹೂ. ೯). ೭. ಸಾಂದ್ರತೆ ; ಸ್ನಿಗ್ಧತೆ : ಇಬ್ಬನಿಗಳಾ ಹೆಪ್ಪು ಹೆಡಸಿನಲ್ಲಿ ಉಗಿಯೊಲು ತೋರುವ ಉಸಿರಿನ ಸರಣಿ (ಶ್ರಾಪಾಸ್ತ. ೩-೨) ; ಮೊಸರು-ಅವಲಕ್ಕಿಯ ಹೆಡಸು ಇನ್ನೂ ಕೈಗೆ ಅಂಟಿಕೊಂಡೈತೆ (ಸಸಂ. ೦೯); ಉಕ್ಕಿದ ಹಾಲಿಗೆ ಹೆಡಸು (ಅಂಪ್ರಿ. ೦೨೬). ೮. ತಲೆಗೂದಲಿನ ಬುಡದಲ್ಲಿ ಉಂಟಾಗುವ ಒಣಗಿದ ಚರ್ಮದ ಹೊಟ್ಟು ; ಹಗರು : (ಕಿ).

ಪೆಡಸಾಗು = ೧. ಗಟ್ಟಿಯಾಗು ; ಬಿರುಸಾಗು : ಸೂಜಿಗಳು ಸಿದ್ಧವಾದವೆಂದರೆ . . . ತಣ್ಣೀರೊಳಗೆ ಚಲ್ಲುವನು. ಅದರಿಂದ ಅವು ಪೆಡಸಾಗುವವು (ಮುಂಬಯಿ. ೯-೦೫೯). ೨. ಕಠಿಣವಾಗು; ನಿಷ್ಠುರವಾಗು: ಎಲ್ಲಿಯೂ ಅವರ ಭಾಷೆ ಪೆಡಸಾಗಿಲ್ಲ (ಪಂಕಾ. ೦೦೦). ೩. ಗರುಗಾಗು : ತುಂಡುಗಳು ಚೆನ್ನಾಗಿ ಕಾದು ಪೆಡಸಾದಾಗ . . . ಎಣ್ಣೆ ಬಸಿದು ಹೋಗುವಂತೆ ತೂತುಗಳಿರುವ ಪಾತ್ರೆಯೊಂದರಲ್ಲಿ ಹಾಕಬೇಕು (ಅಹುಸಾ. ೯೦).

[ದೇ.॥ ತೆಲು. ಪೆಟುಕು, ಪೆಳುಸು ; ಕುಇ. ಪೆಡ]

ಪೆಡಸುಗಟ್ಟು (ಕ್ರಿ). ಗಟ್ಟಿಯಾಗು ; ಗಡ್ಡೆಕಟ್ಟು : ವಯಸ್ಸಾದವರಲ್ಲಿ ಮಿದುಳಿನ ತಳದ ನರಗಂಟುಗಳಿಗೆ ರಕ್ತ ಒದಗಿಸುವ ರಕ್ತನಾಳಗಳು ಪೆಡಸುಗಟ್ಟುವುದು(ಕಂಕೋ. I. ೨೬೬). [ಪೆಡಸು + ಕಟ್ಟು₁]

ಪೆಡಸುಗೊಳ್ಳು (ಕ್ರಿ). ಒರಟಾಗು ; ಬಲಿ : ಪೆಡಸುಗೊಳ್ಳದಿದ್ದ ಎಳೆಯ ಮನಸ್ಸಿನ ಮೇಲೆ . . . ಸ್ಥಿರವಾಗಿ ನೆಲಸುವುದು (ಕಥಕ. ೩೫).

[ಪೆಡಸು + ಕೊಳ್ಳು₁ (<ಕೊಳ್₁)]

ಪೆಡಸುದಾರಿ (ನಾ). ಅಡ್ಡಿ, ಆತಂಕಗಳಿಂದ ಕೂಡಿರುವ ದಾರಿ ; ಬಿಕ್ಕಟ್ಟಾದ ಮಾರ್ಗ : ಕಷ್ಟನಷ್ಟವ ಪೆಡಸುದಾರಿಯ ಯಾವುದೊಂದನು ಗಣಿಸನು (ಎಪಿ. ೧೯-೦೯). [ಪೆಡಸು + ದಾರಿ]

△**ಪೆಡಱು** 'ಪೆಳಱು₁' ನೋ.

ಪೆಡಿಗೆ 'ಪೆಟ್ಟಿಗೆ' ನೋ.

ಪೆಡೆ, ಹೆಡೆ₁ (ನಾ). ೧. ಹಾವಿನ ಬಿಚ್ಚಿದ ತಲೆ,—ಫಣೆ : "ಫಣಾಹ್ವಯಂ ಪೆಡೆಯಕ್ಕುಂ" (ಪಸ್ತುಕೋ. ೦೯-೩); ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡೆಗಣ್ಣ ಮಾಡಿ ಪಾಲ್ಗಡಲನುಪಾಯದಿಂ ಕಡೆಯೆ (ಕಾವ್ಯಸಾ. ೯೩೮ ಕೂರ್ಪಳ) ; ಎರಟ್ಟಾಳಿಂಗನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತಂ ಬಂದೊಡೆ (ಪಡ್ಡಾಕಾ. ೦೦೦-೭೦) ; ಪಡೆಯ ಪೊಱೆಗಗಿದು ಶೇಷಂ ಪೆಡೆಗಳನುಡುಗುವುದುಮೆಳೆ ಬೊದಿಲ್ಲೆನೆ ಬಿಟ್ಟತ್ತು (ಪಂಪಭಾ. ೧೦-೭೦). ಹೆಡೆ₁ : ೧. "ಫಣಃ, ಫಣಾ, ಫಟಾ—ಈ ೩ ಹಾವಿನ ಹೆಡೆ" (ಹಲಾಯು. ೦೦೩-೯೦); ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ (ಬಸವ. ೬೬೦ ೮) ; ಹೆಡೆಯ ಮಣಿಗಳ ಕಂಡು ಸೂಸಿದ ಕಿಡಿಗಳಹಹಾಯೆನುತ ಶಿರಗಳ ಕೊಡಹಿ ಮಱುಗಿದರುರಗಿಯರು ಮಱುಗಳಿಗೆ ಮೈಚಾಚಿ (ಕುಪ್ಯಾಅ. ೦೨-೬೧) ; ಜಡೆಯುಳ್ಳ ಹಿರಿಯರಿಗೆ ಹೆಡೆಯುಳ್ಳ ಸರ್ಪನಿಗೆ ನಡುಗುತ್ತ ನಮಿಸಿ (ಸರ್ಪಾ. ೫೨೬) ; ಹಳದಿಯ ಹೆಡೆಯನು ಬಿಚ್ಚೋ ಬೇಗಾ (ಕಪ್ಪಾ. ೦೨೨). ೨. ಅಗಲವಾದ ತುದಿ : ಬೆಂಕಿಯೊಳಗೆ ಸೌಟು ಚಲ್ಲಿದರೆ ಮೊದಲು ಅವರ ಹೆಡೆಯು ಕಾಯ ತ್ತದೆ (ಮುಂಬಯಿ. ೦೫-೦೩೯). ೩. ತೆಂಗು, ತಾಳೆ ಮೊದಲಾದುವುಗಳ ಗರಿ; ಸೋಗೆ : ಬೊಬ್ಬರ್ಯಗಳ ಹಾಗೆ ನಿಂತ ಹನೆಮರಗಳಿಗೆ ನಿಮ್ಮ 'ಹೆಡೆ' ತೂಗಿಸಬಾರದು ಎನಲು ಅವರಿಗೆ ಹಕ್ಕಿದೆಯೇ ? (ಪುರಪಾ. ೦).

ಹೆಡೆಯಾಡಿಸು = ೧. ಹೆಡೆಯನ್ನು ತೂಗು,—ಅಲ್ಲಾಡಿಸು ; ಎಳೆಬಿಸಿಲಿನಲ್ಲಿ ಹಾವು ಹೆಡೆಯಾಡಿಸುತ್ತಾ ಇತ್ತು (ರೂಡಿ). ೨. ಪ್ರಧಾನವಾಗಿ ಕಂಡು ಬರು ; ಎದ್ದುಕಾಣು : ಕ್ಷುಲ್ಲಕವಿಷಯ ಹೆಡೆಯಾಡಿಸುತ್ತದೆ. (ಹೊಸಕ್ಷಿ. ೯೫). ಹೆಡೆಯಾಡು = ೧. ಹೆಡೆಯನ್ನು ಆಡಿಸು,—ತೂಗು : ಭರಮನ ತಲೆಯ ಬಳಿಯಲ್ಲಿ ನಾಗಸರ್ಪ ಹೆಡೆಯಾಡುವುದನ್ನು ಕಂಡು ಇವನ ಬಳಿಗೆ ಬಂದರು (ಪಕ್ರಪಾ. ೩೯). ೨. ಮೇಲೇಳು ; ಆಸ್ಫೋಟಿಸು : ಸಾಮಾಜಿಕದಾಸ್ಯದ ವಿಷಯದಲ್ಲಿ ಅಸಂತೋಷದ ಭಾವನೆ ದೇಶಾದ್ಯಂತ ಹೆಡೆಯಾಡತೊಡಗಿತು (ಶ್ರೇತ್ಯಪ್ರ. ೦೩೬).

[< ಸಂ. ಸ್ಫಟ]

ಪೆಡೆಗಟ್ಟು (ಕ್ರಿ). ಹೆಡೆಯ ಆಕಾರದಲ್ಲಿ ಕಟ್ಟು,—ರಚಿಸು : ಮುಂಕೊಂಡು ಮುಡಿ ಮಾಡಿ ಪೆಡೆಗಟ್ಟುವಾ ಕೇಳ್ ನಿನ್ನ ಗಂಡಂಗೆ ಲೇಸೆ ಪೇಳೆಂಬಳಕದಿಂ ಮಿಂದು ರಾಜಿಸಿದಳಾ ಮಾನಿನಿ (ಭಾಪಸಂ. ೩-೩೬).

[ಪೆಡೆ + ಕಟ್ಟು₁]

ಪೆಡೆಗಲ್ (ನಾ). ಹಾವಿನ ಹೆಡೆಯಲ್ಲಿರುವ ಮಣಿ,—ರತ್ನ; ಫಣಾರತ್ನ : ಪಾವೆಱೆಯನ ಪೆಡೆವಣಿಗಳೆನಿಪ ಪೆಡೆಗಲ್ಲೊಳಂ . . . ಕುಳ್ಳಿರ್ಪ ಕೋಟಲೆಯಂ ಮಱೆತು ನಿನ್ನ ದುಂಡುದೋಳೊಳ್ ನೆಲೆ ನೆಲಸಿ ಸೊಗಂಬಡೆದುದು (ಪಕಪಂ. ೦೫೭-೦೩). [ಪೆಡೆ + ಕಲ್₃]

ಪೆಡೆದಲೆಯ (ನಾ). ಹೆಡೆಯನ್ನೇ ತಲೆಯಾಗುಳ್ಳವನು ; ಆದಿಶೇಷ : ಪೆಡ[ಡೆ]ದಲೆಯನ ಪೆಂಡತಿ ಮೈಗಣ್ಣನ ಮಡದಿ . . . ಮುಪ್ಪೊಡವಿಯ ಪೆಣ್ಣಕ್ಕಳ ನಿಕುರುಂಬಂ (ಪಯಕಾ. ೦೬-೯೦). [ಪೆಡೆ + ತಲೆ₁ + — ಅ₇]

ಪೆಡೆಮಣಿ 'ಪೆಡೆವಣಿ' ನೋ.

ಪೆಡೆಯಕ್ಕಿ (ನಾ). ಒಂದು ಬಗೆಯ ಸಸ್ಯ ; ಹಾಲುತೊಟ್ಟಿನ ಗಿಡ : ಪೆಡೆಯಕ್ಕಿಯ ಬೇರಂ ಕಟ್ಟಿಡುವುದು ಕರ್ಣದೊಳೆ ಪಿಂಗುಗುಂ ಸೂಱ್ ಜ್ವರಮುಂ (ಕೋಕೋಪ. ೯-೨೩). 'ಅಕ್ಕಿಹೆಡೆ' ಪರಾ. [ಪೆಡೆ + ಅಕ್ಕಿ₁]

ಹೆಡೆಯಿಕ್ಕು (ಕ್ರಿ).. (ಆಲಂ) ತಲೆಯೆತ್ತು : ಪೆಡೆವಣೆದಳೆದ ನಾಗರ ಪುಜಂಯೆಂಬಂತೆ ಹೊಡೆಮರಳುವ ತನ್ನ ತಾನೇ ಪೆಡೆಯಿಕ್ಕುವ ಮುಕ್ತಿನರಳೆಲೆದಾಳ್ದು ಕೆಂಜೆಡೆ ಮುದ್ದುಮೊಗದಲ್ಲಿ ನಲಿಯೆ (ಕೋಚಕ. ೦೭-೭೦). [ಪೆಡೆ + ಇಕ್ಕು]

ಹೆಡೆಯೆತ್ತು, ಹೆಡೆಯೆತ್ತು (ಕ್ರಿ). ೧. ಹೆಪ್ಪೆಯನ್ನು ತೆಗೆ.—ಬಿಚ್ಚು : ನಾಗವರಾಳಿಯನೊರ್ವನಾಲಾಪಿಸಲಾಗಳೆ ನೆರೆದು ಸರ್ಪಗಳು ರಾಗಿಸಿ ಪೆಡೆಯೆತ್ತಿ ಕೇಳುತಿರ್ದುವು (ಕಕ. ೬೪-೦೦). **ಹೆಪ್ಪೆಯೆತ್ತು** : ೧. ತನು ಹೀಗೆಮನ ಸರ್ವನಾಗಿ ತನ್ನಯ ವಿಲಾಸಿತದಿಂದ ಹೆಡೆಯೆತ್ತಿ ಆಡುತ್ತಿರಲಾಗಿ (ಸಗಪಿ ೪. ೬೭೬-೦೦೦೬); ಹೆಡೆಯೆತ್ತಿ ಬುಸುಗುಡುತವರಿವರನು ಕಚ್ಚಿ ಹುತ್ತಪ ಹಾವು ಹೊಗುವೋಲು (ಜಂಣಾಕ. ೧೮-೭೭). ೨. (ಆಲಂ) (ದ್ವೇಷ. ರೋಷ ಮುಂತಾದವು) ಕಾರ್ಯೋನ್ಮುಖವಾಗು : ಅವರ ಬಗೆದ್ದ ದ್ವೇಷ ಅವನಲ್ಲಿ ಹೆಡೆಪುತ್ತಿತು (ಕೂಶಿ). [ಪೆಡೆ + ಎತ್ತು]

ಪೆಡೆವಣೆ, ಪೆಡಮಣೆ, ಹೆಡೆಮಣೆ, ಹೆಡೆವಣೆ (ನಾ). ಹಾವಿನ ಹೆಡೆಯಲ್ಲಿರುವ ರತ್ನ ; ನಾಗಮಣಿ : ಸೊಡರ್ವಾವನಿಪ್ಪ ಪೆಡೆವಣೆಯ ಸರ್ಪಾಗಳಿಂದಾರಾಧ್ಯಮಾನೆಯಪ್ಪೊಲಂತೆಸದು ತೋರ್ಪರ್ಂ(ಜಾದಂಣಾ. ೨೭೦) : ಪಡೆವಂ ರಜೋಧಿಕಂ ವಿಧಿ ಪೆಡೆವಣೆಯಂ ಫಣಿಯಂ . . . ಮಟಿಯಂ ಸಿಡಿಲಂ ಪಡೆದಂತೆ ಸುಜನರಂ ದುರ್ಜನರಂ (ಪಂಣಾಪು. ೦-೩೨) ; ಖಡೆಯ ಸರಮಣೆ ತೋಳಬಂದಿಗೆ ಪೆಡೆವಣೆಯು ಮಱಿವಾವುಗಳಸಳವಡಿಸಿದನು (ಭುಣಾ೪. ೬-೦೩). **ಹೆಡೆಮಣೆ** : [ಉರಗಂ] ಹೆಡೆವಣೆಯಂ ವಿಷಮಂ . . . ಧರಯಿಸಿದುತಿರೆ ಸಜ್ಜನರಂ ದುರ್ಜನರಂ ಪಡೆದಂ ಕವಳಳವಂ (ಭುಪುಣಾ. ೦-೩೩). **ಹೆಡೆಮಣೆ** : ಮೆರೆದಳು ಕೈ ಕೆ ಮುಧರೆಯ ತೊಡೆಯಲ್ಲಿ ಕಾಳಾಹಿಭೋಗದಲಿ ಹೊಳೆವ ಹೆಡೆವಣೆಯಂತೆ (ಕ್ರಿಣಾಪು. ೨೩-೬೦೭). **ಹೆಡೆವಣೆ** : ಫಣಿವ ಹೆಡೆವಣೆಯನುದ್ಧರಿಸುವಂತಿರೆ ಹೆಗೆಮ ಭಸುಟನು ರತುನವುದ್ರಿಕೆಯ (ಭುಣಾ೪. ೬-೩೮) : ಒತ್ತಿ ತಿವಿದು ಛಿದ್ರವ ಮಾಡಿ ಭೂವಿಯ ಹೊತ್ತ ಹಾವಿನ ಹೆಡೆವಣೆಯ ಕಿತ್ತು ತನ್ನ (ಕಃಪುಣಾ. ೦೬-೬೬) ; ಎಡೆಯು ಪಂದುಗಳಿದುವು ನಾಗನಾಥನ ಹೆಡೆವಣೆಗಳ ದೀಕ್ಷೆಯಂತೆ (ಕೋಚಕ. ೦೭-೨೮). [ಪೆಡೆ + ಮಣೆ]

ಹೆಡೆವರಲ್ (ನಾ). = ಪೆಡೆವಣೆ : ಪೆಡೆವರಲಾವುಮೊ ರನ್ನದ ಸೊಡರಾವುದೊ ವೇಱುಮೆಂಬಿನಂ ಸುದೆಗದಚ್ಚಿಡಿದಿರೆ ನಾಗಾಂಗನೆಯರ್ . . . ಸಾರ್ತಂದರ್ (ಪಂಣಾಪು. ೦೬-೮೨); ಪೆಡೆವರಲು ದೆಳಗುಮಾರಗನ ವಿಷಮುಂ ನಿಮಿರ್ದುದೆನೆ ರಾಗ ಪೇದಮನೆವಾಗಿತ್ತುದು ನಿನ್ನ ನುಡಿಯು ಮೊದಲುಂ ತುದಿಯುಂ (ಕುಕೃಪ. ೯-೨); ನೇವಳದ ಫೂಯ ಹೆಡೆವರಲ್ಗಳೊಳು ವಾರ್ವೊಳಿವ (ಜಾಪಪಂ. ೨-೦). [ಪೆಡೆ + ಪರಲ್]

ಹೆಡ್ಡಗೆಯ್ (ಕ್ರಿ). ಲಟ್ಟಿಸು (?) : ಬೊಡ್ಡ ಜಾಕಳು ಬೆಲ್ಲ ಮುಡ್ಡಿಜದ ಸಣ್ಣಿಗೆ ಸುರಡ್ಡ ಕಂಟಿನ ಮಿಶ್ರದಡ್ಡಿವಂದುದುರಪಯುದಿ ನಿಡ್ಡಗಲ್ದಿಂದಲೀರಂಗುಲದ ಚೌಕದಿಂ ಪೆಡ್ಡಗೆಯಿದು ಸ್ಫೊಲ್ಕದಿ (ಅಪಪ್ರ. ೬-೨೬). [? + ಕೆಯ್]

ಹೆಣ್, ಪೆಣ್ಣು, ಹೆಣ್, ಹೆಣ್ಣು (ನಾ).. ೧. ಹೆಂಗಸು ; ಸ್ತ್ರೀ : "ಪೆಣ್ಗಳ್ ಹೋಸೆಯರಪ್ಪರ್" (ಕಚಾಗಿ. ೯); ಶೀತಕ್ಕಾಜಿದಳ್ಕೆ ತೊಟ್ಟಿರ್ದ ಧರಾತಳಮೆಂಬ ಪೆಣ್ಣ ಪೊಸ ಕಂಚುಳಿಕೆಯು ಸೀಮ್ಮುರ್ತ್ತಿನಂದವಾದುವು ಪನಿಗಳ್ (ಶಾಕೃಣಾ. ೬೮೪ ಪೂರ್ವಾ೪); ಪರಮಜಿನೇಂದ್ರವಾಣಿಯೆ ಸಪ್ತತಿ ಬೇಱದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು (ಅಪಪ್ರ. ೦-೯) ; ಅವನ ಚಿಲ್ಲಿಕೆ ಗಂಡು ಪೆಣ್ಗಳ ಕಂಗಳ ಸೆಜ್ಜೆಮಿಡಿದಿಹುದು (ಕಕ. ೦-೩೦). ೨. ಮಗಳು ; ಪುತ್ರಿ : "ಪೆಣ್ ದುಹಿತೃ ನೆಂದನೆ ಪುತ್ರಿ ತನೂಜೆ" (ಪಪ್ರಕೋ. ೫೯-೦೬); ಬುಧನೆ ಮನ್ತ್ರಂ ನೋಡೆ ಕಾಂತಾದ್ವಿದೇಹನವಾಂತೋ ಪಗತ ಗ್ರಹೋದಯಮುಮಾ ಪೆಣ್ಣೊಂದೆರಬ್ಗಂಡುಗಳ್ (ಜಾಕಪ. ೩-೦೯); ಬೆಲಿವೆಣ್ ಪೆಣ್ಣಂ ಪೆತ್ತಂತಿರೆ (ಕಕಾಪು. ೦-೦೫೬). **ಹೆಣ್ಣು** : ೧. ಪೆಣ್ಣಂಗಂ ಪೊನ್ನಿಂಗಂ ಮಣ್ಣಿಂಗಂ ಕಾಂಕ್ಷೆಯಿಂದವೆಱಗದೆ (ಕಕಾಪು. ೬-೮೪); ಕಂಡುದಿಲ್ಲವು ಪೆಣ್ಣಿಗೆ ಪೆಣ್ಣುಮನ ಪಾರುಳ್ಕೊಂಡಿದೆ ಕೇಳಾಯತಾಕ್ಷಿ (ಕೋಚಕ. ೨೬-೨೬) ; ಪೆಣ್ಣಿಲ್ಲವೆ ತಪ್ಪುನೆಲ್ಲ ಪಡೆದ ತಾಯಿ . . . ಪೆಣ್ಣು ಪೆಣ್ಣಿಂದೇತಕೆ ಬೀಳುಗಳಿವರು ಕಣ್ಣು ಕಾಣದ ಗಾವಿಲರು (ಪಪ್ರ. ೫-೬)· **ಹೆಣ್** : ೧. ಹೆಣ್ಣಳ ಕಣ್ಣನೀಡಿಗೆ ಗುಱಿಯಾದೊಡೆ (ಕಂಪಂ. ೪-೦೩೫). **ಹೆಣ್ಣು** : ೧. ಮೊಲೆ ಮುಡಿ ಬಂದರೆ ಹೆಣ್ಣಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ (ಪಂಣಾಪ. ೬೬-೦೬೭); ಹೆಣ್ಣಿನಿಂದಲೆ ಇಹವು ಹೆಣ್ಣಿನಿಂದಲೆ ಪರವು (ಸಪ್ರಣ್ಣ. ೦೬೮೫); ಹೆಣ್ಣಿನಿಂದ ಏನಾಗುವುದೋ ಯಾರು ಬಲ್ಲರು ? (ಅಪಪ್ರ. ೪೪). ೨. ಹೆಣ್ಣಾ ಕುಡುವರಲ್ಲದೆ ಕೂಟಗಾದವರುಂಟೆ (ಕೂಪ್ರಸಂ. ೨೨೬-೨೬). ೩. ಹೆಂಡತಿ ; ಪತ್ನಿ : ಹೆಣ್ಣ ಬಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು (ಭುಪಾಕೇ. ೬. ೪೯-೦೦೭). ೪. ಮದುವೆಗಳು ; ವಧು : ಗಂಡಿನ ಕಡೆಯ ಮೆರವಣಿಗೆ ಇದ್ದಂತೆಯೇ ಇರುತ್ತದೆ ಹೆಣ್ಣಿನ ಕಡೆಯು ಎದುರುಗೊಳ್ಳಲು ಬಂದವರ ಮೆರವಣಿಗೆ (ಸಪ್ರಕೃ. ೬೩); ಹೆಣ್ಣಿನ ಕಡೆಯವರೂ ಕನ್ಯೆಯರೂ ಹಿಂದಿನ ರಾತ್ರಿಯೇ ಬಂದು ಅರಮನೆಯ ಒಂದು ಭಾಗದಲ್ಲಿ ಬಿಡಾರ ಮಾಡಿದ್ದರು (ಜಾಂಕಥಾ. ೦೨೪).

ಪೆಂಗಳ್, ಹೆಂಗಳ್, ಹೆಂಗಳು (ಬಹುವ) : ಆ ವಹ್ನಿಯಂ ಕಾದ ಪೆಂಗಳಿಗೆ ಪಾತಿವ್ರತ್ಯಪಳಿದುದು (ಪಃಕೃಪ್ರ. ೩-೨೦-೨೪); ಪೆಂಗಳ ಸೂಜಿ ವಿಶೇಷಮಾಯ್ತು (ಹಪ್ರಾರ. ೩-೬); ಕೊಡೆಯ ಹತ್ತಿ ಹೆಂಗಳಿಕ್ಕೂಡೆ ಹೇಱುಗಳವ ಮಾಡುತ್ತವಿರಲು (ಕ್ಯಾಂ೦. ೦೧೨೯. ೦೩-೪ : 12ಪಹು ೬೪); ಲೋಕೇಶ್ವರನೆಂಬ ಪಾಪಿಷ್ಠ ಹೆಂಗಳನೇಕೆ ನಿರ್ಮಿತವ ಮಾಡಿದನೋ ನಾಕೇ ದನ್ಮವಿದೇಕೆಂದಾಕೆಯೊಳಾಕೆ ವೇಳಿದಳು ದುಃಕ್ಕವನು (ಕೋಚಕ. ೦೦-೩೦) ; ಬೆಲುವಿನ ಹೆಂಗಳೊ ಒಲವಿನ ಕಂಗಳೊ (ಅಪಪ್ರ. ೩೦-೦೪). ಪೆಂಡರ್, ಪೆಂಡರು, ಪೆಂಡಿರ್, ಪೆಂಡಿರ್ಗಳ್, ಹೆಂಡರು, ಹೆಂಡಿರ್, ಹೆಂಡಿರು (ಬಹುವ) : ಪನ್ನಿರ್ವರ್ ಬೌ[ದೇ]ರರುಮಂ ಪೆ[ಣ್ಣ][ರಂ] ಕವಿಲೆಯುಮನಱಿದ ಮಹಾಪಾತಕಂ (ಪೌಪ್ರ. XI-i. ೪೦-೦೬ ; ೨೦೮); ಲೋಕದೊಳ್ನೋಡದ ಪೆಂಡರಿಲ್ಲ ಆಡು ಮುಟ್ಟದ ಗಿಡುವಿಲ್ಲ (ಧರ್ಮಾಕ್ಯು. ೩-೮೨); ತೆಜಿಗೆ ನೆಜಿವೊರಿಲ್ಲದಁಗೆಲ್ದೆಣ್ದಿರು ಮರ್ಕಳುಂ (ಎಳ. III. ಪಚಪ್ರ. ೦೩೯-೩ ; 915 ?); ಕಲಿಗಳ್ಳನೆಂಬೋ × × × [ಜಿ]ಯ ಬಾಲ್ಗೆನೆನ್ದು ಪರಿಚ್ಛೇದಿಸಿ ಪೆಣ್ದೆರನಂಬಿದೊಡೆ ಪುಟ್ಟದೊ × × × ರದೆ (ಪೌಪ್ರ. XI-i. ೨೦-೮; ೪೧೨); ಪೆಂಡಿರ್ ಪೆಂಡಿರೊಳಿದೆಂತು ಬೆರಸುವರಬಲೆ (ಪಂಣಾಪು. ೦-೭೭) ; ಸಮಸ್ತಶಾಸ್ತ್ರಂಗಳೊಳಂ ಪರಿಣತನೆನಿಸಿದನಂ ಪೆಂಡಿರ ಚಿತ್ತಮನಿಂತುಟೆಂದು ನಿಟ್ಟಿಸಲಾಱಂ (ಪಪ್ರಚ. ೪-೦೦೦,; ವಶಿಹಿತಕಾರ್ಯೆಯಂ . . . ಕಳತ್ರಮೆಂದತಿಶಯದಿಂದೆ ಪಾಲಿಸುವುದಲ್ಲದ ಪೆಂಡಿರನಿಕ್ಕು ಕಿಚ್ಚು ಸೊಳ್ (ದಪಳು. ೧೪-೦೦೭) ; ಪೆಂಡವಾಸದೊಳ್ಪೆಂಡಿರಳುಂ ವಿವಮಾನಂಗಳ ಮುಂದಾಡುತ್ತಂ (ಪಪ್ರಾಣ. ೪೪-೦) ; ಪಿಂಡ ಬಲಿದವ್ವು ಬಳಿಕ ಮೂವರು ಹೆಂಡರಿಗೆ (ಕೂಪಣ. ೦-೪-೦) ; ಹೆಂಡರ ಔತಣವ ಗಂಡರು ಬಲ್ಲರೇ (ಪಪ್ರಕೃ. ೦೭೬೪): ಮಕ್ಕಳೆಲ್ಲ ಮನೆವಾರ್ತೆ ಮಾಡಿದರೆ ಅಪ್ಪಗೆ ಯಾಕೆ ಇಬ್ಬರು ಹೆಂಡರು ? (ಗಾಪ); ಗಂಡ ಹೆಂಡಿರನತ್ಯುಗ್ರದಿ ಶಿಕ್ಷಿಸಲ್ . . . ಹರ. ಕೊಲ್ಲಲ್ ಪರ ಕಾಯ್ವನೇ (ಕೋಪುಚ. ೨೯) ; ರಿಣ ತಪ್ಪಿದ ಹೆಂಡಿರಲ್ಲಿ . . . ಜೀವವಿಲ್ಲವ ದೇಹದಲ್ಲಿ ಫಲವೇನೊ (ಪಪ್ರ. ೫೬೪); ಸೂಜಿವೋಯ್ತುತು ಸುರಪತಿಯು ಭಂಡಾರ ಹೆಂಡಿರುಸಹಿತ ನಿರ್ಜರಾಸುರಿಯರು ತೊತ್ತಾದರು (ಭುಣಾ೪. ೬-೦೦); ಕಂಡರೆಡೆಯಲಿ ಖರನ ನಗರದ ಹೆಂಡಿರುಗಳಕ್ಕಿಗಳ . . . ಬಸುಱ ಹೊಯ್ಲುಗಳ (ಕೋಣಾ. ೬-೪-೨); ಹೆಂಡಿರುಗಳ ಬಿಟ್ಟೋಡಿದವರ . . . ಅಂಡಲೆಗಳನೇನೆಲ್ಲೆ (ಅಪಪ್ರ-೦೦-೩೨). **ಹೆಂಡಿರಾಳಿಗ** = (ಆಲಂ) ಬರಿಯ ಮಾತಿನ ಜಗಳ :

ಕಾಳೆಗಮನುಟಿಮ ಪೆಂಡಿರ್ಗಾಳೆಗಮಂ ಮಾಟ್ಟೆ (ಸಂಗಾಸಾ. ೦೩-೦೩೯). ಪೆಣ್ದಲೆರನ್ನೆ = ಹೆಂಗಸರಲ್ಲಿ ತಲೆಮಣಿಯಂತಿರುವವಳು ; ಅತ್ಯಂತ ಶ್ರೇಷ್ಠಳಾದವಳು : ಚಿತ್ಸುಧಾರುಚಿಜ್ಞಂ ಗರ್ಭದೊಳಿರ್ಪನಾಗಿ ಪೆಣ್ದಲೆರನ್ನೆಗೆ ಆರರೆ ವಸ್ತುಗಳ ರುಚಿಯರುಚಿಯಾದುವು (ಪದ್ಮಾ. ೨-೪೦); ಕಪ್ಪುರವ ಚಿನ್ನಾಗಿ ಹದ ಮಾಡಿ ಲೇಪಿಸಿ ಪೆಣ್ದಲೆರನ್ನೆಗೆ ತಳವನಿಕ್ಕಿದರು (ಸೋಹತ. ೩೦-೩). ಪೆಣ್ಮಂಡೆಮಾಣಿಕ = ಪೆಣ್ದಲೆರನ್ನೆ : ಪೆಣ್ಮಂಡೆ ಮಾಣಿಕ ಹರಿವಧೂಟಿಯಲಿ ಮುಗುಳಂಬನೊಡಲ ಬೇಡಿದಳು (ಸೋಹತ. ೦೦-೯); ಪೆಣ್ಮಂಡೆಮಾಣಿಕವಹ ಪಟ್ಟದರಸಿ . . . ಪೂಗೋಲನ ಕಾಣಿಸಿದಳು ಕಾಂತನೆಡೆಗೆ (ಸೋಹತ. ೨೨-೦೬). ಪೆಣ್ಮಾಡು, ಹೆಣ್ಮಾಡು = ೧. ಹೆಣ್ಣು ರೂಪಾಗಿ ಮಾಡು; ಸ್ತ್ರೀಯನ್ನು ಸೃಷ್ಟಿಸು : ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್ (ಅಧಿಪು. ೬-೨೩); ಕಾಮದೇವನಯ್ದಲರಂಬಿನ ಶಕ್ತಿಗಳುಮನೊಂದುಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದನಕ್ಕುಂ (ಸಂಪಶಾ. ೪-೬೫ ಸ). ೨. ಹೇಡಿಯನ್ನಾಗಿ ಮಾಡು ; ಹಿಂಜರಿಯುವಂತೆ ಮಾಡು : ನಿಜಾರಿಬಳಮಂ ಪೆಣ್ಮಾಡಿ ಪೆರ್ಮ್ಮಾಡಿ ತತ್ಸತುಪುತ್ರಂ ನೆಗಳ್ದಂ (ಕಇಅ. ೭೪ ೦೨-೮ ; 1170) ; ಉದ್ಧತಾರಿಬಳಮಂ ಪೆಣ್ಮಾಡಿ ಪೆಮ್ಮಾಡಿ ತಾಂ ನೆಗರ್ದ್ದಂ (ಎಇ. XV. ೩೦೯-೦೨ ; 1172). ಹೆಂಗಳೆ = ಹೆಂಗಸು; ಸ್ತ್ರೀ : ಹೆಂಗಳೆಯೊಬ್ಬಳು ಅಳುತ್ತ ನಿಂತಿದ್ದಳು (ಶ್ರೀರಾಪ. ೬); ಹೆಂಗಳೆಯಾದ ನನಗೆ ಹೇಗೆ ತಿಳಿಯಬೇಕು ? (ಇಂಪಮು. ೪೫). ಹೆಂಡಹೆಂಡಿರು (ದ್ವಿರುಕ್ತಿ) : ಗಂಡಗಂಡರನೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು (ಮಹಾದೇ. ಬ. ೩೨-೬೮). ಹೆಣ್ಣಾಗು = ೧. ಸ್ತ್ರೀಯಾಗು ; ಹೆಂಗಸಾಗು : ಮತ್ತೊಮ್ಮೆಯಾನು ಹೆಣ್ಣಪ್ಪೆ ನಯ್ಯಾ . . . ನಿಮ್ಮ ಶರಣರಿಗೆ ವಧುವಪ್ಪೆ (ಬಸವ. ೭೦೩); ಹೆಣ್ಣಾದೊಡಂ ಗಂಡಾದೊಡಂ . . . ಸರ್ವನೆಂಬಿವಾದಿಯಾದುವರ್ಕೆ ಪುಲ್ಲಿಂಗದಂತೆ ರೂಪು ಪತ್ತುಗುಂ (ಶಮದ. ೦೨೦ (ಆ) ಪ್ರಯೋ) ; ಹೆಣ್ಣಾಗಿ ಬಾಣಸದ ಪವಣಱಿದುದಿಲ್ಲಲಾ (ಶೃಮಿಪಾ. ೨-೬೧). ೨. ಮೈನೆರೆ : ಋತುಮತಿಯಾಗು : ಅವಳು ಹೆಣ್ಣಾದ ಮೇಲೆ ಅವಳ ಸುಂದರತೆ ಮನ್ಮಥನೊಡನೆ ಪ್ರತಿಸ್ಪರ್ಧಿಸುವಂತಿತ್ತು (ಶಿಲಾಮು. ೦೦೩); ಮಣ್ಮಯ್ಯನರಲಿಸುತ ಹೆಣ್ಣಾದಳವಳು (ಕಾಲೂರ. ೩೩-೩೦). ಹೆಣ್ಣಾಪುಸಕಲಿ = ಹೇಡಿ ; ಅಂಜುಬುರುಕ : ನೀನು ಯಾವಾಗಲೂ ಹೆಣ್ಣಾಪುಸಕಲಿ ಕಳ್ಳೆಕಾಯಿ ಹಾಗೆ ... ಅಳ್ತೀಯ ! (ಸ್ವಾಮಿಸ್ಕೇ. ೧೭೨). ಹೆಣ್ಣಾಪುಸಕಿ = ಹೆಣ್ಣಾಪುಸಕಲಿ : ಹೆಣ್ಣಾಪುಸಕೀ ಕೈಲಾಗದವನೇ! (ಸಡದಾ. I. ೩೨೩). ಹೆಣ್ಣುದಿಕ್ಕು = ಹೆಂಗಸಿನ ನೆರವು.– ಸಹಾಯ : ಅವನ ತಾಯಿ ಸತ್ತುಹೋದಳು. ಆಗ ಅವನಿಗೆ ಮನೆಯಲ್ಲಿ ಹೆಣ್ಣುದಿಕ್ಕಿನ ಅವಶ್ಯಕತೆ ಗೊತ್ತಾಯಿತು (ಬಂಕಿಮ. ೦೯೦). ಹೆಣ್ಣುಹುಡುಗಿ = ಬಾಲಕಿ : ಗರಡಿಮನೆಗೆ ಬೆಂಕಿ ಹಾಕಿದ್ದು ಯಾರೋ ಹೆಣ್ಣುಹುಡುಗೀರ ಕೆಲಸ (ರಾಶೇಂದ್ರ. ೨೬೬). ಹೆಣ್ಣುಹೆಂಗಸು, ಹೆಣ್ಣುಹೆಂಗುಸು = ಅಬಲೆ ; ಆಶ್ರಯರಹಿತಳು : ನಾನು ಒಬ್ಬಳೇ ಹೆಣ್ಣುಹೆಂಗಸು, ಸಣ್ಣಮಕ್ಕಳನ್ನು ಕಟ್ಟಿಕೊಂಡಿರುವುದು ಹ್ಯಾಗೆ ? (ಸಂಗಾಳ್ಯ. ೬); ಹೆಣ್ಣುಹೆಂಗುಸು ನಾನು, ಈ ಕಾರ್ಯದಲ್ಲಿ ಪ್ರವರ್ತಿಸುವುದೆಂದರೇನು ? (ಆರ್ಯಳ. ೪೪).

[ದೇ. ॥ ತಮಿ. ಮಲ. ಕೋತ. ಪೆಣ್ ; ತುಳು. ಪೊಣ್ಣು ; ಕೊಡ. ಪೊಂಗು. ಪೊಣ್ಣ್]

ಪೆಣ, ಹೆಣ (ನಾ). ಜೀವ ಹೋದ ಶರೀರ ; ಶವ : "ಪ್ರೇತಃ, ಪರೇತಃ, ಕುಣಪಃ, ಶವಃ—ಈ ೪ ಪೆ(ಹೆ)ಣಂ" (ಹಲಾಯು. ೦೦೪-೬); ಬೆದೆಕಾಱರೆರ್ದೆಯಂತೆ ಬೇಯುತಿರ್ದ ಪೆಣಂಗಳಿಂ . . . ರಣದೇವತೆಯ ರಿಂದತಿಭಯಂಕರಾಕಾರಮಪ್ಪುದು (ಕಾಶ್ಯಸಾ. ೩೨೯ ಕೂದ್ರಳ) ; ತುಱು ಪರಿವಾಗಳೆಮ್ಮ ಪೆಣನಂ ತುಱಿದುಂ ಪರಿಗುಂ ದರ್ (ಪಂಪಶಾ. ೬-೯೩) ; ಪೆಣದ ಕೈಗಳೆ ಪುಟ್ಟುಗಳಾಗೆ . . . ನೆತ್ತರ ತೊಱೆಯಂ ಮರುಳ್ಮೊಱಸಿ ಪಾಯಿಸುತಿರ್ದುವು ಯುದ್ಧಭೂಮಿಯೊಳ್ (ಸಂಗಾಸಾ. ೦೩-೬೬). ಹೆಣ : ಅಡವಿಯೊಳಟುಹವುಂ ಹೆಣಕ್ಕೆ ಲೇಪನಂಗೆಯ್ದುದುಂ . . . ಇವಱೋಪಾದಿ ಎಂಬ ನೀತಿಕಾಱನ ಮಾತದೇಕೆ ತಪ್ಪುಗುಂ (ಸಂಪಶಂ. ೦೩೬-೯); ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ (ಬಸವ. ೦೩೯) ; ಅರ್ಜುನನಂಬಿನುಱುಬೆಗೆ ಹೆಣನ ದಾವಣಿ ಹಾಸಿದವು (ಕುಣ್ಯಾಸ್ತ್ರೋ. ೦೦-೩) ; ಊರು ಉಪಕಾರ ಅರಿಯದು, ಹೆಣ ಶೃಂಗಾರವರಿಯದು (ಗಾದೆ).

ಹೆಣ ಎತ್ತಿಸಿ ಬಿಡು = ಕೊಲ್ಲು ; ಸಾಯಿಸು : ಮೊದಲು ಹಣ ಇಲ್ಲಿ ಬಡೀರಿ, ಇಲ್ಲದಿದ್ರೆ ನಿಮ್ಮ ಹೆಣ ಎತ್ತಿಸಿ ಬಿಡ್ತೀನಿ ಈಗ್ಲೇ ! (ಹೇಮಳೂ. ೩೪). ಹೆಣ ಎತ್ತು = ಸಾಯು ; ಸತ್ತುಹೋಗು : ಬರೆದವನು ಎಂತಹ ಹೊಲಸು ಮಾತುಗಳನ್ನು ಬರೆದಿದ್ದಾನೆ ನೋಡು. ಇವನ ಹೆಣಾ ಎತ್ತಲಿ (ಕಂಗಸೋ. ೦೭೬). ಹೆಣಚಾಕರಿ = ಹೆಣವಾಗುವಂಥ ಕೆಲಸ ; ಅವಿರತವಾದ ದುಡಿಮೆ : ಕಂಪನಿ ಕೆಲಸ ಇದ್ದೇ ಇರುತ್ತೆ ಹೆಣಚಾಕರಿ (ಕುಣ ೬೪). ಹೆಣದತ್ತ = ಹೆಣಕ್ಕಿಂತಲೂ ಕಡೆಯಾಗಿರುವವನು ; ನಿಷ್ಪ್ರಯೋಜಕ : ಹೆಣದತ್ತನ ಹಾಗೆ ಈ ರೀತಿ ಕೂತಿದ್ದರೆ ಯಾವ ಕೆಲಸ ತಾನೇ ಆದೀತು? (ಕೂಡಿ). ಹೆಣನುಂಡು ಹೋಗು = "ಹಾಳಾಗು" (ಅಪಸಂ. ಕೋಶ) : ಹರಿದು ಹತ್ತಿ ಮುತ್ತಿ ಹಿಡಿದಹೆನೆಂದು ಜಾಱಿ ಉರುಳಿ ಬಿದ್ದರು ಅನಂತರು ಹಿಡಿದವರೆಲ್ಲ ಹೆಣನುಂಡು ಹೋದರು (ಅಪಸಂ. ೦೦೩-೪೭೬). ಹೆಣ ಬಿದ್ದು ಹೋಗು = ಅತ್ಯಂತ ಕಷ್ಟಕ್ಕೆ ಒಳಗಾಗು: ವಿಪರೀತವಾದ ತೊಂದರೆಗೆ ಈಡಾಗು : ಸರಳಬಡ್ಡಿ, ಚಕ್ರಬಡ್ಡಿಗಳನ್ನು ತೆರುವುದರಲ್ಲೇ ಅವರ ಹೆಣ ಬಿದ್ದು ಹೋಗಿತ್ತು (ಹೇಮಳೂ. ೩೪). ಹೆಣ ಬೀಳು = ೧. ಸಾಯು : ಸತ್ತುಹೋಗು. ೨. ಹಾಳಾಗು; ನಾಶವಾಗು : ಕೇಳಿದಿಯಾ, ಸ್ವಾಮೀಜಿ ! ನಮ್ಮ ಹೆಣ ಬಿದ್ದ ಸಮಾಜದ ಈ ವಿಷೋದ್ಗಾರಗಳನ್ನು ! (ಹೊಸಂಗಾ. ೦೦). ೩. ಅಡಗು. ಇಲ್ಲವಾಗು : ನಿದ್ದೆ ಕಟ್ಟಿ ಹಾಕಿದೆ ; ಸದ್ದು ಹೆಣ ಬಿದ್ದಿದೆ ! (ಅಬಿಕೇ. ೨-೬). ಹೆಣಭಾರ = ಹೆಣವಷ್ಟು ಭಾರ ; ಬಹಳವಾದ ಹೊರೆ : ಬೆನ್ನಿನಲಿ ಹೆಣಭಾರವಿಟ್ಟು ಈಗ ನಮ್ಮ ಹೆಗಲಿಗೇ ಕೈಹಾಕಿ ನಡೆದಿರುವೆಯಲ್ಲ (ಸಂಮು. ೨೬-೦೦). ಹೆಣವಾಗು = ಬಹಳವಾಗಿ ದಣಿ.–ಬಳಲು : ಬೆಳಗ್ಗೆಯಿಂದ ಒಂದೇ ಸಮನೆ ಕೆಲಸ ಮಾಡಿ ಹೆಣವಾಗಿದ್ದೀನಿ (ಕೂಡಿ). [ದೇ.॥ ತಮಿ. ಮಲ. ಪಿಣ ; ತುಳು. ಪುಣ ; ತೆಲು. ಪೀನಿಗ, ಪೀನುಗ, ಪೀನುಗು, ಪೀನ್ಗು ; ಗಡಬ. ಪೀನಿಗೆ ; ಕುವಿ. ಪೀನುಗು]

ಪೆಣಕಿ 'ಪೆಳಕೆ' ನೋ.

ಪೆಣಕ್ಕೆ₁. ಹೆಣಕೆ (ನಾ). ೧. ಹೆಣಗೆ: ಜೋಡಣೆ : ಎರಡುಗಯ್ಯ ನಾಲ್ವೆರಲ ನಡನಡುವೆ ಪೆಣಕೆಯೊಳಿಟ್ಟು ಹೆಡಕತ್ತಿಲಿರದಿಟ್ಟು ತೂನೆ ಬಾರದೊಡೆ ಶುಭವವು ಹಿರಿದು ಬರಲು ತಿಂಗಳಿಗೆ ಮರಣಂ (ಪೀಕೃಪು. ೪-೨೪-೨೪). ಹೆಣಕೆ : ೨. ಉಲ್ಲನ್ನು, ಬಣ್ಣದ ದಾರ ಮುಂತಾದುವುಗಳಿಂದ ಹೆಣೆಯುವುದು: ತಾಯಿಯವರು ಹೆಣಕೆಯ ಕೆಲಸವನ್ನು ಮಾಡುತ್ತಿದ್ದರು (ಮೇದಿಮ. ೨೦೦) ; ನಿನಗೆ ಮೊದಲಿನಿಂದಲೂ ಹೊಲಿಗೆ ಹೆಣಕೆ ಅಂದರೆ ಪ್ರೀತಿ ತಾನೆ ? (ಕುಂಕುಮ. ೦೨). ೩. ಹೆಣೆದುದು : ಅದನ್ನು ಹೆಣೆದ ಹೆಣಕೆ, ಅದರಲ್ಲಿ ತೆಗೆದ ಚಿತ್ರ ಅವನವಾಗಿವೆ (ಶಸಂ. ೦೦) ; ಹೂಬಿಸಿಲ ಕರವಸ್ತ್ರದಲಿ ತರತರದ ಹೆಣಕೆಯ ನಕ್ಷೆಯು (ಸಂಮು. ೦೦-೬)

[ಪೆಣ್ಕೆ₁ + – ಕೆ./ತಮಿ. ಪಿಣಕ್ಕ, ಪಿಣಕ್ಕು]

ಪೆಣಕ್ಕೆ₂ 'ಪೆಳಕೆ' ನೋ.

ಪೆಣಗಾಟ, ಹೆಣಗಾಟ (ನಾ). ೧. ಕಷ್ಟ : ತೊಂದರೆ ; ತಾಪತ್ರಯ : ಈ ಪೆಣಗಾಟದಿನ್ ಏನಾನುಮನ್ ಬಿಡುಗಡೆಯನಱಸು (ಬದ್ಧಪ್ರ. ೦೩-೩೦೬). ಹೆಣಗಾಟ : ೧. ಜೀವನ ಅಂದ ಮೇಲೆ ಹೆಣಗಾಟ ಇದ್ದದ್ದೆ (ಕೂಡಿ). ೨. ಪ್ರಯತ್ನ : ಹೋರಾಟ : ಅವರ ಬರವಣಿಗೆ ನಿರ್ದುಷ್ಟವಾಗಿ

ಅಚ್ಚಸಲು ಅವರ ಹೆಣಗಾಟ (ಕ್ಯಕೋ. ೧೮). ೩. ಜಗಳ ; ಕಲಹ : ಶುದ್ಧಾತ್ಮ ವರಮಾತ್ಮರಿಬ್ಬರೂ ಒಂದು ರತ್ನಕ್ಕೆ ಹೆಣಗಾಟವನಾರಿಹರು ಅವರ ಹೆಣಗಾಟವ ನೋಡಿ ಆ ರತ್ನವ ಸೆಳೆದುಕೊಂಡರೆ ಕೂಡಲ ಸಂಗಂಗಾರೋಗಣೆಯಾಯಿತ್ತು (ಬಸ. ೧೦೩); ಯಾವದೊಂದು ಸವಾಜದಲ್ಲಿ ಕೆಲವು ಜನರ ಜೀವನದ ಹೆಣಗಾಟವು ಬೇರೆ ಕೆಲವರ ಹೆಣಗಾಟದೊಡನೆ ತೊಡಕಾಗುತ್ತದೆ (ಕ್ರಾಪಾದ. ೧೦). [ಪೆಣಗು + ಆಟ]

ಪೆಣಗಿಸು, ಹೆಣಗಿಸು (ಕ್ರಿ). ಹೋರಾಡುವಂತೆ ಮಾಡು ; ಕಾಳಗವನ್ನು ಏರ್ಪಡಿಸು : 'ತಗರ್ವೆಣಗಿಸು' ಪರಾ. **ಹೆಣಗಿಸು** : ಯಾರು ತಗರುಗಳನ್ನು ಹೆಣಗಿಸುತ್ತಿದ್ದರು (ಕದುಚ. ೨೩). [ಪೆಣಗು + – ಇಸ್ಸು]

ಪೆಣಗು, ಹೆಣಕು, ಹೆಣಗು (ಕ್ರಿ)· ೧. ಹೋರಾಡು ; ಕಾದು : ಮದನಕಲಹದೋಲ್ದು ಕೊಸರಿ ಪೆಣಗುವ ಸತಿಯವೊಲ್ ಪೆಣಗಿದುವು ಶಿವನೊಳು (ಕಣಾಕ. ೦-೦೦-೩೮); ಗಿರಿತಟದೊಳೊಂದೊಂದಱೊಳ್ಪೆಣಗಿ ಸೋಲ್ತು ಮದಕರಿ ಧರೆಗುರುಳ್ವಂತೆ (ಕೃಭಾಪಾ. ೨೦-೩೦) ; ಪೆಣಗೆ ಕಡುಗವಡಿನಿಂದಂ ಕುಣಗಲ ನರಸಿಂಗವುರದ ನಾಯಕರಿರ್ವರ್ (ಕಪೂ. ೩-೧೪). ೨. ಸ್ಪರ್ಧಿಸು ; ವೈಪೋಟಿ ಮಾಡು : ದುಗೆಭೂಷಣದ ಶೋಭೆ ಮುಂಕೊಂಡು ಬೀಗ ದಿನಮಣಿಯನರುಣಾಶ್ವೆಗನ್ಮರ್ತನೆಯ ಪೆರ್ಚಿಸಲು ಪೆಣಗು[ಪಣಂ.ವಿಣುಗು]ತುಭಯಕಟಾಕ್ಷ ಮುಂಬರಿದು ಶುಭ್ರಾಂಶುವಂ ಕರೆಯೆ (ಪಂಪಾಣಾ. ೦-೨೨-೪೨). ೩. ಹಠ ಮಾಡು ; ಮೊಂಡುಹಿಡಿ : ಪಾದವಂ ಬಲ್ಪಿಡಿದು ಬಿಡನೆಂದು ಪೆಣಗುತಿರೆ (ಕಪ್ಪ. ೩೩-೦೭).**ಹೆಣಕು**: ೧. ತೆಗೆ ತೆಗೆ ಸಾರು ಫಷಫಡೆಯೆನುತ ಮಂಡೆಗೆ ಹಾಯ್ದು ಹೆಣಕಿದನು (ಶಾಶಾ. ೦೯-೨೮). **ಹೆಣಗು** : ೧. ಬಲ್ಲಿಷಾನೆಯುವೊಂದು ಸಲದಿಯುವಿಲ್ಲಿ ಹೆಣಗಿದವು (ಜಸಪ್ರ. ೦೬-೩೭) ; ಬಡದೆ ಹೆಣಗಿದನಣುವ ರಕ್ಕಸನೊಡನೆ (ಶಾಶಾ. ೨೬-೬೪) ; ಅಲ್ಲಲ್ಲಿ ಪಾತ್ರವ ಕಾಣಿಸಿ ಹೆಣಗುವ ಮಲ್ಲರ ತೋಱುತ (ಕಪ್ರ. ೪೬-೬೦). ೨. ಅಡಸಿ ಪದಹತಧೂಳಿ ಮದವನು ಕುಡಿದುದಾ ಮದಧಾರೆ ರೇಣುವನಡಗಿಸಲು ಮದಧೂಳಿಗಳು ಹೆಣಗಿದುವು ತಮ್ಮೊಳಗೆ (ಭಾಕ್ಕ.೪೪.೨-೬೩) ; ಕಾಡಿಗಳನುವಿನಿಂದೊಂದನೊಂದಾ ಲಿಂಗಿಸುತ್ತಮಿರೆ ವನಜವನಜಗಳೊಡನೆ ಹೆಣಗುವಂದದಿ ತೋಳ್ಗಳೊಡ ನೊಡನೆ ತೋರುತವಿರೆ (ಪಂಪಾಣಾ. ೩-೨-೦೮) ; ಓದು ಬರಹ ಬರೋ ಮಂದಿ ಕಾವು ನಾವು ಹೆಣಗಾಕೆ ಆಗೋಲ್ಲಾ (ಕಾಹುಳ. ೧೩). ೪. (ಆಲಂ) ಕಷ್ಟಪಡು; ಪೇಚಾಡು : ಹಣವುಳ್ಳವರು ಹೆಣಗಿದರು (ಶಾಶಾ. ೨-೭) ; ಈ ಕಾಲನೆಂಬುವ ಪ್ರಾಣಿ ... ಗಡಿಯಾರವಲ್ಲವನ ಹಿಡಿದು ಗಾಣವಾಡಿಸಲು ಹೆಣಗಿದ್ದೇವೆ (ಕಂಪ್ರಬು. ೩೦-೦೦) ; ಅವರು . . . ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಹೆಣಗಿದರು (ಐತಿಕೋಡ. III ಕ್ರಿಶಾದಪ). ೫. (ಹಿಡಿತದಿಂದ ತಪ್ಪಿಸಿಕೊಳ್ಳಲು) ಒದ್ದಾಡು ; ಪ್ರಯಾಸಪಡು : ಆ ರಾಣಿ ಹಲುಬಿದಳೊತೆಮುತುಬಿ ಹೆಣಗಿದಳು ಖಳನೊಡನೆ (ಭಾಕ್ಕ.೪. ೦೩-೨೩) ; ಸರ್ಪನಂದದಿ ಹೊಗಿ ತಪ್ಪಿ ಸುಳಿಯುತ್ತ (ಕಂಗ. ೬೯-೩). ೬. ಏಗು ; ನಿರ್ವಾಯಿಸು : ಅವಳ ಸಂಗಡ ಹೆಣಗುವದು ಬಲುಕಷ್ಟ (ಕಂಗಪ. ೨೬). ೭. ಮಾಡು ; ಆಚರಿಸು : " ಮಾಡು, ಎಸಗು, ನೆಗಳು, ಸಮೆ, ಗೈ, ಹೆಣಗು " (ಕಂಪ್ರಹು. ೬೪-೩)). ೮. ಸಂಭೋಗಿಸು : ಹೆಣಗುವಲ್ಲಿ ಮೈಯೆಲ್ಲಾ ಕೈಯಾಗಿ ಹೆಣಗಬೇಕವ್ವ (ಸರಗ. ೬೬-೩೬೫).

[ದೇ. ‖ ತವಿ. ಪಣಕ್ಕು ; ಮಲ. ಪಣಕ್ಕು, ಪಿಣಞ್ಞು ; ತೆಲು. ಪೆನಂಗು, ಪೆನಗು]

ಪೆಣಗೆಡಹು, ಹೆಣಗೆಡಹು (ಕ್ರಿ)· ಹೆಣವನ್ನು ಬೀಳಿಸು ; ಸಾಯಿಸು : ಬೇಂಟೆಯನಣಿಯರದಿಂ ಬೇಡರಾಡುತಿರೆ ಘನ ವನಹಾಗ್ರಣಿ ಘೃತ್ಸ್ನ ಕೊಂದ ಚಂದದೆ ಹಣೆದುಱೆ ಪೆಣಗೆಡಹಿತಾಗಳತಿಶೌರ್ಯದೊಳಂ (ಹಪಾಕ್ಕ. ೨-೨೭).

ಹೆಣಗೆಡಹು : ದೊಪ್ಪನೆ ಕೊಯ್ದು ಸೀಳುವ ಹೆಣಗೆಡಹುವಬ್ಬರಕೆ ಎಗಿಲೊದಗಿದರು ಬಿಲ್ಲವರು (ಭಾಕ್ಕ.೬೯. ೨-೦೪).

[ಪೆಣ + ಕೆಡಹು (<ಕೆಡವು)]

ಪೆಣದಿನಿ, ಹೆಣದಿನಿ (ನಾ)· ಹೆಣವನ್ನೆ ತಿನ್ನುವ ಭೂತ, ಪಿಶಾಚಿ ಮುಂತಾದುವು : ಪೆಣದಿನಿಗಳ ತಂಡು ಬಲ್ಪೆಣಗಳನಱಸುತ್ತುದುಲ್ಲಿ ಬರವರೆ (ಗಪಾಹು. ೪-೦೩) ; ಪೆಣದಿನಿಗಳವೊಲು ಬಾಂಧವರುಗಳ ಹರಣವ ಕೊಂಡೆವು (ಕಾಗಕ್ಕ. ೪-೦೦) ; ಈ ಪೆಣದಿನಿಗಳ ಬಸಮೆನೆ ಬಾಟ್ಟಿಣಂಗ ಳೆವಗೆಲ್ಲಿ ರಸಿಕರೆಲ್ಲಿಯ ನೇಹಂ (ಜಸಪ್ರ. ೬-೦೩೭). **ಹೆಣದಿನಿ** : ಸಾತ್ಯಕಿ ಗುಣಯುತ ಕಾಮಕಂದರ್ಪ ಹೆಣದಿನಿ ದಡಿಗದೈತ್ಯರ ಕೂಡೆ ಕಾದಿ ಮಾರ್ಗಣದಿಂದೆ ಕಡಿದೊಟ್ಟಿದರು (ಕೂಚಪ್ರ. ೨೦-೬೩) ; ಹೆಣದಿನಿಗಳಪ ಗೃಧ್ರರೂಪವು ವರಿದು ದ್ವಿಜರಾಗೆ (ಹೂಪಾಪ್ರ. ೪-೬೦). [ಪೆಣ + – ತಿನ್ನಿ]

ಪೆಣಬಣಂಬೆ, ಪೆಣಬಣಬೆ (ನಾ)· ಹೆಣಗಳ ರಾಶಿ, – ಒಟ್ಟಿಲಂ : ಎಱಗಿದರಂ ತಳ್ಕು ಬಾಳ ಕೀಟ್ಟಿನೆಯಿಂ . . . ಅರಿದಿಱಿದರ್ ಪೆಣ ಬಣಂಬೆಗಳ್ ನೆಗೆವಿನೆಗಂ (ಕಂಪಣಾ. ೦೦-೮೨). **ಪೆಣಬಣಬೆ** : ಧೂಪ್ಪೆನುತೆ ಕೆಡದನ್ ಆ ಕೆಡೆದ ಪೆಣಬಣಬೆಯೊಳ್ (ಕಕ್ಕಾ. ೦೩-೫೬೪).

[ಪೆಣ + ಬಣಂಬೆ]

ಪೆಣಬಣಬೆ 'ಪೆಣಬಣಂಬೆ' ನೋ.

ಪೆಣಮಯ, ಹೆಣಮಯಂ (ನಾ)· ಶವಗಳಿಂದ ತುಂಬಿರುವುದಂ : ಶವಮಯವಾಗಿರುವುದು : ಈ ತೋರ್ಪ ನದಿಯ ತೀರದೊಳ್ ಚತುರ್ಬಲಯುತರಿರ್ವರರಸುಗಳ್ ಕಾದಿದಲ್ಲಿ ಪೆಣಮಯಮಾಗಿರ್ದ ರಣ ಭೂಮಿಯಂ ಕಂಡೆಂ (ಪಂಪಭಾ. ೧೦-೨) ; ಪೆಣಮಯಂ ಮಿಱಿ ವೆದೆಗೆಡೆದಿರ್ದ ವಾಜಿವಾರಣಮಯಂ ... ಸಲೆ ಭಯಂಕರಮಾದುದಂದು ರಣರಂಗಮಾ ಪ್ರದ್ಯುಮ್ನನ (ಕೃಭಾಪಾ. ೨೨-೨೩). **ಹೆಣಮಯ** : ಹೆಣ ಮಯಂ ಮಾಡುತುಂ ಪೆಱಿವಂಟ್ಟುದು ನೋಡೆ . . . ಮಹಾವಿಷಂ (ಪಂಪಭ. ೦-೧೦) ; ಆಳನಾಳ ಮೇಲಿಕ್ಕಿ ಹೆಣಮಯವಾಗಿ (ಕ್ಯಾಆ. ೦೯೩೬. ೩೦-೩; 1910); ಶರದ ಹರಹಿನ ಕುಣಿವ ಮುಂಡದ ಕರಿ ತುರಗ ಪಯದಳದ ಹೆಣಮಯವಾಯ್ತು ರಣಭೂವಿ (ಭಾಕ್ಕ.ಗ. ೦-೧೦). [ಪೆಣ+ – ಮಯ]

ಪೆಣಲ್, ಪೆಣಲು, ಹೆಣಲು[1], ಹೆರಳು[1], ಹೆಳಲು (ನಾ). ಕೂದಲನ್ನು ಒಟ್ಟಾಗಿ ಸೇರಿಸಿ ಹೆಣೆದಂದಂ: ಜಡೆ : ನಿನ್ನ ಬಂಧುರದೀರ್ಘಲೋಚನಕೆ ಕುಚಯುಗಕೆ ಪೆಣಲಿಂಗೆ ... ಎರಲೆಯೆಂದುಂ ಮತ್ತಗಜದ ದುಸ್ತಕಮೆಂದು ಪಿರಿಯುರಗನೆಂದು . . . ವ್ಯಾಘ್ರ ಹರಿ ಕೇಕ ಶರಭ ಶುಕಂಗಳಱಗಿ ಕೊಲ್ವುವು (ಜಾಕ. ೦೭-೬೩). **ಪೆಣಲು** : ವನಜಾಕ್ಷಿಯಳ ವದನ ಚಂದ್ರಮನ ರಾಹು ತಾ ಕನಿಸಿಂದೆ ಪಿಡಿದು ನಿಂದಿರ್ಪಂತೆ ನಿಡಿದಾದ ಪೆಣಲು ಪೊದಪಿವುತಿರೆ (ಕರಪೋ. ೦೩-೩೭). **ಪೆಣಲು[1]** : ಪೆಣಲು ಬಿಚ್ಚಿಕೊಂಡಿರೆ ಜನರು ಹಳಿಯುತಿರೆ . . . ಇನಿತುಳ್ಳ ನಾರಿಯ ಗುಣಗಳ ತಿಳಿದು ಒಬ್ಬನೆ ಇರಲಾಗದು (ಜಸಸು. ೩೩-೩). **ಹೆರಳು[1]** : ಹೊಂಗ್ಯಾದಿಗೆ ದುಂಡಿದ ಬಂಗಾರದ ಹೆರಳಿನ . . . ಮಂಗಳಮೂರ್ತಿಯ ತೋಱಿ ಶುಭಾಂಗಿ (ಕುಕಂತ. ೦-೦೧೦-೩) ; ಕರಿವೋಡಗಳ ಬಾಚಿ ಚಿಕ್ಕಿಹೂಗಳನಿಟ್ಟು ಹೆಣೆದಂತೆ ಇವಳ ಹೆರಳು (ಕಬಾಸ್ತ್ರ. ೬-೩) ; ಸೋರ್ಮುಡಿಯ ಹೆರಳು ಮುಂಗುರುಳು (ಜಕ್ಕಾಂಗ. ೨೦-೦೦೩೬). **ಹೆಳಲು** : ಆರೇನ ಮಾಡುವರು ಅವನಿಯೊಳಗೆ . . . ಹೆಳಲು ಹಾವಾದರೆ ಗೆಳೆಯ ರಿವುವಾದರೆ (ಪುಕಂಪ. ೩-೨೦೩-೨) ; ಮುಡಿವುದಿಲ್ಲವೆ ಚಿಲುವ ಹೂಮಾಲೆಯನು ನೀನು ಕಂದು ಗೂದಲ ಹೆಳಲ ಸಿಂಗಾರಕೆ? (ಪಂಪಾಭಾ. ೧೪-೦೩); ಹೆಳಲು ಹೆಣೆದುಕೊಳ್ಳುವ ಕರ್ಮ ಬೇಡವೆಂದು ಸೋಮಾರಿಯಾದ ಗಂಡು ಹಜಾವಮಿಗೆ ಶರಣು ಹೋಗಿರಬೇಕು (ಕಳಕ್ಕ. ೬೪).

ಹೆರಳು ಹಾಕು, ಹೆಳಲು ಹಾಕು – ಜಡೆಯನ್ನು ಹಾಕು, –ಹೆಣೆ :

ಹೆರಳು ಹಾಕದ ನಿಬಿಡವಾದವಳ ಕೇಶರಾಶಿಯು ಹಿಂದಿನ ಭಾಗವನ್ನೆಲ್ಲ ಕತ್ತಲೆಯಾಗಿ ಮಾಡಿದ್ದಿತು (ಕಸಾಳಂ. ೪೯) : ಅತ್ತೆಯು . . . ದಿನಾಲು ಅವಳಿಗೊಂದೊಂದು ಬಗೆಯ ಹೆಳಲು ಹಾಕಿ . . . ಪತ್ತಲಗಳನ್ನು ಉಡಿಸುವಳು (ಹೂಬಸಿ. ೯) ; ಮುಂದಾ ತನ್ನ ಕೋಣೆಯಲ್ಲಿ ಕುಳಿತು ಹೆಳಲು ಹಾಕಿಕೊಂಡು ಕೂದಲಿಗೆ ತುದಿ ಹಾಕಿ ಹೆಣೆದುಕೊಳ್ಳುತ್ತಿದ್ದಳು (ಇಪ್ಪಳ. ೨೪೬). 'ಪಿಣೆಲ್$_2$' ಪರಾ.

[ಪೆಣೆ$_1$ + — ಅಲ್$_2$. / ತಮಿ. ಪಿಣೈಯಲ್]

ಪೆಣಲಿಕ್ಕು (ಕ್ರಿ). ಜಡೆಯನ್ನು ಹೆಣೆ ; ಹೆರಳು ಹಾಕು : ಕುರುಳ ನಾರಿಸುತೆ . . . ತ್ವರಿತ ತ್ರಿಭಾಗಮಂ ಗೈದುವುನ್ನತಕೇಶದಿರದೆ ಪೆಣಲಿಕ್ಕಿ (ಶವಮೋ. ೨೬-೬೮). [ಪೆಣಲ್ + — ಇಕ್ಕು]

ಪೆಣಲು 'ಪೆಣಲ್' ನೋ.

ಪೆಣವೊಗೆ (ನಾ). ಹೆಣವನ್ನು ಸುಡುವುದರಿಂದ ಉಂಟಾಗುವ ಹೊಗೆ.— ಧೂಮ : ಪೆಣವೊಗೆ ಸುತ್ತಿ ನರಲೋಕಮೆಲ್ಲಮಂತಕ ಡಾಮರದೊಳೆ ಬೆಂದು ಧೂಮಮಯಮಾದ ದಿಶಾಧೂಮಂ ಕವಿದಂತಾಭೀಳಮಾಗೆ (ಶಾಂತಿಪು. ೬-೯೮ ಪ) ; ಮೂಗುವಟ್ಟುವು ಪರಮೆ ಪಕ್ಕಿಗಳ್, ಪೆಣವೊಗೆಗೆ ಪೇಸಿದೋಲಂತೆ (ಕ್ರೀರಾಪಾ. ೬೯೯-೨೩). [ಪೆಣ + ಪೊಗೆ$_2$]

ಪೆಣಸು$_1$ (ಕ್ರಿ). ಹೋರಾಡು ; ಕಾದು ; ಹೆಣಗು ; (ಕ).

[<ಪೆಣಗು ?]

ಪೆಣಸು$_2$ (ನಾ). ಪ್ರಯತ್ನ (?) : 'ಬಲ್ವೆಣಸು' ಪರಾ.

[<ಪೆಣಸು$_1$]

ಪೆಣಱಿಸು 'ಪೆಳಱಿಸಂ' ನೋ.

ಪೆಣಱು 'ಪೆಳಱು$_1$' ನೋ.

ಪೆಣೆ$_1$, ಹೆಣೆ$_1$ (ಕ್ರಿ). ೧. (ರೇಷ್ಮೆ, ಉಣ್ಣೆ ಮುಂತಾದ ದಾರಗಳಿಂದ) ಹೆಣಿಗೆಯನ್ನು ಹಾಕು : "ಪೆಣೆ—ಮಿಶ್ರಬಂಧನೇ(ಹೆಣೆ), ಸಂಯೋಗೇ ಚ" (ಶಮರಾ) ; ಪಂಚಾಯುಧದ ಪುಲ್ಲಿಗೆಯ ತೊಂಗಲ ಸೆಱಂಗು ನಾಂದು ಪಿಣಲೇಱಿದೆಟಲ್ಕಿದ ವೇಣಿಯೊಳ್ಪೆಣೆದು ಮಿಂಚಿನಂಚಿವೆರಸು ಕಾರ್ಮುಗಿಲ ಬಿಟಲು ಕಾಲೂಱಿದಂತೆ (ಅಪಂಪು. ೨-೨೯ ಪ). ೨. ತಳಕು ಹಾಕಿಕೊಳ್ಳು : ನೆಱೆದಿರೆ ಸಂಕಲೆವಂದದ ತೆಱದಿಂ ಪೆಣೆದಿರ್ದ ನಾಗರಜ್ಜುಗಳೆಲ್ಲಂ (ಶಾಂತಿಪು. ೮-೫೦) ; ಪೆಣೆದು ಮೇಣದ ಬೊಂಬೆಯೆಂದು ಮೈಸೋಂಕಿ ಸಾದಣೆಗೈದವಚ್ಚರಿಯೆಂಬೆ (ಶರಸ. ೦೦-೯೭); ಅಣಿಯರಮೆಣೆಗೊಂಡಿಭಂಗಳಂ ಭರಿಕೈಗಳ್ಪೆಣೆದಿರೆ ಕಾದಿಸಿ ತಾಮುಂ ಪೊಣರ್ದರಿಭಾರೋಹಕರ್ (ರಾಜಶೇ. ೦೩-೯೬). ೩. ಒಂದಕ್ಕೊಂದು ಸೇರಿ ತಡಿಕೆಯಾಗು : ಕಣೆಯಿಂ ಪೆಣೆದುದೊ ಗಗನಾಂಗಣಮೆನೆ ಕಣೆಗಳನಿರ್ದಲವ ಬಿಲ್ಲ ವೀರರ್ ಕಱೆದರ್ (ಜಗವಿ. ೭-೫೪). ೪. ಆವೃತವಾಗು ; ಆವರಿಸಲ್ಪಡು : ಕಣೆ ಕಣೆಯ ತಾಗೆ ಪೊಣ್ಮೆದ ಕಿಡಿಯ ಗಡಣದಿಂ ಪೆಣೆದುದು ಸಮಸ್ತ ಜಗಮೆನಲ್ (ಸಬಪು. ೪೦-೮). ೫. ಸೇರು ; ಹೊಂದಿಕೊಳ್ಳು ; ಒಂದಾಗು : "ಪೆಣೆ—ಮಿಶ್ರಬಂಧನೇ(ಹೆಣೆ), ಸಂಯೋಗೇ ಚ" (ಶಮರಾ); ಗಭೀರಧೀರಮುರಜಧ್ವನಿ ಯೌವನಮತ್ತಕಾಮಿನೀಮೃದುಪದನೂಪುರಕ್ವಣಿತದೊಳ್ ಪೆಣೆದೊಂದಿರೆ (ಶಂಪಶಾ. ೯-೨೭); ಅಗ್ನಿಕುಂಡದೊಳ್ ಲಾಜೆಯುಮಂ ಕ್ರಮದಿಂದಮಿಕ್ಕಿದಳ್ ಪೆಣೆದ ಮನಃಪ್ರಣಯಕ್ಕೆ ಮುಡಿಗೆಯಿಕ್ಕುವ ತೆಱದಿಂ (ಶಾಂತಿಪು. ೬-೦೭) ; ಮಾರುಡಮೌದುಂಬರಮಂ ಪೆಣೆದಿರೆ ಬಡಗಲ್ ದೊರೆಕೊಳ್ಗುಂ . . . ಜಳು (ರೋಕೋಪ. ೫-೦೯). ೬. ಸೇರಿಸು ; ಕೂಡಿಸು : ತಾನ್ ಪೂಣ್ದಾ ಧರ್ಮಮುಮನ್ ತನ್ನಯ ಬಾಱೊಳ್ ಪೆಣೆದು (ಶಾಂತಿಗೂ. ೮೬-೩೫೬). ೭. ತುಂಬು ; ಆವರಿಸು : ಮಣಿಯೆ ವಿರಹಾಂಧಕಾರಂ ಕುಣಿಯೆ ಜಗತ್ಪತಿಯ ನೇತ್ರಪುತ್ರಿಕೆ ಮೆಯ್ಯೊಳ್ ಪೆಣೆಯೆ ಪುಲಕಾಳಿ ಚೂಡಾಮಣಿಯಂ ಕೊಟ್ಟಂ ನೃಪಂಗೆ ಪವಮಾನಸುತಂ (ಶಂರಾಪಾ. ೧೧-೦೬೪). ೮. ನಿಕಟಗೊಂಡು ಕಾದು,—ತಾಗು,—ಹೆಣಗು : ಕನಲ್ದೊನಲ್ದು ಮಾಣದೆ ಪೆಣೆದಂ ಹರಂ ದಿಗಿಭದೊಳ್ ದಿಗಿಭಂ ಪೆಣೆವಂತೆ ಪಾರ್ಥನೊಳ್ (ಶಂಪಶಾ. ೮-೨೦) ; ಪೆಣೆದು ಬಿಲ್ವಿಲ್ಲಂ ತೇರ್ ತೇರನಾನೆಯು ಮಾನೆಯಂ . . . ನಿಂದಣ್ಮೆ ಮಣ್ಮಟಿಯಪ್ಪುದುಂ (ಶಾಂತಿಪು. ೫-೫೩) ; ಮಹಾರಾಜನ ಬೆಸದಲ್ ಕನ್ನಮ್ಮನ ಕುದುರೆಯಂ ಪೆಣದಿಱಿದು ಪಡೆವಳ ಜೋಗಯ್ಯ ಸರ್ಗ್ಗಕೆ ಸನ್ದ (ಎಳ. V. ಮಂಜರಾ. ೪೩-೦೪ ; 1022). **ಹೆಣೆ$_1$** : ೧. ದಾರಗಳನ್ನು ಹೆಣೆದು (Knit) ಬಟ್ಟೆಗಳನ್ನು ತಯಾರಿಸಲಾಗುತ್ತದೆ (ಗೃಹವಿ. ೬೨) ; ಅವಳು ಕಾಲುಚೀಲ ಹೆಣೆಯುತ್ತ . . . ನಿಂತಿದ್ದಳು (ಶುನರು. ೦೪೨). ೬. ನಾಡಿನ ಚರಿತ್ರೆಯನ್ನು ಪೌರಾಣಿಕ ಕಥಾನಕಗಳಲ್ಲಿಯೇ ಹೆಣೆದು ಹೇಳುವ ಹೊಸಪ್ರಕಾರವೊಂದು ಈ ಶತಮಾನದಲ್ಲಿ ಮೊದಲಾಯಿತು (ಸಾಹಿಸ. ೦೫) ; ಭೂ ವ್ಯೋಮ ಪಾತಾಳ ಒಂದಾಗಿ ಹೆಣೆದಿರುವೆ (ಅರಳು. ೪೨೦-೯). ೯. ಹೂವು, ಮಣಿ ಮುಂತಾದುವುಗಳನ್ನು ಪೋಣಿಸು : ಬಾಸಿಂಗ, ದಂಡೆ ಹೆಣೆಯಲು 'ವಾಲಿಯದ'ನೂ ಹೂಗಾರನೂ ಬೇರು (ಕನ್ನಶಾ. ೬೮) ; ಕನ್ನುಡಿಯ ಪೂವೀಡು ಹೆಣೆದು ಕೊಡಲೇಂ ಕಾಣ್ಕೆ (ಕಾಬೂರ. ೨೨-೫). ೧೦. ಜಡೆಯನ್ನು ಹಾಕು ; ಹೆರಳು ಹಾಕು : ಎರಡು ಕೈಯಲು ಬಾಚಿ ಜಡೆಯಂ ಹೆಣೆದು(ಬಸಪು. ೪೭-೩೦). ೧೧. (ಆಲಂ) (ಅಸ್ವಾಭಾವಿಕವಾಗಿ) ರಚನೆ ಮಾಡು ; ಹೊಸೆ : ಕಂಡ ಕಂಡುದರ ಬಗ್ಗೆ ಸಿಕ್ಕ ವಿಷಯದ ಮೇಲೆ ಪದ ಹೆಣೆದು ಚಿಲ್ಲಿದ್ದಾನೆ (ಸಾಹಿಸೇ. ೧೧೦). ೧೨. ಹೂಡು ; ಏರ್ಪಾಡು ಮಾಡು : ಮೈಸೂರಿನ ಅರಮನೆಯಲ್ಲಿ ಒಡೆಯರಿರುವಾಗಲೇ ಅವರನ್ನು ವಧೆ ಮಾಡಿಸುವ ತಂತ್ರವನ್ನು ಹೆಣೆದರು (ಒಡಳ. ೨೩).

ಹೆಣೆದುಕೊಳ್ಳು = ಸೇರಿಕೊಳ್ಳು; ಒಂದಾಗು; ಬೆರೆ : ಸಂಗೀತವು... ಎಲ್ಲಾ ಜನತೆಯ ಜೀವನದಲ್ಲಿಯೂ ಹೆಣೆದುಕೊಂಡಿದೆ (ಶಾರದ. ೫೩೫) ; ರಸಪೋಷಣೆಯನ್ನು ಚಿನ್ನಾಗಿ ಮಾಡಬಲ್ಲ ಅಕ್ಷರಯುತ ಶಬ್ದಗಳು ಹಾಡುಗಳಲ್ಲಿ ರಮ್ಯವಾಗಿ ಹೆಣೆದುಕೊಂಡಿವೆ (ಜಗದಾ. ೬೦). [ದೇ. ॥ ತಮಿ. ಪಿಣೈ; ಮಲ. ಪಿಣೆ, ಪಿಣಯು ; ತೆಲು. ಪೆನಯು, ಪೇನು]

ಪೆಣೆ$_2$, ಹೆಣೆ$_2$ (ನಾ). ೧. ಕೂಡಿಕೊಂಡಿರುವುದು ; ಹೆಣೆದುಕೊಂಡಿರುವ ಸ್ಥಿತಿ ; (ಕ). **ಹೆಣೆ$_2$** : ೧. ಕುಜಾತದ ಕೂಟ — ಮರದ ಹೆಣೆ (ನಾನಾರ. ಕಿ. ೦೪೪). ೨. ಕಣದಲ್ಲಿ ಧಾನ್ಯವನ್ನು ಒಕ್ಕುವುದಕ್ಕಾಗಿ ಕೆಲವು ಎತ್ತುಗಳನ್ನು ಸಾಲಾಗಿ ನಿಲ್ಲಿಸಿ ಸರಪಣಿಯಿಂದ ಕಟ್ಟಿದುದು: ಆರೆಂಟು ಎತ್ತುಗಳನ್ನು ಉದ್ದಕ್ಕೆ ನಿಲ್ಲಿಸಿ ಸರಪಣಿಯಂತೆ ಬಿಗಿಯುತ್ತಾರೆ. ಇದಕ್ಕೆ "ಹೆಣೆ" ಎಂದು ಹೆಸರು . . . ಒಬ್ಬ ಆಳು ಇಡೀ ದಿನ ಹೆಣೆಯ ಹಿಂದೆ ಸುತ್ತುತ್ತಲೇಯಿರುತ್ತಾನೆ (ಪುಂಲಾನ. ೫೮).

[<ಪೆಣೆ$_1$. / ಮಲ. ಪಿಣ ; ತೆಲು. ಪೆನ]

ಪೆಣೆಗೊಳ್ (ಕ್ರಿ). ಸೇರು ; ಒಂದಾಗು ; ಬೆರೆ : ಸಿರಿ ನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ . . . ಗುಣಂ ಪೆಣೆಗೊಂಡುದಲ್ಲಿ (ಸೂಕ್ತಿಸು. ೪-೨೬) ; ತಮಗದಱೊಳ್ ಪೆಣೆಗೊಂಡಿರೆ ಸಂಬಂಧಮುಮೆಣಿಸುವ ರಾರದಱಿನಪ್ಪ ಸುತಸದೊಳ್ಪಂ (ಪಕವಿ. ೪-೦೫೦). [ಪೆಣೆ$_1$ + ಕೊಳ್$_1$]

ಪೆಣೆಗೊಳಿಸು (ಕ್ರಿ). ಕೂಡುವಂತೆ ಮಾಡು ; ಜೊತೆಗೂಡಿಸು : ಒಣವೆಣದೊಳ್ ಪೆಣೆಗೊಳಿಸಿಯೆಮ್ಮುಮಂ ಮನಗೊಂಬೀ ಪೆಣದಿನಿಗಳ ಬಸಮೆನೆ ಬಾಟ್ವೆಣಂಗಳಿಮಗೆಲ್ಲಿ ರಸಿಕರೆಲ್ಲಿಯ ನೇಹು (ಪಕವಿ. ೬-೦೩೭).

[ಪೆಣೆಗೊಳ್ + — ಇಸು$_3$]

ಪೆಣೆದಾವಣೆ (ನಾ). ಹುರಿಗಳನ್ನು ಸೇರಿಸಿ ಹೊಸೆದು ಮಾಡಿದ ಹಗ್ಗ.— ಪಾಶ : ಅಂಬುಜಸೂತ್ರಮೆಂಬ ಪೆಣೆದಾವಣೆ [ಣೆ] [ಪಾಶಾಂ. ಪೆಣದಾಣ,ಣೆ] ಯಂ ಪಱಿದಾವಲೆಂಬ ಬಾಟ್ಗಂಬಮನೊತ್ತಿ ಕಿಟ್ಟು (ಕಾಪ್ಯಾನ. ೬೯೯ ; ರಸರ. ೪-೨೯೭ ನೋ). [ಪೆಣೆ$_1$ + ದಾವಣೆ$_1$]

ಪೆಣೆಲೆ (ನಾ). (?) : ಮತ್ತೆ ಕೇಳ್ದು ತಿವಾತದೊಳ್ಳ ಮೆದೆತ್ತ ಜಾವದ ಪೆಣೆಲೆಯಂತುಜ್ ತೆತ್ತಿಸಿದ ಸೂತ್ರಾನುರೂಪಿನ ಬೊಂಬೆಯಂದದಲಿ ಯುಕ್ತಿಯಿಂ ಪ್ರಾಣಾದಿಗಳು ನಿಜಕರ್ತುವಂ ಲಕ್ಷಿಸುವ ದೆನೆಯಿಂ ವ್ಯರ್ಥ ಕೇಳ್ (ಸಮ್ಯರು. ೩-೨೦). [?]

ಪೆಣೆವಾವು (ನಾ). ಒಂದನ್ನೊಂದು ತೆಕ್ಕೆಹಾಕಿಕೊಂಡಿರುವ ಹಾವು : ತಳಕು ಹಾಕಿಕೊಂಡಿರುವ ಹಾವು : ಬ[ಪೆ]ಣೆವಾವಿನಂತೆ ಪೆಣೆದ ಕಯ್ಯ ಕಾಲ ಕೊಂಬಿನ ಕುಂಭಸ್ಥಳದೆಡೆಗಳೊಳ್ ಬೆಣ್ಣೆದೊಡೆದ ಬಟ್ಟಿನಂತೆ ನುಣ್ಣಿ ನುಸುಳ್ದು (ಅರ್ಧನೇ. ೬-೮೯ ಪ) ; ತಲೆಯನತಿಭರದಿಂ ಬಾಗಿದ ಪೆಣೆವಾವುಗಳಿನಿವಿರಿದುಂ ಸೊಗಸಿದುವು (ಜಹುಕಾ. ೧೦ ೩೦).

[ಪೆಣೆ$_1$ + ಪಾವು$_1$]

ಪೆಣ್ಕೊರಂಗು (ನಾ). ಹೆಣ್ಣಿನ ವ್ಯಥೆ,-ಅಳಲು : ರಾಮನ ಪತಿವ್ರತೆಯ ತಪದ ತೀವ್ರಾತಪದ ರೌದ್ರಮಂ, ಪೆಣ್ಕೊರಂಗದೇವುದೆಂದೇವಯ್ಯುವುದು ತರಮೆ . . . ನಮ್ಮ ದಾನವಕುಲದ ಬಲದ ಪೌರುಷಕೆ ? (ಶ್ರೀರಾಮಾ. ೫೬೩-೫೯೩). [ಪೆಣ್ + < ಕೊರಂಗು]

ಪೆಣ್ಗಜ (ನಾ). ಹೆಣ್ಣು ಆನೆ ; ಪಿಡಿ : "ಪಿಡಿ ಸದಡಿಯೆನಲ್ ಪೆಣ್ಗಜ" (ಭಾರತಿ. ೬೬). [ಪೆಣ್ + ಗಜ]

ಪೆಣ್ಗಡಣ (ನಾ). ಹೆಂಗಸರ ಗುಂಪು ; ಸ್ತ್ರೀಸಮೂಹ : ಸಡಗರದಿಂ ಕೃಷ್ಣ ಸೋಳಸಾಸಿರ ಪೆಣ್ಗಡಣದಿಂ ಪೊಕ್ಕನಾಲಯವ (ಪೋಪತ. ೪-೬೯). [ಪೆಣ್ + ಗಡಣ]

ಪೆಣ್ಗತ್ತೆ, ಹೆಂಗತ್ತೆ, ಹೆಣ್ಣುಗತ್ತೆ (ನಾ). ಕತ್ತೆಯ ಜಾತಿಯಲ್ಲಿ ಹೆಣ್ಣು : ಮಿಳಿಯ ಬಿದಿರ ಮೇಗೇಱಿಯಾಕಾಶದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ (ಪಡ್ಮಾರಾ. ೯-೦). **ಹೆಂಗತ್ತೆ** : "ರಾಸಭಾ – ಹೆಂಗತ್ತೆ" (ಓಷಧಿ. ೦೩೭). **ಹೆಣ್ಣುಗತ್ತೆ** : "ದೂರಂಗಮಾ– ಹೆಣ್ಣುಗತ್ತೆ" (ಓಷಧಿ. ೬೮). [ಪೆಣ್ + ಕತ್ತೆ$_1$ (<ಕಟ್ಟೆ$_1$)]

ಪೆಣ್ಗಳ್ಳ, ಹೆಂಗಳ್ಳ (ನಾ). ಹೆಂಗಸನ್ನು ಕದ್ದು ಒಯ್ಯುವವನು : ಆ ದಿನದ ಪೆಣ್ಗಳ್ಳನೇನಾದನೆಂದೀ ದಿನದ ಹಸುಗಳ್ಳಂ ನೀಂ ಬಗೆಯಲ್ವೇಡಾ (ರಾಮಾಶ್ವ. ೧೧೨-೨೨). **ಹೆಂಗಳ್ಳ** : ಈ ಹೆಂಗಳ್ಳನನು . . . ರಕ್ಕಸನ ಎಳ್ಳಿನಿತು ಕಡಿಖಂಡಮಾಡಿಯೆ ಹೊಳ್ಳುವಾಱಸಲೂದುವೆನು (ತೊರರಾ. ೫-೬-೫೬) ; ಎಲ್ಲಿಯ ವ್ರತಿ ಪಾರ್ಥನೆಂಬವನೆಲ್ಲಿಯವ ನಿನಗುಂಟು ಛಲವಿದ ಬಲ್ಲೆನೀಕ್ಷಿಸಿ ಬಹೆನು ಹೆಂಗಳ್ಳನನು ಸಾರು (ಪಿಭಾಗ. ೦೦-೬೨-೩೯).

[ಪೆಣ್ + ಕಳ್ಳ$_1$]

ಪೆಣ್ಗಾಡಿ (ನಾ). ಹೆಣ್ಣಿನ ಸೌಂದರ್ಯ, -ಸೊಬಗು : ವರಂಬಡೆದನೋ ಪೆಣ್ಗಾಡಿಯಂ ಚಂದ್ರಮಂ ನನೆಯಂಬಂ ತವೆ ನೋಂತು ಪೆಣ್ಬರಿಜನೆಂಬಂತಾಕೆ ಕಣ್ಗೊಪ್ಪಿದಳ್ (ಲೀಲಾವ. ೩-೪೭). [ಪೆಣ್ + ಗಾಡಿ$_1$]

ಪೆಣ್ಗಾಡು (ನಾ). ಹೆಂಗಸರ ಸಂದಣಿ ಇರುವ ಪ್ರದೇಶ : ಮುನಿಮ್ಮಗಾವಳಿಯ ಬೇಂಟೆಯಂ ತಾನಾಡಲೆಂದು ಸಿಂಗರದ ಪೆಣ್ಗಾಡಿ[ಪಾಕಾಂ. ಣ್ಗಾಡಿ] ನೊಳ್ ಮಿಾನಾಂಕ ನೃಪತಿ ಕಟ್ಟಿಸಿದ ಬೆಳ್ಳಾರಂಗಳಾಗಬೇಕೆಂಬಂತಿರೆ (ಸ್ವಪಾಧಾ. ೬-೨೦). [ಪೆಣ್ + ಕಾಡು$_2$]

ಪೆಣ್ಗಾಸೆ (ನಾ). ಹೆಂಗಸರು ಹಾಕುವಂತೆ ಹಾಕುವ ಕಚ್ಚೆ : ಕಟ್ಟಿದ ಪೆಣ್ಗಾಸೆ ಮುಂದಲೆಚುಂಗಿಂದ ನಟ್ಟುವರಾಯತವಾಂತು ಬೆಟ್ಟದೊಳಮರೇಂದ್ರ ಕುಣಿದಾಡುತಿರೆ (ಭರತ. ೭೪-೯೯). [ಪೆಣ್ + ಕಾಸೆ$_1$]

ಪೆಣ್ಗಣಿ 'ಪೆಣ್ಗಳಿ' ನೋ.

ಪೆಣ್ಗಳಿ, ಪೆಣ್ಗಣಿ, ಹೆಣ್ಗಳಿ, ಹೆಣ್ಣುಗಿಳಿ (ನಾ). ಗಿಳಿಯ ಜಾತಿಯಲ್ಲಿ ಹೆಣ್ಣು ; ಸಾರಿಕೆ : "ಪುರುಳಿಯೆಂದುಂ ಸಾರಿಕೆಯೆಂದುಂ ಪೆಣ್ಗಳಿ" (ಕನಸಾ. ೫೫-೨೦೩) ; ಪೆಣ್ಗಳಿ ಕಾಯಜನುಪಹತಿಯಿಂದಸುವಂ ನೀಗುವುದದಱಿಂ ನಾನು ಸಾಯದೆ ಸುಮ್ಮನಿರೆನು (ಜಹುಕಾ. ೨-೩೪) ; ಮರದ ತುದಿಯ ಕೊಂಬಿನೊಳೆ ಮೃದುವಾಣಿಯೆಂದೆನಿದ ಪೆಣ್ಗಳಿ . . . ಶೋಕಿಸುತಿರ್ದುದು (ಪಬಪು. ೪೬-೪). **ಪೆಣ್ಗಣಿ** : ಕಳವಳಿಸಿ ವಿರಹದಲಿ ಪೆಣ್ಗಣಿ ಸುಳಿಸುಳಿದು ನಿಂದಿಸುತ (ಅನಂರಾ. ೦ ೭-೪). **ಹೆಣ್ಗಳಿ** : ಅವನ ಒಡಲು ಚಿಲ್ವಿನ ಕದಿರು ತುಂಬಿದ ಹೊಲದಂತಿದ್ದು ಹೆಣ್ಗಳಿಗಳನ್ನು ಕರೆಯುವಂತಿತ್ತು (ಕಾಂಹಿರ. ೨ ಕಥಾಸಾರ). **ಹೆಣ್ಣುಗಿಳಿ** : "ಪ್ರಿಯವಾದಿನೀ– ಹೆಣ್ಣುಗಿಳಿ" (ಓಷಧಿ. ೯೯). [ಪೆಣ್ + ಗಿಳಿ]

ಪೆಣ್ಗುದುರೆ, ಹೆಂಗುದುರೆ, ಹೆಣ್ಣುಕುದುರೆ, ಹೆಣ್ಣುಗುದುರೆ (ನಾ). ಕುದುರೆ ಜಾತಿಯಲ್ಲಿ ಹೆಣ್ಣು : ಪಾರ್ಥನ ತುರಂಗದುದು ಪೆಣ್ಗುದುರೆಯಾಗಿ . . . ಸ್ತ್ರೀರಾಜ್ಯದುಂ ಪೊಕ್ಕುದು (ಸ್ವಪಾಧಾ. ೦೫ ಸೂಪನ) ; ಪೆಣ್ಗುದುರೆಯಾಗಿ ಪುಲಿಯಾಗಿ ವಿಸ್ಮಯದಿಂದೆ ಪಾರ್ಥನಂ ಬೆದಱಿಸಿ . . . ಮುನ್ನಿನಂತೆ ನಿಯಮಿತಮಖಾಶ್ವಮಾದತ್ತು (ಸ್ವಪಾಧಾ. ೦೫-೬). **ಹೆಂಗುದುರೆ** : ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತ ಸಣಕಲ ಕಾಲಿನ ಹೆಂಗುದುರೆಗಳು ನಿಂತುವು (ಪುನರು. ೩೩೮). **ಹೆಣ್ಣುಕುದುರೆ** : "ವಾಮಿಾ, ಅಶ್ವಾ, ಬಡಬಾ–ಸಿ ಹೆಣ್ಣುಕುದುರೆ" (ಸಿದ್ಧಾಂತಿ. ೨೫೦) ; ಗಂಡುಕುದುರೆ ಆ ಬಂದ ಹೆಣ್ಣುಕುದುರೆಯನ್ನೂ . . . ಹಿಗ್ಗಿನಿಂದ ಬಳಿಸಾರಿತು (ಪುಲಿಪು. ೪೨೪). **ಹೆಣ್ಣುಗುದುರೆ** : "ಬಡಬಾ–ಹೆಣ್ಣುಗುದುರೆ" (ಓಷಧಿ. ೦೦೫). [ಪೆಣ್ + ಕುದುರೆ]

ಪೆಣ್ಗೂಸು, ಪೆಂಗುಸು, ಪೆಂಗೂಸು, ಹೆಂಗಸು, ಹೆಂಗುಸು, ಹೆಂಗೂಸು, ಹೆಣ್ಣುಕೂಸು, ಹೆಣ್ಣುಗೂಸು (ನಾ). ೧. ಹೆಣ್ಣು ಮಗು : ಮುನೀಂದ್ರ ನಿಂದ್ರಿಯದೊಳೊಗೆದ ಪೆಣ್ಗೂಸುಮಂ ಗಂಡುಗೂಸುಮನವಱ ಕೆಲದೊಳಿರ್ದ ದಿವ್ಯಶರಾಸನಶರಂಗಳುಮಂ ಕಂಡು ಕೊಂಡುಪೋಗಿ (ಪಂಪಭಾ. ೨-೩೩ ಪ) ; ಗರ್ಭದ ಪೆಣ್ಗೂಸಿಂಗಂ ಗರ್ಭಿಣಿಗಂ ಬಾಧೆ ಪಿಂಗೆ ಪೆತ್ತಾಗಡೆ ಗರ್ಭಾರ್ಭಕನನುಯ್ವೆನೆಂಬೀ ದುರ್ಭಾವನೆಯಿಂ ವಿದೇಹಿಯಂ ಕಾದಿರ್ದಂ (ಪಂರಾಮಾ. ೪-೦೫) ; ಮಾಡಿದುದು ಚಿಂತಾಕ್ರಾಂತತೆಯನೆಮಗೀ ಮಗಳ ಬಳವಿ ತುದಿಯೊಳೀ ತೆಱನೆ ಪೆತ್ತವರ್ಗೆ ಪೆಣ್ಗೂಸಂ (ಪರ್ಧಪು. ೯-೩೯). ೨. ಸ್ತ್ರೀ : ವನಿತೆ : ಇಂತಱುವರ್ ಪೆಣ್ಗೂಸುಗಳಂತವರ್ಗಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ (ಪಡ್ಮಾರಾ. ೦೦೫-೦೫) ; ಈ ಪೊತ್ತಿನೊಳೀ ಪೆಣ್ಗೂಸೀ ಪಸವನಮೆಸೆಯೆ ಪೋಪುದೆಲ್ಲ ಮಿದಘಟವ್ಯಾಪಾರಂ (ಸುಕುಮಾ. ೬-೨೦) ; ಪಸುಗೂಸು ಮೊಲೆಯಂ ಪೆಣ್ಗೂಸು ತದರ್ಮನೆಯಂ . . . ನೆನೆವಂತು (ರರ್ಮಾಪ್ಯು. ೩-೧೯೦). **ಪೆಂಗುಸು** : ೨. ಪೆಂಗುಸೆನುತನುಮಾನದಿಂದ ಯಾಚಿಸಲವಳು ಹಿಂಗದೆನ್ನಂ ಪೊಡೆಯೆ (ಪಂಕಾರಾ. ೫-೦೯-೨೫). **ಪೆಂಗೂಸು** : ೨. 'ಒಳು ಪೆಂಗೂಸು' ಪರಾ. **ಹೆಂಗಸು** : ೨. ಜೊತೆಗೆ ಬಂದ ಹೆಂಗಸೂ ಹಾಗೆಯೇ . . . ಶೋಭಿಸುವ ಮೈಕಟ್ಟಿನವಳು (ಅಪೋಲೀ. ೧೩೦) ; ಅಳುವ ಹೆಂಗಸನ್ನೂ ನಗುವ ಗಂಡಸನ್ನೂ ನಂಬಬೇಡ (ಗಾಪ). **ಹೆಂಗುಸು** : ೨. ಹೆಂಗುಸಿವಳಿಂತೆಂದು ಬಗೆದು (ಬಸಪು. ೨೪-೬೪) ; ಕಾವುದೆನ್ನನು ಹೆಂಗುಸಲ್ಲಾ (ಕುಪ್ಕಾಸ. ೦೫-೨೬) ; ಹೆಂಗುಸಿವಳಿವಳಸುವನುಚ್ಚುವುದಂಗವೇ ಕ್ಷತ್ರಿಯರಿಗೆ (ತೊರರಾ. ೧-೧೦-೯) ; ಹೆಂಗುಸರೆಂದರೆ . . . ಅಡುಗೆಮನೆಯಲ್ಲಿ ಹೊಳಿಡುವ ಕಾಲವು ಮುಗಿದುಹೋಯ್ತು (ಹುಕ್ಷಪ್ರ. ೦೪೦). **ಹೆಂಗೂಸು** : ೨. "ಭಾವಿನಿ . . . ರಾಮೆ ವರವರ್ಣನಿಯೆನಲ್ಕೆ ಹೆಂಗೂಸೆನಿಕ್ಕು" (ಪುಂಗರಾ. ೫೯ ೦) ; ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪು ಬಸವ ನಿಮ್ಮ ದಯದಿಂದ (ಮಹಾಬೇ. ೧. ೬೦-೧೬೯) ; ನಾವು ಹೆಂಗೂಸಿಲ್ಲದೆ ಇರ್ದುದಿಲ್ಲೆಂಬ ಮಾತಂ ಕೇಳ್ದು (ಬಸರ ೦೨ ೧೦೫) ; ಕಿಚ್ಚಿನೊಳಗುಲ್ಲಾಸದಿಂ ಬೀಳುತ ಸೆಱಗಿನಂತೋಸರಿಸುವಾ ವೈಶಿರಿದ ಹೆಂಗೂಸಿನಂದದಲಿ ಹರಣವಂ ತ್ಯಜಿಸುವೆನೆನುತ (ಬಸಪು. ೨೦-೨೦). **ಹೆಣ್ಣುಕೂಸು** : (ಕ). **ಹೆಣ್ಣುಗೂಸು** : ೧. "ಪಿಲ್ಲಾ = ಹೆಣ್ಣುಗೂಸು" (ಕಾಶಕ್ಕ. ೨೫)

ಪೆಣ್ಗೂಸುಮೆಯ್ಯವಂ = ಅರ್ಧನಾರೀಶ್ವರ : ಶಿವ : ಪೆಣ್ಗೂಸು ಮೆಯ್ಯವಂ ಮುಳಿದು ತಾನೆಮ್ಮುವಂ ಕೊಲಬಪ್ಪುದು ಹಸನಾಯ್ತು (ಕಂಪು. ೪೭-೦೯). ಹೆಂಗುಸುಗಳು (ಬಹುವ) : ಹೆಂಗುಸುಗಳಾವ್ ಬಲ್ಲೆವೇ (ಕೊರಂ. ೪-೦೦-೨೬). [ಪೆಣ್+ಕೂಸು]

ಪೆಣ್ಗೂಳಿ (ನಾ). ಯಾವಾಗಲೂ ಹೆಂಗಸರೊಡನೆಯೇ ವ್ಯವಹರಿಸುವವನು ; ಹೆಣ್ಣಿಗ : ಪೇಡಿಯ ಬಿತ್ತೀ ದ್ರುಪದನ ನೋಡಿರೆ ಪೆಣ್ಗೂಳಿ ಮತ್ಸ್ಯನುಂ ಪಾಂಡವರೊಳ್ ಕೂಡಿ ಬರೆ ನಚ್ಚಿದಂ ಹರಿ ನಾಡಾಡಿಗಳಲ್ಲ ವಗ್ಗದೊಳ್ಳೆಯ ಪಿಂಡಂ (ಸೇಕಾಪು. ೧೦-೦೦೦). 'ಪೆಂಕುಳಿ' ಹೋ.

[ಪೆಣ್ + – ಗೂಳಿ (< – ಕುಳಿ$_3$)]

ಪೆಣ್ಗೊಲೆ, ಪೆಂಗೊಲೆ, ಹೆಂಗೊಲೆ (ನಾ). ಹೆಂಗಸಿನ ವಧೆ ; ಸ್ತ್ರೀ ಹತ್ಯೆ : ಅಕಟೆಮ್ಮುವಂ ಶರಣ್ಬೊಕ್ಕುವಂ ಕಂಡು ನಾಚಿಕೆಯಲಾ ಪೆಣ್ಗೊಲೆ ಭಟರ್ಗೆಂದು ತಿಳಿದು ಹೇಸಿಕೆಯಿಲ್ಲದಿನಿತುಮಂ ಕೈಗೈದೆ (ಕಂಪು. ೨೦-೩೬) ; ಪೆಣ್ಗೊಲೆಗಳುಕುವೆನೆಂದಂ ಪಾರ್ಥನು (ಕೈಕುಶಾ. ೧೬-೦೩). **ಪೆಂಗೊಲೆ** : ಕೋಪಮರುಬಿಯಿಂ ಪೆಂಗೊಲೆಯು ಸಂಗಡಿಸಿ (ಪಂಕಾರಾ. ೩-೩-೧೭). 'ಪೆಂಗೊಲೆಯ' ಪರಾ. **ಹೆಂಗೊಲೆ** : ಹೆಂಗೊಲೆಯನು ಕಂಡು ಸುಮ್ಮನಿರುವುದಾವಂಗವು (ಪೇಪಂಸಾಂ. ೦೪-೩೩) ; ಹೆಂಗೊಲೆ ವೀರರಿಗೆ ಮೈಸಿರಿಯೆ (ಪಧಾಗ. ೧೦-೨-೧೦) ; ಎಲೆ ಪಾರ್ಥ ಹೆಂಗೊಲೆಗೆ ಹೇಸದೆ ಮಹಾಸ್ತ್ರಮಂ ತಾಡುವೆ ನೀಂ (ಕೈಕುಶಾ. ೧೬-೦೩).

[ಪೆಣ್ + ಕೊಲೆ$_2$]

ಪೆಣ್ಗೊಳ್ (ಕ್ರಿ). ಹೆಣ್ಣನ್ನು ಪಡೆ, – ಹೊಂದು : ಸಾಣಿ ಕೂರ್ವೇಜಿಯಂ ಸೈತೇಜುವಂತೆವೊಲ್ ಮಾಣದೊಳ್ಪಾರ್ಪ ಘನದೊಲ್ಪು ಪೆಣ್ಗೊಂಬ ಜಾಣಗಂಡರ್ಗೆ ಜಯಮಕ್ಕೆ (ಪಕಪ. ೬-೦೩೪ ತಿವಿ).

[ಪೆಣ್ + ಕೊಳ್$_1$]

ಪೆಣ್ಣನ (ನಾ). ಹೆಂಗಸರ ಸಮೂಹ, – ಗುಂಪು : ಬಾಲನಂತೆಸೆದನು ಸುಜನರ ಕಣ್ಗೆ ಪೂಗೋಲನಂದದಿ ಪೆಣ್ಣನಕೆ (ಪೋಪಕ. ೦೨-೩೦).

[ಪೆಣ್ + ಜನ]

ಪೆಣ್ಣನ್ಮ, ಪೆಣ್ಣುಜನ್ಮ, ಹೆಣ್ಣುಜನ್ಮ (ನಾ). ಹೆಣ್ಣಾಗಿ ಹುಟ್ಟಿರುವುದು : ಹೆಣ್ಣಾಗಿ ಇರುವಿಕೆ : ಈತನೊಳೊಡಗೂಡದಿದ್ದರೆ ಪೆಣ್ಣನ್ಮ ವೇತಜನು (ಪೋಪಕ. ೦೬-೬೪). **ಪೆಣ್ಣುಜನ್ಮ** : ಕಷ್ಟವೀ ಸ್ತ್ರೀವೇಷ ಮುಕ್ತಿಯಿಲ್ಲದರೇನು ಶಿಷ್ಟಾತ್ಮಯೋಗದೋಜಿದರೆ ನಷ್ಟ ಪಾಳ್ದೆವು ಪೆಣ್ಣುಜನ್ಮವನೆಂದು ಸದೃಷ್ಟಿಯ ಸತಿಯರಾಡಿದರು (ಪರಸ. ೦೬-೩೯). **ಹೆಣ್ಣುಜನ್ಮ** : ಸೂಳೆಯಾದರೂ ನಾಚಿಕೆ, ಹೆಣ್ಣುಜನ್ಮದ ಹುಟ್ಟುಗುಣ (ಪಟಿಸಾ. ೯೪). [ಪೆಣ್ + ಜನ್ಮ]

ಪೆಣ್ಣಊರ್ (ನಾ). ಒಂದು ಸ್ಥಳದ ಹೆಸರು : ಕೊಜಿಕುನ್ದವಿಷಯೇ ಪೆಣ್ಣಊರ್ನ್ನಾಮಗ್ರಾಮಃ (ಸ್ಕೃಅಂ. ೦೯೪೨, ೩೦-೪೩ ; ೬೧೦).

[? + ಊರ್]

ಪೆಣ್ಣಂಚೆ, ಹೆಣ್ಣಂಚೆ (ನಾ). ಹೆಣ್ಣುಹಂಸ ; ಹಂಸೆ : ಅಗಲೆವೋದ ಹಂಸನನಜಸಲ್ ಪಡೆದೆಳಸುವ ಪೆಣ್ಣಂಚೆಯ ಪದ ಕೊರಲಿಂಚರದ ಸರಮೆ ಸವಿ ಕಿವಿಗಿದಜೊಳ್ (ಪಂಪಶಾ. ೩-೩೬) ; ತಾವರೆವಂಡಿನ ತನಿಸೊಕ್ಕಿಂ ಸೊಕ್ಕಿದ ಪೆಣ್ಣಂಚೆಗಳಿಂಚರಂಗಳ್ (ಕಾಸುಪು. ೦೦೭); ಅಗಲ್ದ ಪೆಣ್ಣಂಚೆಯಂ . . . ಅಜಸಿ ಪೋಗಿ (ಗಿರಿಕ. ೩-೦೦೩ ನ). **ಹೆಣ್ಣಂಚೆ** : "ಮರಾಳ, ಮರಾಳಾ, ವರಟಾ—ಈ ೩ ಹೆಣ್ಣಂಚೆ" (ಹಲಾಯು. ೪೨-೯೬).

[ಪೆಣ್ + ಅಂಚೆ$_3$]

ಪೆಣ್ಣಂದೂರ್ (ನಾ). ಒಂದು ಸ್ಥಳದ ಹೆಸರು : ಪೆಣ್ಣನ್ದೂರ್ × × ಕೀರ್ತ್ತಣ್ಣನ್ . . . ಎಱುದು ಎಱ್ದೋರ್ (ಎಕ. IX, ಬೇಪಪ. ೬೪-೩ ; ಸು. 780). [? + ಊರ್]

ಪೆಣ್ಣಗಲ್ಕೆ (ನಾ). ಹೆಣ್ಣಿನ ಅಗಲಿಕೆ, – ವಿಯೋಗ ; ಪ್ರಿಯೆಯಿಂದ ಆದ ಅಗಲಿಕೆ : ಇದಿರೊಳಳಿದ ಸತಿಯಂ ಕಂಡು ಹಾ ತರುಣಿ ಹಾಯೆಂದು ಹಲುಬಿದಂ ಭೃಗು ಪೆಣ್ಣಗಲ್ಕೆಯೆಂತಪ್ಪರು ಭ್ರಮೆಗೊಳಿಸದೇಂ ಬಿಡುವುದೆ (ಕಂಪು. ೨೦-೩೯). [ಪೆಣ್ + ಅಗಲ್ಕೆ]

ಪೆಣ್ಣಗೆ, ಹೆಣ್ಣಗೆ (ನಾ). ಹೆಣ್ಣಿನ ನಗು; ಮೆಲುನಗೆ : ಪೊಳ್ತರೆಯ ಪೆಣ್ಣಗೆಯ ಚಿಮ್ಮಿದಳ್ ಬಾನ್ಗೆ (ಕಾಲೂರ. ೬೬-೦೦೩). **ಹೆಣ್ಣಗೆ** : ಹೆಣ್ಣಗೆಯ ನಯನದಿ ಭವಿಷ್ಯವಂ ತಿವಿವ ಪುರುಷನ,ದೃಷ್ಟಿ, ಹೆಣ್ಣೆದೆಯ ಮಾರ್ದವದಿ ಗಂಡಿನ ಮನೋದಾರ್ಢ್ಯ (ಗೂಶ್ಗೂಶಾ. ೪೦-೬೪).

[ಪೆಣ್ + ನಗೆ]

ಪೆಣ್ಣರಿ (ನಾ). ನರಿಯ ಜಾತಿಯಲ್ಲಿ ಹೆಣ್ಣು : ಮುನ್ನಿನ ಜನ್ಮಾಂತರ ದತ್ತಿಗೆಯಪ್ಪ ಪೆಣ್ಣರಿಯಿಂದಂ . . . ಇರುಳುಂ ಪಗಲುಂ ತಿನೆವಡು ತಿರ್ದನಾಗಿಯುಂ (ಪಡ್ಡಾರಾ. ೨-೦). [ಪೆಣ್ + ನರಿ]

ಪೆಣ್ಣಾನೆ, ಹೆಣ್ಣಾನೆ (ನಾ). ಆನೆಯ ಜಾತಿಯಲ್ಲಿ ಹೆಣ್ಣು; ಪಿಡಿ : "ಪಶಾ ಕರಿಣಿ ರೇಣು ಕರೇಣು ಪಿಡಿಯೆನಲು ಪೆಣ್ಣಾನೆ" (ಮುಗರಾ. ೪೬-೦); ಮಂಜುಳಕಿಂಕಿಣಿಗಳ ಕಾಂಚೀದಾಮದಿಂದೆಸೆವ ಪೆಣ್ಣಾನೆಗಳ ಮೇಲೆ ಬರುತಿರ್ದರವರು[ಪಾಶಾಂ. ಪೆಣ್ಗಳಾನೆಗಳ ಮೇಲೈತಂದರು] (ಕೈಕುಶಾ. ೦೬-೩). **ಹೆಣ್ಣಾನೆ** : "ಕರಿಣಿ—ಹೆಣ್ಣಾನೆ" (ಅಕಾಶಿ. ೩-೦೭); ಬಸೆ–ನೆಣ, ಹೆಣ್ಣಾನೆ, ಗೊಡ್ಡಾಕಳು (ಶಮದ. ೨೩೮ ಅಡಿಟಿ); ಇಂದ್ರನೈರಾವತವು ಹೆಣ್ಣಾನೆಗಳ ಪಿಂಡುಗಳಿಗೆಲ್ಲ ಅರಸನು ಆಗಿ (ಸೌಗಂಧಿ. ೮೦-೯).

[ಪೆಣ್ + ಆನೆ$_1$]

ಪೆಣ್ಣಾಯ್, ಹೆಣ್ಣಾಯಿ, ಹೆಣ್ಣುನಾಯಿ (ನಾ). ನಾಯಿಯ ಜಾತಿಯಲ್ಲಿ ಹೆಣ್ಣು; ಶುನಕಿ : "ಶುನಕೀ, ಸರಮಾ—ಈ ೨ ಪೆಣ್ಣಾಯ್ (ಹೆಣ್ಣುನಾಯಿ)" (ಹಲಾಯು. ೪೭-೦೨೭); ಪೆಣ್ಣಾಯಾಗಿ ಪುಟ್ಟಿ ಸತ್ತು (ಪಡ್ಡಾರಾ. ೦೩-೫); ಸತ್ತಲ್ಲಿ ನಿಷಾದನ ಮನೆಯೊಳ್ಪೆಣ್ಣಾಯಾಯ್ತು (ಸುಕುಪಾ. ೩-೦೯). **ಹೆಣ್ಣಾಯಿ** : "ನಾಯಿ = ಹೆಣ್ಣಾಯಿ" (ಕಾಶಕ್ಕ. ೦೧೦). **ಹೆಣ್ಣುನಾಯಿ** : "ಹೆಣ್ಣುನಾಯಿ—ಶುನಿ, ಸರಮೆ" (ಪಾಸರಾ. ೬).

[ಪೆಣ್ + ನಾಯ್]

ಪೆಣ್ಣಾಳ್, ಹೆಣ್ಣಾಳ್, ಹೆಣ್ಣಾಳು (ನಾ). ೧. ಹೆಂಗಸು; ಹೆಣ್ಣು : ಆ ಅಟ್ಟುವೆಲ್ಲಂ ಪೇಡಿಗಳ್ಗೆ, ಪೆಣ್ಣಾಳ್ಗೆ ! (ಅಶ್ವತ್ಥಾ. ೦೩-೨೭೦). **ಹೆಣ್ಣಾಳ್** : ೧. ಹೆಣ್ಣಾಳ್ಗಳೆನ್ನದೆ ತಜ್ಜಿದಿಕ್ಕಿ ತೆಗೆತಂದು ಚಿಣ್ಣನನೆಮ ಗೊಪ್ಪಿಸೆವ (ಪೋಪಕ. ೩೩-೩೦). **ಹೆಣ್ಣಾಳು** : ೨. ಕೂಲಿ ಕೆಲಸ ಮಾಡುವ ಹೆಂಗಸು : ಹೆಂಣಾಳು ಗಂಡಾಳು ಕುಱುಟಗ[ಳು] ಸಹ (ಸೌಇಇ. IX-ii. ೪೧೭ ೦೦; 1377); ಮುಂಗವಚದ ಗುಂಗುರುಹಣೆ ಗೂದಲುಳ್ಳ ಹೆಣ್ಣಾಳುಗಳು . . . ಕಾಣುತ್ತಿದ್ದರು (ಪುಸರು. ೩೦೯).

[ಪೆಣ್ + ಆಳ್$_3$]

ಪೆಣ್ಣಲಿ, ಹೆಣ್ಣಲಿ (ನಾ). ಇಲಿಯ ಜಾತಿಯಲ್ಲಿ ಹೆಣ್ಣು; ಮೂಷಿಕೆ : ಅಂಬರದೊಳಾಡುವ ಪರ್ದಿನ ಬಾಯಿಂದಂ ಬಿರ್ದು ಬರ್ದುಂಕಿದೊಂದು ಪೆಣ್ಣಲಿಯಂ ಕಂಡು (ಪುಸಕಂ. ೨೩೬-೬). **ಹೆಣ್ಣಲಿ** : ಗಂಡಲಿ, ಹೆಣ್ಣಲಿ, ಮುಮಕಿಲಿ, ಹುಡುಗಿಲಿ, ಎಲ್ಲಾ ಬಂದುವು ಓಡೋಡಿ ಜೋಗಿಯು ಬಾರಿಸೆ ಕಿಂದರಿಯ ! (ಪೊಸೋಗಿ. ೦೦-೨೩೦). [ಪೆಣ್ + ಇಲಿ$_1$]

ಪೆಣ್ಣು 'ಪೆಣ್' ನೋ.

ಪೆಣ್ಣುಗ, ಹೆಣ್ಣುಗ (ನಾ). ೧. ಹೆಂಗಸಿನೊಂದಿಗೆ ವ್ಯವಹರಿಸುವವನು. ೨. ಹೆಣ್ಣಿನಲ್ಲಿ ಆಸಕ್ತಿಯಿರುವವನು : ಪೆಣ್ಣೊಳ್ ಪ್ರವಣಂ ವ್ಯಾಪೃತಂ ಮೇಣ್, ಪೆಣ್ಣುಗಂ (ಶಬ್ದಾಮ. ೪೨೪ ಪ್ರಯೋ); "ಸ್ತ್ರೀಭೋಗದಲ್ಲಿ ಚತುರನಾದವನು" (ಪ್ರಶಣ್ಣ). ೩. "ನಪುಂಸಕ" (ಪ್ರಶಣ್ಣ). **ಹೆಣ್ಣುಗ** : ೧. ಉಗ ಪ್ರತ್ಯಯಕ್ಕೆ–ನಾರುಗಂ . . . ಹೆಣ್ಣುಗಂ,

ಮಣ್ಣುಗಂ (ಕಮರ. ೨೦೪ ಪ್ರಯೋ). ೩. "ನಪುಂಸಂ, ನಪುಂಸಕಂ, ಈ ೨ ಹೆಣ್ಣುಗಂ" (ಕಾಕಕ್ಕ. ೩೬೩). ೪. ತಲೆಹಿಡುಕ; ಕುಂಟಣಿ : (ಕ).
[ಪೆಣ್ + — ಉಗ]

ಪೆಣ್ಣುಜನ್ಮ 'ಪೆಣ್ಜನ್ಮ' ನೋ.

ಪೆಣ್ಣುಡೆ, ಹೆಣ್ಣುಡೆ (ನಾ). ಹೆಣ್ಣಿನ ವೇಷ,-ವಸ್ತ್ರ,-ಉಡುಗೆ : ನೀರನೋಡಿ ಪುಗೆ ಪೆಣ್ಣುಡೆಯುಟ್ಟರೆ ಪುತ್ತನೇಱ್ ಕೊಲ್ಲದ ತುಱಿಲಾಳ್ತನಕ್ಕೆ ಸಮನಾವನೊ ಸಾಹಸಭೀಮಭೂಪನೊಳ್ (ಗದಾಯು. ೧-೨೨); ಪೆಣ್ಣುಡೆಯನಾಟಿಸಿ ಬಾಟ್ಟ ಶಿಖಂಡಿ ಮುಂ ನೆಟ್ಟನರ್ಜುನನ ಸಾರಥಿ (ಕಾಪ್ಯಾವ. ೩೬೨); ಪೆಣ್ಣುಡೆಯುಟ್ಟು ಬೈತಲೆಯನೊಳ್ಪೆನಲೊತ್ತಿ . . . ತಳೆದಂ ಸತಿರೂಪನುರ್ವಿಪಾ (ಪಕಳು. ೧೧-೬೦). **ಹೆಣ್ಣುಡೆ** : ಬಳೆಗಳನ್ನು ನೆಗ್ಗಿ, ಹೆಣ್ಣುಡೆಯನ್ನು ತೊರೆದು, ವೀರವೇಷವನ್ನು ಧರಿಸಿದನು (ಕಸಾಸ. ೯೦). [ಪೆಣ್ + ಉಡ್ಡೆ]

ಪೆಣ್ಣುವಿಂಡು 'ಪೆಣ್ವಿಂಡು' ನೋ.

ಪೆಣ್ಣೆ, ಪೆನ್ನ, ಹೆನ್ನೆ$_1$ (ನಾ). ಒಂದು ನದಿಯ ಹೆಸರು; ಆಂಧ್ರ ಪ್ರದೇಶದ ನೆಲ್ಲೂರಿನ ಬಳಿ ಸಮುದ್ರವನ್ನು ಸೇರುವ ಪೆನ್ನಾರ್ ನದಿ; ಪಿನಾಕಿನಿ : ಷಟ್ಪಣ್ಡ ಪೆಣ್ಣೆನದೀ ಪೂರ್ವದಿಶಾಂ ಕ್ಷೇತ್ರಂ (ಎಕ. IX, ರೂಪ್ಯಾ. ೬೯-೪೮; 517); ಪೆಣ್ಣೆನದೀ ಪೂರ್ವ್ವತಟೇ (ಎಕ. VI, ಮೂಡಗೆ. ೩೬-೪೨; 749). **ಪೆನ್ನ** : ಪೆನ್ನನದೀ ಪೂರ್ವ್ವದಿಶಾಂ ಕ್ಷೇತ್ರಂ (ಇಆ. V, ೧೩೯-೧೮; 513). **ಹೆನ್ನೆ**$_1$: ಮೂಡಲು ಕೊಟ್ಟನೂಱ ಹೊಲವೇರೆ ಹೆ(ಂ)ನ್ನೆಯ ತೊಱ್ (ಸೌಇಇ. IX-1, ೩೫೭-೨೦; 1328); ಜೀವಂಗಳಿಗೆಲ್ಲಾ ಉದಕವೇ ಪ್ರಾಣವಾಗಿ ಪೆನುಗೊಣ್ಡಿಗೆ ಹೆನ್ನೆಯ ನದಿಯನೂ ತರಬೇಕೆನ್ದು (ಎಕ. X, ಗೋರೀಪ. ೬-೧೨; 1388). [ದೇ. ॥ ತಮಿ. ಪೆಣ್ಣೈ; ತೆಲು. ಪೆನ್ನ]

ಪೆಣ್ಣೆಗಡಂಗ (ನಾ). ಒಂದು ಸ್ಥಳದ ಹೆಸರು : ಸರ್ಬ್ಬಣನ್ದಿದೇವರ್ಗ್ಗೆ ಪೆಣ್ಣೆಗಡಙ್ಗದ ಸತ್ಯವಾಕ್ಯಜಿನಾಲಯಕ್ಕೆ . . . ಕೊಟ್ಟರ್ (ಇಆ. VI, ೦೮೩-೩; 887). [ಪೆಣ್ಣೆ + ಕಡಂಗ$_1$ (< ಕಡಂಗು$_3$)]

ಪೆಣ್ಣೆರ್ದೆ, ಹೆಣ್ಣೆದೆ (ನಾ). (ಆಲಂ) ಹೆದರುವ ಮನಸ್ಸು; ಅಳ್ಳೆದೆ. **ಹೆಣ್ಣೆದೆ** : ಅಳ್ಳೆದೆಯ ಹೆಣ್ಣು ಹೆದರಿ, ಹೆಣ್ಣೆದೆಯ ಗಂಡನ್ನೊರಗಿ ದಂತಿತ್ತು ಪಾರ್ವತಿ, ಕಿಟ್ಟಯ್ಯನನ್ನೊರಗಿದ್ದ ಆ ದೃಶ್ಯ ! (ನಿಶಣಾ. ೧೮೫).
ಪೆಣ್ಣೆರ್ದೆಯಂ = ಅಳ್ಳೆದೆಯವನು : ಅಂಜುಬುರುಕ : ನಾನ್ ಸ್ಯೂಸನಾ ತಱಿಸಲವಿನಳ್ಕಿಂದೆ, ಪೆಣ್ಣೆರ್ದೆಯನಾದಪೆನ್ ಎಂದು . . . ಕನಸು ಕಾಣ್ಬುದುಂ ಬೇಡ ನೀನ್ (ಬರ್ಕಪ್ರ. ೫೩-೦೧೫೮). [ಪೆಣ್ + ಎರ್ದೆ]

ಪೆಣ್ಣೊಡಲ್, ಹೆಣ್ಣೊಡಲ್ (ನಾ). ೧. ಹೆಣ್ಣಿನ ದೇಹ,-ಶರೀರ. ೨. (ಆಲಂ) ಹೆಣ್ಣಿನ ಮನಸ್ಸು ; ಹೆಂಗರುಳು: ಪೆಣ್ಣೊಡಲಲ್ತೆ ಎಂತು ಸೈರಿಪೆಂ (ರಾಮಾಶ್ವ. ೩೨-೨೨). **ಹೆಣ್ಣೊಡಲ್** : ೧. 'ಹೆಣ್ಣೊಡಲ' ಪರಾ. [ಪೆಣ್ + ಒಡಲ್]

ಪೆಣ್ತನ, ಹೆಣ್ಣುತನ (ನಾ). ೧. ಹೆಣ್ಣಾಗಿರುವಿಕೆ : 'ಪೆಣ್ತನಂಗೊಳಿಸು' ಪರಾ. ೨. ಹೆಣ್ಣಿನ ಸ್ವಭಾವ,—ರೀತಿ : ತನಕ್ಕೆ-ಕಲಿತನಂ . . . ಪೆಣ್ತನಂ (ಕಮರ. ೨೦೦ ಪ್ರಯೋ); ಕವಿತಾವನಿತೆಯ ಸಂಗಕೆ ಪೆಣ್ತನ ಸವಿಯಲ್ಲವೆಂದಾ ವಾಣಿ ತವಕದಿಂ ಗುಡುರೂಪಾಂತಳ್ (ಕುರಾಸಾಂ. ೦-೩೯); ಪೆಣ್ತನಕೆ ತಗುವಂತೆ ಮೇಣ್ ಚೆಲ್ವರಳುವಂತೆನ್ನ ಪಸದನಂಗೈ (ಜಪ್ರಾಂಗ. ೦೯-೪೯೫). **ಹೆಣ್ಣುತನ** : ಈ ಹೆಣ್ಣುಮಗುವಿನಲಿ . . . ಉಳಿದಿಹುದು, ಚೆಲುವಾದ, ನಿರ್ಮಲದ ಹೆಣ್ಣುತನವೊಂದು ! (ಇಂಗೀಶ. ೬೨-೬) ; ಹರೆಯದ ಹೆಣ್ಣು ಚಾಮಲೆ ಹೆಣ್ಣುತನದ ಆ ಬನಿಯನ್ನು, ಚೆಲುವನ್ನು ತಳೆಯುತ್ತಿದ್ದಳು (ಸಪತಿ. ೫೬); ಹೆಣ್ಣುತನ ಶಿವನೆ ಜಗದಾಗ ಕೈಮುಗಿವೆ ಕಂದಯ್ನ ಕೊಟ್ಟು ಕಡಿಮಾಡು (ಜನಗೀ. ೫೯). [ಪೆಣ್ + — ತನ]

ಪೆಣ್ತನಂಗೊಳಿಸು (ಕ್ರಿ). ಹೆಣ್ಣಾಗಿರುವಂತೆ ಮಾಡು : ಧರಣಿಯೊಳಾನೆ ದಿವ್ಯಪುರುಷೋತ್ತಮನೆಂಬ ಸಗರ್ವಶೌರಿಯಂ ಭರದೊಳೆ ಪೆಣ್ತನಂಗೊಳಿಸಿದಂ ಕ್ರತುವಕ್ಷಂ (ವೃಷಪಿ. ೩೬-೦೦೦).
[ಪೆಣ್ತನ + ಕೊಳ್$_1$ + — ಇಸು$_3$]

ಪೆಣ್ದಂಡ (ನಾ). ಹೆಂಗಸರ ಗುಂಪು ; ಸ್ತ್ರೀಯರ ಸಮೂಹ : ಶ್ರಿದಶೇಂದ್ರಂ . . . ಅಟ್ಟಕರ್ತು ನಿರಂತರಂ ಸಮಱಿದಂ ಪೆಣ್ದಂಡಮಿಂದ್ರಾಣಿಯೆಂದುದನೆಂದೆಂದೆಡೆಯಾಡುತಿರ್ಪುದೆನೆ ಮತ್ತೇನೆಂದದಂ ಬಣ್ಣಿಪೆಂ (ಅಂಪು. ೬-೨೨). [ಪೆಣ್ + ತಂಡ]

ಪೆಣ್ದಂತಿ (ನಾ). ಹೆಣ್ಣು ಆನೆ ; ಪಿಡಿ : "ಪೆಣ್ದಂತಿ . . . ಭೂಜವಿಶೇಷ ಕರೇಣುವಾಚಕಂ" (ಪಾನಾರ. ೦೨೦). [ಪೆಣ್ + ದಂತಿ]

ಪೆಣ್ದಳ (ನಾ). ಹೆಂಗಸರ ಪಡೆ ; ಸ್ತ್ರೀಸೈನ್ಯ : ಲೀಲೆ ಮಿಗೆ ಪೆಣ್ದಳಂ ಬಂದು ವಿಜಯನ ಪಡೆಯ ಮೇಲೆ ಬಿದ್ದುದು (ಕೃಪಿಪಾ. ೧೬.೬).
[ಪೆಣ್ + ದಳ$_2$(= ದಲ)]

ಪೆಣ್ದುಂಬಿ (ನಾ). ತುಂಬಿಯ ಜಾತಿಯಲ್ಲಿ ಹೆಣ್ಣು ; ಭ್ರಮರಿ : ಆ ಪೆಣ್ದುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ (ಪಂಪಭಾ. ೧೨-೦೦೫) ; ಬಂಡುಂಬ ಪೆಣ್ದುಂಬಿ ಸುಸ್ವರದಿಂದೋದುವ ಕೀರಮಾರ ಬಗೆಗಂ ಸಮ್ಮೋದಮಂ ಮಾಡವೇ (ಸುಕುಮಾ. ೧-೬೩) ; ಆಗಳೆ ಬಂದ ಮುನಿವೃಂದಾರಕನ ಬರವಿನೊಸಗೆಯೊಳ್ ಮಂಗಳಂಬಾಡು ವಂತಿನಿಯ ದನಿಯಂ ನೆರೆದು ನೊರೆವ ಪೆಣ್ದುಂಬಿಗಳುಂ (ಸಂಪ್ರಪು. ೨-೦೦೫).
[ಪೆಣ್ + ತುಂಬಿ$_1$]

ಪೆಣ್ದೊಡವು (ನಾ). ಹೆಂಗಸು ಧರಿಸುವ ಒಡವೆ ; ಹೆಣ್ಣಿನ ಆಭರಣ : ಪರ್ಸದಾ ಪಡೆ ಬಡವೆ ? ಅದರೊಡವೆ ಪೆಣ್ದೊಡವೆ ? (ಪಾರಸಿ. ೬-೦೩೦).
[ಪೆಣ್ + ತೊಡವು]

ಪೆಣ್ದೊಡೆಯ (ನಾ). ಅರ್ಧದೇಹ ಹೆಣ್ಣಾಗಿರುವವನು ; ಅರ್ಧನಾರೀಶ್ವರ ; ಶಿವ : "ಎಣ್ಮಯ್ಯಂ . . . ಪೆಣ್ದೊಡೆಯಂ, ಈಸಂ . . . ಅಯ್ಮೊಗಂ — ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೪೬-೧); "ಎಳೆದೇರ . . . ಪೆಣ್ದೊಡೆಯ ಮಿಡ ಈಸರಂ ದೇಸಿಗಂ" (ಶಬ್ದಮಂ. ೩).
[ಪೆಣ್ + ತೊಡೆ$_2$ + — ಅ$_7$]

ಪೆಣ್ದೊರೆ (ನಾ). ಹೆಣ್ಣುನದಿ,-ಹೊಳೆ : (ಕ). 'ಗಂಡುದೊಱ್' ಪರಾ.
[ಪೆಣ್ + ತೊರೆ$_3$ (<ತೊಱ್$_2$)]

ಪೆಣ್ಪಾಳ್ಯ (ನಾ). ಹೆಂಗಸರ ಪಡೆ,-ಸಮೂಹ : ಸತ್ಯಸತ್ಪುರುಷರಡಿ ದರ್ಶನಂಗೊಂಡು ಪೋಪಂತೆ ಪೆಣ್ಪಾಳ್ಯದೊಡನೆ ನಡೆಗೊಳಲು (ನವಸೋ. ೨೯ ೬). [ಪೆಣ್ + ಪಾಳ್ಯ (<ಪಾಳೆಯ)]

ಪೆಣ್ಪು 'ಪೆಂಪು' ನೋ.

ಪೆಣ್ಬಕ್ಕಿ 'ಪೆಣ್ವಕ್ಕಿ' ನೋ.

ಪೆಣ್ಬಚ್ಚ (ನಾ). ಹೆಂಗಸಂ ತೊಡುವ ಆಭರಣ : ಹೆಣ್ಣಿನ ಒಡವೆ ಮಚ್ಚರದಾಯಮಂ ಮಱದು ಕೈದುಗಳಂ ತೊಱದುಟ್ಟು ತೊಟ್ಟ ಪೆಣ್ಬಚ್ಚಂ (ಅನಂಪು. ೦೩-೪೬). [ಪೆಣ್ + ಪಚ್ಚ$_2$]

ಪೆಣ್ಬಡಣ (ನಾ). ಹೆಣ್ಣಿನ ದೌರ್ಭಾಗ್ಯ,-ದುರದೃಷ್ಟ : ನಾಣೊಡೆಯ ನನಪ್ಪಿಯುಂ ಮಗುಟ್ಟು ನಿರ್ಲಜ್ಜ ಗಂಡಸನಪ್ಪುತಿರ್ಪ ಪೆಣ್ಬಡಣದ ಮುನ್ನ ಮುಳ್ಳನಿತು ಭಾಗ್ಯಮುಮೇನರೆಯಾಗಿ ಪೋಗದೆ (?)(ಸೂಕ್ತಿಸು. ೬-೪೩೫).
[ಪೆಣ್ + ಪಡಣ]

ಪೆಣ್ಬಡೆ (ನಾ). = ಪೆಣ್ಪಾಳ್ಯ : ನುಡಿವ ನಡೆನೋಡುವ . . . ಚಿತ್ರದ ಪೆಣ್ಬಡೆಯಿಂ ಸ್ತ್ರೀರಾಜ್ಯದಂದಮದಱಿಡೆಯೆಡೆಯೊಳ್ (ಅಂಪು. ೪-೩೨); ಒದವಿದ ನಿಜಲಾವಣ್ಯದಿನುದಕಂ ಸ್ಪರ್ಶಾನುಮಿತಮೆನಲ್ ಪೆಣ್ಬಡೆ ನಿಂದುದು ಪೊಕ್ಕು (ಜಗಪಿ. ೦೪-೯೫); ಪೆಣ್ಬಡೆ ಸೂಸಿತು . . . ಪಟವಾಸದ ರಜಮಂ (ರಾಜಶೇ. ೯-೪೦ ರಗಳೆ). [ಪೆಣ್ + ಪಡೆ$_2$]

ಪೆಣ್ಬಡೆಯ (ನಾ). ಹೆಂಗಸರನ್ನೇ ಸೈನ್ಯವನ್ನಾಗಿ ಉಳ್ಳವನು; ಮನ್ಮಥ: "ಇಂಗೋಲ್ವಿಲ್ಲಂ . . . ಪೆಣ್ಬಡೆಯಂ . . . ಗಿಳಿದೇರಂ ...ಇವು ೧೩ ಕಾಮದೇವಂಗೆ ಪೆಸರ್" (ಕಶಾ. ೦-೦೩); "ಬಂಡುಣಿವೆದೆಯನು . . . ಪೆಣ್ಬಡೆಯನೈಸರಲ ಕಾವ ಜಶಿಗಳವಗೆಯನೆನೆ ಮನ್ಮಥನ ನಾಮಂ" (ಕಬ್ಬಿಳ್ಳ. ೬). [ಪೆಣ್ಬಡೆ + — ಅ$_7$]

ಪೆಣ್ಬರಿಜು (ನಾ). ಹೆಣ್ಣಿನ ಆಕಾರ, —ಆಕೃತಿ: ಮದನನ ಪೂವಿನಂಬುಗಳ ಪೆಣ್ಬರಿಜೆಂಬ ಬೆಡಂಗನುಂಟುಮಾಡಿದ . . . ರಾಜಕನ್ಯಕೆಯರು ಪಲರಂ ತನಯಂಗೆ ಮಾಡಿದಂ ಮದುವೆಯನಾ ನೃಪಂ (ಮಲ್ಲಿಪು. ೯-೧೯೦); ಸಾತ್ವಿಕೋದಯಂ ಪೆಣ್ಬರಿಜಾಗಿ ಮನಂಗೊಳಿಪಂತೆ ರಂಜಿಪ ತತ್ಕಂಜದಳಾಕ್ಷಿಯ ಭಾವಮನಱಿದು (ಉದ್ಯಪು. ೬-೧೦೦ ಪ); ಚೆಲ್ವಂಬೊತ್ತಾ ಚಿತ್ರದ ಪೆಣ್ಬರಿಜಂ ನೋಡಿದನಾ ಕುವರಂ (ಜಯಕಾ. ೩-೮). [ಪೆಣ್ + ಪರಿಜು]

ಪೆಣ್ಬಸ (ನಾ). ಒಂದು ಸ್ಥಳದ ಹೆಸರು: ಪೆಣ್ಬಸ ಅರು ಕಿಸುಮಂಗಲಂ (ಎಇ. IX, ೨೦೯-೬೦; 750). [?]

ಪೆಣ್ಬಾವ (ನಾ). ಹೆಣ್ಣಿನ ಅಂಗವಿನ್ಯಾಸ: ಹಾವಕ್ಕನುರೂಪಮಾದ ಪೆಣ್ಬಾವಕ್ಕಂ . . . ಲಕ್ಕತೆಱದಂ ಪೊಗಟ್ದು (ಶಾಂತಿಪು. ೩-೫೩ ಪ); ಕೊಳದಿಂದಂ ಬಂದ ಲಕ್ಷ್ಮೀಪಧುವೆನಿಸುವ ಪೆಣ್ಬಾವವಿಂತಾಗವೇಡ (ಗದಾಯು. ೬-೬೦). [ಪೆಣ್ + ಬಾವ$_2$]

ಪೆಣ್ಬಾಟ್ತಿ (ನಾ). ಹೆಣ್ಣಿನ ಬದುಕು: ನುಣ್ಬಣೆ ಮೆಲ್ಗದಪು ಮರಲ್ಗಣ್ಬಾಯ್ದೆಱೆ ತುಂಬುಗುದಮಿಂಬಿಡಿದೆರ್ದೆಗಳ್ ಪುಣ್ಬಡುವಿನೆಗಂ ಬಿಗಿದೀ ಪೆಣ್ಬಾಟ್ತಿಯ × × × (ಜಕಪಿ. ೬-೨೦೩). [ಪೆಣ್ + ಬಾಟ್ತಿ]

ಪೆಣ್ಬುಯ್ಯಲ್, ಪೆಂಬುಯ್ಯಲ್, ಹೆಣ್ಬುಯ್ಯಲು (ನಾ). (ಅಪಹರಣ ಕಾಲದಲ್ಲುಂಟಾಗುವ) ಹೆಣ್ಣಿನ ಆರ್ತಧ್ವನಿ, —ಗೋಳಾಟ: ಪೆಣ್ಬುಯ್ಯಲೊಳಱುವೆಸದೊಳ್ ನಂಟನೆಡಱೊಳ್ . . . ತಱಿಸಂದು ಗಂಡುತನಮನೆ ನೆಱಪದವಂ ಗಂಡನಲ್ಲನೆಂತುಂ ಪಂಡಂ (ಗದಾಯು. ೨-೨೯); ಕೇಳ್ದು ಪೆಣ್ಬುಯ್ಯಲಂ ವಿಚಾರಿಸದೆ ಪುರುಷಂ ಪೋಗಲಾಗದೆಂದು ತತ್ಸಮೀಪಮನೆಯ್ದಿ (ಪರ್ಧಪು. ೦೬-೩೮ ಪ); ಎನ್ನಿನೆಯಂಗೆಯ್ದಿಸಿಮೂರ ನಾಡ ಜನಮೀ ಪೆಣ್ಬುಯ್ಯಲಂ . . . ಹಾ ನೃಪ ನೀಱನೆಂದಬಲೆ ಬಾಯ್ವಿಟ್ಟಿಟ್ಟು ಹುಯ್ಯಲ್ಚಿದಳ್ (ಅಪಂಪು. ೦೧-೪೩). **ಪೆಂಬುಯ್ಯಲ್**: ಆಗಸದೊಳು ಬರುತಂ ಪೆಂಬುಯ್ಯಲನಾಗಳೆ ಕೇಳ್ದಾ ಖಚರಂ ಸಿಡಿಮಿಡಿಯಾಗಿ ವಿಚಾರಿಸಿ (ಕುಮುರಾ. ೦೦-೬೦). **ಹೆಣ್ಬುಯ್ಯಲು**: ಹೆಣ್ಬುಯ್ಯಲನು ತಾ ಕೇಳಿ ಸಾಕ್ಷಾದ್ವಿಷ್ಣು ಬಂದವತರಿಸಿದನು ಧರೆಗೆ (ಪಿಭಾಗ. ೦೦-೨೯-೨೦).

[ಪೆಣ್ + ಪುಯ್ಯಲ್ (<ಪೊಯಲ್)]

ಪೆಣ್ಬುರುಳಿ (ನಾ). ಹೆಣ್ಣುಗಿಳಿ: ಪೆಣ್ಬುರುಳಿಯನೊರ್ಮೆ ಮೆಲ್ನುಡಿಯಿನಾಱಿಸಿ ಕಾಂತೆ ವಿನೋದದಿಂ . . . ಪೊಟ್ಟುಗಳೆವಳ್ (ಪುತ್ವಪು. ೯-೧೯). 'ತೊಂಡುವೆಣ್ಬುರುಳಿ' ಪರಾ. [ಪೆಣ್ + ಪುರುಳ್$_2$]

ಪೆಣ್ಬುಲಿ, ಹೆಣ್ಣುಹುಲಿ (ನಾ). ಹುಲಿಯ ಜಾತಿಯಲ್ಲಿ ಹೆಣ್ಣು: ಅನ್ನೆಗಂ ತಾಯಪ್ಪ ಪೆಣ್ಬುಲಿ . . . ರಿಸಿಯರಂ ಕಂಡು ಮುಳಿದು ಮಸಗಿ ಮೇಲ್ವಾಯಲ್ (ಪಡ್ಡಾರಾ. ೯೬-೯); ಪೆಣ್ಬುಲಿಯ ಮುಂದೆ ನಲಿದುದು ಕಣ್ಬರಿವೆತ್ತೆರಲೆ (ಪಂಪ್ರಪು. ೦೯-೨೯); ಗಂಡುಮಱಿ ಸಹಿತ ಪೆಣ್ಬುಲಿಯ ತರೆ ನೃಪನವಂ ಕಂಡಿವಂ ಕಪಿಲೆ ಬಸವಂಗಳಂ ಮಾಡೆನಲು (ಪೀಕೈಪು. ೬-೯-೧೭). **ಹೆಣ್ಣುಹುಲಿ**: ವ್ಯಾಘ್ರಣಿ(ಹೆಣ್ಣುಹುಲಿ)ಯು . . . ತನ್ನ ಗಂಡನು ಆಹಾರ ತರುವುದನ್ನು ಎದುರು ಕಾಯುತ್ತಿತು (ಪರಾವ. ೫೬); ಅವಳು ಹೆಣ್ಣುಹುಲಿಯಂತೆ ಗರ್ಜಿಸುತ್ತ (ಮುಂದಾಕಿ. ೦೬೬). [ಪೆಣ್ + ಪುಲಿ]

ಪೆಣ್ಮಗಳು, ಹೆಣ್ಣುಮಗಳು, ಹೆಮ್ಮಗಳು (ನಾ). ೧. ಹೆಂಗಸು; ಸ್ತ್ರೀ: ಜಗದೊಳು ಹೊಕ್ಕು ವಿಶ್ವವನೆಲ್ಲ ತೃಣವೆಂದು ಬಗೆದು . . . ಅತಿಬೇಗದಿಂ ಬಂದೆ ನಿನ್ನ ಪೆಣ್ಮಗಳೆನ್ನಬಹುದೆ (ಮೋಹತ. ೩೦-೩೮). ೨. ಹುಡುಗಿ; ಬಾಲಕಿ: ಪೆತ್ತ ಪೆಣ್ಮಗಳ ಪೆರ್ಚಿಸಿ ಮೈಮಱೆದುನೃತ್ತೆಯಪ್ಪಂತೆ ಮನ್ನಿಸದೆ (ಹರಿವಿ. ೩-೩೯). **ಹೆಣ್ಣುಮಗಳು**: ೧. ವಿದ್ಯಾವತಿಯಂತೆ ತೋರುವ ಹೆಣ್ಣುಮಗಳನ್ನು ಕಂಡು ನರ್ಮದೆ ನಮಸ್ಕಾರ ಮಾಡಿದಳು (ಮುತ್ತೈರ. ೧೩೩). **ಹೆಮ್ಮಗಳು**: ೧. ವಾಂಡವರ ಬಿರುದಿನ ಕುದುರೆಯನ್ನು ಒಬ್ಬ ಹೆಮ್ಮಗಳೂ ಕಟ್ಟುತ್ತಾಳೆ (ಬಿದುರೆ. ೬). ೨. ಒಮ್ಮೆ ದ್ರುಪದನು ಶಿವನ ಧ್ಯಾನಿಸಿ ಹೆಮ್ಮಗಳಯಿನ್ನಾರಿಗೀವೆನೆನಲ್ಕೆ (ಸುಕಥ. ೨೯-೦೯); ಹೆಮ್ಮಗಳು ನಾ ನಿಮ್ಮ ನೆಮ್ಮಿಕೊಂಡಿರುವೆನ್ನೆ (ಸುಸಾರ. ೨-೨).

[ಪೆಣ್ + ಮಗಳು (<ಮಗಳ್)]

ಪೆಣ್ಮಗು, ಹೆಣ್ಣುಮಗು, ಹೆಮ್ಮಗು (ನಾ). ೧. ಹೆಣ್ಣುಕೂಸು. ೨. ಹೆಂಗಸು; ಸ್ತ್ರೀ: (ಕಿ). **ಹೆಣ್ಣುಮಗು**: ೧. ಅವರ ಹೆಣ್ಣುಮಗು ತುಂಬಾ ಮುದ್ದಾಗಿದೆ (ಕೂಡಿ). ೨. ಜವರಾಯ ನುಂಗಿದೀ ಹೆಣ್ಣುಮಗುವಿನಲಿ ಹೊರೆದ ಕಲ್ಮಷ ತೊಳೆದು, ಈಗ ತಾನುಳಿದಿಹುದು . . . ಹೆಣ್ಣುತನವೊಂದು! (ಇಂಗೀತ. ೬೨-೨). **ಹೆಮ್ಮಗು.**

ಪೆಣ್ಮಕ್ಕಳ್, ಪೆಣ್ಮಕ್ಕಳು, ಹೆಣ್ಣುಮಕ್ಕಳು, ಹೆಣ್ಮಕ್ಕಳು, ಹೆಮ್ಮಕ್ಕಳು (ಬಹುವ): ಪೆಣ್ಮಕ್ಕಳ್ಗಂ ಕ್ರಮಂ ಸಲ್ವುದು (ಎಕ. VI, ಕಡೂರು. ೯-೦೦; ಸು. 990 ?); ಬೆಸೆಯದಿರ್ ಕುಸುಮಾಯುಧ ನಿನ್ನ ಬಲ್ಪು ಪೆಣ್ಮಕ್ಕಳೊಳಲ್ಲದಿಲ್ಲ (ಕಮಾದ. ೧೨೩ ಪ್ರಯೋ); ಪೆಣ್ಮಕ್ಕಳು ಭೀತಿಸದಂತೆ ಚೊಕ್ಕಟವಾಗಿ ನೀ ತಳರು (ಮೋಹತ. ೯೨-೬); ಇಂತಪ್ಪ ತಾಯ ಮಾಯಮನಱಿತು ಪೆಣ್ಮಕ್ಕಳುಂ ಠಕ್ಕಿನಿಂದೊಲ್ಮೆಗರೊಳ್ ಮುನಿವರ್ (ಜಕಪಿ. ೬-೯೬ ಪ); ಹೆಣ್ಣುಮಕ್ಕಳಿಗೆ ಹಾಡ ಕಲಿಸಿದವರಿಲ್ಲ, ನಾಯಿಗೆ ಬೊಗಳ ಕಲಿಸಿದವರಿಲ್ಲ (ಗಾದೆ); ಗಂಡ ಕುಳ್ಳಿರಲು ಮೂವರು ಹೆಣ್ಮಕ್ಕಳು ಸೇವೆಯ ಮಾಡುವರು (ಕೂಪ್ಯಸಂ. ೩೦೮-೩); ನೆರೆಮನೆಯ ಮುಮ್ಮನೆಯ ಹೆಮ್ಮಕ್ಕಳಂ ಬೇಗ ಕರೆ (ಸಿದ್ಧರಾ. ೨-೨); ಇಬ್ಬರು ಹೆಮ್ಮಕ್ಕಳು ರಾಜಮರ್ಯಾದೆಯ ಹರಿವಾಣಗಳನ್ನು ತಂದರು (ಸಪಕಿ. ೯೬). [ಪೆಣ್ + ಮಗು]

ಪೆಣ್ಮಣಿ, ಹೆಣ್ಣುಮಣಿ (ನಾ). ಹೆಂಗಸರಲ್ಲಿ ರತ್ನಪ್ರಾಯಳಾದವಳು; ಅತ್ಯಂತ ಶ್ರೇಷ್ಠಳಾದವಳು; ಸ್ತ್ರೀರತ್ನ: ಉರ್ವಿಯೆನಿಪ್ಪ ಪೆಣ್ಮಣಿಯ ಮೇಲನುರಾಗದೆ ಸೂಸಿದಂತೆವೊಲ್ಪರ್ವಿದುದಂಬುಜಾತಸಖಜಾತಘನಾನತ ನೂತನಾತಪಂ (ಉದ್ಯಪು. ೦೦-೦೦); ಚೆಲ್ವ ಪೆಣ್ಮಣಿಯ ಸುಸಿಲ ಮಸಕದೊಳಿಂಪ ನುಗುತೊಗೆವ ನುಣ್ವಾತುಗಳ ರೀತಿಯಂತೆ (ಪದ್ಮರಾ. ೦-೯೦); ಪೆಣ್ಮಣಿಯಂ ನೃಪಕುಳಚೂಡಾಮಣಿ ಯುವರಾಜಂಗೆ ಮದುವೆಯಂ ಮಾಡಿದಪು (ರಾಜಕೇ. ೬-೯೯). **ಹೆಣ್ಣುಮಣಿ**: ಊರಿಗೆ ಬಾರೆಲೆ, ಹೆಣ್ಣುಮಣಿ! (ಇಂಗೀತ. ೯೨-೨೨). [ಪೆಣ್ + ಮಣ್$_2$]

ಪೆಣ್ಮಾಣಿಕ (ನಾ). — ಪೆಣ್ಮಣಿ: ಕಣ್ಮಲರ್ಗಳ್ ಕಡುನಿಡಿದಾದುವು . . . ಪೆಣ್ಮಾಣಿಕಕೆ (ಜಯಕಾ. ೩-೨೩). [ಪೆಣ್ + ಮಾಣಿಕ]

ಪೆಣ್ಮೆಗ (ನಾ). ಹೆಣ್ಣು ಜಿಂಕೆ: ಹರಿಣಶೃಂಗದೆ ತನ್ನಯ ವಾಮನೇತ್ರಮಂ ತುರಿಸುತುಮಿರ್ಪ ಪೆಣ್ಮೆಗಮುಮಂ ಬರೆಯಲ್ಕಿದರಲ್ಲಿ ವಾಂಛಿಪೆಂ (ಶಾಕುಂತ. ೯೦-೨). [ಪೆಣ್ + ಮಿಗ]

ಪೆಣ್ಮೇನ್, ಪೆಣ್ಮೇನು, ಹೆಣ್ಣುಮೀನ್, ಹೆಣ್ಣುಮೀನು, ಹೆಣ್ಮೇನ್ (ನಾ). ಮೀನಿನಲ್ಲಿ ಹೆಣ್ಣು: "ಪ್ರೋಷ್ಠಾ, ಶಫರೀ—ಈ ೨ ಪೆ(ಹೆ)ಣ್ಮೇನ್" (ಹಲಾಯು. ೦೦೬-೩೬); "ಶಫರೀ—ಪೆಣ್ಮೇನ್" (ಶಿಷಧಿ. ೦೬೦). **ಪೆಣ್ಮೇನು**: ಆನುವರಿಲ್ಲದೆ ಬಿದ್ದ ಶಿಶುವನು ಪೆಣ್ಮೇನು ನುಂಗಿತು ತತ್ಕ್ಷಣದೆ (ಮೋಹತ. ೧೦-೩೦). **ಹೆಣ್ಣುಮೀನ್**: "ಪ್ರೋಷ್ಠಿಯೆನೆ ಶಫರಿಯೆಂದೆನೆ ಹೆಣ್ಣುಮೀನಕ್ಕು" (ಮಂಗರಾ. ೦೨೦-೬). **ಹೆಣ್ಣುಮೀನು**: ಮದ್ಗುರಮೆಂಬ ಆಱುದಾಡೆಯ ಹೆಣ್ಣುಮೀನು (ಶಾಸರಾ. ೪). **ಹೆಣ್ಮೇನ್**: 'ಪೆಣ್ಮೇನ್' ಉಲ್ಲೇಖದ 'ಹಲಾಯು' ಪ್ರಯೋಗವನ್ನು ನೋಡಿ.

[ಪೆಣ್ + ಮೀನ್$_2$]

ಪೆಣ್ಮೇನು 'ಪೆಣ್ಮೇನ್' ನೋ.

ಪೆಣ್ಮುದ್ರೆ (ನಾ). ಹೆಣ್ಣಿನ ಚಿಹ್ನೆ,—ಲಕ್ಷಣ: 'ಪೆಣ್ಮುದ್ರೆವೆಱು' ಪರಾ. [ಪೆಣ್ + ಮುದ್ರೆ]

ಪೆಣ್ಮುದ್ರೆವೆಱು (ಕ್ರಿ). ಹೆಣ್ಣಿನ ಲಾಂಛನವನ್ನು ಪಡೆ,—ಹೊಂದು: ತವ ಪಂಚಬಾಣಕ್ಕೆ ಮೃಡ ವಿಧಿ ವಿಷ್ಣು ದೇವೇಂದ್ರ ಒಡಲೊಳ್ ಪೆಣ್ಮುದ್ರೆ ವೆತ್ತರು (ಪೋಹಕ. ೩-೪೯). [ಪೆಣ್ಮುದ್ರೆ + ಪೆಱು₁]

ಪೆಣ್ಮೆಯ್ಯ (ನಾ). ತನ್ನ ಅರ್ಧ ಶರೀರದಲ್ಲಿ ಹೆಣ್ಣನ್ನು ಹೊಂದಿರುವವನು; ಅರ್ಧ ನಾರೀಶ್ವರ; ಶಿವ: ಗಯ್ಯಾಳಿವೆಂಗಳು ನಿಖಿಲಪುಷ್ಪಗಳ ಪೆಣ್ಮೆಯ್ಯ [ಯ್ಯ] ಗೋಸುಗ ಕಳಚಿದರು (ಪೋಹಕ. ೨೪-೬೭). [ಪೆಣ್ + ಮೆಯ್₂ + —ಅ₇]

ಪೆಣ್ಮೊತ್ತ (ನಾ). ಹೆಂಗಸರ ಗುಂಪು; ಸ್ತ್ರೀಸಮೂಹ: ಪುತ್ತಳಿಗಳಿಗೆ ಚೇತನವ ಇತ್ತರೀ ಬನದೊಳು ಬಂದರೆಂಬಂತೆ ಪೆಣ್ಮೊತ್ತವೊಪ್ಪಿರ್ದುದಲ್ಲಲ್ಲಿ (ಪೋಹಕ. ೧೯-೬೦). [ಪೆಣ್ + ಮೊತ್ತ]

ಪೆಣ್ಮೊಲ, ಹೆಣ್ಣುಮೊಲ (ನಾ). ಮೊಲದ ಜಾತಿಯಲ್ಲಿ ಹೆಣ್ಣು: ಕಿಱುವೇಂಟೆಯ ನಾಯ್ಗಳಿಂದ [ಮು]ಟ್ಟುಪಟ್ಟ ಪೆಣ್ಮೊಲನಂತೆ ಭಯಮಾಸಿದ ಗಲಿಸಿ ಬೆಳ್ಳೋಟಮೋಡಿ (ಶಾಂತಿಪು. ೬-೯೦ ಪ). **ಹೆಣ್ಣುಮೊಲ**: ಅವಳು ಎರಡು ಹೆಣ್ಣುಮೊಲಗಳನ್ನು ಸಾಕುತ್ತಿದ್ದಾಳೆ (ಕೂಡಿ). [ಪೆಣ್ + ಮೊಲ]

ಪೆಣ್ವಕ್ಕಿ, ಪೆಣ್ಬಕ್ಕಿ, ಹೆಣ್ಣುಹಕ್ಕಿ (ನಾ). ಹಕ್ಕಿಯ ಜಾತಿಯಲ್ಲಿ ಹೆಣ್ಣು: ಆಗಸದಲಿ ಮೆಱೆದಳು ಪೆಣ್ವಕ್ಕಿಯಂತೆ (ಪೋಹಕ. ೩೦-೦೨). **ಪೆಣ್ಬಕ್ಕಿ**: ಒಂದುದಿವಸಂ ಗಂಡುವಕ್ಕಿ ಪೆಣ್ಬಕ್ಕಿಯನೆಂದುದಾನೊಂದೆಡೆಗೆ ಪೋಗಿ ಬಂದಪ್ಪೆ ನೀನಿಲ್ಲಿರ್ಪುದೆನೆ (ಜಾಪುಂಪು. ೨೩೭); ಚೆನ್ನೆಯ್ದಿಲುರಿಯೆಂದು ಪುಗಲನುಗೆಯ್ದುದು ಪೆಣ್ಬಕ್ಕಿ ವಿಪುಳವಿರಹವ್ಯಥೆಯಿಂ (ಸೂಕ್ತಿಸು. ೬-೨೯). **ಹೆಣ್ಣುಹಕ್ಕಿ**: ಹೆಣ್ಣುಹಕ್ಕಿಯು ಅದರ ವಯ್ಯಾರವನ್ನು ಸುಲಭದಲ್ಲಿ ಮೋಹಿಸಿ ಬರುವುದಿಲ್ಲ (ಶಾಲಿಪ್ರ. II, ೬೬೦). [ಪೆಣ್ + ಪಕ್ಕಿ]

ಪೆಣ್ವೆಂಡು, ಪೆಣ್ಣುವಿಂಡು (ನಾ). = ಪೆಣ್ಮೊತ್ತ: ಬಿಡೆಯವಿಲ್ಲದೆ ಮಧ್ಯ ಮಧ್ಯದೆ ಪೆಣ್ವೆಂಡು ನಡೆಗೊಂಡುದೇನ ಬಣ್ಣಿಪೆನು (ಪೋಹಕ. ೧೩-೨೩). **ಪೆಣ್ಣುವಿಂಡು**: ಆ ಪೆಣ್ಣುವಿಂಡಂಗಜನ ಬಾಣದೇಱಿಂ ನೋವುತಡಿಯಿಟ್ಟಿತಾಕ್ಷಣದೊಳು (ಕಬಪು. ೦೯-೨೬). [ಪೆಣ್ + ಪಿಂಡು₂]

ಪೆಣ್ವೃಂದ (ನಾ). = ಪೆಣ್ಮೊತ್ತ: ಮುಂದೆಸೆಯಲಿ ಬಾಣಸುತೆ ಚಿತ್ರಲೇಖೆ ಪೆಣ್ವೃಂದದೊಳನಿರುದ್ದ ಬರಲು (ಪೋಹಕ. ೪೨-೯೭). [ಪೆಣ್ + ವೃಂದ]

ಪೆಣ್ಸೆಱೆ, ಹೆಣ್ಣುಸೆಱೆ (ನಾ). ಹೆಣ್ಣಿನ ಬಂಧನ,—ಸೆರೆ: ಅಗಣಿತಮುದ ಪೆಣ್ಸೆಱೆಗಳಂ ಬಿಡಿಸುತ್ತುರುವಿಕ್ರಮಾರ್ಕನ ಅಭಿಮತಮಿತ್ತು (ರಾಜಶೇ. ೦-೩೪). **ಹೆಣ್ಣುಸೆಱೆ**: ಹೆಣ್ಣುಸೆಱೆ ತುಱುಸೆಱೆಯಂ ಕೆಡೆದು (ಪ್ರಾಅಶಿ. ೦೯೩೬, ೦೯-೦೦; 1152). [ಪೆಣ್ + ಸೆಱೆ₂]

ಪೆತ್ತ₁ 'ಪೆಱು₁' ಪರಾ.

ಪೆತ್ತ₂ 'ಪೆಱು₂' ಪರಾ.

ಪೆತ್ತಣಿಸತ್ಯಾಂಕ (ನಾ). ಒಂದು ಬಿರುದು (?): ವೇರಾಳ್ಕವರೆ ಪೆತ್ತಣಿಸತ್ಯಾಂಕನ್ ಅಟ್ಟುಳ್ಳಭಟನ್ ಬೆದರೆ ಮಹೇಂದ್ರನ್ (ಪ್ರಾಅಶಿ. ೧೯೨೩, ೭೨-೨; 7ಪೆಯ ಶತ). [?]

ಪೆತ್ತಿಳ, ಹಿತ್ತಳ, ಹೆತ್ತಿಳ (ನಾ). ಒಂದು ಸ್ಥಳದ ಹೆಸರು: ಪೆತ್ತಿಳದಾ ಮಹಾಜನಕ್ಕೆ ಸಾಲೆ ಆಚನ್ದ್ರತಾರಕಂ (ಎಳ. VII, ಶಿಳಾರಿ. ೪೫ (b)-೦೮; ಸು. 890 ?). **ಹಿತ್ತಳ**: ಮೂಡಲು ಹಿತ್ತಳದ ಸೀಮೆಯ ಒಳಗುಳ . . . ಅಷ್ಟಭೋಗತೇಜಸಾಂಮ್ಯಗಳನು (ಎಳ. VII, ಶಿಳಾರಿ. ೨೫-೨೦; 1515). **ಹೆತ್ತಿಳ**: ಹೆತ್ತಿಳದ × × × ಮಾದಯ್ಯನ ಆಳಿಯ (ಪ್ರಾಅಶಿ. ೦೯೨೬, ೦೬೦-೨; 11ಪೆಯ ಶತ). [?]

ಪೆತ್ತು₁ 'ಪೆಱು₁' ಪರಾ.

ಪೆತ್ತು₂ 'ಪೆಱು₂' ಪರಾ.

Δಪೆದರು 'ಹೆದಱು₁' ನೋ.

ಪೆದೆ, ಹೆದೆ (ನಾ). ಬಿಲ್ಲಿಗೆ ಹೂಡುವ ಬಾಣಕ್ಕೆ ಆಧಾರಪಾದ ದಾರ: ನಾರೀನರನಾಂತ ಪೆದೆವಾಸಕೆ ಸಿಕ್ಕಿ ತೋರಿಯ ಬಿಲ್ವಾಸದಂತೆ . . . ನಿನಗಾನೊಳಗಾಗಿ ಸಾರಸತ್ಕೃತಿಯ ವಿಸ್ತರಿಪೆ (ಪೋಹಕ. ೩೯-೨); ಕುಡಿವುರ್ವ ಚಾಪಕ್ಕೆ ನಿಡುಗುರುಳ ಪೆದೆಯಿಕ್ಕೆ . . . ಬೇಂಟೆಯಾಡುವಂ ಮನ್ಮಥ ಮಹಾಶಬರನು (ಶ್ರಶುಪು. ೯-೦೨೬); ನಾರಿ ಶರಂ ತದಂಗಜನೆ ಸಾರಥಿ . . . ತದಹಿತಂ ಪೆದೆ (ರಾಜಶೇ. ೩-೯೪). **ಹೆದೆ**: "ಬಿಲ್ಲ ಹೆದೆ . . . ಗುಣಮೆನಿಕು" (ಮಂಗರಾ. ೮೭-೩೩); ಇಂದಿಂಗೀ ಬಿಲ್ಲ ಹೆದೆಯೆ ಸಾಲ್ಗುಮೆಂದುಮದಂ ಕಡಿವುದುಂ . . . ಆ ನರಿ ಬಿಱುವರಿದು ಸತ್ತುದು (ಪಂಚತಂ. ೩೦೨-೦೬); ದಶಧರ್ಮವೆನಿಪ ಧನುವಿನೊಳು ಸ್ಮೃತಿಯೆಂಬ ಮಿಸುವ ಹೆದೆಯನಳವಡಿಸಿ . . . ತೀವಿದನು (ತ್ರಿಪುಸಾಂ. ೦೦-೦೦೦); ಬಿಲುಗಳ ಸರಳ ಹೆದೆಗಳ . . . ಪರಿಪರಿಯ ಕೈದುಗಳ ಪಿಡಿಪಿಡಿದು (ಬಸಪು. ೬೧-೨೫).

ಪೆದ್ದ₁ (ನಾ). ೧. ದೊಡ್ಡದಂ; ಹಿರಿದು: 'ಪೆದ್ದಿ₁' ಪರಾ. ೨. ಮುಖ್ಯವಾದುದು; ಪ್ರಧಾನವಾದುದು: 'ಪೆದ್ದಕಾಪು' ಪರಾ. [ದೇ. ॥ ತುಳು. ಹೆದ್ದ; ತೆಲು. ಪೆದ, ಪೆದ್ದ]

ಪೆದ್ದ₂ (ನಾ). ೧. ಮೂರ್ಖ; ದಡ್ಡ; ಹೆಡ್ಡ: ಓಣಿಯ ಜನರೆಲ್ಲ ಶಿವೂನಿಗೆ . . . ಪೆದ್ದ, ಕೈಲಾಗದವ ಎಂದು ಸಿಕ್ಕ ಸಿಕ್ಕ ಹಾಗೆ ಕರೆಯುತ್ತಿದ್ದರು (ಕುರಿಹಿ. ೬೨); ನೀನೊಬ್ಬ ಪೆದ್ದ (ತುಂಗಭ. ೦೩); ಅವನೊಬ್ಬ ಶುದ್ಧ ಪೆದ್ದ (ರರ್ಮಸಾ. ೯೮). (ಗು). ೨. ತಿಳಿಗೇಡಿಯಾದ; ದಡ್ಡತನದಿಂದ ಕೂಡಿದ: ದೇವ ಈ ಪೆದ್ದ ಹಾರುವನ ಸುದ್ದೇನು (ಸೌಗುರಿ. ೬೨ ೨); ಅವಳ ಆ ಪೆದ್ದ ತಾಯಿಯನ್ನು ಮಾತನಾಡಿಸಲು ಹೋದದ್ದೇ ತಪ್ಪಾಯಿತು (ಮೂರುದಾ. ೦೬೬). 'ಹೆಡ್ಡ₁' ಪರಾ. [ಪೆದ್ದು + —ಅ₇]

ಪೆದ್ದಂಭಟ್ಟ, ಪೆದ್ದಭಟ್ಟ (ನಾ). ತಿಳಿಗೇಡಿ; ದಡ್ಡ: ನೀನೊಬ್ಬ ಪೆದ್ದಂಭಟ್ಟನ ಹಾಗೆ ಆಡಬೇಡ (ಕೂಡಿ). **ಪೆದ್ದಭಟ್ಟ**: ಏ ಪೆದ್ದಭಟ್ಟ . . . ಮಾತಾಡದೆ ಸುಮ್ಮನಿರು (ಶಾಲಿಮ. ೦೯೭). [ಪೆದ್ದ₂ + ಭಟ್ಟ]

ಪೆದ್ದಕಾಪು (ನಾ). ಗ್ರಾಮದ ಮುಖ್ಯಾಧಿಕಾರಿ,—ಮುಖಂಡ; ಪಟೇಲ: ಪಟೇಲನಿಗೆ ಪಟೇಲ . . . ಪೆದ್ದಕಾಪು ನಾಯಿಡು ವಗೈರೆ ಹೆಸರುಗಳುಂಟು (ಗ್ರಾಮಾಕ. ೦). [← ತೆಲು. ಪೆದ್ದಕಾಪು, ಪೆದ್ದಂಕಾಪು]

ಪೆದ್ದಕ್ಕ (ನಾ). ತೂಕ ಮಾಡಲು ಬಳಸುವ ದೊಡ್ಡ ಕಲ್ಲು,—ಬಟ್ಟು: ಹಸುಬೆಯೋಳ್ ಪೆದ್ದಕ್ಕ ನಾ ಸೇರುಕಲ್ಲುಗಳನೂ ಸಂತಸದೊಳಿಟ್ಟು (ಅಜಾರಿ. ೩೦-೩೬). [ಪೆದ್ದ₁ + ?]

ಪೆದ್ದಣ್ಣ (ನಾ). ದಡ್ಡ; ಪೆದ್ದಂಭಟ್ಟ: ನೋಡುತ್ತೀರೇನು ಪೆದ್ದಣ್ಣಗಳಂತೆ! (ದೇವಸಾ. ೩). [ಪೆದ್ದ₂ + ಅಣ್ಣ₁]

ಪೆದ್ದಭಟ್ಟ 'ಪೆದ್ದಂಭಟ್ಟ' ನೋ.

ಪೆದ್ದಾಣೆ (ನಾ). ಒಂದು ಸ್ಥಳದ ಹೆಸರು: ಪ್ರತೀಚೀದೆಸೆ ಪೆದ್ದಾಣೆಯ (ಎಳ. IX (3), ಮುಳಪಾ. ೩೨೮-೫೦; ಸು. 650; ಪ್ರಾಅಶಿ. ೦೯೦೭, ೯-೫೦ ನೋ). [?]

ಪೆದ್ದಿ₁ (ನಾ). ೧. ವಯಸ್ಸಾದ ವ್ಯಕ್ತಿ; ಹಿರಿಯ ವ್ಯಕ್ತಿ: (*). ೨. ಗೌರವಕ್ಕೆ ಪಾತ್ರವಾದ ವ್ಯಕ್ತಿ; ದೊಡ್ಡವ್ಯಕ್ತಿ: (*). ೩. ಕೆಲವರ ಹೆಸರಿನ ಕೊನೆಯಲ್ಲಿ ಗೌರವಾರ್ಥವಾಗಿ ಸೇರುವ ಪದ: ಗುಂಡದೇವ ಪೆದ್ದಿ ಬನ್ನಿಯ ಬೆನಕನಲ್ಲಿ ಶ್ರೀಧರದೇವರ ಕೆಯ್ಯಿಂ ಬಡಗ ನಾಕಱ ಹಸುಗೆಯಲು ಕೊಟ್ಟ ಮತ್ತರು ನಾಲ್ಕು (ಸೌಇಇ. IX—I, ೩೩೩-೪೯; 1215). [ಪೆದ್ದ₁ + — ಇ₃./ತೆಲು. ಪೆದ್ದಿ]

ಪೆದ್ದಿ₂ (ನಾ). ಮೂರ್ಖಳಾದ ಹೆಂಗಸು; ದಡ್ಡಿ: ಶುದ್ಧ ಪೆದ್ದಿ. ಇನ್ನು

ಯಾರು ನಿನಗೆ ಪುರಾಣ ಹೇಳುತ್ತಾರೆ (ಶಾಲಿಪು. ೦೬); ಯಾಕೆ ಸುಸಂದಾ, ಪೆದ್ದಿಯ ಹಾಗಾಡ್ತೀಯ ? (ಪೂಪಿಟ್ಟ. ೩೦). [ಪೆದ್ದ$_2$ + — ಇ$_3$]

ಪೆದ್ದಿಗ (ನಾ). ದೊಡ್ಡವನು ; ಶಕ್ತಿವಂತ : ಎನ್ನಿದಿರಿನಲಿ ನಿಂದು ಕಾದುವರೆ ನಿನ್ನಿಂದಲಪ್ಪುದೆ ಕರಸು ನಿಮ್ಮ ಪೆದ್ದಿಗನ (ನವಪೋ. ೩೨-೬). [ಪೆದ್ದ$_1$ + — ಇಗ]

ಪೆದ್ದು (ನಾ). ೧. ದಡ್ಡತನ ; ಮೌಢ್ಯ : ಪೆದ್ದು ಪೆದ್ದಾಗಿ ಆಡಬೇಡ (ಕೂಡಿ). ೨. ಮೂಢವ್ಯಕ್ತಿ ; ತಿಳಿಗೇಡಿಯಾದ ವ್ಯಕ್ತಿ : ನನ್ನ ಪಕೀಲ ಶುದ್ಧ ಪೆದ್ದು (ಪುನರು. ೨೦೪); ನಟಾಷ . . . ಸುಮ್ಮನೆ ನಿಂತಿದ್ದಳು. ಶುದ್ಧ ಪೆದ್ದು, ಅಲ್ಲವೆ ? (ಹೋರಪು. ೧೫). [ದೇ. ॥ ಕೊಡ. ಪೆದ್ದ್]

ಪೆದ್ದುತನ (ನಾ). = ಪೆದ್ದು ೧ : ಈಗ ಓಡಿಸಿದರೆ ಅವರ ಕೆಟ್ಟತನವಲ್ಲ; ನನ್ನ ಪೆದ್ದುತನ ಕಾರಣ ಅಷ್ಟೆ (ಪೊಸಕ್ಷಿ. ೦೨೬). [ಪೆದ್ದು + —ತನ]

ಪೆದ್ದೊರೆ 'ಪೆರ್ದೊಱೆ' ನೋ.

ಪೆದ್ದೊಱೆ 'ಪೆರ್ದೊಱೆ' ನೋ.

ಪೆದ್ದೊಱೆಗರೆ (ನಾ). ಒಂದು ಸ್ಥಳದ ಹೆಸರು : ಪೆದ್ದೊಱೆಗರೆಯೆಟ್ಟು ದಿಂಬರುಂ ಎಣ್ಟೊಕ್ಕಲುಂ ಇದಂ ಕಾವರ್ (ಇಆ XIV, ೨೬-೧೩; 809). [?]

ಪೆನ್ 'ಪೆನ್ನು' ನೋ.

ಪೆನಸಲು 'ಪೆನ್ಸಿಲ್ಲು' ನೋ.

ಪೆನ್ನ 'ಪೆಣ್ಣೆ' ನೋ.

ಪೆನ್ನಜುಟ್ಟುವೆಗಿಡ (ನಾ). ಒಂದು ಬಗೆಯ ಸಸ್ಯ : (ಪ್ರಾಕಿಗಿ. ೫೮-೦೦೬೯). [? + ಗಿಡ (< ಗಿಡು)]

ಪೆನ್ನಸ 'ಪನ್ನಸು' ನೋ.

ಪೆನ್ನು, ಪೆನ್, ಪೇನ್$_2$, ಪೇನಾ, ಪೇನ್ನು$_2$ (ನಾ). ಬರೆಯಲು ಬಳಸುವ ಒಂದು ಬಗೆಯ ಸಾಧನ : ಟಿಪ್ಪಣಿಯನ್ನು ತೆಗೆದುಕೊಳ್ಳಲು ಪೆನ್ನು . . . ಬೈನಾಕ್ಯುಲರ್—ಇವಿಷ್ಟು ಅವರ ಪ್ರಯಾಣದ ಸಲಕರಣೆಗಳಾಗಿದ್ದುವು (ಮಕಪ್ಯ. ೩೦) ; ಈ ಪೆನ್ನು ನನ್ನ ಬಳಿ ಇರಲಿ (ಕಪಪ್ರ. ೪-೨೫). **ಪೆನ್** : ಸೀತಾರಾಮು ವರನಿಗೆ ಒಂದು ಪಾರ್ಕರ್‌ಪೆನ್ . . . ಓದಿಸಿದ (ನಟಿಸಾ. ೩೮೦). **ಪೇನ್$_2$** : ಪೇನ; ಬರೆಯುವ ಕಡ್ಡಿ (Pen. ಇಂಕಸಿ). **ಪೇನಾ** : ಗೂನರು "ಎಲ್ಲಿ ಆ ಪೇನಾ" ಎಂದು ಕೂಗಿದರು (ಕೊಸಪ್ಪ. ೦೪೬). **ಪೇನ್ನು$_2$** : ಪೇನು ಎತ್ತಿದಾಗ ಆ ಪ್ರವಾಹವು ಕಡಿಯುವುದು (ಬಾಂಪ್ರ. III. ೦೫೨೫) ; ಕೈಯಲ್ಲೊಂದು ಪುಸ್ತಕ, ಪೇನು (ಸ್ವಪ್ನಹೊ. ೨೬೫). [←ಇಂ. Pen]

ಪೆನ್ನೇರು (ನಾ). ಒಂದು ಬಗೆಯ ಸಸ್ಯ : ಹಿರೇಮದ್ದಿನ ಗಿಡ, ಪೆನ್ನೇರು. ಆಶ್ವಗಂಧಿ (ಪ್ರಾಕಿಗಿ. ೭೮-೦೬೧೦). [?]

ಪೆನ್ಶನ್ 'ಪೆನ್ಷನ್ನು' ನೋ.

ಪೆನ್ಶನ್‌ದಾರ 'ಪೆನ್ಷನ್‌ದಾರ' ನೋ.

ಪೆನ್ಷನ್ 'ಪೆನ್ಷನ್ನು' ನೋ.

ಪೆನ್ಷನ್‌ದಾರ, ಪಿಂಚಣಿದಾರ, ಪೆನ್ಶನ್‌ದಾರ (ನಾ). ನಿವೃತ್ತಿವೇತನವನ್ನು ಪಡೆಯುತ್ತಿರುವವನು : ಗವರ್ನಮೆಂಟಿನ ಪೆನ್‌ಷನ್‌ದಾರರಿಗೆ ಕೊಡುವ . . . ಸಂಬಳಗಳು (ಗ್ರಾಪಾಕ. ೩೫). **ಪಿಂಚಣಿದಾರ** : ಈಗ ಪಿಂಚಣಿದಾರರಿಗೂ ಸಹ ಪಿಂಚಣಿ ಹೆಚ್ಚಾಗಿದೆ (ಕೂಡಿ). **ಪೆನ್ಶನ್‌ದಾರ** : ನಾನೊಬ್ಬ ಪೆನ್‌ಶನ್‌ದಾರನು (ಪೊಪಾಸಾ. ೪೦); ಪೆನ್‌ಶನ್‌ದಾರ ಪಂತೋಜಿ—ಪಿಂಚಣಿಯನ್ನು ಪಡೆದು ಮನೆಯಲ್ಲಿ ಸುಖವಾಗಿ ಇರಲಾರದೆ . . . ಒಂದು ಜಾಗಕ್ಕೆ ಅರ್ಜಿ ಹಾಕಿದ್ದ (ದೀಪಹ. II. ೨೫). [ಪೆನ್ಷನ್ (< ಪೆನ್ಷನ್ನು) + —ದಾರ್ಯ]

ಪೆನ್ಷನು 'ಪೆನ್ಷನ್ನು' ನೋ.

ಪೆನ್ಷನ್ನು, ಪಿಂಚಣಿ, ಪಿಂಚನ್, ಪಿಂಚನಿ, ಪಿಂಚನ್ನು, ಪಿಂಛನು, ಪೆನ್ಶನ್, ಪೆನ್ಷನ್, ಪೆನ್ಷನು (ನಾ). ೧. ಸೇವೆಯಿಂದ ವಿಶ್ರಾಂತಿ ಪಡೆದ ಮೇಲೆ ಪಡೆಯುವ ವೇತನ ; ನಿವೃತ್ತಿವೇತನ : ನೌಕರಿಯಿಂದ ತೆಗೆದ ಆಯಾ ನೌಕರರಿಗೆ ಪೆನ್‌ಷನ್ನನ್ನೂ ಕೂಡಲೆ...ಪಾವತಿ ಮಾಡಿಸಬೇಕು (ಮಹಾವಂ. II, ೦೨). **ಪಿಂಚಣಿ** : ೧. ಸಂಬಳ, ಬಡತಿ, ಭತ್ತೆ, ಪಿಂಚಣಿ, ಪದವಿ ಇವೇ ಈ ವರ್ಗದ ಪಂಚಪ್ರಾಣಗಳಾದವು (ಮಾಪಾದ. ೯೫). ೨. ನಿವೃತ್ತಿ : ಇಲ್ಲಿಯೇ ಅವರ ಪಿಂಚಣಿ ಆಗಬಹುದು (ಕಂಗರೋ. ೬೨). **ಪಿಂಚನ್** : ೧. ಪಿಂಚನ್ ಪಡೆದು ಬಂದವನೇ . . . ಕಾಲ ಮೇಲೆ ನಿಂತುಕೊಂಡಿದ್ದೇನೆ (ಆಳಸಿ. ೩೦). **ಪಿಂಚನಿ** : ೧. ನನಗೆ ಬರೋ ಮೂವತ್ತು ರೂಪಾಯ ಪಿಂಚನಿಯಲ್ಲಿ... ಹೇಗೆ ಎಂಬುದೇ ಚಿಂತೆಯಾಗಿದೆ (ಗೃಹಲ. ೭೯); ಕೇವಲ ಮೂವತ್ತೈದೇ ವರ್ಷ ಪಿಂಚನಿಯನ್ನು ಅನುಭವಿಸಿ...ಕಣ್ಮರೆಯಾದ ಮಹನೀಯರ ಆತ್ಮಕ್ಕೆ ಶಾಂತಿ ಕೋರುತ್ತೇವೆ (ಹುಸ್ತುಹು. ೬೨). **ಪಿಂಚನ್ನು** : ೧. ಅವರು ಈಗ...ಅಲ್ಪ ಪಿಂಚನ್ನಿನಿಂದ ತಮ್ಮ ಜೀವನ ತಳ್ಳುತ್ತಿದ್ದರು (ಸಾವಿಸ. ೬೦). **ಪಿಂಛನು** : ೧. "ನೌಕರನು ಹಿಂದೆ ಸಲ್ಲಿಸಿದ ಸೇವೆಗಾಗಿ...ಕೊಡುವ ನಿಯತಕಾಲಿಕ ವಿಶ್ರಾಂತಿ ವೇತನ ; ಪಿಂಛನು" (Pension. ಇಂಕಸಿ). **ಪೆನ್ಶನ್** : ೧. ನಿರಾಯಾಸವಾಗಿ ಸಿಗುವ ಈ ಪೆನ್ಶನನ್ನು ಕಳೆದುಕೊಳ್ಳುವುದು ಯುಕ್ತವಲ್ಲ (ವಿಧಿಸ್ಯ. ೬೫). **ಪೆನ್ಷನ್** : ೧. ಯಾವುದಾದರೂ ಸರ್ವಿಸ್ ಫ್ಯಾಮಿಲಿ ಪೆನ್‌ಷನ್ ಫಂಡಿನಿಂದ ಸಲ್ಲುವ ಸಂಬಳಗಳು ಮತ್ತು ಗ್ರಾಚೂಟಿಗಳು (ಗ್ರಾಪಾಕ. ೩೫). **ಪೆನ್ಷನು** : ೧. ಪೊಲಿಟಿಕಲ್ ಯಾ ರಾಜಕೀಯ ಪೆನ್‌ಷನುಗಳು (ಗ್ರಾಪಾಕ. ೩೫).

ಪಿಂಚನ್ನಾಗು=ನಿವೃತ್ತಿ ಹೊಂದು : ಈಗ ಪಿಂಚನ್ನಾಗಿ ಸ್ವಂತ ಊರಲ್ಲಿದ್ದೇನೆ (ಆಳಸಿ. ೩೦). [←ಇಂ. Pension]

ಪೆನ್ಸಿಲ್ 'ಪೆನ್ಸಿಲ್ಲು' ನೋ.

ಪೆನ್ಸಿಲಿನ್ 'ಪೆನ್ಸಿಲಿಯನ್' ನೋ.

ಪೆನ್ಸಿಲಿಯನ್, ಪೆನ್ಸಿಲಿನ್ (ನಾ). ಏಕಾಣುಜೀವಿಗಳಿಂದ ಹರಡುವ ಅಂಟುರೋಗಗಳ ಚಿಕಿತ್ಸೆಯಲ್ಲಿ ಬಳಸುವ ಶಕ್ತಿಯುತವಾದ ಒಂದು ಬಗೆಯ ಔಷಧ : ಒಂದು ಕೋರ್ಸು ಪೆನ್ಸಿಲಿಯನ್ ಕೊಡೋಣವೆಂದು ನುಡಿದರು (ಹುಸ್ತುಹು. ೩೦). **ಪೆನ್ಸಿಲಿನ್** : ವಿಷಘ್ನಗಳಿಲ್ಲದೆ ಬರಿಯ ಪೆನ್ಸಿಲಿನ್ ಕೊಟ್ಟರೆ ರೋಗಿಯು ಬಹುಬೇಗ ಸಾವನ್ನವ್ಯುತ್ತಾನೆ (ಕಂಗರೋ. ೨೫). [←ಇಂ. Penicillin]

ಪೆನ್ಸಿಲು 'ಪೆನ್ಸಿಲ್ಲು' ನೋ.

ಪೆನ್ಸಿಲ್ಲು, ಪೆನಸಲು, ಪೆನ್ಸಿಲ್, ಪೆನ್ಸಿಲು (ನಾ). ಬರೆಯಲು ಉಪಯೋಗಿಸುವ ಒಂದು ಬಗೆಯ ಸಾಧನ ; ಸೀಸದ ಕಡ್ಡಿ : ಮನಸಿನ ಹಲಗೆಯೊಳಿನಿಯನ ಬರೆವರು ನೆನಹಿನ ಪೆನ್ಸಿಲ್ಲಿನಿಂದೆ (ಕಂಪ್ರವೀ. ೫೯-೦೫). **ಪೆನಸಲು** : ಅವುಗಳ ಮೇಲೆ ಅದೇ ಜಾತಿಯ ಪೆನಸಲಿನಿಂದ ಬರೆಯುತ್ತಾರೆ (ಮುಂಡಿಯಾ. ೫೭). **ಪೆನ್ಸಿಲ್** : ಸದಾಶಿವನಿಗೆ ಕಾಗದ ಪೆನ್ಸಿಲಿಗೂ ಕಷ್ಟವಾಗುತ್ತಿತ್ತು (ಕ್ಯಾಗಸು. ೦೮೫). **ಪೆನ್ಸಿಲು** : ಅದೇ ಪ್ರಮಾಣದಿಂದ ಅಲ್ಲಿರುವ ಪೆನ್ಸಿಲು ಕೆಳಗಿನ ಕಾಗದವನ್ನು ಒತ್ತಿಕೊಂಡು ಚಲಿಸುವುದು (ಬಾಂಪ್ರ. III, ೦೫೨೫); ಕೈಯಲ್ಲಿ ಹಿಡಿದಿದ್ದ ಪೆನ್ಸಿಲನ್ನು ಮೇಜಿನ ಮೇಲಿಟ್ಟು . . . ಕುರ್ಚಿಗೆ ಬರಗಿ ಕುಳಿತುಕೊಂಡ (ಮಾಸಿಮು. ೨೭). [← ಇಂ. Pencil]

ಪೆನ್ಹಿದಿಬೋಯ (ನಾ). ಒಬ್ಬಾತನ ಹೆಸರು: ಪೆನ್‌ಹಿದಿಬೋಯಸ್ಯ ಕೌಣ್ಡಿಲ್ಯಗೋತ್ರ ಜಕ್ಕಿಶರ್ಮ್ಮಣ ಎಕ್ಕಂಶಃ (ಇಆ. VII, ೧೯೭-೩೨ ; 668). [? + ಬೋಯ]

ಪೆಪ್ಪರಮೆಂಟ್ 'ಪೆಪ್ಪರ್ಮೆಂಟು' ನೋ.

ಪೆಪ್ಪರಮೆಂಟು 'ಪೆಪ್ಪರ್ಮೆಂಟು' ನೋ.

ಪೆಪ್ಪರ್ಮಿಂಟು 'ಪೆಪ್ಪರ್ಮೆಂಟು' ನೋ.

ಪೆಪ್ಪರ್ಮೆಂಟ್ 'ಪೆಪ್ಪರ್ಮೆಂಟು' ನೋ.

ಪೆಪ್ಪರ್ಮೆಂಟು, ಪೆಪ್ಪರಮೆಂಟ್, ಪೆಪ್ಪರಮೆಂಟು, ಪೆಪ್ಪರ್ಮಿಂಟು, ಪೆಪ್ಪರ್ಮೆಂಟ್ (ನಾ). (ಯಾವುದಾದರೂ ಕೆಲವುಬಗೆಯ ಸಸ್ಯದ ಪರಿಮಳವನ್ನು ಸೇರಿಸಿ) ಸಕ್ಕರೆಯಿಂದ ಮಾಡಿದ ಸಣ್ಣ ಆಕಾರದ ಒಂದು ವಿಧವಾದ ತಿನಿಸು ; P 'ಮಿಂಟ್' ಎನ್ನುವುದು ಇಂಗ್ಲಿಷ್‌ಭಾಷೆಯಲ್ಲಿ ಕೆಲವು ಸಸ್ಯಗಳ ವರ್ಗವನ್ನು ಸೂಚಿಸುತ್ತದೆ : ಗುಂಡಣ್ಣನು ಪೆಪ್ಪರ್ಮೆಂಟುಗಳನ್ನು ತಂದಾಗ ತನ್ನ ಗೆಳೆಯರಿಗೆ ಮಾತ್ರ ಕೊಡುತ್ತಿದ್ದನು (ರಂಗರೋ. ೨೯). **ಪೆಪ್ಪರಮೆಂಟ್** : ಅವರಿಗೆಲ್ಲ ರಾಯರು ಈವರೆಗೆ ಅದೆಷ್ಟು ಚಾಕ್ಲೇಟ್, ಪೆಪ್ಪರಮೆಂಟ್ . . . ಕೊಟ್ಟಿದ್ದಾರೋ (ಕಂಬಹು. ೧೨೦). **ಪೆಪ್ಪರಮೆಂಟು** : ಮಕ್ಕಳು ಪೆಪ್ಪರಮೆಂಟಿಗೆ ಅತ್ತು ತಿಂದಂತೆ ಮಕ್ಕಳ ತಂದೆ ತಾಯಿಗಳು ಆಸ್ಪಿರನ್ ತಿಂದರು (ಹುಸ್ಕುಹು. ೩೨). **ಪೆಪ್ಪರ್ಮಿಂಟು** : ಹರಿಕಥೆಗಳಲ್ಲಿ ಮಕ್ಕಳಿಗೆ ದೊರೆಯುವುದು ಅಡ್ಡಕಥೆಯ ಸವಿಯಾದ ಪೆಪ್ಪರ್ಮಿಂಟು (ಕಥಳ. ೨). **ಪೆಪ್ಪರ್ಮೆಂಟ್** : ಗೋವಿಂದ ಜೇಬಿನಿಂದ ಎರಡು ಪ್ಯಾರಿ ಪೆಪ್ಪರ್ಮೆಂಟ್‌ಗಳನ್ನು ತೆಗೆದು . . . ಬಾಯಿಗೆ ಹಾಕಿಕೊಂಡನು (ಪಿಕಿಶಾ. ೯). [← ಇಂ. Peppermint]

ಪೆಪ್ಪಳಿಸು 'ಪೆಳ್ಪಳಿಸು' ನೋ.

ಪೆಪ್ಪಿಡು, ಹೆಪ್ಪಿಡು (ಕ್ರಿ). ೧. ಹೆಪ್ಪಾಗಲು ಹಾಲಿಗೆ ಮೊಸರನ್ನು ಬೆರಸು : ಹೆಪ್ಪು ಹಾಕು : ಪೆಪ್ಪಿಟ್ಟು ಕಡದು ಪಾಲೊಳು ತುಪ್ಪಂಬಡೆವಂತೆ (ಪರಪಾ. ೫೯-೬೫). **ಹೆಪ್ಪಿಡು** : ೧. ಹೆಪ್ಪಿಟ್ಟೊಡೆ ಪಾಲ್ ಮೊಸರಾಗಿಪ್ಪಂತಿರೆ ನೀರ್ಗಳಾಗಲಱಿಗುಮೆ (ರರ್ಪಾಪ್ಕು. ೧೦-೦೬೭); ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು (ಮಹಾರೇ. ಬ. ೦೦೦-೨೪೯); ಅಪ್ಪುದವರಿಂದ ಕಾರ್ಯವ ತಪ್ಪದೆ ಮಾಡುವದು ಪಿರಿಯರೀವುದು ಹಾಲಂ ಹೆಪ್ಪಿಡುವರೆ ಮಳೆಯಲ್ಲದೆ ತುಪ್ಪವನೆರದಪುದೆ (ಪೀಕಿಸಾ. ೨೮೨). ೨. ಗಡ್ಡೆ ಕಟ್ಟು; ಘನೀಭವಿಸು : ಬಾಣಂತಿಯರಲ್ಲಿ ಒದ್ಮೊಮ್ಮೆ ಹೆಪ್ಪಿಟ್ಟ ರಕ್ತದ ತುಣುಕೊಂದು . . . ಶ್ವಾಸಕೋಶದ ರಕ್ತನಾಳಕ್ಕೆ ಅಡ್ಡಬೀಳಬಹುದು (ಪುನೋನಂ. ೦೩). [ಪೆಪ್ಪು + ಇಡು$_1$]

ಪೆಪ್ಪು, ಹೆಪ್ಪು$_2$ (ನಾ). ೧. ಮೊಸರು ಮಾಡುವುದಕ್ಕಾಗಿ ಹದವಾಗಿ ಕಾಯಿಸಿದ ಹಾಲಿಗೆ ಹಾಕುವ ಮೊಸರು ಅಥವಾ ಮಜ್ಜಿಗೆ: ಕ್ಷೀರದೊಳಿಸೆವಂತಿರೆ ಕಾಶ್ಮೀರಮನೊಡಗೂಡಿ ಪೆಪ್ಪನಿಟ್ಟಾ ಮೊಸರಂ ಸೀರೆಯೊಳಗಿಕ್ಕಿ ಪಿಱಿದಂದು (ಶೋಕೋಪ. ೯-೩೨); ಆ ಕಾಯ್ದಾಱಿದ ಪಾಲೊಳೆ ತುಪ್ಪ ಮಾಗದೆಂದು ಪೆಪ್ಪನೆಱೆದು ಬಯ್ತಿಟ್ಟು (ಜೀವಸಂ. ೨೧೯-೦೦). **ಹೆಪ್ಪು$_2$** : ೧. "ಆ(ವಿಾ)ವಿಕ್ಷಾಯೆಂಬುದು ಹೆಪ್ಪು" (ಹಲಾಯು. ೬೯-೨೬೨); ಕ್ರಮದಿಂ ಪಾಲಂ ಕಾಸಿ ಹೆಪ್ಪನಿಟ್ಟು (ರರ್ಪಾಪ್ಕು. ೯-೦೨೦); ದ್ವಿತ್ವಕಿಲ್ಲದು ದರ್ಕೆ_ತಪ್ಪು, ಸೊಪ್ಪು, ಹೆಪ್ಪು . . . ಕಪ್ಪುರಂ ಎಂಬಂತೆ (ಶಮರ. ೦೩೯ ಪ್ರಯೋ) ; ಒಗತನ ಬಿಟ್ಟು ಹೋಹಾಗ ಹಾಲಿಗೆ ಹೆಪ್ಪ ಮೊಗೆದಿಕ್ಕಿದವರಾರುಂಟು (ಪೋಹಕ. ೯-೦೯). ೨. ಗಟ್ಟಿಯಾದ ಭಾಗ ; ಮುದ್ದೆ : ವಸ್ತುವೊಂದರ ಉಪಾದಾನಕಾರಣವು ಅದರ ನಿಮಿತ್ತಕಾರಣಕ್ಕಿಂತ ಭಿನ್ನವಾಗಿರುತ್ತದೆ ; ಮಣ್ಣಿನ ಹೆಪ್ಪು, ಕುಂಬಾರನಿಗಿಂತ ಭಿನ್ನವಾಗಿರುವಂತೆ (ಕತ್ಕಪ್ರಾ. ೩೬೦). ೩. ಗಾಢತೆ ; ತೀವ್ರತೆ : ತನ್ಮಯತೆಯ ಹೆಪ್ಪನ್ನು ಒಡೆದದ್ದು ಒಂದು ವಿಚಿತ್ರವಾದ ನಗೆ ! (ಹೇಪುಕೂ. ೧). ೪. ಹುಲ್ಲುಗರಿಕೆ ಬೆಳೆದ ನೆಲದಿಂದ ಅಗೆದು ತೆಗೆದ ದಪ್ಪ ಹೆಂಟೆ ; ತೆಂಡೆ : ಆನೆಯನ್ನು ಹಿಡಿಯುವ ಕೆಲಸದಲ್ಲಿ . . . ಕಪ್ಪಗಳು ತೋಡಿದ ಹಾಗೆ ಅವೆ. ಅವುಗಳ್ಮೇಲೆ ಗಳುಗಳ ಹಾಕಿ ಅವುಗಳ್ಮೇಲೆ ಹೆಪ್ಪುಗಳ್ನ ಇಟ್ಟು ಮಣ್ಣು ಸುರಿದು ಭತ್ತದ ಪೈರು ನೆಟ್ಟರೆ . . . ಅದರ ಮೇಲೆ ಕಾಲಿಡ್ತದೆ (ಕಂಗಾಳ್ಯ. ೨೩೭). 'ಹೆಪ್ಪುಗಟ್ಟು$_2$' ಪರಾ.

ಹೆಪ್ಪಾಗು = ೧. ಗಡ್ಡೆಯಾಗು ; ಗಟ್ಟಿಯಾಗು : ಇವನ ಸಂಶೋಧನವಿಷಯ ರಕ್ತನಾಳಗಳಲ್ಲಿ ರಕ್ತ ಹೆಪ್ಪಾಗುವಿಕೆ (ಶಿಕಾಸ. X ಪಿಷಾರರರ್ಪಣ) ; ಕುಳಿರಿಂದೆ ಹೆಪ್ಪಾದ ಹಾಲ್ಗಡಲಿನೈಕಿಲೊಳ್ಗಡ್ಡೆಯಂ ಕಡಿ ಕಡಿಯುತ (ಪತ್ರಾಂಗ. ೯೦-೨೪೯೯). ೨. ಹಾಲು ಮೊಸರಾಗಿ ಪರಿವರ್ತನೆ ಹೊಂದು : ಹಾಲ ಹರವಿಯ ಮೇಲೆ ಮಜ್ಜಿಗೆಯ ತುಂಬಿರಿಸಿದಡೇನು ಹೆಪ್ಪಾಗಬಲ್ಲುದೆ ಅಯ್ಯಾ ಸಮ್ಮಿಶ್ರದಿಂದಲ್ಲದೆ (ಆಪಂಡೇ. ೧೩೨-೧೦೩). ೩. ಗಾಢವಾಗು ; ತೀವ್ರವಾಗು ; ಹೆಚ್ಚಾಗು : ಶಿವಲೀಲೆ ಹೆಪ್ಪಾಗಿ ಶಿವಶರಣ ಚೌಡಾಗಿ ಭವದೊಳಗೆ ಹುಟ್ಟಿ ಶಿವನುಡಿಯ ಸಾರಿದನು (ಕನ್ನಪಾ. ೨೯೦). ೪. ಅತಿಶಯವನ್ನು ಹೊಂದು ; ಓರಿಮೆಯನ್ನು ಪಡೆ : ಒಬ್ಬ ಬಸವನಿಂದ ಭೂಮಿಗೆ ಹೆಪ್ಪಾಯ್ತೆಂದು ಉಬ್ಬಿ ಹೇಳುವಿರಿ ಲೋಕದೊಳು (ಪಿಜ್ಜರಾ. ೯-೯೮). ಹೆಪ್ಪು ಹಾಕು = ಹೆಪ್ಪಾಗಲು ಹಾಲಿಗೆ ಮೊಸರನ್ನು ಬೆರಸು ; ಹೆಪ್ಪಿಡು : ಒಳ್ಳೆಯ ಹೆಪ್ಪು ಹಾಕಿದ ಧೈಂಡಿ ಮೊಸರು (ರಂಗಕ. ೧೨೬) ; ಉಳಿದ ಹಾಲನ್ನು ಅರೆಗಾವು ಕಾಸಿ ಹೆಪ್ಪು ಹಾಕಿ . . . ಮಾರುತ್ತಿದ್ದಳು (ಸಿಕಿತಂ. IX, ೨೯) ; ಓಡಿ ಹೋಗುವ ಬಡ್ಡಿ ಹಾಲಿಗೆ ಹೆಪ್ಪು ಹಾಕ್ಯುಳೇ ? (ಗಾದೆ). [<ಪೆಱು$_3$ + — ಪು$_2$]

ಪೆಬ್ಬಾವು 'ಪೆರ್ವಾವು' ನೋ.

ಪೆಬ್ಬೀಳ್ (ನಾ). ಒಂದು ಊರಿನ ಹೆಸರು : ಸ್ವಸ್ತಿಶ್ರೀವಲ್ಲವ ಪೃಥುವೀರಾಜ್ಯಂಕೆಯೆ ಸಿಯಗೆಲ್ಲ ಕೆಸುಮಾಣ್ಣುನಾಡಾಳೆ ಗುಣ್ಡಿಗೆವಾಟಕ್ಕ ತೊಟ್ಟಲಾಳುತ್ತುಮ್ ಕಾಡುವಟ್ಟಿ ಬೋಳದುಳ್ಳೆ ಪೆಬ್ಬೀಳ ನಲ್ಲಕ್ಕಳ್ ಎಱಿದುವಿಟ್ಟೂರ್ (ಎಕ. XVI, ತುಮಕೂ. ೯೬-೨ ; ಸು. 780). [?]

ಪೆಬ್ಬೆಟ್ಟು 'ಪೆರ್ಬೊಟ್ಟು' ನೋ.

ಪೆಬ್ಬೊಟಲ್ 'ಪೆರ್ವೊಟಲ್' ನೋ.

ಪೆಮೊಗೆ (ನಾ). ಒಂದು ಸ್ಥಳದ ಹೆಸರು : P ಈಗಿನ ತಿರುಮಕೂಡಲುನರಸೀಪುರ ತಾಲ್ಲೂಕಿನ ಹೆಮ್ಮಿಗೆ : ಪೆರ್ಮ್ಮನಡಿಗಳ್ ಅರಸಿಯ ಬೆಸತಿ ಪೆಮೊಗೆಯನ್ ಅಳೆದೊವದುದಿನ ಈಚ್ಚಲೆ ಪತೊನ್ನಿ ವಿಟ್ಟರ್ (ಎಕ. XIV, ತಿರುಮ. ೨೩೪-೬ ; ೪ನೆಯ ಕತ). [?]

ಪೆಮ್ಮ$_1$ 'ಪೆರ್ಮ$_1$' ನೋ.

ಪೆಮ್ಮ$_2$ (ನಾ). (?) : ಗಣಿಗರು ಪೆಮ್ಮದವರು ಆನನ್ದರು ಏನೆತ್ತರು ಸಾಕ್ಷಿ (ಇಅ. XIV, ೨೩೩-೦ ; ಸು. ೨ನೆಯ ಕತ). [?]

ಪೆಮ್ಮಟ್ಟಿ 'ಪೆರ್ಮಟ್ಟಿ' ನೋ.

ಪೆಮ್ಮಡಿ 'ಪೆರ್ಮಾನಡಿ' ನೋ.

ಪೆಮ್ಮನಡಿ 'ಪೆರ್ಮಾನಡಿ' ನೋ.

ಪೆಮ್ಮರ 'ಪೆರ್ವರ' ನೋ.

ಪೆಮ್ಮರುಳ್ 'ಪೆರ್ಮರುಳ್' ನೋ.

ಪೆಮ್ಮಳಿಸು (ಕ್ರಿ). (?) : ಪಾಣ್ಡ್ಯನ್ರಿಪು ಮುಳಿದಾನ್ತು ತೂಳ್ದು ಬನ್ದೆಮ್ಮೆಗನೂರಲೊಡ್ಡಿದಡೆ ವಿಷ್ಣುನ್ರಿಪಾಳಕ ನೋಡೆ ವೈರಿಯಂ ಪೆಮ್ಮಳಿಸಿರ್ದ್ದ ವಾಜಿಗಜಯೂಥಮನಾಳ್ದಱಿಯಟ್ಟಿ (ಎಕ. XII, ಪಕ್ಕಪಾ. ೩೫-೬೬; ಸು. 1200). [? + — ಇಸು$_3$]

ಪೆಮ್ಮಾಡಿ 'ಪೆರ್ಮಾನಡಿ' ನೋ.

ಪೆಮ್ಮಾಡಿಗೊಂಡ 'ಪೆರ್ಮಾನಡಿಗಾಮುಂಡ' ನೋ.

ಪೆಮ್ಮಾನಡಿ 'ಪೆರ್ಮಾನಡಿ' ನೋ.

ಪೆಮ್ಮಾಳ್ (ನಾ). (?) : ಕೊಪಳಾಟಮಹೇಶ್ವರ ದಿವಿಜಗ್ಗಟವಲ್ಲಹ ಪೆಂಮಾಳ್ವಱಿಸೆ ಪೊಗೊಳ್ದ ಸಾದಾರಣ (ಎಕ. XVI, ತುಮಕೂ. ೯೦-೦೯; ಸು. 775) ; ಮೂನೂರ್ವ್ವರುಂ ಸೂಳೆಯರುಂ ಪೆಮ್ಮಾಳರಾನುಳ್ಳಿಟ್ಟ ಮೂನೂರ್ವ್ವರುಂ ಪಹುದಿದಕ್ಕೆ ಸಾಕ್ಷಿ (ಎಕ. X, ಶ್ರೀನಿವಾ. ೦೬-೬; ?). [?]

ಪೆಮ್ಮೆ 'ಪೆರ್ಮೆ' ನೋ.

ಪೆಯಿನಕೆಱ (ನಾ). ಒಂದು ಊರಿನ ಹೆಸರು : ಅಲ್ಲಿನ್ದ ತೆಙ್ಕಲು

ಬೆದಿರೂರ(ರ) ತೊಱೆವೊನ್ದು ರೂಡಿದ ಪೆಯಿನಕಱೆಯು ಜಲಾಶಯಂ (ಕ್ಯಶಾ. ೦೯೫೩, ೦೦೫-೪೦; ೮೩೬). [? +ಕೆಱೆ³]

ಪೆಯ್ಕ 'ಪಯ್ಕ' ನೋ.

ಪೆರ್ 'ಪಿರಿ' ನೋ.

ಪೆರ₁ 'ಪೆಱು₁' ನೋ.

ಪೆರ₂ 'ಪೆಱು₂' ನೋ.

ಪೆರಂಬ 'ಪರಂಬೆ' ನೋ.

ಪೆರಂಬೆ 'ಪರಂಬೆ' ನೋ.

ಪೆರಗಿಕ್ಕ 'ಪೆಱಗಿಕ್ಕ' ನೋ.

ಪೆರಗು 'ಪೆಱಗು' ನೋ.

ಪೆರಗೆ 'ಪೆಱಗೆ' ನೋ.

ಪೆರಟಿ (ನಾ). ಒಂದು ಸ್ಥಳದ ಹೆಸರು: ಮಾತ್ರಿಶರ್ಮ್ಮಗೇ ಪರುವಿಷಯೇ ಪೆರಟಿಭೋಗೇ ಕುರುಊರನಾಮ ಗ್ರಾಮೋದತ್ತ (ಪ್ಯಕಂ.೦೯೧೫, ೦೬-೦೬; ?)'

[?]

ಪೆರತಿ (ನಾ). ಅನ್ಯಳು: ಪರಕೀಯಳು : ನಿನ್ನೊಳನುರಾಗ ವೆಗ್ಗಳಿಸಿ ಪೋಸಕ್ಕೆ ಸಿಕ್ಕಿ ಮನ್ನಿಸದೆ ಕೌಸಲ್ಯೆಯನು ಪರತಿಯೆಂದೆನಿಸಿ (ಕಂಕಾಂಗ. ೨-೬-೪೦). [ಪೆರ₁ (< ಪೆಱತು) + — ತಿ₁ (< — ಇತ್ತಿ)]

ಪೆರದೆಗೆ 'ಪೆಱದೆಗೆ' ನೋ.

ಪೆರದೇಗು (ನಾ). ದೊಡ್ಡ ತೇಗದ ಮರ : ಸೋಮೆಯದೇವರಿಗೂ ರಾಮಚಂದ್ರದೇವರಿಗೂ ಪೆರದೇಗಿನ ತೇರಾಗಿ ಒಂದು ಪಾಸವವಾಗಿ ರತ್ನೋತ್ಸವ ನಡೆಯಬೇಕೆಂದು ಮಾಡಿಸಿದನು (ಎಳ. X (s). ಕುಳದಾ. ೦೪೭-೦೪; 1498). 'ಹೆದ್ದೇಗು' ಪರಾ.

[℘ ಇದು 'ಪೆರ್ದೇಗು' ಎಂಬುದರ ಅಪಲಿಖಿತ]

ಪೆರಮಟಿ² (ನಾ). ಒಂದು ಸ್ಥಳದ ಹೆಸರು : ವಡಗಣ್ಣಾ ಸೀಮೆ ಪೆರಮಟಿ² ವಡುವಣ್ಣಾ ಸೀಮೆ ತಣ್ಣಳ್ಳಿಗಾರ ಪಾಟಿ² (ಎತಿ. XII, ೦೭೮-೦೨; ಸು. ೪೮೫ಬ ೪೫). [?]

ಪೆರಮುಟಿಬೇರು (ನಾ). ಒಂದು ಬಗೆಯ ಮೂಲಿಕೆ: "ಬಲರಕ್ಕಸಿ, ಪೆರಮುಟಿಬೇರು, ಕರೇಬಾಳದ ಬೇರು, ಬಾಲರಾಕ್ಷಸಿ" (ಸಕ್ಕಶಿ. ೦೦೨); ಬಲರಕ್ಕಸಿ, ಪೆರಮುಟಿಬೇರು (ಕ್ಯಶಿಗಿ. ೬೦-೦೨೦೪).

[? + ಬೇರು (< ಬೇರ್)]

ಪೆರಮೊಂದ (ನಾ). ಒಬ್ಬಾತನ ಹೆಸರು : ಪೆರಮೊಂದ್ದ ಪುಗಂ ಮೊದಯಸ್ಸ್ ನೆವಂಲದ ತೊರೆಗಳುಳ್ಳಿಱಿದು (ಎಳ. X, ತಂಜಾಕು. ೦೦೯-೨; ಸು. 1000).

[?]

ಪೆರಸಾರು 'ಪೆಱಸಾರ್' ನೋ.

ಪೆರಿಯೂಳ (ನಾ). ಒಂದು ಊರಿನ ಹೆಸರು : ಸ್ವಭಾಷಯಾ ಪೆರಿಯೂಳ ನಾವು ಗ್ರಾಮಮಂನ್ದತ್ತಮ್ (ಎಳ. X, ಗೋಂಲಿ. ೪೯-೦೪; ಸು. ೮೩೦). [?]

ಪೆರಿಯೂರು (ನಾ). ಒಂದು ಊರಿನ ಹೆಸರು : ಸ್ವಸ್ತಿಶ್ರೀ ಪಾದಿಯು ಗಾಮುಂಡ್ರೀ ಪೆರಿಯೂರು × × × (ಎಳ. IX, ಕಂಗಳ. ೩೪-೨; ಸು. 1000). 'ಪೇರೂರ್' ಪರಾ. [<ಪರಿದು₁ + ಊರು₃ (< ಊರ್)]

ಪೆರಿಸಂದು (ನಾ). ಒಂದು ಸ್ಥಳದ ಹೆಸರು : ಅನ್ತೆ ಒನ್ದು ಬಾಳಗೆಱೆಯ ಮೂಡಣ ಕಟಿಯ ಪೆರಿಸನ್ದರಿಂ (ಎಳ. III, ಕಂಆಸ. ೦೩೯-೦೩; 9151).

[?]

ಪೆರು₁ 'ಪೆಱು₁' ನೋ.

ಪೆರು₂ 'ಪಿರಿ' ನೋ.

ಪೆರುಂತಚ್ಚ (ನಾ). ಪ್ರಸಿದ್ಧನಾದ ಬಡಗಿ : ನಾರಾಯಣ ಪೆರುನ್ತಚ್ಚನ್ (ಪ್ಯಕಂ. ೦೧೩೨, ೫೮-೬; ಸು. 825). [←ತಮಿ. ಪೆರುನ್ತಚ್ಚನ್]

ಪೆರುಂದಾಳಿಸೆಟ್ಟಿ (ನಾ). ಒಬ್ಬಾತನ ಹೆಸರು : ಗಾಣಿಗರ ಪೆರುನ್ದಾಳಿಸೆಟ್ಟಿಯರ ಮಗಂ ಗಜ³ ಸೆಟ್ಟಿ (ಎಳ. X, ಕೋಂಶಾ. ೨೧೩-೨; 966). [? + ಸೆಟ್ಟಿ]

ಪೆರುಂಬೆ 'ಪರಂಬೆ' ನೋ.

ಪೆರುದಟ್ಟಾರ (ನಾ). ಹಿರಿಯ ಅಕ್ಕಸಾಲಿಗ : ಕೊಜಿಕ್ಕೋಣ ಪೆರುದಟ್ಟಾರೇಣೇದಂ ತಾಮ್ರಶಾಸನಲಿಖಿತ (ಎಳ. X (s). ಕುಳಿಶಾ. ೩೨೯-೩೨; ಸು. 650). [ಪೆರು₂ (<ಪರಿದು₁) + ತಟ್ಟಾರ]

ಪೆರುಮಾಳ್, ಪೆರುಮಾಳು (ನಾ). ೧. ಪರಮಾತ್ಮ; ದೇವರು : ಕಡುಘನ ಪೆರುಮಾಳೇಯುಲಫೊಡೆಯೇ (ತಿಮಾ. ಕೀ. ೨೨೬-೪). ೨. ಶ್ರೇಷ್ಠನಾದವನು; ಹಿರಿಮೆಯುಳ್ಳವನು : ಎಡಗಣೆಯ ಪೆರುಮಾಳೆ ಜಗಮಕೆ ನೀಡಿ (ತಿಚಕ್ಷ. ೫೫-೪೨). **ಪೆರುಮಾಳು** : ೧. ಆಳಾಗಿ ಹೊರಟು ಆಳುವದು ಜಗವ ಪೆರುಮಾಳಿ ಜನಿಸುವಂತೆ (ತಿಕಳು. ೬೨-೪). ೩. ಒಬ್ಬಾತನ ಹೆಸರು : ಶ್ರೀಪೆರುಮಾಳು ಗುರವಡಿಗಳಾ ಶಿಷ್ಯ (ಎಳ. II, ೬-೦; ಸು. 700).

[ದೇ. ॥ ತಮಿ. ಮಲ. ಪೆರುಮಾಳ್; ತೆಲು. ಪೆರುಮಾಳ್ಲು]

ಪೆರುಮಾಳು 'ಪೆರುಮಾಳ್' ನೋ.

ಪೆರುಮಾಳ್ತನ (ನಾ). ಹಿರಿಯತನ; ಶ್ರೇಷ್ಠತೆ; ಅತಿಶಯತೆ : ಸಾಯುವುದರೊಳಗೆ ಒಂದು ದಿನಕ್ಕಾದರೂ ತನ್ನ ಗಂಗಕುಲದ ಪುರಾತನ ಪೆರುಮಾಳ್ತನದ ಗದ್ದುಗೆಯನ್ನೇರುವುದೆಂತು? (ವೀಕಾಂ. ೬೨).

[ಪೆರುಮಾಳ್ + — ತನ]

ಪೆರೆ₁ 'ಪೆಱೆ' ನೋ.

ಪೆರೆ₂ 'ಪೊರೆ₂' ನೋ.

ಪೆರೆಗಳೆ, ಪರೆಗಳೆ, ಹರೆಗಳೆ, ಹೆರೆಗಳೆ, ಹೊರೆಗಳೆ (ಕ್ರಿ). ೧. (ಹಾವು) ಚರ್ಮದ ಆವರಣವನ್ನು ಕಳಚು : ನಿರ್ಮೋಕವನ್ನು ಬಿಡು; ಪೊರೆಯನ್ನು ಕಳಚು : ವೆ[ಣಾಂ. ಹೆ]ರೆಗಳಿದ ಮನೋಜವಿಷೋರಗ ವೆಂದು ಬಗೆದನಕ್ಕುಂ ಮನದೊಳ್ (ಕರ್ಣಪು. ೩-೦೬); ಪೆರೆಗಳ[ಣಾಂ ೪]ದ ಫಣಿಕುಲದಂತೆ ನಲಿದುದು ಚತುರ್ಬಲಂ (ಕೃಬಾ. ೨೦-೩೦). **ಪರೆಗಳೆ** : ೧. ನಿರ್ಮುಕ್ತ—ಪರೆಗಳೆವ ಹಾವು (ಗಂಗಾವ. ೦೮೩). **ಹರೆಗಳೆ** : ೧. ಹ[ಣಾಂ. ಹೊ]ರೆಗಳಿದ ಕಲಿಘೋರಗಂಗಣೆಯಾವನವಾರಾರಿ (ಅಣಾಗ. ೧೦-೨-೪೦). **ಹೆರೆಗಳೆ** : ೧. ಹಸಿವ ಹುಲಿಂಗೋ . . . ಹೆರೆಗಳೆದ ನಿಟ್ಟುಸಿರಿನುರಗನೋ ಮೇಣೆನಲು ಸೌಮಿತ್ರಿ ಹಲುಮೊರೆವ (ತೊಕಣ. ೨-೬-೭); ಮನೋಜ್ಞಾಂಗಂ ಪೊದಳ್ದುರ್ಬಿದೊಡದು ಜಾಱಿತ್ತು ಬಾಹಾಹಿತದ್ವೇಹ ಮಹಾಶ್ರಿ ಖಿಂಡಶಾಖಾಗ್ರದೆ ಹೆರೆಗಳೆವುತ್ತಿರ್ಪ್ಪದೆಂಬಂದದಿಂದಂ (ಕಾಪಪ. ೦೦-೦೪೦); ಹೆರೆಗಳೆದ ಉರಗನ ನರಳ ತಾ ತಪ್ಪುವದೆ (ಸಪಗಣ್ಣ. ೦೦೦೬). **ಹೊರೆಗಳೆ** : ೧. ಹೊರೆಗಳೆದ ಫಣಿಯಂತೆ ಮುನ್ನಿನ ಶರೀರವಳಿದುದು ದಿವ್ಯತನು ಸಡಗರಿಸಿತಾಕ್ಷಣ ದೆಸೆಯು ಬೆಳಗಿದ ಕಾಂತಿಯುಕ್ತವಲಿ (ತಂಜಾಕಾ. ೪೯-೬೪). ೨. (ಹೊರ) ಪದರವು ಸುಲಿ : ದೊರೆವೆಣ್ಣ ಹೊಂಬಾಳೆದೊಡೆ ಸೊಂಪು ನುಣ್ಪುವೆತ್ತಿರೆ ಕಂಡು ಕದಳಿ ಕಂಗಱುಬಿ ಒರೆಗೆ ತಾ ಸಲ ಬಂದುದಿಲ್ಲವೆಂಬೊಂದೊಂದು ಹೊರೆಗಳೆದುವು ಬಾಳೆ ಬನದಿ (ತೋಚಕ. ೨೪-೨೦). [ಪೆರೆ₂ (< ಪೊರೆ₂) + ಕಳೆ₁]

ಪೆರೆಗೊಡೆಯ 'ಪೆಱೆಗೊಡೆಯ' ನೋ.

ಪೆರೆದಲೆ 'ಪೆಱೆದಲೆ' ನೋ.

ಪೆರೆದಲೆಯ 'ಪೆಱೆದಲೆಯ' ನೋ.

ಪೆರೆನೊಸಲು 'ಪೆಱೆನೊಸಲ್' ನೋ.

ಪೆರೆಯಿಕ್ಕು (ಕ್ರಿ). ಪೊರೆಯನ್ನು ಬಿಡು.—ಕಳಚು : ಬೀಚರಪತಿ ಭೀಕರ ರೂಪಂ ನಿಜವೀದಂ ಪೆರೆಯಿಕ್ಕಿದ ಕೃಷ್ಣಸರ್ಪನಿರ್ಪಂತಿರ್ದಂ (ಹಂಗಾವಾ. ೦೭-೨೦). [ಪೆರೆ₂ (< ಪೊರೆ₂) + ಇಕ್ಕು]

ಪೆರೆಯುಚ್ಚು 'ಪೊರೆಯುರ್ಚು$_1$' ನೋ.

ಪೆರೆಯುರ್ಚು 'ಪೊರೆಯುರ್ಚು$_1$' ನೋ.

ಪೆರೆಸುಲಿ (ಕ್ರಿ). = ಪೆರೆಯಿಕ್ಕು : ಪೆರೆಸುಲಿದ ಪಾವಿನಂತೆ (ಶಾಂತಿಪು. ೪-೩೯) ; ಪೆ[ಪಾಶಾಂ. ಹೆ]ರೆಸುಲಿವ ಹಿಮವದವನೀಧರಮೆಂಬುರಗಾಧಿಪತಿಯ ನಿರ್ಮೋಕದೊಳೇಂ ದೊರೆಯಾದುವೊ ವಿದ್ರುತಜರ್ಝರ ಭೂರ್ಜದ್ರುಮವನಂಗಳಿಂದಚಳಂಗಳ್ (ಶಾಪ್ಯಾಪ. ೬೬೯).

[ಪೆರೆ$_2$ (< ಪೊರೆ$_5$) + ಸುಲಿ$_1$]

ಪೆರೇಡ್ 'ಪರೇಡು' ನೋ.

ಪೆರೇಡು 'ಪರೇಡು' ನೋ.

ಪೆರೋಲು (ನಾ). ಸೆರೆಯಾಳನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಲು ಒಪ್ಪಿ, ಅವನಿಂದ ಪಡೆದುಕೊಳ್ಳುವ ನಂಬಿಕೆಯ ವಾಗ್ದಾನ: ಹೆಗಡೆಯವರು ಪೆರೋಲಿನ ಮೇಲೆ ಬಿಡುಗಡೆ ಮಾಡಲ್ಪಟ್ಟರು (ಕರಪೀ. ೦೩೮). [← ಇಂ. Parole]

ಪೆರ್ಕಣ 'ಪೆಕ್ಕಣ$_1$' ನೋ.

Δಪೆರ್ಕಳ 'ಪೆಕ್ಕಳ$_1$' ನೋ.

ಪೆರ್ಕಳಂಗೊಳ್, ಹೆಕ್ಕಳಂಗೊಳ್, ಹೆಕ್ಕಳಂಗೊಳು, ಹೆಕ್ಕಳಗೊಳ್, ಹೆಕ್ಕಳಗೊಳು (ಕ್ರಿ). ೧. ಸಂತೋಷಪಡು ; ಹಿಗ್ಗು : ಬಿಜ್ಜೆವಳರ್ ಪೆರ್ಕಳಂಗೊಳ್ವರ್ (ಪಳಪಂ. ೦೭೦-೦೨). **ಹೆಕ್ಕಳಂಗೊಳ್** : ೨. ಅಧಿಕವಾಗು ; ವ್ಯಾಪಿಸು : ಅಧರದೊಳ್ತಂದಿರಿಸಿದಂ ಕೊಳಲನೊಪ್ಪದಿಂ ಮಧುರಾಕ್ಷರಂಗಳಂ ಸವಿವ ಸಮರಾಗದಿಂ ಹೆಲ್ಲಪಣೆ ಹೆಕ್ಕಳಂಗೊಂಡು ವನದೊಳು ತೀವೆ (ಅಪಾರ. ಪೇ. ೦೬೦-೦೯). **ಹೆಕ್ಕಳಂಗೊಳು** : ೩. ಬೀಗು ; ಹೆಮ್ಮೆಪಡು ; ಗರ್ವಿಸು : ಅರಿಯ ಗೆಲಿದನೆನುತ್ತೆ ಹೆಕ್ಕಳಂಗೊಳದಿರು (ಕುರುಗ. ೬೮-೪೦). **ಹೆಕ್ಕಳಗೊಳ್** : ೩. ಉರಿಯ ಕಂಡ ಪತಂಗ ಹೆಕ್ಕಳಗೊಂಡ ಪರಿಯಹುದು (ಕೌಶಿಂಗ. ೩೮-೦೦). **ಹೆಕ್ಕಳಗೊಳು** : ೧. ಇಂತು ರೇವಣಸಿದ್ಧಶಿವಯೋಗಿ ಬಹ ಜನದನಂತವಾರಾಶಿಯಂ ನೋಡಿ ಹೆಕ್ಕಳಗೊಳುತ್ತೆ (ಪಕುಪು. ೨-೪-೩೦). ೩. ಕೊಪ್ಪರಿಗೆಯೊಳಗೆಣ್ಣೆಯಂ ತುಂಬಿ ಹೆಕ್ಕಳಗೊಳುತ್ತಾ ಪುರದ ನೊಳಗಳೆಲ್ಲವನೆಯ್ದೆ ಬಳಿಗೆ ಸೋಹುತ್ತೆ (ಪಾಸೋಪು. ೮೦-೩೯). [ಪೆರ್ಕಳ (< ಪೆಕ್ಕಳ$_1$) + ಕೊಳ್$_1$]

ಪೆರ್ಕಳಿಕೆ, ಹೆಕ್ಕಳಿಕೆ$_1$, ಹೆಗ್ಗಳಿಕೆ (ನಾ). ೧. ಹೆಚ್ಚುಗಾರಿಕೆ ; ಹೆಚ್ಚಳ ; ಮೇಲ್ಮೆ : ಲೋಗರೊಳ್ ಬಲ್ಲರ್ ತಮ್ಮಾಳ್ತನದ ಪೆರ್ಕಳಿಕೆಯಂಗಳವುವರೆ ? (ರಾಮಾಶ್ವ. ೮೩-೨೬). ೨. ಗರ್ವ ; ಸೊಕ್ಕು : ಒರ್ವಂ ನಾರದಂ ಗಾಣಸಾಸ್ತ್ರದ ಬೇರಂ ಪಿಡಿದೆತ್ತಿರ್ಪೆನೆಂಬ ಪೆರ್ಕಳಿಕೆಯಿಂದೋರೊರ್ಮೆ ಪಾಡುತಿರಲ್ (ಅಧ್ಯಾತ. ೨೬-೬) ; ನಿನ್ನ ಪೆರ್ಕಳಿಕೆಯುಂ ರೂಢಿಯುಂ ಜಾನಿಯುಂ ಸಯ್ದನೆಂ ತನಗಮಿದಿರಾಂಪಧಟರೆತ್ತಣವರೆಂಬ ಪಂತಮುಮಕಟ ! (ಸಂಸಪ. ೨೩-೩) ; ಕೆಟನುರ್ಗುವಾ ವಜ್ರಾಯುಧು, ಅವನ ಮೇಲ್ ಕಟ್ಟೆಱಗಿ ಉರ್ಬಟೆಯ ಪೆರ್ಕಳಿಕೆಯಿನ್ ಎತ್ತಿ ಬಡಿಯಿತ್ತು ಅವನನ್ (ಇಧ್ಯಪ್ರ. ೨೦-೪೦೬). **ಹೆಕ್ಕಳಿಕೆ$_1$** : ೧. ಅನಂತಕಾಲಂ ಸುಖದ ಹೆಕ್ಕಳಿಕೆಯಿಂದಲತಿರಮಿಸುತಿರಲು (ಕುರುಗ. ೩೦-೩೦) ; ಆ ಹೆಕ್ಕಳಿಕೆಯ ಸಾಧನೆಯಿಂದ . . . ಧೀವಿಯನ್ನು ಪೋಷಣೆಗೆಯ್ದು ಜೀವಿಸಿಕೊಳ್ಳುವುದೇನು ? (ಪಟ್ಟಅ. ೬೩-೪). ೨. ಅವಳು ಹೆಕ್ಕಳಿಕೆಯಿಂದ ಕೊಟಡಿಯೊಳಗೆ ಹೆಜ್ಜೆಯಿಟ್ಟಳು (ಪುಸಕು. ೨೦೬). ೩. ಸಂತೋಷ ; ಹಿಗ್ಗು : ಆ ಎಂಬುದು ಸ್ವಯಂತೃಪ್ತ ಹೆಕ್ಕಳಿಕೆಯಲ್ಲಿ ಬರುತ್ತಿದ್ದರೆ . . . ಆಹಾ ಎಂಬುದು ತೊಂದರೆ ದಾಟಿದ ಆನಂದದಲ್ಲಿಯೂ ಬರುತ್ತದೆ (ಭಾಷಾಶಾ. ೬). **ಹೆಗ್ಗಳಿಕೆ** : ೧. ಅದರ ವಾತ್ಸಲ್ಯ . . . ಮೋಹಕಶೈಲಿಗಳು ಕನ್ನಡನುಡಿಯ ಹೆಗ್ಗಳಿಕೆಯನ್ನು ಸಾರಬಲ್ಲುವು (ಕಪಸಿ. ೦೭೬) ; ಸಾಮಾನ್ಯ ವ್ಯಕ್ತಿಯೊಬ್ಬನಾದರೆ ಆಗ ತನ್ನ ಹೆಗ್ಗಳಿಕೆಯನ್ನು ಕೊಚ್ಚಿಕೊಳ್ಳುವ ಸಂಭವವಿತ್ತು (ರಾಜಪ. ೬೬) ; ಅದೇ ನಿನ್ನ ಹೆಗ್ಗಳಿಕೆ (ಸಂಪಮ. ೪೬-೧೦). ೨. ವಿಜಯೋನ್ಮಾದದ ಹೆಗ್ಗಳಿಕೆಯಿಂದನ್ನುತ್ತಾ ಸಂಜೀವರಾಯರು . . . ನೋಡಿದರು (ಕುರುಶಾ. ೪೮). ೪. ದೊಡ್ಡಸ್ತಿಕೆ ; ಡೌಲು : ಗಂಡನ ಹುಚ್ಚು ಹೆಗ್ಗಳಿಕೆಗೆ ಬಲಿಯಾಗಿ . . . ನಿರಾಶೆಯ ಸಂಕೇತವಾಗಿ ಕಂಡಳು (ಕಪಸಿ. ೬೮). [ಪೆರ್ಕಳ (< ಪೆಕ್ಕಳ$_1$) + — ಇಕೆ]

Δಪೆರ್ಕಳಿಸು 'ಪೆಕ್ಕಳಿಸು' ನೋ.

ಪೆರ್ಕುಡಿ (ನಾ). ೧. ಹಿರಿಯ ಮನೆತನ ; ದೊಡ್ಡವಂಶ : ಪೆರ್ಕುಡಿಯ ಮಕ್ಕಳಿರ್ ನೀಮೆ ಇಂತಾಡುವೊಡೆ, ಕೀಟ್ಗಳೇನಪ್ಪರ್ (ಅಶ್ವತ್ಥಾ. ೪೨-೬೩೦) ; ಇನ್ ತೋಱ್ಪೆ ನಿನ್ನ ಪೆರ್ಮನೆಯ ಪುಟ್ಟನ್ ; ಇಲ್ಲ ಪೆರ್ಕುಡಿಗೊಗೆದ ನಿನ್ನ ಕೀಟ್ತನಮನ್ (ಅಂತಿಗೊ. ೨-೨೯) ; ಪೆರ್ಕುಡಿಯ ಪೆರ್ಮೆಯವರೊಡನೆ, ಪಂಬಲಿಸಲೇವುದಯ್ ದಾಂಪತ್ಯಯೋಗಮನ್ ? (ಇಧ್ಯಪ್ರ. ೪೬-೦೦೨೩). ೨. ಉತ್ತಮರ ಸಹವಾಸ ; ಶ್ರೇಷ್ಠರಾದವರ ಸಂಗ : ಅಕ್ಕರರ ಗೋಷ್ಠಿ ಸುಜನರ ಪೀ[ಪೆ]ರ್ಕುಡಿ ಸಜ್ಜನರ ಕೇಳಿ ವಿದಗ್ಧೆಯ ಸಂಗಂ ತಕ್ಕರೊಡನಾಟವಾಗಲು ಮಿಕ್ಕ ಸುಖಂ ಬಳಿಕದೇಕೆ (ಪೀಠಿಸಾ. ೩೦೮).

[ಪೆರ್ (< ಪಿರಿದು$_1$) + ಕುಡಿ$_2$]

ಪೆರ್ಕೆಂಗಿಡಿ (ನಾ). ದೊಡ್ಡದಾದ ಕೆಂಪುಕಿಡಿ : ಮಹಾಸ್ತಂಭಮಂ ಮುನ್ನೊಡೆದಾರ್ಪಿಂ ಸಿಂಹವಕ್ತ್ರಂ ಪೊಗೆ ನೆಗೆದೊಡನೆತ್ತೆತ್ತಲುಂ ತೀವೆ ಪೆರ್ಕೆಂಗಿಡಿಗಳ್ ನೇತ್ರಂಗಳಿಂ ಸೂಸುತುಮಿರೆ ಪೊಱಮಟ್ಟಂ ಮಹಾಘೋರರೂಪಂ (ಪಿಡ್ಕುಪು. ೦೦೩-೨೪೩). [ಪೆರ್ (< ಪಿರಿದು$_1$) + ಕೆಂಗಿಡಿ]

ಪೆರ್ಕೆಳೆ (ನಾ). ಗಾಢವಾದ ಸ್ನೇಹ ; ಉತ್ಕಟವಾದ ಮೈತ್ರಿ : ರಾಮನೊಳ್ ನನಗೆ ಪೆರ್ಕೆಳೆ ನುಡಿಸಿತಲ್ಲದೆಯೆ ಭಾವಿಸದಿರನ್ಯಮಂ (ಶ್ರೀರಾಮಾ. ೩೨೨-೩೯೬). [ಪೆರ್ (< ಪಿರಿದು$_1$) + ಕೆಳೆ$_2$]

ಪೆರ್ಕೊರಗು (ನಾ). ಹಿರಿದಾದ ಅಳಲು ; ಅತೀವವಾದ ವ್ಯಥೆ : ಇಂತೆಮಗೆ ಪೆರ್ಕೊರಗು—ಆ ಪುರ್ಚು ಪಱಿದೊಡು (ಅಶ್ವತ್ಥಾ. ೦೦-೨೩೪).

[ಪೆರ್ (< ಪಿರಿದು$_1$) + ಕೊರಗು$_2$]

ಪೆರ್ಗಜ (ನಾ). ದೊಡ್ಡಗಾತ್ರದ ಆನೆ : ಮಾಣದೆ ಮದಜಲ ಸುರಿವ ಪೆರ್ಗಜ . . . ನಂದಿವಾಹನಸಹಿತ ಗೀರ್ವಾಣರೊಪ್ಪಿರ್ದರೋಲಗದಿ (ಪೋಹಕ. ೦೬-೦೬). [ಪೆರ್ (< ಪಿರಿದು$_1$) + ಗಜ]

ಪೆರ್ಗಟ್ಟ (ನಾ). ಬಹು ಇಳಿಜಾರಾದ ಪ್ರದೇಶ ; ಘಟ್ಟ : ಪೆರ್ಗಟ್ಟದ ಕೆಳಗೆ ಪಡುವಣದೆಸೆಯೊಳ್ (ಎಕ. VII, ಶಿಕಾಂ. ೦೩೦-೬೪ ; 1047).

[ಪೆರ್ (< ಪಿರಿದು$_1$) + ಗಟ್ಟ$_1$]

ಪೆರ್ಗಡಣ (ನಾ). ದೊಡ್ಡ ಸಮೂಹ.—ಗುಂಪು : ಮೋದದಿಂ ಪೆರ್ಗಡಣಾ ಬೆರಸೊಲ್ದು ಪೊಕ್ಕನಬ್ಜಾಕರಂ (ಉದ್ಯಪ. ೯-೯೩).

[ಪೆರ್ (< ಪಿರಿದು$_1$) + ಗಡಣ]

ಪೆರ್ಗಡಲ್, ಹೆಗ್ಗಡಲು, ಹೆರ್ಗಡಲ್ (ನಾ). ದೊಡ್ಡ ಸಮುದ್ರ ; ವಿಸ್ತಾರವಾದ ಕಡಲು : ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಬ್ಜೋದ್ಭವಂ ಪಡೆದಂ ಪೆರ್ಗಡಲಂ ... ಎನಲ್ಕೆ ಪೇಪುವಡೆಗುಂ ಗುಣ್ಪೆಂದೆ ಪಂಪಾಸರಂ (ಕಾಪಂಪು. ೦೦೬); ಪೆರ್ಗಡಲಲ್ಲಿ ಗಂಟಲಂ ಮುಱಿದು ತಳರ್ಚದಿಕ್ಕುವುದು ಲೇಸು (ಧರ್ಮಾಮ್ಯ. ೦೦-೪೯); ಬಿಱುವರಿಯ ಬೇಗದಿಂದಂ ಕುಱುಪಿನ ಪಟಯಿಗೆಗಳೊಲೆಯೆ ಪೆರ್ಗಡಲೆಡೆಯೊಳ್ ನೆಱೆ ನಾವೆ ತಾಗುವಂದದೆ ತೆಱಪಿಲ್ಲದೆ ತೇರ್ಗಳೊಡ್ಡು ತಾಗಿದುದು (ಕಪ್ಪಿಕಾ. ೨೬೩). **ಹೆಗ್ಗಡಲು** : ಕುರುಬಲದ ಹೆಗ್ಗಡಲು ಬಱತುದು (ಕುಸ್ಕಾಕ. ೩-೯); ಪೊಡವಿಯನು ಕೆಳಗಿಕ್ಕಿ ಮಿಗೆ ಹೆಗ್ಗಡಲು ಕವಿತಹವೋಲು ಬಂದುದು ಪಡುವಲಭಿಮುಖವಾಗಿ ಮಧುರೆಗೆ ಬಹಳನೃಪಕಟಕ (ಪಿಪಾಗ. ೦೦-೪೮-೬); ಹಿರಿಗಾಳಿ ಹೆಗ್ಗಡಲು ಬಯಲು ನೆಲ ಬೆಂಕಿಗಳಿಗೊಳಗ ನೀಡುವ ದಿವ್ಯ ದೇವಕುಲದಿ (ಪುರಿದೇ. ೩೩-೯). **ಹೆರ್ಗಡಲ್** : ಪಾಣ್ಡ್ಯ ಮಕ

ರೋದ್ಧತ ಕಾಡವಸೈನ್ಯವೆಮ್ಬ ಹೆರ್ಗ್ಗಡಲನಳುರ್ಕ್ಕೆಯಿನ್ದೆ ಭುಜ ಮನ್ದರದಿಂ ಕಡೆದು (ಎಳ. XI. ರಾಪಾ. ೨೫-೪೦; 1224).

[ಪೆರ್ (< ಪಿರಿದು₁) + ಕಡಲ್₂]

ಪೆರ್ಗಡಹು (ನಾ). ವಿಸ್ತಾರವಾದ ದಾಟುವ ಸ್ಥಳ ; ಹಾಯ್ಗಡ : ಎರಡು ಬೆಟ್ಟದ ನಡುವಣ ಪೆರ್ಗ್ಗಡಹು ಅಂತೆ ಬರೆ ಬೆಟ್ಟದ ಮೇಗಣ ಕೊಳವಾವಿ (ಸ್ಕುಅಂ. ೦೯೨೦, ೦೦-೦೯೯; 967).

[ಪೆರ್ (< ಪಿರಿದು₁) + ಕಡಹು₂]

ಪೆರ್ಗಡಿತ (ನಾ). ಬರೆಯುವುದಕ್ಕಾಗಿ ಬಳಸುವ, ಕಪ್ಪುಲೇಪನವುಳ್ಳ ಬಟ್ಟೆಯ ದೊಡ್ಡ ಪುಸ್ತಕ,–ಕಡಿತ : ಧೀರರ್ ಶಂಕರಶಾಙ್ಗಿಗಳ್ ಪೊಣರೆ ತತ್ಸಂಘಟ್ಟದಿಂ ಭೂತಳಂ ನೀರೊಳ್ ಪಾಸಿದದೊಂದು ಪೆರ್ಗಡಿತ ದಂತಳ್ಳಾಡಲ್ (ಜಗಂ. ೦೯-೨೬). [ಪೆರ್ (< ಪಿರಿದು₁) + ಕಡಿತ₂]

ಪೆರ್ಗಡಿತಿ, ಹೆಗ್ಗಡತಿ, ಹೆಗ್ಗಡಿತಿ, ಹೆರ್ಗಡಿತಿ (ನಾ). ೧. ಅರಮನೆ ಮುಂತಾದ ಕಡೆಗಳಲ್ಲಿ ಒಳಾಡಳಿತವನ್ನು ನೋಡಿಕೊಳ್ಳುವವಳು : ಭಂಡಾರವತಿಯೆಂಬ ಪೆರ್ಗಡ[ಡಿ]ತಿಗೆ ಪೆಣ್ಣ ತಂಡ ನಂಬುಗೆವಂತರೆ ಸೆಯೆ . . . ಭೂಷಣಾದ ಕರಂಡಗೆಗೊಟ್ಟು ಕಳುಹಿದ (ಪರಶ. ೩೭-೦೨೬). **ಹೆಗ್ಗಡತಿ**: ೧. ಹೆಗ್ಗಡತಿಯನೊರ್ವಳತಿವೇಗದಿಂದ ಕರೆದು (ಕುರಾಸಾಂ. ೩೫-೬೦); ಗಂಧವ ಸುಗೊಳಿಸಿ ನೀವೆಂದು ಹೆಗ್ಗಡ[ಪಾಶಾಂ.ಡಿ]ತಿಯರೊರೆವರಲ್ಲಿ (ಪುರೇಪು. ೨-೦೪); ಮಿಾನ ತಂದವಗೆ ಬೇಡಿದ ವಸ್ತುಗಳ ಕೊಟ್ಟು ಭೂನಾಥ ತಾ ತ್ವರಿಯದಲಿ ತಾನೊರ್ವ ಹೆಗ್ಗಡತಿಯ ಕೈಯ ಕಳುಹಿದ ಬೋನದ ಮನೆಗೀವುದೆನುತ (ಶೋಕಪ. ೦೦-೩೬). ೨. ಗ್ರಾಮದ ಮುಖ್ಯಾಧಿಕಾರಿಣಿ, –ನಾಯಕಿ : (ಎಸಪ್ಕು. I, ೦). ೩. ಗ್ರಾಮದ ಮುಖ್ಯಾಧಿಕಾರಿಯ ಹೆಂಡತಿ : ಆತನ ಹೆಗ್ಗಡತಿ ಮಾಚೌವೆ (ಎಳ. VI. ಪಳ್ಳಪು. ೬೦-೩; 1173); ಹೆಗ್ಗಡತಿಗೆ ಪ್ರಸಾದ ಕೊಡಿ (ಪೇಪಹಂ. ೦೪೦). ೪. ದಿಟ್ಟೆ : ಗಂಡುಬೀರಿ ; ಉದ್ದಟೆ : ಲೋಕದಲ್ಲಿ ಗಂಡ ಬಡವನಾವರೆ ಹೆಂಡತಿ ಹೆಗ್ಗಡತಿಯಾಗುವಳು (ಅರಸಾ. ೦-೨೦೦). **ಹೆಗ್ಗಡಿತಿ** : ೧. ಕೆಲಬರ ಕಳುಹಿ ತಿಳಿವೆನೆನುತ್ತ ಹೆಗ್ಗಡಿತಿಯರನಟ್ಟಿದರೆ (ಪ್ರಶುಲೀ. ೦೦-೬). ೨. ಚಿಕ್ಕ × × ಹೆಗ್ಗಡಿತಿ (ಎಳ. II, ೨೫೬-೪೦; ಸು. 1185); ಕಾನೂರಿಗೆ ಹೆಗ್ಗಡಿತಿಯಾಗಿ ಹೋಗುವ ವಿಚಾರವನ್ನು ಯಾರಾದರೂ ಎತ್ತಿದರೆಂದರೆ ಮಾತ್ರ ಆಕೆ ಹುಚ್ಚಿಯಂತೆ ವಿಚಿತ್ರರೀತಿಯಿಂದ ವರ್ತಿಸುತ್ತಿದ್ದಳಂತೆ (ಕಾಪೂರು. ೬೨೦). ೩. ಗಂಡು ಹೆತ್ತರೆ ಗೌಡನ ಹೆಸರು, ಹೆಣ್ಣು ಹೆತ್ತರೆ ಹೆಗ್ಗಡಿತಿಯ ಹೆಸರು (ಗಾಪ). **ಹೆರ್ಗಡಿತಿ** : ೨. ಶ್ರೀಮತು ಹಿರಿಯ ಹೆರ್ಗ್ಗಡಿತಿಯಾಚಲ ದೇವಿಯನ್ವಯವೆಂತೆಂದೊಡೆ (ಎಳ. II, ೩೨೬-೪೫ : 1181) ; ಮಲಯಾಳಿತಿಯುಂ, ಹೆರ್ಗಡಿತಿಯುಂ. (ಕಾಪಳ್ಳ. ೦೫೮).

[ಪೆರ್ಗಡೆ₁ + — ಇತಿ₁ (< — ಇತ್ತಿ)]

ಪೆರ್ಗಡೆ₁, ಪೆಗ್ಗಡೆ, ಪೆರ್ಗೆಡೆ, ವೆಗ್ಗಡೆ, ವೆರ್ಗಡೆ, ಹೆಗಡಿ, ಹೆಗಡೆ, ಹೆಗೆಡೆ, ಹೆಗ್ಗಡಿ, ಹೆಗ್ಗಡೆ, ಹೆಗ್ಗೆಡೆ, ಹೆಗ್ಡೆ, ಹೆರ್ಗಡೆ (ನಾ). ೧. ಗ್ರಾಮದ ಮುಖ್ಯಾಧಿಕಾರಿ,– ಒಡೆಯ : ದಾಮಡಿಗಟಂ ಪೆರ್ಗ್ಗಡೆ (ಎಳ. IV, ಹೆಗ್ಗಡ. ೯೩-೪ ; ಸು. 780) ; ದುಷ್ಟಮನ್ನೆಯಪ್ರಳಯಕಾಳಂ ಶ್ರೀಮತ್ಪೆರ್ಗ್ಗಡೆ ಮಾದಿ[ಮ]ಯ್ಯಂ (ಪೌಷಾ. XX, ೨೪-೬ ; 1034) ; ಬಲ್ಲಾಳ ಪೆರ್ಗಡೆ ಮಾಸಾವಂತ ಮನ್ನೆಯ ರಾಯರ್ ಮುಂತಪ್ಪ ನಾಡೊಡೆಯರ್ . . . ಕೈಮುಗಿದು (ರಾಪಾಸ್ಕ. ೫೦-೦೩). ೨. ಅರಮನೆ ಮುಂತಾದ ಕಡೆಗಳಲ್ಲಿ ಒಳಾಡಳಿತವನ್ನು ನೋಡಿಕೊಳ್ಳುವವನು ; ಮನೆವಾರ್ತೆಯ ಮೇಲ್ವಿಚಾರಕ : ಮಂತ್ರಿಯುಂ ಪೆರ್ಗಡೆಯುಂ ಮೊದಲಾಗಿ ಪೊಟಲೊಳಗುಳ್ಳ ಜನಮೆಲ್ಲಮರ್ಚನೆಗಳಂ ಕೊಂಡು ಬಂದು (ಪಡ್ಡಾರಾ. ೬೩-೨೩) ; ಶಂತನು . . . ದಾಶರಾಜನಲ್ಲಿಗೆ ಕೂಸಂ ಬೇಡೆ ಪೆರ್ಗಡೆಗಳನಟ್ಟಿದೊಡೆ (ಪಂಪಭಾ. ೦-೬೦ ಪ) ; ರಾಣೀವಾಸದ ಪೆರ್ಗಡೆ ತನ್ನಿಜನಿಯೋಗಮಂ ಬಿನ್ನವಿಕುಂ (ಶಾಂತಿಪು. ೩-೬೦) ; ರಾಣಿವಾಸದ ಪೆರ್ಗಡೆಯಂತೆ (ರರ್ಮಾಪ್ಕು. ೫-೦೩೦). ೩. ಮಂತ್ರಿ : ಪ್ರಧಾನಿ : ಅರಸಂ ಸ್ತಬ್ಧಂ ಪೆರ್ಗಡೆ ಮರುಳಂ (ಪುದತಿ. ೦೦-೫೦) ; ಪಡಿಯಿಲ್ಲದ ಮನೆಯುಂ ಪೆರ್ಗಡೆಯಿಲ್ಲದ ರಾಜ್ಯಮುಂ . . . ಒಪ್ಪಲಾಱವು ಜಗದೊಳ್ (ರರ್ಮಾಪ್ಕು. ೬-೦೬೦) ; ಇಂತು ಪಡಂಗಬಲಮುಂ ಅರಸು ಪೆರ್ಗಡೆ ಜನಪದ ದುರ್ಗ ಭಂಡಾರ ಮಿತ್ರರುಮೆಂಬಿವರುಂ ಪಡಂಗಬಲ ಸಹ ಚಕ್ರಿಗೆ ಸವ್ವಾಂಗ ದೆನಿಕ್ಕುಂ (ಅರಿಪ. ೬-೦೦). ೪. ಮುಖ್ಯಸ್ಥನಾದವನು : ಉನ್ನತಾಧಿಕಾರಿ ; ಹಿರಿಯ : "ಪೆರ್ಗಡೆಯೆನಲ್ ಮುಖ್ಯನಕ್ಕು" (ಕಬ್ಬಿಳ್ಳ. ೩೬) ; ಬಸಂತನಿವರ್ಕೆ ತಾನೆ ಪೆರ್ಗಡೆ ಗಡ (ಕಬ್ಬಿಳಾ. ೦೮೩) ; ಅತನು ಪುರಾಧಿಪಂ ತಳವಱಂ ಶಶಿ ಪೆರ್ಗಡೆ ಮಂದಮಾರುತಂ (ಪಶಳು. ೪-೬೦). ೫. "ರಾಯ ಭಾರಿ" (ಪಂಪರೀ. ೩೩೫) : ಅಟ್ಟಿದ ನಿಮ್ಮ ಪೆರ್ಗಡೆ ಬರ್ದುಂಕಿದನೆಂಬು ದನಿಂದ್ರಜಾಲಮಂ ತೊಟ್ಟನೆ ತೋಱಿ ಬಂದು ಬರ್ದುಕಾಡಿದಂ (ಪಂಪಭಾ. ೯-೮೯); ತನ್ನ ದೂತರ ಕೈಯೊಳ್ ಪಾಗುಡಮಂ ಕೊಟ್ಟು ಬೇಡಿಯಟ್ಟಿದೊಡೆ ಬಂದ ಪೆರ್ಗಡೆಗಳಂ ಜಡಿದು ನುಡಿದು ಕಳಿಯೆ (ಶಾಪುಂಪು. ೧೪೭). **ಪೆಗ್ಗಡೆ** : ೧. ಪೆಗ್ಗಡೆ ನಾಯಕ ಕಲ್ಲುಣ್ಡಿಪುರದೂರಟಿವಿನೊಳು (ಪ್ರಶುಲೀ. ೦೯೩೬. ೨೦-೬; ಸು. 896); ಕರಹಡನಾಡ ಪೆಗ್ಗಡೆ (ಕಷ. II. ೦೩-೨೨; 1115); ಪರಮೇಷ್ಠಿಯೆಂಬ ಪೆಗ್ಗಡೆಯುಂ ವಿಲಾಸದಿಂ ಮಿಱುಪ ಧ್ರುವನೆಂಬ ಕೊಲ್ಲಟಿಗನೆಲ್ಲಾ ಜಗಂ ಬೆರಸಿಟ್ಟು ನೋಡಲೆರ್ದಾಡಲೆಂದಿರಿಸಿರ್ದ ನಿಡು ಮಿಸುನಿಗಳೆಯೊ ತಿಳಿಯೆ (ಪಂದಿಪಾ. ೨-೦೨). **ಪೆರ್ಗೆಡೆ** : ೧. ಪೆರ್ಗ್ಗೆಡೆ ಮಾಚಯ್ಯಂ ಮಂಗಲದ ಗಾವುಣ್ಡಗಱಿಯ ಮೆಟ್ಟಿಬ್ಬಡೆ ಬಾಟಿಸಿದ ಸ್ಥಿತಿ ಕ್ರಮಮಾವುದೆನ್ದೊಡೆ (ಎಳ. IV, ಪಾಪುರಾ. ೪೯ ೬; 965). ೩. ನೊಟಂಬನ ಪೆರ್ಗ್ಗೆಡೆ ತ್ರಿಭುವನಯ್ಯಂ ಪೆರ್ಮ್ಮಾಡಿಯನೋಲಗಿಸಿ (ಎಳ. IV, ಪಾಪುರಾ. ೦೪೦-೦ ; 990 ?) : ಶ್ರೀಮತ್ಚಲದಂಕಕಾಱದೇವನ ಪೆರ್ಗ್ಗೆಡೆ ಬಸವಯ್ಯ ನಂಕನ ಭಟ್ಟನು ಮಾಡಿಸಿದ ಮಾನಸ್ತಮ್ಬಮ್ (ಎಳ. X, ಪುಳಪಾ. ೫೯-೮; ಸು. 900 ?). **ಪೆರ್ಗಡೆ** : ೧. ಮೂವತ್ತೊರ್ಚ್ಚಾಸಿರದ ನೂಱೆರಡು ಬಾಡಮಂ ಲೋಕಟೆಯರಾಳೆಯಾತನಾಳ್ವ ನಾಟ್ಕೆಲ್ಲಂ ಪೆರ್ಗಡೆ ಬಿಟ್ಟಯ್ಯನ್ . . . ಪ್ರಶಾಪಿಯುಂ (ಎಳ. VII (8), ಶಿಕಾಂ ೩೬೯-೯; 902). **ಹೆಗಡಿ** : ೧. ಅಡಿಯರ ಬಳಿ ಹೆಗಡಿ ಬಳಿ ತಪ್ಪಿಸಿ . . . ಯಿಸರಂಣನಾಯಕನು ವುಭಯದಳ ಮೆಚ್ಚಿ ಹೊಯಿದು (ಕಷ. I, ೪೬-೦೩; 1423). **ಹೆಗಡೆ** : ೧. ಹೆಗಡೆ ಮಾರತಂಮನ × × ಮಾದ ಮಾರಗವುಡರ ಮಕ್ಕಳು ಮಾದಿಗವುಡ ಮಾದಿಗವುಡನವರು ಕೊಟ್ಟ ಕೊಡಗೆಯ ಮಣ್ಣು ೫೦೦ (ಎಳ. III (R), ಹೆಗ್ಗಡ. ೨೪-೦ ; ಸು. 12ಪೆಯ ಕತ) ; ಎ × × × ಳಿಊರ ಹೆಗಡೆ ಕೂವಲೂರ ಕೊಲಗಟ ಮಾರಚ ಹರದೆ . . . ವೊಳಗಾದ ಸಮಸ್ತ ಗ × × ನಂಜುಂಡೇಸ್ವರದೇವರ ಅಮ್ರಿತಪಡಿಗೆ (ಎಳ. III (R), ಪಂಪಪ. ೦೬೨-೪ ; 17ಪೆಯ ಕತ); ಹೆಗಡೆಯವರನ್ನು ಕಂಡಾಗಲೇ ಅನಂತ ಕುಸಿದು ಬಿದ್ದ (ಪೇಪಹಂ. ೦೩೯). ೬. ಗೌಡಸಾರಸ್ವತಬ್ರಾಹ್ಮಣರಲ್ಲಿ ಒಂದು ಒಳ ಪಂಗಡ ಮತ್ತು ಆ ಪಂಗಡಕ್ಕೆ ಸೇರಿದವನು : ಪರ್ಬು, ಹೆಗಡೆ, ಬಾಳಿಗ . . . ಭಕ್ತ—ಎಂಬುದಾಗಿ ಕೊಂಕಣರಲ್ಲಿ ಹದಿನಾಲ್ಕು ಭೇದ ಗಳುಂಟು (ಕುಳುಪಾ. ೦೬೦) : ಇವರಲ್ಲಿ ಭಟ್ಟರೂ (ವೈದಿಕರೂ) ಹೆಗಡೆ ಗಳೂ (ಗೃಹಸ್ಥರೂ) ಎಂಬ ಎರಡು ಭೇದಗಳಿವೆ (ಕಾರಪ. ೪೫). ೭. (ಅಧಿಕಾರಸೂಚಕವಾಗಿ, ಹೆಸರಿನ ಕೊನೆಯಲ್ಲಿ ಸೇರಿಸುವ) ಒಂದು ಮನೆತನದ ಹೆಸರು : ಶುಂಠಿಕೊಪ್ಪದ ಹೆಗಡೆ ಮನೆತನದವನು ನಾನು (ಪೇಪಹಂ. ೦೩೩). **ಹೆಗೆಡೆ** : ೧. ದಂಡನಾಯಕ ಗಂಗಪ್ಪಯ್ಯಂಗಳಣ್ಣ ಹೆಗೆಡೆ ಬಮ್ಮಣಯ್ಯನ ಮ(ಂ)ಗ ಹಿರಿಯೇಚಿಮಂಯ ಮಾಡಿಸಿದ ಶಾನ್ತಿ ನಾಥದೇವರುವಂ ಬಸದಿಯುಮಂ ಮಾ[ಡಿ]ಶಿದ (ಎಳ. II (R), ೦೭೯-೦; 12ಪೆಯ ಕತ). **ಹೆಗ್ಗಡಿ**: ೧. ಈ ಹೆಗ್ಗಡಿಗಳ ವಂಶವು ಮುಂದೆ ಸಾಗುತಾ

ಹೋಯಿತು (ಕಾಳಗ. ೩). ೪. ಪಂಥದಿಂ ಕಿಳಿದೆಲ್ಲರೊಳಗೆ ಪೆಗ್ಗಡಿಯಾದನು [ಕಾಣಾಂ. ಹೆಗ್ಗಡಿಗನಾಗಿ] (ಕ್ರಿಕಂ. ೩-೩). **ಹೆಗ್ಗಡೆ** : ೧. ಶ್ರೀಕರಣದ ಹೆಗ್ಗಡೆ ಎಱಿಯಣ್ಣನ ಕಯ್ಯಲು ಕ್ರಯದಾನಂ ಕೊಂಡು . . . ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ (ಎಕ. XIV, ಶ್ರೀಕಂಗ. ೨೨೯-೩; 1178); ತೆರನೆಯ ಱೊಂಡೆಯ ಹೆಗ್ಗಡೆ ಬಸವಣ್ಣ (ಎಕ. II, ೨೩೩-೧೬; ಸಂ. 1185); ನಾಡ ಹೆಗ್ಗಡೆ ಗುಂಮ್ಮಣ್ಣ (ಎಕ. XI. ೫೪ಪಾ. ೩-೨೦; 1338); ಪಟೇಲನಿಗೆ . . . ಬೊಂಬೈದಿಲ್ಲಾದಲ್ಲಿ ನಾಡುಪಟೇಲ, ಹೆಗ್ಗಡೆ ಎಂತಲೂ ಹೆಸರುಂಟು (ಗ್ರಾಚಾ. ೦). ೫. ಆತನ ಹೆಗ್ಗಡೆ ತೊಮ್ಮನೆಮ್ಮೆ × × × [ಆದಿ] ಯೊಳ್ಮಾದಿ ಸತ್ತೊಡೆ (ಕೌಷಿ. IX-೨. ೩೭-೭ ; ೩೦೮) : ಸಾವಂತ ಬೊಪ್ಪ ಗೌಡನ ಹೆಗ್ಗಡೆ ಸೋಮಯ್ಯನು (ಇಂ. XII, ೦೦೦-೩ ; 1246). ೪. "ಸಿರಿವೆತ್ತ ಹೆಗ್ಗಡೆಗಳಧ್ಯಕ್ಷರಧಿಕೃತರಕ್ಕುಂ" (ಪುಂಗಣಾ. ೭೯-೭); ಮತ್ತಂ ಮಟ್ಟಣದ ಹೆಗ್ಗಡೆ ಗೊಮ್ಮಲಯನಾಯಕನ ಬಿನವಪದಿಂ ಕುಮಾರಂ . . . ಹತ್ತು ದ್ರ[ವ್ಯಮಂ] ಬಿಟ್ಟಂ (ಎಇ. XXVIII, ೩೫-೫೫; ಸಂ. 1082), ಹೆಗ್ಗಡೆಯರೆಂದೆನಿಸುವ ಮಿಸುಪ ಭಂಡಾರಿ ಲಕ್ಷ್ಮಣ್ಣಂ (೦೫೫೨. ೩೮-೮೩) ; ಈಗ ನಮ್ಮಲ್ಲಿ ಉಳಿದಿರುವ ನಮ್ಮ ಯಜಮಾನಿಕೆಯ ವದಗಳೆಂದರೆ ಗೌಡ ಹೆಗ್ಗಡೆ (ಕಟ್ಟಾಪು. ೨೧೪) ; ನನ್ನನ್ನು ನೀವು ಈ ದಿನದ ಆಟಕ್ಕೆ ಹೆಗ್ಗಡೆಯನ್ನಾಗಿ ಚುನಾಯಿಸದಿದ್ದರೆ ನಿಮ್ಮ ಪಾಲಿಗೆ ಇದೊ, ಸೊನ್ನೆ (ಕಾಷಾಪ. ೫೬). ೬. ಗೌಡಸಾರಸ್ವತರು—ಕಾಮತ, ನಾಯಕ, ಕಿಣಿ, ಪ್ರಭು, ಹೆಗ್ಗಡೆ (ಶುಳುಣ. ೦೭೪) ; ಗೌಡಸಾರಸ್ವತದಲ್ಲಿರುವ ಬೇರೆ ಬೇರೆ ಕುಲಗಳು (ಕೌಟುಂಬಿಕ ಹೆಸರುಗಳು) ಉದ್ಯೋಗವರವಾಗಿ ಈ ಕೆಳಗಿನಂತೆ ಬಂದಿರಬಹುದೆಂದು ನನಗನಿಸುತ್ತದೆ . . . ಹೆಗ್ಗಡೆ–ಹಿರಿಯ ಮನುಷ್ಯ (ಮುಖ್ಯಸ್ಥ) (ಶುಳುಣ. ೨೩೯). **ಹೆಗ್ಗೆಡೆ** : ೭. ಕಂಡಚ್ಚನಾಯಕನ ಮಮವಳಿಗೆ ರಾಚವನಾಯಕತಿಯ ಮಗ ಕುಂದಾಡಹೆಗ್ಗೆಡೆ ನಯಚಿಕ್ರದೇವರ ಬೆಸದಿಂ ಮಾಡಿಸಿದ ಬಸದಿ (ಎಕ. II (೩), ೩೭೨-೨೯; ಸಂ. ೪೪೫ಪಾ ೫೫). **ಹೆಗ್ಗೆ** : ೭. ಹೆಗ್ಗಡೆಯವರ ಕೈ ಥರಥರನೆ ನಡುಗತೊಡಗಿತು (ಕ್ರಮಾಪ. ೦೦೫). **ಹೆಗ್ಗಡೆ** : ೧. ಜನಕಂ ಹೆಗ್ಗಡೆ ಬಾಚಿರಾಜಮಹಿಮಂ (ಕೌಷಿ. IX-೨. ೨೫೭-೨೬; 1160) : ಶ್ರೀನಾರಸಿಂಹದೇವರು ಹೆಗ್ಗಡೆಯಂ ಹಡವಳಯ್ಯನುಂ ಅರಿವಿನತೊಳಲ ಕಾರುಣ್ಯಂಗೆಯ್ದು (ಎಕ. VI, ೪೫೫ಪಾ. ೫೩-೦೭; 1156) ; ಹೆಗ್ಗಡೆ ಚವ್ವ[ಂ]ಡಮಯ್ಯನಾಯರ ಮಗ ಹೆಗ್ಗಡೆ ಮಲ್ಲಯ್ಯನ ಕಯಿ (ಇಂ. XII, ೧೭-೨೦; 1187). ೨. ಬ್ರಹ್ಮದೇವರ ದಂಡನಾಯಕರುಂ ಅವರ ಹೆಗ್ಗಡೆ ಮಟ್ಟರಸುರುಂ . . . ಬಿಟ್ಟ ಧರ್ಮವೆಂತೆಂದಡೆ (ಎಇ. V, ೨೭-೨೭; 1178). ೪. ದಂಡಾಯದ ಹೆಗ್ಗಡೆ ದಂಡನಾಯಕ ಮಹಾದೇವಯ್ಯಂಗಳುಂ (ಕೌಷಿ. XI-೨, ೫೦-೨೪; 1138).

ಹೆಗ್ಗಡೆಚಾಳಸೂಳೆ = ಗ್ರಾಮದ ಮುಖ್ಯಾಧಿಕಾರಿಯ ಆಶ್ರಯದಲ್ಲಿದ್ದ ಸೂಳೆ (?) : ಪೆಗ್ಗಡೆವಾಳಸೂಳೆಗೆ ಮತ್ತರ್ ಪದಿನಯ್ದು (ಎಕ. XV. ೬೯-೭೪; 1060).

[ಪೆರ್ (< ಪಿರಿದು) + ಕಡೆ. / ತುಳು. ಪೆರ್ಗಡೆ, ಹೆಗ್ಗಡೆ ; ತೆಲು. ಪೆಗ್ಗಡ, ಪೆಗಡ, ಪೈಗಡ, ಪೈಗ್ಗಡ, ಹೆಗ್ಗಡಿ, ಹೆಗ್ಗಡ]

ಹೆರ್ಗಡೆ₂ 'ಪೆರ್ಗಳೆ' ನೋ.

ಹೆರ್ಗಡೆಗದ್ಯಾಣ, ಹೆಗ್ಗಡೆಗದ್ಯಾನ (ನಾ). ಒಂದು ಬಗೆಯ ನಾಣ್ಯ : ಪೊಲ್ಗ[ದ್ಯಾಣ]ವುಮನ್ದು [ಪೆರ್ಗಡೆ]ಗದ್ಯಾಣಮ್ದು × × × (ಕೌಷಿ. XI-೨, ೧೦-೦೨ ; ೧೬೬). **ಹೆಗ್ಗಡೆಗದ್ಯಾನ** : ಪರಿಹಾರ ಹೆಗ್ಗಡೆಗದ್ಯಾನಗನ ಹೂರಲು (ಎಕ. IX, ೯೩೮ಪು. ೩೩-೯; 1116 ?) ; ಸುಂಕದ ಬೆಡುಂಗೊಳು ನಲ್ವೆತ್ತು ಪರಿಹಾರ ಹೆಗ್ಗಡೆಗದ್ಯಾನ ಗನಹೂರಲು ಒಂದು ಹಳ್ಳಿಗ ಹಣವೈದು (ಎಕ. I (೩). ೩೭-೯ : 1175). [ಪೆರ್ಗಡೆ₁ + ಗದ್ಯಾಣ]

ಹೆರ್ಗಡೆಗೋಲ್ (ನಾ). ದೊಡ್ಡದಾದ ಕಡೆಯುವ ಕೋಲು,—ಮಂತು : ಪೆರ್ಗಡೆಗೋಲಾದುದುಮಿಲ್ಲ ಮೃಡನ ಕಾರ್ಮುಕವಾದುದಿಲ್ಲೆಂದು ಗುರುತ್ವಪಡೆದಿರ್ದುದಾ ಕುರ್ವೆಟ್ಟು (ಕೋಚಕ. ೬-೧೬).

[ಪೆರ್ (< ಪಿರಿದು) + ಕಡೆಗೋಲ್]

ಪೆರ್ಗಡೆತನ. ಪೆರ್ಗೆಡೆತನ, ಹೆಗ್ಗಡೆತನ (ನಾ). ೧. ಗ್ರಾಮದ ಮುಖ್ಯಾಧಿಕಾರಿಯ ಅಧಿಕಾರ,–ಸ್ಥಾನ : ನೀವಾರ್ಗರ್ದೇಕೆ ಕಿಡೆನುಡಿದಱಿಚ್ಚಿಪೆರ್ಗಡೆತನದೊಳಿರ್ದೇಪಡೆವಿರ್ (ಅಂಪ್ರ. ೯-೦೦೭) ; ಇನಿವಿರ್ದು ಸತ್ಕಾರಮುಂ ಪೆರ್ಗಡೆತನಂ ಬಂದನಾವನುಂ ದೇವರ ದೊರೆಯ ರಾಜಾಧಿರಾಜನೊಳ್ ಪಡೆಯಂ (ಶಾಂಪು. ೨-೭೯ ಪ); ಪೆರ್ಗ್ಗಡೆತನವುಂ ಬಲ್ಲರ್ (ಎಕ. VII. ೫೮೨ಪಾ. ೦೦-೪೨ ; 1086?). **ಪೆರ್ಗಡೆತನ** : ೧. 'ಪೆರ್ಗಡೆತನಂಗೆಯ್' ಪರಾ. **ಹೆಗ್ಗಡೆತನ** : ೨. ಮುಂದಾಳುತನ ; ನಾಯಕತ್ವ : ಚಾಚು ಎನ್ನದೆ, ಅವನನ್ನು ನಾವು ಹೆಗ್ಗಡೆತನಕ್ಕೆ ಚುನಾಯಿಸುತ್ತಿದ್ದೆವು (ಕಾಷಾಪ. ೨೬). [ಪೆರ್ಗಡೆ₁ + —ತನ]

ಪೆರ್ಗಡೆತನಂಗೆಯ್, ಪೆರ್ಗಡೆತನಕೆಯ್, ಪೆರ್ಗೆಡೆತನಂಗೆಯ್ (ಕ್ರಿ). ೧. (ಅರಮನೆಯಲ್ಲಿ) ಒಳಾಡಳಿತವನ್ನು ನೋಡಿಕೊಳ್ಳು : × × × ಗಾವುಣ್ಡಗೆಯೆ ಕಲಿಗನಾತಜ್ಞಿ ಪೆರ್ಗ್ಗಡೆತನಂಗೆಯೆ (ಎಕ. VII (೩). ೫೫೦ ೫೭೫-೦೨ ; 902). **ಪೆರ್ಗಡೆತನಕೆಯ್** : ೨. ನಾಯಕನಾಗಿರು : ಮುಂದಾಳಾಗಿರು : ಅರಿಯುರದ ಅಗ್ಗರವರ್ ಪೆರ್ಗ್ಗಡೆತನಕೆಯೆ (ಎಕ. IV, ಗುಂಡ್ಲು ೫೯. ೫೯-೩ ; ಸಂ. 750). **ಪೆರ್ಗಡೆತನಂಗೆಯ್** : ೧. ನಣ್ಣಂಪರ ಕಲಿಗಂ ಪೆರ್ಗ್ಗಡೆತನಂಗೆಯ್ಕೆ (ಎಕ. VII. ೫೫೦. ೨೦೯-೦೨ ; 918). ೨. ದುಷ್ಟನಿಗ್ರಹ ವಿಸಿಷ್ಟಪ್ರತಿಪಾಳನದಿಂ ಪೆರ್ಗ್ಗಡೆತನಂಗೆಯ್ಕೆ (ಕೌಷಾ. XX. ೨೯-೬ ; 1034) ; ಶ್ರೀಮತ್ಪೆರ್ಗ್ಗಡೆ ನಾರಣಯ್ಯ ಪ್ರಮುಖಕರಣಂ ಬನವಾಸಿಪನ್ನಿರ್ವ್ಯಾಸರಕ್ಕಂ ಪೆರ್ಗ್ಗಡೆತನಂಗೆಯ್ದೆ (ಕೌಷಾ. XX. ೩೫-೬; 1055).

[ಪೆರ್ಗಡೆತನ + ಕೆಯ್₁]

ಪೆರ್ಗಡೆತನಕೆಯ್ 'ಪೆರ್ಗಡೆತನಂಗೆಯ್' ನೋ.

ಪೆರ್ಗಣ, ಪೆರ್ಗ್ಗಣ, ಹೆಗ್ಗಣ₂ (ನಾ). ಇಲಿಯಂ ಜಾತಿಗೆ ಸೇರಿದ ಒಂದು ಬಗೆಯ ಪ್ರಾಣಿ : ಒವೊ ಪೆರ್ಗಣವುನಿಕ್ಕಿ ಮನೆ ಮಾಡುವಂದಮುಕ್ಕುಂ ಕಡೆಯೊಳ್ (ಕಡಾರಕ್ಕು. ೩-೦೨೨) ; ಒಡವತ್ತಿಯ ತೊಕ್ಕಿನೊಳಂದೊಡ ಗೂಡಾಡುಳಿಚ ಶುಂಠಿ ನೆಲಗುಳ್ಳಮಿವಂ ಕಿಡುಗುಂ ನೀರಿಂ ಪಾಸಂಗುಡೆ ಪೆರ್ಗಣಮಗ್ರಮಪ್ಪ ವಿಷಮಾ ಕ್ಷಣದೊಳ್ (ಕಷಾಪ. ೦೨-೩೨). **ಪೆರ್ಗಣ** : "ಖನಕವುಂದುರುವೆನಲುಂ ಪೆರ್ಗಣಂ" (ಪುಂಗಣಾ. ೯೯-೦೨) ; ಬೆಳಗಿನೊಳಂ ಕಾಣದು ನಿಶಿಯೊಳ್ ಕಾಣ್ಪುದು ಪೆರ್ಗಣಕ್ಕೆ (ಕಡಾರಕ್ಕು. ೦-೦೦೬) : ಸಿರಿ ಒರಲುಣಲಱಿಯದವಂ ಧರೆಯೊಳು ಬೈಚಿಟ್ಟು ಸತ್ತು ಪೆರ್ಗಣರೂಪು ಧರಿಸಿಸಿ ತೋಡುತ್ತುಮಿರ್ಪಂ ಧರೆಯೊಳು (ಜಾಕ್ಕಪಿ. ೩೨-೨). **ಹೆಗ್ಗಣ್ಣ** : "ಉಂದುರಃ, ಖನಕಃ—ಈ ೨ ಹೆಗ್ಗಣಂ" (ಶಬ್ದಮ. ೪೯-೦೨); ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯುತ್ಪೆನ್ನ ಕಾಯಗುಣ (ಪಕ್ಷ. ೪. ೦೭-೪೫) ; ಬಡಿಗಲ್ಲಿನಲಿ ಹೆಗ್ಗಣ ವಿಡುಕುವಂದದಿ ಮದನಶರವಾಯಾಪ್ರಬಂಧದಲಿ ಕೊಡರಿ (ಅಷ್ಟ. ೫-೭೨) ; ಹಾಳು ಹೆಗ್ಗಣಗಳ ಉಪದ್ರವಂತು ಹೇಳ.ವು ದಕ್ಕೇ ತೀರದು (ಕುಬ್ರಾಶು. ೦೦೭) ; ಹೆತ್ತವಳಿಗೆ ಹೆಗ್ಗಣ ಮುದ್ದು, ಕೂಡಿದವಳಿಗೆ ಕೋಡಗ ಮುದ್ದು (ಗಾಡಿ).

[ದೇ. ; ತುಳು. ಪೆರ್ಗುಡೆ ; ಕೋತ. ಪೆಗಣ್ ; ಕೊಡ. ಎಗಣ್, ಎಗನ್]

ಪೆರ್ಗಣೆ (ನಾ). ದೊಡ್ಡ ಗಣೆ : ಲತೆಗಳ ಪನ್ನಭೂಮಿ ಪುಳಿನಂಗಳ ಪೆರ್ಗಣೆ . . . ತಣ್ಣೆಲ ತಾಯ್ವನೆ ತಾನಸಿದುರ್ದಾ ವನಂ (ಶುಬಚಾ. ೦೮-೦೬೯).

[ಪೆರ್ (< ಪಿರಿದು) + ಕಣೆ]

ಪೆರ್ಗಣಗಿಲ್ (ನಾ). ಕಣಗಿಲೆಯಲ್ಲಿ ಒಂದು ಬಗೆ : "ದ್ವಿಪೆ ಉನ್ಮದುಕೆ ಪೆರ್ಗಣಗಿಲ್" (ಪುಂಗಣಾ. ೪೨-೩೭).

[ಪೆರ್ (< ಪಿರಿದು) + ಕಣಗಿಲ್ (< ಕಣಗಿಲೆ)]

ಪೆರ್ಗಣೆ (ನಾ). ದೊಡ್ಡ ಬಾಣ. —ಸರಳಂ ;' ಪೆರ್ಗಣೆದೊಡು ' ಪರಾ.
[ಪೆರ್ (< ಪರಿದು$_1$) + ಕಣೆ$_1$]

ಪೆರ್ಗಣೆದೊಡು (ಕ್ರಿ). ದೊಡ್ಡ ಬಾಣವನ್ನು ಹೂಡು : ಉತ್ಸುಂಗಗಜಪನೊಂದೆಡೆಯಲ್ಲಿ ಬೇಡ ಕಾಣುತ್ತೆ ಪೆರ್ಗಣೆದೊ[ಪಾಣಂ. ದು]ಟ್ಟು ಕಿವಿವರಂ ತೆಗೆದು ನಡುನೆತ್ತಿಯೊಡೆಯೆಚ್ಚನು (ಪಾಶ್ವ. ೦೭-೬೯).
[ಪೆರ್ಗಣೆ + ತೊಡು$_1$]

ಪೆರ್ಗದ ' ಪೆರ್ಗದಹು ' ನೋ.

ಪೆರ್ಗದಹು, ಪೆರ್ಗದ, ಪೆಗ್ಗದ (ನಾ). ಬಾಗಿಲಿಗೆ ಜೋಡಿಸಿರುವ ದೊಡ್ಡದಾದ ಮರದ ಹಲಗೆ. —ಬಾಗಿಲಿನ ಪಡಿ : ಮಗಿಲನೇಱಿ ಧುಮಿಕ್ಕಿ ಪೆರ್ಗದಹುಗಳನೊಡೆಪಡಿ (ಪಪಪು. ೭೭-೭೭). **ಪೆರ್ಗದ** : ಮದಪಸ್ತಿಗಳ ಕೈಯ ನೂಕಿ ಬಂಧಿಸುವ ಪೆರ್ಗದ ವಜ್ರಾಳವಿಂಡಿಗೆಯು ಅದಟಿನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿಗಳಗಗೋಚರವು (ಪೋಪಕ. ೫೦ ೦೩). **ಪೆಗ್ಗದ** : ಶ್ರೀದ್ವಾರದ ಪೆಗ್ಗದಗಳನ್ನೆಳೆದು ಮುಚ್ಚಿ ಒಳಗೆ ಸರವಳಿ ತಾಳುಗಳನು ಸಶಬ್ದವಾಗಿ ಟಾಯಿಸಿ ಬಿಟ್ಟುವರು (ಪಪಪಂ. ೦೨-೫೦).
[ಪೆರ್ (< ಪರಿದು$_1$) + ಕದಹು$_3$ (< ಕದವು$_1$)]

ಪೆರ್ಗದೂರು (ನಾ). ಒಂದು ಸ್ಥಳದ ಹೆಸರಂ : ಪೆರ್ಗ್ಗದೂರುಂ ಪೊಸವಾಡಗಮುನನಭ್ಯನ್ತರಸಿದ್ದಿಯಾಗೆ ಪಡೆದರ್ (ಇಕ. VI. ೦೦೨-೦೦ ; 777 ?) : ಶ್ರೀಮತ್ ಅನನ್ತವೀರ್ಯಾಚಾರ್ಯಂಗಳ್ ಪೆರ್ಗ್ಗದೂರು ಪೊಸವಾಡ ಗಮುಮುನಭ್ಯನ್ತರಸಿದ್ದಿಯಾಗೆ ಪಡೆದರ್ (ಇಕ. XIV. ೭೭-೦೦ ; 977).
[? + ಊರು$_3$ (< ಊರ್)]

ಪೆರ್ಗದೆ (ನಾ) ದೊಡ್ಡ ಗದೆ : ಭಾರಿಯಾದ ಗದೆ : ಮಾತ್ರಗಜಾನನ ಹರವಸದಿಳಿದೆಚ್ಚತ್ತು ಪೆರ್ಗದೆಯ ತೆಕ್ಕೊಂಡು . . . ಅಪ್ಪಳಿಸುತಿಕ್ಕಿದನು (ಪೋಪಕ. ೫೯-೭೦). [ಪೆರ್ (<ಪರಿದು$_1$) + ಗದೆ]

ಪೆರ್ಗರಡಿ, ಪೆಗ್ಗರಡಿ (ನಾ). ದೊಡ್ಡಗಾತ್ರದ ಭಲ್ಲೂಕ : ಪೆರ್ಗರಡಿಯು ಬೇಂಟೆ . . . ಸಿಂಹ ಶರಭಂಗಳ ಬೇಂಟೆಗಳಾದಿಯಾದ ಭೀಕರಮೃಗಸಂಘ ಸಂಹನನಮುನ್ಮೆತು (ಗಿಂಗ. ೦-೫೦) ; ಪುತ್ರನಗುಟ್ಟು ಪೆರ್ಗರಡಿಗಳ್ ಮೊಗ ವಿಟ್ಟಿಸೆಗುಂ ವನಾಂತದೊಳ್ (ದಪಃ. ೫-೭೦೯) : ಕುಂತಳಮಯವಾಗಿರ್ದ ಪೆರ್ಗರಡಿಯು ಕೊಂತದಿ ಕಡಿದ ವೆರ್ದಲೆಯು ಸಂತಸ ಬಡದೆ ಹೊತ್ತಿರ್ದರು (ಪೋಪಕ. ೦೯-೨೬). **ಹೆಗ್ಗರಡಿ** : ಹೆಗ್ಗರಡಿಯ ಹಿಂದಿದೆ . . . ಪಂದಿಯ ಗೊಂದಣವಿದೆಯೆಂದು ಮುಗ್ಗಿ ಕವಿದರು ಶಬರರು (ಭಾಶಾಸಾಂ. ೫೭-೭೦).
[ಪೆರ್ (<ಪರಿದು$_1$)+ಕರಡಿ$_1$]

ಪೆರ್ಗರಡೆ (ನಾ). ದೊಡ್ಡದಾದ ಕರಡೆ ಎಂಬ ವಾದ್ಯ : ಉನ್ಮೆದವು ಪೆರ್ಗರಡೆ ದೊಂಬುಳಿ ಮರ್ದಳೆ (ಸಂಗಾಶಾ. ೭-೮೨).
[ಪೆರ್ (<ಪರಿದು$_1$)+ಕರಡೆ$_1$]

ಪೆರ್ಗರುಳ್, ಪೆಗ್ಗರುಳು (ನಾ). ೧. ಗಾತ್ರವಾದ ಕರುಳು : ಕೆಲಕೆಲವು ನಾಯ್ಗಳೊರ್ವಯೆ ಮಲೆದಿಱ್ದಿನೆ ಪೊಯ್ದು ಕಚ್ಚಿ ತಿನೆ ಪೆರ್ಗರುಳು (ಧರ್ಮಾಕ್ಷು. ೭-೭೬)/; ಎಳ್ಕರುತಿರ್ದಪುದಿತ್ತ ನಿನ್ನ ವೆರ್ಬಲವುಂಡಿದಸ್ಥಿಯಿಂ . . . ಪಱ್ದ ಪೆರ್ಗರುಳಿಂ (ಪಾಶಪಃ. ೫-೦೦೯). **ಹೆಗ್ಗರುಳು** : ೧. "ಸ್ಥೂಲಾಂತ್ರವೆಂದರೆ ಹೆಗ್ಗರುಳು" (ಪಾಶಪಃ. ೨-೭-೪೬ ೫). ೨. ಮನುಷ್ಯ ದೇಹದ ಎರಡು ಕರುಳುಗಳಲ್ಲಿ ಒಂದು : ದೊಡ್ಡ ಕರುಳು : ಕರುಳುಗಳಲ್ಲಿ ಸೊಂಪು ಪತ್ತದೆ ಹೀಗೆಯೇ ಆಮು, ರಕ್ತ ಬೀಳುವುದಾದರೂ ಹೆಗ್ಗರುಳಿನ (ಕೋಲನ್) ಸೊಂಕಿನಿಂದ ಆದುದಕ್ಕೇ ಈ ಹೆಸರು ರೂಢಿಯಲ್ಲಿದೆ (ಕಖಸಾ. I. ೩೫೬). [ಪೆರ್ (< ಪರಿದು$_1$) + ಕರುಳ್]

ಪೆರ್ಗಲ್, ಹೆಗ್ಗಲ್ಲು (ನಾ). ದೊಡ್ಡ ಕಲ್ಲು : ಹೆಬ್ಬಂಡೆ : ಪೆರ್ಗಲ್ಲಿಂದ ದವುತ್ತುಂ . . . ನೆಲದೊಳೊರಸಿ ಮೇಲ್ಮುತ್ತುತ್ತಂ (ರತ್ನಾಕ್ಷು. ೬-೦೯೦) : ಪೆರ್ಗಲ್ಲನೆತ್ತಿದ ಬಲ್ಪಿಂಗೆ ಕಡಂಗಿ ಪೊಂಗಿ ಗೋವಿಂದನೊಳ್ ಬಂದು ತಾಗಿದಂ (ರಗಕೃ. ೯-೩೭). **ಹೆಗ್ಗಲ್ಲು** : ಕೆಲರು ಹೆಗ್ಗಲ್ಲುಗಳ ಕಱಿದರು (ಭಾಶಾ. ೨೦-೦೩). [ಪೆರ್ (< ಪರಿದು$_1$) + ಕಲ್$_3$]

ಪೆರ್ಗಲಸು (ಕ್ರಿ). "ಗರ್ವಿಸು, ಹೆಮ್ಮೆಪಡು" (ಕ್ರಿಪ್ರ. ಕೋಪ್ರ) : ಪೆರ್ಗಲಸಿ ಸಿರಿಯುಳ್ಳ ಪೆರ್ಮೆಯ ಬಲಮನಿದಂ ಮೆಜ್ಜಿವೆಯೆನ್ನೊಳಿಂದಂ ಮುನಿವಂ (ಕ್ರಿಪ್ರ. ೯-೬೭) [ಧ್ವನಿ ಇದು 'ಪೆಕ್ಕಳಿಸು' ಎಂಬುದರ ಅಪಲಿಖಿತವಿರಬಹುದು]

ಪೆರ್ಗಲಿ (ನಾ). ಮಹಾಪರಾಕ್ರಮಿ : ಒರಿಯ ಯೋಧ : ಕಿಜುವುಸೂರ ಪೆರ್ಗ್ಗಲಿಯರ ವಿಜಯತಿಗಾವುನ್ತನ ಮಗಂ ಅಮ್ಮಡಿಗಾವುನ್ತಂ . . . ಭಾಗಂಗೊಣ್ಡು (ಕ್ರಿಪ್ರ. ೦೯೫೦. ೭೫-೫; ೨೦೫). [ಪೆರ್ (<ಪರಿದು$_1$)+ಕಲಿ$_3$]

ಪೆರ್ಗವತೆ (ನಾ). (ಬೆರಳುಗಳನ್ನು ವಿರಳವಾಗಿಟ್ಟು) ದೊಡ್ಡ ಅಂಗೈ : ಪೆರ್ಗವತೆ ಸೇರೆ ಪಿಡಿ ಕರಭಂಗಳಿನಿಪವಱೊಳಭಿನಯಿಸಿ ತೋಱಿಸಲ್ ವೃದುಪಾಣಿವನಜಮಂ ಸೃಷ್ಟಿಸಿದನೆಂಬ ಚಿಲ್ವಿನ ಕೋಮಲೆಯರಲ್ಲಿ ಣಗ್ಗೆಸೆದರು (ಕ್ರಿಪ್ರಾಣಿ. ೬-೨೦). [ಪೆರ್ (< ಪರಿದು$_1$) + ಕವತ್ತೆ$_3$]

ಪೆರ್ಗಳ್$_1$ (ನಾ). ಧಾನ್ಯಗಳನ್ನು ಒಕ್ಕುವುದಕ್ಕಾಗಿ ಸಿದ್ಧಪಡಿಸಿದ ವಿಶಾಲವಾದ ಕಣ : ನುರ್ಗಿದುದೆನೆ . . . ಪೆರ್ಗಳವನೆ ಕುರ್ಗಿದುದೆನೆ ಮಾರ್ಗದೊಳ್ ಸರೇಫವದಂಗಳ್ (ಕಕುದ. ೭೮).
[ಪೆರ್ (< ಪರಿದು$_1$) + ಕಳ$_3$]

ಪೆರ್ಗಳ್$_2$ (ನಾ). ದಪ್ಪವಾದ ಕುತ್ತಿಗೆ : ಕೊಬ್ಬಿದ ಕತ್ತು : ಹೊಳೆವ ಕೂರ್ಗಣೆಯಿಂದೆ ಹೊಡೆದೆರ್ಕ್ಕಲನ ಪೆರ್ಗಳದೊಳು ಸುರಿವ ರೊ ಹಿತದ ನೆಳಲೊಳು ಕಣ್ಗೆ ಕಾಣಿಸ ಬಂತು ಗಗನಸ್ಥಳದಲಿ ಹೊಳೆವಂತೆ ವಿಜಿನ (ಪೋಪಕ. ೦೯-೭೫). [ಪೆರ್ (< ಪರಿದು$_1$) + ಗಳ$_2$ (= ಗಲ)]

ಪೆರ್ಗಳೆ, ಪೆರ್ಗಡೆ$_2$ (ನಾ). ೧. ಬಲಿತಿರುವ ದಂಟು; ದಪ್ಪವಾದ ಕಾಂಡ : ಕುವಳಯಕುಟ್ಮಳಾವಳಿಯ ಪೆರ್ಗಳೆಯಂ ನೆಗದೇಱಿ ಲಾಗಿಸುತ್ತೆ ...ಆಡಿದುದು ಕೂಡೆ ರುಚಿರಾ ಪೊಸಡೊಂಬನೆಂಬನಂ (ಪಾಪಪಃ. ೫-೭೨). **ಪೆರ್ಗಡೆ$_2$** : ೨. ಉದ್ದವಾದ ಕೋಲು. —ದಂಡ : ಗಡಿಮು ಭಟರು ಗಗನವ ತಿವಿವಂತೆ ಪೆರ್ಗಡೆಯೆತ್ತಿ ಪೆರ್ಗಡೆಗೂಡಿ...ಕಾಣಿಪುತೆಯುಂ ಪರು (ಪಪಪ. ೫೩—೫೪). [ಪೆರ್ (<ಪರಿದು$_1$)+ಗಳೆ (<ಗಟ^3)]

ಪೆರ್ಗಳ್ತಲೆ, ಹೆಗ್ಗತ್ತಲೆ (ನಾ). ದಟ್ಟವಾದ ಕತ್ತಲೆ ; ಗಾಢಾಂಧಕಾರ : ಮುಸುಂಕುಗಳ್ತಲೆ ಪೊದಳ್ದ ಪೆರ್ಗಳ್ತಲೆ . . . ರಸೆಗಳ್ತಲೆಯೆನಿಸಿ ಕೂಡೆ ತೀವಿತು ತಿವಿರಂ (ಗಿಂಗ. ೯-೭೩) ; ನೆಲೆಗೊಂಡ ಪೆರ್ಗಳ್ತಲೆಯೊಳ್... ಪಲವುಂ ದೀವಿಗೆಗಳ್ ಕಳ್ತಲೆ ಪೂತಂತೊಪ್ಪುತಿರ್ದುವಾ ಮನೆಮನೆಯೊಳ್ (ಗಿಂಗ. ೯ ೭೯). **ಹೆಗ್ಗತ್ತಲೆ** : "ಸಂತಮಸಂ. ವಿಷ್ವಕ್‌ಧ್ವಾಂತೇ—ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿ ಇರುವ ಕತ್ತಲೆ ಅಂದರೆ ಹೆಗ್ಗತ್ತಲೆ" (ಸಿಪ್ರಾಂಕ. ೭೦). [ಪೆರ್ (<ಪರಿದು$_1$) + ಕಳ್ತಲೆ (<ಕಟ್ಟಲೆ)]

ಪೆರ್ಗಱು, ಹೆಗ್ಗಱು (ನಾ). ೧. (ಹಕ್ಕಿಯ) ದೊಡ್ಡದಾದ ರೆಕ್ಕೆ. —ಉದ್ದವಾದ ಪುಕ್ಕ : ಕಾಡಮ್ಮೆಯ ಕೋಡು ವರಹದಂತಿಯ ದಾಡೆ... ಭೀರುಂಡನ ರೂಢಪೆರ್ಗಱಿಯಿತ್ತರೊಲಿದು (ಪಾಪಪಃ. ೦೯-೭೯). **ಹೆಗ್ಗಱಿ** : ೨. (ಉದ್ದವಾದ ಈಜುರೆಕ್ಕೆಗಳಿರುವ) ಒಂದು ಬಗೆಯ ವಿಾನು : ಕಂಬಲು ಹೆಗ್ಗಱಿ . . . ಹಾಜೆಗನಾನೆಮೊಗನೆಂಬ ಪರಿವಾರಿಯ ಮಿನ್ಗಳಂ ಗುದಿಗೆಯ್ದುರು (ಪಪಪಾ ೫-೧೫). [ಪೆರ್ (< ಪರಿಮ್ಬು) + ಗಱಿ]

ಪೆರ್ಗಱಿನಿ (ನಾ). ಒಂದು ಸ್ಥಳದ ಹೆಸರು : ಪೃಥಮಂ ದುರ್ಗ್ಗನೈಱಿ ವಂಶೊಡ್ಡೆ ಕಡೆಗೊಡಿವ ಸಂಗಮೊಯುರಾ ಕೆಱಿಯಿನ್ತೆಂಕ್ಕೆ ನಟ್ಟು ಕಲ್ಲೆ ಪೆರ್ಗ್ಗಱಿನಿಯಿನ್ ಬಡಗ್ಗೆ ನಟ್ಟು ಕಲ್ಲೆ (ಎಕ. X (೫). ೫೯೮. ೭೭-೦೭ : ಸು. ೫೫೦). [ಪೆರ್ (<ಪರಿದು$_1$) + ಕಱಿನಿ]

ಪೆರ್ಗಬ್ಬಪ್ಪು (ನಾ). ಒಂದು ಸ್ಥಳದ ಹೆಸರು : ಈಗಿನ ಶ್ರವಣ ಬೆಳುಗೊಳ : ಪೆರ್ಗ್ಗಬ್ಬಪ್ಪನಾ ಪೊಲದಿನ್ನಡದು ಕೊಬ್ಬದು (ಎಕ II. ೫೫-೪ ; ಸು. ೫೦೦). [ಪೆರ್ (<ಪರಿದು$_1$) + ಕಬ್ಬಪ್ಪು]

ಪೆರ್ಗಾಗಾವಾಸಿ (ನಾ). ಒಂದು ಊರಿನ ಹೆಸರು : ಪೆರ್ಗ್ಗಾಗಾವಾಸಿ ಗ್ರಾಮ ಪಶ್ಚಿಮಭಾಗ ಕೃತಾಕೃತಕ್ಷೇತ್ರಂ (ಎಕ. XI, ರಾಸಕ. ೬೬-೨೯ ; ೪೦೪). [?]

ಪೆರ್ಗಾಡು, ಹೆಗ್ಗಾಡು (ನಾ). ದಟ್ಟವಾದ ಅಡವಿ ; ಗೊಂಡಾರಣ್ಯ : ಬಾಗೆ ತೇಗು ಪನೆ ಕಮ್ಮರಮೆಸಳೆಯೆನಿಪ್ಪುವಿರ್ಪುವಾ ಪೆರ್ಗಾಡೊಳ್ (ರಾಪಶಂ. ೩-೩೮) ; ಇದು ದವಶಿಖಿಯಿದು ಕಿಂಶುಕಂ...ಇದು ಮದಗಜ ಮಿಂತಿದು ಗಂಡಶೈಲಮೆಂದೆಂಬುದು ತಿಳಿವೊಡಶಕ್ಯಮೆನಿಪುದಾ ಪೆರ್ಗಾಡೊಳ್ (ಶಶಕಂ. ೩-೩೦). **ಹೆಗ್ಗಾಡು** : "ಮಹಾರಣ್ಯಂ, ಅರಣ್ಯಾನೀ-೨ ದೊಡ್ಡ ಅಡವಿ, ಹೆಗ್ಗಾಡು, ಗೊಂಡಾರಣ್ಯ" (ಸಿಂಗ್ರಾಂಕಿ. ೦೦೯) ; ಈ ಹೆಗ್ಗಾಡಿನಲ್ಲಿ ಯಾವ ಮದ್ದನ್ನರೆಯಬಹುದು? (ಏಕಾಂ. ೯೯) ; ಸುತ್ತಲೂ ಹೆಗ್ಗಾಡೂ ಅಡಕೆತೋಟಗಳೂ ಬೆಳೆದು ಸ್ಥಳ ಏಕಾಂತವಾಗಿತ್ತು (ಶಾಸಂಬಾ. ೫೯೮). [ಪೆರ್ (<ಪಿರಿದು$_1$) + ಕಾಡು$_3$]

ಪೆರ್ಗಾಲ್ (ನಾ). (ನೀರು ಹಾಯಿಸಲು ಮಾಡಿರುವ) ದೊಡ್ಡದಾದ ನಾಲೆ.—ಕಾಲುವೆ : ಲೀಲೆಗಾರ್ತಿಯರಚ್ಯುತನಾಜ್ಞೆಯಿಂದೆ ಪೆರ್ಗಾಲ ಹೊಂದೂಂಬನು ನೆಗಹೆ . . . ಸುರಿದುದು ಸಲಿಲ (ಕೋಚಕ. ೦೯-೩೩). [ಪೆರ್ (<ಪಿರಿದು$_1$) + ಕಾಲ್$_3$]

ಪೆರ್ಗಾವಲಿ, ಹೆಗ್ಗಾವಲಿ (ನಾ). ದೊಡ್ಡದಾದ ಹುರಿಯುವ ಹೆಂಚು; ಅಗಲವಾದ ತವೆ : ಕಾಯ್ದ ಕರ್ಬೊನ್ನ ಪೆರ್ಗಾವಲಿವೊಲಾಯ್ತಾ ನೆಲಂ (ಜಗಪ. ೦೭.೭೦). **ಹೆಗ್ಗಾವಲಿ** : ಕಾದ ಹೆಗ್ಗಾವಲಿಯ ಮೇಲರಿದರಿದು ದೇಹವನುರುಹಲೂಹಿಸುವ (ಶಸಪು. ೪೩-೨೬). [ಪೆರ್ (<ಪಿರಿದು$_1$) + ಕಾವಲಿ$_3$]

ಪೆರ್ಗಾವಿಲ (ನಾ). ಸ್ವಲ್ಪವೂ ತಿಳಿವಳಿಕೆಯಿಲ್ಲದವನು ; ಮಹಾ ಮೂರ್ಖ : ಒಂದೆ ಗಾಲಿಯೊಳ್ ರಥಮಂ ನಡೆಯಿಸುವೆನೆಂಬ...ನಾರಿಲ್ಲದೆ ಪೂಗಟ್ಟುವೆನೆಂಬ ಪೆರ್ಗಾವಿಲನಂ ಪೋಲ್ಕುಂ (ರಕೂಗ್ಯು. ೩-೦೦೬). [ಪೆರ್ (<ಪಿರಿದು$_1$) + ಗಾವಿಲ]

ಪೆರ್ಗಾವುಂಡ (ನಾ). ಹಿರಿಯ ಗೌಡ ; ಮುಖ್ಯ ಗ್ರಾಮಣಿ : ಮುಳ್ಗನ್ದು(ನ್ದ) ಪನ್ನೆರಡುಮಂ ಮಾಯಿರ್ಮ್ಮನಾಳ್ ಸಿರಿವರಕೆ ಬಗೆಗ ಪೆರ್ಗ್ಗಾವುಣ್ಡಮಾಗುತ್ತಿರೆ (ಎಇ. XXVI, ೬೨-೦೨ ; ೪೦೬). [ಪೆರ್ (<ಪಿರಿದು$_1$) + ಗಾವುಂಡ (<ಗಾಮುಂಡ)]

ಪೆರ್ಗಾಳಿ (ನಾ). ರಭಸವಾಗಿ ಬೀಸುವ ಗಾಳಿ ; ಭಿರುಗಾಳಿ : ಪೆರ್ಗಾಳಿಯ ಕೋಳೊಳ್ (ಪೊಯ್ಲೊಳ್) ಕೆಡದಿರ್ದ ವಟವೃಕ್ಷಮಂ ಕಂಡು (ಜಾಪುಂಪು. ೨೬೩), ಸದ್ದಸ್ತುಸಂದೋಹಮಂ ನಿರುತಂ ತೀವಿ ಬರುತ್ತೆ ಭೃತ್ರದುಡೆಯೊಳ್ ಪೆರ್ಗಾಳಿಯಿಂ ಪುಟ್ಟಿದಾ ತೆರೆಯಿಂ ದುರ್ಧರಮಪ್ಪುದೊಂದು ಸುಟಿಯೊರ್ಪಿಟ್ಟು (ರಪಾಗ. ೦೦-೮೨), ಕಾಳಿಂಗಮರ್ದನ ಖಳರಾಯನ ಮೇಲೆ ಪೆಗಳಿಯ ಬಂದ ನಿಷ್ಠುರದಿ ಕೇಳ ಮಾಡುವುದೇನು ಗರುಡನ ಗಱಿಯ ಪೆರ್ಗಾಳಿಯೆಂ ದೀಶ್ವರ ನುಡಿದ (ಕೋಚಕ. ೩೬-೬೦). [ಪೆರ್ (< ಪಿರಿದು$_1$) + ಗಾಳಿ$_1$]

ಪೆರ್ಗಿಚ್ಚು (ನಾ). ದೊಡ್ಡ ಉರಿ ; ದಳ್ಳುರಿ : ಮದನನ ಪೆರ್ಗಿಚ್ಚಂ ಮಗ್ಗಿದ ಪೊಣರ್ವಕ್ಕಿಗಳ ಹೃದಯಸಂಕುಳದಿಂದುಣ್ಮೆದ ಕರ್ಬೊಗೆ ಯೆಂಬಿನೆಗಂ ಪುದಿದೆತ್ತಂ ಮರ್ಬಿನುರ್ಬು ಪರ್ಬಿತ್ತು (ಶಾಂಬಾ. ೦೯೦) ; ಮುಕುರಂ ಮಾಂಸವು ಮದ್ಯ ತುಂಬಿದ ಕೊಡ ಪೆರ್ಗಿಚ್ಚ[ಜಾಶಾಂ. ೮೯] ನಾರ್ ಕಂಡೊಡಾ ಶಕುನಂ ಶೋಭನಕಾಸ್ಪದಂ (ಸೋಪಂಕ. ೬೭) ; ಸಲೆ ಮುಕ್ಕುಳಿಸಿ ಮೊಗೆವ ಪೆರ್ಗಿಚ್ಚುಗಳ ಮೆಂಕೆ ಮೇಲಿಕ್ಕಿದುದು (ಶೈಬಾಸಾ. ೦೩-೦೨) ; [ಪೆರ್ (<ಪಿರಿದು$_1$) + ಕಿಚ್ಚು]

ಪೆರ್ಗಿಡಿ, ಹೆಗ್ಗಿಡಿ (ನಾ). ಬೆಂಕಿಯ ದೊಡ್ಡ ಕಣ : ವಡಬಾಗ್ನಿಯಾ ಸಿಡಿದ ಪೆರ್ಗಿಡಿಯದೋ . . . ಎನಲಕ್ಷಗಿರಿಮಸ್ತಕದೊಳಿನಬಿಂಬಮೆಸೆ ದಿರ್ದುದು (ಶಶಪು. ೯-೨). **ಹೆಗ್ಗಿಡಿ** : ಕುಪಿತ ಯಮನುಬ್ಬರದ ಕೋಪದೊ ಕಾಲರುದ್ರನ ಹಣೆಯ ಹೆಗ್ಗಿಡಿಯೋ (ಶಾಸ್ಯಕ. ೨-೩೦). [ಪೆರ್ (<ಪಿರಿದು$_1$) + ಕಿಡಿ]

ಪೆರ್ಗಿಡುಗ, ಹೆಗ್ಗಿಡುಗ (ನಾ). ದೊಡ್ಡ ಜಾತಿಯ ಡೇಗೆ : ಕಾರಂಡಂ ಕಿಂಗಣ್ಣಂ . . . ಹರಡೆ ಸುರಗಿಗಿಡಿ ಪೆರ್ಗಿಡುಗಂ (ಶಾಸ್ಯಶಾ. ೦೦೪೩). **ಹೆಗ್ಗಿಡುಗ** : ದೊಡ್ಡಡೇಗೆ, ಹೆಗ್ಗಿಡುಗ (Gerfalcon. ಇಂಇಪಿ). [ಪೆರ್ (<ಪಿರಿದು$_1$) + ಗಿಡುಗ (< ಗಿಡಿಗ)]

ಪೆರ್ಗುಂಜಿ, ಹೆಗುಂಜಿ (ನಾ). ಒಂದು ಸ್ಥಳದ ಹೆಸರು ; ಪ ಸೊರಬ ತಾಲ್ಲೂಕಿನ ಈಗಿನ ಮಾವಳಿ : ಆ ಕಾಕರಾಸರುಮೆಚ್ಚು ಪೆರ್ಗುಂಜಿಯ ಕೋಟೆಯಾನ್ ರೋಹಿಸಿ (ಎಕ. VIII, ಸೊರಬ. ೦೦-೯ ; ಶಾ. 800). **ಹೆಗುಂಜಿ** : ಬಾಳ ಚತುಸೀಮೆಯ ಏವರ . . . ಹೆಗುಂಜ್ಜಿಯ ಗಡಿಯಾಂದಲು ಬಡಗಲು ಪಡುವಲು ಕಿಂನಿಕಗಾವಂ[ಡನ] ಬಾಳಿಂದಲು ಮೂಡಲು (ಶಾಶಾ. IX-ii. ೪೦೬-೯ ; 1377) ; ಹೆರಿಯ ದೇವ[ಕ]ನಾಯಕಿತಿಯ ಮೊಂಮಗ ಹೆಗುಂಜಿಯಲಿ ಹುಟಿಕೊಂಡ ಹೊಲೆಯ ಬಳಿಯ (ಕಇ. I. ೬೬-೦೦ ; 1494). [?]

ಪೆರ್ಗುಂಡು, ಹೆಗ್ಗುಂಡು (ನಾ). = ಪೆರ್ಗಲ್ : ಎರಡು ಪೆರ್ಗುಂಡುಗಳು ತಮ್ಮೊಳಗಿರದೆ ತಾಗುವವೆಡೆವಿಡದೆ ವೆಂತರರ ದೆಸೆಯಿಂದೆ (ಸಾಶ್ಯಾಸಾ. ೨೬-೨೬) ; ಒಂದು ಪೆರ್ಗುಂಡನು ಕಟ್ಟಿ ಕೊರಳಲಿ . . . ನಿಂದಿರಲ್ (ಶಪಪು. ೬-೩೬). **ಹೆಗ್ಗುಂಡು** : ಒದಱುದರೆ ಪರ್ವತದ ಶಿಖರದಲುದುರಿದುವು ಹೆಗ್ಗುಂಡುಗಳು (ಶಾಸ್ಯಶಾ. ೦೦-೯). [ಪೆರ್ (<ಪಿರಿದು$_1$) + ಗುಂಡು]

ಪೆರ್ಗುಡಿ (ನಾ). ಅತಿಯಾಗಿ ಮದ್ಯಪಾನ ಮಾಡುವವನು : ಜೂಜಾಟಕೆ ಸೂಳೆಬೊಟಕೆ ರುಣದ ಸಂವಾಜ ಪೆರ್ಗುಡಿಗಳ ಚರ್ಚೆ ರಾಜ ವೀಧಿಯೊಳಿಱಿದಾಡುವ ಸಂದಣಿ ಮಾಜದು ನಿತ್ಯಕೃತ್ಯದಲಿ (ಕೋಚಕ. ೨೮-೨೬). [ಪ ಇದು 'ಪೆರ್ಗುಡಿಹಿ' ಎಂಬುದರ ಸಂಕ್ಷಿಪ್ತರೂಪವಿರಬಹುದು]

ಪೆರ್ಗುಡುಗು (ನಾ). ಭಾರಿಯಾದ ಮೇಘಧ್ವನಿ : ಕಾರ್ಮುಗಿಲ್ ಗಡಣದೆನಿಪ್ಪ ದಂತಿಕತಿಯುಗ್ರದ ಡಿಂಡಿಮನಾದದಂತೆ ಪೆರ್ಗುಡುಗು ನಿದಾಘನು ತಗುಳಲ್ಕೆದಿದ ನೀರದಕಾಲರಾಜನಾ (ರಾಪಶಂ. ೯-೦೦೨). [ಪೆರ್ (<ಪಿರಿದು$_1$) + ಗುಡುಗು$_2$]

ಪೆರ್ಗುಡುಗೋಲು (ನಾ). ದೊಡ್ಡ ಕುಡುಗೋಲು : ಮೊಂಡಿವೆಂಗಳ ನಗಲಿದ ಚದುರರು ತಮ್ಮ ದಂಡಿಪ ಸ್ಥರಚಾಪವೆಂದು ಭಂಡಿ ಪೆರ್ಗುಡುಗೋಲುಗಳಿಂದಲಡೆಗಿಕ್ಕಿ ಖಂಡಿಸುವರು ಕಬ್ಬುಗಳನು (ಕೋಚಕ. ೨-೨೯). [ಪೆರ್ (< ಪಿರಿದು$_1$) + ಕುಡುಗೋಲು (< ಕುಡುಗೋಲ್)]

ಪೆರ್ಗುತ್ತ (ನಾ). ೧. ದೊಡ್ಡ ಕಾಯಿಲೆ ; ಮಹಾರೋಗ : ಈ ಮಹಾ ಪುರುಷಂ ನಿಷ್ಠುರಮಪ್ಪೀ ಪೆರ್ಗುತ್ತದ ನಿರೋಧಮಂ ತಾಳ್ದಿ ಮಱುಗ ದೆಂತಿರ್ದಪನೋ (ರಕೂಗ್ಯು. ೯-೬೬). ೨. ದೊಡ್ಡ ಅಪಾಯ ; ದೊಡ್ಡ ಕೇಡು.—ವಿಪತ್ತು : ಸಣ್ಣಕುತ್ತಂ ಚಿಕ್ಕುದಾದ ಯತ್ನದಿಂ ಮಾಣಲಪ್ಪುದು ಪೆರ್ಗುತ್ತಂ ಪಿರಿದುಂ ಯತ್ನಂಗೆಯ್ದೆ ಪೋಕುಮೊ ಪೋಗದೊ (ಶಾಕಂದ. ೦೦-೦೦) ; ಅಡಸಿದ ಪೊಸವಗೆ ಪೆರ್ಗುತ್ತಗಳನ್ ನುಡಿಯಲ್ಕಾಱೆಂ (ಜಧಕ್ರ. ೬-೦೩೬). [ಪೆರ್ (<ಪಿರಿದು$_1$) + ಕುತ್ತ]

ಪೆರ್ಗುರುಂಟಿಗೆ, ಹೆಗ್ಗುರಂಟಿಕೆ, ಹೆಗ್ಗುರಟಿಗೆ, ಹೆಗ್ಗುರುಟಿಗೆ, ಹೆಗ್ಗುರುಟಿಕೆ, ಹೆಗ್ಗುರುಟಿಗೆ (ನಾ). ಒಂದು ಬಗೆಯ ಔಷಧೀಸಸ್ಯ ; ಅಜಶೃಂಗಿ: ಕಕ್ಕೆ ಮಾದಲ(ಲೆ) ಪೆರ್ಗುರುಂಟಿಗೆ . . . ನುಗ್ಗೆಯಿವೆಲ್ಲಮಂ ಕಟ್ಟಿಯಿಂ ಕೊಳುತ್ತಿರೆ ಪೂಸಲಿಂ ನಿಕ್ಕುವಂ ಕಿಡುಗುಂ ಫಣೀಂದ್ರಮುಖ ಪ್ರಚಂಡವಿಷಂಗಳುಂ (ಕಪುದ. ೩-೬೯). **ಹೆಗ್ಗುರಂಟಿಕೆ** : ಮಂಜನ ನಾರು, ಗೊಡ್ಡುಮಂಜಿ, ಹೆಗ್ಗುರಂಟಿಕೆ (ಕ್ಷೇನಿ. ೬೮-೦೩೦). **ಹೆಗ್ಗುರಟಿಗೆ** : ಗಂಟುಭಾರಂಗಿ, ದ್ರಾಕ್ಷಿ, ನೆಲಬೇವು, ಹೆಗ್ಗುರಟಿಗೆ . . . ತೈಲಪಾಕ

ದಲ್ಲಿಳುಹಿಕೊಂಡು ಸೇವಿಸಲು ಶೀತಜ್ವರಂ ಶಮನಮಪ್ಪುಂ (ಸಿದ್ಧ. ೬೨). **ಹೆಗ್ಗುರುಟಿಗೆ**: "ತ್ರಿಪರ್ಣಿ—ನವಿವಾಲ, ಹೊನ್ನೆ, ಹೆಗ್ಗುರುಟಿಗೆ, ಮುತ್ತಗ, ಪುಷ್ಕರಲೆಯೊನ್ನೆ" (ಓಷ. ೬೯). **ಹೆಗ್ಗುರುಟಿಕೆ** : "ಪೂರ್ವಾ, ದೇವೀ... ಗೋಕರ್ಣೀ, ಪೀಲುಪರ್ಣೀ—೧೦ ಹೆಗ್ಗುರುಟಿಕೆಯ ಪೆಸರುಗಳು" (ಕರ್ಣಾ೦ತ. ೦೩೦). **ಹೆಗ್ಗುರುಟಿಗೆ** : "ಮೂರ್ವೆ . . . ಗೋಕರ್ಣೆ, ಪೀಲುಪರ್ಣಿ-ಹೆಗ್ಗುರುಟಿಗೆ" (ಜಾತಕಾ. ೪): ಹೆಗ್ಗುರುಟಿಗೆ, ಇದನ್ನು ಕೆಲವರು ಸವನೇಗಡ್ಡ ಎಂಬುದು (ಪಥ್ಯ. ೩೩): ಅಂಬಟಿಬೇರು,ಕಟುಕರೋಹಿಣಿ,ಹೆಗ್ಗುರುಟಿಗೆ, ಹುರುಗಲುಬೇರು, ಕಷಿಪಚವಲ ಸಪ ಕಷಾಯವಂ ಮಾಡಿ ತೆಗೆದುತೊಳ್ಸಲು ಶ್ಲೇಷ್ಮಜ್ವರ ನಾಶವಾಗುವುದು (ಸಿದ್ಧ. ೮೯).

[ಪೆರ್ (< ಪರಿದು$_1$) + ಕುರುಂಟಿಗೆ$_0$ (< ಕುರುಂಟಗೆ)]

ಪೆರ್ಗುಳಿ 'ಪೆರ್ಗುಜಿ' ನೋ.

ಪೆರ್ಗುಜಿ, ಪೆಗ್ಗುಜಿ (ನಾ). ೧. ಕೊಬ್ಬಿದ ಕುರಿ : ಆತನ ಬಲಿಗಟ್ಟ ಮುಸ್ಥಬಳಾರಿಗೆ ಪೆರ್ಗುಜಿ ಮಾಡಿ ಪೊಯ್ದುಪೆಂ (ಜಾಜಿಪು. ೦೦-೦೬೩). **ಪೆಗ್ಗುಜಿ** : ೨. (ಆಲಂ) ಅತ್ಯಂತ ತಿಳಿಗೇಡಿ : ಮಹಾಮೂರ್ಖ : ಪೆಜಿಗಿಕ್ಕೆ ಪೆಗ್ಗುಜಿಯಾಗಬೇಡಾ (ಆಡ. ೫೦೦).

[ಪೆರ್ (< ಪರಿದು$_1$) + ಕುಜ್ಜಿ$_3$]

ಪೆರ್ಗುಜಿಪ್ಪು, ಪೆರ್ಗುಜಿಪು, ಪೆಗ್ಗುಜಿಪು (ನಾ). ೧. ಮುಖ್ಯವಾದ ಲಕ್ಷಣ : ಪ್ರಧಾನವಾದ ಗುರುತು.—ಚಿಹ್ನೆ : ಜಸವತಿಯಾಪ್ಪ ಪೆರ್ಗುಜಿಪಿನಿಂದಿವು ಬಿಡಿವು ನಾಡಿಯೂರ್ಗಳೆಂದನುಮಿವರೆಲ್ಲರುಂತಜಿಯಬಾರದು (ಕವಂಶ. ೦೦-೦೦). **ಪೆರ್ಗುಜಿಪ್ಪು** : ೨. ಅಧಿಕವಾದ ಕೀರ್ತಿ,—ಪ್ರಸಿದ್ಧಿ : ವೆರ್ಗುಜಿಪ[ಜಾಕಾಂ. ಪೆಗ್ಗುಜಿಪಿಂ]ನ ಬೇಡರಂ ತಜಿದು ಸೀಳ್ದಿಜಿದಿಕ್ಕಿತು ಸೊಕ್ಕಿದೆಕ್ಕಲಾ (ಕ್ರಶಿಂ. ೨೭-೬೨; ಕಡ್ಡಸಿ. II. ೦೫೭ ನೋ). **ಹೆಗ್ಗುಜಿಪು** : ೨. ಆಸ್ಥಾನದೊಳು ಸತಿಯರ ನಾಮ ಸಲ್ಲದಂತಸ್ಥದೊಳ್ ಪತಿ ಕೇಳಲೇಕೆ ಈ ಸ್ಥಿತಿಗವರ ಹೆಗ್ಗುಜಿಪಿನವರನಟ್ಟಿ ಸ್ವಸ್ಥವೆಂದೆಣಿಸಿದರವರು (ಕಡಿಪ. ೨೮-೨೩). [ಪೆರ್ (< ಪರಿದು$_1$) + ಕುಜಿಪು]

ಪೆರ್ಗುಜಿಪು 'ಪೆರ್ಗುಜಿಪ್ಪು' ನೋ.

ಪೆರ್ಗುಳಿ, ಪೆರ್ಗುಳಿ, ಹೆಕ್ಕುಳಿ, ಹೆರ್ಕುಳಿ (ನಾ). ದೊಡ್ಡದಾವ ಹಳ್ಳ.—ಗುಣಿ.—ತೆರವು : ಎಯ್ದೆ ಮುನ್ನೀರನಡುರ್ತು ಪೀರ್ದುಗುಟ್ಟ ವೆರ್ಗುಳಿಗಳ್ ದಿನಕ್ಕೈದ್ವಿಮಾನವಾಕಾರಮಡಂಗೆ ಪುಕ್ಕಡರ್ದು ಮುಚ್ಚಿದುದೆಂಬಿನಿಗಂ ವಿಕೀರ್ಣಸೇನಾರಜಮುರ್ವಿ ಪರ್ವಿದುದು (ಕರ್ಣಪ. ೯-೦೪). **ಪೆರ್ಗುಳಿ** : ಸಮೆದ ಪೆರ್ಗುಳಿಯೊಳ್ ಕರಿಪೋತಕಂಗಳು ಕೆಡೆವು (ಗಿಪು. ೦-೮೬). **ಹೆಕ್ಕುಳಿ** : ಎತ್ತಾನುಮಿವತ ಮಜಿದೊಡೆ ಮೆಯ್ಯರಂ ಹುಳಿತು ಸತ್ತು ನರಕದ ಹೆಕ್ಕುಳಿ[ಜಾಕಾಂ. ಹೆಕುಳಿ]ಯೊಳಾಳುತಿಪರಿದಕ್ಕೆ ಸಂದೇಹ ಬೇಡ (ಸಮ್ಯ. ೩-೩೦). **ಹೆರ್ಕುಳಿ** : ಇಳಿದು ನರಕಭೂವಿಯು ಹೆರ್ಕುಳಿಯೊಳ್ ಮುಳುಗಿ ನೆಗೆದು ಜೀವಿಸುತಿಹರ್ (ಜಜಾಂತ. ೦೦-೦೩).

[ಪೆರ್ (<ಪರಿದು$_1$) + ಕುಳಿ$_3$]

ಪೆರ್ಗೂಹ (ನಾ). ಅಳವಾದ ಭಾವಿ : ದೊಡ್ಡದಾದ ಕೂಪ : ಲಿಂಗದಿನ್ಯವಗೆ ಸಾಕ್ಷಿಯು ಕೊಟ್ಟ ತನ್ನಿಷ್ಟಲಿಂಗದಿಂ ಪೆರ್ಗೂಪವಗುಳಿಸಿದ (ಶ್ರೀಪಪ. ೦-೪-೨). [ಪೆರ್ (<ಪರಿದು$_1$) + ಕೂಪ$_2$]

ಪೆರ್ಗೂರಿಕ್ಕು (ಕ್ರಿ). — ಪೆರ್ಗೂರಿಡು : ಪೆ[ಜಾಕಾಂ. ಹೆ]ರ್ಗೂರಿಕ್ಕಿ ನುಡಿವ ನಾಲಿಗೆ ಬೀಳೆ (ವಿಂಡೂಗೀ. ಪ. ೩೦೬-೦೩). [ಪೆರ್ಗೂರು+ಇಕ್ಕು]

ಪೆರ್ಗೂರಿಡು, ಪೆಗ್ಗೂರಿಡು, ಹೆಗ್ಗೂರಿಡು (ಕ್ರಿ). ಅತಿಯಾದ ಉಬ್ಬಸದಿಂದ ಕೂಡಿರು : ದಮ್ಮು ಹೆಚ್ಚಾಗು : ಪೆರ್ಗೂರಿಡುತ್ತೆಯೆ ಬಂದಿರ್ದವರಂಜಲ್ ಶ್ವಾಸಮೇಜುತ್ತಿಳಿಯುತುಮಿರೆ (ಶಶ್ವಾ. ೧೦). **ಹೆಗ್ಗೂರಿಡು** : ಕಾಲನವರನುವಾಗೆ ಬಾಯೊಳ್ಸುರಿಯೆ ಲೋಳೆ ವೊಗವೊಳ್ಕುಡಿಸಿ ಗೂಡು ಪೆ[ಜಾಕಾಂ. ಹೆ]ಗ್ಗೂರಿಡುತ್ತಮಿರೆ (ಬಿ:ಪೂಗೀ. ಪ. ೩೦೬-೨೬).

ಪೆಗ್ಗೂರಿಡು : ಕೆವ್ಮಿ ಪೆಗ್ಗೂರಿಟ್ಟು ಸುಯಿವುತೆ (ಹುಕೇಶ್ವ. ೬-೩೩). [ಪೆರ್ಗೂರು+ಇಡು$_1$]

ಪೆರ್ಗೂರು, ಪೆಗ್ಗೂರು, ಹೆಗ್ಗೂರು (ನಾ). ಹೆಚ್ಚಾದ ದಮ್ಮು,—ಉಬ್ಬಸ : 'ಪೆರ್ಗೂರಿಡು' ಪರಾ. **ಹೆಗ್ಗೂರು** : 'ಪೆಗ್ಗೂರಿಡು' ಪರಾ. **ಹೆಗ್ಗೂರು** : 'ಹೆಗ್ಗೂರಿಡು' ಪರಾ.

[ಪೆರ್ (<ಪರಿದು$_1$) + ಗೂರು$_3$]

ಪೆರ್ಗೂಳಿ (ನಾ). ಎಮ್ಮಾನಂ ಓಡಿಯುವ ದೊಡ್ಡ ಬುಟ್ಟಿ : ಕಿಱುಗೂಳಿ ಪೆರ್ಗೂಳಿ . . . ಸೂಸುಗೂಳ್ಗಳೆಂಬಿವಂ ಕೊಂಡು . . . ಬಿನ್ನಣಾಬಡೆದ ಬೇಡರೊಡನರೆ (ರಾಜಶೇ. ೩-೦೦೪೫).

[ಪೆರ್ (<ಪರಿದು$_1$) + ಕೂಳಿ (<ಕೂಳೈ$_1$)]

ಪೆರ್ಗೆಂಡ (ನಾ). ದಪ್ಪವಾದ ಕೆಂಡ,—ಇಂಗಳ : ಪೆರ್ಗೆಂಡಾಂಗಳಂ ಸೂಸುತುಂ ಗಜ್ಜಿಂದೋವದೆ ತೇಗಿಯುಂ (ರಕ್ಷಾಶಿ. ೬-೦೬೯).

[ಪೆರ್ (<ಪರಿದು$_1$) + ಕೆಂಡ]

ಪೆರ್ಗೆಚ್ಚಲ್, ಪೆಗ್ಗೆಚ್ಚಲು (ನಾ). ದೊಡ್ಡ ಕೆಚ್ಚಲು : ತುಂಬಿದ ಕೆಚ್ಚಲು : ಬರಲಾಱುವೆ ಪೆರ್ಗೆಚ್ಚಲ ಭರದಿಂದು ಪೆಱಗು ಕುಸಿಯೆ . . . ಬಂದುವಂದು ಪಯಗಳ್ ಪಲವುಂ (ಅಣಾಪ. ೩-೮೯) ; ಪೊರಲಾರದೊಲೆ ದಾಡುತಿರ್ಪ ಪೆರ್ಗೆಚ್ಚಲಿಂ ಚಿರುಸುತಿಪ ಹೋಮಧೇನುವಂತೆ . . . ಅಶ್ರಮವದೇನೊಪ್ಪಿತೊ (ಕಣಾಪ. ೦೦-೬). **ಹೆಗ್ಗೆಚ್ಚಲು** : ಏನೋಧ್ನೀ, ಪೀವರಸ್ತನೀ—ಈ ೨ ಹೆಗ್ಗೆಚ್ಚಲಾವು (ಹಣಾಯು. ೪೫-೦೦೬) : ಪೀವರಸ್ತನ ಪೀವರೋಧ್ನಿಯೆನೆ ಪೆಗ್ಗೆಚ್ಚಲಾಪದು (ಪುಂಗಣಾ. ೩೪-೩).

[ಪೆರ್ (<ಪರಿದು$_1$) +ಕೆಚ್ಚಲ್]

ಪೆರ್ಗೆಡೆ 'ಪೆರ್ಗಡ್ಡೆ' ನೋ.

ಪೆರ್ಗೆಡೆತನ 'ಪೆರ್ಗಡೆತನ' ನೋ.

ಪೆರ್ಗೆಡೆತನಂಗೆಯ್ 'ಪೆರ್ಗಡೆತನಂಗೆಯ್' ನೋ.

ಪೆರ್ಗೆಯ್ಯಾಡಿ (ನಾ). ಒಂದು ಊರಿನ ಹೆಸರು : ಗಾವುಣ್ಡುಗಳೆ ಸೀಮೆಯೋಜಿದ ಕ್ರಮು ತೊಳಂಚಿಯುವ ಪೆರ್ಗೆಯ್ಯಾಡಿಯು . . . ತೊಳಂಚಿಯದ ಸೀಮೆಯೊಳ್ ತಾಗಿ (ಎಕ್ಷ. XII, ಕಂಚಿಕ. ೨೬೯-೯೦ ; ೨೦೪).

[ಪೆರ್ (<ಪರಿದು$_1$) +ಕೆಯ್$_4$+ಪಾಡಿ$_3$]

ಪೆರ್ಗೆಲಸ (ನಾ). ದೊಡ್ಡ ಕೆಲಸ ; ಮಹತ್ಕಾರ್ಯ : ಕಳಕಳಸಂಭ್ರಮಂ ನೆಲಸಿ . . . ಸಮಂತು ವಿವಾಹಗೇಹಮುಂಗಳ[ಕಿತ]ವಾದ ಪೆರ್ಗೆಲಸವಜ್ಜುಗಂ ತಳೆದಿರ್ದುದಾವಗಂ (ಪಪಚ. ೪೨೬). [ಪೆರ್ (<ಪರಿದು$_1$) +ಕೆಲಸ]

ಪೆರ್ಗೆಸಱ್, ಹೆಗ್ಗೆಸಱು (ನಾ). ಅತಿಶಯವಾದ ರಾಡಿ : ಅಧಿಕವಾದ ಕೆಸರು : ಪೆರ್ಗೆಸಱಾಗಿರ್ಪುದು ಬಟ್ಟೆ ಪೋದವಿದಱೊಳ್ ಪೆರ್ಬಂದಿಗಳ್ (ಜಾಪಂಪು. ೦೫೬) ; ಅಂಭೋಧಿಯುಂ ಪರಿವಂ ಪೆರ್ಗೆಸಱಾಗಿ ಶತ್ರು ಶರವಂ ಸೆಣ್ಡಾಡಿ ವೈರಿಶ್ರೀಯಂ ಪರಿತಂದೀವುದು (ಎಕ್ಷ. XI, ರಾವಣ. ೪೯-೫೬; ೧೩೦೦). **ಹೆಗ್ಗೆಸಱು** : ದೇವವಯಿರಿಯ ಸೇನೆ ಸಮರದಿ ದಾವಱಿವಿರಿವಿರಿದು ರಿಪುಗಳ ಹೇವಗೆಡಿಸಿದ ರಣಾಂಕಣವ ಹೆಗ್ಗೆಸಱು ಮಯುವೆನಿಸಿ (ಹುಕೇಶ್ವ. ೪-೩೨). [ಪೆರ್ (<ಪರಿದು$_1$) + ಕೆಸಱ್]

ಪೆರ್ಗೊಜಿ, ಹೆಗ್ಗೆರೆ$_1$, ಹೆಗ್ಗೆಜಿ, ಹೆರ್ಗೊಜಿ (ನಾ). ದೊಡ್ಡ ಕೆರೆ.—ತಟಾಕ : ಪೆರ್ಗೊಜಿಯಾ ಕೆಟಗೆ ಅಱುಗಣ್ಡಾಗಂ (ಎಕ್ಷ. IV, ಕಾಗಪುಂ. ೩೭-೩೮; ೭೭೬)$_1$ ಪೆರ್ಗೊಜಿಗಳ ಚಿಲ್ಮಿಂ . . . ಒಪ್ಪುವುದು ರೌರವಪುರಂ (ರಕ್ಷಾಶಿ. ೪-೭) ; ಪೆರ್ಗೊಜಿಗಳೆಂಬ ವಿನಿಶ್ಚಲಲೋಚನಂಗಳಿಂ ಭೂರಮೆ ದೇಶಸಂಪದಮನೀಕ್ಷಿಸಿ (ಜಾಕಾಪು. ೪-೦೬). **ಹೆಗ್ಗೆರೆ$_1$** : ಒಂದು ಅಡವಿಯುಲ್ಲಿ ತಿಳಿನೀರನೆಂಬ ಹೆಗ್ಗೆರೆಯಿತ್ತು (ಪಗಪ್ರ. ೭೯). **ಹೆಗ್ಗೆಜಿ** : ಆ ಊರ ತೆಂಕಣ ಹೆಗ್ಗೆಜಿದು ಕೀಳೇರಿಯಲುಂ ಗದ್ದೆ ಖಣ್ಡುಗ ಐದಕ್ಕೆ ಗುಳಿ ೫೦೦ (ಎಕ್ಷ IV (E). ಜಾಪುಶಾ. ೨-೨೯; ಪು. I116)$_1$ ಮತ್ತಿಹ್ಮೊಯದು

ಹೆಗ್ಗೆಱೆದು ಬಡಗಣ ಕೋಡಿಯ ಸಂಕಿನ ಯೇರಿಯ ಕೆಳಗೆ (ಶಾಸ. XX. ೨೫೯-೬೬; 1207). **ಪೆರ್ಗೆಱೆ** : ಕಣಂಬುರಿಗೆಯಾಳೂಂ ಪಡುವಣ ಹೆರ್ಗೆಱೆಯಿಂ ಪಡುವಲ್ ಕೆಯ್ಮತ್ತರ್ ಹನ್ನೆರಡು (ಎಇ. XIII. ೨೦-೨೬; 1204). [ಪೆರ್ (< ಪಿರಿದು$_1$) + ಕೆಱೆ^{3}]

ಪೆರ್ಗೇಡು (ನಾ). ಭಾರಿಯಾದ ಕೆಡುಕು.—ಅಪಾಯ; ಮಹಾ ವಿಪತ್ತು : ಈ ನಿನ್ನ ಪೆರ್ಗೇಡ ನೋಡುತ್ತುಮಾನುಂ ಮುನ್ನಮಿದೆ ಅರಯ್ಕ ಅರಯ್ದೆಂ (ಜಕ್ಕಣ. ೨೯-೩೨೦). [ಪೆರ್ (< ಪಿರಿದು$_1$) + ಕೇಡು]

ಪೆರ್ಗೊಂಬು, ಹೆಗ್ಗೊಂಬು (ನಾ). ೧. ದೊಡ್ಡದಾದ ಶಾಖೆ,—ಟೊಂಗೆ : ಕರಿಯ ಭೂಮಿಯೊಡಗೂಡಿ ಮೊದಲಿಂದಂ ಪಣೆಯಿಂದಂ ಪೆರ್ಗೊಂಬುಗಳಿಂದಂ [ಕಿಱುಗೊಂಬುಗಳಿಂದಂ] ಅಲದ ಮರನೆಂತೊಪ್ಪುಗುಂ (ಕರ್ಣಾಮೃ. ೦೩-೩); ಕರಿ ಮುಱಿದ ಪೆರ್ಗೊಂದಿನಿಱುಂಬಿನೊಳಿಪ್ಪಿತುಗುವ ವಾಲ ಮಿನಿದೊಳ್ ಮಿಗೆ ನೆಗೆವ ಗಗನಚರಿಯ ನಿಡುಬಡೆ ತೊಡಂಕೆ (ಕಾಪಂ. ೩-೩೫ ೪) : ಪೊಮ್ಮಲ್ ಬಲ್ಪಿಂ ಮುರಿದ ಮರದ ಪೆರ್ಗೊಂಬಿನೊಳ್ ಕೊಂಬದೊಂದಂಟಿರೆ (ಕಾಶಿಂಕ. ೦೭-೨೩). ೨. ಕಹಳೆಯಾಕಾರದ ಒಂದು ಬಗೆಯ ದೊಡ್ಡ ವಾದ್ಯ : ಬುರುಗಿನ ಪೆರ್ಗೊಂಬಿನ ಕಾಳೆ ಜಾಗಟೆ ... ದವಸಗಳಬ್ಬರಪೆದುದು (ಕಂಪಂ. ೯-೬೦). **ಹೆಗ್ಗೊಂಬು** : ೧. "ಸ್ಕಂಧಶಾಖಾ. ಶಾರಾಃ — ಈ ೨ ಮರದ ಹೆಗ್ಗೊಂಬು" (ಪಥಾಚು. ೩೦-೩೬); ಮರದ ಹೆಗ್ಗೊಂಬುಗಳಲಿಟ್ಟನು (ಭಾಬಾ$_2$ಕ. ೬-೨೨); ದಧಿ ಮಂಡಮಿನೊಂದು ಹೆಗ್ಗೊಂಬಾಳ್ಗ ಹೆಮ್ಮರನ ಹಿಡಿದು ಕಡಹುತ ಹರಿದು ಬಂದನು (ಶಾಭಾ. ೩೨-೩೬); ಖಳನಿಕಾರುಱುಬವನು ಬಲುಹೆಮ್ಮರನ ಹೆಗ್ಗೊಂಬುಗಳಲೇ ಹೊಯ್ದು ಹೊಱವಂಡಿಸಿದನುಸುರುಗಳ (ಕೊಂಪಾ. ೩-೪-೨೨). [ಪೆರ್ (< ಪಿರಿದು$_1$) + ಕೊಂಬು$_1$]

ಪೆರ್ಗೊಡಲಿ (ನಾ). ದೊಡ್ಡದಾದ ಪರಶು : ಸಂಜಯಂತಮಮನೀಶ್ವರಂ ಕ್ಷಮೆಯೆಂಬ ಪೆರ್ಗೊಡಲಿಯಿಂ ದುರಿತಾಟವಿಯಂ ತಱಿದು (ಕರ್ಣಾಮೃ. ೪-೦೦೪) : ಮೊಳೆಯೊಳಿ ತೋಡಿ [ಸೀಂಟಿ] ಕಳಿಯಲ್ ಬಗೆದವ್ವೆದು ಮಾಡದಾಗಳುಮ್ಮಳಿಸಿ ಬಟ್ಟಿಕ್ಕ ಪೆರ್ಗೊಡಲಿಗೊಳ್ವವೊಲಕ್ಕುಮದೊಳ್ಪಿ ತಕ್ಕುದೇ (ಸೂಕ್ಷು. ೦೬-೦೪). [ಪೆರ್ (< ಪಿರಿದು$_1$) + ಕೊಡಲಿ]

ಪೆರ್ಗೊಣ್ಣಂದ (ನಾ). ಒಂದು ಸ್ಥಳದ ಹೆಸರಂ (?) : ಪೆರ್ಗೊಣ್ಣಂದ ತಟಾಕ ಪೂರ್ವಧಾಗ (ಎಇ. VII (೩), ಕುಂಕ್ಕ. ೩೫-೩೯ ; 713).

[ಪೆರ್ (< ಪಿರಿದು$_1$) + ಕೊಣ್ಣಂದ]

ಪೆರ್ಗೊತ್ತಳ (ನಾ). ದೊಡ್ಡ ಬುರುಜು : ಪರಿಖಾದಿಗಳಂ ಸಾಂಗವೆನೆ ರಚಿಸಿಯುಂ ಪೆರ್ಗೊತ್ತಳ ಪಿರಿಯ ಪಿರಂಗಿಗಳನಮರ್ಚಿಯುಂ (ಕೃಷ. ೦೨-೦೦ ೪). [ಪೆರ್ (< ಪಿರಿದು$_1$) + ಕೊತ್ತಳ$_1$]

ಪೆರ್ಗೊತ್ತು (ಕ್ರಿ). ಹೆಚ್ಚಾಗಿ ತಳ್ಕು : ಅಧಿಕವಾಗಿ ನೂಕು (?) : ಮೊಲೆಯಿಂದಂಪಿರಿವಿಟ್ಟು ಪಾಲುಗುತುದೋರಂತಿರ್ದೂಡಂ ತಮ್ಮ ಕೆಚ್ಚಲವಂದೊಯ್ಯನೆ ಕುಂದದುರ್ವಿ ಕೆಲಸಂ ಪೆರ್ಗೊತ್ತೆಯುಂ . . . ಎಳ್ಪುಜೆ ಸುತಿಪ್ಪುವಾ ವಿಷಯದೊಳ್ ಸಾನಂದದಿಂ ಧೇನುಗಳ್ (ಶಾಂಪುಕ್ಕ. ೦-೮೫); ಮನದೊಳ್ ಪುಟ್ಟಿದ ಸಮ್ಮದಂ ವುದಿದು ಪೆರ್ಗೊತ್ತಲ್ಕೆ ತಾನುರ್ದಿದಕ್ಕೆನೆ ಮೆಯ್ಯೆರ್ಚಿ . . . ಸುತನಂ ನೋಡುತ್ತುಮಿರ್ದಂ ನೃಪಂ (ಭುಜಬ. ೦೭-೦೫೬). [?]

ಪೆರ್ಗೊನೆ (ನಾ). (ಹಣ್ಣು, ಹೂವು ಮುಂತಾದುವುಗಳ) ದೊಡ್ಡ ಗೊಂಚಲು ; ತುಂಬಿದ ಗೊಲೆ : ಸುಲಭದಾನಿಯ ಪೋಲ್ತು ಪೆರ್ಗೊನೆಯೊಳು ಕಾತ ಹಲಸಿನ ಮರಗಳೊಪ್ಪಿದುವು (ಕೂಡಿಪ. ೨೪-೧೬) ; ಕಿಱಿದಾದ ಪೆರ್ಗೊನೆಗಳಿಂದೆ ಎಸೆವ ಚೆಂದೆಂಗಾಯ್ಗಳೊದೊಂದನೊಡೆಯತ್ತಲೊಸರಿ ಸೋರ್ವೆಳನೀರ್ಗಳರ್ಘ್ಯಂಗಳಾಗೆ (ಕೃಪಾಪಾ. ೩-೨೬). [ಪೆರ್ (< ಪಿರಿದು$_1$) + ಗೊನೆ$_3$ (< ಗೊಲೆ$_3$)]

ಪೆರ್ಗೊರವ, ಹೆಗ್ಗೊರವ (ನಾ). ೧. ಉತ್ತಮ ಸಂನ್ಯಾಸಿ : ಹಿರಿಯ ತಪಸ್ವಿ : ಕೇಳೋಯ್ಪೆನ್ನತವಪ್ರಶೈಲಮಡರ್ದಿನಮ್ಮಾ ಕಳನ್ದೂರನಂ ಬಾಲೇ ಪೆರ್ಗೊರವಂ ಸಮಾಧಿ ನೆಱಿದೊನ್ ನೋನ್ತೆಯ್ದುದೋರ್ಸ್ವಿದ್ದಿಯಾನ್ (ಎಇ. II. ೩೨-೯; ಸು. 700). **ಹೆಗ್ಗೊರವ** : ೨. ಈಶ್ವರ ; ಶಿವ : ಧಿಟ್ಟನೈ ಹೆಗ್ಗೊರವ . . . ಅಬಲಾಜನಾಶ್ಮಮ್ [ಸ್ತ]ನಂಗನನು ಬಳಿಕ ಸುಟ್ಟನು (ಕಂಪಂಶಾ. ೨೯-೪೦). [ಪೆರ್ (< ಪಿರಿದು$_1$) + ಗೊರವ]

ಪೆರ್ಗೊಲ್ಲಿ, ಪೆಗ್ಗೊಲ್ಲಿ (ನಾ). ದೊಡ್ಡ ಪ್ರವಾಹ,—ಹಳ್ಳ : ತೆಂಕಯ್ಯ ಗ್ಗೊರ್ವಿಶಿಗೂಡಲ ಪಳ್ಳಮೇ ಪಡುವಾಯ್ ಪೆರ್ಗೊಲ್ಲಿಯೆ . . . ಸೀಮೆ (ಎಇ. IV. ಕಗ್ಗ ೪- ೨೫ ; ಸು. 750) ; ಪೆರ್ಗೊಲ್ಲಿಯುಳ್ಳೂಡಿತ್ತು ವೆಟ್ಟೂಗೆಯ ವೊದಲುಳ್ ಬಡಗಾಯ್ಪೆರ್ಗೊಲ್ಲಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ (ಎಇ. IV. ಎಡಕೊ. ೬೮-೭೬ ; ಸು. 890). **ಪೆಗ್ಗೊಲ್ಲಿ** : ಪೆಗ್ಗೊಲ್ಲಿಯ ನೀವ್ವೆಗಿಲು ಬಡಗಣದೆಸೆಯೊಳ್ (ಕ್ಯು ೩೦-೦೯೨೦, ೦೦-೦೪೪ ; ೪೮೭). [ಪೆರ್ (< ಪಿರಿದು$_1$) + ಕೊಲ್ಲಿ]

ಪೆರ್ಗೊಸರ್ಕೆ (ನಾ). ಅತ್ಯಧಿಕವಾದ ವೋಹ : ಘನಕುಚವುಧ್ಮತಾಡನೆಗೆ ಮುಂದಲೆಯೊಳ್ ಸವನಾಗೆ ಬಲ್ಲೆಯಿಂದಿನಿಯನ ಪೆರ್ಗೊಸರ್ಕೆ ಸರಿಯಾಗೆ ಪತಿತ್ವಮನಾಳ್ದ ಚಾಟುನಿಸ್ವನಮೆರ್ದೆಗೊಳ್ವ ಚುಂಬನಕೆ ಬೆಂಬಱಿಯಿಂದಿದಿರ್ವಪ್ಪ ತನ್ನ ಚುಬುನ[ವೆ]ಗೆಯಾಗೆ ಕಾಂತೆ ಪುರುಷಾಯಿತದೊಳ್ ಕರವೊಪ್ಪಿ ತೋಱಿದಳ್ (ಸೂಕ್ಷ್ಮ. ೦೪-೪೬).

[ಪೆರ್ (< ಪಿರಿದು$_1$) + ಕೊಸಱು$_0$ (< ಕೊಸಱು$_2$) + — ಕೆ]

ಪೆರ್ಗೊಱಿಡು (ನಾ.) ದೊಡ್ಡ ಮರದ ತುಂಡು,—ಕಟ್ಟಿಗೆ : ಆತನ ಕೈಗಳಂ ಕಟ್ಟಿಸಿ ತಳವಳನೆ ಕುದಿವೆಣ್ಣೆಗೊಪ್ಪಂಗೆ ಕಾಯ್ಪುಲ್ಲಿಗೆಳತಂದಿಸಿ ಮತ್ತೆ ಪೊತ್ತುವೋಲಂದಿವ ಪೆರ್ಗೊಱಿಡುಗಳನಿಡಿಸಿ (ಕೃಪಾಪಾ. ೦೦-೩೦). [ಪೆರ್ (<ಪಿರಿದು$_1$) + ಕೊಱಿಡು (<ಕೊಱಿಂಡು)]

ಪೆರ್ಗೋಣೆ, ಪೆಗ್ಗೋಳಿ (ನಾ). ಗೋಣಿಯ ಮರದಲ್ಲಿ ಒಂದು ಬಗೆ; ದೊಡ್ಡ ಗೋಣಿ : ಗೋಣಿಗೆ—ಕಿಱುಗೋಣಿ, ಗೋಣಿಕಾಪುತ್ರ. ಪೆರ್ಗೋಣಿ (ಕಱುದ. ೨೯೮ ಶ್ರಹೋ). **ಪೆಗ್ಗೋಳಿ** : ಹಾಲಿಯರನೇಱಿಲು ಕಡವ ಪೆಗ್ಗೋಳಿ . . . ಹಾದರಿಯು ಮರ ಮೊದಲಾದವುರ್ವಿಹವು (ಕಾಕ್ಕಾ. ೩-೩). [ಪೆರ್ (<ಪಿರಿದು$_1$) + ಗೋಣಿ$_1$ (< ಗೋಳಿ$_1$)]

ಪೆರ್ಚಾಳ್, ಹೆಚ್ಚಾಳು (ನಾ). ಹಿರಿಮೆಯುಳ್ಳವನು ; ಶ್ರೇಷ್ಠನಾದವನು : ಕೋಪಪ್ರಸಾದಮುಳ್ಳವರೆ ದೈವಮೆಂಬೊಡೆ ಮನ್ನೆಯರು ಮಾರಸರುಂ ತಳವಾಱರುಂ ದಂಡಾಧಿವರುಂ ಪೆರ್ಚಾಳ್ಗಳುಂ ದೈವಮಪ್ಪರ್ (ಕರ್ಣಾಮೃ. ೯-೦೦೮). **ಹೆಚ್ಚಾಳು** : "ಮಹೋತ್ಸಾಹಃ, ಮಹೋದ್ಯೋಗಃ, ಮಹೇಚ್ಛಃ, ಮಹಾಮನಾಃ—ಈ ೪ ಹೆಚ್ಚಾಳು" (ಪಥಾಚು. ೩೬-೨೦೦) : ನಿನಗೆ ಮಣಿವವನಲ್ಲ ರಾಧಾತನಯನವ ಹೆಚ್ಚಾಳು ಕಡ್ಡಿಯ ವೊನೆಗೆ ಕೊಂಬನೆ ನಿನ್ನನು (ಭಾಬಾ$_2$ಳ. ೦೬-೦೬). [ಪೆರ್ಚ್ + ಆಳ್^{2}]

ಪೆರ್ಚಸು, ಪೆಚ್ಚಿಸು, ಪೆಟ್ಟಿಸು, ಹೆಚ್ಚಿಸು (ಕ್ರಿ). ೧. ವೃದ್ಧಿಪಡಿಸು ; ಅಧಿಕಗೊಳಿಸು; "ಪೆರ್ಚಿಸು-ವರ್ಧನೇ" (ಕಱುಧಾ) : ಬಂಧುಜನಕ್ಕೆ ಮುಗ್ಧ ಮುಖಚಂದ್ರಾಲೋಕಮಾಲೋಕನೋತ್ಸವಮಂ ಪೆರ್ಚ[ಜಾಕಾಂ. ೬೬]ಸೆ ಜಾಲನಿಂತೊದವಿದಂ ಸಂಸಾರಸಾರೋದಯಂ (ಜಾಪ್ರ. ೬-೦೨೯); ತದೀಯ ಸರ್ವಸ್ವಮಂ ನಿಜೇಶಂಗೆ ತಂದುಕೊಟ್ಟು ಪತಿಪ್ರಸಾದಮಂ ತನ್ನೊಳಮಿನಂ ಪೆರ್ಚಿಸುತ್ತುಂ(ಜಾಂಡೀಪ. ೩-೨೨ ಪ; 1047); ಚೇತಃಪ್ರೀತಿಯಂ ಪೆರ್ಚಿಸುವುದು ಪವನಸ್ಪೈರಚಾರಂ ಸಮಾರಂ (ಕುಭಿಪ್ರ. ೨-೪೦). ೨. ಹಬ್ಬಿಸು; ಹಬ್ಬುವಂತೆ ಮಾಡು : ವಿಷಯವಿಷವಲ್ಲಿಯಂ ಪೆರ್ಚಿಸುವ ದಳಧಾರೆ (ಶಾರಂಪ್ರ. ೫೫೩). ೩. ಉಕ್ಕುವಂತೆ ಮಾಡು ; ಹೊರಹೊಮ್ಮಿಸು : ಕೊಳಪ ದಯಾಂಭೋವಿಧಿಯಂ ಪೆರ್ಚಿಸಿಯಳವಿಗಳಿದ ಸತ್ಪಥದೊಳ್ಪರಿಯಿಸುವಲಳುಗುಣ ವ್ಯಾಭೇಂದ್ರಪದಂ ನಮ್ಮಂ ಪರಿರಕ್ಷಿಸುಗೆ (ಕಪಾಂಗ. ೮-೯); ಬಾಣನ ಮಹ

ದಾಸ್ಥಾನದುಗ್ದಾಬ್ಧಿಯ ಕೇಣವಿಲ್ಲದೆ ಪೆರ್ಚಿಸುವ ಏಕಾಂಕ ತಾನೆಂಬಂತೆ . . . ಮಂತ್ರೀಶನೊಪ್ಪಿದನು (ಸೋಮೇಶ. ೨೦-೩೨). ೪. ವಿಸ್ತಾರಗೊಳಿಸು : ಮನೆಯಂ ಪೆರ್ಚಿಸುವೊಡೆ ಮುನ್ನಿನ ಮಾಟ್ಕೆಯೊಳಯ್ದೆ ಮೂಡಲುಂ ಭಡಗಲ್‌ವೊತ್ತಿ ನಿಮಿರ್ಚುಗುಟ್ಟಿದ ದೆಸೆಗಳೊಳಿನಿತಂ ಪೆರ್ಚಿಸಲೆವೇಡ (ಶೋಭಾಕ. ೩-೦೩). ೫. (ಆಲಂ) ಕತ್ತರಿಸು : ಕಡಿ ; ಕೊಯ್ಯು : ಆಗಳಾ ಮದಗಜಾಂಕುಶದಿಂದೆ ಪೆರ್ಚಿಸಿ ನಾಭಿಯಂ (ಸಂಪಶಾ. ೦-೧೩) ; ಕ್ಷೀರಾಬ್ಧಾಮೃತಮನ್ನಾಭಿಯೊಳ್ತಳಿದು ಘಾತಿಕ್ಷಯಮಕ್ಕೆಂದು ಪರಸೆ ನಾಭಿನಾಳಮಂ ಪೆರ್ಚಿಸುವುದು (ಶಾಪುಂಪು. ೨೩೫) ; ಪೊಕ್ಕುಟ ಕುಡಿಯಂ ಪೆರ್ಚಿಸಲ್ಕಿದ ಮಣಿಕನಕಪುಂಜಮೆಸೆದಿರೆ (ಅಜಿಪು. ೦೨-೬೨). 'ಪಚ್ಚಿಸು$_1$' ಪರಾ. ೬. ಬೀಗುವಂತೆ ಮಾಡು; ಉಬ್ಬಿಸು : ಅವರನೆ ಪೊರೆವರ್ ಪೆರ್ಚಿಪರವರನೆ . . . ನೋಡುವರ್ಗಳೆ ನಂಟರ್ (ಶಾಪುಂಪು. ೩೭೨) ; ಸಂತಸದೆ ಪೆರ್ಚಿಪುದೆಂದಮರ್ದಟ್ಟಿನೊಳ್ ಕರಂ ಕರಗಿಪುದೆನ್ನನೆಂದೊಸೆದು ನೀಂ ಕೃಪೆಯಿಂದೆಲೆ ಹಂಪೆಯಾಳ್ದನೇ (ಸಂಶಾಶ. ೩) ; ನೀನೆಣೆಗೊಂಡನ್ನ ಪೆರ್ಚಿಸಿ ಬಯಲಿಗೀಗ ಮುನಿದಣಕದಿಂ ದಿಟ್ಟ ತಪ್ಪಿಸಿದೊಡೆ (ಸೊಂದಪು. ೦೯-೨೯). ೭. [ಗಣಿತ] ಗುಣಾಕಾರ ಮಾಡು; ಗುಣಿಸು : "ಪೆರ್ಚಿಸು ನೂಂಕು . . . ಗುಣಿಸು . . ಬೆಳಸೊಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು" (ಕ್ಷಸಾಜಾ. ೦೦-೯) ; ಕ್ರಮದಿಂದು ಗ್ರಹರಾಶಿಭಾಗಕಲೆಯಂ ನೂಱೆಂಟಱಿಂ ಪೆರ್ಚಿಸು (ಜಾಕಶಿ. ೯-೦). ಪೆಚ್ಚಿಸು : ೧. ಚತುರೋಪಾಯಮನೆಂದವಿಸಿ ನಿಜಾಧಿಪತಿ ಯಾದವನಾರಾಯಣನ ರಾಮರಾಜ್ಯಶ್ರೀಯಂ ಪೆಚ್ಚಿಸುವಜ[ಂ]ಗೆ ನಲ್ಲಂ ಮಲ್ಲಂ (ಸೌಇಇ. XX. ೨೦೨-೦೬; 1244). ಪೆಱ್ಚಿಸು : ೧. ಮಾಱು ತೋಣ್ಬದ ನೆಲನುಮಾದಿತ್ಯಭಟರರ ಸ್ಥಾನವುವ ರಕ್ಷಿಸಲ್ಪೆಱ್ಚುಸಲಿವರ ಸಮರ್ತ್ಥರೆನ್ದು ಗೋಕರ್ಣಾಪಣ್ಡಿತ ಭಟರರ್ಗ್ಗೆ . . . ಕೊಟ್ಟರು (ಕಇ. I, ೦೩-೦೫; 865); ತನ್ದೆ ನಡಯಿಸಿದ ಬಳಿಕನ್ತಿಂದುವರ ಬಡ್ಡಿಗೊಟ್ಟು ಪೆಱ್ಚಿಸಿ ಪೊನ್ನಂ ಮನ್ದರಗಿರಿಧೈರ್ಯಂ ಸಾನನ್ದದೆ ಶ್ರೀಸಾನ್ತಿಸೆಟ್ಟಿ ಪರಿರಕ್ಷಿಸಿದಂ (ಸೌಇಇ. XX. ೩೩-೩೨; 1082). ಹೆಚ್ಚಿಸು : ೧. ಆಸನ-ಶತ್ರುವನಾಕ್ರಮಿಸಲು ಸಮರ್ಥನಲ್ಲ ಎಂದು ದೇಶ ಕಾಲಾದಿಗಳಂ ಹಾರುತೆ ದುರ್ಗಾದಿಗಳಂ ಹೆಚ್ಚಿಸುವ ವಿಜಿಗೀಷುವಿನ ಸ್ಥಿತಿಯು (ಜಾಸಶಾ. ೪); ಕೊಳುಗುಳದ ಹೆಬ್ಬೆಳಸು ಹೆಚ್ಚಿಸಿತಂತಕನ ಪುರವ (ಕುಪ್ರಾಗ್ರೂ. ೨-೨೬). ೬. ಮಕ್ಕಳನ್ನು ಪ್ರೀತಿಯಿಂದ ಸಾರಬೇಕೇ ಹೊರತು, ಅವರನ್ನು ಹೆಚ್ಚಿಸಿ ಹಾಳು ಮಾಡಬಾರದು (ಕೂಂ). ೭. "ಗುಣಿತಂ. ಆಹತಂ — ೨ ಗುಣಿಸಲ್ಪಟ್ಟದ್ದು. ಹೆಚ್ಚಿಸಲ್ಪಟ್ಟದ್ದು. ಹೊಡೆಯಲ್ಪಟ್ಟದ್ದು" (ಸಿದ್ಧಾಂಶಿ. ೩೪೬). ೮. (ಆಲಂ) (ಶುಭವೆಂದು ಗಣಿಸುವ ದೀಪವನ್ನು ಕುರಿತು ಹೇಳುವಾಗ) ಆರಿಸು,— ನಂದಿಸು : ಕಡೆ ಹಗಲ ಕೊಳುಂಡ ಮೇಗೆ, ಹಣತೆ ಹೆಚ್ಚಿಸೆ ಕಣ್ಣು ತೂಗೆ ಮುಚ್ಚುವುದೆ ಪಾನಚ್ಚಿಯಾ (ಗಿಶಿಪಂ. ೬೦-೨೬).

ಪೆರ್ಚಿಸಿಕೊಳ್ಳು = ವೃದ್ಧಿಯನ್ನುಂಟು ಮಾಡಿಕೊಳ್ಳು : ವಿಧಿಪೂರ್ವಸಾಧಿತ ಮಹಾಮಂತ್ರವ್ರಜಂ ತನ್ನ ತೋಳ್ಬಲದಿಂ ಪೆರ್ಚಿಸಿಕೊಂಡಿಳಾಲಲನೆಯೊಳ್ ಮೋಗಿಂಗಮೆಕ್ಕೆಕ್ಕೆಗಂ ಚಲಕಂಗೆಯ್ವುವೊಲ್ (ಶಾಂತಿಪು. ೩-೦೩).

[ಪೆರ್ಚು$_2$ + — ಇಸು$_3$]

ಪೆರ್ಚು$_1$, ಪೆಚ್ಚು$_1$, ಪೆಱ್ಚು, ಹೆಚ್ಚು$_1$ (ಕ್ರಿ). ೧. ಅಧಿಕವಾಗು ; ವೃದ್ಧಿಯನ್ನು ಹೊಂದು ; ಅತಿಶಯವಾಗು : ಸಂಸಾರವೈರಾಗ್ಯಮಾದವಮಾನುಂ ಪೆರ್ಚಿ (ಪಚಾಶಾ. ೭೫-೨೯); ಆ ಶಂಕೆ ಪೊಣ್ಮುತ್ತಿರೆ ಪೆರ್ಚಿತ್ತುಗ್ರಘೋಷಂ (ಅಜಿಪು. ೦೩-೩೬); ಪಗೆ ನೀಗೆಯುಂ ಮುಳಿಸು ಪೋಗೆಯುಮಾಯತಿ ಪೆರ್ಚಿಯುಂ ಜಗಂ ಪೊಗಟೆಯುಮಾಂತ ರಾತಿನೃಪರಂ ಕವೆ ಕೊಲ್ವುದು (ಸಂಪಶಾ. ೮-೯೯). ೨. (ಮರ, ಗಿಡ ಮೊದಲಾದುವುಗಳಂತೆ) ಬೆಳೆ : ಸರಿದಧಿಪತಿ ಮೊಟಕಾಲ್ವರಂ . . . ತಲೆಯನೆಲೆಗೆ ಲೋಕಾಂತರಮೊಡೆಯಿಲ್ಲೆನಿಸೆ ಪೆರ್ಚಿದಂ ದನುತನಯಂ (ಸಂಪಶಾ. ೧೨-೦೦) ; ರಸದೊಡನೆ ಕೂಡಿ ಪೆರ್ಚಿದ ಸಸಿಯುಂ . . . ಪಲವಂ ಭಾವಿಸುತಿರ್ಪನ ತಪಮುಮೊಪ್ಪಲಾರ್ಕುಮೆ ಕಡೆಯೊಳ್ (ಕರ್ಣಾಮೃ. ೨-೬೨). ೩. ದೊಡ್ಡದಾಗು ; ಹಿರಿದಾಗು : ಅಲ್ಲಿಯ ಖಚರರ್ . . . ದೇಹಪ್ರಮಾಣದೊಳ್ ಕುಂದುವರುಂ ಪೆರ್ಚುವರುಮಲ್ಲರ್ (ಅಜಿಪು. ೯-೦೨೦ ಪ) ; ಪವನಂ ಪೆರ್ಚಿದ ಮಹಾವೃಕ್ಷಂಗಳಂ ಕೀಟ್ಟುದಲ್ಲದೆ ಮೃದುವಪ್ಪ ತೃಣಂಗಳಂ ಕೀಟದು (ಕುಸಕು. ೧೬-೯) ; ತೆಳುವಸಿಱುಂ ಪೆರ್ಚಿತು (ಸಿದ್ಧಾಂ. ೦. ೧೯). ೪. ಉಕ್ಕು ; ಪ್ರವಹಿಸು : ಸುಯ್ಯೊಲರುಬುರಾಶಿ ವಾರಿವಾಯುವೆನಲ್ಕೆ ಪೆರ್ಚುವುದು (ಕಾದಂಉ. ೩೩೩) ; ಶ್ರುತದುಗ್ಧಾಂಭೋಧಿ ಪೆರ್ಚಲ್ಕಿನನಿಗದಿತ ತತ್ವಾಂಶು ಪರ್ವಲ್ (ಕರ್ಣಾಮೃ. ೦-೯); ಜಿನಧರ್ಮಾಂಬೋಧಿ ಪೆರ್ಚುತ್ತಿರೆ (ಎಇ. VIII (3), ಸೊರಬ. ೩೦೭-೯೭ ; 1207). ೫. ವಿಸ್ತಾರವಾಗು; ಹಬ್ಬು; ವ್ಯಾಪಿಸು ; ಹರಡು : "ಪೆರ್ಚು — ವಿಸ್ತಾರೇ" (ಕಸುಗಾ) ; ಪೊಗೆ ಪೆರ್ಚಿ [ಶಾಕಾಂ. ಪೊಳ್ಳೆ] ನೆಗೆದ ಕಾಟ್ಮಿರ್ಚುಮಾ ಸಿಂಹಾಸನದ ಮೇಗೇಱುವ ಕೋಡಗಮುಮಂ . . . ಇಂತೀ ಪದಿನಾಱುಂ ಕನಸುಗಳಂ . . . ಕಂಡೆನೆಂದಂಜಿ (ಪಚಾಶಾ. ೩೫-೨೬) ; ದಿಗ್ವಿಭಿದಿ ಪೆರ್ಚಿ ಕವನಾನಕರಾವಂ (ಸಂಪಶಾ. ೯-೯೨) ; ಹಿಡಿಂಬೇಶ್ವರಮೆಂಬುದು ಆ ಲಿಂಗಂ ಪೆರ್ಚ್ಚಿ ಪೆರ್ಚುವ ಕಾರಣದಿಂ ಕಳೇಶ್ವರಮದಮೃತಲಿಂಗದೇ[ವರ್] ಪ್ರಸನ್ನತೆಯಿಂ ಕಣ್ದೆ ಶ್ರೀಮದ್ದಣ್ಡನಾಯಕ ದೇವಪಯ್ಯ . . . ದೇಗುಲದ ಅಧಿಷ್ಠಾನಮಂ ಕಟ್ಟಿಸಿ (ಸೌಇಇ. IX-1, ೦೩೬-೨೯ ; 1064). ೬. ಬೀಗು ; ಹೆಮ್ಮೆಪಡು ; ಗರ್ವಿಸು : ಎನ್ನನೆ ನಚ್ಚಿ ಪೆರ್ಚಿ ಮುಂ ಪೊರೆದುಂ (ಸಂಪಶಾ. ೯-೬೦) ; ಗಂಗಾನ್ವಯಂ ಪೆರ್ಚ್ಚಿ ವರ್ತಿಸುತ್ತಿರೆ (ಎಇ. VII, ಶಿಕಪಾ. ೨ ೬೯ ; 1122) ; ಅದಟಂ ಮುಂ ಗೆಲ್ದುದಂ ನೀಂ ನೆನೆನೆನೆದು-ಭುಜಾಗರ್ವದಿಂ ಪೆರ್ಚದಿರ್ ಪೆರ್ಚದಿರ್ (ಪಗಪಿ. ೯-೬೯). ೭. ಸಂತೋಷಿಸು ; ಹಿಗ್ಗು : ಸವಣರೆಂದೊಡೆ ಪೆರ್ಚುವಳ್ ಜಿನಪೂಜೆಯೆಂದೊಡೆ ನೋಡುವಳ್ (ಕರ್ಣಾಮೃ. ೯-೦೯); ನುಡಿಯೆ ಬಳಲ್ದ ಪಾಂಥನೆರ್ದೆ ತಣ್ಪೆನ ಸೋನೆಯನಾಂತ ಮಾಳ್ಕೆಯಿಂ ಪೊಡಕರಿಸುತ್ತೆ ಪೆರ್ಚಿ (ಗಿಂಳ. ೨-೦೯); ಅವಗುಣಕೋಟಿಯಂ ಮಱೆದು . . . ತಲೆದೂಗಿ ಮೆಚ್ಚಿ ಪೆರ್ಚುವ ನಿರಸೂಯರಂ . . . ಅರ್ಚಿಪೆಂ (ಪಚಶಾ. ೦-೦೦). ೮. ನೀಳವಾಗು ; ಚಾಚು ; ನಿಡಿದಾಗು : ದೆಸೆಗಳ್ ಪೆರ್ಚದೆ ಮೊಟ್ಟನಾದುವಗಲಕ್ಕೆಂಬನ್ನೆಗಂ . . . ಅದ್ರೀಂದ್ರಂಗಳುಂ ತಂದು ಕೀಲಿಸಿದಂ (ಅಜಿಪು. ೧೩-೩೦). ೯. ವಿಜೃಂಭಿಸು ; ಅಟ್ಟಹಾಸ ಮಾಡು : ದಡಿಗನ ಮಿಟ್ಟುವಂ ಮಿದಿದೊಡಲ್ಲದೆ ಮಾಣೆನ ಮೋಳಿಮೆಂದು . . . ರಥಂಗಳನಟ್ಟುಡಿಯೆಟ್ಟು ಭೀಮನಂ ತಡೆಯದೆ ಮುಟ್ಟಿ ಪೆರ್ಚಿ ನುಡಿದಂ ಕಪಿಕೇತನನಂ ಮುರಾಂತಕಂ (ಸಂಪಶಾ. ೦೨-೦೬). ೧೦. ಅಭಿವೃದ್ಧಿ ಹೊಂದು; ಏಳಿಗೆಯಾಗು, ವರ್ಧಿಸು : ಒಳಗಿರ್ದ ವೈರಿಗಳ್ ಮೊಕ್ಕಳವಿಮಾಯರ್ ಪೆರ್ಚಲಧಿಕವಿಧವರ್ಕಳುಮಂ ತಳರದೊಡನಿರ್ದು ಬಡಬಾನಳನೆಂದುಂ ಪೆರ್ಚಲೀಯು[ದಂ]ತಂಬುಧಿಯುಂ (ಪಚಶಾ. ೩-೦೧೯); ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ ಪೆಣ್ಣ ಪೆತ್ತವರು ಪೆರ್ಚುವರು (ಜಾಪಿ. ೩-೯). ೧೧. ಉಬ್ಬು : ಒಳಗಿರ್ದ ವೈರಿಗಳ್ ಮೊಕ್ಕಳವಿಮಾಯರ್ ಪೆರ್ಚಲಧಿಕವಿಧವರ್ಕಳುಮಂ ತಳರದೊಡನಿರ್ದು ಬಡಬಾನಳನೆಂದುಂ ಪೆರ್ಚಲೀಯು[ದಂ]ತಂಬುಧಿಯುಂ (ಪಚಶಾ. ೩-೦೧೯); ಉರಿಗಣ್ಕೆತ್ತುವ ಮಿಸೆ ಪೆರ್ಚಿದ ಕೊರಲ್ ಪೆರ್ಚಾಲ . . . ಚಿಲ್ವಾಗೆ ತತ್ಕಾನನಾಂತರದೊಳ್ ಪೆರ್ಚುಲಿಯುದ್ದುದು (ಪಕಪಂ. ೭೬). ಪೆಚ್ಚು$_1$: ೧. ಎನಿತೆನಿತಂ ಪೆಚ್ಚುಗುಮಂತನಿತನಿತೊಡನೊಡನೆ ಪೆರ್ಚುತಿಕ್ಕುಂ ಮೋಹಂ ಧನದಿಂ ಪರಿಜನದಿಂದೆಂದಿನಿತಜ್ಞಾನಗ್ಗಳವನೊಲ್ಲೆನೆಂಬಂ ಹೈನು (ಪಕುಪ. ೩-೩೩) ; ಒಂದಕ್ಕೆ ನೂಱುಮಡಿಯಾಗಿ ಪೆಚ್ಚಲ್ಪಂ(ಪಿಗೃಪಿ. ೬-೦೯) ; ಉಚ್ಚವದೊಳಗಿತ್ತ ನವರತ್ನಭೂಷಣ ಪೆಚ್ಚಿ ಬಂದಿವೆ ನೋಡೇಳ್ಕು (ಸಂಪಶಾ. ೨೨-೯೩). ೪. ಒಸೆದು ಕಣ್ಗಳಿಂದೆ ಸುಖದ ರಸದ ಹೊಸಲು ನಚ್ಚಿ ಪೆ[ಶಾಕಾಂ. ಮು]ಚ್ಚಿ (ಪಕುಪ. ೫೯.

೧೯೬-೧೨) ; ಪೆಚ್ಚಿದಿಂಗಡುಲೂರ್ವಿಮಾಲೆ ಮಾಲೆಗಳೆಪೆಜೊಳಚ್ಚಿಗಂ ಹೊಳೆ ಹೊಳೆವ ಮಱಿಮಿನ್ಗಳ್ (ಕೃಷ್ಣಶಾ. ೬-೧೦). ೭. ಭೂತೇಶನಾಗುಗೆರ್ಪಾಸಾರಾಧಿಸುತ್ತಮಿರೆ . . . ಧನವೆಲ್ಲ ತೀರುತಿರೆ ಮನದಲ್ಲಿ ಪೆಚ್ಚುತಿರೆ (ಕೊಂಗುರ ೯೮. ೧೫೬-೧೬) ; ಸಚ್ಚರಿತ್ರಂ ಕಲ್ಲದೇವಂ ಪೆಚ್ಚಿ . . . ಜಾಯಿಲಿವಾಗಳ್ ಬಿಟ್ಟುತಿದುತ ಕರೆದು (೧೪ಪು. ೫೫-೪೬) ; ಪೆಚ್ಚುತಂ ಸೀಕರಣಿ ರಸಪಾನಗಳ್ ಸವಿಗೆ (೯೬೫. ೫-೬೦). ೧೨. ಅಧಿಕಗೊಳಿಸು ; ವೃದ್ಧಿಪಡಿಸು ; ಒರಿದು ಕೌರವ ಪಾಂಡವರಿಗಗ್ಗಳಿವ ಮಿತ್ರತ್ವವನು ಪೆಚ್ಚಿಯುಭಯಸೈನ್ಯವ ರಚಿಸಿ ಬಂದೈ (೧೪೬೫. ೫-೨೬). ೧೩. ಮಿಗಿರು ; ಮಿಗಿಲಾಗು ; ಪೆಚ್ಚಿದವರುಂಟಾದಡೀಕೆಯ ಮೆಚ್ಚಿವುದು ವೀಡಿಯುನೆನೆಲಂ ಪಾಸುಚ್ಚಿ ಸರದಲಿ ಸಾರಿಸಿದನಾ ಚಾರುದತ್ತಕನಂ (ಕಾಳ್ಕಾ. ೦೬. ೬). ೧೪. ಪೋಷಿಸು ; ಕಾಂತಿಯುನ್ನಿ ಹೊಂದು : ಅಚ್ಚಮುತ್ತಿನ ಗುಡಿಗಳಂ ರೆಂಪೆಪಚ್ಚಿಗಳ ಕುಚ್ಚುಗಳ ಸಂದಣಿಗಳಂ ಕೇರಿಕೇರಿಯೊಳ್ ಪೆಚ್ಚಿದುವು ಗೃಹಗೃದ್ಧಾರಂಗಳೊಳ್ ಧುಪಾಮೋರುವೆಗಳೇನೆಂಬಿನಂ (೬೦೪. ೫ ೬). ಪೆಚ್ಚು : ೧. ಬಿಲ್ವಿದ್ಯೆಯಲ್ಲಿ ಕುದುರೆಯೊಳ್ಳಿಟ್ಟ ಅತಿತುಮುಲ ಕಾಳಗ ಪೆಚ್ಚು (ಎಕ. VIII, ೫೦೮. ೦೦-೬ ; ಸಂ. ೫೦೦). ೧೦. ಈಸತ್ತ ಧರ್ಮವಮಾಸ್ಥಾದೋರಾ ರುಲಂ ಪೆಚ್ಚುಗೆ (ಎಕ. VI, ೮೫೪. ೩೬-೬ ; ಸಂ. ೮೧೬ ?) ; ಕಱುಮು ಅರಸಂಗೆ ಒಗ್ಗರ್ ಪೆಚ್ಚುಗೆ (೮೪೩೦. ೦೯೦೬. ೦೩-೧೩ ; ೭೦೦) ; ಕೂಟ್ಟೋನ ಕುಲಂ ಪೆಚ್ಚುಗೆ (ಎಕ. VI, ೮೫೫೮. ೫೬-೦೧ ; ಸಂ. ೮೩೦ ?). ಪೆಚ್ಚು₁ : ೧. ಪೆಚ್ಚದು ಕುಂದದು . . . ಕರಗದು ಕೊರಗದು ಎನ್ನ ನಿರ್ಧಾರಾರ್ಚನೆ (೩೭೮. ೫೦-೦೫೦) ; ಮಾತುದೋಜದು ಪೆಚ್ಚಿದಾಸಂದಾತರೇಕಕೆ ಚಿತ್ತ ನೆಜಿಯದು (೪೩೫೫೮. ೦೫-೨) ; ವಿವಸ ವಿವಸಕೆ ಬಾಲ ಶಶಿ ಪೆಚ್ಚುವವೊಲನುಜರುಸಹಿತ ಲಕ್ಷ್ಮೀಧವನು ಪೆಚ್ಚಿದನು (೫೫೦೫. ೦-೬-೧೦). ೫. ಕದಳಿಯೊಳು ಮದದಾನೆ ಸೊಕ್ಕಂದದಲಿ ಪೆಚ್ಚಿದ ಜಾತರಂಗದ ಮೆದೆಯನೊಟ್ಟಿದು ಹೂಣೆ ಹೊತ್ತನು (೪೩೫೫೮. ೫-೪). ೬. ಇದ ನನ್ನದೆಂದು ಸಚ್ಚಿ ಮಚ್ಚಿ ಹುಚ್ಚಿ ಕೆಚ್ಚುಗೊಂಡು ಒಚ್ಚತಹೋದ ಎನ್ನ ಮನಕ್ಕೆ ಇನ್ನಾವುದು ಗತಿಯೊ (೩೭೫. ೦೫-೬೪); ಪೆಚ್ಚಿದ ಒರಿಯ ಡೊಳ್ಳಿನ ರಾವುತರ ಕೆದಹಿನನು ನಿಮಿಷದಲಿ (೪೩೫೫೮. ೦೦ ೦೪); ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು (೪೮೦೫. ೨-೪೫ ೫೫೬೬೬). ೭. ದೇವದೇವ ಕರುಣಿವುದೆನುತ ಬಗೆ ಹೆಚ್ಚಿ ತನು ಪೆಚ್ಚಿ ನ್ನುಬಂತೆ ನಿಂದಿರಂತೆ (೬೫೫. ೫-೨೪); ಪೆಚ್ಚಿ ಬಂದವಳ್ಗಲ್ಲ ಕಂಪಿಲರಾಯಂಗೆ ಪೆಚ್ಚಿ ಬಂದವಳಾನಲ್ಲ (೪೩೫೫೮. ೨೬-೦೨೦). ೯. ಬೊವಿಮ್ಮದೇವಂ ಪೆಚ್ಚಿ ಹೋಹೋ ನಿಲ್ಲು ನಿಲ್ಲೆಂದೆನುತ ರಘುಂಕಿಸಲು . . . ಬೆಚ್ಚಿ ಮದಕರಿ ಕೆದೆದು ಮಡಿಯಿತು (೧೪೬. ೨೨-೨೬); ಪೌರುಷಾಗದ ನಿರತಿಶಯವನು ನೋಡು ನೀನೆಂದುರುಹರಾಕ್ರಮಿ ಹೆಚ್ಚಿದನು ಹೇರಾಳರೋಷವರಿ (೬೫೮೫. ೪-೦೦-೨೬). ೧೦. ಚಂದ್ರೊ ದಯಕ್ಕೆ ಅಂಬುಧಿ ಪೆಚ್ಚುವುದಯ್ಯಾ ಚಂದ್ರ ಕುಂದೆ ಕುಂದುವುದಯ್ಯಾ (೧೫೬. ೨೬). ೧೨. ಜಡಿವ ಒರಿಯುಬ್ಬಣದ ಪೆಚ್ಚಿದ ಮುಡುಹುಗಳ . . . ಹೊಳೆವ ದಾಡೆಯ ದಡಿಗ ದಾನವನವನಿ ಹಜ್ಜೆಗೆ ಬೆಗ್ಗಲ್ಕಿತಂದ (೪೩೫೫೮. ೦೭-೪೪). ೧೫. ಉತ್ಸಾಹಿಸು : ತಿರುನೀಲಕಂಠಕುಶವರು ಹಿಗ್ಗಿ ಪೆಚ್ಚುತ್ತೈ[ಪಾಠಾಂ ಪೆಚ್ಚಿ ಹಿಗ್ಗುತ್ತೈ] (೬೫೫. ೬೬. ೦೦-೦); ಉರಿಯು ಬಂದಿಯು ಹಿಡಿದು ಪೆಚ್ಚುವ ದೊರೆಯಲೀ ದಿಟ ಪಾದರಸವೆಲೆಯರಸ ನಿನ್ನ ಕಾಪಾರನೇಸರ ಪಾಡು ಪಾರ್ಥಂಗೆ (೪೩೫೫೮. ೪-೪೦). ೧೬. (ಆಲಂ) (ಬಿಳಿ, ಮಂಗಳಸೂತ್ರ ಮುಂತಾದ ಮಂಗಳವಸ್ತುಗಳನ್ನು ಕುರಿತು ಹೇಳುವಾಗ) ಒಡೆ; ತುಂಡಾಗು ; ಸೀಳು ; ಈ ಕಾಲದ ಒಳಗಳು ತೊಟ್ಟು ಕೊಂಡು ಒಳಗೆ ಹೋಗುತ್ತಿದ್ದಂತೆಯೇ ಪೆಚ್ಚುವವು (೧೫೬೦. ೦೦); ಕರಿಮನೆಸರ ಹೆಚ್ಚಿದ. ಬೇರೆ ಮಾಡಿಸಬೇಕು (೬೫೦). ೧೭. ಮುಂಗಿ: ಇಲ್ಲವಾಗು; ತೀರು : ಮನೆಮಂಲ್ಲಿ ಅರಿಸಿನ, ಕುಂಕುಮ ಪೆಚ್ಚಿದೆ. ಅಂಗಡಿಯಂದ ತರಬೇಕು (೬೫೨). ೧೮. ತುಂಡು ಮಾಡು; ಕತ್ತರಿಸು. "ಕೊಚ್ಚು, ಪೆಚ್ಚು, ಪೆರೆ, ತುರಿ, ಶುಂಡರಿಸು" (೪೦೫೫೮. ೬೨); ಈ ಮೂಲೆಯಲ್ಲಿ ಪಲ್ಲೆ ಹೆಚ್ಚುವ ಈಗೆ ಇಟ್ಟಿದೆ (೮೫೦೫೮. ೪-೦೬೫); ತರಕಾರಿಗಳನ್ನು ಪೆಚ್ಚುವುದಕ್ಕೆ ಮಂಚಿತವಾಗಿ ಹೊಳೆದು ಶುಚಿಪೊಡಬೇಕು (೧೪೫೫. ೫೦). 'ಪಸ್ಸು' ಪರಾ.

ಪೆಚ್ಚಿಕೊಳ್ಳು = ೧. ಕತ್ತರಿಸಿಕೊಳ್ಳು : ಕೈಪೆಚ್ಚಿಕೊಳ್ಳದೆ ಜೋವಾನವಾಗಿ ತರಕಾರಿಯನ್ನು ಹೆಚ್ಚು (೬೫೦). ೨. ಗರ್ವಿಸು ; ಅಹಂಕಾರ ಪಡು : ಈ ಮಾಮಕ ತುಂಬು ಪೆಚ್ಚಿಕೊಂಡಿವ್ವಾನೆ. ಇವನು ಕ್ಷಮೆಗೆ ಅರ್ಹನಲ್ಲ (೪೩೦೫. ೬೫).

[ದೇ॥. ತಮಿ. ಪೆರು, ಪೆರುಮ ; ಮಲ. ಪೆರುಕು; ತುಳು. ಪೆರ್ಚು, ಪೆರ್ಜು, ಪೇರ್ಚು, ಪೆಚ್ಚು ; ತೆಲು. ಪೇರುಚು, ಪೇರ್ಚಿ, ಪೆಚ್ಚು, ಎಚ್ಚು ; ಕೋಲಾ. ನಾಯ್ಕಿ. ಪೆರ್ಗೆ ; ಗೊಂತಿ. ಪರ್ಸಾನಾ]

ಪೆರ್ಚು₁, ಪೆಚ್ಚು₁, ಹೆಚ್ಚು₁ (ನಾ). ೧. ಆಧಿಕ್ಯ ; ಹೆಚ್ಚಳ ; ವೃದ್ಧಿ : ಕಾಲ್ಕಳ್ಚರ್ಚಿಂ ಕಂಡುದಜಿಂ ಧೂರ್ತರಪ್ಪ ಪೊಲ್ಲ ಲಿಂಗಿಗಳ ಪೆರ್ಚಕ್ಕುಂ (೭೫೫೫೮. ೭೬-೫೯) : ಕೋಪದ ಪೆರ್ಚಿನೊಳ್ ನಡುಗುವೊರುಯುಗಂ ಡುಪಿಂದರಲ್ಕ ನಾಸಟವುಟಂ (೬೦೬೫೮. ೬-೬) ; ಇಂಥನಸ್ಮತ್ಪ್ರಿಯನಾತನೊಳ್ ತವದ ಪೆರ್ಚಂ ನಿಚ್ಚಲುಂಗೈವ ಕೋಕಸಕಾಯಕ್ಕಿನಿತಾಯುಂ ಶೋಕಂ (೬೦೨೫೮. ೬-೧೧). ೨. ಏರಿದು ; ದೊಡ್ಡದು : ನೀನಾ ಪೇಬ್ದು ದಾವುದುಂ ಪೆರ್ಚಲ್ತು (೪೬೫೫. ೦೫-೨೬). ೩. ಏರಿಮೆ ; ಮೇಲ್ಮೆ ; ಹೆಗ್ಗಳಿಕೆ : ರ್ನಾಟಕದಿಂದೆ ಮತ್ತೆ ರಚಿಸಿ ಶ್ರೀಧರ್ಮನಾಥಪ್ರಬಂಧದ ಪೆರ್ಚಂ ತಳೆದಂ (೨೦೫೫. ೦-೪೮). ೪. ಅಭ್ಯುದಯ ; ಏಳಿಗೆ : ದೈವಬಲವಿಲ್ಲದ ಸೇವಕನಂತೆ ಮುಂಬ್ಗಗೆಟ್ಟು ಗ್ರಹಬಲವಿಲ್ಲದ ಜನ್ಮಿಗನಂತೆ ಪೆರ್ಟ್ಟಿದೆ (೨೦೫೫೮. ೪-೫೦ ವ); ಗಂಗಾಧರ ಪುರಹರ ಸರ್ವೇಶನೆಂದುರ್ವಾಸೌಖ್ಯದ ಪೆರ್ಚಂ ಕೊಟ್ಟು...ರಕ್ಷಿಪ್ಪುದೆಸ್ಮಂ (೪೪೬೫. ೬೦). ೫. ಉರ್ಕ್ಕಿವಿಕೆ: ಪ್ರಭಾವ : ಉದರದೊಳಿರ್ದ ತನೂಜನ ವದನೇಂದುನ್ಮತಿಯೆ ಮಾಡೆ ಲಾವಣ್ಯಸಮುದ್ರದ ಪೆರ್ಚಿನರಸಿ ಲಾವಣ್ಯದ ಪುಣ್ಯದ ಪರಮಪದವನೇನೆಬ್ಬುದಳೊ (೪೩೫. ೫-೨೦) ; ವರ್ಚಸ್ಸುಧಾಬುಧಿಗೆ ಪೆರ್ಚಂ ಮಾಟ್ಪಿ ಚಂದ್ರೋದಯಂ (೪೦೬೫. ೫೬೬) ; ಜಗತೀತಲಯವಮಲಸೌಭಾಗ್ಯರತ್ನಾಕರಂ ಪೆರ್ಚಿಂ ಮೇರೆವರಿಯೆ (೬೫೦೫. ೦.೦). ೬. ಸಂತೋಷ: ಹಿಗ್ಗು ; ಆನಂದ : ಮತ್ಕೋಕಿಲೋತ್ಕೈರ್ಧ್ವಗಂ ವಃಹುವಾರ್ಣೆಪಜಪಿದತ್ಪರ್ಹರ್ಷಂ ಪೆರ್ಚಸಂತರಂಗಕ್ಕೆನ್ನಾ (೪೬೫. ೦-೫೬); ತ್ಪೈಲೋಕ್ಯ ಪಾಂಗಲ್ಯನಂ ಕಣ್ಣಾರೆ ನೋಡಿ ಮನದ ಪೆರ್ಚಿಂದಂ ಕರತಾಮರೆಂಗಳಂ ಮುಗಿದು ನುಂವಿರ್ಮ್ (೬೮೫೫೬೬. ೫-೬೦) : ಪೆರ್ಚೊದವಿದ ವೇಸೆ ತತ್ಪತಿಗಳುತ್ಸವವಾರಿಧಿ ವಿಜಿಯೆ ಗೌರಿ ತಾನುದಯಿಸಿದಳ್ (೧೦೪. ೫-೪೬). ೭. (ಅಲಂ) ಕತ್ತರಿಸುವಿಕೆ ; ಛೇದನ : ಒಸಗೆಯ ಪೇರಲೆ ಪತ್ತೊಸಗೆ ಪೊಕ್ಕುಬಿ ಪೆರ್ಚಿನ ಪೇಲೆ ಪೆರ್ಚು (೪೫೬೫. ೦೨. ೬೧). ೮. ಗರ್ವ ; ಅಹಂಕಾರ : ಪೆರ್ಚ್ (ರ್ಚ್) ನೊಸೆದೀವತಿಬೆಳ್ಕೊಗದಿಂವಮಿವ ಮುಮ್ಮೊಲ ಮುಜುಗುತ್ತುಮಿವ ರದುಲೊಳಭರದಾನಗುರ್ಜರ್ಗಳಂ ಪಳಂಚಲೆವುದಾರ್ತು ಕೂರ್ತು ಪಿರಿದಿವ ಗುಣಾ ಗುಣದಂಕಕಾರ್ತಿಯಾ (೪೪೫. ೦೨-೦೭). **ಪೆಚ್ಚು₂** : ೧. ಎದ್ದಿ ನೋಡಲು ರೋದನದ ಪೆಚ್ಚು (೬೮೫೫೮. ೦-೦೬) ; ಪೆಚ್ಚಿನಿಂ ಪೊಡೆವ ಸಿಡಿಲ್ಮಿಂಚುಗಳ ಹೊಮ್ಮುಗಿಂ ಬಿಮ್ಮುಗಿಂ ತತ್ಪಥವಮಗುರ್ವಿಸಿದುದು (೬೦೪ ೫೬ ೨೨). **ಹೆಚ್ಚು₂** : ೧. ಮುಚ್ಚರಿವ ವಿಟಕೋಟಮಂ ಕಟವುಚ್ಚಿ ನೋಡುವ ನೋಟವಂಬಿನ ಹೆಚ್ಚನೀಕ್ಷಿಸೆ (೧೪೪. ೨೦-೪) ; ಕೂಡೆ ಮೇಘೇಶ್ವರ ವಿಜಯ ಜಯಂತರ್ಗೆ ನಾಡೂರುಗಳ ಹೆಚ್ಚನಿತ್ತು (೪೪೫. ೫೫-೦೦೬) ; ಆದರೆ ಸಿಟ್ಟು ನನಗೇ ಹೆಚ್ಚು (೪೫೫:೬. ೪). ೨. ನನ್ನ

ಸಹೋದರರ ಪಟ್ಟವೆಯ ಸಂಕಟದ ಮುಂದೆ ನನ್ನದೇನೂ ಅಷ್ಟು ಹೆಚ್ಚಿನದಲ್ಲ (ಕುಂಬಾಯ. ೯ ೭೭). ೩. ಮುಂದಿ ಪೆಚ್ಚಲದುವೆ ಪೆಚ್ಚೆ ? ಸಳ್ಳು. ಪೊಳ್ಳು. ಆ ಸ್ವಾತಿ ! (ಅಸಕ್ಷ. ೦೭-೦). ೪. "ಪೆಚ್ಚು ಎಂದರೆ ಧಾನ್ಯ ಸಾಗಿಸುವುದಕ್ಕೆ ಮೊದಲು ಮಾಡುವ ಒಂದು ಕ್ರಿಯೆ" (ಕುಂಡಾಸ. ೫೯) ಇನ್ನುಳಿದಿರುವುದು ಧಾನ್ಯವನ್ನು ಮನೆಗೆ ಸಾಗಿಸುವುದೊಂದೇ. ಇದಕ್ಕೆ ಮೊದಲು "ಪೆಚ್ಚು" ಮಾಡುತ್ತಾರೆ (ಕುಂಡಾಸ. ೫೯).

ಪೆಚ್ಚು ಪೆಚ್ಚು, ಪೆಚ್ಚೆಚ್ಚು (ದ್ವಿರುಕ್ತಿ) : ಇತ್ತೀಚೆಗೆ ಅವನು ಪೆಚ್ಚು ಪೆಚ್ಚು ಮೌನಿಯಾಗತೊಡಗಿದ್ದನು (ಅಪಾಹರು. ೩೨೯); ದೊಂಬಲಾಗದ ಹಾಕಿ ದೊಂತೊಡಿ ಹೊರಳಿದರಲ್ಲ ಪೆಚ್ಚೆಚ್ಚು ಬಯಸಿದರಿಲ್ಲ (ಪುರಂದ. ೩-೦೩೯ ೧) ; ನಾವು ಮೇಲಕ್ಕೆ ಹತ್ತಿದವರ್ಗೆ ನವಿಗೆ ಭೂಮಿಯು ಪೆಚ್ಚೆಚ್ಚಾಗಿ ಕಾಣುವನು (ಕೂಗೋಲ. ೨). **ಪೆಚ್ಚುಕತಮೆ, ಪೆಚ್ಚುಕದಮೆ, ಪೆಚ್ಚುಕದಿಮೆ** — ೧. ಪೆತ್ತನ್ಯಸ; ಭೇದ ; ಲೋಕದೊಪ್ಪುವಾದೊಡಪೆಚ್ಚು ? ಪೆಚ್ಚು ಕದಮೆ ಗಳೊಳಗೆ ಸುತ್ತಿದಾನಂದದೀ ಲೀಲಾವಿನೋದದೊಳ್ (ತ್ರಿಪುರಾ. ೬೨೫. ೧೩೬); ಕಲಸವಲ್ಲಿ ಪೆಚ್ಚುಕದಮೆ ಆಗದಂತೆ ಮಾಡು (ಕೂ೨); ಸಸ್ಯ. ವಿಧಿಸರ್ಗ. ೨ ಬಜ್ಜದಲ್ಲಿ ಪೆಚ್ಚು ಕಡಮೆ ಬಾರದಂತೆ ಸಂ ನೋಡುತ್ತಿರುವ ಸುತ್ತಿಕ್ಕಿನ ಪೆಸರು (ಕಣಾ.೦೬. ೨೦೭); ಚಿನ್ನಕ್ಕೂ ಕಬ್ಬಿಣಕ್ಕೂ ಪೆಚ್ಚು ಕದಿಮೆ ಇಲ್ಲದೇ? (ಗಾಕ). ೨. ಸುಮಾರು: ಅಜಮಾಸು : ಪೆಚ್ಚು ಕದಮೆ ನಾನು ಇಲ್ಲಿ ಆರು ಗಂಟೆಗೆ ಬರುತ್ತೇನೆ (ಕೂ೦); ಪೆಚ್ಚು ಕದಮೆ ನಾಳೆಬೊಳಗೆ ಈ ಕೆಲಸವನ್ನು ಮಾಡಿ ಮುಗಿಸುತ್ತೇನೆ(ಕೂ೦); ಕೆಲವರು ಈ ವಿವರಣೆಯನ್ನು ಪೆಚ್ಚು ಕದಿಮೆ ಒಪ್ಪಿಕೊಂಡು ತಮ್ಮ ವೈಪ್ಪಿಯನ್ನು ಅಂತರ್ಯಾಮಿಯಾದ ನಿರಪೇಕ್ಷ ಸತ್ಯದ ಕಡೆಗೆ ತಿರುಗಿಸಿದರು (ಶಕ್ತಾ. ೩೦೯). **ಪೆಚ್ಚು ಕುಂದು, ಪೆಚ್ಚು ಕುಂದು** = ೧. ಅಧಿಕ್ಯ ಹಾಗೂ ಕೊರತೆ: ನ್ಯೂನಾಧಿಕ್ಯ : ಪೆಚ್ಚು ಕುಂದಿಲ್ಲದಂತೆಚ್ಚಜಗೂಡಿ . . . ಸೊಲ್ಲಿಸುವೆನು (ಪಂಪ. ೧೦ ೧೪); ಪೂತಿನ ಪಾಲಿಯ ಪೆಚ್ಚು ಬಂದಿನ ಹೋಗಾಟವಳ್ಳಸ್ಕರ ಅನ್ಯೆತಿಯಲ್ಲ (ಅಪ ೩೩-೧೭); ಶರಣರ ಪೆಚ್ಚು ಕುಂದುಗಳು ನುತಿಯಂದಿಸ ಸಚ್ಚಿರಿಸಿದ ಛಾಪೆ (ಚಸಪ್ಪ ೬-೧). ೨. ವ್ಯತ್ಯಾಸ; ಪೆಚ್ಚು ಕಡಮೆ: ಅಂತರ: ಪರಿಕಲ್ಪನೆಯಲ್ಲಾವಸ್ಥಂ ಕುಡವ ಮರಕುಜಂ ಪೆರ್ಚು ಕುಂದುಳ್ಳದು (ಕಾಃಪಡಾ. ೨-೦೩೨). ೩. ಏರಿಳಿತ; ಉಬ್ಬರವಿಳಿತ : ಏರಿದು ಭಂಗದನಾತಿನೆಸಂತಪ್ಪ ತಗ್ಗಿ ತಾಂ ಪೆಚ್ಚು ಕುಂದಿನೊಸೆದುದು (ಕುಚಿ. ೨-೩). **ಹೆಚ್ಚಲಿ** = 'ವೃದ್ಧಿಯಾಗಲಿ' ಎಂಬರ್ಥದಲ್ಲಿ ಹೇಳುವ ಮಾತು : ರಾಗಿಯನ್ನು . . . ಅಳೆಯಲು ಪ್ರಾರಂಭಿಸುತ್ತಾರೆ. ಪ್ರಾರಂಭದಲ್ಲಿ ಒಂದು ಎಂದು ಹೇಳುವುದಿಲ್ಲ. "ಹೆಚ್ಚಲಿ" ಎನ್ನುತ್ತಾರೆ (ಕುಂಡಾಸ. ೫೯). [< ಪೆರ್ಚು/ತೆಲು. ಪೆಚ್ಚು]

ಪೆರ್ಚುಂಬುರುಳ್ (ನಾ). ಅಧಿಕವಾಗುತ್ತಿರುವ ಹೊನ್ನು; ಪೆಚ್ಚು ತ್ತಿರುವ ಸಂಪತ್ತು : ಆತುಂಬೊಲು.ವಿಂಬುಬುಬು., ಪೆರ್ಚುಂಬುರುಳ್ (ಕಬಿ. ೦೬೦ ಕ್ರಡೋ). [ಪೆರ್ಚು$_1$ + ಪುರುಳ್]

ಪೆರ್ಚುಗೆ, ಪೆಚ್ಚುಗೆ, ಪೆಚ್ಚಿಗೆ$_1$, ಪೆಚ್ಚುಗೆ (ನಾ). ೧. ಆಧಿಕ್ಯ ; ವೃದ್ಧಿ : ಬಾಹುಳ್ಯ : "ಉಬ್ಬರಂ . . . ಒಟ್ಟಣೆ, ಪೆರ್ಚುಗೆ—ಈ ೧೯ ಅತಿಶಯಂ" (ಶಬಾ. ೩೭-೨೬೪); ಉತ್ತಮವೈರಾಗ್ಯದ ಪೆರ್ಚುಗೆಯಂ ತಡೆಯದೆ ಸೆಟ್ಟಿಯನೆಯ್ದೆವಂದು (ಧರ್ಮಾಮೃ. ೨-೦೧೩); ಪರಗೆ ತಮ್ಮಯ ಸುಪಿದ್ಯೆಯನಿತ್ತೊಡೆ ಮತ್ತೆಮತ್ತೆಯುಂ ಸೌದರಮಾಗಿ ಪೆರ್ಚುಗೆಯುನೆಯ್ದುವುದು (ಪಾಶಪ್ರ. ೪-೨೯). ೨. ದೊಡ್ಡದು ; ಹಿರಿದು : "ಪೆರ್ಚುಗೆಯೆನೆ ಪಿರಿದವ್ವುದು" (ಶಬಾರಾ. ೩೭). ೩. ನೀಳವಾಮುದು; ನಿಡಿಪಾದುದು : ನಿನ್ನ ವಿಕ್ರಮಸೀಹದಾ ಕೇಸರವನ್ನೆಲ್ಲ ಕತ್ತರಿಸದಿರೆ. ಪೆರ್ಚುಗೆಯ ದಂಷ್ಟ್ರ ನಖಿಗಳಂ ಕಸಿವಾಡದಿರೆ . . . ಹೆತ್ತಬ್ಬೆ ಮೇನಣ್ಮನಾಣೆ (ಕಬ್ರಾಂಗ. ೬೯-೨೦೬). ೪. ಹೆಚ್ಚಿನದು : ಅತಿಶಯವಾದುದು ; ಉತ್ತಮವಾದುದು : ತರುಣಿಯರಿರ್ವರು ತಂತಮ್ಮ ಸಪಿಯರ ರದನೊಳಗಿತ್ತಾವ ಪುದಿಯ ಪರಿಮಳ ಪೆರ್ಚುಗೆಯೆಂಬಮ ವಿದಗ್ಧರಿಂದಱಿದು ಬರುವುದೆಂದು ರಳುಪೆ (ಕವಂಪಾಂ. ೦೨. ೦೬). ೫. ಉಬ್ಬರ ; ಉಕ್ಕುವಿಕೆ : ತೆರೆನೊರೆ ಬುಮ್ಮಟಂ ಸುಳಿ ಜಲಂ ತೆಗೆ ಪೆರ್ಚುಗೆ ಗುಣ್ಪು ಘೋಷಣಾ . . . ಬಗೆಗಾದೊಡೆ ಸೈತು ಸಮುದ್ರವರ್ಣನು (ಸಚಿ.ಪು. ೨ ೦); ಪೆರ್ಚುಗೆಯೊಳುಬ್ಬೆದ್ದ ವಾಲ್ಗಡಲ ವೀಚಿಗಳೊ . . . ಎನಲ್ಕಸಂಖಿತ್ತು ಚೆಂಪ್ರಕರಣಂಗಳಿಲ್ಲಾ ದೆಸೆಯೊಳು (ಕೃಷ್ಣಾ. ೨೬-೦೩); ವಾರ್ಧಿ ಪೆರ್ಚುಗೆಯುಮರ್ಜಿ ತಾಳ್ದಲು ತೋವೆಯುಮು ಪಿವಣಾಲಚುಂಪ್ರಮು (ಕಾಶಪ್ರ. ೯-೪). ೬. ಏಳಿಗೆ ; ಅಭ್ಯುದಯ : ಪ್ರಜೆಗಳ ಪೆರ್ಚುಗೆಗೆಂದಪಿಳಜನಾರ್ಥಿತ ಘನ ಸಮಸಸರದ್ಯಮುಮಂ ವಿಶ್ವಜಗನ್ಮುತ ಸಳಿಸುಬ್ಬಿ ಜಳದೆ ಬಳಿಯಿಸನೇಸುದಾರನೊ ಭೂಪಂ (ಧರ್ಮಪು. ೦ ೬೪). ೭. ವೈಶಾಲ್ಯ ; ವ್ಯಾಪ್ತಿ : ಒಂದು ಲಜ್ಜನ ಪೆರ್ಚುಗೆಗೆ ಕಾರಣವಲ್ಲದುದಂ ಕಾರಣಂಗೆಯ್ದುವುದುಂ ಪ್ರೌಢೋಕ್ತಿಯೆನಿಪ್ಪುದು (ಸಕ. ೦೬-೨೬೩). ೮. ಪರಾಕ್ರಮ ; ಶೌರ್ಯ : "ಪೆರ್ಚುಗೆಯೊಳ್ ಬಲಂ" (ಶಕಾಗಿ. ೭೭). **ಪೆಚ್ಚುಗೆ** : ೧. "ಮೆಚ್ಚಾಗ ಪೊಸಳ್ ಪೆಚ್ಚು[ಪಾಶಾಂ. ಪೆಚ್ಚು]ಗೆ" (ವಾಗಿ. ೨೭). ೨. ಭಂಗವಿನ ಗೊಂಪಾದಂ ನೆನೆನೆನೆದು ನಿಟ್ಟುಸಿರ್ವಿಟ್ಟು ಸುಯ್ವುತ್ತಮುಧಿ ತೆರೆ ಪೆಚ್ಚು [ಪಾಶಾಂ. ಪೆರ್ಚು]ಗೆದೊಳಿರ್ದುದು (ಕೃಷ್ಣಾ. ೬. ೨); ಕಣ್ಣೆಸಮಾನು ಪಾಹಾರ್ಣವಮುಮಚ್ಚರಿಯು ಪೆಚ್ಚುಗೆಯುಸಿಚ್ಚಜಿಸುತ (ಪಂರಾಪಾ. ೨-೬). ೯. ಹಿರಿಪು ; ಹೆಗ್ಗಳಿಕೆ : ಕಿಚ್ಚು ಮುಚ್ಚರಿಸಿ ಜಲದ ಮೇಲೆ ನಡೆದರೆ ಪೆಚ್ಚುಗೆ ತನಗೆಂಬಂತೆ ಮುಚ್ಚರಿಸಿಯೆ ಮಾಜಸಾಂತೊಡೆ ನಸ್ಸನು ಹೆಚ್ಚು ಮಾಪುವೆ ರಣಧರೆಗೆ (ಅಚಪ್ರ. ೬-೨೦೩). **ಹೆಚ್ಚಿಗೆ$_1$** : ೧. ನಿಲಕೆ ಕೈಗಳ ಬಿಟ್ಟಿ ಬಿದ್ದನು ಪುಸ್ಪವಿರಹನ ಹೆಚ್ಚಿಗೆಯ ಖಾಪದನು ಪೆಸರಿಡಲಜಿಯೆ ನರ್ಜುನನ (ಕುಪಾರ್ಥ್ರ. ೯-೩೦). ೧೦. [ಗಣಿತ]ಗುಣಾತಿಶಾರ (?) : ಆಬೂಭಾನನು ತಂದ ಖಾಲಿಗೆ ಬಂದ ಭೂಮಿಯು ಪಳಗೆ ಕೊಟದು ಗ ೪ ॥ ಉಳಪುಂ ಗ ೮ ॥ ತಾಶಾಪಗ ನಿಂದ ಗ ೧೩ = ಒಟ್ಟಿಸಲು ಕೂಡಿದ ಪೆಚ್ಚಿಗೆಯಿಂದ ಗ ೨೩ ॥ ಅಂತು ಗ ೯ ॥ (ಎಳ. VII. ೨೮೭೩. ೨೯-೨೨; ೧೧೭). **ಹೆಚ್ಚುಗೆ** : ೧. ಹಣೆಯು ಹೆಚ್ಚುಗೆ ಹಸನ ಕೊಡುಪುವೆ (ಕುವಾ೩. ೯-೪೯) : ಕಂಚುಟಿಯೊರ್ವಳ್ ತನ್ನೈಪರದಟ್ಟನ ಪೆಂಪಂ . . . ವಿಪಿತಾನ್ವಯಮಂ ಶುದ್ಧವ ಪೆಚ್ಚಿಗೆಸಂ . . . ಪೇಳುತ್ತುಂ ನೆಲ್ಲನೆ ನಪಿಸಿದಳು (ಕವಾಣಾ. ೩-೪೬); ಶ್ಲೇಷ್ಮ ಪೆಚ್ಚಿಗೆಯುಂಟಾವ ಧರ್ವಿಯು ಶ್ಲೇಷ್ಮದಿಂದಮಬಿನಿಮಮೆಂದರಿವುದು (ಸಪ್ಪ. ೨೬೨). ೨. ತನ್ನನೇ ಹೀರಿ ಬಡವಾಳ್ವ ಬಡಬಾಗ್ನಿಯಂ ತನ್ನನೇ ಪೆಚ್ಚಿಗೆ [ಪಾಶಾಂ. ಪೆರ್ಚುಗೆ]ಯು ಮಾಳ್ಪವ್ಯತಕರಣನಾ ದಾರ್ಢ್ಯರು ತನ್ನ ಗಂಭೀರತನವನೇ ಮೆಱೆದು ಗರ್ಭೀಕರಿಸಿತಲ್ಲದೇ (ಪಪ್ಪ. ೬-೩೨). ೩. ಈ ಸಿರಿಯ ಸುಗ್ಗಿಯಲಿ ನಿನ್ನವರೆಸು ಪೆಚ್ಚಿಗೆಯಾಗಿ ಬದುಕಿವರ್ಕೆಸುವನು ನೀ ನೋಡಿ ಹಿಗ್ಗದೆ . . . ಮಜುಗುತ ಸೂಸಿದೈ ಸಾಹಿತ್ಯಛಾಪೆಯಸೆಂದವನಾ ರರ್ಣ (ಕಾಣ್ಯ ೦೬-೦೭); ಗತಿಯಿದಾಪ್ತವು ತನಗೆ ವಂಶೋನ್ನತಿಯ ಹೆಚ್ಚುಗೆಗೆನಲು ಹವನೆಂದತಿಶಯವು ಪೋ ದಲ ೧೦ಬನಿವುಂಬಿದನು ಭೂಪ (ಕಪಕಾ. ೦-೪-೬). [ಪೆರ್ಚು$_1$ + — ಗೆ]

ಪೆರ್ಚುಗೊಳ್ (ಕ್ರಿ). (ಅಲಂ) ಹಿಗ್ಗು ; ಸಂತೋಷಿಸು : ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಡುಜೆ ತನ್ನ ಕುಂದಿನೊಳು ಕುಂದುವಳೆ . . . ಮನ್ನಿಪ್ಪದೊಲಿವು (ಕರಂ. ೬ ೧೪). [ಪೆರ್ಚುಗೆ + ಕೊಳ್$_1$]

ಪೆರ್ಚುಗೆಗೊಳಿಸು (ಕ್ರಿ). ಮೇಲೆಯೆನ್ನುವಂತು ಮಾಡು : ತನಗಾವ ರೀತಿಯಿಂದಮಾದೊಡಂ ಬ್ರಹ್ಮಾಸ್ತ್ರಮಂತ್ರಮುಂ ಕಲಿಸಿ ಪೆರ್ಚುಗೆಗೊಳಿಸು ಎಂದು ನಾನಾ ಪ್ರಕಾರಮಾಗಿ ಬಿನ್ನವಿಸಲು (ಕಾಶಣಂ. ೯-೨). [ಪೆರ್ಚುಗೆಗೊಳ್ + — ಇಸು]

ಪೆರ್ಚುಗೆಡು (ಕ್ರಿ). ಕುಂದು ; ಕಡಮೆಯಾಗು : ಚಂದ್ರನ ಪೆರ್ಚಿ ಪೆರ್ಚುಗೆದಲಾಗಿ . . . ಪಸುಃಸೀಧುವ ಕೇವಮಂ ಬಳಸಿ ನಿಂದುವ

ನೀಲಘಟಂಗಳೋಳಿಯಿಂ (ಶಾರಪು. ೯-೭೯). [ಪೆರ್ಚು$_2$ + ಕೆಡು$_1$]

ಪೆರ್ಚುಗೆವಡೆ (ಕ್ರಿ). ವಿಸ್ತಾರಗೊಳ್ಳು ; ವಿಶಾಲವಾಗು : " ಅಗ್ಗಲಿಕುಂ-ಪೆರ್ಚುಗೆವಡೆದವುದು " (ಶಪುರ. ೦೩೬ ಟೀಕೆ). [ಪೆರ್ಚುಗೆ + ಪಡೆ$_1$]

ಪೆರ್ಚುವಡೆ (ಕ್ರಿ). ಹೆಚ್ಚಾಗು ; ಅಧಿಕವಾಗು : ತನುಭೋಗಾಯುಷ್ಯಂಗಳ್ ಮನುಷ್ಯರೊಳ್ ಪೆರ್ಚುವಡೆಗುಮುತ್ಸರ್ಪಣದೊಳ್ (ಸಂಕಾಪಾ. ೦-೩೮); ಎರಡುಂ ಪಕ್ಕದ ವಜ್ರವೇದಿಕೆಗಳಂ ಮೆಯ್ವೆರ್ಚಿಯುಂ ಕ್ಷೀರ ಸಾಗರಮುಲ್ಲಂಘಿಸದಂತೆ ಪೆರ್ಚುವಡೆದುಂ ಧರ್ಮಾರ್ಥಮುಂ ಕಾಮರಾಗರಸಂ ಮೀಱದೆ ಚಿತ್ತವೃತ್ತಿಗದು ಲೀಲಾಮಾತ್ರಮಾದಂತೆನಲ್ . . . ಭೂಚಕ್ರಮಂ ತಾಳ್ದಿದಂ (ಶುಭಪು. ೩-೩೦). [ಪೆರ್ಚು$_2$ + ಪಡೆ$_1$]

ಪೆರ್ಚುವೆಱು (ಕ್ರಿ). ಅತಿಶಯವಾಗು : ಪೆರ್ಚುವೆತ್ತಪರಂಜಿಗಳಶವನಷ್ಟ ವಿಧಾರ್ಚನೆಯಿಂದ ಸತ್ಕರಿಸಿ (ಭರತ. ೦೬-೬೩). [ಪೆರ್ಚು$_2$ + ಪೆಱು$_1$]

ಪೆರ್ಜಡಿ ' ಪೆರ್ಜೆಡಿ ' ನೋ.

ಪೆರ್ಜಸ (ನಾ). ಹಿರಿದಾದ ಕೀರ್ತಿ,—ಹೆಸರು : ಪೆರ್ಜಸಮನೆ ಪಿಡಿದೆನ್ನನೆ ರಣದೊಳಟಿಂವೆಂ (ಸಂಸಭಾ. ೯-೯೬); ಚಿಕದೇವನೃಪನಂದು ಪೆರ್ಜಸಮೊಂದಿ ಸೊಗವಾಳ್ದಂ (ಅಪ್ರತಿ. ೦-೨೦). [ಪೆರ್ (< ಪಿರಿದು$_1$) + ಜಸ$_1$]

ಪೆರ್ಜಾರಂಗಿ (ನಾ). ಒಂದು ಊರಿನ ಹೆಸರು : ಎಡೆದಿಣ್ಡೇ ಸಪ್ತತಿ ಪ್ರತಿ ಬದ್ಧಃ ಪೆರ್ಜ್ಜಾರಙ್ಗಿ ನಾಮಗ್ರಾಮಸ್ಸರ್ವ್ವಬಾಧಾಪರಿಹಾರಸಮೇತೋ (ಸ್ಕೃಅಂ. ೦೯೪೨, ೭೫-೦೦೦; 819). [?]

ಪೆರ್ಜುಂಕ, ಪೆಜ್ಜುಂಕ, ಹೆಜುಂಕ, ಹೆಜ್ಜುಂಕ, ಹೆರ್ಜುಂಕ (ನಾ). ಬೆಲೆಬಾಳುವ ಸರಕು, ಪ್ರಾಣಿ, ಧಾನ್ಯ, ಅಂಗಡಿ ಮೊದಲಾದುವುಗಳ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ : ಟಾಣೋಘಸಹಿತಂ ಪೆರ್ಜ್ಜುಂಕಂ ಬಿಲ್ಕೊಡೆ (ಪೊಂಕಶಾ. ೦೯೩೬, ಹಾನಗಲ್. ೭೩-೦೯; 975); ಆಯೂರ ಪೆರ್ಜ್ಜುಂಕಮುಮಂ ಬಿಟ್ಟು (ಸ್ಕೃಅಂ. ೦೯೩೦, ೭೬-೪೭; 1080); ಅತ್ತಿಮರಸಂ ಮೂರುಲಕ್ಷದಡಕೆಯ ಪೆರ್ಜ್ಜುಂಕಮುಂ ಬಿಟ್ಟ (ಸೌಇಇ. IX—1, ೦೦೮-೬೬; 1107). **ಪೆಜ್ಜುಂಕ** : ಪೆಜ್ಜುಂಕಕ್ಕೆ ದ್ರಮ್ಮ ೧ (ಶಾಂದೇಡ್. ೩-೨೨ ಪ; 1047); ಕೆಱೆಗೆ ಪೆಜ್ಜುಂಕದಲುಯೆರಡುಲಕ್ಕವ(ಂ)ಡಕೆಯುಂ ಬಿಟ್ಟರ್ (ಕಇ. II, ೯-೨೪; 1072). **ಹೆಜುಂಕ** : ಹೆಜುಂಕ ವಡರಾವು[ಳ]ದ ದಂಡನಾಯಕಂ ಕರಿಯ ಮಹೇಸ್ವರದೇವ ಗೋಯಿದರಸರ ಬೆಸದಿಂ (ಕಇ. IV, ೦೪-೦೦; ಸು. 1172); ಉಭಯಮಾರ್ಗದ ಹೆಜುಂಕ × × ಸುಂಕ (ಎಕ. XII, ಶಿಕಾ. ೬೬-೦೬; 1379). **ಹೆಜ್ಜುಂಕ** : ಶ್ರೀಮನ್ಮಹಾಪ್ರಧಾನಂ ಬೆಳ್ವಲನಾಡ ಹೆಜ್ಜುಂಕ ದಂಡನಾಯಕ ಮಲ್ಲಪಂ (ಶಾಸಪ. ೨೩-೨೯; 991); ಗವಱೇಶ್ವರ ದೇವರ್ಗ್ಗೆ ಮೂಱುಲಕ್ಕ ಅಡಕೆಯ ಸುಂಕ ವಡ್ಡಲಾಉಳ ಹೆಜ್ಜುಂಕಮುಂ ಬಿಟ್ಟರು (ಸೌಇಇ. IX—1, ೨೩೯-೪; 1142); ಹೆಜ್ಜುಂಕದ ಅಧಿಕಾರಿ ಮಲ್ಲರಸರು (ಎಕ. IX, ಶಂಗಳೂ. ೯-೯; 1440). **ಹೆರ್ಜುಂಕ** : ವಿನಾಯಕ ದೇವರ ನಿವೇದ್ಯಕ್ಕೆ ಹೆರ್ಜ್ಜುಂಕಹಲು ತಿಂಗಳಿಂಗೆ ಪಣವೆರಡಂ ಬಿಟ್ಟರು (ಸೌಇಇ. IX—1, ೨೨೩-೩೬; 1127) ; ವಡ್ಡರಾವುಳದಲೂ ಹೆರ್ಜುಂಕದಲೂ . . . ಕೊಟ್ಟರು (ಶಂಗಾ. ೪೦-೦೩ ; 1135) ; ಭತ್ತ ಭ ೧ ಕ್ಕಂ ಹೆರ್ಜುಂಕಂ (ಸೌಇಇ. IX-11, ೪೦೦-೦೬ ; 1366) ; ಹನ್ನಿಡ್ಪಾಸಿರದ ಹೆರ್ಜ್ಜುಂಕ ಬಿಲ್ಕೊಡೆ (ಸೌಇಎ. ೦೯೪೭, ಹಾನಗಲ್, ೨೦೯-೨೪ ; ?).

ಪೆರ್ಜುಂಕದ ಪೆರ್ಗಡೆ, ಪೆಜ್ಜುಂಕದ ಪೆರ್ಗಡೆ = ಬೆಲೆ ಬಾಳುವ ಸರಕು, ಪ್ರಾಣಿ, ಧಾನ್ಯ ಅಂಗಡಿ ಮೊದಲಾದುವುಗಳ ಮೇಲೆ ಹಾಕುವ ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿ : ಶ್ರೀಮತ್ ಪೆರ್ಜ್ಜುಂಕದ ಪೆರ್ಗ್ಗಡೆ ವಾವಣಯ್ಯಂಗಳ ಬೆಸದೆ (ಸೌಇಇ. XX, ೩೪-೦೦ ; 1058) ; ಪೆಜ್ಜುಂಕದ ಪೆರ್ಗ್ಗಡೆ ಕರಣಂಗಳುಂ ಗ್ರಾಮೇಶ್ವರದೇವರ್ಗ್ಗೆ . . . ಬಿಟ್ಟರ್ (ಸೌಇಇ. XI—11, ೦೪೩-೩ ; 1099).

[ಪೆರ್ (< ಪಿರಿದು$_1$) + ಸುಂಕ$_1$]

ಪೆರ್ಜೆಡಿ, ಪೆರ್ಜಡಿ (ನಾ). ಒಂದು ಊರಿನ ಹೆಸರು : ಶ್ರೀ ಕಾಲಾವಿಗ್ಗುರವಡಿಗಳ ಶಿಷ್ಯರ್ ತಱೆಕಾಡ ಪೆಱ್ಜೆಡಿಯ ಮೊದೆಯ ಕಲಾಪಕದ ಗುರವಡಿಗಳ್ (ಎಕ. II, ೩೩-೨ ; ಸು. 700). **ಪೆರ್ಜಡಿ** : ಪೆರ್ಜ್ಜಡಿಯ ಕೆಱೆಯ ಕೆಟಗೆ ಮೂಗಣ್ಡುಗಂ ಕಟನಿ(ಎಕ. IX, ಹಾಗಮಂ. ೬೦-೦೨೩; 797).[?]

ಪೆರ್ಜೆಡೆ (ನಾ). ನೀಳವಾದ ಜಡೆ : ಉದ್ದವಾದ ಹೆರಳು : ಪೊಳೆವ ಪೆರ್ಜೆಡೆಯಲರ್ಮಾಲೆ ಹೊಂಗೆಜ್ಜೆ ಬಿಡಯವಿಲ್ಲದ ಹೊನ್ನಂಡೆಗಾತಿಯರು ಬೆಂಗಡೆಯ ಸಾರಿದರು ರುಕ್ಮಿಣಿಯ (ಪೋಹಕ. ೦೪-೬೦).

[ಪೆರ್ (< ಪಿರಿದು$_1$) + ಜೆಡೆ (< ಜಡೆ$_1$)]

ಪೆರ್ಜೆಱೆಪು (ನಾ). ದೊಡ್ಡ ಆತಿಥ್ಯ : ಮೂಮೆ ಪೆರ್ಜ್ಜೆಱೆಪು ಪಟ್ಟಮು ತ್ರಿಭುವನಾಚಾರಿಯೆನ್ದು ಪೆಸರಿಟ್ಟು (ಇಲ. X, ೦೬೪-೩ ; ಸು. 7ಪಯ ಕಕ)

[ಪೆರ್ (< ಪಿರಿದು$_1$) + < ಸೆಱಪು]

ಪೆರ್ಜೊಡರ್, ಹೆಜ್ಜೊಡರ್, ಹೆಜ್ಜೊಡರು (ನಾ). ೧. ದೊಡ್ಡ ದೀವಿಗೆ,—ದೀಪ : ಇರುಳ ಪೆರ್ಜೊಡರ ಕಜ್ಜಕೆ ಬೇಱೇನುಮಿಲ್ಲದಿರಲಾಗ ದೀಪದ ಕಲಿಯನಾರು ತಲೆನವಿರ ಪೆರ್ಜೊಡರ ಪತ್ತಿಸಿ (ರಾಘಶ. ೬-೨೨). ೨. ದೊಡ್ಡ ಪಂಜು,—ದೀವಟಿಗೆ : ದುರ್ಜಯರ್ ಬಡಿವ ಹಱೆಗಳ ಕೈಗಳೊಳಗಾಂತ ಪೆರ್ಜೊಡರ ಗಡಣದಿಂ . . . ಕೋಂಟೆಯಂ ಕಾದಿರ್ದರು (ಪಂಪು. ೪೨-೯). ೩. [ತತ್ತ್ವಶಾ]ಚಿದಾಕಾಶದ ದೀಪದ ಕುಡಿ : ಚಿಜ್ಜ್ಯೋತಿ : ಅಹಿಗಳ್ ಪತ್ತಿ ಪರಿದಾಡುತ್ತಿರೆ ನಡುನೆತ್ತಿಯ ಪೆರ್ಜೊಡರನೊರ್ವನೀಕ್ಷಿಸುತಿರ್ದಂ (ರಾಜಶೇ. ೦-೦೩೪). **ಹೆಜ್ಜೊಡರ್** : ೧. ಮೊಳೆವ ಸಂಧ್ಯಾಂಗನೆಗಬುಧಿ ನಿವಾಳಿಸಲೆಂದು ತಳೆದ ಮಾಣಿಕದ ಹೆಜ್ಜೊಡರೊ . . . ಎನಿಸಿ ಕಡೆವಗಲ ರವಿ ಕಣ್ಗೆ ಸೊಗಸಿರ್ದನು (ಹಕಕಾ ೩-೬೩) ; ಹಿಡಿದ ಹೆಜ್ಜೊಡರನಿಂದುಬೀಬಂ ಪೋಲ್ತುದು (ಸಿದ್ಧರಾ. ೦-೫೪). **ಹೆಜ್ಜೊಡರು** : ೧. ನಡೆಮುಡಿ ಕಱೆಬೋನ ಕಳಸ ಕನ್ನಡಿ ಹೆಜ್ಜೊಡರು ವೆರಸಿ ನಿನ್ನ ಬಳಿಗೆ ನಡೆವೆಂ (ರಾಮಪ. ೬-೦೨೩) ; ಅಂಚಿನೊಳುರಿವ ತುಪ್ಪಗಳ ಹೆಜ್ಜೊಡರಿಂದ ಸಂಚಿಸಿದ್ದುದು ಶಸ್ತ್ರಪೂಜೆ (ಭರತ. ೨೦-೦೨೭) ; ಬೆಳಗಲಿ ಹೆಜ್ಜೊಡರು (ಇಂಶಾಪ. ೦೩೦-೩೬). [ಪೆರ್ (< ಪಿರಿದು$_1$) + ಸೊಡರ್]

ಪೆರ್ಜೋಡೆ (ನಾ). ಅನಂಭವಸ್ಥೆಯಾದ ಸೂಳೆ : ಪೆರ್ಜೋಡೆಯಂತೆ ನುಣ್ಣಿತಂ ದೇಟ್ದು (ಪಂಪಭಾ. ೬-೬೨ ಪ). [ಪೆರ್ (< ಪಿರಿದು$_1$) + ಜೋಡೆ]

ಪೆರ್ಜ್ವಾಲೆ (ನಾ). ಉರಿಯನ್ನು ಚಾಚುವ ಜ್ವಾಲೆ,—ಅಗ್ನಿಶಿಖೆ : " ಉರಿಯ ಪೆರ್ಜ್ವಾಲೆ ಕೀಲಕಮೆನಲ್ " (ಪುಂಗರಾ. ೦೪-೯).

[ಪೆರ್ (< ಪಿರಿದು$_1$) + ಜ್ವಾಲೆ]

ಪೆರ್ತಾಯ್ (ನಾ). ಶ್ರೇಷ್ಠಳಾದ ಜನನಿ ; ಹಿರಿಮೆಯುಳ್ಳ ತಾಯಿ : ಓ ತಾಯೆ, ಕನ್ನಡದ ಪೆರ್ತಾಯೆ, ನಮ್ಮಮ್ಮ, ದೇವಿ, ಸಾಮ್ರಾಜ್ಞಿ (ಹೊಂಗಳು. ೦೩-೦೯). [ಪೆರ್ (< ಪಿರಿದು$_1$) + ತಾಯ್]

ಪೆರ್ದಂಡೆ (ನಾ). ವಿಶಾಲವಾದ ದಡ : ವಿಸ್ತಾರವಾದ ತೀರ : ಉಪಾಂತದೊಳ್ ಪರ್ವಿದ ಪೊಂಗೇದಗೆಯ ರಜದಿಂ ಪುಟಿಲ್ಲಟ್ಟಿದ ಪೆರ್ದಂಡೆಗಳೊಳಂ (ಕಾದಂಪೂ. ೦೦೬). [ಪೆರ್ (< ಪಿರಿದು$_1$) + ದಂಡೆ$_2$]

ಪೆರ್ದಡಿ (ನಾ). ಉದ್ದವಾದ ಬಡಿಗೆ ; ದೊಡ್ಡದಾದ ದೊಣ್ಣೆ : ಪಾಣಿಯೊಳಾಂತ ಪೆರ್ದಡಿಗಳ ಲುಬ್ಧಕಶ್ರೇಣಿ ಬೊಬ್ಬಿಡುತಲೈದಿದುದು (ಪೋಹಕ. ೦೯-೯). [ಪೆರ್ (< ಪಿರಿದು$_1$) + ದಡಿ$_1$]

ಪೆರ್ದರಿ (ನಾ). ದೊಡ್ಡದಾದ ಬಿಲ,...ಡೊಗರು : ಮಿಱುಗುವ ದಾಡೆಯಿಂದಣೆದು ಪೆರ್ದರಿಯಂ ಕರದಿಂದಮೆತ್ತುತುಂ . . . ಬರುತಿರ್ದುದು ಭೀಕರನೊಂದು ಸೂಕರಂ(ಕಾಪ್ಯಸಾ. ೦೦೧೨). [ಪೆರ್(< ಪಿರಿದು$_1$) + ದರಿ]

ಪೆರ್ದರಿಯಂಗಿ (ನಾ). (?) : ಕರಡಿ ರುರುಪ್ರತಾನಮುಡು ಬೆಳ್ಳಿಲಿ ಪೆರ್ದರಿಯಂಗಿ ಪೇರಣಿಲ್ ಮರದಣಿಲೆಂಬಿವಂ ಕೆಡಪಿಯೇಂ ತಿರುಗಿತ್ತೊ ಕಿರಾತಸುಕುಳಂ (ದಶಕು. ೨-೦೨೦). [?]

ಪೆರ್ದಲ (ನಾ). ಒಂದು ಸ್ಥಳದ ಹೆಸರು : ಪೆರ್ದ್ದಲಯಾ ಸೀಮ್ನತಃ ಪೂರ್ವ್ವತಃ (ಎಳ. VIII, ಸೊರಬ. ೩೩-೬ ; ಸು. 420 ಕೃಶಾ). [?]

ಪೆರ್ದಲೆ, ಹೆದ್ದಲೆ (ನಾ). ೧. ದೊಡ್ಡ ತಲೆ : ಪೆರ್ದಲೆಯ ಕಟ್ಟಿಱುಂಪೆಗಳುಮಾಗಿ ಮೆಯ್ಯೆಲ್ಲದುನುರ್ಚಿ[ಯುಂ] (ಪಡ್ಡಾರಾ. ೧೬೯-೫) ; ಪೆರ್ಗರಡಿಯ ಕೊಂತದಿ ಕಡಿದ ಪೆರ್ದಲೆಯ ಸಂತಸ ಬಿಡದೆ ಹೊತ್ತಿರ್ದರು (ಶೋಷಕ. ೦೯-೨೯). **ಹೆದ್ದಲೆ** : ೨. ಮುಖ್ಯನಾದವನು : ಪ್ರಮುಖ : ಬ್ರಹ್ಮಾಚ್ಯುತಾದಿಗಳ ಒಳಗೆ ಹೆ[ಬಾಕಾಂ. ಹೊ]ದ್ದಲೆಯಾಗಿ ಜಾಳ್ವನ ತಲೆಯು ನಿನ್ನಯ ತಲೆಯು ಸರಿಯು (ಬಸಪು. ೩೯-೫೯). [ಪೆರ್ (< ಪಿರಿದು$_1$) + ತಲೆ$_1$]

ಪೆರ್ದಸಿ (ನಾ). ದೊಡ್ಡ ಬೆಣೆ,—ಗೂಟ : ಪೆರ್ದಸಿಯ ಮೇಲೆ ಮಹಾದ್ಭುತದಿಂದಮಿದ್ದು . . . ವೇದನೆಗೆ ಸೈರಣೆಗೆಟ್ಟಬುತಿರ್ದ ಭೀತರಂ ನೋಡುತ್ತುಂ (ಕರ್ಮಾಮ್ಯ. ೦೨-೨೦). [ಪೆರ್ (< ಪಿರಿದು$_1$) + ದಸಿ]

ಪೆರ್ದಳಿ (ನಾ). ದೊಡ್ಡ ದಿಮ್ಮಿಗಳ ಬೇಲಿ : ಸಾಲ್ಗೊಂಡು ತರತರದ ಪೆರ್ದಳಿಯ ದಡ್ಡಿಗಳನುಱ್ ಮುಱಿದು . . . ಪುರವನೊಳಪುಗುತಿರ್ದರು (ಶಿಪು. ೯೨-೨೯). [ಪೆರ್ (< ಪಿರಿದು$_1$) + ತಳ್ಳಿ (< ತಟಿ)]

ಪೆರ್ದಾತು? (ನಾ). ಒಂದು ಸ್ಥಳದ ಹೆಸರು (?) : ತತ ಆಗತ್ಯ ಕರ್ವೇಸುರಿಗೋದು ತತ ಪೆರ್ದಾ(?)ತು ತತ ಆಲೆಱ್ (ಇಆ. VI, ೯೩-೩೨; 695). [?]

ಪೆರ್ದಾರಿ, ಹೆದಾರಿ, ಹೆದ್ದಾರಿ (ನಾ). ದೊಡ್ಡ ಹಾದಿ ; ಪ್ರಧಾನವಾದ ಬೀದಿ ; ರಾಜಮಾರ್ಗ : "ಪೆರ್ದಾರಿ—ಬಱಿಸಳ್ತು" (ಸಕುಶಿ. ೯. I. ೩೫) ; ನರಕಕ್ಕೆ ಪೋಪ ಪೆರ್ದಾರಿ ಮಹಾವ್ಯಸನಕ್ಕೆ ಮೂಲಮಱಿವೊಡೆ ಪುಸಿಯಿಂದಂ ಬಿಟ್ಟು ಪಾತಕಂ ಪೆಱತೊಳವೇ (ಕರ್ಮಾಮ್ಯ. ೦೦-೦೮೦). **ಹೆದಾರಿ** : ಪಡುವಲು ಸುಗ್ಗಿಯ ಗದೆಯ ಕಂಟಗಡಿ ಬಡಗಲು ಹೆದಾರಿಯ ಸುಗ್ಗಿಯ ಗದ್ದೆಯ ಹಾಳಿ ಗಡಿ . . . ಬಿಟ್ಟರು (ಶಇ. I. ೪೦-೪೦ ; 1417 ?). **ಹೆದ್ದಾರಿ** : ಪಡುವ ಮೂಲಿಗವನೆಯ ಹೆ[ದ್ದಾ]ರಿ ಮೂಡ ಬಡಗ ಮುಖ ಬಂದ ಕೈ ಳಿರ (ಸೌಇಇ. XI-1. ೬೯ ೩೫; 1038) ; ಕೂಗುವ ಕಲ್ಲ ಸಮೀಪದ ಹೆದ್ದಾರಿ (ಎಳ. VII. ಶಿಪಮೊ. ೨೬-೨೫೬ ; 1524) ; ವಿವಿಧ ರಾಷ್ಟ್ರಗಳ ನಡುವೆ ಕ್ರಮವಾಗಿ ಹೆದ್ದಾರಿಗಳನ್ನು ಕೂಡಿಸುವುದರ ಮೂಲಕ ಉತ್ತಮವಾದ ಅಂತರರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವುದು ಇಕಾಫೆಯ ಮುಖ್ಯ ಉದ್ದೇಶ (ಅಂತಸಂ. ೪೯) ; ಉದ್ದು ಉರುಳಿದರೆ ಹೆದ್ದಾರಿ ದಾಟೀತೇ ? (ಗಾಪೆ).

[ಪೆರ್ (< ಪಿರಿದು$_1$) + ದಾರಿ]

ಪೆರ್ದಿದಿ (ನಾ). ದೊಡ್ಡ ಚೀಲ : ಪೆಟಲುಪ್ಪಿನ ಪೆರ್ದಿದಿ ಮರ್ದಿದೆಂಬಿವಂ ಸುರಿದು . . . ಭಟರಿಂತು ಕಾಮತಿರೆ (ರಾಜಶೇ. ೬-೦೦೬).

[ಪೆರ್ (< ಪಿರಿದು$_1$) + ತಿದಿ]

ಪೆರ್ದಿನಿ, ಹೆದ್ದೀನಿ$_2$ (ನಾ). ಎಲ್ಲವನ್ನೂ ತಿನ್ನುವವನು ; ಸರ್ವಭಕ್ಷಕ : "ಸರ್ವಾನ್ನೀನಃ, ಸರ್ವಭಕ್ಷಃ—ಈ ೨ ಪೆರ್ದಿನಿ [ಬಾಕಾಂ. ಹೆದ್ದೀನಿ]" (ಪಠಾಯು. ೫೯-೦೯೬). **ಹೆದ್ದೀನಿ$_2$** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಪೆರ್ (< ಪಿರಿದು$_1$) + — ತಿನಿ$_2$]

ಪೆರ್ದುಡುಗೆ (ನಾ). ಬಹಳ ಬೆಲೆಬಾಳುವ ಆಭರಣ ; ಅಮೂಲ್ಯವಾದ ಒಡವೆ : ಪಸರಿಸಿದ ತೋರಹಾರದ ಪೊಸವೆಳ್ದಿಂಗಳುಮನಮರ್ದ ಪೆರ್ದುಡುಗೆಗಳೊಳ್ ಮಿಸುಗುವ ಪೊಸಮಾಣಿಕದೆಳವಿಸಿಲುಮನೊಡಗಾಣಲಾದುದಾಸ್ಥಾಯಿಕೆಯೊಳ್ (ಅಪಿಪು. ೯-೫).

[ಪೆರ್ (< ಪಿರಿದು$_1$) + ತುಡುಗೆ (< ತೊಡುಗೆ)]

ಪೆರ್ದುರ್ಗ (ನಾ). ದೊಡ್ಡ ಕೋಟೆ,— ಕಿಲ್ಲೆ : ಬರುತಿರಲು ಮುಂದೊಂದು ಪೆರ್ದುರ್ಗಮಿರಲದರ ಬಾಹ್ಯದೊಳೆಸೆದುದುದ್ಯಾನವನಂ (ಪಪಮೋ. ೯-೦೯). [ಪೆರ್ (< ಪಿರಿದು$_1$) + ದುರ್ಗ]

ಪೆರ್ದುಱುಬು (ನಾ). ದೊಡ್ಡ ಮುಡಿ,—ಗಂಟು : ಪೂಸಿದ ಗಂಧ ನಡುವಿನ ಬಂಕು ಪೆರ್ದು[ಬಾಕಾಂ. ಪೂದು]ಱುಬು ಉಡಿಜಲ್ಲಿಯುಟ್ಟ ಕಾಶೆಯ ಸಬಳಿಗರಂದು ನಡೆದು ಬಂದರು (ಕುಠಾಸಾಂ. ೦೦-೩೬) ; ಮೌಕ್ತಿಕದ ಹಾರ ಕಿರೀಟ ಪೆರ್ದುಱುಬಿನೊಳೊಪ್ಪುವ ತೋರಮುತ್ತುಗಳ ಪಾಲಿಸಿದ (ಶೋಷಕ. ೦೫-೦೬).

[ಪೆರ್ (< ಪಿರಿದು$_1$) + ತುಱುಬು$_2$ (< ತುಱುಂಬು$_2$)]

ಪೆರ್ದೂಲ (ನಾ). ದೊಡ್ಡ ದಿಮ್ಮಿ ; ಭಾರಿಯಾದ ತೊಲೆ : ಸಾಲ ಡೆಂಕಣಿ . . . ಪೆರ್ದೂಲ ಕಕ್ಕಡಪಂದಿ . . . ಜೊತ್ತುಗುಂಡುಗಳ ಜಾಲ ಪೊಪ್ಪಿಹವು (ಗುಶಸ. ೦-೩೦). [ಪೆರ್ (< ಪಿರಿದು$_1$)+ದೂಲ]

ಪೆರ್ದೆಪ್ಪ (ನಾ). ದೊಡ್ಡದಾದ ಹರಿಗೋಲು,—ನಾವೆ : ಕಾಡೊಡೆಯಂ . . . ಬೇಡರೊಡವರೆ ನೀಡುಂ ಪರಿವ ಪೆರ್ದೊಱ್ಗೆಯ್ದಿ ಸಾರ್ದು ಪೆರ್ದೆಪ್ಪಮನೇಱಿ ನಿಂದು (ರಾಜಶೇ. ೫-೦೧೪ ಪ).

[ಪೆರ್ (< ಪಿರಿದು$_1$)+ ತೆಪ್ಪ]

ಪೆರ್ದೆರೆ, ಹೆದ್ದೆರೆ (ನಾ). ೧. ದೊಡ್ಡ ಅಲೆ,—ತರಂಗ : "ಊರ್ಮಿಃ, ಉತ್ಕಳಿಕಾ, ಉಲ್ಲೋಲಃ, ಕಲ್ಲೋಳಃ, ಲಹರೀ—ಈ ೫ ಪೆರ್ದೆರೆ" (ಹಲಾಯು. ೦೦೯-೩೦) ; ಭಯಂಕರತರಮಾದ ಪೆರ್ದೆರೆಗಳಂ ಹಯಸಂತತಿ . . . ನಿರಂತರಂ ತಿರಸ್ಕರಿಸಿರೆ (ಪಂಪಭಾ. ೦೦-೨೮) ; ಕಣ್ಗೊಳಿಸಿದಳಾಕೆ ಪಾಲ್ಗಡಲ ಪೆರ್ದೆರೆಯೊಳ್ ಸಿರಿ ನಿಂದಳೆಂಬಿನಂ (ಕಬ್ಬಿಕಾ. ೬೯) ; ಮರ್ದಲ ತಾಳಾನುಗತಿಯೊಳು ನಡೆದಳು ಪೆರ್ದೆರೆಯಂತೆ ಮುಂದೊತ್ತಿ (ಭರತ. ೦೨-೬೯). **ಹೆದ್ದೆರೆ** : ೧. "ಹೆದ್ದೆರೆ—ಉಲ್ಲೋಲ, ಕಲ್ಲೋಲ" (ನಾಸಂಗ. ೯) ; ಅದ್ದೆನದ್ದೆನು ನರಕದುಃಖದ ಹೆದ್ದೆರೆಯ ಹೊನಲಿನಲಿ (ಪಿಶಾಗ. ೬-೨-೩೩) ; ಪೆರ್ಗಡಲ ಹೆದ್ದೆರೆಗಳೆದ್ದು ತನ್ನಂ ಕೊಂಡು ಕಾರ್ಗತ್ತಲೋಳದ್ದುವಂತೆ (ಭರಸ. ೪-೬೩). ೨. ಅಗಲವಾದ ಪರದೆ,—ಜವನಿಕೆ : ಅಸಹನೀಯ ಮೌನದ ಹೆದ್ದೆರೆಯೊಂದು ನಮ್ಮ ನಡುವೆ ಇಳಿಬಿದ್ದಿತು (ಸಿಂಕ್ಷೆ. ೦೫೯).

[ಪೆರ್ (<ಪಿರಿದು$_1$)+ತೆರೆ$_4$]

ಪೆರ್ದೆವರ್, ಹೆದ್ದೆವರು (ನಾ). ಎತ್ತರವಾದ ದಿಣ್ಣೆ,—ತಿಟ್ಟು : ಪೆರ್ದೆವರುದ್ದ ಬಿಟ್ಟುವೆಂಬೆಡೆಯಣಮಿಲ್ಲದೆಯ್ದೆ ಧರೆ ತರ್ಗಿ ಬಱಿಕ್ಕದು ಕೊಳ್ಳವಾದುದಾ ಪಡೆ ನಡೆಯಲ್ (ಸೇಮಿಪು. ೦೧-೫೬). **ಹೆದ್ದೆವರು** : ವಿಗಡ ಭೀಮನ . . . ಮುಡುಹು ಸೋಂಕಿದೊಡಾ ಮಹಾದ್ರಿಗಳೊಡನೆ ತೋರಹತರು ಕೆಡೆದುವಡಿಯಿಡಲು ಹಜ್ಜೆಗೆ ತಗ್ಗಿದುದು ನೆಲಸಹಿತ ಹೆದ್ದೆವರು (ಕುಪ್ಕಾಅ. ೦೦-೯). [ಪೆರ್ (<ಪಿರಿದು$_1$)+ತೆವರ್ (<ತೆವರ್$_2$)]

ಪೆರ್ದೆಸೆ (ನಾ). ಏಳಿಗೆಯ ಕಾಲ ; ಅಭ್ಯುದಯಾವಸ್ಥೆ ; ಸಾಸ್ಥಿತಿ : ಕಳವಿಂ ಧನಲಾಭಮಾದೊಡಾ ವನಿತೆಯುಮಿಷ್ಟರುಂ ಸುತರುಮುಣ್ಬೆಡೆಯೊಳ್ ಪುದುಗಳ್ಳನೆಂದು ಭೋಂಕನೆ ಕಡಿದಿಕ್ಕೆ ಪೆರ್ದೆಸೆಯೊಳಲ್ಲವವರ್ಪುದು ವಾಗಳಾರ್ಪರೇ (ಕರ್ಮಾಮ್ಯ. ೬-೦೫೯). [ಪೆರ್ (<ಪಿರಿದು$_1$)+ದೆಸೆ$_2$]

ಪೆರ್ದೊಡವು (ನಾ). ಬಹಳ ಬೆಲೆ ಬಾಳುವ ಆಭರಣ,—ಒಡವೆ : ಮಾಣಿಕದ ಪೆರ್ದೊಡವಿಂ ಪೊಱಪೊಣ್ಮುವಂಶುಗಳ್ ದಾರುಣಕೋಪಪಾವಕನೆ ತನ್ನೊಡಲಂ ಸುಡುವಂದ ಮಾಗೆ (ಪಂಠಾಮಾ. ೦೪-೦೨೬).

[ಪೆರ್ (<ಪಿರಿದು$_1$)+ತೊಡವು]

ಪೆರ್ದೊಡೆ, ಹೆದ್ದೊಡೆ, ಹೆರ್ದೊಡೆ (ನಾ). ಸೊಂಟದಿಂದ ಮಂಡಿಯವರೆಗಿನ ದೇಹಭಾಗ ; ಊರು : "ಊರುಗಳು ಪಿಚಂಡಿಗಳೆನಲು ಪೆರ್ದೊಡೆಗೆ ನಾಮಮಕ್ಕುಂ" (ಪುಂಗಂಗಾ. ೯೯-೦೭) ; ಪೆರ್ದೊಡೆ ಕಟಿ ಮುಮ್ಮುಡಂ ಪರಡು ಸಂದಿ ನೊಸಲ್ ಪಣೆ ರಣ್ ಕದಂಪಿವೆಂಬೆಡೆಯನೆ ನಟ್ಟುವುರ್ಚಿದುವು ನೇರ್ದುವು ಸೀಳ್ದುವು ಪಾರ್ಥನಂಬುಗಳ್ (ಪಂಪಭಾ. ೦೦-೦೩೬) ; ನೆನೆಯಿಸಿ ಕಾಡುಗುಂ ಸತತವಾತನುದಗ್ರಲಲಾಟಪಟ್ಟವು . . ಆತನ ಬಗೆಗೊಳ್ವ ಪೆರ್ದೊಡೆಗಳ್ (ಪಗವಿ. ೦೨-೦೫) ; ಬಟ್ಟಮುತ್ತುಗಳು

ಕೇವಣಿಸಿರ್ದ ವಾರಿಯ ಪಟ್ಟಾವಳಿ ಚಲ್ಲಣವ ತೊಟ್ಟು ಪೆರ್ದೊಡೆಗೆ ಕೇಸರಿ ಮಧ್ಯಕೆ ಬಿಗಿದುಟ್ಟ ಕಾಸೆಯ ರಣೋತ್ಸವದಿ (ಪೋಷಕ. ೧೨-೭೩).

ಪೆರ್ದೊಡೆ : ಊರುದಫ್ಲ, ಊರುಮಾತ್ರಂ, ಊರುದ್ದಯಂ ಇವು ಪೆರ್ದೊಡೆಯ ಉದ್ದವ ಹೇಳುವುದು (ಪಾತಾಂ. ೧೨೨); ಹಾಯುತ್ತಿರೆ ಪೆರ್ದೊಡೆಗಳನು ಮುರಿದಯ್ದಿತವನಿಯನರಣಜಲದಲಿ ತೊಯ್ದು ಧೂಪ್ಪನೆ ಕೆಡೆದನಿಳೆಯಲಿ ಕಾತರರ ರಾಯ (ಭಾಷ್ಯಾಗ. ೭-೩೮). **ಪೆರ್ದೊಡೆ** : ೧. "ಊರುಃ. ಸಕ್ಥಿ, ಪಿಚಂಡಂ ?—ಈ ೩ ಪೆರ್ದೊಡೆ" (ಹಜಾಹು ೮೩-೭೬೦). 'ಕಿಬಿಯೆದೊಡೆ' ಪರಾ. [ಪೆರ್ (<ಪಿರಿದು₁) + ತೊಡೆ₂]

ಪೆರ್ದೊರೆ 'ಪೆರ್ದೊಱೆ' ನೋ.

ಪೆರ್ದೊಲೆ (ನಾ). ದೊಡ್ಡ ದಿಬ್ಬಿ : ಬಲ್ಗುಂಡು ಪೆರ್ದೊಲೆ ಕೊಜಿತು ಕಾಯ್ದು ಮಾಣಲ ರಾಶಿ (ಕರ್ಣಾ. ೩-೨೦); ಉರಿವರಿವೆನ್ನೆ ಪಂದಿವಲೆ ಪೆರ್ದೊಲೆ . . . ಪೆರ್ದಿಡಿಮರ್ದಿವೆಂಬಿವು ಸುರಿವು (ರಾಷಡೇ. ೬-೦೦೬).

[ಪೆರ್ (< ಪಿರಿದು₁) + ತೊಲೆ₂]

ಪೆರ್ದೊಱೆ, ಪೆರ್ದೊರೆ, ಪೆರ್ದೊಱೆ, ಪೆರ್ದೊರೆ, ಪೆಱೊರ್ದೊಱೆ, ಹೆರ್ದೊರೆ₁, ಹೆರ್ದೊಱೆ (ನಾ). ೧. ದೊಡ್ಡ ಹೊಳೆ ; ಮಹಾನದಿ : ಎರಡು ಬೆಟ್ಟದ ನಡುವೆ ಪರಿವ ಪೆರ್ದೊಱೆಯಂತೆ (ರಕಸಾಕ್ಕ. ೨-೬೩); ಗೋಮತಿಯೆಂಬ ಪೆರ್ದೊಱೆಯ ರಾಮಣೀಯಕ ಶೀತಜಲಪ್ರೀಂಟೆ (ಪೋಷಕ. ೪೬-೬೪). ೨. ಕೃಷ್ಣಾನದಿ: [ಪೆರ್ದೊ]ಱೆ[ಪ]ರ್ಕ[ಂತ]ಮುಮು ನಾಳುತ್ತುಮಿಬ್ಬು (ಎತಿ. IV. ೪೩೨-೦೩; 975); ಅಱುಕೆಯ ಗಟ್ಟಿಗೆಯುಂ ಪೆರ್ದೊಱೆಯುಂ ಪರಿದಲ್ಲಿ ತದ್ದಪಾಡಿಗೆ ತೊಲಲ್ (ಅಷ್ಟ. ೦೨-೪೬); ಪೆರ್ದೊಱೆಯ ತಡಿಯ ಕೊಪ್ಪದಲು (ಕ್ಕುಆ. ೦೯೨೬. ೩೦-೨; 1056) **ಪೆರ್ದೊರೆ** : ೨. ಅವನು ಪೆರ್ದೊರೆಯ ದಂಡೆಯಲ್ಲಿದ್ದಾಗ ಅನುಕೂಲಸ್ಥನಾಗಿದ್ದ (ಪಾಕುತ್ತ. ೪೪). **ಪೆರ್ದೊಱೆ** : ೧. ಇರ್ದೊಱೆಯೆಂಬ ಪೆರ್ದೊಱೆ ತುಂಬಿ ಬರೆ (ಪಪಪ್ರ.೩೨-೩೨) ; ಒಂದುದಿನ ಪೆರ್ದೊಱೆಯುಂ ತುಂಬಿ ಪರಿವುತ್ತಿರಲು (ಗುಚಾ. ೦೬-೪). **ಪೆರ್ದೊರೆ** : ೧. ಪೆರ್ದೊರೆಗಳಂ ಪೇರದವಿ ಪೆರ್ಬೆಟ್ಟುಗಳನಂತು ನೂರಾರು ಪೇರೂರ್ಗಳಂ ದಾಂಟಿ (ಕೇಪೂ. ೬-೩೦) ; ಮುಂಗಾರ ಸಮಯವಿದು ಪೆರ್ದೊರೆಯ ಸಂಬಲಾಗದು (ಪಾಣಿ. ೪೯). △ **ಪೆಱೊರ್ದೊಱೆ** : ೨. ಗಂಗಾನ್ವಯ ರಂಗಶಿಳಂ ಬೂಪಯ್ಯ ಪೆರ್ಮಾಡಿ ಪೆಱೊರ್ದೊಱೆ ಪಯರ್ಯಾದೆ ಗಂಗಾವಾಡಿ ತೊಂಬತ್ತಕ್ಷಾಸಾಸಿರವುಮುಂ ಪ್ರತಿಪಾಳಿಸೆ (ಪೌಷಾ. XI-1. ೪೬-೪; 950); ಪೆಱೊರ್ದೊಱೆ ಮರ್ಯಾದೆಯಾಗೆ ನಿರಾಕುಳವಾಳುತ್ತಿರೆ(ಎತಿ. VI. ೨೪೯-೪;೦೭೬). **ಹೆರ್ದೊರೆ₁** : ೧. ಅಲ್ಪಾಲ್ಪಕಾವ್ಯಗಳ ಧಾವನೆಯ ಹೊನಲಾದರೂ ಆ ತೊರೆ—ಹೆರ್ದೊರೆಗಳತ್ತಲೇ ಹರಿದುಹೋಗುವುದೆಂಬುದನ್ನೂ ಬಗೆವಡೆದವು (ಪಾಕೋಷ. ೪೩೬); ಸಾಹಿತ್ಯವಾಹಿನಿ ಬತ್ತದ ತೊರೆ. ಅದು . . . ಹೊಳೆ ಹಳ್ಳಗಳ ಜೀವಂತವಾಹಿನಿಯನ್ನು ತುಂಬಿಕೊಂಡು ಹೆರ್ದೊರೆಯುಂ ಹರಿಯುತ್ತದೆ (ಸುಚಾರ. ೨೨೪). ೨. ವಿಷ್ಣುವರ್ಧನಪ್ರಭು ಹೆರ್ದೊರೆಯನ್ನು ಪೇರಿ, ಆ ನದಿಯಲ್ಲಿ ತವ್ಮ ಕಾಂಭೋಜಿಯನ್ನೂ ಶಕ್ತಿಯನ್ನೂ ತೊಳೆದರು (ಶಾಂಶಿಶಾ. ೨೩೩). **ಹೆರ್ದೊಱೆ** : ೧. ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬರ್ಕು ಹರಿದು ಹೆರ್ದೊಱೆಯ ಕೆಱೆ ತುಂಬಿದಂತಯ್ಯಾ (ಪಪ್ರ. ೦೬೯); ಹೆರ್ದೊಱೆಯನುಱೆ ತಡಿಗೆ ದಾಂಟಿಸುವ ತೋರವಹ ಬಲುದೆಪ್ಪವಿರೆ ಮನಹಾರಿ ಸೊರೆಯೋಡಂ ಪಿಡಿದು ತಾಂ ಪಾರವೆಯ್ದುವೆನು (ಪಪಕ್ಕ.೬೦-೪೬); ಕರಗಿ ಹರಿದಪ್ಪು ಹೇವುತಸ ಹೆರ್ದೊಱೆಯವೋಲು (ಕೊಪಾ. ೩-೮-೬೦). ೨. ಹುಲಿಗೆಱೆ ಮುನೂಱುಮುಂ ಹೆರ್ದೊಱೆ ಪರಿಯನ್ತವಾಗೆ ಯಿನ್ತಿನಿತುಮಂ . . . ಸುಖಿರಾಜ್ಯಂಗೆಯ್ಯುತ್ತಿರೆ (ಪಪ. XII. ೪೪೨೨. ೪೨-೦೩ ; 1148 ?); ಬಾದುರನೊಕ್ಕಲ ಕೊಂಡು ಹೆರ್ದೊಱೆಯ ದಾಂಟಿದನು (ಭುಚಾಂ. ೦೬-೮೩೦). [ಪೆರ್ (< ಪಿರಿದು₁) + ತೊಱೆ₂]

ಪೆರ್ಧಮ್ಮಿಲ್ಲ (ನಾ). = ಪೆರ್ದಱಿಬು : ನಿರ್ಮಲ ಬಹುರ್ಭಾಗದೊಳಿಸೆ ಪಂತೆ ಪೆರ್ಧಮ್ಮಿಲ್ಲ ಜಡೆಗಳೊಪ್ಪಿದವು (ಪೋಷಕ. ೦೪-೪೩).

[ಪೆರ್ (<ಪಿರಿದು₁) + ಧಮ್ಮಿಲ್ಲ]

ಪೆರ್ನಂಡಿ (ನಾ). ಒಂದು ಬಗೆಯ ನಾಣ್ಯ (?) : ಅವರಾ ವಡೆಯಂ ಪೆರ್ವ್ವಟ್ಟಿಯೂರುನ್ದು ತೆಱಿ ಪೆರ್ನ್ನಂಡಿ ಎರಡು ತೆಱಿವುದು (ಎತಿ. IV. ಪಗ್ಗಡ. ೪-೩೩; ಸು. 750). [?]

ಪೆರ್ನಗರ (ನಾ). ಒಂದು ಸ್ಥಳದ ಹೆಸರು : ಅನ್ದರಿಯು ಆಲನ್ದೂರ ಪೌರುಳಱಿಅ ಪೆರ್ನ್ನಗರಾದ್ಯನೇತ ಸಮರಮುಖಿಯುಪಾಹುತ ಪ್ರಮಾತ ಶೂರಪುರುಷ (ಇಶ. V. ೦೩೯-೯; ಸು. 788); (ಮೈಆ. ೦೯೩೯. ೩೯-೦೩; ಸು. 788 ನೋ). [ಪೆರ್ (<ಪಿರಿದು₁) + ನಗರ]

ಪೆರ್ನಗೆ (ನಾ). ಅಧಿಕವಾದ ನಗೆಪಾಟಲು : ಘನನಾಮುಂ ಲೋಕದೊಳ್ ಪೆರ್ನ್ನಗೆಗೆಡೆಯೆನಿಸಿಕ್ಕಟಾ (ಪಾಷಡೇ. ೬-೪). [ಪೆರ್(<ಪಿರಿದು₁) + ನಗೆ]

ಪೆರ್ನರ, ಹೆರ್ನರ (ನಾ). (ದೇಹದೊಳಗಿನ) ಮುಖ್ಯವಾದ ರಕ್ತನಾಳ,—ಸೆರೆ : ಗೋಣರೆಗಡಿದು ಪೆರ್ವರವಾಂತು ವಿಡುಳುವ ಪ್ರಾಣದ ಶವಗಳೊಪ್ಪಿದುವು (ಪೋಷಕ. ೪೦-೬೦). **ಹೆರ್ನರ** : "ಕಱಂದರದೆಂಬುದು ಕೊರಳ ಹೆರ್ನರ" (ಹಜಾಹು. ೦೦೪-೦೨); ತಲೆ ಕಿವಿಸಂದುಯೆಲ್ವಣ ಪುಷ್ಕ ನೋವಡೆ ದಾಹಮಾಗೆ ಮೈ ಬಲಿವಡೆ ಹೆರ್ನರಂ ಪೆಗೆಯೆ ಮೂರ್ಛೆಗೆ ಕಣ್ಣಾಕಿ ರಕ್ತವಾಗೆ (ಕಲ್ಕಾಪು. ೩-೦೩); ಶರದೊಳು ಖಡ್ಗವನಿರಿಸಿ ಬಿಲ್ಬಿನಲೊತ್ತಿ ಘಂಘರಿನರಿದು ಹೆರ್ನರವ ಭರದಿಂದ ಬಿಡಿಸಿ ಗೋನಾಳಿ ಇಬ್ಬಗಿಯಾಗೆ ಉರವಣಿಸಿತು ಬಲುರುಧಿರ (ಪಜಾಂ. ೪-೧೦೬). [ಪೆರ್ (<ಪಿರಿದು₁) + ನರ₁ (<ನರವು)]

ಪೆರ್ನಾವೆ (ನಾ). ದೊಡ್ಡ ತೆಪ್ಪ,— ದೋಣಿ : ಕೆಚ್ಚಿದೆ ಲಲಿ ಕಾಲಾಳುಂ, ಮೆಚ್ಚಿನ ಪೆರ್ನಾವೆಗಳುಂ, ರಾಜರಾಜಸಾಣೆಯಾಯ್ತು ! (ಪಾಕಸಿ. ೩-೧). 'ಪೆರ್ವೆಪ್ಪ' ಪರಾ. [ಪೆರ್ (<ಪಿರಿದು₁) + ನಾವೆ]

ಪೆರ್ನೆಣ (ನಾ). ಅಧಿಕವಾದ ಕೊಬ್ಬು,— ಮೇದಸ್ಸು : ಪೆರ್ನೆಣದ ಖಂಡವ ಮಾಂಸದ ತಾಣಮಲ್ಲದೇ ಎಂದು ಶರೀರದೊಳಾದ ಅಶುಚಿತ್ವಮಂ ಭಾವಿಸಿ (ರಕಸಾಕ್ಕ. ೩-೨೩). [ಪೆರ್ (<ಪಿರಿದು₁) + ನೆಣ]

ಪೆರ್ನೊಣ (ನಾ). ದೊಡ್ಡ ಜಾತಿಯ ನೊಣ : ಪೆರ್ನೊಣಂಗಳಿ ತಗುಳ್ದೊಱಿಸಿಯುಂ . . . ಸೈರಿಸಲಾಱದೆ (ರಕಸಾಕ್ಕ. ೩-೭೩).

[ಪೆರ್ (<ಪಿರಿದು₁) + ನೊಣ (<ನೊಳವು)]

ಪೆರ್ನೊರೆ (ನಾ). ಅಧಿಕವಾದ ಫೇನ ; ಅತಿಶಯವಾದ ಬುರುಗು : ಪೆರ್ನೊರೆ[ಪಾಷಂ. ಪೊನ್ನೊರೆ]ಯಿಂ ತಗುಳ್ದ ವಿಷತಾಂಬುವ ಬಲ್ಪೊನಲಿಂದಿ ಪಾರ್ಪಿದ ಬಟ್ಟೆಯೊಳೊಕ್ಕ ಪಲ್ಲವನಿಕಾಯದಿನೆಂದಱಿದು ಕಾಡಾನೆಗಳಾಗಡೆ ಪೋದುದಂ (ಶಾಬ್ಕಾಕ. ೬೫೬); ಪೆರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತು ತ್ಕೇಕರಂ ಸೂಕರಂ (ಕಂಕ್ರಶ. ೬-೬೦).

[ಪೆರ್.(<ಪಿರಿದು₁) + ನೊರೆ₂]

ಪೆರ್ನೊಸಲ್ (ನಾ). ವಿಶಾಲವಾದ ಹಣೆ: ದೊಡ್ಡ ಹಣೆ : ಪೆಱೆನೊಸಲ್ ಪೆರ್ನೊಸಲಾಗೆ . . . ಸೀತೆ ಕರಾಳಮುಖಿಯಾದಳ್ (ಅಮ್ಮ. ೩೦-೨೦).

[ಪೆರ್ (<ಪಿರಿದು₁) + ನೊಸಲ್]

ಪೆರ್ಪಟ್ಟಪೊಲ (ನಾ). ಒಂದು ಸ್ಥಳದ ಹೆಸರು : ಸ್ವಸ್ತಿಶ್ರೀ ಕೊಱ್ಱಗೆ ಮುತ್ತರಸರ್ ಕೊಟ್ಟತು ಪೆರ್ಪ್ಪಟ್ಟಪೊಲವೞ್ (ಎತಿ. X (B). ಶ್ರವಣಾ. ೦೮೭-೬; 750). [? + ಪೊಲ]

ಪೆರ್ಬಂಟು (ನಾ). ದೊಡ್ಡ ಸೈನ್ಯ,— ಪರಿವಾರ : ತಲೆಕಿಬಗಾಗಿ ಕಟ್ಟಿದಲ ಗೊಜ್ಪಿಪನಾರ್ಚಿ ಬೀಟ್ ಪಿವ್ಮಡಿಯುಂ ಪಱಿಯೆ ಪೆಱಗಂ ನೋಡುತ್ತುಂ ಪರಿವ ಪೆರ್ಬಂಟುವಮಂ (ಪೋಷಕ. ೩-೦೦೪ ಕ).

[ಪೆರ್ (<ಪಿರಿದು₁) + ಬಂಟು]

ಪೆರ್ಬಂಡಿ (ನಾ). ದೊಡ್ಡ ಗಾಡಿ,— ಶಕಟ : ಎತ್ತಲಾ ಪೆರ್ಬಂಡಿ ಬೀಳಿಸೆ

ದತ್ತಲೀತನ ಮೇಲೆ ಬದುಕುವುದೆತ್ತಲೀ ಶಿಶು ಪರಮಪುರುಷನ ಕೃಪೆಯ ದಲ್ಲದಡೆ (ಶಿಶಾಗ. ೦೦-೦೦-೩). [ಪೆರ್ (<ಪಿರಿದು$_1$) + ಬಂಡಿ$_1$]

ಪೆರ್ಬಂದಿ 'ಪೆರ್ವಂದಿ' ನೋ.

ಪೆರ್ಬಕ್ಕವಾಣ (ನಾ). ಒಬ್ಬಾತನ ಹೆಸರು : ತಸ್ಯ ಸಾಕ್ಷಿಣ ಗಙ್ಗರಾಜಕುಲ ಸಕಲ ಸ್ಥಾಯಿಕ ಪುರುಷ ಪೆರ್ಬಕ್ಕವಾಣಮಱುಗರೆಯ ಸೇನ್ದ್ರಿಕ ಗಂಜೆ ನಾಡ ನಿರ್ಗುನ್ದ ಮಣಿಯುಗುರೆಯ ನನ್ದ್ಯಾಲ ಸೀಂಬಾಲಾದಪಭೃತ್ಯಾಯಾಂ (ಎಳ. I (R). ೦-೩೨ ; 466). [?]

ಪೆರ್ಬಕ್ಕಿ 'ಪೆರ್ವಕ್ಕಿ' ನೋ.

ಪೆರ್ಬಟ್ಟ, ಹೆರ್ಬಟ (ನಾ). ಒಂದು ಸ್ಥಳದ ಹೆಸರು ; ℘ ಈಗಿನ ಕೋಲಾರಜಿಲ್ಲೆ : ಪೆರ್ಬಟ್ಟಕ್ಕಂ ಬಿದಿರೂರ ಅಗ್ಗಳಮಿಳಿವಲ್ಲಿ ಅಂಕಕೆ ಕಾದಿದ ಬಿದೆಯಿತ್ತ ಸತ್ತನ್ (ಎಳ. X, ಶ್ರೀನಿವಾ. ೨೭-೨೨ ; ಸು. 870). **ಹೆರ್ಬಟ** : ಮಹಿಷವಿಷಯೆ ಹೆರ್ಬಟಗ್ರಾಮ (ಪ್ರಾಶಿ. ೦೯೨೩, ೦೦೬-೦೦;?). [?]

ಪೆರ್ಬಟ್ಟೆ 'ಪೆರ್ವಟ್ಟೆ' ನೋ.

ಪೆರ್ಬಡಗು 'ಪೆರ್ವಡಗು' ನೋ.

ಪೆರ್ಬಡಿಕೆ 'ಪೆರ್ವಡುಕೆ' ನೋ.

ಪೆರ್ಬಡಿಗೆ (ನಾ). ದಪ್ಪವಾದ ಕೋಲು.—ದೊಣ್ಣೆ : ಪಲಗೆ ಪೆರ್ಬಡಿಗೆ ಎಕ್ಕಟಿಗರ ಮೇಲೆ ಚಿಮ್ಮುವ ಚಮರವ ಲೆಕ್ಕವ ಮಾಡುವರಾರು (ಪೋಹಕ. ೪೦-೦೩). [ಪೆರ್ (<ಪಿರಿದು$_1$) + ಬಡಿಗೆ$_1$]

ಪೆರ್ಬಡಿಸು (ಕ್ರಿ). ಅಧಿಕವಾಗಿ ಶಬ್ದ ಮಾಡು ; ಜೋರಾಗಿ ಧ್ವನಿ ಮಾಡು : ಗುಡಿಗುಡಿಗಳ ನರ್ತನಗಾತಿಯರೊಳು ಪೆರ್ಬಡಿಸುವ ಗೀತ ಶಬ್ದಗಳ ವಡಿ ತಪ್ಪದೆ ಕೋಲ ಚಾರಿಗಳಿಂದ ಜಕ್ಕುಡಿ ಮೆಱೆದುವು ದೇವಾಲಯದಿ (ಪೋಹಕ. ೦೬-೭). [ಪೆರ್ (<ಪಿರಿದು$_1$) + ಬಡಿಸು$_1$]

ಪೆರ್ಬಡೆ 'ಪೆರ್ವಡೆ' ನೋ.

ಪೆರ್ಬತ್ತಿ (ನಾ). ದಪ್ಪವಾಗಿರುವ ಬತ್ತಿ : ಆಗಳ್ ಪರಿತಂದೊಂದಾಖು ಮೇಗಣ್ಗೆಳೆಯಲುರಿವ ಪೆರ್ಬ[ಪಾಕಾಂ. ರ್ವ]ತ್ತಿಯಂ ಕರ್ಚಿ ಬೇಯುತ್ತಿರೆ ಬಾಯ್ವಿಟ್ಟೋಡೆ ಬಿದ್ದತ್ತದು ನಯನದೊಳ್ (ರರ್ಪುಪ. ೯-೦೬). [ಪೆರ್(<ಪಿರಿದು$_1$) + ಬತ್ತಿ]

ಪೆರ್ಬಯಕೆ, ಹೆಬ್ಬಯಕೆ (ನಾ). ೧. ಹಿರಿಯ ಆಸೆ ; ಮಹತ್ವಾಕಾಂಕ್ಷೆ. ೨. ಗರ್ಭಿಣಿಯ ಹಿರಿಯ ಆಸೆ.—ಬಯಕೆ : ಸ್ವರ್ಭಾನುಭಯವಿರಹಿತ ಚಂದ್ರವದನೆ ಕೇಳರ್ಭಕಸತಿಯರಾಗಮದಿ ಪೆರ್ಬಯಕೆಯ ಭುಕ್ತ ನವ್ಯಾಂಬರಗಳ ಗರ್ಭಾಂಗನೆಗುಡಿಸಿದರು (ಪೋಹಕ. ೧೭-೦೦). **ಹೆಬ್ಬಯಕೆ**: ೧. ತಮ್ಮ ತಮ್ಮ ವಿಶಿಷ್ಟಕಾಣಿಕೆಯನ್ನು ಸಲ್ಲಿಸಬೇಕೆಂಬ ಹೆಬ್ಬಯಕೆ ಅಂಕುರಿಸುತ್ತದೆ (ಶಿಕ್ಷಪ. ೦೦೩) ; ದುಷ್ಯಂತನನ್ನು ಅವಳು ವರಿಸಿದ್ದಕ್ಕೆ ತಾನು ರಾಜಮಾತೆಯಾಗಬೇಕೆಂಬ ಹೆಬ್ಬಯಕೆಯೊಂದೇ ಮುಖ್ಯ ಕಾರಣ (ಶಾಸ್ಯಸ. ೨೪). [ಪೆರ್ (<ಪಿರಿದು$_1$) + ಬಯಕೆ$_2$]

ಪೆರ್ಬಯಲ್ 'ಪೆರ್ವಯಲ್' ನೋ.

ಪೆರ್ಬರಿ (ನಾ). ಪಕ್ಕೆಯ ಮೇಲ್ಭಾಗ : ಮಿಡಿಯಿಂ ಬೆಂಬರಮೆಯ್ದೆ ಸೀಟ್ಟ ಶಬಸಂಘಾತಂಗಳಂಗುಷ್ಟದಿಂ ತೊಡೆಯಂ ತಾಪಿನಮೆಯ್ದೆ ಪೋಟ್ಟ ಪೆಣಗಳ್ ಬೆರ್ವಟ್ಟೆಯಂ ಮುಟ್ಟಿ ಮೆಯ್ವಿಡೆ ಭಾಳಾಗ್ರಮನೆಯ್ದೆ ಬಿಟ್ಟ ಕುಣಪವ್ರಾತಂಗಳು ಬಟ್ಟೆಯೊಳ್ ಮಡದಿಂ ಪೆರ್ಬರಿಗೆಯ್ದೆ ನೇರ್ದ ಮೃತಕವ್ಯೂಹಂ ಕರಂ ಭೀಕರಂ (೦೧ಪಾಪ. ೬-೭). [ಪೆರ್ (<ಪಿರಿದು$_1$) + ಬರಿ

ಪೆರ್ಬಲ 'ಪೆರ್ವಲ' ನೋ.

ಪೆರ್ಬಲೆ 'ಪೆರ್ವಲೆ' ನೋ.

ಪೆರ್ಬಸ 'ಪೆರ್ವಸ' ನೋ.

ಪೆರ್ಬಸವು 'ಪೆರ್ವಸ' ನೋ.

ಪೆರ್ಬಸಿಱ್ (ನಾ). ದೊಡ್ಡ ಹೊಟ್ಟೆ : ಪೆರ್ಬಸಿಱುಂ ಕ್ರೂರೇಕ್ಷಣಮುಂ ದನುಜಾಕಾರಮನೊಡರಿಸೆ ನಿಶಾಟರರ್ವಿಸಿ ಶೋರ್ವರ್ (ಕಾಪ್ಯಾಪ. ೨೨೦) ; ಉರ್ಬರಿಸಿದ ಪೆರ್ಬಸಿಱ್ ನಸು ಕುಸುಂಗಿದ ಬೆನ್ (ಪೃಷಿ. ೦೧-೬೦). [ಪೆರ್ (<ಪಿರಿದು$_1$) + ಬಸಿಱ್ (<ಬಸಿಱು)]

ಪೆರ್ಬಳ (ನಾ). ಒಂದು ಊರಿನ ಹೆಸರು (?) : ಆಗ್ನೇಯದ ಎಲಂಚಿಕೂಣ್ಟೆಯಿನ್ದೆ ಪೂಲಿಕುಣ್ಟೆಯಿನ್ದೆ ಪೆರ್ಬಳದೊಳಗಣ ಚಾದು ಪೊಲದಿನ್ದೆ (ಎಳ. X (S), ಶಕ್ಕಪ. ೦೦೬-೬೨ ; 850). [℘ ಇದು 'ಪೆರ್ಬಳ್ಳ'ದ ಅಪಲಿಖಿತವಿರಬಹುದು]

ಪೆರ್ಬಳ್ಳ 'ಪೆರ್ವಳ್ಳ' ನೋ.

ಪೆರ್ಬಳ್ಳಿ$_1$ (ನಾ). ವಿಸ್ತಾರವಾಗಿ ಹರಡಿದ ಬಳ್ಳಿ ; ಚೆನ್ನಾಗಿ ಹಬ್ಬಿದ ಲತೆ : ಒರ್ವ ಲುಬ್ಧಕಂ . . . ಮರನನೇಱಲ್ ಸಾಲದೆ ಕಾಲಪಾಶ ದಂತೆ ಮುರಿದು ಪರಿದು ಪರ್ವಿದ ಪೆರ್ಬಳ್ಳಿಯನಡರ್ದೇಱಿ (ಗಿಂಳ. ೦-೦೨೬ ಪ) ; ಪೆರ್ಬಳ್ಳಿಯ ಬಳಿಯನಡರ್ದು ಪಿಡಿಯಲೆಳಸಿ ಘಳಿಲನೆ ಸಾರೆವರ್ಪ ಘೋರಲುಬ್ಧಕನಂ ಕಂಡಗಿದು (ರಾಜಶೇ. ೩-೩೩ ಪ) ; ಪದಕೆ ತೊಡರ್ದ ಪೆರ್ಬಳ್ಳಿಗಳ್ ಪಾಶದಂತೊಪ್ಪಿರೆ (ಶಾಳುಂತ. ೦೭-೩೩). [ಪೆರ್ (<ಪಿರಿದು$_1$) + ಬಳ್ಳಿ]

ಪೆರ್ಬಳ್ಳಿ$_2$ 'ಪೆರ್ವಳ್ಳಿ' ನೋ.

ಪೆರ್ಬಱ್ 'ಪೆರ್ವಱ್' ನೋ.

ಪೆರ್ಬಱ (ನಾ). ಅಮೂಲ್ಯವಾದ ಬಟ್ಟೆ.—ವಸ್ತ್ರ : ಏಳಸದ್ವಿ ಮಲಾಪುರೀ ವರಶ್ರೀನಟಿ ನರ್ತಿಸುತ್ತುಮಿರೆ ತತ್ಕರವಿಭ್ರಮದಂದಮಾಯ್ತು ಮಂದಾನಿಳಸಂಚಳಲ್ಲುಳಿತ ಚೀನದ ಪೆರ್ಬುಳಿ[ಪೆರ್ಬಱ] ವಿಧಿವಿಧಿ ಯೊಳ್ (ಕುಸುಮಾ. ೬-೦೦೭). [ಪೆರ್ (<ಪಿರಿದು$_1$) + ಪಱ್$_5$]

ಪೆರ್ಬಾಗಿಲ್ 'ಪೆರ್ವಾಗಿಲ್' ನೋ.

ಪೆರ್ಬಾಣ (ನಾ). ಒಂದು ಊರಿನ ಹೆಸರು : ಪಾಣಿಗ್ರಹಣಂಕೆಯ್ದು ಕೊಟ್ಟಾರ್ಪ್ಪೆರ್ಬ್ಬಾಣ ಮುತ್ತರಸರು (ಪ್ರಾಶಿ. ೦೯೪೦, ೧-೩೩ ; 788) ; ಪೆರ್ಬಾಣನ ಪಳ್ಳಿಯ ಕೊಣ್ಡ ಶ್ರೀಕೇಸಿಗ × × × ತಲೆನೆಱಿಯಲ ಕಟ್ಟಂ ಕಟ್ಟುವುದರ್ಕ್ಕೆ ಕೊಟ್ಟ ಸ್ತಿತಿಕ್ರಮವೆನ್ತುವೆನ್ದೊಡೆ (ಎಳ. VI (R), ಶ್ರೀರಂಗ. ೧೩-೦೨ ; ಸು. 904). 'ಪೆರ್ಬಾಟ್' ಪರಾ. [?]

ಪೆರ್ಬಾರವ 'ಪೆರ್ವಾರ್ವ' ನೋ.

ಪೆರ್ಬಾರ್ವ 'ಪೆರ್ವಾರ್ವ' ನೋ.

ಪೆರ್ಬಾಲ (ನಾ). ಉದ್ದವಾದ ಬಾಲ ; ನಿಡಿದಾದ ಬಾಲ : ಪೆರ್ಚಿದ ಕೊರಲ್ ಪೆರ್ಬಾಲವುದ್ದಂಡವಕ್ರರದಂ ಮಿಂಚುವ ಮೆಯ್ . . . ಚಿಲ್ವಾಗೆ ತತ್ಕಾನನಾಂತರದೊಳ್ ಪೆರ್ಬುಲಿಯಿರ್ದುದು (ಸಳಪಂ. ೭೬). [ಪೆರ್ (<ಪಿರಿದು$_1$) + ಬಾಲ$_1$]

ಪೆರ್ಬಾವು 'ಪೆರ್ವಾವು' ನೋ.

ಪೆರ್ಬಾವುಗ (ನಾ). ದೊಡ್ಡ ಗಂಡುಬೆಕ್ಕು : ಎಲೆ ಮಾರ್ಜಾಲ ನಿನ್ನ ವಕ್ಕಾಲಣ ಬೇಂಟೆಗಾಗಿ ನಮ್ಮನೆಯೊಳೀಗ ಪೊಂದಿ ಪೆರ್ಬಾವುಗನು ಪುದುಗಿ ಕುಳಿತಿದೆ (ಪಪಮೋ. ೦೭-೨೩). [ಪೆರ್ (< ಪಿರಿದು$_1$) + ಬಾವುಗ]

ಪೆರ್ಬಾಳ್ 'ಪೆರ್ಬಾಟ್' ನೋ.

ಪೆರ್ಬಾಳು$_1$ 'ಪೆರ್ವಾಳ್' ನೋ.

ಪೆರ್ಬಾಳು$_2$ 'ಪೆರ್ಬಾಟ್' ನೋ.

ಪೆರ್ಬಾಟ್, ಪೆರ್ಬಾಳ್, ಪೆರ್ಬಾಳು$_2$, ಹೆಬ್ಬಾಳು$_2$ (ನಾ). ಒಂದು ಸ್ಥಳದ ಹೆಸರು : ಪೆರ್ಬ್ಬಾಟ ಉತ್ತಮಗಾಮುಣ್ಡರುಂ ಕುನ್ದ ಗಾಮುಣ್ಡರುಂ (ಎಳ. IV, ಶ್ರೀರಂಗ. ೦೬೦-೨೦; ಸು. 900) ; ಪೆರ್ಬ್ಬಾಟ ನಾಳುತ್ತಮಿಟ್ಟು (ಎಇ. IV, ೩೩೩-೨೦ ; 975). **ಪೆರ್ಬಾಳ್** : ಪೆರ್ಬ್ಬಾಳ

ಶ್ರೀಸ್ವಯಂಭು ದಕ್ಷಿಣ ಸೋಮನಾಥದೇವರ ಮಠದಾಚಾರ್ಯ್ಯರ್ (ಸೌಇ. XI-ii, ೦೩೯-೩೦ ; 1005). **ಪೆರ್ಬಾಳ್ಳು₂ :** ಶ್ರೀಮತ್ಕನ್ನಯ್ಯ ಚರಿತ್ರ ಪಳ್ಳಿಯುಮಂ ಪೆರ್ಬಾಳುಮಂ ಬಿದಿರುಪಳ್ಳಿಯು ಧುರದೊಳೆ ಕೊಣ್ಡು (ಎಕ. XI, ಸಪ್ರಮ. ೯೯-೯೦ ; 947). **ಹೆಬ್ಬಾಳ್ಳು₂ :** ಶಿವಲಿಂಗದೇವರ್ಗ್ಗೆ ಆ ನಾಡ ಬಳಿಯ ಕಂಪಣಂ ಹೆಬ್ಬಾಳು ಹಂನೆರಡಱೊಳಗಣ ನಾಗವಾಡಮಂ ಸರ್ಬ್ಬನಮಶ್ಯಂ ಮಾಡಿ (ಕೊಲ್ಲಾಶಾ. ೬-೩೬ ; 1147).

[ಪೆರ್ (< ಪಿರಿದು₁) + ಪಾಟು್]

ಪೆರ್ಬಿಟ್ಟ (ನಾ). ಪ್ರತಿಫಲವಿಲ್ಲದೆ ಮಾಡುವ ಅಧಿಕವಾದ ಕಾಯಕ : ಓರಂತೀ ದೇಹಮಂ ರಕ್ಷಿಸುವತಿಭರದಿಂದುಳ್ತು ತೆತ್ತುಂ ಸತೇಜಕ್ಕಾರೇನಂ ಪೇಳ್ಪೊಡಂ ಕೈಮುಗಿದು ಸುಗಿದು ಪೆರ್ಬಿಟ್ಟಿಯಂ ಪೊತ್ತು (ರಕ್ಷಾಶ. ೦೬).

[ಪೆರ್ (< ಪಿರಿದು₁)+ಬಿಟ್ಟ]

ಪೆರ್ಬಿಡಿ ' ಪೆರ್ವಿಡಿ ' ನೋ.

ಪೆರ್ಬಿದಿರ್ ' ಪೆರ್ವಿದಿರ್ ' ನೋ.

ಪೆರ್ಬಿಲ (ನಾ). ದೊಡ್ಡ ಕಂಡಿ,—ರಂಧ್ರ : "ಪೆರ್ಬಿಲಂ ಬಿಲಸಗ್ಗಮುಂ ಬಿಲದ್ವಾರಮೆಂದು" (ಕಬ್ಬಿಕ್ಕ. ೯೭) ; ಬಿಲದ್ವಾರ . . . ಪೆರ್ಬಿಲ (ಶಪುರ. ೨೯೬ ಪ್ರಯೋ). [ಪೆರ್ (<ಪಿರಿದು₁) + ಬಿಲ]

ಪೆರ್ಬಿಸಿಲ್ ' ಪೆರ್ವಿಸಿಲ್ ' ನೋ.

ಪೆರ್ಬಿಳ್ಗೆ ? (ನಾ). (?) : ಲೋಕದಲ್ಲಿ ಪಾರ್ವರಾದವರೊರ್ಮೆಯುಂ ಮಣ್ಣೀರು ಪೆರ್ಬಿಳ್ಗೆ ಬಿಸಮಾದಿಯಾದ ನಿಷಿದ್ಧವಸ್ತುಗಳನೊಂದಿನಿಸುಂ ಕಾಮಿಸಿ ಭಕ್ಷಣೆಗೆಯ್ಯಲಾಗದು (ಭಾರಶಾಂ. ೨೬೪). [?]

ಪೆರ್ಬುಡಿಕೆ (ನಾ). ದೊಡ್ಡ ಕುಕ್ಕೆ : ಪೆರ್ಬು[ಪಾಶಾಂ. ಬರ್]ಡಿಕೆಯೊಳಿರ್ಪುಗುಂದಿ ನಸುಗೆತ್ತುವ ಮಿನ್ಗಳ್ (ಸೂಕ್ತಿಸು. ೩-೦೬೭).

[ಪೆರ್ (<ಪಿರಿದು₁) + ಪುಡಿಕೆ]

ಪೆರ್ಬುಣ್ (ನಾ). ದೊಡ್ಡ ಗಾಯ : ತಱಿದುಕೊಳೆ ದೋಣಿಪೋಗಿರ್ದ ಪೆರ್ಬುಣ್ಗಳಿಂ (ಕಾದಂಕಾ. ೨೬೦) ; ಪಡಿಕೆಯಂತೆ ನಾಱುತಿರ್ಪ ಪೆರ್ಬುಣ್ಗಳಿಂ . . . ಅದ್ಭುತಮಾಗೆ (ರರ್ಮಾಸ್ಕು. ೯-೭೩). [ಪೆರ್ (<ಪಿರಿದು₁) + ಪುಣ್]

ಪೆರ್ಬುತ್ತು ' ಪೆರ್ವುತ್ತು ' ನೋ.

ಪೆರ್ಬುಲಿ ' ಪೆರ್ವುಲಿ ' ನೋ.

ಪೆರ್ಬುಸಿ, ಹೆಬ್ಬುಸಿ (ನಾ). ದೊಡ್ಡ ಸುಳ್ಳು : ಎನಗಿದಯುಕ್ತಮೆಂದಿರದೆ ಪೆರ್ಬುಸಿಯೊಳ್ಬುದಿದಿರ್ದ ಧರ್ಮನಂದನನನೆ ಧರ್ಮನಂದನನೆನಲ್ (ಗದಾಯು. ೩-೩೨) ; ಮಾತಾಡದಿರೊಂದುಮಂ ಮಱೆದು ಪೆರ್ಬುಸಿಯಂ (ರರ್ಮಾಸ್ಕು. ೩-೭೩) ; ಪುಸಿಕನಿವಂ . . . ಪೆರ್ಬುಸಿಯನೆ ಪೇಳ್ದವಂ (ಪ್ರಸಂ. ೩೯-೦೨೨). **ಹೆಬ್ಬುಸಿ :** ಹೆಬ್ಬುಸಿಯ ಕೇಳಲ್ಬಾರದು (ಪೇಶ್ಯಾಪು. ೯-೭-೩೯) ; ಅಸಮ ಸಸಿರಾಯರೊಳು ಹೆಬ್ಬುಸಿಯ ಬಿರದಂಗಳೇಕೆ (ಕೊಲ್ಲಾಶ. ೦೯೯). [ಪೆರ್ (< ಪಿರಿದು₁) + ಪುಸಿ₂]

ಪೆರ್ಬೆಟ್ಟ, ಪೆರ್ಬೆಟ್ಟು, ಪೆರ್ವೆಟ್ಟು, ಹೆಬ್ಬೆಟ್ಟ, ಹೆಬ್ಬೆಟ್ಟು₁ (ನಾ). ೧. ದೊಡ್ಡ ಬೆಟ್ಟ ; ಮಹಾಪರ್ವತ : ಲುಬ್ಧಕರು ಕೊಟ್ಟರೊಂದೊಂದು ಕೂರ್ಗಣೆಗಳು ಬಿದ್ದು ಪೆರ್ಬೆಟ್ಟಕೆ ಮಿಗಿಲಾದುದೆನಿಸಿ (ಪೋಷಕ. ೦೯-೩೯) ; ಭರತಂ ಮಹೀತಳಕೆ ಬಿದ್ದು ಮೂರ್ಛೆಯೊಳಿರಲ್ಕೆ ಏಗಡಹನುಮಂ ಕಂಡು ಕಿತ್ತು ಪೆರ್ಬೆಟ್ಟಮಂ ನೆಗಪಿ ತಂದರ್ಭಕನ ಮೇಲಿಡಲ್ಕೆ (ಕೈಮಿಣಾ. ೨೦-೨೦). ೨. (ಆಲಂ) ಅತ್ಯಂತ ಭಾರವಾದುದು : ಮುಪ್ಪಡಸಿರ್ದಾತಗೆ ಪೆಣ್ಣು ಬೆಟ್ಟ ರುಣವೇ ಪೆರ್ಬೆಟ್ಟ ಮೂಲೋಕದೊಳ್ (ಸೋಮೇಶ. ೯೩). **ಪೆರ್ಬೆಟ್ಟು :** ೧. ಸುವೇಗನ ಬಲೌಘಕಿದಿರಿಟ್ಟು ನಿಂದಂ ಭೀಮನುತ್ಸಾಹದಿಂದೆ ಪೆರ್ಬೆಟ್ಟೊತ್ತಿ ನೂಕುವ ಮಹಾವಾತಘಾತಮಂ ತಡೆದೊಲೆಯದಿಪ್ಪಂತಿರೆ (ಕೈಮಿಣಾ. ೯-೨೯) ; ಪೇರಡವಿ ಪೆರ್ಬೆಟ್ಟುಗಳನಂತು ನೂರಾರು ಪೇರೂರ್ಗಳಂ ದಾಂಟಿ ಪೂರ್ವದಿಜ್ಮುಖನಾಗಿ ನಡೆದನಾ ಶತ್ರುಘ್ನನು (ಶೇಷರಾ. ೬-೩೦). **ಪೆರ್ವೆಟ್ಟು :** ೧. ಕಲ್ಲುಗೆಗೊಣ್ಡ ಪೆರ್ವೆಟ್ಟು ಧರಾತಳಕೆ ಸರಿಯಾದವು (ಎಕ. II, ೦೯೩-೦೦ ; 1131). **ಹೆಬ್ಬೆಟ್ಟ :** ೧. ಕಣ್ಣೆಂಬ ಕೂರ್ಗಣೆಯನು ಉಬ್ಬರದ ಸಾಹಸದೊಳಳವಡಿಸಿಕೊಂಡು ಬಿಡದಬ್ಬರಿಸಿ ಸೋವಿ ತಂದವರ ಬಲ್ಮೊಲೆಯೆಂಬ ಹೆಬ್ಬೆಟ್ಟದೆಡೆಯಿಱುಬಿನೊಳ್ಕೆಡಪುಶಿಹನಲ್ಲಿ ವಿಟರಕ್ಷಿಮೃಗ ಕುಲವನು (ಕೈಮಿಣಾ. ೬-೦೭) ; ಗಗನದೊಳ್ತನ್ನ ರಥಮಂ ಬಿಟ್ಟು ಹೆಬ್ಬೆಟ್ಟದಂತಿವನ ಮಸ್ತಕದ ಮೇಲೆ ಬೀಳಲ್ಕೆ (ಕೈಮಿಣಾ. ೨೩-೨೦). **ಹೆಬ್ಬೆಟ್ಟು₁ :** ೧. ಅಶ್ವಹೇಷಾರ್ಭಟಮುಮಿಭಘಟಾಘೀಂಕೃತಿಯುಮೇಕಮಾಗಿ ಉಬ್ಬೆದ್ದು ಹಬ್ಬುತ್ತೆ ಭೋರನೆಣ್ಡೆಸೆಯೊಳಂ ಹೆಬ್ಬೆಟ್ಟುಗಳ ಗುಹೆಗಳೊಳಗೆ ಮೊಳಗಿದುವು (ಶೇಷರಾ. ೦೯-೯೩). [ಪೆರ್ (< ಪಿರಿದು₁) + ಬೆಟ್ಟ]

ಪೆರ್ಬೆಟ್ಟು ' ಪೆರ್ಬೆಟ್ಟ ' ನೋ.

ಪೆರ್ಬೆಡೆ ' ಪೆರ್ವೆಡೆ ' ನೋ.

ಪೆರ್ಬೆಣ ' ಪೆರ್ವೆಣ ' ನೋ.

ಪೆರ್ಬೆಣ್ಣಯ (ನಾ). ಒಬ್ಬಾತನ ಹೆಸರು : ಶ್ರೀಮತ್ಪಡೆಯಂಕಕಾಱನೊಟಂಬಾಧಿರಾಜಂ ಪೆರ್ಬೆಣ್ಣಯಂ (ಎಕ. X, ಮುಳಪಾ. ೨೦೬-೦೦ ; 1000). [? + ಅಯ₁ (< ಅಯ₂₁)]

ಪೆರ್ಬೆಲೆ ' ಪೆರ್ವೆಲೆ ' ನೋ.

ಪೆರ್ಬೆಳಸು 'ಪೆರ್ವೆಳಸು' ನೋ.

ಪೆರ್ಬೊಗೆ, ಹೆಬ್ಬೊಗೆ (ನಾ). ದಟ್ಟವಾದ ಹೊಗೆ,-ಧೂಮ : ಏಳು ನೂಱು ಭೂತಂಗಳುದುಭಟನ ಸುಡುವ ಪೆರ್ಬೊಗೆ ತಾಗಲೊಡನಾ ಮೃಡನ ಕೈಲಾಸಕ್ಕೆ ಪೋದವು (ಬಸಪು. ೨೭-೦೯). **ಹೆಬ್ಬೊಗೆ :** ಹೆಬ್ಬೊಗೆಯನಡಗಿಸುತ ಪಿರಿಯುರಿ ಹಬ್ಬುತ . . . ಇರಲು (ಬಸಪು. ೯೯-೨೦).

[ಪೆರ್ (< ಪಿರಿದು₁) + ಪೊಗೆ₂]

ಪೆರ್ಬೊಟ್ಟು, ಪೆಬ್ಬೆಟ್ಟು, ಹೆಬ್ಬೆಟ್ಟು₂, ಹೆಬ್ಬೊಟ್ಟು (ನಾ). ಕೈ ಮತ್ತು ಕಾಲಂಗಳಲ್ಲಿರುವ ದಪ್ಪನಾದ ಮೊದಲನೆಯ ಬೆಟ್ಟು ; ಅಂಗುಷ್ಠ ; ಹೆಬ್ಬೆರಳು : ನೆಟ್ಟನೆ ಪೆರ್ಬೊಟ್ಟಿಂ ಮಣಿಕಟ್ಟಿಂಗಿಳಿತಂದ ಸಂದಿಯಲ್ಲಿಯ ಸೆರೆಯಿಂ ಮುಟ್ಟಿದೊಡೆ ಮಿಡಿಯದಿರ್ದೊಡೆ ನಿಟ್ಟಯ್ಸುಗೆ ಅಯ್ದು ತಿಂಗಳಾಯುಕ್ರಮಮಂ(ಪಸಾರ. ೩೩೬); ಸುಟ್ಟುಂಬೆಯುಂ ಕನಿಷ್ಠಾಂಗುಲಕೆ ನಾಲ್ಕು ಪೆರ್ಬೊಟ್ಟಿಗೈದು (ಸುಂಗರಾ. ೦೦೩-೭). **ಪೆಬ್ಬೆಟ್ಟು :** ಸಣ್ಣ ಬೆರಳ ಶಕ್ತಿಯಿಂತು ಪೆಬ್ಬೆಟ್ಟನ ಬಿಣ್ಣೆತೆಂತುಟೊ ಮುಷ್ಟಿಯೆಂತೊ (ಭರತ. ೯೯-೦೩೬). **ಹೆಬ್ಬೆಟ್ಟು₂ :** ತರ್ಜನಿ, ಪ್ರದೇಶಿನಿ—ಈ ೨ ಹೆಬ್ಬೆಟ್ಟಿನ ಒತ್ತಿನ ಬೆರಲ ಪೆಸರು (ಪಾಸರಾ. ೦೨೦); ಈ ಭಾಷೆ ಹುಸಿಯಾಗೆ ಹೆಬ್ಬೆಟ್ಟು ಮಿರ್ಕು ಬೇವುದು (ಸಿದ್ಧರಾ. ೭-೦೩); ಹೆಬ್ಬೆಟ್ಟುಗಳು, ಪವತಳಗಳು . . . ಶಿರಸ್ಸು ಮುಂತಾದ ಸ್ಥಾನಗಳೇ ಸ್ತ್ರೀಯರುಗಳಿಗೆ ಕಳಾಸ್ಥಾನಗಳೆನಿಸಿಕೊಂಬವು (ಸಕವೈ. ೬೦) ; ಕರದ ಹೆಬ್ಬೆಟ್ಟ ಬಾಯೊಳಗಿಟ್ಟ ವಟಪತ್ರಶಯನನಂತೊಪ್ಪಿದರ್ ಸುಕುಮಾರಕರ್ (ಭರಶ. ೨-೩೦); ಹಿಡಿ ಹಿಡಿದರೆ ಹೆಬ್ಬೆಟ್ಟು ಹೊರಗೆ (ಗಾಪ). **ಹೆಬ್ಬೊಟ್ಟು :** ಇಂಡಿಯನರು ನಡೆಯುವಾಗ ಹೆಬ್ಬೊಟ್ಟು ಮೇಲಕ್ಕೆ ಎತ್ತುವುದಿಲ್ಲ (ಮುಂಬಿಯಿ. ೩-೯೯).

ಹೆಬ್ಬೆಟ್ಟಯ್ಯ=ಸಹಿಗೆ ಬದಲು ಎಡಗೈ ಹೆಬ್ಬೆಟ್ಟನ್ನು ಒತ್ತುವವನು : ತನ್ನಂತೆ ಮಗ ಹೆಬ್ಬೆಟ್ಟಯ್ಯನಾಗದಿರಲಿ ಎಂದೆ ಮಗನನ್ನು ಚಿನ್ನಾಗಿ ಓದಿಸಿದನು (ರೂಢಿ). ಹೆಬ್ಬೆಟ್ಟಿನವರು = ಸಹಿಗೆ ಬದಲು ಎಡಗೈ ಹೆಬ್ಬೆಟ್ಟನ್ನು ಒತ್ತುವವರು : ಆ ಹಳ್ಳಿಯಲ್ಲಿದ್ದ ಮುಕ್ಕಾಲು ಭಾಗ ಜನರೆಲ್ಲ ಹೆಬ್ಬೆಟ್ಟಿನವರೇ (ರೂಢಿ). [ಪೆರ್ (< ಪಿರಿದು₁) + ಬೊಟ್ಟು₁]

ಪೆರ್ಬೊಡೆಯ 'ಪೆರ್ವೊಡೆಯ' ನೋ.

ಪೆರ್ಬೊನಲ್ 'ಪೆರ್ವೊನಲ್' ನೋ.

ಪೆರ್ಬೊನಲು 'ಪೆರ್ವೊನಲ್' ನೋ.

ಪೆರ್ಬೋಲ (ನಾ). ವಿಶಾಲವಾದ ಜಮೀನು ; ವಿಸ್ತಾರವಾದ ಭೂಮಿ : ಕಣ್ಗ ಸೊಗಸಾದುದೀದಮರರಟ್ಟೆಯ ಬೆಳಸು ತ್ರಿವುರದ ಮಹಾಬುಯಲ ಪೆರ್ಬೋಲದೊಳು (ಕಂಪು. ೮೨-೩೮). [ಪೆರ್ (< ಪಿರಿದು$_1$) + ಪೊಲ]

ಪೆರ್ಬೋಲಸು (ನಾ). ಅಧಿಕವಾದ ಹೇಸಿಗೆ.—ಹೊಲಸು : ಕುಮುದ ಶೀಧರ ಜಲಕೇಳಿಲೀಲೆಯುಲಿ ತರುಣಿಸಹಿತಲಿರೆ ವರಮುನಿ ಶಪಿಸಲು ಶರೀರ ಪೆರ್ಬೋಲಸಾದಂತೆ (ಕೃಷ್ಣ. ೩-೨೯). [ಪೆರ್ (<ಪಿರಿದು$_1$) + ಪೊಲಸು]

ಪೆರ್ಬೋಳಲು ' ಪೆರ್ವೊಲಲ್ ' ನೋ.

ಪೆರ್ಬೋಳೆ ' ಪೆರ್ವೊಳೆ ' ನೋ.

ಪೆರ್ಭಯ (ನಾ). ಅಧಿಕವಾದ ಹೆದರಿಕೆ. – ಅಂಜಿಕೆ : ನನ್ನೆಚ್ಚರಿಸಿತು ಒಂದರೆಡಾವ ದಿಗ್ಗಾಲದ ಹಮ್ಮೈಸಿಕೆಯೊಳಗೆ ಪೆರ್ಭಯದಂಬಾಸಂಶಯ ಯೊಳಗೆ (ಗಕಚಿ. ೬೬-೪). [ಪೆರ್ (< ಪಿರಿದು$_1$) + ಭಯ]

ಪೆರ್ಭಾಗ್ಯ (ನಾ). ಅತಿಶಯವಾದ ನಿಧಿ.–ಸಂಪತ್ತು : ಗರ್ಭದೊಳಿದ್ದುದು ಮೊದಲಾಗಿ ಪಾವೆಮಗರ್ಭನಾಗುವನೆಂದು ಪೆರ್ಭಾಗ್ಯದಂತೆ ಪಾರ್ಶ್ವದೆ ನೀವೆಮ್ಮ ನರ್ಭಾಗ್ಯ ಮಾಡಿಹೋಗುವಿರಿ (ಜಪ. ೪೫-೦೦೭). [ಪೆರ್ (< ಪಿರಿದು$_1$) + ಭಾಗ್ಯ]

ಪೆರ್ಭುಜ (ನಾ). ವಿಶಾಲವಾದ ಭುಜ.—ಹೆಗಲು : ಮಂಡೆಯನೊತ್ತಿ ಪೆರ್ಭುಜಗಳನೊರಸಿ (ಕೋಚಕ. ೦೨-೧೦). [ಪೆರ್ (<ಪಿರಿದು$_1$) + ಭುಜ]

ಪೆರ್ಭೂತ (ನಾ). ದೊಡ್ಡ ದೆವ್ವ ; ಪೆಡಂಭೂತ : ಹಸುರ್ಬಯಲು, ಪೆರ್ಭೂತ... ಎಂಬಂತಹ ಪ್ರಯೋಗಗಳನ್ನು ಕುರಿತು ಶುದ್ಧ ವೈಯಾಕರಣಿಗಳು, ಭಾಷೆಯು ಮಡಿವಂತರು ಏನೆಂದುಕೊಳ್ಳುವರೋ! (ಪಾಚಕ. ೦೮೨); ತನ್ನ ಮನಸ್ಸು ಕಲ್ಪಿಸಿದ್ದ ಭೀತಿಯೊಂದು ಪೆರ್ಭೂತವಂತೆ ಅವಳ ಮನಸ್ಸನ್ನೆಲ್ಲಿ ತಕ್ಕಲೆ ಮಾಡಿದ್ದಿತು (ಪಾಂಚಾ. ೬೨). [ಪೆರ್ (<ಪಿರಿದು$_1$) + ಭೂತ]

ಪೆರ್ಮ$_1$, ಪೆಮ್ಮ$_1$, ಹೆಮ್ಮ (ನಾ). ೧. ಮಹಿಮೆಯುಳ್ಳವನು; ಹಿರಿಯ: ಪೆರ್ಮನಿನ್ನ ದರ್ಶನಮಾಯ್ತು; ಜಯಮಾಯ್ತು ನಿನ್ನೆನಗೆ (ಆಪ್ತಾ. ೨-೨೦). ೨. ಒಬ್ಬಾತನ ಹೆಸರು : ಸ್ವಸ್ತಿಶ್ರೀ ಕಡ್ಡಾಣೆ ಪೆರ್ಮ್ಮಾನ್ ಸಾಮ್ರಾಜ್ಯಂಗೆಯ (ಎಕ. X(೩), ಕಂಶಾಪು. ೧೬೨-೦ ; ಪು. 750). ಪೆಮ್ಮ$_1$: ೩. ಹೆಚ್ಚು ; ಅಧಿಕ : "ಅಧಿಕದೊಳ್ ಪೆಮ್ಮವನಿಸುಂ" (ಗಪ್ರ. ೦೫೬). ಹೆಮ್ಮ : ೨. ಅವಂ ವಿಖ್ಯಾತಧರ್ಮ್ಮಂ ಪ್ರಭುಪ್ರಧಾನಂ ಹೆಮ್ಮಂ (ಕಾಸಾಶಾ. ೫೬-೪೯ ; ೧); ಕಾಣೂರ್ಗ್ಗಣ ದಿವಾಸೋ ನಿರ್ಮ್ಮಿತಂ ಹೆಮ್ಮ ಭೂಧೃತಃ (ಎಕ. VII, ೨೪೬ಂ. ೬೨-೬೩ ; 1118 ?). ೪. ದೊಡ್ಡದು (?): 'ಹೆಮ್ಮಧೇನು' ಪರಾ. [ಪೆರ್ + –ಅ$_7$]

ಪೆರ್ಮ್$_2$ (ನಾ). ಧನ ; ಸಂಪತ್ತು : ಪೆರ್ಮ್ಮಂಬಡೆದುಂ ಮಡಗಿದೊಡೊರ್ಮ್ಮೆಯೆ ತಾಂ ಕಿಡುಗುಮೆಂದು ರೇವಗವುಂಡಂ ಧರ್ಮ್ಮಕ್ಕೆ ತವಿಸಿ ಧನಮಂ ನಿರ್ಮ್ಮಿಸಿದು ಶಿವಗೃಹಂಗಳು ಮುದದಿಂದಂ (ಶಾಇಪ. IX—I, ೨೧೯-೬೦ ; 1147). [?]

ಪೆರ್ಮಂದೆ (ನಾ). ದೊಡ್ಡ ಹಿಂಡು.—ಗುಂಪು : ಹೊರಸುಗಳ ಸಮುದಯಂ ; ಪುರುಲಿಗಳ ಪೆರ್ಮಂದೆ (ಕಾಕ್ರಾಂಗ. ೫೫-೦೧೭೬). [ಪೆರ್ (<ಪಿರಿದು$_1$) + ಮಂದೆ]

ಪೆರ್ಮಕ್ಕಿ (ನಾ). ಒಂದು ಊರಿನ ಹೆಸರು (?) : ಆ ಯುದ್ಧದುಳ್ ಉಱು ತೀರಿಚ್ಚಿದವಂಬುವಾಳ್ವಲಗೆಯುಳ್ಕೊಟ್ಟುಬ್ಬುವಲ್ಲನ್ನಿ ಪಿನ್ ಮಱುಮೋಗೀಶ್ವರನುಳ್ಕೆ ಕದಿ ಪೞೆದ ನಾಗವ್ಮನೀ ಶೂದ್ರನ್ ಪೆರ್ಮ್ಮಕ್ಕಿ ಮೇಗಿರೆ ಪತ್ತೊನ್ದಿದೊಡ ಕಾದು (ಶಾಇಪ. IX—I, ೨೮೨-೫; ೬೬೫ ೬೬). [?]

ಪೆರ್ಮಗ, ಹೆಮ್ಮಗ, ಹೆರ್ಮಗ (ನಾ). ಹಿರಿಯ ಮಗ; ದೊಡ್ಡ ಮಗ : ಗಂಗೆಯ ಪೆರ್ಮಗಂಗೆ ಭೂತಸಂಭೂತಂಗೆ ಕರ್ಣಂಗಸಾಧ್ಯನೊಳಾ ಗಾಂಡೀವಿಯೊಳ್ ಕಱುತ್ತಿಜ್ಜಿವರಾರ್ (ಕಂಪಾ. ೧೪-೯); ಪೆರ್ಮಗನಂ ನೋಡುವೆನೆಂದು ಪೋಗಿ ತಲೆ ಬೆಜ್ಜಾಗಟ್ಟಿ ಬೇಱೊಗೆ ಧಾತ್ರಿಗೆ ಬಿಟ್ಟುರ್ದೊಡೆ ಕಂಡು (ಕಂಶಾಪು. ೯-೪೩); ಅಗ್ನಿಭೂತಿಗಂ ಗೌತಮಿಗಂ ಅಗ್ನಿಸಖನೆಂಬ ಪೆರ್ಮಗನಾಗಿ (ಪರ್ಮಪು. ೦೦-೩೦ ೪). ಹೆಮ್ಮಗ : ತ್ರಿಶಂಕುವಸುಧಾಧಿನಾಯಕನ ಹೆಮ್ಮಗ ಹರಿಶ್ಚಂದ್ರನು ಮಾಱುಗೊಂಡೋಲೈಸಿಕೊಂಬರಿಲ್ಲಾ ಎನುತ್ತ ಬಗೆಬಗೆದು (ಪಚಾ. ೦೦-೦೪) ; ಬೊಮ್ಮರಕ್ಕಸ ಗೀವರೇ ಈ ಹೆಮ್ಮಗನ ನೀ ಕೊಟ್ಟಿಯಾದರೆ ನಮ್ಮ ಕಾವ ಮುಕುಂದ ಬಲ್ಲನು ನಿಮ್ಮ ಮಾತುಗಳ (ಸಂಕಪ. ೫೭-೧೬); ಬ್ರಹ್ಮಸ್ವ ದೇವಸ್ವ ಮಾನಿಸ್ವ ಹೊಕ್ಕಿಹರೆ ಹೆಮ್ಮಗನು ಸಾವ (ಪರ್ಮಾಶ್ವ. ೦೦೦೭). ಹೆರ್ಮಗ : ಪೆರ್ಮಾಡಿ ರಾಯನಣುಗಿನ ಹೆರ್ಮಗನೆನಿವು ಯುಗೀನ ನೃಪಸರ್ವಜ್ಞಂ (ಕೂಶಾಕಾ. ೯-೦೨; 1147). [ಪೆರ್ (< ಪಿರಿದು$_1$) + ಮಗ]

ಪೆರ್ಮಗಳ್ (ನಾ). ಹೆಣ್ಣು ಮಗಳು : ಒರ್ವಳೆ ಪೆರ್ಮಗಳ್ ಬಗೆ ವೊಡಿನ್ನೆವುಗೀಕೆಯೆ ಗಂಡುಗೂಸು (ಶಾಪ್ರ. ೦೬೭). [P ಇದು ' ಪೆಣ್ಮಗಳ್ ' ಎಂಬುದರ ಅಪಲಿಖಿತವಿರಬಹುದು]

ಪೆರ್ಮಗು (ನಾ). ಮೊದಲನೆಯ ಮಗು; ಹಿರಿಯ ಮಗು : ಧರ್ಮಜನೆಂಬ ಪೆಸರನು ಪೆರ್ಮಗುವಿಗೆ ಕೊಟ್ಟು ಪಾಂಡುನೃಪತಿಯತಿನಿರ್ಮಲಚಿತ್ರನಾಗಿರಲು (ಕೀಪರ್ವ. ೬-೩೬).

ಪೆರ್ಮಕ್ಕಳ್. ಪೆರ್ಮಕ್ಕಳು = ೧. ಊರಿನ ಪಂಚರು; ಮಹಾಜನ : ಪೆರ್ಮ್ಮಕ್ಕಳ ಸನ್ನಾನ ಪಾರ್ವನ್ನಿನಿಯೂರಾ ಮಹಾಜನಕ್ಕೆ ಕೊಟ್ಟುದು ಸಾಲೆ ಆಚನ್ದ್ರಾರ್ಕಂ (ಎಕ. VII. ೩೫೦. ೪೭-೫೬; ಪು. ೩೦೧). ೨. ಹಿರಿಯ ಮಕ್ಕಳು : ಸಾವಿರಸಂತಾನವಡೆದಲ್ಲಿ ಮಮಮಕಾರ ತೀವಿಹುದಬಲನ ಮೇಲೆ ಕೋವಿದೆ ಪೆರ್ಮಕ್ಕಳ ಬಿಟ್ಟು ಸಲೆ ವಾಗ್ದೇವಿಯೆ ನ್ನೊಳಗಿರು ತಾಯೆ (ಕೋಚಕ. ೦-೦೦). [ಪೆರ್ (<ಪಿರಿದು$_1$)+ಮಗು]

ಪೆರ್ಮಚ್ಚರ (ನಾ). ೧. ಅಧಿಕವಾದ ಅಸೂಯೆ; ಹೆಚ್ಚಾದ ದ್ವೇಷ. ೨. ಅತ್ಯಂತ ದ್ವೇಷವುಳ್ಳವನು; ಅಸೂಯಾಪರ: ಪೆರ್ಮಚ್ಚರನಿನ್ನಲೆನ್ನ ಭುಜದಂಡವೆ ಸಾಲದೆ (ಕಾಪ್ರಾಕ. ೧೧೧). [ಪೆರ್ (<ಪಿರಿದು$_1$) + ಮಚ್ಚರ]

ಪೆರ್ಮಟ್ಟಿ, ಪೆಮ್ಮಟ್ಟಿ (ನಾ). ಒಂದು ಬಗೆಯ ವಾದ್ಯ.

ಪೆರ್ಮಟ್ಟಿತೂರ್ಯನಿರ್ಘೋಷಣ=(ಕದಂಬ ವಂಶದ ಅರಸರಿಗೆ ಸಲ್ಲುತ್ತಿದ್ದ) ಒಂದು ಬಿರುದು : ಕಾದವ್ಯಚಕ್ರಿ ಮಯೂರವರ್ಮ್ಮ ಮಹಾ ಮಹೀಪಾಳಕುಳಭೂಷಣಂ ಪೆರ್ಮ್ಮಟ್ಟಿತೂರ್ಯ್ಯನಿರ್ಘೋಷಣಂ (ಎಇ. XVI. ೩೭-೭ : 1052) ; ಪೆರ್ಮ್ಮಟ್ಟಿತೂರ್ಯ್ಯನಿರ್ಘೋಷಣಂ ಚತುರಾ ಶೀತಿನಗರಾಧಿಷ್ಠಿತಲಲಾಟ ಲೋಚನಚತುರ್ಬ್ಬಾದಂ (ಎಕ. XI. ೧೧೬. ೩೨-೩೬ ; 1 1). ಪೆರ್ಮ್ಮಟ್ಟಿತೂರ್ಯನಿರ್ಘೋಷಣ = ಪೆರ್ಮಟ್ಟಿತೂರ್ಯ್ಯನಿರ್ಘೋಷಣ : ಪೆರ್ಮ್ಮಟ್ಟಿತೂರ್ಯ್ಯನಿರ್ಘೋಷಣಂ ಶಾಖಾಚಲರೇಂದ್ರಧ್ವಜ ವಿರಾಜಮಾನವನೋತ್ತುಂಗ ಸಿಂಹಲಾಂಚ್ಛನ ದತ್ತಾತ್ರಿಕಾಂಚನ ವಾಕ್ಕೊಳ್ಳರ ಗಣ್ಡಂ (ಕಪ್ರ. I. ೫೭-೬೩ ; 1055). ಪೆರ್ಮ್ಮಟ್ಟಿಪಜಿ ಘೋಷಣ = ಒಂದು ಬಿರುದು : ಪೆರ್ಮ್ಮಟ್ಟಿಪಜಿ ಘೋಷಣ (ಶಾಇಪ. ೦೧೧೬, ಶಾಚರಿ. ೨೦೯-೦೬ ; ೧೬೩) ; ಸಿಂಹಲಾಂಚನಂ ಪೆರ್ಮ್ಮಟ್ಟಿಪಜಿಘೋಷಣಂ ಚತುರಾಸೀತಿ ನಗರಾಧಿಷ್ಠಿತಂ (ಶಾಇಪ. XX. ೧೦-೭ ; 1068). [?]

ಪೆರ್ಮಡಿ 'ಪೆರ್ಮಾನಡಿ' ನೋ.

ಪೆರ್ಮಡಿಗವುಂಡ 'ಪೆರ್ಮಾನಡಿಗಾವುಂಡ' ನೋ.

ಪೆರ್ಮಡಿಗಾವುಂಡ 'ಪೆರ್ಮಾನಡಿಗಾವುಂಡ' ನೋ.

ಪೆರ್ಮಡಿಯ 'ಪೆರ್ಮಾನಡಿ' ನೋ.

ಪೆರ್ಮಡಿವಟ್ಟು (ನಾ). ಪೆರ್ಮಾನಡಿಯ ಪಟ್ಟ.– ಪದವಿ : ಶ್ರೀಮತ್ ಪೆರ್ಮಾನಡಿಗಳ್ ಜಡಲ ಎಱೆಯಂಗಗಾವುಂದನ ಮಗಂಗೆ ಪೆರ್ಮ್ಮಾಡಿ ವಟ್ಟಂಗಟ್ಟಿ (ಎಕ. I(೩), ೧೬-೩; ೮೫೦).

[ಪೆರ್ಮಡಿ (<ಪೆರ್ಮಾನಡಿ) + ಪಟ್ಟ$_{೨}$]

ಪೆರ್ಮಾಡು, ಹೆಮ್ಮಾಡು (ನಾ). ಬಹಳ ಆಳವುಳ್ಳ ಮಡ .—ಆಳವಾದ ನೀರಿನ ಭಾಗ : ತನ್ನ ತಂದೆಗೆ ನೀರ್ಗುಡಲುಮೆಂದು ಮಾಡಿದ ಶಮಂತ ಪಂಚಕಂಗಳೆಂಬಯ್ದು ಪೆರ್ಮಾಡುಗಳ ಕೆಲದೊಳೆಡೆಯಲ್ಲಿದು ಬೀಡಂ ಬಿಡಿಸಿ (ಪಂಪಭಾ. ೯ ೦೦೪ ೪); ಬಾಯ್ಬಿಟ್ಟೊಡಂ ಪೆರ್ಮಾಡು ಬಱಿದೆನಿಸಲ್ ಸೊರ್ಕಿ . . . ಮೆಱೆದುದು ಕಡುಪಿರಿ ಸ್ಫೂಲಕಾಯಂ ಲುಲಾಯಂ (ಕೃಷ್ಣ. ೫೬-೬೪); ಕ್ರೂರನಕ್ರಾಕುಲದೊಳಿರಿದಿರ್ದ ಪೆರ್ಮಾಡು ಗಭೀರ ನಿರ್ಮಲಜಲದೊಳೆಸೆವಂತೆ ದುಸದೊಳ್ಕೆಹೋರತರಭಾವಮಂ ತಳೆದು ಬಹಿರಂಗದೊಳ್ ವಿನಯವುಮುಳ್ಳಾತನಾಗಿ (ಕೃಪುಣ. ೫೬-೬೮). **ಹೆಮ್ಮಾಡು** : ಸುರೋಚನೆಯಾವುದ್ಯಾವ ನದಿಯ ಹೆಮ್ಮಾಡುವಂ ಹೊಕ್ಕಳ್ (ಚಿಯಾಕಾ. ೯-೨೯); ಹೆಮ್ಮಾಡುವೊಂದು ಮನೆ ತವುದೇಳಿಗೆಯ ತುದಿಯೊಂದು ಮನೆ ... ಕಾಣಿಸುವಡರಿದೆಂದ (ಪಣಾಗ. ೬-೩-೬). [ಪೆರ್ (<ಪಿರಿದು) + ಮಾಡು]

ಪೆರ್ಮಾನಡಿ 'ಪೆರ್ಮಾನಡಿ' ನೋ.

ಪೆರ್ಮನೆ, ಹೆಮ್ಮನೆ (ನಾ). ೧. ದೊಡ್ಡ ಮನೆ : ವಿಶಾಲವಾದ ಭವನ : ಭಟಾರರುಂ ಕಿಱುಮನೆ ಪೆರ್ಮನೆಯೆನ್ನದುಣಲ್ತಕ್ಕ ಮನೆಗಳಂ ಚರಿಗೆ ವಿಗುತ್ತಂ (ಪಣಾಗ. ೬೯-೩); ತೊವಲಿನೆಲ್ಲಿನಿವಗ್ಗದ ನೆತ್ತಱಿ ವನಂಬಿಡೆ ಸಮೆದಿರ್ದ ಪೆರ್ಮನೆ ಶರೀರವಿದಂ ಪಿಡಿವಂದಮಾವುದೋ (ಪಪಾಗಕ್ಕ. ೬-೬೬); ಮುಗುಳ್ನೆನೆಯ ಪೆರ್ಮನೆ . . . ಪೊಸವಣ್ಣ ಗೊಶ್ತಿದನೆ ಕಣ್ಗೊಸೆದಿರ್ದುದೊಂದು ವಾದುರಂ (ಶತ್ಕಾಗ. ೦೦೦). ೨. (ಅಲಂ) ದೊಡ್ಡ ವಂಶ ; ಹಿರಿಯ ಮನೆತನ : ಇನ್ ತೋಱ್ಪಿ ನಿನ್ನ ಪೆರ್ಮನೆಯ ಪುಟ್ಟನ್ (ಅಂಚಗೊ. ೨-೨೯). **ಹೆಮ್ಮನೆ** : ೧. ಹಮ್ಮಿಲಿ ಶಿರಿದೆ ಒಮ್ಮೆಟ್ಟಿದೆ ಹೆಮ್ಮನೆ ... ಹೊಸ್ತು ಹಮ್ಮಿಂಗೆಳ್ಳ ಸಂಭ್ರಮದಲ್ಲಿ (ಕಱಕಾಕು. ೦೪೭-೦) : ವಾರಿಗೆಯು ಸಖರನೊಡಗೂಡಿ ಹೆಮ್ಮನೆಯ ಪೊರಮಟ್ಟು ಸವಿಲಾಸದಿಂದೆ (ಪಪಕೂಗ. ೦೭-೦೪). [ಪೆರ್ (<ಪಿರಿದು) + ಮನೆ]

ಪೆರ್ಮರ 'ಪೆರ್ವರ' ನೋ.

ಪೆರ್ಮರುಳ್, ಪೆಮ್ಮರುಳ್ (ನಾ). ೧. ದೊಡ್ಡ ಭೂತ : ಭಯಂಕರವಾದ ಪಿಶಾಚಿ : ತೊಡಿನೊಳರ್ತಿ ಕೆಟ್ಟು ದಶಕಂಠಸನಸ್ಕಟ ಕೊಂಡ ಪೆರ್ಮರುಳ್ ಕೊಂಡುದೆ ತನ್ನುವಂ (ಪಂಪಭಾ. ೬-೪೩) ; ತಾಂಡತಾಡದ ಭೂತವಿತತಿಗಳ್ಕಲೆಗೆದಱಿಕೊಂಡು ಪೆರ್ಮರುಳಂತೆ ಬಹ ದುಷ್ಪಬುದ್ಧಿಯಂ ಕಂಡು (ಕೃಪುಣ. ೪೨-೪೬). **ಹೆಮ್ಮರುಳ್** : ೨. ಅಧಿಕವಾದ ಹುಚ್ಚು .—ಮರುಳುತನ (?) : ಪೆಮ್ಮರುಳ ಮೀಗೆ ಸೊರ್ಕಿನೆ ತಾಮ್ಮುನ್ನೆವೆ ಮುಗ್ದೆಯದಱಿ ಮೀಗುಂದಯಿಸೆ ಕೋಪಮ್ಮಿಗೆ ತನ್ನ ನೆಬಲ್ಕಂ ಸಮ್ಮನಿಸಲೆ ಕೂತುರ್ ಕಣ್ಣ ಕಾಣ್ಕೆವೊಳರೇ (ಅಣಾಪ. ೦೯-೩೦).

[ಪೆರ್ (<ಪಿರಿದು) + ಮರುಳ್]

ಪೆರ್ಮರೆ, ಹೆಮ್ಮರೆ (ನಾ). ದೊಡ್ಡ ಜಿಂಕೆ : ಪೆರ್ಮ[ಹಣಾಂ. ಹೆಮ್ಮ]ರೆಯು ಬೇಂಟೆ ವಿಹಂಗದ ಮೊತ್ತವಂತೆ . . . ಉನ್ಮೆತು ಪರ್ವಿದರಣ್ಯಮಧ್ಯದೊಳ್ (ಗಿಂಗ. ೦-೩೦) ; ಪೆರ್ಮರೆಯನಟ್ಟಿ ಕರುಳ್ಗಳ ತೀಪು ಬಾದ ಮುಂಗುಡಿಗಳ ನಾಯ್ಗಳಂ ಪಿಡಿದು ಬೇಂಟೆಯವರ್ ಕರೆದರ್ ಸ್ವವಾಲನಂ (ಪಪಂ. ೬೮) ; ಪೆರ್ಮರೆಗಳವಿತ್ತ ದಂತಿಯುಮಿತ್ತ . . . ಛೀಕರ ಶರ ಭಾಳಿಯಿತ್ತಲೆನಪಬ್ಬರದುಬ್ಬರಮಾಯ್ತರಣ್ಯದೊಳ್ (ಕೃಪ್ರ. ೫೬-೩೦). **ಹೆಮ್ಮರೆ** : ದುಜ್ಜಿಗೆಡೆದು ಕಾಡ್ಕೋಣ ಹೆಮ್ಮರೆ ಕಿಜಿಬ ಚಿತ್ರಕ ಶಿಖರಿ ಹಾಯ್ದುವ ಮುಜ್ಜಿಗಳನು ಮುಂದಿಕ್ಕಿ ವನರಿ ಕಂಡ ಬೀದಿಯರಿ (ಪಪಕಾ. ೬-೦೨-೦೩) ; ಹೆಮ್ಮರೆಯು ಕ್ಷೀರ ಬದಿರಕ್ಕೆಯೋಗರಮಾಂಟು ತನ್ನನಲ್ಲಿರಲ್ ಬಂದು (ಪಾಕೂಕ್ಷ. ೪-೪೯). [ಪೆರ್ (<ಪಿರಿದು) + ಮರ್ಕೆ]

ಪೆರ್ಮಲ (ನಾ). ಅತಿಯಾಗಿ ಭೇದಿಯಾಗುವ ಒಂದು ಬಗೆಯ ರೋಗ; ಅತಿಸಾರ : "ಪೆರ್ಮಲಂ ಗ್ರಹಣಿ" (ಪುಂಗಣಾ. ೦೨೪-೪).

[ಪೆರ್ (<ಪಿರಿದು) + ಮಲ್ಲ]

ಪೆರ್ಮಲೆ, ಹೆಮ್ಮಲೆ (ನಾ). ದೊಡ್ಡ ಬೆಟ್ಟ ; ಎತ್ತರವಾದ ಬೆಟ್ಟ : ಪೊಲೆಗಳ ಮೇಲಿರ್ದಂ ಪೆರ್ಮಲೆಗಳ ದೋಲಿರ್ದರಧಿಗಮಗಣಗಣಯುಕ್ತರ್ (ಧಪಾಗಕ್ಕ. ೬-೬೨). **ಹೆಮ್ಮಲೆ** : ತಾಯೊಂದೆಸೆ ಪುಕ್ಕಳ್ಕೊಂದೆಸೆ . . . ಆಗಿ ಬಾಯು ಬಿಡುತ ಬಲು ಭೀತಿಯೊಳಗೆ ಹೊಕ್ಕರಾಯಾಸಗೊಂಡು ಹೆಮ್ಮಲೆಯ (ಕಂಪಪ. ೧೯-೧೭). [ಪೆರ್ (<ಪಿರಿದು) + ಮಲೆ]

ಪೆರ್ಮಳೆ 'ಪೆರ್ಮಟ್ಟಿ' ನೋ.

ಪೆರ್ಮಳೆಗಱಿ[1] (ಕ್ರಿ). ದೊಡ್ಡ ಮಳೆಯನ್ನು ಸುರಿಸು.—ವರ್ಷಿಸು: ಪೆಬಲಗುಂಡುಗಳ ಎಸೆವ ಪೆರ್ಮಳೆಗಱಿಯಂತೆ ಬೊಬ್ಬಿಱಿದಾಗಳಸಮಾಸಾಸಗಳೇಱಿದರು (ಕಂಪಪ. ೦೯-೧೪). [ಪೆರ್ಮಳೆ (<ಪೆರ್ಮಟ್ಟಿ) + ಕಱಿ[1]]

ಪೆರ್ಮಱಿವೆ (ನಾ). ೧. ಸಂಪೂರ್ಣವಾದ ಮರೆವು : 'ಪೆರ್ಮಱಿವೆಗೊಳ್' ಪರಾ. ೨. ಸಾವು : (ಕ). ಸಿ. (ಅಲಂ) ಅತಿಶಯವಾದ ಔದಾಸೀನ್ಯ ; ಪೆರ್ಮಱಿವೆಯು ದೊಯ್ಸಂ ಪಾತಕದೆಱಿದಿಟ್ಟಪಯಸದ ಬೆಟ್ಟು ಕಾಪಾಸ ಕೆಬ್ಬಂ (ಪಾಂಕೀಕ್ಕ. ೬-೬೨). [ಪೆರ್ (<ಪಿರಿದು) + ಮಱಿವು]

ಪೆರ್ಮಱಿವೆಗೊಳ್ (ಕ್ರಿ). ಮೂರ್ಛೆ ಹೊಂದು : ಊರ್ಮಿಳಾಕಾಂತಂ . . . ಸ್ವರ್ಮಣಿ ಧರಾತಳಕೆ ನಭದಿಂದುರುಳ್ವಂತೆ ಪೆರ್ಮಱಿವೆಗೊಂಡು ಬೀಳ್ವನಿತಜಿಂಗಳ್ (ಕೃಪುಣ. ೫೦-೬೦). [ಪೆರ್ಮಱಿವೆ + ಕೊಳ್[1]]

ಪೆರ್ಮಱಿ (ನಾ). ದೊಡ್ಡ ಹಾವು; ಹೆಬ್ಬಾವು : ಅಡಗಡಹಿ ಪೆ[ಱಾಣಂ. ಪೆ]ರ್ಮಱಿ ಪರಾಹನ ಮಂಡದಲುಱಿ ಘಟ್ಟಿಸಿ ಏನೋದದಿ ನಡೆಯೆ ಧರೆ ಕಂಪಿಸಿತು ಭೀಮಸ ಪದದ ಘಲ್ಲಣೆಗೆ (ಕುಪಾ. ೪-೦೦).

[ಪೆರ್ (<ಪಿರಿದು) + ಪಱಿ./ತ್ಕಳು. ಪೆರ್ಮರಿ, ಪೆರುಮರಿ]

ಪೆರ್ಮಟ್ಟಿ[1], **ಪೆರ್ಮಳೆ, ಪೆರ್ವಳೆ, ಹೆಮ್ಮಳೆ** (ನಾ). ದೊಡ್ಡ ಮಳೆ : ಭಾರಿ ಮಳೆ : ನೆಗೆದ ಮುಗಿಲ್ಗಳುಂ ಸುರಿವ ಪೆರ್ಮಟ್ಟಿಯುಂ . . . ಅಂಜಿಸುವಂತಿರೆ (ಕಱಾ. ೦-೦೨೪); ಕರೀಂದ್ರಸಂಕುಳವುದವಾರಿಧಾರೆಗಳ ಪೆರ್ಮಟ್ಟಿಯೊಳ್ ಕಣವೆಂಬ ರಾತ್ರಿಯೊಳ್ ಸಲೆ ಬರುತಿರ್ಪಳೆಂದುಮಭಿಸಾರಿಕೆಯಂದದೆ ರಾಜ್ಯಲಕ್ಷ್ಮಿ ತನ್ನೊಲವಿನೊಳ್ (ಕಾದುಪ್ರ. ೦೩) ; ನೆತ್ತರ ಪೆರ್ಮಟ್ಟಿ ಕಜ್ಜಿವತ್ತು (ಪಂಗಾಕೃ. ೯-೩೩). **ಪೆರ್ವಳೆ** : ಸುರಿವ ಪೆರ್ವಳೆಯೊಳಗೆ ತಾಂ ಕಂಪಿಸದೆ ನಿಂದಿರ್ದು (ಧಪಕ್ಕ. ೫-೦೨) ; ಬೀಸದು ಬಿಜ್ಜುಸುಗಾಳಿ . . . ಮುಗಿಲ್ಗಳತಿಭರದಿಂ ಪಿಡಿಲ್ಮಿಂಚುಗಳ ಕೂಡೆ ಪೆರ್ವಳೆಯುಸು ಸೂಸದು (ಕೃಪುಣ. ೦೩-೦೬). **ಹೆರ್ವಳೆ** : ಕರಿಮುಗಿಲ ಪೆರ್ವಳೆಯೊ ಅಂಜನಗಿರಿ ಕರಗಿ ಪರಿವಿತವೊ (ಪಾಕೃಣ. ೫೨-೦೬) ; ಜಾಜಿ ಸೋಮರ್ಮಾಡಿ ಸುರಿತರ್ಪ ಕಮ್ಮಲರೆ ಪೆರ್ಮ[ಱಾಣಂ. ಮರ್ಮ]ಳೆಯಾಗಿರೆ (ಧಪಕ್ಕ. ೦ ೪೬). **ಹೆಮ್ಮಳೆ** : ಸುಂದರು ಹಾವುಗಳ ಹೆಮ್ಮಳೆಯು (ಕುಪಾ. ೬೨-೪೪) ; ಕುಜಿಯಸೇಜಲು ಗುರುವು ಧರೆಗೆ ಹೆಮ್ಮಳೆಯಱಿಸೆ (ಸರಕ್ಕ. ೦೪೦೦).

[ಪೆರ್ (< ಪಿರಿದು) + ಮಟ್ಟಿ]

ಪೆರ್ಮಾಡಿ 'ಪೆರ್ಮಾನಡಿ' ನೋ.

ಪೆರ್ಮಾಡಿಗಾವುಂಡ 'ಪೆರ್ಮಾನಡಿಗಾವುಂಡ' ನೋ.

ಪೆರ್ಮಾಣೂರ್ (ನಾ). ಒಂದು ಸ್ಥಳದ ಹೆಸರು : ಚಾಟ್ಯೂರುಂ ಪೆರ್ಮಾಣೂರುಂ ಸವಿಸಾವಮ್ (ಕ್ರಿಪ. ೦೯೪೦. ೦-೬೫; ೭೫೦). [? + ಊರ್]

ಪೆರ್ಮಾತು 'ಪೆರ್ವಾತು' ನೋ.

ಪೆರ್ಮಾನಡಿ, ಪೆಮ್ಮಡಿ, ಪೆಮ್ಮನಡಿ, ಪೆಮ್ಮಾಡಿ, ಪೆಮ್ಮಾನಡಿ, ಪೆರ್ಮಡಿ, ಪೆರ್ಮಡಿಯಂ, ಪೆರ್ಮನಡಿ, ಪೆರ್ಮಾಡಿ, ಪೆರ್ವಡಿ, ಹೆಮ್ಮಾಡಿ, ಹೆರ್ಮಾಡಿ (ನಾ). ೧. ಒಬ್ಬಾತನ ಹೆಸರು : ಶ್ರೀಮತ್ ಪೆರ್ಮಾನಡಿಗಳಾ ಎಱಿಯಪ್ಪರಸರುಮಿಱ್ದು . . . ಕೊರವಾರಸೇನಭೂವರರ್ ಪಡೆದ ಸ್ಮೃತಿ (ಎಕ್. III. ಶ್ರೀರಂಗ. ೮೪೭-೦೦ ; ಸು. ೧೦೦ ?) ; ಶ್ರೀಮತ್ಪೆರ್ಮ್ಮಾನಡಿಗಳ್ಗಂಗವಾಡಿ ತೊಭತ್ತಱಾಸಾಸಿರ[ಮುಂ]ಮಂ . . . ಆಳುತ್ತಿರೆ (ಕಾಇಶ. XI-1. ೪೨-೪ ; ೦೦೦). ೨. ಒಂದು ಬಿರುದು (?) : ರಾಜವಲ್ಲಭಪೆರ್ಮ್ಮಾನಡಿ

. . . ಕಾಮ (ಎಕ. X(ಪ), ಬಾಗೇಪ. ೬೬-೯; ಸು. 820); ಶ್ರೀಮಚ್ಚಾಳುಕ್ಯ ಗಂಗಪೆರ್ಮ್ಮಾನಡಿ ವಿಕ್ರಮಾದಿತ್ಯದೇವರ್ ಗಂಗವಾಡಿತೊಂಭತ್ತಾಱು ಸಾಸಿರಮು[ಂ] . . . ರಾಜ್ಯಂಗೆಯ್ಯೆ (ಕಾ. I, ೦೭-೯; 1055). **ಪೆಮ್ಮಡಿ :** ೧. ಸ್ವಸ್ತಿಶ್ರೀ ಪೆಮ್ಮಡಿಯ ಬೆಸದೊಳ್ (ಎಕ. XVI, ಮುದ್ದಗಿ. ೦೩೩-೦; ೨೫ಯ ಶಕ); ಪೆಮಡಿ . . . ನರಸಿಂಹಂ (ಎಕ. VII, ಶಿವಮೊ. ೩೦-೨೬; 1413). **ಪೆಮ್ಮನಡಿ :** ೧. ಪೆಮ್ಮನಡಿಗಳ್ ಪ್ರಿಥುವೀರಾಜ್ಯಂಗೆಯ್ಯುತ್ತಮಿರೆ (ಎಕ. VI, ಚಿಕ್ಕಮ. ೩-೬; 899 ?); ಶ್ರೀಮತ್ ಪೆಮ್ಮನಡಿಗಳ್ ಸ್ವರ್ಗ್ಗಮೇಱಿದ (ಎಕ. III, ತಿರುಮ. ೯೦-೩; 921 ?). **ಪೆಮ್ಮಾಡಿ:** ೧. ಶಿವಚಿತ್ತಂ ವೀರಪೆಮ್ಮಾಡಿ ತಾಂ ಭೂವಂದ್ಯಂ (ಕಳುಂ. ೩-೬; ?). **ಪೆಮ್ಮಾನಡಿ :** ೨. ಶ್ರೀಮದ್ಗಂಗಪೆಮ್ಮಾನಡಿ ಭುವನಯ್ಯ(ನೈಕ) ವೀರನ್ಸುದೆ(ದ)ಯಾದಿತ್ಯದೇವಂ (ಇಂ.IV, ೨೦೯-೨೦; 1075). **ಪೆರ್ಮಡಿ :** ೧. 'ಚೋಟಪೆರ್ಮಡಿ' ಪರಾ. **ಪೆರ್ಮಡಿಯ :** ೨. ಮದನ್ಕೆಯೊಳಿಱಿದು ವರದೇವನು ಪೆರ್ಮ್ಮಡಿಯ ನೊಟಮ್ಬನುಮೆಟಿಳಿದಯೆಗೇದ (ಎಕ. X (ಪ), ಸಂಶಾಮ. ೦೬೫-೬; 937). **ಪೆರ್ಮನಡಿ :** ೧. ಸ್ವಸ್ತಿ ಸತ್ಯವಾಕ್ಯಪೆರ್ಮ್ಮನಡಿಗಳ ಪಟ್ಟಂಗಟ್ಟಿದ ಪದಿನಯ್ದು ವರಿಶದನ್ದು (ಎಕ. II, ೩೯೯-೩; 384 ?); ಶ್ರೀಮತ್ ಪೆರ್ಮ್ಮನಡಿಗಳ್ ಜೆಡಲ ಎಱೆಯಙ್ಗಙ್ಗಾವುಣ್ಡನ ಮಗಙ್ಗೆ (ಇಂ. VI, ೦೦೩-೯; ?). ೨. ಶ್ರೀಮತ್ ರಾಚಮಲ್ಲಪೆರ್ಮ್ಮನಡಿಗಳ್ (ಇಂ.VI, ೦೦೨-೩; 777 ?); ಸ್ವಸ್ತಿ ಶ್ರೀಪೆರ್ಮ್ಮನಡಿ ಮಾರಾಶಿಙ್ಗದೇವನ ಪಟ್ಟಙ್ಗಟ್ಟಿದ ಪ್ರಥಮವರಿಷದನ್ದು (ಎಕ. XIV, ಪಾಗಮಂ. ೦೦೦-೦; ಸು. 961). **ಪೆರ್ಮಾಡಿ :** ೧. ಪೆರ್ಮ್ಮಾಡಿಯ ಸುಳಿ ಜೋಗಬ್ಬೆಯ ಮಗಳ್ (ಪ್ರಸಂ. ೦೯೨೦, ೦೯-೬; ಸು. 881); ಧರ್ಮಾನುರಾಗಮಂ ಕೂಡೆ ಜಗತ್ತ್ರಯದೊಳ್ಮಾಡಿದ ಪೆರ್ಮಾಡಿಯುಮಣ್ಣನುಮಜಿತಸೇನದೇವರ ಗುಡ್ಡರ್ (ಪಾಪುಂಪು. ೯). ೨. ಶ್ರೀ ಸತ್ಯವಾಕ್ಯಪೆರ್ಮ್ಮಾಡಿ (ಪ್ರಸಂ. ೦೯೩೭, ೨೦-೦; 896); ಕನ್ನರದೇವನ ಭಾವಂ ಮಹಾಮಣ್ಡಲಿಕ ಪೆರ್ಮ್ಮಾಡಿ ಬೂತಾರ್ಯ್ಯಂ . . . ಆಳುತ್ತಿರೆ (ಸೌಇಇ. XI-i, ೩೬-೩; 942). ೩. ಹಿರಿಯ ; ಗೌರವಕ್ಕೆ ಪಾತ್ರನಾದವನು : ದೇವರ ಸಾಲೆಯುಂ ಭೋಗಾದಿತ್ಯ ನಿಕೇತನಮುಂ ಪೆರ್ಮ್ಮಾಡಿಯ ಬಸದಿಯ ಪುರದ ಕೇರಿಯುಂ . . . ಮಾಡಿಸಿ (ಸೌಇಇ. XI-i, ೦೦೩-೦೫; ?). **ಪೆರ್ವಡಿ :** ೪. ದೊರೆ ; ರಾಜ : ಅರವರಿಸದೆ ಪಲರುಂ ಪಾದರಿಗನಿವಂ ಕಷ್ಟನೆಂದು ಕುಱಿಯಂ ಕೊಲ್ವಂತಿರೆ ಕೊಂದು ಪೊಲೆಯರಿಂ ಚಿಚ್ಚರಮೆಟ್ಟಿಸುವರಟ್ಟಿ ದೂಱುವರ್ ಪೆರ್ವಡಿಯೊಳ್ (ಧರ್ಮಾಮೃ. ೬-೦೯೨). **ಹೆಮ್ಮಾಡಿ :** ೧. ಪಡವಳ ಹೆಂಮಾಡಿ ತಂಮವ್ವೆ ಕಾಳವ್ವೆ ಹಡವಳಿತಿಯ ಹೆಸರಿಂ (ಎಕ. VII, ಶಿವಮೊ. ೩೩-೬೨; 1167); ಧರೆಯೊಳ್ ರೂಢಿಯ ಮಾಸವಾಡಿಯರಸಂ ಹೆಮ್ಮಾಡಿದೇವಂ ಗುಣಾಕರನ್ (ಎಕ. II, ೩೨೬-೯೯; 1181). ೩. ಆ ಪುರದ ಸೀಮೆ ಎನ್ತೆಂದಡೆ ಮೂಡಲು ಹೆಮ್ಮಾಡಿಯ ಬಸದಿಯ ಕೆಯ್ಯ ಹಡುವಣ ನಿಲ್ಗಲ್ಲು ಮೇರೆ (ಎಕ. VII, ಶಿಕಾರಿ. ೦೩೩-೬೬; 1159). ೫. ಒಂದು ಸ್ಥಳದ ಹೆಸರು : ಬೆಲತೂರ ಚತುಸ್ಸೀಮೆ ವಿವರ ಅವಳಾಡಿಯ ಗಡಿಯಿಂ ಪಡುವಲು ಯೆತಿದ ಅಗಳಿಂದ ಬಡಗಲು ಹೆಂಮಾಡಿಯ ಗಡಿಂ ಪಡುವಲು ಹೊಳೆಯಿಂ ತೆಂಕಲು ಕುದುರು ಸಹವಾಗಿ (ಸೌಇಇ. IX-ii, ೪೭೯-೦೦; 1510). **ಹೆರ್ಮಾಡಿ :** ೧. ಪದ್ಮಾವತೀದೇವಿಗೆ ಹರಸಿ ಹೆರ್ಮ್ಮಾಡಿದೇವನಂ ಹಡೆದು ಕಾಣಿಕೆಯಂ . . . ಕೊಟ್ಟರ್ (ಎಕ. VII, ಶಿವಮೊ. ೯-೯೨; 1122); ಕೈಪಿಡಿಕಾರರ ಪ್ರಕಾರ 'ಹಲ್ಲಂಡೆ', 'ಹೆರ್ಮಾಡಿ' ಮೊದಲಾದ ಶಬ್ದಗಳು ತಮಿಳಿನಿಂದ ಬಂದುವು (ಭಾಷಾಶಾ. ೦೬೩).

ಪೆರ್ಮಾಡಿಯಂಕಕಾಱ=ಒಂದು ಬಿರುದು : ಚೋಲಕಟಕಸೂಱೆಕಾಱಂ ಪೆರ್ಮ್ಮಾಡಿಯಂಕಕಾಱಂ (ಕಇಲ. ೨೨-೭-೨೦; 1083).

[ದೇ. ೩ ತಮಿ. ಪೆರುಮಾನಟಿ, ಪೆರುಮಾನ್]

ಪೆರ್ಮಾನಡಿಗಾಮುಂಡ, ಪೆಮ್ಮಾಡಿಗೊಂಡ, ಪೆರ್ಮಡಿಗವುಂಡ, ಪೆರ್ಮಡಿಗಾವುಂಡ, ಪೆರ್ಮಾಡಿಗಾವುಂಡ (ನಾ). ಒಬ್ಬಾತನ ಹೆಸರು : ಸಾಕ್ಷಿ ಸಂಗಮದ ಪೆರ್ಮ್ಮಾನಡಿಗಾಮುಣ್ಡರುಂ ರಣವಿಕ್ರಮಗಾಮುಣ್ಡರುಂ (ಎಕ. IV, ಎಡತೊ. ೬೦-೬೯; ಸು. 890); ಪೆರ್ಮ್ಮಾನಡಿಗಾಮುಣ್ಡನ ಮಗಂ ರಾಮನಲ್ಲಿ ಸತ್ತೊಡೆ ಪೆರ್ಮ್ಮಾನಡಿಯುಮೆಱೆಯಪ್ಪೊನುಮೊಡನಿಟ್ಟು (ಎಕ. IV, ಹೆಗ್ಗಡ. ೦೦೩-೯; ಸು. 910). **ಪೆಮ್ಮಾಡಿಗೊಂಡ :** ಪೆಮ್ಮಾಡಿಗೊಣ್ಡಂಗೆ ಕೊಟ್ಟ ನೀಱ್ಪಣ್ಯ ಇನ್ನೂಱು (ಎಕ. VI, ಚಿಕ್ಕಮ. ೩-೬; 899 ?). **ಪೆರ್ಮಡಿಗವುಂಡ :** ಪೆರ್ಮ್ಮಡಿಗವುಣ್ಡಂ ಏಚಗವುಣ್ಡನ್ಕೊಂಗುಣಿ ಗಾವುಣ್ಡನ್ (ಎಕ. IV, ಹೆಗ್ಗಡ. ೦೦೯-೦೩; 1037). **ಪೆರ್ಮಡಿಗಾವುಂಡ :** ಅವಚವಾಡಿಯ ಪೆರ್ಮ್ಮಡಿಗಾವುಣ್ಡನ ಲಕೊಳಾದಿತ್ತನಮೆಳೆಯ ಪುಣಸುಗ ಸತ್ತಂ (ಎಕ. IV, ಪಾಮಂಗಾ. ೦೩೯-೦೦; 893); ಪೆರ್ಮ್ಮಡಿಗಾವುಣ್ಡನು ಪೇಳ್ವಡೆಯು . . . ಅಱಿಯೆ ಕೊಟ್ಟರ್ (ಎಕ. IV, ಗುಂಡ್ಲುಪೇ. ೫೭-೭; ಸು. 900 ?). **ಪೆರ್ಮಾಡಿಗಾವುಂಡ :** ಪೆರ್ಮ್ಮಾಡಿಗಾವುಣ್ಡನ ಪೆಣ್ಡತಿ ಚಾವುಣ್ಡಬ್ಬೆ (ಪ್ರಸಂ. ೦೯೩೦, ೦೯-೭; ಸು. 882); ಪೆರ್ಮ್ಮಾಡಿಗಾವುಣ್ಡನೆಂಬ ಪೆಸರಂ ಪಡೆವಂ (ಎಕ. VII, ಶಿವಮೊ. ೦೦-೩೩; 1085 ?). [ಪೆರ್ಮಾನಡಿ+ಗಾಮುಂಡ]

ಪೆರ್ಮಾರಿ, ಹೆಮ್ಮಾರಿ (ನಾ). ದೊಡ್ಡ ಮಾರಿ : ಮಸಗಿತ್ತು ವಾಜಿ ಪೆರ್ಮಾರಿವೋಲ್ (ಶಂಕಾಮಾ. ೯-೦೦೬); ನೊಂದ ಪೆರ್ಬುಲಿಯೊ ಕಿನಿಸಿ ದೆಕ್ಕಲನೊ ಪಸಿದೈತಂದ ಪೆರ್ಮಾರಿಯೋ (ಪಂಪು. ೩೯-೩೫). **ಹೆಮ್ಮಾರಿ :** ಶಿವಶಿವಾ ಕಾಮಾರಿಯೋ ಪಾಂಡವಬಲದ ಹೆಮ್ಮಾರಿಯೋ ನಿನ್ನಾನೆ (ಕುಮಾಕ. ೦೦-೦೩); ಊರ ಹೊಗಿಸಿದರಱಿದಱಿದು ಹೆಮ್ಮಾರಿಯನು (ಕೊರಗಾ. ೩-೭-೦೬); ಗಂಡಗಂಜದ ನಾರಿ ಅವಳೆ ಹೆಮ್ಮಾರಿ (ಕನಕ. ೩೦-೯).

[ಪೆರ್ (<ಪಿರಿದು$_1$) + ಮಾರಿ$_2$]

ಪೆರ್ಮಾವಿ (ನಾ). ಒಂದು ಊರಿನ ಹೆಸರು : ಕಾಡುವಟ್ಟಿಯು ಮೃಡುವಾನುಂ ಬನ್ದು ಪೆರ್ಮಾವಿಯಾನೆಱಿದು ಸುಟ್ಟಾ ಮಾತ ಕೇಳ್ದು (ಸೌಇಇ. IX-i, ೨೦-೭; ಸು. ೨೫ಯ ಶಕ). [?]

ಪೆರ್ಮಾವುಲಿಗ (ನಾ). ನಿಷ್ಣಾತನಾದ ಬೇಟೆಗಾರ : ಅವಳುಮನೊಲಿಸಿ ಕಂಟಿಸಿ ಗೋವರ ಗುಗ್ಗುರಿಗೆ ಮಾಡಿಯುಂ ತಣಿಯಯ್ ಪೆರ್ಮಾವುಲಿಗನೆಯೋ ಪೇಟೇಂ ಸ್ತ್ರೀವಧೆ ನಿನಗಶ್ವಮೇಧಮೋ ಸಂಬಳಮೋ (ಕಾಪ್ಯಾಪ. ೦೬೬). [ಪೆರ್ (<ಪಿರಿದು$_1$) + ಮಾವುಲಿಗ]

ಪೆರ್ಮಾಳಿಗೆ (ನಾ). ಭವ್ಯವಾದ ಉಪ್ಪರಿಗೆ,-ಸೌಧ : ಉಂಗುರವನ್ನು ಲೇಸಾಗಿ ಮಾರಿ ಪೊಂಗಿ ಪೆರ್ಮಾಳಿಗೆ ಕಟ್ಟುತೇರಿ ಅಂಗನೆಗೂಡಿ ಭೋಗಿಪೆನು (ಶಾಕುಂತ. ೭೫ ಅಡಿಪ). [ಪೆರ್ (<ಪಿರಿದು$_1$) + ಮಾಳಿಗೆ$_1$]

ಪೆರ್ಮಿದ್ದಿಲ್ (ನಾ). ಒಂದು ಊರಿನ ಹೆಸರು : ತೆಱ್ಕೈ ಪೆರ್ಮ್ಮಿದ್ದಿಲ್ ಪೆಟ್ನನನ್ದಿಯ ಕಿಱುನನ್ದಿಯ ಸೊಡಲಿಯದಾ ಮೂಱುಂ ಕುಡಿದಾ ಒಟ್ಟಿ (ಎಕ. X(ಪ), ಚಿಕ್ಕಬಿ. ೬೬-೦೭; ಸು. 880). [?]

ಪೆರ್ಮಿಳಿ, ಹೆಮ್ಮಿಣಿ (ನಾ). ದಪ್ಪ ಹಗ್ಗ ; ಚೆನ್ನಾಗಿ ಹುರಿಗೊಳಿಸಿದ ಹಗ್ಗ : 'ಪೆರ್ಮಿಳಿಗಟ್ಟು' ಪರಾ. **ಹೆಮ್ಮಿಣಿ :** ಬಹು ಸಲಗೆತ್ತುಗಳ ನೊಗಕ್ಕಂ ಹೂಡೆ ಹೆಮ್ಮಿಣಿಯೊಳುಂ ತೊಡರ್ಚಿ . . . ಇರ್ವರುಮ ನೆಳಸೆಂದು ಪೇಳಿ (ಪ್ರಭುಪು. ೯-೦೯೨). [ಪೆರ್ (<ಪಿರಿದು$_1$) + ಮಿಳಿ]

ಪೆರ್ಮಿಳಿಗಟ್ಟು (ಕ್ರಿ). ಬಲವಾದ ಹಗ್ಗವನ್ನು ಬಿಗಿ,- ಕಟ್ಟು : ನಡುತೆ ಕಂಭಮನಲ್ಲಿ ಪೆರ್ಮಿಳಿಗಟ್ಟುತುಂ . . . ಅವನಿರ್ಪಿನಂ (ಪ್ರಸಂ. ೩೯-೯೭).

[ಪೆರ್ಮಿಳಿ + ಕಟ್ಟು$_1$]

ಪೆರ್ಮಿನ್, ಪೆರ್ಮಿನು, ಹೆಮ್ಮಿನ್, ಹೆಮ್ಮಿನು (ನಾ). ದೊಡ್ಡ ಆಕಾರದ ಮೀನು : "ಶೃಂಗೀ, ಮದ್ಗುಃ, ಅವಾಗುಃ, ನಂದ್ಯಾವರ್ತಃ— ಈ ೪ ಮೊದಲಾಗುಳ್ಳುವು ಪೆರ್ಮಿನ್" (ಹಣಾಯು. ೦೦೯-೩೭); ಕರಡಿ ಮಹಿಷಿ ಪೆರ್ಮಿನಜಂ . . . ಕಾಟ್ಕೋಟಿಯೆಂಬೀ ತಿರಿಕವ್ರಾತಂ

ಗಳೊಳ್ ಸಂಭವಿಸಿ ದುರಿತದಿಂ ದುಃಖಮಂ ಪೇಟಲಾಱಿಂ (ಧರ್ಮಾಮೃ. ೦೬-೦೭೬); ತಿಮಿತಿಮಿಂಗಿಲಂಗಳಂ ಕೆಳಗೊಳ್ವ ಪೆರ್ಮಾನ್ಗಳ ಬಾಳಚಳನದಿಂ ಕರೆಗಣ್ಮುವ ಕರ್ಮಡುವಿನೆಡೆಯೊಳ್ (ಸಿಕಸಂ. ೯-೬). ಪೆರ್ಮಾನು: ತಾನಿ ದಿರ್ವಂದು ಮನ್ಮಥನ ಟೆಕ್ಕೆಯದ ಪೆರ್ಮಾನಿಂಗೆ ಹಾಯ್ದುದಾರ್ಭಟಿಸಿ (ಸೋಹಕ. ೩೯-೨೬). ಹೆಮ್ಮಾನ್: "ಹೆಮ್ಮಾನ್—ಝಷ" (ಪಾಸಿಕಾ. ೬); "ಅವಾಗು ಮದ್ಗು ಶೃಂಗಿಯೆವಲು ಹೆಮ್ಮಾನಕ್ಕು" (ಮುಂಗಳಾ. ೦೨೦-೬). ಹೆಮ್ಮಾನು: "ಶೃಂಗಿ ಮದ್ಗುರ ವಾಗುಸ ನಂದ್ಯಾವರ್ತ ಈ ೪ ಮೊದಲಾಗುಳ್ಳುವು ಹೆಮ್ಮಾನು" (ಪಾಸಿಕಾ. ೬); ಬಲೆಗೆ ಬಿದ್ದ ಹೆಮ್ಮಾನು ಕಿರುಮೀನುಗಳೆಲ್ಲವನ್ನು ದಡಕ್ಕೆ ತಂದೊವರಿ. ಹೆಮ್ಮಾನುಗಳನ್ನು ಆಯ್ದು ಕೊಂಡು . . . ಹೋಗುವುದುಂಟು (ಪುಸರು. ೪೯೯).

[ಪೆರ್ (< ಪಿರಿದು$_1$) + ಮೀನ್$_2$]

ಪೆರ್ಮಾನು 'ಪೆರ್ಮಾನ್' ನೋ.

ಪೆರ್ಮುಗಗೆಱೆ^{3} (ನಾ). ಒಂದು ಸ್ಥಳದ ಹೆಸರು: ತೆನನ್ದಾಕಕೆಱೆಂ ಪೆಂರ್ಮುಗಗೆಱೆಂ ಪಡಗಾಯ್ ಸನ್ದು (ಎಕ. IV, ಎಡತೊ. ೬೦-೬೯; ಸು. 890). [? + ಕೆಱೆ^{3}]

ಪೆರ್ಮುಗಿಲ್, ಹೆಮ್ಮುಗಿಲ್ (ನಾ). ಒತ್ತೊತ್ತಾಗಿರುವ ಮೋಡ; ಸಾಂದ್ರವಾದ ಮೋಡ: ಗಗನಾಂತರದೊಳ್ ಸಲೆ ಪೆರ್ಮುಗಿಲೊಂದು ವಿಚಿತ್ರಕೂಟಕೋಟಿಕ್ರಮದಿಂ ನೆಗೆದುದು ಬಳೆದುದು . . . ಕರಗಿದುದು ನರರ ಸಿರಿಗನುರೂಪು (ಪರ್ಶಪು. ೦೨-೬೨); ಗಗನದೆ ಗರುಡನೈತಂದುದು ಪೆರ್ಮುಗಿಲಗಲದೆ ಗಱಿಯ ನಾಟಿಸುತೆ (ಸೋಹಕ. ೩೬-೩೦). ಹೆಮ್ಮುಗಿಲ್: ಕೊಡಿಸು ನೇಮವ ಹಿಡಿದು ಬಲುಹಿಂ ಕಡಲ ಕುಡಿಸುವೆ ಬಾಡಬಾಗ್ನಿಯನು ಬಡ ಪಡಬ ತಾ ಕುಡಿಯಲಾಱನು ಹಿಡಿದು ಹೆಮ್ಮುಗಿಲಿಂದ ಕುಡಿಸುವೆ ಪಡೆಯ ನಡೆಸುವೆ ತಾಯಿಮಳಲೊಳಗೆಂದು ನಳ ನುಡಿದ (ಕಾಶಿಕಾ. ೧೩-೪೨).

[ಪೆರ್ (< ಪಿರಿದು$_1$) + ಮುಗಿಲ್]

ಪೆರ್ಮುಡಿ (ನಾ). = ಪೆರ್ದುಱುಬು: ತನ್ನ ತನಯಳ ಪೆರ್ಮುಡಿಯ ನರಿದೆನ್ನ ಜೆಡೆಯಂ ಕಟ್ಟಿಸಿದನಂದುನ್ನತಿಯೊಳಾ ಮಾನಕಂಜರನು (ಬಸಪು. ೨೩-೯). [ಪೆರ್ (< ಪಿರಿದು$_1$) + ಮುಡಿ$_3$]

ಪೆರ್ಮುತ್ತು (ನಾ). ದೊಡ್ಡ ಮುತ್ತು,— ಮೌಕ್ತಿಕ: ಕತ್ತುರಿಯಿಂದೆ ಸಮ್ಮಾರ್ಜನೆಗೆಯ್ದು ಪೆರ್ಮುತ್ತುಗಳೊಡನೆ ಮಾಣಿಕವ ಪತ್ತುಗೆಗೊಳಿಸಿ (ಸೋಹಕ. ೨೦-೩). [ಪೆರ್ (< ಪಿರಿದು$_1$) + ಮುತ್ತು$_3$]

ಪೆರ್ಮುಸುಂಡೆ (ನಾ). ಒಂದು ಬಗೆಯ ಸಸ್ಯ: ಪರಿಕಿಸಿ ಪೆರ್ಮುಸುಂಡೆ ಪೊಸಜೀರಗೆ ಸಾಸುವೆ ಲೊಕ್ಕೆಯಲ್ಲಮಂ ಬೆರಸಿರೆ ತೆಳ್ಳನಪ್ಪ ಕಳಿಯಂ ಕುಡಿಸು (ಗೋಸ್ಪೈದ್ಯ. ೨೦೩-೯೬).

[ಪೆರ್ (< ಪಿರಿದು$_1$) + ಮುಸುಂಡೆ (< ಮುಸುಂಡಿ$_2$)]

Δಪೆರ್ಮುಱಿಕ್ಕು (ನಾ). ದೊಡ್ಡ ಬಾಗು; ವಿಶಾಲವಾದ ತಿರುವು (?): ಸಾಮಗೆಱೆಯಾ ಪಳ್ಳದಾ ಪೆರ್ಮ್ಮುಱಿಕ್ಕು (ಎಕ. IV, ಪಾಗಸುಂ. ೮೩-೬೯; 776). [ಪೆರ್ (< ಪಿರಿದು$_1$) + ಮುಱಿಕ್ಕು (< ಮುರಿಗೆ$_1$)]

ಪೆರ್ಮೂಗು (ನಾ). ದೊಡ್ಡ ಮೂಗು; ಹಿರಿದಾದ ನಾಸಿಕ: ನೊರೆವಾಯ್ ಜೋಲ್ದುಟಿ ಪೆರ್ಮೂಗರಲ್ದ ಕೆಮ್ಮೀಸೆ . . . ಕಾರೊಡಲಿರೆ ಮೆಱೆದು ಕರಾಗ್ರದಲ್ಲಿ ಮುಳ್ಗತ್ತಿಗೆಯಂ (ಸ್ಕಷಟ. ೦೦-೬೦); ಪೆರ್ಮೂಗಲರೆ ತೆಱೆದ ಬಾಯ್ ಭೀತಿಯಂ ಬೀಱೆ . . . ಪಾಯ್ತಂದುದುದ್ಯತ್ಪದ ನಖವಿದಳತ್ಕುಂಜರೇಂದ್ರಂ ಮೃಗೇಂದ್ರಂ (ಶಪಸಂ. ೩-೬೨).

[ಪೆರ್ (< ಪಿರಿದು$_1$) + ಮೂಗು$_1$]

ಪೆರ್ಮೆ, ಪೆಮ್ಮೆ, ಹಿರಿಮೆ, ಹೆಮ್ಮೆ (ನಾ). ೧. ಅಗ್ಗಳಿಕೆ; ಶ್ರೇಷ್ಠತೆ: ಜಿನಧರ್ಮದ ಪೆರ್ಮೆಗೆ ರಾಗಿಸರೆ ಭವ್ಯರ್ (ಶಾಂತಿಪು. ೦೨-೩೬); ಅಂತು ಜನಸಂ ಬೀಯದ ಚಾಗದ ಪೆರ್ಮೆಯಂ ಮೆಱೆವುದುಂ (ಪಂಗಾಪು. ೩-೦೪೦ ಪ); ವರಕಾಶ್ಯಪಾನ್ವಯಂ ತಳೆದುದು ಪೆರ್ಮೆಯಂ ಪೆಸರನುಂನತಿಯುಂ ಯಶಮಂ (ಸೌಇಇ. IX-i, ೨೬೬-೩೩; 1160); ಪೆರ್ಮೆಯನ್ ಕಾವೆನೆಂದಿರ್ದಪೆನ್ (ಆಂತಿಗೂ. ೯-೦೬೬). ೨. ಅಹಂಕಾರ; ಗರ್ವ: ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ ಪೆರ್ಮೆಯಿಂ ದೇಹವ ನಂಬಬೇಡಿ ಕಾಣಿರೊ (ಪುರುದ. ೨-೪೯ ಅನುಪಲ್ಲವಿ). ಪೆಮ್ಮೆ: ೧. ಪೆರ್ಗ್ಗಡೆ ಮಾಕಿಮಯ್ತನ × × ವ ಪೆಮ್ಮೆಯನು ಕರಣದಲಣ್ಣೆ (ಸೌಇಇ. IX-i, ೦೧೨-೦೪; 1053); ಅನುಪಮವಾದ ಪೆಮ್ಮೆಯೊಳು ರಣ್ಜಿಸುತಿರ್ಪ್ಪ ನೊಳಂಬವಾಡಿಯೊಳ್ (ಎಕ. XI, ದಾಪಣ. ೮೭-೮೩; 1143); ತೋಳ್ವಲದ ಪೆಮ್ಮೆಯನ್ತೆನ್ದೊಡೆ (ಎಕ. VI, ಕರೂರು. ೩೬-೦೩; 1201). ಹಿರಿಮೆ: ೧. ಅಂತೂ ನಮ್ಮನ್ನು ಹೊಗಳುವ ವ್ಯಾಜದಲ್ಲೇ ನಿಮ್ಮ ಹಿರಿಮೆಯನ್ನು ತೋರಿಸಿಕೊಂಡಿರಿ (ಪಕಂಪಾ. ೩); ರಾಮನ ಹಿರಿಮೆ ಗರಿಮೆಗಳು ವ್ಯಕ್ತವಾಗಬೇಕಿದ್ದರೆ . . . ರಾವಣನಂತಹ ಪ್ರಬಲವಿರೋಧಿಯೂ ಬೇರು (ಪಾರಾಕ್ಷ. ೦). ಹೆಮ್ಮೆ: ೧. "ಪ್ರಭವಂತೀ ಎಂಬುದು ಹಿರಿದಪ್ಪ ಹೆಮ್ಮೆ [ಪೆರ್ಮೆ]" (ಪಲಾಯು. ೦೩೦-೦೦೦); ಊರ್ಜಿತ ಶಕ್ತಿಯೊಳ್ ಮಹೇಶ್ವರಪದಭಕ್ತಿಯೊಳ್ ತನಗೆ ಪಾಸಟಿಯಾರ್ಪ್ಪೆಱರೆಂಬ ಹೆಮ್ಮೆಯೊಳ್ ನೆರೆದು . . . ನೆಗಬ್ದಂ ಬಸವಂ (ಎಇ. V, ೮೬-೨೯; 1142); ಹಳಿವಿನಲಿ ಹೆಮ್ಮೆಯನು ಕುಂದಿನ ಕುಲದೊಳಗ್ಗಳಿಕೆಯನು ತಮದಲಿ ಬೆಳಗ ಬಣ್ಣಿಸುತಿಹೆ (ಕುಪ್ಯಾಸ. ೦೦-೦೦); ನಿಮ್ಮಯ ಪಿತ ಕೃಷ್ಣರಾಯನ ಮಹಿಮೆಯ ಹೆಮ್ಮೆಯಱಿದು ಕೀರ್ತಿಪೊಡೆ ನಮ್ಮಳವಲ್ಲ (ಪೋಹಕ. ೧-೯). ೨. ಬೊಮ್ಮಬೋಧೆಯ ಹೇಳಿ ಕೇಳಿಯು ಸುಮ್ಮನಿಹ ನೃಪತನವು ಬಂದಿರೆ ಹೆಮ್ಮೆಯಲಿ ಹಿರಿದಾಗಿ ಕೆಡುವರು (ಸಂಪಕ. ೩-೦೨); ಹೆಮ್ಮೆಯಿಂದಲಿ ನೀವು ಕೆಡಬೇಡಿರಯ್ಯ (ಪುರಂದ. ೦-೦೪೦ ಪಲ್ಲವಿ); ಎಮ್ಮನೆಲ್ಲರನಾದರಿಸಿ ನಿಗರ್ವಿಕೆಯಿಂ ಸಹಸ್ರವದನಂ ಕಳುಹಲು ಹೆಮ್ಮೆಗಳನುಳಿದು ವಿಸ್ಮಿತರಾದರ್ (ಶೈಮಭಾ. ೩೨-೪೭). ೩. ಸಂತೋಷ; ಹಿಗ್ಗು: 'ಹೆಮ್ಮೆಗೊಳಿಸು' ಪರಾ. ೪. ಅಭಿಮಾನ: 'ಹೆಮ್ಮೆಪಡು' ಪರಾ.

[ಪೆರ್ (< ಪಿರಿದು$_1$) + — ಮೆ$_3$./ತಮಿ. ಪೆರುಮೈ: ತುಳು. ಪೆರ್ಮೆ, ತೆಲು. ಪೆರಿಮೆ, ಪೆಮ್ಮೆ]

ಪೆರ್ಮೆಗಿಡು 'ಪೆರ್ಮೆಗೆಡು' ನೋ.

ಪೆರ್ಮೆಗೆಡು, ಪೆರ್ಮೆಗಿಡು (ಕ್ರಿ). ಹೆಮ್ಮೆಯನ್ನು ಕಳೆದುಕೊಳ್ಳು: ಅಭಿಮಾನವಿಲ್ಲದಾಗು: ಒರ್ಮೆ ಪೋಗಿ ಮೃಗಯಾನಿಮಿತ್ತದಿಂ ಧರ್ಮಮಂ ಮಱೆದು ನೋಡ ಬೇಡಿದೊಂ ಪೆರ್ಮೆಗೆಟ್ಟು ಜಮದಗ್ನಿಯಂ ನೃಪಂ ದುರ್ಮದಂ ಸುರಭಿಯಂ ವಿಮೋಹದಿಂ (ಕಾಪ್ಯಾಪ. ೩೬೬). ಪೆರ್ಮೆಗಿಡು: ಕೂರ್ಮೆಯೊಳನುಭವಿಸುತ್ತುಮದೊರ್ಮೆಯುಮವಚಱದೆ ಕಾಮಸುಖದಿಂ ಜನಪಂ ಪೆರ್ಮೆಗಿಡದಿರ್ದಂ (ಪುಷ್ಪಪು. ೯-೪೮).

[ಪೆರ್ಮೆ + ಕೆಡು$_1$]

ಪೆರ್ಮೆಗೊಳ್ (ಕ್ರಿ). ಹಿರಿಮೆಯನ್ನು ಹೊಂದು; ಅಗ್ಗಳಿಕೆಯನ್ನು ಪಡೆ: ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು ಪೆಣ್ಣಿಂದ ಭೃಗು ಪೆರ್ಚಿದನು . . . ಪೆಣ್ಣ ನಿಂದಿಸಲೇಕೆ ಪೆಱರು (ಹದಿಪ. ೩.೩).

[ಪೆರ್ಮೆ + ಕೊಳ್$_1$]

ಪೆರ್ಮೆಯೊಡೆಯ (ನಾ). ಶ್ರೇಷ್ಠನಾದವನು; ಹಿರಿಮೆಯನ್ನು ಹೊಂದಿರುವವನು: ಒಡೆಯ ಪ್ರತ್ಯಯಕ್ಕೆ ಪೆರ್ಮೆಯೊಡೆಯಂ . . . ಜಾಣೊಡೆಯಂ (ಕಮದ. ೨೦೬ ಪ್ರಯೋ). [ಪೆರ್ಮೆ + ಒಡೆಯ$_2$]

ಪೆರ್ಮೆವಡೆ (ಕ್ರಿ). ಮೇಲ್ಮೆಯನ್ನು ಪಡೆ; ಹಿರಿಮೆಯನ್ನು ಹೊಂದು: ಪೆರ್ಮೆವಡೆದುದನಾದ್ಯನಂತಮದೊರ್ಮೆಯಿಂ ಧಾರ್ಮಿಕರನಾ ಜಿನಧರ್ಮಮದೆ ತಾಂ ದಾಟಿಸುಗೆ ಕುಂದದೆ ಭವಸಮುದ್ರವನು (ಪಾಳ್ಯಕಾ. ೦-೬); ಪೊರೆದಯ್ಯನ ಕೂರ್ಮೆ ಪೆರ್ಮೆವಡೆವಂತುಂ . . . ಎತ್ತಿವಂದ ಪಗೆಯಂ ಬಾರಿಸುವೆಂ (ರಾಮಾಶ್ವ. ೮೬-೯). [ಪೆರ್ಮೆ + ಪಡೆ$_1$]

ಪೆರ್ಮೆವೆಱು (ಕ್ರಿ). = ಪೆರ್ಮೆವಡೆ : ಮೇದಿನಿಯಂ ಹಿಮಾದ್ರಿಯಿಂದು ಕಾಶನಗಂ ಲವಣಾಂಬುರಾಶಿ ಕಾಳೋದಕವಾರ್ಧಿಸಿಂದೆಯೆನೆ ಸಾಧಿಸಿ . . . ಪೆರ್ಮೆವೆತ್ತಂ (ಶಂಪ್ರಪು. ೬-೨೬). [ಪೆರ್ಮೆ + ವೆಱು$_1$]

ಪೆರ್ಮೆಳೆ, ಹೆಮ್ಮೆಳೆ (ನಾ). ೧. ದೊಡ್ಡ ಪೊದರು ; ದಟ್ಟವಾಗಿ ಬೆಳೆದ ಗಿಡಗಳ ದೊಡ್ಡ ಗುಂಪು : ಪೆರ್ಮೆಳೆಗಳಿಂ ಕೆಱೆಯಿಂ ತೊಱೆಯಿಂ . . . ಅರಣ್ಯದಿನಲ್ಲಿಯ ತಳ್ಪಲೊಪ್ಪುಗುಂ (ಗಿಂಕ. ೧-೬೦) ; ಪೆರ್ಮೆಳೆಯೊಳೊತ್ತುಗೊಂಡು ಇದಿರಾಲಿಸಿ ದಾಡೆ[ಯವುಂಕಿ] ಕೋಪದಿಂ ಘೂರ್ಮಿಸುತಟ್ಟೆ ಮುಟ್ಟಿ ಬಹ ಜಾಯಿಲನಂ ಕಡಿಪಿಂಡ ಮಾಡುತಂ (ಸನ್ನಿಪಾ. ೩-೦೦೩). ೨. ಒಂದು ಪ್ರದೇಶದ ಹೆಸರು (?) : ಪೆರ್ಮೆಳೆ ಅಂತೆ ಬರೆ ತೆಜ್ಜ ಮೈಯರಿಸಿ ಕಿಱುಗೊಲ್ಲಿಯೊಳ್ ಪೊಕ್ಕು (ಪ್ರಸಾ. ೦೯೨೦. ೦೦-೦೦೩ ; ೦೦೭). **ಹೆಮ್ಮೆಳೆ** : ೧. ಹೆಜಮೆಟ್ಟಿ ನಡೆನಡೆದು ಹೆಮ್ಮೆಳೆಯನಂಡುಗೊಂಡು ಗರ್ಜಿಸುತುಂ ಬಂದ ಜಾತಿ ಜಾಯಿಲಂಗಳನಿತ್ತುಂಡುಮಾಡುತ್ತೆ . . . ಕೆಕ್ಕಳಿಸಿ ನೋಡುವೆಕ್ಕಲಂಗಳುದುಂ (ಸಂಪರ. ೦೩-೦೩) ; ಹೆಮ್ಮೆಳೆಯ ಹರಹುಗಳುಬ್ಬರದ ಶಾರ್ದೂಲ ಸೈರಿಭ ಶರಭಸೂಕರದ ಉಬ್ಬಟೆಯ . . . ಅಬ್ಬರದ ಕಾಂತಾರದೊಳಗಿದರಬ್ಬರಿಸುತ್ತೈದಿದರು (ಶೊರರಾ. ೩-೧-೬).

[ಪೆರ್ (< ಪಿರಿದು$_1$) + ಮೆಳೆ$_1$]

ಪೆರ್ಮೊರಹು (ನಾ). ಗಟ್ಟಿಯಾದ ಮೊರೆತ.—ಝೋಂಕಾರ : ಪಿರಿದು ನಿಗಳದ ಗೆಜ್ಜೆಗಳ ಪೆರ್ಮೊರಹಿಗಂಜಿ ಭವಾನಿಯರ್ಧಶರೀರದುಂ ಬೆರಸೆ (ಬಸಪು. ೦೬-೮೫). [ಪೆರ್ (< ಪಿರಿದು$_1$) + ಮೊರಹು (< ಮೊರೆವು)]

ಪೆರ್ಮೊಲ (ನಾ). ದೊಡ್ಡ ಗಾತ್ರದ ಮೊಲ ; ದಷ್ಟಪುಷ್ಟವಾದ ಮೊಲ : ಉಡುಪತಿಬಂಬದಿಂದೆ ಸರಿದೋಡಿ ಮುಗಿಲ್ಗಳೊಳೆಯ್ದು ಪೊಕ್ಕು ಗಂಡುಡುಗಿ ಸುರುಳ್ದ ತಚ್ಛಶಕನಂ ನೆಱೆ ಪೋಲ್ತುದು ಕಾಡ ಪೆರ್ಮೊಲಂ (ಗಿಂಕ. ೦-೮೮) ; ಬಡಿಯುಡುವಂ ತೊಡಂಕದಿಡು ಪೆರ್ಮೊಲನಂ (ಕಬಸಾ. ೩-೩೦). [ಪೆರ್ (< ಪಿರಿದು$_1$) + ಮೊಲ]

ಪೆರ್ಮೊಲೆ, ಹೆಮ್ಮೊಲೆ (ನಾ). ೧. ದೊಡ್ಡ ಮೊಲೆ : ಕಾದಲಳಚುತುಂ ತೆಱಂದಿರಿದು ನೋಡಿದ ನೋಟದೊಳೆಯ್ದೆ ತಳ್ಪ ಪೆರ್ಮೊಲೆ . . . ಬೆನ್ನಿನಿ ತುಮೊರ್ಮೆಯೆ ನಾ[ಂಬಿ]ನಂ (ಪುಪಶಾ. ೪-೦೦೮) ; ಪೆರ್ಮೊಲೆ ಹಾರದಿಂದೆಸೆಯೆ ಬಂಬಲಬಾಡಿದ ರೂಪು ಗಾಡಿಯಂ ನೂರ್ಮಡಿಮಾಡೆ (ಸಂರಾಪು. ೩-೦೦೮) ; ಸೊಕ್ಕುಜವ್ವನದ ನೀರಜಗಂಧಿಯರ ಕೊಬ್ಬಿದ ಪೆರ್ಮೊಲೆಗಳೆಡೆಯ ಚಂದನದಣ್ಪು . . . ತಂದೆಲರ್ಮೆಲ್ಲಮೆಲ್ಲನೆ ಪರಪುತಿರ್ದುದು (ಶೈಪುಶಾ. ೬-೦೨). ೨. (ಹಾಲಿನಿಂದ ತುಂಬಿದ) ಕೆಚ್ಚಲು : ಕಾಡೆಮ್ಮೆಯ ಪೆರ್ಮೊಲೆಯೊಳೆಚ್ಚು ಪಾಯ್ವ ಪಾಲ ಪಿರಿಯ ಬಲ್ಸರಿಯೊಳೋಲಾಡಿಯುಂ . . . ಅಪರಸಾಂಧ್ಯಗಂಧವಹನೆಳಸೆ (ಸುಪ್ರಪು. ೬-೪). **ಹೆಮ್ಮೊಲೆ** : ೧. ಗಂಧದ ಪೂಸಿದಂದದ ರವಿಕೆಯೊಳುರೆ ಬಂದಿಸಿ ಜಗುಳ್ದ ಹೆಮ್ಮೊಲೆಯ (ಶರ್ಕಾಳಿ. ೪-೬೬). [ಪೆರ್ (< ಪಿರಿದು$_1$) + ಮೊಲೆ$_1$]

ಪೆರ್ಮೊಳೆ (ನಾ). ದೊಡ್ಡ ಮೊಳಕೆ : ಬಿನಯದ ಬಿತ್ತು ಬಿನ್ನಣದ ಪೆರ್ಮೊಳೆ ಬಿಜ್ಜೆಯ ಬೇರ್ . . . ಅನುವಾತುವಣ್ಣ ಬಿಣ್ಗೊನೆಯೆನೆ ಚಿಕ್ಕದೇವನೆಸೆದಂ (ಅಪ್ರಕಿ. ೦೬-೪೦). [ಪೆರ್ (< ಪಿರಿದು$_1$) + ದೊಳೆ$_2$]

ಪೆರ್ಮೊಱ (ನಾ). ಅಗಲವಾದ ಮೊರ.—ಗೆರಸೆ : ಪಾಡುವರ್ ಕೆಲರು ಪೆರ್ಮೊಱದೊಳಕ್ಕಿಯನಿಕ್ಕಿ ಮಾಡುವರ್ ಕೆಲರು (ಪೋಷಶ. ೦೯-೬೦).

[ಪೆರ್ (< ಪಿರಿದು$_1$) + ಮೊಱ$_1$]

ಪೆರ್ಮೊಱಗೊಳ್ (ಕ್ರಿ). ದೊಡ್ಡ ಮೊರದಿಂದ ಗಾಳಿಯನ್ನು ಹಾಕು.—ಬೀಸು (?) : ಆಳಿಯರ್ ಬೀಸುವ ಚಮರಾಲವಟ್ಟ ತಣ್ಗಾಳಿಯಿಂದವಳೊಡಲ್ಗಿಚ್ಚು ತಾಳಿಯ ಹಾಕಿ ಪೆರ್ಮೊಱಗೊಂಡ ತೆಱದಿ ಭಡಾಳಿಸಿತುಷ್ಣ ಸಂಘಟಿಸಿ (ಪೋಷಶ. ೨೬-೬೨). [ಪೆರ್ಮೊಱ + ಕೊಳ್$_1$]

ಪೆರ್ಮೊಱಹು (ನಾ). ಅತಿಶಯವಾದ ಅಬ್ಬರ ; ಅಧಿಕವಾದ ಆರ್ಭಟ : ಪಾಲ ಜಳಧಿಯ ಕಡೆವ ಪೆರ್ಮೊಱಹೊ ವಿಲಯಾಗ್ನಿಯಾಡಂಬರವೊಯೆಂದೆನಲಲ್ಲಿ ಮೊಳಗಿದವಂದು ವಾದ್ಯಗಳು (ಕುರಾಸಾಂ. ೩೬-೯೨) ; ಮಿನುಗುವಾಯುಧದ ನೊರೆಗಳ ವಾದ್ಯದಾರ್ಭಟೆಯ ಪೆರ್ಮೊಱಹಿನ ಚಲಿವ ಕೇತನತತಿಯ ಸುಳಿಯ . . . ಸೇನಾಸಮುದ್ರವನಾಗ ಪುರಜನಂ ನಿಟ್ಟಿಸಿದುದು (ಪಂಪು. ೯೨-೦೪). [ಪೆರ್ (< ಪಿರಿದು$_1$) + ಮೊಱಹು$_2$]

ಪೆರ್ಮೊಱಗು (ನಾ). ಅತಿಶಯವಾದ ಗುಡುಗು : ಪೆರ್ಮೊಱಗಲ್ಲಿದು ಗಜ್ಜವೃಷ್ಟಿಯಲ್ಲಿದು ಸುರಿವಸ್ತ್ರಜಾಲವೆನಲ್ . . . ಬಿಲ್ಲೊದವಿದ ಗರ್ಜಿತಂ ಸುರಿವ ಸಾಯಕವದ್ಭುತವಾಯ್ತು ಸಾಲ್ವನಾ (ಜಗವಿ. ೦೬-೯೦).

[ಪೆರ್ (< ಪಿರಿದು$_1$) + ದೊಱಗು$_2$]

ಪೆರ್ಮೋಡ (ನಾ). = ಪೆರ್ಮುಗಿಲ್ : ಕಾಲ್ವೊನಲ ಕಡುಪಿಂಗಂ ಪೆರ್ಮೋಡದ ಕಳ್ತಲೆಗಂ . . . ಅರಣ್ಯದಾಭೀಳತೆಗಂ ಕೋಡದೆ ಕೊಂಕದೆ . . . ವಿಪುಳತಪದಿಂದಪರ್ಣೆಯೊಪ್ಪುತ್ತುಮಿರೆಯಿರೆ (ಗಿಂಕ. ೯-೩೮ ಪ).

[ಪೆರ್ (< ಪಿರಿದು$_1$) + ಮೋಡ]

ಪೆರ್ವಂದಿ, ಪೆರ್ಬಂದಿ, ಹೆಬ್ಬಂದಿ (ನಾ). ದೊಡ್ಡ ಹಂದಿ ; ಮಹಾವರಾಹ : ಪುಳಿಂದನಾಥನುಳಿದಾರುತೆ ಕೂರಲಗಂ ಕಱುತ್ತು ಪೆರ್ವಂದಿ [ಪಾಠಾಂ. ಪೆರ್ಬಂದಿ, ಪೇರ್ವಂದಿ]ಯನೆಯ್ದಿ ತಳ್ತಿಱಿದೊಡೆ (ಗಿಂಕ. ೧ ೦೦೯). **ಪೆರ್ಬಂದಿ** : ಧರಣಿಯುಂ ಪೆರ್ಬಂದಿ ಕೀಚ್ತೆತ್ತಿದೊಂದೆಡೆ ನೀರ್ ತೀವಿತೆನಲ್ಕೆ ಪಂಪುಪಡೆಗುಂ ಗುಣ್ಪಿಂದೆ ಪಂಪಾಸರಂ (ಕಾವಂಪು. ೦೦೬). **ಹೆಬ್ಬಂದಿ** : ಬ್ರಹ್ಮ ವಿಷ್ಣ್ವಾದಿಗಳು . . . ಹದ್ದು ಹೆಬ್ಬಂದಿಗಳಾದುದನಱಿಯಿರೇ (ಶಸ್ನಪ. ಕ. ೦೯೯-೪೪೪) ; ಈತನುಱುಬೆಗೆ ಬೆದಱಿತುರುಸಂಘಾತದಲಿ ಹೆಬ್ಬಂದಿಯೊಂದು (ಕುಪ್ಯಾಲ. ೦೩-೩೦) ; ನಿಂದನ್ನೆ ಬಳಿಕೀತನಾ ಹೆಬ್ಬಂದಿಯಿಂದಿರಲಿ (ಶೊರರಾ. ೩-೩-೨೦). [ಪೆರ್ (< ಪಿರಿದು$_1$) + ಪಂದಿ]

ಪೆರ್ವಕ್ಕಿ, ಪೆರ್ಬಕ್ಕಿ, ಹೆಬ್ಬಕ್ಕಿ (ನಾ). ದೊಡ್ಡ ಹಕ್ಕಿ ; ಗರುಡ : ಸಿರಿಯೊಡೆಯ ಕೋಲ್ಗಱಿಯ ಪೆರ್ವಕ್ಕಿಗೆಲರುಣಿಯನಱಸುತಿರೆ ರಂಗೆಟ್ಟು ಸರಿಗೆನ್ನದಾ ಪಾವಿಗಿರದಮರ್ದುಗಯ್ಯ ನೇಸರ್ಗಾಲಿಗಳು ನಡುಗಿ ಬೀಳೆ (ಶಾವಸಂ. ೩-೦೦). **ಪೆರ್ಬಕ್ಕಿ** : ಪೆರ್ಬಕ್ಕಿ ಹೆಂಗುರು ಕಾಕಂ ಚಿಲುಗೂಲಿ ರತ್ನಖಗಮಿರ್ಕುಂ ತದ್ವನಾಗೌಘದೊಳ್ (ರಾಜಕೇ. ೩-೩೯). **ಹೆಬ್ಬಕ್ಕಿ** : ಒಬ್ಬ ಹೆಬ್ಬಕ್ಕಿಯಾದ ಒಬ್ಬ ಸೂಕರನಾದ (ಸರ್ವಪ. ೦೬೩-೬೬೩) ; ಹೆ[ಪಾಠಾಂ. ಕ]ಬ್ಬಕ್ಕಿ ಗಿಡುಗ . . . ಹದ್ದೆಂಬಿವಂ ಸಾಳುವಂಗಳು ನೆಗೆದು ತಾಗಿ ಹೊಡೆಹೊಡೆದು (ಸೋಮನ. ೩-೯) ; ಪಟಪಟನೆ ಪಾರ್ವ ಹೆಬ್ಬಕ್ಕಿಗಳ ವೃಂದದ ಸ್ಫುಟತರ ಬಹುಧ್ವಾನದಿಂ (ಪುಜಾವಿ. ೦೬-೩೬). [ಪೆರ್ (< ಪಿರಿದು$_1$) + ಪಕ್ಕಿ]

ಪೆರ್ವಟ್ಟಿಯೂರ್ (ನಾ). ಒಂದು ಸ್ಥಳದ ಹೆಸರು : ಕೆಸುಗೊಳವೊಡೆಯ ಮಹಾಜನಕ್ಕೆ ಪೆರ್ವಟ್ಟಿಯೂರುಂ ಮರ್ದ್ದೂರುಮಂ ಬ್ರಹ್ಮಾದೇಯಂ ಪೊಯ್ದಮ್ (ಎಕ. IV. ಹೆಗ್ಗಡ. ೪-೨೦; ಸು. 750). [? + ಊರ್]

ಪೆರ್ವಟ್ಟೆ, ಪೆರ್ಬಟ್ಟೆ, ಹೆಬ್ಬಟೆ, ಹೆಬ್ಬಟ್ಟೆ (ನಾ). ಹೆದ್ದಾರಿ ; ದೊಡ್ಡ ರಸ್ತೆ ; ರಾಜಮಾರ್ಗ : ಅಣೆಲಾಪುರದ ಪೆರ್ವಟ್ಟೆ ತೆಂಕಣಸೀಮೆ ಮೇಣ್ಪೆಯ ಪೆರ್ವಟ್ಟೆ (ಸೌಇಇ. XI—1, ೬೬-೩೦; 1046) ; ಅನ್ಯಸ್ತ್ರೀರತಿಲೋಲತೆ ನರಕಗತಿಯ ಪೆರ್ವಟ್ಟೆ ವಲಂ (ಪರ್ವಪು. ೦೦-೧೧) ; ಒಟ್ಟಿದ ಬಣಂಬೆಯಂ ಪೆರ್ವಟ್ಟೆಯ ವಾರಿಧಿಯನೆಸೆದ ನಂದನವನಮಂ ಕಟ್ಟಿದ ಮದಕರಿಯಂ ಗುಡಿಕಟ್ಟಿದುದಂ ಕಾಣೆ ಗುಡಿಯ ನಧಿಕಂ ಬೆಳೆಗುಂ (ಅಪ್ಪಸಂ. ೯-೪೦). **ಪೆರ್ಬಟ್ಟೆ** : ಪೆರ್ಬಟ್ಟೆ ಕರಂಗೊಂಟು ದೇವತಾಲಯದ ನೆಱಲ್ಮುಟ್ಟುವೆಡೆ ನೀರ ತಡಿ ಮನೆಗಟ್ಟುವೊಡ ಶುಭಂ (ಲೋಕೋಪ. ೩-೦೨) ; ಪೆರ್ಬಟ್ಟೆಯೊಂದಿರಲ್ಕಂದೊರ್ಬಳೆ ಪೋಗುತ್ತಿರಲ್ಕೆ (ಪಳಸಂ. ೩೬೯) ; ಏಱಿಸಿ ಮಹಾಧನುವನಶನಿಬಾಣವನೆಚ್ಚು ಡೋಱುಗಳೆದವನಿಯಂ ಸಪ್ತಪಾತಾಳಕ್ಕೆ ತೋಱಿಸಿದನೊಂದು ಪೆರ್ಬಟ್ಟೆಯಂ

(ಕೃಷ್ಣಕ. ೨೯-೩೦). **ಹೆಬ್ಬುಟೆ** : ಮುಂದೆ ನಡೆದು ಎಳತುಮೆಟ್ಟಿನ ಹೆಬ್ಬುಟೆ (ಎಳ. XIV. ಎಳುಮೂ. ೦೭೦-೦೦ ; ಸು. 12ನೆಯ ಶತ) . **ಹೆಬ್ಬುಟ್ಟೆ** : ಅರ್ಜುನ ಹಳ್ಳಿಯಿಂದಾ × × ವಡಿಪುರಕ್ಕಂ ಹಿರಿಯದೇವರ ಬೆಟ್ಟಕ್ಕಂ ಹೋದ ಹೆಬ್ಬುಟ್ಟೆಯೆ ಗಡಿ (ಎಳ. II. ೩೯೭-೯೯; 1179 ?); ಮೂಡಲು ತಗ್ಗಿಗೆ ಹೋದ ಹೆಬ್ಬುಟ್ಟೆ (ಶಿಶಾ. I. ೩೦-೯೩ ; 1222).

ಹೆಬ್ಬುಟ್ಟೆಯಾಗು = ೧. ಹೆದ್ದಾರಿಯಾಗು : ದೊಡ್ಡ ದಾರಿಯಾಗು : ಪಾರ್ಥನ ತನುವಿನಲಿ ಹೆಬ್ಬುಟ್ಟೆಯಾದುದು ಬಾಣಪಥಿಕರಿಗೆ (ಕುವಾಶ್ರೀ. ೯-೩೮). ೨. ರಾಜಮಾರ್ಗದಲ್ಲಿ ಪ್ರಯಾಣಮಾಡುವವನಾಗು : ಅಟ್ಟೆಯಾಡಿದರಾಹವದಲಡಗಟ್ಟಿ ಹೊಯ್ದರು ಸುರವರರು ಹೆಬ್ಬುಟ್ಟೆಯಾದರು ಬಳಿಕ ಕಾಲನ ಪುರಕೆ ದೈತ್ಯರಿಗೆ (ಶಿಶಾಗ. ೬-೬-೩೩).

[ಪೆರ್ (< ಪಿರಿದು$_1$) + ಬಟ್ಟೆ$_1$]

ಪೆರ್ವಡಗು, ಪೆರ್ಬಡಗು (ನಾ). ದೊಡ್ಡ ಜಹಜು : ಅಡಿಗಡಿಗೆ ನಡೆವ ಪೆರ್ವಡಗುಗಳ ಬೆಡಗುಗಳ . . . ಮುತ್ತುಗಳ ಪಡೆಪಿನಿಂ ಕಡಲೆಸೆದುದು (ಕಪಪು. ೨-೯). **ಪೆರ್ಬಡಗು** : ರಣವಾರ್ಧಿಯೊಳರಿಯ ಶಿರೋಮಣಿಯಂ ತದೆ ಮಾಜುಗೊಳ್ವ ಪೆರ್ಬಡಗೆಂಬಂತಣಿಯೊಡ್ಡಿದಾಳ್ಗಳೆಲ್ಲಂ ಪೆಣನೊಡ್ಡಾಗಲ್ಕೆ ಪರಿವುವಗ್ಗದ ತೇರ್ಗಳ್ (ಪಪಶಾ. ೬-೭೦).

[ಪೆರ್ (<ಪಿರಿದು$_1$)+ಪಡಗು (<ಪಡಂಗು)]

ಪೆರ್ವಡಹ (ನಾ). ಸತತವಾಗಿ ಸುರಿಯುವ ಮಳೆ ; ಜಡಿಮಳೆ : ಪಕ್ಷಿಗಳರ್ದುಪೆಱಂಕೆಯಗ್ರದಿಂ ಜಲಲವಬಿಂದುಗಳ್ಸುರಿಯೆ ಪೆರ್ವಡಹಂ ಬಿಡೆ ಸೋರ್ವಗುರ್ವಿನೊಳ್ (ಶಾಂತೀಶ್ವ. ೦೨-೩೭).

[ಪೆರ್ (<ಪಿರಿದು$_1$) +ಬಡಹ (<ಬಡವ)]

ಪೆರ್ವಡಿ 'ಪೆರ್ಮಾನಡಿ' ನೋ.

ಪೆರ್ವಡಿಕೆ 'ಪೆರ್ವಡುಕೆ' ನೋ.

ಪೆರ್ವಡಿಯಜಿ (ನಾ). ಮುಖ್ಯ ದ್ವಾರಪಾಲಕ; ಬಾಗಿಲು ಕಾಯುವವರ ಮುಖಂಡ : ರಾಜರಾಜನನುಮತಮನಱಿದು ಪೆರ್ವಡಿಯಜಿನಾವರದಿಂ ಕಾಣಿಸಿದಂ ವ್ಯಂತರೇಶನಂ (ಶಾಂತಿಪು. ೦೦-೧೬೦).

[ಪೆರ್ (<ಪಿರಿದು$_1$)+ಪಡಿಯಜಿ]

ಪೆರ್ವಡುಕೆ, ಪೆರ್ಬಡಿಕೆ, ಪೆರ್ವಡಿಕೆ, ಹೆಬ್ಬಡಿಕೆ (ನಾ). ೧. ಅತ್ಯಧಿಕವಾದ ದುರ್ವಾಸನೆ ; ಹೆಚ್ಚಾದ ಹೊಲಸು ವಾಸನೆ : ಕೀವಿನ ಕೊಂಡಮೆಲ್ವಿನಾಗರವಱಂದೋಲ ಪೆರ್ವ[ಣಕಾಂ. ಬರ್]ಡುಕೆ ಜಾತುಗಳಾಗಳುಮಿಪ್ಪ ತಾಣ (ಸಮಯ. ೬-೩೯). **ಪೆರ್ಬಡಿಕೆ** : ೨. ಅತ್ಯಂತ ಹೊಲಸಾದುದು ; ಬಹಳ ಹೇಸಿಗೆಯಿಂದ ಕೂಡಿದುದು : ಸುಡುವಡಗಿಂ ಕರಂ ಪೊಗೆವ ಪರ್ಬುವ ಕರ್ಬೊಗೆ ಪೆಕ್ಕಮಪ್ಪ ಪೆರ್ಬಡಿಕೆಯ ನಾತಂ (ರೇಸಾಪ. ೬-೩೩); ಕಡುಪೆರ್ಬಡಿಕೆಯ ನಾತಂ ತೊಡರ್ದಿರೆ ಭೀಕರದೆನಿಪ್ಪ ಪೆಣನಂ ಕಾಣುತ್ತೆ (ಶ್ರೀಪಾ. ೩೧-೩೬). **ಪೆರ್ವಡಿಕೆ** : ೧. ಸುಡುಸುಡು ನಿಮ್ಮ ದೇವತನಮೋವುದು ಕೀವೊಸರುತ್ತಮಿರ್ಪ ಪೆರ್ವಡಿಕೆಯ ತೊನ್ನನಂ ಬಯಸಿ ಬಂದಿರಿ (ಕುಕ್ಕುಶ್ರೀ. ೯-೨೯). **ಹೆಬ್ಬುಡಿಕೆ** : ೧. ನಿಮ್ಮ ತನುವಿನ ಹೆಬ್ಬುಡಿಕೆಯ ಮುಂದೆ ಒಬ್ಬರಾದರು ನಿಲಬಹುದೆ (ಪಪಗೋ. ೨೫೯-೦೬); ನಡೆವೆಣನೆ ನಿನ್ನ ತನು ಹೆಬ್ಬುಡಿಕೆ ನಾಱುವುದು (ಶಾಪುರಿ. ಹ. ೨೫೩-೦೯); ಹೇಸಿಕೆಯು ಹೆಬ್ಬುಡಿಕೆ ಕೀವು ರಕ್ತದ ಕುಂಡ (ಪಂಕಾಗಾ. ೨-೩೫-೦೦).

[ಪೆರ್ (<ಪಿರಿದು$_1$) + ಪಡುಕೆ]

ಪೆರ್ವಡುಕೆನಾತ (ನಾ). ಅತ್ಯಂತ ಹೊಲಸು ವಾಸನೆ : ಅತ್ಯಧಿಕವಾದ ದುರ್ಗಂಧ : ಮೆಯ್ಯೋಗಡಿಪಂತು ಪೆರ್ವಡುಕೆನಾತದ ಯೋನಿಮುಖಂಗಳಿಂದೆ ಬೆಟ್ಟುಗಳ್ (ಅಪಂಪು. ೯-೨೯). [ಪೆರ್ವಡುಕೆ + ನಾತ]

ಪೆರ್ವಡೆ, ಪೆರ್ಬಡೆ (ನಾ). ದೊಡ್ಡ ಸೈನ್ಯ : ತನ್ಮಧ್ಯದೊಳ್ ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ಬಾಧಮಿರ್ದತ್ತು ಪೆರ್ವಡೆ ವಾರಾಶಿಯೊಳಿರ್ದ ಬೈತ್ರದೊಳಗಂದೆತ್ತಂ ತೆರಳ್ದರ್ದವೊಲ್ (ಅರಿಪು. ೦೩-೬೦) ; ನಿಷ್ಠುರತನದಿಂದೀ ಪೆರ್ವಡೆವೆರಸು ಮಹಾನೆರವಿವೆರಸು ಕಟ್ಟಾಳ್ತನದಿಂ ಪರಿತಂದು (ಧರ್ಮಾಮೃ. ೬-೦೦೬). **ಪೆರ್ವಡೆ** : ಆ ಪೆರ್ಬಡೆಯಂ ಪ್ರಾಚೀಕೂಪಾರಕ್ಕೊಯ್ದ ನೃಪತಿ ಸೇನಾಪತಿ . . . ಅಂದಂಬಡೆದಂ (ಶಾಂತಿಪು. ೦೦-೦೩೭) ; ಪೆರ್ಬಿದ ಕಡಲೆಂಬಿನಂ ಮಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ (ಕಬ್ಬಿಗ. ೨೦೭); ಪೆರ್ಬಡೆ ನಡೆದುದೇನೆಂದೆನು (ಭಾಪಕಾಂ. ೬-೬).

[ಪೆರ್ (<ಪಿರಿದು$_1$)+ಪಡೆ$_2$]

ಪೆರ್ವಡೆಗಿತ್ತಿ (ನಾ). ದೊಡ್ಡ ಸೈನ್ಯದ ಒಡತಿ : ಆ ಸಮಯದೆ ಬಂದಳೊರ್ವ ಪೆರ್ವಡೆಗಿತ್ತಿ ದೇಶಾಧಿಪತಿಯತ್ತಣಿಂದ (ಅಂಪಸ. ೩-೧೫).

[ಪೆರ್ವಡೆ + —ಗಿತ್ತಿ]

ಪೆರ್ವಣ್ (ನಾ). ತೋರವಾದ ಹಣ್ಣು ; ದೊಡ್ಡಗಾತ್ರದ ಹಣ್ಣು. ಪೆರ್ವಣ್ಣೊತ್ತಿಂದೆ ಪುತ್ತಿಂಗಿಳಿಗಿದ ನೆಲದಿಂದುಣ್ಣೆ ತಣ್ಗಾಂಪಿನುರ್ವಿಂ ನೇರ್ಪಟ್ಟೊಳ್ವಕ್ಕೆ ಪುತ್ತೆರ್ದೊಗೆದು ಮುಸುಱ ಮೆಯ್ಯಂಟು ಕಾಯ್ಕಾಯ್ದು ದೆಂದೆಂದೊರ್ವನ್ನಂ ಪಾಂಥರೆತ್ತಂ ಬಳಸಿದ ರಸನಾತ್ಮಾತುಳಂಗಂ ಅಲ್ಲಿ ಚೆಲ್ವಾದುವಾದಂ (?) (ಪಂಪ್ರಪು. ೦೦-೯೯).

[ಪೆರ್ (< ಪಿರಿದು$_1$) + ಪಣ್$_3$]

ಪೆರ್ವಯಲ್, ಪೆರ್ಬಯಲ್, ಹೆಬ್ಬಯಲು (ನಾ). ೧. ಒಂದು ಸ್ಥಳದ ಹೆಸರು : ಪೆರ್ವಯಲ ಕೆಱಯಂ ತೆನನ್ನಾಕರುಂ ಕೊಳನೆಲ್ಲೂರ ಸಾಲತ್ತರುಂ . . . ಸಾಕ್ಷಿ (ಎಳ. III. ಎಡಕೊ. ೬೦-೭೦; ಸು. 890) ; ನಗುಲರಸಂಗೆ ಪೆರ್ವಯಲ್ಬನ್ನೆರಡಱ ಕಿಱುದೆಱ (ಕ್ರಿಶಾ. ೦೯೩೦. ೭೯-೩೫ ; 1053 ?). **ಪೆರ್ಬಯಲ್** : ೨. ವಿಸ್ತಾರವಾದ ಮೈದಾನ ; ವಿಶಾಲವಾದ ಜಾಗ : ಪಱುಗಳ್ ಪೆರ್ಬಯಲಾಗೆ (ಕಾಸ್ಮಸಾ. ೯೬೩). **ಹೆಬ್ಬಯಲು** : ೧. ತಟ್ಟೇಕೆರೇ ಹೆಬ್ಬಯಲು ನಾಮಾಖ್ಯಾಂ ಸಹ ಪಂಚಭಿಃ ಉಪಗ್ರಾಮೈಃ . . . ಸಂಯುತಂ (ಎಳ. VII. ಶಿಪಮೂ. ೨-೯೩; 1641).

[ಪೆರ್ (< ಪಿರಿದು$_1$) + ಬಯಲ್(< ವಯಲ್)]

ಪೆರ್ವಯ್ತಂಗೊಳ್ (ಕ್ರಿ). ಹುಚ್ಚುಹಿಡಿ : ಮುನ್ನವಿ ತಪ್ಪ ನಿರ್ಬುದ್ಧಿತನವಿಲ್ಲ ನಿನ್ನಂತಪ್ಪ ಬುದ್ಧಿವಂತರುಂ ಪೆರ್ವಯ್ತಂಗೊಂಡರಂತೆ ಬಡಸಾದುವಂ ಕಳ್ಳನೆಂದು ಬೆನ್ನಟ್ಟಿ ಬಂದುದಕ್ಕೆಮಗೆ ಪಿರಿದುಂ ವಿಸ್ಮಯಮಾದಪುದು (ಧರ್ಮಾಮೃ. ೬-೦೦೯). 'ಪೆರ್ವೈತ್ತಿಕ' ಪರಾ. [? + ಕೊಳ್$_1$]

ಪೆರ್ವರ, ಪೆಮ್ಮರ, ಪೆರ್ಮರ, ಹೆಮ್ಮರ (ನಾ). ೧. ದೊಡ್ಡ ಮರ ; ಉನ್ನತವೃಕ್ಷ : ಒಗೆವ ದಿನೇಶನು ಹರಿವ ಸಿಂಧುವಂ . . . ಸೊಗಯಿಸಿ ನಿಂದ ಪೆರ್ವರನಂ . . . ದೈವಮೆಂದೆಱಗುವಾತನೆ ದೇವವಿಮೂಢನಾಗನೆ (ಪಾಶಾ. ೯೬೩). **ಹೆಮ್ಮರ** : ೧. ಪಡೆಯ ಕಾಲ್ದುಳಿಗಾಗ ಗಿಡು ಬಳ್ಳಿ ಹೆಮ್ಮರ ಪುಡಿಯಾಗೆ (ಕಂಪಸಾ. ೦೨-೬). **ಪೆರ್ಮರ** : ೧. ಅಱೊಕೆಯ ಗೋವರಣ್ಗೆ ಬರೆ ಪಾಯಿಸಿ ಘೋಟಱಯಲರ್ ತಗುಳ್ದು ಕತ್ತಱ ತಱಿದಿಕ್ಕಿ ದೇಗುಲೆ ಪೆರ್ಮರವಂ ಕಡಿವಂತೆ ಮಾಡಿದರ್ (ಕಾಪಶಾ. ೯-೧೫); ನೀರಸವಾಗೆ ಬಳ್ಳಿ ಗಿಡು ಪೆರ್ಮರಗಳ್ . . . ಬಂದುದು ಬೇಸಗೆಗಾಲಂ (ಪಂಕಾಪು. ೬-೩೫). **ಹೆಮ್ಮರ** : ೧. ಹೆಮ್ಮರನಿರ್ದೇಸದಱಿಂದಲೆತ್ತ ಬಹುದೇ ಬಲ್ಬಾರವಂ (ಸೋಕೋಕ. ೬೬); ಹೆಮ್ಮರ ನಿವಾತದಲುಡಿದು ಬಿದ್ದವು ಕೌರವೇಂದ್ರನ ಪತನಕಾಲದಲಿ (ಕುಕ್ಕಾಗ. ೯-೩); ಕಿತ್ತು ಬೀಳುವ ಹೆಮ್ಮರಂಗಳಿತ್ತಲವಱವಡಿಗಿದ್ದು ಬದುಕುವುದೆತ್ತಲೀ ಶಿಶುಪಶುಗಳು (ಶಿಶಾಗ. ೦೦-೦೦-೩). ೨. ಒಂದು ಬಗೆಯ ಮರ ; ತಿಗಡುಮರ : "ಶ್ಯೋನಾಕಃ . . . ಶೋಣಕಃ, ಅರಲುಃ—ಇವು ಹೆಮ್ಮರ" (ಶಾಪಶಾ. ೦೦೬) : ಅಯ್ಯ ಹೆಮ್ಮರದಲ್ಲಿ ಸುಗಂಧವನಱಸುವರೆ (ಅಪಪ. ೦೩-೨೯) ; ಹಾಲೆ ಹೊಂಗೇತಕಿ ವನಸಂಪಿಗೆ ಹಿಂತಾಲ ಹೆಮ್ಮರ ಕಮ್ಮರಗಳು (ಕಂಪಸಾ. ೧೯-೩೬).

[ಪೆರ್ (< ಪಿರಿದು$_1$) + ಮರ$_1$]

ಪೆರ್ವರುಷ (ನಾ). ಭಾರಿ ಮಳೆ : ಪೆರ್ವರುಷಗರೆದಾವರಿಸಲೊದನೆ ದಳ್ಳುರಿಯತಿಶಾಂತಿಯಾದುದು (ನವಮೋ. ೬ ೭).

[ಪೆರ್ (< ಪಿರಿದು$_1$) + ಪರುಷ (< ಬರಿಸ)]

ಪೆರ್ವರ್ದು, ಹೆಬ್ಬದ್ದು (ನಾ). ದೊಡ್ಡ ಜಾತಿಯ ಹದ್ದು : ಪರಿಯ ಪರ್ವಱ ಪರ್ವ ಚೆಂಬರ್ವರುತರದ ಹಡೆಹರ್ದು ಪೆರ್ವರ್ದ[ಶಾಕಾಂ. ಪೆರುಪರ್ದ]ಪಱಿಲೊಪ್ಪಿದವು (ಸಾಳ್ವಭಾ. ೩ ೨೩). **ಹೆಬ್ಬದ್ದು** : ಕಿಱು ಹಕ್ಕಿಯ ಕೊಂಡು ಕುಕ್ಕೆಯೊಳಗಿಟ್ಟು ಹೆಬ್ಬದ್ದ ಒಡಿದು ಕಬ್ಬದ್ದ ಜಾಣಸವ ಮಾಡಿ (ಪ್ರಶೋಗ. ಕ. ೩೦೬ ೦೦೦). [ಪೆರ್ (< ಪಿರಿದು$_1$) + ಪರ್ವ]

ಪೆರ್ವಲ, ಪೆರ್ಬಲ, ಹೆಬ್ಬಲ (ನಾ). ಭಾರಿಸೈನ್ಯ ; ದೊಡ್ಡ ದಂಡು : ಇದು ಪೆರ್ವಲಮಾನೊರ್ವನೆ ಕದನಂ ಪಿರಿದಕ್ಕುಂ (ರವರ್ಷಮ್ಯ. ೦೩-೦೨೫) ; ಬಲಕ್ಕೆ-ಆಳ್ವಲ ... ನೆಲವಲ, ಪೆರ್ವಲ(ಕಮದ. ೨೯೬ ಪ್ರಯೋ). **ಪೆರ್ಬಲ** : ಪೆರ್ಬಲ ದಿಂದಂ ಇಱಿಪರ್ವೆಱರೇಕಾಂಗದಿನಿಱಿಪವರಾರ್ನಿನ್ನ ತೆಱದಿನಿಱಿಪ ಬೆಡಂಗಾ (ಗದಾಯು. ೦೦-೯) ; ಕವಿತಪ್ಪ ವಿರೋಧಿಬಲಕ್ಕೆ ಭೀತಿಯಿಂ ನೆಲವಲನೆನ್ನದಲ್ಲ ದಿದು ಪೆರ್ಬಲವೆನ್ನದೆ ದೋಃಪ್ರತಾಪದಿಂ ಗಿಲಿಗಿಲಿಗಂಬವಾಡಿಸುವಂ (ಎಳ. XII, ಸಕ್ಕಶಾ. ೯೩-೦೭; 1171) ; ಕಱುತ್ತೆಱಗೆ ತಾಗಿದರಾತಿವೊಲಂತೆ ಮಾಣ್ದು ಪೆರ್ಬಲಮೊಡವಾಯೆ (ಕಾವ್ಯಸಾ. ೯೬೩). **ಹೆಬ್ಬಲ** : ತಳಿತುದೆಡಬಲಪಂಕ ದಲಿ ಹೆಬ್ಬಲ (ಕುಪ್ಪಾರ್ಪ್ರೋ. ೩-೯೦) ; ಬೊಬ್ಬಿಱಿದು ಮೂಱಂಬುಗಳಲುಱಿ ಯೆಬ್ಬಿಸಿದನಾ ಖಳತನೂಜನ ಹೆಬ್ಬಲದ ರಥ ಹಯ ಮದೇಭ ಪದಾತಿ ಸಂತತಿಯ (ಕೊರರಾ. ೬-೯೦-೨೯); ಹೆಬ್ಬಲದೊಡನಿಂತು ಕಿಱುಬಲ ಬವರ ಕಾನುವುದೆ (ಕಂಪಂ. ೦೭-೨೬). [ಪೆರ್ (< ಪಿರಿದು$_1$) + ಬಲ್$_3$]

ಪೆರ್ವಲಗೆ (ನಾ). ಅಗಲವಾದ ಗುರಾಣ್ಣೆ-ಹರಿಗೆ : ಪಿಡಿವಸಿಗಳಿಂದ ಮುಂಗೈಯ ಪೆರ್ವಲಗೆ . . . ದುಃಶ್ವಾಸ ಸಂಕಲಿತ ಸಂಗಡಿಗರೆಮನಾಳ್ಗ ಳುತಮಮ ಮೈದೋರಿತು (ಬುಕಾಶಾ. ೦-೦೭-೯೬).

[ಪೆರ್ (< ಪಿರಿದು$_1$)+ಪಲಗೆ]

ಪೆರ್ವಲೆ, ಪೆರ್ಬಲೆ, ಹೆಬ್ಬಲೆ (ನಾ). ದೊಡ್ಡಬಲೆ ; ಮಾರಿಬಲೆ : ಪೆರ್ವಲೆ ಬಡಿಕೋಲ್ ಕಿಱುನಾಯ್ (ಕಮದ. ಪ. ೦೯೨ ಪ್ರಯೋ) ; ಚಕ್ರವಲೆ ಮಿಗೆ ಮುಕ್ಕಣ್ಣಿವಲೆ ಪೆರ್ವಲೆಯ ಪೊಱಿಗಳು ವಿಂಧ್ಯಕನ ಕೂಡೆ (ಸಾಳ್ವಭಾ. ೩-೦೮) ; ಪೆರ್ವ[ಶಾಕಾಂ. ಬರ್]ಲೆ ತೊಡಂಪುವಲೆ ಕೊಲ್ವಲೆ . . . ಬಿಡುವಲೆಗಳೆನಿಪ್ಪುವೆಸೆದುವಾ ಬೇಂಟಿಗರೊಳ್ (ಪಂಪಂ. ೩-೨೯). **ಪೆರ್ಬಲೆ** : ಪೆರ್ಬಲೆ . . . ಕವಲಂಬುಸಹಿತಂ ಭೋರನೆ ನೆರೆದತ್ತು ಬೇಂಟೆಕಾಱರ ತಂಡು (ಪಳಸಂ. ೬೯); ಸ್ಮೃತಿನಿಕರವೆಂಬ ಪೆರ್ಬಲೆಗಳಂ ಬೀಸಿ . . . ಶಮೆ ದಮೆ ಶಾಂತಿ ಸತ್ಯಸಂಗತಿ ಬೇಂಟೆ ಗುಚಿತಸಾಧನವಾಗೆ ಮೃಗಕೇಳಿಯಿಂದಿರ್ವನಹೀಟಕನು (ಸೌಂದಪು. ೦೬-೯೬). **ಹೆಬ್ಬಲೆ** : ಹೆಬ್ಬಲೆಯ ಬೆಳ್ಳಾಲವಲೆಗಳ ಮಯಣದಂಟಿನ ಮೇಲುಕೊಂಬಿನ ಬೇಟೆಗಾಱರು ಬಳಸಿದರು ಶಿವನ (ಕುಪ್ಪಾಲ. ೫-೩೩); ಭ್ರಾಂತಿಯೆಂದೆಂಬ ಹೆಬ್ಬಲೆಗೆ ಸಿಕ್ಕಿ ಅಂತ್ಯ ಮೊದಲನು ಕಾಣೆ (ಪುರಂದ. ೨-೦೬೩-೩); ದೈವ ಮಂಚಿಸಲು, ಬುದ್ಧಿಬಲದಿಂದಾರು ಬದುಕಬಹುದು ? ಒಡ್ಡಿದಾ ಹೆಬ್ಬಲೆಯ ಹಾರಬಹುದು ? (ಪಾರಸಿ. ೬-೨೦). [ಪೆರ್ (< ಪಿರಿದು$_1$) + ಬಲೆ$_1$]

ಪೆರ್ವಸ, ಪೆರ್ಬಸ, ಪೆರ್ಬಸವು (ನಾ). ದೊಡ್ಡ ಬರ ; ಭೀಕರಕ್ಷಾಮ : ಪಾವಿಲಿ ಬೆಕ್ಕು ಮತ್ಸ್ಯಮಿನಿತುಂ ಪೊಱಗಾಗಿರೆ ಮತ್ತಮನ್ಯಜೀವಾವಳಿ ತಮ್ಮ ಜಾತಿಯಡಗಂ ತಿನೆ ಪೆರ್ವಸಮಕ್ಕುಂ (ಲೋಕೋಪ. ೪-೬೮); ಮಿಂಚಿನ ಬಣ್ಣಮೆಯ್ದೆ ಕರಿದಾದೊಡೆ ಪೆರ್ವಸವಕ್ಕು (ಅಟ್ಟಿಮ. ೬-೦೨). **ಪೆರ್ಬಸ** : ಸುರಧನು ಪಾಟಳರುಚಿಯಾಗಿರೆ ಸಮರಂ . . . ಅದು ಕರಿದಾಗಿರೆಯುಂ ಧಾರಿಣಿಗೆ ಕೂಡೆ ಪೆರ್ಬಸಮಕ್ಕುಂ (ಲೋಕೋಪ. ೯-೨೫). **ಪೆರ್ಬಸವು** : ಅರ್ಕನ ಸೂನು ಕುಂಭದೊಳ್ ಹೆಟ್ಟಿಗನಪ್ಪ ದೇವಗುರು ಸಿಂಹದೊಳಲ್ಲಿರೆ ಲಂಕೆಯಿಂದಮೆಬ್ಬಟ್ಟಿ ತಗುಳ್ದು ಪೆರ್ಬಸವಿನೊಳ್ ಪ್ರಜೆ ಮೂಱ ಱೊಳೊಂದು ಭಾಗೆಯುಬ್ಬಟ್ಟೆಯೊಳೆಂಬಿನಂ ಬರ್ದುಗುಗುಂ ಸಲೆ ನಾಗಕುಮಾರನೋಜೆಯಿಂ (ಅಟ್ಟಿಮ. ೬ ೫೭). [ಪೆರ್ (< ಪಿರಿದು$_1$) + ಪಸ$_1$]

ಪೆರ್ವಸಲೆ (ನಾ). ದೊಡ್ಡ ಹುಲ್ಲುಗಾವಲು : ಅಸದ್ರಿಶವಿಂದುಮಂಡಳವ ದಿಂದಮ್ರಿತೋಜ್ವಳಕೀರ್ತ್ತಿಕಾಂತಿಗೀಕ್ಷಿಸೆ ರಿಱಿವುಳ್ಳುದೊಂದು ಕಱಿಯಿಲ್ಲದು ದೊಂದಱಿಂದವಂದು ಹೋಲಿಸಿದಪೆನಿಂದು ನಾಳೆ ರಿಪುಹರ್ಮ್ಯತಳಂಗಳ ಮೇಲೆ ತಳ್ತ ಪೆರ್ವಸಲೆಗೆ ಪಾಯ್ಗುವಿಂದುವಮ್ರಿತಂ ಬಳಿಕಂದೆಣೆ ಚಂದ್ರ ಮಂಡಳಂ (ಸೌಇಇ. IX-I, ೩೯೩-೩೦; 1226). [ಪೆರ್ (< ಪಿರಿದು$_1$) + ಪಸಲೆ]

ಪೆರ್ವಸಿವು (ನಾ). ಹೆಚ್ಚಾದ ಹಸಿವು : ವಸುಧೆಗಧೀಶನಪ್ಪ ನಳನಧ್ವರ ಸತ್ಫಲದಿಂ ಸುರರ್ಗೆ ಪೆರ್ವಸಿವಡಗಿತ್ತು (ನಳಸಂ. ೩೩).

[ಪೆರ್ (< ಪಿರಿದು$_1$) + ಪಸಿವು (< ಪಸಿ$_2$)]

ಪೆರ್ವಸುಗೆ (ನಾ). ಒಂದು ಸ್ಥಳದ ಹೆಸರು (?) : ಲೊಕ್ಕಿಗುಣ್ಡೆಯ ಊರೊಡೆವೊಲದ ಪೆರ್ವಸುಗೆಯ ಸ(ಶ)ಂಕರಯ್ಯಂ(ಯ್ಯ)ನಾಯಕರ ಮಗಂ (ಎಇ. XIX, ೨೦೯-೩ ; 1037). [?]

ಪೆರ್ವಳವಿಗೆ (ನಾ). ಅತಿಶಯವಾದ ಬೆಳವಣಿಗೆ : ದಳದಳಿಸಿ ಪೊಸ ಕೆಂದಳಿರ್ಗಳ ಕಾವಣವೊ ಕಮಳಿನಿಯ ರಾಗ ಪೆರ್ವಳವಿಗೆಯೊ ಪೇಱಿಮೆನೆ ರಣ್ಗೊಳಿಸಿದುವರುಣೋದಯಂ ಸುರೇಂದ್ರನ ದೆಸೆಯೊಳ್ (ರರ್ಮಪ. ೨-೩೦).

[ಪೆರ್ (< ಪಿರಿದು$_1$) + ಬಳವಿಗೆ]

ಪೆರ್ವಳಿ, ಹೆಬ್ಬಳಿ (ನಾ). ೧. ದೊಡ್ಡ ಮನೆತನ ; ಹಿರಿಯ ವಂಶ : ಶಸ್ತ್ರಮಂ ಶಾಸ್ತ್ರಮಂ ಕಲ್ತಂ ಮೇಣ್ ಪೆರ್ವಳಿಯೊಳಾದವಂ ಅವನಂ ಕಂಡವಂ ವ್ಯರ್ಥಕಾರ್ಯನಾದುದು ಕಾಣದು (ಸೌನಂದ. ೨-೬). **ಹೆಬ್ಬಳಿ** : ೨. ಒಂದು ವಂಶದ ಹೆಸರು (?) : ಹೆಬ್ಬಳಿ ಮೊದಲಾದ ಬಳಿಯವರ ಕಯ್ಯಲು × (ಸೌಇಇ. IX-ii, ೯೦೬-೦೭ ; 1004).

[ಪೆರ್ (< ಪಿರಿದು$_1$) + ಬಳ್$_2$ (< ಬಱ್$_3$)]

ಪೆರ್ವಳು 'ಪೆರ್ವಱು' ನೋ.

ಪೆರ್ವಳೆ 'ಪೆರ್ವಱೆ' ನೋ.

ಪೆರ್ವಳ್ಳ, ಪೆರ್ಬಳ್ಳ (ನಾ). ೧. ನೀರಿನ ದೊಡ್ಡ ಹಳ್ಳ. ೨. ಒಂದು ಹಳ್ಳದ ಹೆಸರು : ತಸ್ಯ ಸೀಮೆ ಮೂಡಾಯ್ದೆರ್ವ್ವಳ್ಳಮೆ ಪೊಟೆವಾಡಿಯ ಸೀಮೆಯುಳ್ ಕೂಡಿತ್ತು . . . ಮೂಡಯ್ತೂಡಿಲ ಪೆರ್ವ್ವಳ್ಳಮೇ ತೆಂಕಯ್ಯಗ್ಗೊತ್ತಿಗೂಡಲ ಪಳ್ಳಮೇ . . . ಸೀಮೆ (ಎಳ. IV, ಹನ್ಯಪ. ೯-೭; ಸು. 750). **ಪೆರ್ಬಳ್ಳ** : ೧. ಅತಿಪ್ರಬಲಜಲಪ್ರವಾಹಂ ಬೆಳ್ಳಂ ಗೆಡೆದು ಪರಿತರ್ಪ ಪೆರ್ಬಳ್ಳದೊಳ್ ಪಿರಿದಪ್ಪ ತೆಪ್ಪದ ಮೇಲೆ ತೇಂಕುತ್ತುಂ (ಪಂಪಂ. ೨೯೬-೧೭) ; ಅಸಿದುವರಿವ ಪೆರ್ಬಳ್ಳದಿರ್ವಕ್ಕದೊಳ್ ನಿಲ್ತೊಸೆ ದೊಂದಂ ಜಾನಿಸುತ್ತಿರ್ದುದು ಚಳಶಫರೀಕಾಲಕೂಟಂ ಬಕೋಟಂ (ಪಗಸಿ. ೦೭-೬೨). [ಪೆರ್ (< ಪಿರಿದು$_1$) + ಪಳ್ಳ]

ಪೆರ್ವಳ್ಳಿ, ಪೆರ್ಬಳ್ಳಿ$_2$ (ನಾ). ಒಂದು ಸ್ಥಳದ ಹೆಸರು : ಚೋಬರ ಪಿಟ್ಟುವೆಯ್ಯ ಪೆರ್ವ್ವಳ್ಳಿಯ ತುಱುಗೊಳೊಳ್ ಸ್ವರ್ಗ್ಗಸ್ಥನಾದಂದು (ಎಳ. XI, ಪೊಳಲ್ಕೆ. ೬೫-೬; 977). **ಪೆರ್ಬಳ್ಳಿ$_2$** : ಪೆರ್ಬ್ಬಳ್ಳಿ ನಾಮ ಗ್ರಾಮಾನಾಂ ಮಧ್ಯೇ (ಎಇ. IX, ೨೦೯-೬೦; 750).

[ಪೆರ್ (< ಪಿರಿದು$_1$) + ಪಳ್ಳಿ$_1$]

ಪೆರ್ವಱೆ, ಪೆರ್ಬಱೆ, ಹೆಬ್ಬಱೆ (ನಾ). ದೊಡ್ಡ ಹರೆ.- ತಮಟೆ : ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱೆಯಂ ಪೊಯ್ಸಿ ಕೆಲಕ್ಕೆ ನಾಣ್ಚೆ ತಲೆಗುತ್ತಿರ್ಪಾಕೆಯೇ ಜೋಡೆಯೇ (ಪಂಪಭಾ. ೯-೬೨). **ಪೆರ್ಬಱೆ** : ಅಱಿಕೆಯ ತೇರ್ ಪಱಿಯಿಗೆ ಪೆರ್ಬಱೆ ಚಕ್ರಂ ರಾಜ್ಯಚಿಹ್ನಮೆಂಬಿವಱಿಂ ಗೆಂಟಱೊಳೆ ಬರವಂ ವಿರೋಧಿಗಳಱಿಯೆ ಜಯೋದ್ಯೋಗ ಪೇಚರೇಂದ್ರಂ ಬಂದಂ (ಶಾಂತಿಪು. ೯-೯೦) ; ಪೆರ್ಬಱೆಯಂ ಪೊಯ್ಸುತ್ತಂ . . . ಅತಿ ಗರ್ಬದಿ ಮಾಱಾಂಕನೆನಿಪ ಭಟನೇಳ್ತಂದಂ (ತ್ರಿಪುಪ. ೨೩-೦೯). **ಹೆಬ್ಬಱೆ** :

ಹೆಬ್ಬಱೆಗಳು ಬಾಱಿಸುವ ಗತಿಗುಬ್ಬುತುಬ್ಬುತ . . . ಚಾಂಗು ಭಲ ಎನುತಿರಲು (ಬಸಪು. ೫೬-೦೪) ; ಉಲಿವ ಹೆಬ್ಬಱೆಗಳನು ಕಿವಿಗಳ ಬಳಿಯ ಬೊಬ್ಬಿಡಿಸುವುದು (ಕೊರಣಾ ೬-೨೬-೨೩); ಹೊಡೆವ ಹೆಬ್ಬಱೆ ಜಾವಗಹಳೆ . . . ಜಡಿವ ದನಿಗಳಿಂದ ತಳವಾಱರುಗಳ ಪಡೆ ತಿರುಗುವುದು (ಕಂಪಸಿ. ೦೦-೦೪೦). [ಪೆರ್ (< ಪಿರಿದು$_1$) + ಪಱೆ$_1$]

ಪೆರ್ವಟು, ಪೆರ್ವಳು, ಹೆಬ್ಬಳುವ (ನಾ). ದಟ್ಟವಾದ ಕಾಡು ; ಮಹಾರಣ್ಯ : ಅಂತೆಂತಾನುಮೆಯ್ದೆವಂದುಜ್ಜಯಿನಿಯ ಪಡುವಣ ಪೆರ್ವಟುವಂ ಕಟಿದು . . . ಸೀತೆ ಸೇದೆವಟ್ಟಿರ್ಪುದುಂ (ಪಂಠಾಪಾ. ೬-೦೦೩ ಪ). **ಪೆರ್ವಳು** : [ನಾಡು ಬೀಡುಗಳನಂದು] ಕಳೆದು . . . ಶಬರಸಂದಣಿಯಿಂದಗುರ್ವಿಸುವ ಪೆರ್ವಳುವನು ಪುಗುತಿರಲು (ಕುಪುರಾ. ೬-೦೦೦). **ಹೆಬ್ಬಳುವ** : ಬೆಳೆದ ಹೆಬ್ಬಳುವಕ್ಕೆ ಕಾಲಾನಳನು ಕವಿದಂದದಲಿ ಮುರಹರನಲಘುಬಾಣವ್ರಾತ ಕವಿದುದು ಸಾಲ್ವನೆಡಬಲದ (ಪಿಭಾಗ. ೦೨-೬೨-೨೨). [ಪೆರ್ (< ಪಿರಿದು$_1$) + ಪಟು$_1$ (< ಪಟುವ)]

ಪೆರ್ವಟ್ತಿ (ನಾ). ಒಂದು ಊರಿನ ಹೆಸರು (?) : ಪೆರ್ವಟ್ತಿಯ ತೆಂಕಾಯೊಟ್ಟೆ ಎ ಪಡುವಾಯ್ವಾಟ್ಟೇಲಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ (ಎಕ. IV, ಎಡತೂ. ೬೦-೭೫ ; ಸು. 890). [?]

ಪೆರ್ವಾಗಿಲ್, ಪೆರ್ಬಾಗಿಲ್, ಹೆಬ್ಬಾಗಿಲ್, ಹೆಬ್ಬಾಗಿಲು (ನಾ). ದೊಡ್ಡ ಬಾಗಿಲು ; ಮಹಾದ್ವಾರ : ಪೆರ್ವಾಗಿಲ ನೆಲೆವಾಡದಗುರ್ವನದೇನೆಂಬೆಂ (ಧರ್ಮಾಪಾ. ೨-೦೨೦); ಜವಹುರದ ಪೆರ್ವಾಗಿಲಂ ಪುಗುತರ್ಪಂತಿರೆ ಬರ್ಪಟಿ ಬೀರ ನೀನಾರವಂ (ರಾಮಾಶ್ವ. ೯೫-೨೦). **ಪೆರ್ಬಾಗಿಲ್** : "ಪರಿಕೂಟಮಾ ಹಸ್ತಿನಖಮೆನಲು ಪೆರ್ಬಾಗಿಲಕ್ಕು" (ಪುಂಗಣಾ. ೫೬-೪); ನರಪ ಬಲ್ಲಾಳ ನರಪನೆಯ ಪೆರ್ಬಾಗಿಲೊಳಗಂದಳವನಿಳಿದು ನಿಂದು (ಪಪ್ಪಣಾ. ೯-೦೦); ಆ ಪಟ್ಟಣಕ್ಕನುಪಮಿತನವರತ್ನಮಯದ ಮುನ್ನೂಱಱುವತೆಸೆವ ಪೆರ್ಬಾಗಿಲ್ಗಳು (ಶಪಪು. ೦೦-೩೪); ಪೊಳಲ ಪೆರ್ಬಾಗಿಲ್ಗಳಿಕ್ಕಿದವು (ಶೈಪುಣಾ. ೯-೦೬). **ಹೆಬ್ಬಾಗಿಲ್** : ಮುಖಂ, ನಿಃಸರಣಂ— ಈ ೨ ಹೆಬ್ಬಾಗಿಲ ಮುಂತು (ಹಲಾಯು. ೪೯-೦೫೪). **ಹೆಬ್ಬಾಗಿಲು** : ಪುರದ ಹೆಬ್ಬಾಗಿಲ ಮುಚ್ಚುಳ ನಗರದೇವತೆಯರ್ಕೀಲಿಸಲ್ (ಪುಷ್ಯಾಸ್ತ್ರ. ೬-೩೯ ಪ) ; ಪುರದ ಹೆಬ್ಬಾಗಿಲು ಗಳಿಕ್ಕಿತು (ಕೌಶಿಣಾ. ೨೦-೩೨); ಊರು ಸೂರೆ ಹೋದ ಮೇಲೆ ಹೆಬ್ಬಾಗಿಲು ಹಾಕಿದರು (ಗಾಪ). [ಪೆರ್ (< ಪಿರಿದು$_1$) + ಬಾಗಿಲ್]

ಪೆರ್ವಾಣದಿ (ನಾ). ಒಬ್ಬಾತನ ಹೆಸರು : ಕಲಿವಲ್ಲವ(ಭ)ರ್ ಪೆರ್ವ್ವಾಣದಿಯರಸರ್ (ಇಅ. XIV, ೨೩೨-೫೬; ೨ಸಯ ಶಪ).

[P ಇದು 'ಪೆರ್ವಾನಡಿ' ಎಂಬುದರ ಅಪಲಿಖಿತವಿರಬಹುದು]

ಪೆರ್ವಾತು, ಪೆರ್ಮಾತು, ಹೆಮ್ಮಾತು (ನಾ). ೧. ಅಹಂಕಾರದ ಮಾತು : ಕೊರ್ವಿದಾ ಪೆರ್ವಾತುಗಳ್ಗಾಂ ಬೆವರ್ವಂತುಟಣುಗಿಯೇಂ ? (ಶ್ರೀಕಾಮಾ. ೯೯-೩೦೨). **ಪೆರ್ಮಾತು** : ೧. ಭಯಮೇಕಕ್ಕುಮದೆಂತು ಟೆಂದವಟುಮಂ ಪೆರ್ಮಾತುಮಂ ಭೂತಧಾತ್ರಿಯೊಳೋರಂತೆ ನೆಗಟ್ಟಿ (ಪಂಪಭಾ. ೦೨-೦೭೫) ; ಈ ಪರಾಕ್ರಮಮುಮಿಾ ಪೆರ್ಮಾತುಮಿಾ ಗಂಡುಮಿಾ ಸುಭಟಾಲಾಪಮುಮೆಲ್ಲಮಾ ನೃಪಸುತರ್ಗಂದೆಲ್ಲಿ ಪೊಕ್ಕಿರ್ದುದೋ (ಗಜಾಯು. ೩-೩೬). ೨. ಗಂಭೀರವಾದ ನುಡಿ ; ತೂಕದ ಮಾತು : ಭೂತಳದೊಳರ್ಥವಿಹೀನನ ಶೌಚಮಣ್ಮು ಪೆರ್ಮಾತುಕುಲಂ ನೆಗಟ್ಟಿಯಿನಿತುಂ ವಿಫಲಂ (ಕಾಪ್ಯಾಪ. ೫೩). ೩. ಕೀರ್ತಿ ; ಪ್ರಸಿದ್ಧಿ : ಆತನ ಸಿರಿಯಂ ಪೇಟ್ಟೊಡೆ ಭೂತಳದೊಳ್ ರೂಢಿವೆತ್ತ ಧನದಂಗಂ ಪೆರ್ಮಾತಿನ ದೇವೇಂದ್ರಂಗಂ ಮಾತೇಂ ಬಗೆವಂದು ನಾಲ್ವೆರಲ್ ತಾಂ ಪಿರಿಯಂ (ಧರ್ಮಾಪ್ಯ. ೬-೦೧). **ಹೆಮ್ಮಾತು** : ೪. ಒಳ್ಳೆಯ ಅಭಿಪ್ರಾಯದ ಮಾತು : ಅವರ ಬಾಯಿಗೆ ಲೋಕೋಪಕಾರದ ಹೆಮ್ಮಾತುಗಳು ಬರಲಾರವು (ಪಾಕುಣಾ. ೨೫೦). [ಪೆರ್ (< ಪಿರಿದು$_1$) + ಮಾತು$_1$]

ಪೆರ್ವಾರುವ 'ಪೆರ್ವಾರ್ವ' ನೋ.

ಪೆರ್ವಾರ್ವ, ಪೆರ್ಬಾರವ, ಪೆರ್ಬಾರ್ವ, ಪೆರ್ವಾರುವ, ಹೆಬಾರ, ಹೆಬಾರು, ಹೆಬಾರುವ, ಹೆಬ್ಬಾರ, ಹೆಬ್ಬಾರು, ಹೆಬ್ಬಾರುವ, ಹೆರ್ವಾರುವ (ನಾ). ೧. ಬ್ರಾಹ್ಮಣರಲ್ಲಿ ಶ್ರೇಷ್ಠನಾದವನು ; ಬ್ರಾಹ್ಮಣರ ಮುಖಂಡ : ಅಲ್ಲಿಯ ಪೆರ್ವ್ವಾರ್ವ್ವರ್ವಾಸುದೇವಭಟ್ಟರ್ . . . ಧಾರಾಪೂರ್ವಕಂ ಮಾಡಿ ಕೊಟ್ಟರು (ಸ್ಕೃಅಂ. ೦೯೫೯, ೬೯-೦೬; 1060); ಜಾತಿಶಪಥಂಗೊಣ್ಡೂರ ಪೆರ್ವ್ವಾರ್ವ್ವರಂ ಸೊಡರುಂ ಜೀವಿತವರ್ಗ್ಗಮುಂ ಗಡುಗೆಯುಂ ನೈವೇದ್ಯಮುಂ × × × ಬಡಪಟ್ಟರ್ಗ್ಗೆ ತಪಸ್ವಿಗಳ್ಗೆ ತಿರಿವರ್ಗ್ಗಾಹಾರದಾನಂಗಳಂ ನಡವಂತಾಗಿರೆ (ಎಕ. VI, ಕಡೂರು. ೫೦-೬೦; 1169). **ಪೆರ್ಬಾರವ** : ೧. ಓರೋರ್ವರೋರ್ವರಂ ಮೇಲೆ ಬಿದ್ದಲ್ಲಿ ಪೆರ್ಬಾರವನ ಮಗನೋರ್ವ ತೀರಲನುಸಂಧಾನಕಾರಣದಿ ಬಾಯಾಱಿ ಬಸವನೇ ಕೊಂದನವಿಧಾಯೆಂದು ಮೊಱೆಯಿಡಲ್ಕೆ (ಸಿಂಗಣಾ. ೫-೯೨). **ಪೆರ್ಬಾರ್ವ** : ೧. ತಾಗರಚೆಯವೂರೊಡೆಯ ಅರಸಿಮಯ್ಯನ ಮಗಂ ಪೆರ್ಬ್ಬಾರ್ವ್ವೆ ಮಾಧವೈಯ್ಯನ ದೇಗುಲದ ನಾರಾಯಣದೇವರ್ಗ್ಗೆ ದೇವಭೋಗಕ್ಕೆ ಧಾರಾಪೂರ್ಬ್ಬಕದಿಂ . . . ಕೊಟ್ಟಂ (ಎಕ. VII, ಶಿಕಾಂ. ೫೩-೨೫; 1027). **ಪೆರ್ವಾರುವ** : ೧. ಸಾಲಿಯೂರ × × × [ಪೆ]ರ್ವ್ವಾರುವ ಶ್ರೀ × × × ದೇವಾರಿಂಗೆ ಕಗೆಱೆಯ ಬಾಯಲೊಳಗೆ ನಿವೇದ್ಯಕೆ ಬಿಟ್ಟ ಗದೆ (ಸ್ಕೃಅಂ. ೦೯೩೦, ೯೦-೦೯; 1122). **ಹೆಬಾರ** : ೧. ನಾರಣ ಹೆಬಾರ (ಸೌಇಇ. IX-ii, ೬೨೦-೩೯; 1546). **ಹೆಬಾರು** : ೧. ಶಿಲಾಶಾಸನದ ಕ್ರಮವೆಂತೆಂದರೆ × × × ದಲ್ಲಿಯ ನರಸ ಹೆಬಾರು × × × ದ ಮರ್ಯ್ಯಾದೆಯಲು (ಎಕ. VI, ಶೃಂಗೇರಿ. ೩೩-೦೯; 1418). **ಹೆಬಾರುವ** : ೧. ಮಳಲೂರ ಅಪಣ್ಣಹೆಬಾರುವ ಮಳಲೂರ ಜನರುಗಳಿಗೆ ಕೊಟ್ಟ ಶಿಲಾಶಾಸನಕ್ರಮವೆಂತೆಂದರೆ (ಎಕ. IX, ಪಪ್ಪಪ. ೯೩-೭ ; 1572). **ಹೆಬ್ಬಾರ** : ೧. ಮುಡಲು [ಹ]ರಿದ ಹೊಳೆ ತೆಂಕಲು ಕುಂಣಾಣ ಹೆಬ್ಬಾರನ ಮಕ್ಕಳ ಉತ್ತಿ (ಕಇ. I, ೫೫-೦೬ ; 1438) ; ಆನೇಕೆರೆ ಭಾರದ್ವಾಜಗೋತ್ರದ ... ಅಪ್ಪಾಜಿ ಹೆಬ್ಬಾರ ಪುತ್ರನಿಲಯಪ್ಪ ಹೆಬ್ಬಾರ ಮಗ ವೆಂಕೈಯನು ಪಪ್ಪಿಸ್ತ ಪುದಿವೆಟ್ಟು (ಎಕ. V, ಪೇಲೂರು. ೨೬-೪ ; 1707). ೨. ವೈಷ್ಣವ ಮತ್ತು ಶ್ರೀವೈಷ್ಣವರಲ್ಲಿ ಒಂದೊಂದು ಒಳಪಂಗಡ ಮತ್ತು ಆ ಪಂಗಡಗಳಿಗೆ ಸೇರಿದವರು : ಅಹಿಚ್ಛತ್ರದ ಬ್ರಾಹ್ಮಣರು . . . ಹೆಬ್ಬಾರ, ಮೈಯ, ಕಾರಂತ (ಕುಳುಪಾ. ೦೯೦). **ಹೆಬ್ಬಾರು** : ೧. ಹೆಬ್ಬಾರು ಚಂನಪ್ಪನವರು (ಎಕ. XVI, ಪಕ್ಕಪಾ. ೯೦-೩೩; 1802). **ಹೆಬ್ಬಾರುವ** : ೧. ಪೆರಿಯಾಣ್ಡ ಹೆಬ್ಬಾರುವ ಪ್ರಮುಖವಾದಶೇಷಮಹಾಜನಂಗಳು (ಎಕ. VII, ಪೊಣ್ಣಾಳಿ. ೯೦-೩೫ ; 1185 ?) ; ಬಿಟ್ಟೆಯ ಹೆಬ್ಬಾರುವ ನಾಳು (ಸ್ಕೃಅಂ. ೦೯೨೯, ೭೩-೬; 1216). ೨. ನಡುವೆ ಹೆಬ್ಬಾರುವರ ಮಹಾಜನಂಗಳ ಗುಡಿವಾಡ (ಕೋಲಾಂ. ೩೦-೦೬); ಕೂಡಲೂರ ಅಶೇಷಹೆಬ್ಬಾರುವ ಮಹಾಜನಂಗಳು (ಎಕ. IX, ಪಪ್ಪಪ. ೦೫೫-೦೯; 1534); ತನ್ನ ಕಡೆಯ ದೊಡ್ಡ ಹೆಬ್ಬಾರುವನಿಗೆ ಸ್ವಾಧೀನ ಮಾಡಿ (ಪಪ್ಪಅ. ೨೨೦-೦೬). **ಹೆರ್ವಾರುವ** : ೧. ಹೆರ್ವ್ವಾರುವ ಚವುಂಡಮಯ್ಯನುಂ ದೇವಪಯ್ಯನುಂ ಹರಳುಗುಣಿಗನ ಮತ್ತ ೨ (ಸೌಇಇ. IX-i, ೦೬೫-೫೦ ; 1099); ಹೆರ್ವ್ವಾರುವ ಬಿಣಿಯ ಹರಿಮಯ್ಯ (ಸ್ಕೃಅಂ. ೦೯೩೦, ೯೩-೦೦; 1123).

[ಪೆರ್ (< ಪಿರಿದು$_1$) + ಪಾರ್ವ]

ಪೆರ್ವಾವು, ಪೆಬ್ಬಾವು, ಪೆರ್ಬಾವು, ಹೆಬ್ಬಾವು (ನಾ). ೧. ದೊಡ್ಡ ಗಾತ್ರದ ಹಾಗೂ ಬಹಳ ಉದ್ದವಿರುವ ಒಂದು ಬಗೆಯ ಹಾವು; ಅಜಗರ : "ತ್ರಿಲಿಂಗಃ . . . ಅಜಗರಃ, ಶಯುಃ— ಈ ೫ ಪೆರ್ವಾವು (ಹೆಬ್ಬಾವು)" (ಹಲಾಯು. ೦೦೬-೨೦) ; ಆರ್ತಧ್ಯಾನದಿಂ ಸತ್ತು ಪೆರ್ವಾವಾಗಿ ಪುಟ್ಟಿರ್ದೊಡೆ (ಪಜ್ಜಾಣಾ. ೦೪೦-೨೩) ; ಉರ್ವೀನಾಥರನೇಕರುಂ ಮಡಗಿ

ಭಂಡಾರಿಗಳಂ ಲೋಭದಿಂ ಪೆರ್ವಾವಾಗಿ ಪಿಶಾಚರಾಗಿ ಪಲಕಾಲಂ ಕಾದು ಕೊಂಡಿರ್ದರ್ (ಪಂಚಾಮೃ. ೬-೦೩೩). ೨. ಆದಿಶೇಷ : ಇಂಗಡಲೆಡೆಯ ಪೆರ್ವಾವಿನ ಹೆಡೆಯ ರತ್ನಂಗಳ ಬೆಯ್ವಳಿಗನಲಿ ಕಂಗೊಳಿಸುವ ವಾಸುದೇವನ ಶ್ರೀಚರಣಂಗಳ ಸನ್ನುತಿಸಿದನು (ಕೋಚಕ. ೬-೪). ಪೆಬ್ಬಾವು : ೨. ಸಮ್ಮಬಸನಂದೊದೆದ ಕತ್ತಲೆವೆಸರ್ದಡೆದನಂ ಕೊಂದ ಬಗೆಯೊಳಗೆದನನರಲೆಯೇರ್ವನೊಡನಾಡಿಗಿತ್ತುರು ತೂಣನಂ ತುಳಿದ ಪೆಬ್ಬಾವಿನೆಂದಲುಂಡ (ಪಂಚಮಿ. ೨೦-೨೬). ಪೆರ್ಬಾವು : ೧. ಅಂತಿರುಳ್ ನಾಲ್ಕುಂ ಜಾವಮುಂ ಮೌಹೂರ್ತಿಕನಂತೆ ಪೊತ್ತಿನೆಳವಿಯುಂ ನೋಡುತ್ತುಂ ಪೆರ್ಬಾವಿನಂತೆ ಮಂಡಲುಗೊಳ್ಳುತ್ತುಂ ... ಕಣ್ಣೊಳ್ ಬೆಳಗಾಗೆ (ಶಬರಾಮ್ಯ. ೦-೦೬೦); ಈರ್ವರು ಒಲಿದು ಭಂಡಿಯನೇಱಿ ಪೋವಾ ಬಳಿಯಲಿರೆ ಪೆರ್ಬಾವು ಕಾಣುತ (ಪಾಳ್ಕಾಪ್ಯ.೨೦-೬೩). ಹೆಬ್ಬಾವು : ೧. "ಅಜಗರಃ,ಶಯುಃ, ವಾಹಸಃ —ಈ ೩ ಹೆಬ್ಬಾವಿನ ಹೆಸರು" (ಪಾಪಕಾ. ೧೮); ಹಸಿವೆಬ ಹೆಬ್ಬಾವು ಬಸಿಱಿ ಬಂದು ಹಿಡಿದಡೆ ವಿಷವೇಱುತ್ತಯ್ಯ (ಪಂಚಾಖ್ಯ. ೦೦-೦೪); ಹೊರ್ಮು ಹೆಬ್ಬಾವಿನ ಬಸುಱಿ ಸೀಳಿಕ್ಕಿದನೆ (ಶಾಂಕಾಖ್ಯ. ೦೦-೦೯); ಓಲೆಯ ಮನೆ ಕಿಡದಂತೆ ಹೆಬ್ಬಾವುಗಳೇಳುತುರುಳುತಿದ್ದುವಾಗ (ಪಚಾ. ೨೦-೧೦).

[ಪೆರ್ (< ಪಿರಿದು$_1$) + ಪಾವು$_1$]

ಪೆರ್ವಾಳ್, ಪೆರ್ಬಾಳ್$_1$ (ನಾ). ನಿಡಿದಾದ ಕತ್ತಿ : ಉದ್ದವಾದ ಖಡ್ಗ : ಪೆರ್ವಾರಂ, ಪೆರ್ವಾಳ್ (ಪಾಪಪು. ೦೩೬ ಕ್ರಹೋ). ಪೆರ್ಬಾಳ್$_1$: ಚಕ್ರ ಪರಶು ಪಿಂಡಿವಳ್ ಪೆರ್ಬಾಳು (ಪೀಠಸ. ೨-೩೧).

[ಪೆರ್ (< ಪಿರಿದು$_1$) + ಬಾಳ್$_3$]

ಪೆರ್ವಿಡಿ, ಪೆರ್ಬಿಡಿ (ನಾ). ದೊಡ್ಡ ಹೆಣ್ಣಾನೆ : ಎಱಿತ್ರಾತಪತ್ರವ್ರಜಂ ಪೆರ್ವಿಡಿ ಸೌಧಂ ಚಿತ್ರದಣ್ಡಂ (ಎಇ XIII, ೩೩೦-೦೩: ೨೭೦); ಎಱಿದ ಪೊನ್ನ ಪಣ್ಣುಗೆಯ ಪೆರ್ವಿಡಿ ಕಟ್ಟಿದಿರಾಗೆ (ಪಂಚಪಾ. ೯-೦೦೦); ವಾಜಿ ಪೆರ್ವಿಡಿ ಪೇರಾನೆ ಸುಖಾಸನ್ನಂ ತುಱುಗೆ (ಪುಷ್ಪಕ. ೩-೬೭). ಹೆರ್ಬಿಡಿ : ಪೊಸವುದದಾನೆಯಂ ನಸಿಯ ಪೆರ್ಬಿಡಿ . . . ಪೊರ್ದಿ ಶೋಭಿಸುವಪೊಲ್ (ಶಾಂಕಪು. ೬-೨೯). [ಪೆರ್ (< ಪಿರಿದು$_1$) + ಪಿಡಿ$_3$]

ಪೆರ್ವಿದಿರ್, ಪೆರ್ಬಿದಿರ್, ಪೆರ್ವಿದಿರಂ, ಹೆಬ್ಬಿದರಂ, ಹೆಬ್ಬಿದಱು, ಹೆಬ್ಬಿದಿರ್, ಹೆಬ್ಬಿದಿರು (ನಾ). ಎತ್ತರವಾಗಿ ಹಾಗು ದಟ್ಟವಾಗಿ ಬೆಳೆಯುವ ಒಂದು ಬಗೆಯ ದೊಡ್ಡ ಜಾತಿಯ ಬಿದಿರು : ನಟ್ಟ ಕೂರ್ಗಣೆಯ ದೊಟ್ಟಿಯಿಂದೆ ಬಬ್ಬುನುರ್ವಿ ಪೆರ್ವಿದಿ [ಶಾಕಾ. ದ]ರ ಸಿಡಿಂದಿನೊಳಾ ಪುದಿದದೊಂದು ಕುಳಾಚಳದಂತೆ ಸಿಂಧುಜಾ (ಪಂಚಪಾ. ೦೦-೨೩); ತನಿಗಂಪಿನ ಬೆಮ್ಮಲ್ಗಯಿಂ ಜನಾರ್ದನನ ಭೃಂಗದಂತೆ ಸುವನೆನೋರಾಗಂ ಜನಿಯಿಸೆ ತಮಾಲವಲ್ಲವತನುರುಚಿ ಪೆರ್ವಿದಿರ ಪೊವಜನಂವೈತಂದಂ (ಪಂಚಾಮೃ. ೯-೦೯). ಹೆರ್ಬಿದಿರ್ : ಕರ್ಬಿರಲು ಹೆರ್ಬಿದಿರ ಕಡಿವುತಿರ್ದಂ ದೇವ (ಪಾಗಚ. ೪೯. ೨೩೦-೦೩); ಬರುತ ದಾರಿಯೊಳೀಡಿಱಿವ ಪೆರ್ಬಿದಿರ ವೇಳೆಯಲಿ ರೂಢಿಗುರುವಿನ ಸುತರನಱಿಯದೆ (ಪಂಚಪಾ. ೨೪-೪); ಎಸೆದುದಾ ಗಿರಿ . . . ಬೆಸಲಾದ ಪೆರ್ಬಿದಿ[ಪಾಪಾ. ದ]ರ ಕಪಿಡುಗಳ ಬೀಡುಗಳ ಶಬರಿಯರ ಸಂಸಲದೊಳು (ಕೃಪಪಾ. ೦೦-೩). ಹೆರ್ವಿದಿರು : ಬಿಡದೆ ಜಟ್ಟಿಗಳಿಲ್ಲದಾಂ ಸುಗಡದೆ ತೋಳ್ಗಳನೊಡಱಿಸಲು ಕಿಚ್ಚಡಸಿತೊ ಪೆರ್ವಿದಿರ ವೆಳಗಿನೆ ಪರ್ವಿತಾ ರವವು (ಪಾಳ್ಕಾಪ್ಯ. ೨೨-೬೮). ಹೆಬ್ಬಿದರು : ಹೆಬ್ಬಿದರು ಕಿರುಬಿದರು . . . ಹುಣಸೆಯ . . . ಎಡೆಯಡೆಗೆ ಹಾ ಭಾವಿ ಕರಡಿಯಹವಲ್ಲಿ (ಶುಂಶುಮ. ೦-೬೮). △ ಹೆಬ್ಬಿದಱು : ಮೂಡ ಹೆಬ್ಬಿದಱು ಅಲ್ಲಿ ಮೂ × × × ಮೂಡಣಸಿನರಲು ಅಲ್ಲಿ × × × ಡ್ಡೆಯ ರಲ್ಲಱಿಡು (ಎಇ. VII, ೩೪೫೦. ೬೯-೦೦೦ ; ೧೧೨). ಹೆಬ್ಬಿದಿರ್ : ಎಱಿದ್ದೊಡಮಚ್ಚಳಿಸದ ದಾಳ ಹೆಬ್ಬಿದಿರ್ಗಳ ಕೊಚ್ಚಲು ವಜ್ರಾಕ್ಷಿ ಭುಗ್ಗೆ ಮೆಚ್ಚಿಕೊಟ್ಟುಂತೆ ಮುತ್ತುಗಳು ದೊರಿತು (ಪೋಚಪ. ೦೯-೩೩). ಹೆಬ್ಬಿದಿರು : " ವಾತನೇಯಃ —ಹೆಬ್ಬಿದಿರು" (೬೩೦. ೦೩೦) : ಹಿಳಿದುರಿವ ಹೆಬ್ಬಿದಿರ ಗಂಟಿನ ಥಳಥಳತ್ಕಾರದಿ ದಿಶಾಮಂಡಳದ ಮೂಲೆಗಳೊಡೆದುವದ್ಭುತವಾಯ್ತು ಪಸದಹನ (ಶುಣ್ಮಾಪ್ರ. ೨೦-೩೭); ಬಿದಿರ ಮೆಳೆ ಧಗಧಗಿಸೆ ಘನ ಹೆಬ್ಬಿದಿರು ಛಟಿಛಟಿರೆನಲು . . . ಪಕ್ಷಿಸಂಕುಲ ವುದುರಿದುವು ಗಱಿಸಹಿತ ಬೆಂದುವು ವನದ ಮಧ್ಯದಲಿ (ಪಚಪ. ೬-೬); ನೇಱಿಲು ಹೆಬ್ಬಿದಿರುಗಳು ಕಾರಾಚ ಕಗ್ಗಲಿ ಕಂಟಿವಾಳದ ಮರ ಸೂರ ವಾರ್ಗವ ತಡೆದಿಹವು (ಕಂಪಪ. ೦೯-೩೭). [ಪೆರ್ (< ಪಿರಿದು$_1$) + ಬಿದಿರ್$_3$]

ಪೆರ್ವಿದಿರು 'ಪೆರ್ವಿದಿರ್' ನೋ.

ಪೆರ್ವಿಲ್ (ನಾ). ದೊಡ್ಡ ಬಿಲ್ಲು. —ಧನುಸ್ಸು : ಸಗ್ಗಿಗಪೆಱ್ಪೆ: ಪೆರ್ವಿಲ್ಲ ಸುಗಿಯಗ್ಗಳದೊಳ್ತಿರು (ಕಾಡ್ಕಥೆ. ೪-೮೬). [ಪೆರ್ (< ಪಿರಿದು$_1$) + ಬಿಲ್$_3$]

ಪೆರ್ವಿಸಿಲ್, ಪೆರ್ಬಿಸಿಲ್, ಹೆಬ್ಬಿಸಿಲು (ನಾ). ಹೆಚ್ಚಾದ ಬಿಸಿಲು; ಅತ್ಯಧಿಕವಾದ ಬಿಸಿಲು : ಪರ್ವಿದ ಬೆಟ್ಟ ಬೇಸಗೆಯು ಪೆರ್ವಿಸಲರ್ವಿಸೆ ಮೆಯ್ಯನೊಡ್ಡಿ ತಾಂ ನಿರ್ವಹಿಸಲ್ಕಮಾಜಿದೆ ಹಿಮಾಶುಕಳಾಳಿಯನೆತ್ತಿ ಪೊತ್ತನಾ ಶರ್ವಂ (ಪಾರಪ್ರ. ೪-೩೦). ಪೆರ್ಬಿಸಿಲ್ : ಕೆಂಡಮಂ ಕಿಡಿಯನೊಡರ್ಚುತಿರ್ದನೆನಲುರ್ಬುವ ಪೆರ್ಬಿಸಿಲಿಂದೆ ತಾಪಮಂ ಪಡೆದು (ಪಪಥಪಾ. ೨-೨೨೦). ಹೆಬ್ಬಿಸಿಲು : ಹೆಬ್ಬಿಸಿಲ ಉಗುಳುವಂತಿಹುದು ಹೊತ್ತಾರೆ (ಕಾಪ್ರ. ೪೪-೩). [ಪೆರ್ (< ಪಿರಿದು$_1$)+ಬಿಸಿಲ್]

ಪೆರ್ವೀಡೆ (ನಾ). ದೊಡ್ಡ ಬಿರುಕು. —ಸೀಳು : ಕೆಱೆಗಳ ತೊಱೆಗಳ ಸರಸಿಗಳಱುನೀರಂ ಪೀರ್ದು ಪೀರ್ದು ನೆಱೆಯದೆ ಧರೆ ಮತ್ತಜಸುದಾಯ್ವಟ್ಟ ತೆಱದಿಂ ನೆಱೆ ಪರ್ವಿದವಂದು ಬಿರಿದ ಪೆರ್ವೀಡೆಗಳುಂ (ಪಾರಪ್ರ. ೪-೮೦). [ಪೆರ್ (< ಪಿರಿದು$_1$)+ಬೀಡು$_1$ (< ಬೀಟ್ಟಿ)]

ಪೆರ್ವೀದಿ (ನಾ). ದೊಡ್ಡ ರಸ್ತೆ ; ರಾಜಮಾರ್ಗ : ಪೆರ್ವೀದಿಗಳಿಂ ನೇಸಱುವಿರ್ದಡಗಲುವೆಸೆಯೆ . . . ಸೊಗಯಿಪುದು ಸಮವಸರಣ ವಿಲಾಸಂ (ಪಾಪಪು. ೬-೦೬). [ಪೆರ್ (< ಪಿರಿದು$_1$)+ಬೀದಿ]

ಪೆರ್ವುತ್ತು, ಪೆರ್ಬುತ್ತು (ನಾ). ದೊಡ್ಡ ಹುತ್ತ : ಬಡಗ್ಗೆ ಪೆರ್ವುತ್ತು ಅತ್ತಿಯಿನ್ ತೆಜಕ್ಕೆ ದಿಣ್ಡಿಯಿನ್ ಪಡುವಯ್ ನೋಡಿ ಪೋದ ಒಬ್ಬಿಯೊಳಲಿ ಪೆಬ್ಬನಂದಿ ಕೆಱಿಯ ಮೂಡ್ಗೆ ಕಡೆಗೋಡಿತ್ತು ಬಡಗ್ಗೆ ನಪದು (ಪುಷ್ಪ. ೦೯೦೪. ೦೨-೦೯; ೩೧೦). ಪೆರ್ಬುತ್ತು : ೬೪ಸುರಿಗೊಳಂ ತತಃ ಪೆರ್ಬುತ್ತು ತತ ಆಲ್ದೊರೆ ತತೋ ಆಲ್ದೊಳ (ಎಇ. XI, ಶಾಪಾ. ೬೬-೩೨ ; ೩೩೨) ; ಪೆರ್ಬುತ್ತು ಧಾರುಣೀಧರವಾದುದ್ದೆ (ಪೀಠಪು. ೬-೩-೦). [ಪೆರ್ (< ಪಿರಿದು$_1$) + ಪುತ್ತು$_1$]

ಪೆರ್ವರ್ಬು (ನಾ). ಅತಿಶಯವಾದ ದಾನ. —ಕೊಡುಗೆ : ಪೆರ್ವರ್ಬುಗೆಯೆ' ಪರಾ.

[ಪೆರ್ (< ಪಿರಿದು$_1$) + ಪುರ್ಬು$_3$ (p← ತಮಿ. ಪುರವು)]

ಪೆರ್ವರ್ಬುಗೆಯ್ (ಕ್ರಿ). ಅತಿಶಯವಾದ ದಾನವನ್ನು ಮಾಡು : ಸೂರ್ಯ್ಯಗ್ರಹಣದಲ್ಲಿ ದತ್ತೆಯ್ಯನುಂ ಶಂಕಯ್ಯನುಂ ಪೆರ್ವರ್ಬುಗೆಯ್ದು ತಾಗೆರತ್ತಿಯ ಮಹಾಜನಕ್ಕೆ ಪೊನ್ನಬ್ಬೆ ಪೊನ್ನ ಕೊಟ್ಟು ಸಾಲೆ ನೀಡೆನ್ದು ಮತ್ಸಲಂ ಕೊಣ್ಡು ಕೊಟ್ಟ× (ಎಇ. VII, ೩೪೩೦. ೬೦-೫ ; ೩೭೮).

[ಪೆರ್ವರ್ಬು + ಮೆಯ್$_1$]

ಪೆರ್ವುಲಿ, ಪೆರ್ಬುಲಿ, ಹೆಬ್ಬುಲಿ$_1$ (ನಾ). ದೊಡ್ಡ ಗಾತ್ರದ ಹುಲಿ ; ಮಹಾವ್ಯಾಘ್ರ : ಮುಱಿದುಱಿದಿಂದ ಪೆರ್ವ್ವುಲಿಯ ಮಿಸೆಯೊಳುಯ್ಯಲನಾಡುವೊಂದು (ಕೊಗಣಾ. ೦೯೩೬. ಕಾಪರಗೆ. ೬೪-೬೯ ; ೧). ಹೆರ್ಬುಲಿ : ಆ ಪರ್ವತದ ಗುಹೆಯೊಳೊಂದು ಪೆರ್ಬುಲಿಯಿರ್ದುದು (ಪಚಾಪ್ರ. ೦೧೬-೦೦) ; ರಂರಂಗಯುಧದೊಳ್ ಬೆರಸಿದುವೆಂದು ಪೆರ್ಬುಲಿಗಳಿದ್ರುತನೂಜತಪಪ್ರಭಾವದಿಂ (ಪಂಗಣಾ. ೬-೦೦) ; ಕಲಿತನದಿಂದಂ ಲೋಗರ್ ಪುಲಿಯಂ ಪಿಡಿದೊಡಪುದೇಂ ಜಡೆಂಬರ್ತಾವೊಂದಿಲಿಯಂ ಪಿಡಿದೊಡಪುದು ಪೆರ್ಬುಲಿಯೆಂಬರ್ದುರ್ಜನರ್ಗ ತಾನಿದು ಸಹಜ :

(ಧರ್ಮ. ೦-೦೬೩)· **ಹೆಬ್ಬುಲಿ** : ನಿಲಿಸಬಹುದಯ್ಯ ಒಂದೇ ಮುತ್ರದಿಂದ ಹೆಬ್ಬುಲಿಯಂ (ಧರ್ಮ. ೪೨-೦೫೮) ; ಮುನಿ ಹೊಯ್ಕೊಂದಡೆ ಹೊಯ್ದು ಹೆಬ್ಬುಲಿಯನಾವಂ ತತ್ಸಳು ಹೊಯ್ಸಳಂ (ಎಕ. VI. ಶತಮಾ· ೦೫೩ ೩ ಚ 1275) ; ಹಸಿದ ಹೆಬ್ಬುಲಿ ಮಾಸಗಿದರೆ ಮೃಗವಿಸರಪೇಸಹುದರಸ (ಕಾಣ್ಕಡ್ರಿ· ೧೬-೨೭) ; ಬೆಳೆದ ಹೆಬ್ಬುಲಿಯೊಂದು ಮೇವ ದನಕರುಗಳಂ ಕೊಲ್ಲುತಿರ್ಪುದು (ಕಾಬಾಪ್ರ· ೭೯-೦೫೬). [ಪೆರ್ (<ಪರಿದು) + ಪುಲಿ]

ಪೆರ್ಪೆಟ್ಟು ' ಪೆರ್ಪೆಟ್ಟು ' ನೋ.

ಪೆರ್ವಡೆ, ಪೆರ್ವಡೆ, ಹೆಪ್ಪೆಡೆ (ನಾ). ಹಾವಿನ ಅಗಲವಾದ ಪೆಡೆ.-ದೊಡ್ಡ ಪೆಡೆ : ಬಲಭಿತದಿಂ ನೆಲಂ ಕುಸಿಯೆ ಶೇಷನ ಪೆರ್ಪೆಡೆ ತರ್ಗಿ ಕಂಠ ಕಂಧರ ದೊಳಗಬ್ಬಿದಂಗಿವುದು (ಕ್ಷತ್ರ. ೩-೩೬). **ಪೆರ್ಪೆಡೆ** : ಕಣ್ ತುಮುಬಿ ಪೆರ್ಪೆಡೆಯಿಂ ಮಣಿ ಸೂಸೆ ಬೇಸಜ್ಞಂ ತಿಣುಕಿದ ನಾಸಲುಮ್ಮಳಿಸಿ ಶೇಷಸಶೇಷ ಮಮೀವಿಭಾಗದುಂ (ಕಂಕಣ. ೯-೯೯). **ಹೆಪ್ಪೆಡೆ** : ಅದೆ ಕಾಣ್ ಅದೊ . . .ಪಿರಿನಾಗನ ಪೆಪ್ಪೆಡೆ ಹರಪು (ರತ್ನಕ. ೨-೨೩).

[ಪೆರ್ (<ಪರಿದು) + ಪೆಡೆ]

ಪೆರ್ವೆಣ, ಪೆರ್ಪೆಣ (ನಾ). ದೊಡ್ಡ ಗಾತ್ರದ ಹೆಣ : ದಡಿಗವೆಣ : ರಕ್ತವಾರಿ ಬೆದೆಗೂಡಿಸೆ ಸಾಲಿಡೆ ಪೆರ್ವೆಣಾ ರಣಾವನಿತಲವಿರ್ದುದಂಕುರಿತ ಮಾದಪೊರೊಕ್ಕ ಕರುಳ್ವೆಣಲ್ಗಳಿಂ (ಹಂಂಚಮ· ೦೩-೪೯); ಮುಂ ತಳರ್ದ ಭಟನಜಿಯುಟ್ಟುತ್ತುಂ ಕುಟ್ಟುತ್ತುಂ ಮೆಟ್ಟುತ್ತುಂ ಪೆರ್ವೆಣಸು . . . ಭ್ರಾಂತಿಬಡಿಸಿದರು (ಕಂಪ್ರ· ೨೪-೦೦) : ಪಾಸಿ ಪಸರಿಸಿದಂತೆ ಬಿದ್ದ ಪೆರ್ವೆಣಂಗಳಂದತಿಭಯಾವಹಮಾವ ಬಟ್ಟೆಯಂ ನಿಟ್ಟಿಸುತ್ತಿರೆ (ರಾಷಪೆ· ೩-೦೨೦ ಕ)· **ಪೆರ್ಪೆಣ** : ಜವಸುಣ್ಣುಯ್ಯನೆ ಕಾಜ್ಞದನ್ತೆ ಪೆರ್ಪೆಣದ ಬಳಂಬೆ ಪೆರ್ಗ್ಗರುಳ್ ತಿನ್ನಿಣ ನೆತ್ತರ ಪೆರ್ಬೊಸಲು (ಎಕ. VIII, ಕೊರಂ. ೦೨-೬; 1155 ?).

[ಪೆರ್ (<ಪರಿದು) + ಪೆಣ]

ಪೆರ್ವೆರಲ್, ಹೆಪ್ಪೆರಳು (ನಾ). ಕೈ ಮತ್ತು ಕಾಲುಗಳಲ್ಲಿರುವ ದಪ್ಪಗಿರುವ ಮೊದಲನೆಯ ಬೆರಳು ; ಹೆಬ್ಬೆಟ್ಟು : ಅತಿವೃಧನಿಮ್ಮ ಸ್ಮಗ್ಧಾಯತರೇಖಾಶ್ರಿತಯುಮಾಗೆ ಕರತಳದೊಳ್ ಸನ್ನತದಿನರೆಗಂಜಿ ಟೆಲ್ವಿಡಿದು ತೋಜಿ ಪೆರ್ವೆರಲೊಳಾತನುತ್ಪಮಪುರುಷಃ (ಕೋಗಳಿಚ. ೦೦-೦೩); ಬಲದ ನಾಸಾಪುಟವನೊತ್ತಿ ಪೆರ್ವೆರಲಿಂದೊಡಲ ಮರುತನಂ ರಚಿಸಿದೊವೆ ರೇಚಕಮಮ್ಮಂ (ರಚಕ. ೦೨-೬೬). **ಹೆಪ್ಪೆರಳು** : "ಅಂಗುಷ್ಠ:—ಹೆಪ್ಪೆರಳು" (ಲಿಂಗಾ೦೪. ೧೯೩); ಹಿಂದುಶಿಷ್ಟರೊಳಧಿಕ ನೀನೇ ಗುಡುಗರಿ ನಮಗೀಗ ಕೊಡು ಕೊಡು ನಿನ್ನ ಹೆಪ್ಪೆರಳ (ಸಂಕಕ. ೧೬-೦೩೮) ; ಎನೆಂಬೆ ನಿನ್ನ ಬಲಗೆಯ್ಯ ಹೆಪ್ಪೆರಳನಿ ಎನೆ ಕಂದ ? (ಹರ್ಕ. ೩೧ ೦೧೬)·

[ಪೆರ್ (<ಪರಿದು) + ಬೆರಳ್]

ಪೆರ್ವೆಲೆ, ಪೆರ್ಪೆಲೆ (ನಾ). ಅಧಿಕ ಬೆಲೆ; ದೊಡ್ಡ ಮೌಲ್ಯ : ಪಾರ್ವರ್ ಪಲ್ಸುಂಡಿವುರುಳಂ ಪೆರ್ವೆಲೆಯುಂ ಪರದರ್ . . . ಸಾರ್ವರ್ (ಅಕ್ಕ· ೩೯-೩)· **ಪೆರ್ಪೆಲೆ** : ಹುತ್ತಿನಿಂ ತೆಗೆದು ಚಿಲ್ಕೆತ್ತಾಭರಣವ ಮಾಡಿತ್ತು ಪೆರ್ಪೆಲೆಗೊಂಡು ಹರನ ಭ್ರ್ಗಗೆ ಕೊಟ್ಟು (ಕೃಕವೇ. ೪-೦೦೪)·

[ಪೆರ್ (<ಪರಿದು) + ಬೆಲೆ]

ಪೆರ್ವೆಸರ್ (ನಾ). ಬಹಳ ಒಳ್ಳೆಯ ಹೆಸರು ; ಅತಿಶಯವಾದ ಖ್ಯಾತಿ : ತಾನವ್ಯತಮತಿಯಿಂಬ ಪೆರ್ವೆಸರವಂರ್ದಿರೆ ತನ್ನಹಿಪಸುಹಿಳೆ ಲರದೆ ಸೆದಿರ್ವಳ್ (ರಾಷಪೆ· ೩-೦೨)· [ಪೆರ್ (<ಪರಿದು) + ಪೆಸರ್]

ಪೆರ್ವೆಳಗು, ಹೆಪ್ಪೆಳಕು (ನಾ). ದೊಡ್ಡ ಬೆಳಕು: ತನುವನರ್ಪಿಪ ಸಮಯವಾಯಿತು . . . ಪೆರ್ವೆಳಗನಿಕ್ಕುವೆನು ಎನುತ ಬಿಚ್ಚಿದ ಕೂದಲು ದಿಕ್ಕನೆ ಶ್ರಶಾನುವಿಗೊಡ್ಡಿ (ಅಕ್ಕ· ೨೭-೬)· **ಹೆಪ್ಪೆಳಕು** : ನಾಡು ಸಿಂಗವಾದುವ್ರು. ಬೀಡು ಹೆಪ್ಪೆಳಕಾಯ್ತು, ಅದೊ ಹಬ್ಬ ಮೆರೆತ ! (ಹರಿಂಗಳು· ೦೯-೦೭)·

[ಪೆರ್ (<ಪರಿದು) + ಬೆಳಗು]

ಪೆರ್ವೆಳಸು, ಪೆರ್ಪೆಳಸು, ಹೆಪ್ಪೆಳಸು, ಪೆಪ್ಪೆಳಿಸು (ನಾ). ೧. ಬಹಳ ಹುಲುಸಾದ ಬೆಳೆ; ಸರ್ವೋತ್ಕೃಷ್ಟವಾದ ಫಸಲು: ಮೇದಿನಿ ಪೆರ್ವೆಳಸಂ ಟಗ್ಗಾದೆಮೆ ಬರೆ ತಾಮು ತಮ್ಮ ವರಿಣತಕಣೆತಾವೋದದೊಳೆ ಸೊರ್ದ ತಲೆಕುಬಾಗದಂತಿರ್ಪುವ ಸುಗುಧಾಲಿವನಂಗಳ್ (ಅಕ್ಕ· ೨-೦೦) ; ಕೊರೆಯು ತವರ್ಮನೆ ದುರಿತದ ಪೆರ್ವೆಳಸು ಕಳವು ಬಗೆವೊತೆ ಜಗದೊಳ್ (ಧರ್ಮಾನ್ಯ· ೦೨-೨೩೩ ಕಾಪ)· **ಪೆರ್ವೆಳಸು** : ೧. ಕಳವೆಯುಬೆಲೆಯುತತಿ ತೆಂಗು ಮಾಉಳಲಾ . . . ಇವೆ ಪೆರ್ವೆಳಸದವಿಯ ಬೆಳಸು (ಎಕ. VIII, ಸಾಗರ. ೦೦೯-೧೬ : 1042) ; ಸಿತೇಕ್ಷುರಸಪ್ರವಾಹವೊತ್ಕರವೆನೆ ಸಂತತಂ ಬೆಳೆಯೆ ಪೆರ್ವೆಳಸಂ ಪುಸಿಯಾಯ್ತು ದೇವಮಾತ್ಯರೆಸರೆನ್ನದಾ ನೆಲದ ಕಯ್ವೊಲಸಂ ಪೆಜತೇನನೇಬುದೋ (ಪಾರ್ಶ್ವ. ೨-೦೬)· **ಹೆಪ್ಪೆಳಸು** : ೧. ತಲೆಪೊಲದೊಳೀ ಐದೆ ಬೀಜದೆ ನೆಲೆ ನೊಸಲ ಕಣ್ ಚಿಲುವ ಮುಂಬಿವೈದಲೆವ ಜಿಡೆ ದತಭುಜವನಿವ ಹೆಪ್ಪೆಳಸುಯಾರಟ (ಸಾಸಂ೩. ೪-೩೩) ; ಒಬ್ಬೊಬ್ಬರಿದಿರಾಗಿ ಬೊನೆಪೊನೆಗಾಣಪರುಬ್ಬಿ ಹಾಜುವರು ಜಾಜುವರು ಒಬ್ಬುಳಿಗಡಿಯೆತ್ತಿ ನವಿವರು ಜೋಳವ ಹೆಪ್ಪೆಳಸೆದ್ದುದೆಂಬಂತೆ (ಕರ್ನ· ೨೩-೨೬) ; ಬಿತ್ತಿದ ಬೆಳೆಯದೆ ಎತ್ತಣ ಹೆಪ್ಪೆಳಸಿನ ಇತ್ತ ರಾಶಿಯ ನೋಡಯ್ಯ (ಸಿದ್ಧಕ್ಷ. ೨೭-೧೩)· ೨. ಅಧಿಕ್ಯ : ಹೆಚ್ಚಳ : ಉಬ್ಬಟೆಯು ಲಿದಿರಾತು ಕಾಲನ ಹೆಪ್ಪೆಳಸು ಹುಲುಸಾಯ್ತು ಬರಹೇಳೆಂಬವೋಲೊವಜು (ಕುವಾ೦೯. ೪-೦೨) ; ಹಜಿದ ಕರುಳಿನ ಕಳಚಿನೆಲುವಿನ ಕಾಣದ ಮುಂಡದ ಕೊಳುಗುಳದ ಹೆಪ್ಪೆಳಸು ಹೆಚ್ಚಿಸಿತಂತನ ವುರವ (ಕಾಣ್ಕಡ್ರಿ· ೨-೩೬)· **ಹೆಪ್ಪೆಳಸು** : ೧. ಕಾಲನ ಹರವರಿಯೊ ಹೆಪ್ಪೆಳಸ ಮುತ್ತುವ ವಿಷಗ ಸಂತತಿಯೊ (ಕುವಾ೦೯· ೪-೦೩). [ಪೆರ್ (<ಪರಿದು) + ಬೆಳಸು]

ಪೆರ್ವೇಂಟೆ (ನಾ)· ಬೇಟೆಯಲ್ಲಿ ಒಂದು ಬಗೆ ; ದೊಡ್ಡ ಪ್ರಾಣಿಗಳ ಬೇಟೆ (?) : ಬಲ್ಮೆಗು ಬಸಸಕ್ಕಂ ಸವಿಯಪ್ಪ ಕಿಱುವೇಂಟೆಯುಂ ಪೆರ್ವೇಂಟೆಯುಮುಲ್ಲದುಬಾದ ಬೇಂಟೆಯುಂ ಬೇಂಟೆಯೆನ್ನೆಂ (ಕಂಕಕ· ೩-೪೬ ಕ) ; ಬೇಂಟೆಗಳೊಳ್ ನಾನಾವಿಧ ಬೇಂಟೆಗಳಿನತೊಳವವುಳ್ಳೊಡಂ ನೃಪತಿಗೆ ಪೆರ್ವೇಂಟೆ ಕಿಱುವೇಂಟೆಯೂ ಪರವೇಂಟೆಯಿನಲ್ ಮೂಱುವೇಂಟೆ ಪೆಸರ್ವಡೆ ದಿರ್ಕುಂ (ಕಾಕೃಷ್ಣ. ೩-೧೩)· ' ಕಿಱುವೇಂಟೆ ' ಪರಾ.

[ಪೆರ್ (<ಪರಿದು) + ಬೇಂಟೆ]

ಪೆರ್ವೇಲ್ (ನಾ)· ಅಧಿಕವಾದ ಮಲ.—ಅಮೇಧ್ಯ : ಒಡಲಪ್ಪೊಡಶುಚಿ ನಿಲ್ಲದು ಪಡಿಕೆ ಕರಂ ಜಂತಿನಾಗರಂ ಪೆರ್ವೇಲಿರ್ಪೆಡೆ ಕ್ರಿಮಿಯ ರಾಶಿ (ಧರ್ಮಾಮ್ಯ· ೭-೦೩೯)· [ಪೆರ್ (<ಪರಿದು) + ವೇಲ್]

ಪೆರ್ವೈತ್ತಿಕ (ನಾ)· ಅಧಿಕವಾದ ಮನೋವೈಕಲ್ಯ : ನಿನ್ನೀ ಪುರುಳ್ಗಿಯ್ವುದರ್ಪಿನಮಕ್ಕುಂ ಬಗೆದಾ ವಿವೇಕಹವಶದಿಂ ಪೆರ್ವೈತ್ತಿ [ಣಾಗಾ೦. ಪೆರ್ಬದ್ದಿ]ಕಂಗೊಡೆಯಿಂ ಜನವಾಕ್ಯಾಮೃತಸೇವೆಯಿಂ ಕಿಡಿಸದಂ ಮೆಯ್ವುಟ್ಟಿರರ್ ಜೀವನೇ (ಜಿಣಪಂ. ೧೬-೦೬)·

[ಪೆರ್ (< ಪರಿದು) + ವೈತ್ತಿಕ]

ಪೆರ್ವೊಗರ್ (ನಾ)· ಅಧಿಕವಾದ ಕಾಂತಿ ; ಉಜ್ಜ್ವಲವಾದ ಪ್ರಕಾಶ : ಬೆಳ್ಳಿ ಸಾರಿದಳ್ ಪೆರ್ವೊಗರ ಕಡಲೊಡಲ ಪೊರ್ದಿ (ಕಾಂಬಾಕ· ೦೬೯-೪.೬)·

[ಪೆರ್ (< ಪರಿದು) + ಪೊಗರ್]

ಪೆರ್ವೊಡೆಯ, ಪೆರ್ಬೊಡೆಯ (ನಾ)· ದೊಡ್ಡ ಹೊಟ್ಟೆಯುಳ್ಳವನು; ಲಂಬೋದರ ; ಗಣಪತಿ : " ಪೆರ್ವೊಡೆಯ—ದೊಡ್ಡಹೊಟ್ಟೆಯವ, ಗಣೇಶ" (ಗಂಗಾಕ್ರ. ೨೦೩). **ಪೆರ್ಬೊಡೆಯ** : " ಎಲರುಗೆವಸಿಱನೆಡರ್ಗೆಂದಿ ಪೆರ್ಬೊಡೆಯ ನುಂಡಿಲಿವೊಗಂ . . . ಬಿಸುಗಣ್ಣಾಗಸು" (ಕ್ಷ್ಮಾ. ೫)·

[ಪೆರ್ (< ಪರಿದು) + ಪೊಡ್ಡ + — ಅ]

ಪೆರ್ಮೊಣಸೆಟ್ಟಿ (ನಾ)· ಒಬ್ಬಾತನ ಹೆಸರು : ಶ್ರೀಮತ್ ನಾಗತರನ ಮನೆವಗತಿ ಪೆರ್ಮೊಣಸೆಟ್ಟಿ ಬಿಜ್ಜಾಳೂರ ಕಾಳೆಗದೊಳ್ ನಾಗತರನ

ಮುಗಮ್ ಬುಟ್ಟಣವತಿ ಸತ್ತವ್ (ಎಇ. IX (8). ಬೆಂಗಳೂ. ೦೬೨-೩ ; ಸು. 850). [ಪೆರ್ವೊಣ್ + ಸೆಟ್ಟಿ]

ಪೆರ್ವೊದರು ‘ ಪೆರ್ವೊದಱ್ ’ ನೋ.

ಪೆರ್ವೊದಱ್, ಪೆರ್ವೊದರು (ನಾ). ಒತ್ತಾಗಿ ಬೆಳೆದ ಪೊದೆ ; ದಟ್ಟವಾದ ಹೊದರು : ಒಣಗಿದುದೊಂದು ಪೆರ್ವಿದರ ಪೆರ್ವೊದಱಂ ಪೊಱಮೆರ್ವುವಾಶುಶುಕ್ಷಣಿಯವೊಲ್ . . . ಅಭಿಮನ್ಯುವ ಕರ್ಗಣೆ ಪಾಯ್ದು ಮಂಗಲುಂ ನೊಣೆಯಲುಮುರ್ಚಿ ಮುಕ್ಕಲುಮಿದೇಂ ನೆಱೆ ಕಲ್ತುವೊ ಯುದ್ಧರಂಗದೊಳ್ (ಶಂಪಾ. ೦೦-೯೪) ; ‘ ತಾ ಪಿಂಧದ ಪೆರ್ವೊದಱ ಕರಿ ಶಂಕೆಯಿಂ ಪಾಯ್ದದಱೊಳ್ ಹರಿವಿತತಿ ಬಂಡೆವಡಿಪುದು ಮುಳಿಸಂ (ಶಂಪ್ರಭು. ೩-೩೦). **ಪೆರ್ವೊದರು** : ಓಟೆ ಮುಳ್ಳಿಡಿಗಳಂ ಪೆರ್ವೊದರುಗಳನುಳಿದ ಬೇಟೆಯಾಟದಿ ಹುಲಿಯ ನೆಲೆಗೆಟ್ಟುದಿಲ್ಲಂ (ಕಾಂಪೂರ. ೩೦-೧೩೦). [ಪೆರ್ (< ಪಿರಿದು$_1$) + ಪೊದಱ್]

ಪೆರ್ವೊನಲ್, ಪೆರ್ಬೊನಲ್, ಪೆರ್ಬೊನಲು (ನಾ). ತುಂಬಿದ ನೀರು ಇರುವ ನದಿ ; ದೊಡ್ಡ ನದಿ ; ಮಹಾನದಿ : ಭುವನಾಂತರಮಂ ಸಿಂಚಿಸುವವೊಲಾಶಾವನಿತೆಯರುಮನೋಲಾಡಿಸುವಂತೆವೊಲೆಸೆದರಂಗನೆಯರುಣ್ಮುವ ನಿಜಲಾವಣ್ಯರಸದ ಪೆರ್ವೊನಲಿಂದು (ಶಾಪಂಪು. ೯೯೯); ಸಂನ್ಯಸನಮಂ ಕೈಕೊಂಡ ಮಹಾಪುರುಷನ ಕರ್ಮಂ . . . ಪೆರ್ವೊನಲಿಂಗಿದಿರಾದ ಮಳಲೇರಿಯಂತೆ ಜರಿಗುಂ (ಧರ್ಮಾಮೃ. ೦೯-೦೦೨); ಮಂದಾಕಿನಿಯ ಪೆರ್ವೊನಲ್ ಗಿರಿಗೆ ಮೇಖಲೆಯಾಗಿ ಕಂದರದ ಸೀಮೆಯಂ ಸಿಂಗರಿಸಿದತ್ತು (ಶ್ರೀಕಾಪು. ೦೪೦-೪೩೨). **ಪೆರ್ಬೊನಲ್** : ಕಾಂತಾಜನೋತ್ಕರರತ್ನಾಭರಣಪ್ರಭಾಪ್ರಸರವಾದಂ ಶಳ್ತು ತದ್ವೀಧಿಕಾಂತರದೊಳ್ ಪೆರ್ಬೊನಲಂದದಿಂ ಪರಿಯೆ (ಶಾಪಂಪು. ೦೦೦೦) ; ಕಪಾಲದೋಳಿ ಬಾಲ್ಮೃಣಬೆಡೆ ಖಂಡದಿಂಡೆ ಬಿಸುನೆತ್ತರ ಪೆರ್ಬೊನಲರ್ಬಿಸಲ್ಕೆ ಮಾರ್ಗಣಗಣಘಾತದಿಂ ತಮಿಸಿದಂ ದಿವಿಜಾರಿ ವಿರೋಧಿಸೈನ್ಯಮಂ (ಜಗಿ. ೬-೯೯). **ಪೆರ್ಬೊನಲು** : ಪೆರ್ಗ್ಗರುಳ ತಿನ್ತಿಣಿ ನೆತ್ತರ ಪೆರ್ಬೊನಲು × × × ಳಿಪಿದನ್ (ಎಇ. VIII. ಹೊರಪಿ. ೦೨-೭; 1155 ?). [ಪೆರ್(<ಪಿರಿದು$_1$) + ಪೊನಲ್]

ಪೆರ್ವೊಳೆ, ಪೆರ್ಬೊಳೆ (ನಾ). = ಪೆರ್ಬೊನಲ್ : ಘುಳುಘುಳಿಸಿ ನೊರೆವೆಂಡು ಪಸರಿಸೆಯುಮಾ ಪೆರ್ವೊಳೆ ಪರಿಯುಡುಗದ ಸಿರಿಯನೊಳಕೊಂಡು ಭೂಮಂಡಳಕ್ಕೆ ಮಂಡನಮೆನಿಸಿ ರಂಜಿಸಿರ್ಪುದು (ಶಾಪಪ. ೬-೨೪ ಪ). **ಪೆರ್ಬೊಳೆ** : ಕಳಿತ ರಸಾಲ ನೇಱಿಲವಣ್ಣಗಳ ಪಿಕಗಿಳಿ ಚಂಚುಪುಟದಿ ಕರ್ದುಕೆ ತುಳುಕಿದ ಮಧುರಸ ದಡಸೂಸೆ ಪರಿವ ಪೆರ್ಬೊಳೆಯೆಸೆದುದನ್ಮೀಕ್ಷಿಸಿದ (ಕೋಪಕ. ೩-೨೩) ; ತೋರ್ಕೆಯ ಬಿತ್ತರು ಬಡೆದು ಬಿತ್ತಿತ್ತೆಂಬವೋಲಿರ್ದ ಪೆರ್ಬೊಳೆ (ಶಾಕುಂತ. ೦೦೨-೦೬೦).

[ಪೆರ್ (<ಪಿರಿದು$_1$) + ಪೊಳೆ$_3$ (<ಪೊಳೆ^{3})]

ಪೆರ್ವೊಱ^3 (ನಾ). ಅಧಿಕವಾದ ಭಾರ. —ಹೊರೆ. —ಹೇರು : ಇವಿರಿದನ್ವಯಕ್ಷಯದಪವಾದದ ಪೆರ್ವೊಱ^{3}ಯಂ ಆನೊರ್ವಳೆನಗಂ ಪೊತ್ತು ನಿತ್ತರಿಸಲಾರ್ಪುದೆ (ಶಾಂತಿಪು. ೯-೬೯ ಪ) ; ಅರ್ಥಮಂ ಸಾಗಿಸಿದನಿಭಪುರಿಗೆ ಪೆರ್ವೊಱ^{3}ಗಳಿಟ್ಟಣಿಸಲು (ಕೈಪಾಣಾ. ೩-೭೨).

[ಪೆರ್ (<ಪಿರಿದು$_1$) + ಪೊಱ^3]

ಪೆರ್ವೊಟಲ್, ಪೆಬ್ಬೊಟಲ್, ಪೆರ್ಬೊಳಲು, ಹೆಬ್ಬೊಳಲ್ (ನಾ). ೧. ಒಂದು ಊರಿನ ಹೆಸರು : ಪೆರ್ವೊಟಲ ಉಮ್ಮಾದಗಾಮುಣ್ಡರುಂ ಪಿಟ್ಟುವಿಗಾಮುಣ್ಡರುಂ . . . ಸಾಕ್ಷಿ (ಎಇ. IV, ಎಡಕೊ. ೬೦-೭೦ ; ಸು. 890). **ಪೆಬ್ಬೊಟಲ್**: ೧. ಮುದುಕೊಟ್ಟೂರ ವಿಷಯೋ ಪೆಬ್ಬೊಟಲ್ ಗ್ರಾಮೋ (ಎಇ. X. ಕುಲೂರು. ೭೩-೦೬ ; ಸು. 870 ಕ್ಷಾ). **ಪೆರ್ಬೊಳಲು** : ೨. ದೊಡ್ಡ ನಗರ,—ಊರು : ಪುಲಿಯೂರೆನಿಪ್ಪ ಪೆರ್ಬೊಳಲಿನಲ್ಲಿ ಹರನ ಮೆಚ್ಚಿಸಿ ಹೊನ್ನ ಮಳೆಯನೇಳುಂ ದಿವಸ ಕರೆಸಿದಳು . . . ನಿಂಬಿ (ಸೌಂದು. ೦೦-೨೯). **ಹೆಬ್ಬೊಳಲ್** : ೧. ಶ್ರೀಮತು ಹೆಬ್ಬೊಳಲ ಕೊಂಗಳೀಶ್ವರದೇವರಿಗೆ (ಎಇ. IV. ಕೃಷ್ಣರಾ. ೪೦-೦ ; 950 ?).

[ಪೆರ್ (<ಪಿರಿದು$_1$) + ಪೊಱಲ್]

ಪೆರ್ಸಂಪಗೆ (ನಾ). ದೊಡ್ಡ ಜಾತಿಯ ಸಂಪಿಗೆಹೂವುಗಳನ್ನು ಬಿಡುವ ಒಂದು ಬಗೆಯ ಮರ : ಗಂಪ ಪಟ್ಟದ ಜಾರರಿಗೆ ಇಂಪಾದ ಸೌಗಂಧರುಚಿದೋಱದಂತೆ ಪೆರ್ಸಂಪಗೆ ಮರಗಳೊಪ್ಪಿದುವು (ಕೋಪಕ. ೨೯-೯೯)

[ಪೆರ್ (<ಪಿರಿದು$_1$) + ಸಂಪಗೆ]

ಪೆಲ್ಲಣೆ, ಪೆಲ್ಲವಣೆ, ಹೆಲ್ಲಣೆ$_1$, ಹೆಲ್ಲಣೆ$_1$, ಹೆಲ್ಲವಣೆ (ನಾ). ೧. ಕತ್ತಿ ಕಾಳಗದಲ್ಲಿ ಒಂದು ವರಸೆ ; ಖಡ್ಗಯುದ್ಧದಲ್ಲಿ ಒಂದು ಪಟ್ಟು : ರಕ್ಕಸಿ[ಸಿ]ಂದುವ × × × ಗಡ್ಡದೊಳೊಡ್ಡಿ ಗಡಂ[ಗಿ ಚಾಮಟ]ಹೊಕ್ಕತಿವೇಗದಿಂ ಕಡಂಗ[ದಿಂ]ಗಿ ಪೊರಗ ಕಾಳೆವಟ್ಟದಿಂದಿಕ್ಕಿದ ಭೂರಣಂ ನೆಗಳ್ದ ಪೆಲ್ಲಣೆ ಸುರ×[ಣ]ಚಾರಣಗಳಿಂ ಮಿಕ್ಕಿರೆಸವ ವೀರವಳಕಾಲ × × ಕಲಿಗೊಗ್ಗಭೂಭುಜಂ (ಸೌಪಭ. XV. ೩೯-೩೨ ; 1184). ೨. [ಸಂಗೀತ] ಕೊಳಲನ್ನು ನುಡಿಸುವುದರಲ್ಲಿ ಒಂದು ಕ್ರಮ : ಭಣತೆ ಬೆಡಂಗುಕಾಕು . . . ಬಹುಲಾಯಿ ದೇಸೆ ಪೆಲ್ಲಣೆ ಕಳೆಯೆಂಬಿವಂ ಮೆಱೆದು ಬಾಡಿಸಿದಂ ಮುರವೈರಿ ವಾಸವಂ (ಪಗಿ. ೩-೩). **ಪೆಲ್ಲವಣೆ** : ೨. ವಾಸವಂ ಪಿಡಿದು ಕಳೆಯ ಮಯಣಮನನುವಿಂ ಪವಣಾಗಿರೆ ಪತ್ರಿಸಿ ಪೊ[ಪೆ]ಲ್ಲವಣೆ ಕರಂ ಶುದ್ಧಮಾಗೆ ಪುಂಖಿಸಿ (ಧರ್ಮಾಪ. ೨ ೦೯). **ಹೆಲ್ಲಣೆ$_1$** : ೨. ಕಿನ್ನರಂ ತನ್ನಯ ಸೊಳಹೆಯೆಂಬ ವಾಸವಂ ಕೊಂಡು ಹೆಲ್ಲಣೆಯಂ ಸುದ್ಧಮಾಗಿ ಪುಂಖಿಸಿ . . . ಮಧ್ಯಮಾದಿಯೆಂಬಾದಿರಾಗಮಂ ರೂಹುಗೊಳಿಪುದುಂ (ಶಾಂತೀಶ್ವ. ೦೬-೬೬). **ಹೆಲ್ಲಣೆ$_1$** : ೧. ಖಡ್ಗಂಗಳಂ ಜಡಿದು ಮೆಱೆವಾರ್ಪ ಸ್ವಪಕ್ಷ ಪರಪಕ್ಷ ಹೆಲ್ಲಣೆ ನಿರ್ವಾದ ಮಂದಗತಿ ಚಾರಣ . . . ತಾಳದಟ್ಟವೆಂಬ ನಾನಾವಿಧಖಡ್ಗಬಿನ್ನಾಣಮಂ ತೋಱೆ (ಕ್ರಿಪುರಾ. ೨೩-೦೬ ಪ). ೨. ರಾಗಾಗರನೆಂಬ ವಾಸುಕಾರಂ ಧಾಸುರತೆವಡೆದ ಬಾರಹೆಯೆಂಬ ವಾಸವಮಂ ಕಳೆದುಕೊಂಡು ಪೊಳೆವದಱ ರಸಂಗಳಿಂ ಪುಟ್ಟುವ ನಾದಲಕ್ಷ್ಮಿಯ ಮಾರ್ಗವೇದಿಕೆಯೆನಿಸಿ ಕಣ್ಗೊಳಿಸಿ ಕಳೆಯ ಮಯಣಮಂ ನುಣ್ಪಾಗೆ ತಿರ್ದಿ ಪುಂಖಿಸಿ ಹೊ[ಪೆ]ಲ್ಲಣೆಯ ಶುದ್ಧಮಾಗಿ ಮುಹಚಾಳೆಯಮುಮಾಡಿ (ಶಾಂತೀಶ್ವ. ೬-೯೩ ಪ) ; ಹದಿನೆಂಟುತೆಱದ ವಾಸಂಗಳ ಲಕ್ಷಣವನಱಿದಾ . . . ಹೇಳಿಕೆ ಹೆಲ್ಲಣೆ ವ್ಯಾಪ್ತಿ ಮುಂತಾದ ಇಪ್ಪತ್ತುನಾಲ್ಕು ತೆಱದಲ್ಲಿ . . . ಆಲಾಪಿಸಿ ಕೇಳಿಸುವ ಧಾಸುರತರವಾರವಿಲಾಸಿನಿಯರಿಂದ (ಪಿಪೇ. ೦೯೦). **ಹೆಲ್ಲವಣೆ** : ೨. ಅಧರದೊಳ್ತಂದಿರಿಸಿದಂ ಕೊಳಲನೊಪ್ಪದಿಂ ಮಧುರಾಕ್ಷರಂಗಳಂ ಸವಿವ ಸಮರಾಗದಿಂ ಹೆಲ್ಲವಣೆ ಹೆಕ್ಕಳಗೊಂಡು ವನದೊಳು ತೀವೆ ಎಲ್ಲಾ ಮೃಗಂ ಮೇಹನಳಿದು ಕಿವಿಗಳನೋವೆ (ಅಪಾಕ. ಕೇ. ೦೩೦-೦೯). [?]

ಪೆಲ್ಲಯಿಸು, ಪೆಲ್ಲಿಸು (ಕ್ರಿ). ೧. ಒಟ್ಟುಗೂಡು ; ತುಂಬು ; ಮಡುಗಟ್ಟು : ನವಸುಧಾಜಳಪ್ರವಾಹ ಪ್ರಸರಿಸಿ ಪರಿದು ಮಂದರೋದಾರಕಂದರದರಿಪ್ರದೇಶಂಗಳೊಳೆಲ್ಲಮಲ್ಲಿಗಲ್ಲಿಗೆಲ್ಲಿಯಾನುಂ ಪೆಲ್ಲಯಿಸಿ ನಿಂದುಂ . . . ಎಲ್ಲಿಯಾನುಂ ಕಾಟ್ಟೂರಮಾಗುಬ್ಬರಿಸಿಯುಂ ಪೋಗಿ ಮೆಲ್ಲಮೆಲ್ಲನೆ ಭದ್ರಶಾಲದನಮನೆಯ್ದುದಾಗಳ್ (ಪರ್ಧಾಪು. ೦೨-೨೯ ಪ). **ಪೆಲ್ಲಿಸು** : ೨. ಒಟ್ಟುಗೂಡಿಸು ; ಸೇರಿಸು : ಪೊದೆಯಸಿದಡ್ಡಣಂಬೊಲಿರೆ ಸುತ್ತಿದ ಸತ್ತಿಗೆ ಡಿಂಡಿಮಸ್ವನಂ ಕೆದಱೆ . . . ಕೂರ್ಪು ಕುಂದದ ಕಡೆಗಣ್ಣಗೇಣ್ ಪೊಳೆಯೆ ಪೆಲ್ಲಿಸಿ[ಶಾಣಾಂ. ಪಲ್ಲಿಸೆ. ಪೆಲ್ಲಿಸೆ]ಕಟ್ಟಿ ಕಳಕ್ಕೆ ವರ್ಪ ದರ್ಪದ ಕುಸುಮಾಸ್ತ್ರನಂಕವೆನೆ ಬೇಟರಿ ಬಂದಳದೊಂದು ದೇಸೆಯಿಂ (ಅರ್ಜುನ. ೩-೦೯); ಅಲ್ಲಿಗೆ ಮುನ್ನೆ ಬಂದಡಸಿ ನಿಂದ ಗುಹಾಮುಖನೆಂಬ ರಕ್ಕಸಂ ಪೆ[ಶಾಣಾಂ. ಪಿ]ಲ್ಲಿಸಿ ಕಂಡಕಂಡರನೆ ನುಂಗುತುಮಿರ್ದೊಡೆ ಬಾರಿಗಟ್ಟಿಮೊಂದೆಲ್ಲರುಮಿರ್ದು ಮಾಡಿದೊಡೆ ಮಾಡಿದ ಬಾರಿಯ ಸೂಟು

ನಿಯೋಗದಿಂದಲ್ಲಿಯುಮಂತೆ ಬಂದು ಬಟಿಕಾ ಮನೆಯಲ್ಲಿಗೆ ಬಂದುದೆಂಬುದಂ (ಕವಪಂ. ೩೮-೨೩). [ಪೆಲ್ಲ₀ (P<ಪ್ರಾ. ಪೇಲ್ಲ./ಸಂ. ಪೂರಯ) + — ಇಸ್ಯು]

ಪೆಲ್ಲವಣೆ 'ಪೆಲ್ಲಣೆ' ನೋ.

Δಪೆಲ್ಲಾಪೆಲ್ಲಿ 'ಹೆಲ್ಲಾಹೆಲ್ಲಿ' ನೋ.

ಪೆಲ್ಲಿಸು 'ಪೆಲ್ಲಯಿಸು' ನೋ.

ಪೆವಡಿ 'ಪೀವಡಿ' ನೋ.

ಪೆವ್ವಳಿಸು 'ಪೆಳ್ಪಳಿಸು' ನೋ.

ಪೆಸಡೊರ ? (ನಾ). ಒಬ್ಬಾತನ ಹೆಸರು (?) : ಪೃ(ಪೃ)ಥಿವೀರಾಜ್ಯಂ ಗೆಯೆ ಪೆಸಡೊರಾ ಮಗನ್ ರೆವಡಿಬದ್ದರ್ (ಇಕ. VIII. ೨೪೬-೨ : 732).

[?]

ಪೆಸರ್, ಪೆಸರು₁, ಪೇರ್₂, ಪೇರು₂, ಹೆಸರಂ₁ (ನಾ). ೧. ನಾಮಧೇಯ ; ನಾಮಾಂಕಿತ ; ಅಭಿಧಾನ : ಪನರುಹದಂತೆ ಮುಖಿಂ ಲೋಚನಮೆಸೆವುತ್ಪಳದಪ್ಪೋಲ್ ತಳಂ ತಳಿರಂತೆಂದನುರೂಪವಮಾಗಿ ಪೇಟ್ಪಿಂದ ದನಸುಂ ವಸ್ತೂಪಮಾನಮೆಂಬುದು ಪೆಸರಿಂ (ಕಬಾ. ೩-೬೦); ಆ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟಿರ್ದೊಡೆ (ಕಚ್ಚಾಣ. ೬೩-೦೯); ಪೆಸರಿಲ್ಲದಾರ್ಯರಿಂದೀ ಪೆಸರೊಳೆ ಮುನ್ನಡೆಯೆ ನಡೆಯುದೀ ವ್ಯವಹಾರಂ ಪೆಸರಿಲ್ಲದೊಡೆಂದಾ ಮನು ಪೆಸರಿಟ್ಟು ಯಶಸ್ವಿಯೆಂಬ ಪೆಸರಂ ಪಡೆದುಂ (ಅಂಪ್ರ. ೩-೩೦); ಕರ್ಣಾಟಕವ್ಯಾಕರಣಪ್ರಾ ಶಬ್ದಮಣಿದರ್ಪಣಮೆಂಬ ಪೆಸರ ನಿಟ್ಟು ಲಕ್ಷಣಾಚಾರ್ಯರ್ ಪೇಟಿಂದು ಬಿಸಿಸೆ ಮನಂಬುಗುವಂತೆ ಪೇಟ್ದಿಂ (ಕಬಾದ. ೬೧೮೪ ೩ ೪೬); ೨. ಪ್ರಸಿದ್ಧಿ ; ಖ್ಯಾತಿ ; ಹೆಸರುವಾಸಿ : ಗುಣಧರ್ಮ್ಮವೆಯುಂ ವರ ಕಾಶ್ಯಪಾನ್ವಯಂ ತಳೆದುದು ಪೆರ್ಮೆಯಂ ಪೆಸರನುಂ ನತಿಯುಂ ಯಶಮಂ ಪ್ರಭುತ್ವಮಂ (ಸಾಇತಿ. IX—i. ೨೬೭-೫೫ ; 1160) ; ಪೆಸರ ನರೇಂದ್ರನಂದನರ ಚಾಮರವಾಯು ಕಬಲ್ಕೆ . . . ನಿಶ್ವಸಿತದ ಗಾಳಿ ಬಾಳಿಸೆ ತೆರಳ್ದಡಿಗಳ್ಗಿತ್ತು ಧೂಳಿದಾಳಮುಂ (ಕೃತಿ. ೯-೩೬). ' ಪೆಸರ್ವಡೆ ' ಪರಾ. ೩. ಬಿರುದು ; ಪ್ರಶಸ್ತಿ : ಎಕ್ಕಮಾರ್ಜುನನುಮರಾತೀಕಾಳಾನಳನುಂ . . . ಪಡೆವೆಚ್ಚಿಗಂಡನುಂ ಪರಸೈನ್ಯಭೈರವನುಮೆಂಬ ಪೆಸರ್ಗಳನ್ನರ್ಥಂ ವಾಡಿ (ಕಂಪಣಾ. ೦೦-೦೫ ೪); ಪಡೆಯೆಡೆಯ ಕಡೆಯ ಬಡವರ್ ಕಂಡೆ ಪಡೆವನೊ ಚಕ್ರವರ್ತಿಯೊಳ್ ತೈಲವನೊಳ್ ಪಡೆದಂ ಮಹಿಮೋನ್ನತಿಯಂ ಪಡೆದಾ ಕವಿಚಕ್ರವರ್ತಿವೆಸರಂ ರನ್ನಂ (ಗದಾಹು. ೦-೩೬); ಸಂಗರದೊಳ್ ಭೀಕರದೆನಿಪ್ಪ ಮದ್ಯುಜಬಲದಿಂದಾರಿಪರ್ದನನುಂ ತವೆ ಕೊಂದನಿಮರ್ದವನೆಂಬ ಪೆಸರನಾಂ ತಳೆದಪ್ಪೆಂ (ಕಂಚರೆ. ೨೦೬-೦೫). ೪. (ಅಲಂ) ದೂಷಣೆ ; ಅಪವಾದ ; ನಿಂದೆ : ' ಪೆಸರ್ವ್ ' ಪರಾ. **ಪೆಸರು₁** : ೧. ನಂಬಿ ನಂಬೀ ಕಂದ ಮೊಸಳೆ ನುಂಗಿತೆ ಮಗನೆ ನಂಬಿಯಣ್ಣನ ಪೆಸರು ಫಲಿಸದಿಂತೆಲೆ ಮಗನೆ (ಕಚಾಕ. ೦೭-೦೩೮) ; ಧರಣಿಯೊಳು ಮೇಣ್ ತಮ್ಮ ತಮ್ಮ ಪೆಸರುಗಳೊಳು ಹರನಾವುವಂ ಸಲೆ ಧರಿಸಿ ಧಟಿಸುವವಳಿಳೆಗಿರಿತರುಖಗಮೃಗಾದಿಗಳು (ಪಪ್ರ. ೦೯-೬೨) ; ಮಂದಿವೆಸರು ಮರ್ದುಗದೊಳು ವಳವೆಸರೋದು ವಸನದೊಳು . . . ಅಲ್ಲದೆ ನೋಳ್ಕೊಡಿಲ್ಲಾ ಮೆಱೆವ ನಾಡೊಳಗೆ (ಜಾಕೃಣಾ. ೦-೬೦). ೨. ನೆಲೆಪಡಿದು ಕುಳಿತೊಡನೆ ನಾಡೆ ಬಂದಿತು ! ನೋಡೆ ಚೆಲುವಲ್ಲೆ ಪೆಸರ ಪುಲಿ ನನ್ನಿಯಳಿವರಿದು (ಜಾಕೃಣ ೦೨೨-೨೦೬). ' ಪೆಸರುಪೆಱು ' ಪರಾ. **ಪೇರ್₂** : ' ಪೇರ್ಗೊಳ್ ' ಪರಾ. **ಪೇರು₂** : ೧. ಮಾನನ ತೇರುವೆಸರನ್ನು ಜಾನಂದರಾರೆ ಧರೆಯೋರ್ತರುವಿಗೆ ದೂರದಿಂ ನೋಡೆ ತೇರಂತೆ ಸೂಚಿಸುತಿದೆ ಪೇರು ಸಲುವುದಃ ಕಿಂಶುಕಗೆ (ಕೃಕೃಗೋ. ೯-೦೬). **ಹೆಸರು₁** : ೧. ಅಯ್ಯ ಅಱಿವನಱಿಪ್ಪಾತಃ ಅಱಿವ ತಿಳಿದು ಮಱಹ ಮಱಿದು ಮಱಹನಳಿದು ಕುಱುಹೆಱದು ಹೇಳ ಹೆಸರಿಲ್ಲದೆ ಗುರುಲಿಂಗಜಂಗಮ ತ್ರಿವಿಧ ಒಂದಾದ ಎಡೆಯ ತೋಱಿಸಿ ಬದಕಿಸಾ (ಅಕಪ. ೨೬-೦೩೬) ; ನೀನೆತ್ತಲನಮಿಕ್ಕವೀಯೆಡೆಗೆ ಬರಮೆತ್ತ ನೀನಾರು ಮನೆಯೆಲ್ಲಿ ಹೆಸರಾವುದು (ಸಿದ್ಧಣ. ೨-೨೬) ; ಹರಿಹರಬ್ರಹ್ಮ ಮರೇಂದ್ರಾದ್ಯರ ಹೆಸರ ದಿವ್ಯಾಸ್ತ್ರಮಂತ್ರವನೊರೆದನಾಚಮನೀಯ ಸಾಂಗೋಪಾಂಗಮುದ್ರೆಯಲಿ (ಕೂಕರಣ. ೦-೯-೨೩) ; ಹೆಸರು ಕ್ಷೀರಸಾಗರ ಭಟ್ಟ ಮಜ್ಜಿಗೆನೀರಿಗೇ ತತ್ಸಾರ (ಗಾಪ). ೨. ನುಡಿವ ಬೆಡಂಗು ನೋಡುವ ಪಡಾಕ್ರಮ ಮಾಡುವ ಸಾಹಸೋಕ್ತಿ ನಡವ ಚರಿತ್ರಮುಂ ಹೆಸರು ರೂಪು ಗುಣಾರ್ನವನೆಂತು ನೋರ್ಪ್ಪಡಾ ಕತುಗಲಿಯಪ್ಪ ವಿಕ್ರಮನ ಗಂಡಿನ ದೊಂದು ಪೊಡರ್ಪನೇನ ಬಣ್ಣಿಸಲಳವಲ್ತೆ (ಸಾಇತಿ. IX-i. ೨೬೭-೫೫ ; 1183); ಹೆಸರ ನಾಯ್ಗಳ ಹಾಸ ಹರಿದುಬ್ಬಿಸದಲುಳಿಗದವದಿರ ಓಡಿಮ್ಮಗ ಮುಸಗಿದವು ಹದವಿಲುಗಳೊದೆದವು ಪೆಯೆ ಹರವಿನಲಿ (ಕುಬಾ.೪. ೦೪-೨೦); ಆ ಪ್ರಯತ್ನಗಳು ತರುವ ಫಲಕ್ಕಿಂತ ರಾಯರಿಗೆ ಬೇಕಾದುದು ಒಳ್ಳೆಯ ಹೆಸರು (ಜಃಹುಳ. ೪).

ಪೆಸರ್ವೆಸರ್ (ದ್ವಿರುಕ್ತಿ) : ಭರತಂಗೆಯ್ವ್ಯಾಗಳ್ ನೀಂ ಪೆಸರ್ವೆಸರೊಳಾ ನಾಲ್ವರುಮನಾದರಂ[ಗೊಂಡಾ] ನಾಲ್ಕುಂ ದೆಸೆಗೆ [ಬೆಸಸಿಂ] ಬೆಳ್ಕೆಱುವಿಸಿಂ (ಕಂಪಣಾ. ೬-೨೬) ; ಹರಿಣಕೆಯುಂ ಶುಕ ಸಾರಿಕೆಗಳನೋದಿಸಲುಂ ಪೆಸರ್ವೆಸರೊಳೆ ಕರೆದು ಪೇಟ್ವ ಮನೋಹರಾಲಾಪಂಗಳಂ ಕೇಳುತ್ತುಂ ಪೋಗೆಪೋಗೆ (ಕಾರಂಪು. ೦೦೦೬) ; ತಂದ ಕಷ್ಟಂಗಳಂ ಪೆಸರ್ವೆಸರೊಳೆ ಪೇಟ್ದು ಕಂಡೆ (ಕಂದ್ರಪು. ೯-೪ ೪). **ಪೆಸರಾಗು, ಹೆಸರಾಗು**=೧. ಹೆಸರು ಬರು ; ಹೆಸರುಂಟಾಗು : ಆಗುಬ್ದಿರಲಾ ಕುಬೆಯೊಳ್ ತೊಟ್ಟಿಗೆ ನಿಧಿಗಂದಂತೆ ವಸುಧೆಗಸದಳವಾಯ್ತಾ ಮಗ[ನಂ]ದಮೊಂದು [ಲೋಗರ್] ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್ (ಕಂಪಣಾ. ೦-೧೭) ; ಚಂದ್ರಹಾಸವೆಂದಿಳೆಯೋರ್ತಂಗೆ ಪೆಸರಾಗಲೆಂದುಚ್ಚರಿಸಿ ನಾಮಕರಣಂಗೈದರು (ಕೃಪಾಣಾ. ೨೬-೬೦) ; ಚರಿಸುವುದು ರಥವೊಂದು ವಾಗೀಶ್ವರನ ಪುರಿಗೆ . . . ಉರಗರಾಜನ ನಗರಿಗದಱಂ ಧರೆಯೊಳಗೆ ಹೆಸರಾದುದಾ ಭೂವರಶಿರೋರತ್ನಂಗೆ ದಶರಥನೆಂಬ ಗುಣನಾಮ (ಕೂಕರಣ. ೦-೩-೨೦). ೨. ಪ್ರಸಿದ್ಧವಾಗು ; ಪ್ರಖ್ಯಾತವಾಗು ; ಹೆಸರುವಾಸಿಯಾಗು : ಹೊಸ ಹರಿಯದಲಿ ದ್ರವ್ಯವ ನೆಜಿಕೂಡಿಸು ಹೆಸರಾಗು ವಸ್ತ್ರಭೂಷಣದಿ ವ್ಯಸನಕ್ಕೆ ಪ್ರಾಧನೊಳಿಜಗದಿರೆಂದು ರಕ್ಕಸಿಮುಂಡೆ ಮಗಳ ಹಿಂದಿದಳು (ಕೋಚಕ. ೦೪-೩೩) ; ಡಾಕಾ ಎಂಬ ಮಟ್ಟಣದಲ್ಲಿ ಹುಟ್ಟುವ ಜಿನುಗಾದ, ಮಲಮಲಿಯು ದಿಗ್ದೇಶಕ್ಕೆ ಹೆಸರಾಗಿದೆ (ಕುಂಬಾಯಿ. ೪-೨೬) ; ಸೀಕೆಯ ಗೌಡರು ಛಾಂಡ್ಯದ ಗೌಡರು ಊರಿಗೆ ಹೆಸರಾದ ಜನರು (ಸಂಪಾಕ. ೩-೨೦). **ಹೆಸರುಬರ್, ಹೆಸರುಬರು**=೧. ಹೆಸರು ಉಂಟಾಗು ; ಹೆಸರು ರೂಢಿಗೆ ಬರು : ಬಸವನಾಲವಿದೆಂಬುದೇತಕೆ ಪೆ[ಜಾಣಾಂ. ಹೆ]ಸರು ಬಂದಿತ್ತುಸುರಿ ನೀವೆನೆ (ಜಪಕ್ಷ. ೩೨-೦೪). ೨. ಪ್ರಸಿದ್ಧಿ ಬರು ; ಖ್ಯಾತಿಯುಂಟಾಗು : ಆ ವ್ಯಕ್ತಿಯ ಮಹತ್ಕಾರ್ಯದಿಂದ ಅವರ ವಂಶಕ್ಕೆ ಹೆಸರು ಬಂದಿದೆ (ಕೂಪ). ೩. ಅಪಖ್ಯಾತಿಯುಂಟಾಗು ; ಅಪವಾದ ಬರು ; ದೂಷಣೆ ಬರು : ಅವರು ಸಾಲ್ಮ ಜನರ ಬಾಯಲ್ಲಿ ಹೆಸರು ಬರದಂತೆ ನಡೆದುಕೊಂಡರು (ಕೂಪ). **ಹೆಸರಳಿಸು, ಹೆಸರಳಿಸು**=ಹೆಸರನ್ನುಳಿಸು ; ಕೀರ್ತಿಗೆ ಕಳಂಕ ತರದಿರು ; ಹೆಸರು ತರು : ಈರೇಳು ಜಗದೊಳಗೆ ಮೆಚ್ಚಿ ಪೆಸರುಳಿಸಿತನ್ನಾ ಉಳಿಸಿತು (ಕ್ಷೀಂತ. ೦-೦೭೦-೦); ಹೆಸರುಳಿಸುವ ಮಗ್ಳಕ್ಕಾಗಬೇಕೆಂದು ಎಲ್ಲರೂ ಬಯಸುತ್ತಾರೆ(ಕೂಪ). **ಪೆಸರಿತ್ತು, ಹೆಸರಿತ್ತು**=ಹೆಸರನ್ನು ಹೇಳು; ಹೆಸರನ್ನು ನೆನಪಿಗೆ ತಂದುಕೊಳ್ಳು : ಹನೆನ್ನೊಂದರೊಳ್ ನೆರವಿಯಂ ಬಳಗ ನೆರೆದು ಚಿನ್ನೆಯಂ ಪೆಸರಿತ್ತಿ ತಣಿವುಂಡು ಮರೆಯಾಯ್ತು (ಜಾಕೃಣ. ೦೮೬-೨೨೦), ಅವರ ಹೆಸರಿತ್ತಿದರೆ ಮೈಯೆಲ್ಲ ಉರಿಯುತ್ತದೆ (ಪ್ರಹಾಬ. ೩೩೦); ಹನ್ನೊಂದನೆಯ ದಿನ ಬಳಗದವರೆಲ್ಲ ಚಿನ್ನೆಯ ಹೆಸರಿತ್ತಿ, ಉಂಡು ತಣಿದು ಮರೆಯಾಯ್ತು (ಜಾಕೃಣ. ೦೯ ಕಣಾಣ). **ಪೆಸರ್ಮಾಡು, ಹೆಸರುಮಾಡು**=೧. ಪ್ರಸಿದ್ಧಿಯನ್ನುಂಟು ಮಾಡು ; ಖ್ಯಾತಿಯನ್ನುಂಟು ಮಾಡು :

ತನಗೆ ಭರತೇಶ್ವರಂ ವಂದನಾರ್ಥದಿಂ ಸಮೆದ ಮಾಲೆ ಭರತದೊಳದು ವಂದನಮಾಲೆಯೆಂಬ ಪೆಸರಂ ತನಗೆ ಪೆಸರ್ಮಾಪೆ ಕೂಡಿ ಸಂದಪುದಿನ್ನಂ (ತ್ರಿಪು. ೧೬-೪೯). ೨. ಪೆಸರನ್ನು ಗಳಿಸು; ಖ್ಯಾತಿಯನ್ನು ಪಡೆ: ಊರಿನಲ್ಲಿ ಅವರು ದೊಡ್ಡ ಕೆಲಸಗಳನ್ನು ಮಾಡಿ ಪೆಸರು ಮಾಡಿದ್ದಾರೆ (ಪ್ರಾ). **ಪೆಸರಾಗಿ ಕಟ್ಟಿಸು** = ನೆನಪಿಗಾಗಿ ಕಟ್ಟಿಸು: ಸ್ಮರಣಾರ್ಥವಾಗಿ ನಿರ್ಮಿಸು: ನಾಗಸಮುದ್ರವೆಂಬೊ ಗ್ರಾಮವಂನು ಪೆಸರಾಗಿ ಕಟ್ಟಿಸಿ (ಎಕ VII. ೪೪೨ಎ. ೦೬-೩೩; ೧೯೫೫). **ಪೆಸರಿಗೆ ಮಾತ್ರ** = ಕೇವಲ ಪೆಸರಿಗೆ: ನಾಮಕಾವಸ್ತೆಗೆ: ನಯಪಿಲ್ಲದ ಕಾಗದ. ಅಂಜಪಿಲ್ಲದ ಮುನ್ಯಂ. ಪೆಸರಿಗೆ ಮಾತ್ರ ಇರಪಂ ರಕ್ಷಾಪತ್ರ (ಸಿಪಾಲೀ. ೪). **ಪೆಸರಿಲ್ಲದಾಗು** = ಪೆಸರು ಕೂಡ ಉಳಿಯದಾಗು: ನಾಶವಾಗು: ಹಾಳಾಗು: ಓಲಜುರರ ಗೌರವವು ದೈವದಲಿ ನಂಬಿಕೆಯುಂ ಪೆಸರಿಲ್ಲದಾಗುತಿಪುವು (ಪಾರ್ಶ್ವ. ೭೯-೨). **ಪೆಸರು ಕೊಡು** = ಪೆಸರನ್ನು ದಾಖಲುಮಾಡು: ಪುಂದ್ಮಾಟದಲ್ಲಿ ಯಾರೂ ಪೆಸರು ಕೊಡದಿರುವಂತು ನಿಂತ ವರಿಗೂ ಉಂಟು ನೋಡಿ ಸಂತಸಪಡುವ ಭಾಗ್ಯ (ಕಂಪಾ. ೩೩ ೨೨). **ಪೆಸರು ತರು** = ಪ್ರಸಿದ್ಧಿಯನ್ನುಂಟುಮಾಡು: ಕೀರ್ತಿ ತರು: ಕೊಟ್ಟ ಮನೆಯಲ್ಲಿ ಪೆಣ್ಣಾಂಕಳು ಚೆನ್ನಾಗಿ ನಡೆದುಕೊಂಡು ಪೆಸರು ತಂದರೆ ಹೆತ್ತ ತಾಯಿಗೆ ನೆಮ್ಮದಿ (ಪ್ರಾ). **ಪೆಸರುಬಲ** = ಪೆಸರಾಗಿರುವ ಆಧಾರದ ಮೇಲೆ ತಿಳಿಯುವ ಗ್ರಹಬಲ: ನಾಮನಕ್ಷತ್ರ: ಮದುವೆ ಮಾಡಬೇಕೆಂದು ಯೋಚಿಸಿದರೆ . . . ಜೋಯಿಸರಲ್ಲಿ ಪೆಸರು ಬಲ ಕೇಳುವರು (ಸಂಪ್ರಹ. ೯). **ಪೆಸರು ಬೀಳು** = ಪೆಸರು ಬರು: ಪೆಸರುಂಟಾಗು: ನೀರಿನ ನಾಪಪ್ಪ ಅಂತ ನಿನಗೆ ಹೆಂಗೂ ಪೆಸರು ಬಿದ್ದದ. ನನ್ನೋಗ ಎಷ್ಟು ನೀರನ ನೋಡೇ ಬಿಡತೀನಿ ! (ಕಾಪ. ೨೪). **ಪೆಸರು ಹುಟ್ಟು** = ಪೆಸರನ್ನು ಪಟ್ಟಿಯಲ್ಲಿ ಸೇರಿಸು,—ದಾಖಲುಮಾಡು: ಇಲ್ಲಿಯ ಶಾಲೆಯಲ್ಲೇ ಅವನ ಪೆಸರು ಹುಟ್ಟಿದುದಾಯಿತು (ಪಂಗಾರ. ೧೬೨). **ಪೆಸರು ಹೇಳು** = ೧. ಪೆಸರನ್ನು ಹೇಳು,—ಉಚ್ಚರಿಸು: ಕಪಲೇಳು ಸಮುದ್ರವ ಕಂಡಿದು ನೀರಡಸಿದಾತ ಅಜಲುಗೊಂಡು ಬೆಜಗಾದ ಕಿರು ತಾಯ ಹೆಣಸ ಪೊತ್ತುಕೊಂಡು ಪೆಸರು ಹೇಳುತ್ತೈದಾನೆ (ಅವತಂ. ೬-೦೬) ; ಗುರುಭಕ್ತಿಯಿಂದರೆ ಅವನ ಪೆಸರು ಹೇಳಬೇಕು (ಪಣಾ. ೫೦). ೨. ಕೀರ್ತಿಯನ್ನು ತರು: ಪೆಸರು ಹೇಳುವ ಮಗನಾಗಿಲ್ಲ ಅವನು (ಪ್ರಾ). **ಪೆಸರು ಹೊಡೆದು ಹಾಕು** = ಪಟ್ಟಿಯಿಂದ ಪೆಸರನ್ನು ತೆಗೆದು ಹಾಕು: ಸರಿಯಾದ ವೇಳೆಗೆ ಪರೀಕ್ಷೆಯ ಹಣ ಕಟ್ಟಿಲ್ಲವಾದ್ದರಿಂದ ಆ ಹುಡುಗನ ಪೆಸರು ಹೊಡೆದುಹಾಕಿದರು (ಪ್ರಾ). **ಪೆಸರು ಹೋಗು** = ೧. ಪೆಸರು ಇಲ್ಲದಂತಾಗು. —ಅಳಿದುಹೋಗು: ಬಸವನೊಳಗಡಗುವುದು ಭಕ್ತಿಯು ಪೆಸರು ಹೋಹುದು (ಬಸಪು. ೪೬-೪೪). ೨. ಪೆಸರು ಹರಡು; ಪ್ರಸಿದ್ಧವಾಗು: ಖ್ಯಾತವಾಗು: ಅವನ ತಂದೆ. ಅಜ್ಜ ಬಳ್ಳಾರಿಯಲ್ಲಿ ಭಾರೀ ಪೆಸರು ಹೋದವರು (ಕಾಡು. ೧೩).

[ದೇಶೀ. ತಮಿ. ಮಲ. ಪೆಯರ್, ಪೇರ್, ಪಿಯರ್ : ತುಳು. ಪುವರು : ತೆಲು. ಪೇರು ; ಸಾಯ್ಕಿ. ಪೇರ್ ; ಪರ್ಜಿ. ಗಡಬ. ಪಿದಿರ್]

ಪೆಸರಕ್ಕರ (ನಾ). ಪೆಸರಿನ ಅಕ್ಷರ : ನಾಮಾಕ್ಷರ : ದಸ್ಸಜುನದೊಳ್ ನಜುನಂ ಕರದೊಳ್ ಕರಾಬ್ಜವಂಗದೊಳೆಸವಂಗಯಷ್ಟಿ ಪೆಸರಕ್ಕರದೊಳ್ ನಿಜವಾಣಿ ಕೂರ್ಮೆಯೊಳ್ ಹೃದಯವದೊರ್ದಿಯುಂ ನೆಲಸಲುಂಗಣೆ ಗೆಂತಿರೆ ಪೋದುದಾ ದಿನಂ (ಕಾಪಂಕಾ. ೨೮೩) ; ಬಿರುದಿನ ಬೀತದ ಪೆಸರಕ್ಕರಮಂ ಪರಸ್ಪವರ ಮೆಯ್ಯ ಪುಣ್ಣಲೆಗಳ್ ಪೋಲ್ವಿರೆ ತೋರ್ಪಲಕ್ಕೆ ಪಡೆವಂ ನರಶಾಸನಮು ನರೇಂದ್ರಚೂಡಾರತ್ನಂ (ಪಾರ್ಶ್ವ. ೩-೦೯). [ಪೆಸರ್ + ಅಕ್ಕರ]

ಪೆಸರಾನ್, ಹೆಸರಾನು (ಕ್ರಿ). ೧. ಹೆಸರನ್ನು ಹೊಂದು: ಅಭಿಧಾನವನ್ನು ಪಡೆ: ನಗರ ಪಟ್ಟಣ ಖೇಡ ಖರ್ವಡ ಪುರ ಗ್ರಾಮಂಗಳೇಂ ನಾನಾ ಪೆಸರಾಂತು ಸೊಗಯಿಸುತಿಪ್ಪುವಾ ದೇಶದ ಬಿರುದಿಗ್ಗಳ್ಳ (ಪೋಸಕ. ೨ ೦೬). ೨. ಪೆಸರನ್ನು ಗಳಿಸು; ಪ್ರಸಿದ್ಧಿಯನ್ನು ಹೊಂದು; ಖ್ಯಾತಿಯನ್ನು ಪಡೆ: ಪಿಬ್ಬುಲಿಜುನಿಂದೊರಗಿ ಪೆಸರಾಂತ ಟ್ಟಾಳದೊಬ್ಬನೇ ದೊಡ್ಡಂ (ಕಾಂಬಿಸ. ೦೦೬-೨೦೬). **ಪೆಸರಾನು** : ೨. ಅವರು ನಾಡಿನಲ್ಲೆಲ್ಲ ಪೆಸರಾಂತ ವಿದ್ವಾಂಸರೆನ್ನಿಸಿಕೊಂಡಿದ್ದಾರೆ (ಪ್ರಾ). [ಪೆಸರ್ + ಆನ್]

ಪೆಸರಾಳ್ (ನಾ). ಪ್ರಸಿದ್ಧನಾದ ಸೈನಿಕ : ಖ್ಯಾತಿಯನ್ನು ಪಡೆದ ಭಟ: ಬಿಸುಹಮರ್ದ ನೊಸಲ ಬಣ್ಣಂ ತಿಸುಳೇಂಗಳನಾಂತ ಕೈಗಳುಂ ನೋಟ್ಟರಸಂಜಿಸಿ ನಡೆತಂದರ್ ಕಲಬುರ್ ಪೆಸರಾಳ್ಗಳ್ ಬೆಟ್ಟನಣ್ಣಿ ಕಲ್ಲಾಪುತ್ತುಂ (ಕಾಕಾ. ೨೩೩). [ಪೆಸರ್ + ಆಳ್]

ಪೆಸರಿಡು, ಪೆಸರಿಡು (ಕ್ರಿ). ೧. ಪೆಸರನ್ನು ಇಡು: ನಾಮಕರಣ ಮಾಡು: ಪೆಸರಿಲ್ಲದಾರ್ಯರೆಂಬೀ ಪೆಸರೊಳಿ ಮುಂ ನಡೆವೆ ನಡೆಮುದೀ ವ್ಯವಹಾರಂ ಪೆಸರಿಲ್ಲದೊಡೆಂದಾ ವನಂ ಪೆಸರಿಟ್ಟು ಯಂಶಸ್ವಿಯೆಂಬ ಪೆಸರಂ ಪನನಂ (ಕಾಪು. ೬. ೬೨) ; ಬೆಳೆವುದೆ ಹಗವಂ ತೋಡುವೆನೆಂಬ ವುಳ್ಳದ ಕೂಸಿಂಗೆ ಪೆಸರಿಡುವೆನೆಂಬ . . . ಮಾರುಳನಂತೆ (ಧರ್ಮಾಪ್ರ. ೩೨-೨೪) ; ವರಪಾರ್ಶ್ವನಾಥಸೂಜುಗೆ ವಿಮಲಾಂಗಂಗೆ ಹರಿಸದಿಂ ಪವ್ಮರಸರೆಂದು ಪೆಸರಿಟ್ಟು (ಕಬ್ಬಕಾ. ೨-೬೩). ೨. (ಗುಣವನ್ನು) ವೇಚ್ಚಿ ಹೊಗಳು : ಮೆಚ್ಚಿಲ್ವಗೆಯನ್ನು ಸೂಚಿಸು : ತಮ್ಮ ತಮ್ಮಣಿಗಿಂದಂ ಪೆಸರಿಟ್ಟು ಬುಧಸಮೂಹವಿದಂ ಪೇಜಿಂದೊಡೆ ಪೇಜಲ್ಕಾಂ ಬಗೆದಂದಿನಿದಿನ್ನಳವೆ ಗುಂಫರೋದಿತಚಿಂತಂ (ಕಾಪ್ರ. ೧-೬೪) ; ಎಸಪಾತ್ಮವನೀಗಹುದೀವಿ ಸಮೇತಂ ಬಾಹುವೀರ್ಯನಾ ನಟಿಯರ ವಾದ್ಯಸಮಗ್ರನೃತ್ಯಮಂ ವೀಕ್ಷಿಸಿ ನಿಜಿ ಪೆಸರಿಟ್ಟು ನಾಡೆ ಮೆಚ್ಚುತ್ತಿರ್ದಂ (ಶುಸಂಚಾ. ೦೪ ೮೦). ೩. ದೂಷಿಸು ; ನಿಂದಿಸು : ಅಸವಾನವಚಿಳವಮದ್ಯುತವಿಸರಮನೂನ ಪ್ರಭಂ ಶುಭಂ ಘನವಿಭವಂ ಪೆಸರಿಡಬಾರದು ವಿಗೆ ನಿಟ್ಟಿಸಬಾರದು ನೋಡಬಾರದಂಬೆಯು ತಪಂ (ಗಿಸಿ. ೯. ೦೬). **ಪೆಸರಿಡು** : ೧. ಎಳಸೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನ ಮಾಡಿ ಪೆಸರಿಟ್ಟು ಕರೆದು (ಬಸಪು. ೪); ಮುದಸಹರಿಸರಸಿ ಬಿಜಯಂಗೈದು ಹರಸಿ ಮೋಹದೋತನಂ ತಮ್ಮ ದೇವನೆಂದೋವಿ ಪ್ರೇಮದಿ ಸಿದ್ಧರಾಮಯ್ಯನೆಂದು ಪೆಸರಿಟ್ಟಾಡಿ ಹಾಡಿ ಪರಸಿದಳು (ಸಿವ್ಕಾ. ೨-೬) ; ಒಸೆದು ಮುಂದಣ ತಾಗುಬಾಗಿನ ಸಸಿನವನು ಹೋದನು ಹಪಿದಿದೆ ಪೆಸರಿಡುಲು ಬೇಕೆವನ . . . ಎನುತ್ತ ಕೆಲಬಲಕನ ವಳಿವು ಬಿಜುನಗೆಯು ಸೂಸಿದನಾ ದಶನ್ರಿವ (ತಿಪಂಕಾ. ೬-೬-೬೬). ೩. ಅವಳ ಅಡಿಗೆಗೆ ಯಾರಾದರೂ ಹೆಸರಿಟ್ಟರೆ ಅವಳಿಗೆ ಸಹಿಸವಾಗುತ್ತಿದ್ದಿಲ್ಲ (ಸ್ವಾಚ. ೦೨೬); ತಂದಿ ತೀರಿದ ಮೇಲೆ ತಾಯಿಯು ಸಂರಕ್ಷಣೆ ಮಾಡದ ಮಗನಿಗೆ ಪಂದಿ ಹೆಸರಿಡತಾರ (ಹೂಸಂಚಾ. ೬೩). ೪. ಸ್ಪಷ್ಟಪಡಿಸು ; ವ್ಯಕ್ತವಾಗಿ ತಿಳಿಸು : ಮುಚ್ಚಿದನು ಕಂಗಳನು . . . ಎಚ್ಚಜಿಡಗಿತು ನೆಲಕಿ ಕೈಗಳ ಬಿಚ್ಚಿ ಬಿದ್ದನು ಪುಶ್ಯವಿರಹದ ಹೆಚ್ಚಿಗೆದು ತಾಪವನು ಪೆಸರಿಡ ಲಜಿಯೆನರ್ದುಸನ (ಶುಚಾ.ಕ್ರೀ. ೬-೩೧) ; ಪ್ರಳಯಮೆ ಘನನೊಡೆದ ರವಿಮಂಡಲಸಹಸ್ರದ ರಶ್ಮಿಯೋ . . . ಮುಳಿದ ನರಕಿ.ಸರಿಯು ದಾಡೆಯು ಧಳಧಳತ್ಕಾರವೊ ಮಹಾಸ್ಯದ ಬೆಳಗೊ ಪೆಸರಿಡಲಾರು ಬಲ್ಲರಾ (ಶುಚಾ.ಕ್ರೀ. ೦೯-೧೩).

ಪೆಸರಿಟ್ಟು ಬೈ = ಪೆಸರೆತ್ತಿ ಬಯ್ಯು. —ದೂಷಿಸು. —ನಿಂದಿಸು : ಪೆಸರಿಟ್ಟು ಬೈದನೊ ಅತ್ತ ಮಾಪಂದಿರ (ಕಾಸ್ವಾ. ೨. ೦೪).

[ಪೆಸರ್ + ಇಡು]

ಪೆಸರಿಲಿ (ನಾ). ೧. ಪೆಸರಿಲ್ಲದುದು. ೨. ಕೈಯ ಕಿರುಬೆರಳಿನ ಪಕ್ಕದ ಬೆರಳು: ಅನಾಮಿಕ : "ಅಂಗುಷ್ಠಂ ತರ್ಜನಿ ಮಧ್ಯಾಂಗುಲಿ ಪೆಸರಿಲಿ ಕನಿಷ್ಠೆಯೆಂದಕ್ಕುಂ ನಾಮಂಗಳ್ ಬೆರಳ್ಗಿ ತರದೆ" (ಕಬ್ಬ.ಕ್ರೀ. ೬೯ ೦೦):

ಪೆಸರಿಲಿಯ ಬೊಟ್ಟನಿಂದಂ ದೆಸೆದೆಸೆಗಂ ಮಿಡಿದು ಮಿಡಿದು ಕೈಮುಗಿ ವುತ್ತುಂ (ಪಾರಶು. ೦೦-೦೨೯). [ಪೆಸರ್ + — ಇಲ್$_3$]

ಪೆಸರಿಸು, ಹೆಸರಿಸು (ಕ್ರಿ). ೧. ಹೆಸರನ್ನು ಹೇಳು,—ಸೂಚಿಸು: ಸುನಿಮೇಷಮಿಾನಚಾಪಲನೇತ್ರೆ . . . ಮನಸಿಜಶಶಾಂಕಕರ್ಕಟಕ ಚೇಳಂ ಗುಡುವ ತನಿಸೊಬಗುವಡೆದ ಸನ್ನೋಹನದ ಕಣಿಯೆ ಬಾಯೆನುತೊರ್ವ ನೀಜ್ ಸಖಿಯುಂ ಕರೆದೇರಾಜು ರಾಶಿಯುಂ ಪೆಸರಿಪವೊಲು (ಕೃಷ್ಣರಾ. ೬-೨೬). ೨. ಎತ್ತಿ ಹೇಳು; ಹೊಗಳು; ಪ್ರಶಂಸಿಸು: ಎಸೆವರಿಜ್ಜಿವರ್ ಪೊಯ್ವರುಬ್ಬುವರ್ ಕೊಬ್ಬುವರ್ ಮಸಕದಿಂ ಸಮರಂಗಕುಜುಬುವರ್ ತಜುಬುವರ್ ಪೊಸ ಪರಿಯ ಬಿರುದನುಜ್ ಪೆಸರಿಪರ್ ಪಸರಿಪರ್ ತಂತಮ್ಮ ಬೀರಂಗಳ . . . ಉಭಯಂಭಟರು (ಪಂಪ. ೩೯-೩೬); ನಾಗರಿಪುಮಧ್ಯ ಮೂರ್ವಸಿಯು ನಡುವಿಂಗೆ ಸರಿಯಾಗಬಲ್ಲುದೆ . . . ಪೂಗಣೆ ವಿಲಾಸದಾ ರಂಭೆಯು ವಿರಾಜಿಸುವ ಸೋಗೆಗಣ್ಣೆಯಂ ಹುದೆ ನೋಡೆಂದು ಪೊಗಳ್ದನನು ರಾಗದಿಂದೊರ್ವಳಂ ವಿಟನಪ್ಪಸ್ತ್ರೀಯರಂ ಪೆಸರಿಸುವ ನೆವದೊಳು (ಕೃಷ್ಣರಾ. ೬-೨೯). **ಹೆಸರಿಸು**: ೧. ಅವರು ನಾಡಿನಲ್ಲೆಲ್ಲ ಹೆಸರಿಸು ವಂತಹ ಕಲಾವಿದರು (ಕೂಡಿ). ೩. ನಿಗದಿಪಡಿಸು; ನಿರ್ದಿಷ್ಟ ಪಡಿಸು: ಹೆ.ಮಭಾರದ ವಿಮಲರತುನಸ್ತೋಮವಿದೆ ಪಣವೆನಲು ಕೌರವ ಭೂಮಿಪತಿಯೊಡ್ಡಿದನು ಧರ್ಮಜ ಹೆಸರಿಸಿದ ಧನವ (ಕುಸಾ. ೦೩-೪೯). ೪. ಹೆಸರಿಡು; ನಾಮಕರಣಮಾಡು: ಚರಿತ್ರಕಾರನು ಅಂದಂದಿನ ದೃಷ್ಟಿಯಿಂದ ನಡೆದ ಘಟನೆಗಳನ್ನೂ ಹುಟ್ಟಿದ ಕೃತಿಗಳನ್ನೂ ಪರಿಕ್ಷಿಸಿ ಹೆಸರಿಸಬೇಕಾಗುತ್ತದೆ (ಕಪಂ. ೨೦). ೫. ಹೆಸರನ್ನು ಗಳಿಸು; ಪ್ರಸಿದ್ಧಿ ಯನ್ನು ಪಡೆ; ಖ್ಯಾತಿಯನ್ನು ಹೊಂದು: ಹೆಸರಿಸಿದ ಗಂಧರ್ವ ಕಿನ್ನರವಿಸರಮಾಗಧವಂದಿಗಳು ವೇಷ್ಟಿಸಿತು ನಾರದನಭ್ರಮಂಡಲದೊಳಗೆ ನಲಿದಾಡೆ (ಕಭಾಗ. ೯-೦೦-೩೦); ಎಸೆದನದಜ್ಜೊಳು ಭೂಪನೊಬ್ಬನು . . . ಸುಬಲಾಶ್ವನೆಂಬುವನು ಹೆಸರಿಸಿದ ಮೈಥಿಲನೃಪಾಲರ ನೊಸಲ ತಿಲಕದವೋಲು ಮಿಗೆ ರಂಜಿಸುತ (ಕಭಾಗ. ೦೦-೯೦-೨).

[ಪೆಸರ್ + — ಇಸ್ಕು$_3$]

ಪೆಸರೀ (ಕ್ರಿ). ಹೆಸರನ್ನು ಕೊಡು; ಹೆಸರಿಡು: ಈ ಸುತನ ಸೌಂದರ್ಯಕ್ಕೆ ತಕ್ಕಂದದಿಂ ಪೆಸರಿತ್ತಪ್ಪೆನೆನುತ್ತುಮಿತ್ತನರಸಂ ಕಂದರ್ಪದೇವಾಖ್ಯಮಂ (ಕುಸುಚಾ. ೬-೦೦೩). [ಪೆಸರ್ + ಈ$_2$]

ಪೆಸರು$_1$ 'ಪೆಸರ್' ನೋ.

ಪೆಸರು$_2$ 'ಪೆಸಱು' ನೋ.

ಪೆಸರುಗೊಳ್ 'ಪೆಸರ್ಗೊಳ್' ನೋ.

ಪೆಸರುವಡೆ 'ಪೆಸರ್ವಡೆ' ನೋ.

ಪೆಸರುವೆಱು 'ಪೆಸರ್ವೆಱು' ನೋ.

ಪೆಸರ್ಗಿಡು, ಹೆಸರುಕೆಡು (ಕ್ರಿ). ಅಪಕೀರ್ತಿಯುಂಟಾಗು: ಕೆಟ್ಟ ಹೆಸರು ಬರು; ದೂಷಣೆಯುಂಟಾಗು: ಪರವೆಣ್ಣಂ ತುದನೋ ತಂದನೊ ಪೆಸರ್ಗಿಡೆ ಪೆರ್ಮಾರಿಯಂ ನಮ್ಮ ದುರ್ಗಕ್ಕರಸಂ (ಅಪಂಪು. ೦೦.೬೦). **ಹೆಸರುಕೆಡು**: ಸಮಾಜದಲ್ಲಿ ಹೆಸರುಕೆಡದಂತೆ ಜೀವನ ನಡೆಸಬೇಕು (ಕೂಡಿ). [ಪೆಸರ್ + ಕೆಡು (< ಕೆಡು$_1$)]

ಪೆಸರ್ಗೇಳ್ (ಕ್ರಿ). ಹೆಸರನ್ನು ಕೇಳು: ಅರಿಗಳ್ ಪೆಸರ್ಗೇಳ್ದೆರ್ದೊಡೆವ ರೆಂಬ ಶೂದ್ರಕನ ವಿಕ್ರಮಾಡಂಬರಮಂದರೆವಾನಿಸಿಕೆಯೊಳೊಂದಿದ ನರಸಿಂಹಾ ಡಂಬರಕ್ಕೆ ನಸುನಗುತಿರ್ಕುಂ (ಕಾಪಂಪು. ೦೦); ಮನುಜಮನೋಜ ನಿನ್ನ ಪೆಸರ್ಗೇಳಲೊಡಂ ಬೆಮರಿಂದೆ ಕಣ್ಣ ಲಾಗೆನೆ ನೆಜ್ ನಾಂದು ಪತ್ರಿದ ನಿಡಾಂಶುಕಮಂ ಪುಳಕಂಗಳೆತ್ತೆ (ಕಾಪಂಕಾ. ೩೦೯). [ಪೆಸರ್ + ಕೇಳ್]

ಪೆಸರ್ಗೊಳ್, ಪೆಸರುಗೊಳ್, ಪೇರ್ಗೊಳ್, ಹೆಸರುಗೊಳ್, ಹೆಸರಂ ಗೊಳ್ಳು, ಹೆಸರ್ಗೊಳ್ (ಕ್ರಿ). ೧. ಹೆಸರನ್ನು ಹೊಂದು: ಜಂಬೂ ದ್ವೀಪದ ಭರತಕ್ಷೇತ್ರದೊಳಖಿಳಸುಖಮುಖದ್ವಾರಂ ದ್ವಾರಾವತೀಪುರಂ ಪುರಂದರಪುರೀವಿಳಾಸಮಂ ಪೆಸರ್ಗೊಂಡಂತೆ ಮೆಱೆದಿರ್ಪುದು (ಶಾಂಪು. ೦೨-೧೩ ಪ). ೨. ಹೆಸರನ್ನು ಹೇಳು,—ಉಚ್ಚರಿಸು; ಹೆಸರೆತ್ತು: ವಿನಯ ಮುಮೆಱಕಮುಮಪ್ಪುದು ಸನಾಭಿಗಳ್ ಸಂಗತಂಗಳಪ್ಪೊಡೆ ಪೆಸರ್ಗೊಂಡನಿತ ಱೊಳೆನ್ನಂ ಸ್ಮರಿಸನೆನೆ ಭರತಂಗೆಱಗಿ ಲೋಕದಿಂ ನಗಿಸುವೆನೇ (ಕಂಪಾ. ೦೯-೩೬); ಆತನನಾರಾಧಿಸಿ ನೃಪನೀತಿವಿದರ್ ಪೇಚರಾವನೀಚರರಾತ್ಮಖ್ಯಾತಿಶ್ರೀಯಾ ಕಾದಭಿಜಾತನೃಪಾನ್ವಯರೆನಿಬರಂ ಪೆಸರ್ಗೊಳ್ದಂ (ಶಾಂಪು. ೩-೬೩); ಪೆಸರ್ಗೊಳೆ ವಿಷಹರಮಂ ಮಾಱ್ಪಿಸಕದ ಮಣಿಮಂತ್ರತಂತ್ರತತಿಯಿಂ ತಾನೆಱ್ಪಿಸಲಾಱದೆ ಭೂರಮಣಂ ಬಸವಱಿದಾ ಸತಿಯ ಮೇಲೆ ಮೂರ್ಛಿಸಿ ಬಿಟ್ಟಂ (ಶಾಂಕಿಕ್ಕ. ೩-೦೬೯); ಉದಯಕಾಲದೊಳೆದ್ದೊಲಿದಿಷ್ಟದೈವದ ಪದ ಗಳ ಪಾಡುವಂದದೊಳು ಹದಿಬದೆಯರ ಪೆಸರ್ಗೊಂಡು ಪೊಗಳ್ವುದು ವಿದಿತ ವೈಸಲೆ ವೈದಿಕರಿಗೆ (ಕಂಬಾ. ೨-೦೩). ೩. ಹೆಸರಂ ಹಿಡಿದು ಕರೆ,—ಕೂಗು; ಸಂಬೋಧಿಸು: ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊಱೆಲ್ದೆತ್ತಾನು ದೋರೊರ್ವೆ ಚಿಂತಿಸಿದೊಂಗು ಪಣೆಲ್ಲ ಪುಣ್ಯಮೆನೆ (ಅಪಂ. ೦-೩೬); ಆಗಳಾ ಕೊಳನಂ ಬಳಸಿ ಬಂದು . . . ಪಾಚಮಹಾವಾದ್ಯಗಳಂ ಬಾಜಿಸಿಯುಂ ಎಂತುಂ ಪೊಱಮಡಿಸಲಾಱದೆ ಸುಯೋಧನನಂ ಪೆಸರ್ಗೊಂಡು ನಕುಲನಾಸ್ಫೋಟಿಸಿ (ಗದಾಯು. ೬.೦ ಪ); ಸಮಾಧಿಯನಾಗ ತೆಗೆಸುತ್ತ . . . ಪೆಸರ್ಗೊಂಡಾ ಸುಪುತ್ರಕನಂ ಕರೆಯಲು (ಪಸಪು. ೯೮-೨೯); ಎನ್ನಂ ಪೆಸರ್ಗೊಂಡನೇ ನುಡಿಸಿದನೆ ಕುಳ್ಳಿರೆಂದನೆ (ಪಂಪು ೩೦-೦೬). ೪. ವರ್ಣಿಸು; ಬಣ್ಣಿಸು; ವಿವರಿಸು: ಕಳಹಂಸೀಲೀಲೆ . . . ಶ್ರೀಚಕ್ರವಾಕದ್ವಯ ವಿಳಸನಮಂತಃಪುರಸ್ತ್ರೀಸಹಸ್ರಂಗಳ ಮೆಯ್ಯೊಳ್ ತಾನೆ ತಳ್ಪೊಯ್ದೆಸೆದುದು ಪೆಸರ್ಗೊಳ್ದೆಗ್ಗಗಾರೆಂದಿನಂ (ಅಪಂ. ೦೦-೦೩೬); ಗಂಡನನೊರ್ವಳೊರ್ವಳಿಗೆ ಗಂಗೆಗೆ ಗೋಪಿಗೆ ಕೊಟ್ಟರೆಂದೊಡಾ ಪೆಂಡಿರ ರೂಪುಮೆಂ ಸೊಬಗುಮಂ ಭವಮಂ ಪೆಸರ್ಗೊಳ್ವುದೇ (ಶುಶಾ. ೨-೩೩); ಅವರ ವಿಲಾಸಿನಿ ಜನದ ರಾಣಿಯ ವಾಸದ ಪುತ್ರಮಿತ್ರಬಾಂಧವರ ವಿಯೋಗಸಂಕಟಮನೇ ಪೆಸರ್ಗೊಂಡವೆಂ (ಅಪಂ. ೯-೯). ೫. ಪ್ರಸಿದ್ಧಿಯನ್ನು ಪಡೆ; ಖ್ಯಾತಿ ಯನ್ನು ಹೊಂದು: ಪೆಸರ್ಗೊಂಡರ್ತಿಯೊಳತ್ತಿವುಬ್ಬೆಯ ಗುಣಪ್ರಾತಂಗಳಂ ಕೇಳ್ದ ಭವ್ಯಸಮೂಹಂ ಪೊಗೆಱ್ವಂತು . . . ಬಣ್ಣಿಸುವೆಂ ಪುಣ್ಯಪುರಾಣಮಂ ಜಿತಮನೋಜಾತಾಜಿತಸ್ವಾಮಿಯಾ (ಅಪಂ. ೦-೯೬). ೬. (ಉತ್ತಮ ವಾದುದೆಂದು) ಆಯ್ದುಕೊಳ್ಳು; ಆರಿಸಿಕೊಳ್ಳು: ಕುಸುಮಾಸವಕ್ಕೆ ಪೆಱವಂ ಪೆಸರ್ಗೊಳ್ಳವು ತುಂಬಿ ಬಾಣಾಶನಿಗೆ ಪೆಱವಂ ಪೆಸರ್ಗೊಳ್ಳಾ ಮನಸಿಜನೆನೆ ಪೊಸಸುಗ್ಗಿಯ ತೊಡವು ಪೆಱತೆ ಮಲ್ಲಿಗೆಯೆಪೊಲಂ (ಶುಶಾ. ೩-೦೩). ೭. ಹೊಗಳು; ಸ್ತುತಿಸು; ಧ್ಯಾನಿಸು; ನೆನೆ: ಭಕ್ತಿಯಿಂ ಪಾಡದ ಬಾಯದೇಕೆ ಪೆಸರ್ಗೊಳ್ಳದ ಜಿಹ್ವೆಯದೇಕೆ . . . ಕೂಡಿಯಳ್ಳಾಡದ ಚಿತ್ತವೇಕೆನಗೆ ಹಂಪೆಯ ಲಿಂಗವೆ ನಿದ್ದೊಳೆಳ್ಳಱಿಂ (ಪಂಪಾಶ. ೬); ಭಕ್ತರ್ಗೆ ಬಂದೆಡರನಾವಗಂ ಪರಿಹರಿಪೆ ಗಡ ದೇವ ನಿನ್ನಂ ಪೆಸರ್ಗೊಂಡೊಡೆ (ಕೃಷ್ಣರಾ. ೦೦-೩೩). **ಹೆಸರುಗೊಳ್**: ೨. ನಿನ್ನೂರ ಪೆ[ಪಾಣಾಂ. ಹೆ]ಸರುಗೊಂಡಡೆ ನಿನ್ನ ವಾರ್ತೆಯನುಸುರಿದಡೆ ಕೇಳಿದಡೆಯುಂ ತಪ್ಪಸಮವಿಕ್ರಮನಾದಡವನು ಪಿಡಿದು ಕೊಲಿಸುವೆನು (ಪಸಪು. ೨೬-೬೦). ೩. ಬಸವರಸನಿಂತೊಂದನೊಂದಂ ಪೆಸರುಗೊಳುತಿವು ಮೊದಲೆನಿಪ ಗಜ ವಿಸರಮುಂ ಕ್ಷಣದೊಳು ತರಿಸಿ ಮತ್ತಂ ನಿರೂಪಿಸಿದ (ಪಸಪು. ೩೯-೩೩). **ಪೇರ್ಗೊಳ್**: ೫. ಅದರಿಂದೀ ಕೃತಿ ಕೃಷ್ಣರಾಜಮಹಿಮಾಖ್ಯಾತಂ ಪುನೀತಾಂಕಿತಂ ಬುಧರಿಂ ಮೈಸುರನಾಡ ಮೈಸುರಿಯೆನಲ್ ಪೇರ್ಗೊಂಡುದೈ ಲೊಕದೊಳ್ (ಶ್ರೀಸೂಪ. ೦ ೨೦). **ಹೆಸರುಗೊಳ್**: ೨. ಹುಸಿಯಿಂದೆ ಜನಿಸಿದೆನಯ್ಯಾ . . . ಹುಸಿಯಿಂದಲಿ ಲಿಂಗವ ಹೆಸರುಗೊಂಡು ಕರೆದೆನೆಯ್ಯಾ (ಬಸವ. ೯೯೩); ಹೆಸರುಗೊಂಡವನಂ ಕೊಲುದೆನೆಂಬಸಮಭಾಷೆಯೊಳಿರು

ತಿರಲು (ಬಸವು. ೩೩-೩೯); ಹೆಸರುಗೊಂಡರೆ ಕಿವಿಗಳಿಗೆ ಕರ್ಕಶರು ರಕ್ಕಸರೆಂಬ ಹೆಸರಿದು ನುಸಿಗಳೊಳಗಾಶ್ರಯಿಸಿ ಕೆಟ್ಟುದು (ಕುಮಾರ್ಕ್ರೋ. ೦೩-೬೦). **ಹೆಸರುಗೊಳ್ಳು :** ೫. ಹೆಸರುಗೊಂಡ ಬಹುಮಂದಿ ವೀರರು ಮಡಿದರು (ಪಡಿಹಾ. II. ೯೯೩); ದಂತಿದುರ್ಗನು ಹರ್ಷವರ್ಧನ . . . ಕೀರಳ ರಾಜರನ್ನು ಸೋಲಿಸಿ ಹೆಸರುಗೊಂಡ ಕರ್ಣಾಟಬಲವನ್ನು ಅನಾಯಾಸವಾಗಿ ಜಯಿಸಿದನೆಂದು ಹೇಳಿದೆ (ಕಸಾಗಿಂ. ೯೬). **ಹೆಸರ್ಗೊಳ್ :** ೫. ಮಕರಧ್ವಜರೂಪನಾದ ರಾಯನ ಕುಮಾರಕನೆಂದು ಹೆಸರ್ಗೊಂಡುದಿಲ್ಲ ಮುಖವರೀಕ್ಷೆಯ ಬಲ್ಲೆನಾತನ ತಂದೆನ್ನ ಸುಖಬಡಿಸುವುದೆಂದಳೊಲಿದು (ಕೋಚಕ. ೨೬-೨೫). [ಪೆಸರ್ + ಕೊಳ್$_1$]

ಪೆಸರ್ಚು (ಕ್ರಿ). (?) : (ಕ)ರಿವರಗರ್ಜಿತತೂರ್ಯಸ್ವರಮುಂ ಸಂರಂಭಮುಂ ? ಪೆಸರ್ಚಲ್ ಕಾತರವೆನೆ ಪಡೆಗುಂ (ಪಸ್ತುಕೋ. ೦೩೦-೬೯). [?]

ಪೆಸರ್ವು (ಕ್ರಿ). ದೂಷಿಸು ; ಆಕ್ಷೇಪಿಸು ; ದೂರು : ನೆಟ್ಟನೆ ಚಂದ್ರನೊಳ್ ಬಿಸುವು ಪುಟ್ಟದೊಲ್ ನೃಪರೂಪಚಂದ್ರನೊಳ್ ಪುಟ್ಟದುಮಂತಿದು ತಿಳಿವುಗೆಟ್ಟ ಕೃತಜ್ಞತೆಗೆಟ್ಟ ಪೌರುಷಂಗೆಟ್ಟ ದುರಾತ್ಮನು ಕುಱಿತು ಭಾವಿಸದೇನುಮನೀ ಮಹಾತ್ಮನಂ ತೊಟ್ಟಿನಲಿಂತು ದೇವ ಯುವರಾಜನನೀ ತೆಱದಿಂ ಪೆಸರ್ವುದೇ (ಶಾಂಪುರಾ.೧೬೯). ☞ ಇಲ್ಲಿ ನಾಮಪದದ ಮೇಲೆ 'ವು' ಪ್ರತ್ಯಯವು ಪ್ರೇರಣಾರ್ಥದಲ್ಲಿ ಹತ್ತಿದೆ. [ಪೆಸರ್ + —ವು$_1$]

ಪೆಸರ್ವಡೆ, ಪೆಸರುವಡೆ, ಹೆಸರುವಡೆ (ಕ್ರಿ). ೧. ಹೆಸರನ್ನು ಹೊಂದು; ನಾಮಧೇಯವನ್ನು ಪಡೆ : ಪೆಱವಱ ಧರ್ಮಂಗಳನೇತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕಣ್ದೆಱೆಯೆ ಚತುರೋಕ್ತಿಕೃತಿಯೊಳ್ ನೆಱೆದಿರೆ ಪೇಳ್ವುದು ಸಮಾಧಿಯೆನೆ ಪೆಸರ್ವಡೆಗುಂ (ಪಮಪ. ೯೬ ಪ್ರಯೋ); ಹೊಱ ಬೆನ್ನಿಂತೆಂಬ ನುಡಿಯದು ಧರೆಗೆ ಕೂನನೆ ನಿಪ್ಪುದು ಪರಿಹರಿಸಿ ಸೌಂದರಪಾಂಡ್ಯರಾಯನೆನಲು ಪೆಸರ್ವಡೆದ (ಬಸವು. ೩೦-೩೦). ೨. ಪ್ರಸಿದ್ಧಿಯನ್ನು ಪಡೆ ; ಖ್ಯಾತಿಯನ್ನು ಹೊಂದು : ಮತ್ತಂ ಸ್ವಯಂಭುವಾಭಿಧಾನಪದವಿದ್ಯಾಚ್ಛಂದೋವಿಚಿತ್ರಲಂಕಾರಂಗಳೆಂಬ ಮೂಱುಱಿಂ ಪೆಸರ್ವಡೆದ ವಾಙ್ಮಯಮುಮಂ . . . ಮತ್ತಿನ ತನೂಜರ್ಗೆಲ್ಲಮುಮದೇಶಂಗೆಯ್ದುಂ (ಆದಿಪು. ೬-೬೦ ಪ); ಧರೆಯೊಳು ವಿಶಾಲತೆಯೊಳತಿ ಪೆಸರ್ವಡೆದಿರ್ಪ ಪುರಪಟ್ಟಣಗ್ರಾಮಸಂಕುಳದ ನಡುವೆ ಕಿಱುವಳ್ಳಿಯಾಗಿಯು ಕಣ್ಗೆ ಮೆಱೆದು ಹೆಂಪಿನೊಳಿರ್ಪುದು (ಸಿದ್ಧರಾ. ೦-೩೦); ಧರ್ಮಾನುಜಂ ಭೂಪಾಲರೊಳ್ಪೆಸರ್ವಡೆದವಂ (ಶೃಂಪ್ರಾ. ೨೯-೦೫). **ಪೆಸರುವಡೆ :** ೨. ಪೆಸರುವಡೆದ ಮಧುರಸಮಾಹಿನಿಯ ದಾಂಟಿಸಲು ಚಂದನಡೋಣಿಗಡರ್ದು . . . ನಿಟ್ಟಿಸಿದ (ಕೋಚಕ. ೩-೨೬). **ಹೆಸರುವಡೆ :** ೧. ದಶಗುಣೋತ್ಕರವೆನಿಪ ತತ್ವಪ್ರಸರವೇಳೋರಂತೆ ಪರಿವೇಷ್ಟಿಸಿದ ಜಾಂಡಳಟಾಹಕೋಟಿಗಳಾವನುದರದಲಿ ನುಸಿಗಳಂತಿಹವದು ನಿಮಿತ್ತವೆ ಪೆಸರುವಡದುದನಂತನೆಂಬೀ ಹೆಸರು ನಿಮ್ಮಡಿಯಲ್ಲದಾರಿಂಗಳವಡುವುದೆಂದ (ಶಾಭಾಗ. ೬-೦೫ ೧೩). ೨. ಹೆಸರುವಡೆದತಿ ಬಳರನಡೆಗಡಹಿದನು ರಣದೊಳಗೆ (ಕುಮಾರ್ಕ್ರೋ. ಶಂ. ೨೮೨). [ಪೆಸರ್+ಪಡೆ$_1$]

ಪೆಸರ್ವಾಸಿ, ಹೆಸರುವಾಸಿ (ನಾ). ಕೀರ್ತಿ ; ಖ್ಯಾತಿ ; ಪ್ರಸಿದ್ಧಿ : ಮಹಿಷಾಸುರಪುರಾಧೀಶ ಚಾಮರಾಜೇಂದ್ರನಿಂ ಮೆಚ್ಚುಂ ಪಡೆಯದಿರ್ದೊಡೆಮಗೆ ಪೆಸರ್ವಾಸಿಯಿಲ್ಲಂ (ಪುರಾಶ. ೦೪೨-೦೯). **ಹೆಸರುವಾಸಿ :** "ಯಶಃ, ಕೀರ್ತಿಃ. ಸಮಜ್ಞಾ—೩ ಕೀರ್ತಿಯ ಹೆಸರುಗಳು ಅಂದರೆ ಹೆಸರುವಾಸಿ" (ಸಿದ್ಧಾಂತಿ. ೩೨). [☞ ಇದು ಒಂದೇ ಅರ್ಥದ ಎರಡು ಶಬ್ದಗಳು ಸೇರಿ ಆಗಿರುವ ರೂಪ]

ಹೆಸರುವಾಸಿಯಾಗು = ಪ್ರಸಿದ್ಧವಾಗು ; ಕೀರ್ತಿಯನ್ನು ಹೊಂದು : ಅವನ ಮನೆತನದವರೆಲ್ಲರೂ ಮಿಲಿಟರಿಸಾಹಸಗಳಿಗೆ ಹೆಸರುವಾಸಿಯಾಗಿದ್ದರು (ಸಸ್ಕೃಕೃ. ೦೦೪); ಠಾಕೂರಮನೆತನ ಕೀರ್ತಿ, ಪ್ರತಿಷ್ಠೆಗಳಿಗೆ ಹೆಸರುವಾಸಿಯಾದುದು (ಕರ್ಮಸಾ. ೫೭). [ಪೆಸರ್+ವಾಸಿ$_1$]

ಪೆಸರ್ವಿಡಿ, ಹೆಸರುಹಿಡಿ (ಕ್ರಿ). ಹೆಸರನ್ನು ಹೇಳು : ಶಿವಂ ಪಿಂತಿರುಗಿ ಪೆಸರ್ವಿಡಿದು ನಿಲ್ಲೆಂಬ ದನಿಯುಣ್ಮಲೊರ್ವರೊರ್ವರ್ ಮುಱೆಯೊಳಡಗುವರ್ (ಪಂಪಭಾ. ೧೩-೬೦); ಪೆಸರ್ವಿಡಿದು ಕರೆವುತೇಳೇಳ್ಪಿಸಡಾಕ್ಷಿಯೆನುತ್ತ ಕರೆಯಲೊಡನಾಕ್ಷಣದೊಳ್ಪೊಸನುಲಿಗಳ್ಪಿಟಿಭಟರವಮೆಸೆಯೆ ಕರಂ ಸಿಡಿಯೆ ಸಿಬಿಕೆಯಿಂದವಳೆಳ್ದಳ್ (ಸ್ವಪ್ನ. ೨೦-೪೦). **ಹೆಸರುಹಿಡಿ :** ಅವಳು ಮಗನನ್ನು ಹೆಸರುಹಿಡಿದು ಕೂಗಿದರು (ಕೂಡಿ). [ಪೆಸರ್ + ಪಿಡಿ$_1$]

ಪೆಸರ್ವೆಱು, ಪೆಸರುವೆಱು (ಕ್ರಿ). ಪ್ರಸಿದ್ಧಿಯನ್ನು ಹೊಂದು : ಮಱೆಯೆಱೆದ ಮಾರಸಿಂಗನಾ ಕುರುಳ ರಾಜಿಗಂ ಪೆಸರ್ವೆತ್ತಾ ಮರುಳಂ ತಂನ್ರಿಪತಿಳಕಂ ಪಿರಿಯ ಮಗಂ ಸತ್ಯವಾಕ್ಯಂ (ಎಕ. VII. ಶಿವಮೊ. ೫೭-೦೦ ; 1116); ಗರುವಿಕೆಗಿಂಬು . . . ಪೆಸರ್ವೆತ್ತ ನೆಗೞ್ತೆಗೆ ತಾಣಮಾಗಿ ಬಲ್ಲರ ಬಗೆಯಲ್ಲಿ ಕೂಡಿ ನೆಲಸಿರ್ದು ಪೊಗೞ್ತೆಯನಾಂತಳಾವಳಾ ಸರಸತಿ ಕೂರ್ಮೆಯಿಂದೊಸೆದು ಮಾಡುಗೆ ಕಬ್ಬದ ಬರ್ದಿನೇಱ್ಗೆಯು (ಕಬ್ಬಗಾ. ೬) ; ಪೆಸರ್ವೆತ್ತ ಗಣಧರಪ್ರಮುಖಸಮಸ್ತಸಭಾಜನಾಂಗತತಿಯೊಳ್ಬಳಕಪ್ರಸರಮನಂದೊರ್ದೊದಲೊಳ್ [ಪಸರಿಸೆ] ಪೊಣ್ಮಿದುದನೂನ ದಿವ್ಯಧ್ವಾನಂ (ಶಾಂತೀಶ್ವ. ೦೬-೦೦೦). **ಪೆಸರುವೆಱು :** ಬಸವ ಮೋಳಿಗೆ ಮಾರನಂತಹ ಪೆಸರುವೆತ್ತ ಶಿವೈಕ್ಯನಾವನು ವಸುಧೆಯೊಳು (ಬಸವು. ೩೦-೬). [ಪೆಸರ್ + ವೆಱು$_1$]

ಪೆಸಱ್, ಪೆಸರು$_2$, ಪೆಸಱು, ಹೆಸರು$_2$, ಹೆಸಱ್, ಹೆಸಱು (ನಾ). ಒಂದು ಬಗೆಯ ದ್ವಿದಳಧಾನ್ಯ ; ಮುದ್ಗ : ರಾಜಾನ್ನದ ಕೂಟಂ ಪೆಸಱ ತೊವೆಯುಂ . . . ನಾನಾ ಪ್ರಕಾರದ ಪಾನಂಗಳುಮಂ ಭಟ್ಟಾರರ್ಗೆ ಬಡ್ಡಿಸಿದಂತೆ ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ (ಪಡ್ಡಾರಾ. ೭೬-೦೪); ಪೊಸಪೆಸಱಗೆಯ ಬಣ್ಣದಂತೆ ಸೊಗಯಿಸುವ ಸಾಮಂತಚೂಡಾಮಣಿಯ ಮೆಯ್ಯ ಬಣ್ಣಂ ವಿಧಾತ್ರನೆಂಬ ಚಿತ್ರಾರಿಯ ವರ್ಣಕ್ರಮಂಗೆಯ್ದ ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು (ಪಂಪಭಾ. ೨-೩೯ ಪ) ; ಜವೆ ಪೆಸಱುರ್ದೆಂಬಿವನಾಡುವ ಪಾಲೊಳಗಟ್ಟು ಕುಡವ ಮೂಲಂಗಳೊಳಿಕ್ಕುವುದಾ ಮರನೊಪ್ಪುವ ಪಲ್ಲವದಿಂ ಪುಷ್ಪಂಗಳಿಂ ಫಲಂಗಳಿನೆಸೆಗುಂ (ಕೋಕೋಸ. ೬-೦೩). **ಪೆಸರು$_2$:** ದೇವರ ನಿವೇದ್ಯಕ್ಕೆ ರಾಜಾನ್ನದಕ್ಕಿ ಕೊಳಗ ಒಂದು ಪೆಸರು ಮಾನ ಒಂದು... ನುದಾದೀವಿಗೆ ಒಂದು ಇನ್ತಿನಿತುಂ ನಿತ್ಯವ್ರಯಮಾಗಿ ನಡೆವುದು (ಕಾಇ. ೭೯-೦೩-೪೦ ; ಸು. 1088). **ಪೆಸಱು :** ಘೃತದೊಳ್ ಪುರಿದುದ್ದು ಪೆಸಱು ಗೋದುವೆವೆರಸಿರೆ (ಕಬ್ಬಗಾ. ೫೬). **ಹೆಸರು$_2$:** "ಮುದ್ಗಃ—ಹೆಸರು" (ಓಪಧಿ. ೦೩೬) ; ಅಕ್ಕಿ ತುಪ್ಪ ಹೆಸರು ಮೆಲೊಗರವ ಕಾಯಿ (ಕೂಂಳಶಾ. ೦೯೪೦, ಕಾಪುಬೆ. ೦೦೨-೪೬ ; 1332) ; ಧ್ವಜಾರೋಹಣದ ಧ್ವಜಸ್ತಂಭದ ನಯಿವೆದ್ಯಕೆ. ಪೂಜೆ ಗ ೧೫ ಅಕ್ಕಿ ಹೆಸರು ಚ ಗ ೩ ಮೇಲೊಗರ... ತೆಂಗಿನಕಾಯಿ ಚ ಗ ೧ (ಸೌಶಾ. IX—ii. ೬೩೩-೬ ; 1554) ; ಹೆಸರೂ ಬೆಡ, ಉದ್ದೂ ಬೇಡ, ಸದ್ಯ ಮನೆಗೆ ಹೋದರೆ ಸಾಕು ಎನ್ನಿಸಿತು (ರಾಹುಳ.೨೦). **ಹೆಸಱ್ :** "ಹೆಸಱ್—ಮುದ್ಗ" (ನಿಘಂಶಾ. ೪). **ಹೆಸಱು :** "ಮುದ್ಗಮೆನಲ್ಕೆ ಹೆಸಱು" (ಪಂಗಣಾ. ೦೦೦-೩) ; ಪುಟ್ಟಿ-ಉರ್ದು, ತೊವರೆ, ಹೆಸಱು ಮೊದಲಾದುವನಿಕ್ಕಿ ಅಟ್ಟ ಕೂಟ್ (ಪಪುದ. ಪಂ. ೦); ಭಕ್ಷಕ್ಕೆ ಗೋಧಿ ಪ ೩ ಉದ್ದು ಪ ೪ ಬೆಲ್ಲ ೧೦ . . . ಹೆಸಱು ಪ ೨೧ ತೆಂಗಿನ ಕಾಯಿ ಬಾಳೆಯ ಹಣ್ಣು ಅಡಕೆಲೆ ಸಹ (ಎಕ. XV. ಚೇಲೂರು. ೭೦-೯೯; 1485); ಹೆಸಱು ತಡಗುಣಿ ಕಡಲೆ ತೊಗರಿಗಳ ಬೇಳೆಯುಂ ಹೊಸ ಬೆಲ್ಲವಿಕ್ಕಿ ಬೇಯಿಸಿ (ಸೂಪಶಾ. ೦-೬೦).

[ದೇ. ॥ ತಮಿ. ಪಯಱು; ಮಲ. ಪಯಱ್, ಪಯಱು; ತುಳು. ಪದೆಂಜಿ ; ತೆಲು. ಪೆಸರ, ಪೆಸಲು; ಕೋಲಾ. ಪೆಸಲ್, ಪೆಸಾಲ್; ನಾಯ್ಕಿ. ಪೆಸಳ್ ; ಪರ್ಜಿ. ಪಯಾರಿ ; ಗೊಂಡಿ. ಪೆಸಲ್]

ಪೆಸಱು 'ಪೆಸಱ್' ನೋ.

ಪೆಹೆಲ್‌ವಾನ್ 'ಪೈಲವಾನ' ನೋ.

ಪೆಳಕು (ನಾ). ನಿಗದಿ ಮಾಡಿಕೊಂಡ ಸ್ಥಳ; ಸಂಕೇತಸ್ಥಾನ: "ಸಂಕೇತ ಯುಕ್ತಸ್ಥಳಂ ಪೆಳಕೆಂದು" (ಶಬ್ದಾ. ೨೫). [?]

ಪೆಳಕೆ, ಪೆಣಕಿ, ಪೆಣಕೆ₂, ಹೆಳಕೆ (ನಾ). ತೆಳುವಾದ ಹಲ್ಲೆ,—ಬಿಲ್ಲೆ; ಹೆಕ್ಕಳೆ: ಮಾಶಿಲ್ಲದೆ ಉಗುರುಗಳಿಂದ ಪೆಳಕೆಗಳನ್ನು ಕಿತ್ತೆಸೆಯುತ್ತಿದ್ದಾಗ (ಹನುಕಾಂ. ೩೭೬). **ಪೆಣಕಿ:** ಗೋಡೆಯ ಮೇಲೆ ಸುಣ್ಣದ ಪೆಣಕಿಯು ಹಾರಿ ನಾಲ್ಕು ಕಲೆಗಳು ನಿಂತಿದ್ದರೆ ಚಿಂತಾಮಣಿಯು ತನ್ನ ನಿಸ್ತೇಜಮುಖದ ಪಡಿನೆಳಲನ್ನೇ ಅಲ್ಲಿ ಕಾಣುವನು (ಕವಿ. ೬೩). **ಪೆಣಕೆ₂:** ಕಲ್ಲಿನ ಪೆಣಕೆ ಹಾರಿ ಶಾಸನದ ಕಡೆಕಡೆಯ ಭಾಗವು ನಷ್ಟವಾಗಿದೆ (ಶಾಸನ. ೭೬). **ಹೆಳಕೆ:** ಬಿರುಕಿನ ಸಂದಿಯಲ್ಲಿ ಬೆರಳು ತೂರಿಸಿ ಹೆಳಕೆಯನ್ನೆಬ್ಬಿಸಿದರೆ . . . ಕಾಣಬಹುದು (ಹನುಕಾಂ. ೬೮). 'ಹೊಳಕೆ₂' ಪರಾ. [←ತವಿ. ಪಿಳವೈ]

ಪೆಳರ್ 'ಪೆಳಱು₁' ನೋ.

ಪೆಳರು₁ 'ಪೆಳಱು₁' ನೋ.

ಪೆಳರು₂ 'ಪೆಳಱು₂' ನೋ.

ಪೆಳರ್ಚಿಸು (ಕ್ರಿ). ಹೆದರಿಸು; ಅಂಜಿಸು; ಭಯಪಡಿಸು: ಪುರದ ಪೃಥಿವಿಪಾಲನಪೂರ್ವಾನ್ವಯವರಸುಗಳಂದಿನ ಚಕ್ರೇಶ್ವರರಂ ಪಿರಿದಪ್ಪವಗಡದಿಂದ ಪೆಳರ್ಚಿಸಿ ಬಲ್ಗಪ್ಪಂಗೊಂಡು ಇರಿಸಿದ ನವನಿಧಿಯೋ ಎನಲ್ (ಪಂಪಾ. ೦-೩೭). [ಪೆಳರ್ಚು + —ಇಸು₃]

ಪೆಳರ್ಚು (ಕ್ರಿ). ಹೆದರಿಸು; ಅಂಜಿಸು; ಭಯಪಡಿಸು: 'ಪೆಳರ್ಚಿಸು' ಪರಾ. [<ಪೆಳಱು₁ + —ಚು₁]

ಪೆಳರ್ವಡು (ಕ್ರಿ). ಭಯಪಡು: ಹೆದರು; ಅಂಜು: ವನಗಜಪೊಕ್ಕ ಮಳ್ಳದವ ಕೋಟ್ಟಿಗಸಜ್ಜಿಗೊಳ್ ಕೆಸಱಾಟವಾಡಿ ಸೊಕ್ಕಿನ ಸೊವಡಿಂಗೆ ಮುತ್ತಿ ಮಜಸಿಂಬಿಗಳಿಂಬಿಸೆ ರೋಮಾಂಚಕ್ಕಿ ಬಿಕ್ಕನೆ ಬಿರಿವಂತೆ ಬಂದ ಬಲದೊಳ್ಪೆಳರ್ವಟ್ಟು[ಪಾಶಾಂ. ಬೆಳರ್ವಟ್ಟು, ಬೆಳರ್ವಟ್ಟು] ಮದಕ್ಕೆ ಪಂದ ಕಂಪಿನ ಕಳಭಂಬೊಲಿರ್ದುದತಿದರ್ಪರಸಾರನೊಂದುಸೂಕರಂ (ಕರ್ಣಸಂ. ೩-೬೫). [ಪೆಳಱು (<ಪೆಳಱು₂) + ಪಡು₁]

ಪೆಳವ 'ಪೆಬವ' ನೋ.

ಪೆಳವಳಿಸು 'ಪೆಳ್ಬಳಿಸು' ನೋ.

ಪೆಳವಿ 'ಪೆಬವಿ' ನೋ.

ಪೆಳಱ್ 'ಪೆಳಱು₂' ನೋ.

ಪೆಳಱಿಸು, ಪೆಣಱಿಸು (ಕ್ರಿ). ೧. ಹೆದರಿಸು; ಭಯಪಡಿಸು; ಅಂಜಿಸು: ಜುಂಜೆಯ ದನಿ ದಿಕ್ಪಾಲರನಂಜಿಸೆ ತಳ್ತೊಗೆವ ಕೋಡ ಕಾಳೆಯ ದನಿ ದಿಕ್ಕುಂಜರವಂ ಪೆಳಱಿಸೆ [ಪಾಶಾಂ. ಬೆದಱಿಸೆ] ನಭವಂ ಜೇಂಪೊಡೆಯುಲಿಪು ಸುತ್ತಿ ಮುತ್ತಿತ್ತಾಗಳ್ (ಪಂಪಾಭಾ. ೪-೩೬): ಪೊಡವಿಯೊಳಗಿರ್ದುರಗರಾಜನ ಹೆಡೆಹೆಡೆಯನಪ್ಪಳಿಸಿ ದಿಗಿಭವನೊಡನೆ ಪೆಳಱಿಸೆ . . . ತೀವಿತ್ತದೆತ್ತಂ ಬಿಡದೆ ದಶರಥನೃಪನ ಧನುರ್ಗುಣಘೋರಟಂಕಾರ (ಶಾಮಾಂ. ೨-೩೦); ನೀನು ಪ್ರೀತಿಯಿಂ ಸಕಲದೇವಾನ್ನವಂ ಸಲಿಸೆ ನಿನ್ನಯ ನೆನಹಿನಿಂ ಜನಿಸಿದ ಭೂತಜೀವರ್ಗೆ ಸಂತೃಪ್ತಿಯಹುದೆಲೆ ಮಹಾಪೂತ . . . ಪೆಳಱಿಸಬೇಡ ಸಲಿಸೆನಲು (ಪ್ರಕುಪು. ೪-೫೫). ೨. (ಅಲಂ) ಓಡಿಸು; ನಿವಾರಿಸು; ತೊಲಗಿಸು; ನಾಶಮಾಡು: ಬೆಳಗಿ ದಿಗಂಬರ ಪ್ರತತಿಯಂ ಕುಮತೋಗ್ರತಮಃಪ್ರಕಾಶವಂ ಪೆಳಱಿಸಿ . . . ನಿರ್ಮಳನ ಕಳಂಕ ಚಂದ್ರನೆಸೆದಂ ಧರೆಗಚ್ಚರಿ ಪೆರ್ಚಿ ತೇಜದಿಂ (ನೇಮಿಪು. ೦-೨೦); ಮಾಳರಹಿತದರ್ಶನಮನಸ್ಪಳಿತಸ್ವರ್ಗಾಪವರ್ಗಸುಖಕರಮನದಂ ಪೆಳಱಿಸುವುದಾತ್ಮನೊಳ್ಸಂಗಳಿಸಿದನಂತಾನುಬಂಧಿನಾಮಕಷಾಯಂ (ಶಾಂತೀಶ್ವ. ೦೩-೬೨). ೩. ಕಳೆಗುಂದಿಸು; ತೇಜೋಹೀನವನ್ನಾಗಿ ಮಾಡು: ಬಳಸಿ ಚಿಲಿಮಿಲಿಪ ವಿಹಗಂಗಳ ಕಳಕಳದೊಡನೆ ತೊಡರ್ದು ಸರಸಿಜನಳಮಂ ಪಱಗೊಳಿಸಿ ಕಾಮುದಮುಖಮಂ ಪೆಳಱಿಸಿ ಶೀಡಿತ್ತು ಸುಪ್ರಭಾತಸಮೀರಂ (ಶಾಸಾಪ್ರ. ೪-೭೦). **ಪೆಣಱಿಸು:** ೧. ರಥಪರಿವೃಢಮೆಂಬ ಗಿರಿಯೋಱಿ ಪೆಣಱಿಸಿ ರಥರಾಕ್ಷಸನೊಸೆದೀಯೆ ಪೃಥುವೀರ್ಯನು ಮಕರಧ್ವಜಯುತ ಪುಷ್ಪರಥಮನಿರದೆ ಕೈಕೊಂಡು (ಸಂಪುರಾಂ. ೦೯-೦೪೪). [ಪೆಳಱು₁ + —ಇಸು₃]

ಪೆಳಱು₁, ಪೆಡಱು, ಪೆಣಱು, ಪೆಳರ್, ಪೆಳರು₁ (ಕ್ರಿ). ೧. ಹೆದರು; ಭಯಪಡು; ಅಂಜು: "ಪೆಳಱು—ಭಯೋ" (ಶಮಾಧಾ); ಮದಕೋಕಿಲ ಕಲನಿನದೆಯ ವದನಸುಧಾಸೂತಿ ಬೆಳಗೆ ಪೆಳಱಿದ ತಮಮಿಾ ಪುದಿದು ಪೆಱಗಿರ್ದುದೆನಿಪುದು ಮದಗಜಗಮನೆಯ ವಿನೀಲಕೇಶಕಲಾಪಂ (ಅಪಿಪು. ೬-೬೨); ಪೆಳಱಿದ ವಾಜಿರಾಜಪವನಂಜಯನಾ ತ್ರರುಮೂಲದೇಶದಿಂ ತಳರ್ದು . . . ಮಣಿಶೃಂಖಲೆಯಂ ಪಿಡಿಯಲ್ (ಶಾಸಾಪ್ರ. ೦೯-೯೩); ಬಿಡು ಬಿಡು ಪಿಡಿಯದಿರೆಲೆಯೆಲೆ ಜಡಮತಿ ಸಾವಿಂಗೆ ಪೆಳರ್ದು ಪೊಕ್ಕುದು ಬಂದೀ ಗುಡಿಯಂ ಕುಱಿಯಿದು (ಪ್ರಕಪ. ೦೬-೯). △ **ಪೆಡಱು:** ೧. ಧರೆ ಕಂಪುಗೊಳ್ಗುಮಾಸಾಕಲಿ ಪೆಡಱುಗುಂ (ಪಶಿ. VII. ೫೯೦೦. ೦೦೯-೨೫; 1096). **ಪೆಣಱು:** ೨. (ಅಲಂ) ಸೀಳಿಹಾಕು; ಕೊಲ್ಲು (?): ಇರುಳೆಂಬ ಕಂಭದಿಂ ಹಿಮಕರನಾದಂ ಕರಿಯ ತೆಱದಿ ತಳ್ತೊಗೆಯ ಸುಧಾಕಿರಣಮದವುಣ್ಮೆ ಪರಿದುದು ವಿರಹಾಕುಳರೆಂಬ ಬೀಸರಂ ಪೆಣಱುತ್ತುಂ (ಅಪಿಪು. ೬-೯೩). **ಪೆಳರ್:** ೧. ಲಲನೆಯರು ಮಾನಕಗಿದಾದಡಂ ಶಿಕ್ಷಾದಿಗಳಿಗೆ ಪೆಳರ್ದಾದಡಂ ಪರಪುರುಷಸಂಪರ್ಕವುಳಿವುದೆ ಕನಿಷ್ಠತರಮಾದ ಪಾತಿವ್ರತ್ಯವು (ಪಾಪ್ರಕಾ. ೦೯-೨೯). **ಪೆಳರು₁:** ೧. ಪಾಮರಿಯ ಬಿರುದನಿಗೆ ಕೈಪರೆಗೆ ಬಾಯ್ಬರೆಗೆ ಕಲ್ಗವಣಗೊಂದಿನಿತು ಪೆಳರಿ ಗಾರಾಗುತುಂ, ಭುರ್ರೆಂದು ಪೆರತೊಂದೆಡೆಗೆ ಪಾರಿ ಮಂಡಿಸುತೆ ತೊಡಗಿದಪವಿನ್ನೊರ್ವೆ ನೆಲ್ಮೇವಿಗೆ (ಪಶ್ರಾಂಗ. ೩೩-೦೪೫).

[ದೇ.೩ ತವಿ. ಪಿಜಱ್; ತೆಲು. ಪೆಲುಕುಱು, ಪೆಲ್ಮುಱು]

ಪೆಳಱು₂, ಪೆಳರು₂, ಪೆಳಱ್ (ನಾ). ಭಯ; ಅಂಜಿಕೆ; ಭೀತಿ; ಹೆದರಿಕೆ: "ಅಗುರ್ವು, ಬಿಗುರ್ . . . ಪೆಳಱು, ಮಲ್ಲಱಿ, ತಲ್ಲಱಂ, ಅದಿರ್ವು — ಈ ೧೦ ಭಯಂ" (ಶಬ್ದಾ. ೩೬-೨೨೩); ಇಳಿದಳಿಯನೇಳದಂ ಸೂಕುಳಿಯೋಕುಳಿ ಕಳಱು ಪೆಳಱು ಮಱುಕುಳಿಯಳಿಯಂ. . . ಇಱುಕುಳಿಯಿವಾದಿಯೊಗಱಿ ಕುಳನಂ (ಕಪಾಪ್ರ. ೨೬); ಕೋಗಿಲೆವಱ್ ಮಾಮರದೊಳ್ ಕಾಗೆಯು ಕೊತ್ತಱಿಯೊಳೆಟ್ಟು ಪೋಗಲುಮಿರಲುಂ ಕೂಗಲುಮೆಮೆದೆಱ್ ದಿಕ್ಕಲುಮೆಂಗೆಯ್ಯಲುಮಾರ್ತುದಿಲ್ಲ ಬನದೊಳ್ ಪೆಳಱಿಂ (ಕಪ್ಪಾಕಾ. ೩೬ ಬ್ಯಾಬ್ಯಾ). **ಪೆಳರು₂:** ಇಲ್ಲ ಕರು ದನವೆಂಬ ಹೋಹೋಯ್ದು ಯೆತ್ತೆಂಬ ಸೊಲ್ಲಿನಿಂ ಮನೆಮನೆಯ ಪೆಳರು ಪಿರಿದಾಯ್ತು (ಶಾಂಪುರಾ. ೬೯-೦೪೭); ಸುಯ್ದೊಡಲಿನಿಂ ಪೆಳರ ಮೆಟ್ಟಿ ಬಂದಂ ಕೊರಗ ಹುಯ್ಯಲಿಂ ಹಂದರಂ ಕಳವಳಿಸುತಿರಲು (ಶಾಂಪುರಾ. ೦೬೦-೩೮೨). **ಪೆಳಱ್:** "ಪೆಳಱಬಲೆಂದೆಲ್ಲಿಯುಂ ಕವಿವರರುಸಿರಲ್ ನಿಲ್ಲದೆ ಭಯನಾದಂ" (ಕವಿಗಂ. ೦೦೦); ಮನದೊಳಗೆ ಧೃತಿಗೆಡದೆ ಅವನಿಪಂ ಕೇಳ್ದೊಡಂ ತನುವ ತತ್ತಱದೆಱ್ ಸುವಂ ಬಳಿಕಮೆಂಬ ಪೆಳಱಾವೆಯ್ದೆ ತಲೆದೋಱದೆ ನೆನಸುಮೆನಗಂ ಸಾವು ತಪ್ಪದು (ಕಣಾಪ್ರ. ೦-೭-೨೨). [<ಪೆಳಱು₁]

ಪೆಳಱುಗೊಳ್ (ಕ್ರಿ). ಹೆದರು; ಅಂಜು; ಭಯಪಡು: 'ಪೆಳಱುಗೊಳಿಸು' ಪರಾ. [ಪೆಳಱು₂ + ಕೊಳ್₁]

ಪೆಳಱುಗೊಳಿಸು (ಕ್ರಿ). ಭಯಗೊಳಿಸು; ಅಂಜಿಸು; ಹೆದರಿಸು: ಅತ್ತ ಮತ್ತೊರ್ವೆ ಹಳಿಗೊಳಿಯಂ ಪೆಳಱುಗೊಳಿಸಿದಡೆ ಕಿಸಱಂಕಕಾಱರ ನಿಕ್ಕಿದೊಡೆ ಕಂಸನಾ ಜಾಳಾನೆಯಂ ಕೆಡಹಿದೊಡೆ ಮಹಾದ್ಭುತವಾಯ್ತೆ (ಕಾಳ್ಕಥಾ. ೨೫-೩೦). [ಪೆಳಱುಗೊಳ್ + —ಇಸು₃]

ಪೆಳಿ (ನಾ). (?): ಮತ್ತಂ ವುಭಯ ನಾನಾದೇಸಿಗಳು ದೇ × × × ಕ್ಕೆ

ಬುರೊಳಗೆ ಹೊಕ್ಕ ಪೆಂಬುಲ್ಲಿ ಬಿಟ್ಟು ವಗ ೨ ಹೆಜವರ ಪೆಂಬುಲ್ಲಿ ಬಿಟ್ಟು ವಗ ೨ ಮತ್ಸಂ ಕುದುರೆಗೆ ಏಸಪೊಂದಂ ಬಿಟ್ಟರ್ (ಸೌಪ್ತ. XV, ೦೩೫-೫೬ : ೧೧೫೪). [?]

ಪೆಳ್ಳಿ₁ (ನಾ). ಪೊದೆ : ಪೊದರು : ಮೆಳೆ : ಒಂದು ಕೈಯಲ್ಲಿ ಸೀರೆಯ ನಿರಿಗೆಗಳನ್ನು ಒಡಿದುಕೊಂಡು ಕಂಟೆ ಪೆಳಿಗಳ ಮಧ್ಯದಲ್ಲಿ ಓಡಲಸುವಾನೆ (ತಂದಿಪು. ೫೦); ಇಂದು ಅಲ್ಲಿ ಕೆಂಪು ಬಟ್ಟೆ ಬೆದ್ದುಕೊಂಡಿದ್ದುದರ ಬದಲು ಸೂರ್ಯಪ್ರಭೆಯಂತೆ ಲಕಲಕಿಸುವ ನಿಲುವಂಗಿಯ ತುದಿಯೊಂದು ಪೆಳೆಯಲ್ಲಿ ಮರೆಯಾದಂತೆ ಕಂಡಿತು (ತೀರ್ಥಂಕ. ೧೬). 'ಮೆಳ್ಳೆ₁' ಪರಾ. [?]

ಪೆಳ್ಳೆ (ನಾ). ಗುಳ್ಳೆ : ಬೊಕ್ಕೆ (?) : ಕಣ್ಣಿನೊಳಗಣ ಕಸ ಕೈಯೊಳಗಣ ಪೆಳೆ[ಪ್ರಾಣಾ. ವೇಳೆ] ಬಾಯೊಳಗಣ ಬಗಪಳ ಮಾಸವ ಶಂಕೆ ಹಜ್ಜೆವಲ್ಲದೆ ಪ್ರಾಣಲಿಂಗಿಜಾಗಬಾರದು (ಪ್ರಸಾಗೂಂ. ೪. ೨೫೨-೫೩).

[? / ತ್ರಿಪು. ಪಳೆವೈ]

ಪೆಳ್ಳಿಯೂರ್ (ನಾ). ಒಂದು ಊರಿನ ಹೆಸರು : ಕುಡುಕೂರ ಭಟ್ಟ ದೊರಯ್ಯನ ಮಗಂ ದಾರಯ್ಯಂ ಬಿನವಾರನೊ × × × ೈದು ಪೆಳ್ಳಿಯೂರ್ಪಟ್ಟಿನೊಳ್ಪತ್ತಂ ದೊರಯ್ಯಂ ಕುಡುಕೂರಲ್ಲನ್ನಿಜಿಸಿದಂ (ಎಕ. VI. ಪುಡಕೊ. ೩೦ ೩; ೨೪೯). [? +ಊರ್]

ಪೆಳ್ಳಳ (ನಾ). ಭಯ : ಹೆದರಿಕೆ : ಗಾಬರಿ : 'ಪೆಳ್ಳಿಸು', 'ಬೆಳ್ಳಳ' ಪರಾ.

ಪೆಳ್ಳಿಸು, ಪೆಪ್ಪಳಿಸು, ಪೆವ್ವಳಿಸು, ಪೆಳವಳಿಸು, ಪೆಳ್ವಳಿಸು, ಪೆಪ್ಪಳಿಸು (ಕ್ರಿ). ೧. ಹೆದರು ; ಬೆದರು ; ಭಯಪಡು ; ಗಾಬರಿಗೊಳ್ಳು : ಪೊಸತಲರ್ದೊಂದು ತಾವರೆಯಿ ಗೆತ್ತು ಮುಖಾಬ್ಜಮನೊಂದು ತಂಬುಲಚೂಣಿಸಿ ಸತಿ ಬೆರ್ದಿ ಪೆಳ್ಳಿಸಿ ನೋಲ್ಪುದುಂ (ಕಾಪ್ರ. ೫-೬೩) ; ಕುಲಶೈಲಂಗಳ ಪರ್ಮಿನಿಕುಲವ ದೇವೀಸಂಕುಲಂ ಬೆರ್ದಿ ಪೆಳ್ಳಿಸುತ್ತುಂ ದೆಸೆಯಾನೆ ಬೆರ್ದಿ . . . ಘೂರ್ಣಿಸುತ್ತು ರಘುಜಪ್ರಸ್ಥಾನಭಿ ರೀರವಂ (ಪಂಗಾವಿ. ೧೨ ೦೬) ; ಕಂಸರಿಗೆ ಪೆಳ್ಳಿಪ ತುರಗಮುಖವಿಯರ್ಕಳಿಂ ತುರಗಮುಖವಿಜಯರನಾಮಿ ಜೋಡಿಸುವ ಕಲಿಗಳಿಂ (ಜಂಪು. ೧೨-೪೭ ಕಗಳ) : ಸುತ್ತೆತ್ತಲುಂ ನೋಡಿ ಪೆಳ್ಳಿಸುತೆ ಸುತೆ. ಕಣ್ಣೆದಿರಾ ರಘುರಾಕ್ಷಸಂ (ಕ್ರಿಲಂತವಿ. ೨೯೩-೪೩೭). ೨. (ಭಯದಿಂದ) ಕಿಗುಡು : ಚಲಿಸು : ಪರಿಮೂತ್ರಂ ಛಿನ್ನಲಂಡಂ ಸುರಿಯೆ ಮಯಜಳಂ ಮೈಯ್ಗೊಳಿಬ್ಬಾಡೆ ಭೀತಾತುರಚಿತ್ತಂ ಸುತ್ತಲುಂ ಪೆಳ್ಳ[ಪ್ರಾಣಾ. ಪ್ರ. ೪]ಳಿಸೆ ನಯನಮುತ್ಕಂಪಿತಂ ಕುಂಚಿತಾಂಗಂ ಪರಿದೇಳಾಕುಂಜಮಂ ಪೊಕ್ಕೆವೆಮಿಡುಕದೆ ನಿಂದಿಶ್ಚು ಮತ್ತೊಂದಿಭಂ ಸಾರ್ತರೆ ಕರ್ಣಾಘ್ಫರ್ಣಮಂ ಪನ್ನಮೃಗವಿಳಯಮಿಷ್ಟಾದಕಂ ಸಿಂಹನಾದಂ (ಪಾಂಡ. ೦೨-೮೨ : ಸೂಕ್ಷ್ಮ. ೩ ೬೯ ನೋ). **ಪೆಪ್ಪಳಿಸು** : ೧. ನಡುಗುತ್ತಕ್ಕಂ ಕಂಡಪ್ಪಳಿಂದಂ ಮೃಗಾಕ್ಷಿ ಪೆಪ್ಪಳಿಸಿ ದೆಸೆಯುಂ ನೋಡುತ್ತುಂ ಪೊರ್ದಿದಳ್ ಸ್ಮಷಚಂವ್ಯನಂ (ಶಾಪಂಚಾ. ೬೭೩) : ಅಲ್ಲಿಗೆ ಚಿತ್ರಾಂಗನೆಂಬ ಸಾರಂಗಂ ಘೋರೆನೆ ಬಂದು ನೀರಂ ಕುಡಿಯಲಾರ್ದೆ ಪೆಪ್ಪಳಿಸಿ ಪೆಜಗಂ ನೋಡಿ ನಡುಗುತ್ತುಂ ನಿಂದುದಂ ಕಜ್ಜನಾದಿಗಳ್ ಕಂಡು (ಕಂಚಿತಂ. ೩೦೭-೬) ; ಇಂತಪ 'ಸುಲಭೋದ್ವೇಗಗಳ ಕ್ಷುದ್ರ ಭಾವಗಳ ತಿರುದೆರೆಗಳಿಂದಲೀ ಲೀಳನಾಗಿ ಪೆಪ್ಪಳಿಸಿ ಮನ್ಮನಾಗಿ ದಿಙ್ಮೂಢನಾಗಿರುವ ನೀನು . . . ತೊಂತುಪೋಗಿರುವ ಈ ರಾಜ್ಯವೆಂಬ ಹಳೆಯ ನಾಕೆಗೆ ಹೊಸ ಕರಣಧಾರನಾಗಿರುವೆ! (ಪಟ್ಟಿ. ೨೫೬ ೨೦). ೨. ತಳಮಳಗಾಗದೆ ತನು ಪೆಪ್ಪಳಿಸದ ನೆಲೆ ತೊಲಗದಜಿವ್ವು ಪೆಳಪಿದ ಚೇಷ್ಟಾವಳಿ ಪಂಚನಮಸ್ಕಾರವ ಕಳ್ಳರುತಿ ತಮಗಮರೆ ಮಾಡಿಪಿದರ್ ಮಾನಿಚೂಳಿರ್ (ಪಾಪಪು. ೬ ೧೧). **ಪೆವ್ವಳಿಸು** : ೧. ಮತ್ಸಮೊರ್ಮೆ ಚಿಂತಾವಿಷಾದಭರದೊಳಿಬ್ಬು ನಸು ಮುಚ್ಚಿದ ವಿಳೋಚನದಿನಿಬ್ಬು ಪೆರ್ಮೊಲೆಯ ಕೆಲದೊಳ್ ಪನಿವ ಕಣ್ಣಾಯಿ ಸವ್ವಳ್ಳಿ ಪೆವ್ವ[ಪ್ರಾಣಾ. ವರ್ಗ]ಳಿಸಿ ಬಜ್ಜದೆ ಕಂಪಿಸುವಳ್ (ಪಂಪ. ೪ ೩೯ ಪ). **ಪೆಳವಳಿಸು** : ೧. ಭಯಂಗೊಳ್ಳ ಬೆಳ್ಳರಿಪುಂ ಉಬ್ಬರಿಸುವ ಕುರುಡರುಮುಂ ಪೆಳವಳಿಸುವ ಕಿವುಡರುಮಾ ಕಂಡು (ಕಲಾಪ. ೩-೧೧೪ ಪ). **ಪೆಳ್ಳಿಸು** : ೧. ಕನಸಿನೊಳ್ ರಥಾಂಗಧರ ಯಕ್ಷರೂಪಮುಂ ಕಂಡು ನೆನಸೆಂದು ತಂತಮ್ಮ ನೆಲೆಗಳೊಳ್ ಪುರಸ್ಕಾರಾಕೋಟಿ ಪೆಳ್ಳಿಸಿಯುಂ (ಪಾಂಪು. ೧೦-೦೨೨ ಪ). **ಹೆಪ್ಪಳಿಸು** : ೧. ಕಳವಳಿಪ ಹೆಪ್ಪಳಿಪ ತೋಪಿಪ . . . ಬಳಲ್ವ ಹಾಹಾಶ್ರಂದನಂಗೆಯ್ಯಲ್ವ ಜೀವಿಗಳೆಲ್ಲ ದುಃಖಂ ಕಳಲ್ವುವೋಲೀಕ್ಷಿಸಲಿಕೆಯ್ತಂದಾ ಮಹಾಕರುಣೆ (ಸಾಸಂಕ. ೬-೦೬) : ಹರನಿಂತು ಮೂಗುವಟ್ಟಿರೆ ಕೆಡೆದು ದಡದಡಿಸಿ ಕೆರಳೆ ಕೂರಂಬು ಮಜ್ಜುಮೊಸೆದೆ ೞರ್ಪ ಮಜ್ಜುವ್ವಲ್ಲಿಯಿನವಿನಂತಿರಲು ಪಪ್ಪನೆ ಹಾಜಿ ಪೆಪ್ಪಳಿಸಿ (ಕೌಂಪಿ ೦೪ ೩೦). ೫. ಹೆದರಿಕೆಯನ್ನುಂಟು ಮಾಡು ; ಹೆದರಿಸು : ತಪ್ಪದಹುದು ಕೌಶಿಕನ ಕೋಟಲೆ ಈಗ ಮುಪ್ಪುರಿಗೂಡಿ ರಾಯನಿಗೆ ಪ್ರಳಯಕಾಲ ಶಿವನಿವ ಎಂದು ಬೆಜಗಾಗಿ ಒಪ್ಪಗುಂದಿದ ಮನದೊಳಗೆ (ಪಟಾಂ. ೧ ೮೩). ೪. ಹಿಂದುಮುಂದು ನೋಡು ; ಸಂಕೋಚಪಡು : ಅರ್ಚಿತಪ್ರಸಾದವಲ್ಲದಿಹ್ನವ ಹೆಪ್ಪಳಿಸದೆ ಬಲು ಮನದಿಂದುಂಬುವ ಸತ್ಯ ಹೊಸ ಮುಲಮಂ ಕಲ್ಪಿಪುಂ ನಿತ್ಯಂ ಸಲೆ ಸವಿವವ ಜಾತಕಮಂ (ಪಲ್ಲಾಪೋ. ೬೫-೫೫೬) ; ಅರ್ಪಿಸಿದ ಪದಾರ್ಥಮುಮನೊಪ್ಪುಗೊಂಬ ಪ್ರಸಾದಿ ಅರ್ಪಿಸದ ದ್ರವ್ಯಕ್ಕೆ ಪೆಪ್ಪಳಿಸುವ ಪ್ರಸಾದಿ ತನು ಸೋಂಕಿತಂ ಲಿಂಗಕೇನ ಬಲ್ಲ ಪ್ರಸಾದಿ ಮುಮುಚ್ಚಿತಂ ಲಿಂಗಕೇನ ಬಲ್ಲ ಪ್ರಸಾದಿ (ಪಲ್ಲಾಪೋ. ೧೦೫ ೧೧೬). 'ಬೆಳ್ಳಳಿಸು' ಪರಾ.

[ಪೆಳ್ಳಳ + — ಇಸು]

ಪೆಳ್ವಳಿಸು 'ಪೆಳ್ಳಿಸು' ನೋ.

ಪೆಳ್ಳಗಿಸು (ಕ್ರಿ). ಹೊರಕ್ಕೆ ಎಳೆ : ಈ ಬೆಟ್ಟವನ್ನು ಬೆ.ರು ಮಾಟ್ಟ ಕಿಕ್ಕು ಪೆಳ್ಳಗಿಸಿ ಎತ್ತಿ ಸನ್ನ ತಲೆಯು ಮೇಲಿಟ್ಟರೆ ನಾನು ಹೊರುವುದಕ್ಕೆ ಸಿದ್ಧ (ಕಥಾವಾಂ. IV. ೩). [? + — ಇಸು₃ / ತೆಲು. ಪೆಲ್ಲಗಿಂಚು]

ಪೆಳ್ಳನೆ (ಅ). ಒಂದು ಅನುಕರಣಾವ್ಯಯ : ಈ ರೂಪೆಂಬುದು ಭುವನ ಜನಾರ್ಧ್ಯಂ ಚಕ್ರಿಜನನಿಹೇವಿತವಿದಜಿಸೊಳ್ ನಾಸದಳವೆಂದು ಪೆಳ್ಳನೆ ಬಾರಿಸಿದುವು ಬಿಡದೆ ಜಡಿದು ವಸದೆವತೆಗಳ್ (ಅಪು. ೯-೧೩).

[? + — ಅನೆ₁]

ಪೆಜ್ಜಿ₁. ಪೆರ್ಜ₁ (ಸಪೂರೂ). 'ಪೆಜಿತು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪೆಜಿವರಿಜು', 'ಪೆಜಿವುಲ್ಲಿ' ಪರಾ. **ಪೆರ್ಜ₁** : 'ಪೆರತಿ' ಪರಾ. [< ಪೆಜಿತು]

ಪೆಜ್ಜ. ಪೆರ್ಜ. ಪೆರ್ಜ₁. ಪೆಜಿ (ಸಪೂರೂ). 'ಪೆಜಿಗು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪೆಡೆ', 'ಪೆಜಿಪಿಂಗು', 'ಪೆಜಿಸಾರ್' ಪರಾ. **ಪೆರ್ಜ** : 'ಪಗಗೆಗೆ' ಪರಾ. **ಪೆರ್ಜ₁** : 'ಪೆರದೆಗೆ', 'ಪೆಗಪಿಂಗು' ಪರಾ. **ಪೆಜ** : 'ಪೆಜಿಪಿಂಗು', 'ಪೆಜಿಸಾರ್' ಪರಾ. [< ಪೆಜಗು]

ಪೆಜ್ಜಿ (ನಾ). (?): ಬಾಡವ ಸ್ವಯಂಭುದೇವರ್ಗ್ಗೆ ಊರ ತೋಟುವ × × × ಕೂಯ್ತಲಿ ವರ್ಷಂಪ್ರತಿ ಆಯುಂ ಪೆಱ ನನ್ನಾದೀವಿಗೆಗೆ ಬಿಟ್ಟರು (ಎಕ. XI. ದಾವಿ. ೦೪೦-೪೫ ; ೧೦೮೬). [?]

ಪೆಜ್ಜುಳಿ 'ಪೆಜಿವುಲ್ಲಿ' ನೋ.

ಪೆಜ್ಜಂಟೆ (ನಾ). (ನೇಗಿಲ) ಗುಳ : ನಾಲಗೆವಂದಿ ಕಾಲ ಮಾಜಿ ಕೈಗೊಡೆ ತೀವಿದ ಪಳ್ಳ ಪೆರ್ಜಾಂ ಶಾರಿ ಪೆಜಂಟೆ[ಪ್ರಾಣಾ. ಪ] ತಳ್ಳಿಜನು ಮೇಂಬಿವಜಿಸೊಂದು ಕಥಾವಿನೋದದಿಂ ಲೀಲೆಯುಸಾಂತು ರಾಜಸುತನುಂ ಜಪರಾವಿಳಿನಿರ್ದುದತ್ಪನಂ ಮೇಂಟಿಸೆ ವ್ಯರ್ಥಚೇವನಸವನ್ನಿತರಿಯ್ತರಾ ಶರ್ದಾವಗಂ (ಶಾಕಾಸ್ರ. ೩ ೧೩) :

ಪೆಜ್ಜಕೆಜ್ಜೆವು (ನಾ). ಹಿಂದಿನ ಜನ್ಮದ ಅರಿವು : ವಿವಲಿತ ಪುಷ್ಪಸೌರಭ ದಿನಚ್ಚುಶಕಲ್ಪದ ಶುಕ್ಲಲೇಶ್ಯೆ ಲಿಪ್ತದ ಚರಃ ಮ್ಯನಂತವ ಬಲಃ

ಪೊಳೆಪುದ್ಗತ ತಿಗ್ಮರೋಚಿ ಬಣ್ಣದ ರುಚಿ ಮಿಂಚು ಮಿಂಚು ಪೆಱಕಣ್ಣೆಱ ವಾಗಿರೆ . . . ಮೆಱೆವಂ ಕುಮಾರಕಂ (ಅನಂಪು. ೬-೦೬).

[ಪೆಱ$_2$ (< ಪೆಱಗು) + ಕಣ್ಣೆಱವು]

ಪೆಱಕಾಲ್ 'ಪೆಱಗಾಲ್' ನೋ.

ಪೆಱಕಾಲ್ಗೊಳಿಸು (ಕ್ರಿ). ಹಿಂಗಾಲಿನ ಮೇಲೆ ನಿಲ್ಲಿಸು : ಸುಳಿಸುಳಿದಶ್ವ ಮನೇಱುತೆ ಪೊಳೆಯಿಸಿ ಮಿಗೆ ದಂಡೆಗುಡುತಿದಿರ್ಚುತೆ ಪೆಱಕಾಲ್ಗೊಳಿಸಿ ಪೆಡಂಮೆಟ್ಟುತ್ತವ್ವಳಿಸುತ್ತೆ ಪಳಂಚಿದರ್ತುರಂಗಿಗಳದಱೊಳ್ (ರಾಜಶೇ. ೧೩-೬೩). [ಪೆಱಕಾಲ್ (< ಪೆಱಗಾಲ್) + ಕೊಳ್$_1$ + — ಇಸು$_3$]

ಪೆಱಗಣ್ 'ಪೆಱಗು' ಪರಾ.

ಪೆಱಗಣ 'ಪೆಱಗು' ಪರಾ.

ಪೆಱಗನೆ (ಅ). ಹಿಂದೆಯೇ; ಹಿಂಬದಿಯಲ್ಲೇ : ಎನ್ನಯ ಸಖನನತ್ತ ಪೊಯ್ದಪೆ ಮಾಣಿಂದೆನುತಂ ಕೋಪದಿನಾ ಪುರುಷನ ಪೆಱಗನೆ ತಾನುಮಂತ ರಿಕ್ಷಕ್ಕೊಗೆದಂ (ಶಾಪಂಪು. ೯೪೨) : ಪೊಱಮಟ್ಟು ವಿರಾಟಂ ಪೆರ್ದುಱುವಿನ ಪೆಱಗನೆ ಚತುರ್ಬಳೋಪೇತಂ ತಾಂ ತಱಿಸಂದು ಪೋಪ ಪದದೊಳ್ (ಸಂಪು. ೦೦-೦೩೬).

ಪೆಱಪೆಱಗನೆ (ದ್ವಿರುಕ್ತಿ) : ಬಱಿಯನೆ ಮಕ್ಕಳ್ ಭೋರ್ಗರೆದಱುತುಂ ಪೆಱಪೆಱಗನಂತೆ ಪರಿಪರೆ (ಪಂಪಭಾ. ೨-೨೯). [ಪೆಱಗು + — ಅನೆ$_1$]

ಪೆಱಗಾಲ್, ಪೆಱಕಾಲ್ (ನಾ). ಹಿಂದಿನ ಕಾಲು; ಹಿಂಗಾಲು : ಪೆಱಗಾಲೆಡೆಯಿಂ ನುಸುಳ್ದೋಡಿ ಕಾಡಿ ಸಂಗಳಿಸಿತದೊಂದು ಪಲ್ಲಮಱಿ ತಾಯ್ವಿಡಿಗುತುಮನಂತಸೌಖ್ಯಮಂ (ಸಂಪ್ರಪು. ೩-೬೩). **ಪೆಱಕಾಲ್** : ಕಡವೆ ತುಱಿದು ಕದಡಿದೆಡೆಯೊಳೆಲೆ ಕಱಲ್ದು ಕೆಡೆದ ತೋರಗೊಂಬುಗಳಂ ಪೆರ್ವಾವೆಂದು ಪೊರ್ದಲಂಜಿ ಗೆಂಟಱೊಳ್ ತೂಗಿ ನೋಡಿ ಪೆಱಕಾಲೊ ಳೋಡುವ ಕಿಱುನರಿಗಳುಮಂ (ಕಬ್ಬಿಗಾ. ೨೩೯).

[ಪೆಱ$_2$ (< ಪೆಱಗು) + ಕಾಲ್$_1$]

ಪೆಱಗಿಕ್ಕು, ಪೆರಗಿಕ್ಕು (ಕ್ರಿ). ೧. ಹಿಂದೆ ಉಳಿಯುವಂತೆ ಮಾಡು ; ಹಿಂದೆ ಇರಿಸು ; ಹಿಂದಕ್ಕೆ ಹಾಕು : ತಮಿಸ್ರಗುಹೆಯೊಳಗನೆ ಕಾಕಿಣೀ ರತ್ನದೊಳ್ ಬರೆದ ಚಂದ್ರಾದಿತ್ಯರ ಬೆಳಗುಗಳೊಳ್ ನಿಜವಿಜಯಕಟಕಂ ನಡೆಯೆ ವಿಜಯಾರ್ಧಾಚಲಮಂ ಪೆಱಗಿಕ್ಕಿ ಶಬರಖಂಡಂಗಳಂ ಸೇನಾನಾಯಕನೆ ಬಾಯ್ಕೆಳಿಸಿ ಬರೆ (ಅಪಿಪು. ೦೯-೩೭ ಪ) ; ನಿಜಚೇಟಿಯರಂ ಪೆಱಗಿಕ್ಕಿ ಬೇಗದಿಂ ನಡೆದು ಪೆಱಳ್ ಜನಾರ್ದನನ ರೂಪವಿರಾಸಮನೊಲ್ದು ನೋಡಿದಳ್ (ಜಗಪಿ. ೦೬-೬೩). ೨. ಹಿಮ್ಮೆಟ್ಟುವಂತೆ ಮಾಡು ; ಹಿಮ್ಮೆಟ್ಟಿಸು : ಮುನಿವ ಜವನುತೆಟ್ಟಂದಾ ಭೀಷ್ಮನಂ ಪೆಱಗಿಕ್ಕಿದಂ (ಸಂಪು. ೦೨-೦೪). ೩. ಹಿಂದಿಟ್ಟುಕೊಳ್ಳು, ಕಾಪಾಡು ; ರಕ್ಷಿಸು : ವಿಜಯಾದಿತ್ಯಂಗೆ ಗೋವಿಂದರಾಜಂ ಮುಳಿಯೆ ತಳರದೆ ಪೆಱಗಿಕ್ಕಿ ಕಾದ ಶರಣಾಗತಬಳ ನಿಧಿಯ ಪೆಂಪುಮಂ (ಪಂಪಭಾ. ೯-೩೨ ಪ) ; ಮುಡಿವೊಱೆಯ ವಿಷಯದೆ ಮಱೆಗೆವಂದಂಧತಮಸಮಂ ಪೆಱಗಿಕ್ಕಿ ತನ್ನೊಳ್ ಮಲೆವ ಲಲನೆಯರ ವದನವಿಧುಬಿಂಬದೊಳ್ ಕಪೋಳಸಂಭೃತಪ್ರತಿಕೃತಿಚ್ಛದ್ಮದಿಂ ಪೊಕ್ಕು ಪೋರ್ಕುಳಿಯಿಕ್ಕಿಯುಂ (ಪರ್ಪಪು. ೬-೪೩ ಪ). ೪. ಬಿಡು ; ತ್ಯಜಿಸು : ಬಾಲಿಕೆ ಮುಗ್ದೆ ತಕ್ಕುದಱಿಯಳ್ ಪಲರಂ ಪೆಱಗಿಕ್ಕಿ ಸೂಡಿದಳ್ ಮಾಲೆಯಂ (ಶಂಕಾಮಾ. ೩-೪೭) ; ಪ್ರಿಯೆ ತನಗೆಂಬಿದಂ ಬಗೆಯದೆನ್ನನವಂ ಪೆಱಗಿಕ್ಕಿ ಪೋಗಿ ಸಂಜೆಯೊಳನುರಕ್ತನಾಗಿ ನೆರೆದಿರ್ದವಂ (ಶುಗ್ಗಪು. ೬-೦೯). ೫. ಮೀರು ; ಅತಿಕ್ರಮಿಸು ; ಉಲ್ಲಂಘನೆ ಮಾಡು : ಅಱನ ಮಗಂ ಪ್ರಾರ್ಥಿಸೆ ಬಾಂದೊಱೆಯ ಮಗಂ ಮಾಡೆ ಸಂಧಿಯಾದಪುದೆನುತುಂ ಮಱುಗದಿ[ರಣ್ಣನ] ಮಾತಂ ಪೆಱಗಿಕ್ಕುವೆಂ (ಗದಾಯು. ೦-೬೨). ೬. ಉದಾಸೀನ ಮಾಡು ; ಉಪೇಕ್ಷಿಸು : ಈ ನುಡಿಯನೀ ಪದದೊಳ್ ಪೆಱಗಿಕ್ಕೆ ನಾರದಂ ಮನದೊಳೆ ಪೇಸುಗುಂ ಸುರಪನುಂ ನಗುಗುಂ . . . ಎಂತು ಪೇಕ್ಷಿಸುವುದೀ ಮಖಮಂ [ಸರಸೀರುಹೋದರಾ (ಪಂಪಭಾ. ೬-೨೫). **ಪೆರಗಿಕ್ಕು** : ೨. ವಿಕ್ರಮನು . . . ಪರಾಕ್ರಮದಿಂದ ಪರಸೈನ್ಯವನ್ನು ಪೆರಗಿಕ್ಕಿ ಎಡೆಗೊಡದಟ್ಟಿ ಕೊಂದನು (ಕಪೀಶ. ೬೦). [ಪೆಱಗೆ + ಇಕ್ಕು]

ಪೆಱಗಿಡು (ಕ್ರಿ). ೧. ಹಿಂದಕ್ಕೆ ಇಡು : ಚಲಕೆ ಬಿಡದಿಱಿದು ನೆಲಂ ಬಿಡದಣ್ಣೆ ತಮ್ಮ ಮುಂದಿರ್ದಡಿಯಂ ಪೆಱಗಿಡದೆ ಸತ್ತರಿಲ್ಲಿ ಘಟರ್ಕಳ್ (ಗದಾಯು. ೪-೨೯). ೨. ಹಿಮ್ಮೆಟ್ಟು ; ಹಿಂದೆ ಸರಿ : ಕೆದಱೆ ಚತುರ್ಬಲಂ ಬೆದಱೆ ತಳ್ತ ದಟಂ ಕೆಡೆದಱ್ಗೆ ತಱ್ಗೆ ಮಾಣದೆ ಪೆಱಗಿಟ್ಟು ಬಾಯ್ವಿಡೆ ಘಟಾಳಿ . . . ಕನಲ್ದೊನಲ್ದು ಮಾಣದೆ ಪೆಣೆದಂ ಹರಂ ದಿಗಿಭದೊಳ್ ದಿಗಿಭಂ ಪೆಣೆದಂತೆ ಪಾರ್ಥನೊಳ್ (ಪಂಪಭಾ. ೬-೨೦). ೩. ಮೀರು ; ಅತಿಕ್ರಮಿಸು ; ಸೋಲಿಸು : ಪೂರಿತರಣಶಂಖಗಭೀರಾರಾವಂ ದೆಸೆಯ ಕೋಣ ಕುಸುಕುಱ ಗಜಘಂಟಾರವಮನುಱದೆ ಪೆಱಗಿಡೆ ಭೈರವಮೆಸೆದತ್ತು ಚರವ ಬಲಜಲನಿಧಿಯೊಳ್ (ಶಾಂತಿಪು. ೩-೯೭). [ಪೆಱಗೆ + ಇಡು$_1$]

ಪೆಱಗು, ಪೆರಗು, ಹೆಱಗು (ನಾ). ೧. ಹಿಂಬದಿ ; ಹಿಂಭಾಗ ; ಹಿಂದುಗಡೆ : "ಪೆಡಮೆಟ್ಟು, ಪೆಱಗು, ಪೆಱತು, ಪಿಂತಿಲ್—ಈ ೪ ಪಿಂಗಡೆಗೆ ಪೆಸರ್" (ಕಸಾ. ೬೩-೯೩೩) ; ಪೆಱಗಸಿದಾಗಿ ಮುಂತಗಲಿತಪ್ಪುದಱಿಂದೆ . . . ಪೋಲ್ತುದು ಮಹಾನದಿ ರುಂದ್ರಫಣೀಂದ್ರರಾಜನಂ (ಕಾಪ್ಯಸಾ. ೭೯೭ ಕೂಪ್ರಕ) ; ಬುದ್ಧಿವಂತರ್ಗೆ ಕೇಡಿಲ್ಲೆಂದು ನಿಶ್ಚೈಸಿಕೊಂಡು ದಿನಾಂತಂಬರೆಗಂ ತಡೆದು ಬಱಿಕ್ಕೆಲ್ಲಿಯುಂ ನಿಲ್ಲದೆ ಪೆಱಗಂ ನೋಡುತ್ತುಂ ಭಯಾತುರನಂತೆ ಬಂದುಂ (ಪುಸಕಂ. ೬೯-೦೯) ; ಭಯದಿಂದೋಡುತ್ತಿರೆ ಕಾಡೊಳೊಂದುಮರದ ಕೊಂಕುಗೊಂಬಾತನ ತುಱುಂಬಂ ಪಿಡಿದು ತಡೆಯೆ ಪೆಱಗಂ ನೋಡ ಲಣ್ಮದೆ (ಧರ್ಮಾಪ್ಯು. ೨-೩೭). ೨. ಹಿಂದೆ ನಡೆದುದು,—ಆದುದು ; ಪೂರ್ವ ಸಂಗತಿ : ಪೋದುದಿಂ ಪೋಗಲಿ ಪೆಱಗನೆಣಿಸಲಾಗದು (ಧರ್ಮಾಪ್ಯು. ೨-೬೯) ; ಎತ್ತಣಿನಿತ್ತಲೆಟ್ಟರವೆನಲ್ಕದು ಮರ್ದನನಾ ವಣಿಕ್ಸಮೂಹೋತ್ತಮಂ . . . ಪೆಱಗಂ ನೆಱೆ ಬಿನ್ನವಿಸಲ್ಕೆ ವಿಷ್ಣು ಮೆಚ್ಚಿತ್ತನನರ್ಘ್ಯವಸ್ತುಗಳನಾ ಪರವಂಗೆ ಪಸಾಯದಾನಮಂ (ಪುಹಾನೇ. ೦೨-೯೯). **ಪೆರಗು** : ೧. "ಪೆಡಮೆನಲ್ ಪೆರಗೆ ನಲ್ಕಭಿಧಾನಮಕ್ಕು ಬೆಂಗಡೆಗೆ" (ಕಸಾ ೬೬). **ಹೆಱಗು.**

ಪೆಱಗಂ ತಗುಳ್ = ಬೆನ್ನಟ್ಟು : ಬಲದೇವನನುಮತದೊಳ್ ಪೆಱಗಂ ತಗುಳ್ವ ಯಾದವಬಲಮುಂಟಪ್ಪೊಡದನಂಬುಗಾಣಿಸಲ್ ನೀನೆ ಸಾಲ್ವೆಯ್ (ಪಂಪಭಾ. ೩-೨೦ ಪ). **ಪೆಱಗಣ್** = ೧. ಹಿಂಬದಿ ; ಹಿಂದುಗಡೆ ; ಹಿಂಭಾಗ : ಅವರ್ಗಳನಿಬರುಂ ಪೆಱಗಣ್ಗರುಳ್ದು ಬಿಟ್ಟೊಡಿದು ಮಹಾ ಚೋದ್ಯಂ ಸಾರೆ ಪೋಗಿ ನೋಟ್ಟಮೆಂದು ಪೋಪರ್ (ಪಡ್ಡಾರಾ. ೯೬-೭) ; ಕನ್ನಡಿಯಂ ನೋಡುವವಂ ತನ್ನಯ ಪೆಱಗಣ್ಗೆ ಕಾಣಲಾರ್ಪನೆ ರೂಪಂ (ಧರ್ಮಾಪ್ಯು. ೦-೦೬೨). ೨. ಹೊರಗಡೆ ; ಹೊರಭಾಗ : ಒಳಗಣ ಕಿವುಡಿಯರ್ ಪಿಡಿದುಕೊಂಡವಳು ಪೆಱಗಣ್ಗೆ ನೂಂಕಿದರ್ (?) (ಧರ್ಮಾಪ್ಯು. ೨-೩೨) **ಪೆಱಗಣ** = ೧. ಹಿಂದುಗಡೆಯ ; ಹಿಂದಿನ : ಅತಿಶೋಕಾಕ್ರಾಂತೆ ಮತಿಯುಂ ಶ್ರೀಮತಿಯನೊರ್ವಳನೆ ಕನ್ನೆಮಾಡದ ಪೆಱಗಣ ನಂದನವನ ಕ್ಕಾಯ್ದು (ಅಪಿಪು. ೩-೨೯ ಪ); ಪುರೋಚನನುಂ ಪೆಱಗಣ ಕಾವಂ ಕಣ್ಗಾಪಿನಲೆ ಕಾದಿರ್ಪನ್ನೆಗಂ (ಪಂಪಭಾ. ೩-೯ ಪ) ; ಪೆಱಗಣ ಮುಂತಣಾರಿತುಗಳ ತೆಱೆಯಂ ನಿಶ್ಚಯಿಸಿ ಮಧುಕರಂ ಮಧುಕರಮುಂ ತೆಱಲಾಱದೆ ಮಲ್ಲಿಗೆಯೊಳ್ ಸೆಱೆಗೆಯ್ದುಂತಿರ್ದುದೊಂದು ಪರಿಮಳಫಲಮಂ (ಅಪಿಪು. ೬-೦೬). ೨. ಹಿಂದೆ ನಡೆದ ; ಘಟಿಸಿದ : ನಿಮ್ಮಡಿಯ ಪ್ರಸಾದದಿಂದೆನಗೆ ಮಹಾಪಾತಕಂ ಪಿಂಗಿ ಪೋದುದೆಂದು ಪೆಱಗಣ ವಾರ್ತೆಯೆಲ್ಲಮಂ ಪೇಟ್ದು ದೀಕ್ಷೆಯಂ ಪ್ರಸಾದಂಗೆಯ್ಯಿಮೆಂದೊಡೆ (ಧರ್ಮಾಪ್ಯು. ೨-೨೦೦). ೩. ಬಹಿರಂಗದ ; ಹೊರಗಿನ ; ಬಾಹ್ಯ : ಉಪವಾಸಕ್ಕಲಸಿ ಕರಂ ತಪಮಂ ಬಿಸುಡಲ್ಕೆ ಬಾರದವನೀತಳದೊಳ್ ವಿಪರೀತಮಾಗೆ ಪೆಱಗಣ ತಪದಿಂದಲ್ಲದೆ ಪೊಗಟ್ಟೆ

ಯಾಗದು ಬೇಗಂ (ರರ್ಮಾಮ್ಯ. ೬-೪೦). ಪೆಱಗನೇಱಿಸು = ಹಿಂಭಾಗಕ್ಕೆ ಹತ್ತಿಸು : ತನ್ನ ಮುಂದೆ ಸಾರ್ದಿರ್ದ ವಾರುವಂಗಳ್ಗಳ್ಕಿ ಬೆಗಡುಗೊಂಡ ಪಿಡಿಯನೆ ಕೇಯೂರಕನುಮಂ ಪತ್ರಲೇಖೆಯುಮಂ ಪೆಱಗನೇಱಿಸಿ ನಿಜಭವನಕ್ಕೆ ಬಂದು (ಕಾದಂಉ. ೩೬೦). ಪೆಱಗಾಗಿಸು = ಹಿಂದೆ ಬೀಳಿಸು ; ದೂರವಾಗುವಂತೆ ಮಾಡು : ಅದು ಸನ್ಮಾರ್ಗವಿಶುದ್ಧಿಯಂ ಕೆಡಿಸಿತಾ ಶಾಂತಸ್ಫುಟಸ್ವಚ್ಛಭಾವದ ಪೆಂಪಂ ಪೆಱಗಾಗಿಸಿತ್ತು . . . ಜಡಧಿಗಳ್ಗಂತಸ್ಥಮಾಗಿರ್ದುದೆಂಬಿದು ಯುಕ್ತೋಕ್ತಿ ಕುಮಾರ್ಗನಿರ್ಗತರಜೋಜಾಳಕ್ಕಿ ದಾಶ್ಚರ್ಯಮಂ (ಶುಷ್ಕಪು. ೬ ೩೫). ಪೆಱಗಾಗು = ೧. ಹಿಂದೆ ಬೀಳು. — ಉಳಿ : ಪೆಱಿಯ ವಿಲಾಸಮದಿಗಳ್ ಪೆಱಗಾಯ್ತೆನೆ ರೂಪವತಿಯ ಪೆಱಿನೊಸಲೆಸೆಗುಂ (ಸುಭಿಪ್ರ. ೩-೬೨). ೨. ಹೊರತಾಗು : ಇಲ್ಲಿಗೆನ್ನೊಳಲ್ಲದೆಯುಂ ಜನಕಂಗಮಱಿಪುವೊಡೆ ಮದೀಯಹೃದಯದ್ವಿತೀಯನಪ್ಪ ವೈಶಂಪಾಯನಂ ಪೆಱಗಾಗಿ ಪೆಱನಾವನಱಿದಪ್ಪಂ (ಕಾದಂಉ. ೩೬೩). ೩. ಬಿಡುಗಡೆಯನ್ನು ಹೊಂದು. — ಪಡೆ : ಆಗಳ್ ನಿದ್ರೆಯಿನೆಚ್ಚಱಾದಂತು ಕಣ್ಗಟ್ಟಿಂ ಪೆಱಗಪ್ಪುದುಂ (ರಾಮಾಶ್ವ. ೦೦೦-೩). ಪೆಱಗು ಮಾಡು = ಹಿಂದೆ ಉಳಿಯುವಂತೆ ಮಾಡು ; ಹಿಂದಕ್ಕೆ ಬೀಳಿಸು : ನೆಸಱಂ ಪೆಱಗುಮಾಡಿ ಜಯಾವಹಮೆಂಬಿನಂ ಬೀಸೆ ಬೆಂಬಱಿಯನೊಯ್ಯನೆ ಗಾಳಿ ...ನೂಱನೂರ್ಭಾಸಿರಂಗಳವೊಲಾಯ್ತು ರಥಂ ಕಡುವೇಗದಿಂ (ಕಾಪ್ಯಾವ.೨೬).

[ದೇ.॥ ತಮಿ. ಪಿಱಕು. ಪಿಱಕ್ಕು. ಪಿಱ್ಕು ; ಮಲ. ಪಿಱಕು]

ಪೆಱಗುಗುಡು (ಕ್ರಿ). ಬೆನ್ನನ್ನು ತೋರಿಸು ; ವಿಮುಖವಾಗು : ಅಱಿದು ಶುಕಪ್ರಿಯಕಾಮಿನಿ ಗಱಿ ಗದಗದ ನಡುಗೆ ಪಿಡಿದು ಪೊಣ್ಮೆದ ಮುನಿಸಿಂ ಪೆಱಗುಗು[ಶಾಕಾಂ. ಗೆ]ಡೆ ಕೀರಕಾಮುಕನೆಱಗಿದನಿನಿಯಳ ಪದಕ್ಕೆ ಸಂಭ್ರಮದಿಂದಂ (ಲೀಲಾವ. ೬-೪೮). [ಪೆಱಗು + ಕುಡು$_1$ (< ಕೊಡು$_1$)]

ಪೆಱಗುಗೆಯ್ (ಕ್ರಿ). ೧. ಬೆನ್ನು ತಿರುಗಿಸು ; ಬೆನ್ನನ್ನು ತೋರಿಸು ; ವಿಮುಖವಾಗು : ಮುಳಿದು ಮನಃಪ್ರಿಯಂ ಪೆಱಗುಗೆಯ್ದೊರೆ ಬೆಂಬಿಡದಪ್ಪಿಕೊಂಡ ನಲ್ಲಳ ದೊಲೆಯೊತ್ತಿನೊಳ್ ತೊಡರ್ದುದಾಕೆಯ ದೂಱಿಸಿ ಸುಯ್ದು ಸುಯ್ಯೊಳುಚ್ಚಳಿಸಿದುದಾ . . . ಕೋಪವೋಪನಾ (ಶಾಪ್ರ. ೨-೦೨-೦೪) ; ತನ್ನ ಬೆನ್ನೊಳ್ ಪರೆದೊಪ್ಪಲ್ ಕೇಶಪಾಶಂ ಕರಿಯ ಚವರಿಯಂ ಕಟ್ಟಿದಂತತ್ಯಪೂರ್ವಸ್ಥಂಚಾಪಶ್ರೀಯ ಚೆಲ್ವಂ ತಳೆದು ಪೆಱಗುಗೆಯ್ದಿರ್ದೊಡಾಂ ಸೋಂಕೆ ಸಾರಂತಿರೆನುತ್ತುಂ ನೂಂಕಿ ಸುಯ್ದೆನ್ನಿನಿಯಳ ತೆಱನಿನ್ನುಂ ಮನಂಗೊಳ್ಳುದೆನ್ನಂ (ಜಗಪ. ೦೬-೦೩೩). ೨. ಮರೆಯಾಗು ; ಅಡಗು : ಕೆಲರ್ ಕಾಣ್ಗುಮೆಂದು ಪೆಱಗಣಂ ಪೆಱಗುಗೆಯ್ದು ಜಗುಳ್ದುಂ ಕೆಲರ್ ಕಂಡೊಡೆ ಕರೆಗುಮೆಂದು ಕೆಲದ ಮರೆಂಗಳನೊತ್ತುಗೊಂಡುಂ (ಶಾಪ್ರ. ೯-೯೨ ಪ). ೩. (ಅಲಂ) ಕಡೆಗಣಿಸು ; ಕೀಳು ಮಾಡು ; ತಿರಸ್ಕರಿಸು : ನೆರೆದರಸುಗಳ ನಡುವೆ ತಮ್ಮ ಪೆರ್ಮೆಯಂ ಪೆಱಗುಗೆಯ್ದು ಪೆಱರ್ಗೆ ಪೂಮಾಲೆ ಸೂಡುವುದಂ ಮಿಳ್ಮಿಳನೆ ನೋಡಿ . . . ಬಂದ ಬರವಿಂಗೆ ಮಾನದೊಳನುಶಯಂಬಡುವ ಮಾನಧನಧರಾಧಿಪತಿಪಟಳದೊಳಂ (ವರ್ಧಪು. ೯-೯೩ ಪ). [ಪೆಱಗು + ಕೆಯ್$_1$]

ಪೆಱಗೆ, ಪೆರಗೆ, ಹೆಱಗೆ (ಅ). ೧. ಹಿಂದಕ್ಕೆ ; ಹಿಂಬದಿಗೆ ; ಹಿಂದುಗಡೆಗೆ : ಬೀಡಂ ಪೆಱಗೆ ಬಪ್ಪಂತು ನಿಯಮಿಸಿ ಪಯಣದಿಂ ಬಂದು (ಶಾಪುಂಪು. ೨೯) ; ಭರತಜರೊಳ್ಮನ್ನಿಲ್ಲದ ಪರಿಭಾಷೆಯನುಂಟುಮಾಡಿ ಪೆಱಗಡಿಯಿಟ್ಟಂ ಕುರುರಾಜನೆಂದು ಲಜ್ಜಾಭರದಿಂದಂ ತಲೆಯನೆಱಗಿದಂ ಧರ್ಮಸುತಂ (ಗದಾಯು. ೬-೩೯) ; ನೀನಾವ ಪ್ರಾಣಗಾದೊಡಂ ಮುನಿವಲ್ಲಿ ಪೆಱಗೇಱಡಿಯಂ ಪಿಂಗಿ ಜಟಿಕ್ಕಂ ನಿನ್ನ ಮೆಚ್ಚಿದಂತೆ ಮಾಡು (ಧರ್ಮಾಮ್ಯ. ೨-೨೦೬). ೨. ಹೊರಗೆ ; ಹೊರಭಾಗದಲ್ಲಿ : ಶಕಟವ್ಯೂಹದ ಪೆಱಗೆ ನಾಲ್ಕುಯೋಜನದೊಳರ್ಧಚಂದ್ರವ್ಯೂಹದೊಳಧಿಕಬಲರಪ್ಪ ಸೌಬಲ ದುಶ್ಶಾಸನಾದಿ ಪ್ರಧಾನವೀರಭಟಕೋಟಿಯ ನಡುವೆ ಸಿಂಧುರಾಜನನಿರಿಸಿ (ಪಂಪಭಾ. ೧೦-೦೩೨ ಪ) ; ಎಱಗಿದ ನರಪತಿಸಹಸ್ರಮಂ ನಿಮ್ಮ ನಿಮ್ಮ ವಾಹನಂಗಳನೇಱಿಮೆಂದು ಬೆಸಸಿ ಬಿಜಯಂಗೆಯ್ದಲ್ಲಿ ಪೆಱಗೆ ಢಕ್ಕಾರವದಿಂ ಬಧಿರಿತದಿಗಂತರಾಳ ಮೆನಿಸಿ ಬರುತ್ತಂ (ಕಾದಂಪು. ೩೯೬). ೩. ಅನಂತರದಲ್ಲಿ ; ತರುವಾಯದಲ್ಲಿ ; ಅನಂತರ : ಈತನೆ ನಮ್ಮ ಕುಲಕ್ಕಂ ಕೇತು ದಲಾನಱಿವೆಂ . . . ಬಿಸುಡುವುದೀತನ ಪೆಱಗುಱಿದ ಸುತರೆ ಸಂತತಿಗಪ್ಪರ್ (ಪಂಪಭಾ. ೦-೦೩೩) ; ಆಂ ಸತ್ತೊಡೆ ಪೆಱಗೀ ವೃಂದಮನಪ್ಪೊಡೆ ಪೊರೆವರಿಲ್ಲವಾಂ ದೇಸಿಗನೆಂ (ಧರ್ಮಾಮ್ಯ. ೨-೩೬). ೪. ಹೊರತಾಗಿ : ಪುಂಡರೀಕದೇವನ ಪೆಱಗಿಂತು ಜೀವಿಸುತಮಿರ್ದವಳೆಂ (ಕಾರುಉ. ೬೦೬) ; ಅದು ಕಾರಣದಿಂ ರಣದಿಂ ತದುದ್ಧತನ ದುಷ್ಪಚೇಷ್ಟೆಯಂ ಮಱ್ಗಿಸಿ ಬರ್ಪುದೆ ಕಾರ್ಯವೆಂನಗೆ ಕಾದಿರ್ಪುದೆ ಕಾರ್ಯಂ ಪೆಱಗೆ ನಿನಗಮಿಾ ಪುರವರಮಂ (ವರ್ಧಪು. ೨-೨೬) ; ಎಲೆ ತಣ್ಗಾಳಿಯೆ ನೀನೇಕಲೆದಪೆ . . . ಕಾದಲನಿಲ್ಲದ ಪೆಱಗೆ ನೋಯಿಪರೆ ನಿವೆನ್ನಂ (ಕಲ್ಯಾಕಾ. ೬೩). ೫. ಬೆನ್ನಿನ ಹಿಂದೆ ; ಪರೋಕ್ಷವಾಗಿ : ಪೆಱಗೆ ಪಳಿವರ ಪಣ್ಡತಿಗಣ್ಡ × × ದನ್ನಿ × × ಕಾಱರಣರಂಗನೀಱ ಪುಸಿವರ ಬಾಯಂ ಸುಡುವ ಪಿಸುಣರರನೇಲ್ವ × ಳ್ಳುವ ಜಯಲಕ್ಷ್ಮೀತೋರಣಂ ನಾಕಿಯ ಗನ್ಧವಾರಣನಾಮಾದಿ ಸಮಸ್ತಪ್ರಸಸ್ತಿ ಸಹಿತಂ (ಎಕ. VII. ಕಿಕಾಂ. ೩-೨೨ ; 1061). ಪೆರಗೆ : ೧. ರಾಯದಳ ಪಾಯದಳ, ದಳದಳದ ಪೆರಗೆ, ಬಂದು ಬಂದೆತ್ತಲುಂ, ನೆಲ ನೆರೆಯದಲ್ಲಿ (ಪಾರಸಿ. ೩-೦೦೪). ಹೆಱಗೆ : ೫. ಕೂಡಿ ಕೂಟಕೆ ತಪ್ಪುವರ ಗಣ್ಡ ಹೆಱಗೆ ಹಳಿವರ ಗಣ್ಡ (ಎಕ. VI. ತುಂಕೆ. ೬೩-೦೮ ; 1141 ?).

ಪೆಱಪೆಱಗೆ (ದ್ವಿರುಕ್ತಿ) : ಕಿಶೋರಕೇಸರಿಯ ಸಮ್ಮುಖಕ್ಕೆ ಬಾರದೆ ಪೆಱಪೆಱಗೆ ಬರ್ಪ ಮೃಗಂಗಳಂ ಕಂಡುವಱಿಂ (ಶಾಪುಂಪು. ೩೩). [< ಪೆಱಗು]

ಪೆಱಗೆಡೆ (ಕ್ರಿ). ಹಿಂದೆ ಬೀಳು : ಹಿಮ್ಮೆಟ್ಟು : ಧನುರ್ಧರರೆಚ್ಚ ಶರನಿಕರಂಗಳಿಂ ನೆಯ್ ಪೇಱುವಂತಂಬನೆ ಪೇಱಿ ಪೆಱಗೆಡೆದ ತುರುಷ್ಕತುರಂಗಂಗಳುಮಂ (ಪಂಪಭಾ. ೦೨-೬೦ ಪ) : ತನ್ನ ಭೀಕರಗದಾಘಾತದೊಳ್ ಜಾಱಿ ಪಱಿವಱಿದು ಪೆಱಗೆಡೆದು ತಾಱವಱಾದ ಕಾಂಭೋಜಾವಳಿಗಳ ತುರುಷ್ಕತುರಂಗಮಂಗಳಡಿಯೊಳಡಂಗಿದನೆ ಗೆತ್ತು ಕೈಗುತ್ತಿ ನೋಡಿಯುಂ (ಗದಾಯು. ೬-೨೬ ಪ). [ಪೆಱ$_2$ (< ಪೆಱಗು) + ಕೆಡೆ$_1$]

ಪೆಱಗೇಱಿಸು (ಕ್ರಿ). ಹಿಂಬದಿಗೆ ಹತ್ತಿಸು ; ಹಿಂದೆ ಕುಳ್ಳಿರಿಸು : ಪವನಂ ಜಯಾಶ್ವಮನದಂ ತೆಗೆದೇಱಿಯುಃಪೊಲ್ಲೆನೊಲ್ಲೆನೆಂದೆನೆ ತನತಾಜ್ಞೆಯಿಟ್ಟು ಸಖನಂ ಪೆಱಗೇಱಿಸಿಕೊಂಡು ಭೋಲಕನೆ ಪೊಱಮಟ್ಟಂ (ಕುಸುಮಾ. ೦೦-೦೩೩).

[ಪೆಱಗೆ + ಏಱಿಸು]

ಪೆಱಗೇಱು (ಕ್ರಿ). ಹಿಂದೆ ಹತ್ತು ; ಹಿಂಬದಿಗೆ ಹತ್ತಿ ಕುಳಿತುಕೊಳ್ಳು : ಸಡಹುಡನಪ್ಪ ಕಟ್ಟಿ ಕೊಡೆ ಸಂತಸದಿಂ ಪೆಱಗೇಱಿ ಬರ್ಪ ಕನ್ನಡಿವಿಡಿದಾಕೆ (ಪಂಪಭಾ. ೯-೦೦೩) : ಕಟ್ಟಿ ಚಮ್ಮಟಿಗೆ ಮುಟ್ಟಿದವೊಲ್ ನಸುಬೆರ್ಚೆ ತಾನದರ್ಕಿರ್ಮಡಿ ಬೆರ್ಚೆ ಪೆರ್ಚೆ ನಡುಕಂ ಪೆಱಗೇಱಿದಳೊರ್ವಳೋಪನಂ ಪೆರ್ಮೊಲೆ ಬೆನ್ನನುರ್ಚಿದಪುವೆಂಬಿನಮಪ್ಪದಳಾಗಳಾರ್ತದಿಂ (ಕಾಪ್ಯಾವ. ೬೨೩). [ಪೆಱಗೆ + ಏಱು$_1$ (< ಏಱ್$_1$)]

ಪೆಱತು, ಪೆಱದು, ಹೆರತು (ಸ). ೧. ಬೇರೆಯದು : ಮತ್ತೊಂದು : ಆವಲರುಂ ಪಣ್ಣುಂ ಬೀತೋವವು ಗಡ|ಬೀಯವಲ್ಲಿ ಮಲ್ಲಿಗೆಗಳುಮಿಮ್ಮಾವುಗಳುಮೆಂದೊಡಿನ್ ಪೆಱತಾವುದು ಸಂಸಾರಸಾರಸರ್ವಸ್ವಫಲಂ (ಪಂಪಭಾ. ೦-೩೩) ; ಆನಿನಿತು ಭೋಜ್ಯದಿಂ ಪೆಱತೇನುಮಸುಣವೊಲ್ಲೆನೆಂದುಣ್ಟೆಡೆಯೊಳ್ ತಾನಱಿದು . . . ಸಂಯಮಿ ನೆಗಟ್ಟಂ (ಸುಕುಮಾ. ೪-೬) ; ಅದುವಿದುವುದುವಾವುದುವೆಲ್ಲದು ಪೆಱತೇನೈಱದೆನಿಪ್ಪ ಶಬ್ದಂಗಳ್ ತಪ್ಪದೆ ಸರ್ವನಾಮಮಕ್ಕುಂ (ಶಮದ. ೬೮) ; ಆವಾವ ದಿಕ್ಕುದಿಕ್ಕುಗಳೊಳಂ . . . ಹರಿಯ ಸುಭಟಾವಳಿ ಹರಿಯ ವರೂಥಂಗಳಲ್ಲದೆ ಪೆಱತನಾಂ ಕಾಣೆನಾಹವದೊಳು (ಶಾಪು. ೧೬-೮). ೨. ಅನ್ಯ ; ಬೇರೆ : ಪೆಱತು ವಿನೋದವಾಂಛೆ ಪೆಱಪಿಂಗಿ

ಮನೋಧೃತಿಯಂ ಪೊದಟ್ಟ ಪಾಂಗುಱಿ ಪರಿಪಟ್ಟು ಲಜ್ಜೆ ಲವಮಿಲ್ಲದೆ ಬಿಟ್ಟು . . . ಕುಸುಮಾವಳಿ ತಾನಿರೆ ನಿಮ್ಮ ದೂಸಱಿಂ (ಕುಸುಮಾ. ೦೩-೨೩). **ಪೆಱದು :** ೧. ನೆಲನಂ ಪರ್ವುವ ಬಳ್ಳಿಗಂ ಚದುರನೊಳ್ ಮೈ ಮೈಯೊಡಂಬಟ್ಟು ತಳ್ತ ಲತಾಕೋಮಳಿಗಂ ತಗುಳ್ಪು ಪೆಱದೊಂದೆಂತಕ್ಕುಂ (ಅಭಿಪ್ರ. ೦೨-೦೬); ಪೆಱದೇನನಿಂ ಪೊಗಟುತಿಟ್ಟಪುದೀವ ನೆಗಟ್ತಿ ಕಳ್ಪಭೂಮಿ ರುಹದಿನಗ್ಗಳಂ (ಎಳ. II. ೦೩೩-೨೫ ; 982) ; ನಾಗಸ್ಥಾನದ ಶಂಬರ ನಾಗಕುಮಾರಂಗೆ ಪರಸಿ ಪಡೆದೆಂ ಪೆಱದೇಂ ಪೋಗೆಂದು ನಾಗಶರ್ಮಂ ನಾಗಶ್ರೀಯೆಂದು ನಾಮಕರಣಂಗೆಯ್ದಂ (ಸುಳುಪಾ. ೩-೩೦) ; ಅದುವಿಪ್ಪ ವುದುವಾವುದುವೆಲ್ಲದು ಪೆಱತೇನ್ಪೆಱದೆನಿಪ್ಪ ಶಬ್ದಂಗಳ್ ತಪ್ಪದೆ ಸರ್ವ ನಾಮಮಕ್ಕುಂ (ಕಪುದ. ೭೬). **ಪೆರತು :** ೧. ಪುಂಸ್ತ್ರೀಲಿಂಗಗಳಲ್ಲಿ ಪೆರತು ಶಬ್ದದ ಮಪಿಗೆ ಲೋಪ ಬರುತ್ತದೆ (ಹೊಸಗ. ೪೬) ; ಅವನು 'ಹರಿ' ಎಂಬ ಎರಡು ವರ್ಣಗಳನ್ನಲ್ಲದೆ ಪೆರತನ್ನು ಅಕ್ಷಿಯಿಂದ ನೋಡಲಿಲ್ಲ (ಪದುರ. ೦೬೦).

ಪೆಱಪೆಱತು (ದ್ವಿರುಕ್ತಿ) : ನಿನ್ನ ಮಡಗೂಟ್ಟಿಲಂ . . . ನೀನೀಯೆ ಬಂದುದೆನಗಿದನೆನತೆಂದೇನ್ನಿನಗೆ ಬಗೆಯಲಪ್ಪುದೆ ನಿನ್ನನೆ ನೀಂ ಬಗೆಯ ಬಗೆಯದಿರ್ ಪೆಱಪೆಱತಂ (ಅಭಿಪ್ರ. ೦೪-೦೪೪) ; ಗಂಡರ ಬೂತೆ ನುಡಿವುದೇ ಪೆಱಪೆಱತಂ (ರಪರ್ಯಾಸ್ಕು. ೨-೦೨೦). **ಪೆಱಪೆಱರ್** (ದ್ವಿರುಕ್ತಿ) : ರಾಮಾಣಂದಿ ಸಿದ್ಧಾಂತಿಗಳಿರ್ದಂತೆ ಪೆಱಪೆಱರನಂತಿಂತುಂತೆಂದೇನೆಂದು ಬಣ್ಣಪರ್ಜಡ ಮತಿಗಳ್ (ರಪರ್ಯಾಸ್ಕು. ೦-೨೩). **ಪೆಱಪೆಱವು** (ದ್ವಿರುಕ್ತಿ) : ಜಯಾವತಿ ಕಣ್ಕೆತ್ತಿ ಬಾರಿಸಿದೊಡೆ ಕೆಮ್ಮಗಿರ್ದು ಪೆಱಪೆಱವನೆ ನುಡಿಯಲ್ ತಗುಳ್ದೊಡೆ ಸುಕೌಶಳಸ್ವಾಮಿಯವರಿರ್ವರ ನುಡಿಗಳ್ ಸಗರ್ಭವಚನಂಗಳೆಂದು ತನ್ನ ಮನದೊಳೆ ಬಗೆಯುತ್ತಿರ್ಪನಂ (ಪಜ್ಞಾರಾ. ೪೬-೦೪) ; ಪಲುಂಬದಿರ್ ಪೆಱಪೆಱವಂ (ಪುಪಶಾ. ೨-೨೬). **ಪೆರರೊಡವೆ, ಹೆರರೊಡವೆ** = ತನ್ನದಲ್ಲದ ಆಭರಣ ; ಪರರ ವಸ್ತು : ತನ್ನಳವಿನಿಂ ನಡೆವ ಕನ್ನುಡಿಯ ನುಡಿವೆಣ್ಗೆ ಪೊನ್ನಿರ್ಕೆ ಪೆರರೊಡವೆ ಚೆನ್ನಲ್ತು ಕಳೆಗೆ (ಕಾಲೂರ. ೨೨-೩) ; ಹೆಣ್ಣು ಹೆರರೊಡವೆ (ಕಾಪ್ರಸ. ೪೭). **ಪೆರವಿಜಯಕಾಳಾಯುಧ** = ಒಂದು ಬಿರುದು : ಸು × × × ನಮನಸ್ಸ ರೋಜಿನೀರಾಜಹಂಸ ವಿದಗ್ಧವಿದ್ವಜ್ಜನಕರ್ಣ್ಣ × × × ವಿಪಿನದಾವಾನಳಂ ಪೆರವಿಜಯಕಾಳಾಯುಧಂ (ಸೌಷಾ. VI, ೩೭೬-೦೦ ; 1064). **ಪೆಱತೊಂದು** = ಬೇರೊಂದು ; ಮತ್ತೊಂದು : ಪೆಱತೊಂದೆಡೆಯೊಳಿಲ್ಲೆನಿಸಿದ ತಾರ್ಕ್ಷ್ಯ ಪಕ್ಷದನ್ತೈಕ್ಯಪಕ್ಷಪಾಳನೆಯುಮಂ (ಎಇ. XIII, ೩೩೨-೪೫ ; 729) ; ಸುದತಿ ಪೆಱತೊಂದು ನೆವದಿಂ ಕೆದಱಿದಳೊಂದಿನಿಸು ಮುಂದಹಾಸದ್ಯುತಿಯಂ (ಕಾವಂಲು. ೨೪೬) ; ಇನ್ನುಮುಸಿರದಿರ್ದೊಡೆ ಪೆಱತೊಂದು ಬಿಲನನಱಸಿ ಕೊಳ್ವೆಂ (ಪಂತಶಂ. ೩೮-೦೪). **ಪೆಱತೊರ್ವ** = ಬೇರೊಬ್ಬ ; ಮತ್ತೊಬ್ಬ : ಅವರಿರ್ವರ ದ್ವೈಮೆಯುಮಂತವರಿರ್ವರ . . . ಬೇಟಮುಮಂತವರಿರ್ವರೊಳಲ್ಲದಿಲ್ಲ ಪೆಱತೊರ್ವರೊಳು (ಕಬ್ಬಿಗಾ. ೦೨೪) **ಪೆಱನ್, ಪೆರನ್, ಪೆರನು, ಪೆಱನು** = ೧. ಬೇರೆಯವನು ; ಅನ್ಯ ; ಪರಕೀಯ : ಸಾಧುಗೆ ಸಾಧು ಮಾಧೂ(ಧು)ರ್ಯ್ಯನ್ಗೆ(ಪ್ಗೆ) ಮಾಧೂ(ಧು)ರ್ಯ್ಯಂ ಬಾಧಿಪ್ಪ ಕಲಿಗೆ ಕಲಿ ಯುಗವಿಪರೀತನ್ ಮಾಧವನೀತನ್ ಪೆಱನಲ್ಲ (ಇಅ. X, ೬೦-೬ ; ಸು. 700) ; ನಂದನರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರಗುಪ್ತ ನೆಂಬೊನಂ ನಿಱಿಸಿದೊಡೆ (ಪಜ್ಞಾರಾ. ೬೩-೬) ; ಬಂದನೀತಂ ಪೆಱನಲ್ಲಂ ಮರ್ಜಯಂ ಕೌರವಕುಳನಳಿನೀಕುಂಜಪ್ರಭೀಮಸೇನಂ (ಪಂತಶಾ. ೦೩-೬೬) ; ವಿರಚಿಸಿದನೀ ಶೇಷರಾಮಾಯಣವನಿಂತು ಪರತರಪುರಾವೃತ್ತರೂಪದಿಂ ಜಗದೊಳಗೆ ಪೆರನೊರ್ವನಂ ಕಾಣದಿಂತಪ್ಪ ಗುಣಶಾಲಿ ಸತ್ಕಥಾನಾಯಕನನು (ಶೇಷರಾ. ೦-೦೭) ; ಪೆರನಾರೊ ಬಂದಿರಲ್ ಕಣ್ಮುರಿದು ಗೆಳತಿಯಂ ನೆರೆದ ಪೆಱ್ 'ನಿನಗೆಂ'ದು ಚುಚ್ಚಿ ನುಡಿಯುವಳು (ಕಾಲೂರ. ೬೦-೦೦೨) ; ಹೆಮ್ಮೆಯಲಿ ಹೆಱನ ಹೊಡೆಯಲ್ಕೆ ಹಿಡಿದವನು ಗುಮ್ಮಿಕೊಂಡಂತೆ (ಸರ್ವಜ್ಞ. ೪೩೩).

೨. ಕೀಳುಜಾತಿಯವನು ; ಹೊಲೆಯ : "ಪೆಱಂ ಎಡೆಯಂ (ಸಡೆಯಂ, ಸೆಡೆಯಂ, ಪಱಿಯಂ)" (ಕಪುದ. ಸಂ. ೨) ; ಪಿಂಗದೆ ಸೇನಜಿತನಣುಗಿ ಪೆರನಂ ಮೀಂಗುಲಿಯ ಕುಮುದ್ವತಿ ಕೈವಿಡಿದಳ್ ಸಿಂಗಮನಂತೆ ಬೃಹದ್ರಥೆ ಸೇರ್ದಳ್ ಪೆಂಗಳ್ಗಿಲ್ಲಂ ಸೇರಲ್ ತಗವರ್ (ಸೌಪಂಚ. ೬-೪೪). **ಪೆಱರ್, ಪೆರರು, ಪೆಱರು, ಪೆಱವರ್, ಹೆರರು, ಹೆರವರು, ಹೆಱರು, ಹೆಱವರು** (ಬಹುವ) : ನೆನೆನೆನೆದು ಪೆಱರ ಮಾತುಗಳನೆ ನೆಗಟ್ದರೆ ಕೃತಿಯೊಳಿಡುವವಂ ನಗದ ಗುಹಾಧ್ವನಿಯವೊಲನರ್ಥ ವಚನಂ (ಕಪುದಾ. ೦-೦೪) ; ಪೆಱರೀವುದೇಂ ಪೆಱರ ಮಾಡುವುದೇಂ ಪೆಱರಿಂದ ಮಪ್ಪುದೇಂ (ಅಭಿಪ್ರ. ೦-೩೩) ; ಪೆರರ ಕಿವಿ ನಾಲಗೆಯ ಕಣ್ ಬರಹಗಳ ನೋದಿ ಮೆರೆವ ನಲ್ಲರ ಕಣ್ಗೆ ಮಾರ್ನುಡಿಯುತಿರ್ಕುಂ (ಕಾಲೂರ. ೪೨-೩೩) ; ಪೆಣ್ಣಿಂದ ಪೆರ್ಬೆಗೊಂಡನು ಹಿಮವಂತನು...ಪೆಣ್ಣಿಂದ ಜನಕರಾಯನು ಜಸವಡೆದನು ಪೆಣ್ಣ ನಿಂದಿಸಲೇಕೆ ಪೆಱರು (ಪದಿಂ. ೩ ೩) ; ಪೆಱವರೊಳಾದು ಬೈಗಮಂ ಮಱಯಿಸುವುದು ನಿದ್ರೆ (ಪರ್ಯಪು. ೪ ೬೩) ; ಹೂವೊಡದೆ ಪೆರರ ಕೈಯಿಂದೂಟ ಸುತ್ತಾಟ ಹಾವಿಟ್ಟ ಬಗೆಯಾಟ ಹೊಳಲ ಪೆಣ್ಣೆಲ್ಲಿ ? (ಕಾಲೂರ. ೨೬-೦೩) ; ಪೆರವರ ಬರಹದೊಳಿರುವ ಸಂಗತಿಗಳು ಮನ್ಮತಿಯನು ಬೆಳಗುವುವು (ಇಂಶಾತ. ೬೩-೩) ; ಹೆರವರ ಮಾತು ನಿಕೆ ಅದ್ವ ? ಈಗ ರಾಜಮಾತೆಯವರನ್ನೇ ತೆಗೆದುಕೊಳ್ಳಿ (ಸಪತಿ. ೩೩) ; ಪೆಱರ ಗೋಣ ಕೊಯ್ದೆನೆಂದು ಮಂತ್ರವನೋದುವ ನೇಣುಗಾಱರ ಮೆಚ್ಚ (ಐಸವ. ೩೬೦) ; ಸಂಚಯಿಸಿದ ಧನವು ಕುಚು ಕಬ್ಬುನವಕ್ಕು ಹುಚಕ್ಕು ಹೆಱರಿಗುಣಲಕ್ಕು (ಸರ್ವಜ್ಞ. ೬೬೩) ; ಮೂಱು ಗುಣಭೇದವಲಿ ತೋರ್ಪವು ಮೂಱುತನು ಗಳು ದೇವನೊಬ್ಬನಿಗಾರು ಹೆಱವರು ವಿಶ್ವಮಾಯಾಧೀಶ್ವರೇಶ್ವರಗೆ (ಪಜಾಗ. ೦೦-೯೨-೨೪). **ಪೆಱವು** (ಬಹುವ) : ಕುಱಿತಂತೆ ಪೇಟ್ದ ನಾಲ್ಕುಂ ಕುಱಿಪು ಗಳಿಂದಱಿದು ಪರರ ದೋಷಂಗಳುಮಂ ಪೆಱವುಮನೀ ಮಾಟ್ಕೆಯೊಳು ತೊಱಿವುದು ತೊಱಿವಂತಸಾಧುಜನಸಂಗತಿಯಂ (ಕಪುದಾ. ೦-೬೬) ; ಕ್ಷೀರಾಬ್ಧಿಯ ನೀರಲ್ಲದೆ ಧೀರನ ಮಜ್ಜನಕೆ ಪೆಱವು ನೀರ್ ತಗವೆಂದಾ ವಾರಾಶಿವರಂ ಸುರಜನದಾರಿ ಮನೋಹಾರಿ ನೀಳ್ದುವೆರಡುಂ ಕೆಲದೊಳ್ (ಅಭಿಪ್ರ. ೬-೬೨) ; ಪೆಱವೇಟುವಿವಸದೊಳ್ಮಣಿಮಯಮಹೀತಳದೊಳು ತಳರ್ನಡೆ ನಡೆದುಂ ಪೆಱವೇಟುದಿವಸದೊಳು ಪದುಳಂ ನಡೆದುಂ (ಜಾಪುಂಪು. ೨೬). **ಪೆಱಳ್** = ಬೇರೆಯವಳು : "ಲಿಂಗತ್ರಯದೊಳ್ ಪೆಱತು ಪೆಱಂ ಪೆಱಳೆನಿಪ್ಪುದನ್ಯಾರ್ಥಂ" (ಪತುಪಿ. ೬೯) ; ಲತೆಯಂ ಲಲಿತಾಂಗಿಗೆತ್ತು ನೀನೆ ಱಗಿದೆಯೆನ್ನ ಪಕ್ಕದೆ ಪೆಱಳ್ಗೆನೆ ಬೆರ್ಚಿ ಲತಾಂಗಿಗಾಗಳಾನೆಱಗಿದೆಂ (ಅಭಿಪ್ರ. ೪-೦೩) ; ಬೇಗದಿಂ ನಡೆದು ಪೆಱಳ್ ಜನಾರ್ದನನ ರೂಪವಿಲಾಸ ಮನೊಲ್ದು ನೋಡಿದಳ್ (ಜಗಪಿ. ೦೬-೬೩). [ದೇ. ॥ ತಮಿ. ಪಿಱಿತು]

ಪೆಱತೆಗೆ 'ಪೆಱದೆಗೆ' ನೋ.

ಪೆಱದು 'ಪೆಱತು' ನೋ.

ಪೆಱದೆಗೆ, ಪೆರದೆಗೆ, ಪೆಱತೆಗೆ, ಹೆರದೆಗೆ, ಹೆಱತೆಗೆ, ಹೆಱದೆಗೆ (ಕ್ರಿ). ೧. ಹಿಂಜರಿ; ಹಿಂದೆ ಸರಿ; ಹಿಮ್ಮೆಟ್ಟು: ಚರಣಾಕ್ರಾಂತಂ ಮಹೀಮಂಡಲಮದಿರೆ ಭುಜಾಕ್ರಾಂತಮಾಶಾಗಜೇಂದ್ರೋತ್ಕರಮಾಶಾ ಭಿತ್ತಿಯಿಂದಂ ಪೆಱದೆಗೆಯೆ (ಗಣಾಯು. ೬-೨೦) ; ವೀರಭಟಂ ನೀಂ ಸೇನೆ ಬೆಂಗೊಟ್ಟೊಡೆ ಪೆಱದೆಗೆಯಲ್ ನಿನ್ನ ಶೌರ್ಯ ಪ್ರಭಾವಕ್ಕಭಿಭಾವಂ ಪೊರ್ದುಗುಂ (ಜಗಪಿ. ೦೩-೬೬); ಬಿರುದಿನ ಬಲ್ಲಾಳ್ವಡೆ ಪೆಱದೆಗೆದುದು (ಜಡುಕಾ. ೬-೩) ; ಮಱುವಕ್ಕದ ಬೀರಂ ಪೆಱದೆಗೆ ದೆಡಕಂ ಬಲಕಂ ತಿರಿಗಿ ತನ್ನೊಂದು ಪೊಸಮಸೆಯ ಬಾಣದಿಂ ಕಡಿದು (ರಾಮಾಶ್ವ. ೦೨೯-೪). **ಪೆರದೆಗೆ :** ೨. ಹೊರಕ್ಕೆ ತೆಗೆ ; ಹೊರಸೆಳೆ : ಒರೆಯಿಂದ ಪೆರದೆಗೆದ ಸ್ಮರಶರಂಗಳ ತೆರದಿ . . . ಸ್ಮರಪಾರವಶ್ಯತೆ ಯನಾಂತು ನಿದ್ರೆಯೊಳರ್ಪ ತರುಣಿಯರ ಕಂಡು (ಪಂಕಾರಾ. ೩-೪-೩).

ಪೆಜತೆಗೆ : ೧. "ಅಕ್ಕುಳತೆಂದು ಪೆಜತೆಗೆದುದಕ್ಕಂ" (ಕ್ರಿಕೃ. ೭೧) ; ಲಲಿತೆಯು ಮುಯ್ಗೆಂದುಬಿಟ್ಟುದ ಬೆಳಗಿನೊಳಿರದಗಿದು ಪೆಜತೆಗೆದು ತಮೋಬಳವಮರ್ದಿಂಬಿನಂ ಕಣ್ಗೊಳಿಸುಗುವಾಕೆಯ ವಿನಿಳಕಬರಿಭಾರಂ (ಸುಚರಿ. ೯-೬೬) ; ಪೆಜತೆಗೆದ ತಮಂ ತಟ್ಟಿಪೆಮಱುಗಲೆನಲ್ ಪೂರ್ವದಿಗ್ವಧೂವದನಂ ಕಣ್ದೆಱೆದವೊಲವೇಂ ಬೆಳರ್ತುದೊ . . . ತಾಪಿನಾಂಶುಬಿಂಬಂ (ಕಂಗಾವಿ. ೧೧-೦೬೯) : ತಿಮಿರಬಳಂ ತೆರಳ್ದು ಪೆಜತೆಗೆದ ರಣೋತ್ಸವಮಂ ನೋಡಲ್ಕೆಟ್ಟಂದವೊಲೇಱುದನುದಯ ತಿಮಿರಮಂ ಮೃಗಲಕ್ಷ್ಮಂ (ಪರ್ಶ್ವ. ೯-೩೦). ೨. ಪೆಜತೆಗೆದ ಬಾಣವಮ್ಮದು ನೆಱಿಸಡುವಂತದನ ಮನವುನಾಕೆಯ ಬಾಣಂ (ಪಾರ್ಶ್ವ. ೩-೧೮). **ಹೆರವೆಗೆ** : ೧. ಹೆರವೆಗೆದ ನಿಜಪಾಹಿನಿಯ ಮುಂಬರಿನಿ (ಅಸಂಶಾ. ೧೧-೨). **ಹೆಱತೆಗೆ** : ೧. ಕಟಕದ ಚಂದ್ರವಂತನಾಯನ ಕಮುತೆಱಿ ಮೇಲೆ ವರಿದಡೆ ಹೆಱತೆಗೆಯುದೆ ಎರಡ್ಮುದುತೆಱಿ ನೆಟ್ಟಿ . . . ಸ್ವರ್ಗ್ಗಸ್ತನಾದಂ (ಕೌಭಾ. IX-i, ೨೯೪ ೦೦ ; ಕು. ೧೧೯೦) ; ತೆಱಮುಗೊಡು ಘಡ ಘಡ ಬಯಿವ್ಪಳ ಹೆಱತೆಗೆದು ಸಾರೆಸುತ ಹೂಡಿಗನುಱಿಬವರೆ ವಾಜಿಸಾಂತು ಘೇಷನ ಕಡುಹ ನಿಱಿಸಿದನು (ಶಾಣ್ಮಕ್ಕೋ. ೩-೬೪). **ಹೆಜದೆಗೆ** : ೧. ರಣದಿಂದೆ ಪೆಜದೆಗೆದು ಕಂಡ ಕಡೆಗೋಡಿದರ್ . . . ಸಂಘಟರು (ಕೃಪಾಣ. ೨೨-೧೦) ; ಬಿರುದಿನ ಸಬಳದ ಘಟರು ಹಿನ್ನೆಲೆಗಾಗ ಹೆಜದೆಗೆಯುದೆ ಪೆಜ್ಜಗಳ ಧುರಮುಂತಲದೊಳಿರ್ದಾಡಿ ಪೌರುಷವನು ಪರಪವರೇಣ ಬಣ್ಣಿಸುವೆ (ಕಂಪಾ. ೦೯-೬೪). ೩. ಹೊರಕ್ಕೆ ಬರು ; ಹೊರಬರು : ಹೊಗಲು ಬಲ್ಲನು ಹೊಕ್ಕವೊಲು ಹೆಜದೆಗೆಯಲಱಿಬುನು ವೀರಪಾರ್ಥನ ವಗಸು (ಶಾಣ್ಮಕ್ಕೃ. ೪-೬೪). [ಪೆಜ್ಜ (<ಪೆಜಗು) + ತೆಗೆ]

ಪೆಜದೆಗೆಯಿಸು (ಕ್ರಿ). ಹಿಂದಕ್ಕೆ ಹೋಗುವಂತೆ ಮಾಡು : ಪಜದೆ ಯೋಜಿಲೆ ೧೦ ಪಗಲಿಬುತ್ತಮುವೆಂದಾರ್ಜಿ ಮಾತೆಯೊಳಾನತವನಿಸಿ ಬಿಸುಬಿಸುಸುಡಿಗಳಂ ಪೆಜದೆಗೆಯಿಸಿ ಮುನ್ನ ಪಸವಾತನೊದೆದಾಪಿಪುದು (ಪಕ್ಷಿ. ೬-೦೩೭ ಪಾಂಗತ್ಯ). [ಪೆಜದೆಗೆ + — ಇಸ್ಸು]

ಪೆಜನದಿ (ನಾ). ಒಂದು ಊರಿನ ಹೆಸರು : ಇಗ್ಗಲಿಯ ಆರಿಪುರ ವೂಜೂರ ಸನ್ನಿನಲ್ಲಿ ತಣ್ಪಾಲಿಗಾಲ ಮೂಡಣ ಪೇರೊಟ್ಟಿಯಿಂ . . . ಅನ್ನೆ ಬನ್ದ ಪೆಜನದಿಯ ಪಡುವಣ ಪೇರೊಟ್ಟಿಯಿಂ ಅನ್ನೆ ಬನ್ದ ಕೆತ್ತೆಬಾಲ ಪಡುವಣ ಪೇರೊಟ್ಟಿಯಿಂ (ಎಕ್ಷ. III (R). ೭೦೩೮. ೨೦೯-೨೩ ; ೪೧೬ ೧). [?]

ಪೆಜನಡು (ಕ್ರಿ). ಹಿಂದಕ್ಕೆ ಹೋಗು : ಪೊಟ್ಟಿ ಬಟ್ಟಾಗಿರ್ದ ಪೆಜ್ಜಾಟ್ಟ ನಡುವಂ ನೋಡಿ ಪೊಕ್ಕಾ ವಿಚ್ಚೆಂದು ವಿಡುಕಲಾಗ್ದೆ × × × ನೆಯ ಕಾಪಿನಾಳ್ಗಳುವುಂ (ಗದಾಯು. ೯-೪೪ ವ).

[ಪೆಜ್ಜ (<ಪೆಜಗು) + ನಡು]

ಪೆಜನಾಡು (ನಾ). ೧. ಬೇರೆಯ ನಾಡು ; ಅನ್ಯದೇಶ ; ಪರಸ್ಥಳ : ಪೆಜನಾಡಜಿಯುಂ ನಿನ್ನ ಕೈಯೊಳ್ ಬನ್ನಂಬಡೆದು ಕಿನ್ನಾನಿಯುವನ ಮೆಯ್ಯಂದಿದ ಚಿನ್ನವಾಂಗಿನಂತೆ ಪೊಜಪ್ಪರ್ದುದಾಗಿದ ಡಾದಿಯುಂ (ಪಕ್ಕಾ. ೮೯). ೨. (ಆಲಂ) ಬೇರೆಯ ಲೋಕ ; ಪರಲೋಕ : ಅಳವಾನ್ಮು . . . ಪೆಜನಾಡ ನೆಲದಲ್ಲಿ ನಾಚಿರ್ಪಂ (ಅಪ್ಪ೨೨. ೩೩ ೮). [ಪೆಜ್ಜ (<ಪೆಜತು) + ನಾಡು]

ಪೆಜನೂಂಕು (ಕ್ರಿ). ಹಿಂದೆ ಬೀಳುವಂತೆ ಮಾಡು ; ಹಿಂದಟ್ಟು : ಪಾವಸೆಯುಂ ಪೆಜನೂಂಕುವ ಪೊಸಕೊದಾಪರೆಯಿಂನೆ ಕಿಜುಗ್ಗೆಯಿಂ ಮೇಲುವ ನೋವದೆ ನೂಂಕ (ಆದಿಪು. ೨-೩೭). [ಪೆಜ್ಜ (<ಪೆಜಗು) + ನೂಂಕು]

ಪೆಜಪಿಂಗಿಸು (ಕ್ರಿ). ೧. ಹಿಂದಕ್ಕೆ ಸರಿಸು : ಕರದಿಂದೆ ನುಂದೆ ಪರ್ವಿದ ರಜನೀಕಿರಸ್ಕರಿಣಿಯುಂ ಪೆಜಪಿಂಗಿಸಿ ಪರ್ಬಿನೀವಧೂವದನ ಸರೋಜಮಂ ಪದಪಿನಿಂದಮೆ ನೋಡುವೆನೆಂಬ ಮಾಜ್ಕೆಯಿಂನುನಯು ನಿರೀಂದ್ರವೇದಿಕೆಯುನೇಜುದನೊಯ್ಯನೆ ಪಮ್ಮಿನೀಪ್ರಿಯುಂ (ಶಾಕುಂಣ. ೪೩). ೨. ಕಳೆ : ನಿವಾರಿಸು : ಪರಿಹರಿಸು : ಪ್ರಮುದನುಜದೇಶಪೇಶಲಂಗಳವ್ವ ಪಚನಸಿಚಯಂಗಳಿನಾ ನಿರೋಧನಬಾಧಕನಪ್ಪಂತು ಬೋಧಿಸಿ ದೀನಾರಮನೇನಾನುಮನಿತ್ತು ತತ್ಪರಿಣಯಮು ಸಿಜಿಯುಂ ಪೆಜಪಿಂಗಿಸಿ (ಪರ್ಶ್ವ. ೦೩-೩೨ ವ). [ಪೆಜಪಿಂಗು + — ಇಸ್ಸು]

ಪೆಜಪಿಂಗು, ಹೆರಪಿಂಗು, ಪೆಜಪಿಂಗು (ಕ್ರಿ). ೧. ಹಿಂದೆ ಸರಿ ; ಹಿಂದಕ್ಕೆ ಹೋಗು ; ಹಿಂಜರಿ : ಪುರಿ ಪುರಿ ಪರಿಪರಿ ಪೊಪೋಗಲೆಯೆಲೆ ಪೆಜಪಿಂಗು ಪಿಂಗು . . . ತೊಲತೊಲಗೀ ಮಳಿಗೆ ಪುಲಿಯು ದೆಬುದು ಮಾರ್ಗಂ (ಕಬ್ಬ. ೨-೨೬) ; ಬಾಳೊಳೆ ಬಾಳ್ ಪ್ರಳಂಬಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೆಸತೆಗಳ್ ಪೆಜಪಿಂಗ (ಪಾಪಾ. ೧೦-೪೨) ; ಪುತ್ತಂ ದುರ್ಗಂಧಕ್ಕಿರಲಾಜಿದೆ ಲಿಂಕರ್ ದಂಡುಗೊಂಡರಂತೆ ಶಂಕಿಸುತ್ತುಂ ಪೆಜಪಿಂಗೆ (ಧರ್ಮಾಕ್ಕೃ. ೪ ೦೩೯). ೨. ಹೊರಬರು ; ಮರಳು : ಅವಳ ಸಗೆಯೊಗದೊಳೊಯ್ಯನೊಯ್ಯನೆಜಗಿದ ಕಣ್ ಎಸವ ಪೊಸವಾವರೆಗೆಜಕದಿಂದೆಜಗಿದ ಪಾಜಸಾಯಬಿಯಂತೆ ಪೆಜಪಿಂಗಲಾರ್ತುವಿಲ್ಲ (ಕ್ಷತ್ರಾ. ೭೮). ೩. ಕುಗ್ಗು ; ಕಡಮೆಯಾಗು : ತಗು : ಪಂಗಲಾಕಾರಣಂ ವಿಗೆ ನೋಡಿ ನೋಡಿ ಪೆಜಪಿಂಗದಾನಂದದುಂ ಬೆಚ್ಚಿಂತಿರೊಚ್ಚಿತಂ ಬಾಗಿ ಸಲಿಸಲಿವಾತುತೆ (ಕತ್ಪಾ. ೬-೩೭). ೪. ದೂರವಿರು : ಅಗಲಿರು : ಗಂಗಾಧರನ ಭಕ್ತಿ ತಿರುಕೊಳವಿನಾಚಿಯೀಂಬಂಗನೆ ಪವಿತ್ರಜಲಘಟನುಜ್ ಪೊತ್ತು ಪೆಜಪಿಂಗದಾ ಪಂಚವರ್ಷದ ಕುವಾರಂಬೆರಸು ಮುನ್ನ ತಾಂ ನೀರಡಿಸುವ ಲಿಂಗವಂತರ ಮನೆಯ ಪೊಕ್ಕು (ಶಾವಾ. ೬ ೦೭). ೫. ಇಲ್ಲವಾಗು : ನಾಶವಾಗು : ನೆಜಿ ಪೊಯಿಂ ಪೆಜಪಿಂಗಿದಿಂಗಡಲ ಮಧ್ಯಾದಪ್ಪ ಶುಭ್ರಾಬ್ಜದೊಳ್ ವರಕಂದರ್ಪನ ಗರ್ಭದಿಂದೆಸೆವ ಲಕ್ಷ್ಮೀಕಾಂತೆಯೀಯಂತೆ . . . ಕ್ಷೌಮಾಂಬರಾಚ್ಛಾದಿತಭೂರಪರ್ಯಂಕದೊಳರ್ದ ಗರ್ಭವತಿಯಂ ಕಂಡಂ (ಶಾಕುಪಾ. ೩-೩೩) ; ಘೂಪಳೆಯೂಧಿಪಂ ಪೆಜಗುವೆತ್ತು ಮುಂದೆ ಪೆಜಪಿಂಗಿ ಪಂದೆಯುಂ ಪಾಪಡರ್ನಂತೆ ತೊಪ್ಪನೆ ಕಲುಲ್ದು (ರಕ್ಷಾ. ೦೦-೦೦೦). ೬. ಕಳೆ : ನೀಗು : ನಾನು ನೀನುಗಳೆಂದು ತಾನು ಲಿಂಗದಿ ಉಳಿದು ನಾನಾಭೃಮೆಗಳ ಪೆಜಪಿಂಗಿ ನಿಜವನು ತಾನೈಕ್ಯ ನೋಡ (ಸರ್ವಜ್ಞ. ೦೫೩). ೭. ಪರಿಹಾರವಾಗು : ಉಪಶಮನವಾಗು : ಕ್ಷರ ತಾಪಂ ಪೆಜಪಿಂಗೆ ಸೂಳಿಮುರೊಳಂಗಮೊಂದಿ ಕೂಡಿರ್ದ ಗಾತರನಾಟುಂವಲೆ ದಟ್ಟಿ ಪೊಮ್ಮು ಕಳೆದು . . . ಸೂಳಿಮುರೊಳಗ್ಗಾಟೊಸಪದಿಂ ಒಲ್ಮೆಯಿಂ ನೆರಪಂ ಭೂಭುಜನಂದನು (ಧರ್ಮಾಕ್ಕೃ. ೪ ೨೮). **ಹೆರಪಿಂಗು** : ೩. ಹೆರ ಪಿಂಗದ ಪರಮಪದಂ ದೊರೆಕೊಂಡಿತ್ತು (ಪಪ್ರ. ೦೦೨). ೮. ಬೇರೆಯಾಗು : ಬೇರ್ಪಡು : ಅಂಗರಿಂಗಕ್ಕೆ ಕಿಂಚಿನ್ಮಾತ್ರ ಸೂತ್ರ ಪೆರ ಪಿಂಗನಂತನವರತ ಧರಿಸಿಕೊಂಡಿರುತಿರ್ಪ (ಪ್ರಭಾ. ೨ ೨). **ಹೆಜಪಿಂಗು** : ೧. ಜೋಳನಂಜಿ ಹೆಜ್ಜಿಂಗದ ವಸಳವನೋಡಿ ದುರ್ಗ್ಗಮಂ ಹುಗದೆ ಕಳಿಂಗನೋಸರಿಸಿ ಪೋಗದೆ ಗುಜ್ಜರಾನಾತ ಯುದ್ಧದೊಳ್ಕಿಗುಸರೆ ಪಿಟ್ಟಿದೇವ ಗನುಡಂಗಿದಿರಾಗಿ ಧರಿತ್ರಿಪಧ್ವಜನೊಳು (ಎಕ್ಷ. V. ೦೩೫೮. ೬೯-೨೪ : 1135) ; ನಡೆನಡೆನು ತಿರುಗಿ ಪೆಂಜಿಜಕಿಂ ನಜಿಸದೆಮು ದಪದಪಿಸಿ ಹೆಜಪಿಂಗಲಾಜಿದೆ ವನೆಂಪಿಡಿದು (ಕಬ್ಬ. ೮೨. ೧೨೩ ೦೦) ; ಪೊಗರಿಂಗು ವಂಗೋಪಾಂಗವಕ್ಷದೊಳು ಪೊಂಬೊಗರಿಂಬುಂತಿರ್ಪ ನಗೊಳ್ಮೆಲೆಯು ದೃಗುಯುಗಳದಿ ನೋಡಿ ಹೆಜಪಿಂಗಲಾಜಿದೆ ಮುಂಗುಳಂಬನವಾಪ ನಿನ್ನ (ಪೊಚಕ. ೮೯ ೮೨). ೪. ನೆಜಿ ರೂಪುಪಡೆದ ಮ್ಯಾಥನೆಂಬ ರಕ್ಷ ಹೊನ್ನೊರೆಯಿಂದಲುಗಿದ ಕೂರಸಿಯು ಪಜಿಲಿಯುವಾರದು ಮಹಾದೇವ ಸತ್ಕುವರನ ಹೆಜಪಿಂಗುಪುದೆ ಬಲ್ಲುವರು (ಪೊಚಕ. ೨೯-೨೩). ೫. ಲಿಂಗವಂ ನಲಿಸಲಿವು ಪೂಜಿಸುತಂಗಚೇಷ್ಟೆಗಳೊಡನೊಡನೆ ಹೆಜಪಿಂಗುತಿರೆ ಸಬೆ ನೋಡಿ ನೋಡಿ ಮುಯಾಬ್ದವಲರಿಸುತ (ಪಕ್ಷಿ. ೪೪ ೮) : ಎರಲು

ಸುಳಿಮುದು ದೀಪಶಿಖೆ ಪರಿಹಾಸಿವತಿಬಲವಬ್ಬಗದ ನಿಮ್ಮೊರತೆಗಂಜವೆ ವಾಣದೆನೆ ಪೆಜಿಂಗಿತಾ ರಸಿ (ಶಬಾಕ. ೬-೦೪). ೭. ಕೆಲವೊರ ಬಂದಾ ದಾರಿಯ ನಡೆವರಸಿಕೆ ಪೆಜಿಂಗಲಿಸುತ (ಪ್ರಶಂಪ. ೩ ೩೦).

[ಪೆಜ್ಜ (<ಪೆಜಗು) + ಪಂಗು1]

ಪೆಜಭಾಗ (ನಾ). ಹಿಂಬದಿ : ಹಿಂದುಗತ್ತೆ ; ಹಿಂಭಾಗ : ತನ್ನ ಬಲಾ ಪೆಜಭಾಗದಲ್ಲಿ ಬಂದಡಿಗೆತದಂದೆ ವಜಬೊಳೆ ವಾಯಿಸಿ ಮೂಲಪೆಲ್ಲವುಂ ಪತಲ್ವಡಿಸಿ (ಒಳ. II. ೧೩೮ ೬; ಸು. ೪೪೦). [ಪೆಜ್ಜ (<ಪೆಜಗು) + ಭಾಗ]

ಪೆಜಮೆಟ್ಟು, ಪೆಜಪೆಟ್ಟು (ಕ್ರಿ). ಹಿಂದಕ್ಕೆ ಅಡಿಯಿಡು; ಹಿಂದೆ ಸರಿ: ಹಿಂಜರಿ : ಮಾಗುರ್ಚಿದೆಪ್ಪೆಯೋರಿಯುಂ ಪೆಜಮೆಟ್ಟವ ತಗರುಂ (ಣಂಚಪ್ರ. ೬-೮೨ ೪); ಪೆಜಮೆಟ್ಟ ತಜಜುಗಿ ಏಗೆ ತಳ್ಳಿಜುದಪ್ಪು ಪೊಡನೊಡನೆ ತಪೊಳೀ ಕಾಂತೆಯು ನುಣ್ಣಾಜುಗವೆಗ[ಣ್ಣ]ಳಿ (ಪ್ರಕ್ಷಕ್ಷ. ೬-೩೨). **ಹೆಜಮೆಟ್ಟು :** ಬಾಡುತಂ ಬಳುಬಾತಂ ಪೆಜಮೆಟ್ಟ ಭೀತಿಯಿಂ ಕಲುಸಾರ್ದ ಮಾಂಟಪದ ಗೋಂಟಿನೊಳು ಕುಳ್ಳರ್ದ (ಕಬಾಚ. ೮ : ೦೩-೨೦).

[ಪೆಜ್ಜ (<ಪೆಜಗು) + ಮೆಟ್ಟು1]

ಪೆಜಮೆಯ್ (ನಾ). ಮೈಯ ಹಿಂಭಾಗ : ಬೆನ್ನು ; ನೆಜಿಯಿ ನವಿರ್ ಪೆಂಪಡಿದೆಡೆಜುಲ್ಲದೆ ನೆರವ ಪಕ್ಕದಿಂ ಸೊರ್ಕುತುಮಾ .ಪೆಜಮೆಜ್ಜುಕ್ಕ ಮನೆರಡುಮನೆಜುತರ್ ಭೂಭಾರವೆಂದ ತಜುಸಂರಾಗಳ್ (ಶಕವಿ. ೬-೨೮೯).

[ಪೆಜ್ಜ (<ಪೆಜಗು) + ಮೆಯ್2]

ಪೆಜವಕ್ಕ (ನಾ). ಹಿಂದುಗಡೆ; ಹಿಂಭಾಗ : ನರ್ಮದಾತಿಲಕದ್ವಿಪೇಂದ್ರವುಂ ಪಣ್ಣಾಲ್ಪೇಱ್ದು ತಾನುಂ ಕೈಗಯ್ದು ಪದ್ಮಾವತಿಯುಂ ಬರಿಸಿ ಪೂರ್ವಾಸನ ದೊಳಾಕೆಯುಂ ಕುಳ್ಳಿರಿಸಿ ಪೆಜವಕ್ಕವುಂ ತಾನಳವಡಿಸಿಪೊಡನೆ ಗಡಣಿಸಿ ಬಪ್ಪ ರಾಜಪುತ್ರರಿಗೆತ್ತಿವ ಸತ್ತಿಗೆಗಳಿಂದಂಬರತಳಂ ಪುಡುವೀಕಪಂಡದಂತೆ ಕಣ್ಗೊಪ್ಪವಿಸುಂ (ಪುಣ್ಯಾಸ್ರ. ೨-೪೮ ೪). [ಪೆಜ್ಜ (<ಪೆಜಗು) + ಪಕ್ಕ]

ಪೆಜವರಿಜು (ನಾ). ಬೇರೆಯ ರೂಪು. —ಆಕಾರ : ಅಂತಃಕರಣಮೆ ವೆಜವರಿಜಾತುದು ದರ್ ತಿರುಮಸಾರ್ಯನೆಂಬೊಳ್ವಿಸರಿಂದಿಂತೇ ತಿಳಿ ದಪ್ರತಿಪನುಮೊಂತವ್ವ ರಹಸ್ಯಮಾದೊಡಂ ತೊಡರ್ದಿರ್ಕುಂ (ಶಕವಿ. ೩-೦೦೦).

[ಪೆಜ್ಜ (<ಪೆಜತು) + ವರಿಜು]

ಪೆಜವುಬಿ (ಕ್ರಿ). ಬೇರೆಯಾಗಿ ಉಳಿ; ಮಿಗು : ಪೆಜವುಬಿದ ಮೂಜು ಮಿಜುಮಿಜುಪಿಂಜುವ ಶಿತಾಸ್ಯಂಗಳಿಂ ದ್ವಿಜನ್ಮನ ನೊಸಲಂ ನೆಜಗೊಳ್ವಿನ ಮೆಚ್ಚೊಡೆ (ಪಾಪಪು. ೦೨-೬೪). [ಪೆಜ್ಜ (<ಪೆಜತು) + ಉಬ್ಬಿ1]

ಪೆಜವುಬಿ. ಪೆಜಉಬಿ (ನಾ). ೧. (ಗೃಹಸ್ಥನಿರುವ ಕಡೆಯಿಂದ) ಬೇರೆಯಾದ ಸ್ಥಳ : ಭಟ್ಟಾರಾ ನೀವಿಲ್ಲಿಗೇಕೆ ಬಂದಿರಿಲ್ಲಿಂದಂ ಪೂಜ ಪೊಬರೊಳ್ ಪೆಜವುಬಿ ಬಸಬಿಯಲ್ಲಾ ಎಂದೊಡೆ (ಪಶ್ಚಾಶಿ. ೨೬-೨೬). ೨. ಬೇರೆಯು ಕಡೆ. -ಎಡೆ : ತದುಪಗತಮದ್ವಮೈಕತ್ವದೊಳಗ್ಮಂ ವ್ಯಾಯದಿಂದಿಕಾರಮುಕಾರಂ ವಿದಿತಸ್ವರೂಪಲೋಪವಮುಮದಂತೆ ಪೆಜವುಬಿಯೊಳು ಪ್ರಕೃತಂತ್ಯದೊಳಂ (ಕಾಬ್ಯಾಪ. ೪೦೩); ವರುಣನೆಂಬ ನೈಮಿತ್ತಿಕನಂ ಕರೆದು ಬೆಸಗೊಳ್ವುದುಮಾತಂ . . . ದೇವತಿಯು ಮಗ ನೊರ್ವಂ ಪೆಜವುಬಿ ಬಳೆದಪನೆಂದು ಬಗೆಯೊಳ್ ಪಗೆಯನಿಕ್ಕಿ ಪೋಗೆ (ಕರ್ಣಪ. ೬-೬೬ ೪). **ಪೆಜಉಬಿ :** ಪಿ. (?) : ತಿರ್ದಲಿಕೆ ಬಂದ ಶಕುನ ವಲ್ಲಿರ್ದಂತಿರೆ ಪಲವು ತಿರ್ದ ಪೆಜಉಬಿ ಲಾಭಂ ತಿರ್ದಿದಮನಮುಂಗೆ ಪೊರ್ದಿದು ಫಲಮಂತದಕ್ಕೆ ಕಡವೊಗಶುಭಂ (ಕೋಳೂಚ. ೦೨-೬): ಆರಂಬದ ಫಲಮುಂಟೆಂಬುವಂ ಪಡೆದ ಧಾನ್ಯರಾಶಿ ವೇಲ್ವಂತೆ ಧರ್ಮದ ಫಲಮನೆಯ್ದಿದೀ ಸಂಪತ್ತೆ ಪೇಜ್ದಪ್ಪದದಱೊಳ್ ನೀಂ ಬಗೆದು ನೋಡಿ ನೆಗಟ್ಟುದೆಂದೀಪೋಪೆಯನೀ ನೆಗಟ್ಟಿಯುಂ ನಿಜಉಬಿಯ(ದು)ನ್ಮ ವೆಂದು ಭ್ರಾಂತಿಸದಿಂ (ಜಿಪಪ್ರ. ೨೨೦-೦೬ ೪). 'ಅರೆಉಬಿ' ಪೋ.

[ಪೆಜ್ಜ (<ಪೆಜತು) + ಉಬ್ಬಿ2]

ಪೆಜವುಬಿ2 (ಅ). ಮತ್ತೊಂದೆಡೆಯಲ್ಲಿ; ಬೇರೆಯಂ ಕಜೆಯಲ್ಲಿ : ಮಗಳ ಏಮ್ಮ ಕೂಟ್ಟ ಬ್ರತಂಗಳಂ ನಿಮ್ಮಮ್ಮಂ ಬಸುವಲ್ಲೆಲ್ಲಂ ಪೆಜವುಬಿ [ಣಾಸಂ. ಪೆಡೆ]ವಿಸುವದಿರೆನ್ನಿಲ್ಲಿಗೆ ನಂದೆಮ್ಮ ಕೊಟ್ಟ ಬ್ರತಂಗಳನಿವನೊಪ್ಪಿ ಸುವುದು (ಪಣ್ಣಾಶಾ. ೦೩-೦೩); ಪೆಜವೊಳವುಳ್ಳವಲ್ಲಿಯೊಳಾಗವುಳಾಪೆ ಗಳಲ್ಲಿಯುಳ್ಳವಂ ಪೆಜವುಬಿ ಕಾಣಲಾಗದೆನೆ . . . ನಿಗ್ಗುಟ್ಟದಂ ಪವಿತಮರ್ಮಬಿನಾಗವುಮೇರಿಯಪ್ಪುದಂ (ಕಾಪ್ರ. ೦೨-೩೩); ಬಿತರರನೊಯ್ದು ದಪ್ಪಿವೆಬರಂತಪ್ಪಡೆ ಪೆಜವುಬಿ ಪುಟ್ಟ ಬಳೆಯುತ್ತಿರ್ದ ಬಿತರರನೊಡುವ ಪಾರ್ವರ್ತವ್ಯ ಕೆನ್ಮುಲಿರ್ದ ಪಾರ್ವಂಗೆ ಕೂಬನೊಯ್ದರು (ಕಾಪ್ರ. ೧೩-೪) [<ಪೆಜವುಬಿ1]

ಪೆಜವೆಣ್ (ನಾ). ಬೇರೆಯ ಪೆಣ್ಣು ; ಪರಸ್ತ್ರೀ : ಪೆಜವೆಣ್ಗೊಲ್ವಿಂಗ ಬೇನಾಗದು (ಪಂಪಭಾ. ೬-೬೦) ; ಚೂಳುಕ್ಯವಂಶದೊಳಲ್ಲಿಯುಮಿನ್ನೆವರೆಗಂ . . . ಬೇಡಿದರ್ಗಿಲ್ಲೆಂಬುದುಂ ಕಾದಿ ಸೋಲ್ದುದುಂ ಪೆಜವೆಣ್ಣಂ ಪಿಡಿಸುವುದುಂ[ಪಾಣಾಂ. ಪೆಜಿರ ವಿಘಟಿಸುವುದುಂ]ಕನಸಿನೊಳಲ್ಲೆಪಪುದು (ಗಣಾಹು. ೨ ೬ ೪); ಏಗೆಯುಬ್ದಂ ಪೆಜವೆಣ್ಣಾಟಿಸುವವನಂ ಶುಚಿಪೇಬರ್ ಶುಚಿಯುಂ ಅಶುಚಿಯೆಂಬರ್ (ಪಚಪು. ೭೦-೦೬).

[ಪೆಜ್ಜ (<ಪೆಜತು) + ಪೆಣ್]

ಪೆಜವೋಗು, ಪೆಜಪೋಗು (ಕ್ರಿ). ಹಿಂದಕ್ಕೆ ಹೋಗು : ಮರಳು : ಅಱಿವೋ ನಿನ್ನೇಹನೆನ್ನಂ ಹಿಮಗೃಹಕಪೊಳಂತಿರ್ವಳಂ ಕಂಡು ಬೀತ್ತಾ ಪೆಜವೋದಾ (ಶಾರಂಾ. ೩೯೦). **ಪೆಜಹೋಗು :** "ಅಕ್ಕುಳಿತೆಂದುಂ . . . ಪೆಜಹೋದುದೆಂದುಂ. ನುಣ್ಚಿತೆಂದುಂ. ಪಾನಗೆಯ್ದುಂದುಂ - ಈ ೧೩ ಅಪಸರಣಕ್ಕೆ ಪೆಸರ್" (ಶಪಾ. ೬೨-೬೯೯).

[ಪೆಜ್ಜ (<ಪೆಜಗು) + ಪೋಗು1 (<ಪೋ1)]

ಪೆಜಸಾರ್, ಪೆರಸಾರು, ಪೆಜಿಸಾರು, ಹೆಜಿಸಾರ್, ಹೆಜಿಸಾರು (ಕ್ರಿ). ಹಿಂದಕ್ಕೆ ಹೋಗು; ಹಿಂದೆ ಸರಿ: ಹಿಂದೆ ಸಾರು: ತಂಬುಲಿಗರ್ ನಂಬುಗೆ ಗೆಟ್ಟುವರಂತೆ ಪೆಜಸಾರೆ (ಶರ್ಮಾಮ್ಮ. ೨-೬೬): ಅಂದು ನನ್ನನು ಕನಸಿ ಕೂಡಿ ಪೆಜಸಾರ್ದು ಕೊಂದು ಹೋದನ ರೂಪನಜಿಯೆ(ಪೋಪಪ. ೩೦-೨೯); ಪೆಳಱಿ ಪೆಜಸಾರ್ದಪೆಯೋ? ಸ್ಕೂಸ್ಸೆ ಪಗೆವರೊಳ್ ಮುಜುನಿದಪೆಯೋ (ಬತ್ಸಶ್ರ. ೩-೬೦). **ಪೆರಸಾರು :** ರಾಮಚರಿತಾಮೃತಂ ರಮಣೀಯಾತರ ಭವತ್ಕೋಮಲಸುವಾಣಿಯಿಂ ಕಲಿತಮಾದಪೆ ಶ್ರವಣದಾ ಮಹಾ ಸಾಮ್ರಾಜ್ಯಮಂ ಸವಿದು ಪೆರಸಾರದೆನ್ನ ಮಾನಸ ಮಹೇಶ (ಪಂಕಾಚಾ. ೩-೦-೩); ಮೃತ್ಯು. ಓ. ನನ್ನ ಮೃತ್ಯು! ಬಾ. ನಿನ್ನ ಶಂಖನಿನಾದವ ನಿರಾತಂಕ ನಿರುಪಾಧಿಯಲಿ ನಿದ್ದೆ ವೆರಸಾರಿರುವ ರಾತ್ರಿಯಲ್ಲಿ (ಪಂಹಾ. ೧೪-೦೬). **ಪೆಜಸಾರು :** ಪರಿಮುದು ಪಾಡಜುದು ತಳವೇಲ್ಗಳೊಳಗೆ ಪೊಯ್ದು ರಣಿಸಿ ಪೆಜಸಾರಿ ಮುಂಬರಿದು ಗದೆಗಳಂ ತಿರುಪಿ ಭುಜಶ್ಕ್ತಿಂ ತೋಜಿದರ್ ಘನಗದಾಯುದ್ಧವಂ ಸಂಗರದೊಳು (ಕಬಪ್ರ. ೦೬-೨೬). **ಹೆಜಸಾರ್ :** ಇರವಂತಿಯ ಮಾಲೆಗಳಂ ವಿಳಾಸಿನಿಯಗ ಕಯ್ಕೊಳ್ ನೀಡ ಪೆಜಸಾರ್ದು (ಪಂಪಪ. ೦೬-೦೦೦); ಪೆಜಸಾರ್ದು[ಪಾಣಾಂ. ಕೆಲಸಾರಿ] ನಿಂದು ಬೆಸನಾವುದೆನಲು (ಪತಣಾ. ೬-೨). **ಹೆಜಿಸಾರು :** ನಿಮ್ಮ ತೇಜವ ನೋಡಲೆಂದು ಹೆಜಿಸಾರಿ ನೋಡುತಿರಲು ಶತಕೋಟಿಸೂರ್ಯರು ಮೂಡಿದಿಂತೆ ಇರ್ದುದಯ್ಯ (ಅಪಪಂ. ೦೬೩-೬೬೬); ಥಟ್ಟುಗೆಡಹಿದ ಕರ್ಣನನು ಕೈಮುಟ್ಟಿದಿರು ಹೆಜಿಸಾರು ವಾರ್ಥನು ಕೊಟ್ಟ ಭಾಷೆದು ಮಱಿದೆಲಾ ಕೈತಪ್ಪ ಮಾಡದಿರು (ಶಾಬ್ಯಾಳ. ೦೨-೨೯); ನೆಲೆ ಲಕ್ಷ ವರಿ ವಾಯದಳದ ಮನ್ನೆಯ ಸೋತು ಹೆಜಿಸಾರಿದನಲ್ಪಬಲಕೆ (ಶಾಪಂ. ೦೬-೬೬). [ಪೆಜ್ಜ (<ಪೆಜಗು) + ಸಾರ್1]

ಪೆಜಸಾರಿಸು (ಕ್ರಿ). ಹಿಂದಕ್ಕೆ ಸರಿಸು ; ಹಿಂದೆ ಹೋಗುವಂತೆ ಮಾಡು : ನೀರೆಂಬ ನೀರೆಯಂ ಪೆಜಸಾರಿಸುತುಂ ಪುಳಿನಮೆಂಬ ಪಳಿನ

ಸ್ಥಳದಿಂ ನಾರಿಯವೊಲ್ ನದಿ ಮೆಱೆಗುಂ (ಪಾರಪು. ೪-೬೯).

[ಪೆಱಸಾರ್ + — ಇಸು$_3$]

ಪೆಱಸಾರು 'ಪೆಱಸಾರ್' ನೋ.

ಪೆಱಸಾರ್ಚು (ಕ್ರಿ). ೧. = ಪೆಱಸಾರಿಸು : ಅಡಪಮನತ್ತಲೊಯ್ ಡವಕೆಯುಂ ಕಳೆ ಸೀಗುರಿ ಬೇಡ ಬೀಸದಿರ್ ಕೊಡೆಯುಂ ವಿಡಂಬಮೇಕೆ ಸಿರಿಗನ್ನಡಿಯುಂ ಪೆಱಸಾರ್ಚು (ಪುಷ್ಪಾಪು. ೧೩-೯೬). ೨. ಕಡೆಗಣಿಸು : ಬಂದಿವರ್ ಮಱುವಲಂ ಕಿಱಿಪಿರಿದೆಂಬೆಣಿಕೆಯುಂ ಪೆಱಸಾರ್ಚಿ ಪೆರ್ಚಿದ ರಕ್ಕಸವಡೆಗಿದಿರ್ಚುವಿಂದ್ರಾಚ್ಯುತರಂತೆಯುಂ . . . ತೆಲುಂಗಪಾಳೆಯಮಂ ದಟದುಟಿವಾಯ್ದು (ಜಸಂ. ೨-೪೯). [ಪೆಱ$_2$ (<ಪೆಱಗು) + ಸಾರ್ಚು$_1$]

ಪೆಱಹೋಗು 'ಪೆಱವೋಗು' ನೋ.

ಪೆಱಿಸು, ಹೆರಿಸು, ಹೆಱಿಸು (ಕ್ರಿ). ಪ್ರಸವವಾಗುವಂತೆ ಮಾಡು : ಹೆರಿಗೆ ಮಾಡಿಸು : ದೇವಕಿಯಮಳು ಪೆತ್ತಳ್ ಜೀವಂಜಸೆ ಪೆಱಿಸೆ ಹರಿಯ ಬೆಸದಿಂದು ಮಾಯಾವಿ ಪರಿತಂದು ನೈಗಮದೇವಂ ತಂದಿಕ್ಕೆ ಮುಂದೆ ಮಾಯಾಶಿಶುವಂ (ಅರ್ಧನೇ. ೭-೨೯). **ಹೆರಿಸು** : ಸೂತಿಕಾಪರಿಪಾಲಿತಾ–ಅನೇಕಮಂದಿಯಂ ಹೆರಿಸಿವಂಥಾ ಸೂಲಗಿತ್ತಿಯರಿಂ ರಕ್ಷಿಸಲ್ಪಟ್ಟವಳಾಗಿರುವಂಥಾ ಆ ಗರ್ಭಿಣಿಯು (ಭಾಹಟೀ. ೨-೦-೭೭ ವ). **ಹೆಱಿಸು** : ಬಱಿಯ ಮಾತೋ ಚಾಪವಿದ್ಯದೊಳಱಿತವುಂಟೋ ಹೊತ್ತುಗಳೆಯದೆ ಹೆಱಿಸಿರೇ ನಾರಿಯನು ನಿಮ್ಮಯ ಬಾಣಗರ್ಭಿಣಿಯ (ಕುಪ್ಯಾಭೀ. ೯-೩೪) ; ಪುಲ್ಲೆ ಗರ್ಭದಿ ಬೇನೆವಡೆದು ಹೆಱುತಲಿರೆ ನಿಲ್ಲದೆ ಪೆಣ್ಬುಲಿ ಕಂಡು ಸಲ್ಲೀಲೆಯಿಂ ಮೈದಡಹಿ ಹೆಱಿಸುತಿರ್ದುದೆಲ್ಲವನೇನುಸುರುವೆನು (ಅನಂತ. ೩-೬೪).

[ಪೆಱು$_1$ + — ಇಸು$_3$]

ಪೆಱು$_1$, ಪೆರು$_1$, ಹೆರು$_1$, ಹೆಱು$_1$ (ಕ್ರಿ). **ಪೆತ್ತು$_1$, ಹೆತ್ತು$_1$** (ಭೂತಕೃ). **ಪೆತ್ತು$_1$, ಹೆತ್ತು$_1$** (ಭೂತನಾಮ್ಯ). ೧. ಪಡೆ : ಹೊಂದು : ವಿತತಶ್ರೀ ಸಂಪತ್ತಂ ಶತಮಖನವೃಶಾನುಭಾವನೊಲಮಿ ಪೆತ್ತಂ (ಕವಿರಾ. ೨-೪೪) ; ಊರ್ಗಳುಮಂ ನಾಟ್ಗಳುಮಂ ತೊಟಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತುಂ ಪೆಱದೆಯುಮಿಂತು ಬಾಟುತ್ತಂ ಪದಿನೈದು ಪದಿನಾಱು ವರುಷದ ಪ್ರಾಯದಾತನಾಗಿ ವೈದಿಶಮೆಂಬ ಪೊಟಲ್ಗೆ ಪರ್ಪೊಂ (ವಡ್ಡಾರಾ. ೬೬-೨೦) ; ಅದೇಂ ಗಗನಮಂಡಲಂ ನೆಱೆಯೆ ಶೋಭೆಯುಂ ಪೆತ್ತುದೋ (ಅದಿಪು. ೬-೩೯). ೨. ಗಳಿಸು : ಸಂಪಾದಿಸು : ದೇವರ ಪರಿಯೆಂದಿನಂದ ವಲ್ಲಿಂದೊಂದು . . . ಪರಮಲಾಭವ ಪೆತ್ತ ಠೀವಿಯೊಳಿದೆ (ಭರತ. ೪-೯) ; ಲಾಭಮಾವಡೆಯೊಳ್ ಪೆಱವೇಟ್ಕುಮೆಂಬುದನ್ ಕಂಡಱಿತು. ಇನ್ ಮುಂದೆ ನೀಮ್ ಕಳ್ವಿರಂತೆ (ಅಂತಿಗೂ. ೧೩-೨೮೮). ೩. ಹೊಣೆಯನ್ನು ಒಪ್ಪಿಕೊಳ್ಳು ; ಹೊರು : ಅಗ್ಗಳಾಅರಸರಾ ಬೆಸಸಿದೊಡೆ ಬೆಸನ ಪೆತ್ತುರ್ಬಿ ಬಲಮಾನ್ತಾಳ್ದಿ ಎಱದು ಬಿಟ್ಟರ್ (ಎಕ. X (S). ಪೌರಂಗ್. ೬೬.೭; ಸು. 820) ; ಮಿಕ್ಕ ಬೆಸನಂ ತ್ರೈಳೋಕ್ಯಮಲ್ಲಂ ಜಯಶ್ರೀಗೇಹಂ ಕುಡೆ ಪೆತ್ತು ಶೌಚಗುಣ ದಕ್ಷಂ ಸ್ವಾಮಿಭಕ್ತಂ ಯಶಶ್ರೀನಾವಾಸ ಮೆನಲ್ಕೆ ಸಂದ ನರರಾರ್ (ನಾಂದೇಡ್. ೩-೦೨ ; 1047). ೪. ಹಡೆ : ಪ್ರಸವಿಸು : "ಪೆಱು—ಉಪಲಬ್ಧೌ (ಸಂಪಾದಿಸು). ಪ್ರಸೂತೇ ಚ" (ಶಸುಧಾ) : ಮತ್ತಾತನಿಂ ಬಱಿಯುಂ ಪೆಣ್ಗೂಸುಮಂ ಪೆತ್ತೊಡೆ ಅಕೆಗೆ ವೀರಶ್ರೀಯೆಂದೆ ಪೆಸರನಿಟ್ಟು (ವಡ್ಡಾರಾ. ೦೦೬-೦೩) ; ಭಾಸ್ವನ್ನಾಭಿರಾಜಾಂಗನೆ . . . ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್ (ಅದಿಪು. ೭-೩೬) ; ತರುವೇ ಪಣ್ಗಳ ಮೆಲ್ಲೆ ಮಾತೆ ವಿಷಮಂ ಪೆತ್ತರ್ಭಕಂ ಗೂಡಿಸಲ್ ಹರ ಕೊಲ್ಲಲ್ ಪರ ಕಾಯ್ವನೇ (ಸೋಮೇಶ. ೨೯). ೫. ಸೃಷ್ಟಿಸು ; ಉತ್ಪತ್ತಿಮಾಡು : ದ್ಯುನದೀಕಂಜಾಳಿಗೆಟ್ಟರ್ಪಳಿ ಸಮುದಯವೋ. . .ತಿಗ್ಮನಿದಾಘೋರ್ವೀಜಮಂ ತೂಳ್ದಿಸಲನಿಲಪಥಶ್ರೀ ಪೆಱುತ್ತಿರ್ಪ ಭಾನೀಕಿನಿಯೋ ಪೇಟೆಂಬಿನಂ ಪೊಣ್ಮೆದುದೆಸೆವಸಿತೋತ್ತಾನ ಮೇಘಪ್ರತಾನಂ (ಕುಸುಮಾ. ೬-೯) ; ನಡುಗಣ್ಣಿನಿಂದ ಬೀರನ ಪೆತ್ತು ಕಳುಪೆ (ಭಾವತಂ. ೩-೦೩) ; ಮಗನಂ ಪೆಱವಂಗೆ ಸಗ್ಗಿಗರ್ ಬಾಗಿಲಂ ತೆಱೆಯರೆಂಬರಲ್ತೆ ! (ರಾಮಾಶ್ವ. ೦೦೪-೨೭). ೬. ಹೊರಸೂಸು ; ಹೊರಚೆಲ್ಲು ; ಬೀರು : ಕಡುವೊಗರು ಪೆಱುವ ದೊಗಂ ಸುರ್ಬಡರ್ದ ವಾಳಾಗ್ರಂ ಮುಂದುಱುವಾಯ್ದು ತವಕವೊಪ್ಪುವ ಕುಱುಪಿನ ಕುಮರೆಗಳ ನಾರ್ಮ ಬಿಟ್ಟರ್ ಸುಭಟರ್ (ದಶಕು. ೨-೦೮). ೭. (ಪ್ರಾಣಿ, ಪಕ್ಷಿ, ಮುಂತಾದುವು ಮರಿ, ಮೊಟ್ಟೆಗಳನ್ನು) ಇಡು ; ಹಾಕು : ತತ್ತಿಗಳಂ ನೀಂ ಪೆತ್ತಂದು ಚಿಂತಿಸಿಕೊಳ್ವಂ (ಪಂಚತಂ. ೦೩೮-೦೨). ೮. ದೊರಕು ; ದೊರೆ ; ಲಭ್ಯವಾಗು : ಜನನಪ್ರಸ್ತುತಕಾಲದೊಳ್ ಸ್ವಭವನದ್ರೇಕ್ಕಾಣದರ್ಗೋತ್ತಮಾಂಶ ನವಾಂಶೋಪಗತಂ ಸಕೃದ್ದ್ವಿಗುಣಮಂ ವಕ್ರಸ್ಥನಾಗಿರ್ದೊಡಕ್ಕೆ ನಿಜೋಚ್ಚಸ್ಥಿತನಾದೊಡಂ ತ್ರಿಗುಣಮಂ ತಾನೀಗುಂ (ಜಾತಕ. ೮-೩). **ಪೆರು$_1$** : ೪. ಲಕ್ಷ್ಮಣಂ ಶತ್ರುಘ್ನರೆಂಬವಳಿಮಕ್ಕಳ್ಗಳು ಪೆತ್ತಳ್ ಸುಮಿತ್ರೆ (ಶ್ರೀರಾಮಾ. ೧೬-೪೨೨). **ಹೆರು$_1$** : ೪. ಈ ರೀತಿಯಾಗಿ ಕೊಲೆಗೀಡುಮಾಡಬೇಕಾದ ಮಕ್ಕಳನ್ನು ಹೆರುವ ಬಸಿರು ಬೇಡ (ಪಾರಾಕ್ಯ. ೩೯) ; ಹನ್ನೆರಡು ಹೆತ್ತು ಎರಡು ಉಳಿಸಿಕೊಂಡಿದ್ದ ತಾಯಿ ಅವಳು. ಸತ್ತರೆ ಇನ್ನೊಂದು ಹೆತ್ತೇನು ಎನ್ನುವ ಎದೆಗಾರಿಕೆ ಅವಳಲ್ಲಿತ್ತು ! (ಮುಂಗಾಮು. ೨೩). **ಹೆಱು$_1$** : ೪. ಭರತಸಂತಾನಕ್ಕೆ ಕುಮಾರರ ಹೆಱುವೆ ನಾಮುನ್ನೆಂದು ಗರ್ಭವ ಧರಿಸಿದೆನು (ಕುಪ್ಯಾಅ. ೪-೪೪) ; ಅರಗಿಳಿಯೆಂಬಂತೆ ನುಡಿವಳು ಕೋಕಿಲಸ್ವರದಿಂದೆ ಕೂಗುವಳೊಡನೆ ಪೊರೆವಳು ಪೆಣ್ದುಂಬಿಯೆನೆ ಹೆಱಲಾಱದೆ ನರಳುವಳಬುಜಾಯತಾಕ್ಷಿ (ಪೋಹತ ೧೭-೧೪). ೫. ಹೆತ್ತ ನಿನ್ನೊಡಲಿಂಗೆ ತಂಪಿನ ತೆತ್ತಿಗನೊ ದೇಣ್ ಬಹಳತಾಪದ ಮುತ್ತಯನೊ ಕುರುರಾಯನೆಲೆ ಧೃತರಾಷ್ಟ್ರ ಕೇಳೆಂದ (ಕುಪ್ಯಾಪ್ರೋ. ೪-೨) ; ಸಾಮಾನ್ಯವೇ ಮನದ ಉತ್ತಮಿಕೆ ಲೇಸಾಪ್ತನಹ ಹಗೆ ಸತ್ತನೀತನ ಕಯ್ಯ ಮಕ್ಕಳ ಹೆತ್ತರೀತನ ಹೆಸರಿಡಲುಬೇಕೆಂದನಾ ರವಿಜ (ತೊರಣಾ. ೪-೩-೨೦). ೬. ಅಂಗಜ ಪಂಚಫಣೋರಗನಾ ದಿವ್ಯಾಂಗದೊಳುದ್ಭವಿಸಿದ ಕಿಱುಮುತ್ತಿನ ಜಂಗುಳಿಯಂ ತದ್ವದನಂಗಳಿನೋವದೆ ಹೆಱುವಂದದೊಳು (ಜಯಕಾ. ೮-೩೭).

ಪೆತ್ತ ಜಯನ್ = ಜಯವನ್ನು ಹೊಂದಿದವನು ; ವಿಜಯಿ : ಸೇನ್ಪ್ರಕ ಬಣೋಭಯದೇಶದಾ ವೀರಾಪುರುಷಸಮಕ್ಷದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತ ಜಯನಾ ವಿಜ ಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮುಂಬಿವಳ್ಳಿಉಂ ಕೊಟ್ಟಾರ್ (ಪ್ಯುಅಂ. ೦೯೩೬ ೦೬-೦೦; ಸು. 450). **ಪೆತ್ತ ತಂದೆ, ಹೆತ್ತ ತಂದೆ** = ಜನ್ಮ ನೀಡಿದವನು ; ಹಡೆದ ತಂದೆ ; ಜನಕ : ಸತ್ಯದೇವನ ಪೆತ್ತ ತಂದೆ ಸತ್ಯಕಂ ತನ್ನ ಮಗನನಱಸುತ್ತುಂ ಬಂದಲ್ಲಿ ಕಂಡು (ಹಾವುಂಪು. ೬೩) ; ಗಂಧೇಭಗಮನೆ ಚಿತ್ತವಿಸು ನಿನ್ನಯ ಹೆತ್ತ ತಂದೆ ಬೀಳ್ಕೊಟ್ಟ ಧೂರ್ಜಟಿಗೆ ಸಂದೇಹವಿಲ್ಲದೆ ಶರಣೆಂದು ಬರ್ಪೆವೇಳೆ ದೆನಲವಳು ಹಿಗ್ಗಿದಳು (ಪೋಹತ.೨೩ ೬). **ಪೆತ್ತ ತಾಯ್, ಹೆತ್ತ ತಾಯ್, ಹೆತ್ತ ತಾಯಿ, ಹೆತ್ತಾಯಿ** = ಹಡೆದವಳು ; ಹಡೆದ ತಾಯಿ : ವನಿತೆಯುಮಂ ನಂಟರುಮಂ ಜನಕನುಮಂ ಪೆತ್ತ ತಾಯುಮಂ ವೃತ್ತಿಯುಮಂ ಮನಮುರಿದು ತೊಱೆದು ತಪಕಂ ತನುವಂ ತಂದೊಡ್ಡಿ (ಧರ್ಮಪ್ರಾ. ೬-೬೯) ; ಹೆತ್ತ ತಾಯಂ ಮಾಱೆ ತೊತ್ತ ಕೊಂಬರೆ (ಹತಕಾ. ೮ ೭೬) ; ಹೆತ್ತ ತಾಯಿಗೆ ವಂದಿಸುತ ನಾಂ ಪೊತ್ತ ಹಿಂದಣ ಕೆಲಸವಿಂದಾಯಿತ್ತೆ ಎಂದುತ್ತಮೆಯ ಕೃಪೆಯಂ ಪಡೆದು (ಬಸಪು. ೬೦-೩೪) ; ಸಂತೋಷದಿಂದ ನಾರದ ಕಂತುವಿನ ಹೆತ್ತಾಯಿಗೆ ಅಂತರಂಗದ ಮಾತುಗಳನಾಡುತಿದ್ದನು (ಶ್ರೀಕೃಪಾ. ೩). **ಪೆತ್ತ ಮಗ, ಹೆತ್ತ ಮಗ** = ತಾನು ಜನ್ಮಕೊಟ್ಟ ಮಗ ; ಸ್ವಂತ ಮಗ : ಕೃತಾಂತನುಯ್ದ ಸುತರಂ ಪಡೆದೀಯೆಮಗೆಂದು ಕಾಂತೆಯರ್ ನುಡಿದಪರೆನ್ನ ಪೆತ್ತ ಮಗನಂ ಪಡೆದೀಯೆನಗೆಂದು ಪಾರ್ವನುಂ ನುಡಿದಪಂ (ಅಪಪು. ೦೦-೩೨) ; ಹೆತ್ತ ಮಗನಂತೆಯೆ ಅವನನ್ನು ಸಾಕಿದರು (ರೂಢಿ). **ಪೆತ್ತಯ್ಯ, ಹೆತ್ತಯ್ಯ** = ೧.

ಹೆತ್ತ ತಂದೆ : ಆರ್ಮೊಗನಂ ಪೆತ್ತಯ್ಯಂ ಕೂರ್ಮೆಯಿನುಸುರಲ್ಕೆ ಸಂತಸದಿಂ (ಕ್ರೀಮಹಾ. ೯-೨); ಆ ಕಣ್ದೆಱವಾದ ನಿಕ್ಷೇಪವ ದೃಷ್ಟಿ ಮುಟ್ಟಿದಡೆ ಅಲ್ಲಿ ನಮ್ಮ ಹೆತ್ತಯ್ಯನ ಹೊಳವ ಕಂಡು ತಳವೆಳಗಾದನು ಕಾಣಾ (ದೇರಾವ. ೦೩-೨೦). ೨. ತಂದೆಯ ತಂದೆ ; ಅಜ್ಜ ; ತಾತ : ಬಸವನಾಲ ವಿದೆಂಬುದೇತಕೆ ಹೆಸರು ಬಂದಿತ್ತುಸುರಿ ನೀವೆನೆ . . . ಒಸೆದು ಹೆತ್ತಯ್ಯಂಗಳಿಂದಾಲಿಸಿದೆನೆಂದೆಮ್ಮಯ್ಯನೊಲವಿಂ ಶಿಶುಗಳಪ್ಪೆಮ್ಮೆಲ್ಲರಿಗೆ ಹೇಳಿದನು (ಬಸಪು. ೩೨-೦೯); ನಮ್ಮ ಹೆತ್ತಯ್ಯನು . . . ನಮ್ಮನ್ನು ಕೂರಿಸಿಕೊಂಡು ಪ್ರಸ್ತಾಪ ಬಂದಾಗ ಹಳೇ ಕಥೆಯನ್ನೆಲ್ಲಾ ಹೇಳುತ್ತಿದ್ದರು (ಮಹಮಾಂ. ೦೦೬). ಪೆತ್ತವರ್, ಪೆತ್ತರ್, ಪೆತ್ತವರು, ಹೆತ್ತವರು, ಹೆತ್ತೋರು (ಬಹುವ) = ೧. ಪಡೆದವರು ; ಹೊಂದಿದವರು : ಇತ್ತರ್ಗಿತ್ತ ಧನಮೇನದು ನಿಲ್ವುದೆ ಮುನ್ನಮಿತ್ತರೆಲ್ಲಿದರಿವರೀಯೆ ಪೆತ್ತವರುಮೆಲ್ಲಿದರಾ ಧನಮೆಲ್ಲಿತಿಂದ್ರಜಾಲದ ಸಿರಿಗೇಕೆ ಮೆಟ್ಟಿಡುವಿರೆಂದೊರೆದಂ ಕವಿಕುಂಜರಾಂಕುಶಂ (ಗರಾಯು. ೦-೩೩). ೨. ಹಡೆದವರು ; ಜನ್ಮ ನೀಡಿದವರು; ತಾಯಿ ತಂದೆಗಳು : ಜಿನಪೂಜೆಗಳಂ ಮಾಡದೆ ಮುನಿಗಳ್ಗಾಹಾರದಾನಮಂ ಮಾಡದೆ ಭೋಂಕನೆ ಪೋಗಲಾಗ ಮಗಳೇ ಮನಕತಮಂ ಮಾಡಿ ಪೆತ್ತವರ್ಮಱುಗುವಿನಂ (ರರ್ಮಾಮ್ಯ. ೩-೨೨೪); ಬೇವಸಂಗಳಿಲ್ಲಮಱ್ ಸದಾ ವಯಸ್ಸಿನಿಂದಲೆಸವ ಕೋವಿದಂಗೆ ಪೆತ್ತರಿತ್ತರೆನ್ನ (ಮಹಾದೇ. ಬ. ೦೩೦-೨); ತಂದಪಂ ಕುಲದ ಕೀರ್ತಿಗೆ ದಿವಾದೀಪ್ತಿಯಂ, ಮೇಣೆನ್ನನೊಲ್ದು ಪೆತ್ತರ್ಗೆ ಸಂತೃಪ್ತಿಯಂ! (ಪತ್ರಾಂಗ. ೬೦-೦೬೪೦); ತನ್ನ ಪೆತ್ತವರು ಮಿಗಿಲು ತನ್ನವರೊಳ್ ತನ್ನ ಪೆತ್ತವರಿಗೆ ಮಿಗಿಲು ತನ್ನಿನಿಯನ ಪೆತ್ತವರು (ಹರಿಬಿ. ೪-೪); ಹಳಿವು ಹೊದ್ದದೆ ಹೆತ್ತವರು ಮಕ್ಕಳುಗಳೆಂಬೀ ಬದುಕು ಮಾಣದೆಯೆಳಸಿ ಕೊಂಬಂತಾಯಿತೆಂದಳು ಪಾಂಡವರ ರಾಣಿ (ಕುಪ್ಯಾದಿ. ೨-೨೩); ಹೆತ್ತವರಿಗೆ ಹೆಗ್ಗಣ ಮುದ್ದು, ರೂಡಿದವರಿಗೆ ಕೋಡಗ ಮುದ್ದು (ಗಾದೆ) ; ನಿತ್ಯಾನಂದ ರಜತಾಚಲವಾಸನೆ ಭಕ್ತವತ್ಸಲ ಭಾಳನೇತ್ರ ಹೆತ್ತೋರ ಮನೆದೈವ ಶ್ರೀಮೈಲಾರಗೆ ಹಸ್ತವ ಮುಗಿದು ವಂದಿಸುವೆ (ಕಂದ್ರಹಾ. ೦-೩). ಹೆತ್ತ ಕರುಳು = ೧. (ಆಲಂ) ತಾಯಿಯ ಕರುಳು ; ಮಮತೆಯ ಹೃದಯ : ಹೆತ್ತ ಕರುಳಾದ್ದರಿಂದ ಮಕ್ಕಳ ಸಂಕಟ ನೋಡಲಾರದೆ ಅವಳು ಕೂಲಿಕೆಲಸ ಮಾಡಿ ನಾಲ್ಕು ಕಾಸು ಸಂಪಾದಿಸಿ ಸಾಕುತ್ತಾ ಇದ್ದಾಳೆ (ರೂಡಿ). ೨. ತನ್ನಿಂದಾದ ಸಂತಾನ : ಮಕ್ಕಳಿರ, ಅಕ್ಕರೆಯ ಮಕ್ಕಳ, ಹೆತ್ತ ಕರುಳನು ಮರೆವೆನೆ? (ಹೊಂಗಳು. ೨-೯). ಹೆತ್ತಪ್ಪ = ೧. ಹಡೆದ ತಂದೆ. ೨. ಅಜ್ಜ ; ತಾತ : ಶತಬಲನೆಂಬ ನಿಮ್ಮ ಹೆತ್ತಪ್ಪನು ಬಹುಕಾಲ ರಾಜ್ಯವನ್ನಾಳಿ ಅಂತ್ಯದೊಳ್ ರಾಜ್ಯ ಭೋಗದೊಳ್ ನಿಸ್ಪೃಹನಾಗಿ ನಿಮ್ಮ ತಂದೆಯವರಿಗೆ ರಾಜ್ಯವಂ ಕೊಟ್ಟು ಅನಶನಾದಿ ಯೋಗದಿಂ ತನುವಂ ತ್ಯಜಿಸಿ (ಪುರುಷ. ೨೨). ಹೆತ್ತ ಮನೆ = ಬಾಣಂತಿಯ ಮನೆ ; ಹೆರಿಗೆ ಮನೆ ; ಸೂತಿಕಾಗೃಹ : "ಆರಿಷ್ಟಗೃಹಂ, ಸೂತಿಕಾಭವನಂ—ಈ ೨ ಹೆತ್ತ ಮನೆ" (ಹಲಾಯು. ೬೨-೩೪೩). ಹೆತ್ತ ಮುತ್ತ = ಹೆತ್ತಪ್ಪ ೨ : ಛತ್ರ ಚಾಮರ ಹೆತ್ತ ಮುತ್ತರ ಬಿರುದ ಬಿಟ್ಟಳುತಳುತಲೋಡಿದನು (ಶರಂ. ೩೬೨-೪೦). ಹೆತ್ತಮ್ಮ = ೧. ತಾಯಿ ; ಅಮ್ಮ : ಹೆತ್ತಮ್ಮನಿಗೆ ಹೆಗ್ಗಣವೂ ಮುದ್ದು (ಈಕಥ. ೧೩೩). ೨. ತಾಯಿಯ ತಾಯಿ ; ಅಜ್ಜಿ : (ಕಿ). ಹೆತ್ತ ಸೂತಕ = ಹೆರಿಗೆಯ ಮೈಲಿಗೆ; ಪುರುಡು : ಹೆತ್ತ ಸೂತಕ ಹತ್ತು ದಿನಗಳಿಗೆ ಪರಿಹಾರ ಮೃತ್ಯುಸೂತಕವು ಹನ್ನೊಂದು ದಿನಕೆ ಮತ್ತೆ ಋಣಸೂತಕವು ಜನ್ಮಜನ್ಮಾಂತರಕೆ ಎತ್ತೆತ್ತಲೂ ಬೆನ್ನು ಹತ್ತಿಕೊಂಡಿಹುದು (ಕುಪು. ೨೩-೪). ಹೆತ್ತೊಡಲು = (ಆಲಂ) ಹಡೆದ ಹೊಟ್ಟೆ ; ತಾಯಿಯ ಹೃದಯ : ಕೊಟ್ಟ ಹೆಣ್ಣು ಕುಲಕ್ಕೆ ಹೊರಗಾದರೂ ಹೆತ್ತೊಡಲಿಗೆ ಅವಳ ಚಿಂತನೆ ತಪ್ಪಿದ್ದೆಂದು? (ಹೊಸಕ್ಷಿ. ೦೭).

[ದೇ.॥ ತಮಿ. ಮಲ. ಪೆಱು; ತುಳು. ಪೆಡ್ಡು; ಕೊಡ. ಪೆರ್; ತೆಲು. ಪೆಟ್ಟು ; ಕೋಲಾ. ಪೆಟ್, ಪೆಟ್ಟ್ ; ನಾಯ್ಕಿ. ಪೆಟ್ಟ್ ; ಪರ್ಜಿ. ಪೆಡ್]

ಪೆಱು$_2$, ಹೆರು$_2$, ಹೆರೆ$_1$, ಹೆಱು$_2$, ಹೆಱ್$_1$ (ಕ್ರಿ). ಪೆತ್ತ$_2$, ಹೆತ್ತ$_2$, ಹೆರ್ತ (ಭೂತಕೃ). ಪೆತ್ತು$_2$, ಹೆತ್ತು$_2$, ಹೆರ್ತು (ಭೂತನ್ಯೂ). ಗಟ್ಟಿಯಾಗು ; ಹೆಪ್ಪುಗಟ್ಟು ; ಹೆಪ್ಪಾಗು : "ಪ್ರಸೂತಾಜ್ಯಗಟ್ಟಿಗಳೊಳು ಪೆಱು" (ಶಬ್ದಮಂ. ೧೦೬); ಪೆತ್ತ ತುಪ್ಪದಿನೆತ್ತಂ ತೀವಿದ ಕೊಡದಂತಿರ್ದುವು (ಅಕಪು. ೦೦-೩೬) ; ವಿದಳಿಸೆ ಘನದಂತಿ ಬಿಸಿಲ್ಗುದುರೆಗಳಂ ಪನಿತು ಪೆತ್ತನೆತ್ತರ ಪನಿಯಂದದಿನಲ್ಲಲ್ಲಿಗೆ ಕಣ್ಗೊಳಿಸಿದತ್ತು ಕಾರ್ಮುಕದೊಳಿಂದ್ರಗೋಪಕಳಾಪು (ಜಗದಿ. ೪-೧೩). ಹೆರು$_2$: ನೀರು ಹೆರ್ತು ಬರ್ಫವಾಯಿತೆಂದರೆ ಅದರ ಆಕಾರವು ಬೆಳೆಯುತ್ತದೆ. ಹೆರ್ತ ತುಪ್ಪವನ್ನು ಕಾಸಿದರೆ ಅದು ಪ್ರವಾಹಿಯಾಗುತ್ತದೆ (ಮುಂಬಯಿ. ೩-೦೦೬); ಕೊಬ್ರಿಯೆಣ್ಣೆ ತಂಪಾಯಿತೆಂದರೆ ಹೆರುತ್ತದೆ (ಮುಂಬಯಿ. ೩-೦೨೦). ಹೆರೆ$_1$: ಉಷ್ಣಮಾಪಕಯಂತ್ರ-ಇದರೊಳಗಿನ ಪಾರಜವು ಶೂನ್ಯಸ್ಥಾನದಲ್ಲಿ ಇದ್ದಾಗ ನೀರು ಹೆರೆಯುತ್ತದೆ (ಮುಂಬಯಿ. ೩-೦೦೭) ; ಉಷ್ಣಮಾಪಕಯಂತ್ರದಲ್ಲಿ ನೀರು ಹೆರೆಯುವಾಗ ಅದರ ಉಷ್ಣತೆಯನ್ನು ತೋರಿಸಲಿಕ್ಕೆ ಶೂನ್ಯವು ಬರೆದಿರುತ್ತದೆ (ಮುಂಬಯಿ. ೩-೦೩೩). ಹೆಱು$_2$: ಅರೆದಲೆಬೇನೆಗೀಶ್ವರಿಯ ಮೂಲದ ನಸ್ಯಮನುಗ್ರಪನ್ನಗೋತ್ಕರದ ವಿಷಕ್ಕೆ ಮತ್ತದಱ ಬೇರೊಡನೊಂದಿರೆ ಹೆತ್ತ ತುಪ್ಪಮಂ . . . ಪ್ರಯೋಗಿಸುತ್ತಿರೆ ಪೆಱತೇನಿದೊಂದೆ ಕಳೆದಿಕ್ಕುಗುಮಾವಗಮಂತವೆಲ್ಲಮಂ (ಲೋಕೋಪ. ೯-೬೩) ; ಹೆತ್ತ ಹಾಲಿನ ಕೆನೆಯ ತೆಗೆದು (ಸೂಪಶಾ. ೨-೦೦). ಹೆಱ್$_1$: ಕರಗಿದ ತುಪ್ಪ ಹೆಱ್ವಂತೆ ಜವ್ವನವು ತಿರುಗಿ ಬಂದಿಹುದೆ (ಸರ್ವಜ್ಞ. ೦೬೦೩).

ಹೆತ್ತುಪ್ಪ = ಗಟ್ಟಿಯಾದ ತುಪ್ಪ ; ಹೆಪ್ಪುಗಟ್ಟಿದ ತುಪ್ಪ : ಬತ್ತಿ ಹೆತ್ತುಪ್ಪವನು ಹೊತ್ತಿಸಿದ ಫಲವೇನು ಮತ್ತೊಂದು ದೈವಕೆಱಗುವನ ಶಿವಪೂಜೆ ಹತ್ತಿಗೇಡೆಂದ (ಸರ್ವಜ್ಞ. ೦೭೨).

[ದೇ. ॥ ತಮಿ. ಪೆರು; ಮಲ. ಪಿರನ್ನು; ತೆಲು. ಪೇರು, ಪೇಱು]

ಪೆಱುಕು, ಹೆಕ್ಕು$_2$, ಹೆರಕು (ಕ್ರಿ). ೧. ಆರಿಸು ; ಆಯು ; ಹಿಕ್ಕು : ಈತನಂಗಡಿಯಲವಡಂ ಪೆಱುಕಿ ತಿಂದು ಬಾಟ್ವೊಂ (ಪಡ್ಕಾರಾ. ೪೬-೭). ಹೆಕ್ಕು$_2$: ೧. ಕೆಳಗೆ ಬಿದ್ದ ಹೂಗಳನ್ನು ಹೆಕ್ಕಲು ಆರಂಭಿಸಿದಳು (ಮೃಜಲ. ೦೦೩) ; ಅವಳು . . . ಉತ್ತಮವಾದ ಪಟ್ಟೆವಸ್ತ್ರಗಳನ್ನು ಹೆಕ್ಕಿ ತೆಗೆದಳು (ಹಾಹುತ್ತ. ೪೦). ೨. ಕೆದಕು ; ಬೆದಕು : ಸತ್ತವರ ತಪ್ಪನ್ನು ಹೆಕ್ಕಿ ಏನು ಪ್ರಯೋಜನ? (ಸಂಸ್ಕಾರ. ೦೦) ; ಅವಳು ತನ್ನ ನೆನಹುಗಳನ್ನು ಹೆಕ್ಕಿ ಶೋಧಿಸತೊಡಗಿದಳು (ಪಡೆದಾ. II, ೦೦೨೯). 'ಪಿಕ್ಕು$_1$' ಪರಾ. ಹೆರಕು : ೧. ಬಡನಡುವಿನಬಲೆಯರ್ . . . ಕರಿಯ ಕುಂಭಸ್ಥಳದ ಮುಕ್ತಾಫಲಂಗಳಂ ಹುಡುಕುತ್ತ ಹೆರಕುತ್ತ ಇನ್ನೆಲ್ಲಿಹರೊ ಕಾಣೆ (ಕಂದ್ರಸ. ೨೯-೦೨) ; ಗುತ್ತಿ ಅದನ್ನು ಹೆರಕಿಕೊಂಡು . . . ಕೆಲಸಕ್ಕೆ ತೊಡಗಿದನು (ಮಲೆಮ. ೭೪). ೨. ಇದು ನಿಜವಾಗಿ ತನ್ನ ಲೇಖನವೆ? ಅವರಿವರ ಎಂಜಲನ್ನು ಬೋಜಣ್ಣ ಜನಪ್ರಿಯವಾಗಲೆಂದು ಹೆರಕಿ ಬರೆದಿದ್ದಲ್ಲವೆ (ಪ್ರಶ್ನೆ. ೦೦). ೩. (ಹಲ್ಲಿನಿಂದ) ಗೋರು,—ಕವರು : "ಈಷತಿ = ಹಲ್ಲಿಂ ಹೆರಕಿದಪಂ" (ಕಾಶಕ್ಕ. ೩೭). 'ಹೆರಕುಗ' ಪರಾ.

ಹೆಕ್ಕುಹೆಕ್ಕು (ದ್ವಿರುಕ್ತಿ) : ಮರದ ಬುಡದಲ್ಲಿ ಮಾವಿನ ಕಾಯಿಗಳಂತೆ ಹಸುರಾಗಿ ಪವಡಿಸಿದ್ದ ನೂರಾರು ಗಿಳಿಗಳನ್ನು ಹೆಕ್ಕಿಹೆಕ್ಕಿ ತನ್ನ ಜೋಳಿಗೆಯಲ್ಲಿ ತುಂಬಿಕೊಂಡನು (ವಾಗಳಾ. ೫); ಅಶೋಕನಿಗೆ . . . ಹೆಕ್ಕಿಹೆಕ್ಕಿ ಕೆಳುವ ಪ್ರಶ್ನೆಗಳು ಸರಿದೋರಲಿಲ್ಲ (ಮೃಜಲ. ೩೬). ಹೆಕ್ಕಿಕೊಳ್ಳು = ಆರಿಸಿಕೊಳ್ಳು ; ಆಯ್ದುಕೊಳ್ಳು : ಎಲ್ಲಿಂದಲೋ ಹೇಗೋ ನಾಲ್ಕು ಅಕ್ಷರಗಳನ್ನು ಹೆಕ್ಕಿಕೊಂಡು ಪ್ರಸಂಗಗಳನ್ನು ಓದುವುದಕ್ಕೆ ಕಲಿತ (ದೇವಮ. ೪೦) ; ಆಗ ಆ ರಕ್ಕಸನೇ ಆ ಎಂಟೂ ನೋಟುಗಳನ್ನು ಹೆಕ್ಕಿ

ಕೊಂಡನು (ಹಳ್ಳಿಹಾ. ೬೩).

[ದೇ. ॥ ತಮಿ. ಪೆಱುಕ್ಕು, ಪೊಱುಕ್ಕು; ಮಲ. ಪೆಱುಕ್ಕು; ತುಳು. ಪೆಜ್ಜು; ಕೊಡ. ಪೊರೀಕ್; ತೊದ. ಪೆಱ್ಕ್; ಕೋಲಾ. ಪೆತ್ಕ್; ಕಾಯ್ಕಿ. ಪೆತ್ತ್; ಪರ್ಜಿ. ಪೆಡ್, ಪೆತ್, ಪೆತ್ಕ್; ಕೊಂಡ. ಪೆಱ್]

ಪೆಱ್, ಪೆರ್$_1$, ಹೆರ್$_5$, ಹೆಱ್$_3$ (ನಾ). ೧. ಚಂದ್ರ; ಶಶಿ: "ಚಳಿಗದಿರ ಸವಿಗಡಲಣುಗ . . . ಚಂದಿರಂ ಪೆಱ್‌ಯು . . . ಬಿದುವೆಫಲ್ ಚಂದ್ರನಾಮ" (ಕಬ್ಬಿಸುಂ. ೦೭); ಪೆಱ್‌ಗಿವೆ ಪೊಣ್ಮಿದತ್ತಮೃತಬಿಂದುಗಳೆಂಬಿನೆಗಂ ಲಲಾಟದೊಳ್ . . . ಘನಘರ್ಮಬಿಂದುಗಳ್ ಪೊಱಮಡೆ (ಕಾದಂಪೂ. ೬೯); ಪೋಲ್ತಳ್ ಕಳೆದುಡುಗಣಮಂ ಕೆಮ್ಮುಗಿಲೆಳಸಿದ ಪೆಱ್ ಪೊಳೆವ ಪೂರ್ವದಿಗ್ದೇವತೆಯಂ (ಪುಷ್ಪಪು. ೩-೦೦೬); ಲಲಾಟದೊಳ್ ಮೃಗಮದಬಿಂದುವಂ ಪೆಱ್‌ಗೆ ನುಣ್ಗಱ್‌ಯಂ ಪಡೆವಂತೆ ತಿರ್ದಿದಳ್ (ಕಾವ್ಯಸಾ. ೬೩೪). ೨. ಅರ್ಧಚಂದ್ರ: "ಪೆಱ್ ಸೋಮಾರ್ಧಾಂಶದೊಳ್" (ಕರ್ಣಾಪ. ೪೦); ಕಣ್ಬೆಲ್ ಕಱ್ ಪೆಱ್ ನೊಸಲೊಳ್ ಚಂಡದೋರ್ದಂಡದೊಳ್ ಕಂಧರದೊಳ್ ತನ್ನುತ್ತಮಾಂಗಾಂತರದೊಳೆಸೆಯೆ ನಿಂದಾಂತನಾಚಾರ್ಯಪುತ್ರಂ (ಪಂಪಭಾ. ೦೨-೬೫); ಕೊರಲ ಕಱ್ ಶಿರದ ಪೆಱ್ ನೊಸಲುರಿಗಣ್ ಧೃತಚಾಪಹಸ್ತ ಶಾಕ್ವರಚಿಹ್ನಂ ವಿರಚಿಸೆ . . . ಮುಳಿದು ಬಂದನಶ್ವತ್ಥಾಮಂ (ಗದಾಯು. ೯-೨); ಪೆಱ್‌ಯಂತೆ ರಾರಾಜಿಪ ನೊಸಲೆಲ್ಲಿ (ಪೋಹಶ. ೬-೬). ಪೆರ್$_1$: ೧. "ಉಡುರಾಜನಕ್ಕು ಪೆರೆಯೆನಲು" (ಕಶಿ. ೬೬); ಪೆರೆಯ ಬೆಳ್ದಿಂಗಳಿಂ ಪುದಿದ ಕರುಮಾಡಗಳ ಶರದಮಂಡಲವನಂಟುತೆ ಸುಧಾಲೇಪ ಪಾಂಡುರಮೆನಿಸಿದುತ್ತುಂಗಶಿಖರಭಾಗಂ ಪೊಳೆಯೆ (ಶೇಷರಾ. ೩-೦೨); ಕಲ್ಪನೆ ಹಾರಿತು ಪೆರೆಯನ್ನೇರಿ, ಹಿಗ್ಗು ಊದುತಿರೆ ತುತ್ತೂರಿ (ಅರಳು. ೩೩೯-೦೩). ೨. ಕುಡುವಿಲ್ಲಂ ವಿರಹಿಗಳಂ ಸುಡೆ ತೆಗೆದಾಗ್ನೇಯಬಾಣಮೆನೆ ಪೆರೆ ಕರೆ ಸಂಗಡಿಸಿದ ಧೂಮಾಂಕುರಮೆನೆ (ಪಸುಸ್ವ. ೩-೪೦); ಗಗನತಲೆನವಿರಾಗೆ ಪೆರೆ ತಾರೆ ಹೂವಾಗೆ . . . ನಗುನಗುವ ಬೊಬ್ಬಿಡುವ ಜೀವತಾಂಡವ ರಸಿಕ ಭಗವಂತ ಶಿವರುದ್ರ (ಸುಂಕುಳ. ೬೬). ಹೆರ್$_5$: ೧. "ಗ್ಲೌ:—ಹೆರೆ" (ಕಾಶಕ್ಕ. ೬೬). ೨. 'ಹೆರೆನೊಸಲು' ಪರಾ. ಹೆಱ್$_3$: ೧. ಭಾನುವಂ ಹೆಱ್‌ಯು ಗೋಕುಲಮಂ . . . ದೇವರ್ಕಳೆಂದಿಂತು ಕೂರ್ತೆಱಗುತ್ತಿರ್ಪವರೇಕೆ ಮುಕ್ತಿ ಪಡೆವರ್ತ್ರೈಲೋಕ್ಯಚೂಡಾಮಣೀ (ಪಸಾರ. ೪೬೯); ಹೆಱ್‌ಯ ರಾಹು ಪಯೋಜವನು ಮಧುಕರವು . . . ಮುಸುಕಿರ್ದುದೆನೆ (ಪೇಪಂಪ. ೦೬-೫೩). ೨. ಮುಡಿಯೊಳು ಹೆಱ್‌ಯುಂಟು ತೊಱ್‌ಯುಂಟು ಜಡೆಯುಂಟು . . . ನೊಸಲ ಕಣ್ಣುಂಟಾತನಂ ತೋಱ್ ಕೊಡಿ (ಸಿದ್ಧರಾ. ೨-೫೭); ಜಡೆಯಾಡಿನೊಳಿದ್ದ ಹೆಱ್‌ಯ ಬಿಡಿಸುವಂದದಿ ದಿವ್ಯಾಮೋದಪುಷ್ಪಂಗಳ ಮುಡಿಸಿದ ಶಿವನ ಮಸ್ತಕದಿ (ಪೋಹಶ. ೨೦-೨೯). ೩. (ಮುಂದಲೆಯಲ್ಲಿ ಧರಿಸುವ) ಅರ್ಧಚಂದ್ರಾಕೃತಿಯ ಒಂದು ಬಗೆಯ ಆಭರಣ; ಚಂದ್ರಮುರು: ಪಡುವಣ ದಿಶಾಂಗನೆಯ ಮುಂದಲೆಯ ಮುತ್ತಿನ ಹೆಱ್‌ಯೊ ಎನಲರ್ಧಚಂದ್ರನಂ ಬಣ್ಣಿಸುವೊಡರಿದು ಕಾವ್ಯಂಗಳೊಳಗೆ (ಹಕಕಾ. ೩-೬೨); ಹೆಱ್ ನೇಸಱಂ ಮುಂಗುರುಳ ಮೇಲೆ ತೆತ್ತಿಸಿ . . . ಅಂಜನವನೆಚ್ಚಿದರು ಪರವೆಗಾ ಸತಿಯರು (ಸೌಂದಪು. ೬-೨೯).

ಪೆಱ್‌ತಲೆದಿವಸ, ಪೆಱತಲೆದಿವಸ = ಚಂದ್ರನು ಸಂಪೂರ್ಣವಾಗಿ ವೃದ್ಧಿಹೊಂದಿರುವ ದಿನ; ಹುಣ್ಣಿಮೆ: ಶ್ರೀರಾಜ್ಯವಿಜಯ ಸಮ್ಬತ್ಸರ ಸತ್ಯವಾಕ್ಯಪೆರ್ಮ್ಮನಡಿಗಳಾಳುತ್ತ ನಾಲ್ಕನೆಯ ವರ್ಷದ ಮಾರ್ಗ್ಗಸಿರಮಾಸದ ಪೆಱ್‌ತಲೆದಿವಸಮಾಗೆ (ಎಕ. III, ಶ್ರೀರಂಗ. ೧೪೬-೪; 904 ?); ಶಕನೃಪಕಾಲಾತೀತಸಮ್ಬತ್ಸರಶತಂಗಳೆಣ್ಬುನೂಱುಪ್ಪತ್ತೊಮ್ಬತ್ತನೆಯ ಶ್ರಾವಣದ ಪೆಱತಲೆದಿವಸಮಾಗೆ (ಎಕ. III, ಮಂಡ್ಯ. ೧೪-೩; 907). **ಪೆಱ್‌ತಲೆದಿವಸ** = ಪೆಱ್‌ತಲೆದಿವಸ: ಮಾಘಮಾಸದ ಪೆಱ್‌ತಲೆದಿವಸಮುಮ್ಮಙ್ಗಳವಾರದನ್ದು . . . ಧಾರೆಯನೆಱ್‌ದು ಕೊಟ್ಟನು (ಎಕ. XV, ಹೊಳೆಪ. ೦೦೯-೬; 871); ಭದ್ರಪದಮಾಸದ ಪೆಱ್‌ತಲೆದಿವಸಮಾಗೆ . . . ತೆರಗಾಲಂ ದೇವಟ್ಟ ಬಿಟ್ಟಳ್ (ಸ್ಕುಲಿ. ೦೯೩೦, ೦೪-೫; ಸು. 882). **ಪೆಱ್‌ಯ ಮುಱಿಗಂ** = "ಅರ್ಧಚಂದ್ರನ ಚೂರಿನಂತಿರುವ ಬಾಣ ?" (ಪಂಪದೀ. ೫೨೪): ಪೆಱ್‌ಯ ಮುಱಿಗಂ ಕಣಕೆನೆವೋಪಂ[ಬು] ಕವಲ[ಂಬುವೆಂ]ಬಂಕದಂಬೆತ್ತ[ಲುಂ] ತುಱುಗಿ ನಡುವಿನಂ ಸಾರ್ದು ಸಾರ್ದೆಚ್ಚೆಚ್ಚುಕಾದಿದರತಿರಥರೊಂದು ಜಾವಂ (ಪಂಪಭಾ. ೦೩-೩೯). 'ಪೆಱ್‌ಯಂಬು' ಪರಾ. **ಪೆಱ್‌ಯಾದಿ** = ಶುಕ್ಲಪಕ್ಷದ ಮೊದಲ ತಿಥಿ; ಶುಕ್ಲಪಾಡ್ಯಮಿ (?): ಇಪ್ಪತ್ತೊಂಬತನೆಯ ಚಯಿತ್ರಮಾಸದ ಪೆಱ್‌ಯಾದಿಯಾಗೆ ಎಱ್‌ಯಪ್ಪರಸರ ಮಗ . . . ಅಱ್ಮಿ ಸತ್ತಂ (ಎಕ. IX, ಕಾವಳಾ. ೪೬-೪; 899 ?). **ಪೆಱ್ ಸೂಡಿದಂ, ಹೆಱ್ ಸೂಡಿದು** = ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಚಂದ್ರಚೂಡ; ಶಿವ: ಪಿಚ್ಚನೇ ಪೆಱ್ ಸೂಡಿದನೆ ಪರಮ ಪಶುಪತಿಯೆ (ಪಂಪರಾ. ೭-೦೪೭); ಹೆಱ್[ಪಾಕಾಂ. ಪೆಱ್] ಸೂಡಿದನ ಮನವನೀ ತೆಱದಿಂದಂ ಸುತ್ತುವಳ್ ಭವಾನಿಯೆನಿಪ್ಪಾ ತೆಱನಂ ತೋಱುವ ತೆಱದಿಂ ಮೆಱ್‌ವುಡಿಗೆಯ ಮೇಲೆ ಸುತ್ತಿದುಡೆವಣಿ ತೋರ್ಕುಂ (ಗಿರಿಕ. ೩-೬೬). **ಹೆಱ್‌ಚಂದ್ರಮ** = ಪೆಱ್ ೩: ಮಿಱುಗುವ ಕಾರ್ಮುಗಿಲೆಡೆಯೊಳು ರಾಜಿಪ ವರ ಬಿದಿಗೆಯ ಶಶಿಯಂತೆ ತರುಣರನ್ನೆಯರುತ್ತಮಾಂಗದ ಚಿಕುರದೆ ಹೆಱ್‌ಚಂದ್ರಮನೊಪ್ಪಿದುವು (ಕಂಪಪಿ. ೨೪-೪೦).

[ದೇ. ॥ ತಮಿ. ಪಿಱ್ಕೈ; ಮಲ. ಪಿಱ]

ಪೆಱ್‌ಗೊಂಕು (ನಾ). ಬಾಲಚಂದ್ರನಂತೆ ಕೊಂಕಿರುವುದು; ಅರ್ಧಚಂದ್ರಾಕೃತಿ: ಪೊಳೆಪುವೆತ್ತ ನೊಸಲ್ ಪೆಱ್‌ಗೊಂಕುನಾಮಮೊಳ್ಳಿ ಸುನಿಯ ಮಿಂಚಿನೋಲೆ . . . ಸೊಗಂಬಡೆಯೆ (ಪಕಪಿ. ೬-೫೩).

[ಪೆಱ್ + ಕೊಂಕು$_2$]

ಪೆಱ್‌ಗೊಡೆಯ, ಪೆರೆಗೊಡೆಯ (ನಾ). ಚಂದ್ರನನ್ನು ಕೊಡೆಯಾಗಿ ಉಳ್ಳವನು; ಮನ್ಮಥ; ಕಾಮ: "ಇಂಗೋಲ್ವಿಲ್ಲಂ . . . ಪೆಱ್‌ಗೊಡೆಯಂ . . . ಗಿಳಿದೇರಂ—ಇವು ೧೩ ಕಾಮದೇವಂಗೆ ಪೆಸರ್" (ಕಶಸಾ. ೪೭-೦೩); "ಪೆಱ್‌ಗೊಡೆಯಂ ಪೆಣ್ಬಡೆಯಂ . . . ಅಲರ್ವಿಲ್ಲನೆಂದು ಕಾಮಂ" (ಕಪಿಕಂ. ೨೭). **ಪೆರೆಗೊಡೆಯ**: "ಪೆಣ್ಬಡೆಯನನೆ ಪೆರೆಗೊಡೆಯನೆನೆ ಶಂಬರಾರಿ ಪೆಸರ್" (ಕಶರ. ೬೬).

[ಪೆಱ್ + ಕೊಡೆ$_2$ + —ಅ$_7$]

ಪೆಱ್‌ದಲೆ, ಪೆರೆದಲೆ, ಹೆಱ್‌ದಲೆ (ನಾ). ೧. ಬಾಲಚಂದ್ರನನ್ನು ಧರಿಸಿದ ತಲೆ,—ಶಿರಸ್ಸು: 'ಪೆಱ್‌ದಲೆಯ' ಪರಾ. ೨. ಹುಣ್ಣಿಮೆ: ಪೆಱ್‌ದಲೆಯ × × ವಾರದೊಳು ಗಂಗವಾಡಿಯ ವಿಕ್ರಮ ಚೋಟಮಣ್ಡಲದಿ (ಎಕ. IX (3), ಹೊಸಕೋ. ೦೮೦-೬; 1028). **ಪೆರೆದಲೆ**: ೧. ಪೆರೆದಲೆಯ ಬಾಂದೊರೆಯ . . . ಕೆಂಜೆಡೆ ಕಿರುನಗೆಯ ಪದಿನೈದುಕಂಗಳ ಪರಮಶಿವ ನಿರುತಿರ್ದನನುಪಮರತ್ನಪೀಠದಲಿ (ಅಪಂರಾ. ೦-೨-೦೩). **ಹೆಱ್‌ದಲೆ**: ೧. 'ಹೆಱ್‌ದಲೆಯ' ಪರಾ.

ಹೆಱ್‌ದಲೆಯವನು = ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಶಿವ: ಬಿಱಿಸಿನಡ್ಡಾಯುಧನಿಹತಿಯುಂ ಹೆಱ್‌ದಲೆಯವನ ದೇಗುಲದ ಹೊಱ ಹೊಱಗೆ ಬಿದ್ದುದು ಖಳನ ತಲೆ (ಪಸಪು. ೨೬-೨೭). [ಪೆಱ್ + ತಲೆ$_1$]

ಪೆಱ್‌ದಲೆಯ, ಪೆರೆದಲೆಯ, ಹೆಱ್‌ದಲೆಯ (ನಾ). ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದವನು; ಚಂದ್ರಚೂಡ; ಶಿವ: "ಪೆಱ್‌ದಲೆಯಂ ಮಾದೇವಂ ಕಱ್‌ಗೊರಲಂ . . . ಉಮೆಯಾಣ್ಮಂ" (ಪಸುಪಿ. ೬); ಪಾರ್ವತೀಪತಿಯನಭವನಂ ಪೆಱ್‌ದಲೆಯನಂ ಶಂಕರನನಣಿಯರಂ ಮನದೊಳೆಱಕದಿಂ ತಾಳ್ದು (ಅರಾಪ. ೦-೨-೫೭); ಪೆಱ್‌ದಲೆಯನ ಮೆಯ್ಯಂ ಗೌರಿ . . . ಒಲಿದಂದದಿಂ (ಪಯಕಾ. ೦೫-೫). **ಪೆರೆದಲೆಯ**: "ಪೆಣ್ಡೊಡೆಯನನೆ

ಪೆರೆದಲೆಯನೆನಲಂತಕಾಂತಕಂ" (ಕಸ. ೬೬) ; ಪೆರೆದಲೆಯನಿಂತು ಪರಿಭವಣಿಗಳನುಣಲೇಕೆ (ಸುಹಾಸಿ. ೩-೨೯). **ಹೆಱೆದಲೆಯ :** ಹೆಱೆದಲೆಯ ನಾತ್ಮಜನನೆಚ್ಚು ಮರುಳೆಚ್ಚು ಬೊಬ್ಬಿಱಿದು (ಸಂಪು. ೪೦-೦೨).

[ಪೆಱೆದಲೆ + — ಅ$_7$]

ಪೆಱೆನೊಸಲ್, ಪೆರೆನೊಸಲಂ, ಪೆಱೆನೊಸಲು, ಹೆರೆನೊಸಲು, ಹೆಱೆನೊಸಲು (ನಾ). ಅರ್ಧಚಂದ್ರನಾಕಾರದ ಹಣೆ : ಮೃಗಮದ ತಿಲಕಾಂಕದಿನೆಸೆದುದು ಮಿಱುಪ ಪೆಱೆನೊಸಲ್ಕೋಮಲೆಯಾ (ಕಾದಂಬಾ. ೦೬); ಪೆಱೆಯ ವಿಲಾಸಮದೀಗಳ್ ಪೆಱಗಾಯ್ತೆನೆ ರೂಪವತಿಯ ಪೆಱೆನೊಸಲೆಸೆಗುಂ (ಸುಲ್ಲಪು. ೩-೬೨). **ಪೆರೆನೊಸಲು :** ಪೆರೆನೊಸಲೊಳಗೆ ಕತ್ತುರಿಯ ತಿಲಕಮನ್ನಿಟ್ಟು . . . ಜಾರೆ ಮೆಲ್ಲನ್ನೆತರೆ (ಸಂಕಾರಾ. ೩-೨-೩೯); ಪೆರೆನೊಸಲ ಬೆಳ್ದಿಂಗಳ್ಪೆಟ್ಟಿನಿಂದಿಳಿದುದೆನೆ ಕರಿಸುರುಳಿಗುರುಳು ತೆರೆತೆರೆಯಾಗಿ ನೆರೆ ಜೋಲ್ದ ಬಿಡುಮುಡಿಯ ನಿಡುವೊನಲ್ ರಾರಾಜಿಸಿತು ಕಣ್ಗೆ ಕದ್ದಿಂಗಳಂ ಮೆತ್ತಿ (ಸತ್ರಾಂಗ. ೩೩-೯೦೩). **ಪೆಱೆನೊಸಲು :** ಕೋಮಲದ ಕದಪಿನ ಪೆ[ಸಾಕಾಂ. ಹೆ]ಱೆನೊಸಲ ಪ್ರಜ್ವಲಿಪ ದಂತಾವಳಿಯ . . . ಮಾನವ ವಿಲಸಿತಾಂಗದ ರೂಪ ಕೈಕೊಂಡೆಸದಳಿದಿರಿನಲಿ (ಸೂರಿಂ. ೩-೯-೩); ಪೆಱೆನೊಸಲೊಳು ನೊಸಲಿಟ್ಟು ಮುಂಡಾಡಿ ಕಣ್ದೆಱೆಯದೆ ಮಱೆದೊಱಗಿಹರು (ಸೋಹತ. ೦೬-೯೩); ಪೆಱೆನೊಸಲಹುದಾದರಾ ಪೆಱೆಯೊಳಗಣ ಕಱೆಯಸ್ತವ್ಯಸ್ತವೆಂದದನು ಜಱೆವಂತೆ ಕಸ್ತೂರಿತಿಲಕವೊಪ್ಪದೊಳೆಸೆವೆಱೆಯನ ಪಣೆ ಗೆಲ್ದುದೆನ್ನ (ಭರಸ. ೬-೯೯). **ಹೆರೆನೊಸಲು :** ಹೆರೆನೊಸಲು ಅಂಚೆಯ ನಡೆ ನುಡಿಯ ಜಾಣೆಯರು (ಸೌಂದಕಾ. ೩-೭೬). **ಹೆಱೆನೊಸಲು:** ಹೆಱೆನೊಸಲ ನಿಡುಹುಬ್ಬುಗಳ ಢಾಳಿಸುವ ಕದಪುಗಳ. . .ನಳಿತೋಳುಗಳ ನೀಱೆಯರೈದಿತೊಗ್ಗಿನಲಿ (ಕುಪ್ಪಾಕ. ೦೩-೩೦); ಸೆಱಗು ಸಂಧಾಳಿಕೆ ಬಹು ಭೂಷಣಗಳೆಚ್ಚಱ ಮೇಲಪ್ಪಾವಧಾನ ಹೆಱೆನೊಸಲಬಲೆಯರ್ದಿಟ್ಟಿ ಪರಾಕು ಮಿಂಗುಱುಹಿನ ಜೀಯ ಚಿತ್ತೈಸು (ಸೋಹತ. ೦೬-೯).

ಪೆಱೆನೊಸಲಳ್ = ಅರ್ಧಚಂದ್ರನಾಕಾರದ ಹಣೆಯುಳ್ಳವಳು ; ಸುಂದರಿ : ವಜ್ರಮುಷ್ಟಿ ಸಮಂತಾ ಪೆಱೆನೊಸಲಳನಗಲದಿರಲ್ ನೆಱೆದತ್ತಂ ಬಂದುದಂದು ಕಾಂತವಸಂತಂ (ಸೇಮಿಪು. ೬-೨೯).

[ಪೆಱೆ +ನೊಸಲ್]

ಪೆಱೆನೊಸಲ (ನಾ). ಅರ್ಧಚಂದ್ರನಾಕಾರದ ಹಣೆಯುಳ್ಳವನು; ಸುಂದರ : ಅಲರ್ಗಣ್ಣಂ, ಪೆಱೆನೊಸಲಂ, ಕುಡುವಿಲ್ಲಂ (ಶಪ್ಪಾಸು. ೩೨೬ ಪ್ರಯೋ). [ಪೆಱೆನೊಸಲ್ + — ಅ$_7$]

ಪೆಱೆನೊಸಲು 'ಪೆಱೆನೊಸಲ್' ನೋ.

ಪೆಱೆಮೀನ್ (ನಾ). (ಅರ್ಧಚಂದ್ರನಾಕಾರದಲ್ಲಿರಬಹುದಾದ) ಒಂದು ಬಗೆಯ ಮೀನು : ಪಂದಿಮೀನ್ಪೆಱೆಮೀನ್ಬಗ್ಗಡೆ ಬಣ್ಣಮೀನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೩ ೦೦೩). [ಪೆಱೆ + ಮೀನ್$_2$]

ಪೆಱೆಮುಖಿ (ನಾ). ಚಂದ್ರನಂತಿರುವ ಮುಖವುಳ್ಳವಳು ; ಇಂದು ಮುಖಿ; ಸುಂದರಿ : ಪೆಱೆಮುಖಿ ಸಮಸ್ತದುಃಖಂ ಪಱುವೊಡೆ ನೆಱೆಯಜ್ಞದತ್ತೆ ನವಮಾಸಂಗಳ್ ನೆಱೆಯೆ ಸುರರಾಜನಿಭನಂ ನೆಱೆ ಪೆತ್ತಳ್ ಸಕಲಜೀವನ್ಸುತನಂ ಸುತನಂ (ರರ್ಮಾಸ್ಕ. ೬-೬೨).

[ಪೆಱೆ + ಮುಖ + — ಇ$_2$]

ಪೆಱೆಮೊಗ (ನಾ). ಚಂದ್ರನಂತಿರುವ ಮುಖ : ಪೆಱೆಮೊಗದಂಗನೆಯೊಳಳಪಟ್ಟಂಗಜಕೇಳಿಯಂ ನೆಗೞ್ಚಿ ತೃಪ್ತಿಪಟ್ಟು (ಉದ್ಕರಿ. ೩-೩೦ ಪ); ಕಡೆಗಣ್ಬೊಗರ ಕುಡುನೋಟದಿಂ ನೋಡಿ ಪೆಱೆಮೊಗದ ನಗೆಜೊನ್ನಮಂ ಕೂಡಿ (ರಾಮಾಶ್ವ. ೯-೦೫). [ಪೆಱೆ + ಮೊಗ]

ಪೆಱೆಯಂಬು, ಹೆರೆಯಂಬು, ಹೆಱೆಯಂಬು (ನಾ). ಅರ್ಧಚಂದ್ರಾಕೃತಿಯ ಅಲಗುಳ್ಳ ಬಾಣ ; ಕವಲಂಬು : ಪೆಱೆಯಂಬಂ ತೀವಿತೊಟ್ಟು ಹಸ್ತನ. ತಲೆಯಂ ಪಱಿಯೆಚ್ಚಂ (ಸಂರಾಮಾ. ೦೩-೬೭) ; ಪೆಱೆಯಂಬಂ ಕವಲಂಬನೆಯ್ದೆ ಸರಲಂ ತೀವ್ರಾಸಿಯಂ ಚಕ್ರಮಂ ನೆಱೆ ಭಾಳಂದಿಗು ದಂತಪಂಕ್ತಿ ನಳಿತೋಳುವ್ಯತ್ಯುಚಂ ಪೋಲೆ (ರರ್ಮಾಸ್ಕ. ೬-೨೦೩). **ಹೆರೆಯಂಬು :** ತನ್ನ ಬತ್ತಳಿಕೆಯಿಂದ ಒಂದು ಹೆರೆಯಂಬನ್ನು ಕಿತ್ತು... ಅದರ ಹೆರೆಯಿಂದ ತನ್ನ ಬಲಗೆಯ್ಯ ಹೆಬ್ಬೆರಳನ್ನು ಕಟಕ್ಕನೆ ಕಡಿದು ದ್ರೋಣನ ಕಾಲ ಬುಡದಲ್ಲಿ ನೀಡುವನು (ಹೆಸ್ಕರ. ೩೦-೬). **ಹೆಱೆಯಂಬು :** "ಅರ್ಧಚಂದ್ರಮೆಂಬುದು ಹೆಱೆಯಂಬು" (ಹಲಾಯು. ೬೬-೩೦೩); ಹೆಱೆಯಂಬಿಂದ ಕಡಿದಿಳುಹಿದನು ಪಾಂಚಾಲಾಧಿಪನ ಶಿರವ (ಕುಪ್ಪಾರ್ಪ್ರೋ. ೦೬-೩೬). [ಪೆಱೆ+ಅಂಬು$_2$]

ಪೆಱೆವಣೆ (ನಾ). =ಪೆಱೆನೊಸಲ್ : ಆ ಸತಿಗೆಡ್ಡಂಬಡೆದವು ನಗೆಮೊಗವಾಸುರವಡಗಿದ ಚೆಂಬಾಯ್ . . . ತುಱುಗೆವೆ ಪೆಱೆವಣೆ ನಿಱಿದಲೆಯು (ಉದ್ಕರೇ. ೨-೩೬).

ಪೆಱೆವಣೆಯಳ್ = ಅರ್ಧಚಂದ್ರನಾಕಾರದ ನೊಸಲುಳ್ಳವಳು ; ಸುಂದರಿ : ಮೆಲ್ಲೆರ್ದೆಯಳ್, ನುಣ್ದೊಡೆಯಳ್, ಪೆಱೆವಣೆಯಳ್ (ಶಪ್ಪಾಸು. ೦೬೨ ಪ್ರಯೋ). [ಪೆಱೆ + ಪಣೆ$_1$]

ಪೆಱೆವಣೆಯ (ನಾ). =ಪೆಱೆನೊಸಲ : ಮೆಲ್ಲೆರ್ದೆಯಂ, ಪೆಱೆವಣೆಯಂ (ಶಪ್ಪಾಸು. ೦೯ ಪ್ರಯೋ). [ಪೆಱೆವಣೆ+—ಅ$_7$]

ಪೆಟಕ (ನಾ). (?) : ಬಟಲದೆ ಪೊತ್ತು ಕಲ್ಲನುಲುವಂಗೆಣೆಯಾದ ಮಹಾಪ್ರತಾಪಿ ನೀಂ ಪೆಟಕನಡುರ್ತು ಕೊಂದ ಕಡುವಲ್ಕಣೆ ಮಾಣ್ದುರದಣ್ಣೆ ಬಂದು ನಾಯ್ನೊಟಲೆಯ ಮೇಲೆ ಪಟ್ಟ ಕಡುವೀರ ಕುಟುಂಬದಿನಗ್ಗಳಿಕ್ಕೆ ಕೈಗಟಿದಿರೆ ಶಂಖವೋ [ಗಡ] ಮಹಾತ್ಮರಣಾಗ್ರದೊಳೇಡಗುಳ್ಳೆಯೋ (ಬಂಹಂ. ೭-೬೭). [?]

ಪೆಟಕು (ನಾ). ೧. ಜಗಳ ; ವ್ಯಾಜ್ಯ; ಕಾದಾಟ : "ಪೆಟಕು—ಜಗಳಂ" (ಕಪುದ. ಸಂ. ೦); ಮೊಟಗು, ಪೆಟಕು, ಪೊಟಕು (ಶಪ್ಪಾಸು. ೦೩೯ ಪ್ರಾಪ್ತಾ). ೨. ನಾಶ (?) : ನೋಟ್ಪೊಡಿಂದಿನ ಮುಂದಿನ ಖಲನ ಪೊಟಕು ಪೆಟಕಪ್ಪಿನೆಗಂ, ತುರಿಪದೆ ಕಾದಿ ಗೆಲ್ದು ಹಯಮಂ ತಾರದುಟಿದೆನಾದೊಡೆ, ಶ್ರೀರಾಮರಂ ಮೊಕ್ಕಳಂ ತನ್ನೊಂದು ಹಂಹದಟಿವಗ್ಗಿನ ಬೆಸಗೆಯ್ಮೆಯಿಂ ತೆಗಟ್ಟ ಕೀಟನ ದುರ್ಗತಿಗಿಟಿವೆಂ (ರಾಮಾಶ್ವ. ೦೦೦-೦೬). [?]

ಪೆಟಗಾಲ್ (ನಾ). ಕುಂಟುಗಾಲು ; ಹೆಳವುಕಾಲು : ಕೆಲರ್ಗೆ ಪೆಟಗಾಲ್, ಕೆಲರ್ಗೆ ಕುಡುಗೆಯ್ (ಅಮೃತ. ೨೩-೨೩). [<ಪೆಟವು+ಕಾಲ್$_1$]

ಪೆಟವ, ಪೆಳವ, ಹೆಳವ$_1$, ಹೆಟವ (ನಾ). ೧. ಊನವಾದ ಕಾಲುಳ್ಳವನು; ಕಾಲಿಲ್ಲದವನು ; ಕುಂಟ : "ಖಂಜಃ, ಪಂಗುಃ, ಶ್ರೋಣಿಃ—ಈ ೩ ಪೆಟವಂ" (ಹಲಾಯು. ೦೦೦-೯೩೬) ; ಬರೆ ಮೀನಗೇಹದುದಯಂ ನೋಟ್ಟಂದದಂ ಮಂದ ವಕ್ರ ಶಶಾಂಕರ್ ಪೆಟವಂ (ಜಾತಕಿ. ೯-೦೦); ಪೂಡುವ ಕುದುರೆ ಬೆಸಗೊಂಡೋಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಟವಂ ಕೇಡಿಂಗಲಸಿದೊಡಕ್ಕುಮೆ ನೋಡಿರೆ ರವಿ ಕೆಡೆವನಸ್ತಗಿರಿಮಸ್ತಕದೊಳ್ (ಅರ್ಧನೇ. ೩-೦೯). ೨. ಸೂರ್ಯನ ಸಾರಥಿ ; ಅರುಣ : ಪಟಯಿಗೆಯ ನುಡುಗಿ ರಥಮಂ ಪೆಟವನನೆಸಗಲ್ಕೆವೇಟ್ದು ಸುತಶೋಕದ ಪೊಂಪುಟಿಯೊಳ್ ಮೆಯ್ಯಱಿಯದೆ ನೀರಿಟಿವಂತೆವೊಲಿಟಿದನವರಜಳಧಿಗೆ ದಿನವಂ (ಪಂಪಭಾ. ೦೨-೨೨೦). **ಪೆಳವ :** ೧. ಪೆಳವಂಗೆ ಕಾಲನಿತ್ತುವಱಿಂ (ಎಇ. XVI, ೬೯. ೦೬; 1067); ಪೆಳವನ ಕಣ್ಗಳಂಧಕನ ಕಾಲ್ಗಳಿವಿಂತೊಡಗೂಡಿ ಗಾವುದಂ ತಳರ್ದೊಡೆ ಬಲ್ಲಿದಂ ನಡೆದ ಮಾಳ್ಕೆಯೆನಿಪ್ಪುದೆ (ಗಿರಿಕ. ೦-೨೯); ಇನನ ವರೂಥದ ಗಾಲಿಗಳ್ವಾಯ್ವುವು ತೆನೆತೆನೆಯಂಬುಗಂಡಿಯೊಳು ತೆನೆಗಳು ಪೊಯ್ಗುಮೆಂದಳ್ಕಿ ಕಾಲ್ನೀಡದೆ ಇನನ ಸಾರಥಿ ಪೆಳವಾದ (ನಾಗಕು. ೨-೯೨); ಪೆಳವಂ ಮರದುದಿಯ ಮಹಾಫಳವಂ ಮಿಗೆ ಬಯಸುಮತೆ (ಶಬಕಂ. ೨-೬೭). **ಹೆಳವ$_1$:** ೧. ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ

(ಪಸಪ. ೩೯) ; ಓಡಿಸ ಕಲಿಸೆ ಹೆಳವನನೊಕ್ಕುಡಿತೆನೀರಲಿ ಮುಳುಗಲೇಳಲ್ಕೆ ಮಳಲಿಂ ಸರವಿಯಂ ಹೊಸೆಯೆ . . . ಇಂತಿಳೆಯೊಳಾಗಳು ಸತ್ತು ಹುಟ್ಟಲು ಬಲ್ಲ ನೆಱೆ ಜಾಣೆ (ಪಸಪು. ೪೨-೨); ಗುರುಬುಧಮಂಗಳೋನ್ನತಿಗೆ ಕುಂದನಿತ್ತುದಱಿಂದೆ ಸಾರಥಿ ಹೆಳವನಾದನು (ಕೈಪುಣಾ. ೦೭-೪೩). **ಹೆಟವ** : ೧. "ಶೋಣಃ, ಪಂಗುಃ—ಈ ೨ ಹೆಟವನು" (ಪಾಸರಾ. ೦೦೯) ; "ಖಂಜಾ ಪಂಗುವೆಂದೆನಲು ಹೆಟವನಕ್ಕುಂ" (ಮಂಗರಾ. ೦೦೯-೩).

ಪೆಟವಿ, ಪೆಳವಿ, ಹೆಳವಿ (ನಾ). ಕಾಲಿಲ್ಲದವಳು ; ಕಾಲು ಊನವಾದವಳು ; ಕುಂಟಿ : ಪೆಟವಿ ದುರ್ಗಂಧೆ ದುರ್ವರ್ಣೆ . . . ಸಂಸಾರ ಕೂಪಾರದೊಳನವರತಂ ನೀಡುಮೋಲಾಡುತಿರ್ದಳ್ (ಸುಕುಮಾ. ೩-೨೦). **ಪೆಳವಿ** : ದಿವಿಜರಂ ಪೊರೆವವಂ ಚಮ್ಮಟಗೆವಿಡಿಯಲೇತಕೆ ನರನ ಕಾಱುಹುಗಾಣಿಸದವಂ ಪೆಳವಿಗೊಲ್ದು ಸುಮ್ಮನೇತಕೆ ಸಿಕ್ಕಿದಂ (ಕೈಪುಣಾ. ೬-೪೯). **ಹೆಳವಿ** : ಆ ಮಗನಿಗೆ ಒಂದು ಹೆಳವಿ ಹೆಣ್ಣನ್ನು ತಂದು ಪಾಣಿಗ್ರಹಣ ಮಾಡಿಸೋ ಸಂಕಲ್ಪ (ಉಪಾಶಿ. ೩). [ಪೆಟವ + — ಇ$_2$]

ಪೆಟವು, ಹೆಳವು$_2$, ಹೆಟವು (ನಾ). ಕಾಲು ಊನವಾಗಿ ನಡೆಯಲಾಗದಿರುವ ಸ್ಥಿತಿ; ಪಂಗುತನ; ಕುಂಟು: ಮಾರಕ್ಕೆ . . . ಉಟವು, ಪೆಳವು (ಪೆಟವು), ಕೆಳವು (ಕಪುದ. ೨೦೦ ಪ್ರಯೋ); ಪೆಟವು ಪೊರ್ಕುಟುಂ . . . ಮಹಾಪ್ರಾಣಾಕ್ಷರಂಗಳೊಳ್ ಸುಟ್ಟಿವುತಿರ್ಕನುಕರಣೆಯೆಲ್ಲವುಂ ನಿತ್ಯಱಟುಂ (ಸಂಜೀಪ. ೯). 'ಪೆಟವೆ' ಪರಾ. **ಹೆಳವು$_2$** : "ಖಜಿ—ಗತಿವೈಕಲ್ಯೇ, ಹೆಳವಿನೊಳ್" (ಕಾಶಕ್ಯ. ೦೯). **ಹೆಟವು** : ೧. 'ಹೆಟವುಗೊಳಿಸು' ಪರಾ. [ಪೆಟವ + — ಉ$_4$]

ಪೆಟವುಗೊಳ್ (ಕ್ರಿ). ಕಾಲು ಊನವಾಗು : ಪಿರಿದುಮಧರ್ಮದೆ ಗತಿಗೆಟ್ಟರಸುಗಳೆಲೆ ಪೆಟವುಗೊಂಡರೆಂಬಂತೆ ವಲಂ ಕರವಿಡಿದು ಸಾರ್ಚುವೆತ್ತುವ ತುರಿಪದೆ ಕಯ್ಗುಡುವುದಕ್ಕೆ ಲಜ್ಜಿಸರರೆಬರ್ (ಕಾದಂಪು. ೩೬೦). [ಪೆಟವು + ಕೊಳ್$_1$]

ಪೆಟವೆ (ನಾ). = ಪೆಟವಿ : ಕೂಂಟಿಯುಂ ಪೆಟವೆಯುಂ ಕುಷ್ಠಿನಿಯುಂ ಕುಬ್ಜೆಯುಮಪ್ಪ ಮಗಳ್ದಿರಱುವರನಿಬರಿಂ ಪಿರಿಯೈ ನೀಂ (ಶಾಂತಿಪು. ೪-೬೬ ಪ). [ಪೆಟವ + — ಎ$_2$]

ಪೆಟಸು 'ಪೆಡಸು ನೋ.

ಪೆಟ್ಟಿಸು 'ಪೆರ್ಚಿಸು' ನೋ.

ಪೆಟ್ಟು 'ಪೆರ್ಚು$_1$' ನೋ.

ಪೆಟ್ಟವಸಿ (ನಾ). ಒಂದು ಬಗೆಯ ತೆರಿಗೆ : ಕೊಳಗುಪ್ಪೆ ಪೆಟ್ಟವಸಿ ಅರ್ಧಂ ಕಾನಸೊಪ್ಪಿನರ್ಧಂ ವಾರಲರ್ಧಂ... ಇದು ಗೋಪಾಲದೇವರಾದತ್ತಿ (ಎಇ. XXI. ೦೭೬-೦೯; ೬ಪಯ ಶಕ). [?]

ಪೆಟ್ಟೋಗೆ (ನಾ). ಒಂದು ಪ್ರದೇಶದ ಹೆಸರು (?) : ಪೆಟ್ಟೋಗೆಯ ಮೊದಲುಳ್ ಬಡಗಾಯ್ದೆಗೊಳ್ಳಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ (ಎಳ. IV. ಎಡಕೊ. ೬೦-೬೬; ಸು. 890). [?]

ಪೆಟ್ದಿಂಟಲ್ (ನಾ). ಒಂದು ಪ್ರದೇಶದ ಹೆಸರು (?) : ನೈರಿತ್ತೆ ದೆಸೆ ನೆಲಮುಟ್ಟುಗೂರ್ ಪ್ರತಿಚಿದೆಸೆ ಪೆದ್ದಾಣ ಎ ವಾಯುವ್ವಾದೆಸೆ ಪೆಟ್ದಿಣ್ಬಲಿನ್ಬಡಕಾಯ್ಕೂಕು ಉದಿಚಿ ದೆಸೆ ಕೆಱೆಯಿನ್ನೀರ್ಗೊರೆ ಮುಟ್ಟಿ (ಎಳ. X (೩). ಮುಳಪಾ. ೩೨೯-೩೨ ; ಸು. 650). [?]

ಪೆಟ್ದೆಸೆ, ಹೆರ್ದೆಸೆ (ನಾ). ಒಂದು ಪ್ರದೇಶದ ಹೆಸರು : ವಣ್ಣಿಗಂ ಬನವಾಸಿವನ್ನಿರ್ಚ್ಚಾಸಿರಕ್ಕಧಿಪತಿಯಾಗಿ ಪೆಟ್ದೆಸೆಯೊಳಿಟ್ಟು ರಾಜ್ಯಂಗೆಯ್ಯೆ (ಎಳ. VIII. ಸೊರಬ. ೬೬-೯; 940). **ಹೆರ್ದೆಸೆ** : ಶ್ರೀಸಾನ್ತಿವರ್ಮ್ಮ ಹೆಱ್ದೆಸೆಯೊಳ್ಸುಖಸಂಗತವಿನೋದಂಗಳಿಂದರಸುಗೆಯ್ಯೆ (ಎಳ. VIII. ಸೊರಬ. ೪೭೯-೩; ಸು. 991). [?]

ಪೆಟ್ದೊಱೆ 'ಪೆರ್ದೊಱೆ' ನೋ.

ಪೆಟ್ನನಂದಿ (ನಾ). ಒಂದು ಪ್ರದೇಶದ ಹೆಸರು (?) : ಪೆರಗ್ಗಟನಿಯನ್ ಬಡಗ್ಗೆ ನಟ್ಟ ಕಲ್ಲೆ ತೆಂಕ್ಕೆಪೆರಮ್ಮಿದ್ದಿಲ್ ಪೆಟ್ನನಂದಿಯ ಕಿಱುನಂದಿಯ ಸೊಡಲಿಯದಾ ಮೂಱುಮ್ ಕುಡಿದ ಒಟ್ಟೆ ಪಡುವೈ ನಡದು (ಪ್ರಾಸಿ. ೦೯೦೯. ೦೨-೦೭; 810). 'ಕಿಱುನಂದಿ' ಪರಾ. [ಇದು 'ಪೆರ್ನಂದಿ' ಎಂಬುದರ ಅಪಲಿಖಿತವಿರಬಹುದು]

ಪೇಂಕುಳಿ 'ಪೆಂಕುಳಿ' ನೋ.

ಪೇಂಠೆ 'ಪೇಟೆ' ನೋ.

ಪೇಕುಳಿ 'ಪೆಂಕುಳಿ' ನೋ.

ಪೇಕುಳಿಗೊಳ್ 'ಪೆಂಕುಳಿಗೊಳ್' ನೋ.

ಪೇಕುಳಿನಾಯ್ 'ಪೆಂಕುಳಿನಾಯ್' ನೋ.

ಪೇಗುರ, ಪೇಗೂರ (ನಾ). ಒಬ್ಬಾತನ ಹೆಸರು : × × × ತಾರಿಕುಮಾರರಿನರ್ಚ್ಚಿಕೆಯ್ಯೆ ತಾಂ ಸ್ಥಿರವರಳಿನ್ತು ಪೇಗುರವು ಸುರಲೋಕವಿಭೂತಿ ಎಯ್ದಿದಾರ್ (ಎಳ. II. ೨೬-೩; ಸು. 700). **ಪೇಗೂರ** : × × × ಪೇಗೂರ ಸ್ವರ್ಗ ಪರಲೋಕಕೆ ಸನ್ದ (ಎಳ. IX. ಬೆಂಗಳೂ. ೮೬-೩; ಸು. 900). [?]

ಪೇಗೂರ 'ಪೇಗುರ' ನೋ.

ಪೇಚಕ (ನಾ). ೧. ಗೂಬೆ ; ಗೂಗೆ : "ಉಲೂಕಃ, ವಾಯಸಾರಾತಿಃ, ಪೇಚಕಃ — ೩ ಗೂಗೆ, ಗೂಬೆ" (ಸಿದ್ಧಾಂತಿ. ೦೩೭). ೨. ಆನೆಯ ಬಾಲದ ಬುಡ,—ಮೂಲ : "ಪೇಚಕಃ, ಪುಚ್ಛಮೂಲಂ—ಈ ೨ ಮೊದಲ ಬಾ(ವಾ)ಲಂ" (ಹಲಾಯು. ೩೭-೬೬) ; ವನಕರಿ ಮೆಲ್ಲದೆ ಲಲಿತಸಲ್ಲಕೀಪಲ್ಲವಮಂ ಸ್ಮರವಶದಿಂದಿರ್ದುಮ ನಿಜಕರೇಣುಪೇಚಕನಿರೂಪಿತಾಯತಹಸ್ತಂ (ಕಪಾ. ೩-೬); ಬೇಟ್ಟುದಂ ಪಡೆದುವೆತ್ತಾನುಂ ದಿಶಾದಂತಿ ದಿಕ್ಕರಿಣೀಪೇಚಕಚುಂಬನೈಕಸುಖಮಂ ಶೇಷೋರಗಂ ಭೋಗಿನೀಪರಿರಂಭೋತ್ಸವಮಂ (ಶಂರಾಮಾ. ೬-೬೯). ೩. ಹೇನು. [ಸಂ.]

ಪೇಚಕಿ (ನಾ). ಆನೆ ; ಗಜ. [ಸಂ. ಪೇಚಕಿನ್]

ಪೇಚಾಟ (ನಾ). ೧. ತೊಂದರೆ ; ಕಷ್ಟ ; ತೊಡಕು; ಕ್ಲೇಶ : ಭೂಚಕ್ರದೊಡೆಯನ ಮುಂದೆ ಪೇಚಾಟದೆಮಗೊಂದು ರಾಜಮೋಡಿಯೆ ಸುಡು (ಭರಕ. ೨೩-೭೦) ; ಮನೆಯೊಳಗೆ ಪೇಚಾಟ ಹೀನ (ಸರ್ವಜ್ಞ. ೦೭೩೭). ೨. ಚಿಂತೆ ; ದುಃಖ ; ಗೋಳಾಟ : ನೋಡಿಕೊಳ್ಳೋಣ ಅದಕ್ಕೆ ಈಗಲೇ ಯಾತಕ್ಕೆ ಪೇಚಾಟ (ಪೀತಿಸಂ. VIII. ೦೬) ; ದುಡುಕಿ ಪೇಚಾಟದಲ್ಲಿ ಬೀಳುವೆನು (ಹೇಮಂತ. ೨೩೦). [ಪೇಚು$_3$+ಆಟ]

ಪೇಚಾಡು (ಕ್ರಿ). ೧. ಹೆಣಗಾಡು ; ತೊಂದರೆಗೆ ಈಡಾಗು ; ಒದ್ದಾಡು : ಆಚಾರವೆಂಬುದು ಅತಿಕಷ್ಟವದರೊಳು ಪೇಚಾಡಲಾರದೆ (ಪಸ್ಕರಾ. ೩-೦೦೨). ೨. ಚಿಂತಿಸು ; ದುಃಖಿಸು ; ಗೋಳಾಡು : ನಾವು ಮನೆ ಸೇರದೆ ಅಡವಿಯಲ್ಲಿ ಸಿಕ್ಕಿ ಪೇಚಾಡುವ ಕಾಲ ಬಂತು (ಕಥಾಮಂ. IV. ೦೭) ; ಎಲ್ಲ ಮನೆಯಿಲ್ಲದೆ ಪೇಚಾಡುತ್ತಿರುವಾಗ ಅಂಥ ಮನೆ ಹೇಗೆ ಸಿಕ್ಕಿತು ? (ಪಾಕ್ಷಲ್ಯ. ೨೭೭). [ಪೇಚು$_3$+ಆಡು$_1$]

ಪೇಚು$_1$ 'ಪೇಸು$_1$' ನೋ.

ಪೇಚು$_2$ (ಕ್ರಿ). ಗೋಳಾಡು ; ಸಂಕಟಪಡು ; ವ್ಯಥೆಪಡು : ಪಿಶಾಚಿಗಳಿರಾ . . . ನೀವು ವಿವಿಧಪ್ರಕಾರದೊಳಮಂಗಲದ ನುಡಿಯೊಳಂ ಯವಗಾರು ಗತಿಗೆಟ್ಟೆವೆನುತ ಪೇಚುವಿರೆಂದು ಸವಿಶೇಷದಂಡದಿಂದಟ್ಟಿ ಬಡಿವುತ್ತಿರ್ದಂ (ಪೀಕೈಪು. ೨-೯-೨೮) ; ಸದ್ಬ್ರಾಹ್ಮಣರ ನೆರಪಿ ಭೋಜನವನಧಿಕತರದಿಂದೆಸಗಿ ಮಾಡಿದಲ್ಲದೆ ಶುದ್ಧವಲ್ಲವೆಂದುಱೆ ಪೇಚುತೆ (ಸಿದ್ಧೇಪು. ೪-೩೬). [←ಮರಾ. ಪೇಚ್, ಪೇಂಚ್]

ಪೇಚು$_3$ (ನಾ). ೧. ತೊಡಕು ; ಇಕ್ಕಟ್ಟು ; ತೊಂದರೆ : ಅವನನ್ನು ಪೇಚಿಗೆ ಕೆಡವಲು ಪ್ರಯತ್ನಿಸುತ್ತೇನೆ (ಬೇಕಪ್ಪ. ೩೭) ; ಶಿವಣ್ಣಯ್ಯನವರು

. . . ಅವರಿಗೂ ಮಾತನ್ನು ಕೊಟ್ಟು ಪೇಚಿನಲ್ಲಿ ಸಿಕ್ಕಿದರು (ಅಳಿ. ೦೩೮). ೨. ಹಿಡಿತ; ಪಟ್ಟು: ಎಷ್ಟೋ ಪೇಚುಗಳನ್ನು ಹಾಕಿದೆ (ಬಾಳಿ. ೯); ಭಾರತದ ಮೇಲೆ ಸಾಮ್ರಾಜ್ಯ ಹಿಡಿತವಿಟ್ಟುಕೊಳ್ಳುವುದು ಬ್ರಿಟಿಷ್ ರಾಜಕಾರಣಿಗಳ ಒಂದು ಕುಶಲ ಪೇಚು (ಎಕ್ಸಸಾ. ೭೯); ಜಟ್ಟಿಯೇ, ನಾನು ಮಾಡುವ ಕೈಸನ್ನೆಗಳು ಯಾವ ಪೇಚನ್ನು ಸೂಚಿಸುತ್ತವೆ (ಕಿಪೋದ. ೧೦). ೩. ತಿರುಪುಮೊಳೆ ಮೊದಲಾದುವುಗಳಲ್ಲಿಯ ಸುತ್ತು; ಮರಸುತ್ತು: ಅವರ ತುದಿಗೆ ಹೊರಮೈಯಲ್ಲಿ ಗಂಡುಮಲಸೂತ್ರದ ಪೇಚುಗಳಿರುತ್ತವೆ (ಮುಂಬಯಿ. ೩-೭೨).

[< ಪೇಚು₁./ಪಾರ. ಹಿಂ. ಮರಾ. ಪೇಚ್]

ಪೇಜವಿತಿ (ನಾ). ಒಂದು ಬಗೆಯ ಚಲನೆಯ ಗತಿ, -ಸಂಚಾರಕ್ರಮ: ಗೋಮೂತ್ರ ಮಂಡಲಮುಮಾಕಾಶಂ ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲೆಂ (ಶಾಂತಿಪು. ೩-೨೩ ಪ). [?]

ಪೇಜು (ನಾ). (ಪುಸ್ತಕಗಳ) ಪುಟ: ಆ ನೀತಿಪ್ರಶ್ನೇಗೆ ಒಂದು ಪೇಜು ಬರೆದಿದ್ದಾರಂತೆ (ಸ್ವಾಮಿಸ್ಕೇ. ೭೩); ನಾವು ದಪ್ಪ ಪೇಜುಗಳು ಇರುವ ಒಂದು ಪುಸ್ತಕವನ್ನು ತೆಗೆದುಕೊಂಡು . . . ಬರೆದೆವು (ಶಾಲೆಮು. ೨೦೩).

[←ಇಂ. page]

ಪೇಟ₁ (ನಾ). ೧. ಸಾಮಾನುಗಳನ್ನಿಡುವ ಪೆಟ್ಟಿಗೆ,- ಪೆಟಾರಿ. ೨. ಗುಂಪು; ಸಮುದಾಯ. ೩. ಸೇವಕಜನ; ಪರಿವಾರ. ೪. ಬೆರಳುಗಳನ್ನು ಚಾಚಿದ ಕೈ; ತೆರೆದ ಹಸ್ತ. [ಸಂ.]

ಪೇಟ₂ (ನಾ). ತಲೆಯಂಡುಗೆ; ರುಮಾಲು; ಮುಂಡಾಸು: ತಲೆಗೆ ಪೇಟ. ಪೋಷಾಕೆಲ್ಲ ಶುದ್ಧ ಬಿಳುಪಿನದು (ಭಾರದ. ೩೬೪); ಟೋಪಿ ಪೇಟವ ತೊರೆದು ಪಿಳ್ಳನೆ ಜುಟ್ಟು ತೋರುವೆ ಊರೊಳು (ಗಜೇಶ. ೭೨-೬).

[← ಹಿಂ. ಮರಾ. ಫೇಟಾ]

ಪೇಟಕ (ನಾ). ೧. ಪೆಟ್ಟಿಗೆ; ಪೆಟಾರಿ: "ಪಿಟಕಃ, ಪೇಟಕಃ—೨ ಪೆಟಾರಿಗೆ ಹೆಸರುಗಳು" (ಸಿದ್ಧಾಂತಿ. ೩೦೩). ೨. ಬುಟ್ಟಿ: ದಟ್ಟಿಯುಟ್ಟು ಮುದದೆ ಸಲಿಕೆ ಪೆಗಲೊಳೆಸೆಯೆ ಪೇಟಕಮದೆ ಸಿರದೊಳಮರೆ (ಹಾಲಾಸ್ಯ. ೪-೦೩-೦ ರಗಳೆ). ೩. ಗುಂಪು; ಸಮೂಹ: ಅಧಿಕಭಕ್ತಿಯೆ ತರೆ ಬಂದುದು ದೇವದಿವಿಜಪೇಟಕಮನಿತುಂ (ಅಧಿಪು. ೯-೦೦). . [ಸಂ.]

ಪೇಟನ (ನಾ). ಸವರುವುದು; ನೀವುವುದು: ದಶಮಿಯೊಳ್ ನಾಭಿಯ ನಾಭಿಯಿಂ ಪೇಟನಂ ಮಾಡುವುದು (ಕಾಮಶಾ. ೨೨೭). [< ಸಂ. ಪೇಟ ?]

ಪೇಟಪಾವುಡ (ನಾ). ಒಂದು ಬಿರುದುಸೂಚಕವಾದ ವಸ್ತುವಿಶೇಷ; ಪೇಟಕ್ಕೆ ಸುತ್ತುವ ಬಟ್ಟೆ (?): ಚಂದ್ರಗಾವಿ ವುಡಾಸ್, ಪೇಟಪಾವುಡ, ಸಾಗ (ಗುರುವ. ೦೦). [ಪೇಟ₂ + ಪಾವುಡ₁]

ಪೇಟಿ (ನಾ). ೧. ಪೆಟ್ಟಿಗೆ; ಪೆಟಾರಿ: ಅಂಬುಜಮುಖಿಯೊರ್ವಳ ನಿಡುಗಣ್ಬೆಳಗಿನೊಳೊಂದು ಸಿಲ್ಕಿದರಗಿಳಿಯೆಸೆಗುಂ ತಣ್ಬೆಳಗುವಣಿಯ ಪೇಟಿಯೊಳಿಂಬಾಗಿ ಮನಂಗೊಳಿಪ್ಪ ಮರಕತಮಣಿವೋಲ್ (ಕಾದ್ಯಪಿ. ೩-೨೩); ಧರಣಿಯುಂ ಸಂಶೋಧಿಪಾಗಳ್ ಕರಸ್ಥಿತ ಕುದ್ದಾಲಕೆ [ಸಿಲ್ಕೆ ಪೇಟಿ ವರ] ಭಾಸ್ವತ್ಕನ್ಯಕಾರೂಪರಂಜಿತವೊಂದುಂ ಶಿಶು ಸಿಲ್ಕೆ (ದಿಷ್ಟಕ. ೬-೪). ೨. ಪೆಟ್ಟಿಗೆಯಾಕಾರದ ಒಂದು ವಾದ್ಯ; ಹಾರ್ಮೋನಿಯಂ: ವಸಂತ ನಾಟಕದಲ್ಲಿ ರಾಜಾಪಾರ್ಟು ಮಾಡಲು ಹವ್ಯಾಸಬಟ್ಟದ್ದು, ಪತದೆ ಪೇಟಿಗಳ ಬಗ್ಗೆ ವಿಚಾರಿಸಿದ್ದು (ಗಂಮಾಯಿ. ೨೪೦).

ಪೇಟಿ ಬಾರಿಸು = ಹಾರ್ಮೋನಿಯಂ ನುಡಿಸು: ಜ್ಞಾನಶಂಕರ . . . ಈಗ ಪೇಟಿ ಬಾರಿಸುವುದರಲ್ಲಿ ಮಗ್ನನಾಗಿರುತ್ತಿದ್ದ (ಶ್ರೀಮಾಶ್ರ. ೬).

[ಸಂ. ಪೇಟೀ]

ಪೇಟಿಕೆ (ನಾ). = ಪೇಟಿ ೧: "ಪೇಟಿಕೆಗೆ ಪೇಳಿಗೆಯೆನಿಕ್ಕುಂ" (ಸಂಜೀವ. ೨೯); ಆಭರಣಪೇಟಿಕೆಯನತ್ಯುರುತರಾಲೇಪನದ ಭರಣಿಗಳ ಕುಸುಮಸಾಂದರ ಭಾಜನಂಗಳಾಂತಬಲೆಯರು ಸುತ್ತಲೋಲೈಸಿ ಬರೆ (ವೀಶ್ವಪು. ೩-೨-೨೬); ಕ್ರೀಡಾವಸ್ತುವಿನೋದಪೇಟಿಕೆಯೆನಿಪ್ಪೀ ವಿಶ್ವಮಂ ಕೊಂಡು ನೀವಾಡುತ್ತಗ್ಗದ ಜಾಣ್ಮೆಯಿಂದಮೊಲಿಸಲ್ ನಾಂ ಪಾರಿತೋಷಂಗಳಂ ನೀಡುತ್ತಿರ್ಪೆಂ (ಕಿಪೋದ. ೨೫-೦). [ಸಂ. ಪೇಟಿಕಾ]

ಪೇಟೆ, ಪೇಂಠೆ, ಪೇಠಾ, ಪೇಠೆ₂ (ನಾ). ೧. ಅಂಗಡಿಗಳಿರುವ ಬೀದಿ; ಕ್ರಯ ವಿಕ್ರಯ ಮಾಡುವ ಸ್ಥಳ; ಮಾರುಕಟ್ಟೆ: "ಮಾಱುಹ ಟಾವು ಪೇಟೆಯಕ್ಕುಂ" (ಮಂಗರಾ. ೦೦೨-೩); ಉರಿಯ ಪೇಟೆಗಳಲ್ಲಿ ಪತಂಗದ ಸರಕು ಮಾಱದೆ ಮರಳುವುದೆ (ಕುಸ್ಯಾಳ. ೦೦-೨೮); ನನೆಯುಂ ದಾವಣಿಗಟ್ಟಂ ಕಟ್ಟುತ್ತಿನಿಯರ್ಗೊಪ್ಪಿಸಿ ಕೊಡುವವೊಲಿತ್ತರ್ವನಿತೆಯರಾ ಪೂವಿನ ಪೇಟೆಯೊಳ್ಬಾಸಿಗಮಂ ವಿಟರ್ಗೆ (ಇಯಶಾ. ೦-೩೮); ಆಗಮಜ್ಞರು ಹಂಚಿ ಕೊಟ್ಟಂತೆ ಪೇಟೆಯ ಭಾಗದಂಗಡಿಗಳೊಪ್ಪಿದುವು (ಪೋಹತ. ೩-೦೨); ಇಲ್ಲಿಯ ಪೇಟೆಯಲ್ಲಿ ಬೂಸದ ವ್ಯಾಪಾರವಾದರೂ ತಕ್ಕ ಮಟ್ಟಿಗೆ ನಡೆಯುತ್ತದೆ (ಮುಂಬಯಿ. ೪-೦೪೩). ೨. ನೆಲೆ; ಆಗರ: ಹದಿರು ಚದುರಿನಾಗರ ಠೌಳಿಯ ಪೇಟೆ (ಕಂಪಪಿ. ೨-೩೬). ೩. ಜನರು ವಾಸವಾಗಿದ್ದು ವ್ಯಾಪಾರ, ವ್ಯವಹಾರಗಳನ್ನು ನಡೆಸುವ ಸ್ಥಳ: ಅವರ ಮನೆ ಪೇಟೆಯೊಳಗೆ ಇದೆ (ರೂಢಿ). ೪. ಶಹರು; ಪಟ್ಟಣ: ಇದೇಯೇನು ನಿಮ್ಮ ಪೇಟೆಯವರ ಧೈರ್ಯ (ಪಟ್ಟಣೀ. ೦೬೪). ಪೇಂಠೆ: ೫. ತಾಲ್ಲೂಕಿಗಿಂತ ಸಣ್ಣದಾದ ಆಡಳಿತವಿಭಾಗ; ಹೋಬಳಿ: ನಡೆದು ಬನ್ದ ನಾಡ ಗೌಡಿಕೆ ದೇಶ ಪೇಂಠೆ ಪಟ್ಟಣದ ಹಟ್ಟಿಗೆ ಮರಿಯಾದೆ (ಎಕ. VIII, ಸೊರಬ. ೨೬೬-೨೯; 1629 ?). ಪೇಠಾ: ೫. ರಾಜಕೀಯದ ಮಟ್ಟಿಗೆ, ಅದು ಪೇಠಾ ಅಂದರೆ ಉಪತಾಲೂಕಿನ ರಾಜಧಾನಿ (ಜಾರುರಾ. ೨೪); ಪೇಠಾದ ಸ್ಥಳವಾದುದರಿಂದ ೪-೮ ಕಚೇರಿಯ ಜನರು ಕಣ್ಣಿಗೆ ಬೀಳುತ್ತಿದ್ದರು (ಎಂ ಎ. ೭). ಪೇಠೆ₂: ೧. ಕೃಷ್ಣಾಪುರದ ಪೇಠೆಯ . . . ಸ್ಥಳಸುಂಕ (ಸೌಇಇ. IV, ೨೫೫-೨೫; 1513); ಯಿಾ ಗ್ರಾಮದಲು ಹಳೆ ಪೇಠೆಯಲು (ಎಕ. VIII, ಸೊರಬ. ೩೫೪-೨೪; 1743 ?). ೨. ಸ್ಮರನಿಕ್ಕೆ ರತಿಯರವನೆ ಮಧುವಿನ ಪೇಠೆ[ಪಾಠಾಂ. ಟೆ] (ಸೊಬಸೋ. ೨೫-೫೬). ೫. ತಾಲೂಕು ದೊಡ್ಡದಿದ್ದಲ್ಲಿ ಪೇಠೆಯೆಂಬ ಸಣ್ಣ ಭಾಗ ಮಾಡಿ . . . ಅಧಿಕಾರಿಯನ್ನು ನೇಮಿಸುತ್ತಾರೆ (ಮುಂಬಭೂ. ೪೫); ಈ ಜಿಲ್ಲೆಯಲ್ಲಿ ೮ ತಾಲೂಕುಗಳೂ ೩ ಪೇಠೆಗಳೂ ಇರುವುವು (ಕಾರವಾ. ೭೦).

ಪೇಟೆಧಾರಣೆ = ಮಾರುಕಟ್ಟೆಯಲ್ಲಿ ಆಯಾ ದಿನದಲ್ಲಿ ಇರುವ ಸರಕುಗಳ ಬೆಲೆ: ತೆರಬೇಕು ತಕ್ಕ ಬೆಲೆ, ಪೇಟೆಧಾರಣೆ ಬೇರೆ (ಪಂಮು. ೬೬-೫). [← ಮರಾ. ಪೇಟಾ, ಪೇಠ. / ತಮಿ. ಪೇಟ್ಟೈ; ತುಳು. ಪೇಂಟೆ, ಪೇಟೆ; ತೆಲು. ಪೇಟ]

ಪೇಠಣೆ 'ಪೈಠಣಿ' ನೋ.

ಪೇಠಾ 'ಪೇಟೆ' ನೋ.

ಪೇಠೆ₁ (ನಾ). ಗುಂಪು; ಸಮೂಹ: ಬೆಜವಾಡದೊಳ್ ನ್ಯಾಯಮಂ ಪೇಳ್ದ ಮಧ್ಯಸ್ಥರಂದದ ಜನದ ಪೇಠೆಗಳಿನೊಪ್ಪಿರ್ದುದು (ಶೇರಮ. ೨-೦೦).

[< ಸಂ. ಪೇಟ]

ಪೇಠೆ₂ 'ಪೇಟೆ' ನೋ.

ಪೇಡ, ಪೇಡೆ, ಪೇಢೆ, ಫೇಡೆ (ನಾ). (ಉಕ) ಹಾಲುಖೋವ ಹಾಗು ಸಕ್ಕರೆಯಿಂದ ಮಾಡುವ ಒಂದು ಬಗೆಯ ಮಿಠಾಯಿ; ದೂದಪೇಡ: ಧಾರವಾಡದ ಪೇಡ ಬಾಯಿಗೆ ಹಾಕುತ್ತಿದ್ದ ಹಾಗೇ ಕರಗಿ ಬಿಟ್ಟಿತು (ರೂಢಿ). ಪೇಡೆ: ನಿನ್ನೆ ಎಲ್ಲರಿಗೂ ಪೇಡೆ ಕಳಿಸಿದ್ದಿ (ಕುಂಕುಮ. ೨); ಅದಕ್ಕಾಗಿ ಪೇಡೆ ಹಂಚುವ ವ್ಯವಸ್ಥೆಯನ್ನು ಗುಪ್ತವಾಗಿ ತಿಳುಹಿಸಿರಿ (ಅಮಗಾಂ. ೫೦). ಪೇಢೆ: ಅವಳು ಗಾಡಿಯಲ್ಲಿ ಕುಳಿತ ಮೇಲೆ ಟಿಳಕರು ಖಜ್ಜೂರ ಮತ್ತು ಪೇಢೆ ತಂದು ಅವಳ ಕೈಗಿತ್ತರು (ಸ್ಮೃತಿಪ. ೦೪೪).

ಪೇಡೆ ; ಖಾದರನು ಕೈಚೀಲದಲ್ಲಿ ಫೇಡೇದ ಪುಡಿಕೆಗಳನ್ನು ತಂದಿಟ್ಟನು (ಮುಸ್ತ್ಯರ. ೦೬೬) ; ಊರಲ್ಲೆಲ್ಲಾ ಆ ಸಂಭ್ರಮದ ಪ್ರತೀಕವಾಗಿ ಫೇಡೆ ಹಂಚಿದರು (ಅರಿಯಾ. ೨೨). [←ಹಿಂ. ಪೇಡಾ ; ಮರಾ. ಪೇಡಾ, ಪೇಢಾ]

ಪೇಡಿ₁, ಪೇಟಿ₁, ಹೇಡಿ (ನಾ). ೧. ಅಂಜುಕುಳಿ ; ಕೈಲಾಗದವನು ; ಹೆದರುಪುಕ್ಕ : ಆನೆ ರಿಪುಸೇನೆಗೆ ಸಾಲ್ದೆನವುಂಕಿ ಪೇಡಿ ಪಾಡಿಗಟ್ಟಿಱಿ ವೆಡೆಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟುದೇ (ಕಾಸ್ಯಸಾ. ೯೦೦ ಕೂಪ್ರಳ) ; ಮುಂ ಬಳೆದೊಟ್ಟಿ ಪೇಡಿಯೆ ನಿಮ್ಮನಿಂತಿಳಿಸಿ ಮದ್ಬಲಮೆಲ್ಲವುಂ ಕೊಲೆ ನೋಡುತಿರ್ಪುದು ಪಾಟಿಯೇ (ಸಂಸಪು. ೦೦-೦೯) ; ಪೇಡಿಯಪ್ಪರಸಿನ ಮಾತಿನಂತೆ ದೇಸಗೆಯ ಮುಗಿಲಂತೆ (ರರ್ಮಾಸ್ಯು. ೯-೨೬). ೨. ನಪುಂಸಕ ; ಪಂಡ : "ನಪುಂಸಕಂ ಪೇಡಿ ಪಂಡಕಂ ತಾಂ ಪಂಡಂ" (ಪಸ್ತುಕೋ. ೫೬-೨೬). **ಪೇಟಿ₁** : ೧. ಧರ್ಮಾನುಜಂಗೇಕೆ ಕಿಂಕರನಾದಂ ಕರವೇಟಿಯಾದನದಱಿಂ ಸೂತಂ ಭಟಂ ಪೇಟಿಯೆಂಬರ ಮಾತೊಪ್ಪುಗುಂ (ಗದಾಯು. ೩-೯೩). **ಹೇಡಿ** : ೧. ಹೇಡಿ ಬಿರುದ ಕಟ್ಟಿದಂತಾಯಿತೆನ್ನ ವೇಷ ಕಾದ ಬೇಕು ಕಾದುವರೆ ಮನವಿಲ್ಲಾ (ಜಸಪ. ೩೦೦) ; ರಾಯನಿದಿರಲಿ ಹೇಡಿ ಕಲಿಯಹ (ಕುಪ್ಯಾಕ. ೯-೨೬) : ನನ್ನನ್ನು ಹೇಡಿಯೆಂದು ಎಲ್ಲರೂ ತಿಳಿದುಕೊಂಡಿದ್ದಾರೆ (ಕರ್ಯಕ. ೦೦೨) ; ಹೇಡಿ ಯುದ್ಧಕ್ಕೆ ಹೋಗ, ಖೋಡಿ ಕೆಲಸಕ್ಕೆ ಹೋಗ (ಗಾರ). ೨. "ಉಭಯವ್ಯಂಜನಾ, ಪೋಟಾ—ಈ ೨ ಹೆ(ಪೆ)ಡಿ" (ಹಲಾಯು. ೭೦-೨೬೬). ೩. ಗಟ್ಟಿಯಲ್ಲದುದು ; ಪೊಳ್ಳಾದುದು : ಅರಳೆ . . . ಕಟ್ಟಿಗೆ ಹೇಡಿ, ಕೆಲಸಕ್ಕೆ ಬರುವುದಿಲ್ಲ (ಕಥಾಗೆ. ೩೫) ; 'ಹೇಡಿಮಣ್ಣು' ಪರಾ.

[ದೇ.॥ ತಮಿ. ಪೇಟಿ; ಮಲ.ಪೇಡಿ; ತುಳು. ಹೇಡಿ,ಹೇಡೆ; ತೆಲು. ಪೇಡಿ]

ಪೇಡಿ₂, ಪೇಢಿ (ನಾ). (ಉಕ) ಚಿನ್ನ, ಬೆಳ್ಳಿಯ ವ್ಯಾಪಾರಕೇಂದ್ರ ; ಸರಾಫ್ ಕಟ್ಟೆ : ಈ ಅಜ್ಞಾನ ಮತ್ತು ಭಯದ ಮೂಲಕ ಪೇಟೆಯ ವ್ಯವಹಾರವು ಆಡತಿ ಅಂಗಡಿ ಇಲ್ಲವೆ 'ಪೇಡಿ'ಗಳ ಮುಖಾಂತರವಾಗಿ ಇದುವರೆಗೆ ನಡೆದಿರುವುದು . . . 'ಪೇಡಿ'ಗಳ ವ್ಯವಹಾರಕ್ಕೆ ಕಾಯದೇ ಕಾನೂನಿನ ನಿರ್ಬಂಧವಿರುವುದಿಲ್ಲ (ಪ್ಯಾಂಕಳ್ಯ. ೦) ; ಈ ಮುಂಬಯಿಯೊಳಗಿನ ದುಕಾನಿನ ಹೊರ್ತು ನಮ್ಮ ಮುಖ್ಯ ಪೇಡಿಯೂ ನಮ್ಮ ವಾಸಸ್ಥಾನವೂ ಸೋಲಾಪುರದಲ್ಲುಂಟು (ಮುಂಬಪ್ಯಾ. ೨೦). **ಪೇಢಿ** : ಆಗಿನಿಂದ ನಡೆದು ಬಂದ ಕೆಲವು ಪೇಢಿಗಳು, ಅಂಗಡಿಗಳು, ಸಂಸ್ಥೆಗಳು (ಸಕ್ಕಪ. ೯೨) ; ನಮ್ಮೂರಲ್ಲಿ ಪೇಢೀ ನಡೆಸುತ್ತಿದ್ದ ಗಂಗಾಪ್ರಸಾದತಿವಾರಿ . . . ರಂಗಣ್ಣ, ಇವರೇ ಈ ವಾಸಂತಿಕಾಭತ್ರಕ್ಕೆ ಮಹಾಪಾಲರಾಗಿದ್ದರು (ರೀಪಡ. II, ೦೯೯).

[← ಮರಾ. ಪೇಢೀ]

ಪೇಡಿತನ, ಹೇಡಿತನ (ನಾ). ಅಂಜುಬುರುಕುತನ ; ಪುಕ್ಕಲುತನ : ಏನಯ್ಯ ಪೇಡಿತನಂ, ಅಂಜದಿರ್ (ಅಕ್ಕಪ್ಯಾ. ೯-೬೨) ; ಕೊಲೆಯ ಅಪರಾಧದಿಂದಮಾ ಪೇಡಿತನಪದಮಾನವೋ ಮೇಲು (ಇರ್ಕಪ್ರ. ೯೬-೯೯೩). **ಹೇಡಿತನ** : ನೋಡಿದಳು ದಮಯಂತಿ ಭೀತಿಯಲೋಡುತಿಹ ಬೀಡಿಕೆಯ ವೈಶ್ಯರ ಪೇಡಿ[ಪಾಠಾಂ. ಕೇಡ]ತನವನು (ಸಕಸ. ೩-೯೦) ; ಅವರಲ್ಲಿ ಬೇಗನೆ ಪುಕ್ಕು, ಹೇಡಿತನಗಳು ಮೆಲ್ಲನೆ ಸೇರಿಕೊಳ್ಳುವುವು (ಯಕ್ಷಪ್ರ. ೩೦).

[ಪೇಡಿ₁ + — ತನ]

ಪೇಡೆ 'ಪೇಡ' ನೋ.

ಪೇಢಿ 'ಪೇಡಿ₂' ನೋ.

ಪೇಢೆ 'ಪೇಡ' ನೋ.

ಪೇಣಿ (ನಾ). ಒಂದು ಬಗೆಯ ಸಿಹಿಭಕ್ಷ್ಯ : ಬೆಳತಿಗಕ್ಕಿಯ ಹಿಟ್ಟ ಹೊಸ ಬೆಣ್ಣೆಯಿಂ ಕಲಸಿ . . . ಸರಿಬೆಣ್ಣೆ ಸರಿದುಪ್ಪದೊಳಗೆ ಪಾಕವ ಮಾಡಿ ಪದರಿನೊಳು ಸಕ್ಕರೆಯನಿಡಲದುವೆ ಪೇಣಿಯಹುದು (ಸೂಪಶಾ. ೦-೯೬) ; ಚಿಲುಪಾಲುವ್ರತವೆಂದಳೊರ್ವಳು ಪೇಣಿಯ ಮೆಲಲೊಲ್ಲೆನೆಂದ ಳೊರ್ವಬಲೆ (ಪರಸ. ೨೧-೨೯). [<ಸಂ. ಫೇಣೀ]

ಪೇತ, ಪೇತು, ಹೇದೆ (ನಾ). ೧. ಭೂತ ; ಪಿಶಾಚಿ ; ಪ್ರೇತ : ಕೆಲಕೆ ಕಾದಿಹ ಬೂತಪೇತವು (ಕೌಶಿರಾ. ೩೬-೨೩) ; ಕೊಳುಗಾಣದ ಪೇತರು ಗಳಂತೆ ಕಾಡುವರು ಕಂಡವರ (ಕಂಕಾಂ. ೭-೨೦). ೨. ಹೆಣ; ಶವ : 'ನರಪೇತ' ಪರಾ. **ಪೇತು** : ೧. "ಪೇತು(ತ)—ಪ್ರೇತ = ಪಿಶಾಚಿ" (ಶಪ್ರಕೋ. ೨೬) ; ಪೇತೆ ನೀನೇನು ದೊಡ್ಡಿತು (ಸೋಪಕ. ೦೨-೦೫೯) ; ಪೇತುಗಳಲ್ತೆ ಖೇಚರರು ಭೂಚರರೆಲ್ಲ ಭೂತಗಳಲ್ತೆ (ಪರಸ. ೯೯-೩೫). ೩. ಅಂಜುಬುರುಕ ; ಹೇಡಿ : 'ಪೇತುಗ' ಪರಾ. **ಹೇದೆ** : ೧. "ಹೇದೆ-ಭೂತಂ" (ಕಸುದ. ಸಂ. ೨) ; ತೊನೆವ ನೆಲ ಮಾಟಮಿದು ಮನೆಯ ಕಾಟದ ಹೇದೆ ಬಿನುಗೊಂದು ನೆಲಮುಕ್ಕು ಕಾಡುತಿಹುದು (ಕಾಂಪ್ರ. ೦೫೯-೩೩೯). [< ಸಂ. ಪ್ರೇತ]

ಪೇತು 'ಪೇತ' ನೋ.

ಪೇತುಕಣೆ (ನಾ). (ಆಲಂ) ಹಿಂಸೆಗೊಳಗಾಗಿಸುವ ಅನಂಗನ ಬಾಣ ; ಪುಷ್ಪಬಾಣ : ಚೂತ ಕುಮುದಂ ಕಮಲ ಮಲ್ಲಿಗೆಯಶೋಕೆಗಳ ಪೇತುಕಣೆಗಳ ತೊಟ್ಟು ಕಾತರಿಪ ಸ್ತ್ರೀಪುಂಸರೆಸೆಯೆ ಬೀಳುವರು (ಪ್ರಶುಪು. ೩-೦೨೯).

[ಪೇತು (< ಪೇತ) + ಕಣೆ₁]

ಪೇತುಗ (ನಾ). ೧. ಪಿಶಾಚಿಯಂತಹವನು ; ದುಷ್ಟ : ದುರಾತುಮನು ಪಾಂಡವರ ಕಪಟದ್ಯೂತದಲಿ ವನವಾಸಕಟ್ಟಿದ ಪೇತುಗನು ಕಡುಲಜ್ಜ ಭಂಡನು (ಕುಮುದಾ. ೦೯). ೨. ಅಂಜುಬುರುಕ; ಹೇಡಿ : ತಿರುಗಿ ಸೀತೆಯ ಬಿಟ್ಟೆನಾದರೆ ಕರೆಯ ಪೇ[ಪಾಠಾಂ. ಕೇ]ತುಗನೆಂದು (ಕೊರಶಾ. ೬-೦೨-೦೬) ; ಕಂಡ ದೆಸೆಗೋಡುತಿರಲು ಕೇಳಿ ಚೈದ್ಯಂ ಪೇತುಗರ ಬಯ್ದು (ಯಾದವಾ. ೩೯). [ಪೇತು (< ಪೇತ) + —.ಗ₂]

ಪೇದೆ 'ಪ್ಯಾದೆ' ನೋ.

ಪೇದೆಮಾತು 'ಪ್ಯಾದೆಮಾತು' ನೋ.

ಪೇನ್, ಪೇನ್ನು₁, ಹೇನ್, ಹೇನು (ನಾ). ೧. (ಸಾಮಾನ್ಯವಾಗಿ ಕೊಳ ಕಾದ ಬಟ್ಟೆ ಹಾಗೂ ತಲೆಯ ಕೂದಲಿನಲ್ಲಿ ಸೇರಿಕೊಳ್ಳುವ) ಒಂದು ಬಗೆಯ ಸಣ್ಣ ಹುಳು ; ಯೂಕ : ಅಂತೊಪ್ಪುವ . . . ಶಯ್ಯಾತಳದೊಳ್ ಮಂದವಿಸರ್ಪಿಣಿಯೆಂಬುದೊಂದು ಪೇನಿರ್ಪುದು[ಪಾಠಾಂ. ಯೂಕಮಿಪ್ಪುದು]. (ಸಂಸಕಂ. ೦೨೩-೦೦) ; ರಸಮಂ ಘಣವಲ್ಲೀದಳರಸದೊಳ್ ಮರ್ದಿಸಿ ಬಟಿಕ್ಕೆ ಕಪ್ಪಡದೊಳ್ ಭಾವಿಸಿ ತಲೆಯೊಳ್ ಕಟ್ಟಿದೊಡುಳ್ಳ ಸೀರುಮುಳ್ಳನಿತು ಪೇನುಮಾಗಳೆ ಕಿಡುಗುಂ (ಶೋಕೋಪ. ೯-೩೭) ; ತಲೆಯೊಳ್ತೀವಿದ ಪೇನ ಸೀರ್ಮಲಮನೆಂತುಂ ಬಾರ್ಚಿ (ಜಸಪಸಂ. ಸಂ. ೦-೯) ; ಕಣ್ಣೆಂಜಲೆಂದು ತೂಪಿಱಿದು ಬಣ್ಣದಾವರೆಮೊಗ್ಗೆಮೊಲೆಯ ಬಾಯೊಳ ಗೂಡಿಯುಣ್ಣಲ್ಕೆ ಪೇನ್ಬೆದಕುವಳು (ಸೋಪಕ. ೦೭-೬೩). **ಪೇನ್ನು₁** : ೧. ಸ್ಪರ್ಶ ರಸ ಗಂಧಂಗಳೆಂಬೀ ಮೂಱನಱಿವ . . . ಪೇನು ಸೀರು ತೇಟು . . . ತುಂಬುಬು ಮೊದಲಾದವಱೊಳಂ (ಪಸಾರ. ೪೯). **ಹೇನ್** : ೧. "ಮಸ್ತಕಮ್ಭಗಂ ಷಟ್ಪದಂ ಹೇನೆನಿಕ್ಕುಂ" (ಮಂಗರಾ. ೯೯-೦೯) ; "ಉಂದುಕಂ=ಹೇನ್" (ಕಾಕಕ್ಕ. ೨೬) ; ಕೇಶವಿಳಿದಿಹದೆಂದೆ ಹೇನ್ಸೀರ್ ಸೂಸುತಿಹವೆಲ್ಲಲ್ಲೆ ಮೃತವಹ ಘಾಸೆ ಬಪ್ಪುದು (ಪಕುಭಾ. ೩-೦೫). **ಹೇನು** : ೧. "ಹೇ[ಪಾಠಾಂ. ಪೇ]ನಿಗಂಜಿ ಸಂವರ್ಜಿಪರುಂಟೆ ಕುಂತಳಮಂ (ಪಾರಪು.೦-೩೬) ; ಹೇನನೊರಸುವಡೇಕೆ ಶರಸಂಧಾನ (ಕೊರಶಾ ೬-೪-೩೬) ; ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ (ಪುರಂದ. ೦-೦೨೩-೨). ೨. ಗಿಡಮರಗಳಿಗೆ ಹತ್ತುವ ಕೀಟಗಳಲ್ಲಿ ಒಂದು ಬಗೆ : ಗಿಡಮರಗಳಿಗೆ ಅಂಟಿರುವ ಹೇನುಗಳಲ್ಲೂ ಇನ್ನು ಅನೇಕ ಕೀಟಗಳಲ್ಲೂ ಈ ರೀತಿಯಿಂದ ಸಂತತಿಯು ಬೆಳೆಯುವುದು (ಪಾಂಪ್ರ. II, ೬೦೦) ; ಗಿಡದೆ ಸೀರು ಅಥವಾ ಹೇನುಗಳು (aphids) ಲಕ್ಷಾವಧಿ ಸಂತಾನವನ್ನು ಉತ್ಪತ್ತಿ ಮಾಡುವವು (ಕೀಟಾ. ೬).

ಹೇನ ಕೆರೆ=ಕೂದಲು ಉದುರುವ ಒಂದು ಬಗೆಯ ರೋಗ : ಇಂದ್ರಲುಪ್ತ ಎಂಬುದೊಂದು ಮಂಡೆಯ ಕೂದಲು ಒಂದೂ ಇಲ್ಲದೆ ಉದುರಿ ಮಂಡೆಯ ಚರ್ಮ ಕಾಣಲ್ಪಡುವುದು ; ಅದನೇ ಹೇನ ಕೆರೆ ಎಂಬರು (ಪೈದ್ಯಸಾ. II. ೦೩೦).

[ದೇ. ॥ ತಮಿ. ಮಲ. ನಾಯ್ಕಿ. ಗಡಬ. ಪೇನ್ ; ತುಳು. ತೆಲು. ಕುಇ. ಮಲ್ತೊ. ಪೇನು ; ಕುವಿ. ಪೇನು, ಪೇನೂ]

ಪೇನ್$_1$ (ನಾ). ನೊರೆ ; ಬುರುಗು : "ಪೇನ—ಫೇನ=ನೊರೆ" (ತತ್ಕಕೋ. ೨೬); ಫಕಾರಕ್ಕೆ ಪಕಾರಂ . . . ಫಾಲ್ಗುನ – ಪಾಲುಗುಣ ; ಫೇನ-ಪೇನ (ಶಮದ. ೨೫೫ ಪ್ರಯೋ). [<ಸಂ. ಫೇನ]

ಪೇನ್$_2$ 'ಪೆನ್ನು' ನೋ.

ಪೇನಾ 'ಪೆನ್ನು' ನೋ.

ಪೇನಾರಿ 'ಪೀನಾರಿ$_1$' ನೋ.

ಪೇನಿ (ನಾ). ೧. ಒಂದು ಬಗೆಯ ಪಿಶಾಚಿ : ಬಟ್ಟೆವೋಪರ್ ಪಸಿದೆಳೆಗೆಯ್ಯಂ ಪೊಕ್ಕಂತೆ ಪೊಟ್ಟೆಯನುರ್ಚಿ ತಿಂಬ ಪೇನಿಗಳುಂ (ಬಂಹರಿ. ೨-೦೦ ವ). ೨. (ಆಲಂ) ಲೋಭಿ ; ಜಿಪುಣ : ಪೇನಿಗಳಂ ಪೊಗಟದಿರಭಿಮಾನಿಗಳಂ ಗುಣದ ಕಣಿಗಳಂ ವಸುಮತಿಯೊಳ್ ದಾನಿಗಳನೂನಮಿಲ್ಲದ ಮೋನಿಗಳಂ ಪೋಗಿ ಪೊಗಟ (ಎಕ. V. ಪೇಲೂರು. ೦೨೩-೦೭ ; ೯೮೭) ; ತಾನುಣ್ಣದ ಪೆಱರ್ಗಿಕ್ಕದ ಪೇನಿಯ ಪಚ್ಚಡಿಕೆಯೆನಿಪ ಲೋಭಿಯ ಪೊನ್ನ . . . ಕವರ್ದುಕೊಂಡು (ರರ್ಮಾಮ್ಯ. ೨-೩೪). [ದೇ. ॥ ಕುವಿ. ಪೇನು]

ಪೇನು$_1$ 'ಪೇನ್' ನೋ.

ಪೇನು$_2$ 'ಪೆನ್ನು' ನೋ.

ಪೇಪಂದಿ (ನಾ). ಹೆಣ್ಣುಹಂದಿ : ಆ ಪೊಟಲೊಳ್ . . . ಪೇಪಂದಿಯಾಗಿ ಪುಟ್ಟಿ (ಪಡ್ಡಾರಾ. ೧೦-೬) ; ಆ ಪುರದೊಳ್ ಪೇಪಂದಿಯಾಗಿ ಬಂದು (ಸುಕುಮಾ. ೩-೨೭) ; ಅಮೇಧ್ಯದ ನಾಯ ಪೇಪಂದಿಯ ಕತ್ತೆಗಳ ನಡುವೊಂದೆರಡು ಜಾವಂಬರಮಿರ್ದು (ಬಂಹರಿ. ೪-೪ ವ). [<ಪೆಣ್ + ಪಂದಿ]

ಪೇಯ (ನಾ). ೧. ಕುಡಿಯಲು ಯೋಗ್ಯವಾದುದು ; ಪಾನೀಯ ; ಮದ್ಯ, ಪಾನಕ, ಚಹಾ, ಕಾಫಿ ಮುಂತಾದುವು : ನೀರಿಲ್ಲದಿದ್ದರೆ ಚಹಾ, ಕಾಫೀ, ಕೋಕೋ ಮೊದಲಾದ ಪೇಯಗಳನ್ನು ಕುಡಿದು ಬದುಕಬಹುದಲ್ಲವೆ (ನಿನೋದ. ೦೪) ; ಬಾರಿನಿಂದ ಯಾವ ಯಾವುದೋ ಪೇಯಗಳನ್ನು ತರಿಸಿ ಕುಡಿಯುತ್ತಿದ್ದಾರೆ (ಕ್ಷಿತಿಜ. ೬). ೨. ಭಕ್ಷ್ಯ, ಭೋಜ್ಯ, ಲೇಹ್ಯ ಮತ್ತು ಪೇಯ ಎಂಬ ನಾಲ್ಕು ವಿಧವಾದ ಆಹಾರಗಳಲ್ಲಿ ಒಂದು : ಬಾರದ ಭವದಲ್ಲಿ ಬಂದು, ಉಣ್ಣದ ಪೇಯವನು ಉಂಡು, ಕಾಣದ ದುಃಖವ ಕಂಡು (ಶರಸ. ೬೩೬) ; ಮನುಷ್ಯರ ಜಠರದಲ್ಲಿರುವ ವೈಶ್ವಾನರಾಗ್ನಿಯಲ್ಲಿ . . . ಸಂಯುಕ್ತನಾಗಿ ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯ ಎಂಬ ನಾಲ್ಕು ವಿಧ ಅನ್ನವನ್ನು ಜೀರ್ಣ ಮಾಡುತ್ತೇನೆ (ಭಾತತ್ವ. ೦೬೮). ೩. ಭೋಜ್ಯ, ಪೇಯ, ಚೋಷ್ಯ, ಲೇಹ್ಯ, ಖಾದ್ಯ, ಚರ್ವಣ, ನಿಷ್ಪೇಯ ಮತ್ತು ಭಕ್ಷ್ಯಗಳೆಂದು ಆಹಾರಗಳು ಎಂಟು ವಿಧ ಎಂಬ ವಿವರಣೆಯೂ ಇದೆ. ೩. ನೀರು. ೪. ಹಾಲು. [ಸಂ.]

ಪೇಯತ್ತಿ (ನಾ). ಒಂದು ಬಗೆಯ ಅತ್ತಿಮರ : "ಮಲಯೂಃ–ಕಲ್ಲತ್ತಿ, ಪೇಯತ್ತಿ" (ಕಿಸಂ. ೦೦೪). [ಪೇಯ ? + ಅತ್ತಿ$_1$]

ಪೇರ್$_1$ 'ಪಿರ್ಕಿ' ನೋ.

ಪೇರ್$_2$ 'ಪೆಸರ್' ನೋ.

ಪೇರ್ಗಂಡೆ (ನಾ). ದೊಡ್ಡ ಪಾತ್ರೆ.—ಅಂಡೆ : ಶತಸಂಖ್ಯೆ ಕೊಪ್ಪರಿಗೆಯಿಂ ಬಹುವಿಧದ ತೈಲಂಗಳ ಮಿಂದೆದ್ದು ಪೇರಂಡೆಗಳಲಿ ಮೊಗದತಿ ಪಂಜು ತಂಡವಂ ಪತ್ತಿಸಿದರು (ಲಕ್ಷ್ಮಣಾ. ೬-೬-೩೩).

[ಪೇರ್$_1$ (<ಪಿರಿದು$_1$)+ಅಂಡೆ$_2$]

ಪೇರಂದ (ನಾ). ಅತಿಶಯವಾದ ಪ್ರದರ್ಶನ : ಆ ಪರ್ತಕನು ದೊರೆಯನ್ನು ತನ್ನ ಮನೆಗೆ ಔತಣಕ್ಕೆ ಕರೆದನು ; ತನ್ನ ಭಾಗ್ಯವನ್ನೆಲ್ಲಾ ಪೇರಂದ ಮಾಡಲು ಹೊರಟನು (ನೀತಿಸಂ. IV, ೩).

[ಪೇರ್$_1$ (<ಪಿರಿದು$_1$)+ಅಂದ]

ಪೇರಗಳು 'ಪೇರಗಟ್' ನೋ.

ಪೇರಗಟ್, ಪೇರಗಳು (ನಾ). ದೊಡ್ಡದಾದ ಕಂದಕ : ಸೀರ್ಪನಿಯಾಯ್ತುಬ್ಧಿಯೆನುತ್ತುಮಾರ್ದುಲಿವವೋಲೊಪ್ಪಿರ್ಪುದಾ ಪೇರಗಟ್ (ಕುಸುಮಾ. ೨-೭೩). ಪೇರಗಳು : ಪೇರಗಳು ವಾರಿನಿಧಿ ಚಕ್ರವಾಳಾದ್ರಿ ವಿಸ್ತಾರತರ ಕೋಟಿ ತತ್ಪುರವೆ ಜಂಬೂದ್ವೀಪ (ಸಾಕ್ಯಾಪ. ೨-೯) ; ನೆಗಳಾನೆ ಮೀನ್ಗಳನೊಳಕೊಂಡು ಬಂದು ಪೇರಗಳಾಮದಬ್ಧಿ ದ್ವಾರಕೆಗೆ (ಪೋಷಕ. ೩-೩) ; ಬಂದು ಬಿದ್ದರಮರಾವತಿಯ ಪೇರಗಳನಮರಧಟರು (ಸಂಪು. ೨೯-೨೯). [ಪೇರ್$_1$ (<ಪಿರಿದು$_1$)+ಅಗಟ್$_2$(<ಅಗುಟ್$_3$)]

ಪೇರಗುಟಿ (ನಾ). ದೊಡ್ಡ ಅಗುಳಿ ; ಭಾರಿಯಾದ ಲಾಳವಿಂಡಿಗೆ : ಭರದೊಳ್ಮುಱಿದರ್ ಬಿಡುಗಣ್ಣರೂರ ಪೇರಗುಟಿಗಳಂ (ಅಪ್ರತಿ. ೩೨-೨).

[ಪೇರ್$_1$ (<ಪಿರಿದು$_1$)+ಅಗುಟಿ (<ಅಗ್ಗಟಿ$_1$)]

ಪೇರಟೆ (ನಾ). (ಕರಾ) ವರನ ಮನೆಗೆ ಮದುಮಗಳ ಸಂಗಡ ಹೋಗುವ ಆಕೆಯ ಅಕ್ಕ ಅಥವಾ ತಂಗಿ : ಅಕ್ಕನ ಜೊತೆಗೆ ಪೇರಟೆಯಾಗಿ ಅವಳ ಊರಿಗೆ ಹೋಗಿದ್ದಳು (ರೂಢಿ). [?]

ಪೇರಟ್ಟಣೆ 'ಪೇರಟ್ಟಳೆ' ನೋ.

ಪೇರಟ್ಟಳೆ, ಪೇರಟ್ಟಣೆ (ನಾ). ದೊಡ್ಡ ಬುರುಜು,—ಕೊತ್ತಳ : ಮಿಳಿರ್ಪುತ್ತುಂಗಧ್ವಜು ಮಾರ್ಪೊಳೆವ ಜಲಧರವ್ರಾತಮೆಂಬಂತೆ ಪೇರಟ್ಟಳೆಗಳ್ ತಳ್ತಿತ್ತಲುಂ ಬಿಂಬಿಸೆ (ರರ್ಮಾಮ್ಯ. ೨-೬೯). ಪೇರಟ್ಟಣೆ : ಮಕರಬಿಬ್ಬಿ ಪೇರಟ್ಟಣೆಗಳಮರನಾಯಕರ ಕಾಯ್ಪಿಂ . . . ಮನಕೆ ಮಂಗಳವೆನಿಸುವಮರಾವತಿಯ ಪುರಕ್ಕೈತಂದನೆಮ್ಮ ರುದ್ರಂ (ನೀಕೈಪು. ೨-೩-೦೯).

[ಪೇರ್$_1$ (<ಪಿರಿದು$_1$) + ಅಟ್ಟಳೆ]

ಪೇರಟ್ಟೆ (ನಾ). ದೊಡ್ಡ ಮುಂಡ ; ದಪ್ಪವಾದ ದೇಹ : ನೆಟ್ಟನೆ ನಡೆಯುತ್ತೆ ಪಡಲ್ವಟ್ಟರ ಪೇರಟ್ಟೆಗಳನೆ ಮೆಟ್ಟುಗೆಗೆಯ್ದು (ಪಕನಿ. ೨-೦೦೯).

[ಪೇರ್$_1$ (<ಪಿರಿದು$_1$) + ಅಟ್ಟೆ$_1$]

ಪೇರಡಗು (ನಾ). ಅಧಿಕವಾದ ಮಾಂಸ : ದೆಸೆದೆಸೆಗೆ ನರಶಿರಂ ತೆತ್ತಿಸಿ ಮೆಱೆದುವು ಮಗಿಲೊಳಬ್ಬೆ ಪೇರಡಗಿನ ಪೆರ್ಬೆಸನದೆ ಪೊಱಗಣ ಜೀವ ಪ್ರಸರಮುಮಂ ಪಲವು ಮುಖದಿನವಳೋಕಿಪವೋಲ್ (ಯಶೋಸ. ೦-೩೬) ; ತೊಡೆ ಪೇರಡಗಿನ ಕಾಳಿಜದೆಡೆ ಚರಣಂ ದುರಿತಕಾರಣಾ ತಾನೆನಿಪ . . . ಗಣಿಕೆಯರೊಡಲೊಳ್ಪುರುಡುಂಟೆ (ಪ್ರಸಂ. ೨೮-೭೦).

[ಪೇರ್$_1$ (<ಪಿರಿದು$_1$)+ಅಡಗು$_3$]

ಪೇರಡಬಳ (ನಾ). ಹೆಚ್ಚಾದ ಆತಂಕ ; ಅಧಿಕವಾದ ಕಾತರ : ಕಾರುಣ್ಯನಿಧಿಯ ಕಾರುಣ್ಯಮಿಂತಾಯ್ತೆನುತಪಾರಭೀತಿಗ್ರಸ್ತಮನನಾಗಿ ಬಾಯಳಿದು ಪೇರಡಬಳು ಬಲಿದು ಬಸವಳಿವುತಿರ್ಪನ್ನಂ (ಕೂಟ್ಯೂಪ. ೦೩-೦೯).

[ಪೇರ್$_1$ (<ಪಿರಿದು$_1$) + ಅಡಬಳ$_?$]

ಪೇರಡವಿ, ಹೇರಡವಿ (ನಾ). ದೊಡ್ಡ ಕಾಡು ; ದಟ್ಟವಾದ ಅರಣ್ಯ : ಒರ್ವನೆ ಸಂಧಿಸಿ ಪೋದನಂದು ಪೇರಡವಿಯೊಳಾ ತುರಂಗವದನರ್ಕಳ ಬೆಂಬಟಿಯಂ ಮಹೀಭುಜಂ (ಕಾದಂಪೂ. ೬೨೦) ; ಭೃತ್ಯರ್ಗೆ ಪೇರಡವಿಯೊಳ್ ಪಣ್ಣಲಂಗಳನಱಸಿ ಶನ್ನಿಮೆಂದು ಪೇಟ್ವುದುರಿ (ರರ್ಮಾಮ್ಯ. ೨-೦೬೩) ; ಪಾತಕಿಯನಟ್ಟುವಂತೆ ಪೇರಡವಿಗಟ್ಟುವೊಡೆ (ಕ್ರೀರಾಮ. ೩-೨೨). ಹೇರಡವಿ : ಆಡಿನ ತತ್ತಿಯೊಳಗೊಂದು ಹೇರಡವಿ ಇದ್ದಿತ್ತು ಆ ಹೇರಡವಿಯೊಳಗೆ ಮೇರುವೆ ಇದ್ದಿತ್ತು (ಆದಪ. ೪೮-೦೦೭) ; ಕೌರವಪಡೆಯ ಹೇರಡವಿಯನು ಸವಱಲು ಕಡಿತಕಾಱರು ಮುಂದೆ ಹೊಕ್ಕುದು(ಕುಸುಮಾ. ೩-೮);

ಹೇರಡವಿಗಳ ಮೊತ್ತದಲಿ ಮೈಮಱೆಯದಱಸಿದರಾ ನಿಶಾಚರನ (ಕೂರಂಗ. ೯-೦೦-೦೩). [ಪೇರ್$_1$ (<ಪಿರಿದು$_1$)+ಅಡವಿ]

ಪೇರಡಿ (ನಾ). ೧. ದೊಡ್ಡ ಪಾದ: ಪದದಾದಿಯ ಹ್ರಸ್ವಕ್ಕೆ ಬಹುಳತೆಯಿಂ ದೀರ್ಘಮಕ್ಕುಂ . . . ಪೇರಡಿ, ಪೇರೊಡಲ್ (ಕಮದ. ೦೬೦ ಪ್ರಯೋ). ೨. ಶ್ರೇಷ್ಠವಾದ ಪಾದವುಳ್ಳವನು ; ಪೂಜನೀಯ: ಶಣ್ಪನ್ ತರ್ಪಾ ಪೇರಡಿ ಬಾರಯ್! ನೋವನ್ ನೀಗುವ ಪೇರಡಿ ಬಾರಯ್! (ಅಂತಿಗೊ. ೩೦-೦೦೬೩). ೩. ದಾಪುಗಾಲಂ ಹಾಕಲಂ ಅನುಕೂಲವಾಗುವಂತಹ ಕಾಲುಳ್ಳುದು ; ನಾಯಿ : "ಪೇರಡಿ, ಸೊಣಗಂ, ಜಾಯಿಲಂ—ಈ ೩ ಕುಕ್ಕುರಂ" (ಕಕಾ. ೩೦-೦೦೬); ಪೇರಡಿ ತನ್ನನಟ್ಟಿಯಿಂ ನಲಿನಲಿದಾಡೆ ಪೋದ ಮನುಜಂ ಪಡೆಗುಂ ತನಗಿಷ್ಟಸಿದ್ಧಿಯಂ (ಲೋಕೋಪ. ೦೨-೨೩); ಬೇಂಟೆಯ ಪೇರಡಿಗಳಂ ಮುಂ ಬಿಟ್ಟು (ಮರಾಪ. ೦೦-೩೦).

[ಪೇರ್$_1$ (<ಪಿರಿದು$_1$)+ಅಡಿ$_1$]

ಪೇರಡ್ಡ (ನಾ). (ಆಲಂ) ಮುಖವನ್ನು ತಿರುಗಿಸುವಿಕೆ; ತಿರಸ್ಕಾರ : ಅಂತುದಾಸೀನಮಾನಸಂ ಮಸಕಮಿಲ್ಲದ ಸಾರ್ವಭೌಮಂ ಪೇರಡ್ಡಮಾಗಿ ಕೆಲದ ಚಕ್ರಾಯುಧನೊಳ್ ತಮ್ಮಂಗಬಾಹ್ಯವಸ್ತುವಂ ಪರಿತಂ ಮಾಡುತ್ತಿರೆ (ಕಾಂತಿಪು. ೧೦-೦೦೬ ಪ). [ಪೇರ್$_1$ (<ಪಿರಿದು$_1$) + ಅಡ್ಡ$_1$]

ಪೇರಣ, ಪೇರಣೆ (ನಾ). ನೃತ್ಯ ಮುಂತಾದ ಮನರಂಜನೆಯ ಪ್ರದರ್ಶನ : ಭೂವರನ ಮುಂದಾಡುತಿಹ ಪೇರಣ ದಲೆಂಬ ಸಂವರಣೆ ಗುಂಟಾದ ವಾಜಿಗಳೆಯ್ದ ಚಾರಿವರಿದಾಡಿದವು ಶತಕೋಟಿಯು (ಹಸಕಾ. ೩-೨೦); ರುದ್ರಕನ್ನೆಯರುಗ್ಗಡದ ಪಾತ್ರ ನೂಱೊಂದು ತಾಳಮೇಳದ ಲಕ್ಷಲಕ್ಷಣವ ತೋಱು[ತ್ತೆ] ಗುಂಡಾಲದೊಲಂಡಲೆದು ಪೆಕ್ಕಣದ ಪೇರಣದ ಲಾಸ್ಯಗಳ (ಗುಪಸ. ೩-೯೯); ಪೇರಣ ಪೆಕ್ಕಣ ಗುಂಡಲಂಗಳಂ ಬಲ್ಲ ಸಾತ್ವಿಕ ಆರಭಟಿ ಕೌಶಕಿಯೆಂಬ ಪಾತ್ರಂಗಳಿಂ (ದಶಾವ. ೨-೦೦ ಪ). **ಪೇರಣೆ**: ಹಾಡುತಿಹ ಗುರುನಿರೂಪಿತದ ವಚನಂಗಳಿಂದಾಡುತಿಹ ಪೇರಣೆಯ ವೇಡಾಂಕ ಕೇಳಿಕೆಯ ನೋಡುತಿಹ ಪೃಥ್ವಿಯ ಮಹಾಭಕ್ತಜನದ ಸಮ್ಮರ್ದನವ ಕೆಲವಿಂಗಿಸಿ (ಸಿದ್ಧರಾ. ೮-೭೯); ಲಾಲಿಪ ಪೇರಣೆಯೊಳ್ಮಿಗೆ ಮೇಲೆನಿಸುವ ಕುಶಲೆ . . . ಕಾಲೇ ನಾಲಗೆಯೆಂಬಂತೋಲಗದೊಳ್ ಕುಣಿದು ದೇವಿಯಂ ಮೆಚ್ಚಿಸಿದಳ್ (ಬಾಧಪು. ೬-೮೩); ನಾಟಕದ ಪಾತ್ರದ ಪೇರಣೆಯ ಜೋಳಿಗಳ ಜೋಕೆಗಳ ಪ್ರಕಟವೆಸೆಯಲು (ಬಸಪು. ೯-೬); ಬಿತ್ತರದ ನೂಪುರಂಗಳನಿಟ್ಟು ಕಾಲೊಳಗೆಯತ್ಯಧಿಕ ಸಪ್ತತಾಳದ ಪೇರಣೆಯ ನಟಿಸೆ (ಸಕುಪು. ೦-೯-೭೬). [< ಪ್ರಾ. ಪೇರಣ./ಸಂ. ಪೇರಣಿ]

ಪೇರಣಿ$_1$ (ನಾ). ೧. ದೊಡ್ಡ ಪದಾತಿಸೇನೆ; ಭಾರಿ ಸೈನ್ಯ: ಅಂತು ಪೇರಣಿ ಪೆಣಮಯಮಾಗೆ (ಸಂರಾಮಾ. ೦೩-೩೬ ಪ); ಇಸುವ ಧನುರ್ವಲಂ ಭರದಿನೆಯ್ದುವ ಪೇರಣಿ (ಪಗಂ. ೦೯-೯೯). ೨. ದೊಡ್ಡ ಸಾಲು, —ಶ್ರೇಣಿ : ಅಣಿಯರಮಿಸೆ ಕುವರನ ಕೂರ್ಗಣೆಯೇಱಿಂ ಪಱಿದು ಬಿರ್ದ ಖಚರರ ತಲೆ ಸಂದಣಿಸೆ ವಿಮಾನಂಗಳ ಪೇರಣಿ ಪೋಲ್ತುದು ತೆಱೆದ ಮೊಗದ ಪೇಳಿಗಳಿರವಂ (ಸಂದ್ರಪು. ೬-೩೯). [ಪೇರ್$_1$ (<ಪಿರಿದು$_1$)+ಅಣಿ$_3$]

ಪೇರಣಿ$_2$ (ನಾ). =ಪೇರಣ: ಗೀತದ ಮಾತ ಮಾನುಷಮಿದೇಂ ಪಂಚಾಂಗ ಮೊಪ್ಪಿತ್ತೊ ಪೇರಣಿ ಸಂಕ್ರಂದನನಲ್ಲದಿಲ್ಲೆನಿಸಿದತ್ತಾ ತಾಂಡವಾಡಂಬರಂ (ಅನಂಪು. ೩-೯೬). [ಸಂ.]

ಪೇರಣಿಗ (ನಾ). ನಾಟ್ಯ ಮಾಡುವವನು; ನರ್ತಕ : ಕವಿ ಗಮಕಿಗಳ ನವರಸಂಗಳಂ ಕೇಳುತುಂ ನವಪೇರಣಿಗರ ರಸದಾಟಮಂ ನೋಡುತುಂ (ಸಂಬರ. ೯-೦೯೦); ಸುಕವಿಗಳ ಶಾಸ್ತ್ರಾಗಮಿಕ ಭಾವಕ ಕಲಾವಿದ ಪೇರಣಿಗ ವಾದ್ಯಕರ ಶಿಲ್ಪಿಗ . . . ಸುಗಂಧಾಧಿಕರ ಕೇರಿಗಳಿರವ ಚಿತ್ತೈಸೆನುತರಸ ನಡೆದ (ಸಂಕಥಾ. ೯-೨೬). [ಪೇರಣ+—ಇಗ]

ಪೇರಣಿಲ್, ಹೇರಣಿಲ್, ಹೇರಣಿಲೆ (ನಾ). ೧. ಒಂದು ಬಗೆಯ ಕೋಡಗ (?): "ಪೇರಣಿಲೆನೆ ಸೊಂದಿಗೋಡಗಂ" (ಸಕುಶಿ. ೭೬). **ಹೇರಣಿಲ್**: ೨. ದೊಡ್ಡ ಜಾತಿಯ ಅಳಿಲು : ಹೇರಣಿಲ್ ಗಿಡುಗ ಮೊಲಂ . . . ಕೂರಗೆಯೆಂಬಿವನೈದೆ ಕಾನಿನೊಳ್ಗಡಣದೆ ಪೊತ್ತು ಬೇಡವಡೆ ಬಂದುದು (ಸೂಕ್ತಿಸು. ೩-೦೬೬). **ಹೇರಣಿಲೆ**: ೨. ಹೇರಣಿಲೆಯಿವು ಮುಂಗುರಿಗಳಿವು ಗೌಜುಗೆಗಳಿವು ಗಜಗಮನೆ ನೋಡು (ಕೊರರಾ. ೩-೦-೩೦).

[ಪೇರ್$_1$ (<ಪಿರಿದು$_1$)+ಅಣಿಲ್]

ಪೇರಣೆ 'ಪೇರಣ' ನೋ.

ಪೇರಣೆಮಣಿ (ನಾ). (?) : ಪತ್ತಿದರುಣೌಘದಿನಾ ವೃಷಶೃಂಗಯುಗ್ಮು ಮೊಂದಣಿಯರಮಾಯ್ತು ಸಾರವಿಸಿ ನೆತ್ತರೊಳೊಕ್ಕೆಱೆದರ್ಚಿಸಿರ್ದ ಪೇರಣೆ [ಪಾಕಾಂ. ಣಿ]ಮಣಿಯೆಂಬ ಭೈರವನ ಲಿಂಗದ ಸೀಯದರಂಬೊಲದ್ಭುತಂ (ಅರ್ಧಪೇ. ೯-೦೨೨). [?]

ಪೇರರ್ಬಿ 'ಪೇರರ್ವಿ' ನೋ.

ಪೇರರ್ವಿ, ಪೇರರ್ಬಿ (ನಾ). ದೊಡ್ಡ ಜಲಪಾತ : ಪೇರರ್ವಿಗಳ್ವೆರಸು ಜಾಜಿನ ಪರ್ವತಂಗಳಂತೆ ಕೆಡೆದು (ಪಂಪಭಾ. ೦೦-೯೬ ಪ); ಪೇರರ್ವಿಗಳಿ ನಸದಳಂ ಕಣ್ಗೆ ಚೆಲ್ವಾಗಿ . . . ಚಿತ್ರಕೂಟಂ ಸೊಗಯಿಸೆ (ಪಂಶಾಮಾ. ೭-೩೦). **ಪೇರರ್ಬಿ**: ಪೆರ್ಗೆಱೆಗಳಿಂ ಪುಂಡ್ರೇಕ್ಷುವಾಟಕ್ಕೆ ಪೊಣ್ಮುವ ಪೇರರ್ಬಿಗಳೆತ್ತಲುಂ ಸೊಗಯಿಕುಂ (ಸುಕುಮಾ. ೯-೯೩).

[ಪೇರ್$_1$ (<ಪಿರಿದು$_1$) +ಅರ್ವಿ]

ಪೇರಲ, ಪೇರಲೆ$_2$, ಪೇರಿಲ, ಪೇರಿಲು (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಸೀಬೆ : ಚುದೂರಿನಲ್ಲಿಯೇ ಅವರ ಪೇರಲ ಬನ ದೊಡ್ಡದು (ಶಿಸರ್ಗ. ೯೩); ಪೇರಲದ ತೋಟಗಳ ಹಳದಿ ಬಣ್ಣದ ಹಣ್ಣು (ಭಾವಪೇ. ೨೨-೨೩); ಹುಬ್ಬಳ್ಳಿಯಿಂದ ಪೇರಲಹಣ್ಣಿನ ಬುಟ್ಟಿ . . . ಕಳಿಸಿ ಕೊಡುವಳು (ಗಂಮಾಯಿ. ೩೭). **ಪೇರಲೆ$_2$**: ಹೊರಗಡೆ ಪೇರಲೆ ಮರದ ಮೇಲೆ ಮಂಗಗಳ ಕುಣಿತ (ಹೊಸಕ್ಷಿ. ೭೬). **ಪೇರಿಲ** : ನೇರಿಲ ಪೇರಿಲ ಬೋರೆಯ ಬೆಳವಲ ಫಲವಿಹುದು (ಕರುಶ್ರಾ. ೩೯-೦೩). **ಪೇರಿಲು** : ಬೆಲ್ಲವತ್ತಂ ಬೇವು ಬಿಕ್ಕೆ ತಂಡಸಿ ತಪಸಿ ನೆಲ್ಲಿ ಪೇರಿಲು ಮಾವು ಬದರಿ (ಸಿದ್ಧಕಾ. ೬-೦೭). [?./ಮರಾ. ಪೇರೆ, ಪೇರು]

ಪೇರಲೆ$_1$ (ನಾ). ಭಾರಿಯಾದ ಅಲೆ ; ದೊಡ್ಡ ಅಲೆ : ಇದು—ದುಗುಡ ಸಂತಸದ ಪೇರಲೆಗಳೇರಿಳಿತದಿಂದೆ ಮೆರೆದಾಡುತಿಹ ಸಂಸಾರಸಾಗರದೊಳಲೆ ಯುತಿಹ ಜೀವಿಗಳ . . . ನೀರ್ಗುಡಿಸಿ ನಗುನಗುವ ಕಾಲನರಮನೆ! (ಕಪಕಾ. ೨೯-೦೯). [ಪೇರ್$_1$ (< ಪಿರಿದು$_1$) + ಅಲೆ$_3$]

ಪೇರಲೆ$_2$ 'ಪೇರಲ' ನೋ.

ಪೇರಳ್ಕು (ನಾ). ಅತಿಯಾದ ಹೆದರಿಕೆ,—ಅಂಜಿಕೆ : ಪೇರಳ್ಕು ಪೇರಬಲ ಕಲ್ಲೋಲದಂತೆವೋಲ್ ಪುರ್ಚಿಬ್ದು ಬಡಿಗುಮೇ ಬಡಿಬಡಿಪ ನುಡಿಗಳ್ (ಬದ್ಧಪ್ರ. ೯೬-೦೦೦೩). [ಪೇರ್$_1$ (< ಪಿರಿದು$_1$) + ಅಳ್ಕು$_2$]

ಪೇರಳ್ತಿ (ನಾ). ಹೆಚ್ಚಿನ ಪ್ರೀತಿ ; ಅತ್ಯಾಸಕ್ತಿ : ಬುಧಷಟ್ಪದವ್ರಜಕೆ ಪೇರಳ್ತಿಯಂ ಜನಿಸುವೀ ಕಾವ್ಯಂ . . . ಫಲವನೀಯದಿರದು (ಶೇಷರಾ. ೦-೦೨). [ಪೇರ್$_1$ (< ಪಿರಿದು$_1$) + ಅಳ್ತಿ(< ಅಟ್ತು)]

ಪೇರಱಿಕೆ, ಹೇರಱಿಕೆ (ನಾ). ಅಧಿಕವಾದ ಕೀರ್ತಿ ; ಅತಿಶಯವಾದ ಖ್ಯಾತಿ : ಪೆರ್ಬುಲಿಯ ಮಿಸೆಯೊಳುಯ್ಯಲನಾಡುವೊಂದು ಪೇರಱಿಕೆಯ ಬೀರರ್ (ಎಕ. VII, ೨೫೦. ೯೬-೦೭ ; 1100) : ಇರ್ಪರಿರ್ವರ್ ನೆಱೆದೊಕ್ಕಲ್ತನದ ಪೆರ್ಮೆಯೊಕ್ಕಲಿಗರ್ ಪೇರಱಿಕೆಯ ಶಶಿ ಸೂರ್ಯಾಖ್ಯರ್ (ಸಂದ್ರಪು. ೩-೬೭) ; ತಕ್ಕಿನ ರಕ್ಕಸರನೊಕ್ಕಲಿಕ್ಕಿದ ಪೆಸರ ಪೇರಱಿಕೆಯೊಳಿಂತೆಂದಂ (ಕಶ್ಮಿಕಾ. ೨೯೩). **ಹೇರಱಿಕೆ**: ಅದಳರ ರಾಮಂ ಮಱುಗರೆ ನಾಡೊಳಗೇ ಹೇರಱಿಕೆಯ ಕಯ್ದಾಳದಲಿ ಧರ್ಮೋನ್ನತಿಯಂ ಆ ಕಯ್ದಾಳದ ವಿಳಾಸಾಱ್ಪದವದೆಂತೆಂದೊಡೆ (ಎಕ. XII, ಕುಮಕೂ. ೯-೩೬; 1151) ;

ಕುಂದದೆ ಲಕ್ಷ್ಮಿಯಿರ್ಪ್ಪ ಹೇರಱಿಕೆಯಶೇಷಸೌಖ್ಯನಿಳಯಂ (ಎಕ. IV. ಹುಣಸೂ. ೦೩೬-೪೩ ; 1162). [ಪೇರ್$_1$ (< ಪಿರಿದು$_1$) + ಅಱಿಕೆ]

ಪೇರಱ್ (ನಾ). ದೊಡ್ಡ ಬಂಡೆ : ಪೇರಱ್ಯ ತೆಱದೆ ಜಲಪುಂಜದಿಂ ಮಿಂಚಿನಿಂ ಸಾರಮೊಳಗಿಂದೆ . . . ಮುಂಗಾರ್ ಬಂದುದು (ಭಾವಸಂ. ೬-೨).

[ಪೇರ್$_1$ (< ಪಿರಿದು$_1$) + ಅಱ್$_4$]

ಪೇರಾಣ್ಕೋವ (ನಾ). ಒಬ್ಬಾತನ ಹೆಸರು : ಸತ್ತಾನ್ ಪೇರಾಣ್ಕೋವನ್ (ಸ್ಕೃಅಂ. ೧೯೦೭, ೦೦-೫ ; 7ನೆಯ ಶತ) ; ಮಂದುವೂರಾ ತೊಱು ಕೊಳ್ವಲ್ಲಿ ವಿಟ್ಟೋರ್ ಪೇರಾಣ್ಕೋವರ್ (ಎಕ. X, ಶ್ರೀಪಾ. ೨೦-೬ ; ಸು. 750). [?]

ಪೇರಾನಂದ, ಹೇರಾನಂದ (ನಾ). ಅತಿಶಯವಾದ ಸಂತೋಷ,-ಹಿಗ್ಗು ; ಮಹದಾನಂದ : ಹೋ ! ಆನಂದಂ ! ಪೇರಾನಂದಂ ! ನೆಗೆವಾ ಕುಣಿವಾ ಮಿಗುವಾನಂದಂ ! (ಅಶ್ವತ್ಥಾ. ೨೮-೫೪೫). **ಹೇರಾನಂದ** : ಅವನಾಟವನು ಕಣ್ತುಂಬ ನೋಡುತಿಹೆವದುವೆ ಹೇರಾನಂದವಾನಂದ ! (ಪಡೆದಾ. I, ೪೫೨).

[ಪೇರ್$_1$ (< ಪಿರಿದು$_1$) + ಆನಂದ]

ಪೇರಾನೆ, ಹೇರಾನೆ (ನಾ). ದೊಡ್ಡ ಆನೆ : ಪಾಱಿ ತಾಱಿದ ಪೇರಾನೆಯೊಡಲ್ಗಳಭ್ರತಳದೊಳ್ ಸಿಲ್ಕಿರ್ದುವು (ಪಂಪಭಾ. ೧೦-೬೬); ಭೂತಗಣಂ ಪೇರಾನೆಯ ನೆಣನಂ ತಿಂದೆರ್ದ್ದಾನಂದದೆ ಕೂಡೆ ನಲಿದು ನರ್ತ್ತಿಸುತಿರ್ಕ್ಕುಂ (ಎಕ. VIII, ಸಾಗರ. ೧೦೯-೩೯ ; 1042) ; ಪೇ[ಶಾಠಾಂ. ಹೇ]ರಾನೆವೆಟ್ಟುಗಳ ನೆತ್ತಿಯ ಮುತ್ತುಗಣಿಯನಗುಟ್ಟಿ ವಜ್ರದ ಗುದ್ದಲಿಗಳೆನಿಸಿ . . . ಅಳುಂಬ ಮಾದ ದಂಷ್ಟ್ರಾಂಕುರಂಗಳೊಳಂ . . . ಭಯಂಕರಮಾದುದು (ವರ್ಧಪು. ೦೦-೫೮). **ಹೇರಾನೆ** : ಕಡಿದು ಬಿಸುಟನು ತುರಗದಳವನು ಕೆಡಹಿದನ್ ಹೇರಾನೆಗಳ (ಕುಮ್ಮಾಲೀ. ೯-೧೮); ಹೇರಾನೆಯ ತಲೆಯಡಗ ಭಕ್ಷಿಸುವ ಕಂಠೀರವನೊಡಲ ನೆಗ್ಗೊತ್ತಿ . . . ಶರಭ ಹೂಂಕಾರದಿಂದಿರ್ವಂದುದಾಗ (ಮೋಹತ. ೦೯-೩೪). [ಪೇರ್$_1$ (< ಪಿರಿದು$_1$) + ಆನೆ$_1$]

ಪೇರಾಮೆ, ಪೇರಾವೆ (ನಾ). ೧. ದೊಡ್ಡ ಆಮೆ. ೨. ವಿಷ್ಣುವಿನ ಹತ್ತು ಅವತಾರಗಳಲ್ಲಿ ಎರಡನೆಯದು ; ಆದಿಕೂರ್ಮ : ಶ್ರೀಯುಣ್ಮೆ ಶೈಲಮಂ ಪೊತ್ತಾಯಸಮಂ ಮಱಿದು ನೀಡಿ ಕೊರಲಂ ಮಲೆತೊಂ ದೋಯರದಿಂದಂ ನಿಟ್ಟಿಪ ಮಾಯೆಯ ಪೇರಾಮೆ ಕುಡುಗೆ ನರಪತಿಗೊಳ್ಪಂ (ಪಕಪಿ. ೩-೧). **ಪೇರಾವೆ** : ೧. ಪಾವಸೆಗೊಂಡ ಪೇರಾವೆಯಂ ತಾವರೆಯ ಕೊಡೆಯೆಲೆಗೆತ್ತಱಿಯದೆಱಗಿ (ಪಂದ್ರಪು. ೩-೪೦ ವ); ಏಡಿಯಿಂ ಮೊಸಳೆಯಿಂ ಪೇರಾವೆಯಿಂದಾನೆಯಿಂ ... ಒಪ್ಪಿದುದಿಳಾಶ್ರೀಗಾಗರಂ ಸಾಗರಂ (ಹಾಲಾಸ್ಯ. ೦-೦-೦೬). [ಪೇರ್$_1$ (< ಪಿರಿದು$_1$) + ಆಮೆ$_1$]

ಪೇರಾಲ್ 'ಪೇರಾಲ' ನೋ.

ಪೇರಾಲ, ಪೇರಾಲ್, ಹೇರಾಲ (ನಾ). ದೊಡ್ಡ ಆಲದ ಮರ : ಚಳಿಗಾಱದೆ ಪೇರಾಲದ ಕೆಳಗಿರ್ಪನಿತಱೊಳೆ . . . ಸೂಸುವೆಲೆವನಿಗಳಿನೊರ್ವಂ ನೆನೆದು ನಡುಗಿ ಸಿಡಿಮಿಡಿಗೊಂಡಂ (ರಾಜಶೇ. ೯-೨೪); ಬಳಿಯ ಪೇರಾಲವು ಬೇರ್ವೆರಸುರುಳಿರುವೆಡೆಗೆಣೆಯೂರೆನಿಸುವುದು (ಗಾಥಾಸ. ೨೪-೯೪). **ಪೇರಾಲ್** : ಮೊಱಡಿಯ ಮೇಗಿಟ್ಟ ಪೇರಾಲೆ ಈಶಾನಂಗೆ ಸೀಮೆ ನೆಡು ಮೊಱಡಿಯಾ . . . ಪಳ್ಳಮೆ (ಎಕ. IX (3), ಬೆಂಗಳೂ. ೦೩೦-೪೮ ; 328). **ಹೇರಾಲ** : ಅದೊಂದು ವಟಭೂಜಾತಮೊಪ್ಪಿತು ಪಿರಿದಾಗಿ ಕಾಲೆತ್ತಿ ನೆಱಿದ ಹಲ ಹೆಣನೆಲ್ವೆಲುಮಾಲೆಗಟ್ಟಿದ ಬಳ್ಳಿಗರುಳು ಸಾಲೇಱಿದ ಪಂದಲೆಯಿಂದ ಹೇ[ಶಾಠಾಂ. ಮೇ]ರಾಲಯ[ವು] ಭಯಂಕರಮಾಯ್ತು (ಶ್ರೀಪಾಲಿ. ೮-೩೩).

[ಪೇರ್$_1$ (< ಪಿರಿದು$_1$) + ಆಲ$_1$]

ಪೇರಾವೆ 'ಪೇರಾಮೆ' ನೋ.

ಪೇರಾಸೆ, ಹೇರಾಸೆ (ನಾ). ಹಿರಿಯಾಸೆ ; ಹೆಬ್ಬಯಕೆ ; ಮಹತ್ವಾಕಾಂಕ್ಷೆ : ನಾಡಿನಲ್ಲಿ ಹಿಂದಣ ಅದೇ ದಿನಗಳು ಮರುಕಳಿಸಬೇಕು ಎಂಬ ಪೇರಾಸೆಯಿಂದ ಅಂತಹ ಕಜ್ಜದಲ್ಲಿ ಮನಮಾಡಿದೆನಹುದು (ಸವತಿ. ೦೭೦) ; ತನ್ನ ಕುವರಂ ತನಗೆ ಸರಿಯೆನ್ನಲೆಳಸಿದೊಂದುನ್ನತಿಯ ಪೇರಾಸೆ ಬಯಲಾದುದೇ (ಅರುಣ. ೨೦-೧೪). **ಹೇರಾಸೆ** : ಈ ಪಾಳೆಯಗಾರಿಕೆಗಳ ಹೇರಾಸೆಯ ದೊರೆಗಳು ಒಬ್ಬರೊಬ್ಬರ ಮೇಲೆ ಮತ್ತೆ ಮತ್ತೆ ಯುದ್ಧ ಮಾಡಿದುದು ಕಂಡುಬರುತ್ತದೆ (ಶತ್ರಪ್ರಾ. ೩೨೯) ; ಹೇರಾಸೆಗಳನಟ್ಟಿ ಮಿತಿಯೊಳಗಿದ್ದರೆ ನೆಮ್ಮದಿಯಿರುವುದು ಮನಕೆ (ಇಂಪಾಪ. ೨೨೬-೦೭).

[ಪೇರ್$_1$ (< ಪಿರಿದು$_1$) + ಆಸೆ$_1$]

ಪೇರಾಳ್ ಹೇರಾಳು (ನಾ). ಕಟ್ಟಾಳು ; ಮಹಾಶೂರ : ಈರಯ್ದಸ್ತ್ರದಿಂದೆಚ್ಚು ಖಂಡಿಸಿ ಪೇರಾಳ್ ತಿಱಿದಿಕ್ಕಿದಂತೆ ತಲೆಯಂ ಪೋಗೆಚ್ಚನಾಶ್ವೇತನಾ (ಪಂಪಭಾ. ೦೦-೧೨೩); ದ್ವಿಷತ್ಸೇನೆಯೊಳ್ ಪೇರಾಳುಂ ತುರಗಂಗಳುಂ ರಥಮುಮುನ್ಮತ್ತೇಭವುಂ ಬಿಟ್ಟುವು (ಪಂಠಾಮಾ. ೦೩-೦೨೦). **ಹೇರಾಳು** : ಬಂದ ಬಲ ಹೇರಾಳ ತೆಗೆತೆಗೆ (ಕುಮ್ಮಾಲೀ. ೦೮-೩೩).

[ಪೇರ್$_1$ (< ಪಿರಿದು$_1$) + ಆಳ್$_3$]

Δ **ಪೇರಾಳ$_1$** 'ಹೇರಾಳ$_1$' ನೋ.

ಪೇರಾಳ$_2$ (ನಾ). ಅತಿಯಾದ ಆಳ,-ಗಭೀರತೆ : ಇಹರು ಹೆಗ್ಗಡಲ ತಳಕೂ ಮುಳುಗಿ ಬಂದವರು . . . ಈ ಬರಿಹೆಣ್ಣ ಎದೆಗಡಲ ಪೇರಾಳ ಕಂಡ ಕಲಿಗಳು ಮಾತ್ರ ಕಂಡರಿಲ್ಲ (ಪಡೆಬಂ. ೩೯-೩).

[ಪೇರ್$_1$ (< ಪಿರಿದು$_1$) + ಆಳ$_1$ (< ಆಱ)]

ಪೇರಾಟ್ಟಿಪಳ್ಳ (ನಾ). ಒಂದು ಹಳ್ಳದ ಹೆಸರು : ಬಡಗ ಪೋಗಿ ಬೆಳ್ಳೊಲೆಯ ಬಟ್ಟೆಯ ಪೇರಾಟ್ಟಿಪಳ್ಳಂಬಿಡಿದು ಪೋಗಿ ಪಿರಿಯ ಪಳ್ಳದಳ್ಳೂಡಿ (ಸೌಇಇ. IX-I, ೩೮-೨ : ?). [ಪೇರಾಟ್ಟಿ$_0$ + ಪಳ್ಳ]

ಪೇರಿ$_1$ 'ಫೇರಿ' ನೋ.

ಪೇರಿ$_2$ (ನಾ). (?) : ಪೇರಿಯಾ ಒಸಗೆಯಂ ಅಲವಣವುಂ ಅಪುತ್ರಕ ಪೊರಳುಮಾನ್ ವಿಟ್ಟಾರ್ (ಇಅ. XIX, ೦೪೪-೫ ; 680); ತಪ್ಪದೆ ನಡಸುವುದಕ್ಕೆ ಕೊಟ್ಟು ಕೇಳ್ವಿಯ × ಪೇರಿಯ × × × ಉಭಯಂದೆರಸಿಯಾ ಗ್ರಾಮಕೆ ಅಱಿಮಾನ್ಯವು ಮಠಕ್ಕೆ ಅಱಮಾನ್ಯವಾ[ಗಿ] ಕೊಟದು (ಸೌಇಇ. IX—II, ೪೬೬-೮ ; ಸು. 1472). [?]

ಪೇರಿಕೆ (ನಾ). ಓರಣವಾಗಿ ಒಂದರ ಮೇಲೊಂದರಂತೆ ವಸ್ತುಗಳನ್ನು ಇಟ್ಟುದು : ಪಟ್ಟಿಗಳನ್ನು ಸೇರಿಸಿ ಪರಮಾಣು ಪೇರಿಕೆಗಳನ್ನು (Atomic piles) ಮಾಡುತ್ತಾರೆ (ಶಿಲ್ಪಿಶಾ. ೨೬೨) ; ಹೀಗೆ ಮಾದರಿಗಳನ್ನು ಒಳಗೊಂಡ ಹೀರುದಾಳೆಗಳ ಪೇರಿಕೆ ಒಂದು ಒಂದೂವರೆ ಅಡಿ ಎತ್ತರವಾದರೂ ಚಿಂತೆಯಿಲ್ಲ (ಹಸುಹೂ. ೦೨೬).

[ಪೇರು$_1$ (<ಪೇಱು$_1$) + -ಇಕೆ./ತುಳು. ಪೆರಿಕೆ]

ಪೇರಿಟ್ಟಿ, ಹೇರಿಟ್ಟಿ, ಹೇರೀಟಿ (ನಾ). ನೀಳವಾದ ಶಲ್ಯ ; ದೊಡ್ಡ ಈಟಿ : "ಪೇರಿಟ್ಟಿಯೆ ಬಿಟ್ಟೇಱು" (ಪಕುಪಿ. ೨೦೩) ; ಮುಸಲ ಪೇರಿಟ್ಟಿ ... ಶಕ್ತಿಯಾದಿಯನು ವಿಭುಗಳು ಧರಿಸಿ ಯುದ್ಧಕೆ ಸೇರಿದರಾಗ ಸುಭಟರಂದಾಳು ವೇರಿಯನು (ಅಪಂಪ. ೦೬-೪೩). **ಹೇರಿಟ್ಟಿ** : ಸುಲಿ ತೊಗಲ ಹಿಡಿದು ಹೇರಿಟ್ಟಿಯಿಂದಿಱಿ ಕರುಳ (ಹಪಳಾ. ೬-೩೪) ; ಹೇರಿಟ್ಟಿ ಪೊಱಿಯ ಪೆರ್ಬಲೆ . . . ಕವಲಂಬುಸಹಿತಂ ಭೋರನೆ ನೆಱಿದತ್ತು ಬೇಂಟೆಕಾಱರ ತಂಡಂ (ಪಳಪಂ. ೬೯) ; ಸಾಲವನು...ಹಿಂದೆ ಕೊಡುವಾಗ ಹೇರಿಟ್ಟಿ[ಶಾಠಾಂ. ಟ್ಟಿ] ಬಂದು ಬಡಿದಂತೆ (ಸರ್ವಜ್ಞ. ೦೩೯೨). **ಹೇರೀಟಿ** : ಹೇರೀಟಿಯಿಂದಿಱುಬುವ . . . ಕರಗಸದಿ ಕೊಱಿವ ರೌರವದ ನರಕಂ ಭಯಂಕರವಾದುದು (ಸಿದ್ಧರಾ. ೬-೨೮). [ಪೇರ್$_1$ (<ಪಿರಿದು$_1$) + ಇಟ್ಟಿ$_2$]

ಪೇರಿರ್ಪೆ (ನಾ). ದೊಡ್ಡ ಹಿಪ್ಪೆಮರ : ತಸ್ಯ ಸೀಮಾನ್ತರಂ ಕೊಳ್ತಿನಿ ತೊಱಿಎ ಪೇರಿರ್ಪ್ಪೆಎ (ಎಕ. XVI, ಗುಬ್ಬಿ. ೭೫-೫೦ ; 733).

[ಪೇರ್$_1$ (<ಪಿರಿದು$_1$) + ಇರ್ಪೆ]

ಪೇರಿಲ 'ಪೇರಲ' ನೋ.

ಪೇರಿಲು 'ಪೇರಲ' ನೋ.

ಪೇರಿಸು$_1$ 'ಪೇಱಿಸು$_1$' ನೋ.

ಪೇರಿಸು$_2$, ಪೇರೈಸು (ಕ್ರಿ). ೧. ದೊಡ್ಡದಾಗು ; ಅಗಲವಾಗು : ಕೂಡಿದುವಪ್ಪ ಕಣ್ಮಲರ್ಗಳಳ್ಳೆರ್ದೆಯೊಳ್ ತಡವಾಡೆ ತಾಮೆ ಕಣ್ ಪೇರಿಸೆ ಪುರ್ವು ನಾಲಗೆವೊಲಾಗೆ ಮನಂಬುಗಿಸಲ್ಕೆ ಬಲ್ಲೊಡಾ ಜಾರೆಯೆ ಜಾರೆ (ಪಂಪರಾ. ೯-೮೩). **ಪೇರೈಸು** : ೨. ಅಧಿಕವಾಗು ; ಅತಿಶಯಿಸು(?) : ಅದಱ ಕರ್ಣಚಮರದ ರ್ಝಲ್ಲಿಯಂತೆ ಜಲ್ಲೆನೊಟ್ಕೆ ಧಾರೆಗೆದಱ ಪೇರೈಸಿ ಸೂಸುವುಭಯಕಟದ ಸೊರ್ಕುಕದಡಿನ ತೆರ್ಕೆಗಡಲ್ಗಳೊಕ್ಕೈಸಿ (ಅನಂಪು. ೦೩-೨೦ ಪ). [ಪೇರ್$_1$ (< ಪಿರಿದು$_1$) + — ಇಸು$_3$]

ಪೇರೀಳೆ, ಹಿರಳೆ, ಹೆರಳೆ, ಹೇರಳೆ, ಹೇರಿಳೆ, ಹೇರೀಳೆ (ನಾ). ಈಳೆಯಂ ಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಕಂಚೀಕಾಯಿ : ಪೇರೀಳೆಯ ನಾರಂಗದ ಕಂಚೀಳೆಯ ತನಿವಣ್ಣನಿಕ್ಕೆ ಮೆಲ್ದು (ರರ್ಮಾಸ್ಯ. ೦-೦೩೦) ; ಬಾಳೆ ಪೇರೀಳೆ ತಾಳೀತರು ತೆಂಗುಂ . . . ಸಾಲ್ಗೊಂಡು ಕಣ್ಗೊಪ್ಪುತಿರ್ಕುಂ (ರಾಜಶೇ. ೨-೩೬); ಕಿತ್ತೀಳೆ ಪೇರೀಳೆ ಬಾಳಿಂಬಂ . . . ಮನೋಹರಮಾಗಿರ್ಕುಂ (ರಾಮಾಶ್ವ. ೬-೨೩). **ಹಿರಳೆ** : "ಹಿರಿಳೆ, ಹಿರುಳೆ, ಹಿರಳೆ = ಕಂಚೀಕಾಯಿ" (ಗಂಗಾಮ. ೩೯೯) ; ಹಿರಳೆ ಕಾಯಿ ಗೊಜ್ಜು, ಉಪ್ಪಿನಕಾಯಿ ತಿನ್ನಲು ರುಚಿಯಾಗಿರುತ್ತವೆ (ರೂಢಿ). **ಹೆರಳೆ** : "ಐರಾವತಃ, ನಾಗರಂಗಃ—೨ ಹೆರಳೇಗಿಡ" (ಸಿದ್ಧಾಂತಿ. ೦೨೦) ; ನಾರಾಯಣನಿಗೆ ಕಣ್ಣು ಹೆರಳೆಕಾಯಿ ಗಾತ್ರವಾಯಿತು (ಗರುಡಾ. ೬೭). **ಹೇರಳೆ** : "ಕಾಗಿನೇರಳೇಗಿಡ . . . ನೆಲನೇರಳೇಗಿಡ—ಈ ೪ ಹೇರಳೇಗಿಡವೆಂದು ಕೆಲವರನ್ನುವರು" (ಸಿದ್ಧಾಂತಿ. ೦೨೦) ; ಹೇರಳೆ : ಈ ಚಿಕ್ಕೆಯನ್ನು ಎಮ್ಮೆಕಟ್ಟುಮೊಸರಿನಲ್ಲಿ ಅರೆದು ಕಟ್ಟುಮೊಸರಲ್ಲಿ ತೆಗೆದು ಕೊಳ್ಳೆ ಅತಿಸಾರ ಮಾಣ್ಗುಂ (ವಿಸ್ತಾ. ೬) ; ಕಿತ್ತಲೆ, ಹೇರಳೆ . . . ಅಂಜೂರ ಇವೇ ಮುಂತಾದ ಹಲವು ಹಣ್ಣಿನ ಗಿಡಗಳನ್ನು ತೋಟಗಳಲ್ಲಿ ಬೆಳೆಯಬಹುದು (ವೃಷಮ. ೩೮). **ಹೇರಿಳೆ** : "ಜಂಬೀರಃ—ನಿಂಬೆ, ಹೇರಿಳೆ, ಮರುಗ, ಕಕ್ಕೊರಲೆ" (ಓಷಧಿ. ೬೦) ; ಹೇರಿಳೆ ಪರಿಮಳಸಾರವಂ ನಿನ್ನಲ್ಲಿ ಮಾರಾರಿಗೀಯೆನುತ್ತಂ ಹೂಗೊಳುತ್ತಲ್ಲಿ (ಪುಷ್ಪರ. ೯-೦೬) ; ಪೂರೈಸಿದ ಫಲಸಹ ಹೇರಿಳೆಯ ಮರವಾರಾಮದೊಳೊಪ್ಪಿದುವು (ಕಂಪಿ. ೩-೬೨) ; ಹೇರಿಳೆ ಹಾಗಲಗಳಲ್ಲಿ, ಒಬ್ಬೊಬ್ಬರಿಗೆ ಒಂದೊಂದು ಇಷ್ಟವಾಗಿರುತ್ತದೆ (ಜೀವಸಾ. ೩೯). **ಹೇರೀಳೆ** : "ಹೇರೀಳೆಯೆನೆ ಕಂಚಿ" (ಮಂಗರಾ. ೩೯-೦೦) ; ಮಂಜುಳಫಲೋಚ್ಚಂಡವಾದ ಕಿತ್ತೀಳೆಯಿಂ ಕೆಂಜಿಗುರಲರ್ಪಣ್ಗಳವರ್ದ ಹೇರೀಳೆಯಿಂ . . . ವಿಮಲವಲ್ಲರಿಗಳಿಂ ಪೊಂಗಿ ಪೊಂಪುಟಿಯೋಗಿ (ಉದ್ಭಟ. ೩-೯೦) ; ಮಧುರರಸದ್ರವದ ಕಿತ್ತೀಳೆ ಕಂಪಿತ ಫಲಭರದ ಹೇರೀಳೆ (ತೊರರಾ. ೫-೯-೬).

[ಪೇರ್$_1$ (< ಪಿರಿದು$_1$) + ಈಳೆ]

ಪೇರು$_1$ 'ಪೇಱು$_1$' ನೋ.

ಪೇರು$_2$ 'ಪೇಱು$_2$' ನೋ.

ಪೇರು$_3$ 'ಪೆಸರ್' ನೋ.

ಪೇರುಕಟ್ಟು (ಕ್ರಿ). ತಕ್ಕಡಿಯ ಪರಡೆಗಳ ಸಮತೋಲನವು ವ್ಯತ್ಯಾಸಗೊಂಡಾಗ ಭಾರವನ್ನು ಹೆಚ್ಚು ಕಡಮೆ ಮಾಡಿ ಸಮಗೊಳಿಸು : ಪದಾರ್ಥವನ್ನು ತೂಕ ಮಾಡುವುದಕ್ಕೆ ಮುಂಚೆ ಪೇರುಕಟ್ಟಿ ತೋರಿಸು (ರೂಢಿ). [ಪೇರು$_2$ (< ಪೇಱು$_2$) + ಕಟ್ಟು$_1$]

ಪೇರುಡು, ಹೇರುಡು (ನಾ). ದೊಡ್ಡ ಉಡು : ಫಲ್ಗಾನೊಳಾ ಪೋಪ ಪೇರುಡುವಂ ಸೋವು (ಸೂಕ್ತಿಸು. ೩-೦೦೩) ; ಪೇರುಡುವಿಳಿದು ಬಂದುಂಡು ರಸವನು ಪೋಗುತದೆ (ಸಾಳ್ವಭಾ. ೦೭-೬೬). **ಹೇರುಡು** : ಭಲ್ಲಾತಕತರು ಮೂಲಂ ಸಲ್ಲಲಿತ ಗುಡೂಚಿ ಭದ್ರಮುಸ್ತೆಯಿವಂ ತಾಂ ನಿಲ್ಲದೆ ನೀರಿಂ ಕುಡಿಯಲ್ ನಿಲ್ಲದು ಹೇರುಡುಗಳಗಿದು ತುಡುಕಿದ ಗರಳು (ಐಮರ. ೦೩-೬೯).

[ಪೇರ್$_1$ (< ಪಿರಿದು$_1$) + ಉಡು$_2$]

ಪೇರುರ, ಹೇರುರ (ನಾ). ೧. ವಿಸ್ತಾರವಾದ ಎದೆ ; ಹರವಾದ ವಕ್ಷಸ್ಥಳ : ಸಕಳಕಳಾಧಾರನ ಪೇರುರದೊಳ್ಮಣಿಹಾರಂ ಥಳಥಳಿಸಿ ಪೊಳೆವುತ್ತಿರ್ದತ್ತಾಗಳ್ (ಕಾದಂಪೂ. ೩೦) ; ಶ್ರೀರಮಣಿಗೆ ನೆಲೆ ತನ್ನಯ ಪೇರುರಮಂ ಮಾಟ್ಟಿನೆಂಬ ಬಗೆ ಮಿಗೆ (ಗದಾಯು. ೬-೦) ; ಖಳನ ಪೇರುರದಲ್ಲಿ ತಾಗಲೆಚ್ಚನು ಕೆಡೆಯೆನುತೆ (ಮೋಹತ. ೩೯-೨೦). ೨. (ಸ್ತ್ರೀಯ) ಉನ್ನತವಾದ ಎದೆ ; ಪುಷ್ಟವಾದ ಸ್ತನ : ಜಾರ ಗೋಪಾಂಗನೆಯ ಪೇರುರದ ಸೋಂಕು ಚಿಂತಾರತ್ನವೆನೆ ತ್ರಿದಿವದೂರ ಸಂಪತ್ತಲಾ (ಶಾವತಂ. ೫-೯). **ಹೇರುರ** : ೧. ಕಲಿಪಾರ್ಥನು . . . ಕೌರವನ ಹೇರುರದಲಂಬನು ಹೂಳಿದನು (ಕುಪ್ಯಾಥೀ. ೬-೦೦೬); ಓನಹೃದಯನ ಹೇರುರವನೆಚ್ಚೊಡನೆ ಕೆಡೆಕೆಡೆಯೆನುತ ನಡೆತಂದ (ತೊರರಾ. ೯-೯-೨೯). ೨. ಮದನಾರಿಯರ್ಧದ ನಾರಿ ಹರಿ ತಾ ಹೇರುರದ ಹೆಂಗುಸುಱ ಬೊಮ್ಮನು ಮಗಳ ಮೊಱಗೇಡಿ (ಕುಪ್ಯಾಅ. ೦೩-೩೭).

[ಪೇರ್$_1$ (< ಪಿರಿದು$_1$) + ಉರ$_2$]

ಪೇರುರಿ, ಹೆಬ್ಬುರಿ (ನಾ). ದೊಡ್ಡ ಉರಿ ; ದಳ್ಳುರಿ : "ದಳ್ಳುರಿಯು ಪೇರುರಿಯು ಘನಜ್ವಲಿತದೊಳು ಸೊಗಯಿಪ್ಪುದು" (ಶಬ್ದಮಂ. ೦೨) ; ಪೇರುರಿಯಾರತಿಯನೋರಂತೆ ಪಿಡಿದು ಬೆಳಗೆಯುಂ (ವೃಷಪಿ. ೯-೨೦ ಪ). **ಹೆಬ್ಬುರಿ** : ಎಬ್ಬಿಸುತೆ ಹೆಬ್ಬುರಿಯ ಕಾರ್ಬೊಗೆಯ ಕಣೆಗಳಂ (ಪರಶು. ೨೯-೩೩). [ಪೇರ್$_1$ (< ಪಿರಿದು$_1$) + ಉರಿ$_2$]

ಪೇರುಸಿರು, ಪೇರುಸುರು (ನಾ). ನಿಡಿದಾದ ಉಸಿರು ; ನಿಟ್ಟುಸಿರು : ಕೊಡವಿಡಿದು ಪೆಡೆಯನದರಡಿಯ ಮರಿಯನ್ನಿಟ್ಟು ನಿಡುತರದ ಪೇರುಸಿರ ಗಾಳಿಯಿಂ ತಣ್ಪೆನಿಸುತೊಡನಂದು ಮರುಗುತಿರಲು (ವೆಂಕಾರಾ. ೩-೬-೦೨). **ಪೇರುಸುರು** : ತಲ್ಲಣಿಸಿ ಹೋಗುತ ಬರುತ್ತೆದೆ ಡಿಳ್ಳವಾಗುತ್ತಿರನೆ ಲಕ್ಷ್ಮೀವಲ್ಲಭಂ ನಂದೀಶ್ವರನ ಪೇರುಸುರುಗಳು ತೊಡಕಿ (ಬಸಪು. ೫೪-೯೦).

[ಪೇರ್$_1$ (< ಪಿರಿದು$_1$) + ಉಸಿರು$_2$ (< ಉಸಿರ್$_2$)]

ಪೇರುಸುರು 'ಪೇರುಸಿರು' ನೋ.

ಪೇರೂರ್, ಹೇರೂರ್ (ನಾ). ೧. ದೊಡ್ಡ ಊರು, ಗ್ರಾಮ : ನೂರಾರು ಪೇರೂರ್ಗಳಂ ದಾಂಟಿ (ಶೇಷರಾ. ೬-೫೦). ೨. ಒಂದು ಊರಿನ ಹೆಸರು : ಕೋರಿಕುನ್ದವಿಷಯೇ ವೆನ್ನೆಲ್ಕರನಿಗ್ರಾಮಃ ಪೇರೂರೇವಾನಿ ಅಡಿಗಳ್ (ಎಕ. X, ಮಾಲೂರು. ೭೨-೨೯; 425 ? ಕೃಶಾ); ನೈರಿತಿಯೊಳೆ ಅವದಕಲ್ ತೆಂಕ ಪೇರೂರ ಪಳ್ಳಂ (ಎಕ. XI, ಮೊಳಕಾ. ೨೭ ೬; 962). **ಹೇರೂರ್** : ೨. ಹೇರೂರ . . . ಶ್ರೀಪಾದಪದ್ಮಾರಾಧಕ ರಾಚಯ್ಯ (ಎಕ. VII, ಶನ್ನಗಿ. ೩೨-೨೩೩; ಸು. 1050 ?); ಮುನ್ನ ತನ್ನರ್ತಿಗೆ ಹೇರೂರ ಹೆಣ್ಣಂ ಗಂಡುರೂಪಂ ಮಾಡಿದೋಪಾದಿಯಿಂದೆನ್ನಂ ಹೆಣ್ಣಂ ಮಾಡದೆಂತು ಪೋದಪಂ (ಬಸರ. ೦೨-೦೨೫).

[ಪೇರ್$_1$ (< ಪಿರಿದು$_1$) + ಊರ್]

ಪೇರೆದೆ (ನಾ). = ಪೇರುರ ೧ : ಉನ್ನತವ ಭುಜಯುಗಲ ಪೇರೆದೆ ಹೊನ್ನ ಸೆಳೆನಡು ಬಾಳೆದೊಡೆ ಮೆಱೆದನ್ನರಂ ಸೋಲಿಸುವ ಜವ್ವನ ವಾಂತನಾ ಕುವರ (ಸಾಳ್ವಭಾ. ೯-೬).

[ಪೇರ್$_1$ (< ಪಿರಿದು$_1$) + ಎದೆ (< ಎರ್ದೆ)]

ಪೇರೆಲು (ನಾ). ದೊಡ್ಡ ಎಲುಬು; ನಿಟ್ಟೆಲುವು : ರಕ್ತದೊಳ್ ನನೆದು ಪೇರೆಲುಗಳುಮನೊದೆದು ಕೈದುಗಳ ಸೋಂಕಿಂ ಗಾಯವಡೆದು (ಶಿಪು. ೯೯-೯೪). [ಪೇರ್$_1$ (< ಪಿರಿದು$_1$) + ಎಲು$_1$ (< ಎಲ್ವು)]

ಪೇರೆಲೆ (ನಾ). ಅಗಲವಾದ ಎಲೆ : ಬಲದ ಕೈಯಲಿ ಮಾಂಸವಿಹ ಪೇರೆಲೆಯ ಜೊನ್ನೆಯನಾ ಶಿವೈಕ್ಯಂ ಪಿಡಿದು ನಡೆತಂದು (ಬಸಪು. ೧೮-೩೦).

[ಪೇರ್$_1$ (< ಪಿರಿದು$_1$) + ಎಲೆ$_1$]

ಪೇರೆಳ್ತು (ನಾ). -ಭಾರಿಯಾದ ಎತ್ತು : ಭಾಳವಧ್ಯಸ್ಥಳಬದ್ಧಸ್ವರ್ಣ ಪಟ್ಟಾಂಕನದಿನೆಸೆವ ಪೇರೆಳ್ತುಗಳ್ಪರ್ಮೆಯಿಂದಂ . . . ಪರಿಯೆ (ಕೃಷ್ಣ. ೩೮-೩೯). [ಪೇರ್$_1$ (< ಪಿರಿದು$_1$) + ಎಳ್ತು (< ಎಟ್ಟು$_1$)]

ಪೇರೇರ (ನಾ). ಒಬ್ಬಾತನ ಹೆಸರು : ಇಳವಚ್ಚಟುವಸ್ಯ ಪುತ್ರೀಣ ವೇರೇರನ್ನಾಮುಲಿಖಿತಮ್ ಪಟ್ಟಿಕಾ (ಕ್ಯು೫೮. ೦೯೩೬. ೦-೩೯; ಸು. 567).

[?]

ಪೇರ್ಮೈರಿ (ನಾ). ಹಿರಿದಾದ ಸಂಪತ್ತು,—ಐಶ್ವರ್ಯ : ಈ ರೇಪೆಯೆ ಧನರೇಪೆಯಿದಾರಯ್ಯಂ ನುಡಿಗುಮಿವನ ಪೇರ್ಮೈರಿಯಂ (ಪಶ್ವಪಂ. ೫-೩೩).

[ಪೇರ್$_1$ (< ಪಿರಿದು$_1$) + ಐಸಿರಿ]

ಪೇರ್ಮೈಸು 'ಪೇರಿಸ್ಮು' ನೋ.

ಪೇರೊಕ್ಕಲ್, ಪೇರೊಕ್ಕಲು (ನಾ). ದೊಡ್ಡ ವಂಸೆತನ,—ಕುಟುಂಬ : ದೀರ್ಘಕ್ಕೆ—ಪಿರಿದು + ಆನೆ—ಪೇರಾನೆ; ಪೇರಡವಿ, ಪೇರೊಕ್ಕಲ್, ಪೇರಡಿ. ಪೇರೊಡಲ್ (ಕಪುಕ. ೧೩೦ ಕ್ರಹೋ). **ಪೇರೊಕ್ಕಲು** : ಎಲ್ಲರೂ ನನ್ನಕ್ಕ ತಂಗಿಯರು . . . ಆ ಕಡೆಗೆ, ಈ ಕಡೆಗೆ ತೂಗುವರು; ತೊನೆಯುವರು . . . ಪೇರೊಕ್ಕಲಾಗಿ ಪಾಡುವರು (ಹೊಂಗಳು. ೦೯-೯); ಪೇರೊಕ್ಕಲು ! ಈ ಮಕ್ಕಳು ಬಡವರ ಮೈಸಾಲ (ಬೀಕಪು. ೧-೦೭).

[ಪೇರ್$_1$ (< ಪಿರಿದು$_1$) + ಒಕ್ಕಲ್$_2$]

ಪೇರೊಕ್ಕಲು 'ಪೇರೊಕ್ಕಲ್' ನೋ.

ಪೇರೊಡಲ್, ಪೇರೊಡಲು, ಹೇರೊಡಲ್, ಹೇರೊಡಲು (ನಾ). ದೊಡ್ಡ ದೇಹ; ಭಾರಿಯಾದ ಶರೀರ : ಕಾರಿರುಳ ತಿರುಳ ಬಣ್ಣಂ... ವಿಳಿರ್ವುರಿಗೇಸಂ ಪೇರೊಡಲಸೆದಿರೆ ಪುಟ್ಟಿವನಾರುಮಗುರ್ವಿಸೆ ಮಗಂ ಘಟೋತ್ಕಚನೆಂಬಂ (ಕಂಪಣಾ. ೩-೨೦); ಕಾರೊಸಡುಂ ಕರ್ಬಾಯುಂ ಪೇರೊಡಲುಂ ... ದನುಜಾಕಾರಮನೊದರಿಸೆ ನಿಶಾಟರರ್ವಿಸಿ ತೋರ್ವರ್ (ಕಾಖ್ಯವ. ೨೨೦); ಪಲರ್ಗೆ ಬಿರಿದಲೆ, ಸುರಿವಾಯ್ ಪಲರ್ಗೆ . . . ಅರಿವರ್ಗೆ ಪೇರೊಡಲ್ (ಅಜ್ಜುತ. ೨೩-೨೭). **ಪೇರೊಡಲು** : ಪೇರೊಡಲ ಧಿಜ್ಜಿನೆ ತಿರುಗಿಸುತೆ . . . ಅಪ್ಪಳಿಸುತಿಕ್ಕಿದನು (ಪೋಚಕ. ೩೮-೩೦). **ಹೇರೊಡಲ್** : ಮಿಂಚುದಲೆಗಳ ಖಂಡಿವಲ್ಗಳಿ . . . ಡೊಳ್ಳುಗಳ ಹೇರೊಡಲ ವಂಚಕರ . . . ಹಿಂಡು ನೆರೆದು (ಶಪು. ೫೦-೫೪). **ಹೇರೊಡಲು** : ಕರೆ ನಿಮ್ಮಯ್ಯನನು ಹೇರೊಡಲ ತೋಜಿಸಿ ಬಲವ ಬಿದಱಿಸಲಗ್ಗಳಿಕೆಯಹುದೇ (ಕುಚಾ.ಕ್ರೋ. ೦೩-೩೩); ಮಹೋದರನ ಹೇರೊಡಲನೂಡಿದು . . . ಶಕ್ರಜಿತುವನು ಹುಡುಕುನೀರದ್ದಿದನು ನಡೆದು ಸಮುದ್ರಮಧ್ಯದಲಿ (ತೊಪಣಾ. ೪ ೯-೩); ಪೊಡೆಗೆಡೆದ ಹೇರೊಡಲ ಸೀಳ್ಗಳಿಂ ಪೋಳ್ಗಳಿಂ . . . ಕಡುಭಯಂಕರಮಾಗಲು (ಕೃಬಾಣಾ. ೯-೧೬).

[ಪೇರ್$_1$ (< ಪಿರಿದು$_1$)+ಒಡಲ್]

ಪೇರೊಡಲು ' ಪೇರೊಡಲ್ ' ನೋ.

ಪೇರೊನಕೆ (ನಾ). ದೊಡ್ಡ ಒನಕೆ : ಇಕ್ಕಡಿವಡೆದ ಕಾರ್ಮುಕವ ನಿವಾರಿಸಿ ತೆಕ್ಕೊಂಡು ಭಾರಿಯ ಹಲವ ಒಕ್ಕಯ್ಯೊಳಾತ ಪೇರೊನಕೆಯಿಂದಿಕ್ಕಿದ ಸೊಕ್ಕಾನೆದಲೆಗನ ಮೇಲೆ (ಪೋಚಕ. ೩೮-೩೯).

[ಪೇರ್$_1$ (< ಪಿರಿದು$_1$) + ಒನಕೆ]

ಪೇರೊರ್ಬೆ ' ಪೇರೊಟ್ಟೆ ' ನೋ.

ಪೇರೊಸಗೆ (ನಾ). ದೊಡ್ಡ ಹಬ್ಬ,—ಉತ್ಸವ : ' ಪೇರೊಸಗೆಗೆಯ್ ' ಪರಾ. [ಪೇರ್$_1$ (< ಪಿರಿದು$_1$) + ಒಸಗೆ]

ಪೇರೊಸಗೆಗೆಯ್ (ಕ್ರಿ). ದೊಡ್ಡ ಹಬ್ಬವನ್ನು ಆಚರಿಸಂ ; ಭಾರಿ ಉತ್ಸವವೇರ್ಪಡಿಸು : ಕಲಸೋಗರಮಂ ನಲಿದಿಕ್ಕಿ ಭೂಷಣಪ್ರಚಯಮ ನಿಟ್ಟು ಪೇರೊಸಗೆಗೆಯ್ದು ಸಪೀಜನದೊಂದುಗೂಡಿ (ರಾಶಪೇ. ೪-೧೨).

[ಪೇರೊಸಗೆ + ಕೆಯ್$_1$]

ಪೇರೊಟ್ಟಿ ' ಪೇರೊಟ್ಟೆ ' ನೋ.

ಪೇರೊಟ್ಟೆ, ಪೇರೊರ್ಬೆ, ಪೇರೊಟ್ಟಿ, ಪೇಱೊರ್ಪೆ, ಪೇಱೊರ್ಬೆ, ಹೇರೊಬ್ಬೆ (ನಾ). ದೊಡ್ಡ ಮುಳ್ಳುಹಂದಿ (?) : ಅಱಿಯಿನ್ತೆಂಕೈ ನೋಡಿ ನಡದು ಪೇರೊಟ್ಟೆ ದುಗ್ಗನ್ನೆಱಿ (ಎಳ. X (ಪ), ೫೪೦. ೬೬-೬೨ ; 850) ; ಸಾಲತ್ತ ಕಾಡೇಱುನ ಪೇರೊಟ್ಟೆಎ ಪಗನ್ನೆವಳ್ಳವೆ (ಎಳ. IV. ಎಪಕೊ. ೬೦-೬೩ : ಸು. 890). **ಪೇರೊರ್ಬೆ** : ಪಡುವ ನೋಡಿ ಪರಿದ ಪೆರೊರ್ಬೆಯೆ (ಎಳ. IX (ಪ), ಕಂಗಳೂ. ೦೩೦ ೩೭ ; 828). **ಪೇರೊಟ್ಟಿ** : ಪುಲಿವದಿಯು ತೆನ್ಮಣ ಪೆರೊಟ್ಟಿಯೆ (ಇಆ. XII. ೦೩-೪ (b) : 813) ; ಇಗ್ಗಲಿಯು ಅರಿಪುರ ಮೂಱೂರ ಸನ್ದಿನಲ್ಲಿ ತಣ್ಸಾಲಿಗಾಲ ಮೂಡಣ ಪೇರೊಟ್ಟಿಯಿಂ (ಎಳ. III. ಕಂಇಪ. ೦೩೯-೦೪; 915 ?). **Δಪೇಱೊರ್ಪೆ** : ದಕ್ಷಿಣಸ್ಯಾನ್ದಿಶಿ ಪಡುವ ನೋಡಿ ಪೋದ ಪೇಱೊರ್ಪೆಯೆ (ಎಳ. XVI. ೬೪೬೦. ೦೪೦-೬೮ ; ಸು. 900). **Δಪೇಱೊರ್ಬೆ** : ಅನ್ತೆ ತುಬ್ದಿಲ ಪೆಱೊರ್ಬೆಯೆ (ಎಳ. XVI. ೬೪೬೦. ೦೪೦-೬೮ ; ಸು. 900). **ಹೇರೊಬ್ಬೆ** : ತೆಂಕಣ ಕಡೆಗೋಡಿ ಏರಿಯ ಮೇಲೆ ಬಂದು ಚಣ್ಡಿಹಿನಲೇದು ಹೇರೊಬ್ಬೆ ಪುಳಿಗಡಪಿನೊಳು ಕೂಡಿ (ಎಳ. XIV. ಎಳಂಮೂ. ೦೭೦-೦೪ ; ಸು. 12ವಿಪು ೫೫); ಚಕ್ರನ ಕೊಡಗೆಯು ಹೊಲದ ಹೇರೊಬ್ಬೆಯಿಂ ಮೂಡಲು (ಕ್ಯು೫೦. ೦೯೩೦. ೫೮-೬೫ ; 1413). [ಪೇರ್$_1$ (<ಪಿರಿದು$_1$) +ಒಟ್ಟೆ]

ಪೇರೋಟ (ನಾ). ವೇಗವಾದ ಓಟ : ಕುದುಕುವರಿಯಲಿ ಪರಿದು ಪೇರೋಟದಲಿ ಪರಿದೋಡುತ್ತವಾಯಾಸದಿ ಬಳಲುತೊಯ್ಯನೆ ನಡೆದು (ಪಪು. ೨೬-೩೨). [ಪೇರ್$_1$ (<ಪಿರಿದು$_1$) +ಓಟ]

ಪೇರೋಣೆ (ನಾ). ದೊಡ್ಡ ಓಣಿ : ಸೀವೆಂ ಮೂಡಾಯ್ದೊಱೆ ಎ ತೆಂಕಾಯ್ದಟಾರನ ಮಾಡವೆಂ ಪೇರೋಣಿ ಎ ಸನ್ದು (ಎಳ. IV. ಎಪಕೊ. ೬೦-೬೩ ; ಸು. 890). [ಪೇರ್$_1$ (<ಪಿರಿದು$_1$) +ಓಣಿ]

ಪೇರೋಲಗ (ನಾ). ದೊಡ್ಡ ಸಭೆ ; ಮಹಾಸಭೆ : ಪೇರೋಲಗವಂ ಪರಿಯವೇಳ್ದೆಲ್ಲರಂ ಕಳುಪಿ (ಬಸಪು. ೬-೩೭) : ಚಂದ್ರಾಚೂಡನೆಲ್ಲರುವಂ ಕಳುಹಿ ಪೇರೋಲಗಂ ಪರೆದು (ಬಸಪು. ೦-೫೦).

[ಪೇರ್$_1$ (<ಪಿರಿದು$_1$) +ಓಲಗ$_1$]

ಪೇರ್ಗೊಳ್ ' ಪೆಸರ್ಗೊಳ್ ' ನೋ.

ಪೇಲ್, ಹೇಲು$_1$ (ಕ್ರಿ). ಹೇತು$_1$ (ಭೂತನ್ಯೂ). **ಮಲವಿಸರ್ಜನೆ ಮಾಡು** : ''ಪೇಲ್—ಮಲವಿಸರ್ಜನೇ, ಮಲೇ ಚ'' (ಪಪುಶಾ) : ಗುದತಿ=ಪೇಲ್ವಪಂ (ಶಾಪಕ್ಕ. ೨೩೦). **ಹೇಲು$_1$** : ನೂಲೋ ಹೆಂಡತಿ ಬಿಟ್ಟು ಹೇಲೋ ಮೂಳಿ ತಂದ (ಗಾಪ) ; ನಡುಮನೇಲಿ ಹೇತು, ನಾತ ಬರುತ್ತ ಎಂದ (ಗಾಪ).

[ದೇ. ಪ ತಮಿ. ವೇಲ್, ವೇಳ್; ಗೊಂಡಿ. ವೇಲಾನಾ]

ಪೇಲ್$_2$, ಪೇಲು, ಹೇಲು$_2$ (ನಾ). ಅವೇಧ್ಯ; ವಿಷ್ಪೆ ; ಮಂಲಿ : ಪೇಲಂ ಕಚ್ಚಲ್ ತಕ್ಕುದೆ (ಸಪುಚ. ೯-೩೪) ; ಪಂದಿಗಳೊಡನಾಡಿದ ಕಱುವಂ ಪಂದಿಯಂತೆ ಪೇಲಂ ತಿಂಗೆಂಬುದು ನಾಣ್ಣುಡಿ (ಧಪಾಪ್ರಬೃ. ೨-೭೬). **ಪೇಲು** : ಸಾಸನಮಯ್ಯರ್ಕೆದೆಯುಮಂ ವೇಸದೆಯಿದನಳಿವೆನೆಂಬ ಮಹಪಾತಕನಿಂತೀಸನೆ ವೇಲಿನ ಕಾಳಿಯೊಳ್ಸಾಸಿರಸತವರ್ಷ ಬಾಲವುಳುವಾಗಿಯುವಂ (ಕಾ. I. ೨೪-೩೬; 1148). **ಹೇಲು$_2$** : ಹೇಲೊಳಗಣ ಹುಳುವ ಕೋಳಿ ಕದಱಿದಂತಾಯಿತ್ತವನ ಶಿವಪೂಜೆ (ಗಣಕಾ. ೦೪೦-೬) : ಯಾ ಧರ್ಮಕೆ ತಪಿದವರು ಹೇಲೊಳಗಣ ಹುಳುವಾಗಿಯಿರಲುಳವರು (ಸಿಪುಶಾ. IX-೩೩. ೩೭೦-೩೨ : 1584) ; ದಂಡಿಗೆ ಮೇಲೆ ನಾಯಿಂ ಕುಂಡ್ರಿಸಿದರೆ ಹೇಲು ಕಂಡು ಹಾರಿತು (ಗಾಪ). [<ಪೇಲ್$_1$]

ಪೇಲವ (ಗು). ೧. ಕೃಶವಾಗಿರುವ; ತೆಳುವಾದ. ೨. ಕೋಮಲವಾದ; ಸಂಕುಮಾರ. ೩. ಮಸುಕಾದ; ನಿಸ್ತೇಜವಾದ : ಬಿಳಿ

ಕೊಂಡ : ಅರೆಬಿರಿದ ಸಂಪಿಗೆಯ ಹೂವಿನ ಹಾಗೆ ಪೇಲವವರ್ಣದಾಕೆ ಈಕೆ (ಇಷ್ಟಕ. ೪೦೩). ೪. ಸಣ್ಣ ; ಎಳೆಯ. ೫. ವಿರಳವಾದ ; ಬಿಡಿಬಿಡಿಯಾದ. (ನಾ). ೬. ಕೃಶವಾದುದು : "ಕ್ಷಾಮಂ . . . ಪೇಲವಂ, ತಳಿನ(ಮ)ಂ, ತನು—ಈ ೭ ಅಸಿದು" (ಹಲಾಯು. ೦೦೯-೩೨). ೭. ವಿರಳವಾದುದು : "ಪೇಲವಂ, ವಿರಳಂ, ತನು—೩ ಎಡೆಬಿಟ್ಟದ್ದು, ವಿರಳವಾದದ್ದು" (ಸಿದ್ಧಾಂತಿ. ೩೪೦). ೮. (ಆಲಂ) ಸತ್ತ್ವವಿಲ್ಲದುದು ; ನೀರಸವಾದುದು : 'ತಾಯಿ' ಯಂಥ ಕಥೆಗಳ ಜೊತೆಗೆ ಬಂದಿರುವುದರಿಂದ ಅವು ಪೇಲವವಾಗಿ ಕಾಣುತ್ತವೆ (ಎಮುಳ. XVI, ಮುನ್ನುಡಿ) ; ಪಂಪನ ಆದಿಪುರಾಣದಲ್ಲಿ ಬರುವ ಸನ್ನಿವೇಶದ ಎದುರು ಇದು ತೀರಾ ಪೇಲವವಾಗಿದೆ (ಶಂಕೀ. ೦೫೬). [ಸಂ.]

ಪೇಲವತೆ (ನಾ). ಬಿಳಿಚಿಕೊಂಡಿರುವಿಕೆ : ಗರ್ಭಿಣಿಯಾಗಿ ಬಂದಾಗ ಇದ್ದ ಆ ಪೇಲವತೆ ಈಗಿಲ್ಲ (ಅಶಾಕ. ೨೩೩). [ಸಂ. ಪೇಲವತಾ]

ಪೇಲು 'ಪೇಲ್ಯ' ನೋ.

ಪೇಲೆ, ಪ್ಯಾಲೆ (ನಾ). ಕುಡಿಯಲು ಬಳಸುವ ಪಾತ್ರೆ ; ಬಟ್ಟಲು : ಬೆಳ್ಳಿಯಿಂದ ತಾಟು, ತಬಕ, ಪೇಲೆ ಮುಂತಾದ ಸಾಮಾನುಗಳನ್ನು . . . ಮಾಡುತ್ತಾರೆ (ಮುಂಬಯಿ. ೪-೦೨೦) ; ಚೆನ್ನೂ ಹಾಲಿನ ಪೇಲೆ ಹಿಡಿದು ಅಡಿಗೆ ಮನೆಯ ಹೊಸ್ತಿಲ ಮೇಲೆ ಕುಳಿತ (ಕ್ಷಿತಿಜ. ೩೩) ; ಪೇಲೆಗಳು ತುಂಬಿದವೆನ್ನುವಷ್ಟರಲ್ಲಿ ಬರಿದಾಗುತ್ತಿದ್ದವು (ಮೂಪಾಸಾ. ೦೨). **ಪ್ಯಾಲೆ** : ಆ ಮುಹೂರ್ತದಲ್ಲಿ ಕಾರ್ಕೋಟಕವಿಷ ತುಂಬಿದ ಪ್ಯಾಲೆ ಕೊಟ್ಟಿದ್ದರೂ ಗುಟುಕರಿಸಿಬಿಡುತ್ತಿದ್ದರು (ಪೈದ್ಯಕಿ. ೯).

[←ಪಾರ. ಹಿಂ. ಪ್ಯಾಲಾ ; ಮರಾ. ಪೇಲಾ, ಪ್ಯಾಲಾ]

ಪೇಲೆವೆರಿಗೆ (ನಾ). ಒಂದು ಬಗೆಯ ತೆರಿಗೆ (?) : ಬಸವನಹಳ್ಳಿಯ ಪೇಲೆವೆರಿಗೆ ಹೆಟ್ಟಿಗೆ ಹುರಿಗೆ ಸಿನ್ದುವಱದು ದೇವಳಿಗೆನಾಡ ಎಳ್ಪದಿಮ್ಬರು ಪ್ರಭುಗಳ್ ಅಟಿಯಲು (ಎಳ. VI, ಶಕ್ಕಮ. ೦೩-೦೦; 1674 ?). [?]

Δ **ಪೇವಯ್ಸು** 'ಹೇವಯಿಸು' ನೋ.

ಪೇಶಣ 'ಪೇಸಣ' ನೋ.

ಪೇಶಲ, ಪೇಶಳ (ಗು). ೧. ಕೋಮಲವಾದ; ಮೃದುವಾದ : ಓಸರಿಸದಿಂದೆನ್ನ ಬಡಸೇವೆಯನು ತಾವು ಪೇಶಲ ಸುಭಾವದಿಂ ನೋಡಿ ಕೈಕೊಳಲು (ಕಿರೀಟೇ. ೦೦-೩೦). ೨. ತೆಳುವಾದ ; ಕೃಶವಾದ. ೩. ಸುಂದರವಾದ ; ಮನೋಹರವಾದ : ದೇವ ದೋಷಹೃದ್ಗರಧರ ವಂದ್ಯ ಪೇಶಲ ಪಿನಾಕ ಸುಪಾಣಿ ಮಹೇಶ ಪಾಲಿಸಾ (ಹಮ್ಮೀರ. ೦-೨). ೪. ಸಮರ್ಥವಾದ ; ದಕ್ಷ. ೫. ಮೋಸದ ; ವಂಚನೆಯ. ೬. ಅಲಂಕಾರ ಮಾಡಿದ ; ಸಿಂಗರಿಸಿದ. (ನಾ). ೭. ಮೃದುತ್ವ ; ಕೋಮಲತೆ : ಪ್ರಯೋಗಮಾರ್ಗದೊಳತಿಪೇಶಲಮಾಗೆ (ಮಾಧವಾ ೨-೨೪೨); ಮೃದು ಪೇಶಲಮನಾಂತ ನುಡಿಗಳಿಂ ಬಿನ್ನವಿಸಿದು (ವಂಕಾರಾ. ೬-೬೩ ೨). ೮. ತೆಳುವು ; ಪಾರದರ್ಶಕವಾದುದು : ನಟಿಯಂತೆ ಪೇಶಲವಾದ ವಸ್ತ್ರಗಳನ್ನು ಧರಿಸಿ . . . ತನ್ನ ವಕ್ಷಸ್ಸನ್ನು ಲೋಕದೆದುರಿಗೆ ಆವಿಷ್ಕಾರ ಮಾಡುತ್ತಾ (ಶಾರದ. ೨೨). ೯. ಶುಭ; ಮಂಗಳ : "ಕಮನಂ ಶುಭಂ ಪೇಶಲಂ ಶೋಭನಂ" (ಮಂಗರಾ. ೦೨೬-೨). ೧೦. ಒಂದು ಬಗೆಯ ಬಣ್ಣ ; ತಿಳಿ ಹಳದಿ : ಪೇಶಲವೆಂಬುವದು ಭತ್ತದ ಗರಿಯ ವರ್ಣವಾಗಿಯಿರುವದು (ಸೌಗಂಧಿ. ೩೬೬-೦೯). ೧೧. ಅಂದ ; ಸೊಬಗು : ಮನೋವಿಕಾಸಮಂ ಕನ್ನಡಿಸಿತ್ತು ಸೀತೆಗೆ ಮುಖಾಂಬುರುಹಂ ದರಹಾಸ ಪೇಶಲಂ (ಶಂಕಾಮಾ. ೦೦-೮೬). ೧೨. ದಕ್ಷತೆಯಿಂದ ಕೂಡಿದ ವ್ಯಕ್ತಿ ; ಪರಿಣತ : "ದಕ್ಷಃ, ಚತುರಃ, ಪೇಶಲಃ . . . ಉಷ್ಣಃ—ಆಲಸ್ಯವಿಲ್ಲದವನ ಪೆಸರುಗಳು" (ಸಿದ್ಧಾಂತಿ. ೩೦೨). ೧೩. ಮೋಸದಿಂದ ಕೂಡಿದುದು ; ಕುಟಿಲತನ. ೧೪. ವಿಷ್ಣುವಿನ ಹೆಸರುಗಳಲ್ಲಿ ಒಂದು. **ಪೇಶಳ** : ೩. ಪ್ರವಾಳಜಾಳಕಮೆನೆ ಕಣ್ಗೊಳಿಸಿರ್ದುದಾ ವಧೂವರರ ಸಲೀಳಪೇಶಳ ಶರಕ್ಕೆ ಪಾಣಿಗ್ರಹಣಂ (ವರ್ಧಮಾ. ೩-೯೩). [ಸಂ.]

ಪೇಶವಾಯಿ (ನಾ). ಮರಾಠರ ಆಳ್ವಿಕೆಯಲ್ಲಿದ್ದ ಮುಖ್ಯಮಂತ್ರಿಯ ಆಡಳಿತ,—ಅಧಿಕಾರ : ಇದು ಪೇಶವಾಯಿಯಲ್ಲಿ ಕಿತ್ತೂರ ದೇಸಾಯಿಯ ವಶಕ್ಕಿತ್ತು (ಬೆಳ. ೬೨).

[←ಪಾರ. ಹಿಂ. ಪೇಶವಾಈ; ಮರಾ. ಪೇಶವಾಯಿ]

ಪೇಶವೆ, ಪೇಶ್ವೆ, ಪೇಷ್ವೆ (ನಾ). ಮರಾಠರ ಆಳ್ವಿಕೆಯಲ್ಲಿದ್ದ ಮುಖ್ಯಮಂತ್ರಿ : ಅವನು . . . ಕೊಂಕಣಸ್ಥ ಬ್ರಾಹ್ಮಣನಿಗೆ ಪೇಶವೆ (ಮುಖ್ಯಪ್ರಧಾನಿ) ಎಂಬ ಅಧಿಕಾರ ಕೊಟ್ಟು, ಯಾವತ್ತು ಕಾರಭಾರವನ್ನು ಅವನ ಸ್ವಾಧೀನ ಮಾಡಿದನು (ಕರ್ನಾಇ. ೬೬). **ಪೇಶ್ವೆ** : ಪೇಶ್ವೆಗಳ ಆಡಳಿತವು ಬಿಗಿತಪ್ಪಿ ಸುಬೇದಾರನು ಪರಾಕ್ರಮಪರನಾಗಿದ್ದನು (ಝಾಂಸಿ. ೦). **ಪೇಷ್ವೆ** : ಎಂಟುಮೂಲೆಗಳಿಂದಲೂ ಮುತ್ತಿದ ಶತ್ರುಗಳನ್ನು ಎದುರಿಸಲು ಅವರು ಪುಣೆಯ ಪೇಷ್ವೆಯ ನಾಯಕತ್ವವನ್ನು ಅಂಗೀಕರಿಸಲಿಲ್ಲ (ಭಾರದ. ೪೨೩). [←ಪಾರ. ಹಿಂ. ಮರಾ. ಪೇಶವಾ, ಪೇಶ್ವಾ]

ಪೇಶಳ 'ಪೇಶಲ' ನೋ.

ಪೇಶಿ (ನಾ). ೧. ಮಾಂಸ ; ಅಡಗು ; ಬಾಡು : ಹೊಟ್ಟೆಯೊಳು ರಕ್ತ ಪೇಶಿಯು ಬಲಿದ ಗರ್ಭ (ವೀಶೈಪು. ೨-೩-೦೩). ೨. ಮಾಂಸದ ಮುದ್ದೆ : ವಿವಿಧಭಕ್ಷೋಪದುಶಪ್ರಾಯಮಪ್ಪ ದಿವ್ಯಾಹಾರಮೆತ್ತಲೀ ಕ[ನಿ]ತ ಪೂತಿಗಂಧಮಪ್ಪ ಮೃಗಪಿಶಿತಪೇಶಿಯೆತ್ತಲ್ (ವರ್ಧಮಾ. ೬-೪ ಪ). ೩. ಮೊಟ್ಟೆ ; ತತ್ತಿ : "ಕೋಶಂ ಪೇಶಿಯಂಡಮೆನೆ ತತ್ತಿಯಕ್ಕುಂ" (ಮಂಗರಾ. ೩೦-೧). ೪. ಗರ್ಭಧಾರಣೆಯ ನಂತರದ ಕೆಲವೇ ದಿನಗಳ ಭ್ರೂಣ. ೫. ಅರಳುವುದರಲ್ಲಿರುವ ಮೊಗ್ಗು. ೬. ಇಂದ್ರನ ವಜ್ರಾಯುಧ. ೭. ಒಂದು ಬಗೆಯ ವಾದ್ಯ. ೮. ಹಣ್ಣಿನ ಓಟೆ. ೯. ಕತ್ತಿಯ ಒರೆ,—ಕೋಶ. ೧೦. ಚೆನ್ನಾಗಿ ಬೇಯಿಸಿದ ಅಕ್ಕಿ. ೧೧. ಸ್ನಾಯು ; ಸ್ನಾಯುರಜ್ಜು : ಶರೀರದ ನಷ್ಟವಾದ ಹಲವೊಂದು ಪೇಶಿ (Tissues)ಗಳು ರಕ್ತವನ್ನು ಸೇರಿ ಯಕೃತ್ತಿಗೆ ಬರುವುವು (ಶಾಂಪ್ರ. I, ೩೦೦). [ಸಂ.]

ಪೇಶು (ಕ್ರಿ). ಹೊಗಳು ; ಕೊಂಡಾಡು : ಪೇಶಾದ ದಿನವೆಲ್ಲ ಪೆಱವಾದ ದಿನವಯ್ಯ ಈಶನಂ ನೆನೆಯದ ದಿನಂ ಬಂಜೆದಿನವಯ್ಯ (ವಾಗೀರ. ದೇ. ೨೬೩-೯); ಪೇಶಾದ ನಾಳೆಲ್ಲ ಪೆಱನಾ[ವಾ]ದ ದಿನ (ವೀಶೈಪು. ೪-೯-೦೩).

[ದೇ. ॥ ತಮಿ. ಪೇಚು ; ಮಲ. ಪೇಚು = ಮಾತನಾಡು]

ಪೇಶ್ವೆ 'ಪೇಶವೆ' ನೋ.

ಪೇಷ್‌ಕಷ್, ಪೇಷಕಶಿ (ನಾ). ಹಿಂದೆ ಜಮೀನುದಾರ ಮುಂತಾದವರು ಸರ್ಕಾರಕ್ಕೆ ತೆರುತ್ತಿದ್ದ ನಿಗದಿಯಾದ ಹಣ ; ಪೊಗದಿ : ಪ್ರಭುಗಳೂ . . . ನಿಯಮಿತವಾದ ಪೇಷ್‌ಕಷ್‌ನ್ನು ಕ್ರಮವಾಗಿ ಸಲ್ಲಿಸುತ . . . ಅವರ ದೇಶಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು (ಮಹಾಮಂ. II, ೧೩) ; ಇಂಗ್ಲೀಷ್ ಸರ್ಕಾರದವರು . . . ಪೇಷ್‌ಕಷ್ ಎಂಬ ಪೊಗದಿಯನ್ನು ತೆಗದುಕೊಳ್ಳುತ್ತಿದ್ದಾರೆ (ಪಾಳಗಾ. ೩೦). **ಪೇಷಕಶಿ** : ಫವುಜಿನ ಖರ್ಚಿಗೆ ಮೊಗಲು ಮರಾಟೀರ ಪೇಷಕಶೀ ಸಹಾ ನವಾಬರೇ ತೀರಿಶಿಕೊಳಬೇಕು (ಹೈದರ. ೩೦). [←ಪಾರ. ಮರಾ. ಪೇಶ್‌ಕಶ್; ಹಿಂ. ಪೇಶಕಷ್]

ಪೇಷಕಶಿ 'ಪೇಷ್‌ಕಷ್' ನೋ.

ಪೇಷಣ$_1$ 'ಪೇಸಣ' ನೋ.

ಪೇಷಣ$_2$ (ನಾ). ೧. ಧಾನ್ಯವನ್ನು ಹಿಟ್ಟು ಮಾಡುವುದು,—ಬೀಸುವುದು. ೨. ಅರೆಯುವುದು : ಪೇಷಣದ ಶಿಲೆಯೊಳಂ ಪೊಸೆದಿರ್ಕುಕಂದು (ಶಪ್ತಮಂ. ೯೯). ೩. ಬೀಸುವ ಕಲ್ಲು. ೪. ಅರೆಯುವ ಕಲ್ಲು ; ಕಲಬತ್ತು. ೫. ನರಕದ ಶಿಕ್ಷೆಗಳಲ್ಲಿ ಒಂದು : ಪೇಷಣ . . .

ದುರ್ಭೋಗ್ಯ ನಾನಾವಿಧಾಸಂಪ್ರಾತೀವ್ರವೇದನಾರೂಪಂಗಳಾಗಿ ಶಿವ ದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾಲೇಶಮೆಂದೆನಿಸಿ (ಪವೀಗೀ. ೦೬೦).

[ಸಂ.]

ಪೇಷಣೆ (ನಾ). ಅರೆಯುವ ಕಲ್ಲು : ಚುಲ್ಲಿ ಪೇಷಣೆ ಕಂಡನಿ ಉಪಸ್ಕರ ಉದಕುಂಭ ಎಂಬೈದು ಗೃಹೋಪಕರಣಗಳೂ ಹತ್ಯಾಕಾರಕಗಳು . . . ಪೇಷಣೆ—ಅಂದರೆ ಅರೆಯುವ, ಬೀಸುವ ಕಲ್ಲುಗಳು (ಆರ್ಗ್ರ. ೦೬೭).

[ಸಂ. ಪೇಷಣೇ]

ಪೇಷುಖಾನೆ (ನಾ). ಹಿಂದೆ ರಾಜ ಮೊದಲಾದವರು ಪ್ರವಾಸ ಹೊರಡುತ್ತಿದ್ದಾಗ ಅವರ ಮುಂದಿನ ಮೊಕ್ಕಾಮಿಗಾಗಿ ಮೊದಲೇ ರವಾನಿಸುತ್ತಿದ್ದ ಡೇರೆ ಮೊದಲಾದ ಸರಂಜಾಮು : ಮೂರು ಮಂದಿ ಪಾದುಶಹರು ತಮ್ಮ ತಮ್ಮ ಪೇಷುಖಾನೆ ಸಂಗಡ ರ್ಷಾಂಡಾವನ್ನು ಹೊರಗೆ ಹಾಕಿಸಿದರು (ಐಕ್ಕರು. ೩).

[←ಪಾರ. ಪ್ರಾ. ಪೇಶ್‌ಖಾನಾ; ಹಿಂ. ಪೇಶ್‌ಖೇಮಾ]

ಪೇಷ್ಕಾರ್, ಪೇಷ್ಕಾರ (ನಾ.) ಕಂದಾಯವನ್ನು ವಸೂಲು ಮಾಡುವ ಒಬ್ಬ ಅಧಿಕಾರಿ : (ಕ್ಯಗೆಚೆ. IV. ೭೮೨). **ಪೇಷ್ಕಾರ** : ಸಿದ್ಧನಾಯಕ ಬೇಗ ನೀನೋಡು ಪೇಷ್ಕಾರರದ್ದಿದ್ದರುಸುರು (ಅಣಾಗಿ. ೩೦-೩೮); ಪ್ರತಿ ತಾಲ್ಲೂಕಿಗೂ ಒಬ್ಬ ಸುಬೇದಾರ, ಒಬ್ಬ ಪೇಷ್ಕಾರ . . . ಗೊತ್ತಾಗಿ (ಕುಚಾಕಂ. II, ೮೨). [←ಪಾರ. ಹಿಂ. ಮರಾ. ಪೇಶ್‌ಕಾರ್]

ಪೇಷ್ಕಾರ 'ಪೇಷ್ಕಾರ್' ನೋ.

ಪೇಷ್ಮೆ 'ಪೇಶವೆ' ನೋ.

ಪೇಸಣ, ಪೇಶಣ, ಪೇಷಣ$_1$, ಪೇಸಣೆ, ಪೇಸಾಣೆ, ಪೇಸಾಳಿ (ನಾ). ೧. ಕೆಲಸ ; ಕಾರ್ಯ. ೨. ಸ್ವಾಮಿಕಾರ್ಯನಿರ್ವಹಣೆ ; ಒಡೆಯನ ಕೆಲಸ ಮಾಡುವುದು. **ಪೇಶಣ. ಪೇಷಣ$_1$. ಪೇಸಣೆ. ಪೇಸಾಣೆ. ಪೇಸಾಳಿ.**

ಪೇಸಣಗರುಡ, ಪೇಷಣಗರುಡ = ಸ್ವಾಮಿಕಾರ್ಯನಿರ್ವಹಣೆಯಲ್ಲಿ ಗರುಡನಂತಿರುವವನು; ಒಂದು ಬಿರುದು : ಶ್ರೀಮತ್ರಿ × ವನವಲ್ಲ ದೇವ ಪೇಸಣಗರುಡಂ ಜಯಲಕ್ಷ್ಮೀನಿಳಯಂ (ಸಿಇಇ. IX-೬ ೦೮೨-೯: 1078) ; ಶ್ರೀಮತ್ರಿಭುವನವಲ್ಲದೇವ ಪೇಷಣಗರುಡನಾಮಾದಿ ಸಮಸ್ತ ಪ್ರಸಸ್ತಿಸಹಿತರ (ಸಿಇಇ. VIII, ೪೭೭-೯; 1085). **ಪೇಸಣಹಣುವಂತ, ಪೇಷಣಹಾನ್ಮಂತ, ಪೇಸಣಹನುಮಂತ** = ಸ್ವಾಮಿಕಾರ್ಯನಿರ್ವಹಣೆಯಲ್ಲಿ ಹನುಮಂನಂತಿರುವವನಂ ; ಒಂದಂ ಬಿರುದಂ : ಜಯ ಸಿಮ್ಹದೇವ ಪೇಸಣಹಣುವನ್ನ (ಕ್ಯಆಇ. ೦೮೨೯, ೬೫-೫೪; 1081); ಸ್ವಸ್ತಿಶ್ರೀಮಚ್ಚಾಳುಕ್ಯಪ್ರತಾಪೋನ್ನತ್ಯರ್ಥ ಜಗದೇಕಮಲದೇವ ಪೇಷಣ ಹಾನ್ಮನ್ತರಪ್ಪ ಶ್ರೀಮಹಪ್ರಧಾನಂ ಕನ್ನಡಸಂನ್ಧಿವಿಗ್ರಹಿ (ಕಇ. IV, ೦೦-೯; ಸು. 12೪೮ ೫೪); ಪೇಸಣ ಹನುಮಂತನೆನಿಪ ನಾವಿದದಾಸ (ಸಿಇಇ. XI-ii, ೦೪೪-೦೯ ; 1087). **ಪೇಸಣ ಹನುಮ್ಮ, ಪೇಷಣ ಹಣುವ, ಪೇಸಣೆ ಹನುವ, ಪೇಸಾಣೆ ಹನುವ, ಪೇಸಾಳಿ ಹನುವ** = ಪೇಸಣಹಣುವಂತ : ಪಟಿಹಿತರಾಯನ್ಸಿಂಹನ ನಚ್ಚಿನಚ್ಚು ಪೇಸಣಹನುವಂ (ಸಿಇಇ. IX—i, ೪೪೬-೦೦; 1226); ಕಡುಗಲಿ ದಣ್ಣನಾಥಮಿತನಾತ್ಮಜ ಪೇಷಣಹಣ್(ಣು)ವ ಬಲ್ಲಿಗನ್ (ಎಇ. V. ಕಪ್ಪಣ. ೦೮೭-೭೬; 1223) ; ದಣ್ಣನಾಥ ಪೇಸಣಹನುವ (ಎಇ. VI. ಕಡೂರು. ೪೪-೪೯; 1291); ಪೇಸಾಣೆಹನುವ ಮೋಹರವುರಾರಿ (ಎಇ. XI. ಹೊಳೆ. ೪೦-೦ ; ಸು. 1225 ?) ; ಚಕ್ರೇಶ್ವರ ಜಾವಾದಿ ಕೋಳಾಹಳ ಪೇಸಾಳಹನುವ ಗಜಬೇಣ್ಕೆಕಾಜಿ (ಎಇ. XIV. ೪೪೦ಮೂ. ೦೫-೫ ; ಸು. 1511). [< ಪ್ರಾ. ಪೇಸಣ. / ಸಂ. ಪ್ರೇಷಣ]

ಪೇಸಣೆ 'ಪೇಸಣ' ನೋ.

Δ **ಪೇಸರಗತ್ತೆ** 'ಹೇಸರಗತ್ತೆ' ನೋ.

Δ **ಪೇಸರು** 'ಹೇಸರ' ನೋ.

ಪೇಸಾಣೆ 'ಪೇಸಣ' ನೋ.

ಪೇಸಾಳಿ 'ಪೇಸಣ' ನೋ.

ಪೇಸಿಕೆ, ಹೇಸಿಕೆ (ನಾ). ೧. ಹೊಲಸು ; ಕೊಳಕು : ಬೇಡವಟ್ಟವುಂ ಕಂಡಂ . . . ನರಕದ ನೆಲೆ ಪೇಸಿಕೆಗಳ ಕರು ಮಸಣದ ಪುಟ್ಟು ಪಾಪ ದೆಱೆ ಪಾತಕದಾಗರವುದು (ಕಾದಂಉ. ೭೪೬); ಉದುರಿದುವು ಧರಣಿಯಲಿ ಬಲುಮಾಂಸದ ಸುರಕ್ತದ ಪುಟ್ಟಗಳು ಪಿಂಡದ ಸುಧಾಳದ ಜಿಗಿಯ ಪೇ [ಕಾಣಂ. ಹೇ]ಸಿಕೆ ನಿಕರ ನೂಱೊಂದು (ಶಾಪ್ಯಾ. ೪-೪೨). ೨. ಅಸಹ್ಯ ; ಜುಗುಪ್ಸೆ : ನೀನಲಬ್ಧಸಮ್ಯಗ್ದರ್ಶನೆಯಪ್ಪುದಱಿಂ ಪೇಸಿಕೆಯಂ ತಾಳ್ದದೆ (ಕಾಂಕಿಸ್ಮ. ೬-೦೩೨ ಪ). **ಹೇಸಿಕೆ** : ೧. ಸಂತವೊಂಬತ್ತುಮಾಸಂ ಹೇಸಿಕೆಯ ನಡುವೆ ಕತ್ತಲೆಯ ಕರುಳೊಳಗೆ ಮುರುಳಂದದಿಂ ಬೆಳೆದು (ಏಂಪೂಗೀ. ಪ. ೩೦೦-೨) ; ರಕುತದ ಹೇಸಿಕೆಯನು . . . ನೆರಹಿದಂ ನಿಳಯದೊಳಗೆ (ಪಪಣಾ. ೦೦-೩೦); ಮುಂದಿಳುಹಿದಳು ಹೇಸಿಕೆ ಹೊನಲಿಡುವ ಹಂದಲೆಯನು (ಕೂರಣಾ. ೩-೬-೨೦) ; ಹೇಸಿಕೆಯ ಕಿಸುಕುಳದ ಕೀವು ತುಂಬಿ ಒಸರುವ ಹಸಿಯ ತೊಗಲಿನ ಹಳೆಯ ಗಾಯದಲ್ಲಿ ವಿಷಯಾತುರದಿಂದ ಬಿದ್ದು (ಅಖಂಶೀ. ೬-೬). ೨. ಮಾಂಸಿನಲ್ಲಿ ಮಾನ್ಯತನ ಮನದಲ್ಲಿ ಆಶೆ . . . ಇದು ಎನಗೆ ಹೇಸಿಕೆಯಾಯಿತ್ತು (ಕೂೀಪಚಾ. ೩೬-೦೩೭); ಹಾಸಿಕಲ್ಲದೆ ಹಾವಿನ ಮೇಲೆ ಒಜಗಿದವ ಹೇಸಿಕಲ್ಲದೆ ಕರಡಿಯ ಕೂಡಿದ (ಪುರಂರ. ೨-೦೦ ೦) ; ವಿನಾಯಕರಾಯನಿಗೆ ತನ್ನ ಪ್ರಿಯಪತ್ನಿ ಸರಳೆಯನ್ನು ಬಿಟ್ಟು ವೇಶ್ಯೆಯ ಮನೆಗೆ ಹೋಗಲು ಹೇಸಿಕೆ (ಶಾಂಳಾಪು. ೭೦). ೩. (ಆಲಂ) ಅವಮಾನ ; ಅಗೌರವ : ಶಿರುಗಿ ರಾಮೆಯನು ಕೊಟ್ಟು ತಮ್ಮನ ಕರಸಿ ಕೊಂಬೀ ಹೇಸಿಕೆಯ ನಿಜಶಿರದೊಳಾನುವನಲ್ಲೆನುತ ನಡೆತಂದನಾಹವಕೆ (ಕೂರಣಾ. ೪-೪-೦೦). [ಪೇಸು$_1$ + — ಇಕೆ. / ತುಳು. ವೇಸಗೆ, ವೇಶಿಗೆ]

ಪೇಸು$_1$, ಪೇಚು$_1$, ಹೇಸು$_1$ (ಕ್ರಿ). ೧. ಅಸಹ್ಯಪಡು ; ಜುಗುಪ್ಸೆಹೊಂದು : ದೋಸವೇನಾನುಂ ಸ್ವಲ್ಪಮಾದೊಡಂ ಮಾಸಿಸರ್ಕುಮಣಂ ಕೃತಿವಧುವಂ ವೇಸದೆ ದುರ್ಜನದೊಳಾದ ಪರಿಚಯಂ ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ (ಕಣಾ. ೦-೦೦೦) ; ಭೀಭತ್ಸವುಂ ಕಂಡಾದವುಮನುಂ ವೇಸ ಶರೀರ ವೈರಾಗ್ಯಮನೊಡೆಯನಾಗಿ (ಪಣ್ಣಾಣಾ. ೬೩-೦೭); ನಾರದಂ ಮನದೊಳೆ ಪೇಸುಗುಂ (ಪಂಕಣಾ. ೬-೨೬); ಬೇನೆ ಬಿದ್ದಿರೆ ವೇಸದೆ ಬೇಸಱದೆ ಸನ್ಮಾನದೊಳುವಚರಿಸುವುದು (ಪಪಣಾ. ೪-೦೪); ತನ್ನ ಗಂಡುಸುತನಕೆ ವೇಸದಳ್ ತಾನೆ ಚಿತ್ರಾಂಗನೆ (ಪಣ್ಣಾಂಗ. ೦೬-೪೩೮). **ಪೇಚು$_1$** : ೧. ಭಸ್ಮಧಾರಿಯ ಕಂಡು ಪೇಚುತಂ ನಿಂದಿಸುವವಂ ಶೂದ್ರಗೊಗೆದನೆಂದೇ ಚತುರ ರೂಹಿವುದು (ಣಾಶಿಪ. ೪-೦೯). **ಹೇಸು$_1$** : ೧. "ಹೇಸು—ಜುಗುಪ್ಸಾಯಾಂ" (ಪಮಂಣಾ); ಕಾಳುದ್ವೇಷಕ್ಕೆಱಗಿ ನಾನು ಶಿವಭಕ್ತನೆನಿಸಿಕೊಂಬ ಚಂಡಿನಾಯಿಗಳ ಕಂಡು ಎನ್ನ ಮನ ಹೇಸಿತ್ತು ಕಾಣಾ (ಪುಪಪೂ. ೨೪-೪೦). ೨. ಹಿಂಜರಿ ಹಿಂದೆಗೆ; ಅಳುಕು : ಹೇಸುವುದು ಮನ ಬೊಮ್ಮಹತಿಗಾಗಿ (ಕ್ಯಆಣಾ. ೦೬-೦೨); ಕೌರವ ಹೇಸದೆ ನಿನ್ನನು ಕಟ್ಟಿಸಲು ಸಾಸಿರನಾಮನೆ ವಿಶ್ವರೂಪವ ತೋಱೆ ವೋಸ ಗೊಳಿಸಿದಾಟವೆಲ್ಲಿ ಕಲಿತೆಯ್ಯ (ಪೂಂಪ. ೦-೪೬-೨೨); ಸೂಸುವ ಮನವನ್ನು ಹೇಸದಲೆ ಹಱಿದೊಗೆದು ಲೇಸಾಗಿ ಇಪ್ಪ ಶಿವಯೋಗಿ ಗುರುವಿನ ಕೊಸು ತಾನಿರುವ (ಪಪಣಾ. ೪೧೩); ಏನೂ ಇಲ್ಲದವ ಯಾವುದಕ್ಕೂ ಹೇಸ (ಣಾಪ). **ಹೇಸೆ ಪಡು**—ಇತರರ ಜುಗುಪ್ಸೆಗೆ ಒಳಗಾಗು,—ಅಸಹ್ಯಕ್ಕೆ ಗುರಿಯಾಗು : ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆ ಆದಮಾವುಂ ವಿರೂಪೆ ವೇಸವ[ಕಾಣಂ. ವೇಸವ್]ಡುವಳ್ (ಪಣ್ಣಾಣಾ. ೦೦೬-೩೫).

[ದೇ. ∥ ತುಳು. ವೇಸು]

ಪೇಸು$_2$, ಹೇಸು$_2$ (ನಾ). ಅಸಹ್ಯ; ಜುಗುಪ್ಸೆ: **ಪೇಸೇಟು**' ಪರಾ-

ಹೇಸು$_2$: ಪರಿಚಯವಿದ್ದವರೊದ್ದರು ಕಡುಲೇಸು . . . ಪರಿಚಯವಿರದವರೊಲಿದರು ಕಡುಹೇಸು (ಇಂಕಾಪ. ೭೮-೭೭). [<ಪೇಸು$_1$]

ಪೇಸುಗೆ (ನಾ). ಅಸಹ್ಯ; ಜುಗುಪ್ಸೆ: ಮತ್ತಿನ ಪೆಂಡಿರ್ಗೆ ಪೇಸುಗೆಯಂ ಪುಟ್ಟಿಸುವ ನಾಯಕಸ್ತ್ರೀಯಂತಪ್ಪ (ಧರ್ಮಾಮೃ. ೦೨-೨೯); ಪೇಸುಗೆ ಪೆಸರಟಿಯೆ ಹೇಯಂ ಮಾಯವಾಗೆ (ಇಗಪಿ. ೨-೫೩ ಪ); ಜುಗುಪ್ಸೆ ಪೇಸುಗೆಯಂ ಮಾಟ್ಟುದು (ಪಸಾರ. ೦೨). [ಪೇಸು$_1$ + – ಗೆ]

ಪೇಸುಗೆಗೆಡು (ಕ್ರಿ). ಅಸಹ್ಯಭಾವವನ್ನು ಕಳೆದುಕೊಳ್ಳು; ಜುಗುಪ್ಸೆಯಿಲ್ಲದಂತಾಗು: ಸಂಸಾರದೊಳ್ ಪೇಸುಗೆಗೆಟ್ಟೇ ನಾಣ ಪುತ್ತಪ್ಪಟಿಜಗಳದೊಳೇನಮ್ಮ ತಕ್ಕೂರ್ಮೆಯುಂಟೇ (ಶಾಂತಿಪು. ೬-೬೭). [ಪೇಸುಗೆ+ಕೆಡು$_1$]

ಪೇಸುತಪ (ನಾ). ಜುಗುಪ್ಸೆಯನ್ನುಂಟುಮಾಡುವ ತಪಸ್ಸು: ಭಾವಿಸುವಂದಿನಿಸು ಪೇಸುತಪಮಂ ಕಾಣೆಂ (ಧರ್ಮಾಮೃ. ೯-೦೦೬). [ಪೇಸು$_2$ + ತಪ$_2$]

ಪೇಸುಪತ 'ಪೇಸುಪಥ' ನೋ.

ಪೇಸುಪಥ, ಪೇಸುಪತ (ನಾ). ಅಸಹ್ಯ; ಜುಗುಪ್ಸೆ: ರಾಜ್ಯಾಭಿಲಾಷೆಯಿಂದಿರ್ದೆನಪ್ಪೊಡೆ . . . ಸೌಂತೆಯ ತೋಂಟದಂತೆ ಕಡೆಯೊಳ್ ಪೇಸುಪಥಮುಮಶೋಭೆಯುಮಾಗದೆ ಪೋಗದು (ಧರ್ಮಾಮೃ. ೬-೦೨೨); ಕಣ್ಗೆ ಕೊಕ್ಕರಿಕೆ ಮನಕ್ಕೆ ಪೇಸುಪಥಮಾಯ್ತೆನಸುಂ ನೆಗಟ್ಟೂ ರಣಾಂಗಣಂ (ಶಾಂತೀಕೃ. ೬-೦೨). **ಪೇಸುಪತ** : ತಿಪ್ಪೆಯಂತೆ ಪೇಸುಪತಮಪ್ಪುದು . . . ಬಣಗಿನಂತೆ ನೇರಿತಲ್ಲದು ಬಗೆವಂದೀ ಶರೀರಂ (ಧರ್ಮಾಮೃ. ೯-೦೭೫); ಪೇಸುಪತಂ ಕರಂ ಕಿಸುಗುಳಂ ಕಾಯಂ ಶುಚಿಪ್ರಾಯಮೇ (ಪುಷ್ಪಪು. ೦೩-೯೯). [ಪೇಸು$_2$+ಪಥ ?]

ಪೇಸುವೆ (ನಾ). ಹೇಳಿದುದು; ವಿಷಯ; ಸಂಗತಿ: ಮಾಣಿಗಬಸುಣ್ಣಿ ಪೇಸುವೆ ಚಲಭೂಷಣನೆಟ್ಟು × ಪರಾಕ್ರಮನ ಪುದಿದ ಕಲ್ಲು ಕೊತ್ತಟಿ ಸುದ್ದಂವಡೆಯರಂ ಮಂಗಳಂ (ಎಕ. X, ಕಿಡ್ಡಳಿ. ೦೨-೨; ಸು. ೪೦೦ ?).

[←ತಮಿ. ಪೇಚ್ಚು]

ಪೇಸೇಳ್ 'ಪೇಸೇಟ್' ನೋ.

ಪೇಸೇಳು 'ಪೇಸೇಟು' ನೋ.

ಪೇಸೇಟು, ಪೇಸೇಳ್, ಪೇಸೇಳು, ಹೇಸೇಳ್ (ಕ್ರಿ). (ಅಜ್ಜಿಬಜ್ಜಿಯಾಗಿ) ಅಸಹ್ಯವುಂಟಾಗು; ಜುಗುಪ್ಸೆಯಾಗು: ಪದಿನೆಂಟುಕೋಟಿ ಪದಾತಿಯುಮನಲಸದೆ ಪೇಸೇಟ್ ಕೊಂದು (ಪಂಪಭಾ. ೦೦-೦೯ ಪ); ಪಿಡಿದು ಪೇಸೇಟ್ ಸೀಳ್ದಿಕ್ಕಿದಂ (ಪರ್ಧಮಾ. ೩-೨೨); ರಣದೊಳ್ ಪೇಸೇಟ್ ಹೊಯ್ದು (ಎಕ. VIII, ಸೊರಬ. ೨೫೦-೯; 1237). **ಪೇಸೇಳ್** : ನಿಬನ್ಧಿಸಿ ಕಟ್ಟಾಳಲಾರದ ನಾವೀ ಅಧಿರಾಜರು ಪಾಲಕರೆನಿಸಿರುವುದು ಪೇಸೆಳ್ದು, ಪಟ್ಟಣದ ರತ್ನಸಿಂಹಾಸನದಡಿಯಲ್ಲಿ ಭೂಕಂಪವಾಗುತ್ತಿರಬೇಕೆಂಬ ಶಂಕೆಯನ್ನುಂಟುಮಾಡಿ ಬಾಧಿಸುತ್ತಿದೆ (ಪಟ್ಟಿಕ. ೭೯-೦೭). **ಪೇಸೇಳು** : ಉಗ್ರಾಂನ್ತಕನಂನ್ದದಿಂದೆ ಪಲರಂ ಪೇಸೇಳೆ ಕೊಂದಿಕ್ಕಿ (ಎಕ. VII, ತಿಕಾರಿ. ೦೬೩-೦೦; 1198 ?). **ಹೇಸೇಳ್** : ಜವನೊಕ್ಕಿಲಿಕ್ಕಿದಂತಿರದ್ಭುತಮಾಗೆ ಹೇಸೇಳೆ ಕೊಣ್ದು ಬೆನ್ನಟ್ಟಿದಲ್ಲಿ (ಎಕ. VII, ಹೊಸ್ಕಾಳಿ. ೫೫-೦೦; 1247). [ಪೇಸು$_2$ + ಏಟ್$_1$]

ಪೇಳ್ 'ಪೇಟ್' ನೋ.

ಪೇಳಾಪೇಳಿ (ನಾ). [ಸಂಗೀತ] ಠಾಯದಲ್ಲಿ ಒಂದು ಪ್ರಕಾರ: ತಾಳಸಾರಿಪರೀತ ಪೇಳಾಪೇಳಿಯುಂ ಸಂಜಾತಜಾಯನುಜಾಯುಚಿತಮೊಯ್ಯಾರ ಮೊಡಗೂಡಿ (ಬಸಪು. ೦೬-೦೨).

[← ತೆಲು. ಪೆಳ್ಳಾಪೆಳ್ಳಿ. / ಸಂ. ವೇಲಾವಲಿ = ಒಯ್ಯ ನಿರ್ದಿಷ್ಟ ಸ್ವರಶ್ರೇಣಿ]

ಪೇಳಿ 'ಪೇಟ್$_2$' ನೋ.

ಪೇಳಿಕೆ, ಹೇಳಿಕೆ$_2$ (ನಾ). ೧. [ಕಾವ್ಯಮೀ] ಶಬ್ದಾಲಂಕಾರದಿಂದ ಕೂಡಿದ ಕಾವ್ಯರಚನೆ; ಒಗಟು; ಒಡಪು: ಸುಕವಿಪ್ರಕರಕ್ಕೆ ವಿನೋದ ಕೇಳಿಗುಪಯೋಗಹೇತುಗಳ್ ಪ್ರಚ್ಛನ್ನಪ್ರಕಟಾರ್ಥಂಗಳನೇಕಪ್ರಕಾರದಿಂದೊಂದಿ ವರ್ತಿಕುಂ ಪೇಳಿಕೆಗಳ್ (ಕಾಪ್ಯಾಪ. ೫೯೩); ನುಸುಳೊರ್ನುಡಿ ಭಾಮೆ ಮನಕ್ಕೆಸೆವಸ್ಪಷ್ಟಾರ್ಥಮುಟಿವು ನಾಮಾಂತರಿತಂ ಕುಸುರಿಯ ನುಡಿಯೆಂಬಿವು ಭಾವಿಸೆ ಪೇಳಿಕೆಗಳೊಳ್ ಪೇಟ್ವ ಭೇದಮವಕ್ಕುಂ (ಕಾಪ್ಯಾಪ. ೫೯೯). **ಹೇಳಿಕೆ$_2$**: ೧. ಅನುಗತಂ ಪೂರ್ವಕವಿಗಳ್ ನೆನೆದಿನ್ನುಂ ಪೇಟ್ದಿಂ ದುಷ್ಕರೋಕ್ತಿಯನ್ನನುಗತಕ್ರಮದೆ ಬಗೆದು ಹೇಳಿಕೆಯೊಳ್ ಜನಿತವಿಭೇದಮುಮಂ ಪೇಟ್ವಿಂ (ಕವಿರಾ. ೨-೦೯೦). ೨. [ಸಂಗೀತ] ಕೊಳಲನ್ನು ನುಡಿಸುವುದರಲ್ಲಿ ಒಂದು ಪ್ರಕಾರ: ಆಲಾಪ . . . ಹೇಳಿಕೆ . . . ವ್ಯಾಪ್ತಿ ಮುಂತಾದಿಪ್ಪತ್ನಾಲ್ಕು ತೆಱದಲ್ಲಿ . . . ಭೇದವಱಿದಾಲಾಪಿಸಿ (ವಿವೇಕ. ೨೫೭).

[< ಸಂ. ಪ್ರಹೇಲಿಕಾ]

ಪೇಳಿಗೆ 'ಪೆಟ್ಟಿಗೆ' ನೋ.

ಪೇಳಿಸು 'ಪೇಟಿಸು' ನೋ.

ಪೇಳು 'ಪೇಟ್' ನೋ.

ಪೇಳ್ಕೆ 'ಪೇಟ್ಕೆ' ನೋ.

ಪೇಳ್ಗೆ 'ಪೆಟ್ಟಿಗೆ' ನೋ.

ಪೇಱಿಸು, ಪೇರಿಸು$_1$, ಹೇರಿಸು, ಹೇಱಿಸು (ಕ್ರಿ). ೧. (ಭಾರವನ್ನು) ಹೊರುವಂತೆ ಮಾಡು; ಹೊರಿಸು: ತೀವಿರ್ದ ನಿಖಿಳಭಂಡಾರಮಂ ತೆಗೆಸಿ ನಾನಾವಸ್ತುನಿಚಯಮಂ ಪೇಱಿಸಿ ಸಮಸ್ತಸೇನಾವಿತತಿಸಹಿತ . . . ಪೊಱಮಟ್ಟನು (ಸ್ವಯಿಶಾ. ೯-೬೭). **ಪೇರಿಸು$_1$**: ೨. (ವಸ್ತುಗಳನ್ನು) ಒಂದರ ಮೇಲೊಂದರಂತೆ ಇಡು; ಅಡುಕು: ಮಡಿಕೆಗಳನ್ನು ಪೇರಿಸಿ ಕಟ್ಟಿಕೊಟ್ಟನು (ಕಥಾಮಂ. IV, ೩೭); ಬಲಭಾಗದಲ್ಲಿ ಪೇರಿಸಿದ್ದ ಹಾಸಿಗೆಸುರುಳಿಯನ್ನೇರಿ ಕುಳಿತಳು (ಮಾಮಪ. ೫); ಹೀಗೆ ಬೆಳವಣಿಗೆಯ ಪದರಗಳು ಒಂದರ ಮೇಲೊಂದನ್ನು ಪೇರಿಸಿಟ್ಟಂತೆ ಕಾಣುತ್ತವೆ (ಹಸುಹೂ. ೨೮೩). **ಹೇರಿಸು**: ೧. ವಿವಿಧರತ್ನಾಭರಣಕಾಂಚನನವಮಕೂಲಂಗಳನು ಅವರವರ ತೆರನರಿತು ಹೇರಿಸಿಪುಳು ವಿಚಿತ್ರದಲಿ (ಕೋಗಯ. ೦೩-೯); ಹೊಗಳಿಕೆಯ ಹೊರೆಯನ್ನೇ ಹೇರಿಸುತ್ತಿದ್ದರು (ಕಂಕ. ೯೨). **ಹೇಱಿಸು** : ೧. ಕೇರಳರ ಸದೆದು ಮಹಾರ್ಘರತ್ನಾವಳಿಯ ಹೇಱಿಸಿದನು ಸುಚಿತ್ರಾಂಬರ ವಿಲೇಪನವ (ಕುಪ್ಯಾಸ. ೫-೨೦); ಅತಿ ಸುಮ್ಮಾನದಲಿ ಶಿಶುಪಾಲ ಹೇಱಿಸಿದನು ಮಹಾಧನವ (ಕುಪ್ಯಾಸ. ೯-೩).

[ಪೇಱು$_1$ + – ಇಸು$_3$]

ಪೇಱು$_1$, ಪೇರು$_1$, ಹೇರು$_1$, ಹೇಱು$_1$ (ಕ್ರಿ). ೧. (ವಸ್ತುಗಳನ್ನು) ಒಂದರ ಮೇಲೊಂದರಂತೆ ಇಡು; ಅಡುಕು: ತಳಿರ್ಗಳಿಱುಂಬಿನೊಳ್ತರದೆ ಪೇಱಿದ ಕೃಷ್ಣಮೃಗಾಜಿನಂಗಳಿಂ . . . ತೋಱಿದುವಾಗಳಶೋಕಭೂರುಹಂ (ಕಾದಂಪೂ. ೨೨೭); ಆ ಜವನಿಕ್ಕುಂ ಕೋಣನಿನ್ದಂ ಪಗೆವರ ಪೆಣನಂ ಪೇಱಲೀ ವಿಷ್ಣುವಂ ಕಾದುವನಾವಂ (ಎಕ. V, ಹಾಸಪ. ೬೫-೨೫; 1149). ೨. ಇಡು; ಇರಿಸು: ವಿಜಯಗಜಮನೇಱಿ . . . ಬಲದ ಕೋಡ ಮೇಲೆ ಕೆಯ್ಯಂ ಪೇಱಿ (ಪಂಪಭಾ. ೯-೯೫ ಪ); ಗಿರಿಜೆಗೆ ಶಿವಲಿಂಗಮಂ . . . ತೋಱಲೊಡಂ ಕಣ್ದೆಱೆದಳ್ ಪೇಱಿದಳೆರಡುಂ ಕರಂಗಳಂ ನೊಸಲೊಳ್ (ಗಿರಿಕ. ೩-೫೯). ೩. ತುಂಬಿಕೊಳ್ಳು; ತಾಳು; ಹೊಂದು: ನನೆಯನೆ ಪೇಱುಕೊಂದಳಿರೊಳೆಯ್ದೆ ಬಟಲ್ದೆಳಮಾವು (ಅಂಪು. ೦-೬೫); ಕಾಯ್ದುಱುಗಲಂ ಪೇಱಿರ್ದ್ದ ಚೆನ್ದೆಂಗು (ಎಕ. VIII, ಸೊರಬ. ೨೭೫-೬; 1231); ಬೇರಿಂದಂ ಕಾಯ್ಗಳಂ ಪೇಱಿದ ಪಲಸುಗಳೆಲ್ಲೆಲ್ಲಿಯುಂ (ಪಾಠಪು. ೦-೦೦೭); ಮಾಮರಗಳು ತಳಿರ್ಗಳಂ ಪೇಱಿ ವಿರಹಿಗಳ ಬಾಯಾಱಿ (ಪಂಪು. ೯೫-೯). ೪. ಹೆಚ್ಚಿಸು; ಅಧಿಕಗೊಳಿಸು: ಮಂದಪವನಂ ಸಂತೋಪಮಂ ಪೇಱಿ (ದಶಕು. ೩-೯). **ಪೇರು$_1$**: ೨. ಬೀಳ್ದ ಕಲ್ತೊಲೆಯನಾರ್ಯಂ ಪೇರಿರೆಂದೊರೆಯಲು ಕಲ್ಲುಗಳನೆಲ್ಲ ಪೇರಲು (ಮಹಾಂಕೇ. ೨೧-೩೩); ತನ್ನ ಕುಕ್ಕೆಯನ್ನು ನಿಧಾನವಾಗಿ ಮಂಡೆಯ ಮೇಲಿನ ಚಂಡಿನ ಮೇಲೆ ಪೇರಿಕೊಂಡಳು ಕಾವೇರಿ (ಹೊಸಕ್ಕ ೫೩). **ಹೇರು$_1$**: ೧. ಅವುಗಳ ಮೇಲೆ ಕಟ್ಟಿಗೆಯ ತುಂಡುಗಳನ್ನು ಹೇರಿ

. . . ಪೀಪಾಯಿಯನ್ನು ತುಂಬುತ್ತಾರೆ (ಮುಂಬಯಿ. ೯-೩೩). ೫. ಭಾರವನ್ನು ತುಂಬು,–ಹೊರುವಂತೆ ಮಾಡು : ಹೇರುವ ಮಾನ್ಯದ ಎತ್ತು ನಡೆ ೫೦ (ಎಕ. VII, ಶಿಪಮೊ. ೨೬-೯೩ ; 1670); ಇಷ್ಟೊಂದು ಪಠ್ಯ ವಿಷಯಗಳನ್ನು ಮಕ್ಕಳ ಮೇಲೆ ಹೇರುವುದೆ ? (ಶಿಕ್ಷದ. ೦೨೬). ೬. (ಆಲಂ) ಹೊಡೆ; ಬಡಿ : ತನ್ನ ಎರಡೂ ಕೈಗಳಿಂದ ಬಲವಾಗಿ ಪಟಾ, ಪಟಾ ಎಂದು ಏಟು ಹೇರುತ್ತಿದ್ದಳು (ಹಳ್ಳಹಾ. ೦೦೯); ಆ ಪುಂಡನನ್ನು ಹಿಡಿದು ಚೆನ್ನಾಗಿ ಹೇರಿದರು (ಕೂಡಿ). ಹೇಱು₁: ೧. ಹೇಱಿದರು ಹಿಳುಕುಗಳ ಮೈಯಲ್ಲಿ (ಕುಸ್ಕಾರೀ. ೬-೦೯). ೨. ಕರಂಗಳ್ ಚೆಲ್ವನಾಂತಿರ್ದೊಡಂ ಮುಱಿದಂತಿರ್ವರ ಮೇಲೆ ಹೇಱಿ ನಡೆವರ್ (ಸೋಮೇಶ. ೩೩). ೩. ಲೌಕಿಕಧರ್ಮಮಂ ಮೀಱಿ ಕಡುನಿಷ್ಠೆಯಂ ಹೇಱಿ ಪರಮಸುಖದಿಂದಿರ್ಪುದು (ಬಸರ. ೯-೩೩); ತುದಿ ಮೊದಲ್ತನಕ ಹೇಱಿದ ಕಾವ್ಯರಸಫಲಂಗಳನು ಸವಿಸುವುದು (ಹಸಕಾ. ೦-೧೬) ; ನೂಱರೊಡನೈವರನು ಧರಿಸಿರಲಾಱದೀ ಪುರಿಯೆನುತ ದುಗುಡವ ಹೇಱಿ ಹೊದಕುಳಿಗೊಳುತಲಿರ್ದುದು ಹಸ್ತಿನಾ ನಗರ (ಕುಸ್ಕಾಲ. ೬-೩). ೪. ಹೇ[ಪಾಣಾಂ. ತೋ]ಱಿದವು ಹರುಷವನು ತನು ನಗೆದೋಱಿದವು ಮುಖಕಮಲ (ಶೂರಶಾ. ೦-೮-೨) ; ಅತಿತ್ವರಿತ ಗಮನದಿಂದೆ ಹೇಱಿದುದು ಭಯಮನಹಿಸಂಕುಲಂ (ಸಬಪು. ೯೦-೬). ೫. ಹುಲ್ಲ ಹೇಱುವೊಡೆ ಬಂದಿರುವ ಕವಾಡದ ರ್ಕುಲ್ಲಿಯ ಕೊಂಬಿನೆತ್ತುಗಳ ನಿಲ್ಲದೆ ತಿರುಹಿಕೊಂಡು (ಕುಪಪಿ. ೩-೬೨). ೬. ಹೇಱಿದನು ಶತಬಲಿಯ ಕರುಳನು ಕಾಱಿಸಿದನಂಗದನ (ಕೌಶಿರಾ. ೩೫-೦೭); ಖಳರಾಯ ತ್ರಿಶೂಲದಿ ಹೆದ್ದೈವವ ಹೇಱಿದನು (ಪೋಹತ. ೯೦-೭೩). ೭. ತುಂಬಿ ಸಾಗಿಸು : ಇಱಿದಡೆ ದಂಡವಿಲ್ಲ ಹೇಱಿದಡೆ ಸುಂಕವಿಲ್ಲ (ಎಕ. VI, ಕಡೂರು. ೦೩೭-೭೩ ; 1191). ೮. ಮುತ್ತು ; ಕವಿ ; ಆವರಿಸು : ಖಡ್ಗ ತೋಮರ ಸುರಗಿ ಹೊಳೆದವು ಕೈದು ಹೇಱಿದವಖಿಳದೆಸೆಗಳಲಿ (ಕುಸ್ಕಾಪ್ರೋ. ೩-೬); ಮೀಱಿದ ಕಮ್ಮಲರ್ಗಳ ದೇವಾರ್ಚನೆಗೇಱಿಸಗೊಡದೆಯೆಂಜಲಿಸಿ ಹೇಱಿದ ಪಱಮೆವಿಂಡುಗಳ ಬಂಧಿಸಿವಂತೆ ನೇಱಿಲ ಪಣ್ಗಳೊಪ್ಪಿದುವು (ಪೋಹತ. ೨೯-೯೩). ೯. ಹೆಚ್ಚಾಗು ; ಅಧಿಕಗೊಳ್ಳು : ವೈರಾನುಬಂಧದ ಬೇಗುದಿಯ ದುಮ್ಮಾನದಳವೇಱಿದುದು ಹೇಱಿತು ಭೀತಿ ಭೂಪತಿಗೆ (ಕುಸ್ಕಾಗ. ೦-೬೨).

ಪೇಱುವೆತ್ತು, ಪೇರ್ವೆತ್ತು, ಹೇಱುವೆತ್ತು=ಭಾರವನ್ನು ಹೊರುವ ಎತ್ತು: ಸಾಸಿರ ಪೇಱುವೆತ್ತಿಂಗೆ ಪೆರ್ಜ್ಜುಂಕ . . . [ಪ] ರಿಹಾರಂ ಮಾಡಿ ಬಿಟ್ಟಂ (ಎಇ. XXVIII, ೩೩-೩೦ ; ಸು. 1082); ಅಖಿಳಧಾನ್ಯಂಗಳಾ ಪೇರ್ವೆತ್ತುಗಳ ಮೇಲೆ ಬರೆ (ಸಬಪು. ೯೬-೯೦); "ಸ್ಥಾರೀ, ಪೃಷ್ಠವಾಹ್ಯ: – ಈ ೨ ಹೇಱುವೆತ್ತು" (ಹಲಾಯು. ೯೯-೦೦೦) ; ನವನಿಧಿಯೊಳಗೊಲಿದುದುಮಂ ಬ್ಯವಹರಿಸಲುಕೆನ್ದು ಪೇಱುವೆತ್ತಯ್ವತ್ತುಂ ಭುವನದೊಳೆತ್ತಲು ನಡೆದಡೆ (ಎಕ. XI, ದಾಪಪ. ೫೯-೬೦ ; 1280).

[ದೇ. ॥ ತಮಿ. ಪಿಱಕ್ಕು ; ಮಲ. ಪೇಱು ; ತುಳು. ಪೇರು ; ತೆಲು. ಪೇರುಚು]

ಪೇಱು₂, ಪೇರು₂, ಹೇರ್₂, ಹೇರು₂, ಹೇಱು, ಹೇಱು₂ (ನಾ). ೧. ಪೇರಿಸಿಟ್ಟುದು ; ಅಡಕಿಲು : ಬಳೆಯ ಪೇಱನಾನೆ ಮೆಟ್ಟಿದಂತೆ ನುರ್ಚುನೂಱಪ್ಪಿನಮವುಂಕಿ (ಪಂಪಭಾ. ೬-೭೬ ಪ) ; ಬೆಲ್ಲದ ಪೇಱನಿಲಿ ಪೊಕ್ಕಂತೆ (ಧರ್ಮಾಮ್ಯ. ೨-೭೦) ; ಪತ್ತಿಯ ಪೇಱುಗಳಂ ಕೊಯಿದೆತ್ತುಗಳು ಬಿಲ್ಲರಾಜರೊಯ್ದಡೆ (ಪುಷ್ಯಾಸ್ತ್ರ. ೯-೨೨). ೨. (ಒಂದು ಪ್ರಾಣಿ ಅಥವಾ ಒಬ್ಬ ಆಳು ಹೊರುವಷ್ಟು ತೂಕದ) ಹೊರೆ ; ಭಾರ : ಅಡಕೆಯ ಪೇಱಿಂಗೆ ಮೂನೂಱು (ಎಇ. IX, ೨೨-೬ ; 800); ಒಂದು ಪೇಱು ಪೊನ್ನಂ ಕುಡುವೆಂ (ಪಡ್ಡಾರಾ. ೦೬೭-೨೨) ; ದೇವರಿಗೆ ನನ್ದಾದೀವಿಗೆಗೆ ತಿಂಗಳ್ದಿಂಗಳಿಗೆ ಬಿಟ್ಟ ಎಲೆಯ ಪೇಱು ೧ (ಸೌಇಇ. IX-i, ೦೯೯-೩ ; 1081). ೩. ಚೀಲ : 'ತೊಗಲ್ವೇಱು' ಪರಾ. ಪೇರು₂ : ೪. ತಕ್ಕಡಿಯನ್ನು ಸಮತೋಲನಗೊಳಿಸಲು ಪರಡೆಗಳಲ್ಲಿ ಹಾಕುವ ಬಟ್ಟು ಇತ್ಯಾದಿ ಭಾರವಾದ ವಸ್ತು: 'ಏರುಪೇರು', 'ಪೇರುಕಟ್ಟು' ಪರಾ. ಹೇರ್₂ : ೧. ಇದು ವರಹ ರೂಪಾಯಿ ಹೇರ್ಗಳಿವು ಕನಕಾಭಿಷೇಕದಕ್ಷಿಣೆಗಿದು (ಕೃಷ್ಣವಿ. ೨-೨೩). ಹೇರು₂ : ೨. ಉಭಯಮಾರ್ಗದ ಬೇಹಾರಿಗಳ ಹೇರುಗಳಿಗೆ ಕೊಂಬ ಕಟ್ಟಣೆ (ಎಕ. XII, ಶಿರಾ. ೭೬-೭ ; 1379) ; ಹಸುಗಳ ಮೇಲೆ ಹೇರುಗಳನ್ನು ಎತ್ತದೆ . . . ರಕ್ಷಿಸುತ (ಕೃಷಾಲಿ. ೦೦೯) ; ಉಳುವೆ ನಾ ಭೂಮಿಯನು ; ಹೊರುವೆ ನಾ ಹೇರನ್ನು (ಪೀಗಟ್ಟು. ೦೭೩). ೫. (ಆಲಂ) ಹೊಣೆ ; ಜವಾಬ್ದಾರಿ : ನಾನಿನ್ನೂ ಕಾಲ ಮೇಲೆ ನಿಲ್ಲೋದೇ ಕಷ್ಟವಾಗಿದೆ. ಆಗಲೇ ಚೆನ್ನ ಮೇಲೆ ಹೇರು ಹೊರು ಅಂದರೆ ? (ಪಂದವ. ೦೯). ಹೇಱ್ : ೩. ಹೇರ್ಗಳು ಬಿಸುಟ ಹೋರಿಗಳ ಚಪ್ಪರಣೆಯಿಂ ನಿಲಿಸಿ ಮೂಗುನೇಣಿಡುತೆ ಹೇರ್ಗಳ ಹೊಲಿವುತೆ (ಸಬಪು. ೯೭-೯೬). ಹೇಱು₂ : ೨. ಉಪ್ಪಿನ ಹೇಱು ಅಯ್ವತ್ತು (ಪೂಂಕಶಾ. ೦೯೩೬, ಹಾನಗಲ್. ೭೩-೨೦ ; 975) ; ಕೋಣನ ಹೇಱಿಂಗೆ ಕುನ್ನಿ ಬಸುಗುತ್ತಬಡೆವಂತೆ ತಾವು ನಂಬರು ನಂಬುವವರ ನಂಬಲೀಯರು (ಬಸವ. ೬೬೩) ; ಹೇಱನೊಪ್ಪಿಸಿದವಂಗೆಲ್ಲಿಯದು ಸುಂಕ (ಹಸಕಾ. ೬-೩೯) ; ಎತ್ತು ಹೇಱುಗಳಿಂದ ಹೊತ್ತು ಮಾಱುವುದಲ್ಲ (ಪುರಂದ. ೦-೦೨೬-೩).

[<ಪೇಱು₁./ ತಮಿ. ಪೆಱು₂ ; ಮಲ. ಪೇಱು; ತೆಲು. ಪೆಱಿಕ]

Δ ಪೇಱೊರ್ಪೆ 'ಪೇರೊಟ್ವೆ' ನೋ.

Δ ಪೇಱೊರ್ಬೆ 'ಪೇರೊಟ್ವೆ' ನೋ.

ಪೇಟ್, ಪೇಳ್, ಪೇಳು, ಹೇಳ್, ಹೇಳು, ಹೇಟ್, ಹೇಟು (ಕ್ರಿ). ಪೇಳ್ದ, ಪೇಟ್ದ (ಭೂತಕೃ). ಪೇರ್ದು, ಪೇಳ್ದು, ಪೇಟ್ದು, ಹೇಳ್ದು (ಭೂತನ್ಯೂ). ೧. ತಿಳಿಸು ; ನುಡಿ ; ಅರಿಯುವಂತೆ ಮಾಡು : ಏನೇನಭಿಮತಮಂ ಪೇಟ್ ನೀನಾಸ್ವಾದಿಸಿದೆ ದೇವಿಯರ ಮನೆಯೊಳ್ (ಕಾದಂಪೂ. ೬೩) ; ನೀವೆನಗೊಂದಪೂರ್ವಮಪ್ಪ ಕಥೆಯಂ ಪೇಟ್ವೇಟ್ಪುದು (ಪಂಪತಂ. ೦೦-೦೦) ; ಇಂದು ನೃಪಂಗೆ ಸಂಭವಿಸಿದಂ ಭುಜಶಕ್ತಿ ಸಮೀರನಂದನಂ ನಂದನನೆಂದು ಪೇರ್ದು (ಕುಸುಮಾ. ೬-೦೦೯). ೨. ನಿರೂಪಿಸು ; ವಿವರಿಸು ; ವಿಶದಪಡಿಸು : "ಪೇಟ್ದಂ = ನಿರೂಪಿಸಿದಂ" (ಕಪುದ. ಪಂ. ೦) ; ಕಟ್ವಪ್ಪಿನಾ ವೆಟ್ಟದುಳ್ಳೀಸಂಗಂಗಳ ಪೇಟ್ದ ಸಿದ್ಧಸಮೆಯನ್ತಪ್ಪಾದೆ ನೋನ್ತು (ಎಕ. II, ೨೬-೦ ; ಸು. 700) ; ನೀವಿರ್ವರುಂ ಬಂದಂದ ಮುಮಂ ಮನೆವಾಟ್ತಿಯಂ ಪೇಟಿಂ (ಪಂಪಭಾ. ೯-೦೦ ಪ) ; ಬಣ್ಣಸರಂಗೋದಂತೆ ಧರ್ಮಶಾಸ್ತ್ರಂಬೇಟ್ವರ್ (ಸಮಪ. ೩-೭೬). ೩. ಕಾವ್ಯರಚನೆ ಮಾಡು : ಪ್ರಕಟತರವಸ್ತುವಿಸ್ತರವಿಕಲ್ಪವಿದನಲ್ಲದಾಗದಾಗದು ಪೇಟಲ್ (ಕವಿರಾ. ೦-೨೬) ; ಛಂದಛಂದದಿಂ ಪೇಟ್ದಾಡುವುದಂ ಕಂಡು (ಪಡ್ಡಾರಾ. ೬೯-೦೯) ; ಕತೆ ಪಿರಿದಾದೊಡಂ ಕತೆಯ ಮೆಯ್ಗೆಡಲೀಯದೆ ಮುಂ ಸಮಸ್ತಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ (ಪಂಪಭಾ. ೦-೦೦) ; ಕರ್ಣಾಟಕಲಕ್ಷಣಶಬ್ದಶಾಸ್ತ್ರಮಂ ಲಾಕ್ಷಣಿಕರ್ಪೇಟಿಂದು ಬೆಸಸೆ ಬಗೆವುಗೆ ಪೇಟ್ದಿಂ (ಕಪುದ. ೩). ೪. (ಯುದ್ಧಕ್ಕೆ ಹೋಗುವಂತೆ) ವಿಧಿಸು ; ನಿಯಮಿಸು : ಅಂತು ಭೀಮಸೇನನನಿಂದ್ರನ ಮೇಲೆವೇಟ್ವಂತೆ ಪೂರ್ವದಿಗ್ಭಾಗಕ್ಕೆವೇಟ್ದು (ಪಂಪಭಾ. ೬-೨೬ ಪ). ೫. ನಿರ್ದೇಶಿಸು ; ಸೂಚಿಸು : ಆಕೆ ಪುರೋಹಿತನ ಪೇಟ್ದೋಜೆಯೊಳ್ ಲಾಜೆಯನಗ್ನಿಕುಂಡದೊಳ್ ಸುರಿದು (ಪಂಪಭಾ. ೩-೭೩ ಪ). ಪೇಳ್: ೧. ಪನ್ನಿರ್ಮ್ಮತ್ತರ್ಕೈಯ್ಯಂ ಮಾನ್ಯಂಗುಡುಗೆನ್ದು ಪೇಳೆ (ಇಲ. XII, ೨೨೩-೩ ; 939) ; ತತ್ಪುರದ ಮಹಾಜನದ ಮಹಿಮೆಯಂ ಪೇಳ್ವಡೆ (ಸೌಇಇ. XI-ii, ೦೨೬-೧ ; 1080) ; ಸರ್ವಾಭರಣನಲ್ಲಿಗೆ ಕಳಿಪುವುದೆಂದು ನಾರದಮುನಿ ಪೇಳ್ದು ಪೋಗೆ (ಬಿಂಕ. ೨ ಕಾರ್ಯ) ೩. ರಸಪೂರಿತ ಸುಪ್ರಬಂಧ ವಿಲಕ್ಷಣವೆಸೆವಂತೆ ಪೇಳ್ದಪೊದನು (ಪೋಹತ. ೦-೨೬). ೫. ಪಾವಿಸೆಟ್ಟಿ ಪೇಳೆ ಬರೆದಂ (ಪ್ರಾಂಕ. ೦೯೩೬, ೩೩-೧೨ ; 1064).

೬. ಹೆಸರಿಟ್ಟು ತಿಳಿಸು; ಗುರುತಿಸು: ಮಂತ್ರಿ(ಕ ಪೇಳ್ದ ಪೇರ್ಗಳಿಗುಡು ಗೊಱಿಯಿತ್ತು ಮನ್ನಿಸಲು (ವೀಚಕ. ೧೦-೫೯). ಪೇಳು : ೧. ಪೊಗೞ್ವಲ್ಲಿಗಾರವೆ ಪೇಳು ಸಾಸಿರ್ವರ ಖ್ಯಾತಿಯಂ (ಕಾವ್ಯ. V, ೬೮೯-೨೦ : 1144); ಎಂತುಸುರದಿರ್ಪಿನಿನ್ನೆಂತು ಪೇಳುವೆನಿದಂ (ಕಬಚ. ಡೀ. ೨೦. ೬); ಮುಂದಗಮನೆ ಇವನಾರೆ ಪೇಳಮ್ಮ (ಪುಕಂದ. ೨-೭೦-೦); ಒಡೆಯನಿರಿಸಿರಂತಿರ್ದುರಲ್ಲದೆ ಪೇಳೊಡವೆಗೆ ಬೇಱಿರವುಂಟೆ (ಪರಿಶಿ. ೧-೮೮). ೨. ಬಣ್ಣಿಸಿ ಪೇಳುತ್ತಿರ್ಪುದು (ಪ್ರಬಂ. ೦೯೩೬, ೩೨-೦೩ : 1140). ೩. ಸಕಲ ಸೂರಿಗಳ ಪಾದಾರವಿಂದವ ನೆನೆದೀ ಕೃತಿಯನು ಮೇದಿನಿ ನಲಿಯೆ ಪೇಳುವೆನು (ಕಂಪಂ. ೦-೦೨). ಪೇಳ್ : ೫. ಎಲ್ಲರ ಕಜುಬು ಹರ್ಮ್ಯವ ಹತ್ತಿ ಪೇಳ್ದಳು ಪುಲ್ಲಶರಾತ್ಮಸಂಭವಗೆ (ವೀಚಕ. ೩೩-೩೯); ದೇವಾಲ್ಯಮು . . . ಮಾಡಿಂದೊಸೆದು ಹರಿಹರಂ ಪೇಳ್ದು ತಾಂ ಮಾಡಿಕೊನ್ದಮ್ (ಎಳ. XI. ಶಾಪಪ. ೨೫-೬೦ : 1224). ೭. ಶಾಸನದಲ್ಲಿ ಬರೆಸಿ ದಾನ ಮಾಡು : ಗವುಡುಗೆಱಿಯಲ್ಲಿ ತಮ್ಮ ಕೊಡಗಿಯಲು ಖಿಣ್ಣಗದ್ದೆಯುಂ ಪೇಳ್ದು (ಎಳ. V. ಶಾಸಪ. ೩೩-೬೨ : 1170). ಪೇಳು : ೧. ಜೀವ ಪರಮನ ಮಧ್ಯದಲ್ಲಿ ನಿಂದು ಆರೈಕೆಗೊಂಬರಾರು ಪೇಳಿರಣ್ಣಾ (ಕೂಲಂಶಾಂ. ೪-೯); ಕಡೆಗೆ ಧರ್ಮಜ ಪೇಳು ಕೊಂದವನಾರು ನಂದನನ (ಭಾಷ್ಯಕ್ರೋ. ೬-೨೬); ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ ಕಬ್ಬ ಪೇಳೆರೆ ಸರಸ್ವತಿಯೆ (ಕಬ. ೦-೬). ೨. ರವಕುಳವ ನಾನೇನ ಪೇಳುವೆನವನಿಪತಿ (ಭಾಷ್ಯಕ. ೦-೬). ೩. ತಿಳಿಯ ಪೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ (ಭಾಷ್ಯಕ. ೦-೦೩). ೪. ಕಾಳಗವ ಮಾಡಲ್ಲದಿದ್ದರೆ ಪೇಳಿದಾ ಕವ್ಪನ ತೆತ್ತೀ ತಲೆಯನುಳುಹಿಕೊಳು (ಸಾಳ್ವಭಾ. ೦೯-೦೦); ದೊರೆ ಪೇಳಿದನೆಂದರೆ ಮಾರದ ಕಾಯಿ ಬಿದ್ದೀತೆ ? (ಗಾಪ). ೮. ಕಥನ ಮಾಡು ; ಕಥಿಸು : ಆ ದೇವರಲ್ಲಿ ಶಾಸ್ತ್ರವ್ಯಾಖ್ಯಾನಮುಂ ಮಾಡಲುಂ ಪುರಾಣಮುಂ ಪೇಳಲುಮೊರ್ಬ್ಬರಾಧ್ಯಾಯಗ್ಗೆ ವರ್ಷವರ್ಷಕ್ಕೆ ಬರಿಗುಳಿಯೇಳು ಗದ್ಯಾಣ (ಸಾವಾ. IX-i, ೨೬೭-೬೨ : 1160); ಹೆ.[ಕಾಪಾಂ. ಪೇ]ಳಿದ ಹರಿಕಥೆಯ ಕೇಳದವ ಹೊಲೆಯು (ಪುಕಂದ. ೦-೦೭೨-೦). ೯. ಗಮನಕ್ಕೆ ತರು : ತಾಂ ಹೇಳದೆ ಸೋಮಭೂವಿಪತಿಯಲ್ಲಿಗೆ ಬಂದಡೆ ರಾಜ್ಯವಾಯ್ತು ಸಲ್ಲೀಲೆಯೊಳು (ಕಾಶಾಚಾ. ೯-೪೦ ; 1147). ೧೦. ಕರೆ ; ಆಮಂತ್ರಿಸು ; ಬರಹೇಳು : ಹೇಳದಾತನಕೆ ಬರ ಹೊಲ್ಲ (ಸರ್ವಜ್ಞ. ೦೯೩೭). ೧೧. ದೂರು ; ಚಾಡಿ ಚುಚ್ಚು : ಮೇಲಧಿಕಾರಿಯೊಂದಿಗೆ ಉಳಿದವರ ಮೇಲೆ ಯಾವಾಗಲೂ ಹೇಳೋದೇ ಅವಳ ಸ್ವಭಾವ (ಕೂಪಿ). ೧೨. ಒಪ್ಪಿ ಸಂಡಿ.—ತಿಳಿಸು : ನೀನು ಹಾಗೆ ಹೇಳಬೇಡ (ಕೂಪಿ). ೧೩. ಪ್ರಕಟಿಸು ; ತೋರ್ಪಡಿಸು : ಕಾಳಕೆಯ ಕೈಕೊಂಡು ಸಿರಿವೆಂಗ ಹೇಳುತಿದೆ ಭೀತಿಯನು (ಭಾಷ್ಯಕ್ರೋ. ೬-೩೭). ಹೇಟ್ : ೧. ದಾರಿಂಬ ದೊಳ್ಳಣ್ಣನೊಡೆದು ಚಿಮ್ಮಾಗಿಟ್ಟು ಹೇಟಲಳವಡದ ಸಲ್ಲೀಲೆಯೊಳಗಳವಟ್ಟು ತೊಱಿದೆಚ್ಚು ಪಾಯ್ದು ತನಿರಸವನುಂಡು (ಕಾದ್ಯ. ೩-೮೩). ಹೇಟು : ೧. 'ಹೇಟುಹ' ಪರಾ.

ಹೇಳುಹೇಳು (ದ್ವಿರುಕ್ತಿ) : ಮುಗುಳುನಗೆ ನಿನಗೇಕೆ ಬಂದಿತ್ತು ಹೇಳುಹೇಳಿನಲು[ಕಾಣಾಂ. ಪೇಳಿನಲು] (ದಸಪು. ೧೦-೩); ಹೇಳುಹೇಳಿನ್ನೊಮ್ಮೆ ನುಡಿನುಡಿ ಕೇಳುವೆನು ಕವಿಯಾರೆ (ಭಾಷ್ಯಕ. ೩-೨೦) ; ಹೇಳು ಹೇಳಿಧಮಾನಭಂಗಧಡಾಳವಾರಿಂವಾಯಿತೆಂಬುದ (ಕೂಕಣಾ. ೩-೩-೪). ಪೇಟ್ ಪಡು, ಹೇಳಿಪಡು = ಹೇಳಲ್ಪಡು : ಮಹಾಪುರಾಣದೊಳ್ ಹೇಟ್ ಪಟ್ಟುದು (ಕಾಪುಂಪ. ೦೮೨) ; ಪರಮಾಗಮಂ ಪುಸಿಯೆಂದಿಯಪ್ಪುದೀ ಸಿದ್ಧಾಂತದೊಳ್ ಪೇಟ್ಪಟ್ಟ ಗಣಿತ ಜೋಯಿಸಂಗಳೇಕೆ ತಪ್ಪರ್ (ಧರ್ಮಾಕ್ಕು. ೩-೦೯೭) ; ಇಳೆನೆಯದೇ ತೂರ್ಯಗಾವಿನಿ ಹೇಳಿಪಡುಗುಂ (ಪಪಕ ೦೩-೨೩). ಹೇಳದೆ ಕೇಳದೆ = ಅಪ್ಪಣೆಯಿಲ್ಲದೆ : ಹೇಳದೆ ಕೇಳದೆ ಅಲ್ಲಿಗೆ ಯಾರೂ ಹೋಗುವಂತಿಲ್ಲ (ಕೂಪಿ). ಹೇಳ ಹೆಸರಿಲ್ಲದಂತೆ = ನಿಶ್ಶೇಷವಾಗುವಂತೆ ; ಸಂಪೂರ್ಣವಾಗಿ : ಅರ್ಜುನನ ಶಕ್ತಿಗೆ ಶತ್ರುಸೈನ್ಯ ಹೇಳ ಹೆಸರಿಲ್ಲದಂತೆ ಓಡಿತು (ಕೂಪಿ). ಹೇಳಿ ಕಳಿಸು = ಸಂದೇಶ, ವರ್ತಮಾನ, ಅಪ್ಪಣೆ ಮುಂತಾದುವನ್ನು ಬೇರೆಯವರ ಮುಖಾಂತರ ತಿಳಿಸು ; ಸುದ್ದಿ ಮುಟ್ಟಿಸು : ಈ ಸಂಜೆ ಅವರ ಮನೆಗೆ ಬರಬೇಕೆಂದು ಹೇಳಿಕಳಿಸಿದ್ದಾರೆ (ಕೂಪಿ). ಹೇಳಿ ಕೇಳಿ = ಎಲ್ಲರಿಗೂ ಗೊತ್ತಿರುವಂತೆ ; ತಿಳಿದೂ ತಿಳಿದು : ನೀವೆ ಕರೆಯದಿರುತಿರೆ ಛಂದನೇನು ನೀವೆ ಹೇಳಿ ? ಕೂಸು ನಾನು ಹೇಳಿ ಕೇಳಿ (ಹೃದಶ. ೨೬-೦೬); ಹೇಳಿಕೇಳಿ ಮೊದಲೇ ಅವಳ ಕೆಲಸ ನಿಧಾನ. ಈಗಂತೂ ಕೇಳುವ ಹಾಗೇ ಇಲ್ಲ (ಕೂಪಿ). ಹೇಳಿಕೊಂಡು ಹೋಗು = (ಸುಳ್ಳು) ಸುದ್ದಿ ಹಬ್ಬಿಸು ; ಪ್ರಚಾರ ಮಾಡು: ಅವಳು ಆ ಸಣ್ಣ ವಿಷಯವನ್ನು ಎಲ್ಲರೊಡನೆ ಹೇಳಿಕೊಂಡು ಹೋಗಿದ್ದರಿಂದ ಅದೇ ದೊಡ್ಡ ಹಗರಣವಾಗಿ ಹೋಯಿತು (ಕೂಪಿ). ಹೇಳಿಕೊಟ್ಟ ಮಾತು = ಅರ್ಥ ಮಾಡಿಕೊಳ್ಳದೆ ಬೇರೆಯವರು ಆಡಿದುದನ್ನೇ ಆಡುವುದು; ಗಿಳಿಪಾಠ : ಕಟ್ಟಿ ಕೊಟ್ಟ ಬುತ್ತಿ, ಹೇಳಿಕೊಟ್ಟ ಮಾತು ಎಲ್ಲಿವರೆಗೆ ಬಂದೀತು ? (ಗಾಪ). ಹೇಳಿ ಕೊಡು = ೧. ತಿಳಿಸು : ಇದಕ್ಕೆ ಏಚಾಡಬೇಡಿ ಎಂದು ಉಪಾಯವನ್ನು ಹೇಳಿಕೊಟ್ಟನು (ಪೀಚಕಂ. IV, ೬). ೨. ಕಲಿಸು ; ಬೋಧಿಸು : ಹೀಗೆ ಹೇಳಿಕೊಟ್ಟರೆ ಸ್ವಲ್ಪವೂ ಪ್ರಯೋಜನವಿಲ್ಲ (ಕಳಹು. ೭೬). ೩. ಚಾಡಿ ಹೇಳು ; ಚೆಂಚಿಕೊಡು : ಅಕ್ಕಪಕ್ಕದವರು ಹೇಳಿಕೊಟ್ಟು ಅವಳ ಸಂಸಾರ ಹಾಳುಮಾಡಿದರು (ಕೂಪಿ). ಹೇಳಿಕೊಳು, ಹೇಳಿಕೊಳ್ಳು = ೧. ಬಿನ್ನವಿಸಿ ಕೊಳ್ಳು ; ಕೋರು: ಶಾಸನವ ಬರಸಿಕೊಡಬೇಕೆಂದು ನೀನು ಹೇಳಿಕೊಳುದಾನೆಂದು ನರ್ವಾಣ್ಯೆಯಮಾವನವರು ಹೇಳಿದರಿಂದ ಬರಸಿ ಕೊಟ್ಟದು (ಪ್ರಬಂ. ೦೯೩೩, ೩೦-೨೦; 1730). ೨. ತಿಳಿಸಿರಿ ; ನುಡಿ : ಜನ್ಮ ಇರುವವರೆಗೂ ತಮ್ಮ ಉಪಕಾರ ನೆನಸುವೆನು ಎಂದು ವಿನಯದಿಂದ ಹೇಳಿಕೊಂಡನು (ಪುಂಶಾಖ. ೪-೩೦). ೩. ದುಃಖ, ಕಷ್ಟ ಮುಂತಾದುವನ್ನು ಬೇರೆಯವರಲ್ಲಿ ತೋಡಿಕೊಳ್ಳು : ನಾಲ್ಕು ಜನರ ಹತ್ತಿರ ದುಃಖವನ್ನು ಹೇಳಿಕೊಂಡರೆ ಮನಸ್ಸಿನ ಭಾರ ಎಷ್ಟೋ ಕಡಮೆಯಾಗುತ್ತದೆ (ಕೂಪಿ). ೪. ಜಂಬ ಕೊಚ್ಚಿಕೊಳ್ಳು : ಸದಾಕಾಲವೂ ತನ್ನ ವಿಷಯ ಬೇರೆಯವರ ಮುಂದೆ ಹೇಳಿಕೊಳ್ಳೋದೆ ಅವಳ ಜಾಯಮಾನ (ಕೂಪಿ). ಹೇಳಿದ್ದು = ಶಾಸ್ತ್ರಸಮ್ಮತವಾದುದು ; ವಿಧಿವತ್ತಾದುದು : ಸ್ವಯಂವರದಲ್ಲಿ ಬ್ರಾಹ್ಮಣರಿಗೇನು ಅಧಿಕಾರ ? ಅದು ಕ್ಷತ್ರಿಯರಿಗೆ ಹೇಳಿದ್ದು (ಕಕಥಾ. ೩೩). ಹೇಳಿ ಬರೆಯಿಸು = ಯಾವುದಾದರೊಂದು ವಿಷಯವನ್ನು ಮತ್ತೊಬ್ಬರು ಬರೆದುಕೊಳ್ಳಲು ಆಜ್ಞಾಪಿಸು: ಆ ಅಧಿಕಾರಿಯು ಆ ಎರಡು ನಿಯಮಗಳನ್ನು ಹೇಳಿ ಬರೆಯಿಸಿದರು (ಕೂಪಿ). ಹೇಳಿ ಮಾಡಿಸಿದ್ದು = ಸಂಪೂರ್ಣವಾಗಿ ಹೊಂದಿಕೊಳ್ಳುವಂತಹುದು ; ತಕ್ಕುದು : ಈ ಕೆಲಸ ಅವಳಿಗೆ ಹೇಳಿ ಮಾಡಿಸಿದ್ದು (ಕೂಪಿ). ಹೇಳುವವ = ಗ್ರಾಮದ ನಿರ್ದಿಷ್ಟ ಮನೆಗಳ ಮುಂದೆ ನಿಂತು ಅವರ ಮನೆತನದ ಬಗೆಗೆ ಹೊಗಳಿ ಜೀವನ ನಡೆಸುವವನು ; ಹೆಳವ : ಹೆಳವ ಎಂಬ ಪದವು ಬಹುಶಃ 'ಹೇಳುವವ' ಎಂಬುದರಿಂದ ಬಂದಿರಬಹುದು (ಕೂಪಿ). ಹೇಳುವವರು ಕೇಳುವವರು = ಅಧಿಕಾರಯುಕ್ತವಾಗಿ ಅಪ್ಪಣೆ ಮಾಡುವವರು : ಹೇಳುವವರು ಕೇಳುವವರು ಇಲ್ಲದಿದ್ದರೂ ಅವರವರ ಕೆಲಸವನ್ನು ಒಪ್ಪವಾಗಿ ಮಾಡಬೇಕು (ಕೂಪಿ).

[ದೇ. ॥ ತೆಲು. ಪೇಲು, ಪ್ರೇಲು ; ಮಲ್ತೊ. ಪೇಳ್ಕೆ]

ಪೇಟ್೧ 'ಪೇಡಿ೧' ನೋ.

ಪೇಟ್೨, ಪೇಳಿ (ನಾ). ಬುಟ್ಟಿ ; ಗೂಡೆ : ಪಜ್ಜಿದು ಬರ್ದ ಖಚರರ ತಲೆ ಸಂದಣಿಸೆ ವಿಮಾನಂಗಳ ಪೇರಣ್[ಣಿ] ಪೊಲ್ತುದು ತೆಜಿದ ಮೊಗದ

ಪೇಟಿಗಳಿರವಂ (ಕಂಠ್ರಪು. ೬-೩೯). ಪೇಳಿ : ದೇವರ ಪೂಜೆಗಂ ಅಱವಂಟಿಗೆಗಂ ಬಿಟ್ಟು ಧರ್ಮ್ಮವೆಂತೆಂದೆಡೆ ಪೇಳಿಯಲು ಪಣವಯ್ದು (ಶಾಸಾ. IX-1. ೨೨೩-೯೯ ; 1127). [←ತಮಿ. ಪೇಟ್ಟಿ. / ಸಂ. ಪೇಟೀ]

ಪೇಟಿಸು, ಪೇಳಿಸು, ಹೇಳಿಸು, ಹೇಟಿಸು (ಕ್ರಿ). ೧. ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ಮಾಡು ; ಮಾತನಾಡುವಂತೆ ಮಾಡು; ಹೇಳುವಂತೆ ಮಾಡು : ಶುಕನಾಸನಂದನಂ ಬಂದಪನಾತನಿಂದಮಱಿವಂತಿರೆ ಪೇಟಿಸಿ ಮತ್ಪಪಂಚಮಂ (ಕಾದಂಕಾ. ೩೮೨). ೨. ಕಾವ್ಯವನ್ನು ಬರೆಸು ; ಕಾವ್ಯರಚನೆ ಮಾಡಿಸು : ಇಂತು ಪೇಟಿಸಿದ ನರೇಂದ್ರರುಂ ನೆಱೆಯ ಪೇಟ್ದ ಕವೀಂದ್ರರುಮಾರ್ ಧರಿತ್ರಿಯೊಳ್ (ಸಂಪಕಾ. ೦೯-೩೩) ; ಮಲ್ಲಪಾರ್ಯನುಮುದಾತ್ತಯಶೋನಿಧಿ ಪುನ್ನಮಾರ್ಯನುಂ ಸವಿ ತವದಂತು ಪೇಟಿಸಿದರ್ (ಶಾಂತಿಪು. ೦ ೩೭). ೩. (ಕಾವ್ಯವನ್ನು) ಓದಿಸು ; ವ್ಯಾಖ್ಯಾನಿಸು : ಪಿತೃ ಪುತ್ರನಂ ಕಥೆಯಂ ಪೇಟಿಸಿದಂ (ಶಬ್ದಾಸು. ೨೦೬ ಪ್ರಯೋ). ಪೇಳಿಸು : ೨. ಪಂಪಾಕ್ಷೇತ್ರದೊಡೆಯಂ ವಿರೂಪಾಕ್ಷನೇ ಪೇಳಿಸಿದೊಡೆ ಸವಿನುಡಿಗಳಿಂದೀ ಚೆನ್ನಬಸವಪುರಾಣಮಂ ಪೇಳ್ದೆನಧಿಕೋತ್ಸವದೊಳು (ಸಬಪು. ೦-೩೦); ಪೊಡವಿಪ ದಳವಾಯಿ ನಂಜರಾಜೇಂದ್ರ ತನ್ನೊಡೆಯನ ಕಾರ್ಯದೇಳಿಗೆಯ ಗಡಣವೆ ಚರಿತೆಯಾಗೊಲಿದು ಪೇಳಿಸಿದನು (ಕಂಪಪಿ. ೦-೨೬); ಸಂತಸದಿ . . . ಪುರಂದರವಿಠಲ ವ್ಯಾಸಮುನಿಗಳು ಪೇಳಿಸಿದರು (ಪಗರಾ. ೬೬). ೩. ಕವಿದು ಪರಿಯೆ ರಸದೊಳ್ಗಂಪು ಕಮ್ಮನೆ ಕವಿತೆಯೊಂದನು ಪೇಳಿಸು (ಹಂಬಿ. ೦-೨೬). ಹೇಳಿಸು : ೧. ಗಾಳಿಯಂ ಗಂಟಿಕ್ಕಲುಂ ಕಣ್ಣಾಲಿಗಳೊಳಿಹ ಬಾಲಕರನೊಳು ಸೂಳುಮಾತಂ ಹೇಳಿಸಲು . . . ಬಲ್ಲ ನೆಱೆ ಜಾಣೆ (ಬಸಪು. ೪೨-೯); ಭೀಮಗೆಹೇಳಿಸಿದಳಾ ಫಲುಗುಣನ ಕೈಯಿಂದ (ಕುಪ್ಯಾಅ. ೯ ೨೨); ಮಂದಬುದ್ಧಿಯ ಬಿಟ್ಟು ಬಾಗಿಲ ತೆಗೆಸ ಹೇಳೆಂದ ನಾಯಕಗೆ ಹೇಳಿಸಿದ (ಮೋಹತ. ೩೩-೬೩). ಹೇಟಿಸು : ೪. ವಿಧಿಸು; ಆಜ್ಞಾಪಿಸು : ಅನುಜ್ಞೆ-ಬೆಸನ ಹೇಟಿಸಿಕೊಳುಹ (ನಾಸರಾ. ೫).

ಪೇಟಿಸಿಕೊಳ್ = ವಿವರಣೆಯನ್ನು ಪಡೆ; ವರ್ಣನೆಯ ವಸ್ತುವಾಗು: ಈ ಲಕ್ಷಣಂಗಳನುಳ್ಳ ಕುದಿರೆ ಸಂಪೂರ್ಣಮಪ್ಪಾಯುಷ್ಯಮನುಳ್ಳುದೆಂದು ಪೇಟಿಸಿಕೊಳ್ವುದು (ಕೋಕೋಪ. ೦೦-೭೩ ಟೀಕೆ). [ಪೇಟು್ + — ಇಸು$_3$]

ಪೇಟ್ಕೆ, ಪೇಳ್ಕೆ, ಹೇಳಿಕೆ$_1$ (ನಾ). ೧. ಹೇಳಿದುದು; ಅಭಿಪ್ರಾಯ ಕಥನ : ಅನ್ಯರ ಪೇಟ್ಕೆಯದೆಂಬ ಬಟ್ಟೆಯೊಳ್ನಡೆಯದಿರ್ (ಕಾದಂಉ. ೯೦೭); ಕೆಮ್ಮನೆ ಮೂರ್ಖರ ಪೇಟ್ಕೆಗೆ ತಮ್ಮ ಮನಂ ಸೋಲ್ತು (ರರ್ಮಾಪ್ಯು. ೦೦-೩೯); ತತ್ಪ್ರಪಂಚಮಂ ನಿಜಪ್ರಿಯಸಖಿಯ ಪೇಟ್ಕೆಯಿಂ ಕೇಳ್ದು (ಪಗಪಿ.೦೩-೩ ಪ); ಏನ್ ಪೇಟ್ಕೆ ಪೇಟ್ದೆ ನೀನ್, ಮುತ್ತಬ್ಬೆ, ಘೋರಂ! (ಅಶ್ವತ್ಥಾ. ೦೦-೦೯೬). ೨. ಆಜ್ಞೆ; ಅಪ್ಪಣೆ : ಸುರಸಿಂಧುವಾರಿ ನಿರ್ಭರನವರತ್ನಕುಂಭತತಿಗಳ್ . . . ಸುರರಾಜನದೊಂದು ಪೇಟ್ಕೆಯಿಂ ಸುರಪಥದಿಂದೆ ಬಂದುವಭಿಷೇಕಮಹೋತ್ಸವದೊಳ್ ಮುಕುಂದನಾ (ಪಗಪಿ. ೬-೦೦೩); ಪುರದ ಸಮಸ್ತಚೈತ್ಯನಿಳಯಂಗಳೊಳೆಯ್ದೆ ಜಿನೇಂದ್ರ ಪೂಜೆಯಂ ನಿರುಪಮಭಕ್ತಿಯಿಂ ಹಿತಪುರೋಹಿತನೊಪ್ಪಿರೆ ತನ್ನ ಪೇಟ್ಕೆಯಿಂ ನಿರವಿಸಿ (ಪಾರ್ಶ್ವಪು. ೩-೩೩). 'ಪೇಟ್ಕೆಗೇಳ್' ಪರಾ. ೩. ವಿವರಣೆ ; ನಿರೂಪಣೆ : ಚಾಮರಾದಿಗಳನಿಕ್ಕಿದ ಗದ್ದುಗೆಯೊಳ್ ಮಹಾಪ್ರತೀಹಾರರ ಪೇಟ್ಕೆಯಿಂದೆಳಸಿ ಮತ್ತವರಂ ಪೆಸರ್ಗೊಂಡು (ಸೂಕ್ಷಿಸು. ೩-೨೯). ಪೇಳ್ಕೆ : ೪. ಕಾವ್ಯರಚನೆ : ಅಗ್ಗಳದ ಪಳೆಗಬ್ಬಿಗರ[ಪೇಳ್ಕೆಯ]ತೆಱದಿ ವಿರಚಿಸದೆ (ಸಾಳ್ವಭಾ. ೦-೯೩). ಹೇಳಿಕೆ$_1$: ೧. ನಿಮ್ಮ ಹೇಳಿದ ಹೇಳಿಕೆಯಿಂದ ಪಿಂಬೇರ ಮೈಲಿಗೆ ಮೇಳವಾಡುತ್ತಿದ್ದ ಕಾಣಾ ತ್ರೈಜಗದೊಳಗೆ (ಬಸರ.೩೬೬); ಈ ಹಳೆಯ ಹೇಳಿಕೆಗೆ ಹೊಸ ಉಸಿರು ತುಂಬಿದ್ದಾರೆ (ದ್ರಾಪಿಪಿ. ೪೨) ; ಈ ವಿಷಯದಲ್ಲಿ . . . ಒಬ್ಬರ ಹೇಳಿಕೆಯನ್ನಾಗಲೀ, ನಾವು ನಂಬುವುದಕ್ಕಿಲ್ಲ (ಪ್ರಕಾಶ. ೫೯). ೨. ಎಲ್ಲಾ ಸುಂಕಮಂ ಶ್ರೀಮತು ಭುಜಬಲಚಕ್ರವರ್ತ್ತಿ ಬಿಜ್ಜಲದೇವರಸರ ಹೇಳಿಕೆಯಿಂ ರಾಮೇಶ್ವರದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ (ಕಪ್ಪ. II, ೨೯-೨೬; 1167); ನಮ್ಮ ಹೇಳಿಕೆ ಯಾವುದದನೀ ತಮ್ಮ ಮೀಱಿದು ನಡೆದನಾದಡೆ ನಮ್ಮ ವಾಘೆಯ ಬೀಳುಕೊಡುವೆವು (ಕುಪ್ಯಾಕ. ೬-೩); ಮದನನ ಹೇಳಿಕೆಯೊಳಂದು ವಿದಿತ ಮಂಗಳವಿವಾಹೋಚಿತಕ್ರಿಯೆಗಳಂ ವಿರಚಿಸಿದರು (ಶೈಪುಣಾ. ೩೦-೩೯). ೩. ಎನ್ನ ಜನ್ಮಗಳೇಳನೊಲ್ಲದೆ ಬಂದವಾವ್ ಜನ್ಮತ್ರಯಂಗಳಲಿ ಹೇಳಿಕೆಯಲಿನ್ನೊಂದು ಜನ್ಮದ ಬಾಳುವೆಯು ನಮಗುಂಟು (ಶೂರಣಾ. ೬-೯೬-೨೦). ೫. ಕರೆ ; ಆಹ್ವಾನ ; ಆಮಂತ್ರಣ : ಪ್ರಾಣೇಶಾಚಾರ್ಯರು ಯಾಕೆ ಬರಲಿಲ್ಲ . . . ಏನು ಹೇಳಿಕೆ ತಲ್ಪಲಿಲ್ಲವೆ ಅವರಿಗೆ ? (ಸಂಸ್ಕಾರ. ೯೦) ; ಎರಡೂ ಕಡೆಯ ಹೇಳಿಕೆಗಳು ಶೀನಮಯ್ಯರಿಗೆ ಬಂದಿದ್ದುವು (ಮರಸು. ೨೬೯). ೬. ಕೋರಿಕೆ ; ಬಿನ್ನಹ : ಹೇಳಿಕೆಯಲಿ ಮಿತ್ರೆ ಕುಳಿತಳು ಕಾಂತಿ ಛಡಾಳಿಪ ಮಣಿಮಂಚದೆಡೆಯ (ಮೋಹತ. ೨೬-೩೩).

ಹೇಳಿಕೆ ಮಾಡು, ಹೇಳಿಕೆಯನ್ನು ಮಾಡು = ಕರೆ; ಆಮಂತ್ರಿಸು: ಚನಿಯ ಪ್ರತಿಯೊಬ್ಬರನ್ನು ಕುಡು 'ನಾಳೆಗೆ ಪೂಜೆ ನಿಶ್ಚಯ ಮಾಡಿದೆ' ಎಂದು ಹೇಳಿಕೆ ಮಾಡಿದ (ಕುಡಿಕೂ. ೦೪೬) ; ತಿಮ್ಮ ಎಲ್ಲರಿಗೂ ಹೇಳಿಕೆಯನ್ನು ಮಾಡಿದ. ಊಟಕ್ಕೆ ಜನರೂ ಬಂದಿದ್ದರು (ಕುಡಿಕೂ. ೨೨೬). ಹೇಳಿಕೆ ಮಾತು = ಚಾಡಿ ; ಪಿಸುಣು : ಹೇಳಿಕೆ ಮಾತು ಕೇಳಿ ಅನೇಕ ಸಂಸಾರಗಳು ಹಾಳಾಗಿವೆ (ಕೂಡಿ). ಹೇಳಿಕೆಯಾಗು = ೧. ವರದಿಯಾಗು ; ಅಭಿಪ್ರಾಯ ತಿಳಿ : ಕೊರಳ ತೆತ್ತುದು ಚೂಣಿ ದಳಮುಖ್ಯರಿಗೆ ಹೇಳಿಕೆಯಾಯ್ತು (ಕುಪ್ಯಾಲೀ. ೬-೦೯). ೨. ಅಪ್ಪಣೆ ಮಾಡು ; ಆಜ್ಞಾಪಿಸು : ಹೇಳಿಕೆಯಾಯ್ತು ವರಪಾಂಚಾಲರಿಗೆ (ಕುಪ್ಯಾಲೀ. ೩-೦೬) ; ಬರಸಿದವು ಬಳಿಕೋಲೆ ಮಣಿಹಾಱರಿಗೆ ಹೇಳಿಕೆಯಾಯ್ತು (ಶೂರಣಾ. ೦-೬-೯).

[ಪೇಟು್ + — ಇಕ]

ಪೇಟ್ಕೆಗೇಳ್ (ಕ್ರಿ). ಆಜ್ಞೆಯನ್ನು ಪಾಲಿಸು : ಗೋವಿಂಡುಗಳಂ ಮೊಲೆತೊರೆದಾವುಗಳಂ ಪೇಟ್ಕೆಗೇಳ್ವ ತೊಟ್ಟಿರ್ಕಳ ಸದ್ಭಾವಮನೆಮ್ಮೆಯ ಪಿಂಡಂ ಭಾವಿಸಿ ನೋಡಂಬುಜಾಕ್ಷಿ ಚಿತ್ತೋತ್ಸವದಿಂ (ರರ್ಮಾಪ್ಯು. ೩-೦೦೬ ಅಡಿಟಿ). [ಪೇಟ್ಕೆ + ಕೆ.ಳ್]

ಪೈ$_1$ (ಗು). ೧. ಮೇಲಿನ ; ಹೆಚ್ಚಿನ : 'ಪೈಪೋಟಿ' ಪರಾ. ೨. ಹೊರಗಿನ ; ಬಾಹ್ಯ : (ಕಿ). (ನಾ). ೩. ಮೇಲುಗಡೆ ; ಮೇಲು ಭಾಗ: (ಕಿ). [←ತೆಲು. ಪೈ, ಪಯಿ]

ಪೈ$_2$ 'ಪಾಯಿ$_2$' ನೋ.

ಪೈಂಗಲ, ಪೈಂಗಳ (ನಾ). ಚಾಂದ್ರಮಾನಗಣನೆಯ ಪ್ರಕಾರ ಅರುವತ್ತುಸಂವತ್ಸರಗಳಲ್ಲಿ ಐವತ್ತೊಂದನೆಯ ಸಂವತ್ಸರ; ಪಿಂಗಳ. ಪೈಂಗಳ : ಆ ವರ್ಷವೇ ಪ್ರಭವ ವಿಭವ . . . ನಳ ಪೈಂ[ಪಾಶಾಂ. ಪಿಂ]ಗಳ ಕಾಳಾಯುಕ್ತಿ . . . ಅಕ್ಷಯವೆಂದಱುವತ್ತುತೆಱನಾಗಿಹುದು (ಪಿಪೇಕ. ೨೬೩). 'ಪಿಂಗಲ' ಪರಾ. [ಸಂ.]

ಪೈಂಗಳ 'ಪೈಂಗಲ' ನೋ.

ಪೈಂಜಣ 'ಪೈಜಣ' ನೋ.

ಪೈಂಟು 'ಪಾಯಿಂಟು' ನೋ.

ಪೈಕ 'ಪಯಿಕ' ನೋ.

ಪೈಕರಿ (ನಾ). ತಾತ್ಕಾಲಿಕ ಬಾಡಿಗೆದಾರ ಅಥವಾ ಒಂದು ಊರಿನಲ್ಲಿ ವಾಸವಾಗಿದ್ದು ಇನ್ನೊಂದು ಊರಿನಲ್ಲಿರುವ ಜಮೀನಿನ ವ್ಯವಸಾಯ ಮಾಡುವವನು : (ಕೈಸ್ಗೆ. II. ೩೩೮). [?]

ಪೈಕಿ, ಪಯಿಕಿ (ಅ). ಸಂಬಂಧಿಸಿದುದರಲ್ಲಿ ; ಸೇರಿದುದರಲ್ಲಿ : ನೆಲ ಮಂಗಲತಾಲೂಕು ಪೈಕಿ ಹೇಗುಂದ (ಪೂಂಕಶಾ. ೦೯೯೦, ಸಿರನಿ. ೨೬-೬; 1260);

ಬಳುಕಾರವ ಪೈಕಿ ಕೈಲಿಗೆರೆ ಗ್ರಾಮದ ಸಾಧನಪ್ರತಿ (ಪ್ರ.ಅ. ೦೯೩೯. ೨೫-೦ ; 1394) ; ರಾಯರ ಶಿಷ್ಯರ ಪೈಕಿ ಯಾರು ಯಾರು ಅನುಭವಸ್ಥರು (ರಾಯಕ. ೬೯). ಪಯಿಕಿ : ನಮ್ಮ ಮೊದಲನೇ ಆವೃತಿಯ ರಿವಾಜ ಪುಸ್ತಕದೊಳಗಿನ ಪಾನು ೬೩ರ ಪಯಿಕಿ ೬ನೇ ಕಲಮಿನಲ್ಲಿ ಸೂಚನಾ ಪ್ರಸಿದ್ಧ ಮಾಡಿದಾಗ್ಯೂ (ಮುಂಬಿಪ್ಯಾ. ೨೦೭). [←ಮರಾ. ಪೈಕೀ]

ಪೈಗಂಬರ್ 'ಪೈಗಂಬರ' ನೋ.

ಪೈಗಂಬರ, ಪೈಗಂಬರ್ (ನಾ). ದೇವರ ಸಂದೇಶವನ್ನು ಸಾರುವವನು ; ಪ್ರವಾದಿ : ಮಹಮ್ಮದನು ಪೈಗಂಬರನೆನಿಸಿ ಮಕ್ಕಳ್ಕೆ ಮರಳಿದನು (ಶಾಂಶ್ರ. II. ೯೩೩) ; ಪೈಗಂಬರನು ನೀನೆ, ಮರಿಯಾತ್ಮಜನು ನೀನೆ ಎಂಬ ಸತ್ಯವನೀ ಜಗತ್ತರಿವುದೆಂದು? (ಗಿಳಿಂ. ೦೯-೯). ಪೈಗಂಬರ್ : ಇಸ್ಲಾಂಸಂಸ್ಕೃತಿಗೆ ಆದ್ಯಪ್ರವರ್ತಕ ಪೈಗಂಬರ್ ಮಹಮ್ಮದ್ (ಇಸ್ಲಾಂಸಂ. ೦). [←ಪಾರ. ಪೈಗಂಬರ್, ಪೈಗಾಂಬರ್ ; ಹಿಂ. ಪೈಗಂಬರ್ ; ಮರಾ. ಪೈಗಂಬರ್, ಪೇಗಂಬರ್]

ಪೈಗಸ್ತಿ, ಪೈಗಸ್ತು (ನಾ). ೧. ಪಹರೆ ; ಗಸ್ತು: ಎರಡು ದಿನಗಳು ಒಂದೇ ಸಮನಾಗಿ ಸರಸ್ವತಿಯ ಮನೆಯ ಬಳಿ ಪೈಗಸ್ತಿ ತಿರುಗಿಸಿ ಗಣೇಶ ಹೊಸ ಸುದ್ದಿಗಳನ್ನು ತಂದು ದಣಿಗೆ ಒಪ್ಪಿಸಿದ (ಶಪಿಸಂ. ೨೦೦). ಪೈಗಸ್ತು : ೨. ಹೆಚ್ಚಿನ ಮೇಲ್ವಿಚಾರಣೆ ಮಾಡುವವನು; ಮೇಲ್ವಿಚಾರಕ : (*). ೩. ಕಾವಲುದಳದವನು; ಗಸ್ತುತಿರುಗುವವನು : (*). ೪. ಸೇವಕ : ರಾಮನಾಥಯ್ಯನವರ ಜತೆ ಬಂದಿದ್ದ ಅವರ ಪೈಗಸ್ತಿಗೆ ಹೊರಗೆ ಎಲೆ ಹಾಕ ಹೇಳಿ, ಅವರೊಂದಿಗೆ ಶಾಸ್ತ್ರಿಗಳು ಊಟಕ್ಕೆ ಕುಳಿತರು. (ಮುಯ್ಯಮು. ೯೩). [←ಹಿಂ. ಪೈಗಶ್ತೀ; ಮರಾ. ಪೈಗಸ್ತ./ತೆಲು. ಪೈಗಸ್ತಿ]

ಪೈಗಸ್ತು 'ಪೈಗಸ್ತಿ' ನೋ.

ಪೈಗು, ಪೈಗೋ (ನಾ). ೧. ಬರ್ಮಾದ ಸಮೀಪದಲ್ಲಿರುವ, ಕುದುರೆಗಳಿಗೆ ಪ್ರಸಿದ್ಧವಾದ ಒಂದು ದೇಶದ ಹೆಸರು : (*). ೨. "ಒಂದು ಜಾತಿಯ ಕುದುರೆ, ತಟ್ಟು" (ರಮಾಕಾಂ. ೩೯೭). ಪೈಗೋ : (*).

ಪೈಗೋ ಟಾಂಕ್ಣಾ = ಪೈಗೋದೇಶದ ಉತ್ತಮಜಾತಿಯ ಕುದುರೆ : ಜವನಃ, ಜವಾಧಿಕಃ—ವೇಗದಿಂದ ಅಧಿಕವಾದ ಕುದುರೆಯ ಹೆಸರು . . . ಅರಬ್ಬೀಟಾಂಕ್ಣಾ, ಪೈಗೋಟಾಂಕ್ಣಾ, ಮುಂತಾದವುಗಳು (ಸಿದ್ಧಾಂತಿ. ೨೯೯). [←ಮಲಯ. ಪೈಗು. / ತಮಿ. ಪೈಕೋವೈ]

ಪೈಗೋ 'ಪೈಗು' ನೋ.

ಪೈಚುಕೆ (ನಾ). ಒಂದು ಬಗೆಯ ಸಸ್ಯ : "ಪೈಚುಕಾ—ಕುರುಟಿಗೆ, ನಾಯಹತ್ತಿ" (ಓಷಧಿ. ೦೦೩). [?]

ಪೈಜಣ, ಪೈಂಜಣ, ಪೈಜಣಿ, ಪೈಜಣು (ನಾ). ೧. ಕಿರುಗೆಜ್ಜೆಗಳಿಂದ ಕೂಡಿದ ಕಾಲಿನ ಆಭರಣ ; ಅಂದುಗೆ ; ನೂಪುರ : ಆಕೆಯ ಕಾಲಲ್ಲಿ ಇನ್ನೂ ಪೈಜಣಗಳಿದ್ದು ಆಕೆಯು ನಡೆಯುವಾಗ ಅವುಗಳ ಸಪ್ಪಳದಿಂದ ಅಲ್ಲಿ ನಿಂತವರ ಎದೆಯು ಖಿಲವಾಯಿತು (ಗೌರಾಂಗ. ೦೬೩) ; ಕಾಲೊಳಗಿನ ಪೈಜಣದ ರತ್ನಪ್ರಭೆಯು ಅವಳ ಮೈಯಲ್ಲಿ ಹಬ್ಬಿರುವುದು (ಮುಂಬಿಯಿ. ೫-೩೦೦). ೨. ಗೆಜ್ಜೆಯ ನಾದ : ಬೇಸಗೆಯ ನಿಟ್ಟುಸಿರು ಮಳೆವನಿಯ ಪೈಜಣಕೆ ಕುಣಿದು ಕೊನರುವ ಹಸಿರು (ಪಂಪಾ. ೯೨-೩). ಪೈಂಜಣ : ೧. ಬಾಲೆಯರ ಕಾಲಲ್ಲಿ ರುಳಿ ಪೈಂಜಣ ಗಿಲಿಗಿಲಿ ಎಂದು ನುಡದಾವ (ಸಿದ್ಧಪು. ೦೭-೭೦). ಪೈಜಣಿ: ೧. ಹುಡುಗಿಯ ರತ್ನಾಭರಣಗಳ ತೊಡಿಗೆಯ ಪೈಜಣಿ ಚಾದರದುಡಿಗೆಯ ತ್ರಿಭುವನ ಮೋಹಿಪ ಬರೆ ಬೆಡಗಿಯ ಕಂಡಾಗ . . . ಖಳರು ಸೋಲುತ (ಸಮುಮ. ೨೯). ಪೈಜಣು : ೧. ಅವುಗಳ ಕೋಡುಗಳಲ್ಲಿ ಸೆಟ್ಟರ ಹೆಣ್ಣುಮಕ್ಕಳ ಕಾಲೊಳಗಿನ ಬೆಳ್ಳಿಯ ಸರಪಳಿ, ಪೈಜಣುಗಳು ಒಪ್ಪುತ್ತಿದ್ದುವು (ಅಕೋಕ. ೨೦೨).

[←ಹಿಂ. ಪೈಜನೀ, ಪೈಂಜನಾ ; ಮರಾ. ಪೈಜಣ್, ಪೈಂಜಣ್]

ಪೈಜಣಿ 'ಪೈಜಣ' ನೋ.

ಪೈಜಣು 'ಪೈಜಣ' ನೋ.

ಪೈಜಾಮ 'ಪಾಯಜಾಮ' ನೋ.

ಪೈಜಾಮಾ 'ಪಾಯಜಾಮ' ನೋ.

ಪೈಜಾರ 'ಪೈಜಾರು' ನೋ.

ಪೈಜಾರು, ಪೈಜಾರ (ನಾ). ಜೋಡು ; ಮೆಟ್ಟು ; ಪಾದರಕ್ಷೆ : ಏಕಲವ್ಯನು ರತ್ನಖಚಿತವಾದ ಪೈಜಾರುಗಳನ್ನೂ . . . ಹಿಡಿದು (ಕೃಪಾಸ. ೦೨೦). ಪೈಜಾರ : ಪೈಜಾರದಿಂದ ಒಂದು ಪೆಟ್ಟು ತ್ರಾಡಿಸಿದ್ದು ನಿಶ್ಚಯವು (ಕಸಾರ. ೫೦). [←ಅರ. ಪಾರ. ಹಿಂ. ಮರಾ. ಪೈಜಾರ್]

ಪೈಜೆ (ನಾ). ಶರತ್ತು ; ಕರಾರು ; ಪಣ : ತಿಳಿವೆನಾತನ ನಿಜವನಥವಾ ಸೆಳೆದನಾದೊಡೆ ಮುಟ್ಟಿ ಹಿಡಿಕೊಂಡೆಳೆದು ತಹೆ ನಾನೆನುತ ಪೈಜೆಯ ನುಡಿದಳಾ ಮಾಯೆ (ಪ್ರಭುಲಿಂ. ೨-೪೦) ; ಎಲೆಲೆ ಗರುವೆ ನಿನ್ನಯ ಪೈಜೆಯಂ ಸಲಿಪನಿನ್ನುಮಾತನು ಪೋಗೆ ಮರ್ತ್ಯಕೆ (ಪ್ರಭುಪು. ೯-೩೦); ಧೀರಮುನಿ, ಪೈಜೆಯಂ ಪಾಲಿಸುವ ನಿನ್ನ ಧೈರ್ಯವದೆತ್ತ ಜಾರಿದುದೊ? (ಪಶ್ರಾಂಗ. ೩೯-೦೦೫೯). [<ಪ್ರಾ. ಪಇಜ್ಜಾ. / ಸಂ. ಪ್ರತಿಜ್ಞಾ./ಹಿಂ. ಮರಾ. ಪೈಜ್]

ಪೈಜೆಗ (ನಾ). ಪಣ ತೊಟ್ಟವನು ; ಶಪಥ ಮಾಡಿದವನು : ನಡೆವು ತಿರ್ದುದು ಸಮರವೀಚಿಯ ಕಡೆಯಲೈವರು ರಕ್ಕಸರ ಖಳರೊಡೆಯ ಕಳವಿನ ಕಾಳಗಕೆ ಕಳುಹಿದನು ಪೈಜೆಗರ (ತೊರಣಾ. ೬-೦೩-೫೦).

[ಪೈಜೆ + — ಗ$_2$]

ಪೈಜೆಗಾಱ (ನಾ). = ಪೈಜೆಗ : ಆಜಿರಂಗದಲಿಂದು ನಿನ್ನಯ ಭಟಶಿರೋಮಣಿಯ ಪೈಜೆಗಾಱನ ಗೆಲಿದಡಹುದು ಬಿಡೌಜಸುತನೆಂಬಗ್ಗಳಿಕೆ (ತೊರಣಾ. ೯-೯-೫). [ಪೈಜೆ + — ಕಾಱ]

ಪೈಟನ 'ಪೈಠಣಿ' ನೋ.

ಪೈಟನಿ 'ಪೈಠಣಿ' ನೋ.

ಪೈಟಾಣಿ 'ಪೈಠಣಿ' ನೋ.

ಪೈಟಿ 'ಪಲ್ಟಿ' ನೋ.

ಪೈಠಣಿ, ಪೇಠಣಿ, ಪೈಟನ, ಪೈಟನಿ, ಪೈಟಾಣಿ, ಪೈಠಣಿ (ಗು). ೧. 'ಪೈಠಣ' ಎಂಬ ಸ್ಥಳದಲ್ಲಿ ತಯಾರಾದ : ಐದಂಬು ತಿಂಗಳಿಗೆ ಕೊಯ್ದ ಮಲ್ಲಿಗೆದಂಡೆ ಹಸರು ಪೈಠಣಿಸೀರಿ ಕುಬ್ಬಸ ಬಗೆಸುವಳ (ಶೋಕಗೀ. ೯೯). (ನಾ). ೨. ಪೈಠಣ ಎಂಬ ಸ್ಥಳದಲ್ಲಿ ತಯಾರಾದ ಒಂದು ಬಗೆಯ ಬಟ್ಟೆ ; ಜರಿಯ ನಕಾಸೆಯುಳ್ಳ ರೇಷ್ಮೆವಸ್ತ್ರ ; P 'ಪೈಠಣ' ಎಂಬುದು ಈಗಿನ ಔರಂಗಾಬಾದ್ ಜಿಲ್ಲೆಯ ಹಿಂದಿನ 'ಪ್ರತಿಷ್ಠಾನಪುರ' ವೆಂಬುದಕ್ಕೆ ಈಗ ಇರುವ ಹೆಸರು : ಕೆಂಜೆಡೆಗೊಪ್ಪುವ ಕಾಸಿ ಚಿನ್ನಾಂಬರವ ರಂಜಿಪ ಸಣ್ಣ ಪೈಠಣಿಯ (ದೇವಾಂಪು. ೭-೨೫೩) ; ಹಸಿರ ಪೈಠಣಿ ಮೇಲೆ ಕುಸಲದ ಹೂಗಳು ಕಸುತಿ ತಗೆದಾರ ಕುಬಸೀಗೆ ಕನ್ಯೆಯರು (ಸಿದ್ಧಪು. ೦೭-೭೩). ೩. ರೇಷ್ಮೆಯ ಅಂಗಿ : ತೊಟ್ಟ ಮುತ್ತಿನ ಪೈಠಣಿಯಿಂದ ಚೆಲುವಿನ ಕಟ್ಟೆಱಕದೆ ನಡೆತಂದ (ಕಂಪಪಿ. ೯-೯೯). ಪೇಠಣಿ : ೧. ಪೊನ್ನ ಪೇಠಣಿಯ ಪೊಸರ್ ಥಳತ್ಥಳಿಸೆ (ರಾಜಶೇ. ೦೩-೭೨). ಪೈಟನ : ೪. ಜರತಾರಿ ಬಟ್ಟೆ ; ಜರಿಬಟ್ಟೆ : ಉಟ್ಟ ಎಳೆಗಾವಿಯ ಸುಧೋತ್ರವ ತೊಟ್ಟಗೆಲಸದ ಪೈಟ[ಟ]ನಂಗಿಯ ಕಟ್ಟಿದನು ಮಣಿತಾತಿಯಂಗುಲಕಿಟ್ಟ ಮುದ್ರಿಕೆಯ (ಶರಲಿ. ೨೨೯-೨). ಪೈಟನಿ : ೧. ಹಸರು ಪೈಟನಿಸೀರೆ ನಿರಿವಿಡಿದುಟ್ಟು ಪೊಸ ವಜ್ರಗಾವಿಕುಪ್ಪಸವನ್ನು ತೊಟ್ಟು (ಸಂಬ್ರಾವ. ೬). ಪೈಟಾಣಿ: ೧. ಉಟ್ಟಾಳು ಪೈಟಾಣಿಶೀರೆಯ ತಾನೂ ತೊಟ್ಟಾಳು ಜರುತಾರಿ ಕುಪ್ಪುಸವನ್ನು (ಶಪಿಮಾ. ೦೨). ಪೈಠಣಿ : ೨. ವರನೂತನವಸ್ತ್ರವನು ಸುರುಚಿರಮಪ್ಪ ಪೈಠಣಿ ಮುಂತಾದುವ ದೊರೆಗುಡಲಿತ್ತನಾ ದೇವ

(ಸ್ಕಾಂದ. ೩-೪೯). ೩. ಪೊಳೆವ ಪಸುರುವಟ್ಟೆಯ ಪೈಠಣೆ ಪೊಸ ಸಣ್ಣ ರುದ್ರಾಕ್ಷಿಗಳ ಕಂಠಮಾಲೆ ರಾಜಿಸಲು ನಂಬ್ಯಣ್ಣನಂದಂಬಡೆದ (ಸೌಂದಪು. ೩-೯). ೪. ಇಳೆಯೊಳೆಳಲುವ ಶೋಣ ಪೈಠಣೆಯ ಪೈರಣೆಯು ಕಳಕಳಿಸೆ ಮೈಯೊಳಂ ದಾಳಿಂಬಪೂವಿನಂತಳವಟ್ಟ ಚಿಂದಿ ಮಸ್ತಕತಟದೊಳುಂ ಚುಂಗ ಮೆಱೆವುತಿರೆ ಸೊಬಗಿನಿಂದಂ . . . ನಿಂದು (ಪ್ರಭುಪು. ೩-೨೬).

[←ಮರಾ. ಪೈಠಣೇ./ಸಂ. ಪ್ರತಿಷ್ಠಾನ]

ಪೈಠಣೆ 'ಪೈಠಣಿ' ನೋ.

ಪೈಠರ (ನಾ). ಮಡಕೆಯಲ್ಲಿ ಬೇಯಿಸಿದ ಹಿಟ್ಟು ಮುಂತಾದುವು : "ಉಖ್ಯಂ, ಪೈಠರಂ—೨ ಮಡಕೆಯಲ್ಲಿ ಅಟ್ಟ ಹಿಟ್ಟು" (ಸಿದ್ಧಾಂತಿ. ೨೬೭).

[ಸಂ.]

ಪೈಠವ (ನಾ). ಒಂದು ಬಗೆಯ ಸಿಹಿ ಖಾದ್ಯ : ಕಣಕದ ಬಟುವ ತೆಗೆದು ವಣಕ ಸೂಸಲನಿಕ್ಕಿ ಮಣಿದು ಪೈಠವದ ವರ್ತುಳಭೂಷಣಂಗೈದು (ಶಂಗಪು. ೬-೦೦). [?]

ಪೈಣ 'ಪಯಣ' ನೋ.

ಪೈಣಗತಿ 'ಪಯಣಗತಿ' ನೋ.

ಪೈಣಿಗ 'ಪಯಣಿಗ' ನೋ.

ಪೈತಿಕ, ಹೈತಕ, ಹೈತಿಗೆ₁ (ನಾ). ೧. ಪಿತ್ರಸಂಬಂಧವಾದುದು : ಲಲನಾಮುಖೇಂದುಲಾವಣ್ಯಲೀಲೆಯಂ ಪಡೆವ ಬಣ್ಣದಿಂ ಕುಪಿಂದೇ ನಲೆದುದೊ ಪೈತಿಕ[ಪಾಠಾಂ-ಪೈತಿಗ, ಬಯ್ಯುಗ]ದಂತಿರೆ ತಲೆಗೇಱುವ ಕುಸುಮನಿಚಯಮಂ ಕಾಶ್ಮೀರಂ (ಅಭಿಪು. ೦೦-೦೨೯). **ಹೈತಕ** : ೨. ಮೈಮೇಲೆ ಪಿತ್ರದಿಂದುಂಟಾಗುವ ಗಂದೆ,— ಗಾದರಿ : (ಕ). **ಹೈತಿಗೆ₁** : ೨. ಮಗುವಿನ ಮೈಮೇಲೆ ಹೈತಿಗೆ ಎದ್ದಿದೆ (ಕೂಡಿ).

[<ಸಂ. ಪೈತ್ರಿಕ]

ಪೈತೃಕ (ಗು). ೧. ತಂದೆಗೆ ಸಂಬಂಧಿಸಿದ. ೨. ಪಿತೃಸಂಬಂಧವಾದ ; ಪಿತ್ರಾರ್ಜಿತವಾದ : ದುರ್ಯೋಧನಾದಿಗಳಿಗೆ ಭೀಷ್ಮದ್ರೋಣಾದಿಗಳು ಎಷ್ಟೋ ಬಗೆಯಲ್ಲಿ ಬುದ್ಧಿ ಹೇಳಿ ಪಾಂಡವರಿಗೆ ಅವರ ಪೈತೃಕ ರಾಜ್ಯವನ್ನು ಕೊಡಿರೆಂದು ಎಷ್ಟು ಬೇಡಿದರೂ ಅವರು ಕೇಳಲಿಲ್ಲ (ಭೀಷ್ಮಪ. ೦೩೬) ; ಕಗ್ಗತ್ತಲೆ, ಗುಹೆ, ಕಾಡು ಮತ್ತು ಭಯ ಇತ್ಯಾದಿಗಳ ಸಂಸ್ಕಾರಗಳು, ಗುಣಗಳು ಪೈತೃಕ ಆಸ್ತಿಯಂತೆ ನಮ್ಮನ್ನು ಸಂಬಂಧಿಸಿಕೊಂಡು ಬಂದಿರುವುವುಗಳಾಗಿರುತ್ತವೆ (ಪಂಚಾಕ್ಷ. ೨೦೭). (ನಾ). ೩. ಪಿತೃಗಳಿಗೆ ಮಾಡುವ ಶ್ರಾದ್ಧ ; ತಿಥಿ : ನಾಳೆ ಪೈತೃಕಮದಂ ನಾಡಿದಲ್ಲದೆ ಮಾಡೆನು (ಕೃಷ್ಣಾ. ೦೦-೨೬) ; ಬೇಗದಿಂ ಪೈತೃಕಕೆ ಕ್ಷಣಸಲ್ಪಿರಿಯ ಭಕ್ತನಾಗಿ ಬಂದರ್ಚನೆಯ ಕೈಕೊಂಡು ನಿಜಮುಕ್ತನಾಗೆ ಚಿತ್ರೀಸಪುರವರಸಿ ಕೈಲಾಸಕ್ಕೆ ಸಾಮವೇದಿಯನೊಯ್ದನು (ರಾಶಿಪ. ೬-೨೦). [ಸಂ.]

ಪೈತೃಕಕರ್ಮ (ನಾ). ಶಾಸ್ತ್ರೋಕ್ತವಾಗಿ ಮಾಡುವ ಶ್ರಾದ್ಧ ; ಪಿತೃಕರ್ಮ : "ಶ್ರಾದ್ಧಂ . . . ಬ್ರಾಹ್ಮಣಭೋಜನ, ಪಿಂಡಪ್ರದಾನಾದಿ ರೂಪವಾದ ಪೈತೃಕಕರ್ಮಕ್ಕೆ ಹೆಸರು" (ಸಿದ್ಧಾಂತಿ. ೨೨೩). [ಸಂ.]

ಪೈತೃಕಧನ (ನಾ). ಪಿತ್ರಾರ್ಜಿತವಾಗಿ ಬಂದ ಸ್ವತ್ತು ; ವಂಶಪಾರಂಪರ್ಯವಾಗಿ ಬಂದ ಐಶ್ವರ್ಯ. [ಸಂ.]

ಪೈತೃಪತಿ (ನಾ). ಪಿತೃಗಳ ಒಡೆಯ ; ಯಮ : ಪೈತೃಪತಿವಿಧ್ವಂಸನ ಸುರನಿಕರಪೋಷಣ ಮಹಾಪೌರುಷಪ್ರಯುತ . . . ತ್ರಿಣೇತ್ರ ದಾನವ ಚೈತ್ರ ಸುಪವಿತ್ರಚಾರಿತ್ರನೆ (ಶಪಪು. ೦೩-೦). [ಸಂ.]

ಪೈತ್ತ (ಗು). ಪಿತ್ತದಿಂದ ಉಂಟಾದ. [ಸಂ.]

ಪೈತ್ತಲ (ಗು). ಹಿತ್ತಾಳೆಯಿಂದ ಮಾಡಿದ. [ಸಂ.]

ಪೈತ್ತಲಜ (ನಾ). ಹಿತ್ತಾಳೆಯಿಂದ ಹುಟ್ಟಿದುದು ; ಕಂಚು ಮುಂತಾದ ಮಿಶ್ರಲೋಹ : ಪಾದವೆರಡಾ ಸಮಾಂಗುಲವದಂ ಚಿನ್ನದಿಂದಾದಡಾಗಲಿ ಬೆಳ್ಳಿ ತಾಮ್ರ ಪೈತ್ತಲಜ ಲೋಹಾದಿಯಾಗಲಿ ಪಿಷ್ಟರಚಿತವಾಗಲಿ ಪಾತ್ರೆಯಂ ರಚಿಸಿ (ಪಂಚೈಪು. ೭-೦೦-೩೯). [ಸಂ.]

ಪೈತ್ತಿಕ (ಗು). ೧. ಪಿತ್ತಸಂಬಂಧವಾದ ; ಪಿತ್ತದಿಂದುಂಟಾದ : ಸಿರಿ ಕಂಡಂ ಮುಟ್ಟಿಗೆಯಾಟರೂಪಕಂ ಕಕ್ಕೆ ಮುಸ್ತೆ ನಿಂಬಂ ಕೊತ್ತುಂಬರಿಯೆಂಬಿವ ನೆಂಟೊಂದಾಗಿರೆ ಮಱುಗಿಸಿ ಕುಡಿಯೆ ಪೈತ್ತಿಕಜ್ವರಹರಣಂ (ಕೋಕೋಪ. ೯-೦೭) ; ಇವು ನಿಮಗೆನಿತು ಪೈತ್ತಿಕಜ್ವರವಾದೊಡಮಿಂತೆನಲಕ್ಕುಮೆ (ಜಾಕಂ. ೬-೩೯ ಪ). (ನಾ). ೨. ಪಿತ್ತದಿಂದ ಉಂಟಾಗುವ ವಿಕಾರ ; ಉನ್ಮಾದ : ನೀಕಿಯೆ ತಾಯೆ ಪೈತ್ತಿಕವಾದಾದೊಡಮಾಡಲವೋಳ್ ಮೆನ್ನೊಳೀ ಮಾತಂ (ಪಂಪಪು. ೭-೦೧೩). ೩. ಪಿತ್ತಶರೀರಿಯಾದುದು: ವಾತಪ್ರಕೃತಿಯ ಗುಣಂಗಳ್ ಮಾತಾಪಿತೃಗಳ್ಗೆ ಮುನ್ನಮುಳ್ಳೊಡೆ ಮಱಿಯುಂ ವಾತಿಕನಕ್ಕುಂ ಪೈತ್ತಿಕಜಾತಿಕನುಂ ಶ್ಲೇಷ್ಮಕಾಂಗನುಂ ತಜ್ಜಾತಂ (ಅಶ್ವಶಾ. ೬-೬೬). [ಸಂ.]

ಪೈತ್ಯ (ಗು). ೧. ಪಿತ್ತದಿಂದುಂಟಾದ ; ಪಿತ್ತಸಂಬಂಧವಾದ : ಅನಿಲ ಕಫ ಪೈತ್ಯದೋಷದಿನನಿಲನ ಕುಂದಿಂದೆ ಪಂಗುಳಾಂಧ ಕೃಶಂ ವಾಮನ ಕುಬ್ಜ ಬಧಿರ ಮೂಕರುಮನೇಕವಿಧದಂಗಹೀನರುಂ ಜನಿಯಿಸುವರ್ (ಮದಪ. ೦-೬೩). 'ಪೈತ್ಯಜ್ವರ' ಪರಾ. (ನಾ). ೨. ಪಿತ್ತಸಂಬಂಧವಾದ ದೋಷ ; ಪಿತ್ತದೋಷ : ಬೇಗದಿ ಹರಿ ಶೀತಳಿಯಂ ಪೈತ್ಯದ ರೋಗವನುಚ್ಚಾಯಿಯ ವಚ್ರಾಸ್ತ್ರವ (ಕಲ್ಯಾಕೀ. ೫೩) ; ಕಳ್ಳಂಕಡಲೆ ೫೦ ಹಲ . . . ಸಕ್ಕರೆ ೩೦ ಭಾಗ, ಇವಂ ಚೂರ್ಣವಂ ಮಾಡಿ ಸೇವಿಸೆ ಪೈತ್ಯ, ಶ್ವಾಸ, ಕಾಸ ಮಾಣ್ಗುಂ (ಪಥ್ಯಪಿ. ೭೯) ; ಬಲುಭೂತ ಸೋಂಕಿತೋ ಗ್ರಹದ ಚೇಷ್ಟೆಯೋ ಪೈತ್ಯ ತಲೆಗಡರ್ದುದೊ ಮಿತ್ರೆಯೇನಪ್ಪಳೋ (ಪಪಪೂ. ೨೩-೯೯). ೩. ಉನ್ಮಾದ ; ಹುಚ್ಚು : ಪೈತ್ಯದೊಳುಲಿದ ಯತಿನುಡಿ ನಿಶ್ಚಯವೆ (ಶಾಕಾಪೂ. ೨೦೬-೯೩) ; ಪೈತ್ಯವಾದವಗೆ ಸೈತ್ಯವಾಗದೋ ? (ಗಾವ). 'ಪೈತ್ಯಗಾರ' ಪರಾ. [< ಸಂ. ಪೈತ್ಯ]

ಪೈತ್ಯಗಾತಿ (ನಾ). ಹುಚ್ಚಿ ; ಉನ್ಮಾದಿನಿ : (ಕ). [ಪೈತ್ಯ + — ಕಾತಿ]

ಪೈತ್ಯಗಾರ (ನಾ). ಉನ್ಮತ್ತ ; ಹುಚ್ಚ : ಪೆತ್ತ ಮಗಳಂ ಮಡದಿಯಾಗಿ ಮಾಡಿಕೊಂಡ ಬೊಮ್ಮನಂ ಪಾರ್ವರ್ ಪೈತ್ಯಗಾರರಾಗಿ ಪೊಗಳುತ್ತಿರ್ಪರ್ (ಅರ್ಜುನ. ೨೬-೨೬ ಪ). [ಪೈತ್ಯ + — ಗಾರ (< — ಕಾಱ)]

ಪೈತ್ಯಜ್ವರ (ನಾ). ಪಿತ್ತದಿಂದ ಉಂಟಾದ ಜ್ವರ : ಘೋಡಾಬೋಳಿರಸ . . . ಪೈತ್ಯಜ್ವರಕ್ಕೆ ಜೀರಿಗೆಯಲ್ಲಿ ಕೊಡುವುದು (ಪಥ್ಯಪಿ. ೨೬); ಉನ್ಮಾದ ರೋಗದವರು, ಪೈತ್ಯಜ್ವರದವರು . . . ವಿಷದ ರೋಗದವರು, ಇವರಿಷ್ಟೂ ವಮನಯೋಗ್ಯರೆಂದರಿವುದು (ಸಕಪ್ರ. ೨೩). [ಸಂ.]

ಪೈತ್ಯಾಧಿಕೆ (ನಾ). ಪಿತ್ತವು ಹೆಚ್ಚಾಗಿರುವವಳು : ಪೈತ್ಯಾಧಿಕೆಗತಿಕೋಪಂ (ಮದಪ. ೦೦-೭). [ಸಂ. ಪೈತ್ಯಾಧಿಕಾ]

ಪೈತ್ರ₁ 'ಪಯಿತ್ರ' ನೋ.

ಪೈತ್ರ₂ (ಗು). ೧. ಪಿತೃಗಳಿಗೆ ಸಂಬಂಧಿಸಿದ,—ಸೇರಿದ; ಪಿತೃಸಂಬಂಧವಾದ. (ನಾ). ೨. ಪಿತೃಗಳನ್ನು ಉದ್ದೇಶಿಸಿ, ಅಂಗುಷ್ಠ ಮತ್ತು ತೋರುಬೆರಳುಗಳ ಮಧ್ಯದಿಂದ ಬಿಡುವ ತೀರ್ಥ : "ಪೈತ್ರಂ—ಪಿತೃಸಂಬಂಧವಾದ ತೀರ್ಥವು. ಅಂಗುಷ್ಠಾಂಗುಳ್ಯೋಃ—ಹೆಬ್ಬೆರಳಿಗೂ ಅದರ ತರ್ಜನೀ ಬೆರಳಿಗೂ ಮಧ್ಯದಲ್ಲಿರುತ್ತೆ" (ಸಿದ್ಧಾಂತಿ. ೨೩೦). ೩. ಹೆಬ್ಬೆರಳು ಮತ್ತು ತೋರುಬೆರಳುಗಳ ನಡುವಿನ ಭಾಗ. [ಸಂ.]

ಪೈದಲ್ (ನಾ). ಕಾಲಾಳುಗಳ ಪಡೆ ; ಪದಾತಿಸೈನ್ಯ : ಇವರ ಸಂಗಡ ಭಾರಿ ಫೌಜು, ಕುದುರೆ, ಪೈದಲ್ ಸಹಾ, ಕೊಡಗಿನ ಕಡೆಗೆ ರವಾನೆ ಮಾಡಿದ್ದರಿಂದ (ರಾಕೇಂದ್ರ. ೩೬). [← ಹಿಂ. ಪೈದಲ್]

ಪೈನೆ 'ಬಯಿನೆ' ನೋ.

ಪೈಪಾಡು 'ಪಯಪಾಡು' ನೋ.

ಪೈಪು (ನಾ). ೧. ನಳಿಕೆ ; ಕೊಳವೆ : ಮಂಡಿಯು ಈಗಿರುವ ಆಕಾರದ ಬದಲು ಮೂರು ಅಂಗುಲದ ಪೈಪಿನ ಹಾಗೆ ಇದ್ದರೆ ಎಷ್ಟೋ ಚೆನ್ನು (ನಾಡಗೇ. ೯೯). ೨. ಕೊಳಾಯಿ ; ನಲ್ಲಿ ; ನಳ : ಪೈಪುಗಳಿದ್ದ ಪಟ್ಟಣಗಳಲ್ಲಿ ಮೊದಲಿನಷ್ಟು ಗಿರಾಕಿ ದೊರೆಯದಿದ್ದರೂ ಒಟ್ಟಿನ ಮೇಲೆ ಆವನ ಪ್ರಾಪ್ತಿ ಚೆನ್ನಾಗಿಯೇ ಇತ್ತು (ದಾಸಹು. ೨೮). [← ಇಂ. Pipe]

ಪೈಪೋಟಿ (ನಾ). ಹುರುಡು ; ಸ್ಪರ್ಧೆ ; ಮೇಲಾಟ : ಅವರ ಮನೆಯಲ್ಲಿ ನಡೆದ ಸತ್ಕಾರದಲ್ಲೆಲ್ಲಾ ಒಂದು ಪೈಪೋಟಿ ಮನೋಭಾವ ಕಾಣುತ್ತಿತ್ತು (ಹೊಸಕ್ಷಿ. ೦೦೬); ಅಲ್ಲಿ ಯಾವಾಗಲೂ ಜನರ ಪೈಪೋಟಿ ನಡೆಯುತ್ತಿರುತ್ತದೆ (ಕೂವಪೇ. ೨೩೮).

ಪೈಪೋಟಿ ಹಾಕು = ಸ್ಪರ್ಧಿಸು ; ಮೇಲಾಟವಾಡು ; ಹುರುಡಿಸು : ಗುರು ಅಜಿತಸೇನನ ಕೀರ್ತಿ ಮಲ್ಲಿಗೆಯೊಂದಿಗೆ ಪೈಪೋಟಿ ಹಾಕಿತಂತೆ! (ಶಾಸಗಿ. ೬೯).

[ಪೈ$_1$ + ಪೋಟಿ$_1$. / ತೆಲು. ಪಯಿಪಾಟು, ಪೈಪಾಟು = ವಿಜೃಂಭಣೆ]

ಪೈಮಾಯಿಷಿ, ಪೈಮಾಷಿ, ಪೈಮಾಷೆ, ಪೈಮಾಸಿ (ನಾ). ಭೂಮಿಯನು ಅಳೆಯುವಿಕೆ ; ಮೋಜಣಿ ; ಸರ್ವೆ : ಜಮೀನು ಪೈಮಾಯಿಷಿಯಿಂದ ಬೀಜವರಿಯ ಮೇಲೆ ಕಂದಾಯವನ್ನು ಠರಾವ್ . . . ಮಾಡಿದರು (ಮಹಾಪಂ. II, ೩೦). **ಪೈಮಾಷಿ** : ಮೋಜಣಿ, ಪೈಮಾಷಿ (—ಮಾಡುವುದು) (Surveying. ಇಂಕಸಿ). **ಪೈಮಾಷೆ** : ಇದು ಈಗಿನ ಪೈಮಾಷೆಯ ಸಾಕಳಿ ಅಳತಿಯು (ಕೃಷಿಪ್ರ. ೦೩೯). **ಪೈಮಾಸಿ** : ೧೮೦೪ ರಲ್ಲಿ ಸೀಮೆ ಪೈಮಾಸಿಯಂ ಮಾಡಲು ಮಕಂಜಿಸರದಾರಂ ಲಕ್ಷ್ಮಣರಾಯಂವೆರಸು ಕನಕಗಿರಿಗೆ ಬಂದು (ಕಸಿಸ. III, ೦೯೭); ಒಂದು ಸಾಕಳಿ ಅಗಲ ಹಾಗು ಹತ್ತು ಸಾಕಳಿ ಉದ್ದ ಅಳೆದರೆ ಈಗಿನ ಪೈಮಾಸಿ ಪ್ರಕಾರ ಒಂದು ಎಕರೆ ಆಗುವುದು (ಕೃಷಿಪ್ರ. ೦೩೯ .

[← ಪಾರ. ಪೈಮಾಇಶ್, ಪೈಮಾಯಿಶ್; ಹಿಂ. ಪೈಮಾಇಶ್; ಮರಾ. ಪೈಮಾಯಷ್, ಪೈಮಾಶೀ, ಪೈಮಾಷೀ]

ಪೈಮಾಷಿ 'ಪೈಮಾಯಿಷಿ' ನೋ.

ಪೈಮಾಷೆ 'ಪೈಮಾಯಿಷಿ' ನೋ.

ಪೈಮಾಸಿ 'ಪೈಮಾಯಿಷಿ' ನೋ.

ಪೈಯಿವಸ್ತಿಕೆ (ನಾ). ಪತ್ರವು ಬಂದ ತಾರೀಖಿನ ದಾಖಲೆ : ಶ್ರೀಕೃಷ್ಣ ಪೈಯಿವಸ್ತಿಕೆ ಚಿತ್ರಭಾನು ಸಂ॥ ರದ ಉಭಯಾತ್ಮಕ ಪುಷ್ಯ ಬ ೩ ಮಂಗ್ಗಳವಾರ (ಮೈಅಂ. ೦೯೩೦, ೪೨-೦೭; 1822).

[←ಪಾರ. ಪೈವಸ್ತ್ ; ಮರಾ. ಪೈವಸ್ತೀ, ಪೈವಸ್ತಾ]

ಪೈರಣ 'ಪೈರಣೆ' ನೋ.

ಪೈರಣಿ 'ಪೈರಣೆ' ನೋ.

ಪೈರಣು 'ಪೈರಣೆ' ನೋ.

ಪೈರಣೆ, ಪೈರಣ, ಪೈರಣಿ, ಪೈರಣು, ಪೈರನ, ಪೈರಾಣ, ಫೇರಣೆ (ನಾ). ಸಡಿಲವಾದ ಅಂಗಿ : ಇಕ್ಕಿದ ಕುಂಡಲಯೆಕತಾಯಿ ಪೈರಣೆ ಸುಕ್ಕುಗುಪ್ಪಸ ಕಿಱುವೆರಲ ಚೊಕ್ಕಮುದ್ರಿಕೆ ಚಿಲ್ವುವೆತ್ತಿರಲಾಸ್ಥಾನ ಪೊಕ್ಕನಾ ಮಂತ್ರಿತಿಲಕನು (ಕುಂಡಾಸಾಂ. ೯-೦೦೬); ಇಳೆಯೊಳೆಳಲುವ ಶೋಣ ಪೈಠಣೆಯ ಪೈರಣೆಯು ಕಳಕಳಿಸೆ (ಪ್ರಭುಪು. ೩-೨೬) ; ನರಸೇಂದ್ರನ ಪೈರಣೆಯ ಜೋಲ್ಸೆಱಗಾಂತು ಗರುವೆಯರಿರ್ವರೈದಿದರು (ಕಂಪಸಿ. ೨೯-೬೩). **ಪೈರಣ** : ಮೈಮೇಲೆ ಬಿಳಿದಾದ ಒಂದು ಪೈರಣ; ಅಂಚು ಇಲ್ಲದ ಧೋತರವನ್ನು ತೀಡಿ ಉಟ್ಟುಕೊಂಡಿದ್ದಾನೆ (ಕಾದಸ್ಯ. ೯). **ಪೈರಣಿ** : ಲೋಕೇಶ ಜಿನನ ಕೊರಳೊಳಿಕ್ಕಿ ಮಾಲೆಯ ಬೇಕಾದ ಪೈರಣಿದೊಡಿಸಿ (ಜ್ಞಾನಪ. ೬-೮೯). **ಪೈರಣು** : ಬಿಂದುಮಾಧವನು . . . ಪೈರಣನ್ನು ಕಳೆದು ಬರಿಮೈಯಿಂದ ಅಡಿಗೆಮನೆಗೆ ಹೊರಟನು (ಧರ್ಮಸಿ. ೦೯೭); ಕೋಟು ಟೊಪ್ಪಿಗೆ ತೆಗೆದಿಡಿರಿ, ಪೈರಣು ಇರಲಿ (ಶಿಂಗಾಪ ೮೦). **ಪೈರನ** : ಮೈಯಲ್ಲಿ ಒಂದು ಉದ್ದನ್ನ ಪೈರನದ ಮೇಲೆ ಜಾಕೀಟು (ಮಂದಾಕಿ. ೦೯೧). **ಪೈರಾಣ** : ಧೋತ್ರ, ಪೈರಾಣ, ಟೊಪ್ಪಿ—ಎಲ್ಲ ಖಾದಿಬಟ್ಟೆಯದೇ (ಆಳಸಿ. ೭). **ಫೇರಣೆ** : ತೊಟ್ಟ ಫೇರಣೆ ಮೇಲುಟ್ಟ ದೇವಾಂಗವು ಇಟ್ಟ ಶ್ರೀಭಸಿತ ರುದ್ರಾಕ್ಷೆ (ಬಸಪ. ೦-೦೯೩).

[←ಪಾರ. ಪೆರಾಹನ್, ಪೀರಾಹನ್ ; ಹಿಂ. ಪೈರಾಹನ್ = ಹೊದಿಕೆ ; ಗುಜ. ಪಹೇರಣ್./ಪ್ರಾ. ಪರಿಹಾಣ./ ಸಂ. ಪರಿಧಾನ]

ಪೈರನ 'ಪೈರಣೆ' ನೋ.

ಪೈರಾಣ 'ಪೈರಣೆ' ನೋ.

ಪೈರು 'ಪಯಿರ್' ನೋ.

ಪೈರುದಾರ (ನಾ). ಜಮೀನನ್ನು ಸಾಗುವಳಿ ಮಾಡುವವನು ; ರೈತ ; ಕೃಷಿಕ : ನಾಲ್ದೆಸೆಯೊಳಿರ್ಪ ವರ್ತಕ ಪೈರುದಾರ ಗಂದಿಗ ಕೊಂಕಣಿಗ ಮುಂತಾದ ಮಹಾನಾಡವರಂ ಬರಿಸಿ (ಕಳಸ್ಯ. ೭-೨) ; ಇವನಿಗೆ ಶೇಕದಾರನು, ಸಾಗುವಳಿದಾರನು, ಪೈರುದಾರನು ಎಂಬ ಹೆಸರುಂಟು (ಕಥಾಮಂ. IV, ೩೦). [ಪೈರು (<ಪಯಿರ್) + — ದಾರ್ಯ]

ಪೈರೆ (ನಾ). ೧. ದಿನಗೂಲಿಯ ಹಣ. ೨. ದಿನಗೂಲಿ ಕರಾರಿನ ಮೇಲೆ ಮಾಡುವ ಕೆಲಸ : ನಮ್ಮ ಕೂಡೆ ಪೈರೆ ಮಾಡ್ತೇನ ಅಂದರ ಕೊಡತೇನಿ (ಅಕೋಕ. ೯೦). [← ಮರಾ. ಪೈರೇ]

ಪೈರೆತ್ರ (ನಾ). ಒಂದು ಬಗೆಯ ಸಸ್ಯ : ಪೈರೆತ್ರಂ, ಕ್ರಿಮಿನಾಶಹೂವು (ಮೈಜಿಗಿ. ೬೫-೦೩೨೯). [?]

ಪೈಲವಾನ, ಪಯಿಲ್ವಾನ್, ಪಹಿಲವಾನ, ಪಹಿಲ್ವಾನ್, ಪೆಹೆಲ್‌ವಾನ್, ಪೈಲ್ವಾನ್ (ನಾ). ಕುಸ್ತಿಯಾಳು ; ಜಟ್ಟಿ ; ಮಲ್ಲ : ಮತ್ತೊಂದು ಕಡೆಯಲ್ಲಿ ಟಗರು ಕೋಣ ಮೊದಲಾದವುಗಳ ಕಾಳಗವನ್ನೂ ದೊಂಬರು ಪೈಲವಾನರು ಮುಂಶಾದವರ ಆಟಗಳನ್ನೂ ನೋಡಿ (ಮಹಾಪಂ. I, ೩೬) : ಅವನು ಪೈಲವಾನನಂತೆ ಹುರಿಕಟ್ಟಾಗದಿದ್ದರೂ ಆರೋಗ್ಯಕ್ಕೆ ಹೊಂದಿಕೊಂಡು ದುಂಡಗೆ ಬಳೆದಿದ್ದನು (ಇಯಂತ. ೩೦). **ಪಯಿಲ್ವಾನ್** : ಅವನು ಆ ಊರಿನ ಭಾರಿ ಪಯಿಲ್ವಾನ್ ಆಗಿದ್ದಾನೆ (ಕೂಡಿ). **ಪಹಿಲವಾನ** : ಗ್ರಂಥಕರ್ತನು . . . ೧೫೫ ವರ್ಷದ ಒಬ್ಬ ಬಲಿಷ್ಠನಾದ ಅರಬೀ ಪಹಿಲವಾನ (ಜಟ್ಟಿ)ನನ್ನು ಸ್ವತಃ ಕಣ್ಮುಟ್ಟ ನೋಡಿರುವನು (ಬ್ರಹ್ಮಜೀ. ೦೯೬); ದೊಡ್ಡ ದೊಡ್ಡ ಜಟ್ಟಿಗಳು (ಪಹಿಲವಾನರು) ಇಷ್ಟು ನಿರ್ವಿಕಾರಿಗಳೂ ಶಾಂತರೂ . . . ಬಲವಂತರೂ ಆಗುವ ನಿಜವಾದ ರಹಸ್ಯವು ವ್ಯಾಯಾಮವೇ ಸರಿ (ಬ್ರಹ್ಮಜೀ. ೦೯೭). **ಪಹಿಲ್ವಾನ್** : ಕೆಲವು ಪಹಿಲ್ವಾನ್ ಚಿತ್ರಗಳಲ್ಲಿ ಎದೆಯ ಮೇಲೆ ದೊಡ್ಡ ಎರಡು ಕಾವಲಿಗಳಿರುತ್ತವೆ (ಕಸಡ. ೯೫). **ಪೆಹೆಲ್‌ವಾನ್** : ನಮ್ಮ ತಾಲೀಮಿನಲ್ಲಿಯ ಪೆಹೆಲ್‌ವಾನ್‌ರನ್ನೆಲ್ಲ ಕೂಡಿಕೊಂಡು, ಒಬ್ಬೊಬ್ಬ ಕಾಫರ್‌ನನ್ನೂ ಹಿಡಿದು, ಗುಟಲನ್ನೊತ್ತಿ ಪಡಚಾ ಮಾಡಿಬಿಡುತ್ತಿದ್ದೆ (ಅಶಾಂತಿ. ೦೮೦). **ಪೈಲ್ವಾನ್** : ಪೈಲ್ವಾನ್ ಸುಬ್ಬುವೂ ತೊಡೆ ತಟ್ಟಿ ನಿಂತ (ಭೀಮಕಾ. ೩) ; ನಮ್ಮೆಲ್ಲರ ಪೈಲ್ವಾನ್ ಆಗಿದ್ದವನು ಹೀಗಾದೆಯಲ್ಲ (ಅತ್ಯಾರ್ಪ. ೯೮).

[←ಪಾರ. ಹಿಂ. ಪಹಲವಾನ್ ; ಮರಾ. ಪಹಿಲವಾನ್, ಪಹೀಲ್ವಾನ್, ಪೈಲವಾನ್]

ಪೈಲಾ 'ಪಯಿಲಾ' ನೋ.

ಪೈಲಾನಂಬರು 'ಪಯಿಲಾನಂಬರು' ನೋ.

ಪೈಲಿಕೆ (ನಾ). ಒಂದು ಬಗೆಯ ಮೂಲಿಕೆ : "ಪೈಲಿಕಾ—ಅಗುಳುಶುಂಠಿ" (ಒಪಧಿ. ೦೦೩). [?]

ಪೈಲು (ನಾ). (ವಿಶೇಷವಾಗಿ ರತ್ನಗಳ) ಪಾರ್ಶ್ವ ; ಮಗ್ಗುಲು : ಒಂದು ನಕ್ಷತ್ರ ನೂರು ಕಡೆಗೆ ಬೆಳಕನ್ನು ಚೆಲ್ಲುತ್ತದೆ. ಹಾಗೆ ಭಗವಂತನ ಸೃಷ್ಟಿಯಲ್ಲಿ ಒಂದೊಂದು ಘಟನೆಗೂ ನೂರೊಂದು ಪೈಲುಗಳಿರುತ್ತವೆ

(ಸಮುಜೀ. ೧೫೩); ಕರ್ಮಕುಶಲತೆಯು ಅವನ ವ್ಯಕ್ತಿತ್ವದ ಒಂದು ಪೈಲು (ಸಪ್ಯಕಾ. ೨೩). [← ಪಾರ. ಹಿಂ. ಪಹ್ಲೂ; ಮರಾ. ಪೈಲೂ, ಪಹಿಲೂ]

ಪೈಲ್ವಾನ್ 'ಪೈಲವಾನ' ನೋ.

ಪೈವಸ್ತಿ (ನಾ). ವಾಸ್ತವ್ಯ; ವಸತಿ: ಇದರ ಮುಂದೆ ವಿಜಾಪುರದಲ್ಲಿ ಮುಸಲ್ಮಾನರ ಪೈವಸ್ತಿಯು ಬಿದ್ದದ್ದರ ಪ್ರಮಾಣಗಳು ಇತಿಹಾಸದಲ್ಲಿ ಇರುತ್ತವೆ (ಕಠಾಗೆ. ೫೫೯). [← ಪಾರ. ಪೈವಸ್ತ್; ಮರಾ. ಪೈವಸ್ತೀ]

ಪೈವಸ್ತೆ (ಗು). ಮೂರು ವರ್ಷಗಳ ಹಿಂದಿನ: (ಮೈಗೆಶೆ. IV, ೬೮೦). [←ಮರಾ. ಪೈವಸ್ತಾ]

ಪೈಶಂಗಿತ (ನಾ). ನಸುಹಳದಿಬಣ್ಣ: ಪಿರಿದುಂ ಮಾಡಿತ್ತಮರ್ತೃಪ್ರಕರದ ನಯನಕ್ಕಂ ಮನಕ್ಕಂ ಸುರಸ್ತ್ರೀಯರ . . . ಅಧರಮಯೂಖಾಳಿಯಿಂ ದೆತ್ತಲುಂ ಪಾಂಡುರಿತಂ ಪೈಶಂಗಿತಂ ಕರ್ಬುರಿತಮರುಣಿತಂ ವ್ಯೋಮರಂಗಂ ಬೆಡಂಗಂ (ಶಂಪ್ರಪು. ೦೨-೭೭). [ಸಂ.]

ಪೈಶಾಚ (ಗು). ೧. ಪಿಶಾಚಿಗೆ ಸಂಬಂಧಿಸಿದ. ೨. ಆಸುರೀಸ್ವಭಾವದ; ಅಮಾನುಷವಾದ. (ನಾ). ೩. ಪಿಶಾಚಿ: ಹಿಂದೆ ರಣದೊಳಭಿಲಾಷೆಯಿಂ ಪೈಶಾಚರಂತೆ ಹೇಸದೆ ರಕ್ತಪಾನಮಂ ಮಾಡಿಯೊಡಲ ಪೋಷಿಸಿದೆ (ಶೈಬಿಶಾ. ೨-೬೦). ೪. ಹಿಂದೂವಿವಾಹಪದ್ಧತಿಯ ಎಂಟು ಪ್ರಕಾರಗಳಲ್ಲಿ ಒಂದು: 'ವಿವಾಹ' ಪರಾ. [ಸಂ.]

ಪೈಶಾಚಕ (ನಾ). ೧. = ಪೈಶಾಚಿಕ ೩: ಹರಂ ಗಿರಿಸುತೆಗೆ ಪೇಟ್ದೂ ಕಥೆಗಳಂ ಪೈಶಾಚಕಭಾಷೆಯೊಳ್ ಬೃಹತ್ಕಥೆಗಳಂ ಮಾಡಿ ಪೇಟ್ದೊಡೆ (ಪಂಚತಂ. ೦೦-೧೩). ೨. ಪಿಶಾಚಿ ಹಿಡಿದವನು; ದೆವ್ವ ಮೆಟ್ಟಿಕೊಂಡವನು: ದಿಗ್ಭ್ರಮೆ ಪದಂಗೆಟ್ಟಂಗೆ ಪೈಶಾಚಕಂಗೆ ದುರಾವೇಶ ಮಧಾರ್ಮಿಕಂಗೆ ಕುಮತಂ ತತ್ವಪ್ರಮೂಢಂಗೆ ಬೀಸಿದ ಕಣ್ಮಾಯದ ಕುಂಚ ದಂತಿರೆನಗಾದತ್ತಾಗಳೇನೆಂಬುದೋ (ಕಾಮಂಪೂ. ೮೦೩). [ಸಂ.]

ಪೈಶಾಚಿ (ನಾ). ೧. ಪಿಶಾಚಿ: ಪುತ್ರಾಭ್ಯುದಯಮೋಹದ ತಮಸ್ಸು ತೀವಿರ್ಪ ಲೋಭಪೈಶಾಚಿಗೀ ಪಿರಿಯ ಬಲಿಯಹುದೆಂದು ಮುನ್ನಮಾನರಿಯಲಾರದೆ ಹೋದೆ (ಶ್ರೀರಾಮಾ. ೦೦೮-೨೨೧). ೨. = ಪೈಶಾಚಿಕ ೩: ಈ ದೃಶ್ಯಕಾವ್ಯದಲ್ಲಿ ರಾಜನು ಮುಂತಾದವರುಗಳಿಗೆ ಸಂಸ್ಕೃತಭಾಷೆಯೂ . . . ರಾಕ್ಷಸ ಪಿಶಾಚಾದಿಗಳಿಗೆ ಪೈಶಾಚೀ ಮತ್ತು ಚೂಳಿಕಾಪೈಶಾಚೀ ಭಾಷೆಯೂ ಚಂಡಾಲಾದಿಗಳಿಗೆ ಅಪಭ್ರಂಶಭಾಷೆಯೂ ವ್ಯವಹಾರಾರ್ಹವಾಗಿ ವಿಹಿತವಾಗಿರುವುದು (ಭಾರದ. ೪೩೩). [ಸಂ. ಪೈಶಾಚೀ]

ಪೈಶಾಚಿಕ (ಗು). ೧. ಪಿಶಾಚಿಗೆ ಸಂಬಂಧಿಸಿದ. ೨. ಆಸುರೀಸ್ವಭಾವದ. (ನಾ). ೩. ಪ್ರಾಕೃತ ಭಾಷೆಗಳಲ್ಲಿ ಒಂದು; ಗುಡ್ಡಗಾಡುಜನಾಂಗದ ಭಾಷೆ: ಸಂಸ್ಕೃತಂ ಪ್ರಾಕೃತಂ ಅಪಭ್ರಂಶಿಕ ಪೈಶಾಚಿಕಮೆಂಬ ಮೂಱು ವರೆಭಾಷೆಗಳೊಳ್ ಪುಟ್ಟುವುದೆಲ್ಲಂ ಸರ್ವವಿಷಯಭಾಷಾಜಾತಿಗಳಕ್ಕುಂ (ಛಂದೋಂಬು. ೧-೪೬ ವ); ಸಂಸ್ಕೃತ ಪ್ರಾಕೃತ ಪೈಶಾಚಿಕ ಮಾಗಧ . . . ಮಿಶ್ರಾದಿ ಭಾಷಾಭೇದಗಳಿಂ ಪೇಳ್ವ ಲಾಕ್ಷಣಿಕರಪ್ಪ ಕವಿಗಳಿಂ (ವಿವೇಕ. ೨೨೬). [ಸಂ.]

ಪೈಶುನ್ಯ (ನಾ). ೧. ಚಾಡಿ ಹೇಳುವಿಕೆ; ಚಾಡಿಕೋರತನ. ೨. ಪಿಸುಣು ಚಾಡಿ; ದೂರು: ಆ ಬಳಿಕ ನೀವು ಮಾಡಿಟ್ಟಿರುವ ಪೈಶುನ್ಯದ ಕುಚೇಷ್ಟಿತವನ್ನು ತಿದ್ದುವುದಾಗಲಿ (ವಿಗಡ. ೭-೦೫). ೩. ದುಷ್ಟತನ; ದುರ್ಗುಣ. [ಸಂ.]

ಪೈಶೂನ್ಯ (ನಾ). ೧. ಚಾಡಿ; ದೂರು; ಪಿಸುಣು: ಪರಿವಾದಂ ಪೈಶೂನ್ಯಂ ಪರಮರಹಸ್ಯಪ್ರಕಾಶಕರಣಂ ಕೂಟಾಕ್ಷರನಿಧಿನಿಕ್ಷೇಪಾದ್ಯಪಹರಣಂ ಸತ್ಯವ್ರತಕ್ಕಶಿಕ್ರಮಮಕ್ಕುಂ (ವರ್ಧಮಾ. ೭-೯). ೨. ದುಷ್ಟತನ: 'ಪೈಶೂನ್ಯದೂರ' ಪರಾ. ೩. ಚಾಡಿಕೋರ; ಪಿಸುಣ: ಒತ್ತಿ ಬುದ್ಧಿಯ ಪೇಳ್ದಡಲಗನು ಕಿತ್ತು ನಾ ಮರುಳಾದೆನಕಟವನೆತ್ತ ಪೋದನೊ ಕೊಲುಗು ಹಗೆ ಪೈಶೂನ್ಯನೆಂದೆನುತ (ಕೌಶಿಶಾ. ೦೫-೦). [<ಸಂ. ಪೈಶುನ್ಯ]

ಪೈಶೂನ್ಯದೂರ (ನಾ). ದುಷ್ಟತನವಿಲ್ಲದವನು; ದುರ್ಗುಣವಿಲ್ಲದವನು: ದೇವಾಗ್ರಗಣ್ಯಂ ಶಂಭುಸ್ವಾಮಿಷ್ಟಲಿಂಗಂ ಪ್ರಮಥಪರಿವೃಢಂ ಪಾತು ಪೈಶೂನ್ಯದೂರಂ (ಹನ್ಮೀರ. ೩-೬೬). [ಪೈಶೂನ್ಯ + ದೂರ]

ಪೈಷ್ಟಿಕ (ಗು). ೧. ಹಿಟ್ಟಿನಿಂದ ತಯಾರಿಸಿದ; ಪಿಷ್ಟಸಂಬಂಧವಾದ. (ನಾ). ೨. ಹಿಟ್ಟಿನಿಂದ ಮಾಡಿದ ಮಾದಕಪೇಯ: "ಪೈಷ್ಟಿಕಃ— ಮದ್ಯ" (ಓಷಂ. ೦೦೩). [ಸಂ.]

ಪೈಸ, ಪೈಸಾ, ಪೈಸೆ (ನಾ). ೧. ಒಂದು ನಿರ್ದಿಷ್ಟ ಬೆಲೆಯ ತಾಮ್ರದ ನಾಣ್ಯ; ಆಣೆಯ ಮೂರನೆಯ ಒಂದು ಅಂಶ; ಒಂದು ದುಡ್ಡು; ನಾಲ್ಕು ಕಾಸು: ಟೆಂಕೆ ವಿವರ: ಟೆಂಕೆಗೆ ಶೋಡಶ ದುಡ್ಯಂ ಬಿಂಕದಿ ಸಸಿಗಾಣಿ ನಾಲ್ಕು ಪೈಸಗಳೆಂಟಂ ಪಂಕಜಮಿತ್ರನ ಗಣನೆಗೆ ಭೋಂಕನೆ ತಾಂ ಒರಗಾಣಿ ದುಗ್ಗಾಣೆರಡಂ (ಭಾಸ್ಕರ. ೭೬-೯). ೨. ಹಣ; ದುಡ್ಡು: (ಕಿ) ೩. ಒಂದು ರೂಪಾಯಿಯ ನೂರನೆಯ ಒಂದು ಭಾಗ: (ಕಿ). ಪೈಸಾ: ೨. ಭಟಾರಜಿ . . . ನಿಮಗ ಪೈಸಾ ಖೂಬ ಕೊಡ್ತಾವ (ಸ್ವಾಪರಂ. ೮). ಪೈಸೆ: ೧. ಚಕ್ರವ ಪರರಿಗೆ ವಿಕ್ರಯ ಮಾಡಲು ಹನ್ನೆರಡೇ ಪೈಸೆ (ಕೃಲಿಕಾ. ೪೯). ೩. ಈಗಿನ ದಿನಗಳಲ್ಲಿ ಐವತ್ತು ಪೈಸೆ ಕೊಟ್ಟರೂ ಒಂದು ಒಳ್ಳೆಯ ಬಾಳೆಹಣ್ಣು ಸಿಕ್ಕುವುದಿಲ್ಲ (ರೂಢಿ). 'ಪಾಯ್ಸಿ' ಪರಾ. [← ಪಾರ. ಪೈಸ; ಹಿಂ. ಮರಾ. ಪೈಸಾ]

ಪೈಸರ, ಪಯ್ಸರ, ಪೈಸಾರ (ನಾ). ೧. ಮಲ್ಲಯುದ್ಧದ ಒಂದು ಪಟ್ಟು; ಕುಸ್ತಿಯ ಒಂದು ವರಸೆ: ಗಳಹತ್ತ ಡೊಕ್ಕರ ತಳಮೇಲು ಪೈಸರ ಸುಳಿವು ವಂಚನೆ ಪತನದಲಿ . . . ಹೋರಿವರು (ಕಂನವಿ. ೨೦-೯೨). ೨. ಯುದ್ಧದಲ್ಲಿ ಬಳಸುವ ಒಂದು ಪಟ್ಟು: ಓಸರದ ಪೈಸರದ . . . ಸಮರವಿಲಾಸಿಗಳು ಸರಕಟಿಸಿ ಕಾದಿದರು (ತೊರಣಾ. ೬-೦೦-೨೦). ೩. ಕುಗ್ಗುವುದು; ಕುಸಿ ಬೀಳುವುದು; ಜೋಲುವುದು: ಮುರಿದ ಕಂಗಳ ಮಲಗಿನಲಿ ಪೈಸರದ ಗಾತ್ರದ ಗಾಢವೇದನೆಯುರವಣಿಸೆ ಸೊಂಪಡಗಿ ನಿಮಿಷ ಮಹೀಶ ಮೈಮಱೆದ (ಕುಪ್ಯಾಕ. ೩-೪೫). ೪. ಜಾರುವುದು; ಜಾರುವಿಕೆ: ವ್ಯೋಮದೊಳೆಯ್ದುವ ನಿಮಗೆ ಪೈಸರವುಂಟೆ (ಭರತ. ೩-೬೯). ೫. ಹಿಂದಕ್ಕೆ ಸರಿಯುವುದು; ಹಿಂಜರಿತ; ಹಿಮ್ಮೆಟ್ಟುವಿಕೆ: ಆಸೆಯ ಪೈಸರಂ ಮೆಱೆವ ಚೆಲ್ವಂ ದೇವ ನೀವೇಱಿ ನೋಡಿರೆ (ಅನಂಪು. ೨-೩೦); ೯ ಇಲ್ಲಿ 'ಪೈಸರಂ' ಎಂಬುದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪವಿರಬಹುದು: ಮನಕೆ ಭೀತಿಯ ಬೆರಕೆಯುಳ್ಳಡೆ ಬಿಟ್ಟು ಕಳೆ ಪೈಸರಕೆ ಸಮಯವಿದು (ಕುಪ್ಯಾಸ. ೦೩-೫೮). ೬. ಹಿಂದು ಮುಂದು ನೋಡುವುದು; ಅನುಮಾನ: ಕನ್ನಗಳ್ಳರನಿವರ ಮೊಗದಿ ಪೈಸರವ ಮಾಡದೆ ವಿಚಾರಿಸುವುದು (ಸಮ್ಯಕೌ. ೨-೯೩). ೭. ತಪ್ಪುವುದು; ನುಣುಚಿಕೊಳ್ಳುವುದು: ಭಾಷೆ ಪೈಸರವಿಲ್ಲ ಓಸರಿಸೆನನ್ನಕ್ಕೆ ಆಸೆಮಾಡೆನು ಮತ್ತೆ ಭಿನ್ನಸುಖಕ್ಕೆ (ಮಹಾದೇ. ಬ. ೩೦-೬೬). ೮. ನಷ್ಟ; ಹಾನಿ: ಈಸು ಕಳವಳವೇನು . . . ನಿನ್ನ ಹರುಷಕೆ ಪೈಸರವದೇನು (ಕುಪ್ಯಾಸ. ಓಂಇ. ೦೩-೨೯). 'ಪೈಸರಂಗೊಳ್' ಪರಾ. ೯. ಇಳಿಜಾರಾದ ಪ್ರದೇಶ; ಇಳುಕಲು: ಪಾಂಡುನಂದನರು ಗಾಸಿಯಾದರು ಗಟ್ಟ ಬೆಟ್ಟದ ಪೈಸರದೊಳು (ಕುಪ್ಯಾಅ. ೦೭-೦೭); ಪಾದವೆಚ್ಚಱಿಕೆ ಪೈಸರ ಪರಾಕವಧಾನವೆನಲು (ಭರತ. ೩೯-೩೮); ಅವರು ಒಂದು ಬೆಟ್ಟದ ಶಿಖರದ ಅಂಚಿನ ಸಮೀಪದ ಪೈಸರದಲ್ಲಿ ನಿಂತಿದ್ದರು (ಗಿಂಪಾ. ೭೦). ೧೦. ಸೋಲು; ಭಂಗ: ನೆನಹಿನಭರುಚಿಯ ವಾಸಿಗಳ ಪೈಸರವನೆನ್ನಲಿ ಸೂಸಬಾರದೆ (ಕುಪ್ಯಾಸ. ೦೨-೨೮). ೧೧. "ಸೋರಿಕೆ" (ಷಟ್ಪದಿ): ಪರಿಕಾಲ್ಗಳೇಳ್ಗೆದಪ್ಪಿರ್ದೊಡವಱೋಳಿಯಂಭೋವಾಟಮಾ ಪೈಸರಮು ಮುದಕಸೂತ್ರಕ್ಕೆ ಹರಿಯಾದೊಡೆ . . . ನೀವೆಲ್ಲರಾರ್ದು ಪೊಗಳ್ವಂ ತೆಸಗದೊಡೆ ಮಹಾದೇವನೇ ದೇವನೆಂದೆನಲಕ್ಕುಮೇ (ಶಪ್ತಕಾ. ೬-೪೦).

೧೨. ವ್ಯಾಪನೆ; ವಿಸ್ತಾರ; ಹರಹು : ಪೈಸರಿಸು' ಪರಾ. ೧೩. (ಯುದ್ಧದ ಪಟ್ಟಿನಿಂದ ಒದಗುವ) ರಕ್ಷಣೆ (?) : ಅಚಲ ಮೂಱಱ ಪೈಸರದ ಬಲನಿಚಯ ನಮ್ಮದು ವೀರಸುಭಟಪ್ರಚಯಮುಖ್ಯರ ಮಾಡಿ (ಕುಪ್ಯಾಕ. ೦-೨೦). **ಪಯ್ಸರ** : ೩. 'ಪಯ್ಸರವೋಗು' ಪರಾ. ೪. 'ಪಯ್ಸರಿಸು' ಪರಾ. ೭. ನುಸುಳು ನೆಲೆ ಡಿಳ್ಳಾಯ್ತು ಪಯ್ಸ [ಪಾಠಾಂ. ಪೈಸ]ರ ಬೆಸುಗೆ ಬಿಗುಹುಳುಕೊತ್ತು ಕಲೆಗಳ ರಸದ ಪಸರವ ನಱಿಯಬಾರದು ವಿಗಡವಿಟರುಗಳ (ಕುಪ್ಯಾಕ. ೦೩-೨೩). **ಪೈಸಾರ** : ೧೨. ಬಯಲ ಬಿಡಾರ ಪೈಸಾರದಿಂದೆ ಬಿಟ್ಟಿತು ಬಹುಬಲವಾ (ಸೌಂದಕಾ. ೭-೬).

ಪೈಸರವಾಗು, ಪಯ್ಸರವಾಗು = ೧. ಸೋಲುಂಟಾಗು; ಪರಾಭವವುಂಟಾಗು : ಬೀದಿಗಲಹದೊಳೊಮ್ಮೆ ಪೈಸರವಾದಡದು ಪರಿಹರಿಸಿದವರೇ ಸೋದರರಲಾ (ಕುಪ್ಯಾಕ. ೨೦-೩೩). ೨. ಇಲ್ಲವಾಗು; ಮರೆಯಾಗು : ಶೌರ್ಯದ ವಾಸಿ ಪೈಸರವಾಯ್ತು ರಣದಾವೇಶವಿಳಿದುದು ಮಗಧಪತಿಗೆ (ಕುಪ್ಯಾಸ. ೨-೦೦೪); ಉಱ ಮನದ ವಾಸಿ ಪಯ್ಸರವಾಯ್ತು ಗೆಲ್ವಾಸೆಯಡಗಿತು (ಸಮಪು. ೨೩-೩೩). [ದೇ. ॥ ತೆಲು. ಪೈಸರ, ಪಯಿಸರ]

ಪೈಸರಂಗೊಳ್, ಪೈಸರಗೊಳ್ (ಕ್ರಿ). ೧. ಹಾಳಾಗು; ಕೆಡು : 'ಪೈಸರಂಗೊಳಿಸು' ಪರಾ. **ಪೈಸರಗೊಳ್** : ೨. ಅನುಮಾನಿಸು; ಹಿಂದೇಟು ಹಾಕು; ಹಿಂದುಮುಂದು ನೋಡು : ಕೈಸೇರಿದೊಡವೆಯೆನುತೆ ಕೊಡಬೇಕೆಂದು ಪೈಸರಗೊಳಬೇಡ ಮನದಿ (ಮೋಹತ. ೨೬-೩೪). [ಪೈಸರ + ಕೊಳ್$_1$]

ಪೈಸರಂಗೊಳಿಸು (ಕ್ರಿ). ಹಾಳು ಮಾಡು; ಕೆಡಿಸು : ಹಣ್ಣನಿಟ್ಟೊಡೆ ಕಾಯಿ ಬಿದ್ದ ತೆಱದಿಂ ನಾನು ಹಣ್ಣದಾ ಕಾರ್ಯಮಂ ಪೈಸರಂಗೊಳಿಸಿ ಮಸಿವಣ್ಣಮಂ ಮಾಡಿದೆಯಲಾ ಪಾಪಿದೈವವೇ ಎಂದು ಬಸಿಱಂ ಹೊಸೆಯುತ (ಸಮ್ಮಕೌ. ೩-೩೦). [ಪೈಸರಂಗೊಳ್ + — ಇಸು$_3$]

ಪೈಸರಂಬೋಗು, ಪಯ್ಸರವೋಗು, ಪೈಸರವೋಗು (ಕ್ರಿ). ೧. ಜಾರು; ಜಗುಳು : ಗತಿ ಸ್ತಂಭಿಸಿ ಪಾದಂ ಪೈಸರಂಬೋ[ಪಾಠಾಂ. ಪೋ]ಗಿ ... ಮೂರ್ಚಿಸುವ ಮಗಳಂ ಪದ್ಮಾವತಿ ಕಂಡು (ಪಂಚಿ. ಹ. ೦೬೯-೦೬). ೨. ಇಲ್ಲವಾಗು; ತೊಲಗು : ಪನ್ನತಿಕೆ ಪೈಸರಂಬೋಗಿ ಮೈಗರೆದು ದೇವತ್ವಮುಡುಗಿ ಬಲಗೆಟ್ಟು ನಾಣ್ಗೆಟ್ಟು ನಿಂದು (ಆರಾಸ. ೩-೬-೩೩). **ಪಯ್ಸರವೋಗು** : ೩. ಜೋಲು; ಕುಸಿಬೀಳು : ಅಸಮಸಾಹಸಿ ತಿವಿದರಮಮಾ ದೆಸೆಗೆ ಚೆಲ್ಲಿತು ಕರುಳು ಪಯ್ಸರವೋಗಿ ಖಳ ಕೆಡೆದ (ಕೌತಿಕಾ. ೨೨-೨೦). **ಪೈಸರವೋಗು** : ೧. ಮುಂದೆ ಹೆಜ್ಜೆಯನಿಡುತ ಪೈಸರವೋಗಿ (ಕುಪ್ಯಾಗ. ೩-೦೩). ೨. ಆಶೆ ಪೈಸರವೋಯ್ತು (ಕುಪ್ಯಾಅ. ೬-೩೬); ಬಿದಿರ್ದುದು ಬಿಂಕಂ ಬೀತುದು ಪರಿ ಪೈಸರವೋದುದು ಪೆಂಪು (ಜಯಕಾ. ೩-೩೨). ೪. ತಪ್ಪಿಸಿಕೊಳ್ಳು; ನಂಣುಚಿಕೊಳ್ಳು : ತಿರುಗಿ ಪೈಸರವೋಗಿ ಪವನಜ ಮರಳಿ ತಿವಿದನು ಕೀಚಕನ ಪೇರುರವನು (ಕುಪ್ಯಾಪಿ. ೩-೯೨). [ಪೈಸರ + ಪೋಗು$_1$ (< ಪೋ$_1$)]

ಪೈಸರಗೊಡು (ಕ್ರಿ). ವಿಸ್ತಾರವಾಗಿಡು; ಅಗಲವಾಗಿಡು: ಕಾಲ ಪೈಸರಗೊಟ್ಟು ಸರಪಣಿವಿಡಿದು ಹಿಮ್ಮಾಲಾಗಿ ಪಡೆ ತೆಗೆವಾಗ ತೋಳ ಸಿಕ್ಕಿಗೆ ರಾಯ ನೀಡಿದನುಱ ಹೊಟ್ಟೆಮೇಲಾಗಿ ಕೆಡೆದರುರ್ವಿಯೊಳು (ಪರಸ. ೪೯-೦೦೯). [ಪೈಸರ + ಕೊಡು$_1$]

ಪೈಸರಗೊಳ್ 'ಪೈಸರಂಗೊಳ್' ನೋ.

ಪೈಸರಗೋಲು (ನಾ). ದೊಣ್ಣೆವರಸೆಯಲ್ಲಿ ಬಳಸುವ ಕೋಲು : ಉರ ತಗ್ಗಿ ಬಗ್ಗಿ ಕುಪ್ಪಳಿಸಿ ಮೈಸಿರಿಯುಬ್ಬಿ ಭರತಕೋವಿದರಂತೆ ಹೆಣಗಿ ಸರಿಬವರಿಯೊಳು ಪೈಸರಗೋಲ ತಿರುಗಿ ಶ್ರೀಕರದ ಸಾದಕವ ತೋರಿದರು (ಕವಿಸ. III, ೪೯ ಸೌಂದರಕಾವ್ಯ). [ಪೈಸರ + ಕೋಲು$_1$ (< ಕೋಲ್$_1$)]

ಪೈಸರವೋಗು 'ಪೈಸರಂಬೋಗು' ನೋ.

ಪೈಸರಿಸು, ಪಯಿಸರಿಸು, ಪಯ್ಸರಿಸು (ಕ್ರಿ). ೧. ಕೆಳಕ್ಕೆ ಬೀಳು; ಜಾರು; ಜಗುಳು: "ಪೈಸರಿಸಿತೆನಲ್ಕೆ ಜಾಱಿತೆಂದಱಿಗೆ ಬುಧರ್" (ಭಾರವಿ. ೩೩); ಸಂಜಯನು ಬರಬರಲು ಕಂಡನು . . . ಕರಿಗಳೊಟ್ಟಲನೇಱಿಳಿದು ಪೈಸರಿಸಿ ಮಿದುಳಿನ ಜೋಱು ಜೊಂಡಿನ ತೊರಳೆಯಲಿ ದಡದಡಿಸಿ ಜಾಱುತ ಬೀಳುತೇಳುವನ (ಕುಪ್ಯಾಗ. ೩-೬); ಜೋಲುವ ದೋತ್ರ ಪೈಸರಿಸಿದಕ್ಷಮಾಲೆ (ಸೌಂದಪು. ೩-೦೬); ಪಾದಪಶಾಖೆಯಿಂ ಪೈಸರಿಸಿ ಧೊಪ್ಪನೆ ಕೆಡದು ಪವನನ ಕಾಲು ನೊಂದಿರಲು (ತಿಪ್ಮುಂ. ೭-೨೩). ೨. ಕುಸಿದುಬೀಳು.— ಕೆಡೆ: ಅಧಟನವನಿಗೆ ಪೈಸರಿಸಿ ಹರಿವದನವನು ನೋಡುತ್ತ ಬಿಟ್ಟನು ನಿಜಕಳೇವರವ (ಶಿಪಾಗ. ೩-೬-೩೯). ೩. ಕುಗ್ಗು; ಕುಂದು; ಕಡಮೆಯಾಗು : ಬರಸು ಭಾಷೆಯನಿಂದು ಕರ್ಣನ ಶಿರವುಳಿದು ತಾವರೆಯ ನೆಗೆ ಪೈಸರಿಸಿದರೆ . . . ಕಲಿಭಿ ಮನಯ್ಯನ ಹರಹು ನಿಂದರೆ ಬಳಿಕ ನಿಮ್ಮಯ ತಮ್ಮನಲ್ಲ (ಕುಪ್ಯಾಕ. ೦೬-೬); ಬೀಸರಂಬೊಂದಿತ್ತು ಮನದೆಸಕಮಾವಗಂ ಪೈಸರಿಸಿತತಿಧೈರ್ಯಂ (ಆರಾಸ. ೨-೩.೭); ಧೃತಿ ಪೈಸರಿಸುತಾ ನೃಪನೊಡನೆ ತದ್ವಿಪ್ರನಿಂತೆಂದು (ತಿಪ್ಮುಂ. ೩-೬೨). ೪. ಕ್ಷಯಿಸು; ನಾಶವಾಗು : ಇರುತಿರುತ ರವಿಸೂನು ಗಂಧರ್ವರಲಿ ತನ್ನಯ ಕೀರ್ತಿಲತೆ ಪೈಸರಿಸಿದಂದವನೈದೆ ಚಿಂತಿಸುತಿರಲು ರಜನಿಯಲಿ ತರಣಿ ಕಂದನ ಮೋಹದಿಂದವೆ ಧರೆಗೆ ಬಂದನು (ಕುಪ್ಯಾಕ. ಓಂಇ. ೨೩-೩); ಅತ್ಯಂತವಿಷಯಾತುರರಿಗೆ . . . ಕುಲ ಪೈಸರಿಸುವುದು (ಪೇವಂಪ ೪-೨); ತೇಜದೇಲೆ ಯದು ಪೈಸರಿಸಿತ್ತೆ (ವೀರವಿ. ೦೦-೭೩). ೫. ಹಿಂಜರಿ; ಹಿಮ್ಮೆಟ್ಟು : ಕಿಗೆ ಸೆಡೆದಾ ನಕುಲ ಪೈಸರಿಸಿದನು (ಕುಪ್ಯಾಗ. ೨-೩೩); ವೀರಹನುಮನ ಮಱಿಯ ಹೊಕ್ಕುದು ಭೂರಿವಾನರಸೇನೆ ಪೈಸರಿಸಿ (ತೊರರಾ. ೬-೩೨-೯); ಆ ಸುರಾರಿಗಳೆಮ್ಮ ದೆಸೆಯಿಂ ಪೈಸರಿಸುವವರಲ್ಲ (ಕಾರರಾ. ೩-೨೬). ೬. ತೊಲಗು; ದೂರ ಸರಿ: "ಪೈಸರಿಸಿತೆನಲ್ಕೆ ಪೋದುದು" (ಪಕುವಿ. ೦೨೬-೦೬೪); ಬೀಸುವ ಗಾಳಿಗೊಯ್ಯನೆ ಪೈಸರಿಸುವ ರಾಸಿಮುಗಿಲ ತೆಱನಂತೆ (ಅಂಜಸ. ೦೩-೨೯೯); ಎರಡುಘಳಿಗೆಯ ಮೇಲಾ ಕಾಂತೆ ನಿದ್ರೆ ಪೈಸರಿಸಿ ಮೈಮುರಿದೆದ್ದಳು (ಪರಸ. ೪೦-೦೬೬). ೭. ಹಿಂದಿರುಗು; ವಾಪಸ್ಸಾಗು : ಪೈಸರಿಸುವುದು ಬಂದ ಬಳಿವಿಡಿದು (ಕುಪ್ಯಾಉ. ೩-೦೩); ಪುರದ ಹೊಱವಂಟುರಗಪತಿ ಪೈಸರಿಸಿದನು ಯವನೇಶನೈತರೆ (ಪಿಪ್ರಾಗ. ೪-೦೬-೨೬). ೮. ಮರೆಯಾಗು; ಕಾಣದಾಗು : ಅತುಳಮೋಹಮದೋ ಸರಿಸಲ್ ಥಳಥಳಿಪ್ಪ ವಿಮಲಾತ್ಮನವೋಲ್ ಪೈಸರಿಸಲಿಂದ್ರಜಾಲಕಮಾ ಸನ್ಮುನಿಯೊರ್ವನೊಪ್ಪಲು (ಕಾದ್ಯಪಿ. ೩-೯೬). ೯. ಪಕ್ಕಕ್ಕೆ ಸರಿ; ಓರೆಯಾಗು : ಬಿಗಿದು ತೊಟ್ಟ ಕಂಚುಕಮಿನಿತು ಪೈಸರಿಸೆ ನಿಬಿಡಕುಚಮಿಟ್ಟಿಸಲ್ ನಸುದೋರೆ . . . ಗಟ್ಟಿವಾಳ್ತಿಯರೆಸೆದರು (ಪಕುಪು. ೦-೩-೩೦). ೧೦. ಸಡಿಲವಾಗು; ಅಳ್ಳಕವಾಗು : ನಿಱಿಯ ಬಿಗಿ ಪೈಸರಿಸೆ (ಸೈಪಾಪಾ. ೦೦-೦೯). ೧೧. ಬಿಡು; ವರ್ಜಿಸು; ತ್ಯಜಿಸು: ಆ ಸುರುತಾಳನ ಖಾನನ ಕರೆದುಕೊಂಬಾಸುರಕೃತ್ಯ ಬೇಡೆಮಗೆ ಪೈಸರಿಸುವುದದನು (ಕುರಾಸಾಂ. ೦೬-೦೩೬); ಆದಿಶೈವಾಚರಣೆಯಿಂ ಮುಕ್ತಿವನಿತೆಯೊಳಗಾವರದೆ ಸುಖಮಿರ್ಪುದಂ ಪೈಸರಿಸಿಯರ್ಹತೋದಿತಾಚಾರದೊಳ್ವರ್ತಿಸುತವಿದ್ಯಾಂಗನಾ ಸಂಗದಿಂದಿರ್ಪುದು ಹಾದರಮದಲ್ಲವೇ (ಪಾಸೋಪು. ೯-೦೦೩). ೧೨. ಕೆಡು; ಹಾಳಾಗು : ಹೇಸದರಿಭೂಪಾಲರನು ನಿಶ್ಶೇಷವೆನಿಸುವುದಲ್ಲದಿರ್ದೊಡೆ ಪೈಸರಿಸುವುದು ರಾಜಕಾರ್ಯವಿದು (ಕುಪ್ಯಾಅ. ೬-೪೬). ೧೩. ಸಿಡಿ; ಚಿಮ್ಮು : ಪೊಂಗೇವಗೆಯ ಕಿಱಿಯ ಗಱಿಗಳಿಂ ಪೈಸರಿಸಿದ ಅಲರ್ವುಡಿಗಳಿಂ (ರೇವಣ. ೨೬-೨೭); ಪೈಸರಿಸಿ ಭೂತ್ಕರಿಪ ಕಿಡಿ ನಿಶ್ವಾಸದುರಿ ಭುಗಿಭುಗಿಲೆನುತ ಪೆಡೆಸಾಸಿರವ ಪಸರಿಸುತ ಪವನನ ಕರೆದನಾಹವಕೆ (ಆಪಂರಾ. ೦-೬-೨೩). ೧೪. ಹರಡು; ವಿಶಾಲವಾಗಿಸು; ಹರಹು : ಉಱುಗಿತು ಬ್ರಹ್ಮಾಂಡವೆನೆ ಖಗರಾಜ ಕಿಳ್ಕಱಿಯನೊಯ್ಯನೆ ಪೈಸರಿಸೆ (ಮೋಹತ.

೩೬-೬೨) : ಸದಮಲಸರ್ವಜ್ಞ ನಿಂದು ನಿಟ್ಟಿಸೆ ವಿಶಾರದ ಗಱಿಯನು ಪೈಸರಿಸೆ ಮದವಕ್ಕಳಿಳಿದರು (ಪೋಹಕ. ೪೨-೧೩). ೧೫. ಹರಡಿಕೊಳ್ಳು; ವಿಸ್ತಾರಗೊಳ್ಳು : ತೆರೆತೆರೆಗೊಂಡು ಜಾರುತ ಪೈಸರಿಸುತ ಸಿರ ಮುಖ ಕಂಠ ವಕ್ಷಕ್ಕೆ ಪರಿದು ಜಠರ ಕಟಿಯೂರುಗಳಿಗಿಳಿತಂದು ಚರಣದಿಂದಂಗಣ ತುಂಬಿ (ಗೊಮ್ಮಟ. ೭-೨೨೨). ೧೬. (?) : ಆ ಸಮೀಪದೆ ಸುಂಡಿಲ ಗಳೊಳು ಪೈಸರಿಸಿ ಸುಂಡಿಲುಗಳಿಟ್ಟು ವಿಲಾಸದಿಂ ವತ್ತರಿಸಿ ನೂಂಕುತೆ ಬ್ರಹ್ಮೇತಂಗೈದು ವಾಸದಿಂ ಪೂರ್ವಾನೆಗಳದಿಂ ದೋಸಪದೊಪ್ಪಿದುದು ಬರುತಿಹ ಭೂಸುರೋತ್ತಮರುಗಳಿಗಂ ಭಯಮೀವುತೇಳೆಯಲಿ (ಕಾವೇಮ. ೬೦-೦೯). ಪಯಿಸರಿಸು : ೧೭. ತಪ್ಪಿಸಿಕೊಳ್ಳು ; ನುಣುಚಿಕೊಳ್ಳು : ದೊರೆಗಳ ಹಿಂದೆ ದೊರೆ ಪಯಿ[ಪಾಠಾಂ. ಪೈ] ಸರಿಸಿತಲ್ಲಿಯದಲ್ಲಿ ಭೀಮನ ಹೊಯ್ಲ ಹೋರಟಿಗೆ (ಕುಪ್ಯಾಕ. ೦೩-೩೬). ಪಯ್ಸರಿಸು : ೧. ಕುಚ ಯುಗಂ ವರನಿತಂಬಂ ಕದಕ್ಕದಿಸೆ ಮೇಲುದ ನಿಱಿಗಳಿರದೆ ಪಯ್ಸರಿಸೆ (ಶಿಪು. ೩-೦೩). ೧೭. ಬಾಹುಗಳಿಂದೆ ಕಂಠಮಂ ತೊಡರೆ ಕುನುಂಗಿ ಪಯ್ಸರಿಪ ಬಿನ್ನಣಮೊಪ್ಪೆ ಕಡಂಗಿ ಕಾದಿದರ್ (ಕಬಕಂ. ೪-೭೩).

[ಪೈಸರ + — ಇಸು$_3$]

ಪೈಸಾ 'ಪೈಸ' ನೋ.

ಪೈಸಾರ 'ಪೈಸರ' ನೋ.

ಪೈಸೆ 'ಪೈಸ' ನೋ.

ಪೊಂ 'ಪೊನ್' ನೋ.

ಪೊಂಕ (ನಾ). ೧. ಗರ್ವ ; ಅಹಂಕಾರ : ಅಲರ್ದರೆಗಳಿಗೆಯೆ ಜಾದಿಯ ಮಲೆಪುಂ ಪಲ್ಲಿಗೆಯ ಪೊಂಕಮುಂ ಬಟಿಕವನಾರ್ ತಲೆಯೊಳ್ ತಾಳ್ದುವರ್ (ಅದಿಪು. ೦೦-೦೦೬) ; ಪಂಕಜನಂದನ ದಾನವಾರಿ ರುದ್ರರ್ ಪೊಂಕದ ಬೋಳೆ ಯರಾದಿಕಾರಣಾಂಗರ್ ಬಿಂಕದ ಮೂಪರಿವರ್ಗೆ ಬೀಜಮೀಶಂ (ಹಾಲಾಸ್ಯ. ೦-೦೭-೨೬) : ಪೊಂಕಮಿಱಿದು ಬಂದು ಎನ್ನ ಕೆಳೆಯ ನೆರೆದಪೆನ್ (ಬದ್ಯಪ್ರ. ೦೨-೨೩೪). ೨. ಉಬ್ಬು ; ಉತ್ಸಾಹ ; ಸಂಭ್ರಮ : ಪಂಕರುಹಸಖನುಮುದಯಿಸೆ ಪೊಂ[ಪಾಠಾಂ. ಕೊಂ, ಬಿಂ]ಕದೆ ಬಂದೊಡ್ಡಿ ನಿಂದುವೆರಡುಂ ಪಡೆಗಳ್ (ನೇಮಿಪು. ೦೨-೦೦೦) ; ಶಂಕೆಯಿಲ್ಲದೆ ಬದಿಯಲಿ ಬಂದು ನಿಂತು ಪೊಂಕದಲಿ ನಲಿದಾಡುವನಮ್ಮಾ (ಪುರಂದ. ೩-೦೩೦-೨) ; ಮುನೀಂದ್ರದೇವತಾಸಂಕುಳಮೊಲ್ದು ಭಕ್ತಿರಸಪೂರಣದಿಂದೆ ಪರಸುತ್ತೆ ಸೇಸೆಯುಂ ಪೊಂಕಮದಾಗೆ ಸೂಸಿದರ್ (ಹಾಲಾಸ್ಯ. ೦-೦೬-೬೦). ೩. ಸೊಗಸು ; ಶೋಭೆ : ಕಂಕಣಝುಣತ್ಕಾರಕಿಂಕಿಣೀಕಲರವದ ಪೊಂಕ ಮೇರ್ಪಡಲು ಮೀನಾಂಕನೋಜೆಯ ಬೆಡಗ ಸೋಂಕಿಸುತ ವಿಟತತಿಗೆ ಬಾಪನ್ನವನ್ನರೆವ ನಲವು ಚೆಲುವಾಗಿರ್ದುದು (ಪಂಕಾರಾ. ೦-೪-೨೮).

[<ಪೊಂಗು$_1$./ತಮಿ. ಪೊಙ್ಕ, ಪೊಕ್ಕ ; ಮಲ. ಪೊಕ್ಕ ; ತಕಳು. ತೆಲು. ಪೊಂಕ]

ಪೊಂಕಂಗಿಡಿಸು (ಕ್ರಿ). ಗರ್ವಭಂಗಮಾಡು : ಶಿತಾಸ್ತ್ರಂಗಳ್ ಪೊಂ[ಕ]ಂಗಿ [ಪಾಠಾಂ. ಪೊಂಖಂಗಿ, ಪೋಗಂಕಿ]ಡಿಸೆ ಸುಗಿದಂ ಭಾರ್ಗವನಿದೇಂ ಪ್ರತಿಜ್ಞಾ ಗಾಂಗೇಯುಂಗದಿರದಿರ್ದಿನ್ನಿಲ್ವನ್ನರೊಳರೇ (ಪಂಪಭಾ. ೧-೬೦) ; ಕಿಂಕುರ್ವಾಣ ಪ್ರವಣರರೆಬರ್ ಬರ್ಪಿನಂ ಕಾದು ತನ್ನಂ ಬಿಂಕಂ ಪೊಂಕಂಗಿಡಿಸೆ ನನೆವಿಲ್ಲಾತನಂ ತೊಟ್ಟ ದಿವ್ಯಾಲಂಕಾರಗಳ್ ನಯನಸುಖಮಂ ನೀಡೆ (ಪಂರಾಮಾ. ೭-೦೩೦). [ಪೊಂಕಂಗಿಡು (<ಪೊಂಕಂಗೆಡು) + — ಇಸು$_3$]

ಪೊಂಕಂಗಿಡು 'ಪೊಂಕಂಗೆಡು' ನೋ.

ಪೊಂಕಂಗೆಡು, ಪೊಂಕಂಗಿಡು (ಕ್ರಿ). ಗರ್ವಭಂಗವಾಗು ; ಸೊಕ್ಕಿಳಿ : ಪೊಂಕಮುಳ್ಳವರ್ ಪೊಂಕಂಗೆಟ್ಟೊಡೆ (ಧರ್ಮಾಮೃ. ೦೩-೩೩). ಪೊಂಕಂ ಗಿಡು : ಅಂಕದ ನರೇಂದ್ರತನಯರು ಪೊಂಕಂಗಿಡೆ ಜನದ ನೆರವಿ ಬಾಯಂ ಬಿಡೆ...ಕೊಂಡುದರ್ಜುನನ ಶರಂ (ಬಂಹರಿ. ೦೦-೦೩). [ಪೊಂಕ + ಕೆಡು$_1$]

ಪೊಂಕು$_1$ 'ಪೊಂಗು$_1$' ನೋ.

ಪೊಂಕು$_2$ 'ಪೊಂಗು$_2$' ನೋ.

ಪೊಂಕುಂದ, ಪೊಕ್ಕುಂದ, ಹೊಂಕುಂದ (ನಾ). ಒಂದು ಊರಿನ ಹೆಸರು; ೯ ಈಗಿನ ಕೋಲಾರಜಿಲ್ಲೆಯ ಬೌರಿಂಗ್‌ಪೇಟೆ ತಾಲ್ಲೂಕಿನ ಹನಕುಂಡ : ಶ್ರೀಮಾಧವಮುತ್ತರಸರ್ ... ಆವನ್ಯನಾಡು ಮೂವತ್ತುಂ ಪೊಂಕುನ್ದು ಪನ್ನೆರಡುಮಾಟುತ್ತು[ಮಿ]ರೆ (ಎಕ. X, ಬೌರಿಂಗ್. ೦೩ ೨ ; ಸು. ೩೯೦) ; ೯ ಇದು 'ಪೊಂಕುಂದ' ಎಂಬುದರ ಅಪಲಿಖಿತ ; ಸ್ವಸ್ತಿಶ್ರೀ ದಿಲೀಪಯ್ಯಂ ಪ್ರಿಥುವೀರಾಜ್ಯಂಗೆಯ್ಯತ್ತಿರೆ ಪೊಂಕುನ್ದದ ತುಱುಗೊಳೆ ... ಕಾದಿ ಸತ್ತು ಸಗ್ಗಿಯಾದನ್ (ಮೈಅರಿ. ೦೯೩೦, ೬-೨ ; ?). ಪೊಕ್ಕುಂದ : ಪೊಕ್ಕುನ್ದದ ತುಱುಗೊಳೆ ಕೊಂಗಮಂಗಲದ ಮೇವಯ್ಯ ಕಾದಿ ಸತ್ತು ಸಗ್ಗೆಯ್ಯದ (ಎಕ. X, ಬೌರಿಂಗ್. ೪೦-೨ ; ಸು. ೯೦೦). ಹೊಂಕುಂದ : ಸ್ವಸ್ತಿಶ್ರೀಮತು ಪಲ್ಲವಾನ್ವಯಪ್ರದೀಪಕಮ್ ಕುಮಾರಮ್ ಮಾಚಿ ದೇವರಸರುಮ್ . . . ರಾಜಾಧ್ಯಕ್ಷ ವಾಮನಕ್ರಮಿತರುಮ್ ಹೊಳಲೆ ಕೆಱೆನಾಡುಮುಮ್ ಹೊಂಕುನ್ದಮೂವತ್ತುಮುಮ್ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನೆಯಿನಾಳುತ್ತಮಿರ್ದ್ದು (ಎಕ. XI, ಚಿತ್ರದು. ೨೩-೨೦ ; 1205).

[ಪೊಂ (< ಪೊನ್) + ಕುಂದ$_3$]

ಪೊಂಗ$_1$ (ನಾ). ಧೈರ್ಯಶಾಲಿ ; ದಿಟ್ಟ : 'ಚೆನ್ನಪೊಂಗ' ಪರಾ.

[ಪೊಂಗು$_2$ + — ಅ$_7$]

ಪೊಂಗ$_2$ 'ಪೊಂಗಯಿ' ನೋ.

ಪೊಂಗಂಟೆ, ಹೊಂಗಂಟೆ (ನಾ). ಚಿನ್ನದ ಗಂಟೆ : ಏಳಸದ್ರುದ್ರಾಕ್ಷಮಾಲಾ ಭರಣದೆ ಕೊರಲೊಳ್ತಳ್ತ ಪೊಂ[ಪಾಠಾಂ. ಹೊಂ]ಗಂಟೆಯಿಂ . . . ಎಸೆವ ಪೇರೆಳ್ತುಗಳ್ (ವೃಷಿ. ೩೬-೬೯) ; ಬಾಳದೊಳ್ ಬಂಧಿಸಿದ ಜಲ್ಲಿ ಪೊಂಗಟ್ಟೆ [ಂಟೆ]ಗಳ ಮೇಳದಿಂ ಸೊಗಸಾಂತ ಬೆಂಡುವೂವ್ಗಳನು ಮಿಗೆ ಢಾಳಿಸುವ ಪುಲಿವಾಲಗಳನಾಂತ ತುಳಿಲಾಳ್ಗಳು (ಘೋರಾಸು. ೭-೦೦). ಹೊಂಗಂಟೆ : ಹಯನಿಕರ . . . ಹೊತ್ತುವು ಝಡಿವ ಹೊಂಗಂಟೆಯ ವಿಡಾಯವರೂಥ ವನು (ಕುಪ್ಯಾಭೀ. ೪-೯೨) ; ಹೊಂಗಂಟೆ ಹೊಮ್ಮೇಳದ ಕಠಾರಿಗಳು . . . ಒದವಿತೊಗ್ಗಿನಲಿ (ಪೋಹಕ. ೦೯-೦೦). [ಪೊಂ (< ಪೊನ್) + ಗಂಟೆ$_2$]

ಪೊಂಗಂಬ (ನಾ). ಚಿನ್ನದಿಂದ ಮಾಡಿದ ಕಂಬ ; ಬಂಗಾರದ ಕಂಬ : ವರತನು ಪೊಂಗಂಬವಾಗೆ ಪೊಲ್ದುಟ್ಟಂಬರದ ಸೆಱಗು ಪಟವಾಗೆ ಅರಲ್ಗಣ್ಣು ಮೀನಾಗೆ ಬಂದರು ಪೆಣ್ಗಳು ಸ್ಮರನ ಪತಾಕೆಯೆಂಬಂತೆ (ಪಂಪ್ರಸಾಂ. ೦೨-೦೩೪). [ಪೊಂ (< ಪೊನ್) + ಕಂಬ$_1$ (< ಕಂಭ)]

ಪೊಂಗಜೆ (ನಾ). ಬಂಗಾರದ ಗದೆ : ಪಾಱುಂಬಳೆ ಸಂಕು ಪೊಂಗಜೆ ಬಿಗುರ್ಪಿನ ಬೀಯಮರಲ್ದ ಪೇರುರಂ (ಪಕಪಿ. ೩-೬೯).

[ಪೊಂ (< ಪೊನ್) + ಗಜೆ]

ಪೊಂಗಟ್ಟಿ, ಪೊಂಘಟ್ಟಿ (ನಾ). ಬಂಗಾರದ ಗಟ್ಟಿ,-ತುಂಡು : ಸುರ ಶೈಲಂ ಪೂಟ್ದ ಪೊಂಗಟ್ಟಿ [ಪಾಠಾಂ. ಬುಟ್ಟಿ]ವೊಲಿರೆ . . . ಜಗದ್ವ್ಯಾಪಿಯಾ ದತ್ತುಯುದ್ದೋದ್ಧುರತತ್ಸೇನಾದ್ವಯಾಭ್ಯುಚ್ಚಲನದಳದಿಳೋತ್ಖಾತಪಾಂಸು ಪ್ರತಾನಂ (ಪಂದ್ರಪು. ೦೦-೬೬ ; ಕಾವ್ಯಸಾ. ೪೬೦ ನೋ). ಪೊಂಘಟ್ಟಿ : ಕೆಸಱೊಳಗಬ್ಜಂ ಕಲ್ಲೊಳು ಮಿಸುಗುವ ಪೊಂಘಟ್ಟಿ ಪೋಲದಂತಾ ಯೆಡೆಯಂ ಪಸುಧಾಸೇವ್ಯಂ ಕ್ಷೀರಂ ಪಸುವಿನ ತನುವಿನೊಳೆ ಪುಟ್ಟಿ ಪೋಲದು ತನುವಂ (ಪಸಾರ. ೨೯೬). [ಪೊಂ (< ಪೊನ್) + ಗಟ್ಟಿ]

ಪೊಂಗಟ್ಟಿಗೆ, ಹೊಂಗಟ್ಟಿಗೆ (ನಾ). ಚಿನ್ನದ ಕೋಲು : ಹಡಪ ಕಾಳಾಂಜಿ ಪೊಂಗಟ್ಟಿಗೆ ಕಂಚು ಕನ್ನಡಿ ಗಿಂಡಿ ಬಿಜ್ಜಣಿಗೆಗಳ ಪಿಡಿದೊಳಿಗಗೈವ ಬಿಂಕ ಗಾತಿಯರಾ ಪೊಡವಿಯಾಣ್ಮನ ಪೊದ್ದಿಹರು (ಹರಿಶಿ. ೧-೦೬). ಹೊಂಗಟ್ಟಿಗೆ : ಹರುಷದಲಿ ನೃಪ ಹೊಂಗಟ್ಟಿಗೆಯ ಚರರಿಂದಲಾ ಮನಮುಟ್ಟಿದಾಪ್ತರ ಕರೆಸಿ (ತೊರರಾ. ೨-೧-೦೦). [ಪೊಂ (< ಪೊನ್) + ಕಟ್ಟಿಗೆ$_1$]

ಪೊಂಗಡಗ, ಹೊಂಗಡಗ (ನಾ). ಬಂಗಾರದ ಕಡಗ: ಬೇಸರಿಂದೆಡಗಯ್ಯೊಳ್ ಪಿಡಿದಾಂತು ಪೊಂಗಡಗಮೊಂದಂ...ರಂಜಿಪನಿವಂ ತೇಜೋನ್ವಿತಂ ಭೂಮಿಪಂ (ಶಾಕುಂತ. ೮೨-೦೩೭). **ಹೊಂಗಡಗ**: ಹೊಂಗಡಗದ ಲಿಂಗವಂತೆಗೆ ತೋಳಬಂದಿಯ ಬಾಲಕಿಗೆ . . . ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ . . . ಮೋಡಶಸಹಸ್ರವಿಳಾಸಿವಿಯರ್ವೆರಸು (ಗಿರಿಕ. ೩-೯೦ ಪ); ಹೊಂಗಡಗದ ಲಿಂಗವಂತಂ ಉಡೆವಣೆಯ ದಿಗಂಬರಂ ಗೆಜ್ಜೆಗಳ ಸಜ್ಜನನೆನಿಪ ಸಿದ್ಧರಸಂ . . . ಭೋಂಕನೆದ್ದು (ಬಸರ. ೦೨-೦೦೫).

[ಪೊಂ (<ಪೊನ್) + ಕಡಗ$_1$]

ಪೊಂಗಡಲು, ಹೊಂಗಡಲು (ನಾ). ಚಿನ್ನದ ಬಣ್ಣದ ಸಮುದ್ರ; ಹೊಂಬಣ್ಣದ ಕಡಲು: ಪೊಂಗಡಲ ನುಣ್ದೆರೆಗಳ ಬಿಣ್ಪಿನ ಮೆಲ್ದೆರಳ್ಕೆಯ ಗಾಂಭೀರ್ಯದಿಂದ ಚಳಚಳಿಸುತ್ತ (ಮಂತ್ರಶ. ೮೮-೦೭). **ಹೊಂಗಡಲು**: ಪಡುವಣ ಹೊಂಗಡಲಿನಲ್ಲಿ ಮೀಯಲಿಳಿದಿರುವ ಮುಳುಗುನೇಸರು (ಬದುಶ್ಯ. ೦೨೯); ಬಾ ಗೆಳತಿ, ನನ್ನೊಡನೆ ಗಗನದಂಚಿಗೆ ರವಿ ಮೂಡುವ ಹೊಂಗಡಲಿನ ಮಿಂಚು ಹೊಂಚಿಗೆ! (ಅಂಹೂ. ೯೩).

[ಪೊಂ (<ಪೊನ್) + ಕಡಲು (<ಕಡಲ್$_2$)]

ಪೊಂಗಣೆ (ನಾ). ಚಿನ್ನದ ಗಣೆ: ಬೆಳಗೆಯ್ಯಿಂ ಪೊಂಗಣೆಯಿಂ ಫಲತರುವಿಂ ದೊಳ್ಪಯಂಗಳಿಂ ಕುಸುಮರಜಾನಿಳನಿಂ ಪಗರೆಯ ಪರಿಯಿಂ ತಳರದ ಸಿರಿ ಬಲ್ಲಕುಂದೆನಾಳ್ಕೆಸೆದಿರ್ಕ್ಕುಂ (ಸೌಇಇ. IX-i, ೨೪೯-೦೫; 1147).

[ಪೊಂ (<ಪೊನ್) + ಗಣ್$_2$ (<ಕಣ್$_3$)]

ಪೊಂಗಣೆ, ಹೊಂಗಣೆ (ನಾ). ಚಿನ್ನದ ಬಾಣ: ಮಕರಾಂಕಮಂಡಿತ ಪೊಂಗಣೆಗಳ್ಗೆ ಮೌಕ್ತಿಕಮೊಂಟೆಯ ಸಾರ್ಚಿದಂತೆ ನಖಚಕ್ರದಶಕದಿಂ ಬೆರಲ್ಗಳೊಪ್ಪಿರ್ದುವು (ಮೋಹಶ. ೨೩-೧೪). **ಹೊಂಗಣೆ**: ಹೊಳಕಿಸಿದ ಹೊಂಗಣೆಯ ಶರಧಿಯ ತುಳುಕಿಸಿದ (ಅಂಬಕಾ. ೨೦-೩).

[ಪೊಂ (<ಪೊನ್) + ಕಣ್$_1$]

ಪೊಂಗದ (ನಾ). ಚಿನ್ನದ ಕದ: ಸೋಮೇಶ ನೀಂ ತೆಗಿಸಿ ಬಾಗಿಲ ಪೊಂಗದಂಗಳನೆನುತ್ತಂದೋಹಿಲಂ ಕೂಗಿದಂ (ಉಪ್ಪಟಿ. ೦೦-೬೦); ನವ ಪುಷ್ಕರಾಗಾಳಿಯಿಂ ಸಮೆದ ಬಾಗಿಲ್ ಪೊಂಗದಂಗಳಿಂ ಪೇಳಲಚ್ಚರಿಯಾದು ದರಮನೆ (ಶಿಪಿಪು. ೫-೪೮). [ಪೊಂ (<ಪೊನ್) + ಕದ (<ಕದವು$_1$)]

ಪೊಂಗದಳಿ, ಹೊಂಗದಳಿ (ನಾ). ಒಂದು ಬಗೆಯ ಬಾಳೆ; ಹೊಂಬಾಳೆ: ತಾಮರಸಜನು ನಿರ್ಮಿಸಿದ ಪೊಂಗದಳಿಯೊ ವಾಮಲೋಚನೆಯ ತೊಡೆಗಳೊ (ಪರ್ಧಶ. ೨-೨೨); ಪೊಂಗದಳಿಸ್ತಂಭಂಗಳಂ ನೆರೆ ಸೋಲಿಪಾ ಪೊಳೆವ ನುಣ್ದೊಡೆಯುಗಳಂ (ಪಪಪೋ. ೬-೦೫). **ಹೊಂಗದಳಿ**: "ಗೌರಿಕಃ — ನೀರಿಪ್ಪೆ, ಹೊಂಗದಳಿ" (ಓಹಧಿ. ೫೨); ಹೊಂಗದಳಿಯ ಕೋಮಲಪತ್ರ ವೀಜನದಂಗನೆ ಮೆಱೆವಳೊತ್ತಿನಲಿ (ಮೋಹಶ. ೩-೩೯).

[ಪೊಂ (<ಪೊನ್) + ಕದಳಿ$_2$ (=ಕದಲಿ)]

ಪೊಂಗದಿರ್$_1$ (ನಾ). ಚಿನ್ನದ ಬಣ್ಣದ ತೆನೆ: ಪೊಂಗದಿರಿನೆನೆ ಪೊಂಗದಿರಿಂ ಕಣ್ಗೊಳಿಪ ಕೆಯ್ವೊಲನತ್ತಣಿಂ ಪಕ್ಕಿ ಸೋವ ಕಕ್ಕಸಜವ್ವನೆಯರ ಮೆಲ್ಲುಲಿ ಕೇಳೆವರ್ಪುದು (ರಾಮಾಶ್ವ. ೯-೭). [ಪೊಂ (<ಪೊನ್) + ಕದಿರ್$_1$]

ಪೊಂಗದಿರ್$_2$, ಪೊಂಗದಿರು, ಹೊಂಗದಿರು (ನಾ). ಚಿನ್ನದ ಬಣ್ಣದ ಕಿರಣ; ಹೊಂಬಣ್ಣದ ಕಿರಣ: ಪೊಂಗದಿರ್ ಚವರಿಯಂ ಬೀಸಿ ರವಿ ಮೂಡಣದ್ರಿಯನೇರಿ ಬರ್ಪನಿತರೊಳೆ(ಶ್ರೀರಾಮಾ. ೫೮-೦೨೩). **ಪೊಂಗದಿರು**: ಗಗನಾಂಗಣವನ್ನು ತನ್ನ ಪೊಂಗದಿರುಗಳಿಂದಲೇ ದೀಪ್ತಿಗೊಳಿಸುವ ಸೂರ್ಯ (ಸ್ಕೋಕಿರ್ಣ. ೦೯೨). **ಹೊಂಗದಿರು**: ಮೇರುಗಿರಿಯೊಂದುದಿನ ಗರ್ವದಿಂ ತಲೆಯೆತ್ತಿ ಕೆಂಗದಿರ ಹೊಂಗದಿರ ಜಿಹ್ವೆಯಲಿ ನುಡಿಯಿತ್ತು (ಕನಿಸೋ. ೨೦-೨); ಹೊಂಗದಿರ ಜೀರ್ಕೊಳವಿಯಿಂ ಸಂಜೆ ಜಿರ್ರೆಂದು ರಂಗೆರಚಿ (ಪಶ್ರಾಂಗ. ೨೦-೫೩೬). [ಪೊಂ (<ಪೊನ್) + ಕದಿರ್$_2$]

ಪೊಂಗದಿರು 'ಪೊಂಗದಿರ್$_2$' ನೋ.

ಪೊಂಗದುಗು (ನಾ). ಚಿನ್ನದ ಗಜ್ಜುಗ: ಜೂಜಿನಲಿ ಭರವಸದೊಳಾಸಕ್ತಿಯವಡೆದು ಪೊಂಗದುಗುಗಳ ಕರತಳದೊಳಾಂತು (ಸೌಂದಪು. ೦೬-೩).

[ಪೊಂ (<ಪೊನ್) + ಗದುಗು$_1$ (<ಗರ್ದುಗು)]

ಪೊಂಗದ್ಯಾಣ (ನಾ). ಚಿನ್ನದ ಗದ್ಯಾಣ: ಅರಸರ ದೆಸೆಗೆ ಸಿದ್ಧಾಯಂ ಪೊಂಗದ್ಯಾಣಮೆರಡು (ಎಇ. XIV, ೩೬೯-೦೬; 945); ಎಲಸೆಯ ಮಹಾಜನಕ್ಕೆ ಕೊಟ್ಟ ಪೊಂಗದ್ಯಾಣವಯ್ವತ್ತಯ್ದು (ಮೈಅಂ. ೦೯೨೯, ೬೯-೧೩; 964); ಅಂಕದೊಳಂ ಪೊಂಗದ್ಯಾಣಂ ೧೨೦ (ಎಇ. XIII, ೪೯-೬೩; 1112).

[ಪೊಂ(<ಪೊನ್) + ಗದ್ಯಾಣ]

ಪೊಂಗನ್ನಡಿ (ನಾ). ಚಿನ್ನದಿಂದ ಮಾಡಿದ ಕನ್ನಡಿ: ಕಣ್ಮಲರ್ಗಳ್ ಕಡು ನಿಡಿದಾದುವು ಪೊಱಪೊಣ್ಮೆತು ಪೊಂಗನ್ನಡಿಮೊಗದೊಳ್ ಪೊಗರುಣ್ಮೆದು ದಂಗಲತಿಕೆಯೊಳು ಕಂಪು (ಇಯಕಾ. ೩-೨೩).

[ಪೊಂ (<ಪೊನ್) + ಕನ್ನಡಿ$_1$]

ಪೊಂಗಯ್ (ನಾ). ಹೊಂಬಣ್ಣದ ಕೈ: ತಲೆಯಲ್ಲಿ ಪೊನ್ನ ಮುಡಿ, ಪದಿದರಿಲ ಪೆಂಪು, ಬೆಳ್ದಾವರೆಯ ಪೊಂಗಯ್! (ಹೊಂಗಳು. ೦೬-೦).

[ಪೊಂ (<ಪೊನ್) + ಕಯ್$_2$ (<ಕೆಯ್$_2$)]

ಪೊಂಗಯಿ, ಪೊಂಗ$_2$ (ನಾ). ದೋಣಿ; ನಾವೆ: ದೋಣಿಯಲ್ಲಿ ಅಥವಾ ಪೊಂಗಯಿಯಲ್ಲಿ ಮಿಕ್ಕ ಹುಡುಗರ ಸಂಗಡವಿದ್ದಾಗ ಸಾಮಾನ್ಯವಾಗಿ ನಾನೇ ಅದನ್ನು ನಡೆಸುವ ಯಜಮಾನನಾಗುತ್ತಿದ್ದೆ (ಬೆಂಜವ್. ೦೬). **ಪೊಂಗ$_2$**: ಪಂಪನೆಂದರೆ ಎರಡು ಭಾರತಗಳ ದೋಣಿಗಳಲ್ಲಿ ಕಾಲಿಟ್ಟು ತಾನೇ ಮುಳುಗಿಹೋಗುವಂತಾದನೆಂದು ಭಾವಿಸುವುದಾಗಲಿ, ಆ ಕಾರಣದಿಂದಲೆ ಸುಭದ್ರೆಯನ್ನು ನಾಯಿಕೆಯನ್ನಾಗಿ ಮಾಡಿದ ಪೊಂಗ(ಕಿರು ದೋಣಿ)ವನ್ನೇರಬೇಕಾಗಿ ಬಂತೆಂದು ಬಗೆವುದಾಗಲಿ, ಈ ಎರಡರಿಂದಲೂ ಪರಿಣತಿಯೊಂದೇ (ಪಾಪೋಪ. ೦೯೩). [←ತುಳು. ಪೊಂಗಾಯಿ]

ಪೊಂಗರಗ, ಹೊಂಗರಗ (ನಾ). ಚಿನ್ನದ ಕರಗ; ಬಂಗಾರದ ಜಲಪಾತ್ರೆ: ಪೊಂಗರಗೆದೊಳ್ತೀವಿದ ಘುಸೃಣರಸಂ (ಪಾಗಳು. ೩೦-೩೬ ಪ); ಪನ್ನೀರ ಗಿಂಡಿ ಕುಡಿನೀರ ಪೊಂಗರಗ . . . ಬಹುವಿಧಾಭರಣವಿತತಿಗಳ ನಾಂತ ಕನ್ನೆಯರು . . . ನೆರೆದಿರ್ದರು (ರಾಶಿಪ. ೬-೮೪). **ಹೊಂಗರಗ**: ನೀಡಿಹರು ಪನ್ನೀರ ಹೊಂಗರಗದಲಿ ನಲಿದಾ ನಾರಿಯರು (ಪ್ರಭುರೀ. ೪-೩೯). [ಪೊಂ (<ಪೊನ್) + ಕರಗ]

ಪೊಂಗರಡಿಗೆ, ಹೊಂಗರಡಿಗೆ (ನಾ). ೧. ಚಿನ್ನದ ಸಂಪುಟ,-ಭರಣಿ: ತಂದೆ ಪುಷ್ಪವನೊಂದನಿಂದುಮೌಳಿಗೆಂದು ಮುಂದಿಡೆ ಪೊಂಗರಡಿಗೆಯ (ಕೋಡಶ. ೦-೭೪). **ಹೊಂಗರಡಿಗೆ**: ೧. ಹೊಱಡಾಗದಂತೆ ನಾಲ್ಮೊಗ ಜಂತದಲಿ ಹೊಂಗರಡಿಗೆಗಡೆದು ಕರ್ಮಣಿಯ ಬಿರುಡೆಯ ಬಿಗಿದಿಟ್ಟನೆಂಬಂತೆ ಬಲ್ಮೊಲೆಯೆರಡಱ ಮೊಗಪು ತೋಱುದುವು (ಮೋಹಶ. ೨೩-೨೩). ೨. ವೀರಶೈವರು ಧರಿಸುವ ಚಿನ್ನದ ಕರಡಿಗೆ: ಎದೆಯ ಮೇಲೆ ಕಂಠೀಹಾರ, ಹೊಂಗರಡಿಗೆ (ತುಂಗಭ. ೨).

[ಪೊಂ (<ಪೊನ್) + ಕರಡಿಗೆ (<ಕರಂಡಿಗೆ)]

ಪೊಂಗರಿ 'ಪೊಂಗಱಿ' ನೋ.

ಪೊಂಗರು (ನಾ). ಚಿನ್ನದ ಎರಕ: ಹೃದಯದೊಳೆಸೆವ ಶಾಂತತೆ ಬಹಿರಂಗದೊಳೊದವಿದ ರೌದ್ರತೆಯಿಂದ ಸದಮಲಗಿರದೊಪ್ಪಿತು ಪಾದರಸ ನೆಱೆಪುದಿದ ಪೊಂಗರುವಿನಂದದೊಳು (ಪೇಮಿಸಂ. ೨೯-೬೭); ಕರಮೆಸೆದಳು ಕರುಮಾಡದ ಮೇಲೆ ಪೊಂಗರುವಿನ ಪುತ್ತಳಿಯಂತೆ (ಕುರಾಸಾಂ. ೨೦-೭೫); ಅರಮನೆಯತುಳಶಾಲಾಗ್ರದೆ ಮೆಱೆವ ಪೊಂಗರುವಿನ ತೆನೆಗಳೊಪ್ಪಿದುವು (ಕಂಪಪಿ. ೬-೨೨). [ಪೊಂ (<ಪೊನ್) + ಕರು$_2$]

ಪೊಂಗರುಮಾಡ (ನಾ). ಚಿನ್ನದ ಉಪ್ಪರಿಗೆ: ಆ ಪುರವರದ ಪೊಂಗರು

ಮಾಡಗಳೊಳು ಕರಮೆಸೆದಿರ್ಪವು ಕಣ್ಗೆ ದುಕೂಲದ ವರವೈಜಯಂತಿ ಕೋಟೆಗಳು (ಕುಠಾಸಾಂ. ೩-೬೦). [ಪೊಂ (<ಪೊನ್) + ಕರುಮಾಡ]

ಪೊಂಗರೆ, ಹೊಂಗರೆ (ನಾ). ಜರತಾರಿ ಅಂಚು ; ಜರಿಯಂಚು : ಒಟ್ಟಿರ್ಪ ಕೆಂಬೊಗರಿ ನೆರೆಯುಡೆಯ ತಲೆಸುತ್ತಿ ನಿಟ್ಟಳದ ಪೊಂಗರೆಯೆ ಕಣ್ಮೋರೆಗಳಿಗೆ ಕಟ್ಟಿರ್ಪ ಕವಲಾಳಿಗಂ ನೋಡೆ ಕಣ್ಕೆಸರ್ ಮುಟ್ಟುವುದೆ (ಕಾಲೂರ. ೦೪೭-೩೨೨). **ಹೊಂಗರೆ :** ಈ ವುಂಗುರ ತೊಂಡಿಲು ಬಂದಿ ಹೊಂಗರೆಯಂಬರವೀ ನಾಲ್ಕು ಹೆಚ್ಚು ಪುಣ್ಯಾಂಗನೆಗಿವು ಸಲಲಿ (ಕರಸ. ೩೮-೬೬). [ಪೊಂ (<ಪೊನ್) + ಕರ್ಕೆ]

ಪೊಂಗಲ್₁, ಹೊಂಗಲ್ಲು (ನಾ). ಚಿನ್ನದ ಕಲ್ಲು : ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ ಮೃತ್ತಿಕೆಯ ಸಾರದಲ್ಲಿ ಹೊಮ್ಮಿದ ಪೊಂಗಲ [ಲ್ಲ] ಪರಿಯಂತೆ (ಪೋಳಿಪಾ. ೧೫-೩೭೭); ಸ್ವರ್ಣೋಪಲೇ_ಪೊಂಗಲ್ಲೊಳ್ (ಸಂಪಸಂ. ೦೬೬-೨ ಟೀಕೆ). **ಹೊಂಗಲ್ಲು :** ಮಂದರತಳದ ಹೊಂಗಲ್ಲಂತೆ ಬಹಿರಂಗಸಾಮಗ್ರಿಯನೆಂದುಂ ಪಡೆಯದೆ ನಿಗೋದಾವಾಸದೊಳು ನಮೆಯುತ್ತಿರ್ಪರನಭವ್ಯಸಮಾನದ ಭವ್ಯರೆಂದಱಿವುದು (ಪಸಾರ. ೪೩೨). [ಪೊಂ (< ಪೊನ್) + ಕಲ್₃]

ಪೊಂಗಲ್₂, ಪೊಂಗಲು₁ (ನಾ). (ವಿಶೇಷವಾಗಿ ಸಂಕ್ರಾಂತಿಯಂದು) ಅಕ್ಕಿ, ಹೆಸರುಬೇಳೆ, ಬೆಲ್ಲ, ತುಪ್ಪ ಮುಂತಾದುವುಗಳಿಂದ ತಯಾರಿಸುವ ಖಾದ್ಯ ; ಹುಗ್ಗಿ : ಈ ದಿನ ನೈವೇದ್ಯಕ್ಕೆ ಪೊಂಗಲ್ ಮಾಡಿದ್ದರು (ರೂಢಿ). **ಪೊಂಗಲು₁ :** ಜನಕ್ಕೆಲ್ಲ ಪೊಂಗಲು ಹಂಚಿದರು (ಕಾಮಿಕಾಂ. ೧೬) ; ಪೊಂಗಲು ಮತ್ತು ಪಕ್ವಾನ್ನಗಳನ್ನು ಮಕ್ಕಳಿಗೆ ಕೊಟ್ಟು ತಿನ್ನಿಸುತ್ತ ಉಪಚರಿಸುತ್ತಿದ್ದರು (ಇಐದು. ೩೬).

ಪೊಂಗಲುಹಬ್ಬ = ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ದಿನದಂದು ಸೂರ್ಯನಿಗೆ ಪೊಂಗಲಿನ ನೈವೇದ್ಯವಿಟ್ಟು ಪೂಜಿಸುವ ಹಬ್ಬ ; ಮಕರಸಂಕ್ರಾಂತಿ : ನಮ್ಮಲ್ಲಿ ಪೊಂಗಲುಹಬ್ಬದಂದು ಎಳ್ಳು ಬೀರುವ ವಾಡಿಕೆಯಿದೆ (ರೂಢಿ).

[ದೇ.॥ ತಮಿ. ಪೊಙ್ಕಲ್ ; ತೆಲು. ಪೊಂಗಲಿ, ಪೊಂಗಳಿ]

ಪೊಂಗಲು₁ 'ಪೊಂಗಲ್₂' ನೋ.

ಪೊಂಗಲು₂ (ನಾ). ಒಂದು ಬಗೆಯ ಆಭರಣ (?) : ಲುಳಿದಾರ ಕಂಠಿಕೆ ಖಡೆಯ ಪೊಂಗಲು ಹೊನ್ನ ಬಳೆಯುತ್ತರಿಗೆ ಚಿನ್ನಸರವ ಕಳುಪು (ಕುಠಾಸಾಂ. ೪೨-೨೪). [?]

ಪೊಂಗವಚ (ನಾ). ಚಿನ್ನದ ಕವಚ ; ಹೊನ್ನಿನ ಮೈಜೋಡು : ಸಂಗರಲಾಭೋತ್ಸವಪುಷ್ಪಾಂಗತೆಯಿಂ ಕಿಱಿಯವಾದೊಡಟ್ಟಿಜನಕ್ಕಾ ಪೊಂಗವಚಂಗಳನಿತ್ತರ್ . . . ಮಹಾವೀರಭಟರ್ (ಸಂಪ್ರಪು. ೦೦-೬೪). [ಪೊಂ (<ಪೊನ್) + ಕವಚ]

ಪೊಂಗವಡಿಕೆ (ನಾ). ತಲೆಯಲ್ಲಿ ಧರಿಸುವ ಕವಡೆಯಾಕಾರದ ಒಂದು ಬಗೆಯ ಚಿನ್ನದ ಆಭರಣ : ಎಡೆಗಿಱಿದಿರೆ ಪೊಂಗವಡಿಕೆ ಬಿಡೆ ಘಲ್ಕೆನೆ ಗೆಜ್ಜೆ (ಜಗವಿ. ೩-೪೪) ; ಮಾಂಗಾಯ್ ಕದಪಂ ಚುಂಬಿಸೆ ಪೊಂಗವಡಿಕೆ ನೊಸಲೊಳಲೆಯೆ (ಸಂಪ್ರಪು. ೩-೪೬) ; ಪೊಳೆವ ಪೊಂಗವಡಿಕೆ[ಪಾಠಾಂ. ಗೆ] . . . ಉಲಿವ ಪೊಂಗೆಜ್ಜೆಗಳಿಂದ ಸಿಂಗರಮಾಗಿ ನೆಲದೆಱೆಯನ ಸುತನಿಹನು (ಸಂಪ್ರಸಾಂ. ೪-೭೬). [ಪೊಂ (<ಪೊನ್) + ಕವಡಿಕೆ₂]

ಪೊಂಗವಳಿಗೆ (ನಾ). ಚಿನ್ನದ ಕರಂಡಕ ; ಹೊನ್ನಿನ ತಾಂಬೂಲದ ಪೆಟ್ಟಿಗೆ : ತಂಬುಲಂದೀವಿದ ಪೊಂಗವಳಿಗೆಯಂ ಪಿಡಿದಂಬಿಕೆಗವಟಯ್ಸಿದಳೊರ್ವಳಿಂದ್ರವಧು ತಂಬುಲಮಂ (ಶಾಂತಿಪು. ೯-೦೬೦) ; ಮೆಲ್ಲನೆಯ್ತಂದೊರ್ವಳ್ ಪೊಂಗವಳಿಗೆಯಂ ಪಿಡಿದು ಮನಂಗೊಳೆ ನೃಪಸತಿಗೆ ನೀಡಿದಳ್ ತಂಬುಲಮಂ (ಪರ್ಧಪಾ. ೮೮-೪೭).

[ಪೊಂ (< ಪೊನ್) + ಕವಳಿಗೆ₂]

ಪೊಂಗಸೆದೇವ (ನಾ). ಒಬ್ಬಾತನ ಹೆಸರು : ಪೊಂಗಸೆದೇವನ ಮಗ ಪೊನ್ನಯ್ಯ (ಎಳ. XII, ಪಾಪುಗೆ. ೬೦-೧ ; ಸು. 925). [ಪೊಂಗಸೆ ? + ದೇವ]

ಪೊಂಗಹಳೆ, ಪೊಂಗಾಳೆ (ನಾ). ಚಿನ್ನದ ಕಹಳೆ : ಕೊಂಬುಗಹಳೆ ಪೊಂಗಹ[ಪಾಠಾಂ. ಪೊಂಗಾ]ಳೆಯುತ್ಕಟತಾಳಮದ್ದಳೆಗಳೆಂಬ ಬಹುವಾದ್ಯ ದುಬ್ಬಟೆಯಖಿಳದೆಸೆಯೊಳಾವರಿಸಲು (ಸಂಪು. ೩-೭) ; ಪಿಡಿನಡುವು ರತುನ ಕೈಪಿಡಿ ಗಂಡಮಂಡಲಗಳಡಿದಾವರೆಯು ಸ್ಮರನ ಪೊಂಗಹಳೆ ಜಂಘೆಗಳೊ ಪೊಡವಿ ಜಘನಂ ತಳೋದರ ಶ್ರೀಫಲೋಪಮಿತ ಕುಚ ಕಂಬುಕಂಠಗಳೊ (ಪಂಕಾರಾ. ೩-೬-೩೪). **ಪೊಂಗಾಳೆ :** ಮೇಲಿನ 'ಚೆಬಪು' ಪ್ರಯೋಗದ ಪಾಠಾಂತರವನ್ನು ನೋಡಿ. [ಪೊಂ (<ಪೊನ್) + ಕಹಳೆ]

ಪೊಂಗಳಂತಿಗೆ (ನಾ). ಚಿನ್ನದ ಜಲಪಾತ್ರೆ : ತಣ್ಪಿನ ನೀರ್ ಸೆಱೆಯಾದ ಪೊಂಗಳಂತಿಗೆಯಿರೆ ಸಜ್ಜೆಯೋವರಿಯಿದೋವರಿ ಮಾಡಿತು ಕಂತುಗೆಮ್ಮುಮಂ (ಸಂಪ್ರಪು. ೬-೬೦). [ಪೊಂ (<ಪೊನ್) + ಗಳಂತಿಗೆ₁]

ಪೊಂಗಳಶ, ಹೊಂಗಲಶ, ಹೊಂಗಳಶ (ನಾ). ೧. ಚಿನ್ನದ ಕಲಶ : ಸ್ವರ್ಣಕುಂಭ : ಸುಲಲಿತಲಾವಣ್ಯಸುಧೆಯ ಪೊಂಗಳಶಗಳಲಿ ತುಂಬಿ (ಕಂಪವಿ. ೯-೨೬). ೨. ಗುಡಿ ಗೋಪುರಗಳ ಮೇಲೆ ಇರಿಸುವ ಚಿನ್ನದ ಕಲಶ : ಅಭ್ಯುದಯಕರಮೆನಿಪ ಕರುಮಾಡದ ಶಿಖರದೊಳೊಪ್ಪಿ ತೋಱುಗುಂ ಪೊಂಗಳಶಂ[ಪಾಠಾಂ. ಸಂ](ಸುಕುಪಾ. ೦೦-೫೦). **ಹೊಂಗಲಶ:** ೧. ಹೊಂಗಲಶ[ಪಾಠಾಂ. ಸ]ಮೊಲೆ ಹೊಗರೊಗುವ ನೆರೆದಿಂಗಳೊಲು ಮೊಗ . . . ಕಣ್ಮನವ ಸೋಲಿಸಿದವು ಮನೋಭವನ (ಸಾಳ್ವಭಾ. ೨೮-೨೬). ೨. ಬಳಿಬಳಿಯ ಸೌಧಾಳಿಗಳ ಹೊಂಗಲಶ[ಪಾಠಾಂ.ಳಸ]ಗಳ ಹೊದಱಿನ ಪತಾಕಾವಳಿಯ ಪಸರದಿನೆಸೆದುದಾ ಪುರ ಮುನಿಯ ಕಣ್ಮನಕೆ (ಶೊರಣಾ. ೦-೯-೦೬). **ಹೊಂಗಳಶ :** ೧. ಇದು ಭೂದೇವತೆ ಹೊತ್ತ ಹೊಂಗಳಶಮೋ . . . ತಾನೆಂದು × × × ಲೋಕಂ ಮನೋಮುದದಿಂ ಬಣ್ಣಿಸೆ ಬರ್ಮ್ಮಿಸೆಟ್ಟ ಜಿನಚೈತ್ಯಾವಾಸಮಂ ಮಾಡಿದಂ (ಎಳ. VII, ಕಪಮೊ. ೩೭-೩೭; 1115); ತರಿಸಿದನು ಹೊಂಗಳಶ[ಪಾಠಾಂ.ಸ]ತತಿಯಲಿ ವರನದೀವಾರಿಗಳನು (ಕುಪ್ಯಾಕ. ೦-೨೮). [ಪೊಂ (<ಪೊನ್) + ಕಳಶ (=ಕಲಶ)]

ಪೊಂಗಳಸ, ಹೊಂಗಲಸ, ಹೊಂಗಳಸ (ನಾ). ೧. = ಪೊಂಗಳಶ ೧: ಪೊಂಗಳಸಂಗಳೊಳಿರ್ದ ಪುಣ್ಯತೋಯಂಗಳೊಳಟ್ಟಱಿಂ ಮಿಸಿಸಿ ಕಟ್ಟಿದನಾವಿಭು ವೀರಪಟ್ಟಮಂ (ಪಂಪಭಾ. ೦೦-೦೫); ರಸರಸಾಯನಂಗಳಂ ತೀವಿ ನೇಱಿದ ಪೊಂಗಳಸಂಗಳಂತಪ್ಪ ನವಫಲಂಗಳಿಂ ನೆಱೆದೊಪ್ಪುವ ಮಾತುಲುಂಗದ ಪೊವಱುಗಳುಮಂ (ಪಂಪಸಂ. ೦೦೭-೦೩); ನೀರ್ದುಂಬಿ ಮೆಱೆವ ಪೊಂಗಳ[ಪಾಠಾಂ.ಲ]ಸಂಗಳಂ ಕೊಂಡು ಬಂದರುತ್ಸವದಿಂದೆ (ಸ್ವಪಿಭಾ. ೩೪-೪). ೨. = ಪೊಂಗಳಶ ೨: ಮಂಗಳಜಲಕುಂಭದಂತೆ ಕಂಗೊಳಿಸುವ ಕೋಟೆಯ ತೆನೆಗೊಂದೊಂದು ಪೊಂಗಳಸಂಗಳೊಪ್ಪಿದುವು (ಪೋಹತ. ೨೪-೩). **ಹೊಂಗಲಸ :** ೨. ಬೆಟ್ಟವ ಕಿತ್ತು ತಂದಿರಿಸಿದಂದದಿ ಮುಗಿಲಟ್ಟಣೆ ತೆನೆಗಳಗ್ರದಲಿ ಬಟ್ಟರನ್ನಗಳ ತೆತ್ತಿಸಿದ ಹೊಂಗಲಸಂಗಳಿಟ್ಟರ್ದುವೇನ ಬಣ್ಣಿಸುವೆ (ಪೋಹತ. ೨೦-೮). **ಹೊಂಗಳಸ :** ೧. ಕರವತಿಗೆ ಹೊಂಗಳ[ಪಾಠಾಂ.ಲ]ಸ ಹೊಂಗೊಪ್ಪರಿಗೆ . . . ವೈಡೂರಿಯದ ಪಡಿಗವ ಚರರು ತಂದೊಟ್ಟಿದರು ಬಂಡಿಗೆ ಭಾರಸಂಖ್ಯೆಯಲಿ (ಕುಪ್ಯಾಗೆ. ೪-೦೫); ಮಡಿವಸನವನುಟ್ಟು ಪೂರ್ವದಿಗ್ವನಿತೆಯ ಮುಡಿಯೊಳು ಹೊತ್ತ ಹೊಂಗಳಸ ನಿಡಿನಿಂದ ರಥದ ಮೇಲಡರ್ಚಿದ ರನ್ನಗನ್ನಡಿಯಂತೆ ಸೂರ್ಯ ಮೂಡಿದನು (ಪೋಹತ. ೦೬-೦೦೯). ೨. ತೋಱಿದನುತ್ತಮದ ಹೊಂಗಳಸ ಪೊಂದನು ನಿಮಿಷಮಾತ್ರದಲಿ (ಪ್ರಶುಲೀ. ೦೦-೦೬); ಕೋಂಟೆಯ ತೆನೆ ಹೊತ್ತ ಹೊಂಗಳಸಂಗಳಿಂದೆ . . . ರುಜಿಸಿತು (ಪೋಹತ. ೨೯-೨೫) ; ಹೊಂಗಳಸ ಏರುಗುವೆಡೆ . . . ಸುಳಿವ ಮಾರುತದ ಪಾವಿತ್ರ್ಯದೊಸಗೆಯನು ತಳೆದು (ಪುಲೆದೇ. ೩೪-೦). [ಪೊಂ (< ಪೊನ್) + ಕಳಸ₁ (<ಕಲಸ)]

ಪೊಂಗಱಿ, ಪೊಂಗರಿ, ಹೊಂಗರಿ$_1$, ಹೊಂಗಱಿ (ನಾ). (ಬಾಣದ ಹಿಂಭಾಗಕ್ಕೆ ಕಟ್ಟುವ) ಚಿನ್ನದ ಗರಿ : ರವಿಕಿರಣಂಗಳಸ್ತಮಿಸೆ ಕಟ್ಟಲೆ ಕೈಮಿಗೆ ಸುತ್ತಿ ಮುತ್ತಿ ದಿಗ್ವಿವರಮನಾಗಸಂ ಪೊಳೆವ ಪೊಂಗಱಿಯಿಂ ಕವಿಲಾಗೆ ... ಬಾಣಸಂಬಳಂ ಕವಿದುವು (ಶಂಠಾಮಾ. ೧೩-೧೩). **ಪೊಂಗರಿ** : ಪೊಳೆವ ಪೊಮ್ಮೂಡಿಗೆಯ ಪೊಂಗರಿಯ ಬಾಣಗಳ . . . ಸೆಳೆದು (ನವಮೋ. ೧೨-೩೬). **ಹೊಂಗರಿ$_1$** : "ಹೊಂಗರಿ = ಚಿನ್ನದ ಗರಿ" (ಸಿಂಕೋ. ೩೫೯). **ಹೊಂಗಱಿ** : ಹೊಂಗಱಿಯ ಬಿಲ್ಲುಕೋಲನೊಂದು ಕೈಯಲಿ ಪಿಡಿದು (ಪನ್ನವ. ಕ. ೦೯೬-೩೩೨); ಹೊಗರೊಗುವ ಹೊಂಗಱಿಯ ಬಿಲುಸರಳುಗಳ ಹೊದೆಗಳ ನಡೆದುವಡವಿಯ ಬೆಗಡುಗೊಳಿಸುತ ಮುಂದೆಮುಂದೆ ಪುಳಿಂದ ಸಂದೋಹ (ಕುಮಾಅ. ೧೩ ೨೨); ಸರಳ ಹಿಳುಕಿನ ಹೊಂಗಱಿಯ ತುದಿ ವೆರಳಲೊಯ್ಯಾರಿಸುತ (ತೊರಣಾ. ೩-೯-೦೩). [ಪೊಂ (< ಪೊನ್) + ಗಱಿ]

ಪೊಂಗಱಿಗೆ (ನಾ). (?) : ಆ ಪ್ರಾಸಾದಂಗಳ ಚೌಪಳಿಗೆಗಳ ಪೊನ್ನ ಪೊಂಗಱಿಗೆ ನೀಳ್ಪುಂ ಬೆಳ್ಪುಮಂ ತಾಳ್ದಿ ಕರ್ಪಿನೊಳುಪಾಶ್ರಯಂಬಡೆದು (ಶಂಪಶಾ. ೩-೪೦ ಪ). [?]

ಪೊಂಗಾಜು, ಹೊಂಗಾಜು (ನಾ). ಚಿನ್ನದ ಬಣ್ಣದ ಗಾಜು ; ಹೊಂಬಣ್ಣದ ಗಾಜು : ಮಧುವಂ ವನಲಕ್ಷ್ಮಿ ಪೀರ್ವ ಪೊಂಗಾಜಿನ ಬಟ್ಟಲಂತೆ (ಮಲ್ಲಪು. ೫-೨೦). **ಹೊಂಗಾಜು** : "ಕಾಂಚನಭೂಷಣಂ— ಹೊಂಗಾಜು" (ಓಪಂ. ೩೨). [ಪೊಂ (< ಪೊನ್) + ಕಾಜು]

ಪೊಂಗಾರುಕ (ನಾ). ಚಿನ್ನದ ಕೆಲಸ ಮಾಡುವವನು ; ಅಕ್ಕಸಾಲಿಗ : ಚಾರುವೈದ್ಯರ ಜೋಯಿಸರ ಪೊಂಗಾರುಕರ ಪರಿಹಾಸಕರ . . . ತೇರುಗರ ವಾಹಕರ ಜೋದರ ಸೇರುವೆಯ ಸಂಭ್ರಮದೊಳೆಸೆದಿರ್ದಂ ಧರಾಕಾಂತ (ಶಂಕಾಂ. ೧೦. ೭). [ಪೊಂ (< ಪೊನ್) + ಕಾರುಕ$_2$]

ಪೊಂಗಾಲಿ (ನಾ). (ರಥದ) ಚಿನ್ನದ ಚಕ್ರ : ಅರದದ ಪೊಂಗಾಲಿಯ ಜೀರ್ಗರೆವಂದಮನಂತವೀರ್ಯನೇಱಿದ ನಿನಗಂ ಪರಿವೆನಗಮೊಡನೆ ಕೇಡಂ ತರೆ ನಿನ್ನುಮನೆನ್ನುಮಂ ಪೆಱ ಕಾವಪನೇ (ಶಾಂತಿಪು. ೩-೦೦೦); ಪೊಳೆವ ಪೊಂಗಾಲಿಗಳಿಂದೊಪ್ಪುವ ರಥಂಗಳಿಂ . . . ಎಸೆದು (ರರ್ಮಾಮ್ಯ. ೯-೦೯೬); ಪೊಂಗಾಲಿ ಮಿಱುಗೆ ಪಟಿಯಿಗೆ ಬಾಂಗೆ ಪೆಡಂಮಗುಟ್ . . . ರಥಂಗಳ್ ಪರಿದುವು (ಜಗಂ. ೭-೬೨). [ಪೊಂ (< ಪೊನ್) + ಗಾಲಿ]

ಪೊಂಗಾಳೆ 'ಪೊಂಗಹಳೆ' ನೋ.

ಪೊಂಗಿಂಡಿ, ಹೊಂಗಿಂಡಿ (ನಾ). ಕೊಂಬು ಅಥವಾ ಸೊಂಡಿಲಿರುವ ಚಿನ್ನದ ಪಾತ್ರೆ : ವರುಣಂ ಪೊಂಗಿಂಡಿಯ ವಾಸವನೆ ಡವಕೆಯಂ ಪಾವಕಂ ದೀಪಮಂ . . . ಪಿಡಿದೋಲೈಸಿ ನಿಂದಿರ್ದರಾಗಳ್ (ರಾಜಶೇ. ೦೯-೦೫೮). **ಹೊಂಗಿಂಡಿ** : ವರಮುನಿಗಳೋದಿವರು ಕನ್ಯಾವರಣಗಳ ಹೊಂಗಿಂಡಿಯುದಕ ವನೆರೆವರರಸನ ರಾಣಿಯರು ನಿಜಭಾವ ಶುದ್ಧಿಯಲಿ (ಆನಂರಾ. ೧-೨೯-೨೯). [ಪೊಂ (< ಪೊನ್) + ಗಿಂಡಿ]

ಪೊಂಗಿರುಗಟೆ (ನಾ). ಚಿನ್ನದಿಂದ ಮಾಡಿದ ಒಂದು ಬಗೆಯ ವಾದ್ಯ : ಪೊಂಗಿರುಗಟೆಯ ಕೇಳಿಕೆಯ ಜೋಕೆಗಳ ಭೂರಿಯೆನಿಸಿದ ಸೊನ್ನಲಿಗೆಪುರ (ಬಸಪು. ೫-೯೦). [ಪೊಂ (< ಪೊನ್) + ಗಿರುಗಟೆ]

ಪೊಂಗಿಸು, ಹೊಂಗಿಸು (ಕ್ರಿ). ೧. ಹೆಚ್ಚಿಸು ; ಅಧಿಕಗೊಳಿಸು ; ಉತ್ಕರ್ಷಗೊಳಿಸು : ಲಲನಾಸಂಭೋಗರೋಗಂ ಪಸಿವನುಡುಗಿಸುತ್ತಾರ್ತಿಯಂ ಪೊಂಗಿಸುತ್ತುಂ ಬಲಮಂ ಕೈಗುಂದಿಸುತ್ತುಂ . . . ಸಲೆ ಲಜ್ಜಾಭಾವಮಂ ಮೀಱಿಸುತುಮಿದೆ (ರಕ್ಷಾಶ. ೨೭). ೨. ಹಿಗ್ಗಿಸು ; ದೊಡ್ಡದು ಮಾಡು : ರೇಚಕ ಪೂರಕಗಳೆಂಬ ವಾಯು ಧಾರಣದಿಂ ಪೊಟ್ಟೆಗಳಂ ಪೊಂಗಿಸಿ ಕುಳ್ಳಿರ್ಪುದುಂ (ಪುಣ್ಯಾಸ್ರ. ೩-೯೯ ಪ); ಅಂಗವಂ ನಡುಗಿಸುತ ಬಸುಱಂ ಪೊಂಗಿಸುತ . . . ಬೆಚ್ಚುತ ಬೆದಱುತಂ (ಬಸಪು. ೦-೯೯). **ಹೊಂಗಿಸು** : ೧. ನಿನ್ನಂ ನುಡಿಯ ತೊಡಂಕಿನ ಬೆಡಂಗಿನಿಂ ಸೋಲಿಸಿ ಸಮಸ್ತರಾಜ್ಯವನು ಬಡಮುನಿ ಕೊಂಡು ಮೇಲೆ ಋಣವ ಹೊಂಗಿಸಿ ತಗುಳ್ವುದಿದು ದೈವಿಕಂ (ಹಪಕಾ. ೦೦-೦೩). ೩. ಚೆನ್ನಾಗಿ ಕುದಿಸಿ ಮೆದುವಾಗಿಸು ; ಹದವಾಗಿ ಬೇಯಿಸು : ಬೇವಾಗ ಗಂಜಿಯ ಬಸಿದುಕೊಂಡು ಮುಚ್ಚುಳನಿಕ್ಕಿ ಘಟ್ಟಿಪಾವಡೆಗಟ್ಟಿ ತಱಿಗೆಂಡ ದೊಳಗೆ ಹೊಂಗಿಸಿಕೊಂಡು ಮೃದುವಾಗಿ ಮಾಡಿದುದು ತಾ ಶುದ್ಧ ಮಪ್ಪೋದನಂ (ಸೂಪಶಾ. ೩-೨). [ಪೊಂಗು$_1$ + — ಇಸು$_3$]

ಪೊಂಗು$_1$, ಪೊಂಕು$_1$, ಹೊಂಗು$_1$ (ಕ್ರಿ). ೧. ಹೆಚ್ಚಾಗು ; ವೃದ್ಧಿಗೊಳ್ಳು ; ಅಧಿಕಗೊಳ್ಳು : ತಿರಿಪುತ್ತುಂ ಜವದಿಂ ಮುಕುಂದನಿಡೆ . . . ತದುತ್ತ ಮಾಂಗದೊಡನುದ್ದಂಪಾಱಿ ಮೃತ್ಸ್ನಾಘಟಂಬೆರಸುದ್ಯದ್ಭುಜದಂಡವರ್ತನ ದಿನುಗ್ರಾಡಂಬರಂ ಪೊಂಗೆ . . . ತಿರಿದುದಾ ಚಕ್ರಂ ವಿಯಚ್ಚಕ್ರದೊಳ್ (ಶಾಂತಿಪು. ೯-೫೯); ಅವಿವೇಕಿಯಾದ ನೃಪನೊಪ್ಪುವ ಪುಣ್ಯಂ ತೀರ್ದು ದೋಷಮುಂ ಪೊಂಗುವವೋಲ್ (ಉದ್ಯಪ. ೯-೨೭); ಗಂಗಾನದೀತಟಕೆ ನಡೆತಪ್ಪ ಷಟ್ಕೃತ್ತಿಕಾಂಗನೆಯರೀ ಮಹಾಜ್ವಾಲೆಯೆತ್ತಣದೆಂದು ಹಿಂಗದೀ ವೀರ್ಯದೆಡೆಗೈತಂದು ನೋಡುತಿರಲಾ ಸ್ತ್ರೀಯರಂ ಕಾಣುತೆ ಪೊಂಗು ತೊಡನೊಡನೆ ಘನಗಾಢದಿಂದವರ ಗರ್ಭಂಗಳಂ ಬಿಡದೆ ಭೇದಿಸಿ ಬಲಿಯ ಲಾಕ್ಷಣಂ (ಕಬಪು. ೩೯-೦೩). ೨. ಉಕ್ಕು ; ಸೂಸು ; ಹೊರಹೊಮ್ಮು : "ಪೊಂಗು-ಸ್ಫುಟನೇ (ಹೊಮ್ಮು, ಉಕ್ಕು)" (ಶಮರಾ); ಸುಧಾಂಗನಿಂ ಪೊಂಗುವೆಳದಿಂಗಳ ತೊಡರ್ದ ಕಂಗಳ ಬೆಳಗಿನ . . . ಲತಾಂಗಿಯರೆನಿಪ್ಪ ಪಣ್ಯಾಂಗನಾಜನವೆಸೆದುದು (ಹಪಕಾ. ೯-೯೦). ೩. ಕೆರಳು ; ಉದ್ರೇಕಗೊಳ್ಳು : ಪೊಂಗುವುದು ಗಡಶಿಕೋಪದೆ ಕೆಂಗೋಲ್ಗೊಳ್ವುದು ಗಡಿಂದ್ರ ಜಾಲದ ಸಿಂಗಂ ತಾಂ ಗಡ (ಪುಪಕಂ. ೨೫೨-೨೦). ೪. ವ್ಯಾಪಿಸು ; ಹರಡು : ಮಂಗಳಗೀತವಾದ್ಯನಿನದಂಗಳಶೇಷದಿಶಾತಟಂಗಳೊಳ್ ಪೊಂಗಿರೆ (ವರ್ಧಪು. ೧೯-೩೯). ೫. ಅರಳಂ ; ಬಿರಿ ; ವಿಕಸಿಸು : ಮಗಮಗಿಸುವುವು ಪೊಂಗಿ ಪೊಂಗೇದಗೆಗಳ್ (ಲೀಲಾವ. ೬-೦೨೯); ಶೃಂಗಾರವಾರಿ ತೀವಿದ ಮೊಗಗೊಳದೊಳು ಪೊಂಗಿದ ಪುಂಡರೀಕಗಳೊ...ತಿಂಗಳ ಮೊಗದಳಕ್ಷಿಗಳೊ (ವರ್ಧಪ. ೨-೩೯); ಪೊಂಗುವ ಸಂಪಗೆದಂಡೆಯೊಳಂಗೈಸುವರಖಿಳಜನರುಂ (ಪಕಂ. ೬-೯೬). ೬. ಉಬ್ಬು ; ದೊಡ್ಡದಾಗು ; ದಪ್ಪವಾಗು : ತನುವಳಿರೇಖೆಗಳ್ ಕಿಡೆಯುಮೆಯ್ದೆ ಬೆಡಂಗಿನದೊಂದು ರೇಖೆಯಂ ತನಗೆಡೆಮಾಡಿ ಪೊಂಗೆ ನಡು (ಅದಿಪು. ೬-೯೬); ಸುದತಿಯ ಗರ್ಭಚಿಹ್ನಮನ ದೇವೊಗಟ್ಟಪ್ಪುದೊ ಬಾಸೆ ಕರ್ಪನಾಂತುದು ನಡು ಕೂಡೆ ಪೊಂಗಿದುದು (ಜಗಂ. ೨-೯೫); ಪೊಂಗಿದಧರಂ ಮುಗಿದ ಕಣ್ಮಲರ್ಪರೆದ ಸುಕ್ಕುಂಗುರುಳ್ (ಸೌಂದಪು. ೯-೨೦). ೭. ಉತ್ಸಾಹಿಸು ; ಹಿಗ್ಗು : ಅಂಗಜನಂಕಮಿದೆನೆ ಮಿಗೆ ಪೊಂಗುವ ಮಧುವಿಂಗೆ ರಾಗದಿಂ ಕಟ್ಟಿದ ನಾರಂಗದ ಪಟ್ಟೆಯ ತೊಂಗಲ ಭಂಗಿಯನಿಳಿಸಿದುವು ಪೂತ ಮುತ್ತದ ಗೊಂಚಲ್ (ವರ್ಧಮಾ. ೦೦-೩೭); ಇನಿವಣ್ಗೊಂಚಲಂ ಕಂಡರಗಿಳಿಯಂತೆ ಪೊಂಗಿ ಪೊರೆಯೇಱಿ (ಉದ್ಯಪ. ೦೦-೦೦೬ ಪ); ಪೊಂಗಿ ನಾಟ್ಯವನಾಡುತಂಗಜಾರಿಗೆ ನಮಿಸಿದಂಗವಱಿದಾ ಗಿರಿಜೆ ತುಂಗಕೋಪದಲಿ ತನ್ನಂಗಮಂ ತಾರೆನಲು (ಕಬಪು. ೧-೯); ಅಬ್ಬೆ ! ಪಿಡಿ ನಡೆದಪೆನೆನುತುಮೆರಟ್ಮೂಱಡಿಯಿಡುತೆ ಪೊಂಗಿ ತಾಯ ನಿಡುದೋಳಂ ತಾಂಗಿ (ರಾಮಾಶ್ವ. ೧೯-೨೯). ೮. ನವಿರೇಳು ; ರೋಮಾಂಚವಾಗು : ಪೊಂಗಿ ಹಾಡುತ ತಮತಮಗೆ ವಾದ್ಯಂಗಳುಲಿಯಲ್ಕೆ (ಬಸಪು. ೦೯-೦೯); ಜಡಿದು ನಾಣ್ಗೆಡೆ ನುಡಿಯಲುಬ್ಬುವಂ ಬಿಱಿಸಿನಿಂ ಪೊಡೆಯೆ ಪೊಂಗುವಂ (ಕಬಪು. ೦೦-೨೯). ೯. ಸೊಕ್ಕಿಗೇಳು ; ಗರ್ವಪಡು ; ಬೀಗು : ಪೊಂಗಿ ಸೊಡರ್ಗುಡಿಯ ಮೇಲೆ ಪತಂಗಂ ಪಾಯ್ವಂತೆ ಪಾಯ್ದು ಬರ್ದುದು ಸಿಂಗಂ (ಕಾವ್ಯಸಾ. ೦೦೦೯ ಶೂದ್ರಕ); ಆನಗಿದಱಿದಿರ್ದೊಡಂ ಚಲದಿನೆನ್ನೊಳೆ ಪೊಂಗಿ ಪೊಡರ್ಪುದೋರ್ಪಂ . . . ಕೊಂದಪನಕಾರಣದಿಂ ಮೊಱೆಯೋ ಮನೋಭವಾ (ಅದಿಪು. ೦೨-೩೩); ಪೊಂಗುವ ರಿಪುಕುಳ

ಮದಮಾತಂಗಮನಱಿಯಟ್ಟೆ (ಶಾಶಾ. XX. ೬೦-೧೬ ; 1088). ೧೦. ಹೊಳೆ : ಪ್ರಕಾಶಿಸು : ಪೊಂಗುವ ನುಣ್ಮೊಗಂ ಪೊಳೆದು ಪೊಂಚುವ ಸಂಚಿನ ನೋಟದಬ್ಬಿಯಿಂದಂಗಜವೀರನಾರುಬಟೆಯಂ ಪಟುಗೆಯ್ಯುತೆ ಬಾಜಿಪೋಡೆಯೊಳ್ (ಶಸಿ. ೬-೨). ೧೧. ಸೋಕು ; ಮುಟ್ಟು : ಪುಲೆ ಪಿಂಗದೆ ಪೊಂಗುವುದಕ್ಕಲಸುವರಾಳಿಜನಂಗಳ್ (ಪ್ರಭುಪು. ೩ ೬೬). ೧೨. ತಟ್ಟು ; ತಾಕು : ಮಹಿಯ ಪೊಂಗಿ ತಲೆಕೆಳಗು ಮಾಡಿದ ಹಮವ ಮಕ್ಕು ಭಾವು (ಭಾಶಕಂ. ೬-೦೯). ೧೩. ಕೂಗು ; ಅರಚು : ವಾತ ಪೂರಣಂಗಳಿಂ ನೊಂದಂತೆ ದೆಸೆದೆಸೆಗೆ ಪೊಂಗುವ ಗೂಗೆಗಳಿಂ . . . ಉಯ್ಯಲಾಡುವ ರಣದೇವತೆಯರಿಂದತಿಭಯಂಕರಾಕಾರಮಪ್ಪುದು (ಭಾಪ್ರಸಾ. ೩೨೯ ಕಾಪ್ರಳ). ೧೪. ಕುಂದಣಿಸಿ ತುಂಬಿರು ; ಮೆಟ್ಟು : ಮುಂಗುರುಳನು ಪಿಡಿದೊಯ್ದೆನ್ನ ನವರತ್ನ ಪೊಂಗಿದ ಮಣಿಮಂಚದಲಿ ಅಂಗಜಕೇಳಿಯ ನಿತ್ತೆನ್ನನುಳುಹೊ (ಕಂಪಪಿ. ೯-೦೬೭). ಪೊಂಕು₁ : ೧೧. ಸೊಗಸನಗಲ್ಚ ದಾಗಿಸೆ ಲತಾಂಗಮನರ್ತಿಯೆ ಪೊಂಕುವಾಸೆಯಂ ತೆಗೆದಮರ್ದಪ್ಪುವಾಸೆಯ ನಭೀಕ್ಷಿಸೆ (ಪಂಚಾಶೇ. ೯-೭೮); ತುಂಗವಯೋಧರೆ ಮಿಂದು ಸಿಂಗರಗೈದಾಸನದೊಳು ನಲ್ಲನರ್ಧಾಂಗವ ಪೊಂಕಿ ಕುಳ್ಳಿರ್ದು (ಪರ್ಗಶ. ೧೦-೬೭). ಹೊಂಗು₁ : ೧. ಹೂತ ಹರುಷದ ಹೊಂಗಿಮತ್ಸವದ . . . ಉಬ್ಬನಲಿ ಹೊಂಪುಳಿಯೋದನು (ಸಂಭಶ. ೩೩-೩೭). ೨. ಹೊಂಗಿ ಪೈತೃಶ್ಲೇಷ್ಮ ತತಿ ರಂಧ್ರಂಗಳಲಿ ಮುಸುಕಿದಡೆ ತನುರೋಮಂಗಳಿನತುಂ ಕವುಱುನಾತಡೆ . . . ದೃಷ್ಟಿಗಳು ವಿಚ್ಛಿನ್ನವಾದಡೆ ನಿಮ್ಮಯಾಣೆ ಪ್ರಮಥರುಗಳಾಣೆ (ಬಸಪು. ೧೯-೨೭). ೪. ಧೋಲ್ಗಳ ಧಳಂಕಾರ ಹೊಂಗುತಿದೆ (ಗಿಪಿಂ. ೭೦-೯). ೫. ಹೊಂಗಿದ ಪುಷ್ಪದ ಪರಿಮಳವನುಂಡೆಳ್ಳು ಅವು ತಮ್ಮಂಗವ ಬಿಟ್ಟು ಹೋಹಾಗ ಕಮ್ಮೆಣ್ಣೆಯಾಗದಿಪ್ಪುವೆ (ಪಪ್ರ. ಕ. ೩೩೩-೭೦೦). ೬. ನವ ನೀಳಕಾಂತಿಯಿಂದಿದಿರೇಱುತಿರೆ ಬಾಸೆ ನಡು ಹೊಂಗಿ ಕಿಳ್ಪೊಡೆಯದೊಪ್ಪದಿಂ ಹಿಗ್ಗುತಿರೆ (ಪಸರ. ೦-೦೦೯). ೭. ಜನಕಂ ಸಾಮನ್ತಭೀಮಮ್ . . . ಮಿಱುಕಿ ಕಡಂಗಿ ಹೊಂಗಿ ಮದವೇಱಿ ಚಲಂ ತಲೆದೋರಿ ಬಿಲ್ಲನಾರ್ದ್ದೇಱಿಸಿ ನೀವಿ ಜೇವೊಡೆದು (ಎಳ. XII. ಪಕ್ಷಪಾ. ೨೦-೧೬ ; 1160) ; ಸಂಗಡ ಮಿರ್ದಂಗನೆಯರ್ ಶೃಂಗರಿಸೆ ಮಂಗಳಮುಖಿ ಹೊಂಗಿ ಹೊರೆಯೇಱಿ (ಗಿಂಳ. ೯-೬ ವ) ; ವನಜನಾಭಧ್ಯಾನಸುಧೆಯಲಿ ನನೆದು ಹೊಂಗಿದ ಕರಣ ಹೊರೆಯೇಱುತ್ತು (ಕುಮಾಕ್ರೋ. ೦-೨೨). ೧೦. ಹೊಂಗಿ ಮಿಡುಕುವ ಮೀನ ಗುದಿಗಳಂ . . . ಪೂತಿಬೆಕ್ಕಂ ಹರಿಶ್ಚಂದ್ರರಾಯಂಗೆ ಕಾಣಿಕೆಯನಿತ್ತು (ಹಶಕಾ. ೩-೩) ; ಮುಗುಳುನಗೆಗಳ ಹೊಂಗುವಂಗದ ನಗೆ ಮೊಗದೊಳಾನಂದಬಿಂದುಗಳೊಗುವ ಕಂಗಳ . . . ಪಾಂಡವರೆಱಗಿದರು (ಕುಮಾಕ. ೦೬-೩೦) ; ಅರಸರ ವಿಭವದುತ್ಸವದ ತೆರವ ಕಂಡು ಕುಶಲವ ಪಡೆದ ಕಂಗಳಿವು ಹೊಂಗುವುವು (ಪುರಿದೇ. ೯೭-೩). ೧೨. ರಂಗ ನಿನ್ನಯ ವಕ್ಷದೊಳಗಿರ್ಪ ಕೌಸ್ತುಭಮಂಗಂಡ ಘನಮಹಿಮರನು ಹೊಂಗದು ಕಿಲ್ಬಿಷವು (ಶಶಸಾಂ. ೩-೦೩). ೧೫. ಬಾಗು ; ಬಳುಕು : ಅವನ ಭಾರ ತುಯ್ದು ಹೊಡೆತಕ್ಕೆ ಬಚ್ಚನ ಕೈ ಹೊಂಗಿ, ಬೈಸಿಕಲ್ ಅವನತ್ತ ಬಾಗಿ, ಬೀಳುವುದರಲ್ಲಿತ್ತು (ಪುರಿಪು. ೧೦೩). ೧೬. ಹುಟ್ಟು ; ಉಂಟಾಗು ; ಪ್ರಕಟವಾಗು : ತಿಂಗಳಿಗೆ ತಲೆ ಮಾಸವೆರಡಱಲಂಗ . . . ಹೊಂಗುವವು ಧಾತುಗಳು ನಾಲಕುತಿಂಗಳಿಗೆ ಬರೆ ಹಸಿವು ತೃಷೆಗಳು ತಿಂಗಳ್ಬೆದಱಲಿ (ಶಿಶಾಗ. ೩-೦೯-೨೦).

[ದೇ. ॥ ತಮಿ. ಪೊಙ್ಕು; ಮಲ. ಪೊಙ್ಗು; ತುಳು. ಪೊಂಗು, ಬೊಂಗು ; ತೆಲು. ಪೊಂಗು ; ಕೋತ. ಪೊಂಗ್, ಪೊಗ್ ; ಕೋಲಾ. ನಾಯ್ಕಾ. ಪೊಂಗ್]

ಪೊಂಗು₂, ಪೊಂಕು₂, ಹೊಂಗು₂ (ನಾ). ೧. ಗರ್ವ ; ಸೊಕ್ಕು : ಪೊಂಗುಱಿದು ಭರತನೃಪಚರಣಂಗಳ್ಗಾ ಮಾಗಧಾಮರಂ . . . ಬಾಗಿದಂ (ಆರಿಪು. ೦೨-೦೦೦) ; ಮಲೆಪರ ಪೊಂಗಡಂಗಿದುದು ಮನ್ನೆಯರುಕ್ಕುಕದಲ್ದುದು (ಎಪಾ. XV. ೩೦-೯ ; 1028) ; ಅಂತಾ ದೇವತೆಯರ್ ಪೊಂಗುಱಿದು ಪಿಂಗಿ ಪೋಗೆ (ಸೇಪಿಪು. ೬-೯೬ ವ). ೨. ಸೊಗಸು ; ಅಂದ ; ಶೋಭೆ : ಪೊಸದೇಸೆ ಪೊಂಗು ಪಾಂಗೆಸೆವೆಸಕಂ ಕಡುಗಾಡಿ ಗರುಡಿಯೊಂಬಿವಱಿಂವಂ . . . ವಸುದೇವಂ ಧರೆಗೆ ಕಣ್ಣಮುಳ್ಳಾಗಿರ್ದಂ (ಅರ್ಧನೇ. ೯-೦೩೧) ; ಅಂಗನೆಯ ಹಸ್ತನಖಮೆ[ಳ]ದಿಂಗಳ್ ಕೇದಗೆಯ ಸುಱಿಯ ಮಧುವೆಂಬುದನೆತ್ತಂ ಗೆಲ್ದಿರ್ದವು ತೊಳಗುವ ಪೊಂಗಿನೊಳಾಕೃತಿಯೊಳೆಸೆವ ವರ್ಣಕ್ರಮದೊಳ್ (ಶಾಹಾ. ೬-೩೬). ೩. ಶುಭ ; ಮಂಗಳ : 'ಪೊಂಗುನೂಲ್' ಪರಾ. ೪. ವ್ಯಾಪನೆ ; ವಿಕಾಸಹೊಂದುವಿಕೆ : (ಕ). (ಗು). ೫. ವ್ಯಾಪಕವಾದ ; ಹೆಚ್ಚಾದ : ಎಸಳುಗಂಗಳ ಪೊಂಗುಶೋಭೆಯಿಂ ರಂಜಿಸುವ ಮಿಸುಪ ತುರುಗೆವೆ (ತುರಂಗ. ೯-೩೦). ಪೊಂಕು₃ : ೨. ಕುಂಕುಮ ಪನ್ನೀರು ಕೂಡಾ ಗೋಡೆಗೆ ಪೂಶಿ ಪೊಂಕಾದ ಚಿತ್ರಪತ್ತಿಗೆಯನ್ನು ಬರದು (ಯುಸಿಳ. ೩೭). ೬. ಬೆಡಗು ; ಬಿನ್ನಾಣ ; ಬಿಂಕ : ಮಯ್ಗುರೆಯಲು ಗಣ್ಡನ ತೊಣ್ಡನಂಕದಧಟಲ್ ಪೊಂಕಾ(ಕ)ಳ್ತನಂ (ಹೈಆಸಿ. ೦೩-೨೭-೭೩ ; 1090) ; ಸೊಗಯಿಪ ಪೊಂಕು ಲಾಲಿಸುವ ಲಲ್ಲೆ ಮರಲ್ಚುವ ಮಾತು (ಕಂಪ್ರಪು. ೯-೭೦). ಹೊಂಗು₂ : ೭. ಉತ್ಸಾಹ ; ಹುರುಪು : ನಾರುಡೆಯಿದಾರವಯ್ ? ಹೋಹ ಹೊಂಗಿಂದಿದಂ ಮರೆದಿರೇಂ ? (ಕ್ರೀರಾಪಾ. ೨೨೯-೯೭). ೮. ಕೊಂಕು ; ಬಾಗು : ಕಂಗಳಲಿ ಕುಡಿಮೇಳ ಹುಬ್ಬಿನ ಹೊಂಗಿನಲಿ ಭಂಜವಣೆ ಭಾವದ ಭಂಗಿಯಲಿ ಪಶಿಕರಣೆ (ಕುಮಾಕ. ೦೩-೨೫). ೯. ಉತ್ಕರ್ಷ ; ಏಳಿಗೆ : ಬ್ರಾಹ್ಮಣಮತದ ಹೊಂಗು ಹೆಚ್ಚಾಗಿತ್ತು (ಶಾಸಾಶಿ. ೬೨). ೧೦. ತೀವ್ರತೆ ; ಹೆಚ್ಚಳ : ಹಿಂಗದಾಸಱು ಮನದ ಬಯಕೆಯ ಹೊಂಗು ಮುಱಿಯದು ಚಿತ್ತದೊಲವಿನ ಹಂಗು ಹಱಿಯದು (ಶಿಶಾಗ. ೬-೨೩-೨). [< ಪೊಂಗು₁./ತಮಿ. ಪೊಙ್ಕು. ಪೊಙ್ಕ. ಪೊಕ್ಕ ; ಮಲ. ಪೊಕ್ಕ ; ತುಳು. ಬೊಂಗು ; ತೆಲು. ಪೊಂಗು]

ಪೊಂಗುಡುಪು (ನಾ). ಚರ್ಮವಾದ್ಯವನ್ನು ಬಾರಿಸುವ ಚಿನ್ನದ ಕೋಲು ; ಚಿನ್ನದ ವಾದನದಂಡ : ಸಮರಸನ್ನಾಹಭೇರಿಯಂ ಪೊಂಗುಡುಪಂ ಪಿಡಿದಡಸಿ ಪೊಡೆಯಲ್ (ರಾಜಶೇ. ೬-೩೦ ವ).

[ಪೊಂ (< ಪೊನ್) + ಕುಡುಪು]

ಪೊಂಗುನೂಲ್, ಪೊಂಗುನೂಲು, ಹಂಗನೂಲು (ನಾ). ೧. ಮಂಗಳ ಕಾರ್ಯಗಳಲ್ಲಿ ಮುಂಗೈಗೆ ಕಟ್ಟಿಕೊಳ್ಳುವ ಹಾಗೂ ದೇವರು, ಕಲಶ ಮೊದಲಾದುವುಗಳಿಗೆ ಏರಿಸುವ ಅರಿಸಿನದ ದಾರ : ನಾಂದುವ ಬೇವಿನ ಸರಳಿಗೆಗಳುಂ ಕೂಲೊಳ್ ಪೊಂ[ಪಾಶಾಂ. ಪಾಂ]ಗುನೂಲಂ ಸುತ್ತುವ ಕುಡುಗೋಲ್ಗಳುಂ . . . ಪುಂಜಿಸುವ ಕಣಿಶಂಗಳು ಮೆಸೆಯೆ (ಶಿಶಾಪ. ೭-೩೬ ವ). ೨. ಎಳೆಯ ಮಕ್ಕಳಿಗೆ ಹಾಕುವ ಒಂದು ಬಗೆಯ ಆಭರಣ : ಅರಳೆಲೆ ಪೊಂಗುನೂಲ್ ಪುಲಿಯುಗುರ್ . . . ಭುವನೈಕಮಂಡನನೊಳೇನೆಸೆದಿರ್ದುದೊ ಬಾಲಮಂಡನಂ (ಅಪಪು. ೩-೬೨). ಪೊಂಗುನೂಲು : ೧. ನನೆಯ ದಂಡೆಗಳನು ಕಟ್ಟು ಅನುಮಾಡು ಪೊಂಗುನೂಲನು ಗಂಧವರೆ (ಕಂಪ್ರಸಾಂ. ೦೨-೩೬). ಹಂಗನೂಲು : ೧. ಗಂಧದ ಬೊಟ್ಟು ಗಮಕಿಲೆ ಇಟ್ಟು ಹಂಗನೂಲು ಹಾಕಿಯೆಷ್ಟು . . . ಆ ಕಲ್ಲೇನೂ ಉಣಲಿಲ್ಲಾ ಎಡೆಮಾಡಿ ನೀನೆ ಉಂಡೆಲ್ಲಾ (ಕಂಇಪ. ೩೬-೦೯) ; ಈ ದಿನ ಈ ನಾಗಗಳ ಪೂಜೆ ಮಾಡಿ ಹಂಗನೂಲು ಕುಬಸಗಳನ್ನು ಏರಿಸಿ . . . ಬರುತ್ತಿದ್ದರು (ಹಮ್ಮಿಪಿ. ೭೯). [ಪೊಂಗು₂ + ನೂಲ್₂]

ಪೊಂಗುನೂಲು 'ಪೊಂಗುನೂಲ್' ನೋ.

ಪೊಂಗುಪ್ಪಸ (ನಾ). ಜರತಾರಿ ಎಳೆಗಳಿರುವ ಕುಪ್ಪಸ : ಪೊಂಗುಪ್ಪಸಂ ದೊಟ್ಟೊಡನಿಟ್ಟೋರಂತೆ ಮಾಣಿಕ್ಯದ ಕಿವಿದೊಡವಂ (ರಾಶಶೇ. ೦೩-೭೦).

[ಪೊಂ (< ಪೊನ್) + ಕುಪ್ಪಸ]

ಪೊಂಗುಪ್ಪೆ (ನಾ). ಚಿನ್ನದ ಜಾಡಿ ; ಬಂಗಾರದ ಹೂಜಿ : ಪರಿಮಳಿಪ ಸೀತಳೋದಕವ ಪೊಂಗುಪ್ಪೆಯೊಳು ತುಂಬಿಡುತ್ತೆ (ಸಪಸೋ. ೧೯-೧೭).

[ಪೊಂ (< ಪೊನ್) + ಕುಪ್ಪೆ$_3$ (< ಕುಪ್ಪಿ$_1$)]

ಪೊಂಗುಬ್ಬಿ (ನಾ). ಚಿನ್ನದ ಗುಬುಟು,–ಗುಮುಟ : ಅಂಗದೊಳ ಗಮರ್ದ ಬಣ್ಣಬಗೆಗಳ ಬೆಳ್ಳಿಪೊಂಗುಬ್ಬಿವರಿಗೆಯಂ ತೊಡೆ ಚಾಟು ಗೊಳುತೆ (ಸಪಪು. ೪೮-೫೦). [ಪೊಂ (< ಪೊನ್) + ಗುಬ್ಬಿ$_1$]

ಪೊಂಗುರು, ಪಿಂಗುರು, ಪೆಂಗುರು, ಹೆಂಗುರು, ಹೊಂಗರಿ$_2$, ಹೊಂಗುರು (ನಾ). ಕೊಕ್ಕರೆಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ : ಕೋಗಿಲೆ ಚಾದಗೆ ಪೋದಗೆ . . . ಕಾಗೆ ಪೊಣರ್ವಕ್ಕಿ ಪೊಂಗುರು ಗೂಗೆ ಮುಕುಂದಂ ಬಲಾಕೆ ಲಾವುಗೆ ಸೇನಂ (ಕಾಪ್ಯಸಾ. ೧೦೪೪ ಶೂದ್ರಕ). **ಪಿಂಗುರು :** ಪೊಣರ್ವಕ್ಕಿ ಪಿಂಗುರು[ಪಾಠಾಂ. ರಿ] ಗೂಗೆ ಮುಕುಂದ ಬಳಾಹಕ (ಸೊಕ್ತಿಸು. ೩-೦೪೪). **ಪೆಂಗುರು :** ಗಿಳಿ ಪುರುಳಿ ಪೆಂಗುರು[ಪಾಠಾಂ. ಪಿಂಗುರಿ] ಕಾರಂಡವಾಂದೆ ಮೊದಲಾಗೊಡೆಯ ಗಗನಚರಂ ಪಂಚೇಂದ್ರಿಯಂ ಗಳುಮಾಗಿ (ಪಡ್ಮಾರಾ. ೯೭-೯). **ಹೆಂಗುರು :** ಬಾನಾಡಿ ಪೆರ್ಬಕ್ಕಿ ಹೆಂ[ಪಾಠಾಂ. ಹಿಂ]ಗುರು ಕಾಕಂ . . . ಇರ್ಕುಂ ತದ್ವನಾಗೌಘದೊಳ್ (ರಾಜಶೇ. ೩-೫೯); ಕಾಕಂ ಬಕಂ ಕೊಂಚೆ ಹೆಂಗುರು . . . ಚಾತಕಮುವಿರ್ಕುಂ ತತ್ತರು ವ್ರಾತದೊಳ್ (ಯಾದಸಂ. ೪-೪೬); ಪಾರಾವತಂ ಹೆಂಗುರು ಟೀವಂ ಟಿಟ್ಟಿಭಂ . . . ತದ್ವನಾಂತಸ್ಥಮಿರ್ಕುಂ (ಶಬಶು. ೩-೫೫). **ಹೊಂಗರಿ$_2$:** ಹೊಂಗರಿ ಚರಣಾಯುಧಂ ಗಿಡುಗ ಗೀಜಿಗನಾ ಗಿಳಿ ಕಾಡ ಗುಬ್ಬಿಗಳ್ ಬರುತಿರೆ (ಪಶ್ನಾ. ೬-೨೦೩). **ಹೊಂಗುರು :** ಹೊಂ[ಪಾಠಾಂ. ಹೆಂ]ಗುರು ಚರಣಾ ಯುಧಂ ಶಕುನಿ . . . ತಿತ್ತಿರಿ ಗಿಡುಗಂಗಳೆಂಬ ಖಗವೃಂದದಿನಲ್ಲಿಯರಣ್ಯ ಮೊಪ್ಪುಗುಂ (ಗಿಂಕ. ೦-೭೪ ; ಪುಣ್ಣಕಾ. ೩-೧೪೦ ನೋ) ; ಹರಡೆ ಹಸುಬ . . . ಹೊಂಗುರುವಕ್ಕಿಯೆಸೆದವಂದಲ್ಲಿ (ಶ್ರೀಪಾಠ. ೬-೦೬).

[<ಪ್ರಾ. ಪೋಕ್ಖರ./ಸಂ. ಪುಷ್ಕರ./ತೆಲು. ಪೆಗ್ಗುರು, ಬೆಗ್ಗುರು]

ಪೊಂಗುರುಜು (ನಾ). ಬಂಗಾರದ ಮಂಟಪ : ಕೇರಿಕೇರಿಯಲಿ ಪನ್ನೀರ ಚಳಯ ರನ್ನದೋರಣ ಪೊಂಗುರುಜುಗಳು ಮೇರೆಯಿಲ್ಲದೆ ಕಾಂತಿ ಎಡಿದುವು (ಕಂಪಪಿ. ೨೩-೨೬). [ಪೊಂ (< ಪೊನ್) + ಕುರುಜು]

ಪೊಂಗುಲ (ನಾ). ೧. ಚಿನ್ನದ ಕೆಲಸ ಮಾಡುವವರ ಕುಲಕ್ಕೆ ಸೇರಿ ದವನು ; ಅಕ್ಕಸಾಲಿಗ : ಕಡೆಕೊಳಂದ ಮಣ್ಣಿಗಪ್ಪೊಂಗುಲಂ ಕೊಡ ಲಿಯಂ ಬಲ್ಲಸಿಯ ಕಮ್ಮಱು ಮುಟ್ಟಗೆರಿಯೊಡೆಯೊಂ ಓದಲಪೋಲೆಯಂ ಮಜ್ಜಳಂ (ಪ್ರಾಸಂ. ೦೯೩೪, ೩೮-೨೨ ; ಸು. 11ನೆಯ ಶತ). ೨. ಒಬ್ಬಾತನ ಹೆಸರು : ಸಾಕ್ಷಿ ಕೂಡಲೂರ್ ಪೊಜ್ಜುಲರು ಎಳ್ಮಡಿಯರು ಬದಿರಿಯರುಮ್ (ಪ್ರಾಸಂ. ೦೯೦೬, ೦೩-೯ ; 726). [ಪೊಂ (< ಪೊನ್) + ಕುಲ]

ಪೊಂಗುಲ್ವಟ್ಟಿ (ನಾ). ಒಂದು ಪ್ರದೇಶದ ಹೆಸರು (?) : ತೆನ್ಕಣ ಕೊನೆದು ಪೊನ್ಗುಲ್ವಟ್ಟಿಯ ತೆನ್ನೊಳ್ವೆ ತೆನ್ಕಣಸೀಮೆ (ಪ್ರಾಸಂ. ೦೯೨೭, ೦೨೨-೬೦ ; 808 ?). [?]

ಪೊಂಗುಳ (ನಾ). ಚಿನ್ನದ ಕುಳ,–ಗುಳ : ಪೊಂಗುಳಂಗಳಂ ಕಬ್ಬಿಣದ ಗುಳವೆಂದು ಕೈಯಲೀಯೆ (ಪಶುಪು. ೬-೩-೨).

[ಪೊಂ (< ಪೊನ್) + ಕುಳ$_1$ (< ಕುಬು)]

ಪೊಂಗುಳಿಗೆ (ನಾ). ಚಿನ್ನದ ಗುಳಿಗೆ : ಪೊಂಗುಳಿಗೆಗಳ ಪರಿಯೊಳಂಗು ಷ್ಟಂಗಳೊಪ್ಪುಗು ನಿಮಿರ್ದ ಕೋಮಳದಂಗುಳಂಗಳು ಮೆಱೆವವುಡುಗಣ ದೊಲು ಪದನಖಾಳಿ (ಬಸಪು. ೪-೦೭). [ಪೊಂ (< ಪೊನ್) + ಗುಳಿಗೆ$_1$]

ಪೊಂಗುಱುವ (ನಾ). ಚಿನ್ನದ ದ್ವೀಪ : ಪಾಲ್ಗಡಲೊಳಗಣ ಪೊಂಗು ಱುವಂ ಗಡಮೆನಿಸಿದುದಮರನಗಮಿದೇನಚ್ಚರಿಯೋ (ವರ್ಧಮಾ. ೦೨-೩೫).

[ಪೊಂ (< ಪೊನ್) + ಕುಱುವ$_1$]

ಪೊಂಗೆಜ್ಜೆ, ಹೊಂಗೆಜ್ಜೆ (ನಾ). ಚಿನ್ನದ ಗೆಜ್ಜೆ : ಮಧುಪಾನದಿಂ ಸೊಕ್ಕಿದ ಮುತ್ತಂಚಿಯ ಧ್ವನಿಗಳಂತೆ ಜರ್ಝರಮಾದ ಪೊಂಗೆಜ್ಜೆಗಳ ಮೆಲ್ಲುಲಿ ಯೊಳಂ (ಕಾದಂಪೂ. ೬೭) ; ಪೊಂಗೆಜ್ಜೆಯುಲಿವು ನೆಲನುಗ್ಗಡಿಸುತ್ತಂದೆಸೆಯೆ . . . ನಡೆತರುತಿರ್ದಳ್ (ಗಿಂಕ. ೩-೧೦೬) ; ಮೆಱೆಯಲೊಡ್ಯಾಣದ ಪೊಂಗೆಜ್ಜೆಗಳ ದನಿ . . . ಪಾಡುತ ಪಿರಿದು ಸಂಭ್ರಮದ ಬೀಱಿದರು (ಕಂಪಪಿ. ೨೦-೧೦೦). **ಹೊಂಗೆಜ್ಜೆ :** ಹೊಂಗೆಜ್ಜೆಗಳ ಮುಕುರದ ಘಂಟೆಗಳ . . . ವಜ್ರಮಯಧಾರೆಗಳಲೆಸೆದುದು ಭದ್ರಮಂಟಪ (ಕುಪ್ಯಾಅ. ೦೨-೦೨); ಪುಟ್ಟಪಾದಗಳ ಹೊಂಗೆಜ್ಜೆಗಳ್ ಘಲಿರೆನೆ ದಟ್ಟಡಿಯಿಡತೊಡಗಿದನು (ಪೋಹತ. ೦೬-೬೨); ಸುಗತಿಗುಲಿವ ಹೊಂಗೆಜ್ಜೆಗಳ ರಭಸದಿಂದೆಸೆವ ನಿರ್ಮಲ ವಾಜಿಯಂ ಸುವೇಗಂ ತುದು ನಿಲಿಸಿದಂ (ಶೈಮಿಪಾ. ೩-೦೦).

[ಪೊಂ (< ಪೊನ್) + ಗೆಜ್ಜೆ$_1$]

ಪೊಂಗೆಲಸ, ಹೊಂಗೆಲಸ (ನಾ). ಚಿನ್ನದ ರೇಕಿನ ಕೆಲಸ : ಪೊಸ ಪೊಂಗೆಲಸದ ಯೂಪಸ್ತಂಭಂಗಳ ಭಂಗಿಯನನುಕರಿಸಿದುವುಳ್ದೊಡೆಯಾ ಕಮಲ ದಳಾಂಬಕಿಗೆ (ಜಯಕಾ. ೩-೩೦). **ಹೊಂಗೆಲಸ :** ತೀವಿದವು ಹೊಂಗೆಲಸ ಗತಿಯಲಿ ಲೋವೆಗಳು (ಕುಪ್ಯಾಅ. ೦೨-೯) ; ಹೊಂಗೆಲಸದ ಪೊಚ್ಚಪದುಮ ವಿಟ್ಟರದೊಳು ಮಂಗಲಮಜ್ಜನಗೆಯ್ದು (ಪೋಹತ. ೨೦-೩).

[ಪೊಂ (< ಪೊನ್) + ಕೆಲಸ]

ಪೊಂಗೇದಗೆ, ಹೊಂಗೇದಗೆ (ನಾ). ಒಂದು ಬಗೆಯ ಕೇದಗೆ ; ಹೊಂಬಣ್ಣದ ತಾಳೆಹೂವು : ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆ ಯೆಂಬ ಪಲವು ಪೂಮಾಲೆಗಳಂ ಬಗೆಯಱಿದೋಲಗಿಪುದು ಮಾಲೆಗಾಱನಂ ಪೋಲ್ತುದಗ್ರಮಾಲ್ಯಮಹೀಜಂ (ಆದಿಪು. ೩-೩೬) ; ಸೋರ್ಮುಡಿಯಿಂ ಸೂಸಿದ ಪೊಂಗೇದಗೆಯ ಕುತ್ತುಂಗಱಿ (ಪಂಠಾಪೂ. ೨-೦೩ ಪ) ; ವನಮ ನುಱಿ ಬಳಸಿ ಕಂಗೊಳಿಪ ಪೊಂಗೇದಗೆಗಳೊಪ್ಪಿದುವು (ಪಪಪು. ೪೩-೦೬). **ಹೊಂಗೇದಗೆ :** ಕುರವಕದ ವಕುಳದೆಳೆಗೌಂಗಿನ ಹೊಂಗೇದಗೆಯ ಬಳಸಿ ನೊಳಂ . . . ಲತಾಮಂಟಪಂಗಳ್ ಮನಂಗೊಳಿಪುವು (ಕಾದಂಪೂ. ೯೭) ; ಈಳೆ ಹೊಂಗೇದಗೆಯ ಕಂಚಿಯ . . . ಕಿತ್ತೊರಸಿ ಹುಡಿಹುಡಿ ಮಾಡಿದನು (ಕೌತಿರಾ. ೦೦-೨೦) ; ಹೊಂಗೇದಗೆಯೆಸಳಂ ವಾಸಿಸಿ (ಜಯಕಾ. ೨-೧೪).

[ಪೊಂ (< ಪೊನ್) + ಕೇದಗೆ]

ಪೊಂಗೊಡ, ಹೊಂಗೊಡ (ನಾ). ಚಿನ್ನದ ಕೊಡ ; ಸ್ವರ್ಣಕುಂಭ : ಪೊಂಗೊಡಂ ತಮಾಳಪಲ್ಲವದೊಳೆ ಮುಚ್ಚಿವಂದದೊಳೆ ಚೂಚುಕ ಮಾಂತುದು ಕರ್ಪನಾಕೆಯಾ(ಪಂಪಭಾ. ೧-೦೨೫) ; ಬಿಳಿಯ ಸಾಸವೆ ಪೊಂಗೊಡ ನಷ್ಟಶೋಭೆ ಕನ್ನಡಿ . . . ಎಲ್ಲೆಡೆಗಳೊಳಲ್ಲಿಗಲ್ಲಿಗಧಿಕಂ ವಡೆದತ್ತು ಜನಾನು ರಾಗಮಂ (ಕಾಪ್ಯಾಪ. ೬೩೨) ; ಕೀಲಾಲಮನುಱಿ ಸಾಸಿರಸೂಳ್ವೊಂಗೊಡನಿಂ ತಂದು . . . ಅಭಿಷೇಕಂಗೆಯ್ದಂ (ಕಾಪ್ಯಪೇ. ೩-೪೫). **ಹೊಂಗೊಡ :** ತೊಳೆದ ಹೊಂಗೊಡದೊಳಗ್ಗಣಿಗಳಂ ತುಂಬಿ ತಂದಿಳುಹಿದರು ಕಾಮಿನಿಯರು (ಹಸಕಾ. ೩-೫೭) ; ಹೊಂಗೊಡನ ಹಿಡಿದೈತರಲಿ ನಾರಿಯರು (ಕುಪ್ಯಾಪ್ರೋ. ೧-೩೭) ; ಮಜ್ಜನಕುಷ್ಣಜಲ ಹೊಂಗೊಡದಲಿಳುಹಿದವು (ಶೊರಂಗಾ. ೩-೩-೩೪). [ಪೊಂ (<ಪೊನ್) + ಕೊಡ$_2$]

ಪೊಂಗೊಡೆ (ನಾ). ಚಿನ್ನದ ಛತ್ರಿ ; ಬಂಗಾರದ ಸತ್ತಿಗೆ : ಶಕ್ರಂಗೆತ್ತಿದ ಮಾಣಿಕಗೊಡೆ ಪೊಂಗೊಡೆ ಬೆಳ್ಳಿಗೊಡೆಯೆನಿಸಿದುದು ಶಶಿಬಿಂಬಂ (ಜಗಪಿ. ೦೬-೦೦೬) ; ಚೈತ್ರನೆತ್ತಿದ ಪಲವುಂ ಪೊಂಗೊಡೆಗಳೆನಿಸಿ ಪೂತು ಮನಂಗೊಳಿಸಿದುವೆಸೆವ ಕರ್ಣಿಕಾರಕುಜಂಗಳ್ (ಕುಸುಪಾ. ೩-೪೦).

[ಪೊಂ (<ಪೊನ್) + ಕೊಡೆ$_2$]

ಪೊಂಗೊಳಗು (ನಾ). ಪಶುಗಳ ಗೊರಸಿಗೆ ತೊಡಿಸುವ ಚಿನ್ನದ ಆಭರಣ : ಪೊಂಗೋಡು ಪೊಂಗೊಳಗು ಪೊಂಗೆಜ್ಜೆ ಘಂಟೆಗಳು ಪೊಂಗಲಶ ಪೊನ್ನ ಬಾಸಿಗ ತಂದು ವೃಷಭನಂ ಸಿಂಗರಿಸಿ (ಸಿಂಗಿರಾ. ೩-೦೩).

[ಪೊಂ (<ಪೊನ್) + ಕೊಳಗು]

ಪೊಂಗೊಳಲು (ನಾ). ಚಿನ್ನದ ಕೊಳಲು : ಪೊಂಗೊಳಲನೂದುತಿಹ ಯದುಕುಲೋತ್ತುಂಗ (ಪುರಂದ. ೩-೫೮ ಪಲ್ಲವಿ) ; ಪೊಂಗೊಳಲಾಂತು ನಿಂದು . . . ಬಾಜಿಪೋಜೆಯೊಳ್ (ಸಳವಿ. ೬-೨).

[ಪೊಂ (<ಪೊನ್) + ಕೊಳಲು (<ಕೊಟಲ್)]

ಪೊಂಗೋಂಟೆ, ಹೊಂಗೋಂಟೆ, ಹೊಂಗೋಟೆ (ನಾ). ಚಿನ್ನದ ಕೋಟೆ : ವರಯೋಷಿಜ್ಜನಮಂ ಪುರಂ ಪುರಮನೊಳ್ಪೊಂಗೋಂಟೆ ಪೊಂಗೋಂಟೆಯಂ ತರುಷಂಡಂ . . . ತಳ್ಕೊಳಕೆಯ್ಯೆ ಚಿಲ್ವನೊಳ ಕೊಂಡಿರ್ಕುಂ ತದುರ್ವೀತಳಂ (ಬರ್ಗಪು. ೦-೩೨) ; ಪ್ರಕಟಂಬೆತ್ತಿರ್ಪ ಪೊಂಗೋಂಟೆಯ ತೆನೆಯೆಸಟ್ಗಳ್ ಕೇಸರಂ . . . ತಾನೆನಲ್ಕೊಪ್ಪುಗುಂ . . . ತತ್ಕುಸುಮಪುರಿ (ದಶಳು. ೦-೨೫) ; ಬಗೆಗೊಂಡುದಾ ಪೊಳಲ ಪೊಂಗೋಂಟೆ (ಕುಲಾಸಾಂ. ೩-೬೨). **ಹೊಂಗೋಂಟೆ** : ಪುರದ ಮಧ್ಯದ ಮಣಿಮಯದ ಹೊಂಗೋಂಟೆ ರಂಜಿಸಲು (ಸಾಸಂಪ. ೨-೩೯) ; ಹೊಂಗೋಂಟೆ ಗಗನಮಂಡಲವ ಮುಟ್ಟಿಹುದು (ಕಂಪಿ. ೬-೯). **ಹೊಂಗೋಟೆ** : ಸುತ್ತಣ ಮಣಿಗಲ್ಲ ಹೊಂಗೋಟೆ ನೋಡಲು ತತ್ತಳ ಗೆಯ್ವುದಕ್ಷಿಗಳ (ಪೋಜಪ. ೩ ೬); ದಿನಮಣಿಯ ಮಣಿರಥದ ಗಾಲಿಗಳ ನೇಮಿಗಳ ಪೊಯ್ಲಿಂದೆ ಪುಡಿವಡೆದಯೆದ್ದ ಸಾಲ ಹೊಂಗೋಟೆದೆನೆಗೊನೆ ಗಳಿಂದೇಳ್ವ ದೂಳಲ್ಲಿಗಲ್ಲಿಗೆ ನಭದೊಳು ಸ್ಥೂಲದಂಡಾಕೃತಿಯನಾಂತವೋಲ್ (ಶೈಮಿಭಾ. ೩-೨೦). [ಪೊಂ (<ಪೊನ್) + ಕೋಂಟೆ]

ಪೊಂಗೋಡು (ನಾ). ಪ್ರಾಣಿಗಳ ಕೊಂಬುಗಳಿಗೆ ಹಾಕುವ ಒಂದು ಬಗೆಯ ಚಿನ್ನದ ಒಡವೆ : ಚಿನ್ನದ ಕೋಡಣಸು : ಪೊಂಗೋಡು ಪೊಂಗೊಳಗು . . . ಪೊನ್ನ ಬಾಸಿಗ ತಂದು ವೃಷಭನಂ ಸಿಂಗರಿಸಿ (ಸಿಂಗಿರಾ. ೩-೦೫). [ಪೊಂ (<ಪೊನ್) + ಕೋಡು$_5$]

ಪೊಂಗೋಲ್ (ನಾ). ೧. ಚಿನ್ನದ ದಂಡ ; ಬಂಗಾರದ ಕೋಲು : ಮೇಲ್ಗಳೊ . . . ಪಾರ್ವತಿಯ ಚಿತ್ತಮಂ ಸೋಲಿಸುವಾ ಕೀಲ್ಗಳೋ ಸಲ್ಲೀಲೆಯ ಪೊಂಗೋಲ್ಗಳೊ ಕಣಕಾಲ್ಗಳೋ ಲಲಾಟೇಕ್ಷಣನಾ (ಗಿರಿಕ. ೦೦-೬೦). ೨. ಚಿನ್ನದ ಬಾಣ : ಪೊಂಗೋಲ ಪಿಡಿದವರೊಳಾರಾರ್ಗೆ ನಮ್ಮಳ್ಕೆ ? (ಪಾರಸಿ. ೦೩-೩೦೦). [ಪೊಂ (<ಪೊನ್) + ಕೋಲ್$_1$]

ಪೊಂಘಟ್ಟ 'ಪೊಂಗಟ್ಟ' ನೋ.

ಪೊಂಚು$_1$, ಹೊಂಚು$_1$ (ಕ್ರಿ). ೧. ತಕ್ಕ ಸಮಯವನ್ನು ಕಾಯು. — ಎದುರುನೋಡು : ಪೊಂಚುವ ಪಾಯ್ವ ಪೊಯ್ವ ಕೊಯ್ವ . . . ಸಾವ ಬೇವನಿಬರಂ ಪದ್ಮಾಸನಂ ಕಂಡನು (ಪಬಪು. ೯೯-೩೨). ೨. (ಬೇಟೆಯಾಡುವಾಗ) ಗುಟ್ಟಾಗಿ ಅಡಗಿದ್ದು ಬೇಟೆಯ ಮೇಲೆ ಬೀಳಲು ಸಿದ್ಧವಾಗಿರು : ಬೆಳ್ಕಂ ಇರದೆ ಪೊಂಚಿ ಪಿಡಿದು ಹಾವು . . . ನುಂಗಲಾಱ ದಿರುತಿರಲು (ಕತ್ತ್ವಪ. ೩೭-೩). ೩. ಇತರರ ಚಲನವಲನಗಳನ್ನು ರಹಸ್ಯವಾಗಿ ಗಮನಿಸು ; ಕದ್ದು ನೋಡು; ಬೇಹು ಮಾಡು : ಪೊಂಗುವ ನುಣ್ಮೊಗಂ ಪೊಳೆದು ಪೊಂಚುವ ಸಂಚಿನ ನೋಟದಟ್ಟಿಯಿಂದಂಗಜ ವೀರನಾರುಬಟೆಯಂ ಪಟುಗೆಯ್ಯುತೆ ಬಾಜಿಪೋಜೆಯೊಳ್ (ಸಳವಿ. ೬-೨). ೪. ಯಾರಿಗೂ ಕಾಣದಂತೆ ಗುಪ್ತವಾಗಿರು ; ಅಡಗಿ ಕುಳಿತಿರು : ಕಾಂತರಾಲಿಂಗನದೊಳು ಪೊಂಚಿರ್ದ ಕಾಮಿನಿಯರೆದೆ ಧಿಗಿಲೆನಲ್ಕೂಗಲುಂಚ ದೊಳ್ಕೋಳಿಗಳ್ (ಶೈಮಿಭಾ. ೨೬-೨೯). **ಹೊಂಚು$_1$** : ೧. ಮಿಂಚಿದವು ದೆಸೆಗಳಲಿ ಗಮನಕೆ ಮುಂಚಿದವು ಹಂಸೆಗಳು ನಭದಲಿ ಹೊಂಚಿದುದು ಜೀವನಕೆ ಜೀವನವಿರಹಿನಿಕುರುಂಬ (ಕುಸ್ಕಾಲ. ೦೯-೨೦); ಕತ್ತಲೆಯೊಳು ಮಿಂಚುವ ವಿಭೂಷಣಕೆ ಮುಸುಕಿಟ್ಟು ಸುಳಿವರ್ಗೆ ಹೊಂಚುವ ಚಮತ್ಕೃತಿಯನಳವಡಿಸಿ ನೆನಹಿಂಗೆ ಮುಂಚುವ ಪದನ್ಯಾಸಮಂ ಕಲಿತು ನಡೆವ ಜಾರೆಯರ ಚದುರೆಸೆದಿರ್ದುದು (ಶೈಮಿಭಾ. ೨೬-೦೦) ; ತನಗಾದ ಅಪಮಾನಕ್ಕೆ ಪ್ರತೀಕಾರವನ್ನು ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ಸಮಯವನ್ನು ಹೊಂಚಲು ಮೊದಲಿಟ್ಟನು (ಬಸಳ. ೦೫). ೨. ಆ ಪೊಸತಾಗಿ ಸೊರ್ಕಿದಿಭಮಂ ಪದೆದೀಕ್ಷಿಸಿಯೊರ್ವ ಧೀವರಂ ಕೋಪದೊಳೊಯ್ಯನೊಯ್ಯನುಱ್ ಹೊಂಚಿ ನಿಕುಂಜಮನೊತ್ತುಗೊಂಡು ಮೇಣ್ಚಾಪಮನಾರ್ದು ನೋಡಿ ತೆಗೆದಂದಿಸೆ (ಉದ್ಕಟ. ೨-೫೫); ತೂಳಿ ದಾಡೆಯಲಿರಿಸಿ ಮೆಟ್ಟಿಸಿ ಕಾಲುಗೊಲೆಯಲಿ ಸುಂಡಿಲಲಿ ಸಮಸೀಳ ತೋಱಿಸಿ ಹಾಱಿ ಹೊಂಚುವ ವೀರವಾನರರು . . . ಜೋದರುಗಳಂತಕನಾಲಯವ ಹೊಗಿಸಿದರು (ಕೊರಣಾ. ೬-೨೦-೦೯) ; ತಲೆಯೆತ್ತುವ ಮೀಂಗಳನೋರಂತೆ ಮುರಿದಿಕ್ಕು ತಲಿಹ ಬಕದಂತೆ ಹೊಂಚುತೆ ಕುಳಿತಿರುವನು ಕಾದು ! (ಕಂಪಿ. ೯೨-೩). ೫. ಗುಪ್ತವಾಗಿ ಪ್ರಯತ್ನಿಸು ; ರಹಸ್ಯವಾಗಿ ಕಾರ್ಯ ನಡೆಸು : "ಹೊಂಚು-ಸಂಕೇತೋದ್ಯೋಗೇ" (ಕಪುಣಾ). ೬. ಉಪಾಯ ಮಾಡು; ತಂತ್ರವನ್ನು ಹೂಡು : ನಿನ್ನೀ ನಿಲವು ನೀ ಹೊಂಚಿಹುದು ಸಮರಕೆ ಬಂದ ಸಿಂಗರವೊ (ಉತ್ತರಾ. ೩೨-೭೯). ೭. ಸೂಸು; ಹೊರಹೊಮ್ಮು: ಹರಿಗೆಗಳ್ ಮೇಘದೊಡ್ಡಣೆ ಕತ್ತಿಗಳ ತೊಳಪದಿರವೆ ಹೊಂಚುವ ಮಿಂಚು ಕವಿದೆಸೆವ ಸಾಯಕದ ಸರಿಯೆ ಸರಿವಳೆ (ಪಬಪು. ೩೮-೩೭); ನಳಿತೋಳ್ಗಳಿಂ ಜಡಿದು ಝಳಪಿಸುವ ಕೈದುಗಳ ದೀಧಿತಿಗಳು ಹೊಂಚಿದುವು ವಜ್ರಮಣಿ ಭೂಷಣದ ಕಾಂತಿಯಿಂ (ಶೈಮಿಭಾ. ೦೬-೭); ನಿನ್ನೆ ನಡೆದಂತಿಹುದ ಮರೆವೆನೆಂತು ? . . . ಸಂಜೆಸೂರ್ಯನ ಸೌವರ್ಣರಾಗದ ಕಾಂತಿ ಹೊಂಚಿ ಎಮ್ಮಿಬ್ಬರನು ಹೊದಿಸಿ ಬೆಳಗಿದುದ (ವಿಸೀಗೀ. ೭೯-೦೬). ೮. (ಆಹಾರ, ಹಣ ಮೊದಲಾದುವನ್ನು) ಹೊಂದಿಸಿಕೊಳ್ಳು; ಜೋಡಿಸಿಕೊಳ್ಳು: ಸಾಮಾನ್ಯವಾಗಿ ಎಂಥ ಬಡರಾಷ್ಟ್ರವಾದರೂ ಯುದ್ಧಕಾಲದಲ್ಲಿ ಹಿಮಾಲಯ ದೆತ್ತರಕ್ಕಾದರೂ ಹಣವನ್ನು ಹೊಂಚಲು ಶಕ್ತವಾಗುತ್ತದೆ (ಶಿಕ್ಷದ. ೭೩೬). ೯. ಅಳವಡಿಸು ; ಹೊಂದಿಸು ; ಜೋಡಿಸು : ಪಂಚರತ್ನದ ಕಾಸೆ ನವರತ್ನಭೂಷಣ ಮಿಂಚುಮುತ್ತಿನ ಮೊಲೆಗಟ್ಟು ಹೊಂಚಿ ರತ್ನದೊಳು ನಿರ್ಮಿಸಿದ ಪುತ್ತಳಿಗಳ ಸಂಚಯದಂತಿದ್ದರಾಗ (ಭರಸ. ೦೩-೯೮).

[ದೇ.೩ ತುಳು. ಅಂಚು; ತೆಲು. ಪೊಂಚು]

ಪೊಂಚು$_2$, ಹೊಂಚು$_2$ (ನಾ). ೧. ಅಡಗಿಕೊಂಡು ಕಾಯುವಿಕೆ : ಗುಪ್ತವಾಗಿ ನಿರೀಕ್ಷಿಸುವಿಕೆ : ಪದವಮೆತ್ತಮಿಡುತುಸಿರ್ವಿಡದೆ ಪೊಂಚಿ [ಚಿ]ನೊಳ್ ಶಾರ್ದೂಲವೊಂದು ಮುಂಗಡೆಯ ಮೆಳೆಯ ಒತ್ತಿನೊಳು ಮೇವ ಮೃಗಕವ್ವಳಿಸುತಾರ್ದು . . . ಮತ್ತರುಣಜಲವ ಪೀರಿದುದು (ಪಂಕಾರಾ. ೩-೬-೪೭). ೨. ಸೇರಿಕೆ ; ಜೋಡಣೆ ; ಹೊಂದಾಣಿಕೆ : "ಪೊಂಚೆನೆ ಪೊರ್ದಿದ ಬಗೆ" (ರನ್ನಕಂ. ೩-೩). **ಹೊಂಚು$_3$** : ೨. ಈ ಕತೆಗಳಲ್ಲಿ ಸೋದ್ದಿಶ್ಯವಾದ ಆಕಾರರಚನೆಯ ಪ್ರಯತ್ನವಿದೆ. ಇಲ್ಲಿಯೂ ಪಾತ್ರಗಳಿರುತ್ತವೆ, ಸನ್ನಿವೇಶಗಳಿರುತ್ತವೆ ; ಆದರೆ ಅವುಗಳನ್ನು ಜೋಡಿಸಿರುವ ಕ್ರಮದಲ್ಲಿಯೇ ಹೊಸ ಅರ್ಥವೊಂದು ಪ್ರಕಟವಾಗುವಂತೆ ಅವುಗಳ ಹೊಂಚು ಕಾಣುತ್ತದೆ (ಹೊಸಕ್ಷಿ. ೨೮೩). ೩. ಗೂಢಚರ್ಯೆ ; ಬೇಹು. ೪. ಉಪಾಯ ; ತಂತ್ರ ; ಹಂಚಿಕೆ : ಅಳಿಯ ಆ ಆಕರ್ಷಣೆಗೆ ಸುಲಭವಾಗಿ ಬಲಿಯಾಗುತ್ತಾನೆಂದು ಏರ್ಪಡಿಸಿದ ಇಂದ್ರಾಣಿಯ ಹೊಂಚು ವಿಫಲವಾಗಲಿಲ್ಲ (ಹೊಸಕ್ಷಿ. ೨೫) ; ಅವರ ರಾಜಕೀಯ ಹೊಂಚು-ಸಂಚುಗಳು ಜಗತ್ತಿನಲ್ಲಿ ಯಾವೆಡೆಗಳಲ್ಲಿ ಎಷ್ಟು ಯಶಸ್ವಿಯಾದವು ? (ಪೂಪಾದ. ೦೭೦). ೫. ಸಿದ್ಧತೆ ; ಹವಣಿಕೆ : ದಾಯಾದಿಗಳು ದತ್ತಕ ಪುತ್ರನನ್ನು ಕೊಡಲು ನಾ ಮುಂದೆ ನೀ ಮುಂದೆ ಎಂದು ಹೊಂಚಿನಲ್ಲಿಯೇ ಒದ್ದಾಡುತ್ತಿದ್ದರು (ಎಡಾಭ. ೦೦೪).

ಹೊಂಚು ಕಾಯು = ಸರಿಯಾದ ಸಮಯಕ್ಕಾಗಿ ರಹಸ್ಯವಾಗಿ ಕಾಯು : ಒಬ್ಬ ಹುಡುಗನನ್ನು ಹಿಡಿದು ಅವನ ಸಂಗಡ ಹೊಂಚು ಕಾದು, ಅವಳು ಆನಂದನೊಡನೆ . . . ತಿರುಗಾಡಲು ಹೋಗುವುದನ್ನು ಕಂಡುಹಿಡಿದ (ರೂರಸ. ೨೦೮) ; ಬೆಕ್ಕು, ಏಡಿ ಮುಂತಾದುವು ತಮ್ಮ

ಆಹಾರಕ್ಕಾಗಿ ಹೊಂಚು ಕಾಯುತ್ತವೆ (ಕೀಚಾಕೃ. ೧೯೯). ಹೊಂಚು ಕೇಳು = ರಹಸ್ಯವಾಗಿ ಕೇಳಿಸಿಕೊಳ್ಳು; ಕದ್ದು ಕೇಳು : ಎಲ್ಲರೂ ಅವನಿಗೆ ಕಾಣಿಸದಂತೆ ಹೊಂಚು ಕೇಳುತ್ತಿದ್ದರು (ಗೋಪುರ. ೩). ಹೊಂಚು ಜಾಗ = (ಕಳ್ಳರು ಹಾಗೂ ಬೇಟೆಯಾಡುವ ಪ್ರಾಣಿಗಳು) ಅಡಗಿಕೊಂಡು ಕಾಯುವ ಸ್ಥಳ.— ರಹಸ್ಯವಾದ ಜಾಗ : (ಕಿ). ಹೊಂಚು ನೋಡು = ಗುಟ್ಟಾಗಿ ನೋಡು ; ಕದ್ದು ನೋಡು : ಗುಬ್ಬಿಗಳ ಮೇಲೆ ಎರಗಲು ಕಾಯುತ್ತಾ ಬೆಕ್ಕು ಹೊಂಚು ನೋಡುತ್ತಿದೆ (ರೂಗಿ). ಹೊಂಚು ಹಾಕು = ೧. ಅಡಗಿಕೊಂಡು ಕಾಯುವಂ ; ಗುಪ್ತವಾಗಿ ಸಮಯವನ್ನು ನಿರೀಕ್ಷಿಸು : ಅಲ್ಲಲ್ಲಿ ಕಂಡು ಕಾಣದಂತೆ ಹೊಂಚು ಹಾಕುತ್ತಿದ್ದ ಇತರರೂ ಬೆರಗಾಗಿ ನೋಡುತ್ತ ವಿಷಯವೇನೆಂದು ತಿಳಿಯದಿದ್ದರೂ ಏನೋ ಒಂದು ದೊಡ್ಡ ಕಾರ್ಯವನ್ನು ಸಾಧಿಸಿದವರಂತೆ ಸಮಾಧಾನಗೊಂಡರು (ಪಂಚ. ೬೬); ಹೀರೆಯು ಸ್ವಲ್ಪ ಮುಂಚೆ ಬಂದಿದ್ದು ಕಿಟಕಿಯ ಹತ್ತಿರ ಹೊಂಚು ಹಾಕಿ ಎಲ್ಲವನ್ನೂ ಕೇಳಿ ಹೋಗುತ್ತಿದ್ದಾಗ, ದೇವೇಂದ್ರನ ಕೈಗೆ ಸಿಕ್ಕಿದಳು (ಬಂಕಿಮ. ೩೧). ೨. ಬೇಟೆ ಮೊದಲಾದುವುಗಳಿಗಾಗಿ ಅಡಗಿಕೊಂಡು ಕಾಯು ; ಗುಟ್ಟಿನಿಂದ ಮೇಲೆ ಬೀಳಲು ಸಿದ್ಧವಾಗಿ ನಿರೀಕ್ಷಿಸು : ಒಂದು ದೊಡ್ಡ ಹುಲಿ ಬೆಕ್ಕಿನಂತೆ ಹೊಂಚು ಹಾಕುತ್ತ ಕುಳಿತಿದ್ದುದನ್ನು ಅವರು ನೋಡಿದರು (ಕಳಹು. ೩) ; ದೂರದಿಕ್ಕಿನ ಅಂಚಿಗಿದೆ ಹೊಸಹೊಂಚು ಹಾಕಿದ ಚೆಂಡವು (ನಿಂಮು. ೪೭-೦೪). ೩. ಉಪಾಯವನ್ನು ಮಾಡು ; ತಂತ್ರವನ್ನು ಹೂಡು : ಪೋಗದೊತ್ತಾಯದಿಂ ದನದ ಹಟ್ಟಿಯೊಳಿಹಳ್ಬಂಡಿ ಭೀತಿ ಲಜ್ಜೆಗಳಿಲ್ಲದೆ ಮತ್ತೇನು ಹೊಂಚು ಹಾಕಿಹಳೊ ಸಂಶಯವಿಹುದು (ಮಲ್ಲಿಕ. ೭-೩೪) ; ಮುಸಲ್ಮಾನರು . . . ಈ ಹಿಂದೂರಾಜ್ಯವನ್ನು ಸಮೂಲ ನಾಶಮಾಡಲು ಹೊಂಚು ಹಾಕಿದ್ದುದೂ ಸುಪ್ರಸಿದ್ಧವಿದೆ (ಯುಕ್ಷಪ್ರ. ೨೦). ೪. ಜೊತೆ ಮಾಡು ; ಹೊಂದಿಸು : ನಿನ್ನೆ ದೊಡ್ಡಪ್ಪ ನನ್ನ ಮದುವೆಯ ಪ್ರಸ್ತಾಪ ಮಾಡಿದರು. ಅವರು ಯಾರನ್ನೋ ಹೊಂಚುಹಾಕಿಕೊಂಡಿರುವಂತಿದೆ (ವಾತ್ಸಲ್ಯ. ೨೬೯). [<ಪೊಂಚು$_1$. / ತೆಲು. ಪೊಂಚು]

ಪೊಂಜಗಲಿ, ಪೊಂಜಗುಲಿ (ನಾ). ಚಿನ್ನದ ಕಟ್ಟೆ; ಬಂಗಾರದ ವೇದಿಕೆ: ಪಸೆವಾಸಿನ ಪಟ್ಟವಟಿಯ ದುಗುಲದ ರುಚಿಗಳ್ ಪಸರಿಸೆ ಪೊಂಜಗಲಿ ವಿರಾಜಿಸುತಿರ್ದುದು (ಪಗಂ. ೦೦-೯೫) ; ಬೆಳ್ಮುಗಿಲ ಕೆಳಗಳವಡಿಸಿದ ಸುರಯಿಯರಲ ಪರಾಗದ ಪೊಂಜಗಲಿಯ ಮೇಲಣಸುಗೆದಳಿರಲರ್ವಾಸಿನೊಳರಸಿ ವೆರಸಿ ಕುಳ್ಳಿರ್ದು (ರಾಜಶೇ. ೦೦-೩೦ ವ). ಪೊಂಜಗುಲಿ : ಪೊಂಜಗುಲಿಯೊಳಗೆ ಮನಮೊಸೆದು ಮಂಡಿಸಿರಲು (ಪಪಪು. ೪೬-೯).

[ಪೊಂ (<ಪೊನ್) + ಜಗಲಿ]

ಪೊಂಜಗುಲಿ 'ಪೊಂಜಗಲಿ' ನೋ.

ಪೊಂಜರಪಣಿ (ನಾ). ಚಿನ್ನದ ಸರಪಣಿ : ವಾಮಕರದ ಪೊಂಜರಪಣಿಯು ಬೆರಲ ಮಣಿಮುದ್ರಿಕೆಗಳ . . . ಸಂಗರಧೀರರಾಜಸುಕುಮಾರರೊಪ್ಪಿರ್ದರು (ಪಪಪು. ೬-೩). [ಪೊಂ (<ಪೊನ್) + ಸರಪಣಿ]

ಪೊಂಜರಿ (ನಾ). ಚಿನ್ನದ ಮಳೆ; ಸುವರ್ಣವೃಷ್ಟಿ : ತನುವೆಲ್ಲ ಮಿಾಟಾದ ಕನಕವರ್ಣಮದಾಗೆ ಮನ ನೆನೆದನಿತು ಪೊಂಜರಿಯಾ ನೆನೆದಾಗಲುಗುಳ್ವಂ (ಶೃಕರೇ. ೨-೦೫೫). [ಪೊಂ (< ಪೊನ್) + ಸರಿ$_5$]

ಪೊಂಜರಿಗೆ (ನಾ). ೧. ಚಿನ್ನದ ಎಳೆ ; ಬಂಗಾರದ ತಂತಿ : ಕಿವಿಗಳೊಳ್ ಪೊಂಜರಿಗೆಯ ಮಿಸುಪ ತುದಿಯೊಳ್ ರನ್ನಮಾಗಾಯ್ಗಳೊಲೆದಾಡೆ (ಪಪಪು. ೩-೩೬) ; ಅನಿತುಂ ತಂತ್ರಿಗಳಿಂದವೊಂದೆ ದನಿಯುಣ್ಮೆತ್ತಂಬಿನಂ ಕೂಡೆ ನುಣ್ಣನೆ ಕಂಬಚ್ಚಿನೋಳ್ಟ ಪೊಂಜರಿಗೆಯಂ ಪೋಲ್ಗುಂ (ಪಕವಿ. ೯-೦೦೩). ೨. ಬಂಗಾರದ ಕಲಾಬತ್ತು ; ಚಿನ್ನದ ಜರಿ : ಪೊಸ ಧುಗುಲದುಡೆಯಿನಮರ್ದೊಪ್ಪುವ ಪೊಂಜ[ಪಾಠಾಂ. ಜು]ರಿಗೆಯುಮುಜ್ವಲ ನಾನಾಭರಣಂಗಳುಮೋಂ ವಿಲಾಸಮಂ ಮಾಡಿದುವೋ (ಸುಕುಮಾ. ೧೦-೪೬); ಎಸೆವುವು . . . ಕೊಂಬವರ್ಗೆ ತೋರಿಪ ಬಲ್ವಲೆಯಂ ಪಟ್ಟಿಸೀರೆಗಳ ಪೊಂಜರಿಗೆಗಳ್ಪೂಸಿಗರ ಪಸರಪಸರದೊಳಗೆ (ಕೀಪಶಾ. ೧೬-೬).

[ಪೊಂ (<ಪೊನ್) + ಸರಿಗೆ]

ಪೊಂಜಲಗೆ (ನಾ). ಚಿನ್ನದ ಸಲಾಕೆ : ಪೊಂಜಲಗೆಯಂತೆ ಕಿರ್ಚಿಂದಂ ಜಾನಕಿ ಶುದ್ಧೆಯಾಗೆ (ಶಂಗಾಪಾ. ೦೬-೩೦). [ಪೊಂ (<ಪೊನ್) + ಸಲಗೆ$_2$]

ಪೊಂಜಳಂಬ (ನಾ). ಚಿನ್ನದ ಎಳೆಯಿಂದ ಮಾಡಿದ ಮುಸುಕು,— ಹೊದಿಕೆ : ವಿಳಸದ್ ಭರ್ಮ್ಯಹರ್ಮ್ಯಪ್ರಭಾವಿಸ್ಫುರಿತಾಭ್ರಂ ಪೊಂಜಳಂಬಂ ಮಿಸುಪವೊಲಿರೆ ಕಾಂಚೀಪುರಂ ಕಣ್ಗೆ ತೋರ್ಕುಂ (ಪೃಕಥಾ. ೦೦-೩). [ಪೊಂ (<ಪೊನ್) + ಜಳಂಬ]

ಪೊಂಜಾಜಿ (ನಾ). ಒಂದು ಬಗೆಯ ಜಾಜಿಹೂವು ; ಹೊಂಬಣ್ಣದ ಜಾಜಿ : "ಚಾರುಮೈದ—ಪೊಂಜಾಜಿ" (ಅಕಾಪಾ. ೦೦-೨೫).

[ಪೊಂ (<ಪೊನ್) + ಜಾಜಿ$_1$ (<ಜಾದಿ)]

ಪೊಂಜಾಮರ (ನಾ). ಚಿನ್ನದ ಹಿಡಿಕೆಯುಳ್ಳ ಚಾಮರ : ಪೊಂಜಾಮರ ಮುಱ ತೊಳಪಾರಂಜಿಯ ಬೀಸಣಿಗೆ ಗಿಂಡಿ ಹಡಪಂ ಮಣಿಕಾಳಾಂಜಿಯ ನಾಂತೆಸೆವರ್ . . . ಪಲಂಬರ್ ಸತಿಯರ್ (ಉದ್ಧಪ. ೨-೯).

[ಪೊಂ (<ಪೊನ್) + ಚಾಮರ]

ಪೊಂಜಾಳಿಗೆ, ಹೊಂಜಾಳಿಗೆ (ನಾ). ಚಿನ್ನದ ನಾಣ್ಯಗಳಿರುವ ಚೀಲ, —ಹಮ್ಮಿಣಿ : ಪೊಂಜಾಳಿಗೆಯೊರಡ ವಿನಯದಿಂದಿಬ್ಬರು ಜಂಗಮಕಿತ್ತು (ಪೋಳಿಪು. ೩-೬೯) ; ಪಣಾಂಗನೆ ಕನಲ್ದು ಪೊಂಜಾಳಿಗೆಯಂ ನೂಂಕಿ ಕಳೆದು (ಪೃಕಥಾ. ೦೬-೧೩ ವ). ಹೊಂಜಾಳಿಗೆ : ಮಾರಯ್ಯನವರ ವಚನಗಳು, ಬಸವಣ್ಣ . . . ಹೊಂಜಾಳಿಗೆಯನಿರಿಸಿ ಹೋದ ಸಂಗತಿಯನ್ನು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಹೇಳುತ್ತಿವೆ (ಪೋಳಿಪಾ. ೯೦ ಪ್ರಸ್ತಾವನೆ).

[ಪೊಂ (<ಪೊನ್)+ಜಾಳಿಗೆ$_1$]

ಪೊಂಜುರಿಗೆ, ಹೊಂಜುರಿಗೆ (ನಾ). ಚಿನ್ನದ ಕಿರುಗತ್ತಿ ; ಬಂಗಾರದ ಕಠಾರಿ : ಕರೆವೆರಸಿದ ಹೊಸದುಗುಲದ ತೆರಳ್ಳೆವೆತ್ತುಡೆ ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ ಜನಮನೆಂ ಮನಂಗೊಳಿಸಿದುದೊ (ಆಪಪು. ೪-೩೬) ; ತರತರದಿನೆಸೆವ ಕರೆಗಳ್ಪೆರಸಿದ ಪೊಸದುಗುಲದುಡೆಯಿನಮರ್ದೊಪ್ಪುವ ಪೊಂಜುರಿಗೆಯುಂ . . . ಏಂ ವಿಲಾಸಮಂ ಮಾಡಿದುವೋ (ಸುಕುಮಾ. ೧೦-೪೬) ; ಬಿಗಿದುಡೆಯೊಳ್ಪೊಂಜುರಿಗೆಯಂ ಕಟ್ಟಿ (ರಾಶಕೇ. ೬-೦೦ ವ) ; ಪೊಂಜುರಿಗೆಯೆಂದೇ ಎರ್ದೆಗೊತ್ತಿದೆಂ (ರಾಮಾಕೃ. ೨೯-೨೬). ಹೊಂಜುರಿಗೆ : ನಡುವಿನೊಳು ಚೆಲ್ವಂಕೆಗೊಡೆಸೆವ ಹೊಂಜುರಿಗೆ (ಪರಕ. ೨೯ ೦೩). [ಪೊಂ (< ಪೊನ್)+ಸುರಿಗೆ$_2$]

ಪೊಂಜೂಜಿ (ನಾ). ಚಿನ್ನದ ಸೂಜಿ : ಪೊಂಜೂಜಿ [ಪಾಠಾಂ. ಜೂಜಿ, ಪೂಜಿ]ಯೊಂದೊಂದು ಚೂರ್ಮೊನೆಗೊಂಡೊಂದಲರಾಯ್ದು ಕೋಪ ತೆಜದಿಂದಿರ್ಪಂತು ಪುಲ್ಲಾಂಬುಜಾನನೆ ಪುಷ್ಪಾಂಜಲಿಗೊಟ್ಟಳ್ (ಅರ್ಧನೇ. ೩-೯೯). [ಪೊಂ (< ಪೊನ್) + ಸೂಜಿ]

ಪೊಂಜೂಡಗ (ನಾ). ಚಿನ್ನದ ಕಡಗ ; ಬಂಗಾರದ ಬಳೆ : ಕರ್ಣದ ಕನನ್ಮಣಿಕುಂಡಲವೊಂದೆ ಕೆಯ್ಯ ಪೊಂಜೂಡಗವೊಂದೆ . . . ಒಪ್ಪಿರೆ (ಶಂಪ್ರಪು. ೦೦-೭) ; ಪೊಂಜೂಡಗವ ಪಿಡಿದ ಕಯ್ದುಡಿಯ ನೋಳ್ಪುದೆನೆ (ಕಾಲೂರ. ೦೪೮-೩೨೯). [ಪೊಂ (<ಪೊನ್)+ಸೂಡಗ]

ಪೊಂಜೂಲು (ನಾ). ಚಿನ್ನದ ಎಳೆಗಳಿಂದ ಮಾಡಿದ ಹೊದಿಕೆ ; ಜರತಾರಿ ಹೊದಿಕೆ : ಆಂತ ರತ್ನಂಗಳೇ ಮಣಿಪೊರಜೆ ಕಳಧೌತಕಾಂತಿ ಪೊಂಜೂಲೆನೆ ವಿರೂಪಾಕ್ಷನಡರೆ ಬೊಮ್ಮಂ ತಿರ್ದಿ ತೋರ್ಪ ಪಟ್ಟದ ದಂತಿಯೆಂದೆನಲ್ ಕನಕಾಚಲಂ ಮೆಱೆದುದು (ಪಪಪು. ೨-೬). [ಪೊಂ (<ಪೊನ್)+ಜೂಲು$_2$]

ಪೊಂಜೆಂಡು (ನಾ). ಚಿನ್ನದ ಚೆಂಡು : ರನ್ನದ ಚೆಂಡು ಮೇಲೆ ಪೊಂಜೆಂಡು

ಮೌಕ್ತಿಕದ ಚೆಂಡಾದಂತನುಕ್ರಮದೊಳಿಂದುಬಿಂಬಂ ಸಾಲಾಗಿಯರುಣಂ ಪಿಶಂಗಮಾ ಸಿತರುಚಿಗಳೋಲೈಸಿ . . . ಚೆಲ್ವಾದುದು (ಪಂಪು. ೯-೦೬).

[ಪೊಂ (<ಪೊನ್) + ಚೆಂಡು (<ಸೆಂಡು)]

ಪೊಂಜೆಳೆ, ಹೊಂಜೆಳೆ (ನಾ). ಚಿನ್ನದ ಕೋಲು ; ಬಂಗಾರದ ಬೆತ್ತ : ಗಂಧಸಿಂಧುರದಪೊಲ್ಲಡೆಯನಾಂತ ನವಯೌವನೆ . . . ಪೊಂಜೆಳೆಯ ಮೆಯ್ಯ ಪದ್ಮಿನಿ (ಸಂದಿಪ್ರ. ೭-೦೦). **ಹೊಂಜೆಳೆ** : ಕರತಳದೊಳು ಹೊಂ[ಪಾಠಾಂ. ಪೊಂ]ಜೆಳೆಯನು ಪಿಡಿದು ತನ್ನರಸಗಂಗಜಲಾಸ್ಯವನು ಭರದಿಂದುಪದೇಶಿಪ ಲಾಸ್ಯಕಿಯೆನೆ ತರುಣಿ ಕಣ್ಗೊಪ್ಪವಡೆದಳು (ಸಂಪ್ರಶಾಂ. ೯-೨೯) ; ಹೊಂಜೆಳೆಯಂದದಿ ಬಳಕುವ ಕಾಯದಿ (ಜೈಸಿಕ. ೩-೦೬೦).

ಪೊಂಜೆಳೆಮೆಯ್, ಹೊಂಜೆಳೆಮೆಯ್, ಹೊಂಜೆಳೆಮೈ = ಚಿನ್ನದ ಬೆತ್ತದಂತೆ ಹೊಳೆಯುವ ಶರೀರ ; ಸುಂದರವಾದ ದೇಹ : ಪೊಂಜೆಳೆಮೆಯ್ಯ. . . ಗೌರೀದೇವಿಯೆಂಬ ತರುಣಿಯಂ ಮದುವೆಯಂ ಮಾಡಿ (ಹಮ್ಮೀರ. ೨-೩೨ ವ) ; ನೀರಾಟಮನಾಡಿ ಪೋದ ವಾರನಾರಿಯರ ಪೊಂಜೆಳೆಮೆಯ್ಯೊಳ್ ರಂಜಿಸಿರ್ದ ರಜನೀರಜಂಗಳಿಂ ಕದಡೇಳ್ದು (ರಾಜಶೇ. ೦೨-೩೯ ವ); ಅಂಜನದಲರುವಕ್ಕಿಯ ಬಣ್ಣಮೆನೆ ತೋರ್ಪ ಕಂಜಲೋಚನನ ಮೂರುತಿಯ ರಂಜಿಸುವಂತಲರ್ಗಂಗಳೊಳಿಡುವರು ಹೊಂಜೆಳೆಮೆಯ್ಯ ನೀಱಿಯರು (ಪರ್ಧಸ. ೯-೨) ; ಮೊಳೆಯೆ ಹೊಂಜೆಳೆಮೈಯೊಳಾಗಳೆ ಪುಳಕಸಸಿ ತನಿಮೋಹರಸ ಮನದೊಳಗೆ ಕಾಳ್ಪುರವಾಗೆ ಸಾರ್ದಳು ರೋಹಿಣೀದೇವಿ (ಸಾಳ್ವಭಾ. ೦೮-೩೭). [ಪೊಂ (< ಪೊನ್) + ಸೆಳೆ]

ಪೊಂಜೆಳೆಮಂಚ (ನಾ). ಚಿನ್ನದ ತೂಗುಮಂಚ : ಪೊಂಜೆಳೆಮಂಚದ ಮೇಲೆ ಪೂರೆಯೊಳೇಱುಂಪೊವನೆ ಲಜ್ಜಾತುರೆ ಕಾಂಚನಕಂಜವದನೆ ತಲೆವಾಗಿರೆ (ಪಡುಕಾ. ೯-೧೧). [ಪೊಂ (<ಪೊನ್) + ಸೆಳೆಮಂಚ]

ಪೊಂಜೆಱಂಗು (ನಾ). ಚಿನ್ನದ ಎಳೆಗಳಿಂದಾದ ಸೆರಗು ; ಜರತಾರಿಯಿರುವ ಸೆರಗು : ವಿಟಜಂಗಮಂ ಬಂದಱುವೆ ಕರೆಸಿ ನಲ್ಲಳ ಸೀರೆಸೆಱಗು ವಿಡಿದೆಳೆವುತಿರಲು ಅಂಗಸ್ಥವಸನವಂತಿರ್ದುದಱೊಳ್ಪೊಂಜೆಱಂಗು ರಂಗಿಸೆವ ಸೀರೆಗಳಪರಿಮಿತಮುದಿಸೆ ಜಂಗಮಾವಳಿ ವಣಿಯಲಿತ್ತು (ರಾಶಕ ೬-೪೦).

[ಪೊಂ (<ಪೊನ್) + ಸೆಱಂಗು]

ಪೊಂಜೊನ್ನಲಿಗೆ (ನಾ). ಚಿನ್ನದ ಕೊಡ,—ಕಲಶ : ಜಲಜನ್ಮಕೋರಕವ್ಯಯ ಸೊಕ್ಕುಮಿಕ್ಕಾನೆದಲೆ ಗಾಲಿವಕ್ಕಿ ಪೊಂಜೊನ್ನಲಿಗೆಗಳ ಚೆಲ್ವನಲೆದು ಮಲೆದು . . . ನೆಲವೊಲೆಗಳ್ . . . ಎಡ್ಡಂಬಡೆದವು (ಉತ್ಪಲೇ. ೪-೨೦).

[ಪೊಂ (<ಪೊನ್) + ಸೊನ್ನಲಿಗೆ]

ಪೊಂಡವಕೆ (ನಾ). ಚಿನ್ನದ ಪೀಕದಾನಿ : ಶಕ್ತಿವ್ರಜಮಾನ್ಯೆ ಪೊಂಡವಕೆಯಾಂತಿರ್ದಾದಿದೇವೀಸಮುತ್ಕರವೊಲ್ದಾಂತಿರೆ ರನ್ನವಾವುಗೆಯನೊಪ್ಪಿರ್ದಂ ಭವಾನೀಧವಂ (ಶಪಕಂ. ೦-೬೯) ; ಪರಮಗಾಯತ್ರಿ ನಿಂದಿರೆ ಶಕ್ತಿಗಳ ವಿತತಿ ಪೊಂಡವಕೆಯೊಲ್ದಾಂತಿರಲ್ (ಶುಪಾಪು. ೦-೬೦).

[ಪೊಂ (<ಪೊನ್) + ಡವಕೆ]

△**ಪೊಂತಕಾಱಿ** 'ಹೊಂತಕಾಱಿ' ನೋ.

△**ಪೊಂತಕಾಱಿ** 'ಹೊಂತಕಾಱಿ' ನೋ.

ಪೊಂತಿವಣೆ (ನಾ). (?) : ಬಿಟ್ಟ ಕಣ್ಣುಂ ಬಿಗಿದ ಮೊಗಮುಂ ಮನದ ಮುನಿಸುಂ ಮೆಯ್ಯ ಮುಱುಕಮುಂ ಪ್ರತಿಮಾನದ ಪೆಣನುಮಣಲೊಳಡಸಿದಾನೆಯಡಂಗುಂ ಕೋಡ ಕಯ್ಯ ಪೊಂ[ಪಾಠಾಂ. ಪೊಸಂ]ತಿವಣೆಯ ನೆತ್ತರನೊಂದುನಿಮಿಷಮುಂ ಕುಂದಿಸದ ಕ್ರೋಧಿನಿಯೆಂಬಯ್ದನೆಯ ಮದದೊಳ್ (ಅರ್ಧನೇ. ೬-೬೯ ವ). [?]

ಪೊಂದಂಡ (ನಾ). = ಪೊಂಗೋಲ್ ೧ : ಏಣಾಂಕವದನೆಯರು . . . ಪಾಣಿಯಲಿ ಪೊಂದಂಡವಿಡಿದವರು ಮುನ್ನಡೆಯೆ (ಸವಪೋ. ೩೯-೨೭).

[ಪೊಂ (< ಪೊನ್) + ದಂಡ]

ಪೊಂದಂಡಿಗೆ, ಹೊಂದಂಡಿಗೆ (ನಾ). ಚಿನ್ನದ ಪಲ್ಲಕ್ಕಿ ; ಬಂಗಾರದ ಮೇನೆ : ಮಂಗಳಪಾಠಕರು ಸಂಗಡಿಸಿ ಬಿರಿದುಗಳಂ ಪೊಗಳುತಂ ನಡೆಯೆ ಪಿಳ್ಳೆಯನಾಯನಾರ್ ಪೊಂದಂಡಿಗೆಯನೇಱಿ (ಪಸಪು. ೩೦-೦೬). **ಹೊಂದಂಡಿಗೆ** : ನೆಗಹಿದವು ಕೈದೀವಿಗೆಯ ಸಾಲುಗಳು ಹೊಂದಂಡಿಗೆಯ ದೂವಾರಿಗಳು ವೆಂಟಣಿಸಿದರು (ಶುಪ್ರಾಕ್ರೂ. ೬-೩೩).

[ಪೊಂ (<ಪೊನ್) + ದಂಡಿಗೆ]

ಪೊಂದಗಡು, ಹೊಂದಗಡು (ನಾ). ಚಿನ್ನದ ತಗಡು ; ಬಂಗಾರದ ವರ್ತಿ : ಪೊಂದಗಡಿನ ಕಡಾರಮಂ ಕಾದಿರ್ಪಂತೆ ಕಂಪು ಪೀರ್ದು (ಲೀಲಾವ. ೬-೬೦ ವ) ; ಮುತ್ತಿನ ಪುಡಿಯಂ ಪೊರಳ್ಚಿ ಪೊಸಪೊಂದಗಡಂ ತಱಿದಿಕ್ಕಿದಂತೆ ತೋರ್ಪಿನಿಯನ ಬಾಯ ಕರ್ಪೂರದ ತಂಬುಲಕೊಯ್ಯನೆ ಕೆಯ್ಯನೊಡ್ಡಿದಳ್ (ಇಂಪು. ೦೨-೬೬) ; ಸ್ಮರನ ವಸ್ಮದ ಯಂತ್ರವ ಪೊಂದಗಡಲಿ ಬರೆವಂತೆ ಕತ್ತುರಿಯಿಂದ ತರುಣಿಯ ಕದಪಿನಲಿ ಮಕರಿಕಾಪತ್ರವ ವಿರಚಿಸಿದರು (ಪೀವಂಶಾಂ. ೧೦-೦೯). **ಹೊಂದಗಡು** : ಹೊಂದಗಡಿನ ಹೊದಕೆಯ ಮನೆ ಬಹಳ ನೇರಂದವಡೆದ ಪಟ್ಟಶಾಲೆ (ಮೋಹಕ. ೩-೩೯).

[ಪೊಂ (<ಪೊನ್) + ತಗಡು]

ಪೊಂದಟ್ಟೆ, ಹೊಂದಟ್ಟೆ (ನಾ). ಚಿನ್ನದ ತಟ್ಟೆ ; ಬಂಗಾರದ ಹರಿವಾಣ : ಕರಯುಗದೊಳಾಂತ ಪೊಂದಟ್ಟೆಯನದಱ ಮೇಲೆ ಪರಪಿರ್ದ ಸಂಪಗೆಯ ಪೂಗಳಂ . . . ಕೊಂಡು ಬಂದು (ಕೈಲಾಭಾ. ೦೦-೦೦) ; ಹೊಳೆವ ಪೊಂದಟ್ಟೆಯಾರತಿಗಳ ಪಿಡಿದಾಗ ಲಲಿತಾಂಗಿಯರು ಸಾಲ್ಗೊಂಡು (ಶಂಪಾ. ೬-೧೦೬). **ಹೊಂದಟ್ಟೆ** : ಹೊಂದಟ್ಟೆಯೊಳು ಕುಂಕುಮರಸಪೂರಿತ ಗಂಧಾಕ್ಷತೆಗಳ ಕೊಟ್ಟು ಅಂದವಡೆದ ಕದಳಿಯ ಪರ್ಣದೊನ್ನೆಯ ತಂದಿರಿಸಿದರೆಲ್ಲರಿಗೆ (ಮೋಹಕ. ೩-೩೦) ; ಮಕರಂದಾಜಿಯೆಂಬೊರ್ವ ನೀಱಿ . . . ಕೆಳದಿಯ ಕೈಯ ಹೊಂದಟ್ಟೆಯ ತಾನೊಯ್ದು . . . ಭಾವಗೆ ಕೊಟ್ಟಳು (ಪರ್ಧಸ. ೯-೩೦). [ಪೊಂ (< ಪೊನ್) + ತಟ್ಟೆ]

ಪೊಂದಳಿಗೆ, ಹೊಂದಳಿಗೆ (ನಾ). = ಪೊಂದಟ್ಟೆ : ಮಂಗಳಭೂಷಣಾವಳಿಯ ಬೆಳ್ಪು . . . ಪೊಂದಳಿಗೆ ಸೂಸಿದ ಸೀಸೆಯ ಬೆಳ್ಪು ತಳ್ತಿರಲ್ (ಜಗವಿ. ೦೦-೯೦) ; ಪೊಂದಳಿಗೆವಿಡಿದಾರತಿಯನೆತ್ತಲೈದೆಯರು . . . ಕಂಗೊಳಿಸಿತಾ ದಂಪತಿಗಳ ಮದುವೆ (ಕೈಲಾಭಾ. ೩೦-೦೬). **ಹೊಂದಳಿಗೆ** : ಸುಳಿದವಾರತಿಯಮರಿಯರ ಹೊಂದಳಿಗೆಗಳ ದೀಪಗಳ ಮುಕ್ತಾಫಲದ ಸೇಸಾಕ್ಷತೆಯ ಮಳೆ ಸಿರಿಮುಡಿಯ ಸರಿಸದಲಿ (ಕೊಕಶಾ. ೩-೬-೩೬) ; ಹೊಂದಳಿಗೆಯಲಿ ಸಂಧ್ಯೆಯೋಕುಳಿಯನೆರಚುತ್ತೆ . . . ನಿನ್ನ ಪೂಜಿಸುವಳನುದಿನಂ ! (ಪಶ್ರಾಂಗ. ೦೬-೪೪೨). [ಪೊಂ (< ಪೊನ್) + ತಳಿಗೆ]

ಪೊಂದಳಿರ್, ಪೊಂದಳಿರು (ನಾ). ೧. ಹೊಂಬಣ್ಣದ ಚಿಗುರು : ಪೊಂದಳಿರ್ಗಳ್ ತೋರಣಮೆನೆ ಕರಮೆಸೆವುವು (ಸುಕುಮಾ. ೯-೬೦). ೨. ಚಿನ್ನದಿಂದ ಮಾಡಿದ ಚಿಗುರಿನಾಕಾರದ ಅಲಂಕಾರವಸ್ತು : ಬಳಸಿದ ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳಿರ ತೊಂಗಲ್ಗಳ . . . ನಡುವೆ (ಪಪು. ೬-೦೩ ವ). **ಪೊಂದಳಿರು** : ೧. ಕುರವಕದ ಕುತ್ತುಂಗಱಿಯುಮಂ ಪೊಂದಳಿರ ಪೊಂದಳಿರುಮಂ . . . ಮನೋಹರಮೆನೆ ಸಮೆದು (ಕಂಪ್ರತ. ೬-೦೦೪ ವ). [ಪೊಂ (< ಪೊನ್) + ತಳಿರ್]

ಪೊಂದಳಿರು 'ಪೊಂದಳಿರ್' ನೋ.

ಪೊಂದಳೆ (ನಾ). ಚಿನ್ನದ ಸತ್ತಿಗೆ : ತುಱುಗಿದ ಪೊಂದಳೆಗಳ ಬಳಿನೆಳಲೊಳ್ ನೆಱಿ ಬರ್ಪ ಗಣಂಗಳ್ (ಪ್ರಸಕಾ. ೩-೨೨ ವ).

[ಪೊಂ (< ಪೊನ್) + ತಳೆ (< ತಱಿ)]

ಪೊಂದಾಮರೆ, ಪೊಂದಾವರೆ, ಹೊಂದಾವರೆ (ನಾ). ಒಂದು ಬಗೆಯ ತಾವರೆ ; ಹೊಂಬಣ್ಣದ ಕಮಲ : ಭೂಮಿಯ ಮೇಗೆ ಸಿಂಹಾಸನ ಮಕ್ಕುಂ ಅದಱ ಮೇಗಲರ್ದ ಪೊಂದಾಮರೆಯಕ್ಕುಂ (ಪಚ್ಚಾಗಾ. ೦೫೫-೩) ;

ತಾಮರೆ ಪೊಂದಾಮರೆ ಕಲ್ಪಲತೆಯೆ ಲತೆಯೆಲ್ಲಂ (ಶಾಂತಿಪು. ೩-೬). **ಪೊಂದಾವರೆ :** ಮಂದರಧರನೀ ಪೊರ್ಕುಟ ಪೊಂದಾವರೆಪೊಕ್ಕು ಮೇಣವಂ ಬರ್ದುಕುವನೇ (ಶಂಸಭಾ. ೦೦-೦೨೦); ಸರೋವರಮಂ ಪೊದಟ್ಟ ಪೊಂದಾವರೆ ಬಳ್ಳಿ (ಸುಳ್ಳಿಪು. ೨-೨೨). **ಹೊಂದಾವರೆ :** ತಾವರೆ ಹೊಂದಾವರೆಗಳ್ ಮಾವಿಮ್ಮಾವಳಿಮದಾಳಿ ಗಿಳಿಯರಗಿಳಿಗಳ್ (ಗಿಂಳ. ೨ ೬೮) ; ಕೆಲರು ಹೊಂದಾವರೆಯ ಹಂತಿಯ ಕೊಳನ ಹೊಕ್ಕರು (ಕುಮಾ್ರಕ. ೦೬-೯), ಶರಧಿಯೊಳೊಗೆದ ಹೊಂದಾವರೆಯಂತಿರ್ಪ ಪುರಮಧ್ಯದಲಿ ಕೃಷ್ಣರಾಯ ಅರಮನೆ . . . ರಂಜಿಸಿತು (ಪೋಷಕ. ೩-೬೨). [ಪೊಂ (< ಪೊನ್) + ತಾಮರೆ]

ಪೊಂದಾರ (ನಾ). ಚಿನ್ನದ ದಾರ ; ಜರತಾರಿ ಎಳೆ : ಪೊಂದಾರಗೆಯ್ದೆ ಸೆಜಗಿನ ಚೆಂದದ ಚೆಂಗಾವಿಯುಡೆಯನುಟ್ಟನುರಿವಳ್ (ಸಕಲ. ೬-೦೯೦).

[ಪೊಂ (< ಪೊನ್) + ದಾರ$_1$]

ಪೊಂದಾವರೆ 'ಪೊಂದಾಮರೆ' ನೋ.

ಪೊಂದಾವು (ನಾ). ಚಿನ್ನದ ಎಳೆಯಿಂದ ಮಾಡಿದ ಹಗ್ಗ : ಕೊರಲೊಳ್ ಕಟ್ಟಿರ್ದ ಪೊಂದಾವುಱ್ ಪಱಿದದನೀಳುತ್ತೆ ಬಾಗಿಲ್ಗದಂಗಳ್ ಬಿರಿವಂತೊತ್ತುತ್ತೆ (ಉತ್ತರಗೋ. ೨೦-೩೯). [ಪೊಂ (< ಪೊನ್) + ದಾವು$_2$]

ಪೊಂದಾಳ, ಹೊಂದಾಳ (ನಾ). ಚಿನ್ನದ ತಾಳ : ಮಿಗೆಯೊತ್ತುವ ಪೊಂದಾಳದ ಬಗೆಯಂ ಪೋಲ್ದಲರ್ದ ಕರ್ಣಕಾರಮದೆಸೆಗುಂ (ಕಾದಂಬ. ೯-೨೨); ಹರನಿತ್ತ ಪೊಂದಾಳವಂ ನುಡಿಸುತ್ತ ಪಾಡಿದಂ (ಶಾಂದಪು. ೬-೩೦); ಶ್ರೀಕರದ ಪೊಂದಾಳಮಂ ತೆಗೆದು ತಿರುಪಾಡನೇಕವಂ ಪಾಡಲ್ಕೆ (ಏಕಶ್ರೀ. ೪-೯-೦೨). **ಹೊಂದಾಳ :** ನುಡಿಗೇಳಿ ಹೊಂದಾಳವಂ ಪಿಡಿವುತಂ (ಲಂಗಪು. ೦೯-೩೬).

[ಪೊಂ (< ಪೊನ್) + ತಾಳ್$_2$ (= ತಾಲ)]

ಪೊಂದಿಕೆ, ಹೊಂದಿಕೆ (ನಾ). ಹೊಂದಾಣಿಕೆ ; ಸಾಮರಸ್ಯ : ಒಂದಿಕೆ, ಒಂದಿಕೆಗಳ್ . . . ಪೊಂದಿಕೆ, ಪೊಂದಿಕೆಗಳ್ (ಕಪ್ಪಾಸು. ೩೩೬ ಪ್ರಯೋ). **ಹೊಂದಿಕೆ :** ಹೊಂದಿಕೆಯ ಹೊಲಬಲ್ಲವೀ ನುಡಿ (ತೊರಕಾ. ೩-೩-೭೬); ಅಪೂರ್ಣವಾದರೂ ಹೊಂದಿಕೆಯುಳ್ಳ ಅರ್ಥವನ್ನು ಕೊಡುವ ಪದಗಳ ಗುಂಪಿಗೆ ಪದಸಮುಚ್ಚಯ ಎಂದು ಹೆಸರು (ಪುರುಷಸು. ೩). 'ಪೊರ್ದುಗೆ' ಪರಾ. [ಪೊಂದು$_1$ (< ಪೊರ್ದು) + — ಇಕೆ]

ಪೊಂದಿಗೆ 'ಪೊರ್ದುಗೆ' ನೋ.

ಪೊಂದಿಸು 'ಪೊರ್ದಿಸು' ನೋ.

ಪೊಂದು$_1$ 'ಪೊರ್ದು' ನೋ.

ಪೊಂದು$_2$, ಹೊಂದು$_2$ (ಕ್ರಿ). ಸಾಯು ; ಮರಣ ಹೊಂದು : ನೀಲಸಿನ್ದ ಮನಸಿಜನಾನಿಱಂದು ಪಿಡಿದು ತಾನ್ಪೊನ್ದಿದಾನ್ (ಪ್ರಭಂ. ೦೯೪೦. ೨-೯; ಸು. 788); ಕೆಡೆದು ಪೊಂದಿದನಾಯಿಳೆಯಲ್ಲಚೇತನಂ (ಕಾದಂಬಾ. ೩೬೩); ನಿಜಕಾಲಪೂರ್ತಿಯೊಳ್ ಪೊಂದುವರೊಯ್ಯಗೆ (ಪಶ್ಚಾಪ. ೦-೯-೦೨೯); ತಂತಮ್ಮ ದುಷ್ಕೃತಂಗಳ ಫಲಂಗಳತ್ತಣಿನಾ ರಕ್ಕಸರ್ ಪೊಂದಿದರ್ (ರಾಮಾಶ್ವ. ೦೨-೦೮). **ಹೊಂದು$_2$:** "ಹೊಂದು — ಮರಣೇ" (ಶಮಂಗ); ಹುಟ್ಟುವಲ್ಲಿ ಭವಿ . . . ಹೊಂದುವಲ್ಲಿ ಭವಿಯಾಗಿ ಹೋಹರ ಮುಟ್ಟಲಾಗದು (ಪಸವ. ೬೬೪); ಹರಣವಿರೆ ಹೊಂದಿದನದಾವನು (ಕುಮಾಶ. ೨೩-೯೯); ಮರಳಿ ಮರಳಿ ಹುಟ್ಟಿ ಹೊಂದಿ ತೊಳಲಿ ಬಳಲಿ ಬಂದೆ ನಾ (ಪುರಂದ. ೧-೦೬೬-೯).

[ದೇ.॥ ತಮಿ. ಪೊನ್ನು ; ಮಲ. ತೆಲು. ಪೊಲಿ]

ಪೊಂದು$_3$, ಹೊಂದು$_3$ (ನಾ). ೧. ಸೇರಿಕೆ; ಹೊಂದಿಕೆ: 'ಪೊಂದುಗುಂದು' ಪರಾ. ೨. ಸಮೂಹ ; ಗುಂಪು : ಎಡೆಯೆಡೆಯೊಳಿಡಿಕಿಱಿದ ಡೋಣಿಗಳ ಶ್ರೇಣಿಗಳ ಸಿಡಿಸಿಡಿದುರುಳ್ವ ಜಲಬಿಂದುಗಳ ಪೊಂದುಗಳ . . . ಕಡಲೆಸೆದುದು (ಶಪು. ೨-೯). **ಹೊಂದು$_3$:** ೩. ಪಕ್ಕ ; ಬದಿ ; **ಸಾಮಾನ್ಯ :** ಗಂಜೇಯ ಸೀರುಟ್ಟು ಗಂಧದಾ ಬೊಟ್ಟಿಟ್ಟು ನಂದೀಶ ನಿಮ್ಮ ಹೊಂದೀಲಿ ಕೂತಿರುವ ನಾರಿ ಗಂಗವ್ವ ಏಳ ಹೋಗಿ ನೀ ಗಂಡರನೆಬ್ಬಸೇಳ (ಕೋಳಗೀ. ೦೩೩) ; ಬೆಳಗುಜಾವದ ಎಲರು ಕದಿರಿನ ಬದಿಗೆ ನಿರ್ನೆರನಲಗುತ ಎಲೆಯ ಸಂದಿಗೆ ಅಲರಿನಂದಿಗೆ ಮರದ ಹೊಂದಿಗೆ ನಲಗುತ (ಜಾಡುಜಾ. ೩೩-೨೮). [< ಪೊಂದು$_1$. / ತಮಿ. ಪೊರುತ್ತು ; ತೆಲು. ಪೊಂದು]

ಪೊಂದು$_4$, ಹೊಂದು$_4$ (ನಾ). ಸಾವು ; ಮರಣ : ಪುಟ್ಟು ಪೊಂದಿಗೆಡೆಯಲ್ಲದೆ ತೋರ್ಪರ್ (ಪಶಕು. ೯-೬); ಈವುಳಿವು ಪೊಂದುಗಳ . . . ನೋಡಿ ನಗುತಲಿಹೆಯೊ (ಏಕೀಗೀ. ೬೯-೦೦). **ಹೊಂದು$_4$:** ಹೆಸರಿಲ್ಲದ ಕುಲವಿಲ್ಲದ ಹುಟ್ಟಿಲ್ಲದ ಹೊಂದಿಲ್ಲದ ಅಯೋನಿಸಂಭವ ನೀನಾದ ಕಾರಣ ನಿನ್ನ ನಾನು ನಿಷ್ಕಲಲಿಂಗವೆಂದೆನಯ್ಯ (ಸಿದ್ಧೇಶ. ೬-೨೨); ಭಾವಲಿಂಗದಲ್ಲಿ ಬಯಲನೈದಿದ ಮಹಾಶರಣಂಗೆ ಹುಟ್ಟು ಹೊಂದುಗಳು ನಷ್ಟವಾದುವಯ್ಯ (ಅಖಂಡೇ. ೦೦೬-೪೩). [< ಪೊಂದು$_2$]

ಪೊಂದುಗುಂದು (ಕ್ರಿ). (ಸಾಂಸಾರಿಕಜೀವನದೊಡನೆ) ಹೊಂದಿಕೆಯನ್ನು ಕಳೆದುಕೊಳ್ಳು,—ಸಂಬಂಧವು ಕಡಿದುಹೋಗು : ಈ ಪಂಬಲಿಂ ಬೆಂಡಾಗಿ ಕಂದುಬಗೆಯಿಂ ನಂದಿ ಪೊಂದುಗುಂದಿರ್ಪ ಪುರದಧಿರಾಜಂ ಸುರಥರಾಜಂ ತಾನೋಲಗದೊಳಿರ್ಪನ್ನೆಗಂ (ರಾಮಾಶ್ವ. ೦೩೯-೯).

[ಪೊಂದು$_3$ + ಕುಂದು$_1$]

ಪೊಂದುಗುಲ (ನಾ). ಚಿನ್ನದ ಎಳೆಗಳಿರುವ ರೇಷ್ಮೆಬಟ್ಟೆ : ತೆರೆ ಮಸಗುವ ಪೊಂದುಗುಲದ ಪೊಗರು (ಗೀತಗೋ. ೧೩-೨೬).

[ಪೊಂ (< ಪೊನ್) + ದುಗುಲ$_1$]

ಪೊಂದುಗೆ 'ಪೊರ್ದುಗೆ' ನೋ.

ಪೊಂದುಡಿಗೆ 'ಪೊಂದೊಡಿಗೆ' ನೋ.

ಪೊಂದೆನೆ, ಹೊಂದೆನೆ (ನಾ). ೧. ಚಿನ್ನದ ಬಣ್ಣದ ಧಾನ್ಯದ ಹೊಡೆ; ಹಣ್ಣಾದ ತೆನೆ : ತುಂಬುವುದು ಕಾಡುಗಳೆಲ್ಲ ಪೊಂದೆನೆಯ ಕಮ್ಮಿತುಗಾಳಿ (ಜಪ್ರಾಂಗ. ೩೩-೦೯೯೦). ೨. ಕೋಟೆಯ ತುದಿಗಿರುವ ಚಿನ್ನದ ಕೊತ್ತಳ : ಕೋಂಟೆಯ ಪೊಂದೆನೆಗಳ್ ವಿರಾಜಿಕುಂ (ಪಗಪ. ೨-೦೯) ; ಪೊಂದೆನೆಗಳ್ ಖರಕರಕರದಿಂದಂ ಕರಗುಗುಂ (ರಾಜಶೇ. ೨-೬೬). **ಹೊಂದೆನೆ :** ೧. ಚಿಲ್ವ ಹಸುರ್ಗೊನೆಯಲ್ಲಿ ನೆಲ್ಲ ಹೊಂದೆನೆಯಲ್ಲಿ ಚಿಲ್ಲಿಹವು ಇಬ್ಬನಿಯ ಮುತ್ತುಗಳಿವಿಲ್ಲಿ (ಏಕೀಗೀ. ೫೬-೧೩). [ಪೊಂ (< ಪೊನ್) + ತೆನೆ$_1$]

ಪೊಂದೆರೆ$_1$ (ನಾ). ಚಿನ್ನದ ರೂಪದಲ್ಲಿ ಕೊಡಬೇಕಾದ ತೆರಿಗೆ : ಏಷ್ಟದಾ ಸಾಮಂತರೆಲ್ಲ ಪೊಂದೆರೆಯ ತೆರಲೊಲ್ಲರಲ್ಲ ! (ಜಾರಸಿ. ೨೨ ೯೯೬).

[ಪೊಂ (< ಪೊನ್) + ತೆರೆ$_3$ (< ತೆಱ್$_3$)]

ಪೊಂದೆರೆ$_2$, ಹೊಂದೆರೆ (ನಾ). ೧. ಜರತಾರಿಯ ಪರದೆ : ಪೊಂದೆರೆಯ ಪೊರೆಯ ಮಱೆವಿಡಿದು . . . ನಿಂದಳು ವಿಲಾಸದಿಂದ (ಶಾಂದಪು. ೬-೨) ; ಮೃಗಾಕ್ಷಿಯೊರ್ವಳುಜ್ಜ್ವಳತರಮಾದ ಪೊಂದೆರೆಯನೋಸರಿಸುತ್ತಿರೆ ಕಂಡನಿಂದುಮಂಡಳಮುಖಿಯಂ (ರಾಜಶೇ. ೦೦-೬). **ಹೊಂದೆರೆ :** ೨. ಹೊಂಬಣ್ಣದ ಅಲೆ : ಅಲರ್ದ ತಾವರೆವಂಡನುಮರಿಸಿ ಕೊಳನ ಹೊಂದೆರೆಯೆತ್ತಿ ಮಿಂದು . . . ಸುಳಿದಾಡುವುದು ಬಾಲಕನಂದೊಂದೆಲರು (ಸಾಳ್ವಭಾ. ೨-೩). [ಪೊಂ (< ಪೊನ್) + ತೆರೆ$_4$]

ಪೊಂದೇರ್, ಪೊಂದೇರು, ಹೊಂದೇರ್, ಹೊಂದೇರು (ನಾ). ಚಿನ್ನದ ತೇರು ; ಸ್ವರ್ಣರಥ : ಪೊಂದೇರ ಮೇಲಿರ್ದ ವಸುದೇವನಂದನರ್ಗೆ ಮುಕುಳಿತಾಂಜಲಿಯಾಗಿ (ಪಗಪ. ೩-೧೦೨ ಪ) ; ಧೀರರ ದೇವ ಮೂಱನೆಯ ಜಾವದೊಳು ಪೊಂದೇರೇಱಿ ನಡೆದನಬ್ಧಿಯೊಳು (ಪಂಪ. ೨೯-೨೬) ; ಪೊಂದೇರನಳವಡಿಸಿ ತುರಗಂಗಳಂ ಪೂಡಿ (ಶೃಂಪಾ. ೦೨-೪). **ಪೊಂದೇರು :** ಕರಿತುರಗನಿಚಯದೆಡೆಯಾಟಗಳ ಘಾಟಗಳ ಪೊಂದೇರ ಸಂದಣಿಗಳ . . . ಪಾಳೆಯಂ ಕಣ್ಗೆಸೆದುದು (ಪಪು. ೪೨-೧೫). **ಹೊಂದೇರ್ :** ಅಧ್ವಮಾರ್ಗದೊಳ್ಸುಳಿವ ಮುಂಗಾರ ಮಿಂಚಂ ತನ್ನ ಹೊಂದೇರ ಚಲಕೆಱಗುವಶನಿಯಂ ತನ್ನ ಘಾತಿ . . . ಕಿರಸ್ಕರಿಸೆ ವೃಷಕೇತು ರಿಪುಸೈನ್ಯಮಂ ಪೊಕ್ಕನು

(ಕೃಬಭಾ. ೦೨–೦೫). **ಪೊಂದೇರು** : ಪೊಳೆಪೊಳೆದು ಪೊದೇರು ಪಂದವು (ಭಾಷ್ಯಪ್ರ. ೯–೨), ನೇಸರಾಗಳೆ ತನ್ನ ಪೊಂದೇರಪ್ಪಗಿರಿವಾಸ್ತವದೊಳಿ ಸುತಿರ್ಪನ್ (ಜಾನಾ. ೯೯–೪). [ಪೊಂ (<ಪೊನ್) + ತೇರ್$_2$]

ಪೊಂದೇರು 'ಪೊಂದೇರ್' ನೋ.

ಪೊಂದೊಟ್ಟಿಲ್, ಪೊಂದೊಟ್ಟಿಲು (ನಾ). ಚಿನ್ನದ ತೊಟ್ಟಿಲು : ಆ ವನಜಜ ಗೇಹದೊಳಿಪ್ಪರಿವಲಿ ಪೊಂದೊಟ್ಟಿಲೊಳಿಗೆ . . . ಜೀವಂಧರ ನೊಪ್ಪುವ ಲೀಲೆಯಲಿ . . . ಬೆಳೆದು (ಜೀಪು. ೬–೨); ಗಿರಿಜೆ ಮಗನಂ . . . ಕೊಂಡಾಡಿ ಪರಸಿ ಪೊಂದೊಟ್ಟಿಲೊಳ್ ತೂಗಿದಳ್ (ಕಬು. ೭–೨೬). **ಪೊಂದೊಟ್ಟಿಲು** : ಕಿಬ್ಬಿ ಪೊಡವ ವಿಳಿಗಳಲಿ ಪೊಂದೊಟ್ಟಿಲನು . . . ರತ್ನಿಯ ಕಟ್ಟಿರಿಸಿ ಪಾಡಿಪಳು ಗೋಪಿ ಮುಳುಂದನನು (ತಣಾಗ. ೦೦–೬-೦೩). [ಪೊಂ (< ಪೊನ್) + ತೊಟ್ಟಿಲ್$_1$]

ಪೊಂದೊಡರ್, ಪೊಂದೊಡರು (ನಾ). ೧. ಚಿನ್ನದ ಅಂದುಗೆ : ಪೀತಪಟಂ ಕಟಿಯೊಳ್ ಪೆಡಂಗು ಪೆಯ್ತೊಪ್ಪಿರೆ ಕಾಲ ಪೂದೊಡರ ದೈತ್ಯರ ಹಾಜೆಗಳೊಪ್ಪೆ . . . ಗೋವಳರಾಪುನ ಲೀಲೆ ರಂಜಿಪುಂ (ಜಗಂ. ೩-೧೨); ಎಡಗಾಲೊಳ್ ಪೊಂದೊಡರ್ ತಳ್ಪಿರೆ (ಣಾಪ್ರ. ೦೩–೭೦). **ಪೊಂದೊಡರು** : ೧. ಪೊಂದೊಡರು ಕಿಱುಗೆಜ್ಜೆಘಂಟೆಗಳಂದವಡೆದರಳಿಲೆ . . . ಕಂಠಣಂಗಳ ಗೊಂದಣದ ಭೂಷಣಗಳಲಿ ಗೋಮಿಂದ ರಾವುರು ಮೆಜ್ದರು (ತಣಾಗ. ೦೦–೬–೩). ೨. ಚಿನ್ನದ ಆಭರಣ : ಬಂಗಾರದ ಒಡವೆ : ಪೊಂದೊಡರ ಹಾರಾದಿಗಳಲೊಪ್ಪಂಬಡೆದು ನಸು ನಗೆಮೊಗದ ಸೊಂಪಿನಲಾಪವಕ್ಕನುವಾದನಭಿಮನ್ಯು (ಭಾಷ್ಯಕ್ರೀ. ೪–೧೯); ಪೊಂದೊಡರು ತೊಡರಲ್ಲವೇ ? (ಗಬಾ. XXIV. ೨೧೮೪).

[ಪೊಂ (< ಪೊನ್) + ತೊಡರ್$_2$]

ಪೊಂದೊಡವು, ಪೊಂದೊಡವು (ನಾ). ಚಿನ್ನದ ಒಡವೆ ; ಬಂಗಾರದ ಆಭರಣ : ಪೂದೊಡವಿನೊಳದ ನಿಸ್ವನಮು ದುಂದುಭಿಯಾಗೆ (ಕಬೂಡಿ. ೪-೦೩೯); ಮಾನದನೆವಂದದಿ ಪೊಂದೊಡವು ದೆಟ್ಟಿತ್ತು (ಕಮಾಗ. ೨-೨೨). **ಪೊಂದೊಡವು** : ಪೊಂದೊಡವುಗಳನಿತ್ತುವಚರಿಸಿ ಪರುವಳು (ಕೂಪಾ. ೩-೦-೪); ಕಾಲ್ಗೆಜ್ಜೆ ನೇವುರ ಬಳೆಯ ಪೊಂದೊಡವುಗಳ ಕಂಠಣಗೆ . . . ಹಾರಿದವನಾಲಿಸಿ ಮರಳಿ ಮರಳಿ ದನಿಯನಾಕರ್ಣಿಸಲ್ಮಾಟಿಸುತ್ತೆ (ತ್ರಿಣಪ್ರ. ೩೩–೪೩). [ಪೊಂ (<ಪೊನ್) + ತೊಡವು]

ಪೊಂದೊಡಹ (ನಾ). ಚಿನ್ನದ ಲೇವಣ ; ಬಂಗಾರದ ಗಿಲೀಟು : ಉಡಿರುಂಲ್ಲಿ ಕಟ್ಟಿದ ಸರಗಿ ಕೈಪೊಡೆ ಪೊಂದೊಡಹದಂಬಿನ ಬತ್ತಳಿಕೆ (ಭಾಣಾಸಂ. ೩೭–೩೬). [ಪೊಂ (< ಪೊನ್) + ತೊಡಹ$_1$ (<ತೊಡವ)]

ಪೊಂದೊಡಿಗೆ, ಪೊಂದುಡಿಗೆ, ಪೊಂದುಡಿಗೆ, ಪೊಂದೊಡಿಗೆ (ನಾ). = ಪೊಂದೊಡವು : ಪೊವಟ್ಟ ಪೊಂದೊಡಿಗೆ ಶಕ್ತಿ ವಿರಾಜಿಪ ಶಕ್ತಿ ಶೂಲವೊಪ್ಪಿದ ಕರಾಸಿ ಗೌರಿ ನಿಜವಲ್ಲಭೆ (ಕಂಕೋಣಾ. ೦-೨); ಪರಿ ಪರಿಯ ಪೊಂ[ಣಾಣಂ.ಹೊಂ]ದೊಡಿಗೆಗಳ ಪರಿಪರಿಗಳುಡಾಗೆಯ ದೇಶ ವಿಗ (ಭಾಣಾಶ. ೬–೬); ಇದೆ ತೊಟ್ಟಲಿಲ್ಲಾಡಿಸುವರಿಲ್ಲ ನಿನಗೆ ಪೊಂದೊಡಿಗೆಯಿಲ್ಲ (ಕೃಬಭಾ. ೨೮–೦೬). **ಪೊಂದುಡಿಗೆ** : ಎಲೆ ಶಬರರಾಜ ನೋಡಿದೆ ಪಲವುಂ ಪೊಂದುಡಿಗೆದೊಟ್ಟು ಬಂದೊರ್ವಂ ವ್ಯಾಕುಲನಾಗಿರ್ಪಂ (ಕಂಶತಂ. ೦೦೭–೨೨) : ಅಳವಡೆ ತೊಟ್ಟ ಪೊಂದುಡಿ[ಣಾಣಂ. ದುಡು, ದೊಡಿ]ಗೆಯಿಂ (ಕರ್ಣನೇ.೨–೦೦). **ಪೊಂದುಡಿಗೆ**: ಅರಿಸಿನವನೆ ಮಿಂದು ಪೊಂದು [ಣಾಣಂ. ದೊ]ಡಿಗೆಯನೆ ತೊಟ್ಟು ... ಪುರುಷ ಬಾರಾ (ಕುಶಾರೀ. ೨. ೦೪೦–೪೨೦). **ಪೊಂದೊಡಿಗೆ** : ಅರಿಸಿನವನೆ ಮಿಂದು ಪೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ (ಶಸಪ. ೨೬೯) : ರಾರಾಜಿಸುವ ಪೊಂದೊಡಿಗೆಯ ಕುವರ ನೀನಾರವನು (ಕೂಚಕ. ೦೦–೬೦).

[ಪೊಂ (<ಪೊನ್) + ತೊಡಿಗೆ (<ತೊಡುಗೆ)]

ಪೊಂಪಲ 'ಪೊಂಪುಲ' ನೋ.

ಪೊಂಪಲ್ಲ 'ಪೊಂಪುಲ' ನೋ.

ಪೊಂಪು, ಪೊಂಪು (ನಾ). ೧. ಸೊಗಸು ; ಅಂದ : ಚಂದ : ಪುರಿಯೇಱ್ ದಶದಿಸೆಯ ಪೊಂಪು ಪೊನ್ನದ ಪೊಂಪು ಮೆಱೆದುದಾ ಜಾರುಚೇದ್ಯೋದಯದ ಸಮಯದೊಳ್ ಬಗೆದು ಬಣ್ಣಿಸುವರೊಳರೆ (ಹರಿವಂ. ೦೯–೦೦). **ಪೊಂಪು** : ೧. ಸೊಂಟನಿಂ ಕಂಪಿಡುವ ಸಂಪಗೆಗಳಂ ಕೊಂಡು ಪೊಂ[ಣಾಣಂ.ಹೆಂ]ಪಿನೆವ ಪೊಂಗೇದಗೆಯ ಪೂಗಳಂ ಕೊಂಡು (ಶಸಪ. ೩–೨೯). ೨. ಹೆಚ್ಚಳ ; ಮೇಲ್ಮೆ ; ಅತಿಶಯ : ರಾಣೇವಾಸ ಬಡದೆ ವಸಂತವಾಡಿ ವಿಲಾಸದಲಿ ಶ್ರೀಕಾಂತೆಯೋಲಗ ಕೊದಗಿತ್ತೆ ಮಜ್ಜನಗಳನು ರಚಿಸಿ ಕಿಂತಿಗಿಸಿಕೊಂಡಾಭರಣಗಳ ಕಂತುವಿನ ಮದದಾನೆ ಸಾಲಿಟ್ಟಂತೆ ವಂವಳೆಜಿಗುವಳಿಗಳ ಪೊದಣಿ ಪೊಂಪಿನಲಿ (ಕೃಕಾ.ಪ. ೦೭–೨೯). ೩. ಹಿರಿಮೆ ; ದೊಡ್ಡಸ್ತಿಕೆ : ನಳಸ್ಯಪ ಮುಗುಳುನಗೆಯುದಲ್ಲಿಗಲ್ಲಿಗೆ ಜಗಳವಾಡುವ ಭುವರ ದಟ್ಟಿಸುತಧಿಕ ಪೊಂಪಿನಲಿ ಒಗುವಿಗೆಯ ಪರುಷದಲಿ ರಥವಿಳದಗಡು ಪುಷ್ಕರನಿರ್ಪ ಸಭೆಗೊದ್ಕೊಗದೊಳ್ಪೆದಿದ (ಜೀಪು. ೯೯–೩೩). ೪. [ಸಂಗೀತ] ಸ್ವರವಿಸ್ತಾರ (?) : ಗತಿ ಗಮಕ ಗಹಗಹಿಕೆ ತಿರುಪು ಜಾಳೆಯ ಕೊಂಕು ಜತಿ ಜೋಕೆ ಮಾರ್ಗವಣೆ ವಹಣಿ ತರಹರಿಕೆ ಕಂಪಿತ ಪೊಂಪು ಬಾಗು ದೊಕ್ಕರ ವಿವರ ಕಾಳಾಸ ಕಮ್ಮವಣೆ ಲೋಲಂಗಿತ ನುತಶುದ್ಧಸಾಳಂಗಸಂತೀರ್ಣವುಂ ಯಥೋಚಿತ ತಾರ ಮಧುರ ದುಂದ್ರುಂಗಳಿಂ ಹಾಡಿ (ಹಹಗಾ. ೬–೩). [<ಪೊಂಗು$_2$. / ತೆಲು. ಪೊಂಪು]

ಪೊಂಪುಲ, ಪೊಂಪಲ, ಪೊಂಪಲ್ಲ (ನಾ). ಒಬ್ಬಾತನ ಹೆಸರು : ಸ್ವಸ್ತಿ ಗುವಳಾಲಂ ಗೊಂಗುಂ ವಾನರಸ ಆಳಿ ವೇಗೂರುಂ ಪೊಂಪುಲಂ ಆಳೆ (ಎಕ. X, ಕುಳಣಾ. ೨೬೫–೦ ; ಸು. ೫೦೦೧). **ಪೊಂಪುಲ** : ರಾಜಾಲ ಪೊಮ್ಪುಲ ಜ್ಞಾನಶ್ಯಮ್ಮ ಮುದ್ದಯ್ಯನುಂ ಎಱೆಯಮ್ಮನೆಸುವರಾದಿತ್ಯಂ ತುಜುವನಿಕ್ಕಿಸಿ ಸತ್ತೊಂಗೆ (ಎಕ. X, ಕಂಣಾಕು. ೦೪೩–೦೦ ; ೫೫೦೧). **ಪೊಂಪಲ್ಲ** : ಸತ್ಯಶೌಚೀಲಾಚಾರಸಮ್ಪನ್ನ ಬೆಂಗದನಾಥ ಶ್ರೀವು[ತ್] ಪೊಮ್ಪಲ್ಲವೊಡೆಯಮ್ ಊರ್ಗ್ಗೆ ಪಾಡಿಯೊಳಿರ್ದ್ದಿ ಬಾಣರಸರುಳ್ಳಾದಿ ... ಬೀರಲೋಕಮೆಯ್ದಿದ (ಎಕ. X, ಕೋಣಾಕ. ೬೯–೦೦ ; ಸು. ೫೦೦). [?]

ಪೊಂಪುಳಿ 'ಪೊಂಪುಟಿ' ನೋ.

ಪೊಂಪುಳಿಗೊಳ್ 'ಪೊಂಪುಟಿಗೊಳ್' ನೋ.

ಪೊಂಪುಳಿಯೋಗು 'ಪೊಂಪುಟಿವೋಗು' ನೋ.

ಪೊಂಪುಳಿವಡೆ 'ಪೊಂಪುಟಿವಡೆ' ನೋ.

ಪೊಂಪುಳಿವೆಱು 'ಪೊಂಪುಟಿವೆಱು' ನೋ.

ಪೊಂಪುಳಿವೋಗು 'ಪೊಂಪುಟಿವೋಗು' ನೋ.

ಪೊಂಪುಟಿ, ಪೊಂಪುಳಿ, ಪೊಂಪುಣಿ, ಪೊಂಪುಳಿ (ನಾ). ೧. ಹೆಚ್ಚಳ ; ಆಧಿಕ್ಯ ; ಅತಿಶಯ : "ಪೊಂಪುಟಿ = ಪೆರ್ಚುಗೆ" (ಕಬುತ. ಪ್ರ. ೦) ; ಸುತಶೋಕದ ಪೊಂಪುಟಿಯೊಳ್ ಮೆಯ್ಯಱಿಯದೆ ನೀರಿಱಿವಂತೆಯೊಲಿಱಿದ ನಪರಜಳಧಿಗೆ ದಿನಪಂ (ಕಂಣಾ.೦೩–೨೨೦); ಕಂಟಿನ ಪೆಂವು ಪೊಂಪುಟಿಯೆನಲ್ ದೊರೆವೆತ್ತ ನವೇರುಮಾಲೆಯಿಂವಂ ಪರಿಚುಂಬಿಸಲ್ ಬಯಸಿ ಬರ್ಪಳಿ ಮಾಳೆಯಂತೆ (ಕಾಂಶಪ್ರ. ೩–೨೩) ; ಸುಱಿವ ಮುರಾಳಯಾನೆಯರವಾಂಗ ಮುರೀಚಿಚಯಂ ತ್ರಿವರ್ಣಮುಂ ಗಱಿಯಿಸೆ ಪೆರ್ಮೆ ದುಂ ನೆರೆಯೆ ಬೀತವೊಲಿರ್ದ ಲತಾಳಿ ಮತ್ತೆ ಬೆಂಬಱಿಯೊಳಿ ಪಲ್ಲವಪ್ರಸವಭೃಂಗ ಕುಳಂಗಳನಾಂತು ಸೊಂಪು ಪೊಂಪುಟಿಯೆನಿಪಂತೆ ತೋಱಿದುದು (ಹಂಕ್ರತ್ರ. ೭–೦೦೭). ೨. ಹರವು ; ಪ್ರಸರ : ದಿವಿಜಸೌಂದರಿಯರ್ ಗೊಂದಣಂ ಮಾಡುವಲ್ಲಿ ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುಟಿಯೋಗಿಯುಂ ಭೂವಿಭ್ರಮವೊಳ್ ಪೊನಲ್ವರಿದುಂ . . . ಆಗಳಂಗೋ

ಪಾಂಗದೊಳಿಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟಿ (ಆದಿಪು. ೬-೦೨೬ ಪ); ರಂಜಿತಗೀತವಾದ್ಯನಿನದಂ ಮಾಧುರ್ಯವೀಣಾಲಸನ್ನಿನದಂ ಪೊಂಪುಟಿಯಾದುದಚ್ಚರಿಯೆನಲ್ ವೇಶ್ಯಾಲಯಾನೀಕದೊಳ್ (ಪುಷ್ಪಪು. ೮-೦೦೯). ೩. ದೊಡ್ಡತನ : ಘನತೆ ; ಹಿರಿಮೆ : ದಾನದ ಪೊಂಪುಟಿ ಲೋಭದಾಸೆಯೊಳ್ತೊಡರದು (ಸಮಪ. ೬-೨). ೪. ಹಿಗ್ಗು ; ಸಂತೋಷ : "ಪೊಂಪುಟಿಯೆನಲ್ ಸಂತಸಂ" (ಸಂಸೇಪ. ೨) ; ಧಾರಿಣೀಶ್ವರಂ ತಣಿಯೆ ಮನಂ ವದನಾಬ್ಜಂ ಪೊಂಪುಟಿಯೊಳ್ ಪುದಿದಿರೆ ವರಸುರತಸುಖಮನೆಯ್ದಿದನಾಗಳ್ (ಕುಸುಮಾ. ೪-೬೩). ೫. ಮೈ ನವಿರೇಳುವಿಕೆ ; ಪುಳಕ ; ರೋಮಾಂಚನ : "ಪೊಂಪುಟಿಯೆಂದು ಪುಳಕಂ" (ಕಶಸಾ. ೬೪-೪೦೯) ; ಒದವುವ ಗದ್ಗದಂ ನೆಗೆವ ಪೊಂಪುಟಿಯುಣ್ಮುವ ಸೇದೆಯಿಂದೆಯುಂ ಪದವಟಿದೊಂದು ಪೊಚ್ಚಪೊಸದೇಸೆ ಪುದುಂಗೊಳೆ (ಪಕಪಿ. ೩-೯೪). **ಪೊಂಪುಳಿ :** ೧. "ಪೊಂಪುಳಿಯೆನಲ್ ಪೆರ್ಚಿನೊಳ್" (ಕಶರ. ೬೯) ; ಅಭಿಮಾನದ ಜನ್ಮಭೂಮಿ ಮಾನ್ತನದ ಮೊದಲ್ವಿಳಾಸನಿಧಿ ರೂಪಿನ ಪೊಂಪುಳಿ (ಸೌಇಇ. XI-1, ೬೩-೩೯ ; 1028) ; ಮನಂಗೊಂಡು ರಮಾಧಾಜನಮೆನೆ ಹಿರಿಯಾರತಿ ರಾಜಿಸುವುದು ಸಕಲಸುಖದ ಪೊಂಪುಳಿಯಿಂದಂ (ಮಾರಣಾ. ೦-೩). ೪. ನಳಿನನಾಭನ ಕರುಣದಳತೆಯ ತಿಳಿದು ಪೊಂಪುಳಿಯಾಗಿ ಧೌಮ್ಯನ ಬಳಿಗೆ ಬಂದರು ಪರಮಸುಖದಲಿ ಕುಂತಿಯಾತ್ಮಜರು (ಸಂಪಪ. ೨೬-೧೩) ; ತಾಂ ಪೊಂಪುಳಿಯಿತ್ತು ನೋಳ್ಪ ನರರ್ಗೆ ನಲವಾಂತರೊ ಮಾಲೆಗಾರ್ತಿಯರ್ (ಕಮಮಾ. ೨-೩೬). ೫. "ಪೊಂಪುಳಿಯೆನಲ್ ರೋಮಾಂಚಮಕ್ಕು" (ಕಶರ. ೭೦) ; ಕಾಯಜವೈರಿಯ ದಿವ್ಯಮೂರ್ತಿಯಂ ನೆಟ್ಟನೆ ಕಂಡು ಪೊಂಪುಳಿಯನಾಳ್ದು . . . ಸುಭಕ್ತಿಯಿಂದೆಱಗಿದಂ ಹರನಂಘ್ರಿಯೊಳಾ ಹಲಾಯುಧಂ (ಪ್ರಸಪಿ. ೦೫-೪೩) ; ತವ ಶೀರ್ಷದೊಳ್ನೆಗಳಲೀ ರಾಜ್ಯಾಭಿಷೇಕೋತ್ಸವಂ ದೊರೆಗುಂ ಪೊಂಪುಳಿ ತಣ್ಪು ಮೂಡಿದುದು ತಾಂ ಸರ್ವಪ್ರಜಾಂಗಂಗಳೊಳ್ (ಪರಪ. ೬೩-೦೩೭). **ಹೊಂಪುಣಿ :** ೧. ಹೊಂಬಟ್ಟೆಗಳ ಹೊಂಪುಣಿಯಿಂದ ಮೆಱೆದಿಹ ಪಂಚಘಂಟೆಗಳಿಂದ್ರನೈರಾವತಕೆ ಸರಿಮಿಗಿಲೆಂದುದಖಿಳಜನ (ಸಂಪಪ. ೨೦-೦೦). **ಹೊಂಪುಳಿ :** ೧. ಹೊಂಗಿದರು ಹೊಂಪುಳಿಯ ಪುಳಕದ ಮುಂಗುಡಿಯ ರೋಮಾಂಚನದ ರಣರಂಗಧೀರರು ತಱುಬಿ ನಿಂದರು ಮತ್ತೆ ಕಾಳೆಗವ (ಕುಷ್ಠಾಪ್ರೋ. ೦೫-೪೦) ; ಹೊಂಪುಳಿಯ ಘನಸೌಖ್ಯ ಮಿಕ್ಕಳಿಗಂಪುಗಳಲಿಲ್ಲೆನುತ ತನ್ನೊಳು ಜೊಂಪಿಸುವ ಮನವೆಂಬ ತುಂಬಿಯ ಭಾವ ಮಿಗೆ ತುಂಬಿ ಸಂಪಿಗೆಯ ಸಾರ್ವಂತೆ ಬಂದಳಲಂಪಿನಲಿ ಮಹದೇವಿ . . . ಅಲ್ಲಮ ಪ್ರಭುರಾಯನಿದ್ದೆಡೆಗೆ (ಪ್ರಶುಲೀ. ೦೭-೩). ೪. ಇಂದ್ರನು ಪೃಥೆಯ ಮಾತಿಗೆ ನೆನೆದು ಹೊಂಪುಳಿಯಾಗಿ . . . ವನಿತೆಗೆಂದನು (ಸಂಪಪ. ೦೫-೦೯) ; ಶರಣಾಗತರ ಸೇವೆಯೊಳು ಹೊಂಪುಳಿಯಾಗಿ ಬಾಳುವರೇಸು ಧನ್ಯರೊ (ಹಂಸಾ. ೦೭). ೫. ಒಡನೊಡನೆ ಝೊಮ್ಮಿಡುತ ತನುಲತೆ ನಡುಗಿ ಹೊಂಪುಳಿಯಾಗಿ . . . ತಲೆವಾಗಿ ಮೆಲ್ಲಡಿಯಿಡುತ ನಸುಲಜ್ಜೆಯಲಿ ನಡೆತಂದಳು ಧರಾತನುಜೆ (ಅವಂಶಾ. ೦-೨೩-೩೫).

[ದೇ. ॥ ತಮಿ. ಪೊಮ್ಮಲ್ ; ತೆಲು. ಪೊಂಪಿರಿ]

ಪೊಂಪುಟಿಗೊಳ್, ಪೊಂಪುಳಿಗೊಳ್ (ಕ್ರಿ). ಸಂತಸಪಡು ; ಹಿಗ್ಗು : ಸುಟಿಗುರುಳೊಳ್ ತೊಡಂಕಿ ವದನಾಂಬುಜಸೌರಭದೊಳ್ ಮುಟುಂಗಿ ಪೊಂಪುಟಿಗೊಳುತಿರ್ಪ ಸೋರ್ಮುಡಿಯೊಳೊತ್ತಿದ ಕತ್ತುರಿಯಂ ಕಲಂಕಿ . . . ತೀಡಿದುದು ವಲ್ಲಭನಂತಿರೆ ಮಂದಮಾರುತಂ (ಸೂಕ್ತಿಸು. ೪-೦೪೦). **ಪೊಂಪುಳಿಗೊಳ್ :** ಮುಂ ಪೇಳ್ದ ಬಾಹ್ಯರತಮಂ ಪಿರಿದೆಸಗಿ ರಮಿಸೆ ಪೊಂಪುಳಿಗೊಳುತ್ತವಳ್ ಪುರುಷನೊಡನೆ ತಂಪಿಂ ದ್ರವಿಸಿ (ಇವವ. ೮-೩೭).

[ಪೊಂಪುಟಿ + ಕೊಳ್$_1$]

ಪೊಂಪುಟಿಯೇಱು (ಕ್ರಿ). ಸಂತೋಷವು ಹೆಚ್ಚಾಗು ; ಹಿರಿಹಿಗ್ಗು : ರಾಜನೃಪನಂದನಂ ಧರೆ ಸೊಂಪೇಱೆ . . . ಮುಂ ಪೊರ್ದಿದರ್ ಪಿರಿದುಂ ಪೊಂಪುಟಿಯೇಱೆ ಪಟ್ಟವಣೆಯಂ ತಾನೇಱಿದಂ (ಪಕಪಿ. ೨-೬೫).

[ಪೊಂಪುಟಿ + ಏಱು$_1$ (< ಏಱು$_1$)]

ಪೊಂಪುಟಿಯೋಗು 'ಪೊಂಪುಟಿವೋಗು' ನೋ.

ಪೊಂಪುಟಿವಡೆ, ಪೊಂಪುಳಿವಡೆ (ಕ್ರಿ). ೧. ಸಂತೋಷಪಡು ; ಹಿಗ್ಗು : ಕಂಕೆಲ್ಲಿಯ ಸೋಂಕಿನೊಳ್ ಚಂಪಕದಣ್ಪಿನೊಳಂ ಪೊಂಪುಟಿವಡೆದು ವನವಲ್ಲಭೆಯಧರಪಲ್ಲವಕ್ಕೆ ಕುಸುಮವಿಸರದಿಂ ಪಾಟಳರುಚಿಯಿಂ ಪಾಟಿಸಲ್ ನೆಱೆವ ಪಾಟಳಿಯಂ ಸಹಕಾರನೆಂಬ ನಾಗರಕಂ ನೋಡಿ (ಅವಂಪು. ೭-೦೦ ಪ). **ಪೊಂಪುಳಿವಡೆ :** ೨. ಆಧಿಕ್ಯವನ್ನು ಪಡೆ ; ಹೆಚ್ಚಾಗು : ಕಂಪಿಂ ಸೊಂಪಿಂ ಪೆಂಪಿಂ ಪೊಂಪುಳಿವಡೆದಿರ್ದ್ದಮೆಲ್ಲಿನೊದವಿದ ಗುಣದಿಂ ಗುಂಪಿಲ್ಲದೆ ಪಡೆದಳ್ ಪತಿಗಿಂಪಂ ಮಾಳವ್ವೆ ಮಾಲತೀಮಾಲೆಯವೊಳ್ (ಎಕ. V, ಅರಸೀ. ೦೨೬-೩೦ ; 1185 ; ಶಾಪಮಂ. ೦೦೦೫ ನೋ) ; ತೊಳಗಿ ಬೆಳಗುವ ವಿಮಳವಸತಿಯ ಬಳಿಗೆ ಭಕ್ತಿಯ ರಸಮೆ ಪೊಂಪುಳಿವಡೆಯೆ ನಡೆತಂದ (ಸಾಕ್ಷಿಪಾ. ೪-೩೬). ೩. ರೋಮಾಂಚನವನ್ನು ಹೊಂದು ; ಪುಳಕಗೊಳ್ಳು : ಒಂದೆಡೆಯೊಳ್ ನಿಲ್ಲದೆ ಗೋಮಿಂದಂ ಬಳಸಿರ್ಪ ಗೋಪಿಯರ ಕೈ ಮೈಸೋಂಕಿಂದಂ ಪೊಂಪುಳಿವಡೆದಾನಂದದಿನಕ್ಷಿಗಳನಲ್ಲಿ ತೇಲಿಸುತಿರ್ದಂ (ಪಸ್ಕಾಪು. ೫-೩-೦೬೬). [ಪೊಂಪುಟಿ + ಪಡೆ$_1$]

ಪೊಂಪುಟಿವೆಱು, ಪೊಂಪುಳಿವೆಱು (ಕ್ರಿ). ೧. ಸುಖವನ್ನು ಪಡೆ : ದೇವಕಾಂತೆಯರ್ . . . ತನ್ನಿಳಿಂಪರುಪಭೋಗದ ಪೊಂಪುಟಿವೆತ್ತರಂದು . . . ತಪಃಪ್ರಭಾವದಿಂ (ಪೇಮಿಪು. ೦-೦೨೭). ೨. ಅತಿಶಯವಾಗು : ರಾಗದಿನಾಡುವೀ ಹರನ ರಾಗಮೆ ಪೊಂಪುಟಿವೆತ್ತದೊಂದು ರೂಪಾಗಿಯೆ ನಿಂದುದೆಂಬರುಣವಸ್ತ್ರದಿನುಜ್ವಲದೇಹವಂದು ಚೆಲ್ವಾಗಿರೆ (ಇಗಪಿ. ೦೭-೦೦೦). **ಪೊಂಪುಳಿವೆಱು :** ೩. ಹಿಗ್ಗು ; ಸಂತೋಷಿಸು : ಆ ಪ್ರೋಜ್ವಳರಂಗಾಧೀಶವೃತ್ತಾಂತಮನತಿಮುದದಿಂ ಪೇಳೆಯಾ ಗೌತಮಂ ಪೊಂಪುಳಿವೆತ್ತು (ಪತ್ಕಿಪು. ೫-೪). ೪. ರೋಮಾಂಚನಗೊಳ್ಳು : ಪೊಂಪುಳಿವೆತ್ತ ಮೆಯ್ಯ ಪೊರ್ದುಗೆಯಱಿದಪ್ಪಿ ಜಾಣಱಿದು ಮುದ್ದಿಸಿ (ಯಾದವ. ೩-೦೪೦). [ಪೊಂಪುಟಿ + ಪೆಱು$_1$]

ಪೊಂಪುಟಿವೋಗು, ಪೊಂಪುಳಿಯೋಗು, ಪೊಂಪುಳಿವೋಗು, ಪೊಂಪುಟಿಯೋಗು, ಹೊಂಪುಳಿಯೋಗು, ಹೊಂಪುಳಿವೋಗು, ಹೊಂಪುಳಿಹೋಗು (ಕ್ರಿ). ೧. ಹೆಚ್ಚಾಗು ; ಅಧಿಕವಾಗು ; ವೃದ್ಧಿಹೊಂದು : ಕೇಸರಿಣೀಸ್ತನ್ಯಮನನ್ಯವನ್ಯಗಜಪೋತಾನೀಕಮುಂಡಾಡೆ ಶಾಂತರಸಂ ಪೊಂಪುಟಿವೋದುದಾ ಮುನಿಪನಿಂ ತತ್ಕಾಂತಕಾಂತಾರದೊಳ್ (ಆದಿಪು. ೯-೯೭) ; ಪೊಂಪುಟಿವೋಯ್ತು ದೀಪ್ತತಪಮೆಂಬಿನಮರ್ಕಕರಂಗಳತ್ತಮಿತ್ತಂ ಪುದಿದುಷ್ಣರಶ್ಮಿ ಪುರುಷಾಕೃತಿಯಂತಿರೆ (ಶಾಂತಿಪು. ೯-೧೦೮) ; ಕಂಪಿನ ಪೊಂಪುಟಿವೋಪ ನಿಳಿಂಪನ ಮೆಯ್ವೆಳಗೇಂ ಕರಂ ಮನಂಗೊಳಿಸಿದುದೋ (ಪರ್ಶಪು. ೦೨-೪೪). ೨. ಸೊಗಸಾಗು ; ಚೆನ್ನಾಗು : ಪುಷ್ಪವಾಸನೆಯ ಮೆಲ್ಪಿನ ತಣ್ಪಿನ ಕಂಪಿನಲ್ ಪೊಂಪುಟಿವೋಗುತ್ತಿರ್ದ ತಂಡುಲಂಗಳಂ ಕಳದುಕೊಂಡು ಬಾಗಿದೋಗರಮನಾರೊಗಿಸುವಂ (ಸುಕುಮಾ. ೧೦-೩೫ ಪ) ; ಗಾಂಪಿನೊಳನ್ಯಪುಷ್ಪದೊಳು ಮೇಳಿಸಿ ನೀಳ್ದುದಿದೇಕೆ ಕಂಪಿನೊಳ್ ಪೊಂಪುಟಿವೋಗುತಿರ್ದಮಳವಕ್ತ್ರಸರೋಜಮೆ ಸಾಲ್ಗುಮೆಂದು ತಣ್ಗಂಪನುಣಲ್ಕೆ ಬಂದೆಱಗಿ (ರರ್ಮಾಪ್ಯು. ೬-೨೦೦). ೩. ವ್ಯಾಪಿಸು ; ಹರಡು ; ಹಬ್ಬು : ಈ ಬಂದಂ ಧರಾಧೀಶನೆಂಬ ರವಂ ಪೊಂಪುಟಿವೋಗೆ ವಾರಿಧಿತಟಂ ಚೆಲ್ವಾದುದಾ ಸೈನ್ಯದಿಂ (ಆದಿಪು. ೦೨-೦೨೬) ; ಪೊಂಪುಟಿವೋಗೆ ರಾಗವೆರಡುಂ ಕೆಲದೊಳ್ ಮದನಾನುರಾಗಮಂ ಸಿಂಪಿಸುವಂತೆ ಬಾಜಿಸುವ ಬಂಚದ ನುಣ್ಚರದೊಳ್ ಪಳಂಚಿ ಗೀತಂ ಪರಿಪುಷ್ಪಮಾಗೆ (ಮುಂಪು. ೦೧-೦೦೨). ೪. ಹಿಗ್ಗು ; ಸಂತೋಷಪಡು :

ವಿದ್ಯಾ ಧರೀರಮ್ಯ ನರ್ತನರಾಗೋತ್ಥಿ ತಪಾರಿಹಾರ್ಯರಶನಾಮಂಜೀರಿಕೋದ್ದಾಮನಿಸ್ವನದೊಳ್ ಪೊಂಪುಟಿವೋಗುತಿರ್ಪುವೆರಡುಂ ವಿದ್ಯಾಧರಶ್ರೇಣಿಗಳ್ (ಅಪಿಪು. ೧-೬೦) ; ತವೆ ಮಂಚಸ್ಥಿತ ಭೂಮೀಭವನಂ ನಡೆನೋಡಿ ಕಾಂತೆ ಪೊಂಪುಟಿವೋದಳ್ (ಉದ್ಯಟ. ೬-೯೯) ; ತನಗೆ ದೊರೆವಡೆದೊಂದು ಜವ್ವನದ ಪೊಸ ಕುದುರೆಯಂ ನಿಟ್ಟಿಸಿಯಟ್ಟಿಱಿಂ ಪೊಂಪುಟಿವೋಗಿ (ರಾಮಾಶ್ವ. ೬೫-೨). **ಪೊಂಪುಳಿಯೋಗು** : ೪. ಮೆಯ್ಯಿಕ್ಕಿ ಪೊಂಪುಳಿಯೋದನಾ ಮುನಿಪನಂದು (ಲಕಿಸಂ. ೪೬-೧೩) ; ಸಂಪಗೆ ನಾಗ ಸಂಪಗೆ . . . ಪೊಂಪುಳಿಯೋಗುವೋಪರ ಮನ ತನುವಿಗೆ ತಂಪ ಪುಟ್ಟಿಸುವವೇನೆಂಬೆ (ಅನಂಶ. ೦-೦೧೨). ೫. ರೋಮಾಂಚನ ಹೊಂದು ; ಪುಳಕಗೊಳ್ಳು : ನಳಿನಗಂಧದ ಗಾಢತರಸುಖದೊಳಗೆ ಪೊಂಪುಳಿಯೋಗಿ [ಪಾಠಾಂ. ಹೊಂಪುಳಿವೋಗಿ] ಭೂಪತಿತಿಲಕನಿದ್ದನು ಗಂಧಮಾದನಗಿರಿಯ ತಪ್ಪಲಲಿ (ಕುಪ್ಯಾಅ. ೧೦-೫) ; ಮಗುಳೆ ಸೊಂಪಿಡಿದು ಕುಣಿಕುಣಿವುತ್ತೆ ಪೊಂಪುಳಿಯೋಗುತಡಿಗಡಿಗೆ (ಕಾವೇಮ. ೫೫-೦೯). **ಪೊಂಪುಳಿವೋಗು** : ೧. ರಸವಿಸರಂ ಪಸರಿಸೆ ಸೊಂಪು ಪೊಂಪುಳಿವೋಗೆ ರೀತಿ ಕೌತುಕಮನೀಯೆ . . . ಪ್ರಮುಖಪ್ರಬಂಧಂಗಳಂ ಪೇಳ್ದು (ರಾಜಕೇ. ೫-೧೯ ಪ). ೪. ಹರಿಯದಮಳಾನಂದರಸದಲಿ ಹೊರೆದು ಪೊಂಪುಳಿವೋಗಿ[ಪಾಠಾಂ. ಹೊಂಪುಳಿಯೋಗಿ] ಲಕ್ಷ್ಮೀಧರನ ನೆನೆದನು (ಕುಪ್ಯಾಕಾ. ೪-೦೨೨) ; ಪೊಡವಿಯೊಳ್ ಮೆಯ್ಯಿಕ್ಕಿದಗರಾಜ ಮೇನೆಯರನೊಡನೆತ್ತಿ ತಾನೆಱಗಲುಮೆಯನವರೆತ್ತಿ ಬಿಗಿಯಪ್ಪಿ ಪೊಂಪುಳಿವೋದರು (ಸಂಪು. ೩೬-೦೭) ; ನೀ ಕೇಳಿದ ದನಿಯಿದಕಾಲದ ಮೋಡದ ಮೊಳಗೆಲೆ ಮುಗುದೆ ಗಂಡನ ಬಿಲ್ಲಿನ ಸಿಂಜಿನಿದನಿಯೆಂದದೇತಕೆ ಪೊಂಪುಳಿವೋದೆ (ಗಾಭಾಸ. ೦೫-೯). ೫. ಲತಾಂಗಿಯ ಮೆಲ್ಪುವೆತ್ತ ಸಿರಿಮೆಯ್ಯ ಸೋಂಕಿಗೆ ಮೆಯ್ಮರೆದು ಪೊಂಪುಳಿವೋದ ಮಾರಾಯನ ಕಯ್ದಾವರೆಯಂ ಪಿಡಿದು (ಮರಾಶ. ೪-೪೨ ಪ) ; ಮಣಿದೆನದ್ವೈತದ ಪೀಠಕೆ ಕೊಂಡಾಡಿ ಕುಣಿದು ನಾ ಪೊಂಪುಳಿವೋದೆ (ಇಂಪಾಶ. ೦೭-೨೫). **ಪೊಂಪುಟಿಯೋಗು** : ೪. ವಿಮಲವಲ್ಲರಿಗಳಿಂ ಪೊಂಗಿ ಪೊಂಪುಟಿಯೋಗಿ ಪೊದಟ್ಟು ನುಣ್ಣರವೆತ್ತಿ ಝೇಂಕರಿಸುವಳಿಗಳಿಂ (ಕಾದ್ಯಟ. ೩-೯೯). ೫. ಮಹಾದೇವನ ಮೂರ್ತಿಯಂ ಕಂಡು . . . ಪೊಂಗಿ ಪೊರೆಯೇಱಿ ಪೊಂಪುಟಿಯೋಗಿ ಮಹಾನಂದಂಬಡೆದು (ಉದ್ಯಟ. ೦೨-೦೩೬ ಪ). **ಹೊಂಪುಳಿಯೋಗು** : ೩. ಬಸವನ ಪುಣ್ಯಕೀರ್ತಿಲತೆ ಬೇರ್ವರಿಯಿತ್ತುರಗೇಂದ್ರಲೋಕದೊಳ್ . . . ಕುಸುಮಿತವಾಗಿ ಸೌರಭದಿ ಹೊಂಪುಳಿಯೋಯ್ತುಮರೇಂದ್ರಲೋಕದೊಳ್ (ಬಸರ. ೦೨-೦ ಸೂಕನಾಪದ್ಯ). ೪. ರೋಮಾಂಚನದಲಾನಂದಾಶ್ರುಜಲದಲಿ ನನೆದು ಹೊಂಪುಳಿಯೋಗಿ ಕಣ್ಣೆವೆ ಮುಚ್ಚಿ (ಕುಪ್ಯಾಕ್ರೋ. ೦೬-೬೦) ; ಹೊರೆಯೇಱಿ ಹೊಂಪುಳಿಯೋದಳುಮ ಮಹಿಮೆಗೆ ಮಧುದ್ವಿಷನ (ತೊರರಾ. ೪-೯-೩೨). ೫. ತೆಗೆದು ಬಿಗಿಯಪ್ಪಿದನು ಯಮಜಾದಿಗಳ ಮನ್ನಿಸಿ ವೀಳೆಯವನಿತ್ತೊಗುಮಿಗೆಯ ಹರುಷದಲಿ ಹೊಂಪುಳಿಯೋದನಾ ಭೀಷ್ಮ (ಕುಪ್ಯಾಭೀ. ೭-೦೭) ; ಉಬ್ಬರದ ಹರುಷದಲಬಲೆ ಹೊಂಪುಳಿಯೋದಳಡಿಗಡಿಗೆ (ತೊರರಾ. ೫-೩-೯೩) ; ವರ ಮುನೀಶ್ವರ ಮನದೊಳಗಜಾವರನ ಮೂರ್ತಿಯ ಕಂಡು ಹರ್ಷೋತ್ಕರದ ಸುಖಮಯನಾಗಿ ಹೊಂಪುಳಿಯೋದನಡಿಗಡಿಗೆ (ಅಂಬಿಕಾ. ೨ ಸೂಕನ). **ಹೊಂಪುಳಿವೋಗು** : ೪. ನಗೆಮೊಗವರಳಿ ಹೊಂಪುಳಿವೋ[ಪಾಠಾಂ. ಯೋ]ಗಿ ಕೌರವರರಸ ನುಡಿದನು (ಕುಪ್ಯಾಕ್ರೋ. ೦-೩೯) ; ಜೋಗದ ಜಲಪಾತದಿ ಧುಮುಕುವ ಮನ. ಮಲೆನಾಡಿಗೆ ಹೊಂಪುಳಿವೋಗುವ ಮನ (ಕೋಗಿರೆ. ೪೩-೦೬). ೫. ವನಿತೆ ಗುಣಗಳೊಳೊಂದನೊಂದನು ಮನದೊಳಗೆ ಸವಿಮಾಡಿ ತರುಣಿಯ ನೆನದು ಹೊಂಪುಳಿವೋ [ಪಾಠಾಂ. ಯಾ]ಗಿ ವಿರಹದಿ ಮದನಗೀಡಾಗಿ ... ಜನಪ ನಳನಿರೆ (ನಳಸ. ೨-೬). **ಹೊಂಪುಳಿಹೋಗು** : ೪. ಮನದ ಭಾವದ ರಾಗರಸದುಬ್ಬಿನಲಿ ಹೊಂಪುಳಿಹೋದನವರನು ಕಂಡು ಪಾಂಚಾಲ (ಕುಪ್ಯಾಅ. ೧೬-೬೨). [ಪೊಂಪುಟಿ + ಪೋಗು$_1$ (< ಪೋ$_1$)]

ಪೊಂಪುಟಿಸು (ಕ್ರಿ). ೧. ಅಧಿಕವಾಗು; ಹೆಚ್ಚಾಗು; ಉಕ್ಕು : ಮನೋಹರಿಯರ್ ಬಂದೊಡಲಂಪು ಪೊಂಪುಟಿಸೆ (ಅನಂಪು. ೩-೭೭) ; ತುಂಬಿಗಳ್ಕದ ನಱುಗಂಪು ಪೊಂಪುಟಿಸೆ ಪೆಂಪೆಸೆದಿರ್ದುದು ಚಂಪಕವ್ರಜಂ (ದಶಕು. ೦-೫೨). ೨. ವ್ಯಾಪಿಸು; ಹರಡು; ಹಬ್ಬು : ಪೊಟಲನಿತುಂ ಪಳಚ್ಚ ನಮೃತಪ್ಲವದಿಂ ತೊಳೆದಂತೆ ಸೊಂಪು ಪೊಂಪುಟಿಸೆ (ಅನಂಪು. ೭-೯೦).

[ಪೊಂಪುಟಿ + — ಇಸು$_3$]

ಪೊಂಬಕ್ಕರಗೆ 'ಪೊಂಬಕ್ಕರಿಕೆ' ನೋ.

ಪೊಂಬಕ್ಕರಿಕೆ, ಪೊಂಬಕ್ಕರಗೆ, ಪೊಂಬಕ್ಕರಿಗೆ (ನಾ). ಆನೆ, ಕುದುರೆಗಳಿಗೆ ಹಾಕುವ ಚಿನ್ನದ ರಕ್ಷಾಕವಚ, —ಮೈಜೋಡು : ಎರಡುಂ ಬಳಿಗಳ ಪೊಂಬಕ್ಕರಿಕೆಗಳೊಳ್ತುಱುಗಿ ನಟ್ಟು ಗಱಿಗಣೆ ಗಱಿಯಂತಿರೆ . . . ತುರಂಗತತಿ ಗರುಡಬಳಮನೇನಿಳಿಸಿದುದೋ (ರಾಜಕೇ. ೬-೬೩). **ಪೊಂಬಕ್ಕರಗೆ** : ಪರಿದುವು . . . ಘೋಟಾಯ್ಲರ್ ಪರಿಯಿಸೆ ತರದಿಂ ಪೊಂಬಕ್ಕರಗೆಯ ತುರಗಂಗಳಾಹವಾಂಭೋನಿಧಿಯೊಳ್ (ಸಂಪ್ರಪು. ೦೦-೭೬). **ಪೊಂಬಕ್ಕರಿಗೆ** : ಪೊಳೆವ ಪೊಂಬಕ್ಕರಿಗೆಯ ತೇಜಿಗಳು ರಣಜಲನಿಧಿಯಲ್ಲಿ ಪರಿವವು (ಸಂಪ್ರಸಾಂ. ೨೧-೦೪೬). [ಪೊಂ (< ಪೊನ್) + ಪಕ್ಕರಿಕೆ]

ಪೊಂಬಕ್ಕರಿಗೆ 'ಪೊಂಬಕ್ಕರಿಕೆ' ನೋ.

ಪೊಂಬಕ್ಕರೆ (ನಾ). = ಪೊಂಬಕ್ಕರಿಕೆ : ಹಾಯ್ಕಿದ ಪೊಂಬಕ್ಕರೆ ರುಲ್ಲಿಗಳೆಸೆವ ಮಿಕ್ಕ ಮನದ ಕುದುರೆಯೆನೇಱಿ ಬಂದನಂದಕ್ಕಸಾಲೆಯ ಚಿಕ್ಕ ಬೇಗ (ಕುರಾಸಾಂ. ೦೦-೫೩). [ಪೊಂ (< ಪೊನ್) + ಪಕ್ಕರೆ$_1$]

ಪೊಂಬಕ್ಕಿ (ನಾ). ಚಿನ್ನದ ಬಣ್ಣದ ರೆಕ್ಕೆಗಳಂಳ್ಳ ಹಕ್ಕಿ ; ಗರುಡ : ಇಕ್ಕಿದ ಪಕ್ಕರಕ್ಕೆ . . . ಮೊಗರಂಬಮೊಂದು ಪೊಂಬಕ್ಕಿಯ ತೊಟ್ಟು ಮೆಯ್ಗರೆಯೆ ಬಾಸಿಗದಿಂ ಮೆಱೆದತ್ತು ಸಪ್ತಿಗಳ್ (ನಳಸ. ೨-೯೬).

[ಪೊಂ (< ಪೊನ್) + ಪಕ್ಕಿ]

ಪೊಂಬಗರಿ 'ಪೊಂಬೊಗರಿ' ನೋ.

ಪೊಂಬಚ್ಚ (ನಾ). ಚಿನ್ನದ ಒಡವೆ ; ಸ್ವರ್ಣಾಭರಣ : ಕೊರಳ ಪೊಂಬಚ್ಚಗಳ ಬೆಳ್ಳಿಯ ಮುರುಹುಗಡಗದ . . . ಪರಮಗೋಪರ ಕಂಡು ನಸುನಗುತಿರ್ದನಕ್ರೂರ (ಅಕ್ರೂಸ. ೨-೪೯) ; ಪೊಂಬಚ್ಚಮಂ ಪಣ್ಣಿ ಬಣ್ಣಮಂ ಕೇಳ್ದಯ್ ? (ರಾಮಾಶ್ವ. ೦೨-೨೩).

[ಪೊಂ (< ಪೊನ್) + ಪಚ್ಚ$_2$]

ಪೊಂಬಚ್ಚಲ್ (ನಾ). ಚಿನ್ನದಿಂದ ನಿರ್ಮಿತವಾದ ಬಚ್ಚಲು.— ಸ್ನಾನದ ಮನೆ : ಲೇಸೆನುತೈತಂದು ಮಗ ಸೊಸೆಗೆಣ್ಣೆಯ ಪೂಸಿ ಪೊಂಬಚ್ಚಲೊಳ್ ನಿಲಿಸಿ ಮೀಸಿದ ಬಳಿಕ ಸಿಂಗರಗೆಯ್ದು ರನ್ನದ ಬಾಸಿಗವನು ಕಟ್ಟಿದರು (ಮೋಹಶ. ೦೩-೬೯). [ಪೊಂ (< ಪೊನ್) + ಬಚ್ಚಲ್]

ಪೊಂಬಚ್ಚು (ನಾ). ಒಂದು ಬಗೆಯ ಹುಳು.—ಕ್ರಿಮಿ : ನಮ್ಮಲ್ಲೂ. ಒಮ್ಮೊಮ್ಮೆ ಬತ್ತದ ಪೈರಿನ ಮೇಲೆ ತಲೆದೋರುವ "ಪೊಂಬಚ್ಚು" ಹುಳುವು ಬಯಲಿಗೆ ಬಯಲನ್ನೇ ಕೆಡಿಸಿಬಿಡುವುದು (ಬಾಲಪ್ರ. III. ೦೩೬೭). [?]

ಪೊಂಬಟ್ಟ, ಹೊಂಬಟ್ಟ (ನಾ). ಚಿನ್ನದ ಹಣೆಪಟ್ಟಿ.—ಫಲಕ : ಪೆತ್ತೆನಗೆ ನೀಂ ಪೊಂಬಟ್ಟಮಂ ಕಟ್ಟಿದೈ (ಧರ್ಮಾಮ್ಯ. ೨-೦೦೦) ; ಮೇದಿನಿಯೊಳಾರಾದೊಡಂ ಮಿಡುಕುಳ್ಳೊಡುನ್ನತಪರಾಕ್ರಮಿ ತಡೆಯಲಿ ವಾಜಿಯನೆಂದು ತನ್ನ ಬಿರುದಂ ಬರೆದು ಪೊಂಬಟ್ಟಮಂ ಕಟ್ಟಿ ಬಿಡುವುದಾ ಹಯದ ಪಣೆಗೆ (ಕೈಮಿಭಾ. ೨-೨೬). **ಹೊಂಬಟ್ಟ** : ಇದು ಇಂತಹ ರಾಯನ ಕುದುರೆ . . . ಎಂದು ಬರೆದಿರುವ ಹೊಂಬಟ್ಟವನ್ನು ಕಟ್ಟಿ ಬಿಡಬೇಕು (ಬಿದುರೆ. ೪).

[ಪೊಂ (< ಪೊನ್) + ಪಟ್ಟ$_3$]

ಪೊಂಬಟ್ಟಲ್, ಪೊಂಬಟ್ಟಲು, ಹೊಂಬಟ್ಟಲು (ನಾ). ೧. ಚಿನ್ನದಿಂದ ಮಾಡಿದ ಬಟ್ಟಲು : ಪೊಂಬಟ್ಟಲೊಳ್ತೀವಿದಾಸವದ ರುಚಿ ಗಿರ್ವರುಂ ಬಿಡದೆ ಮೊಗಮಿಟ್ಟಿರಲ್ಕೆ (ಕೈಮಿಭಾ. ೦೫-೪೬) ; ಕಪಿಲಾಕ್ಷೀರಮಂ

ಕಮ್ಮಗಿನಿದಪ್ಪಂತೆ ಕಾಸಿ ಬಳ್ಳದಿನಳೆದು ಪೊಯ್ದು ಪೊಂಬಟ್ಟಲ್ದೀವಿ (ಸ್ಕಂ. ೯-೬೦ ಪ). **ಪೊಂಬಟ್ಟಲು** : ೧. ಪೊಂಬಟ್ಟಲೊಳಗಿನ ಹಾಲು ಉಚ್ಛಿಷ್ಟ ಹಾಕಿಸೊ (ಪುರಂದ. ೨-೨೩-೨). ೨. (?) : ತೊಟ್ಟ ವಜ್ರಾಂಗಿಯ ಹೋಡುಸವಗ ಪೊಂಬಟ್ಟಲ [ಪಾಠಾಂ. ಲು] ಚೀನಿಯ ಶೌಳಿ ಕಟ್ಟಿದ ಬಿರಿದು ಮೆಱೆಯ ರಾವುತರು ಬಿಟ್ಟೇಱಿದರು ಕುದುರೆಗಳ (ಕುರಾಸಾಂ. ೦೨-೬೬). **ಹೊಂಬಟ್ಟಲು** : ೧. ಬಳಿಕಿನಿತು ಪಾಲ್ಗೆಱೆದು ಹೊಂಬಟ್ಟಲೊಳಿರಿಸಿ ತಾಂ ನಿಲಿಸಿ ಬಂದಾ ಮಲಹರನ ಬಳಿಗದೆ ಯುವತಿ ಹೋದಹಳು ನೋಡೆನಲು (ಶಿಸಪು. ೩೦-೦೨) ; ಹೊಳೆವ ಹೊಂಬಟ್ಟಲಲಿ ಸೂಸಿದ ನರ್ಘ್ಯಜಲವನು ಜನಕನಿದಿರಿನಲಿ (ಕುಸ್ಯಾಕ. ೬-೦೬) ; ಹೊಂಬಟ್ಟಲಲಿ ವೀಳೆಯವ ನಂದನಂಗಿತ್ತು . . . ಬೆಸಸಿದನು ಬಳಿಯಲಿ ಬವರಕನಿಲಜನ (ಕೊರಾ. ೩-೫-೦೦). [ಪೊಂ (<ಪೊನ್)+ಬಟ್ಟಲ್]

ಪೊಂಬಟ್ಟಲು 'ಪೊಂಬಟ್ಟಲ್' ನೋ.

ಪೊಂಬಟ್ಟು (ನಾ). ಚಿನ್ನದ ದುಂಡನೆಯ ವಸ್ತು : ಮುಗಿಲೊಡ್ಡಂ ಗೆಲೆವಂದ ಕಾಯಭರದಿಂ ಪೊಂಬಟ್ಟನೊಟ್ಟೈಪ ದಿಟ್ಟಿಗಳಿಂ . . . ಪೆಱೆಯ ಸೌಭಾಗ್ಯಕ್ಕೆ ತೋಡಾದ ಕೋಡುಗಳಿಂದೇಂ ಜನಕಂಗೆ ಹರ್ಷಜನಕಂ ತಾನಾಯ್ತೊ ವನ್ಯದ್ವಿಪಂ (ಸಂಗಾಮಾ. ೯-೦೦೯) ; ಭೂತಳಕ್ಕೆ ಪರಿವೇಷಂ ಗೊಂಡು ಬೀಟ್ಟಂವ ಭಾಸ್ಕರನಂತಿರ್ದುದು ಸೀಹಚೂಡನ ಶಿರಂ ಪೊಂಬಟ್ಟಿ ನಾಳ್ದಟ್ಟಿನೊಳ್ [ಪಾಠಾಂ. ಳ್ಬಟ್ಟೆಯೊಳ್] (ಅಸಂಪು. ೦೦-೬೩).

[ಪೊಂ (<ಪೊನ್) + ಬಟ್ಟು]

ಪೊಂಬಟ್ಟೆ, ಹೊಂಬಟ್ಟೆ (ನಾ). ಜರತಾರಿಯ ಪೀತಾಂಬರ : ಪಕ್ವಶಾಳಿ ಕಣಿಶಾಳೀನಮ್ರಮೊಪ್ಪಿರ್ದದೇಂ ಗೆಲೆವಂದತ್ತೊ ಸುವರ್ಣವರ್ಣದಿನಿಳಾ ಶ್ರೀಯುಟ್ಟ ಪೊಂಬಟ್ಟೆವೋಲ್ (ಪಗಸಿ. ೨-೩) ; ಜಾಣಮರೆ ಪೊಂಬಟ್ಟೆಯುಟ್ಟು ನೀಲಾಬ್ಜಮಂ ಪಾಣಿಯೊಳ್ ಪಿಡಿದು . . . ಒಪ್ಪಿದಳ್ (ಸದ್ಯಾಂ. ೬-೯೬) ; ತುಱುಗೆವೆಗಣ್ಣ ನೀರಿಂಗೆ ಹಱಿಗೋಲ ಹಾಯ್ಕಿಸಬೇಡೆಂದು ಪೊಂಬಟ್ಟೆಸೆಱಗಿನಿಂ ತೊಡೆದ ಲೋಚನವ (ಸೋಹಕ. ೯-೬೭). **ಹೊಂಬಟ್ಟೆ** : ತಂದು ಹೊಂಬಟ್ಟೆಗಳ ಹೊಂಪುಣಿಯಿಂದ ಮೆಱೆದಿಹ ಪಂಚಘಂಟೆಗಳಿಂದ್ರ ನೈರಾವತಕೆ ಸರಿಮಿಗಿಲೆಂದುದುಖಳಿಜನ (ಸಂಪಸ. ೨೦-೦೦); ಎಡಗೈಯೊಳಾಂತ ಹೊಂಬಟ್ಟೆ ಅಕ್ಷತೆ ಪುಷ್ಪ ನಿಡುಗಿಂಡಿ ಬಲದ ಹಸ್ತದೊಳು ತೊಡಿಗೆಯ ಪ್ರಭೆ ದಿಕ್ಕುದಿಕ್ಕಿಗೆ ಪಸರಿಸಿ ನಡೆಯೆ ನಡೆದನಾ ರಾಯ (ಪರಸ. ೩-೬).

[ಪೊಂ (<ಪೊನ್) + ಬಟ್ಟೆ$_2$]

ಪೊಂಬಡಲಗೆ, ಪೊಂಬಡಲಿಗೆ (ನಾ). ಚಿನ್ನದಿಂದ ಮಾಡಿದ ಅಗಲವಾದ ತಟ್ಟೆ : ಎಡದ ಕರದೊಳ್ಗಂಧಂ ಪೂಮಾಲೆ ಸಿರ್ಪಿನ ಸೇಸೆ ಪೊಂಬಡಲ [ಪಾಠಾಂ.ಲಿ]ಗೆಯೊಳೊಂದಂದಂ ಚೆಲ್ವಾಗೆ ಗಂಧಜಳಂಗಳಂ ಪಿಡಿದ ಕಳಸಂ ಕಯ್ಯೊಳ್ಕತ್ತೊಂದಱೊಳ್ಮಿಗೆ ಶೋಭೆಯಂ ಪಡೆಯೆ ಪದಪಿಂದೊರ್ವಂ ಬಂದಂ ಪ್ರಗಲ್ಭಪುರೋಹಿತಂ (ಅರ್ಧಸೇ. ೨-೦೯). **ಪೊಂಬಡಲಿಗೆ** : ನಿಜಜನನಿಯ ಮನೋಹರಮಪ್ಪ ಮಣಿದೊಡವುಗಳಂ ಪೊಂಬಡಲಿಗೆ ಯೊಳ್ತೀವಿಯೋರ್ವ ಕೆಳದಿಯ ಕೈಯೊಳ್ಮಾತೆಯೆಡೆಗಟ್ಟಲ್ (ಪಾಗಳು. ೯-೦೦೯ ಪ). [ಪೊಂ (<ಪೊನ್) + ಪಡಲಗೆ]

ಪೊಂಬಡಲಿಗೆ 'ಪೊಂಬಡಲಗೆ' ನೋ.

ಪೊಂಬಡಿಗ (ನಾ). ೧. ಚಿನ್ನದ ಪೀಕದಾನಿ : ಮಿಂಡಿಯರ್ ಪೊಂಬಡಿಗವ ಸಾರ್ಚಿ ಬಿಸಿನೀರ ಗಿಂಡಿಯೊಳ್ ತಂದು ಕಾಲ್ದೊಳೆಯೆ (ಸೋಹಕ. ೦೬-೯೯). ೨. ಚಿನ್ನದ ಪಾತ್ರೆ: ಪಾವನಪಾದ್ಯಮಂ ತಳೆದ ಪೊಂಬಡಿಗಂಬೊಲ ದಾಯ್ತು ಮೇರು (ಪಳಿ. ೯-೨). [ಪೊಂ (<ಪೊನ್) + ಪಡಿಗ]

ಪೊಂಬಡೆ (ಕ್ರಿ). ಹಣವನ್ನು ಗಳಿಸು ; ಐಶ್ವರ್ಯವನ್ನು ಸಂಪಾದಿಸು : ಗಂಡುಗೂಸುವೆತ್ತ ಸಜ್ಜನದಂತೆ ಪೊಂಬಡೆದ ಸೂಳೆಯಂತೆ . . . ಚಿತ್ತದೊಳಾನಂದಂ ಬೆರಸಿರ್ಪುದು (ಧರ್ಮಾಸ್ಕು. ೯-೩). [ಪೊಂ (<ಪೊನ್)+ಪಡೆ$_1$]

ಪೊಂಬಣತಿ (ನಾ). ಚಿನ್ನದ ದೀಪ : ಪಟ್ಟಸೂತ್ರದಿ ಪೊಸೆದು ಬತ್ತಿಯನಿಟ್ಟು ಪೊಂಬಣತಿಯೊಳು . . . ಮುದದಿಂದ ದೀಪ್ತಿಯ ಮುಟ್ಟಿಸೆ (ಸಂಕರಾ. ೩-೩೩). [ಪೊಂ (<ಪೊನ್) + ಪಣತಿ$_2$ (<ಪಣತೆ)]

ಪೊಂಬಣ್ಣ, ಹೊಂಬಣ್ಣ (ನಾ). ೧. ಬಂಗಾರದ ಬಣ್ಣ ; ಚಿನ್ನದ ಬಣ್ಣ : ಕಣ್ಣಾರೆ ಬಿರಯಿಯಂ ಮೂಪಣ್ಣಂ ಬರಿಸಿದುವರಲ್ದ ಸುರ ಹೊನ್ನೆಯ ಪೊಂಬಣ್ಣದ ಬೆಳರ್ವಣ್ಣದ ಕೆಂಬಣ್ಣದ ಕೇಸರಮುಮೆಸಟ್ಗಳುಂ ಕರ್ಣಿಕೆಯುಂ (ಪುಲ್ಲಿಪು. ೩-೦೬); ಒಲೆದಾಡುವ ಪೊಂಬಣ್ಣಮೆಸೆವ ಕಳಮ ಶ್ರೀಯ ಪರಿಚರ್ಯೆಯಂ ಬಿಡದೆ ಮಾಳ್ಪ ಕೆಳದಿಯರೆನಲ್ಕೀರನಿಕುರುಂಬಮಂ ಸೋವಲೆಂದಲ್ಲಿರ್ದ ಪಾಮರಿಯರಧ್ವಗರ ನಡೆಗೆಡಿಪರು (ಸ್ವಪ್ನಾ. ೩-೬). ೨. ಕೆಂಪು ಬೆರೆತ ಹಳದಿ ಬಣ್ಣ ; ಮಾಸಲುಕೆಂಪು ; ಕಪಿಲವರ್ಣ : "ಕವಿಲೆವಣ್ಣಮೆಂದು ಪೊಂಬಣ್ಣಂ" (ಕಸಾ. ೩೬-೨೨೦) ; ಪೊಂಬಣ್ಣದ ಕೆಂಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ (ಅಸಿಪು. ೦-೬೦) ; ತೋರ ಮುಯ್ಯುಗಳೊಳೆಸೆವ ಕುಂಕುಮಂಗಳ ಬಂಬಲ ಸೋಂಕಿನೊಳ್ ರಜಂ ನೆಗೆದು ದೆಸೆಗಳ್ ಪೊಂಬಣ್ಣಮಾಗೆಸೆಯೆಯುಂ (ಕಾದಂಪು. ೬೬). **ಹೊಂಬಣ್ಣ** : ೧. ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು (ಬಸವ. ೪೭೦); ಪೂರ್ವಮಂದರಂ . . . ಅಂಬುಜಜಂ ನಟ್ಟಿರಿಸಿದ ಹೊಂಬಣ್ಣದ ಕಂಭ ಮೆಂಬಿನಂ ರಂಜಿಸುಗುಂ (ಪಾಪಪು. ೯-೯); ಹೊಂಬಣ್ಣಮೈಯಳೊರ್ವಳು . . . ನಿಂದಳು ಹೊನ್ನ ಬೊಂಬೆಯಂತರಸನೊತ್ತಿನೊಳು (ಪರಸ. ೩-೨೯). ೨. ಅಣ್ಣಗಳೆ ! ಹೊಂಬಣ್ಣ ತಿರುಮಾಸೆಯಬ್ಬರಕೆ ಮಣ್ಣಿಕ್ಕಿ ! (ಕಾಪು. ೯೨-೩). [ಪೊಂ (< ಪೊನ್) + ಬಣ್ಣ]

ಪೊಂಬಣ್ಣಿಗೆ (ನಾ). ಚಿನ್ನದ ಅಲಂಕಾರ,-ಶೃಂಗಾರ : ಬಂದತ್ತು ಪೊಂಬಣ್ಣಿಗೆಯ ಪಿಡಿಗಳೊಳ್ ತಂಡದಿಂ ಪೆಂಡವಾಸಂ (ಪಗಸಿ. ೦೫-೭೮).

[ಪೊಂ (< ಪೊನ್) + ಪಣ್ಣಿಗೆ (< ಪಣ್ಣುಗೆ)]

ಪೊಂಬರಣಿ (ನಾ). ಬಂಗಾರದ ಕರಂಡಕ; ಚಿನ್ನದ ಡಬ್ಬಿ: ಪೊಂಬರಣಿಯ ಮೇಲೇನಿದು ತುಂಬಿಯೆ ಕತ್ತುರಿಯ ಬೊಟ್ಟೆ (ಪಳಿ. ೬-೩೦).

[ಪೊಂ (<ಪೊನ್) + ಬರಣಿ]

ಪೊಂಬರದ (ನಾ). ಚಿನ್ನದ ವ್ಯಾಪಾರ ಮಾಡುವವನು ; ಸರಾಫ : "ಸೊನ್ನೆವರದನೆಂದುಂ ಪೊಂಬರದನೆಂದುಂ ಚಿನ್ನವರದಂ" (ಕಸಾ. ೬೦-೩೩೫) ; ಪೊಂಬರದರ ಪೂವಡಿಗರ ತಂಬುಲಿಗರ . . . ಕದಂಬದಿನಾ ರಾಜವೀಧಿ ಕಣ್ಗೆಸೆದಿರ್ಕುಂ (ಕಾಸ್ಪುಟ. ೦-೩೦) ; ತಂಬೆಲರೆಂಬ ಪೊಂಬರದ ನಲರ್ವೊನ್ನಂ ಪರ್ಣಕರ್ಷೋಪಲದೊಳೊರೆಯೆ (ಸಂಪಸ. ೨-೯೨ ಪ).

[ಪೊಂ (< ಪೊನ್) + ಪರದ$_1$]

ಪೊಂಬರಹ, ಹೊಂಬರಹ (ನಾ). ೧. ಚಿನ್ನದ ಎರಕದಲ್ಲಿ ಬರೆದ ಲಿಪಿ,-ಬರವಣಿಗೆ : ಆತನ ಮೇಲೆ ಪೊಂಬರಹಶೋಭಿತಶರವ್ರಾತವನೆಚ್ಚು ಬೊಬ್ಬಿಱಿದ (ಸೋಹಕ. ೩೬-೬). ೨. ಬಂಗಾರದ ಚಿತ್ರ,-ಅಲಂಕಾರ : ಕರುಮಾಡ ಕಂಡರಿಸಿದ ಗೋಪುರ ಪೊಂಬರಹದ ಲೋವೆ . . . ಮಣಿವಾಗಿಲೆಸೆಯೆ ಕಣ್ಗರಮನೆ ಗಾಡಿವೆತ್ತಿಹುದು (ಕುರಾಸಾಂ. ೫-೯). ೩. ಚಿನ್ನದ ಎಳೆಯ ಕಸೂತಿ ; ಜರತಾರಿ ಹೆಣಿಗೆ : ವರಚಂದ್ರಿಕೆಯ ಪಾವುಡಕೆ ಶೋಭಿಸುವ ಪೊಂಬರಹದ ಶುಭ್ರದೂಪಟವ ಸ್ಮರಬಾಣಗಱಿಯಂತೆ ನಿಱಿ ವಿಡಿದುಡಿಸಿದರ್ ದರಹಾಸಮುಖಿಗೆ (ಸೋಹಕ. ೨೩-೦೩). **ಹೊಂಬರಹ** : ೧. ಹೊಂಬರಹದಂಬಿನ ಮಿಂಚುಗಳಲೆವೆಹಳಚಿದವು ಹರಿಹರ ಪುರಂದರರ (ಕುಸ್ಯಾಕ. ೨೩-೦೦); ಹೊಳೆವ ಹೊಂಬರಹದ ಸುರೇಖೆಯ ತಳಪದಸ್ತ್ರದಲವಳ ಹಸ್ತವ ಕಳಚಲೆಚ್ಚನು ಭೂತಗಣ ಬಿಱಿತೋಡೆ ಭೀತಿಯಲಿ (ಕೊರಾ. ೦-೦೦-೦೩). ೨. ಕೀಲಿಸಿದ ಪಟ್ಟೆಗಳ ದಿವ್ಯದುಕೂಲದಲಿ ಹೊಂಬರಹದೆಲೆಗಳ [ಪಾಠಾಂ. ಹೊಂಬಾಳೆತೆಱೆಗಳ] ಚೂಳಿಕೆಯ ಕನ್ನಡಿಯ ತೋರಣವೆರಡುಪಕ್ಕದಲಿ (ಕುಸ್ಯಾಕ. ೦೨-೦೩); ತೆಗೆದು ವಜ್ರಾಂಗಿಯನು

ಮೈಯಲಿ ಬಿಗಿದು ಹೊಂಬರಹದ ಸುರತ್ರಾಣಿಗಳ ಬಲುಸೀಸಕವನಳವಡಿಸಿ ದನು ಸಿರಿಮುಡಿಗೆ (ಶಾಕಾಗ. ೩-೧೦).

[ಪೊಂ (< ಪೊನ್) + ಬರಹ (< ಬರೆಹ)]

ಪೊಂಬರಿಗೆ (ನಾ). ಬಂಗಾರದ ಧಾಲು; ಚಿನ್ನದ ಗುರಾಣಿ: ಕಡಿತಲೆ ದೂಗುತ ಕಯ್ಯ ಪೊಂಬರಿಗೆಯನೆಡಬಲಗಳಿಗೆ ತೋಱಿಸುತ ಕಡಿದಾಡಿ ಮಡಿದರು (ಶಾಕಾಗಾ. ೦೨-೩೯); ದಾಳುಬಟ್ಟಲ ಪಿಡಿದೊಮ್ಮೊಮ್ಮೆ ಪೊನ್ನ ಪೂಗೋಲು ಪೊಂಬರಿಗೆಯಾಂತೊಮ್ಮೆ ಕಾಲಿಟ್ಟು ಹೊಳೆವುತಿದ್ದರು ಪುನಸಿಜನ ವಜಾಸಾಳುಗಳಂತೆ ದಿಟ್ಟಿಯರು: (ಜಪ. ೦೨-೧೦).

[ಪೊಂ (< ಪೊನ್) + ಪರಿಗೆ]

ಪೊಂಬರಿಸು (ನಾ). ಚಿನ್ನದ ವಿಗ್ರಹ; ಬಂಗಾರದ ಪ್ರತಿಮೆ: ಕಿಟ್ಟ ಹಾಱಿದ ಪೊಂಬರಿಸೊ ನಿಜಾತ್ಮನ ಕಿಟ್ಟವೊಯೆನೆ ನೃಪವರನ ದಿಟ್ಟಿಗತ್ಮಾನಂದವನೊದವಿಸಿದುದು ದಿಟ್ಟಿಯೋಗಿಯ ದಿವ್ಯಮೂರ್ತಿ (ಕಂಶ್ರಕಾಂ. ೩-೬೩). [ಪೊಂ (< ಪೊನ್) + ಪರಿಸು]

ಪೊಂಬರಿಯಣ 'ಪೊಂಬರಿಯಾಣ' ನೋ.

ಪೊಂಬರಿಯಾಣ, ಪೊಂಬರಿಯಣ, ಪೊಂಬರಿವಾಣ, ಹೊಂಬರಿಯಣ, ಹೊಂಬರಿವಾಣ (ನಾ). ಚಿನ್ನದ ತಟ್ಟೆ; ಬಂಗಾರದ ಹರಿವಾಣ: ಬಳಿಕ ಪೊಂಬರಿಯಾಣದೊಳು ವೀರರಾಮನ ಕಳಕಳಿಸುವ ಪಂದಲೆಯನು ತಳುವದಿರಿಸಿಕೊಂಡು ತಂದು ತೋಱಿಸಲು (ಶಾಕಾಗಾ. ೬೬-೮೦); ಮಿಸುನಿಯಡ್ಡಣಿಗೆಯೊಳೊಂಬರಿಯಾಣವನಮರ್ಚಿ (ವ್ಯಕ. ೩-೬೨ ಪ). **ಪೊಂಬರಿಯಣ:** ನೀಂ ಬಯಸಿದಗ್ರಪೂಜೆಯ ಪೊಂಬರಿಯಣಮಿದೆ ನಿಶಾಟಕೊಳ್ಳೆಂದು ಸರೋಜಾಂಬಕನಿಡೆ (ಜಗ. ೦೭-೩೦); ಪೊಂಬರಿಯಣದಿ ಪೋಳ್ಮಣಿಮಯವಡೆದಿರ್ದ ಸಂಬಳಿಗೆಯ ವರ್ಣಚೂರ್ಣ ಕೊಂಬ ಕರ್ಪೂರ ಕರಂಡವ ಸ್ಮರನ ತಲೆಗಿಂದಿನೊಳ್ ತಂದಿರಿಸಿದರು (ಕೋಚಕ. ೦೭-೨೭). **ಪೊಂಬರಿವಾಣ:** ಬಹುವರ್ಣದಲ್ಲಿ ರಂಜಿಪ ಬಣ್ಣಗೂಳು ಬೆಳ್ಳಿ ಪೊಂಬರಿವಾಣಗಳ ತುಂಬಿ ಸುಳಿಹತ್ತಿ ಬಿಲ್ಲಿಸಿದಳು ದೆಸೆದೆಸೆಗೆ (ಕೋಚಕ. ೩೦-೩೩); ಮಿನುಮಿನುಸುವ ಪೊಂಬರಿವಾಣಗಳೊಳೆಯ್ದೆ ನೀಡಿದರ್ ಪರಿಪರಿಯ ಪರಿಕರವನು (ಕಣಪ. ೩-೩೯). **ಹೊಂಬರಿಯಣ:** ಹೊಂಬರಿಯಣ ದೊಳೊಸೆದು ಬಡಿಸಿದ ಸುಳ್ಳಿತ ದಿವ್ಯಾನ್ನಮಂ ನಿವೇದ್ಯಂಗೊಟ್ಟು (ಜಪಶಾ. ೫೦. ೩-೬೭); ಮಿಗೆ ರವ್ಯವಡೆದ ಹೊಂಬರಿಯಣ ತಳಿಗೆ ತಂಬಿಗೆ . . . ದೀವಿಗೆಗಂಬಗಳನಿತ್ತನೊಲಿದು (ಕೋಚಕ. ೦೬-೦೬). **ಹೋಂಬರಿವಾಣ:** ಮುಕ್ತಿನಾರತಿಯ ಹೊಂಬರಿವಾಣದಿಂ ಬೆಳಗಿಸಿ ಮಂತ್ರಿ ಪೀತಾಂಬರಧರನ ಕೀರ್ತಿಸಿದ (ಕೋಚಕ. ೪೦-೩೩); ರಾವಣ್ಯ ಧಗಧಗಿಸುವ ನರಪತಿಯ ಮುಂದೋವಿಟ್ಟ ಹೊಂಬರಿವಾಣ ಭಾವಿಸಲೊಪ್ಪಿತು . . . ಚಿಲ್ವಿನೊಳು (ಜಪ. ೪-೬೨). [ಪೊಂ (< ಪೊನ್) + ಪರಿಯಾಣ1]

ಪೊಂಬರಿವಾಣ 'ಪೊಂಬರಿಯಾಣ' ನೋ.

ಪೊಂಬಲಗೆ (ನಾ). ಚಿನ್ನದ ಹಲಗೆ; ಬಂಗಾರದ ಫಲಕ: ಕಡಿತಕೆ ಪಾರೆ ಪೊಂಬಲಗೆ ಬೀಳೆ ಶರಂ ಸಿಡಿದೇಳೆ ಭೂತಸಂಗಡಣದಿ ನೋಡಿ (ಎಳ. VI. ಕಡೂಪು. ೦೩೭-೩೮ ; 1191); ಮನಸಿಜಮಂತ್ರಾಕ್ಷರಮಂ ಬಳಪದಿನನುರಾಗದಿ ಬರೆಯಲ್ಕೊಂಬಲಗೆಗೆ ಮಿನುಗುವ ಮಸಿಯಿಡು ವಂದದೆ ನೊಸಲೊಳ್ ವ್ಯಗವದಮಿಕ್ಕಿದಳು (ಜಪುಶಾ. ೨-೩೯).

[ಪೊಂ (< ಪೊನ್)+ ಪಲಗೆ]

ಪೊಂಬಲೆ (ನಾ). ಜಾಲರಿಯಂತಹ ಚಿನ್ನದ ಆಭರಣ: ದಿಟ್ಟಿಸರ ಪೊಂಬಲೆಗಳ್ ವೊಗರಂಬವೋದು ಪೊಂಬಕ್ಕಿಯ ತೋಳ್ಮ ವೆಯ್ಗುರೆಯೆ ಬಾಸಿಗದಿಂ ವೆಜೆದತ್ತು ಸಕ್ತಿಗಳ್ (ಜಪ. ೨-೪೬).

[ಪೊಂ (< ಪೊನ್) + ಬಲೆ1]

ಪೊಂಬಲ್ಲಕಿ 'ಪೊಂಬಲ್ಲಕ್ಕಿ' ನೋ.

ಪೊಂಬಲ್ಲಕ್ಕಿ, ಪೊಂಬಲ್ಲಕಿ (ನಾ). ಚಿನ್ನದ ಅಂದಣ; ಬಂಗಾರದ ಪಲ್ಲಕ್ಕಿ: ನಿಲ್ಲದಾಳಿಯರೆಂದಣಗಳ ನಡುವೆ ಪೊಂಬಲ್ಲಕ್ಕಿಯೇಱಿ ಲೀಲೆಯೊಳು ಮೆಲ್ಲನೆಯ್ತಂದಳಾ ಸುರುತಾಳಸುತೆ (ಶಾಕಾಶಾ. ೬೭-೮೨); ಸಲ್ಲಲಿತಾಂಗಿಯ ವರವಾಣಿವಿಡಿದು ಪೊಂಬಲ್ಲಕ್ಕಿಯೊಳ್ ತಂಡಿಸಿದ (ಕೋಚಕ. ೧೦-೩೧). **ಪೊಂಬಲ್ಲಕಿ:** ಅಲ್ಲಿ ತವ್ಮೊಡಲ ಬಲವನಿರವೇಳ್ದು ವೊಂಬಲ್ಲಕಿಯನಿಳಿದು . . . ಒಳವುಗೆ (ಕಪ್ರಕಾ. ೨೨); ಪೊಂಬಲ್ಲಕಿಯ ಹರಿಸದಿಂದಿಳಿದು . . . ಆರಮನೆಯ ಪೊಕ್ಕು (ಶಾಕಾ. ೨-೨೬).

[ಪೊಂ (< ಪೊನ್) + ಪಲ್ಲಕ್ಕಿ1 (< ಪಲ್ಲಂಗ)]

ಪೊಂಬಸದಿ (ನಾ). ಬಂಗಾರದಿಂದ ನಿರ್ಮಿತವಾದ ಬಸದಿ: ಇವ ನೆವಮ್ಮಾಳ್ವನನಿಕ್ಕಿ ಸಾಧುವಿನವೋಲ್ ತಾನಲ್ಲದಂತಿರ್ದಿ ಪೋ ಕವಿದರ್ಪಂ ಜಿನನೆಂದು ಪೊಂಬಸದಿಯಂ ಪುಷ್ಪಾಸ್ತ್ರಸೇನಾಳಿ ಮುತ್ಸವವೋಲ್ ಪೆಂಡಿರ ತಂಡವೊವ್ಪೆ (ಅರಕೇ. ೨-೧೬). [ಪೊಂ (< ಪೊನ್) + ಬಸದಿ]

ಪೊಂಬಸಿರ 'ಪೊಂಬಸಿಱಿ' ನೋ.

ಪೊಂಬಸಿಱಿ, ಪೊಂಬಸಿರ, ಪೊಂಬಸುಱಿ (ನಾ). ಬ್ರಹ್ಮ; ಹಿರಣ್ಯಗರ್ಭ; ಚಿನ್ನದ ಮೊಟ್ಟೆಯಿಂದ ಜನಿಸಿದನೆಂಬ ಪ್ರತೀತಿಯಿಂದ ಬ್ರಹ್ಮನಿಗೆ ಈ ಹೆಸರು ಬಂದಿದೆ: "ಅಂಚೆದೇರಂ, ನುಡಿಮೆನ್ನೆನಿಯಂ, ಪೊಂಬಸಿಱಿಂ . . . ತಾವರೆಮಸೆಯಂ—ಈ ೮ ಬ್ರಹ್ಮಂಗೆ ಪೆಸರ್" (ಶಕಾ. ೧೮-೦೩); ಪೊಂಬಸಿಱಿನ ಬಾಯ ಬೀಯಗ ಜಯಯೆಂದು ಶಂಬರಾರಿಯ ಹೊಗಳಿದರು (ಕೋಚಕ. ೦೬-೩); ಪೊಂಬಸಿಱಿನ ಗುಂಡಿಗೆಯಂ ಪೊಕ್ಕು ಪೊಱಮಟ್ಟುಂ ಧರೆಗಿಬ್ಬಿದು ಬಂದು . . . ತ್ರಿಪಥಗೆ ಕಾಣಿಸಿಕೊಂಡಳ್ (ರಾಪಚಕ್ರ. ೩೦-೦೨). **ಪೊಂಬಸಿರೆ:** ಪೊಂಬಸಿರನೀ ಪರಿ ಬರೆದನೇತಕೆ ಹಾ ಮಹಾದೇವ (ಶಾಕುಂಶ. ೬ ಅಧ್ಯಾಹರ ೨೨ಶ್ಲಾಳು). **ಪೊಂಬಸುಱಿ:** ಪೊಂಬಸುಱಿನ ಪೆಣ್ಣುಗಂಡಿಂದ ಶಕ್ಯನೆ ತುಂಬಿತು ಕಿಱಿದೆ ಕುಟುಂಬ (ಜಪ. ೬೨-೨೮). [ಪೊಂಬಸಿಱು + — ಅ7]

ಪೊಂಬಸಿಱು, ಹೊಂಬಸಿರು (ನಾ). ೧. ಚಿನ್ನದ ಗರ್ಭ: 'ಪೊಂಬಸಿಱಿ' ಪರಾ. ೨. ಶ್ರೇಷ್ಠವಾದ ಗರ್ಭ: ಪಂದಲೆ, ಬೆಂದೊವಲ್, ಬೆಂಬುಳಿ, ಪೊಂಬಸಿಱು (ಕರ್ನಾಕು. ೦೦ ಹ್ಯಾಕ್ಯಾ). **ಹೊಂಬಸಿರು:** ೨. ಬೇಂದ್ರಿಯವರ ಕವಿತೆಯಲ್ಲಿ ಮೇಲೆ ಹೇಳಿದಂತೆ 'ಹೂ' ಎಂದರೆ ಸಮಾಧಿಯಲ್ಲಿದ್ದ ಹೊಂಬಸಿರಿನ ಉಸಿರು (ಕಕ್ಕಾ. ೬೨); ನಮ್ಮ ಕನ್ನಡತಾಯಿ, ತನ್ನ ಹೊಂಬಸಿರಿನಿಂದ ನಮ್ಮನ್ನು ತಂದು . . . ಹಾರೈಸುತಿಹಳು (ಹೊಂಗಳು. ೦೯-೨). [ಪೊಂ (<ಪೊನ್) + ಬಸಿಱು (< ಬಸಿಱ್)]

ಪೊಂಬಸುಱಿ 'ಪೊಂಬಸಿಱಿ' ನೋ.

ಪೊಂಬಳಯಿಗೆ, ಹೊಂಬಳಯಿಗೆ (ನಾ). ಚಿನ್ನದ ಕಾಂತಿಯ ಬಾವುಟ; ಹೊಂಬಣ್ಣದ ಪತಾಕೆ: ಪೊಂಬಳಯಿಗೆ ವಿಂಚು ಮಣಿತೋರಣ ಕಣ್ಗೊಂಬಿಂದ್ರಧನು ಕವಸುವಮಳಿ ಇಂಬುಗೊಂಡಾಲೀಲ್ಲುಗಲಾ ನಗರಿ ವಿಡಂಬಿಸಿದುದು ಕಾರ ಸಿರಿಯ (ಶಾಕಾಶಾ. ೬-೬೯). **ಹೊಂಬಳಯಿಗೆ:** ತಳತ ಪಲ್ಲವಸಶ್ರಿಗೆಯ ಹೊಂಬಳಯಿಗೆಯ ಸೀಗುರಿಯ ಚಮರಾವಳಿಯ ಲಗ್ಗೆಯೊಳಳ್ಳಿಜಿವ ಘನವಾದ್ಯರಭಸಗಳ ಒಲವಿನಿಂದಾ ನೃಪತಿ ಚಾತುರ್ಬಲ ಸಹಿತ ಬಂದಾ ಕಿರಾತರನಳವಿಯಲಿ ತಾಗಿದನು (ಕಿಶಂಕ. ೬-೦೦).

[ಪೊಂ (<ಪೊನ್) + ಪಳಯಿಗೆ (<ಪಟಯಿಗೆ)]

ಪೊಂಬಳೆ 'ಪೊಂಬಾಳೆ1' ನೋ.

ಪೊಂಬಳೆದೊಂಗಲ್ (ನಾ). ಅಡಕೆ, ತೆಂಗು ಮೊದಲಾದುವುಗಳ ಹೂವಿನ ಗೊಂಚಲು: ಎರಲಲೆಯಿಂ ತೆಱಂಬೊಳೆದು ಪೊಂಬಳೆದೊಂಗಲ ನಾಂತ [ಶಾಕಾಂ. ಪೂಮುಡಿದೊಂಗಲನಾಂತು] ಕೌಂಗುಗಳ್ (ಜಗ. ೦೯-೩೦).

[ಪೊಂಬಳೆ (<ಪೊಂಬಾಳೆ1) + ತೊಂಗಲ್]

ಪೊಂಬಳ್ಳಿ, ಹೊಂಬಳ್ಳಿ (ನಾ). ೧. ಚಿನ್ನದ ಬಳ್ಳಿ; ಸ್ವರ್ಣಲತೆ:

ಪೊಂಬಳ್ಳಿಯ ಪೊಗರಂ ಗೆಲ್ವಂಗದ ಕಂಬುಲಲಿತಕಂಧರೆ ಮುನ್ನೆಱೆದ ನವಾಂಬು ಜಲಕ್ಕನೆ ತೀವಲ್ಕೆ (ಇಯಾಕಾ. ೦-೪೩); ವರನಾರಾಯಣನ ರಾಣಿಯರ ಪಾದದ ಹೊನ್ನ ಸರಪಳಿಯೆಳೆಯುತ್ತೆ ಬರಲು ವರನೀಲದ ಫಲಗಟ್ಟಲ್ಲಿ ಪೊಂಬಳ್ಳಿ ಬರೆದಂತೆ ರೇಖೆದೋಱುದುವು (ಮೋಹತ. ೦೯-೨೬). ೨. ಹಳದಿಬಣ್ಣದ ಒಂದು ಬಗೆಯ ಲತೆ : ಖರ್ಜೂರ ದ್ರಾಕ್ಷಿಗಳೊಮ್ಮೆ ಪೊಂಬಳ್ಳಿಗಳ ಫಲವೊಮ್ಮೆ ಘನತರಾರ್ಘ್ಯಗಳಿಂದ ಶಾಂತಿಧಾರೆಗಳಿಂದ ಜನಪನಂಬಿಕೆಯನರ್ಚಿಸಿದ (ಭರತ. ೦೯-೦೨೦). ಹೊಂಬಳ್ಳಿ: ೧. ಹೊಂಪಿಡಿದ ಹೊಂಬಳ್ಳಿಯೊಳೆಸೆವ [ಶಾಕಾಂ. ಹೊಂಬಳಿಮಯ್ಯೊಳೆಸೆವ] ಕಡುಬಿಣ್ಣಿನ ಜಘನದ ಕಾಮಿನಿಗಿಂದು ಪಡಿಗಟ್ಟಿ ಪೇಳುವೆನೇನ (ಜೀವಂಸಾಂ. ೦೦-೨೫); ವಿಳಾಸಿನೀಚರಣದ ನಿಗಳವೇಳ್ತರಲು ವರನೀಲಮಣಿಗಟ್ಟಿನ ಮೇಲೆ ಹೊಂಬಳ್ಳಿ ಬರೆದಂತೆ ಕಣ್ಗೆ ರಂಜಿಸಿತು (ಮೋಹತ. ೨೯-೩೬). [ಪೊಂ (<ಪೊನ್)+ಬಳ್ಳಿ]

ಪೊಂಬಱುಗಲ್ (ನಾ). ಚಿನ್ನದ ದೋಣಿ : ಬಂಗಾರದ ನಾವೆ : ಗಗನತಟಾಕದೊಳೊಗೆದು ಪೊಳೆವ ಮಿಂಗಳೆಂಬ ಮಿಂಗಳ್ಗೆ ಬಿಂಬಮೆಂಬ ಪೊಂಬಱುಗಲ ಕಳುಕಧೀವರನಡರೆ ಬೀಸಿದ ಜಾಲದಂತೆಯುಂ (ಅನಂಪು. ೬-೬೦ ಪ). [ಪೊಂ (<ಪೊನ್) + ಪಱುಗಲ್ (<ಪಱುಗೋಲ್)]

ಪೊಂಬಾಗಿಲ್, ಪೊಂಬಾಗಿಲು (ನಾ). ಚಿನ್ನದ ಬಾಗಿಲು; ಬಂಗಾರದ ದ್ವಾರ : ಪೊಂಬಾಗಿಲ್ಗೆ ಬಂದನಾ ಕವಿರಾಜಂ (ಉದ್ಯಪ. ೦೨-೫೫). ಪೊಂಬಾಗಿಲು : ಮದಿಲೊಳು ಮಣಿವಾಡದೊಳು ಪೊಂಬಾಗಿಲ ತುದಿಯೊಳು . . . ಪುರಸುದತಿಯರವನ ನೋಡಿದರು (ಶ್ರೀಪಾಂ. ೦೩-೩೯); ಅಂತರಾಂತರದ ಪೊಂಬಾಗಿಲೊಳಗೆ ನೀಲಕುಂತಳೆಯರು ನಸುನಗುತ ಸಂತೋಷದೆ ಮುತ್ತಿನಾರತಿಗಳ ಭೂಕಾಂತನಿಗೊಲೆದೊಪ್ಪಿದರು (ಕಂಪಪಿ. ೬-೫೦). [ಪೊಂ (<ಪೊನ್) + ಬಾಗಿಲ್]

ಪೊಂಬಾಗಿಲು 'ಪೊಂಬಾಗಿಲ್' ನೋ.

ಪೊಂಬಾದರಿ (ನಾ). ಹೊಂಬಣ್ಣದ ಪಾದರಿಹೂವು ; ಪಾಟಲಪುಷ್ಪ : ಸುರಯಿಯ ಚೊಲ್ಲೆಯಮುಂ . . . ಪೊಂಬಾದರಿಯ ಕಿಱುಮುಗುಳ ತೊಡರುಂ ಪರಿವಡೆದಿರೆ ಬಂದನಟ್ಟಿಯಿಂದೆ ಬಸಂತಂ (ಕಬ್ಬಿಕಾ. ೩೨೫).

[ಪೊಂ (<ಪೊನ್) + ಪಾದರಿ$_2$]

ಪೊಂಬಾರಿಕ (ನಾ). ಓಲಗದಲ್ಲಿ ಚಿನ್ನದ ದಂಡ ಹಿಡಿದು ಶಿಸ್ತು ಕಾಯುವವನು : ಕುಂಭಾಂಡಮಂತ್ರೀಶ್ವರನ ಚಿತ್ತೈಸೆಂದು ಪೊಂಬಾರಿಕರು ಪೊಗಳಿದರು (ಮೋಹತ. ೨೦ ೫೬). [ಪೊಂ (<ಪೊನ್)+ಬಾರಿಕ]

ಪೊಂಬಾವಡೆ 'ಪೊಂಬಾವುಡೆ' ನೋ.

ಪೊಂಬಾವುಗೆ, ಹೊನ್ನುಹಾವಿಗೆ (ನಾ). ಬಂಗಾರದ ಪಾದುಕೆ : ಮಾಣಿಕವೆತ್ತ ಪೊಂಬಾವುಗೆವೆರಸಿ . . . ಹಿಂಸಕನಕ್ತಂಚರಭೇದಿ ನಡೆದ (ಮೋಹತ. ೦೯-೦೬). ಹೊನ್ನುಹಾವಿಗೆ : ಎನ್ನ ಮನ ಪ್ರಾಣಗಳು ಹೊನ್ನುಹಾವಿಗೆಯಾಗಿ ನಿನ್ನ ಚರಣಕೆ ಯೋಗ್ಯ ಮೆಟ್ಟಾಗಲಿ (ಸುಸಾರ. ೦೯-೫). [ಪೊಂ (<ಪೊನ್) + ಪಾವುಗೆ]

ಪೊಂಬಾವುಟ (ನಾ). ಹಳದಿಯ ಬಣ್ಣದ ಬಾವುಟ.—ನಿಶಾನೆ : ನೋಡಲ್ಲಿ ಗುಡಿ ತೋರಣಂ ಅಲ್ಲಿ ಪೊಂಬಾವುಟಂ (ಶ್ರೀರಾಮಾ. ೫೯-೦೫೯).

[ಪೊಂ (<ಪೊನ್) + ಬಾವುಟ]

ಪೊಂಬಾವುಡೆ, ಪೊಂಬಾವಡೆ (ನಾ). ಹೊಂಬಣ್ಣದ ವಸ್ತ್ರ; ಪೀತಾಂಬರ: ತಡಿ ಸುಖಾಸನ ಸುಗತಿ ಪೊಂಬಾವು[ಶಾಕಾಂ.ವ]ಡೆ ಜನಾಖಿ . . . ಮಣಿಲಂಬಳದ ಹಯ ಮಿಗೆ ಗುಡಿಯಿಱಿದು ಮೊಗವೆತ್ತಿ ನರ್ತಿಸಿತು (ತೊರರಾ. ೬-೨೯-೦೨). ಪೊಂಬಾವಡೆ : ಬಿರುದಿನ ಪೊಂಬಾವಡೆ ಸೆಡಕಿನವಲ್ಲಿ . . . ಮಿಱುಗುವ ರತ್ನಭೂಷಣಗಳಾಂತಿಹ ಹಯ ಖುರವೆತ್ತಿ ಕುಣಿಯುತ್ತೈದಿದುವು (ಕಂಪಪಿ. ೦೫-೦೯).

[ಪೊಂ (<ಪೊನ್) + ಪಾವುಡೆ$_1$ (<ಪಾವುಡ$_1$)]

ಪೊಂಬಾಸಿಗ (ನಾ). ಚಿನ್ನದ ಬಾಸಿಂಗ : ಲಲನೆಯರು ಪೊಂಬಾಸಿಗವ ನಿಕ್ಕಿದರು ಶಶಿಮುಖಿಗೆ (ಬಸಪು. ೯-೪೦). [ಪೊಂ (<ಪೊನ್) + ಬಾಸಿಗ]

ಪೊಂಬಾಸು (ನಾ). ಚಿನ್ನದ ಎಳೆಗಳ ಪಾಶ : ಮಾಣಿಕ್ಯರಚಿತ ಕೆಂಬಟ್ಟೆ ಪೊಂಬಾಸಿನ ನೇಣ ಚತುಷ್ಪಾದಿಗಳ ಪಾಣಿಯೊಳಾಂತ ಪರ್ದಡಿಗಳ ಲುಬ್ಧಕಶ್ರೇಣಿ ಬೊಬ್ಬಿಡುತಲೈದಿದುದು (ಮೋಹತ. ೦೯-೯).

[ಪೊಂ (<ಪೊನ್) +ಪಾಸು$_3$ (<ಪಾಸ$_1$)]

ಪೊಂಬಾಳೆ$_1$, ಪೊಂಬಳೆ, ಹೊಂಬಾಳೆ$_1$ (ನಾ). ೧. ಅಡಿಕೆ, ತೆಂಗು ಮುಂತಾದ ಮರಗಳಲ್ಲಿ ಹೊರಡುವ ಹೊಡೆಯಾಕಾರದ ಹೂವಿನ ಗೊಂಚಲು ; ಸಿಂಗಾರ ; ಕಂಹಳಿ : ಓರೊಂದೆಡೆಯೊಳ್ ವನವಿಲಾಸಿನಿಯ ವಿಲಾಸಭವನದಂತಿರ್ದ ಪೊಂಬಾಳೆಯ ಕುರುಂಬುಗಳೊಳ್ (ಪುಲ್ಲಿಪು. ೨-೩೩); ಇಂಬಾಗಿರೆ ವರಹಿಮಕರಬಿಂಬದ ಬೆಂಬಳಿಯೊಳಿಳಿವ ತಣ್ಗದಿರ್ಗಳೆನಲ್ ಪೊಂಬಾಳೆಯ ಚಮರಮದಾಲಂಬಿಸೆ ಪಿಡಿದೊರ್ವ ಚಂದ್ರಮುಖಿ ನಡೆತಂದಳ್ (ಗಿರಿಕ. ೬-೯); ಪರಿವ ಕಾಲ್ವೆಗಳಿಂದ ಬಾಳೆಮಿನ್ನೆಗೆದು ಬಂಧುರಪೂಗಮಂ ಮುಟ್ಟಲಲ್ಲಿರ್ದ ಪೊಂಬಾಳೆ ಬಿರಿದು ಮಕರಂದರಸಮಂ ಸೂಸಲ್ (ಸೌಂದಪು. ೫-೯೨). ಪೊಂಬಳೆ : ಅಗ್ಗಲಿಸಿ ಬಿರಿವ ಪೊಂಬಳೆಯ [ಶಾಕಾಂ. ಪೊಂಬಟ್ಟೆಗಳ, ಪೊಂಬಾಟ್ಟೆಯ]ತಣ್ಮಲೆವ ಪೊಸಗುಪಿನೊಳ್ ಪುದಿದಲೆವೆಲರಾಱಿಪುದು ಖಚರವಂಪತಿಶತಮಂ (ಅದಿಪು. ೧-೬೮) ; ಕಂಪಿಡಿದ ಪೊಂಬಳೆಗಳಿಂದೆಸೆವ ಅಡಕೆ ಎಸೆದವು ಕಣ್ಗಳಿಗೆ (ಕುರಾಸಾಂ. ೩-೫೫). ಹೊಂಬಾಳೆ$_1$: ಮಘಮಘಪ ಹೊಂಬಾಳೆಗಳ ರಸವೊಗುವ ಮಧುರದ್ರಾಕ್ಷಿಗಳ . . . ಸೊಗಸು ಸೆಳೆದುದು ಮನವನು (ಕುಷ್ಠಾಲಾ. ೭-೨೬); ಗಾಳಿಯೊಲಹಿಗೆ ನಿಲುಕುವವು ಹೊಂಬಾಳೆ ಖಚರೀಜನದ ಕಬರಿಗೆ (ತೊರರಾ. ೫-೩-೦೩); ಆಗರಳಿದ ಕಸ್ತೂರಿ ಹೊಂಬಾಳೆಯ ಪೂಗವೃಕ್ಷಗಳೊಪ್ಪುತಿಹವು (ಕಂಪಪಿ. ೨-೪೦).

[ದೇ. ॥ ತಮಿ. ಪೂಮ್ಬಾಳೈ; ತುಳು . ಪೂಂಬೆ; ತೆಲು. ಪೂಂಬಾಳ]

ಪೊಂಬಾಳೆ$_2$ 'ಪೊಂಬಾಟ್ಟೆ' ನೋ.

ಪೊಂಬಾಟ್ಟೆ, ಪೊಂಬಾಳೆ$_2$, ಹೊಂಬಾಳೆ$_2$, ಹೊಂಬಾಟ್ಟೆ (ನಾ). ಒಂದು ಬಗೆಯ ಬಾಳೆಯ ಗಿಡ ಮತ್ತು ಅದರ ಹಣ್ಣು : ಶತಪತ್ರದ ಸಿತಾತಪತ್ರದೊಳಂ ಪೊಂಬಾಟ್ಟೆಯ ಚಾಮರಂಗಳೊಳಮೆಸೆವ ಮಂಟಪಂಗಳ ನಡುವಣ ಪದ್ಮರಾಗದ ಪಟ್ಟವಣೆಯೊಳ್ ನಿಲಿಸಿದ ಕಾಮದೇವನನತಿಪ್ರೀತಿಯಿಂದರ್ಚಿಸಿ (ಕಾದಂಉ. ೬೮೦); ಅಂದಂಬೆತ್ತೆ ಬಂದುಗೆಯೆಸಟಿಂ ಕತ್ತರಿಸಿ ಪತ್ತಿಸಿದ ಚಿತ್ರಪತ್ರಂಗಳಳುಂಬಮಾದ ಪೊಂಬಾಟ್ಟೆಯ ಕಂಬಂಗಳೊಳಂ (ಕಂದ್ರಪು. ೬-೯೫ ಪ) ; ಪೊಂಬಾಟ್ಟೆಯ ಪಣ್ಣ ಬಿಣ್ಗೊನೆಗಳೊತ್ತಂಬಂಕರಂ ಬೀಱುತಿರ್ಪುದು . . . ಅಲಂಪಂ (ಕುಸುಮಾ. ೨-೪೯). ಪೊಂಬಾಳೆ$_2$: ಪಳಿಕಿನ ಪಟ್ಟಿಕೆಯಲ್ಲಿ ಪೊಂಬಾಳೆಯ ಸುಳಿಯಲ್ಲಿ ರತಿಯ ಕುಳ್ಳಿರಿಸಿ ನಳಿನಾಕ್ಷಿಯರೊಡತಿಯ ಕಾಲೆರಡುಮಾಂದಳಿರನು ಜಲದೊಳದ್ದಿದರು (ಮೋಹತ. ೯-೪೦); ತಮಾಲದೆಳೆದಳಿರಂ ಕೊಱೆದು ಚಿತ್ರಪತ್ರಮಪ್ಪಂತೆ ಪತ್ತಿಸಿ ನಟ್ಟ ಪೊಂಬಾಳೆಯ ಬಾಳ್ಗಂಬಂಗಳಿಂ (ರಾಜಶೇ. ೦೦-೩೦ ಪ). ಹೊಂಬಾಳೆ$_2$: ಹೊಂಬಾಳೆಗಳ ಸುಳಿಯ ಸಪುರನೇತ್ರಂಗಳಂ ಇಂಬಱಿದು ಹಾಸಿ (ಪುಷ್ಪರ. ೯-೨೬); ಬಣ್ಣಬಣ್ಣದ ಪೂಗೊಯ್ದು ಹೊಂಬಾಳೆಯ ಪರ್ಣದೆ ಪೊಟ್ಟಣಗಟ್ಟಿ . . . ತೋಱಿದರು (ಮೋಹತ. ೨೪-೬೮). ಹೊಂಬಾಟ್ಟೆ : ಇಂತೆಸೆವ ನುಣ್ಬುಳಿನತಳದೊಳ್ ಹೊಂಬಾಟ್ಟೆಯ ಕಂಬಂಗಳಿಂ ಪಚ್ಚೆಯ ಪಲಗೆಗಳಿಂ ಬಾಳದ ಬಿಜ್ಜಣಿಗೆಗಳಿಂ ಬಿತ್ತರಿಸಿ ಚೆಲ್ವಿನ ನೆಲೆಯುಂ ಕಂಪಿನ ಕಣಿಯುಂ ತಂಪಿನ ತಾಯ್ವನೆಯುಮೆನಿಪ ಲತಾಮಂಟಪಮಂ ಕಂಡು (ಶಾಂತೀಶ್ವ. ೧೦-೦೦೭ ಪ). [ಪೊಂ (<ಪೊನ್) + ಬಾಟ್ಟೆ]

ಪೊಂಬಿಸಿಲ್, ಪೊಂಬಿಸಿಲು, ಹೊಂಬಿಸಿಲು (ನಾ). ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ಕಾಣುವ ಹೊನ್ನಿನ ಬಣ್ಣದ ಬಿಸಿಲು :

ಕುಸಿದುವು ಕಿರಣಂಗಳ್ . . . ಅನಂತರಂ ಪೊಂಬಿಸಿಲಾದುದು ಪೊರ್ದೆ ಪಟ್ಕೆವೆಟ್ಟಮನರ್ಕಂ (ಸಂರಾಪು. ೦೦-೦೬೬); ಪೊಸಸೊದೆ ಕೌಮುದಿಯಂ ಪಸರಿಸೆ ಕನಕದ ಕಳಶಮಾಳೆ ಪೊಂಬಿಸಿಲಂ ಪೂರಿಸೆ ತರತರದಿಂದಂ ರಾಜಿಸು ತಿರ್ಪುವು ಸೋಮಸೂರ್ಯವೀಥಿಗಳ್ (ಗಿರಿಕ. ೨-೬೨); ಪರೆದುದಾಕ್ಷಣ ಮನದ ಸಂದೇಹಮೆಂದೆಂಬ ಪರಮತಿಮಿರಂ ವಿವೇಕಮೆನಿಪ್ಪ ಪೊಂಬಿಸಿಲ್ ನಿರುತದಿಂ ಪಸರಿಸಿತು (ಸಂಪು. ೬-೨೨). **ಪೊಂಬಿಸಿಲು :** ಹಗಲು ಸವೆದುದು ಪೊಂ[ಪಾಕಾಂ. ಹೊಂ]ಬಿಸಿಲು ನೆಱೆ ತೆಗೆದುದತಿವೇಗದಲಿ (ಸಳಸ. ೫-೪೩). **ಹೊಂಬಿಸಿಲು :** ಮುತ್ತಿನ ಢಾಳ ಢವಳಿಸಲಾಯ್ತು ಚಂದ್ರಿಕೆ ತನುವ ಡೊಕ್ಕರಿಸಿ ಮೇಲೆ ಹೊಂಬಿಸಿಲಾಯ್ತು ಮಾಣಿಕದೇಳಿಗೆಯ ಲಹರಿಯಲಿ (ಕುಸ್ಯಾಸ. ೫-೪೪); ಬಿಡದೆ ಚಂದ್ರಾತಪವನಪಹರಿಸುವುದು ಹೊಂಬಿಸಿಲು (ಕೊರರಾ. ೫-೨-೬೪); ಗಿರಿಯುತ್ತಮಾಂಗದಲಿ ಮೈದೋರಿದನು ಅಹ ಹೊಂಬಿಸಿಲಿನೆಳನೇಸರು ! (ಸತ್ರಾಂಗ. ೬-೧೫೯).

[ಪೊಂ (<ಪೊನ್) + ಬಿಸಿಲ್]

ಪೊಂಬಿಸಿಲು 'ಪೊಂಬಿಸಿಲ್' ನೋ.

ಪೊಂಬಿಸುಗೆ (ನಾ). ಚಿನ್ನದ ಅಂಬಾರಿ : ಪೊಂಬಿಸುಗೆಯ ಕರಿಗಳ ಚೆಂಬೊಂ [ಬ]ಕ್ಕರೆಯಶ್ವಚಯದ ಬಹುವಿಧಮಪ್ಪಾಡಂಬರದ ಪತಾಕೆಯ ಪಲವುಂ ಬಿರುದಿನ ಭಟರ ಬಹಳ ಬಲದರ ನೆಲೆಯೊಳ್ . . . ಅಪರಾಜಿತಕುಮಾರ ನಿರ್ಪುದುಂ (ಮಹಾವೇ. ೫-೫೦). [ಪೊಂ (<ಪೊನ್) + ಬಿಸುಗೆ$_2$]

ಪೊಂಬೀವು (ನಾ). ಚಿನ್ನದ ತಂತಿಗಳಿಂದ ಮಾಡಿದ ಹಗ್ಗ : ಪೊಂಬಡ ಲಿಗೆಯೊಳ್ ಪರಪಿದ ಪೊಂಬೀವಿಂ ಕಂಗೊಳಿಪ ಮೋಹನಂಬೆತ್ತ ಕಾಂತೆಯರ್ (ಕುಂದಕೂ. ೨೦೫). [ಪೊಂ (<ಪೊನ್) + ಬೀವು]

ಪೊಂಬುಗುಡಿ (ನಾ). ಚಿನ್ನದ ಬುಗುಡಿ : ಕೊಪ್ಪು ಪೊಂಬುಗುಡಿ ಬಾವುಲಿ . . . ಪಿಲ್ಲಿ ಮಿಂಚು ಮೊದಲಾದ ಪೊಸಮಿಸುನಿದೊಡವುಗಳಿಂ ತೊಂಡಿಲ್ಗಳಿಂದಲಂಕೃತೆಯಾದ . . . ಕನ್ನಿಕೆಯಂ . . . ಬಿಜಯಂಗೆಯ್ಸು ತಮಿರ್ಪಿನಂ (ಹಾಲಾಸ್ಯ ೪-೯-೬೪ ಪ). [ಪೊಂ (<ಪೊನ್) + ಬುಗುಡಿ]

ಪೊಂಬುಚ್ಚ 'ಪೊಂಬುಟ್ಟಿ' ನೋ.

ಪೊಂಬುಜ್ಜಣಿ (ನಾ). ಚಿನ್ನದ ಬಣ್ಣದ ಬುದ್ದಲಿ : ಮುಟ್ಟಲಮ್ಮದೆ ಕುಂಕುಮರಸಪನಿನೀರ ಬಟ್ಟಬಲ್ಮೊಲೆಗೆ ಸಿಂಪಿಸಲು ಇಟ್ಟ ಮಾಡಿಗೆಯ ಪೊಂಬುಜ್ಜಣಿ ತೈಲಸಂಘಟ್ಟದಿಂ ಪೊಂಗಿದಂತಾಯ್ತು (ಮೋಹತ. ೨೬-೦೬).

[ಪೊಂ (<ಪೊನ್) + ಬುಜ್ಜಣಿ (<ಬುದ್ದಲಿ)]

ಪೊಂಬುಡಿ (ನಾ). ಚಿನ್ನದ ಪುಡಿ ; ಬಂಗಾರದ ಹುಡಿ : ತೊಟ್ಟ ಮೈದುಡಿಗೆಗಳ ಮಸೆದ ಪೊಂಬುಡಿಯಂತೆ ಕುಂಕುಮರಜಂಗಳು . . . ಸೂಸುತಿರೆ (ಕೈತಿಪಾ. ೩೩-೨೨); ತಂಬೆಲರೆಂಬ ಪೊಂಬರದನಲರ್ವೊನ್ನಂ ಪರ್ಣಕರ್ಷೋಪಲದೊಳೊರೆಯೆ ಸುರಿದು ಪರಿದ ಪೊಂಬುಡಿಯೆಂಬಂ ತಿಂಬುವೆತ್ತ ರಜನೀರಜಃಪಿಂಜರರಜೋಗುಣದಿಂ ಸುರುಚಿರವಾದ ಸುರಯಿ ಯುಂ (ಕಬಕಂ. ೨-೪೨ ಪ). [ಪೊಂ (<ಪೊನ್) + ಪುಡಿ]

ಪೊಂಬುತ್ತಳಿ, ಹೊಂಬುತ್ತಳಿ (ನಾ). ಚಿನ್ನದ ಬೊಂಬೆ ; ಬಂಗಾರದ ಪ್ರತಿಮೆ,- ವಿಗ್ರಹ : ಭಾವಿಸಲಧಿಕ ಪೊಂಬುತ್ತಳಿಯೆಂಬಂತೆ ಕೋವಿದ ಕೋಮಲಾಂಗಿಯರು ದೇವಕಿಯಾತ್ಮಸಂಭವನೆಡಬಲದಲಿ ತೀವಿರ್ದರೇನ ಬಣ್ಣಿಪೆನು (ಮೋಹತ. ೪-೪); ಬಿಸಜಗಂಧಿನಿಯೆನಿಸಿ ರಾಮರುದ್ರರ ರಾಣಿ ಪೊಂಬುತ್ತಳಿಯೊಲೆಸೆದಳು (ಬಕೋಪು. ೬-೪೦). **ಹೊಂಬುತ್ತಳಿ :** ಅತ್ಯಂತ ರೂಪಯೌವನಗಾರ್ತಿಯರು ಹೊಂಬುತ್ತಳಿಯೆಡೆಯಾಡುವಂತೆ . . . ಸತ್ಯಭಾಮೆಯನು ಸಾರಿದರು (ಮೋಹತ. ೦೪-೬೨).

[ಪೊಂ (<ಪೊನ್) + ಪುತ್ತಳಿ (=ಪುತ್ತಲಿ)]

ಪೊಂಬುದಿ (ನಾ). ಬಂಗಾರದ ಬಾಗಿಲುವಾಡ : ಕಾಮಜಟ್ಟಿಯ ಕಟ್ಟು ಕಂಬ ಕಾಮಗೃಹದ ಪೊಂಬುದಿ[ಪಾಕಾಂ. ಪೊಂದುಡೆ, ಪೊಂಬುಡೆ, ಪೊಂಪುಡೆ]ಯೆನಲೊಪ್ಪಿದುವಾ ಮುಗ್ಧೆಯೆಸೆವೊಳ್ದೊಡೆಗಳು (ಶ್ರೀಪಾಂ. ೩-೫೧). [ಪೊಂ (<ಪೊನ್) + ಪುದಿ$_2$]

ಪೊಂಬುರ್ಚ 'ಪೊಂಬುಟ್ಟಿ' ನೋ.

ಪೊಂಬುಲಿ (ನಾ). ಹಳದಿಬಣ್ಣದ ಹುಲಿ : ಬಂದುವು ಪೊಂಬುಲಿದೋಲ ಪಲ್ಲಣಂಗಟ್ಟಿದ ಪಟ್ಟಸಾಹಣದ ವಾಜಿಗಳುದು ಜಯೋತ್ಸವಾಜಿಗಳ್ (ಮಲ್ಲಿಪು. ೯-೪); ಪೊಂಬು[ಪಾಕಾಂ. ಪೆರ್ಬು]ಲಿಯ ತೊವಲನಾನೆಯ ಕೊಂಬಂ ಕುತ್ತಟಿಸದಡಸಿ ಪಿಡಿದುಗಿದೆತ್ತಿದುವಂ ಪತಿಗೆ ಕಾಣ್ಕೆಗೊಟ್ಟಿಂತೆಂದಂ (ಅಸಂಪು. ೦೦-೩೬); ಪೊಂಬುಲಿಯ ಚರ್ಮದ ಕಕ್ಷಪಾಳಿಕೆಯೊಳಳವಟ್ಟ ನಿಗ್ಗವದ ಕರಂಡಕದೊಳಗೆ ಮುದ್ರಿಸಿರ್ದನರ್ಘ್ಯಮಣಿಯಂ . . . ತುಡುಂಕಿ ತೆಗೆದು (ಕಾಸಕೇ. ೫-೨೫ ಪ). [ಪೊಂ (<ಪೊನ್) + ಪುಲಿ]

ಪೊಂಬುಲಿಸಮ್ಮ (ನಾ). ಹಳದಿಬಣ್ಣದ ಹುಲಿಯ ಚರ್ಮ : ಆನೆದೊವ ಲ್ಪೊಂಬುಲಿಸಮ್ಮಂ ತಾವರೆಗಣ್ಣಂ ಕಣ್ಣೇಱಿಸಿದಡಿದಾವರೆಯಿಂತೀ ಪರಿ ಸೊಗಯಿಪ ಶೋಭಾಪಹದಿವ್ಯಾಂಗಂ ಲಿಂಗದಿನೆಳ್ತಂದು (ಕಾಪ್ಯಕೇ. ೩-೩೯); ಪೊಂಬುಲಿಸಮ್ಮಮಾನೆದಲೆಮುತ್ತು . . . ಪೀಲಿಯೆಂಬಿವಂ ತುಂಬಿದ ಕಂಬಿಯಂ ತಳೆದದೇಂ ತಳರ್ವತ್ತೊ ಪುಳಿಂದಸಂಕುಳಂ (ಕಾಸಕೇ. ೫-೦೦೪).

[ಪೊಂಬುಲಿ + ಸಮ್ಮ$_2$ (<ಚಮ್ಮ)]

ಪೊಂಬುಟ್ಟಿ, ಪುಂಬುಚ್ಚ, ಪೊಂಬುಚ್ಚ, ಪೊಂಬುರ್ಚ, ಪೊನ್ಬುಚ್ಚ, ಹೊಂಬುಚ, ಹೊಂಬುಚ್ಚ, ಹೊಂಬುರ್ಚ, ಹೊಂಬುಟ್ಟಿ (ನಾ). ೧. ಒಂದು ಊರಿನ ಹೆಸರು ; ೨ ಈಗಿನ ಶಿವಮೊಗ್ಗಜಿಲ್ಲೆಯ ನಗರತಾಲ್ಲೂಕಿನ ಹುಂಚ. ಇದು ಜೈನರ ಪ್ರಸಿದ್ಧವಾದ ತೀರ್ಥ ಕ್ಷೇತ್ರ : ಉದಯಪುರದ ನಕ(ಗ)ರಸಹಿತಂ ಪೊಂಬುಟ್ಟದ ನಕ(ಗ)ರಕ್ಕೆ ಸುಂಕಕಾದುದು (ಎಇ. IX, ೨೨-೫ ; ಸು. 800); [ಪೊ]ಮ್ಬುಟ್ಟದ ಮೇಲೆಟ್ಟು ಕೋಟೆಯ ಕೊಳ್ವನ್ದು (ಸೌಇಇ. XX, ೦೫-೬ ; 904). 'ಪಟ್ಟಿಪೊಂಬುಟ್ಟಿ' ಪರಾ. ೨. ಒಂದು ಊರಿನ ಹೆಸರು ; ೨ ಈಗಿನ ಗದಗು ತಾಲ್ಲೂಕಿನ ಹೊಂಬಳ : ಪೊಂಬುಟ್ಟದ ಮಹಾಜನಂ . . . ಧರ್ಮಾ ನುಷ್ಠಾನಪರಾಯಣರಾಗಿ ಸುಖದಿನಿರೆ (ಸೌಇಇ. XI-i, ೬೪-೧೦ ; 1049). **ಪುಂಬುಚ್ಚ :** ೧. ತುಂಗಾದ್ರಿಯ ದೊರೆಯ × × × ಭಕ್ತಿಮನದಿಂ ಪುಂಬುಚ್ಚಮಿಪುನೆಗಂ ಪ × × × ಹದಿಲೊಕ್ಕಿಯಬೆಯಂ ಜಿನಗೇಹಮಂ ಮಾಡಿದಂ (ಎಕ. VII, ಶಿವಮೊ. ೦೦೪-೦೦ ; 950?). **ಪೊಂಬುಚ್ಚ :** ೧. ಏಕಾಂಗವೀರ ಸಂಗ್ರಾಮಧೀರ ಪೊಂಬುಚ್ಚನಿರ್ದ್ದಾಟಣ ಸಾವಿಮಲೆ ನಿರ್ಲೋಟಣ (ಎಕ. II, ೧೪೩-೩೬ ; 1131) ; ಪೊಂಬುಚ್ಚಪುರವರಾಧೀಶ್ವರ ಮರೆಹೊಕ್ಕರೆ ಕಾವ ಮಾರಾಂತರೆ ವೈರಿ (ಇಲ. V, ೪೦-೬ ; 1586). ೩. ಒಂದು ವಂಶದ ಹೆಸರು (?) : ಸ್ವಸ್ತಿಶ್ರೀಪೊಮ್ಬುಚ್ಚಕುಲ ತಿಲಕಂಬ್ಬಳರ ಹರಿತಿನ್ರಿಪಂ ಲೋಕೈಕ (ಎಕ. VIII, ಸಗರ. ೨೨-೦ ; ಸು. 900 ?). **ಪೊಂಬುರ್ಚ :** ೧. ಕೊಂಗಳಿಯುಚ್ಚಂಗಿ ತಲೆಯೂರ ಪೊಂಬುರ್ಚ . . . ಮೊದಲಾಗನೇಕದುರ್ಗ್ಗತ್ರಯಂಗಳನಶ್ರಮದಿಂ ಕೊಣ್ಡು (ಎಕ. II, ೦೩೨-೨೬ ; 1123). **ಪೊನ್ಬುಚ್ಚ :** ೧. ಸ್ವಸ್ತಿಶ್ರೀ ಮಚ್ಚಿತ್ರವಾಹನ ಪೊನ್ಬುಚ್ಚಾಳಿಕಿಳ್ಳಂ ನಾಗೆಣ್ಣನಧಿಕಾರಿಗಳಾಗೆ (ಎಕ. VI, ಕೊಪ್ಪ. ೩೬-೦; ಸು. 675 ?). **ಹೊಂಬುಚ :** ೧. ಇಂತಪ್ಪುದಕ್ಕೆ ಸಾಕ್ಷಿಗಳು ಹೊಂಬುಚನಾಡು ಮುದುವಂಕನಾಡು ಸಾಕ್ಷಿಗಳು ಪೊಪ್ಪ ಬಿಲ್ಲೇಶ್ವರ ದೇವರು (ಎಕ. VIII, ತೀರ್ಥ. ೦೦೬-೪೦ ; 1378) ; ಹೊಂಬುಚದ ಸೀಮೆಯಿಂದಲು ಪ್ರಾಕು ಸುಂಣದ ಬಸ್ತಿಯು ಸಿದ್ಧಾಪುರದ ಮಠಕೆ ಉತ್ತಾರವಾಗಿಯಿದ್ದ ಸ್ವಾಸ್ತಿಯು (ಎಕ. VIII, ತೀರ್ಥಹ. ೯೬-೦೩ ; 1664). **ಹೊಂಬುಚ್ಚ :** ೧. ಶ್ರೀಮತು ಹೊಂಬುಚ್ಚದ ಆದಿಬಿಲ್ಲೇಶ್ವರ ದೇವರ ದಿವ್ಯಶ್ರೀಪಾದಪದ್ಮಾರಾಧನಂ (ಎಕ. VIII, ಸಾಗರ. ೦೨೫-೯ ; 1216) ; ಮಲ್ಲಪ್ಪಗಳ ಮಗ ಹೊಂಬುಚ್ಚದ ಯಿಂ × × ಪಾಯಣ್ಣ . . .

ಸ್ವರ್ಗಸ್ಥರಾದರು (ಪಂ. VIII, ಪರ್ವ. ೩೧-೯ : 1200). **ಹೊಂಬುಳಿ** : ೧. ಹದಿನೆಂಟುಕಂಪಣದೊಳಗಣ ಹೊಯ್ಬುಳ್ಳನಾಡ × × × ನಾಗರ ಹ್ಯೊಯ (ಪಂ. VIII, ಪರ್ವ. ೭೪-೦೪ : ೧). **ಹೊಂಬುಬ್ಬ** : 'ಪಟ್ಟಿ ಹೊಂಬುಬ್ಬ' ಪರಾ.

ಪೊಂಬೆಟ್ಟ, ಪೊಂಬೆಟ್ಟು, ಪೊನ್ಬೆಟ್ಟಿ, ಹೊಂಬೆಟ್ಟ (ನಾ). ಚಿನ್ನದ ಬೆಟ್ಟ : ಮೇರುಪರ್ವತ : "ಪೊಂಬೆಟ್ಟರೆಂದೆನಲಕ್ಕು ಹೇಮಾದ್ರಿಗೆ" (ಕಾವ. ೭೦) ; ದಿಟ್ಟಿಗೆ ಪೊಲನಾದುದು ಪೊಂಬೆಟ್ಟಂ ಜನಜನ್ಮಸವನವನಮಂ ವಂಯಪ್ಪುಂ (ಹರಿವಂ. ೬-೪೪); ಅಂಬುಧಿವಿಬುಧ ಧರೆಯೊಳು ಚತುರಾಸ್ಯನೆಂಬ ವಿದ್ಯಾಧಿಕನೊಲಿದು ಕಂಭಸೂತ್ರವ ಕೃತಿಷ್ಮೆಯ ಮಾಡಿದಂದದಿ ಪೊಂಬೆಟ್ಟ ಕಣ್ಗೆ ರಾಜಿಸುತು (ಕೋಕಶ. ೫-೦೦). **ಪೊಂಬೆಟ್ಟು** : "ಸೊಗಯಿಕುಂ ಪೊಂಬೆಟ್ಟು ದನ್ನದಪ್ಪಲು ಸುರಗಿರಿಗೆ" (ಕಬ್ಬಿಗರ. ೦೧) : ಭೂವನಿತೆ ಭರ್ಗಂಗೆ ನೆತ್ತಿಯೊಳ್ ಪೊತ್ತ ಸೊಡರೋ ವಿಚಾರಿಪೊಡನಿಸಿ ಪೊಂಬೆಟ್ಟಿಸೆವುದು (ಕಬ್ಬಹಾ. ೫-೩) ; ಗಿರಿಯಗ್ರದ ನಲ್ಮುಖಶಿಖರದೊಳು ನಾಲ್ಕುನಾಲ್ಕಿರೆಯಕೃತ್ರಿಮಜಿನವಾಸ ವರರತ್ನ ರಜತ ಸುವರ್ಣದಿ ಪದಿನಾಱು ವೇಱಿಯಲಾ ಪೊಂಬೆಟ್ಟನಲಿ (ಪಾಪಣಾಂ. ೦-೨೪). **ಪೊನ್ಬೆಟ್ಟು** : ಮಾದೇವನ ಪೊನ್ಬೆಟ್ಟೀಱಿದರತ್ಯಾದರದಿಂದ ಕರೆದೊಡೆಳೆಕೆ ಯರ್ವುರಸರ್ವ ಸರ್ವಜ್ಞತೆ (ಕಾದ್ಯಕ. ೩-೬೬). **ಹೊಂಬೆಟ್ಟ** : ವನ್ದನೆಯೆನ್ದು ಬೊವ್ಬೆಟ್ಟಮನಾಗಭೀರತೆಯೊಳಮ್ಬುಧಿಯಂ ಗೆಲೆವನ್ದಂ (ಪಂ. VIII, ಪೊಡಪ. ೩೫೯-೫೦ ; 1178 ೧) : ತುಟ್ಟ ಸಮ್ಮೋಹಸಮುದ್ರಕೆ ಹೊಂಬೆಟ್ಟದೊಟ್ಟ ಸೇತುವೆಗಟ್ಟ ದಂತೆ ಬಟ್ಟವೊಲೆಗಳೊಡ್ಡು ವೋಪಿರುದುವು ವೊಲಿಕಟ್ಟಿನ ಮಱಿಯೊಳು (ಕಬಪ. ೦೩-೨೨).

ಪೊಂಬೆಟ್ಟದಿಲ್ಲಯ್ಯ — ಮೇರುಪರ್ವತವನಂ ಧನುಸ್ಸಾಗಿ ಉಳ್ಳವನು; ಶಿವ : ಸುಕುಮಾರನಂ ಒಯ್ದು ಪೊಂಬೆಟ್ಟಬಿಲ್ಲಯ್ಯನೋಲಗದಲ್ಲಿ ನಿಲಿಸಲ್ಕೆ (ಕ್ರಿಶಕಣ. ೦೯-೫೬). **ಪೊಂಬೆಟ್ಟವಿಲ್ಲ, ಪೊಂಬೆಟ್ಟವಿಲ್ಲ = ಪೊಂಬೆಟ್ಟಬಿಲ್ಲಯ್ಯ** : "ಎನ್ನಯ್ಯಂ . . . ಪೊಂಬೆಟ್ಟವಿಲ್ಲಂ, ಇಂಗಳಗಣ್ಣಂ . . . ಅಯ್ಯೊಗಂ—ತಂ ತಿತಿ ಈಶ್ವರಂಗೆ ಪೆಸರ್" (ಪಪಪಾ. ೧೭-೦) : ವಿರಹಾಗ್ನಿಯ ಕಿಡಿಸು ಪೊಂಬೆಟ್ಟುವಿಲ್ಲನ ಮಟ್ಟದರಸಿ (ಭಾರಾಪಾಂ. ೫೩-೮೫).

[ಪೊಂ (<ಪೊನ್) + ಬೆಟ್ಟ]

ಪೊಂಬೆಟ್ಟು 'ಪೊಂಬೆಟ್ಟ' ನೋ.

ಪೊಂಬೆತ್ತ (ನಾ). ಚಿನ್ನದ ಬೆತ್ತ.—ಸೆಳೆ : ಕೆಯ್ಯ ಸೋಂಕಿಂದೆ ಕೆಂಪಂ ತಳೆದೊಪ್ಪಂಬೆತ್ತ ಪೊಂಬೆತ್ತದ ಸೆಳೆಗೆ ತಳಿರ್ಮೂಡಿದಂತಾಗೆ . . . ಬಂದಳ್ ಪ್ರತೀಹಾರಿಯೊರ್ಬಳ್ (ಪೀಗಾಕ. ೧-೬೬) ; ನೆರೆದೊತ್ತರಿಪ ಸುರಸಿದ್ಧ ಸಾಧ್ಯಗಂಧರ್ವಾದಿಗಳ ವಿಸರದಳವಿಗಳಿದ ಕಳಕಳಮಂ ಪೊಂಬೆತ್ತಪನೆತ್ತಿ ಹೋ ಸಾರ್ ತೊಲಗೆಂದು ನಿವಾರಿಸಿ (ಕಬಪಂ. ೦-೭೯ ಕ).

[ಪೊಂ (<ಪೊನ್) + ಬೆತ್ತ]

ಪೊಂಬೆಸ, ಹೊಂಬೆಸ, ಹೊಂಬೆಸೆ (ನಾ). ಚಿನ್ನದ ಕೆತ್ತನೆಕೆಲಸ ; ಹೊಂಗೆಲಸ : ಕಂಬುಲತಾಸುಲಲಿತಲವಣಾಂಬುಧಿಪರಿಧಾನವಾಗೆ ಚೆಲ್ವಂ ಪಡೆದೀ ಜಂಬೂದ್ವೀಪಪ್ರಭುಗಿದು ಪೊಂಬೆಸದೊಳೆ ಸಮೆದ ಮಕುಟ ವಿರ್ವಂತಿರ್ಪುಂ (ಅಂಪ್ರ. ೬-೬೨) ; ಪೊಂಬೆಸದುವ್ವರಿಗೆಯ ಬಿಸವಂದ ವಾಜಿ ಚುಂಚುಲೋವೆಗಳೊಳಗೆ ಬಳಸಿ ಸಲಿದುಲಿವ ಪಾರಿವಂಗಳ ಕೊರಲುಲಿಯೊಳಂ (ಕಬ್ಬಗ. ೧೪). **ಹೊಂಬೆಸ** : ಸಿದಿಲ್ . . . ದಿಟಂ ಹೊಂಬೆಸಕ್ಕಂ ಬಡೆಯರ್ ಪುಷ್ಪೇಶನಂ ನಿರ್ಮಿಸಿ ನಿರುಪಮಸಾವಮ್ರಾಜ್ಯ ಪಟ್ಟಾಹರ್ಷನಂ ಮಾಡಿಡೆ . . . ಅದರ್ಕವ್ವುದಾ ವಜ್ರವಾತಂ (ಶಾಂಶಾಕ್ಕ. ೩-೭೬) ; ಚಂದ್ರಾತಪವನಪಹರಿಸುವುದು ಹೊಂಬಿಸಲು ಕಡೆದ ಕರುವಾಡದ ಕವಾಟದ ಕಡವಿಡಿದು ಹೊಂಬೆಸದಲುಱ್ ಹೊಗರಿಡುವ ನೀಲದ ವಜ್ರಿತ್ಕದ ಮಾಣಿಕದ ಲಹರಿಯಲಿ (ಕೋಕಾ. ೩-೨-೬೨). **ಹೊಂಬೆಸೆ** : ಅಂಬರ ವಿಂಬಿಲ್ಲ ಮುಂಬಲಿ ತುಂಬಿದ ಹೊಂಬೆಸೆಯಾಲಮ್ಬಿಲಿಗೆ ಜಂಭಾರಿಗಿಂಬಾದ ಕುಂಭಯಃದದ ಮದಸ್ತಂಬೇರಮಗಳ್ಕೆದಿದುವು (ಕಂಪ್ರ. ೦೩-೨೬).

[ಪೊಂ (<ಪೊನ್) + ಬೆಸ]

ಪೊಂಬೆಸಗೆಯ್ (ಕ್ರ). ಚಿನ್ನದ ಕೆತ್ತನೆಕೆಲಸವನ್ನು ಮಾಡು : ಇರೆ ಚಂದ್ರಂ ತೊಲೆಯೊಳ್ ಹಿಮಕರಣಸುತಾದಿ ಗ್ರಹತ್ರಯಂ ನೋಡೆ ಧರಾಮರವತಿ ಪೊಂಬೆಸಗೆಯ್ಯಂ (ಜಾಕಥ. ೫೦-೭).

[ಪೊಂಬೆಸ + ಕೆಯ್]

ಪೊಂಬೆಸಱ್, ಹೊಂಬೆಸರು, ಹೊಂಬೆಸಱು, ಹೊಂಬೆಸಱು (ನಾ). ಹೊಂಬಣ್ಣದ ಹೆಸರುಕಾಳು : ತಿವುಡುಗಳೆದ ಪೊಂಬೆಸಱ ಮಹೋದ್ದಳಮಪ್ಪ ಕಂಪಿನಿಂಪಿನ ನಿಳಯಮುಮೆನಿಸಿರ್ದ ಸವಿಯಿನೊದವಿದ ತೊವೆಯಂ . . . ಉಂಡು (ಹರಿಶರ್ಮ. ೦-೦೪೯) ; ಪೊಂಬೆಸಱ ಸೂಪವನೊಪ್ಪುವ ಮಾದುರಂಗಳಂ ಯುವತಿ ತೆರಳ್ಚಿ ಬಡ್ಡಿಸಿದಳ್ (ದಶಕು. ೦೫-೦೬೦). **ಹೊಂಬೆಸರು** : "ಪೀತಮುದ್ಗಾ — ಹೊಂಬೆಸರು" (ಓಷಧಿ. ೯೪). **ಹೊಂಬೆಸಱ್** : ಹೊಂಬೆಸಱ ಸೂಪಮದಱೊಳಗಿಂಬಾದುದು (ಪಾಪಶ. ೦೦-೦೭೬). **ಹೊಂಬೆಸಱು** : ಸಿಹಿತೊಂಡೆ, ಹೊಂಬೆಸಱು, ಕಳ್ಳಂಗಡಲೆ ಇವಂ ಕಷಾಯವುಂ ಕಾಸಿ . . . ಪ್ರತಿಪಾಕ ಹಾಕಿ ಕೊಡುವುದು (ಪಥ್ಯ. ೦೫೬).

[ಪೊಂ (<ಪೊನ್) + ಪೆಸಱ್]

ಪೊಂಬೆಳಗು, ಹೊಂಬೆಳಕು, ಹೊಂಬೆಳಗು (ನಾ). ೧. ಹಳದಿಬಣ್ಣದ ಕಾಂತಿ ; ಹೊಂಬಣ್ಣದ ಪ್ರಕಾಶ : ಪೊಂಬೆಳಗುಮಂ ವರಪುತ್ತುದು ... ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣಿರಿ ಹಂವೆಯಾಳ್ದನಾ (ಗಿರಿ. ೯-೪೭). **ಹೊಂಬೆಳಕು** : ೨. (ಆಲಂ) ಜ್ಞಾನದ ತೇಜಸ್ಸು; ಅರಿವಿನ ಬೆಳಕು : ತಂಬೆಳಕಾಗಲಿ ನಂಬೆಳಕೆನುವೊಲು ಹೊಂಬೆಳಕೇ ಹೊರಸೂಸಲಿ (ಆಕಳು. ೭೦೦-೭) ; ಈಚೆಗೆ ಪಾಶ್ಚಾತ್ಯ ಶಿಕ್ಷಣರಂಗದಲ್ಲಿ ಸಂಶೋಧನೆಯು ಹೊಂಬೆಳಕು ಬಿದ್ದು, ಅಲ್ಲಿನ ಬೋಧನ ಕ್ರಮ ಬಹುವಾಗಿ ಉತ್ತಮಗೊಂಡಿದೆ (ಶಿಕ್ಷಣ. ೨೦೧). **ಹೊಂಬೆಳಗು** : ೧. ಅಸಿಯಳೆ ಕಂಡಪ್ಪ ಜ್ಯೋತಿ ಪ್ರಜ್ವಲಿಸಲು ಮಸುಳಿಸದೆ ಜ್ಯೋತಿ ಹೊಂಬೆಳಗಾಯಿತಮ್ಮ (ಅಪಪಂ. ೨೧೯-೦೬೦೩). [ಪೊಂ (<ಪೊನ್) + ಬೆಳಗು]

ಪೊಂಬೊಂಬೆ, ಹೊಂಬೊಂಬೆ (ನಾ). ಚಿನ್ನದ ಗೊಂಬೆ: ಸ್ವರ್ಣಪುತ್ಥಳಿ : ಕಂದರ್ಪನೆಂಬ ಡೊಂಬನ ಚಂದದ ಪೊಂಬೋಬೆಯಿಂದು ನೆರೆದತ್ತಾಗಳ್ (ಪಪಪ್ರಕ. ೨-೬೦). **ಹೊಂಬೊಂಬೆ** : ನನ್ನ ಸರಿಹರಿಯದ ರಮಣಿಯರು ಹೊನ್ನ ಸಸಿ ಹೊಂಬೋಬೆ ರನ್ನದ ಚಿನ್ನ ಬಿನ್ನಡಿಯೆನಿಪ ಮಕ್ಕಳ ನೋಡಿ ಪಾಡುವರು (ಜಾಕ್ಕಥ. ೬-೦೦) ; ಇಳ್ಳು ಕಿರೀಟ ಮೂಡುವ ಸೂರ್ಯನಂತೆ ಮೈಗಟ್ಟು ಹೊಂಬೊಂಬೆಯಂತೆಸೆಯೆ ಬೆಟ್ಟುವ ನಡೆಸುವಂತಾರಾಯ ಮುಂದಕೆ ಪಟ್ಟದಾನೆಯ ನಡೆಸಿದನು (ಕಪಪ. ೨೦-೬೨).

[ಪೊಂ (<ಪೊನ್) + ಬೊಂಬೆ]

ಪೊಂಬೊಗರ್, ಹೊಂಬೊಗರು (ನಾ). ೧. ಚಿನ್ನದ ಕಾಂತಿ.—ಹೊಳಪು. ೨. ಚಿನ್ನದ ಬಣ್ಣದ ಕಾಂತಿ; ಹೊಂಬಣ್ಣದ ಪ್ರಕಾಶ.—ಹೊಳಪು : ಕೆಂಬೊಗರಿನ ಸಿರಿಯಿಂದಂ ಮೊದಲೊಳ್ ಪೊಂಬೊಗರಿಂದಂ ಸಮನಂತರದೊಳ್ ಅಂಬರಕೇರುತ ಚಂದ್ರಂ ತುದಿಯೊಳ್ ಬೆಳ್ಳೆಳಗಿಂ ಮೆರೆದಂ (ಜಾಪಪು. ೦೪೯); ಒಪ್ಪಿನಿಂ ಕುಣಿವ ಪರಿಜಂ ನೆರೆದು ಜೋಲ್ಮವಿರೆ ಕಪ್ಪು ಬೆಳ್ಪುಗಳ ಪೊಂಬೊಗರ ನೇವರಿಸಿ . . . ಹೆಬ್ಬುಲಿಯುಂ ಬರುತಿಹುದು (ಕಾಂಪಾ. ೧೪-೦೬೬). ೩. ವಿಶೇಷವಾದ ಕಾಂತಿ,—ತೇಜಸ್ಸು : ನಗೆಮೊಗದ ಪೊಂಬೊಗರ ವಿಂಚಿನ ಬೊಗಸೆಗಂಗಳ ಸೆಳೆನಡುವ ಸೆಳ್ಗುಗುರ ಬೆಡಗಿನ ಕಾಂತ ರಂಜಿಸುತಿರ್ದನಾ ಪುರದಿ (ಪಪಪ. ೨-೫೪). **ಹೊಂಬೊಗರು** : ೧. ಕವಿಯೊಬ್ಬ ಚಂದ್ರೋದಯವನ್ನು ನೋಡುತ್ತಿದ್ದಾನೆ . . . ಪೂರ್ವದಿಶೆಯಲ್ಲಿ ತಣ್ಣನೆಯ ಹೊಂಬೊಗರು ಹಬ್ಬುವುದು ಕಣ್ಣಿಗೆ ಬೀಳುತ್ತದೆ (ಸೌಂದ. ೦೦).

[ಪೊಂ (<ಪೊನ್) + ಪೊಗರ್]

ಪೊಂಬೊಗರಿ, ಪೊಂಬಗರಿ, ಹೊಂಬುಗುರಿ, ಹೊಂಬೊಗರಿ (ನಾ). ಬಂಗಾರದ ಬುಗುರಿ; ಚಿನ್ನದ ಬೊಗರಿ : ಅವಳ ನೆಲೆ ಮೊಲೆಗೆ ತಾವರೆಮೊಗ್ಗೆ ಪೊಂಬೊಗರಿಗಳೆಣೆಯೆಂದು ಭಾವಿಪನವನೆಗ್ಗನಲ್ತೆ (ಕುಂಗಾಸಾಂ. ೬-೨೬); ಪೊಂಬೊಗರಿಯಂತಿರ್ಪ ನುಣ್ಮೊಲೆಯ ದ್ಯುಗುಯುಗಳದಿಂ ನೋಡಿ (ಸೋಪಕ. ೦೯-೬೨). **ಪೊಂಬುಗರಿ** : ಮೊಳೆತುವು ಮೊಲೆ . . . ಪೊಂಬಗರಿಯ ಬೆಳುಗಾಯ ಕರಂಡಕದೆಣೆ ವಕ್ಕಿಯ ಕಳಸದ ದೊರೆಯೆನೆ ಪರಿವಿಡಿಯಿಂ ಸುಕುಮಾರಿ ಸುಲೋಚನೆಗೆ (ಶಿಪುಶಾ. ೩-೨೯). **ಹೊಂಬುಗುರಿ** : ಪೊಳ್ತರೆ ಬಂದು ನಿಶಿಯ ಬೋಗುಣಿಯೊಳಕಿ ಹೊಂಬುಗುರಿಯೆಸೆದು ತಾರೆಯರಳುಗಳನಲ್ಲಿಂದೆ ಚೆಲ್ಲಾಡಿಹನು (ಅಂಪುಚ. ೦-೦). **ಹೊಂಬೊಗರಿ** : ಹೊಳೆವ ಹೊಂಬೊಗರಿಗೆ ಬೆವಟಕ್ಕಿ ಕೈಯಾರ ಬೆಳಗಿದೊಡೊಪ್ಪುವೆತ್ತಂತೆ ಅಳಲುವ ರತಿಯುರಸ್ಥಳದೆ ಭಸ್ಮಾಂಕಿತ ಕಳಸಕುಚಂಗಳೊಪ್ಪಿದುವು (ಸೋಪಕ. ೬-೨೨).

[ಪೊಂ (< ಪೊನ್) + ಬೊಗರಿ (< ಬವರಿ)]

ಪೊಂಬೊಡೆಯ (ನಾ). = ಪೊಂಬಸಿಱಿ : "ಪೊಂಬೊಡೆಯನಂಚಿದೇರಂ . . . ಬ್ರಹ್ಮಗೆಸೆವ ನಾಮಂ" (ಕ್ಷತ್ರಾ. ೯); ಸುರರಾಜನೈತಂದು ಪೊಂಬೊಡೆಯಗಿಂತೆಂದು ಬಿನ್ನವಿಸಿದಂ (ಪಂಚಾಶಾ. ೦-೦೩-೧೩); ಮಹಾತಪದಿನೊಲಿಸಿ ಪೊಂಬೊಡೆಯನಂ ಪಡೆದನಾ ರಾವಣಂ ತ್ರೈಲೋಕ್ಯರಾಜ್ಯಾಧಿಕೃತಿಪದವನು (ಪಂಚಾಶಾ. ೩-೧೩). [ಪೊಂ (<ಪೊನ್) + ಪೊಡೆ$_3$ + – ಅ$_7$]

ಪೊಂಬೊರಡೆ (ನಾ). ಚಿನ್ನದ ಹಗ್ಗ : ಬೆಳಗುವ ದಂತ ಪೊಂಬೊರಡೆ . . . ಪೊಕ್ಕುಳ ಘಂಟೆಯೆಳಸಲೆಯ್ತಂದುದಾ ಹಸ್ತಿ (ಕುಂಗಾಸಾಂ. ೬-೯೯); ಕರದ ಪಟ್ಟಿಯ ಕೊಂಬಿನ ಸೂನಗಿ ಪೊಂಬೊರಡೆ[ಪಾಶಾಂ. ಡಿ]ಮೆಱೆಯೆ . . . ಕರಿ ಕರಿಗಳು ತಾಗಿದವು (ಕುಂಗಾಸಾಂ. ೦೨-೦೦೨).

[ಪೊಂ (< ಪೊನ್) + ಪೊರಡೆ]

ಪೊಂಭಾಂಡ (ನಾ). ಚಿನ್ನದ ಪಾತ್ರೆ; ಸ್ವರ್ಣಭಾಜನ : ಅಡಲೊಡರ್ಚುವ ಪೊಂಭಾಂಡಗಳ ಕರ ಬೋನಗಡಣವ ಕೊಟ್ಟನುತ್ಸವದಿ (ಸೋಪಕ. ೦೩-೦೯). [ಪೊಂ (<ಪೊನ್) + ಭಾಂಡ]

ಪೊಂಭಿತ್ತಿ (ನಾ). ಚಿನ್ನದಿಂದ ನಿರ್ಮಿತವಾದ ಗೋಡೆ; ಬಂಗಾರದ ಗೋಡೆ : ಆ ಸಭಾಮಂಟಪದ ಪೊಂಭಿತ್ತಿಗೋಪುರದಿ ಲೇಸಿನ ವಿಚಿತ್ರ ಪತ್ರಮನಿರದೆ ರಚಿಸಿ (ಪಪಪೋ. ೨೦-೦೭). [ಪೊಂ (< ಪೊನ್) + ಭಿತ್ತಿ]

ಪೊಂಭುಣಶೆ (ನಾ). ಒಂದು ಬಗೆಯ ಮರ : ಅನ್ತೆ ತುಟ್ಟಿಲ ಪೇಱೊಟ್ಟೆಯೆ ಕಮ್ಮರೆಯ ಗುಮಿಪುಣಸೆಯೆ ಅಲೆ ಪೊಮ್ಮುಣಶೆ ಅನ್ತೆ ಬಳಿಪುಣುಶೆಯೆ (ಎಕ. XVI, ತಿಪಟೂ. ೦೯೦-೬೬; ಸು. 900).

[ಪೊಂ (< ಪೊನ್) + < ಪುಳಿಸೆ]

ಪೊಕ್ಕ$_1$ 'ಪೊಗು' ಪರಾ.

ಪೊಕ್ಕ$_2$ (ನಾ). 'ಲೆಕ್ಕ' ಶಬ್ದದ ಜೊತೆ ಬರುವ ಪ್ರತಿಧ್ವನಿಪದ : ಉಳ್ಳೋದುಗಳೊಳಗೆನಿತಱಿವುಳ್ಳರ್ಗಂ ತಿಳಿಪಲರಿಯದೆನಿಪೆಡೆಗಳುಮಂ ತೆಳ್ಳಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮು ಪೊಕ್ಕ[ಪಾಶಾಂ. ಬಿಂಕ]ಮುಮಂ (ಪಂಪಶಾ. ೨-೩೩); "ಪೊಕ್ಕಮುಮಂ = ಲೆಕ್ಕಪತ್ರಗಳನ್ನು" (ಪಂಪಶಾ. ೬೯). [?]

ಪೊಕ್ಕರಣೆ 'ಪೊಕ್ಕರಣೆ' ನೋ.

ಪೊಕ್ಕರಣೆ, ಪೊಕ್ಕರಣೆ, ಹೊಕ್ಕರಣೆ, ಹೊಕ್ಕರಣೆ, ಹೊಕ್ಪರಣೆ, ಹೊಖರಣೆ (ನಾ). ೧. (ದೇವಸ್ಥಾನದ ಬಳಿಯಿರುವ ಪವಿತ್ರವಾದ) ಕೊಳ; ಕಲ್ಯಾಣಿ : ತೀವಿದ ಪೊಕ್ಕರಣೆಗಳ ನೆಱೆದ ಕೆಱೆಗಳ ಸರೋವರಂಗಳ ಬೆಡಂಗಾಗುಂದಲೆ ಪುರದೊಳ್ (ಸುಳುಪಾ. ೯-೩೦); ಇಕ್ಕೆಲದೊಳಗೊಪ್ಪುವ ಕರಣಿಕಶಾಲೆ ಪೊಕ್ಕರಣೆಗಳಿರುತಿಹವು (ಶಂಪಶಾ. ೩-೩೩). **ಪೊಕ್ಕರಣೆ** : ೧. ಮಲ್ಲಿಕಾರ್ಜುನದೇವರ ಗಱ್ಡಿಯಿಂ ಪಡುವಲು ಪೊಕ್ಕರಣೆಯಿಂ ಬಡಗಲು ಬಿಟ್ಟ ಗಱ್ಡಿ (ಎಕ. VII, ತಿಗಾಂ. ೦೯-೨೬; 1066). **ಹೊಕ್ಕರಣೆ** : ೧. ಪಾಯಬ್ಬ ಬಿಂಡನಕಳ ಹೊಕ್ಕರಣೆಯ ಬಡಗಣ ದಡ (ಎಕ. V, ಹಾಸಪ. ೬೦-೧೩; 1218); ಕೆಱೆ ಬಾವಿ ಹೊಕ್ಕರಣೆ ದೀರ್ಘಕೆ ಕೊಳು ಪಳ್ಳಂಗಳು ತನತೆನಗೆ ನೇಮಿಸಿರ್ಪುವು ಲೇಕ್ಕವಿಲ್ಲ (ಕಂಪಾ. ೦೧-೨೯); ಬಲುವುದರವು ನರಕದ ಹೊಕ್ಕರಣೆ (ಪಣಾಕೋ. ೩೬-೬). **ಹೊಕ್ಕರಣೆ** : ೧. "ಪಾಶಾ, ಪುಷ್ಕರಿಣೀ—ಈ ೨ ಹೊಕ್ಕರಣೆ" (ಪಣಾಯು. ೦೦೧-೫೩); ದೇವರ ಹೊಕ್ಕರಣೆಯಿಂದ ಮೂಡಣ ದೆಸೆಯೊಳು . . . ಮತ್ತರೊನ್ದಂ ಬಿಟ್ಟರು (ಸಿಶಾ. IX–I. ೦೩೩-೫೯; 1083); ಗುರುಲಿಂಗಜಂಗಮಕ್ಕೆ ಪಾದಾರ್ಚನೆಯ ಮಾಡುವ ಹೊಕ್ಕರಣೆ ನಾಲ್ಕು ಪುರುಷಪ್ರಮಾಣದ ಘಾತ (ಕಪ್ರಸ. ೪. ೦೩೬-೩೩೬); ಒರೆದ ವಜ್ರದ ಗಾರೆಗಳ ಹೊಕ್ಕರಣೆಗಳ ಸಾಲುಗಳು ಯೋಜನವೆರಡಱಲಿ ಪೃತಕೈಲದುಗ್ದಾದಿಗಳಿಗೆಡೆಯಾಯ್ತು (ಶಿಂಶಾ. ೦-೭-೬). ೨. ಕಮಲಗಳಿಂದ ತುಂಬಿರುವ ಕೊಳ; ತಾವರೆಕೊಳ : (ಕ). **ಹೊಕ್ಪರಣೆ** : ೧. ಹಿರಿಯ ಹೊಕ್ಪರಣೆಯಿಂ ತೆಂಕಣ ಹೆಗ್ಗೆಱೆಯೊಳಗಣ ಮತ್ತರಾಱು ಕಮ್ಮಂ ನಾಲ್ಕೂಱಯ್ವತ್ತು (ಶಾಸಪ. ೪೭-೫೫; 1107 ?). **ಹೊಖರಣೆ** : ೧. ಹೆಗ್ಗಡೆ ಶ್ರೀಪದ್ಮನಾರಾಯಣದೇವರ ಮುಂದಣ ಹೊಖರಣೆಯ × × × ಗೆಳ್ಸ ದೇವರ ಪುಷ್ಪಾರಕ್ಕೆ (ಎಕ. XI, ಹೊಳೆಕೆ. ೦೪-೦೭; 1210).

[< ಪ್ರಾ. ಪೋಕ್ಕರಿಣೀ, ಪುಕ್ಕರಿಣೀ./ಸಂ. ಪುಷ್ಕರಿಣೀ]

ಪೊಕ್ಕಳು 'ಪೊಕ್ಕುಟ್' ನೋ.

ಪೊಕ್ಕಟು 'ಪೊಕ್ಕುಟ್' ನೋ.

ಪೊಕ್ಕಿ (ನಾ). ಹಾದರಗಿತ್ತಿ; ಜಾರೆ : 'ನಾನು ಆ ಮಾಸ್ತರನ ಸುದ್ದಿತೆಗೆದ ಕೂಡಲೆ . . . ಓಡಿದಳಲ್ಲ ಹೆಣ್ಣುನಾಯಿ—ಪೊಕ್ಕಿ (ಪೂರುರಾ. ೦೪೯).

[←ತುಳು. ಪೋಕೆ = ವ್ಯಭಿಚಾರಿ]

ಪೊಕ್ಕು$_1$ 'ಪೊಗು' ಪರಾ.

ಪೊಕ್ಕು$_2$, ಹೊಕ್ಕು$_2$ (ನಾ). ಮಗ್ಗದ ನೆಯ್ಗೆಯಲ್ಲಿ ಅಡ್ಡವಾಗಿ ಹಾಕುವ ಎಳೆ : ಪಾಸಿನ ಪೊಕ್ಕಿನ ಮಾಣಕದ ಕಾಂತಿಯು . . . ಕೂಟದಂತೆ ಮಹಾಪುರುಷರ ಸಮ್ಯಕ್ತ್ವದೊಳಾದ ಕೂಟಮುಮತಿಶಯಂ (ಧರ್ಮಾಮೃ. ೩-೦೯೯). **ಹೊಕ್ಕು$_2$** : ಒಂದೆ ಕಾಲೊಳ್ ಪರಿವೆನೆಂಬ ಹೊಕ್ಕಿಲ್ಲದೆ ಸೀರೆಯ ನೆಯ್ವೆನೆಂಬ . . . ಪೌರ್ಣಾವಿಲನು ಪೋಲ್ಕುಂ (ಧರ್ಮಾಮೃ. ೩೦-೦೬ ಅಂಕಪತ್ರ); ಅಡ್ಡಕ್ಕೆ ಬೀಳುವ ನೂಲುಗಳು 'ಹೊಕ್ಕು' ಎನಿಸುವುವು (ಶಾಲಿಪ್ರ. I, ೯೨೦). [< ಪೊಗು]

ಪೊಕ್ಕುಂದ 'ಪೊಂಕುಂದ' ನೋ.

ಪೊಕ್ಕುಳ್ 'ಪೊಕ್ಕುಟ್' ನೋ.

ಪೊಕ್ಕುಳವಕ್ಕಿ 'ಪೋರ್ಕಳಿವಕ್ಕಿ' ನೋ.

ಪೊಕ್ಕುಳಿ 'ಪೋರ್ಕಳಿ' ನೋ.

ಪೊಕ್ಕುಳಿವಕ್ಕಿ 'ಪೋರ್ಕಳಿವಕ್ಕಿ' ನೋ.

ಪೊಕ್ಕುಳು 'ಪೊಕ್ಕುಟ್' ನೋ.

ಪೊಕ್ಕುಳುಘಂಟೆ (ನಾ). ಮಕ್ಕಳಿಗೆ ಉಡಿದಾರದಂತೆ ಕಟ್ಟುವ, ಘಂಟೆಯಾಕಾರದ ಒಂದು ಬಗೆಯ ಆಭರಣ : ಆರಳೆಲೆಯು ಮಾಗಾಯಿ . . . ಪೊಕ್ಕೊ[ಕ್ಕು]ಳುಘಂಟೆ ಪಾಲ್ಗಡಗ ಗೆಜ್ಜೆ ಸಹ ಬಾಲದೊಡವಾ ಪರಿವರಿಯ ರತ್ನಖಚಿತಾಭರಣಗಳನಿಟ್ಟು (ಪಪಪೋ. ೦೫-೩೦).

[ಪೊಕ್ಕುಳು (< ಪೊಕ್ಕುಟ್) + ಘಂಟೆ]

ಪೊಕ್ಕುಳ್ಗೊಯ್ (ಕ್ರಿ). (ಮಂಗುವು ಹುಟ್ಟಿದ ತಕ್ಷಣ) ಹೊಕ್ಕುಳು ಬಳ್ಳಿಯನ್ನು ಕತ್ತರಿಸು : ಪುಟ್ಟಲೊಡನೆ ಪೊಕ್ಕುಳ್ಗೊಯ್ದು ಬೆನ್ನೀರಟ್ಟಿ . . . ಕೌರಿನ ಹೊಗೆಗೊಟ್ಟೊಡವಿದರು ಬಾಲಕನನು (ಕ್ರಿಪಾಂ. ೨-೬೬).

[ಪೊಕ್ಕುಳ್ (<ಪೊಕ್ಕುಟ್) + ಕೊಯ್]

ಪೊಕ್ಕುಟ್, ಪೊಕ್ಕಳು, ಪೊಕ್ಕಟು, ಪೊಕ್ಕುಳ್, ಪೊಕ್ಕುಳು, ಪೊಕ್ಕುಟು, ಪೊರ್ಕು, ಪೊರ್ಕುಳ್, ಪೊರ್ಕುಟ್, ಹೊಕ್ಕಳು, ಹೊಕ್ಕುಳ್, ಹೊಕ್ಕುಳ, ಹೊಕ್ಕುಳು, ಹೊಕ್ಕುಟ, ಹೊಕ್ಕುಟು (ನಾ). ೧. ಹೊಟ್ಟೆಯ ಮೇಲಿರುವ ಸಣ್ಣ ಕಂಣಿ ; ನಾಭಿ : ಈಕೆಯ ಪೊಕ್ಕುಟ ಚೆಲ್ವೀ ಲೋಕದೊಳತಿಸೇವ್ಯಂ (ರರ್ಮಾಮ್ಯ. ೩-೧೪೭) ; ಅರಿಸಿನ ದಂಚೆಯನಿನಿಸೋಸರಿಸಲುಮಿಾಯದೆ ಯತೋದೆಯಿಾತಂ ಪೀತಾಂಬರನೆಂದು ಧರೆಗೆ ಪೇಟ್ವಂತಿರೆ ಪೊಕ್ಕುಟೊಳಿಕ್ಕಿದಳ್ ಪಯೋಜೋದರನಾ (ಅರಸೇ. ೭-೩೩) : ಒಸಗೆಯ ಮೇಲೆ ಮತ್ತೊಸಗೆ ಪೊಕ್ಕುಟ ಪೆರ್ಚಿನ ಮೇಲೆ ಪೆರ್ಚು . . . ಪಸರಿಸುವಂತಿರಗ್ರಜೆ ತನೂಭವನಂ ಪಡೆದು (ಅನಂಪು. ೦೨-೯೦). **ಪೊಕ್ಕಳು**: ೧. ನಿನ್ನ ನಡೆ ಜಗದ ಈರಡಿ ಮಾಡಿತು ನಿನ್ನ ಪೊಕ್ಕಳು ಸರಸಿಜ ನಾಭನ ಪಡೆಯಿತು (ಪುರಂದ. ೫-೦೬೦-೧೪೨). **ಪೊಕ್ಕಟು** : ೧. "ಪೊಕ್ಕಟು ನಾಭಿಯಕ್ಕು" (ಮಂಗರಾ. ೯೭-೦೩). **ಪೊಕ್ಕುಳ್** : ೧. ಹರಿಯ ಪೊಕ್ಕುಳ ಕನಕಾಂಬುಜದೊಳುದಯಿಸಿದಂ . . . ಬ್ರಹ್ಮಂ (ನಾಂದೇಡ್. ೨೪-೬ ; 12ನೆಯ ಶತ) ; ಅಡಿ ತಳಿರ್ಗಳ್ ಕುರುಳ್ ತುಂಬಿಗಳ್ . . . ಪೊಕ್ಕುಳೇ ಕೊಳಂಗಳ್ (ಕಬಪು. ೯೫-೩೪). ೨. ಮಧ್ಯಭಾಗ ; ಕೇಂದ್ರ : ಪರಿಗೋಲನೇರ್ದು ಪೊಳೆಯಂ ಪಾಯ್ದು ಪೋಪವಂ ಪೊನಲ ಪೊಕ್ಕುಳ್ಗೆ ಬರೆ ಕಾಣ್ಬನದೊ ; ರಂಧ್ರದಿಂ ನೀರೊಳ್ಕಿ ನುಗ್ಗುತಿರ್ಪುದು ಬುಗ್ಗೆಯೋಲ್ ! (ಶ್ರೀರಾಮಾ. ೭೭-೬೦೦). ೩. ಒಳಗು ; ಒಳಭಾಗ : ಪೊಳೆಗಳ ಮೂರರ ಪೊಕ್ಕುಳೊಳಿರ್ಪನ ಮೃತ್ಯುಂಜಯಾ ಎನ್ನಿರೊ (ಶಕ್ತಿಸ. I, ೨-೨). **ಪೊಕ್ಕುಳು** : ೧. ಚಲ್ರ ಇರದೆ ಪೊಕ್ಕುಳಲಿ ಬೆಳೆದು ಬಾಸೆನಾಳದ ಸರಸಿಜವೆನೆ ಕೃಷ್ಣಗೆಸೆಗು (ವರ್ಧಸ. ೭-೩೦) ; ಎಸೆವ ತಿಲಕದ ನೊಸಲ ನೆಲೆಮೊಲೆಯ ನೀಳ್ದ ಬಾಸೆಯಗುಳಿದ ಪೊಕ್ಕುಳಿನ . . . ಸೊಬಗಿನ ನಾರಿ ಸಕಲಸೌಖ್ಯಾಧಾರಿ (ಕಬಪು. ೩೭-೦೦). ೪. ದ, ಪ, ಬ ಮುಂತಾದ ಕೆಲವು ಅಕ್ಷರಗಳಿಗೆ ನಡುವೆ ಬರುವ ಒಳಸುಳಿ : ಪೊಕ್ಕುಳು ತಲೆಕಟ್ಟಮನನ್ತಕ್ಕರ ದವಯವಮನಱಿದು ಖಣ್ಡಿಸಲುಕೀ ಇಕ್ಕುಡನೆ ಬಲ್ಲನ್ (ಎಳ. XI. ದಾಪಣ. ೦೪೯-೨೫ ; 1113). **ಪೊಕ್ಕುಟು** : ೧. ನಗೆಗಣ್ ನೀಳಸಹಸ್ರ ಪತ್ರದೆಸಟಂ . . . ಪೊಕ್ಕುಟು ನಂದಿವಟ್ಟದರಲಂ ಚೆಲ್ವಿಂದುಗುರ್ಕೂಡೆ ಕೇದಗೆಯಂ . . . ಪುಷ್ಪಾಸ್ತ್ರನ ಪಂಚಬಾಣಮಿವಳೆಂಬಾಶಂಕೆಯಂ ಮಾಡಿದಳ್ (ರರ್ಮಾಮ್ಯ. ೭-೨೦೭). **ಪೊರ್ಕು**: ೧. ಮುಂಗಯ್ ಮೊಗಂ ಪೊರ್ಕು ಕಿಟ್ಟೊಡೆ . . . ಪುರ್ವಳ್ಳೆ ಪಲ್ ಕೆಕ್ಕೆ ಕಾಲಡಿಯೆಂದಿಂತಿವನುರ್ಚಿ ಪೋದುವಿಸೆ ತತ್ಸೌಜನ್ಯಕಂದಾಂಕುರಂ (ಶಾಂತಿಪು. ೪-೦೭). **ಪೊರ್ಕುಳ್** : ೧. ನಿರುತಂ ಶ್ರೀಯುತಪುರಮೆಂಬಿಂದ್ರಾವರಜನ ಮಧ್ಯದ ಪೊರ್ಕುಳ ಹೊಂದಾವರೆಯೆನೆ ರಂಜಿಪ ರಾಜಾಲಯಮೆಸೆಯುತ್ತಿರರ್ (ಕಯಕಾ. ೦-೬೬) ; ಪೊರ್ಕುಳೊಳ್ ವೇದಾಗಮಸೃಷ್ಟಿಕರ್ತು ಮೂದೇವರೂಪ ಚಂದ್ರನ ಕಣ್ಣೊಳಗಾಂತ ಮಾಧವನಿರವ ನೋಡಿವಳು (ಪೋಹತ. ೨೯-೪೪). ೫. ಚಕ್ರದ ಮಧ್ಯಭಾಗ ; ಗುಂಬ : ದರುಮದ ಚರಕಂ ನನ್ನಿಯ ಪೊರ್ಕುಳುಮರಿವು ಸಮಾಧಿ ಧೃತಿಯುಮಿರೆ ನೇಮಿ ಅರಮನೆ ನಯ ವಿನಯಮವಂ ಹಿತಕಾ ಪರಿಷದದೊಳವಂ ನಡೆಯಿಸಿವಂ (ಸೌನಂದ. ೩-೦೦). **ಪೊರ್ಕುಟ್** : ೧. "ನಾಭಿ ಪೊರ್ಕುಟೆಂದಱಿವುದು" (ವಸ್ತುಕೋ. ೬೯-೬) ; ಕೊಂದೆನ್ನ ಮಗನನಿಂ ಭಯದಿಂದಂ ರಸೆಪೊಕ್ಕುಮಜನ ಗುಂಡಿಗೆಪೊಕ್ಕುಂ ಮಂದರಧರನೀ ಪೊರ್ಕುಟ ಪೊಂದಾವರೆಪೊಕ್ಕು ಮೇಣವಂ ಬರ್ದುಕುವನೇ (ಸಂಪಭಾ. ೦೦-೦೨೦) ; ಆ ಮಹೀಪಾಲನ ಲೋಲಲೋಚನಂಗಳಾಕೆಯ ಲಾವಣ್ಯರಸಕೂಪದಂತೆ ನಿಮ್ನಮಾದ ಪೊರ್ಕುಟಂ ಪೊಕ್ಕಱಿದುಂ . . . ತನುಲತೆಯೊಳ್ಪುಳಕಾಂಕುರಮನೊದವಿಸುತ್ತುಮಿರೆ (ಮಲ್ಲಿಪು. ೩-೮೯) ; ಎಳೆವೆಣ್ಣ ಪೊರ್ಕುಟಲರ್ಗೊಂಡೆಯಂತಿರೆ ಪೊಂಬೆಟ್ಟಂ . . . ಕಣ್ಗೊಳಿಕುಂ (ರಾಮಾಕ್ಷ. ೬-೩). ೪. ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಟ ಚೆಲ್ವು . . . ಪೊಂದಿರಲಕ್ಕರಕ್ಕೆ ಬರೆವಂ ಚತುರರ್ ಪರಿವರ್ಣಿಸಲ್ ನವಿಲ್ಗುಂದದ ಮಾದಿರಾಜವಿಬುಧಂ (ಪುಷ್ಪಪು. ೦೪-೫೯). **ಹೊಕ್ಕಳು** : ೧. "ನಾಭಿಃ . . . ಹೊಕ್ಕಳಿಗೆ ಹೆಸರು" (ಸಿದ್ಧಾಂತಿ. ೪೦೬) ; ಭೀಮನು ಹೊಕ್ಕಳ ಕೆಳಗೆ ಹೊಡೆದನಲ್ಲಾ . . . ಹೊಕ್ಕಳಿಂದ ಕೆಳಗೆ ಹೊಡೆಯಕೂಡದೆಂಬುದು ನಿಯಮ (ಪನಭಾ. ೩೦೯). **ಹೊಕ್ಕುಳ್** : ೧. ಹೊಕ್ಕುಳಿಂದ ಕೆಳಗೆಯು ಧರಿಸುವರಿಗೆ ಅಕ್ಕು ನೋಡು ಮಹಪಾತಕವವರಿಗೆ (ದೀಕ್ಷಾಪೋ. ೬೫ ೦೩೫). ೨. ಅರ್ಚನೆಯ ಮಂಟಪವಂ ನಿಮಿರ್ಚಿ ನಡುವೆ ಕಟ್ಟಿದ ಮೇಲ್ಕಟ್ಟಿನ ಹೊಕ್ಕುಳ ಪುಲ್ಲಿಯ ತೊಂಗಲ್ಗಳಂ (ಕೇಶಿರ. ಹ. ೩೦೪-೫). **ಹೊಕ್ಕುಳ** : ೪. ಹೊಕ್ಕುಳ ಎಂಬುದು ಕೆಲವು ಅಕ್ಷರಗಳಿಗೆ ನಡುವೆ ಬರುವ ಒಳಸುಳಿ. ದ, ಪ, ಬ – ಇಂತಹ ಅಕ್ಷರಗಳಲ್ಲಿ ಹೊಕ್ಕುಳವನ್ನು ಕಾಣಬಹುದು . . . ಕೆಲವು ಅಕ್ಷರಗಳಿಗೆ ಹೊಟ್ಟೆ ಹೊಕ್ಕುಳಗಳಿಲ್ಲ (ಸಂಶೋಧ. ೧೦). ೬. (ಅಲಂ) ಹೊಟ್ಟೆ ; ಬಸಿರು: ಎಲೆ ಆತ್ಮನೆ ಪಾತಕದ ಹೊಕ್ಕುಳದಲೇಕೆ ಹುಟ್ಟಿದೆ (ಪೋಳಿಪಾ. ೦೦-೩೪). **ಹೊಕ್ಕುಳು** : ೧. ತ್ರಿವಳಿ ಮೈಗರೆಯೆ ಹೊಕ್ಕುಳ ಗುಣ್ಪು ಹೊಱಸೂಸೆ (ಬಸರ. ೦-೦೦೭) ; ಪುಷ್ಪವ ತಂದು ನಿನಗರ್ಪಿಸುವೆನೆಂದರೆ ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ (ಪುರಂದ. ೨-೬೭-೨). ೪. ಅನೇಕರು . . . ಹೊಕ್ಕುಳು, ತಲೆಕಟ್ಟು ಮುಂತಾದ ಅಕ್ಷರಗಳ 'ಅವಯವ' ಗಳನ್ನರಿತು ಕೆತ್ತಬಲ್ಲೆವೆಂದೂ ಹೇಳಿಕೊಂಡಿದ್ದಾರೆ (ಕಶಾಅ. ೬೩). ೬. ಬಿಡದೆ ಪಾಂಡುಕುಮಾರರಡಗಲಿ ಹರಿಯ ಹೊಕ್ಕುಳಲಿ . . . ರಿಪುಗಳ ಕಡಿದು ತಿನಿಸುವೆನು (ಕುಪ್ಯಾಅ. ಓಂಇ. ೨೫-೦೩). **ಹೊಕ್ಕುಟ**: ೧. "ತುಂದಿಯೆನೆ ಬುಗುಡು ಹೊಕ್ಕುಟಮೆನಿಕು" (ಮಂಗರಾ. ೧೧೪-೫). **ಹೊಕ್ಕುಟು**: ೧. ಹೊಕ್ಕುಟು ಬುಗುಡುಳ್ಳವನು. ತುಂಡಿಲ, ತುಂಡಿ (ಪಾಚರಾ. ೬).

ಪೊಕ್ಕುಳ ಅರಸುಮಕ್ಕಳು = ಪರಸ್ಪರ ಸಂಬಂಧವುಳ್ಳ ರಾಜವಂಶ : ಅತ್ತಲಿದ್ದರು ಸೆಟ್ಟಿಮುದ್ಯರು, ಗುತ್ತಿನಡ್ಯಂತಾಯರು, ಇತ್ತ ಪೊಕ್ಕುಳ ಅರಸುಮಕ್ಕಳ ಒತ್ತಿನಲಿ ಕಳದೆಡದಲಿ (ಕಎಪು. ೩೯-೪). **ಪೊಕ್ಕುಳ ಘಂಟೆ, ಪೊರ್ಕುಳ ಗಂಟೆ, ಪೊರ್ಕುಳ ಘಂಟೆ, ಹೊಕ್ಕುಳ ಗಂಟೆ, ಹೊಕ್ಕುಳ ಘಂಟೆ** = ೧. ಆನೆ, ಕುದುರೆ ಮುಂತಾದ ಪ್ರಾಣಿಗಳ ಹೊಟ್ಟೆಗೆ (ಹೊಕ್ಕುಳಿನ ಭಾಗಕ್ಕೆ ಬರುವಂತೆ) ಕಟ್ಟುವ ಘಂಟೆ : ತಳೆದು ಕಾಲ್ಪರಜೆಯ ಪೊಕ್ಕುಳ ಘಂಟೆಯನೆಳಲಿಕ್ಕಿ ಬಿಗಿದು ಗುಳವನು . . . ಕರಿಯನೇಱಿ ಕಲಿಜೋವರೆತ್ತಂವರಂದು (ಕ.ರಾಸಾಂ. ೦೦-೨೫) ; ಪೊಕ್ಕುಳ ಘಂಟೆ ಡೌಡೆ ಜಾಗಟೆರವಂ ತೀವಿತೆಣ್ದೆಸೆಯನಿರದೆ (ನವಮೋ. ೨೭-೭೦) ; ಪೊರ್ಕುಳ ಗಂಟೆಯ ಮೋಹಿಸುವ ದೊಗವಡದ . . . ಪರಿದು ಶರಧಿಯನೆಡಗಲಿಪ ಗಗನಮನಡರ್ವ ಜಾತ್ಯಶ್ವಂಗಳ ವಳಯಮಂ (ಗಿಂಕ. ೬-೫೫ ವ) ; ಗರ್ಗರವ ತರಜೆಗತ್ತರಿಯ ಪೊರ್ಕುಳ ಘಂಟೆಯ . . . ತುರಗಸಂಘಾತದಿಂ (ರಾಜಕೇ. ೬-೦೦ ವ) ; ಹೊಕ್ಕುಳ ಗಂಟೆ ಸೂಡಿದ ಸುವರ್ಣಗನ್ನಡಿ ಮೌಕ್ತಿಕಾವಳಿಯ ಜೋಡು (ಸಿಂಗಿರಾ. ೩೫-೬) ; ಕಟ್ಟಿದ ಹೊಕ್ಕುಳ ಗಂಟೆಯ ತೇಜಿಗಳಿಟ್ಟಣಿಸುತಲೈದಿದುವು (ಕಂಪಪಿ. ೨೩-೯೪) ; ನೊಸಲಗನ್ನಡಿ ಢಣರೆಂಬ ಹೊಕ್ಕುಳ ಘಂಟೆ ಮಿಸುನಿಬರಹದ ಹಾವರಣ ಬಸಿವ ಗಲ್ಲದ ಮದಧಾರೆಯಿಂದಾನೆಗಳ್ಮಸಗಿ ಬಂದುವು ರಾಯನೆಡೆಗೆ (ಭರಕ. ೨೦-೬೨). ೨. ಮಕ್ಕಳಿಗೆ ಉಡಿದಾರದಂತೆ ಕಟ್ಟುವ, ಗಂಟೆಯಾಕಾರವುಳ್ಳ ಒಂದು ಬಗೆಯ ಆಭರಣ : ಪೊಕ್ಕುಳ ಘಂಟೆ ಪುಲಿನಖಂ . . . ಮಣಿಮಯಮುದ್ರೆಗಳ ಬೆರಳ್ಗಳಿಗಮರ್ಚಿ (ನವಮೋ. ೦೨-೦೬). **ಪೊಕ್ಕುಳ ಪುರಿ, ಹೊಕ್ಕಳ ಹುರಿ** = ಭ್ರೂಣ ಮತ್ತು ಗರ್ಭಾಶಯದಲ್ಲಿರುವ ಪೋಷಕಾಂಗವನ್ನು ಸಂಬಂಧಿಸುವ ನಾಳ ; ನಾಭಿ ನಾಳ : ನೆರೆದಿರ್ದ ವಾರಿಜಾಕ್ಷಿಯರು ಪೊಕ್ಕುಳ ಪುರಿಯ ಕೊಯ್ದು . . . ಉಪಚಾರಮಂ ಮಾಡುತಿರಲು (ನವಮೋ. ೦೦-೨೦); "ಹೊಕ್ಕಳ ಹುರಿ=

ಭ್ರೂಣವನ್ನೂ ಗರ್ಭಾಶಯದಲ್ಲಿರುವ ಪೋಷಕಾಂಗವನ್ನೂ ಸಂಬಂಧಿಸುವ ನಾಳ; ನಾಭಿನಾಳ" (ಅಪಂಶಾ). ಪೊಕ್ಕುಳ ಬಳ್ಳಿ, ಹೊಕ್ಕುಳ ಬಳ್ಳಿ=ಪೊಕ್ಕುಳ ಪುರಿ: ಮಿಡಮಿಡನೆ ಮಿಡುಕೆ ಪೊ[ಶಾಕಾಂ. ಹೊ]ಕ್ಕುಳ ಬಳ್ಳಿಯಂ ಕೊಯ್ದು (ಬಿಂಹೋರ. ಹ. ೩೦೦-೨೯); ಬೆಳ್ಳಿಯ ಪಿಡಿಯ ಕತ್ತಿಯ ತಂದು ಹೊಕ್ಕುಳ ಬಳ್ಳಿಯ ಕೊಯ್ದರರ್ಭಕನ (ಪೋಹಕ. ೦೭-೨೦); ಜೀವ ಜೀವವ ಬಂಧಿಸಿದ ಹೊಕ್ಕುಳ ಬಳ್ಳಿಯಯ್ಯಾ ಇದು (ಸೂರುಶಾ. ೨೦೬). ಪೊಕ್ಕುಟಂ ಕೊಯ್ = ನಾಭಿನಾಳವನ್ನು ಕತ್ತರಿಸು: ಮಕ್ಕಳು ಪುಟ್ಟಿದಾಗಳೆ ಪೊಕ್ಕುಟಂ ಕೊಯ್ದುದನೆಲ್ಲರ್ಗಱಿಪಿ ನಾಭಿರಾಜನೆಂಬ ಪೆಸರನ್ವರ್ಥಂ ಮಾಡಿ (ಪುಣ್ಯಾಸ್ರ. ೦೦-೧೪ ಪ). ಪೊಕ್ಕುಟ ಕುಡಿ, ಹೊಕ್ಕುಳ ಕುಡಿ=ಪೊಕ್ಕುಳ ಪುರಿ: ಪೊಕ್ಕುಟ ಕುಡಿಯಂ ಪೆರ್ಚಿಸಲಿಕ್ಕಿದ ಮಣಿಕನಕಪುಂಜಮೆಸೆದಿರೆ ಮೂಲೋಕಕ್ಕೋಜನೆನಿಸುವಜನಂ ಪೊಕ್ಕುಟ ಪೂವಿಂದೆ ಪಡೆದುದುಂಟೆನಿಸರ್ದಂ (ಅಪಂಪು. ೧೨-೮೨); "ಹೊಕ್ಕಳ ಕುಡಿ=ಭ್ರೂಣವನ್ನೂ ಗರ್ಭಾಶಯದಲ್ಲಿರುವ ಪೋಷಕಾಂಗವನ್ನೂ ಸಂಬಂಧಿಸುವ ನಾಳ; ನಾಭಿನಾಳ" (ಅಪಂಶಾ). ಪೊಕ್ಕುಟ ಪೂ, ಪೊರ್ಕುಟ ಪೂ = (ವಿಷ್ಣುವಿನ) ನಾಭಿಯಲ್ಲಿ ಹುಟ್ಟಿದ ಹೂವು: ಲೋಕಂಗಳನಾ ಹರಿ ಬಸುಱೊಳಿಟ್ಟನಂತಾತನ ಪೊಕ್ಕುಟ ಪೂವಿನಲ್ಲಿ ಲೋಕಂಗಳನೆಲ್ಲ ಮಾಡಿದಜನೆ ಪುಟ್ಟಿದನೆಂಬರ್ (ಸಮಸ. ೦೦-೪೪); ಮೂಲೋಕ್ಕೋಜನೆನಿಸುವಜನಂ ಪೊಕ್ಕುಟ ಪೂವಿಂದೆ ಪಡೆದುದುಂಟೆನಿಸರ್ದಂ (ಅಪಂಪು. ೦೨-೮೨); ರಾಜೀವಸಖಂ ಸಜಳಜಳಧರಶ್ಯಾಮಾಭ್ರ ಶ್ರೀವತ್ಸಾಂಕನ ಪೊರ್ಕುಟ ಪೂವೆನೆ ಕೆದಱಿದಪನಮಳಕರಕೇಸರಮಂ (ಲೀಲಾವ. ೪-೦೪೯). ಪೊಕ್ಕುಟ ಸುಱಿ, ಹೊಕ್ಕುಳ ಸುಳಿ = ೧. ನಾಭಿಯ ವರ್ತುಲ: ಅಳಿಪಿಂ ಪೆಂಡಿರ ಪೊಕ್ಕು[ಶಾಕಾಂ. ಪೊರ್ಕು]ಟ ಸುಱಿಯೊಳ್ ಸುಱಿತರ್ಪ ನೃಪನ ಕಣ್ಪೂಣರ್ಗಳನೇನಿಱಿಸಿದವೊ ನದಿಯೊಳೊದವಿದ ಸುಱಿಗಳ ಬಱಪಿಡಿದು ಸುಱಿದು ಪೊಳೆವೆಳೆಮಿಾಂಗಳ್ (ಶಾಕ್ಯಕೃ. ೯-೨). ೨. ಪ, ಮ ಮುಂತಾದ ಅಕ್ಷರಗಳ ಅಡಿಯಲ್ಲಿರುವ ಒಳಸುಳಿ: ಪ, ಮ, ವ—ಇಂಥವಕ್ಕೆ ಅಡಿಯಲ್ಲಿ ಅಂದರೆ ಕೆಳಗಡೆ ಒಳಸುಳಿಯಿದೆ. ಈ ಕೆಳಗಡೆ ಇರುವ ಸುಳಿ "ಹೊಕ್ಕುಳ ಸುಳಿ" ಎನಿಸುತ್ತದೆ (ಸಂಕೋರ. ೨೦೦). ಹೊಕ್ಕುಳಲಿ ಹೂದುಱುಬಿದಾತ = ನಾಭಿಯಲ್ಲಿ (ಕಮಲದ) ಹೂವುಳ್ಳವನು; ಪದ್ಮನಾಭ; ವಿಷ್ಣು: ಹೆಱೆಯ ಹೊತ್ತನ ಹೊಕ್ಕುಳಲಿ ಹೂದುಱುಬಿದಾತನ ಮಗಳಿಗಳುಪಿದ ಮೊಱೆಯವನ ಹೆಂಡಿರನು ಬಲ್ಲೆನು ಕಂಡುಶಾನು (ಕೊರಣಾ. ೬-೯-೨೯). ಹೊಕ್ಕುಳ ಸೀಳು = ದ, ಪ ಮುಂತಾದ ಅಕ್ಷರಗಳನ್ನು ಮಹಾಪ್ರಾಣಗಳಾಗಿ ಬರೆಯುವಾಗ ಆ ಅಕ್ಷರಗಳ ಹೊಕ್ಕುಳ ಸುಳಿಯಿಂದ ಕೆಳಗೆ ಗೆರೆ ಎಳೆ: ಡ, ದ, ಪ—ಮುಂತಾದುವನ್ನು ಮಹಾಪ್ರಾಣಗಳಾಗಿ ಬರೆವಾಗ 'ಹೊಕ್ಕುಳ ಸುಳಿ'ಯಿಂದ ಕೆಳಗೆ (ಢ, ಧ, ಫ—ಎಂಬಂತೆ) ಗೆರೆ ಎಳೆಯುವರಷ್ಟೆ. ಇದನ್ನು 'ಹೊಕ್ಕುಳ ಸೀಳುವುದು' ಎನ್ನುತ್ತಾರೆ (ಸಂಕೋರ. ೨೦೨). ಹೊಕ್ಕುಳ ಹೂವ = ನಾಭಿಯಲ್ಲಿ ಹೂವಿರುವವನು; ವಿಷ್ಣು: ಹೊಕ್ಕುಳ ಹೂವನ ರೂಹ ತೋಱಿದಳು ಪೆಣ್ಮಕ್ಕಳ ಮಂಡೆಮಾಣಕಕೆ (ಪೋಹಕ. ೩೦-೨೩). ಹೊಕ್ಕುಳಾರದ ಶಿಶು=ಅದೇ ಹುಟ್ಟಿದ ಕೂಸು; ಹಸುಗೂಸು: ಮಹೀಶೂರರತ್ನಸಿಂಹಾಸನದ ಸಮರಾಂಗಣಧರ್ಮಕ್ಕೆ ಇಂತಹ ವೀರವಿಶ್ವಾಸವನ್ನೊಪ್ಪಿಸಿ, ತವಕದ ಪ್ರತ್ಯಾಶೆಯಿಂದ ಕುದಿಯುತ್ತಿರುವ ಕಯ್ದುಗೊಳ್ಳದ ಮಾರಾಳ . . . ಸ್ತ್ರೀ!— ಹೊಕ್ಕುಳಾರದ ಶಿಶು! (ಪಟ್ಟಕ. ೭೩-೦೩). ಹೊಕ್ಕುಟ ಬುಗಟು = ಉಬ್ಬಿರುವ ನಾಭಿ: ವೃದ್ಧನಾಭಿಃ, ತುಂದಿಲಃ, ತುಂದಿಧಃ—ಈ ೩ ಹೊಕ್ಕುಟ ಬುಗಟುಳ್ಳವನು (ಶಾಕಾಂ. ೦೨೦). [ದೇ. ॥ ತಮಿ. ಪೊಕ್ಕುಳ್, ಪೋಕಿಲ್; ಮಲ. ಪೊಕ್ಕುಳ್, ಪೊಕ್ಕಿಳ್; ತುಳು. ಪುವಳು, ಪುವೊಳು, ಪೂವೊಳು; ಕೊಡ. ಪೊಕ್ಕಿ; ತೆಲು. ಪೊಕ್ಕಿಲಿ; ಕೋಲಾ. ನಾಯ್ಕಿ. ಬೊಗುರ್]

ಪೊಕ್ಕುಟು 'ಪೊಕ್ಕುಟ್' ನೋ.

ಪೊಕ್ಕ 'ಪುಗುಳ್₂' ನೋ.

ಪೊಗಟು 'ಪಗಟು' ನೋ.

ಪೊಗಡ, ಪಗಡೆ₁, ಪೊಗಡೆ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು; ಬಕುಳ; ಕೇಸರ: ಪೊಗಡದ ಪೊಸಪೂವಿನ ತುಡುಗೆಗಳ್ಗಮಧರದ ಪೊದಟ್ಟ ತಣ್ಗಾಂಬಿಂಗಂ ಮೃಗನಯನೆಯರನೆ ಬಿಡದೋಲಗಿಸಿದುದಳಿನಿಕರಮವರನಾರೋಲಗಿಸರ್ (ಅಂಪು. ೦೦-೧೦೨). ಪಗಡೆ₁: ಸುರಗಿ ಸುರಹೊನ್ನೆ ಸಂಪಿಗೆ ಪಗಡೆ ಪನ್ನೀರು ಪಾರಿಜಾತ ಮೊದಲಾದ ತರುಗಳಲ್ಲಿ (ಸೌಗಂಧಿ. ೪-೦); ನೇರಳೆ, ಪಗಡೆ, ಪಾದರಿ . . . ಮೊದಲಾದ ಪುಷ್ಪಫಲಭರಿತವಾದ ವೃಕ್ಷಗಳನ್ನು (ಕೃಷಾಂ. ೨೨೬). ಪೊಗಡೆ: ಸೌಗಂಧಿಕಾದೇವಿಗೆ . . . ಪೊಗಡೆಹುವ್ವುಗಳ ಪೋಣಿಸಿದ ಒಡ್ಯಾಣವಂ ನಡುವಿನೊಳ್ ಕಟ್ಟಿದರೆ ನಡೆಯುವದಕೆ ತಡವಾಗಿ ಬಳಲಿ ಅಲ್ಲಲ್ಲಿ ನಿಲ್ಲುವಳು (ಸೌಗಂಧಿ. ೨೦೦-೨೨). [ದೇ. ॥ ತೆಲು. ಪೊಗಡ, ಪೊವಡ]

ಪೊಗಡೆ 'ಪೊಗಡ' ನೋ.

ಪೊಗದಸ್ತು 'ಪಗದಸ್ತು' ನೋ.

ಪೊಗದಿ 'ಪಗುದಿ' ನೋ.

ಪೊಗರ್, ಪೊಗರು, ಹೊಗರ್, ಹೊಗರ್ಪು₂ (ನಾ). ೧. ಕಾಂತಿ; ಹೊಳಪು; ಮೆರುಗು; ಪ್ರಕಾಶ: "ತೊಳಗು, ಬೆಳಗು . . . ಪೊಗರ್, ತೊಳಪಂ, ಮಸೆ—ಈ ೧೪ ಕಾಂತಿ" (ಕಶಾ. ೩೩-೨೦೨); ಪೊಗರಳವಟ್ಟು ಪೊನ್ನನೊರೆದಂತೆವೊಲಿರ್ದೊಡೆ . . . ತಾನೆ ವೀರಲಕ್ಷ್ಮಿಗೆ ನೆಲೆಯಕ್ಕುವಿಾ ತೆಱದ ಬಾಳ್ವಿಡಿದಂ (ಲೋಕೋಪ. ೦೦-೦೦೦); ಅಂಗಜನ ಬಾಳ ಪೊಗರ್ ನಿಜಬಾಹುಮೂಲದಿಂ ತುಳ್ಕೆ ತುಳುಂಕಿದಳ್ ಹರಿಯ ಮೇಲೆ ಪೆಱಳ್ ತರಳಾಕ್ಷಿ ತೋಯಮಂ (ಜಗವ. ೦೯-೦೦೩); ಪೊಂಬಳ್ಳಿಯ ಪೊಗರಂ ಗೆಲ್ವಂಗದ ಕಂಬುಲಲಿತಕಂಧರೆ ಮುನ್ನೆಱೆದ ನವಾಂಬು ಜಲಕ್ಕನೆ ತೀವಲ್ಕೆ (ಇಯಶಾ. ೦-೪೩). ೨. ಹರ್ಷ; ಉತ್ಸಾಹ; ಉಬ್ಬು: ಗಮಕಂ ಪ್ರಯೋಗಮಾ ಭೋಗಮಳಂಕಾರಂ ಪೊಗರ್ ನಯಂ ಮಿಱುಗು ಪೊದಟ್ಟಮರೆ ಕೊಳೆ ಪಾಡುವಮರಿ ದಲಮರ್ದಂ ಮುಕ್ಕುಳಿಸಿಯುಗುಟ್ಟ ತೆಱನಂ ಪೋಲ್ತಳ್ (ಅಂಪು. ೬-೦೬); ದನಿಯ ಪೊಗರ್ ಮನೋಭವನ ಬಾಳ್ವೊಗರಂತಿರೆ . . . ವನಚರಿ ಪಾಡಿದಳ್ ಮಧುರಗೀತಿಗಳು (ಲೀಲಾವ. ೬-೩೨); ಪೊಗರಿಂಪು ನುಣ್ಪು ಪೆಂಪಿನ ಸೊಗಸಿನ . . . ಚೆಲ್ವ ಕಾವ್ಯದ ಬಗೆಯಱಿಯದ ಪುಚ್ಚುಗುನ್ನಿ ಕೂಗಿದೊಡಳ್ಕೇಂ (ಹಮ್ಮೀರ. ೦-೦೬). ಪೊಗರು: ೧. "ಪೊಗರೆನಲ್ಕೆ ಕಾಂತಿಯಕ್ಕುಂ" (ಶಕರ. ೭೧); ಧುರದೊಳರುಹದ್ದಾಸರಾಯನ ವರ ಕೃಪಾಣದ ಪೊಗರು ಪೊಗರಿಲ್ಲರಿನೃಪಾಲರ ಶಿರವನೊಡೆವೊಯಿದೆತ್ತೆ (ಶಾಕೃಶಾ. ೨-೨೩); ಮೊಗಮುಂ ಮೆಯ್ಯುಂ ಪೊಗರುಂ ಮಿಗೆ ಸೊಗಸಂ ಪಡೆಯೆ (ಜಶಪ. ೩-೦೦); ಮೂಡಲಿದೆ ಹೊಸಚಿಗುರು ಮೂಡಲಿದೆ ಹೊಸ ಪೊಗರು (ಅರಳು. ೪೪೬-೩). ೩. ಬೀಂಕ; ಗರ್ವ; ಸೊಕ್ಕು: ಹೈಹಯಾತ್ಮಜನೈದೆ ನಗರಮಂ ಪೊರಮಟ್ಟು ಚತುರಂಗಬಲವೆರಸಿ ಪೊಗರಿನಿಂದೈತರುತಲಿರೆ (ಪರಶು. ೦೦-೦); ಮುಂದಕೆ ವಿಗಡಿಸುವ ದಾಯವನು ತಿಳಿಯದೆ ಪೊಗರಿನಿಂ ದುರ್ನೀತಿಗೆಳಸಿದ ಪಾರ್ಥನು (ಕೋಗಹು. ೦೭-೭೦); ಮಿತ್ತುವಿನ ಕೋರೆದಾಡೆಯ ಪೊಗರಿಗಂಜದೆದೆಯು . . . ಕಂಗೆಟ್ಟು ಮಮ್ಮಲನೆ ಮರುಗುತಿಹುದು! (ಶಕಾಶಾ. ೨೨-೨). ಹೊಗರ್: ೧. ಉರವಣಿಸಿ ತಮ್ಮನಟಿಗುಂ ಧುರದೊಳಿದೆಂದಂಜಿ ಹೊಗರ ನೆವದಿಂ ರಿಪುಭೂವರ ನೊಸಲಕ್ಕರಮಿರ್ಪುವು ನೆರೆದು ಶರಣ್ಪೊಕ್ಕಿಳಾಧಿಪನ ಕೂರಸಿಯೊಳ್ (ಸರ್ವಪು. ೭-೩೦); ನಳಿತೋಳ ಮೊದಲು ಹೊಗರಂ ಕಱಿಯೆ ಕಡೆಗಣ್ಣ ತೊಳಪ ಮಿಂಚಂ ಕೆದಱೆ (ಹಕಶಾ. ೩-೩೦); ಹೂವೊಗ್ಗೆಗಳ ಹೊದಱಿನ ಹೊಗರ ಹೊಸದೇಸಿಯಲಿ ಯುದ್ದೋನ್ಮತ್ತನನುವಾದ (ಕೊರಣಾ. ೬-೨೯-೨೬). ಹೊಗರ್ಪು: ೧. ಲಲಿತವಿದ್ರುಮಲತಾವಿಭ್ರಮೋಪಮ

ಜಟಾವಲಿ ಹೊಗರನುಗುಳ್ವ ರುದ್ರಾಕ್ಷಮಾಲಾಜಾಲ (ಪಟ್ಟಣಾ. ೨-೫೦); ಹೊಗರನುಗುಳುವ ಹೊಸಮಸೆಯ ಕೋಲುಗಳ ಕವಿಸಿದನು (ಕುಮಾಸ. ೪-೦೩); ಕಾಸಿದಂತೆ ಕಾಂಚನದ ಹೊಗರು ಅಧಿಕವಲ್ಲದೆ ? (ಸೀತಾಪ. ೭). ೨. ಬಾಹುಸತ್ವದ ಹೊಗರು ಹೋಗದು ಮನದ ಪಾತಿಯ ತೆಗಹು ತೆಗ್ಗದು ಹೊಕ್ಕು ತಿವಿದಾಡಿದರು ಬೇಸಱದೆ (ಕುಮಾಸ. ೨-೦೦೦). ೪. ಹೆಚ್ಚಳ; ಆಧಿಕ್ಯ: ಭುಜಪ್ರತಾಪದ ಹೊಗರು ಹೊಸ ಪರಿಯೆನುತ ರಿವುಗಳ ಹೊಗಳುತಿರೆ (ಕುಮಾರಕ್ರೋ. ೫-೩೬); ಜಗದುಸುರು ಪಸರಿಸಿತು ಹರುಷದ ಹೊಗರು ಮಸಗಿತು ರಿವುನೃಪರ (ಕುಮಾರಕ್ರೋ. ೦೯-೫೦). ೫. (ಆಲಂ) ಮಂಕು : ಮೇಲುಮುಸುಕಿನ ಹೊತ್ತ ದುಗುಡದ ಹೊಗರ ಹೊಗೆವೊಗದ ತಾಳಿಗೆಯ ನಿರ್ದ್ರವದ . . . ನೃಪಾಲ ಹೊಕ್ಕನು ನಡು ವಿರುಳು ನಿಜರಾಜಮಂದಿರವ (ಕುಮಾಸ. ೦೨-೧).

[ದೇ.ಕ ತಮಿ. ಮಲ. ಪುಕರ್; ತೆಲು. ಪೊಗರು, ಪೊವರು]

ಪೊಗರಂಬು, ಹೊಗರಂಬು (ನಾ). (ಸಾಣೆ ಹಿಡಿದ) ಹೊಳೆಯುವ ಬಾಣ; ಹರಿತವಾದ ಸರಳು : ಹರಿಯೆರ್ದೆಯೊಳಾಮುನಿಯ ನುಡಿಯು ಮಂಗಜನ ಪೊಳಪರಲ ಹೊಸಮಸೆಯ ಪೊ[ಪಾಶಾಂ. ಹೊ]ಗರಂಬುಗಳು ಪೊಡನೊಡನೆ ಭರದಿ ನೆಲೆಗೊಂಡುವು (ಸಾಳ್ವಭಾ. ೨೯-೨೨). **ಹೊಗರಂಬು :** ತಳಿತ ಹೊಗರಿನ ಬಾಯಿಧಾರೆಯ . . . ಹಂಗನ ಗಱಿಯ ಬಿಗುಹಿನ ಹಿಳುಕುಗಳ ಹೊಗರಂಬು ಕವಿದವು (ಕುಮಾರಕ್ರೋ. ೫-೦೩); ಹೊಡಕರಿಸಿ ಹೊಗರಂಬು ಹೊಕ್ಕುವು ಕೊಡಹಿದರು ಕೊಬ್ಬಿದ ವಿರೋಧಿಗಳೊಡಲ ಬಗೆದುವು ಚಿಗಿಯ ನೆತ್ತರ ಧಾರೆ ದೆಸೆದೆಸೆಗೆ (ಕಾತ್ರಾ. ೭-೫೯).

[ಪೊಗರ್ + ಅಂಬು$_2$]

ಪೊಗರಲಗು, ಹೊಗರಲಗು (ನಾ). (ಕತ್ತಿ, ಖಡ್ಗ ಮೊದಲಾದುವುಗಳ) ಹೊಳೆಯುವ ಅಲಗು,-ಬಾಯಿ : ಬಗೆಯೆ ನಿಜದೇಹದನ್ನರ್ ಖಗನಾಯಕರಟ್ಟಿದೊಡುರ್ಕುಗೆಟ್ಟನೆ ಮುನ್ನಿಂ ಮಿಗೆ ಕಡುಗೂರ್ಪಂ ತಳೆದಂ ಪೊ[ಪಾಶಾಂ. ಹೊ]ಗರಲಗಂ ಪಱಿಯೆ ಮಸೆದವೋಲ್ ಹಯಕಂಠಂ (ಸರ್ವಪು. ೬-೫೬). **ಹೊಗರಲಗು :** ಹಿಪ್ಪೆಗರ ಹರೆಗಡಿದು ಹೊಗರಲ ಗೊಪ್ಪಿದವು ಕರುಳುಗಳ ನಿಮಿಷದೊಳೊಪ್ಪಗೆಡಿಸಿದವರಿಕದಂಬವನೀತ ನಂಬುಗಳು (ಕುಮಾರಕ್ರೋ. ೨-೫೩); ಮೈಯೊಳಗೆ ಹೊಚ್ಚಿದವು ಹೊಗರಲಗು ಮುಚ್ಚಿದವು ನೆಣವಸೆಯನು (ಕೃಷ್ಣಭಾ. ೦೩-೦೬). [ಪೊಗರ್ + ಅಲಗು$_2$]

ಪೊಗರಳಿ, ಹೊಗರಳಿ (ಕ್ರಿ). ಕಾಂತಿಗುಂದು; ಕಾಂತಿಹೀನವಾಗು : ಅವನಿಪರ ಮುಖಂ ಪೊಗೆ ಸುತ್ತಿದ ಪೊಂಗನ್ನಡಿಯಂದದಿ ಪೊಗರಳಿದುವು ಪೊಗಸಿನ ಚಂದ್ರಂಬೊರ್ (ಕಪಶಾ. ೬-೦). **ಹೊಗರಳಿ :** ಒಗೆದ ಚಿಂತೆಯ ಹೊಗರಳಿದ ಮೊಗವ ಮೆಯ್ದೆಗೆದ ಮಾತಿನ ಬಲವೆರಸು ದುಗುಡದಿಂ ಬಂದು ಪೊಕ್ಕನು ಬೀಡ ಒಲ್ಲಾಳ ಬಿಗುವುಗುಂದಿದ ಬಿಂಕದೊಳು (ಕುಶಾಸಾಂ. ೧೩-೦೩೩). [ಪೊಗರ್ + ಅಳಿ$_1$ (<ಅಱಿ$_1$)]

ಪೊಗರಾನ್, ಹೊಗರಾನ್ (ಕ್ರಿ). ಕಾಂತಿಯನ್ನು ಹೊಂದು; ಥಳ ಥಳಿಸು : ಪುಂಖದ ಪೊಳೆಪುರ್ವೆ ಮುಮ್ಮೊನೆಯ ಕಿಂಗಿಡಿ ಸಾಲಿಡೆ ರೂಢಿ ಸುತ್ತೆ ಪಿಂಗದ ಪೊಗರಾಂತ ಕೂರ್ಗಣೆಗಳೇಂ ಪರಿತಂದುವೊ ಪಾಂಡು ಪುತ್ರನಾ (ಕಶಕಂ. ೯-೧೨). **ಹೊಗರಾನ್ :** ಹೊಗರಾಂತ ಹೊಸ ಹೊನ್ನ ರಸ ಕಾಯ್ದುರೆ ಕಂಡು ಸೆಗಣೆಯೊಳಱಿವಂತೆ ಮೊಱದಿ ಮೃಗಮದ ಗಂಧಿಯರ್ ಗೋಮಯದಿಂ ಮುದ್ದುಮಗನ ದೇಹವ ಸಾರ್ಚಿದರು (ಮೋಹತ. ೦೭-೨೦). [ಪೊಗರ್ + ಆನ್$_1$]

ಪೊಗರಿ (ನಾ). [ಜೈನ] ಮುನಿಗಳ ಒಂದು ಸಂಘದ ಹೆಸರು : ಗಚ್ಛ ಗಳಲ್ಲಿ ಒಂದು: ಗಛ್ಛೇ(ಚ್ಛೇ)ಶ ತುಛ್ಛೇ(ಚ್ಛೇ)ಪಿ ಪೊಗರ್ಯ್ಯಭಿಖ್ಯೇ ಸಂಸ್ಥಾಯ ಮಾನೋ ಮುನಿರಾರ್ಜ್ಯ(ರ್ಯ್ಯ) ಸೇನಃ (ಇ. XIX, ೫೨೨-೦೯ ; 1054) ; ಜಿನಧರ್ಮಕ್ಕೆ ಮೂಲವಾದ ಮೂಲಸಂಘದಲ್ಲಿ ಪ್ರಸಿದ್ಧವಾದುದು ಸೇನಗಣ; ಅದರಲ್ಲಿ ಪ್ರಸಿದ್ಧವಾದುದು ಪೊಗರಿಗಚ್ಛ (ಕಶಾಅ. ೮೬ ಅಷಿ). [?]

ಪೊಗರಿಗೆಟ್ಟಿ (ನಾ). ಒಂದು ಊರಿನ ಹೆಸರು : ತಳವನಪುರದೊಳ್ ತಳ ವಿತ್ತಿಯ ಮಣ್ ಪೊಗರಿಗೆಟ್ಟಿಯೊಳ್ ಪನ್ನಿರ್ಕ್ಕಣ್ಣುಗಂ ಮನೋಹರಂ ದತ್ತಂ (ಎಕ. I, ೦-೨೦ ; ಸು. ೨೫ಷು ಕಕ).

[ಇದು 'ಪೊಗರಿಗೆಱೆ' ಎಂಬುದರ ಅವಲಿಖಿತವಿರಬಹುದು]

ಪೊಗರಿಡಿ (ಕ್ರಿ). ಕಾಂತಿಯಿಂದ ತುಂಬಿರು : ಪತೆಯನುಱೆ ಕೊಂದುವು ಶರಧಿಭವನಭವನ ಪೊಗರಿಡಿದಂಬುಗಳ್ಳಳಯಶತಕೋಟಿ ಶತಕೋಟಿಯಂ ಪೋಲ್ತು ಸಂಗರದೊಳು (ಕೃಷ್ಣಭಾ. ೨೨-೨೦). [ಪೊಗರ್ + ಇಡಿ$_2$]

ಪೊಗರಿಳಿಸು 'ಪೊಗರಿಱಿಸು' ನೋ.

ಪೊಗರಿಱಿಸು, ಪೊಗರಿಳಿಸು (ಕ್ರಿ). ಗರ್ವವನ್ನು ಕುಗ್ಗಿಸು ; ಅಹಂಕಾರ ವನ್ನು ಹೋಗಲಾಡಿಸು : ಸೊಕ್ಕಿಳಿಸು : ಜಯಲಕ್ಷ್ಮಿಯ ನಯ ನೋತ್ಪಲಮಯೂಖಮೆನೆ ತಾನೆ ಬಂದು ಕರಕಿಸಲಯಕಾಂತಿಯಿನೇಂ ರಾಗಂಬೆತ್ತುದೊ ಜಯಾಸಿ ಪೊಗರಿಱಿಸೆ ಕಿಸುರ ಮಸಿಯಕ್ಕರಮಂ (ಪಂಚಾಪ. ೯-೨೦). **ಪೊಗರಿಳಿಸು :** ಯಾರಾದರೂ ಆ ಜಂಬಾರನ ಪೊಗರಿಳಿಸಬೇಕು (ಕೂಡ). [ಪೊಗರ್ + ಇಱಿಸು]

ಪೊಗರು 'ಪೊಗರ್' ನೋ.

ಪೊಗರುಗು, ಹೊಗರುಗು (ಕ್ರಿ). ಚೆಲುವು ಹೊರಸೂಸು ; ಕಾಂತಿಯು ಹೊರಚೆಲ್ಲು : ನಾಡೆ ಕಡುಚೆಲ್ವು ಮಿಕ್ಕು ಪೊಗರುಗುವ ಹೊಂಬಣ್ಣ ವೊಲೆಯಾಯತದ ಸೆಕ್ಕುಂದುಱುಂಬಿನ ... ಪೆಣ್ಮಕ್ಕಳೆಯ್ತಂದರೊಸೆದು (ಪಟ್ಟಣಾ. ೩-೬೬) ; ಪಲ್ಲವಾಧರ ದಂತ (ಕುಚ ಪೊಗರುಗುವ) ಧಮ್ಮಿಲ್ಲದೆ ಮೆಱೆವ ಹೆಣ್ಣುಗಳು ಪುಲ್ಲದಳಾಕ್ಷಗೆ ಪೊಸವೇಟ ಪುಟ್ಟುವಂತೆಲ್ಲರಿಬ್ಬಗೆ ಯಾದರಾಗ (ಮೋಹತ. ೦೯-೬೩) ; ಪೊಗರುಗುವ ಕಣೆಗಳ್ ಸಾರ್ತರ್ಪುದಂ ಕಾಣುತೆ ರಾಘವಂ ಪಡಿಸರಳಂ ತುಡುತೆ ಬಿಡದೋರೊಂದು ಪಗೆಗೋಲಂ ನಡುದಾರಿಯೊಳೆ ಇರ್ಕಡಿಗೆಯ್ವುಂ (ಅದ್ಭುತ. ೯೯-೨೦). **ಹೊಗರುಗು :** ಹೊಗರು[ಪಾಶಾಂ. ರೊ]ಗುವ ಹೊಸ ಕಣೆಯ ದಡ್ಡಿಯ ಬಿಗಿದನೆಡಬಲ ನಿದಿರಿನಲಿ ಸೆಗಳಿಗೆಯ ಸಸಿಯಂತಾಯ್ತು ಕೌರವಸೇನೆ ನಿಮಿಷದಲಿ (ಕುಮಾವ್ಯಾ. ೭-೩೨) ; ಹೊಗರುಗುವಂಗೋಪಾಂಗ ವಕ್ಷದೊಳು ಪೊಂಬೊಗರಿಯಂತಿರ್ಪ ನುಣ್ಣೊಲೆಯ ದೃಗುಯುಗಳದಿ ನೋಡಿ ಹೆಱಹಿಂಗಲಾಱದೆ ಮುಗುಳಂಬ ನಮರ್ದಱ್ಬಿದನು (ಮೋಹತ. ೧೯-೬೨). [ಪೊಗರ್ + ಉಗು$_1$]

ಪೊಗರುವೆಱು (ಕ್ರಿ). ಗರ್ವಪಡು; ಬೀಗು ; ಹೆಮ್ಮೆಪಡು : ಗದ್ದೆಯ ಗೊರವನೊಳ್ ಕಡಿದಾಡಿ ಪೊಗರುವೆತ್ತಿದ್ದೆ ನೀ ರಣಾಂಗದೊಳಗೆ ಬಿದ್ದೆಯ ನನ್ನ ಬಾಧೆಗೆ ಕೃಷ್ಣ ಕರೆ ನಿನ್ನ ದೊದ್ದೆಯ ನಿಲಲೊಬ್ಬಗರಿದು (ಮೋಹತ. ೯೦-೦೬). [ಪೊಗರು (<ಪೊಗರ್) + ಪೆಱು$_1$]

ಪೊಗರೆ (ನಾ). ಪೊಟರೆ; ಬಿರುಕು; ಹೋರು : ಕಲ್ಲ ಪೊಗರೆಯೊಳಿಟ್ಟ ಕಾರ್ಮುಗಿಲ ಮೊಟ್ಟೆಗಳ್ ತಾಮೆನಿಸಿ ಪರ್ಬಿದುವು ಪೆರ್ಜೇನ ಪುಟ್ಟುಗಳ್ . . . ಪೊಕ್ಕು ಕುಕ್ಕಿಱಿಸಿ ಹೋಂಪಿಸಿ ಕಲ್ಲ ಪೊಗರೆಯಂ ನೆಮ್ಮಿ ಪುಲಿ ಸಮಱುದುವು ಕಟವಾಯ ಸವಿಗಳಂ (ಅಪಂಪು. ೯-೦೬ ರಗಳೆ).

ಪೊಗರೇರು 'ಪೊಗರೇಱು' ನೋ.

ಪೊಗರೇಱು, ಪೊಗರೇರು, ಹೊಗರೇರು, ಹೊಗರೇಱ್, ಹೊಗರೇಱು (ಕ್ರಿ). ೧. ಕಾಂತಿಯಂಕ್ಕು; ಸೊಬಗು ಹೆಚ್ಚಾಗು : ಪೊಂಗುವ ಪೊಱವಾಱಿನ ಪೊಗರೇಱುವ ಪೊಂಗೊಡವೊಲೆಯ ಸೋರ್ಮುಡಿಯ ಉಂಗುರವಿಡಿನಡುವಿನ ನಿಡುಗಣ್ಣ ಲತಾಂಗಿಯರೆಸೆದರಂದಲ್ಲಿ (ಕುಶಾಸಾಂ. ೨೯-೩೫); ಆಲಿಗಳರಳ್ದುವಸು ಪಸರಿಸಿತೊಡಲೊಳಗೆಸೆದುದಾ ಲಲಿತಮುಖ ಕಾಂತಿ ಪೊಗರೇಱುತವಯವಂ (ಕೃಷ್ಣಭಾ. ೨೯-೬೬); ಪವಣಿಗೆಯೊಪ್ಪೆ ಪುರುಳು ಪೊಗರೇಱಿಯಂಗವಿಸೆಯಲಂಕಾರಗಳು (ಹರಿ. ೧-೨೬).

೨. ಹರ್ಷಗೊಳ್ಳು; ಉಬ್ಬು; ಉತ್ಸಾಹಪಡು : ಸುರರುಂ, ಕಿನ್ನರರುಂ, ನರರುಂ, ವಾನರರುಂ ಪೊಗರೇಱ ಕಳೆವರ್ಚಿದರ್ (ರಾಮಾಶ್ವ. ೦೦೪-೯). **ಪೊಗರೇರು :** ೩. ಗರ್ವವು ಹೆಚ್ಚಾಗು; ಸೊಕ್ಕು : ಈಚೀಚೆಗೆ ತುಂಬಾ ಪೊಗರೇರಿರುವುದರಿಂದಲೇ ಈತ ಹೀಗಾಡುವುದು (ಕೂಡಿ). **ಹೊಗರೇರು :** ೧. ಗಿಡಬಳ್ಳಿ ಚಿಗುರಿಡಲು ಹೊಗರೇರಿ ಹೂಬಿಡಲು ನತ್ತಿಡಲು ಮುತ್ತಿಡಲು ತುಂಬಿ ಬಹವು (ಶಾಪುರ. ೨೦-೪೦೯); ಉಡಿಗೆ ತೊಡಿಗೆಗಳಿಂದ ಹೊಗರೇರಿದ ರಾವುತನು ಅಂಗಳಕ್ಕಿಳಿಯುತ್ತಿದ್ದನು (ಪಪಚಾ. I, ೪೪೩). **ಹೊಗರೇಱ್ :** ೧. ಹೊಗರೇರ್ವ ಹೊಂಬಣ್ಣ ಮುಖದೊಳು ಮುಖವಿಟ್ಟ ಸುಗುಣಿ (ತಪಗೀ. ೦೬೯-೬೨೩). **ಹೊಗರೇಱು :** ೧. ವಿಾಱಬಾರದು ಪ್ರಾಪ್ತವಶನೆಂದವಳಿಗೆ ಮಾಱುತ್ತರಗೊಟ್ಟು ನಗುತ ನೂಱೆಲಗಣ್ಣ ರುಕ್ಮಿಣಿಗೊಡರ್ಚಿದ ಹೊಗರೇಱುವ ಗರ್ಭೋತ್ಸವವ (ಸೋಕಶ. ೯-೬೬); ಹೊಮ್ಮಿದ ಮೊಲೆ ಹೊಗರೇಱುದ ಜೌವನವೊಮ್ಮಾಱು ಜಡೆಯ ಸೊಬಗಿನ ಉಮ್ಮತ್ತೂರು ಗೌರಾಜಿ ಚಿತ್ತಿನಿ ಬಲುಸುಮ್ಮಾನ ದೊಳ್ಳೆದಿದಳು (ಕಂಪಂ. ೨೦-೬೬). ೨. ಕೇಶವನಾತ್ಮಸಂಭವಸೂನು ವೀರಾವೇಶದಿ ಹೊಗರೇಱುತಿರಲು ಆ ಸಮಯದಿ ಚಿತ್ರಲೇಖೆ ನಿರ್ಮಿಸಿದಳು ಭಾಸುರರಣಯಂತ್ರವಾಣಿಯ (ಸೋಕಶ. ೫೫-೫೬). ೪. ಉದ್ದೀಪನ ಹೊಂದು ; ಅಧಿಕವಾಗು ; ಹೆಚ್ಚಾಗು : ಮನದ ಖತಿ ಹೊಗರೇಱ್ ದುಶ್ಶಾಸನನ ಮಗನಿದಿರಾಗಿ ಖಡುಗದ ಮೊನೆಯ ಚೂರಿಸಿ . . . ತನಗೆ ಮೃತ್ಯುವ ಕರೆವವೋಲರ್ಜುನಕುಮಾರನ ಕರೆದು ಹಳಚಿದನು (ಕುಮಾರವ್ಯಾ. ೬-೫೭). [ಪೊಗರ್ + ಏಱು$_1$ (<ಏಱ್$_1$)]

ಪೊಗರೇಱ್, ಹೊಗರೇಳ್, ಹೊಗರೇಳು (ಕ್ರಿ). ೧. ಕಾಂತಿಯನ್ನು ಸೂಸು ; ತೇಜಸ್ಸನ್ನು ಬೀರು : ಸಮಸಂದಾ ಮಲಯಜ ಕುಂಕುಮ ಕಸ್ತೂರೀಜಲಾರ್ದ್ರತನುತತಿಯಿಂ ತತ್ಪ್ರಮದಾಜನಮೆಸೆದುದು ರತಿರಮಣನ ಪೊಗರೆಟ್ಟ ಕುಸುಮಶರಸಮಿತಿಯೊಲ್ (ಕುಸುಬಾ. ೩-೦೩೦). **ಹೊಗರೇಳ್ :** ೧. ಅಗುರು ಕುಂಕುಮ ಪಚ್ಚೆಗಪ್ಪುರ ಪನ್ನೀರು ಮೃಗನಾಭಿ ಮುಖ್ಯಲೇಪನದಿ ತಿಗುರನಿಕ್ಕಿದರಾಳಿಯರು ಸತ್ಕುವರಿಯ ಹೊಗರೇಳ್ವ ಹೊಂಬಣ್ಣವೆಯ್ಗೆ (ಸೋಕಶ. ೨೩-೦೨). **ಹೊಗರೇಳು :** ೧. ಮುಗಿಲ ಮುಟ್ಟುವ ಕೋಟೆಯ ತೆನೆಯೆಡೆಯೆಡೆ ಹೊಗರೆದ್ದ ದಸಿ ಮೊನೆ ಶೂಲ ಝಗಝಗಿಸುವ ಹೇರಿಟ್ಟ ಮರುಳುಗೈಗಳುಗುಳುತಿರ್ದುವು ಕೆಂಗಿಡಿಗಳ (ಕಂಪಂ. ೦೦-೩೦). ೨. ಉಬ್ಬು ; ಸಂತೋಷಪಡು : ನೆಗಹಿ ಪುಳಕಾಂಬುಗಳ ಲೋಚನ ಬಿಗಿದು ಹೊಗರೆದ್ದಾಗ ಹಿಮ್ಮಡಿಗೊಗುವ ಕೇಶದ ಬಾಲೆ ಭಾಮಿಸಿ ನೆನೆದಳಚ್ಯುತನ (ಕುಮಾಶಿ. ೬೦೩. ೦೬-೨೩); ಬಲಸಂಘಾತಭಯವನಿತ್ತು ಬಾಣವ್ರಾತವನು ಹೊದೆಗೆದಱ್ ಹೊಸ ಹೊಗರೆದ್ದನಡಿಗಡಿಗೆ (ಕುಮಾಶ. ೦೩-೨೨). ೩. ಉದ್ದೀಪನಗೊಳ್ಳು ; ಹೆಚ್ಚಾಗು : ಅಧಿಕವಾಗು : ಹೃದಯದಲಿ ಹೊಗರೆದ್ದುದುರಿ ಬಳಿಕಾ ದಶಾನನನ (ಕೊರಬಾ. ೩-೬-೦೩) ; ಬೊಬ್ಬರಿಯೆ ವೀರಧ್ವನಿಯಿಂದ. ತರುಗಿರಿ ಹಬ್ಬಿ ಮುಂಚೂಣಿ ಉರಿ ಹೊಗರೆದ್ದು ಸುತ್ತೆ (ಶಿರಾಳ್ವ. ೬೫-೩). [ಪೊಗರ್ + ಏಱ್$_1$]

ಪೊಗರೊಗು, ಹೊಗರೊಗು (ಕ್ರಿ). ೧. ಕಾಂತಿಯನ್ನು ಹೊರ ಸೂಸು,—ಚೆಲ್ಲು : ಮುಗುದೆಯೊರ್ವಳು ನೀರನೆಱೆವುತ ಪಥಿಕನ ಪೊಗರೊಗುತಿರ್ದ ಪಲ್ಲುಗಳ ಸೊಗಸುವ ದಾಡಿಮಬಿತ್ತೆಂದು ಶುಕನಿಗೆ ವಿಾಗೆ ತೋಱ್ ನಗುವರಬಲೆಯ (ಪರ್ಧಶ. ೦-೩೦) ; ಗಗನವಡರ್ದ ಸೌಧಂಗಳ ಮರೀಚಿಯಿಂ ಪೊಗರೊ[ಪಾಶಾ. ರು]ಗುವ ಪೊಚ್ಚಪೊಸ ಪೊನ್ನ ಕೋಂಟೆಗಳ ಕಾಂತಿಗಳ್ಳಿದೆ ಮುಸುಕಿಕೊಂಡೆಸೆದಿರ್ದುವರ್ಜುನನ ಕಣ್ಗೆ ಕೌತುಕವಾಗಲು (ಕೃಷ್ಣಾ. ೦೬-೬). ೨. ಹೆಚ್ಚಾಗು ; ಅಧಿಕವಾಗು : ಪೊಗರೊಗುವ ಕಟ್ಟಲೆಗೆ ಕಣ್ಗಳಂ ಮುಚ್ಚುತುಂ (ಉಧಪ. ೦೦-೦೨೬).

ಹೊಗರೊಗು : ೧. ಹೊಗರೊಗುವ ಸೂನಿಗೆಯ ಸುಮತಾಕಿಗಳ ಸಿಂಧದ ಹೊಳೆವ ಹೊಂಗಂಬುಗೆಯ . . . ಅಗಿವ ಚೀತ್ಕಾರದ ಧಡಾಳದ ವಿಗಡ ರಥಿಕರ ರಹಿಯ ರಥವಾಜಿಗಳ ನೋಡೈ ಪಾರ್ಥ (ಕುಪ್ರಾಂ. ೩-೦೯) ; ಹೊಗರೊಗುವ ದಾಡೆಗಳ ದಳ್ಳಿಸುವ ಗಡುಮೋಱ್ಯ ಕೆಂಪಡರ್ದ ವಿಾಸೆಗಳ ಕೆಂಗಣ್ಣುಗಳ ಮುಪ್ಪುರಿಗೊಂಡ ಹುಬ್ಬುಗಳ . . . ರಕ್ಕಸರನೀಕ್ಷಿಸಿ ನುಡಿದನಸುರೇಂದ್ರ (ಕೊರಬಾ. ೬-೦೩-೬). [ಪೊಗರ್ + ಒಗ್ಗು$_1$]

ಪೊಗರೊಗೆ (ಕ್ರಿ). ಕಾಂತಿಯು ಸೂಸು ; ಪ್ರಕಾಶವು ಹೊಮ್ಮು : ಕಾಮಿನಿಯ ನಿಡುಜಡೆ ರಂಜಿಸಿದುದು ಪೊಗರೊಗೆಯೆ ವಿಜೃಂಭಿಸುವಂಗಜ ನೃಪನ ಮಸೆದ ಸುರಗಿಯ ಪಾಂಗಿಂ (ಉಧಪ. ೯-೦೦೩).

[ಪೊಗರ್ + ಒಗ್ಗೆ$_1$]

ಪೊಗರ್ಗಣ್, ಹೊಗರುಗಣ್ಣು (ನಾ). ಹೊಳಪಿನಿಂದ ಕೂಡಿದ ಕಣ್ಣು : ಕಾಂತಿಯುಕ್ತವಾದ ಕಣ್ಣು : ಪೊಗರ್ಗಣ್ಗಳ ಪೊಳೆವಲರ್ಗಣ್ಗಳ ಬೆಳತಿಗೆಗಣ್ಗಳ ಬೆಳರ್ದಾಮರೆಗಣ್ಗಳ ಸೊಗಯಿಪ ಸೊರ್ಕುಂಗಣ್ಗಳ ಸುದತಿಯ ರೀಕ್ಷಿಸಿದರ್ ನೃಪನ (ಜಯಶಾ. ೦೦-೩೯). **ಹೊಗರುಗಣ್ಣು :** ಹೊಗರುಗಣ್ಣು, ನಿಗುರಿದ ಕಿವಿ ಹಗುರುಮೈಯ್ಯ ಚಿಗುರೆಯು ಎರಡೆ ದಿವಸ ಕೂಡಿ, ಬೇಡಿ ತಿಗುರಳಿದಿತು ಚಿಗುರೊಲು (ಪಾಂಡೀ. ೨೬-೦). [ಪೊಗರ್ + ಕಣ್]

ಪೊಗರ್ಗಣೆ, ಹೊಗರುಗಣೆ (ನಾ). ಕಾಂತಿಯುಕ್ತವಾದ ಬಾಣ : ಹೊಳಪಿನಿಂದ ಕೂಡಿದ ಸರಳು : ಉಬ್ಬಿದುದು ಮೈ ರೋಷದಿಂದೆ ಗಂಟಿಕ್ಕಿದುವು ಪುಬ್ಬುಗಳ್ಪಭ್ರುವಾಹುಗೆ ತೆಗೆತೆಗೆದಿಸುತೆ ಬೊಬ್ಬಱಿದನನು ಸಾಲ್ವನಂ ಮುಸುಕಿದುವು ಕೋಟಿಸಂಖ್ಯೆಯ ಪೊಗರ್ಗಣೆಗಳು (ಕೃಷ್ಣಾ. ೨೨-೦೦). **ಹೊಗರುಗಣೆ :** ಘೃತಲೇಪನದ ಬಂಧದ ಹೊಗರುಗಣೆ ಹೂಳಿದುವು ಗುರುಸುತನುಬಿನಂಬುಧಿಯ (ಕುಮಾಶ. ೩-೩). [ಪೊಗರ್ + ಕಣೆ$_1$]

ಪೊಗರ್ತೆ 'ಪೊಗಟ್ತೆ' ನೋ.

ಪೊಗರ್ತೆವಡೆ 'ಪೊಗಟ್ತೆವಡೆ' ನೋ.

ಪೊಗರ್ತೆವೆಱು 'ಪೊಗಟ್ತೆವೆಱು' ನೋ.

ಪೊಗರ್ವಟ್ಟು (ನಾ). ಕಾಂತಿಯ ವೃತ್ತ,—ಬಿಂಬ; ಶೋಭೆಯ ಮಂಡಲ: ಪೊಗರ್ವಟ್ಟನತನುಬಾಣದ ಪೊಗರಂ ನುಣ್ಪೊಗರೊಳಿಟ್ಟಿಸಿ ನೋಡಿದ ಕಣ್ಣಣ್ಣುಗುಮೆನಿಪ ನುಣ್ಪೆನಿಂದೇಂ ಸೊಗಯಿಸುವುವೊ ಬಾಹುಮೂಲಮಾ ಕಾಮಿನಿಯಾ (ಪುಷ್ಪಿಯ. ೩-೬೯); ಸಿಡಿಲ್ದುಗುತುದುವು ಪುಷ್ಪಸಾಯಕಂಗಳ ಪೊಗರ್ವಟ್ಟು ಚಂದ್ರಿಕೆಯ ಬಿಟ್ಟೆಳಮಿಂಚಿನ ತತ್ತಿ ತಾರಕಂಗಳ ಮಱೆಯೆಂಬ ವಾರಿಧರವಾರಣವೇಣುವರಾಹವೌಕ್ತಿಕಂ (ಜಾಹ. ೦೬-೨೮). [ಪೊಗರ್ + ಬಟ್ಟು]

ಪೊಗರ್ವಟ್ಟೆ (ನಾ). ಹೊಳಪಿನಿಂದ ಕೂಡಿದ ಬಟ್ಟೆ,—ವಸ್ತ್ರ : ರಾಂತಕ್ಕೆ—ಕುಳಿರ್ಗಾಳಿ, ಬೆಳರ್ಗೆಂಪು . . . ಪೊಗರ್ವಟ್ಟೆ, ಬೆಮವರ್ನಿ, ಅಲರ್ಚೆಂಪಂ, ಕದಿರ್ಚೆನ್ನಂ (ಕಪಾದ. ೪೩ ಪ್ರಯೋ); ತಳರ್ಗೆಂಪು, ಬೆಳರ್ಗೆಂಪು . . . ಪೊಗರ್ವಟ್ಟೆ (ಕಣ್ಣಾಕು. ೬೩ ಪ್ರಯೋ).

[ಪೊಗರ್ + ಪಟ್ಟೆ$_3$]

ಪೊಗರ್ವಡು (ಕ್ರಿ). ೧. ಪ್ರಕಾಶವನ್ನು ಹೊಂದು,—ಪಡೆ; ಕಾಂತಿಯುಕ್ತವಾಗು : ಸೊಗಯಿಸೆ ತೋಳ ಮೊತ್ತಮೊದಲೊಳ್ ಪೊಗರ್ವಟ್ಟೆಸೆ ಪೊಂದು ನುಣ್ಪು ಸಾವಗಿಸುವ ಮೇಲುದಂ ಮೊಲೆಗಳ್ಳಿಱಿಯುತ್ತಿರೆ . . . ಘಟ್ಟಿಮಗುಟ್ಟುವ ಘಟ್ಟವಳ್ತಿಯಂ ಭೋಂಕನೆ ಕಂಡು (ಕಂಪಶಾ. ೬-೩೯); ಅಗಲದೆ ರೇಖಾತ್ರಯದಿಂದಗಲದ ಪೊಗರ್ವಟ್ಟ ಬಂಧುರಚ್ಛವಿಯಿಂ ಕಂಬುಗಳಂ ನಗುವಂತಿರೆ ಕಂಬುಗಳಂ ಕರಮೆಸೆಗುಮಾ ವಣಿಕ್ಪತಿಸತಿಯಾ (ಸುಕುಮಾ. ೯-೬೯). ೨. ಚೆಲುವನ್ನು ಹೊಂದು : ಸೊಗಯಿಸಿ ತೋರ್ಪ

ಸೋಗೆಕೊರಲೊಳ್ ಪೊಗರ್ವಟ್ಟೆಸೆದಿರ್ಪ ಕರ್ಪು ... ಮನಂಗೊಳೆ ಚೆಲ್ವ ನಾಳ್ದುದೀ ನಗವನರಾಜಿಯೊಳ್ ಸುಟಿಯುತಿರ್ಪ ವಿಚಿತ್ರಶಿಖಂಡಿಮಂಡಲಂ (ಕಾಸ್ಕಾಪ. ೬೦೯). [ಪೊಗರ್+ಪಡು$_1$]

ಪೊಗರ್ವಡೆ (ಕ್ರಿ). ಕಾಂತಿಯುಕ್ತವಾಗು ; ಪ್ರಕಾಶಮಾನವಾಗು : ತೋರ್ಪ ಕಣಿಯಲ್ಲ ಪರುಷದ ಕಣಿಗಳಗ್ರದಿ ಪೊಗರ್ವಡೆದ ರತ್ನಂಗಳೆಯ್ದೆ ಚಿಂತಾರತ್ನಮುರ್ವಿ ಬೆಳೆದಿರ್ಪ ತರುಗಳ್ ಕಲ್ಪತರುಗಳಲ್ಲಲ್ಲಿ ಗಿರಿಸಾನುವಿಂದೆ ...ಕೈಲಾಸಪರ್ವತಂ ಕಣ್ಗೆಸೆದುದು (ಪಂಪು. ೨-೦೦) ; ಉಡುರಾಜಮಂಡಲಂ ಶಂಖವರ್ಣಂ ಪೊಗರ್ವಡೆದ ಕೌಮುದಿಯಾಗೆ ರಾತ್ರಿಲಕ್ಷ್ಮಿಯ ಭಾವಮಡಸಿ ಕಣ್ಗೆಸೆದುದು (ಪಂಠಿಪಾ. ೨-೬). [ಪೊಗರ್ + ಪಡೆ$_1$]

ಪೊಗಸು (ನಾ). ೧. ಬೆಳಗಿನ ಜಾವ ; ಮಂಜಾವ ; ಪ್ರಾತಃಕಾಲ : ನಿನ್ನ ಮೊಲಗಟ್ಟಲೆಗಾಂ ಬೆಱಗಾದೆನಿಂದು ಪೇಟೀಗಳೊ ಬಯ್ಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ (ಆದಿಪು. ೩-೬೩) ; ವಿಮಲ ಪ್ರಗುಣನುಪಶಾಂತಕಾಮಂ ಪೊಗಸಿನ ಚಂದ್ರಂಬೊಲಿರ್ದನಾ ಶ್ರೀಚಂದ್ರಂ (ಅರ್ಧಪೇ. ೯-೩೨) ; ನಸುನಗೆ ಮಿನುಗುವ ಮೊಗಮೇಕೆ ಪೊಗಸಿನ ಶಶಿಯಂತೆ ಕಲೆಗುಂದಿದುದು (ಪೇಮಿಸಂ. ೮-೭೦). ೨. ಹಗಲು : ನಿನ್ನೊಳಿರುಳುಂ ಪೊಗಸುಮೆಟ್ಟ ಪೊಗೆ ಗುಡುಗುಗಳಿನ್ ಆ ಬೇವ ಬೆಂಕೆ ಒಳಗೆನಿತಿರ್ಕುಮೆಂಬುದು ! (ಅಶ್ವತ್ಥಾ. ೩೮-೬೨೯).

ಪೊಗಳ್ 'ಪೊಗಟ್ಕ್$_1$' ನೋ.

ಪೊಗಳಿಕೆ 'ಪೊಗಟ್ಕೆ' ನೋ.

ಪೊಗಳಿಸು 'ಪೊಗಟಿಸು' ನೋ.

ಪೊಗಳು 'ಪೊಗಟ್ಕ್$_1$' ನೋ.

ಪೊಗಳ್ಕೆ 'ಪೊಗಟ್ಕೆ' ನೋ.

ಪೊಗಳ್ತೆ 'ಪೊಗಟ್ತೆ' ನೋ.

ಪೊಗಳ್ತೆವಡೆ 'ಪೊಗಟ್ತೆವಡೆ' ನೋ.

ಪೊಗಟ್ಕ್$_1$, ಪೊಗಳ್, ಪೊಗಳು, ಹೊಗಳ್, ಹೊಗಳು$_1$ (ಕ್ರಿ). ೧. ಕೊಂಡಾಡು ; ಬಣ್ಣಿಸು ; ಸ್ತುತಿಸು : "ಪೊಗಟ್ಕ್–ಸಂಸ್ತವನೇ" (ಕಪುರಾ) ; ಮಾದಕ್ಷಿಣಾಪಥಬಹುಶಶಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯಮಭರಿತೋ[ನ್ದಾನ]ಪಶುಪತಿಯೆನ್ದು ಪೊಗಟ್ಕೆಪ್ಪೊಟ್ಟಣ ಪಶುಪತಿ ನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯಸುತನ್ಗೆ (ಪ್ರಾಸಿ. ೦೯೩೬, ೧೬-೮ ; ಸು. 450) ; ಪಟಿಗೆ ಮೇಣ್ಪೊಗಟ್ಕೆ ಮೇಣ್ ನೆವಮಿಲ್ಲದೊಡಿಂತು ಕೈಗಟಿಯೆ ಬಗ್ಗಿಸುಗೆ ಮೇಣವರೆಲ್ಲರುಮಂತುಮಾನು ಟಿವೆನಲ್ಲೆಂ (ಕಪಾ. ೦-೦೩೬) ; ನೀನ್ನಿನ್ನ ನೃಪನ ದಿಗ್ವಿಜಯೋನ್ನತಿಯಂ ಪೊಗಟ್ದು ಮೂರ್ಛೆಪೋಪೈ ಪೊಗಟ್ದುಂ ನೀನ್ನಿನ್ನ ಮನದೊಳಿಂತಿದು ಬನ್ನಮನೆತ್ತುವಪೊಲಾಯ್ತು ನಿನ್ನವನಿಪನಾ (ಆದಿಪು. ೦೯-೬೬). **ಪೊಗಳ್** : ೧. ತಮ್ಮದೊಂದರ್ಕ(ಟ್ಕ)ಱಿಂದಂ ಪೊಗಳಲ್ (ಎಇ·XIII. ೩೩೦-೯; 929); ರಾಜಕುಲದೀಪಕನ ರೂಪು ಸೌಂದರ್ಯಮನೇನೆಂದು ಬಣ್ಣಿಪೆಂ ಎಂತು ಪೊಗಳ್ದಪೆಂ (ಪಂಪರ. ೯-೨೦) ; ಹದಿಬದೆಯರ ಪೆಸರ್‌ಗೊಂಡು ಪೊಗಳ್ವುದು ವಿದಿತವೈಸಲೆ ವೈದಿಕರಿಗೆ (ಹಡಿಪ. ೨-೧೫). **ಪೊಗಳು** : ೧. ಆ ಸತಿಯರೊಲಿದು ಬಲಗೊಂಡೆಱಗಿ ಪೊಗಳುತಿರ್ಪಾ ಸಮಯದೊಳು . . . ಸಿರಿ ಸರಸ್ವತಿವೆರಸಿ ಗಿರಿಜೆ ಬಿಜಯಂಗೈದಳು (ಸಿದ್ಧರಾ. ೦-೫೭) ; ಸುಜ್ಞಾನ ದಿಂದಱಿದು ಪೊಗಳತೊಡಗಿದನು ಸೌಂಪರಕುವರನು (ಸೌಂದಪು. ೫-೦೬) ; ಪರಮಪತಿವ್ರತೆಯರ ನಡತೆಯನಿಲ್ಲಿ ಪುರುಳುಗೊಳಿಸಿ ಪೊಗಳುವೆನು (ಹಡಿಪ. ೦-೯೭). **ಹೊಗಳ್** : ೧. ಹೊಗಳ್ವ ವೇದಾಳಿಗತಿಗೂಢ ಕೂಡಲಸಂಗ ಸೊಗಯಿಸುವ ಘನವೃಷಾರೂಢ ಕೂಡಲಸಂಗ (ಬಸರ. ೩-೯೩). **ಹೊಗಳು$_1$** : ೧. ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ (ಬಸಪ. ೩೮೬) ; ತೆಗೆಸು ದಳವನು ಸಾಕು ಬಱಿದೇ ಹೊಗಳುತಿಹೆ ನೀ ನಮ್ಮನು (ಕುಪ್ಕಾಪ್ರೋ. ೦೫-೯); ಅಗಣಿತವಿದ್ಯಾಧಿಕರು ಬಂದಲಸದೆ ಹೊಗಳಿದರಬುಜಾಂಬಕನ (ಪೋಹಕ. ೯-೬೦); ಹೊಗಳಿ ಮಾರಬೇಕು, ತೆಗಳಿ ಕೊಳ್ಳಬೇಕು (ಗಾದೆ). ೨. ನಿರ್ಧಾರವಾಗಿ ಹೇಳು ; ವಿವರವಾಗಿ ಹೇಳು : ಧರ್ಮಜ ಹೊಗಳು ಹೊಣೆಯನು ವಚನಿಸೊಡ್ಡವನಿದು ವಿನೋದವಲೆ ಬಗೆವಡೊಂದೇ ಹಲಗೆ ಮೇಲಣ ದುಗುಣ ಸಲ್ಲದು (ಕುಪ್ಕಾಸ. ೦೬-೯೭); ಮನೆಯನ್ನು ಎರಡನೆಯ ಭೋಗ್ಯಕ್ಕೆ ಕೊಟ್ಟಾಗ ಭೋಗ್ಯಪತ್ರದಲ್ಲಿ ಮೊದಲ ಭೋಗ್ಯವನ್ನು ಹೊಗಳಿ ಬರೆಯಬೇಕು (ರೂಢಿ).

ಪೊಗಟ್ಕೆ ಪಡು = ಹೊಗಳಿಸಿಕೊಳ್ಳು : ಸುಬ್ರಾಹ್ಮಣನಾಗಿರ್ದುಂ ಸುಬ್ರಾಹ್ಮಣರಿಂದೆ ಪೊಗಟ್ಕೆಪಟ್ಟುಂ ಮತ್ತಂ ಸುಬ್ರಾಹ್ಮಣತ್ವಮಾ ನೀಂ ನಿರ್ಬ್ರಹ್ಮಂ ಕಿಡಿಸಿ ಸವಣನಾದೈ ಮರುಳೇ (ರರ್ಮಾಪ್ರ. ೯-೬೬).

[ದೇ. ॥ ತಮಿ. ಪುಕಟ್ಕ್ ; ಮಲ. ಪುಗಟು ; ತುಳು: ಪೊಗಳು, ಪುಗಳು ; ತೆಲು. ಪೊಗಡು, ಪೊವಡು]

ಪೊಗಟ್ಕ್$_2$, ಹೊಗಳ್ಕು$_2$ (ನಾ). ಸ್ತುತಿ ; ಕೊಂಡಾಟ ; ಪ್ರಶಂಸೆ : ಱಟಕ್ಕೆ —ಪೋಟ್ಕ್, ಬೀಟ್ಕ್ . . . ನೆಗಟ್ಕ್, ಪೊಗಟ್ಕ್, ತೆಗಟ್ಕ್ (ಶಪುರ. ೯೯ ಪ್ರಯೋ). 'ಪೊಗಟುಲಿ' ಪರಾ. **ಹೊಗಳ್ಕು$_2$** : ದೂರನ್ನು ಎದುರಿಗಾಡು, ಹೊಗಳನ್ನು ಹಿಂದಾಡು (ಗಾದೆ). [< ಪೊಗಟ್ಕ್$_1$]

ಪೊಗಟಿಸು, ಪೊಗಳಿಸು, ಹೊಗಳಿಸು (ಕ್ರಿ). ಸ್ತುತಿ ಮಾಡಿಸು ; ಪ್ರಶಂಸೆ ಮಾಡಿಸು : ಮಾನಧನಾ ಪೊಗಟಿಸಲೇಂ ದಾನಿಯೆ ನೀನುಂತೆ ನಿನ್ನ ಕಸವರಮೆಂದುಂ ದೀನಾನಾಥರ ಕೆಯ್ಯದು ದಾನಿಯದೆಂತೆಂಬುದಿಂತು ಹೇತ್ವಾಕ್ಷೇಪಂ (ಕಪಾ. ೩-೦೦೫) ; ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗಟಿಸಿದಂ (ಪಂಪಭಾ. ೫-೯೯); ತುಂಬಿಯಿಂದಂ ಗಿಳಿಯಿಂದಂ ಬೀರಮಂ ಪಾಡಿಸಿ ಪೊಗಟಿಸುವಂ ಚೈತ್ರದೊಳ್ ಚೈತ್ರಮಿತ್ರಂ (ಜಗಪ. ೦೪-೯೦). **ಪೊಗಳಿಸು** : ಮನಮೊಲ್ದಾರ್ಗ್ಗೀಯನಾರಿಂ ಪೊಗಳಿಸನವನೀಮಂಡನಂ ವೀರಲಕ್ಷ್ಮೀಸ್ತನಹಾರಂ ವಾಜಿವಂಶಾಂಬರಹಿಮಕಿರಣಂ . . . ನಾಗವರ್ಮ್ಮ (ಪಾಂದೇಡ್. ೩-೦೭ ; 1047); ಶಿವನಾಜ್ಞೆಯಂ ಸಂಪಾದಿಸಲು ಪಾಲಿಸಲಖಿಳರಂ ಭೇದಿಸಲು ಲೋಕಂಗಳಂ ಪೊಗಳಿಸಲು ನೆಗಳಿಸಲು ಈ ಮಣಿಹವಾಗಿಳೆಗೆ ಬಂದ ಮಹಾಮಹಿಮ ಹರಮೂರ್ತಿ (ಬಸಪು. ೩೬-೯೨). **ಹೊಗಳಿಸು** : ಅರಸ ಕರ್ಣಚ್ಛೇದವೇ ಜಯಸಿರಿಯ ನಾಸಾಚ್ಛೇದವಿನ್ನ ರವರಿಸದಿರು ಹೊಯ್ದಾಡ ಹೊಗಳಿಸು ಬಾಹುವಿಕ್ರಮವ (ಕುಪ್ಕಾಕ. ೦-೦೬).

[ಪೊಗಟ್ಕ್$_1$ + — ಇಸು$_3$]

ಪೊಗಟುಲಿ (ನಾ). ಹೊಗಳಿಕೆಯ ಮಾತು ; ಕೊಂಡಾಟದ ನುಡಿ : ಮಗಮಗಿಸುತ್ತುಮಿರ್ಪ ನಱುಸುಯ್ಗಲರ್ವಕ್ಕಿ ಜಿನುಂಗುತಿರ್ಪಿನಂ ಬಗೆಗೊಳೆ ಬಂದು ನಿಂದು ನೆಱೆದಗ್ಗದ ನೀಱೆಯರೊಲ್ದು ಪರ್ವುವಾ ಪೊಗಟುಲಿ ಪೊಣ್ಮೆ ಬಿತ್ತರದೆ ಮುತ್ತಿನ ಸೇಸೆಯನಾಗಳಿಕ್ಕಿದರ್ (ಕಪ್ಕಾಸ. ೩೯೨). [ಪೊಗಟ್ಕ್$_2$ + ಉಲಿ$_2$]

ಪೊಗಟ್ಕೆ, ಪೊಗಳಿಕೆ, ಪೊಗಳ್ಕೆ, ಹೊಗಳಿಕೆ, ಹೊಗಳ್ಕೆ (ನಾ). ಕೊಂಡಾಟ ; ಪ್ರಶಂಸೆ : 'ಪೊಗಟ್ಕೆವೆಱು' ಪರಾ. **ಪೊಗಳಿಕೆ** : ಎನ್ನ ಜಿಹ್ವೆಗೆ ಮೊಳಗುವಂದದಿ ನಿನ್ನ ನಾಮಾವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ (ಹಂಸಾ. ೨೦) ; ಪೊಗಳಿಕೆಗೆ ಹಿಗ್ಗಲೊಲ್ಲಡೆ, ತೆಗಳಿಕೆಗೆ ಕುಗ್ಗಲಾರಡೆ, ಲತೆ ಫಲಕೆ ಸಿಗ್ಗಲೇಕೆ ? (ಗಿಳಿಪಿಂ. ೦೦೯-೯೦). **ಪೊಗಳ್ಕೆ** : ಮುನಿಗಳ ಪೊಗಳ್ಕೆಯಂಡಲೆಗೆ ಕೆಲದವನಿನಂದನೆಯ ಮೊಗನೋಡಿ ನಸುನಗುತಾ ರಘೂದ್ವಹಂ . . . ಮುಂ. ನೆರೆದ ಸಭೆಗಿಂತೆಂದನು (ಶ್ರೀರಾಪು. ೫-೯೦). **ಹೊಗಳಿಕೆ** : ಹೊಗಳಿಕೆಗೆ ಹೊಱಗಾದರೈವರು ವಿಗಡರದರೊಳಗಿಬ್ಬರಳಿದರು ಹಗೆಗಳುಳಿದಿರಿ ಮೂವರೆಂದನು ಭಾನುಸುತ ಮುಳಿದು (ಕುಪ್ಕಾಕ. ೯-೦೬) ; ನೋಟಕರು ಹೊಗಳಿಕೆಯ ಪರಿಪರಿಯ ಕೈವಾರಿಗಳು ನೆರೆದುದು ನಿಮ್ಮಯೋಧ್ಯಾನಗರದಧಿರಾಜೇಂದ್ರಚಂದ್ರಮನಶ್ವಮೇಧದಲಿ

(ತೊರರಾ. ೦-೭-೨೩). **ಹೊಗಳ್ಕೆ :** ಣೂ—ಸ್ತವನೇ, ಹೊಗಳ್ಕೆಯೊಳ್ (ಶಾಕಳ್ಯ. ೨೩೦). [ಪೊಗಟ್$_1$ + — ಕೆ]

ಪೊಗಟ್ಕೆವೆಱು (ಕ್ರಿ). ಪ್ರಶಂಸೆಯನ್ನು ಪಡೆ : ಅಂತು ಪೊಗಟ್ಕೆವೆತ್ತ ಒದ್ದಾಯನಮಹಾರಾಜಂಗೆ ಪಟ್ಟದರಸಿ ಪ್ರಭಾವತಿಯೆಂಬಳ್ (ಧರ್ಮಾಮೃ. ೯-೦೩). [ಪೊಗಟ್ಕೆ + ಪೆಱು$_1$]

ಪೊಗಟ್ತೆ, ಪೊಗರ್ತೆ, ಪೊಗಳ್ತೆ, ಹೊಗರ್ತೆ, ಹೊಗಳತೆ, ಹೊಗಳ್ತೆ (ನಾ). ಹೊಗಳಿಕೆ ; ಕೊಂಡಾಟ ; ಪ್ರಶಂಸೆ : "ಪೊಗಟ್ತೆಯೆನೆ ಕೀರ್ತನಾಖ್ಯಂ" (ಸಂಜೀವ. ೭) ; ಗುರುಗಳ ಪೊಗಟ್ತೆಗೆ ರಾಗಿಸಿ ಸಂತೋಸಂ ಬಟ್ಟಿರ್ದೊಡೆ (ಪಡ್ಯಾರಾ. ೮೨-೨೯) ; ನೆಗಟ್ತೆವೆತ್ತ ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯಗ್ಗಲದ ಪೊಗಟ್ತೆ ತನ್ನದೆನೆ ಪೆಂಪು ಮನೋಹರಿಗಲ್ಲದಕ್ಕುಮೇ (ಆದಿಪು. ೦-೭೨) ; ಇನ್ತು ಜನಂ ಪೊಗಳೆ ಪೊಗಟ್ತೆಗಂ ನೆಗರ್ತ್ತೆಗಂ ತಾನೆ ನೆಲೆಯಾಗಿ (ಎಕ. XI, ಸತ್ರದು. ೩೯-೨೩ ; 1123) ; ಜನಮನೋಹರಮಾಗಿ ಪೊಗಟ್ತೆಗೊಪ್ಪುವುಪ್ಪರಿಗೆಗಳಿಂ ನೆಗಟ್ತೆವಡೆದಿರ್ದುದು ಸೌಂದರರಾಜ ಮಂದಿರು (ದಶಕು. ೬-೨೩೬). **ಪೊಗರ್ತೆ :** ಇನ್ತಾರ್ಪೊಗರ್ತ್ತೆ(ಟ್ತೆ)ಗಡ ರ್ಪ್ಪಾದ ಮಹಾಮಹರ್ (ಎಇ. XIII, ೩೨-೯೨ ; 928) ; ಅಜ್ಞಾನ ಪೊಗರ್ತೆಯಿಂ ಶಾಸ್ತ್ರಜ್ಞ ನೃಪಾಳಿ[ಯು]ಪದೇಶಮೆಂಬುತೆ ಕರಂ ಪ್ರಾಜ್ಞಂಗೆ ಬಗೆದು ನೋಡೆ ಮನೋ[ಜ್ಞ]ಗೆ ಪ್ರಣಯಾನುರಾಗಮಂ ಪುಟ್ಟಿಸುಗುಂ (ವರ್ಧಮಾ. ೦-೦೭) ; ರೂಪಿನ ಪೊಗರ್ತೆಯುಂ ಸಹಜದ ನೆಗರ್ತೆಯುಮಂ ಕೇಳ್ದು (ಬಂಹರಿ. ೬-೩೨ ಪ). **ಪೊಗಳ್ತೆ :** ಕಾಳಗಾವುಣ್ಡನ ಮಗ ಕಲ್ಲಣ . . . ಪೊಗಳ್ತೆಗಂ ನೆಗರ್ತ್ತೆಗಂ ನೆಲೆಯಾಗಿ ಕಾದಿ (ಎಕ. VIII, ಸೂರಬ. ೯೯೩-೬ ; 975 ?) ; ಅನ್ತು ಪೊಗಳ್ತೆಗಂ ನೆಗಳ್ತೆಗಂ ಜನ್ಮಭೂಮಿಯಾಗಿ (ಎಕ. VI, ಕಡೂರು. ೬೯-೯ ; 1160) ; ತ್ರಿಲೋಕಶರಣಂ ಶರಣಾಭರಣಂ ಸಮಸ್ತಮುಕ್ತಾ ಪರಣಂ ಎಂಬ ಪೊಗಳ್ತೆಗೆ ಮಿಗಿಲೆನಿಸಿ ನೆಱೆ ಮೆಱೆವ ಶಿವನ ಪುಣ್ಯಾಗಣ್ಯ ಲಾವಣ್ಯಮಯಸುಕುಮಾರಾವಯವಂಗಳಂ ಕಂಡು (ಗಿರಿಕ. ೦೦-೬೦ ಪ). **ಹೊಗರ್ತೆ :** ಹೊಗರ್ತ್ತೆಯಂ ತಳೆದು (ಶೊಂಕಶಾ. ೦೯೩೦, ಶಾಗೇವಾಡಿ. ೦೦೯-೯೩ ; 1168). **ಹೊಗಳತೆ :** ಕೂಡಲಸಂಗಮದೇವಾ ನೀನೆನಗೊಳ್ಳಿದ ನಾದರೆ ಎನ್ನ ಹೊಗಳತೆಗಡ್ಡ ಬಾರಾ ಧರ್ಮಿ (ಬಸವ. ೩೮೬) ; ನಿಶ್ಶಬ್ದಂ ಬ್ರಹ್ಮ ಉಚ್ಚತೆ ಎಂಬ ಘನವು ಹೊಗಳತೆಗೆ ಸಿಕ್ಕುವುದೇ ಎಲೆ ಮರುಳುಗಳಿರಾ (ಅವಕಂ. ೨೩೨-೦೦೯೮). **ಹೊಗಳ್ತೆ :** "ಸ್ತವನಂ, ಸ್ತವನೀಯಂ . . . ಸ್ತುತಂ, ಸ್ತೋತವ್ಯಂ, ಈ ೭ ಹೊಗಳ್ತೆ" (ಶಾಕಳ್ಯ. ೦೬೯) ; ಹೊಗಳ್ತೆಗವಗ್ಗಳ ವೆನಿಸಿದ (ಶೊಂಕಶಾ. ೦೯೩೫, ರಾಣಿಪೆಮ್ಮಾರ್. ೨೮-೦೦ ; ?).

[ಪೊಗಟ್$_1$ + — ತೆ$_2$]

ಪೊಗಟ್ತೆವಡೆ, ಪೊಗರ್ತೆವಡೆ, ಪೊಗಳ್ತೆವಡೆ (ಕ್ರಿ). ಹೊಗಳಿಕೆಯನ್ನು ಗಳಿಸು : ಪ್ರಶಂಸೆಯನ್ನು ಹೊಂದು : ಅಂತು ಪೊಗಟ್ತೆವಡೆದಾ ಮಹಾದೇವಿಯೊಳಾ ಮಹಾನುಭಾವನೇಕಭಾವದೊಳನಂಗಸಾಮ್ರಾಜ್ಯಸುಖ ಮನನುಭವಿಸಿ (ಅಪಪು. ೨-೯೬ ಪ) ; ಮತ್ತಮೆಲ್ಲರೊಳಂ ಬಲ್ಲರೆನಿಸಿ ಎಲ್ಲಾ ನಾಡೊಳಂ ಪೊಗಟ್ತೆವಡೆದು ಮೆಲ್ನುಡಿಗರ್ ಅಱಿವರ್ (ಪಕವಂ. ೦೯೯-೦). **ಪೊಗರ್ತೆವಡೆ :** ಅಂತು ಪೊಗರ್ತ್ತೆವಡೆದ ಪ್ರಕಾಮಿ ದೇವದಂಡನಾಥ (ಇಎ. ೦೯೯೬, ಮುಂಡರಗಿಸೀಮೆ. ೩೩೫-೩೬ ; ?). **ಪೊಗಳ್ತೆವಡೆ :** ಅಂತು ಪೊಗಳ್ತೆವಡೆದೈವತ್ತೊಕ್ಕಲ್ಗಳೇಕಸ್ಥರಾಗಿಳ್ದೆರಂಬರಾಪುರದೀಶಾನದಿಗ್ವಿಭಾಗ ದೊಳ್ ತೆಲ್ಲಿಗೇಶ್ವರದೇವರ ಪ್ರತಿಷ್ಠೆಯಂ ತದ್ದೇವಾಯತನಮುಮಂ ಮಾಡಿಸಿದರ್ (ಎಇ. XX, ೦೦೬-೩೬ ; 1167) ; ಆ ಮಹೀಕಾಂತಸುತಂ ಪೊಗಳ್ತೆವಡೆದೊಪ್ಪುತ್ತಮಿರ್ದೊಂದುಶುಭದಿನದಲ್ಲಿ . . . ಪುಗುತಂದ ನಳ್ಕಱಿಂ (ರಾಪಶೇ. ೯-೦೦೦ ಪ). [ಪೊಗಟ್ತೆ + ಪಡೆ$_1$]

ಪೊಗಟ್ತೆವೆಱು, ಪೊಗರ್ತೆವೆಱು (ಕ್ರಿ). = ಪೊಗಟ್ತೆವಡೆ : ನಯಮಂ ತಾಳ್ದಿ ಪೊಗಟ್ತೆವೆತ್ತು ಭುವನಕ್ಕಾರಾಧ್ಯೆಯಾದತ್ತಿಮಬ್ಬೆಯ . . . ಭಕ್ತಿ ಕ್ರಮಕತ್ತಿಮಬ್ಬೆಯ ಗುಣಕ್ಕಾರುಂ ಸಮಂ ಪೋಲ್ವರೇ (ಅಪಪು. ೦೨-೦೩) ; ಪೊಗಟ್ತೆವೆತ್ತುವೊಪ್ಪಂಬಡೆದಯಿರುಪಗದಂಡಾಧೀಶನ ಸತ್ಕೀರ್ತಿಯೆಂತೆಂ ದೊಡೆ (ಐಮಾದ. ೦-೨೯ ಪ). **ಪೊಗರ್ತೆವೆಱು :** ಶಿಷ್ಟರಂ ಪೊರೆವ ಪೊಗರ್ತೆ ವೆತ್ತ ಬಲಿ ಭಾವಿಪೊಡೀತನೆ ತಾನೆನುತ್ತಮಿಾ ಧರೆ ಮನಮೊಲ್ದು ಬಣ್ಣಿಸುವು ದೆನ್ತು ಚಮೂಪತಿ [ಸೋ]ವಿದೇವನ (ಸೌಇಇ. XX, ೭೯-೦೫ ; 1112) ; ಇನ್ತು ಪೊಗರ್ತ್ತೆವೆತ್ತ ಸುಜನಂಗೆ ಮಹೋತ್ಸವನಾ ಬಸುತಿಮಯ್ಯಂ ತನಯಂ ಸಮಸ್ತವಿಬುಧಾಶ್ರಯನಾತನ ಧರ್ಮಪತ್ನಿ . . . ಮಾಡಿದ ಪುರಾಕ್ರಿತ ಪುಣ್ಯಮನೇಪೊಗಳ್ವುದೋ (ಸೌಇಇ. IX-i, ೨೦೦-೦೯ ; 1121).

[ಪೊಗಟ್ತೆ + ಪೆಱು$_1$]

ಪೊಗಿಲ್ಲಿ (ನಾ). ಒಬ್ಬಾತನ ಹೆಸರು : ಶ್ರೀ ಪೊಗಿಲ್ಲಿ ಸೇನ್ದ್ರಕಮಹಾ ರಾಜರ್ ನಾಯರ್ಖಣ್ಡಮುಂ ಜೆಡುಗೂರಾಳ್ಗೆಯಾನಾಳುತ್ತು (ಇಆ. XIX, ೦೯೯-೩ ; ಸು. 680). [?]

ಪೊಗಿಸು, ಪುಗಿಯಿಸು, ಪುಗಿಸು, ಹುಗಿಸು$_1$, ಹೊಗಿಸು (ಕ್ರಿ). ೧. ಹೊಗಂವಂತೆ ಮಾಡು ; ಪ್ರವೇಶಗೊಳಿಸು ; ಒಳಹೊಗಿಸು : ಈ ಬ್ರಹ್ಮೇತಿಕಾಱನನಾರ್ ಪೊಗಿಸಿದರಾರ್ ತಂದರ್ (ಪಂಪರ. ೬-೩೩) ; ಹಗೆಯ ಹೆಂಗಳನರಮನೆಗಳೊಳು ಪೊಗಿಸಲಾಗದು (ಕುಪ್ಯಾಅ. ೬-೩೫) ; ಉರಿಗಳೊಳ್ ಪೊಗಿಸುತುಂ ದರಿಗಳೊಳ್ ನೂಂಕುತುಂ (ಶಿಪಿಪು. ೩೬-೨೬). **ಪುಗಿಯಿಸು :** ೨. ಒಳಗಿರಿಸು ; ಒಳಗಿಡು : ವಿಪಣಿವೀಧಿಯೊಳ್ ಮಾಲೆಗಾರ್ತಿಯ ರೆತ್ತಿದ ಬೆಲೆವೂವಿನ ಸರಂಗಳನಲರಂಬಂಗೆ ಪೊದೆಗೆದಱುವಂತೆ ಕೆದಱಿ ಪರಿಮಳ ಭಂಗಭಯಮನವಳ್ದಿರೊಳ್ ತಗುಳ್ಚಿ ಪಡಲಗೆಯಂ ಮಗುಟೆ ಪುಗಿಯಿಸಿ ಯುಂ (ಕಂಪ್ರಪು. ೬-೯ ಪ). **ಪುಗಿಸು :** ೧. ಸಮಾಧಿ ಇಲ್ಲಾದೆಱೆ ಪೊನ್ನೆತ್ತಿಕೊಳೆ ಕೊಟ್ಟ ಒಕ್ಕಲ್ಗೆ ಪೊನ್ವಿಟ್ಟು ಪುಗಿಸಿದಾರ್ (ಎಕ. XIV, ತಿರುಮ. ೨೩೩-೩ ; ಸು. 800) ; ವಿಷಧಿಗಳೊಳಗೊಯ್ದರ್ದುವ ವಿಷಮರಣಾಂ ಗಣಮನಿರದೆ ಪುಗಿಸುವ . . . ವಿಷಯಸುಖಂಗಳೊಳೆ ತೊಡರ್ದು ಬಿರ್ದ ಪುದು ಜಗಂ (ಆದಿಪು. ೦೯-೦೨೯) ; ಹುಟ್ಟಿದುದೆಲ್ಲಿ ನೀನುಱೆ ಬೆಳೆದುದು ಬಿಳ್ಳಿವೆಟ್ಟ ನೋಡಬಲೆ ಮತ್ತೆಮ್ಮ ಪಟ್ಟಣದೊಳು ಪುಗಿಸಿತು ಪುಣ್ಯ (ಭರತ. ೩೩-೦೨೯). ೨. ಎಡದಡಿಯಂ ಪುಗಿಸುವ ಬಲದಡಿಯಂ ಪೊಱಗಿಡುವ ದುಡೆಯಂ ನಿಟ್ಕುವ . . . ಬೆಡಂಗು ರಂಜಿಸಿತು ಭೀಮ ದುರ್ಯೋಧನರಾ (ಗದಾಯು. ೮-೬). ೩. ಪ್ರವೇಶಕ್ಕೆ ಅನುಮತಿ ಯನ್ನು ಕೊಡು : ಅರಸಾಡಿದಂತೆ ನೀನಾಗಿರೆ ನಿನ್ನಂ ತಂದೆಯೆಂತು ಮನೆಯಂ ಪುಗಿಪಂ (ಶಾಕುಂತ. ೭೨-೦೨೬). ೪. ಮುಟ್ಟಿಸು ; ತಲಪಿಸು : ನೀಂ ಪತ್ರಲೇಖೆಯನೊಡಗೊಂಡು ಪೋಗಿ ಕಟಕಮಂ ಪುಗಿಸು (ಕಾದಂಕಾ. ೩೨೯). ೫. ಒಂದುಗೂಡಿಸು ; ಸೇರಿಸು : ಕಥಕಶ್ರೇಣಿಯೊಡನೆಳಸಿ ಬಳಸುವ ನಾಣಲಿಗಳನೀ ಬುಧಾಳಿಯೊಳ್ ಪುಗಿಸುವುದೇ (ಸುಕುಮಾ. ೨-೨೯). ೬. ಹೊಂದಿಸು ; ಅನ್ವಯಿಸು : ವಿಪುಳಯಶೋವಿತಾನಗುಣಮಿಲ್ಲದನಂ ಪ್ರಭು ಮಾಡಿ ಪೂರ್ವಭೂಮಿಪರ ಪದಂಗಳಂ ಪುಗಿಸಿ ಪೋಲಿಪೊಡಿ:ತನು ದಾತ್ತ ಪೂರ್ವಭೂಮಿಪರನೊಳ್ಳಿನೊಳ್ ತಗುಳೆವಂದೊಡೆಯಾ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ತಿಯಾದುದು ಗುಣಾರ್ಣವಭೂಭುಜನಂ ಕಿರೀಟಿ ಯೊಳ್ (ಪಂಪಭಾ. ೦-೦೯). **ಹುಗಿಸು$_1$:** ೧. ಹುಗಿಸಿದೆನೆ ಮನೆಗಿತರ ಪಾಕವನುಗಿಸಿದೆನೆ ಲಿಂಗಪ್ರಸಾದವನಗಲಿಸಿದೆನೇ ಕಲಹವಂ ಮಾಡಿಷ್ಟಶಿಷ್ಟ ರನು (ಬಸಪು. ೯೩-೦೯) ; ನಳಿನನಾಭನು ನಗುತ ಪರಮಂಡಲದ ಶಿಷ್ಟನು ಬರಲಿಯೆನೆ ಜಾಗಿಲಲಿ ಕೈದುವ ಕೊಂಡು ಹು[ಪಾಕಾಂ. ಹೊ]ಗಿಸಿದರಂದು ಸಂಜಯನ (ಕುಪ್ಯಾಲಾ. ೨-೨೯) ; ಒಳವುಗಿಸೆನೆ ಹುಗಿಸಿದಳಾ ಸ್ತ್ರೀ ಸಭೆಯಂ ಭರದಿಂದ (ಜಯಕಾ. ೨-೨೦). **ಹೊಗಿಸು :** ೧. ಅಧ್ವಶ್ರಮದ ಧಗೆ ಪರಿಹರಿಸೆ ನೀರೊಳು ಹೊಗಿಸಿದನು ಹರಿ ಹಯಚತುಷ್ಟಯವ (ಕುಪ್ಯಾಕ್ರೋ. ೦೦-೩೯) ; ಬಲುರ್ಝಳದ ರ್ಝಾಡಿಯನಟ್ಟಿದನು ದೆಸೆದೆಸೆಗೆ ಧಾವಿಸುವ

ನೆಳಲು ಹೊಗಿಸಿದನೆಲ್ಲರನು (ಶಿಭಾಗ. ೦೦ ೦೬-೨). ೩. ಸುರರ ಮೆಚ್ಚದ ರಾಮ ನೀತನ ಕರೆದು ಗರುಡಿಯ ಹೊಗಿಸಿದನು (ಕುಪ್ಯಾಕ. ೬-೨) ; ಗತಸೂನು ವಿವನೆಂದೆನ್ನ ಹೊಗಿಸರು ಸ್ವರ್ಗವನು ಸುರರು (ಕೂರರಾ. ೦-೪-೪). ೪. ತುರಗವರಸನ ಕೊಂಡು ಮಂದರಗಿರಿಯ ಹೊಗಿಸಿತು (ಸಂಭವ. ೩-೦೬).

ಪುಗಿಸಿಕೊಳ್ = ಸೇರಿಸಿಕೊಳ್ಳು : ಶರೀರದೊಳ್ ಪುಗಿಸಿಕೊಂಡವನೆಂಬಿನ ವಾದಮುಪ್ಪುತುಂ . . . ಕಾಲ್ಗಳಂ ನೆತ್ತಿಯಲಿಟ್ಟುಕೊಂಡಟುತಮಿರ್ದಂ (ಕಾದಂಬಾ. ೭೦೬). [ಪೊಗು + — ಇಸು$_3$]

ಪೊಗು, ಪುಗು, ಹುಗು, ಹೊಗು (ಕ್ರಿ). ಪೊಕ್ಕ$_1$, ಹೊಕ್ಕ (ಭೂತಕೃ). ಪೊಕ್ಕು$_1$, ಹೊಕ್ಕು$_1$ (ಭೂತನ್ಯೂ). ೧. ಒಳಸೇರು ; ಪ್ರವೇಶಿಸು : ಶ್ವೇತ್ರವಾಹನನ್ ಉದಯಪುರಮಾನ್ ಪೊಗುವಲ್ಲಿ ಎಱಿದು ಶ್ವ(ಸ್ವ)ರ್ಗ್ಗ(ರ್ಗ್ಗಾ)ಲಯಕ್ಕೇಱಿ[ದೊನ್] (ಎಇ. IX, ೦೯-೧೪; ಸು. 800) ; ಅಯೋಧ್ಯೆಯನಿದು ಪೊ[ಪಾಶಾಂ. ಪು]ಗದೆ ತಱುಂಬಿ ನಿಂದ ಕಾರಣಮೇನೋ (ಅದಿಪು. ೦೪-೭) ; ತನುವೆರಸಿ ಎಂತು ಪೊಗುವೆಂ ದೇವ ನಿಮ್ಮೊಳಗೆ (ಪಾಗೀರ. ದೇ. ೨೭೬-೦೯) ; ತನ್ನಾಲಯಕೆ ತಿಂಗಳ ದಿನ ಸವೆಯೆ ಪೊಗಲು (ಸಂಭವ. ೨೫-೨೬). **ಪುಗು** : ೧. "ಪುಗು-ಪ್ರವೇಶೇ" (ಕಪುಧಾ) ; ಶ್ರೀದಾಸಿ ಅಮ್ಮನ್ ಕಣ್ಣಿಯೊಳ್ಪನ್ನೊರ್ಬ್ಬರನೆಱಿದು ಸ್ವರ್ಗ್ಗಿ ಆದನ್ ಭೂತಲದೊಳೆಲ್ಲಿಯು ಸ್ವೋನ್ನತೆ ಪುಗೆ (ಪ್ಯುಆರಿ. ೦೯೩೯. ೨೩-೦೪ ; ಸು. 740) ; ಎನ್ನ ಜಾತ್ರೆ ಸಮೆವನ್ನೆಗಂ ನೀಮಿಾ ಪೊಟಲಂ ಪುಗದಿರಿಂ (ಪಡ್ಡಾರಾ. ೦೩೪-೦೪) ; ಮಿಗುವವಧಿ ಬುಧರಱಿಯೆ ನಿನ್ನಿನ ಹಗಲು ನಿನ್ನದು ಪಾಂಡು ತನಯರು ಪು[ಪಾಶಾಂ. ಹೊ]ಗುವೊಡಿಂದಿನ ದಿವಸವವರದು ಕಂದ (ಕುಪ್ಯಾಪಿ. ೭-೨೨) ; ಸೀತೆ ಬೆಂಕಿಯ ಪುಗೆ ಶೀತಳಮಾದುದು (ಹದಿಪ. ೨-೪೭). ೨. ಮುಟ್ಟು ; ಸ್ಪರ್ಶಿಸು : ಅಳಿಯೆಱಗದನಿಲನಲುಗದ ರವಿಕರಂ ಪುಗವ . . . ಇರವಂತಿಯಿರೆ ಕಂಡು (ಪುಷ್ಪರ. ಹ. ೫೨೩-೨೩). **ಹುಗು** : ೧. ಇದಿರಾಗಿ ಕಾದದೋಡುವರೆನೆ ದೇವತಾಭವನವಂ ವನವಂ ಹುಗುವಂತು ಮಾಡುವಂ . . . ರಾಯಮುರಾರಿ ಭೂಭುಜಂ (ಕೊಲ್ಹಾಶಾ. ೯-೩೫ ; 1147); ಎನ್ನ ಭಕ್ತಿದ್ವಾರವನು ಹುಗದನ್ಯಮಾರ್ಗದಲಿ . . . ನನ್ನನಱಿವುದು ಹುಸಿ ಕಣಾ (ಪ್ರಭುಲೀ. ೦೬-೫). ೨. ಕಲಿ ಹುಗದ ಹೆಸರಿಂಗದೋಜೆ ಕೊರಗದ ದರ್ಪವುಗದ ಬಗೆ ಹುಸಿ ಹುಗದ ನುಡಿ (ಹಸಕಾ. ೦-೪೯). **ಹೊಗು** : ೧. ಮಾಚಮ[ನಾ] ಊರಱಿವಿನೊಳೆ ಹೊಗೆನೆನ್ದು . . . ಸಿಂಗಮದೇವ ಯೆಱಿಮ್ಮನ ಮಗ ಪಡಿಗನೊಂಬಾ ದಣ್ಡನೊಳ್ಕಾದಿ ಸತ್ತಾನ್ (ಸೌಇಇ. IX-i. ೬೦-೧೩ ; 981); ಬಗಿದು ಹೊಗುವೆನು ನಾ ನಿಮ್ಮ ಮನವನು (ಬಸವ. ೪೬೬); ಅಕಟಿನ್ನೆಲ್ಲಿ ಹೊಗುವೈ ಕಂದ ಕುಂತಿಯ ಜಠರವಲ್ಪವಲೇ (ಕುಪ್ಯಾಪ್ರೋ. ೨-೪೭) ; ಅಜವಿಂಡ ಹೊಕ್ಕ ಹೆಬ್ಬುಲಿಯಂತೆ ಸೊಕ್ಕಿದ ಗಜವಿಂಡ ಸಿಂಹ ಹೊಕ್ಕಂತೆ ... ಕುಜನರ ಕುಟ್ಟಿ ಹಾಯ್ಕಿದನು (ಶೋಹತ. ೩೫-೨೦). ೨. ಆನು ಗುರುವಾಜ್ಞೆಯಂ ಮೀಱಿದುದಱಿಂದೆನಗೆ ಹಾನಿ ಹೊಗದಿರದು (ಹಸಕಾ. ೬-೪೭) ; ನಿಂದೆ ಹೊದ್ದದು ನಡೆವಳಿಗಳಲಿ ಕುಂದು ಹೊಗ[ಪಾಶಾಂ. ಱ]ದು (ಕೂರರಾ. ೦-೩-೨೬). ೩. ಮೇಲೆ ಬೀಳು ; ಆಕ್ರಮಿಸು : ಉಱುಬಿ ಹೊಕ್ಕನು ದ್ರೋಣ ಪರಬಲವ (ಕುಪ್ಯಾಪ್ರೋ. ೧-೫೩) ; ಮಂದಮತಿ ಸುತ ಹೊಲ್ಲ ಹಂದೆಯನು ನಂಬಿ ಹೊಗ ಹೊಲ್ಲ (ಸರ್ವಜ್ಞ. ೬೯೯). ೪. ಸೇರು ; ಕೂಡಿಕೊಳ್ಳು : ಅತ್ತಡೇನಹುವೆಲೆಗೆ ತೊತ್ತಿರ ಹಿಂಡ ಹೊಗು (ಕುಪ್ಯಾಸ. ೦೪-೭೯).

ಪೊಗುಪೊಗು, ಹುಗುಹುಗು, ಹೊಗುಹೊಗು (ದ್ವಿರುಕ್ತಿ) : ಅಕ್ಕಱಿಂ ಬಾಲೇಂದುಧರನೊಳು ಪೊಕ್ಕುಪೊಕ್ಕಲರ್ದಲರ್ದು ಕೂಡುತ ಸೊಕ್ಕಿ ತಲ್ಲಿಂಗದೊಳಗಿಂತು ವಿಲೀನನಾಗಿರ್ದು (ಬಸಪು. ೩೫-೪) ; ರಕ್ಷಿಸುವೆನೊಲ ವುಣ್ಮೆಯಿನಿತು ಮನಕ್ಷತಂಗೊಳಲೇಕೆಯೆನ್ನಯ ವಕ್ಷಮಂ ತೆಱಿದಪೆನು ಹುಗು ಹುಗು (ಬಸಪು. ೫೩-೪೮) ; ಹೊಗುಹೊಗುತ ಹೊರಬರುವ ಮಾನುಷ್ಯ ವಾಹಿನಿಯ ಕಲ್ಲೋಲಲೀಲೆಯೊಳು ದಿಟ್ಟಿ ಸಲಿಸಿ (ಪುಲಿದೇ. ೪೬-೫). **ಪೊಕ್ಕಿಲ್, ಹೊಕ್ಕಿಲ್ = ಹೆಣ್ಣು ಮದುವೆಯಾಗಿ ಸೇರುವ ಮನೆ** ; ಅತ್ತೆಯ ಮನೆ : ತವರುಂ ಪೊಕ್ಕಿಲುಮಾಗಿ ಮದ್ಗೃಹಮಿವಳ್ಗೆ (ಅರ್ಧಪೇ. ೬-೦೯); ಅವರ್ಗೆ ತಾಯ್ವನೆಯವರ್ಗೆ ತವರ್ಮನೆಯವರ್ಗೆ ಹೊಕ್ಕಿಲ ಮನೆಯು ಮೇಳುಂ ಗವಿಯ ಬೆಳಗುವನೆಯ್ದೆ ರಕ್ಷಿಪ್ಪರಮನೆಯು ತಾನೆ (ಸಾಪಂಸ. ೯-೦೨). **ಪೊಕ್ಕಿಱಿ, ಹೊಕ್ಕಿರಿ, ಹೊಕ್ಕಿಱಿ** — ೧. ಆಕ್ರಮಿಸಿ ಯುದ್ಧ ಮಾಡು : ಆಣಿಚಿಲ್ವನಣುಮಪರಾಕ್ರಮನ್ವೀರಮಹಾಮೇರು ಪೊಕ್ಕಿಱಿ ಪೊರದೊಗರಾಜನ್ . . . ನಾಯಕರುಳ್ತಳ್ತಿಱಿದೋಡಿಸಿ ಬಿಟ್ಟನ್ (ಎಕ. X, ಶ್ರೀಪಿಪಾ. ೬-೫ ; ಸು. 780) ; ಪುರುಷಮಂ ಸಮಕಟ್ಟುವಮಪ್ಪೊಡೆ ಪೊಕ್ಕಿಱಿಯಲಣ್ಮುವರಿಲ್ಲ (ಪಂಪಭಾ. ೬-೬೬ ಪ) ; ನಿಶ್ಶಂಕೆಯಲಿ ಹೊಕ್ಕಿಱಿದು ಬಹ ಸತ್ವಾತಿಶಯ ಬೇಹುದು ರಣಾಗ್ರದಲಿ (ಕುಪ್ಯಾಕ. ೦೬-೩೩). ೨. ಆಕ್ರಮಿಸಿ ಚುಚ್ಚು,-ತಿವಿ : ಎಕ್ಕಲನ ಹೊಕ್ಕಿರಿದು ಕರಡಿ ಬಾಯ್ದೆರೆಯೆ ಮುಸುಡಂ ಮುರಿಯಲಿಕ್ಕಿ (ಪಪಪೋ. ೦೬-೨೩) ; ಹೊಳೆವ ಕಣೆ ಹೊಕ್ಕಿಱಿದ ದಾರಿಯೊಳುಳಿದ ಕಣೆ ದಾಂಟಿದವು (ಕುಪ್ಯಾಕ. ೦೪-೦೯). **ಹೊಕ್ಕ ಅಮಾವಾಸ್ಯೆ, ಹೊಕ್ಕಮಾಸೆ** = "ಮಧ್ಯಾಹ್ನದ ಮೇಲೆ ಬಂದು ಮಾರನೆ ದಿನವಿರುವ ಅಮಾವಾಸ್ಯೆ ತಿಥಿಯ ಪೂರ್ವಭಾಗ" (ಅಪಂಶಾ). **ಹೊಕ್ಕು ತುಂಬುವ ಬಾವಿ** = ಇಳಿದು ನೀರು ತುಂಬಿಕೊಳ್ಳಬಹುದಾದಂತಹ ಬಾವಿ ; ಮೆಟ್ಟಲುಗಳಿರುವ ಬಾವಿ ; ನಡೆಬಾವಿ ; ಕಲ್ಯಾಣಿ : ಲಕ್ಕುಂಡಿಯಲ್ಲಿ ಗುಡಿಗಳಂತೆ ಹಲವು ದೊಡ್ಡ ದೊಡ್ಡ ಹೊಕ್ಕು ತುಂಬುವ ಬಾವಿಗಳಿರುತ್ತವೆ (ಕಭಾಗ. ೪೭೮) ; ಅಕ್ಕತಂಗಿಯರ ಬಾವಿಯೆಂಬ ದೊಡ್ಡ ಹೊಕ್ಕು ತುಂಬುವ ಬಾವಿಯನ್ನು ಇಬ್ಬರು ಪಾತರದವರಾವ ಅಕ್ಕತಂಗಿಯರು ಕಟ್ಟಿಸಿದರು (ಕಭಾಗ. ೫೦೯).

[ದೇ. ॥ ತಮಿ. ಮಲ. ಪುಕು; ತುಳು. ಪೊಗ್ಗು]

ಪೊಗುಂಡಿ (ನಾ). ಒಂದು ಸ್ಥಳದ ಹೆಸರು : ಕುಕ್ಕನರೆನಾಡ್ × × × ಜತ್ತ ತಳವಾರ ಪೊಗುಣ್ಡಿ ಕಾಳೆಗದುಳ ಎಱಿದು ಸತ್ತ (ಎಕ. IX. ಪಂಪುಂ. ೩೪-೪; ಸು. 750 ?). [?]

ಪೊಗುತರ್, ಪುಗುತರ್, ಹೊಗುತರು (ಕ್ರಿ). ಒಳಹೊಗು; ಪ್ರವೇಶಿಸು: ಚಪ್ಪರದ ಬಾಗಿಲ್ಗೆ ಬಂದೊಡವರ್ ಪೊಗಲೀಯದಿರ್ದೊಡೆ ಅವಂದಿರಱಿಯದಂತೆ ಪೊಗುತಪ್ಪಾಗಳು (ಪಂಜರ. ೬-೩೦). **ಪುಗುತರ್** : ಆಳುವೇನ್ದ್ರ . . . [ಉ]ದ[ಯಾ]ಪುರಮನ್ ಪುಗುತಪ್ಪಲ್ಲಿ . . . ಅಱಿದು ಸುರಲೋಕಕ್ಕೆ ಏಱಿದನ್ (ಎಇ. IX. ೨೦-೫; ಸು. 800) ; ಸಂಗರಾರ್ಜುನಂ ಸಿದ್ಧನಂತಾ ಸಿದ್ಧಕ್ಷೇತ್ರಮಂ ಪುಗುತಂದಂ(ಕಾಪ್ಯಸಾ. ೫೨೯ ಶೂದ್ರಕ) ; ಸಂಚಿತ ಪುಣ್ಯರ್ ಪಾಂಚಾಲದೇಶಮಂ ಪುಗುತಂದರ್ (ಪಂಪಭಾ. ೩-೩೬) ; ಆ ಗೃಹಮಂ ಪುಗುತಂದನಚ್ಯುತಂ (ಜಗವಿ. ೦೦-೦೩೧). **ಹೊಗುತರು** ; ಹೊಳಲ ಹೊಗುತರುತಮಮ ಕಂಡನು . . . ನಿಜಧಾಮದಲಿ ಮುಕ್ಕುಳಿಸಿದಮಳಪ್ರಭೆಯಿದೇನೆಂದು ಬೆಱಗಾದ (ಪಿಭಾಗ. ೬-೨೦-೨೬). [ಪೊಗು + ತರ್]

ಪೊಗುತೆ, ಪುಗುತೆ, ಹುಗುತೆ, ಹೊಗುತೆ (ನಾ). ಹೊಗುವಿಕೆ ; ಪ್ರವೇಶ : ಬಗೆ ಭಾವ ಧಾತು ಮಾತುಗಳಿಂವು ಸೊಂಪಿನ ಪೊಗಿ[ಗು]ತೆಯನೆಳ್ಳನಿತನಱಿಯೆ ಅಗಣಿತಮತಿಗಳಾವವರೀ ಕೃತಿಯನು ಮಿಗೆ ತಿರ್ದಿ ಬಣ್ಣವಿಡುವದು (ಅಂಜತ. ೦-೦೦೬). **ಪುಗುತೆ** : ಪೊಗಟ್ತೆ, ನೆಗಟ್ತೆ, ಪುಗುತೆ (ಕಪುದ. ೨೦೦ ಪ್ರಯೋ) ; ಪುಗುತೆ, ಪುಗುತೆಗಳ್ ; ಮಿಗುತೆ, ಮಿಗುತೆಗಳ್ (ಕಬ್ಬಾನು. ೫೬೦ ಪ್ರಯೋ). **ಹುಗುತೆ** : ಕವಿಯ ಹುಗು[ಪಾಶಾಂ. ಗ]ತೆ ಗಮಕಿಯ ಸಂಚ ವಾದಿಯ ಚೊಕ್ಕೆಹ ವಾಗ್ಮಿಯ ಚೇತನ ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು (ಡಪೊಪ್ಮು. ಕ. ೨೩೦-೪೯). **ಹೊಗುತೆ** : ಕಾರುಕನ ಹೃದಯದ ಕಪಟ ಕಣಿಲೆಂದು ಕೈಯ ಕಲ್ಲು ತನು ಕಟ್ಟಳಿಹೀನನ ಹೊಗುತೆ ಸೈರಣೆಯವಳೊಳುಪಿನ ಮಾತು ಇವು ಸಾರದ ಪ್ರಸ್ಥದಂತೆ

(ಸಗಪೂ. ೪. ೬೨೪-೭೯); ತೆಗೆದು ಗಳಹತ್ತದಲಿ ಕೊರಳನು ಬಿಗಿಯೆ ಬಿಡಿಸುವ ತೋರಹತ್ತದ ಹೊಗುತೆಯನು ವಂಚಿಸುವ . . . ಬಿನ್ನಾಣದಲಿ ಹೆಣಗಿದರು (ಕುಮಾ.ಸ. ೦೯-೯೩). [ಪೊಗು + — ತ್ರೆ]

ಪೊಗುಲೂರ್ (ನಾ). ಒಂದು ಊರಿನ ಹೆಸರು : ಪೊಗುಲೂರ ವಾಸ್ತವ್ಯಸ್ಯ ಭಾರಧ್ವಾಜಸಗೋತ್ರಸ್ಯ ಭಾರಧ್ವಾಜಸೂತ್ರಸ್ಯ (ಇಆ. XIII. ೦೩೬-೦೯; ಸು. 660). [? + ಊರ್]

ಪೊಗೆ$_1$, **ಹೊಗೆ**$_1$ (ಕ್ರಿ). ೧. ಹೊಗೆಯನ್ನು ಕಾರು ; ಧೂಮವನ್ನು ಉಗುಳು ; ತ್ರಿಪುರಂಬೊತ್ತಿಸಿದಂತೆ ಪೊತ್ತಿ ಪೊಗೆದತ್ತೆತ್ತಂ ವಿಯನ್ಮಂಡಳಂ (ಪಂಪಭಾ. ೦೦-೦೭) ; ಆ ಪುಲ್ಲು ಪೊತ್ತಿ ಪೊಗೆದುರಿದು ಮಂದುರಮಂ ಪೊತ್ತಿದೊಡೆ (ಪಂಪಕಂ. ೭೭೯-೦೨) ; ಪೊಗೆದುದು ಪೊತ್ತಿದತ್ತು . . . ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣಾರಿ ಹಂಪೆಯಾಳ್ದನಾ (ಗಿಕಿ. ೯-೯೭) ; ಧಗಧಗತ್ಕಾರದಿಂದಂ ಧರಣಿಮಂಡಲಂ ಪೊಗೆವುತಿರ್ದುದು ಸಮುದ್ರಂ ಕುದಿದು ತಳಮಳಲನುಗುಳುತಿರ್ದುದು (ಕಂಪಭಾ. ೪೦-೨೦). ೨. (ಪರಿಮಳವುಳ್ಳ) ಹೊಗೆ ಆಡಿಸು ; ಹೊಗೆಕೊಡು : ಮುಡಿಯಂ ಗುಗ್ಗುಳದಿಂ ಪೊಗೆದಾಱಿಸಿ ಪೂವಂ ಸೂಡಿ . . . ಪೊಂದೊಡವುಗಳಿಂ ಪಸದನಂಗೊಂಡು ಮೊಂಬಱಯಿಗೆಯನ ಕುಲದೇವಿಯರೆನೆ ಕಣ್ಗೊಂಬಾದರ್ (ರಾಮಾಶ್ವ. ೦೨೪-೯). ೩. (ಆಲಂ) . (ಬಿಸಿಲಿನಿಂದ) ಕಡಿಕಾಗು ; ಸೀಯು : ಪೊಗೆದುದು ಸಸ್ಯಾನೀಕಂ ಮೃಗತೃಷ್ಣಾಂಬುವಿನ ವೀಚಿ ಪೊಂಗಿದುದಿರದಂದುಗುಟ್ಟುದು ಕೆಂಗಿಡಿಯಂ ಬೇಸಿಗೆ ಬಿಸಿಪೊಯ್ಲ ನರ್ಕಮಂಗಿಗಣಮಾಗಳ್ (ಅಂಧಕ. ೯-೬೩). ೪. ಕಪ್ಪಾಗು : ಮನೆಮನೆದಪ್ಪದೆ ನೆಗೆದುದು ತನಿಗಿರ್ಚಿನೆ ದಹನವಿದ್ಯೆಯಿಂ ಸುಟ್ಟಂ ಪಾವನಿ ಲಂಕೆಯನಸುರಾಧೀಶನ ಮನಮುರಿವನ್ನಮಾನನಂ ಪೊಗೆವನ್ನಂ (ಪಂರಾಪಾ. ೦೦-೦೪೪). ೫. ದುಃಖಿಸು ; ಪರಿತಪಿಸು ; ಮರುಗು : ಅನಿವಿರಿದು ದುಃಖದೊಳ್ ನಮೆದು ನಾರುಗಿದು ಪೊಗೆದು ಸತ್ತಲ್ಲಿ ನಿಷಾದನ ಮನೆಯೊಳ್ಬೆಣ್ಣಾಯಾಯ್ತು (ಸುಳುಪಾ. ೫-೦೯); ಸುಯ್ ಬಿಸಿಯುವಾದುವಿದೇಕೆ ಕದಂಪು ಕೆಂಪನಾಳ್ದುಗುಟ್ಟುವುದೇಕೆ ಗಗ್ಗರಿಕೆಯುಗ್ಗಳವಾದುದಿದೇಕೆ ನೀಂ ಕರಂ ಪೊಗೆದಪೆಯೇಕೆ ಪೇಳ್ಬೆನಗೆ ಪಂಕಜಪತ್ರವಿಶಾಲಲೋಚನೇ (ಅರ್ಧನೇ. ೭-೦೯). **ಹೊಗೆ**$_1$: ೧. ಗುಂಡು ಬಿದ್ದೊಡೆ ಹೊತ್ತಿ ಹೊಗೆದು ದಳ್ಳುರಿ ಮಸಗೆ (ಸಿಕ್ಕಣಾ. ೬-೨೨) ; ತೋರಣದಲುರಿ ತಳಿತು ರಾಜದ್ವಾರ ಹೊಗೆದುದು (ಕುಮಾ.ಸ. ೦೫-೯೨) ; ಹೊಗೆದು ದಾನನವಕ್ಷಿ ಕಿಡಿಗಳನುಗುಳಿದವು ಹೊಗೆ ಸುತ್ತಿ ಕುಡಿಮಾಸೆಗಳು ಕೊಱಿದವಂಗ ಕಾಹೇಱಿದುದು ಕಡುಹಿನಲಿ (ಹರಿಹರಾ. ೨-೩-೯). ೬. ಸುಡು ; ದಹಿಸು : ವಿಗಡರುದ್ರನು ಲೋಚನಾಗ್ನಿಯೊಳೊಗುವಿಗೆಯ ಕೋಪದಲಿ ಕಾಮನ ಮಿಗೆ ದಹಿಸಿದಂದದಲಿ ರಿಪು ಕುಂತೀಕುಮಾರಕರ ಹೊಗೆದು ಕಳೆ ಲಾಕ್ಷಾಭವನದಲಿ (ಕುಮಾ.ಸ. ೬-೩೦). ೭. ಪ್ರಚಂಡವಾಗು ; ಪ್ರಜ್ವಲಿಸು : ವಿರಹಾಗ್ನಿಯೆತ್ತಿ ಮನಂ ಪೊತ್ತಿ ಬುದ್ಧಿ ಕವರ್ದು ಅಹಂಕಾರಂ ಹೊಗೆದು ಚಿತ್ತಂ ಬೆಂದು ಹರಣಮುರಿದು . . . ಭೋಗದ ವಿಯೋಗಿಯೆನಿಸಿರ್ದ ತರುಣಿಯರ ವಿರಹಾತಿಶಯಮಂ ಗಿರಿರಾಜಂ ಕರುಣಿಸಿ ನೋಡಿ (ಗಿಕಿ. ೪-೦೦೬ ಪ) ; ಉರಿಯ ಕರುವಿಟ್ಟಂತೆ ವಿಲಯದ ಹರನ ಖತಿ ಹೊಗೆವಂತೆ ಸಿಡಿಲಿನ ಹೊರಳಿ ಹೊದಱಿದ್ದಂತೆ ನಿಂದವನವ ಘಟೋತ್ಕಚನು (ಕುಮಾ.ಭಾ. ೨-೦೨). ೮. ಮಸುಕಾಗು ; ಮಂಕಾಗು ; ಕಾಂತಿಹೀನವಾಗು : ಚಿತ್ತವಿಸು ಧೃತರಾಷ್ಟ್ರ ಕೌರವನಿತ್ತನಿರುಳೋಲಗವ ಮಂಜಿನ ಮುತ್ತಿಗೆಯ ನಭದಂತೆ ಹೊಗೆದುದು ರಾಯನಾಸ್ಥಾನ (ಕುಮಾ.ಭಾ. ೪-೯). ೯. ಸಿಟ್ಟೆಗೇಳು ; ಧುಮುಗುಡು : ಅಪ್ರಸನ್ನಾ=ಹೊಗೆವುತ್ತಿರ್ದಳ್ (ಶಕಿವಾ. ೩೦-೦೯) ; ಹೊತ್ತ ಕೋಪದ ಹೊಗೆವ ಮುಖದೊಡೊತ್ತುವಧರದ ವೈರಿಸೇನೆಯ ಕುತ್ತಿ ತೇಗುವ ಮನದ ಮಾರುತಿ ಮೊಳಗಿದನು ಮುಂದೆ (ಕುಮಾ.ಸ. ೦೨-೨೦). ೧೦. ದ್ವೇಷಿಸು : ಈ ಅಣ್ಣ ತಂಗಿ ಮೇಲೆ ಮೊದಲಿಂದ ಹೊಗೆದು ಹೊಗೆದು ಹೊಗೀತಾಲೇ ಇದ್ದಿದಾನೆ. ಇವನು ಹೊಗೆದರೆ ನಮಗೇನಾಯ್ತು ? (ಪಳಗಿ. ೨೫೯). ೧೧. [ವೈದ್ಯಶಾ] ಚಿಕಿತ್ಸೆಗಾಗಿ ಔಷಧೀಯಂಗುಣವುಳ್ಳ ಹೊಗೆಯನ್ನು ಹಾಕು,—ಹೊಗೆಯೇಳಿಸು : "ಹೊಗೆ—ಧೂಮನಿರೋಧ ಕ್ರಿಯಾಯಾಂ, ಧೂಮೇ ಚ" (ಶಬ್ದಾ).

ಹೊಗೆಹಾಲ ಮೊಸರು — "ಸೂರ್ಯೋದಯಕ್ಕೆ ಸ್ವಲ್ಪ ಮುಂಚೆ ಹಾಲಿಗೆ ಹೆಪ್ಪುಹಾಕಿ ಮುಚ್ಚಿರಿಸಿ ಅದೇ ದಿವಸ ಮಧ್ಯಾಹ್ನ ತೆಗೆದು ಉಪಯೋಗಿಸುವುದು. ಇದಕ್ಕೆ ಹೊಗೆಹಾಲ ಮೊಸರೆಂದು ಹೆಸರು" (ಸೂಪಶಾ. ೨-೦೦ ಅಡಿ) : ಬಿಸಿಲುವುದಿಸದ ಮುನ್ನ ಹೆಪ್ಪನೆಱೆದಾ ಹಾಲನೊಸೆದು ಹಿಂಬಗಲಿನೊಳು ತೆಗೆಯಲದು ಹೊಗೆಹಾಲ ಮೊಸರೆಂಬ ಹೆಸರಾಯ್ತು (ಸೂಪಶಾ. ೨-೦೦).

[ದೇ.॥ ತಮಿ. ಪುಕೈ ; ಮಲ. ಪುಕ ; ತುಳು. ಪುಗೆ, ಪೊಗೆ ; ತೆಲು. ಪೊಗಯು, ಪೊವಯು]

ಪೊಗೆ$_2$, **ಹೊಗೆ**$_2$ (ನಾ). ೧. ಧೂಮ : "ಪೊಗೆಯೆನಲ್ ಧೂಮಂ" (ಕಶಕ. ೭೦) ; ಪೊಗೆ ಪರ್ಚಿ ನೆಗೆದ ಕಾಟ್ಯೊರ್ಚುಮಂ . . . ಕಂಡೆಂ (ಪಜ್ಜಾಣಾ. ೬೫-೨೬) ; ಬಳಸೆ ಮುಗಿಲ್ಗಳ್ ಕನಕಾಚಳಮಂ ಬಳಸುವವೊಲಿಕ್ಕಿದಾಹುತಿಗಳ ಗೊಂದಳದಿನೊಡನೊಗೆದ ಪೊಗೆಗಳ ಬಳಸಿದುವೆತ್ತೆವಿಡದೆ ಕನಕಯೂಪವಮನಾಗಳ್ (ಪಂಪಭಾ. ೬-೩೩); ಪೊಗೆಯಿಂ ಕಿರ್ಚಂ ಮೊಟಗಿಂ ಮಟ್ಟೆಯಂ . . . ಜೋಯಿಸರಿಂ ಗ್ರಹಣಮಾನಱಿವಂತೆ . . . ಅಱಿವುದು (ಧರ್ಮಾಮೃ. ೯-೬೯); ಕೆಯ್ಯ ಶ್ರೀಗಂಧ ಧೂಪಾರ್ಚಿ ಪಾಪಾರಣ್ಯದ ಬೇಗೆಪೊಲ್ ಪೊಗೆ ಮುಸುಕಿದುದು (ಪೋಷತ. ೪೨-೩೦). ೨. ಆವಿ; ಹಬೆ : ಗೇರ ಪಣ್ಣಿನಿದು ಕೆಂಡಮೆನುತ್ತಂ ಸಾರಿ ಮೇಲೆ ತೃಣಮಿಟ್ಟದನೂದಲ್ ಸೇರಿ ಬಾಯ ಪೊಗೆ ತಳ್ತಿರೆ ಕಂಡಾ ದಾರಿಗಂ ಮುದದಿನೂದುತಮಿರ್ತಂ (ರಾಜಶೇ. ೯-೨೩). ೩. (ಆಲಂ) ಅಗ್ನಿ ; ಬೆಂಕಿ ; ಜ್ವಾಲೆ : 'ಪೊಗೆಮೊಗ' ಪರಾ. ೪. ಅಗ್ನಿಯ ದಿಕ್ಕು ; ಆಗ್ನೇಯದಿಕ್ಕು : ಹರನೊಳೊಗೆದು ನೈಋತಿಗೆ ಬರ್ಪೊಡಂ ಪೊಗೆಯಲೊಗೆದನಿಲಂಗೆ ಬರ್ಪೊಡಂ . . . ಇವ ನೋಡಿ ಪೇಟ್ಟ್ ಮಟ್ಟೆಯಧಿಕ ತಾನೆಂಬುದಂ (ಪಟ್ಟಸು. ೨-೦). **ಹೊಗೆ**$_2$: ೧. "ಧೂಮಮೆನೆ ಹೊಗೆಯುಕ್ಕು" (ಪುಂಗಣಾ. ೦೯-೯) ; ಒಲೆಯುಡಿಯನುರುಹಿದಡೆ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು ಮಹೀತಳನ ಜೆಡೆ ಸೀಯಿತ್ತು ಮರೀಚಕನ ಸಿರ ಬೆಂದಿತ್ತು (ಪಸಪ. ೯೩೦); ಮೊಗದ ಹೊಗರವಗಡಿಸೆ ಸುಯಿಲಲಿ ಹೊಗೆಯ ಹೊದಱಂಕುರಿಸೆ ಬಿಡುಗಣ್ಣುಗಳೊಳೊಕ್ಕುದು ಕೆಂಪು ಸೊಂಪಡಗಿತು ಮುಖ ಸ್ನೇಹ (ಕುಮಾ.ಭೀ. ೬-೨೦); ಹೊಗೆಯೊಳಗೆ ಹೋಗಬೇಕಾದರೆ ಬಾಗಿಕೊಂಡು ಹೋಗಬೇಕು (ಮುಂಬಯಿ. IV. ೬೦). ೨. ಒಂದೆಲಗನ ಸೊಪ್ಪು, ಗಾಂಧಾರಿಸೊಪ್ಪು . . . ಇವುಗಳನ್ನೆಲ್ಲಾ ದಳಿಗೆಯಲ್ಲಿ ಹಾಕಿ ಹತ್ತು ಮೊಗೆ ಅಂಬಲವಂ ಹುಯ್ದು ಕುದಿ ಬರುವ ಹಾಗೆ ಕಾಯಿಸಿ ಆ ಹೊಗೆಯಿಂದುಬ್ಬೆಯ ಕಾಯಿಸಲು ವಾತಜ್ವರಂ ತೀರ್ಗುಂ (ಸಶಕೃ. ೬೯). ೩. ಬಾಣದ ಹೊಗೆಯಲಿ ರಿಪುಗಳ ತೂಳಿಸಿಕೊಂಡೇಣಾಂಕವಂಶಸಂಭವನು ಕ್ಷೋಣೀಪ ಬೆಟ್ಟದ ಚಾಮೇಂದ್ರನೊಳಹೊಕ್ಕು ಮಾಣದಿಱಿದ ರಿಪುಬಲವ (ಕಂಪಲಿ. ೩-೭೯). ೫. ಮಂಕು ; ಮ್ಲಾನತೆ : ನಗೆಗೆ ನಗೆ ಕುಂಟಣಿ ವಿವೇಕದ ಹೊಗೆಗೆ ಹೊಗೆ ಸಭೆಯಾದುದಲ್ಲಿಯ ಹಗರಣಿಗ ನಾನಾದೆನದು ನೋಟಕದ ಜನವಾಯ್ತು (ಕುಮಾ.ಸ. ೦೨-೯೨); ಇವರ ಹರುಷದ ನಗೆಯನಾ ಬಲದವರ ಮೋಱೆಯ ಹೊಗೆಯನು . . . ನೀ ಚಿತ್ತಮಿದೈ ಧೃತರಾಷ್ಟ್ರ (ಕುಮಾ.ಸ. ೦೨-೨). ೬. ಹೊಗೆಸೊಪ್ಪು ; ತಂಬಾಕು : ಆ ವರುಷ ಮೂರು ಕೊಳಗದಷ್ಟು ತಕ್ಕಲು ಕಿತ್ತು ಹೊಗೆ ಹಾಕಿದ್ದರಿಂದ ಸುಂಕಗಿಂಕ ಕಳೆದು ಅರುವತ್ತು ವರಹ ಬಂತು (ಸಂಗಾಳ್ಳ. ೩೦೩).

ಹೊಗೆಯ ಬತ್ತಿ = ಹೊಗೆಸೊಪ್ಪಿನಿಂದ ತಯಾರಿಸಿದ ಬೀಡಿ, ಸಿಗರೇಟು ಮುಂತಾದುವು : ಕಾರ್ಖಾನೆಯ ಹೊಗೆಯು ವಾತಾವರಣವನ್ನು ತುಂಬಿರುವುದು ಸಾಲದೆ ಪ್ರತಿಯೊಬ್ಬನೂ ಒಂದೊಂದು ಹೊಗೆಯ ಬತ್ತಿಯನ್ನು ಬಾಯಲ್ಲಿಟ್ಟುಕೊಂಡು ಹೊಟ್ಟೆ ತುಂಬಿಸಿ ಮತ್ತೆ ಹೊಗೆ ಕಾರುತ್ತಿರುವನು ! (ಕೈಲಾಕ. ೩). ಹೊಗೆಯಾಗು = ಹೊಗೆಯಿಂದ ಆವೃತವಾಗು ; ಧೂಮವುಂಟಾಗು : ಹಸಿಸೌದೆಯಾದ್ದರಿಂದ ಒಲೆ ಸರಿಯಾಗಿ ಉರಿಯದೆ ಮನೆಯೆಲ್ಲಾ ಹೊಗೆಯಾಯಿತು (ಕೂಡಿ). ಹೊಗೆ ಹಾಕು = ೧. ಹೊಗೆಯನ್ನು ಉಂಟುಮಾಡು ; ಧೂಮವುಂಟುಮಾಡು : ಹೋಗು ಅನ್ನಲಾರದೆ ಹೊಗೆ ಹಾಕಿದರು (ಗಾದೆ); ಹೊಗೆ ಹಾಕುವುದರಿಂದ ಸೊಳ್ಳೆಗಳು ಕಡಮೆಯಾಗುತ್ತವೆ (ಕೂಡಿ). ೨. (ಶಿಕ್ಷೆಗಾಗಿ) ಮೆಣಸಿನ ಕಾಯಿ ಮುಂತಾದ ಖಾರದ ಹೊಗೆಯನ್ನು ಉಂಟುಮಾಡು : ಹಿಂದೆ ಮಠದ ವಿದ್ಯಾರ್ಥಿಗಳಿಗೆ ವಿಧಿಸುತ್ತಿದ್ದ ಕಠಿಣಶಿಕ್ಷೆಗಳಲ್ಲಿ ಹೊಗೆ ಹಾಕುವುದೂ ಒಂದು (ಕೂಡಿ). ೩. (ಚಿಕಿತ್ಸೆಗಾಗಿ) ಔಷಧೀಯ ಗುಣವುಳ್ಳ ಹೊಗೆಯನ್ನು ಉಂಟುಮಾಡು ; ಧೂಪಹಾಕು : ಹಿಂದಿನವರು ಶೀತ ಕಡಮೆಯಾಗಲು ರಾಗಿಹಿಟ್ಟು, ಅರಿಸಿನದ ಪುಡಿ ಮುಂತಾದುವುಗಳಿಂದ ಹೊಗೆ ಹಾಕುತ್ತಿದ್ದರು (ಕೂಡಿ). ೪. ಒಲೆಹಚ್ಚು ; ಅಡುಗೆ ಮಾಡು : ಅವಳಿಗೆ ನಾನು ಶರಣಾಗತನಾದರೆ ನಾನು ಈ ಊರಲ್ಲಿ ಹೊಗೇ ಹಾಕ್ಕೊಂಡು ಇರೋಕಾಯ್ತದಾ ! (ಹುಟ್ಟಿಹ. ೦೩೭); ಹೆಣ ಸಾಗಿಸೋವರೆಗೂ ಊರಲ್ಲಿ ಹೊಗೆ ಹಾಕೋ ಹಾಗಿಲ್ಲ (ಕೂಡಿ). ೫. (ಕಾಯಿಗಳನ್ನು ಕೃತ್ರಿಮವಾಗಿ ಹಣ್ಣುಮಾಡಲು) ಕಾವಿಗೆ ಹಾಕು ; ಅಡೆಹಾಕು : ಬಾಳೆಗೊನೆಯನ್ನು ಹೊಗೆ ಹಾಕಿ ತಂದಿದ್ದಾನೆ (ಕೂಡಿ).

[< ಪೊಗೆ$_1$./ತಮಿ. ಪುಕೈ; ಮಲ. ಪುಕ; ತುಳು. ಪುಗೆ, ಪೊಗೆ ; ಕೊಡ. ಪೊಗೆ; ತೆಲು. ಪೊಗ, ಪೊವ; ಕೋಲಾ. ಣಾಯ್ಕಿ. ಪೊಗ್]

ಪೊಗೆಗುಡಿ, ಹೊಗೆಗುಡಿ (ನಾ). ಹೊಗೆಯುಗುಳುವ ಕುಡಿ; ಹೊಗೆ ಕಾರುವ ದೀಪದ ತುದಿ : ನೆಗೆವ ಪೊ[ಪಾಠಾಂ. ಹೊ]ಗೆಗುಡಿಗಳಿಂದೇಂ ಸೊಗಯಿಸುತಿರ್ದಪುವೊ ಸುತ್ತಲುಂ ಕಟ್ಟಲೆಯಂ ಮಿಗೆ ಕುಡಿದಟ್ಕುಸಲಾಱದೆ ಮಗುಟ್ಟುವೆ ಕಾಱದಪುವೆನಿಸಿ ಕೆಯ್ದಾವಿಗೆಗಳ್ (ಪರ್ಧಪು. ೩-೬). **ಹೊಗೆಗುಡಿ** : ಮೇಲಿನ 'ವರ್ಧಪು' ಪ್ರಯೋಗದ ಪಾಠಾಂತರವನ್ನು ನೋಡಿ. [ಪೊಗೆ$_2$ + ಕುಡಿ$_3$]

ಪೊಗೆಗೆಱ^3 (ನಾ). ಧೂಮರೇಖೆ : ಪೊಗೆಗೆಱ^{3}ಯಂತೆ ಕಣ್ಗೆಸೆದುದಾ ರಾಯನ ಮೃಗನಯನೆಯ ರೋಮರಾಜಿ (ಕುರಾಸಾಂ. ೭-೨೯). [ಪೊಗೆ$_2$ + ಗೆಱ^3]

ಪೊಗೆಗೊಳ್ (ಕ್ರಿ). ಹೊಗೆ ಹಿಡಿ ; ಹೊಗೆಯಿಂದ ಮಸುಕಾಗು : ಪೊಗೆಗೊಂಡ ಚಿತ್ರಲತೆ ದೂಳಿಗೊಂಡ ಪುತ್ತಳಿಗೆ ಮಂಜುಗೊಂಡಬ್ಜಿನಿ ಕಾರ್ಮುಗಿಲೊಳಕೊಂಡೆಳವೆಱ^{3}ಯೆನೆ ಮೃಗಲೋಚನೆ ಸೀತೆ ನಾಡೆ ಪಾಡಟಿ ದಿರ್ದಳ್ (ಪಂಠಾಮಾ. ೦೦-೬೩); ಮಿಗೆ ಕಾತರವ ಪುಟ್ಟಿಸುವ ಸುಗುಣನ ಸೋಂಕದವಳ ಜನ್ಮ ಸೊಗಸಲ್ಲ ಪೊಗೆಗೊಂ[ಪಾಠಾಂ. ಯುಂ]ಡ ಪುತ್ತಳಿಯಂತೆ (ಕುರಾಸಾಂ. ೨೨-೨೩). [ಪೊಗೆ$_2$ + ಕೊಳ್$_1$]

ಪೊಗೆಗೊಳಿಸು, ಹೊಗೆಗೊಳಿಸು (ಕ್ರಿ). (ಪರಿಮಳದ) ಹೊಗೆಯಾಡುವಂತೆ ಮಾಡು ; ಧೂಪಹಾಕು : ಕಳೆ ಕರ್ಪೂರದ ಕಸವಂ ತಳಿ ಕತ್ತುರಿನೀರನಿಕ್ಕು ಮುತ್ತಿನ ಕಡೆಯಂ ಬೆಳಗು ಮಣಿದೀಪಮಂ ಪೊಗೆಗೊಳಿಸಗರುವನೆಂಬರಲ್ಲಿ ಸೂಳೆವಳರ್ಕಳ್ (ಜಗವಿ. ೯-೦೦೦) ; ಪೂಜಿಸಿ ನಿಳಿಂಪಸಂಕುಲಪೂಜಿತನಂ ಮಗುಟ್ಟು ಪೊಗೆಗೊಳಿಸಲಂದಾದಂ ರಾಜಿತ ಧೂಪಮನೊಸೆದಾ ರಾಜೋತ್ತಮನೋಹಿಲಾಂಕನೆಂದನುವಾದಂ (ಉದ್ಯಟಿ. ೦೦-೭೮). **ಹೊಗೆಗೊಳಿಸು** : ಲಲನೆ ಕಳೆ ಕಪ್ಪುರದ ಕಸವನು ತಳಿ ಸುಗಂಧೋದಕವನಗಿಲ ಹೊಗೆಗೊಳಿಸು (ಜೀವಂಕ. ೩-೦೩).

[ಪೊಗೆಗೊಳ್ + — ಇಸು$_3$]

ಪೊಗೆಧ್ವಜ (ನಾ). ಹೊಗೆಯೇ ಧ್ವಜವಾದವನು; ಧೂಮಧ್ವಜ; ಅಗ್ನಿ : ಪೊಗೆಧ್ವಜನ ಟಾವಿಂಗೆ ತೃಣದ ಪರ್ವತವು ಬರ್ಪಂದದಿಂ (ಪವಪೋ. ೬-೩೨). [ಪೊಗೆ$_2$ + ಧ್ವಜ]

ಪೊಗೆಮೊಗ, ಹೊಗೆಮೊಗ (ನಾ). ಹೊಗೆ ಕಾರುವ ಮುಖ; ಉರಿಮೊಗ : ಒಗೆದ ಕುಚಂ ಮೊಗಂಗುಡದೆ ಚಿಲ್ವಿನೊಳೇಳಿಸೆ ತತ್ಸಮೀಪದೊಳ್ ಪೊಗೆಮೊಗವಾದವೋಲ್ ತಳೆದ ಧೂಮಘಟಂಗಳಿನುಣ್ಮೆ ಪೊಣ್ಮೆ ತಟ್ಟಗರುವ ಧೂಮಲೇಖೆ ಸುರಸುಂದರಿಯರ್ ನಡೆತಂದರಂದು (ಪಂಠಾಮಾ. ೦೬-೯೩). **ಹೊಗೆಮೊಗ** : ಹೊಗೆಮೊಗದ ಕಿಡಿಗಣ್ಣ ಕೆಮ್ಮಾಸೆಗಳ ಗುಜುಱಿನ ಜುಂಜುಗೇಶದ ವಿಗಡನೆದ್ದನು (ಕುಪ್ಯಾಸ. ೦೯-೦೦೦).

[ಪೊಗೆ$_2$ + ಮೊಗ]

ಪೊಗೆಯಿಡು (ಕ್ರಿ). ಹೊಗೆಯು ಹೊಮ್ಮು : ಪಡುವೆಡೆ ಕಿರ್ಚಿಲ್ಲದೆ ಪೊಗೆಯಿಡುವೊಡೆ ಮೇಣ್ ಪಟದ ಸೀರೆಯುರಿದೇಟ್ವೊಡೆ ಮೇಣ್ ಕಿಡಿಗಳ್ ತಲೆಯಿಂದಂ ಪೊಱಮಡುವೊಡೆ ಯಮಗೃಹಮನೆಯ್ದುವಂ ತಡೆಯದವಂ (ರೋಕೋಪ. ೯-೯೬). [ಪೊಗೆ$_2$ + ಇಡು$_1$]

ಪೊಗೆವಂಡಿ, ಹೊಗೆಬಂಡಿ, ಹೊಗೆಭಂಡಿ (ನಾ). ಹಬೆಯಿಂದ ಚಲಿಸುವ ಗಾಡಿ ; ಉಗಿಬಂಡಿ ; ರೈಲುಗಾಡಿ : ಪೊಗೆವಂಡಿಯ ತಂಗಿನೆಡೆಯೊಳಿಳಿದು (ಪುರಾಶ. ೭-೩). **ಹೊಗೆಬಂಡಿ** : ಹೊಗೆಬಂಡಿ ಹೊರಟಿತು (ಕಪಪು. ೦-೨೯). **ಹೊಗೆಭಂಡಿ** : ಇವರು (ಇಂಗ್ಲೀಷರು) ಮಹಾಬುದ್ಧಿಯಿಂದಾ ಹೊಗೆಭಂಡಿಯನ್ನೂ ಹೊಗೆಹಡಗವನ್ನೂ . . . ದೂರದೃಷ್ಟಿಯಂತ್ರಗಳನ್ನೂ ಹೊಸಹೊಸದಾಗಿ ಮಾಡುತ್ತಾ ಇರುವರು (ಅವಂಶ. ೯೦ ಟೀಳು). [ಪೊಗೆ$_2$ + ಬಂಡಿ$_1$]

ಪೊಗೆವಣ, ಹೊಗೆಹಣ (ನಾ). ಹೊಗೆಸೊಪ್ಪಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ಪಡವಳದೇವರಸರು ಪೊಗೆವಣಮ ಬಿಟ್ಟರು (ಪೊಂಕಶಾ. ೦೯೯೩, ಬಂಕಾಪುರ. ೯೯-೩೦; ?). **ಹೊಗೆಹಣ** : ಗದ್ದೆ ಬೆದ್ದಲು ತೋಟ ತುಡಿಕ್ಕೆ ಆಡುಮಗದೆಱ^3 ಹೊಗೆಹಣ × × × ಬೇಡಿಗೆ ದವಸ ಮುಂತಾದ ಸರ್ವಸ್ವಾಮ್ಯ ಸರ್ವಆದಾಯವನು ಆಗುಮಾಡಿಕೊಂಡು (ಪ್ರಾಂಶಿ. ೦೯೩೦, ೩೩-೦೫; 1668); ಹೊಗೆಹಣ ಹೊಗೆಕಾಣಿಕೆ ಕುಱಿದೆಱಿಗೆ . . . ಆ ಸಕಲಸ್ವಾಮ್ಯವನೂ . . . ಅನುಭವಿಸಿ ಕೊಂಡು ಬಹರು (ಎಕ. XIV, ಪ್ರೈಸೂರು. ೦೦೩-೯೦೩; 1674). [ಪೊಗೆ$_2$ + ಪಣ$_3$]

ಪೊಗೆವರಿ (ಕ್ರಿ). (ಆಲಂ) ರುಚಿಯನ್ನು ಕುಂದಿಸು,—ಕಡಮೆಮಾಡು; ಹೀಗಳೆ : ಮುಗುದೆಯರ ತಲೆರನ್ನೆ ಕೇಳು ಮದ್ವಚನರುಚಿ ಪೊಗೆವರಿಯದೇ ಕಾಯ್ದ ಚಿನಿಪಾಲ (ಪವಪೋ. ೨೬-೯). [ಪೊಗೆ$_2$ + ಪರಿ$_2$]

ಪೊಗೆವಳವಿಗೆಯ 'ಪೊಗೆವಟಯಿಗೆಯ' ನೋ.

ಪೊಗೆವಟಯಿಗೆಯ, ಪೊಗೆವಳವಿಗೆಯ, ಪೊಗೆವಟವಿಗೆಯ (ನಾ). ಹೊಗೆಯೇ ಧ್ವಜವಾದವನು ; ಅಗ್ನಿ ; ಬೆಂಕಿ : "ಮರಗೂಟಂ, ಪೊಗೆವಟಯಿಗೆಯಂ, ಕರ್ಬಟ್ಟಿಗಂ . . . ಇಂಗಳು, ಎಲರ್ಗೆಳೆಯಂ—ಈ ೧೩ ಅಗ್ನಿ" (ಕಶಸಾ. ೯೯-೩೩). **ಪೊಗೆವಳವಿಗೆಯ** : "ಪೊಗೆವಳವಿಗೆಯನೆನೆ ಧನಂಜಯಗೆ ಪೆಸರು" (ಕಶರ. ೭೦). **ಪೊಗೆವಟವಿಗೆಯ** : "ಇಂಗಳನೆಲರ್ಗೆಳೆಯ ಪೊಗೆವಟವಿಗೆಯನಗ್ಗಿ ಹಗ್ಗಿ . . . ಅಗಿನಿಯೆನೆ ಕಿಚ್ಚು" (ಕಬ್ಬಿಕ್ಕ. ೨೦). [ಪೊಗೆ$_2$ + ಪಟಯಿಗೆ + — ಅ$_7$]

ಪೊಗೆವಟವಿಗೆಯ 'ಪೊಗೆವಟಯಿಗೆಯ' ನೋ.

ಪೊಗೆವೊಗೆ (ನಾ). ಒಂದು ಬಗೆಯ ತೆರಿಗೆ, — ಸುಂಕ (?) : ಮಂನೆಯ ಸಾಮ್ಯದೊಳ್ ಬಿಟ್ಟ ಮರ್ನ್ನಣೆಯೆನ್ತೆನ್ದೊಡೆ ಮನ್ನೆಯದೆಱ^3 ಆಳಿವಸತಾಯ ಪೊ[ಗೆ]ವೊಗೆ ತಳಾಱಗೂಲಿ (ಸೌಇಇ. XI-1, ೭೩-೨೦ ; 1042) ; ಪೊಗೆವೊಗೆಯ ಮನೆಗೆ ಪಣವುಂ ಪಾಗದ ತೆಱ^{3}ಯುಮಂ . . . ಬಿಟ್ಟರ್ (ಎಇ. XVI, ೬೩-೩೯ ; 1067). [?]

ಪೊಗೆಸುತ್ತು (ನಾ). (ಆಲಂ) ಮಂಕಾಗಿರುವಿಕೆ : ಮುಸುಕು ಪೊಗೆಸುತ್ತು ಹೊದಕೆಗಳಸದೃಶದೊಲವಿಕೆ ವಿಚಿತ್ರಪುಳಕವಿಲಾಸಪ್ರಸರಂ ಸನ್ನಾಹನಮಿಂತೆಸೆವಾ ಬೇಗಕ್ಕೆ ತರದಿನನುಭಾವಂಗಳ್ (ರಸರ. ೯-೦೦೨).

[ಪೊಗೆ₂+ಸುತ್ತು₂]

ಪೊಚ್ಚ₁, ಹೊಚ್ಚ (ನಾ). ೧. ನವೀನವಾದಂದು ; ಹೊಸದು : "ಪೊಚ್ಚವೆನಲ್ ಪೊಸತು" (ಕರ್ಣಾಂ. ೩೬) ; ಅಂಗರಾಜನೊಳಿರ್ಚಿದ ಭಾವನೆ ಪೊಚ್ಚವಾಗೆ ಹೇಮಾಂಬುರುಹಾಸ್ಯೆ ಸೋಲ್ವುದೆನೆ ಕನ್ನಿಕೆ ಜನ್ಯೆಯನೊತ್ತೆ (ಶಾಂತಿಪು. ೩-೦೦೬). (ಗು). ೨. ಹೊಸದಾದ ; ನವೀನವಾದ : ಹೊಂಗೆಲಸದ ಪೊಚ್ಚ ಪದುಮವಿಟ್ಟರದೊಳು ಮಂಗಲ ಮಜ್ಜನಗೆಯ್ದು (ಸೋಪಶ. ೨೦-೩); ಕೊರಲೊಳೊಪ್ಪುವಚ್ಚ ಪೊಚ್ಚಚ್ಚಸರಂ ಮುಕುತಿವೆಣ್ಣ ಸಿರಿಗೊರಲ ಕರ್ಮಣಿಸರಮನಡಿಗೊತ್ತೆ (ರಾಮಾಶ್ವ. ೦೩೯-೦೯). 'ಪೊಚ್ಚ ಮುತ್ತು', 'ಪೊಚ್ಚವಚ್ಚ' ಪರಾ. ಹೊಚ್ಚ : ೨. ಕಾಲರಾಯನ ಬೆರಳುಂಗುರದೊಳು ಗಾದೆ ಮಿರುಗುವ ಹೊಸ ಹೊಚ್ಚಹರಳು (ಇಂಶಾಪ. ೨೨೦-೯೯). [<ಪೊಸ]

ಪೊಚ್ಚ₂ (ನಾ). ೧. ತಪ್ಪು ; ದೋಷ : ತಾನೆಚ್ಚಂ ಪೊಚ್ಚಮಲ್ಲದರಿ ವಾಹಿನಿಯಂ (ಕಪುದ. ೨೨೯ ಪ್ರಯೋ). 'ಪೊಚ್ಚಂಬೋಗು' ಪರಾ. ೨. ಕಳಂಕ ; ಮಾಲಿನ್ಯ : ಪಂಚೇಂದ್ರಿಯಪ್ರಾಣಿಗಳೊಳಂ ಪೊಲ್ಲರಪ್ಪ ತಿರ್ಯಙ್ಮನುಷ್ಯರ್ಕಳ ಅಸಾರಮಾಗಿ ಪೊಚ್ಚಮಪ್ಪ ಔದಾರಿಕಪೊಲ್ಲ ಶರೀರಂಗಳುಂ (ಪಸಾರ. ೯೯).

[ದೇ.೩ ತಮಿ. ಪೊಚ್ಚ, ಪೊಚ್ಚೈ, ಪೊಕ್ಕ ; ಮಲ. ಪೊಕ್ಕ ; ತೆಲು. ಪೊಚ್ಚ, ಪೊಚ್ಚೆ]

ಪೊಚ್ಚ₃ (ನಾ). ಹೊಳೆ ; ತೊರೆ ; ಪ್ರವಾಹ : "ಪೊಚ್ಚಂ=ಪೊಟ್" (ಕಪುದ. ಶಂ. ೨) ; ಕಾಳುವೈಷ್ಣವ ರಹಸ್ಯದೊಳು ತಲ್ಲಿಂಗಮಂ ಮೇಳೈಸಿ ಕೊಳುತೊಂದು ಪೊಚ್ಚದೊಳು ಹಾಯ್ಕಿಯಾಮೇಲೆ ನೆಱ್ ವೀರನಾರಾಯಣ ನೆನಿಪ್ಪ ಪ್ರತಿಮೆಯನಲ್ಲಿ ನೆಲೆಗೊಳಿಸಲು (ಜಾಸೋಪು. ೦೦-೩೯) ; ತಡಿಯೊಳ್ನೀರ್ಗೊಂಬ ಕಾಡಾನೆಗಳಂ . . . ಮತ್ಸ್ಯಂಗಳಂ ಪೆಂಪಿಡಿದೊಪ್ಪಿತ್ತಲ್ಲಿ ಫೇನಸ್ಮಿತೆಯೆನಿಸುವ ಪೊಚ್ಚಂ ಪೊದಳ್ದೊಪ್ಪದಿಂದಂ (ರಾಜಶೇ. ೬-೨೩) ; ಇಂತು ಮುಂಗಾರ್ ತಲೆದೋಱ್ ತಿರೆವೆಣ್ಗೆ ಮುಗಿಲ್ಸೊಂದಿಯೊಳ್ ಬಳ್ಳಿವರಿವ ನೇಹದಿಂ ಬೆಳ್ಳಂಗೆಡೆವ ಸೊಗದಾಲಿನೀರೆನೆ ಪೊಚ್ಚಂ ಪೆರ್ಚಿ ಪರಿದುದು (ರಾಮಾಶ್ವ. ೩-೦೯). 'ಬಾಂಬೊಚ್ಚ' ಪರಾ.

ಪೊಚ್ಚ₄ ? (ನಾ). (?) : ಪೆಸರ್ಗಳ್ಕಿತ್ತು ಸಮಸ್ತಪೇಚರಬಲಂ ತೇಜಕ್ಕೆ ಬೆರ್ಚಿತ್ತು ಮುಂ ಪೊಸಪೊಚ್ಚಂ[ಪಾಠಾಂ. ಪೊತ್ತಂ, ಪೊಟ್ಟುಂ, ಪೊರ್ತಂ] ಬೆರಸಿರ್ಪ ಭೂಚರಬಲಂ . . . ಎಂಬ ಗುಣಸಂಘಾತಂಗಳಂ ತಾಳ್ದಿ ಪೆಂಪೆಸಕಂಬೆತ್ತಿರೆ ಸಂತಮಿಂತತಿಬಳಂ ರಾಜ್ಯಂಗೆಯುತ್ತಿರ್ಪಿನಂ (ಅದಿಪು. ೦-೭೮). [?]

ಪೊಚ್ಚಂಬೋಗು (ಕ್ರಿ). ೧. ದೋಷಯುಕ್ತವಾಗು ; ಕಳಂಕ ಹೊಂದು : ಮಚ್ಚರದಿಂ ಜಿನಮತಮಂತುಚ್ಚಳನಪ್ಪನ್ಯಸಮಯಿ ಪೊಲ್ಲೆಂದೊಡದೇಂ ಪೊಚ್ಚಂಬೋಕುಮೆ ವಾಯಸ ವೆಚ್ಚಮನಿಕ್ಕಿದೊಡೆ ವಾರ್ಧಿಗಕ್ಕುಮೆ ಭಂಗಂ (ಸಮಪ. ೦೩-೩೦); ಮಚ್ಚಿಂ ರಾಗದ್ವೇಷಂ ಮೆಚ್ಚಮೆಯಿಂದಾಗೆ ಕೆಟ್ಟರೀಯೆರಡಱೊಳಂ ನಚ್ಚುವುದಾಸೀನಂ ತಾಂ ಪೊಚ್ಚಂಭೋ[ಬೋ]ಗದೆ ತಗುಳ್ದೊಡಘಮಟಿಯದುದೇ (ಜೀವಸಂ. ೦೭೦ ೦೩). ೨. (ಆಲಂ) ಹುಸಿಯಾಗು : ಪೊಚ್ಚುಂ[ಚ್ಚಂ]ಬೋಗದ ಶೌರ್ಯಮದಚ್ಚರಿಯಾಗಿರೆ ಮೃಗಾರಿಯಂ ಪೊಕ್ಕಬಲಿಂ ಮಚ್ಚರಿಸಿ ಕೊಂದು ನಚ್ಚಿಂ ಮೆಚ್ಚೆ ಜಗಂ ತಗುಳೆ ಪೊಗಟ್ ನೆಗಟ್ದಂ ಕೃಷ್ಣಂ (ವರ್ಧಮಾ. ೩-೨೩).

[ಪೊಚ್ಚ₂ + ಪೋಗು₁ (<ಪೋ₁)]

ಪೊಚ್ಚಮುತ್ತು (ನಾ). ಹೊಸದಾದ ಮುತ್ತು ; ಕಾಂತಿಯಿಂದ ಕೂಡಿದ ಮೌಕ್ತಿಕ : ಆಳದೊಳಗೆ ಏನೋ ಒಂದು ಪೊಚ್ಚಮುತ್ತಿನಂತಿದೆ (ಪ್ರಧಸ. ೨೩-೦೦). 'ಪೊಸಮುತ್ತು' ಪರಾ. [ಪೊಚ್ಚ₁+ಮುತ್ತು₂]

ಪೊಚ್ಚರ 'ಪೊಚ್ಚಱು₂' ನೋ.

ಪೊಚ್ಚವಚ್ಚ (ನಾ). ಹೊಸ ಆಭರಣ; ನೂತನವಾದ ಅಲಂಕಾರ : ಪಚ್ಚಮಾಭರಣಂ; ಪಾವುವಚ್ಚಂ, ಪೊಚ್ಚವಚ್ಚಮಿತ್ಯಾದಿ (ಸಮ್ಮಾಪು. ೯೯೦ ಪ್ರಾಪ್ತಾ). [ಪೊಚ್ಚ₁+ಪಚ್ಚ₂]

ಪೊಚ್ಚಳ 'ಪೊಯ್ಸಳ' ನೋ.

ಪೊಚ್ಚಱ 'ಪೊಚ್ಚಱು₂' ನೋ.

ಪೊಚ್ಚಱತನ (ನಾ). ಅಹಂಕಾರ ; ಹೆಮ್ಮೆ ; ಗರ್ವ : ಮಱದಪ್ಪಡಮೆಂದುಂ ನುಡಿದಱಿಯಂ ದಿಟಮಪ್ಪ ನುಡಿಗಳಂ ಮಾಣದೆ ಪೊಚ್ಚಱತನದಿ ನುಡಿವನೆನಿಸಿಲ್ಲಱಗುಲಿಗಂ ಮೊಗ್ಗೆ ಸೂನೃತವ್ರತಮೆಂತುಂ (ಸಮಪ. ೩-೩೦).

[ಪೊಚ್ಚಱ (< ಪೊಚ್ಚಱು₂) + — ತನ]

ಪೊಚ್ಚಱಿಸು (ಕ್ರಿ). ೧. ಗೋಚರಿಸು : ಪ್ರಕಟವಾಗು : "ಮಿಗೆ ಪೊಚ್ಚಱಿಸಿತೆಂದು ಕಣ್ಣಲೆದುದೆಂದಿರದೆ ಪೊಡಕರಿಸಿತಕೆ ನಾಮಮಕ್ಕುಂ" (ಕಪ್ಪಕ್ಕ. ೭೯) ; ತಱಿದು ನಿಶಿತಾಸ್ತ್ರದಿಂದಂ ತೆಱಪಾಗಿರೆ ದಿವ್ಯಬಾಣದಿಂ ನಿಟ್ಟಿಸೆ ಪೊಚ್ಚಱಿಸೆ ಶಿಶುಪಾಳಶಿರಮಂ ಪಱಿಯೆಚ್ಚಂ ಕೃಷ್ಣನುಷ್ಣತೇಜೋನಿಳಯಂ (ಪೇಶಿಪು. ೭-೩೮) ; ಕಿಱುವೆಳಗಿಂದ ಧರ್ಮಧ್ಯಾನರೂಪ ಪೊಚ್ಚಱಿಪ ಮಹಾಪ್ರಭೆಯಿಂದ ಮಿಱುಪ ಶುಕ್ಲಧ್ಯಾನರೂಪ ನನ್ನೆದೆಯೊಳಿರೆಱಿಯ ಚಿದಂಬರಪುರುಷಾ (ಭರಸ. ೩೯-೦೦೩). ೨. (ಗರ್ವವನ್ನು) ತೋರ್ಪಡಿಸು ; ಪ್ರದರ್ಶಿಸು : ಆಗಳಾನೇಱಿಪೆನೆಂದು ಪೊಚ್ಚಱಿಸಿ ಬಂದು ಸುಯೋಧನನುಗ್ರಚಾಪಮಂ ಮೂಱುಸೂಟ್ ಬಲವಂದು ಪೊಡಮಟ್ಟು (ಪಂಪಭಾ. ೩-೩೮) ; ಕೆಲಬರೆಮ್ಮಿಂ ಮುನ್ನಿಱಿವರಾರೆಂದು ಪೊಚ್ಚಱಿಸಿ ಕೈದುವೆತ್ತೆಯುಂ (ವರ್ಧಮಾ. ೯-೩೯ ಪ). ೩. ಗರ್ವಪಡುವಂತೆ ಮಾಡು; ಹೆಮ್ಮೆಪಡುವಂತೆ ಮಾಡು ; ಉಬ್ಬಿಸು : ಮಱಿಯದಹೋರಾತ್ರಂ ಕಯ್ಮಱಿದಿಲ್ಲದ ಗುಣಮನಂತೆ ಬಿಡದೇಱಿಸಿ ಪೊಚ್ಚಱಿಸುತ್ತಮಿರ್ಪ ಪಿಡ್ಗರ್ಗೆಱಿಸುವರಱಿವಿಲ್ಲದವನಿಪಾಲರ್ ಜಗದೊಳ್ (ಕಾರಂಪು. ೩೭೦). ೪. ಎಚ್ಚರವಾಗು ; ಜಾಗೃತಗೊಳ್ಳು : ಕುರುಪತಿಯಂತಿರೆ ಕಂಡಾ ಗುರುತನಯಂ ಮುನಿದು ರೌದ್ರರುದ್ರನ ತೆಱದಿಂ ಪಿರಿದಿರುಳೊಳಿಱಿದು ಕೌಂತೇಯರ ಬೀಡಂ ಕೂಡೆ ಮಸಗಿ ಕೊಲ್ವುದುಮಾಗಳ್ ನೆಱಿದಿರದೆ ಗುರುಜನಂ ಪೊಚ್ಚಱಿಸೆ ಕಱುತ್ತುಱದೆ ತಾಗೆ . . . ತಱಿದಂ ಭೋಂಕಲ್ (ಪೇಶಿಪು. ೦೨-೨೦೭). [ಪೊಚ್ಚಱು₁+—ಇಸು₃]

ಪೊಚ್ಚಱು₁ (ಕ್ರಿ). ೧. ಗೋಚರಿಸು ; ಪ್ರಕಟವಾಗು ; ಕಾಣು : "ಪೊಚ್ಚಱು—ಸ್ಫುರಣೇ (ತೋರ್ಪಡು)" (ಕಪುಧಾ); ಉಱದೆನ್ನಂ ಮಾಯೆಯಿಂ ಬಂಚಿಸಿ ಮಹಿಜೆಯನೆಂತೊಯ್ದನೊಯ್ದಂದದಿಂ ಪೊಚ್ಚಱದಿನ್ನುಂ ತೋರ್ಕೆ ಸಂಗ್ರಾಮದೊಳೆಡೆಗಡಿದಾ ತೋಳ್ಗಳಿರ್ಪತ್ತುಮಂ . . . ಮೆಟ್ಟಿ (ಕ್ಕಂಗಾರ. ೦-೭೦) ; ಪೆಱತೊಂದು ಸತ್ಯಲೋಕದ ಪೊಱವಳೆಯದೊಳಂಡ ಭಿತ್ತಿಯೊಳವಯಲೊಳ್ ಪೊಚ್ಚಱುವುದು ಪರವೈಕುಂಠದ ಮಱಿಯೆನೆ ತಾನೊಂದುಕೋಟಿಯೋಜನಮಾನಂ (ಕಕವಿ. ೩-೦೯೦). ೨. ಬರು ; ಒದಗು : ಪೊಚ್ಚಱುಗುಂ ತೃತೀಯೆ ಬಂದಂತಱಿನೆಂಬ ಪದಕ್ಕಮಾ ಎಕಾರಕ್ಕಿತರಂ (ಕಪುದ. ೩೦೭).

ಪೊಚ್ಚಱು₂, ಪೊಚ್ಚರ, ಪೊಚ್ಚಱ (ನಾ). ೧. ಹೆಮ್ಮೆ ; ಗರ್ವ ; ಅಹಂಕಾರ: ಪಾಂಚಾಳಿಯನೆಱಿವದಟೇನಾದುದೋ ಗಂಡ ಪೇಟ್ ಪೊಚ್ಚಱಿನಂತಾ ಮಾತುಮಿಂತೀಯಿರ[ವೆನೆ] ನಗೆಯಂ ಮಾಡಿದೈ (ಪಂಪಭಾ. ೦೩-೭೭) ; ತಳ್ತಿಱಿಯಲ್ಕಾಮುಕರೊಳ್ ಮನೋಭವನೃಪಂ ಮೇಲೆತ್ತಿದಂ ನಾಡೆ ಪೊಚ್ಚಱು ಬೇಡೆಂಬವೊಲೊರ್ವ ಕಾಮಿನಿ ಲಸಚ್ಛೃಂಗಾರದಿಂದೊಪ್ಪಿದಳ್ (ರರ್ಮಾಪು. ೭-೨೦೩) ; ಕಿಱಿಯನಿವಂ ಪ್ರಾಯದೊಳೆಂದುಱದೆನ್ನಂ ನುಡಿವುದಳವೆ

ಬಲ್ಪಿನೊಳೆನ್ನೀ ಕುಱುಕುಣಿಕೆಗೆ ನೆಱೆಯ್ಯೆ ಪೊಚ್ಚಱುನೊಳಿದೇಂ ಪೊಣರ್ದು ನೋಡಲಾಗದೆ ಕೆನ್ನಂ (ಬಂಹಂ. ೦೦-೩೯). ೨. ಎಚ್ಚರ : 'ಪೊಚ್ಚಱಿಸು', 'ಪೊಚ್ಚಱುಗೆಡು' ಪರಾ. ೩. ಪರಾಕ್ರಮ ; ಶೌರ್ಯ : ಆತನಂ ತಾಗಿ ತಳ್ತಿಱಿಯಲ್ ಕೋಡಗಗಟ್ಟುಗಟ್ಟಿ ತರಲಿನ್ನಾರಾರ್ಪರಂತಪ್ಪ ಪೊಚ್ಚಱ ಸಾಮಂತರೆ ಪೋಗಿಂ (ಪಂಪಶಾ. ೫-೨೦) ; ಗುರುವಂ ಪ್ರೋಜ್ಜಿತ ಚಾಪನಂ ಪುಸಿದು ಕೊಂದಾ ಬೀರಮಂ ಭೀಷ್ಮರಂ ಶರಶಯ್ಯಾಗತರಂ ಕಱುತ್ತು ಗುಱಿಯೆಚ್ಚಾ ಪೊಚ್ಚಱಂ . . . ಪಾಂಡುಪುತ್ರರೆ ಬಲ್ಲರ್ (ಗದಾಯು. ೩-೩೩). ೪. ತೇಜಸ್ಸು ; ಕಾಂತಿ : ರತಿಯತಿರೂಪಮಂ ಸಿರಿಯ ಪೊಚ್ಚಱನಾ ಮುನಿಪತ್ನಿಯಪ್ಪರುಂಧತಿಯ ಸುಶೀಲಮಂ . . . ಎಲ್ಲಮನೊಂದುಗೂಡಿ ಪಾರ್ವತಿ ಸಮೆದಂತೆ ಕಣ್ಗೆಸೆವುತಿರ್ದಳವಳ್ಮನಕಿಂಪ ನೀವುತುಂ (ಪೀರಪಿ. ೯-೩). ೫. (ಪ್ರಕಟವಾದ) ತೀವ್ರತೆ ; ತೀಕ್ಷ್ಣತೆ : ಮತ್ತೊರ್ವಂ ಬಸನದ ಮೆಚ್ಚು ಪೊಚ್ಚಱಾದ ಇಚ್ಛೆಕಾಱನಿಂತೆಂದಂ (ಅಪಂಪು. ೮-೫೬ ಪ). ಪೊಚ್ಚರ : ೬. "ಸ್ಫುರಣ, ಆವೇಶ" (ಕಾಲೂರ. ಕೋಶ) : ಕಡಿದು ಮೇಣ್ ಬೋಳನು ಬಡಿದು ಕಮ್ಮರಿಗಿಕ್ಕಿ ತೊಡಗಿರ್ಪೆಯೇಂ ಮದುವೆ ? ಪೊಚ್ಚರೇನೊಪ್ಪಂ (ಕಾಲೂರ. ೦೬೦-೩೫೯). ಪೊಚ್ಚಱ : ೩. ಏತಱೊಂದು ಪೊಚ್ಚಱದ ಮಾತಿನೊಂದು ನಿಱಿಗೆಯೊ ! ಲೋಗರೊಳ್ ಬಲ್ಲರ್ ತಮ್ಮಾಳ್ತನದ ಪೆರ್ಕಳಿಕೆಯಂ ಗಳಪುವರೆ ? (ರಾಮಾಶ್ವ. ೮೫-೨೫) ; ಕಬ್ಬಿಗರ್ಗೆ ನೀಂ ಕಲ್ಲಾಯ್ತನಕ್ಕುಂ ಎಂದುಂ ಕಾಣದರೊಂದು ಪಾಂಗಿನಿಂ ಪೇಟ್ದ ಪೊಚ್ಚಱದ ನಿನ್ನೀ ಬಣ್ಣನೆಯ ನುಡಿಗೇನೆಂಬೆನೊ ! (ರಾಮಾಶ್ವ. ೮೭-೨೬). [< ಪೊಚ್ಚಱು$_1$]

ಪೊಚ್ಚಱುಗಿಡಿಸು (ಕ್ರಿ). ತೀವ್ರತೆಯನ್ನು ಕಡಮೆಮಾಡು : ಪೊಱಮಟ್ಟು ಕೋಪದಿಂ ಮೆಯ್ಯಱಿಯದೆ ತನ್ಮನಿಯ ತಪಮನೇಗೆಯ್ದುಂ ಪೊಚ್ಚಱುಗಿಡಿಸಿ ತರ್ಪೆಮೆಂಬೊಂದಱಿಕೆಯಿನವರೆಯ್ದೆವಂದರಾ ಗಿರಿವರಮಂ (ರರ್ಮಾಮ್ಯ. ೮-೬೯). [ಪೊಚ್ಚಱುಗಿಡು (< ಪೊಚ್ಚಱುಗೆಡು) + — ಇಸ್ಸು$_3$]

ಪೊಚ್ಚಱುಗಿಡು 'ಪೊಚ್ಚಱುಗೆಡು' ನೋ.

ಪೊಚ್ಚಱುಗೆಡು, ಪೊಚ್ಚಱುಗಿಡು (ಕ್ರಿ). ೧. ಶೌರ್ಯಗುಂದು ; ಹೆದರು : ಪೊಱಮಟ್ಟಂ ಲಲಿತಾಂಗನೆಂದೊಡಮವರ್ಬಳ್ಕುತ್ತುಮಳ್ಕುತ್ತೆ ಪೊಚ್ಚಱಿ[ಱು]ಗೆಟ್ಟೋಡುವರ್ (ರರ್ಮಾಮ್ಯ. ೨-೬೬). ೨. ಎಚ್ಚರ ತಪ್ಪು : ನಚ್ಚುವುದೊಂದಂಬಂ ತೊಟ್ಟೆಚ್ಚೊಡೆ ನೆಱೆಗೊಂಡ ಸರದೊಳಾಗದೆ ಕರ್ಣಂ ಪೊಚ್ಚಱುಗೆಟ್ಟುಱದೌಡಂ ಕಚ್ಚಿ ಮಹಾರೌದ್ರಭಾವದಿಂದಂ ಕೆಡೆದಂ (ಬಂಹಂ. ೦೨-೯೩). ೩. ಶೋಭೆಗೆಡು; ಅಂದಗೆಡು; ಹಾಳಾಗು : ಪೆಱತೇನೊ ಪಲಪುದಿವಸಂ ಪೊಱಗಿರ್ದೊಡೆ ಕಿಡದ ವಸ್ತುಗಳ್ತನುವನಿವಂ ನೆಱೆ ಪೊರ್ದಿದನಿತಱೊಳೆ ಪೊಚ್ಚಱುಗೆಟ್ಟು ಮಲಂಗಳೆಂಬ ಪೆಸರಂ ಪಡೆಗುಂ (ರರ್ಮಾಮ್ಯ. ೬-೦೯೦). ಪೊಚ್ಚಱುಗಿಡು : ೨. ಮನುಷ್ಯಲೋಕ ಸುಖಮಸ್ಥಿರಮೆಂದಳಿಪಿಂಧೆ ಸೋಲ್ತು ಪೊಚ್ಚಱುಗಿಡದಮ್ಮ ಜೀಯೆನಿಸಿ ಯಾವೊಡಲಂ ಜಿನದೀಕ್ಷೆಗೊಡ್ಡಿ ಮತ್ತಱಿಕೆಯ ಮೂಱುಮೂಢ ಮುಮನೊರ್ಮೆಯೆ ಬಿಟ್ಟು (ರರ್ಮಾಮ್ಯ. ೯-೦೯೨). [ಪೊಚ್ಚಱು$_2$ + ಕೆಡು$_1$]

ಪೊಚ್ಚಱುವಳಿ (ನಾ). ಹೊಳೆಯುವ ಬಟ್ಟೆ; ಕಾಂತಿಯುಕ್ತವಾದ ವಸ್ತ್ರ : ಮಿಱುಪ ಕುಸುಮಾಯುಧಕೆ ಪೊನ್ನೊರೆಯಂ ಸೇರಿಸುವ ತೆಱದೆ ಪೊಂಬಣ್ಣದ ಪೊಚ್ಚಱುವಳಿಯನುಡಿಸಿದರ್ಕಿಱುವೆಱೆನೊಸಲಂಗನೆಗೆ ಕೋವಿದೆಯರತಿಮುದದಿಂ (ಪೀರಪಿ. ೯-೯೫). [ಪೊಚ್ಚಱು$_2$ + ಪಳ್ಳಿ$_4$ (< ಪಟ್ಟಿ$_5$)]

ಪೊಚ್ಚು 'ಪೊದೆಯಿಸು' ನೋ.

ಪೊಟ್ (ನಾ). ಒಂದು ಅನುಕರಣಶಬ್ದ : ದಪ್ಪರಿದಟ್ಟುಂ ಪೊಟ್ಟೆನೆ ದೊಪ್ಪಧೊಗಪ್ಪೆನೆ ದಿಧಿಲ್ಬುಧಿಲ್ಲೆನೆ ಗದೆಗಳ್ ಸೊಪ್ಪುಸೊವಡಪ್ಪಿನಂ ಸೂಟ್ತಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್ (ಗದಾಯು. ೮-೦೦).

ಪೊಟರೆ 'ಪೊಟ್ಟರೆ' ನೋ.

ಪೊಟೆವಾಡಿ (ನಾ). ಒಂದು ಊರಿನ ಹೆಸರು : ತಸ್ಯ ಸೀಮೆ ಮೂಡಾಯ್ದೆರ್ವ್ವಳ್ಳಮೆ ಪೊಟೆವಾಡಿಯ ಸೀಮೆಯುಳ್ ಕೂಡಿತ್ತು (ಎಕ. IV, ಹೆಗ್ಗಡ. ೯-೭; ಸು. 750). [ಪೊಟ್ಟೆ$_0$ + ಪಾಡಿ$_2$]

ಪೊಟ್ಟಗೆ (ಅ). ಒಂದು ಅನುಕರಣಾವ್ಯಯ ; 'ಪೊಟ್' ಎಂಬ ಶಬ್ದದೊಡನೆ : ಘಟ್ಟಿಸಿದ ಕೀಟ ಘಟ್ಟಣೆಯೊಳ್ ಪೊಟ್ಟಗೊಡೆದ ತಾಳುಗೆಗಳ ರುಧಿರಜಲದೊಳ್ ಬೆರಸಿ (ಪಂಪಶಾ. ೦೦-೬೦ ಪ); ಬಡಿವ ಬಡಿಗೆಗಳ ಕೋಳೊಳ್ ತೊಡೆಯದು ಸಲೆ ಪೊಟ್ಟಗೊಡೆದು ಕಡಿವಡೆದೆತ್ತಂ ಪುಡುಪುಡನೆ ಪುರ್ಗಿ ಜೋಲ್ದೆಟಲ್ವಡಗಾಗಿ ಸುರುಳ್ದು ಸುರುಳ್ದು ಬಾಯ್ವಿಟ್ಟೆರ್ಕುಂ (ಸುಕುಮಾ. ೫-೦೫). [ಪೊಟ್ + — ಅಗ್ಗೆ$_3$]

ಪೊಟ್ಟಣ 'ಪೊಟ್ಟಳ' ನೋ.

ಪೊಟ್ಟಣಂಗಟ್ಟು 'ಪೊಟ್ಟಳಂಗಟ್ಟು' ನೋ.

ಪೊಟ್ಟಣಗಟ್ಟು 'ಪೊಟ್ಟಳಂಗಟ್ಟು' ನೋ.

ಪೊಟ್ಟಣವಾರಿ (ನಾ). ಪೊಟ್ಟಣಗಟ್ಟಿದ ನೀರು ; ದೊನ್ನೆಯ ನೀರು : ಬನಮೆ ಬನಕ್ಕೆ ಬಾವರಿಗೆ ಬಂದವೊಲಾದುದು ತಂಡತಂಡದಿಂ ಮುನಿಗಳ ಕೆಯ್ಯ ಕುಂಚಣಿಗೆ ಚಾಂದ್ರಮಸೀದಳಕುಂಡಿಕಾಳಿ ತಜ್ಜಿನಭವನಕ್ಕೆ ದುಗ್ಧನಿಧಿ ಕಟ್ಟಿದ ಪೊಟ್ಟಣವಾರಿಗಟ್ಟಿದತ್ತೆನಿಸಿದುದಿಂದು ಸಾಧುಜನಸಂಗ ಸಮಾಗಮನಪ್ರಪಂಚದೊಳ್ (ಅಪಂಪು. ೩-೩೦) ; ನೀರ ತಾರೈ ಹೋಗು ನಕುಲ ಸರೋರುಹದ ಪತ್ರದಲಿ ಪೊಟ್ಟಣವಾರಿಯನು ಕಟ್ಟೆಂದು ಕುಂತೀ ಸೂನು ನೇಮಿಸಿದ (ಕುಪ್ಯಾಕ. ೨೩-೦೨).

[ಪೊಟ್ಟಣ (< ಪೊಟ್ಟಳ) + ವಾರಿ$_2$]

ಪೊಟ್ಟಣಿಸು 'ಪೊಟ್ಟಳಿಸು' ನೋ.

ಪೊಟ್ಟನೆ (ಅ). ಒಂದು ಅನುಕರಣಾವ್ಯಯ ; 'ಪೊಟ್' ಎಂಬ ಶಬ್ದದೊಡನೆ : ಪಾರ್ಥನ ದೇವದತ್ತನಿಸ್ವನದೊಳೆ ತೀವಿ ಪೊಟ್ಟನೊ[ಪಾಕಾಂ. ಗೊ]ಡೆವಂತೆವೊಲಾದುದಜಾಂಡಮಂಡಳಂ (ಪಂಪಶಾ. ೦೦-೦೪೫) ; ಬೀಸಿ ಕರಮೆತ್ತಿ ಪೊಯ್ದಡೆ ಸೂಸೆ ಮಿದುಟ್ ಪೊಟ್ಟನೊಡೆಯೆ ತಲೆ ಕರಮಿಂ ತೊಂದಾಸುರಮಾಗಿರೆ ಕೊಂದು ವಿಭಾಸುರತೇಜದೊಳೆ ತಂದೆಯಲ್ಲಿಗೆ ಮಗುಟ್ಟಂ (ಬಂಹಂ. ೬-೫೬). [ಪೊಟ್ + — ಅನ್ನೆ$_1$]

ಪೊಟ್ಟಮುಡುಹ, ಪಟ್ಟಮುಡುಹು (ನಾ). ಮಲ್ಲಯುದ್ಧದಲ್ಲಿ ಒಂದು ವರಸೆ : ಆಂ ಪಿಡಿದುದೆ ಕತ್ತರಂ . . . ಪೊಟ್ಟಮುಡುಹಂ ಮುಹಡಂ ದಣುವಟ್ಟಿ ಪಟ್ಟಿಸಂ (ಅಪಂಪು. ೨-೨೬). ಪಟ್ಟಮುಡುಹು : ಚಿಮ್ಮಿ ಝುಡಿತೆಯ ಸೆಳೆದು ಮುಡುಹಿನಲೌಕಿ ಬಿಗಿದರು ಪಟ್ಟಮುಡುಹಿನಲಿ (ಕುಪ್ಯಾಸ. ೨-೯೮). [?]

ಪೊಟ್ಟರೆ, ಪೊಟರೆ, ಪೊರಟೆ$_2$ (ನಾ). (ಮರ, ಕಲ್ಲು ಮುಂತಾದುವುಗಳಲ್ಲಿರುವ) ಡೊಗರು ; ಹೋರು ; ರಂಧ್ರ : ಕಾಗೆಯು ಆ ಮರದ ಪೊಟ್ಟರೆಯಲ್ಲಿಯಿರುವ ಕೃಷ್ಣಸರ್ಪದಿಂದ ಭಕ್ಷಿಸಲ್ಪಟ್ಟ ತನ್ನ ನೂರಾರು ಮರಿಗಳು ತಿಳಿದು (ಸೌಗಂಧಿ. ೫೬೬-೦೯) ; ನಾರಾಯಣನು ಯಾರಿಗೂ ಕಾಣದಂತೆ ಊರ ಹೊರಗಣ ಒಂದು ದೊಡ್ಡಮರದ ಪೊಟ್ಟರೆಯನ್ನು ಸೇರಿ ಅನ್ನನೀರುಗಳಿಲ್ಲದೆ ಮೂರು ದಿನಗಳಿದ್ದನು (ಭಜ್ಯೋತಿ. ೦೮೭). ಪೊಟರೆ : ಪಕ್ಷಿಗಳೆಲ್ಲ ಸಂಚಾರವಂ ಬಿಟ್ಟು ಕಲಕಲಧ್ವನಿಗಳಂ ಮಾಡುತ ಮರಗಳ ಪೊಟರೆಗಳಲ್ಲಿ . . . ಸೇರಿ (ಸೌಗಂಧಿ. ೦೮೯-೦೬) : ಮನೆಯ ಹದಿಗೆ ಹಾಕಿರುವ ಕಲ್ಲುಗಳ ಪೊಟರೆಗಳಲ್ಲಿ ಕಿರಿಜೇನು, ದುಂಬಿಗಳು ಒಂದು ವಿಧವಾದ ಜೇನನ್ನು ಶೇಖರಿಸಿಡುತ್ತಿದ್ದವು (ಹುಟ್ಟಿಹ. ೦೫೫). ಪೊರಟೆ$_2$: ಆ ಕೋಡಗಿ ಕಾಡಂ ಕೂಡಿ ಕುರವಿಯಾಗಿರ್ದುದಱ ಪೊರಟೆಯೊಳ್ಳತತ್ರಿಗಳ್ಸತ್ತು ಪೋತುಗಳಾಗೆ (ಪುಷ್ಕಾಸ್ತ. ೯-೫೩ ಪ). [ದೇ. ॥ ತುಳು. ಪೊಟ್ರೆ]

ಪೊಟ್ಟವಟ್ಟಳೆ (ನಾ). (?) : ಬಳಸುವೇಱುವ ಸುಟಿವಗಲ್ವಿನ್ತಪ್ಪ ಚಾರಣ ದೋಷಮಲ್ಲದೆ ಪೊಟ್ಟವಟ್ಟಳೆಗೆ ಸಮನಾಗೆ ಗಿರಿಗೆಯ ಕೋಲ್ಮುಟ್ಟಿ

ಮಿಗಲುಂ ನೆಲಲುಮಣಮಿಾಯದಿನ್ತೊನ್ದಳವಿಯೊಳ್ ಬರೆ (ಎಳ. II, ೦೩೩-೯೦ ; ೨೫೫). [?]

ಪೊಟ್ಟವಣಿ (ನಾ). [ಸಂಗೀತ] (?) : ತಾನು ಮೊದಲವು ಮುನ್ನವವ ಱೊಳು ಗಾನಮೊಪ್ಪುವ ದಂಡಿಗೆಯನವಧಾನಿಸುತ ಮಿಗೆ ಮೇಘಜಾಳವ ನೊಡನೆಯೌಠಾಣಮಾನಿತಂ ನವಠಾಣಮುಂ ಸಂಧಾನಮಮರಂ ತಾಳ ಪಠ್ಯಮನೂನಪತ್ರಂ ಪೊಟ್ಟವಣಿ ಸಾರಣಮಲರ್ದಿರಲು . . . ಬಾಜಿಸುತಾ ವಿಮಳರಾಗದೊಳೆ (ಬಸಪು. ೦೯-೮). [?]

ಪೊಟ್ಟಳ, ಪೊಟ್ಟಣ, ಪೊಟ್ಣ (ನಾ). ೧. ಕಾಗದ, ಎಲೆ ಮೊದಲಾದುವುಗಳಿಂದ ಕಟ್ಟಿದ ಪುಡಿಕೆ, ದೊನ್ನೆ ಇತ್ಯಾದಿ : ಜೀವಿತಮರಣಂಗಳೆಂಬಿವಱಿಟ್ಟಳಮುಂ ಪುಸಿಯ ಪೊಟ್ಟಳಮುಮಕ್ಕುಂ (ಶಾಂತಿಪು. ೬-೦೩೨ಪ); ಕುಂಕುಮದ ಪೊಟ್ಟಳ ಜವಾದಿಯ ವಂಕಿ ಪೊಡರ್ವ ಗಂಧದ ಸಿಪ್ಪು ಕರ್ಪುರದ ನಾಳಿಗಳ ಪಿಡಿದೊಡನೆ ನಡೆದರೊಲಿದು (ಪದ್ಮಾ. ೬-೭) ; ಸರಕಾರದ ಸಾಲದ ಪತ್ರಗಳನ್ನು ಕರಿಯ ಮದ್ದಿನ ಪೊಟ್ಟಳಗಳನ್ನು ಕಟ್ಟುವುದಕ್ಕಾಗುಪಯೋಗಿಸಿ . . . ಸುಟ್ಟು ಬಿಟ್ಟನು (ಗುಜಾ. ೮೬). **ಪೊಟ್ಟಣ** : ೧. "ಪೊಟ್ಟಣ(ಳ)–ಪುಟ = ಎಲೆ–ಕಾಗದಗಳ ಬುಟ್ಟಿ" (ಪದ್ಮಕೋ. ೨೬) ; ಅಭ್ಯರ್ಣಪಾದಪಸ್ಪುಟಿತ ವಲ್ಕಲಂಗಳೊಳಂ ಕಟ್ಟಿದ ಕರ್ಪೂರರಜದ ಪೊಟ್ಟಣಂಗಳೊಳಂ ಸ್ವೇದಪ್ರಶೀಕಾರಮನನವರತಂ ಮಾಡಿಯುಂ (ಶಾಪಂಪು. ೬೩೩) : ಬಾಳ್ಗೆನ್ನ ಭಾಳಾಕ್ಷನೆನುತೆ ಪಿನಾಕಿ ಕೊಟ್ಟ ಪೊಟ್ಟಣಮಂ ಬಿಟ್ಟು ಭಕ್ತರ್ಗಿತ್ತು (ಪಂಬರ. ೬-೦೪); ಕಿಸೆಯಲ್ಲಿ ಅಡಿಕೆಯ ಪೊಟ್ಟಣವಿದೆ, ತಂದು ಕೊಡು (ತೇಪೋಕ. ೦೦೬). ೨. (ಹಣ ಮೊದಲಾದುವುಗಳ) ಕಟ್ಟು; ಗೆಂಟು; ಥೈಲಿ: ತನ್ನ ಕಯ್ಯೊಳಿರ್ದ ಸಾಸಿರಗದ್ಯಾಣದ ಪೊಟ್ಟಣಮಂ ಸುಮತಿಯ ಕಯ್ಯೊಳ್ ಕೊಟ್ಟು (ಸುಳುಮಾ. ೭-೨೬ ಪ). **ಪೊಟ್ಣ** : ೧. ಅಂಗಡಿಯಿಂದ ತಂದ ಕಾಫಿಪುಡಿಪೊಟ್ಣ ಒಡೆದುಹೋಗಿದೆ (ಕೂಡಿ).

[ದೇ.॥ ತಮಿ. ಪೊಟ್ಟಲ, ಪೊಟ್ಟಣ, ಪೊಟ್ಟಿಲ; ತುಳು. ತೆಲು. ಪೊಟ್ಲ, ಪೊಟ್ಟ]

ಪೊಟ್ಟಳಂಗಟ್ಟು, ಪೊಟ್ಟಣಂಗಟ್ಟು, ಪೊಟ್ಟಣಗಟ್ಟು (ಕ್ರಿ). ೧. (ಕಾಗದ, ಎಲೆ ಮೊದಲಾದುವುಗಳಿಂದ) ಪೊಟ್ಟಣವನ್ನು ಕಟ್ಟು; ಪುಡಿಕೆಮಾಡು; ದೊನ್ನೆಯಾಗಿಸು: ಪಿರಿದೊಂದು ತಾವರೆಯೆಲೆಯೊಳ್ ನೀರಂ ಮೊಗೆದು ಪೊಟ್ಟಳಂಗಟ್ಟಿ ಕೊಳದಿಂ ಪೊಱಮಟ್ಟು (ಬಂಹಕಿ. ೦೯-೩೫ ಪ). **ಪೊಟ್ಟಣಂಗಟ್ಟು** : ೨. ಉಂಡೆಮಾಡು: ಉಟ್ಟ ಸೀರೆಯ ಪೊಟ್ಟಣಂಗಟ್ಟಿ ಶೂಲಿಯಕ್ಷಿಗೆ ಬಾಯ ಶೇಖವನೋಳಿಯಿಂ ನಸು ಹತ್ತಿಸುತ್ತಿರೆ (ಬಸಪು. ೦೬-೬೦). **ಪೊಟ್ಟಣಗಟ್ಟು** : ೧. ಆದರಿಸಿ ಸಕಲಪುಷ್ಪವನು ಪೊಟ್ಟಣಗಟ್ಟಿ . . . ಶಿವಲಿಂಗಾರ್ಚನೆಯ ಮಾಡಿ ಪುಳಕಿಸುತೆ (ಸಾಮಾಕ. ೭೯-೧೬) ; ಸಿಡಿಲ ಪೊಟ್ಟಣಗಟ್ಟಿ ಸೇಕವ ಕೊಡುವರೇ (ಕುಪ್ಯಾಸ. ೦೯-೩೭) ; ಬಣ್ಣಬಣ್ಣದ ಪೂಗೊಯ್ದು ಹೊಂಬಾಳೆಯ ಪರ್ಣದೆ ಪೊಟ್ಟಣಗಟ್ಟಿ (ಮೋಹತ. ೨೯-೬೮).

[ಪೊಟ್ಟಳ + ಕಟ್ಟು$_1$]

ಪೊಟ್ಟಳಿಗೆ (ನಾ). (ಹಣ ಮುಂತಾದುವನ್ನು ಕಟ್ಟಿದ) ಪೊಟ್ಟಣ ; ಗಂಟು : ಸಾಸಿರದೀನಾರದ ಪೊಟ್ಟಳಿಗೆಗಳಂ ಪ್ರಾಸಾದದ ಮೇಗಿರ್ದು ಜನಸಂಕೀರ್ಣದ ನಡುವೆ ನಾಲ್ಕು ಪೊಟ್ಟಳಿಗೆಯನೀಡಾಡಿದೊಡಾ ಪೊಟ್ಟಳಿಗೆಯಂ ಕೊಂಡು ಕೊಳ್ಳೆನೆಂದು ಪುಸಿದೊಡೆ . . . ಸಾಸಿರದೀನಾರದ ಪೊಟ್ಟಳಿಗೆ ಕೆಟ್ಟುದು (ಪಡ್ಡಾಂ. ೦೩-೬); ಸಾಸಿರ ದೀನಾರದ ಸಮಕಟ್ಟಿನ ನಾಲ್ಕು ಪೊಟ್ಟಳಿಗೆಯನೊಂದೆ ಮಾಡಿ (ಸುಳುಮಾ. ೭-೬ ಪ). [< ಪೊಟ್ಟಳ]

ಪೊಟ್ಟಳಿಸು, ಪೊಟ್ಟಣಿಸು, ಹೊಟ್ಟಳಿಸು (ಕ್ರಿ). ೧. (ಆಲಂ) (ಪೊಟ್ಟಣದಂತೆ) ಉಬ್ಬು; ಊದಿಕೊಳ್ಳು; ಬಾತುಕೊಳ್ಳು: ಕದಂಪು ಬೆಳರ್ತು ಬಾಡಿ ಪೊಟ್ಟಳಿಸಿ ಬೆಳರ್ತು ಮುದ್ರಿಸಿದ ಬಾಯ್ಗಳಲರ್ವಿರಿವಂತು ಕಂಪು ಕೈಕೊಳೆ ಬಿರಿದತ್ತು ತುಂಬಿ ನೆರೆವಲ್ಲಿಗೆ ಮಲ್ಲಿಗೆ ಸಂತೆಯಂತೆವೊಲ್ (ಶಪಂಪು. ೬-೬೪). ೨. ಕೊಬ್ಬು; ಅಹಂಕಾರಪಡು; ಗರ್ವವನ್ನು ಪ್ರದರ್ಶಿಸು: ಲಲಿತಪದಂ ಪ್ರಸನ್ನಕವಿತಾಗುಣಮಿಲ್ಲದೆ . . . ಅರ್ಥದ ಕೇಡೆನೆ ಪೇಟ್ದು ಬೀಗಿ ಪೊಟ್ಟಳಿಸಿ ನೆಗಟ್ತಿಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ (ಪಂಪಭಾ. ೦-೦೨); ಒರ್ವರಪ್ಪೊಡಮಿದಿರ್ಚುವ ಗಣ್ಡರ ನಾಮ್ಪೆವೆನ್ದು ಪೊಟ್ಟಳಿಸುವ ಬೀರರಂ ನೆಱೆಯೆ ಕಾಣೆಮೆ (ಎಳ. IV, ಪುಂಡ್ಯ. ೪೦-೦೬; ೨೫೦); ರಾಜದರ್ಪದಿಂದ ಪೊಟ್ಟಳಿಸುತ್ತಿದ್ದ ಆ ದ್ರುಪದನಿಗೆ ಇದೇ ತಕ್ಕ ಪುರಸ್ಕಾರ (ಗುಕುಪ. ೨೩). **ಪೊಟ್ಟಣಿಸು** : ೧. ಬಱವಱ ಬತ್ತಿ ತೋಱೆ ಕಿಱುನಾಲಗೆ ಮುಟ್ಟಲೊಡಂ ಶಿರೋರುಹಂ ಪಱಿಯೆ ಕುವರ್ಣಮಾಗೆ ನಖದಂತಚಯಂ ಕಡುದಣ್ಣಸಾಗಿ ಸುಯ್ ಪೊಱಮಡೆ ಪೊಟ್ಟೆ ಪೊಟ್ಟಣಿ(ಳಿ)ಸೆ . . . ದಷ್ಟನ ಸಾವು ನಿಶ್ಚಯಂ (ಕೋಕೋತ. ೦೦-೯) ; ಪತ್ತಿರೆ ಪಲ್ಲು ವಿವರ್ಣತೆವೆತ್ತಿರೆ ನಖನಿಕರಮಸಿತಮಾಗಿರೆ ದಶನಂ ಕೆತ್ತಿರೆ ಗಂಟಲ್ ಬಸಿಱೊಳಪತ್ತಿರೆ ಪೊಟ್ಟಣಿಸೆ ದಷ್ಟತನುಗಮರಿಷ್ಟಂ (ಬಸುದ. ೩-೯೫). **ಹೊಟ್ಟಳಿಸು** : ೨. ನುಡಿವಂತು ನಡೆವನಲ್ಲಂ ಕಡುಖಳ ಸಂಯೋಗಿತನಕೆ ಹೊಟ್ಟಳ[ಳಿ]ಸಿಪ್ಪಂ . . . ತಿಂಬುದಡಗು ನುಡಿವುದು ತತ್ವಂ (ತೀಕಿಸಾ. ೬೫೪). [ಪೊಟ್ಟಳ + —ಇಸ್ಸು$_3$]

ಪೊಟ್ಟಿ 'ಪೋಟ್ಟೆ' ನೋ.

ಪೊಟ್ಟು, ಹೊಟ್ಟು$_2$ (ನಾ). ೧. ಧಾನ್ಯದ ಮೇಲಿನ (ನಿಸ್ಸಾರವಾದ) ಸಿಪ್ಪೆ.– ಕವಚ: ಪೊಟ್ಟೆಲರಿಂ ಪಾಱುವವೋಲ್ ಬೆಟ್ಟಂ ಪಾಱುಗುಮೆ (ಪಂಪ್ರಪು. ೬-೩೬); ಇವರೆಲ್ಲರ ಮನದ ದುಃಖಮನಾಱಿಸುವುದು ಬಱಿಯಂ ಕರ್ಮದ ಪೊಟ್ಟಂ ಪಾಱಿಸುವುದು (ಜೀವಸಂ. ೨೬-೫); ಪೊಟ್ಟುಗಳಂ ಕಳೆದು ಸಾರಂಗಳಂ ಸಂಗ್ರಹಿಸಿ (ಪಕಪಂ. ೦೫೬-೦೬). ೨. (ಆಲಂ) ಸತ್ತ್ವವಿಲ್ಲದುದು ; ನಿಸ್ಸಾರವಾದುದು : ಪೂರ್ವೋತ್ತರವೆರಡಱ ಪಕ್ಷಂಗಳೊಳ್ ಯುಕ್ತಿಜಾಲಂಗಳ ಸಾರಾಸಾರಮಂ ಸೋದಿಸಿ ಕಳೆದದಱೊಳ್ಪೊಟ್ಟನೊಳ್ಗಟ್ಟಿಯಂ ಕೂರ್ತೊಳಕೊಂಡಿರ್ಪೊಳ್ಪಿನಿಂ ತತ್ತ್ವದ ನೆಲೆಯಱಿತು . . . ತರ್ಕಿಕುಂ ಚಿಕ್ಕದೇವಂ (ಕಳಿ. ೯-೦೦೦). ೩. ಸುಳ್ಳು; ಸಟೆ : "ಧಾವನನ್ನ ಮುಂದೆ ಪೊಟ್ಟೇಕೆ ಹೇಳುತ್ತಿ?" . . . "ನಾನೇನು ಪೊಟ್ಟು ಹೇಳಿದೆ?" (ಹುಂಹಾ. ೨೬). **ಹೊಟ್ಟು$_2$** : ೧. ಜರಿದುದೀ ಬಲರಾಸಿ ಗಾಳಿಯ ಹೊರಳಿಗೊಡ್ಡಿದ ಹೊಟ್ಟು ಹಾಱುವುದರಿದೆ (ಕುಪ್ಯಾಸ್ತ್ರೋ. ೦೯-೨೭) ; ಗಟ್ಟಿಗೋದುಮೆಯ ನಾಲ್ ಬಳ್ಳಮಂ ನೆನಹಿ ಕುಮ್ಮಿ ಹೊಟ್ಟು ಹಾಱುವ ತೆಱದಿ ಕೇಱಿ (ಸೂಪಶಾ. ೦-೯); ಅದಕ್ಕೆ ಹಾಕುವ ಹುಲ್ಲು, ಹೊಟ್ಟು, ತೌಡು ಮೊದಲಾದ ಆಹಾರವನ್ನು ನೀನೇ ತಿಂದು ಬಿಡು (ಕಪುಳ. ೦೨೫). ೪. (ಮರ ಮುಂತಾದುವುಗಳ) ಪುಡಿ ; ಸಣ್ಣ ಸಣ್ಣ ಚೂರು : ಒಲೆಗೆ ಹೊಟ್ಟು ತುಂಬಬೇಕು (ಕೂಡಿ). ೫. ತಲೆಯಲ್ಲಿ ಉಂಟಾಗುವ ಹಗರು.— ಹುರುಪು : ಮೆಂತ್ಯವನ್ನು ತಿರುವಿ ತಲೆಗೆ ಹಚ್ಚಿ ಸ್ನಾನ ಮಾಡಿದರೆ ಹೊಟ್ಟು ಕಡಮೆಯಾಗುತ್ತದೆ (ಕೂಡಿ). ೬. (ಆಲಂ) ನಿಸ್ಸತ್ವನಾದವನು : ಹೊಟ್ಟ ನೂಕಿ ವೃಥಾಹವದ ಜಗಜಟ್ಟಿ ನೀ ಹೊಱಕಾಲುಗೊಂಡರೆ ಬಿಟ್ಟೆನೇ (ಕುಪ್ಯಾಕ. ೦೦-೩೯).

ಪೊಟ್ಟಾಗು, ಹೊಟ್ಟಾಗು = ೧. ಪುಡಿಯಾಗು ; ಸಣ್ಣ ಸಣ್ಣ ಚೂರಾಗು : ಸತ್ಸುರಭೂಜಂ ಪೊಟ್ಟಾದುದು (ಎಳ. VII, ತಿಕಾಂ. ೨೯೯-೯ ; 1185). ೨. ನಿಷ್ಫಲವಾಗು ; ಹುಸಿಯಾಗು : ಅವರ ನುಡಿ ಸುಳ್ಳಾಗುವುದಿಲ್ಲ ; ಹೇಳಿದ ಕಣಿ ಹೊಟ್ಟಾಗುವುದಿಲ್ಲ (ದೇವಮು. ೯). **ಪೊಟ್ಟು ಮಾಡು** = ವ್ಯರ್ಥ ಮಾಡು : ಕಟ್ಟಿದರ್ಥ ಕಱೆವ ಎಮ್ಮೆ ಕೊಟ್ಟ ಕೊಂಡ ಸಾಲ ಕದನು ಪೊಟ್ಟು ಮಾಡಿ ಮಕ್ಕಳೊಡನೆ ಅಷ್ಟು ಹೇಳಿ ಸಾವ ತನಕ ದುಷ್ಟ ಜನರು ಸುಮ್ಮನಿರುವರೆ (ಕಪಕ. ೦೯೬-೩).

[ದೇ.॥ ತಮಿ. ಮಲ. ತುಳು. ತೆಲು. ಪೊಟ್ಟು ; ಕೊಡ. ಪೊಟ್ಟ್; ಕೋತ. ಪೊಟ್ ; ಕೋಲಾ. ಪೊಟ್ಟ]

ಪೊಟ್ಟುಕತೆ (ನಾ). ನಿಸ್ಸಾರವಾದ ಕತೆ; ಜಳ್ಳುಕಥೆ; ಪೊಳ್ಳುಕಥೆ: ಅಲ್ಲಿಗೇ ಈ ಪೊಟ್ಟುಕತೆ ಮುಗಿದಂತಾಯಿತು (ಶಾಕುಮ. ೩೫).

[ಪೊಟ್ಟು + ಕತೆ]

ಪೊಟ್ಟುಕಳೆ 'ಪೊಟ್ಟುಗಳೆ' ನೋ.

ಪೊಟ್ಟುಗ, ಹೊಟ್ಟುಗ (ನಾ). ನಿಷ್ಪಯೋಜಕನಾದವನು; ಬಲಹೀನ; ಹೇಡಿ: ನೆಟ್ಟನೆ ಪಿತೃಘಾತಿಯಿಂದಂ ನಿಟ್ಟಿಪುದುಂ ನಿಂದ್ಯವೆ ಮ್ಮವಂದಿಗರಿಂದೀ ಪೊಟ್ಟುಗನಂ ಪೊಟಲಿಂದರೆಯಟ್ಟುವೆವೆಂದೊರೆದು ಥಟ್ಟನೊಡನಳವಟ್ಟಂ (ಸಕಲ. ೨-೩೩). ಹೊಟ್ಟುಗ: ಬಿಟ್ಟನಾಹವಕಹಿತ ಬಲಜಗಜಟ್ಟಿ ಕೌರವನೃಪತಿ ರಥವನು ಹೊಟ್ಟುಗರ ತೆಗೆ ಹೋಗಹೇಳೆಂದೆಟ್ಟ ನತಿರಥರ (ಕುಮಾರವ್ಯಾ. ೨-೭೦); ಮರುಳೆ ಹೊಟ್ಟುಗರೊಡನೆ ಜಯಿಸಿದ ಪರಿಯ ಮೆರೆವುದೆ ನನ್ನೊಡನೆ (ಮೂಲಂಠಾ. ೩-೨೯). [ಪೊಟ್ಟು + — ಗ2]

ಪೊಟ್ಟುಗಳೆ, ಪೊಟ್ಟುಕಳೆ (ಕ್ರಿ). ೧. ಸಿಪ್ಪೆಯನ್ನು ಹೋಗಲಾಡಿಸು; ನಿಸ್ಸಾರವಾದುದನ್ನು ತೆಗೆ; ಜಳ್ಳನ್ನು ತೂರು. ೨. (ಆಲಂ) ಹಗುರವಾಗಿ ಕಾಣು; ಅಲ್ಪವೆಂದೆಣಿಸು: ಏವೆನವ್ವ ಏವೆನವ್ವ. . . ಬಲುಬೆಟ್ಟವ ಪೊಟ್ಟುಗಳೆವ ಬೀರನವ್ವ (ಗೀತಗೋ. ೦೭-೦೯). ಪೊಟ್ಟುಕಳೆ: ೨. ಕೆಟ್ಟರಳಿದರೆಂಬ ಕೀರ್ತಿಗಂಜದ ಚಳಿಬಿಟ್ಟ ಕೆಳದಿವೆಣ್ಗಳೊಳು ನೆಟ್ಟನೆ ಬಳೆದಿರ್ದ ನೇಹವ ನೆನೆಯದೆ ಪೊಟ್ಟುಕಳೆದು ಪೊಱಡಿಪುದು (ಹರಿಹ. ೬-೧೫). [ಪೊಟ್ಟು + ಕಳೆ1]

ಪೊಟ್ಟುಗೆಯ್ (ಕ್ರಿ). ಹುರುಳಿಲ್ಲದಂತೆ ಮಾಡು: ನಿಸ್ಸಾರಗೊಳಿಸು; ಶಕ್ತಿಗುಂದಿಸು: ಅಂತಿರ್ಪ ಕೂರ್ಪನೀ ಪಟ್ಟಣದೊಳ್ ಪೊಟ್ಟುಗೆಯ್ದಂ (ಪಕಲಂ. ೫೬-೦೯). [ಪೊಟ್ಟು + ಕೆಯ್1]

ಪೊಟ್ಟುಬಾವಿ, ಹೊಟ್ಟುಬಾವಿ (ನಾ). (ನೀರಿಲ್ಲದೆ) ಹಾಳುಬಿದ್ದ ಬಾವಿ; ಪಾಳುಬಾವಿ: ಅದು ಯಾವುದೊ ಒಂದು ಪೊಟ್ಟುಬಾವಿ. ಅದೀಗ ಮುಚ್ಚುತ್ತಾ ಬರಾಬರಿ ಒಂದಾಳು ಆಳದಲ್ಲಿ ನಿಂತಿತ್ತು (ಕೂಪಗು. ೫೫). ಹೊಟ್ಟುಬಾವಿ: ಅವರಲ್ಲಿ ನೀರು ಇರಲಿಲ್ಲ, ಅದು ಹೊಟ್ಟುಬಾವಿ (ಈಶಕ. ೧೧). [ಪೊಟ್ಟು + ಬಾವಿ]

ಪೊಟ್ಟುವಡೆ (ಕ್ರಿ). ಹೊಟ್ಟಾಗು; ವ್ಯರ್ಥವಾದ ವಸ್ತುವಾಗು; ನಿಸ್ಸಾರವಾಗು: ತರ್ಕದೊಳ್ ಬಾದಂ ಬರ್ಕುಡಿಗುಟ್ಟಿ ಪೊಟ್ಟುವಡೆದೆಂ ದುರ್ವಾದದಿಂದಿನ್ನೆಗಂ ಭೇದಂಬಟ್ಟಿರ್ದೆಗೆಟ್ಟು ಕೆಟ್ಟೆನಿನಿತುಂ ಕಾಲಂಗಳೇಂ ಕರ್ಮವೋ (ಸುಳುಮಾ. ೩-೧೩). [ಪೊಟ್ಟು + ಪಡೆ1]

ಪೊಟ್ಟುವಾಯ್ (ಕ್ರಿ). ನಿಸ್ಸತ್ತ್ವಗೊಳ್ಳುವಂತೆ ಮೇಲೆ ಬೀಳು, — ಎರಗು: ಮುಳಿದಿದಿರಾದುದಾದೊಡಿದಿರಂ ಮುಳಿಸಿಂದಮನನ್ತಪಾಳನಾಗಳೆ . . . ಪೊಟ್ಟುವಾಯ್ಗುಮಾಗಳೆ ಪಡೆಪೊಯ್ಗುಮಾಗಳೆ ಪೊರಳ್ಚುಗುಮಾಗಳೆ ಕೊಂದು ಕೂಗುಗು (ಗಿಸಾ. V, ೦೯-೬; 1099). [ಪೊಟ್ಟು + ಪಾಯ್1]

ಪೊಟ್ಟುಳಿ (ನಾ). ಒಂದು ಬಗೆಯ ವಸ್ತ್ರ: ಅಳಿಲ ಬಣ್ಣವು ಆನೆಮಾರ್ಗ ಶ್ರೀರಾಮನು ಕಳಸಗಂಟೆಯು ಪದ್ಮಮಿತ್ರ ಎಳೆಯ ಮಾಂದಳಿರು ಪೊಟ್ಟುಳಿ ಮುದ್ದುಕೇಸರಿ ಕಳೆಜೂಟನಣುಗ ನೇಯುವನು (ಅಮೃಗಾಂ. ೯-೨೫).

[< ಪಟ್ಟವಟಿ]

ಪೊಟ್ಟೆ1, ಹೊಟ್ಟೆ (ನಾ). ೧. ದೇಹದ ಒಂದು ಭಾಗ; ಜಠರ; ಉದರ: ಪೊಟ್ಟೆ ಬಟ್ಟಾಗಿರ್ದ ಪೆಜನಟ್ಟ ನಡುವಂ ನೋಡಿ ಪೊಕ್ಕು ಮಿಟ್ಟೊಂದು ಮಿಡುಕಲಣ್ಮಾದೆ (ಗದಾಯು. ೯ ೩೯ ಪ); ನೆಕ್ಕ ಕದಂಪು ಕಂಪಿಪಧರಂ ಮಿಗೆ ಕೆಂಪಡರ್ದಕ್ಷಿ ಬಿಟ್ಟ ಬಾಯಕ್ಕುಳಿಸಿರ್ದ ಪೊಟ್ಟೆ ಪೊಱವಾಯ್ದರ್ದೆ . . . ಮಸೆದ ಕತ್ತಿಗೆ ಕಣ್ಣೊಲನಾದುವೆತ್ತಲುಂ (ಪರ್ಶು. ೦೫-೩೯); ನೀನೆನ್ನ ಪೊರೆ ಪೊಟ್ಟೆಗಶನವನಿಕ್ಕಿ (ಕೃಕರ್ಣ. ೦-೦೩೦). ೨. ಕಣ್ಣಿನ ರೆಪ್ಪೆ; ನಿಮೇಷ: ಚಕ್ಷುರಿಂದ್ರಿಯಕ್ಕೆ ಕರಿಯಾಲಿಯು ಮಧ್ಯಂತರೋಪಕರಣಮೆರಡು ಪೊಟ್ಟೆಯುಮೆಮೆ ಇವು ಮೊದಲಾದುವೆ ಬಾಹ್ಯೋಪಕರಣಂ (ಕಸೂಕ್ಷ. ೪೦); ಕಣ್ಣಂ ಮುಚ್ಚಿಹ ಪೊಟ್ಟೆಯೆ ಸನ್ನುತವರ್ಕಣಿಕೆಯದಱ ಮೇಲಣ ರೇಖಂ ಬಣ್ಣಿಪೊಡದು ಕ್ಷಣಿಯಕ್ಕುಂ (ಕಕ್ಕಣಾ. ೯-೦೫). ಹೊಟ್ಟೆ: ೧. ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ (ಇಸಸ. ೨೯೦); ಕೊರಳಿಗಡರುವ ಹೊಟ್ಟೆಗಳ ಪುಷಿವರರು (ಕುಮಾಸಂ. ೦೬-೯೦); ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ (ಪುರಂದ. ೯-೫೫ ಕೃತಿ); ತನ್ನ ಹೊಟ್ಟೆಗೆ ಸಹ ಪೂರಾ ತಿನ್ನುತ್ತಿರಲಿಲ್ಲ (ಮುಂಬಹಿ. ೯-೫೨). ೨. ಚಕ್ಷುವಿಂಗೆ ಕರಿಯಾಲಿ ಬಿಳಿಯಾಲಿ ಇವೊಳಗಣುಪಕರಣಂ ಎವೆ ಹೊಟ್ಟೆಯೆಂಬಿವು ಬಾಹ್ಯೋಪಕರಣಂ (ಕಸಾಕ. ೧೩). ೩. ಬಸಿರು; ಗರ್ಭ: ಹೊಟ್ಟೆಯೊಳಗಿನ ಕೂಸು ಹೊಟ್ಟೆಯೊಳಗಿರುವಾಗ ಪುಟ್ಟಪ್ಪ ಅಂತ ಹೆಸರಿಟ್ಟರು (ಗಾಪ). ೪. ಡೊಳ್ಳು; ಬೊಜ್ಜು: ಈಚೆಗೆ ಅವನಿಗೆ ಸ್ವಲ್ಪ ಹೊಟ್ಟೆ ಬಂದಿದೆ (ರೂಢಿ). ೫. ಸಂತಾನ; ವಂಶದ ಕುಡಿ: ಕಳೆದೈ ಬಿಟ್ಟು ಮಗನೆ ನಮ್ಮನು ಬಟ್ಟಬಯಲೊಳಗಿರಿಸಿದೈ ಹೊಗಗುಟ್ಟಿದೈ ಕಾಳ್ಗಿಚ್ಚಿನಲಿ ಕಾಮೋಷ್ಣಿಯಲಿ ಪಡೆದ ಹೊಟ್ಟೆ ಬಱುದೊಱ್ಯಾಯಿತೇ (ಕೊಕಕಾ. ೨-೩-೩೭). 'ಪೊಡೆ2' ಪರಾ.

ಹೊಟ್ಟೆ ಕಿವಿಚಿಕೊಳ್ಳು = (ಆಲಂ) ಕರುಬು; ಅಸೂಯೆ ಪಡು: ನಿದ್ರೆ ಬರದಿರಬೇಕಾದರೆ . . . ಆಸ್ತಿಯನ್ನು ಕಳೆದುಕೊಂಡಿರಬೇಕು, ಕಾಮುತುರ ನಾಗಿರಬೇಕು ಅಥವಾ ಕಳ್ಳನಾಗಿರಬೇಕು, ಅನ್ಯರ ಆಸ್ತಿಗೆ ಆಸೆಪಟ್ಟು ಹೊಟ್ಟೆ ಕಿವಿಚಿಕೊಳ್ಳುತ್ತಿರಬೇಕು (ಪಕಪಾ. ೨೩೬). ಹೊಟ್ಟೆಗೆ ಹಾಕಿಕೊಳ್ಳು = ೧. ಆಹಾರವನ್ನು ತೆಗೆದುಕೊಳ್ಳು; ಊಟಮಾಡು: ಹುಸುವು ತಡೆಯಲಾಗುತ್ತಿಲ್ಲ. ಮೊದಲು ಏನಾದರೊಂದಿಷ್ಟು ಹೊಟ್ಟೆಗೆ ಹಾಕಿಕೊಂಡು ಬರುತ್ತೇನೆ (ರೂಢಿ). ೨. (ಆಲಂ) ಕ್ಷಮಿಸು; ಮನ್ನಿಸು: ತಮ್ಮ ಮಗಳು ತಿಳಿಯದೆಮಾಡಿದ ತಪ್ಪನ್ನು ಹೊಟ್ಟೆಗೆಹಾಕಿಕೊಳ್ಳಬೇಕೆಂದು ಅವಳ ತಾಯಿ ಅವರನ್ನು ಕೇಳಿಕೊಂಡಳು (ರೂಢಿ). ಹೊಟ್ಟೆಗೆ ಹಾಕು = ೧. ತಿನ್ನಲಂ ಕೊಡು: ಮೊದಲು ಅವನಿಗೆ ಹೊಟ್ಟೆಗೆ ಹಾಕಿ ಕಳುಹಿಸು (ರೂಢಿ). ೨. ಸಾಯಿಸಲೆಂದು ಔಷಧವಿಡು, —ಮದ್ದಿಡು: ಅವರಿಗೆ ಯಾರೋ ಆಗದವರು ಹೊಟ್ಟೆಗೆ ಹಾಕಿ, ಬದುಕುವುದೇ ಕಷ್ಟವಾಯಿತು (ರೂಢಿ). ಹೊಟ್ಟೆ ತಣ್ಣಗಾಗು = (ಆಲಂ) ಸಮಾಧಾನವಾಗು; ತೃಪ್ತಿಯಾಗು: ನಿನ್ನ ಸೇಡು ತೀರಿತು. ಈಗಲಾದರೂ ಹೊಟ್ಟೆ ತಣ್ಣಗಾಯಿತಲ್ಲ (ರೂಢಿ). ಹೊಟ್ಟೆ ತಣ್ಣಗಿಡು = (ಆಲಂ) (ಸಂತಾನವನ್ನು) ಸುಖವಾಗಿರಿಸು: ದೇವರು ನಿಮ್ಮ ಹೊಟ್ಟೆ ತಣ್ಣಗಿಡಲಿ (ಸುಖಾಹ. ೦೯). ಹೊಟ್ಟೆ ತಣ್ಣಗೆ ಮಾಡಿಕೊಳ್ಳು = (ಆಲಂ) ಸಮಾಧಾನ ಮಾಡಿಕೊಳ್ಳು; ಸಂತೃಪ್ತಿಗೊಳ್ಳು: ಬಸಿಲು ಮಳೆ ಗಾಳಿಗಳಿಗೆ ಸಿಕ್ಕಿ ತಪಸ್ಸಿನಲ್ಲಿ ನವೆಯುತ್ತಿದ್ದ ನಮ್ಮನ್ನು ಸುಖವಾಗಿದ್ದ ಈ ದುಷ್ಟ ನೋಡಿ ಹೊಟ್ಟೆ ತಣ್ಣಗೆ ಮಾಡಿಕೊಳ್ಳಬೇಕೆಂದು ಬಂದನು (ಪಕಪಾ. ೦೬೦); ತನ್ನ ಗಂಡನನ್ನು ಕೊಲ್ಲಿಸಿದವನನ್ನು ತಾನು ಕೊಂದು ಮುಯ್ಯಿ ತೀರಿಸಿಕೊಂಡು ಹೊಟ್ಟೆ ತಣ್ಣಗೆ ಮಾಡಿಕೊಂಡದ್ದಷ್ಟೇ ಅವಳಿಗೆ ಸಮಾಧಾನ! (ಬಂಕಸು. ೦೫೫). ಹೊಟ್ಟೆ ತಣ್ಣಗೆ ಮಾಡು = (ಆಲಂ) ತಂಪಾಗಿಸು; ತಂಪು ಮಾಡು: ಹಾಡಿಯ ಮರದಿಂದ ಕೋತಿಗಳ ಹೀಡು ಬಂದರೆ ಗೊನೆಗೊನೆ ಸೀಯಾಳ ಹಾಳಾಗುತ್ತದೆ. ಅದನ್ನೆಲ್ಲಾ ನೋಡಿದರೆ ನಿಮ್ಮ ಹೊಟ್ಟೆ ತಣ್ಣಗೆ ಮಾಡಿದರೆ ಪುಣ್ಯವಾದರೂ ಬರುತ್ತದೆ (ಕೀಕಹಿ. ೦೬೦). ಹೊಟ್ಟೆಯ ಮೇಲೆ ಹೊಡೆ = (ಆಲಂ) ಜೀವನೋಪಾಯಕ್ಕೆ ಅಡ್ಡಬರು: ಭಂಗೀಜನರು ತತ್ತರಿಸಿದರು . . . ಹೊಟ್ಟೆಯ ಮೇಲೆ ಹೊಡೆಯಬೇಡಿರಿ ಎನ್ನತೊಡಗಿದರು (ಸ್ಮೃತಿಕಿ. ೩೦೭). ಹೊಟ್ಟೆ ಸಾಗಿಸು = (ಆಲಂ) ಹೊಟ್ಟೆಯ ಪಾಡನ್ನು ನೀಗಿಸು; ಬದುಕನ್ನು ನಡೆಸು: ತನ್ನ ಹೊಟ್ಟೆ ಸಾಗಿಸುವ ಎಮ್ಮೆ ಸತ್ತಿದ್ದರಿಂದ ಆ ಗವಳಿಗನು ಎದೆ ಎದೆ ಬಡಕೊಂಡು, ಇನ್ನೇನು ಗತಿಯೆಂದು ಅಳಹತ್ತಿದನು (ಮುಂಬಹಿ. ೦-೦೯). ಹೊಟ್ಟೆ ಹಿಡಿ = (ಆಲಂ) (ದುಃಖವನ್ನು) ತಾಳಿಕೊಳ್ಳು; ಸಹಿಸಿ

ಕೊಳ್ಳು: "ಅಪ್ಸರೆ ಅಂತಹ ಹುಡುಗೀನ ಮನೇಲಿ ಕೂರಿಸಿ . . . ನಾನು ಹೇಗೆ ಹೊಟ್ಟೆ ಹಿಡಿದು ಬರಲಿ" ಎಂದು ಗೋಳಿಡುತ್ತಿದ್ದರು (ದೂಪಟ್ಟ. ೭೦).

[ದೇ.ಪ ತುಳು. ಕೊಡ. ಪೊಟೆ ; ತೆಲು. ಕೋಲಾ. ನಾಯ್ಕಿ. ಪರ್ಜಿ. ಪೊಟ್ಟ./ಪ್ರಾ. ಪೋಟ್ಟ, ಪುಟ್ಟ./ಮರಾ. ಪೋಟ್]

ಪೊಟ್ಟೆ₂ 'ಪೋಟೆ₁' ನೋ.

ಪೊಟ್ಟೆಕಿರ್ಚು, ಹೊಟ್ಟೆಕಿಚ್ಚು, ಹೊಟ್ಟೆಗಿಚ್ಚು (ನಾ). ೧. ಹೊಟ್ಟೆಯೊಳಗೆ ಆಹಾರ ಜೀರ್ಣವಾಗಲು ಅನುಕೂಲವಾಗುವ ತಾಪ ; ಜಠರಾಗ್ನಿ : ಪಿರಿದುಣ್ಬೆಂದೊತ್ತೆಪಟ್ಟ ಪೊಟ್ಟೆಕಿರ್ಚಲ್ತೆ ನಂದುಗುಂ ಪಿರಿದುಂ ಸೌದೆ ಕವಿವ ಕಿರಿದಾದುರಿಯಂತೆವೊಲ್ (ಸೌಸಂದ. ೦೪ ೭). 'ಪೊಡೆಗಿಚ್ಚು' ಪರಾ. **ಹೊಟ್ಟೆಕಿಚ್ಚು** : ೨. (ಆಲಂ) ಅಸೂಯೆ ; ಕರುಬು ; ಮಾತ್ಸರ್ಯ : ಅವರಾಡುವ . . . ಬಯಲಾಟಗಳು ಹೊಟ್ಟೆಕಿಚ್ಚು ಹುಟ್ಟಿಸುವುವು (ಪಟ್ಟಕೊ. ೩); ಜೀವಜೀವನದ ಹೊಟ್ಟೆಕಿಚ್ಚು ಕಾರಿತು ವಿಷಪ್ರಸಾದ (ಅರಳು ೪೩೪-೦೬). **ಹೊಟ್ಟೆಗಿಚ್ಚು** : ೨. ಈ ಹೊಟ್ಟೆಗಿಚ್ಚಿಗೇನು ಮದ್ದು ? (ರೂಢಿ).

ಹೊಟ್ಟೆಕಿಚ್ಚಿನ ಮೊಟ್ಟೆಕೋಳಿ = (ಆಲಂ) ಅತಿಯಾಗಿ ಅಸೂಯೆ ಪಡುವ ವ್ಯಕ್ತಿ; ಕರುಬುವ ವ್ಯಕ್ತಿ: ನೀನು ಹೊಟ್ಟೆಕಿಚ್ಚಿನ ಮೊಟ್ಟೆಕೋಳಿ (ಹಾಹುತ್ತ. ೪). **ಹೊಟ್ಟೆಗಿಚ್ಚು ಪಡು, ಹೊಟ್ಟೆಕಿಚ್ಚು ಪಡು** = ಅಸೂಯೆ ಪಡು; ಕರುಬು ; ಮತ್ಸರಿಸು: ತನಗೆ ಸವತಿಯೆಂದು ಅವಳ ಮೇಲೆ ಹೊಟ್ಟೆಗಿಚ್ಚು ಪಡಲಿಲ್ಲ (ರೇವೀಸೌ. ೦೦); ನೀವೆಲ್ಲ. . .ತಮಾಷೆಯಾಗಿ ಕಾಲ ಕಳೆಯುತ್ತಾ ಇರುವುದನ್ನು ನೆನೆದುಕೊಂಡು ಹೊಟ್ಟೆಕಿಚ್ಚು ಪಡುತ್ತಿದ್ದೆ (ಶಾಲೆಮ. ೧೯೦). [ಪೊಟ್ಟೆ₁ + ಕಿರ್ಚು (< ಕಿಚ್ಚು)]

ಪೊಟ್ಟೆಗವಡಿಕೆ (ನಾ). (ಉಜ್ಜುಗಲ್ಲಾಗಿ ಬಳಸುವ ನುಣುಪಾದ) ದಪ್ಪ ಕವಡೆ : ಪೂರ್ವಾಪರದಿಗ್ಭಾಗದ ಸಮಭೂತಳಪ್ರದೇಶದೊಳ ಪೂರ್ವಶಿಲ್ಪಿಕೃತಮಪ್ಪ ಲೆಕ್ಕವಲಗೆಯಂ ಕಾಡಿಗೆಯೊಳ್ ಪು[ಘ]ಟ್ಟಿಸಿ ಪೊಟ್ಟೆಗವಡಿಕೆಯೊಳೊರಸಿದುತೆ ಮಿಂಚೆ (ಶಾಂತಿಪು. ೯-೧೪೩ ವ).

[ಪೊಟ್ಟೆ₁ + ಕವಡಿಕೆ₂]

ಪೊಟ್ಟೆಗುಡುಮ (ನಾ). ೧. ಹೊಟ್ಟೆ ದಪ್ಪನಾಗಿರುವವನು; ಬೊಜ್ಜು ಬೆಳೆದವನು. ೨. ಹೊಟ್ಟೆಬಾಕ; ಶಿಂಡಿಪೋತ : ಪಟ್ಟೆನಾಮವ ಬಳೆದು ಪಾತ್ರೆ ಕೈಯಲಿ ಹಿಡಿದು ಗುಟ್ಟಿನಲಿ ರಹಸ್ಯವ ಗುಱುತಱಿಯದೆ ಕೆಟ್ಟ ಕೂಗನು ಕೂಗಿ ಬಗುಳಿ ಬಾಯಾಱುವಂಥ ಪೊಟ್ಟೆಗುಡುಮ ಮೃಗಗಳೆಲ್ಲ ಶ್ರೀವೈಷ್ಣವರೆ (ಕನಕ. ೦೨೬-೨). [ಪೊಟ್ಟೆ₁ + ಗುಡುಮಿ + —ಅ₇]

ಪೊಟ್ಟೆಬೇನೆ, ಹೊಟ್ಟೆಬೇನೆ (ನಾ). ಹೊಟ್ಟೆನೋವು; ಜಠರರೋಗ : ಅಸಾತೋದಯಜನಿತಮಪ್ಪ ತಲೆಬೇನೆ ಪೊಟ್ಟೆಬೇನೆ ಶೂಲೆ . . . ಮೊದಲಾದಯ್ವತ್ತುಕೋಟಿಯುಂ . . . ರೋಗ (ಶ್ರಾವಕಾ. ೬೯-೬). **ಹೊಟ್ಟೆಬೇನೆ** : "ಹೊಟ್ಟೆಬೇನೆಯದು ಗುದಖಾಸಮೆನಿಸಿಕ್ಕು" (ಮಂಗರಾ. ೦೦೪-೩); ಹೊಟ್ಟೆಬೇನೆಗೆ :—ಅಪಿನಿ, ಅಳಲೇಕಾಯಿ, ಜಾಯಿಕಾಯಿ, ಗಜ್ಜುಗದ ತಿರುಳು, ಶುಂಠಿ . . . ಕೊಳುವುದು (ವಿವೈವಿ. ೬೮) ; ರಾಘಪ್ಪನು ಹೊಟ್ಟೆಬೇನೆ ಹತ್ತಿ ಹಾಸಿಗೆ ಹಿಡಿದನು (ಗಂಮಾಯಿ. ೨೦೦). [ಪೊಟ್ಟೆ₁+ಬೇನೆ]

ಪೊಟ್ಟೆವಂತ (ನಾ). ದಪ್ಪಹೊಟ್ಟೆಯನ್ನು ಹೊಂದಿರುವವನು ; ಲಂಬೋದರ ; ಗಣಪ : ಪೊಟ್ಟೆವಂತಂ ಬೆನಕಂ (ಕಜ್ಜಾಮ. ೪೦೨ ಪ್ರಯೋ). [ಪೊಟ್ಟೆ₁ + — ವಂತ]

ಪೊಟ್ಟೆವಾಯ್ (ಕ್ರಿ). ೧. ಹೊಟ್ಟೆಯು ಊದು,—ಉಬ್ಬರಿಸು : ಅಂತು ಪೊಟ್ಟೆವಾಯಲ್ತಿಂದು ಸೂಲೆ ಪುಟ್ಟಿ ಸತ್ತು ಅಗ್ನಿಭೂತಿ ವಾಯುಭೂತಿ ಗಳಾದಿರ್ (ಪುಷ್ಕಾಸ್ತ್ರ. ೬-೫೬ ವ). ೨. (ಕಣ್ಣಿನ) ರೆಪ್ಪೆಯು ಅದುರು ; ಎವೆ ಮಿಡುಕು ; ಇದು ಒಂದು ಶಕುನವೆಂಬ ನಂಬಿಕೆಯಿದೆ : ಅಗಿದಪುದೀಗಳಾಂ ಪಿಡಿದ ಕೆಂದಳಮೀಯೆಡದೋಳ್ಗೆ ಕೆತ್ತುಗಳ್ ತಗುಳ್ದಪು ವೆತ್ತುವೀ ಮಿಡುಕೆ ಮಾಣದೆ ಪಾಯ್ದುದೆ ಪೊಟ್ಟೆವಾಯ್ವ ಚಕ್ಷುಗೆ ಪಿರಿದಾದುದಕ್ಕುಮೆ ಪರಿಸ್ಫುರಿತಂ ಪೆಱತೇನೊ ದೇವಿಯಾಕೆಗೆ ವರನಂ ಮನೋಹರನನಿಂದು ಕುಡಲ್ ಕಡುಗೂರ್ತಳಾಗಳೇ (ಲೀಲಾವ. ೦೦-೫೫).

[ಪೊಟ್ಟೆ₁ + ಪಾಯ್₁]

ಪೊಟ್ಟೆವೋಗು 'ಪೋಟೆಹೋಗು' ನೋ.

ಪೊಟ್ಣ 'ಪೊಟ್ಟಳ' ನೋ.

ಪೊಡಕರಿಸು, ಹೊಡಕರಿಸು (ಕ್ರಿ). ೧. ಕಾಣಿಸಿಕೊಳ್ಳು; ತೋರು; ಸ್ಫುಟವಾಗು ; ಪ್ರಕಟವಾಗು : "ಮಿಗೆ ಪೊಟ್ಟಱಿಸಿತೆಂದು ಕಣ್ಣಲೆದು ದೆಂದಿರದೆ ಪೊಡಕರಿಸಿತಕೆ ನಾಮಂ" (ಕಬ್ಬಕ್ಕ. ೭೪) ; ನುಡಿಯೆ ಬಳಲ್ದ ಪಾಂಥನೆರ್ದೆ ತಣ್ಪಿನ ಸೋನೆಯನಾಂತ ಮಾಳ್ಕೆಯಿಂ ಪೊಡಕರಿಸುತ್ತೆ [ಶಾಕಾಂ. ಪೊಡರಿಸುವಂತೆ] ಪೆರ್ಚಿ (ಗಿರಿಕ. ೨-೦೯); ಪೊಡಕರಿಪ ಗುಡಗುಣ ದುಗ್ಗಡವೆಂತು[ಟೊ] (ಸೌಇಇ. IV, ೨೬೭-೨೯; 1380); ಗಗನಮಂಡಲವ ಬಗಿದು ಪೊಡಕರಿಸೆ ವೃಷಭಧ್ವಜಾನೀಕ (ಸೌಂದಪು. ೦೮-೦೪); ರೋಷಶಿಖಿ ಪೊಣ್ಮೆ ಪೊಡಕರಿಸಿ ಪರ್ಬಿದುದನೇನೆಂಬೆನು (ಕಪಪು. ೨೦-೩೪). ೨. ಹೊರ ಹೊಮ್ಮು ; ಹೊರ ಬರು : ಪೊಸಗಾರ ಸಿಡಿಲ ಮಸಕ ಮನಸಕಱಿದು ಕೃತಾಂತಜಿಹ್ವೆ ಪೊಡಕರಿಸುವವೋಲ್ ಬೆಸಸು ಬೆಸಸೆಂದು ಕರಮರ್ವಿಸಿ ಸನ್ನಿದಮಾಯ್ತು ವಿದ್ಯೆ ರಾವಣನಿದಿರೊಳ್ (ಸಂರಾಮಾ. ೦೪-೦೦೫); ಶಿಶು ನಾಲಗೆಗಿತ್ತಳುವಂತೆ ರಂಗಮಂಟಪದೊಳ್ ಪೊರಳ್ದು ಪೊಡಕರಿಸಲಾಱದೆ ಕಿಂಕುರ್ವಾಣ ಕೈ ಮಿಕ್ಕು . . . ಮಱುಗಿ (ಸಂಬರ. ೦೨-೬೨); ಮುನಿದೀ ಶಿಲೆಯನೆತ್ತಿದೊಡಾನುಂಗುಟದಿನೊತ್ತಿದೊಡೆ ಪೊಡಕರಿಸಲಾಱದೆವೊಳಱಿದಂ (ಶಾಂತೀಶ್ವ. ೧೩-೧೬ ವ); ಪೊಡಕರಿಪ ದಾರಿಯ ನಿತ್ತ ನಿರುಕಿಸಾ ದುಃಖದಿಂ ಪರಿಪಕ್ವಮಾದೆ (ಸಂಸಪ. ೨೫-೦೬). ೩. ನಡುಗು; ಕಂಪಿಸು : ಜಡೆಯಿಡುಕುಱಿಡೆಯೆಡೆಯೊಳಡಿಯಿಡುವ ಕಡಲ ತಡಿವಿಡಿದುಡುಗಡಣದೊಡೆಯನೊಡಲೊಡಕು ನಡನಡುಗಿ ಪೊಡಕರಿಸಿ ಮಿಡುಮಿಡುಕಲು (ಹಡಕಾ.೧-೨). **ಹೊಡಕರಿಸು**: ೧. ಹಿಡಿ ಧನುವನೆಲೆ ಭೂಪ ಮಿಡುಕು ಧೃಷ್ಟದ್ಯುಮ್ನ ಸಾತ್ಯಕಿ ಹೊಡಕರಿಸು (ಕುಷ್ಯಾಗ. ೩-೪೩); ಕಾಳಕೂಟದ ಕಡಲ ಕಟ್ಟೆ ವಿತಾಳಿಸಿತೊ ಶಿವಯೆನಲು ಸಲೆ ಹೊಗೆವಾಲಿಗಳ ಹೊಡಕರಿಸುವತಿಶಯವಿಕೃತವಿಗ್ರಹದ ಕಾಳಿಕೆಯ ಕುಡಿಪೆಳಗುಗಳ . . . ರಾಕ್ಷಸವರೂಥಿನಿ ಕಾಳಗಕೆ ಹೊಱವಂಟುದು (ಶೊರರಾ. ೨-೦೩-೦೪); ಕೆಡೆಯೆನುತ ಕನಲಿ ಕುಶಾಗ್ರದಲಿಡಲು ಬಿದ್ದನು ಸೂತನವನಿಗೆ ಹೊಡಕರಿಸಿ ಹಾಯೆನುತ ವಿಪ್ರಸ್ತೋಮ ಗಜಬಜಿಸೆ (ವಿಭಾಗ. ೦೦-೯೪-೨೬). ೨. ಸೂರ್ಯಾಂಶುವೆಂಬ ಕಿಚ್ಚಂ ಕಾದು ಕೆಂಗಲಿಸಿ ಚಾರು ಬೆಳಗಾಱಿ ಕಪ್ಪಾಯ್ತೊ ಹೇಳೆಂಬ ವಿಸ್ತಾರದಿಂ ಕಾಳಗತ್ತಲೆಯೆಂಬ ಲತೆ ಹಚ್ಚಿ ಹೊಡಕರಿಸಿ ಮಡಲಿಱಿದುದು (ಹಡಕಾ. ೩-೬೬) ; ಹೊಗೆಯೆದ್ದು ಹೊಡಕರಿಸದೆ ಮದನಾಗ್ನಿ ಮೆಯ್ದೆಗೆವುದೆ ಮೃಗಶಾಬನೇತ್ರೆ (ಕುರಾಸಾಂ. ೨೬-೦೫೪) ; ಹತ್ತಿರಿದ್ದರು ದೂರ ಹೃದಯಗಹ್ವರದಲ್ಲಿ ಮಿಣಿ ಮಿಣಿ ಎನುವ ಪಣತಿ ನಮ್ಮ ಜೀವದ ಗೆಣತಿ ಹೊಮ್ಮಿ ಹೊಡಕರಿಸಿದರೆ ಹೊಸ ಬೆಳಕಿನಾಕೃತಿ (ನಲಮು. ೬೨-೩). ೩. ಉಬ್ಬೇಱಿ ಹೊಕ್ಕುದು ಹೊಡಕರಿಸಲಿಳೆ ವೀರರುಭಯದಲಿ (ಶೊರರಾ. ೬-೨೧-೦೦). ೪. ವ್ಯಾಪಿಸು ; ಆವರಿಸು : ಹಿಂದೆನ್ನ ಹೆಸರೆಂದಡೋಡುವ ಕತ್ತಲೆ ಹೊಡಕರಿಸುತಿರ್ದುದೆನ್ನಾಳಿಕೆಗೆ ಶಶಿಯ ಮುಂಗುಡಿ ಧಾಳಿ ಬರುತಿದೆಯಿದು ಕಂಡು ಜೀವಿಪೆನ್ನೊಡಲಾಸೆಯೇಕೆಂದು ಲಜ್ಜೆಯಿಂದಿಳವಂತೆ ಬಿದ್ದನಿನನಬುಧಿಯೊಳಗೆ (ಹಡಕಾ. ೩-೭೪) ; ಗಡಣದಂಬಿನ ಮಸೆಯ ಬೆಳಗಿನೊಳಡಸಿದಾಕ್ಷಣ ಮತ್ತೆ ನಿಮಿಷಕೆ ಹೊಡಕರಿಸಿ ಹಬ್ಬಿದುದು ಮಬ್ಬಿನ ಧಾಳಿ ದೆಸೆದೆಸೆಗೆ (ಕುಷ್ಯಾಮ್ರೋ. ೦೫-೨೭) ; ಮತ್ತೆ ಹೊಡಕರಿಸಿ ಕೋಪಾಗ್ನಿ ರಕ್ಕಸನ ಮೈ ಪೊತ್ತಿದುದು (ಕಪಪು. ೪೮-೦೩). ೫. ಹೊಳೆ ; ಸ್ಫುರಿಸು ; ಪ್ರಕಾಶಗೊಳ್ಳು : ಮಿಸುನಿ

ಯೋಲೆಗಳೆಸೆಯೆ ಘಲಿಘಲಿಲೆನಲಂದುಗೆ ಹೊಡಕರಿಸೆ ಹಾರವೆಡೆವಿಡದೆ ನರ್ತಿಸೆ ಕುರುಳು ಕಡುನೀಱೆಯೋರ್ವಳುಯ್ಯಲನಾಡುತಿರ್ದಳು. (ರೇಮಾ. ೬-೨೩) ; ಮುಸುಕಿದ ಸಿಂಗಾಡಿಯಂಬುಗಳೊಳಗೆ ಕಣ್ಗೆಸೆದನು ಬೆತ್ತದಡವಿಯ ಹಸರದೊಳಗೆ ಹೊಕ್ಕು ಹೊಡಕರಿಸುವ ಸಿಂಗಸಿಸುವಿನಂತಾ ವೀರರಾಮ (ಕುರಾಸಾಂ. ೪೩-೯೮) ; ಲೋಚನದ ನೋಟದ ಹೊಳಹು ಹೊಡಕರಿಸೆ (ಸೈಮಭಾ. ೨೯-೨೮) ; ಗುಡುಗುಡಿಸುತ್ತ ಕುಡಿಮಿಂಚಿಂ ಹೊಡೆದು ಹೊಡಕರಿಸುತೆ ಆಗಸದಲಿ ನೆಗೆದು (ಪಲ್ಕೆ. ೬೨-೦೪). ೬. ಉರಿ ; ಪ್ರಜ್ವಲಿಸು : ಕೆರಳಿ ರೋಷಾಗ್ನಿ ಹೊಡಕರಿಸೆ ಹೊಗೆ ಸುತ್ತಿ ಮೆಯ್ಯುರವು ಕಪ್ಪಾಗೆ (ಹಸಕಾ. ಪರಿ. ೨೦೪). ೭. ಬೆರೆ ; ಕೂಡು ; ಒಂದಾಗು : "ಹೊಡಕರಿಸಿತೆನಲ್ಕೆ ಬೇಗ ಬೆರಸಿದುದಕ್ಕುಂ" (ಭಾಕವಿ. ೨೨) ; ಹರಹಿನಲಿ ಹೊದಱೆದ್ದು ಹರುಷದ ಹೊರಳಿಯಲಿ ಹೊಡಕರಿಸಿ ಚಿತ್ತವ ತಿರುಹಿ ಹಿಡಿದನು (ಕುಪ್ಯಾಲಿ. ೬-೩೯) ; ಹರಶರಾನಲ ತೀವ್ರಧೂಮಜ್ವಾಲೆಗಳ ಝಳದ ಹೊರಳಿಯಲಿ ಹೊಡಕರಿಸಿ ಹಾಯೆಂದೊಱಲಿದುದು ಬಲವೆರಡು (ವಿಭಾಗ. ೦೦-೬೯-೨೬). ೮. ಅಲುಗಾಡು; ಅಲುಗು : ನುಡಿಸಿದೊಡಿನಿಸಱಿಯದೆ ನೋಡಿ ಮರವಟ್ಟು ಹೊಡಕರಿಸದೆ ಸುಮ್ಮನಿರಲು ನಡುಗಿ ಶೋಕಿಪ ಮಡದಿಯರ ಕಂಗಳ ಜಲ ತಡಹನೊಡೆದ ಮಳೆಯಾಯಿತು (ಅಂಪಸ. ೭-೯೯). ೯. ಹೊರಬೀಳು ; ತಪ್ಪಿಸಿಕೊಳ್ಳು : ಶಿದ್ಧಿತಾತನ ತಪಸು ಮಾಯೆಯ ಮದ್ದಿನಲಿ ಮರುಳಾಗಿ ಮದನನ ಹೊದ್ದಿದನು ಹೊಡಕರಿಸಲಱಿಯದೆ ಬಳಿಕಲಾ ಮುನಿಪ (ಹೊರಾ. ೦-೩-೩೬). ೧೦. ಅಟ್ಟು ; ಓಡಿಸು : ಪೊಡೆದು ಕೆಲವ ಹೊಡಕರಿಸಿ ಕೆಲವ ಕರ್ಚಿ ಕೊಡಹಿ ಕೆಲವನಾಗಳಿಗೆ ಕೆಡಪಿತು ಭರದಿಂದ ಪಕ್ಕಿಗಳನು ಸಾಳ್ವ (ಕುರಾಸಾಂ. ೨೬-೬೬). ೧೧. (ಗಾಳಿಯು) ಬೀಸು ; ಚಲಿಸು : ತೆಂಕಣ ದಿಶಾಭಾಗದೊಳು ಗಾಳಿ ಹೊಡಕರಿಸೆ ಮನ್ಮಥಭೂಪನು ತಿಳಿದು ಬಲು ಬತ್ತಳಿಕೆಗಳನಱಸೆ (ಹಸಕಾ. ೩-೦೪). ೧೨. ಒಡೆದುಹೋಗು ; ಚೂರಾಗು : ರಕ್ತಮಳೆ ಸುರಿದು ದಭ್ರದಿ ದೇವಪ್ರತಿಮೆಗಳ್ ಕುಕ್ಕರಿಸಿ ಬಿದ್ದು ಹೊಡಕರಿಸಿದುವು ಶಿಖರ ಪೊಂಗಳಸಗಳ್ ನೆಲಕುರುಳಿತು (ತುರಂಗ. ೨೨-೩೯).

[< ಪೊಡರ್$_1$ + — ಇಸು$_3$]

ಪೊಡಣಿಗೆ 'ಪೊಡ್ಡಣಿಗೆ' ನೋ.

ಪೊಡಣಿಗೆಗೊಡು 'ಪೊಡ್ಡಣಿಗೆಗೊಡು' ನೋ.

ಪೊಡಪತ್ರ, ಪೊಡಪತ್ರೆ (ನಾ). ಒಂದು ಬಗೆಯ ಔಷಧೀಯಗಂಣವುಳ್ಳ ಮರ : ತಿಗಡೆ, ಹಿಪ್ಪಲಿ, ಬಜೆ . . . ಪೊಡಪತ್ರ, ನೀಲಿಬೇರು . . . ಇವನ್ನು ಸಮಭಾಗ ಕಷಾಯ ಮಾಡಿ ಕೊಡಲು ಭೇದಿಯಾಗುವುದು. ಜ್ವರ ಸಹ ಬಿಡುವುದು (ಸಳಸ್ಯ. ಪರಿ. ೪೬೮). **ಪೊಡಪತ್ರೆ** : ಅಳಿಲೆಕಾಯಿ, ತಾರೆಕಾಯಿ. . .ಪೊಡಪತ್ರೆ, ಬ್ರಹ್ಮಿ—ಇವೆಲ್ಲವಂ ಚೂರ್ಣಿಸಿ ಸಕ್ಕರೆವೆರಸಿ ಸೇವಿಸಲು ಸ್ವರಭಂಗ ಪರಿಹರಮಕ್ಕುಂ (ಸಳಸ್ಯ. ೨೬೦). [←ತೆಲು. ಪೊಡಪತ್ರಿ]

ಪೊಡಪತ್ರೆ 'ಪೊಡಪತ್ರ' ನೋ.

ಪೊಡಪು 'ಪೊಡರ್ಪು' ನೋ.

ಪೊಡಮಡಿಸು 'ಪೊಡೆವಡಿಸು' ನೋ.

ಪೊಡಮಡು 'ಪೊಡೆವಡು$_2$' ನೋ.

ಪೊಡಮಡುಹ (ನಾ). ನಮಸ್ಕರಿಸುವಿಕೆ ; ನಮನ : "ನತಂ ವಂದನಂ ಪೊಂಗಿ ಪೊಡಮಡುಹಂ" (ಮಂಗರಾ. ೦೩೬-೩೯).

[ಪೊಡಮಡು (<ಪೊಡೆವಡು$_2$) + —ಹ$_2$ (< —ಪ್ಪ$_2$)]

ಪೊಡಮಡುಹು (ಕ್ರಿ). ನೆಲಕ್ಕೆ ಹೊಟ್ಟೆ ತಗುಲುವಂತೆ ಬಾಗು,—ಬಗ್ಗು : ಪೊಡಮಡುಹಿ ನೆಗೆಯಲ್ಕೆ ಕಪಿಗಳು ಪಡುವ ಮೂಡಣ ದಿಕ್ಕು ಮುಟ್ಟುತ್ತಡವಿ ಗಿಡುಮರ ಕುಲನಗಂಗಳ ತೊಳಲಿಯಱಸುತಿರೆ (ಕಾಶಿರಾ. ೯-೩೨). [< ಪೊಡೆವಡು$_2$]

ಪೊಡರ್ (ಕ್ರಿ). ೧. ಅಲ್ಲಾಡು; ಅದುರು ; ನಡುಗು ; ಕಂಪಿಸು : "ಪೊಡರ್—ಸ್ಫುರಣೇ (ನಡುಗು)" (ಕಪುರಾ) ; ನಡು ನಡುಗಲ್ಕೆ ಪುರ್ವು ಪೊಡರಲ್ಕೆ ಕುರುಳ್ ಮಿಳಿರಲ್ಕೆ . . . ತಗುಳ್ದುದು ಕೆಂದನೀಕೆ ಕನ್ನಡಿಪಳೊಪಾಡಿದೀ ನೆವದಿಂ (ಪಂಪಭಾ. ೭-೬೯) ; ಬಟ್ಟೆಯ ದೂಳಿದೂವೆ ಮೊದಲಾದುದು ಪೋದಪೆನೆಂಬ ಮೆಯ್ಯುವಂಗೆಟ್ಟು ಪಿಪಾಸೆಯಿಂ ಪೊಡರಲಾರ್ತವುದಿಲ್ಲ (ಕಾದಂಪೂ. ೦೯೯) ; ಉಲಿಯೆ ಕಲಕಾಂಚಿ ಮುಡಿಯಿಂದಲರುಗೆ ಬಡನಡು ಬಳುಂಕೆ ಪೊಡರೆ ನಿತಂಬಂ ನೆಲೆಮೊಲೆಗಳಲುಗೆ ಬಿಡದೇಳ್ವ ಲತಾಂಗಿಯ ಕೈಯನೊಯ್ಯನರಸಂ ಪಿಡಿದಂ (ರಾಜಕೇ. ೦೦-೭). ೨. ಕಾಣಿಸಿಕೊಳ್ಳು ; ಪ್ರಕಟವಾಗು : ನಿರಂತರಂ ಪೊಳೆವ ಬಾಳುಡಿಸುಯ್ವ ನವವ್ರಣಂಗಳೊಳ್ ಪೊಡರೆ ಪೊದಟ್ಟುದದ್ಭುತಭಯಾನಕಮಾಹವರಂಗಭೂಮಿಯೊಳ್ (ಪಂಪಭಾ. ೦೦-೩೬); ಪಂದಲೆಯೋಳಿದೋರಣದ ಸೀಯದರಂ ಪೊಸದೂವೆದೂಪ ತೂಗುಂದಲೆ ಬಾಟ್ಟಿಣಂ ಪೊಡರೆ ಬಳ್ಕುವ ಸಮ್ಮನ ಸೂಲಮಾಲದೊಳ್ ಸಂದಣಿಯಾಗಿ ನೇಲ್ವ ಪೆಣನೊಂದಿರೆ . . . ಮಿಂಚಿದುದಾ ಶ್ಮಶಾನದೊಳ್ (ಕಾಪ್ಯಾಪ. ೩೬); ಮೃಡಭಕ್ತರಾನಂದವಂಕುರಿಸುವಂತೆ . . . ಬಿಡುಬಿಡಂತಿಂತೆಂದು ಪೊಡರ್ವ ನುಡಿಗಡಣಗಳನೆಡೆವಾತದೇಂ ಷಟ್‌ಸ್ಥಲಸ್ಥಾಪನಾರ್ಥಮಾ ಕಡುಮೆಯ್ಯೆವಡೆದ ಷಣ್ಮುಖನಖಿಳಶಕ್ತಿ ಬಂದೊಳಪೊಕ್ಕು ಶೋಭಿಸುತಿರೆ (ಪಜ್ಯರಾ. ೪-೨೮). ೩. ಹೊಳೆ ; ಪ್ರಕಾಶಿಸು ; ಮಿರುಗು : ಇಡಿದಿರೆ ಗುಹಾಂಧಕಾರಂ ಪೊಡರ್ದೆಸದಿರೆ ಚಂದ್ರಕಾಂತರುಚಿ ನಗಮೊಂದೊಂದೆಡೆಯೊಳ್ ಪೋಲ್ತೊಪ್ಪುವುದೊಂದೆಡೆಯೊಳ್ ನೆಲಸಿರ್ದ ಕಾಳಮುಂ ಜೊನ್ನಮುಮುಂ (ಅಜಿಪು. ೯-೨೦); ವಿಷಯರತಿಯೊಡನೆ ಮೆಯ್ಯಿಸುಪಡಂಗೆಯುಂ ಪೊಡರದುಡುಗುವ ಲೋಚನದೊಡನೆ ನಿಡುಸುಯ್ಗಳುಡುಗೆಯುಂ (ಪರ್ಧಪು. ೯-೭೬ ಪ) ; ಪೊಡರ್ವ ಪುಣ್ಣಮೆಯೆ ಬಿಡುವೀಕ್ಷಣದೊಳಲರಂಬು ಮಡದಿಯಿಂದುಟಿಯೊಳೆಲ ಪವಳಲತೆ . . . ತೋಱುತ್ತಿಪ್ಪುದು (ಸಾಳ್ವಭಾ. ೨೪-೦೮). ೪. ಎಧುರಿಸು ; ಪ್ರತಿಭಟಿಸು : ಪೊಡರದೆ ಕಪ್ಪಮಿಾವ ಪರಮಂಡಳಿಕರ್ ಮನೆದೀವಿ ಮಕ್ಕಳಂ ಪಡೆದಬಳಾಜನಂ . . . ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ (ಅಪಿಪು. ೨-೨೪); ಪೊಡರ್ವತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪೆನೆಂಬೊಡದಂ ಮುನ್ನಮೆ ನಿಮ್ಮ ವಿಕ್ರಮದವಾಗ್ನಿಜ್ವಾಲೆ ತಳ್ತಿರ್ದುದು (ಪುಷ್ಪಪು. ೩-೩). ೫. ಚಿಮ್ಮು ; ಹೊಮ್ಮು : ತದ್ಭ್ರಾಮ್ಯನ್ನಿ ಶಾಟಾಸ್ಯದಿಂ ಪೊಡರ್ದಸ್ರಾಂಬುವಲಾತಚಕ್ರಮೆನೆ ವೃತ್ತಾಕಾರದಿಂ ದುಣ್ಮುತುಂ (ಜಗನಿ. ೬-೬೯). ೬. ಹುಟ್ಟು; ಆವಿರ್ಭವಿಸು; ಉಂಟಾಗು: ಆನುಂ ಮಿಡುಕಲಣಮಱಿಯದಿರ್ದೆಂ ಪೊಡರದ ಗಱಿಯವನೆ ತನ್ನ ತಂದೆಯ ಕೆಲದೊಳ್ (ಕಾದಂಪೂ. ೦೩೨) ; ಕಾಂಚೀಕ್ಷುದ್ರಘಂಟಾರವಂ ಪೊಡರುತ್ತಿರ್ಪಿನಮಿಂತು ಕಾಂತೆ ನಡೆತಂದಾ ಚಕ್ರಿಯಂ ನೋಡಿದಳ್ (ಕಾಂಶೀಶ್ವ. ೧೩-೪೪).

ಪೊಡರ್ಕೆ (ನಾ). ಚಲನೆ ; ಸ್ಫುರಣ : ಒದವಿದ ನಿದ್ರೆ ದೂತಜನಗರ್ಜನದಿಂ ಕಿಡೆ ಹೃದ್ಗುಹಾಂತರಾಳದಿನುರುಕೋಪಸಿಂಹಮಿರದೆಟ್ಟುದು ಮೀಸೆಯ ಕೆತ್ತು ಕೇಸರಂ ಕೆದಱುವ ಭಂಗಿ ಪುರ್ವಿನ ಪೊಡರ್ಕೆಯೆ ಮೆಯ್ಯುರಿವೋಜೆ ಕಣ್ಗಳಿಂದುದಯಿಪ ಕೆಂಪದಾಗುಱಿಪ ವಕ್ತ್ರದ ಕೆಂಪೆನೆ ರಾಜಮೇರುವಾ (ಸಂಧ್ರಪು. ೬-೨೩). [ಪೊಡರ್ + —ಕೆ]

ಪೊಡರ್ಪು, ಪೊಡಪು (ನಾ). ೧. ಚಲಿಸುವಿಕೆ ; ಅಲುಗಾಟ ; ಕಂಪನ : ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡರ್ಪೊಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ (ಪಂಪಭಾ. ೦-೧೨೦) ; ಇನಿಸಪ್ಪೊಡಂ ಪೊಡರ್ಪನಪ್ಪುಕೆಯ್ಯ ದಿಟಿಯೆ ಪೂದಳೆದುದೆನಿಪ ಪುರ್ಬಿನ ಕುಡಿವೆರಸು ತೂಕಡನೊಳಕೊಂಡ

ಹಾಡ್ಯಮುಂ (ಕಾದಂಪು. ೬೫೯). ೨. ಆಧಿಕ್ಯ ; ಅತಿಶಯ : ತುಡುಗೆಯ ಮಣಿದೀಧಿತಿಗಳ ಪೊಡರ್ಪು ಮೇಗೊಗೆವ ಕೊಡೆವೊಲೆಸೆದಪುದೆಂಬೀ ನುಡಿ ನೆಗಟ್ ಪಂಚರತ್ನದ ಕೊಡೆಯಂ ಪಿಡಿದಮರಿಜನದ ಮನದಡಿವಿಡಿದಳ್ (ಅರಿಪು. ೭-೩) ; ಕಡುಗಲಿಯಪ್ಪ ವಿಕ್ರಮನ ಗಂಡಿನದೊಂದು ಪೊಡರ್ಪ ನೇನ ಬಣ್ಣಿಸಲಳವಲ್ತೆ (ಸೌಇಇ. IX-1. ೨೬೬-೨೬; 1183) ; ಎಡೆಗುಡದು ಸಿರ್ದೆಗೆವೆಡೆಯೊಳ್ ಪೊಡಕರಿಸುವುದುಸಿರನಿಕ್ಕುವೆಡೆಯೊಳ್ ಮುನ್ನೀರ್ಗಡ ಲೆಂದೊಡೆ ವಡಬಾಗ್ನಿಯ ಪೊಡರ್ಪಿನಿತ್ತೆಂಬ ರಸನೆಗೊಗೆಯವೆ ಪುಗುಳ್ಗಳ್ (ಸೂಕ್ತಿಸು. ೨-೨೦). ೩. ತಾಪ ; ಶಾಖ ; ಬಿಸುಪು : ಬಡಬಶಿಖಿಯಲ್ಲಿ ಪರ್ಬುವ ಪೊಡರ್ಪನೊಳಕೊಂಡು ಮೇಲೆಮೇಲೈತರ್ಪೆನ್ನೊಡಲುರಿಯನವ ಧರಿಸು (ರಾಜಶೇ. ೧೩-೦೪೭). ೪. ಶಕ್ತಿ; ಪ್ರತಾಪ; ಸಾಮರ್ಥ್ಯ : ಮಿಕ್ಕ ತೋಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ (ಪಂಪಭಾ. ೦೦-೨೩); ಆ ಮಹಾರೌದ್ರಭದ್ರಾಕಾರನ ಪೊಡರ್ಪಿನಾರ್ಪಿನಳವಿಗಟಿದ ದರ್ಪಮಂ ಪೇಟ್ಟೊಡೆ (ಪಂಪತಂ. ೧೩-೦೬) ; ಧರೆಗೆಸೆದತ್ತು ತಾರಕನ ದುರ್ಗತಿ ತಾರಕ ನೇಳ್ಗೆ ತಾರಕಾಸುರನ ಪೊಡರ್ಪು (ಗಿಂಕ. ೬-೦೦); ಮಾತಂಗದ ಬಲಂ, ಸಿಡಿಲ ಪೊಡರ್ಪು, ಕಡಲ ಗುಣ್ಪು, ಪಡಿಗೊಳೆ ದಶರಥಕುಮಾರಂ ರಾಜ್ಯಮನಾಳು ತಿರ್ದಂ (ರಾಮಾಶ್ಯ. ೭-೦೬). ೫. ಆವೇಶ ; ಉತ್ಸಾಹ; ಸ್ಫುರಣೆ : ತನ್ನ ಮನದ ಪೊಡರ್ಪುಮಂ ಕೂರ್ಪುಮನುಂಟುಮಾಡಿ ನುಡಿದಂ (ಪಂಪಭಾ. ೦೦-೩೯ ಪ) ; ಇದಿರ್ಗೆ ಬರೆ ಪುನ್ನಿಗಂ ಕಿಡಿಸದಿರಂ ಕವಿಗಮಕಿವಾದಿವಾಗ್ಮಿಗಳ ಕವಿತ್ವದ ಗಮಕಿತ್ವದ ವಾದಿತ್ವದ ಪೊಡರ್ಪುಮಂ ದರ್ಪಮುಮಂ (ಶಾಂತಿಪು. ೦೨-೬೯) ; ಆರ್ಪೊಗಳಬಹುದು ಹರಸ್ಥೈನ್ಯಮಿಾ ಪರಿಯೊಳ್ ಪೊಡರ್ಪಿನಿಂದೈ ತರುತ್ತಿರ್ದುದು (ಪಂಪು. ೨೬-೦೨). ಪೊಡಪು: ೪. ಸಿಡಿಲ ಪೊಡಪು ಘುಡು ಘುಡಿಸುತ ಮಿಂಚಿನ ಕುಡುಪು ಮೋಡದಿ ಹೊಳೆಹೊಳೆದು ಬಿಡದೆ ಸುರಿವ ಮಳೆಯಲಿ ತರುಮೂಲದಿ ತಡೆದಿರ್ದನಾ ಮುನಿರಾಜ (ಅನಂಪ. ೯-೩೦) ; ಸುಖ ದುಃಖವಾಯ್ತೇ, ಪೊಡಪು ಪುಡಿಯಾಯ್ತೇ, ಪಾಡೆಲ್ಲ ಗೋಳಾಟ ವಾಯ್ತೇ! (ಪಾರಸಿ. ೦೨-೨೦೬). [ಪೊಡರ್ + — ಪು$_2$]

ಪೊಡರ್ಪುಗಿಡು 'ಪೊಡರ್ಪುಗೆಡು' ನೋ.

ಪೊಡರ್ಪುಗುಂದಿಸು (ಕ್ರಿ). ಬಲವನ್ನು ಕುಂದಿಸು; ಶೌರ್ಯಹೀನನನ್ನಾಗಿ ಮಾಡು : ವನುಜಸುತಂ ಪನ್ನಗಶರದಿನಿಸುವುದುಂ ಜನಕಸುತನನದು ಪೆಣೆದಹಿಬಂಧನದಿಂ ಪೊಡರ್ಪುಗುಂದಿಸೆ (ಪಂರಾಮಾ. ೦೩-೦೯೩).

[ಪೊಡರ್ಪು + ಕುಂದಿಸು]

ಪೊಡರ್ಪುಗುಂದು (ಕ್ರಿ). ಬಲಗುಂದು ; ಶಕ್ತಿಯನ್ನು ಕಳೆದುಕೊಳ್ಳು : ಕುತ್ತದೊಳ್ ಪೊರಳುತ್ತಿರ್ಪವರನ್ಯಲಿಂಗಿಗಳ ರೂಪಂ ಕಂಡು ತದ್ಬಾಧೆ ಯುಬ್ಬರದಿಂ ಪಿಂಗಿ ಪೊಡರ್ಪುಗುಂದದೆ ಮಹಾಸಂತೋಷದಿಂದಿರ್ದರೇ (ರರ್ಮಾಮ್ಯ. ೯-೬೭). [ಪೊಡರ್ಪು + ಕುಂದು$_1$]

ಪೊಡರ್ಪುಗೆಡಿಸು (ಕ್ರಿ). = ಪೊಡರ್ಪುಗುಂದಿಸು : ಈ ಶರವ ಇಂದೆಸೆ ದವನ ಪೊದ[ಡ]ರ್ಪುಗೆಡಿಸಿ ನಾವು ತಂದೊಪ್ಪಿಸುವೆವು ನಿನ್ನಡಿಗೆ (ಗೋಪುಟೇ. ೦೦-೭೬). [ಪೊಡರ್ಪು + ಕೆಡಿಸು$_1$]

ಪೊಡರ್ಪುಗೆಡು, ಪೊಡರ್ಪುಗಿಡು (ಕ್ರಿ). = ಪೊಡರ್ಪುಗುಂದು : ಮಿಾಱುವೆ ವೆಂಬ ಮಣ್ಡಳಿಕರಿಲ್ಲದಟಿಂದೆ ಬಯಲ್ಗೆವನ್ದು ಮೆಯ್ದೋಱುವೆವೆಂಬ ವಿಕ್ರಮಿ ಗಳಿಲ್ಲ ಕುನುಂಗಿ ಕಳಲ್ದಳಲ್ದು ಕಾಯ್ದಾಱಿ ಪೊಡರ್ಪ್ಪುಗೆಟ್ಟು ಬೆಸಕೆಯ್ವವ ರಲ್ಲದೆ ಮಿಕ್ಕ ತನ್ನ ಕಾಯ್ದೇಱಿದ ತೇಜದಿಂ ವಿಜಯಪಾಣ್ಡ್ಯಮಹೀಪನಿದೇಂ ಪ್ರತಾಪಿಯೋ (ಎಕ. XI, ರಾಮಾ. ೩೨-೦೦ ; 1171). **ಪೊಡರ್ಪುಗಿಡು** : ಈ ಸಕಲಧರೆಯನುಗ್ರಭುಜಾಸಿಯೊಳಳವಡಿಸಿ ನಹುಷನಗ್ರಸುತಂ ಸಂವಾಸಂ ರಿಪುದಾರಕರಂ ದಾಸೇರಕರೆನೆ ಪೊಡರ್ಪುಗಿಡೆ ನಡೆಯಿಸಿದಂ (ಪಂರಾಮಾ. ೨-೬೦); ಕೃಪ ಕೃತವರ್ಮರಿರ್ವರುಮನಂತಿಷುಜಾಳದಿನೆಯ್ದೆ ಪೂಟ್ ಸಗ್ಲಪಿತ ಮನರ್ ಪೊಡರ್ಪುಗಿಡೆ[ಪಾಶಾಂ.ಡುಗಿ]ನಿಲ್ವುದುಂ (ಪೇಪಿಪು. ೦೨-೯೦) ; ಪೊಡರ್ಪುಗಿಡೆ ದೈನ್ಯದಿಂ ನಿಜಪದಾಬ್ಜದೊಳ್ಬಿಟ್ಟು ಬಾಯ್ವಿಡುತ್ತುಮಿರೆ ನೋಡಿ ಪೇಡಿಯನದೆಂತು ಕೊಂದಪ್ಪೆನೆಂದಡಂಗಿಸಿದನಾತ್ಮಕೋಪಮಂ (ಪರ್ಧಪು. ೨-೩೩). [ಪೊಡರ್ಪು + ಕೆಡು$_1$]

ಪೊಡರ್ಪುಗೆಯ್ (ಕ್ರಿ). ಬಲವನ್ನು ತೋರಿಸು; ಶಕ್ತಿಯನ್ನು ಪ್ರದರ್ಶಿಸಂ; ಪೌರುಷವನ್ನು ಪ್ರಕಟಿಸು : ಕೊಲೆ ಪುಸಿ ಪರವಧು ಸಂಗಂ ಕಳವೆಂಬಿವು ಬೇಡ ಬೇಡ ಬೇಡೆಂಬೀ ನಿರ್ಮಳವೀತರಾಗನಾಜ್ಞೆ ಯನುಟಿದಣ್ಣ ಪೊಡರ್ಪುಗೆಯ್ವ ಗಂಡರುಮೊಳರೇ (ರರ್ಮಾಮ್ಯ. ೯-೯೩); ಮತ್ತನನ್ತನೊಳನನ್ತಪರಾಕ್ರಮನೊಳ್ ಪೊಡರ್ಪ್ಪುಗೆಯ್ವುದಿರಿಡುವೊಡ್ಡಿ ನಿತ್ತರಿಪ ಕಾದುವ ಮೆಯ್ಗಲಿಯಾರ್ದ್ದರಿತ್ರಿಯೊಳ್ (ಸೌಇಇ. XX. ೭೯-೨೩; 1112); ಬಿಸಿಲೊಳೆ ಬಿಬ್ಬರಂಬಿರಿದ ಮಸ್ತಕಶುಕ್ತಿಕೆಯಿಂದೆ ಮುತ್ತು ಮುಂದೆಸೆ ಕವಿತಂದೊಡೆ . . . ಪೊಡರ್ಪುಗೆಯ್ದು ಪೂರಿಸುವಳಿಪಿಂದೆ ಪುಷ್ಕರಮನೆತ್ತಿದುದಂದು ನಭಕ್ಕದೊಂದಿಭಂ (ಪಂದ್ರಪು. ೯-೭೩)

[ಪೊಡರ್ಪು + ಕೆಯ್$_1$]

ಪೊಡರ್ಪುಡುಗು (ಕ್ರಿ). ಶಕ್ತಿಯು ಕುಂದಿ ಹೋಗು; ಪರಾಕ್ರಮವು ಅಳಿ; ಬಲಹೀನವಾಗು : ಪೊಡರ್ಪುಡುಗದೆ ಬಿಟ್ಟುವಿರ್ದ ನೆಲೆಯಿಂ ಕೆಲವುನ್ಮದ ಗಂಧಸಿಂಧುರಂ (ಪಂಪಭಾ. ೦೦-೯೯); ಯಕ್ಷರ್ ಭಗ್ನದಂಷ್ಟ್ರಹರ್ಯಕ್ಷರೆನಿಸಿ ಪೊಡರ್ಪುಡುಗೆಯುಂ (ಜಗಪಿ. ೧೩-೭೭ ಪ); ಪೆಱನಾಡೆಱೆಯಂ ನಿನ್ನ ಕೈಯೊಳ್ ಬನ್ನಂಬಡೆದು ಕಿನ್ನನಾಗೆಯವನ ಮೆಯ್ಗಂದಿದ ಚೆನ್ನಪಾಂಗಿನಂತೆ ಪೊಡರ್ಪುಡುಗಿದ ಜಾದಿಯಂ ನಗುವಂದದಿನರಲ್ದ ಸುರಹೊನ್ನೆಗಳೊಳಂ (ಕಬ್ಬಿಕಾ. ೯೯). [ಪೊಡರ್ಪು + ಉಡುಗು$_1$]

ಪೊಡರ್ಪುದೋಱು 'ಪೊಡರ್ಪುದೋಱು' ನೋ.

ಪೊಡರ್ಪುದೋಱು, ಪೊಡರ್ಪುದೋಱು (ಕ್ರಿ). ಶಕ್ತಿಯನ್ನು ತೋರಿಸು; ಪರಾಕ್ರಮವನ್ನು ಪ್ರದರ್ಶಿಸು; ಬಲವನ್ನು ತೋರು : ಭುಜಂಗಕಾಂಡಕ್ಕೆ ಖಗೇಶಕಾಂಡಮನಧೋಕ್ಷಜನೆಚ್ಚು ಪೊಡರ್ಪುದೋಱಿದಂ (ಜಗಪಿ. ೦೬-೨೯). **ಪೊಡರ್ಪುದೋಱು** : ಆನಗಿದಱಿದಿರ್ದೊಡಂ ಚಲದಿ ನೆನ್ನೊಳ್ ಪೊಂಗಿ ಪೊಡರ್ಪುದೋರ್ಪಂ (ಅರಿಪು. ೦೨-೩೩); ಬಲ ನಾರಾಯಣರಂ ನಿರೀಕ್ಷಿಸಿ ದಶಗ್ರೀವಂ ರಣಕ್ಷೋಣಿಯೊಳ್ತಲೆಯುಂ ತೂಗಿ ಪೊಡರ್ಪುದೋರ್ಪೆನೆನುತುಂ ಬಂದೊಡ್ಡಿ (ಪಂರಾಮಾ. ೦೩-೩೨).

[ಪೊಡರ್ಪು + ತೋಱು]

ಪೊಡರ್ಪುವೆಱು (ಕ್ರಿ). ಅತಿಶಯವನ್ನು ಪಡೆ; ಆಧಿಕ್ಯವನ್ನು ಹೊಂದು : ಪರಿವ ಪಡಂಗು ಬಲ್ದೆರೆಯ ಸಾಲ ಬೆಡಂಗು . . . ಪೊಡರ್ಪುವೆತ್ತು ಬಗೆಗೊಂಡುದು ಪೂರ್ಣಗುಣಂ ಮಹಾರ್ಣವಂ (ಕಬಕಂ. ೦-೩೯).

[ಪೊಡರ್ಪು + ಪೆಱು$_1$]

ಪೊಡರ್ಮಿಸೆ (ನಾ). ನಡುಗುವ ಮಿಾಸೆ; ಅದುರುವ ಮಿಾಸೆ : ಕೆಂಗಣ್ಣ ಕೆದರ್ದಲೆಯ ತೆರೆವಾಯ ಪೊಡರ್ಮಿಸೆ ತುಂಗತರನಾಸಿಕಂ ಹೆದ್ದಂಷ್ಟ್ರ . . . ದುಃಶ್ವಾಸಸಂಕಲಿತಸಂಗಡಿಗರೆಮನಾಳ್ಗಳಂತಮಮ ಮೈದೋರಿತವನಿಯುಂ ಗದ್ಗದಿಪೊಲು (ಪಂಕಾರಾ. ೦-೦೭-೯೬).

[ಪೊಡರ್ + ಮಿಾಸೆ]

ಪೊಡವಡಿಕೆ (ನಾ). ಅಡ್ಡಬೀಳುವುದು; ನಮಸ್ಕಾರ; ನಮನ : "ನಮಸ್ಕಾ, ವಂದನಾ—ಈ ೨ ಪೊಡವಡಿಕೆ" (ಹಲಾಯು. ೦೨೮-೯೦) ; ಕಾದಂಬರೀದೇವಿ ಪರಿಜನಂಬೆರಸು ನಿಮಗೆ ತನ್ನ ಪೊಡವಡಿಕೆಯಂ ಬಿನ್ನವಿಸಲ್ವೇಟ್ಟಿಟ್ಟಿದ ಳೆಂಬುದುಂ (ಕಾದಂಉ. ೨೮೦); ದೇವಿ ನಿಮ್ಮ ಸವತಿ ಜಯಂಧರನರಸಿ ವಿಶಾಳನೇತ್ರೆಯೆಂಬುದುಮಂತಾದೊಡೆನ್ನ ಪೊಡವಡಿಕೆಯಂ ಪಾರುತ್ತಿರ ಲಾರ್ಪಳೆಂದಱಿದು (ಪುಷ್ಕಾಸ್ತ್ರ. ೭-೯೭ ಪ).

[ಪೊಡವಡು (< ಪೊಡೆವಡು$_2$) + — ಇಕೆ]

ಪೊಡವಡಿಸು 'ಪೊಡೆವಡಿಸು' ನೋ.

ಪೊಡವಡು 'ಪೊಡೆವಡು$_2$' ನೋ.

ಪೊಡವಿ 'ಪೃಥುವಿ' ನೋ.

ಪೊಡವಿಕಂಟಕ (ನಾ). ಭೂಮಿಂಗೆ ಮುಳ್ಳಿನಂತಿರುವವನು ; ಲೋಕಕ್ಕೆ ತೊಂದರೆಯನ್ನು ಕೊಡುವವನು : ಪೊಡವಿಕಂಟಕರೆನಿಪ ನೃಪಕುಲ ದಡವಿಯನು . . . ತಡೆಗಡಿದನು (ಪಾಂಗ. ೨-೩-೦೦).

[ಪೊಡವಿ (<ಪೃಥುವಿ)+ಕಂಟಕ]

ಪೊಡವಿಚ (ನಾ). ಭೂಮಿಯ ಮಗ ; ಮಂಗಳ : "ಮಂಗಳನ ಪೆಸರು ...ಪೊಡವಿಚನೆಂದು" (ಕ್ರಿಮಂ. ೦೯). [ಪೊಡವಿ (<ಪೃಥುವಿ) + — ಇಚ]

ಪೊಡವಿಜೆ (ನಾ). ಭೂಮಿಯ ಮಗಳು ; ಸೀತೆ : ಪೊಡವಿಜೆಯ ಬಿಡೆನೆಂಬ ಚಿತ್ತದ ಕಡುಹು ಖರೆಯವೆ ಎನಗೆ ನೇಮವ ಕೊಡಿಸು (ಕೌಶಿಂಗ. ೦೯-೬). [<ಸಂ. ಪೃಥ್ವೀಜಾ]

ಪೊಡವಿಪ, ಪುಡವಿಪ (ನಾ). ಭೂಮಿಯ ಒಡೆಯ ; ಅರಸ ; ರಾಜ : ಪೊಡವಿಪಂಗೀ ಹದನನಱಪಲು ಘುಡುಘುಡಿಸುತಹುದಹುದು ಭಕ್ತನು ಕಡುಹುಗೊಡ್ಡಾಟಂಗಳಂ ಕುಪರಿಗಳನಾಡಿದನು (ಪಸಪು. ೨೮-೪೯) ; ಕಡುಮನದ ಕಪಿಬಲದ ಧಾಳಿಗೆ ನಡುಗಿ ಕಂಡುದು ಪೂರ್ವದಿಕ್ಕಿನ ಪೊಡವಿಪರು ಸಾವಂತ ಮನ್ನೆಯ ಮಂಡಲೇಶ್ವರರು (ಹೊಸಗಾ. ೪-೯-೨೨) ; ಪೊಡವಿಪ ಕೇಳು ನಿಮ್ಮೊಡನೆ ಮಚ್ಚರಿಸುವ ಕಡುಗಲಿಗಳನೆಲ್ಲವರನು ಪಿಡಿಯಾಳಾಗಿ ಹಿಡಿದು ನಿಮ್ಮಡಿ[ಗೊಪ್ಪಿಪ] ಸಡಗರವೆನಗಿರುತಿರಲಿ (ತ್ರಿಪುರಾಂ. ೦೪-೦೩೩). **ಪೃಡವಿಪ** : ಕಡಲು ಕದಡಿತು ಭೂರಿಭೇರಿ ವಾದ್ಯಂಗಳಂ ಪು[ಪಾಣಂ. ಪೊ]ಡವಿಪರ ಮಣಿಮಕುಟಮಣಿಯೊಳಗೆ ತರಣಿ ಶಶಿಯಡಗಿದುವು (ತುಳಂಗ. ೪೩-೨೩). [ಪೊಡವಿ (<ಪೃಥುವಿ)+—ಪ$_3$]

ಪೊಡವಿಪತಿ, ಪಿಟ್ಟುವಿಪತಿ (ನಾ). = ಪೊಡವಿಪ : ಪೊಡವಿಪತಿ ಗೊರವನೆನೆ ವೇಟ್ಟಡೆಯದುವದೆಕರಿಸಿ ಕಬ್ಬಿಗರ್ಮೂಱೆನೆಯುಂ (ಕಏಂಗಾ. ೦-೪೯) ; ಪೊಡವಿಪತಿ ಕೂರ್ತು . . . ಆನಿರ್ದೆಡೆಗೇಟ್ಟಂದಂ (ಧರ್ಮಕು. ೦೨-೪೩) ; ಪೊಡವಿಪತಿ ಕೇಳ್ಪಳಿಕ ಕಣ್ಕೆಂಡದಂತಾಗೆ ಕುಡಿಹುಬ್ಬು ಧೂಮಲತೆಯೆಂಬೊಲಿರೆ (ಕೃಷ್ಣಾಭಾ. ೦೩-೩೬). **ಪಿಟ್ಟುವಿಪತಿ** : ಶ್ರೀಮತ್ ಪಿಟ್ಟುವಿಪತಿಯ ಮಗ ನನ್ನಿಯ ಗಂಗನಣ್ಣೆಯೆಂಬ ಗಣ್ಡ ಬೀರನೊಟವ್ವಂ ತಾಗಿ ಶಾನ್ತರನೆಱೆಯರಟ್ಟಿದೊಡೆ (ಎಕ. X, ಗೋರಿಬಿ. ೪-೯ ; ಸು. 920).

[ಪೊಡವಿ (<ಪೃಥುವಿ)+ಪತಿ$_2$]

ಪೊಡವಿಯಾಣ್ಮ (ನಾ). = ಪೊಡವಿಪ : ಬಿಜ್ಜಣಗಿಗಳ ಪಿಡಿದೂಳಿಗಗೈವ ಬಿಂಕಗಾತಿಯರಾ ಪೊಡವಿಯಾಣ್ಮನ ಪೊದ್ದಿಹರು (ಹರಿವಂ. ೦-೦೬).

[ಪೊಡವಿ (<ಪೃಥುವಿ)+ಆಣ್ಮ (<ಆಳ್ಮ)]

ಪೊಡವಿಯೆಱೆಯ (ನಾ). = ಪೊಡವಿಪ : ಓವರೆ ಪೊಡವಿಯೆಱೆಯ ನಣುಗಿನ ಸುಕುಮಾರಂ ಸಡಗರದಿಂ ಸಲೆ ಸಂಪದದೊಳ್ ದಿನಮಂ ನೂಂಕುತ್ತಿಹನು (ಪಂಚಾ. ೨-೬೬). [ಪೊಡವಿ (<ಪೃಥುವಿ)+ಎಱೆಯ]

ಪೊಡವಿವನೆ (ನಾ). ಭೂಮಿಯಲ್ಲಿನ ಮನೆ ; ಹುತ್ತ.

ಪೊಡವಿವನೆಯರ್ = ಹುತ್ತದಲ್ಲಿ ವಾಸಿಸುವವರು ; ಹಾವುಗಳು; ನಾಗಗಳು : ಪೊಡವಿವನೆಯರ ದಂಡು ಖಗಪತಿಯ ಮುತ್ತಿದೊಲು (ಪಪಪೋ. ೦೨-೪೯). [ಪೊಡವಿ (<ಪೃಥುವಿ)+ಮನೆ]

ಪೊಡವಿವೆಣ್ (ನಾ). ಭೂಮಿಯ ಮೇಲಿನ ಹೆಣ್ಣು ; ಮಾನವಸ್ತ್ರೀ : ಪೊಡವಿವೆಂಗಳ ಬಟ್ಟು ಸಗ್ಗವೆಂಗಳಿಗೊಲ್ದ ಜಡಬ್ರಹ್ಮಚಾರಿಯೆ ಅವನು (ಧರ್ಮ. ೯-೦೦೬). [ಪೊಡವಿ (<ಪೃಥುವಿ)+ಪೆಣ್]

ಪೊಡವಿಸು 'ಪೊಡೆಯಿಸು' ನೋ.

ಪೊಡವಿಸುತೆ (ನಾ). = ಪೊಡವಿಜೆ : ಉಡುಗೊಱೆಯನುಚಿತದಲಿ ರಾಘವ ಕೊಡಿಸುತಿರ್ದನುವೊಬ್ಬರುಳಿಯದೆ ಪೊಡವಿಸುತೆಯೊಲಿದಂತೆ ತಾನೊಲಿದಂತೆ ಮನ್ನಿಸಿದ (ಕೌಶಿಂಗ. ೪೪-೩೪). [ಪೊಡವಿ (< ಪೃಥುವಿ) + ಸುತೆ]

ಪೊಡವೀಶ (ನಾ). = ಪೊಡವಿಪ : ಪೊಡವೀಶರ್ಭುವನೈಕಮಲ್ಲನುತ ಪಾಪಾಂಭೋಜರತ್ಯೂರ್ಜಿತರ್ ದೃಢಚಿತ್ತರ್ (ರರ್ಮಾಕ್ಷ. ೦-೨೯); ಪೊಡವೀಶ ಬೊಟ್ಟುದೋಱಿಪ ಪೊಡರ್ಪದೇಕಜ್ಞಮಂತುಮಿದಿರಪ್ಪಡ ಮೆನ್ನೆಡಗೆಯ್ಯ ಕಿಱುಕಾಣಿಕ್ಕೆಯು ಮಡಿಯೊತ್ತಿರೆ ನೋಟ್ಟೆಮೆಂದು ನೀಡಿದ ಬೆರಲಂ (ಪಂಪಂ. ೦೩-೨೦); ಬಡವನೊಳ್ಳೆಯ ಮಾತ ನುಡಿದರಲ್ಲೆಂಬುವರು ಪೊಡವೀಶ ಪೊಳ್ಳುಗೆಡೆದರೂ ಕೈವಾರಿ ಕಡುನಗುತಲಿಹರು (ಸರ್ವಜ್ಞ. ೦೨೬೬).

[ಪೊಡವಿ (< ಪೃಥುವಿ) + ಈಶ]

ಪೊಡವು (ನಾ). ಗುರುತು; ಚಿಹ್ನೆ; ಸುಳಿವು : ಶಿರಿಯೊಳಿಹ ಕಲ್ಯಾಣ ಪುರವನಾಳುವ ಬಸವ ಧೊರೆಯ ಮುಂದಿರ ಪೊಕ್ಕು ಚರಮೂರ್ತಿಯಂತೆ ಪೊಡವು ಶಿಕ್ಕದ ತೆರದೊಳಡರಿಯುವರೊಳು ನೀನು ಮೃಡನ ರೂಪಿಗಳೊಳಗೆ ಕಡುವಿನೋದದೊಳು (ಯುಕೋರ. ೬೬). [?./ತೆಲು. ಪೊಡ]

ಪೊಡಸೆಂಡು 'ಪೊಡೆಸೆಂಡು' ನೋ.

ಪೊಡಿಪ್ಪಾಡಿ (ನಾ). ಒಬ್ಬಾತನ ಹೆಸರು : ಶ್ರೀಪೊಡಿಪ್ಪಾಡಿಯರ್ಗ್ಗಯ್ದೂಂಬು ಕಟನಿ ಕೊಟ್ಟರ್ (ಪ್ರಾಶಿ. ೦೯೨೬, ೦೦೦-೦೦ ; ೪ಪಯ ಕತ).

[?]

ಪೊಡಿಮಡೆ ? (?) : ಹಾರಮ್ ಸೋರಡೆಯ ಕದಂಬರ ತೈಲಹನ್ ಇಱಿದು ಪೊಡಿಮಡೆ ಉರ್ಧ್ವಲ್ ಆ ತುಱು ಪರಿಯೆ ಬೊಪದಳಾಱ ಕಾದಿ ಸುರಲೋಕಪ್ರಾಪ್ತನ್ ಆದಡೆ (ಪ್ರಾಶಿ. ೦೯೨೩, ೬೨-೦೨ ; ?). [?]

ಪೊಡೆ$_1$, ಹೊಡೆ$_1$ (ಕ್ರಿ). ೧. ಏಟುಕೊಡು ; ಪೆಟ್ಟುಹಾಕು : "ಪೊಡೆ-ಪ್ರಹರಣೇ, ಕುಕ್ಷಾಚ (ಹೊಟ್ಟೆ)" (ಕವಾಧಾ); ಪೊಡೆವ ಬೀರರ ಜಂಕೆಗೆ ಗೊಂಟಿನಾನೆಗಳ್ ಕೋಡುವಿನಂ ಕಡಂಗಿ ಪರಿತಂದುವು ತೋರ್ಕೆಯ ತೇರ್ಗಳೋಳಿಯಿಂ (ಕಬ್ಬಿಗಾ. ೨೦೩) ; ವೇತ್ರದಿಂ ಪೊಡೆದೆಲೆಲೆ ಮಗನೆ ಯೇಳೇಳೆನಲ್ಕೆ (ಪಡ್ಡಾ. ೨-೩೨) ; ಪೊಡೆದರೇ ಕಾಮಧೇನುವ ಕಲ್ಪ ವೃಕ್ಷಮಂ ಕಡಿದರೇ ಸೌಂದರ್ಯರಸದ ಕೆಱೆಯಂ ಮಾಣದೊಡೆವರೇ (ಪಪಪು. ೩೩-೨೯). ೨. ಹರೆ, ನಗಾರಿ, ತಮಟೆ ಮೊದಲಾದ ಚರ್ಮ ವಾದ್ಯಗಳನ್ನು ಬಾರಿಸು,—ಬಾಜಿಸು : ಪೊಡೆ ಪಱೆಯನೆಂದು ಪಱೆಯಂ ಪೊಯ್ಸಿ (ಪಡ್ಡಾಕಾ. ೦೯೦-೧೩) ; ಪೊಡೆವ ಪಟಹ ಡಕ್ಕೆಗಳ ಬೊಬ್ಬಿಱುವ . . . ಪೇಚರಿಯರ ತುಮುಳರವದೊಳ್ ತೊಡರ್ದು (ಅರ್ಧನೇ. ೩-೦೬ ವ); ಪೊಡೆವ ಡಕ್ಕೆಯ ಪಿಡಿದ ಬಿರುದಿನ ಕಾಳೆಯ ಬಲ್ಲುಲಿಯ ಸಡಗರಮೆಲ್ಲಾ ದೆಸೆಗಳು ಕಿವುಡುವಡಿಸೆ (ಕಬ್ಬಿಗಾ. ೨೩೦) ; ಪೊಡೆ ಭೇರಿಯನಡರಾನೆಯ ನಡೆಯಿಡು ಕದನಕ್ಕೆ ಬಲವ ನೊಡ್ಡೆಂಬ ರವಂ ಸಡಗರದಿಂದೆಡೆವಿಡದುಗ್ಗಡಮಾದುದು (ಹಮ್ಮೀರ. ೩-೩೦). ೩. (ಸಿಡಿಲು ಮೊದಲಾದುವುಗಳು ಪೆಟ್ಟಾಗುವಂತೆ) ತಾಗು ; ಬಡಿ ; ಅಪ್ಪಳಿಸು : ನೆಗೆಟ್ಟಿಯ ಗಾಂಡಿವಮಂ ತಗುಳ್ದು ಜೇವೊಡೆಯೆ ಸಿಡಿಲ್ ಸಿಡಿಲ್ದು ಪೊಡೆವಂತೆಪೊಲಾಯ್ತು (ಪಂಪಭಾ. ೯-೦೦೦) ; ಪೊಡೆದತ್ತುರ್ವರೆಯಂ ಯುಗಾಂತರದ ಸಿಡಿಲ್ (ಕಾರಂಪು. ೩೬೩); ದುರಿತಂ ಮತ್ತದ್ವಿಪಂ ಮೂರ್ಖತೆ ಪೊಡೆವ ಸಿಡಿಲ್ ದುರ್ಜನಂ ದುರ್ಮದಂ ತಸ್ಕರರೆಂಬೀ ಕಂಟಕಸ್ತೋಮದ ನಡುಪೊಡಲಿರ್ಪಂದಮೇಂ ಸೋಜಿಗಂ (ರತ್ನಾಕ. ೨೯). ೪. (ಗ್ರಹ ಮೊದಲಾದುವುಗಳು) ಮೈಮೇಲೆ ಬರು ; ಆವರಿಸು ; ಮೆಟ್ಟಿಕೊಳ್ಳು : ಪೊಡೆದುದು ಗರವತಿಕೋಪದೆ ಪಿಡಿದುದು ಪುಲಿ ಗಾಳಿ ಸೋಂಕಿದತ್ತು (ಕಾರಂಪು. ೩೬೩); ಕವಿಗಳ್ ಕಾವ್ಯಂಗಳಂ ಮಾಡುವಾಗ್ರಹಮಂ ಮಾಡಿ ದೊಡಾ ಗ್ರಹಂ ಪೊಡೆದಪೊಲ್ ಬೆಂಡಾಗಿ ಬೇಳಾಗರೇ (ಅನಂಪು. ೦-೩೬). ೫. (ಗಾಡಿ, ಪ್ರಾಣಿ, ಗಾಣ ಮೊದಲಾದುವುಗಳನ್ನು) ಮುಂದಕ್ಕೆ ಸಾಗಿಸು ; ಚಲಿಸುವಂತೆ ಮಾಡು; ಅಟ್ಟು; ನಡೆಸು : ಗಾಣಮಂ ಪೊಡೆ (ರೇವಣ. ೩-೩೨). ೬. ಮೂಡು; ಹುಟ್ಟು; ಕಾಣಿಸಿಕೊಳ್ಳು :

ಗಡಿಗೆ ಮಡಿಕೆಯ ಕೊಂಡು ಅಡಿಗೆಯ ವೇಳೆಯೊಳು ಬಿಡದೆ ಮಳೆಮೊಡ ಪೊಡೆಯಲ್ಕೆ ಈರ್ವರಿಗೆ ತಡಬಡಲಾಯ್ತು (ಸರ್ವಜ್ಞ. ೬). ೭. ಸೋಲಿಸಂ; ಮಿಂಗಿಲಾಗು; ಮೀರು : "ಅಲಗಣಸಾದುದು ಮಿಕ್ಕುದು ಗೆಲೆವಂದುದು ಮಳ್ಳಿಸಿದುದುಮೋರಂಡಲಮಂಡಲೆದುದು ಪಳಂಚಿದುದು ತಾನಟಿಸಿದುದಂ ಪೊಡೆದುದೈದೆ ಮಿಾಱಿದುದೆಂದುಂ" (ಕವಿಕಂ. ೦೩೭). ೮. ಇಲ್ಲದಂತೆ ಮಾಡು; ನಿವಾರಿಸು; ಕಳೆ : "ಕೊರ್ಬು ತೆನೆ ತಾಡನ ಬಸಿಱು ನಿವಾರಿಪುದೆಂಬಿವಱೊಳು ಪೊಡೆ" (ಶಬ್ದಮಂ. ೯೦). ೯. (ಆಲಂ) ತಿನ್ನು; ಭಕ್ಷಿಸು : ಕಡೆಗಣ್ಣೊಳೆ ರಕ್ಕಸನಂ ನಡೆ ನೋಡಿ ಕೊಲಲ್ಕೆ ಸತ್ತ್ವಮಪ್ಪಂತಿರೆ ಮುಂ ಪೊಡೆವೆಂ ಕೂಟಂ ಬಟಿಯಂ ಪೊಡೆವೆಂ ರಕ್ಕಸನನೆಂದು ಸಾಹಸ ಭೀಮಂ . . . ಸಮೆಯೆ ತುತ್ತುವುದಂ ಕಂಡು (ಪಂಪಭಾ. ೩-೨೯). ೧೦. [ಗಣಿತ] ಗುಣಾಕಾರ ಮಾಡು; ಗುಣಿಸು : ಪೊಡೆ ಪೊಡವಿಸು . . . ಗುಣಿಯಿಸೆಂಬುದು ನಿರತಂ (ಪ್ರಪಹಾ. ೦೦-೦೦). ಹೊಡೆ$_1$: ೧. ತಿರ್ಪನೆ ಶಿಗುಹಿ ನೆಲದೊಳು ಹೊಡೆವ ಸಮಯಕೆ ಕಂಡು ಪಾರ್ವತಿ ಬಿಡುಬಿಡೆಲೆ ಪವಮಾನನಂದನ ಈತ ಶಿವನು ಕಣಾ (ಸಂಪಪ. ೦೭-೩೬) ; ತಡೆದರೆ ತಡೆದೊಡ್ಡರೊಡ್ಡೆಱಕೆಯೊಳಿಟ್ಟು ಹೊಡೆದರೆ ಹೊಡೆದು ಡೊಕ್ಕರಿಸಿ ಕೆಡೆದರೆ ಕೆಡೆದುಗುರ್ಗಳೊಳೊತ್ತಿ ಭೀಕರವಡೆದು ಹೊಯ್ದಾಡಿದುವೆರಡು (ಮೋಹತ. ೩೬-೨೮) ; ತಱಿಯಿಱಿ ಹೊಡೆ ಕಾಹಿನವರನೆಂಬಬ್ಬರ ಮೆಱೆದುದು ಚೌದೆಸೆಯೊಳಗೆ (ಕಂಪಪಿ. ೦೯-೬) ; ನಮ್ಮ ದೇಶದಲ್ಲಿ ಎಷ್ಟೋ ಜನ ಯಜಮಾನರು ತಮ್ಮ ಕೈಕೆಳಗಿನವರನ್ನು ಹೊಡೆಯುತ್ತಾರೆ (ಮುಂಬಿಯಿ. ೯-೭೯). ೨. ಸಿಡಿಲ ಕುಡುಹುಗಳಿಂದ ಕಮಲಜ ಹೊಡೆಯಲ ಬುಜಭವಾಂಡ ಭೇರಿಯ ಕಡುದನಿಗಳೆನಲೊದಱಿದವು ನಿಸ್ಸಾಳಕೋಟಿಗಳು (ಕುಪ್ಯಾಕ್ರೋ. ೦-೯೭); ಹೊಡೆದುದಮರರ ಭೇರಿ (ತೊರರಾ ೧-೦೦-೦೯); ಆನೆಯ ಮೇಲೆ ಹೊಡೆವ ಡಮಾಮಿಗಳಬ್ಬರ ಗಗನವ ತುಡುಕಿತು (ಕಂಪಪಿ. ೦೦-೨೩). ೩. ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ (ಜಸಕಾ. ೨-೩೦); ಉರಿ ಹೊಡೆದ ಕೆಂದಾವರೆಯವೋಲ್ ಕರುಕುವಡೆದುದು ಮುಖ (ಕುಪ್ಯಾಕ. ೦೬-೦೩); ಢಗೆ ಹೊಡೆದಳ್ಳೆ ಹೊಯ್ಯುತ ಬಿಸಿಲಿಂಗೆ ನಾಲಗೆ ನೀರು ತಟಗುಟ್ಟಿ ಸುರಿಯೆ . . . ನಾಯಿಗಳಡಸಿದು ವೆಡಬಲದೆ(ಮೋಹತ. ೦೯-೧೯). ೪. ಕಳವಳಿಸುವ ಕಪಿಯ ಭೂತ ಹೊಡೆದು ಚೇಳೊಱಿ ಘಾಳಿಯೊಳು ನಿಂದು ಧೂಳಿಯ ಹೊಯ್ಯುತ್ತಿದೆ (ಆದವ. ೦೫-೩೨). ೫. ಹಾದರಿಯ ನೆಳಲ್ಗೆ ಹರಿಣಂಗಳಂ ಹೊಡೆಯೆಂಬ ಕೆಲಸದ ನೆವದಿಂ ರತಿಮಂಗಳೆ ಬಂದ ಕೆಳದಿಯರೆಲ್ಲರಂ ಮೆಲ್ಲಮೆಲ್ಲನೆ ಕಳುಪಿ (ಪಂಬಿರ. ೦೯-೩೯); ಹೊಡೆದನೊಬ್ಬನು ಸೂರ್ಯರಥವನು (ಸಂಪಪ. ೫-೯೦). ೯. ಎಡೆಯಲೇ ಭಕ್ಷ್ಯಾದಿಗಳ ಬಱಿ ಹೆಡಗೆಯುಳಿದವು ಕೂಳೊಳರ್ಧವ ಹೊಡೆದು ಸುಱಿದನು ಹಾಲುತುಪ್ಪದ ಹರವಿಯೋಜೆಯಲಿ (ಕುಪ್ಯಾಕ. ೦೦-೩೦); ತುಡುಗುಣಿಯು ಗಂಡನ ಬಡತನವ ಬಲ್ಲಳೆ ಕಡನ ತಂದಿಕ್ಕಿ ಕುಡಿಸಿ ತುಪ್ಪವ ಬೆರಸಿ ಹೊಡೆದು ಕುಳ್ಳಿಹಳು (ಸರ್ವಜ್ಞ. ೦೬೫೬). ೧೧. ಕಡಿ; ಕತ್ತರಿಸು : ತಲೆಯಂ ಹೊಡೆದ ಕೊಡಲಿಯಿಂ (ಇಱಿರ. ದೇ. ೧೦೬-೦೭); ಕಡುಹಿನಲಿ ಸೈಂಧವನ ತಲೆಯನು ಹೊಡೆದು ನಿನ್ನಯ ಕಾಲ ಬಳಿಯಲಿ ಕೆಡಹುವನು (ಕುಪ್ಯಾಕ್ರೋ. ೯-೩೩); ಅಖಿಳದ್ವೀಪಪತಿಗಳ ತಲೆಗಳನು ಹೊಡೆದಲ್ಲಿ ತನ್ನಗ್ಗಳೆಯ ಭೃತ್ಯರನಿರಿಸಿ ಬಂದನು(ತೊರರಾ. ೦-೯-೩೭). ೧೨. (ಬಾಣ ಮೊದಲಾದುವನ್ನು) ಬಿಡು; ಪ್ರಯೋಗಿಸು; ಎಸೆ : ಕೂರ್ಗಣೆಯ ಗಾಯವ ತಿನ್ನು ಹೋಗೆಂದು ಹೊಡೆದನಂಬುಗಳ (ಮೋಹತ. ೩೬-೭). ೧೩. (ವೇಗದಿಂದ ಗಾಳಿ, ಮಳೆ ಮುಂತಾದುವು) ಬೀಸಂ; ಚಲಿಸು : ಹೊಡೆವ ಬಿಱುಗಾಳಿಯಲಿ ಮುಗಿಲೊಡ್ಡೊಡೆದವೊಲು (ಕುಪ್ಯಾಕ್ರೋ. ೦-೬೯). ೧೪. ತಟ್ಟು; ಆಸ್ಫಾಲನ ಮಾಡು : ಮದ ಮುಖನೆಡಬಲನ ನೋಡಿದರೆ ರಕ್ಕಸಕೋಟಿ ಜೀಯೆನುತ ಸಿಡಿಲ ಸೆಱೆ ಬಿಟ್ಟಂತೆ ಭುಜವನು ಹೊಡೆದು ಮುಂಚಿತು (ಕುಪ್ಯಾಕ್ರೋ. ೦೫-೯೬). ೧೫. ಲಪಟಾಯಿಸಂ; ಕದಿ; ಅಪಹರಿಸು : ಅಂಗಡಿಯಿಂದ ಉತ್ಪನ್ನವಾಗುವ ಹಣದ ಬಹುಭಾಗವನ್ನು ಆದಂಸಾಹೇಬ ಹೊಡೆಯುತ್ತಿದ್ದ (ನಿಸುತ. ೨೯). ೯'ಹೊಡೆ' ಪದವು ಇತರ ಅನೇಕ ನಾಮಪದಗಳೊಂದಿಗೆ ಸೇರಿ ಬೇರೆ ಬೇರೆ ಅರ್ಥಗಳಲ್ಲಿ ಸಮಾಸವಾಗುತ್ತವೆ. ಉದಾ : ಊಟ ಹೊಡೆ, ದುಡ್ಡು ಹೊಡೆ, ಬಣ್ಣಹೊಡೆ, ಹರಟೆಹೊಡೆ— ಇತ್ಯಾದಿ.

ಪೊಡೆಪೊಡೆ, ಹೊಡೆಹೊಡೆ (ದ್ವಿರುಕ್ತಿ) : ಬಡಿಬಡಿ ತಿವಿತಿವಿ ಪೊಡೆ ಪೊಡೆ. . . ಎಂದು ನಾನಾಪ್ರಕಾರದಿಂ ನಾರಕರ್ದಂಡಿಸುವರ್ (ರರ್ಮಾಮ್ಯ. ೬-೦೯೩) ; ಮುಟ್ಟಿ ಹೊಡೆಹೊಡೆ ನೀಳ್ದ ಪುಷ್ಪಮಾಲೆಗಳಿಂದೆ (ಪಂಬಿರ. ೦೫-೬೯). ಹೊಡೆದಾಟ= ಕಾದಾಟ; ಜಗಳ : ಸ್ವದೇಶಗಳಲ್ಲಿ ವ್ಯಾಜ್ಯ, ಹೊಡೆದಾಟ ಆಗುತ್ತಿದ್ದರೂ, ಸಂಘದವರು ಅಪ್ಪಣೆ ಮಾಡಿರುವಂತೆ. . . ಕೆಲವು ಮಾತುಗಳನ್ನು ಹೇಳುತ್ತೇನೆ (ರಾಯಕ. ೯೬). ಹೊಡೆದಾಡು= ೧. ಕಾದಾಡು; ಹೋರಾಡು : ತರ್ಕಶಾಸ್ತ್ರದೊಳೊಡ್ಡಿ ತಗರು ತಗರಿನಂತೆ ಮಾರ್ಕೊಂಡು ಹೊಡೆದಾಡಬಹುದು (ಭರತ. ೨-೯೦) ; ಜೊಂಡುಹುಲ್ಲು ಬೆಳೆದಿತ್ತು. ಅದನ್ನು ಕಿತ್ತುಕೊಂಡು ಹೊಡೆದಾಡಿದರು (ನೀತಿಸಂ. II, ೬). ೨. ಶ್ರಮಪಡು : ಅದೆಲ್ಲ ಎನ್ನದೆಂದು ಹೊಡೆದಾಡಿ ಬೇಸತ್ತೆನಲ್ಲಾ! (ಅಂತರಾ. ೩). ಹೊಡೆದು ಕಾಣು = ಎದ್ದು ತೋರು; ಸ್ಪಷ್ಟವಾಗಿ ಕಾಣು : ಈ ವಿಚಾರದಲ್ಲೂ ಕೇರಳದ ವೇಷಗಳಿಗೂ ನಮ್ಮ ವೇಷಗಳಿಗೂ ಬೇಕಷ್ಟು ಅಂತರ ಹೊಡೆದು ಕಾಣುತ್ತದೆ (ಯಕ್ಷಬ. ೧೩೬). ಹೊಡೆದು ಕೊಳ್ಳು= ಕದಿ; ಲಪಟಾಯಿಸು : ನನ್ನ ಪರಿಶ್ರಮದಿಂದ ಗಳಿಸಿದ್ದ ಹಿಂಡನ್ನು ನನ್ನ ಅಲಕ್ಷ್ಯದಿಂದ, ಮೋಸಮಾಡಿ ನೀನು ಹೊಡೆದುಕೊಂಡಿದ್ದಿ (ಬಂಗಾಹೆ. ೫೨).

[ದೇ. ॥ ತಮಿ. ಪುಟ್ಟೆ ; ತುಳು. ಪೊಡೆ, ಪುಡೆ ; ಕೊಡ. ಪೊಡ ; ತೆಲು. ಪೊಡುಚು]

ಪೊಡೆ$_2$, ಹೊಡೆ$_2$ (ನಾ). ಏಟು ; ಪೆಟ್ಟು ; ಹೊಡೆತ : 'ಪೊಡೆವಡು$_1$' ಪರಾ. ಹೊಡೆ$_2$: ಪತಿ ಬಿಱಿಸಿನಲಿ ಹೊಯ್ವ ಹೊಡೆಗಳು ಸತಿಯ ಮೇಲಣುಮಾತ್ರದನಿತುಂ ತಾಗವು (ಬಸಪು. ೫೨-೯); ಬಿಸಿಲ ಹೊಡೆಯಿಂದ ಕಂದದೆ ದೋಸೆವದದಿ ಸೊಗಯಿಸುವ ಸಕ್ಕರೆಗಳೆಳನೀರ ಕುಯಿದಿಳುಪಿ (ಸೂಪಕಾ. ೨-೩೦); ಚಬುಕಿನ ಹೊಡೆಗಳಱಿಯದ ರಾವುತರುಗಳ ಮಡದ ಸನ್ನೆಗೆ ಸುಳಿವ ದಿವ್ಯಾಶ್ವಂಗಳೊಪ್ಪಿದುವು (ತಿಮ್ಮಅ. ೬-೯೨). [<ಪೊಡೆ$_1$]

ಪೊಡೆ$_3$, ಹೊಡೆ$_3$ (ನಾ). ೧. ಹೊಟ್ಟೆ ; ಉದರ : ಒಡಲು : "ಪೊಡೆ—ಪ್ರಹರಣೇ, ಕುಕ್ಷೌಚ (ಹೊಟ್ಟೆ)" (ಶಮಾಧಾ) ; ಸತ್ತಿರ್ದನಡ್ವಾಹನಂ ಕಂಡದಱ ಪೊಡೆಯಂ ಡಾಣೆಯಿಂ ಪೊಯ್ಯಲ್ಕೆ (ಪಂಪಕಂ. ೦೯-೦೩) ; ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೆ (ಸೋಮೇಶ. ೯೭) ; ಉದರದೇಶಮಂ ಪೊಡೆಯೆಂಬರ್ (ಶೈಮಿಠಾ. ೨-೯). ೨. ಬಸಿರು ; ಗರ್ಭ : ನಾಭಿ ಗುಣ್ಪಾಯ್ತು ಪೊಡೆ ಪೊಣ್ಮೆದುದು (ಪದ್ಮರಾ. ೯-೨೯) ; ಪೊಡೆಯೊಳಗಿಹ ಬಾಲಕ ಮೂಱುಲೋಕಕ್ಕೆ ಸೆಡೆಯನೆಂಬುದ ಜಗಜನಕೆ ಬಿಡದೆ ಪೇಳುವವೊಲು ಮಡದಿಯ ತನುಕಾಂತಿ ಮಡು ವಿಡುತಿಹುದು (ಅಂಜನ. ೯-೧೦); ಬಳೆದುದು ಪೊಡೆಯುಂ ಜಘನಾಚಳಮುಂ ಕರ್ಪಿಡಿದುದಳಕಮುಂ ಚೂಚಕಮುಂ (ರಾಜಶೇ. ೯-೩೬). ೩. ತೆನೆಯ ಮೊದಲಿನ ಸ್ಥಿತಿ ; ಗಬ್ಬ : "ಕೊರ್ಬು ತೆನೆ ತಾಡನ ಬಸಿಱು ನಿವಾರಿಪುದೆಂಬಿವಱೊಳು ಪೊಡೆಯದು" (ಶಬ್ದಮಂ. ೯೦) ; ಸಸಿಯಂತೆ ಪೊಡೆಯಂತೆ ಪಾಲ್ದೆನೆಯಂತೆ (ರರ್ಮಾಮ್ಯ. ೦೨-೨೯) ; ಪೊಡೆಯೊಂಬುದು ಬೆಳೆಗೆಯ್ಯೊಳ್ (ಕಬ್ಬಿಗಾ. ೨೫). ೪. ಬಿಲ್ಲಿನ ಹಗ್ಗವು ಕೈಗೆ ತಗುಲದಂತೆ ತೊಡುವ ರಕ್ಷಾಕವಚ ; ಗೋಧೆ : ಹೊದಱ ಝುಲ್ಲಿಗಳಡಾಯುಧ ಕೆಯ್ಯ ಪೊಡೆ ಸರಳ ಹೊಡೆಗಳಂ ತತ್ತಸ್ಥಳಂಗಳೊಳ್ ಕಟ್ಟಿ (ಶಬಪು. ೯೬-೯೯).

'ಕೆಯ್ಪೊಡೆ', 'ಪೊಟ್ಟೆ$_1$' ಪರಾ. **ಹೊಡ್ಕೆ** : ೧. ವಿಷ್ಣು ವಿಧಿಪಾಶದಿಂ ಬಿಗಿಯೆ ರುದ್ರನ ಹೊಡೆ ನಿಚ್ಚ ಹೊಯ್ದುತಿದೆಯಮ್ಮ (ಶಿಪಗೀ. ೦೫೯-೭೯೯ ಪ); ಈ ಜಗವನೆಲ್ಲವನೊಂದುಹೊಡೆಯಲಿ ಹೊತ್ತ ಬಲರಾಮಂಗೆ ಕಡುಮುಳಿದು (ಸಿಪಾಗ. ೦೦-೦೫-೩೦); ನವನೀತಮಂ ಸವಿದು ಹೊಡೆ ಸಿಡಿದು ಹೋಯ್ದು! (ಸಂಪ್ರಸ. ೪೪-೨೦). ೩. ಹೊಡೆಯ ಹುಲ್ಲು ಕರವಾಳ ಹಿಡಿಯ ಕೊಯ್ಯಿತ್ತು (ಶಗಸಾ. ೪. ೪೨೬-೫೭); ಮೊಳೆವ ಬೀಜವನು ಕ್ರಿಮಿಕೀಟಕಂಗಳು ಸಸಿಯನೆಳ ಹುಲ್ಲೆಗಳು ಹೊಡೆಯನೆರಳೆಗಳು ಸವಿದು . . . ನಾಡೆಲ್ಲಮಂ ಗೋಳಿಡಿಸು ತಿರ್ದುವು (ಪಶಾ. ೩-೬೩); ಮುಗುಳುಹೊಡೆಗಳರೆಹೊಡೆ ನೆಱೆ ಮೇಲಕ್ಕೆ ನಿಗುರುವ ಹೊಡೆ ಪಸುರ್ಪೊಡೆಯ ಒಗುಮಿಗೆಯಲಿ ಹಾಲು ದುಂಬುದೆನೆಯ ಶಾಲಿ ಸೊಗಸನಿತ್ತುವು (ಕಂಪಸಿ. ೫-೬೨). ೪. "ಹೊಡೆ(ಡ)-ಪುಟ, ಮುಚ್ಚಳ, ಪೊಡ" (ಶಪ್ಯಕೋ. ೫೦). 'ಕೈಹೊಡ್ಕೆ$_2$' ಪರಾ. ೫. (ಬಾಳೆ, ಕೇದಗೆ ಮುಂತಾದುವುಗಳ) ಮೋತೆ : ಮುಗುಳು ವಾಳೆಯ ಹೊಡೆಯ ನುಚ್ಚಾಗಿ ಕತ್ತರಿಸಿ (ಸೂಪಶಾ. ೪-೬೦). ೬. ತೆನೆಯ ಪೈರುಗಳ ಬೆಳೆ : ಕೋಟಿಚೆನ್ನಯರು . . . ಹಿತ್ತಿಲಿಗೆ ಇಳಿದು, ಅಡ್ಕವನ್ನು ಅಡರಿ, ಹೊಡೆಯಲ್ಲಿ ಹೋಗಿ, ಹೊಳೆಯನ್ನು ಹಾಯ್ದು . . . ಬೆಳ್ಳಿಯ ಕಲಶದ ಬಿಳಿಯ ಉಪ್ಪರಿಗೆಯನ್ನು ಏರಿದರು (ಕೋಪಿಸೆ. ೦೫).

ಪೊಡೆಯಲರಾತ= ಹೊಕ್ಕುಳಲ್ಲಿ ಹೂವನ್ನುಳ್ಳವನು ; ಪದ್ಮನಾಭ; ವಿಷ್ಣು : ಪೊಡೆಯಲರಾತಂ ರಾಗದೆ ತೊಡೆಯಂ ಪೊಯ್ದಾರ್ವ ನೆವದೆ ನೆಱನೀತಂಗೀಯೆಡೆಯೆಂದು ತೋಱಿ ಕುಡೆ ಪೊಲಗಿಡದಱಿದಂ ಪರಮ ಪುಡಿತಂ ಪವನಸುತಂ (ಗದಾಯು. ೬-೩೫); ಪೊಡೆಯಲರಾತನಕ್ಷಿಗಮಗೋಚರಮಾಗಿರೆ . . . ಕೃಷ್ಣನ ತೇರ ಧೂಳಿಯಪ್ಪೊಡಮಿರದಾಯ್ತೆನುತ್ತಬಳೆ ಧೂಳಿವಿಡುತ್ತಿರೆ ಬಾಯ್ದಲುಂಬಿದಳ್ (ಜಗಪಿ. ೫-೦೦೦). **ಪೊಡೆವಕ್ಕಳ್** — ಹೊಟ್ಟೆಯ ಮಕ್ಕಳು ; ಸ್ವಂತಮಕ್ಕಳು : ಪೊಡೆವಕ್ಕಳು ಭಕ್ತಿಯಿಂದೆ ಪೆಸರಿಟ್ಟುಯೆಡೆವಿಡದೆ ಗುಡಿಗಟ್ಟಿ ಜಗವೆಲ್ಲ ಬಂದಡಿಗೆಱಗೆ ಪೊಡವಿಯಲ್ಲುರಿವ ಕಿಚ್ಚಂ ಪರಿವ ಪಾವ ಸ್ವಾಜ್ಞಾಮಾತ್ರದಿಂದೆ ನಿಲಿಸಿ (ರಾಘಶ. ೦೯-೬೮).

ಪೊಡೆಗಟ್ಟು (ನಾ). "ಹೊಟ್ಟೆಯ ಮೇಲಣ ಕಟ್ಟು" (ಪ್ರಭಣ್ಣ) : ಒಳಗಿಡಿದ ಮೂಱುಂ ಜಗದ ಭಾರದಿಂ ಸರಿಯದಂತೆ ರನ್ನದ ಪೊಡೆ[ಶಾಶಾಂ. ಡ]ಗಟ್ಟುಗಟ್ಟಿರ್ಪುದು (ಪಕಸಂ. ೦೨೬-೦೩). [ಪೊಡ್ಕೆ$_3$ + ಕಟ್ಟು$_2$]

ಪೊಡೆಗಲ್ಲು, ಹೊಡೆಗಲ್ಲು (ನಾ). (ತಾಗುವಂತೆ) ಮೇಲೆದ್ದಿರುವ ಕಲ್ಲು ; ಗೂಟಕಲ್ಲು : ಕೆಡೆದ ಕರಿಗಳ ಬೆಟ್ಟವಳಿಯ ಗುಂಡುಗಳೊಳಗೆ ಮಡಿದ ಕುದುರೆಗಳ ಪೊಡೆಗಲ್ಲ ಪೊರಳಿಗಳೊಳಗೆ . . . ರುಧಿರಪ್ರವಾಹಂ ಪರಿಯೆ ಸವಱಿದಂ ಪಾರ್ಥಜಂ ಪರಬಲವನು(ಸ್ವಪಿಸಾ. ೨೨-೨೬). **ಹೊಡೆಗಲ್ಲು** : ಹೊಡೆಗಲ್ಲೊಳು ಮುಗ್ಗಿ ಎಡವುತ ಕಾಲನು ತೊಡರುವ ಬಳ್ಳಿಯ ಪಱಿದು ಅಡಗುವೆಡೆಯ ನೋಡಿ ತಳಿತ ಕಾನನದೊಳು ನಡೆತಂದನು ಚಿಕ್ಕನೊಲಿದು (ಪಿಜಸಾಂ. ೦-೬೬). [ಪೊಡೆ$_1$+ಕಲ್ಲು (< ಕಲ್$_3$)]

ಪೊಡೆಗಿಚ್ಚು (ನಾ). ಜಠರಾಗ್ನಿ : ಪೊಡೆಗಿಚ್ಚಿಂದವೆ ಜೀರ್ಣನಾದನಸುರಂ ವಾತಾಪಿ (ಶಾದಂಪೂ. ೦೦೩). [ಪೊಡ್ಕೆ$_3$ + ಕಿಚ್ಚು]

ಪೊಡೆಗಿರ್ಚು, ಹೊಡೆಗಿಚ್ಚು (ನಾ). ದಳ್ಳುರಿ ; ಆವರಿಸುವ ಬೆಂಕಿ : ಧವವೇಕಾನೇಕಸತ್ತ್ವಾದಿ ಗುಣದ ಪುದಿವಾಳೇಕದಾನೇಕೆ ಕಾಮೋತ್ಸವ ವೇಕಾನೇಕೆ ತಾಪತ್ರಿತಯದ ಪೊಡೆಗಿರ್ಚೇಕದಾನೇಕೆ (ರಕ್ಷಾಶ. ೫೬). **ಹೊಡೆಗಿಚ್ಚು** : ಸುಸಾರಕ್ಕೊಳಗಾದವರೆಲ್ಲ ಮಾಯೆಯ ಹೊಡೆಗಿಚ್ಚ ಗೆಲಬಲ್ಲರೇ (ಅಪಸಂ. ೨೭೭-೦೨೬೨); ಒಡಲ ಬಿಡದಾಪತ್ತು ಕೆಡಹಿ ಧರೆಯೊಳು ಕಾಡ ಹೊಡೆಗಿಚ್ಚಿನಂತೆನ್ನ ಸುಟ್ಟು ಸುರುಳಿಪುದು (ಕೃಕಪ. ೦-೦೭-೨); ಸನ್ನುತ ಶರಣರ ಮನದಲ್ಲಿ ಕೋಪಾಗ್ನಿಯು ತಾನೆ ಎದ್ದರೆ ನಿಂದಕರೆ ಗುರಿ ದೇವನೆ ನಿನ್ನ ಹೊಡೆಗಿಚ್ಚಿಗೆ ನಾ ಗುರಿಯಲ್ಲ (ಸಿದ್ಧಪು. ೨೨-೮೮).
[ಪೊಡೆ$_1$ + ಕಿರ್ಚು (< ಕಿಚ್ಚು)]

ಪೊಡೆಗೆಡೆ, ಹೊಡಗೆಡೆ, ಹೊಡೆಕೆಡೆ, ಹೊಡೆಗೆಡೆ (ಕ್ರಿ). ೧. ನೆಲಕ್ಕೆ ಹೊಟ್ಟೆ ತಗುಲುವಂತೆ ಬೋರಲಾಗಿ ಬೀಳು ; ಮಗುಚಿ ಬೀಳು : ಬಿಡೆ ಕುಣಿವ ಮುಂಡದಿಂ ಬೊಬ್ಬಿಡುವ ರುಂಡದಿಂ ಬಿಡುಮಿದುಳ ಜೊಂಡಿನಿಂ ನಡುತೊಡೆಯ ತುಂಡಿನಿಂ ಪೊಡೆಗೆ[ಶಾಶಾಂ. ಯೊ]ಡೆದು ಬೀಳ್ದರಿಂ ನೆತ್ತರಿನೊಳಾಳ್ದರಿಂ ರಣಧರಣಿ ಕಣ್ಗೆಸೆದುದು (ಸಿಪಾ. ೩೮-೩೯); ಭಾಸುರದ ಗಜವದನ ಪೊಡೆಗೆಡೆದು ಪೊಡಳುತಿರೆ (ಪಪಸೋ. ೭-೨). ೨. ನಮಸ್ಕರಿಸು; ಅಡ್ಡಬೀಳು : ಶಿಷ್ಯಸುಜ್ಞಾನಾಮೃತಸ್ವಾದಿಹಂಸ ಶರಣಾಗೆಂದು ಪೊಡೆಗೆಡೆದನು (ಬಿಕೋಪು. ೦೫-೨೨). **ಹೊಡಗೆಡೆ** : ೨. ಭೂತಳಂ ಬೆಱಗಾಗಿ ಜಯ ಎಂದು ಹೊಡಗೆಡೆದು ಪ್ರೀತಿಯಿಂ ವಂದಿಸುತ (ಗುರುಜಾ. ೩-೨೯); ಅವರು ಕಳುಹಿದಂತೆ ಮಾಡೆನಲು ಉರಗರಾಜ ಹೊಡಗೆಡೆದು ವಂದಿಸಿ (ಶೃಕಪಾ. ೨೭). **ಹೊಡೆಕೆಡೆ** : ೧. ಮಡಕೆ ನಿಮಿರ್ದಾಡೆ ಜಡೆಗಳ್ ತುಡುಕೆ ಶರೌಘಮುಮನಭವನತಿಕೋಪದೊಳಂ ಅಡಕೆ ಮರುಳ್ಗಳ್ ಪೆಣನಂ ಹೊಡೆಕೆಡೆದರ್ ದೈತ್ಯರಂದು ತ್ರಿಪುರಸ್ಥಳದೊಳ್ (ಕರ್ಣಾಕ. ೫೭). **ಹೊಡೆಗೆಡೆ** : ೧. ಮಹಾರ್ಣವವುರಿದು ಬೇವಲ್ಲಿ ಕರಗದ ಜಲಕ್ಕೆ ಹೊಡೆಗೆಡೆವುದೆ (ಸಕವ. I. ೨೦೫-೦೨೬); ಕುಸುಮಚಾಪಂ ಕಾಲ್ಗೆಱಗುವಂತೆ ಪಂಚಭಾಣಂ ಹೊಡೆಗೆಡೆವಂತೆ . . . ಪೊಡೆಮಟ್ಟು ನಿಂದು (ಗಿಂಕ. ೫-೪೨ ಪ); ಹೊಡೆಗೆಡೆದ ದಂತಿಗಳು ರಕ್ತದ ಕಡಲೊಳೀಸಾಡಿದವು (ಕುಪ್ಯಾಪ್ರೋ. ೦೦-೦೦). ೨. ಗೊರವರ ಪಡೆ ಬೆದಱಿ ಹೊಡೆಗೆಡೆದರಾತನ ಪಾದಪಂಕಜಕೆ (ಶಂಕರಾ. ೦೩-೭೨); ಹೊಡೆಗೆಡೆದ ಮಣಿಮಕುಟಶಿರಗಳಂ ... ನೋಡಿದನು ಕಲಿದ್ರೋಣನು (ಶುರುಗ. ೫೫-೩೮). [ಪೊಡ್ಕೆ$_3$ + ಕೆಡೆ$_1$]

ಪೊಡೆಗೊಳ್, ಹೊಡೆಗೊಳು (ಕ್ರಿ). ೧. ಒಡಲಲ್ಲಿ ಇಟ್ಟುಕೊಳ್ಳು; ಒಳಗೊಳ್ಳು. ೨. ಹೊಟ್ಟೆಯಲ್ಲಿರು ; ಗರ್ಭದಲ್ಲಿರು : ನಿನ್ನಿರವಿಂತು ಬೇಱೆ ಪಿರಿಯುಕ್ಕೆವಮಂ ಪೊಡೆಗೊಂಡ ದೇಸೆಯಿಂದುನ್ನತಮಾದುದು (ಪಕಪಿ. ೩-೦೦೩); ಪೊಱಲಾಱಳ್ ತೊಡವುಗಳಂ ಪೊಱುವಳ್ ಪೊಡೆಗೊಂಡ ವಿಶ್ವಗರ್ಭನನೊಳ್ಪಿಂ (ಪಕಪಿ.೪-೬). **ಹೊಡೆಗೊಳು** : ೧. 'ಹೊಡೆಗೊಳಿಸು' ಪರಾ. [ಪೊಡ್ಕೆ$_3$ + ಕೊಳ್$_1$]

ಪೊಡೆಚಂಡು 'ಪೊಡೆಸೆಂಡು' ನೋ.

ಪೊಡೆಚೆಂಡಾಟ 'ಪೊಡೆಸೆಂಡಾಟ' ನೋ.

ಪೊಡೆಚೆಂಡು 'ಪೊಡೆಸೆಂಡು' ನೋ.

ಪೊಡೆಜ (ನಾ). ಹೊಟ್ಟೆಯಲ್ಲಿ ಹುಟ್ಟಿದವನು ; ತನುಜ ; ಮಗ : ದೇವಿ ನಿಮ್ಮಯ ಪೊಡೆಜನು ತನ್ನ ವಲ್ಲಭೆಯಂ ಪೊಡವಿಯೊಳಱಿಸಿ ಕಾಣದೆ ತನ್ನಸುವನು ಬಿಡದೆ ಮಾಣನು ತಾನೆಂದಂ (ಅಂಜಸ. ೦೦-೦೩೦).
[ಪೊಡ್ಕೆ$_3$ + — ಜ$_0$./P ಸಂಸ್ಕೃತದ 'ಜ' ಪ್ರತ್ಯಯವು ಕನ್ನಡಪದದೊಂದಿಗೆ ಸೇರಿದೆ]

ಪೊಡೆತ, ಹೊಡೆತ (ನಾ). ಏಟು ; ಪೆಟ್ಟು : ಬಾಸುಳಂ ತೋರದಂದದಿ ಬೆರಳ್ಪೊಡೆತಮಂ ಕೊಡು (ವಂಕಾರಾ. ೫-೨-೪೦); ಕೊಂಬಿನಂಡೆಗಳೊಳ್ ತುಂಬಿದೋಕುಳಿಯ ನೀರ ಪೊಡೆತಗಳಿಂ ಕುಣಿಕುಣಿದಾಡುವ ಬೊಜಗರಿಂ (ಮಿತ್ರಗೋ. ೬-೦೬). **ಹೊಡೆತ** : ಈ ದಿನವೇ ಮೇಷ್ಟರಿಂದ ಹೆಚ್ಚಾಗಿ ಹೊಡೆತ ತಿಂದರೆ ಸಾಕಷ್ಟು ಕಾರಣವೂ ಆಯಿತೆಂದು ಬಗೆದು, ನಾನಿ ಶಾಲೆಯೊಳಕ್ಕೆ ಸಾಗಿದನು (ವಾಡಿಗೇ. ೦೦೯). [ಪೊಡ್ಕೆ$_1$+ — ತ$_2$]

ಪೊಡೆದುಂಬು (ಕ್ರಿ). ತೆನೆಯು ತುಂಬಿಕೊಳ್ಳು,—ಪುಷ್ಟವಾಗು : ದೆಸೆಗೆ ಕವಿಲ್ತು ಗಂಟಿಡಿದು ನುಣ್ಬಸಿಱಿಂ ಪೊರೆಯೇಱಿ ಕೊರ್ಬಿಯುರ್ಬಿಸಿ ಪೊಡೆದುಂಬಿ ಪಾಲ್ದೆನೆಗಳುರ್ಬೆ ಕರಂ ತಲೆವಾಗಿ ಬಿಣ್ಪೆನಿಂದೆಸೆವುವು (ದಶಕು. ೦-೨೬). [ಪೊಡ್ಕೆ$_3$+ತುಂಬು$_1$]

ಪೊಡೆಮಗುಚು, ಹೊಡಮಗುಚು, ಹೊಡೆಮಗುಚು (ಕ್ರಿ). ೧. ಹೊರಳು ; ಹೊಟ್ಟೆ ಕೆಳಗಾಗಿ ಮಲಗು : ಪೊಳೆವುದೋಱುವ ಪೊಡೆ

ಮಗುಚುವ ಸುಳಿಗೊಂಡು ಸುಳಿವ ಕೇಲ್ವಕ್ಕಿಗಳ್ನಡುಗೆ ಇಳಿವ ಮೇಲಕೆ ಪುಟನೆಗೆವ ಹಲವು ಮಾಂಗಳಿನೊಪ್ಪಿತಾ ತಿಳಿಗೊಳನು (ಶ್ರೀಪಾಂ. ೦೨-೦೭). **ಹೊಡಮಗುಚು** : ೧. ಪೊಡವಿಯೊಡೆಯನ ಕೈಯ ಹದಡಂ ಕಡುವಿಷಂ ಮಿಗೆ ಕಚ್ಚೆ ಮೊಱೆವುತ ಹೊಡಮಗುಚಿದನಿತಱೊಳಗಾ ಸತಿ ನಿದ್ರೆ ತಿಳಿದೆದ್ದು ನಡವಡುಗಿ ಹಾ ಎನುತೊಱಲುತಿಹ ನಿಡುದನಿಗಳಂ ಕೇಳಿ (ಜಪಸು. ೪೬-೨೨). **ಹೊಡೆಮಗುಚು** : ೧. ಜಿನದತ್ತರಾಯನು ಹೊಡೆಮಗುಚುವುದನ್ನು ಜನನಿ ತಾ ನೋಡಿ ಪ್ರೀತಿಪಳು (ಜಪರಾ. ೨-೦೫೫); ಮಕ್ಕಳ ಮಾಣಿಕ . . . ಹೊಡೆಮಗುಚಲು ಭವಿಗಳ ಪಡೆ ನಡುಗಿತ್ತು (ಅಬ್ಬಲೂ. ೨-೫೩). ೨. ತಲೆ ಕೆಳಗಾಗಿಸು ; ಬಂಡವೇಲು ಮಾಡು : ಸಡಗರದಿ ಕೌರವನ ಸಿಂಹಾಸನ ವನು ಹೊಡೆಮಗುಚಿ ಕೆಡಹಿದ್ದೀ ಪಾದವೆ ಕೃಷ್ಣ (ಪುರಂದ. ೦-೦೦೩-೨).

[ಪೊಡೆ$_3$+ಮಗುಚು (< ಮಗುಟ್ಟು)]

ಪೊಡೆಮಗುಳ್ 'ಪೊಡೆಮಗಂಟ್' ನೋ.

ಪೊಡೆಮಗುಟ್, ಪೊಡೆಮಗುಳ್ (ಕ್ರಿ). = ಪೊಡೆಮಗುಚು ೧ : ಪೊಡೆ ಮಗುಟ್ಟೆಡೆಯೊಳ್ ಪೊಕ್ಕುಟ ಕುಡಿ ಸುಟಿಯಿಂ ವಳಿಯನೆಸೆದು ತೆಳ್ಳೊಡೆ ಕಡುಚಿಲ್ವಡೆದುದು (ಅಪಂಪು. ೬-೩). **ಪೊಡೆಮಗುಳ್** : ಅರರೆ ದುಡಪ್ರಣಾಮವನಭಿನಯಿಸಿ ಬೋಧಿಪಂತೆ ಪೊಡೆಮಗುಳ್ದು ಬೀಳ್ವಂ (ಪದ್ಮರಾ. ೨-೭೦); ಪೊಡೆಮಗುಳ್ವಂದು ಬಾಲನನೆತ್ತಿದಿರವ ಕನ್ನಡಿಸುವಂತಾ ಜಗನ್ಮಾತೆ . . . ಹರಸಿವಳು (ಭರತ. ೪೬-೪೭). [ಪೊಡೆ$_3$ + ಮಗುಟ್]

ಪೊಡೆಮಡಿಸು ಪೊಡೆವಡಿಸು' ನೋ.

ಪೊಡೆಮಡು 'ಪೊಡೆವಡು$_2$' ನೋ.

ಪೊಡೆಮರಳ್, ಹೊಡಮರಳು, ಹೊಡೆಮರಳ್, ಹೊಡೆಮರಳು (ಕ್ರಿ). ೧. ಹೊರಳು; ಮಗುಚಿಕೊಳ್ಳು : ತಾಪದಿಂ ಪೊಡೆಮರಳ್ದಂ ಕೂರ್ಮನೀ ರವಿಯ ರೂಪಡಗಿತಿಸುವ ಬಾಣಾಂಧಕಾರದೊಳು (ಸ್ವಮಿಶಾ. ೨೦-೦೩). **ಹೊಡಮರಳು**: ೧. ಹೊಡಮರಳ ಕಲಿತರೆ ವಿರಕ್ತರ ದೃಢತೆ ಹೊಡೆಗೆಡೆಯಿತ್ತು (ಪ್ರಭುರೀ. ೩-೨೮). ೨. ಹಿಂತಿರುಗಿ ಬರು; ಮರಳಿ ಬರು : ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗ ಹೊಡಮರಳಿ ಕಚ್ಚುವ ಹೆಡೆನಾಗ (ಸರ್ವಜ್ಞ. ೦೮೬). **ಹೊಡೆಮರಳ್** : ೩. (ಸಸ್ಯಗಳಲ್ಲಿ) ಸುಳಿಯು ಹೊರಡು, – ಹೊರಬರು : ತೊಱೆಗಣಿಗಿಲೆ ನಾಯ್ವೆಟ ಪೆರ್ಗುರುಟಿಗೆ ಹೊಡೆಮರಳ್ದ(ಟ್ದ) ಹಚ್ಚೆಯೆಲೆ (ಜಪುರ. ೦೬-೦೦೯). **ಹೊಡೆಮರಳು** : ೧. ಉಡಿದ ತೊಡೆಗಳ ಹಱಿದ ಹೊಟ್ಟೆಯ ಹೊಡೆಮರಳಿದಾಲಿಗಳ ತೋಳಿನ ಕಡಿಕುಗಳ ರಣಮಹಿ ಭಯಾನಕರಸಕೆ ಗುಱಿಯಾಯ್ತು (ಕುಪ್ಯಾಶೀ. ೬-೦೬); ಪೆಡೆವಣಿದಳೆದ ನಾಗರ ಮಱಿಯೆಂಬಂತೆ ಹೊಡೆಮರು[ಳ]ಳುವ ತನ್ನ ತಾನೆ ಪೆಡೆಯಿಕ್ಕುವ ಮುತ್ತಿನರಳೆಲೆದಾಳ್ದು ಕೆಂಜೆಡೆ ಮುದ್ದುಮೊಗದಲ್ಲಿ ನಲಿಯೆ (ಪೋಷಕ. ೦೭-೬೦). ೨. ವಿಕ್ರಮನು ಹೊಡೆಮರಳಿ ಸೋಮೇಶ್ವರನ ಸೇನಾಕಾನನವನ್ನು ನುಗ್ಗಿದನು (ಕವಿರ. ೬೦) ; ಜೀವನದಲ್ಲಿ ಎಲ್ಲ ದುಃಖಗಳನ್ನೂ ನುಂಗಿದ ಭಾಗೀರಥಿಗೆ ಮಗಳ ಚಿಂತೆ ಹೊಡೆಮರಳಿ ಹೊಡೆಯ ಹತ್ತಿತು (ಶಾರಶಿ. ೨೦೩). ೩. ಹೊಡೆಮರಳಿದುದೆನೆ ಬೆಳೆದುದು (ಶಾರವಿ. ೨೨). [ಪೊಡೆ$_3$ + ಮರಳ್$_1$ (< ಮಲರ್$_1$)]

ಪೊಡೆಯರಲ 'ಪೊಡೆಯಲರ' ನೋ.

ಪೊಡೆಯಲರ, ಪೊಡೆಯರಲ (ನಾ). ೧. ಹೊಕ್ಕುಳಲ್ಲಿ (ಕಮಲ) ಪುಷ್ಪ ವನ್ನು ಉಳ್ಳವನು ; ವಿಷ್ಣು : "ಸಿರಿಯೆಱೆಯಂ ಸೌರಿಯೆಂದು ತಾವರೆಗಣ್ಣಂ ಸಿರಿಯಾಣ್ಮಂ ಪೊಡೆಯಲರಂ" (ಕರ್ಣಾವಿ. ೩); ಪೊಡೆಯಲರನ ಕೊರಲ ಪುಲಿಯುಗುರ್ ಕರಮೆಸೆಗುಂ (ಜಗವಿ. ೩-೪೪); ಆತಂ ತಾವರೆಯಂತೆ ಸಿರಿಯೊಳೊಂದಿಯುಂ ಪೊಡೆಯಲರನೆನಿಸಂ (ಕಬ್ಬಿಕಾ. ೫೦); ಖಳಂ ನಸು ನಗುತೆ ತಾಂ ತಡೆಯದಾ ಗದೆಯನುಳಿದು ತೋಳ್ವೊಯ್ವುತಂ ಪೊಡೆಯಲರ ಗಿಂತೆಂದನು (ಶಿಪಿಪು. ೨೫-೩೦). ೨. [ಛಂದ] ಅಂಶಗಣಗಳಲ್ಲಿ ಒಂದು ; ವಿಷ್ಣುಗಣ : ಪೊಡೆಯಲರವರಿರ್ವರ್ಮೊದಲೊಳಿರ್ಕೆ ಜಡೆಯ ಶಂಕರ ನೊರ್ವಂ ತುದಿಯೊಳಿರ್ಕೆ ಮಡದಿ ಕೇಳ್ಮೂಱೆ ಗಣಮೆಸೆದಿರ್ಕೆ ಗಡ ಕಿಱಿಯಕ್ಕರಕ್ಕಿದೆ ಲಕ್ಷಣಂ (ಶಂಕೋಂಬು. ೫-೨೪೬). **ಪೊಡೆಯರಲ** : ೧. ಸೆಱಗುವಿಡಿದೆಯ್ದುಯೆಂದಜರನು ಪೊಡೆಯರಲರನು . . . ಜಡಿದು ದಟ್ಟಿಸುತೊಪ್ಪಿದರು ಕೈಯ ದಡಿಯ ಬಿಂಕದ ನಂದಿಯುಂ ಮಹಾಕಾಳನುಂ ಮೃಡನ ಸಮ್ಮುಖದೊಳಿರ್ದು (ಸೌಂದಪು. ೦-೩೯); ಬಿಡದೆ ಕೇಸರಿಯೆಂಬ ದೇವತೆ ಕಡುವಿಗಡ ದುಷ್ಪಾಶ್ವರೂಪದಿ . . . ನೆಱೆ ಕೆರಳಿ ಬಂದು ಪೊಡೆಯರಲನೊಡವಾಯೆ ಹಣೆಗಣ್ಣೊಡೆಯೆ ತಿವಿದಡೆ ಕಾಱೆ ನೆತ್ತರ ಕೆಡೆದು ಬಿದ್ದೆದ್ದೋಡಿದುದು ಹರಿಯದಟನೇನೆಂಬೆ (ಸಾಳ್ವಶಾ. ೨೦-೪೬).

[ಪೊಡೆ$_3$ + ಅಲರ್$_2$ + – ಅ$_7$]

ಪೊಡೆಯಿಸು, ಪೊಡವಿಸು, ಪೊಡೆಸು, ಹೊಡಯ್ಸು, ಹೊಡಿಸು, ಹೊಡೆಯಿಸು, ಹೊಡೆಸು (ಕ್ರಿ). ೧. ಹೊಡೆಯುವಂತೆ ಮಾಡು; ಪೆಟ್ಟು ಕೊಡಿಸು; (ಕ). ೨. ಭೇರಿ, ನಗಾರಿ, ತಮಟೆ ಮೊದಲಾದ ವಾದ್ಯಗಳನ್ನು ಬಾರಿಸುವಂತೆ ಮಾಡು,—ಮೊಳಗಿಸು : ಅಮರಪತಿ ಸಮರೋತ್ಸಾಹಭೇರಿಯಂ ಪೊಡೆಯಿಸೆ . . . ಕೋಳಾಹಳೋತ್ಕರನಿಸ್ಸಾಳ ಧಳಂಧಳಂಧಳರವಂ ಪರ್ಬಿತ್ತು ಮೂಲೋಕಮಂ (ಗಿಂಳ. ೬-೫೩ ಪ); ಪೌದನ ಪುರಾಧಿಪತಿ . . . ಪೊಡೆಯಿಸೆ ಪೊಣ್ಮೆ ತತ್ಸಮಯ ಮಂಗಳವಾದ್ಯದ ಹೃದ್ಯ ನಾದಮೀ ಪೊಡವಿಯನುರ್ವಿ ಪರ್ಪುತಿರೆ (ಶಾಶಿತೀಶ್ವ. ೨-೦೩೭); ಪೊಡೆಯಿಪ ಱಂಜೆಯಂಜಿಸೆ ದಿಶಾಗಜಮಂ ಮಱುವಕ್ಕದಂತೆ ಬೊಬ್ಬಿಡುವ ರವಕ್ಕೆ ಬೊಬ್ಬಿಡೆ ಗುಹಾಕುಹರಂ (ಸುಹಾಶೇ. ೨-೦೪) ; ಇಂತೊಗೆಂದ ಶರದೃತು ವಿನೊಳಾ ಕುಮಾರಂ ವಿಜಯಯಾತ್ರೆಗೆ ಪೋಗಲ್ . . . ಸಮರಪ್ರಸ್ಥಾನ ಭೇರಿಯಂ ಪೊಡೆಯಿಸೆಂಬುದುಂ (ರಾಜಶೇ. ೬-೦೦೮). **ಪೊಡವಿಸು**:೩.[ಗಣಿತ] ಗುಣಾಕಾರ ಮಾಡು; ಗುಣಿಸು : ಪೊಡೆ ಪೊಡವಿಸು . . . ಬಳಯಿಸು ಏಕೆಂದೊಡರಿಪ ವಾಕ್ಯಂಗಳ್ ತಾಂ ಪೊಡವಿಯ ನರಗೆಲ್ಲ ಗುಣಿಯಿಸೆಂಬುದು ನಿರತಂ (ಪ್ರಕಟಾ. ೦೦-೦೦). **ಪೊಡೆಸು**: ೧. ಪದದುಂಗುಟದ ತುದಿಯಿಂದ ಬರೆವುತಿಳೆಯ ನಿರೀಕ್ಷಿಸುತ ನೆರಿಗುರುಳನಂಗಕೆ ಪೊಡೆಸಿಕೊಳುತುತ್ತರಕೆ ಬದಲುತ್ತರವನೀಯದೆ ನಿಂದಳರೆಘಳಿಗೆ (ಅಪಂಪಾ. ೨-೦-೩೬). ೨. ಪೊಡೆಸು ಭೇರಿಯನಿಂದೆ ನಡೆಸು ಮತ್ಸ್ಯೈನ್ಯಮಂ . . . ತಡೆಸದೆನ್ನಿಂ ದಾಳಿಯಿಡಿಸು ಬೇಗದೊಳು (ಶಿಪಿಪು. ೪೭-೨೨). **ಹೊಡಯ್ಸು**: ೨. ಪೆಳಱೆ ದಿಗುದ್ದಾಗಳು ದಿಗುವಿಭಾಗಾಂತರದೊಳು ಪಾತಾಳದೊಳು ಪರ್ವ್ವತಕುಹರದೊಳಾಕಾಶ ದೊಳು ಕೊರ್ವ್ವಿ ಪರ್ವ್ವಿತ್ತುರುತೇಜಂ ವೀರಬಮ್ಮಂ ಹೊಡಯ್ಸು ನೆಗರ್ದ್ದಾ ಚಂಡನಿಸ್ಸಾಣಘೋಶ (ಸೌಇಷ. XV, ೫೯-೦೦; 1184). **ಹೊಡಿಸು** : ೧. 'ಡಿಕ್ಕಿಹೊಡಿಸು' ಪರಾ. **ಹೊಡೆಯಿಸು** : ೧. ಅವನು ಅಪ್ಪನಿಗೆ ಚಾಡಿ ಹೇಳಿ ನನಗೆ ಹೊಡೆಯಿಸುತ್ತಾನೆ (ಕೂಡಿ). ೪. (ದನಕರು, ಗಾಡಿ ಮೊದಲಾದುವನ್ನು) ಅಟ್ಟಿಕೊಂಡು ಹೋಗುವಂತೆ ಮಾಡು : ಕರುಗಳನ್ನು ಕಟ್ಟಿದ್ದ ಸ್ಥಳಕ್ಕೆ ಹೋಗಿ ಅವುಗಳನ್ನು ಜಾತ್ರೆಮಾಳಕ್ಕೆ ಹೊಡೆಯಿಸಿಕೊಂಡು ಬಂದು ಅಲ್ಲಿ ಕಟ್ಟಿಸಿದೆನು (ಸಂಗಾಳ್ವ. ೩೫೩). **ಹೊಡೆಸು** : ೧. ಅವನು ಉಪಾಧ್ಯಾಯರಿಗೆ ಚಾಡಿ ಹೇಳಿ ಆ ಹುಡುಗನನ್ನು ಹೊಡೆಸಿದನು (ಕೂಡಿ). ೪. ನಿನ್ನ ಕೈಯಲಿ ಬರಲಿ ಸತ್ತಿಗೆಯೆನ್ನ ಕೈಯಲಿ ಹೊಡೆಸು ಬಂಡಿಯ (ಕುಪ್ಯಾಕ. ೫-೨೬).

[ಪೊಡೆ$_1$ + – ಇಸು$_3$]

ಪೊಡೆಯೊತ್ತು (ಕ್ರಿ). (ಸಸ್ಯವು) ತೆನೆ ಬಿಡು; ಹೊಡೆಯಾಗು : ಪಸುರೇಱುತ್ತೆ ಕವಲಿಱಿದು ಪೊಡೆಯೊತ್ತುತ್ತುಂ ಪಾಲೇಱುತ್ತುಂ ಪೆಱೆ ದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ (ಗಿಂಳ. ೨-೦೩).

[ಪೊಡೆ$_3$ + ಒತ್ತು$_1$]

ಪೊಡೆವಡಿಸು, ಪೊಡಮಡಿಸು, ಪೊಡವಡಿಸು, ಪೊಡೆಮಡಿಸು, ಹೊಡವಂಡಿಸು, ಹೊಡವಡಿಸು (ಕ್ರಿ). ನಮಸ್ಕಾರ ಮಾಡಿಸು ; ವಂದಿಸುವಂತೆ ಮಾಡು : ಅಧಿಪಂ ಮೊಗಮೊಗದಿಂ ಬೆಸಸಿದೊಡಲ್ಲದೊಲ್ಲೆವೆನೆ ವಿಕ್ರಿಯೆಯಿಂದಂ ಬೆಸಸುವಂತೆ ಮಾಡಿ ಮನಂಬಿಡೆ ಪೊಡೆವಡಿಸಿ ನಮಿಯುಮಂ ವಿನಮಿಯುಮಂ (ಅಬಿಪು. ೯-೧೦೨); ಗಂಗಾಜಳವಿಶ್ರೀಕೃತಗಾತ್ರನುಂ ಕೌಶೇಯಪರಿಧಾನನುಮಾಗಿರ್ದ ಮಾನನಿಧಾನನಂ ತಂದು ಪೊಡೆವಡಿಸಿ (ಸಂಪಶಾ. ೦೪-೦೭ ಪ). **ಪೊಡಮಡಿಸು** : ಕರ್ಣನಂ ಮುಂದಿಟ್ಟೊಡಗೊಂಡು ಪೋಗಿ ಧೃತರಾಷ್ಟ್ರಂಗಂ ಗಾಂಧಾರಿಗಂ ಪೊಡಮಡಿಸಿದಾಗಳ್ (ಕುಸಭಾ. ೨-೮೫ ಪ); ಪಟ್ಟವರ್ಧನಕೆ ಜಗತ್ಪ್ರಭುವಂ ಪೊಡಮಡಿಸುವುದು (ಅಶ್ವಶಾ. ೬-೨೫); ಮಂಗಲೆ ನಿಜಾತ್ಮಜೆಯ ತಂದು ಪೊಡಮಡಿಸಿದಳು ಭಕ್ತಿಯಿಂದ (ಸೌಂದಪು. ೦೫-೦೫). **ಪೊಡವಡಿಸು** : ಪ್ರತಿಪತ್ತಿಮೂಢೆಯೆನಿಸಿರ್ದ ತರುಣಿಯಂ ಗುರುಜನಕ್ಕೆ ಪೊಡವಡಿಪುದುಂ (ಕಾದಂಕಾ. ೬೦೦); ನಿಜಪಾದಪೀಠಘಟಿತೋತ್ತಮಾಂಗನಾದ ಚಿತ್ರಭಾನುವಂ ಪುತ್ರನಿರ್ವಿಶೇಷಮೋಹದಿಂದಮಾದರಿಸಿ ತತ್ಸಮಯದೊಳಮಾತ್ಯವೈಶ್ರವಣಂಗೆ ಪೊಡವಡಿಸೆ (ಪುಷ್ಕಪು. ೯-೭೨ ಪ); ತನ್ನ ಮಗಳಂ . . . ಒಡಗೊಂಡು ಬಂದು ಸಮಸ್ತಭಕ್ತರಿಗೆ ಪೊಡವ[ಪಾಠಾಂ. ಮ]ಡಿಸಿ (ಬಸಪು. ೯-೪೩). **ಪೊಡೆಮಡಿಸು** : ಆತನ [ಮನೆಗೆ ವಂದು ಪೊಸಮದವಳಿಗೆಯ ಕೆಲದೊಳಿರ್ದ ಪುಷ್ಪದಾಡನಂ ಕಂಡು] ಕಯ್ಯಂ ಪಿಡಿದೊಡಗೊಂಡು ಬಂದು ತಮ್ಮ ಗುರುಗಳ್ಗೆ ಪೊಡೆಮಡಿಸಿ (ಧರ್ಮಾಮ್ಯ. ೭-೦೨೭); ನಿನ್ನಾಳ್ದನ ಕೊಂದ ಮದೀಯವಲ್ಲಭನ ಸಂದರುಶನವ ಮಾಡೇಳೆಂದು ಚರಣಾರವಿಂದಕೆ ಪೊಡೆಮಡಿಸಿದಳು (ಮೋಹತ. ೬-೨೭). **ಹೊಡವಂಡಿಸು** : ಕಮಲಾನನೆಯ ಹೊಡವಂಡಿಸಿದನವ್ವೆಗೆ (ಕುಪ್ಯಾಅ. ೦೬-೭). ℘ ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. **ಹೊಡವಡಿಸು** : ಕಂದನಂ ತಾನೆತ್ತಿ ಕೊಂಡೈ ತಂದವರ ಚರಣಾಂಬುಜಕೆ ಹಣೆಯೊಂದೆ ಹೊಡವಡಿಸಲ್ಕೆ (ಬಸಪು. ೯೬-೩೦); ತನಗೆ ತಾನೇ ಹೋಗಲಚ್ಯುತನೆನಿಪನಂ ಕೊಂಡೊಯ್ದು ವಿಶ್ವೇಶನ ಪದಾಬ್ಜಕೆ ಹೊಡವ[ಪಾಠಾಂ. ಪೊಡಮ]ಡಿಸಿದವೆನಿನ್ನು (ಬಸಪು. ೫೩-೬೨).

[ಪೊಡೆವಡು$_2$ + — ಇಸು$_3$]

ಪೊಡೆವಡು$_1$ (ಕ್ರಿ). ಹೊಡೆತವನ್ನು ಹೊಂದು ; ಹೊಡೆಯಲ್ಪಡು : ಆ ಮುನೀಂದ್ರನಂ ಬಲೋಪೇಂದ್ರರ್ ಪೊಡೆಮಟ್ಟು ಕಲಿಪೆ ಪೊಡೆ[ಪಾಠಾಂ. ಡ]ವಟ್ಟ ಸೆಂಡಿನಂತೆ ಗಗನಕ್ಕೊಗೆದಂ (ಅಪಂಪು. ೦೩-೯೦ ಪ).

[ಪೊಡೆ$_2$ + ಪಡು$_1$]

ಪೊಡೆವಡು$_2$, ಪೊಡಮಡು, ಪೊಡವಡು, ಪೊಡೆಮಡು, ಹೊಡಮಡು, ಹೊಡವಂಡು, ಹೊಡವಡು, ಹೊಡೆವಡು (ಕ್ರಿ). (ಸಾಷ್ಟಾಂಗ) ನಮಸ್ಕಾರ ಮಾಡು ; ವಂದಿಸು ; ನಮಿಸು : ಶಚೀಮಹಾದೇವಿಯನೆ ಪೋಲ್ವ ಧಾರಿಣಿಮಹಾದೇವಿಯೆನ್ನ ಕಾಲ್ಗೆಱಗಿ ಪೊಡೆವಟ್ಟಿರ್ದಳ್ (ಪಡ್ಡಾರಾ. ೬೦-೬); ಪೊಡೆವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ . . . ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ ಬಹುಪ್ರಕಾರಜನಸಂಕಟಮೊಪ್ಪಿದುದಾ ಪ್ರಯಾಣದೊಳ್ (ಅಬಿಪು. ೯-೫೭) ; ಕರ್ತಾರ ನಿನಗೆ ಕರವೆತ್ತಿ ಪೊಡೆವಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನ್ನೆ (ಪೇಗಾಪ. ೨೯-೪೯). **ಪೊಡಮಡು** : " ಪೊಡಮಡು (ಪೊಡ + ಮಡು)—ನಮಸ್ಕಾರೇ " (ಶಸುಧಾ); ಪೊಡಮಡುವರ್ ಜೀಯೆಂಬರ್ ಕುಡು ದಯೆಗೆಯ್ಯೇಂ ಪ್ರಸಾದಮೆಂಬಿವು ಪೆಱರೊಳ್ ನಡೆಗೆಮ್ಮ ನಿನ್ನಯೆಡೆಯೊಳ್ ನಡೆಯಲ್ವೇಡೆನಗೆ ಕೆಳೆಯನೈ ರಾಧೇಯಾ (ಸಂಪಶಾ. ೨-೮೫); ವಸುಧೆಯೊಳು ಪೊಡಮಡಲು ದೇಗುಲಂ ಬಿರ್ದ ನುಡಿ ಪಸರಿಸುವ ನಾಡ ಗಾದೆಯ ತೆಱದಿ ನಿಮ್ಮ ಸೇವಿಸಬಂದ ನಮಗಾಯ್ತು [illegible] (ಸಿದ್ಧರಾ. ೦-೨೭); ಪೊಡಮಟ್ಟು ಶಿರವ [illegible] ಮಲ್ಲಿ[illegible]ನಡಿಗೆಱಗಿದನು ಭಕ್ತಿಯಲಿ (ಅಬ್ಬಲೂ. ೩-೬). **ಪೊಡವಡು** : ಧರ್ಮಪುತ್ರನಾ ಮುನೀಂದ್ರಂಗೆ ಸಾಷ್ಟಾಂಗವೆಱಗಿ ಪೊಡವಡೆ ಪರಸಿ ಪಯೋಧರಪಥಕ್ಕೊಗೆದಂ (ಪಂಪಭಾ. ೭-೬೬ ಪ); ತನ್ನ ತಂದೆಯಂ ಕಂಡು ಲಜ್ಜಿಸಿ ತಲೆಯಂ ಬಾಗಿ ದೂರದೊಳ್ ಪೊಡವಟ್ಟು (ಕಾದಂಕಾ. ೯೭೯). **ಪೊಡೆಮಡು** : " ಮೊಟ್ಗು, ತುಟಿಲ್, ಕುಂಟು, ಎಱಗು, ಬಾಗು, ಪೊಡೆಮಡ್ಡು, ಕಾಲ್ವಿಡಿ, ಮಣಿ, ಮೆಯ್ಯಿಕ್ಕು—ಈ ೯ ನಮಸ್ಕಾರಂ " (ಕಶಸಾ. ೬೯-೪೯೦); ಕಿತ್ತಯ್ಯಾ ಇಂದೆಮ್ಮ ಮನೆಯೊಳ್ ಪಾರಿಸಲ್ವೇಟ್ಟು ಮೆಂದು ಕಾಲಂ ಪಿಡಿದು ಪೊಡೆಮಟ್ಟಿರ್ದೊನಂ ನೋಡಿ (ಪಡ್ಡಾರಾ. ೬೦-೦೮); ಸೊಸೆಗೂಡಿ ಕಂಸಮರ್ದನನ ಸೊಸೆ ಮದವಕ್ಕಳು ಸಹಿತ ಕೃಷ್ಣಾಂಘ್ರಿಗೆ ಯೊಸಗೆಯೊಳ್ ಪೊಡೆಮಟ್ಟರೊಲಿದರು (ಮೋಹತ. ೯೨-೬೫); ಮುನಿಯ ನಿದಿರ್ಗೊಂಡು ಪೊಡೆಮಟ್ಟು . . . ಕುಶಲಮಂ ಬೆಸಗೊಂಡುಪಚರಿಸುತಿರ್ದಂ (ರಾಮಾಶ್ವ. ೦೦-೬). **ಹೊಡಮಡು** : ವಾರಿಜಾಸ್ಯೆಯಪೂರ್ವಲಾಂಛನಧಾರಿಯಾಗಲು ತನ್ನ ಮನದೊಳು ಹಾರವಿಸಿ ಹೊಡಮಟ್ಟು ಮುಗ್ಧರ ದೇವನಿಂತೆಂದ (ಬಸಪು. ೦೨-೨೩). **ಹೊಡವಂಡು** : ನಿಮ್ಮ ನಿಮ್ಮ ಹೊಡವಂಡುವ ದೈವಗಳೆಲ್ಲಾ ಗಿಡ ಮರನಾಗಿ ಹೋದವಲ್ಲಾ (ಅಂಬಿಪ. ಕ. ೯೦೭-೦೨೦); ಹರಿಗೆ ಹೊಡವಂಟಸ್ತ್ರಶಿಕ್ಷಾಗುರುವ ಮನದಲಿ ನೆನೆದು ಹೊಸಬಿಲುದಿರುವನೇಱಿಸಿ ಮಿಡಿದು . . . ನರನಾಥನಿದಿರಾದ (ಕುಪ್ಯಾಕ. ೩-೩೦). **ಹೊಡವಡು**: ಇಂತು ವರ ಕೊಡಗೂಸು . . . ದೇಗುಲದೊಳಿಪ್ಪ ಭವನಂ ಕಂಡು ಹೊಡವಡುತ್ತಂ ಬಟ್ಟಲಂ ಮುಂಗಡೆಯೊಳಿಟ್ಟು (ಬಸಪು. ೦೯-೬). **ಹೊಡೆವಡು** : ಶಿವನೇ ನಿತ್ಯನೆಂದು ಹೊಡೆ[ಪಾಠಾಂ. ಡ]ವಡುತ್ತಿದೆ ವೇದ . . . ಬಸವಪ್ರಿಯ ಕೂಡಲಚೆನ್ನಸಂಗಯ್ಯನೇ ನಿತ್ಯನೆಂದು ಹೊಗಳುತ್ತಿದೆ ವೇದ (ಪಸಶಾ. I. ೦೭-೯ ; ಶದಗೋ. ೬-೧೮೦ ನೋ); ಮಗನರಸಿ ಮಂತ್ರಿಸಹಿತವನಿಪಂ ಹಿಂದೆ ದೇಸಿಗನಂತೆ ಕೌಶಿಕನ ಕಾಹಿನೊಳು ಬರೆ ಕಂಡು ಬಗೆ ಬೆದಱಿ ಹೊದ್ದಿ ಹೊಡೆವಟ್ಟು ಕಾಣಿಕೆಯ ಚಿತ್ತೈಸು ಭೂಭುಜ ಎಂದರು (ಹಸಕಾ. ೬-೭೨). [ಪೊಡೆ$_3$ + ಪಡು$_1$]

ಪೊಡೆವಳಸು (ಕ್ರಿ). ಹೊಟ್ಟೆಯನ್ನು ಸುತ್ತು, — ಬಳಸು : ಅವಳು ಮಟ್ಕರ್ತು ಕೊಲಲೆತ್ತಿದ ಕೋಲಂ ಕೆಲಕಿಟ್ಟು ಕಟ್ಟುಱದೊಳ್ಬಿಟ್ಟಿತ್ತೆನೆ ನಿಟ್ಟುರಮಂ ನುಡಿದು ಕಟ್ಟೆ ನಿಲಿಸಲ್ಕೆಂದು ತೊಟ್ಟನೊಂದು ಕಡೆವಾವಂ ಪೊಡೆವಳಸಿ ಪಿಡಿವಿನಮೆರಟ್ಟಿರಲಳವುಂ ಕಡಮೆಯಾಗೆ (ಸಕವಂ. ೬೯-೦).

[ಪೊಡೆ$_3$ + ಬಳಸು$_1$]

ಪೊಡೆವೆಱು (ಕ್ರಿ). ಹೊಡೆತವನ್ನು ಅನುಭವಿಸು ; ಪೆಟ್ಟುತಿನ್ನು : ಪೊಡೆವೆತ್ತ ಪಾವಿನಂತೆ ನೊಂದ ಶರಭದಂತೆ ಸಿಕ್ಕಿದ ಪುಲಿಯಂತೆ ಕೋಪಾವಿಷ್ಟವಾಗಿ . . . ಮುತ್ತಿಕೊಳ್ವುದುಂ (ಧರ್ಮಾಮ್ಯ. ೬-೦೨೪)

[ಪೊಡೆ$_2$ + ಪೆಱು$_1$]

ಪೊಡೆವೊಗು (ಕ್ರಿ). ಹೊಟ್ಟೆಯನ್ನು ಹೊಗು ; ಉದರವನ್ನು ಪ್ರವೇಶಿಸು,— ಸೇರು : ದೆಸೆಗೆಟ್ಟು ತಮಮೋಡಿ ಭೀತಿಯಿಂ ಸಸಿವಸುಱ ಬಹೆನೆಂದು ಪೊಡೆವೊಕ್ಕುದೋ . . . ಎನಲ್ ಪೊಸತಾಯ್ತು ವಿಧುಬಿಂಬ ಮಧ್ಯದಂಕಂ ಪಳಿಕುವಸೆಯಿರ್ದ ಕಾಳಿಯಂತೆ (ಶಬಪು. ೯-೨೫).

[ಪೊಡೆ$_3$ + ಪೊಗು]

ಪೊಡೆಶಂಡು ' ಪೊಡೆಸೆಂಡು ' ನೋ.

ಪೊಡೆಸು ' ಪೊಡೆಯಿಸು ' ನೋ.

ಪೊಡೆಸೆಂಡಾಟ, ಪೊಡೆಚೆಂಡಾಟ (ನಾ). ಚೆಂಡನ್ನು ಪುಟಿಸಿ ಆಡುವ ಒಂದು ಬಗೆಯ ಆಟ : ಅವರ ಪಸುಳೆಗಳ್ ಪಕ್ಕಿಯ ಸಿಡಿದಲೆಯೊಳ್ ತಿಱಿಕಲ್ಲಾಟಮಂ . . . ತುಪ್ಪುಟ್ಗೇಟ್ ಸಿಡಿವ ಪಾರಿವಂಗಳಂ ಪೊಯ್ದು ನೆಲಕ್ಕೆ ಕೆಡವುವಲ್ಲಿ ಪೊಡೆಸೆಂಡಾಟಮಂ . . . ಕಲ್ವರ್ (ಸಕವಂ. ೬-೦೬). **ಪೊಡೆಚೆಂಡಾಟ** : ಅಹಿತರಾಯರುಗಳ ಶಿರವನು ಪೊಡೆಚೆಂಡಾಟವಾಡುವೆನು (ಅಂಬಿಪ. ೭-೨೨). [ಪೊಡೆಸೆಂಡು + ಆಟ]

ಪೊಡೆಸೆಂಡಾಡು, ಹೊಡೆಚೆಂಡಾಡು, ಹೊಡೆಸೆಂಡಾಡು (ಕ್ರಿ). ಚೆಂಡನ್ನು ಎಸೆಯುವ ಆಟವನ್ನು ಆಡು : ಕಡಲಂ ಪೀರಲುಂ . . . ಮೇರುವಂ ಪೊಡೆಸೆಂಡಾಡಲುಮಾರ್ಪ ಕಾಲಯವನಂಗೇನಾರ್ಪನೆ ಯುದ್ಧದೊಳ್ ತೊಡರಲ್ ಚಕ್ರಿ ದಿಶಾಗಜಕ್ಕೆ ಕಳಭಂ ಕೈಯಿಕ್ಕಲೇನಾರ್ಕುಮೇ (ಪಾಂಪ. ೯-೦೭); ಕುಲಾದ್ರಿಸ್ತೋಮವಂ ಕಿಳ್ತಣಾ ಪೊಡೆಸೆಂಡಾಡುವ . . . ಗಣಗಳ್ ಬಂದರಾವಂದದಿಂ (ಗಿರಿಕ. ೧೦-೭೪). **ಹೊಡೆಚೆಂಡಾಡು :** ಹೊಡೆದು ಹೊಡೆಚೆಂಡಾಡಿ ರಿಪುಗಳ ಗಡಣವನು ಯಮರಾಜಧಾನಿಗೆ ನಡೆಸುವೆನು (ಕುಪ್ಪಾಕ. ೬-೬); ತೇರ್ಗಳ ನುಚ್ಚುನುಱಿ ಮಾಡಿಯಾನೆ ಗಳನಿರದೆ ತಿವಿತಿವಿದು ಹೊಡೆಚೆಂಡಾಡುತಿರ್ದಂ ಗಜಾಸುರಂ ಸಂಗರದೊಳು (ಶಿಪಿಪು. ೨೮-೨೩). **ಹೊಡೆಸೆಂಡಾಡು:** ಚಂಡಪರಾಕ್ರಮದಿಂದಿದಿರಾದವುದ್ದಂಡ ಮಂಡಳಿಕರೆಲ್ಲರನು ಗಂಡುತನದಿ ಹೊಕ್ಕಾ ತಲೆಗಳ ಹೊಡೆಸೆಂಡಾಡದೆ ಸುಮ್ಮನಿಹನೇ (ವೇಮಸಂ. ೨೮-೨೨). [ಪೊಡೆಸೆಂಡು + ಆಡು$_1$]

ಪೊಡೆಸೆಂಡು, ಪೊಡಸೆಂಡು, ಪೊಡೆಚಂಡು, ಪೊಡೆಚೆಂಡು, ಪೊಡೆಶಂಡು, ಹೊಡಸೆಂಡು, ಹೊಡೆಚಂಡು, ಹೊಡೆಚೆಂಡು, ಹೊಡೆಸೆಂಡು (ನಾ). ೧. ಹೊಡೆದ ಚೆಂಡು ; ಪುಟಿದ ಚೆಂಡು. ೨. ಚೆಂಡನ್ನು ಎಸೆದು ಹಿಡಿಯುವ ಒಂದು ಬಗೆಯ ಆಟ : "ಪೊಡೆಸೆಂಡೆಂದು ಅಮ್ಮಾಲೆ" (ಕಕಸಾ. ೬೯-೩೩೯); ಒಡನಾಡಿಯುಮೊಡನೋದಿಯುಮೊಡವಳೆದುಂ ಗುಳ್ಳೆಗೊಟ್ಟಿ ಬಟ್ಟುಳಿಸೆಂಡುಂ ಪೊಡೆಸೆಂಡೆಂಬಿವನಾಡುತ್ತೊಡವಳೆದರ್ ತಮ್ಮೊಳೆಳಸೆ ತಂತಂ ಗೆಡೆಗಳ್ (ಪಂಪಭಾ. ೨-೩೦); ಅಭಿನವಜಲಧರತತಿಗಳ್ ನಭಕ್ಕೆ ನೆಗೆವುವು ಖಗಾದ್ರಿಯಣೆಯಿಂ ಸೂರ್ಯಪ್ರಭತನಯನತುಳಭುಜಬಲವಿಭವಂ ಪೊಡೆಸೆಂಡುವೊಯ್ದ ಬೆಟ್ಟಂಗಳವೋಲ್ (ಅರ್ಧಪೇ. ೨-೯೦); ಪೊಡೆಸೆಂಡುವೊಯ್ದನಾ ದ್ರುಪದನ ಪುತ್ರನಂ ಘಟಜಸೂನು (ಮಹಾಪೇ. ೦೩-೩೦). ೩. ಚೆಂಡನ್ನು ಅಂಗೈಯಿಂದ ನೆಲಕ್ಕೆ ಮತ್ತೆ ಮತ್ತೆ ಹೊಡೆದು ಪುಟಿಸುವ ಆಟ ; ಪುಟಚೆಂಡಾಟ : ತನ್ನ ಮುಂ ನೆರಪಿದ ಪಾಪಮೆ ಕೋಪದಿಂ ಪೊಡೆಸೆಂಡುವೊಡೆಯುತ್ತಿರ್ದುದು (ಪಾರ್ಶ್ವಪು. ೬-೦೦೦ ಪ). **ಪೊಡಸೆಂಡು :** ೨. ವೈರಿಭೂಪ್ರಭುಗಳ ಮಸ್ತಕಾವಳಿಗಳಂ ಮುಳ್ಸಿಂ(ಳಿಸಿಂ) ಪೊಡಸೆಂಡುವೊಯ್ದನೀ ತ್ರಿಭುವನಮಲ್ಲನೀ ಪೃಥ್ವಿ ಸೆಟ್ಟಿಯಿವಂ ಹರಿಪಂ ರಣೋರ್ವ್ವಿಯೊಳ್ (ಕಇ. IV, ೦-೬೪; 1204). **ಪೊಡೆಚಂಡು :** ೧. ಮೊಗಮೆತ್ತಿ ಫಲುಗುಣಾ ನೋಡುತಿರೆ ಕರ್ಣಜಂ ಗಗನದಿಂ ಬಿದ್ದಿಳೆಗೆ ಪೊಡೆಚಂಡಿನಂತೆ ಪುಟನೆಗೆದೆದ್ದು ರೋಷದಿಂ . . . ತೆಗೆದಿಸಲ್ (ಶೈಮಿಪಾ. ೨೩-೦೯). **ಪೊಡೆಚೆಂಡು :** ೨. ಕುಲೋರ್ವೀಧರಂಗಳನೆತ್ತಿ ಪೊಡೆಚೆಂಡನಾಡಲೋ ದಿಗ್ಗಜಂಗಳ ನಿಗ್ಗವಂಗಿತ್ತು ತಂದಿರಿಸಲೋ ಕೊಡು ಬೆಸನನೀ ರಿಪುಗಳಂ ಗೆಲುವುದರಿದೆ (ಸಾಳ್ವಭಾ. ೨೩-೩). 'ಪೊಡೆಚೆಂಡಾಟ' ಪರಾ. **ಪೊಡೆಶಂಡು :** ೧. ಕೆಳೆಯಂ ಕೊಂಡಪೆನೆಂಬವಂಗಭಯಮಂ ಕಾರುಣ್ಯದಿಂ ಕೊಟ್ಟಪಂ ಕಲಿಬ × × × ಪೊಚ್ಚಳಿಸಿ ಬಲ್ಬಿಂದಾನ್ತೋವೋವೆನಲ್ ತಲೆಯಂ ಚಕ್ಕನೆ ಕಿತ್ತುರ್ ಮೆಟ್ಟಿ ಪೊಡೆಶಂಡಂ ಪೊಯಿದಪಂ ಭೂರಿಭೂತಳವಾಕಂಪಿಸೆ (ಸೌಇಇ. IX — i, ೨೩೭-೦೯ ; ಸು. 1160). **ಹೊಡಸೆಂಡು :** ೧. ಸಿಡಿಲಂ ನುರ್ಗ್ಗೊತ್ತುವಂ ಭೈರವನ ಮಸಕಮಂ ಬಗ್ಗಿಪಂ . . . ಹೊಡಸೆಣ್ಡಂ ಹೊಯ್ವನನ್ಯಾವನಿಪರ ತಲೆಯಂ ವೀರಸಾಮನ್ತಸಿನ್ದನ್ (ಎಕ. XIV, ವಾಗಶುಂ. ೦೪೦-೩೬; ಸು. 1224). **ಹೊಡೆಚಂಡು :** ೨. ಒಂದುದಿನ ಭೋಜನು ಸಖರ ಕೂಡಿಕೊಂಡು ಹೊಡೆಚಂಡನಾಡುವಾಗ ಸಿಡಿದು ಕಿಱಿಯ ತಾಯಿಯ ಮಂಚದ ಕೆಳಯಿಕೆ ಬೀಳಲು (ಶೈರಸೂ. I, ೬೨); ಉರ್ವಿಯೊಳು ನಮ್ಮನು ನಿಷೇಧಮಾಡುತಲಿರ್ಪ ಗರ್ವರಾರವರೆರ್ದೆಗೆ . . . ಕಡಹದಿರೆಮೆಂದು ಹೊಡೆಚಂಡನಾಡುತಿರ್ದರು ಗೆಲುವಿನಿಂ (ಪಪಮೋ. ೦೭-೩೮). **ಹೊಡೆಚೆಂಡು :** ೨. 'ಹೊಡೆಚೆಂಡಾಡು' ಪರಾ. **ಹೊಡೆಸೆಂಡು :** ೧. ಕುಲಗಿರಿಗಳ ಕೈಗುಂಡುಗಳ ಬ್ರಹ್ಮಾಂಡಂಗಳ ಹೊಡೆಸೆಂಡುಗಳ . . . ಧರೆ ಗಗನಂಗಳ ಪಲ್ಲಟಿಸುವ ಬಲಯುತಬಲದಿಂ ಗಣಕುಲ ನಡೆದುದು ವೀರೇಶನ ಕೆಲಬಲದಲಿ ಜಗದಗಲದೊಳು (ವೀರೇಶ. ೨-೨೦); ಗಜದಳದ ಘಾಡಿಕೆಗೆ ವಾಜಿವ್ರಜದ ವೇಢೆಗೆ ಭೀಮನೇ ಗಜಬಜಿಸುವನೆ ಹೊಡೆಸೆಂಡನಾಡಿದನಹಿತಮೋಹರವ (ಕುಪ್ಪಾಕ. ೩-೦೦).

[ಪೊಡೆ$_1$ + ಸೆಂಡು]

ಪೊಡ್ಡಣ, ಪೊಡ್ಡವಣೆ, ಪೋಡಣಿ (ನಾ). ಒಗ್ಗರಿಸುವಿಕೆ; ಒಗ್ಗರಣೆ : 'ಪೊಡ್ಡಣಿಗೆ' ಪರಾ. **ಪೊಡ್ಡವಣೆ :** 'ಪೊಡ್ಡವಣೆಗೊಡು' ಪರಾ. **ಪೋಡಣಿ :** ಶಾಕ ಶೀಕರಣಿಯ ಗಾಡ ಪೋಡಣಿಯ ಸುಪಾಕವೊಗ್ಗರಣೆ ಪಾಯಸವ ಈಕೆಗಾಕೆಗೆ ಸ್ವಾಮಿಗವಳಿಗಿವಳಿಗೆಂದು ಜೋಕೆವಿಡಿದು ಬಡಿಸಿದರು (ಶರಶ. ೪-೭೪).

[< ಪ್ರಾ. ಪೋಡಣ. / ಸಂ. ಸ್ಫೋಟನ. / ಮರಾ. ಪೋಡಣೇ]

ಪೊಡ್ಡಣಿಗೆ, ಪೊಡಣಿಗೆ (ನಾ). ಒಗ್ಗರಿಸುವುದು; ಒಗ್ಗರಣೆ : ಮೊದಲು ತುಪ್ಪದೊಳುಕ್ಕರಿಸಿ ಸವಿಯುಮಂ ಹಡೆದ ಬದನೆಯೆಳೆಗಾಯ ಹೋಳಂ ಹಾಕಿಕೊಂಡು ತುಪ್ಪದೊಳು ಪರಿಮಳವಿಕ್ಕಿ ಪೊಡ್ಡಣಿಗೆಯಂ ಕೊಟ್ಟು ಸೆಪೆ ಹೋಗದಂತಿರಿಸಲು ಆದುವೆ ಪುಳಿಚಾರು ಬದನೆಯ ಕಾಯಿ (ಸೂಪಶಾ. ೪-೬); ಬಳಿಕ ಕೆಂಪಂ ಮಾಡಿ ಹುರಿದು ತಾಳಿಸಿಕೊಂಡು ಇಳುಹಿ ಪೊಡ್ಡಣಿಗೆಯಂ ಕೊಟ್ಟು (ಸೂಪಶಾ. ೪-೩೮). **ಪೊಡಣಿಗೆ :** ಸುಗಮವಹ ಸಕಲಸಂಭಾರಂಗಳ ಅಮ್ಮಿಕಲ್ಲೊಳಗರೆದು ನುಱುಗುವಂದದಿ ಕಾಸಿ ಕಮ್ಮನೆಯ ತುಪ್ಪದೊಳು ಪೊಡ[ಪಾಕಾಂ. ಪೂವ, ಪೊಡ್ಡ]ಣಿಗೆಯಂ ಕೊಟ್ಟು . . . ನವಪರಿಮಲವನು ಭಾವನೆಗೊಡುವುದು (ಸೂಪಶಾ. ೨-೪೮).

[ಪೊಡ್ಡಣ + — ಇಗೆ]

ಪೊಡ್ಡಣಿಗೆಗೊಡು, ಪೊಡಣಿಗೆಗೊಡು (ಕ್ರಿ). ಒಗ್ಗರಣೆ ಕೊಡು; ಒಗ್ಗರಿಸು : ಬಂದ ತಿಳಿಯಲ್ಲಿ ಸಂಭಾರಮಂ ಕದಡಿ ಸರಿಯಪ್ಪಂತೆ ಕಾಸಿಕೊಂಡು ನಿಂದುದಂ ಪಲಭಾಗ ಮಾಡಿ ಪೊಡ್ಡ[ಪಾಕಾಂ. ಡ]ಣಿಗೆಗೊಟ್ಟು (ಸೂಪಶಾ. ೨-೪೯); ಬಟ್ಟ ಬದನೆಯ ಕಾಯ . . . ತುಪ್ಪಮಂ ಬಿಟ್ಟು ಪೊಡ್ಡ[ಪಾಕಾಂ. ಡ]ಣಿಗೆಗೊಡೆ ತುಪ್ಪಗಾಯಾಯಿತು (ಸೂಪಶಾ. ೪-೦೩). **ಪೊಡಣಿಗೆಗೊಡು :** ಕೂಡಿ ಮಾಡಿದ ಸುಪದಾರ್ಥದಂದವನಱಿದೊಂದಿನಿಸು ತುಪ್ಪವನೆಱೆದೊಪ್ಪಮಾಗಿ ಪೊಡಣಿಗೆ[ಪಾಕಾಂ. ಪೊಡವಣಿಗೆ]ಗೊಟ್ಟು ಮಹಾಸ್ವಾದುಗೊಳಿಸುವಂತೆ (ಪರಪೂ. ೦). [ಪೊಡ್ಡಣಿಗೆ + ಕೊಡು$_1$]

ಪೊಡ್ಡವಣೆ 'ಪೊಡ್ಡಣ' ನೋ.

ಪೊಡ್ಡವಣೆಗೊಡು (ಕ್ರಿ). = ಪೊಡ್ಡಣಿಗೆಗೊಡು : ಮಿಗೆ ಪೊಡ್ಡವಣೆಗೊಟ್ಟ ಸಾರು ದೊವಲಾದ ಬಲುಸೊಗಸುಳ್ಳ ಪಾಕಂಗಳವನಿಷ್ಟದಂತಿರಲು (ಮುಲ್ಲಕ. ೩-೬). [ಪೊಡ್ಡವಣೆ (< ಪೊಡ್ಡಣ) + ಕೊಡು$_1$]

ಪೊಡ್ಡಿ, ಪೋಟಿ$_3$, ಬಡ್ಡಿ$_1$, ಬೊಡ್ಡಿ (ನಾ). ೧. ಸೂಳೆ; ವೇಶ್ಯೆ. ೨. ಕೆಲವು ವೇಶ್ಯೆಯರ ಹೆಸರಿನ ಮುಂದೆ ಸೇರುವ ಪದ : ದೇಗುಲದ ಸೂಳೆ ಗೋಯಿಂದಪೊಡ್ಡಿಯ ಮಗಳು ಬಾಡಿ (?ಳಿ) ಪೊಡ್ಡಿಯೆಂಬೊಳ್ (ಇಲ. XI, ೦೨೬-೪; 778). **ಪೋಟಿ$_3$:** ೨. ಮಹಾರಾಜಾಧಿರಾಜ ಪರಮೇಶ್ವರಭಟ್ಟಾರರಾ ಪ್ರಾಣವಲ್ಲಭೆ ವಿನಾಪೋಟಿಗಲೆನ್ನೊರ್ ಸೂಳೆಯರ್ (ಇಲ. X, ೦೦೬-೩ ; ?). **ಬಡ್ಡಿ$_1$:** ೩. ನೀಚಳು, ದುಷ್ಟಳು ಎಂಬರ್ಥದ ಒಂದು ಬಯ್ಗುಳು : ಏನನೆಂಬಳು ಬಡ್ಡಿ ಖಡ್ಡಿನಿತೇನು ಕಾರಣಮೆಂದು ನಸುನಗುತಾ ನಿಶಾಚರಚಕ್ರವರ್ತಿಯ ಕೇಳ್ದಳೊಲವಿನಲಿ (ಅಂಬಿಕಾ. ೩೪-೦೮); ಅಟ್ಟಕ್ಕೆ ಹಾರಲಾರದ ಬಡ್ಡಿ ಸ್ವರ್ಗಕ್ಕೆ ಹಾರಿದಳಂತೆ (ಮುಸ್ತಕ. ೦೨೩); ಓಡಿಹೋಗುವ ಬಡ್ಡಿ ಹಾಲಿಗೆ ಹೆಪ್ಪು ಹಾಕ್ಕಾಳೇ ? (ಗಾಡ). **ಬೊಡ್ಡಿ :** ೨. ಶ್ರೀ ವಿಜಯಮಹಾದೇವೀಬೊಗ್ಡಿ(ಡ್ಡಿ)ಪೋಧೀ(ಥೀ) ಸರ್ವ್ವಾನಾಜ್ಞಾಪಯತಿ (ಇಲ. VIII, ೪೬-೨೮; ೨೫ಯ ಕಸ). ೩. ಮುಡುಹಿನ ಮುಕ್ಕೆ

ಸೊಕ್ಕದಿರದೇನಭಿಮಾನದ ಬೊಡ್ಡಿ[ಪಾಠಾಂ. ಜೋಡೆ] ಬಾಲಮಂ ಬಡಿದವೆ (ಅನಂಪು. ೮-೩೦ ; ಸೂಕ್ತಿಸು. ೮-೪೨೪ ನೋ); ಇಬ್ಬರಿಗೆ ಫಡ ಹುಬ್ಬನಿಕ್ಕುವ ಕೊಬ್ಬಳೇ ಜಯಲಕ್ಷ್ಮಿ ಬೊಡ್ಡಿಯ ಕೊಬ್ಬ ನಿಲಿಸುವೆನು (ಕುಪ್ಪಾಳ. ೨೩-೨೬); ದುಡ್ಡಿಗೆ ಮಣ್ಣು ಹಾಕೋ ಆ ಬೊಡ್ಡಿಯಾದರೂ ಇದ್ದಾಳಲ್ಲ (ಬಡ್ಡಿಕಾ. ೨೬).

ಬೊಡ್ಡಿಮಗ, ಬಡ್ಡಿಮಗ=ವೇಶ್ಯೆಯ ಮಗ ; ಒಂದು ಬಯ್ಗುಳು : ಬೊಡ್ಡಿಮಗನಿಗೆ ಸರಿಯಾಗಿ ಬುದ್ಧಿ ಕಲಿಸಬೇಕಾಗಿದೆ (ಪುನರು. ೪೫೦); ಎಲಾ ಬೊಡ್ಡೀಮಗನೇ, ಸುಳ್ಳು ಹೇಳುತ್ತೀಯಾ? (ರಂಗರೋ. ೯೬); ನಿನಗೆ ಬರಬೇಕಾದ ದುಡ್ಡನ್ನು ಆ ಬಡ್ಡಿ ಮಗನ ಹತ್ತಿರದಿಂದ ಕೊಡಿಸುತ್ತೇನೆ (ರೂಢಿ).

[ದೇ. ॥ ತಮಿ. ಪೊಟ್ಟಿ; ಮಲ. ಪಟ್ಟಿ; ತುಳು. ಪಡವೆ, ಪಡವ್ವೆ]

ಪೊಣಕೆ 'ಪೊಣರ್ಕೆ' ನೋ.

ಪೊಣರ್₁, ಪೊಣರು₁, ಪೊಣಱ್, ಹೊಣರು (ಕ್ರಿ). ೧. ಸೇರು; ಕೂಡು; ಜೋಡಿಯಾಗು : ನಡೆಯೊಳ್ಪಾಜಮರಾಳರಾಜಿ . . . ಪಿಕ ಶ್ರೇಣಿಯಂ ಪಿಡಿದಂಚನ್ಮೃದುನಾದದೊಳ್ಪೊಣರಲಂದೆಟ್ಟುಂದುವೀ ವೇಳೆಯೊಳ್ಗಡಮಾದೀ [ವೀ] ಕ್ಷಿಸು ತಂಗಿಯೊಂದೆನುತಲೈತಂದತ್ತು ಕಾಂತಾಕುಳಂ (ಕಾದಕ್ಕಟ. ೭-೬೦). 'ಮೆಯ್ವೊಣರ್' ಪರಾ. ೨. ಸೇರಿಕೊಂಡಿರು; ಕೂಡಿಕೊಂಡಿರು : ಬಾಹುಬಲಿ ಭರತನಂ ದೃಷ್ಟಿಯುದ್ದ ಜಳಯುದ್ದದೊಳುಗೆಲ್ದು ಮಲ್ಲಯುದ್ದದೊಳು ಪೊಣರ್ದು ಪಲವಾಯಂಗಳೊಳು ಪೊಣರ್ದು ಶ್ರಾಂತವಾದಾಗಳು ಭರತನಂ ಪಿಡಿದೆತ್ತಿ ನೆಲಕ್ಕಿಕ್ಕುವುದುಂ (ಪಾಪುಂಪು. ೪೯); ಪೊಣರ್ವ ಪುಂಧಗಳುಂಚದಿಂ ಕೆದಱ ಮುದದಿಂದೆ ದಣುವಿಲ್ಲದೊಲ್ದು ಕುಣಿವಚ್ಚಕೇಳಿಕೆಗಳಿಂ (ಕಾದಕ್ಕಟ. ೩-೯೬). ೩. ಉಂಟಾಗು; ಒದಗು; ಸಂಭವಿಸು : ಅತ್ತ ದುರ್ಯೋಧನಂಗಂ ಭೀಮಂಗಮನುವರಂ ಪೊಣರ್ದಿರ್ದುದು (ಪಂಪಭಾ. ೦೨-೦೭೬ ಪ); ವರಾಹಕಲ್ಪಂ ತಾಂ ಪೊಣರ್ದುದು [ಪಾಠಾಂ. ಪೊಣ್ಮೆದುದು]ಎರಡನೆಯ ಪರಾರ್ಥಾಬ್ದದೊಳ್ (ಪಸ್ತುಪು. ೦-೦-೧೪೩). ೪. ಶೋಭೆಗೊಳ್ಳು ; ಶೋಭಿಸು ; ವಿರಾಜಿಸು : ಪೊಣರ್ವಖಿಳಕ್ಷೇತ್ರ ಶಿಖಾಮಣಿಯಾದೀ ಪಂಪೆಯೊಳ್ವಿರೂಪಾಕ್ಷಂ . . . ಕಂಗೊಳಿಪ್ಪಂ (ಕಾದಕ್ಕಟ. ೩-೬೪). ೫. ವೃದ್ಧಿಗೊಳ್ಳು ; ಅತಿಶಯವಾಗು ; ಹೆಚ್ಚಾಗು : ಎಣೆಗಳವಡದ ಮಹಿಮೆಗೆ ಗಣಭೂಷಣೆಗೊಲ್ದು ರತ್ನಕೀಲಿತನವಭೂಷಣ ಜಾಲಮನರ್ಪಿಸಿದಂ ಪೊಣರ್ವ ಮುದಂಬೆತ್ತು ಘೂರ್ಜರಕ್ಷಿತಿಪಾಲಂ (ಕಾದಕ್ಕಟ. ೩-೦೭೬). ೬. ಕಾದು ; ಹೋರಾಡು ; ಯುದ್ಧಮಾಡು : ಆ ಕ್ಷಣದೊಳೆ ಮಾರ್ಕೊಣ್ಡು ಪೊಣರ್ದು ತಳ್ತಿಱಿದು ಮಡಿದನೀ ಗೊಗ್ಗಿ × × (ಎಕ. XI. ಶಕ್ಕಳ. ೬-೬ ; ಸು. 925); ಇರ್ವರುಂ ನೀಲನಿಷಧಗಿರಿಗಳೊಂದೊಂದಱೊಳ್ ಬಂದು ಪೊಣರ್ವಂತೆ ನಿಂದೊರ್ವರೊರ್ವರೆಮೆಯಿಕ್ಕದೆ ನೋಡುವಲ್ಲಿ (ಅಪಿಪು. ೦೪-೦೦೪ ಪ); ಶರನಿಧಿಯೊಡನೊರ್ಮೆಗೆ ಮಚ್ಚರಿಸಿಕೊಳಂ ಪೊಣರ್ವ ತೆಱದಿನಂಗಜಮದಸಂಹರನೊಳ್ ತನ್ನಳವಱಿಯದೆ ಗುರುಲಘುವೆಂದಱಿಯದುಕ್ಕಿ ನೆಱೆ ಬಲಿ ನುಡಿದಂ (ರಮಾಸ್ಕು. ೯-೬೪); ಧರದಿಂದಿಭದೊಳಿಭಂ ಹರಿ ಹರಿಯೊಳ್ ತೇರ್ ತೇರೊಳಾಳೊಳಾಳ್ ಪೊಣರ್ದುದು (ಪರಾಪು. ೯-೪೬). ೭. ಸ್ಪರ್ಧಿಸು ; ಪೈಪೋಟಿ ನಡೆಸು : ಕೆಲರಂ ಬೀಸಿಯುಮೊತ್ತಿಯುಂ . . . ಭುಜಾದಂಡದಿಂ ಕೆಲರಂ ಕುತ್ತಿಯುಮೊತ್ತಿಯುಂ ಪೊಣರಿಯುಂ ಪೊಯ್ದುಂ ಧನುರ್ದಂಡದಿಂ ಕಲಿ ಕಟ್ಟಾನೆ ಕಡಂಗಿ ಕೊಲ್ವ ತೆಱದಿಂ ಕೊಂದಂ ಮರುನ್ನಂದನಂ (ಗರಾಯು. ೩-೦೨); ನೀಮುತ್ತಮೆಯೊಳ್ ಕರಂ ಪೊಣರೆ ಸೋಲ್ವುದು ತಪ್ಪದೆನಲ್ಕೆ ಕೇಳ್ದು ಕಾಡುತ್ತಿರದಾಡಿಮೆಂದೆನೆ ಮನೋಮುದದಿಂ ಪೊಣರ್ದಾಡುತಿರ್ಪುದುಂ (ಕೇಮಿಪು. ೪-೩೩). ಪೊಣರು₁ : ೬. ಬಾಣಾಂಬುಧಿಯ ತೆರೆಯೊಳದ್ದಿ ಪೊಣರುವರೊಮ್ಮೆ ಮೂರ್ಛೆಯಿಂ ಮೈಮಱೆದು ಬಿದ್ದು [illegible] ಕಾದುವರೊಮ್ಮೆ ಕೃಷ್ಣ ಪಾರ್ಥರ ತನಯರಾಹವದೊಳು (ಶೈಮಭಾ. ೨೨-೨೯); ಮುನಿಪತಿಯೆನ್ನೊಡನೀ ಮೇದಿನಿಯೊಳ್ ಪೊಣರಲ್ಸಮರ್ಥರಾರೊಳರುಸಿರ್ (ಪಸ್ತುಪು. ೩-೭-೮). Δ ಪೊಣಱ್ : ೬. ಎರೆದ ಮನುಜಂಗೆ ಸುರಭೂಮಿರುಹಂ ಶರಣೆಂದವಂಗೆ ಕುಳಿಶಾಗಾರಂ ಪರವನಿತೆಗನಿಲತನೆಯಂ ಧುರದೊಳು ಪೊಣರ್ಚಂಗೆ ಮೃತ್ತು ವಿನೆಯಾದಿತ್ಯಂ (ಎಕ. II, ೦೪೩-೭; 1131). ಹೊಣರು : ೬. ಸಿಂಹಿಕೆ ಹನುಮರಿರ್ವರುಂ, ತಾವೊರ್ವರೊರ್ವರಂ ಸೆಳೆದು, ಹೊಣರಿದರೊರ್ವರೊರ್ವರಂ ಸೋಲಿಸುವ ಛಲದ ವೀರ್ಯದ ಗರ್ವದಿಂ (ಶ್ರೀಕಾಪು. ೪೧೩-೨೯೨); ಅರೆಜಾವದಷ್ಟು ಸಮಯ ಆತನೊಡನೆ ಹೊಣರಿದರೂ ಈ ಅಪರಿಚಿತಮಲ್ಲನನ್ನು ಸೋಲಿಸಿ ಕೆಡಹಲಾಗಲಿಲ್ಲ (ಹುಲಿಸಾ. ೨೪೩); ಅವರು ಧೈರ್ಯದಿಂದ ಹೊಣರಿದರೂ ಹಗೆಗಳನ್ನು ಸೋಲಿಸಿ ಹಿಂದಟ್ಟಲು ಅಸಮರ್ಥರಾದರು (ಹಾಹುಕ್ತ. ೫೫).

[ದೇ. ॥ ತಮಿ. ಪುಣರ್; ಮಲ. ಪುಣರು; ತೆಲು. ಪೊನರು]

ಪೊಣರ್₂, ಪೊಣರು₂ (ನಾ). ೧. ಸೇರಿಸುವಿಕೆ; ಕೂಡಿಸುವಿಕೆ; ಜೊತೆಗೊಳಿಸುವಿಕೆ : (ಕಿ). ೨. ಎರಡರ ಜೊತೆ : ಜೋಡಿ; ಯುಗ್ಮ : "ಯುಗಳಂ ಯುಗ್ಮಂ ದ್ವಂದ್ವಂ . . . ದ್ವಯಂ ದ್ವಿತಯಂ ಸಂಜ್ಞೆಗಳಿವೆ ಪೊಣರೊಳ್" (ಪಸ್ತುಕೋ. ೧೦೪-೩೫); ತಪನಕರಂ ತನುಗಳನುರ್ಚಿ ಪೋಗೆ ಸಾರ್ವತ್ತು ಜಕ್ಕವಕ್ಕಿಯ ಪೊಣರುಂ ಗ್ಲಪಿತಮನಮಾಗಳುದ್ದಂಡಪುಂಡರೀ ಕೋಜ್ಜ್ವಲಾತಪತ್ರದ ನೆಟಲಂ (ಅಪಿಪು. ೦೦-೫೦); ಗುಣವತಿ ರಾಘವನಂ ಲಕ್ಷ್ಮಣನಂ ನೆನೆನೆನೆದು ಶೋಕಪಾವಕನೆರ್ದೆಯೊಳ್ ಮಣಿಯದೆ ದಳ್ಳಿಸೆ ಕಣ್ಗಳ ಪೊಣರಿಂ ಕಣ್ಬನಿಗಳುಣ್ಮೆ ದೆಸೆಗೆಟ್ಟರ್ದಳ್ (ಪಂಠಾಪು. ೦೫-೭೭); ಪೊಣರದೆ ಮದನನ ಡೊಣೆಗಳ ಪೊಣರದೆನಲ್ ನಂಬಿ ಕೇಳ್ವುದಾ ಯುವತಿ ಶಿಖಾಮಣಿಯ ಕಿಱುದೊಡೆಯನೀಕ್ಷಿಸಿ ಮಣಿಯದರಾರ್ ಮದನನಿಸುವ ಮೋಹನಶರದಿಂ (ಜಗಂ. ೦೦-೨೩). ೩. ಕಾಂತಿ; ಹೊಳಪು; ಶೋಭೆ: "ತೊಳಗು, ಬೆಳಗು . . . ಪೊಣರ್, ಮಿಂಚು, ಡಾಳಂ, ಪೊಗರ್, ತೊಳಪಂ, ಮಸೆ—ಈ ೧೪ ಕಾಂತಿ" (ಕಶಸಾ. ೫೫-೨೦೨). ೪. ಯುದ್ಧ; ಕಾಳಗ; ಕದನ: "ಮೊನೆ ಪೊಣರ್ ಕೊಳುಗುಳಂ ಬಂಡಣಂ ಜುದ್ದ ಮೆಂದೆನೆ ಕಾಳಗಕ್ಕೆ ನಾಮಂ" (ಕಬ್ಬಿಳ್ಳ. ೪೦). ಪೊಣರು₂ : ೩. "ತೊಳಗೆನೆ ಮಿನುಗೆನೆ . . . ಕಳೆ ಪೊಳೆಪು ಪೊಣರು ಮಸೆಯೆನೆ ತಳಪಮೆನಲ್ ಕವಿಗಳಿಂದೆ ಕಾಂತಿಯೆನಿಕ್ಕುಂ" (ಕವಿಕಂ. ೧೦೦). ೪. "ಕೊಳುಗುಳ ಬಂಡಣಂ ಜುದ್ದ ಮೊನೆ ಪೊಣರು ಕಾಳಗಕ್ಕಳವಟ್ಟ ನಾಮ" (ಕಬ್ಬಿಪುಂ. ೪೦).

[<ಪೊಣರ್₁. / ತಮಿ. ಮಲ. ಪುಣರ್]

ಪೊಣರಱ (ಕ್ರಿ). ಜೊತೆಗೆಡು ; ಅಗಲು ; ಬೇರೆಬೇರೆಯಾಗು : ಇನರಥಹತಿಯಿಂ ನೆಗೆದ ಗಗನಧಾತುಸ್ಥಳೀರಜಂಗಳಿಂ ರೂಪಱಿದತ್ತೆನೆ ಸಂಜೆಗೆಂಪನುಱಿದಿರೆ ಕನಲ್ದು ಪೊಣರಱಿದುವೊಡನೆ ಕೋಕಯುಗಂಗಳ್ (ಜಗಂ. ೧೬-೯೬); ಇನಿಯಳ್ ಪೊಣರಱಿದೊಡದಂ ನೆನೆನೆನೆದುಂ ಸುಯ್ದು ಸುಯ್ದಟಲ್ದಳ್ತಳ್ತಬ್ಜಿನಿಯಬ್ಜಿನಿದಪ್ಪದೆ ನೋಡಿ ನೋಡಿ ಜಾನಿಸಿದುದ ತುಲಶೋಕಂ ಕೋಕಂ (ಜಗಂ. ೦೬-೯೭). [ಪೊಣರ್₂ + ಅಱ₁]

ಪೊಣರಿಚು 'ಪೊಣರ್ಚು' ನೋ.

ಪೊಣರಿಸು (ಕ್ರಿ). ಕಾದಿಸು ; ಯುದ್ಧಮಾಡಿಸು ; ಹೋರಾಡಲು ಪ್ರಚೋದಿಸು : ಗಣನೆಗೊಳಲ್ಕದೇಂ ನೆರಪಿದಂ ಮದನಂ ಕದನೋತ್ಸವಕ್ಕೆ ಮೇಣ್ ಪೊಣರಿಸಲೆಯು ಪೋರಿಸುವನಲ್ಲದೊಡೇಂ ಪೆಱಸಾರವಂತೆವೋಲ್ ಬೆಣೆಯನಮರ್ಚಿ ಪೂಣ್ದವನಿದೆಂಬಿನಮೇಂ ಬಗೆವಂದುದಿಂದು ಸಂದಣಿಸುತೆ ಗುಂಬದಂಬಟೆವುಯಿಲ್ಪಱೆಯಿಂ ಗಣಿಕಾಕದಂಬಕಂ (ಪಕವಿ. ೬-೧೫೨).

[ಪೊಣರ್₁ + — ಇಸು₃]

ಪೊಣರು₁ 'ಪೊಣರ್₁' ನೋ.

ಪೊಣರು₂ 'ಪೊಣರ್₂' ನೋ.

ಪೋರ್ಕೆ. ವೊಣಕೆ, ಹೊಣಕೆ, ಹೊಣೆಕೆ, ಹೊಳಕೆ$_1$ (ನಾ). ೧. ಜೊತೆ ; ಜೋಡಿ ; ಯುಗಳ : ಗುಣಾಗ್ರಣಿ ದಿನೇಶವಾಯುಯುಗಳಂ ಪೋರ್ಕೆಯೊಳ್ ಕೀಱು ಬಂದೊಡೆ . . . ಕೇಳ್ವಲೋದ್ದತರತಂ (ಧಂಕೋಂಬಾ. ೨–೦೩೮). ೨. ಯುದ್ಧ ; ಕಾಳಗ ; ಹೋರಾಟ : ಇರೆ ಛಿದ್ರಿಸಿದೊಂ ಜವನನುವರ್ಕ್ಕಮಿದಿರ್ಗಂ ಪೋರ್ಕೆಗಂ ಸುಗಿದವೊಲಾ ಹರಿಯಂ ಮೂದಲಿಸಿ ಚಲಂದಿರಸಿ ನಿರಾಕರಿಸಿ ಹರಿಯನಿಱಿವುದು ಮೊಗ್ಗೇ (ಶಾಂತಪು. ೯–೦೮೭); ಬಲವಿರೋಧಿ ವಜ್ರಂಗೊಳೆ ದಾನವರಿವು ಚಕ್ರಂಗೊಳೆ ಕೌರವಾರಿಗದೆಗೊಳೆ ಪೋರ್ಕೆಗಾವಂ ನಿಶ್ಶಂ (ಕಬಾದ. ೦೩೭ ಕ್ರಿಪೋ); ಕ್ಷತ್ರಿಯರ್ಗೆ ದಿಮ್ಮಿದರೊಳ್ ಪೋರ್ಕೆ ಸಲ್ಲದೆಂದುಂ (ಅಮ್ಮಕ. ೩೨–೨೨). ೩. ಸ್ಪರ್ಧೆ ; ವೈಪೋಟಿ ; ಮೇಲಾಟ : ನೆತ್ತವನಾಡಲೀ ಘನಸುವೃತ್ತಪಯೋಧರೆಯೊಳ್ ಪೋರ್ಕೆ ಕೇಳತ್ತಳಗಂ ದಿಟಂ (ಪಂಪಪು. ೪–೩೩). **ಪೊಣಕೆ** : ೨. ತಂದವೆ ನಾ ಸೇನೆಗಳಂ ಚುದ್ದ ಕಾಲ್ಕಂದಿ ಕುದುರೆ ತೇರಾನೆಗಳಂ ಪೊಣಕೆಯ ಬಂಟರಂ (ಜಾಣಕ್ಕ. ೨–೦೪–೨೩). **ಹೊಣಕೆ** : ೧. ಭಟರು . . . ರಣ ಭಯಂಕರವಾಗಲು ಹೊಣಕೆಗಳಿಂದಲಿ ಹೊಕ್ಕಿಱಿದಾಡ್ದರು (ಕ್ರಿಪುಪೋ. ೬–೧೩). ೨. ಸೆಣಸು ಗಡ ನಮ್ಮೊಡನೆ ಸಲೆ ಟೆಂಕಣಿಪುವರು ಗಡ ಬವರಕೋಸುಗ ಹೊಣಕೆ ಗಡ ನಮ್ಮೊಡನೆ (ಕುಮ್ಮಕ್ರೋ. ೦೫–೬೦) : ಬರಸಿಡಿಲುಗಳ ಸಮೂಹವಬ್ಬರಿಸುತ ಗಿರಿಶಿಖರಗಳ ಹೊಯ್ದಂತೆ ಬಿರುದಿನ ಹೊಣಕೆಯ ಹೊಂತಕಾಜಿಗಳಾಗ ತಱುದಿದರರಿವಾಹಿನಿಯಾ (ಕಂಪಾ. ೦೫–೨೫). ೩. ಬಾಲಕರು . . . ಬೆಂಡಿನ ಹೊಣೆ ಜಾನಕೋಲಾಳು ಗೊತ್ತಿನ ದಂಡೆಯನೆ ನಾನಾವಿನೋದದಲಿ . . . ಆಡಿದರು (ಕುಪಾ.ಕ. ೬–೦); ತವುತವುಗೆ ಹೊಣಕೆಯಲಿ ತೋರಿದರಮಿತಬಲಸನ್ನಾಹಗಳ ಸಂಧ್ಯಾವದೊಳೆಪ್ಪತ್ತೈಳು ಕೋಟಿ ಕಿರೀಟವರ್ಧನರು (ಅಪಂಗಾ. ೪–೩–೨೭). ೪. ಹೊಂದಿಕೆ ; ಸೇರಿಕೆ ; ಕೂಡಿಕೆ : ಈ ಸಿದ್ಧಾಂತಕ್ಕೆ ಎಣಿಕೆಯು ಕಾಣಿಕೆ ಮಾತ್ರವೇ ಕಾರಣವೋ ಅಧಾರದ ಹೊಣಕೆಯೂ ಇದೆಯೋ ಎಂದು ಕೇಳ್ಬಹುದು (ಪಾಪೋಗಾ. ೭೬). ೫. ಕೂಟ; ಸಂಭೋಗ : ಹೊಣಕೆಗೆ ಹೋರಿದಲ್ಲಿ ವನಿತೆಯರ ಮನೆಯಾಸೆ ಉಂಟೆ ಘನತರವವ್ವ ಪರವುದಾಸೋಹಿ ತಾನಾಗಿ ಅಲ್ಲಿ ಅನುವರವನಱಸುಲುಂಟೆ (ಪಕಥ. I. ೩೩೦–೦೨೬). ೬. ಎಣೆ ; ಸಾಟಿ; ಸರಿ : ವರರೂಪಿನೊಳು ರತಿಗೆ ಹೊಣಕೆ ಸೌಧಾಗ್ರದೊಳು ಸಿರಿಗೆ ಹೊಯಿಕೈ (ಪಪಕಾ. ೦–೯೯). ೭. ಶೌರ್ಯ ; ಪರಾಕ್ರಮ : ಹೊಣಕೆಯುಳ್ಳಧಿಪರೊತ್ತರಿಸಿದರ್ಕಱಿಸಿದರ್ಕಣೆವಳೆಯು ಸಬಳದಿಂ ಸಿಕ್ಕಿದರ್ ಕಾಕ್ಕಿದರ್ಕಣಿಕೆ ಕುಂತದಿ ಕಡಿದರಸಿಗಳಿಂ ಮಸಿಗಳುದರುಣಜಲ ಧಾರೆವರಿಯೆ (ಪಂಂಪಪು. ೦೬–೯೪). ೮. ಪ್ರತಿಜ್ಞೆ; ಶಪಥ : ಧಾತೆಯತಿಬಳರು ಹೊಣಕೆಯಿಂದಲೇ ಹಿಂದ ಹಾರದಿರಣಕ್ಕಿಸುವ ಮಾತಿಲ್ಲ ದಿವಿಜರ ಗಣಕೆಯರು ಬಯಸುವರು ನೂಳುವದೆಂದು ಸಾರಿದರು (ಕುಪಾ.ಪ್ರ. ೯–೪೯); ಅಣಕಿಸುವ ದಾಧಕರ ದಾಯವೆ ಟೊಣೆದು ಬಸವನ ಛಿತ್ರಿ ಧಾರದ ಹೊಣಕೆಯನೆ ಹುಂಕೊಂಡು ಪೂರ್ಪಿಸಲಿಕೆ ದೇಕು(ಕ್ರಪುಂಗೀ. ೨೨–೩೦); ಹೊಣಕೆಗಳ ತಡಹುಗಳ ಕಲಿತನದ ಕಡುಹುಗಳ ರೂಢವಕಧಿ ಕುದಿಯುತಿಹುದು ಹಂಸಧ್ವಜನ ಪರಿವಾರವನುದಿನದೊಳು (ಕೃಪಾಣಾ. ೦೦-೯೩). **ಹೊಣೆಕೆ** : ೧. ಕನಕದ ಗುಂಡು ಪವಳ ಎರಡನೆ ತಂದು ಹೊಣೆಕೆಯಲ್ಲಿ ಇಟ್ಟು ಪೋಗಿಸಲು ಜನರಿಗೆ ಪೊಳೆವದು ಎಂದಿಗಾದರು ಮೋಹನಮಾಲೆಯಲ್ಲದೆ ಪ್ರತಿಮೆಸರೆ (ಪಣಾಸಂ. ೨೯–೩). ೨. ತೆಂಗಿನಕಾಯ್ಕೂಗ ಗಟ್ಟಿಯೆ ವಿಂಗಡಿಸಿ ಹೊಣೆಕೆಯಲಿ ರಾವುತ ಲಂಚ್ಯಸುತ ನೋಡಿದ್ದ ಯಾಟಯಲಿರಿದ ತೆರನಂತೆ (ಪಾ.ಪಸಂ. ೦೮–೮೦). **ಹೊಳಕೆ$_1$** : ೨. ಹೊಳಕೆಗೆ ಹೊಸವೀಳೆಯವೀಯೆಂಬಗ್ಗಳಿಕೆಯ ಪಂತದ ಪಲವಾತುಗಳಂ ಗಳಪುವ . . . ಭುಜಬಲಶಾಲಿಗಳ್ (ಇಪುಗಾ. ೬–೨೭): ಹೊಳಕೆಯ ಹೊಂತಕಾಜಿಗಳು ಹೋರಾಟದ ಕಲಿಗಳು ಬರುದಿನ ಭಟರು . . . ಎಳಸಿದರವನ ಪೌದಿನೊಳು (ಭಾಗಾಪಾ. ೦೨–೩೯); ಇಂತಪ್ಪ ಬರುದಿನ ಹೊಳಕೆಯ ಭಟರ್ಗಳು ಮುಂತಾರ್ದಟಿಸುತ್ತೈತರಲು (ಕೋಚ. ೩೩–೩೫). ೩. ದುಡದ ಹೊಳಕೆಗಳ ಹೋರಾಟ ಬಿಡುವಿಲ್ಲುಧಯಃಪ್ರುಧಭರ (ಕುಪ್ರ. ೬–೬೩); ತಂದೆ ಮಕ್ಕಳು ಬೆರಸಿ ಹೊಯ್ದಾಡಿದರು ಮುಂದಲಿ ಸುತ್ತ ಹೊಳಕೆಯಲಿ (ಅಂಪಾಗಾ. ೫೦–೦೪); ಹೊಳಕೆಯಂ ವೀರವಾದಗಳೆಲೆಸೆವ ಚರರ ಪದಗತಿಗಳಾ ದುಂದುಭೀಧ್ವಂಕಾರಧರಕಳುತಿ ಪಮಿಸಲ್ಕೆತಪ ರಾಜವಾಳಿಗಳ ತೆರದೆ ಖಿಸಿಖಿಸಿಲೆಂಬ ವಾದ ಮಾಗಧರವದಿ ತುಂದಿ ತೆಣ್ಡಸೆ ರಭಸದಿ (ಪಂಗಾಪಾ. ೦-೬–೦೩). ೪. ಗುಂಪು ; ಸಮೂಹ : ತಿಳಿದ ಕಾರಿರುಳೆರಕವೋ ಮೇಣ್ ಖಳಜಪಪ ಹೃದಯಾಂಧಕಾರದ ಹೊಳಕೆಯೋ ತಾಮಿಸುತಿರಲು ನಡೆತಂದವಾ ದನುಜ (ಭಾಪ್ರಾಪ. ೩–೨೦); ಅತ್ಯ ಬಿಜ್ಜಲಧೂಪ . . . ಹೊಳಕೆಯು ರಾವುತರು ಎಳೆವ ಡಾಪುರಿ ಬೊಂದೆ ಕಾಳಕನ ಕಾಲದಂತೆಯೊಪ್ಪಿಹನು (ಕೋಚಕ. ೩–೭೯).

ಹೊಣೆ ಮಾಡು = ಸಂಗಡಿಸು ; ಆಣೆಗೊಳಿಸು : ರಣೆಯ ಶಿದ್ಧಿತ ಗಱಿಯ ಕಟ್ಟುತ . . . ಹೆದೆಯನಳವಡಿಪ ರಣಕೆ ಸುಧೀರ ಹೊಣೆ ಮಾಡುವ ತ್ರಿಣಯಪುರವನು ನೋಡಿ ಕಾಲವನೆಣಿಪ ತೆಱದಲಿ ನೋಡು ತಿಹ ರಣಧೀರ ಸೌಮಿತ್ರಿ (ಕಾಣಾ. ೦೭–೨೦). [ಪೋರ್$_1$+—ಕೆ]

ಪೋರ್ಗಳಸ (ನಾ). ಜೊತೆಯಾಗಿರುವ ಕಲಶ ; ಜೋಡುಕಲಶ : ಪೊಱವಾಱು ಮೆಟ್ಟುವಂತಬ್ಬರಿಪ ಮುಗುಳ ಗೊಂಚಲ್ಗಳಂ ದೆಸ್ಸು ಪೂವಂ ತಿಱುವುದ್ಕಚ್ಚಂದ್ರದಿಂದಾನನೆದು ಘನಕುಚದ್ವಂದ್ವಮಂ ಪೊತ್ತು ಜೆಲ್ವಿಂದೆಱಗುತ್ತಿರ್ವುದ್ವಲನ್ನಾಧವಿಮಧುಸ್ಮವವೇಟ್ರಂದೊಡಾನಂದದಿಂದಂ ಮಿಱುಗುತ್ತಿರ್ವನ್ನೆಗಂ ಕನ್ನಡಿ ಪೋರ್ಗಳಸಂದೊತ್ತವೋಲ್ ಪೆತ್ತುದಿಂದುಂ (ಅಣಾಪ. ೦೭–೭೭). [ಪೋರ್$_2$ + ಕಳಸ$_1$ (< ಕಲಸ)]

ಪೋಱಿಸು (ಕ್ರಿ). ಕಾದಾಡುವಂತೆ ಮಾಡು ; ಹೋರಾಡಿಸು : ಪೋರ್ಚಿಸಿದಪನಾನೆಯಂ ಮಾವಟಿಗನಿನರಸಂ (ಕಬ್ಭಾಪು. ೩೯೦ ಕ್ರಿಪೋ). [ಪೋರ್ಚು + — ಇಸು$_5$]

ಪೋಱಿಸು, ಪೋಱರಿಚು (ಕ್ರಿ). ೧. ಜೊತೆಮಾಡು ; ಸೇರಿಸು; ಹೊಂದಿಸು : "ಪೋರ್ಚು—ಸಂಯುಗೇ (ಬೆರಸು)" (ಕಪಾಧಾ); ಸುರ ಸುದತೀಕದಂಬಕದ ಗಾಂದರದಿಂ ದನಿಯೊಳ್ ದರಸ್ಮಿತಾಂಬುರುಹಮುಖಿತ್ತಿ ಚುಂದಿಸುವ ತುಂಬಿಯ ಗಾವರಮಂ ಪೋರ್ಚಿ (ಅಪಂಪು. ೪–೦೨೬). ೨. ಉಂಟಾಗು ; ಒದಗು ; ಸಂಭವಿಸು : ನೀರದವಿಟಂಗೆ ವಿದ್ಯುನ್ನಾರಿಯ ವಿರಹಂ ಪೋರ್ಚಿ ಬಡವಾಗಿ ಕರಂ ದೂಱಿಸಿ ಬೆಳರ್ತ ತೆಱದಿಂ ಶಾರದಾಭ್ರ ಧರದ ತುಱುಗಲೊಗೆದುವ ನಭದೊಳ್ (ಅಣಾಪ. ೫–೫೦). ೩. ಮಾಡು ; ಉಂಟುಮಾಡು ; ಒದಗಿಸು : ತೆಪ್ಪುತನಕ್ಕೆ ತೆಪ್ಪುತನಮಂ ಪುಸಿನಲ್ಮಿಗೆ ಮೋದಿ ನಲ್ಮೆಯಂ . . . ಉಳ್ಕೆವಕಾಳ್ಕೆವಗೆಯ್ವುವಂ ಪೋರ್ಚುತ್ತುಮುವಾಯದಿಂ ಕಳೆಯೆ ಕೂಡುವನಂ ವಿಧು ಕಂಡು ಮಿಚ್ಚಿದಂ (ಗಾಕೃಣ. ೧೮೩ ಕಬ್ರಸ್ತ) ; ಬೆಚ್ಚದೆ ಬೆದಱದೆ ಮೊಲೆಯಂ ಸಾರ್ಚಿದ ಮಱಿವೆರಸು ಸುಟಿವ ಮಾನಿಸರುಲಿವಂ ಮಚ್ಚಿದ ವುಲ್ಲೆಗಳಲ್ಲಿ ಪೋರ್ಚುತ್ತಿರ್ದಪುವು ಶಾಂತರಸಪರಿಣತೆಯಂ (ಕೋಪ್ರಸು. ೩–೦೩೦). ೪. ನೆರವೇರಿಸು ; ನಡೆಸು ; ಆಚರಿಸು: ಜಿನವರವದ್ಮದೊಳ್ ಮಣಿಕಿರೀಟತಟಂ . . . ಪರಿಶುದ್ಧಿಯೊಳ್ ತ್ರಿಕರಣಂ ಸಮಸಂದಿರೆ ಮುಖ್ಯಸೌಖ್ಯಧಾಜನನಮರಂ ತ್ರಿಲೋಕತಿಲಕಂಗೆ ಮಹಾಮಹಮಂ ಪೋರ್ಚಿದಂ (ಶಾಂಶಪು. ೬–೩೦). ೫. ಕೈಕೊಳ್ಳು ; ಪ್ರಯೋಗಿಸು : ಇತೀ ವೇಟ್ಟು ವದಿವಾಱುಂ ಸಂಧಿ ಮಾಱುತಿನೀತಿಯಲ್ಲಿರ್ಕುಂ ಸೋಮದೇವನೀತಿಯಲ್ಲಿರ್ಕುಂ ಇವಱಲ್ಲಿ ಸಾವಾವ ಸಂಧಿಯಂ ಪೋರ್ಚುಪೊದಮರಿವರ್ದನನೊಡಂಬಡುವನೆಲ್ಲ (ಕಂಚಪ. ೨೨೦–೬). ೬. (ಯುದ್ಧ, ಜಗಳ ಮೊದಲಾದುವುಗಳನ್ನು) ಹೂಡು; ಒಡ್ಡು ; ಏರ್ಪಡಿಸು : ಒರ್ವ ಗಂಧರ್ವನೊಳೆ ಚಿಕ್ಕಾಂಗದಂ ದ್ವಂದ್ವಯುದ್ಧಮಂ ಪೋರ್ಚಿ ಕುರುಕ್ಷೇತ್ರಮಂ ಕಳಂದೇಱ್ದು ಕಾದಿ ಸತ್ತೊಡೆ (ಕಂಕಣ. ೦೯೭ ಕ); ಪೋರ್ಚಿ ಕಾದಿ ಕೆಡೆದಂ ಕಲಿಗಳ್ ಕಲಿಗಳಂ (ಕಂಕಣ. ೦೯೭ ಕ); ಪೋರ್ಚಿ ಕಾದಿ ಕೆಡೆದಂ ಕಲಿಗಳ್ ಕಲಿಗಳಂ (ಕಂಕಣ. ೦೯೭ ಕ); ಪೋರ್ಚಿ ಕಾದಿ ಕೆಡೆದಂ ಕಲಿಗಳ್ ಕಲಿಗಳಂ (ಕಂಕಣ. ೦೯೭ ಕ);

ಅಂತಚಿಂತ್ಯಯುದ್ಧಂಗೆಯ್ದು ಲಕ್ಷ್ಮಣನಂ ಗೆಲಲ್ ನೆಱೆಯದೆ ವಿದ್ಯಾಯುದ್ಧಮಂ ಪೊಣರ್ಚಿ ದಿವ್ಯಾಸ್ತ್ರಮನಭಿಮಂತ್ರಿಸಿಕೊಂಡಿಸುವುದುಂ (ಸಂಧಾಮಾ. ೦೪-೦೫೬ ಪ); ಅವನ ಸತಿ ಪುರುಡಿ ನೆವದಿಂ ಬವರಮನೆ ಪೊಣರ್ಚಿ ಮಾರಿದತ್ತಾಖ್ಯೆ ಮಹಾಹವಶೀಲೆ ತನ್ನ ಮನೆಯಿಂದವೆ ಪೊಱ ಮಡಿಸಿದ[ಳು ಕ]ನಲ್ದು ಪದ್ಮಾವತಿಯಂ (ಪುಷ್ಯಾಸ್ತ್ರ. ೨-೪೩). ೭. ಯುದ್ಧಮಾಡು ; ಕಾದು ; ಸೆಣಸು : ತಲೆಗಾಯಿಾ ಭಟನಂ ಪೊಣರ್ಚಿ ಪೊಡೆದಿಕ್ಕೀ ದ್ರೋಹನಂ (ಅನಂಪು. ೦೧-೫೬) ; ಹರಿಹರಪದ್ಮಜಾದಿಗಳ ನೋವದೆ ಕಂತು ಲತಾಂತಬಾಣಮೊಂದೆರಡಱನೆಚ್ಚು ಗೆಲ್ದ ಜಯದಗ್ಗದ ಸುಗ್ಗಿಯ ಮೊಟ್ಗಿದೆಂದು ಬಂದಿರದೆ ಪೊಣರ್ಚಿ ಸೋಲ್ತು (ಪುಷ್ಪಪು. ೦-೦೨); ಕಲಿ ರಾಜಹಂಸನಶ್ವವನೊಸೆದೇಱಿಯೆಕ್ಕತುಳದಿಂ ಪೊಱಮಟ್ಟರಿಯೊಳ್ ಪೊಣರ್ಚಿದಂ (ದಕಕು. ೦-೭೩). ೮. ಪೈಪೋಟಿ ನಡೆಸಂ ; ಸ್ಪರ್ಧಿಸು : ತನುವಿದುವೊಂದನುಳ್ಳ ನಭದೊಳ್ ಶಿಶುಕೇಸರಿಯೊಂದನುಳ್ಳ ಕಾನನದೊಳದೊಂದು ಕುಟ್ಮಲಮನುಳ್ಳ ಸರೋವರದೊಳ್ ಪೊಣರ್ಚಿ ನೆಟ್ಟನೆ ದೊರೆಯಾದುದೀ ಬಲಮುಮಿಾ ಶಿಶುವೊರ್ವನಿನೆಂಬಿನಂ ಜಗಜ್ಜನಮತಿಮುಗ್ಧ ಬಾಲನರಪಾಲಕಮಾದುದು ಚಕ್ರಭೃತ್ಕುಲಂ (ಅಧಿಪು. ೪-೬೨); ಗಣಿದದೊಳೇಂ ಕರುಮಾಡಂ ಪೊಣರ್ಚುವೊಡೆ ನೆಗಟ್ಟ ದಿವಿಜರಾಜವಿಮಾನಕ್ಕೆಣೆ ಪೋಲ್ವೆ ಸಮಂ ಸದೃಶಂ ತೊಣೆ ತೋಡನುಸಾರಿ ಸಾಟಿ ಪಾಸಟಿಯೆನಿಕುಂ (ಸುಕುಮಾ. ೦೦-೫೦). ಪೊಣರಿಚು : ೭. ಪೊಣರಿಚುವನಾವ ದಕ್ಷಂ ನೋಳ್ಪೆ ವಿದುವೆ ಸನ್ನಾಹಭೇರಿಯ ಪೊಡೆಯಿರೈ (ಸತುಪು. ೪-೯-೦೩).

ಪೊಣರ್ಚುವ ಬಲೆ=ಒಂದಕ್ಕೊಂದು ಕೂಡಿಸಬಹುದಾದ ಒಂದು ಬಗೆಯ ಬಲೆ (?) : ತಡಿಕೆವಲೆ ಕಣ್ಣಿವಲೆ ನಿಟ್ಟಡಕಿಲ್ವಲೆ ಗೂಂಟವಲೆ ಪೊಣರ್ಚುವ ಬಲೆ ಮುಂ ಬಿಡುವಲೆ ನಡುವಲೆ ತಡೆವಲೆ ಸಿಡಿವಲೆ ನಿಡುವಲೆಗಳೊಪ್ಪಿದವು ಲುಬ್ಧಕರೊಳ್ (ಗಂಳ. ೦-೬೦). [ಪೊಣರ್$_1$ + ಚು$_1$]

ಪೊಣರ್ಪುಳಿ (ನಾ). ಒಂದು ಸ್ಥಳದ ಹೆಸರು : ತಸ್ಯ ಸೀಮಾನ್ತರಾಣಿ ಬಡಗಣದೆರೆ ಪೊಣರ್ಪುಳಿ ಬಡಗಣ ಪಡುವಣ ಕೊನೆದು ಪಾಣತ್ತಿಗಲ್ಲು (ಮೈಅಂ. ೦೯೨೭. ೦೨೨-೫೯; 808). [?]

ಪೊಣರ್ವಕ್ಕಿ (ನಾ). (ಹಗಲಿನಲ್ಲಿ) ಜೊತೆಯಾಗಿರುವ ಹಕ್ಕಿ; ಚಕ್ರವಾಕ ಪಕ್ಷಿ; ಜಕ್ಕವಕ್ಕಿ : "ಕೋಕಂ ರಥಾಂಗಂ ಪೊಣರ್ವಕ್ಕಿ ಚಕ್ರಂ" (ಪಸ್ತುಕೋ. ೪೨-೦೬); ಕಾಗೆ ಪೊಣರ್ವಕ್ಕಿ ಪೊಂಗುರು ಗೂಗೆ ಮುಕುಂದಂ ಬಲಾಕೆ ಲಾವುಗೆ ಸೇನಂ (ಕಾವ್ಯಸಾ. ೦೦೪೪ ಕೂದ್ರಕ) ; ಮದನನ ಪೆರ್ಗಿಚ್ಚಿಂ ಮಗ್ಗಿದ ಪೊಣರ್ವಕ್ಕಿಗಳ ಹೃದಯಸಂಕುಳದಿಂದುಣ್ಮೆದ ಕರ್ಬೊಗೆಯೆಂಬಿನಗಂ ಪುದಿದೆತ್ತಂ ಮರ್ಬಿನುರ್ಬು ಪರ್ಬಿತ್ತಾಗಳ್ (ಕಾವಂಕಾ. ೦೪೦); ನಲ್ಮೆಯ ಪೊಣರ್ವಕ್ಕಿಯ ನುಡಿವಕ್ಕಿಯ ಬೆಳುದಿಂಗಳ ಹಕ್ಕಿಯ ನಿಡುಗಣ್ಗಱಿವಕ್ಕಿಯ ಬಳಗಂ ಬಳಸಿದುದಾ ನೃಪಸತಿಯಾ (ಜಯಕಾ. ೨-೦೬). [ಪೊಣರ್$_1$ + ಪಕ್ಕಿ]

ಪೊಣರ್ವೆಟ್ಟು (ನಾ). ಜೊತೆಯಾಗಿರುವ ಬೆಟ್ಟ : ಜೋಡಿಬೆಟ್ಟ : ಮೊಲೆ ಪೊಣರ್ವೆಟ್ಟು... ಕೋಮಳತನು ಯಷ್ಟಿ ಕಲ್ಪಲತಿಕಾಂಕುರವೊಳ್ಮುಡಿ ಸೋಗೆ ಮನ್ಮಥಾನಳಶಿಖಿ ಬೇಗೆಯಾಗೆ ಮದನಾಟವಿಯಂತೆವೊಲೊಪ್ಪಿ ತೋಱಿದಳ್ (ಕಾವ್ಯಸಾ. ೬೦೨ ಕೂದ್ರಕ).

[ಪೊಣರ್$_2$ + ಬೆಟ್ಟು$_2$ (< ಬೆಟ್ಟ)]

△**ಪೊಣಱ್** 'ಪೊಣರ್$_1$' ನೋ.

ಪೊಣೆ$_1$ (ಕ್ರಿ). ಹೊಡೆ; ಪೆಟ್ಟುಕೊಡು ; ಏಟುಕೊಡು : ಪೊಣೆದೋರೋರ್ವರನೆಚ್ಚಂಬುಗಳು ಮಧ್ಯರಣರಂಗದೊಳು ಕತ್ತರಿಸುತ ಬಣಬೆಯನೊಡ್ಡಿದಂತಾಗಲು ಕಪಿಕೇತುವಣುಗನ ಕೈಯಂಬು ತೀರೆ (ವೇಮಿಸಂ. ೨೯-೬೭); ಬಾಯಂ ಪೊಣೆದು ವಿರಿಂಚಿಯ ಕಾಯಜಪಿತನೆರ್ದೆಯನೊದೆದು ಸುರಪತಿಯಂಗಕ್ಕಾಯತಭಗದಂಕಿತವಂ ಮಾಯದೊಳಾಗಿಸಿ ಮಹೇಶನಂಗದೊಳೆಸೆದೆಂ (ಪಮ್ಮಾರ. ೬-೨೮); ಮಾರ್ಕಣೆಗಳು ಪಣೆಯೊಳಣೆವುತುಂ ಪೊಣೆವುತುಂ . . . ತೇರ್ಕುದುರೆಗಳ ಭಟರನಟ್ಟುತುಂ ಮೆಟ್ಟುತುಂ ವೃಷಭಂ ಪ್ರಹಾರಿಸಿದನು (ಪಿಪು. ೪೪-೦೬). 'ಪೊಣೆಗುಂಡು' ಪರಾ.

ಪೊಣೆ$_2$, ಹೊಣೆ (ನಾ). ೧. ಜವಾಬ್ದಾರಿ; ಉತ್ತರದಾಯಿತ್ವ : 'ಪೊಣೆಕಾಱ' ಪರಾ. ೨. ಹೊಣೆಗಾರಿಕೆಯನ್ನು ವಹಿಸಿಕೊಂಡ ವ್ಯಕ್ತಿ; ಜವಾಬ್ದಾರ ; ಹೊಣೆಗಾರ : ನರನ ಜೀವನಕ್ಕೆ ಪೊಣೆ ದೇವಪುರ ಲಕ್ಷ್ಮೀಶನು (ಶೈಮಿಶಾ. ೨೩-೬೪). ೩. ಕರಾರುಪತ್ರ ; "ಜಾಮೀನು" (ಗಂಗಾಮ. ೨೦೭). ೪. ಕರಾರುಪತ್ರವನ್ನು ಬರೆದುಕೊಟ್ಟವನು; ಜಾಮೀನುದಾರ : (ಕಿ). ಹೊಣೆ : ೧. ಹಣೆಯ ಹೊಣೆಯ ತೋಱಿ ಉದರವ ಹೊರೆವ ನಿಮ್ಮ ಮಱೆಯಲಡಗಿಪ್ಪ ಹಡಪಿಗ ನಾನಯ್ಯ (ಕೂಪ್ಯಸಂ. ೯೫-೦೦); ಧರ್ಮಜ ಹೊಗಳು ಹೊಣೆಯನು ವಚನಿಸೊಡ್ಡವನಿದು ವಿನೋದವಲೆ (ಕುವ್ಯಾಸ. ೧೬-೪೭); ಅವನ ಹೊಣೆ ನಿಮ್ಮ ಹೊಣೆಯೇ ಆಗಿದೆ (ರಂಗರೋ. ೧೦); ದೊಣೆಗೆ ಹೋದರೂ ಹೊಣೆ ತಪ್ಪದು (ಗಾದೆ). ೨. ಶಿವನೇ ಶಂಕರಾ ಸ್ಥಾಣುವೇ ಜಲಂಧರಾಸುರವಿಜಯ ರಕ್ಷಿಸು ರಕ್ಷಿಸು ನಮಃ ಶಿವಾಯ ನೀನೆ ತೊಣೆ ನೀನೆ ಹೊಣೆ (ವಾಗೀರ. ದೇ. ೨೬೭-೯); ಬಾಳಿಸುವದಕೆ ಹೊಣೆ ನಾನು ಭಕ್ತನಾಗು ಸಮಸ್ತವಸ್ತುವ ಯುಕ್ತರಾಜ್ಯವನೀವೆನು (ಬಸಪು. ೨೭-೫೪); ನಿಮ್ಮಾಯುಷಕೆ ಹೊಣೆ ತಾನು ಹೇಳಿತ ಮಾಡಿ ಬೇಗದಲಿ (ಕುವ್ಯಾದ್ರೋ. ೦೯-೩೭). ೩. ರಮಾದೇವಿಯವರನ್ನು ಹೊಣೆಯ ಮೇಲೆ ಬಿಡುಗಡೆ ಮಾಡಿಕೊಂಡು, ಗೋವರ್ಧನರಾಯನು ಅವರನ್ನು ತಮ್ಮ ಮನೆಗೆ ಕರೆದೊಯ್ದನು (ಸ್ಕೂಲಿಮಿ. ೨೨೦). ೪. ಸರ್ವವೂ ಸಾಧ್ಯವಾದಡೆ ತಾನಿಲ್ಲ ಬಯಲಪ್ಪುದಕ್ಕೆ ಇದೇ ಚಿಹ್ನ ಹೀಗೆಂದು ನಂಬುವುದು ನಂಬದಿದ್ದರೆ ಚೆನ್ನಬಸವಣ್ಣನ ಹೊಣೆಯ ಕೊಡುವೆ ಕಾಣಾ (ಅವಸಂ. ೦೭೬-೭೯೯); ಮಾಜಿ ಹೋಗರು ನಾವು ಹೊಣೆಯಿದರ್ಗೆಂದಾದಿರಾಜ ಪೊಕ್ಕಣಿಸಿ ಕೈಮುಗಿದ (ಶರತ. ೪೫-೫೮).

ಪೊಣೆಯಾಗು, ಹೊಣೆಯಾಗು = ಜವಾಬ್ದಾರಿಯನ್ನು ಹೊರು ; ಭಾರವನ್ನು ವಹಿಸಿಕೊಳ್ಳು : ಇಱಿಯಲ್ಬಲ್ಲೊಡೆ ವೀರನಾಗು . . . ತೆಱಬಲ್ಲರ್ಪೊಣೆಯಪ್ಪುದೈ (ಸೋಮೇಶ. ೭೭); ತಾಯೆ ಕೊಟ್ಟುದು ತಮಗೆ ತಾನದ ಕಾಯುವಗತಿಗನುಸಾರಿ ಯಾದವರಾಯ ಹೊಣೆಯಾಗಿರಲು ಲಕ್ಷ್ಯವೇ ದೈತ್ಯಕೋಟಿಗಳು (ಸಂಭವ. ೨೫-೪೯); ಮಾಯೆಯು ನಿನ್ನ ಬಹುವಿಧದಿ ಕಾಡುತಲಿಹುದು . . . ಕ್ಷಿತಿಯ ಪೂಜ್ಯತೆ ಕೆಡಿಸುವುದು ಮುಂದೆ ಶತಜನ್ಮಂಗಳಿಗೆ ಹೊಣೆಯಾಗಿ ನಿಲ್ಲುವುದು (ಪುರಂದ. ೦-೫೦-೨); ಗಣಿಕನ ನೆರೆ ಹೊಲ್ಲ ಗಣಿಕೆ ಮುದಿಯುಳು ಹೊಲ್ಲ ಕಣುಕಟ್ಟು ಹೊಲ್ಲ ಅಱಿದರಲಿ ಅರಮನೆಗೆ ಹೊಣೆಯಾಗ ಹೊಲ್ಲ (ಸರ್ವಜ್ಞ. ೭೪೬). ಹೊಣೆಗೊಡ್ಡು = ಜಾಮೀನಾಗಿಸು ಹೊಣೆಯಾಗಿಸು ; ಜಾಮೀನು ಮಾಡು : ಹೊಣೆಗೊಡ್ಡಿ ದೊಡ್ಡಣ್ಣ ಚಿಕ್ಕಣ್ಣನವರ ಪೊಕ್ಕಣಿಸಿರಿ (ಶರತ. ೪೫-೬೬). ಹೊಣೆ ಮಾಡು = ೧. ಜಾಮೀನು ಕೊಡು; ಹೊಣೆಯಾಗು : ಆ ಪೊಂಗಳಿತ್ತವರೊಂದುದಿನ ನಿಲಿಸಿ ಗಾಱುಮಾಡುತ್ತಿರಲ್ಕಂಡು ಬರಲೀತನಂ ತೋಱಿದಪೆನೆಂದು ಶಿವಭಕ್ತನಂದದಿ ಬಂದು ಹೊಣೆ ಮಾಡಿ ಬಿಡಿಸಿ ತಂದು (ಗುರುಸಾ. ೧೩-೬೬). ೨. ಜವಾಬ್ದಾರನನ್ನಾಗಿ ಮಾಡು; ಹೊಣೆಗಾರನನ್ನಾಗಿ ಮಾಡು : ಅವನು ತನ್ನ ತಪ್ಪಿಗೆ ಬೇರೆಯವರನ್ನು ಹೊಣೆ ಮಾಡಿದನು (ರೂಢಿ). ೩. ಕಾದಿರಿಸು ; ಮೀಸಲಾಗಿಡು : ಅವನು ತನ್ನ ಪ್ರಾಣವನ್ನು ಒಡೆಯನ ಶತ್ರುಸಂಹಾರಾರ್ಥವಾಗಿ ಹೊಣೆ ಮಾಡಿದ್ದನಲ್ಲದೆ ಸ್ವರಕ್ಷಣಾರ್ಥವಾಗಿ ಎಂದೂ ಆಶಿಸಿದವನಲ್ಲ (ಕವಿಕ. ೨೫).

[ದೇ. ॥ ತಮಿ. ಪಿಣೈ, ಪುಣೈ; ಮಲ. ಪಿಣ ; ತುಳು. ಪೊಣೆ, ಹೊಣೆ]

ಪೊಣೆಕಾಱ, ಪೊಣೆಗಾರ, ಹೊಣೆಕಾರ, ಹೊಣೆಕಾಱ, ಹೊಣೆಗಾರ, ಹೊಣೆಗಾಱ (ನಾ). ೧. ಜವಾಬ್ದಾರಿಯನ್ನು ಹೊತ್ತವನು ; ಭಾರವನ್ನು ವಹಿಸಿಕೊಂಡವನು ; ಜವಾಬ್ದಾರ : ಇನ್ನೇಕೆ ಬಹು

ಪ್ರಚಿಂತೆಯೆನಗಂ ಸಂಸಾರಮಂ ಖಂಡಿಸಲ್ಪೊಣೆಕಾಱು ಪತಿ (ನೀ)ನಿರಲ್ಕಿವ ಗಣಾನಂದಾಬ್ಧಿಚಂದ್ರೋದಯಾ (ಕಂಕಸ. XVIII, ಬೀಕಿ). **ಪೊಣೆಗಾರ** : ೨. "ಜಾಮೀನುದಾರ" (ಗಂಗಾಮ. ೨೦೭). **ಹೊಣೆಕಾರ** : ೧. ಎಲೆ ಭೈರವಾ ಕಾಶಿಯಲ್ಲಿದ್ದವರ ಮುಕ್ತಿಗೆ ನೀನು ಹೊಣೆಕಾರನು (ಕಾಶೀಮ. ೨೬-೪). **ಹೊಣೆಕಾಱ** : ೧. ಹೊಣೆಕಾಱನೊಪ್ಪ ಶ್ರೀಮಹಾದೇವಶರಣ (ಸೌಇಂ. ೦೯೩೦, ಉಡುಪಿ. ೬೦೦-೨೪ ; 1339) ; ತಲೆ ಪೋಪ ಬಳಿಗೆ ಕಾಲೆ ಹೊಣೆಕಾಱನೆಂದೇಬ ಗಾದೆಗೆ ಸಂದು ಮೇಲನಱಿಯದೆ ಬಂದು ಕಂಡನಾ ವೀರ ಶರಜಾಲದಿಂ ಪುದಿದ ರಣತಂಗಮಂ (ಕಂಪು. ೩೨-೨). **ಹೊಣೆಗಾರ** : ೧. ಆ ಸೆರೆಮನೆಯಲ್ಲಿ ನಡೆಯುತ್ತಿದ್ದ ಕ್ರೂರಕೃತ್ಯಗಳಿಗೆಲ್ಲ ಯಾರು ಹೊಣೆಗಾರರೊ ಅಂಥ ಇನ್‌ಸ್ಪೆಕ್ಟರ್ ಮತ್ತು ಮುಖ್ಯ ಕಾವಲುಗಾರರಿಗೆ ವಿನಯವಿನಮ್ರನಾಗಿ ವಂದನೆಯನ್ನರ್ಪಿಸಬೇಕಾಗಿತ್ತು (ಪುಪರು. ೦೬೬). 'ಹೊಣೆಗಾರಿಕೆ' ಪರಾ. ೨. "ಲಗ್ನಕಃ, ಪ್ರತಿಭೂಃ — ೨ ಹೊಣೆಗಾರ, ಜಮೀನ್‌ದಾರ" (ಸಿದ್ಧಾಂತಿ. ೩೦೯). **ಹೊಣೆಗಾಱ** : ೧. ತಾಯೆ ಬಾರೌ ತಂಗಿ ಗಂಧದ ವಾಯುವಿದೆ ಹೊಣೆಗಾಱನಾಗಿ ನವಾಯಭೋಜನ ವಿಂದು ಮೊರಕಿತು ಮನುಜಮಾಂಸದಲಿ (ಕುಪ್ಯಾಲ. ೯-೦೦) ; ಹುಟ್ಟಿಸಿದ ದೇವ ತಾ ಹೊಣೆಗಾಱನಾಗಿರಲು ಗಟ್ಯಾಗಿ ರಕ್ಷಿಪನು ಇದಕೆ ಸಂಶಯವಿಲ್ಲ (ಕಪಕ. ೩೦-೦). ೨. "ಪ್ರತಿಭೂಃ, ಲಗ್ನಕಃ — ಈ ೨ ಹೊಣೆ(ಗಾಱಂ)" (ಹಲಾಯು. ೬೨.೨೨೫). [ಪೊಣ್ಮೆ + — ಕಾಱ]

ಪೊಣೆಗಾರ 'ಪೊಣೆಕಾಱ' ನೋ.

ಪೊಣೆಗುಂಡು, ಹೊಣೆಗುಂಡು (ನಾ). ಒಂದು ಬಗೆಯ ಆಟ (?) : ℘ ಇದು 'ಪೊಡೆಸೆಂಡು' ಎಂಬ ಆಟವಿರಬಹುದು: ಪರಿವರಿ ಪಾಱುಂ ಬಳೆ ಮರದೆರಸಿ ಕುಳಿಲ್ಸೆಂಡು ಬಟ್ಟು ತಿಱಿಕಲ್ಲಟ್ಟುಂಗರೆ ಪೊ[ಪಾಕಾಂ. ಹೊ]ಣೆ ಗುಂಡೆಂಬಿವನಾ ಮುರಹರನಲ್ಲಲ್ಲಿಗಾಡುತುಂ ಬರಲ್ (ಜಗಪ. ೯-೯೪ ; ಕಾವ್ಯಸಾ. ೬೭೭ ನೋ). **ಹೊಣೆಗುಂಡು** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಪೊಣ್ಮೆ + ಗುಂಡು]

ಪೊಣ್ಣನೆ (ಅ). ಕೂಡಲೆ ; ತಕ್ಷಣ ; ತಟ್ಟನೆ : ಅಣ್ಣಾಜಿ ಬಹಾಗ ಕುಳಿತಿರ ಲಾಗದೇಳಣ್ಣಾಯೆಂದನು ಚಿಕ್ಕಮಗನ ಪೊಣ್ಣನಾ ಮಗನೆದ್ದನೊಡನೆ (ಭರಸ. ೧೬-೩೬).

§ **ಪೊಣ್ಣೆಪೊಣ್ಣನೆ** (ದ್ವಿರುಕ್ತಿ) : ಪೊಣ್ಣಪೊಣ್ಣನೆ ಕುಣಿಯೊ ಚಿಣ್ಣ ಯೌವನರಱಿದು ಕಣ್ಣ ಬಱವು ಹರಿಯಿತೆಂದು ಹೆಣ್ಣುಗಳೆಲ್ಲರು . . . ಲಿಂಗಣ್ಣಗಾರತಿಯನೆತ್ತಿದರು (ಕೋಡಸ. ೩-೦೦೭). [ಪೊಣ್ಮ್ + — ಅನೆ$_1$]

ಪೊಣ್ಮಂಚಿ (ನಾ). (?) : ಅಂಚೆದುಪ್ಪುಳುವಾಸು ಕೌಳುಡೆಮಲಗು ಪೊಣ್ಮಂಚಿಯ ಮೇಲ್ಗಟ್ಟು ಗಿಂಡಿ ಮಿಂಚುವಡಿಗ ವೀಣೆ ಸಂಗಲಿಸಿದುವು ಲಾವಂಚದ ಬೀಸಣಿಗೆಗಳು (ಭರಸ. ೦೫-೨೭). [℘ ಇದು 'ಪೊನ್ನಂಚಿ (= ಚಿನ್ನದ ಹಂಸ)' ಎಂದಿರಬಹುದು]

ಪೊಣ್ಮಿಸು, ಹೊಮ್ಮಿಸು (ಕ್ರಿ). ೧. (ನಾದ ಮೊದಲಾದುವನ್ನು) ಹೊರಡಿಸು ; ಉಂಟುಮಾಡು : ನವಕುಮುದಾಮೋದಮಾಢುರ್ಯದಿಂ ಪಟ್ಟದಗಾನಂಬೊಣ್ಮಿಸುತ್ತುಂ ಶಶಿಯುದಯದೊಳೊಪ್ಪಿತ್ತು ರಾಜೋಪ ಚಾರಂ (ಗಿರಿಕ. ೯-೯೬) ; ಕಂಠನಿನಾದಂಬೊಣ್ಮಿಸುತ್ತುಂ ಶುಕಪಿಕಶಕುನಿ ನಾದಮೊಟ್ಟೈಸೆ ಚಿತ್ರಾಸನೆ ತಚ್ಚಿತ್ತಪ್ರಿಯಂಗೇಂ ಮೆಱೆದಳೊ ಸುರತ ಕ್ರೀಡೆಯುಂ ಪ್ರೌಢಿಯಿಂದಂ (ಕಾವ್ಯಸಾ. ೬೬೯). ೨. (ದ್ರವ ಮೊದಲಾದುವು) ಹೊರಸೂಸುವಂತೆ ಮಾಡು ; ಹೊರಹೊಮ್ಮುವಂತೆ ಮಾಡು : ಮದನೋಗ್ರಾಗ್ನಿ ಮನಕ್ಕೆ ಮಾಟ್ಟುದು ಮಹಾಸಂತಾಪಮಂ ಜ್ವಾಲೆಯಿಲ್ಲದೆಯುಂ ಕಣ್ಮಲರ್ಗಳ್ಗೆ ಪೊಣ್ಮಿಸುವುದಂಭೋಧಾರೆಯುಂ ಧೂಮವಿಲ್ಲದೆಯುಂ (ಕಾದಂಉ. ೩೦೯). **ಹೊಮ್ಮಿಸು** : ೩. ಹರಡು ; ವ್ಯಾಪಿಸುವಂತೆ ಮಾಡು ; ಪಸರಿಸುವಂತೆ ಮಾಡು : ಮುಕ್ಕುಳಿಸುವ ಕೆಂಗಿಡಿರಾಶಿರಾಶಿಯ ದಿಕ್ಕೆಂಟಱೊಳಗೆ ಹೊಮ್ಮಿಸುತೆ ಹೊಕ್ಕುದು ವಿಧಿಬಾಣ ಕೃಷ್ಣನ ನಾಭಿಯ ಕುಕ್ಕರಿಸುತೆ ಶಿತುವೆನಲು (ಪೋಹಕ. ೯೦-೯೫) ; ಬರುವುದು . . . ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ, ಅಬ್ಬರದಲಿ ಭೋರ್ ಭೋರೆನೆ ಗುಮ್ಮಿಸಿ (ಕುಪು. ೨೬-೨). ೪. ತೋರ್ಪಡಿಸು ; ಪ್ರದರ್ಶಿಸು : ಜನರು ಕುಸ್ತಿ ಕಸರತ್ತು ಮೊದಲಾದುವುಗಳಲ್ಲಿ ತಮ್ಮ ಹೊಸತನವನ್ನು ಹೊಮ್ಮಿಸುವರು (ಕನ್ನಕಾ. ೦೭೭). [ಪೊಣ್ಮು + — ಇಸು$_3$]

ಪೊಣ್ಮು, ಹೊಣ್ಮು, ಹೊಮ್ಮು$_1$ (ಕ್ರಿ). ೧. ಹೊರಚಿಮ್ಮು ; ಹೊರಸೂಸು : "ಪೊಣ್ಮು—ಉದ್ಗಮನೇ (ಏಳು, ಕಾಣು)" (ಶಮಧಾ) ; ಸಾಧ್ವಸದಿಂ ಬೆಮರ್ ಬೆಮರ್ವೆಡೆಗಳಿನುಣ್ಮೆ ಪೊಣ್ಮೆದುದು (ಪಂಪಭಾ. ೩-೦೩) ; ಅಪರಿಮಿತಂ ಪೊಣ್ಮುವ ಬಾಷ್ಪಪಯೋಧಾರಾಳಿ ಪರಿವ ಪರಿನಾಳಿಕೆಯೊಂದು ಪಮೆಗೆ ಬಂದಿರ್ದುದು ಕರ್ಣಪೂರನವಕೇತಕೀದಳಂ ಕಾಮಿನಿಯಾ (ಕಾದಂಉ. ೨೨೯). ೨. ಹರಿ ; ಪ್ರವಹಿಸು : ಪೆರ್ಗೆಱೆಗಳಿಂ ಪುಂಡ್ರೇಕ್ಷುವಾಟಕ್ಕೆ ಪೊಣ್ಮುವ ಪೇರರ್ಬಿಗಳೆತ್ತಲುಂ ಸೊಗಯಿಕುಂ ಚಂಪಾಪುರೋಪಾಂತದೊಳ್ (ಸುಕುಮಾ. ೯-೯೩) ; ಸಿರಿ ಸುರಚಾಪದಂತೆ ಪೊಸಜವ್ವನಮಿದ್ದಿಲ ಬೂದಿಯಂತೆ ಪೆಂಡಿರ ಸುಖಮುಣ್ಮೆ ಪೊಣ್ಮುವ ಬಯಲ್ದೊಱೆಯಂತೆ . . . ಕಿಡಲಲ್ಲದೆ ತಾಂ ಸ್ಥಿರಮಾಗಲಾರ್ಕುಮೇ (ಧರ್ಮಾಮ್ಯ. ೫-೦೬) ; ಅಟ್ಟೆಯಿಂ ಸ್ಫುರಿಸಿ ರಕ್ತದ ಧಾರೆ ಪೊಣ್ಮೆ (ಭಾವಸಂ. ೯-೨೭). ೩. ಹೊರಕ್ಕೆ ಬರು ; ಹೊರಬೀಳು : "ಎಚ್ಚು ಪಾಯ್ವುದೆನಲ್ಕೆ ಪೊಣ್ಮೆತ್ತೆಂಬರ್ಥಮಕ್ಕುಂ" (ಕಬ್ಬಿಕ್ಕೆ. ೭೨). ೪. ಹರಡು ; ಹಬ್ಬು ; ವ್ಯಾಪಿಸು : ನೀರಿಲ್ಲದ ಕೆಱೆಯ ನಡುವುಮಂ ಪೊಗೆ ಪೊಣ್ಮೆ ನೆಗೆದ ಕಾಟ್ಕೆರ್ಚುಮಂ . . . ಇಂತೀ ಪದಿನಾಱುಂ ಕನಸುಗಳಂ . . . ಕಂಡೆಂ (ಪಡ್ಡಾರಾ. ೬೫-೨೭) ; ದೇವಾನೀಕಿನೀದುಂದುಭಿರವಮಮರೀವೃಂದ ಮಾಂಗಲ್ಯಗೇಯಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ (ಅಂಪು. ೦೯-೦೦೬) ; ಪೊಣ್ಮುತಿರ್ಪ ಪೂವಿನ ಪೊಸಗಂಪು ಕತ್ತುರಿಯ ಕಂಪೆನೆ ಪಾಡುವ ತುಂಬಿ ಗಾಣರೆಂದೆನೆ ನನೆಯಂಬ ನೋಲಗದ ಸಾಲೆವೊಲಿರ್ದುವು ಬಂದ ಮಾವುಗಳ್ (ಕಬ್ಬಿಕಾ. ೬೦) ; ನೂಪುರ ಕಂಕಣಸ್ವನು ದೆಸೆಗಳೊಳ್ ಪೊಣ್ಮೆ . . . ಬರುತಿರ್ದರಖಿಳಸ್ತ್ರೀಯರು (ಕಪಪು. ೫-೦೨). ೫. ಉಂಟಾಗು ; ಕಾಣಿಸಿಕೊಳ್ಳು ; ತಲೆದೋರು : ಬಗೆಯೊಳ್ ಪೊಣ್ಮೆ ದಯಾರಸು ಚರಿತದೊಳ್ ಕೈಗಣ್ಮೆ ಚಾರಿತ್ರಂ (ಅಂಪು. ೧-೫) ; ರೋಮೋದ್ಗಮಂ ಕೂಡೆ ಪೊಣ್ಮುತ್ತಿರೆ ಬಾಹುದ್ವಂದ್ವದಿಂದಂ ಬರೆತೆಗೆದುಱೆ ತಟ್ಕೈಸೆಯುಂ (ಕಾದಂಪೂ. ೯೯೦) ; ಪೊಗೆಯಿಲ್ಲದೆ ಪೊಣ್ಮೆತ್ತಗ್ನಿ (ಪಂಧಾಮಾ. ೩-೦೦೦) ; ಸಂಪನ್ನಮತಿ ಪವನಜಂ ತಳರ್ದನಲ್ಲಿಗೆ ವಿಪುಲಪುಲಕೋತ್ಸವಂ ಪೊಣ್ಮಲು (ಶೈಮಭಾ. ೬-೪೦). ೬. ಹೆಚ್ಚಾಗು ; ವೃದ್ಧಿಯಾಗು ; ಅತಿಶಯವಾಗು : ತ್ರಿದಶನರಾಸುರೋರಗಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮೆ ಪೊಣ್ಮೆ ನಿಲೆ (ಪಂಪಭಾ. ೦-೬೫) ; ಸ್ಮರರಾಗಾಂಧತ್ವದಿಂದಂ ಪಗಲೊಳಮಸತೀಕೇಳಿ ಪೊಣ್ಮಲ್ . . . ಬಂದುದು ಶಿಶಿರನೃಪೋದ್ಯತ್ಕೃತಾಂತಂ ವಸಂತಂ (ಕಾದಂಪೂ. ೬೨೦) ; ಇನಿತೊಂದುದ್ವೇಗಂ . . . ಆವನಿನಾದತ್ತೆಂತು ಪೊಣ್ಮೆತ್ತೆನೆ . . . ವಸುಮತೀಕಾಂತೆಯಿಂತೆಂದಳ್ (ಜಗಪ. ೦-೨೯). ೭. ಉತ್ಸಾಹಿಸು ; ಹರ್ಷಗೊಳ್ಳು ; ಸಂಭ್ರಮಪಡು : ತನಗಾಗಳ್ ಪೊಡವಟ್ಟಳಂ ಪದಪಿನಿಂ ಪೊಣ್ಮೆತ್ತ ಬಾಯಿತ್ತಬಾಯೆನುತಂ ತನ್ನ ಕೆಲಕ್ಕೆ ಕಾಂತೆ ಕರೆದು . . . ಅಲಂಪಿನೊಳಾ ಕಾಂತೆಯ ಮೆಯ್ಯನೊಯ್ಯನೆಳವುತ್ತಿರ್ದಳ್ ಕರಾಂಭೋಜದಿಂ (ಕಾದಂಉ. ೨೯೦) ; ಬೆಚ್ಚರಮವನೀತಳಂ ತನಗೆ ಸಾರ್ವ ಪೊಲೊರ್ಮೊದಲುಣ್ಮೆ ಪೊಣ್ಮೆದಂ (ಧರ್ಮಾಮ್ಯ. ೬-೬೦) ; ಪುಳಕಿಸುತ್ತುಂ ಪುಟವೇಱುತ್ತುಂ ಪೊಣ್ಮುತ್ತುಂ ನಲಿಯುತ್ತೆ ಗಜಾರೂಢನಾಗುತುಂ ಗಿರಿರಾಜಂ . . . ಪುರಕ್ಕೆ ತಿರುಗಿದನಾಗಳ್ (ಗಿರಿಕ. ೩-೦೦೦) ; ಸುತ್ತುವ ಪತ್ತುವ ನಿಲ್ವ ಗೆಲ್ವ ಪೊಣ್ಮುವ ಪುಟವೇಳ್ವ ಪಾಯ್ವ . . .

ನೆಱೆ ನೂಂಕುವೇಳ್ಗೆಯ ಬಲಂ ಬಗೆಗೊಂಡುದು ತತ್ಕುಮಾರರಾ (ಶಾಸಕೇ. ೦೩-೯೪). ೮. ಉಬ್ಬು; ದಪ್ಪವಾಗು; ಸ್ಥೂಲವಾಗು: ನಡು ಪೆರ್ಚಿದುದು ನಾಭಿ ಗುಣ್ಪಾಯ್ತು ಪೊಡೆ ಪೊಣ್ಮಿದುದು . . . ಗರ್ಭಚಿಹ್ನಮೆಸೆದುದು ಲತಾತನ್ವಿಗಂದು (ಪದ್ಮಕಾ. ೪-೨೯); ಏಱುಂಱೌವನದ . . . ಪೊಣ್ಮುವ ಪೊಱವಾಱ . . . ಮನೋಹರರೂಪದ ನೀಱೆಯ ನವಲಾವಣ್ಯದ ಸಿರಿಯನದೇನಂ ಬಣ್ಣಿಪೆನು (ಪಯಶಾ. ೩-೬೩); ಪೊಂಗಳಸಮೊಲೆಯ ಪೊಣ್ಮುವ ಮೊಲೆಯ . . . ಬಿಣ್ಮೊಲೆಯ ಭಾವೆಯರ್ ಬರುತಿರ್ದರು (ಪಾಪು. ೩೬-೪೩). ೯. ಚಿಮ್ಮು; ಸಿಡಿ; ಪುಟಿ: ಮೆಲ್ಪಿಂದವಳ್ ಪೊಯ್ದು ಪೊಣ್ಮಿದ ಸೆಂಡಂ ನಖದೀಪ್ತಿ ರಂಜಿಸುವಿನಂ ಮೇಗೆಯ್ಯೊಳಾಂತು . . . ತಾಳದ ಸೂಟಂ ತಿಳಿದಾಡಿದಳ್ ಸುದತಿ ಪೆಂಪಿಂ ಕಂತುಕಕ್ರೀಡೆಯಂ (ಪಕಳು. ೦೨-೨೯). ಹೊಣ್ಮು: ೫. ಜೈಮಿನಿಮುನಿ, ಕೂರ್ತು ಕೇಳುವರಿಗೆ ರೋಮಾಂಚನ ಹೊಣ್ಮುವಂತೆ, ಹರುಷ ಉಣ್ಮುವಂತೆ, ಆ ಕಥಾಮೃತವನ್ನು ಅದರ ಕಾರಣಸಹಿತ ತುದಿಮೊದಲಾಗಿ ವಿರಚಿಸಿದ (ಪಜಿಪು. ೦೯೫). ಹೊಮ್ಮು1: ೧. ಸಡಿಲಿದ ಎಣೆಗಂಟಿನ ದೆಸೆಯಿಂದ ಜಾರಿದ ಕುಸುಮಗಳುಳ್ಳ ಮುಡಿಯಿಂದಲೂ, ಹೊಮ್ಮಿದ ಬೆಮರಿನ ಹನಿಗಳುಳ್ಳ ಮುಖದಿಂದಲೂ . . . ಸ್ವಲ್ಪ ಬಳಲಿದವಳಂತೆ ಬರೆಯಲ್ಪಟ್ಟಿರುವ ಈಕೆ ಪೂಜ್ಯಳಾದ ಶಕುಂತಳೆ (ಶಾಕುಂತ. ೬೮-೨೨); ವಿಶ್ವ ಕುಣಿಸುವ ಆ ಸಂಜೀವಿನೀರಸ ಹರಿಯುತಿದೆ ಎಲ್ಲೆಲ್ಲೂ ಝುರಿಝುರಿಯಾಗಿ, ಸಮುದ್ರದೊಡಲಿಂದ ಹೊಮ್ಮಿ! (ಪಸ್ಕರ್ಯ. ೯-೨೦). ೪. ಬಳಿಕ ಮಾಯಾಂಗನೆಯ ಮನಸಿಗೆ ತಿಳಿವು ತಿಣ್ಣನೆ ತಿಟ್ಟ ಎಟ್ಟಿತು ಹೊಳಹು ಹೊಮ್ಮಿತು (ಪ್ರಕುಲೀ. ೬-೮); ನಮ್ಮಂತೆರಡುಮೆಸರನು ತಾಳಿ ರಾಜಿಪ ಸುಮ್ಮಾನದರಳಿಲ್ಲವೆನುತ ಹೊಮ್ಮಿದ ನಂದನದಲಿ ಸುರ ಹೊನ್ನೆಯ ಕಮ್ಮಲರುಗಳೊಪ್ಪಿದುವು (ಕಂಪಾ. ೩-೯೫); ಶ್ರುತಿಗೂಡಿದಾಗ ಹೊಮ್ಮುವದು ಹಾಡಿಸ ಲಹರಿ ಗಾಳಿಯ ಬೆನ್ನ ಮೇಲೆ ಮೋಡದ ಸವಾರಿ (ಕಂಪು. ೬೨-೨೯). ೫. ಹೊಮ್ಮಿಡುತ ಹೋಲುತ್ತಲೊಂದನೊಂದಂ ನೆಮ್ಮಿ ಸುಮ್ಮಾನವೇಱೆ ಮೆಯ್ನುಮಿರಿಯೆ ಸುಖಂ ಹೊಮ್ಮಿ . . . ಇಂತು ಗೋಕುಲವೆಲ್ಲ ಮಱೆದು ಕೇಳುತ್ತಲಿರೆ (ಅಪಾಕ. ಪೇ. ೦೮೨-೨೨); ಅನು ತಾಪವೇಱೆ ವಿರಹು ಹೊಮ್ಮಿ ಕಣ್ಗೆಟ್ಟಿಗಲಲಾಱದೆ ರಂಗಮಂಟಪದ ಕಂಭಮಂ ಘಳಿಲನೆ ಹಾಯ್ದು (ಪಸ. ೪-೨೬). ೬. ಪೂಗಳಂ ನಡೆ ನೋಡುತಾಹಾ ವಿರೂಪಾಕ್ಷ ಎನುತ ಹಿಗ್ಗುತ್ತೆ ಹೊಂಗುತ್ತೆ ಹೊಮ್ಮುತ್ತಂದು [ಪಾಕಾಂ. ಎಂದೆನುತೆ ಹಿಗ್ಗಿ ಹೊಗಳುತ್ತೊಲೆದು ನಲಿವುತ್ತೆ] (ಪುಸ್ತರ. ಪ. ೩೨೩-೦೯). ೧೦. ಉಂಟುಮಾಡು; ಒದಗಿಸು: ಕೊಡುವಡಿದು ವರವಲ್ಲದಿದ್ದರೆ ನುಡಿಗೆ ಮೊಳೆ ಹೊಮ್ಮುವರೆ ನಿಮ್ಮಯ ತೊಡಕ ನೊಲುವವನಲ್ಲ (ಕುಣ್ಯಾಪ್ರೋ. ೦-೪೦). [ದೇ.॥ ತಮಿ. ಪೊಮ್ಮು, ಪೊಟಿ; ಮಲ. ಪೊಡಿ; ತೆಲು. ಪೊಡಮು, ಪೊಡ್ಮು]

ಪೊತ್ತ1 'ಪೊಱು' ಪರಾ.

ಪೊತ್ತ2. ಪೊತ್ಥ (ನಾ). ೧. ಹಣದ ಚೀಲ; ಥೈಲಿ; ಹಮ್ಮಿಣಿ: ಪೊತ್ತಗಳನ್ನು ಬಾಯ್ಬಿಚ್ಚಿ ಹೊಸ ಪುತ್ತಳಿ ನಾಣಿಯಗಳನ್ನು ಕುಡಿತೆಯತ್ತಿ ಕೇರಿ ತೂರಿ ಧಾರೆಯೆರೆದು ಸುರಿದಾಡಿದನು! (ಮಂತ್ರಿಕ. ೦೫೦-೯). ೨. ಹಣ; ದ್ರವ್ಯ; ಧನ: ರಸ್ತಿನ ಮೊತ್ತದ ಚೀಲವನು ಕೆಂಪಾವಿಯವರ ಮನೆಯನು ಕಳರು ಯಿಳೆಬಿದ್ದು ಅರಮನೆ ರಸ್ತು ಹಾಕಿ ಗಣ್ಪು ಕಟ್ಟಿಯಿಕ್ಕಿದನ್ತ ಪೊತ್ತದ ಚೀಲವನು ಕಳರು ಕದ್ದುಕೊಣ್ಡು ಹೋಗಲಾಗಿ (ಎಕ. XI. ಪೊಳಲಿ. ೨೫-೪೩; 1665). ಪೊತ್ಥ: ೨. ಸುಂಕವ ತಮಚಿ[ಯ] ಮುದ್ರೆಯ ಪೊತ್ಥದೊಳ್ × × × ಕೆ ತಿಂಗಳಿಗೊಂದು ಗದ್ಯಾಣ ಪೊನ್ನುಮಂ . . . ಲೆಕ್ಕಂ ಮಾಡಿ ಕುಡುವರ್ (ಸೌಇಇ. XI-ii, ೦೫೦-೩೩; 1102).

[← ಪಾರ. ಪೋತಾ; ಮರಾ. ಪೋತ್, ಪೋತೀ, ಪೋತೇ]

ಪೊತ್ತಗೆ, ಪೊಸ್ತಕ, ಹೊತ್ತಗೆ (ನಾ). ಗ್ರಂಥ; ಪುಸ್ತಕ; ಹೊತ್ತಿಗೆ: ತಿಂತಿಣಿಯಾಗೆ ನಟ್ಟ ಕಣಿಯೊಳ್ ನೆಲಮುಟ್ಟದೆ ಮೆಯ್ಯೊಳತ್ತಮಿತ್ತಂ ತೆಱೆದಿರ್ದ ಪುಣ್ಗಳೆಸೆವಕ್ಕರದಂತಿರೆ ನೋಡಿ ಕಲ್ಲಿಮೆಂಬಂತೆವೊಲಿರ್ದನಟ್ಟ ವಣಿಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನು ಬರೆದ ಪೊತ್ತಗೆಯಂತಮರಾಪಗಾತ್ಮಜು (ಶಂಪಪಾ. ೦೦-೪೬); ಪೊತ್ತಗೆಯಂ ಪೊತ್ತಿರ್ದಂ ಪೊತ್ತಗೆಯೊಳಗಿರ್ದ ಮಾತನಱಿವನೆ (ಸಮಪ. I, ಅಪುಬಂಧ. ೩೯೦); ಮಿಸುನಿ ವಾವುಗೆಸೆವ ಪೊತ್ತಗೆಯಾಲವಟ್ಟ . . . ಕರ್ಪುರದ ನಾಳಿಗಳ ಪಿಡಿದೊಡನೆ ನಡೆದರೊಲಿದು (ಪದ್ಮಕಾ, ೬-೭). ಪೊಸ್ತಕ: ವೀರಸಿದ್ಧಾಂತದ ಪೊಸ್ತಕಂ ತವಣಿಕೋಲೊಳಳುರ್ವ್ವಿಸಿದಂತೆ ವೀರವಿಕ್ರಾಂತವನಾಸೆವಟ್ಟು ಕಲೆ ಬೆಳಯನೆಯ್ದಿದ ದೇವಲೋಕಮಂ (ಪ್ರಾಪು. ೦೯೩೦, ೬೬-೦೯; 1194); ಯಮಿಗಳೈವರಿಗೈದು ಪರಮಾಗಮದ ಪಾವನಪೊಸ್ತಕಂಗಳ ನಮಿಸಿ ಕೊಡುವುದು (ಪಸಪ. ೫-೩೦); ಬಾಹುದಂಡದ ಪೊಸ್ತಕದಿ ಪೊಯ್ದರಾತನೊಡ್ಡುವನದಱೊಳು (ಅಂಗಪು. ೨೬-೩೯). ಹೊತ್ತಗೆ: ಅನ್ತು ಕಾದಿ ತುಱುಮ ಮಗುರ್ಚ್ಚಿ ದೇಕರಸನು ಹೊತ್ತಗೆಯ ಟವಣಿಕೋಲ್ಗಳಲೆತ್ತಿದ ತೆಱದನ್ತೆ ಸರದ ತನ್ದಲು ತನುದಂ ತೆತ್ತಿಸಲ್ಕಮರಕಾಂತಾಜತ್ತಕಿಯರುಯ್ಯೆ ದೇಕನಾಕಕ್ಕೋದ (ಎಕ. XII, ಪಕ್ಕಣಾ. ೦೬-೩೦; 1149); ಚಿಕ್ಕದೊಂದು ಹೊತ್ತಗೆ ಬೆನಕನ ಕರಡಗೆಯಯ್ಯಾ (ಬಸಪ. ೭೩೦); ದಿಟದ ನಾಮಂಗಳ ಅಕ್ಷರವೃತ್ತಿಗೆ ಪೂ, ಮರಂ, ಹೊತ್ತಗೆ, ಕವಳಿಗೆ, ಕಟ್ಟವತ್ತಿಗೆ (ಕಪುದ. ೭೬ ಪ್ರಯೋ); ಬಾಳ ಹೊತ್ತಗೆಯಲ್ಲಿ ಬರಿಯ ಗೆಲವಿನ ಗಲಗೆ ಬರೆಯಬೇಕೆಂದಾರು ಕಟ್ಟುಹಾಕಿಲ್ಲ (ಕಕುಸ್ತಾ. ೩-೨೦).

ಪೊತ್ತಗೆಗೇಱಿಸು=ಬರೆದಂ ಪುಸ್ತಕವನ್ನಾಗಿ ಮಾಡು: ಪರಮೋತ್ಸವದಿಂ ಗುಣರತ್ನಭೂಷಣಂ ಕವಿಜನಶೇಖರಂ ಬರೆದು ಪೊತ್ತಗೆಗೇಱಿಸಿದಂ ಪುರಾಣಮಂ (ಶಾಪುಂಪು. ೯೩೨).

[< ಸಂ. ಪುಸ್ತಕ./ಪ್ರಾ. ಪುತ್ಥಯ, ಪೋತ್ಥಯ]

ಪೊತ್ತಡಿ (ನಾ). ಹಣದ ಚೀಲ; ಥೈಲಿ: ಆ ಕಳ್ಳನಲ್ಲಿಂ ಪೊಱಮಡುತ್ತಂ ಪಸುದತ್ತ ಸುಡಿಯೊಳಿರ್ದ ಪೊತ್ತಡಿಯಂ ಕೊಯ್ದುಕೊಂಡು ಪೋದಂ (ಪುಷ್ಯಾಸ್ತ್ರ. ೩-೬೭ ಪ); ತನ್ನ ಪೊತ್ತಡಿಯೊಳ್ ಪೊನ್ನುಗಳು ತೆಗೆದು ಅಕೃತ್ಯಪುಣ್ಯನ ಕೈಯಲಿಕ್ಕಲ್ (ಪುಷ್ಯಾಸ್ತ್ರ. ೦೨-೫೦ ಪ). [< ಪೊತ್ತ2]

ಪೊತ್ತಡೆ 'ಪೊಟ್ಟಿಱು' ನೋ.

ಪೊತ್ತರ (ನಾ). ಒಂದು ಬಗೆಯ ಸುಂಕ,—ತೆರಿಗೆ: ಜೋಲಕಾರುಣ್ಯ ಬಟ್ಟಿಯ ಭಣ್ಡಿ ೧ ಕಂ ಗ ೨ ಎತ್ತಿನು ಪೊತ್ತರ ಪ ೮ ಖಾಣದು ಪೊತ್ತರ ಪ × ಅಂತು ಗ ೬೬ ಪ ೩ (ಎಕ. V, ಹಾಸನ. ೮೯-೬೯; ಸು. 1230); ಜೋಳಕಾರುಣ್ಯ ಬಟ್ಟಿಯ ಭಂಡಿ ಗದ್ಯಾಣ ೧ ಪಣ ೯ ಪತ್ತಿನು ಪೊತ್ತರ ಪಣ ೪ ಹಾ॥। (ಎಕ. V, ಬೇಲೂರು. ೭೪-೦೪೪; 1261); ಜೋಲಕಾರುಣ್ಯ ಜೆಡೆದರೆ ೯ ಪ ೩॥—ಬಟ್ಟಿಯ ಭಂ ೧ ಕ್ಕಂ ಗ ೨ ಎತ್ತಿಲು ಪೊತ್ತರ ಪ ೫ ಖಾಣದು ಪೊತ್ತರ॥। (ಎಕ. XVI, ಪಕ್ಕಣಾ. ೭೦-೨೦; ಸು. 1330). [?]

ಪೊತ್ತಳ (ನಾ). ಬತ್ತಳಿಕೆ; ಬತ್ತಳೆ (?): ಪೊತ್ತಳದಂಬನೆ ತೆಗೆದು ಪೊಸಗಾಯದಿ ಬಸವಳಿದು ಮತ್ತವನುಂಗವನಿಱಿದಳು ಮಱುಮೊನೆಗಾಬುತಲಿ (ಶಿಪಗೀ. ೦೬೯-೦೦೯); "ಆಗ ತಾನೆ ತಯಾರಿಸಿದ" (ಶಿಪಗೀ. ಕೋಶ). [?]

ಪೊತ್ತಱು 'ಪೊಟ್ಟಿಱು' ನೋ.

ಪೊತ್ತಱಿ 'ಪೊಟ್ಟಿಱು' ನೋ.

ಪೊತ್ತಾರ 'ಪತ್ತಾರ' ನೋ.

ಪೊತ್ತಾಱಿ 'ಪೊಟ್ಟಿಱು' ನೋ.

ಪೊತ್ತಿ (ನಾ). ಬಟ್ಟೆ; ವಸ್ತ್ರ: ಧಗಧಗಿಪ ಕೆಂಡಂಗಳಂ ಬಗಿಬಗಿದು ದಸರಿಯ ಪೊತ್ತಿಯಲಿ ಬಿಗಿಬಿಗಿದು ಕರಯುಗಳಂಗಳಿಂ ತೆಗೆದೊಪ್ಪಿ ಧಲವೊಪ್ಪಿ ನೆಗಳನೇ ಶಿವಪುಡಿತಂ (ಬಸಪು. ೫೫-೨೫). [< ಪ್ರಾ. ಪೋತ್ತೀ./ಸಂ. ಪೋತ]

ಪೊತ್ತಿಗೆ, ಹೊತ್ತಿಗೆ (ನಾ). ೧. ಪುಸ್ತಕ; ಗ್ರಂಥ; ಹೊತ್ತಗೆ: "ಪೊತ್ತಗೆ (ಪೊತ್ತಿಗೆ)—ಪುಸ್ತಕ" (ಕ್ರಿಯಾ. ೨೬). ೨. ಜೋಯಿಸರು ಶಾಸ್ತ್ರ ಹೇಳಲು ಬಳಸುವ ಪುಸ್ತಕ,—ಭವಿಷ್ಯವನ್ನು ಹೇಳಂವ ಗ್ರಂಥ: ಸಂತತಿಯದೆಂದವ್ವು ದೆಮಗಿನ್ನೆಂತೆಸುತ ಸಚಿವರಿಗಳುಂ ಮಚಿವಂತರಿಂದಂ ಪೊತ್ತ್[ಣಾಣಂ. ಕ್ಕ]ಗಗಳಂ ತೆಗಿಸಿ ನೋಡಿಸುತ (ಜಚಪು. ೨-೧೪). **ಹೊತ್ತಿಗೆ:** ೧. "ಹೊತ್ತಗೆ(ಹೊತ್ತಿಗೆ)—ಪುಸ್ತಕ=ಪೊತ್ತಗೆ" (ಕ್ರಿಯಾಕೋ. ೩೦): ಅನುಭವವೆಂಬುವದು ಅನುಧಾವಿಕಗಲ್ಲದ ಹೊತ್ತಿಗೆಯಲ್ಲಿಲ್ಲ ನೋಡಾ (ಸಿದ್ಧಕ. ೪. ೩೨-೨೭೩); ನುಡಿದಹುಂ ದುರ್ಧಾಷೆಗಳನಡಿಗಡಿಗೆ ಶಮನಿಂದೆಯನುಸುರ್ವ ಬಗ್ಗಡಿಯನಂ ಕೊಲಲಹುದು ಸುಡಲಹುದವನ ಹೊತ್ತಿಗೆಯ [ಣಾಣಂ. ಪುಸ್ತಕವಂ. ಹೊತ್ತಗೆಯ] (ಜಚಪು. ೩೭-೨೯); ಮೊದಲಿನವರು ಕೈಬರಹವ ಹೊತ್ತಿಗೆಗಳನ್ನು ಓದುತ್ತಿದ್ದರು (ಕುಂಬಿಯಾ. ೧-೦೪೪). ೨. "ಹೊತ್ತಿಗೆ"ಯನ್ನು ತೆಗೆಯಿಸಿ ಪ್ರಶ್ನೆ ಮಾಡಿದಾಗ ಜೋಯಿಸರು ಏನು ಹೇಳಿದರು? (ಸಣಾಕೋ. ೮೮).

ಹೊತ್ತಿಗೆ ಕೇಳು=ಹೊತ್ತಿಗೆ ತೆಗೆಸು: ಒಂದು ರೂಪಾಯಿ ಇಟ್ಟು ಹೊತ್ತಿಗೆ ಕೇಳಿ ದಾ (ಕೂಪ). **ಹೊತ್ತಿಗೆ ತೆಗಿಸು=ಜೋಯಿಸರ ಬಳಿ** ಇರುವ ಶಾಸ್ತ್ರ ಹೇಳುವ ಪುಸ್ತಕವನ್ನು ತೆಗೆಸಿ, ಭವಿಷ್ಯವನ್ನು ಕೇಳು. —ಪ್ರಶ್ನೆ ಕೇಳು: ಗೌಡರು ಹೊತ್ತಿಗೆ ತೆಗಿಸಿ ಕೇಳಿದರೆ—"ಹಿರಿಸೊಸೆ ಮಲ್ಲವ್ವನ ಕೆರೆಗೆ ಹಾರ ಕೊಡಬೇಕು" ಎಂದು ಹೊರಟಿತು. ಗೌಡನು ವಿಚಾರದಲ್ಲಿ ಮುಳುಗಿದನು (ಕಪು. ೭-೨೬).

[<ಸಂ. ಪುಸ್ತಿಕಾ. / ಪ್ರಾ. ಪೋತ್ಥಿಯಾ]

ಪೊತ್ತಿನ್ಕಳ್ 'ಪೋಂತು' ಪರಾ.

ಪೊತ್ತಿಮಳ್ 'ಪೋಂತು' ಪರಾ.

ಪೊತ್ತಿಯ (ನಾ).=ಪೊತ್ತಿ: "ಪತ್ರಂ. ಟಿಣ್ಣಂ. (ಧೌತ)ಕೌಶೇಯಂ — ಈ ೩ ಪೊತ್ತಿಯಂ" (ಕಡಾಹು. ೧೦-೬೧೩) 'ಪೊತ್ತಿ' ಪರಾ.

[<ಪ್ರಾ. ಪೋತ್ತಿಅ, ಪೋತ್ತಿಅ]

ಪೊತ್ತಿರ್ಮಕ್ಕಳ್ 'ಪೋಂತು' ಪರಾ.

ಪೊತ್ತಿರ್ಮಕ್ಕಳು 'ಪೋಂತು' ಪರಾ.

ಪೊತ್ತಿಸು, ಹೊತ್ತಿಸು (ಕ್ರಿ). ೧. (ದೀಪ, ಬೆಂಕಿ ಮೊದಲಾದುವನ್ನು) ಉರಿಯುವಂತೆ ಮಾಡು; ಹತ್ತಿಸಂ; ಪುಟಗೊಳಿಸಂ: ಶರಮನಿದು ಕಡೀಡಿದುಡಿದರಡೆರಡವ್ವಂತು ತಱಿದು ರಿವುಬಲಗಹನಾಂತರಮುಂ ಸುಡಲೊಗೆವುದು ದುರ್ಧರಕೋಪಾಗ್ನಿಯನೆ ಮುನ್ನಮಾಂ ಪೊತ್ತಿಸಿನೇ (ಆಪು. ೦೨-೦೦೨); ಸೊಡರಂ ಪೊತ್ತಿಸುವರ್ಸತ್ತೆಡೆಯೊಳ್ (ಸಭುಕ. I. ೫೪೨೦೮. ೬೭೯); ಬನಮೆಂಬ ಮದನನೃಪನರಮನೆಯೊಳ್ ಪೊತ್ತಿಸಿದ ದೀಪಮಾಲೆಯ ವಾಡಕ್ಕನುರೂಪಮಾಗಿ ವನಿಯಿಂ ಕೊನೆವರೆಗಂ ಪೂತುವರರೆ ಚಿಂವಕ ನಿಕರಂ (ಪಂದ್ರಪು. ೬-೫೩); ಮಿಗೆ ಮುದ್ರಿಸಿದ ಚಿತ್ಸುಖಿದಿನಾತನಿರ್ದನಾ ಸೊಗಸನೀಕ್ಷಿಸಿ ಪೊಳೆವ ದೀವಿಗೆಯೊಳೊಂದು ದೀವಿಗೆಯ ಪೊತ್ತಿಸಿದಂತೆ ಸಮಕಲೆ ಪುಟಿಸಿತು (ಪಕ್ಕಣಾ. ೦೨-೩೪). ೨. ಉಂಟುಮಾಡು; ಆಗುವಂತೆ ಮಾಡು: ಹಾಬಲದಿಂ ಪಾಂಡವರನುವರಮಂ ಪೊತ್ತಿಸಿದರೆನ್ನೊಳ್ (ಪಂಭಾ. ೦೦-೬). **ಹೊತ್ತಿಸು:** ೧. ಎಣ್ಣೆ ಬತ್ತಿಯ ಕೂಡಿ ಜ್ಯೋತಿಯುಂ ಹೊ[ಣಾಣಂ. ಪ]ತ್ತಿಸಲು ಬಣ್ಣ ಬೆಳಗೇಕವಾಗದೆ ದಿಟ ವಿಚಾರಿಸಲು (ಪೀಳ್ಗಾಕೋ. ೦೩೦-೨೦); ಹೊತ್ತಿಸಿದ ಜಿಡೆ ದೆಂದು ದಳ್ಳುರಿ ಹತ್ತಿ ಧಗಧಗ ಎನುತಲುತ್ಪಮನುತ್ಪಮಾಂಗಂ ದೇವುಕಿರಲು (ಜಚಪು. ೦೬-೨೬); ಅಂಜನಾಸುತ . . . ದನುಜಪುರಕೆ ಧನಂದಯನ ಹೊತ್ತಿಸಿದ ಏಳರನು ಭಂಜಿಸಿದ ಸಾಗರವ ದಾಂಟಿದ ರೂಪು ತೋಱು (ಭುಜ್ಞಾ. ೦೦-೩೦); ಕತ್ತಲೆಯಹು ದೊಮ್ಮೆ ಬೆಳಗಹುದದು ಮಾಸಿ ಮತ್ತೊಂದು ತಂಪಿನ ಸೊಡರ ಹೊತ್ತಿಸಿ ದಂಶಿಹುದಾ ಭರತೇಶನ ಚಿತ್ತದೊಳಾತ್ಮಯೋಗವದು (ಭಸ. ೯-೦೦೩); ಕಸಕಡ್ಡಿಗಳನ್ನು ಪ್ರತಿದಿನ ಕೂಡಿಸಿ ಹೊತ್ತಿಸದೇರು (ಅಮೂ. ೩೦). ೨. ಚಿತ್ತಜನು ಪಾತಕಮು ವಿರಹವ ಹೊತ್ತಿಸಿದನಿಬ್ಬರಿಗೆ (ಕಳಪ. ೨-೧೯). ೩. (ಪದಾರ್ಥಗಳು ಸೀದು ಅಥವಾ ಹೆಚ್ಚಾಗಿ ಬೆಂದು ಪಾತ್ರೆಯ ತಳದಲ್ಲಿ) ಅಂಟಿಕೊಳ್ಳುವಂತೆ ಮಾಡು; ಹತ್ತಿಕೊಳ್ಳುವಂತೆ ಮಾಡು: (ಕುಂಬಿಯಾ. ೬. ೩-೦೬೬). [ಪೊತ್ತು$_1$ + — ಇಸು]

ಪೊತ್ತು$_1$, ಹೊತ್ತು$_1$ (ಕ್ರಿ). ೧. (ಬೆಂಕಿ, ದೀಪ ಮೊದಲಾದುವು) ಹತ್ತಿಕೊಳ್ಳು; ಉರಿ: ಪುಟಗೊಳ್ಳು: "ಪೊತ್ತು—ಅಗ್ನಿಪಟೂಕರಣೇ, ಅತಿ ವಕ್ಕಾನ್ನೇ ಚ (ಸೀದ ಅನ್ನ)" (ಹುಗಾ); ಕಾಯ್ಮಿನಿ ದಿಶಾವಳಿವೆರಸಂಬರಂ ಪೊಗೆದು ಪೊತ್ತಿದುದು (ಪಂಕಚಾ. ೦೦-೭೦); ತನುತಾಪದಿಂದೆ ಪೊರ್ದಿದ ಬನಮುರಿವುದು ಪೊತ್ತ ಪೊಗೊಳಂ ಬತ್ತುವುದಿರ್ದ ನೆಲಂ ಪೊತ್ತುವುದು (ಜಚಪು. ೯-೭೦); ಪೊತ್ತಿದತ್ತು ಕಿಡಿಯಿಟ್ಟುದು . . . ಮುಟ್ಟಿತು ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ವಣಗಣ್ಮಾಂ ಹಂಮೆಯಾಳ್ದನಾ (ಗಿಂಪ. ೯-೧೭); ಮತ್ತೆ ತಳಿವ ಪೊಸಗವ್ವು ರೆದೊಳ್ಕುಡಿ ಪೊತ್ತಿದುದಾ ವಿರಹಾನಲನೊಳಗೆ (ಜಪುಗಾ. ೯-೪೦). ೨. ಬೆಂದು ಹೋಗು; ಸುಟ್ಟುಹೋಗು; ಕರಿಕಾಗು: ವನ್ನಗಲೋಕದ ಜೀವರಾಶಿಗಳ್ ಪೊತ್ತುವ ಮಾಲ್ಕೆಯಿಂ ತಿದಿಗಳಿಂ ಪೊಗೆದವ್ವರೊ ಭಲ್ಲರೆಂದವಾ ಪುತ್ರನ ಗುಟ್ಟು ವೆರ್ಗರಡಿಗಳ್ ವೊಗಮಿಟ್ಟಿಸೆಗುಂ ವನಾಂತದೊಳ್ (ಜಚಪು. ೨-೦೦೯). ೩. ಸುಟ್ಟುಹೋಗುವಂತೆ ಮಾಡು; ಸುಡು; ದಹಿಸಂ: ಆ ಶರಗರ್ ಪರಿದು . . . ವುಲ್ಲೊಳ್ ಪೊನಲೆಲೊಡಮಾ ಪುಲ್ಲು ಪೊತ್ತಿ ಪೊಗೆದುರಿದು ಮಂದುರಮಾ ಪೊತ್ತಿದೊಡೆ (ಪಂಕಚಂ. ೦೬೯-೦೨); ಉಗ್ರದಾವಾಗ್ನಿ ತರುನಿಚಯಮಂ ಕೊಂಡುರಿಯುವಂತೆ ಪೊತ್ತಿದುದು ಚಿತ್ತಾಂಗಿಯಂ ಪ್ರಣಯ ವ್ಯಲಯಶಿಖಿ (ಚಕ್ಕಾಂಗ. ೧೦-೦೦೦). ೪. (ಪದಾರ್ಥಗಳು ಹೆಚ್ಚಿ ಬೆಂದು ಅಥವಾ ಸೀದು ಪಾತ್ರೆಯ ತಳದಲ್ಲಿ) ಹತ್ತಿಕೊಳ್ಳು; ತಳಹಿಡಿ; ಬುಡಹತ್ತು: ಪೊತ್ತದೆ ಪೊಗೆ ಸುಕ್ಕದೆ ನಸುಬತ್ತದೆ ಕೆಂಪಡರ್ದು ಬೆಂದ ಪಾಗಲಕಾಯಂ ಪತ್ಯಂಟು ಶುತ್ತಿದಲ್ಲದೆ ಚಿತ್ತಂ ತಣಿಗುಮೆ (ಸೂಕ್ತಿಸು. ೦೦-೯೨); ಪಸಿವೇನಾದುದೊ ದೇವ ಕೇಳ್ನಿನಗೆ ಪಾಲೇಂ ಕಾಯದೋ ಪೊತ್ತಿತೋ (ಕ್ಷಪ. ೯-೭೯). ೫. ಬೂಗು; ತಾರು: ಪಲವು ದಿವಸ ಮಾಯಾಸಂಬಟ್ಟು ಬತ್ತಿದ ದಾಯ್ಗಂ ಪೊತ್ತಿದ ನೆತ್ತಿಗಮಾತ್ತೇನುಮಂ ಪಡೆಯದೆ ಬಡತನಮಡಸಿ ಬಳಮಟ್ಟಿದು ಪುಟ್ಟಾತು ಏಮೆದು ಸತ್ತುಂ (ಸುಕಾಪು. ೩-೦೨ ೪); ಪೊತ್ತಿದ ನೆತ್ತಿಗೆ ಕಾಣದೆ ತುತ್ತಿಲ್ಲದೆ ಬಡಿಯೆ ಜಡಿಯೆ ಕಂಡವರೆಲ್ಲಂ ಚಿತ್ರೋಕ್ತಾಸಹಂಗಿಡುವರ್ಮತ್ತೆನಿಸದೆ ಜೈನಪೂಜೆಯಾ ಕಿಡಿಸಿದವರ್ (ಸಣಾಪು. ೬-೦೭೬). **ಹೊತ್ತು$_1$:** ೧. ನಿಮ್ಮ ಗಣಂಗಳು ಬತ್ತಿದ ಕೆಱೆ ದಾಯ ದಿಟ್ಟಂತೆ ಮೊಱೆಯಿಟ್ಟು ಬರಲು ಹೊತ್ತಿದ ಅಂಗಾಲ ಕಿಚ್ಚು ನೆತ್ತಿಯ ಮುಟ್ಟಿದಡೆ ಚಕ್ಕನೆ ಕಪಿಲಸಿದ್ಧಮಲ್ಲಿನಾಥ ನೊಸಲ ಕಣ್ಣ ತೆಗೆದನು (ಸಿದ್ಧಕ. ೪. ೦೯-೩೨); ಉತ್ತಮತೆ ಲೋಹಾದಿಗಳಿಗೀ ಹೊತ್ತಿದ್ದಿಯೆ ಸ್ಪರುಶದಲಿ ಪಾವನತೆಯಹುದು (ಅಣಾಗ. ೦೦-೩೯-೯); ಹೊತ್ತಿದೇಕಾರತಿ ಪಂಚಾರತಿ ಕಡ್ಡಿಬತ್ತಿ ನೀರಾಂಜನವಲಗೆ ಮತ್ತೆ ನಾನಾವಾದ್ಯರಭಸದಿಂ ವೊಳಗಲುಯೆತ್ತಿದ ಮಹಪಾರತಿಯ (ಕೂಆಕ. ೨೨-೧೩). ೨. ಹತ್ತು ಸಾವಿರ ಯೋಜನದ ಸಂತಪ್ತತೈಲದ ತಾಂಬ್ರತಳದಲಿ ಹೊತ್ತುವನಲಾ ದಿವ್ಯರಶ್ಮಿಯ ಕಾಲಸೂತ್ರದಲಿ ಎತ್ತಿ ಬಿಸುಡುವರದಱೊಳಗೆ ತನು ಹೊತ್ತಿ ಹೊರಳಲು ಪಾಪಿಗಳನುದ್ಧೃತ್ತತನದಲಿ ದೆಂ ವಿಪ್ಪದೊಹಿಗಳನೆಂದ (ಅಣಾಗ. ೩-೦೦-೨೨). ೩. ಇನಿಸು ಹೊತ್ತದ ಕೆಱದಿ ತಱಿಗೆಂಡದೊಳು ಪಾಕವನೆ ಮಾಡಿ (ಕೂಪಣಾ. ೦-೦೩); ಅವಳು ಆ ಹೊತ್ತಿದ ರೊಟ್ಟಿಗಳನ್ನು ನೋಡಿ (ಕುಂಬಿಯಾ. ೬. ೩-೦೬೬); ಪಾತ್ರೆಯಲ್ಲಿ ಆಹಾರ ಹೊತ್ತಿ ಅಂಟಿಕೊಂಡಿದ್ದರೆ ಅದನ್ನು ತೆಗೆಯಲು ಪಾತ್ರೆಯಲ್ಲಿ ನೀರು ಹಾಕಿ . . . ಇಸಬೇಕು (ಅಮೂ. ೧೬). ೪. ತವನಪ್ಪದ್ಯೋತಹತಿಯಿಂ ಬೆನ್ನೊಡೆದು ದಾಯಾಜ್ಞೆ

ತಾಳಿಗೆ ಬತ್ತಿ ನೆತ್ತಿ ಹೊತ್ತಿ ಕಣ್ಣೊಳ್ ನೆತ್ತರೆಚ್ಚು ಪಾಯೆ (ಗಿರಿಕ. ೯-೨೭ ಪ). ೬. ಉಂಟಾಗು ; ಒದಗು ; ಪ್ರಾಪ್ತವಾಗು : ಅತ್ತಲಾ ದಮಯಂತಿ ನಳನೊಳು ಚಿತ್ತವಿಟ್ಟಳು ನೃಪಗೆ ವಿರಹವು ಹೊತ್ತಿತಾಕೆಯ ಮೇಲೆ ಯಿರ್ವರಿಗಾಯ್ತು ಸಂತಾಪ (ಪಳಕ. ೨-೪೯) ; ಹೃದಯಗುಹೆಯಲ್ಲಿ ಹಿಗ್ಗು ಹೊತ್ತಿಹುದು ಅಗ್ನಿಸತ್ವದಂತೆ (ಅರಳು. ೦೬೩-೨) ; ಧ್ಯಾನಸುಪ್ತಿಯಿಂ ಜ್ಞಾನ ವೆದ್ದಿತೋ ಬಾಳಿಗಾನಂದ ಹೊತ್ತಿತೋ (ಗೋಕುವಿ. ೩೫-೨೨). ೭. ಆರಂಭವಾಗು ; ಮೊದಲಾಗು : ಮತ್ತೆ ಕರ್ಣನ ಭೀಮನಾಹವ ಹೊತ್ತಿದುದು (ಕುಣ್ಣಾಕ. ೦೩-೨೯). ೮. ಉಗ್ರವಾಗು ; ಪ್ರಚಂಡವಾಗು : ಒಳಗೆ ಹೊ[ಣಾಹಾಂ. ಯೊ]ತ್ತುವ ಧಗೆಯ ಹೊಱಗಣ ತಳಿತ ಬಿಮ್ಮಿನ ನಗೆಯ ನೃಪಮಂಡಲದ ಮೌಳಿಯನೇನನೆಂಬೆನು (ಕುಣ್ಣಾಅ. ೦೩-೪೬). ೯. (ಆಲಂ) ಉದ್ವೇಗಗೊಳ್ಳು ; ಉದ್ವಿಗ್ನವಾಗು : ದುಗುಡವ ಹಿಡಿದ ರಾಯನ ಕೆತ್ತ ಮುಖವನು ಕಂಡು ಭಟರೆದೆ ಹೊತ್ತಿದವು ಹೊಗೆದೋಱಿದವು ಮೋಱಿಗಳು ಪಟುಭಟರ (ಕುಣ್ಣಾಕ್ರೋ. ೦೩-೩). ೧೦. ಸಂಕಟಪಡು; ನೋಯು : ಮಾಡಿದ ಭೃತ್ಯರಪರಾಧಕ್ಕೆ ಚಿಂತಿಸಿ ಸುಯ್ದು ತನ್ನೊಳಗೆ ಹೊತ್ತುವೆದೆಯಲಿ ರವಿತನಯನಳಲುತ್ತ ನುಡಿದನು ದೂತರಿಗೆ (ವಿಭಾಗ. ೬-೩-೨೦). ೧೧. ಸಂಕಟಪಡಿಸು; ನೋಯಿಸು : ಭಾಷೆ ಸಲ್ಲದೆ ಹೋಯಿ ತೆನ್ನಯ ವಾಸಿ ವರ್ಧಿಸಿ ಹೊತ್ತುತಿದೆ ಕೈಲಾಸದವರಿದ ಕೇಳಿ ನಗುವಂತಾಯಿತೇ ಎನಗೆ (ಶ್ರಭುಂ. ೭-೬೪). [ದೇ.॥ ತಮಿ. ತುಳು. ಪೊತ್ತು]

ಪೊತ್ತು₂ 'ಪೊಱು' ಪರಾ.

ಪೊತ್ತು₃, ಹೊತ್ತು₄ (ನಾ). ೧. ಹತ್ತಿಕೊಂಡಿರುವಿಕೆ ; ಉರಿಯುವಿಕೆ ; ಜ್ವಲನ: (+). ೨. ಸೀದು ಹೋದುದು ; ಕರಿಕಾದುದು ; ಸೀದು ತಳಹಿಡಿದ ಅನ್ನ ಮುಂತಾದುದು : "ಪೊತ್ತು—ಅಗ್ನಿ ಪಟೂಕರಣೇ, ಅತಿಪಕ್ವಾನ್ನೇ ಚ (ಸೀದ ಅನ್ನ)" (ಶಮರಾ); "ಇಂಗಳವ ಪಟುಮಾಟ್ಟಲ್ಲಿಯತಿಪಕ್ವದೊಳು ಪೊತ್ತು" (ಶಬ್ದಮಂ. ೯೬). ಹೊತ್ತು₄ : ೨. ದಗ್ಧಿಕೆ = ಸುಟ್ಟ ಅನ್ನ, ಹೊತ್ತು (ಗಂಗಾಮ. ೦೬೨). [< ಪೊತ್ತು₁]

ಪೊತ್ತು₄ 'ಪೊಟ್ಟು' ನೋ.

ಪೊತ್ತುಂಗೊಱಡು (ನಾ). ಉರಿಯುತ್ತಿರುವ ಮರದ ತುಂಡು ; ಉರಿಗೊರಡು ; ಕೊಳ್ಳಿ : ಉಕಾರಾಂತದೊಳ್ ಗಕಾರಂ ಪರಮಾದುದರ್ಕೆ —ಎತ್ತುಂಗೋಲ್, ಕುತ್ತುಂಗಱಿ, ಪೊತ್ತುಂಗೊಱಡು (ಶಮದ. ೦೭೦ ಪ್ರಯೋ). [ಪೊತ್ತು₁ + ಕೊಱಡು (< ಕೊಱಂಡು)]

ಪೊತ್ತುಗಳೆ 'ಪೊಟ್ಟುಗಳೆ' ನೋ.

ಪೊತ್ತುಗೆ (ನಾ). ೧. ಹತ್ತಿಕೊಳ್ಳುವಿಕೆ; ಉರಿಯುವಿಕೆ; ಪುಟಗೊಳ್ಳುವಿಕೆ. ೨. ಬೆಂಕಿ; ಜ್ವಾಲೆ ; ಉರಿ : ಮಿಕ್ಕು ಸೂಸುವ ತೂಱುಗಿಡಿಗಳ ಕಣಾಳಿಗಳ ಕೌರಿಡುವ ಪೊತ್ತುಗೆಗಳ . . . ಮೊಗೆವ ಪೆರ್ಗಿಚ್ಚುಗಳ ವೆಂಕೆ ಮೇಲಿಕ್ಕಿದುದು ಹಂಸಧ್ವಜನ ಸೇನೆ ಬೆಂದು ಬೇಗುದಿಗೊಂಡುದಾಕ್ಷಣದೊಳು (ಕೈಮಭಾ. ೦೩-೦೨). [ಪೊತ್ತು₁ + — ಗೆ]

ಪೊತ್ತುಪೋಕ, ಹೊತ್ತುಹೋಕ (ನಾ). (ವ್ಯರ್ಥವಾಗಿ) ಕಾಲ ಕಳೆಯುವವನು; ಕಾಲಹರಣ ಮಾಡುವವನು : ದ್ಯೂತದುರ್ವ್ಯಸನಿಗಳೆನಿಪ್ಪ ಪೊತ್ತುಪೋಕರುಗಳೊಡನಾಡಿ ತನ್ನಯ ಲಿಂಗಪೂಜೆ ಲಿಂಗಧ್ಯಾನದಾ ಗೊತ್ತನಱಿಯದೆ . . . ಭಂಗಿಯ ತಿಂದವೋಲಿರ್ಪಗೆತ್ತಣದು ಲಿಂಗನಿಷ್ಠೆ (ಸಿದ್ಧೇಪ. ೨೨-೬೬). ಹೊತ್ತುಹೋಕ : ವೇದವ ಪಠಿಸುವಲ್ಲಿ ಶಾಸ್ತ್ರವನೋದುವಲ್ಲಿ . . . ಪಗುಡಿ ಪರಿಹಾಸಕರ ಅರ್ತಿಕಾಱರ ಹೊತ್ತುಹೋಕನಿಗಾಗಿ ಘಟ್ಟುವರ ಕೂಡಲುಂಟೆ (ಅಂಬಿಪ.ಕ. ೩೬೯-೪೨); ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು ಹೋರುವ ಹೊತ್ತುಹೋಕರ ಮಾತೇತಕ್ಕೆ (ಸರ್ವಪ. ೦೦೩-೫೫೯); ಬಱಿದೆ ಹೊತ್ತುಹೋಕರೊಳಾಡದಿರು (ಸದ್ದುರು. ೨-೦೩). [ಪೊತ್ತು₄ (< ಪೊಟ್ಟು) + ಪೋಕ]

ಪೊತ್ತುವೆಳಗು (ನಾ). ಪ್ರಾತಃಕಾಲದ ಬೆಳಕು ; ಬೆಳಗಿನ ಹೊಳಪು : ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ ಪೊತ್ತುವೆಳಗಂ ಬೇಱೆ ತೋರ್ಪರಾರ್ (ಕೈಮಭಾ. ೨-೦೬). [ಪೊತ್ತು₄ (< ಪೊಟ್ಟು) + ಬೆಳಗು₂]

ಪೊತ್ತೆ (ನಾ). ಕುಚ್ಚು ; ಗೊಂಚಲು; ಗುಚ್ಛ : ಮರದಲ್ಲಿ ಪೊತ್ತೆ ಪೊತ್ತೆಯಾಗಿ ಹಿಡಿದ ಕಾಯಿಗಳೊಳಗಿಂದ ಒಂದು ಕಾಯನ್ನು ತೆಗೆದು ತಿನ್ನುತ್ತಿದ್ದಂತೆ ಅದರ ಹುಳಿರಸಕ್ಕೆ ಮೈಮೇಲೆ ಮುಳ್ಳು ನಿಂತವು (ಮೂರುದಾ. ೨೨೫); ಅಂಗಡಿಯ ಹುಡುಗ ಬಸ್ತ್ಯಾಂವ ಇವರಿಂದ ಕೀಲಿಕೈ ಪೊತ್ತೆಯನ್ನು ತೆಗೆದುಕೊಂಡು ಬಾಗಿಲು ತೆರೆಯುತ್ತ (ಮೂರುದಾ. ೨೫೯).

[ದೇ.॥ ತಮಿ. ಪೊತ್ತೈ = ದೊಡ್ಡದು]

ಪೊತ್ತೆಮೀಸೆ (ನಾ): ಕುಚ್ಚು ಕುಚ್ಚಾಗಿರುವ ಮೀಸೆ ; ಹೊದೆಮೀಸೆ : ಮೋರೆಗೆ ಇಷ್ಟುದ್ದ ಕಪ್ಪು ಪೊತ್ತೆ—ಮೀಸೆಗಳು ; ಕಪ್ಪು ಎದೆಯ ಮೇಲೆ ಕಪ್ಪು ರೊಣೆ (ಹೂಸಕ್ಷಿ. ೦೭೦). [ಪೊತ್ತೆ + ಮೀಸೆ]

ಪೊತ್ಥ 'ಪೊತ್ತ₂' ನೋ.

ಪೊದಕುಳಿ, ಹೊದಕುಳ, ಹೊದಕುಳಿ (ನಾ). ಅಳಲು ; ದುಃಖ ; ನೋವು : 'ಪೊದಕುಳಿಗೊಳ್' ಪರಾ. ಹೊದಕುಳ : ಇದಕ್ಕೆ ಪರಿಹಾರವನು ನೀ ಮಾಡಿದರೆ ನಾನಿಹೆನಲ್ಲದಿರ್ದೊಡೆ ಹೊದಕುಳದಿ ನಲುಗುತ್ತಲಿರಬೇಕಿನಿತು ನೀವಿದ್ದು (ತಿಮ್ಮಸ್ತೀ. ೦-೬೩). ಹೊದಕುಳಿ : "ಹೊದಕುಳಿಯೆನೆ ಸಂತಾಪಂ" (ಭಾರವಿ. ೨೪); ಆ ಚದುರರ್ಗೆ . . . ಮುಕ್ತಿಯಲ್ಲದೆ ಭವದ ಸಂಕಟದ ಹೊದಕುಳಿಯುಮಿಲ್ಲೆಂಬುದಕ್ಕಿದೇ ಸಾಕ್ಷಿಯಾಯ್ತು (ಸಮ್ಮಕೌ. ೦೦-೫೫).

ಪೊದಕುಳಿಗೊಳ್, ಹೊದಕುಳಿಗೊಳ್, ಹೊದಕುಳಿಗೊಳು (ಕ್ರಿ). ದುಃಖಪಡು ; ಶೋಕಗೊಳ್ಳು ; ನೋವನ್ನು ಹೊಂದು : ಪಿರಿದಾಗೆ ಪುಣ್ಯದ ಪೊಱೆಯದನೆತ್ತುವೊಡರಿದಾಗಿ ಪೊದಕುಳಿಗೊಳ್ವ ಪರಿಯೊಳು ಸಾಷ್ಟಾಂಗವೆಱಗಿ (ಭಾಗಕು. ೦೩-೬೫); ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪುದೇ . . . ಹೇಳೆಂದು ಸೀತೆ ಪೊದಕುಳಿಗೊಂಡಳು (ಕೈಮಭಾ. ೦೯-೦೨). ಹೊದಕುಳಿಗೊಳ್ : ಆಶಾಪಾಶದಿಂದ ತೊಳಲಿತ್ತಯ್ಯ ಎನ್ನ ಕಾಯವು ಆಶೆಯಿಂದ ಹೊದಕುಳಿಗೊಂಡಿತ್ತಯ್ಯ ಎನ್ನ ಮನವು (ಪಶಶಾ. I, ೨೬೩-೦೭); ತೊಲತೊಲಗು ತರುವಲಿಗೆ ರಣವಿದು ಸುಲಭವೇ ಲೋಕೈಕವೀರರು ಹಲಬರಿದಱೊಳು ಹೊಕ್ಕು ಹೊದಕುಳಿಗೊಂಡು ಹೋವರಲೆ (ಕುಣ್ಣಾಕ. ೪-೦೨) ; ಪಾಂಡವನ ಸೇನೆ ಅಟ್ಟಿ ಸುಡುವನಲಧೂಮಜ್ವಾಲೆಗೊಡನೆ ಗೋಳಿಟ್ಟು ಹೊದಕುಳಿಗೊಂಡು ಹೊರಳುತಿರಲು (ಕೈಮಭಾ. ೮-೪೦) ; ಸರ್ವಜೀವರುಗಳಂತೆ ಉತ್ಪತ್ತಿ ಸ್ಥಿತಿ ಪ್ರಳಯಂಗಳೆಂಬ ಕಷ್ಟಬಂಧನಂಗಳಲ್ಲಿ ಸಿಲ್ಕಿ ಹೊದಕುಳಿಗೊಂಬನೆ ಶಿವನು (ಅಖಂಡೇ. ೦೦೬-೬೨). ಹೊದಕುಳಿಗೊಳು : ಇಳೆಯ ಮೇಲಾವ ವಾದಿಗಳು ಹದುಳವೇಳೆಂದೆತ್ತಲಾಱದೆ ಹೊದಕುಳಿಗೊಳುತ ನೋಡುತಿರ್ದಹರು (ಬಸಪು. ೫೩-೬೭) ; ದುಗುಡವ ಹೇಱಿ ಹೊದಕುಳಿಗೊಳುತಲಿರ್ದುದು ಹಸ್ತಿನಾನಗರ (ಕುಣ್ಣಾಅ. ೮-೩) ; ಶುನನಂತೆ ಮನೆಮನೆಗೆ ತಿರುಗಿ ದೈನ್ಯಂಬಟ್ಟು . . . ಹೊದಕುಳಿಗೊಳುತ್ತ (ತತ್ವಪ. ೨೮-೪).

[ಪೊದಕುಳಿ + ಕೊಳ್₁]

ಪೊದಕೆ₁, ಪೊದಟ್ಕೆ₂, ಪೊದಿಕೆ, ಹೊದಕೆ₁, ಹೊದಿಕೆ₁, ಹೊದ್ದಿಕೆ₁ (ನಾ). ೧. ಮುಚ್ಚಲು ಬಳಸುವ ವಸ್ತು ; ಮುಸುಕು ; ಆಚ್ಛಾದನೆ : ಪಲವು ಪೊದಕೆಗಳ್ ಬಿಗಿದಿರ್ಪುದವನನ್ ಮುಡಿಯಿಂದಮಡಿವರಂ (ಬದ್ಧಪ್ರ. ೬-೯೯). ೨. ಹೊದೆಯುವ ವಸ್ತ್ರ, —ಬಟ್ಟೆ ; ಅಂಗವಸ್ತ್ರ, ಸೆರಗು ಮುಂತಾದ ಮೇಲುಹೊದಿಕೆ : ಚಿಂದಿತ ಪಾರಿಯ ಚಿಮ್ಮುರಿ ಮುಂಗಯ್ಯ ಮುಂದಣ ಪೊದಕೆಯ ಸೆಱಗು ಅಂದವಾಗಿರೆ ಕರ್ನಾಟದರಸುಗಳು ಬಂದು ಕಂಡರು ಮಾತಂಗಿಯನು (ಕುರಾಸಾಂ. ೯೦-೯೫); ತರದೆ ಕೊಂಬಿನ ಲಾಳಿಯಂ ಮುಟ್ಟಿ

ಸದೆ ರುಚಿರತರಮಾದ ಪೊದಕೆಯಂ ನೆಯ್ಸಿಕೊಳ್ವುದೆ ನಿರಂತರದೊಳಿರ್ಪ ತ್ತೊಂದನೆಯ ಶೀಲ (ಜಾಕೋಪ್ರ. ೨-೬೦). ೩. (ಮನೆ, ಗುಡಿಸಲು ಮಂಂತಾದುವುಗಳ) ಛಾವಣಿ ; ಮೇಲ್ಛಾವಣಿ : ಮೂಳೆಯ ಕಂಭ ವಿಲ್ಲಿ . . . ತಗುಳ್ದೇಳಿದಮಪ್ಪ ತೋಲ್ ಪೊದಕೆ ಮಾಂಸಮೆ ಕೇರ್ಗಳಮೇಧ್ಯ ಪೂರ್ಣ ದೇಹಾಳಯಂ (ಶಿವಸಂ. ೧೩೦-೨೨) ; ಬಾಲಸತ್ವಲ್ಲವದ ಪೊದಕೆ ಯಿಂದಿಕ್ಷುದಂಡಂಗಳಿಂ ಕಣ್ಗೊಳಿಕಂ ನಾನಾಲತಾಂತಪ್ರಸರಸರಯುತಂಗಳ್ ಪ್ರಪಾಮಂಟಪಂಗಳ್ (ರಾಜಶೇ. ೨-೨೦) ; ಪಸುರೆಲೆಯ ನಟ್ಟವನೆ, ಸೆಳೆಗೊಂಬಿನ ಕೇರ್, ಪಣ್ಣೆಲೆಯ ಪೊದಕೆ . . . ಅಲರ್ಜೊಂಪದ ಮೇಲ್ಕಟ್ಟು ಚೆಲ್ವಾಗೆ ಕಣ್ಗಂ ಮನಕಮಿಂಬಾದ ಪರ್ಣಕುಟಿಯನೇರ್ಪಡಿಸಿ (ರಾಮಾಶ್ವ. ೧೯೯-೦೦). ೪. (ವಸ್ತ್ರ ಮಂಂತಾದುವುಗಳ) ಗಂಟು,—ಮೂಟೆ,—ಹೊರೆ : ಅಡಕೆ ೨೫ ಕತ್ತೆಯ ಬರಕಕ್ಕೆ ಪೊಂಗೆ ಅಡಕೆ ೨೦ ಸೀರೆಯ ಸುಂಕ ಪೊದಕೆಗೆ ಪಾಗ ೨ ಸೀರೆಗೆ ಪಾಗ ೧ ಪೊಟ್ಟೆಯ ಸೀರೆಗೆ ಪೊಂಗೆ ಪಣ ೧ (ಶಾಂಕೇಡಿ. ೩-೨೨ ಪ ; 1047). ಪೊದಟ್ಕೆ₂ : ೨. ಭೋಂಕೆನೆ ಪಜ್ಜಳಿಪ ತನ್ನ ಸನ್ನುತವದನಸುಧಾಕರಬಿಂಬದಿನೊಸೆವ ಚಂದ್ರಿಕಾ ವಿಸ್ತಾರದಂತೆ ತೋರ್ಪಧಿಕಸಿತಧವಳಲೋಳಲೋಚನಂಗಳ ಬೆಳಗಿನ ಬಳಗದಿಂ ನಿಳಯಲಕ್ಷ್ಮಿಗೆ ಬೆಳ್ಪಸದನದ ಪೊದಟ್ಕೆಯನಿತ್ತು (ಪರ್ಧಾಪ್ರ. ೦೩-೬೩ ಪ). ಪೊದಿಕೆ : ೧. ಕಂಡಷ್ಟಾಂಗಪ್ರಣಾಮಂಬೆರಸು ಹರಿಸದಿಂ ನಾರದಂ . . . ಹಿಂಡೇಳ್ವಾನಂದರೋಮಾಂಚದ ಪೊದಿ[ಪಾಠಾಂ. ದ]ಕೆಗಳಂ ತಾಳ್ದು ನಿಂದರ್ದು . . . ಸ್ತೋತ್ರಮಂ ಮಾಡುತಿರ್ದಂ (ಗಿರಿ. ೪-೪೩). ೨. ಗದಗದಿಪ ಕರಕಮಲಮಂ ಕಂಡು ದಂತಿಚರ್ಮದ ಪೊದಿಕೆಯಿಂದದಂ ಮುಚ್ಚಿ (ಪಂಪಭಾ. ೩೨-೦). ೩. ಕುಳಿರ್ವ ಕುಳರ್ವೇರ ಕೇರ್ಗಟ್ಟಿನಿಂ ಅಸುಕೆಯ ಕಿಸುದಳಿರ ಪೊದಿ[ಪಾಠಾಂ. ದ]ಕೆಯಿಂ ಪಜ್ಜಳಿಸುವ ಪನ್ನೀರ ಚಳೆಯದಿಂ . . . ಲೀಲೆವಡೆದ ಲತಾಗೃಹಂ ಲತಾಂತಶರಜನ್ಮಭವನದಂತಿರ್ದುದು (ದಶಕು. ೦೦-೬೨ ಪ). ಹೊದಕೆ₁ : ೧. 'ಮೇಲುಹೊದಕೆ' ಪರಾ. ೨. ಧವಳದ ಕಾಂತಿಯ ನಿಲವೋ ರುದ್ರಾಕ್ಷಿಯ ಹಂಗು ಬೇಡವೆಂದು ಹೊದ್ದ ಚರ್ಮದ ಹೊದಕೆಯಂ ತೆಗೆದ ಗಿಟಿಗಿಟಜಾತ್ರದ ನಿಲವೊ (ಕೂಪ್ರಸಂ. ೦೦೭-೯) ; ಹಿರಿಯ ಮೆಳೆಯಡಿಯಲ್ಲಿ ಹೊದಕೆಯಂ ಹಾಸಿ ಕುಳ್ಳಿರಿಸಿ (ಸಿದ್ಧರಾ. ೨-೩೨) ; ಕಳಿದರೀ ಚಂಡಾಂಶುವಂಶೋಜ್ವಲರು ಬಳಿಕಾ ಹಿಮಸಮಯವನು ಪುಲಿದೊಗಲ ಹರಿಣಾಜಿನದ ಹಾಸಿಕೆಯ ಹೊದಕೆಯಲಿ (ತೊರಕಾ. ೩-೨-೩). ೩. "ಆಚ್ಛಾದನಂ, ವಲಭಿಃ — ಈ ೨ ಮನೆಯ ಹೊ(ದಿ)ದಕೆ" (ಹಲಾಯು. ೩೦-೦೧೩); ಕರಮೆಸೆದವು ಲತೆಗಳನೆಟ್ಟರದಿಂ ಪಚ್ಚೆಲೆಯ ಹೊದಕೆ ಬೆಳ್ವಾಳದ ಬೇರ್ ಸಿರಿಖಂಡದ ವಳಯಂ ಕಪ್ಪುರವಳುಕಿನ ಜಗಲಿ ಕೇತಕೀರಜದ ಮಟಲ್ (ಸೂಕ್ತಿಸು. ೦೦-೬೦) ; ಹೊಂದಗಡಿನ ಹೊದಕೆಯ ಮನೆ ಬಹಳ ನೇರಂದವಡೆದ ಪಟ್ಟಶಾಲೆ ಮುಂದೆಸೆಯಲಿ ತುಳಸಿಯ ಮಾಟವದಿ ಗೋವಿಂದನ ಕೀರ್ತಿಸುತಿಹರು (ಪೋಷಕ. ೩-೩೯). ೪. ಒಂದುದಿನ ಮಡಿವಾಳ ಹೊದಕೆಯ ತಂದ ಕತ್ತೆಗೆ ಲಿಂಗವಿರದಿರೆ ಕೊಂದು ಇರಿಸಾಕ್ಷಣದಿ ಅವ ಸಹವಾಗಿ ಕತ್ತೆಯನು (ಬಿಜ್ಜಳ. ೩೦-೨). ಹೊದಿಕೆ₁ : ೧. ಏಳು ನೆಲೆಯ ಕರುಮಾಡದುಪ್ಪರಿಗೆಯೊಳಗೆ ಒಂದೆ ಮುತ್ತಿನ ನೆಲಗಟ್ಟಿನ ಮೇಲೆ ಭಿತ್ತಿ ಇಲ್ಲದ ರತ್ನದ ಹೊದಿಕೆಯ ಮೇಲಿಪ್ಪ ಕಳಸವ ಕಂಡವರನಾರನು ಕಾಣೆ (ಅಪವ. ಮು. ೨೩೦-೩೯೨); ಕಾಮದ ಒಡಲು ಕ್ರೋಧದ ಗೊತ್ತು . . . ಮತ್ಸರದ ಹೊದಿಕೆ ಆ ಭಾವವಜಿತಲ್ಲದೆ ಚಿನ್ನಮಲ್ಲಿಕಾರ್ಜುನನ ಅಱಿವು ದಕ್ಕೆ ಇಂಬಿಲ್ಲ ಕಾಣೆರಣ್ಣ (ಮಹಾದೇ. ಬ. ೪೯-೦೦೪) ; ಎಲುಬು ಗಳವ ಮಾಡಿ ನರದ ಬಳ್ಳಿಯಲ್ಲಿ ಬಿಗಿಯುತ . . . ಮಲಿನಚರ್ಮವನ್ನು ಹೊದಿಕೆ ಯೆಳೆದು ನಿತ್ಯ ಬೆಳೆವ ಈ ಹೊಲೆಯ ಗೂಡಿನೊಳಗೆ ಜನಿಸಲಾಱ ಲಕ್ಷ್ಮಿಯ ರಸನೆ (ಕುರಂದ. ೧-೦೭೬-೨). ೨. ನೀರ ಬೊಂಬೆಯ ಚೋಹವ ತೊಟ್ಟು ಅಗ್ನಿಯ ಬಣ್ಣದ ಹೊದಿ[ಪಾಠಾ ದ]ಕೆಯ ಹೊದ್ದು ಗಾಳಿಯ ಗತಿಯಲ್ಲಿ ಸುಳಿದಾಡುವ ಪ್ರಾಣಿಗಳು ದೇವರನೆತ್ತ ಬಲ್ಲರು (ಅವಸಂ. ೨೦೬-೯೩೦ ; ಕೂಪ್ರಸಂ. ೬-೦೦ ನೋ) ; ತಮತಮಗೆ ನೆರೆದು ಬೆಚ್ಚಂಬಿಲವ ಕುಡುಗೋಲ ಕಪ್ಪಡವನರಳೆಯಂ ತೈಲವಂ ತಾ ಬೇಗಲೆನುತಲಾತನ ಹೊದಿಕೆಯಂ ತೆಗೆ ದರು (ಸಿದ್ಧರಾ. ೨-೨) ; ಗಡ್ಡದ ಮುದುಕರು . . . ಕಂಗೆಟ್ಟು ಹಾಯ್ದರು ಹೊದಿ[ಪಾಠಾಂ. ದ]ಕೆ ದಂಡು ಕಮುಂಡಲವ ಬಿಸುಟಿಖಳಿದೆಸೆದೆಸೆಗೆ (ತೊರಕಾ. ೦-೦೦-೦೨) ; ಹೊದಿಕೆಯನ್ನು ತೆಗೆದು ದೂರಕ್ಕೆ ಎಸೆದೆನು (ಪಂಚಿಕಾ. ೨೯). ೩. "ಪಟಲಂ, ಛದಿಃ—೨ ಮನೆಯ ಮೇಲುಹೊದಿಕೆಯ ಪೆಸರು, ಮನೆಯ ಮೇಲುಮುಚ್ಚಳ" (ಸಿಕ್ಕಾಂತಿ. ೦೦೩) ; ಹೊಡಿದೆಲು ಮರಮುಟ್ಟು ಮಾಂಸದ ಗೋಡೆ ಚರ್ಮದ ಹೊದಿಕೆ ನರವಿನ ಕೂಡೆ ಹಿಂಡಿಗೆ ಬಿಗಿದ ಮನೆ ಯೊಳಗಾತ್ಮನಿರುತಿರಲು (ಹಂಸಾ. ೬೩); ಒಲೆಗಳನ್ನು. . . ಹುಲ್ಲಿನ ಹೊದಿಕೆಯ ಮನೆಗಳಲ್ಲಿ ಸುರಕ್ಷಿತವಾಗಿ ಉಪಯೋಗಿಸಬಹುದೆ? (ಅಡುಗಾ. ೨೯). ೫. (ಪುಸ್ತಕ ಮೊದಲಾದುವುಗಳ) ರಕ್ಷಾಕವಚ ; ರಟ್ಟು : "(ಅಂಚೆಯ ಮೂಲಕ ಕಳಿಸುವ ವೃತ್ತಪತ್ರಿಕೆ, ಕಟ್ಟು, ಮೊಗಳ ಮೇಲಿನ) ಆವರಣ, ಸುತ್ತುಹಾಳೆ; (ಪುಸ್ತಕಗಳಿಗೆ ಹಾಕಿರುವ, ಕಳಚಲಾಗುವ) ಕವಚ, ಹೊದಿಕೆ" (wrapper. ಇಂಗಿಷ) ; ಆ ಹೊಸಪುಸ್ತಕದ ಹೊದಿಕೆ ಹರಿದು ಹೋಗಿದೆ (ಕೂಪ್ರ). ಹೊದ್ದಿಕೆ₁ : ೧. ಮಾಸವೆರಡಱಲಿ ಶಿರ ಮಾಸ ಮೂಱಱೊಳಂಗ ಮಾಸ ನಾಲ್ಕಱಲಿ ಚರ್ಮದ ಹೊದ್ದಿಕೆ (ಪುರಂದ. ೧-೦೩೨-೩).

[ಪೊದ್ದೆ₁ + --ಕೆ]

ಪೊದಕೆ₂, ಪದಿಕೆ, ಹದಿಕೆ₁, ಹದಿಗೆ₁, ಹದ್ದಿಕೆ, ಹೊದಕೆ₃, ಹೊದಿಕೆ₂ (ನಾ). ಒಂದು ಬಗೆಯ ತೆರಿಗೆ : ಬಂಮರಸದೇವನು ಶ್ರೀರಾಯ ಕೇಶವಪುರವಾದ ಮೊರಲೆಯ ಸಿದ್ಧಾಯ ಪೊದಕೆ ಶ್ರೀಕೇಶವದೇವರ ಶ್ರೀ ಸಿದ್ದೇಶ್ವರದೇವರ ನಂದಾದೀವಿಗೆಯ ಸೊಡರೆಣ್ಣೆಯ ನಡಸುವಂತಾಗಿ ಕೊಟ್ಟ ಗ ೫ (ಮೈಶಿಂ. ೦೧೩೨. ೩೬-೨ : 1245). ಪದಿಕೆ : ಗೌಡಿಕೆ ಮಾನ್ಯ ಪೇಠೆ ಪದಿಕೆ ಸಿದ್ಧಾಯ ದಾಯ ಕಾರಕ ಕಣ್ಪವಣ ಮೊದಲ ವಿಧ್ಯ × × ಸಂಟಾದನುಮ ಮಾಡ್ಸಿ ಕೊಣ್ಡ (ಎಇ VIII, ಸೊರಾ. ೨೬೬-೩೪; 1629 ?). ಹದಿಕೆ₁ : ಉಪಾಧ್ಯಾಯರ್ಗೆ ಮುಂಚಿದ ಹದಿಕೆಯಲ್ಲೀವಿ ತಮಂ ಕೊಟ್ಟು (ಸಾಇಇ. XI-ii, ೦೭೩-೫೭; 1124) ; ಮೂಱಡಿ ಮಣ್ಣಿಗೆ ಆಱು ಹೊನ್ನ ತೆತ್ತು ಮಿಱ ಹದಿಕೆಯ ಬೇಡ(ಕೊಳ್ಳಿ) ನಂದೀಗ್ರಾಮದವರ ಮುಂದಿಟ್ಟು ಮಿಱಲಿಲ್ಲ (ಸರ್ಪಸ. ೦೦೯-೫೬೯); ನಲೆಮ್ಮೆಯ ಹದಿಕೆಯ ನೆತ್ತುವ ಹೆಗ್ಗಡೆಗಳಾರು ಬಂದಡಂ ತಂಮ ಧರ್ಮ್ಮವಾಗಿ ಪ್ರತಿಪಾಳಿಸುವರು (ಸಾಇಇ. IX-i, ೩೮೯-೯; 1282); ಮೊಱದೆದ್ದು ಸಕಲ ರಾಣುವೆಯೊಂದು ಹುರಿಯಾಗಿ ಪುರವರದೊಳೆತ್ತಿ ಹದಿಕೆಯನು (ಸಮ್ಮಕಾ. ೨-೫೯). ಹದಿಗೆ₁ : ಹದಿಗೆಯಾಗಿ ಗ ೭೨ × × ವಲೂ ಯಪ್ಪತ್ತೆರಡನೂ ತೆತ್ತು (ಎಇ. IX (S), ಕುಡಿಗ. ೨೬-೦೮ ; 1563). ಹದ್ದಿಕೆ : ಗ್ರಾಮ ವಂದಕ್ಕಂ ಕುಳಗ ೨॥ ೦॥ ೭ ಗುಂಡಿಕುಳ ೧ ಹದ್ದಿಕೆ ೯ (ಮೈಶಿಂ. ೦೧೩೨. ೨೬-೦೯; 1430). ಹೊದಕೆ₃ : ಆ ಹತ್ತು ವ್ರಿತ್ತಿಯ ಸಿದ್ಧಾಯ ಸೇಸೆ ಅಳವು ಅನ್ಯಾಯ ಹೊದಕೆ ಮುಖ್ಯವಾಗಿ ಏನು ತೆಱುಗಡೆ ಬನ್ದಡೆಪೂ. . .ನಡಸುವನ್ನಾಗಿ. . .ಧಾರಾ ಪೂರ್ವ್ವಕಂ ಮಾಡಿಕೊಟ್ಟರು (ಎಇ. XII, ಇಕ್ಕೆಗಾ. ೨-೨೩ ; 1261) ; ಆವುಗೆ ಅನಾಯ ಹೊದಕೆ ಸಹಿತವಾಗಿ ಏನು ಬಂದದೂ ಸರ್ವ್ವಮಾನ್ಯವಾಗಿ ಅರಸುಗಳು ಯೇನುಬಂದದನೂ ಯಿಳಿಹಿಕೊಟ್ಟ ದರ್ಮ (ಕಾ. III-i, ೬-೯೯; 1348) ; ಆ ಪುರದ ಚತುಸೀಮೆಯೊಳಗಣ ಅಕ್ಷೀಣೆ ಆಗಾಮಿ ನಿಧಿ ನಿಕ್ಷೇಪ ಜಲ ಪಾಶಾಣ ಸಿದ್ಧ ಸಾಧ್ಯ ಸಿದ್ಧಾಯ ಹೊದಕೆ ಹದಿಕೆ ಕಾಣಿಕೆ ಕಡ್ಡಾಯ . . . ಅಷ್ಟಭೋಗಭೇಜಸ್ವಾಮ್ಯವನು (ಎಇ. XI, ಇತ್ತರು. ೨-೨೨;1365). ಹೊದಿಕೆ₂ : ಶಾಂತಿಗ್ರಾಮದ ಅಧಿಕಾರಿಗಳು ಪ್ರತಿವರ್ಷ ಸಲ್ವಂತಾಗಿ ವರದನರಸಿಂಹದೇವರ್ಗ್ಗೆ ತಂಮ ಹೊದಕೆಯ ಹೊಂನಿನೊಳಗೆ ಹತ್ತು ಗದ್ಯಾಣ ಹೊನ್ನನು ದೇವರ ಹೊದಿಕೆಯಂ ಧಾರಾಪೂರ್ವ್ವಕಂ

ಮಾಡಿ ಕೊಟ್ಟರು (ಸ್ಕೃಅಂ. ೦೯೯೦, ೩-೨೯; 1216); ಆ ಸೋಮನಾಥಪುರಕ್ಕೆ ಉರುತ್ಯವಾಗಿ ಬನ್ದ ಹದಿಕೆ ಹೊರಣೆ ಹೊದಿಕೆ ಮಳಬ್ರಯವೊಳಗಾಯಿತ್ತು (ಎಕ. III, ತಿರುಮ. ೯೮-೯೨; 1300); ಅರಮನೆಯಿಂದ ಬಂದ ಹದಿಕೆ ಹೊದಿಕೆ ಮಗಮೆ × × × ಸಿದ್ದಾಯ ಮನೆವಾರ್ತೆ ಹಣಕಾಹುಕಾಣಿಕೆ (ಸ್ಕೃಅಂ. ೦೯೩೯, ೫೮-೨೩; 1435).

ಪೊದಪು, ಹೊದಪು$_1$, ಹೊದೆಪು (ನಾ). ಹೊದೆಯುವ ವಸ್ತ್ರ; ಹೊದಿಕೆ; ಮೇಲುವಸ್ತ್ರ: ಚರವೇಷದಿಂ ಶಂಭು ಬಂದು ಪೊದಪಂ ಬೇಡೆ ತರಳಾಕ್ಷಿಯುಟ್ಟಱವೆಯಂ ಕೊಡಲು (ಶಾಶಕ. ೬-೨೩); ಅಂಬುಜ ನಾಭನಾ ಸಭಾಮಂಟಪವನುಳಿದು ಮಣಿವ್ರಜದ ದೀಪ್ತಿಯ ಬೆಳಗಿನಿಂದ ಸ್ವಮಂದಿರಕೆ ಪೋಗಿ ಪೊದಪಂ ತೆಗೆಯಲು (ಸಸಸೋ. ೦೭-೦೭). **ಹೊದಪು$_1$**: ಚಿನ್ಮಯ ಚಿದ್ರೂಪ ಚಿತ್ಪ್ರಕಾಶವೇ ತನ್ನ ಹೊದಪು (ಪಸಶಾ. II, ೦೩೯-೦); ಮಱೆಯೊಳು ರಮಿಸಿದರೆನೆ ಸಾಕು ಹೊದಪಿನ ಮಱೆ ಹೋಯ್ತು ಪುಳಕ ವಾಯ್ತೆಂದು ತುಱುಬಳಿದುದು ದೇಹ ಕಂಪಿಸಿತೆಂದದ ಹೊಱಹೊಮ್ಮಿ ಸುವುದಾವ ಪ್ರೌಢಿ (ಶರಸ. ೦೦-೦೦೭); ಹಜಾಮರಿಗೆ ಕೆಮ್ಪಿನ ಗಣಗಳಹುವು ಕೆಮ್ಪಿನ ಹೊದಪು ಸಾಣೆ ಕಟಕಡೆ ದಾಗಲುಯಿದು ಹಜಾಮನಿಗೆ ಸಲುವದು ಯೆನ್ದು . . . ದೇಶನಾಡಿನವರು ಗ್ರಾಮಾಧಿಪತಿಗಳು ಕರಣಿಕರು ಸಹ ಹೇಳಿದರು (ಎಕ. IX, ಶಾಸಶಾ. ೯೦-೫೭; 1700). **ಹೊದೆಪು**: ವಿಶ್ವಭೂತಿ ಯೆಂಬಾ ಪಾರ್ವಂ ... ಒಂದುದಿನ ಪೊಡಲು ಹಿಡಿವಂತೆ ಬಾಯ್ಸವಿಯಾಗು ವಂದದಿಂ ಕನಸುಮನಸಿನೊಳುಂಬುದಂ ಕಾಣನೊಂದುದಿನಮಾಗಿಯುಂ ಮೆಯ್ತುಂಬ ಹೊದೆ[ಪಾಕಾಂ. ದ]ಪುಮಂ ಹೊದೆವುದಂ ಕಂಡಱಿಯನು (ಸಮ್ಯಕೌ. ೭-೩೦). [ಪೊದೆ$_1$ + — ಪು$_2$]

ಪೊದಯಿಸು 'ಪೊದೆಯಿಸು' ನೋ.

ಪೊದರ್ 'ಪೊದಱ್' ನೋ.

ಪೊದರು$_1$ 'ಪೊದಱ್' ನೋ.

ಪೊದರು$_2$, ಹೊದರು$_2$ (ನಾ). ೧. (ಮರದ) ಪೊಟರೆ; ಡೊಗರು: ಪೊಳ್ಳು, ಪೊಟ್ಟೆ (ಹೊಟ್ಟೆ), ಪೊದರು (ಹೊದರು), ಪದರು, ಡೊಗರು (ಕಂಸುಹು. ೬೮). ೨. (ನೆಲದಲ್ಲಿರುವ) ರಂಧ್ರ; ಕುಳಿ; ಬಿಲ; "ತೂತು" (ಗಂಗಾಸು. ೨೦೭). **ಹೊದರು$_2$**: ೧. ಮರದ ಹೊದರಿನಲ್ಲಿ ಗಂಭೀರವಾದ ಘಟಸರ್ಪವಿರುವುದನ್ನು ಬೋಧರಾಯ ಅರಿತಿರಲಿಲ್ಲ! (ರಕ್ತರ್ಷ. ೬೯); ಕಪ್ಪೆಯು ನಿದ್ದೆಯಿಂದ ಇದೇ ಎಚ್ಚತ್ತು ಸಾವಕಾಶವಾಗಿ ಕಾಲಿಡುತ್ತ ಬೆಲಪತ್ರಿಯ ಗಿಡದ ಹೊದರಿನೊಳಗಿಂದ ಹೊರಕ್ಕೆ ಬಂದಿತು (ಕುಂಹಿಂ. ೬೬). ೨. ಶಹಾಮೃಗವು ನೆಲದ ಹೊದರಿನಲ್ಲಿ ಮನೆಮಾಡುತ್ತದೆ (ಮುಂಬಿಯಿ. ೯-೮೮೮); ಆಗ ಶಾಕ್ಯಸಂಘಲಕನು ಅವನ ಶಕ್ತಿಯನ್ನು ಕಂಡು ಅವನೊಬ್ಬನ ಜೊತೆಗೆ ಬಂದು ನೆಲದ ಹೊದರನ್ನು ಹೊಕ್ಕನು (ಕಪಶಿ. ೫೦). ೩. (ಆಲಂ) ಬಿರುಕು; ಭಿನ್ನಾಭಿಪ್ರಾಯ: ಅಂತಃಪುರದಲ್ಲಿಯೂ ಎಲ್ಲಿಯಾದರೂ ಡೊಗರು ಬಿದ್ದಿದೆಯೋ, ಹೊದರು ಕೊರಕಲು ಆಗಿವೆಯೋ ಎಂಬ ಬಗ್ಗೆ ಒಮ್ಮೆಯಾದರೂ ಪರೀಕ್ಷಿಸಿ ನೋಡಬೇಕೆಂದು ಭೂಪತಿಯ ಮನಸ್ಸಿಗೆ ಹೊಳೆದಿರಲೇ ಇಲ್ಲ (ಇಷ್ಟಕ. ೨೬೬).

[ದೇ. ॥ ತಮಿ. ಪೊನ್ತರ್, ಪೊನ್ತು; ಮಲ. ಪೊತ್ತು; ತೆಲು. ಬೊಂದ, ಬೊತ್ತ]

ಪೊದರೊಡೆ 'ಪೊದಱೊಡೆ' ನೋ.

ಪೊದರ್ಕೊದಳ್ (ನಾ). ಅತಿಶಯವಾಗಿ ಸೇರಿರುವ ಮಧುರವಾದ ಮಾತು: ಪದ ಕೊರಲಿಂಪನಪ್ಪುಕೆಯೆ [ಕೊಂಕು ನ]ಯಂ ಗಮಕಂಗಳಿಂ ಪೊದರ್ಕೊ[ಪಾಕಾಂ. ರ್ಕೊ]ದಳೆಱೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ ಜಾಣನಾಂತು ಮೆಚ್ಚಿದ ತೆಱದಾಸೆವಟ್ಟಲಸದೆತ್ತಿದವೋಲ್ ದೊರೆವೆತ್ತು ದೂಱಿ ದಾಱಿದ ದನಿಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ (ಸಂಪಶಾ. ೬-೮೮). [ಪೊದಱ್ + ಕೊದಳ್$_2$ (< ಕೊದಲು$_2$)]

ಪೊದರ್ದಲೆ, ಹೊದಱುದಲೆ (ನಾ). ೧. ಕೂದಲು ಜಡೆಗಟ್ಟಿ ಪೊದೆಯಂತೆ ಆಗಿರುವ ತಲೆ; ಪೊದೆಗಟ್ಟಿದ ಕೂದಲುಳ್ಳ ತಲೆ: ಕೆಮ್ಮೀಸೆಯ ಜೋಲ್ವಾಯ ಪೊದರ್ದಲೆಯ ಕರ್ಮೊಗದ . . . ಜವನ ದೂಱು ಗಾಱರ ಜಂಗುಳಿ . . . ಸಡಗರದ ದಟವುಟದಿಂ ಬಂದು ಮುತ್ತಿ ಮುತ್ತಿ ಅಱಗುಲಿಜೀವಾತ್ಮನಂ ಸೆಱೆವಿಡಿದತ್ತು (ರಾಮಾಶ್ವ. ೭೯-೦೯). **ಹೊದಱುದಲೆ**: ೨. ಅನೇಕ ತಲೆಗಳ ಗುಂಪು: ಹೊದಱುದಲೆ ಹೊಕ್ಕಾಳೆ ಬೆರಳಿನ ತುದಿಯ ತುಟಿಯಲಿ ಬೊಬ್ಬಱಿದಡಿನನದಿರೆ ದಳವುಳಿಸಿದುದು ಕೌರವ ಪಾಂಡವರ ಸೇನೆ (ಕುಪ್ಯಾಭೀ. ೯-೯); ಬೆದಱಿದರು ಕಂಡವನ ರೂಪನು ಹೊದಱುದಲೆಗಳ ಹೊತ್ತ ಚೋಹದ ಮದದ ಗರ್ವದ ಗಾಢಗಮನದ ಭೂತ ವಲೆಯೆನುತ ಸುದತಿಯರು ಗಡಗಡನೆ ನಡುಗಿದರು (ಕೊರರಾ. ೦-೦೫-೦೨).

[ಪೊದಱ್ + ತಲೆ$_1$]

ಪೊದರ್ವಡೆ (ಕ್ರಿ). ದಟ್ಟವಾಗು; ಒತ್ತಾಗು; ನಿಬಿಡವಾಗು: ಪೊದರ್ವಡೆದಡವಿಯ ಪಥದೊಳ್ಪಿಡಿದುದೊಂದು ಕೇಸರಿ ತನ್ನ ನಂದನನನು (ಸ್ವಿಮಿಪಾ. ೨೬-೩೩). [ಪೊದಱ್ + ಪಡೆ$_1$]

ಪೊದರ್ವನೆ, ಹೊದಱುವನೆ (ನಾ). ಬಳ್ಳಿಮನೆ; ಲತೆವನೆ; ಪರ್ಣಶಾಲೆ: ಕೊಳದೆಡೆಗೆಯ್ದು ತವಕದಿಂದವಲೋಕನಂಗೆಯ್ದು ಒಡನೊಡನೆ ಮರಳಿದಳ್ ಮಾಕಂದಕಂದರ್ಪತರುತಲದ ಪೊದರ್ವನೆಗೆ (ಸಕ್ರಾಂಗ. ೫೨-೦೯೦೯). **ಹೊದಱುವನೆ**: ಕೆಲಬಲದಲ್ಲಿ ಅವನನು ಅಱಸುತ್ತ ಕಾಣದೆ ಗಿಡಮರಗಳ ಬಳಿಯಲ್ಲಿ ಹೊದಱುವನೆಗಳಲ್ಲಿ ಕೊಳದ ತಡಿಗಳಲ್ಲಿ ನೋಡುತ್ತ ಬಹು ಹೊತ್ತಿನ ಮೇಲೆ ಒಂದು ಹೊದಱುವನೆಯ ಮುಂದುಗಡೆಯಲ್ಲಿ ಕಲ್ಲಱೆಯ ಮೇಲೆ ಕುಳಿತು . . . ಮನ್ಮಥಪರವಶನಾಗಿರುವ ಬಗೆಯನು ಕಂಡು (ಪಸಶಾ. ೨೬). [ಪೊದರ್ (< ಪೊದಱ್) + ಮನೆ]

ಪೊದಲು (ನಾ). (?): [ಮಾದುಕಾ]ಲ ಪೊದಲು ಎರಡುಂ (ಇಎ. ೦೯೯೬, ಹಾಸುಗ. ೨೯೮-೩೯; ?). [?]

ಪೊದಲ್ನಾಡು, ಹೊದನಾಡು, ಹೊದೆನಾಡು (ನಾ). ಒಂದು ನಾಡಿನ ಹೆಸರು; ೫ ಈಗಿನ ಕೋಲಾರ ಜಿಲ್ಲೆಯ ಒಂದು ಭಾಗ: ಪಲ್ಲವ ಕುಲತಿಲಕ ಶ್ರೀಮತ್ × × × ರಾಜ ಪ್ರಿಥಿವೀರಾಜ್ಯಂಗೆಯೆ × × × ಭೀಮ × × × ನೆ ನಾಡು ಮೂನೂಱು ಪೊದಲ್ನಾಡಱುವತ್ತುಮನಾಳೆ (ಎಕ. X, ಶ್ರೀಪಿಪಾ. ೫೦-೬; ಸು. 880 ?); × × × ಪೊದಲ್ನಾಡು ದ × × ಬೆಳಬ್ಗಬ್ಗೂರ × ಕೊನ್ದನ್ ತುಱುಗೊಳೆಯ್ದು ಸತ್ತರ್ (ಎಕ. X, ಶ್ರೀಪಿಪಾ. ೦೯೩-೦; ?). **ಹೊದನಾಡು**: ಹೊದನಾಡಿನೊಳಗಾದ ಗುಳ್ಳಹಳ್ಳಿಯ ಮುತ್ತರಸನ ಮಗ ದೇವಣ್ಣನ ಮಗ ಮರಿಯಪ್ಪನು ಮಾಡಿಸಿದ ದೀಪಮಾಲೆಕಂಮ್ಬ (ಎಕ. X, ಸಂಶಾಸು. ೦೯೭-೩; 1657 ?). **ಹೊದೆನಾಡು**: ಹೊದೆನಾಡ ಒಳಗೆ ನಮ್ಮ ಮುಳುವಾಯ ನಾಚೀದೇವಿಯರಿಗೆ ಸಲುವ ಕತರಿಯ ಹಳಿಹಳಿಯ ಸೀಮೆ ಒಳಗೆ (ಎಕ. X, ಮುಳಪಾ. ೭-೯; 1416); ಶ್ರೀಮತು ಹೊದೆನಾಡ ಉತ್ತನೂರ ಮಡವಾಳದ ಕಾವಬ್ಬ ದೇವಿಯರ ಸ್ಥಾನಿಕನಾಯಕ . . . ಬರಸಿ ಕೊಟ ಶಾಸನ (ಎಕ. X, ಮುಳಪಾ. ೦೦೫-೩; 1636?). [ಪೊದಲ್$_1$ + ನಾಡು]

ಪೊದಳ್ 'ಪೊದಱ್' ನೋ.

ಪೊದಳು 'ಪೊದಱ್' ನೋ.

ಪೊದಳ್ಕೆ 'ಪೊದಱ್ಕೆ$_1$' ನೋ.

ಪೊದಳ್ಕೆವಡೆ 'ಪೊದಱ್ಕೆವಡೆ' ನೋ.

ಪೊದಱ್, ಪೊದರ್, ಪೊದರು$_1$, ಪೊದಱು, ಹೊದರ್, ಹೊದರು$_1$, ಹೊದಱ್, ಹೊದಱು$_2$ (ನಾ). ೧. ದಟ್ಟವಾಗಿರುವ ಗಿಡಮರಗಳ ಸಮೂಹ; ಪೊದೆ; ಹಿಂಡಲು: "ಕುತ್ತುಱೆಂದು ಪೊದಱ್" (ಕಸಾ. ೫೦-೬೦); ಆಗಳ್ ದುರ್ಯೋಧನನಾತ್ಮೀಯಸೇನಾನಾಯಕನಪ್ಪ

ಗಾಂಗೇಯಂ ಬಿದಿರ ಸಿಡಿಂಬಿನ ಪೊದಱೊಳಗೆ ಮಱೆದೊಱಗಿದ ಮೃಗ ರಾಜನಂತೆ ಶರಶಯನದೊಳೊಱಗಿದಂ (ಪಂಪಭಾ. ೦೦-೫೦ ಪ); ಭಟ್ಟನೀ ಚೋದ್ಯಮಂ ನೋಟ್ಪೆನೆಂದು ಅದಱ ಕೆಲದೊಳ್ ಪರ್ವಿ ಕೊರ್ವಿ ಸುರ್ವು ಗೊಂಡ ಮಾಧವಿಯ ಪೊದಱೊಳಡಂಗಿರ್ದು ನೋಟ್ಪುದುಂ (ಪಂಪಸಂ. ೨೩೦-೭); ಬಿಡದೆ ಕುತ್ತುಱುಗಳಂ ಸೋವಿದರ್ತೀವಿದರ್ಗಿಡಗಳ ಪೊದರ್ಗ ಳಿಂದೆಬ್ಬಿಸಿದರುಬ್ಬಿಸಿದರೊಡನೊಡನೆ ಖಗಮೃಗವ್ರಾತಮಂ ಪಾತಮಂ ಮಾಡಿದರ್ಕೂಡೆ (ಶೈಮಭಾ. ೨೬-೪೭). ೨. ಗುಂಪು; ಸಮೂಹ; ಸಂದಣಿ: ಭೋರ್ಗರೆದುವನಿತಱೊಳ್ ಸಾಳನಿಃಸಾಳಮಾ ತೇರ್ಗಳ ಪೊದಱ್ ಪೊದಳ್ದೈದಿದುವು ಮೈಬೆಮರ್‌ನೀರ್ಗಳೊಗೆಯಲ್ ವಾಜಿ ರಾಜಿ ನಡೆದುದು (ಪಂಪು. ೩೦-೩೦). **ಪೊದರ್**: ೧. ಹರಿಣೇಂದ್ರನಂ ಕ್ರೂರಕಣಂಗಳಿಂದನಿಬರುಂ ಭರದಿಂದ ಪೊದರ ಬಿಟ್ಟೇಳ್ವನಿತರಲ್ಲಿ ತಚ್ಛಿರದ ಲಕ್ಷ್ಯಂ ಬಿಡದಿಸುತ್ತೆ ಬೊಬ್ಬಿಡಲ್ (ಮಹಾಪಿ. ೭-೩೦); ಗರುವ ತರುವರ ಕುಲಂ ಮೂಲಮಂ ತಿರಿಪಿ ಮಿಂಟಿದ ಪೋಲ್ ನೆಲಕ್ಕುರುಳಿದುವು, ಪೊದರ್ ಗಿಡುಗಳಂ ಪುಡಿಗೈದು (ಪತ್ರಾಂಗ. ೪೯-೦೩೦೪). **ಪೊದರು$_1$**: ೧. "ಪೊದರು ಕುಂಜು" (ಕಶರ. ೬೯); ಸುತ್ತು ಬಲೆಯನ್ನು ಬೀಸಿ ಮತ್ತೆ ಪೊದರುಗಳನರಸಿ ಕುತ್ತಿ ಕೆಡಹಿ ಮಿಗಗಳನ್ನು ಮತ್ತೆ ದೊರೆಗೆ ತೋರಿಸಲು (ಸಳಪಾ. ೧೬-೩); ಅಪಳ ಹೊಂಬಣ್ಣದ ಮುಖಮಂಡಲ ಗೈರಿಕವಸನ ಗಳಿಂದ ಪರ್ವತದ ಸನಿಹಪ್ರದೇಶದಲ್ಲಿ ಕಕ್ಕೇಗಿಡದ ಪೊದರು ಹೂ ಬಿಟ್ಟಿದೆಯೋ ಎಂಬಂತೆ ಕುಂಡಲಿತವಾಗಿದ್ದಿತು (ಶಾಖಲ. ೯೫); ವಾಯು ಪುತ್ರನಾದ ಭೀಮಸೇನನು . . . ಆನೆಯ ಹಾಗೆ ಕಾಡಿನಲ್ಲಿ ಗಿಡಗಳನ್ನೂ ಪೊದರುಗಳನ್ನೂ ದೂರಮಾಡಿ ದಾರಿ ಮಾಡಿಕೊಂಡು ನಡೆದನು (ವ್ಯಾಸಕಿ. ೬೫). **ಪೊದಱು**: ೧. "ಕುತ್ತುಱೆನೆ ಪೊ[ಪಾಠಾಂ. ಹೊ]ದಱು" (ಪಕುವಿ. ೯೨); ಇನಿತು ದಿವಸಮಿಾ ಮರಗಳ ಗಿಡುಗಳ ಪೊದಱುಗಳ ಮಱೆಗಳೊಳೀ ಪೊಟಲಂ ಕಂಡೆಮಿಲ್ಲೆಂದು ಮನದೊಳ್ ಬಗೆದು (ಪಡ್ಡಾರಾ. ೮೯-೨೨); ಪೊದಱು ಮರಂ ಗಿಡು ಪುಲ್ಲೆಂಬುದು ತಿರ್ಯಗ್‌ಜಾತಿಯೆಂಬುದಲ್ಲದೆ ನರನೆಂಬುದೆ (ಸಮಪ. ೪-೦೩೦); ಬಗಿದು ಪುಗಲ್ಕರಿದಲ್ಲಿಯುಮೊಗೆದ ಮರಂ ಪೊದಱು ಬಳ್ಳಿ ಗಿಡುವೆಂಬಿವಱಿಂ ಮಿಗಿಲೆನಿಪ ಬಲ್ಲೆ ನಗಸಾನುಗಳೊ ಳದಂತಾವ ಮೆಯ್ಯೊಳಂ ಪುದಿದಿರ್ಕುಂ (ಕಾವ್ಯಾವ. ೯೭); ಅರಳಾದ ಮಲ್ಲಿಗೆಯ ಪೊದಱೊಳಗೆ ತಿರುಗಿದೊಡೆ ತೆರಳ ಬಲ್ಲುದೆ ಸಂಪಗೆಯ ಬನಕೆ ಮಱಿದುಂಬಿ (ಶೈಮಭಾ. ೨-೫೭). ೨. ಮದಕರಿಗಳ ಮೊತ್ತ ಕದಳಿಯ ವನಗಳ ಪೊದಱ ಕಿತ್ತೀಡಾಡುವಂತೆ ಕದನಗಲಿಗಳಿಂದ ಮುತ್ತಿದ ತುರುಕರ ಸದೆದೆಬ್ಬಿಸು ನೀನು (ಕಂಪಪಿ. ೦೪-೫೨). **ಹೊದರ್**: ೧. "ಕುಂಜಿಃ, ಕುಂಜುಃ, ಕುಂಜನಂ, ಈ ೩ ಹೊದರ್" (ಕಾಶಕ್ಯ. ೬೫); ರಾಜಕುಮಾರಿ ಬನದೊಳಲ್ಲಲ್ಲಲೆದು . . . ಮೇಣೊರ್ಮೆ ಬಳ್ಳಿಹೊದರನೆ ಕುಟೀರಂಗೆತ್ತು ತಲ್ಲಣಿಸಿ ಮುಂ ನಡೆದು, ತಪ್ಪನರಿಯುತೆ ನಾಚಿ, ಸವ್ಯನಾಚಿಯನರಸುತಿರೆ (ಪತ್ರಾಂಗ. ೨೦-೫೪೯). **ಹೊದರು$_1$**: ೧. ಉದಕಮಂ ಕೊಳಬಂದ ಮೃಗಗಳ ಬೆದರದಂತೆಸೆಯಲ್ಕೆ ತೋಹಿನ ಹೊದರಿನೊಳು ಕಾದಿರ್ದೆ ಚಾಪಾಸ್ತ್ರಗಳ ಕೈಕೊಂಡು (ಅನಂಗಾ. ೨-೩-೭); ಬಿದಿರುಕೊಳ್ಳಕೆ ಹೋಗಿ ಹೊದರೊಳಗೆ ಕೈಹಾಕಿ ಬಿದಿರೆಳೆಯ ಕೊಯ್ದು ನಿತ್ಯದಲಿ ಕಾಯಕವ ಬದಿಕಿಸುತಲಿದ್ದ ಸತಿಯೊಡನೆ (ಕನ್ನಕಾ. ೨೬೫); ಹೊದರೂ ಮುಳ್ಳೂ ತುಂಬಿದ್ದ ಆ ವನ ಹಿಂದೆ ಒಂದು ಕಾಲದಲ್ಲಿ ದೊಡ್ಡ ನಗರವಾಗಿ ಇತ್ತಂತೆ (ವ್ಯಾಸಕಿ. ೯೦). ೩. (ಆಲಂ) ತೊಡಕು; ಸಿಕ್ಕು; ತೊಂದರೆ: ಹೇಗೂ ನಾಲ್ಕು ದಿನ ಸಮಾಧಾನವಾಗಿ ನಡಕೊಂಡು ಅವರಿಗೆ ತಿಳಿವಳಿಕೆ ಕೊಟ್ಟು ಅವರನ್ನು ಈಗಿನ ಹೊದರಿಂದ ಬಿಡಿಸಿಕೊಳ್ಳೋದೇ ಸರಿ (ಪಳಶಾ. ೦೦೮). ೪. ಪೊದೆಯಾಗಿ ಸಸ್ಯಗಳು ಬೆಳೆದಿರುವ ಭೂಮಿ (?): ಚಂದನಕೈಯಿಂದಲೂ ಬೀಜ ಖ ೨ಕೆ ಖ ೮ ಉಂಬಳಿ ಹೊದರಿಂದ ಬೀಜ ಖ ೫ಕೆ ಗಡಿ ಖ ೨೦ (ಮೈಆಂ. ೦೯೨೯. ೮೯-೨೬; 1632). **ಹೊದಱ್**: ೧. ತುದಿಕೋಡೊಳ್ ವೇಣುಜಾಲಂಗಳ ಹೊದಱನಡರ್ದೆತ್ತುತುಂ . . . ಕಂಠದ ಬಿಣ್ಪಂ ಜೊಂಪಿಸುತ್ತುಂ ನಡೆದುದಡವಿಯೊಳ್ ದೀರ್ಘದೇಹಂ ವರಾಹಂ (ಸೂಕ್ತಿಸು. ೩-೩೯); ಹೊದಱಂ ಪುಗಿಸೆರ್ಬು ನಟ್ಟು ನಿಲ್ಸರಳಿಸ ಲಿತ್ತು ಕುತ್ತು . . . ಸಾರೆನುತಿರ್ವ ಬೇಡ[ರ]ಬ್ಬರಕಿರದೊಂದನೊಂದೆಡ ಪುತಾಕುಳಮಾಯ್ತು ಮೃಗೀಮೃಗವ್ರಜಂ (ಮಹಾವೇ. ೫-೦೫); ಅದಱೊಳ್ ತಾವರೆವಳ್ಳಿಯ ಹೊದಱೊಳ್ ಬಿಸನಾಳಸಾರವಂ ಸವಿದು ಸುಖಾಸ್ಪದ ದಿಂದಿರ್ದುದು ಜಾಂಬೂನದಹಂಸಂ ಮಱೆದು ತನ್ನ ಮಾನಸಸರವಂ (ಪಳಸಂ. ೦೨೬). **ಹೊದಱು$_2$**: ೧. "ಉಲಪಃ, ಸ್ತಂಭಃ, ಗುಲ್ಮಃ, ವೀರುತ್, ವಿಟಪಃ—ಈ ೫ ಹೊದಱು" (ಪಲಾಯು. ೩೦-೩೬); ಇಡಿದಿರ್ದ ಹೊದಱಿ ನೊಳು ಸರಿವಿನೊಳು ದರಿವಿನೊಳು . . . ಬರುತಿರೆ (ಕಣ್ಣರ. ದೇ. ೦೨೯-೬); ಅರಣಿಯನು ಮೃಗವೆಳೆದುಕೊಂಡೀ ಹೊದಱ ಹೊಕ್ಕುದು ಬಹಳಕಾನನದ (ಕುವ್ಯಾಲ. ೨೩-೭); ಹೊಕ್ಕು ಲೀಲಾಸರಸಿಗಳನಿರದೆ ಕಯ್ಯಿಕ್ಕಿ ಹೊದಱು ಗಳೆಡೆಯನು ಹಿಕ್ಕಿ ಹೆಮ್ಮೆಳೆಗಳನಱಸಿ ನೋಡಿದೆವದು ಸಿಕ್ಕಿದುದಿಲ್ಲೆಮ್ಮ ಕಣ್ಗೆ (ಕುರಾಸಾಂ. ೩೨-೨೪). ೨. ಬೆಳೆಗೆಯ್ಯ ಹೊದಱಿನೊಳು ಮುನ್ನಾಡಿ ದೆಡೆಗಳೊಳು . . . ಮೇವ ತುಱುವಿಂಡಿನೊಳು ದಾರಿಯೊಳು ಸುತ್ತಿ ಸುಳಿದಱ ಸಿದಂ ಸಿದ್ಧರಾಮನಾ ಪರ್ವತಾಗ್ರಣಿ ಮಲ್ಲಿಕಾರ್ಜುನನನು (ಸಿದ್ಧರಾ. ೨-೩೬); ಸುಮಹಾರಥರ ಹೊದಱಲಿ ಹೊಕ್ಕನುರಿ ಬಲುಮೆಳೆಯ ಹೊಕ್ಕಂತೆ (ಕುವ್ಯಾದ್ರೋ. ೨-೩೦); ಹೊದಱ ಝುಲ್ಲಿಗಳಡಾಯುಧ ಕೆಯ್ಯ ಪೊಡೆ ಸರಳ ಹೊದೆಗಳಂ ತತ್ತಸ್ಥಳಂಗಳೊಳ್ ಕಟ್ಟಿ ಬಿಲ್ ಹೆದೆಯನಾರೈದು . . . ಎಚ್ಚಾಡಿದರ್ ಬಿಲ್ಲ ಬಿನ್ನಣಿಗರಂದು (ಪಂಪು. ೪೯-೪೯).

[ದೇ.॥ ತಮಿ. ಪುತರ್, ಪುತಲ್; ತುಳು. ಪುದೆಲ್; ತೆಲು. ಪೊದರು]

ಪೊದಱು 'ಪೊದಱ್' ನೋ.

ಪೊದಱುಗಟ್ಟು, ಹೊದಱುಗಟ್ಟು (ಕ್ರಿ). ಗುಂಪುಗೂಡು; ದಟ್ಟೈಸು; ಒಟ್ಟುಗೂಡು: ಕೆದಱಿ ನಾಂದಿ ಪೊದಱುಗಟ್ಟುವ ಕದಲೆಗದಿರನುರದಿನು ರವಣಿಸಿ ನೆತ್ತಿಯಿಂ ಪೊತ್ತು ನೆಗೆದು (ಅನಂಪು. ೭-೬೦ ಪ). **ಹೊದಱುಗಟ್ಟು**: ಉದಯವಾಗದ ಮುನ್ನ ಕಳನೊಳು ಹೊದಱುಗಟ್ಟಿದ ವೈರಿಸೇನೆಯ ಹದನಿವರ ಪಾಳಯಕ್ಕೆ ಬಂದುದು (ಕುವ್ಯಾಲೀ. ೫-೭).

[ಪೊದಱು (<ಪೊದಱ್) + ಕಟ್ಟು$_1$]

ಪೊದಱುಗೊಳ್, ಹೊದಱುಗೊಳ್ (ಕ್ರಿ). ದಟ್ಟವಾಗು; ಒತ್ತಾಗು: ಪುತ್ತಡರ್ದಿರ್ದ ಮೆಯ್ ಪೊದಱುಗೊಂಡ ಜಟಾವಳಿ...ಕಷ್ಟಮೌನಮೊಪ್ಪು ತ್ತಿರೆ ಜೀರ್ಣತಾಪಸಕುಲಂ ಮೆಱೆದಿರ್ಪುದು ತನ್ಮಹಾದ್ರಿಯೊಳ್ (ದಶಕು. ೪-೩೦). **ಹೊದಱುಗೊಳ್**: ಚಲಿಪ ಬಲುಶಾಖಾಸಮೂಹವ ಬಲು ಹೊದಱುಗೊಂಡಿಹ ಪಲಾಶಾವಳಿಗಳನು ಕಾಯ್ಗಳನು ಗೊಂಚಲುಗಳನ ವೆಲ್ಲವನು ಇಳುಹಿ ಮೊದಲೇ ತಱಿವ ಮರದಂತಳವಡಿಸಿಕೊಂಡಿರಲು (ತಿಮ್ಮಕಾಂ. ೫-೦೦೯). [ಪೊದಱು (<ಪೊದಱ್) + ಕೊಳ್$_1$]

ಪೊದಱುವೆಳಗು, ಹೊದಱುವೆಳಗು (ನಾ). ದಟ್ಟವಾದ ಪ್ರಕಾಶ; ಗಾಢವಾದ ಕಾಂತಿ: ತ್ರಿದಶಪತಿ ಗಿರಿಗಳಂ ಕಡಿವಂದು ತೆಗೆದಿಡುವೆನೆಂದು ತಿರಿಪಿದ ಕುಲಿಶದ ಪೊದಱುವೆಳಗಿಳೆಗಿಳಿದು ವಜ್ರಮಯಮಾಗಿ ನಿಂದುದೊ . . . ಪೇಳೆನಲ್ಕೋಟೆ ಕಣ್ಗೆಸೆದುದು (ಶೈಮಭಾ. ೦೦-೩೬). **ಹೊದಱು ವೆಳಗು**: ಮುದದಿನವನೀ ರಾಘವೇಂದ್ರನ ಪದಕೆನುತ ನಾನಾಸುರತ್ನದ ಹೊದಱುವೆಳಗಿನ ಹೊಂದೊಡವುಗಳ ಹೊಱಿಸಿ ಬೀಳ್ಕೊಟ್ಟ (ಕೂರಗಾ. ೪-೯-೨೦). [ಪೊದಱು (< ಪೊದಱ್) + ಬೆಳಗು$_2$]

ಪೊದಱೇಳ್, ಹೊದಱೇಳ್, ಹೊದಱೇಳು (ಕ್ರಿ). ಗುಂಪುಗೂಡು; ದಟ್ಟವಾಗು; ಹೇರಳವಾಗು: ಇದಿರೆರ್ದು ಖಚರೇಶನೆಱಗೆ ನಾರದನಿಗೆ ಪೊದಱೆರ್ದು ಮಕುಟರತ್ನಾಂಶು ಕೆದಱಲು ಸುರಧನುವನು ಮುನಿ

ಕುಳ್ಳಿರೆ ಮೃದುವಚನದೊಳಿಂತೆಂದ (ಕರ್ಣಾ. ೬-೦೦). **ಹೊದಱಿಸೇಳ್** : ಘನವಿಕ್ರಮದ ಬಿರಿ ಹೊದಱಿಸೇಳೆ ಜಯವಿಕ್ರಮದೊಳಬ್ಬರಿಸಿದನು ನಿಷ್ಕಾರಸಿಂಹನಾದಲಿ (ಕುಚಾ.೮೨.೨. ೦೬-೨೬); ಹೊರಳಿಗಿಡಿಗಳು ಹೊಡ ಕರಿಸಿ ಹೊದಱಿದ್ದು ರುಳಪಲಿ ರುಂಡಿಮುದಾಶಾಭಿತ್ತಿ (ಕೂರ್ಮಾ. ೬-೨೬-೨೬); ಹೊಂದಾವರೆಗೊಳ ಹೊದಱಿದ್ದೆ ತುಲಸಿಯ ನಂದನ ನಾಟ್ಯಕೀರ್ತನದಿ ಸಂದರ್ಶನದೊಳುಬ್ಬುವ ಸ್ವಾಮಿಯ ಕೂರ್ತು ಮುಂದಣ ಕೃತಿವೇಳು ಮುದದಿ (ಕೂಚಕ. ೨೦-೦). [ಪೊದಱಿ + ಏಳ್$_1$ (< ಏಱಿ$^{-}_{1}$)]

ಪೊದಱಿಸೊಡೆ, ಪೊದರೊಡೆ, ಹೊದಱಿಸೊಡೆ (ಕ್ರಿ). ೧. ಗುಂಪು ಬೆದರು; ದಿಕ್ಕಾಪಾಲಾಗು : ಪೊ[ಕಾಕಾಂ. ಹೊ]ದಱಿಸೊಡದು ಕುರುಸೇನೆ ತೆಗೆ ದೋಡಿದುದು ಭಯಜಲಧಿಯಲಿ ತೇಕಾಡಿದರು ಕೌರವಜನಪರೀ ಭೀಷ್ಮಾವ ಸಾನದಲಿ (ಕುಚಾ.೮೬. ೦೦-೦೩). **ಪೊದರೊಡೆ** : ೨. ಗುಂಪುಗುಂಪಾಗಿ ಹರಡು ; ದಟ್ಟವಾಗಿ ವ್ಯಾಪಿಸು : ಕದಳೀಕ್ಷು ನಾರಿಕೇಳ ಚೂತ ದ್ರಾಕ್ಷೆಯಿಂ ಬದರಿ ದಾಡಿಮವು ಖರ್ಜೂರ ಹೇರುಳೆ ನಿಂಬೆ ಪೊದರೊಡೆದ ಹುಳಿಸೆ ನೇರಿಲು ನೆಲ್ಲಿ ಹಲಸು ಫಲಭಾರದಿಂದೊಪ್ಪಿರ್ದುದು (ಕಪಪೋ. ೨-೬೨). **ಹೊದಱಿಸೊಡೆ** : ೧. ಮೇಲಿನ 'ಕುವ್ಯಾಭೀ' ಪ್ರಯೋಗದ ಪಾಠಾಂತರವನ್ನು ನೋಡಿ. [ಪೊದಱಿ + ಒಡೆ$_1$]

ಪೊದಱಿ, ಪೊದಳ್, ಪೊದಳು, ಹೊದಳು$_1$ (ಕ್ರಿ). ೧. ಹೊರ ಹೊಮ್ಮು ; ಹೊರಸೂಸು : " ಪೊದಟ್ಟುದೆನೆ ಪೊಣ್ಮಿದುದಕ್ಕು " (ಕಮು. ೭೬); ಮನ್ಮಥಶಿಖಿಜ್ವಾಲಾಳಿ ತಳ್ತೇಟಿ ಬೀಯದೆ ಕಾಯ್ದೋಡಿನ ಜೋಳದಂತಲರ್ದೊಡಾ ಕಂಪುಂ ಮಾನಸಾಪಮುಂ ಪುದಿದೆತ್ತಂ ಬರೆ ಸುಯಿ ಪೊದಟ್ಟು ಬಿಸಿದುಂ ಕವಿತ್ತುಮಾಯ್ತೋವಳಾ (ಕಾದ.೫೫೬ ಕೂದ್ರಳೆ); ಪ್ರತಿದಿನಂ ನೃಪಚಂದ್ರನ ದಿವ್ಯದೇಹದಿಂ ಕಾಂತಿ ಪೊದಟ್ಟು ವರ್ವಿ ಗಗನಾಂತರಮುಂ ವುದಿದಿರ್ಪುದು (ಕಾರಂಣಾ. ೬೬೮); ವಿವಿಧಾತೋದ್ಭರವಂ ಪೊದಟ್ಟಖಿಲದಿಕ್ಕಟಕಂಬರಂ ಕೂಡೆ ಪೊಣ್ಮಾವಿನಂ (ಗರಾಹು. ೯-೬೬). ೨. ಉಂಟಾಗು; ಒದಗು; ಪ್ರಾಪ್ತವಾಗು : ಮುನೀಂದ್ರನ ದಿವ್ಯ ದೃಷ್ಟಿಮಂತ್ರದೊಳೆ ಪೊದಟ್ಟುದಾ ಸತಿಯರಿರ್ವರೊಳು ನವಗರ್ಭವಿಭ್ರಮಂ (ಕಂಕಣಾ. ೦-೬೩); ಮನಕ್ಯಮ್ಮಳಂ ಪೊದಟ್ಟುದೆನಗಂ ಸರೋಜದಳನೇತ್ರೆ ನಿನ್ನಂದದಿ (ಕುಗ್ಗಿಪ್ರ. ೪-೨೩); ಮಟಿ ಕಂಬನಿಯಂ ದನಿಯಿಂ ಮೊಲಗೆಜಗಿದ ಮಕುಟದಿಂದೆ ವಿಂಬೊಗೆಯೆ ಪೊದಟ್ಟಬಲಿಂದಂ ಮುನ್ನಡಿಯೊಳ್ ಮಟಿ ಗಾಲವನಂದು ಸೂನು ತಂದೆಗೆ ತಂದಂ (ಅಪಂಪ್ರ. ೬-೧೯). ೩. ಎದ್ದು ತೋರು; ಪ್ರಕಟವಾಗು ; ನಿಚ್ಚಳವಾಗಿ ಕಾಣು : ಕಂಜದಳೋಪಮ ಶೋಭಿತವಿಲೋಚನದೊಳ್ ನಿಟಲಾಗ್ರದೊಳ್ ಪೊದಟ್ಟಿಂಜನರೇಖೆ ಕಣ್ಗೆಸೆಯೆ (ಸುಳ:ಪಾ. ೧೦-೬೮); ಅದಸಿ ಪೊದಟ್ಟ ಪೆರ್ಮೊಲೆಗೆ ಕುಟ್ಮಲ ಹಾರಮನಾಂತಳಟ್ಟುಯಿಂ (ಲೀಚಾಪ. ೦೩-೦೦೦); ಪೊದಟಿದ ಲಜ್ಜೆ ವಲ್ಲಟಸ ದಾಸನಂ . . . ಪಲ್ಲ ಕೊನೆದಾಗದ ಚುಂಬನವೆಂಬಿವಿಚ್ಚೆಯೊಳ್ ವುದಿದಿರೆ ಮೆಚ್ಚಿದಳ್ ನೆರೆದು ಪೊ:ಪವಳೋವನ ಜಾಣ ಕೇಣಮಾ (ಸೂಪ್ರ.ಸಾ. ೯-೦೩೪). ೪. ಹರಡು; ವ್ಯಾಪಿಸು; ಆವರಿಸು: ಮುಂ ತನ್ನರ್ಚಿಗಳ್ ಬಂದು ಮೊಕ್ಕಳಮೆತ್ತಂ ಸುರಿಯುತ್ತುಮಿರ್ಪ ರಸಮಂ ಮುಂ ಪೀರ್ದುಕೊಂಡಂ ಮನಂಗೊಳೆ ಸಪ್ತಾರ್ಚಿ ಪೊದಟ್ಟು ನೀಳ್ದೊಸಗೆಯಿಂದಾಪೋಶನಂಗೊಳ್ವ ವೋಲ್ (ಕಂಪಾ. ೩-೬೬); ಪೊಸಪವ್ವನದೇಟ್ಟಿಯೊಳ್ ತಪಶ್ಚರಣಮಿದೇಂ ಪೊದಟ್ಟುಡಿದ ಕಾನನದೊಳ್ ಬಡದೊರ್ಬಳಿರ್ಪುದೇಂ (ಕಾದಂಪೂ. ೬೯೮); ಸಿಂಗರವೇಟ್ಟಿಯಂ ಪಡೆಯೆ ದೇಸೆ ಪೊದಟ್ಟಿರೆ ಕೊಂಕು ತೀವೆ . . . ನನೆವಿಲ್ಲನ ಹೀರಮನೊಲ್ದು ಪೇಟ್ಟಿನಾಂ (ಕಪ್ಪಿಣಾ. ೦೬). ೫. ಅಧಿಕವಾಗು ; ಹೆಚ್ಚಾಗು ; ವೃದ್ಧಿಯಾಗು : ಕಲಿಯನೆ ಪಾದೆ ಮುಟ್ಟ ಕಡುವಂದಿಯನೊಳ್ಗಲಿ ಎಮ್ಮಟ ... ತವ್ಮೊಳಗ್ಗಲಿಸಿ ಪೊದಟ್ಟು ಹರ್ಮದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲಮದಱಿಂದಮೋಲಗಿಸಿ ಬಾಟ್ಟುದೆ ಕಷ್ಟವಿಳಾಧಿನಾಥರಂ (ಕಂಕಣಾ. ೦೨-೯೨); ಪುಟ್ಟಿದ ನೂರ್ವರು ಮೆನ್ನೊಡವುಟ್ಟಿದ ನೂರ್ವರುಮಿದಿರ್ದ ಸತ್ತೊಡೆ ಕೋವಂ ಪುಟ್ಟ ಪೊದಟ್ಟುದು ಸತ್ತರ್ ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱಿವೆಂ (ಗದಾಪ್ರ. ೩-೩೪); ಮದನನ ಬಲ್ಲ ಬಲ್ಮೆ ಬಲಿದಿತ್ತು ವಸಂತದ ಮೋಹನಂ ಪೊದಟ್ಟುದು ಕಡುಗಾಡಿವೆತ್ತಲೆವ ತೇಂಗಣಗಾಳಿಯ ಸೋಂಕು ಸೊರ್ಕುವೆತ್ತುದು (ಕರ್ಣಾ. ೦-೬೨). ೬. ದೊಡ್ಡದಾಗು ; ತೋರವಾಗು; ಸ್ಥೂಲವಾಗು ; ಜಗದ ಬಡತನವಮನೊರ್ವಯೆ ಬಗೆದಂತಿರೆ ಕಿಡಿವ ಚಿಕ್ಕ ತನ್ನಿರ್ದೆಡೆಯೊಳ್ ನೆಗಟ್ಟ ಬಡತನವನದನೇಕೆ ಗಡಂ ಸೈರಿಸುವನೆನೆ ಪೊದಟ್ಟುದು ಮಧ್ಯಂ (ಕಂಪು. ೬-೩೦); ಬಿಸರುಹನೇತ್ರೆ ಯೊಳ್ನಡು ಪೊದಟ್ಟುದು ದಾಂಗುಡಿಯಿಟ್ಟು ಬಾಸೆ ನೀಳ್ದೆಸೆದುದು . . . ಗರ್ಭದೇಟ್ಟಿಯೊಳ್ (ಕಂಕಕಂ. ೦೪೪-೧೧). ೭. ಶೋಭಿಸು ; ಕಾಂತಿಯುಕ್ತವಾಗು; ವಿರಾಜಿಸು: ಇದು ನಿನ್ನೀಯಗಲ್ದುರದೊಳ್ ಪೊದಟ್ಟು ತನತೊಂದು ಜನ್ಮಮಂ ಸಫಲಂ ಮಾಟ್ಟುದಿತೆಂದು ಕುಂದದಲಶಾರದ ನೀರದನಿರ್ಮಲಂ ಭವತ್ಕೀರ್ತಿಯಪೋಲ್ (ಅಂಪ್ರ. ೦೨-೦೦೯); ಪುಸಿ ಮುಂಗಿಸಿಂದಂ ಪಿರಿದುಂ ಪ್ರಯತ್ನದಿಂದಮೆ ವಿರಚಿಸೆ ಕಣ್ಗೆಸೆವ ಭೀಷ್ಮ ಭ್ರುಕುಟಿ ಪೊದಟ್ಟಿರೆ (ಕಾದಂಪೂ. ೭೯೦); ಭುವನಮನಾವಗಂ ಪುದಿದು ಕಿವಿದ ತನ್ನಂದಿರ್ಗಳ್ ಪೊದಟ್ಟ ಕೈರವವನಮಾದುವೆಯ್ದೆ ಪೊಸವಲ್ಲಿಗೆ ಯಾದುವು . . . ಹಿಮಮಾದುವಲ್ಲದೊಡೆ ಚಂದ್ರನ ಚಂದ್ರಿಕೆ ಮಾಯುವಾದುದೇ (ಲೀಚಾಪ. ೩-೭). ೮. ಪ್ರಸಿದ್ಧವಾಗು; ಕೀರ್ತಿಯನ್ನು ಪಡೆ; ಹೆಸರನ್ನು ಗಳಿಸು: ಜಗತ್ತ್ರಿತಯಂಗಳೊಳ್ ಜಸಕ್ಕಾಗರಮಾದ ಬದ್ದೆಗನಿನಾ ನರಸಿಂಹನಿನತ್ತ ನಾಲ್ವೆರಲ್ ಮೇಗು ಪೊದಟ್ಟ ಚಾಗದೊಳಮೊಂದಿದ ಬೀರ ದೊಳಂ ಗುಣಾರ್ಣವಂ (ಕಂಕಣಾ. ೦-೩೦); ಪೊದಟ್ಟಧಿರಾಜಲಕ್ಷ್ಮಿಯೊಳ್ ನಿಸದಮೆ ವಿಶ್ವಭೂತಿ ವಸುಧಾಪತಿ ತಾನೊಲವಿಂದಮಿರ್ದು ಭೋಗಿಸಿದನಶೇಷ ಭೋಗಮುಂ (ವರ್ಧಪು. ೦-೯೦); ಕ್ರಮದಿಂದೆ ಸಂಧಿ ನಾಮಂ ಸಮಾಸಮಾ ತದ್ಧಿತಂ ಪೊದಟ್ಟುಖ್ಯಾತಂ ಪ್ರಮುದಿತಧಾತುವಪಭ್ರಂಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್ (ಕವಿಪ. ೧). ೯. ಒಂದಾಗು; ಸೇರು; ಕೂಡು : ಎಸೆವ ವಿವಮಾನಳಾಟಿಗಳ ಮೆಲ್ಲುಲಿ ಕನ್ನರಗೇಯದೊಳ್ ಪೊದಟ್ಟಿಸೆಯೆ (ಆಂಪ್ರ. ೨-೪೦); ನುಡಿ ಪುಸಿಯೊಳ್ ಪೊದಟ್ಟಿರದು ದಾನದ ಪೊಂಪುಟಿ ಲೋಭದಾಸೆಯೊಳ್ಕೊಡತರದು (ಕವಿಪ. ೬-೨). ೧೦. ಹೊಂದು; ಪಡೆ; ತಾಳು: ಧರಣೀಧ್ರನೋಲಗಕ್ಕಂ ಸುರಪತಿಯೊಡ್ಡೋಲಗಕ್ಕಮಿದು ವಿಗಿಲಿಂಬೋಲ್ ಕರವೊಪ್ಪಿರ್ದುದು ಸಭೆಯಾ ತರಳಾಕ್ಷಿಯರಿಂ ಪೊದಟ್ಟು ನೂರ್ವರ್ದಿ ಚೆಲ್ವಂ (ಕರ್ಣಾಮ್ಮ. ೪-೦೪೬); ಮೊದಲೆರಡು ವಿಭಕ್ತಿಯೊ ಂ ಪೊದಟ್ಟುವುಲ್ ಕಾಲವಾಚಿಯಾದಿಂದುಂದೆಂಬುದುಮೇಕರೂಪವಾಗಿರ್ಪುದು ಮೊದಲೆರಡುಂ ವಿಭಕ್ತಿಗಂ ಸಪ್ತಮಿಗಂ (ಕವಿಪ. ೦೨೦); ಶ್ರೀ ಚಾಮರಾಜೇಂದ್ರನೀ ಬಿರುದೆಲ್ಲಾ ಬಿರುದಂಗಳೊಳ್ಪನಿಟ್ಟಿಕೆಯ್ದಾರ್ಪಿಂ ಪೊದಟ್ಟೊವ್ಪುಗುಂ (ಚಿಪಿ. ೨-೬). ೧೧. ಅಂಟಿಕೊಳ್ಳು; ಹತ್ತಿಕೊಳ್ಳು: ತರುಣಿಯರಂದು ಕಂಸನ ವಿಯೋಗದ ಶೋಕದೆ ಬಿಟ್ಟು ಧಾತ್ರಿಯೊಳ್ ಪೊರಳಿ ಪೊದಟ್ಟ ಮೆಯ್ಯ ರಜವಶ್ಯಾಜಲೌಘದೆ ನಾಂದು ಕರ್ದಮಂ ಬೊರೆದವೊಲಾಗರ್ (ಹರಿ. ೬-೧೬). ೧೨. ವಿಶಾಲವಾಗು; ವಿಸ್ತಾರವಾಗು : ನಗೆವೊಗಮಂ ಪೊದಟ್ಟುಲರ್ದ ತಾವರೆಯೆಂಬ ವಿವೋಹದಿಂ ವೊಗಂಬುಗಲೊಡವಮಾ ತಳೋದರಿಯ ಸುಯ್ಗುಳ ಬೆಂಕೆಯೊಳಿಚ್ಚೆಗೆಟ್ಟು . . . ಪಾಱುದುವುನ್ಮದಾಳಿಗಳ್ (ಕಂಕಣಾ. ೩-೧೧). ೧೩. ಬೆದರು; ಬೆಲ್ಲಾಪಿಲ್ಲಿಯಾಗು ; ದಿಕ್ಕುಪಾಲಾಗು : ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳಿ ನಾಂದೆಲರ್ಚಿ ಪೊದಟ್ಟೊರ್ವೆಯೆ ಪಾಱುದುವುನ್ಮದಾಳಿಗಳ್ (ಕಂಕಣಾ. ೩-೦೦). ೧೪. ಉಬ್ಬು ; ಉತ್ಸಾಹಿಸು ; ಹರ್ಷಿಸು : ವಿತತಕಳಾ ಪ್ರವೀಣತೆಯಿನೆಯ್ದೆ ಸರಸ್ವತಿ . . . ಪತಿಭಕ್ತಿಯಿಂ ನೆಗಟ್ಟರುಂಧತಿಯಿಂದು

ಪೊದಟ್ಟು ಬಣ್ಣಕುಂ ನುತವಿಜಯಾವನೀಶಸತಿಯುಂ ಸಲೆ ಪೊನ್ನಲದೇವಿಯುಂ ಜಗಂ (ಶಿಬುಪು. ೦-೨೬); ಚಂದಿರನುಂ ರೋಹಿಣಿಯೊಡನೊಂದಿ ಪೊದಟ್ಟುದಿಸಿ ಬಂದನಿರುಳರೆಗಳದತ್ಯಂದಿನಪೋಲಟ್ಟುಯಿನಾನಂದಂ ಪೊಗರೇಱೆ ಭವದೊಳಾವಿರ್ಭವಿಸಾ (ಶಕಸಂ. ೬-೨೩೦). **ಪೊದಳ್** : ೧. ಪುದಿದ ಹಿಮಮೊಡಲೊಳಿಳಿತಂದುದರಾಗ್ನಿಯನೆಯ್ದೆ ನುಂದೆಪೊಯ್ದುದು ನಿಜಮಲ್ಲದೊಡೆಂತು ತೋರ್ಪುದೋ ಪೇಳ್ಮೊದಲಿಲ್ಲದ ಪೊಗೆ ಪೊದಳ್ದು ಜನದಾಯನದೊಳ್ (ರಾಜಶೇ. ೯-೦೬). ೨. ವಿಳಸನಮಂ ಪುದುಂಗೊಳಿಪ ನನ್ದನದೋಳಿ ಪೊದಳ್ದಳುಂಬದಿಂ ಬೆಳೆದಱಗಿರ್ಪ್ಪ ಶಾಳಿನವಸೌರಭಮಂ ನಯದಿಂ ದೆಸೆ × × × ನ್ವಿಳಸುವ ಗಾಳಿ (ಶಾ. V. ೨೦-೨೯ ; 1125) ; ಸ್ತ್ರೀಪುನ್ನಾಗಮೆರಡು . . . ಪೊದಳ್ದಾತುರದಿಂ ಸಮಸಂಭೋಗಕ್ರೀಡೆಯೊಳಾಲಿಂಗಿಸಿದುವು ಹೂಗಣೆಯಿಂ ಹುರಿಗೂಡಿದ ಸಂಮೋಹನಪಾಶದ ತೆಱದಿ (ಜಯಕಾ. ೦೦-೨೮). ೩. ಮೇಲುದಿನೊಳ್ಪೊದಳ್ದ ಕುಚಭಾರದಿಂ ನಸುವಾಗಿದಂಗಲತೆಲಹರಿಗಳ . . . ವಿನುತಾಷ್ಟಮಹಿಷಿಯರ್ಚಾರುಚಾಮರತಾಲವೃಂತಮಂ ಪಿಡಿದಿರ್ದರಚ್ಯುತನ ಕೆಲಬಲದೊಳು (ಕೈವಿಕಾ. ೬-೪೬). ೪. ಒಪ್ಪುವ ಪಂಚಮಹಾನಕಂಗಳಿಂ ಬಳಸಿ ಪೊದಳ್ದ ವಾಜಿದಳದಿಂದಮಗುರ್ವ್ವಿಪ ವೀರಕೋಟಿಯಿಂ (ಸೌಇಇ. XI-1, ೩೨-೬೯; 1007) ; ತೇಜದುರ್ಬ್ಬೇಳುಸಮುಂ(ಮುಂ)ದ್ರಮುಂಗಳಿಯೆ ಪರ್ಬ್ಬಿ ಪೊದಳ್ದುದು (ಇಲ. V. ೦೬-೦೯ ; 1019) ; ಚತುರಂಭೋನಿಧಿವರೆಗಂ ಚತುರಂಗಬಲಂ ಪೊದಳ್ದು ಬಿಡೆ ಪದ್ಮಜನೇಂ ಚತುರನೊ ತದ್ಧಾರಮನಹಿಪತಿ ಪೋಲೆಂದಂದೊಡರ್ಚಿದಂ ಬಹುಶಿರಮಂ (ರಾಜಶೇ. ೬-೨೫). ೫. ಪದತಳದೊಳ್ ತೊಡಂಕಿ ಪರಿದಾಡಿ ಪೊದಳ್ದೆಸೆವಂಗದೇಶದೊಳ್ ಪದೆದು . . . ಸರಿತ್ಸುಧಾಂಶುಗಳ್ ಪುದಿದ ತದೀಯ ಮೌಳಿಯೊಳಿ ವಿಶ್ರಮಿಸಿರ್ದುದು ದೃಷ್ಟಿ ಪಾರ್ಥನಾ (ಶಶಕಂ. ೩-೦೩). ೬. ನಡು ಪೊದಳ್ದವು ವರವಳಿತ್ರಯಾವಡಗಿದವು . . . ಬೆಳ್ಪಡಸಿದವು ಮುಖಮಂಡಲಗಳಾ ಮಾನಿನೀತ್ರಯದ (ತೊರರಾ. ೦-೬-೩). ೭. ಪೊಱಪೊಳಲೊಳ್ ಪೊದಳ್ದ ನವನನ್ದನಬೃಂದದಿಂ (ಎಇ. XIII, ೩೩೦-೨೬ ; 929) ; ಅಡಿದಳದ ಬಲ್ಸೊಂಪು ಕೆಂದಳಿರ ಪೆಂಪನವಗಡಿಸಿ ಮಾರನೇಱೆಸೆ ಪೊದಳ್ದುಗುರ್ ಶುಕ್ತಿಜದ ಬೆಡಗಿಂಗೆ ಭಂಗಮಂ ಸಂಗೊಳಿಸೆ . . . ಸೊಗಸನೇವಣ್ಣೆಪೆಂ (ಪದ್ಮಕಾ. ೩-೨೬) ; ಸಣ್ಣನಡು ಸೈನಿಮಿರೆ ತೋಳ ಮೊದಲೊಳ್ಪೆಸೆಯೆ ತಿಣ್ಣ ಮೊಲೆಗಳ್ಪೊದಳೆ ... ಪೆಣ್ಣಾವಿಂಡಾ ಬನದೊಳಲರ್ಗಳಂ ತಮ್ಮ ತನುವಿನ ಕಂಪಿನಿಂ ಪೊರೆದರು (ಕೈವಿಕಾ. ೬-೦೬). ೮. ಸಂಗಡಿಸಿದ ಬಡತನದೆ ಕುನುಂಗಿ ಕರಂ ಪೆಸರಿನೊಂದರಿಂದುಳಿದಿರ್ದಾ ಸಂಗೀತಂ ದಿನದಿನಕಂ ಪೊಂಗಿ ಪೊದಳ್ದೇಳ್ಗೆವಡೆದುದೀ ಧಾರಿಣಿಯೊಳ್ (ಮಾರಾಕ. ೯. ೦೦). ೯. ಮದಗನ್ಧಶಾಳಿವನದಿಂ ಬಿಡದೊಪ್ಪುವ ಕರ್ವ್ವದೋಣ್ಪದಿನ್ದೊಳಗೆ ಪೊದಳ್ದ ದೇವಕುಲಸಂಕುಲದಿಂ ದ್ವಿಜಸೌಧಗೇಹದಿನ್ದೆಳಿಗೆಸೆದತ್ತು ಪಲ್ಲವಪುರಂ (ಎಳ. V. ೮೮೫. ೦೫-೬೦ ; 1185) ; ದಟ್ಟಡಿಯನಿಡೆ ರನ್ನದಂಮಗೆಯಾ ಮೆಱೆಪ ದನಿ ತಾವರೆಯ ರಜದಲಿ ನೆಱೆ ಪೊದಳ್ದೆಳೆದುಂಬಿಮಾಲೆಯ ಕಿಱುದನಿಯಪೊಲು ಜನನ ಚರಣಾಂಬುಜದಲೊಪ್ಪಿದವು (ಶಾಳ್ಳಕಾ. ೩೩-೧೦೩) ; ಮಹೀರಮಣನ ತೇಜಮನೇನೆಂಬೆಂ ಪೊದಳ್ದ ರವಿಶತರುಚಿಯಿಂದಮರ್ದು ಪೊಱಪಳಯಮಂ ಹೇಮಮಯಮಿದೆನಿಸಿತ್ತಜಾಂಡಮಂಡಳಮನಿತಂ (ರಾಜಶೇ. ೩-೬). ೧೦. ನಿಮಗೊಪ್ಪುವುದಾವುದದಂ ಪೊದಳ್ದುಕೊಂಬುದು ವಿಪ್ರಾ (ಶಿಷ್ಟಪು. ೨-೩-೧೩೦). ೧೪. ಕ್ಷಿತಿವಲ್ಲಭನೇಕಾಂತಸ್ಥಿತಸೌಭರಿಮುನಿಸಮಿಾಪಮಂ ಸಾರ್ದವನಿಂದತಿ ಸನ್ಮಾನಿತನಾಗಿಯೆ ಕೃತಾಸನಪರಿಗ್ರಹಂ ಪೊದಳ್ದಿಂತೆಂದಂ (ಶಿಷ್ಟಪು. ೯-೦-೧೧೨). ೧೫. ಬಳಕೆಯಲ್ಲಿರು ; ಉಪಯೋಗದಲ್ಲಿರು : (ಕ). ೧೬. ಚಾಚು ; ನೀಡು : ಪಸರಂಬೆತ್ತೆಡೆಯಾದ ನೀಡಡಿ ಪೊದಳ್ದಾಕರ್ಣವಾಕುಂಚಿತಾಸ್ತ್ರಸಮೇತೋಚ್ಚಕರಾಗ್ರಂ...ತಾನಿಸಲೊಂದೊಂದುಕುರಂಗಮಂ ಶಬರನಿಂತಿರ್ದಂ ಮಹಾರಣ್ಯದೊಳ್ (ಗಿಳಿ. ೦-೮೯). ೧೭. ರಭಸವನ್ನು ಹೊಂದು ; ವೇಗವನ್ನು ಪಡೆ ; ತ್ವರೆಗೊಳ್ಳು : ಕ್ರೂರೋನ್ನತಸ್ಯಂಧನಾ ತ್ರಿದಶಾರಾತಿ ಪೊದಳ್ದು ಪೊಕ್ಕನಿರುಳೊಳ್ ತದ್ಗೋವ್ರಜಸ್ಥಾನಮಂ (ಶಿಷ್ಟಪು. ೫-೩-೦೮೨). ೧೮. (?): ವಿತತಮತಿ ಬಾಷ್ಕಳಂ ಸಂಹಿತೆಗಳ್ ಮೂಱುಂ ಪೊದಳ್ದು ಬೇಱೆಸಗಿ ನಿಜಾಶ್ರಿತಶಿಷ್ಯವರ್ಗಕಾ ಸಂಹಿತೆಗಳನೋದಿಸುವವೇಕ್ಷೆಯಿಂದಿರ್ದಾಗಳ್ (ಶಿಷ್ಟಪು. ೩-೦-೦೯೫). **ಪೊದಳು**: ೧. ಹದಿಬದೆಯು ತೋಡಿರುವ ಎದೆಯುದ್ದ ಶಿವಗುಣಿಯು ಪೊದಳಿದಾ ಒರತೆ ಕಲ್ಯಾಣಪುರದೊಳಗೆ ಕದಳಿಬನವೆಂದು ಹೆಸರಾಯ್ತು (ಕನ್ನಸಾ. ೨೬೭). **ಹೊದಳು₁** : ೧೬. ವದನಮಿರ್ದುದು ಹತ್ತುಯೋಜನ . . . ಹೊದಳು ತಿರ್ದುದು ನಡುವೆ ನಾಲಿಗೆದುದಿಯು ತಾ ಹನ್ನೆರಡುಯೋಜನ ರುಧಿರ ಬೀಜನ ಘೋರತರ ಚೀರಿಸಿತು ಹರಿಹರರ (ಅಂಬಿಕಾ. ೪೨-೦೦೭).

[ದೇ.॥ ತಮಿ. ಮಲ. ಪೊಶಿರ್ ; ತುಳು. ಪೊದಲು ; ತೆಲು. ಪೊದಲು, ಪೊದುರು]

ಪೊದಟ್ಕೆ₁, ಪೊದಳ್ಕೆ (ನಾ). ೧. ಹುಟ್ಟು ; ಉದಯ; ಆರಂಭ : ನುಡಿಯ ಪೊದಟ್ಕೆಯೊಳೊಳ್ನುಡಿ ನುಡಿದಂ ನಿಜಸಕಲಚಕ್ರವರ್ತಿತ್ವಕ್ಕಂದಡಿಯಿಡುವಂತೆ ನಿರಂತರಮಡಿಯಿಟ್ಟಂ ಪದ್ಮರಾಗಮಣಿಕುಟ್ಟಿಮದೊಳ್ (ಅಪಪು. ೬-೧೦). ೨. ಹೆಚ್ಚಳ; ಆಧಿಕ್ಯ ; ಅತಿಶಯ : ಸಿರಿಯ ಶರೀರದ ರೂಪಿನ ನರರೈಶ್ವರ್ಯದ ಪೊದಟ್ಕೆಗಳ್ ಕರಗುವವೋಲ್ ಶರದಂಬುಧರಂ ಭೋಂಕೆನೆ ಕರಗಿದೊಡರ್ದೆ ಕರಗಿ ಕೊರಗಿದಂ ಧರಣೀಶಂ (ಅಪಪು. ೯-೬೯); ಪುರುಡಿಸುವಳ್ ವಿಳಾಸದ ಪೊದಟ್ಕೆಗೆ ವಿಭ್ರಮದೇಟ್ಕೆಗಂಬರಚರಿಯರೊಳಿಂದ್ರಲೋಕಲಲಿತಾಂಗಿಯರೊಳ್ . . . ಆವಗಂ ಸೆಣಸುವಳ್ ಸಲೆ ಗಾಡಿಗಮುನ್ನತಿಕ್ಕೆಗಂ (ಧರ್ಮಾಮೃ. ೬-೦೬೬); ಹೃದಯದಲಂಪು ಪೋಗೆ ಪದೆದೀಂಟದೆ ಮುನ್ನಮೆ ತನ್ನ ಕಂಪಿನಿಂ ಮದದ ಪೊದಟ್ಕೆಯಂ ಮನಕೆ ಮಾಟ್ಟ ವಿನೂತನವೃಕ್ಷಧಾನ್ಯಸಾರದೆ ಮಧುಪಾಳಿಗಳ್ ಸುಟಿಗೊಳುತ್ತಿರಲ್ (ಶಾಂತೀಶ್ವ. ೩-೦೦). ೩. ಕಾಂತಿ; ಶೋಭೆ: ಕ್ಷಾಯಿಕದೃಷ್ಟಿ ತುಷ್ಟಿಯೊಳೊಡಂಬಡೆ ಜೈನವಚೋಮೃತಂ ಮುಖಶ್ರೀಯ ಪೊದಟ್ಕೆಯಂ ಬೆಳಗೆ (ಶಾಂತಿಪು. ೦-೯); ಕೊರಳ ಜನ್ನಿವರಂ ಪೊದಟ್ಕೆಯನೆಯ್ದೆ ಮಿಂಚುವ ಬೆಳ್ಳಿಯುತ್ತರಿಗೆ ಭಾಸುರಮಪ್ಪ ತೇಜಮಗುರ್ವ್ವ ಪರ್ವಿರೆ (ಧರ್ಮಾಮೃ. ೯-೨೦೬). ೪. ರಾಶಿ ; ಸಮೂಹ ; ಗುಂಪು : ಚದುರ ಪೊದಟ್ಕೆ ಸಂಪದದ ಬೊಂಬುಳಿ ಸತ್ಕದ ಬಿತ್ತರಂ . . . ಕೂಡೆ ಭೋಗದ ಕಣಿಯಾಯ್ತು ತಾಂ ತನಗೆ ಪೌರಜನಂ (ಜಗಪಾ. ೯-೦೦೬); ನಿಮಿರ್ಕೆವೆತ್ತ ತಣ್ಗದಿರ ಪೊದಟ್ಕೆಯಂ ಕಱೆವ ನವ್ಯಕಲಾವಿಸರಂ ಮಸುಳ್ದು ಮೂಸಿದ ಮುಕುರಂಬೊಲಂತೆ ವಿಗತಪ್ರಭನಾಯ್ತಮೃತಾಂಶುಮಂಡಲಂ (ಶಾಕುಮಾ. ೪-೬೭). ೫. ಹರ್ಷ ; ಉತ್ಸಾಹ : 'ಪೊದಟ್ಕೆವಡೆ' ಪರಾ. **ಪೊದಳ್ಕೆ** : ೨. ರಾಜ್ಯಸಂಪದದ ಪೊದಳ್ಕೆ ತೇಜದ ತೆರಳ್ಕೆ ವಿರೋಧಿಯ ಬಾಳ್ಕೆ ತನ್ನದೆಂಬುದನೆ ಪೆರ್ಮ್ಮೆಯಂ ತಳೆದನೋ ನ್ರಿಪರೊಳು ನ್ರಿಪತೃಲಶಾಂತರಂ (ಎಳ. VIII. ನಾಗರ. ೦೫೯-೦೩ ; 1159) ; ತಂನೆಸೆವ ರಾಯಮುರಾರಿವೆಸರು ಪೊದಳ್ಕೆಯಿಂ ನೆಲೆಗೊಳಿ ಸೋವಿದೇವಪೃಥಿವೀಪತಿ ವಿಕ್ರಮಮಂ ನಿಮಿರ್ಚ್ಚಿದಂ (ಜಾಸಶ. ೩೦-೦೦ ; 1170) ; ಪರಿವ ಪಡಂಗು ಬಲ್ದೆರೆಯ ಸಾಲ ಬೆಡಂಗು ನವೀನವಿದ್ರುಮೋತ್ಕರದ ಪೊದಳ್ಕೆ ಶುಕ್ತಿಜದಳುರ್ಕೆ . . . ಚೆಲ್ವ ಬಿತ್ತರಿಸೆ ಪೊಡರ್ಪುವೆತ್ತು ಬಗೆಗೊಂಡುಮು ಪೂರ್ಣಗುಣಂ ಮಹಾರ್ಣವಂ (ಕಶಕಂ. ೦-೩೯). ೬. ಎದ್ದು ಕಾಣುವಿಕೆ; ನಿಚ್ಚಳವಾಗಿ ತೋರುವಿಕೆ ; ಪ್ರಕಟವಾಗುವಿಕೆ : (ಕ). ೭. ರಭಸ; ವೇಗ; ತ್ವರೆ: ಪ್ರಲಂಬಕಂಧರಂ ದುರಾಸದಂ ಪೊದಳ್ಕೆಯಿಂದೆ ಗೋಕುಳಕ್ಕೆ . . . ಬರ್ಪನಂ ಭಯಂಗೊಳುತ್ತೆ ಗೋಪಗೋಪಿಯರ್ಕಳಾಕ್ಷಣಂ ಕೊರಲ್ಚಿದರ್ (ಶಿಷ್ಟಪು. ೩-೩-೦೮೩). [ಪೊದಟ್ + —ಕೆ]

Δ**ಪೊದಟ್ಕೆ₂** 'ಪೊದಕ್ಕೆ₁' ನೋ.

ಪೊದಟ್ಕೆಗುಂದು (ಕ್ರಿ). ಹೆಚ್ಚಳವು ಕಡಮೆಯಾಗು ; ಅಧಿಕವು ಕುಗ್ಗು : ಘನಾಘನಸ್ವನಂ ಪೊದಟ್ಕೆ ಪೊದಟ್ಕೆಗುಂದಿದುದು ವಾಃಕಣ ಸಂತತಿ ಸೋರೆ ಸೋರ್ದಡಂಗಿದುದೆಳಗಾರೊಳಾ ಸಕಳಚಾತಕಪೋತತೃಷಾ ವಿಷಾದನಂ (ಕಂಪ್ರಭು. ೯-೧೬). [ಪೊದಟ್ಕೆ$_1$+ಕುಂದು$_1$]

ಪೊದಟ್ಕೆವಡೆ, ಪೊದಳ್ಕೆವಡೆ (ಕ್ರಿ). ೧. ಹೆಚ್ಚಳವನ್ನು ಪಡೆ ; ಅಧಿಕವನ್ನು ಹೊಂದು ; ಸಮೃದ್ಧವಾಗು : ಆ ರಾಜಕುಮಾರನನೇಕ ಕಲಾಕಲಾಪಪ್ರವೀಣನಾಗಿ ಯುವರಾಜಲಕ್ಷ್ಮಿಯೊಡನೆ ವಿಸ್ತಾರಮಂ ಕೈಕೊಂಡ ವಕ್ಷಸ್ಥಲಮುಂ ಬಂಧುಜನಮನೋರಥಂಗಳೊಡನೆ ಪೊದಟ್ಕೆವಡೆದ[ಜಾಣಾಂ. ವೆತ್ತ] ವೃತ್ತೋರುಸ್ತಂಭಂಗಳುಂ...ಆತ್ಮೀಯಯೌವನಪ್ರಾದುರ್ಭಾವಮಂ ಪ್ರಕಟಂ ಮಾಡೆ (ಆದಿಪು. ೩-೯ ಪ) ; ಪೊದಟ್ಕೆವಡೆದ ಸದ್ಧರ್ಮಪೀಯೂಷ ಮಹಾಪ್ರವಾಹಂ ವಂಗಮಂಡಲದೊಳ್ ತರಂಗಂಗೊಂಡು ಕಳಿಂಗಮಂಡಲ ದೊಳ್ ಮಡುಗಟ್ಟಿ ನಿಂದು . . . ಪೆರ್ಮೆಗಾಶೀರ್ವಮಾದುದು (ಆಪಂಪು. ೦೪-೧೬ ಪ). **ಪೊದಳ್ಕೆವಡೆ** : ೨. ಉತ್ಸಾಹವನ್ನು ಹೊಂದು ; ಉಬ್ಬು ; ಹರ್ಷಗೊಳ್ಳು : ಜೈನಸಮಯಾಂಬುಧಿಕೀರ್ತ್ತಿಸುಧಾಂಶುವಿಂ ಪೊದಳ್ಕೆವಡೆಯೆ ರೇಚಿರಾಜನೆಸೆದಂ ಜಸದಿಂ ವಸುಧೃಕಬಾಂಧವಂ (ಎಕ. VII, ಶಿಕಾರಿ. ೦೯೭-೩೨; 1182 ?). [ಪೊದಟ್ಕೆ$_1$+ಪಡೆ$_1$]

ಪೊದಟ್ಕೆವೆಱು (ಕ್ರಿ). ೧. = ಪೊದಟ್ಕೆವಡೆ ೧ : ಆ ರಾಜಕುಮಾರ ನನೇಕಕಲಾಕಲಾಪಪ್ರವೀಣನಾಗಿ ಯುವರಾಜಲಕ್ಷ್ಮಿಯೊಡನೆ ವಿಸ್ತಾರಮಂ ಕೈಕೊಂಡ ವಕ್ಷಸ್ಥಲಮುಂ ಬಂಧುಜನಮನೋರಥಂಗಳೊಡನೆ ಪೊದಟ್ಕೆ ವೆತ್ತ[ಜಾಣಾಂ. ವಡೆದ] ವೃತ್ತೋರುಸ್ತಂಭಗಳುಂ . . . ಆತ್ಮೀಯಯೌವನ ಪ್ರಾದುರ್ಭಾವಮಂ ಪ್ರಕಟಂ ಮಾಡೆ (ಆದಿಪು. ೩-೯ ಪ). ೨. ಶೋಭೆ ಯನ್ನು ಹೊಂದು ; ಮನೋಹರತೆಯನ್ನು ಪಡೆ : ಪೊಳೆವಲರ್ಗಣ್ಣ ನೀಳ್ದ ನಿಡುಪುರ್ವಿನ ಸುಕೃದಮರ್ಕೆವೆತ್ತ ಕುಂತಳದ ಪೊದಟ್ಕೆವೆತ್ತಸಿಯ ಬಾಸೆಯ . . . ಅಂಗನಾವಳಿ ನೆರೆದಂದು ಬಂದುದು ಮನೋಜನ ತಂತ್ರದಪೋಲ್ ವಿಲಾಸದಿಂ (ಧರ್ಮಾಮೃ. ೦೩-೦೬). [ಪೊದಟ್ಕೆ$_1$ + ಪೆಱು$_1$]

ಪೊದಟ್ಟು (ಕ್ರಿ). ಉಂಟುಮಾಡು ; ಒದಗಿಸು : ತಾಂ ಮೊಗಂಗುಡೆ ಪದವೆತ್ತು ಚುಂಬಿಸಿ ಭಯಂಗೆಯ ಬಲ್ವೆಣಸಂ ಪೊದಟ್ಟು ನಾಣ್ಗಡೆ ನೆರೆ ದೂಢಯುಂ ಪ್ರಥಮಸಂಗಮದೊಳ್ ಕುವರಂ ಮರುಳ್ಚಿದಂ (ಕಂಪ್ರಭು. ೬-೮೨). [ಪೊದಟ್ಟ್ + — ಚು$_1$]

ಪೊದಟ್ತರ್ (ಕ್ರಿ). ಪೂರ್ಣವಾಗು ; ತುಂಬು : ಬೀಗಿ ಬೆನ್ನಿಂ ಬರಿವನ್ನಂ ಕೊರ್ವಿ ಮುಂಗಾಲ್ ಗಡಿಯೆನೆ ಕಡುಗೆಚ್ಚಲ್ ಪೊದಟ್ಟಂದು ವತ್ಸೋತ್ಕರ ವೆಲ್ಲಂ ಬಾಲವಂಬಂ ಕಱೆಯೆ(?) ಬಹಳರೋಮಂಥಘೋನಾವಳೀ ಪಾಂಡುರವಕ್ತ್ರಂ ಮಾಹಿಷೀಸಂತತಿ ವಿಪಿನಭವಂ ಕಣ್ಗಗುರ್ವಾಯ್ತು ಕಾರೊಳ್ (ಕಂಪ್ರಭು. ೯-೧೮). [ಪೊದಟ್ + ತರ್]

ಪೊದಿಕೆ 'ಪೊದಕ್ಕೆ$_1$' ನೋ.

ಪೊದಿಸು 'ಪೊದೆಯಿಸು' ನೋ.

ಪೊದ್ದೆ$_1$, ಹೊದ್ದಿ$_1$, ಹೊದ್ದೆ$_1$ (ಕ್ರಿ). ಪೊದ್ದ, ಹೊದ್ದ (ಭೂತಕೃ). **ಪೊದ್ದು$_2$, ಹೊದ್ದು$_2$**(ಭೂತನ್ನೂ). ೧. (ವಸ್ತ್ರ ಮೊದಲಾದುವನ್ನು) ಧರಿಸಿಕೊಳ್ಳು : ಆತನ ರತ್ನಕಂಬಳಮಂ ಪೊದೆದು ತನ್ನ ಮನೆಗೆ ಬರ್ಪೊನಂ ಕಂಡು (ಪಜ್ಜಾಣಾ. ೩೯-೨); ಒಂದಂಚೆಯಂ ಪೊದೆಯೊ[ದೊಂ] ದಂಚೆಯನುಟ್ಟು ನಿನ್ನಿರವಿದೇನಂಭೋಜಪತ್ರೇಕ್ಷಣೇ (ಪಂಪಭಾ. ೬-೬೬); ಚಂದ್ರಾಪೀಡದೇವಂ . . . ಪಾವಿನೆರೆಯ ದೊರೆಯ ದುಕೂಲಮಂ ಪೊದೆದು (ಶಾದಂಶಾ. ೩೪೦); ಕರ್ಮುಗಿಲಾಗಸವಂ ಮುಸುಂಕೆ ಕಾಲನೆಂಬ ಕಾಳರಕ್ಕಸಂ ಪೊದೆದ ನೀಲಪಟದೊಂದು ಪಾಂಗಿನೊಳೊಪ್ಪಿದುದು (ಶಾಪುಸ್ತ. ೩-೪). ೨. ಕವಿ; ಆವರಿಸು ; ಮುತ್ತು : ಶ್ರೀದುರಿತಾ ಭೂದ್ವೈಷಮಾನ್ಮೀಟ್ಟಲಱ್ ಪೊದೆದಜ್ಞಾನಶೈಲೇಂದ್ರಮಾನ್ ಪೋಟ್ಟುರ ವಿಂಥ್ಯಾತ್ವಪ್ರಮೂಢಸ್ಥಿರತರನೃಪನಾನ್ ಮೆಟ್ಟಿ (ಎಕ. II, ೦೨-೦; ಸು. ೨೦೦). **ಹೊದ್ದಿ$_1$** : ೧. ಒಡಲಿಗ್ಹಾಕುವ ನೀನೆ ಉಡಲು ಹೊದಿಯಲು ವಸ್ತ್ರ ಕೊಡುವವ ನೀನೆ (ಕುಕಂಪ. ೦-೦೧೬-೨); ನಿವೀತಂ, ಪ್ರಾವೃತಂ-೨ ಹೊದಿಯುವ ಬಟ್ಟೆ (ಸಿಂಹಾಸಿ. ೨೦೩). **ಹೊದ್ದೆ$_1$** : ೧. "ಹೊದೆ—ಆಚ್ಛಾದನೇ, ಶರಕೋಶೇ ಚ (ಬತ್ತಳಿಕೆ)" (ಶಮಭಾ); ಆವನಾದರೇನು ಶ್ರೀಮಹಾ ದೇವನ ನೆನೆವವನ ಬಾಯ ತಂಬುಲವ ಮೆಲುವೆ ಬೀಳುಡಿಗೆಯ ಹೊದೆವೆ (ಪಸಪ. ೩೬೩) ; ಮುನೀಂದ್ರನಿವೇದಕಂಗೆ ತಾಂ ಹೊದೆದುದನಿತ್ತು (ಅಪಂಪು. ೯೮-೪); ಒದೆದನಳಲನು ರೋಮಹರುಷವ ಹೊದೆದು ಹೊರೆ ಹೆಚ್ಚಿದನು (ಶುಪ್ರಾಕ್ರೀ. ೦೯-೦೦); ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದೆದು ಹಿಂಡನಗಲಿದ ಗಜದಂತೆ ಇಪ್ಪವರ ಕಂಡು ನಂಬುವದು (ಸರ್ವಜ್ಞ. ೩೦೩).

ಪೊದ್ದುಕೊಳ್, ಹೊದ್ದುಕೊಳ್ = (ವಸ್ತ್ರ ಮೊದಲಾದುವನ್ನು) ಧರಿಸಿಕೊಳ್ಳು : ಪೊದ್ದು[ಜಾಣಾಂ. ತಾಳ್ದು, ಪೊರ್ದಿ, ಪೊರ್ದು]ಕೊಳ್ವೊಡೆ ಧವಳೋತ್ತರೀಯಂ . . . ಒಲ್ದು ನೋಳ್ಪೊಡೆ ರಜತಾದ್ರಿಯೊಂದೆನಿಸಿ ತೋಱುತು ಮಿಱುದ ಚಂದ್ರಿಕೋಜ್ವಳಂ (ಗಿರಿಕ. ೯-೦೦೬) ; ಪ್ರಾವಾರಃ —ಹೊದ್ದುಕೊಂಬ ಸೀರೆ (ಪಾಸಕಾ. ೬).

[ದೇ. ॥ ತಮಿ. ಪೊತಿ ; ಮಲ. ಪೊತಿ, ಪೊತ್ತು, ಪುತ ; ತುಳು. ಪೊದೆ, ಪೊದಿ, ಪೊದ್ದಿ, ಪೊದ್ದು ; ಕೊಡ. ಪೊದ, ಪೊದಿ, ಪೊದೆ; ತೆಲು. ಪೊದುಗು, ಪೊದುವು]

ಪೊದ್ದೆ$_2$, ಹೊದ್ದೆ$_2$ (ನಾ). ೧. ಬಾಣಗಳನ್ನಿಡುವ ಕೋಶ ; ಮೂಡಿಗೆ ; ಬತ್ತಳಿಕೆ : ಪದವಿಲ್ಲಂ ನನೆಯಂಬಿನ ಪೊದೆಯಂ ಪಿಡಿದಿರದ ಪದದೊಳಾ ರ್ನೋಡಿದೊಡಂ ಮದನಂಗಂ ಮಾನಿನಿ ದಶವದನಂಗಂ ರೂಪಭೇದ ಮೇನಾದಪುದೇ (ಪಂಶಾಸಾ. ೯-೧೬೬); ಪೊದೆಯೊಳಗಿಂದಮುರ್ಚುವೆಡೆಯಲ್ಲಿ ಸರಲ್ ದಿಟಮೊಂದು . . . ಇರ್ದಿರ್ದರಂ ನಡುವಲ್ಲಿ ಲಕ್ಕಮೆಂಬುದನೆನೆ ಬಿಲ್ಲ ಬಿನ್ನಣಮನಾ ರಣದೊಳ್ ಮೆಱೆದಂ ಯುವಾಧಿಪಂ (ಕಂಪ್ರಭು. ೬-೩೬); ಬರಯುಗಳನಿಸಲನಂಗಂಗರಲಂಬಿನ ಪೊದೆಯನಖಳಪನದೇವತೆಯರ್ ವಿರಚಿಸಿ ನೀಡಲ್ ಬಂದಂತಿರಲೆಸೆವರ್ ಪುಷ್ಪಮಾಲಿಕಾಧಾರಿಣಿಯರ್ (ಪುಷ್ಪಭಾ. ೨-೭೯); ಕೆಲದೊಳಿಳಿಪಿದಂಬಿನ ಪೊದೆಯ ಸಾರ್ಚಿ ನಿಲಿಸಿದ ಶರಾಸನದ (ರಾಜಶೇ. ೬-೦೦ ಪ). ೨. ಗಿಡಮರಗಳು ಒತ್ತಾಗಿರುವ ಸ್ಥಳ ; ಹೊದರು; ಮೆಳೆ : ಮೆಯ್ಯುಱೆದು ಲಜ್ಜೆಯಂ ತೊಱೆದು ಪೊದೆಯೊಳರ್ದ ಪೆಣ್ಗಾರಡಿ ಯಂ ಕಂಡು ಕಾತರತನದಿಂ ಪಿಡಿದದಂ ನೆರೆಯಲ್ (ಧರ್ಮಪ ೩-೯೫ ಪ); ಕೆಂಬೂತಂ ಪಾರಿತು ಪೊದೆಯಿಂದಿತ್ತ (ಅಪಕೇ. ೪೯-೬); ಕುಬ್ಜಕ, ಮಲ್ಲಿಗೆ, ಕುರಂಟಕ, ನವಮಾಲಿಕೆ ಮೊದಲಾದವುಗಳ ಪೊದೆಗಳಿದ್ದವು (ಜಾಣಾ.೩೬). ೩. ರಾಶಿ ; ಹೊರೆ ; ಗುಂಪು : ಕರವಾಳ ಕೂರ್ಪಂ ನೋಡಲೆಂದು ಬಾಯ್ದೂರೆ ನಿಲೆ ಕುಮಾರಂ ಪೊಯ್ದೊಡೆ ಕೈಯಳವಿದಾರ ಕೈಯಳವಿಯೆನಲ್ ನೆಯ್ದಿಲ ಕಾವಿನ ಪೊದೆಯಂ ಪೊಯ್ದಂತೊರ್ಮೊದಲೆ ಪಱಿದುದಾ ವಂಶ ವನಂ (ಪಂಶಾಪಾ. ೯-೨೩); ಸುಮ್ಮಾನದಲಿ ತಱಗೆಲೆಯ ಪೊದೆಯೊಳು ಮೌನ ದಲಿ ಉರಗೇಂದ್ರನಿದ್ದನು ಬಲಿದ ನಿದ್ರೆಯಲಿ (ಪಳಕ. ೫-೨೬). ೪. (ಮನೆ ಮುಂತಾದುವುಗಳ) ಹೊದಿಕೆ ; ಛಾವಣಿ : (ಕ). ೫. ಕಟ್ಟು ; ಕಂತೆ ; ಹೊರೆ : (ಕ). ೬. (ಆಲಂ) ಗೋಜು ; ಸಿಕ್ಕು : ಈ ಪೊದೆಯನ್ನು ಬಿಡಿಸಿದರೆ ಹಿಂದೂಧರ್ಮದ ಮೂಲತತ್ವಗಳು ದೊರೆಯು ತ್ತವೆ (ಪಂಕಸು. ೧೩೬). **ಹೊದ್ದೆ** : ೧. "ಹೊದೆ—ಆಚ್ಛಾದನೇ, ಶರ ಕೋಶೇ ಚ (ಬತ್ತಳಿಕೆ)" (ಶಮಭಾ); "ಡೊಣೆ ಬತ್ತಳಿಕೆ ಮೂಡಿಗೆಯು ಮೆನಲ್ ಹೊದೆಯು" (ಶಬ್ದಮಂ. ೯೯) ; ಕಯ್ಯ[ಂ]ಬು ತವಲು ದೇವಂಣಗೆ ಬಿನ್ನಪಂಗೆಯ್ಯಲು ಅವ್ವನ ಹೊದೆಯಂ ಕಾರುಣ್ಯಗೆಯ್ಯಲು ಮಹಾಪ್ರಸಾದ ಎಂನುತ್ತೆ ಕಾಳಗಕ್ಕೆ ಹಱಿದು (ಪ್ರಭಂ. ೦೯೩೨, ೩೨-೩ ; ಸು. 1125) ; ಭೀಷ್ಮನಿತ್ತಲು . . . ಬಿಗಿದ ಹೊದೆಗಳ ಹಱಿದು

ಬಿಲ್ಲಿಂದುಗುಳಿಸಿದನಂಬುಗಳನು (ಕುಸ್ಯಾಲೀ. ೯-೭) ; ಎಸುವ ಹೊದೆಯಿಂದೆ ತೆಗೆದೆಸುವ ಬೊಬ್ಬಿಱಿದು ತೊಟ್ಟೆಸುವ . . . ಚಾಪಕಲಾಪ್ರವೀಣರೆಚ್ಚಾಡಿದರ್ (ಶಿಪಿಪು. ೪೦-೭). ೩. ದುಷ್ಕೃತಂಗಳ ಹೊದೆಯಂ ನೆಱೆ ಮುಂದು ಮಾಡಿ ಕೈವಿಡದೆಯುಂ . . . ತಿರ್ದುವ ಚದುರಂ ಬಲ್ಲವರೆ ಬಲ್ಲರ್ (ಪಸ್ತಸಂ. ೯-೬೩). ೪. ಹೊಱಗೆ ಹಾಸಿದ ಹಸಿಯ ತೊಗಲ ಹೊದೆಯ ಮಾಣದೊಱಲಿ ಕೂಗಿಡುವ ನಾನಾಪ್ರಾಣಿವರ್ಗಮುಂ ಕೊಱೆವ ಕೊಚ್ಚುವ ತಱಿವ (ಹಸಕಾ. ೦೦-೩೦). [< ಪೊದೆ$_1$./ತಮಿ. ಪುತೈ, ಪೊತಿ, ಪೊತೈ; ಮಲ. ಪುತ, ಪೊತಿ ; ತೆಲು. ಪೊದ, ಪೊದಿ]

ಪೊದೆಗಟ್ಟು (ಕ್ರಿ). ಬತ್ತಳಿಕೆಯನ್ನು ರಚಿಸು : ಹೊಸ ಪೊ[ಜಾಕಾಂ. ಹೊ]ದೆಗಟ್ಟುವಂಬುಗಳ ಕುಪ್ಪಿಯನಾವರಿಪಾರ್ದ್ರಜಾಳಮಂ ಪಸರಿಪ . . . ಪುಳಿಂದಸಂಕುಳದ ಪರ್ಕಣದಿಂದೆಸೆದತ್ತು ಪಕ್ಕಣಂ (ಸಂದ್ರಪು. ೩-೩೯).

[ಪೊದೆ$_2$ + ಕಟ್ಟು$_1$]

ಪೊದೆಗೆದಱು, ಹೊದೆಗೆದಱು (ಕ್ರಿ). (ದಟ್ಟವಾಗಿರುವುದನ್ನು) ವ್ಯಾಪಿಸುವಂತೆ ಮಾಡು.—ಎಲ್ಲೆಡೆಗೆ ಹರಡು : ಮಾಲೆವೂವಂ ನೆಗಪಿ ಸೊಗಯಿಕುಂ ನೀಱರೊಳ್ ಪುಷ್ಪಚಾಪಂ ಗುಱಿಯೇಸಂ ತೋಱಲಂಬಂ ಪೊದೆಗೆದಱಿದವೋಲ್ ಪುಷ್ಪಲಾವೀಕದಂಬಂ (ಸಂಗಾಪು. ೦-೦೨೦) ; ಮಾಲೆಗಾರ್ತಿಯರೆತ್ತಿದ ಬೆಲೆವೂವಿನ ಸರಂಗಳನಲರಂಬಂಗೆ ಪೊದೆಗೆದಱುವಂತೆ ಕೆದಱಿ (ಸಂದ್ರಪು. ೬-೪ ಪ) ; ಪೊದೆಗೆದಱಿರ್ದ ಪೂಗಣೆಯ ಕೆಂಗಱಿಯಂತೆ . . . ಪೂತ ಚೂತದ ಕಿಱುಗೊಂಬಿನೊಳ್ ನಿಱಿದಳಿರ್ ಮೆಱೆದತ್ತು (ಅಪಂಪು. ೬-೬೨). **ಹೊದೆಗೆದಱು** : ಸುಶರ್ಮ ಶಲ್ಯರು ಸರಳ ಹೊದೆಗೆದಱೆ ಮೊನೆಗಣೆಯನಳವಡಿಸೆ ಗುರು . . . ಸೇನಾವನಧಿ ಗರ್ಜಿಸಲಾಯ್ತು ಸಂಕುಲಸಮರಸೌರಂಭ (ಕುಸ್ಯಾಲೀ. ೩-೩) ; ಬಾಣವ್ರಾತವನು ಹೊದೆಗೆದಱಿ ಹೊಸ ಹೊಗರೆದ್ದನಡಿಗಡಿಗೆ (ಕುಸ್ಯಾಳ. ೦೩-೨೨).

[ಪೊದೆ$_2$ + ಕೆದಱು$_1$ (< ಕೆದಱ್$_1$)]

ಪೊದೆದುಂಬು (ಕ್ರಿ). (ಬಾಣಗಳು) ಬತ್ತಳಿಕೆಯಲ್ಲಿ ತುಂಬಿರು.—ಭರ್ತಿಯಾಗಿರು : ಸಕ್ಕಿದ ಖಂಡೆಯಂ ಬಿಗಿದ ಬಿಲ್ ಪೊದೆದುಂಬಿದ ಬೋಳೆಯಂಬು . . . ಬಾಸಿಗದಿಂ ಮೆಱೆದತ್ತು ಸಪ್ತಿಗಳ್ (ಪಕಪಿ. ೨-೯೬).

[ಪೊದೆ$_2$ + ತುಂಬು$_1$]

ಪೊದೆಯಿಸು, ಪೊಚ್ಚು, ಪೊದಯಿಸು, ಪೊದಿಸು, ಪೊದೆಸು, ಹೊಚ್ಚು$_1$, ಹೊದಸು, ಹೊದಿಯಿಸು, ಹೊದಿಸು, ಹೊದುಸು, ಹೊದೆಸು, ಹೊದ್ದಿಸು$_2$ (ಕ್ರಿ). ೧. ಮುಚ್ಚು ; ಆಚ್ಛಾದಿಸು : "ಪೊದೆಯಿಸು—ಆಚ್ಛಾದನೇ" (ಕಮಧಾ) ; ಬಿಸರುಹದಳಂಗಳಿಂ ಪೊದೆಯಿಸಿರ್ದ ಹಿಮಗೃಹಮನವನಿಪಾಲಂ ಕಂಡಂ (ಕಾಮಾಕಾ. ೨೦೯) ; ಪೊದೆಯಿಸಿದತ್ತೊ ಚಿತ್ರಪಟದಿಂ . . . ಎಂಬಿನಂ ತಳಿರ ಪೂವಿನ ತುಂಬಿಯ ಕಾಯ ಪಣ್ಣ ಬಣ್ಣದಿನೆಸೆದತ್ತು . . . ಬನಂ (ಪಗಪಿ. ೦೦-೩೩) ; ಆ ವಿಷಯದೊಳೊಪ್ಪುವ ಕಳಮಾವಳಿ ನಳನಳಿಸಿ ಬೆಳೆದು ಪಸುರೇಱಿ ಲಸದ್ಭೂವನಿತೆಗೆ ಧಾತ್ರಂ ಪರಿಭಾವಿಸಿ ಪೊದೆಯಿಸಿದ ಹರಿತಪಟದಂತಿರ್ಕುಂ (ಗಿಂಕ. ೨-೦೨). ೨. ಮುಸುಕು; ಕವಿ; ಆವರಿಸು : ಮುಕುಂದನ . . . ಹಸ್ತದ ಕಾಂಚನವಾರಿಯಂತ್ರಮಂಕದಱ ನಿಮಿರ್ಕೆವೆತ್ತ ಘುಸೃಣೋದಕಧಾರೆ ನವಾರುಣಾಂಶುವೋಲ್ ಪೊದೆಯಿಸಿತಂಬುಜಾನನೆಯರೆಂಬ ನವಾಂಬುಜಿನೀಕದಂಬಮಂ (ಪಗಪಿ. ೦೪-೦೦೬). ೩. ವ್ಯಾಪಿಸುವಂತೆ ಮಾಡು ; ಹರಡು : ಸುಗುಡುತನಮಂ ಪುದಿದ ಚತುರಂಗದತ್ತ ಚದುರಂ ಪೊದೆಯಿಸುತೆ ಕೊಯ್ಲೆವಿಂಡರಂ ಪಣೆದದಿಂ ಮಣಿಯಿಸುತ್ತೆ (ಪಪ್ರಕಾ. ೬-೬೮). **ಪೊಚ್ಚು** : ೧. ಗುರುಪಾದೋದಕದಿಂದಲೆರೆದು ವಸ್ತ್ರವ ಪೊಚ್ಚಿ ವರವಿಭೂತಿಯನು ಫಾಲದೊಳಿಟ್ಟು ಮುದದಿ (ಸ್ಕುಲಾರ. ೦೬೪-೨). **ಪೊದಯಿಸು** : ೧. ಪೆಱತೊಂದೆಡೆಯೊಳ್ ಸಹಕಾರರಸದಿಂ ತೊಯ್ದರನೇಱಿಲ ತಳಿರ್ಗಳಿಂ ಪೊದಯಿಸಿದ ಕುಳಿರ್ವ ಕಾವಣಂಗಳುಮಂ . . . ನೋಡುತ್ತಂ ಪೋಗೆ (ಕಾದಂಉ. ೨೦೯) ; ಪೊದಯಿಸುವಂತೆ ಚಿತ್ರಪಟದಿಂ ತನುವಂ ಬಹುರತ್ನ ಕಾಂತಿಗಳ್ ಪುದಿಯೆ ಲತಾಂಗಿ . . . ತಳೆದಳ್ ಪುಳಕಾಂಕುರಂಗಳಂ (ಮಲ್ಲಿಪು. ೪-೬೪) ; ಪೆರ್ಮರದ ನಟ್ಟೆಗೊಂಬಿನ ಕವಲ್ದಲೆಯೊಳಿಟ್ಟ ಗೂಡುಗಳೊಳ್ ಗೂಡುಗೊಂಡಿರ್ದ ಕುಱುಳೆವಱಿಗಳ್ಗೆ ಕುಟುಂಕನಿಕ್ಕಿ ಕಡುಗಂದಿತನದಿಂ ಕೋಡಗಱಿಯ ತುಱುಗಲೊಳ್ ಪೊದ[ಜಾಕಾಂ. ದೆ]ಯಿಸೆ (ಸಂದ್ರಪು. ೮-೪ ಪ) ; ಸಪುರಬಿಳಿದಂ ಬಿಗಿದುಡಿಸಿ ಬೆಳಗುವ ದುಕೂಲಮಂ ಪೊದಯಿಸಿ (ಸಂಬರ. ೦೦-೪೬). **ಪೊದಿಸು** : ೧. ಪರಿಮಳೋದಕದಿಂದೆ ಮಹಮಜ್ಜನಕ್ಕೆಱೆದು ವರದುಕೂಲಮನುಡಿಸಿ ಪೊದಿಸುತಂ (ತಿರುಕ. ದೇ. ೬-೨೦) ; ಕೋಮಳಸಿತಪಕ್ಷಮಂ ಪೊದಿಸಿ ಲಾಲಿಪ ಹಂಸೆಯ ಪುತ್ರ ಮೋಹಮಂ ಲಳನೆ ಸಮಂತು ಕಂಡು ಮಿಗೆ ಚಿಂತಿಸಿದಳ್ ಸುಕುಮಾರಲಾಭಮಂ (ದಶಕು. ೦-೩೬); ವಾಯಸಪ್ರತತಿ ಗಱಿಗಳಂ ಪೊದಿಸಿ ಮಗ್ಗುಲೊಳಿಟ್ಟು ಕೋಗಿಲೆಯ ಮಱಿಗಳಂ ಮೈಯೊಳ್ ಪುದುಗಿಕೊಂಡು ಮಱುಕದಿಂದೈದೆ ಪಾಲಿಸುತಿರ್ದವು (ಕೈಪಿಭಾ. ೨೮-೪). **ಪೊದೆಸು** : ೧. ಬಿಳಿಯ ಪಟ್ಟಾವಳಿಯ ಪೊಸ ಸಪುರಮಂ ಪೊದೆಸಿ (ಅಪೀರ. ದೇ. ೬೩-೯); ದುಗುಲವ ಪೊದೆಸುತ ನಿಱಿಯ ಸುಗಿದನು (ಕರಸ. ೪೦-೬೦). **ಹೊಚ್ಚು$_1$** : ೧. ಶರಪಂಜರವ ಖಳನೆಚ್ಚು ಶರದಲಿ ಕೈಟಭಾರಿಯ ಹೊಚ್ಚಿ ಬೊಬ್ಬಿರಿಯುತ್ತಲಿಂತೆಂದನು ಸರೋಷದಲಿ (ಕೋಗಯ. ೦೦-೩೯) ; ಮೈಮೇಲೆ ಮೆತ್ತಗಾಗಿ ಹೊದಕೆಯೊಂದನ್ನು ಹೊಚ್ಚಿ ತಾಯಿ ದೀಪವನ್ನಾರಿಸಿದಳು (ಕಮಸ. ೦೦೯) ; ಬಡವರಾದವರು ಮನೆಗಳಿಗೆ ಹುಲ್ಲು ಹೊಚ್ಚುತ್ತಾರೆ (ಮುಂಬಯಿ. ೪-೦೦೮). ೨. ಬಿಚ್ಚಿದವು ಕವಚಮಂ ಕಚ್ಚಿದವು ಖಂಡಮಂ . . . ಮೈಯೊಳಗೆ ಹೊಚ್ಚಿದವು ಹೊಗರಲಗು ಮಚ್ಚಿದವು ನೆಣವಸೆಯನು (ಕೈಪಿಭಾ. ೦೩-೦೮) ; ಮುಗಿಲ ಹೊಚ್ಚಿತು ಕಪ್ಪುಕಂಬಳಿಯ ಕತ್ತಲು (ಸಂಸು. ೦೪-೦೩). ೪. (ಕದ ಮುಂತಾದುವನ್ನು) ಮುಚ್ಚು ಆ ಉಷ್ಣದಿವಸದೊಂದಿರುಳು . . . ಪಡಿಯ ಹೊಚ್ಚಿದೊಡುಬ್ಬೆ ತಾಗುವುದೆಂದು ಮಡದಿಯೆಡದ ತೋಳೊಳೊಱಗಿ ಬಡಗಾಳಿಗೆ ಮೈಯೊಡ್ಡಿ ನೃಪಾತ್ಮಜನಡಸಿದ ನಿದ್ರೆಯೊಳಿರಲು (ಪೇಪುಸಂ. ೯-೩೬). **ಹೊದಸು** : ೨. ರೋಷಜ್ವಾಲೆ ಹೊದಸಿತು ವದನವನು ಕಣ್ಣಾಲಿ ಕಾಹೇಱಿದವು ಪಾರ್ಥಂಗೆ (ಕುಸ್ಯಾಳ. ೦೬-೦). **ಹೊದಿಯಿಸು** : ೧. ಭರದಿಂದ ಹೊದಿಯಿಸಲೊಡನಾ ಪೀತಾಂಬರವೆಳೆದಳಿರಂತಾಗೆ ಸುರುಚಿರಮಪ್ಪ ತಮಾಲಲತಿಕೆಯೆನೆ ಸುದತಿ ಕಣ್ಗೊಪ್ಪವಡೆದಳು (ಪೇಪುಸಂ. ೨೩-೦೬೯). **ಹೊದಿಸು** : ೧. ಕಂದನಂ ನೋಡುತ್ತ . . . ತಾಯಿ ಮೇಲ್ಸೆಱಗಿಂದ ಹೊದಿಸುತ ತೆಱೆವುತಂ ಹೊದಿಸುತ್ತ ತೆಱೆವುತ್ತ . . . ಸಲ್ಲಣಿಸುವಳು (ಪಸಪು. ೦೩-೨೦); ಗುಡಿಲಂ ಹೊದಿಸಿ ಹಸಮಾಡುವ ಕಳನ ಕೆತ್ತುವ . . . ಕುಡಿಯರುಗಳೊಳಗೊಪ್ಪಮಂ ಪಡೆದುದು (ಸಪ್ಯುಕೌ. ೦-೨೯); ಬಿಸಿನೀರಿಂದೆ ಮೆಯ್ದೊಳೆದು ಪಕ್ಕೆಯೊಳೊಱಗಿಸಿ ವಸ್ತ್ರದಿಂ ಮುಚ್ಚಿ ಹೊದಿಸಿ (ಸೋಹಕ. ೦೦-೪೬); ಅನೆಗಳಿಗೆ ಬಟ್ಟೆಯನ್ನು ಹೊದಿಸಿರುತ್ತಾರೆ (ಕ್ರಪಾಇ. II. ೦೬೬) ; ಹಚ್ಚಡ ಹೊದಿಸಿದರೆ ಹುಚ್ಚು ಹೋದೀತೇ ? (ಗಾರ). ೨. ಅದಿರ್ದ ಖಡುಗದ ಕಾಂತಿ ಸೂರ್ಯನ ಹೊದಿಸಿದುದು (ಕುಸ್ಯಾಸ್ತ್ರೋ. ೦೨-೬) ; ಸರಳು ಗಗನವ ಹೊದಿಸಿದವು (ಕುಸ್ಯಾಳ. ೪-೩೨). ೫. ಆವೃತವಾಗು; ಮುಸುಕಲ್ಪಡು : ದಿಗುಜಾಲವಂಬಿನ ಹೊರಳಿಯಲಿ ಹೊದಿಸಿದುದೆನಲು ಕವಿದೆಚ್ಚನಾ ಪಾರ್ಥ (ಕುಸ್ಯಾಳ. ೨೦-೨೦). ೬. ಆವರಿಸುವಂತೆ ಮಾಡು; ಕವಿಯಿಸು : ಹಿಳುಕ ಹೊದಿಸಿದನೆಖಲದೆಸೆಗಳ ನಿಲುಕಲರಿದೆನೆ (ಕುಸ್ಯಾಸ್ತ್ರೋ. ೦೩-೩೩) ; ಪಂಚಪಾಂಡವರಡಸಿದರು ಹೊದಿಸಿದರು ಕಣೆಯಲಿ ರವಿಸುತನ ರಥವ (ಕುಸ್ಯಾಳ. ೦೩-೩೬). ೭. ಬಳಸು; ಸುತ್ತುವರಿ: ಆ ಕುತದ್ವೀಪವದಱಿಂತುದಿಗೆ ತಿರುಗಿಹುದಿಕ್ಷುವಿಕ್ಷುವ ಹೊದಿಸಿಹುದು ತಾ ಕ್ರೌಂಚದ್ವೀಪವದು

(ಸಂಭವ. ೦೦-೬). **ಹೊದುಸು :** ೧. ಛತ್ರದ ಮನೆಯ ಹೊದುಸುವದಕ್ಕೆ ೬ (ಎಕ. VII, ಶಿವಮೊ. ೭೦-೬೨ ; 1431). **ಹೊದೆಸು :** ೧. ಕೋಮಲಾಂಗಿಯರಿಗೆ ರಾಯ ತಾ ಹೊದೆದಿದ್ದ ಕ್ಷೌಮವಸ್ತ್ರವ ಹೊದೆಸಿದನು (ಭರತ. ೩೦-೦೦೯). ೨. ಹೃದಯ ಕಳವಳಿಸಿದವು ಕಂಗಳ ಹೊದೆಸಿದವು ನಯನಾಂಬು (ತೊರರಾ. ೨-೨-೨೭). **ಹೊದ್ದಿಸು₂ :** ೧. ಜಿಪ್ಪೆಯಾಹಾರವ ಜಂಗಮವನೂಡಿಸುವೆ [ತ್ವ]ಚದಾಹಾರವ ಜಂಗಮಕ್ಕೆ ಹೊದ್ದಿಸುವೆ (ಬಸವ. ೪೨೯) ; ಮಂಚದ ಮೇಲೆ ಮಲಗಿಸಿ ಹೊದ್ದಿಸಿ ಬಾಗಿಲು ಹಾಕಿಕೊಂಡು ಬಾ (ತಂಗಾಳ್ಯ. ೨೫೯). [ಪೊದೆ₁ + — ಇಸು₃]

ಪೊದೆವಡು (ಕ್ರಿ). ಹೊದಿಸಲ್ಪಡು : ಪೊದೆವಟ್ಟ ಪಟ್ಟಾವಳಿಗಳಾನೆ ದೊವಲೆಸೆವ ಪುಲಿಸಮ್ಮವು (ನೇರಮ. ೦-೩೦). [ಪೊದೆ₁ + ಪಡು₁]

ಪೊದೆಸೀರೆ (ನಾ). ವಸ್ತ್ರದ ಹೊದೆಯುವ ಭಾಗ ; ಮೇಲುಸೆರಗು : ಅತಿವೇಗದೆ ಸಾರೆವಂದು ನೀರೇರುಹನೇತ್ರನಿರ್ದಿರವನೀಕ್ಷಿಸಿ ಗದ್ಗದ ಕಂಠನಾಗಿ ಕಣ್ಣೀರೆತ[ರೊಗೆ]ದುಣ್ಮೆ ಕಣ್ಗಡೆಗಳಿಂ ಪೊದೆಸೀರೆಯಿನೊತ್ತು ತೊಂದು ಕಾಸರಮನೆಯ್ದಿದರ್ (ಮಹಾಸೇ. ೦೬-೫೩). [ಪೊದೆ₁ + ಸೀರೆ₂]

ಪೊದೆಸು 'ಪೊದೆಯಿಸು' ನೋ.

ಪೊದ್ದ 'ಪೊದೆ₁' ಪರಾ.

ಪೊದ್ದಿಗೆ 'ಪೊರ್ದುಗೆ' ನೋ.

ಪೊದ್ದಿಸು 'ಪೊರ್ದಿಸು' ನೋ.

ಪೊದ್ದು₁ 'ಪೊರ್ದು' ನೋ.

ಪೊದ್ದು₂ 'ಪೊದೆ₁' ಪರಾ.

ಪೊನ್, ಪೊಂ, ಪೊನ್ನು, ಹೊಂ, ಹೊನ್, ಹೊನ್ನು₁ (ನಾ). ೧. ಕಬ್ಬಿಣ, ತಾಮ್ರ, ಚಿನ್ನ ಮುಂತಾದ ಖನಿಜ ; ಲೋಹ : 'ಕರ್ಪೊನ್', 'ಚೆಂಬೊನ್' ಪರಾ. ೨. ಬಂಗಾರ ; ಚಿನ್ನ ; ಸ್ವರ್ಣ : "ಪೊನ್ ಸ್ವರ್ಣಂ" (ಕರ್ಣಾನಿ. ೨) ; ಪಿರಿಯ ಪೊನ್ನ ತಳಿಗೆಯು ಮುಚ್ಚಮಪ್ಪಡ್ಡವಣಿಗೆಯುಮನಿಟ್ಟು . . . ತಾನೆ ಬಡ್ಡಿಸಲ್ (ವಡ್ಡಾರಾ. ೬೬-೦೨) ; ಇ[ದ] ಕಾದುಡಿದೋ[ಂ]ಗೆ ವಾರಣಾಸಿಯೊಳ್ಸಾಸಿರಕವಿಲೆಯ[ಂ] ಕೋಡುಂ ಕೊಳಗುಮಂ ಪೊನ್ನೊಳ್ಕಟ್ಟಿಸಿ ದಾನಂಗೊಟ್ಟ [ಫ]ಲಮಕ್ಕು (ಸೌಇಇ. XI—i, ೩೯-೦೯ ; 925) ; ಗಗನಗಜಕ್ಕಿಕ್ಕಿದ ಪೊನ್ನ ಗಂಟೆಯೆರಡೆ ನಲುಮಂಬರಾಂಭೋನಿಧಿಯೊಳ್ ನೆಗೆದುರಿವೌರ್ವಾನಲದುರ್ಬುಗಳೆನಲುಂ ನೆಗೆದುವಹಿಮಹಿಮಕರಬಿಂಬಂ (ಅದಿಪು. ೬-೩೨) ; ಉದಕಂ . . . ಪೊನ್ನ ಬಣ್ಣದ ಮಣ್ಣೊಳ್ ಪರಲಾಗಿ ಕಂಪೆಸೆವ ಮಣ್ಣೊಳ್ ಕೈಪೆಯಾಗಿರ್ಕುಂ (ಲೋಕೋಪ. ೩-೬) ; ಪೊನ್ನ ನೇಗಿಲಲುತ್ತು ಗುಳ್ಳದ ಬೀಜವಂ ನೆಱೆ ಬಿತ್ತುವಂದದಿ . . . ಲಿಂಗಪರಾಙ್ಮುಖರನಾಗಳು ಭಜಿಸಿ ಭವಬಂಧನಕ್ಕೊಳಗಾಗದೆಂತಿಹನು (ಬಸಪು. ೬೦-೩೦) ; ಮಿಸುಪ ಪವಳದ ಪುತ್ತಳಿ ಪೊನ್ನ ಪೊವಕೆ ರಂಜಿಸಿತು ಚಾವಡಿಯ ಚೌರಸದೆಡೆಯೊಳು (ಕೈಮಿಣಾ. ೦೭-೨೩). ೩. (ಹಿಂದೆ ಚಲಾವಣೆಯಲ್ಲಿದ್ದ) ಹತ್ತು ಹಣ ಬೆಲೆಯುಳ್ಳ ಒಂದು ಚಿನ್ನದ ನಾಣ್ಯ ; ಗದ್ಯಾಣ : "ಪತ್ತುಂ ಪಣದಿಂ ಪೊನ್ನಕ್ಕುಂ" (ಪ್ರವಹಾ. ೯-೨೩) ; ಈ ಪೊನ್ನೆನ್ದು ಕೊಡಗೆಗಾಗಿ ಅಳಿದೊನ್ . . . ಪಞ್ಚಮಹಾಪಾತಕವಕ್ಕು (ಎಕ. III, ತಿರುಮ. ೧೦೩-೬; ಸು. 750); ಕವಿವರರುಂ ಪೆಂಡವಾಸಧೊಳ್ಪೆಂಡಿರ್ಕಳುಂ ವಿಮಾನಂಗಳ ಮುಂದಾಡುತ್ತಂ ದಮ್ಮಮುಮಂ ಪೊನ್ನುಮಂ ಕೇಳಿ ಮಾಡಿ ಮುಂದೆ ಸೂಸುತ್ತಮೊಯ್ದುದಂ . . . ಕಂಡು (ವಡ್ಡಾರಾ. ೬೯-೨); ನಿತ್ಯದಾನಕ್ಕೆ ದೇವಸಬಳದ ಪದಿನೆಂಟುಕೋಟಿ ಪೊನ್ನುಮನಿತ್ತು (ಪಂಪಭಾ. ೨-೬೯ ಪ). ೪. ಸಂಪತ್ತು ; ಐಶ್ವರ್ಯ ; ನಿಧಿ : ಅರಸರ ದುಣ್ಡಿಗೆವೆರಸಿಟ್ಟ ಪೊನ್ನ ಕೆಯ್ದೆಱೆಯಪ್ಪಂಗೊಪ್ಪಿಸಿಮೆನ್ದು ತನ್ದು (ಎಕ. III, ಪಂಪಪ. ೩೬-೦೩; ಸು. 900); ಸಿಡಿಲ್ಮೊಡೆದವೊಲಟ್ಟಿ ಮುಟ್ಟಿ ಕಡಿದಿಕ್ಕಿದುದಾದೆಡರಂ ನಿರಂತರಂ ಕಡಿಕಡಿದಿತ್ತ ಪೊನ್ನ[ಪಾತಾಂ. ನ್ನೆ] ಬುಧಮಾಗಧವಂದಿಜನಕ್ಕೆ ಕೊಟ್ಟ ಕೋ[ಡೆ]ಡಱದೆ ಬೇಡಿ[ಮೋ]ಡಿಮಿದು ಚಾಗದ ಬೀರದ ಮಾತು ಕರ್ಣನಾ (ಪಂಪಭಾ. ೧-೯೯); ಅರಸನುಂ . . . ಪೂಜಿಸಿ ಬಂಡಾರದ ಪೊನ್ನೆಲ್ಲಮಂ ಮುಂದೆ ರಾಸಿಮಾಡುವುದುಂ (ಧರ್ಮಾಮೃ. ೩-೨೦೫); ನಿನ್ನ ನೀನಱಿ ಸಾಕು ಮಾಯೆಯ ಗನ್ನಗತಕವ ಗೆಲುವೆ ಕನಸಿನ ಪೊನ್ನ ಕಾಣದೆ ದುಃಖಪಡುವರೆ (ಕುಪ್ಯಾರ್ಪ್ರೋ. ೭-೨೬). ೫. ಹಣ ; ಧನ ; ದುಡ್ಡು : ಈತಂಗೆ ಪೊಱಗೆ ನಾಡಿಲ್ಲೊಳಗೆ ಭಂಡಾರಮಿಲ್ಲೀತಂಗೆ ಪೊನ್ನೆತ್ತಣಿಂ ಬರ್ಪುದಿದನಾರಯ್ವೆಂ (ಧರ್ಮಾಮೃ. ೨-೦೦೬). ೬. (ಚಿನ್ನದ) ಒಡವೆ : ಆಭರಣ : ತೊಟ್ಟ ಪೊನ್, ಡಿಜ್‌ನಾದ ಮಿಡಿದು, ಮೇಲ್ ವಾಯ್ದು ಪೊನಲಿಟ್ಟು ಪರಿದು . . . ಮಲೆದನ್ (ಅಂತಿಗೊ. ೭-೦೦೦). ೭. ಚಿನ್ನದ ಬಣ್ಣ ; ಹೊಂಬಣ್ಣ ; ಹಳದಿಬಣ್ಣ : 'ಪೊಂದಳಿರ್', 'ಪೊನ್ನೀರ್' ಪರಾ. **ಪೊಂ :** ೨. ಅರಸುಮಗಂ ಗಡ ಕಲಿ ಗಡ ಪಿರಿದೀವಂ ಗಡ ಬಟಿಕ್ಕ ಜೈನಂ ಗಡೆನಲ್ದರಣಿಪತಿ ಕೀರ್ತಿದೇವಂ ನಿರುತಂ ಪೊಂ ಕಮ್ಮಿತಾದುದೆನಿಸಿದನಿಳೆಯೊಳ್ (ಸಮಪ. ೦-೪೭). ೩. ಕೋಟಿ ಪೊಂಗೆ ಘಂಟೆಯಲುಗುವ ಕಿಱುಕುಳಬೊಜಂಗರುಮಂ . . . ನೋಡಿ (ಪಂಪಭಾ. ೯-೬೭ ಪ); ಬುಧರಿಗೆ ಸಕಲರಿಗೆ ಪೊಂಗಳನು ಭೂಷಣವಸ್ತ್ರ ರತ್ನವನೊಲಿದು ದಾನವ ಮಾಡಿದನು ಮಮಕಾರಭೂಪಾಲ (ಪ್ರಭುಲೀ. ೩-೦೨). ೪. ಪೊಂಗೆಱಗುವ ದೀಪವರ್ತಿ ಮಣ್ಗೆಱಗುಗುಮೆ (ಸಮಪ. ೯-೨೫). **ಪೊನ್ನು :** ೩. ದಶಪಣದಿಂದಂ ಪೊನ್ನುಮೊಂದು ತಪ್ಪದು (ಪ್ರವಹಾ. ಅಮಬಂಧ. ೬-೩೮). ೫. 'ಪೊಂಬಡೆ' ಪರಾ. ೭. 'ಪೊಂಗೇದಗೆ', 'ಪೊಂಬುಲಿ' ಪರಾ. ೮. ಶ್ರೇಷ್ಠವಾದುದು ; ಅತ್ಯುತ್ತಮವಾದುದು : 'ಪೊಂಬಸಿಱು' ಪರಾ. **ಹೊಂ :** ೨. 'ಹೊಂಗಂಟೆ', 'ಹೊಂಗಡಗ' ಪರಾ. ೩. ಅಕ್ಕಸಾಲೆ ನಾಗೋಜಂ ಹೊಂಗೆ ವೀಸ × × × [ಲೆ]ಕ್ಕದಿಂ ಕೊಟ್ಟ ಪವಣಾಯಮನಾ ಕೊತ್ತಳಿಗ [ಮಾ]ಡಿಸಿದ ಬಸದಿ ದೇವಾಲ್ಯಕ್ಕೆ . . . ಧಾರಾಪೂರ್ವ್ವಕಂ ಮಾಡಿಕೊಟ್ಟ ದಂಣಾಯ ಹೊಂಗೆ ವೀಸ ಲೆಕ್ಕ . . . ಪಚ್ಚುಕುಡುವುದು (ಕೊಲ್ಲಾಶಾ. ೩೯-೦೩ ; 1153) ; ಪಿಂಗದಾಸ್ಥಾನದಲ್ಲಿ ಮಿಸುನಿಯ ಹೊಂಗಳೊಡನೊಡನುಕ್ಕಿ ಹೊಱವಡಲಂಗಣದಲದ್ಭುತರಸಂ ಮಿಗೆ ಮೂಡುತ್ತಿರೆ (ಬಸಪು. ೨೩-೩೫); ನೋಟ ಸವಿಸುಖಕೆ ಕೋಟಿ ಹೊಂ ಬೆಲೆಯಲ್ಲ ಕೂಟಕೆ ನೋಟವನು ಸಾರೆ ವ್ಯಸನಕ್ಕೆ ಬೇಟವೆ ಮೊದಲು (ಸರ್ವಜ್ಞ. ೧೬೧೦). ೭. 'ಹೊಂಗಾಜು', 'ಹೊಂಗೇದಗೆ' ಪರಾ. **ಹೊನ್ :** ೨. "ಹೇಮ, ಸ್ವರ್ಣಂ . . . ಕರ್ಬುರಂ, ತಪನೀಯಂ—ಈ ೨೫ ಹೊನ್ (ಪೊನ್)" (ಹಲಾಯು. ೨೯-೦೯); ಸಹಸ್ರಕವಿಲೆಯಂ ಕೋಡುವಂ ಕೊಳಗುವಂ [ಹೊನ್ನ]ಲುಂ ಬೆಳ್ಳಿಯ(ಂ)ಲುಂ ಕಟ್ಟಿಸಿ (ಸೌಇಇ. XI—i, ೬೬-೦೯; 1033); ಕವಡಿಕೆಯುಂ ಕಾಚುಂ ಸಲ್ಗುಮೆ ಹೊನ್ನವೊಲೆಲ್ಲಿಯಾದೊಡಂ (ಸಮಪ. ೩-೦೨); ಧರೆಯಱಿಯೆ ಹೊನ್ನ ಮೆಯ್ಯಾಂತಿರುತಿರ್ದುಂ ಲಜ್ಜೆಯಿಲ್ಲ ತನಗೆಂದು ಕರಂ ಸುರುಚಿರಧವಳಿಮದಿಂ ಸುರಗಿರಿಯಂ ಹಿಮನಗದ ಚೆಲ್ವು ನಗದೇಕಿರ್ಕುಂ (ಗಿಂಕ. ೧-೩೭). ೩. ಕೊಠಾರದ ದಿವಾಕರದಂಡನಾಯಕರು ತಮ್ಮ ಕೈಯ ಹೊನ್ನ ಕೊಟ್ಟು (ಇಅ. IV, ೨೭೬-೬೬; 1184). ೭. 'ಹೊಂದಾವರೆ' ಪರಾ. ೮. 'ಹೊನ್ನುಡಿ' ಪರಾ. **ಹೊನ್ನು₁ :** ೨. "ಗೈರಿಕಂ ಕರ್ಬುರಂ . . . ಸ್ವರ್ಣಮೆನೆ ಹೊನ್ನಿಂಗೆ ನಾಮಮಕ್ಕು" (ಮಂಗರಾ. ೩೦-೯); ಗಿರಿಯ ಮುತ್ತಿದ ಮಿಂಚುಬುಳುವಿನ ಹೊರಳಿಯಂತಿರೆ ಹೊನ್ನ ಬರಹದ ಸರಳು ಮೆಱೆದವು (ಕುಪ್ಯಾರ್ಪ್ರೋ. ೩-೨೬); ಹೊನ್ನಿನ ಹೊಳೆವ ಕಠಾರಿಯ ಮೊನೆಮೊಳೆ ಬೆನ್ನೊಳು ತಲೆದೋಱಿಸಲು (ಮೋಹತ. ೧೨ ೬೬); ಹೊನ್ನ ತಂಬಿಗೆ ಗಿಂಡಿ ಪನ್ನೀರ ಚಂಬಿನಲಿ ಪೂರ್ಣಜಲವ ಕೊಂಡು . . . ಕನ್ನಿಕೆಯರು ರಾಜಿಸುವರು (ಕಂನವಿ. ೩-೩೩). ೩. ಈ ಗೂಳಿಯ ಕೊಂದ ಪಾತಕಕ್ಕೆ

ಹದಿನೆಂಟು ಲಕ್ಷ ಹೊನ್ನಿನಲ್ಲಿ ಗೂಳಿಯ ಮಾಡಿ . . . ಕೊಟ್ಟಲ್ಲಿ ಈ ಪಾಪ ಹೋಹುದೇ (ಅವತಂ. ೦೫೭-೭೨೦); ಪೂರ್ವ್ವಾಯವ ಪೂರ್ವ್ವಾಯದಿಂ ಬಹಾಯ ಹೊಂನು ಸಹಿತವಾಗಿ . . . ತಾಮ್ರಶಾಸನಮಂ ಕೊಟ್ಟರು (ಮೈಲಿ. ೦೯೪೦, ೦-೭೨; 13ನೆಯ ಶತ ?); ತಾಳಜಂಘನು . . . ಹೊನ್ನ ನೊಂದನು ಭೂಮಿದೇವಿಯ ಕೆನ್ನೆಯಲಿ ತಾನಿಡದೆ ಭೂಸುರರುನ್ನತಿಯನೇ ಬಯಸುತಿಪ್ಪನು (ಸಂಭವ. ೨೫-೫೬); ಆಲಕಟ್ಟಲೆಗೆ ಬರಸಿ ಕೊಟ್ಟಿಹ ಪ್ರಮಾಣ ರೇಖೆ ೧೫೫ ಹೊಂನಿಗೆ (ಎಳ. VII, ತಿವಮೊ. ೭೦-೨೬; 1431). ೪. ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು ಎಂದು ನೆನೆನೆನೆದು (ಮಹಾಬೇ. ಬ. ೦೯-೫೦); ಹೊನ್ನುಳ್ಳ ಹೊಲೆಯರುತ್ತಮರು (ಪುರಂದ. ೦-೦೪೯-೪); ಮಣ್ಣು ಬಿಟ್ಟವ ದೈವ ಹೊನ್ನು ಬಿಟ್ಟವ ದೈವ (ಸರ್ವಜ್ಞ. ೦೨೭೯). ೫. ಮನೆಯಲ್ಲಿ ಮಂದಿ ಬಹಳ ಹೊನ್ನಿನ ವೆಚ್ಚ ಘನವೆಂದು (ಕಂಪಿ. ೬-೦೪೬). ೭. 'ಹೊನ್ನೀರು' ಪರಾ. ೮. 'ಹೊನ್ನುನಡೆ', 'ಹೊನ್ನುನುಡಿ' ಪರಾ. ೯. ಪ್ರೀತಿಪಾತ್ರರಾದವರನ್ನು ಮುದ್ದಿನಿಂದ ಕರೆಯುವ ಮಾತು: ಪುಲ್ಲಶರಾತ್ಮಸಂಭವನ ಕಣ್ಗೆಸೆಮದು ಹೊಲ್ಲೆಹ ಮೃಗವೆನ್ನ ಹೊನ್ನೆ (ಪೋಹತ. ೦೯-೫೫). 'ಚಿನ್ನ$_1$' ಪರಾ.

ಪೊನ್ನ ಪೂ, ಹೊನ್ನ ಹೂವು = ಹೂವಿನ ಆಕಾರದಲ್ಲಿ ಚಿನ್ನದಿಂದ ಮಾಡುವ ಒಂದು ಬಗೆಯ ಕರ್ಣಾಭರಣ: ಆ ಕಿವಿಗಳಲಿ ಪೊನ್ನಪೂ [ಪಾಠಾಂ. ಹೊನ್ನ ಹೂ]ಗಳನಾ ಕಮಳಲೋಚನೆಗೆ ಕೀಲಿಸಲು (ಬಸಪು. ೪-೫೯); ಚಿನ್ನಾಗಿ ಲಾಲಿಸು ಚೆಲ್ವಡರಿದ ನಿನ್ನ ಕರ್ಣಾಂತರದಲಿ ಮೆಱೆವ ಹೊನ್ನ ಹೂವಿಗೆ ಪರಿಮಳ ಬರೆ ಪೇಳುವೆ ಬನ್ನಣೆಗಾರ್ತಿ ಚಿತ್ತೈಸು (ಪೋಹತ. ೨೯-೨); ವಾಲೆ ಮೂಗುತಿ ಹೊನ್ನ ಹೂವು (ವಿಧಾಕ್ಯ. ೦೦-೩). 'ಚಿನ್ನ ಪೂ' ಪರಾ. **ಪೊನ್ನ ಬೆಟ್ಟು** = ಚಿನ್ನದ ಪರ್ವತ; ಮೇರು: ಪೊನ್ನ ಬೆಟ್ಟು ಕೈಯಂ ಕಾಲಂ ತಳೆದಿರ್ದುದೆಂಬಿನಂ ಕಣ್ಗೊಳಿಸಿದನಂತವರ ಪಕ್ಕದೊಳ್ ಪಲಗಣ್ಣಂ (ಕಬ್ಬಿಗಾ. ೦೬೩). **ಪೊನ್ನ ಮಱೆ, ಹೊನ್ನ ಮಳೆ** = ಚಿನ್ನದ ಮಳೆ; ಸುವರ್ಣವೃಷ್ಟಿ: ವಸುಮತಿವೆಸರನ್ವರ್ಥಂ ವಸುಧೆಗೆನಲ್ಕಱೆದು ಪೊನ್ನ ಮಱೆಯಂ ದಾನವ್ಯಸನಿ ದಶರಥನದೇಂ ಪೊಸಯಿಸಿದನೊ ಚೌಲೋಪನಯನಮಹಿಮೋತ್ಸವಮಂ (ಪಂಡಿಪು. ೩-೦೪೨); ದಾಸನಂತೆ ತವನಿಧಿಯ ಬೇಡುವನಲ್ಲ ಚೋಳನಂತೆ ಹೊನ್ನ ಮಳೆಯ ಕಱೆಸೆಂಬವನಲ್ಲ (ಬಸವ. ೭೬೦). **ಪೊನ್ನ ಮೈಯವನು** = ಹಿರಣ್ಯಗರ್ಭ; ಬ್ರಹ್ಮ: ಪೊನ್ನ ಮೈಯವನು ನಮ್ಮಿಬ್ಬರಿಗೆ ಪೂರ್ವಾನುಕೂಲಗೈದಂ ಸೃಜಿಸಲು (ಪವಮೋ. ೨೯-೦೦). **ಪೊನ್ನರ್ಧ** = ಗದ್ಯಾಣದ ಅರ್ಧಭಾಗ: "ಭರಣಂ = ಪೊನ್ನರ್ಧಂ" (ಕಾಶಕ್ಯ. ೭೩). **ಪೊನ್ನವಣ, ಹೊನ್ನವಣ** = ಚಿನ್ನದ ಒಂದು ಬಗೆಯ ನಾಣ್ಯ: ಗಳಂತಿಗೆಯಲು ಪುಟ್ಟಿದಾಯ ದೊಳಗೆ ಲೊಕ್ಕಿಯು ನವಿಲುಮಾಗಿ ಪೊನ್ನವಣ ಚಿ(ಂ)ನ್ನಮನಾಯ್ದು ಕಳೆದು (ಸೌಇಇ. IX-1, ೦೬೪-೨೮; 1098); ದೀವಿಗೆಗೆ ಗಾಣ ಒಂದು ಅಶೇಷನಕರ ಹೊನ್ನವಣ ಹೇಱಿಂಗೆ ೧೦೦ ಎಲೆಯಂ ಬಿಟ್ಟರು (ಕಇಲ. ೪೩-೬೦-೦೭; 11 ನೆಯ ಶತ). **ಪೊನ್ನುಳ್ಳವಂ, ಹೊನ್ನುಳ್ಳವಂ** = ಧನಿಕ: ಪೊನ್ನುಳ್ಳವನೆ ಕುಲೀನಂ ಚಿನ್ನಂ ಕಲಿ ಸತ್ಯವಾದಿಯೆನಿಸುಗುಂ (ಕಾಪ್ಯಾಪ. ೬೦); "ಧನವಾನ್, ಅಸ್ತಿಮಾನ್-ಈ ೨ ಹೊನ್ನುಳ್ಳವಂ" (ಹಲಾಯು. ೬೦-೨೦೪). **ಹೊನ್ನ ಕನಸು** = ಹೊಂಗನಸು; ಸುಂದರವಾದ ಕಲ್ಪನೆ: ಗುರು ದೇವನ ಹೊನ್ನ ಕನಸನ್ನು ಹುಡಿಗುಟ್ಟಿ . . . ಮೆರೆಯುತ್ತಿರುವ ನೀನು ಪರಮಪಾತಕಿ (ತುಂಗಭ. ೪೨). **ಹೊನ್ನುತಾ ಗುಬ್ಬಿಯಾಟ** = ಕೈಯ ಬೆರಳುಗಳನ್ನು ಮುಚ್ಚಿ, ಬಿಡುವ ಆಟ; ಯಾರಾದರೂ ಏನಾದರೂ ಕೊಟ್ಟರೆ ಅದನ್ನು ಅಂಗೈಯಲ್ಲಿ ಹಿಡಿದುಕೊಳ್ಳುವ ರೀತಿ ಕೈಬೆರಳು ಗಳನ್ನು ಚಲಿಸುವ ಆಟ; ೩ ತಾ ತಾ ಗುಬ್ಬಿ, ಹೊನ್ನ ತಾ ಗುಬ್ಬಿ, ರನ್ನ ತಾ ಗುಬ್ಬಿ, ತಾ ತಾ ಗುಬ್ಬಿ, ಚಿನ್ನ ತಾ ಗುಬ್ಬಿ, ಹೊನ್ನ ತಾ ಗುಬ್ಬಿ, ತಾ ತಾ ಗುಬ್ಬಿ-ಎಂಬುದು ಮಗುವನ್ನು ಆಡಿಸುವಾಗ ಹೇಳುವ ಮಾತುಗಳು. ಗುಬ್ಬಚ್ಚಿಯು ಚಿನ್ನವನ್ನು ತಂದುಕೊಡ ಬೇಕೆಂಬುದನ್ನು ತಿಳಿಸುವ ಆಟ: ಕೈಸನ್ನೆಯಿಂದಾ ಮುಕ್ತಿಬಾಲೆಯಂ ಕೆಳೆತನಕೆ ಕರೆವಂತೆ ಹೊನ್ನ ತಾ ಗುಬ್ಬಿಯಾಟಂಗಳಾಡಿ (ಕಬಪು. ೩-೫೯). **ಹೊನ್ನ ದಾರ** = ಚಿನ್ನದ ಒಡ್ಯಾಣ; ಕಾಂಚೀದಾಮ: ಹೊನ್ನ ದಾರ ಉತ್ತಮ ಮಿಸುನಿಯ ಗಂಟೆಸರಗಳಿಂದ ಮತ್ತೇಭಯಾನೆಯೊಪ್ಪಿದಳು (ಕಂಪಿ. ೯-೭೦). **ಹೊನ್ನ ಹುಳು, ಹೊನ್ನೆಹುಳ** = ಮಿಂಚುಹುಳು; ಮಿಣುಕುಹುಳು: ಹೊನ್ನ ಹುಳು[ಪಾಠಾಂ. ಳ]ವ ಕಂಡು ನರಿ ತನ್ನ ಬಾಲವ ಹುಣ್ಣ ಮಾಡಿಕೊಂಡರೆ ಹೋಲಬಹುದೆ (ಬಸವ. ೨೬೭); ಹೊನ್ನೆ ಹುಳಗಳು ಹಾರಾಡುತ್ತಿದ್ದಂತೆ ಕಾಣುವವು (ಮುಂಬಯಿ. ೬-೦೫೯); ಗಿಡ ಗಂಟಿ ಮೈಮನಕೆ ಹೊನ್ನೆಹುಳಗಳ ಮಿಣುಕು ಚಲಿಸುತಿಹ ದೀಪಾವಳಿ (ಪಂಮು. ೪೦-೦೦); ಹೊನ್ನೆಹುಳ! ಹೊನ್ನೆಹುಳ! ಬೆಳಕೇಕೆ? ನಿನ್ನ ಬೆಳಕೇಕೆ? (ರಕ್ತಾಕ್ಷ. ೬೩).

[ದೇ.॥ ತಮಿ. ಮಲ. ಪೊನ್; ತುಳು. ಪೊನ್ನು; ಕೊಡ. ಪೊನ್ನ್; ತೆಲು. ಪೊನ್ನು, ಹೊನ್ನು, ಹೊಂ]

ಪೊನಲ್, ಪೊನಲು, ಹೊನಲ್, ಹೊನಲಂ (ನಾ). ೧. (ನದಿಯ) ಪ್ರವಾಹ; ನೀರೋಟ: ಪರಚಕ್ರಭೂಪರಟ್ಟಿದ ಕರಿಗಳ್ಬಿಡುತಪ್ಪ ಮದದ ಪೊನಲಿಂದೆತ್ತಂ . . . ಕೆಸಱಕ್ಕುಂ (ಕಬಿಂಕ. ೩-೦೬೨); ಕಡಲ್ ಕಡಲಂ ಮುಟ್ಟಿ ತೆರಳ್ವ ನೆತ್ತರ ಪೊನಲ್ ಕಣ್ಗೊಂಡುದುಗ್ರಾಜಿಯೊಳ್ (ಪಂಪಭಾ. ೦೦-೯೦); ಎಸೆವುದು ವಳಿತ್ರಯಂಗಳಿನೆಸೆವಸಿಯಳ ತೆಳ್ವಸಿಱ್ . . . ತೆರೆಮಸಗಿದ ಲಾವಣ್ಯರಸದ ಪೊನಲೆಂಬಿನೆಗು (ಮಲ್ಲಿಪು. ೩-೬೬); ಪಱಿದು ಗುವ ಕರ್ಬುಗಳ ತನಿರಸದ ಪೊನಲಿಂದೆ ನೆಱೆಯೆ ಬೆಳೆದುವು ಪುರದ ಕಳಮಾದಿ ನಯದಿಂದೆ (ಪಂಬಿ. ೯-೦೯). **ಪೊನಲು**: ೧. ಪನ್ನೀರ ಪೊನಲೇ ಪ್ರವಾಹ ಸುದತಿಯರ ಕಡೆಗಣ್ಣ ಬೆಳಗು ಕುಡಿಮಿಂಚು (ಸೌಂದಪು. ೧೫-೬); ಅಲರ್ವುಡಿವೆರಸಿ ನಲವಿನಿಂದ ಪರಿವ ಪರಿಕಾಲ್ಗಳ ಪೊನಲಲ್ಲಿ ಕುಂಕುಮರಸದಿರವಿನಂತಿಹುದು ನೋಳ್ಪರಿಗೆ (ಕುರಾಪಾಂ. ೨-೨೫). **ಹೊನಲ್**: ೧. "ಹೂರಮೆಂದು ಹೊನಲ್" (ಕಸಸಾ. ೭೦-೫೯೪); "ಹೂರಮೆನಲ್ಕದುವೆ ಹೊನಲೆನಿಕ್ಕುಂ" (ಕಬಿಕಂ. ೨೫೪). **ಹೊನಲು**: ೧. ವೇದವನೋದಿದ ವಿಪ್ರರು ಹೊನಲ[ಪಾಠಾಂ.ರ]ಲ್ಲಿ ಹೋದ ಕೇಡ ನೋಡಿರೇ (ಬಸವ. ೫೬೭); ಉಣ್ಮುವ ಶಿವಾನಂದರಸದ ಹೊನಲೊಳ ಗದ್ದು ಈಸಾಡಿ (ಬಸರ. ೩-೦೧೯); ಎರಡು ಗೂಳಿಗಳಲ್ಲಿ ತಮ್ಮೊಳಗುರ ವಣಿಸಿ . . . ಕಾದುತ್ತಿರಲು ನೆತ್ತರ ಹೊನಲು ಪರಿವುತಿರೆ (ಬಸಪು. ೬೨-೨೦); ಕಡುಹಿನ ಕಾಳಕೂಟದ ನದಿಗೆ ನಂಜಿನ ಹೊನಲು ಬೆರೆಸಿದರೆ ವಾಳೆಯವೆ (ಕುಪ್ಯಾಸ. ೦೯-೬೦). ೨. ತೊರೆ; ಹೊಳೆ: ಹೊನಲು ನೂರೀ ಬಾಳ ಕಡಲನುಬ್ಬಿಸಲಿ (ಮುಂಕುಳ. ೬೯೪); ಆ ದೊಡ್ಡ ಕಂಬದ ಮನೆಯ ಅನತಿ ದೂರದಿಂದ ಒಂದು ಹೊನಲು ನಸುನಗುತ್ತ ಸದಾ ಸರ್ವದಾ ಹರಿಯುತ್ತಿ ರುತ್ತದೆ (ಕಂಬಹು. ೨).

ಪೊನಲಾಗು, ಹೊನಲಾಗು = ಪ್ರವಾಹದಂತೆ ಹರಿ; ಉಕ್ಕು; ಪ್ರವಹಿಸು: ಇಂದುವಬಿಂಬದಿಂದಮೃತಬಿಂದುಗಳೊಕ್ಕಪುವೆಂಬವೋಲ್ ಮಹಾಕ್ರಂದನವೇಗದಿಂದೆ ಸುರಿವಶ್ರುಜಲಂ ಪೊನಲಾಗೆ (ಭಕಕು. ೭-೬೯); ಆ ಭವನಪಂಕ್ತಿಗಳುರಿದು ಕರಗಿದವವನಿಯಲಿ ಹೊನಲಾಯ್ತು ಪುರಜನವೈದೆ ಬೆಱಗಾಗೆ (ಕುಪ್ಯಾಲ. ೯-೯೯); ಇದಿರಾಂತ ಭಟರ ಗೋಣ್ಗಳ ನರಿಯಲು...ಹೊನಲಾಯ್ತು ರುಧಿರಂ ಪ್ರವಾಹದಂತೆ (ಕೈಬ್ರಭಾ. ೬-೪೬).

[ದೇ.॥ ತಮಿ. ಪುನಲ್; ಮಲ. ಪುನಲ್, ಪುಣಲ್; ತುಳು. ಪುಣಲ್ = ತೇಲುವುದು]

ಪೊನಲಿಡು, ಹೊನಲಿಡು (ಕ್ರಿ). ೧. ಪ್ರವಾಹವಾಗು; ಉಕ್ಕಿ ಹರಿ;

ಪ್ರವಹಿಸು : ತಾಮ್ರಧ್ವಜಂ . . . ತೆಗೆದಿಸಲ್ ಬಱಸಿಡಿಲ್ಪೊಡೆದು ಗಿರಿ ಜರಿವಂತಿರೆ ನಿರ್ಜರೇಂದ್ರನ ಸೂನು ಪೊನಲಿಡಲ್ ಬಿಸಿಯ ನೆತ್ತರ್ಜೊಂಪಿಸುತೆ ಮೈಮಱೆದು ಬಿದ್ದನು (ಕೈಮಿಶಾ. ೨೫-೩೫) ; ತೊಟ್ಟ ಪೊನ್ ಡಿಜ್ ನಾದ ಮಿಡಿದು, ಮೇಲ್‌ವಾಯ್ದು ಪೊನಲಿಟ್ಟು ಪರಿದು . . . ಮಲೆದನ್ (ಅಂತಿಗೂ. ೬-೦೦೨). **ಹೊನಲಿಡು :** ೧. ಮಿದುಳ ಕೊಳ್ಗೆಸಱ ಹೊನಲಿಡುವ ರಕುತದ ಕಡಲೊಳಡಿಯಿಡಲು ಬಾರದೆಯಂತೆ ವಿಶ್ವಾಮಿತ್ರನು ಅಡವಿಯೊಳಗೆಯ್ದೆ ನಾನಾಭಯಂಕರವ ಸಾಲಿಡಲು (ಹತಕಾ. ೦೨-೩೪) ; ಬೆಳುನೊರೆ ಮಸಗಿ ನಸುಬಿಸಿರಕುತ ಹೊನಲಿಡಲು . . . ಹೆಣನ ಮೆದೆ ಹೇರಾಳ ರಂಜಿಸಿತು (ಕುಪ್ಯಾಪ್ರೋ. ೦೦-೬) ; ಹೇಳಲೇನದನವಳು ಮೇಘದ ಜಾಳಿಯಲಿ ಮಳೆಗಱೆದಳರುಣಜಲಾಳಿ ಹೊನಲಿಡಲಬ್ಬರಿಸುತಾಸುರವಿಕಾರದಲಿ (ತೊಕರಾ. ೦-೦೦-೦೭). ೨. ವ್ಯಾಪಿಸು ; ಹೊಮ್ಮು . ಘನರವುದ್ರದ ಘೋರವದನದ ಹೊನಲಿಡುವ ದಾಡೆಗಳ ಹೊಗರಿನ . . . ಮನದ ಕಡುಹಿನ ದೂತರೆದ್ದುದು (ಅಂಬಿಕಾ. ೪-೫೨). [ಪೊನಲ್ + ಇಡು$_1$]

ಪೊನಲು 'ಪೊನಲ್' ನೋ.

ಪೊನಲುವರಿ 'ಪೊನಲ್ವರಿ$_1$' ನೋ.

ಪೊನಲೇಳ್, ಹೊನಲೇಳು (ಕ್ರಿ). ಪ್ರವಾಹ ಬರು.-ಉಕ್ಕು: ಚಟ್ಟಮಂ ಇಱಿಯೆ ವಿರೋಧಿ ಬಿದ್ದ ಸಮರಾಂಗಣದೊಳು ಶ್ರೀ ಗವುಣ್ಡಭೂಮಿಯಿಂದೊಱೆದೊಱೆದ್ದುಕ್ಕುಯಿಂನು ಪೊನಲೇಳ್ವುದು ಭೂತಪಿಶಾಚ ಕೋಟಿಯುಂ ನೆಱೆ ತಣಿಯುಣ್ಡು (ಎಳ.XVI, ಸಕ್ಕಪಾ. ೯೮-೨೫ ; 1169). **ಹೊನಲೇಳು :** ಅರುಣಜಲ ಹೊನಲೆದ್ದು ಮಗ್ಗುಲಲುನವಣಿಸಲಾರಾಮ . . . ನೋಡಿದನೆನಗೆ ಕಡುಮುಳಿದು (ಕುಪ್ಯಾಕ. ೯-೩೨) ; ಅನಲಾಕ್ಷನಾಣೆ ನಾರದ ಕೇಳು ರೋಹಿತ ಹೊನಲೇಳೆ ಹೊಯ್ವೆ ಹೊಕ್ಕವನ (ಸೋಹತ. ೩೩-೨೦). [ಪೊನಲ್ + ಏಳ್$_1$ (< ಏಱು$_1$)]

ಪೊನಲ್ಗೊಳ್ (ಕ್ರಿ). ಪ್ರವಾಹವಾಗು : ಮುಕ್ತಿಸಾರಂ ಪೊನಲ್ಗೊಂಡುದೋ . . . ಶಿವಾಂಗರುಚಿ ನದಿಯಂಗವೆತ್ತುದೆನೆ ಸುರಗುಂಗೆ ಕಣ್ಗೆ ಮಂಗಳಮಾಗಿ ತೋರ್ದುದು (ಸಂದಿಮಾ.೦೦ -೨೪). [ಪೊನಲ್ + ಕೊಳ್$_1$]

ಪೊನಲ್ನಾಡು (ನಾ). ನದಿಗಳಿರುವ ದೇಶ.-ಪ್ರಾಂತ : ಮಲೆನಾಡೆ, ಪೊನಲ್‌ನಾಡೆ, ಬಯಲ ಪೊನ್‌ನಾಡೇ, ಪಲಕಾಲಮಾನಗಲ್ದಿರ್ದೆನ್ (ಅಕ್ಕಶ್ಯಾ. ೧೭-೩೫೩). [ಪೊನಲ್ + ನಾಡು]

ಪೊನಲ್ವರಿ$_1$, ಪೊನಲುವರಿ, ಹೊನಲುವರಿ (ಕ್ರಿ). ೧. = ಪೊನಲಿಡು ೧ : ಕೊರೆವೊಡೆ ಬೆಟ್ಟುಗಳ್ ಬಿರಿವುವುಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು (ಸಂಪಶಾ. ೪-೦೦೦) ; ಅಂತು ತಾಮ್ರಮಯಗುಹ್ಯಕಪ್ರತಿರೂಪಂ ಕಿಚ್ಚಿಂಗೆ ತೋಱೆದರಗು ಕರಗುವಂತೆ ಕರಗಿ ಪೊನಲ್ವರಿಯೆ (ಶಾಂತಿಪು. ೬-೨೯ ಪ) ; ನವಮಣಿಮರೀಚಿಮಂಜರಿ ಕವಿದು ಪೊನಲ್ವರಿದು ದೆಂಬಿನಂ . . . ಜಲಜಲಿಸಿ ಪರಿವ ಬರಿವೊನಲೆಸೆಗುಂ (ಪರ್ಧಪು. ೦೦-೦೪). ೨. ಹರಡು; ವ್ಯಾಪಿಸು; ಹೊಮ್ಮು : ಈ ನಾಟ್ಯರಸಂ ಸಮಸ್ತ ಸುರವೃಂದಾಧೀಶನಿಂದು ಪೊನಲ್ವರಿದತ್ತೆಂಬಿನಮಾಡುವಲ್ಲಿ ಮಕುಟವ್ಯಾಲಗ್ನ ರತ್ನಪ್ರಭಾಪರಿವೇಷಂ ಲಲಿತೇಂದ್ರಚಾಪರುಚಿಯುಂ ಮಾಡಿತ್ತು ದಿಕ್ಚಕ್ರದೊಳ್ (ಅಂಪು. ೬-೦೨೦). **ಪೊನಲುವರಿ :** ೧. ಆ ಮಾತಿಗೆ ಹರುಷಾಶ್ರುವಿನಿಂದ ಪೊನಲುವರಿಯೆ ಪುಳಕಾಂಬು ವನಿತೆ ಮಂಗಳಮಜ್ಜನವ ಮಾಡಿ ಸಿಂಗಾರಕನುವಾದಳು (ಕಂಪಿ. ೪-೬೮). **ಹೊನಲುವರಿ :** ೧. ವಿನುತ ಸುಕವಿಯ ಸೂಕ್ತಿ ತಾಗಿದ ಮುನಿಗಳಂತಃಕರಣದಂತಿರೆ ಹೊನಲುವರಿದವು ಚಂದ್ರಕಾಂತದ ಸಾಲಶಿಲೆ ಕರಗಿ (ಕುಪ್ಯಾಪ್ರೋ. ೦೭-೦೬). [ಪೊನಲ್ + ಪರಿ$_2$]

ಪೊನಲ್ವರಿ$_2$ (ನಾ). (ನೀರಿನ) ರಭಸವಾದ ಓಟ, – ಹರಿವು : ಪರಿವ ಪರಿಕಾಲ ಪೊನಲ್ವರಿಯೊಳಿರ್ಪುವೊರೆದು ತಣ್ಪೆಬಲಿಕ್ಕಿಡ ಮಡಿವರ್ಗದ ದುಗುಲಂಗಳುಂ (ಪರ್ಧಪು. ೫-೬೩ ಪ). [ಪೊನಲ್ + ಪರಿ$_3$]

ಪೊನಲ್ವರಿಯಿಸು (ಕ್ರಿ). ಪ್ರವಾಹವನ್ನುಂಟುಮಾಡು ; ರಭಸವಾಗಿ ಹರಿಯುವಂತೆ ಮಾಡು : ಕರಂ ಪೊನಲ್ವರಿಯಿಪ ಬಂಬಲ್ಸರಿ ಬಲ್ಸರಿ ಕಾಲ್ಸರಿ ಸಾಲ್ಸರಿ ಸಲೆ ಸುರಿದು ಕಱೆದುವಿರುಳುಂ ಪಗಲುಂ (ರಾಜಕೇ. ೯-೦೦೨). [ಪೊನಲ್ವರಿ$_2$ + – ಇಸು$_3$]

ಪೊನ್ಕೆವಿ (ನಾ). ಒಂದು ಸ್ಥಳದ ಹೆಸರು : ಪಶ್ಚಿಮಾಯಾನ್ದಿಶಿ ಪೊನ್ಕೆವಿ ತಾಟ್ಟುವಾಯರಾ ಕೆಱೆ (ಎಳ. IV, ಸಾಗಮಂ.೮೫-೬೩; 776). [?]

ಪೊನ್ಕೊಳ (ನಾ). ಒಂದು ಸ್ಥಳದ ಹೆಸರು : ಶ್ರೀಮಾರಸಿಂಘದೇವ ಪೃಥುವೀರಾಜ್ಯಜ್ಞಿಯ್ಯುತಿರೆ ಪೊನ್ಕೊಳದ ಎಮ್ಮೆತುಱುಗಳೊ × × × ಹಾಯ್ದು (ಪ್ರಾಂಶಿ. ೦೯೩೦, ೦೨-೨; ಸು. 961). [? + ಕೊಳ್$_2$]

ಪೊನ್ತನ (ನಾ). ಚಿನ್ನದಂತೆ ಹೊಂಬಣ್ಣವಾಗಿರುವಿಕೆ; ಚಿನ್ನದಂತಿರುವಿಕೆ: ಒಯ್ಯನೊಯ್ಯನೆಯೆ ತುಂಬುದಿಂಗಳ ಕನಕಬಿಂಬಕ್ಕೆ, ಪೊನ್‌ತನಂ ಬಾಡಿ, ಮೂಡಿದುದು ಬೆಳ್ಳಿಯ ತನಂ (ಶ್ರೀರಾಮಾ. ೪೮೦-೦೭೩). [ಪೊನ್ + – ತನ]

ಪೊನ್ನಂಗಲ್ (ನಾ). (?) : ಪೊನ್ನಂಗಲ್ . . . ಕಣ್ಣಂದೊಬಲಿ, ಕಣ್ಣಂಬಾಳೆ (ಕಬ್ಬಾಸು. ೫೫ ಪ್ರಯೋ). [?]

ಪೊನ್ನಂಡೆ, ಹೊನ್ನಂಡೆ (ನಾ). ಚಿನ್ನದ ಜೀರ್ಕೊಳವೆ ; ಬಂಗಾರದ ಪಿಚಕಾರಿ : ಮನ್ಮಥ ರತಿ ಪೊನ್ನಂಡೆಗಳ ತುಡುಕಿದರು (ಸೋಹತ. ೦೪-೯೦) ; ತಮತಮಗೆ ಹಸ್ತಕಳವಟ್ಟ ಜಲಯಂತ್ರ ಪೊನ್ನಂಡೆಗಳ ಗಡಣದಿಂ ನೀರಾಟಕನುವಾದರು (ಸಂಪು.೩೭-೬೫); ಕರದೊಳ್ ಪೊನ್ನಂಡೆಯುಂ ಜೀರ್ಕೊಳವಿಯೆಸೆಯೆ . . . ಕಾಂತಾಳಿ ನೀರ್ವೊಕ್ಕುದಾಗಳ್ (ರಾಜಕೇ. ೦೦-೭೦). **ಹೊನ್ನಂಡೆ :** ಕೊಂಡು ಕುಂಕುಮವಾರಿಗಳ ಹೊನ್ನಂಡೆ ಜಲಜಂತ್ರಂಗಳಲಿ ಹೊಯ್ದಾಡಿದರುವೋಕುಳಿಯ (ತೊಕರಾ. ೦-೦೬ ೫೩); ಕುಂಕುಮಜಲವ ಹೊನ್ನಂಡೆಗಳೊಳು ತುಂಬಿ ಮುಂಕೊಂಡು ಹೊಯ್ದಾಡಲು (ಸೋಹತ ೦೪-೯೦); ಗುಂಡಿದುಳ್ಳಾಡಿ ಸರ್ವರು ಹೊಕ್ಕು ಕೂಡೆ ಹೊನ್ನಂಡೆ ಜೀರ್ಕೊಳವೆಯೊಳ್ಮೊಗೆದು ಸುಂಡಿಲೊಳ್ಸೂಸುವಾನೆಗಳಂತೆ ಚಲ್ಲಿದರ್ಮಂಡೆ ಮೈನನೆಯಲೆಲ್ಲರಿಗೆ (ಶರಸ. ೪೦-೨೯). [ಪೊನ್ + ಅಂಡೆ$_2$]

ಪೊನ್ನಂದಣ 'ಪೊನ್ನಂದಳ' ನೋ.

ಪೊನ್ನಂದಳ, ಪೊನ್ನಂದಣ, ಹೊನ್ನಂದಣ (ನಾ). ಚಿನ್ನದ ಪಲ್ಲಕ್ಕಿ ; ಬಂಗಾರದ ಶಿಬಿಕೆ : ಅಗಣಿತವಿಲಾಸಿನಿಯರುಗ್ಗಡಿಸೆ ಪಾಯವಧಾರೆ ನುತ್ತಲಂದು ಪರವೆ ಪೊನ್ನಂದಳವನಡರೆ (ಸೌಂದಪು ೬-೩೨). **ಪೊನ್ನಂದಣ :** ಬಳಿಕ ಪೊನ್ನಂದಣದ ಮೇಲೆ ವೈವಾಹಮಂಗಳಮಹೋತ್ಸವಕೆ ವಿರಚಿಸಿದ ಮಂಟಪದೆಡೆಗೆ ನಳಿನಪತ್ರಾಕ್ಷಿಯುಂ ತಂದರೊಸಗೆಯೊಳು (ಕೈಮಿಶಾ. ೩೦-೦೩). **ಹೊನ್ನಂದಣ :** ಹಿಂದೆ ಮುಂದಿಕ್ಕೆಲದ ನಾರೀವೃಂದವೆಯ್ತರೆ ನಡುವೆ ತಾ ಹೊನ್ನಂದಣವನೇಱಿದಳು ಸುರಕರಿಯೆಡೆಗೆ ಗಾಂಧಾರಿ (ಸಂಪಶ. ೨೦-೦೪) ; ಮಣಿಮಯದ ದಡ್ಡಿಗಳು ಹೊನ್ನಂದಣವ ಮುಸುಕಿದವು (ತೊಕರಾ. ೦-೦೬-೦೩) ; ಸಂದಣಿಸಿದರಣ್ಣಗಳು ದಾದಿಯರು ಹೊನ್ನಂದಣದೆಡದ ಭಾಗದಲಿ (ಸೋಹತ. ೨೪-೨೩). [ಪೊನ್ + ಅಂದಳ]

ಪೊನ್ನಂದುಗೆ (ನಾ). ಚಿನ್ನದ ಕಾಲುಕಡಗ : ಉಂಗುರ ಗೆಜ್ಜೆ ಪೊನ್ನಂದುಗೆ ಪವಳಮಂ...ತಂದುಕೊಡುವರು (ಬಸಪು. ೦೪-೦೫). [ಪೊನ್ + ಅಂದುಗೆ]

ಪೊನ್ನಂಬರ 'ಪನ್ನಂಬರ' ನೋ.

ಪೊನ್ನಂಬು, ಹೊನ್ನಂಬು (ನಾ). ಚಿನ್ನದ ಬಾಣ : ಇತರ ಕುಮತಂಗಳೊಳುತ್ಪನ್ನಮತಿ ಮನಂಗೆಯ್ವುದು ಪೊ[ನಾತಾಂ. ಹೊ]ನ್ನಂಬಂ ನೀರೊಳೆಚ್ಚಿ ಕಿಡಿಪಂತಕ್ಕುಂ (ಸಪುಪ. ೩-೩೫) ; ಸನ್ನುತ ಜಿನಧರ್ಮಂ ನೆಱೆ ತನ್ನಿಂದಂ ತಾನೆ ಬಂದೊಡಲ್ಲದೆ ಬಿಡುವಾತಂ ನೆಱೆ ಪೋಲ್ಕುಂ ಜಗದೊಳ್ ಪೊನ್ನಂಬಂ ನೀರೊಳೆಚ್ಚು ಕಿಡಿಸುವ ಮರುಳಂ (ರರ್ಮಾಮ್ಯ. ೩-೨೬೦). **ಹೊನ್ನಂಬು :** ಅಱಿತವರ ಮುಂದೆ ತನ್ನಱಿವನ್ನು ಮೆಱೆಯುವುದು ಅಱಿಯದರ ಮುಂದೆ ಹೊನ್ನಂಬ ತೊಱೆಯಲೆಚ್ಚಂತೆ (ಸರ್ವಜ್ಞ. ೦೪೬೯). [ಪೊನ್ + ಅಂಬು$_2$]

ಪೊನ್ನಕ್ಕ (ನಾ). ಒಬ್ಬಾಕೆಯ ಹೆಸರು : × × × ಸೆಟ್ಟಿಯ ಮಗ ಳ್ಪೊನ್ನಕ್ಕನ್ × × × (ಎಕ. XII, ಗುಬ್ಬಿ. ೪೪-೫; 965).
[ಪೊನ್ + ಅಕ್ಕ$_1$]

ಪೊನ್ನಗಂಟಿ 'ಪೊನ್ನಗನ್ನೆ' ನೋ.

ಪೊನ್ನಗನ್ನೆ, ಪೊನ್ನಗಂಟಿ, ಹೊನಗನೆ, ಹೊನಗನ್ನೆ, ಹೊನಗೊನೆ, ಹೊನಗೊನ್ನೆ, ಹೊನ್ನಗನ್ನೆ, ಹೊನ್ನಗೊನ್ನೆ (ನಾ). ಒಂದು ಬಗೆಯ ತರಕಾರಿ ಗಿಡ ಮತ್ತು ಅದರ ಸೊಪ್ಪು : "ಪಾಂಡುರ-ಕಾಡುದ್ದು, ಕರಿಯ ಹುರುಳಿ. ಪೊನ್ನಗನ್ನೆ" (ಓಷಿ. ೯೪) ; ಪೆಸರೆಸೆವ ಪೊನ್ನಗನ್ನೆಯ ರಸಮಂ ಕೊಂಡಾಡ ಪಾಲೊಳುಱ ಮಱುಗಿಸಿ ಹಿಂಗು ಸಮೇತಂ ಕುಡಿಯಿಸೆ ಕಿದ್ದೆಸೆ ದೆಸೆಗೆಟ್ಟೋಡಿ ಪೋಗದೇಂ ನಿಂದಪುದೇ (ಲೋಕೋಪ. ೯-೦೩೩). **ಪೊನ್ನಗಂಟಿ** : ಸೊಪ್ಪುಗಳು : ಅಗಸೆ . . . ಪೊನ್ನಗಂಟಿ, ಕೀರಕಸಾಲೆ (ಸಮ್ಯಸು. ೨೩೭). **ಹೊನಗನೆ** : ಹೊನಗನೆ ಬಹಳ ತಂಪು (ರೂಢಿ). **ಹೊನಗನ್ನೆ** : ಯಷ್ಟಿಮಧುಕ, ಹೊನಗನ್ನೆಯ ಬೇರು ಇವಿಷ್ಟನೂ ಪ್ರತ್ಯೇಕ ಒಂದು ವರಹ ತೂಕವ ಸಣ್ಣನಾಗಿ ಕತ್ತರಿಸಿ (ಪೈದ್ಯಸಾ. II, ೫೫). **ಹೊನಗೊನೆ** : "ಬ್ರಾಹ್ಮೀ, ಮತ್ಸ್ಯಾಕ್ಷೀ, ವಯಸ್ಥಾ, ಸೋಮವಲ್ಲರೀ — ೪ ಹೊನಗೊನೇಸೊಪ್ಪು" (ಸಿದ್ಧಾಂಶಿ. ೦೪೪) ; ಹಳೆಅಕ್ಕಿಅನ್ನ, ಹೊನಗೊನೆಸೊಪ್ಪು . . . ಚಿಲಿಕೀರೆಸೊಪ್ಪು ಇವುಗಳೆಲ್ಲವೂ ಜ್ವರದವರಿಗೆ ಪಥ್ಯದ್ರವ್ಯಗಳು (ಸಕಸ್ವ. ೧೦೨). **ಹೊನಗೊನ್ನೆ** : "ಬ್ರಾಹ್ಮೀ, ಮತ್ಸ್ಯಾಕ್ಷೀ, ವಯಸ್ಥಾ, ಸೋಮವಲ್ಲರೀ — ಈ ೪ ಹೊನಗೊನ್ನೆ" (ಪಾಸರಾ. ೦೦೦) ; ಹೊನಗೊನ್ನೆ ಸಂಗಡ ಆವರಿಕೆ ಮುಗುಳಂ ಹಾಲಲ್ಲಿ ಅರೆದು ಕುಡಿಯೆ ಹೊಟ್ಟೆಉರಿ ಸಹ ಗುಣ (ವಿಸ್ತಿ. ೬). **ಹೊನ್ನಗನ್ನೆ** : "ಮತ್ಸ್ಯಾಕ್ಷಕಃ — ಹೊನ್ನಗನ್ನೆ" (ಓಷಿ. ೦೦೯) ; ಹೊನ್ನಗನ್ನೆಯ ರಸಮಂ ಕೊಂಡು ಆಡಿನ ಪಾಲೊಳಗೆ ಕೂಡಿ . . . ಕುಡಿಯಲ್ ಕಿದ್ದೆಸೆಯ ಬೇನೆ ಮಾಣ್ಬುದು (ಲೋಕೋಪ. ೯-೦೩೩ ಪೀಠಿ) ; ತೊಟ್ಟಿ ಮುಸ್ತೆಯನುಱ ಚೂರ್ಣಪುದುಲಿಗ ಹೊನ್ನಗನ್ನೆ ಸಮೇತಂ (ಐಮದ. ೫-೯೪). **ಹೊನ್ನಗೊನ್ನೆ** : "ವಸುಕಾಂತಿಯೆನೆ ಹೊನ್ನಗೊನ್ನೆ" (ಮಂಗರಾ. ೪೦-೩೩).
[ದೇ. ॥ ತಮಿ. ಪೊನ್ನಾಙ್ಕಣ್ಣಿ, ಪೊನ್ನಾಙ್ಕಾಣಿ ; ತುಳು. ಪೊನ್ನಾಂಕಣ್ಣಿ, ಪೊನ್ನಾಂಗಾಣಿ, ಹೊಣ್ಣಂಗಣಿ ; ತೆಲು. ಪೊನ್ನಗಂಟಿಕೂರ]

ಪೊನ್ನಬ್ಬೆ (ನಾ). ಒಬ್ಬಾಕೆಯ ಹೆಸರು : ಕೋಸಿಗರಾ ಕೋಟೆಯಮ್ಮ ಗೋಸಾಸಿಯ ಪೆಣ್ಡತಿ ಪೊನ್ನಬ್ಬೆ (ಮೈಅಂ. ೦೯೨೯, ೭೯-೨; 964) ; ತಾಗೆ ರತ್ತಿಯ ಮಹಾಜನಕ್ಕೆ ಪೊನ್ನಬ್ಬೆ ಪೊನ್ನ ಕೊಟ್ಟು ಸಾಲೆ ನೀಡೆನ್ದು ಮುತ್ತಲಂ ಕೊಣ್ಡು (ಎಕ. VII, ಶಿಕಾರಿ. ೬೦-೭ ; 978). [ಪೊನ್ + ಅಬ್ಬೆ$_1$]

ಪೊನ್ನಯ್ಯ, ಹೊನ್ನಯ್ಯ (ನಾ). ಒಬ್ಬಾತನ ಹೆಸರು : ಪೊನ್ಗಸದೇವನ ಮಗ ಪೊನ್ನಯ್ಯ (ಎಕ. XII, ಪಾವುಗ. ೮೦-೧ ; ಸು. 925). **ಹೊನ್ನಯ್ಯ** : ಗೊರವರ ಹೊನ್ನಯ್ಯಂ ತುಱುವಂ ಪಿನ್ತಿಕ್ಕಿ ಪಲರಂ ಕೊನ್ದು ತಳುತ್ತಿಱಿದು ದೇವಲೋಕಕ್ಕೆ ಸನ್ದೊಂ (ಎಕ. VIII, ಸೊರಬ. ೬೪-೦೦ ; 1032).
[ಪೊನ್ + ಅಯ್ಯ$_1$]

ಪೊನ್ನಲರ್ (ನಾ). ಬಂಗಾರದ ಹೂವು : ಮಾಣಿಕದ ಸೊಡರ್ಗಳಿಂ ನೇರಾಣಿಯ ಪೊನ್ನಲರ್ಗಳಿಂ ಗೀರ್ವಾಣಾರ್ಚಿತನಂ ನರೇಂದ್ರವಧುವರ್ಚಿಸಿದಳ್ (ಪುಲ್ಲಿಪು. ೪-೩೮). [ಪೊನ್ + ಅಲರ್$_2$]

ಪೊನ್ನವಾರಗಾವುಂಡ (ನಾ). ಒಬ್ಬಾತನ ಹೆಸರು : ಮೊಳಿಯನೂರ ದೇವಯ್ಯನುಂ ಪಂಪಯ್ಯನುಂ ಕಳ್ಳಬುಣುಸೆಯ ಪೊನ್ನವಾರಗಾವುಣ್ಡನುಂ . . . ಧರ್ಮರಾಸಿಭಟಾರರ ಕಾಲಂ ಕರ್ಚ್ಚಿ ಕೊಟ್ಟ ಸ್ಥಿತಿ ಯಾವುದೆನ್ದೊಡೆ (ಎಕ. XI, ಚಕ್ರದು. ೭೬-೨೦ ; 937).
[ಪೊನ್ನವಾರ್$_0$ + ಗಾವುಂಡ (< ಗಾಮುಂಡ)]

ಪೊನ್ನವೂರ್ (ನಾ). ಒಂದು ಸ್ಥಳದ ಹೆಸರು : ಜಿಡೂರಾಳ್ಗೆಟ್ಟತ್ತಱ ನಾಟ್ಗೂವುಣ್ಡಮ್ × × × ಕಲಿವಿಟ್ಟನೊಳೆ ವಿರೋಧಮಾಗಿ ನಾಡಿನ್ದಂ ಗಂಗವಾಡಿಗೆ ಪಳ್ಳಿವೆನಿಪ್ಪೊನ್ನವೂರಳೊಳಿರೆ (ಎಕ. VIII, ಸೊರಬ. ೮೮-೬ ; 912). [< ಪೊನ್ + ಊರ್]

ಪೊನ್ನಳಱು (ನಾ). ಒಬ್ಬಾತನ ಹೆಸರು : ಕಂಚುಗರ ಗುಜಯ್ಯಂಗೆ ಪೊನ್ನಳಱು ಒರ್ಮ್ಮ[ತ್ತ]ಲಂ ಕೊಟ್ಟ (ಎಕ. VIII, ಸೊರಬ. ೪೦೩-೧೯ ; 986). [?]

ಪೊನ್ನಳೂರ್ (ನಾ). ಒಂದು ಸ್ಥಳದ ಹೆಸರು : ಪೊನ್ನಳೂರ್ ಬೋಯಸ್ಯ . . . ಸರ್ವ್ವಶರ್ಮ್ಮಣ (ಇಆ. VII, ೦೮೮-೪೨ ; 665). [? + ಊರ್]

ಪೊನ್ನಳ್ಳಿ (ನಾ). ಒಂದು ಸ್ಥಳದ ಹೆಸರು : ಪೊನ್ನಳ್ಳಿ ನಾಮಗ್ರಾಮಃ (ಎಕ. IV, ನಾಗಮಂ. ೮೫-೬೦ ; 770). [ಪೊನ್ + < ಪಳ್ಳಿ$_1$]

ಪೊನ್ನಾಣ್ಮ (ನಾ). ಸಂಪತ್ತಿನ ಒಡೆಯ ; ಕುಬೇರ : "ಧನಪತಿಯೊಳೆ ಪೊನ್ನಾಣ್ಮಂ" (ಕರ್ಣಾನಿ. ೯೦). [ಪೊನ್ + ಆಣ್ಮ (< ಆಳ್ಮ)]

ಪೊನ್ನಾಯ (ನಾ). ಒಂದು ಬಗೆಯ ತೆರಿಗೆ : ವೇಳಾಪುರದ ಬೀಡು ಚತುಶ್ಶೀಮೆ ಸುಂಕ ಪೊಂನಾಯ ಸಹಿತ ದೇವಳಿಗೆನಾಡೆಂಮೆ ಸಂದಿ ಹಂನೆರಡು (ಎಕ. V, ಬೇಲೂರು. ೫೮-೮೨ ; 1117). 'ಪನ್ನಾಯ' ಪರಾ.
[ಪೊನ್$_?$ + ಆಯ್$_?$]

ಪೊನ್ನಾಯುಗ, ಹೊನ್ನಾಯುಗ (ನಾ). (ಕತ್ತಿಯ) ಚಿನ್ನದ ಹಿಡಿಕೆ : ರಂಜಿಸಿದುದು ಪೊನ್ನಾಯುಗದ ಪೊನ್ನ ಬಜ್ಜರಿ ಕಟಿಯೊಳ್ (ಅಪಂಪು. ೬-೫೦). **ಹೊನ್ನಾಯುಗ** : ಹೊನ್ನಾಯುಗದ ಖಡುಗದ ಗಜಱು . . . ಮೂದಲೆಗಳ ಮಹಾಧ್ವನಿ ಬಗಿದುದ್ದೈ ತಾವರೆಯ ತನಯನ ಕರ್ಣಕೋಟರವ (ಕುಪ್ಕಾಭೀ. ೨-೪) ; ಹೊನ್ನಾಯುಗದ ಖಡುಗವನಕ್ಷಯದ ಮೂಡಿಗೆಯ ದಕ್ಷಿಣದ ಹೆಗಲಿಗೇಱಿಸಿ . . . ಹೊಱವಂಟನು ರಘುಪ್ರಭವ (ತೊರಂಗಾ. ೩-೬-೫). [ಪೊನ್ + ಆಯುಗ (< ಆಯಗ)]

ಪೊನ್ನಾಯೋಗ (ನಾ). ಚಿನ್ನದಿಂದ ಮಾಡಿದ ಅಲಂಕಾರವಸ್ತು.— ಆಭರಣ : ನಡೆಯೆ ತುರಗು ಪೊನ್ನಾಯೋಗಂಗಳಿಂದಮರ್ದಟ್ಟಿಯಿಂ (ಪಂಪಭಾ. ೯-೦೦೨). [ಪೊನ್ + ಆಯೋಗ]

ಪೊನ್ನಾಳ್ (ನಾ). ಶ್ರೇಷ್ಠನಾದ ಯೋಧ,— ಸೈನಿಕ : ಪೋದವರಾ ಪೊನ್ನಾಳ್ಗಳ್ ಬಾರದೆ ಬಗೆ ಬೆದರುತಿಹುದು (ಪಾರಸಿ. ೦-೦೫).
[ಪೊನ್ + ಆಳ್$_3$]

ಪೊನ್ನಿಗ, ಹೊನ್ನಿಗ (ನಾ). ೧. ಒಬ್ಬಾತನ ಹೆಸರು : ಬಿದಿರೂರಲು ಬೂತುಗನಂ ತುಮ್ಬೆವಾಡಿಯ ಗಡ್ಡಯ್ಯನ ಮಗಂ ಪೊನ್ನಿಗಂ ಕಾದಿ ಸತ್ತು ಸ್ವರ್ಗ್ಗದಲಿಟ್ಟಂ (ಎಕ. XII, ಪುದ್ಧಗಿ. ೨೭-೨೨ ; ಸು. 950). ೨. (ಕನ್ನಡದಲ್ಲಿ ಪ್ರಸಿದ್ಧನಾದ ಪೊನ್ನನೆಂಬ) ಒಬ್ಬ ಕವಿಯ ಹೆಸರು : ಪೊನ್ನಿಗ[ನಿಂ] ಮಲ್ಲಪನುಂ ಪೊನ್ನನುಮರ್ತಿಯೆ ಪುರಾಣಚೂಡಾಮಣಿಯಂ ಮುನ್ನಂ ಪೇಟಿಸಿದಂತೆ . . . ಪೇಟಿಸಿದಳ್ (ಅಪಪು. ೦-೬೬). 'ಅರಿಗ' ಹೋ. **ಹೊನ್ನಿಗ** : ೧. ಹೊನ್ನಿಗ ಪಸುಗಪೊನ್ನವೆಣ್ಡ ತಮ್ಮ ಚವನಮ ಊರಟಿವನ ಸತ್ತ (ಎಕ. X (ಕ), ಬಾಗೇಪ. ೯೪-೨ ; 10ಪೆಯ ಕಕ).
[ಪೊನ್ + — ಇಗ]

ಪೊನ್ನಿಡಿಕಿ (ನಾ). ಒಂದು ಸ್ಥಳದ ಹೆಸರು ; ೞ ಈಗಿನ ತುಮಕೂರು ಜಿಲ್ಲೆಯ ಹೊನ್ನುಡಿಕೆ : × × × ದ ಪೊನ್ನಿಡಿಕಿಯೊಳ್ ತನ್ನ ಅರ್ತ್ತದಟಿವಿನೊಳ್ ಕಾದಿ ನಾಲ್ವರ ಕೊನ್ದು ಸತ್ತನ್ (ಎಕ. XII, ಪುದ್ಧಗಿ. ೪೦-೩ ; ಸು. 950). [?]

ಪೊನ್ನೀರ್, ಹೊನ್ನೀರು (ನಾ). ೧. ಹೊಂಬಣ್ಣದ ಕಾಂತಿ : ಒಯ್ಯನೆ ಸುತ್ತಂ ಸೂಸಿದೀಶಾನನ ಜಡೆಗಳವೊಲ್ ಕಾಯ್ದ ಪೊನ್ನೀರ್ಗವಿಲ್ಗೆಂಪಿನ ಪೆಂಪಂ ಸಿಂಪಿಸುತ್ತಿರ್ದಹಿಮರುಚಿಗಳಂ ತಿಗ್ಮರುಙ್ಮಾಲಿಬಿಂಬಂ (ಕಾರುಣ

೩೭೪). **ಹೊನ್ನೀರು** : ೨. ಹೊಂಬಣ್ಣದ ನೀರು : ಉದಯೋನ್ಮುಖ ಸೂರ್ಯನ ರಶ್ಮಿ ವಿಕಸನಪುಷ್ಪದ ಮೇಲೆ ಹೊನ್ನೀರನೆರಚಿತ್ತು (ಸೀಪಪ. ೨೯); ಹೊಂಗದಿರ ಜೀರ್ಕೊಳವಿಯಿಂ ಸಂಜೆ ಜರ್ರೆಂದು ರಂಗೆರಚೆ . . . ಕನ್ನೆಳಲ ಪಸಲೆಯಲಿ ಹೊನ್ನೀರ ಮಳೆ ಹೊಯ್ಯಲು (ಸತ್ರಾಂಗ. ೨೦-೩೪೦).

[ಪೊನ್ + ನೀರ್]

ಪೊನ್ನು 'ಪೊನ್' ನೋ.

ಪೊನ್ನುಗ (ನಾ). ಚಿನ್ನದಲ್ಲಿ ವ್ಯವಹರಿಸುವವನು; ಅಕ್ಕಸಾಲಿಗ : ಮಣ್ಣುಗಂ, ಪೊನ್ನುಗಂ (ಕಸ್ಮಾಸು. ೯೨೪ ಪ್ರಯೋ). [ಪೊನ್ + – ಉಗ]

ಪೊನ್ನುಡೆ (ನಾ). ಜರತಾರಿ ವಸ್ತ್ರ ; ಚಿನ್ನದ ಬಣ್ಣದ ದುಕೂಲ : ಪೀತಾಂಬರ : ತನ್ನ ಮನೆಯ ಮದುವೆಯೊಳು ಮಂಗಲದೊಳು ತನ್ನ ಬಾಂಧವರೆಲ್ಲರನು ಅನ್ನಪಾನಂಗಳಿಂದಾದರಿಪುದು ಮತ್ತೆ ಪೊನ್ನುಡೆಯಿತ್ತು ಪೂಜುವುದು (ಹರಿಪ. ೯-೩೯) ; ಪೊನ್ನುಡೆಯಿರೆ ತೊವಲಂ ಕೊಳೆಯುವನೆನ್ನಂ ತಾನಕ್ಕೆ ಪಶುಪನೆಂದೇ ಬಗೆವರ್ (ಸಳಿ. ೦-೩೦). [ಪೊನ್ + ಉಡೆ$_2$]

ಪೊನ್ನುಯ್ಯಲ್, ಹೊನ್ನುಯ್ಯಲ್ (ನಾ). ಚಿನ್ನದ ತೂಗುಮಣೆ,–ಜೋಕಾಲಿ : ಚೂತಮಹೀಜದ ಕೆಲಗಣ ಪೊನ್ನುಯ್ಯಲನೇಱಿ . . . ತರಳಾಕ್ಷಿಯಾಡುತುಮಿರ್ಪಿನಂ (ರರ್ಮಾಪ್ಯು. ೩-೨೭). **ಹೊನ್ನುಯ್ಯಲ್** : ಕಾಂಚನಮಾಲೆ . . . ಕೆಳದಿಯರ ಮೇಳದಲಿ ಹೊನ್ನುಯ್ಯಲಾಡುತ ಲೀಲೆಯಿಂದಿರೆ (ಸಾಳ್ವಭಾ. ೨೯-೦). [ಪೊನ್ + ಉಯ್ಯಲ್]

ಪೊನ್ನೆ, ಹೊನ್ನೆ (ನಾ). ಒಂದು ಬಗೆಯ ಮರ; ಪುನ್ನಾಗ: ಚಿನ್ನೆ ಪೊನ್ನೆಯರಲಂ ಕೊಯ್ದಳ್ (ಅಂಪು. ೦೦-೯೯. ಅಡಿಪದ್ಯ) ; ಪೊನ್ನೆಯ ಮುಗುಳೆಕ್ಕಾವಳಿ ತನ್ನ ಕೊರಲ್ಗೆಸೆಯೆ . . . ಕಣ್ಗೆಸದಿರ್ದಳ್ (ಶಾಂತಿಪು. ೬-೦೭) ; ಕದಂಬಮಹೀಜದೊಂದು ಶೋಭಾಗುಣಮೊಂದೆ ಪೂತೆಸೆವ ಪೊನ್ನೆಗೆ ಕರ್ಮುಗಿಲೊಡ್ಡು ಬೆಳ್ಮುಗಿಲ್ಗಾಗಿರೆ ಪೋದುದಿಂತು ಜಳದಾಗಮಮಾದುದು ಶಾರದಾಗಮಂ (ಪರ್ಶಮಾ. ೯-೯೬). **ಹೊನ್ನೆ** : "ಪೀತಸಾ(ಲ)ರಃ, ಆಸನಃ–ಈ ೨ ಹೊನ್ನೆ" (ಹಲಾಯು. ೩೩-೯೬) ; ಹೊನ್ನೆ ಕುಟಜಂ ಕಬ್ಬನ್ನಿ ಸೀವನ್ನಿ ತುಂಬುರುಹಂ ತಾಳಂ (ಶಾಪ್ಯಸಾ. ೦೦೪೦ ಕೂಪ್ರಳ) ; ಉಱೆ ಬೀತುವು ಸುರಗಿ ಹೊನ್ನೆ ಮಲ್ಲಿಗೆ ವನದೊಳ್ (ಅಗಪ. ೯-೩).

[ದೇ.॥ ತಮಿ. ಪುನ್ನೈ, ಪಿನ್ನೈ ; ಮಲ. ಪುನ್ನ ; ತುಳು. ಪೊನ್ನೆ, ಹೊನ್ನೆ ; ತೆಲು. ಪೊನ್ನ]

ಪೊನ್ನೆಱೆಯ (ನಾ). = ಪೊನ್ನಾಣ್ಮ : "ಪೊನ್ನೆಱೆಯ ತಿಸುಳಿಗೆಳೆಯಂ ಕಿನ್ನರಪತಿ" (ಕರ್ಪಾಪ. ೦). [ಪೊನ್ + ಎಱೆಯ]

ಪೊನ್ನೇಱರಸ (ನಾ). ಒಬ್ಬಾತನ ಹೆಸರು : ಸಿಙ್ಗಪೋತರಸರು ಪೊನ್ನೇಱರಸರು ಧರ್ಮ್ಮಮಹಾದೇವಿಯರುಡಿತಿಟ್ಟು ಪೊನ್ನೇಱ ದೊಡ್ಡರೆನ್ದು ಕಡಗಮಿಟ್ಟರ್ (ಸೌಇಇ. IX-i, ೦೭-೦೨ ; ೨೦೦). [? + ಅರಸ$_1$]

ಪೊನ್ನೈರಣೆ (ನಾ). (ಸೌಭಾಗ್ಯಸೂಚಕವಾಗಿ) ಮದುವೆಯಲ್ಲಿ ಚಿತ್ರ ಬರೆದಿಡುವ ಚಿನ್ನದ ಕೊಡ : ಮದನನ ರತಿಯ ಮದುವೆಯೊಳ್ ಸಿರಿ ಸಂಪುದದಿಂ ಪೊನ್ನೈರಣೆಯ ಜವಳಿಗಳಸದ ಮೇಲೊಲಿದಿಕ್ಕಿದ ಮಂದಾರದ ಮಾಲೆಯ ಮಾಳ್ಕೆಯೊಳು ಮದಯೌವನೆಯುನ್ನತಕುಚತಟದೊಳ್ ಚದುರೆಯದೊರ್ವಳ್ ನವನವರತ್ನದ ಪದಕಂಗಟ್ಟಿದಳು (ಜಯಕಾ. ೩-೧೯).

[ಪೊನ್ + ಐರಣೆ (< ಅಯ್ರಣೆ)]

ಪೊನ್ನೊಡೆಯ (ನಾ). = ಪೊನ್ನಾಣ್ಮ : "ಪೊನ್ನೊಡೆಯಂ, ತಿಸುಳಿಗೆಳೆಯಂ–ಈ ೨ ಕುಬೇರಂ" (ಕಸಾ. ೪೯-೩೯) ; ಸಸಿಯಂ ಮೆಯ್ವೆಳಗಿಂದೆ ಪೊನ್ನೊಡೆಯನಂ ಪೆಂಪಿಂದೆ . . . ಉಬ್ಬಸಮಂ ಮಾಡುವ ಬರ್ದೆಯರ್ ಪಲಬರುಂ ಕಣ್ಗೇಂ ಬೆಡಂಗಾದರೋ (ಕಬ್ಬಿಗಾ. ೦೩೪). [ಪೊನ್ + ಒಡೆಯ$_1$]

ಪೊನ್ನೊರೆ$_1$ (ನಾ). ೧. ಚಿನ್ನದ ಬಣ್ಣ,–ಮೆರುಗು,–ಕಾಂತಿ : ಪೊನ್ನೊರೆ ಗನ್ಯದೀಪಮೆಱಪಂತಿರೆ ಮಾಣಿಕ್ಯಪ್ರದೀಪಮೇನೆಱಗುಗುಮೇ (ಪಂಠಾಮಾ. ೯-೦೬೦). ೨. ಚಿನ್ನದ ಗೆರೆ : ಧರಣೀರಕ್ಷಣಮಂತ್ರಾಕ್ಷರಮಂ ವಿದ್ವಿಷ್ಟಸೈನ್ಯಮಾರಣಮಂತ್ರಾಕ್ಷರಮಂ ಪೊನ್ನೊರೆಯಿಂದಂ ಬರೆದಂತಾ ನೃಪನ ತೋಳ ಬಾಳ್ವೊಗರೆಸೆಗುಂ (ಪುಲ್ಲಿಪು. ೩-೦೫); ಪೊನ್ನ ಬೆಟ್ಟವ ಬಳಸಿದೆಂ ಸಜ್ಜನರ್ಗೊಂದು ಪೊನ್ನೊರೆಯನಿತ್ತುದಿಲ್ಲ (ಭಾಪಸಂ. ೬-೩೩). [ಪೊನ್ + ಒರೆ$_3$]

ಪೊನ್ನೊರೆ$_2$ 'ಪೊನ್ನೊಱೆ' ನೋ.

ಪೊನ್ನೊಱೆ, ಪೊನ್ನೊರೆ$_2$, ಹೊನ್ನೊಱೆ (ನಾ). ಚಿನ್ನದಿಂದ ಮಾಡಿದ ಶಸ್ತ್ರಕೋಶ; ಕತ್ತಿಯನ್ನಿಡುವ ಚಿನ್ನದ ಕೋಶ : ಪೊಸದುಕುಲಂ ಬೆಡಂಗಮರ್ದ [ಪ]ಟ್ಟಿಗೆ ಪೊನ್ನೊಱೆ ಸೇತಮಾಲೆ ಬಣ್ಣಸರಮುದಾತ್ತ ಹಸ್ತಕಟಕಂ . . . ತಿರುಳೋಲೆ ಕರಂ ತಮಗೊಪ್ಪೆ (ಪರ್ಶಮಾ. ೬-೯೩) ; ಪೊನ್ನೊಱೆ ಚಿಕ್ಕಗೇಣ್ ಪಱಿಯ ಟೊಪ್ಪಿಗೆ (ಪುಸ್ವಪು. ೬-೪೦). **ಪೊನ್ನೊರೆ$_2$** : ಎಡಕರದಿ ಪೊನ್ನೊರೆ ಕಠಾರಿಯುಮನಾಂತು (ಪಪಪೋ. ೦೭-೩೭). **ಹೊನ್ನೊಱೆ** : ನೆಱೆ ರೂಪುವಡೆದ ಮನ್ಮಥನೆಂಬ ರತ್ನಹೊನ್ನೊಱೆಯಿಂದಲುಗಿದ ಕೂರಸಿಯು ಮಱೆಯಬಾರದು ಮಹಾದೇವ ಸತ್ಕುವರನ ಹೆಱಹಿಂಗಬಹುದೆ ಬಲ್ಲವರು (ಪೋಹತ. ೨೯-೩೩) ; ಬಲಗೈಯೊಳಾಂತ ಹೊನ್ನೊಱೆಯ ಕಠಾರಿಯ ಕೆಲಕೂಱೆ . . . ಕಲಿಗಳ ದೇವನೊಪ್ಪಿದನು (ಭರತ. ೦-೩೨). [ಪೊನ್ + ಒಱೆ$_2$]

ಪೊನ್ನೋಲೆ, ಹೊನ್ನೋಲೆ (ನಾ). ಚಿನ್ನದ ಓಲೆ : ನಿಕ್ಕುವದಿಂ ತಾಳೋಲೆಯನಿಕ್ಕುವವರ್ಪಲರೊ ನೋಡ ಪೊನ್ನೋಲೆಯನಂತಿಕ್ಕುವವರ್ಪಲರೊ (ರರ್ಮಾಪ್ಯು. ೦-೨೦೦); ನಾಗಕುಂಡಲಂ ಪೊನ್ನೋಲೆಯೆಸೆವ ಕಱೆರನ್ನದಾಳಿ (ಹಪಕಾ. ೦-೬); ಆತನ ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು (ಬಸಪು. ೧೦-೯೩). **ಹೊನ್ನೋಲೆ** : ಮಾಗಾಯಿಗಳ ಮುಗ್ಧೆ ಹೊನ್ನೋಲೆಯ ಚೆನ್ನೆ . . . ಪೆಣ್ಗಳ ಪುಣ್ಯಾಕಾರೆಯುಮೆನಿಸಿ ಮನಂಗೊಳಿಸುತ್ತಿದ್ದಳು (ಉಪ್ಯಲಿ. ೩-೩೩ ಪ). [ಪೊನ್ + ಓಲೆ]

ಪೊನ್ಬುಚ್ಚ 'ಪೊಂಬುಟ್ಟಿ' ನೋ.

ಪೊನ್ಬೆಟ್ಟು 'ಪೊಂಬೆಟ್ಟ' ನೋ.

ಪೊನ್ಮಿಗ 'ಪೊಮ್ಮಿಗ' ನೋ.

ಪೊನ್ಮುಡಿ, ಹೊಮ್ಮುಡಿ (ನಾ). ೧. ಚಿನ್ನದ ಕಿರೀಟ : ಒದೆದೆ ಪೊನ್ ಮುಡಿಯನ್, ಒದೆದೆ ಕೌರವನ ಸಿರಿಮುಡಿಯನ್ (ಅಶ್ವತ್ಥಾ. ೪೩-೬೯೭). **ಹೊಮ್ಮುಡಿ** : ೨. (ಆಲಂ) ಶ್ರೇಷ್ಠವಾದುದು; ಘನತೆಯಿಂದ ಕೂಡಿದುದು : ಎನಿತೊಂದು ನಾಡುಗಳನಾಳಿದುದು ಸೂಸ, ಹೊಮ್ಮುಡಿಯ ನಮ್ಮ ಸೂಸ ! (ಹಾರಸಿ. ೩೩-೭೩೩). [ಪೊನ್ + ಮುಡಿ$_3$]

ಪೊನ್ಮೋದಿರ, ಪೊನ್ಮೋಯಿರ (ನಾ). ಚಿನ್ನದ ಉಂಗುರ : ಈ ಕಲ್ಲನ್ನೆತ್ತುವವರಿಗೆ ಈ ಪೊನ್‌ಮೋದಿರವನ್ನು ಕೊಡುವೆವು (ಹುಂಜಾ. ೦೬೬). **ಪೊನ್ಮೋಯಿರ** : ಅಂದು ನಾನು ನಿನ್ನ ಬೆರಳಿಗೆ ತೊಡಿಸಿದ ಪೊನ್ಮೋಯಿರದೊಡನೆ ನನ್ನ ಹೃದಯವನ್ನೂ ನಿನಗೆ ಕೊಟ್ಟೆ (ಪರಿಶಾ. II, ೦೦೩೨)

[ಪೊನ್ + ಮೋದಿರ. / ಕೊಡ. ಪೊಮ್ಮೊದ್‌ರ]

ಪೊನ್ಮೋಯಿರ 'ಪೊನ್ಮೋದಿರ' ನೋ.

ಪೊಪ್ಪಳಿ$_1$, ಪಪುಳ್ಳಿ, ಪಪ್ಪಳಿ, ಪಾಪ್ಪಳಿ, ಪೊಪ್ಪುಳಿ (ನಾ). ೧. (ಬೇರೆ ಬೇರೆ ಬಣ್ಣಗಳಿಂದ ಕೂಡಿದ) ಒಂದು ಬಗೆಯ ಬಟ್ಟೆ,–ವಸ್ತ್ರ : ಹಳದಿ ಪೊಪ್ಪಳಿ ಚಂದ್ರಗಾವಿ . . . ಬಿಳುವಟ್ಟೆ ನಾನಾ ವರ್ಣದ ಜವಳಿಯ ಮಳಿಗೆಗಳೆಸೆದುವರ್ತಿಯಲಿ (ಕಂಪಪಿ. ೬-೭೦). ೨. ಒಂದು ಬಗೆಯ ಸೀರೆ : ಪೊಪ್ಪಳಿ ಕರ್ಕವಾಡಗಳೆಂಬ ಸೀರೆಗಳೊಪ್ಪಿ ಮೆಱೆಯೆ (ಅಮುಸಾಂ. ೪-೦೯) ; ಪೊಪ್ಪಳಿಯಾ ನಾಯಕಿ ರಂಗು ಕೊಪ್ಪಣದ ಬಣ್ಣವನುಟ್ಟು ರಾಯಸಂದಣಿಯ ನೋಡುವರು (ಸೌಂದಕಾ. ೭-೭೦). 'ಸಾರಪೊಪ್ಪಳಿ' ಪರಾ. ೩. ಚೌಕಳಿಯ ಆಕಾರವನ್ನು ಅಚ್ಚೊತ್ತಿರುವ ಬಟ್ಟೆ ; ಚೌಕಾಕಾರವಾದ ಅಚ್ಚುಗಳುಳ್ಳ ಬಟ್ಟೆ : ಅವಳು

ಉಟ್ಟಿರುವ ಹಸುರು ಪೊಪ್ಪಳಿ ಸೀರೆ ತುಂಬ ಚೆನ್ನಾಗಿದೆ (ರೂಠಿ). **ಪಪ್ಪುಳ್ಳಿ** : ೧. 'ಪಪ್ಪುಳ್ಳಿಅಚ್ಚಡ' ಪರಾ. **ಪಪ್ಪಳಿ** : ೩. 'ಪಪ್ಪಳಿಬಟ್ಟೆ' ಪರಾ. **ಪಾಪ್ಪಳಿ** : ೨. ಬರೆಹದ ಪಾಪ್ಪಳಿ ಮಂಜಿಷ್ಟೆ ಚೌಪುಲ್ಲಿ ಮೆಱೆವಷ್ಟಗೊಳ ಚಂದ್ರಗಾವಿ (ಜ್ಞಾನಕ. ೩೬-೯೬). **ಪೊಪ್ಪುಳಿ** : ೧. ಬಿಳಿದು ಪೊಪ್ಪುಳಿ ಚಂದ್ರಗಾವಿಗಳಿಳೆಗೆ ಪೊಸತಹ ಮಂಚಿಟಿಕೆ ಗುಜ್ಜರಿ ದುಕೂಲಗಳ ಅಳವಡಿಸಿ. . . ಶ್ರೀಕೃಷ್ಣನೋಲಗಶಾಲೆ ರಂಜಿಸಿತು (ಕೋಗಯ. ೩-೩೮). ೨. ಪೀತಾಂಬ್ರ ಪೊಸ ಚುದ್ರಗಾವಿ ಪೊಪ್ಪುಳಿಯ ಮಿಸುವ ಶುಭ್ರದ ದಿವ್ಯ ದುಗುಲದ ನಿಱಿಗಳ ಶಶಿಮುಖಿಯರು ರಂಜಿಸಿದರು (ಕಂಪಪಿ. ೨೯-೯೯) ; ಪೊಪ್ಪುಳಿಯು ತಿಗುಳಿ ರಾಗಾವಳಿಯ ರತ್ನಾವಳೀ ಧಾವಳ್ಯ ದಿವ್ಯತಾರಾವಳಿಯ . . . ನಾನಾವಿಧದ ಸೀರೆಗಳ ಚಿನ್ನದೆಳೆಮೊಗ್ಗ ಕಂಚುಕವ ಬೇಹನಿತ ತೆಗೆದು (ಸಪಪೋ. ೦೭-೬೦). ೩. ಸುಮಂಗಲಿಯರು . . . ಬಣ್ಣಬಣ್ಣದ ಆನೆಪೊಪ್ಪುಳಿ, ಕವಡೇ ಸೀರೆಗಳನ್ನುಟ್ಟು . . . ಹೊರಟರು (ಮಲಿಮಂ. ೩೯).

[ದೇ.॥ ತೆಲು. ಪೊಪ್ಪಳಿ, ಪಪ್ಪಳಿ./ಮರಾ. ಪೋಫಳೀ]

ಪೊಪ್ಪಳಿ₂ 'ಪೊಪ್ಪಿಳಿ' ನೋ.

ಪೊಪ್ಪಿಳಿ, ಪೊಪ್ಪಳಿ₂, ಪೊಪ್ಪುಳು (ನಾ). ೧. ಒಂದು ಬಗೆಯ ಮರ : ಮಡ್ಡೀಹಂಬು, ಪೊಪ್ಪಿಳಿಮರ, ನುಣಾಮರ (ಪ್ರಾಕಿಗ. ೫೫-೦೦೯೭). ೨. (ಹಳದಿಯ ಬಣ್ಣದ ಪುಡಿಯನ್ನು ಕೊಡುವ) ಒಂದು ಬಗೆಯ ಪೊದೆ: (ಕ). **ಪೊಪ್ಪಳಿ₂** : ೧. "ಮಡ್ಡೀಹಂಬು, ಪೊಪ್ಪಳಿಮರ, ಗುಣಾಮರ, ಮಡ್ಡಿಬನ್ನೆ, ಮಡ್ಡಿಚಕ್ಕೆ" (ಸಸ್ಯಪಿ. ೯೦); ಈ ವೃತ್ತಿಗೆ ಸಲ್ಲುವ . . . ಪೊಪ್ಪಳೀಗಿಡಗಾವಲು ಬ್ರಾಹ್ಮಣನಿವೇಶನ ಶೂದ್ರನಿವೇಶನ (ಹುಶ್ಶಿಹ. ೩); ಪೊಪ್ಪಳಿ, ಕುರುಡಿ, ಸಣಬು, ನೀಲಿ (ಪಮ್ಮಸು. ೨೩೬). **ಪೊಪ್ಪುಳು** : ೧. ಸೇಬು ಅಂಜುರ ಹಲಸು ಪೊಪ್ಪುಳು ಶೀತಫಲವು ಖರ್ಜೂರದ ಮರನು (ಪಂದಿಲೀ. ೬-೨೭). [?]

ಪೊಪ್ಪು 'ಪರುಪು' ನೋ.

ಪೊಪ್ಪುಕ 'ಪಪ್ಪುಕ₂' ನೋ.

ಪೊಪ್ಪುಳಿ 'ಪೊಪ್ಪಳಿ₁' ನೋ.

ಪೊಪ್ಪುಳು 'ಪೊಪ್ಪಿಳಿ' ನೋ.

ಪೊಪ್ಲಿ 'ಪಪ್ಪುಳಿ' ನೋ.

ಪೊಮ್ಮ, ಪೊಮ್ಮು₂, ಪೊಮ್ಮೆ (ನಾ). ೧. ಒಂದು ಬಗೆಯ ತೆರಿಗೆ : ಸನ್ತೆಯವೊಳಗಣ ಕೊಡದೆಣ್ಣೆ ಯೆಲೆಯ ಹೇಱುಗಳ ಪೊಮ್ಮ ಕಿಱುಕುಳ ಧಾನ್ಯವರ್ಗ್ಗಂಗಳ ಮೊಟ್ಟೆಯ ಸುಂಕವೊಳಗಾಗಿ (ಎಇ. XIX, ೩೯-೫೦ ; 1144). **ಪೊಮ್ಮು₂** : ೧. ಪಟ್ಟೆ ಪ್ರಕಾರಕ್ಕೆ ಸಲತಕ್ಕ ಪೊಂಮಿನ ಹಣವನ್ನು ಕೇಳದೆ (ಪ್ರಾಕಿಗ. ೦೯೨೬, ೯೮-೦೦ ; ಸು. 1711) ; ಪೊಮ್ಮು ಕೈದುಡುಕುಗಳಂ ಪುಟ್ಟಿಸಿ ಪೊಣರ್ವ ಸೆಟ್ಟಿಗಳಟ್ಟುಳಿಯಂ ನಿಲಿಸಿ ಸುಂಕಮಂ ಬಾಳಿಸಿದಂ (ಕೆಳನ್ಯ. ೭-೩೦); ಸುಂಕ್ಕಾ ಪೊಂಮು ಮಾರ್ಗ ಕರಗ ಪಡಿ ಸುಂಕಾ ಹತ್ತಿ ಪೊಂಮು ಅಲೆಸುಂಕಾ ಕಬ್ಬಿಣದ ಪೊಂಮು (ಪ್ರಾಕಿಗ. ೦೯೩೯, ೪೨-೯೩ ; 1823) ; ಆ ಸಿದ್ಧಾಯ ಈ ಪೊಮ್ಮು . . . ಸತ್ತ ಹೆಣಕ್ಕೂ ಕೊನೆ ಮೊದಲಿಲ್ಲದೆ ಹಣ ಹೊನ್ನು ತೆರುತಿರಬೇಕು (ಶಟ್ಟಿಲಿ. ೦೫೫-೭). ೨. ಹೊಗೆಸೊಪ್ಪಿನ ಮೇಲೆ ಹಾಕುವ ತೆರಿಗೆ : (ಕ). **ಪೊಮ್ಮೆ** : ೧. ಪೊಂಮೆ ಸುಂಕ ದೇವಾದಾಯ ಬ್ರಂಹಾದಾಯ ನಟ್ಟ ಕಲ್ಲು ಬಿಟ್ಟ ಬಸವ ಮೊದಲಾದುವುಗಳನು ಈ ಮಠಕೆ . . . ಕೊಡುವುದು (ಪ್ರಾಕಿಗ. ೦೯೩೦, ೦೩-೩೬ ; 1345).

ಪೊಮ್ಮಿನ ಚಾವಡಿ = ಪೊಮ್ಮು ಸುಂಕವನ್ನು ವಸೂಲು ಮಾಡುವ ಚಾವಡಿ : ಪೊಮ್ಮಿನ ಚಾವಡಿ – ಇದರಲ್ಲಿ ಸೀಮೆಯಲ್ಲಿರುವ ತ್ಯಾಜಗಾರರು, ಮಾನ್ಯಗಾರರು . . . ತುರುಕರು ಮುಂತಾದ ಜನಗಳು ವ್ಯಾಪಾರವನ್ನು ತರುವಲ್ಲಿಯೂ ಕೊಡುವಲ್ಲಿಯೂ ಸರಕಾರದ ತೀರ್ಪು ಆಗದಿದ್ದ ಪದಾರ್ಥಗಳನ್ನು ತೆಗೆದುಕೊಳ್ಳುವಲ್ಲಿಯೂ ಅರ್ಧಸುಂಕವನ್ನು ತೆಗೆದುಕೊಳ್ಳುವುದೆಂದು ನಿಬಂಧನೆ ಮಾಡಿದರು (ಸುಹಾವಂ. I, ೦೯೮). [?]

ಪೊಮ್ಮಗಿಲ್ (ನಾ). ಚಿನ್ನದ ಪ್ರಾಕಾರ,–ಗೋಡೆ : ಪರಿಖೆಯ ತೆರೆವೊಯ್ಲಿಂದಂ ತೆರಳ್ದು ತಡವಿಡಿದು ತೆಕ್ಕೆಗಟ್ಟಿದ ಪೊಂದಾವರೆಯ ರಜದಂತೆ ನೃಪಮಂದಿರಮಂ ಬಳಸಿರ್ದ ಪೊಮ್ಮಗಿಲ್ ಸೊಗಯಿಸುಗುಂ (ಪುಲ್ಲಿಪು. ೨-೬೯) ; ಸರಸ್ಸಮಿತಿ ಸುತ್ತಿ ಪೊಮ್ಮಗಿಲ ಸುತ್ತಲುಂ ರಂಜಿಕುಂ (ಪಂಠಾಮಾ. ೪-೦೩೦). [ಪೊಂ (< ಪೊನ್) + ಮಗಿಲ್]

ಪೊಮ್ಮಡಿಬೆಳ್ಳಿ 'ಪೊಮ್ಮಡಿವೆಳ್ಳಿ' ನೋ.

ಪೊಮ್ಮಡಿವೆಳ್ಳಿ, ಪೊಮ್ಮಡಿಬೆಳ್ಳಿ (ನಾ). ಶುದ್ಧವಾದ ಬೆಳ್ಳಿ ; ಚೊಕ್ಕ ಬೆಳ್ಳಿ : ರಾಜಮಂದಿರದ ಮುಂದುಗಡೆ ನೆಡಿಸಿರ್ದ ತೋರಣಸ್ತಂಭಯುಗಳಕ್ಕೆ ಪೊಮ್ಮಡಿವೆಳ್ಳಿದಗಡುಗಳನು ತೊಡಿಸಿದಂದದೊಳಿರ್ಪ ಮಾಳ್ಕೆಯಿಂ ಧವಳಾಂಶುವಿಡಿಕಿಱಿದ ಪೊಸದೂವಟದ ಕಾಲ ಕುಪ್ಪಸವ ತೊಡಿಸಿದಳದೋರ್ವ ಕಾಮಿನಿ ಪರವೆನಾಚಿಗೆ (ಸೌಂದಪು. ೭-೨೯). **ಪೊಮ್ಮಡಿಬೆಳ್ಳಿ** : ಶ್ರೀಗಂಧ ಮಂಚ ಪೊಮ್ಮಡಿಬೆಳ್ಳಿಮಂಚ ಪಂಚರತ್ನದ ಮಂಚ ನವರತ್ನಮಂಚ ಗಳಂಚಿತವಾದುವಲ್ಲಲ್ಲಿ (ಭರತ. ೦೫-೨೫) ; ರಂಜಿಪ ಪೊಮ್ಮಡಿಬೆಳ್ಳಿಯ ಪೂವಪರಂಜಿಯ ಪೂಗಳ ತಂದು . . . ಆದಿಜಿನಗೆ ಪುಷ್ಪಾಂಜಲಿ ಮಾಡಿದರು (ಭರತ. ೭೦-೦೯).

[ಪೊಮ್ಮಡಿ₀ (ಪ ← ತೆಲು. ಪಮಿಡಿ = ಚಿನ್ನ) + ಬೆಳ್ಳಿ]

ಪೊಮ್ಮತ್ತಿ (ನಾ). ಚಿನ್ನದ ಬಣ್ಣದ ಮಚ್ಚೆ,–ಕಲೆ: ಉತ್ತುಂಗಕುಚಾದ್ರಿಯ ಪೊಮ್ಮತ್ತಿಯ ಮೊಳೆ ಮೊಳೆತ ಜರಗಿನಂತಿರೆ ಕಾಣಲ್ಪೆತ್ತ ಸತಿಗಾಯ್ತು ಸುತನಂ ಪೆತ್ತಂತಪ್ಪೊಂದು ಸಂತಸಂ (ಅರ್ಥಪೇ. ೨-೯).

[ಪೊಂ (< ಪೊನ್) + ಮತ್ತಿ₂]

ಪೊಮ್ಮದಿಲ್, ಪೊಮ್ಮದಿಲು (ನಾ). = ಪೊಮ್ಮಗಿಲ್ : ನಿತಾಂತಮೋಲಗಿಸಲಟ್ಟಿದ ಸಾನುವದೆತ್ತಂ ಬಂದೆಳಸಿರ್ದಪುದೆಂಬಿನಂ ಸೊಗಯಿಪ್ಪುದು ಪೊಮ್ಮದಿಲುಗ್ರಾಂಶೂದ್ಗತಮಾಗಿರೆ ಕೆಮ್ಮುಗಿಲ್ (ಪುಷ್ಪಪು. ೨-೯೦) ; ವರ್ಗಪಂಚಮಕ್ಕೆ . . . ಪೊಮ್ಮದಿಲ್, ಪೊಂಮದಿಲ್ (ಶಮದ. ೦೩೦ ಪ್ರಯೋ). **ಪೊಮ್ಮದಿಲು** : ಇಂಬುವೆತ್ತಿಹ ರಾಜಗೃಹಲಕ್ಷ್ಮಿಯುಟ್ಟ ಪೀತಾಂಬರವೆನಿಸಿ ಪೊಮ್ಮದಿಲು ತಾಂ ಬಳಸಿಹುದವಳಿಕ್ಕಿದ ಮಕುಟ ತಾನೆಂಬಿನ ಕರುಮಾಡವಿಹುದು (ನಾಗಕು. ೨-೬೭).

[ಪೊಂ (< ಪೊನ್) + ಮದಿಲ್]

ಪೊಮ್ಮದಿಲು 'ಪೊಮ್ಮದಿಲ್' ನೋ.

ಪೊಮ್ಮರೆ, ಹೊಮ್ಮರೆ (ನಾ). ಚಿನ್ನದ ಬಣ್ಣದ ಜಿಂಕೆ ; ಸುವರ್ಣ ಮೃಗ : ತತ್ಪರದೂಷಣರ್ಕಳಂ ಕೊಂದೆಡೆ ಪೋಗಿ ಪೊಮ್ಮರೆಯ ನೆಚ್ಚಿಡೆ ತಪ್ಪದಿದಪ್ಪುದು (ಪಂಪಭಾ. ೯-೦೯) ; ಮಱೆದು ಗಿರಿತಟದೊಳೆಲ್ಲಿಯು ಮೊಱಗಲೊಡಂ ಪೊರೆದು ಪೊನ್ನ ರಜದಿಂ ಮೆಯ್ಗಳ್ ಮಿಱುಮಿಱನೆ ಮಿಱುಗೆ ಪೊಸ ಪೊಮ್ಮರೆಯಂತಿರೆ ಪರೆವುವಲ್ಲಿ ಹರಿಣಗಣಂಗಳ್ (ಲೀಲಾವ. ೯-೯೦) ; ಪೊಮ್ಮರೆವೋಲ್ ಪೊಳೆದು ಪಾಱು ಪೋದಂ ಶ್ವೇತಂ (ಶಮದ. ನ. ೨೫೩ ಪ್ರಯೋ). **ಹೊಮ್ಮರೆ** : ತಾ ಬಳಿಕ ಭೂಸುರನಾಲಯವ ಸಾರಿದನು ಹೊಮ್ಮರೆಯಾಕೃತಿಯ ತಾಳಿ (ಕುವ್ಯಾಲಿ. ೬೦೩. ೨೬-೨) ; ತೋಱಿದನು ತಾ ಬಳಿಕವಗೆ ಹದಿನಾಱುಬಣ್ಣದ ಪುಟದ ಚಿನ್ನಕೆ ನೂಱುಮಡಿಯೆನೆ ಹೊಳೆ ಹೊಳೆವ ಹೊಮ್ಮರೆಯ ರೂಪಕವ (ತೊರಣಾ. ೩-೬-೦೯); ಕಲಿಧನ್ವಿ ಹಳುವ ಹೊಕ್ಕನು ಹೊಮ್ಮರೆಯ ಹಿಂದೆ (ಶ್ರೀರಾಮಾ. ೨೩೫-೦೯೦).

[ಪೊಂ (< ಪೊನ್) + ಮರೆ₂]

ಪೊಮ್ಮಳೆ 'ಪೊಮ್ಮಟಿ³' ನೋ.

ಪೊಮ್ಮಟಿ³, ಪೊಮ್ಮಳೆ, ಹೊಮ್ಮಳೆ (ನಾ). ಚಿನ್ನದ ಮಳೆ ; ಸುವರ್ಣ ವೃಷ್ಟಿ : ಅಲರ್ವಟಿ³ ಪೊಮ್ಮಟಿ³ ಮಂದಾನಿಳನನಿಮಿಷ ದುಂದುಭಿಸ್ವನಂ

ದಿವಿಜಮುಖೋಚ್ಚಳಿತಾಹೋದಾನಸ್ವನಮಿಳಾತಳಾಶ್ಚರ್ಯಮಾಯ್ತು ಪಂಚಾಶ್ಚರ್ಯಂ (ಕಂದ್ರಪು. ೦೯-೦೨); ನಿರವಿಸೆ ಮನುಷ್ಯಧರ್ಮಂ ಪರವಾಹನೆ ಮೇಱಿ ಬಂದನೆಮ್ಮಂಗಳದೊಳ್ ಸುರಿಗುಂ ಪೊಮ್ಮಟ್ ಭರದಿಂ ಬರವೇಟ್ಕುಂ ಧನದನೆಟ್ಟು ಪೋಗದ ಮುನ್ನಂ (ಕಸಂ. ೬-೨೯೬). **ಪೊಮ್ಮಳೆ :** ಲೋಕವಟ್ಟಮೆನೆ ಪೊಂಮಳೆಯಂ ಕಱೆವಂ (ಎಳ. VI, ಕಡೂರು. ೦೩೯-೨೩; 1178); ಪೊಮ್ಮಳೆಯನೀವುತ್ತ ಕೈಲಾಸ ಸೂಱೆಗೊಟ್ಟು (ಪಿಕ್ಕಪು. ೬-೦-೮); ವಿಳಸದ್ಭಕ್ತಿಗೆ ಕೂರ್ತು ಸಪ್ತದಿನಪರ್ಯಂತಂ ನೆಲಂದೀವಿ ಪೊಮ್ಮಳೆಯಂ ಪೂಮಳೆಗೂಡಿ ತಾಂ ಕಱೆಯಿಸುತ್ತಾನಂದವಂ ಬೀಱನೇ (ಪ್ರಸಂ. ೩೬-೦೨೬). **ಹೊಮ್ಮಳೆ :** ಮೆಱೆವನೆಱೆಯಂಗನಾತನ ಕುಱುಪಿನ ಸುತನೆಱಗಿದವರ್ಗೆ ಮಳೆಯೆಱಗಿದವೊಲ್ ಕಱೆವಂ ಹೊಂಮಳೆಗಳಂ (ಎಳ. XI, ಬಾಸಂ. ೨೫-೨೦; 1224); ಸಿರಿಯಾಳನಂದದಲಿ ಆ ಸುತನನರ್ತಿಸೆನು ಹೊಮ್ಮಳೆ ಸೂಸವೇಳೆನು ಚೋಳನಂತೆ (ಬಸಪು. ೯-೩೩); ಸುರವಾಕ್ಯ ಸುರಭೇರಿ ಹೂಮಳೆ ಹೊಮ್ಮಳೆ ಸುರಭೀರವವೆಂದಿಂತು ಸುರಕೃತ ಪಂಚವೈಭವಗಳಾದುವು (ಕರಸ. ೩-೦೨೦).

[ಪೊಂ (< ಪೊನ್) + ಮಟ್]

ಪೊಮ್ಮಾಡ (ನಾ). ಚಿನ್ನದ ಉಪ್ಪರಿಗೆ,—ಮಹಡಿ : ಹರಿಣಾಕ್ಷಿಯಾದರ ದೊಳೀಕ್ಷಿಸುವಿಚ್ಛೆಯಿಂದ ಪೊಮ್ಮಾಡಮಂ ಪರಿದೆಯ್ದುವಾಗ (ರಾಘಸ. ೦೬-೯೯); ಬಳಸಿದ ಸಾಲದ ತೆನೆ ದಳಮೊಳಗಣ ಪೊಮ್ಮಾಡಮಮರ್ದ ಕರ್ಣಿಕೆ ಮಣಿಮಂಗಳಕಳಶಕಾಂತಿ ಮಧುವೆನೆ ಜಳರುಹಮೆನಿಸಿದುದು ರಮೆಗೆ ಭೂವರಭವನಂ (ಪ್ರಸಂ. ೯-೬೯). [ಪೊಂ (< ಪೊನ್) + ಮಾಡ$_1$]

ಪೊಮ್ಮಿಕೆ (ನಾ). ವ್ಯಾಪ್ತಿ; ವಿಸ್ತಾರ; ಹರಹು : ಸಮ್ಮುದದೊಳ್ಳೆತಂದು ಏಟರಾ ನೆವದಿ ಬೆಲೆಗೇಳೀ ಪೊಮ್ಮಿಕೆಯ ಜಾಣ್ಮೆಯೊಳು ಬಗೆಗಳ ನೆಮ್ಮದಿಯನರಿಯಲ್ಕೆ (ಕೃಷ್ಣಾರ. ೯-೩೦). [ಪೊಮ್ಮು$_1$ + —ಇಕೆ]

ಪೊಮ್ಮಿಗ, ಪೊನ್ಮಿಗ, ಹೊಮ್ಮಿಗ (ನಾ). = ಪೊಮ್ಮರೆ : ಪೊಮ್ಮಿಗವಿರ ದೊಯ್ದುದು ಸೀತೆಯನಗಲ್ಚಿ ನಿಲಲೀಯದಲ್ಲಿ ದಶರಥಸುತನಂ (ಕಾಪಂಪು. ೦೦೨); ಪಿಡಿಯಲ್ ಪೊಮ್ಮಿಗವೆಂದು ಪೋಗೆ ರಘುಜಂ ಭೂಪುತ್ರಿ ಸಂವ್ಯಾಸಿ ಯೆಂದಡಿಯಿಟ್ಟಳ್ (ಸೋಮೇಶ. ೯೩); ರಾವಣಂ ದುರುಳ ಮಾರೀಚಂಗೆ ಪೇಳಲ್ಕವಂ ಮುದದಿಂ ಪೊಮ್ಮಿಗಮಾಗಿ ತೋಱಲ್ (ದಶಾಪ. ೬-೨೦೬). **ಪೊನ್ಮಿಗ:** ಗಮಕಿವರ್ಯನ ವೇಣುವಾಣಿಗೆ . . . ನರ್ತಿಸುವಂತೆ ನಲಿ ದುದಾ ಪೊನ್ಮಿಗಂ (ಶ್ರೀಪಾಪು. ೨೩೨-೦೨೬). **ಹೊಮ್ಮಿಗ :** ಸುಱಿದಾ ಹೊಮ್ಮಿಗವೆಯ್ದೆ ಸೀತೆಯ ಖಳಂ ಕೊಂಡೊಯ್ದು ತಾಂ ಬಾಟ್ದನೇ (ಸೋಮೇಶ. ೯೨); ರಾಘವನು ಹೊಮ್ಮಿಗವುರುಕಪಟವೆಂದಱಿಯನೇ (ಜೀವಂಕ. ೯-೦೩); ಇದುವೆ ಹೊಮ್ಮಿಗವಧೆಗೆ ಕೋ . . . ಎನುತಸುರ ರಾಮನನೆಚ್ಚು ಮೂದಲಿಸಿ (ಕೌಶಿಂಗ. ೩೫-೩೦).

[ಪೊಂ (< ಪೊನ್) + ಮಿಗ]

ಪೊಮ್ಮಿಣಿ, ಹೊಮ್ಮಿಣಿ, ಹೊಮ್ಮಿಳಿ (ನಾ). ಬಂಗಾರದ ಸರಪಣಿ : ಪಿಡಿದು ಪೊಮ್ಮಿಣಿಯ ರನ್ನದ ಮಣಿಯ ಮೇಲೆ . . . ಕಡು ನೀಱೆಯೊರ್ವಳುಯ್ಯಲನಾಡುತಿರ್ದಳು (ರೇಪಣ. ೬-೨೩). **ಹೊಮ್ಮಿಣಿ :** ಮಡದಿಯರು ಹೊಮ್ಮಿಣಿಗಳನು ಕೈದುಡುಕಿ ತೆಗೆವ ಬೆಡಂಗು ಮನ್ಮಥ ಕಡುಗಿ ಬಾಳುಗಿವಂದವಾಗೆ . . . ನಲಿದೊಲೆದಾಡಿದರು ಕೋಮಳೆ ಯರುಯ್ಯಲೆಯ (ಜೀವಂಕ. ೦೬-೬೦); ಬಿಗಿದ ಱೆಂಚೆಯ ಹೊಮ್ಮಿಣಿಯ ಹೊರಜೆಗಳ . . . ದಂತಿಯ ಹೆಗಲ ಹೊಂಗದ್ದುಗೆಗೆ ಬಿಜಯಂಗೈದನಾ ಭೂಪ (ಕುಪ್ಯಾಸ. ೦೨-೯೬); ಒಗುಮಿಗೆಯೊಲವಿಂದುಯ್ಯಲನೇಱಿದ ಮುಗುದೆಯಲಘುಕುಚಮಧ್ಯದ ಹೊಮ್ಮಿಣಿ ಸೊಗಯಿಸಿದುದು (ಜಯಕಾ. ೦೯-೩೩). **ಹೊಮ್ಮಿಳಿ :** ಖಂಡಿಸಿ ಕಳಚಿದನು ಮೊಗರಂಬವನು ಹೊಮ್ಮಿಳಿಯ ಕುಣಿಕೆಯ ಮುಱಿದು ತಱಿದನು ಸುತ್ತ ಱೆಂಚೆಗಳ (ಕುಪ್ಯಾಪ್ರೋ. ೩-೫೨); ಹೊರಜೆ ಹೊಮ್ಮಿಳಿ ನಿಗಳ . . . ಕರದ ಹೊಗರಂಬದ ವಿಲಾಸದಿನೆಸೆದುದಾ ದಂತಿ (ಕೊರಣಾ. ೬-೨೯-೦೯).

[ಪೊಂ (< ಪೊನ್) + ಮಿಣಿ$_2$ (< ಮಿಳಿ$_2$)]

ಪೊಮ್ಮಿನ್ (ನಾ). ಹೊಳೆಯುವ ನಕ್ಷತ್ರ : ಪ್ರಕಾಶಮಾನವಾದ ತಾರೆ : ಇದು ಬಾನಿಂ ಬರ್ಪ ಪೊಮ್ಮಿಂದೊಣರ ತೆಱನಿದಲ್ತೊಂದ ಮಳ್ಮಿಂಚು ಮಿಂಚಲ್ಲದಿವರ್ಚಂದ್ರಾರ್ಕರೇಂ . . . ಎಂದುರ್ವಿದಲಂಪಿಂ ನೋಡೆ ಭೂಪಂ ಗಗನದಿನಿಟಿದರ್ಚಾರಣರ್ಚಾರುರೂಪರ್ (ಅರ್ಧನೇ. ೨-೫೯). [ಪೊಂ (< ಪೊನ್) + ಮಿನ್$_2$]

ಪೊಮ್ಮು$_1$, ಹೊಮ್ಮು$_2$ (ನಾ). ೧. ಆಧಿಕ್ಯ ; ಹೆಚ್ಚಳ : ತರುಲತಾ ಗುಲ್ಮಂಗಳ ಪೊ[ಪಾಕಾಂ. ಹೊ]ಮ್ಮಿನಿಂ ಪೆಕ್ಕಣಂಗೆಯ್ವ ಸೋಗೆಗಳಿಂದೆ . . . ತಂಬೆಲರಿಂದೆ ತಾಮ್ಮನೋಹರದ ವನಮಧ್ಯದೊಳ್ ಸರಸಿ ಮೆಱೆದುದು ಕೂಡೆ ಸೊಗಸುವೆರಸಿ (ಸೇರಪು. ೭-೦೬). **ಹೊಮ್ಮು$_2$:** ೨. ಹುರುಪು ; ಉತ್ಸಾಹ : ಬಲುಭಟರ ಹೊಳೆಗಳ ಹೊಮ್ಮಱಿದು ಕೊಟ್ಟನು ನಳನ ವಶಕೆ (ಕೊರಣಾ. ೬-೫-೦೦) ; ಹೊಸಹರೆಯದ ಹೊಮ್ಮಿನ ಬಾಲೆವೆಂಗಳು ಜಸವಡೆದೆಸೆದರೇನೆಂಬೆ (ಕಂಪಂ. ೨೯-೯೦). ೩. ಜಂಬ ; ಗರ್ವ ; ಸೊಕ್ಕು : ಹೊಮ್ಮಿನಲಿ ಸಿಂಹಾಸನಾಗ್ರದ ಸೊಮ್ಮಿನಲ್ಲಿರೆ ನೀನು ನಮ್ಮವರೊಮ್ಮದೀ ಮಾತಿದನು ಮಾಡಿದ ನೋಡಿ ಬಳಿಕೆಮಗೆ (ಸಂಪಂ. ೩-೦೦) ; ಕಾಗೆಕೂಟದೊಲೆಲ್ಲ ಕುಲಗೆಟ್ಟಾಗಲಾಡಿದ ಹೊಮ್ಮು ನೃಪನೆಡಗಾಗುವದೆ (ಬಿಜ್ಜಪು. ೬-೫೯). ೪. ಕಾರ್ಯವ್ಯಾಪ್ತಿ ; ನಡವಳಿಕೆ ; ವ್ಯವಹಾರ : ಕಮ್ಮೆಯನ ಚೇಳಿನ ಹೊಮ್ಮೆರಡು ಒಂದಯ್ಯ (ಸರ್ವಜ್ಞ. ೦೦೦೯). ೫. ಸತ್ತ್ವ ; ಶಕ್ತಿ : 'ಹೊಮ್ಮಿಱಿ' ಪರಾ.

ಪೊಮ್ಮಿದ = ಮಿಗಿಲಾದವನು : ದಿಮ್ಮಿದರಕ್ಕರಕ್ಕಱಿವರೊಳ್ ನುಡಿಯೊಳ್ ಕಡುಜಾಣರಂದದೊಳ್ ಪೊಮ್ಮಿದರೊಂದಿ ನಿಂದ ಸಿರಿಯೊಳ್ (ಕಬ್ಬಿಣಾ. ೦೦).

[< ಪೊಣ್ಮು./ತಮಿ. ಪೊಮ್ಮಲ್ ; ತೆಲು. ಹೊಮ್ಮು, ಒಮ್ಮು]

ಪೊಮ್ಮು$_2$ 'ಪೊಮ್ಮ' ನೋ.

ಪೊಮ್ಮುಗಿಲ್ (ನಾ). ಹೊನ್ನಿನ ಮಳೆಯನ್ನು ಸುರಿಸುವ ಮೋಡ : ಎಱಗಿದ ಜನಕ್ಕೆ ಪೊಂಮುಗಿಲೆಱಗಿದವೊಲು ಲೋಕ ವಟ್ಟಮೆನೆ ಪೊಂಮಳೆಯಂ ಕಱೆವಂ (ಎಳ. VI, ಕಡೂರು. ೦೩೯-೨೩ ; 1178).

[ಪೊಂ (< ಪೊನ್) + ಮುಗಿಲ್]

ಪೊಮ್ಮೂಡಿಗೆ, ಹೊಮ್ಮೂಡಿಗೆ (ನಾ). ಚಿನ್ನದ ಬತ್ತಳಿಕೆ : ಪೊಳೆವ ಪೊಮ್ಮೂಡಿಗೆಯ ಪೊಂಗರಿಯ ಬಾಣಗಳ ನಲವಿಂದೆ ಸಿಂಜನಿಗೆಯಳವಡಿಸಿ (ಪಪಪೋ. ೦೨-೫೬). **ಹೊಮ್ಮೂಡಿಗೆ :** ಉಗಿದನುರಗಾಸ್ತ್ರವನು ಹೊಮ್ಮೂಡಿಗೆಯೊಳಗೆ ಹೊಱಕಯ್ಯ ಗಾಳಿಗೆ ಹೊಗೆಯ ಹೊದಱಿನ ಹೊರಳಿ ಹಬ್ಬಿತು ಕೂಡೆ ಕಿಡಿಯಿಡುತ (ಕುಪ್ಯಾಕ. ೨೫-೯); ಹೊಮ್ಮೂಡಿಗೆಯ ಹೊದಱುಗಳ ಬಿರುದಿನ ಬೀಡುಕಾಱರು ಬೀದಿವರಿದಟ್ಟಿದರು ಬಲಿ ಮುಖರ (ಕೊರಣಾ. ೬-೩೬-೦೦). [ಪೊಂ (< ಪೊನ್) + ಮೂಡಿಗೆ]

ಪೊಮ್ಮೆ 'ಪೊಮ್ಮ' ನೋ.

ಪೊಮ್ಮೊಗೆ (ನಾ). ಚಿನ್ನದ ಪಾತ್ರೆ : ವೃತ್ತಕುಚಾನ್ವಿತೆಯೊಡಲ ಮಾಸಿನ ಬೀಜ ಮತ್ತೊಂದು ಶಿಶುವಾಗಲೆನುತ ಬಿತ್ತಲುದ್ಯೋಗಿವ ತೆಱದಿಂದೆ ಪೂಳ್ದರು ಚಿತ್ರಾಯವೆತ್ತ ಪೊಮ್ಮೊಗೆಯ (ಪೋಹಕ. ೦೬-೨೨).

[ಪೊಂ (< ಪೊನ್) + ಮೊಗೆ$_3$]

ಪೊಯ್$_1$, ಪುಯಿ$_1$, ಪೊಯಿ, ಹುಯ್$_1$, ಹುಯಿ$_1$, ಹುಯ್ಯು$_1$, ಹೊಯ್$_1$, ಹೊಯಿ$_1$, ಹೊಯ್ಯು$_1$ (ಕ್ರಿ). **ಪೊಯ್ದು$_1$, ಹುಯ್ದು$_1$, ಹೊಯ್ದು$_1$** (ಭೂತನ್ಯೂ). ೧. ಹೊಡೆ ; ಬಡಿ ; ಅಪ್ಪಳಿಸು : "ಪೊಯ್—ತಾಡನೇ" (ಶಪುರಾ) ; ಕಡುಗುಣ್ಪುವೆರಸು ದಾಂಟೆಂ ಗಡ ಮೇರೆಯನೆಂದು ವಜ್ರವೇದಿಕೆಯಂ ತಾಂ ತೊಡೆಸಕ್ಕಿಪೊಯ್ವವೊಲ್

ಪೊಯ್ದೊಡನೊಡನುಚ್ಚಳಿಪುವಿದಱ ತುಂಗತರಂಗಂ (ಆಪು. ೦೨-೦೨೯); ಕೆಲರಂ ದೆಸೆವಲಿಗೆಯ್ದಂ ಕೆಲರಂ ಭುಜಬಲದಿನಱಿದು ಶಿಲೆಯೊಳ್ ಪೊಯ್ದಂ (ಗದಾಯು. ೩-೦೦). ೨. ಕಡಿ; ಕತ್ತರಿಸು: ಇಸುವಿಡುವ ಪೊಯ್ವ ಕುತ್ತುವ ಮಸೆಯಂ ಪತ್ತಿಸುವ ಕೈದುಬಿನ್ನಣಮಂ ಈಕ್ಷಿಸಲು (ಪಸುಚ. ೫-೦೨೫); ಫಲದಿಂ ಪೂಣಿಸಿ ತಲೆಯಂ ಸೆರಗಿಲ್ಲದೆ ಪೊಯ್ದೆ (ರಘುವಂಶ. ೭-೦೦೬); ಪಶುಗಳನ್ ಪೊಯ್ದು ನೆತ್ತರನ್ ಕೋಡಿ ಕೆಡಪಿದಯ್! (ಅಶ್ವತ್ಥಾ. ೦೫-೩೦೯). ೩. ತಾಕು; ತಗಲು: ಸೊವಡೊಂದೊಯ್ಯನೆ ಬಂದು ಪೊಯ್ದೆ ಮುನಿಸಿಂದಾರಯ್ದು . . . ನಿಂದೋರೊಂದಱೊಳ್ ತಾಗಿ ಪೋರ್ವವು ಕಾಡಾನೆಗಳ್ (ಶಾಸ್ತ್ರಾಪ. ೩೯); ತಾಂ ಪೊಯ್ದೆ ನುಣ್ಗದಂಪಂ ಕರ್ಣಕುಂಡಲಂ (ಶಾಪಟ. ೯-೪೬); ಗಂಡಮನೋರಂತಿರೆ ಪೊಯ್ದೆ ಕುಂಡಲಯುಗಂ (ಶಾಸ್ತ್ರಶಾ. ೬೫೬). ೪. ಮಿಡಿ; ಮೀಟು: ತಂತಿಯಂ ನೀವಿ ನಿರ್ಮಳಮಂ ಮಾಡಿ . . . ಸುಸ್ಥಾನಕಂಗಳನೋರಂತಿರೆ ಪೊಯ್ದು ಪೊಯ್ದು . . . ಸುಕಂಠಿ ಬಾಜಿಸಿದಳಾ ಜಾಣಂ ಲಸದ್ವೀಣೆಯಂ (ಶಾಸುಪಾ. ೦-೩೬). ೫. ಮೃದಂಗ, ತಬಲ ಮುಂತಾದ ವಾದ್ಯಗಳನ್ನು ಬಾಜಿಸು: "ಸೂಳಯಿಸಿತೆನಲ್ ಪೊಯ್ದುದು" (ಶಾರಶಿ. ೨೦); ಅತ್ತಮಿತ್ತಂ ನಿಱುವ ಕರಯುಗಂಗಳ್ ಪೊಯ್ವ ದೇವಾನಕಂಗಳ್ . . . ಬೆಡಂಗಂ ಮೆಱೆಯೆ (ಆಪು. ೬-೩೨); ಆವುಜಮನಳವಡಿಸಿಕೊಂಡು ಝಂಕಾರವಂ ಪೊಯ್ದು (ಶಾಂತೀಶ್ವ. ೦೬-೬೬ ಪ). ೬. ದಡದಡಿಸು; ಬಡಿದುಕೊಳ್ಳು: ಮಾರಾಧ್ವರಪಾವಕಜ್ವಾಲೆಯೆನಲು ಕುಮಾರತಿಯುಸಿರೊಳು ಪೊಯ್ದೆ (ಪೋಪಕ. ೨೯-೨೦); ಸೂಸುವ ಸುಯ್ ಬೆಮರೇಱೆದಾನನಂ ಪೊಡೆವೆರ್ದೆ ಪೊಯ್ವ ಕಿರ್ಬರಿ . . . ತೋಱೆ ಪುಳಿಂದನ್ನೆದುತೆ (ರಾಜಶೇ. ೩-೦೦೬); ಪೊಯ್ವೆರ್ದೆಗಳ ಸೆರಗ ಮರೆದು ಬಳಿ ಎಡಿದು (ಕಾಲೂರ. ೦೩೦-೨೬೯). ೭. ಪೆಟ್ಟನ್ನು ಹೊಂದು; ಹೊಡೆತಕ್ಕೆ ಒಳಗಾಗು: ಈ ಇರುಳ್ ನಡೆದುದೊಂದದ್ಭುತಂ. ಪಟ್ಟ ಪಡೆ ಪಟ್ಟುಂತೆ ಪೊಯ್ದತ್ತು (ಅಶ್ವತ್ಥಾ. ೦-೦೨). ೮. (ಭೂತ. ಪಿಶಾಚಿಗಳಂತೆ) ಮೆಟ್ಟಿಕೊಳ್ಳು; ಆವರಿಸು: ಆರೋಗಣಿಯ ಸಮಯಮಾರ್ಗೆ ಭೂತಂ ಪೊಯ್ದುದಾರನೀ ಮನೆಯೊಳಿಂತೀಗಳೇತಕೆ ಮೌನಂ (ಕೈಪಾಶಾ. ೬-೩೦). ೯. ಕೊರೆ; ಕಡೆ; ಕಂಡರಿಸು: ಕಲ್ಕುಟಿಗ ದೇಯೋಜು ಪೊಯ್ದಕ್ಕರವಮ್ (ಎಇ. XV, ೩೩೨-೩೬; 1029); ಚೆಣ್ಣಆಚಾರಿಯ್ಯ ಮಗಂ ಅನಿ ××ಗ××ಜ್ಜೆ ಆಚಾರಿ . . . ಪೊಯ್ದ ಅಕ್ಕರವಮ್ (ಎಇ. IV, ಗುಂಡ್ಮಪೇ. ೯೩-೦೩; 1049); ದಾಮರಾಜಂ ಸಾಸನಗಬ್ಬಮಂ ಪೇಳ್ದು ಬರೆದಂ ಪೊಯ್ದಂ ಸಾನ್ತೋಜನುಂ ಪದ್ಮನುಂ (ಎಇ. VII, ಶಿಮೊ. ೦೦-೩೯; 1085 ?). ೧೦. ನಾಶಮಾಡು; ಧ್ವಂಸಗೊಳಿಸು: ಭೀಮಸೇನಂ . . . ಬಾಱೆಯ ಚೆಲ್ವನವ್ವ ಬನಮಂ ಕಾಡಾನೆ ಪೊಯ್ದಂತೆ ಪೊಯ್ದಿನಿಸುಂ ಮಾಣದೆ ನೀಚ ಕೀಚಕನಿಕಾಯಧ್ವಂಸನಂ ಮಾಡಿದಂ (ಪಂಪಭಾ. ೮-೮೦). ೧೧. [ಗಣಿತ] ಗುಣಿಸು: ತಿವಿ, ಪೊಯ್, ಪೆರ್ಚಿಸು . . . ಬೆಳಸೆಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು (ವ್ಯವಹಾ. ೦೦-೬). ಪೊಯಿ$_1$: ೧. ಬಯಿದೊಡೆ ಪುಯಿದನೆ ಪುಯಿದೊಡೆ ಯಱಿದನೆ (ಸ್ಥಾಪಪ. ೩೯-೯೩). ಪೊಯಿ: ೧. ಇನ್ನಿರೆನ್ನುಂ ಸಿಂಗದನ್ತಿರೆ ಹರಿ ಬೀರಲಕ್ಷ್ಮೀ ನೆರವಾಗಿರೆ ಚೋಟನ ಕೋಟೆಯೆಮ್ಬ ಸಿನ್ದುರದ ಶಿರಾಗ್ರಮಂ ಬಿರಿಯೆ ಪೊಯಿದುಂ ಕದನ್ಯೆಕ ಸೂದ್ರಕಂ (ಎಇ. III, ಮುಂಡ್ಯ. ೯೦-೦೯; 950). ೧೧. ಪೊಯಿ ಗುಣಿಸು ಪೆರ್ಚಿಸೆನಲಿವು ಗುಣಕಾರಭಾಷೆಗಳ್ (ವ್ಯವಹಾ. ೦೦-೦೬). ಹುಯ್$_1$: ೧. ಚಿಕ್ಕತಂಮನು ಮೂಡಣಬೆಟ್ಟದಲ್ಲಿ ಅಸಹಾಯಸೂರನಾಗಿ ಕೊಡಲಿಯಲ್ಲಿ ಕಳ್ಳರ ಹುಯ್ದು ಕೆಡಹಿ ತಾನು ಬದ್ದ (ಸೌಇ. IX-ii, ೯೨೦-೩; 1386); ಹರಿಯೊ ಹರಿಯೋ ಹುಯ್ಯೊ ಕಪಿಗಳ (ಕೌಶಿಗಾ. ೩೨-೦೩); ಕಡುಭರದಿ ಹತ್ತಿ ಕೋಟೆಯ ಮೇಲೆ ಕುದುರೆ ಕಾಲಿಡುವುದಂ ಕಂಡೆಕ್ಕಟಿಗಳೊಳಗಣಿಂ ಬಂದು ಕೆಡೆವಂತೆ ಹುಯ್ದು (ಸಪ್ತಶೌ. ೩-೩೩). ೫. ಪ್ರಯಾಣಭೇರಿಯ ಹುಯ್ಯ ಹೇಳು (ಪಕ್ಕಿಪ್ರ. ೩-೨೩-೩೯). ಹುಯ್ಯಿ$_1$: ೧. ಇವನು . . . ದಾರಿಯನ್ನು ಕಾದು ಬಂದವರನ್ನು ತಲೇ ಹುಯಿದು ಅವರ ಹತ್ತಿರ ಇದ್ದುದನ್ನೆಲ್ಲಾ ಕಸಿದುಕೊಂಡು ಹೊಟ್ಟೆ ಹೊರೆಯುತ್ತಿದ್ದನು (ಪಲಿಕಾಂ. XII, ೦೨). ಹುಯ್ಯು$_1$: ೧. ಈ ಕೋಲನ್ನು ಹುಯ್ಯುವಾಗ ವೇಗಕ್ಕೆ ಮತ್ತು ಬಿರುಸಿಗೆ ಪ್ರಾಧಾನ್ಯ ಹೆಚ್ಚು (ಕಪಕೋ. I, ೭೦೬). ೨. ಆ ದೊರೆಯು ಇವಳ ತಲೆಯನ್ನು ಹುಯ್ಯುವ ಹಾಗೆ ಚಂಡಾಲನಾದ ವೀರಬಾಹುವಿಗೆ ಆಜ್ಞಾಪಿಸಿದನು (ಪಲಿಕಾಂ. IX, ೨೯). ಹೊಯ್$_1$: ೧. ಬಾಯೆದ್ದು ಬಯ್ಯಲಾಱೆ ಕಯ್ಯ ಎದ್ದು ಹೊಯ್ಯಲಾಱೆ (ಬಸೇಕ್ಷ. ೬೨); ಬಸುಱು ಹೊಸೆದು ಹೊಯ್ದು ನೆಲನಂ ತಿರುಗಿ (ತಿರುಪ. ಪೇ. ೦೬-೪); ಒಲೆದು ಕೇಸರಿ ಹೊಯ್ದುವೋಲವ್ವಳಿಸಿ ಕರ್ಣನ ಹಯರಥವ ನಪ್ಪಳಿಸಿ ಮರಳುವ ಲಾಗಿನಲಿ ಖಂಡೆಯವ ಖಂಡಿಸಿದ (ಶಾಸ್ತ್ರಾಪ್ರೋ. ೬-೩೦). ೨. ಮೆಯ್ದೋಱೆ ಬುದ್ಧಿವೇಳ್ವರಸು ನಂಟರ್ಕಳಂ ಹೊಯ್ದ ನಿಕ್ಕಡಿಯಾಗೆ (ಇಪಕ. ಪೇ. ೪೦-೬); ಸಾವಿರಕಾಱಿಯ ಹೊಯ್ದುರು ಪೂಜಿಸಿದರಾ ಚತುರ ಚಂಡಿಕೆಯ (ಸಂಭಕ. ೦೭-೦೦೦); ಮದದಂತಿಗಳ ಸೊಂಡಿಲ ಹೊಯ್ದು ಸುಭಟರ ಸದೆದರೇವೇಳ್ವೆನದ್ಭುತವ (ಪಂಪಭಾ. ೩-೭೮). ೩. ಸತಿಯರು ಭೂಪನಿರವ ಕಂಡುರಿ ಹೊಯ್ದ ಹೂಗಣೆಗಳಂತಿರ್ದರು (ಪಕಶಾ. ೮-೭೪). ೫. ಹೊಯ್ ಡಂಗುರವನೆವಂ ಹೊಱಗು ಹೊಱಗೀ ಸಭೆಗೆ ಹೊಯ್ ಡಂಗುರವನಾವನಾದೊಡಂ ಹೊಱಗೆಮಗೆ (ಪುಷೇರ. ಪೇ. ೭೪-೯); ಹಲಾಯುಧನು ತಾಳವಂ ಹೊಯ್ದನು (ಬಸಪು. ೩೭-೯೯). ೬. ಹೊಯ್ವಳ್ಳೆಗಳ ಮುನಿಜನವ ಕಂಡರು ಪಾಂಡುನಂದನರು (ಶಾಸ್ತ್ರಾಶ. ೨೨-೨೨); ಕಡಲಳ್ಳೆ ಹೊಯ್ವಂತೆ ಸಿಂಧು ಕಂಪಿಸಿತು (ಪೋಪಕ. ೨-೭). ೯. ಗಂಗೋಜಂ ಹೊಯ್ದ ಶಾಸನಂ (ಎಇ. V, ಹಾಸಪ. ೩೯-೩೬; ಸು. 1000 ?); ಆಸ್ಕಂದದೇವರು ಬರೆದ ಶಾಸನ ಕೇತೋಜ ಹೊಯ್ದ (ಸೌಇ. IX-i, ೨೦೩-೨೬; 1122). ೧೦. ನಾಳೆ ಹಗೆವನ ಹೊಯ್ವೆನೆಂಬುದ್ಬಾಳುತನ ವಿನ್ನೊಮ್ಮೆ ಭೂಪತಿಯೋಲೆಗಾತಿಯರಿದಿರಲಾಡಿದ ಭಾಷೆಯಿನ್ನೊಮ್ಮೆ (ಶಾಸ್ತ್ರಾಪ್ರೋ. ೯-೯೩). ೧೨. ಕುಟ್ಟು; ಜಜ್ಜು: ಅಱಿಯದವರೊಡನೆ ಸಂಗವ ಮಾಡಿದರೆ ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ (ಪುಹಾಪೇ. ಇ. ೬೮-೦೬೦). ಹೊಯಿ$_1$: ೧. ಅರಗಿನ ಪುತ್ತಳಿಯನುರಿಯ ನಾಲಗೆ ಹೊಯಿದು ಮಾತಾಡುವ ಸರಸ ಬೇಡ (ಇಸಪ. ೬೬೦ ಅ); ಮುಂದೆ ತ್ರಿವಿಧಮುಲವಿದೆ ಆಸೆಯ ಕುಳಿ ಆಳವಿದೆ ಎಡ ಬಲದಲ್ಲಿ ರೋಷ ತಾಮಸವೆಂಬ ಹೊಯಿಲು ಹೊಯಿವುತ್ತಿದೆ (ಸರ್ವಪ. ೯೦-೨೨೨); ಶಿಶುಗಳನು ಖಳ ದುರಾತ್ಮಕ ಕಂಸ ತಾನಾಗಳು [ಭರದಿ ಬಂ]ದತ್ತಲೊಯಿದತಿಮುಳಿದು ಶಿಲೆಯೊಳಗಸಗಪೊಯಿಲನು ಹೊಯಿದು ಮಿಗೆ ಕೊಂದ (ಸಾಕೃಶಾ. ೨೦-೩). ೫. ಹೊಯಿದ ಹೊಱೆಗೆ ಕುಣಿದಾಡುವರೆಲ್ಲ ಹಾಡಿದ ಗೀತಕ್ಕೆ ತಲೆದೂಗುವರೆಲ್ಲ (ಸಕಾಪ. ೬-೨೩); ಜಡರುಗಳಿರಾ ತೊಲಗಿ ಬೋ ಎನುತಡಿಗಡಿಗೆ ಜಯಘಂಟೆಯನು ಹೊಯಿದು (ಇಸಪು. ೨೦-೦೦). ೯. ಯಿಾ ಶಾಸನವ ಹೊಯಿದ ಹುಲಿಯೂರ ಸೋಮನಾಥನ ಮಗ ಅಲೋಜಗವುಡಗಳ ಒಪ್ಪ (ಎಇ. XII, ಕುಹೊಗೊ. ೦೦೬-೨೩; 1429); ಶ್ರೀ ಶಾಸನವ ಹೊಯಿದಾತ ಹೊನ್ನ ಹಲೆಗೆಯ ಮಗ ಕರವೀರಯ್ಯ (ಎಇ. XI, ಸತ್ಕಪು. ೦೩-೨; 1605). ೧೩. ಒಪ್ಪಿಕೊಳ್ಳು; ಅಂಗೀಕರಿಸು; ಸಮ್ಮತಿಸು: ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ (ಇಸಪ. ೬೬೯). ೧೪. ಕಾಳಗ ಮಾಡು: ಕರೆಕರೆದು ಮೂದಲಿಸಿ ಕಡುಹಿನ ದುರುಳರುಬ್ಬಿನ ಮೇಲೆ ಹೊಕ್ಕಬ್ಬರಿಸಿ ಹೊಯಿದರು ಕಾದಿ ಕೊಂಡರು ಕಾಲನರಮನೆಯ (ಶಾಸ್ತ್ರಾಪ್ರೋ. ೯-೨೮). ಹೊಯ್ಯು$_1$: ೧. ತಾನೋವಿ ಮೀಯುತ್ತಿರಲು ನಿನ್ನಯ ಶೀವ್ರ ತೆರೆಗಳಲಿ ಓವೆನುತ ಹೊಯ್ಯಲಿಕೆ ನಿನಗೆಯು ನಾವು ನುಡಿದೆವು (ಸಂಭಕ.

೦೨-೨೯); ಚಿತ್ತಜಂ ಕತ್ತಿಯಂ ಕಿತ್ತುಕೊಂಡೆತ್ತಿ ಹೊಯ್ಯುತ್ತೆ ಬರಲು (ಕೈಪುಣಾ. ೨೬-೬); ಆ ಅಂಗಿಯನ್ನು ದೊಪ್ಪನೆ ಹಾಸುಗಲ್ಲಿಗೆ ಹೊಯ್ಯುತ್ತಾನೆ (ರೇಕನ್ಯ. ೪೦). ೫. ಹೊಯ್ಯೋ ಡಂಗುರವ ಜಗದಯ್ಯನಯ್ಯ ಶ್ರೀಹರಿಯಲ್ಲದಿಲ್ಲವೆಂದು (ಪುರಂದ. ೨.೨೦ ಪಲ್ಲವಿ); ತಪ್ಪದೆ ಗಳಿಗೆಗೊಮ್ಮೊಮ್ಮೆ ಭೇರಿಯ ಹೊಯ್ಯುತಿಪ್ಪುದದೊಂದು ಬಾಗಿಲೊಳು (ಪೋಹತ. ೨೦-೩೦). ೬. ಢಗೆ ಹೊಡೆದಳ್ಳೆ ಹೊಯ್ಯುತೆ . . . ನಾಯಿಗಳಡಸಿದುವೆಡಬಲದೆ (ಪೋಹತ. ೦೯-೦೯).

[ದೇ.॥ ಮಲ. ಪೊಯ್ಯು; ಕೊಡ. ಪೊಯ್; ಕೋತ. ಪೊಯ್, ಒಯ್]

ಪೊಯ್$_2$, ಹುಯ್$_2$, ಹುಯ್ಯಿ, ಹುಯ್ಯಿ, ಹುಯ್ಯು$_2$, ಹೊಯ್$_2$, ಹೊಯ್ಯಿ, ಹೊಯ್ಯಿ, ಹೊಯ್ಯು$_2$ (ಕ್ರಿ). ಪೊಯ್ದು$_2$, ಹುಯ್ದು$_2$, ಹೂದು, ಹೊಯ್ದು$_2$ (ಭೂತನ್ಯೂ). ೧. ಸುರಿ; ಎರೆ: ಪೊಸವುಣ್ಗಳೊಳ್ ಪೊಯ್ ಮಱುಗುವಿನಂ ಲೋಹವಾರಿಯಂ ಮಱುಗುವಿನಂ (ಪಡ್ಮಾರಾ. ೦೨೬-೩); ಮಣಿಮಯಕುಂಭದಿನಂದು ಪೊಯ್ದಳೊರ್ವಳ್ ವಿದಳಿತಪಂಕರುಹವದನೆ ಕುಂಕುಮಜಳಮಂ (ಶಾಪಂಪೂ. ೬೬); ಮದವಶೀಕರಣಶೃಂಗಾರರಸಮಂ ಪೊಯ್ವಂತೆ ಕಸ್ತೂರಿವಾರಿಯಂ ಪೊಯ್ದುಂ (ಕುಸುಪಾ. ೩-೦೩೩ ಪ). ೨. ವರ್ಷಿಸು; ಕರೆ: ನೆಲನಱಿದೂಡುವ ಪೊಬಿನೀರಲಂಪಿನಿ ಪದಕೆ ಪೊಯ್ವ ಮಟಿನೀರ್ (ಕಬ್ಬಾಪು. ೩೨೬ ಪ್ರಾಪ್ಯಾ). ೩. ನೆಡು; ನಾಟು: ಅಗೆಯಂ ಪೊಯ್ವರ್ ಸೊಡರಂ ಪೊತ್ತಿಸುವರ್ ಸತ್ತೆಡೆಯೊಳ್ ತವಗಂಜಿ ಭೀತಿಯಿಂದ ಮೂಢರ್ (ಸಪುಪ. ಅಪುಪಂ. I, ೩೭೯-೨೯); ಪೊಸಬೆಳ್ಳಿದಾವರೆಗಳಾವೆಡೆಯೊಳ್ ನಡೆವಲ್ಲಿ ಪೊಯ್ದ ಪೂಗುಡಿ ಗಡ (ಕಬ್ಬಾಕಾ. ೦೮೩); ಗುಡಿಯಂ ಪೊಯ್ದಾನೆಯ ಪೊಂದೊವಲಿಂದುಡಿದ ಪತಾಕಾಪಟಸಂತತಿಯಿಂದೆಡೆವಱಿಯದ ಸರವತಿಯಂ ಬಿಟ್ಟು (ಜಯಕಾ. ೭-೨೯). ೪. ಅಚ್ಚಿಗೆ ಹಾಕು; ಎರಕಕ್ಕೆ ಹಾಕು: ಸುವರ್ಣಮನೊರೆದುಂ ಕಡಿದುಂ ಕಾಸಿಯುಂ ಪೊಯ್ದುಂ ನೋಡಿ ಪರೀಕ್ಷಿಪಂತರ್ ಪರೀಕ್ಷಿಸಿಕೊಳ್ವಂತೆ (ರರ್ಮಪ. ೦೦-೩೯ ಪ). ೫. ಸೂಸು; ಎರಚು; ಚಿಮುಕಿಸು; ಸಿಂಪಡಿಸು: ಆಗಳಂಗರಾಜಂ . . . ದುಕೂಲಾಂಬರದೊಳಿಂದಾಗಿ ಚಲ್ಲಣಮನುಟ್ಟು ಪುಡಿಗತ್ತುರಿಯ ತಲೆಯೊಳ್ ತೀವೆ ಪೊಯ್ದು (ಪಂಪಪಾ. ೦೨-೦೦೬ ಪ); ಕಣ್ಣೊಳ್ ಮಳಲಂ ಪೊಯ್ದುಟ್ಟುದಂ ಕೊಂಡರೆಂಬಂತೆ (ರರ್ಮಾಪ್ಯ. ೬-೨೦೬); ಕೆಮ್ಮನೆ ಕೈಗಾದಿರದೋ ಮದುಪ್ಪನೊಲೆಯೊಳ್ ಪೊಯ್ವಂತೆ ಪಾಱೀಟಿ ದುರ್ಜನನಂ ಬಯ್ವುದು ಬಯ್ದೊಡಲ್ಲದವನಂ ಪೇಟ್ ಭಾವಿಸಲ್ ಬರ್ಕುಮೇ (ಸೂಕ್ತಿಸು. ೦-೩೨). ೬. ಬೀಸು; ತೀಡು: ಕತ್ತುರಿಯ ತಗುಳ್ದು ಪೊಯ್ವ ಸೊವಡಾ ಸೊವಡೊಳ್ ಕಡುಸೊರ್ಕು ಸೊರ್ಕಿಗಾವರಿಸುವ ತುಂಬಿ ಚೆಲ್ವೆಸೆಯೆ ಕಣ್ಗೆಸೆದತ್ತು ಖಗೇಂದ್ರನೋಲಗಂ (ಅದಿಪು. ೨-೩). ೭. (ದಾನವಾಗಿ) ಕೊಡು; ನೀಡು: ಪನ್ನಿರ್ವ್ವರಾ ಏಟ್ವರಾ ಪೊಯ್ದ ಧರ್ಮ್ಮಮಿದೊಮ್ ಕೆಡಿಸಿದೊನ್ ಪಞ್ಚಮಹಾಪಾತ[ಕ]ನಪ್ಪೊನ್ (ಎಕ. IV, ಶಾಪುರಾ. ೬೩-೦೦; ಸು. 750); ಈ ಎನೆತುಂತ ಜಡಿಯಕ್ಕೆ ಪೊಯ್ದೋದು (ಎಕ. IX, ಸಂಪುಂ. ೬೦-೦೨೬; 797); ಮನೆ ತುಂಬಿದ ಪೊನ್ನಂ ಪೊಯ್ದು ಮನಂ ತೀವಿದ ಪರಿಣಾಮತೆಯಂ ಕೊಟ್ಟು ಅವರಂ ಕಳುಪಿ (ಪಂಪಿರ. ೨-೯೬). ೮. ಹೊಮ್ಮಿಸು; ಉಂಟಂ ಮಾಡು: ಮದನನಾಜ್ಞೆಗಳ್ಕದರ್ ಮೋಹಿಗಳ ಕುಲಕೆ ಹೊಱಗೆಂದು ನೂಪುರರವದೆ ನಾದಮಂ ಪೊಯ್ವರಂಗನೆಯರಲ್ಲಿ (ಪಡ್ಮಕಾ. ೬-೯೦). ಹುಯ್$_2$: ೧. ಆಜ್ಯ ಹುಯ್ದರಾಗುವುದಿಲ್ಲ (ಶಾಪುಕಾಂ. ೬). ೨. ವೈಡೂರ್ಯಮಣಿಯ ಬೆಳ್ಸರಿ ಹುಯ್ಯೆ (ಸಮ್ಯಕ್ಕೌ. ೭-೩೯); ದೈವಕೆರಗಳು ತನ್ನ ಪತಿಗೆರಗು ತೇಳುವಳು ಅಂಥವಳು ಹುಯ್ಯೆನಲು ಮಳೆ ಹುಯ್ವುದು (ಕುಲಿಲ್. ೨೩) ೫. ಅಕ್ಕವ್ಳೇ ಗಂಗೇ ದಡದಲ್ಲಿ—ಸರಸತಿಯ ಅಕ್ಕೀ 'ಹೂದ'ವಳಾ ಕರೆತನ್ನೀ (ಹುಟ್ಟಿಹ. ೦೭೩). ಹುಯ್ಯಿ: ೧. ಒಮ್ಮಾನ ಹಾಲ ಹುಯಿದವನು ಸಟ್ಟುಗದಿ ತೊಳಸಿ (ಸೂಪಶಾ. ೦-೯೦). ಹುಯ್ಯಿ: ೧. ಆ ಪಾತ್ರೆಯ ತುಂಬ ನೀರನ್ನು ಹುಯ್ಯಿ (ರೂಢಿ). ಹುಯ್ಯು: ೧. ನೀರ ಹುಯ್ಯೋಳವಳೆ ಹಣ್ಣು ಮೆಲ್ಲೋಳವಳೆ (ಪಾಪದ. ೯೩). ೨. ಹಸ್ತೆಮಳೆ ಎತ್ತಲಾದರೂ ಹುಯ್ಯುತ್ತೆ (ಗಾರ); ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ (ರೂಢಿ). ಹೊಯ್$_2$: ೧. ಆಮಿಕ್ಷೆ-ಕಾಯ್ದು ಬಿಸಿಯಾಗಿರ್ದ ಹಾಲಿನಲಿ, ಆವುದಾನೊಂದು ಮೊಸರ ಹೊಯ್ದುದಱತ್ತಣಿಂದ ಒಡೆದುದು (ಪಾಪಕಾ. ೬); ಬೇವಿನ ಬೀಜವ ಬಿತ್ತಿ . . . ಜೇನುತುಪ್ಪವ ಹೊಯ್ದರೆ ಸಿಹಿಯಾಗಬಲ್ಲುದೆ ಕಹಿಯಹುದಲ್ಲದೆ (ಬಸವ. ೬೨೭); ನೀರ ಹೊಯ್ ನಂದಿಸು (ಕೊರಕಾ. ೩-೯-೭೩); ಒಡೆದ ಹುಳಿಮಜ್ಜಿಗೆಯ ತಿಳಿಯುಮಂ ಚೆಲ್ಲಿ . . . ಕಡುಗಟ್ಟಿಯಾದುದ ತೆಗೆದು ಮಡಕೆಯೊಳು ಹೊಯ್ದು (ಸೂಪಶಾ. ೨-೦೬). ೨. ಆರುಗಾಲ ಮಳೆ ಹೊಯ್ದರೂ ಮುತ್ತುಗಕ್ಕೆ ಮೂರೇ ಎಲೆ (ಗಾರ); ಎಮ್ಮೆ ಮೇಲೆ ಮಳೆ ಹೊಯ್ದ ಹಾಗೆ (ಗಾರ). ೩. ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ ಕೆಳಯಿಂಕೆ ಬೇರೂಱದು (ಬಸವ. ಕ. ೨೩೭-೩೯೦). ೫. ಗುರು ಲಘುವೆಂಬವರ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ (ಬಸವ. ೩೬೭); ಕಳವಳಿಸುವ ಕಪಿಯ ಭೂತ ಹೊಡೆದು ಚೇಳೂಱಿ ಘಾಳಿಯೊಳು ನಿಂದು ಧೂಳಿಯ ಹೊಯ್ವುತ್ತಿದೆ (ಅದಪ. ೦೩-೩೨). ಹೊಯ್ಯಿ: ೧. ಅವನ ಪುಷ್ಪತೋರಣಂಗಳಿಗೆ ದೇವತಾಸ್ತ್ರೀರು ನೀರ ಹೊಯಿವರು (ಗರಪು. ೨-೦೨-೧); ಕಾರ್ಬೋಲಿಕ್ ಆಮ್ಲದ ತೀಕ್ಷ್ಣವಾದ ದ್ರವ ಅಥವಾ ಸೀಮೆಎಣ್ಣೆ ಹೊಯಿವರೆ ಇರುವೆಗಳು ಬಾರದಂತೆ ಮಾಡಬಹುದು (ಅಡುಸೌ. ೩೦). ಹೊಯ್ಯಿ: ೧. ಗಿಡಗಳಿಗೆ ನೀರನ್ನು ಚಿನ್ನಾಗಿ ಹೊಯ್ಯಿ (ರೂಢಿ). ಹೊಯ್ಯು$_2$: ೧. ಹಿಟ್ಟನ್ನು ಬೆಂಕಿಯಲ್ಲಿ ಸ್ವಲ್ಪ ಕಾಯಿಸಿ, ಅದಕ್ಕೆ ಕುದಿಯುವ ನೀರನ್ನು ಹೊಯ್ಯಬೇಕು (ಅಡುಸೌ. ೯೯); ಧಾರೇ ಹೊಯ್ಯುವಾಗ ಹೇಳುವ ಹಾಡು (ಹುಟ್ಟಿಹ. ೦೮೨). ೨. ಬೆಳಗ್ಗೆಯಿಂದ ಒಂದೇ ಸಮನೆ ಮಳೆ ಹೊಯ್ಯುತ್ತಿದೆ (ರೂಢಿ). [ದೇ.॥ ತಮಿ. ಮಲ. ಪೊಱಿ; ತೆಲು. ಪೋಯು]

ಪೊಯ್$_3$, ಹೊಯ್$_3$ (ನಾ). ಹೊಡೆತ; ಏಟು; ಪ್ರಹಾರ; ಬಡಿತ: ಒರ್ಮೆಯೆ ಪೊ[ಪಾಶಾಂ. ಪಾ]ಯ್ವ ಪೊಯ್ಗಳಿಂ ನೆಗೆದು ಮುಗಿಲ್ಗಳಿಟ್ಟೆಡೆಗಳೊಳ್ ತಲೆಗಳ್ ತೊಡರ್ದಿರ್ದ ಜೇನ ಪುಟ್ಟಿಗಳನೆ ಪೋಲ್ತುವು (ಪಂಪಪಾ. ೦೦-೯೦); ಕುದುರೆಗಳನೊಂದೆ ಪೊಯ್ಯಿಂ ಮವಕರಿಗಳನೆರಡೆ ಪೊಯ್ಯೊಳಿರ್ಕಂಡಂ ಮಾಡಿದ ಖಡ್ಗಧರರ ಭುಜಬಲಮದೇಂ ನಿಮಿರ್ಚಿದುದೊ (ಗದಾಯು. ೯-೩೦); ಕೀಱುವ ಕುಱಿ ಪೊಯ್ದನವನ್; ಪೊಯ್ಯೆಡೆಯೆಡೆ ಬಯ್ಬಯ್ದುನಲಿದನವನ್ (ಅಕ್ಕಪ್ಪಾ. ೦೦-೨೦೨). ಹೊಯ್$_3$: ಬಯ್ದ ಬಯ್ಗುಳಂ ಬೇಡುವ ಹೊಯ್ದ ಹೊಯ್ಗೆ ಪುಳಕಾವಳಿ ಮೂಡುವ ಗಂಡು ಹೆಣ್ ತಡಂ ಮಾಡುಗುಂ (ಅಪಂಪು. ೮-೩೧); ಪವನಸಂಭವ ಹೊಯ್ದ ಹೊಯ್ಗಳ ನೆನೆದ ನಿಂದ್ರಾರಿ (ಕೌತಿರಾ. ೦೯-೩೨); ಖಾತಿಗೊಳ್ಳದ ಮುನ್ನ ಪವನಜನೋತು ಕೊಟ್ಟನು ತನ್ನ ಹೊಯ್ಗಳನು (ಕುಪ್ಯಾಕ. ೦೦-೩೬). [< ಪೊಯ್$_1$]

ಪೊಯಲ್, ಪುಯಲ್, ಪುಯ್ಯಲ್, ಪೊಯ್ಲು, ಹುಯಲು, ಹುಯ್ಯಲ್, ಹುಯ್ಯಲು, ಹುಯ್ಲು, ಹೂಯಲು, ಹೂಲಿ$_3$, ಹೊಯಲು, ಹೊಯ್ಯಲಂ, ಹೊಯ್ಲು (ನಾ). ೧. ಏಟು; ಪೆಟ್ಟು; ಹೊಡೆತ: ವಿಷಯಗಳೆಂಬ ಪೊಯಲ್ಗಳಂ ಸಾರಲೀಯದೆ . . . ಸಂಸಾರಮೆಂಬ ಮಹಾನದಿಯಂ ದಾಂಟುವುದು (ರರ್ಮಾಪ್ಯ. ೬-೨೦೯); ವೀಚಿಯ ಪೊಯಲ್ಗಳೆಡೆ ಸಿಲ್ಕುವೆಳವಿಾನ್ಗಳಿಂ ವೀಚಿಗಳನೊಡೆದುರ್ಬಿ ಪರಿವ ಬಲ್ಲೀನ್ಗಳಿಂ (ಉದ್ಯಟಿ. ೩-೮೪). ಪುಯಲ್: ೧. ಜಿನುಗುತ್ತುಂ ಭೋಂಕನೆ ಮಧುಪನಿಕಾಯಂ ಸೋಂಕೆ ತನ್ನನೇವೈಸಿ ಕರಂ ಕೊನೆವಂತಿರ್ದುದು ವನಪವನನ ಪುಯಲಿಂದೊಲೆವ ಕಂಬುಲತೆ ಸೊಗಯಿಸುಗುಂ (ಕುಸುಪಾ. ೯-೨೩). ೨. ಹೊಡೆದಾಟ; ಕದನ; ಕಾಳಗ:

ಶ್ರೀಕಣ್ಡೆಯ್ಯ ತುಱುಗೊಣ್ಡಲ್ಲಿ ಪುಯಲ್‌ಗಾಗಿ ತುಱು ಅಟ್ಟೆ ಸತ್ತ (ಎಕ. X. ಶ್ರೀಕಾಂ. ೩೦-೦೦; ಸು. 880 ?). ಪುಯ್ಯಲ್: ೨. ತುಱುಪಿನ ಪುಯ್ಯಲೊಳ್ ದೊಮ್ಮರ ಕಾಡವಂ ಸತ್ತು ಸ್ವರ್ಗಾಲಯಕ್ಕೇಱೆದನ್ (ಎಇ. VI, ೦೬೩-೩ ; 780) ; ದಾವರಂಗದ ದೊದಿಪನ್ದಿಗಲಿಯು ಕೆಲ್ಲೂರುಂ . . . ಕರ್ಪೂರ ತುಱುವಂ ನೊಬಮ್ಬುನ ಪರಿ ಬನ್ದು ಹೆಮ್ಮಾಗೆಯ ಪಳ್ಳಿಯೊಳಿಕ್ಕೆ ಕೊಣ್ಡು ಪರಿದೈದಿ ಬಲವಮ್ಮನಂ ಮೂದಲಿಸಿ ಮುನ್ದಣ ಪುಯ್ಯಲ ಪಿನ್ದಿಕ್ಕಿ . . . ಪುಗುಟ್ಟು ಬರುತಿಟ್ಟೊಡೆ (ಎಕ. XII, ತಿಪಟೂ. ೦೦-೬ ; ಸು. 930 ?) ; ಪುಯ್ಯಲ್ಗೆ ವಂದ ಖರ ದೂಷಣರನವರ ಸೇನೆವೆರಸು ಕೊಂದು (ಪಂರಾಪೂ. ೦೦-೨೬ ಪ). ೩. ಸೂರೆ ; ಲೂಟಿ : ನೃಪಬಾಧೆ ಕಳ್ಳರಿಂದಾದ ಪುಯ್ಯಲನ್ನಿಪ್ರಕೋಪಮುಬ್ಬರದಿಂದಪ್ಪುವ ಸರ್ಗವೆನಿಪ ವಾರ್ತಾಪ್ರಪಂಚಮಾದಲ್ಲಿ ಕೇಳಬೇಡೋಸಱಿಯಂ (ಲೋಕೋಪ. ೧೨-೩೨). ೪. ಆರ್ತನಾದ ; ಆಕ್ರಂದನ ; ಚೀರಾಟ : ಈ ಪುಯ್ಯಲನಾರಯ್ದು ಬರ್ಪೆನೆಂದು ಭೀಮನನಿರಿಸಿ ಕೊಂತಿ ತಾನೆ ಪೋಗಿ (ಪಂಪಭಾ. ೩-೨೯ ಪ) ; ತುಱುವಂ ಕೊಣ್ಡು ಪೆಣ್ದೊರುಡೆಯನುರ್ಚ್ಚಿದರೆಂಬ ಪುಯ್ಯಲಂ ಕೇಳ್ದು ಕಡಿಗಣಿಸದೆ ಮಾಚಗಾವುಣ್ಡನಟ್ಟಿ ಮುಟ್ಟಂಜಿ . . . ಸಂಗ್ರಾಮಮಂ ಪರಿಚ್ಛೇದಿಯಾಗಿ ಮಾರ್ಬ್ಬಲದಾಳು ಮೂದಲಿಸಿ (ಎಕ. VII, ಶಿಕಾರಿ. ೬೩-೦೬ : 1058) ; ಈ ನೆಲನೆಯ್ದೆ ಕಾಯ್ದು ಮತ್ತೆಮ್ಮು ಮನಟ್ಟಿ ಮುಟ್ಟಿ ಸುಡುತಿರ್ದಪುದೆಂದಿಡುವಂತೆ ಪುಯ್ಯಲಂ ತಮ್ಮ ಕರಾಗ್ರದೊಳ್ ತೊವಲನಾಂತು ನೆಟಲ್ಗೆ ತೊಟಲ್ದವಾನೆಗಳ್ (ಪಾರಪು. ೪-೬೨). ೫. ಗಲಾಟೆ ; ಗದ್ದಲ : ಬಂದ ಕಡುಗುದುರೆ ಪೊಲದೊಳ್ ನಿಂದವರಂ ತಿವಿದುವಕಟ ನೋಡಿರೆ ತಾನಿಂತೆಂದಱಿಯಬಾರದಿದು ಪೊಸತೆಂದೊರ್ಮೆಯೆ ಪೊಱಗೆ ಪುಯ್ಯಲಾದತ್ತಾಗಳ್ (ಕಬ್ಬಿಗಾ. ೨೪೭). ೬. ದೂರು ; ಮನವಿ ; ಅಹವಾಲು : ಏಳಿದರ ಪುಯ್ಯಲಂ ಕರೆದಾಳೋಚಿಸಿ ತಿರ್ದಿ ಸಂತಸಂಬಡಿಸದೆ . . . ಕೆಡಿಸಿದು ನೃಪಸುತನೇ (ರರ್ಜುನಪ್ಪ. ೨-೬೬) ; ನೀನಾರಯ್ಯಲಾರ್ಪೊಡೆನ್ನ ಪುಯ್ಯಲಂ ಪೇಳ್ವೆಂ (ಕೇವಸಂ. ೨೧-೨೨) ; ಅನಿತುಂ ಗಿರಿಗಳು ಖಾಂಡವವನಮಂ ಹಸಿಪೋಗೆ ಮೇದು ಮೆಲ್ಲೊತ್ತು ತಿರಲ್ ವನಪಾಲನೀಕ್ಷಿಸಿ ಪರಿದನಿಮಿಷಪತಿಯಲ್ಲಿಗೆಯ್ದು ಪುಯ್ಯಲನಿಟ್ಟಂ (ರರ್ಜುನ. ೩-೩೨). ಪೊಯ್ಯಲ್: ೧. ಅಡಿಯಿಂ ಮೇಗಣ್ಗೆತ್ತುವ ಕಡುಗಾಳಿಯ ಪೊಯ್ಲೊಳಿದಱ ನೀರೊಗೆದಪುದು (ಕಾಪಿ. ೦೩-೩೨) ; ಪೊಱಮಡುವ ಸಾಪದಕ್ಕರದ ಪೊಯ್ಲಿಂಗೆ ನಡುಗುವಂತೆ ಕೆತ್ತುವ ತುಟಿಯುಂ (ಕಬ್ಬಿಗಾ. ೩೦೦); ಉರಿಯ ಪೊಯ್ಲುಗಳೊಳಂದು ಕಾಲುಡುಗಿ ಬೀಳ್ವ ಬಹುದನುಜರಿಂ ಮನುಜರಿಂ . . . ಪಾಳಾದ ಸಕಲಲೋಕಂಗಳಿಂ ಕಂಗಳಿಂ ನೋಡಲುರಿ ಘನಮಾದುದು (ಶಪಪು. ೪೬-೨೬). ಹುಯಲು : ೧. ಒಂದು ಹುಯಲಂ ಗಣೇಶ್ವರನೆಯ್ದೆ ಹೊಡೆಯಲು (ಏಕೃಪು. ೨-೯-೩೦). ೨. ಕಂಬಿಯನಾಯ್ಕ ಮಗ ಬೊಂಮೆಯನಾಯ್ಕನು ಪೂರ ಹುಯಲಿಕಾಗಿ ಕಾದಿ . . . ಸುರಲೋಕಕೆ ಸಂದಂ (ಎಕ. XVI, ತಿಪಟೂ. ೧೬೦-೦೨ ; 1277) ; ಜನ್ನೆಗುರುಗಳ ಪೂರಳಿದು ಹುಯಲ ಹರಿದು ಕಾದಿ ತಳ್ತಿಱಿದು . . . ಸರ್ಗ್ಗಪ್ರಾತ್ತರಾದರು (ಎಕ. VII, ಶಿಪಮೊ. ೬೦-೧೩ ; 1237) ; ಹೊಂಗನೂರ ಹುಯಲೊಳಗೆ ಬಿದ್ದನು (ಎಕ. IX, ಶನ್ನಪ. ೦೪೭-೭ ; 1437). ಹುಯ್ಯಲ್ : ೭. ದಾಳಿ ; ಆಕ್ರಮಣ : ಕಡೆಗಣ್ಣಿಂದಿಸುವಂತೆ ಚಂದ್ರಕರಮಂ ತೆಂಗಾಳಿಯಂ ಜೋಲ್ದ ಪೂಮುಡಿಯಿಂ ರೊಂಪಿಸುವಂತೆ . . . ಎಲ್ಲರ ಧೈರ್ಯಮಂ ಮೊಲೆಯ ಬಿಣ್ಟಂ ನುರ್ಗಿ ನೂಂಕಲ್ಕೆ ಧೀಂಕಿಡುವಂತಾದಿದಳುಯ್ಯಲಂ ತರುಣಿ ತಂದಳ್ ಕಾಮನಿಂ ಹುಯ್ಯಲಂ (ಪಂಪು. ೯-೬). ಹುಯ್ಯಲು: ೧. ಇನ್ನಿವನಿಂದಂಗಭವನ ಹುಯ್ಯಲು ಬಂದೆನ್ನ ನೋಯಿಸಿ ಕೊಲ್ವುದೆಂದು ಉನ್ನತಮಪ್ಪ ಭೀತಿಯೊಳು ನಡುಗುವಂತೆ ಕನ್ನೆಯ ತನು ಕಂಪಿಸಿದುದು (ಶ್ರೀಕಾಂ. ೪-೧೦೫). ೨. ಬೊಂಮಂಣ್ಣನು ದಿವಿಗೆಯ ಹಳಿಯ ಹುಯ್ಯಲಲ್ಲಿ ಸಮರಂಗದಲ್ಲಿ ಕಾದಿ ಸುರಲೋಕಪ್ರಾಪ್ತನಾದ (ಎಕ. VII, ಶಿಕಾರಿ. ೬೩-೨ ; 1048 ?) ; ಮಹಾಗಜವು ಪ್ರಳಯಮಹಲ್ಲಿ ಮಣ್ಣ ಮೊರಡಿ ಕದೆಡಿದುದಿಲ್ಲ . . . ಬಲ್ಲಿದರೆಲ್ಲರು ಕಾದಿ ಮಡಿದಲ್ಲಿ ಹಾದೆ ಹುಯ್ಯಲಲ್ಲಿದ್ದು ಅಂಜಿದುದಿಲ್ಲ (ಪೋಕಾಪೂ. ೨೫೦-೬೦೨) ; ಹೊಳಲು ತಲೆಕೆಳಕಾಯ್ತು ಹುಯ್ಯಲು ತಳಿತುದೊಳ ತೋಟಿಯಲಿ (ಶುಕ್ಲಾಯ್ರೂ. ೬-೬). ೪. ಧಾರುಣಿಯ ಜನದ ಹುಯ್ಯಲ ನಿಲಿಸಬೇಕೆಂದು ಪಾರದಿಗೆ ಪೊಱಮಟ್ಟು . . . ಗುರು ವಿರೂಪಾಕ್ಷನಂ ಕಂಡನವನೀಶನು (ಪಕಗಾ. ೩ ಸೂಕಪ) ; ಕೇಳಿದನು ಮುರವೈರಿ ತನ್ನಯ ಮೇಳದೈವರ ಸತಿಯ ಹುಯ್ಯಲ (ಶುಕ್ಲಾಸ. ೦೯-೦೩೦). ೫. ತನ್ನಂಗವ ತಾಬಡಿದುಕೊಂಡು ಇದಿರಿನಲಿ ನೋವ ಕೇಳುವನಂತೆ . . . ಹೆಮ್ಮೆಗೆ ಹುಯ್ಯಲಿನಲ್ಲಿ ಸಿಕ್ಕಿ ತನ್ನ ತಾನಱಸಿಕೊಂಡಂತಾಯಿತ್ತು (ಪೋಕಾಪೂ. ೩೨-೦೩೨) ; ಜಗದ ಹುಯ್ಯಲು ಜಡಿಯಲಭ್ರದಲಗಿದು ಕೌರವಸೇನೆ ಹರುಷದ ಸೊಗಸಿನಲಿ ಮೈಮಱೆಯೆ ಕೃಷ್ಣಾದಿಗಳು ಕೈಮಱೆಯೆ (ಶುಕ್ಲಾಯ್ರೂ. ೦೯-೩೩). ೬. ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ (ಪಸವ. ೪೭); ಅಯ್ಯಯ್ಯೋ ನಿಮ್ಮ ಕರುಣದ ಶಿಶು ಎಂದು ಹುಯ್ಯಲ ಲಾಲಿಸಿರೋ (ಶಿಪಗೀ. ೦೬೨-೯೦೩); ಸುರರು ದಾನವಬಾಧೆಗಾಱದೆ ಹರಿಗೆ ಹುಯ್ಯಲ ನಿಟ್ಟೊಡವರಿಗೆ ಕರುಣದಲಿ ಮೈದೋಱೆ ನರಹರಿಯಭಯವನು ನೆಗಹಿ (ಶಾಶಿಕಾ. ೦-೦೬). ಹುಯ್ಲು: ೧. ತತ್ತುರುಗವನು ತೆಗೆದಂಗಣಕೆ ಹಲ್ಲಣಿಸಿ ಹತ್ತಿ ಹೊಯ್ದಾ ಚಮ್ಮುವಟ್ಟಿಗೆಯ ಹುಯ್ಲಿಗೆ ಕರುತ್ತು ನಭ ಕುಪ್ಪರಿಸೆ (ಸಮ್ಮಶಾ. ೦೦-೬೦); ಆರ ನೋಡಲು ಸುರುಟಿಯ ಕತ್ತಿಗಳ ಹುಯ್ಲ ಧಾರೆಗಿಕ್ಕಡಿಯಾದವರು (ಕಂಪಪ. ೦೩-೯೯). ೨. ಸೈನಿಕರೂ ತಮ್ಮ ಕತ್ತಿಗಳನ್ನು ಹಿರಿದು ಹುಯ್ಲಿಗೆ ಸಿದ್ಧರಾದರು (ಶಾಂಕಲಾ. ೦೬೯). ೩. ಸಾರ್ವಭೌಮನ ಮನೆಯ ತುರಗವನೋರ್ವ ತಸ್ಕರ ಕೊಂಡು ಬರಲಿಕೆ ನೀರ್ವಹದಿ ಹುಯ್ಲಾಯ್ತು ಬೇಗದಿ (ಸಂಶಪ. ೦೯-೦೩). ಹೊಯಲು: ೫. ಮೀಯಲುಣ್ಣಲಿ ವೀಳ್ಯ ಕೊಳ್ಳಲಿ ಹೀಯಲೊಱಗಲಿ ಕಾಂತೆಯರ ಬಲು ಹೊಯಲನು ಮಾಡಲಿ (ಪಶಾಗ. ೦೧-೩೯-೨೯). ೬. ಬಂದಿರೈ ಸುರವರರು ಹೊಯಲ ತಂದಿರೈ ತನಗಕಟ (ಪಶಾಗ. ೬-೫-೦೯). ಹೂಲ್ಲಿ : ೨. ತಗ್ಗಿಸಿವರೆಡಬಲನ ಹೂಲಿಯ (ಕೂಲ್ಲಾಕ. ೨೯೦). ೫. ಪುರುಷರ ವಿರುದ್ಧ ವ್ಯರ್ಥವಾಗಿ ಹೂಲಿಯನ್ನೆಬ್ಬಿಸಬಾರದು! (ಭ್ರಕ್ಷಕೀ. ೦೬೯); ಹುಲಿಯಬ್ಬರವು ನಿಲಲು ಇವನ ಹೂಲಿ! (ಕಂಕಪ. ೦೯-೬); ಇಕೋ ನೋಡು ನಾನೆ ಹುಲಿ! ಬರಿ ಹೂಲಿ! ವನಮಾಲಿ! (ಶ್ರೀಂಕಪ್ಪ. ೦೩-೦೩). ಹೊಯಲು : ೨. ವರರೂಪ ಶೌರ್ಯಗಳರಸಿ ಅವರ ಹೊಯಲು ಸಾಹಸಗಳನ್ನು ವರಸಸಿಯಿಂ ಭಜಿಸಿ (ಸೌಗಂಧಿ. ೯೯-೭). ಹೊಯ್ಯಲು : ೪. ದೇವತತಿ[ವರಕೆ] ನಾ ದೂತ ಕಳುಪಿದರೆನ್ನ ನಿನ್ನ ಹೊಯ್ಯಲ ಕೇಳ್ದು ಕರುಣದಿಂದ (ತರಂಗಾ. ೨-೨೯). ಹೊಯ್ಲು : ೧. ಕಾಡೆಮ್ಮೆಯ ಹಾಲ ಊರ ಕೋಣ ಕುಡಿದು ಮತ್ತಾರನು ಲೆಕ್ಕಿಸದೆ ಬಹುಜನರ ನೋಯಿಸಿ ಬಾಹಲ್ಲಿ ಒಂದಾಡಿನ ಬಾಲದ ಹೊಯ್ಲಿಗಂಜಿ ಓಡಿ ಹೋಯಿತ್ತು (ಪೋಕಾಪೂ. ೦೬೨-೬೮೩) ; ದಟ್ಟೈಸಿದುರಿಯ ಹೊಯ್ಲಿಂಗಾಱದಕಟ ಬಾಯ್ವಿಟ್ಟು ಪಶುಮೃಗಪಕ್ಷಿ ನೆರೆದೊಱಲುತಿರೆ (ಸಿದ್ಧರಾ. ೬-೩೦) ; ಕೋಮಲೆಯರ ಕಟಾಕ್ಷದ ಹೊಯ್ಲಿಗಳುಕದನೇ ಮಹಾಧೀರ (ಕೇವಂಪ. ೫-೭೯) ; ಉರವಣಿಪ ತೇಜಿಗಳ ಕಡುಹಿನ ಖುರದ ಹೊಯ್ಲಲಿ ವಿಲಯಮಪವನನ ಗರಿಯ ಗಾಳಿಯಲಿ ಹರನ ನಯನಜ್ವಾಲೆ ಪಾರ್ಥಿಯ ಸರಳ ಕಿಡಿಯಲಿ ಪಲ್ಲಟಿಸೆ (ಶುಕ್ಲಾಯ್ರೂ. ೫-೨). ೨. ಮಱಹ ಪಡೆಯರು ಘಾಯ ಖಂಡಿಗೆ ತೆಱಹುಗಾಣರು ಹೊಯ್ಲ ಹೋರಟೆ ಹೊಱಗೆ ಬಿದ್ದವು ಕದ್ದ ಎಬ್ಬರ ದೃಷ್ಟಿ ಮನಮನವ (ಶುಕ್ಲಾಗ. ೬-೨೭). ೫. ಕೇಣವಿಲ್ಲದೆ ಭಟರ ಹಾಣಾಹಾಣಿ ಮಸಗಿತು ಖಣಿಖಟಿಲ ಹೊಯ್ದಾಣಿಗಳ ಬಿಱುಗಿಡಿಯ ಹಿರಿಯುಬ್ಬಣದ ಹೊಯ್ಲುಗಳ (ಶುಕ್ಲಾಶ. ೨-೦೯). ೮. ಮಿಡಿತ ; ತುಡಿತ :

ಲಲನೆ ಮೂಗಿನೊಳುಸುಯನೈಯೊಳು ಹೊಯ್ದನುಗುರೊಳು ರಜವನೆದೆ
ಯೊಳಲ್ಲಾಟವಂ . . . ರೋವುದೊಳು ಬಲ್ಪನಾರಯ್ದು ಕಾಣದೆ
ನೊಂದಳು (ಪಚಾ. ೦೨-೫೬). ೯. ನಿಃಶ್ವಾಸ : ಮೇಲುದುಗುಡದ
ಮುಖದ ಚಿಂತೆಯ ಜಾಳಿಗೆಯ ಜಡವಾನದಲಿದ್ದರು ಸೂಳು ಸುಯ್ಲಿನ
ಹೊಯ್ಲ ನಾಸಾವುಟದ ಬೆರಳಿನಲಿ (ಭಾಹೊ. ೦೭-೦). ೧೦. ಬಾಜನೆ :
ಹಜ್ಜೆಯ ಹೊಯ್ಲಿನಲಮರಗಿರಿ ತಜಿತಜ್ಜಿಸೆ ತೂಳಿದರಸ್ಪಶಸ್ಪದ ಹೊಜ್ಜಿಗೆ
ಯಲಿ ಹೂಳಿದರು ಹೊಗಿಸಿದರಾನೆಳುದುರೆಗಳ (ಕೊಚಾ. ೩-೬-೬) ; ನೆಜ್ಜೆ
ಯದಂಬರವಿವರ ಗವನದ ತೆಜಿಹಿಗೆನೆ ತೇರಯ್ದಿ ತೊಡೆಗಳ ಹಜ್ಜೆಯ
ಹೊಯ್ಲಿನಲಿಳಿದರಾ ಪ್ರಸ್ರವಣಗಿರಿಗಾಗಿ (ಕೊಚಾ. ೩-೯-೦೭). ೧೧.
ಚಚ್ಚಿಕೊಳ್ಳುವಿಕೆ ; ಬಡಿದುಕೊಳ್ಳುವಿಕೆ : ಬಾಯ ಬಸುಱಿನ ನೊಸಲ
ಹೊಯ್ಲಿನ ರಾಯನರಸಿಯರರಸನಿದಿರಲಿ ಹಾಯಿದರು (ಭಾಹೊ. ೦-೩).

ಹುಯ್ಯಲೇಳಿಸು = ಗೋಳಾಡುವಂತೆ ಮಾಡು : ಜೀಯ ಕಳುವು
ಪಾಳಿಯವನೀಗಳೆ ಹೊಕ್ಕು ಹುಯ್ಯಲೇಳಿಸಿ ಶುರುತರನು ಕಯ್ಕಾರೆ
ಕೊಂದು . . . ತೋಜಿದವೆವು (ಭಾಹಾಂ. ೦೪-೩೭). ಹೂಲಿ
ಎಬ್ಬಿಸು = ಗಲಾಟೆ ಮಾಡು ; ಗಲಭೆಯೆಬ್ಬಿಸು : ಕೂಗು ಕೇಕೆ
ಗಳಿಂದ ಹೂಲಿ ಎಬ್ಬಿಸಿಕೊಂಡು ಇವರೆಡೆಗೆ ಬಂದು ನಿಂತ ಕೂಡಲೆ
ಅವರಲ್ಲಿಯ ಒಬ್ಬನು ತನ್ನ ಕೈಯಲ್ಲಿಯ ಕೊಡಲಿಯನ್ನೆತ್ತಿ . . . ಬೀಸಿ
ಒಗೆದನು (ಶಾಗಾಚ. ೬೦). 'ಪೊಯಿಲ್' ಪರಾ.

[ಪೊಯ್$_1$ + — ಅಲ್$_3$. / ತಮಿ. ಪುಟರ್ ; ಮಲ. ಪೂಯಲ್]

ಪೊಯತಳ 'ಪೊಯ್ಸಳ' ನೋ.

ಪೊಯಸಳ 'ಪೊಯ್ಸಳ' ನೋ.

ಪೊಯಿ ' ಪೊಯ್$_1$' ನೋ.

ಪೊಯಿನೀರು 'ಪೊಯ್ನೀರ್' ನೋ.

ಪೊಯಿಲ್, ಪುಯಿಲ್, ಪೊಯಿಲು, ಹುಯಿಲು, ಹೊಯಿಲ್, ಹೊಯಿಲು$_1$ (ನಾ). ೧. ಏಟು ; ಪೆಟ್ಟು ; ಹೊಡೆತ: ತೃಣಮುಂ
ತೆನೆವೋದ ಬಟ್ಕೊಣಗುವುದದಱಿಂದೆ ನರರ ಬಾಟುಲ್ ಲಘುಕಾಲಂ
ಹಣಿದದ ಪೊಯಿಲ್ಗೆ ವೊದಲ್ನಡು ಕಣೆಯನ್ನದಿದೆವವೆ ಜನ್ಮನಂ ಮುಪ್ಪೆನ್ನಂ
(ಕವಂತ್ರಿ. ೩-೭೦) ; ಪೊಯಿಲ್ಗಳು ಸರಳು ವಾಡದೆ ವಾಗ್ದಿ ಕವಿದರಾ
ತ್ರಿಪುರವಂ ಸುತ್ತಲಾ ದಿವಿಜಭಟರು (ಕಂಪ್ರ. ೪೨-೩೦). **ಪುಯಿಲ್** : ೨.
ಹೊಡೆದಾಟ ; ಕದನ ; ಕಾಳಗ : ಇರ್ತೇರಿ ಬಸವವಟ್ಟಣದುರ್ಕರಸ
ರ್ಗೊಂದು ನೆವದೊಳಂದಿಂಗೆ ಪುಯಿಲ್ ವೆರ್ಚಿಸಿ ಮಯದಿರೆ ಭೃಶಕರ್ಕಶ
ರಬ್ಬಿಗೆಯ್ಮೆವಟ್ಟಿಗೊಡನಡಿಯಿಟ್ಟರ್ (ಪಚಂ. ೨-೯೦) ; ಅತ್ಯಲಾ ಪುಯಿ
ಲೊಳ್ ನೊಂದು ಪೊಜಲ್ಗರಂ ಪೊರ್ದಿದ . . . ನೆರೆದೊರೆಗಳ್ (ಪಚಂ.
೧೪-೦೪). **ಪೊಯಿಲು** : ೩. ದೂರಂ ; ಮೇರೆ ; ಮನವಿ : ಬೆಳವ
ಕೆಯ್ಗಳೊಳ್ ತಲೆಗೊಯಿಲು ಮುಳಿದ ಕಡುನಲ್ಲರೊಳೆ ಪೊಯಿಲು
(ಶಾಂಪಂ. ೦-೦೪). **ಹುಯಿಲು** : ೧. ಆವ ದೆಶಗೊಡಲಲ್ಲಲ್ಲಿಗೆ ಬಂದು
ಬೀಳುವವು ಹುಯಿಲುಗಳು (ಏಕೃಕ. ೨-೯-೩೦). ೨. ದೊರೊಪ್ಪುರಾ
ಗವ್ವುನ್ದನ್ ಅಱೆಱಿ ಹುಯಿ(ಲೊ)ಳು ಸತ್ತನ್ (ಕ್ಯಾಶಾ. ೦೪೨೬, ೪೦-೪ ;
1೦೩ಹು ೫೫) : ನಿವ್ಮ ತನ್ದೆ ನವ್ಮ ಕಾರ್ಯನಿಮಿತ್ತ ಹುಯಿಲಲಿ ಬಿದನಾಗಿ
ಈ ಕಾನನು ನೆತ್ತರಕೊಡಿಗೆಯಾಗಿ, ಕೊಟ್ಟನು (ಕ್ಯಾಶಾ. ೦೪೨೬, ೪೬-೩ : ?).
೪. ಗಲಾಟೆ ; ಗದ್ದಲ : ತಿಳಿಯದ ಮೂರ್ಖರು ಎಬ್ಬಿಸುವ ಹುಯಿಲು
ವ್ಯರ್ಥಾರಾವವಲ್ಲದೆ ಮತ್ತೇನೂ ಅಲ್ಲ (ಪಚಾ. ೭೫) : ಇದು ಸುಮ್ಮನೆ
ಜನಸಾಮಾನ್ಯರನ್ನು ಹುರಿದುಂಬಿಸಲು ಎಬ್ಬಿಸಿದ ಹುಯಿಲು ಆಗಿದ್ದರೆ,
ಅದರ ಬಗೆಗೆ ವಿಶೇಷ ಆಕ್ಷೇಪಣೆಯಿಲ್ಲ (ಪುಚಕ್ರ. ೩೨). ೫. ದಾಳಿ :
ಆಕ್ರಮಣ : ಹಾದರದಲ್ಲಿ ಬಂದಿದ್ದು ಹುಯಿಲಲ್ಲಿ ಹೋಯ್ತು (ಗಾಪ).
ಹೊಯಿಲ್ : ೧. ಹೊದ್ದಿಯು ಹೊದ್ದದ ಹೊಯಿಲೆಸದುವ ಜೋಡರ
ಸುಸಿಲೊಳ್ (ಕಾದ್ಯಕೀ. ೪-೦೭). **ಹೊಯಿಲು$_1$** : ೧. ದಶಮರುತನ
ಹೊಯಿಲಿಲ್ಲದೆ ತಾನೆ ಲಿಂಗದ ಜ್ಞಾನಜ್ಯೋತಿಯ ನಿಲವೋ (ಶಪಪಂ.
೨೨೭-೦೦೩೦) ; ಕೆಲಬರನು ಹೊಜ್ಕೆಯ ಹೊಯಿಲಲಿ ಕೆಲಬರನು
ಧನುವಿನಲಿ ಗದೆಯಲಿ ಹೊಯ್ದು ಕೆಲಕೆಲರ ಕಲಕಿದನು ಬಲಜಲಧಿಯನು
(ಭಾಹೊ. ೦೭-೩) ; ಕುಂಭಸ್ಥಲ ಬಿಯಲಂಕುಶದ ಹೊಯಿಲಿಂದ
ಬರಿಸುತಿಹರು ಸಾಧನೆಯನಂಕದ ಮದಕರಿಗಳಗ್ಗಿ ಕೋವಿದರು (ಭಾಹಾಂ.
೪-೭೦). ೨. ಏನೆಂಬೆನು ಕುಮಾರರ ಹೊಯಿಲ ಬೆಳೆಸಿರಿಯ (ಭಾಹೊ. ೦೭-೦೪).
' ಪೊಯಿಲ್ ' ಪರಾ.

ಹುಯಿಲು ಎಬ್ಬಿಸು, ಹುಯಿಲೆಬ್ಬಿಸು = ಗಲಾಟೆ ಮಾಡು ; ಗಲಭೆ
ಯೆಬ್ಬಿಸು : ವಿದ್ಯಾರ್ಥಿಗಳು ಅವನ ಭಾಷಣಕ್ಕೆ ಗುಲ್ಲು ಮಾಡಿ ಹುಯಿಲು
ಎಬ್ಬಿಸುತ್ತಿರಲಿಲ್ಲ (ಕಾಪಸ. ೦೮೭) ; ನಿಃಸ್ವಾರ್ಥಹೃದಯಿಯಾಗಿ ದುಡಿಯುತ್ತಿರು
ವಾಗ ಈಗ ಈ ಸ್ವಾರ್ಥದ ಸೆಳಕು ಹುಯಿಲೆಬ್ಬಿಸಬೇಕೆ ? (ಕಳ್ಳಕೃ. ೯೩).
ಹುಯಿಲು ಕೊಡು = ಮಾಟ ಮಾಡಿ ಕೊಲ್ಲಿಸು : 'ಹುಯಿಲು
ಕೊಡುತ್ತೇನೆ' (ಮಾಟ ವಾಡಿ ದೆವ್ವದ ಸಹಾಯದಿಂದ ವೈರಿಗಳನ್ನು
ಕೊಲ್ಲಿಸುವೆನು ; ಎಂದರ್ಥ) (ಕಾಕೂರು. ೪೬೩). ಹೊಯಿಲು ಹಿಡಿ =
ಜೋಲಿ ತಪ್ಪಿಸಿ ನಿಲ್ಲು ; ಸಮತೂಕದಲ್ಲಿರು : ಕುಂಟೆಯನ್ನು ಹಿತ್ತಿ,
ಎರಡು ಕಾಲುಗಳನ್ನೂ ವೇಣಿಯ ಆಚೆ ಈಚೆ ಇಟ್ಟು . . . ಬೊಡ್ಡೆ
ಎತ್ತುಗಳ ಹಗ್ಗದ ಆಧಾರದಿಂದಲೇ ಹೊಯಿಲು ಹಿಡಿದು ನಿಲ್ಲಬೇಕಾಗಿತ್ತು
(ಕಳಾಚು. ೨೬೬). [ಪೊಯ್$_1$ + —ಇಲ್$_3$. / ಕೊಡ. ಪೊಯಿಲ್]

ಪೊಯಿಲು ' ಪೊಯಿಲ್ ' ನೋ.

ಪೊಯಿಲ್ಜೆಱು (ಕ್ರಿ). ಏಟು ತಿನ್ನು : ಪೊಯ್ದೊಡೆ ಬಱುಬಂ ಪೊಯಿಲ್ದೆ
ತ್ತಂತೇನುಮನಱಿಯದೆ ಪರಿಭವಾನಲನಿಂ ಶೋಕಾನಲನಿರ್ಮಡಿಸೆ (ಕಂಕರಾ.
೪-೭೦ ಪ). [ಪೊಯಿಲ್ + ಪೆಱು$_1$]

ಪೊಯಿಸು, ಪೊಯ್ಕಿಸು, ಹುಯಿಸು, ಹೊಯಿಸು$_1$ (ಕ್ರಿ). ೧. ಹೊಡೆ
ಯುವಂತೆ ಮಾಡು ; ಹೊಡೆಯಿಸು : ಎಱಗಲಱಿಯದೆ ಜಿಣ್ಣು
ಕಮ್ಮಗುಬ್ಬುಂ ಬರಲಣಮಱಿಯದೆ ತವ್ಪಂ ಪಿನ್ದುಂ ತೆಱನನಱಿಯದೆ
ಭಂಗವನಿಕ್ಕಿಯುಂ ಮೂಱಡೆಗಲ್ದೆ ಕಟ್ಟಾಡಿಯುಂ ಮುಱಿಯೆ
ಪೊಯಿಸಿದನು (ಎಳ. II. ೦೩೩-೦೪೦ : ೨೮೭). ೨. ವಾದ್ಯವನ್ನು
ಬಾಜಿಸುವಂತೆ ಮಾಡು : ಶುಭದಿನಮುಹೂರ್ತದೊಳುತ್ತರಭರತ
ವಿಜಯೋದ್ಯೋಗಮಂ ಭರತರಾಜನಱಿಪಲೆಂದು ವಿಜಯಭೇರಿಯಂ
ಪೊಯಿಸಿದಾಗಳ್ (ಆದಪು. ೦೩-೪೦ ಪ) ; ಗುಡಿಯಂ ಕಟ್ಟಿರೊ ಭೇರಿಯಂ
ಪೊಯಿಸಿರೊ . . . ಎನುತ್ತುತ್ಸವಂಬಡೆಯುತ್ತಾತ್ಕ್ಷಣಮೊಯ್ದಿದಂ ನೃಪವರಂ
ತತ್ಪೂತಿಕಾಗೇಹವಂ (ದಶಕು. ೨-೭೦). ೩. ಕತ್ತರಿಸುವಂತೆ ಮಾಡು;
ಕಡಿಯಿಸಂ : ಚೆಂಡಿನ ನೆವದಿಂದ ಬಂದು ತನ್ನಬಲೆಯ ಕಂಡು ಪಿಡಿದ
ರಾವಣನೆಂದು ಕೊಂಡೊಯ್ದು ತಲೆಯ ಪೊಯಿಸಿದನೆಂದವನೆಟೆಗೊಂದು
ರಾಯಗೆ ವೇಳಿದನು (ಭಾಹಾಂ. ೪೭-೪೪). ೪. ಬಲಿ ಕೊಡುವ
ಉದ್ದೇಶದಿಂದ ಪ್ರಾಣಿಯ ಆಹುತಿಯನ್ನು ಅರ್ಪಿಸು : ಚೌಷಷ್ಟಿ
ಯೋಗಿನಿಯರ್ಗೆ ಬಲಿಗೊಟ್ಟು ಭೂತಸಂತುಷ್ಟಿಯವ್ವಂತೆ ಕುಜ್ಜೆ ಕೋಣಾ
ಗಳಂ ಪೊಯಿಸಿ . . . ಭೂಪನುತ್ಕೃಷ್ಟಮಖಮಿನ್ನು ಸಂಪೂರ್ತಿಯಾದವು
ದೆಂಬ ಹೃಷ್ಟತೆಯೊಳರ್ಥವಂ ಸಾಗಿಸಿದನು (ಕೃಮಾಚಾ. ೩-೭೨).
ಪೊಯ್ಕಿಸು : ೫. ಕೆತ್ತಿಸು ; ಕೊರೆಯಿಸು ; ಕಂಡರಿಸು : ಚೋಳ
ಸೆಟ್ಟಿ ಎಣ್ಪಿಸಿರವಿವು ಪೊಯ್ಕಿಸಿದ ಕಲ್ಲು (ಎಳ. IV. ಪುಶಸಂ. ೦೦-೦೫ ;
1020 ?). **ಹುಯಿಸು** : ೩. ಆ ಕೃಷ್ಣರಾಯನ ಮೇಲೆ ದೊಡ್ಡ
ತವ್ಪನ್ನು ಹಾಕಿ ಅವನನ್ನು ತಲೆಹುಯಿಸಬೇಕೆಂದು ಗಂಡನೊಡನೆ ಬಾಡಿ
ಹೇಳಿದಳು (ಪಚಾಂ. VII. ೫೦). **ಹೊಯಿಸು$_1$** : ೨. ಹಜ್ಜೆಯ
ಹೊಯಿಸಿ ಕುಜ್ಜಿಹ ಪುಜೆಸುವರೆ ಮೆಚ್ಚ (ಪಸಂ. ೫೦೬). ೫. ಶಾಸನವ

ಹೊಯಿಸಿದನು (ಶಸ್ತಿ. ೪೯-೪೬); ತಮ್ಮಯಗೌಡನು ನನ್ನನಸಂವತ್ಸರದ ಚಯಿತ್ರ ಶು ೧ಲು ಹೊಯಿಸಿದ ಕಲೊರಳೂ ೧ (ಎಳ. X, ಕೌಂಗ. ೬೯-೯; ೧); ಹೊಲತೀಪುರಸ್ವಳದ(ದ) ಗಉಡ ಅರೆಯಂಣನು ಪಾಲಿಹಿಸಿದಂತ್ತ ಶಾಸನ ಹೊಯಿಸಿವರೂ (ಎಳ. VII, ಶಿವಮೊ. ೦೦೦-೬ ; ೧). 'ಪೊಯ್ಸು$_{೨}$' ಪರಾ. [ಪೊಯ್$_{೧}$ + — ಇಸು$_{೨}$]

ಪೊಯ್ಯೆಂಡು 'ಪೊಯ್ಸೆಂಡು' ನೋ.

ಪೊಯ್ತ ? (ನಾ). (?) : ಸ್ವಸ್ತಿಶ್ರೀ . . . ವಿಜಯಸಂವತ್ಸರ ಇಪ್ಪದಾ ಎಣ್ಪನೆಯೊಳು ಶಿವಮಾರ ಕದಮ್ಮೂರ ಆಳೆ ಕದಮ್ಮು × ಭೂಮೊಟ್ಟ ಯೋನ್ ಕಟುಕಣ್ಪೇಶ್ವಂಕು ಪೊಯ್ತುಮಮೆನ್ತ ಕಟನಿಕಣ್ಣುಗಂ ಎಟ್ಟು × × × ಪಾಟು ಅಯ್ತು ಮೂಸೇ ಪೊನ್ನದಳಿ ಅಟಿದನ್ತಪ್ಪರ ಕೊಡಿ ಮೆನೂರುಂ ಆಳ್ವ ಅರಸನು ಮಾಡಿಸುವೋರ್ (ಎಳ. ೪, ಕೋಣಕ. ೬-೪ : 758). [?]

ಪೊಯ್ದು$_{೧}$ 'ಪೊಯ್$_{೧}$' ಪರಾ.

ಪೊಯ್ದು$_{೨}$ 'ಪೊಯ್$_{೨}$' ಪರಾ.

ಪೊಯ್ನೀರ್, ಪೊಯಿನೀರಂ, ಹೊಯ್ನೀರು (ನಾ). ೧. ಮಳೆಯ ನೀರಿನಿಂದ ಬೇರೆಯಾದ, ಪಾತ್ರೆಗಳಲ್ಲಿ ತುಂಬಿ ಸಸಿಗಳಿಗೆ ಹಾಕುವ ನೀರು : ಅವರಿರ್ವರ ಬೇಟಮೆಂಬ ಲತೆಯ ಬೆಳಸಿಂಗೆ ಪೊಯ್ನೀರಿಱಿವಂತೆ ಕೆಯ್ನೀರಿಱಿದು ಬಯಮಂ ಮಱಿದು (ಕಂಪರಾ. ೪-೪೬ ಪ); ಭೂಪಂ ತನ್ನ ಸಂತಾನವೃದ್ಧಿಗೆ ಪೊಯ್ನೀರಿಱಿವಂತೆ . . . ಕೈನೀರಿಱಿದಂ (ಕಂಚಿಪ್ರಾ. ೪ ೦೨೯) ; ಮಟಿಯಿಲ್ಲದೆ ಪೊಯ್ನೀರಿಂ ಬೆಳೆಗುಮೆ ಧರೆ (ರಕ್ಷಾಶ್ಯ. ೦-೨೯); ಬಾಷ್ಪಬಿಂದುಗಳಂ ಸೂಸಿ ಲತಾಂಗಿ ಭಂಗಿವಡೆದಿರ್ದಳ್ ದೇಂಟವೆಂಬೊಂದು ಬಳ್ಳಿಗೆ ಪೊಯ್ನೀರಿಱಿವಂದದಿಂ (ಪಗಪ. ೦೦-೦೦). ೨. ನೀರು ಹಾಕಿ ಕಡೆದ ಮೊಸರು ; ಮಜ್ಜಿಗೆ : "ದಧಿಮಂಥಂ ಮಸ್ತು ವೆಂಬುದಕ್ಕುಂ ಪೊಯ್ನೀರ್" (ವಶ್ಯ. ಕೋ. ೮೨-೩). **ಪೊಯಿನೀರು** : ೧. ಸಂತಾನಾಭಿವೃದ್ಧಿಗೆ ಪೊಯಿನೀರಿಱಿವಂತಾ ಕುವರಗಂದವರು ಸಂತಸಮಿಗೆ ಕೈಧಾರೆಯೆಱಿದರು (ಶಾಂಶಾಂ. ೬-೦೩೪). **ಹೊಯ್ನೀರು** : ೧. ಬೇವಿನ ಆ ಗಿಡಕ ಬೆಲ್ಲದ ಕಟ್ಟಿ ಕಟ್ಟಿ ಜೇನುತುಪ್ಪದಲ್ಲಿ ಹೊಯ್ನೀರ ಹಣಿಸಿದರ ಬೇವೆ ತನ್ನಿಸವ ಬಿಡಲಿಲ್ಲ (ಶರ್ಮಾಕ. ೪೩೬). [ಪೊಯ್$_{೪}$+ನೀರ್]

ಪೊಯ್ಮಿಸು 'ಪೊಯಿಸು' ನೋ.

ಪೊಯ್ವಡೆ, ಹೊಯ್ವಡೆ (ಕ್ರಿ). ಏಟನ್ನು ತಿನ್ನು : ಪೆಟ್ಟು ಹೊಂದು : ಪ್ರಣಯಪ್ರಕೋಪಭರಮಂದೆಯ್ತಂವು ಕಾಂತಾಜನಂ ಪಿಡಿತಂದೊರ್ಮೆಯೆ ಕಂಕಣಂಗಳಲಿಯಲ್ ಪೂಮಾಲೆಯಿಂ ಪೊಯ್ವಡೆವಂ ಕೇಸರದಾಮಬದ್ಧ ಚರಣಂ ಶೃಂಗಾರಸಾರೋದಯಂ (ಶಾಕಂಪು. ೩೨೩) ; ನೃಪಂ ಪೆಱರ ಸೂಟಿದಿನಂ ಮಱಿದಿರ್ದು ಸೂಟ್ಟಡಂ ಬಂದಳ ಸೂಟಿಗ್ಗಿ ಬಂದು ಬಿಡೆ ಪೊಯ್ವಡೆವಂ ಬಿಡುತರ್ವ ಕಣ್ಣಾ ನೀರ್ತಳಿಂದಲ ಬಳ್ಳಿಮಿಂಚಿನೆ ಪಳಂಚುವ ಲೋಲ ಕಟಾಕ್ಷವಮಾಲೆಯಿಂ (ಪುಗ್ಗಿಪು. ೩-೪೩) ; ಪೊಡೆಯೆ ಕೈಕವಾಕುನಿನದಂ ಬಿಡದುಣ್ಮುತಿರಲ್ಕೆ ಕೆಯ್ಯ ಬಾಳ್ ಬೀಟ್ಟರೆ ಪೋ[ಪಗಪಂ. ಹೊ]ಯ್ವಡೆದಂತೆ ಪಂದೆಯಂ ಪಾವಡರ್ದಂತಾಗಿರೆ ಯಶೋಧರಂ ಬೆಜಗಾದಂ (ಶುಕೋಪ. ೩-೩೬). **ಹೊಯ್ವಡೆ** : ಈ ಐದು ಬಿಕ್ಕಳಿಗಳು ಮುಟ್ಟಿನವರಿಗೂ . . . ಹೊಯ್ವಡೆದವರಿಗೂ ಮರಣಕ್ಕೆ ಕಾರಣವಾಗಿ ಕಾಣಿಸಿಕೊಂಬುದು (ಪಥ್ಯ. ೩೯೦). [ಪೊಯ್$_{೪}$ + ಪಡೆ$_{೧}$]

ಪೊಯ್ವೆಱು (ಕ್ರಿ). = ಪೊಯ್ವಡೆ : ದಶಾನನಂ . . . ಪೊಯ್ವೆತ್ತಿಭವೈರಿಯಂತೊದಱಿ ಕೆಂಗಱಿ ಮೂಡಿದ ಭೃಂಗಮಾಲೆ ನೀಳ್ದತ್ತೆನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರವಮ್ಮಮಂ (ಕುಂಡಾಪು. ೦೪-೦೦೬) : ಪೊಯ್ತೆತ್ತ ಪಾವಂತೆ ವೊರೆದು . . . ಪೊಱಮಟ್ಟನ್ (ಅ೯ ೪೨ . ೧೨-೨೪೨). [ಪೊಯ್$_{೪}$ + ಏಱು]

ಪೊಯ್ಯಳ 'ಪೊಯ್ಸಳ' ನೋ.

ಪೊಯ್ಸಣ 'ಪೊಯ್ಸಳ' ನೋ.

ಪೊಯ್ಸಳ, ಪೊಚ್ಚಳ, ಪೊಯಶಳ, ಪೊಯಸಳ, ಪೊಯ್ಯಳ, ಪೊಯ್ಸಣ, ಪೋಶಳ, ಪೋಶಟಿ, ಪೋಸಳ, ಪೋಸಟಿ, ಹುಯಸಲ, ಹೊಯಸಣ, ಹೊಯಸಳ, ಹೊಯಿಸಣ, ಹೊಯಿಸಳ, ಹೊಯ್ಸಣ, ಹೊಯ್ಸಳ, ಹೊವಿಸಳ, ಹೋಸಣ, ಹೋಸಲ, ಹೋಸಳ, ಹೋಸಾಲ (ನಾ). ಕರ್ನಾಟಕದ ಒಂದು ಪ್ರಸಿದ್ಧ ರಾಜವಂಶ, ಆ ವಂಶದ ಮೂಲಪುರುಷ ಹಾಗೂ ಆ ವಂಶಕ್ಕೆ ಸೇರಿದ ವ್ಯಕ್ತಿ ಮತ್ತು ಅವರ ರಾಜ್ಯದ ಹೆಸರು ; P ಸುಮಾರು ವರ್ಷಗಳ ಹಿಂದೆ ಸಳನೆಂಬ ಒಬ್ಬ ಶೂರಯುವಕನಿದ್ದನು. ಇವನ ಅಧ್ಯಯನಕಾಲದಲ್ಲಿ ಒಮ್ಮೆ ಹುಲಿಯು ಹಾಯ್ದು ಬರಲು 'ಪೊಯ್ ಸಳ' ಎಂದು ಗುರುವು ಸೆಳೆಯೊಂದನ್ನು ಇವನ ಬಳಿಗೆಸೆದು ಆಜ್ಞೆಯನ್ನಿತ್ತನು. ಸಳನು ಹುಲಿಗೆ ಕಿಂಚಿತ್ತೂ ಹೆದರದೆ ಗುರುವಿನ ಆಜ್ಞೆಯನ್ನು ಪಾಲಿಸಿ ಗುರುವು ಕೊಟ್ಟ ಸೆಳೆಯಿಂದಲೇ ಹುಲಿಯನ್ನು ಹೊಡೆದು ಕೊಂದನು. ಈ ಘಟನೆಯಿಂದ ಅವನಿಗೆ ಮುಂದೆ 'ಪೊಯ್ಸಳ' ಎಂದೇ ಹೆಸರಾಯಿತಲ್ಲದೆ ಇವನು ರಾಜ್ಯವೊಂದನ್ನು ಕಟ್ಟಿ ಪ್ರಸಿದ್ಧನಾದ ನಂತರವೂ ಇದೇ ಹೆಸರು ಇವನ ಮನೆತನಕ್ಕೂ ಉಳಿದು ಬಂದಿತೆಂಬ ಪ್ರಸಿದ್ಧವಾದ ಕಥೆಯಂ ಶಾಸನಗಳಲ್ಲಿ ಸಿಗುತ್ತದೆ. ಇದಕ್ಕೆ ಚಾರಿತ್ರಿಕ ಆಧಾರಗಳೇನೂ ಇರುವಂತಿಲ್ಲ. ಬಹುಶಃ ಇದಂ ಕಾಲ್ಪನಿಕವಿದ್ದರೂ ಇರಬಹುದು : ಪೊಯ್ಸಳರಾಜ್ಯದ ಮೂಲಸ್ತಂಭಮಿದೆನಿಸಿದ . . . ಚೈತ್ಯಾಯತನದ್ವಯಂಗಳಂ . . . ಮಾಡಿಸಿ (ಎಳ. IV (R), ಕುಣಸೂ. ೦೬-೪೪; 1124) : ಶ್ರೀವಿಷ್ಣುವರ್ಧನ ಪೊಯ್ಸಳ ಶ್ರೀವೀರನಾರಸಿಂಹದೇವರ್ (ಮೈಆ. ೦೯೪, ೨೨-೪ ; 1124). **ಪೊಚ್ಚಳ** : ಭುಜಬಲವೀರಗಜ್ಜ ಪೆಚ್ಚಳ ಜಗದೇಕಮಲ್ಲ ಶ್ರೀನರಸಿಂಹದೇ[ವ] (ಎಳ. IV (R), ಕೂಳ್ಕೇಗಾ. ೬೭-೦೦ ; ಸು. 1284ರು ಕಡೆ). **ಪೊಯಶಳ** : ಶ್ರೀಮನ್ಮಹಾಮಂಡಳೇಶ್ವರ ಪೊಯಶಳ ಬಿಟ್ಟಿದೇವನ ದಣ್ಣಾಯಕ ಬೊವ್ವಣನೆತ್ತಿ ಬರಲು . . . ಬಮ್ಮಯನಾಯಕಂ ಸುರಲೋಕಪ್ರಾಪ್ತನಾದ (ಎಳ. VII, ಶಿವಮೊ. ೦೨-೬ ; 1120). **ಪೊಯಸಳ** : ಪೊಯಸಳ ಶ್ರೀವೀರಬಲ್ಲಾಳದೇವರಸರು ಪೃಥ್ವೀರಾಜ್ಯಂಗೆಯುತ್ತಿರೆ (ಎಳ. IV (R), ಕಾಮಂಡಾ. ೦೩೦-೨ ; 1335). **ಪೊಯ್ಯಳ** : ಪೊಯ್ಯಳ ಶ್ರೀವೀ[ರ]ನಾರಸಿಜ್ಜದೇವನ್ ಪೃಥಿವೀರಾಜ್ಯಮ್ ವಣ್ಣಿ (ಎಳ. IV (R), ಕೂಳ್ಕೇಗಾ. ೯-೦ ; 1224). **ಪೊಯ್ಸಣ** : ಸಳಿಯಿಂ ಪುಲಿಯಿಂ ಪೊಯ್ಸಳೆಯೆನೆ ಪೊಯ್ದುದಱಿಂ ಪೊಯ್ಸಣವೆಸರವನಿಂದ ವಾದುದು (ಮೈಆ. ೦೯೪೦. ೪೪-೪ ; ಸು. 1110). **ಪೋಶಳ** : [ತ್ರಿ]ಭು[ವ]ನ ಪ್ರತಾಪಚಕ್ಕ[ಅ]ವ[ತ್ತಿ] [ಪೋಶಳದೇ]ವನ್ (ಎಳ. IV (R), ಕಾಮಂಡಾ. ೦೩೬-೨ ; ಸು. 1184ರು ಕಡೆ). **Δಪೋಶಟಿ** : ಪ್ರತಾಪ ಚಕ್ರವರ್ತಿ ಪೋಶಟಿ ಶ್ರೀವೀರಸೋಮಿಶ್ವರದೇವನ್ (ಎಳ. III (R), ಗುಂಕ್ಕೃಜಿ. ೭೦-೯ ; 1224). **ಪೋಸಳ** : ಸ್ವಸ್ತಿಶ್ರೀಪ್ರತಾಪಚಕ್ರವರ್ತಿ ಪೋಸಳ ಶ್ರೀವೀರನಾರಸಿಜ್ಜದೇವನ್ (ಎಳ. IV (R), ಎಳಂಡೂ. ೦೩೬-೨ ; ಸು. 1284ರು ಕಡೆ); ಸ್ವಸ್ತಿಶ್ರೀ ಪೋಸಳ ಸೋಮಿಸಾಸುರದೇವನ್ (ಎಳ. IV (R), ಕೂಳ್ಕೇಗಾ. ೯೩-೦ ; 1237). **Δಪೋಸಟಿ** : ಶ್ರೀ ಪೋಸಟ ವೀರವಲ್ಲಾಳದೇವನ್ (ಎಳ. IV (R), ಕಾಮಂಡಾ. ೨೯೬-೦ ; 1284ರು ಕಡೆ). **ಹುಯಸಲ** : ಹುಯಸಲ ನಾಡಿಗೆ ಸಲುವ ಕೊತ್ತಾಗಾಲಕೆ ಸಲುವ ಉವಗ್ರಾಮ ಹೊರವಳಲಿವುರ ಗ್ರಾಮವನು . . . ಕೊಟೆವಾಗಿ (ಎಳ. III (R). ಹಗ್ಗಡ. ೦೬-೯ ; 1669). **ಹೊಯಸಣ** : ಶ್ರೀಮತುಹೊಯಸಣಚಕ್ರವರ್ತ್ತಿವಿನಯಾದಿತ್ಯಾ (ಎಳ. XI, ಚಕ್ರರು. ೦-೬ ; 1310 ?). **ಹೊಯಸಳ** : ಪ್ರತಾಪಚಕ್ರವರ್ತ್ತಿ

ಹೊಯಸಳ ಶ್ರೀವೀರನಾರಸಿಂಹದೇವರಸರು (ಎಇ. IV (R). ತಾಮರಾ ೨೨೦-೩ ; 1276) ; ಹೊಯಸಳರಾಜ್ಯಾಧೀಸ್ವರ ಶ್ರೀವೀರಸಂಜರಾಯ ಒಡೆಯರು (ಎಇ. IV (R). ತಾಮರಾ. ೨೩೬-೬ : 1492) ; **ಹೊಯಿಸಣ :** ಹೊಯಿಸಣ ವೀರನಾರಸಿಂಹದೇವರ ಬೆಸದಿಂ . . . ಈ ಕಾರ್ಯ್ಯಕ್ಕೆ ತಲೆಗೊಟ್ಟಲ್ಲಿಗೆ ಚಟ್ಟವ್ವೆ ತನ್ನ ಮಗಂಗೆ ನಿಲ್ಲಿಸಿದ ವೀರಗಲ್ಲು (ಎಇ. V. ಹಾಸನ. ೭೦ ೯ ; 1293 ?) ; ಸ್ವಸ್ತಿಶ್ರೀಮತ್ಪ್ರತಾಪಚಕ್ರವರ್ತ್ತಿ ಹೊಯಿಸಣ ಶ್ರೀ ವೀರಬಲ್ಲಾಳದೇವರ್ಸರು ಸುಖರಾಜ್ಯಂಗೆಯುತ್ತಮಿರೆ (ಎಇ. VII. ತಿನಪೂ. ೬೬-೦ ; 1313). **ಹೊಯಿಸಳ :** ಸಳನೆಂಬ ಯಾದವಂ ಹೊಯಿಸಳನಾದಂ . . . ಶಶಕಪುರದ ವಾಸಂತಿಕೆಯೊಳ್ (ಎಇ. VI. ಕಡೂರು. ೦೨-೩ ; 1253) ; ಶ್ರೀಮನುಪ್ರತಾಪ ಹೊಯಿಸಳ × × ಬಳ ಶ್ರೀ ವೀರಬಲ್ಲಾಳರು (ಪ್ರಾಶಾಂ. ೧೯೪೬, ೦೦-೨ ; ಸು. 13ನೆಯ ಶತ) ; ಹೊಯಿಸಳ ತುಳುವ ಚೋಳ ಚೇರವಾಪಾಂಡ್ಯ . . . ಕಾಂಚೋಜದೇಶದ ಸಕಲಶರಣರೈತರುತಿರ್ದರು (ಪಂಪು. ೬-೧೯). **ಹೊಯ್ಸಣ :** ಶ್ರೀಮನುಮಹಾಮಂಡಳೇಶ್ವರನೆಜಿಯಂಗ ಹೊಯ್ಸಣದೇವನಳಿಯಂ (ಎಇ. VII. ತಿನಪೂ. ೬೯-೯೨ ; 1112 ?) ; ಹೊಯ್ಸಣಶ್ರೀವೀರಭುಜಬಲಬಲ್ಲಾಳದೇವರಸರು (ಎಇ. IV (R). ಬೆಂಗಾ. ೦೯-೩ ; 1338) ; ಹೊಯ್ಸಣ[ಜಿಶಾಂ. ಯಿಸಣ]ದೊಳುದಿಸಿರಲು ಭೂಮಿಜಂ (ಪಂಗೂಗಾ. ೬೩-೨೦). **ಹೊಯ್ಸಳ :** ಸಳನೆಂಬಂ ಶಶಕ ಪ್ರಸಿದ್ಧಪುರದೊಳ್ ವಾಸನ್ತಿಕಾದೇವಿಯಂ ತಳೆದಾರಾಧಿಸುವಾಗಳ್ . . . ಪುಲಿ ಪಾಯೆ ಕಂಡು ಮುನಿನಾಥಂ ಕುಂಚಮಂ ಕೊಟ್ಟು ಪೊಯ್ಸಳಯೆಂದಂ ಬಳಿಕಾಯ್ತು ಹೊಯ್ಸಳವೆಸರ್ತ್ತಾಂ ಯಾದವೋರ್ಬ್ಬೇಸರೊಳ್ (ಎಇ. VI. ಕರೇಶ. ೧೨-೯ ; 1206) ; ಶ್ರೀಮತು ಪ್ರತಾಪಚಕ್ರವರ್ತ್ತಿ ಶ್ರೀಹೊಯ್ಸಳ ವೀರಬಲ್ಲಾಳದೇವರಸರು ಉಣ್ಣಾಮಲೆಪಟ್ಟಣದೊಳು ಪೃಥ್ವೀರಾಜ್ಯಂಗೆಯುತ್ತಿರಲು (ಎಇ. IX. ಶಿಂಗಳೂ. ೨೦-೯; 1342) ; ಮಾಳವ ಮಗಧ ಕಾಶ್ಮೀರ . . . ಹೊಯ್ಸಳ ಮಲೆಯಾಳದೇಶಂಗಳೊಪ್ಪಿದುವು (ಮೋಚಕ. ೨-೦೯). **ಹೊವಿಸಳ :** ಸ್ವಸ್ತಿಶ್ರೀಪ್ರದಾಪಚಕ್ರವರ್ತಿ ಹೊವಿಸ[ಳ] ಶ್ರೀ ವೀರಬಲ್ಲಾಳದೇವರಸರು (ಎಇ. IV(R). ಕೊಳ್ಳೇಗಾ. ೦೩-೨ ; 1308). **ಹೋಸಣ :** ಹೋಸಣ ನನ್ನಿಯ ಚಾರದಲಿ ಪೊಕ್ಕು ಹೊಱವಡುವ ಸಾಮನ್ತರ ಗಣ್ಡ (ಎಇ. XII. ತಿಪಟೂ. ೯೦-೦೯ ; 1169) ; ಹೋಸಣ ಗೋವಿಮಸೆಟ್ಟಿಯ ರಾಯನಗೃತನೂಜಂ ಬಲ್ಲಗೌಡಂ (ಎಇ. VII. ತಿನಪೂ. ೧೩-೩೨ ; 1172 ?) ; ಸ್ವಸ್ತಿಶ್ರೀಮತು ಹೋಸಣ ವೀರಬಲ್ಲಾಳುದೇವ (ಎಇ. VIII. ಸೊರಬ. ೦೧೯-೦ ; 1204). **ಹೋಸಲ :** ಕಾವೇರೀ ತೀರಗೇ ರಾಜ್ಯೇ ಮಹಾಹೋಸಲನಾಡಕೇ ಶ್ರೀರಂಗಪಟ್ಟಣಕ್ಷ್ಮಾಯಾಂ ಬಸುರವಾಣಸ್ಥಳೇ ಸ್ಥಿತಂ (ಎಇ. III. ಪಾಂಡ್ಯ. ೫೫-೯೩ ; 1534). **ಹೋಸಳ :** ವಿಷ್ಣುವರ್ದ್ಧನಪ್ರತಾಪಹೋಸಳವೀರಬಲ್ಲಾಳದೇವರು . . . ಹಿರಿಯ ಬೆಳುಗಲಿಯ ಸರ್ವ್ವಬಾಧೆ ಪರಿಹಾರಾರ್ತ್ಥವಾಗಿ ಧಾರಾಪೂರ್ವ್ವಕವಾಗಿ ಬಿಟ್ಟರು (ಎಇ V. ಬೇಲೂರು. ೦೦೬-೫೦; 1173); ಶ್ರೀ ಪ್ರತಾಪಚಕ್ರವರ್ತ್ತಿ ಹೋಸಳ ಶ್ರೀವೀರನಾರಸಿಂಹದೇವರಸರು ಪೃಥ್ವೀರಾಜ್ಯಂಗೆಯುತ್ತಿರೆ (ಪ್ರಾಶಾ. ೦೯೩೬, ೪೭-೯; 1278). **ಹೋಸಾಲ:** ಹೋಸಾಲಬಲಾಲ ಲತಾಲಕ್ಷ್ಮೀಕಂದಸಂದೋಹಮರ್ದನಗಜ (ಪ್ರಾಶಾ. ೦೯೨೯, ೬೯-೦೨; 1276). [?]

ಪೊಯ್ಸಳಮಾರುಗ (ನಾ). ಒಬ್ಬಾತನ ಹೆಸರು : ಅರಕೆಲ್ಲನ ಮಗ ಅವನ ಮಾವ ಪೊಯ್ಸಳ ಮಾರುಗಂ (ಪ್ರಾಶಾ. ೦೯೩೨, ೩೭-೩; ಸು. 950 ?).

[ಪೊಯ್ಸಳ + ಮಾರುಗ (< ಮಾರಗ)]

ಪೊಯ್ಸು$_1$, ಹುಯ್ಸು$_1$, ಹೊಯ್ಸು$_1$ (ಕ್ರಿ). ೧. ವಾದ್ಯವನ್ನು ಬಾಜಿಸುವಂತೆ ಮಾಡು : ಶುಭದಿನನಕ್ಷತ್ರಮುಹೂರ್ತದೊಳ್ ದಿಗ್ವಿಜಯಭೇರಿಯಂ ಪೊಯ್ಸಿದಾಗಳ್ (ಆದಿಪು. ೦೦-೯ ಪ); ಪಲತೆಱದ ಪಱೆಗಳಂ ಪೊಯ್ಸಿಯುಂ . . . ಭೇರಿಗಳಂ ತಾಟಿಸಿಯುಂ (ಗದಾಯು. ೭-೧ ಪ) : ಪಂಚಮಹಾಶಬ್ದಮನೊಲ್ಲದೆ ಬೇಂಟೆಪಱೆಯಂ ಪೊಯ್ಸಿ (ಧರ್ಮಾಮೃ. ೭-೬೩). ೨. (ಡಂಗುರ ಬಾರಿಸುವುದರ ಮೂಲಕ) ಪ್ರಕಟಿಸು; ಸಾರಿಸು : ಗರ್ಭದೊಳಿರ್ದಂತೆ ಅವರ ತಾಯ್ಗೆ ಜೀವಂಗಳಂ ಕೊಲ್ಲದಂತಪ್ಪ ಬಯಕೆಯಾಗಿ ಅಭಯಘೋಷಣೆಯಂ ಪೊಱಲೊಳಂ ನಾಡೊಳಂ ಪೊಯ್ಸಿ ಜೀವಂಗಳ್ಗಭಯದಾನಂಗೊಟ್ಟು ಪುಟ್ಟಿದರಪ್ಪುದಱಿಂದವರ್ಗಭಯಘೋಷರೆಂಬ ಪೆಸರಾದುದು (ಪಡ್ಮಾಚಾ. ೯೫-೨೦). **ಹುಯ್ಸು$_1$:** ೩. ಕೆತ್ತಿಸು ; ಕೊರೆಯಿಸು ; ಕಂಡರಿಸು : ಸಟೆಯೋಜನ ಮಾವ ಜಯಿಸೋಜನು ವೀರಗಲ ಹುಯ್ಸಿ ನಿಲ್ಸಿದ ವೀರಗಲು (ಎಇ. III. ಶಾಸನ. ೦೬-೯; 1381). **ಹೊಯ್ಸು$_1$:** ೧. ಹರುಷಸ್ವಾಂತದಲಿ ಹೊಯ್ಸಿದನು ಕಮಲಜನಮಲಭೇರಿಗಳ (ಶೋಚಾ. ೪-೭-೨೬). ೨. ನಂಬಿಗಿಂಬಿಯ ನಂಬಿಗೊಲಿದಿಹ ಶಂಭು ಗಿಂಭು ಸಮಸ್ತಭಕ್ತಾಡಂಬರಕೆ ಹೊಱಹೊಱಗೆನುತ ಹೊಯ್ಸಿದನು ಡಂಗುರವ (ಶಸಪು. ೨೬-೨೨) ; ಅರಸ ಹದುಳಿಸು ನಿನ್ನ ಸೊಸೆಯರ ಕರೆದು ಸಂತೃಸಕಟ ಹಸ್ತಿನಪುರದ ಗಾವಳಿ ಗಜಬಜಕೆ ಡಂಗುರವ ಹೊಯ್ಸಿಂದ (ಕುಪ್ಪಾಕ. ೦-೯). ೪. ಪೆಟ್ಟುಕೊಡುವಂತೆ ಮಾಡು ; ಹೊಡೆಸು : ಕಷ್ಟವ ಬಗೆದ ಕೈಕೆಯ ಕಾಳುದೊತ್ತಿರ ಜಗಳದಲಿ ಹೊಯ್ಸು [ಜಿಶಾಂ. ಯ್ಸು]ವೆನು ಬಾಯನು (ಶೋಚಾ. ೨-೩-೯). 'ಪೊಯಿಸು' ಪರಾ.

[ಪೊಯ್$_1$ + --ಸು$_1$]

ಪೊಯ್ಸು$_2$, ಹುಯ್ಸು$_2$, ಹೊಯ್ಸು$_2$ (ಕ್ರಿ). ೧. ಹೊಯ್ಯುವಂತೆ ಮಾಡು ; ಸುರಿಸು : ಚನ್ನಿಗರಂ ಮನ್ನಿಸಿಮೆಂದು ಬಡಿದು ಬಾಯ್ತೂವೆ ಪುಡಿಯಂ ಪೊಯ್ಸುವಂ (ಧರ್ಮಾಮೃ. ೨-೬೭). **ಹುಯ್ಸು$_2$:** ೧. ಮಲ ದೇಹಿಗಳ ದೂತರಿಂ ಹಿಡಿದು ಕೆಡಹಿಸುತ ಘಳಿಲನವದಿರ ಬಾಯೊಳಂ ಹುಡಿಯಂ ಹುಯ್ಸಿ ಮಡಗಳಲೊದೆಸಿ ನರಕದೊಳು ಹಾಯ್ಕಿಸುವನಂತರಂ (ವೀರೈಪು. ೪-೪-೨೮) ; ನಾನು ಅವರ ಹತ್ತಿರ ಹೋಗಿ ಕೈಗೆ ನೀರು ಹುಯ್ಸಿಕೊಂಡು ಅವರ ಕೈಯಿಂದ ಚಂಬು ತೆಗೆದುಕೊಂಡ ಮೇಲೆ ಅತ್ತೈಯನೇ . . . ಬೀದಿಬಾಗಲಿಗೆ ಹೋದರು (ಶಾಂಗಾಳ್ಳ. ೦೭೯). **ಹೊಯ್ಸು$_2$:** ೨. ನೆಡಿಸು ; ಸ್ಥಾಪಿಸು : ಧರಣೀಪಾಲ ಸುಮುಹೂರ್ತದಲಿ ಹೊಯ್ಸಿದನುದು ಹೊಱಗುಡಿಯ (ಕುಪ್ಪಾಕೀ. ೦-೧೩). [ಪೊಯ್$_2$ + --ಸು$_1$]

ಪೊಯ್ಸಿಂಡಾಡು, ಹೊಯ್ಚಿಂಡಾಡು (ಕ್ರಿ). ಹೊಡೆದು ಅಥವಾ ಎಸೆದು ಹಿಡಿಯುವ ಚೆಂಡಿನ ಆಟವನ್ನು ಆಡು : ಸಿಡಿಲಂ ನುರ್ಗುವ . . . ವೆರ್ಗಡಲಂ ಪೀರ್ವ ಕುಲಾಚಲಂದಳಿದು ಪೊಯ್ಸಿಂಡಾಡುವಾದಿತ್ಯನಂ ಎಂದಿವಾರ್ಪುಳ್ಳ ಗಣಾಧಿನಾಥರೊಡನೇಳ್ತಂದರ್ ಮಹೋತ್ಸಾಹದಿಂ (ಶಶಿಂ. ೩-೦೯). **ಹೊಯ್ಚಿಂಡಾಡು :** ತಲೆಯ ಹೊಯ್ ಚೆಂಡಾಡು ತಿನ್ನಿವನೆಲುವನೆನುತೀಟೆಯಲಿ . . . ಹೊಯ್ದರು ಪವನನಂದನನ (ಕುಪ್ಪಾಕ. ೦೦-೩೦) ; ಕುಣಿಯೆ ಕುರುಳು . . . ಮೇಲುದು ನಸುಜಾಜಿ ಮಣಿಹಾರವಲೆಯೆ ಹೊಯ್ಚಿಂಡಾಡುವ ಬಾಲಗಣಕೆಯರೊಪ್ಪಿದರಲ್ಲಿ (ಕುಶಾಸಾಂ. ೫೬-೩೦). [ಪೊಯ್ಸಿಂಡು + ಆಡು$_1$]

ಪೊಯ್ಸಿಂಡು, ಪೊಯ್ಚಿಂಡು, ಹೊಯಿಸೆಂಡು, ಹೊಯ್ಚಿಂಡು (ನಾ). ೧. ಚೆಂಡನ್ನು ಹೊಡೆದು ಅಥವಾ ಎಸೆದು ಹಿಡಿಯುವ ಒಂದು ಬಗೆಯ ಆಟ : (ಕ). ೨. (ಹೊಡೆದು ಆಡುವ ಅಥವಾ ಎಸೆದು ಹಿಡಿಯುವ ಆಟದಲ್ಲಿ ಬಳಸುವ) ಒಂದು ಬಗೆಯ ಚೆಂಡು : ಮೇಗಣ್ಗೆ ಪಾಱಿ ಮತ್ತೆ ಬೀಟ್ಟಿಂತು ಪೊಯ್ಸಿಂಡಿನಂತೆ ಪಲವು ಸೂಟ್ಟಾಱಿ ಬೀಟ್ಟಿಚ್ಚಱಲಾಱದೆ ನೆಲನು ಕರ್ಚಿ (ಶಶಾಂ. ೦೯೯). **ಪೊಯ್ಚಿಂಡು :** ೨. ಅದೆಲ್ಲ ಹಳೇಗಾಲದ ಹಳಸಿದ ಸಂಪ್ರದಾಯಗಳು ಎಂದವನು ಮತ್ತೆ ಮತ್ತೆ ಗಾಳಿ ಊದಿದ. ಅವರೂ ಅದನ್ನು ಕೇಳಿ 'ಪೊಯ್ಚಿಂಡಿ'ನಂತೆ ಉಬ್ಬಿದರು (ಕೃಷ್ಣಶಾ. ೩೯). **ಹೊಯಿಸೆಂಡು :** ೨. ಅಂಜನಾದೇವಿ

ನಿಜಸಖಿವೃಂದದ ನಡುವೆ ಹೊಯಿಸೆಂಡಂ ಚಂದದೆ ಪೊಯ್ವುತಿರಲು (ಅಂಜನ. ೯ ೬೧). **ಹೊಯ್ಚೆಂಡು :** ೨. ಗಂಡನೆಷ್ಟೆಷ್ಟು ಮನ್ನಿಸಿದನಷ್ಟಷ್ಟು ಹೊಯ್ಚೆಂಡಿನಂತುಬ್ಬಿ ಹಾಡುವಳು (ಶರಸ. ೧೦-೬೯). 'ಪೊಡೆಸೆಂಡು' ಪರಾ. [ಪೊಯ್$_1$ + ಸೆಂಡು]

ಪೊರಕಮಲೆಯ (ನಾ). ಒಬ್ಬಾತನ ಹೆಸರು : ಮಲ್ಲಯಂ ಊರ ತುಱು ಹುಯಿ(ಲೊ)ಲೊಳು ತುಱುವಂ ಕಟ್ಟಿ ಕಾದು ಸತ್ತು ಸಗ್ಗಿಯಾದಂ ಪೊರಕಮಲೆಯ ಕಲ ನಿಲಿಸಿದೊ (ಸ್ಮಾಲಿಂ. ೦೯೨೭, ೯೬-೯ ; 10ನೆಯ ಶತ). [?]

ಪೊರಕೆ, ಪರಕೆ$_2$ (ನಾ). ಕಸ ಗುಡಿಸುವ ಸಾಧನ ; ಬರಲು : ಪ್ರಸನ್ನಳು ಹಠಾತ್ತಾಗಿ ಪೊರಕೆಯನ್ನು ಕೈಯಲ್ಲಿ ಹಿಡಿದಳು ! (ಕಪುಳ. ೦೨೫) ; ಕೈಯಲ್ಲಿದ್ದ ಪೊರಕೆಯನ್ನು ಕೆಳಕ್ಕೆಸೆದು ಆಕೆ ಕೊಠಡಿಯೊಳಕ್ಕೆ ಕಾಲಿಟ್ಟಳು (ಐಕಾಂಗ. ೨೯). **ಪರಕೆ$_2$:** ಆನೆಯ . . . ಬಾಲದ ತುದಿಯ ಕೂದಲುಕುಚ್ಚು ಕಂಡವರು 'ಆನೆ ಪರಕೆಯ ಹಾಗಿದೆ' ಎಂದರು (ಬುದ್ಧಪ. ೬೩) ; ಈ ಪರಕೆಗಳನ್ನು ಉದ್ದವಾದ ಗಳುಗಳಿಗೆ ಕಟ್ಟಿಕೊಂಡು ಛಾವಣಿಯ ಧೂಳನ್ನೂ ಬಲೆಗಳನ್ನೂ ಗುಡಿಸಬಹುದು (ಗೃಹಪ. ೧೬೯). [ದೇ. ॥ ತೆಲು. ಪೊರಕ]

ಪೊರಗಣ 'ಪೊಱಗು' ಪರಾ.

ಪೊರಗು 'ಪೊಱಗು' ನೋ.

ಪೊರಜಿ 'ಪೊರಜೆ' ನೋ.

ಪೊರಜೆ, ಪೊರಜಿ, ಹುರಜಿ, ಹುರ್ಜಿ, ಹೊರಜಿ, ಹೊರಜೆ, ಹೊರ್ಜಿ (ನಾ). (ಆನೆಯನ್ನು ಕಟ್ಟುವುದಕ್ಕೂ ರಥವನ್ನೆಳೆಯುವುದಕ್ಕೂ ಬಳಸುವ) ದಪ್ಪವಾದ ಹಗ್ಗ, ಸರಪಣಿ ಮುಂತಾದುವು : ಪೊನ್ನೆಯ ಮುಗುಳೆಕ್ಕಾವಳಿ ತನ್ನ ಕೊರಲ್ಗೆಸೆಯೆ ಮಧುಪರುಚಿ ಮದನವಶಾತ್ಯುನ್ನತೆ ಪೂವಿನ ಪೊರಜೆಯೊಳುನ್ನುನ್ನಂ ಸೊಗಯಿಪಂತೆ ಕಣ್ಗೆಸೆದಿರ್ದಳ್ (ಶಾಂತಿಪು. ೬-೦೭) ; ರನ್ನದ ಪೊರಜೆ ನವಾಂಭೋದಮಾದ್ಯದ್ಗಜಕ್ಕಿಕ್ಕಿದುದೋ ಪೇಱಿಂಬಿನಂ ಕಣ್ಗೆಸೆದುದು ಶಬಲಚ್ಛಾಯೆಯಿಂ ಶಕ್ರಚಾಪಂ (ಪಂಠಾಮಾ. ೭-೧೪೫) ; ಸರಸಿಜತಂತು ಕಿಂಶುಕದ ಕುಟ್ಮಲವೇಱಿದ ಕೆಯ್ಯೊಳಂಕುಶಂ ಪೊರಜೆಗಳಾಗೆ (ಅನಂಪು. ೬-೦೯). **ಪೊರಜಿ :** ಪೊರಜಿಯೆ ಪರಿವೇಷವೆಂದಂತೆ ಕೆನ್ನೆಯೊಳಿಳಿದ ಮದವೆ ಲಕ್ಷದಂತೆ ಕರದ ತುಷಾರಾಂಬು ಚಂದ್ರಿಕೆಯಂತೆಸೆದಿರೆ ಶಶಿಯಂತಿರ್ದುದಾ ಗಜ (ತ್ರಿಶಂತಿ. ೨೭-೨೦) ; ರನ್ನದ ಮೊಗರಂಬ ಬೆಳ್ಳಿಯ ಪಕ್ಕರೆ ಚಿನ್ನದ ಪೊರಜಿ ಮೆಱೆಯಲು . . . ಮನ್ನಣೆಯಾನೆಯೆಯ್ದಿದವು (ಕುರಾಸಾಂ. ೦೦-೨೬). **ಹುರಜಿ :** ಬಸವನ ಆಭರಣದ ಲೆಖ್ಖಾ . . . ೨ ನೂಲುಹಗ್ಗದ ಹುರಜಿ (ಎಕ. XIV, ನಂಜನ. ೨೮೭-೬ನೇ ಕಲಂ ; ಸು. 1849). **ಹುರ್ಜಿ :** ಬಸವನ ಆಭರಣದ ಲೆಖ್ಖಾ . . . ೪ ಕಬ್ಬಿಣದ ಹುರ್ಜಿ ಬಳೆ (ಎಕ. XIV, ನಂಜನ. ೨೮೯-೬ನೇ ಕಲಂ ; ಸು. 1848). **ಹೊರಜಿ :** ಮನವೆಂಬ ಹೊರಜಿಯಂ ಕರಣಂಗಳೆಂಬ ಕಾಲಾಳ್ಗಳಿಂ ಪಿಡಿಸಿ ಸುಬುದ್ಧಿಯೆಂಬ ಭೂಮಿಯಲ್ಲಿ ಆನಂದವೆಂಬರಸು ರಥವಂ ನಡೆಸಿ (ಅನನಂ. ೨೬೦-೦೧೮೭) ; ಹಿಂಡಿ ಹಿಳಿವ ಕೆಡಹುವ ಹೊರಜಿ ಹೊಸೆವ ತಿರುಹುವ . . . ರೌರವಂ ಭಯಂಕರವಾದುದು (ಸಿರ್ಧಾ. ೬-೨೯). **ಹೊರಜೆ :** ಆ ಸಮರಸಂಭ್ರಮದೊಳ್ ಹೊರಜೆಯೊಳ್ ಕಾಲ್ಗೋದು ನಿಂದ . . . ಗಜದ (ಅನಂಪು. ೦೯ ೬ ಪ) ; ಹೊರಜೆ ಹೊಕ್ಕುಳ ಗಂಟೆ ಡಕ್ಕೆಯ . . . ಕರಿಘಟೆಗಳಿರದೆಯ್ದೆ ತಳರ್ದವು ಕುಲಗಿರಿಗಳಂತೆ (ಕುಮುರಾ. ೩-೩೦) ; ಕನಕಘಂಟೆಗಳುಲಿಯೆ ಹೊರಜೆಯ ತನತನಗೆ ಹಿಡಿದಡರಿ ಪೂರ್ವಾಸನವ ವೆಂಠಣಿಸಿದರು ರಾಜಾರೋಹಕವ್ರಾತ (ಕುಪ್ಯಾಭೀ. ೯-೭೦). **ಹೊರ್ಜಿ :** ಜಿನಬಿಂಬಾಂಕಿತ ಅಮೌಲ್ಯರತ್ನನಿರ್ಮಿತ ೨೪ ಘಂಟೆಗಳಂ ಮಾಡಿಸಿ ಅದಕ್ಕೆ ಚಿನ್ನದ ಹೊರ್ಜಿಯಂ ಕಟ್ಟಿಸಿ (ಪುರುಸ ೨೨೩). [ದೇ. ॥ ತಮಿ. ಪುರಚ್ಚೆ, ಪುರೋಚ್ಚೆ]

ಪೊರಜೆವಿಡಿ (ಕ್ರಿ). (ಆನೆಗೆ ಕಟ್ಟಿರುವ) ಹಗ್ಗವನ್ನು ಹಿಡಿ : ಮದೇಭಂಗಳನಾರ್ದು ಬಿಟ್ಟಿಕ್ಕುವ ನಿಷಾದಿಗ[ಳಟು]ಯೆ ಪೊರಜೆ[ಶಾಕಾಂ.ಜಿ] ವಿಡಿದು ಕೊರಲ ಬಳೆಗಳೊಳೆ ಕಾಲ್ಗೋದು ಪರಿಯಿಸುವ ರಸತ್ತಾರು ಗರುಮಂ (ಪಂಪಭಾ. ೦೨-೬೦ ಪ). [ಪೊರಜೆ + ಪಿಡಿ$_1$]

ಪೊರಟೆ$_1$ (ನಾ). ಮೋಸ ; ದ್ರೋಹ : ಪುಸಿಗಂ ಪೊಱ[ರ]ಟೆಗಂ ಮಾಯೆಗಂ ಮಱವೆಗಂ ಕಳವಿಂಗಂ ಕಪಟಕ್ಕಂ . . . ಸೊಱಹಿಂಗಂ ಇಂಬುಗೊಡದೆ (ಸಕವಂ. ೬೨-೦೦). [ದೇ. ॥ ತಮಿ. ಪುರಟ್ಟು]

Δ **ಪೊರಟೆ$_2$** 'ಪೊಟ್ಟರೆ' ನೋ.

ಪೊರಡು 'ಪೊಱಮಡು' ನೋ.

ಪೊರಣಿಮೊಗೆ (ನಾ). ಒಂದು ಊರಿನ ಹೆಸರು : ಮೀರಿಜವಳಿ ಪೊರಣಿಮೊಗೆ ಕಿಟ್ಟ್‌ಕೆಱೆ ಗುಡಗತಾಣಮ್ ನೊಕ್ಕಿಗೋಡು (ಸ್ಮಾಲಿಂ. ೦೯೦೯, ೦೦ ; 700). [?]

ಪೊರತು 'ಪೊಱತು' ನೋ.

ಪೊರಪಾಳೆಯ 'ಪೊಱಪಾಳೆಯ' ನೋ.

ಪೊರಪು 'ಪೊರೆಪು' ನೋ.

ಪೊರಪೊಣ್ಮು 'ಪೊಱಪೊಣ್ಮು' ನೋ.

ಪೊರಮಡು 'ಪೊಱಮಡು' ನೋ.

ಪೊರಯಿಂಕೆ 'ಪೊಱಯಿಂಕೆ' ನೋ.

ಪೊರವಕ್ಕ (ನಾ). ಒಬ್ಬಾಕೆಯ ಹೆಸರು : ಪೊರವಕ್ಕನುಂ ಸೆಮ್ಬಕ್ಕನುಂ ಪಾಟಿಯಕ್ಕನ ಕೆಳದಿಯೆ ಪುಟಿಯಣ್ಣನೀ ಧರ್ಮ್ಮಂ ನಡಯಿಸು × × × (ಎಕ. VIII, ಸಗರ. ೯೫-೦೩ ; ಸು. 950). [? + ಅಕ್ಕ$_1$]

ಪೊರವಾರ್ 'ಪೊಱಮಾಱು$_2$' ನೋ.

ಪೊರವಾರ 'ಪೊಱಮಾಱು$_2$' ನೋ.

ಪೊರವಾರು 'ಪೊಱಮಾಱು$_2$' ನೋ.

ಪೊರಸು, ಹೊರಸು$_4$ (ನಾ). ಹಗ್ಗ ಅಥವಾ ನುಲಿಯಿಂದ ಹೆಣೆದ ಮಂಚ; ನೂಲುಮಂಚ : ಕೂಸಂ ಮಿಸಿಸಿ ಮನೆಯ ಮುಂದೊಂದು ಪೊರಸಿನ ಮೇಲೆ ಪಟ್ಟಿರಿಸಿದಾಗಳ್ (ಬಂಹಂ. ೬-೯ ಪ). **ಹೊರಸು$_4$:** "ಹೊರಸು ಖಟ್ವಮೆನಿಕ್ಕು" (ಮಂಗರಾ. ೬೦-೦೫); ಲಗ್ನಕ್ಕೆ ಷಟ್ ತ್ರಿನವ ದ್ವಾದಶಾಲಯಂಗಳ್ ಹೊರಸಿಂಗವು ನಾಲ್ಕು ಕಾಲ್ಗಳ್ (ಜಾತಕಿ. ೯-೦೬) ; ತನಯಂ ಪಡೆತಂದ ವಸ್ತುವ ನೋಟ್ಟೆವೆಂದತಿಸಂಭ್ರಮದಿಂದಿದಿರಂ ಬಂದು ಹೊರಸಿನ ಕಾಲ್ಗಳಂ ಕಂಡು (ಪುಷ್ಯಾಸ್ತ್ರ. ೦೨-೦೫ ಪ); ಕಂಡಕಂಡವರು ಏಱಲ್ಕೆ ಕೈಲಾಸ ರಂಡೆಯ ಹೊರಸೆ (ಸರ್ವಜ್ಞ. ೬೯೦). [?]

ಪೊರಳ್, ಪೊರಳು$_1$, ಹೊರಡು$_2$, ಹೊರಳ್, ಹೊರಳು$_1$ (ಕ್ರಿ). ೧. ಉರುಳಾಡು ; ಉರುಳು : "ಪೊರಳ್-ಲುಠನೇ" (ಶಮಠಾ) ; ಪೊರಳೆ ವಾರಿಧಿಗಳ್ ಕಲಂಕಿದುವು[ರ್ದೆ ಮೆ]ಯ್ಯನುದಗ್ರಮಂದರವು ದಂದಲುಗಿತು . . . ದಾಡೆಗುಟ್ಟೆ ಕಟಲ್ದು ತಾರಗೆಗಳ್ ನಭಂಬೆರ[ಸು] ಬಿಟ್ಟುವು ಪೆಂಪಿದೇಂ ಪಿರಿದಾಯ್ತೊ ದೈತ್ಯವರಾಹನಾ (ಪಂಪಭಾ. ೬-೦೫); ಬಡಗೊಂದೆಯಂತೆ ದಡದಡಿಸುವರ್ ಪಾವಿನಂತೆ ಪೊರಳ್ವರ್ (ಧರ್ಮಾಮ್ಯ. ೩-೬೦). ೨. ತಿರುಗು : ಚಲಿಸು : ಕಸಕಳಿಯಂತೆ ನಾಲಗೆ ಪೊರಳ್ವುದು ರಾಜಸಭಾಂತರಾಳದೊಳ್ (ಅಂಪು. ೨-೦೦) ; ನುಡಿವೊಡೆ ನಾಲಗೆ ಪೊರಳದೆ ಕಿಡುಗುಂ ನೆಱೆ ಮೂಗನಾಗಿ ನಮೆಗುಂ (ಧರ್ಮಾಮ್ಯ. ೬-೦೬೨) ; ಪಲಕಾಲದ ಪುಣಸೆಯ ಪಣ್ಣ ಲೇಹ್ಯಮಂ ಮಾಡೆ ಸನ್ನಿಪಾತಜ್ವರದಿಂ ಸಲೆ ಪೊರಳದಿರ್ದ ನಾಲಗೆಗೆ ಲೇಸನೀಗುಂ (ಕಲ್ಯಾಕಾ. ೩-೫೦). ೩. ಜಾರು ; ಸರಿ : ಮುದ್ದುಮೊಗಂ ಪೊರಳ್ವ ಮುಂಜೆಱಗು ಕಿವುಟ್ಟು ಪೀರ್ವ ಮೊಲೆ ದಟ್ಟಡಿಯೊಳ್ಪರಿದೋಡುವಂಗಣಂ ನೆಱೆ ತನಗೊಪ್ಪುವರ್ಭಕನನೊರ್ವನನಾಂ ಪಡೆವಂದಮಾವುದೋ (ಸುಕುಮಾ. ೯-೯೯). ೪. ಬೇರೆ ದಿಕ್ಕಿಗೆ ತಿರುಗು :

ಬೆಟ್ಟದ ಮೇಲ್ ಪೊರಳೆ ಬನ್ದು ಮೂಡಾಯ್ ಸಿ(ಸೀ)ಮೆಯುಳ್ ಕು(ಕೂ)ಡಿತ್ತು (ಇಅ. XVIII, ೩೬೬-೨೬ ; ೫ನೆಯ ಶತ). **ಪೊರಳು$_1$** : ೧. ರುಗಮಂಟಪದೊಳಗೆ ಪೊರಳುತಂ ಮುಂದುಗೆಟ್ಟಱಿವುಗೆಟ್ಟಲ್ಲಲ್ಲಿಯೊಱಲುತಂ (ಕಣ್ಣಡ. ರೇ. ೦೪೭. ೦೯) ; ಮಡುವಿನಂ ಪೊಱಮಟ್ಟ ಮಱಿಮೀನಿನಂತೆ ಕೆಲಸಿಡಿಸಿಡಿದು ಪೊರಳಿ ಬರಹದ ಬೆಂಕೆಯಿಂ ಬೆಂದು ಕಡುಹರವಸಂಬೋದರಮರಿಯರ್ (ಸಂಪು. ೦೯. ೪೩) ; ಸರಸಿಜಗಂಧಿಯ ದಿವ್ಯಾಂಗಲಾವಣ್ಯಕರಧಿಯೊಳ್ನೆರವಿಗರಕ್ಷಿ ವರಮೀನಗಳು ನೆಱ^3 ಪೊರಳುತ ತೆರಳುತ ಮರಳಿ ಮುಳುಗುತೊಪ್ಪಿದುವು (ಕಂಪಂ. ೯. ೯೫). ೨. ಧರೆಯೊಳು ನಟ್ಟ ದಿಟ್ಟಿಯಲರಿತಧರದೆ ಪೊರಳುವ ತುದಿನಾಲಗೆಯ ಬೆರಳಲುಕದೊಳಾಂದೋಳಿಪ ಮಸ್ತಕದರಳುಗಣ್ಣಬಲೆಯೊಪ್ಪಿದಳು (ಕಂಪಂ. ೯-೦೬೪). **ಹೊರಡು$_2$** : ೧. "ಹೊರ[ಶಾಶಾಂ. ದ]ಡು -ಪರಿಲುಠನೇ (ಹೊರಳು)" (ಶಮರಾ). **ಹೊರಳ್** : ೧. ಮುರಿವ ಬಿಡಿಸುವ . . . ಹೊರಳ್ವ ತನು ಹೋರಟೆಯ ಸತ್ವೋತ್ಕರುಷ ಸರಿಯೆನೆ ಶಂಭು ಶಿಷ್ಯಗೆ ಪರಿವಿಡಿಯ ತೋಱಿಸುವೊಲಿದ್ದನು (ಕುಪ್ಯಾಂ. ೬-೩೦) ; ನಾ ತಿವಿದ ಖಡ್ಗಕೆ ನರನ ಮೈ ಲವಲವಿಸಲಡಿಮೇಲಾಗಿ ಹೊರಳ್ದರೆ ಧನ್ಯ ತಾನು (ಕುಪ್ಯಾಳ. ೬-೪೦). **ಹೊರಳು$_1$** : ೧. [ಚಿನ್ನಮಲ್ಲಿಕಾರ್ಜುನನಿಱಿದಲಗು] ಒಡಲಲ್ಲಿ ಮುಱಿದು ಹೊರಳುವೆನ್ನಳಲನು ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ (ಮಹಾದೇ. ಬ. ೧೪೦-೩೦೯) ; ಸೆರೆ ಬಿಗಿದು ಗದುಗದಿಸಿ ಬಿಕ್ಕುತೆ ಬಿದ್ದು ಹೊರಳುತ್ತಳುತ್ತಗಲಲಾಱದೆ (ಬಸರ. ೩-೨೦) ; ಬಂದು ಭೀಷ್ಮನ ಚರಣಸೀಮೆಯಲಂದು ಕಾಯವ ಕೆಡಹಿ ವಿಗತಾನಂದ ಭೂಪತಿ ಹೊರಳಿದನು ಹೇರಾಳಶೋಕದಲಿ (ಕುಪ್ಯಾಭೀ. ೦೦-೦೯). ೨. ಪರಕೆ ಬಾಹಿರನಾಗಿ ನಾನಾಯೋನಿಯೊಳು ಸುಳಿದು ಹೊರಳುವನುವನು ಕೃಷ್ಣದೇವನು ಕರುಣಿಸಿದನೇ (ಕುಪ್ಯಾಭೀ. ೩-೨೯). ೩. ಭೀಮ ಬಿದ್ದನು ತೊಡೆಯ ಮೇಲಿಂದೀ ಮಹಿಗೆ ತಚ್ಚೈಲಶಿಲೆ ನಿರ್ನಾಮವಾದುದು ಹಸುಳೆ ಹೊರಳಿದು ಬಿದ್ದ ಭಾರದಲಿ (ಕುಪ್ಯಾಅ. ೪-೩೭). ೪. ಹೊರಳಿ ನೋಡು ಮರಮರಳಿ ನೋಡು ಒಳಗರಳಿ ನೋಡು ನೋಟ (ಅರಳು. ೪೦೪-೦೦) ; ಇರುಳೇ ಹೊರಳಿತು ಹಗಲೇ ಮರಳಿತು ಚಿಗುರೆಲೆ ಹೂವಿಗೆ ಹಾಸು (ಸಂಪು. ೦೦-೦೦). ೫. ಹಿಂತಿರುಗು ; ಮರಳು : ನಂಜಮ್ಮ ಹೊನ್ನ ತಳಿಗೆಯನ್ನು ಎತ್ತಿಕೊಂಡು ಸೆರೆಮನೆಯಿಂದ ಹೊರಳಿದಳು (ಹಾಹುತ್ತ. ೪೦).

[ದೇ. ॥ ತಮಿ. ಪಿರಳ್, ಪುರಳ್ ; ಮಲ. ಪಿರಳು ; ಪುರಳು, ತುಳು. ಪುರೆಲು, ಪೊರಲು, ಪೊರೆಡು, ಹೊರಳು ; ತೆಲು. ಪೊರಲು, ಪೊರ್ಲು]

ಪೊರಳನ್ವಯ (ನಾ). [ಜೈನ] ಯತಿಗಳ ಒಂದು ಶಾಖೆ : ಸ್ವಸ್ತಿಶ್ರೀ ಅರಿಉರ ಪನ್ನಿರ್ವರು ಮೂ × × × ಯ್ಯನ್ತಲ ಮೊಱಮುನಿಱಿಸಿದಾ ಕಾರೆಯರುಂ ಪೊರಳನ್ವಯರುಂ × × × ಗುಣಸಾಗರತಮ್ಮಡಿಗಳ್ಗೆ ಕೊಟ್ಟ × × × (ಎಳ. IV, ಗುಂಡ್ಮುಸೇ. ೬೯-೧೩ ; ಸು. 750). [? + ಅನ್ವಯ]

ಪೊರಳಿ, ಹೊರಳಿ, ಹೊರಳೆ$_2$ (ನಾ). ೧. ಗುಂಪು; ಸಮೂಹ; ರಾಶಿ : ತಾಪದಿಂ ಮೃಣಾಳನಾಳದ ಪೊರಳಿಯಂ ಪೊರಳ್ದು ತರ್ಕಯಿಸಿಯುಂ (ಅರ್ಥನೇ. ೩-೨ ಪ); ಕೆಡೆದ ಕರಿಗಳ ... ಮಡಿದ ಕುದುರೆಗಳ ಪೊಡೆಗಲ್ಲ ಪೊರಳಿಗಳೊಳಗೆ ಕಡಿದ ಕೈಕಾಲ ನರರಟ್ಟೆಗಳ ತುಂಡುಗಳ ಮರಮಟ್ಟೆಗಳನೆಳೆಯುತೆ (ಸ್ವಪಿಸಾ. ೨೨ ೨೬). **ಹೊರಳಿ** : ೧. "ಬಂಬಲ್, ತುಱುಗಲ್ . . . ಹೊರಳಿ . . . ಗೊಂದಣ(ಉಂದಲ್) — ಈ ೪೦ ಸಮೂಹಂ" (ಕಶಸಾ. ೩೬-೨೨೨); ಇರುಳ ತಿರುಳಿನ ಹೊರಳಿಗಾ ತರಣಿ ಕೆರಳ್ವಂತೆ ಸರಳ ತೆರಳಿಕೆಗೆ ಮರಳಿತು ಕರುಳ ಸುರುಳಿಯೊಳು ಹೊರಳುತ್ತ . . . ತರಳಚಿತ್ತದ ಹಂದಿ ಮರಳಿ ಕಾನನಕೆಯ್ದಿತು (ಹತಕಾ. ೬-೩೦); ಇಂದುಕಳೆಯ ಸಂದಣಿಯಂತೆಯುಂ ಅರಲ ಸರಲ ಹೊರಳಿಯಂತೆಯುಂ . . . ವಿಲಾಸದಿಂ ಬರ್ಪ ವಿಲಾಸಿನೀ ಜನದ ನಡುವೆ (ದಶಕು. ೬-೩೦ ಪ) ; ಗಿರಿಯ ಮುತ್ತಿದ ಮಿಂಚುಬುಳುವಿನ ಹೊರಳಿಯಂತಿರೆ ಹೊನ್ನ ಬರಹದ ಸರಳು ಮೆಱೆದವು (ಕುಪ್ಯಾಸ್ತ್ರೋ. ೩-೨೬). ೨. ಆಧಿಕ್ಯ ; ಹೆಚ್ಚಳ : ಪರುಷದ ಹೊರಳಿಯಲಿ ಹೊಡಕರಿಸಿ ಚಿತ್ತವ ತಿರುಹಿ (ಕುಪ್ಯಾಅ. ೬-೭೯). **ಹೊರಳೆ$_2$** : ೧. 'ಹೊರಳೆಗಡಿ' ಪರಾ. ೩. ಹೊರೆ ; ಮೂಟೆ : ದೇವಾಂಗವಸ್ತ್ರಂಗಳ ಹೊರಳೆಯಂ ಕೈಕೊಳ್ಳಿ (ಸಂಪು. ೩೬-೦೦).

ಪೊರಳಿಸು, ಹೊರಳಿಸು (ಕ್ರಿ). ೧. ಉರುಳಾಡುವಂತೆ ಮಾಡು ; ಉರುಳಿಸು : ಪರಿಭವರಜದೊಳ್ ಪಗೆಯಂ ಪೊರಳಿಸಲುಂ . . . ತಕ್ಕುದು ನೀಂ ಪೊರಳಲ್ತಕ್ಕುದೆ ಮದೀಶ ಭೂಪಾಂಸುವಿನೊಳ್ (ಇಗಂ. ೬-೯೭). **ಹೊರಳಿಸು** : ೧. ಸಕ್ಕರೆಯ ತಳಿದುದ್ದನು ಆರೆದದಱೊಳಿನಿ ಸಕ್ಕಿವಿಟ್ಟಿಕ್ಕಿಕೊಂಡದಂ ಹೊರಳಿಸಿ ಬಳಿಕ್ಕ ತಿಳಿದುಪ್ಪದೊಳು ಕೆಂಪಾಗಿ ಹುರಿದು (ಸೂಪಶಾ. ೪-೬೦). ೨. ತಿರುಗಿಸಂ ; ಆಡಿಸು : ನಾನು ಕೋಣೆಯೊಳಗೆ ದೃಷ್ಟಿ ಹೊರಳಿಸಿದೆ (ಕಾಂಯಾ. ೦೦) ; ಅವನನ್ನೇ ನಿಟ್ಟಿಸುತ್ತಿದ್ದ ಮಾಲುಗಣ್ಣುಗಳನ್ನು ಅತ್ತಿತ್ತ ಹೊರಳಿಸದೆಯೆ ಅವಳು ಕಲ್ಲಿನಂತೆ ನಿಂತಳು (ಪುಪರು. ೦೯೦). [ಪೊರಳ್ + — ಇಸು$_3$]

ಪೊರಳು$_1$ 'ಪೊರಳ್' ನೋ.

ಪೊರಳು$_2$ 'ಪುರುಳ್' ನೋ.

ಪೊರಳ್ಚು, ಹೊರಳಿಚು, ಹೊರಳ್ಚು (ಕ್ರಿ). = ಪೊರಳಿಸು ೧: "ಪೊರಳ್ಚು —ಲುಠನೇ" (ಶಮರಾ) ; ಅಸ್ತ್ರಾನಳಂ ಕಿಡಿಯಿಂ ಕೆಂಡದಿನೇಂ ಪೊರಳ್ಚಿದುದೊ ತನ್ಮೇಘಾಮರಾನೀಕಮಂ (ಅದಿಪು. ೦೩-೬೬) ; ದುರ್ಯೋಧನನೊಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂಗೆಯಂ ಪೊರಳ್ಚಿ (ಸಂಪಶಾ. ೬-೭೦ ಪ); ದ್ರುಪದಾತ್ಮಜಾತನೋವದೆ ಪುಡಿಯೊಳ್ಪೊರಳ್ಚಿ ತಲೆಯಂ ತೆಗೆವಲ್ಲಿ ಪಿನಾಕವೆತ್ತವೋದುದೊ (ಗದಾಯು. ೪-೩೦). **ಹೊರಳಿಚು** : ಹೊಕ್ಕವಾನೆಗಳು . . . ಲಾಳವುಂಡಿಗೆಯ ಸರಿಸಗುಂಡಿನೊಳೊಂದನೊಂದಿಟ್ಟೊರಸಿದವು ಕೊಡಹಿದವು ಸೀಳಿದು ಹೊರಳಿಚಿದವೆಱಗಿದವು ನಾನಾವಿಧದ ಕೊಲೆಗಳಲಿ (ಕುಪ್ಯಾಭೀ. ೪-೮೦) ; ಹೊಡೆದರಿಱಿದರು ಹೊರಳಿಚಿದರಡಗೆಡೆಹಿದರು ಕೋಳಾಹಳದ ಬಲುಗಡಿಯ ಭಟರಬ್ಬರಿಸಿ ಸದೆದರು ಸೂಳುಪಾಳಿನಲಿ (ಕೊರಾ. ೩-೭-೨). **ಹೊರಳ್ಚು** : ತೆರಳ್ಚೆ ಮರಳ್ಚೆ ಹೊರಳ್ಚೆಯಕಟ ನಿಜವು ಜೀವ ಹತ್ತುತೆಱನೆ ಪ್ರಾಣವೆಂಬರಲ್ಲ ಹುಸಿಯನಂತಜೀವ (ಸಾಸಂಸ. ೬-೬೧). [ಪೊರಳ್ + — ಚು$_1$]

ಪೊರಳ್ನುಡಿ (ನಾ). ದ್ವಂದ್ವಾರ್ಥವುಳ್ಳ ಮಾತು ; ಎರಡರ್ಥ ಬರುವ ಮಾತು : ಆದೊಡಿವು ಅರ್ಥಯಿಸಲಾಗದಸ್ಪಷ್ಟತೆಯ ಪೊರಳ್ನುಡಿಗಳಿನ್ ಮರಲ್ದುವಯ್ ಏಗಳುಂ (ಬದ್ಧಶ್ರ. ೩೫-೭೩೩). [ಪೊರಳ್ + ನುಡಿ$_2$]

ಪೊರಿ 'ಪುರಿ$_2$' ನೋ.

ಪೊರಿಗೆಱೆ 'ಪುಲಿಗೆಱೆ' ನೋ.

ಪೊರಿವಯ್ಯ (ನಾ). ಒಬ್ಬಾತನ ಹೆಸರು : ಕುಮ್ಬೆಸೆಯ ಮನವನೆಯರ ಪೊರಿವಯ್ಯ × × × ಕೇಸಿಮಾಣಿ ಕೆಞ್ಚಾಗಣ್ಯಗಾಳುಮದಟನಾಗಿ ನೆಲ ಕುಮ್ಬಿಸೆಯನಿಱಿಯಿಮೆನ್ದು ಕೆಞ್ಚಿಗಂ ತನ್ನಾಳ್ ಬೆಸಮೊಱೆ (ಎಳ. VIII, ಸೊರಬ. ೬೬-೬ ; 912). [? + ಅಯ್ಯ$_1$]

ಪೊರಿಸು 'ಪೊಱಿಸು' ನೋ.

ಪೊರು 'ಪೊಱು' ನೋ.

ಪೊರುಳ್ 'ಪುರುಳ್' ನೋ.

ಪೊರುಳಱೆ (ನಾ). ಒಂದು ಊರಿನ ಹೆಸರು : ಅಲಂತೂರ ಪೊರುಳಱೆ ಪೆರ್ನ್ನಗರಾದ್ಯನೇಕ ಸಮರಮಖಮುಖಾಹುತಪ್ರಹತಶೂರಪುರುಷಪಶೂಪಹಾರ (ಎಳ. IX, ದೊಡ್ಡಬ. ೬೬-೩೬ ; 517). [?]

ಪೊರೆ$_1$, ಹೊರೆ$_1$ (ಕ್ರಿ). ೧. ಕಾಪಾಡು ; ರಕ್ಷಿಸು : "ಪೊರೆ—ಪೋಷಣೇ, ಉಪಸರ್ಗೇ ಚ (ಹತ್ತಿರ)" (ಶಮರಾ) ; ರಾಮೇಶ್ವರ ಎಮ್ಬ ತೀರ್ಥದಾ ಮೊದಲೊಳ್ ಮೆಪ್ಪಿಕ್ಕಿ ಪೊರದ ಪನ್ದಿಗಳನಿಱಿಯಲ್ ಬನ್ದಲ್ಲೀ(ಲ್ಲಿ)

(ಇತಿ. XI. ೦೫೬–೦೦ ; ೫೦೨) ; ಒಡವೆಗಳಂಬರೆಂಚರರನನ್ವಿತಮಂತ್ರಿ ಸಮೂಹಮುಂ ಮನಂ ಬಿಡೆ ಪೊರೆದಿಷ್ಟಬಂಧುಜನಮುಂ ಕರದು (೦೦೫. ೨–೩೦) ; ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ಪೆಣ್ಣಲ್ಲವೆ ಪೊರೆದವಳಾ (ಹೂಂ. ೫–೭). ೨. ಪೋಷಿಸು : ಈತನಂಗಡಿಯಂಬಲವಡಂ ಪೆಜುತಿ ತಿಂದು ಬಾಟ್ಕೊಂ ಬೈಕಂಗುಳಿ ಬೇಡಿ ಪೊಬರೆಲ್ಲಮಂ ತೊಟಲ್ದು ಬಸಿಱು ಪೊರೆವೊಂ (ಕಣ್ಣಾಣಾ. ೧೬. ೬) ; ತನ್ನೊಡಲಂ ಪೊರೆಯಲಱಿಯದವನಾರುಮಿಲ್ಲಂ (ಕುಚಕಂ. ೩೨–೦೭) ; ಪೊರೆದೇಂ ಬಾಟವೆ ಪಂದಿ ನಾಯ್ಗಳೊಡಲಂ (ಸೋಮಚಿ. ೦೮). ಹೊರೆ¹ : ೧. ನೀನು ಹೊರೆವ ಯುಗಜುಗಂಗಳು ಒಂದು ತೃಣಮಾತ್ರವಾದ ಕಾರಣ ನಿನ್ನ ಹಸುಮಕ್ಕಳವರೆನುತ್ತಿದ್ದೆನಯ್ಯ (ಅಪಚಿ. ೦೯೯–೧೦೦) ; ನೀವಿನ್ನಿದಂ ರಕ್ಷಿಪುದು ಹೊರೆವುದಿನಿತಂ ಬೇಡಿ ವಡೆದೆನಾ ನಿಮ್ಮಲ್ಲಿ ಕರುಣೆಸೆಗೆ (ಕಚಾ. ೯–೦೪) ; ನಿನ್ನ ಭೃತ್ಯನ ಹೊರೆವ ಪರಿಯಿದು ಕೃಷ್ಣ ಜಯಜಯ (ಭಾಷ್ಕಂ. ೭–೦೬). ೨. ದೇಹೊಡಲ ಹೊರೆವುದಕ್ಕೆ ನಾನಾಜಿ (ಜುಚಾಕೇ. ೨. ೦೪–೦೬) ; ಹಗೆದು ಕೈಯಲಿ ಸಾಯಲಾಜಿವ್ವ . . . ಹೊರೆಯಲಾಪೆವು ಬೆಂದ ಬಸುಱುಗಳ (ಭಾಷ್ಕಂ. ೦೬. ೦೦) ; ಪೃಜೆಗಳಿಗೆ ಹೊಟ್ಟೆಯನ್ನು ಹೊರೆದುಕೊಳ್ಳುವುದೇ ದೊಡ್ಡ ಸವಸ್ಯೆಯಾಗಿತ್ತು (೩೦ಪಾ. ೧೧೭).

[ದೇ.ಕ ತಮಿ. ಪುರ; ತೆಲು. ಪ್ರೋಚು; ಕೋಲಾ. ಪುರಾಯ್; ಪರ್ಜಿ. ಪೊರಿವ್; ಗೊಂಡಿ. ಪೊರ್ವನಾ]

ಪೊರೆ¹. ಹೊರೆ¹ (ಕ್ರಿ). ೧. ಸೇರು; ಕೂಡು; ಬೆರೆ : ವರಶಬ್ದಾಲಂಕಾರದ ವಿರಚನೆಗಳ್ ನೋಟ್ಕೊಡೊಂದೆ ತೋರ್ಕಿಗಳಿಂತುಂ ಪೊರೆದಿರಲೊಂದೊಂದ ಱಿಂಳಾ ಪರಮಕವೀಶಪ್ರಯೋಗಗತವರ್ಗಂಗಳ್ (ಕಚಾ. ೨–೧೬) ; ಅವ ಕಾಲಮುಂ ಕಿಡದುದಂ ಪಾವದಿಂ ಪೊರೆಯದುದುಂ ಸುಖಮನೊಡೆ ತಪ್ಪುದಂ ಹ್ನುಂ ತಾನಾದುದನಂತಪ್ಪ ವೋಕ್ಷಸುಖಮನೆಯ್ದಿ (ಕಣ್ಣಾಣಾ. ೧೯–೬) ; ಎಡಱೋಡುವಿನಂ ಪೊರೆದೊಳ್ನೆಗಟ್ಟಿತ್ತೆಯೊಳ್ ತೊಡರ್ದಿರೆ ವೃನ್ದಾರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ (೩೦ಕಿ. ೨–೨೪). ೨. ಮೆತ್ತಿಕೊಳ್ಳು : ಅಂಟು ; ಹತ್ತು : ವಿಧುಮುಖಿ ವೆಲ್ಲವೆಲ್ಲನೆ ಮಧುದ್ರವಮಂ ಸವಿದೀಂಟುವಲ್ಲಿ ತನ್ನಧರದ ರಾಗದೊಳ್ ಪೊರೆದುದಂ ಮಧುವಂ ಬೆಱಗಾಗಿ ನೋಡುತುಂ (ಜಾಚ. ೦೬–೦೭) ; ಅಡಿಗಡಿಗೆ ಪೊಡವಿಯೊಳ್ ಪೊಡಿದುಕೊಳ್ವ ರಭಸದೊಳ್ ಪೊರೆದ ಪುಡಿಯನೊಡನೊಡವೆ ಬೆಮರ ಬಿಮಗಳ್ ನಾಂದೆ (ಕರ್ಣಪ. ೯–೬೦ ೫). ೩. ಬಳಿ ; ಲೇಪಿಸು ; ತೊಡೆ : ಕರಡಿಯ ತೋಲಂ ಕಜ್ಜಲಪರಾಗದಿಂ ಪೊರೆದು ಪಿಡಿದು ಜೀನೆಯೊಳ್ ತಂದಿರಿಸಿದನೋಲರಸನಂ ವಚನರಚನೆ ಬಳಸಿದುದತೀವತವುಮೊದನ್ನುವಿನಂ (ಕಾಂಪ್ರ. ೯ ೦೨೬) ; ಚಂದ್ರಗಾವಿಯ ದುಗೂಲದ ಬೈತಲೆಗೆ ಪೊರೆದ ಚಂದ್ರರಜದೊಬ್ಬ್ಯೆಯ ಶೃಂಗಾರಸಾರದಿಂ ಚಂದ್ರಶೇಖರನ ಪಟ್ಟದ ರಾಣಿ ನಮಿತಗೀರ್ವಾಣಿ ರಂಜಿಸುತಿರ್ದಳು (೩೦ಪು. ೩೬–೨೪). ೪. ಧರಿಸು ; ತೊಡು : ಪೊರೆದ ದುಕೂಲಮೊಂದಿನಿಸು ವಾಸಿದೆ ಧಾಳದೊಳಿಟ್ಟ ಚಿಂದನು ತೆರಳಿದೆ (೩೫೪. ೦೦–೫೦). ೫. ನೆನಹಾಕು ; ನೆನೆಯಿಸು : ಪೊರೆದಿರ್ವತ್ತೊಂದುದಿನಃಬರೆಗಂ ಪಾಲೊಳಗೆ ಬೆಳಲ ಕಿರುಳು ನೆಬಲೊಳ್ ಪರಿತೋಷಿಸಿ ಬಯ್ತಿಟ್ಟಕ್ಷುರಸದೊಳಿಕ್ಕಿದೊಡೆ ಸತ್ಯವುದು ಪಾಲಕ್ಕುಂ (ಕೋಪ್ರ.ಕ. ೯–೧೭). ೬. ಬಳಿಯಿಲ್ಪಡು ; ಲೇಪನವಾಗು : ಚರಿಯಿವ ವನದೇವತೆಯರ ಚರಣಾಲಕ್ತಕದೆ ಪೊರೆವುವೌಷುವು···ಚಂದಳಿರ್ದುಱುಗಲ್ (ಈದಂಪು. ೧೬). ೭. ಲೇಪಿಸಿಕೊಳ್ಳು ; ಬಳಿದುಕೊಳ್ಳು : ಕತ್ತುರಿಯನಃಗದೊಳ್ಪೊರೆದು ನೀಲಾಂಬರವನೊತ್ತಿ ಬಿಗಿದುಟ್ಟು (ಕಕ್ಷಣ. ೯–೬೨). ೮. ಉಲ್ಲಾಸಗೊಳ್ಳು ; ಆರಳು : ಶ್ರೀವಧೂವಿನಂಬಱಚೆಕೋರಕಂ ಪೊರೆಯೆ (ಕೃಷ್ಣಾ. ೦೦–೦). ೯. ಅಗಲವಾಗು ; ಹಿಗ್ಗು : ಅಂತನ್ನಿಘೋರ್ಣಿತಾವೂರ್ಣವನ್ನು ವೇಗದೊಳ್ ಬೀಗಿ ಬಾವಂತೆ ಗಗ್ಗರಿವ ಕೊರಲೊಳುಬ್ಬರಿಸಿ ಪೊರೆದ ಸೆರಗಳೊಳಂ (ಕರ್ಣಪ. ೯–೬೦ ೫). ೧೦. ಸಿಂಪಡಿಸು ; ಚಿಮುಕಿಸಂ ; ತಳಿ : ಸುರಹೊನ್ನೆಯ ಬೀಜಂ . . . ೬ಪ್ಪುರ ಮೆಂಬವಱಿಂ ಪೂವಂ ಪೊರೆದೊಡೆ ಪುಷ್ಪದ್ರವಂ ವನೋಹತವಾಕ್ಕುಂ (ಕೋಶೋಚ. ೬–೪೬). **ಹೊರೆ²** : ೧. ಅಱಿವು ವಸ್ತುವೆಂದಡೆ ಒಂದು ಕುಱುಹಿನ ಹೊರೆಯಲ್ಲಿ ಹೊರೆಯದು ಇಂತೀ ಹೊರೆಯದೆ ಹೊರೆಯದ ಪರೀಕ್ಷೆ ವಿಧ(ದ)ನಾಗಿ ಗಾರುಡೇಶ್ವರಲಿಂಗವನಱಿದವಂಗಲ್ಲದೆ ಸಾಧ್ಯವಲ್ಲ (ಸರ್ಪಚ. ೦೦೦–೩೩೬) ; ತರುಣಿ ನಿಜತನುಪರಿಮಳದಲುಱಿ ಹೊರೆದ ಹೂವಿನ ದಂಡೆಯನು ನಿಜವರನ ಕೊರಳಲಿ ಹಾಯ್ಕುದಳು (ಭಾಷ್ಕಂ. ೦೩–೩೩) ; ಪರಿಮಳದ ಪದ್ಮದ ಪರಾಗದಿ ಹೊರೆದ ನಿಱಿದೆರೆಯುಬ್ಬುಗಳ . . . ಸೊಗಸಿನ ಸರಸಿಗಿಳವರು (ಕೊಕಣಾ. ೩–೬–೪). ೨. ಹೊರೆದ ರಕುತದ ಧಾರೆಗಳ ತುದಿಕರದೊಳೆಳಲುವ ತಲೆಗಳಂಭ್ರಯೊಳೊರೆದ ನೆಣಸಡಗಿನ ಮಹಾಗಜ ವೊಗೆದುದರಿಬಲವ (ಭಾಷ್ಕಕ್ರೀ. ೩–೨೯). ೩. ಹೊರೆದ ಕತ್ತುರಿಸಾರಣೆಯ ನವವರಿಮಳದ ಪನ್ನೀರ ಚಳೆಯವ . . . ಧೂಪದ ಧೂಮಗಂಧೋತ್ಕರಸಮುದ್ರದೊಳದ್ದನೊಲ್ಲದೆ ಪಥವ ಪವಮಾನ (ಕೊಕಣಾ. ೦–೦೩–೩) ೧೦. ಪರಿಮಳದ ಕುಸುಮ ಪನ್ನೀರ ಧಳೆಯಂಗಳಿಂ ಹೊರೆದ ಮುತ್ತಿನ ರಂಗವಾಲಿ ಕಸ್ತೂರಿಗಳ ಪರಿವಿಡಿಪು ಕುಂಕುಮದ ಕಾರಣಿಗಳು (೦೩೩೦. ೩೦–೩೮). ೧೧. ಹೊಂದು ; ಪಡೆ ; ತಾಳು : ಹೊರದುದಿಳೆ ಸೌರಭ್ಯಶೈತ್ಯೋತ್ಕರವನು (ಕೊಕಣಾ. ೦–೦೩–೩೪) ; ಪರನಾರಿ ಸೋದರನು ವರಶಕ್ರುದಲ್ಲಣನು ಕರ ಪಾಪಭಯವ ಹೊರೆವ ಗುಣಿಯಹ ನೃಪಗೆ ಸ್ಥಿರವಿಹಳು ಲಕ್ಷ್ಮಿ (ಸರ್ಪಕ್ಕ. ೬೩೬). [ದೇ.ಕ ತಮಿ. ಮಲ. ಪೊರು]

ಪೊರೆ². ಹೊರೆ² (ನಾ). ೧. ರಕ್ಷಣೆ ; ಆಶ್ರಯ ; ಆಧಾರ : ಒಂದು ವೊಡಂಬಡುಂ ಪೊರೆಯುಮಿಲ್ಲದರ್ಗೆಂಬುದನೆಯ್ದೆ ನಂಬಿ ನಾಡಂ ದಯೆಗೆಯ್ದು ನೀಂ ಕುಡುವಿನಂ ವೆಱತೇ ಪಡೆವಾತೊ ಪಳ್ಳಿರಲ್ಕೆಂದವರ್ಗೀವು ದೊಳ್ಪು ನಿಲೆ . . . ಅಯ್ದುಬಾಡವುಂ (ಕಂಕಣಾ. ೯–೪೩) ; ಸೆರಗಂ ದೆಱಗಂ ಬಗೆಯದೆ ಪೊರೆಯಿಲ್ಲದೆ ಕಲಿಯ ದಂಡೆಯಂ ನೂಂಕದವೋಲ್ ಪೊರೆದಾಳ್ದನ ಕಾರಣದಿಂ ಪರಿಹರಿಪುದು ಭೃತ್ಯನರ್ಥಮಂ ಪ್ರಾಣಮುಮುಂ (ಗಣಾಪು. ೨–೨೨). ೨. ಪಾಲನೆ ; ಪೋಷಣೆ : 'ಪೊರೆಕೈ' ಪರಾ. **ಹೊರೆ³** : ೧. ಕಾಯವಸ್ತುವೆಂದಡೆ ನಾನಾಮಲಗುಣಂಗಳ ಹೊಲೆ(ರೆ)ಯದು ಜೀವವಸ್ತುವೆಂದಡೆ ತ್ರಿವಿಧಮಲದ ಹೊರೆ (ಸರ್ಪಚ. ೦೦೦–೩೪೬) ; ಉಳಿದ ಮೂವರ ಕಳ್ಳುಹಿಂದೆನು ಬರುವತಿಯ ಹೊರೆಗಾಗಿ (ಭಾಷ್ಕಂ. ೯–೨೬) ; ತೋಱಿ ನಿಜರೂಪವನು ಭೀತಿಯ ಬೀಱಿ ಕೌರವನೃಪರೊಳಗೆ ಮುರವೈರಿ ವಿಜಯಂಗೆಯ್ಯಲಾ ಪಾಂಡವರ ಹೊರೆಗಾಗಿ (೩೦ಗ. ೩ ೦–೫). [<ಪೊರೆ¹]

ಪೊರೆ⁴. ಹೆರೆ⁴, ಹೊರೆ⁴ (ನಾ). ೧. ಹತ್ತಿರ ; ಬಳಿ ; ಸಮೀಪ : "ಪೊರೆ ಸಮೀಪಂ" (ಕರ್ಣಪ. ೩೨) ; ಬೆಟ್ಟದಾ ಮೂಡಾಪಿನ್ ಪೊರೆವೆ ಬನ್ದು ತುಬ್ದಿಲ್ಲಾಲೊಳ್ಮೂಡಿತ್ತು (ಕ್ಯಾಂ. ೦೯೩೬. ೩೩–೨೯ ; ಹು. ೫೫೦) ; ಪೋದಂ ಬಗೆ ೬ದಡೆ ತಾಯ ಪೊರೆಗೆ ನೃಪೇಂದ್ರಂ (ಜುಚೋಕೇ. ೨–೩೦). ೨. ಉತ್ಸಾಹ ; ಚೈತನ್ಯ ; ಆನಂದ : 'ಪೊರೆಯೇಱು' ಪರಾ. ೩. ಸಂಬಂಧ ; ನಂಟು : ಕೊಲೆಯೊಳ್ ಪೊರೆಯಿಲ್ಲದ ಪರಲಲನೆಗೆ ಬಗೆಗುಡದ ಕಳ್ಳದುಱಿ ಪುಸಿಯದ ಕಾದಲಿಸಿ ವಿಷಯಂಗಳೊಳ್ ಪಂಬಲಿಸದ ಗುಣಮೈದಣಾವ್ರತಂ ಜಿನಮತದೊಳ್ (೩೦ಪು. ೦–೬೬). ೪. ಲೇಪನ : ಬಳಿಯುವಿಕೆ : 'ಪೊರೆಯಿಡು' ಪರಾ. ೫. ಬೆರಕೆ ; ವಿಶ್ರಣ : 'ಪೊರೆಯಿಕ್ಕು' ಪರಾ. ೬. ಹೊಳಪು ; ಕಾಂತಿ : 'ಪೊರೆಯಿಡು' ಪರಾ. **ಹೆರೆ⁴** : ೧. ಅಲ್ಲಿ[ಂ] ಮೂಡಲು ಶ್ವೇತಪಾಷಾಣವಂತಿ ಅಲ್ಲಿ[ಂ] ಬಡಗಣ ಹೆರೆ ಈಶಾನ್ಯದಲಿ ಹುಪನಱಿ ಅದಱ ತೆಂಕಯಿಣ ಹೊರೆಯುಂ ಪಡುವ ವೊಗದೆ ಜಲಪ್ರವಾಹ(ಪಿಕ್ಷ. IX–i. ೨೩೪–೮೪ : 1148). ೨. 'ಹೆರೆಹೆಚ್ಚು' ಪರಾ. **ಹೊರೆ⁴** : ೧. "ಹತ್ತಿರಕೆ ಹೊರೆಯೆನಿಕ್ಕುಂ" (ಕಜ. ೦೦೬) ;

ಅದಱ ತೆಂಕಯಿಣ ಹೊರೆಯಿಂ ಪಡುವ ಮೊಗದೆ ಜಲಪ್ರವಾಹ (ಸೌಇಇ. IX-1, ೨೫೪-೪೪; 1148); ಕಿಚ್ಚಿನ ಕೆಂಡದಂತೆ ಹೊರೆಯಲ್ಲಿಪ್ಪೆಯಯ್ಯ (ಅಸಸಂ. ೬೦-೨೬೩); ಅಪ್ಸರಗಣಿಕೆಯರು ಕೋಮಳನ ತುದರು ವಾಸವನ ಸಿಂಹಾಸನದ ಹೊರೆಗೆ (ಕುಸ್ಕಾಕ್ರೋ. ೬.೬೩). ೨. 'ಹೊರೆಹೆಚ್ಚು' ಪರಾ. ೪. 'ಹೊರಸು₁' ಪರಾ. [<ಪೊರೆ₂]

ಪೊರೆ₅, ಪರೆ₄, ಪೆರೆ₂, ಹರೆ₄, ಹೆರೆ₆, ಹೊರೆ₅ (ನಾ). ೧. ಆವರಣ; ಹೊದಿಕೆ; ಆಚ್ಛಾದನ; ಮುಸಂಕು: ಎರಡು ಘಟಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ ಇಂದ್ರಪ್ರತೀಂದ್ರ . . . ಲೋಕಪಾಲಾಹ ಮಿಂದ್ರತ್ವಮೆಂದೀ ಮಹರ್ಧಿಕದೇವರಾಗಿ (ಪಡ್ಡಾರಾ. ೯೮-೩); ದಿವ್ಯತಳ್ಪ ತಳ್ಪದ ಪೊರೆಯೊಳಗೆ ತೊಳತೊಳತೊಳಗಿ ಪೊಱಮಡುವೆಳನೇಸಱ ಬಳಗದ ಬೆಳಗನೊಳಕೊಂಡು (ಅಧಿಪು. ೨-೬೦ ಪ); ನಾರದನಿರದೆ ಗಗನತಳಕ್ಕೊಗೆದು ಮುಗಿಲ ಪೊರೆಯೊಳಡಂಗಿದಂ (ಪಂಪಭಾ. ೬-೨೦ ಪ). ೨. ಪದರ; ಮಡಿಕೆ: ಪಾಲ್ಗಡಲ ನೊರೆಯ ಪೊರೆಯ ತೆರೆಯನನುಕರಿಸಿಯುಮಲ್ಪ ದಶನದಂಶಮಾತ್ರಖಂಡನೀಯಕರಂಗಳನಿಸಿದ ಮಂಡಕಂಗಳುಮಂ . . . ಉಣ್ಬ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಳುಮಾ. ೦೦-೨೯ ಪ); ನಿಜೋತ್ತರೀಯಪಲ್ಲವದ ಪೊರೆಯಿಂ ತೆಗೆದು . . . ಮಣಿದೊಡವನೊರ್ವಳಂಗನೆಗಿತ್ತಳ್ (ಮಲ್ಲಿಪು. ೪-೬೦); ಮೆಯ್ಯ ಪೊರೆಗಳಿಂತು ಮೂಱುಭಾಗಂ ಅಲ್ಲಿ ಪೊಱಗಣ ಭಾಗಂ ಧಾತುಮಲಾದಿ ದೋಷಸಹಿತಂ . . . ಒಳಗಣ ಭಾಗಂ ಜ್ಞಾನಮಯಂ (ಜೀವಸಂ. ೦೨೮-೦೯ ಪ). ೩. ಹಾವು ತನ್ನ ಮೈಮೇಲಿನಿಂದ ಕಳಚುವ ತೆಳುವಾದ ಚರ್ಮದ ಆವರಣ,—ಪದರ; ನಿರ್ಮೋಕ: ದಂಡಕರಿಸಿಯರ ಮೆಯ್ಯ ತೊಗಲ್ ಪಾವಿನ ಪೊ[ಪಾಠಾಂ. ಪೆ]ರೆ ಸುಲಿವಂತೆ ಸುಲಿದು ಪೋಗಿ (ಪಡ್ಡಾರಾ. ೦೭೨-೨). ೪. ಕಣ್ಣಿನ ಗುಡ್ಡೆಯ ಮೇಲೆ ಬೆಳೆಯುವ, ನೋಟಕ್ಕೆ ಅಡ್ಡಿ ತರುವ ಒಂದು ಬಗೆಯ ಪದರ; ಕಣ್ಣಿನ ಒಂದು ದೋಷ: ಕಣ್ಣಿನ ಪೊರೆಯನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆದುಬಿಡಬಹುದು (ಕೂಡಿ). ೫. ಕಣ್ಣಿನಲ್ಲಿ ಇರುವ ಒಂದು ಬಗೆಯ ತೆಳುವಾದ ಚರ್ಮ; ದೃಷ್ಟಿಪಟಲ: ಅಂತರ್ದ್ರವದ ಚಲನೆಗೆ ಅಡ್ಡಿಯುಂಟಾಗಿ ಪಾಪೆಯ ಪೊರೆಯು ಕೆರಳಿ ಕಣ್ಣೊಳಗೆ ಅಂತರ್ದ್ರವದ ಒತ್ತಡವು ಹೆಚ್ಚುವುದು (ಸಿಮ್ಮಧ್ಯ. ೦೭೦). ೬. ಕಿವಿಯೊಳಗಿನ ಪಟಲ: 'ರಾಜ' ಎಂಬ ಶಬ್ದ ಕಿವಿಯಲ್ಲಿನ ಪೊರೆಯನ್ನು ಚುಚ್ಚುವಂತೆ ಭಾಸವಾಗುತ್ತಿತ್ತು (ಪಂದಸೇ. ೪೯). ೭. ತಪ್ಪು; ದೋಷ; ಕುಂದು: ಕುಡುವಂ ಗುರು ಪಡೆವರ್ ಪೆಱರೆಡೆಯೊಳ್ ನೀಮಾರ್ಗಮಿದೇಕೆ ಕಿಡೆನುಡಿದಪಿರಿಟ್ಟೆಡೆವೆರ್ಗಡೆತನದೊಳಿದೇವಡೆವಿರ್ ನಿಮಗೆಮ್ಮ ಕಜ್ಜದೊಳ್ ಪೊರೆಯುಂಟೇ (ಅಧಿಪು. ೯-೦೦೭). ೮. ಮಂಚ್ಚು ಮರೆ; ವಂಚನೆ: ನಿನ್ನಡಿಯೊಳಗದವರೊಳ್ ನೀಂ ಪೊರೆಯಿಲ್ಲದೊಡವೆರೆದಿರ್ದುಂ ತಣಿಯದೆ ಅರ್ಜುನಾದಿಗಳೊಳಾಳರಸುತನಮಂ ಪಲ್ಲಟಂಗೆಯ್ದು ನಲಿವ ಸುಶೀಲನೆಂದುಂ . . . ನಿನ್ನ ಕಲ್ಯಾಣಗುಣಂಗಳಂ ಕೇಳ್ದು (ಜಸಿಂ. ೩೦). ೯. ಅರಗಿನ ಕೀಟವು ದ್ರವರೂಪದಲ್ಲಿ ವಿಸರ್ಜಿಸುವ ಅರಗಿನ ಕವಚ: ಅರಗಿನ ಲಾರ್ವಾಗಳು ಪ್ರೌಢಸ್ಥಿತಿ ಮುಟ್ಟುವ ಮುನ್ನ ಮೂರು ಬಾರಿ ತಮ್ಮ ಪೊರೆಗಳನ್ನು ಬಿಡುತ್ತವೆ (ಕವಿಕೋ. I, ೪೪೫). ೧೦. (ಆಲಂ) ಮಾಯೆ; ಭ್ರಮೆ: ಸುಬ್ಬುವಿನ ಕಣ್ಣಿನ ಪೊರೆ ಕೊಂಚ ಜಾರಿದಂತಾಯಿತು (ಭೀಮಕಾ. ೨೦೫). ಪರೆ₄: ೨. ಶ್ವಾಸಕೋಶದ ಒಳಮಗ್ಗುಲಲ್ಲಿ ನೂರಾರು ಸೂಕ್ಷ್ಮರಂಧ್ರಗಳೂ ಪರೆಗಳೂ ಇವೆ (ಪಾಲಿಪ್ರ. I, ೩೦೯); ಗಾಳಿಯ ಪರೆಗಳೆಂಬ ಹೆಸರನ್ನು ಪಡೆದಿದ್ದ ಬಟ್ಟೆಗಳು ರಚಿತವಾಗಿದ್ದುವು (ಭಾಕೆರ. ೩೯೭). ೩. ಸುದತಿಯ ದಿವ್ಯಗಂಧ ತನುಚಂದನಶಾಖೆಯೊಳಂಗಜಾಹಿಯಿಕ್ಕಿದ ಪ[ಪಾಠಾಂ. ಹೆ]ರೆಯಂತಿರುಟ್ಟ ದುಕುಲಾ . . . ಒಪ್ಪಿದುದು (ಅರ್ಧನೇ. ೨-೦೬; ಕಾವ್ಯಸಾ. ೬೪೭ ನೋ); ಮಹಾಸರ್ಪವು ಜೀರ್ಣವಾದ ಪರೆಯನ್ನು ಬಿಡುವ ಹಾಗೆ (ಕೃಪಾಣಾ. ೨೬೮); ಹಳೆಯ ನೆನಪುಗಳು ಮರುಕಳಿಸಿದವು ಹಾವಿನ ಪರೆಯೊಳು ಜೀವ ನುಸುಳಿದೊಲು (ಸ್ವದರ್ಶಿ. ೨೬). ೪. ಪರೆ ಪ್ರಾರಂಭವಾಗಿರುವ ವ್ಯಕ್ತಿಯ ಮಾನಸಿಕ ಶಕ್ತಿ ಮತ್ತು ಕಾತುರತೆಗೆ ಭಂಗವಾಗದಂತೆ ಎಚ್ಚರಿಕೆಯಿಂದ ವೈದ್ಯರು ಸಲಹೆ ಕೊಡಬೇಕು (ಸಿಮ್ಮಧ್ಯ. ೧೬೩). 'ಪರೆಗಣ್ಣು' ಪರಾ. ೫. ಆಮೆ (Turtle) ಪಾಪೆಯ ಪರೆಯನ್ನು ಹೊಂದಿರುವ ಮೊದಲ ಜೀವಿ. ಪಾಪೆಯ ಪರೆಯು ಕಣ್ಣೊಳಗೆ ಪ್ರವೇಶಿಸುವ ಬೆಳಕಿನ ಕಿರಣಗಳನ್ನು ಮಿತಿಗೊಳಿಸುವುದು (ಸಿಮ್ಮಧ್ಯ. ಪ್ರಕೃತಿಯಲ್ಲಿನ ಕಣ್ಣುಗಳು — ದಶರೂಪಗಳು). ೧೧. ಭ್ರೂಣವನ್ನು ಆವರಿಸಿರುವ ತೆಳುವಾದ ಹೊದಿಕೆ; ಭ್ರೂಣದ ಚೀಲ: ಜರಾಯು—ಗರ್ಭದೊಳಗಿನ ಶಿಶುವಿಗೆ ಸುತ್ತಿದ ಪರೆ (ಗಂಗಾಮ. ೦೩೬). ೧೨. ಮಂಡೆಯ ಚರ್ಮವು ಸುಲಿದು ಕೂದಲಿನ ಬುಡದಲ್ಲಿ ಏಳುವ ಹೊಟ್ಟು; ಹಗರು: (ಕ). ಪೆರೆ₂: ೩. ಕರ್ಪಿಲ್ಲದ ಕಾಡಿಗೆ ಕಂದರ್ಪನ ಜಸಂ . . . ಸರ್ಪನ ಪೆರೆ ಜಲಕನಾಯ್ತು ಪೊಸವೆಳ್ದಿಂಗಳ್ (ಮಲ್ಲಿಪು. ೬-೪೪); ಪೊರೆವಿಡಿದು ಪೊಕ್ಕು ಪಾವಿನ ಪೆರೆಯಂ ಪೊತ್ತೋಂತಿಯೊಂದು ಪರಿತರೆ (ಅರ್ಧನೇ. ೩-೮೨); ನವರತ್ನರಾಜಿ ಫಣಮಣಿ ಕವಿದ ಮುಗಿಲ್ ಪೆರೆ ಕರಾಳಪವನಂ ಪೂತ್ಕಾರವೆನಲ್ ಮಂಡಳಿತಮಹಾಹಿವೊಲಿರ್ಪುದು ಸುತ್ತಿ ಮಾನುಷೋತ್ತರಶೈಲಂ (ಪುಷ್ಪಪು. ೦-೯೨). ಹರೆ₄: ೩. ಹಾವಿನ ಹರೆಯ ತಂದು . . . ಹರೆಯನಿಕ್ಕಿ ಕಟ್ಟಲು ಜ್ವರ ಮಾಣ್ಗುಂ (ಸಿಪ್ಪಿ. ೦೦೮). ಹೆರೆ₆: ೩. "ನಿರ್ಲಯನೀ, ನಿರ್ಮೋಕಂ, ಕಂಚುಕಂ—ಈ ೩ ಹಾವಿನ ಹೆರೆ" (ಹಲಾಯು. ೦೦೬-೨೨); ಬಿನ್ನವಿಸು ಮನ್ನಣೆಯ ವನಜಾಕ್ಷ ಕೈಮುಗಿದು ನಿನ್ನ ಹೆಡೆಗಳನುಡುಗಿ ನಿಲ್ಲಹಿಪ ಹೆರೆ ತೆಗೆದು (ಪೀರರ. ಹ. ೪೮೩-೩); ಹೀಲಿಗಱಿ ಗುಗ್ಗುಳ ಹಾವಿನ ಹೆರೆ ಇವಂ ಕೂಸಿಂಗೆ ಧೂಪವಿಕ್ಕುವುದು (ಬಾಲಿಪ. ೦೨೪-೦೯). ಹೊರೆ₅: ೧. ಬೆಂದ ಮಸಿಯ ತೊಳೆದಡೆ ನೊಂದಿತ್ತೇ ಅದು ಎನ್ನ ಹೊರೆಯನೆತ್ತಿದರೆಂದು (ಪೋಳಿಮಾ. ೨೦-೭೯); ಕಾರ್ಗಾಲದ ಕರಿಯ ಮುಗಿಲ ಹೊರೆಯೊಳು ಹರಿದಾಡುವ ಕಿಱುಮಿಂಚಿನ ತೆಱದಿ (ಜಯಕಾ. ೫-೨). ೮. ಮಱಿಗಳಱಿಗಳು ವೈಶಿಕಂಗಳು ಬಱಿಯ ಹುಸಿ ನುಸುಳುಗಳು ಕಾಮುಕರಱಕೆಗಳು ಬಹುಭಾಷಂಣಗಳು ಹೊರೆಗಳೆರವುಗಳು (ಜಸಪು. ೪೦-೬೦); ಅರಸನಂಕೆಯ ಮನದ ಬಯಕೆಯ ಹೊರೆಯ ಬಳಕೆಯನೀ ಸಮಂಜಸತರದ ಸಾತ್ವಿಕರೆತ್ತ ಬಲ್ಲರು (ಕುಸ್ಕಾಅ. ೬-೬೬); ತಪ್ಪೇನು ನಿನ್ನಯ ಹೇಳಿಕೆಗೆ ಹೊರೆಯಿಲ್ಲ ಹೋಗಲು ಬಹುದು ಬಾಂಧವರ ಆಲಯಕೆ (ಸಿಭಾಗ. ೪-೦-೨೩). ೧೩. ಸಿಪ್ಪೆ; ತೊಗಟೆ: ಹಿರಿದು ಹೊರೆಗಳ ನೊಂದನೊಂದು ತೆರಳಿ ಸುಲಿಯಲು ಬಾಳೆಯದು ತಾನೊರೆಯಲಿಲ್ಲದೆ ಮುನ್ನಿನಾಕೃತಿಯಿಲ್ಲದಿಪ್ಪವೊಲು (ಜಸಪು. ೩೫-೩೮). ೧೪. ವ್ಯತ್ಯಾಸ; ಭೇದ: ಕ್ಷೀರ ನೀರಿನಂತೆ ಹೊರೆ ಇಲ್ಲದೆ ವರ್ಣಭೇದವಿಲ್ಲದೆ ಕೂಡಬೇಕು (ಪೋಳಿಮಾ. ೨೮೦-೪೩); ತ್ರಿಪುಂಡ್ರವ ಧರಿಪಗೆನ್ನೊಳುಂ ಹೊರೆಯಿಲ್ಲ ನಿಶ್ಚಯಮಿದು (ಲಕಿಸಂ. ೪೦-೨೨); ದೇವದೇವಾಧಿಪನ ಹೊರೆಯಿಲ್ಲದೆ ಕೂರ್ತು ಕೃತಿವೇಳು ಖಂಡಶರ್ಕರೆಯಂತೆ ಸವಿವಾತುವೆರಸಿ (ಮೋಹಕ. ೧೬-೧). ೧೫. ಶ್ವಾಸನಾಳ: 'ಹೊರೆಯೇರು₂' ಪರಾ.

ಪೊರೆಯ ಲಡ್ಡುಗೆ = ಒಂದು ಬಗೆಯ ಭಕ್ಷ್ಯ; ಪದರಗಳಿಂದ ಕೂಡಿದ ಲಡ್ಡುಗೆ (?): ಬಿಳಿಯ ಕಡಲೆಯ ಸಣ್ಣ ಹಿಟ್ಟ ಸೋದಿಸಿ ಹಾಲಿನೊಳಗಿಕ್ಕಿ ಸಂಪಳವ ಮಾಡಿ ತೆಂಗಿನ ಕರಟದೊಳಗೆ ಕಿಱುವೆರಲ ಗಾತ್ರದ ವೆಜ್ಜವಂ ಮಾಡಿ ತುಂಬಿ ತುಪ್ಪವನು ಕಾಸಿ ಇಳಿಯ ಬಿಡೆ ಬುರುಬುರನೆ ಬೆಂದು ಹದನಾದುಂಡೆಗಳಿಗೆ ಸಕ್ಕರೆಯ ಪಾಕವ ಹೊಯ್ದು ನವ್ಯಪರಿಮಳವನಿಕ್ಕಿ ಕಟ್ಟಿ ಪೊರೆಯ [ಪಾಠಾಂ. ಹೊರೆಯ, ಸೊನೆಯ] ಲಡ್ಡುಗೆಗಳೆಂದು ಹೆಸರನೊಲವಿಂ ಕರೆವುದು (ಸೂಪಶಾ. ೦-೩೬).

[ದೇ. ೩ ತಮಿ. ಪುರೈ; ತುಳು. ಪರೆ; ತೆಲು. ಪೊರ]

ಪೊರೆ₄ 'ಪೊಱ³' ನೋ.

ಪೊರೆಕಳಚು, ಪರೆಗಳಚು (ಕ್ರಿ). ೧. (ಹಾವು) ತನ್ನ ಚರ್ಮದ ಆವರಣವನ್ನು ಕಳಚು; ನಿರ್ಮೋಕವನ್ನು ಬಿಡು : ನಿರ್ಮುಕ್ತಃ, ಮುಕ್ತಕಂಚುಕಃ_ ೨ . . . ಪೊರೆ ಕಳಚಿದ ಹಾವು (ಸಿದ್ಧಾಂತಿ. ೭೩). **ಪರೆಗಳಚು** : ೨. (ಆಲಂ) ಜಾಡ್ಯವನ್ನು ಬಿಡು; ಉತ್ಸಾಹವನ್ನು ಹೊಂದು : ರಷ್ಯಾ ಜಪಾನು ತುರ್ಕಿಗಳೆಲ್ಲ ಪರೆಗಳಚಿ ಹೊರಟಿಹವು ಹೊಸಪಯಣಕೆ (ಕೋಗಿಲೆ. ೫೮-೬). [ಪೊರೆ₅ + ಕಳಚು (< ಕಟಲ್ಚು₁)]

ಪೊರೆಕೈ (ಕ್ರಿ). ಪೋಷಣೆ ಮಾಡು ; ಪೋಷಿಸು : ಕವಳವನೊಲ್ದು ಕೂಡಿಸುವ ರೋಗದವಂ ಪೊರೆಕೈವ . . . ಸೂಕಳಾಶ್ವಮಂ ಜವಳಿಯ ನಿಕ್ಕಿಯೋಡಿಸುವ ವಾರುವವಂ ನಡೆಪಾಡಿಸಲ್ಕೆ ನೋಡುವ ಮಱಿಗಳ್ಗೆ ಪಾಲನೆಱ³ವುಜ್ಜುಗವಂ ತಳೆದಿರ್ಪನಾವಗಂ (ಸಳಸಂ. ೬೪೯).

[ಪೊರೆ₃ + ಕೈ₁ (< ಕೆಯ್₁)]

ಪೊರೆಗಳೆ (ಕ್ರಿ). ಸಾಮಿಪ್ಯವನ್ನು ಕಳೆದುಕೊಳ್ಳು ; ದೂರವಾಗು : ಕೆಲಕೆಲರ್ ಪೊಯ್ಲ ಪೊರೆಗಳೆವುತುಂ ಕಳೆವುತುಂ ಕೆಲಕೆಲರ್ ಪಂಥಗಳನುಡಿವುತುಂ ಜಡಿವುತುಂ ಕೆಲಕೆಲರ್ ಸೊಗಸಿನಿಂದಾಡುತುಂ ಪಾಡುತುಂ ಕಣ್ಗೆಸೆದರಾ ಕೊಳದೊಳು (ಕಬಪು. ೩೭-೬೮). [ಪೊರೆ₄ + ಕಳೆ₁]

ಪೊರೆದೋಱು, ಹೊರೆದೋಱು (ಕ್ರಿ). ೧. ಪದರವು ತೋರು ; ಪದರು ಬಿಚ್ಚು ; ಅರಳು : ಪರಿಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱ³ ತೆಂಬೆಲರ್ ಪೊರೆಪೊರೆಯಂ ಸಡಿಲ್ಚೆ ನಡುಪೊಂಗಿರೆ ಮಲ್ಲಿಗೆಗಳ್ ವಸಂತದೊಳ್ (ಅಂಪು. ೦೦-೦೦೬) ; ಕನರ್ಗೊನರೆಲ್ಲಿಯಲ್ಲಿ ಮಿಳಿರ್ದಾಡುವ ನುಣ್ದಳಿರೆಲ್ಲಿಯಲ್ಲಿ ಬಲ್ನನೆಗಳವೆಲ್ಲಿಯಲ್ಲಿ ಪೊರೆದೋಱುವ ಮೊಗ್ಗೆಗಳೆಲ್ಲಿಯಲ್ಲಿ . . . ಎನೆ ಸೋಲಿಸುಗುಂ ಬಿಡದಾವನಂ ಬನಂ (ಕಬ್ಬಿಗ. ೩೨). **ಹೊರೆದೋಱು** : ೨. ಭೇದವು ಕಾಣು ; ವ್ಯತ್ಯಾಸವು ತೋರು : ಹೆಸರಿಗಂ ದೇಹಿಗು ಭಿನ್ನವಿಲ್ಲದ ತೆಱದಿಯೆಸೆವ ಪಂಚಾಕ್ಷರಿಗೆ ಶಿವನೊಳಂ ಹೊರೆದೋಱದು (ಲಿಕಾಂ. ೪೦-೫). [ಪೊರೆ₅ + ತೋಱು]

ಪೊರೆನೆತ್ತರ್ (ನಾ). ಹತ್ತಿರದ ಸಂಬಂಧ,—ಬಾಂಧವ್ಯ; ರಕ್ತಸಂಬಂಧ: ಪೊರೆನೆತ್ತರಯ್ವದಿಂಬರ್ ದಾಯಿಗರ ಬೇಂಟಮನ್ ತಪ್ಪಿಸಲ್ಕೋಡಿ, ಒತ್ತಂಬದಿಂದರ್ಗಾಸ್ಗೆ ಪಿಂದಿರುಗಿದಪ್ಪರ್ (ಬದ್ಧಕ್ರ. ೪೫-೪೮೦).

[ಪೊರೆ₄ + ನೆತ್ತರ್]

ಪೊರೆನೆತ್ತರ (ನಾ). ಹತ್ತಿರದ ಸಂಬಂಧಿ,—ಬಂಧು ; ರಕ್ತಸಂಬಂಧಿ : ಪೊರೆನೆತ್ತರನೋ ಪೊಱಬಿಗನೋ ಮೇಣ್ ಏನಾದೊಡಮೇನ್ ಎಲ್ಲವರಿಂದಮ್ ನಿನ್ನನೆ ಮಿಗೆ ನಾನ್ ಮನ್ನಿಸಿದಪ್ಪೆನ್ (ಬದ್ಧಕ್ರ. ೦೭-೩೪೦).

[ಪೊರೆನೆತ್ತರ್ + —ಅ₇]

ಪೊರೆಪು₁, ಹೊರಹು₁ (ನಾ). ೧. ರಕ್ಷಣೆ ; ಆಶ್ರಯ : ಗೋವುಳಿಗನ ಮಗನೆಂ ಪೊರೆಪಾವುದುಮಿಲ್ಲೇಕೆ ಮುಳಿವನಂತುಂ ಮುಳಿವಂದೇವುದೊಚಾತುರ್ದಂತಂ ಕಾವುದೆ ಕಾವಡಮೆ ಪುಣ್ಯಮೊಂದೇ ಕಾಗುಂ (ಬಂಚರಿ. ೬-೪೬). ೨. ಪಾಲನೆ ; ಪೋಷಣೆ : ದುರಿತಭಯದಿಂ ಕಳತ್ರದ ಪೊರೆಪಂ ಬಿಸುಟಿರ್ದ ಮುನಿಗೆ ಮತ್ತಂ ದೋಷಂ ಪೊರೆಪೊಡೆ ಮರ್ದಿಂದಟ್ಟಮೆ ಕರಮಪ್ಪೊಡದರ್ಕೆ ಮಗುಟ್ಟು [ಪಾಕಾಂ. ಮರ್ದು] ಬಲ್ಲವರೊಳರೇ? (ಸೀಪಸಂ. ೦೫೯-೦೯) ; ನಮ್ಮ ಮಹಾರಾಜಾಶ್ರಯದ ಪೊರೆಪಿನಿಂದ ತೇಜವಡೆದರೆ ಆ ಶಿಶುಗಳಿಗೆ ಸದಾಕಾಲದಲ್ಲೂ ದ್ವೇಷ ಹಿಂಸೆ ಪ್ರಾಣ ಸನ್ದೇಹಗಳು ತಪ್ಪದೆ ಅಡಸಲುಳ್ಳುವು (ಪಂಂತ್ರಕ. ೦೭-೨೩). **ಹೊರಹು₁** : ೨. ಇರುಳಡೆಯೊಳಗೆ ಬಲ್ಲಿದರು ಜೊನ್ನದ ಪಾಲ ಹೊರಹಿಂದ ಬೆಳೆದ ರಸಿಕರು ತರುಣಿಯರಾಲಿಗಾಯತದ ಚಕೋರಿಯ ದೊರೆಗನ್ನಡಿಗರ ಪೌಜಿದೇಕೊ (ಪರ್ಗಸ. ೦೦-೦೩೦).

[ಪೊರೆ₃ + —ಪು₂]

ಪೊರೆಪು₂, ಪೊರಪು (ನಾ). ೧. ಸಂಸರ್ಗ ; ಸೋಂಕು : ನೀರೆಜದ ರಜದ ಪೊರೆಪಾ ನೀರೇಜದ ನೀರ ಪೊರೆಪು ಪೊರೆಪೊರೆ ನೀಂ [ಸಂ]ಸಾರಕ್ಕೆ ನಿನಗಮಿಾ ಸಂಸಾರಂ ಪೊರೆಪೊರೆ (ಶಾಂತಿಪು. ೦೦-೯೬). ೨. ಉತ್ಸಾಹ ; ಹುರುಪು : 'ಪೊರೆಪುದೋಱು' ಪರಾ. **ಪೊರಪು** : ೩. ಬಳಿಯುವಿಕೆ ; ಲೇಪನ : ನಾಟಕಶಾಲೆ . . . ಸಿರಿಗಂಪು ಕುಂಕುಮ ಪನ್ನೀರು ಸಾದು ಕತ್ತುರಿಯ ಸಾರಣೆ ಚಳೆಯಗಳಾ ಪೊರಪಿಂದ ಸ್ವರ್ಗದ ಕಂಪ ತುಂಬಿದ ಹೊನ್ನ ಕರಡಿಗೆಯಂತೊಪ್ಪುತಿಹುದು (ಭರತ. ೦೨-೦೪). [ಪೊರೆ₄ + —ಪು₂]

ಪೊರೆಪುದೋಱು (ಕ್ರಿ). ಉತ್ಸಾಹಗೊಳ್ಳು ; ಹುರುಪಾಗು : ವಿಳಾಸಿನೀ ನಯನಕ್ಕೈರವದಿಂ ದೆಸೆ ಕೂಡೆ ಪೂಗೊಳಂದೋಱ³ ವಿಳಾಸದೊಳ್ ಪೊರೆಪುದೋಱಿದುದಾಗ ಮನಂ ನೃಪೇಂದ್ರನಾ (ಅಪಂಪು. ೩-೬೫).

[ಪೊರೆಪು₂ + ತೋಱು]

ಪೊರೆಬಿಡು 'ಪೊರೆವಿಡು' ನೋ.

ಪೊರೆಯಿಕ್ಕು (ಕ್ರಿ). ಕೂಡಿಸು ; ಬೆರಸು ; ಮಿಶ್ರಮಾಡು : ನಾರಳಿದಂಟ ಕತ್ತರಿಸಿ ಪಿರಿದು ಮಘಮಘಪ ತಿಳಿದುಪ್ಪಮಂ ಹೊಯಿದು . . . ಕಾಯ್ದಾಱಿದೆಮ್ಮೆವಾಲೊಳಗೆ ಮುಱಿದಿರಿಸಿ ಹೊಸಸಕ್ಕರೆಯ ಹಾಕಿ ಪರಿಮಳಗಳಂ ಪೊರೆಯಿಕ್ಕಿದದುವೆ ತುಪ್ಪದ ಪಾಯಸಂ (ಸೂಪಶಾ. ೩-೦೨).

[ಪೊರೆ₄ + ಇಕ್ಕು]

ಪೊರೆಯಿಡು, ಹೊರೆಯಿಡು (ಕ್ರಿ). ೧. ಬಳಿ ; ಹಚ್ಚು ; ಲೇಪಿಸು : ಅರುಣಾಂಭೋರುಹದಲರ್ಗಲತಗೆಯಂ ಪೊರೆಯಿಟ್ಟು . . . ಕರಂ ಹರಿಸದಿಬಿದಿ ನಿರ್ಮಿಸಿದಂದದಿನೊಪ್ಪಿದುವವಳಂಘ್ರಿಗಳು (ಜಯಕಾ. ೩-೨೬). ೨. ಪುಷ್ಪರಸ, ಗಂಧ ಮೊದಲಾದ ಪರಿಮಳದ್ರವ್ಯಗಳನ್ನು ಬೆರಸಿ ಸುವಾಸನೆಯು ಹೆಚ್ಚುವಂತೆ ಮಾಡು : ಗೊಂದಣದ ಸಂಭಾರಮಂ ಮೆತ್ತಿ ತಿಳಿದುಪ್ಪದಿಂದೋಟೆಯಡಿಯಾಗಿ ಪೊಗ್ಗರಣೆಮಾಡಿ ಹೂವಿಂದ ಪೊರೆಯಿಟ್ಟು ಮಡಕೆಯೊಳಿರಿಸಲದು ತುಂಬುವಾಳೆಗಾಯ್ವೆಸರಾದವು (ಸೂಪಶಾ. ೪-೭೫). ೩. ಹೊಳಪು ಕೊಡು ; ಒಪ್ಪ ಹಾಕು : ತೊಳೆದಮರ್ದಿನ ತಿರುಳಮಿಂಚ ಬಾಂಬಿಳಿವೆಳಗಿಂದವೆ ಪೊರೆಯಿಟ್ಟ ತಿಳಿಜೊನ್ನದೊಳು ಭಾವನೆ ಮಾಡಿದಂತೆ ಪಜ್ಜಳಿಸಿದುದಭವನ ಕಾಂತಿ (ಶ್ರೀಪಾಲ. ೬-೬೦). **ಹೊರೆಯಿಡು** : ೨. ಅಷ್ಟಭಾಗವನಷ್ಟಗಂಧದೊಳಗೆ ಹೊರೆಯಿಟ್ಟು ಬಟ್ಟಲುಗಳ ತೀವಿ ಬಿಟ್ಟರೀರಾಱು ತುಂಡಹ ಬಿಳಿಯೆಲೆಯ ತಂದಿಟ್ಟಣಿಸಿದರಬಲೆಯರು (ಅಂಪಸ. ೬-೪೯). [ಪೊರೆ₄ + ಇಡು₁]

ಪೊರೆಯಿರ್ (ಕ್ರಿ). ಹತ್ತಿರದಲ್ಲಿರು ; ಸಮೀಪವಿರು : ಕೊನೆಗೆ, ಬಂದಿರ್ದುದಿನ್ ಇರದೆ ಪೊಡೆದಾಟಕಮ್, ತಡೆವನುಮ್ ಪೊರೆಯಿರ್ದನಿಲ್ಲ (ಅಂತಿಗೊ. ೦೨-೨೫೨). [ಪೊರೆ₄ + ಇರ್₁]

ಪೊರೆಯಿಸು (ಕ್ರಿ). ರಕ್ಷಿಸುವಂತೆ ಮಾಡು; ಸಲಹುವಂತೆ ಮಾಡು : ಈ ಧಾರುಣಿಯನಾಳಿಸುವುದೊಂದೇನರಿದೆ ನಾ ನಿನ್ನ ನೀರಧಿಯ ಪರಿಯಂತ ಭೂವಿಸ್ತಾರಮಂ ಪೊರೆಯಿಸುವೆನು (ಜಸಪು. ೩-೬೮). [ಪೊರೆ₃ + —ಇಸು₂]

ಪೊರೆಯುರ್ಚು₁, ಪರೆಯುಚ್ಚು, ಪೆರೆಯುಚ್ಚು, ಪೆರೆಯುರ್ಚು, ಹೆರೆಯಚ್ಚು, ಹೆರೆಯುರ್ಚು (ಕ್ರಿ). ೧. (ಹಾವು ತನ್ನ) ಹಳೆಯ ಚರ್ಮವನ್ನು ಬಿಡು,—ತ್ಯಜಿಸು : ಹಳೆಚರ್ಮ ಪೊರೆಯುರ್ಚುವ ಮೊದಲು ಕೆಳಚರ್ಮದ ಜೀವಕಣಗಳು (Hypodermal cells) ಒಳಗಡೆ ಹೊರಚರ್ಮ ಮತ್ತು ಮೇಲ್ಚರ್ಮಗಳನ್ನು ಸ್ರವಿಸಿರುತ್ತವೆ (ಕೀಟಿಸ. ೦೨೯). **ಪರೆಯುಚ್ಚು** : ೨. ಆವರಣವನ್ನು ತ್ಯಜಿಸು,—ಕಳಚು : ಪರೆಯ ಮರೆಯಲ್ಲಿಹ ಲಿಂಗವೇ ನೀ ಪರೆಯುಚ್ಚಿ ಬಹೆಯೆಂದು ಲಿಂಗವೇ (ಅರಳು. ೪೫೬-೫). **ಪೆರೆಯುಚ್ಚು** : ೧. ರಥಕಡರ್ದೆಚ್ಚನೆರಡಂಬಿನಿಂದೀತನ ಕಿರೀಟಮಂ ಕವಚಮಂ ಮೂಱಱಿಂದೆ ಕೊಚ್ಚಿ ಕೆಡಹಿದನಾಗ ಜಾನಕಿಯ ಸೂನು ಪೆರೆಯುಚ್ಚಿದಹಿಪತಿಯ ಶೌರ್ಯವಿಮ್ಮಡಿಸೆ (ಸೈಬಾಣ. ೨೦-೪೯). **ಪೆರೆಯುರ್ಚು** : ೧. ಪೆರೆಯುರ್ಚೆ ದಾಂಟೆ ಕೋಳ್ದ(ಲ್ದ)ಪ್ಪಿರೆ ಪಗೆಗೊಳೆ

ಸೊರ್ಕೆ ಶಂಕೆ ದೊರೆಕೊಳೆ . . . ಪಾವು ಕೊಳ್ಗುಂ ನರನಂ (ಲೋಕೋಪ. ೦೦-೨); ಜಾನಕಿಯನುಳಿದು ಪೆರೆಯುರ್ಚಿದುರಗನಂತಿರ್ದಪೆಂ (ಶೈಪುಣಾ. ೦೯-೩೭). ಪೆರೆಯುಚ್ಚು : ೧. ಹೆರೆಯುಚ್ಚಿದ ಸರ್ಪದಂತೆ (ಸೌಗಂಧಿ. ೪೦೩-೨). ಹೆರೆಯುರ್ಚು : ೧. ಪಾವುಗಳ್ಗೆ ಹೆರೆಯುರ್ಚುವಾಗಳ್, ಮಂಡಲಂಗೊಂಡಿರ್ದಲ್ಲಿ ದಾಂಟಿ ಪೋಗಲ್, ಕೋಲಿನಲ್ಲಿ ಪೊಯ್ದು ನೋಯೆ ಪಗೆಗೊಂಡಿರ್ದಲ್ಲಿ . . . ಆ ಹಾವು ಮನುಷ್ಯರಂ ಕರ್ಚುವುದು (ಲೋಕೋಪ. ೦೦-೨ ಟೀಕು); ನಿರ್ಮುಕ್ತಃ, ಮುಕ್ತಕಂಚುಕಃ — ಈ ೨ ಹೆರೆಯುರ್ಚಿದ ಹಾವಿನ ಹೆಸರು (ಪಾಸರಾ. ೯೮). [ಪೊರೆ₅ + ಉರ್ಚು]

ಪೊರೆಯುರ್ಚು₂ (ನಾ). (ಕೀಟ ಮುಂತಾದುವು ಹಳೆಯ) ಚರ್ಮವನ್ನು ಬಿಡುವಿಕೆ, -ತ್ಯಜಿಸುವಿಕೆ : ಹೊರಗಡುಸು ಚರ್ಮದ ಕೆಳಗೆ ಒಳಚರ್ಮ ಬಂದು ಪೊರೆಯುರ್ಚು ಪೂರೈಸುತ್ತದೆ (ಕೀಟಿಪ. ೦೨೪); ಪೊರೆಯುರ್ಚುಗಳ ಸಂಖ್ಯೆ ನಿರ್ದಿಷ್ಟವಲ್ಲ (ಕೀಟಿಪ. ೦೨೩). [< ಪೊರೆಯುರ್ಚು₁]

ಪೊರೆಯೆತ್ತು₁ (ಕ್ರಿ). ಕೂಡಿಸು ; ಬೆರಸು ; ಮಿಶ್ರಮಾಡು : ತೊಳೆದ ಗೋಧುವೆಗೆ ಜೀರಿಗೆಯೆರಡ ಪೊರೆಯೆ[ಪಾಠಾಂ.ಯೊ]ತ್ತಿ (ಸೂಪಶಾ. ೩-೪೦).

[ಪೊರೆ₄ + ಎತ್ತು₁]

ಪೊರೆಯೆತ್ತು₂, ಹೊರೆಯೆತ್ತು (ಕ್ರಿ). ಪದರವನ್ನು ತೆಗೆ : ಪೊರೆಯೆತ್ತಿದ ಬೆಳ್ದಿಂಗಳ ಪೊರೆ ಗಂಗೆಯ ಪೊನಲೊಳೊಗೆದ ತೆರೆ ಶೇಷನ ಮೆಯ್ವೆರೆಯೆನಿಪ ನವದುರೂಲಾಂಬರಕ್ಕೆ ಪರಭಾಗದಾಯ್ತು ದೇಹಪ್ರಭೆಯಿಂ (ಮಲ್ಲಿಪು. ೬-೦೨೧); ಖಚರಿಯರ್ ನೀರಡಸಲೊಡಂ ಕರಿಯ ಕಿಱಿಯ ಮುಗಿಲಂ ಖಚರರ್ ಪಿಡಿದು ಪೊರೆಯೆತ್ತಿ ಮಿಂಚಿನ ಪುಡಿಕೆಗಳಂ ತೆಱೆದ ತೆಱದೆ ತೋರ್ಪುವು ನಗಗಳ್ (ಅರ್ಧನೇ. ೨-೭೩); ಅಚ್ಚವೆಳ್ದಿಂಗಳನೀಗಳ್ಪೊರೆಯೆತ್ತಿದರೆಂಬಂತೊಳ್ಪಂ ಗೆಡಗೊಂಡು ಸೊಗಯಿಸುವ ಮಂಡಗೆಯಂ . . . ಬಟ್ಟಲೊಳಿಟ್ಟರ್ (ಪಾರ್ಶ್ವಪು. ೮-೩೦). ಹೊರೆಯೆತ್ತು : ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ ಒಳಗೆ ಕೆಟ್ಟಿಲ್ಲದಿರಬೇಕು (ಬಸವ. ೩೨೩). [ಪೊರೆ₅ + ಎತ್ತು₁]

ಪೊರೆಯೇರು 'ಪೊರೆಯೇಱು' ನೋ.

ಪೊರೆಯೇಱಿಸು (ಕ್ರಿ). ೧. ಲೇಪಿಸು ; ಬಳಿ : ಕೆಂಪಡರಿದ ಅರಲ್ತೀ ವಿದಸುಕೆದೊಂಗಲ ತಿಱಿದರು ಕೈಗರಳ್ಗೆಂಪ ಪೊರೆಯೇಱಿಸಲೆಂದು (ಸೂಪಸೋ. ೩-೩೯). ೨. ಸಂತೋಷಪಡಿಸು : ತನ್ನಂ ಪೊತ್ತು ಮನ್ನಣೆಯಿಂ ಮುನ್ನಂ ಪೊರೆಯೇಱಿಸಿ ಪೊರೆದ ಮಣಿಗರ್ಭಗಣಿಯರಂ ಬಾಗಿ ಬಳ್ಕಿ ಮಣಿದ ಮಾಳ್ಕೆಯಿಂ . . . ಎಱಗಿ ನಿಂದ ರಾಜಕದಳಿಗಳಂ (ಕಬಸಂ. ೨-೪೨ ಪ). ೩. ಚಿಗುರಿಸು ; ಪಲ್ಲವಿಸುವಂತೆ ಮಾಡು : ಅಶೋಕೆಯನೊದೆದಂಕುರಮಂ ಪುಟ್ಟಿಪ ಪದ್ಮಮುಖಿಯಂ ಕುರುವಕಮಂ ಪರಿರಂಭಣದಿಂ ಪೊರೆಯೇಱಿಸುವ ತರುಣಿಯರಿಂ (ಗಿರಿಕ. ೭-೦೦ ಪ).

[ಪೊರೆಯೇಱು + — ಇಸು₃]

ಪೊರೆಯೇಱು, ಪೊರೆಯೇರು, ಹೊರೆಯೇರು₁, ಹೊರೆಯೇಱು (ಕ್ರಿ). ೧. ಸಂತೋಷಪಡು ; ಆನಂದಿಸು ; ಉತ್ಸಾಹಗೊಳ್ಳು : ಬಡಿದೊಡೆ ಪೊಂಗಿ ಪಂದೊವಲವೊಲ್ಪೊರೆಯೇಱುವ . . . ಬದಂಗನಂ ಬೆಸನಿಯಲ್ಲದಳಾತನನೊಟ್ಟಿ ಸುಟ್ಟಪಳ್ (ಲೀಲಾವ. ೨-೭೬); ಕೃತಕೃತ್ಯನಾದೆನೆನುತ್ತೆ ಪೊಂಗುತುಂ ಪೊರೆಯೇಱುತುಂ ನುತಿಸಿ (ಪದ್ಮರಾ. ೩-೩೪); ತರಳನಯನದೊಳು ನಡೆನೋಡುತ್ತ ಪಾಡುತ್ತ ಪೊರೆಯೇಱಿ ನಲಿದಾಡುತ (ಸೌಂದಪು. ೩-೨೦). ೨. ಪ್ರಖರವಾಗು ; ಉಜ್ವಲವಾಗು : ಪರೆವುದು ದುರಿತತಮಿಸ್ರಂ ಪೊರೆಯೇಱುವುದಮಳದೃಷ್ಟಿ (ಯಶೋಕ. ೦-೨೬); ಮೆಲ್ಲಮೆಲ್ಲನೆ ಹಿಮಂ ಸರಿಯೆ ಪೊಸವಿಸಿಲ್ಪೊರೆಯೇಱಿ ಮೆಯ್ಯ ಬಿಱುಬುಗಳಡಂಗಿ . . . ಮೆಱೆದುದು ಮಾಗಿಯಪಜಯಂ ಮಧುವಿನ ಜಯಂ (ಪದ್ಮರಾ. ೮-೨). ೩. ದೊಡ್ಡದಾಗು : ತೆಳುವಸುಱು ಪೊರೆಯೇಱದಾ ಹೊಂಗಳಸಮೊಲೆತುದಿ ಕಂದದು (ಸಾಳ್ವಭಾ. ೩೨-೫೯). ೪. ಉಬ್ಬು : ಕೂಡುವ ಪಾರಿವಂಗಳುಲಿ ಕೇಳಿನಗಂಗಳೊಳುಣ್ಮೆ ಕೇಳ್ದಲಂಪೋಡೆ ಕೊಳಂಗಳೊಳ್ ನೆರೆದು ಕಣ್ಗೆಯಲಾಟಿಪ ಹಂಸಯುಗ್ಮಮಂ ನೋಡಿ ನವೋದ ಬಿಂದುಭರಮಂಥರದೃಷ್ಟಿ ಮರಳ್ದು ನಲ್ಲನಂ ನೋಡಿದಳುರ್ವಿ ನೋಡೆ ಪೊರೆಯೇಱಿದ ತನ್ನಯ ಮುಯ್ವನಂಗಜಂ (ಪರ್ಯಪು. ೬-೨೪); ಕುಸುಮೋಲ್ಲ ಸತ್ಪರಿಮಳೋತ್ಕರದಿಂ ಪೊರೆಯೇಱಿ . . . ಸುಳಿವುದು ಸಂತತಂ ಪುರಬಹಿರ್ವನಚಾರಣನಾ ಸಮೀರಣಂ (ಕುಸುಮಾ. ೨-೭೦). ೫. ಕಾಂತಿಯನ್ನು ಹೊಂದು, -ಪಡೆ : ಶಶಿತಿಲಕಮವಳ ನೇತ್ರಾಂಶುವಿಂದೆ ಪೊರೆಯೇಱಿ . . . ಉಯ್ಯಲಾಟವಾಡಿದಳೊರ್ವ ಬಾಲೆಯಂಬರದ ಮಿಂಚಾಡುವಂತೆ (ಶಿಪು. ೦೦-೦೯). ೬. ಪುಳಕಗೊಳ್ಳು ; ರೋಮಾಂಚನಹೊಂದು : ಹರ್ಷದ ಶರನಿಧಿಯೊಳ್ ಪೊಕ್ಕು ಲೀಲೆ ಮಿಕ್ಕೋಲಾಡುತ್ತರಲುತ್ತೀ ಸಾಡುತ್ತುಂ ಪೊರೆಯೇಱುತೆ ಜಪದ ವಿಪುಳೆ ತಪಮಂ ಬಿಟ್ಟಳ್ (ಗಿರಿಕ. ೩-೦೭). ಪೊರೆಯೇರು : ೧. ಪೂರ್ಣದಿಂ ಪೂರ್ಣವನೆ ತೆಗೆದರೂ ಪೂರ್ಣವೇ ಉಳಿವುದೆಂದು ಪೂರ್ಣಾನುಭೂತಿಯನು ಪಡೆದು ಪೊರೆಯೇರಿದರು ಶಿಷ್ಟ ಸಂತತಿ ಡಿಂಭದಿದಿರು ನಿಂದು (ಪುರಿದೇ. ೩೭-೯). ೫. ಎಷ್ಟು ದೊಡ್ಡವನಾಗಿ ಬಳೆದು ಮೆಯ್ಗೂಡಿ ಪೊರೆಯೇರಿಕೊಂಡಿರುವೆ ! (ಪಟ್ಟಿಲ. ೦೮-೨೨). ಹೊರೆಯೇರು₁ : ೧. ಇಂತಹ ಜಂಗಮದಿಂದಲೇ ಜಗತ್ತು ಪಾವನವೆಂದು ಹಿಗ್ಗಿ ಹೊರೆಯೇರಿದ್ದಾರೆ (ಮೋಳಿಮಾ. ೦೦೪ ಪ್ರಸ್ತಾವನೆ); ತಂಗಾಳಿಯು ಕೊಳಲೂದಲಿ ಸಾಗಲಿ ಸ್ವರಸಮ್ಮೇಳನ ಹೊರೆಯೇರಿ ! (ಕಪಪು. ೬-೦೪೯). ಹೊರೆಯೇಱು : ೧. ಪೋಗಲಾಱದೆ ತಿರಿಗಿ ತಿರಿಗಿ ಪೊಡವಡುವುತುಂ ರಾಗದಿಂದಗ್ಗಿಸುತೆ ಹಿಗ್ಗಿ ಹೊರೆಯೇಱುತಂ (ತಿರುರ. ದೇ. ೩-೨೨); ಆಹವವಿಜಯವಾರ್ತೆಯ ಹರಹಿನಲಿ ಹೊರೆಯೇಱಿ ಹೊಂಪುಳಿಯೋದರಡಿಗಡಿಗೆ (ಕುಸ್ಮಾಭೀ. ೭-೩೪). ೬. ತನು ಹೊರೆಯೇಱಿ ಸರ್ವಾಂಗ ಕರಗಿ ಕೊರಗಿ ನೆರೆವ ಭರದುರವಣೆಯ ತವಕದಿಂ ಲಿಂಗದೊಳು ಪರವಶೀಭಾವ ತಲ್ಲೀಯವಾಗಿ (ಕಿಪಗೀ. ೨೮-೦೨೪). ೭. ಹೆಮ್ಮೆ ಪಡು ; ಗರ್ವಹೊಂದು ; ಬೀಗು : ಎಲವೊ ಕರ್ಣಾತ್ಮಜನ ಹೊಯ್ದಗ್ಗಳಿಕೆಯಲಿ ಹೊರೆಯೇಱದಿರು ಪಡಿಬಲಕೆ ಕರಸಾ ಕೃಷ್ಣ ಪಾರ್ಥರ ನಿನ್ನಲೇನಹುದು (ಕುಸ್ಮಾಳ. ೦೦-೪೪). [ಪೊರೆ₄ + ಏಱು₁ (< ಏಱ್₁)]

ಪೊರೆಯೊತ್ತು (ಕ್ರಿ). ೧. ಕೂಡಿಸು ; ಬೆರಸು ; ಮಿಶ್ರಮಾಡು : ಹಿರಿದು ಮೃದುವಾಗಿ ನನೆದಕ್ಕಿಯೊಳಗರಿಸಿನವ ಪೊರೆಯೊತ್ತಿ ಮುಗುಳ್ವದದಿ ಬೆಂದ ವಿದಳಗಳನೊಡವೆರೆಸಿ (ಸೂಪಶಾ. ೩-೩). ೨. ನೆನಸಿ ಇಡು : ನೆನೆ ಹಾಕು : ಎರಡು ಸೂಳ್ ಪೊಸ ಬೆಣ್ಣೆಯಿಂ ಹಸಿಯ ಹಾಲಿನಿಂ ಪೊರೆಯೊತ್ತಿದುದ್ದಿನ ಬಿಳಿಯ ಬೇಳೆಯಂ ಕಲ್ಲೊಳರೆದು . . . ಸಂಪಳೆ ಮಾಳ್ಪುದು (ಸೂಪಶಾ. ೦-೭೦). [ಪೊರೆ₄ + ಒತ್ತು₁]

ಪೊರೆವತ್ತಿಸು (ಕ್ರಿ). ಪದರಗಳನ್ನು ಕೂಡಿಸು : ಪೊರೆವತ್ತಿಸಿದನೊ ಪಳೆಯಂಬರಮಿದು ನೆಱೆ ಪಱಿಗುಮೆಂದು ಬಿದಿ ನವನೀಲಾಂಬರದಿನೆನೆ ತೀವಿ ಕವಿದಂಬರಮನದಂ ನೀಲಜಲದಮೇಂ ರಂಜಿಸಿತೋ (ವೃಷವಿ. ೦೪-೦೩).

[ಪೊರೆ₅ + ಪತ್ತಿಸು]

ಪೊರೆವಿಡಿ (ಕ್ರಿ). ಸೇರು ; ಸಮೀಪಿಸು ; ಹತ್ತಿರವಿರು : ಪಿರಿಯ ಕೆಱೆಯೊಳಗೆ ಬೆಟ್ಟದ ಪೊರೆವಿಡಿದನ್ತೆಯ್ದೆ ತೋಂಟಗಾಣಮು ಮಠದೇಹರ ಮಲ್ಲಿಕಾರ್ಜ್ಜುನದೇವರ ತೋಂಟ (ಸೌಇಇ. XI-i, ೬೩-೨೬ ; 1049).

[ಪೊರೆ₄ + ಪಿಡಿ₁]

ಪೊರೆವಿಡು, ಪರೆಬಿಡು, ಪೊರೆಬಿಡು, ಹೊರೆಬಿಡು (ಕ್ರಿ). ೧. ಪದರವನ್ನು ಕಳಚು ; ಬಿರಿ : ಪೊರೆವಿಡೆ ಸೋಂಕಿ ತೆಂಕಣೆಲರೂದಲೊಡು ಸ್ಮರದಗ್ಧಭೂಜ ಮಂಕುರಿಸಿರೆ (ಲೀಲಾವ. ೯-೬೩). ಪರೆಬಿಡು : ೨. (ಹಾವು) ತನ್ನ ಹಳೆಯ ಚರ್ಮವನ್ನು ಕಳಚಿಕೊಳ್ಳು ; ನಿರ್ಮೋಕವನ್ನು ಬಿಡು ; ಪರೆ ಬಿಟ್ಟ

ಹಾವಿನಂತೆ ತಾನು ಹೊಸಬಾಳನ್ನು ಹೊಗುತ್ತಿದ್ದಂತೆ ಅವನಿಗೆ ಭಾಸವಾಯಿತು (ಮುಕಿಮಾ. ೨೭). **ಪೊರೆಬಿಡು** : ೨. ಉದಕವು ಪೊರೆಯನು ಕಳಚುವುದಾದರೆ ಉರಗವು ಪೊರೆಬಿಡುವ ಹಾಗೆ ಬೆಳ್ಳುಡೆಯಾಗುತಲಿದ್ದವು ಸತಿಯರ ನೀರಾಟವಾಡುವ ಮೈಗೆ (ಇಂಪಾಪ. ೦೪೪-೬) ; ಪೊರೆ ಬಿಟ್ಟ ಹಾವಿನಂತೆ ದೇಹವನ್ನು ತ್ಯಜಿಸಿ ಹೊರಟುಹೋದನೆಂದರೆ ಮತ್ತೆ ಅವನಿಗೆ ಪುನರ್ಜನ್ಮವಿಲ್ಲ(ಇಗದಾ. ೩೬). ೩. (?) : ತನಿವಣ್ಣಂ ಪೊರೆಬಿಟ್ಟು ಕುತ್ತೆಸಟ್ಗಳೊತ್ತಿಂದೋಡಿ ನಿಂದೂಡು ವಬ್ಬನಿಯೊಳ್ಗೋಸಗೆಯುಂಡು ಪಾಡುವಳಿಯಿಂ ಚಾಂಡಾಳಬಾಳಾಕಳಧ್ವನಿಯೊಳ್ ಮಂದ್ರತೆಯಂ ತಗುಳ್ಚಿ ಕಿವಿಯೊಕ್ಕೀ ಸಂಗದಿಂ ಸೌಖ್ಯಸಾಯನಿಕಂ ತಾನೆನಿಸಿತ್ತೊ ಸೆಜ್ಜೆವನೆಯೊಳ್ ಸುಪ್ರಾತಗೀತಾನಿಲಂ (ಅನಂಪು. ೮-೬೯). **ಹೊರೆಬಿಡು** : ೨. ಹೊಡೆಯೆ ವಜ್ರಂ ಹಱುವುದೇ ಕೀಸೆ ನೆಳಲು ಹೊರೆಬಿ [ಪಕಿಕಾಂ. ೧]ಡುವುದೇ (ಸಿದ್ಧರಾ. ೬-೪). [ಪೊರೆ$_5$ + ಬಿಡು$_1$]

ಪೊರೆವೋಗು (ಕ್ರಿ). ಉತ್ಸಾಹವು ಕಡಮೆಯಾಗು : ಪೊರೆವೋಗದ ಕಟ್ಟಾಯಮುಮಂ ಒರೆವೋಗದ ಚಲಮುಮಂ . . . ನೋಟಕರಪ್ಪಿನಮಪ್ಪವರಿಂ ಪೊಗಟಿಸುವೆನೆಂದು ತಱಿಸಂದು (ಪಾಂತಿಪು. ೯-೩೬ ಪ).

[ಪೊರೆ$_4$ + ಪೋಗು$_1$ (<ಪೋ$_1$)]

ಪೊರೆಸಾರ್ (ಕ್ರಿ). ಹತ್ತಿರಕ್ಕೆ ಬರು; ಸಮೀಪಿಸು: ಚಿರಕಾಲ ಬೇಟವ ಮಾಡಿ ಮುಕ್ತ್ಯಂಗನೆ ಕರೆಯಟ್ಟಿದಾ ದೂತಿ ಬಂದು ಪೊರೆಸಾರ್ದು ಪೇಳ್ವಂತೆ ನೃಪನ ಕೆನ್ನೆಯೊಳೊಂದು ನರೆಯಿದ್ದುದು (ಭರತ. ೭೬-೦೯). [ಪೊರೆ$_4$ + ಸಾರ್$_1$]

ಪೊರೆಹುಲ್ಲು (ನಾ). ಒಂದು ಬಗೆಯ ಹುಲ್ಲು: ಹಂಬುಹಾರಕಹುಲ್ಲು, ಪೊರೆಹುಲ್ಲು (ಮೃಷಿಗಿ. ೦೯-೨೯೦). [ಪೊರೆ$_7$ + ಹುಲ್ಲು (<ಪುಲ್)]

ಪೊರ್ಕು 'ಪೊಕ್ಕುಟು' ನೋ.

ಪೊರ್ಕುಳ್ 'ಪೊಕ್ಕುಟು' ನೋ.

ಪೊರ್ಕುಳಿ 'ಪೋರ್ಕುಳಿ' ನೋ.

ಪೊರ್ಕುಳಿಗೊಳ್ 'ಪೋರ್ಕುಳಿಗೊಳ್' ನೋ.

ಪೊರ್ಕುಳಿಯಿಕ್ಕು 'ಪೋರ್ಕುಳಿಯಿಕ್ಕು' ನೋ.

ಪೊರ್ಕುಳಿವಕ್ಕಿ 'ಪೋರ್ಕುಳಿವಕ್ಕಿ' ನೋ.

ಪೊರ್ಕುಳಿವುಗು (ಕ್ರಿ). ಕದನಕ್ಕೆ ಇಳಿ; ಯುದ್ಧಕ್ಕೆ ತೊಡಗು : ಎಕ್ಕೆಯೊಳೊಕ್ಕು ಪಳಂಚುವ ಪಾಂಗಿಂ ತಕ್ಕು ಮಿಗಲ್ಕೆಕ್ಕತುಳಾ ಪೊರ್ಕುಳಿವೊಕ್ಕು ಕರಂ ಪಾಡಾಪಾಡಿಯೊಳುಱದಿಱಿದರ್ ತಮ್ಮೊಳಗೆ (ಇಡುಕಾ. ೬-೩೦).

[ಪೊರ್ಕುಳಿ (<ಪೋರ್ಕುಳಿ) + ಪುಗು (<ಪೊಗು)]

ಪೊರ್ಕುಟ್ 'ಪೊಕ್ಕುಟ್' ನೋ.

ಪೊರ್ತು 'ಪೊಟ್ಟು' ನೋ.

ಪೊರ್ತುಗೀಜ 'ಪೋರ್ಚುಗೀಸ್' ನೋ.

ಪೊರ್ದಿಗೆ 'ಪೊರ್ದುಗೆ' ನೋ.

ಪೊರ್ದಿಸು, ಪೊಂದಿಸು, ಪೊದ್ದಿಸು, ಹೊಂದಿಸು, ಹೊದ್ದಿಸು$_1$ (ಕ್ರಿ). ೧. ಸೇರುವಂತೆ ಮಾಡು; ಸೇರಿಸು; ಕೂಡಿಸು : ನಿನ್ನಂ ರಸಾತಲಮಂ ಪೊರ್ದಿಸದಾಯ್ತದೇಕಿಳೆ ಮರುತ್ತೇಕದೊಯ್ಯದಾಯ್ತು (ಕಾದಂಕಾ. ೩೭೨); ಕಿಸುವಂ ಮೂಲಿಕೆಯಂ ಪೊರ್ದಿಸೆ ನಗೆಯೊಳೆ ಹೇಮಮಪ್ಪ ತೆಱದಿಂದಂ ಸಂಕಿಸದೆ ವರಧರ್ಮದೊಳ್ ಕೂರ್ತೆಸಗುವನರನುಂ ವಿಶೇಷಸುಖಿಯಾಗಿರ್ಕುಂ (ರರ್ಮಾಮ್ಯ. ೪-೩೯). ೨. ಉಂಟುಮಾಡು : ಮೊದಲೊಳ್ ರಾಜ್ಯಾಭಿಷೇಕ ಪ್ರಬಲಜಲಮೆ ಕರ್ಚಿತ್ತು ದಾಕ್ಷಿಣ್ಯಮಂ ಹೋಮದ ಧೂಮಂ ಚಿತ್ತದೊಳ್ತೊಟ್ಟನೆ ಮಲಿನತೆಯಂ ಪೊರ್ದಿಸಿತ್ತು . . . ಎನಲ್ ದುಷ್ಟರಪ್ಪರ್ ನೃಪಾಲರ್ (ಕಾದಂಪೂ. ೩೫೯). **ಪೊಂದಿಸು** : ೧. ರಘುವರಂ . . . ಮಿತ್ರಸದ್ಭಾವದಿಂದವರವರ ನೋಡಿ ಸೌಮಿತ್ರಿಸಹತಾಪವಂ ಪರಿಹರಿಸಿ ಶಾತಗುರೆ ಮಿತ್ರವಂಶೋತ್ತಮರ ಸಂಸ್ಕಾರವಿಧಿಯಿಂದ ಪೊಂದಿಸಿದನೊಂದುಗೂಡಿ (ಪರಸು. ೨-೨೯). ೩. ಅಳವಡಿಸು ; ಹಚ್ಚು : ಒಂದೆಡೆಯೊಳಗೊರ್ವ ಗಟ್ಟಿವಳಿತಿ ಸಿರಿಗಂಧವ ವಿಟನುರದೆಡೆಗೆ ಪೊಂದಿಸಿ (ಕಂಪಪಿ. ೨-೩೯). **ಪೊದ್ದಿಸು** : ೨. ನಿರ್ಮಲತಪಸ್ವಿಗಳ ನಿಶ್ಚಲಹೃದಯಮಧ್ಯಪಂಕೇಜಾತದ ಗದ್ದುಗೆಯೊಳೆಸವ ಚಿದ್ರೂಪನಂ ಜಗವಱಿಯೆ ದೊದ್ದೆಯೊಳ್ಕೂಡಿ ತೇರ್ಗುದುರೆಯಂ ಪೊಡೆವುದಂ ಪೊದ್ದಿಸಿದ ಪಾರ್ಥನಾರಿದರೊಳೆನಲು (ಸೈಪಿಪಾ. ೩-೯). **ಹೊಂದಿಸು** : ೧. ಅಸಮಸದುಭಕ್ತಾಂಘ್ರಿಗಳನರ್ಚಿಸಿ ಸಮಸ್ತಾಂಗಂಗಳಂ ಹೊಂದಿಸಿ ನಮಿಸಿ . . . ಬಸವರಾಜನು ಮುನ್ನ ತಾಂ ಮುದ್ರಿಸಿದ ಮುಸುಕಂ ತೆಗೆಯಲು (ಬಸಪು. ೩೬-೩೬) ; ಹಳೆಯದರ ಅಂದವನ್ನು, ಹೊಸದರ ಚಂದವನ್ನು ಹೇಗೆ ಹೊಂದಿಸುವುದು (ಸಮ್ಯಕು. ೩೦೯). ೪. ಅಣಿಮಾಡಿಕೊಳ್ಳು ; ಜೊತೆಗೂಡಿಸಿಕೊಳ್ಳು : ಅವಳು . . . ಎರಡು ದೋಲಿಗಳನ್ನು ಹೊಂದಿಸಿಕೊಂಡು ಅವನನ್ನು ಸರಿಯಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಉಪಚರಿಸಿದಳು (ಬಂಕಿಮ. ೨೨೦) ; ಸರಸಮ್ಮ ಸಗಣಿ ಹೊಂದಿಸಿ ಅಡಿಗೆಮನೆ ಮೊದಲು ಸಾರಿಸತೊಡಗಿದಳು (ಕುಸುಸಂ. ೯೦) ; ನಾಳೆಯ ಕೆಲಸಕ್ಕೆ ನಾನು ದುಡ್ಡು ಹೊಂದಿಸಿಕೊಳ್ಳಬೇಕು (ಕೂಡಿ). ೫. (ವ್ಯವಹಾರ, ಅಭಿಪ್ರಾಯಭೇದ ಮೊದಲಾದುವನ್ನು) ಇತ್ಯರ್ಥ ಮಾಡು ; ತೀರ್ಮಾನಿಸು ; ನಿರ್ಣಯಿಸು : ಈ ವ್ಯಾಪಾರವನ್ನು ನೀವೇ ಹೊಂದಿಸಿ ಕೊಡಬೇಕು (ಕೂಡಿ). ೬. (ಧಾರಣೆ ಮೊದಲಾದುವುಗಳನ್ನು) ಅನುವು ಮಾಡಿಕೊಡು ; ಕುದುರಿಸು : (ಕ). ೭. ಸರಿದೂಗಿಸು : ಭೂಪತಿಯು . . . ಲೆಕ್ಕಪತ್ರವನ್ನು ಹೊಂದಿಸಿ ಹೋಲಿಸಿ ನೋಡುತ್ತ ಕುಳಿತು ಬಿಟ್ಟನು (ಇತ್ಯಕ. ೨೬೯). ೮. ಒಪ್ಪಮಾಡು ; ಅಣಿಗೊಳಿಸು : ಅವರು ಗೂಡಿನಲ್ಲಿ ಡಬ್ಬಿಗಳನ್ನು ಅಂದವಾಗಿ ಹೊಂದಿಸಿ ಇಟ್ಟಿದ್ದಾರೆ (ಕೂಡಿ). **ಹೊದ್ದಿಸು$_1$** : ೧. ಬಿದ್ದೆನು ಭವಾಂಬುಧಿಯೊಳುದ್ದರಿಸುವರ ಕಾಣೆ ಹೊದ್ದಿಸುವರಿಲ್ಲಾದಿರುದ್ರನು ನಿಮ್ಮಾಣೆ (ದೀಕ್ಷಾಮೋ. ೬-೦೯) ; ಇದ್ದರೆಯು ರಣವಿಜಯವನಿತೆಗೆ ಹೊದ್ದಿಗರು ದ್ರುಪದಾದಿರಾಯರ ಹೊದ್ದಿಸಲು ಬೇಡವರಿಗಂಜುವೆವೆನುತ ನೂಕಿದರು (ಕುಪ್ಪಾಲೀ. ೬-೨೦). ೯. ಧರಿಸುವಂತೆ ಮಾಡು ; ಧಾರಣೆ ಮಾಡಿಸು : ಇಂತಿವರು ಮುಟ್ಟಲಱಿಯರು ತತ್ವದ ನಿಜವನಱಿಯರು ಇಂತವರಿಗಿಷ್ಟಲಿಂಗವನು ಹೊದ್ದಿಸಲೇಕೆ (ಮೋಳಿಮಾ. ೦೬-೭೦). ೧೦. ಸ್ಪರ್ಶಿಸುವಂತೆ ಮಾಡು : ನಯನದಾಹಾರವ ಜಂಗಮವ ನೋಡಿಸುವೆ . . . ಜಿಹ್ವೆಯಾಹಾರವ ಜಂಗಮವನೂಡಿಸುವೆ [ತ್ವ]ಚದಾಹಾರವ ಜಂಗಮಕ್ಕೆ ಹೊದ್ದಿಸುವೆ (ಬಸವ. ೯೨೯). [ಪೊರ್ದು + — ಇಸು$_3$]

ಪೊರ್ದು, ಪೊಂದು$_1$, ಪೊದ್ದು$_1$, ಪೊಟ್ಟು, ಹೊಂದು$_1$, ಹೊದ್ದು$_1$ (ಕ್ರಿ). ೧. ಕೂಡು ; ಸೇರು : ರವಿ ಪೊರ್ದಿದನಸ್ತಶೈಲಮಂ (ಶಂಪಭಾ. ೯-೯೬) ; ಆತಂ ಕೈಕೊಂಡುದಱಿಂ ಋಷಿವೇಷಕ್ಕಗ್ರಾಮ್ಯತೆಯುಂ ಆತನಂ ಪೊರ್ದಿದ ಜವ್ವನಕ್ಕೆ ಸೌಂದರ್ಯಮುಂ... ಆದುದೆಂದು ಬಗೆಯುತ್ತಂ(ಕಾದಂಪೂ.೭೯೦); ಒಡವುಟ್ಟಿದರಂ ಕೊಂದವರಡಗಂ ತಿಂದವರ ನೆತ್ತರಂ ಬೆಸಲಗೆಯೊಳ್ ಕುಡಿವೀ ನಿಸ್ತ್ರಿಂಶತೆಯಂ ಹಿಡುಬಿಯಂ ಪೊರ್ದಿ ಕಲ್ತನಾಗನೆ ಭೀಮಂ (ಗದಾಯು. ೩-೨೬). ೨. ಹೊಂದಿಕೊಳ್ಳು ; ಸರಿಯಾಗು ; ಜೋಡಿಯಾಗು : ಬೇಱೆವೇಱೆ ನಿಲೆ ಕಾರಕದೊಳ್ ಕ್ರಿಯೆ ತಳ್ತು ಮುಂ ತೋಱೆ ಪೇಟ್ದವಗುಣಂ ಗುಣರೂಪದೆ ಪೊರ್ದುಗುಂ (ಕವಿರಾ. ೦-೦೩೯) ; ಪರಮಾರ್ಥಂ ಪೇಱೆಪಟ್ಟಿರ್ದಧಿಕರಣಮಿವಿಂತಯ್ದಱೊಳ್ ಶಬ್ದಸಿದ್ಧಿಸ್ಮರಣಕ್ಕಾದ್ಯಕ್ಕುದಾತ್ತಪ್ರಕರಣಗಣನಾವೃತ್ತಿಯಿಂ ಪೊರ್ದಿ ನಿಲ್ಕುಂ (ಕಾಪ್ಯಾಪ. ೦-೬). ೩. ಹತ್ತಿರಕ್ಕೆ ಬರು; ಸಮೀಪಿಸು; ಬಳಿ ಸಾರು : "ಪೊರ್ದು-ಸಮೀಪೇ (ಹತ್ತಿರಕ್ಕೆ ಹೋಗು)" (ಶಮಧಾ); ಪಸರಿಸಿದ ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕಾಟಿಸಿಯುಂ ಬಱಿಕದನುರಿಯೆಂಬ ಸಂಕೆಯಿಂ ಪೊರ್ದದಿರ್ದುವೀ ಮತ್ಸ್ಯಂಗಳ್ (ಅಂಪು. ೦೨-೦೨೨); ಕಿರ್ಚಿನಂತೆ ಪೊರ್ದಿದರಂ ಕಿಡಿಸುವುದು (ರರ್ಮಾಮ್ಯ. ೯-೦೭೫). ೪. ತಾಕು ; ತಟ್ಟು;

ತಗುಲು : ಹೀನಬಲನನಧಿಕಬಲಂ ತೊತ್ತಟದುಟಿದನೆಂಬ ಲೋಕದ ಪಟಿ ಪೊರ್ದದೆ ಮಾಣ್ಗೆ ಧರ್ಮಯುದ್ಧದೊಳೆನಗಿಂ (ಲಿಪು. ೦೯-೦೦೨) ; ಶೀಲಾಲಂಕೃತೆಯಂ ಗುಣಮಾಲಾಲಂಕೃತೆಯನಾ ಮಹಾಸತಿಯಂ . . . ಪೆಸರ್ಗೊಳೆ ಬಾಲೆಯರಂ ಖಳಕಲಂಕಮೇಂ ಪೊರ್ದುಗುಮೇ (ಅಜಪು. ೦-೭೯); [ವ]ಲ್ಮೀಕಪುರವೆಂಬುದಾದಿಯ ಪೆಸರ್ ತನಗೆ ಕಲ್ಮಷದ ಯುಗಧರ್ಮವೆಯ್ದೆ ಪೊರ್ದದು ತನಗೆ (ಸಂಬರ. ೯-೯). ೫. ಅಂಟು; ಹತ್ತು : ತಾವರೆ ನೀರಂ ಪೊರ್ದದಂತೆ (ಧರ್ಮಾಮೃ. ೫-೦೬೯). ೬. ಹೋಗಿ ಸೇರು ; ತಲಪು : ಅದು ಸಂಧ್ಯೋಪಾಸ್ತಿಗೆ ಪೊರ್ದಿದವುದು ಮಾನಸಸರಕ್ಕಮಿಾಗಳಿದೆಂಬಂದದಿನುತ್ತರಾಶೆಯಂ ಪೊರ್ದಿದತ್ತು ಸಪ್ತರ್ಷಿ ಮಂಡಲಂ ಕ್ರಮದಿಂದಂ (ಕಾದಂಪು. ೦೩೯). ೭. ಪ್ರವೇಶಿಸು : ವಾರಿಜಷಂಡಮಂ ಪಡೆದು ಪೊರ್ದುವವೊಲ್ ಕಳಹಂಸೆ ತಿಪ್ಪೆಯಂ ಸಾರಮಿದೆಂದು ಪೊರ್ದುಗುಮೆ (ಧರ್ಮಾಮೃ. ೯-೨೦೦) ; ಎಳಸಿ ಪಿಪಾಸೆಯಿಂ ಮೃಗಚಯಂ . . . ತಚ್ಚರಜ್ಜಲವಿಹಗಂಗಳೊಳ್ಳುಲಿವುಗೇಳ್ದಿರದೊಯ್ಯನೆ ಪೊರ್ದಿ ಪೀರ್ವುವಾ ಸಲಿಲಮನೆಂದೊಡೇವೊಗಟ್ಟೆನಾ ವಿಪುಳಾತಟಿನೀಜಲಾಚೃಮಂ (ಕುಸುಮಾ. ೦-೮೦) ; ಕಾಯಜ ನಿಜಪುಷ್ಪಸಾಯಕದಿಂದೆಸಲಾಯತಗಿಡದಾ ಸರವ ಕಾಯವ ಪೊರ್ದಲೀಯದೆ ಚರಣದೊಳಾಂತ ಶ್ರೇಯಾಂಸ ಜನರ ವಂದಿಪನು (ಅಂಜನ. ೦-೦೦). ೮. ಆಶ್ರಯಿಸು ; ಅವಲಂಬಿಸು : ಚಂದ್ರನೊಡೆದುದಂ ಕಂಡುದಱಿಂ ಸದ್ಧರ್ಮದ ಮೊದಲ ಪೊರ್ದಿದ ಮಾರ್ಗದಿಂ ಬೆಳೆಯೊಳ್ ಪುಲ್ಗಳ್ ಪಲವಕ್ಕುಂ (ಪಡ್ಮಾರಾ. ೬೬-೦೩); ಆನೆಂತು ತತ್ವಜ್ಞನಾದೆನ್ನ ಪೊರ್ದಿದ ಜನಂಗಳುಮಿಂತೆ ತತ್ವಜ್ಞರಕ್ಕೆಂದು . . . ತತ್ವೋಪದೇಶಂಗೆಯ್ವೊಂ (ಕಾಪುಂಪು. ೫) ; ಅಲ್ಪಬುದ್ಧಿಗಳ್ ರಾಗಿಸಿ ಪೊರ್ದಲೇಂ ಗಳ ಕುದ್ಯೆವದೊಳಂ ಫಲಮಾಗಲಾರ್ಪುದೇ (ಧರ್ಮಾಮೃ. ೭-೭೬). ೯. ಪಡೆ ; ಗಳಿಸು : ಪಡಿವಣ್ಣೋ—ಪೊರ್ದಿ [ಪಾಠಾಂ. ಳ್ದಿ]ದೊಂ (ಪಡ್ಮಾರಾ. ೭೩-೯) ; ಮಗಳೇ ನೀನಿಂತಿವಂ ನಂಬನುಕ್ರಮದಿಂದಂ ದೊರೆದೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುವೈ (ಅಪಪು. ೫-೬೩); ಅನಂತಚತುಷ್ಟಯಮಂ ಪೊರ್ದು ಪೊರ್ದದಿರು ಸಂಸೃತಿಯಂ (ಅಜಪು. ೬ ೭೩). ೧೦. ಉಂಟಾಗು; ಪ್ರಾಪ್ತವಾಗು; ಒದಗು : ನೆರೆಯಲ್ಕೆನ್ನುದಯಪ್ರಭಾವಮನೆ ಪಾರ್ದೋರಂದದಿಂ ಜೀವಿಸಿರ್ಪ ರಥಾಂಗಪ್ರಚಯಕ್ಕೆ ಪೊರ್ದುವ ವಿಯೋಗಾವಸ್ಥೆಯಂ ವೇಗದಿಂ ಪಿರಿಮಂ ಬಾರಿಸದೆನ್ನ ತೇಜದೊದವಿನ್ನೇ ಬಾರ್ತೆಯೆಂದೆಯ್ದೆ ತನ್ನುರು ತೀವ್ರಾಂಶುವನಿಂತು ಬಿಟ್ಟನೆನೆ ತಣ್ಪಂ ತಾಳ್ದನಾ ಭಾಸ್ಕರಂ (ಕುಸುಮಾ. ೯-೦೨). ಪೊಂದು$_1$: ೧. ಅಶುಚಿದೇಹಮನಿದನಿನ್ನನುಪಮಮೆಂದೆನಲಾಗದು ಜಿನಮತದೊಳ್ಪೊಂದಿಯಱಿವಿನೊಳ್ನೆಗಟ್ಟ ನರಂ (ಧರ್ಮಾಮೃ. ೪-೦೭೯). ೨. ಪೆರ್ಚುಗೆಯೊಳ್ ಬಲಮೆಂದು ಪೊಂದುಗುಂ (ಕರ್ಣಾಪಿ. ೬೭); ಕರೆದವಂ ಬಂದಿಲ್ಲ ಬಂದವಂ ಪೊಂದಿಲ್ಲ (ಕಾಲೂರ. ೩೫-೩೬). ೯. ಸುಖಮಂ ಪೊಂದೆಂದು ಪಾಟಿಸುತಿರ್ಪನುಂ (ಧರ್ಮಾಮೃ. ೬-೭೦); ಹರಿಯ ಪಾದಜೆಯಳೆರಕದಿಂ ಪಾವನಂ ಪೊಂದಿ (ಪರಕು ೭-೩); ಪುರೋಹಿತರ ಸಂಗಡ ಬ್ರಹ್ಮಾರ್ಚನೆಯಂ ಮಾಡಿಸಿ ಆಶೀರ್ವಾದಮಂ ಪೊಂದಿ (ಮೃಅರಿ. ೦೯೩೫, ೯೬-೯; 1824). ೧೦. ಕಂದರ್ಪನರ್ಧಾಂಗಿಯ ಮೇಲೆ ವೈಧವ್ಯ ಪೊಂದದೊಲ್ ಮಾಡು (ಮೋಹತ. ೯-೩೯); ಒಂದೆಡೆಯೊಳಗೊರ್ವ ನೀಱ ವಿಟನ ಮೇಲ್ಪೊಂದಿದ ಮೋಹವ ಬಿಡದೆ ಕಂದರ್ಪಕೇಳಿಯೊಳೋಲಾಡುತಿರೆ (ಕಂಪಪಿ ೬-೦೩೦). ೧೧. ಸಂಭೋಗಿಸು: ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡಿಂಬುಕೈಸೆ ಬಿಯಮಾಱಿಸಿ ಪೊಂದದವಂ ಬೊಜಂಗನೇ (ಅಪಪು. ೦೨-೦೭). ಪೊದ್ದು$_1$: ೧. ವಿದ್ಯದ ಮನುಜರ ಕರೆಸೋದು ರೊಕ್ಕ ಪೊ[ಪಾಠಾಂ. ಹೊ]ದ್ದಿದ ಜನರನು ಬಿಡಿಸೋದು ರೊಕ್ಕ (ಪುರಂದ. ೨-೯೮-೫); ಬರಿಮಾತಿನಲ್ಲಿ ನೆರೆಯಲ್ಕೆಳಸಿ ಬಹಕಪಟವಿಟಂಗಳ ನಿಷ್ಪಣಮೆನುತ್ತಮರಿದು ಲಲ್ಲೆಯಿಂ ಬಿಸಿಲಿಗರಿಸಿನ ತೊಲ್ದಂತವರನೆಲ್ಲಿಯುಂ ಪೊದ್ದದ ವಿದಗ್ಧೆಯರ ಮಂದಿರಗಳಲಿ ಸಿರಿಜವ್ವನಗಳೊಪ್ಪಿರವೆ (ಸಂಕಾರಾ. ೫-೬-೪೫). ೩. ಕಳವು ಹಾದರಮೆಂಬಿವೆಮ್ಮ ಶಿವಭಕ್ತಸಂಕುಳದೊಳಗೆ ಪೊದ್ದಲರಿಯವು (ಸಂಪು. ೭-೨೯); ಹಡಪ ಕಾಳಾಂಜಿ ಪೊಂಗಟ್ಟಿಗೆ. . .ಬಿಜ್ಜಣಿಗೆಗಳ ಪಿಡಿದೊಳಿಗಗೈವ ಬಿಂಕಗಾತಿಯರಾ ಪೊಡವಿಯಾಣ್ಮನ ಪೊದ್ದಿಹರು (ಹಂಬ. ೦-೦೬); ಕರಣಗಳ ಕಾಳಾಟವೆರಗದ ಗುರುಲಘುತ್ವಗಳಳಿದ ತ್ರಿಗುಣಗಳುರುಬೆ ಪೊದ್ದದ ಮಾಯೆ (ಗಗತಾ. ೦೬-೫). ೪. ಒಳಗೆ ಭಾಳೇಕ್ಷಣನ ನೆನಹು ತೀವಿರೆ ಕರಂ ಚಳಿ ಪೊದ್ದದವರನೆಂತಿರ್ದೊಡಂ ಭಕ್ತರಂ (ಇಳೆರ. ದೇ. ೫೨-೦೬). ೬. ಹೊಳಲ ಬಳಿಯ ಪೊದ್ದಲ್ಲಿರ್ದತುರುಕರ . . . ಸಾಸಿರಮೂಗರಿದಾಕ್ಷಣ ದಳಪತಿಯಡಿಗೊಪ್ಪಿಸಿದರು (ಕಂಪಪಿ. ೧೩-೫೫). ೮. ಎಲೆ ಮುನಿನಾಥ ನಾನಿನಿತು ಕಾಲವಲ್ಲದ ಸಮಯವಾ ಮುಂದಱಿಯದೇ ಪೊದ್ದಿ ಗತಿಗೆಟ್ಟು ಪೋದೆನು (ಸಮ್ಯಕ್ಕೌ. ೯-೦೯). ೧೨. ತಳೆ; ಧರಿಸು: ರುದ್ರಾಕ್ಷಭಸಿತವನು ಹೊದ್ದಿರಲು ದೇಹದೊಳಗಿದ್ದ ಪಾಪಗಳು ಬಯಲಾಗಿ ಶಿವನು ತಾನಿದ್ದಲ್ಲಿ ಬರುವ (ಸರ್ವಜ್ಞ. ೦೨೦). ಪೊಟ್ಟು : ೧೦. ಮಿಶದ್ಗುಣಪದ [ಪು]ದಿದೊಡಂ [ವೀ]ತಿ [ಸಾ] × [ರ್ತ್ಥ]ದೊಳ್ ಪೊಟ್ಟುದಿನ್ತಪ್ಪೆಸಕಂ ತ್ರೈಗರ್ಮ್ಮಿ ಸನ್ದರ್ತ್ತ [ಪಾ]ದಮಹಿಮೆಯಿಂ (ಸೌಇಇ. XI-I,೬೦-೬; 1024). ಹೊಂದು$_1$: ೨. ತಮ್ಮತಮ್ಮೊಳಗೆ ಹೊಂದಿದರೆ ಸಂತೋಷದಿಂದ ವ್ಯವಹಾರ ಮಾಡಬೇಕು (ಮುಂಬಯಿ. ೫-೬೫) ; ಗತಿಯು ತನ್ನ ಛಂದದಲ್ಲಿ ಭಾವ ತನ್ನ ಬಂಧದಲ್ಲಿ ಹರಿವೆನಿಲ್ಲೆ ಹೊಂದದಲ್ಲಿ ಬಲ್ಲೆ ಎಲ್ಲು ಒಂದರಲ್ಲಿ (ಅರಳು. ೦೬೯-೦೦). ೪. ಭೂವ ಹೊಂದದು ಪಾಪವೆಮ್ಮಂ (ಬಸಪು. ೫೫-೭). ೯. ಹೊಂದುತಿಹರಾ ಪುರುಷತತ್ವದಿ ನಿಂದು ತೋರುತಲಿರ್ಪ ಭುವನವ (ಗಗತಾ. ೯-೬೫); ಕಾಲಕ್ರಮದಲ್ಲಿ ಅದು ವಿಜಯನಗರವೆಂಬುದಾಗಿ ಬದಲಾವಣೆ ಹೊಂದಿತು (ಕೃದೇಪ. ೨). ೧೩. ಕುದುರು; ವ್ಯವಸ್ಥೆಯಾಗು: ದುಡ್ಡು ಹೊಂದಿರಲಿಲ್ಲಪ್ಪ . . . ಇಪೊತ್ತು ಹಣ ಕೈಗೆ ಬಂತು (ದೂರಸ.೦೫೨). ಹೊದ್ದು$_1$: ೧. ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ (ದೇದಾಪ. ೨೮-೯೮) ; ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ (ಮಹಾದೇ. ಬ. ೦೯-೦೩); ಅರವಿಂದಸಖ ಹೊದ್ದಿದನು ಮೆಲ್ಲನೆ ಪಶ್ಚಿಮಾಂಬುಧಿಯ (ಕುಸ್ಯಾಮ್ರೋ. ೦೯-೩೩). ೨. ಸವ್ಯಘೃತದಲಿ ಕ್ಷೀರವಾದೊಡೆ ಹೊದ್ದುವುದು . . . ಶುದ್ಧರಾಕ್ಷಸರನ್ನವಿದ ತಾ ಶುದ್ಧಭೂಸುರರುಂಬರೇ (ಸಂಭವ. ೨೫-೦೭); ಹೊದ್ದಿ ನಿಲುವುದೆ ದರ್ಪಣದ ಮೇಲುದ್ದುರುಳಿ ಬೀಳ್ವಂತೆ ನಿಮಿಷದಿ ಬಿದ್ದು ಹೋಗುವ ಕಾಯವು (ಹರಿಸಾ. ೭೬). ೩. ನೋಡುವರೆ ಕಾಣ ಬರುತ್ತಿದೆ ಮುಟ್ಟುವರೆ ಕೈಗೆ ಸಿಲುಕದು ಹೊದ್ದುವಡೆ [ಪಾಠಾಂ. ಹೊದ್ದಿದರೆ] ಸಮೀಪ ಹತ್ತೆಸಾರಿದಡತ್ತತ್ತ ತೋಱುತ್ತಿದೆ (ಅವಸಂ. ೦೬೬-೬೫೦) ; ಸರಳ ಮಂಚದ ಹೊದ್ದಿ ಭೀಷ್ಮನ ಚರಣಕಮಲವ ಹಿಡಿದು ನೊಸಲಿನೊಳೊರಸಿಕೊಂಡನು ನಾದಿದನು ಕಂಬನಿಯೊಳುಪ್ರಿಗಳ (ಕುಸ್ಯಾಮ್ರೋ. ೦-೨೦) ; ಹೊದ್ದಲೀಯದೆ ಬಾಣಂಗಳ ತಱಿದನಿರುದ್ಧ ಮಾತುಲನ ಕೊಂಡಾಡಿ . . . ಎಚ್ಚನು ಸುಭಟ ಪ್ರಸಿದ್ಧ ಬಾಣಾಸುರನೆದೆಯ (ಮೋಹತ. ೩೫-೩೦). ೪. ದೇಶವೆಲ್ಲವನನೃತ ಹೊದ್ದದಂದದಿ ಕೊಟ್ಟು ಕಾಶಿಯ ನಿವಾಸದೊಳು ಸತಿ ಸುತರ ಮಾಱಿ . . . ಋಣವನುತ್ತರಿಸಿದ (ಹಸಕಾ. ೦೦ ಸೂಸನ) ; ಕಕ್ಕುಲಿತೆ ಕುಂದೆಡರು ಬಡತನ ಸಿಕ್ಕು ರೋಗಾದಿಗಳು ಹೊದ್ದದ ಉತ್ಕಟದ ವರವೀಯಬೇಕೆನೆ ಕೊಟ್ಟನಾ ಮುನಿಪ (ಕೌಶಿರಾ. ೯೯-೩೯) ; ಜನನ ಮರಣಾದಿಗಳು ಹೊದ್ದದ ತೋಱಿ ತೋಱದ ಜಗದ ದೇವರ ದೇವನಿದ್ದನು ರಜತಶಿಖರಿಯಲಿ (ತೊರರಾ. ೦-೨-೦) . ೫. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ಜಲಪದ್ಮಪತ್ರದಂತೆ ಹೊದ್ದಿಯೂ ಹೊದ್ದದಂತಿಹನು (ವಸರ. ೭) ; ಮನ ವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದ[ಪಾಠಾಂ. ರ್ದ]ದಂತೆ ನಡೆದ ಕಲಿಗಳಾರಯ್ಯ (ಹಸಕಾ. ೨-೬) ; ವರಿದ್ದಿಸಿ ಚುಬುಕಾಗ್ರವಿಡಿದಡೆ ಬೆರಲ್ಗಳ ಹೊದ್ದಿ

ದುವುರಿಬೊಕ್ಕೆಗೆಯ್ಯ ಬದ್ದಿಸಿ ಬಿಡದೆ ಕಾಲುವೆಯ ತಣ್ಣೀರೊಳಗದ್ದಿದರವಳ ಹಸ್ತವನು (ಶೋಹತ. ೨೮-೦೯). ೬. ಎದ್ದು ನಡೆವ ಬಲಜಲಧಿಯ ಕಡೆಯನು ಹೊದ್ದಲಾಱದೆ ಖಗನಿವಹ ಎದ್ದವು ಕೆಲವು ಪತಾಕಾಗ್ರದೊಳಲ್ಲಿ ಬಿದ್ದವು ಕೆಲವು ನೆಲದೊಳು (ಕುಂಶಾಸಾಂ. ೩೭-೭೦). ೭. ದೊದ್ದೆ ತೆಗೆಯಲಿ ಪಾರ್ಥ ಪವನಜರಿದ್ದರಾದರೆ ಬರಲಿ ಸಮರವ ಹೊದ್ದಲಾಪರೆ ಹೊಗಲಿ ಹರಿ ತೋಱಲಿ ಸಹಾಯತೆಯ (ಕುಪ್ಯಾಭೀ. ೬-೨೦) ; ಹೊದ್ದಿ ಗೊಲ್ಲರ ಮನೆಯಲ್ಲಿ ದ್ದಷ್ಟು ಬೆಣ್ಣೆಯನು ರದ್ದು ಮೆದ್ದುದಕ್ಕೆ ಹೊಟ್ಟೆ ತುಂಬಿತೆ (ಪುರಂದ. ೦-೬೯-೨). ೮. ನೀನೇಕೆ ಈ ನುಡಿಯೇಕೆ ಹೊದ್ದಿದರಂ ಹೋಗೆಂಬರೆ (ಜಸರ. ೯-೩೯) ; ಸಾಲ ಸಾವಿರದೀವಿಗೆಯ ಹರಿದಾಳಿಗಳುಕದೆ ನೃಪರ ಮೋಱೆಗಳೋಳಿಗಳ ನೆಱೆ ಹೊದ್ದಿ ಕತ್ತಲೆ ನಿಂದುದಲ್ಲಲ್ಲಿ (ಕುಪ್ಯಾಳ. ೦-೦೯) ; ಅಸುರರೀತನ ಹೊದ್ದಿ ಜಗದಲಿ ಹೆಸರು ಪಡೆದವರಿಲ್ಲವೇ ಭಾವಿಸಿದಡೀಯನೆ ಲೋಕಪಾಲತ್ವವನು ನೈರುತಿಗೆ (ತೊರಣಾ. ೬-೬-೩೨). ೯. ಚತುರ್ವಿಧ ಪದವಿಯಂ ಹೊದ್ದದೆ ಫಲಭೋಗಂಗಳಂ ಮುಟ್ಟದೆ (ಅದಪ. ೩೦-೪೭) ; ಗದ್ದುಗೆಯೇಱಿ ಸತ್ಕಥೆಗೇಳಿ ಮುಕ್ತಿಯ ಹೊದ್ದುವರಾರು ನಿನ್ನಂತೆ (ಭರತ. ೨ ೩೯). ೧೦. ಇವರಿಂದ ಪಲವು ಲೇಸೆಮಗೆ ಮಿಗೆ ಹೊದ್ದಿದವು (ಸೇದಿರ. ದೇ. ೦೬೩-೯) ; ಹೊದ್ದಿದುತ್ಪಾತಗಳನೀಕ್ಷಿಸುತ್ತಿದ್ದನಾ ಮುನಿನಾಥನು (ಶಾತ್ತಣಾ. ೯-೯). ೧೪. ಪರಿಣಮಿಸು ; ಫಲ ಕೊಡು : ಯುಕ್ತಿ ಹೊದ್ದದ ಶಿವ ಸ್ನೇಹಿಗಳ್ ಬರುತಮಿರೆ (ತಿರುರ. ದೇ. ೦೯-೦೨).

ಹೊಂದಿಕೊಳ್ಳು = ೧. ಸೇರಿದಂತಿರು ; ಕೂಡಿಕೊಂಡಿರು : ಪದ್ಮಬ್ಬರಸಿಯು ತಾನು ಕಟ್ಟಿಸಿದ ಬಸದಿಗೆ ಹೊಂದಿಕೊಂಡಂತೆ ಒಂದು ದಾನಶಾಲೆಯನ್ನು ಕಟ್ಟಿಸಿದಳು (ಕಶಾಲ. ೪೫೦) ; ಅವರ ಮನೆ ನಮ್ಮ ಮನೆಗೆ ಹೊಂದಿಕೊಂಡಿದೆ (ರೂಢಿ). ೨. ಒಗ್ಗು ; ಹೊಂದಾಣಿಕೆಯಾಗು : ನಾರಾಯಣನಿಗೆ ಅನುಕೂಲವಾದ ಮನೆಯು ಅದಾಗಿದ್ದು ತುಂಬ ಹೊಂದಿಕೊಂಡಿತ್ತು (ಕಂಬಹು. ೦೨೩) ; ಎದುರುಮನೆಯ ಮಗು ನನಗೆ ತುಂಬಾ ಹೊಂದಿಕೊಂಡಿದೆ (ರೂಢಿ).

[ದೇ.॥ ತಮಿ. ಪೊರುನ್ತು, ಪೊರುತ್ತು ; ಮಲ. ಪೊರುತ್ತು ; ತುಳು. ಪೊರ್ದು, ಪೊಂದು, ಹೊಂದು ; ಕೋತ. ಪೊತ್]

ಪೊರ್ದುಗೆ, ಪೊಂದಿಗೆ, ಪೊಂದುಗೆ, ಪೊದ್ದಿಗೆ, ಪೊರ್ದಿಗೆ, ಪೊಟ್ಟುಗೆ, ಹೊಂದಿಗೆ, ಹೊಂದುಗೆ, ಹೊದ್ದಿಗೆ, ಹೊದ್ದುಗೆ (ನಾ). ೧. ಸಹವಾಸ ; ಸಂಬಂಧ : ಆರಯ್ದು ನೋಡೆ ತೊಱೆಗಳ ನೀರುಂ ವಾರಿಧಿಯ ನೀರ ಪೊರ್ದುಗೆಯಿಂದಂ ಸಾರಂಗೆಟ್ಟುಪ್ಪಪ್ಪವೊಲ್ (ರರ್ಪಾಸ್ಕು. ೨-೭೭) ; ಸಂಬಂಧಮೆಂದು ಪೊರ್ದುಗೆ (ಕಪುದ. ಬೀಕಿಳೆ. ೭ ಸೃತ್ತಿ) ; ಪರವತ್ಸದೇಶಮೆಂಬುದ್ಧುರವತ್ಸದ ನಿಬಿಡವಾದ ಪೊರ್ದುಗೆಯಿಂದಂ ಧರೆಯೆಂಬ ಸುರಭಿಸುಖಮೆಂಬುರು ಪರಮಾಮೃತಮನೆಯ್ದೆ ಕಱೆಯುತ್ತಿರ್ಕುಂ (ಪಾರಪು. ೯ ೨೩). ೨. ಬಳಿ; ಹತ್ತಿರ; ಸಮೀಪ : "ಪೊರ್ದುಗೆ, ಪೊರೆ, ಪಕ್ಕಂ, ಸನಿಹಂ, ಕೆಲಂ—ಈ ೫ ಸಮೀಪಂ" (ಕಂಶಾ. ೬೯-೯೩೯) ; ಮೃಗಮೂರ ಪೊರ್ದುಗೆಯ ಬಟ್ಟೆಗೆ ಮೇಪಿನ ಕಾಪಿನಿಂ ಮರಳ್ದುವು ದಿನನಾಯಕಂ ವರುಣದಿಙ್ನಗಮಂ ಮಱೆಗೊಳ್ವ ಕಾಲದೊಳ್ (ಸೂಕ್ತಿಸು. ೬-೨೦). ೩. ಅಧೀನವಾದುದು : ಅಪ್ರಧಾನವಾದುದು : "ಉಪಾಗ್ರಂ, ಉಪಸರ್ಜನಂ—ಈ ೨ ಪೊ(ಹೊ)ರ್ದುಗೆ" (ಹಠಾಯು ೦೨೬-೭೬). ೪. ಆಶ್ರಯ; ನೆಲೆ : 'ಪೊರ್ದುಗೆವಡೆ' ಪರಾ. ಪೊಂದಿಗೆ : ೨. ಮಾವನ ವಾಕ್ಯಗಳಿಗಾನಂದಪುಳಕಿತನಾಗಿ ಖಳಪತಿ ಪೊಂದಿಗೆಯ ಹೊಂಬಟ್ಟಲಲಿ ಕರ್ಪುರದ ವೀಳೆಯವ . . . ಇತ್ತು (ಅಂಬಿಕಾ. ೦೬-೨೧). ಪೊಂದುಗೆ : ೧. ರಂಗಯೆಂದೆಂಬ ನೀಱೆಯ ಪೊಂದುಗೆಯೆಂದು ವಂದಪುದೊ (ಕತಸಾಂ. ೨೯-೫೦). ೫. ಹೊಂದಾಣಿಕೆ ; ಸೇರಿಕೆ ; ಸರಿಹೊಂದಿರುವಿಕೆ : ಚಂದನಾಗರು ಏಲೇವಕ್ಕಂಗಸೌರಭ್ಯಪೊಂದುಗೆಯು ಮಾಟ್ಟುದಪೂರ್ವಗಂಧಮಂ (ಪುಷ್ಪಪು. ೩-೫೦). ಪೊದ್ದಿಗೆ : ೧. ಪಲವು ಪೊದ್ದಿಗೆಗಳನುಳಿದಾಸೆಯೆಂಬೆಳವಲೆಯ ಪಗ್ಗವ ಪಱಿವಿಟ್ಟು ನೆಲದೊಳೊಂದಕೆ ಕೈವಶವಾಗದೆ ಬೀಸುವೆಲರಂತೆ ತೊಡಕಿಲ್ಲದಿಹೆನು (ಕರ್ಪಸ್ಕ. ೦೦-೨೮). ಪೊರ್ದಿಗೆ : ೨. ಆ ನೆಲದ ಪೊರ್ದ್ದಿಗೆಯಲು ಸಿರಿಯುರದಲು ಕರಿಯ ಕೆಯಿ ಮ[ತ್ತ] × × ಪದಿನೈಯ್ದು (ಸೌಇಇ. IX-I. ೦೫೯-೦೯; 1091). ಪೊಟ್ಟುಗೆ: ೨. ದೇವರ ಕೆಯ್ಯ ಪೊಟ್ಟುಗೆಯಲು ಬಿಟ್ಟ ಕೆಯಿ ಮತ್ತರು ನಾಲ್ಕು (ಕಪಲ. ೬೯-೦೩-೩೭; 1088). ಹೊಂದಿಗೆ : ೫. ಅಂದಂದಿನ ಹೊಂದಿ[ಶಾಶಾಂ. ಹೊದ್ದಿ]ಗೆಯ . . . ಕೆಡಿಸಲಱಿಯದ ಅಂಧತರ ನೋಡಾ (ಬಸಪ. ೭೬೨); ಒಂದು ಸಾವಿರದೊಂದು ಶತ ಹನ್ನೊಂದು ಪದಮೆದೆಂಬ ಪರುಷದ ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯೆಂಬ ಹೊಂದಿಗೆಯ ಸೋಪಾನಗಳ ಬಲಿದಂದವಿಸಿಯಲ್ಲಮನ ಕರಮಾನಂದಲೀಲಾಮೃತಸರೋವರವಾಯ್ತು ಜಗದೊಳಗೆ (ಪ್ರಭುಲೀ. ೨೫-೨೫) ; ಹೊಂದೀಗಿ ಮನಿಯಾಗ ಇರವೂಳ ಆ ರಮಣಿ ಚಂದ ಚಂದ ಪಂತ ನಡೆಸೂಳ (ಕೋಳಗೀ. ೨೨). ಹೊಂದುಗೆ : ೫. ಅಗಲೆ = ಹೊಂದುಗೆಯಾಗದಿರೆ (ಕಪುದ. ಕಿ. ೦೯೫ ಟೀಕು). ಹೊದ್ದಿಗೆ : ೧. ರುದ್ರನ ಕಪಾಲ ತುಂಬಿ ಬುದ್ಧಿವಂತರೆಲ್ಲರು ಕಪಾಲದ ಕೂಳನುಂಡು ಬುದ್ಧಿವಂತರಾಗಿರಿ ಎನಗಾ ಹೊದ್ದಿಗೆ ಬೇಡ (ಅಂಬಾಸ ಕ. ೦೯೯-೦೬೩); ಇದ್ದ ನೆಲೆಗಳವಡುವ ಭಕ್ತಿಯ ಶ್ರದ್ಧೆಯಲಿ ವಿತ್ತಾನುಸಾರದ ಹೊದ್ದಿಗೆಯನಱಿದಱಿದು . . . ಅಳವಟ್ಟೊಡಾತನೆ ಶುದ್ಧಭಕ್ತಿಯನಱಿವನ್ನೆ (ಪ್ರಭುಲೀ. ೦೬-೩೦). ೩. "ಉಪಸರ್ಜನಮುಪಾಗ್ರಮೆನೆ ಹೊದ್ದಿ[ಶಾಶಾಂ. ದ್ದು]ಗೆಗೆ ನಾಮಮಕ್ಕುಂ" (ಪುಂಗರಾ. ೦೩೩ ೨೯). ೫. ಮುದ್ದಿಸಿ ಮುಂಡಾಡುತೊಲೆದರಳೆಲೆಯನು ತಿದ್ದುವ ಕೊರಳ ದಂಡೆಯನು ಹೊದ್ದಿಗೆ ಮಾಳ್ಪನು ಮಾಗಾಯ ಮುಟ್ಟುತ ಮುದ್ದಾಡುತಿರ್ದನಾ ಮಗನ (ಭರತ. ೨೬-೨೯). ಹೊದ್ದುಗೆ : ೧. ಕಿಗ್ಗಯ್ಯ ನೀರು ತಟಾಕಕ್ಕೆ ಹೊದ್ದಿದುದುಂಟೆ ಅಱಿದು ಮಱೆದವಂಗೆ ಸಮಯದ ಹೊದ್ದುಗೆ ಏನು (ಕೂಸ್ಕಸಂ. ೨೬೭-೨೨). ೬. ಸಮೀಪದಲ್ಲಿರುವ ಪ್ರದೇಶ; ನೆರೆಹೊರೆ: "ಹೊದ್ದುಗೆಯೊಳುಮುಪಹ್ವರವೆಂದೆನಿಸಿರ್ಪುದು" (ಪುಂಗರಾ. ೦೩೬-೩). [ಪೊರ್ದು + ... ಗೆ]

ಪೊರ್ದುಗೆವಡೆ (ಕ್ರಿ). ೧. ಸೇರು : ಕೂಡು ; ಬೆರೆ : ಜಗದಬಳಾಜನಕ್ಕೆ ಮಿಗೆ ವರ್ತಿಪ ಗರ್ಭದ ಚಿಹ್ನಜಾಳದೊಳ್ ಬಗೆವಡೆದೊಂದುಮಾಸತಿಯ ಭಾಸುರಮಪ್ಪ ಲತಾಂಗದಲ್ಲಿ ಪೊರ್ದುಗೆವಡೆದಿರ್ದುದಿಲ್ಲ (ಪರ್ಧಪು. ೧೩-೬೬) ; ಪುಂಡವೆಣ್ಗಳೊಳು ಪೊರ್ದುಗೆವಡೆಯದೆ ನಲ್ವೆಂಡಿರೊಡನೆ ಬೆರಸುವುದು (ಹರಿಶಾ. ೬-೪೬). ೨. ಆಶ್ರಯವನ್ನು ಹೊಂದು,—ಪಡೆ : ಎಮ್ಮಯ ಜನ್ಮಭೂಮಿಯಿಂತಿಲ್ಲಿ ಪೊರ್ದುಗೆವಡೆದು ಬಾಳ್ವೆವೆಂದೆನುತೆ (ಸೌಂದಪು. ೭-೨೬). [ಪೊರ್ದುಗೆ + ಪಡೆ$_1$]

ಪೊರ್ದುಗೆವೆಱು (ಕ್ರಿ). ಹತ್ತಿರವಾಗು ; ಸಮೀಪಗತವಾಗು ; ಸನಿಹದಲ್ಲಿರು : ಕರ್ಣಾಗ್ರದೊಳ್ ಪೊರ್ದುಗೆವೆತ್ತಾ ಮುಷ್ಟಿಯುಂ ಮಂಡಳಿಸಿದ ಧನುವುಂ ದಿಟ್ಟಿಪಾಲೋಕಮುಂ ನೆಟ್ಟಗೆ ತೋಱುತಿರ್ದುವೆಂಬಂತಗಧರನಿಸುತಿರ್ದಂ (ಜಗವಿ. ೬-೫೦). [ಪೊರ್ದುಗೆ + ಪೆಱು$_1$]

ಪೊಲ್, ಪೊಲಿ$_1$, ಹೊಲಿ$_1$ (ಕ್ರಿ). ೧. ಹೊಲಿಗೆ ಹಾಕು : "ಪೊಲ್-ಸ್ಯೂತೇ (ಹೊಲಿ)" (ಕಪುಧಾ) ; ಅಡಿಯೊಳ್ ಪಾಸಿದ ಚರ್ಮರತ್ನಪಟಮುಂ ತಚ್ಛತ್ರರತ್ನಂ ಬೆಡಂಗಿಡಿದೋರಂತಿರೆ ಮುಟ್ಟಿ ಪೊಲ್ದ ತೆಱದಿಂದಿಂಬಾಗೆ ತನ್ಮಧ್ಯದೊಳ್ ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ದಾಧವಿರ್ದತ್ತು (ಅದಿಪು. ೧೩-೬೦) ; ಸೆರೆದೆಗೆಯೆ ಸೂಜಿಯಿಂ ಪೊಲ್ತಿರ್ದ ಕಯ್ಗಳಿಂ (ಕಾದಂಉ. ೨೭೦). ಪೊಲಿ$_1$: ೧. ಕುಪ್ಪಸದಂತೆ ಬೆನ್ನಂ ಪತ್ತಿ ಕೆತ್ತುವರ್ ಸಿಪ್ಪಿಗನಂತೆ ಪೊಲಿವರ್ (ರರ್ಪಾಸ್ಕು. ೩-೭೩); ಬಾಯಂ ತೆಱೆದಿಕ್ಕಿ ಕಾಯ್ದ ಲೋಹದ ಕೆಱುವೊಂಗಳನಡಸಿ ಪಿಡಿದು ಪೊಲಿವರ್ ಬಾಯಂ (ಶಾಂತೀಶ್ವ. ೯-೯೯). ಹೊಲಿ$_1$: ೧. ದಂಡಿಯೊಳ್ ಪ್ರಚ್ಛನ್ನವೇಷದ

ಖಂಡಪರಶುವೆನಲ್ ಮೆಱೆದು ಕೈಕೊಂಡು ಕೌದಿಗಳಂ ಹೊಲಿವ ಕಾಯಾವೆ ತಸುಗಾಗಿ (ಪಗತ್ತಿ. ೨೩-೩); ಬಸುಱಲಿ ಹೊಲಿದ ಹೊಲಿಗೆಯ ದಡಿಗ ರಕ್ಷಸರಾಯರಿದ್ದುದು ಕೋಟಿಸುಂಹೆಯಲಿ (ಕೂಡಲ. ೩-೬-೬); ನೆಲವನ್ನು ಮುಗಿಲನ್ನು ಹೊಲಿವರುಂಟೆಂದರವ ಹೊಲಿವರು ಹೊಲಿವರೆನಬೇಕು ಮೂರ್ಖನಲಿ ಕಲಹ ಬೇಡೆಂದ (ಪಪಗಿ. ೦೦೩೬); ಹೊಲಿಯುವವನ ಬಲಕ್ಕೆರಬೇಡ, ಅಳುವವನ ಎಡಕ್ಕೆರಬೇಡ (ಗಾಡ). ೨. ಹೆಣೆ : ಉಕುಳು ತರೆ ಕಾಲ್‌ಬೆಳೆ ಕೊನೆಯಲಿ ಮರಳಿ ಹೊಲಿದಳು ಜಡೆಯನು (ಭುತ್ತಿ. ೪೯-೦೪). [ದೇ.೩ ತಮಿ. ಪೊಲ್ಲುಮ್=ಹೊಲಿಯುವುದು; ಮಲ. ಪೊಲ್ಲುಂ; ತುಳು. ಪೊಲ್ಲು. ಪೊಲ್ಲಿಯು ; ಕೊಡ. ಪೂರಿ. ಪೊರ್ಲ್]

ಪೊಲ, ಹೊಲ (ನಾ). ೧. ಬೆಳೆ ಬೆಳೆಯುವ ಭೂಮಿ ; ಜಮೀನು : ಪುನೂಪ್ಪೂರ್ಲ ನೆಲ್ಲು ಪಾಣ್ಡೆಯುವಳೆವದು ಸರ್ವಪರಿಜಾರತೊಟ್ಟೊಪ [ರ್] (ಪ್ರಜ್ಞ. ೦೯೩೦. ೩೩-೩: ೩೩೦); ದೇವಮಾತೃಕಮೆನಿಪ್ಪ ಪೊಲಂ ನವಗಂಧ ಪಾಳಯಂ ಬೆಳೆವುದು (ಪೂಡಲ. ೦-೩೪); ಪೊಲಂ ಪಸುರೇಱೆ ಕಾಡ ಮಲ್ಲಿಗೆ ನಸೆಯೇಱೆ (ಪಗಂ. ೯-೨). ೨. ಸ್ಥಳ ; ಪ್ರದೇಶ ; ಎಡೆ : ಊರ ಪೊಱಪೊಱ[ಲ] ಪೊಲದೊಳ್ ಬಟ್ಟಿದು ಕಣ್ಣೊಳ್ ರಾತ್ರಿಪ್ರತಿಮೆ ನೀದೊರ್ (ಕಣ್ಣಾಡ. ೦೩೨-೦೩). ೩. ಆಶ್ರಯ; ಆಸರೆ: ಪುಸಿ ಪೊಲನಲ್ಲ, ನಾಲಗೆಗೆ ಪಾದೆತನಂ ಪೊಱಿಯಲ್ತು, ಕೈಯ ಕೊರಸಿಗೆ (ಪೂಡಲ. ೬-೦೦೯). 'ಆಡುಂಬೊಲ' ಪರಾ. ೪. ಕ್ಷೇತ್ರ : ಜಿನರ ಪದಸೇವೆಯಿಂದಂ . . . ಈ ವಿಧವಂ ಜನಿಯಿಸಿದುದೀಗಳಲ್ಲದೊಡನುವವುಸುರವಿಭವಮೆನಗೆ ವಿಷಯಮೊ ಪೊಲನೋ (ಪುಗಪೂ. ೯-೨೬). ೫. ವಿಷಯ ; ಸಂಗತಿ : ಸಕಳವಿದ್ಯಾಧರವಜ್ರಭಸದ್ಧಯೊಳದು ಪೊಗಟ್ಪಿಗೆಪೊಲನೇ (ಪೂಂಡಪೂ. ೩-೨೨); ಏಳಂಗೆ ಪೊಲನಲ್ತೆ ಕೃತಿಯೋಳ್ಳವ ದೋಷಂ (ಪಕೃತಿ. ೦-೨೮). ೬. ಗೋಚರ; ಕಾಣಿಸುವಿಕೆ : ದಿಟ್ಟಿಗೆ ಪೊಲಸಾದುದು ಪೊಂಬೆಟ್ಟಿಂ (ಪೂಂಡಪೂ. ೦-೨೪); ಅಲೋಚನಗೋಚರೇ=ಕಣ್ಗ ಪೊಲಸಲ್ಲದ(ಪಂಡಾ. ೩-೨೬); ತೊಟ್ಟಿನೆ ಬಟ್ಟಿದಿರೊಳ್ ಪೊಂಬೆಟ್ಟಿಂ . . . ದಿಟ್ಟಿಗೆ ಪೊಲನಾದುದು (ಪ:ಪೂ. ೬-೦೩೪). ೭. ವ್ಯಾಪ್ತಿ ; ಪರಿಮಿತಿ : ನೆಲನಂ ಪೊಲ್ತಿಂ ಪೊಲವು ಮನಱಿದು ಬಲ್ಮೆಯೊಳ್ ಪೆಸತಂ ಪಟುಮುನಱಿದು ಪರಿಯಿಸಲ್ ವೀನೆ ಬಲ್ಲಯ್ (ಪಂಪಡಾ. ೩-೧೩ ಪ). **ಹೊಲ** : ೧. ಸಿರಿಗಾ(ಂ)ವುಂದನ ಹೊಲದೊಳಗೊಂದು ತೋಟಕ್ಕಂ ಹೊಲಗೇರಿಯ ಪದುಮಣ ಕರುವಗೆಯ್ಕಿಂದಂ ತೆಂಕಲಾಱುವಾತ್ಮರು ಕೆಯಿಂಗಮಱುವಣವಾಯ್ದು ಗದ್ಯಾಣಮಂ ತಿಱುವರು (ಪ್ರಾಇಇ. XI-i, ೩೦-೦೪: 1005); ಹೊಲದಲ್ಲಿ ಅವಿಲ್ಲ ಮನೆಯಲ್ಲಿ ಕಱುವಿಲ್ಲ ನೆಲಹಿನ ಮೇಲಣ ಬೆಣ್ಣೆಯಿದು ದಿಟವೋ (ಪಪಹಂ. ೦೨೬-೩೭೨); ಧರೆ ಬೀಜಂಗನ ನುಂಗೆ ಬೇಲಿ ಸೊಲನೆಲ್ಲಂ ಮೇದೊಡಂ (ಪೂಂಪುಗಿ. ೫೯); ಕಡಲೆಯು ತನಗೆ ಬೇಕಾದ ಅಂಶಗಳನ್ನು ಮಾತ್ರ ಹೊಲದಿಂದ ಹಿ:ರುತ್ತದೆ (ಪೀಣಾಕ್ಕ. ೨೨೭). ೨. ಗಹನವಲ್ಲಿ ಸಿಕ್ಕಿದ ಶಿಶುವಿನಂತೆ ಸ್ಥಾನದಪ್ಪ ಹೊಲಬುದಪ್ಪಿದ್ದೇನೆ ಹೊಲದ ಹೊಲಬ ಹೇಳು (ಪೂಂಪಾಂ. ೦೩-೩೦) ; ಬರುತಿರ್ದನವ್ರತಿವುಶಿವಭಕ್ತನುರವಣಿಸಿ ಪುರದ ಹೊಲನಂ ದಾಂಟಿ (ಪಗಿ. ೬೯. ೫೪-೨). ೮. ನಿವಾಸ ; ವಾಸಸ್ಥಾನ ; ಸಿಂಹದ ಹೊಲನ ಹೊಗುವಿಧದಂತೆ ಹೊಱಕಾಲ್ಗೊಳುತಲಿರೆ ಕಂಡು (ಪುಷ್ಪಾದ್ರೋ ೦೨-೩೦) ; ಹಾಸ್ಯದ ಹೊಲಂ ವಿರುಳಾಟದ ಮಂದಿರಂ . . . ಗಣಿಕಾಪ್ರತೋಳಿ ತಾಂ (ಪಪ್ಪಾಪ. ೨-೧೨) ; ಕರಿವಿಂಡುಗಳು ಸೀಹದ ಹೋದಲಿ ಬಂದು ನೆಜ್ಜೆ ಮೇವ ಕೊಂಡು ಜೀವಿಪುವೆ (ಪಂಪಪಿ. ೩-೧೩). ೯. ಕೇವಲ ಮಳೆಯಂ ನೀರಿನಿಂದ ಬೆಳೆಯಂಬುವ ಭೂಮಿ ; ಖುಷ್ಕಿ : ಕೇವಲ ಮಳೆನೀರಿನ ಆಧಾರವಲ್ಲಿ ಆಗಬಹುದಾವ ಬೆಳೆಯಿಡುವಂತಾ ಭೂವಿಯನ್ನು ಖುಷ್ಕಿ ಅಥವಾ ಹೊಲವೆಂದು ಹೇಳುವುದು(ಪಪಂಖಾ. ೩೩).

ಪೊಲಪೊಲ (ದ್ವಿರುಕ್ತಿ): ಪಲವಂದದ ಮರ್ದಾಗಳಂ ಪೊಲಪೊಲದೊಳ್ ಮಱಸಲೇಕೆ (ಗಹುದ. ೦೨-೩೩). **ಪೊಲಾಗು**=ಆಶ್ರಯವಾಗು: ಪೊಗಟ್ಟು ಮಹಾತ್ಮರುಜ್ವಲವೆನಿಪ್ಪ ಗುಣಂಗಳನುಜ್ವಲಪ್ರಸಿದ್ಧಿಗೆ ಪೊಲನಾಗದೆ... ಪೊಗಟ್ಟು ದುರಾತ್ಮರಂ ಮೊಗದೊಳಿರ್ದುಗಟುಂ ಪೊಱಗಿಕ್ಕಲಾದ ನಾಲಗೆಯವನೆತ್ತುನಾಲಗೆಯೊಳೋದಿದವಂ ಕೃತಿಯೇ ಕೃತಾರ್ಥನೇ (ಪಂಂಪಪು. ೦-೩೩). **ಹೊಲಾಡು**=ಪ್ರದೇಶದಲ್ಲಿ ಓಡಾಡು : ನಾಡೊಳಗೆ ತುಜುಪಟ್ಟಿಯಲಿ ಹೊಲನಾಡಿ ಹೆಚ್ಚಿದ ಗೋಕವಂಬವ ನೋಡುವುದು ನೆವ (ಭಾಷ್ಯಾ. ೦೭-೨೦). **ಹೊಲದುಣಿ**=ಹೊಲ ಮತ್ತು ಮನೆ ; ಜಮೀನು ಮತ್ತು ಮನೆ : ಯಿಂ ಸ್ವಾಮಿಯ ಹೊಲದುಮನೆಯ ವಾತೆಯೆತ್ತಿ ಆಡಿದವರು ಜಾತಿವಂತನಲ್ಲ (ಎಳ. XII. ೩೪೮೩. ೭೭-೪ ; 1778) : ಹೊಲದುಮನೆಯೊಳೊಲವುಗಳ ಕುಡಿಕುಡಿಸಿ ಹೂ ಕೊಯ್ದು ಬೆಳ್ಳಿರ ಬೆರಲಿಂದ ಮುಡಿಯುವಳ್ ನೇದು (ಕಾಂಡಪ. ೩೩-೩೨). **ಹೊಲ ಹೂಡು**=ವ್ಯವಸಾಯ ಮಾಡು ; ಬೇಸಾಯ ಮಾಡು : ಅವನು ಹೊಲ ಮಾಡಿಕೊಂಡು ಜೀವನ ನಡೆಸುತ್ತಾನೆ (ಪೂಡ).

[ದೇ.೩ ತಮಿ. ಪುಲ, ಪುಲವು; ಮಲ. ಪುಲವ್; ತುಳು. ಪುಲ; ತೆಲು. ಪೊಲ ; ಕೋಲಾ. ಪೊಲವ್]

ಪೊಲಂಗೊಳ್ (ಕ್ರಿ). ಎಲ್ಲ ಕಡೆಗೂ ಚೆದರು ; ದಿಕ್ಕುಪಾಲಾಗಂ : ನೃಪರಾರುಂ ವೀರಬಲ್ಲಾಳನೊಳಿರದೆ ಮಾಱುಮಾವರೇ. . .ವುಲ್ಲೆವಿಂಡಂತೆ ಪೊಲಂಗೊಂಡೋಡುವರ್ (ಎಳ. V, ಕೀಂಪೂ. ೦೦೨-೪೪ ; ಪು. 1220 ?).

[ಪೊಲ + ಕೊಳ್[1]]

Δ **ಪೊಲಂತಿ** 'ಪೊಲತಿ' ನೋ.

ಪೊಲಂಬಿಗ, ಪೊಲಬಿಗ, ಹೊಲಬಿಗ (ನಾ). ೧. ದಾರಿ ತೋರಿಸುವವನು ; ಮಾರ್ಗದರ್ಶಿ : ಕುರುಡನವ್ವ ಪೊಲಂಬಿಗನುಂ ನಂದಿ ಗುಟ್ಟು ದಿಟ್ಟಿಡೆಯೊಳಿರುಳ್ ದೂರದೇಶಕ್ಕೆ ಪಯಣಂದೋವೆನೇದಾತನುಂ . . . ಬುದ್ಧಿವಂತರಲ್ಲರ್ (ಪಪಚಾಕ್ಯ. ೬-೪೩). ೨. ನೆಲೆಯನ್ನು ಅರಿತವನು: ಜೋಯಿಸಿಗಂ, ಲೆಕ್ಕಿಗಂ, ಪೊಲಂಬಿಗಂ (ಪಕುಡ. ೦೪೭ ಕ್ರಡೋ). **ಪೊಲಬಿಗ** : ೧. ವಿಷವಮಹಿಷಿ ಕಾಲೊಳ್ ಕೆರೆದ ಗುಳಿಗಳಿವೆಯೆಂದು ಪೊಲಬಿಗ ಪೇಳಂದಳಿಗಳ್ ತೋಱಿದರ್ (ಪಗಿಚಿ. ೦೦-೩೪). **ಹೊಲಬಿಗ**: ೧. ಎಲೆಯಿಲ್ಲದ ಮರದಿ ಒಂಭತ್ತು ತಲೆಗಳು ನಡುವೃತಿದೆ ಕಲಿಗಳೆ ಕೈಗಳ ನೋಡಿರೆ ಉಳುವಿಗೆ ಹೊಲಬಿಗರಾದವರು (ಪಪಗಿ. ೦೪೩-೧೦೬) ; ಶಿವಂ ಕೇಶವ ಬ್ರಹ್ಮರುಗಳಂತು ಹೊಸ ಹೊಲಬಿಗರು ರೂಪಾಗಿ ಭೂಮಿಯೊಳಗಿಂತು ಬಸವೇಶನಾದನು (ಪಪಪಂ. ೩೩-೩೦); ಹೊಲಬಿಗರು ಹರಿದರು ಸುರೇಂದ್ರನ ದಳದ ವಾನ್ಮರು (ಭಾಷ್ಯಾ. ೦೨-೦೨). ೨. ಹೊರೆಯ ಹೊಲಬಿಗ ನಾದರೆ ಅವನ ಹೊರೆಯಲಿವ್ವುದು ಲೇಸು ಕಂಡಯ್ಯ (ಪಪಪ. ೦೪೫) ; ಆ ಹೊಜಗಣ ಹೊಲಬ ಕಂಡು ಆ ಹೊಲಬಿಗನ ಹೊಲನ ನೋಡಿ (ಪೂಂಪಪು. ೦೩೨-೩೦೦) ; ಯೋಗಾವಸ್ಥೆಯಲಿ ಹೊಂದಿ ಚಿನ್ನೆಸೆದು ತಾನೆಂಬ ಹೊಲಬಿಗನೆನ್ನದಾವ ಕಳಂಕವಿಲ್ಲದೆ ತನ್ನೊಳದು ತಾನಾಗಿ ತಾನಿವ್ವಂದಮೋ ಮತ್ತೆ (ಪಪಕೃ. ೩೫-೪೪). ೩. ದಾರಿಗ; ಪ್ರಯಾಣಿಕ: ಶಿಲೆ ಹಲವು ತೆಱದಲ್ಲಿ ಹೊಲಬಿಗರಿಂಗೆ ಹೊನ್ನಾಗಿ ಒಲವರವಿಲ್ಲದೆ ಅವರ ಭಾವದಲ್ಲಿ ನಿಲ್ಲುವುದು ಶಿಲೆಯೋ ಮನವೋ (ಪಪಗಿ. ೬೬-೬೫೩).

[ಪೊಲಂಬು + —ಇಗ]

ಪೊಲಂಬು, ಪೊಲಬು, ಹೊಲಬು (ನಾ). ೧. ದಾರಿ ; ಮಾರ್ಗ : ನಿಮಗಾ ಧರ್ಮದ ಪೋದ ಪೊಲಂಬದು ತಾ ನರ್ಮದೆಯಿಂ ಗೆಟದೇಕೆ ಕೇಳ್ದಪೆಯಮ್ಮಂ (ಪುಷೋಚ. ೦-೩೪); ನಿನ್ನ ಚರ್ಮರತ್ನಂ ಪೋದ ಪೊಲಂಬ ಬಲ್ಲೊಡೆ ಪೇಟಿಂಬುದುಂ (ಪಪಳು. ೪-೦೩೦ ಪ). ೨. ರೀತಿ ; ಬಗೆ : ಎಲೆ ನೃಪ ಜೀವತತ್ತ್ವದ ಪೊಲಂಬದು (ಪಾರಪ್ತಿ. ೩-೩೩). ೩. ಸುದ್ದಿ ; ಸಮಾಚಾರ : ಸಂಗತಿ : ನಾವದಱ ಪೊಲಂಬಂ ಬಲ್ಲುದಿಲ್ಲ ನೀವು ಬಲ್ಲಡೆ

ವೇಟೊಂ (ಪುಣ್ಯಾಸ್ರ. ೬-೩೩ ಪ). ೪. ಪರಿಚಯಂ; ಗುರುತಂ: ಜಿನಗಣದೊಳು ಮುನ್ನ ತನಗೆ ಪೊಲಬುಳ್ಳ ಜಿನರ ಕಂಡವರ ಪೂರ್ವವನು ಅನುಜರಱಿಯಲೆಂದು ಪೆಸರುಗೊಂಡೆಱಿಗುತೆ (ಧರ್ಮ. ೭೦-೩೯). ಪೊಲಬು: ೧. ನಡೆದೊ ಭರದಿಂ ಪುಷ್ಕರಿಕೆ ಪೇಟ್ಟ ಪೊಲಬಿಂಗಾಗಳ್ (ಪಜಳು. ೦೦-೭೦); ಬಲ ಕೇಶವರ ಬೆನ್ನ ತಗುಳ್ದುಮವರು ಪೋದ ಪೊಲಬಱಿಯದೆ ಮುಂದೆ ಪೋಗಿ (ಶಾಂತೀಶ. ೩-೯೩). ೩. ಜಟಾಯುವಂ ಕಂಡು ಪೊಲಬಂ ಕೇಳ್ದು ಸೌಮಿತ್ರಿಸಹಿತ ನಡೆದಂ ಮುಂದೆ ರಘುನಾಥನು (ಶ್ರೀಪುರಾ. ೦೯. ೯); ಸುಲಭಮೆ ಪೊಲಬನೆಲ್ಲ ಪರಿಂಗರಿಪಲ್ (ಕೃಷ್ಣರೋ. ೨೩೯). ೫. ಮರ್ಮ; ರಹಸ್ಯ: ನಿಗಮವಱಿಯದು ಬೊಮ್ಮ ಚಿಂತಿಪ ನಗನಿಲಯ ಪೊಲಬಱಿಯ (ಕೃಷ್ಣಶಾ. ೦-೨೯). ಹೊಲಬು: ೧. ಲಿಂಗದ ಪರಿಪೂರ್ಣವ ಕಾಣದಿಹ ಅಂಗಹೀನನುಗೇಕೆ ವ್ರತಾಚಾರದ ಹೊಲಬು (ಸರ್ವಜ. ೭-೨೭); ಹೋಗು ತಿರ್ದಳು ಹೊಲಬ ಕೇಳುತ (ಪ್ರಭುಲಿಂ. ೬-೧೨); ಲಂಕಾಪುರದ ಸರಣಯ ಹೊಲಬ ತೋಱಿಸಿ ಬೀಳುಕೊಂಡನು (ತೊರಣಾ. ೯-೦೦-೨೨). ೨. ಅಕ್ಕಟಾ ಪುಣ್ಯ ಪಾಪದ ಹೊಲಬನಱಿಯಿರೇ (ತಿರುಕ. ಪಂ. ೦೬-೩); ಎಲೆ ಮಹಾತ್ಮನೆ ನಿನ್ನ ಸೂತ್ರದ ಹೊಲಬಿದಲ್ಲದೆ ಸುಮ್ಮನೀ ಪರಿ ಸಿಲುಕಬಲ್ಲುದೆ (ಪ್ರಭುಲಿಂ. ೦೦-೩೦); ಮಾಯಾವಿದ್ಯದೇಳ್ಗೆಯ ಹೊಲಬ ತೋಱಿದಳಾಳ್ದನಿಗೆ (ಪೋಷಕ. ೦೩-೯೯). ೩. ನಳನೃಪತಿಗೆ ಮುನ್ನಂ ಕಂಗೊಳಿ ಸಾರಥಿಯಾದ ಹೊಲಬನಱಿವೆಂ (ಪಳಸಂ. ೬೭೦); ಸತ್ತವರ ಕಥೆಯಲ್ಲ ಜನನದ ಕುತ್ತಡಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲ್ಕುವರ ಸೀಮೆಯ ಹೊಲಬು [ಶಾಕಾಂ. ಮಾತು]ತಾನಲ್ಲ (ಪ್ರಭುಲಿಂ. ೦-೦೩); ತರುಣಿ ನೀನಱಿದುದಿಲ್ಲವೆ ನಮ್ಮ ಪಾದರಕ್ಷೆಯ ಹೋದ ಹೊಲಬನು (ಸಮ್ಮೇಶ. ೯-೩೫). ೪. ತರಣಿಕುಲ ಪೊರೆಯೋ ಎನುತ್ತಿರೆ ಹಿರಿದು ಶಂಕಿಸಿ ಕೇಳಿದರು ಹೊಲಬುಂಟೆ ನಿನಗೆಂದು (ಶಾಕಿರಾ. ೦೯-೯೭); ನೆಲನಾವು ದಾಗಸವಾವುದೆಣ್ಣೆಸೆಗಳ ಹೊಲಬಾವುದೆಂದು ತೋಱಿಸದೆ . . . ಬಾಣಾಬ್ಧಿ ಬಲಗೂಡಿ ಹರಿಯ ನುಂಗಿದುವು (ಪೋಷಕ. ೪೦-೩೬); ನಾಲ್ಮಂದಿಗಳೆಯರಾದ ಮಂತ್ರಿಗಳು ಅವನಂತರಂಗವೇ ಆಗಿದ್ದರೆನ್ನಬಹುದು. ಅವರ ಯೋಗ್ಯತೆಯನ್ನರಿತಲ್ಲಿ ಅರಸನ ಅಂತರಂಗದಾಳಿಕೆಯ ಹೊಲಬು ವಾಚರಿಗಾಗಬಹುದು (ಶಾಕೋಸಿ. ೩೩೭). ೫. ಅಂಗದೊಳಗೆ ಬೆರಸಿದ್ದ ಲಿಂಗದ ಹೊಲಬನಾರೂ ಅಱಿಯರು (ಇಷಸ. ೨೨-೩೯); ಎಲೆ ಕಿತವ ಚರ್ಮರತ್ನವ ನೊಲವಿಂದು ಕಾಮವಾಂಜರಿಗೆ ಕೊಟ್ಟೆನ್ನೊಳ್ ಹೊಲಬು ಪೇಳದೆ ನೀಂ ಸಂಗಲೆಯೊಳ್ ಬೀಳಲ್ಕೆ ಬಿಡುವೆನೆ (ಪಕಳು. ೬-೨೦೦); ನೀನಶ್ವಲಕ್ಷಣದ ಹೊಲಬ ಬಲ್ಲೆ (ತೊರಣಾ. ೩-೨-೨೦); ಮಾವನ ಮಾತಿನ ಹೊಲಬು ದಾಬಣ್ಣನಿಗೆ ಹೊಳೆಯಿತು (ಶಕೋಕ. ೨೩). ೬. "ಸರಹದ್ದು" (ಶಕ್ರಶಾ. ಇಪಾಬಂಧ. ೨): ವೀರಮೆಂಕರಿಪುರದ ಹೊಲಮೇರೆಯಿಂದಾ ಹಾಯಿಕಲ್ಲು ಹೊಲಬಿನಲು (ಎಳ್ XI. ೫೨೫. ೬೦-೩ ; ಸು. 1800 ?); ಈ ದಳವಾಯಿ ಮುದ್ದಣ್ಣನು ಬಿದರಕೆರೆ ಹೊಲಬಿನಲ್ಲಿ ಸಂತೇಮುದ್ದಾಪುರದ ಗ್ರಾಮವನ್ನೂ ಅಲ್ಲಿ ಆ ಹನುಮಂತರಾಯನ ದೇವಸ್ಥಾನ, ಕೆರೆಗಳನ್ನೂ . . . ಸ್ಥಾಪನೆ ಮಾಡಿದನು (ಶಕ್ರಶಾ. ೩೩).

ಹೊಲಬಾಗು = ೧. ದಾರಿಯಾಗು; ದಿಕ್ಕುತೋರು: ಆ ಅರುಣನ ನೆಲೆ ಒಂದೆ ಹಲವು ಜಗಕ್ಕೆ ಹೊಲಬಾದಂತೆ ಸ್ಥಲಜ್ಞನಾದೆಯಲ್ಲಾ ಸ್ಥಲದ ನೆಲೆ ಒಂದೆಂದಱಿತಲ್ಲಿ ಏಕಸ್ಥಲಮೂರ್ತಿ ನೀನೆ (ಪೋಷಮಾ. ೨೦೦-೭೨೩). ೨. (ಪರಿಸ್ಥಿತಿಯ) ಅರಿವಾಗು; ಪರಿಚಯವಾಗು: ಚೀನದಲ್ಲಿ ಆರಿಸಿದ ೧೬೮ ಸ್ಥಳಗಳ ಜನರಿಗೆ ತಲಾ ಒಂದರ ೧,೪೦೦ ಕಿಲೋಗ್ರಾಂ ಉತ್ಪನ್ನವನ್ನು ಉತ್ತರಅಮೇರಿಕದ ೨೦,೦೦೦ ಕಿಲೋಗ್ರಾಂ ಉತ್ಪನ್ನದೊಡನೆ ಹೋಲಿಸಿದರೆ ಏಶಿಯದ ಜೀವನದ ಮಟ್ಟದ ಹೀನಸ್ಥಿತಿಯ ಹೊಲಬಾಗುವುದಿಲ್ಲವೆ? (ಐತಿಸಾ. ೩೩).

[ದೇ. ॥ ತುಳು. ಪೊಲಬು, ಪುಲಬು, ಪುಲಮೆ; ತೆಲು. ಪೊಲಂಪು]

ಪೊಲಂಬುಗಿಡಿಸು. ಹೊಲಬುಗೆಡಿಸು (ಕ್ರಿ). ೧. ದಾರಿತಪ್ಪಿಸು; ಮಾರ್ಗ ತಪ್ಪಿಸು: ತೇಜಿಗಳ ಕಾಲ ದೂಳಿ ನೆಗೆದು ಕೊಳಂಗುಳದೊಳ್ ಪಸರಿಸಿ ಬೀರರನಱಸುವಚ್ಚರಸಿಯರಂ ಪೊಲಂಬುಗಿಡಿಸೆಯುಂ (ಕ್ಷತ್ರಾ. ೨೯೬). **ಹೊಲಬುಗೆಡಿಸು**: ೧. ನಿನ್ನಾಳ್ದನನು ಹೊಲಬುಗೆಡಿಸಿ. . . ಎಳೆದೊಯ್ದೆನು (ತ್ರಿಪುರಾಂ. ೨೦-೨೩೩); ಹೆಬ್ಬಲ ಸಘಾಡದಲೊಕಿ ಕರ್ಣನ ಹೊಲಬುಗೆಡಿಸಿದುದಂಬುಗಳ ಸಾರಾಯ ಸೋನೆಯಲಿ (ಕುಮಾಸ. ೦೦-೨೦); ನಾನವನ ಹೊಲಬುಗೆಡಿಸಿ ಹೋರಿ ಹೊಲಬಡಿಸುವೆನು (ರಾಮಾ. ೯-೩೯). ೨. ದಿಗ್ಭ್ರಮೆಯುಂಟುಮಾಡು; ಗೊಂದಲಗೊಳಿಸು: ಚಾತುರ್ಬಲವ ಸವಱಿ . . . ಹೊಲಬುಗೆಡಿಸಿ ಮಹೀಪತಿಯ ಪಡಿಮುಖಕೆ ಮಾಱಾಂಗ (ಕುಮಾಸ. ೩-೩೩). [ಪೊಲಂಬುಗಿಡು (< ಪೊಲಂಬುಗೆಡು) + — ಇಸು$_{5}$]

ಪೊಲಂಬುಗಿಡು 'ಪೊಲಂಬುಗೆಡು' ನೋ.

ಪೊಲಂಬುಗೆಡು, ಪೊಲಂಬುಗಿಡು, ಪೊಲಬುಗೆಡು, ಹೊಲಬುಕೆಡು, ಹೊಲಬುಗಿಡು, ಹೊಲಬುಗೆಡು (ಕ್ರಿ). ೧. ದಾರಿ ತಪ್ಪಿಸಿಕೊಳ್ಳು; ಮಾರ್ಗ ಕಾಣದಾಗು: ಒಂದೊಟ್ಟೆ ಪೊಲಂಬುಗೆಟ್ಟು ಬಂದಾಡುತ್ತಿರ್ದುದಂ. . . ಕಂಡು (ಪಂಚತಂ. ೦೪೦-೮); ಕಾಂತಾರದೊಳ್ ಪೊಲಂಬು [ಶಾಕಾಂ. ಪೊಲ, ಪೊಲೆ]ಗೆಟ್ಟು ಸೇದವಟ್ಟು (ಶಾಪಸಂ. ೬೯-೦೬); ಸಂಸರಣಕಾನನದಲ್ಲಿ ಪೊಲಂಬುಗೆಟ್ಟೆ (ಪಾರಭ. ೯-೦೩೯); ಪಿರಿದಜ್ಞಾನಾಟವಿಯೊಳ್ ಮರುಳಾಗಿ ಪೊಲಂಬುಗೆಟ್ಟು ತಿರುಗುವ ನಮಗಾದರದಿಂ ಪಥಮಂ ತೋಱಲ್ ಭರದಿಂ ಬಂದೆ (ರಮಾಶ. ೦೦-೯೫). ೨. ದಿಗ್ಭ್ರಮೆಯಾಗು; ಏನೂ ತೋಚದಂತಾಗು: ರಾಜವೀಥಿಯೊಳ್ ಸುಳಿವ ಜವ್ವನಿಗರಂ ಕಂಡು ಪೊಲಂಬುಗೆಟ್ಟು ಪುಲ್ಲೆಯಂತೆ ದೆಸೆದೆಸೆಗೆ ದೆರ್ಶುವ (ಗಿಂಗ. ೨-೦೦೩ ಪ). **ಪೊಲಂಬುಗಿಡು**: ೨. 'ಪೊಲಂಬುಗಿಡಿಸು' ಪರಾ. **ಪೊಲಬುಗೆಡು**: ೧. ನೆಲನಾಗಸಮಾವುದೆಂಬುದನಱಿಯದೆ ಪೊಲಬುಗೆಟ್ಟನು (ಅಂಗಸ. ೬-೦೩೯). **ಹೊಲಬುಕೆಡು**: ೧. ಮಾಯಾಪಾಶದಿ ಸಿಕ್ಕಿ ಕಡುನೊಂದೆ ಹೊಲಬುಕೆಟ್ಟೆನು ಜಗದೊಳಗೆ (ಬೆಂಕೇಸು. ೦-೦೦). **ಹೊಲಬುಗಿಡು**: ೨. "ಹೊಲಬುಗಿಡು (ಹೊಲಬು+ಕಿಡು)—ದಿಗ್ಭ್ರಮಣೇ" (ಕಪುರಾ); ಜಠರದೊಳಿಳಿದು ತದ್ಭ್ರಹ್ಮಾಂಡಶತದೊಳು ಹೊಲಬುಗಿಡೆ (ಕುಮಾಉ. ೬೦೩. ೦೦-೦೯). **ಹೊಲಬುಗೆಡು**: ೧. ಹೊಲಬುಗೆಟ್ಟೆನು ಬಟ್ಟೆಯ ತೋಱಯ್ಯಾ (ಪಸಸ. ೬೩); ಅಡವಿಯೊಳು ಹೊಲಬುಗೆಟ್ಟನೋ (ಪಶಕಾ. ೦೨-೮೩); ಕಾನನದ ಕಾಡಾನೆಗಳವೊಲು ಪಥದನುವ ಕಾಣದೆ ಹೊಲಬುಗೆಟ್ಟವು (ತೊರಣಾ. ೬-೨೬-೩೫). ೨. ನೆನೆವ ಮನಂ ಹೊಲಬುಗೆಟ್ಟವುದು (ಪಂಬಸ. ೦೯ ೩). [ಪೊಲಂಬು+ಕೆಡು$_{1}$]

ಪೊಲಂಬುದಪ್ಪು, ಹೊಲಬುತಪ್ಪು, ಹೊಲಬುದಪ್ಪು (ಕ್ರಿ). ೧. ದಾರಿ ತಪ್ಪು; ಮಾರ್ಗ ಕಾಣಸದಂತಾಗು: ರವಿರಥದ ಕುದುರೆಯೊಳೊಂದು ಪೊಲಂಬುದಪ್ಪಿ ನೆಲಕ್ಕಿಳಿದುದೆಂಬಂತೆ ಚೆಲ್ವಸಪ್ಪ ವಾಜಿಯ ರೂಪನಳವಡಿಸಿ (ಪುಣ್ಯಾಸ್ರ. ೩-೬೨ ಪ); ಪೊಲಂಬುದಪ್ಪಿದ ಮಱಿಯಂ ನೆನೆದು . . . ಪಾಯ್ದುಗುತರ್ಪ ವನಮಹಿಷಿಗಳ ಪಾಲ ಧಾರೆಯಂ ಮಿಕ್ಕು ನಡ್ಕುತೊಡವರ್ಪ ಕಾನನಬಿಡಾಲಂಗಳಿಂ . . . ವಿಜೃಂಭಿಸಿ (ರಾಪಶಕಿ. ೩-೩೩ ಪ). ೨. ರೀತಿ ತಪ್ಪು; ಕ್ರಮ ತಪ್ಪು: ಪೊಲಂಬುದಪ್ಪಿ ಕೋಟಲೆಗೊಳಗಪ್ಪ ಪಾಟ್ಟನದ ಮಾನಸರಂ ಸುಡು ಸಂದ ಗೊಡ್ಡರಂ (ಕಂಪ್ರಭು. ೬-೦೦). **ಹೊಲಬುತಪ್ಪು**: ೧. ಸಂಸಾರಪಂಥ ಘೋರಾರಣ್ಯದಲ್ಲಿ ಹೊಲಬುತಪ್ಪಿ ಬಳಲುತ್ತಿಹೆ (ಪಕರ. ೨೨). ೩. ದಿಗ್ಭ್ರಾಂತವಾಗು; ದಿಕ್ಕುತೋಚದಂತಾಗು: ಪದವಿಯ ಫಲವ ಕಾಣದೆ ಹೊಲಬುತಪ್ಪಿದೆನು (ಪಂಶಾ. ೫೯). **ಹೊಲಬುದಪ್ಪು**: ೧. ಗಹನದಲ್ಲಿ ಸಿಕ್ಕಿದ ಶಿಶುವಿನಂತೆ ಸ್ಥಾನದಪ್ಪಿ ಹೊಲಬುದಪ್ಪಿದ್ದೇನೆ (ಶೋಲಶಾಂ. ೦೩-೬೦); ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾದೆನೈ (ಕುಮಾಸ. ೧೫-೦೨೫); ನಿಜವಿರಕ್ತಿಯ ಹೊಲಬುದಪ್ಪದೆ

. . . ಅರ್ಚಿಯಿಂದಾಚರಿಸುವರಯ್ಯ ನಿಮ್ಮ ಶರಣರು (ಶಿಪಪ. ೬೦-೫೯). ೨. ಒಂದು ದ್ವಾರದಲ್ಲಿ ಬಂದ ಆತ್ಮಂಗೆ ಹಲವು ದ್ವಾರ ಉಂಟೆಂದು ಹೊಲಬುದಪ್ಪಿ ನುಡಿವವರ ನೋಡಾ (ಕೂಗೀವಚ. ೦-೦). ೩. ಹೊಲಬುದಪ್ಪಿದ ಮನದ ಸತಿಯರು ಸುಳಿಯೆ ನಳನೃಪ ಬಂದನಿದೆಯೊದೆನುತ ಕಳವಳಿಸಿ ನಿಲುಕಿ ನೋಡುವಳು (ಪಪಸ. ೩-೨). ೪. ಮಾರ್ಗವು ಕಠಿಣವಾಗು ; ಗಹನವಾಗು ; ಅಗಮ್ಯವಾಗು : ಹೊಲಮೇರೆಯಿಂ ಮೇರೆ ಹೊಲಬುದಪ್ಪಿದ ನಾದಕಳಿಗಳ ಮಿಱುರ್ದ ತುರ್ಯಂಗಳ ಗುರುವಿನ ಕರುಣದ ಅನಿಮಿಷದ ಮನೆಯಲ್ಲಿ ಹೊಲಬುದಪ್ಪಿದ ಕಂಡೆ ಮಧ್ಯಮವನು (ಸಿದ್ಧಶ. ೪. ೩೪೦-೦೦೦೨). [ಪೊಲಂಬು + ತಪ್ಪು$_1$]

ಪೊಲಂಬುದೋಱು (ಕ್ರಿ). ಮಾರ್ಗ ಕಾಣು ; ಸುಳಿವು ತೋರು : ನಂಬಿರೀ ತತ್ತ್ವವ ವ್ರತದೊಳಾಚರಿಸಿ ಪೊಲಂಬುದೋಱುವುದಾತ್ಮಸಿದ್ಧಿ (ಶರಸ. ೬೯-೯). [ಪೊಲಂಬು + ತೋಱು]

ಪೊಲಂಬೊಗು (ಕ್ರಿ). ಕ್ಷೇತ್ರವನ್ನು ಪ್ರವೇಶಿಸು : ಭೇದವಿಲ್ಲದೆ ತಾನೆಯಪ್ಪಂತೆ ಸವಿಕಾರ್ಯವಾದ ವಿದ್ಯೆಯ ಪೊಲಂಬೊಗಲು ತತ್ಕ್ಷಣಿಕಂಗಳಾದೆ ವಂತಾತ್ಮಚೈತನ್ಯದ ಪ್ರತಿಫಲದ ರೂಪವಹ ವಿದ್ಯಂಗಳಾ (ಸಿದ್ಧಶ. ೩-೯-೨೬). [ಪೊಲ + ಪೊಗು]

ಪೊಲಕೇಶಿ 'ಪುಲಿಕೇಶಿ' ನೋ.

ಪೊಲಗ, ಪೊಲೆಗ (ನಾ). ಒಬ್ಬಾತನ ಹೆಸರು : ಬನವಾಸಿನಾಡಂ ಛಲದಂಕರಾಮ ಸಾನ್ತರನಾಳೆ ರಟ್ಟಪಳ್ಳಿಯ ಪೊಲಗನು (ಎಇ. VIII, ಹೊನ್ನಾಳಿ. ೨೯-೩ ; 934). **ಪೊಲೆಗ** : ಪಿರಿಯಮಾಗುಣ್ಡಯ ಪೊಲೆಗ ಊರ್ಗ್ಗಮುಣ್ಡುಗೆಯ್ಯುತ್ತಿರೆ (ಎಇ. VIII, ಸೊರಬ. ೨೦೩-೦೬; 986) ; ಎಱಕನ ವರಪುತ್ರಂ ಪೊಲೆಗನೀ ಮಹೀಮಣ್ಡಳದೊಳ್ ಸ್ಥಿರಮಾಗಿರೆ (ಸೌಇಇ. XI-I, ೬೩ ೩೬ ; 1029). [?]

ಪೊಲಗಾ (ಕ್ರಿ). ಹೊಲದ ಬೆಳೆಯನ್ನು ಕಾಯು,- ರಕ್ಷಿಸು : ಪೊಲಗಾವ ಪಾಮರಿಯರೋಳಿಗಳ ಮೈಗಂಪ . . . ಸುಳಿವ ತಂಗಾಳಿಗಳ ಕಡುಗಂಪ ಸೇವಿಸುತೆ ಪಥಿಕರಾಸರ್ಗಳೆವರಾ ನಾಡೊಳು (ಕೈಲಾಶಾ. ೩-೬). [ಪೊಲ + ಕಾ$_1$]

ಪೊಲಗಾಪು (ನಾ). ಪ್ರದೇಶದ ರಕ್ಷಣೆ,-ಕಾವಲು : ಆ ಬೀಡಿನ ಪೊಲಗಾಪಿನವರ್ ಕಾಣುತೆ ಪಲರುಂ ಪರಿತಂದು (ಕೇಪಸಂ. ೫೬-೩೯). [ಪೊಲ + ಕಾಪು]

ಪೊಲಗಾಹಿ, ಹೊಲಗಾಹಿ (ನಾ). ಹೊಲದ ಬೆಳೆಯನ್ನು ರಕ್ಷಿಸುವ ವ್ಯಕ್ತಿ : ಪೊಲಗಾಹಿಯಬ್ಬರಿಸಿ ದಿಕ್ಕುದಿಕ್ಕೊಕ್ಕು ತಾನೆಳ್ಚುತಿರಲಿರದ . . . ಪೆರತೊಂದೆಡೆಗೆ ಪಾರಿ ಮಂಡಿಸುತೆ (ಕಸ್ತೂಂಗ. ೫೩-೦೪೯೬). **ಹೊಲಗಾಹಿ** : ಹೊಲಗಾಹಿಗಳೆಲ್ಲ ಗುಡಿಸಲುಗಳಲ್ಲಿ . . . ಸೇರಿಕೊಂಡಿದ್ದಾರೆ (ಕಳುಸು. ೨೩೬). [ಪೊಲ+ಕಾಹಿ]

ಪೊಲಗಿಡಿಸು 'ಪೊಲಗೆಡಿಸು' ನೋ.

ಪೊಲಗಿಡು 'ಪೊಲಗೆಡು' ನೋ.

ಪೊಲಗೆಡಿಸು, ಪೊಲಗಿಡಿಸು (ಕ್ರಿ). ೧. ದಿಕ್ಕು ತಪ್ಪಿಸು ; ದಿಗ್ಭ್ರಮೆಯುಂಟುಮಾಡು : ಪಚ್ಚಿಯ ಕಂಬಂಗಳ ಬೆಳಗುಂ ಪೊಲಗೆಡಿಸಿದತ್ತು ಸುರರೀಕ್ಷಣಮುಂ (ಪಾರಪ. ೬-೯೫). **ಪೊಲಗಿಡಿಸು** : ೧. ನೀನಂತು ಪಲವೋದನೋದಿ ಎನ್ನಂ ಪೊಲಗಿ[ಪಾಣಾಂ. ಗೆ]ಡಿಸದೆ ಉಳ್ಳುದನುಳ್ಳಂತೆ ಪೇಳು (ಪಂಸಕಂ. ೦೩೯-೯). ೨. ರೀತಿಗೆಡಿಸು ; ಕ್ರಮತಪ್ಪಿಸು : ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಮೆಂದೆ ಪಟಗನ್ನಡಮಂ ಪೊಲ(ಗಿ) [ಪಾಣಾಂ. ಗೆ]ಡಿಸಿ ನುಡಿವರಾಗಮಬಲಹೀನರ್ (ಕವಿರಾ. ೦-೯೫) ; ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲೆಂ (ಶಾಂಕಶಿ. ೩-೨೩ ಪ). [ಪೊಲ + ಕೆಡಿಸು$_1$]

ಪೊಲಗೆಡು, ಪೊಲಗಿಡು, ಹೊಲಗೆಡು (ಕ್ರಿ). ೧. ದಾರಿ ತಪ್ಪು ; ಮಾರ್ಗ ತಿಳಿಯದಂತಾಗು : ಅವಧಿವಿಬೋಧದೆ ಬರೆ ಮನಕ್ಕೆ ಬಗೆಯೊಳ್ ಕಂಡಂ ದಿವಿಜಪತಿ ತನ್ನ ಮುನ್ನಿನ ಭವಮಂ ಪೊಲಗೆಟ್ಟ ಬಟ್ಟೆಗಾಣ್ಬಂತಾಗಳ್ (ಶಾಂಕಶಿ. ೭-೦೯); ಇರುಳ್ ನಡೆವಂ ಪೊಲಗೆಟ್ಟಲ್ಲಿಯೆ ನೇಸಱೊಗೆವ ಪೊಲ್ (ಸಂಪ್ರಶಿ. ೯-೬೫); ವಱುವಿನೊಳ್ ಪೊಲಗೆಟ್ಟು ತೊಟಲುತ್ತುಂ ಬಂದು ನಿಮ್ಮಂ ಕಂಡಂ (ಕೇಪಸಂ. ೦೭೭-೫೧). ೨. ಭ್ರಾಂತಿಗೊಳ್ಳು ; ದಿಗ್ಭ್ರಮೆಯನ್ನು ಹೊಂದು ; ದಿಕ್ಕು ತೋಚದಂತಾಗು : ಶಶಿಶ್ರೀಣಿಗಳ್ ಪಿಡಿದುರ್ಕಿಂ ಪೊಲಗೆಟ್ಟು ಪೊಕ್ಕು ಮೃಗಶಾಖಾನೀಕಮಂ ಕೊಂಡು (ಅರ್ಥಪಂ. ೩-೫೦); ಬಳಕೋಳಾಹಳದಿಂ ವಿಯಚ್ಚರಗಣಂ ಶೇಷಂ ದಿಶಾಪಾಲಕರ್ ಪೊಲಗೆಟ್ಟೋಡೆ (ಪಗಪಿ. ೭-೯೦). **ಪೊಲಗಿಡು** : ೨. ನೆಲನೀತಂಗೀಯೆಡೆಯೆಂದು ತೋಱೆ ಕುಡೆ ಪೊಲಗಿಡದಱಿದಂ ವರಮವಂಡಿತಂ ಪವನಸುತಂ (ಗದಾಯು. ೬-೩೫); ಕಾದಲನೆಡೆಗೆಯ್ದಿ ಬರ್ಪ ಖಚರೀನಿಚಯಕ್ಕಿದಿರ್ಪೋಗಿ ದಿಟ್ಟಿಗಳ್ ಪೊಲಗಿಡೆ ಚಿತ್ತದುಜ್ಜುಗಮುಮಂ ಮಱೆದಿರ್ದರ್ಪೊಲಿರ್ದ ನಲ್ಲಳಂ . . . ನರಪತಿ ಭಾವಿಸಿ (ಸರ್ಥಪ್ರ. ೯-೭೬); ಸವನಕ್ಷೀರಂ . . . ಪರಿಡುದು ದಿವಿಜರ್ ಮೇರುಮಹೀಧರಮಲ್ಲದು ತಾರಮಹೀಧರಮಿದೆಂದು ಪೊಲಗಿಡುವಿನೆಗಂ (ಅಪಂಪು. ೫-೬೬). **ಹೊಲಗೆಡು** : ೧. ಮುನಿಗಳೊಳಱಸಿದರು ಮಾಮಸಕದಿಂ ಪುರಜನಂ ಭೂವನಂ ಹೊಲಗೆಟ್ಟ ಕಱು ತಾಯನಱಸುವಂತೆ (ಹಕಳಾ. ೦-೬೦); ಕೆಟ್ಟೆನಿನ್ನೇವೆನೆನ್ನಣುಗ ನಡವಿಯೊಳು ಹೊಲಗೆಟ್ಟನೋ (ಸಿದ್ಧರಾ. ೨-೪೫). [ಪೊಲ + ಕೆಡು$_1$]

ಪೊಲಗೆಱ^3 (ನಾ). ಹೊಲಸು ತುಂಬಿದ ಕೆರೆ : ಪಾಪದ ಪುಂಜಂ ತೋಯಿಲ ಕುಱಿ ಪೊಲಗೆಱಿಯೊಂದಾಯತಿಯಂ ಬಗೆವರುಱಿವರಾ ಸೂಳೆಯರಂ (ಶಪಾರ. ೨೧೯). [< ಪೊಲೆ + ಕೆಱ^3]

ಪೊಲಗೇರಿ 'ಪೊಲೆಗೇರಿ' ನೋ.

ಪೊಲತಪ್ಪು (ಕ್ರಿ). ದಾರಿ ಸಿಕ್ಕದಾಗು ; ಹಾದಿ ತಪ್ಪು : ಪೊಲತಪ್ಪಿದ ಹುಲ್ಲೆಯಂತಾ ಸಖಿಯರು ಪಲುಬಿ ಪಂಬಲಿಸಿ (ಶಂಕಸ. ೯-೬೨). [ಪೊಲ + ತಪ್ಪು$_1$]

ಪೊಲತಿ, ಪೊಲಂತಿ, ಹೊಲತಿ (ನಾ). ೧. ಹೊಲೆಯರ ಹೆಣ್ಣು : ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಗಂ ಮಗಳ್ . . . ಪೊಲತಿಯಾಗಿ ಪುಟ್ಟಿ (ವಡ್ಡಾರಾ. ೯-೭); ಬಿಡುವಂತುಟದೊಂದವಳ್ಗೆ ಪೇಱಱ ದೊರಕೊಳಲಾರ್ಕುಮೇಂ ಪೊಲತಿಗೆ (ಶಾಕಂಉ. ೬೯೭); ಪೊಲತಿಯುಣಲಿಕ್ಕೆ ಶುನಕನ ಕಳಿವರಮಂ ಪೊಕ್ಕು ಪೇಸದುಂಡಾ ಮುನಿ ನಿರ್ಮಳನಾಗಿ ಮುಕ್ತಿರಮೆಯೊಳ್ಪಲಿದಂ (ಸಪುಶ. ೦೦-೦೦೯). Δ**ಪೊಲಂತಿ** : ೧. ಪೊಲಂತಿಯರೊಳೀ ಜನವೋಹನಮಪ್ಪ ರೂಪು ತಾಂ ನೆಲಸುಗುಮೇಂ (ಮಹಾಪೂ. ೯-೩೦). **ಹೊಲತಿ** : ೧. ಬಡ ಹೊಲತಿ ಮೈಗೆಟ್ಟವಳು ನೀನು . . . ಬಾರದಿರತ್ತ ನಿಲ್ಲು (ಬಸಪು. ೫೭-೫೭); ಹೊಲಗೇರಿಲಿ ಹೊಲೆಯ ಹೊಲತಿಲ್ಲ (ಪುರಂದ. ೧-೦೦೭ ಅಷ್ಟಪ್ರಾಣಿ). ೨. "ಹೊಲೆಯುಳ್ಳವಳು, ರಜಸ್ವಲೆಯಾದವಳು" (ಬಸವ. ಕೋಶ); ಹೊಲತಿ ಶುದ್ಧನೀರ ಮುಂದಂತಾಯಿತ್ತಯ್ಯಾ (ಬಸವ. ೬೨೯); ಹೊಲತಿ ತನ್ನ ಹೊಲೆಯ ಮಱೆದು ಶುದ್ಧನೀರ ಮುಂದೆನೆಂದು ಕೆಲವರ ಮುಟ್ಟುವಂತೆ . . . ತ್ರಿಕರಣಶುದ್ಧವಿಲ್ಲದ ಪೂಜೆ (ಸೋಸಾ. ೩೯-೦೬೨). [< ಪೊಲೆ + — ತಿ$_1$ (< — ಇತ್ತಿ)./ತಮಿ. ಪುಲೈತ್ತಿ; ಕೊಡ. ಪೊಲತಿ]

ಪೊಲದಿ (ನಾ). ಕಾಮುಕ; ವ್ಯಭಿಚಾರಿ : "ಸಿತಗನುಂ ಪೊಲದಿಯುಂ [ಪಾಣಾಂ. ಪೊಲೆಯನೆಂ]ದಕ್ಕುಂ" (ಶಬ್ದಶಿ. ೬೩); "ಪೊಲದಿಯೆನೆ ಸಿತಗ" (ಸಿದ್ಧಮಾ. ೫೬). [ದೇ. ॥ ಮಲ. ಪುಲಯಾಟಿ]

ಪೊಲದಿಗಣ್ಣು (ನಾ). ಕಾಮುಕ ಕಣ್ಣು ; ವಿಟದೃಷ್ಟಿ : ನಿನಗೆ ಪೊಲದಿಗಣ್ಣು ಕೊಟ್ಟಾಗ, ನಿನ್ನ ಅದ್ಭುತ ರೂಪ ಸೌಂದರ್ಯಗಳ ಕಿರುಜವ್ವನದ

ಅಂಗೋಪಾಂಗವ್ಯದರ್ಶನಗಳ ಹಾವಭಾವವಿಲಾಸವಿಭ್ರಮಗಳ ಪ್ರಯೋಗದಿಂದ ಬಗೆಗಲಂಕಿ ಅವನನ್ನು ಮುಂದಲೆವಿಡಿಯದೆ (ಕುಂಶ್ರಕ. ೫೬-೧೦).

[ಪೊಲದಿ + ಕಣ್ಣಾ (< ಕಣ್)]

ಪೊಲಬಿಗ 'ಪೊಲಂಬಿಗ' ನೋ.

ಪೊಲಬು 'ಪೊಲಂಬು' ನೋ.

ಪೊಲಬುಗೆಡು 'ಪೊಲಂಬುಗೆಡು' ನೋ.

ಪೊಲಮಚ್ಚು 'ಪೊಲಮೆಚ್ಚು' ನೋ.

ಪೊಲಮೆಚ್ಚು. ಪೊಲವಚ್ಚು (ನಾ). ತನ್ನ ನೆಲೆಯ ಮೇಲಿರುವ ಪ್ರೀತಿ.—ಸೆಳೆತ; ಸ್ವಸ್ಥಾನದ ಆಕರ್ಷಣೆ: ಅದಟರ ಚಿನ್ನಪೊಂಗರ ಸಬಂಗಳ ತೊಯ್ತುಚ್ಚೆಯೊಳ್ ತೊಡಂಕಿ ನಿಲ್ಲದೆ ಪೊಲಮೆಚ್ಚು[ಪಾಠಾಂ. ಪೊಜವಾಟ್ಟ] ತಮ್ಮ ಮನದೊಳ್ ಎಗೆ ಬಿಚ್ಚಿಸಿದಂತೆ ತೋಱುವ . . . ಕರ್ಬಾಸುಗಳ್ ಪರಿಗೊಂಡುವಾಜೆಯೊಳ್ (ಕಂಕಪಾ. ೬-೦೦೪). **ಪೊಲಮಚ್ಚು:** ನಿಲೆ ಪೊಲವಚ್ಚು ತಮ್ಮ ಮನದೊಳ್ ಸರೆ ಕಟ್ಟಸು ಪರ್ವಿದುರ್ವಿಯೊಳ್ ಚಲದಿಜಿದಾಂತು ಬಿದ್ದ ಭಟರಂತ್ರದ ತೊಂಕುಳಿಯೊಳ್ . . . ಪರಿತಂದುವು ಯುದ್ಧಭೂವಿಯೊಳ್ (ಕಂಪಾಶ್ವ. ೦೦-೦೫೩). [ಪೊಲ+ಮೆಚ್ಚು2]

ಪೊಲಮೇರೆ, ಪೊಲೆಮೇರೆ, ಹೊಲಮೇರೆ, ಹೊಲವೆರೆ, ಹೊಲವೇರಿ, ಹೊಲವೇರೆ (ನಾ). (ಪ್ರದೇಶದ) ಗಡಿ; ಸೀಮೆ; ಸರಹದ್ದು: ಪೊಲಮೇರೆ ತಟ್ಟಗ್ಗೆಜಿಯ ಕಿಬ್ಕೆಜಿ ವೋಗಿ (ಎಕ. II, ೭-೫೫; ಸು. ೫೦೦); ಇನಿತುಮಂ ಪೊಲಮೇರೆ ಸಹಿತಂ ಇತ್ತನ್ (ಎಕ. IX, ಶಿಂಗಳೂ. ೬೭-೦೬; ಸು. ೫೦೦); ಅಣಲಿನೆಯೂರ ಮುಂದಣ ಪೊಲಮೇರೆಯ ವಳ್ಳದ ತಡಿಯಲು (ಪಾಂಡೇಶ್. ೬-೭೮; 1070). **ಪೊಲೆಮೇರೆ:** ಪೂವಿನ ಪಿಪ್ಪರಗೆ[ಯ] ನಾಲ್ಕುದೆಸೆಯ ಪೊಲೆಮೇರೆಯುಂ [ನ]ಡು ಸರಿಯಾಗಿ ನಡದು[ಂ] (ಪಿಇಶಿ. XI-1, ೯-೨೪; ೫೮೭). **ಹೊಲಮೇರೆ:** "ಅವಧಿ, ಮರ್ಯಾದಾ, ಆಘಾಟಿ, ಸೀಪು, ಸೀಮಾ—ಈ ೫ ಹೊಲಮೇರೆ" (ಪಠಾಪು. ೪೭-೦೦೪); ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ ಹೊಲವೇರೆಯ ಹೊಂದಿ ಹೊಲನ ಬಟ್ಟೋಡುವೆ (ಬಸವ. ೧೧೭); ಹೊಲಮೇರೆಯಂ ಪೆಟ್ಟಲೊಲ್ಲದೆ ಚಲಂ ವಿಕ್ಕು ಕಲಿಕಾವನಲ್ಲಿ ಶಿರುಗಿದನುಮ್ಮಳಂ ವಿಕ್ಕು (ಕಂಗಾ. ೮೯. ೩೦೭-೯). **ಹೊಲವೆರೆ:** ಮೂಡಣ ವೇರೆ ಮಂಗಳೂರ ಹೊಲವೆರೆ ಯೊಡವಿನ ಕೊತ್ತುರ ಹೊರೆಯಣ ಕವಿಲೆಯ ಕಲ್ (ಕೞಶ. ೭೩-೦೨-೫೨; 1170). **ಹೊಲವೇರಿ:** ಹೊನ್ನವುರವ ನಿರಗುನ್ದದ ಹೊಲವೇರಿಯ ಕಾಳಗದಲು . . . ಕಾದಿ ಸುರಲೋಕಪ್ರಾಪ್ತನಾದಲ್ಲಿ (ಎಕ. V, ಪಾಸಕ. ೬೯-೯ : 1174 ?); ಈಶ್ವರಪುರದ ಹೊಲವೇರಿಯ ಚಿಕ್ಕಕಾಂಟೆ (ಎಕ. VII, ಶಿವಪಿ. ೫೬-೨೬೧; 1624). **ಹೊಲವೇರೆ:** ಶ್ರೀಮ[ತ್]ತ್ರಿಭುವನೇಶ್ವರ ದೇವರ ನಿವೇದ್ಯಕ್ಕೆ ದೇವಗೇರಿಯ ಹೊಲವೇರೆಯಿಂ ತೆಂಕ . . . ಬಿಟ್ಟ ಯೆರೆ ಮತ್ತರಯುಂ (ಎಇ. XIX, ೦೮೨-೨೮; 1121); ಬಡಗವೊಲದ ಹೊಲವೇರೆಯ . . . ಕೆಯಿ ಳೆಯಿ ಮತ್ತರು ಳ (ಪಾಂಡೇಶ್. ೪೩-೦೦; 1149); ಅಲ್ಲಿಂ ಪಡುವಲು ತೆಂಕಣ ಮೇರೆ ಸಿರಿಯೂರ ಹೊಲವೇರೆಯೊಡವಿನ ಕೊತ್ತುರ (ಪಾಸಕ. ೬೪-೦೪; 1170). [ಪೊಲ + ಮೇರೆ1]

ಪೊಲವಾನಸೆ (ನಾ). = ಪೊಲತಿ ೧: ಚರಿಗೆವೋಗುತ್ತುಂ ನಾನಾನೂನ ದುಃಖಪೀಡಿತವಾನಸೆಯಾಗುತ್ತುವಿರ್ದ ಪೊಲವಾನಸೆಯಂ ಕರುಣಾಕೈವಿಗೆ ಕಂಡು (ಶುಳುಪಾ. ೩-೨). [< ಪೊಲೆ + ಮಾನಸೆ]

ಪೊಲವಿಡಿ (ಕ್ರ). ನೆಲೆ ಮುಟ್ಟು: ಪೊಲವಿಡಿಮದು . ಬಗೆಯಮಮಾ ಬಲೆಯೊಳ್ ಕಣ್ಣಾಳಿ ತೊಡರೆ ಪಿಡುಕುವುದವುಮಾ (ಪಠಾ. ೩-೦೭೯).

[ಪೊಲ + ಪಿಡಿ1]

ಪೊಲಸಂದು (ನಾ). ಬೇರೆಬೇರೆ ಹೊಲಗಳು ಕೂಡುವ ಸ್ಥಳ: ಅನ್ತೆ ಬನ್ದು ಬೆಳ್ಗಲಿಯ ಇಗ್ಗಲಿಯ ಕಲ್ಸನ್ದಿನ ಮೂಜೂರ ಪೊಲಸನ್ದಿನ ಕಜಕೊಡಿಯನ ಕೆಜಿಯಿಂ (ಎಕ. III, ಶಿಂಪಾಪ. ೦೩೯-೫೩; ೪೨೫ ?).

[ಪೊಲ + ಸಂದು1]

ಪೊಲಸೀಮೆ (ನಾ). = ಪೊಲಮೇರೆ: ಮೂಱೂರ ಮುಕ್ಕೂಡಲಲ್ಲಿ ಪೊಲಸೀಮೆ ಕೂಡಿತ್ತುಂ (ಕ್ಯಾಂ. ೦೯೭೪, ೩೮-೫೦; 11೭ಮು ೫೫).

[ಪೊಲ + ಸೀಮೆ]

ಪೊಲಸು1, ಹೊಲಸು1 (ನಾ). ೧. ಕೊಳೆ; ಕೊಳಕು; ಮಾಲಿನ್ಯ: ಅದ್ರಿಯನಗೆಯೆತ್ತುವುರ್ವಿಯನಡಂಗಿಪ ಭಂಗಿಯೊಳಿಲ್ಲ ಭೇದವಾ ಕ್ಷಯ ವವನಂಗಮಾತನ ಗದಾವವನಂಗವುದೊಂದೆ ರಕ್ಕಚರ್ಚೆಯ ಪೊಲಸುಂಟೆ ದೈತ್ಯನ ಗದಾನಿಳನಲ್ಲದೊಡಾ ಕ್ಷಯಾನಿಳಂ (ಜೂಂ. ೯-೬೪); ಪೊಲಸಿನ ನೆಲೆ ರುಧಿರದ ಕುಳಿ ವಿಲಿವಿಲಿಸುವ ಪುಳುಗಳೊಗೆವ ಪೃತ್ತು ಪುರೀಷು ನೆಲಸಿದ ದರಿ ಕಾಮಾಹಿಯ ಬಿಲಮಂಗಜಗೃಹವನಂಗದುರ್ಜಲಕೂಪಂ (ಕೃಷ. ೨೯-೭೦). ೨. ಅಮೇಧ್ಯ; ಮಲ: ಪೊಲಸಿನಂತಶುಚಿಯಪ್ಪ . . . ಸಂಸಾರಮಂ ನಂಬಿ ದರ್ಶನಮುಮಂ ವ್ರತಮುಮಂ ಕೆಡಿಸುವುದೆಗ್ಗಿಕೆ (ರಚೂಷ್ಕು. ೬-೦೬೬). ೩. ಕಳಂಕ; ದೋಷ: 'ಪೊಲಸುಗೊಳ್' ವರಾ.

ಹೊಲಸು2: ೧. ಹೊಲಸಜಿಯಟ್ಟ ನಾರ್ವ ನಿಜದೇಹದ ರಾಜತನೂಜ ನರ್ತಿಯಿಂ ತಳೆದುಪವಾಸದೊಂದು ಫಲದಿಂ ರತಿವಲ್ಲಭರೂಪನಾಗಿ ಕಣ್ಗೊಳಿಸಿ . . . ಅಮ್ಮತೇಶನಾದಂ (ಪುಚಾಶ್ರ. ೬-೦೬); ಬಾತ ಹೆಣನುಬ್ಬರದ ಹೊಲಸಿನ ಗವಲು ಕವಿದುದು ಕೂಡೆ ವನದೊಳಗೆ (ಶುಚಾಶ. ೦೦-೦೨); ಮೈಮೇಲೆ ಹೊಲಸು ಇದ್ದರೆ ಅದು ರೋಮರಂಧ್ರಗಳ ಬಾಯಿಗೆ ಕೂತು, ಬೆವರಿಗೆ ಅಡ್ಡಿ ಮಾಡುತ್ತದೆ (ಕುಂಬಾಯಿ. ೯-೨೪). ೨. ಹೊಲಸು ಮಾಂಸದ ಹುತ್ತ ಎಲುವಿನ ಹಂದರವ್ವ ಹೊಲಿ ಬಲಿದ ತನುವಿ ನೊಳಗಿರ್ದುವದಱೊಳಗೆ ಕುಲವನಱಸುವರೆ (ಸರಣ್ಣ. ೨೦). ೪. ಕಸ; ಗಲೀಜು: ಮುನಿಸಿಪಾಲಿಟಿಯ ಆರೋಗ್ಯಖಾತೆಯ ಟ್ರಕ್ಕೊಂದು ರಸ್ತೆಯ ಮೇಲೆ ಕೂಡಿ ಹಾಕಿದ ಹೊಲಸಿನ ರಾಶಿಯನ್ನು ತೆಗೆಯಲು ಬಂದು ನಿಂತಿತ್ತು (ಆಪೋಶ. ೦೦೨). ೫. (ಆಲಂ) ಹೀನವಾದ ಕಾರ್ಯ; ಕೆಟ್ಟ ಕೆಲಸ; ನೀಚಕಾರ್ಯ: ಇಂತಹ ಹೊಲಸಿನೊಳಗೆ ನಾನು ಕೈಹಾಕುವುದಿಲ್ಲ. ನನ್ನನ್ನು ಹಿಡಿದರೆ ನೀವು ಸಂಸ್ಥಾನದಿಂದ ಉಳಿಸಲು ಬರುವಿರಾ? (ಕೂಹಣಾ. ೭೦). ೬. ಅನಾಗರಿಕತೆ; ಅಸಭ್ಯತೆ: ಮಾತು ಹೊಲಸಿನ ಗಂಧವಾಗಿದೆ ಭೀತಿರಸದಲಿ ಮನ ಮುಳುಗಿತೀ ಪ್ರೀತಿ ಮಾರಿಯ ಮುಸುಕನುಗಿವುದನಾರು ಕಲಿಸಿದರು (ಶುಪ್ರಾಸ. ೦೨-೬೬). (ಗು). ೭. ಕೊಳಕಾದ; ಅಶುದ್ಧವಾದ; ಮಲಿನವಾದ: ಹೊಲಸುಮೈಯವಗೇಕೆ ಹೊಸಕಸ್ತೂರಿವಾಟ ತಲೆದೋಱುವವಗೇಕೆ ದಟ್ಟ ವುನುಗು (ಕುಕಂದ. ೦-೦೦೦-೦); ನೆಲೆ ಇಲ್ಲದ ಕಾಯ . . . ಮಲಮೂತ್ರಂಗಳು ತೀವ್ರ ಕ್ರಿಮಿಗಳುಳ್ಳ ಹೊಲಸು ತೊಗಲ ಮೆಚ್ಚಿ ಕೆಡಬೇಡಿರೊ (ಕುಕಂದ. ೨-೦೦-೨).

ಪೊಲಸುಟ್ಟ ನಾಜಿ, ಹೊಲಸುಟ್ಟ ನಾಜಿ = ವಿಪರೀತವಾದ ದುರ್ನಾಶದಿಂದ ತುಂಬಿರು: ಕಾಡ ಪಂದಿಗಳ ಬಲ್ಲಿನದಿಂ ಪೊಲಸಟ್ಟ ನಾರ್ವ . . . ನೆತ್ತರ ಕೆಯ್ ನಡುಗಲ್ಕೆ (ಗಾರಂಪೂ. ೦೮೩) ; ಮೆಯ್ಯ ವ್ರಣಮುಂ ಕೀವುಂ ಪೊಲಸಟ್ಟ ನಾಜಿ (ಕುಚಾಶ್ರ. ೩-೨೭ ಪ) ; ಮುಂದೆ ನೋಡದೆ ಹೊಲಸಟ್ಟ ನಾರ್ತಪುದು ಪೆರ್ಬುಲಿಯಿರ್ವಪುದಕ್ಕೆನುತ್ತ ಪೆರ್ಚಿದ ವನದಲ್ಲಿ ವಜ್ರವಲ್ಲಿಯಿಂ ನಡೆಗೊಂಡುದು ಭಲ್ಲಸಂಕುಳಂ (ರಕಳ. ೨-೦೨೦). **ಹೊಲಸಾಗು** = ಕೊಳಕಾಗಂ; ಗಲೀಜಾಗು: ಸೊದಲಿಗಿಂತ ನಾಲ್ಕುಪಾಲು ಹೆಚ್ಚಾಗಿ ಸೀನು ಬಂದಿತು; ಮೂಗು ಇನ್ನಷ್ಟು ಹೊಲಸಾಯಿತು! (ಶುಟಿ. ೩೮); ಮಗುವಿನ ಬಟ್ಟೆ ಹೊಲಸಾಗಿದೆ (ಕೂಂ). **ಹೊಲಸು ಮಾಡು** = ೧. ಕೊಳಕು ಮಾಡು; ಮಲಿನಗೊಳಿಸು: ಅವನು ಕಸ ಚಿಲ್ಲಿ ಮನೆಯನ್ನೆಲ್ಲ ಹೊಲಸು ಮಾಡಿದ್ದಾನೆ (ಕೂಂ). ೨. ಮಲವನ್ನು ವಿಸರ್ಜಿಸು; ಹೇಸಿಗೆ ಮಾಡು: ಮನೆಯ ಬಾಗಿಲಿನಲ್ಲಿ ನಾಯಿ ಹೊಲಸು ಮಾಡಿದೆ

(ಕೂಡ). ೩. ಕಳಂಕಗೊಳಿಸು ; ದೋಷಯುಕ್ತವನ್ನಾಗಿ ಮಾಡು : ನಿನಗೆ ಅಕ್ಕ ತಂಗಿ ಇಲ್ಲವೆ ? ಅವರ ಹೆಸರನ್ನು ಹೀಗೆ ಹೊಲಸು ಮಾಡಿದ್ದರೆ ನಿನಗೆ ಹೇಗೆ ಅನಿಸುತ್ತಿತ್ತು (ರಂಗೂರೇ. ೧೯).

[ಪೊಲೆ + — ಸ್ಸು$_2$. / ತುಳು. ಪೊಲಸ್, ಹೊಲಸ್]

ಪೊಲಸ್ಸು$_2$, ಹೊಲಸ್ಸು$_2$ (ನಾ). ಮಾಂಸ ; ಬಾಡು : ಮತ್ತಮಾನಂತೆ ಪೋಗೆವೋಗೆ ಪೊಲಸಿನ ಗಂಧಮಂ ಪೊತ್ತು ಕಿಱುಕವ್ವರೆಗೊಳ್ಳ ಕೌರ ಪೊಗೆಯಿನಱಿಯಲಾದ ಬೇಡವಟ್ಟಮಂ ಕಂಡಂ (ಶಾಂಪುರಾ. ೭೧೩) ; ಇವರವರ್ಗೆ ಕಪಟದಿಂದಂ ಸವಿನಯದಿಂದೆಱೆಯೆ ಕಳ್ಳನಾದರದಿಂ ಮತ್ತ ಪರಿವರ್ಗೆ ತಂದು ಪೊಲಸಂ ಸವಿನಯದಿಂದಿಕ್ಕೆ ಕುಡಿದು ತಿಂದಂತಾಗಳ್ ಸಾವುದುಂ (ಧರ್ಮಾಮೃ. ೨-೨೦೯). **ಹೊಲಸ್ಸು$_2$** : ಕೊಲುವನೇ ಮಾದಿಗ ಹೊಲಸ ತಿಂಬವನೇ ಹೊಲೆಯ ಕುಲವೇನೋ ಅವಂದಿರ ಕುಲವೇನೊ (ಪಸಪ. ೩೧೨) ; ಅವನ ಕಯ್ಯೊಳು ಹೊಲಸು ಮಹದೊಳಮೃತಂ (ಕಣ್ಣಡ. ಪೇ. ೦೪೪-೦೩). [ದೇ. ॥ ತಮಿ. ಪುಲ್ಲೆಚು ; ತೆಲು. ಪೊಲಸು]

ಪೊಲಸುಗೊಳ್ (ಕ್ರಿ). ಕಳಂಕಿತವಾಗು ; ದೂಷಿತವಾಗು : ಕಾಯಿ ಮಡಿದವನ ಕೊಲೆಯಿಂದೆ ಪೊಲಸುಗೊಂಡೆಲ್ಲವನು (ಪುರುಷಾ. ೦೦೯-೩೬೯).

[ಪೊಲಸು$_1$ + ಕೊಳ್$_1$]

ಪೊಲಸುನಾಱು, ಹೊಲಸುನಾರು, ಹೊಲಸುನಾಱು (ಕ್ರಿ). ಗಬ್ಬುನಾತ ಬರು ; ದುರ್ವಾಸನೆ ಬರು : ನೆತ್ತರೊಳ್ ಪೊರೆದು ನಿರಂತರಂ ಪೊಲಸು ನಾಱುವ ಮೆಯ್ಯನೆ ಕರ್ಚಲೆಂದು ಚಿಚ್ಚರಮಪರಾಂಬುರಾಶಿಗಿಟಿಪಂತಿ ಟಿದಂ ಕಮಳೈಕಬಾಂಧವಂ (ಹಂಪಶಾ. ೦೦-೩೦) ; ದೈತ್ಯನಂ ಪೊಲಸು ನಾರ್ಪಿನೆಗಂ ತ್ರಿಶೂಲದಿನೊತ್ತಿ ಕೊಂದ ಕುಮಾರಿ ಕೂರ್ತಲಸದಿರ್ಕೆ ಭುಜಾಸಿಧಾರೆಯೊಳಂಕಮುಳ್ಳರ ದೇವನಾ (ಕಾಶ್ಯಾಪ. ೨೦೨). **ಹೊಲಸು ನಾರು** : ಕುಣಪ= ಹೊಲಸುನಾರುವ ಹೆಣ (ಗಂಗಾಸು. ೬೯). **ಹೊಲಸು ನಾಱು** : ಹೊಲಸುನಾರ್ವೆಳಜಲಚರಂಗಳು ಬೆಳಂವು ನೆಱೆಯದ ಕಿಱುವೆಸಳ ನೆಯ್ದಲುಗಳೀ ಮಡದಿಯ ಕುಡಿತೆಗಂಗಳಿಗೆ ಪಡಿಯಲ್ಲ (ಪಸಪ. ೯-೨೩).

[ಪೊಲಸು$_1$ + ನಾಱು$_1$]

ಪೊಲಸೇಳು, ಹೊಲಸೇಳ್, ಹೊಲಸೇಳು (ಕ್ರಿ). ೧. ದುರ್ಗಂಧ ವ್ಯಾಪಿಸು.—ಹರಡು : ಶಿವಶಿವ ಇದೆಲ್ಲಿಯದ್ಭುತವೆನುತೆ ಪೊಲಸೇಳೆ ತಿರುಗಿ ಬಂದಗ್ಗಣಿಯನೊಂದು ಠಾವಿನೊಳಿರಿಸಿ (ಕಣ್ಣಡ. ಪೇ. ೦೩೩-೨೦). **ಹೊಲಸೇಳ್** : ೧. ಮೇಲೆ ಮುಸುಕರ್ದ ಮಾಂಸು ಸುಲಿಯ ಹೊಲಸೇಳ್ದು (ಬಿಂಕೋಗ. ಹ. ೩೦೦-೨೨). **ಹೊಲಸೇಳು** : ೨. ಕಸವು ತುಂಬಿರು ; ಗಲೀಜಾಗು : ಮನೆಯೆಲ್ಲ ಹೊಲಸೆದ್ದು ಹೋಗಿದೆ (ಕೂಡ).

[ಪೊಲಸು$_1$ + ಏಳು$_1$ (<ಏಱ್$_1$)]

ಪೊಲಿ$_1$ 'ಪೊಲ್' ನೋ.

ಪೊಲಿ$_2$, ಹುಲಿ$_2$, ಹೊಲಿ$_2$ (ನಾ). (ಕರಾ) ಧಾನ್ಯರೂಪದ ಬಡ್ಡಿ ; ತಲವಾಸಿ : ನೂರ್ಗಣ್ಣುಗ ಭತ್ತ ಪೊಲಿಯೆ ಕೊಣ್ಡೂಟ್ಟುವೊದು (ಎಕ. X. ಕೋಗಾಶ. ೬-೯ ; 758) ; ಮುಡಿಗೆ ಒಂದು ಕಳಸಿಗೆ 'ಪೊಲಿ' (ಪಗುಪ. ೩೯). **ಹುಲಿ$_2$** : ಗದ್ದೆ ಕೊಯ್ದಾದ ನಂತರ ಹುಲಿ (ಬಡ್ಡಿ) ಸೇರಿಸಿ ಒಂದಕ್ಕೆ ಎರಡರಷ್ಟು ಭತ್ತವನ್ನು ಹಿಂದಕ್ಕೆ ಕೊಡಬೇಕಾಗಿತ್ತು (ಪಸಪಸಂ. ೮). **ಹೊಲಿ$_2$** : ಅಕ್ಕಿ ಮಳೆಗಾಲದಲ್ಲಿರಿಸಿಕೊಂಡು ಹೊಲಿಗೆ ಕೊಟ್ಟರೆ ಪ್ರಯೋಜನವಿದೆ (ಬುಗಿಯು. ೭೬) ; ಎಷ್ಟೋ ಮಂದಿ ಅವರಿಂದ ಹೊಲಿಗೆ ಬತ್ತ ಹೊಂದಿಕೊಂಡಿದ್ದರು (ಪುಸಕೂ. ೩).

[ದೇ. ॥ ತಮಿ. ಮಲ. ತುಳು. ತೆಲು. ಪೊಲಿ]

ಪೊಲಿಕೇಶಿ 'ಪುಲಿಕೇಶಿ' ನೋ.

ಪೊಲಿಗೆ 'ಪೊಲ್ಗೆ' ನೋ.

ಪೊಲಿಸು, ಹೊಲಿಸು (ಕ್ರಿ). (ಹರಿದುದನ್ನು ಜೋಡಿಸಿ) ಹೊಲಿಗೆ ಹಾಕಿಸು : ಹಾಸನಟ್ಟಿದು ಕಂಥೆಯಂ ಪೊಲಿಸುವ (ಧರ್ಮಾಮೃ. ೩-೨೦) ; ಸಂಜೆಗೆಂಪಿನ ತೆಳ್ಪಮರ್ದಿರೆ ಪೊರೆಯನೆತ್ತಿ ಪೊಲಿಸಿದ ತೆಱದಿಂದೊಪ್ಪಿನ ಪೊಸಚೊಪ್ಪರಂ . . . ಎಸೆದುದು (ಶೀಪಾಪ. ೯-೭೩). **ಹೊಲಿಸು** : ಹೋಳಾದ ಕವಚವ ಹೊಲಿಸಿದರು (ಕುಪ್ಪಾಶೀ. ೩-೩೬) ; ಬೇನಸುಗಳ ಡಾಗಗಳನ್ನು ಹೊಲಿಸಿ ತಯಾರ ಇಡೋಣ (ಮುಂಬಣ್ಣಾ. ೨೬೯).

[ಪೊಲ್ + — ಇಸು$_3$]

ಪೊಲುಕೇಸಿ (ನಾ). ಒಬ್ಬಾತನ ಹೆಸರು : ಪೊಲುಕೇಸಿಯ ಬೂದಿಗನ ಕಾಳಿಗದೊಳ್ ಪೊಲುಕೇಸಿಯೊಡತಿಹದು ಕೊಕಾಳಿನ ಕೊನ್ದು ಸತ್ತ (ಎಕ. III. ಸ್ಯಸೂರು. ೧೯-೬ ; ಸು. ೨೨೦ ?). 'ಪುಲಿಕೇಶಿ' ವರಾ. [?]

ಪೊಲೆ, ಹೊಲೆ (ನಾ). ೧. ಮೈಲಿಗೆ; ಸೂತಕ : ಮಾನವರ ಮಖಯಾಜನಂ ಪೊಲೆ ಸುರರ್ಗುಚಿತಮಲ್ಲ (ಶೈಶಾ. ೩-೨೩). ೨. ಮುಟ್ಟು ; ರಜಸ್ಸು: "ಮುಟ್ಟುವೆಯೆನೆ ಮಾಣಿಕವೆನೆ ಮುಟ್ಟೆನೆ ಪೊಲೆ ಸೂತಕಾಭಿಧಾನಂ" (ಕಕುಪ. ೩೦); ಪೊಲೆ ಪಿಂಗದೆ ಪೊಂಗುವುದಕ್ಕಲಸುವರಾಳಿಜನಂಗಳ್ (ಪುಸೃಪ. ೩-೬೬). ೩. ಕೆಟ್ಟುದು ; ಒಳ್ಳೆಯದಲ್ಲದುದು : ಪೊಲೆ ಮುಳಿಸೆಂಬುದಾ ಮುಳಿಸು ಪುಟ್ಟಿದ ಪುಟ್ಟುಱೊಳಾವನಾದೊಡಂ ಪೊಲೆಯನೆ (ಪಂಚಾಪ. ೦೦-೯೯). ೪. ಪಾಪ ; ದೋಷ ; ಕಳಂಕ : ಪೊಲೆ ಮಸಗಿ ದಿಕ್ಕುವರೆ ಗಂತಲಸದೆ ಭಾರತಮನೆಯ್ದೆ ಕಿಡೆ ಪೇಟ್ಟುದಱಿಂ ಪೊಲೆಯರ ಬಸಿಱೊಳ್ಬಂದಮ್ಮಳಿನಾತ್ಮಂ ವ್ಯಾಸನೆಂಬರಿವನಿದನಱಿಯರ್ (ಸಪಸ. ೦೦-೦೭೯) ; ನುಡಿಯೆಲ್ಲಂ ಪೊಲೆ ಸೂರುಳೊಳ್ ನಿಱಿ (ಶೀಪಾಪ. ೨-೦೦೨) ; ಪೊಲೆ ಪೊರ್ದಲ್ ಪೇಸಿ ಬೇಸರದಿ (ಎಕ. VII, ಶಿಪಪೂ. ೩-೬ ; 1218) ; ಮರ್ದಲ್ತು ಪೊಲೆಗೆ ಪೊಲೆ (ಅಕ್ಕಣ್ಣಾ. ೦೩-೩೦೨). **ಹೊಲೆ** : ೧. ಹೊಲತಿ ತನ್ನ ಹೊಲೆಯ ಮಱೆದು ಶುದ್ಧನೀರ ಮಿಂದೆನೆಂದು ಕೆಲವರ ಮುಟ್ಟುವಂತೆ . . . ತ್ರಿಕರಣ ಶುದ್ಧವಿಲ್ಲದ ಪೂಜೆ (ಮೋಗಾಪ. ೩೯-೦೬೨); ಸೂರ್ಯನ ಕಿರಣ ಹೊಲೆಯನ ಚರಿಸಿದರೆ ಹೊಲೆ ಹೊಱುವುದೇ (ಕುಪ್ಪಾಶೀ. ೩-೪೯) ; ಈ ದೇಹದೊಳು ನೀ ನೆಲೆಸಿರಲು ಹೊಲೆಯುಂಟೆ (ಪಂಸಾ. ೯೯). ೨. ಜನನ ಮರಣದ ಸೂತಕಂ ಕೆಡುವ ತೆಱದಿ ಕೆಟ್ಟುವು ಹೊಲೆಗಳಾ ದಿವಸಕೆ (ಸಿದ್ಧಶಾ. ೦-೩೯). ೩. ಹುಸಿಯೆಂಬುದೇ ಹೊಲೆ (ಸುಜಾಶೀ. ೩. ೩೬-೦೯೦) ; ಮುನಿಗೆ ಹೊಲೆಯಾವುದತಿ ಕೋಪ ಬದ್ಧದ್ವೇಷ (ಪಪಶಾ. ೬-೨) ; ನಿನಗಿನ್ನವದೆಸೆಯ ಹೊಲೆ ಹೋಯ್ತು (ಕುಪ್ಪಾಸ. ೦೯-೬೨). ೫. ಕೊಳಕು ; ಮಲ ; ಹೇಸಿಗೆ : ಹೊಲಸು ಮಾಂಸದ ಹುತ್ತ . . . ಹೊಲೆ ಬಲಿದ ತನುವಿನೊಳಗಿರ್ದುಮವಱೊಳಗೆ ಕುಲವನಱಸುವರೆ (ಸರ್ವಜ್ಞ. ೭೦). ೬. ಮಾಸು : ಮೂತ್ರದ ಕುಳಿಯ ಹೊಱವಡುವಾಗ ಹೊಲೆ ಮುಂತಾಗಿ ಮುದುಡಿ ಬಿದ್ದಲ್ಲಿ ಹೆತ್ತವಳು ಹೊಲತಿ ಮುಟ್ಟಿದ ಮಗುವು ಹೊಲೆಯನೆಂದು ನಿಮ್ಮ ಕುಲಗೋತ್ರ ಮುಟ್ಟಲಮ್ಮದೆ (ಸರ್ವಸ. ೦೭೩-೦೨೯).

ಹೊಲೆಯಾಗಿರು=(ಸ್ತ್ರೀಯು) ರಜಸ್ವಲೆಯಾಗಿರು ; ಮುಟ್ಟಾಗಿರು : (ಕ). **ಹೊಲೆಯಾಗು**=ಅಪವಿತ್ರವೆನಿಸು ; ಅಮಂಗಳವಾಗು : ಒಳ್ಳೇ ಕೆಲಸದ ಅರಿವು ಇರದ್ದರಿಂದ ಅವರ ಆಯುಷ್ಯವೆಂಬುದು ಹೊಲೆಯಾಗಿತ್ತು (ಗೌರಾಂಗ. ೬೬).

[ದೇ. ॥ ತಮಿ. ಪುಲ್ಲೆ ; ಮಲ. ಪುಲ ; ತುಳು. ಪೊಲೆ, ಪಿಲೆ, ಹೊಲೆ ; ಕೊಡ. ಪೊಲೆ]

ಪೊಲೆಕೇಶಿ 'ಪುಲಿಕೇಶಿ' ನೋ.

ಪೊಲೆಕೇಸಿ 'ಪುಲಿಕೇಶಿ' ನೋ.

ಪೊಲೆಗ 'ಪೊಲಗ' ನೋ.

ಪೊಲೆಗಲಸು$_1$, ಹೊಲೆಗಲಸು (ಕ್ರಿ). ೧. ಅಪವಿತ್ರಗೊಳಿಸು ; ಮೈಲಿಗೆಯುಂಟುಮಾಡು : ಕಲ್ಲಂ ಮರನಂ ಕುಲದೈವಮೆಂದು ಪೂಜಿಸಿ ಪೊಲೆಗಲಸುವ ಪೆಂಡಿರಿಂದ ಬೆಳಗದು ಧರ್ಮಂ (ಸಪಸ ೩-೯೩);

ಇಂದೀ ಗಳಿಗೆಯೊಳು ಹೊಲಗೇರಿಯೊಳೊರ್ವ . . . ಭಕ್ತನ ಮನೆಯೊಳ ಗುಂಡುದಲ್ಲದೆ ನಿನ್ನೋಲಗದೊಳು ಪೊಲೆಗಲಸಲುಂ ಬಂದವಂ (ಬಸರ. ೦೦-೩೦) ; ಕುಲಹೀನನೋರ್ವನಂ . . . ನಿಲಯಕ್ಕೆ ತಂದು ಕಾಲ್ದೊಳೆದು ತಜ್ಜಲವೀಂಟಿಯುಣಲಿಕ್ಕೆ ವಿಕ್ಕುದುಂಡು ಪೊಲೆಗಲಸಿದಂ (ಪಜ್ಜಂಗಾ. ೯-೧೦). ೨. ಮೈಲಿಗೆಯಾಗು ; ಅಪವಿತ್ರವಾಗು : ಪೂಜಲ ಬೇಳ್‌ಕಟ್ಟೆಗಳ್, ಮನೆಯ ಬೇಳ್‌ಕಟ್ಟೆಗಳ್, ಎಲ್ಲಮುಮ್ ಪೊಲೆಗಲಸಿಯಿರ್ದತ್ತು, ಕೊಲೆವಿಟ್ಟು ದುರ್‌ವಿಧಿಯ ಒಯ್ದುಪೌಸ್ ಮಗನ ಪೆಣದಿನ್ ಪರ್ದುಗಳ್ ನಾಯ್ಗಳುಮ್ ಪಿಕ್ಕಿದೆರೆಯಿನ್ (ಅಂತಿಗೂ. ೧೩-೧೩೮). **ಹೊಲೆಗಲಸು :** ೧. ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮಾಱ ತಮ್ಮ ಭಕ್ತಾಚಾರವೆಗ್ಗಳಂ ತಲೆಗೇಱಿ ಹೊಲೆಗಲಸಿ ನೆಲೆಗೆಟ್ಟು ಛಲವುಡುಗಿ ಕುಲವಳಿದು ಹೊಲೆಯನೆನ್ನದೆ ಹಿರಿಯ ಭಕ್ತನೆಂದಱಿದುದು (ಭೋಗರ. ಹ. ೨೬೪-೯) ; ನೀನು ದೇಶಭ್ರಷ್ಟನಾಗಿದ್ದು, ಹಿಂತಿರುಗಿ ಬಂದುದಕ್ಕಾಗಿಯೂ ನಿನ್ನ ತಂದೆಯ ಏಕಾಂತ ಭವನವನ್ನು ಪ್ರವೇಶಿಸಿ ಹೊಲೆಗಲಸಿದುದಕ್ಕಾಗಿಯೂ ತಕ್ಕ ಫಲವನ್ನು ಅನುಭವಿಸುವೆ (ಭಾರಬೆ. ೦೦೦). ೨. ಬಲ್ಲಹನೆ ಕಲ್ಯಾಣಕಟಕವದೆಲ್ಲವುಂ ಹೊಲೆಗಲಸಿ ಹೋಯಿತು (ಬಸಪು. ೩೩-೬) ; ಅಗ್ರಹಾರಂ ಹೊಲೆಗಲಸಿತೆನು ತಾಗ್ರಹಿಸಿ ವಿಪ್ರರು ನುಡಿವುತಿರೆ (ಬಸಪು. ೩೭-೩೮). ೩. ಕೆಡಿಸು ; ಹಾಳು ಮಾಡು : ಹೊಲೆಗಲಸದ ಯೋಗಿ ಹೊಲೆಗಲಸದುಳಿವನೇ ಹೊಲೆಗಲಸದಿಪ್ಪ ಕಡುಮೂರ್ಖ ಶಿವಯೋಗಿ ಹೊಲೆಗಲಿಸಿ ಹೋಹ (ಸರ್ವಜ್ಞ. ೫೫೮). ೪. ಜಾತಿಸಂಕರ ಮಾಡು ; ವರ್ಣಸಂಕರ ಮಾಡು : ಸಲುವದಱ್ಪಾದಶ ವಿವರ ವರ್ಣಂಗಳಾದಿಯಲಿ ಇಳೆಯೊಳಿವು ತಾನೀಗಲಾದವೆ ಹೊಲೆಗಲಸಿ ಕುಲಸಂಕರವನಗ್ಗಳಿಸಿ ಈ ಕಲ್ಯಾಣಕಟಕವನಿಂತು ಕೆಡಿಸುವರೇ (ಬಸಪು. ೩೩-೧೨). [ಪೊಲೆ + ಕಲಸು₁]

ಪೊಲೆಗಲಸು₂ (ನಾ). ಜಾತಿಸಂಕರ ; ವರ್ಣಸಂಕರ : ಯುಧಿಷ್ಠಿರನಾಳ್ವ ದೇಶದೊಳ್ಕಳವು ಕೊಲೆ ಪಾದರಂ . . . ಪೊಲೆಗಲಸು . . . ಮೊಳೆ ದೋಱವು (ಕೈಪಾಶಾ. ೨-೩). [< ಪೊಲೆಗಲಸು₁]

ಪೊಲೆಗಿಡಿಸು 'ಪೊಲೆಗೆಡಿಸು' ನೋ.

ಪೊಲೆಗೆಡಿಸು, ಪೊಲೆಗಿಡಿಸು, ಹೊಲೆಗೆಡಿಸು (ಕ್ರಿ). ಮಲಿನಗೊಳಿಸು ; ಅಪವಿತ್ರಗೊಳಿಸು : ಒಲವರದಿಂದಲ್ಲದುದಂ ಸಲೆ ನುಡಿದವರಿದುವೆ ಚೋದ್ಯ ಮವರೊಳ್ಕರ್ಮಂ ಪೊಲೆಗೆಡಿಕುಂ ಪೊಲೆವಡಿಕುಂ ತೊಲಗಿಕುಮಪವರ್ಗ ಮಾರ್ಗದಿಂ ಭವ್ಯನುಮಂ (ಪಾಶಾ. ೩೦೩). **ಪೊಲೆಗಿಡಿಸು :** ಪೊಲೆಯನಂ ಕಿಟ್ಟುವ ದೇವರುಂಟೆ . . . ನೀಂ ಬಱಿದೆ ಕೊಂಡುಯ್ದು ವೈಕುಂಠಮಂ ಪೊಲೆಗಿಡಿಸದಿರಿ (ರಾಮಾಶ್ವ. ೮೦-೦೦). **ಹೊಲೆಗೆಡಿಸು :** ಒಂದು ಮಾತನು ಲೋಕ ಹೊಲೆಗೆಡಿಸಿಕೊಂಡಿಹುದು, ಹೊಲೆಗೆಡಿಸೆನದನು ನಾನು (ಇಂಗೀತ. ೩೩-೦). [ಪೊಲೆಗೆಡು + — ಇಸು₃]

ಪೊಲೆಗೆಡು, ಹೊಲೆಗೆಡು (ಕ್ರಿ). ೧. ಹೀನಸ್ಥಿತಿಗೆ ಇಳಿ ; ಕೀಳಾಗು : ಕೊಟ್ಟೊಡಮೇಂ ಕನ್ನಿಕೆಯಂ ಕೊಟ್ಟೊಂಗಮಿದಾಗದೆಂದು ಕುಡೆ ಕೊಂಡೆ ನಗೇಗೆಟ್ಟಪುದೆಂದು ಮನಂ ಪೊಲೆಗೆಟ್ಟರೆ ಕೊಂಡಂಗಮೆನಗಮಱಿಯಲ್ಕಕ್ಕುಂ (ಶಾಂತಿಪು. ೩-೧೧) ; ಕಾಟ್ಯಬ್ಬವುಂ ಕಟ್ಟಿ ಕೋಟಲೆಗೊಂಡೊಳ್ವವನೊರ್ವನೊಲ್ಬವರ ಚಾತುರ್ಯಕ್ಕೆ ಕೈವಾರಮಂ ಪೊಲೆಗೆಟ್ಟೇವವನೊರ್ವಂ (ಲೀಲಾವ. ೦-೧೦). **ಹೊಲೆಗೆಡು :** ೧. ಕುಲ ಜಾತಿಗೆಟ್ಟು ಕೂಳುಣಲುಡ ಹಡೆಯದೆ ಹೊಲೆಗೆಟ್ಟು ಹುಟ್ಟು ಹೋದಳಿದು ನೆಲಹೊರದಾ ಮೆಯ್ಗೆಟ್ಟು ಸಿದ್ಧರ ಪಾದ.ಲಘುಭಕ್ತಿಯೊಳಿಱಗುವೆನು (ಪ್ರಭಂಪು. ೩-೨). ೨. ಮುಟ್ಟಾ ಗುವುದು ನಿಲ್ಲು : ಎನ್ನ ಹರೆಯಂ ಬಿಟ್ಟು ಜರೆವಟ್ಟು ಹೊಲೆಗೆಟ್ಟು . . . ಧಾತುಗಳು ಪಲ್ಲಟವಾದವು ಇನ್ನು ನಾನೆತ್ತ ಮಗನಂ ಹಡೆವುದು (ಸಿದ್ಧರಾ. ೦-೧೦) ; ಹೊಲೆಗೆಟ್ಟು ಹೊಸಬೇಟಗೆಯ್ವ ಪಾತಕಿ ಮೊಗ್ಗೆಮೊಲೆವೆಂಗಳಿಗೆ ಪೇಳ್ದಪರೇ (ಮೋಹತ. ೦೬-೭೮). [ಪೊಲೆ + ಕೆಡು₁]

ಪೊಲೆಗೆಯ್ (ಕ್ರಿ). ಅಪವಿತ್ರಗೊಳಿಸು ; ಕಲುಷಿತ ಮಾಡು : ಕೆಡಿಸು : ನೆನೆಯ ಮತ್ತವನ ತಾಯ್–ವೆಂಡತಿಯನ್ . . . ಪುರಿನೇಣನುಸಿರ್ದಿಟಿ ಪೊಲೆಗೆಯ್ದು ಬಾಟನೀಡಾಡಿದಳ್ (ಅಂತಿಗೂ. ೩-೧೧). [ಪೊಲೆ + ಕೆಯ್₁]

ಪೊಲೆಗೆಳೆ (ನಾ). ಕೆಟ್ಟ ಸ್ನೇಹಿತ : ಆ ಪಾಪಕರ್ಮಂ ಪೊಲೆಗೆಳೆಯುತೆಯುಂ . . . ರಾಜ್ಯಕ್ಕಾಸೆವಟ್ಟು ನಿನ್ನಂ ಕೊಂದಪಂ (ಪಂಚತಂ. ೯೨-೦೦). [ಪೊಲೆ + ಕೆಳೆ₂]

ಪೊಲೆಗೇರಿ, ಪೊಲಗೇರಿ, ಹೊಲಗೇರಿ, ಹೊಲೆಗೇರಿ (ನಾ). ಹೊಲೆಯರು ವಾಸಿಸುವ ಓಣಿ : ಪುದೋಟ ಮತ್ತರೊನ್ದು [ಪೊ]ಲೆಗೇರಿಯ ಪಾಳರೆಮತ್ತರು (ಪಾಂಡೇಡ್. ೯-೨೦ ; 1049) ; ಪಟ್ಟಣವಂ ಬಿಟ್ಟು ಪೊಲೆ ಗೇರಿಯೊಳ್ ಪಡುವಂತೆ (ಧರ್ಮಾಮೃ. ೦೦-೮೨) ; ಪೊಲೆಗೇರಿಯೊಳುರಿ ನೆಗೆದೊದವೆ (ಬಂಪಂ. ೦೪-೨೬ ರಗಳೆ). **ಪೊಲಗೇರಿ :** ಆ ಮೊಸಳೆ ತನುವನು ಟಿದು ಬಟ್ಟಿಕ್ಕಾ ಪೊಲಗೇರಿಯಾಡಿನುದರದೆ ನೆಲಸಿ (ಯಶೋಧ. ೩-೯೯). **ಹೊಲಗೇರಿ :** ಹೊಲಗೇರಿಯ ಪಡುವಣ ಕರುವಗೆಯ್ಯಂದು ತೆಂಕಲಾಜು ಮತ್ತರು (ಸೌಇಇ. IX-1, ೫೦-೦೬; 1005) ; ಹೊಲಗೇರಿಯೊಳೊರ್ವಂ . . . ಹಿರಿಯ ಭಕ್ತನ ಮನೆಯೊಳಗುಂಡುದಲ್ಲದೆ ನಿನ್ನೋಲಗದೊಳು ಪೊಲೆಗಲ ಸಲುಂ ಬಂದವಂ (ಬಸರ. ೦೦-೨೯) ; ಹೊಲಗೇರಿಲಿ ಹೊಲೆಯ ಹೊಲಶಿಲ್ಲ (ಪುರಂದ. ೦-೦೦೬ ಅನುಪಲ್ಲವಿ). **ಹೊಲೆಗೇರಿ :** ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ ಜಲವೊಂದೆ ಶೌಚ ಮಜ್ಜನಕ್ಕೆ (ಬಸವ. ೬೭೮) ; ಶಿಲೆಯೊಳುಂಟೇ ಮೃದುವಱಸಲಂಬಿಲದೊಳುಂಟೇ ಬೆಣ್ಣೆ ಕರುಣಾಸುಲಭ ಹೊಲೆಗೇರಿಯೊಳ ಗುಂಟೇ ವೇದಘೋಷಣವು (ಬಸಪು. ೩೦-೨೮). [< ಪೊಲೆಯ + ಕೇರಿ]

ಪೊಲೆತಾಳ್ವ (ನಾ). ಒಬ್ಬಾತನ ಹೆಸರು : × × ಸತ್ತ ಪೊಲೆತಾಳ್ವನ ಮನೆವಗತಿ ಆಡಿಶದಧೆ × × × (ಪ್ರೌಶಿ. ೦೯೨೨, ೨-೬ ; 973). 'ಪೊಲೆ ತ್ತಾಳ್ವ' ಪರಾ. [?]

ಪೊಲೆತೆಱ³, ಹೊಲೆದೆಱ³ (ನಾ). ಒಂದು ಬಗೆಯ ತೆರಿಗೆ : ತೆಱ³ಯಂ ಕಿಱುದೆಱ³ಯುಂ ಪೊಲೆತೆಱ³ಯುಂ ಮಾನ್ಯಕ್ಕೆ ಬಂದ ತೆಱ³ಯು ದೇವತ್ತೆಱ ವೇಳ್ಕುಮೆಂಬ ಪಾತಕನಱಿದೀಗಳೊಳಟಿಗುಂ (ಕೊಣ್ಣಾಶಾ. ೩-೪೬ ; 1110). **ಹೊಲೆದೆಱ³ :** ಬಡಗಿಕೂಂಟೆಯ ಮನೆದೆಱ³ ಹೊಲೆದೆಱ³ ಸಾದಂ ಬಣ್ಣಿಗೆ ಬಳಂಬೆಯ ತೆಱ³ ತಳಸಾರಿಗೆ ಕಾಣಿಕೆ ಕವಣಾಯ ದಣ್ಣದಾಯ ವಿನ್ತಿನಿತುಮಂ . . . ಕೊಟ್ಟರ್ (ಸೌಇಇ. IX—1, ೦೬೨-೦೮ ; 1109) ; ಶ್ರೀವೈಜನಾಥದೇವರಿಗೆ ಶಿವಪುರದ ಹಲುಗೂರ ಸುಂಕ ಆಗಂತುಕ ಹೊಲೆ ದೆಱ³ ಗಾಣದ ತೆಱ³ . . . ಕೈಯಾರ ಧಾರಾಪೂರ್ವ್ವಕಂ ಮಾಡಿ ಕೊಟ್ಟ ದತಿ (ಎಇ. XIV, ಮುಂಡ. ೦೯೦-೩ ; ?). [ಪೊಲೆ? + ತೆಱ³₃]

ಪೊಲೆತ್ತಾಳ್ವ (ನಾ). ಒಬ್ಬಾತನ ಹೆಸರು : ಸ್ವಸ್ತಿ ಶ್ರೀಮತ್ ಶ್ರೀಪುರುಷ ಮಹಾರಾಜಂ ಪೃಥ್ವೀರಾಜ್ಯಂಗೆಯ್ಯೆ ಪೊಲೆತ್ತಾಳ್ವೊರೆನ್ನ ಕರಿಕನಾಡ ಬಿದಿ ರ್ಕಲ್ಲಾಳ್ವ ಕುಕ್ಕರ ಪಾಳಿಕ್ಕಾಱುನಾಡಿಯರ್ ತುರಿವು (ಎಇ. IX, ಸೆಂಗಳೂ. ೩೬-೨ ; ಸು. 750). [?]

ಪೊಲೆನುಡಿ (ನಾ). ಹೊಲಸುಮಾತು ; ಕೀಳುನುಡಿ : ಐವರೊಡ ವುಟ್ಟಿದರು ಸನ್ನುತರು ಲಲನೆಯೋರ್ವಳನಾಳ್ದರೆಂಬೀ ಪೊಲೆನುಡಿಗೆ ಕಿವಿಗುಡದೆ (ಸಾಳ್ವಶಾ. ೦-೧೬). [ಪೊಲೆ + ನುಡಿ₂]

ಪೊಲೆಬೂತು (ನಾ). (ಆಲಂ) ಕ್ಷುದ್ರವ್ಯಕ್ತಿ : ಪಾಣ್ಬೆಯಱ್ಪ ಸಜ್ಜನೆ ಯಂತೆ ಸಿಡಿಮಿಡಿಗೊಳ್ಳದೆ ಪೊಲೆಬೂತಿನಂತೆ ಕೆಡೆನುಡಿಯದೆ . . . ನಿಂದು ಸುವ್ರತಂಗಳಂ ತಾಳ್ದಿ (ರರ್ಮಾಮೃ. ೦೦-೩೭). [ಪೊಲೆ + ಬೂತು₁]

ಪೊಲೆಮನೆ, ಹೊಲೆಮನೆ, ಹೊಲೆವನೆ (ನಾ). ೧. ಸಾಮಾಜಿಕವಾಗಿ ಚಾತುರ್ವರ್ಣಗಳಿಂದ ಬೇರೆಯಾಗಿರುವವರ ಮನೆ (?) : ಅಲ್ಲಿ ಬೆಸಗೆಯ್ವ ಕಲ್ಯುಟಿಗರ ಮನೆ ೧ ಸಾವಗರಿಪ್ಪ ಪೊಲೆಮನೆ ೧ (ಇಇ. XIX, ೨೬೩-೧೦; 1054). **ಹೊಲೆಮನೆ :** ೨. ಹೆಂಗಸರಂ ಮುಟ್ಟಾದಾಗ

ಉಳಿದುಕೊಳ್ಳುವ ಮನೆ : (ಕ). ೩. ಹೆರಿಗೆಮನೆ : ಸೂತಿಕಾ ಗೃಹ : ಅವರಿಗೆ ಒಂದು ಗಂಡುಮಗುವೂ ಆಗಿತ್ತು . . . ಹೊಲೆಮನೆ ಯಲ್ಲಿಯೇ ಸತ್ತು ಹೋಯಿತು (ಬಂಕಿಪು. ೬೩); ಕೃಷ್ಣನು ಹೊಲೆಮನೆಗೆ ಹೋಗಿ ನಿಶ್ಚೇತನವಾಗಿ ಬಿದ್ದಿದ್ದ ಮಗುವನ್ನು ನೋಡಿ . . . ಕೈಯಾಡಿಸಿದನು (ಪಸಕಾ. ೩೬೬). **ಹೊಲೆವನೆ : ೪.** ಹೊಲೆಯನ ಮನೆ (?) : ಹೊಲೆಮನೆಯಿಂದಂ ಕಷ್ಟಂ ಪಲಲಮಯಂ ದೇಹಮಿದಱೊ ಳೊಲ್ಪಿರ್ಪೆನ್ನಿಂ ಹೊಲೆಯಾಂ ಕಷ್ಟನದಾವಂ (ಶಾಸಾರ. ೪೦-೨೪೬).

[ಪೊಲೆ + ಮನೆ]

ಪೊಲೆಮುಡಿ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀವರಿಗರ ಪೊಲೆಮುಡಿ ಕೊಟ್ಟದು ಸೊಡರು ಆಚನ್ದ್ರತಾರಕಂ (ಎಇ. VII, ಶಿಕಾಂ. ೪೫-೬೪; ಸಾ. 890 ?). [ಪೊಲೆ + ಮುಡಿ]

ಪೊಲೆಮೇರೆ 'ಪೊಲಮೇರೆ' ನೋ.

ಪೊಲೆಯ, ಹೊಲೆಯ (ನಾ). ೧. ಪಂಚಮವರ್ಣಕ್ಕೆ ಸೇರಿದವನು ; ಚಾಂಡಾಲ : ಎಯ್ದಿದಂ ಪೊಲೆಯನಾ ಪೊಲೆವಟ್ಟನೊಳಿರ್ದ ಕನ್ನೆಯಂ ಕಂಡು ಗೆಂಟಱೊಳೆ ಪೊಡೆವಟ್ಟು (ಶಾಡಂಶಾ. ೭೪೭); ಪೊಲೆಯರ್ತಮ್ಮಯ ಕೇರಿಗೆ ಪೊಲೆಯರ್ಬರೆ ತುಟ್ಟಿ ಮಾಟ್ಟರ್ (ಸಮಪ. ೪-೬೭); ಪಿತ್ತಳೆಯ ತೊಡವು ಪೊಲೆಯರ್ಗುತ್ತಮವೆನಿಸಿರ್ದ ಪೊನ್ನ ತೊಡವೆನಿಸುವವೋಲ್ (ರರ್ಮಾಕ್ಯ. ೪-೩೫). ೨. ನೀಚ ; ಕೆಟ್ಟವನು : "ಸಿತಗನುಂ ಪೊಲೆಯ ನೆಂದಕ್ಕುಂ" (ಕಕ್ಕಯ್ಯ. ೬೩) ; ನಿನ್ನಿಂದ ಬಿಟ್ಟು ಪೊಲೆಯರ್ಯಿನ್ನುಮ್ಮುನ್ನಾ ದೊಡೊಳರೆಯಿಂತೀ ಪುರದೊಳ್ (ಪುಜ್ಞಾಸ್ರ. ೬-೨೨). ೩. ಕುಲಹೀನ ನಾದವನು : ಕಲಿಯನೆ ಪಂದೆ ಮಾಟ್ಟ ಕಡುವಂದೆಯನೊಳ್ಗಲಿ ಮಾಟ್ಟ ತಕ್ಕನು ಪೊಲೆಯನೆ ಮಾಟ್ಟ ಮುಂ ಪೊಲೆಯನಂ ನೆಱೆ ತಕ್ಕನೆ ಮಾಟ್ಟ ತಮ್ಮೊಳಗ್ಗಲಿಸಿ ಪೊವಟ್ಟು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲ ಮದಱಿಂದಮೋಲಗಿಸಿ ಬಾಟ್ಟುದೆ ಕಪ್ಪವಿಳಾಧಿನಾಥರಂ (ಪಂಪಭಾ. ೦೨-೯೨). **ಹೊಲೆಯ : ೧.** "ಅಂತಾವಸಾಯಿ ಚಂಡಾಳಂ ತಾಂ ಹೊಲೆಯಂ ಜನಂಗಮಂ ಮಾತಂಗಂ" (ಪಸ್ತುಕೋ. ೬೬-೮೭) ; ಹೊಲಸ ತಿಂಬವನೇ ಹೊಲೆಯ (ಬಸವ. ೫೮೨); ಅತಿ ಹುಸಿವ ಯತಿ ಹೊಲೆಯ (ಹಕಸಾ. ೦೪-೦೦); ಹೊಲೆಯ ಹೊಱಗಿಹನೆ ಊರೊಳಗಿಲ್ಲವೆ . . . ಉಂಡ ಮನೆಗೆರಡನ್ನು ಬಗೆವಾತನೇ ಹೊಲೆಯ (ಪುರಂದ. ೦-೦೭೫ ಕಲ್ಲಿ). ೨. ಹೊಲೆಯ ಹೋಗೇಂದ ಬಲೆ ಮುಖದಿರುಹಿದಳು ಖಾತಿಯಲಿ (ತೊರಕಾ. ೫-೩. ೫೫).

[ಪೊಲೆ + — ಅ./ತಮಿ.ಪುಲೈಯ ; ಮಲ.ಪುಲಯ ; ಕೊಡ.ಪೊಲೆಯ]

ಪೊಲೆಯಣ್ಣ (ನಾ). ಒಬ್ಬಾತನ ಹೆಸರು : ಪುರಿಗೆಱೆಯಿಂ ಬನ್ದ ಪೊಲೆ ಯಣ್ಣನ ಶಿಲಾಕರ್ಮ್ಮ (ಸಿಇಇ. XI-1, ೦೦-೨೬; 865). [ಪೊಲೆ + ಅಣ್ಣ]

ಪೊಲೆಯಮ್ಮ, ಹೊಲೆಯಮ (ನಾ). ಒಬ್ಬಾತನ ಹೆಸರು : ಪೊಲೆಯಮ್ಮ × × × ಲ್ಲರನೆಱೆದು ಕೊನ್ದು ಗೆಲ್ದು ಪೊನ್ದಿ ಸ್ವರ್ಗ್ಗಾಲಯಮೇಱಿದನ್ (ಎಇ. VIII, ಸಿಂಪಿ. ೦-೬ ; 797) ; ಶ್ರೀ ಬೇವಿಗೆ ಮುತ್ತರಸರ ಮಗನು ಪೊಲೆಯಮ್ಮನ್ನಡಕರಿಕಲ್ಲನಾಳುತ್ತುಮ್ (ಎಇ. XI, ಪಳ್ಳಿಕೆ. ೩೩-೨೦; ಸಾ. 815). **ಹೊಲೆಯಮ :** ಹೊಲೆಯಮನೆಂಬ ಗೋತ್ರನಿಧಿಗಂ ಗುಣಭೂಷಣ ಚಂಡಿಕವ್ವೆಗಂ ಕುಲತಿಲಕಂ ಗುಣಾಂಬುನಿಧಿ ಪುಟ್ಟಿದಂ . . . ನೆಗಳ್ದ ಜಕ್ಕಣಂ (ಕಇ. IV, ೦೦-೩೯ ; 1121). [ಪೊಲೆ + ಅಮ್ಮ]

ಪೊಲೆಯ್ಗಬ್ಬೆ (ನಾ). ಒಬ್ಬಾಕೆಯ ಹೆಸರು : ಶ್ರೀಮತ್ ಕನ್ನಯನಬ್ಬೆಗಳ್ ಪೊಲೆಯ್ಗಬ್ಬೆ (ಎಇ. XI, ಹೊಳಲ್ಕೆ. ೩೩-೦೯ ; 965). [? + ಅಬ್ಬೆ]

ಪೊಲೆವಗೆ (ನಾ). ಕೆಟ್ಟಬುದ್ಧಿ ; ನೀಚಬುದ್ಧಿ : ಮಂದಾಂಗಾರಕರಿರ್ವರು ಮೊದೆಡೆಯೊಳ್ ನಿಂದು ವಕ್ರಿಸಲ್ ಪಶು ಕಱೆಗುಂ ತಂದು ಪೊಲೆವನೆ(ಗೆ) ಯೊಳರಸುಗಳಂದೊರ್ವರನೊರ್ವರಿಱಿದು ಸಾ(ವರ್)ವುಗೆ ಜಗದೊಳ್ (ಅಜಿಪು. ೬-೦೦೪). [ಪೊಲೆ + ಬಗೆ]

ಪೊಲೆವಟ್ಟು (ನಾ). ಹೊಲೆಯರ ಬೀಡು ; ಚಾಂಡಾಲರ ಕೇರಿ : ಇರದೆಯ್ದಿದಂ ಪೊಲೆಯನಾ ಪೊಲೆವಟ್ಟನೊಳಿರ್ದ ಕನ್ನೆಯಂ ಕಂಡು ಗೆಂಟಱೊಳೆ ಪೊಡೆವಟ್ಟು (ಶಾಡಂಶಾ. ೬೪೭). 'ಪೊಲೆಗೇರಿ' ಪರಾ.

[<ಪೊಲೆಯ + ಪಟ್ಟು]

ಪೊಲೆವಡು (ಕ್ರಿ). ಕಳಂಕವನ್ನು ಹೊರು : ಈ ಪರಮಜಿನಾಲಯಂಗಳಂ ಪೊಲೆವಟ್ಟಿರ್ದ್ದಾ ಪಾಂಡ್ಯಚೋಳನೆಂಬ ಮಹಾಪಾತಕ ತಿವುಳನಳಿದಧೋಗತಿ ಗಿಳಿದ (ಎಇ. XV, ೩೪೦-೩೦; 1071); ಪೊಲೆವಟ್ಟು ಪೊಳಲಿಂ ಪೊಱಮಡಿಸಿ ಕೊಂಡಲಸದೊಂದಡವಿಯೊಳಿರ್ಪ ಕುಲಗೆಟ್ಟು ಬೇಡವಳ್ಳಿಯ ಹೊಕ್ಕಿರ್ದಾ ಖಳನೊಂದಾನೊಂದು ಪಗಲು . . . ಜೀವದನವ ಕಳ್ದೊಯ್ದುತಮಿರಲು (ಸಂಮಿಸಂ. ೬-೩೦). [ಪೊಲೆ + ಪಡು]

ಪೊಲೆವಾತು, ಹೊಲೆಮಾತು (ನಾ). ಕೀಳುಮಾತು ; ಕೆಟ್ಟನುಡಿ : ಎಲೆ ಮೂಢ ಲಿಂಗಮಂ ನೀಂ ಪೊಲೆವಾತಿಂ ಬಳ್ಳಮೊಂಬುದಕ್ಕುಮೆ (ಸ್ವಸಂ. ೬-೦೯). **ಹೊಲೆಮಾತು :** ಹೊಲಬಱಿಯದೆ ತಾನು ರಾಯನೆಂದೆಂಬೀ ಹೊಲೆಮಾತಿಗುತ್ತರವುಂಟೆ (ಕುರಾಸಾಂ. ೦೦-೨೩); ಇಂಥ ಹೊಲೆಮಾತಾಡಿ ದವರ ಬಾಯಲ್ಲಿ ಹುಳು ಸುರಿಯದಿರುತ್ತದೆಯೆ (ಗೃಹಲಿ. ೬೩); ಇದನ್ನು ಕಂಡು ಅವನು ಕಿಡಿಕಿಡಿಯಾಗುತ್ತಿದ್ದ, ಶಪಿಸುತ್ತಿದ್ದ, ಹೊಲೆಮಾತಾಡುತ್ತಿದ್ದ (ಪಂಪಭಾ. ೩೦೦). [ಪೊಲೆ + ಮಾತು]

ಪೊಲೆವೆಣ್, ಹೊಲೆವೆಣ್ (ನಾ). ಕೆಟ್ಟಹೆಣ್ಣು ; ನೀಚಸ್ತ್ರೀ : ಪೊಲೆವೆಣ್ಣ ನಿಪೆನಗೆಂದುಂ ನಿಲಲೊಲ್ಲದೆ ತೊಲಗಿ ಪೋಪ ಗಂಡವಿಮುಕ್ತರ್ ಮಲಧಾರಿ ಸ್ವಾಮಿಗಳಂ ನಿಲಿಸುವ ಸತ್ಪುತ್ರನೆನಗೆಂದಾದಪನೋ (ಅರ್ಧಪಂ. ೦-೦೦೩). **ಹೊಲೆವೆಣ್ :** ಹೊಱಮಿಂಚಿಂ ಹೊಲೆವೆಣ್ಗೆ ಸೋಲ್ವ ತೆಱದಿಂ . . . ವಿಟ ವೇಶ್ಯಾಕಾವ್ಯಮಂ ಕೇಳ್ದು ಮೆಯ್ ಮಱೆವರ್ (ರತ್ನಾಕ. ೬೭).

[ಪೊಲೆ + ಪೆಣ್]

ಪೊಲೆಸೂರುಳ್ (ನಾ). ಹೀನವಾದ ಪ್ರತಿಜ್ಞೆ ; ನೀಚವಾದ ಶಪಥ : ನುಡಿಯೆಲ್ಲಂ ಪೊ[ಪಾಶಾಂ. ಹೊ]ಲೆಸೂರುಳ್ (ಲೀಲಾವ. ೨-೦೦೨); ಮಾತೆಲ್ಲಂ ಪೊಲೆಸೂರುಳ್ (ಪಪುರ. ೫೫ ಪ್ರಯೋ). [ಪೊಲೆ + ಸೂರುಳ್]

ಪೊಲ್ಗೆ, ಪೊಲಿಗೆ, ಹೊಲಿಗೆ (ನಾ). ೧. ಹೊಲಿಯುವಿಕೆ : ಗೆಜಾರಕ್ಕೆ ಉಡುಗೆ, ಪಸುಗೆ, ಪೊಲ್ಗೆ (ಕಪುರ. ೨೦೦ ಪ್ರಯೋ). **ಪೊಲಿಗೆ :** ೧. "ಸೇವನಂ, ಸೀವನಂ, ಸ್ಯೂತಿಃ—ಈ ೩ ಪೊಲಿಗೆ" (ಶಾಸಾರಾ. ೪). ೨. ಹೊಲಿದುದು : ತಾಱಿಗೆ, ಮಾಱಿಗೆ, ಪೊಲಿಗೆ (ಕಶ್ಯಾಸು. ೫೬೫ ಪ್ರಯೋ). **ಹೊಲಿಗೆ :** ೧. "ಧರ್, ಡೇಹನಂ, ಈ ೨ ಹೊಲಿಗೆ" (ಶಾಶಕ್ಯ. ೬೬); ಚೋಡು ಪೈಠಣಿಗಳ ಹೊಲಿಗೆಯಂ ಗರುವ ಚಿಪ್ಪಿಗಗೇರಿಯಿಹವು (ಕಂಪಂ. ೬-೫೫). ೨. "ಊತ ಸ್ಯೂತ ಎಂಬಿವು ನೂಲ ನೆಯ್ಗೆಯಲ್ಲಿಯೂ ಹೊಲಿಗೆಯಲ್ಲಿಯೂ ವರ್ತಿಸುಗು" (ಶಾಸಾರಾ. ೪); ಹಱಿಗವಿಗಳ ಕಬ್ಬಂಗಳ ಹೊಱಗಳಿಯಕ್ಕರದ ಹೊಲಿಗೆ ಬರ್ಚಿದೊಡೆಲ್ಲಂ . . . ಎಕ್ಕಸಕ್ಕಮಸ್ತಂಬ್ಯಸ್ತಂ (ಗಿಂಪಿ. ೦-೨೩); ಕಲ್ಬಮೇಘದ ಹೊಲಿಗೆ ಹಱಿದವೊಲಾಯ್ತು ಮಾದ್ರೇಶ್ವರನ ಶರಜಾಲ (ಕುವಾಶ. ೨-೩೬) ; ಬಸುಱಲಿ ಹೊಲಿದ ಹೊಲಿಗೆಯ ದಡಿಗರಕ್ಕಸರಾಯ ರಿದ್ದುದು ಕೋಟಿಸಂಖ್ಯೆಯಲಿ (ತೊರಕಾ. ೬-೬-೩). ೩. ಸಂಬಂಧ ; ಹೊಂದಾಣಿಕೆ : ಕಾಯದ ಜೀವದ ಹೊಲಿಗೆಯನಱಿದವಂಗಲ್ಲದೆ ಲಿಂಗೈಕ್ಯವಿಲ್ಲ (ಸೋಸಾಮಾ. ೨೫೬-೬೦೯) ; ಕಾಯ ಜೀವದ ಹೊಲಿಗೆಯ ಅಳಿದ ಭೇದವ ತಿಳಿಯಬಲ್ಲಡೆ ನಮ್ಮ ಗುಹೇಶ್ವರಲಿಂಗದ ಅಱಿವು ಸಾಧ್ಯವಪ್ಪುದು (ಅವಸಂ. ೨೭೩-೧೨೫೭). [ಪೊಲ್ + — ಗೆ./ತುಳು. ಪೊಲಿಕೆ, ಪೊಲಿಗೆ, ಪೊಲ್ಲಿಗೆ]

ಪೊಲ್ಲ, ಹೊಲ್ಲ (ನಾ). ೧. ಕೆಟ್ಟುದು ; ಹೀನವಾದುದು : ಪಾಪಕರ್ಮಂ ಪೊಲ್ಲಂ (ಕಬಾ. ೦-೬೯) ; ಪಗೆ ಪೊಲ್ಲ ಪಾಂಡುನಂದನರೊಳ್ (ಪಂಪಭಾ. ೬-೬೫). ೨. ಕೇಡು ; ಆಪತ್ತು : ಅವನು ನಂಬಿದಂದು ಪೊಲ್ಲಮಕ್ಕುಂ (ಪಂಪಸಂ. ೦೦೭-೩); ಗುರು ಪರಿವೇಷದೊಳ್ ನೆಲಸಿ ವಿಪ್ರಜನಕ್ಕೆದು ನಾಡೆ

ಪೊಲ್ಲ (ಅಭಿಮ. ೩-೦೬). ೩. ಕೀಳುತನ : (ಕ). ೪. ಕೆಟ್ಟಗುಣವುಳ್ಳವನು ; ಹೀನನಾದವನು : ಪೊಲ್ಲರಲ್ಲದರಂ ಪೊಲ್ಲರೆಂದು ನುಡಿದೊಡೀ ಬಾಹಾದುದು (ಪಂಚಾಮೃ. ೦೬-೩೯ ಪ); ಕಳ್ಗುಡಿವವರಂ ಪೊಲ್ಲರೆಂಬಂತೆ ಪಾಲ್ಗುಡಿವವರನೇಕೆ ಪೊಲ್ಲರೆನ್ನರ್ (ಧರ್ಮಾಮೃ. ೭-೪೩). ೫. ಕೇಡುಂಟುಮಾಡುವವನು ; ಅನಿಷ್ಟಕಾರಕ : ಹಿಮಧಾಮಂ . . . ತ್ರಿರಂಧ್ರಂಗಳೊಳತಿಶುಭದಂ ಶೇಷದೊಳ್ ಪೊಲ್ಲನಕ್ಕುಂ (ಜಾತಕ. ೧೦-೪). (ಗು). ೬. ಒಳ್ಳೆಯದಲ್ಲದ ; ಕೆಟ್ಟದಾದ : ಪದಿನಾಱುಂ ಪೊಲ್ಲ ಕನಸುಗಳಂ ಕಂಡಂ (ಪಡ್ಮಾಕಾ. ೬೭-೨೦); ಸಂಜೆಯಂತೆ ಪೊಲ್ಲ ವಸ್ತುವಿನೊಳ್ ರಾಗಿಯಾಗದೆ (ಧರ್ಮಾಮೃ. ೫-೯೯); ಪೊಲ್ಲ ಕೆಯ್ತಮುಂ ದುರ್ಭಗತ್ವಮುಂ ಕಿವಿಗೆ ಸೊಗಯಿಸಿದ ಪೊಲ್ಲ ಸ್ವರಂಗಳುಂ . . . ಎಂದಿವೆಲ್ಲಮಶುಭನಾಮಂಕರ್ಮಫಲಂಗಳುಂ (ಪಾರ. ೩೦) ; ಪೊಲ್ಲ ಸುದ್ದಿಗಳನೊರೆತರ್ಪೊನನ್ ಒಲ್ವನೊರ್ವನುಮಿಲ್ಲ (ಅಂಕೀಗೂ. ೦೩-೨೬೦). ಹೊಲ್ಲ : ೧. ಬೇಡ ಬೇಡ ಅನ್ಯದೈವದ ಸಂಗ ಹೊಲ್ಲ (ಬಸವ. ೬೦೨) ; ಬಱಿಯ ವಿಚಾರ ಹೊಲ್ಲ (ಹಕಶಾ. ೮-೬೦) ; ನೆರೆ ಹೊಲ್ಲ ದುರಾಚಾರಿಗಳ (ಅಂಕೀ. ೦೨೬-೯೨) ; ಹೇಳಿ ಮಾಡುವುದು ಹೊಲ್ಲ, ಅದು ಆತ್ಮಪ್ರಶಂಸೆ (ಕಾಂಕಶಾ. ೫೬). ೪. ಪಲ್ಲವನನಲ್ಲೆಂದು ಪೆಲ್ಲನಂ ಹೊಲ್ಲೆಂದು (ಜಗಿ. ೦೭-೦೦೮ ಕಗಳೆ) ; ಇಲ್ಲದಿಹ ಕಾಲಕ್ಕೆ ಶಾ ಹೊಲ್ಲನವ[ಜಾಕಾಂ. ಹೊಲ್ಲ ಹನು]ಜನರಿಂಗೆ ಅಲ್ಲದ ಗುಣದ ಅರಸಿಂಗೆ ಸಾಲಕ್ಕೆ ಕಲ್ಲೆದೆಯು ಬೇಕು (ಸರ್ವಜ್ಞ. ೦೯೦೭). ೭. ಅಪರಾಧ ; ತಪ್ಪು : ಹಗೆ ಹೊಲ್ಲ ದೈವದಲಿ (ಕುಮಾರಸ್ತ್ರೀ. ೧-೯). (ಗು). ೮. ಕೆಟ್ಟ ಸ್ವಭಾವದ; ದುಷ್ಟ : ಕಲ್ಲಿನಲ್ಲಿ ವಲ್ಲಭನ ಕಂಡೆವೆಂದು ಬಡಿದಾಡುತ್ತಾರೆ ನೋಡಾ ಅಲ್ಲಯ್ಯಾ ಈ ಹೊಲ್ಲ ಮನುಜರು (ಸಿದ್ಧಪ. ೪. ೨೦೩-೬೮೦) ; ಹೊಲ್ಲ ದೈವವನಿನಿತು ನೀ ನೋಡುವೆನದೆಂದರೆ ಕರವೆ ನಾನೀಗ (ಸಂಶಪ. ೮-೬೬) ; ಹೊಲ್ಲ ಜೋಗಿಯ ಮಾತ ಕೇಳಿದರು (ಸಿದ್ಧಪು. ೨-೫೫).

ಪೊಲ್ಲಾಗು, ಹೊಲ್ಲಾಗು = ೧. ಕೆಡುಕಾಗು ; ಅನಿಷ್ಟವಾಗು : ಅದು ಲೇಸಾದೊಡಂ ಪೊಲ್ಲಾದೊಡವೆನ್ನ ಪುಣ್ಯಂ (ಅರ್ಧನೇ. ೩-೬೯ ಪ); ಕಲ್ಲಾಗಲೇನು ಹೊಲ್ಲಾಗಲೇನು ಅದು ಬಲ್ಲತನಕೆ ಸಲ್ಲ ಆ ನಲ್ಲೆ ತಾನು ಇರುವಲ್ಲೆ ನಿತ್ಯ ಇರುತಿಹನು ಒಬ್ಬ ನಲ್ಲ (ಅರಳು. ೫೫-೦೩). ೨. ಕೇಡು ಬಗೆ ; ಕೆಟ್ಟುದನ್ನು ಎಣಿಸು : ಇದಕ್ಕಾವನಾನುಂ ಹೊಲ್ಲಾಗಿರೆ × × × ಕುರುಕ್ಷೇತ್ರ ವಾರಣಾಸಿ ಸಾಯಿರಕವಿಲೆಯುಮಂ . . . ಕೊಂದ ಪಂಚ ಮಹಾಪಾತಕನಕ್ಕು (ಶಾ. IV. ೨೦-೦೩ ; ?).

[ದೇ. ॥ ತಮಿ. ಪೊಲವ್, ಪೊಲ್ಲಾ; ಮಲ. ಪೊಲ್ಲಾ]

ಪೊಲ್ಲಕೆಯ್ 'ಪೊಲ್ಲಗೆಯ್' ನೋ.

ಪೊಲ್ಲಗೆಯ್, ಪೊಲ್ಲಕೆಯ್ (ಕ್ರಿ). ೧. ಕೆಡುಕುಮಾಡು : ಕೇಡುಂಟುಮಾಡು : ವನಜಾಕ್ಷಿ ದೋಷಿಯಲ್ಲದ ನಿನಗೆ ಕರಂ ಪೊಲ್ಲಗೆಯ್ದಂ (ಪಂಕಶಂ. ೬೬-೨೦); ಇದಾವುದು ಪೊಲ್ಲಗೆಯ್ದನೀ ಮುನಿಸವಿವೇಕಮೆಂದು ನುಡಿದಳ್ (ಪಂಚಾಮೃ. ೦೦-೬೮). ೨. ತಪ್ಪು ಮಾಡು : ವಲ್ಲಭಿಯರ್ ಪೊಲ್ಲಗೆಯ್ದರಂತುಸಿರದೆ ಕುಳ್ಳಿರೆ (ಧರ್ಮಾಮೃ. ೪-೦೩೪). **ಪೊಲ್ಲಕೆಯ್** : ೧. ಎನಿತಾದೊಡಮೇಂ ಪ್ರಭು ಪೊಲ್ಲಕೆಯ್ಗುಮೇ (ಪಂಕಶಾ. ೦೦-೬೩) ; ಕಳವಂ ಮಿಥ್ಯೆಯನೇಱಿಸಿ ಕಳತ್ರದೊಳ್ ಪೊಲ್ಲಕೆಯ್ದರೆಂದಿಲ್ಲದುದಂ ಗಱಪಿದೊಡೆ (ಪಂಕಾಪಾ. ೯-೯) ; ಇವರ ಕೊಲ್ವುದುಂ ಪುರುಷಾರ್ಥಮಲ್ಲ ಚಿಃ ಪೊಲ್ಲಕೆಯ್ದುರಿ (ವೇಣುಪು. ೪-೦೦೩ ಪ). ೩. ಹಾದರ ಮಾಡು ; ವ್ಯಭಿಚರಿಸಂ : ಬ್ರಹ್ಮ ಘಾತಿವೋದನೆಂಬುದೇಕೆ . . . ತನ್ನ ಸುತೆ ಪದ್ಮೆಯೊಳು ಪೊಲ್ಲಕೆಯ್ದನೆಂಬುದೇಕೆ (ಪಾಶಾ. ೯೬೪). [ಪೊಲ್ಲ + ಕೆಯ್$_1$]

ಪೊಲ್ಲಗೆಯ್ಮೆ (ನಾ). ಅಯೋಗ್ಯವಾದ ಕೆಲಸ; ಕೆಟ್ಟ ಕಾರ್ಯ : ಇಲ್ಲದಿರೆ, ಎಂತಕ್ಕುಮ್ ಈ ಪೊಲ್ಲಗೆಯ್ಮೆ? (ಅಕ್ಕಶ್ರಾ. ೯-೦೩೯).

[ಪೊಲ್ಲ + ಗೆಯ್ಮೆ (< ಕೈಮೆ$_1$)]

ಪೊಲ್ಲದು, ಹೊಲ್ಲದು (ನಾ). ೧. ಕೆಟ್ಟುದು ; ಹೀನವಾದುದು : ಒಳ್ಳಿತ್ತಾ ಕೆಯ್ದೊರಾರ್ಪೊಲ್ಲದುಮದಱನ್ತೆ (ಇಶಾ. X. ೬೧-೭ ; ೨ನೆಯ ಕಡೆ); ಇದು ಪೊಲ್ಲದೊ ತಾನಿದೊಳ್ಳಿತೋ ಮೋಣದೆಂಬುವಂ ಬಗೆಯಶಾರ್ತ ನಿಲ್ಲಾಕ್ಷಣದೊಳ್ (ಕಾದಂಪೂ. ೬೬೬) ; ಒಳ್ಳಿತ್ತು ಪೊ[ಹಾಕಾಂ. ಹೊ]ಲ್ಲದೆಂಬುದನೊಳ್ಳಿತ್ತಾಗಱಿವವಂಗೆ ಜಿನವಚನಂ ತಾನೊಳ್ಳಿತ್ತು (ಸಮಾಪ. ೩-೩೦). ೨. ಅಹಿತವಾದುದು ; ಅಸಹ್ಯವಾದುದು : ಪೊಲ್ಲದಂ ನುಡಿದೊಡೆ ಕೇಳ್ದುಮುಣ್ಬರೆ ಸದಾಚರಿತರ್ಜಿನಭಕ್ತರೆಲ್ಲಿಯುಂ (ಸಮಪ. ೬-೨೩) ; ಮನದೊಳ್ ಪೊಲ್ಲವನೆಂತುಂ ನೆನೆಯರ್ (ಕಾಪ್ಪಾಪ. ೨೩೫). ೩. ಅಯೋಗ್ಯವಾದುದು ; ಅನುಚಿತವಾದುದು : ಸರಿಯಲ್ಲದುದು : ಈ ನೆರೆದ ಗುರುಜನಂಗಳ್ ಮಾನಿನಿಯರ ಮುಂದೆ ಕರ್ಣ ಪೊಲ್ಲದಂ ನುಡಿದೈ (ಪಂಪಭಾ. ೨-೬೦) ; ಪೊಲ್ಲದಂ ನುಡಿದನಾತನಂ ಬಿಸುಟಂ ತಕ್ಕಿವ ನುಡಿಯ ನುಡಿವನೇ (ಗದಾಯು. ೨-೨೦) ; ಸಲ್ಲದು ವಿಪ್ರುಂಗಿಂತಿದು ಪೊಲ್ಲದು (ಸಮಪ. ೨-೩೬). ೪. ಅನಿಷ್ಟವಾದುದು ; ಕೇಡು ; ಕೆಡುಕು : ರಿಸಿಯರೊಂದಿಱುವೆಗಪ್ಪೊಡಂ ಪೊಲ್ಲದಂ ಬಗೆಯದವರೆನಗಹಿತಮಂ ಬಗೆವರೆ (ಪಚಾಂಗಾ. ೦೬೬-೨೬) ; ಎನ್ನ ಪುಣ್ಯೊಳಗೆ ನಿನ್ನ ರೋಮಂ ಪುಗೆ ಪೊಲ್ಲದಪ್ಪುದು (ಪಂಕಶಂ. ೦೪೫-೦೨) ; ನಿಮ್ಮಾಶ್ರಮದತ್ತಲ್ಪೋಗಿಮಿರ್ದಂದ ರಸರ ದೆಸೆಯಿಂ ನಿಕ್ಕುವಂ ಪೊಲ್ಲದಕ್ಕುಂ (ಸುಳುಮಾ. ೬-೪೦) ; ಭುವನಜನಕ್ಕೆ ಗೋನಿವಹಕ್ಕೆ ಪೊಲ್ಲ[ದು ಸವನಿ]ಕ್ಕು (ಅಭಿಮ. ೬-೦೬). **ಹೊಲ್ಲದು** : ೩. ಕೋಲ ಬಲುಹುಂಟಾಗೆ ನಾಲಗೆ ಹೋಲ ನುಡಿಯದು ಹೊಲ್ಲದೇನಿದು ಖೂಳ ಕಟಕಿಯ ಮಾತು ಬೇಡಂಬಿನಲಿ ಮಾತಾಡು (ಕುಮಾಕೃ. ೯-೩೦).

[<ಪೊಲ್ಲ./ತಮಿ. ಪೊಲ್ಲತು, ಪೊಲ್ಲಾತು]

ಪೊಲ್ಲದುಗೆಯ್, ಪೊಲ್ಲದುಗೈ (ಕ್ರಿ). ೧. ಕೆಡುಕು ಮಾಡು ; ಕೇಡು ಮಾಡು : ಒದವುಗೆ ನಿನ್ನ ಸಂತತಿಗೆ ನೂರ್ವರುದಗ್ರಸುತರ್ಕಳೊಂದೆ ಗರ್ಭದೊಳೆನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದೆಯ್ (ಪಂಕಶಾ. ೦-೦೩೦) ; ಪೊಲ್ಲದುಗೆಯ್ದನೆಂದು ನಹುಷಾಜಗರಂ ಪಿರಿದಪ್ಪ ದೈನ್ಯದಿಂ ಬಲ್ಲಿದನಪ್ಪಗಸ್ತ್ಯಮುನಿಯೊಳ್ ದಯೆಯಂ ಪಡೆಯಲ್ಕೆ ಬಂದವೋಲ್ (ಕಾದಂಪೂ. ೦೦೩) ; ಕರವಿಂತೊಂದವಿವೇಕಮಂ ನೆಗೞ್ದಿರಂದೇಕಿಂತುಟಂ ಪೇಳದಿರ್ದಿರೆ . . . ಪೊಲ್ಲದುಗೆಯ್ದರೆಂದು ಜಡಿದರ್ ಕುಂತೀ ಸುತರ್ಕೊಂತಿಯಂ (ಗದಾಯು. ೦೦-೨೦). ೨. ಹೀನಕಾರ್ಯವನ್ನು ಮಾಡು; ಪಾಪ ಮಾಡು: ಭೋಗೋಪಭೋಗಂಗಳ್ಗೆ ಪೊಲ್ಲದುಗೆಯ್ದೊಲ್ಲದ ಪೆಂಡತಿಗೆ ಪೇಸಿದಂತೆ ಪೇಸಿ (ಧರ್ಮಾಮೃ. ೫-೨೦). **ಪೊಲ್ಲದುಗೈ** : ೧. ಹಿಂದು ಮುಂದರಿಯದೆ ಪೊಲ್ಲದುಗೈವನು ನರಕದ ಭಯವಿನಿತಿಲ್ಲ (ಇಂಕಾಪ. ೦೬೯-೮೨). [ಪೊಲ್ಲದು + ಕೆಯ್$_1$]

ಪೊಲ್ಲದುಗೈ 'ಪೊಲ್ಲದುಗೆಯ್' ನೋ.

ಪೊಲ್ಲನುಡಿ, ಹೊಲ್ಲನುಡಿ (ನಾ). ಕೆಟ್ಟ ಮಾತು ; ಅಹಿತವಾದ ನುಡಿ : ಶಿಶುಪಾಲನ ಪೊಲ್ಲನುಡಿಗೆ ಸೈರಿಪುದು (ಜಗಿ. ೦೬-೯೬). **ಹೊಲ್ಲನುಡಿ** : ಆಲಿಪುದುಮಾ ಹೊಲ್ಲನುಡಿಯ ಕಿಡಿಕಿಡಿವೋಗಿ (ಕೇಶಶಾ. ೩-೩೯) ; ಬಿಲ್ಲೇಶನ ಬಾಯಿಂದ ಹೊಲ್ಲನುಡಿಗಳ ಕೇಳಿ ಎಲ್ಲರು ಬೆರಗುಗೊಂಡರು (ಸಿದ್ಧಪು. ೦೩-೯೬). [ಪೊಲ್ಲ + ನುಡಿ$_2$]

ಪೊಲ್ಲಬ್ಬೆ (ನಾ). ಒಬ್ಬಾಕೆಯ ಹೆಸರು : ನಾಗಳ ಪೊಲ್ಲಬ್ಬೆ ಮಾಡಿಸಿದ ಬಸದಿ (ಶಿಂಶಶಾ. ೦೯೩೯. ರಾಶಿಪಟ್ಟೂರ್. ೦೦೬-೨೦ ; 781).

[ಪೊಲ್ಲ ? + ಅಬ್ಬೆ$_1$]

ಪೊಲ್ಲಮಾತು 'ಪೊಲ್ಲವಾತು' ನೋ.

ಪೊಲ್ಲಮಾನಸ, ಪೊಲ್ಲಮಾನಿಸ (ನಾ). ಕೆಟ್ಟ ಮನುಷ್ಯ; ದುರ್ಬುದ್ಧಿಯಂಳ್ಳವನು : ಅಧಮರ ಪೊಲ್ಲಮಾನಸರ ದುರ್ಜನರ ಚಾರಡಾತರ ವಿಜಾತಿಗಳ್ಗೆ ಯೋಗ್ಯಮಪ್ಪಯೋಗ್ಯಮಂಗೆಯ್ದಿರ್ (ಪಚಾಕಾ. ೯-೦೯) ;

ದುರ್ಯೋಧನನಪ್ಪೊಡೆ ಪೊಲ್ಲಮಾನಸನಾತನುಂ ನೀಮುಮೊಂದೆಡೆಯೊಳಿರೆ ಕಿಸುಱುಂ ಕಲಹಮುಮೆಂದುಂ ಕುಂದದು (ಪಂಪಭಾ. ೨-೯೨ ಪ). ಪೊಲ್ಲ ಮಾನಿಸ : ಪೊಲ್ಲಮಾನಿಸರ ಪೊಲ್ಲಮೊಗಂಗಳ್ (ಪಚಾರ. ೦೭೭ ಪ್ರಯೋ). [ಪೊಲ್ಲ + ಮಾನಸ$_1$ (< ಮಾನುಸ)]

ಪೊಲ್ಲಮಾನಸಿ (ನಾ). ದುಷ್ಟಹೆಣ್ಣು : ನೀಂ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದು (ಪತ್ಮಾಣಾ. ೦೬-೨೯). [ಪೊಲ್ಲ + ಮಾನಸಿ]

ಪೊಲ್ಲಮಾನಿಸ 'ಪೊಲ್ಲಮಾನಸ' ನೋ.

ಪೊಲ್ಲಮೆ, ಹೊಲ್ಲಮೆ (ನಾ). ೧. ದುಷ್ಟತನ ; ಕೆಟ್ಟತನ : ಪೊಲ್ಲಮೆಯುಂ ಗುಣಮುಂ ತಮಗಲ್ಲದೆ ಪುದುವಲ್ಲ (ಕವಿರಾ. ೩-೦೭೮); ಅವನೀ ನಾಥನ ಗೆಯ್ದು ಪೊಲ್ಲಮೆಯೆನ್ನೊಳ್ಬಿಂಗಮಿಂ ಸಕ್ಕಿಯಾಗು (ಪಂಪಭಾ. ೯-೨೬); ಪೊಲ್ಲಮೆಯೊಳೊಂದದೆ ಚಾರಿತ್ರದೊಳ್ ಕೂಡಿ ನೆಗೞ್ದ ಧರ್ಮಮೆ ಸದ್ಧರ್ಮಂ (ರರ್ಮಾಮ್ಯ. ೯-೧೬). ೨. ಕೆಡುಕು; ಅಹಿತ; ಕೇಡು : ಕಂಸಕೃತಾವಚಾರದಿಂ ನಿರ್ವಿಚಾರಮೆ ಪೊಲ್ಲಮೆಯಾದುದು (ಹರಿವಂ. ೨-೬೦ ಪ); ಆ ನಿನಗೆ ಮಾಡಿದ ಪೊಲ್ಲಮೆಯುಂಬೆ (ದಶಕು. ೦೦-೭೫) ; ಈಗಳೋ ತಾನೆ ಗೆಯ್ದು ಪೊಲ್ಲಮೆಗೆ ದೇವರ್ಗೆ ತೆತ್ತಪನ್ ಈ ದಂಡಮನ್ (ಬಸ್ರ. ೦-೦೦). ೩. ದೋಷ; ತಪ್ಪು : ಸಂಸಾರದ ಪೊಲ್ಲಮೆಯು ಮನನಿತ್ಯತೆಯುಮುಂ ಬಗೆದು ವೈರಾಗ್ಯಪರರಾಗಿ (ಪಡ್ಮಾಣಾ. ೧೩-೬) ; ಏಗಾನುಮೊಂದು ಪೊಲ್ಲಮೆಯನಿಲ್ಲದುದನುದ್ಭವಿಸಿ (ಪರ್ಣಪು. ೧೫-೫೯ ಪ); ಮರುಳೀ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್ (ಯಶೋಧ. ೨-೪೨). ೪. ಕಳಂಕ ; ಅಪವಾದ : ಇನ್ನುಮೊಂದು ಕಥೆಯುಂ ಪೇಳ್ದೆನ್ನ ದೋಗಣ ಪೊಲ್ಲಮೆಯುಂ ಪಿಂಗಿಸಿಕೊಳ್ವೆಂ (ರರ್ಮಾಮ್ಯ. ೦೨-೦೩೭). ೫. ಪಾಪ : ಆದಂ ಪೊಲ್ಲಮೆಯೊಳ್ ಸಲೆ ನಡೆವರ್ ದುಷ್ಟಮಮೆಂಬಯ್ದನೆಯ ಕಾಲದೊಳ್ (ಆದಿಪು. ೦೫-೫೬). ಹೊಲ್ಲಮೆ : ೧. ಅಗಲ್ಕೆಯಲ್ಲಿಯುಂ ಹೊಲ್ಲಮೆಯಲ್ಲಿಯುಂ ಪ್ರತ್ಯವಾಯಮೆಂಬುದು (ಹರಿಭಾಯು. ೦೩೭-೩೯) ; ಸ್ತ್ರೀಜೇಷನದ ಹೊಲ್ಲಮೆ ಸಹ ನಯಸೇನನ ತೀಕ್ಷ್ಣವಾದ ನೋಟಕ್ಕೆ ಸಿಲುಕದೆ ಹೋಗಿಲ್ಲ (ತವಪ. ೧೫). ೨. ವಲ್ಲಭ ನಿನಗೇಗೆಯ್ದಂ ಹೊಲ್ಲಮೆಯುಂ (ಸಳಕಂ. ೫೪೪). ೩. ಒಸಗೆ ತಮ್ಮದೆನೆ ವೆರ್ಮೆಯೊಡನಾಡಿ ಹೊಲ್ಲಮೆಯು ಕೆಳಗಿಕ್ಕಿ ತಿಳಿದೆಳರ್ಚುವ ಬಾಳ್ಗೆ ಸೊಲ್ಲೇನು ? (ಕಾಲೂರ. ೭೫-೦೩೭). ೬. ಕೆಟ್ಟ ಮಾತು ; ನಿಂದೆ : ಈ ಕಡೆಯ ಬಾಯಿಂದ ಒಳ್ಳೆಯ ಮಾತಾಡುತಿದೆ ಆ ಕಡೆಯ ಬಾಯಿಂದ ಬರಿಯ ಹೊಲ್ಲಮೆಯೆ ಹೊರಹೊಮ್ಮುತಿದೆ (ಬಗಾಗೀ. ೫೦). [ಪೊಲ್ಲ + —ಮೆ$_3$]

ಪೊಲ್ಲಮೆಗಾಣ್ (ಕ್ರಿ). ದೋಷವನ್ನು ಕಾಣು ; ತಪ್ಪನ್ನು ಕಾಣು : ಮನಮನಗಲ್ಬಲೊಂದೆಡೆಯ ಪೊಲ್ಲಮೆಗಾಣೆನೆ ಬೇಱದೊಂದು ರೂಪಿನ ನಿಧಿ ಬೇಱದೊಂದು ಕಡುಗಾಡಿಯ ಸನ್ನಿಧಿ (ಶಾಂತಿಪು. ೯-೭೯); ಪೊಲ್ಲಮೆಗಂಡದ ನಱುದುಂ ಮೆಲ್ಲನೆ ಸಯ್ತಾಗೆ ತಿರ್ದುವರ್ಸುಕವೀಶರ್ (ರರ್ಮಾಮ್ಯ. ೦-೧೩) ; ಪೊಲ್ಲಮೆಗಂಡವರ್ಳಿದು ತಮ್ಮಯ ತೊಟ್ಟಿರನೆಂತು ಮಾಱೊಡಂ ಸಲ್ಲದೆ (ಶೃಂಗಾರ. ೩-೫೦). [ಪೊಲ್ಲಮೆ + ಕಾಣ್]

ಪೊಲ್ಲಮೆಗೆಯ್ (ಕ್ರಿ). ಕೆಟ್ಟುದನ್ನು ಮಾಡು ; ಕೇಡುಂಟುಮಾಡು : ಸಂಜೀವಕಂಗೆ ನೀ ಕೂರ್ಪೆಯಪ್ಪ ಕಾರಣದಿಂದಾತನೆನಿತು ಪೊಲ್ಲಮೆಗೆಯ್ದ ನಾದೊಡವೊಳ್ಳಿದನೆಂದು ನುಡಿದವೆ (ಪಂಕಕಂ. ೦೦೧-೬); ಪೊಲ್ಲಮೆಗೆಯ್ಯ ಲಾಱದಿದು (ಪಚಾರ. ೦೯-೬೦) ; ಪೊಲ್ಲಮೆಗೆಯ್ಯಲ್ಬುಟ್ಟೆದೆಡೆಗೆ ನೆಲನೆಲ್ಲ ಮನುಱದಳಱುಪ ಖಳ ನೀ ನನೆವಿಲ್ಲಂ (ಉತ್ಕರೀ. ೯-೩೫). [ಪೊಲ್ಲಮೆ + ಕೆಯ್$_1$]

ಪೊಲ್ಲಯ್ಯ (ನಾ). ಒಬ್ಬಾತನ ಹೆಸರು : ಮಟ್ಟೂರ ಸಾಯಿರ ಒಟ್ಟೊಬ್ಬರುಂ ಪೊಲ್ಲಯ್ಯನ ಮಾಡಿಸಿದ ದೇಗುಲಕ್ಕೆ ಕೊಟ್ಟ ಮಾಣ್ (ಎಕಿ. IV, ಎಳಂಗೂ. ೪೦-೩; 982). [ಪೊಲ್ಲ ? + ಅಯ್ಯ$_1$]

ಪೊಲ್ಲಲಿಂಗಿ (ನಾ). (ಅನ್ಯಪಂಥದ) ಹೀನಯತಿ : ಸಂನ್ಯಾಸಿ : ಪೊನ್ನ ತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡುದಱಿಂ ಪೊಲ್ಲಲಿಂಗಿಗಳರ ಸರ್ಕಳಿಂದಂ ಪೂಜಿಸೆ ಪಡುವರ್ (ಪಡ್ಮಾಣಾ. ೮೬-೨೮). [ಪೊಲ್ಲ + ಲಿಂಗಿ$_2$]

ಪೊಲ್ಲವಾತು, ಪೊಲ್ಲಮಾತು (ನಾ). = ಪೊಲ್ಲನುಡಿ : ಎಲ್ಲಿಯದೀ ಸುದ್ದಿ ರಾಮ ಮಡಿದನೆಂಬ ಪೊಲ್ಲವಾತಿದ ತಂದರಾರು (ಕುಂರಾಸಾಂ. ೩೬-೦೦೯). ಪೊಲ್ಲಮಾತು : ನಿಮ್ಮಂದಿಗರ್ವಂಶದ ಕೇಡಂ ನೋಡದೊಳ್ಪಂ ಬಗೆಯದೆ ಪಱಿಗಂ ಪಾತಕಕ್ಕಂ ಭಯಂಗೊಳ್ಳದೆ ಪೇಟರ್ ಪೊಲ್ಲಮಾತಂ ನುಡಿಯಲಿದು ಮನಂ ನೋಟ್ಬ ಸಂಕಲ್ಪಜಲ್ಪಂ (ಪಂಚಾಪಾ. ೯-೦೬೯). [ಪೊಲ್ಲ + ಮಾತು$_1$]

ಪೊಸ, ಹೊಸ (ಗು). ೧. ನೂತನ; ನವೀನ : ಒರ್ವಳ್ ಪೊಸ ಶ್ರಾವಕಿ . . . ಕಟ್ಟಲೆಯೊಳ್ ನಿರ್ಗ್ರಂಥಮಪ್ಪ ರೂಪಂ ಕಂಡು ಬೆರ್ಚಿದೊಡೆ (ಪಡ್ಮಾಣಾ. ೧೩-೦೧) ; ತಾವರೆಯ ರಜಂಗಳಿಂಬ ಪೊಸ ನುಣ್ಮಳಲಿಂದೆ ಪುಟಿಲ್ಗಳಂ ಮನೋಹರಕೃತಕಪ್ರವಾಹಿನಿಯೊಳಂಗನೆ ಮಾಡಿಸು ತಿರ್ದಳರ್ಥಿಯಿಂ (ಕಾದಂಬಾ. ೨೯) ; ಪೊಸ ಪೊನ್ನ ಪರಿಯಾಣದೊಳಿಸೆವ ಅಮೃತಾನ್ನವನು ನಾಯ್ತಿಂಬುದಂ . . . ನೃಪಾಳಂ ಕಂಡಂ (ಪುಣ್ಯಾಸ್ರ. ೯-೦೯); ಪೊಸ ಜೊನ್ನಂ ತನ್ನ ಕೀರ್ತಿಪ್ರಭೆ ಪಸರಿಸಿತೆಂಬಂತೆ ಸೊಂಪೇಱೆ (ವೃತಪ. ೨೬-೦೦). ೨. ಚೆಲುವಾದ; ಮನೋಹರವಾದ : 'ಪೊಸ ವೆಳ್ದಿಂಗಳ್', 'ಪೊಸಸಂಜೆ' ಪರಾ. ೩. ಶುಭ್ರವಾದ; ಸ್ವಚ್ಛವಾದ; ನಿರ್ಮಲವಾದ : 'ಪೊಸದಳಿಂಬ', 'ಪೊಸನೀರ್' ಪರಾ. ೪. ಚಿಕ್ಕದಾದ ; ಎಳೆಯ ವಯಸ್ಸಿನ : 'ಪೊಸನವಿಲ್' ಪರಾ. ೫. ಪಕ್ವವಾದ ; ಮಾಗಿದ: 'ಪೊಸವಣ್' ಪರಾ. ೬. ಬಿಸಿಯಾದ : 'ಪೊಸನೆತ್ತರ್', 'ಪೊಸಪಾಕ' ಪರಾ. ೭. ಮಾಸದಿರುವ ; ಅಳಿಸದಿರುವ: 'ಪೊಸಪಜ್ಜೆ' ಪರಾ. ೮. ಬೇರೆಯ ; ಮತ್ತೊಂದು: 'ಪೊಸವೆಸರ್' ಪರಾ. ೯. ಮೊದಲನೆಯ ; ಪ್ರಥಮ : 'ಪೊಸಗಾರ್' ಪರಾ. ೧೦. ಅಧಿಕವಾದ ; ಅತಿಶಯವಾದ: 'ಪೊಸಸಿರಿ' ಪರಾ. ಹೊಸ: ೧. ಆವರಿಸಿದುದು ಮತ್ತೆ ಹೊಸ ಮೇಳಾವದಲಿ ಕುರುಸೇನೆ (ಕುಮಾಕಾ. ೦೯-೫೮); ಹೊಳಲು ಹೊಸ ರೀತಿಯಲಿ ಮಿಗೆ ಕಂಗೊಳಿಸುತಿರ್ದುದು (ತೊರಗಾ. ೦-೯-೦೦); ಈ ಹಳೆಯ ಹೇಳಿಕೆಗೆ ಹೊಸ ಉಸಿರು ತುಂಬಿದ್ದಾರೆ (ಧ್ರಾಪಸಂ. ೪೨). ☞ 'ಪೊಸ' ಮತ್ತು 'ಹೊಸ' ಎಂಬ ಈ ಶಬ್ದಗಳು ಇತರ ಅನೇಕ ನಾಮಪದಗಳೊಡನೆ ಸೇರಿ ಸಮಾಸವಾದಾಗ ಬೇರೆ ಬೇರೆ ಅರ್ಥಗಳನ್ನು ಕೊಡುತ್ತವೆ.

ಪೊಚ್ಚಪೊಸ, ಪೊಸಪೊಸ, ಹೊಚ್ಚಹೊಸ, ಹೊಸಹೊಸ (ದ್ವಿರುಕ್ತಿ): ಪೊಚ್ಚಪೊಸ ಮಲ್ಲಿಗೆಯುಂ ಮುದದಿಂ ತುಱುಂಬಿ (ರರ್ಮಾಮ್ಯ. ೬-೦೬೮); ತನಿಗಂಪು ತೀವಿರ್ದ ಪೊಚ್ಚಪೊಸ ಪೂಗಳಂ ಕೊಂಡು (ಪುಷ್ಪರ.ಹ. ೩೨೩-೨೮); ಪರಿಯಾಣದಲಿ ಪೊಸಪೊಸ ಪದಾರ್ಥಶ್ರೇಣಿಯುಂ ಲೇಸಾಗಿ ಗಡಣಿಸಿ (ಬಸವ. ೩೩-೦೦); ಹೊಚ್ಚಹೊಸ ಬೆಣ್ಣೆಗಾಸಿದ ತುಪ್ಪ (ಸಮ್ಯಕ್ತಾ. ೬-೨೯); ಹೊಚ್ಚಹೊಸ ಹೊಗರಂಬಿನಲಿ ತೆಗೆದೆಚ್ಚನು (ದೇವಿಮಾ. ೩-೨೬); ಆ ಅಂಗಡಿಗೆ ಹೊಸ ಹೊಸ ಬಗೆಯ ಸೀರೆಗಳು ಬಂದಿವೆ (ರೂಢಿ). ಪೊಸವು (ಬಹುವ): ರಸಭಾವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮುಂ (ಆದಿಪು. ೯-೨೫).

[ದೇ.॥ತಮಿ. ಪುತಿಯು, ಪುತು ; ಮಲ. ಪುದು; ತುಳು. ಪೊಸ, ಹೊಸ; ಕೊಡ. ಪುದಿಯುದ್; ಕೋತ. ಪುದ್]

ಪೊಸಅಡಕೆ (ನಾ). ತಾಜಾಅಡಕೆ ; ಹಸಿಯಡಕೆ : ಪೊಸಸುಗ್ಗಿ, ಪೊಸ ಅಡಕೆ (ಭಾಷಾಶಾ. ೦೪೪ ಉಡಾ); ಪೊಱಅಡಿ, ಒಳಅಟ್ಟಂ, ಪೊಸಅಡಕೆ (ಕಮಾದ. ೫೬ ಪ್ರಯೋ). [ಪೊಸ + ಅಡಕೆ$_1$]

ಪೊಸಎಲರು (ನಾ). ಸ್ವಚ್ಛವಾದ ಗಾಳಿ ; ನಿರ್ಮಲವಾದ ವಾಯು : ಪಳವಾನೇ! ಪೊಸಎಲರೇ! (ಹೊಂಗಳು. ಹಾಕ್ಕೆಳೆ. ೦೭).

[ಪೊಸ + ಎಲರು (< ಎಲರ್)]

ಪೊಸಒಲುಮೆ (ನಾ). ನವೀನವಾದ ಪ್ರೇಮ,–ಭಕ್ತಿ : ಭಕ್ತರ ಚರಿತೆಗಳನಾನಂದದಿಂ ತಿರುಪಾಟ ರೀತಿಯೊಳೊಂದಿ ಪಾಡುತ ಪೊಸ ಒಲುಮೆ ಸಲೆ ಪೊಣ್ಮಿ [ಪಾಣಾಂ. ಪೊಡವಡುತವೊಲವುಣ್ಮೆ] ಕೀರ್ತಿಸುತ (ಬಸಪು. ೨೭-೭೦).

[ಪೊಸ + ಒಲುಮೆ (< ಒಲ್ಮೆ)]

ಪೊಸಂತಿಲ್, ಪೊಸಂತಿಲು, ಪೊಸತಿಲ್, ಪೊಸತಿಲು, ಹೊಚ್ಚಲ, ಹೊಸಂತಿಲ್, ಹೊಸಂತಿಲು, ಹೊಸತಿಲ್, ಹೊಸತಿಲು, ಹೊಸಲು, ಹೊಸಿಲು, ಹೊಸ್ತಲು, ಹೊಸ್ತಿಲ್, ಹೊಸ್ತಿಲ, ಹೊಸ್ತಿಲು (ನಾ). ೧. ಬಾಗಿಲ ಚೌಕಟ್ಟಿನ ಕೆಳಭಾಗ; ಉತ್ತರಾಸ; ದೇಹಳಿ: "ಗೃಹಾವಗ್ರಹಣೇ. ದೇಹಳೀ—ಈ ೨ ಪೊ(ಹೊ)ಸಂತಿಲ್" (ಹಲಾಯು. ೩೦–೦೪೭) ; ಮೇರು ಪೊಸಂತಿಲ್ ಕುಡಿತೆಯ ನೀರಂಬುಧಿ ಗಗನತಳಮೆ ಕೈ ದಿವಿಜಗಣಂ ಕಾರೊಕ್ಕಲೆಂದೊಡುಟಿದವರಾರಾತನ ಮಸಪ ಮಸಕದೆಸಕಮನಿಟಿಪರ್ (ಶಾಸ್ತ್ರಸಾ. ೨೩೯ ಕೂಪ್ರಶ) ; ಎನಗೆ ಪೊಸಂತಿಲೀ ನೆಗೆದ ವಜ್ರದ ವೇದಿಕೆ ಗೋಪ್ಪದಂದಲೀ ವನನಿಧಿ ಪಾಯ್ದು ಮಾಗಧನನೀಗಳೆ ಕಟ್ಟುವೆನಲ್ಲಿ (ಅಪಿಪು. ೦೨-೭೦) ; ನಿತ್ಯಬಿಂದುಗಂ—ಬೆಡಂಗು. . .ಪೊಸಂತಿಲ್, ಗಳಂತಿಗೆ (ಕಪುರ. ೩೬ ಕ್ರಯೋ). **ಪೊಸಂತಿಲು** : ೧. "ಪೊಸಂತಿಲು ದೇಹಳಿಯುಮಕ್ಕು" (ಕಬ್ಬಮಂ. ೩೬). **ಪೊಸತಿಲ್** : ೧. ಪೊಸತಿಲ ಮೇಲನೊಕ್ಕಿಱದು ಮಿಾಸಲ ತುಯ್ಯಲನಟ್ಟು ಬಾಗಿಲ್ಚೆಸಿ (ಪಪಾರ. ೧೬೫) ; ಪುದೋಂಟ್ಕೆ ಪೋಗಿ ನಿಚ್ಚಲುಂ ಪೂಗಳ ಕೊಯ್ದುಕೊಂಡು ಮನೆಗೆ ಬರುತ್ತಾ ಮಾರ್ಗದ ಬಸದಿಯ ಪೊಸತಿಲೊಳೊಂದೊಂದು ಪೂವನರ್ಚಿಸುತ್ತಂ (ಪುಷ್ಪಾಸ್ರ. ೦-೪೨ ಪ). **ಪೊಸತಿಲು** : ೧. ಅಸುವೆಂಪೊರಲೊನಕೆ ಗೂಟಂ ಪೊಸತಿಲು ಮನೆಮನೆಯ ಕಂಭ . . . ದೆಯ್ವ ಮಿಂತಿವೆಂಬರ್ಮೂರ್ಥರ್ (ಸಪಪ. ೯-೬೨) ; ಬಸವಿಯರೊಳು ಪಾತಕಿನಿಯರೊಳು ಮತ್ತಸತಿಯರೊಳು ಕೆಳೆಗೊಳದೆ ಪೊಸತಿಲ ಪೊಱಗಡಿಯಿಡದೊಳ್ವೆಂದಿರ ಜಸವಳ್ಳಿ ಜಗವ ಪರ್ಬುವುದು (ಪಪಂ. ೯-೯೩). **ಹೊಚ್ಚಲ** : ೧. ಬೆಚ್ಚನ ಮನೆಯಾ ಹೊಚ್ಚಲದೊಳಗೆ ನಿಂತರು ಭಟ್ಟರು ಹಣಕುತ ಹೊರಗೆ (ಗೊ. ೯೯-೬) ; ನೀ ಹೊಚ್ಚಲವಾಗ ಬಾಲಿಟ್ಟೇದಿ, ಹಿತ್ತಲದಾಗಿನ ತುಲಸೀಗಿಡ ಕಮರಿ ಹೋತು (ಸಪುಜ. ೭೯). **ಹೊಸಂತಿಲ್** : ೧. "ಗೃಹಾವಗ್ರಹಣೇ. ದೇಹಳೀ—ಈ ೨ ಪೊ(ಹೊ)ಸಂತಿಲ್" (ಹಲಾಯು. ೩೦-೦೪೭) ; ನುಡಿಯೆಲ್ಲಂ ಹೊಲೆ ಸೂರುಳೊಳ್ನಿಱಿ ಹೊ[ಪಾಣಾಂ. ಪೊ]ಸಂತಿಲ್ ಪೊಂಗೊಳಲ್ ಪುತ್ತುವಾಯ್ಕುಡಿನೀರೊರ್ವೆಂಗೆ ಕಮ್ಮನಪ್ಪ ಬಟ್ಟಿನೀರೂರ ದೈವಂಗಳುಂ ಪಡಿಗೆತ್ತೋಡಿದುವೀಕೆಗಂಜಿ (ಲೀಲಾವ. ೨-೦೦೨). **ಹೊಸಂತಿಲು** : ೧. ಒಂದು ಹೊಸಂತಿಲನ್ನು ದಾಟುವುದರೊಳಗಾಗಿ ಬಿಟ್ಟದೇವನೂ ಬಂದನು (ಸಪತಿ. ೨೬೯). **ಹೊಸತಿಲ್** : ೧. "ದೇಹಳಿಯದೊಗೆದ ಹೊಸತಿಲೆನಿಕ್ಕುಂ" (ಪಂಗಣಾ. ೩೯-೦೨). **ಹೊಸತಿಲು**: ೧. ಹೊಸತಿಲ ಪೂಜಿಸಿ ಹೊಱವಟ್ಟು ಹೋದ ಒಕ್ಕಲಿತಿಯಂ ತಾಯಿತ್ತೆನ್ನ ಭಕ್ತಿ (ಬಸಪ. ೯೨೨); ಈ ಜನದ ಬದುಕಿನ ಸೊಗಸು ಸಂಸೃತಿಯರಳಿ ಪರಿವುಳಿಸಲೆಂದು ಹೊಸತಿಲಲಿ ಹಚ್ಚಿಟ್ಟ ಹಣತೆ ಒಳಗು ಹೊರಗೂ ಕೂಡಿ ಬೆಳಗಲೆಂದು (ಪಂಪು. ೪-೬); ಹೊಸತಿಲಲ್ಲಿ ಅಡಿಯಿರಿಸುತ್ತಿದ್ದ ಹಾಗೆಯೇ ಮುಕ್ತಾ ಆನಂದಭರಿತಳಾದಳು (ಆಶ್ರಮ. ೦೨೬). **ಹೊಸಲು** : ೧. ಹೋಮಶಾಲೆಯ ಹೊಸಲು, ಹೊಸದಾಗಿ ಮಾಡಿರುವ ಸಮ್ಮಾರ್ಜನೆಯಿಂದ ಶೋಭಿಸುತ್ತಿರುವುದು (ಶಾಕುಂತ. ೬೬-೦೬); ರೈತರೆಲ್ಲ ಮನೆಯ ಹೊಸಲಿಗೆ ಕಾಯಿ ಒಡೆದಿಟ್ಟು ಧೂಪ ಹಾಕಿ ಪೂಜಿಸುತ್ತಿದ್ದರು (ಹುಬ್ಬಳ. ೬೨). **ಹೊಸಿಲು** : ೧. ಪೋಜಾ ನಸ್ರೆದ್ದೀನ್ . . . ದೊಸಿಲನ್ನು ದಾಟಿದನು (ಪಗಹೂ. ೨೨೯). ೨. (ಆಲಂ) ಅಂಚು ; ಗಡಿ : ನನ್ನ ಬಾಳು ಸಾವಿನ ಹೊಸಿಲನ್ನು ಮೆಟ್ಟಿತ್ತು (ರಾಪಾಸ. ೯೦); ಹದಿನೆಂಟರ ಹೊಸಿಲನ್ನು ದಾಟ್ಟಿದರೂ ವಿಲಾಸಜೀವನವೇನೆಂಬುದನ್ನೇ ಅವಳು ಅರಿಯದವಳಾಗಿದ್ದಳು (ಕಾಪಸ. ೨೯). **ಹೊಸ್ತಲು** : ೧. ನರಸಿಂಹರೂಪದಿಂ ದೈತ್ಯನಂ ಪಿಡಿತಂದು ಹೊಸ್ತಲೊಳಗೆ ಸಂಜೆಯೊಳ್ ತನ್ನ ತೊಡೆಯೊಳ್ ಕೆಡಪುತುಗುರ್ಗೊನೆಗಳಿಂ ಜಠರಮಂ ಬಗಿದು (ಕೆಬಪು. ೩೩-೩); ಮುಂದಣಂ ಗಣಮನೆಲ್ಲವನುಡುಗಿ ಸಲೆ ಹೊಸ್ತಲೊಲೆಗಳಿಗೆ ಸಾರಣೆಯನೇ ಹಾಕಿ (ಸುಭಿಪ. ೨-೦೩). **ಹೊಸ್ತಿಲ್**: ೧. "ಗೃಹಾವಗ್ರಹಣೇ. ದೇಹಳೀ—ಈ ೨ ಹೊಸ್ತಿಲ ಪೆಸರು" (ಪಾಕಣಾ. ೧೦೯). **ಹೊಸ್ತಿಲ** : ೨. ಬಳ್ಳಾರಿ ಕನ್ನಡ ನಾಡಿನ ಹೊಸ್ತಿಲದಂತೆ (ಪುಂಗಾಪು. ೨೭). **ಹೊಸ್ತಿಲು** : ೧. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ (ಬಸಪ. ೯೭); ನಡುಹೊಸ್ತಿಲನು ಮೆಲ್ಲನೆ ದಾಂಟಿ (ಸಂಪಕ. ೦೯-೯೦); ಬಾಪೂಜಿಯ ಚಿತ್ರವೊಂದು ಮಾತ್ರ ಅವರ ಅರಮನೆಯ ಹೊಸ್ತಿಲನ್ನು ದಾಟಿ ಒಳಗೆ ಕಾಲಿಡುವುದು ಅಸಾಧ್ಯವಾಗಿತ್ತು (ಕಂಬಹು. ೯೯).

ಹೊಸತಿಲ ಹುಣ್ಣಿವೆ, ಹೊಸ್ತಿಲ ಹುಣ್ಣಿವೆ = ಮಾರ್ಗಶೀರ್ಷಮಾಸದ ಹುಣ್ಣಿಮೆ ; ಪ ದೇವತೆಗಳ ಆಗಮನಕ್ಕಾಗಿ ಹೊಸ್ತಿಲನ್ನು ಪೂಜೆ ಮಾಡುವ ದಿನ : ಮಾರ್ಗಶೀರ್ಷ ಶುದ್ಧ ೧೫ನೆಯ ತಿಥಿ ಹೊಸತಿಲ ಹುಣ್ಣಿವೆ (ಶಾಕಟ್ಟಾ. ೦೬೯) ; ಹೊಸ್ತಿಲ ಹುಣ್ಣಿವೆಗೆ ಹೊಸ್ತಿಲ ನಡುಗಿತ್ತು ಬನದ ಹುಣ್ಣಿವೆಗೆಲ್ಲ ಬನ ನಡುಗಿದೆ (ಸಪೀಗೀ. ೨೩-೬೫೫). **ಹೊಸತಿಲು ದಾಟು, ಹೊಸಲು ದಾಟು** = ೧. ಮನೆಯ ಹೊಸ್ತಿಲನ್ನು ದಾಟು ; ಹೊರಗೆ ಹೋಗು : ಮನೆಯ ಹೊಸತಿಲು ದಾಟುವ ಮುನ್ನ, ಅವರು ಹಿತ್ತಲ ಕಡೆಗೆ ಹೋಗಿ, ತಮ್ಮ ಮೂಕಜೀವಗಳನ್ನು ಮಾತನಾಡಿಸಿ ಬರುವರು (ಕಂದ್ರಹಾ. ೩೨). ೨. (ಆಲಂ) ಹದ್ದು ಮೀರು ; ಅಂಕೆತಪ್ಪು : ಬೀದಿಯವರ ಮುಂದೆ ನಾಟ್ಯವಾಡಲು ಸರಿಯಾದ ಹೊಸಲು ದಾಟಿದ ಹೆಣ್ಣು ಇವಳು (ಗೋಪುರ. ೩೮). [< ಪೊಸತು ? + ಇಲ್$_2$]

ಪೊಸಂತಿಲು 'ಪೊಸಂತಿಲ್' ನೋ.

ಪೊಸಂಬ, ಪೊಸಬ, ಹೊಸಬ (ನಾ). ಗುರುತಿಲ್ಲದವನು; ಅಪರಿಚಿತ : ಒಂದೆಡೆಗೆ ಪಟ್ಟಿಯನಿಂ ಪೊಸಂಬನೆ ಲೇಸು (ಪಂಪಕಂ. ೦೦೬-೯) ; ಏಚಾರಿಸದುಂತೆ ಪೊಸಂಬರೊತ್ತೆಯಂ ಕೊಳ್ಳುದು ತಕ್ಕುದಲ್ತು (ಕಪುರ. ೦೫೩ ಕ್ರಯೋ); ಆವನಾನೊರ್ವನಾಗಲಿ ಪೊಸಂಬಂ ಬರಲ್ [ಪಾಣಾಂ. ಪೊಸಬನೆಯ್ತರಲ್] ಭಾವಜ್ಞರಾದವರ್ ಪತ್ತೆಂಟು ಪಗಲವನ ಭಾವಮಂ ನೋಡಿಯೊಳ್ಳಿದನಾದೊಡೊಳಕೊಳ್ಳಬೇಕು (ಸಪುಳಾ. ೦೦-೩೦). **ಪೊಸಬ** : ಪೊಸಬರೀ ದೇಶದಳಬಳವನಱಿಯಿರಿ (ಸೊಂದಪು. ೯-೬೭) ; ಮಿಸುನಿವಣ್ಣದ ಮೆಯಿ ಗವಾಧಿಪ ಕಂಧರವು ಮೆಱಿವ ಪೊಸಬನಿವನಂಬಿಗನೆನಿಸನೀಕ್ಷಿಸಲು (ಶಾಕೃಶಾ. ೦೯-೩). **ಹೊಸಬ** : ಹೊಸಬರಪ್ಪ ಕೊಯ್ಲಾಳಿಗಳು ಬನ್ದೀಯೂರೊಳ್ . . . ಎರಡು ಪಣಮಂ ಕೊಟ್ಟು ಕೊಯ್ವರ್ (ಶಿಶಾ. XI–11, ೨೬೦–೨೮ ; 1094); ಸಂವರ್ತರುದ್ರನೊ ಹೊಸಬನಿವನಾರೆಂದು ತಲ್ಲಣಿಸುತ್ತು ರಿಪುಸೇನೆ (ಶಾಸ್ತ್ರಕ್ಷೋ. ೦೨-೨೦) ; ವರ್ತಕನೊಬ್ಬನು ಹೊಸಬ ಗಿರಾತಿಗೆ ಉಪದೇಶವಿತ್ತನು (ಪಂಶಾಪ. ೦೨೦–೯೦). [< ಪೊಸ + — ಬ$_2$. / ತುಳು. ಪೊಸಬೆ]

ಪೊಸಕಂಪು 'ಪೊಸಗಂಪು' ನೋ.

ಪೊಸಕನ್ನಡ 'ಪೊಸಗನ್ನಡ' ನೋ.

ಪೊಸಕಳ್ತಲೆ 'ಪೊಸಗಳ್ತಲೆ' ನೋ.

ಪೊಸಕಿಟ್ಟಳ (ನಾ). ತಾರುಣ್ಯದ ಹೊಸಮದ,–ಸೊಕ್ಕು : ಅಸಿಯ ಸೆಳೆ ತಳದೊಳಿರ ರಂಜಿಸೆ ಪೂರ್ವವ್ಯಳಿಸೆ ಪತ್ತಸಾರ್ವವರಂ ತರ್ಜಿಸಿ ಕಾಮನ ಪಡಿಯಱಿತೊಲೆಸೆದಳ್ ಪೊಸದೇಸೆಕಾರ್ತಿ ಪೊಸಕಿಟ್ಟ [ಪಾಣಾಂ. ೮೨] ಳದೊಳ್ (ಅರ್ಜುನ. ೨-೦೩). [ಪೊಸ + ಕಿಟ್ಟಳ]

ಪೊಸಕೆಂದಳಿರ್ 'ಪೊಸಗೆಂದಳಿರ್' ನೋ.

ಪೊಸಗಂಪು, ಪೊಸಕಂಪು (ನಾ). ಆಗ ತಾನೆ ಹುಟ್ಟಿರುವ ಸುಗಂಧ; ಹೊಸದಾದ ಸುವಾಸನೆ: ಮಲರ್ದಲರ್ದ ನಾಗಸಂಪಗೆಯಲರ್ಗಳೊಳ ಗ್ಗಲಿಸಿ ಬಿರಿವ ಪೊಂಬಾಟ್ಟೆಯ ತಣ್ಮಲೆವ ಪೊಸಗಂಪಿನೊಳ್ ಪುದಿದಲೆವೆಲ ರಾಜಿಪುದು ಖಚರದಂಪತಿಶ್ರಮಮಂ (ಆದಿಪು. ೦-೬೮); ಕಪ್ಪುರದ ಕಂಪುಮಂ ಸೂಡಿದ ಬಾಸಿಗದ ಪೊಸಗಂಪನಿಂಬಾಗೊಗೆದಿರೆ ಮಾಡಿದುದು ಚಮೆರರುಹ ಗಂಧವಹಂ (ಪಂಪಭಾ. ೦೯-೨೫). **ಪೊಸಕಂಪು**: ಬಂದು ಮನೆಗೆಯ್ದೆ ಪೊಸಕಂಪು ಕವಿದಿರೆ ಕಂಡು ಎಂದಿನಂತಲ್ಲದೆ ನವೀನವಾಗಿರೆ ಕಂಡು (ತಿರುಪ. ಚಂ. ೬-೯). [ಪೊಸ + ಕಂಪು]

ಪೊಸಗನ್ನಡ, ಪೊಸಕನ್ನಡ, ಹೊಸಗನ್ನಡ (ನಾ). ೧. ಹೊಸ ಬಗೆಯ ಕನ್ನಡ; ನವೀನತೆಯುಳ್ಳ ಕನ್ನಡ: ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂತಿಸಿ ಕೊಡಲಾಱದಕ್ಕಟ ಮಿಸುಕದ ಸಕ್ಕದ ಮನಿಕ್ಕುವವನುಂ ರವಿಯೇ (ರರ್ಮಾಭ್ಯು. ೦-೪೦); ವಾಸುಂಮತಿ ವಂರ್ಣಿಸಿದಂ ಶ್ರೀಸಜ್ಜನತಿಲಕನೊಸೆದು ಪೊಸಗಂನಡದಿಂ (ಕೊಲ್ಲಾಪು. ೦೫-೧೦೦; 1186); 'ಪೊಸಗನ್ನಡ' ಎಂಬ ಪದಪ್ರಯೋಗ ಪ್ರಾಚೀನಕನ್ನಡಸಾಹಿತ್ಯದಲ್ಲಿಯೂ ಆಗಾಗ ಬರುತ್ತಿದೆ (ಸಾಸಮಾ. ೦). **ಪೊಸಕನ್ನಡ**: ೧. ಮಹಾಮುನಿಮತ ಮಿಗೆ ಪೇಳ್ದನೆಸೆಯೆ ಪೊಸಕನ್ನಡದಿಂ (ಮುದಿ. ೦-೫೩). **ಹೊಸಗನ್ನಡ**: ೨. ಹಳಗನ್ನಡ, ನಡುಗನ್ನಡಗಳಿಂದ ಭಿನ್ನವಾದ ಈಗಿನ ಕನ್ನಡ: ಈಗ ನಾವು ಬಳಸುತ್ತಿರುವ ಭಾಷೆ 'ಹೊಸಗನ್ನಡ' (ಕೃಷಿ. ೦): ಕನ್ನಡವಮಾತೆಷ್ಟು ವಿಧವಾಗಿರುವದು?. ಹೊಸಗನ್ನಡವೆಂತಲೂ ಹಳಗನ್ನಡವೆಂತಲೂ ಎರಡು ವಿಧವಾಗಿರುವದು (ಹೊಸಗ. ೦). [ಪೊಸ + ಕನ್ನಡ$_1$]

ಪೊಸಗಬ್ಬ (ನಾ). ನವೀನರೀತಿಯ ಕಾವ್ಯ: ಈಗಡೀಗಡಿನ ಕಥಾನ್ವಯಕ್ಕೆ ರಸಮುಂ ಪೊಸಗಬ್ಬಮುಪೂರ್ವಮಾವುವುಳ್ಳೊಡಮುವು ಪೇಳ್ದು ಸಾಧಿಸಿದ ಕಬ್ಬಮೆ ದಲ್ ಕವಿಚಕ್ರವರ್ತಿಯಾ (ಶಾಂತಿಪು. ೧೨-೭೯). [ಪೊಸ + ಕಬ್ಬ$_1$]

ಪೊಸಗವಲು, ಹೊಸಗವಲು (ನಾ). ಹೊಸಬಗೆಯ ವಾಸನೆ,—ಕಂಪು: ಪೊಸಗವಲು ನಾರುತಿದೆ ಬಂದು (ಕಂಕ. ೩೦). **ಹೊಸಗವಲು**: ನಱುಗೋಲನೊತ್ತಿಂದ ದಕ್ಷಿಣಗಿದಿರಾಗಿ ಮಱೆಯೆರಳೆಗಳೋಡಿ ಬಂದು ದುಱುದುಱನೀಕ್ಷಿಸಿ ಹೊಸಗವಲಿಗೆ ಬೆಚ್ಚಿ ಬಿಱಿತೋಡಿದುವು ಕಂಡ ಕಡೆಗೆ (ಕರಕ. ೪೭-೬೨). [ಪೊಸ + ಗವಲು (<ಗವುಲು)]

ಪೊಸಗಳ್ತಲೆ, ಪೊಸಕಳ್ತಲೆ (ನಾ). ಆಗ ತಾನೆ ಆವರಿಸುತ್ತಿರುವ ಅಂಧಕಾರ: ಪೊದಳ್ದ ಪೆರ್ಗಳ್ತಲೆ ನಾಲ್ದೆಸೆಗಳ್ತಲೆ ಪೊಸಗಳ್ತಲೆ ರಸೆಗಳ್ತಲೆಯೆನಿಸಿ ಕೂಡಿ ತೀವಿತು ತಿಮಿರು (ಗಿರಿಕ. ೯-೭೬). **ಪೊಸಕಳ್ತಲೆ**: ಪೊಸಕಳ್ತಲೆಯುದು ತನುವಂ ಮುಸುಂಕೆ ಕರ್ಬಕ್ಕೆ ಗೆತ್ತಗಲ್ದುದು ಚಕ್ರಪ್ರಸರಂ (ರಾಜಶೇ. ೦೦-೦೮). [ಪೊಸ + ಕಳ್ತಲೆ (<ಕಱ್ತಲೆ)]

ಪೊಸಗಟಮೆ (ನಾ). ಆಗತಾನೆ ಬೆಳೆಬಂದ ಬತ್ತ: ಪೊಸಜಾದಿಯ ಬೆಳೆ ದೊಱಗಿದ ಪೊಸಗಟಮೆಯ ಪೊಸತರಲ್ದ ತಾವರೆಗಳ ಕಂಪಸದಳಮೆಸೆದಿರೆ ದೆಸೆದೆಸೆಗೊಸಗೆಯ ಬರ್ಪಂತೆ ಕಣ್ಗೆ ವಂದುದು ಶರದಂ (ಆದಿಪು. ೦೦-೬). [ಪೊಸ + ಕಟಮೆ (<ಕಟವೆ)]

ಪೊಸಗಾಡಿ (ನಾ). ನವೀನವಾದ ಸೌಂದರ್ಯ; ಹೊಸಸೊಬಗು: ಅವರಿರ್ವರ ರೂಡಿವಡೆದ ಪೊಸಗಾಡಿಯುಮಂತವರಿರ್ವರ ಬೇಟಮುಮಂತವರಿರ್ವರೊಳಲ್ಲದಿಲ್ಲ ಪೆಱತೊರ್ವರೊಳಂ (ಕಬ್ಬಿಗಾ. ೦೨೯); ಮದನಮಹಿಷಿ ಮೆಯ್ಯಗ್ಗಣ್ಣನ ಪಟ್ಟದ ಸುದತಿಯರ್ಗಿಮ್ಮಡಿಯಾದೈಸಿರಿ ಪೊಸಗಾಡಿ ಚದುರು ಚೆಲ್ವು ವಿದಿತವಿಭವಮುಂಟೇಕೆಗೆ (ಜಯಾಕಾ. ೩-೪೭). [ಪೊಸ + ಗಾಡಿ$_1$]

ಪೊಸಗಾರ್, ಪೊಸಗಾರು (ನಾ). ವರ್ಷಾರಂಭದ ಮಳೆಗಾಲ ಮತ್ತು ಆಗ ಸುರಿಯುವ ಮಳೆ; ಮುಂಗಾರು: ಕರಮುಚ್ಚಮಪ್ಪ ಬೆಟ್ಟುಗಳ ತಟುಗಳಿಂ ಸುರಿವ ನಿರ್ಝರಮುಂ ಪೊಸಗಾ[ಪಾಠಾಂ. ಕಾ]ರೊಳಿಂತು ಬೆಳ್ಪಗೆ ಪಥಿಕಾಂಗನಾಜನಮಾನಂಜಿಸುವಂತಿರೆ ತೋಱೆ ಸುತ್ತಲುಂ (ಕಬಿಗಾ. ೦-೦೨೯); ಎದಗ್ಗೆ ಪುರುಷಾಯಿತಂ ತಗುಳೆ ನರ್ತಕೀಲೀಲೆಯಿಂದದೊಂದು ಪೊಸಗಾರ ಸೋಗೆನವಿರಾಟಮಂ ತೋಱೆದಳ್ (ಆದಿಪು. ೦೨-೦೯); ಪಸುರ್ವೆಲ್ಲಂ ಮೇದು. . . ಪೊಸಗಾರೊಳ್ಪಾರಲೊಳ್ ಕಣ್ಣರೆಮುಗಿದಿರೆ ಸೃಕ್ವಂಗಳಿಂ ಸೂಸೆ ಫೇನಪ್ರಸರಂ ಮೆಲ್ಮೊತ್ತುತುಂ ನಿಂದುದು ವನಮಹಿಷೀವೃಂದ ಮಾನಂದದಿಂದಂ (ಪಂಂಪಾಮಾ. ೬-೦೫೭). **ಪೊಸಗಾರು**: ಪೊಸಗಾರೆನಿಸುತಿಕ್ಷನು ಗರವವುಪಚರದಲ್ಲಿ ಜಾನಕಿವೆರಸು ಲಕ್ಷ್ಮಣಸಹಿತಲೈತರಲಾಗ ಘನಕಾಲ (ಪಂಪಾಮಾ. ೦೯೬-೩೯). [ಪೊಸ + ಕಾರ್$_2$]

ಪೊಸಗಾರು 'ಪೊಸಗಾರ್' ನೋ.

ಪೊಸಗಾವರ (ನಾ). ಹೊಸದಾದ ಸ್ವರ; ನವ್ಯಧ್ವನಿ: ನುಣ್ಪೆಸೆವ ಮಾಮರ ನೊರ್ವೊದಲಲ್ಲದುಣ್ಮುವುಯ್ಯಲ ಪೊಸಗಾವರಂ ಪುಗಿಲೊಳೇನೆಸೆದತ್ತೊ ಬಸಂತಮಾಸದೊಳ್ (ಪಂಪಭಾ. ೨-೦೨). [ಪೊಸ + ಗಾವರ]

ಪೊಸಗು (ಕ್ರಿ). ಲಭಿಸು; ದಕ್ಕು: ವಸುಧೆಯೊಳುಯಿಾ ತನುವು ಯಾರು ನಂಬುವರು ಪೊಸಗಿದಯಿಾ ರಾಜ್ಯಭೋಗಗಳು ನಿಮಿಗ್ಯಾಕೆ (ಯುವಕ. ೦೭). [← ತೆಲು. ಪೊಸಂಗು, ಪೊಸಗು]

ಪೊಸಗೆಂದಳಿರ್, ಪೊಸಕೆಂದಳಿರ್ (ನಾ). ಎಳೆಯ ಚಿಗುರು,-ಕುಡಿ; ನವಪಲ್ಲವ: ಬಳಸಿದ ಮಾಧವೀಲತೆಯ ಬಳ್ಳಿವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳಬಳೆದೆಳದಳಿಸುವ ಪೊಸಗೆಂ[ಪಾಠಾಂ. ಕೆಂ]ದಳಿರ ಗೊಂದಳದೊಳ್ (ಆದಿಪು. ೦೧-೭೦ ಪ). **ಪೊಸಕೆಂದಳಿರ್**: ಪೊಸಕೆಂದಳಿರ್ಗಳ ದಾಳಿಂಬ ಸಾರಮಂ ಕಟ್ಟಿ ತನ್ನ ಬಣ್ಣದೊಳದು ರಂಜಿಸೆ (ಶಾಂತಿಪು. ೯-೦೬). [ಪೊಸ + ಕೆಂದಳಿರ್]

ಪೊಸಗೆಂಪು (ನಾ). ಮನೋಹರವಾದ ಕೆಂಪುಬಣ್ಣ: ಪಸರಿಸಿದ ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕಾಟಿಸಿಯುಂ (ಆದಿಪು. ೦೨-೦೨೨); ಪೊಸಗೆಂಪೇಱಿದ ಬಿಂಬಫಲವ ಗಿಳಿ ಮಸಗಿ ಸಂತಸದೆ ಪೀರ್ವಂತೆ (ಕಂಪಪ. ೦೦-೯೦). [ಪೊಸ + ಕೆಂಪು$_1$]

ಪೊಸಗೆಲ್ಲ (ನಾ). ನೂತನ ವಿಜಯ: ಸಾರಿಯಂ ನಲಿದಿಡುವಂದು ಪಲ್ಲಟಿಸೆ ಪುಟ್ಟಿದಂದೋ ಪೊಸಗೆಲ್ಲಮಾಂಪೆನೇ ಲಲನೆಯೊಳೆಂಬ ಸಂಭ್ರಮದಿ ನುಣ್ಪೆದುದೋ ನಗೆ ನಿನ್ನ ವಕ್ತ್ರದೊಳ್ (ಕೃಷ್ಣ. ೨೯-೫೫). [ಪೊಸ + ಗೆಲ್ಲ]

ಪೊಸಗೆಱೆ^{3}, ಹೊಸಕೆರೆ, ಹೊಸಕೆಱೆ^{3}, ಹೊಸಗೆಱೆ^{3} (ನಾ). ಹೊಸದಾಗಿ ಕಟ್ಟಿಸಿದ ಕೆರೆ; ನೂತನತಟಾಕ: ಇದಕ್ಕೆ . . . ಆತ್ಮೂರ ಪೊಸಗೆಱೆಯುಂ ಬೆಲತೂರ ಇನಿಬರ ಸನ್ಮಥ ಬರದೊಂ ಶ್ರೀಧರಮ್ಮನ್ (ಎಕ. III, ಮಂಡ್ಯ. ೦೯-೦೫; 907); ವಿದ್ಯಾದಾನಕ್ಕೆ ಪೊಸಗೆಱೆಯ ಬಟ್ಟೆಯಿಂ ಬಡಗಮಂಡೆಯ ವೀಸಕದಯ್ದು ಮತ್ತರ್ (ಇಇ. XIII, ೯೩-೨೬; 1084). **ಹೊಸಕೆರೆ**: ನಡವು ಹೊಸಕೆರೆಯ ದಂಡಿನ ಹಾದಿಯಿಂ ತೆಂಕಲು ಪಡುವಮುಖವಾದ ಲಿಂಗಮುದ್ರೆಯ ಕಲ್ಲು (ಎಕ. IV (R), ಕೊಳ್ಳೇಗಾ. ೬-೨೦; 1512). **ಹೊಸಕೆಱೆ^{3}**: ಮಿಣ್ಣುಂಗಲ್ಲಲ್ ಪಲ್ಲವಕಟ್ಟಿನ್ದು ಹೊಸಕೆಱೆಯ[ಂ] ಕಟ್ಟಿಸಿ (ಎಇ.V, ೨೦೬-೯; 1047); ಈಶಾನ್ಯಕ್ಕೆ ನಡವು ಹೊಸಕೆಱೆಯ ಮೂಡಣ ಮುರಿಯ ಮಡುವಿನ ಹೆಬ್ಬಳ್ಳಮೆ (ಎಕ. III(R), ಗುಂಡ್ಲುಪೇ. ೯೦-೬೩; 1320). **ಹೊಸಗೆಱೆ^{3}**: ಹೊಸಗೆಱೆಯ ಕೆಳಗೆ ಗದ್ದೆ . . . ಖ × × × ಪೂಕೆಱೆ^{3} ಕೆಳಗೆ ಖಂ (ಎಕ. IV(R), ಶಾಸುರಾ. ೫೮-೩೨; 1484). [ಪೊಸ + ಕೆಱೆ^{3}]

ಪೊಸಜವ್ವನ, ಪೊಸಜೌವನ, ಹೊಸಜವ್ವನ (ನಾ). ನವಯೌವನ; ಹೊಸ ಪ್ರಾಯ; ಏರುಂಜವ್ವನ: ಪೊಸಜವ್ವನದ ಮುಂಬಣ್ಣದಂತೆ ಕರ್ಪಂ ಕೈಕೊಂಡು ಕತ್ತುರಿಯಲಿ ಬರೆದಂತಪ್ಪ ವಿಕ್ರಾಂತತುಂಗನ ಮಿಸೆಗಳಾತನ ಶೀತ್ರಪ್ರತಾಪಾನಳಧೂಮಲೇಖೆಯುಂತಾದುವು (ಪಂಪಭಾ. ೨-೩೯ ಪ); ಸಿರಿ ಸುರಚಾಪವಂತೆ ಪೊಸಜವ್ವನಮಿದ್ದಿಲ ಬೂದಿಯಂತೆ . . .

ಕಿಡಲಲ್ಲದೆ ತಾಂ ಸ್ಥಿರಮಾಗಲಾರ್ಕುಮೇ (ರರ್ಮಾಮ್ಯ. ೩-೦೬); ಸೌಂದರ ಮಹೀಪತಿಗೆ ಪೊಸಜವ್ವನವನಂತವಿಭವದೊಳೊಪ್ಪುತಿರೆ (ಸೌಂದಪು. ೪-೭). **ಪೊಸಜೌವನ :** ವಸುವಂ ದ್ವಿಜನ್ಮದಾನದೆ ಪೊಸಜೌವನಮಂ ಸ್ವದಾರ ಸಂತೋಷದೆ ನಿನ್ನಸುವಂ ಪತಿಕಾರ್ಯದೆ ವರ್ಜಿಸಿದೈ (ಗದಾಯು. ೩-೨೨). **ಹೊಸಜವ್ವನ :** ಚಳಗತಿಯ ನಿರ್ಮಾಂಸಜಂಘೆಯ ಲುಳಿಯ ಲಾಗಿನ ಲಂಘನೆಯಲವ್ವಳಿಪ ಹೊಸಜವ್ವನದ ಹೊಮ್ಮರೆ ಹೊಳಕಿತಿದಿರಿನಲಿ (ಕೊರರಾ. ೩-೮-೦೩). [ಪೊಸ + ಜವ್ವನ]

ಪೊಸಜವ್ವನೆ, ಪೊಸಜೌವನೆ (ನಾ). ನವಯೌವನವನ್ನು ಹೊಂದಿದವಳು : ನೋಡಿದರ್ ಭಾಮಿಸಿ ಸಗರನನಸಿಯ ಪಸಿಯ ಪೊಸಜವ್ವನೆಯರ್ (ಅಜಪು. ೯-೩೬); ಸುಧಾಮರೀಚಿಮಣಿವೇದಿಕಾಗ್ರದೊಳ್ತತ್ಕಾಮಿನಿಯಂ ಪಟ್ಟಿರಿಸಿ ಶಿಶಿರೋಪಚಾರಮನಸವಸದಿಂದಾ ಪೊಸಜವ್ವನೆಯರೆಸಗುತ್ತಮಿರೆ (ಉಸ್ಕಟ. ೭-೩೩ ಪ). **ಪೊಸಜೌವನೆ :** ಪೊಸಜೌವನೆ ನಿನ್ನೀ ದೀರ್ಘಾಂಬಕ ದೆಸಕದ ಸಂಪತ್ತಿಗೆ ಮಿಗೆ ಸೋಲ್ತೀಯಸಿತೋತ್ಪಲ ದರದಳಿತಂ ತನ್ನ ಪರಾಗದ ರಿಷ್ಪವನು ಒಸೆದೀಯೆಲ್ಬಂದಿದೆ (ಇಯಕಾ. ೨-೦೭). [ಪೊಸ + ಜವ್ವನೆ]

ಪೊಸಜಾಗ (ನಾ). ಮನೋಹರವಾದ ಮರಕತಮಣಿ : ಪೊಸಜಾಗಂ ಪೂರ್ಣಕುಂಭಂ ದಧಿ ಮಧು ಸುಧೆ . . . ಮಿಸುಗೆ ಬಗೆಗೆ ಚೆಲ್ವಾದುದುದ್ವಾಹಗೇಹಂ (ಪೃಷಪಿ. ೩-೪). [ಪೊಸ + ಜಾಗ$_1$ (<ಚಾಗ$_1$)]

ಪೊಸಜಾದಿ (ನಾ). ಅದೇ ತಾನೆ ಅರಳಿರುವ ಜಾಜಿ : ಪೊಸಜಾದಿಯ ಬೆಳೆದೊಱಗಿದ ಪೊಸಗಟಮೆಯ ಪೊಸತರಲ್ದ ತಾವರೆಗಳ ಕಂಪಸದಳಮೆಸೆದಿರೆ ದೆಸೆದೆಸೆಗೊಸಗೆಯೆ ಬರ್ಪಂತೆ ಕಣ್ಗೆ ವಂದುದು ಶರದಂ (ಅಂಪು. ೦೦-೬); ಪೊಸಜಾದಿ ಚೆಲ್ವನೀಯುತ್ತಿರೆ ದೇಸಿಯಿಂ ನಿಮಿರ್ದ ಸೋರ್ಮುಡಿಯೊಳ್ (ರರ್ಮಾಮ್ಯ. ೪-೦೩೭). [ಪೊಸ + ಜಾದಿ]

ಪೊಸಜೌವನ 'ಪೊಸಜವ್ವನ' ನೋ.

ಪೊಸಜೌವನೆ 'ಪೊಸಜವ್ವನೆ' ನೋ.

ಪೊಸತಳಿರ್ 'ಪೊಸದಳಿರ್' ನೋ.

ಪೊಸತಿಕ್ಕು (ಕ್ರಿ) ಪ್ರಥಮಬಲಿಯನ್ನು ಕೊಡು; P"ಪೊಸತಂ + ಇಕ್ಕು = ಪೊಸತಿಕ್ಕು : ಒಕ್ಕಣೆ ಆದ ಮೇಲೆ ಅನ್ನವನ್ನು ದಿಕ್ಕುದಿಕ್ಕಿಗೆ ಚೆಲ್ಲಿ ಬಲಿಕೊಡುವುದಕ್ಕೆ ಪೊಸತು ಎಂದು ಹೆಸರು, ಮಲೆನಾಡಿನಲ್ಲಿ ಇದು ರೂಢಿಯಾಗಿದೆಯಂತೆ" (ಸಂಪದೀ. ೩೭೭) : ಉತ್ತರನಂ ಜವಂಗೆ ಪೊಸತಿಕ್ಕುವಂತಿಕ್ಕಿ (ಸಂಪಭಾ. ೧೦-೦೦೨ ಪ); ರಣದೊಳ್ ರಾವಣನಂ ಜವಂಗೆ ಪೊಸತಿಕ್ಕಲ್ . . . ಪುಟ್ಟಿದವರೇಂ ಸಾಮಾನ್ಯರೇ (ಸಂರಾಮಾ. ೩-೦೬೦); ಟಕ್ಕಿಪನಂ ತುಟಿ ಮೇಕುದೋರ್ಪನಂ ಮಾಳಚಿಗಿಕ್ಕು ಪೂಟ್ ಪುಸಿವನಂ ಪೊಸತಿಕ್ಕು[ಶಾಕಾಂ. ಪೊಸೆದಿಕ್ಕು]ಗೆ ಪಚ್ಚಿಗಾಱನಂ (ಸೂಕ್ತಿಸು. ೮-೪೫೬; ಲೀಲಾವ. ೨-೦೦೭ ನೋ). [ಪೊಸತು + ಇಕ್ಕು]

ಪೊಸತಿಲ್ 'ಪೊಸಂತಿಲ್' ನೋ.

ಪೊಸತಿಲು 'ಪೊಸಂತಿಲ್' ನೋ.

ಪೊಸತು, ಹೊಸತು, ಹೊಸದು$_2$, ಹೊಸ್ತು (ನಾ). ೧. ನೂತನವಾದುದು ; ನವೀನವಾದುದು : "ನವ್ಯಂ, ನವಂ, ನವೀನಂ, ನೂತನಂ, ಅಭಿನವಂ, ನೂತ್ನಂ—ಈ ೬ ಪೊ(ಹೊ)ಸತು" (ಹಲಾಯು. ೦೦೬-೨೬); ನೆಲನುಂ ಪೊಟ್ಟುಂ ಪೊಲನ್ನುಮನಱಿದು ಬಟಿಯೊಳ್ ಪೊಸತುಂ ಪಟದುಮನಱಿದು ಪರಿಯಿಸಲ್ ನೀನೆ ಬಲ್ಲೆಯ್ (ಸಂಪಭಾ. ೩-೪೬ ಪ); ಮುಂತೆ ಪರಿದರು ಕೇರಿಕೇರಿಗಿದು ಪೊಸತೆನುತೆ ಬಸವನ ಪ್ರಾಣಮಂ ಪರಿದಱಸುವಂದದಿಂ (ಬಸರ. ೯-೦೬೬); ವರಲಾಸ್ಯತಾಂಡವವೆಸೆದುದೈ ರಂಭಾದಿ ನರ್ತಕಿಯರಲಿ ಪೊಸತೆನಿಸಿ (ಕುಪ್ಯಾಅ. ೭-೯೩). ೨. (ಆಲಂ) ಅಸಾಮಾನ್ಯವಾದುದು ; ಅಪರೂಪವಾದುದು : ಪೆಸರೇನಾರ್ಗೀತನೀ ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ ಪೊಸತೀ ಲೋಕಕ್ಕೆ (ಕಾದಂಪೂ. ೬೬೦); ಲೋಕದೊಳ್ವಧಿಲಿಖಿತಮನ್ನಿವಾರಿಪರುಂಟೆ ಶಿವಶಿವಾ ಪೊಸತೆಂದು ಬಿಸುಸುಯ್ದು ಬೆಱಗಾದನು (ಕೃಮಿಶಾ. ೩೦-೩೩). ೩. ಮೊದಲನೆಯ ಬಲಿ,—ನೈವೇದ್ಯ : 'ಪೊಸತಿಕ್ಕು' ಪರಾ. **ಹೊಸತು:** ೧. ಹೊಸತನು ಹಾಡುವುದೆನ್ನಿಂದಲಾಗದು ಹೊಸತಾವುದಿರುವುದು ಹೇಳು ಈ ಜಗದೊಳಗಿಹುದೆಲ್ಲವು ಹಳೆಯದು ನನ್ನ ಸುಭಾಷಿತ ಕೇಳು (ಇಂಶಾಪ. ೬೮-೨೬). ೨. ಒಸೆದಿರಿಸಬಾರದಿರಿಸದೆ ತೆಗೆಯಬಾರದೀ ಹಸುಳೆಯುಂದಂ ಹೊಸತು (ಸಿದ್ಧರಾ. ೨-೩); ಮೇದಿನಿಗೆ ಹೊಸತೆನಿಸಿ ವಜ್ರವ ಕೊಂಡು ಕಾದಿದನು (ಸಂಪಪ. ಪಂ. ೨-೨೫). **ಹೊಸದು$_2$:** ೧. ಆ ವರ್ಣನಾವೈಖರಿಯನ್ನು ಕೇಳಿದವರು ಹೊಸದರಲ್ಲಿ ಸಂತಸಪಡದೇ ಇರುವುದಿಲ್ಲ (ರಾಯಕ. ೯೯); ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದ (ಗಾದೆ). **ಹೊಸ್ತು:** ೧. ಕಾಣಿಕೆ ಕಡ್ಡಾಯ ಬೀಡಗೊಳು ಹೊಸ್ತು ಹಳದು ಎರಡು ಎತ್ತಿನ ಹೇಱು ಮಾನ್ಯ (ಎಕ. X, ಮುಳಣಾ. ೨೦-೩ ; 1468).

ಪೊಸತುಪೊಸತು, ಪೊಚ್ಚಪೊಸತು, ಪೊಸಪೊಸತು, ಹೊಚ್ಚಹೊಸತು, ಹೊಚ್ಚಹೊಸದು, ಹೊಸತುಹೊಸತು, ಹೊಸಹೊಸದು (ದ್ವಿರುಕ್ತಿ): ಪೊಸತುಪೊಸತೀ ಪರಿಯೆನಲ್ಕೆ . . . ಆರೋಗಿಸುತ್ತಿರಲು (ಬಸಪು. ೬-೪೩); ಸಭೆ ಮೆಚ್ಚೆ ಪೊಚ್ಚಪೊಸತಾಯ್ತು ರಸಂ (ಅಜಪು. ೩-೩೩); ಪೊಸಪೊಸತಿಂತಿದೆಂದುಮೆಮೆಯಾಟಕೆ ಸೈರಿಸದಿಂತಿದೆಂದು ಬಣ್ಣಿಸಲರಿದಪ್ಪ ಮೆಯ್ಸಿರಿ (ಪಕಪಿ. ೬-೨೫೯); 'ಕಬ್ಬಿಗರ ಕಾವ' ಎಂಬ ಹೆಸರು ಕನ್ನಡ ಕೃತಿನಾಮಗಳಲ್ಲಿ ಹೊಚ್ಚಹೊಸತಾಗಿ ಕವಿಯ ವೀರವ್ಯಕ್ತಿತ್ವದ ಗುರುತಾಗಿ ನಿಂತಿದೆ (ತನಪಿ. ೦೩೪); ನಿನ್ನೆ ಮೊನ್ನೆಯೊ ಏನೊ ನಿನ್ನ ನೋಡಿದ ಪೊಲಿಹುದು ಒಲುಮೆ ಹೊಚ್ಚಹೊಸದಾಗಿರಲು ಇಂದು ! (ವಿಜದ. ೪೦-೪); ಹೊಸಪರುಷಕೆ ಹೊಸಹರುಷವ ಹೊಸತು ಹೊಸತು ತರುತಿದೆ (ಗಂ. ೦೦೬-೦೦); ಅದನ್ನನುಸರಿಸುವ ರೀತಿಯೂ ಹೊಸಹೊಸದಾಗಿ ಕಂದಲಿತವಾಗಬೇಕು (ನಾಡೋಜ. ೨೨೬). **ಪೊಸತಾಗು, ಹೊಸವಾಗು, ಹೊಸ್ತಾಗು** = ನವ್ಯವಾಗು; ಹೊಸಪರಿಯಾಗು: ಪಸರಿಸಿದಾ ಬಗೆ ಮನಮಂ ಪೊಸತಾಗೆ ನೆಗಟ್ಟಲಱಿಯನಾ ರಚನೆಯೊಳೇಂಬಸನಂ ತನಗೆ (ಕವಿರಾ. ೦-೦೨); ಪೊಸತಪ್ಪ ಕಡಲಿದೆಂಬಂತೆಸೆದೊಪ್ಪಿರೆ ತಿಸುಳಿ ಬೇಗದಿಂ ಪುಟ್ಟಿಸಿದಂ ಪುಸಿವಡೆಯಂ (ಕಬ್ಬಿಕಾ. ೨೪೯); ಮತ್ತೆ ಮೂರನೆಯ ದಿನವೊಮ್ಮೆ ಅಳಲು ಹೊಸದಾಯಿತು (ಕಾಲೂರ. ೦೯ ಕಥಾಸಾರ); ಹೊಸ್ತಾಗಿ ದೇವಾಲ್ಯವ ಮಾಡಿದ ಸಂಮಂಧ (ಮೈಅಂ. ೧೯೨೮, ೪-೯; 1369); ಗಉಡಗೆ ಹೊಸ್ತಾಗಿ ಉರ ಕಟ್ಟಿ (ಎಕ. IX, ಪನ್ನಪ. ೦೬೯-೬ ; 1416); ಕಾಲುವೆನೂ ಹೊಸ್ತಾಗಿ ತೆಗಸಿ (ಎಕ. XV, ಅರಸೀ. ೨-೨೩; 1515). **ಪೊಸತು ಮಾಡು** = ನವೀಕರಣಗೊಳಿಸು; ಹೊಸದನ್ನಾಗಿ ಮಾಡು : ಸತ್ಕವಿಯೊಳ್ ಸಮನಾಗಿ ಮಾರ್ಗಮಂ ಪೊಸಯಿಸಿ ದೇಸಿಯಂ ಪೊಸತು ಮಾಡಿದಳೊರ್ವಳಪೂರ್ವರೂಪದಿಂ (ಸಂಪಭಾ. ೩-೬೪). **ಹೊಸತನಿಕ್ಕು** = ಮೊದಲನೆಯ ನೈವೇದ್ಯ ಮಾಡು : ನಾಗಂಗೆ ಹೊಸತನಿಕ್ಕಿಹೆವೆಂಬರು ನಾಗ ಬಂದರೆ ಕೋಲ ಕಳೆದುಕೊಂಬರು (ಬಸವ. ೦೯೩).

[ದೇ. ॥ ತಮಿ. ಪುತಿಚು, ಪುತಿತು ; ತುಳು. ಪೊಸತು]

ಪೊಸತುಪ್ಪ, ಹೊಸತುಪ್ಪ (ನಾ). ಆಗ ತಾನೆ ಬೆಣ್ಣೆ ಕಾಯಿಸಿದ ತುಪ್ಪ : ಪಸುವಿನ ಪೊಸತುಪ್ಪಂ ಜಾಜಿಯ ಪೂ ಅತ್ತಿ ಅಲ ಅರಳಿ ಬಸಿರಿ ಗೋಣಿ ಈ ಮರಂಗಳ ಎಳೆಯ ತಳಿರ್ ಯಷ್ಟಿಮಧುಕಂ ಇವಂ ಬಿಸುನೀರಲ್ಲಿ ಅರೆದು ಪೂಸಲ್ ಸ್ತ್ರೀಯರ ಯೋನಿಯ ದುರ್ಗಂಧಂ ಮಾಣ್ಬುದು (ಲೋಕೋಪ. ೯-೦೭೨ ಟೀಕು); ಬಾಳೆಯ ಕಾಯ ಕಹಿದೆಗೆದದಕೆ ಪೊಸತುಪ್ಪ ನೀರುಳ್ಳಿ ಕೊತ್ತುಂಬರಿಯನಿಕ್ಕಿ ಕೆಂಪಾಗಿ ಹುರಿದು . . . ಪರಿಮಳಂಗಳನಿಡುವುದು (ಸೂಪಶಾ. ೯-೬೦); ಪೊಸತುಪ್ಪದಿಂದ ತಲೆ ಕಾಲ್ಗಳೊಳ್ ಸೊಡರಿಕ್ಕಿ (ಕಾಲೂರ. ೦೬೩-೪೦೩). **ಹೊಸತುಪ್ಪ :** "ಹಯ್ಯಂಗವೀನಂ, ಆಜ್ಯಂ—ಈ ೨ ಹೊಸತುಪ್ಪಂ" (ಹಲಾಯು. ೪೬-೦೦೯);

ಅಗ್ನೆವಾಲೊಳು ಸೊಜ್ಜಿಗೆಯಂ ನನೆಹಿಕ್ಕಿ ಬಳಿಕ ಸಣ್ಣನ[ಪ್ಪ]ಂತೆ ಕಣಿಕವ ಮಾಡಿಯದಱ ಸರಿಬೆಣ್ಣ ನಸುಗೆನೆಯಿಕ್ಕಿ . . . ಗಾರಿಗೆಯ ಮಾಡಿ ಹೊಸ ತುಪ್ಪದೊಳು ಬೇಯಿಸಿದೊಡೆ . . . ಸಮುದ್ರಫೇನ (ಸೂಪಶಾ. ೦-೨೩).

[ಪೊಸ + ತುಪ್ಪ]

ಪೊಸತೇರ್ (ನಾ). ಹಳೆಯದಲ್ಲದ ತೇರು; ನೂತನವಾದ ರಥ: ಪೊಸತೇರ್ ಪಡಗಂ ನೆಗೞ್ದಿ ಪೆರ್ಚಿದ ಕಡಲೆಂಬಿನಂ ಮಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ (ಕಬ್ಬಿಗಾ. ೨೦೭). [ಪೊಸ+ತೇರ್$_2$]

ಪೊಸತ್ತಿಗಲ್ಲು (ನಾ). ಒಂದು ಪ್ರದೇಶದ ಹೆಸರು: ಬಡಗಣ ದೆಶೆ ಪೊಣರ್ಪುಳಿ ಬಡಗಣ ಪಡುವಣ ಕೊಣೊದು ಪೊಸತ್ತಿಗಲ್ಲು ಪಡುವಣ ಸೀಮೆ ಕಡಂಬಗೆಱೆಯ ಪೆರ್ವಾಗಂ (ಎಕ. III (R), ಪಂಪಪ. ೨೬೯-೬೦; ೩೦೩). [? + ಕಲ್ಲು (< ಕಲ್$_3$)]

ಪೊಸದಳಿಂಬ (ನಾ). ಶುಭ್ರವಾದ ಬಟ್ಟೆ,—ವಸ್ತ್ರ: ಕಪ್ಪುರವಳಿಕಿನ ಜಗುಲಿಯ ಮೇಗಣ ಕುಸುಮದೆಸಱ ಮಿಸುಗುವ ಪೊಸದಳಿಂ[ಪಾಶಾಂ. ಣಂ]ಬದ ಮೇಗೆ ಕಿಱಿದುಬೇಗಂ ವಿಶ್ರಮಿಸಿ (ಆದಿಪು. ೦೦-೭೦ ಪ).

[ಪೊಸ + ದಳಿಂಬ]

ಪೊಸದಳಿರ್, ಪೊಸತಳಿರ್, ಹೊಸತಳಿರು (ನಾ). ಕುಡಿಯಿಡುತ್ತಿರುವ ಚಿಗುರು; ನವಪಲ್ಲವ: ಕುಸುಮಾಪಚಯವ್ಯಸನಾವಸಕ್ತ ಸುರಯುವತಿ ಪಾಣಿಪಲ್ಲವರಾಗಂ ಮುಸುಕಿದುದೆನಿಸಿದುದಸುಗೆಯ ಪೊಸದಳಿರ್ಗಳೊಳಿಸೆವ ಕಂಪು ನಂದನವನದೊಳ್ (ಆದಿಪು. ೬-೧೬); ತುಂಬಿಯ ಬಂಬಲಂ ಕುರುಳ್ಪೊಸದಳಿರಂದಮಂ ಕರತಳಂ ದನಿ ಕೋಗಿಲೆಯಂ . . . ನೆಱೆ ಪೋಲ್ತು (ಧರ್ಮಾಮೃ. ೯-೦೪೦). **ಪೊಸತಳಿರ್:** ಪೊಸತ[ಪಾಶಾಂ. ದ]ಳಿರ್ಗಳ ಬಿಜ್ಜಣಿಗೆಯನೆಸೆವೆಲರ್ಗಳಿನೊಗೆವ ಘರ್ಮಜಲಮಂ ಕೀರ್ದಾಱಿಸಿದುವು ಕುಸುಮರಜಂಗಳ್ ಪೊಸಯಿಸಿದುವು ಬಣ್ಣಮಂ ಲತಾಂಗಿಯರ್ಗಾಗಳ್ (ಆದಿಪು. ೦೦-೭೭); ಪೊಸತಳಿರಿಂದೆ ಬೀಸಿ ಕಳೆದಂತಿರೆ ಕಾಂತೆಯ ಕಾಯ ಕಾಂತಿಯಂ (ಲೀಲಾವ. ೯-೦೨೩). **ಹೊಸತಳಿರು:** ಮಾದಲದ ಹೊಸತಳಿರು ಕರಿಬೇವು ಕೊತ್ತುಂಬರಿಯ ಸೊಪ್ಪು ಶುಂಠಿ ನೀರುಳ್ಳಿಗಳ ಚಿತ್ತಳಿಸಿ ತುಪ್ಪದೊಳು ಹುರಿದು ಪರಿಮಳಗೊಳಿಸಿ ಪೊಡ್ಡಣಿಗೆಯನು ಮಾಡುತ (ಸೂಪಶಾ. ೩-೦೯). [ಪೊಸ + ತಳಿರ್$_2$]

ಪೊಸದಾಂಗುಡಿ (ನಾ). = ಪೊಸದಳಿರ್: ಗುಡಿ ತುಱುಗಿ ಲತೆಯ ಪೊಸದಾಂಗುಡಿಯೆನಿಸಿದುದು (ಶಾಂತಿಪು. ೦೦-೬೯).

[ಪೊಸ + ದಾಂಗುಡಿ (< ದಾಂಟುಂಗುಡಿ)]

ಪೊಸದಾವರೆ (ನಾ). ಆಗ ತಾನೆ ಅರಳಿರುವ ತಾವರೆ; ನಳನಳಿಸುತ್ತಿರುವ ಕಮಲ: ತಳಿರ್ತೆಸೆವೆಳಮಾವು ತುಂಬಿ ಪೊಸದಾವರೆ ಮಲ್ಲಿಗೆ ಯೆಂಬಿವಾಂತರಂ ದೆಸೆವಲಿಗೆಯ್ವ ಪಾಳಿ ಮೊನೆಯೊಳ್ ನೆಗೞ್ದಿರ್ದ ಬಸಂತಂ (ಕಬ್ಬಿಗಾ. ೦೭೯). [ಪೊಸ+ತಾವರೆ (<ತಾಮರೆ)]

ಪೊಸದು 'ಪೊಸೆ$_1$' ಪರಾ.

ಪೊಸದುಗುಲ (ನಾ). = ಪೊಸದಳಿಂಬ: ಕರೆವೆರಸಿದ ಪೊಸದುಗುಲದ ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ (ಆದಿಪು. ೯-೩೬); ಮೆಲ್ಲುಡಿ ವೀಣಾನಾದವಂಗಪ್ರಭೆ ಪೊಸದುಗುಲಂ ಪಕ್ವಬಿಂಬೋಷ್ಠರಾಗಂ ಕಡುಚೆಲ್ವಾದಂಗರಾಗಂ (ಶಾಪುಪು. ೦೦೦೨); ಪೊಸದುಗುಲಮನೊಲವಿಂದೆ ಪೊದೆದು (ಕಬ್ಬಿಗಾ. ೩೩೯). [ಪೊಸ + ದುಗುಲ$_1$]

ಪೊಸದೂವಟ (ನಾ). ಹಳೆಯದಲ್ಲದ ವಸ್ತ್ರ; ಹೊಸಬಟ್ಟೆ: ಧವಳಾಂಶುವಿಡಿಕಿಱಿದ ಪೊಸದೂವಟದ ಕಾಲ ಕುಪ್ಪಸವ ತೊಡಿಸಿದಳದೋರ್ವ ಕಾಮಿನಿ ಪರವೆನಾಚಿಗಳವಡಿಸಿ ಚಾತುರ್ಯದಿಂದ (ಶಾಂಕಪು. ೬-೨೯); ಪೊಸದೂವಟದ ಶೋಭೆಯುಂ ಮನೋಹರದಿ ಮೋಹಿಸುವ ಭದ್ರಾಸನ ಸುಖಾಸೀನನಾಗಿರ್ದ ಶಶಿಧರ ಶ್ರೀನಂದಿನಾಥಂ (ಪಂಚಿಪು. ೯-೩೩).

[ಪೊಸ + ದೂವಟ (< ದುಪ್ಪಟಿ)]

ಪೊಸದೂವೆ (ನಾ). ಹೊಸದಾದ ಚಿತೆ: ಪಂದಲೆಯೋಳಿದೋರಣದ ಸೀಯದರಂ ಪೊಸದೂವೆ ದೂಪ [ಪಾಶಾಂ.ದಂಚಿತೂಪ] ತೂಗುಂದಲೆ ಬಾಟ್ಕಿಣಂ ಪೊಡರೆ ಬಳ್ಕುವ ಸಮ್ಮನ ಸೂಲಂ (ಶಾಸ್ತ್ರಾಪ. ೩೬); ಪರೇತವನದೊಳಗೆ ಪೊಸದೂವೆಯ ಕೆಲದೊಳ್ ಕಳೆದೊಟ್ಟಿದ ತೊಡವುಗಳುಮಂ ಮರದ ಕೊಂಬಿನೊಳ್ ಬರೆದು ಕಟ್ಟಿದ ಕಪ್ಪಡಮುಮಿರ್ದವು ದೆಂದು . . . ಬಿನ್ನವಿಸಿ (ಅರ್ಥಪಂ. ೩-೪೦ ಪ). [ಪೊಸ + ದೂವೆ$_1$]

ಪೊಸದೇಶಿ (ನಾ). ಹಿಂದೆ ಇಲ್ಲದೆ ಇದ್ದ ಬೆಡಗು,—ವಿಲಾಸ; ನೂತನವಾದ ಬೆಡಗು: ಪೊಸದೇಶಿ[ಪಾಶಾಂ. ಸೆ] ಪೊಂಗು ಪೊಂಗೆಸೆವೆಸಕಂ ಕಡುಗಾಡಿ ರೂಢಿಯೆಂಬಿವಱಿಂದಂ ವಸುಧೇಶನಣುಗದಮ್ಮಂ ವಸುದೇವಂ ಧರೆಗೆ ಕಣ್ಣುಮುಳ್ಳಾಗಿರ್ದಂ (ಅರ್ಥಪಂ. ೯-೦೩೦). [ಪೊಸ + ದೇಶಿ$_2$]

ಪೊಸದೇಸಿ, ಪೊಸದೇಸೆ, ಹೊಸದೇಸೆ (ನಾ). = ಪೊಸದೇಶಿ: ಸಾಗೆನಿಸಲ್ಕೆ ಸಾಲ್ವ ಸಗ್ಗದ ಪೊಸದೇಸಿಯೋಳಿಗಳನೊರ್ವಳೊಱಲ್ದು ನೆಱಲ್ದುಪಾಡಿದಳ್ (ಪಂಕಪಾ. ೬-೯೦). **ಪೊಸದೇಸೆ:** ಕವಿಮಾರ್ಗದೊಳಂ ಪೊಸದೇಸೆಯ ನುಡಿಗಳೊಳಂ ಪೊಸೆಯಿಪ ಬಲ್ಮೆಗೆ ಚತುರ್ಮುಖಂ ಕವಿರನ್ನಂ (ಗದಾಯು. ೦-೩೯); ನೆಲೆಮಾಡದ ಪೊಸದೇಸೆಯ ನೆಲೆಮಾಡದ ಸುರವಿಮಾನ ಮೆಯ್ದಲಣಂ ಕಿಟ್ಕಿಲೆಯಾದುವಿವಱ ತೆಱದಿಂ ನೆಲೆಯಾದುವೆ ಸಕಲಜನದ ಕಣ್ಗಂ ಮನಕಂ (ಪುಗ್ಗಪು. ೨-೬೯). **ಹೊಸದೇಸೆ:** ಹೊನ್ನನ ಹೊಸದೇಸೆಯ ನುಡಿ ನೇಮಿಯ ಕನ್ನಡದೊಳ್ಭಿನವಪಂಪನ ಬಗೆಯೆನ್ನೀ ಪೇಳ್ದ ಕೃತಿಗೆ ಪಿರಿದುಂ ಸೇರುಗೆ ನಿರ್ವಿಘ್ನತೆಯಿಂ (ಪಶುಕಾ. ೦-೦೦). [ಪೊಸ + ದೇಸಿ]

ಪೊಸದೇಸೆ 'ಪೊಸದೇಸಿ' ನೋ.

ಪೊಸದೇಸೆಕಾರ್ತಿ (ನಾ). ತಾರುಣ್ಯವತಿಯಾದ ಸುಂದರಿ,—ಚೆಲುವೆ: ಪತ್ತೆಸಾರ್ವವರಂತರ್ಜಿಸಿ ಕಾಮನ ಪಡಿಯಱತಿವೊಲೆಸೆದಳ್ ಪೊಸದೇಸೆ ಕಾರ್ತಿ ಪೊಸಕಿಟ್ಟಳದೊಳ್ (ಅರ್ಥಪಂ. ೨-೦೩).

[ಪೊಸ + ದೇಸೆಕಾರ್ತಿ (< ದೇಸಿಗಾರ್ತಿ)]

ಪೊಸದೋಂಟ (ನಾ). ಹೊಸದಾಗಿ ಬೆಳೆಸಿದ ತೋಟ: ಬಸದಿಯ ಪಡುವಣ ಎಳೆದೋಣ್ಬಮುಂ ಪಡುವಣ ತೊಱೆಯ ಮೂಡಗಣೆಯ ಪೊಸದೋಣ್ಬಮುಂ (ಎಕ. X, ಕೋಲಾರ. ೯೦-೬೭ ; 903). [ಪೊಸ + ತೋಂಟ]

ಪೊಸನನೆ (ನಾ). ಎಳೆಯ ಮೊಗ್ಗು; ಹೂಮೊಗ್ಗು: ಪೊಸನನೆಯೊಳ್ ಪಸುರ್ಪಲರೊಳಂ ಚಿತಮಲ್ಲದ ಬೆಳ್ಪು ಪಲ್ಲವಪ್ರಸರದೊಳೆಯ್ದೆ ಕಣ್ಗೆ ಪಸರಯಡೆದೊಪ್ಪುವ ಕಂಪು . . . ಬಗೆಗೊಳ್ವಿನಂ ಬಸಂತದೊಳ್ ಬಸದಿಯ ಬಾಗಿಲಂ ತೆಱೆದ ಮಾಱ್ಕಿಯೊಳಿರ್ದುವು ಬಂದ ಮಾವುಗಳ್ (ಆದಿಪು. ೦-೬೬); ಪೊಸನನೆಯ ಬಿರಿಮುಗುಳ ಕುಸುಮಬಾಣಂಗಳಿಂ . . . ಎಸೆವುದುಂ (ಧರ್ಮಾಮೃ. ೦೦-೩೦). [ಪೊಸ + ನನೆ$_3$]

ಪೊಸನವಿಲ್ (ನಾ). ಎಳೆಯ ವಯಸ್ಸಿನ ನವಿಲು; ಮರಿನವಿಲು: ಸುತ್ತಲುಂ ಪರಿವ ಜರಿಪೊನಲ್ಗಳಿಂದೆತ್ತಲುಂ ನಲಿವ ಪೊಸನವಿಲ್ಗಳಿಂ (ಪಂಪಾ. ೩-೨೨ ರಗಳೆ). [ಪೊಸ + ನವಿಲ್]

ಪೊಸನಸೆ (ನಾ). ೧. ಉಂಟಾದ ಬೆದೆ: ಪೊಸನಸೆಯಿಂ ಮೃಗಂ ಮೃಗಿಯ ಮಗ್ಗುಲಿಸುತ್ತಿರೆ (ಸೂಕ್ತಿಸು. ೩-೨೨೯). ೨. ಕಾಮೋದ್ರೇಕದಿಂದ ಆಗ ತಾನೆ ಸೂಸಿದ ಸುರತದ್ರವ: ಪೊಸನಸೆಯ ಸೊವಡನಾಘ್ರಾಣಿಸಿ ಮಣಕದ ಮಿಡುಕುಗಚ್ಚೆಯೊಳ್ ಮೊಗವೆತ್ತುತ್ತೆಸೆದುದು ವೃಷಮಮರರನೇಡಿಸುವವೊಲೇನುಂಟೆ ನಿಮಗಮಿಾ ಸುಖಮೆಸುತುಂ (ಲೀಲಾವ. ೩-೧೩). [ಪೊಸ + ನಸೆ$_1$]

ಪೊಸನಾರ್ (ನಾ). ೧. ಒಣಗದಿರುವ ನಾರು; ಹಸಿಯಾದ ಕತ್ತು: ಬಿದಿರುದಿರ್ದಕ್ಕಿ ಪಕ್ಕಿಪೊಱೆ . . . ಹೂತಿಯ ಬೆಕ್ಕು ಸೀಳ್ದ ಮುತ್ತದ

ಪೊಸನಾರ್ ಸೆಣಂಬು ಪಲವುಂ ಮೃಗವಕ್ಕಿಗಳಿಂದಮೊತ್ತಿ ಕಟ್ಟಿದ ಮರಗಂಬಿ ಜೀರ್ಗರೆವಿನಂ ಗುದುಕಿಂ ಮಗುಟ್ಟರ್ ವನೇಚರರ್ (ಸೂಕ್ತಿಸು. ೩-೦೬೯) : ಪೊಸನಾರಂ ಕಲ್ಲೊಳೆತ್ತಲ್ತಿಱಿಯಲರಲನಾಕಾಶದೊಳ್ . . . ಆ ಬರ್ದೆ ಬಲ್ಲಳ್ (ಪೃಸಪಿ. ೨೯-೯). ೨. ಹೊಳೆಯುವ ನಾರುಮಡಿ,-ವಲ್ಕಲ : ಪಿರಿಯ ಮಡುಗಳೆ ಮಜ್ಜನಮಾಗೆ ಪೊಸನಾರೆ ದೇವಾಂಗವಸ್ತ್ರಮಾಗೆ (ಪಂಪಣಾ. ೭-೨೬). [ಪೊಸ + ನಾರ್]

ಪೊಸನೀರ್, ಪೊಸನೀರು, ಹೊಸನೀರು (ನಾ). ೧. ಶುದ್ಧವಾದ ನೀರು ; ನಿರ್ಮಲಜಲ : ಪೊಸನೀರಿಂ ಪೊಸಗಂಪಿನಿಂ ಪೊಸತು ಬೆಳ್ಪುದಕ್ಕಿಯಿಂ ದೇವನಂ . . . ಅರ್ಚಿಸಿ (ಲೀಲಾವ. ೩-೯೫). **ಪೊಸನೀರು** : ೧. ಶಶಿಕಾಂತಕಲಶದೆ ಚಂದ್ರಮುಖಿಯರಾಗ ಪೊಸನೀರ ಪಥಕರಿಗೆಱೆಯೆ (ಕಂಪಪಿ. ೬-೭೬). ೨. ಮಳೆಯಿಂದ ಹೊಸದಾಗಿ ಬಂದ ನೀರು : ಪೊಸನೀರ ಹೂರದೊಳಗೆ ಮಱಿಮೀನ್ಗಳು ಮಸಗಿ ಮುಂ ಪೊಳೆದಾಡುವಂತೆ (ಕಂಪಪಿ. ೦೦-೩೬). **ಹೊಸನೀರು** : ೨. ಹೊಸನೀರು ಬಂದು ಹಳೆನೀರು ಕೊಚ್ಚಿಕೊಂಡು ಹೋಯಿತು (ಗಾರ). ೩. ಸಿಹಿನೀರು : ಗೋದಾವರಿ-ಕೃಷ್ಣ-ಈ ನದಿಗಳ ಮಧ್ಯೆ ಕೊಲೇರ್ ಸರೋವರವಿದೆ. ಇದು ಇಂಡಿಯಾದಲ್ಲಿ ಮುಖ್ಯವಾದ ಹೊಸನೀರಿನ ಸರೋವರ (ಭೂಗೋಳ. ೮೦). [ಪೊಸ + ನೀರ್]

ಪೊಸನೀರು 'ಪೊಸನೀರ್' ನೋ.

ಪೊಸನುಡಿ (ನಾ). ಅಪೂರ್ವವಾದ ಮಾತು ; ನೂತನವಾದ ಮಾತು : ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪೊಗುಗುಂ (ಅಂಪು. ೦.೦೬) ; ರಸಭಾವಂ ಗಮಕಂ ಕಾಣಿಸೆ ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ ಕುಸುರಿಯ ಬಗೆಯಿಂದಿನಿತಱೊಳೆಸೆಯದ ಕೃತಿ ಕೃತಿಯೆ ಬಗೆದು ನೋಟ್ಪೊಡೆ ಜಗದೊಳ್ (ರರ್ಮಾಮ್ಯ. ೦-೪೦) ; ನೀಳ್ಕೊಳಿಯ ಪೊಸ ನುಡಿಯ ಕಾಳು ಕೊರಗರ್ಗೆ ಕೀಳಿಲಿನೊಳಿದ್ದವರ್ ತಳವೆಳಗಿನಿಂ ನುಡಿಯೆ (ಕಾಲೂರ. ೦೦೭-೨೦೯). [ಪೊಸ + ನುಡಿ$_2$]

ಪೊಸನೂಲ್ (ನಾ). ಹಸಿಯ ದಾರ ; ಹೊಸೆಯದ ದಾರ : ಮಿಸುಗುವ ಶಶಿ ರೋಹಿಣಿಯರನೆಸೆವ ಶರನ್ಮೇಘಮಾಲೆ ಬಳಸಿದವೋಲ್ಮೋಭಿಸಲಾ ಮದುಮಕ್ಕಳನುಱೆ ಪೊಸನೂಲಿಂ ಸುತ್ತಿದರ್ ಮಹೀಸುರರಾಗಳ್ (ಉದ್ಯಪಿ. ೮-೬೩). [ಪೊಸ + ನೂಲ್$_2$]

ಪೊಸನೆತ್ತರ್ (ನಾ). (ದೇಹದಿಂದ ಅದೇ ತಾನೆ ಹೊರಬಂದ) ಬಿಸಿರಕ್ತ : ತಿಸುಳದೊಳುಚ್ಚಳಿಪ ಪೊಸನೆತ್ತರೆ ಕೆಂದಳಿರಾಗೆ (ಪಂಪಣಾ. ೦-೬) ; ಚಲದಿಂ ಮಲೆವ ಮಱುವರಸರ ಪೊಸನೆತ್ತರೊಳ್ ಪೊರೆದ ನಿನ್ನ ಬಾಳಂತೆ ಕೆಂದ ಳಿರ್ಗಳಿಂ ಒಳ್ಪುವಡೆದ ಮಿಸುಗುವ ಅಸುಗೆಗಳೊಳಂ (ಕಬ್ಬಿಕಾ. ೬೯). [ಪೊಸ + ನೆತ್ತರ್]

ಪೊಸನೆಯ್ (ನಾ). = ಪೊಸತುಪ್ಪ : ಇಂತೊಂದು ಪೂಣ್ಕೆ ಎಮ್ಮನ್ನರ್ಗೆ ದಳ್ಳಿಸುವ ಬಲ್ಗಿಚ್ಚಿನೊಳೆಱೆದ ಪೊಸನೆಯ್ಗೆ ಪಾಸಟವಾರದೇಂ ಪೋಕುಂ (ರಾಮಾಶ್ವ. ೮೫-೩೦). [ಪೊಸ + ನೆಯ್$_2$]

ಪೊಸನೆಲ್ (ನಾ). ಹೊಸ ನೆಲ್ಲು,-ಬತ್ತ : ಬೇಱೆವೇಱಿರೆ ವಿಕಲ್ಪ ಸಮುಚ್ಚಯಯುಗ್ಮದೊಳ್ ತೋಱುವೆಂ ಕ್ರಮವಿಕಲ್ಪನೆಯಿಂ ಗುಣ ದೋಷಮಂ ಕೀಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ ತೋಱಿ ಪಿಂಗಿಸುವವೊಲ್ ಪೊಸನೆಲ್ಲಿರೆ (ಪೊಳ್ಗ್)ಳಂ (ಕವಿರಾ. ೧-೦೩೦). [ಪೊಸ + ನೆಲ್]

ಪೊಸನೇಣ್ (ನಾ). ಹಳೆಯದಲ್ಲದ ಹಗ್ಗ ; ಹೊಸಹಗ್ಗ : ತೆಂಗಿನ ಪೊಸನೇಣಿಂದಱುದಿಂಗಳ್ವರಮಡಸಿ ಕಂಬಿಯಿಂ ಕಟ್ಟಿದೊಡಂ ತಾಂ ಗಡ ಬಿಟ್ಟೊಡೆ ಮತ್ತಂ ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ (ರರ್ಮಾಮ್ಯ. ೨-೯೨) ; ಮಾತೆಲ್ಲಮಂ ಬರೆದು ಅರದ ಪೊಸನೇಣ್ಗಳಿಗೆ ಪೊಸೆಯಿಯಾದವರಿರವ ರೋಡಾಡುತಿಹುದು (ಕಾಲೂರ. ೨೯-೦೯). [ಪೊಸ + ನೇಣ್$_1$]

ಪೊಸನೇರಾಣಿ (ನಾ). ವಿಂರುಗುವ ಚಿನ್ನ,-ಅಪರಂಜಿ : ರಾಣಿಯ ವಾಸದ ಪೊಸನೇರಾಣಿಯ ಮಾಡಂಗಳೊಳಗೆ ಕೆಯ್ಗೆಯ್ದಿರೆ ರುದ್ರಾಣಿ ವರುಣಾನಿ ನೆಗೞ್ದಿಂದ್ರಾಣಿಯೆನಲ್ತಕ್ಕು ಮಿಕ್ಕ ಮಹಿಷೀಬೃಂದಂ (ಕಾಂತಿಪು. ೦೦-೭೦). [ಪೊಸ + ನೇರಾಣಿ]

ಪೊಸನೋಟ, ಹೊಸನೋಟ (ನಾ). ನೂತನದೃಶ್ಯ ; ಹೊಸದಾದ ನೋಟ : ಹರಹರ ಎನ್ನ ಕೈಯ ಹಸಿವೋಡಲಣಂ ತನುವಿಂದೆ ಪೂಜೆಯಂ ವಿರಚಿಪೆನೆಂದೊ ಕಣ್ಗಳ ಬಱಂ ತಿಳಿಯಲ್ ಪೊಸನೋಟದಿಂದೆ ಕೆಂಕರಿಸುವೆ ನೆಂದೊ (ಪಂಪಾಶ. ೯). **ಹೊಸನೋಟ** : ಎಂದಿನದೊ ಹಳೆತೋಟ ಹೊಸಬಗೆಗೆ ಹೊಸನೋಟ (ಕಾಲೂರ. ೬೬-೦೦೭). [ಪೊಸ+ನೋಟ]

ಪೊಸಪಚ್ಚ (ನಾ). ಉಜ್ವಲಕಾಂತಿಯಿಂದ ಕೂಡಿದ ಆಭರಣ : ರನ್ನದ ಪೊನ್ನ ಚಿತ್ರವಸ್ತ್ರದ ಪೊಸಪಚ್ಚದೊಟ್ಟಲನೆ ಕೋಶಗೃಹಂ ಬಱಿದಾಗೆ ಕೊಟ್ಟು ಮಾಣದೆ ಮಗುಟಾನೆಯಂ ಕುದುರೆಯಂ ಧರಣೀಪತಿ ಸಾಱಿ ಬೀಱಿದಂ (ಪಂದ್ರಪು. ೬-೮೦) ; ನಿನಗೆ ವಸಂತದೂತಿವೆಸರೊಪ್ಪುವುದೆಂತೆನೆ ಮುಂತೆ ಬಂದು ನೀನೆನಗೆ ವಸಂತನಾಗಮನಮಂ ನೆಱೆ ಸೂಚಿಸಿ . . . ಇತ್ತ ಪಸಾಯದಚ್ಚಮುತ್ತಿನ ಪೊಸಪಚ್ಚಮಂ ತಳೆದವೋಲದಿರ್ಮುತ್ತೆ ಮುಗುಳ್ತು ದೆತ್ತಲುಂ (ಪಂದ್ರಪು. ೬-೪೦). [ಪೊಸ + ಪಚ್ಚ$_2$]

ಪೊಸಪಜ್ಜೆ (ನಾ). ಅಳಿಸಿ ಹೋಗಿರದ ಹೆಜ್ಜೆಯ ಗುರುತು ; ಮಾಸದಿರುವ ಹೆಜ್ಜೆಯ ಗುರುತು : ಕುಂಜರಗುರುಕುಂಭಮಂಡಳ ದಿನಲ್ಲುಗುತಂದು ಕುಳುಂಪೆಗೊಂಡ ನೆತ್ತರ ಪೊಸಪಜ್ಜೆ [ಪಾಠಾಂ. ಹೊಸವಜ್ಜೆ] ಯೊಳ್ಕೆದಱಿ ಕಣ್ಗೆಸೆದಿರ್ದುವು . . . ಮುತ್ತುಗಳ್ (ಪುಲ್ಲಪು. ೧೦-೯೪ ; ಸೂಕ್ತಿಸು. ೩.೭೦ (ನೋ) ; ಅಗಲ್ದ ಪೆಣ್ಣಂಚೆಯ ಪುಳಿನಸ್ಥಳದ ಕುಸುಮರಜದ ಪೊಸಪಜ್ಜೆವಿಡಿದಱಿಸಿ ಪೋಗಿ (ಗಿರಿಕ. ೩-೦೦೩ ಪ). [ಪೊಸ+ಪಜ್ಜೆ]

ಪೊಸಪನ್ನೀರ್ (ನಾ). ಶುಭ್ರವಾಗಿರುವ ಪರಿಮಳದ ನೀರು : ಪೊಸ ಪನ್ನೀರೊಳ್ ಲತಾಂತಸ್ತಬಕಮನೊಲವಿಂ ತೊಯ್ದು ಭರ್ತಾರನಾದಬ್ಜ ಸಖಂ (ಉದ್ಯಪಿ. ೪-೨೬). [ಪೊಸ + ಪನ್ನೀರ್ (< ಪನಿನೀರ್)]

ಪೊಸಪರಿಮಳ, ಹೊಸಪರಿಮಳ (ನಾ). ಆಹ್ಲಾದಕರವಾದ ವಾಸನೆ ; ನರುಗಂಪು : ಪೊಸಪರಿಮಳವಿಡಿದಿಹ ಕರ್ಪುರದ ಸವಿರಸದಂಬುಲದ ಕುಟುಕಿತ್ತು ನೊಸಲೆಡೆಯನು ಚುಂಬಿಸಿ ತಕ್ಕಿಸುತ ವರವಶೆಯಾದಳೇನ ಬಣ್ಣಿಸುವೆ (ಕಂಪಪಿ. ೯-೦೭೭). **ಹೊಸಪರಿಮಳ** : ಹಸನಾಗಿ ಸವಿಯಾದ ಸಂಭಾರಮಿಕ್ಕಿಯವು ಮಸಕದಂದದಿ ನೇತ್ರಮಂ ಕಟ್ಟಿ ಪೊಗ್ಗರಿಸಿ ಹೊಸ ಪರಿಮಳವನಿಕ್ಕಲವು ತಾನೆ ಭಿನ್ನರುಚಿವೃಂತಾಕವೆಸರಾದುವು (ಸೂಪಶಾ. ೪-೯). [ಪೊಸ + ಪರಿಮಳ (= ಪರಿಮಲ)]

ಪೊಸಪರೆಯ 'ಪೊಸವರೆಯ' ನೋ.

ಪೊಸಪಸಲೆ (ನಾ). ಹಚ್ಚಹಸುರಾಗಿರುವ ಹುಲ್ಲು ; ಎಳೆಯ ಗರಿಕೆ : ನಳನಳಿಸಿ ಬೆಳೆದ ಪೊಸಪಸಲೆಯ ಮೇಲೆ ಕದಳೀದಳಂಗಳಂ ಕಮಲ ಪತ್ರಂಗಳಂ . . . ಪಾಸುತ್ತುಂ (ಗಿರಿಕ. ೫-೬೬ ಪ). [ಪೊಸ + ಪಸಲೆ]

ಪೊಸಪಸೆ 'ಪೊಸವಸೆ' ನೋ.

ಪೊಸಪಳುಕು 'ಪೊಸವಳಿಕು' ನೋ.

ಪೊಸಪಾಕ, ಹೊಸಪಾಕ (ನಾ). ಆಗತಾನೆ ತಯಾರಿಸಿದ (ಸಕ್ಕರೆ ಅಥವಾ ಬೆಲ್ಲದ) ಬಿಸಿಯಾಗಿರುವ ಪಾಕ : ಕಳಿತ ಬಾಳೆಯ ಹಣ್ಣ ಸಕ್ಕರೆಯ ಪೊಸಪಾಕದೊಳಗೆ . . . ಇಳುಹುವುದು (ಸೂಪಶಾ. ೪-೯೦). **ಹೊಸಪಾಕ** : ಕುಂಬಳದ ಕಾಯ ಕೈಸೇವಗೆಯ ಸಮವಾಗಿ ಸಂಬಳಿಸಿಕೊಂಡೊಣಗಲಿಕ್ಕಿ ತುಪ್ಪದೊಳಗಿಳಿಯಂ ಬಿಟ್ಟು ಹುರಿದು ಸಕ್ಕರೆಯ ಹೊಸಪಾಕದೊಳು ಕಟ್ಟುವುದು ಲಡ್ಡುಗೆಯನು (ಸೂಪಶಾ. ೦-೫೩). [ಪೊಸ+ಪಾಕ$_1$]

ಪೊಸಪುಟ್ಟು, ಹೊಸಹುಟ್ಟು (ನಾ). ಹಳೆಯ ಬಾಳಿನಿಂದ ಬೇರೆಯಾದ ಬಾಳು ; ಮತ್ತೊಂದು ಜನ್ಮ : ಎಳೆಯ ಕರ್ನಾಟಕಂ ಪೊಸಪುಟ್ಟು ಪುಟ್ಟುಗೆ ! (ಹೊಂಗಳು. ೪೦-೦೫). **ಹೊಸಹುಟ್ಟು** : ಹೊಸಹುಟ್ಟು ಬರುವದಿದೆ ಇನ್ನು ಮುಂದೆ ಆಗೋಣ ಆ ಜಗದ ತಾಯಿತಂದೆ (ಶಾದಲೀ. ೬೬-೦೬). [ಪೊಸ+ಪುಟ್ಟು$_2$]

ಪೊಸಪುಲ್ 'ಪೊಸವುಲ್' ನೋ.

ಪೊಸಪೂ 'ಪೊಸವೂ' ನೋ.

ಪೊಸಪೊಡೆ, ಹೊಸಪೊಡೆ (ನಾ). ಎಳೆಯ ತೆನೆ, – ಹೊಡೆ : ತೊಳಪ ಪಸುರ್ವಣಿಯ ಬೆಳಗುಚ್ಚಳಿಸಲ್ತನ್ಮಧ್ಯದೊಳ್ವಿಜೃಂಭಿಪ ಸೂತ್ರೋಜ್ವಳ ರೇಖೆಯಂತೆ ಪೊಸಪೊಡೆಯಳವಟ್ಟಿರಲೆಸೆದುದಮರ್ದ ಕಳಮಕ್ಷೇತ್ರಂ (ಕಾದಂಬ. ೩-೦೬). **ಹೊಸಪೊಡೆ** : ಉತ್ತಮದ ಹೂವು ಕಾಯ್ ಗೆಣಸುಗಳ ಹೊಸಪೊಡೆ [ಶಾಶಾಂ. ಪುಡಿ]ಯ ಮತ್ತುಳಿದವಕ್ಕೆ ಹಸಮಾಡಿ ಬಟ್ಟತ್ರಿವದ ನಿತ್ತು ಒಗ್ಗರಿಸಿಕೊಂಡವಱವಱ ಹೆಸರ ಹೂರಣಬದನೆಗಾಯೆಂಬುದು (ಸೂಪಶಾ. ೪-೨೦). [ಪೊಸ+ಪೊಡೆ$_3$]

ಪೊಸಪೊನ್ 'ಪೊಸವೊನ್' ನೋ.

ಪೊಸಪೊನಲ್ 'ಪೊಸವೊನಲ್' ನೋ.

ಪೊಸಪೊಟ್ಟಱ್ (ನಾ). ಯೌವನದ ಕಾಲ ; ತಾರುಣ್ಯ : ಪಾಂಡವರನ ಕಾರಣಂ ಕೆಣಕಿದೀ ಪೊಸಪೊಟ್ಟಱೊಳಾದ ಕಿರ್ಚು ಕೌರವರ್ಗಿದು ನಾಡೆಯುಂ ತಿಣುಕನಾಗಿಸದೇಂ ಗಳ ಸಯ್ತು ಪೋಕುಮೇ (ಸಂಪಶಾ. ೨-೬೭). [ಪೊಸ + ಪೊಟ್ಟಱ್]

ಪೊಸಬ 'ಪೊಸಂಬ' ನೋ.

ಪೊಸಬಗೆ 'ಪೊಸವಗೆ' ನೋ.

ಪೊಸಬಣ್ಣ, ಹೊಸಬಣ್ಣ (ನಾ). ೧. ಉಜ್ವಲವಾದ ಬಣ್ಣ ; ಸ್ವಚ್ಛ ವರ್ಣ : ಪೊಸಬಣ್ಣದೊಳೊಂದಿದ ಪಾರಿಜಾತಮಗ್ಗಳಮೆಸೆದೊಪ್ಪುವಂತೆ ತಳಿರಿಂ ಮುಗುಳಿಂ ನವಯೌವನಂ ಮನಂಗೊಳೆ (ಸಂಪಶಾ. ೨-೩೬). **ಹೊಸ ಬಣ್ಣ** : ೨. ಹೊಸ ಬಗೆ ; ನವೀನ ರೀತಿ : ಇಂದ್ರಚಾಪದ ಮಳೆಗಾಲದ ದಿನದಂತೆ ಬಾಳಿಗೆ ಹೊಸಬಣ್ಣವಾಗೆ ಸಂಸಾರವೆನುವುದು ಸುಖಮಯ ವೆನಿಸುತೆ ಕಳೆಯಿತು ಕಾಲವು (ಇಂಶಾಪ. ೪೨-೦೦೦). [ಪೊಸ+ಬಣ್ಣ]

ಪೊಸಬಾಸಿಗ 'ಪೊಸವಾಸಿಗ' ನೋ.

ಪೊಸಬಾಸೆ (ನಾ). (ಎದೆಯ ಮಧ್ಯಭಾಗದಿಂದ ಹೊಕ್ಕುಳ ಮೇಲು ಭಾಗದವರೆಗೆ ಇರುವ) ಮನೋಹರವಾದ ಕೂದಲ ಸಾಲಂ : ಪೊಸಬಾಸೆಯ ಚೆಲ್ವಂ ನಿಟ್ಟಿಸಲಾಂ ಮೊಲೆ ಕಾಣಲೀಯವೆಂದುಱ ಸುಯ್ವಂತುಸುರಂ ಪಸರಿಸಿಯಲರೇಱಿಸಿದಳ್ ಸಿಂಧುವಾರದಲರನ ದೊರ್ವಳ್ (ಕಾದಂಬ. ೬-೪೩). [ಪೊಸ+ಬಾಸೆ$_1$]

ಪೊಸಬಿಜ್ಜಣಿಗೆ (ನಾ). ಮಿರುಗುವ ಬೀಸಣಿಗೆ : ಬಿಸಿಲೆಸಕದಿಂದೆ ಕೊರಗಿದ ದೆಸೆವೆಣ್ಗಳ ಬಿಸುಪನಾಱಿಪಂತಿರೆ ಗಿಳಿಗಳ್ ಪಸುರೆಱಕೆಯೆಂಬ ಬಾಱಿಯ ಪೊಸಬಿಜ್ಜಣಿಗೆಗಳಿನೆಸಗಿಪುವು ತಣ್ಣೆಲರಂ (ಕಾದಂಪೂ. ೦೩೦). [ಪೊಸ + ಬಿಜ್ಜಣಿಗೆ]

ಪೊಸಬಿಜ್ಜೆ (ನಾ). ಹೊಸಬಗೆಯ ಮಾಯಾವಿದ್ಯೆ : 'ಪೊಸಬಿಜ್ಜೆವಳ' ಪರಾ. [ಪೊಸ+ಬಿಜ್ಜೆ]

ಪೊಸಬಿಜ್ಜೆವಳ (ನಾ). (ಇಂದ್ರಜಾಲವೆಂಬ) ವಿದ್ಯೆಯನ್ನು ತಿಳಿದವನು; ಮಾಯಗಾರ : ಸಿಸುವಾಗಿ ತಾನಾಲದೆಲೆಯೊಳೊಱಗಿ ತನ್ನ ಬಸಿಱೊಳೀರೇಳುಲೋಕಗಳ ಪಸರವ ತೋಱಿ ಬಗೆಗೊಳಿಸುವ ಪೊಸಬಿಜ್ಜೆ ವಳಗೆಱಗುವೆನು (ಕರ್ಣಸ್ಯ. ೦-೦೦). [ಪೊಸಬಿಜ್ಜೆ+–ವಳ]

ಪೊಸಬಿಸಿಲ್ 'ಪೊಸವಿಸಿಲ್' ನೋ.

ಪೊಸಬೀಡಾರ (ನಾ). ನೂತನ ವಸತಿ ; ಹೊಸ ನೆಲೆ : ಪೊಸಬೀಡಾರ ದೊಳಿರ್ದ ಬಟ್ಟೆಗನವೊಲ್ ಮೋಹಾಭಿವೇಶೋದಯಂ ವಸುಧಾಧೀಶನ ಚಿತ್ತದಲ್ಲಿ ಕಿಱಿದುಂ ಮೆಯ್ದೋಱಿತಿಲ್ಲ (ಶಾಧಪು. ೦೨-೭೨). [ಪೊಸ+ಬೀಡಾರ]

ಪೊಸಬು (ನಾ). (?) : ಮುಕ್ಕಾಲು ದೀವಿಟಿಗೆ ಮುರೆಳೆ ಜನಿವರ ತುದಿಕಲಪ ಪೊಸಬು ಚಕ್ರದ ಕೊಡೆ ಅಳ × × × ಪಿಲುಚಿಕತಕಡಿದೆಡ ತಕಡಿ (ಎಕ. XVI, ಗುಲ್ಕ. ೬೯-೨೬ ; ?). [< ಪೊಸತು ?]

ಪೊಸಬೆ (ನಾ). ಅಪರಿಚಿತೆ ; ಹೊಸಬಿ : ಎಳೆನಾಭಿಯೆಳೆಯಳ್ ಎಸೆವು ಡಿಯ ಪೊಸಬೆ ನುಣ್ದನಿಯ ನೂತನೆ ಭಾಳದ ಭಾಮಿನಿ ಕರ್ಣಪಾಲಿಕೆಯ ಕಾಮಿನಿ . . . ಪೆಣ್ಗಳ ಪುಣ್ಯಾಕಾರೆಯುಮೆನಿಸಿ ಮನಂಗೊಳಿಸುತ್ತಿದ್ದಳು (ಕಾದಂಬ. ೫-೫೩ ಪ). 'ಹೊಸಬಿ' ಪರಾ. [ಪೊಸಬ (< ಪೊಸಂಬ) + – ಎ$_2$]

ಪೊಸಬೆಣ್ಣೆ, ಹೊಸಬೆಣ್ಣೆ (ನಾ). ಆಗತಾನೆ ತೆಗೆದ ಬೆಣ್ಣೆ ; ನವನೀತ : ರಾಹುಗೆ . . . ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ (ಕಾನ್ಯಸಾ. ೯೩೬ ಶೂದ್ರಕ) ; ನನೆದ ಸೊಜ್ಜಿಗೆಯೊಳಗೆ ಪೊಸಬೆಣ್ಣೆ ಸಿಹಿಮೊಸರ ಕೆನೆ ಹಾಲ ಕೆನೆಯುಪ್ಪನಿಕ್ಕಿ ಕಣಿಕವ ಕುಟ್ಟಿಯನುವಾಗಿ ರೊಟ್ಟಿಯಂ ಮಾಡಿ ಪಿಟ್ಟೆಯ ಹಲ್ಲೆಗಳ ನಡುವೆಯಿರಿಸಿ ಹುದುಗಿ (ಸೂಪಶಾ. ೦-೦೨). **ಹೊಸಬೆಣ್ಣೆ** : ನೆಲಕೆ ಗಗನಕೆ ಸೂತ್ರವಿಡಲಂಬಿಲದೊಳಗೆ ಹೊಸಬೆಣ್ಣೆಯಂ ತೆಗೆಯಲು . . . ಬಲ್ಲ ನೆಱೆ ಜಾಣೆ (ಬಸಪು. ೪೨-೨) ; ಕುಟ್ಟಿ ಕಣಿಕವನು ಹೆಬ್ಬೆಟ್ಟಂತೆ ಹೊಸೆದು ಮೂವೆಟ್ಟಗಲದೊಳಗೊತ್ತಿಯಂತದಕೆ ಹೊಸಬೆಣ್ಣೆ ವಿಟ್ಟುಮಂ ತೊಡೆದು (ಸೂಪಶಾ. ೦-೫೦). [ಪೊಸ + ಬೆಣ್ಣೆ]

ಪೊಸಬೇಟ 'ಪೊಸವೇಟ' ನೋ.

ಪೊಸಬೇಸಗೆ (ನಾ). ಆಗತಾನೆ ಪ್ರಾರಂಭವಾದ ವೈಶಾಖಮಾಸ ; ಮುಂಬೇಸಗೆ : ಪೊಸಬೇಸಗೆಯೊಳ್ ಮೃಗತತಿಯಸುವೆರಸಿರವೇಳ್ಕು ಮೆಂದು ಕರುಣಿಸಿ ಮಿತ್ರಂ ಬಿಸಿಲಂ ಹಿಳಿದೊಡೆ ಬೆನ್ನೀರೊಸರ್ವಂತಿರ್ದುದು ಮರೀಚಿಕಾಜಲಮೆತ್ತಂ (ಗಿಂಕ. ೯-೦೬). [ಪೊಸ + ಬೇಸಗೆ]

ಪೊಸಬೋನ (ನಾ). ಹೊಸದಾಗಿ ಮಾಡಿದ ಅನ್ನ : ಜಂಗಮಕೆ ಮಾಡಿ ದನ್ನವ ಪುತ್ರನುಣುತಿರಲು ಪಿಂಗದವನಂ ಕೊಂದು ಮುಚ್ಚಿ ಪೊಸ ಬೋನಮಂ ಸಾಂಗಮಾಗಿಯೆ ಮಾಡಿ ತಜ್ಜಂಗಮಕೆ ನೀಡೆ (ರಾಘಶ. ೬-೦೨). [ಪೊಸ + ಬೋನ]

ಪೊಸಮಂಜು (ನಾ). ಶುಭ್ರವಾದ ಮಂಜು, – ಹಿಮ : ಜೊನ್ನದ ವೊಲ್ ಪೊಸಮಂಜು ವಾರ್ಧಿ ಪೆರ್ಚುಗೆಯನಮರ್ಚೆ ತಾಳ್ದನುದಿತೋದ ಯಮಂ ಹಿಮಕಾಲಚಂದ್ರಮಂ (ರಾಜಶೇ. ೯-೪). [ಪೊಸ + ಮಂಜು$_1$]

ಪೊಸಮಕರಂದ (ನಾ). ಆಗತಾನೆ ಅರಳಿರುವ ಹೂವಿನ ಬಂಡು : ಪೊಸಮಕರಂದದ ಮಾಂದದ ರಸಕ್ಕೆ ವಂದಲರೊಳೆಱಗಿದಳಿ ರಚನೆಯ ಕರ್ಪೆಸೆಮತೆಸೆವಿನಮೇಂ ಸೊಗಯಿಸಿದುದೊ ವನಯುವತಿವದನತಿಲಕಂ ತಿಲಕಂ (ಶಾಂತಿಪು. ೭-೧೩೩). [ಪೊಸ + ಮಕರಂದ]

ಪೊಸಮದ, ಹೊಸಮದ (ನಾ). ೧. ತಾರುಣ್ಯದ ಸೊಕ್ಕು. ೨. ತಾರುಣ್ಯದ ಸೊಕ್ಕಿನಿಂದ ಸುರಿಯುವ (ಆನೆಯ) ಮದಧಾರೆ : ಪೊಸಮದದಾನೆಯಂ ನಸೆಯ ಪೆರ್ಬಿಡಿ ಜಂಗಮಕಲ್ಪವೃಕ್ಷಮಂ ಮಿಸುಗುವ ನಲ್ಪಕಲ್ಪಲತೆ ನೀರದಮಂ ಕುಡುಮಿಂಚು ಪೊರ್ದಿ ಶೋಭಿಸುವವೊಲ್ (ಶಾಂತಿಪು. ೭-೨೯). **ಹೊಸಮದ** : ೨. ಹೊಸಮದದ ವನದಂತಿ ಕದಳಿಯ ಕುಸುರಿದಱಿದಂದದಲಿ ಘನಪೌರುಷವ ಮಾಡಿದನೆಂದನವನೀಪಾಲನನುಜಂಗೆ (ಕುಪ್ಯಾಕ್ರೋ. ೬-೨೨). [ಪೊಸ + ಮದ]

ಪೊಸಮದವಣಿಗ (ನಾ). ಹೊಸದಾಗಿ ಮದುವೆಯಾದವನು : ಪೊಸ ಮದವಣಿಗಂ ದೇವೇಂದ್ರನ ಶಚಿಯ ವಿಳಾಸಾವಿಷ್ಕೃತವಿವಿಧವಿಭವಮಂ ಮಸುಳಿಸಿದಂ (ಶಾಂತಿಪು. ೭-೦೨೦). [ಪೊಸ+ಮದವಣಿಗ(< ಮದುವಳಿಗ)]

ಪೊಸಮದವಳಿಗೆ (ನಾ). ಹೊಸದಾಗಿ ಮದುವೆಯಾದವಳು; ನವವಧು : ಆತನ [ಮನೆಗೆ ವಂದು ಪೊಸಮದವಳಿಗೆಯ ಕೆಲದೊಳಿರ್ದ ಪುಷ್ಪದಾಡನಂ ಕಂಡು] (ರರ್ಮಾಮ್ಯ. ೬-೦೨೭). [ಪೊಸ + ಮದವಳಿಗೆ (<ಮದುವಳಿಗೆ)]

ಪೊಸಮನೆ, ಹೊಸಮನೆ (ನಾ). ಹೊಸದಾಗಿ ಕಟ್ಟಿದ ಮನೆ; ನೂತನ ಗೃಹ : ಕಿಸುರ ಕಸಗಳೆದುಮೆತ್ತಿಸಿ ಪೊಸಬಗೆಯಂ ಪೂಸಿ ರಾಗರಸದಿಂ ಪೊಕ್ಕಂ ಪುಸಿದಟ್ಟಿವೆಂಡಿರ ಬೇಟಂ ಬಿಸುಟೆರ್ದೆಯಂ ಸ್ಮರನೆ ಪುಗುವವೊಲ್ ಪೊಸಮನೆ [ಪಾಠಾಂ. ಪಾಟ್ಟನೆ]ಯಂ (ಕರ್ಣಸೇ. ೯-೦೪೯); ಮಾಡಿದ ತೋರವೆಟ್ಟುಗಳ್ ಪೊಸಮನೆ ಸುತ್ತಲುಂ ಬಳಸಿ ಪರ್ವಿದ ಕೇದಗೆ ಪಚ್ಚವಾಗಿಲ್ (ಕಬ್ಬಿಗಾ. ೦೦೦). **ಹೊಸಮನೆ:** ಹೊಸಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ (ಪುರುಂದ. ೨-೬೦-೩); ಹೊಸ ಊರು ಹೊಸಮನೆಯೆನೆ ಹೊಸತಾಯಿತು ನಮ್ಮ ಜೀವನ ಸುಖವಾಗಿ (ಇಂಜಾಪ. ೩೮-೭೬). [ಪೊಸ + ಮನೆ]

ಪೊಸಮಲ್ಲಿಗೆ (ನಾ). ಆಗತಾನೆ ಅರಳಿರುವ ಮಲ್ಲಿಗೆ; ನಳನಳಿಸುತ್ತಿರುವ ಮಲ್ಲಿಗೆ : ಸೊಡರ್ಗುಡಿಯೊಯ್ಯನಾಗೆ ಪೊಸಮಲ್ಲಿಗೆ ಮೆಲ್ಲಗೆ ಕಂಪು ನಾಱೆ (ಪಂಪಭಾ. ೯-೦೦೦); ಪೊಸಮಲ್ಲಿಗೆಗಮೊಳ್ಮಾವಿಂಗಂ ಮದುವೆಮಾಡಿದಳ್ಳನದೊಳ್ (ಪರ್ಗಪು. ೯-೩೬). [ಪೊಸ + ಮಲ್ಲಿಗೆ]

ಪೊಸಮಸೆ, ಹೊಸಮಸೆ (ನಾ). (ಮಸೆದು) ಹೊಳೆಯುವಂತೆ ಹರಿತಗೊಳಿಸಿರುವುದು : ಗಗನಮೆಡೆನೆಱೆಯದಂತಿರೆ ಗಗನೇಚರಸೈನ್ಯಮಿಸುವ ಪೊಸಮಸೆಯ ಸರಲ್ನಗಧರನ ಮೇಲೆ ಪಾಯ್ದುವು (ಪಂರಾಮಾ. ೯-೬೦); ದಮನನಂ ಪೊಸಮಸೆಯ ಕೂರ್ಗಣೆಗಳಿನಿಸುತುಂ (ರಾಮಾಕ್ಯ. ೯೦-೦೦). **ಹೊಸಮಸೆ :** ಹೊಸಮಸೆಯ ಹೊಗರಂಬುಗಳನೆಬ್ಬಿಸಿದನು (ಕುಮ್ಮಾಪ್ರೋ. ೦೩-೬೦). [ಪೊಸ + ಮಸೆ$_2$]

ಪೊಸಮಾವು (ನಾ). ಚಿಗುರಿದ ಮಾವಿನ ಮರ : ಮುಸುಕಿದ ತಳಿರಂ ಪೇಱಿದ ಪೊಸಮಾವುಗಳಿಂ ಬಸಂತಮೆಸೆದಪುದು (ಆದಿಪು. ೦೦-೮೩); ತಣಿಪುವುದು ಪೊಸಮಾವೆಳಸಿದ ಪಾಂಥಪ್ರತಾನಪಂಚೇಂದ್ರಿಯಮಂ (ಗಿರಿಕ. ೨-೯೩). [ಪೊಸ + ಮಾವು]

ಪೊಸಮಿಸುನಿ, ಹೊಸಮಿಸುನಿ (ನಾ). = ಪೊಸನೇರಾಣಿ : ಪೊಸಮಿಸುನಿವೆಸದ ತೊಡೆಗುಪ್ಪಸಮೆಸೆದುದು ಪೊಣರಲೆಂದು ಪೊಂಬಾಳೆಯೊಳಂದಸಿಯಳ ನುಣ್ದೊಡೆ ತಾಳ್ದವೊಲಸದೃಶರುಚಿ ಕನಕಕವಚಮಂ ಕಡುಪಿಂದಂ (ರಾಜಶೇ. ೦೨-೬೦). **ಹೊಸಮಿಸುನಿ :** ಹೊಸಮಿಸುನಿಯ ಚಿನ್ನದಿ ಕರುವಿಟ್ಟು ನಿರ್ಮಿಸಿದ ಪುತ್ತಳಿಯಂದದಲಿ (ಜೀವಂಜಾಂ. ೦-೦೬). [ಪೊಸ + ಮಿಸುನಿ]

ಪೊಸಮೀನ್ (ನಾ). ಹೊಳೆಯುವ ಮೀನು : ನನೆಗಣೆಯನ ಮೆಯ್ವೆಳಗೆಂಬಿನಿಗೊಳದೊಳ್ ಮೊದಲೆ ಮಿಳಿರ್ದು ನೆಗೆದಾಡಿದುವಂದೆನಸುಂ ಕಡು ನೀಱೆಯ ಚಿಲ್ವೆನೆ ತೊಳಗುವ ಕಣ್ಗಳೆಂಬ ಪೊಸಮೀಂಬೊಣರ್ಗಳ್ (ಕಬ್ಬಿಗಾ. ೩೩೦). [ಪೊಸ + ಮೀನ್$_3$]

ಪೊಸಮುತ್ತು, ಹೊಸಮುತ್ತು (ನಾ). ನೂತನವಾಗಿರುವ ಮುತ್ತು : ರಸದಾಡಿಮದ ಬಿತ್ತುಮಂ ಪೊಸಮುತ್ತುಮಂ ಮುಕ್ಕುಳಿಸಿದಂತಪ್ಪ ವಿಬುಧವನಜವನಕಳಹಂಸನ ದಂತಪಂಕ್ತಿಗಳಮೃತಕಿರಣನ ಕಾಂತಿಗಳನಿಳಿಸುವಂತಾದುವು (ಪಂಪಭಾ. ೨-೩೯ ಪ); ಮತ್ತಗಜಮಸ್ತಕದ ಪೊಸಮುತ್ತಂ ಬಲ್ಪಿಂದೆ ತಂದೆಂ (ಗಿರಿಕ. ೦-೦೦೩); ಪಲಪಸುರ್ದೋರಣ ಪಳಿ ಗುಡಿ ಸಂತಸವಱೆ ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ಶೋಭಿಸಿತು (ಜಯಾಕಾ. ೨-೩೯). **ಹೊಸಮುತ್ತು:** ಹೊಸಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು (ಅವಶಂ. ೧೩೬-೬೨೯); ಎತ್ತಿದರು ಬಳಿಕಾರತಿಯ ಹೊಸಮುತ್ತುಗಳ ಸೇಸೆಯನು ಪರಿಕಲಿಸುತ್ತ ಹರಸಿದರಖಿಳವಿಪ್ರಸುವಾಸಿನೀನಿಕರ (ತೊರರಾ. ೦-೦೪-೨೦). [ಪೊಸ + ಮುತ್ತು$_3$]

ಪೊಸಮೃಣಾಳ (ನಾ). ತಾವರೆಯ ಎಳೆಯ ದಂಟು : ಎಳದೆನಿಸಿರ್ದ ಪಾವಸೆಯ ತಣ್ಣೆಟೆಯಿಂದಮೆ ನೆಯ್ದ ಸೀರೆ ಶೀತಳಿಕೆಯ ಚಾಮರಂ ಪೊಸಮೃಣಾಳದ ತೋಳ್ವಳೆ (ಕಾಪಂಕಾ. ೯೩೯). [ಪೊಸ + ಮೃಣಾಳ (= ಮೃಣಾಲ)]

ಪೊಸಮೆಂಡಿ (ನಾ). ಒಬ್ಬಾತನ ಹೆಸರು (?) : ಸಿರೆಸಗರನ್ × × × ಯನ್ ಪೊಸಮೆಣ್ಡಿ ಸಗ್ಗಮೇಱಿದ (ಎಕ. IX. ಹೊಸಕೋ. ೯-೯; ಸು. 870). [?]

ಪೊಸಯಿಸು$_1$ (ಕ್ರಿ). ೧. ಹೊಸದನ್ನಾಗಿ ಮಾಡು ; ಹೊಸತುಗೊಳಿಸು : ರಸಭಾವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ (ಆದಿಪು. ೯-೨೩); ಅಸಮಾನಮೆನಿಪ್ಪ ಲಾಸ್ಯಲೀಲೆಯುಮಂ ನಿರ್ಮಿಸಿ ತೋಱಿದನೊರ್ವೊದಲೆನೆ ಪೊಸಯಿಸಿದಂ ನಾಟ್ಯವಿದ್ಯೆಯಂ ಪುರುಹೂತಂ (ಪೇಟಿಪು. ೮-೦೬೯). ೨. ಜೀರ್ಣೋದ್ಧಾರ ಮಾಡು : ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ (ಎಕ. II, ೭೩-೩೩; 1118). ೩. ಅತಿಶಯವಾಗು; ಅಧಿಕವಾಗು; ಹೆಚ್ಚಾಗು : ಸರಸಿರುಹದ ಮೇಗಾಡುವ ಸುರಸುವತಿಯರಾಟದಂದಮೆಂತೆನೆ ಸಿರಿಯಂ ಪರಿಭವಿಸಿ ತಂದು ಪೊಸಯಿಪ ಸಿರಿವಂತಿಕೆಯಿಂದೆ ಕಾಲೊಳೊದೆದಪರನಿಕುಂ (ಶಾಂತಿಪು. ೦೦-೦೬); ಈ ಸಮಸ್ತವಸುಧಾತಳರಾಜ್ಯವಿಭೂತಿ ನಿಮ್ಮದೊಂದಸದೃಶಮಂತ್ರದತುಳತಂತ್ರಬಳಪ್ರಥಿತಪ್ರತಾಪದಿಂ ಪೊಸಯಿಸಿ ಸಂದುದಿಂದುವರಂ (ಪೇಟಿಪು. ೨-೩೯). ೪. ಅಧಿಕಗೊಳಿಸು ; ಹೆಚ್ಚುಮಾಡು : ಎಡಱುವಹಿತರಂ ಚಕ್ರಮೆ ಸಾಧಿಸಿದಪ್ಪುದು ನವನಿಧಿಗಳ್ ಪೊಸಯಿಸಿದಪ್ಪುವು ವಿಭೂತಿಯಂ ಪುರುಸುತನಾ (ಆದಿಪು. ೦೯-೬೦). [ಪೊಸ + — ಇಸು$_3$]

ಪೊಸಯಿಸು$_2$ 'ಪೊಸೆಯಿಸು' ನೋ.

ಪೊಸರಂಗ (ನಾ). ನೂತನವಾಗಿ ನಿರ್ಮಿಸಿದ ರಂಗಮಂಟಪ : ಪೊಸರಂಗದ ಪರಿಯಂಕಂ ಮಿಸುಕುವ ಕೌಳುಡೆ ಮರಾಳತಳ್ಪಂ ಸಿತಸದ್ವಸನದಿ ಪಚ್ಚವಡಿಸಿ ರಾಜಿಸುತಿರೆ ಕುಳ್ಳಿರ್ದನಬಲೆವೆರಸಾ ಕುವರಂ (ಕ್ರಿಪುಪಿ. ೦೯-೬). [ಪೊಸ + ರಂಗ]

ಪೊಸರಕ್ತ, ಹೊಸರಕ್ತ (ನಾ). ೧. = ಪೊಸನೆತ್ತರ್ : ಧಾತ್ರಿಗೆ ಪೊಸರಕ್ತ ಪೂರಮೆಸಗಿದತ್ತು (ರಾಜಶೇ. ೩-೦೦೬). **ಹೊಸರಕ್ತ :** ೨. (ಆಲಂ) ನವಯೌವನ : ಉತ್ತಮವಾದವು ಹರೆಯದ ದಿನಗಳು ಹೊಸರಕ್ತ ಹೊಸ ಅನುರಕ್ತಿ (ಇಂಜಾಪ. ೨೦೨-೯೯). [ಪೊಸ + ರಕ್ತ]

ಪೊಸರಜ್ಜು (ನಾ). = ಪೊಸನೇಣ್ : ಪೊಸರಜ್ಜುಗಳಿಂ ಲಿಂಗಮನಸವಸದಿಂ ಸುತ್ತಿ ಮೂಱು ಘಟೆಯಾನೆಗಳಿಂ ಮಸಗಿ ಕಲಿ ಚೋಳವಿಭು ತೆಗೆಯಿಸೆ ದಿಟದಿಟಿಯೆನುತೆ ಪಱಿದು ಮುಗ್ಗಿದುವಾಗಳ್ (ಕ್ರಿಪುಪಿ. ೨೦-೦೦). [ಪೊಸ + ರಜ್ಜು]

ಪೊಸರತ್ನ (ನಾ). ನೂತನವಾದ ರತ್ನ : ಸಾಲ ಮುತ್ತಿನ ಕುಚ್ಚಿನ ಪೊಸರತ್ನದ ಮೇಲುಪ್ಪರಿಗೆಗೆನ್ನನೊಯ್ದು ಕಾಲೋಚಿತದ ಕಲೆಗಳಿಂದ ಸೋಲಿಸಿ (ಕಂಪಿ. ೯-೦೯೦). [ಪೊಸ + ರತ್ನ]

ಪೊಸರನ್ನ (ನಾ). = ಪೊಸರತ್ನ : ಪೊಸರನ್ನದ ಪೊನ್ನ ಪೊದಟ್ಟ ಸೋನೆ ಮಂದಾನಿಳನಿಚ್ಚೆ ಬೆರ್ಚೆಯೊಳಗಚ್ಚಿಱಿದಂತಿರೆ ದೇವರಾರ್ವ ಹೋಧ್ವಾನನಿನಾದಮೊಪ್ಪಿದುದು ರಾಜಿತರಾಜಗೃಹಾಂತರಾಳದೊಳ್ (ಶಾಂತಿಪು. ೬-೭೪); ಮಿಸುಗುವ ಕಣ್ಣ ನುಣ್ಬೆಳಗು ಜೊನ್ನದೊಳೋರಗೆಯಾಗೆ ಸೊಂಪು ಸಂದಿಸೆ ಪೊಸರನ್ನದಾರತಿಯನೆತ್ತಿದರಗ್ಗದ ಗಾಡಿಕಾರ್ತಿಯರ್ (ಕಬ್ಬಿಗಾ. ೩೯೩). [ಪೊಸ + ರನ್ನ (<ರತುನ)]

ಪೊಸರೂಪು, ಪೊಸರೂವು (ನಾ). ಹೊಸದಾದ ಚೆಲುವು ; ನವೀನ ರೂಪ : ಪೂಗಳಂ ತನ್ನುಮಂ ಮಱೆದಂ ನಿರೀಕ್ಷಿಸುತೆ ಮಱೆದಿರ್ದನಂ ಸತಿಯರಂಮ ಭೋಂಕನೆ ಕಂಡು ಬೆಱಗಾಗಿ ಸೋಲ್ತು ಪೊಸರೂಪಂ

ಮನಂಗೊಂಡು (ಪಂಪಿ. ೦-೪೪). **ಪೊಸರೂವು :** ನೊಸಲ ಕತ್ತುರಿ ಬಾಗಿದ ಪುರ್ಬು ತಾವರೆಯೆಸಳನೇಳಿಪ ನಿಡುಗಣ್ಣು ಪಸರಿಪ ತಿಲಪುಷ್ಪ ನಾಸಿಕ ಸತ್ಕರ್ಣ ಪೊಸರೂವ ನೋಡಿ ಹಿಗ್ಗಿದರು (ಪೋಷತ. ೦೮-೬೨).

[ಪೊಸ+ರೂಪು]

ಪೊಸರೂವು 'ಪೊಸರೂಪು' ನೋ.

ಪೊಸಲತೆ (ನಾ). ಹೊಸದಾಗಿ ಚಿಗುರಿದ ಬಳ್ಳಿ : ಪೊಸಲತೆಯಕ್ಕುಮಲ್ಲ ಲತೆಗೆತ್ತಣದೀ ಸವಿಮಾತು ನೀಟ್ಟ ರನ್ನಸರಮದಕ್ಕುಮಲ್ಲ ಸರಕೆತ್ತಣವೀ ನವಘರ್ಮಬಿಂದುಗಳ್ . . . ಎಂದೊಸೆದು ಸಖೀಜನಂ ಪೊಗಟ್ಟುದಾ ಸತಿಯಂ (ಉಪ್ಕಟ. ೬-೪೦). [ಪೊಸ+ಲತೆ]

ಪೊಸವಂದರ್ (ನಾ). ಹೊಸದಾಗಿ ಹಾಕಿದ ಚಪ್ಪರ : ಪರಿವೇಷದ ತೆಱದಿಂದನವರತಂ ಕರ್ಪೂರರಸದ ಪರಿಕಣಿ ಸುತ್ತಂ ಪರಿಯಲ್ ಮೃಣಾಳ ಪೊಸವಂದರ ನಡುವಣ ಪೂವಿನೆಸಟ ಪಾಸಿನೊಳಿರ್ದಳ್ (ಕಾದಂಕಾ. ೨೨೬).

[ಪೊಸ+ಪಂದರ್]

ಪೊಸವಗೆ, ಪೊಸಬಗೆ, ಹೊಸಬಗೆ (ನಾ). ನವೀನರೀತಿ ; ನೂತನ ಕ್ರಮ : ಅಳಿಯರಗಿಳಿಯರಸಂಚಿಯುಮಿಳೆಯೊಳ್ ಭಾವುಕರ ಕಿವಿಗೆ ಸವಿಯಂ ಪಡೆಗುಂ ಕಳಕಂಠಕಂಠನಾಳೋದ್ಗಳಿತಸುಧಾಸಾರದಿಂಪು ಪೊಸ ವಗೆಯಲ್ಲೇ (ಶಕವಿ. ೦-೦೬). **ಪೊಸಬಗೆ :** ಪೊಸಬಗೆ ದೇಸೆವೆತ್ತು ಚಿತಮಂ ಪ್ರತಿಪಾಲಿಸುವರ್ಥದೊಳ್ಪು ರಂಜಿಸೆ ರಸಭಾವದೊಳ್ ನೆಗಟ್ವ ಳಂಕೃತಿ ಕೈಮಿಗೆ ಪೇಟ್ಟು ಕಾವ್ಯಮಂ (ಪುಷ್ಕಾಸ್ತ್ರ. ೦-೨೦). **ಹೊಸಬಗೆ :** ಈ ಹೊಸಬಗೆ ಎಂದರೆ. ಕಾವ್ಯದ ವಿಶಿಷ್ಟಧರ್ಮವೆಂಬಲ್ಲಿ ಸಂಶಯವಿಲ್ಲ (ಶಾಪೋಶಿ. ೨೨೬); ಕಂದೆರೆಯೆ ಮರೆಚಿಲ್ವು ತಂಗಾಳಿ ಪೊರೆಯೆ ಎಂದಿನದೊ ಹಳೆತೋಟ ಹೊಸಬಗೆಗೆ ಹೊಸನೋಟ ತಂದು ತೋರ್ಪುದು ಪಸಂ ಬಾಗಿಲಂ ತೆರೆಯೆ (ಕಾಂಯಿರ. ೬೭-೧೦೭). [ಪೊಸ+ಬಗೆ$_2$]

ಪೊಸವಟ್ಟ (ನಾ). ೧. ಹೊಸ ಗದ್ದುಗೆ.—ಪೀಠ : ಅದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆತ್ತಿದ ಪೊಸವಟ್ಟಮಂತದು ಮನೋಜನ ಕೈಪಿಡಿಯೆಂದು ಮಾಣ್ದೆನಾ ಸುದತಿಯ ರೂಪಿನಿಂ ಪೆಱತನೆಂದೊಡೆ ಚಿಃ ಕರಮೆಗ್ಗನಾಗೆನೇ (ಆದಿಪು. ೨-೬೪). ೨. ಹೊಸದಾದ ಹಣೆಪಟ್ಟಿ : ಧವಳವಿಲೋಚನಂ ಧವಳಚಾಮರಮಾಗೆ ಲಲಾಟಪಟ್ಟಮೊಪ್ಪುವ ಪೊಸ ವ[ಪಾಶಾಂ. ಪ]ಟ್ಟಮಾಗೆ . . . ಪೋಲ್ತು ತೋಱುವುದಸಿತೋತ್ಪಲೇಕ್ಷಣೆಯ ಯೌವನಲಕ್ಷ್ಮಿಯ ರಾಜ್ಯಲಕ್ಷ್ಮಿಯಂ (ಶಿಪಿಪು. ೨-೨೫). [ಪೊಸ + ಪಟ್ಟ$_3$]

ಪೊಸವಟ್ಟೆ, ಹೊಸಬಟ್ಟೆ (ನಾ). ಹಳೆಯದಲ್ಲದ ಬಟ್ಟೆ ; ನೂತನವಸ್ತ್ರ : ಮಿಸುನಿಯ ಹಡವ ಚಾಮರ ಕುಂಚ ಕಾಳಾಂಜಿ ಪೊಸವಟ್ಟೆಯ ಪಾವಡೆಯ ಜಸವಟ್ಟೂಳಿಗದವರ ಮೇಳದೊಳಾಗ ವಸುಧೇಶ ಸಾರಿಗೈದಿದನು (ಕಂಪಿ. ೨೨ ೬೬). **ಹೊಸಬಟ್ಟೆ :** "ಅನಾಹತಂ, ನಿಷ್ಪ್ರಮಾಣಿ, ತಂತ್ರಕಂ—೩ ನವಾಂಬರ, ಹೊಸಬಟ್ಟೆ" (ಸಿದ್ಧಾಂತಿ. ೨೦೨) ; ಸಾಧಾರಣವಾಗಿ ಎಲ್ಲರೂ ಹಬ್ಬಗಳಲ್ಲಿ ಮಕ್ಕಳಿಗೆ ಹೊಸಬಟ್ಟೆ ತರುತ್ತಾರೆ (ಕೂಡಿ).

[ಪೊಸ + ಬಟ್ಟೆ$_2$]

ಪೊಸವಣ್ (ನಾ). ಮಾಗಿದ ಹಣ್ಣು ; ಪಕ್ವಫಲ : ಎಸಗುವೆಲರಿನೊಡೆ ದೊಸರ್ವ ಪೊಸವಣ್ಣ ಪಸರದಿನೆಸೆವಸಿಯ ಕೊಂಬನಿಂಬು ಮಾಡಿ ಸುಟಿದು ಗಟಪುವೆಳಗಿಳಿಯ ಬಳಗಕ್ಕೆ ತಮರ್ಮನೆಯಾದಿಮ್ಮಾವಿನ ಪೊದಱೊಳಂ (ಕಲ್ಕಿಕಾ. ೩೦). [ಪೊಸ+ಪಣ್$_3$]

ಪೊಸವರೆಯ, ಪೊಸಪರೆಯ, ಹೊಸಹರೆಯ (ನಾ). ನವಯೌವನ : ನುಣ್ಗುರುಳ ಪೊಸವರೆಯದಂಬುಜಾಸ್ಯದ ಸೂಳೆವೆಣ್ಗಳೊಡನೈದಲುಜ್ಜುಗಿಸೆ ಪಡೆ ಮೋಹರಿಪ ಜಾಣ್ಗೆ ಸಂತೋಷಿಸುತ ವಂದಿಗಳು ಜಯ ಜೀಯ ಧಲರೆ ಭಾವೆಂದುಲಿಯಲು (ಶಾಪಸಂ. ೬-೪) ; ಬಸಿಱೊಳು ಬಂದ ಕುವರನಾದೊಡಮೇನು ಪೊಸವರೆಯದ ಪುರುಷನನು ಒಸೆದು ನಿಟ್ಟಿಸಿ . . . ಬಣ್ಣಿಸಲಾಗದು ಭಾವೆಯರು (ಪಂಪಿ. ೪-೨೨). **ಪೊಸಪರೆಯ :** ಈ ಮೂರುಲೋಕದೊಳಗಿಂತ ಚನ್ನಿಗ ಚಲ್ವ ಪೊಸಪರೆಯದಾ ಗಂಡುಸರ ನಾ ಕಾಣಲಿಲ್ಲ (ಪಪಪೋ. ೨೬-೨೯). **ಹೊಸಹರೆಯ :** ಅಲಘುಕಬರಿಯ ಕಮಲ ನಿಭವದನದ ಕಳಕಂಠಾಳಾಪದ ಹೊಸಹರೆಯದ ಲಲನೆಯರ ವಿಲಾಸಂ ನೃಪನಱಿತಮನೆಳಕುಳಿಗೊಳಿಸಿದುದು (ಕಥಾಕಾ. ೨-೩); ದೊರೆರಾಯನ ಸಮ್ಮುಖದೆ ಹೊಸಹರೆಯದ ತರುಣಿಯರುಗಳ ಹಸ್ತದಲಿ ಮಿಱುಪ ಮಿಸುನಿಯ ಬೊಂಬಾಳದೀವಟಿಗೆಗಳ್ಸುರುಚಿರಪ್ರಭೆಯ ಸೂಸಿದುವು (ಕಂಪಿ. ೬-೨೩). [ಪೊಸ + ಪರೆಯ$_2$ (< ಪರಯ)]

ಪೊಸವಸೆ, ಪೊಸಪಸೆ, ಹೊಸಹಸೆ (ನಾ). (ಅರಳಿದ ಹೂವಿನಿಂದ ರಚಿಸಿದ) ಮೃದುವಾದ ಹಾಸುಗೆ : ಮಿಸುಗುವ ಪೊಸವಸೆಯೊಳಸದಳ ಮೆಸೆಯೆ ಬಯಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳ್ ಬಸದಾಗಿಯುಮಸಿಯಳೆನಗಸವಸದೊಳೆ ಬೆಸೆದು ಪೋಗಿ (ಆದಿಪು. ೪-೦೨ ಪ). **ಪೊಸಪಸೆ :** ಮಿಸುಪೆಸಟ ಪಸರದಿನೆಸೆವ ಪೊಸಪಸೆಯೊಳ್ ಮೆಯ್ಯ ನೀಡಾಡಿ ಪೊಳೆಪುವಡೆದ ಪಾಲ್ಗಡಲ ತೆರೆದುಱುಗಲೊಳ್ ಪವಡಿಸುವ ಸಿರಿಯಂ ಪೋಲ್ತಿರ್ಪಳ್ (ಕಬ್ಬಿಕಾ. ೩೦೫). **ಹೊಸಹಸೆ :** ಹಂಸ ತೂಲಸ್ಥಲದೊಳ್ ತಾಂ ಬೈತೊಡು ಮುಳ್ಗಳ ಹೊಸಹಸೆಯೊಳ್ ಬೈತೊಡಂ . . . ಸರ್ವವೊಂದಂದಮೆಂದಾಂ ಸಲೆ ಕಾಣ್ಬಂತಿತ್ತು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೬೫). [ಪೊಸ + ಪಸೆ$_2$]

ಪೊಸವಳಿಕು, ಪೊಸಪಳುಕು (ನಾ). ನೂತನಸ್ಫಟಿಕ : ಪೊಸವಳೀನ ಸೆಲೆಯೊಳ್ ನೆಟಲೆಸೆಯೆ ಮೊಗಂಬೊಕ್ಕು ಪಾಯ್ದ ಕರಿಯುಂ ಹರಿಯುಂ ಪೊಸಪೋರ್ತಮನಱಿಯಮೆ ಪುಟ್ಟಿಸೆ ನೆಟಲೊಳ್ ಪೋರ್ದು ಸೇದೆಗಿಡು ವುವು ನಗದೊಳ್ (ಕಾಂಶಿಪು. ೨-೦೦೩). **ಪೊಸಪಳುಕು :** ಪೊಸಪಳುಕಿನ ಗಂಧಾಶ್ಮದಿನೆಸೆವ ಸುವರ್ಣಾದ್ರಿಯಂತೆ ಪಾಸಿದ ಸಿತಸದ್ವಸನದಿನೊಪ್ಪುವ ವಜ್ರದ ಪಸೆವಣೆಯಿಂ ಪೊನ್ನ ಜಗುಲಿ ಕಣ್ಗೆಸೆದಿರ್ಕುಂ (ತ್ರಿಪುವಿ. ೦೬-೩೬).

[ಪೊಸ + ಪಳಿಕು(< ಪಟಿಕ)]

ಪೊಸವಳ್ಳಿ, ಹೊಸವಳಿ, ಹೊಸವಳ್ಳಿ, ಹೊಸಹಳಿ, ಹೊಸಹಳ್ಳಿ, ಹೊಸಳ್ಳಿ (ನಾ). ಒಂದು ಊರಿನ ಹೆಸರು : ವಳ್ಳಾವಿವಿಷಯ ಪಣ್ಣಾಗ್ರಾಮೇ ಕೆಱಿಗಾಲೂರ್ಪೊಸವಳ್ಳಿ ಮಿಾದುಂಣ್ದವಳ್ಳಿ (ಪ್ರಾಕಾಂ. ೦೯೩೦. ೩-೦೬; ಸು. 475); ಪುಂನಾಡಱುಸಾಸಿರಮಂ ತಟಿಕಾಡು ಮಾಯ್ದಿಲೆಗೆಯುಂ ಪೊಸವಳ್ಳಿಯುಂ (ಎಳ. IV (R). ಶಾಮರಾ. ೦೦೫-೩ ; ಸು. 10ನೆಯ ಶತ) ; ವೀರಸಿದ್ಧೇಶ್ವರಮಹಾದೇ[ವ]ರ್ಗ್ಗೆ ಪೊಸವಳ್ಳಿಯ ನೀರಗಾವುಣ್ಡನ ಕೆಯ್ಯಲ್ಪೊನ್ನಱಿ ಕೊಟ್ಟು ಮಣ್ಣಱಿ ಕೊಣ್ಡು (ಎಳ. I. ೪೯-೬; 1070). **ಹೊಸವಳಿ :** ಸರಗೂರು ಉಗುನೆಯ ಹೊಸವಳಿ[ಸಿವನ] ಹಳಿ . . ಚತುಸ್ಸೀಮಾಸಮನ್ವಿತವಾದ ಕಾಲುವಳಿಗಳು ಸಹಿತವಾಗಿಟ್ಟ (ಎಳ. IV(R), ಕೊಳ್ಳೇಗಾ. ೩೦-೩೭ ; 1321). **ಹೊಸವಳ್ಳಿ :** ಅಶೇಷಮಹಾಜನಂ[ಗ]ಳು ತಮ್ಮ ಶ್ರೀಹರದೆ ಕಾಲುವಳ್ಳಿ ಹೊಸವಳ್ಳಿ ಶ್ರೀರ × × ದೇವರ ಖಣ್ಡಸ್ಫುಟಿತಜೀರ್ನ್ನೋಧಾರಕ್ಕಂ ದೇವರ ನಿತ್ಯನಿವೇದ್ಯಕ್ಕಂ . . . ಮಾಡಿ ಬಿಟ್ಟ ಎರೆ (ಎಳ. VII. ಹೊನ್ನಾಳಿ. ೧೧೫-೦೪ ; ಸು. 1250 ?). **ಹೊಸಹಳಿ :** ಚಿರುಕನ ಹಳಿಯ ಗ್ರಾಮವೊಂದಕೆ ಎಂಭತ್ತು ಪರಹ ಹೊಸಹಳಿ ಗ್ರಾಮವೊಂದಕೆ ಐವತ್ತಐದುವರಹ (ಎಳ. III (R). ಗುಂಡ್ಮುಪೇ. ೦೫೦-೭೬ ; 1521) ; ಹೊಸಹಳಿಯ ರಾಯಂಣ ಪಱಿಯಂಣ . . . ಯಿವರು ಮುಂತ್ತದ ಸಮಸ್ತರು . . . ಯಿಾ ಸಾಲವನು ಧಾರಾ ಪೂರ್ವ್ವಕವಾಗಿ ಕೊಟ್ಟೆಉ (ಎಳ. II (R). ೩೫೨-೦೯; 1634); ಪಾರ್ಶ್ಥಿವಕುಲ ಪವಿತ್ರನುಂ ಕ್ರಿಷ್ಣರಾಜಪುಂಗವನುಂ ಬೆಳುಗುಳದ ಜಿನಧರ್ಮ್ಮಕ್ಕೆ ಬಿಟಂಥ ಗ್ರಾಮಾದಿಗ್ರಾಮಭೂಮಿಗಳ್ ಆರ್ಹನಹಳಿಯುಂ ಹೊಸಹಳಿಯುಂ ಜಿನ ನಾಥಪುರಂ (ಎಳ. II (R). ೩೫೦-೨೦; 1723). **ಹೊಸಹಳ್ಳಿ :** ಹೊಸಹಳ್ಳಿಯ

ಗ್ರಾಮವನು ಕಲ್ಲ ನೆಟ್ಟು ಕೊಟ್ಟೆಉ (ಎಕ. IV (R). ಶಿಂಪೂ. ೦೪೦-೦೬ ; 1586) ; ಮಹಿಶೂರ ಶ್ರೀಕೃಷ್ಣರಾಜವಡೆಯರ್ಯೆಯ್ಯನವರು ವೆಂಕಟರಾಮ್ಯೆಗೆ ಬರೆಸಿಕೊಟ್ಟ ಕ್ರಯ ಭೂದಾನ ತಾಮ್ರಶಾಸನದ ಕ್ರಮವೆಂತೆಂದರೆ . . . ಉಪಗ್ರಾಮ ಹರಯೂರ ಗ್ರಾಮ ೧ ಹೊಸಹಳ್ಳಿಗ್ರಾಮ ೧ (ಎಕ. III (R), ಸಂಇಪ. ೧೦೯-೦೦; 1761). **ಹೊಸಳ್ಳಿ:** ಸಿಂಗಸಮುದ್ರವಂ ಕೂಡಿದ ಕೆಂಬರಲೆಯ ಹಳ್ಳವೆ ಹೊಸಳ್ಳಿಗೆ ಆ ಕೆಲ್ಲಿಗೆಜಿಗೆ ಆ ಸೀಮೆ ಆ ಕೆಜಿ ಹೊರಗಣ ಹಳ್ಳದಲು ಸೀಮೆ (ಎಕ. IV (R), ಶಾಸುಶಾ. ೩೦೬-೩೨; 1318).

[ಪೊಸ + ಪಳ್ಳಿ1]

ಪೊಸವಾಣತಿ (ನಾ). ಆಗತಾನೆ ಹಡೆದವಳು : ಹಸಿ ಬಾಣಂತಿ : ಒಡನೆಯ ಚಕ್ರವಾಕಿ ಪೊಸವಾಣತಿ ಕೋಗಿಲೆಯಾಱಿಂದು ಕೇಳ್ಗಡಗಿಳವೆಣ್ಗೆ ಪೊತ್ತಿನೊಳಗೆಯ್ದೆ ನವಿಲ್ ಮನೆದೇವಿ ಮಕ್ಕಳಂ ಪಡೆದುದು (ಅರ್ಗಸಂ. ೦-೯೯) ; ಅಂತು ಮನಂಗೊಳೆ ನೋಟ್ಪಿನಮದಱ ಕೆಲನೆಲದ ಪಸುರ್ವುಲ್ಲಂ ಮೇವುತಿರ್ದ ಪೊಸವಾಣ[ಣ]ತಿವುಲ್ಲೆ ಮುನ್ನ ತನ್ನ ನಡೆಪಿದುದಪ್ಪುದಱಿಂ ಪರಿಚಯಕ್ಕೆಳಸಿ (ಶಾಕೃಶಾ. ೩-೭೬ ಪ).

[ಪೊಸ + ಬಾಣತಿ (< ಬಾಳಂತಿ)]

ಪೊಸವಾದಗ (ನಾ). ಒಂದು ಊರಿನ ಹೆಸರು : ಶ್ರೀಮತ್ ಅನನ್ತವೀರ್ಯ್ಯಯ್ಯಂಗಳ್ಪೆಗ್ಗದೂರುಂ ಪೊಸವಾದಗಮುಮಾನಭ್ಯನ್ತರಸಿದ್ಧಿಯಾಗೆ ಪಡೆದರ್ (ಎಕ. I (R). ೯೮-೦೦; 978). [ಪೊಸ + ?]

ಪೊಸವಾವುಗೆ (ನಾ). ಹೊಸತಾದ ಚಪ್ಪಲಿ, – ಪಾದರಕ್ಷೆ : ಆಗಳಂಗರಾಜಂ . . . ಪಂಚರತ್ನಗರ್ಭಂಗಳಪ್ಪ ಮಂಗಳಜಳಂಗಳಂ ಮಿಂದು ಮೆಯ್ಯನಾಱಿಸಿ ದುಕೂಲಾಂಬರಮನುಟ್ಟು ಪೊಸವಾವುಗೆಯಂ ಮೆಟ್ಟಿ (ಸಂಪಶಾ. ೦೨-೦೦೬ ಪ). [ಪೊಸ + ಪಾವುಗೆ]

ಪೊಸವಾಸಣೆಗೆ (ನಾ). ಹೊಳೆಯುವ ಮುಸುಕು: ಬಾಸಣಿಸಿದ ಚಿನ್ನದ ಪೊಸವಾಸಣೆಗೆಯ ಪೊನ್ನ ಸಿವಿಗೆ ಪಾಣಿಮಯಕಳಶೋದ್ಭಾಸಿ ದೆಸೆದೆಸೆಯೊಳೆಸೆಯೆ ವಿಳಾಸಂಬೆರಸಣುಗಭೋಗಿಯರ್ ಕೆಲರೆಸೆದರ್ (ಅಂಪಿ. ೦೦-೯೦).

[ಪೊಸ+ಬಾಸಣಿಗೆ2]

ಪೊಸವಾಸಿ (ನಾ). ಅಂತಃಪುರದವರ ರಕ್ಷಣೆಗಾಗಿ ನಿಯುಕ್ತನಾಗಿರುವ ವೃದ್ಧ: "ಅಚ್ಚೆಂದು ಪೊಸವಾಸಿ (ಸಾವಾಸಿ)" (ಶಸಾಪ. ಸ. ಸಂ); "ಅಚ್ಚೆಂಬುದು ಪೊಸವಾಸಿ" (ಶಸಾಪಿ. ೦೯೦). [?]

ಪೊಸವಾಸಿಗ, ಪೊಸಬಾಸಿಗ (ನಾ). ನಳನಳಿಸುತ್ತಿರುವ ಹೂಮಾಲೆ,– ಸರ ; ಬಾಡಿರದ ಹೂವಿನ ದಂಡೆ : ಸುರಕುಸುಮದ ಪೊಸವಾಸಿಗ ಮೆರಡುಂ ಕರತಳದೊಳೆಸೆದು ತನ್ನಯ ತೋಳೊಳೆ ದೊರೆಯೆನೆ ಬಂದತ್ತು ಸೊಯಂಬರಕ್ಕೆ ಬರ್ಪಂತೆ ದೇವಗಣಕಾನಿಕರಂ (ಅಂಪಿ. ೦೦-೨೦) ; ಪೊಸವಾಸಿಗಮಂಗಜಚಕ್ರವರ್ತಿಗಂದೆತ್ತಿದ ಮಿಾನಕೇತನಮನೊತ್ತರಿಸುತ್ತಿರೆ ಚಲ್ಲವಾಡಿ ಪೂವೆತ್ತುವ ಮಾಲಿಗಾರ್ತಿಯರನಂದರಿಕೇಸರಿ ನಿಂದು ನೋಡಿದಂ (ಪಂಪಭಾ. ೯. ೬೦) ; ಪೊಗಟ್ಟಾಕೆ ಮಾಣೆ ನಾಣಿನಿಸಗಲೆ ನಯಂ ಬೀಱಿ ದಿಟ್ಟ ನೆಯ್ದಿಲ ಪೊಸವಾಸಿಗದೊಳೆಣೆಯೆನೆ ಕುಮಾರನ ಪೆಗಲೊಳ್ ನೆಲೆ ನೆರೆಯ ಮಾಲೆ ಮೂಡಿದ ತೆಱದಿಂ (ಶಾಂಕಿಪು. ೩-೦೫೬). **ಪೊಸಬಾಸಿಗ :** ಕಟ್ಟಿಯುಮೇನೊ ಮಾಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ (ಅಂಪಿ. ೦-೪೩) ; ಪೊಸಬಾಸಿಗವಂ ಬಿಸುಡುತೆ ಮಿಸುನಿಯಭೃಂಗಾರಿಗಳ ಘಟಂಗಳನೊಡೆವುತ್ತಸವಸದ ಕರ್ಮವಂ ತಾಪಸನುರುಮುಳಿಸಿಂದೆ ಮಾಡುತಿರಲಂತಾಗಳ್ (ಕ್ರಿಪುರಾ. ೨. ೬೭). [ಪೊಸ + ಬಾಸಿಗ]

ಪೊಸವಾಳೆ (ನಾ). ಎಳೆಯದಾದ ಬಾಳೆ : ಪಳಗಪ್ಪುರವನಿನೀರ್ ಪೊಸವಾಳೆಯ ಸುಳಿ ಕಮ್ಮಿದುವಾದೆಲರೆಳೆಯಸುಗೆಯ ತಳರ್ . . . ಬಳರ್ವಣ್ಣಿನ ಬಾವನ್ನದಿನಾಳಯರೆಳಸಿ ಕರಂ ಸತ್ಕರಿಸಲು (ಜಯಾಶಾ. ೯-೪೦).

[ಪೊಸ + ಬಾಳೆ1 (<ಬಾಱ)]

ಪೊಸವಿಲ್ (ನಾ). ಹೊಳೆಯುವ ಬಿಲ್ಲು : ಇಸಲೊಡರಿಸುವಿಂಗೋಲನ ಮಿಸುಗುವ ಪೊಸವಿಲ್ಲ ಜೇವೊಡೆಯ ದನಿಯವೊಲೆಣ್ದೆಸೆಯೊಳ್ ನೇವುರದುಲಿ ಪಸರಿಸೆ ಮೆಲ್ಲನೆ ಚೆಲ್ಲಗಾರ್ತಿಯರ್ ನಡೆತಂದರ್ (ಕುಮಾಶಾ. ೯೬) ; ಪೊಸವಿಲ್ಲಂ ತೋಳ್ಪಲದಿಂ ಪಸರಿಪುದಾಳಲ್ಲ ಸುತ್ತಿ ಬಳಸುತೆ ಬೆನ್ನೊಳ್ ಮಿಸುಗುವ ಸಿಂಪುಗಳಂ ತಾಳ್ದೆಸವುದು ಪುಳುವಲ್ಲ ತಿಳಿದು ಪೇಳ್ ಲಲಿತಾಂಗೀ (ಕ್ರಿಪುತಿ. ೨೪-೦೭೩). [ಪೊಸ + ಬಿಲ್2]

ಪೊಸವಿಸಿಲ್, ಪೊಸಬಿಸಿಲ್ (ನಾ). ಎಳೆಯ ಬಿಸಿಲು ; ಹೊಂಬಿಸಿಲು : ತೆಕ್ಕನೆ ತೀವಿದ ತಮಾಲತರುಗಳುಮಂ ಪೊಸವಿಸಿಲ ಪೊಳಪಿನಿಂ ನುಣ್ಣನುಜ್ಜಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ (ಶಾಪಂಉ. ೩೨೬); ಪೊಸವಿಸಿಲೊಳ್ ಮುಗುಳ್ಗಳ್ ಸಡಿಲ್ದುಸರ್ವಂತೆ . . . ಬೆಳಪ್ಪನೀಗೆ ವರಂಗಳಂ (ಶಾಪ್ರಾಶ. ೯೦೬). **ಪೊಸಬಿಸಿಲ್:** ಪೊಸಬಿಸಿಲದು ಪೆಱದೆಗೆದಿರೆ ಕಿಸುಸಂಜೆಯುಮುಡುಸಮೂಹಮುಂ ಮಿಸುವವೊಲೇನೆಸೆದುದೊ ಪವಳಂ ಮುಕ್ತಾವಿಸರಂ ಜಾಂಬವಜಳಂ ಪೆಡಂಮೆಟ್ಟಲೊಡಂ (ರಾಜಶೇ. ೬-೦೦೯). [ಪೊಸ+ಬಿಸಿಲ್]

ಪೊಸವುಟ್ಟು (ನಾ). ಹೊಸದಾಗಿ ರಸ ತುಂಬಿದ ಜೇನುಹುಟ್ಟು : ಮುಸುಱಿತು ಕೋಂಟೆಯುಂ ಮಸಗಿ ಜೇಂಬುಱುಗಳ್ ಪೊಸವುಟ್ಟಿಯಂತೆ (ಜಸಂ. ೨-೦೦೬). [ಪೊಸ + ಪುಟ್ಟಿ2]

ಪೊಸವುಣ್ (ನಾ). ಆಗತಾನೆ ಉಂಟಾದ ಗಾಯ : ಹಸಿಯಾಗಿರುವ ಗಾಯ : ಇಱಿ ಕಿಱಿವನೊದಱಿ ಕೈರಂದಱಿ ಮುಱಿ ನಿಟ್ಟಿಲ್ಲನರಿದು ನೆಱ[ನಿ]ಡೆಗಳ್ ಬಾಯ್ದೆಱೆಯೆ ಪೊಸವುಣ್ಗಳೊಳ್ ಪೊಯ್ ಮಱುಗುವಿನಂ ಲೋಹವಾರಿಯುಂ ಮಱುಗುವಿನಂ (ಪಣ್ಡಾರಾ. ೦೨೬-೩) ; ಹರಿ ಶಸ್ತ್ರ[ಹತಿಯಿಂ]ದಮಾವ ಪೊಸವುಣ್ಣೀತಂಗೆ ಮೆಯ್ಯೊಳ್ ನವಾಭರಣಂ ಶೋಭಿಸುವಂತೆ ಶೋಭಿಸುವುದು (ಶಾಂಕಿಪು. ೯-೬೯). [ಪೊಸ + ಪುಣ್]

ಪೊಸವುರ, ಹೊಸಪುರ (ನಾ). ಒಂದು ಊರಿನ ಹೆಸರು : ಶ್ರೀಪುರುಷಾಮಾಹಾರಜರ್ ಪ್ರೀತುವೀರರಾಜ್ಯಂಗೆಯೆ ಲೋಕಗಾಳ್ಪೊಸವುರಂ ಬ್ರಮ್ಮದೆಂ ಕೊಟ್ಟು (ಕ್ಯುಶಾ. ೦೯೯೩. ೦೦-೩; ಸು. 788). **ಹೊಸಪುರ :** ಈ ಕಲ್ಲಿಗೆ ಬಡಗಲು ಹೊಸಪುರಕ್ಕೆ ವಾಯವ್ಯಮೂಲೆ ಬಸವನ ಶಿಟ್ಟಿನ ಹೊಲದಲ್ಲಿ ನೆಟ್ಟ ಕಲ್ಲು ೧ (ಎಕ. IV (R). ಶಾಂಶಪ. ೯೯-೬೯೦; 1722).

[ಪೊಸ + ಪುರ2]

ಪೊಸವುಲ್, ಪೊಸಪುಲ್ (ನಾ). ನಳನಳಿಸುವ ಹುಲ್ಲು ; ಎಳೆಯ ಹುಲ್ಲು : ಪಳಗೊಂದೆ ಬಳ್ದು ಪೊಸವುಲ್ಗಳ ಪೊದಱೊಳ್ತನ್ನನೆತ್ತುವವರಿಲ್ಲದೆ ಮೇಣ್ಬಳಲುತ್ತಿರ್ದಪುದು (ಸ್ಥಶಾ. ೦೦-೭). **ಪೊಸಪುಲ್ :** ಪೊಸಪುಲ್ಲೊಳ್ ಕಿಚ್ಚನಿಟ್ಟೂದಿದೊಡುರಿದುರಿ ಕೂರ್ಚಾಗ್ರಮಂ ಪತ್ತೆ . . . ನಂದಿಸಲೇತಂಪಾಂಥನುದಾಱದೆ ನಡುಮಡುವಂ ಪೋಗಿ ಬಿರ್ದೆಕಿಲಿಂ ಕಂಟಸುತಿರ್ದಂ (ಲೀಶಾಪ. ೯-೨೦). [ಪೊಸ + ಪುಲ್]

ಪೊಸವೂ, ಪೊಸಪೂ, ಹೊಸಹೂ (ನಾ). ಬಾಡದೆ ಇರುವ ಹೂವು ; ನಳನಳಿಸುತ್ತಿರುವ ಹೂವು : ಜಲಜಲನೊ[ಟ್ಟು]ತಿರ್ಪ ಪರಿಕಾಲ್ ಪರಿಕಾಲೊಳಳುರ್ಕಿಗೊಂಡ ನೆಯ್ದಿಲ ಪೊಸವೂ (ಪಂಪಭಾ. ೦-೩೨) ; ತನಗನುರೂಪವೆಂಬಿನೆಗಮೊರ್ವ ಕುಮಾರತಪಸ್ವಿ ದೇವತಾರ್ಚನೆಗೆ ವನಕ್ಕೆ ಬಂದು ಪೊಸವೂಗಳನರ್ತಿಯೊಳಾಯ್ದು ಕೊಯ್ದು ಬೆನ್ನನೆ ಬರಲ್ (ಶಾಪಂಪಿ. ೬೨೦). **ಪೊಸಪೂ :** ಪೊಸಪೂವಬ್ಜಿನಿಯೊಂದಱೊಳ್ ಸೊಗಯಿಕುಂ (ಅಂಪಿ. ೬ ೫೯). **ಹೊಸಹೂ :** ಸಿರಿಮುಡಿಗೆ ಹೊಸಹೂಗಳು ತಂದು ಸೂಡುತುಂ (ಪಂಪಭ. ೦-೩೬). [ಪೊಸ + ಪೂ2]

ಪೊಸವೂರ್, ಹೊಸವೂರು, ಹೊಸೂರು (ನಾ). ಒಂದು ಊರಿನ ಹೆಸರು : ಇಂತಿದಕ್ಕೆ ಕಾಕಂಬಾಟ ಕಂಭಯ್ಯನುಂ ಆಸಾಗೊರ ಕನ್ನನುಂ ಪೊಸವೂರ ಬೇದಮ್ಮನುಂ . . . ಸಾಕ್ಷಿ (ಎಕ. XI, ಶಕ್ರದು. ೬೯-೨೬; 968); ಅಯ × ಪೊಸವೂರ ತುಱುವಂ ಮಗುಟ್ಟಿ × × × ಱದ

ಕೊಳ್ಳಿಯ[ಣ್ಣ] ಸತ್ತು ಸುರಗತಿಗೆ ಸನ್ದಂ (ಎಳ. III (R), ಗುಂಡ್ಮಪೇ. ೩೦-೬ ; 10ಪು ಕ). **ಹೊಸವೂರು :** ಹೊಸ[ವೂರು] ಅಲಗಿಕೊಂಡನ ಹಳ್ಳಿ . . . ಮುಂತಾಗಿ × × ವಱ ಚತುಸ್ಸೀಮಾಸಮನ್ವಿತವಹ ಕಾಲುವಳಿಗಳು ಸಹಿತವಾಗಿ (ಎಳ. IV (R), ಕೊಳ್ಳೇಗಾ. ೩೦-೩೬ ; 1321). **ಹೊಸೂರು :** ಪುನರ್ವಸುನಕ್ಷತ್ರದಲು ಹೊಸೂರಾದ ಯಿಳಚಲ ಹೊದವಿಚಲು ಬೈರಮಂಗಲದ ಅಶೇಷ ಮಹಾಜನಂಗಳು . . . ಬಿಟ್ಟು ಕೊಡಂಗೆ (ಎಳ.IV (R), ಎಳಂದೂ. ೦೭-೬ ; 1283); ಬೊಮ್ಮಿದೇವವೊಡೆಯರಿಗೆ ಹಱುಹೆ ಹೊಸೂರ ನಾಡೊಳಗನ ಮಱುವಕಗೊಂಕನು ಬಲಾಳವುರವಾಗಿ ಆಚಂದ್ರಾರ್ಕಊ ಸರ್ವಮಾನ್ಯವಾಗಿ ಧಾರಾಪೂರ್ವಕವಾಗಿ ಕೊಟ್ಟೆಊ (ಎಳ. X, ಗೋಣಿಬೀ. ೦೬-೦೮; 1333); ಊರಿನ ಹೆಸರು 'ಹೊಸೂರು' ಆದರೂ ಜನರಲ್ಲಿ ಮಾತ್ರ ಹಳೆಯ ಸಂಪ್ರದಾಯದ ಕೊಳೆ ನುಶಿಪಾಂತವಾಗಿ ತುಂಬಿಕೊಂಡಿತ್ತು (ಹೊಸೂಹ. ೦೭). [ಪೊಸ + ಊರ್]

ಪೊಸವೆಣ್, ಹೊಸವೆಣ್ (ನಾ). ನವಯುವತಿ : ಕಡುಚೆಲುವೊಪ್ಪೆ ಸಾರ್ದ ಪೊಸವೆಣ್ಣಿದನಾರಯೆ ಮುನ್ನಮೇಂ ಕರಂಬಿಡಿದೆನೊ ಮೇಣ್ ಕರಂಬಿಡಿಯೆನೋ ಎನುತಂ ಮನದಲ್ಲಿ ನಿರ್ಣಯಂಬಡೆಯದೆ (ಶಾಕುಂತ. ೬೭-೦೦೯). **ಹೊಸವೆಣ್.**

ಪೊಸವೆಂಡಿರ್, ಹೊಸವೆಂಡಿರ್ (ಬಹುವ) : ಶ್ರೀಮದೆಱೆಯಪ್ಪರಸನ್ ಸಮಸ್ತರಾಜ್ಯಱ್ಗಿಯುತ್ತಮಿರೆ ಅವರ ಸಾಮನ್ತಂ ಶ್ರೀಮುತ್ತರ ಅತಿರಥಗಣ್ಡ ಪೊಸವೆಣ್ಡಿರಟ್ಟಿ ಬೀಸಿ ತಪ್ಪದೊನ್ . . . ಆಸನ್ದಿನಾಡನಾಳುತಿರೆ (ಎಳ. XV, ಅರಸೀ. ೨೦೩-೯ ; ಸು. 890); ಕಳಸಂ ಕನ್ನಡಿ ಗುಡಿ ಪಜ್ಜಳಿಸುವ ಮಾಂದಳಿರ ತೋರಣಂ ದೆಸೆದೆಸೆಯಂ ಬಳಸಿರೆ . . . ಪೊಱಮಟ್ಟ ರೊಸಗೆಯಿಂ ಪೊಸವೆಂಡಿರ್ (ಕಬ್ಬಿಗಾ. ೩೨೩) ; ಆಧುನಿಕಕವಿತೆಯೂ ಹಸುಮಕ್ಕಳಂತಾಡುವದು. ಹೊಸವೆಂಡಿರಂತೆ ನಗುವುದು (ಸಾಹಿತಿ. ೧೭).

[ಪೊಸ + ಪೆಣ್]

ಪೊಸವೆಸರ್ (ನಾ). ಬೇರೆಯ ಹೆಸರು : ಪೊಸ — ಪೆಸರ್, ಪೊಸವೆಸರ್ ; ಎಳೆ — ಬಿದಿರ್, ಎಳೆವಿದಿರ್ (ಶಾಸಾಸೂ. ೩೦ ಪ್ರಯೋ). [ಪೊಸ + ಪೆಸರ್]

ಪೊಸವೆಸಲ್ (ನಾ). ಮೊದಲನೆಯ ಹೆರಿಗೆ ; ಪ್ರಥಮಪ್ರಸೂತಿ : ಪೊಸವೆಸಲಾದ ಪೆಣ್ಗಳ ಜನ್ಮನದ ಬಿಗುರ್ಪಟಿದು ತಿಳಿವಂತೆ ತೊಱೆವೆಂಡಿರ್ಗರ್ಕಿನುಬ್ಬರವಮಡಂಗಿ ತಿಳಿದುದು (ರಾಜಶೇ. ೬೩-೩). [ಪೊಸ + ಬೆಸಲ್]

ಪೊಸವೆಳ್ದಿಂಗಳ್ (ನಾ). ಚೆಲುವಾದ ಬೆಳುದಿಂಗಳು ; ಮನೋಹರವಾದ ಬೆಳುದಿಂಗಳು: ಪೊಸವೆಳ್ದಿಂಗಳ್ ದೆಸೆದೆಸೆಗೆಸೆದುದು ಕುಮುದವನಮಲರ್ದುದೆಂಬಂತಿರದೇನೆಸೆದುದೊ ಕಟಾಕ್ಷಮಾಲಾಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ (ಅರಿಪು. ೯-೩೯); ಪೊಸವೆಳ್ದಿಂಗಳ್ ಪಗಲೊಳಮೆಸೆವಂತಿರೆ ದಂತಕಾಂತಿಗಳ್ ವಿಭು ನುಡಿದಂ (ಕಾಂತಿಪು. ೯-೦೩೬); ಪೊಸವೆಳ್ದಿಂಗಳ್ಮುಸುಕಿದ ಮಿಸುವ ಕುಳಾದ್ರಿಗಳ ತೆಱದಿ ಪಳುಕಿನ ಭವನಪ್ರಸರದೊಳತಿಲೀಲೆಗಳಿಂ ದೆಸೆದಿರ್ದುವು ಸಪ್ರಮದದ ಭದ್ರಗಜಂಗಳ್ (ತ್ರಿಪುರಿ. ೦೭-೩೯).

[ಪೊಸ + ಬೆಳ್ದಿಂಗಳ್]

ಪೊಸವೆಳ್ಪು (ನಾ). ಅತಿಶಯವಾದ ಬೆಳುಪು : ಪಸರಿಸಿದ ಪಯಃಪೂರದ ಪೊಸವೆಳ್ಪು ನಿಡಾಂಗರುಚಿಯ ಪೊಱಪೊಱಗೆ ಪೊದಟ್ಟಿಸೆದಿರೆ ಬೆಳ್ಮುಗಿಲಿಂದಂ ಮುಸುಕಿದ ದಾಲಾರ್ಕಬಿಂಬಮಿರ್ಪಂತಿರ್ದಂ (ಅರಿಪು. ೬-೧೨); ಒಳಗೆಸೆವ ವೃಷಭನಂಗದ ಬೆಳರ್ವಣ್ಣಂ ಪೊಗೆ ತೀವಿತೆನೆ ಪೊಸವೆಳ್ಪುಜ್ಜಳಿಸಿದುದು ತನುವಿನೊಳ್ಕೋಮಳೆಗೆ (ಪ್ರಕಟ ೩-೩). [ಪೊಸ + ಬೆಳ್ಪು$_1$]

ಪೊಸವೇಟ, ಪೊಸಬೇಟ, ಹೊಸಬೇಟ (ನಾ). ಮೊದಲ ಪ್ರಣಯ: ಪೊಸವೇಟಮೆಂಬ ಚೆಲ್ವಿಡಿದೆಳಮಾವರು ಪುಳಕಮೆಂಬ ನವಾಂಕುರದಿಂ ವಿಳಾಸಮಂ ಪಡೆದು . . . ಸುಸಿಲೆಂಬ ಬಸಂತದೊಳೇಂ ಪೊದಟ್ಟುವೋ (ಅರಿಪು ೦೨-೨೮) ; ಪಲ್ಲವಾಧರ ದಂತ (ಕುಚ ಪೊಗರುಗುವ) ಧಮ್ಮಿಲ್ಲದೆ ಮೆಱೆವ ಹೆಣ್ಣುಗಳು ಪುಲ್ಲದಳಾಕ್ಷಗೆ ಪೊಸವೇಟ ಪುಟ್ಟುವಂತೆಲ್ಲರಿಬ್ಬಗೆಯಾದರಾಗ (ಪೋಕತ. ೦೯-೬೩); ಪೊಂಗುವ ಪೊಸವೇಟದ ಗೋವಾಂಗನೆ ತನ್ನಳವು ಗಿಡಿಸಿ ಮೆಯ್ಮುಱಿಪುಸಿದಾ ಮಂಗಳಮೂರ್ತಿಯ ಸಿಂಗರದಿಂಗಿತಮಂ ಕೆಳದಿಗಿಂತು ಬಗೆವುಗೆ ಪೇಟ್ಟಳ್ (ಗೀತಗೋ. ೦೦-೨೯). **ಪೊಸಬೇಟ :** ಮತ್ತೊಂದೆಡೆಯೊಳೊರ್ವಳ್ ತನ್ನನುಱಿದ ಪೊಸಬೇಟದಾಣ್ಮನನೇಗೆಯ್ದುಂ ಪೋಗಲೀಯದೆ ತನ್ನಳವನೆ ತೋಱ (ಪಂಪಭಾ. ೯-೧೬ ಪ). **ಹೊಸಬೇಟ :** ತಲೆಯಲಿ ಕರಿದು ಕೂಂದಲುಗಳೌಷಧಿಗಿಲ್ಲ ಸಲೆ ಕುಚಯುಗಳವಿಂಗಿದವು ಹೊಲೆಗೆಟ್ಟು ಹೊಸಬೇಟಗೆಯ್ವ ಪಾತಕಿ ಮೊಗ್ಗೆಮೊಲೆವೆಂಗಳಿಗೆ ಪೇಳ್ದಪರೇ (ಪೋಕತ. ೦೯-೬೮). [ಪೊಸ + ಬೇಟ (< ಬೇಂಟ)]

ಪೊಸವೇಟಕಾರ್ತಿ (ನಾ). ಯುವಪ್ರೇಮಿಯಾದವಳು: ಬೆಳಗಾಯ್ತೆಂಬೊಂದಬಲಗ್ಗಳಸಲ್ ಪೊಸವೇಟಕಾರ್ತಿಯರ ಬಿಸುಸುಯ್ಯೊಳ್ ಬೆಳಗಿದುದೆಂಬಿನವಾಗಳದೆಂ ಕೊರಗಿದುದೊ ಕುಮುದಿನೀವಿಸ್ತಾರಂ (ಕಾದಂಬಾ. ೦೬೩); ಪೊಸವೇಟಕಾರ್ತಿಯರ್ತಮ್ಮ ಕನ್ನೆವೇಟಮವನೊಳಾಗದೆ ಕೆಟ್ಟೆವೆಂದು ಕಟ್ಟುಗೆಡೆಯೆಯುಂ (ಅರ್ಥಪ್ರ. ೩-೨ ಪ).

[ಪೊಸವೇಟಕಾಱ + — ತಿ$_1$ (< —ಇತ್ತಿ)]

ಪೊಸವೇಟಕಾಱ (ನಾ). ಯುವಪ್ರೇಮಿಯಾದವನು: ಮತ್ತೊಂದೆಡೆಯೊಳಂದೆ ಪೊಸಯಿಸಿದ ಪೊಸವೇಟಕಾಱರಪ್ಪ ಕಡುನಲ್ಲರಿರ್ವರಿರೆ (ಅರಿಪು. ೦೨-೨೬ ಪ). [ಪೊಸವೇಟ + —ಕಾಱ]

ಪೊಸವೊಗರ್, ಪೊಸವೊಗರು, ಹೊಸಹೊಗರು (ನಾ). ಉಜ್ವಲವಾದ ಕಾಂತಿ: ನೇಸರೇಂ ನಗುನಗುತ ನಲ್ಮೆಗಳ ತೊಡವೆನಲ್ ಸೂಸುವಂ ಕದಿರ್ಗಳಂ ಕಳ್ತಲೆಯ ಸುಡುವಂ ಪೊಸವೊಗರ್ ಕೋದಿರ್ಪ ಪೊಳ್ತೆಳೆಯನೆಳೆಬಿಡುವ ಪೊಸೆದು ನೆಲದೊಳ್ಬುಗಳ ಬಾಳ್ವೆಳ್ಪ ತೊಡೆವಂ (ಕಾಂಪುರ. ೭೦-೦೨೯). **ಪೊಸವೊಗರು:** ಹಸುರು ಹೊಲದುಸಿರಾಗಿ ಬೀಸುತಿರೆ ತಂಗಾಳಿ ಸುಸಿಲು ಮೈವಡೆಯುತಿದೆ ಪೊಸವೊಗರ ಪೆಂಪು (ಕಾಂಪುರ. ೬೬-೦೦೬). **ಹೊಸಹೊಗರು :** ಹೊಸಹೊಗರ ಜವ್ವನ ಸಿರಿಯ ಜೋಡಣೆ ಜನಮನವನಾವರಿಸಿದುದು ನಿಪ್ಪಸರದಲಿ ಪಾಂಚಾಲನಂದನೆಯ (ಶಾಬ್ಬಾಉ. ೦೩-೨೬) ; ಬಂಬಲುಗುರುಳ ಹೊಸಹೊಗರ ಕಲಿತ ಮದದುಬ್ಬುಗಳ . . . ಪುಳಿನಜಘನಸ್ಥಳದ ದಾನವಸತಿಯಾರಿರ್ದರದೊಂದು ತಾಣದಲಿ (ಕೊರಣಾ. ೩-೨-೬೯).

[ಪೊಸ + ಪೊಗರ್]

ಪೊಸವೊಗರು 'ಪೊಸವೊಗರ್' ನೋ.

ಪೊಸವೊನ್, ಪೊಸಪೊನ್, ಹೊಸಹೊನ್ನು (ನಾ). ೧. ಹೊಳೆಯುವ ಚಿನ್ನದ ನಾಣ್ಯ,—ವರಹ : ಇನ್ನಿವಕೆ ಬಡ್ಡಿಯೊಳೇತಮನೆನ್ದು ಪತ್ತುಗದ್ದಿನ ಪೊಸವೊನ್ನನಿತ್ತನು (ಸೌಪ್ರ. XX, ೩೩-೨೯; 1082). **ಪೊಸಪೊನ್ :** ೨. ಹೊಳೆಯುವ ಚಿನ್ನ,— ಬಂಗಾರ : ಪೊಸಪೊನ್ನ ವೇದಿ ನಾಲ್ಕುಂದೆಸೆಗಳೊಳಂ ಬೆಳ್ಳಿವೆಸದ ಬಾಗಿಲ್ವಾಡಂ ಪಸರಿಸಿದ ಸಕಳಮಂಗಳವಿಸರಂ ನಿಧಿಸಮಿತಿ ಯಕ್ಷರಕ್ಷಕರೆಸೆಗುಂ (ಕಂಪ್ರಪು. ೧೩-೩೫) ; ಲಾವಣ್ಯಾಮೃತರಸದೊಳ್ ತೀವಿದ ಪೊಸಪೊನ್ನ ಮಿಸುವ ಶಾಕ್ತಿಕೆಗಳೆನಲ್ ದೇವಿಯ ತಾಂಬೂಲಚ್ಛಾಯಾವಿಪ್ಲವಿತಮಾದ ತೆಳ್ಗದಂಪುಗಳೆಸೆಗುಂ (ಪುತ್ರಪು. ೩-೨೬). **ಹೊಸಹೊನ್ನು :** ೨. ಹೊಗರಾಂತ ಹೊಸಹೊನ್ನ ರಸ ಕಾಯ್ದಿರೆ ಕಂಡು ಸೆಗಣೆಯೊಳೆಱೆವಂತೆ ಮೊಱದಿ ಮೃಗಮದಗಂಧಿಯರ್ ಗೋಮಯದಿಂ ಮುದ್ದುಮಗನ ದೇಹವ ಸಾರ್ಚಿದರು (ಪೋಕತ. ೦೭-೨೦) ; ಕಿವಿಯೊಳೊಪ್ಪುವ ನಾಗರ ಪಣೆ ಹೊಸಹೊನ್ನ ಸವಡಿದಾರದ ಕೊರಳುಗಳ ನವರತ್ನಭೂಷಣದಾಳ್ಗಳ ಮೇಳದೆ ಭುವನೇಶ್ವರನೈತಂದ (ಕಂಪಸಿ. ೦೨-೩೩). [ಪೊಸ + ಪೊನ್]

ಪೊಸವೊನಲ್, ಪೊಸಪೊನಲ್ (ನಾ). (ಕಾರ್ಗಾಲದಲ್ಲಿ) ಹೊಸದಾಗಿ ಉಂಟಾದ ಪ್ರವಾಹ, —ಹೊಳೆ : ಮಡದಿ ನಡೆದಳ್ ಮನಃಪ್ರಿಯ

ನೆಡೆವರಮವರವರ ನಯನರುಚಿ ತನುರುಚಿಯೊಳ್ ತೊಡರ್ದು ಬರೆ ಪೊಸವೊನಲ್ಗಳ ಗಡಣದಿನಪ್ಪತಿಯನೆಯ್ದುವಮರಾವಗೆವೋಲ್ (ಸರ್ಗಪು. ೯-೧೩). **ಪೊಸಪೊನಲ್** : ಪೊಸಪೊನಲೊತ್ತಿ ಬಂದು ಪುಗೆ ಪುತ್ತದ ಬಾಯೊಳವಲ್ಲಿ ಪಾವುಗಳ್ ಬಸಮಟ್ಟಿದು . . . ಪೊಱಮಟ್ಟು ಬಂದು ಸಲೆ . . . ಪೆಡೆಯೆತ್ತಿ ದಲಾಡುತುಮಿರ್ದರ್ಥಿಯಿಂ (ಶಾಕಪು. ೦೨-೩೬).

[ಪೊಸ + ಪೊನಲ್]

ಪೊಸವೋರ್ತ (ನಾ). ಹೊಸಬಗೆಯ ಹೋರಾಟ,— ಕಾಳಗ : ಪೊಸವಳಿಕಿನ ಸೆಲೆಯೊಳ್ ನೆಟಲೆಸೆಯೆ ಮೊಗಂಬೊಕ್ಕು ಪಾಯ್ದು ಕರಿಯುಂ ಹರಿಯುಂ ಪೊಸವೋರ್ತಮನಱಿಯಮೆ ಪುಟ್ಟಿಸೆ ನೆಟಲೊಳ್ ಪೋರ್ದು ಸೇದೆಗಿಡುವುವು ನಗದೊಳ್ (ಶಾಂತಿಪು. ೨-೦೦೩); ನೀಪಕುಲನಾಗಿ ನೃಪ ತಿಲಕೋಪಮನೀತನನೆ ಸಾರ್ದು ಗುಣಗಣಮುಟ್ಟಿದತ್ತಾ ಪೊಸವೋರ್ತ ಮನಪ್ಪಕುಲಲೋಪಕನಂ ಪೊರ್ದಿ ಪಗೆಯನುಟ್ಟಿದಂತೆ ಜಗಂ (ಶಾಂತಿಪು. ೩-೧೨೬).

[ಪೊಸ + ಪೋರ್ತ]

ಪೊಸಸಂಜೆ (ನಾ). ಮನೋಹರವಾದ ಸಾಯಂಕಾಲ : ಪೊಸಸಂಜೆ ಮುಗಿಲ ತುಱುಗಲ್ ಮುಸುಕಿದುದು ಪಯಃಪಯೋಧಿಯೆಲ್ಲಮನೇಂಬಂ ತಸದೇಮೆಸೆದುದು ಬೊಗುವುದ್ದೆಸದೊಳೆ ತಳತಳಿಸಿ ಪೊನ್ನ ಪೊಸಕಳಸಂಗಳ್ (ಆಂಪು. ೭-೧೩); ಪೊಸಸಂಜೆಗೆಂಪಿನೆಡೆಯೊಳ್ ನಸುತೋರ್ಪ ಶಶಾಂಕಲೇಖೆ ಯೆಂಬಿನೆಗಂ ರಂಜಿಸಿದಳರುಣಾಂಬರವನುಟ್ಟಸಿತಾಂಬುಜಪತ್ರನೇತ್ರೆ (ಅಾಧಟಿ. ೩-೩೨). [ಪೊಸ + ಸಂಜೆ]

ಪೊಸಸಂಪಗೆ (ನಾ). ಆಗತಾನೆ ಅರಳಿರುವ ಸಂಪಿಗೆ ; ನಳನಳಿಸುತ್ತಿರುವ ಸಂಪಿಗೆ : ಸುರಗಿ ಮೊಲ್ಲೆ ಪೊಸಸಂಪಗೆಯಾ ಅರಲಿಂ ಭಕ್ತಿಯಿನಾತಂ ಪರಮಜಿನೇಶ್ವರನ ಪಾದಮಂ ಪೂಜಿಸಿದಂ (ಧರ್ಮಾಮೃ. ೩-೩೭); ಮೊಗವೆತ್ತಿ ನಿಳ್ಳ ಪೊಸಸಂಪಗೆಗೊಂಬಂ ಪಿಡಿದು ಪೂಗಳಂ ತಿಱುವಾ ಪೆಣ್ಬಗೆಗೊಂಡಳ್ಳಡೆ ಬಲಲ್ಮೈಗೆ ಜಡಿವಂಗಜನ ಪೊಂಗಿನಿಂಗೋಲ್ವಿಲ್ಲೋಲ್ (ಅಾಧಟಿ. ೯-೬೦).

[ಪೊಸ + ಸಂಪಗೆ]

ಪೊಸಸಕ್ಕರೆ, ಹೊಸಸಕ್ಕರೆ (ನಾ). ಆಗತಾನೆ ತಯಾರಿಸಿದ ಸಕ್ಕರೆ; ತಾಜಾ ಸಕ್ಕರೆ : ಪೊಸಸಕ್ಕರೆ, ಮನೆಸರಕು (ಶಬ್ದಾಮ. ೯೯ ಪ್ರಯೋ); ಪೊಸಸಕ್ಕ[ಶಾಕಾಂ.ರ್ಕ]ರೆಯಂ ನವಮಧುರಸಮಂ ನಱನೆಯ್ಯನೆಸೆವ ಕದಳೀಫಲಮಂ ರಸನೆಯೆಳಸಿದುದನೆನ್ನೊಳ್ಪೆಸಸೀಗಳೆ ನಿನಗೆ ತಂದಪೆಂ ಶಶಿಮೌಳೀ (ಪ್ರಕಟ. ೯-೬೬). **ಹೊಸಸಕ್ಕರೆ**: ಕಾಯ್ದಾಱಿದೆಮ್ಮೆವಾಲೊಳಗೆ ಮುಱಿದಿರಿಸಿ ಹೊಸಸಕ್ಕ[ಶಾಕಾಂ.ರ್ಕ]ರೆಯ ಹಾಕಿ ಪರಿಮಳಗಳಂ ಪೊರೆಯಿಕ್ಕಿದದುವೆ ತುಪ್ಪದ ಪಾಯಸಂ (ಸೂಪಶಾ. ೩-೦೨).

[ಪೊಸ + ಸಕ್ಕರೆ]

ಪೊಸಸರ (ನಾ). ಹೊಸ ರಾಗ : ಪೊಸಸರದಲ್ಲಿ ಪಾಡು ಪಿರಿದೀವನ ಕೇಳಿಯೊಳೊಂದು ಸದ್ದ್ರವಂ ಮಿಸುಗಿರೆ ಕಾಮಧರ್ಮಗುಣವೃತ್ತಿ ಯನಾಳ್ದಿರು (ಪ್ರಕಟ. ೯-೯). [ಪೊಸ + ಸರ$_2$]

ಪೊಸಸಿರಿ (ನಾ). ೧. ಹೊಸತಾದ ಚೆಲುವು,—ಸೌಂದರ್ಯ : ಕಟ್ಟುದ್ದ ಮನಾಂತು ಮಿಸುಪ ಕೊಸಗಿನ ಚೆಲ್ವೆಂ ಪುಟ್ಟಿಸಿದುದೊ ಪೊಸಸಿರಿಗೆ ಱವೆಟ್ಟೆನೆ ಪೂಗಣೆಯನಿರ್ಪ ನೆಲೆಪಾಡದ ಪೋಲ್ (ಕಬ್ಬಿಗಾ. ೦೦೬). ೨. ಅಧಿಕವಾದ ಐಶ್ವರ್ಯ,—ಸಂಪತ್ತು : ಪುಸಿನುಡಿಯ ವಿಷ ವಿಷಾಕದ ಮಸೆದೆ ಮುಖರೋಗಮಾದಪೋಲಿನಿತಾನುಂ ಬಸವಲ್ಲದುಸಿರ್ ರೆಂದುಂ ಪೊಸಸಿರಿಯಿಂ ಮೈಮೆದೆತ್ತ ಮಾಯ್ದು ಮನುಷ್ಯರ್ (ಶಾಂಪು. ೩೬೨); ಅರರೆ ಸುಭದ್ರೆಯ ಕಣ್ಮನಗಳ ಪೊಸಸಿರಿಯೆಯೆಂದವಳು ಚುಂಬಿಪಳು (ಭರತ. ೯೦-೧೩೩). [ಪೊಸ + ಸಿರಿ]

ಪೊಸಸುಗ್ಗಿ (ನಾ). ಮನೋಹರವಾದ ವಸಂತಕಾಲ : ಇಲ್ಲಿ ಪುಟ್ಟಿ ಪೋಗದು ಪೊಸಸುಗ್ಗಿ ಮೂಗುವಡದಿಲ್ಲಿಯ ಕೋಗಿಲೆ ಬಂದ ಮಾವು ಬೀಯದು ಕುಸುಮಾಸ್ತ್ರನಾಜ್ಞೆ ತವದೆಲ್ಲಿಯುಮಿಲ್ಲಿಯ ನಂದನಂಗಳೊಳ್ (ಪಂಪಭಾ. ೯-೨೦); ಅನಂಗನ ಬೇಂಟೆಯ ಬಿಂದದಂದಿಂ ಬರೆ ಪೊಸಸುಗ್ಗಿ ಕೆಯ್ಗಟ್ಟಿಯೆ ಕಣ್ಗೆಸೆದರ್ದುವು ನಂದನಾಳಿಗಳ್ (ಶಾಂತಿಪು. ೭-೦೨೪); ಒಸಗೆಗಳ ಮೈಮುಟ್ಟಿ ಕಣ್ ಬಾಯ್ಗಳಿಂ ಕರೆವ ಪೊಸಸುಗ್ಗಿ ಕಾಲ್ಮೆಟ್ಟಿ ಸುಯಿಲಿಟ್ಟು ಕರೆಯೆ (ಕಾಂಗಿ. ೦೨೨-೨೫೭). [ಪೊಸ + ಸುಗ್ಗಿ]

ಪೊಸಸುಣ್ಣ, ಹೊಸಸುಣ್ಣ (ನಾ). ಹಳೆಯದಲ್ಲದ ಸುಣ್ಣ : ಉಪ್ಪಿಲ್ಲ ಣಂಗು ಸಾಸವೆ ತಪ್ಪಿಲ್ಲದ ಪೊಣಸು ಸುಂಟಿ ಪೊಸಸುಣ್ಣಮಿವಂ ಚಪ್ಪರಿಸಿ ಬಡಿದು ಮೆಯ್ಯಂ ಸೊಪ್ಪಾಗಿರೆ ಮೋದಿ ಪೂಸುವರ್ ನಿರ್ದಯೆಯುಂ (ಧರ್ಮಾಮೃ. ೩-೭೦); ಪೊಸಸುಣ್ಣ ಸೂಡುಬಾಡಿರೆ ಬಸಮಟ್ಟಿದು ಬಟಲ್ದು ನೆಟಲ ಕಳವಳದಿಂ ಪೊಕ್ಕಸಿಪತ್ರವನದ ಕೂರೆಲೆ ಕುಸುಮದ ಕೊನೆ ಕೊಯ್ದು ಕೊಱೆದು ಕುಱುಮಱಯಪ್ಪರ್ (ಅಪಂಪು. ೯-೩೩). **ಹೊಸಸುಣ್ಣ** : ಹೊಸಸುಣ್ಣದುದಕದೊಳು ಮಾವಲದ ತನಿಪಣ್ಣ ಕುಸುರಿಗಳನಿರುಳಿರಿಸಿ (ಸೂಪಶಾ. ೩-೯). [ಪೊಸ + ಸುಣ್ಣ]

ಪೊಸಸುಸಿಲ್ (ನಾ). ನೂತನ ರತಿಕ್ರೀಡೆ : ಮಿಸುಗುವ ಪೊಸವಸೆ ಯೊಳಸದಳಮೆಸೆಯೆ ಬಯಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳ್ ಬಸದಾಗಿಯುಮಸಿಯಳೆನಗಸವಸದೊಳೆ ಬೆಸೆದು ಪೋಗಿ (ಅಂಪು. ೯-೦೨ ಪ); ಪೊಸಸುಸಿಲೊಳಸಗೆ ರಮಣಂ ಮಿಸುಗುವ ನೆಲೆವೊಲೆಯೊಳಿಸವ ನುಱತಿಯನದಂ ಮುಸುಕುದೆಱೆದೆಱಗಿ ನೋಡುತ್ತ ಸವಸದಿಂ ದಾರಿದಪ್ಪುವರ್ಪೇಚರಿಯರ್ (ರಾಪಶಕ. ೦-೦೩೪); ಇಂತಿರೆ ಪೊಸಸುಸಿಲೊಳ್ ತಮ್ಮೊಂದು ಗೆಯ್ತಕ್ಕೆ ಬಸವಟ್ಟಿದು ಮೆಯ್ಯೊಲ್ದ ಜವ್ವನಿಗರಿರವಂತಿರೆ ಬೀರರಿರವಪ್ಪುದುಂ (ರಾಪಶಾಸ್ತ್ರ. ೦೩೬-೦೨).

[ಪೊಸ + ಸುಸಿರ್$_1$]

ಪೊಸಾಲ್ ? (?). (?) : ಪಚ್ಚಿದೋನ್ ಪಣ್ಣಮಹಾವಾತಕಸಂಯುಕ್ತ ನಕ್ಕೆ ಪೊಸಾಲ್ಪೋಗೆ ವೃತ್ತಿ ಬ್ರಹ್ಮಕಾಪದು ಏಕಾಂಚತ್ತಿ ದೊಶಾಮಾಪಿರ ಕನ್ಯಾಪುಲನ್ತರಟ್ಟಿದ ಪಸಲಾನ್ವಿಡಿಸಿದೋರ್ ದರಾ ದಾನ (ಎಕ. VI. ೩೯೬ಸು. ೯೩-೬; ಸು. ೨೦೦ ?). [?]

ಪೊಸೆ$_1$, ಹೊಸೆ (ಕ್ರಿ). ಪೊಸದು, ಪೊಸೆದು, ಹೊಸದು, ಹೊಸೆದು (ಭೂತನ್ನೂ). ೧. (ಹಾಲು, ಮೊಸರು ಮೊದಲಾದುವನ್ನು) ಕಡೆ ; ಮಥಿಸು : ಪೊಸೆದೊಡೆ ಪಾಲ್ಗಡಲಂ ಮಾಱ್ಬುಸುರರ್ ಪೊಸೆದಲ್ಲಿ ಕಾಳ ಕೂಟಾಂಕುರಮಂದಸದಳವೊಗೆದಂತೊಗೆದುವು ಬಸಿಱಂ ನೂಱೊಂದು ಪಿಂಡಮರುಣಾಕೀರ್ಣಂ (ಪಂಪಶಾ. ೦-೦೩೦); ನೀರಂ ಪೊಸೆದುಂ ಬೆಣ್ಣೆಯನಾರಾನುಂ ಪಡೆದರೊಳರೆ (ಸಮಯ. ೯-೦೨೮); ಕೆನೆಯ ತೆಗೆಯದೆ ಕಡೆವ ಕಳಲು ಗೋಳಕಮಾಯ್ತು ಕೆನೆದೆಗೆದು ನೀರಿಡದೆ ಪೊ[ಶಾಕಾಂ. ಪಾ]ಸೆದುದೇ ಮಥಿತವೆಂದೆನಿಸುತ್ತು (ಸೂಪಶಾ. ೨-೦೩). ೨. ಕಲಕು ; ಕದಡು· ಆಲೋಡಿಸು : (ಕ). ೩. (ಹೊಟ್ಟೆಯನ್ನು) ಕಿವಿಚು ; ಹಿಸುಕು : ಸಂತತಿಗೆ ಪಿರಿಯ ಮಕ್ಕಳ ನಾಂ ತಡೆಯದೆ ಪಡೆವೆನೆಂದೊಡೆನ್ನಿಂ ಮುನ್ನಂ ಕೊಂತಿಯೆ ಪಡೆದಳ್ ಗರ್ಭದ ಚಿಂತೆಯದಿನ್ನೇವುದೆಂದು ಬಸಿಱಂ ಪೊಸೆದಳ್ (ಪಂಪಶಾ. ೦-೦೨೯); ಬಸಿಲ ಕಡುಗಾಯ್ದು ಭೋಂಕೆನೆ ಪಸರಿಸೆ ಬಿದಿ ರೊಡೆದು ಸುರಿವ ಬಸಿಪುಱುತ್ತುಗಳಂ ಪೊಸನೀರ್ವನಿಗಳಿವೆಂದುದೊಸೆದೀಂಟಲ್ ಮಿಡುಕಿ ಸೋಗೆ ಪೊಸೆದುದು ಬಸಿಱಂ (ಶಾಕಪು. ೯-೬೩); ಪೊಸೆದಳೊಡಲಂ ಕೂಡೆಕೂಡೆ ಸುತಮೋಹದಿಂದಸವಳಿದು . . . ಹಲುಬಿದಳಂಬುಜಾಕ್ಷಿ (ಶೃಂಗಾ. ೨೦-೨೦). ೪. ತಿಕ್ಕು : ಉಜ್ಜು ; ತೀಡು : ಕರತಳದಿಂ ಕಣ್ಣಂ ಪೊಸೆಯುತ್ತಮೆಟ್ಟು ತಂತಮ್ಮ ತಲೆವೆಸೆಯೊಳರ್ದ ಕರವಾಳು ಕೊಂಡು (ಗದಾಯು. ೯-೩೨ ಪ); ಜವದಗ್ನಿಮುನಿ ಮಾನಿದು ಪಕ್ಕಿಗಳಂ ಕರತಳದೊಳ್ಪೊಸೆದು ಕೊಲಲುದ್ಯೋಗಿಸುವುದುಂ (ಧರ್ಮಾಮೃ. ೨-೨೨೩); ಹಾ ಪುತ್ರಯೆನುತೆತ್ತಿಕೊಂಡು ಮುಂಡಾಡಿ ಪಣೆಗಾ

ಪಣೆಯನೊಂದಿಸಿ ಪೊಸೆದು ಚೀರ್ದು ಬಹಳಪ್ರಲಾಪದಿನಳಲ್ದಂ (ಕೃಷ್ಣಶಾ. ೦೩-೫೩). ೫. ಉಜ್ಜಿ ಬೆಂಕಿಯನ್ನು ಉತ್ಪತ್ತಿಮಾಡು.—ಉಂಟುಮಾಡು : ಪೊಸೆವಗ್ನಿಯಿನುಗಿದಿರ್ದಂಕುಸದಿಂದಂಜನದಿನಾ ಪ್ರಲೇಪದಿನಿದ ನಂಜಿಸಲಿಕ್ಕಿದ ಧೂಪದಿನಳ್ಕಿಸುವಾತಂ ಬೆನ್ನ ತಕ್ಕಿನಾತನೆ ನೃಪತೀ (ಶಾಂತಿಪು. ೩-೨೬). ೬. (ಹಗ್ಗ, ನೂಲು ಮೊದಲಾದುವುಗಳನ್ನು) ತಿರಿಚು ; ಹುರಿಮಾಡು : "ಪೊಸೆ-ರಜ್ಜುಕ್ರಿಯಾಯಾಂ (ಹಗ್ಗ ಹೊಸೆ), ಮಂಥದಂಡೇ ಚ (ಕಡೆಗೋಲು)" (ಕಮರಾ) ; ಪುಲ್ಲ ಬೆಂಟೆಯಂ ಪೊಸೆದು ಕಿಚ್ಚು ಮೆಣ್ಣೆಯ ಕೊಡನುಂ ಬೆಂಟೆಯುಮಂ ಕೊಂಡು ಪೋಗಿ ಭಟಾರರ ಮುಂದಿಟ್ಟು (ಪಡ್ಮಾಶಾ. ೦೫೩-೦೦) ; ಪರಿವ ಭಂಡಿಯಂ ಕಾಲಿಂ ಕೋವರು ಮಣಲಂ ಸರವಿ ಪೊಸೆವರು ಬೆಟ್ಟಿಱ ಮಿತ್ತುಗರೆವರು ಜವನ ಮಿಸೆಯಂ ಕೀಳುವರು (ಸೌಇಷ. IX-1, ೨೬೬-೦೬ ; 1190) ; ಪೊಸವೊಗರ್ ಕೋದಿರ್ಪ ಪೊಳ್ತೆಳೆಯನೆಳೆಬಿಡುವ . ಪೊಸೆದು ನೆಲದೊಳ್ಬುಗಳ ಬಾಳ್ವೆಳ್ಪ ತೊಡೆವಂ (ಕಾಲೂರ. ೭೦-೦೨೪). ೭. (ತಲೆಗೂದಲು) ತೆಕ್ಕೆಗಟ್ಟಿರು ; ನುಲಿದು ಕೊಂಡಿರು : ನೆತ್ತಿಯೊಳೆಱೆದೆಱೆದಿನಿಸಱೆಯೊತ್ತಿ ಬಱಕ್ಕಿಱಿಯೆ ಪೊಸೆದು ಜಡೆಗೊಂಡಿರ್ದುದ್ವೃತ್ತ ಕುಚಯುಗೆಯ ಕೇಶಮನೆತ್ತಂ ಪಸರಿಸಿದನೆಯ್ದೆ ಪಸರಿಸಿದದಟಿಂ (ಪಂಪಶಾ. ೦೨-೦೫೪) ; ಪೊಸೆದ ಕೆಂಡೆಡೆಯುಂ ಪುಲಿದೋಲ ಕಚ್ಚಿಯುಂ (ಕಾಮಾಶ. ೪೯). ೮. (ತಲೆಗೂದಲು ಮೊದಲಾದುವನ್ನು) ನುಲಿ ; ಸುತ್ತು : ಮಂದಾರಮುಖ್ಯ ಮಾದ ಅಲರ್ಗಳಂ ಮುಡಿವ ಕುರುಳಂ ಪೊಸೆದು ಜಡೆಯನಂತಳವಡಿಪರೇ ರತಿಸುಖಂಬಡೆವ ಕಾಲದೊಳ್ ಕೆಳೆಗೊಂಬರೇ ತಪವನು (ಸಬಪು. ೩೬-೮). ೯. ಸೇರಿರು ; ಕೂಡಿರು ; ಹೊಂದಿರು : ಬೆರಲೊಳ್ ಬೀಣೆಯ ತಂತಿಗಳೊರಸಿದ ಕೆಂಗಲೆಗಳಕ್ಷಮಾಲೆಯೊಳೆಸೆವಂತಿರೆ ಪೊಸೆಯೆ ಮುತ್ತು ಪವಳಂಬೆರಸಿದ ಪೋರಾಯ್ತು ಚೆನ್ನತಪಸಿಯ ಕೆಯ್ಯೊಳ್ (ಪಂಪಶಾ. ೬-೧೦). ೧೦. ಕೂಡಿಸು; ಸೇರಿಸು ; ಬೆರಸು : ಪೊಸೆದಾತ್ಮಜಳದೆ ಬೇಳೆಯ ರಸಮಂ ಕಿವಿಯೊಳಗೆ ಪಿಱಿಗೆ ಮೇಣ್ ಕಟ್ಟುಗೆ ವಾಯಸಜಂಘೆಯ ಬೇಳೆಯ ಕಿಱುಕುಸಾಲೆ ಬೇರೊಂದನಲ್ತೆ ಸೂಟ್ಜ್ವರಮಱಿಗುಂ (ಲೋಕೋಪ. ೯-೨೪). ೧೧. ಹೆಣೆ ; ಕಟ್ಟು ; ರಚಿಸು : ರಘುವಂಶರಾಮಕೃತಿಯೊಳ್ ಪತ್ತೆಂಟು ಪದ್ಯಂಗಳಂ ಪೊಸೆವೆಂ (ಸಂರಾಮಾ. ೦-೩೩). ೧೨. ಉಂಟುಮಾಡು; ಉಂಟಾಗಿಸು : ಶೋಭೆಯಂ ಪೊಸೆಯುತ್ತಿರ್ದುದು ಮೂಡಲುಂ ಪಡುವಲುಂ ಚಂದ್ರಾರ್ಕಸನ್ಮಂಡಲಂ (ಪಾರಪು. ೫-೭). ೧೩. ಹರಿ ; ಕತ್ತರಿಸು : ತೊಡರಂ ಪೊಸೆದು ಪಱಿವ ಮದಕರಿಯಂತೆ ಪೊಸೆದು ನೋಡಲೊಡಂ (ಶಾಂತಿಪು. ೮-೫೦ ಪ); ಆ ನಾಗಪಾಶಮಂ ಜಗತೀನಾಥಂ ಪೊಸೆಯೆ ಕಟ್ಟುಗಳ್ ಬಿಟ್ಟಿರೆ (ಶಾಂತಿಪು. ೮-೫೪). ೧೪. (ಹೆಜ್ಜೆಯನ್ನು) ಕೀಳು ; ತೆಗೆದಿಡು : ಪೊಸೆಯದೆ ಪಜ್ಜೆಗಳಂ ನಾಲ್ದೆಸೆಯೊಳಮೊಂಟೆಂಟು ದೆವಸಮಿರುಳುಂ ಪಗಲುಂ ಮಿಸುಕದೆ ನಿಲೆ (ಸಮಪ. ೧-೦೬). ೧೫. ಹೊಡೆ ; ಬಡಿ : ಇರುಳ್ ಮೊದಲ ಜಾವಮಪ್ಪನ್ನೆಗಂ ಪೊಸೆಯೆ ಸಸ್ಯಕ್ಕೆ ನಟ್ಟಿರುಳ್ವರೆಗಮಾ ಪಿಶಾಚನಿವಹಕ್ಕೆ . . . ಅಶುಭಮೆಂಗೆ ನಿರ್ಘಾತಮಂ (ಲೋಕೋಪ. ೪-೦೭); ಚಾಟಿಯೊಳ್ ಬಡಿವುತುಂ ಸರಳಿನಿಂ ಪೊಸೆವುತುಂ ಭೂತದಿಂ ಪೊಯ್ಸುತುಂ . . . ಬಳಲಿಸುವರೇನೆಂಬೆನು (ಸಬಪು. ೫೬-೨೬). ೧೬. ಹೊಸಕು; ನಾಶಮಾಡು; ಹಾಳುಮಾಡು : ಆ[ಚಾ]ರ್ಜ್ಯ ಪುರುಷ ಇಱಿದು ಬಸಮಱಿ[ಯದೆ] ಬೀಱ್ವೊರನ್ ತೆಱೆ[ಱ]ನ ಮೆಚ್ಚದೊಂ ಪಿಸುಣರ ಪೊಸೆವೊ (ಎಇ. XXIV, ೦೯೩-೧೨; ಸು.885); ಎಲ್ಲರಂಯಮಸುತನುಂ ಸುರೇಂದ್ರಸುತನುಂ ಪೊಸೆದೀಗಳೇ ಮುಕ್ಕಿ ತೋಱರೇ (ಪಂಪಶಾ. ೪-೭); ಪೆರ್ಮಾರಿಯನಾವಗಂ ಪೊಸೆಮ ನೀಂ ಮುಕ್ಕೆಂಬುದೇಂ . . . ಬೀರಮೇ (ಕಬ್ಬಿಶಾ. ೨೪೦). ೧೭. ಕೊರೆ ; ತೂತು ಮಾಡು : ರಸಮಯಮಂ ಕೃತಿಯಂ ಸೇವಿಸಿ ವಿರಸಮನೆಯ್ದೆ ಜೋಡುಮಾಡುವ ವಿಬುಧಪ್ರಸರಂ ಪೊಸಮಾವಂ ಸೇವಿಸಿ ಬಿದಿರಂ ಪೊಸೆವ ತುಂಬಿಯೊಡನಾಡಿದರೇಂ (ಪುಸ್ವಪು. ೦-೫೭). ಹೊಸೆ : ೧. ವಸುಧೆಯಿಲ್ಲದ ಬೆಳಸು ರಾಜಾನ್ನದ ಹೆಸರಿಲ್ಲದ ಓಗರ ವೃಷಭ ಮುಟ್ಟದ ಹಯನು ಬೆಣ್ಣೆಯ ಹೊಸೆವರಿಲ್ಲದೆ ಕಂಡುಂಡೆ (ಅಪಸಂ. ೧೪೫-೬೬೦); ಹೊಸೆದರೈ ಧರೆ ಗಗನ ನಡುಗಲು ಮಸಗಿ ಮಂದರದಿಂದ ದುಗ್ಧದ ರಸಗಡಲನಾ ದೇವದಾನವರಂದು (ಸಂಭಪ. ೫-೦೦೫); ಸಸಿಯನೊಕ್ಕಲಿಗನು ಹೊಸೆವಾಕೆ ಬೆಣ್ಣೆಯನು ಅಸಗ ಸೀರೆಯನು ಅಱಿವಂತೆ ಸೂಳೆ ತಾ ಹುಸಿವರಱಿದಿಹಳು (ಸರ್ವಜ್ಞ. ೦೯೦೦). ೨. ಮಿಸುಗುವ ಸುಗಂಧವಾಳೆಯ ಹಣ್ಣ ಕತ್ತರಿಸಿ ಹೊಸತುಪ್ಪಮಂ ಕೂಡಿ ಮತ್ತಮಾ ಹಾಲೊಳಗೆ ಹೊಸೆದದಂ ಹಾಕೆ ಕದಳೀ [ಪಾಶಾಂ. ನೊಸೆದದಂ ಹಾಕೆ ಕದಳಿಯ, ವಸೆದದಂ ಹಾಕೆ ಕದಳಿಯ, ಪೊಸೆದು ಹಾಕಿದೊಡೆ ಕದಳಿಯ] ಪಕ್ವಫಲಸಾರಪಾಯಸವೆನಿಸಿಕೊಂಬುದು (ಸೂಪಶಾ. ೩-೦೪). ೩. ಸಕಳಸುಖವಿರಹಿತೆಯಪ್ಪ ರತಿದೇವಿ ನಿಂದಿರ್ದು ಬಿಸುಸುಯ್ದು ಬಸಿಱಂ ಹೊಸೆದು ಕೆಯ್ಯೆತ್ತಿ ದೆಸೆದೆಸೆಯಂ ನೋಡಿ (ಗಿರಿಕ. ೯-೬೪ ಪ); ಕಾಳುಮಾಡಿದನೆನಗೆ ಮುನಿಪತಿ ಠೌಳಿಕಾಱನಲಾ ಸುಡೀ ಗರ್ಭಾಳಿಗಳನೆಂದಬಲೆ ಹೊಸೆವಳು ಬಸುಱನೊಡೆಮುಱಿದು (ಕುಮ್ಮಾಶಾ. ೪-೪೦); ಪುತ್ರನ[ರ]ಳಿದಪರೆಂದು ದೇವಕಿ ಹೆತ್ತ ಹೊಟ್ಟೆಯ ಹೊಸದು ಶೋಕಿಸಿ ಬಿದ್ದು ಹೊರಳಿದಳು (ಸಾಳ್ವಶಾ. ೨೧-೪); ಅಯ್ಯೋ ಎಂದು ಭೋರೆಂದು ಗೋಳಿಟ್ಟು ಹೊಟ್ಟೆ ಹೊಸೆದು ಹುಚ್ಚಿದ್ದು ಹೌಹಾರಿ ಹುಯ್ಯಲಿಟ್ಟಳು (ಸಬೀಗೀ. ೯೮-೨೨). ೪. ವಾಸನೆಯ ಕುಸುಮವ ಹೊಸೆದು ವಾಸನೆ ಹೋಗಿ ಆ ಸುವಾಸನೆಯೆಲ್ಲಡಗಿತ್ತೆಂಬುದನಱಿದಲ್ಲಿ ಶರಣನ ಶರಣಸ್ಥಲ (ಮೋಳಿಮಾ. ೦೪೩-೫೪೬); ವಿಷದ ಕ್ರೂರತೆ ಲೋಕವೆಲ್ಲವ ಘಸಣಿಸುತ ಬರಲಾ ಸಮೀರಣ ಹೊಸೆವನಂಗೈತಳದಿ ಕೋಪದಿ ನೋಡಿ ಪಡಿಸಣವ (ಸಂಭಪ. ೬-೧೯) ; ನಾಗ ಕೈ ಹೊಸೆದ (ಪಡಿಶಾ. II, ೦೦೨೬). ೫. ಕಾಷ್ಠದೊಳಿಹುವಗ್ನಿ ಹೊಸೆದರೆ ತಾನಿರ್ದ ಕಾಷ್ಠವ ತಾನೆ ಸುಡುವುದು (ಭರತ. ೬೪-೫೨); ಹಸಿಯ ಸಮಿಧೆಯ ತಂದು ಹೊಸೆದರುಂಟೇ ಕಿಚ್ಚು (ಸರ್ವಜ್ಞ. ೯೩). ೬. ಮಳಲ ಹೊಸೆದರೆ ಹೊಸೆದಂತಲ್ಲದೆ ಸರವಿಯ ಹಡೆಯಲು ಬಾರದು (ಬಸವ. ೫೫೪); ಹೊರಜಿ ಹೊಸೆವ ತಿರುಹುವ . . . ನೆಱೆ ಸುಲಿವ ಖಳರ ಕಳಕಳದ ಕೋಳಾಹಳದೊಳಾ ರೌರವಂ ಭಯಂಕರವಾದುದು (ಸಿದ್ಧರಾ. ೬-೨೯); ತಿಣ್ಣವಲೆ ಜೋಡುವಲೆ ಹೊಸೆದಿಕ್ಕಣ್ಣಿವಲೆ ಚಕ್ರವಲೆ . . . ಪೊಱೆಗಳು ವಿಂಧ್ಯಕನ ಕೂಡೆ (ಸಾಳ್ವಶಾ. ೫-೦೬); ಪುನಃಪುನಃ ನೀರಿನಲ್ಲಿ ಅದ್ದಿ, ಒಣಗಿಸಿ ಅತ್ಯಂತ ತಾಳಿಕೆಯುಳ್ಳದ್ದಾಗುವಂತೆ ಆ ಚರ್ಮವನ್ನು ಹೊಸೆದನು (ಬಂಗಾಹ. ೨೦). ೧೦. ಲೋಕವನು ನಾಕಕ್ಕೆ ಬೆಸೆಯೆ ನಾಕವನು ಲೋಕಕ್ಕೆ ಹೊಸೆಯೆ ಐತಂದೆ ನಾ ಭಕ್ತಿದೇವಿ ! (ಕಂದ್ರಸ. ೫೦-೦). ೧೧. ಕನ್ನಡದ ಆದಿಕವಿ ಪುಪ ತನ್ನ ಪೋಷಕನಾದ ಅರಿಕೇಸರಿಯನ್ನು ಅರ್ಜುನನಿಗೆ ಅಭಿನ್ನವಾಗಿ ಮಾಡಿ, ನೂತನರೀತಿಯಲ್ಲಿ ಕಾವ್ಯವನ್ನು ಹೊಸೆದುದು ಆತನ ಸುಶೋಧನೆಯ ಪ್ರಜ್ಞಾಫಲವೆನ್ನಬಹುದು (ಸಂಶೋಧ. ೦೮೬). ೧೫. ಕೊಂಕುಸರಳಿಂ ಹೊಸೆವ ಚಕ್ರದಿಂದಿಡುವ ಕುರುಪಿಂ ಕೆರೆವ . . . ಕರಗಸದಿ ಕೊಱೆವ ರೌರವದ ನರಕಂ ಭಯಂಕರವಾದುದು (ಸಿದ್ಧರಾ. ೬-೨೮). ೧೮. ನೆರಿಗೆ ಹಿಡಿ ; ಜೋಡಿಸು : ಹೊಸೆದು ಕಟ್ಟಿದ ಮುನ್ನ ಕಚ್ಚೆಯ ಬೆಸುಗೆ ಶಿಖಿಗಳ ಗಂಟು ಮಿಗೆ ಶೋಭಿಸುವ ಜನಿವಾರವು . . . ಎಸೆವ ಹೊಂಬಣ್ಣದ ಶರೀರದಿ ಮಿಸುಪ ವಾಮನರೂಪನಾಂತಾ ವಿಷ್ಣುಮುನಿ ಬಂದ (ಸಾಳ್ವಶಾ. ೦೬-೨೫). ೧೯. ಕೋಡುಬಳೆ, ಸೇವಗೆ ಮುಂತಾದುವುಗಳ ಹಿಟ್ಟನ್ನು ಬೆರಳುಗಳಿಂದ ಹೊರಳಿಸಿ ಎಳೆಯಾಗಿ ಮಾಡು : ಹದನಾಗಿ ನಾರು ಹಱಿವಂತೆ ಕಣಿಕವ ಕುಟ್ಟಿ . . . ಸೇವಗೆಯಂತೆ ಹೊಸೆದು ಸಣ್ಣಕ್ಕಿವಿಟ್ಟಿನೊಳು ಬೆಣ್ಣೆಯನು ಕಲಸಿ ಅದಕಿಕ್ಕಿ (ಸೂಪಶಾ. ೦-೪೭). ೨೦. (ಆಲಂ) ವ್ಯರ್ಥವಾಗಿಸು ; ಪೋಲುಮಾಡು : ನಾನೇ ಸೈನ್ಯ ತೆಗೆದುಕೊಂಡುಹೋಗಿ ಮೂರೇ ದಿನಗಳಲ್ಲಿ ಮಸೆದು ಬರುತ್ತೇನೆಂದು

. . . ಒಂದು ವರ್ಷವೆಲ್ಲ ಹೊಸೆಯುತ್ತ ಕುಳಿತೇನು (ಶಾಂಕಶಾ. ೦೯೨). ೨೧. ದುಡಿ; ಶ್ರಮಿಸು : ಹೊಸೆಯದ ಕೈಯಿಂದ ಕುಸಿದು ಹೋಹುದು ಲೇಸು ಅಸಮಾನದವಳ ಬದುಕಿಂದ ತಿಂಗಳಲಿ ಹಸಿದಿಹುದೆ ಲೇಸು (ಸರ್ವಜ್ಞ. ೦೬೪೭).

ಪೊಸೆದು ಮುಕ್ಕು, ಹೊಸೆದು ಮುಕ್ಕು=ಹೊಸಕಿ ಹಾಕು ; ನಾಶ ಮಾಡು : ಈ ಮಱಲುಂದಿದರನೆತ್ತಿನಿಬರುಮನೊರ್ವೆಯೆ ಪೊಸೆದು ಮುಕ್ಕುವಂ (ಪಂಪಭಾ. ೩-೦೬ ಪ) ; ಅಂಭ್ರಯುಗ್ಮದಿಂದೊರಸುವ ಕೈಗಳಿಂ ಪೊಸೆದು ಮುಕ್ಕುವಗುರ್ವಿನ ಕುಂಭಕರ್ಣನೀ ಧರಣಿಗೆ ದುಂತ ವಕ್ರನೆನಿಸಿರ್ದು(ರ್ದು)ದನಾನಱಿವೆಂ (ಜಗಿ. ೦-೬೦) ; ಅನುಜರನಿತ್ತುಮಂ ಹೊಸೆದು ಮುಕ್ಕಿದನೋ ವೃಕಕುಕ್ಷಿ ನಿಂದು ಮತ್ತೆನಗಿದಿರಾಗಿ ಬಲ್ದಡಿಗೆಯಂ ಪಿಡಿದಿರ್ದವನು (ಮುಖಾಪೇ. ೦೩-೦೮) ; ದೆಸೆಯ ನುಣ್ಣನೆ ನುಂಗಿ ಸೂರ್ಯನ ಹೊಸೆದು ಮುಕ್ಕಿತೋ ರಾಹು (ಸಾಳ್ವಭಾ. ೩-೨).

[ದೇ.ಕ ತಮಿ. ಪೊಚುಪ್ಪು ; ತುಳು. ಪೊಯಿ; ತೆಲು. ಪೊಸಗು]

ಪೊಸೆ₃ (ನಾ). ಕಡೆಗೋಲು ; ಮಂತು : "ಪೊಸೆ—ರಜ್ಜುಕ್ರಿಯಾಯಾಂ (ಹಗ್ಗ ಹೊಸೆ), ಮಂಥದಂಡೇ ಚ (ಕಡೆಗೋಲು)" (ಶಬುಧಾ); "ಪೊಸೆ ಮೊಂದುಂ ಕಡೆಯೊಂದುಂ ಮಂಥಾನು" (ಶಕಶಾ. ೩೩-೦೪೦). [< ಪೊಸೆ₁]

ಪೊಸೆದು 'ಪೊಸೆ₁' ಪರಾ.

ಪೊಸೆಯಿಸು, ಪೊಸಯಿಸು₂ (ಕ್ರಿ). ೧. ಕೂಡು ; ಸೇರು ; ಹೊಂದು : ಪೊಸೆಯಿಸಿ ನಸುಬಿಸುಪೇಱಿದ ಬಿಸಿಲಱಿಯೆ ಬೆಮರ್ತು ಬಿಂದು ಬಿಡುವಪೊಲೆನಸುಂ ಪೊಸಮುಗುಳಂ ಪೊತ್ತಿಸೆದುದು ವಸಂತದೂತಿಕೆ (ಲೀಲಾವ. ೯-೬೦). ೨. ರಚಿಸು ; ನಿರ್ಮಿಸು : ಕವಿಮಾರ್ಗದೊಳು ಪೊಸದೇಸೆಯ ನುಡಿಗಳೊಳಂ ಪೊಸೆ [ಪಾಣಾಂ. ಸ]ಯಿಪ ಬಲ್ಮೆಗೆ ಚತುರ್ಮುಖಂ ಕವಿರನ್ನಂ (ಗದಾಯು. ೦-೩೯) ; ಪುಷ್ಪಮಾಳಿಕೆಯೆಂಬಳ್ ಪಲತೆಱವಲರ ಪಸವನಂಗಳಂ ಪೊಸೆಯಿಸಿಯುಂ (ಶಾಂತೀಶ್ವ. ೦೩-೨೨೯ ಪ). ೩. ಉಂಟುಮಾಡು ; ಒದಗಿಸು : ಯುವತಿಗೆ ನಿಱಿವಿಡಿದು ದುಕೂಲವ ನುಡಿಸುವ ದಿವಿಜೆ ಕನಕನಗಪೇಖಳೆಯಂ ಧವಳಾಭ್ರಮಾಲೆಯಂ ಸುತ್ತುವ ವಾರಿದಲಕ್ಷ್ಮಿಯೆಸಕಮಂ ಪೊಸೆಯಿಸಿದಳ್ (ಪುಸ್ತಪು. ೯-೭೨). ೪. ಮಾಡು ; ನೆರವೇರಿಸು : ಶಿಶುಗೆ ನಯನಾಂಶುದುಗ್ಧಪ್ರಸರದೆ ಜನ್ಮಾಭಿಷೇಕಮಂ ಮುನ್ನೊಂದಂ ಪೊಸೆಯಿಸಿ ಸರೋಜದಿಂದರ್ಚಿಸುವಂತಿಂ ದ್ರಾಣಿ ನೆಗಪಿದಳ್ ಕೆಂದಳದಿಂ (ಶಂದ್ರಪು. ೦೨-೩೩). ೫. ಪ್ರಕಟಪಡಿಸು ; ತೋರಿಸು ; ಕಾಣಿಸು : ಏನಂ ಪೇಱ್ದೆಂ ತನ್ನೃಪಸೂನುವ ಪುಣ್ಯಪ್ರವಾಹಮಂ ಗ್ರಾಹಮಹಾಮಾನಕುಳೀರಾಹಿಗಳಂದೇನುಂ ಪೊಸೆಯಿಸಿದುವಿಲ್ಲ ನಿಜವಿಷಮತೆಯಂ (ಶಂದ್ರಪು. ೩-೨೩). **ಪೊಸಯಿಸು₂ :** ೧. ವಿಚಿತ್ರ ಪಾತ್ರಪರಿನರ್ತನಮುಣ್ಮುವ ತೂರ್ಯನಾದದೊಳ್ ಪೊಸಯಿಸೆ . . . ಲೀಲೆ ಕಣ್ಗಸವಳಮಾಗೆ ವಾಱುವ ಮಹೀಧರನೆಂಬ ವಿಯಚ್ಚರೇಂದ್ರನಂ ಭೋಂಕೆನೆ ಕಂಡು (ಆದಿಪು. ೨-೨೧). ೨. ಎಸೆದರ್ದೆಯೊಳ್ ಪಳಂಚುವ ಕಲಧ್ವನಿಯಂ ಪೊಸತೊಂದು ರಾಗಮಂ ಪೊಸಯಿಸಿ (ಆದಿಪು. ೨-೭೭) ; ಸತ್ಯವಿಯೊಳ್ ಸಮನಾಗಿ ಮಾರ್ಗಮಂ ಪೊಸಯಿಸಿ ದೇಸಿಯಂ ಪೊಸತು ಮಾಡಿದಳೊರ್ವಳಪೂರ್ವರೂಪದಿಂ (ಪಂಪಭಾ. ೩-೬೯) ; ಮೇಪುಗಾಡಿಂ ಹಕ್ಕಿದಲೆಗೆ ಹರಿಯಿಡುವ ಹರಿಣೇಗಣದ ಕಡೆಮಾಯೊಳರೆಮೆಲ್ದುಟಿದೆಳೆಗಱುಂಕೆಯೆಸಟ್ಟಳಂ ಸೆಳೆದು ತಂದು ಬಯಲೊಳ್ ಬಳ್ಳಿವಸಲೆಯುಂ ಪೊಸಯಿಸಿಯುಂ (ಶಂದ್ರಪು. ೯-೯ ಪ). ೩. ಪೊಸತಳಿರ್ಗಳ ಬಿಜ್ಜಣಿಗೆಯಿನೆಸೆವೆಲರ್ಗಳಿನೊಗೆವ ಘರ್ಮಜಲಮಂ ಪೀರ್ದಾಱಿಸಿದುವು ಕುಸುಮರಜಂಗಳ್ ಪೊಸ[ಪಾಣಾಂ. ಸೊಗ]ಯಿಸಿದುವು ಬಣ್ಣಮಂ ಲತಾಂಗಿಯರ್ಗಾಗಳ್ (ಆದಿಪು. ೦೦-೭೩) ; ರಸವೊಸರ್ವನ್ನೆಗಂ ತಗುಳಿ ಪಾಡುವ ಗಾಣರ ಗೇಯಮಟ್ಟುಱಂ ಪೊಸಯಿಸೆ (ಪಂಪಭಾ. ೦೦-೯) ; ಎಸೆವ ಜಿನೇಂದ್ರಚಂದ್ರನ ಸದಚ್ಛತನುಚ್ಛವಿ ಸಾಂದ್ರ ಚಂದ್ರಿಕಾಪ್ರಸರಮದೀಕ್ಷಣೋತ್ಪಳಕಮುತ್ಸವವಾರ್ಧಿಗಮಂದಮಂದಮಂ ಪೊಸಯಿಸೆ ಹರ್ಷಸಂಪದಮಂ (ಪರ್ಶಪು. ೦೩-೯೮). ೪. ಪತಿಂವರೆಗೆ ಸೊಯಂಬರಮಂ ಪೊಸಯಿಸಿದಂ ನಿಖಿಲರಾಜಕಂ ನೆರೆಯೆ ಸಾನುಜಂ ಬಲದೇವಂ (ಶಾಂತಿಪು. ೯-೮೯) ; ದಾನವ್ಯಸನಿ ದಶರಥನದೇಂ ಪೊಸಯಿಸಿದನೊ ಚೌಲೋಪನಯನಮಹಿಮೋತ್ಸವಮಂ (ಪಂಪಾಮಾ. ೩-೦೧೨) ; ಶಿಶುಗಳು ಕಾಡೆ ತೋಱೆ ಶಶಿಯಂ ಜಳಕೇಳಿಗಳಂ ವಿನೋದದಿಂ ಪೊಸಯಿಸಿ (ಪುಷ್ಪಾಸ್ತ್ರ. ೦೦-೦೨). ೫. ಧೃತವಿಷಮಬಾಣನಂ ಜಿನಪತಿ ಗೆಲ್ದಪೊಲಾತನಂ ಪ್ರಜಾಪತಿ ಧರಣೀಪತಿ ಕಾಮದೇವನಂ ಗೆಲ್ದು ತಳರದನಿವಾರ್ಯವೀರ್ಯಮಂ ಪೊಸಯಿಸಿದಂ (ಶಾಂತಿಪು. ೩-೩೭) ; ಬೇಗಂ ಕೂರ್ತಂತೆ ಭಕ್ತಿಯಂ ಪೊಸಯಿಪರ್ಕಾಲಮಂ ಕಜ್ಜಮಂ ಬಗೆಯುತಿರ್ಪರ್ (ಮಧಕಿ. ೦೦-೭೫) ; ದೂರದೊಳೆಯ್ತರೆ ತುಂಬುಮೊಗವ ತೋಱೆ ಭೂರಿಲೀಲೆಗಳ ಪೊಸಯಿಸಿ (ಪಸಂ. ೬-೦೩ ಸಾಂಗತ್ಯ). ೬. ಹೊಂದಿಸು ; ಕೂಡಿಸು ; ಸೇರಿಸು : ಈ ದೂದವರೆಂಬ[ರ್] ಬೇಟಕಾಱರ ಬೇಟಮೊಂಬ ಲತೆಗಳಡರ್ಪಿರ್ವಂತಿರ್ದರೆಂತಪ್ಪ ಬೇಟಂಗಳುಮವರ್ ಪೊಸ[ಯಿ]ಸೆ ಪೊಸತಪ್ಪುದು ಕಿಡಿಸೆ ಕಿಡುವುದು (ಪಂಪಭಾ. ೯-೦೦೩ ಪ) ; ಅಲ್ಲಿಯ ವಯೋಧಿಕರೀಗಳುಮಾಗಳುಮಱಿವರಾದೊಡವಿನಿಸೆ ಡೆಯಾಗಿರ್ದ ಸಂಬಂಧಮಂ ನೀನಿರ್ದು ಪೊಸಯಿಸುವುದು (ಶಾಂತಿಪು. ೨-೭೭ ಪ). ೭. ಕಡೆ ; "ಮಥಿಸು" : (ಪಶಾಪ. ೯. I. ೭೬). ೮. ಹೂಡು ; ಬಳಸು : ಅಸತ್ಯವಾದಮಂ ಪೊಸಯಿಸಿ ಜೀವನಿಲ್ಲ ಮೊಱೆಯಿಲ್ಲಱನಿಲ್ಲ ಪರತ್ರಯಿಲ್ಲೆ ನಲ್ಮಸಕಳಿಯಂತೆ ನಾಲಗೆ ಪೊರಳ್ವುದು ರಾಜಸಭಾಂತರಾಳದೊಳ್ (ಆದಿಪು. ೨-೦೦). [ಪೊಸೆ₁ + — ಇಸು₃]

ಪೊಸ್ತಕ 'ಪೊತ್ತಗೆ' ನೋ.

ಪೊಸ್ತಕಗಚ್ಛ, ಪೊಸ್ತಕಗಛ (ನಾ). [ಜೈನ] ಮುನಿಗಳ ಒಂದು ವರ್ಗ : ಸ್ವಸ್ತಿಶ್ರೀ ಮೂಲಸಂಘದೇಶಿಯಗಣ ಪೊಸ್ತಕಗಚ್ಛದ ಕೊಣ್ಡಕುನ್ದಾನ್ವಯ ಕೊಲ್ಲಾಪುರದ ಸಾವನ್ತನ ಬಸದಿಯ ಪ್ರತಿಬದ್ಧದ ಶ್ರೀಮಾಘನನ್ದಿಸಿದ್ಧಾನ್ತ ದೇವರ ಶಿಷ್ಯರು . . . ಕೊಟ್ಟರು (ಎಕಿ. II, ೩೮೦-೦ ; ಸು. 1200). **ಪೊಸ್ತಕಗಛ :** ಶ್ರೀಮೂಲಸಂಘದೇಸಿಯಗಣ ಪೊಸ್ತಕಗಛ ಕೊಂಡಕುಂದಾನ್ವಯದ ಹೆರಗಿನ ಹರಿಶ್ಚಾಂದ್ರದೇವರ ಪ್ರಿಯಗುಡ್ಡುಗಳಪ್ಪ ತಾತಂಗಿಯ ಪಟ್ಟಣದ ನಖರಂಗಳು ಮಾಡಿಸಿದ ಶ್ರೀಶಾಂತಿನಾಥದೇವರು (ಎಕಿ. I (R). ೬-೨; 12ನೆಯ ಶತ). [< ಸಂ. ಪುಸ್ತಕ ಗಚ್ಛ]

ಪೊಸ್ತಕಗಛ 'ಪೊಸ್ತಕಗಚ್ಛ' ನೋ.

ಪೊಹಚಿ 'ಪೌಂಚಿ' ನೋ.

ಪೊಳ್ (ಸಪೂರೂ). 'ಪೊಳ್ಳು' ಎಂಬ ನಾಮವಾಚಕಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪೊಳ್ನುಡಿ', 'ಪೊಳ್ಪರ' ಪರಾ. [<ಪೊಳ್ಳು]

ಪೊಳಂಕು, ಪೊಳಕು₁, ಹೊಣಕು, ಹೊಳಕು₁ (ಕ್ರಿ). ೧. ಪ್ರಕಾಶಿಸು; ಮಿಂಚು; ಹೊಳೆ : ನದಿ ಕಣ್ದೆಱೆದಂತೆ ಪೊಳಂಕಿದ ಮಿಾನಂ ಮೊಸಳೆ ವಾಯೆ ನರಪತಿಯ ವಿನೋದದ ಗುಜ್ಜ ಸಿಕ್ಕಿ ಪಿಡಿದತ್ತದನಧಿಪತಿ ಜಾಲ ಗಾಱಿಂ ತೆಗೆಯಿಸಿದಂ (ಯಶೋಧ. ೩-೨೬). ೨. ಅಗಿದು ತಿನ್ನು; ಜಗಿ : "ಪೊಳಕು, ಪೊಳಂಕು—ಚರ್ವಣಕ್ರಿಯಾಯಾಂ (ಅಗಿಯು)" (ಶಬುಧಾ). **ಪೊಳಕು₁ :** ೨. ಅರೆಮುಗಿದಿರ್ದ ಕಣ್ ಮುರಿದ ಮಿಾಸೆ. . .ಸುಲಿವಲ್ ತಳತ್ತಳಿಸಿ ತಂಬುಲಮಂ ಪೊಳಕುತ್ತೆ ರಾಗದಿಂ ಪ್ರಕಟಿಗೆ ಕೊಟ್ಟ ಪಂದಲೆಯುಗುಂದಲೆಯಾದುದು ಬೀರನಣ್ಣೈನಾ (ಅರ್ಧನೇ. ೩-೩೦). ೩. ಚಪ್ಪರಿಸು : ಪನಸಾಮ್ರಾತಕ . . . ದಾಡಿಮಫಲವ್ರಾತಂಗಳಿಂದಾಗಳುಂ ತನಿಗಂಪಂ ಮೊಗೆದೆತ್ತಿ ತೀಡುವೆಲರೊಂದಿಂಪಿಂಗೆ ಪೊಂಗೂರ್ತು ಮೆಲ್ಲನೆ ಬಾಯಂ ಪೊಳಕುತ್ತೆ ನೋಟ್ಟರಮರರ್ ತಾರಾಚಳೋದ್ಯಾನದೊಳ್ (ಅರ್ಧನೇ. ೨-೬೦). ೪. ಬಾಯಾಡಿಸು ; ನಾಲಗೆ ಹೊರಳಿಸು : ಮತ್ತಂ ಕಾಯೋತ್ಸರ್ಗಕ್ಕೆ ಮೂವತ್ತೆರಡುದೋಷಂಗಳಪ್ಪುವವಾವುವೆಂದೊಡೆ ಕುದುರೆಗಾಲಿಕ್ಕಿ

ನಿಲ್ವುದುಂ . . . ಬಾಯಂ ಪೊಳಕುತ್ತಂ ನಿಲ್ವುದುಂ ಎರಡು ಕಯ್ಯಂ ಪಿಡಿಕಿಸಿ ನಿಲ್ವುದುಂ (ಪಸಾರ. ೩೪೨). ೫. ಚಿಮ್ಮು; ಪುಟಿ : ತಿರುವಿಂ ಪೊಳಕಿದ ಕಾಮನ ಸರಲಂತಿರೆ ಬಂದಳ್ (ಪುಷ್ಪಪು. ೯.೦೦೬) ; ಅವಗಡಿಸಿ ಪೊಕ್ಕು ಪೊಯ್ದಾಡಿದರ್ ಕೋಡಿದರ್ ನವರುಧಿರಧಾರೆಯೊಳ್ ಮುಳುಕಿದರ್ ಪೊಳಕಿದರ್ (ಸಂಪು. ೨೬-೦೮). ೬. ಸೇರು; ಕೂಡಿಕೊಳ್ಳು : ಕರ್ಮದ ಬೇರ ಹಱಿದರೆ ಪೊಳಕೆನೀ ಸಂಸಾರಚಿತ್ರಕೆ (ತಿಣಗ. ೦೦.೨-೦೦). ೭. ನಾಶಮಾಡು ; ಧ್ವಂಸಗೊಳಿಸು : ಪಟನುಡಿದೆತ್ತು ಪೊಯ್ತು ಧರಮಂ ತಿರೆಯಂ ಪದೆದೆತ್ತಿ ದೈತ್ಯನಂ ಪೊಳಕಿ ಬಲೀಂದ್ರನಂ ತಗುಳ್ದು ಮಟ್ಟಿಸಿ ದುಷ್ಟನೃಪಾಲವಂಶಮಂ (ಪಕಪಿ. ೩-೧೪೩). ಹೊಣಕು : ೮. ಸುಟ್ಟುಹಾಕು ; ಭಸ್ಮಮಾಡು : ಕ್ಷಣಕೆ ಕರ್ಮವ ಸುಟ್ಟ ಶಾಂತಿ ಶ್ರೀ ಜಿನರಾಜ ಹೊಣಕೆನ್ನ ಪಾಪೇಂಧನವ (ಜಾನಪ. ೪೩-೧). ೯. ಹೊಡೆ; ಬಡಿ : ಮರಳಿಸಿದನಾ ರಥವ ಪಾಂಚಾಲರೆಂಟುಸಾವಿರರಥಿಕರೈತರಲ್ಕವರ ದೆಸೆಗಾಗಿ ಹೊಕ್ಕುರವಣಿಸಿ ಹೊಣಕಿದಂ ಹೇರಾಳದಂಬಿನಂ ದೆಸೆದೆಸೆಗೆ ಪರಿವಂದದಿ (ಲಕ್ಷ್ಮಣಾ. ೦.೩೦). ಹೊಳಕು$_1$: ೧. ಬೆಳಗು ಹೊಳಕಿದ ಬಳಿಕಡಗಿತ್ತೆಲ್ಲಿ ಕತ್ತಲೆ (ಮನೋಪಿ. ೪-೨೪); ಮುಂಗಾರ ಗಗನಾಂಗಣದ ನಾಟ್ಯಕೆ ಎಂದ ಮಿಂಚಿನ ಭಣಿತೆಯವೊಲಸುರೇಂದ್ರರಥ ಹೊಳಕಿದುದು ಕಣನೊಳಗೆ (ತೊರಣಾ. ೬-೨೦-೩೦). ೫. ನೊರೆಯನುಬ್ಬಿಸುತೇಳ್ವ ರಣದುಬ್ಬರದ ರಕುತದ ಹೊನಲು ಹೊಳಕಿತು [ಪಾಶಾಂ. ಮಸಗಿತು] ಹೊಳಕಿಸಿ ಹೊರಳಿದವು ಹೇರಾಳ ಹೆಣದುಂಡುಗಳು ಕಪಿಬಲದ (ತೊರಣಾ. ೬-೩೦-೦೪). ೭. ಕುಲಗಿರಿಗಳೆಲ್ಲವನೊಂದು ನಿಮಿಷದಿ ಹೊಳಕಿ ಹೊಳಕಿ ಬಿಡುವೆನ್ನ ಕುಲಿಶದಂಡವ ಪಿಡಿದೀ ಸಗ್ಗಿಗರ ಜಂಗುಳಿಸಹಿತವೆ ಬಲಿದೊತ್ತೆ (ಶ್ರೀಪಾಲ. ೭-೩). ೯. ಭೀಮನಂ ತೊಡಕಿದರು ಹೊಳಕಿದರು ತವಕಿಗರು ತಲ್ಲಣಿಸದೆ (ತುರಂಗ. ೬೪-೨೨). ೧೦. ಝಂಕಿಸು; ಗದರಿಸು : ಅವದಿರ ನಾಡಿನೊಳಗರ್ಧಮಂ ಕೊಟ್ಟು ಬಾಳೆಂದು ಧೃತರಾಷ್ಟ್ರ ಹೊಳಕಿ ನುಡಿದನು (ತುರಂಗ. ೪೦.೦೬). ೧೧. ಜಲಿಸು ; ಅಲುಗಾಡು : ಮೃತ್ಯುವಿನಣಲ ಹೊಳಲೊಳಗೆ ಹೊಳಕಬಹುದಹಿಪನ ಘಣಾಮಂಡಳ ದೊಳಾಡಲುಬಹುದು ಕಾಣೆನು ಗೆಲುವ ಹದನನು ಮಗನೆ ಪದ್ಮವ್ಯೂಹ ದೊಡ್ಡಣೆಯ (ಕುಷ್ಠಾಪ್ರೋ. ೪.೩೭). ೧೨. ಅಲುಗುವಂತೆ ಮಾಡು ; ಅಲುಗಾಡಿಸು : ಕೃತ್ರಿಮದ ಸರ್ಪನ ತೊಲಗಿಸಲು ದುಂದುಭಿಯ ಹೊಯ್ದರೆ ಹೊಳಕಲಹುದೇ (ಸಮ್ಯಕ್ತು. ೬-೦೨). ೧೩. ಅತಿಶಯವಾಗು ; ಹೆಚ್ಚು : ಮೆಲುವ ಭೂಪರ ಮನಕೆ ಹೊಸಜಕ್ಕುಲಿತೆ ಹುಟ್ಟಲು ಬಾಯ ಹಬ್ಬವು ಹೊಳಕಲಮೃತವಿದೆಂಬ ಹಾಲುಂಡೆಗಳನೋರಣದಿ ತೆಲುಗ ನಾರಿಯರೈದೆ ಬಡಿಸಿತು (ಕೌತಿಣಾ. ೨-೬೨). ೧೪. ರಭಸದಿಂದ ಮುಂದುವರಿ; ಮುನ್ನುಗ್ಗು : ಉಲಿವಲಮ್ಮುವರಿಲ್ಲ ಬವರಕೆ ನಿಲುವ ಚೂಣಿಗರಿಲ್ಲ ಮುಂಬಿಗೆ ಹೊಳಕಬಲ್ಲವರಿಲ್ಲ ನಮ್ಮಯ ಬಲವ ನಾಯಕರು (ಕುಷ್ಠಾಪ್ರೋ. ಪಂ. ೨೯೦) ; ಅಲ್ಲಿಯ ಗಲಭೆಕಾಱರು ಕವಿಯೆ ಗೋಪುರವಂಕವೀಧಿಯಲಿ ಹೊಳಕುವೀ ಕಪಿನಾಯರ ಗಾವಳಿಯ ಗುಮ್ಮಿದರಸ್ತ್ರಶಸ್ತ್ರಾವಳಿಯಲಿ (ತೊರಣಾ. ೪-೯ ೨೦) ; ನಳಿನಮಿತ್ರನ ಮೊಮ್ಮಗಂ ಭೀಮನೋಳ್ಕಾದಿ ಗೆಲಿದು ಮಾದ್ರೀಸುತರನೊಟ್ಟೈಸಿ ಮುಂದಕಂ ಹೊಳಕುತಿರಲರ್ಜುನಂ ಕೊಲಲು (ತುರಂಗ. ೬೬ ಸೂಪನ). ೧೫. ಎರಗು ; ಮೇಲೆ ಬೀಳು : ಹಳಚಿದನು ಕರ್ಬೊಗೆಯ ತೆರದಲಿ ಹೊಳಕಿದನು ಭೇರುಂಡರೂಪಿನಲಿ . . . ಮುಳಿದು ಕೊಂದನು ಕಲಿಘಟೋತ್ಕಚನಮಿತಸೈನಿಕವ (ಕೋಗಯ. ೨೩-೬೫). [< ಪೊಳ್$_1$]

Δ ಪೊಳಂಪು 'ಪೊಳಪು' ನೋ.

ಪೊಳಕಾಯಿ (ನಾ). ಒಂದು ಕ್ಷುದ್ರದೇವತೆಯ ಹೆಸರು : ಗುಳ್ಳಕೆ ಪೊಳಕಾಯಿ . . . ಮಹಕೆಂಚೆ ಮಾತಂಗಿ ಬಕ್ಕಾಯಿ ಎಲ್ಲ ನಾನಾಕದಾ ಕಳ್ಳ ದೇವತೆಗಳನಿಲ್ಲದೆ ಒಲಿಸಿವರು (ಪಾಸಾ. ೫೯-೨). [?]

ಪೊಳಕಿ (ನಾ). ಒಂದು ಬಗೆಯ ಸಸ್ಯ : ಪೊಳಕಿ—ಸಣ್ಣಗಿಡ; ಬೈಲು ಶೀಮೆಯ ಅಡವಿಯಲ್ಲಿ ಬಹಳ (ಕಣಾಗ. ೪೩). [?]

ಪೊಳಕಿಸು, ಹೊಳಕಿಸು (ಕ್ರಿ). ೧. ಅಲುಗಾಡಿಸು ; ಹೊರಳಾಡಿಸು : ಕಾಗೆಯಂತೆ ಕಡೆಗಣ್ಣೊಳೆ ನೋಡುತ್ತುಂ ಕೀಟಿಟ್ಟ ಕುದುರೆಯಂತೆ ಬಾಯಂ ಪೊಳಕಿಸುತ್ತುಂ (ಧರ್ಮಾಮೃ. ೩-೧೩೬). ಹೊಳಕಿಸು : ೨. ಮುನ್ನುಗ್ಗುವಂತೆ ಮಾಡು : ಜವದಿಂದೆ ತದ್ವರೂಥಮನಿರದೆ ಸೌಭರಿಯು ಸುವಿಲಾಸದಿಂ ಹೊಳಕಿಸಲ್ ಮೇಘಮಾರ್ಗದೊಳ್ (ಶೋರಾಸು. ೨೩-೩೩). ೩. ಹೊಳೆ ; ಪ್ರಕಾಶಿಸು : ದಿನಕರನ ಪ್ರಭೆಯಂತೆ ಹೊಳಕಿಸು ತಸಮಕೋಪದಲಿ . . . ಕರಗಳ ಮುಗಿದನಾ ದ್ವಿಜನು (ಸುದಾಮ. ೩-೧೩).

[ಪೊಳಕು$_1$ (< ಪೊಳಂಕು) + — ಇಸು$_3$]

ಪೊಳಕು$_1$ 'ಪೊಳಂಕು' ನೋ.

ಪೊಳಕು$_2$ 'ಪೊಬಿಕು' ನೋ.

ಪೊಳಚು, ಹೊಳಚು (ಕ್ರಿ). ೧. ಕತ್ತರಿಸು ; ತುಂಡರಿಸು : ಕಳೆದರದಂ ಕಡಿದಿಕ್ಕಿದ ಸೊಂಡಿಲು ಪೊಳಚಿದ ಕಿವಿ ಕತ್ತರಿಸಿದ ಬಾಲಂಗಳಿನಾ ಬಲ್ಲಾನೆಯ ಬವರದ ನೆಲನತಿ ವಿಭ್ರಾಜಿಸಿತು (ಜಯಕಾ. ೬-೪೦). ಹೊಳಚು : ೧. ಪರಿಮಳಿಪ ಮಲಯರುಹವೃಕ್ಷಂಗಳಂ ಕಂಡು ಹೊಳಚಿ ತಂದಾ ಸೆಕ್ಕೆಗಳನೊಳಗೊಳಗೆ ಶೋಧಿಸಿ ತನ್ನ ಕಂಬಿಯ ನೆಲಹಿನಿತ್ತರದಲ್ಲಿ ಸುತ್ತಲು ಸೆಕ್ಕೆ ಬಿಗಿಬಿಗಿದು (ಬಸಪು. ೪೩-೨೫) ; ಬಿಳಿಯುಳ್ಳಿಯಂ ಸುಲಿದು ಹಿಂದು ಮುಂದಂ ಚಿವುಟಿ ಹೊಳಚಿ ನಡುವಣ ದಿಂಡ ತೆಗೆದು (ಸೂಪಶಾ. ೩.೬). ೨. ಒಡೆ; ಸೀಳು : ಸ್ಫಟಿಕದ ಘಟವ ಹೊಳಚಿದಂತೆ ಒಳಹೊಱಗೆನ್ನದೆ ನಿರ್ಮಲ ತೋಱುವಂತೆ ಆದಱಿರವು ಸುಚಿತ್ತನಾಗಿ ನಿಂದುದು ನಿರ್ಮಾಯ (ಅಱಿಮಾ.ಕ. ೦೩೪-೦೬೬) ; ಸತಿಸಹಿತ ಖರಕರಾಘಾತಗೈದಪುವು ಕರಿತತಿಗಳಿದ ಮರ್ದಿಸಲ್ವೇಳ್ಕೆನುತ ಕರಖಡ್ಗಹತಿಯಿಂದ ಮಸ್ತಕವ ಹೊಳಚುವನೊ ಭಾಸ್ಕರನೆನಲ್ಕೆ ಖರಕಿರಣದಿಂದೆ (ಪಂಕಾರಾ. ೩-೬-೨೦). ೩. ಒದೆ : ಆ ರಾಮನಟ್ಟೆಯಂ ನಲವಿನಿಂದುಂಗುಷ್ಟದಿಂ ಕುಟ್ಟಿ ಹೊಳಚಲದು ಪಲವು ದಶಯೋಜನಂ ಪಾರಿ ಪೋಗಲ್ಕೆ (ತುರಂಗ. ೩೪-೩೬). [?]

ಪೊಳಪು, ಪೊಳಂಪು, ಪೊಳೆಪು, ಹೊಳಪು, ಹೊಳಹು (ನಾ). ೧. ಮೆರುಗು ; ಕಾಂತಿ ; ಪ್ರಕಾಶ : "ತೊಳಗು, ಬೆಳಗು . . . ಹಬೆ, ಪೊಳಪು, ಪೊಣರ್ . . . ಮಸೆ — ಈ ೧೪ ಕಾಂತಿ" (ಕಶಸಾ. ೩೩-೨೦೨); ಮಡಿದು ತಂದಿಟ್ಟ ಪೊಸನೆಯ್ದಿಲ ಕಾವನಾವಗಂ ಗೆಲ್ದ ರತ್ನಕುಂಡಲಂಗಳ ಪೊಳಪನೊಳಕೊಂಡುತೆ ನಸುನೇಲ್ವ ಕರ್ಣಾಟೀಕರ್ಣಪೂರನ ಪಾಲೆಗಳುಂ (ಪಂಪಶಾ. ೨-೩೯ ವ) ; ಪೊಸವಿಸಿಲ ಪೊಳಪಿನಿಂ ನುಣ್ಣನುಜ್ಜಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ ಸುರಶರಾಸನಂಗಳನೆಟಲಿಕ್ಕಿದಂತೆ ನಿಮಿರ್ವ ನಿರ್ಝರಂಗಳುಮನಪ್ಪುಕೆಯ್ದ ಕೇಳೀಪರ್ವತನಿತಂಬಂಗಳೊಳಂ (ಕಾದಂಉ. ೩೨೬) ; ಸುಲಿಪಲ್ಲ ಬೆಳಗುಂ ಕಣ್ಗಳ ಕಾಂತಿಯುಂ ಮುಖದ ಶಾಂತಿಯ ಪೊಳಪುಂ . . . ದಟ್ಟೈಸಿ ಮೆಱೆಯೆ (ಬಸರ. ೪-೭೩). ೨. ನಡುಗುವಿಕೆ ; ಅಲ್ಲಾಡುವಿಕೆ: (ಕಿ). ೩. ಉಯ್ಯಾಲೆ; ಜೋಕಾಲಿ; ತೂಗುಮಣೆ: (ಕಿ). ೪. ಕುದುರೆಯ ಓಟದಲ್ಲಿ ಒಂದು ಬಗೆ : ಪೊಳಪು ಗತಿ ವೇಡೆ ಜೋಡತಿ ಚಳಕಂ ದೂವಾಳಿಬಿಡಿಪುದಾಳಿಯರ ಮನಂಗೊಳಿಸಿರೆ ತುರಂಗಗಳ ವಾಹಳಿ ವಾಹಕರಿಂದೆ ಮೆಱೆದುದಾ ಪೊಱವೊಳಲೊಳ್ (ತ್ರಿಪುವಿ. ೦೭-೦೬). Δ ಪೊಳಂಪು : ೧. ಬೀಜರೂಪದ ಪುದುಱುಂಗಲ ಪೊಳಂಪಿನಿಂ (ಮಹಾನೇ. ೩-೨೦ ವ). ಪೊಳೆಪು : ೧. "ತೊಳಗೆನೆ ಮಿನುಗೆನೆ . . . ಪೊಳೆಪ್ರ ಪೊಣರು ಮಸೆಯೆನೆ ತಳಪಮೆನಲ್ ಕವಿಗಳಿಂದೆ ಕಾಂತಿಯೆನಿಕ್ಕುಂ" (ಕವಿಕು. ೦೦೦) ; ತಲದೊಳ್ ತಂಬುಲದೆಲೆಗಳ ಪೊಳೆಪಮರ್ದಿರೆ ದೇವಕನ್ಯೆ ಮತ್ತೊರ್ವಳ್ ಕೋಮಲಲತೆಯ ನಿಮಿರ್ದ ಕುಡಿಯೊಳ್ ಗಿಳಿ ಪಾಯ್ದುತ್ತೆನಿಸಿ ಸತಿಗೆ ತಂಬುಲಮಿತ್ತಳ್ (ಆದಿಪು. ೭-೧೨) ; ಮೇಲೆ ಬೀಟ್ವ ಸಿಡಿಲಂತೆ ಬಂದೆಱಗುವ

ದುರ್ನಿರೀಕ್ಷತೀಕ್ಷ್ಣಾಯುಧಂಗಳ ಪೊಳಿಪುಗಳುಂ ಚಕ್ಷುರಿಂದ್ರಿಯಮನನವರತ ಮುಗಿಬಗಿ ಮಾಡುತ್ತಿರೆಯುಂ (ಪರ್ಶ. ೦೦-೪೭ ಪ). **ಹೊಳಪು :** ೧. ಪುರಹರಪ್ರಸಾದದಿಂದ ರಂಜಿಸಲ್ಕೆ ಗಂಜಿಯಿಟ್ಟು ಶರಣಸಂಗದಿಂದೆ ಘಟ್ಟಿಸುತ್ತೆ ಹೊಳಪ[ಶಾಣಾಂ. ಹ]ನೊಪ್ಪವಿಟ್ಟು (ಕರುತೊಂ. ದೇ. ೨೩೩-೦೯) ; ಬೆಳ್ಳಿಯು ಅಂದವಾದ ಬಿಳೀ ಬಣ್ಣದ ಧಾತು. ಅದಕ್ಕೆ ಹೊಳಪು ಬಹಳ (ಮುಂಗಿಯು. ೯-೦೨೦) ; ಗಾಜನ್ನು ತಯಾರಿಸುವುದು ಹಾಗೂ ಹೊಳಪನ್ನು ಕೊಡುವುದು ಒಂದು ಕೈಗಾರಿಕೆಯಾಗಿತ್ತು (ಶಕ್ಯಾಸ್ತ್ರ. ೩೦೦). **ಹೊಳಹು :** ೧. ಅಪ್ಪುವಿನ ಮಱೆಯ ಪಡುವರ್ಣದ ಟಿಪ್ಪಣದಂತೆ ತೇಜದ ಮಱೆಯ ನವಗುಣದ ಹೊಳಹಿನಂತೆ (ಕೋಳಿಪಾ. ೦೦-೪೦) ; ಕಂಗಳಿನ ಮಿಂಚಿನ ಹೊಳಹಿನಲಿ ನಡೆಗೆಟ್ಟು ನಿಂದರು ಚಿತ್ತವಿಹ್ವಲರು (ಶಾಸ್ತ್ರಿ. ೦-೨೫) ; ಹಳದಿಯ ಹೆಡೆಯನು ಬಿಚ್ಚೋ ಬೇಗಾ ಹೊಳಹಿನ ಹೊಂದಲೆ ತೂಗೋ ನಾಗಾ (ಶಪಚು. ೨-೩೦). ೪. ದಾಟುದೀಟು ಹೊಳಹು ಹೊಮ್ಮಿಚ್ಚುವೆಡೆ ಮೋಡಿ . . . ವರತರಹವೊಂಬ ನವೀನಗತಿಗಳೊಳು ತನ್ನ ಮನಮೆ ಹಯದ ತನುಗತಿಗಳಾದಂತೆ ವಾಹಕವಿನ್ನಾಣಂಗಳಂ ತೋಱುತ (ಶುಕ್ರಾಸ್ತ್ರ. ೬-೩೦ ಪ) ; ಹೊಳಹು ದೂವಾಳಿಯಲಿ ಪಾರ್ಥನ ಕೆಲಕೆ ಬಿಟ್ಟನು ರಥವ (ಶಾಸ್ತ್ರಿ. ೦೯-೩೫). ೫. ಚೆಲುವು ; ಸೊಗಸು : ಸುಳಿದು ಸುಖದಲಿ ತನ್ನ ಲೀಲೆಯ ಬೆಳೆಸಬೇಕೆಂದೊಂದು ವೇಷದ ಹೊಳಹಿನಲಿ ಬರುತಿರಲು (ಪ್ರಭುಲಿಂ. ೦೦-೩). ೬. ಸ್ವರೂಪ ; ಲಕ್ಷಣ : ಮೆಯ್ದೆಗೆದರಿದಱೊಳಗೆ ಹೆಸರೆನಗೆಯ್ದು ಬೇಕಿನ್ನೈಸಲೇಯೊಂದಯ್ದುಬಾಣವ ಕೊಂಡು ಯಂತ್ರದ ಹೊಳಹನೀಕ್ಷಿಸಿದ (ಸಂಪಪ. ೩೦-೩೨) ; ಪಂಡಿತನು ಪ್ರಹುಡ ತಾನೆಂಬ ಭಾಷೆಗಳಂತೆ ಕುಂಡಲಿಯ ಹೊಳಹ ಕೇಳ್ದರೆ ಕುದಿವನಂತೆ (ಶಕ್ಯಸ. ೨೫-೪). ೭. ರೂಪರೇಷೆ ; ಯೋಜನೆ : ಕನ್ನಡನಾಡಿನ ಚರಿತ್ರೆಯ ಚಿತ್ರಕ್ಕೆ ಅವು ಹೊಳಹನ್ನು ಹಾಕಿ ಕೊಟ್ಟಿವೆ (ಶಾಸ. ೩೯) ; ಹೊಳಲ ಹೊಳಹನು ಹಾಕುವವರಿಗಿದು ತಿಳಿದಿತ್ತೋ ಇಲ್ಲವೋ ನಾನರಿಯೆ, ಕವಿ ಕುಡನಿಂತು (ಕರುಚಾ. ೭೬-೦೩) ; ವ್ಯಕ್ತದ ಚಿಲುವಿನಲ್ಲಿ ಅವ್ಯಕ್ತದ ಹೊಳಹನ್ನು ಬಹುಸುಲಭವಾಗಿ ಗುರುತಿಸುತ್ತದೆ (ಸೌಂದ. ೨೬೦). ೮. [ನಾಟ್ಯ] ಕರಣಗಳಲ್ಲಿ ಒಂದು : ಮತ್ತಂ ದಿಂಡುಮುಂಡಾಸನಂ ದಪ್ಪ ಸರಣ ಒಳಗಭವರಿ ಹೊಳಹು ತಿರಿಪು ಸಮಸೂಚಿ . . . ಲಂಕಾದಹನಮೆಂಬ ಪಲವುಂ ತೆಱದ ಕರಣಂಗಳಂ ವಿಚಿತ್ರಮಪ್ಪ ಚಿತ್ರವಿದ್ಯೆಯಿಂ ಲಾಸ್ಯ ತಾಂಡವಮೆಂಬೆರಡುಂ ತೆಱದ ನೃತ್ಯಭೇದದಿಂದಾಡಿ (ಧರ್ಮಪ. ೨-೨೬ ಪ).

ಹೊಳಪಾಗು=ಮಳೆ ನಿಂತ ನಂತರ ಬೆಳಕಾಂಟಾಗು ; ಮಳೆಯ ಮೋಡವಿಲ್ಲದಾಗು ; ಹೊರಪಾಗು : ಹವೆಯ ಸ್ಥಿತಿಯನ್ನೂ ಮಳೆ ಬರುವದನ್ನೂ ಹೊಳಪಾಗುವುದನ್ನೂ ಮುಂದಾಗಿ ತಿಳುಕೊಳ್ಳುತ್ತಾರೆ (ಮುಂಗಿಯು. ೩-೬೦). **ಹೊಳಹು ಹಾಕು** = ೧. ಮಿಂಚಿನಂತೆ ಸುಳಿ ; ಸ್ಫುರಿಸು : ತಿರುಗಿ ತಲೆಯಲ್ಲಿ ಹೊಳಹು ಹಾಕಿದ ಸಂಶಯ ಬಾಯಿ ಬಿಡದಾಯಿತು (ಮೂಲಿಂಗಾ. ೯೬). ೨. ರೂಪರೇಷೆ ಹಾಕು ; ಯೋಜನೆ ಹೂಡು : ಏನಾದರೂ ಮಾಡಿ ಗುಂಡನನ್ನು ಮತ್ತೆ ಹುರಿದುಂಬಿಸಬೇಕೆಂದು ಅವನು ಹೊಳಹು ಹಾಕಿ . . . ಕೇಳಿದನು (ಕಂಗಸೋ. ೩೦) ; ಇಬ್ಬರೂ . . . ಹೊಳಹು ಹಾಕಿ ಅತ್ಯಂತ ಉತ್ಸಾಹದಿಂದ ಈ ತುಣುಕುನೆಲದ ಮೇಲೆ ಒಂದು ಉದ್ಯಾನದ ಕಲ್ಪನೆಯನ್ನು ಹಬ್ಬಿಸಿ ಬಿಟ್ಟಿದ್ದಾರೆ (ಇಪ್ರಸ. ೨೨೯). [ಪೊಳೆ$_1$ + — ಪ್ಪು$_1$./ಮಲ. ಪುಳಪ್ಪು]

ಪೊಳಪೇಱು, ಹೊಳಪೇರು (ಕ್ರಿ). ಕಾಂತಿ ಹೆಚ್ಚಾಗು ; ಕಳೆಯೇರು : ವದನಸುಧಾಮರೀಚಿಯೊಳಣಂ ಪೊಳಪೇಱೆ ವಿಲೋಚನಂಗಳೊಳ್ ಪುದಿದ ವಿಳಾಸವೇಱೆ . . . ನವಯೌವನವೇಱುದುದಾ ಕುಮಾರನೊಳ್ (ಕಾಸುಮಾ. ೬-೦೦೯) ; ಪೊಸನೀರ ಹೂರದೊಳಗೆ ಮಱಮಿಾನ್ಗಳು ಮಸಗಿ ಮುಂ ಪೊಳೆದಾಡುವಂತೆ ಮಿಸುಗುವ ವರಲಾವಣ್ಯಾಂಬುವಲಿ ಕಣ್ಣೆಸೆದುವು ಪೊಳಪೇಱೆ ನಗುತ (ಕಂಪಪ. ೦೦-೩೬). **ಹೊಳಪೇರು :** ಅವನನ್ನು ನೋಡಿದ ಕೂಡಲೆ ಅವಳ ಕಣ್ಣುಗಳು ಹೊಳಪೇರಿದುವು (ರೂಢಿ).

[ಪೊಳಪು + ಏಱು$_1$ (< ಏಱ್$_1$)]

ಪೊಳಯಿಸು 'ಪೊಳೆಯಿಸು' ನೋ.

ಪೊಳಲ್ 'ಪೊಱಲ್$_2$' ನೋ.

ಪೊಳಲಿಚ 'ಪೊಱಲಿಚ' ನೋ.

ಪೊಳಲು 'ಪೊಱಲ್' ನೋ.

ಪೊಳವಳಿಗೆ 'ಪಳವಳಿಗೆ' ನೋ.

ಪೊಳವೆ (ನಾ). ಬಿದಿರಿನ ಸೀಳು ; ದೆಬ್ಬೆ : ಒಂದುದಿನ ವಿಟನಕ್ಕೆ ಹೊರಟ ಕೇತಯ್ಯ ಚುದದಿಂ ಬಿದಿರನುಂ ಸೋಸಿ ತರುವುದಕೆ ಹೋಗಿ ದಟ್ಟಿಯ ತರಿದು ಪೊಳವೆ ಸೀಳುತಿರೆ ನಾಗಭೂಷಣ ಗಿರಿಜೆ ನಂದಿಯನ್ನೇರಿ . . . ಬರಲು (ಶರೋ. ೦೭೨-೦೦).

[?./ತಮಿ. ಪೋಲ್=ಬಿದಿರು ; ಮಲ. ಪೊಳ್ಳ=ಬಿದಿರು]

ಪೊಳಸು (ನಾ). ಸಂಬಂಧ ; ಸಂಗ ; ಕೂಟ : ಪೊಳೆವಿನಿದುಟಿಯ ವೈಯಾರಿ ಪೆಪ್ಪುದಳಿದ ಪಲ್ವರಿಸೆಯ ಮೋಹನಾಕಾರೆ ಗಿಳಿದೇರನ ಕೈಕಠಾರಿ ನಿನ್ನ ಪೊಳಸಿಗೆ ಪೊಂಚಿಕೊಂಡಿಹಳಾ ನಾರಿ (ಪಂಚಕ್ಷ್ಯಾ. VI. ೦೬೨೬ ಶೃಂಗಾರ ಸೂತ್ರೋದಾಹರಣ). [?]

ಪೊಳಿ (ನಾ). (?) : ಆ ಸ್ಥಾನಮುಮಂ ಭಳರಿಯೂರಂ ಬನ್ದ ಸಿಳಕೆಬ್ಬಾಯುಂ ಚಿಕ್ಕೇಶ್ವರಕ್ಕೆ ಈಶಾನ್ಯದ ಪೊಳಿಯುಂ ಬಳಿಕೆಱೆಯ ಕೀಟೇರಿಯ ಬೇರುಂಗಾಲಂ ಒಕ್ಕಲೊಳೊನ್ದು ಪೊಱೆಯುಂ ಕೆಯುಂ ಪದಿರ್ಕೊಳಂ ಭತ್ತಮುಂ ಮಿಾಸಲು ಬಳಿವತ್ತಮುಂ ಸಲ್ವದು (ಎಕ. III, ಪಂಚಪ. ೦೬೩-೦೦ ;977). [?]

ಪೊಳಿಪೊನ್ ? (ನಾ). (?) : ಸುರಿಗೆ ಸವನ್ನುಂ ಪೊಳಿ ಪೊನ್ಗೆಮಿ ಕೊಟ್ಟ ಪುನ್ಗಿಣಲ್ಕಱನಿ ಕೊಟ್ಟಿತ್ತು ಕೆಡಿಪೊನ್ಪಣ್ಣಾಮಹಾವಾತಕ (ಎಕ. XIV. ತಿರುಮ ೨೩೩-೦೨ ; ಸು. 800). [?]

ಪೊಳೆ$_1$, ಹೊಳೆ$_1$ (ಕ್ರಿ). ೧. ಪ್ರಕಾಶಿಸು ; ಥಳಥಳಿಸು : ತುಂಗಗಿರಿಶಿಖರದಿಂದಂ ಲಂಗಿಸಿ ಶೂದ್ರಕನ ಪೊಳೆವ ಸುರಿಗೆಯ ಮೊನೆಯೊಳ್ ಪೊಂಗಿ ಸೊದಗರ್ಗುಡಿಯ ಮೇಲೆ ಪತಂಗಂ ಪಾಯ್ವಂತೆ ಪಾಯ್ದು ಬರ್ದುದು ಸಿಂಗಂ (ಶಾಕ್ಯಶಾ. ೦೦೦೪ ಶೂದ್ರಕ); ಪಿರಿಯ ಮರುಂಗಳೆ ಮಾಡಮಾಗೆ ಪೊಳೆವೆಳದಳಿರ್ಗಳೆ ಸೆಜ್ಜೆಯಾಗೆ . . . ಪಣ್ಪಲಮೆತ್ತಿದ ಬೋನಮಾಗೆ ಸಿರಿಯ ಮಹಿಮೆಯಂ ಮೆಱೆಯಲೇನಾರ್ತುದೊ ಬನದೊಳರ್ಜುನವಾ ಪಾಂಡವರಾ (ಪಂಪಭಾ. ೭-೨೮); ಮದುದಾತ್ಮಜ ನಿಜರಿಪು ತಲೆಗರೆದಿರ್ದಪನ್ನಿಲ್ ನೋಡುಕೊಳದೊಳಗೆಂಬಂತಿರೆ ಪೊಳೆದು ತೋರ್ಪ ಜಲಚರಪರಿಕರಮಱಿಬದುವು ಶಾಮೆ ದುರ್ಯೋಧನನಂ (ಗದಾಯು. ೬-೧೩); ಪೊಳೆಯುತಿರ್ದುದು ಬಿಸಿಲ್; ಕಂಡಳಿಲ್ಲದನಾಕೆ (ಪಕ್ಷಾಂಗ. ೩೨-೦೧೨೯). ೨. ಕಳೆಯೇರು; ಶೋಭಿಸು; ವಿಜೃಂಭಿಸು: ಬಾಗುತೆ ಬಲಿಯುತೆ ಪೊಳೆದಿನಿದಾಗುತೆ ದಳವೇಱುತಿಡಿದಿಡುದು ಹಿಗ್ಗುತೆ ಪಣ್ಣಾಗುತೆ ಕಾಯ್ಗಳ್ ಪೊಱಮಡೆ ಬೀಗುತ್ತುಂ ಬೆಳೆದುವಲ್ಲಿ ಕದಳೀಷಂಡಂ (ಗಿಂಗ. ೨-೩೦). ೩. ಪ್ರತಿಬಿಂಬಿಸು; ಪ್ರತಿಫಲಿಸು: ಸುರುಚಿರ ಸಾಲಭಂಜಿಕೆ ಬೆಮರ್ತುರದೊಳ್ ಪೊಳೆಯುತ್ತಿರಲ್ಕೆ ಮತ್ಸರಿಸಿದಳ್ . . . ಮನೋಹರನನೀಕ್ಷಿಸಲಿತ್ತವುವಿಲ್ಲ ಹರ್ಷದಿಂದಿರದುಗುತರ್ವ ಬಾಷ್ಪಮೆನಗೆಂದು ಲತಾಂಗಿಯಬಲ್ದು ಬಾಡಿದಳ್ (ಶಾದಂಶಾ. ೩೨). ೪. ಹೊಯ್ದಾಡು; ಅಲುಗಾಡು ; ಚಲಿಸು : "ಪೊಳೆ—ಉಠನೇ (ಹೊರಳು), ನದ್ಯರ್ಥೇ ಉಬಂ (ಪೊಱ್)" (ಕಸುಧಾ); ಉನ್ಮತ್ತಚೇಷ್ಟೆಯಿಂದೆರೆಯಂ ತಿಂದ ಮಿನಂತೆ ಪೊಳೆಯುತ್ತುಂ (ಧರ್ಮಾಮೃ. ೩-೦೩೬) ; ನಿಮಿರ್ದುವು ಪೊಳೆದುವಳುಂಕಿದುವಮರ್ದುವು ಚುಂಬಿಸಿದುವಪ್ಪಿದುವು ಸಂಭ್ರಮದಿಂ ಸಮದೃಷ್ಟಿಯಾಗಿ ಸಿಲ್ಕಿದುವೆಮೆಯಿಕ್ಕಲ್ಕಱಿದುವವಳ ಧವಳಕಟಾಕ್ಷಂ (ಕಸುಧ. ೨೨೩ ಪ್ರಯೋ) ;

ಮೂಸಿದೊಡೆ ನಾಸಾಗ್ರಮನುರ್ಚುವ ನಕ್ಕಿದೊಡೆ ನಾಲಗೆಯೊಳ್ನಡುವ ಪೊಳೆದೊಡೆ ಬೆನ್ನೊಳ್ಮೂಡುವೊರಸಿದೊಡೆ ಬರಿಯಂ ಕೊಱೆವ . . . ಪಲವುಂ ಬಗೆಯ ಗಾಣಂಗಳಂ . . . ಬರ್ಚಿ ಬೀಸಿದಾಗಳ್ (ರಾಜಶೇ. ೫-೦೦೪ಪ). ೫. ಅಸ್ಥಿರವಾಗು ; ಚಂಚಲವಾಗು : ದಂತಿವಾಹನಂ ದಂತಿವಾಹನನೆಂಬ ಪೆಸರನನ್ವರ್ಥನಂ ಮಾಡಿ ಪೊಳೆಯದೆ ಕಳವಳಿಸದೆ ಪಟುವಿನೊಳ್ ಪೋಗುತ್ತಂ (ಪುಷ್ಪಾಸ್ತ್ರ. ೨೩-೯ ಪ). ಹೊಳ್ಳೆ$_1$: ೧. ಹೊಳೆವ ಕೆಂಜಡೆಗಳ ಮಣಿ ಮುಕುಟದ ಒಪ್ಪುವ ಸುಲಿಪಲ್ಲ ನಗೆಮೊಗದ . . . ದಿವ್ಯಸ್ವರೂಪನಂ ಕಂಡೆನಾನು (ಪುಷಾಪೇ. ೨. ೩೨-೬೮); ಎಳೆಯ ರವಿರಶ್ಮಿಗಳು ರಕ್ತೋತ್ಪಲದೊಳಗೆ ಹೊಳೆವಂತೆ ಹೊನ್ನರೆ ಬಳಿದ ಹಿಳುಕನೆ ಕಾಣಲಾದುದು ಭಟನ ಕಾಯದಲಿ (ಕುಪ್ಪಾಕ್ರೋ. ೬-೫೦); ಹೊಳೆವ ಕನ್ನಡಿ ಕೈಯೊಳಿರ್ದು ನೋಡದೆ ನೀರ ನೆಳಲಲ್ಲಿ ಮೊಗವ ನೋಳ್ಪಂತೆ (ಭರತ. ೦-೦೦೩); ಧಾತುಗಳು ಕಾಜಿನಂತೆ ಹೊಳೆಯುತ್ತವೆ (ಪುಂಬಿಯು ೯-೯೨). ೨. ಇಂತು ನವಮಾಸವಾಕೆಯೊಳಾಗೆ ಸನ್ನುತಂ ಅಂತಃಸ್ಥಳದೆ ಪುಣ್ಯಶಿಶು ತೊಳಗಿ ಹೊಳೆವುತಂ (ಬಸರ. ೦-೧೨೦). ೪. ಹೊಳೆವ ಸಿಂಧದ ಜಡಿವ ಕಹಳಾವಳಿಯ ಲಗ್ಗೆಯ ವಿವಿಧವಾದ್ಯದ ಕಳಕಳದ ಕಾಲಾಳ ಬೊಬ್ಬೆಯ ಬಹಳರಭಸದಲಿ . . . ಸಂದಣಿಸಿತತಿರಥರು (ಕುಪ್ಪಾಕ್ರೋ. ೬-೨). ೬. (ಮಾತಿಗೆ) ತಪ್ಪು ; ನುಣುಚಿಕೊಳ್ಳು : ಕಪಟವನು ಬಿಡರಾತ್ಮಬುದ್ಧಿಯೊಳುಪಮೆಗಾಣದೆ ನುಡಿದು ಹೊಳೆವರು ಚಪಲ ಚಿತ್ತದಿ ಮನವ ವಂಚಿಸಿ ಮಾತನಾಡುವರು (ಪಳಸ. ೩-೨೯); ಬೊಮ್ಮನೆಮ್ಮೊಡನಾಡಿ ಹೊಳೆದನೇ ಅಕಟಕಟ ತಮ್ಮ ಭಾಗ್ಯದ ಶರಧಿ ಬತ್ತಿ ಬಯಲಾದುದು (ಸಬಪು. ೪೪-೨೭); ಉದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗುರುದ್ರೋಹ ಮೊಂದಚ್ಯುತನೊಳಾಡಿ ಹೊಳೆದ ದೈವದ್ರೋಹಮೆರಡು (ಶೈಮಭಾ. ೯-೨). ೭. ಬೇರೆಯ ಕಡೆಗೆ ತಿರುಗು; ಪಕ್ಕಕ್ಕೆ ಹೊರಳು : ತಳೆದನು ಬಲಭದ್ರ ರಾಮನ ಗದೆಯೆರತಳದ [ಗದೆಯೇಱ ತಳೆದ] ಭೈರವನುಪಟಳಕೆ ಹೊಳೆದು ನೀಲಾಂಬರ ನೇಗಿಲ ಕೊರಲ್ಗಿಕ್ಕಿ ಸೆಳೆದವರ್ ಪೊಯ್ದಾಡಿದರು (ಮೋಹತ. ೩೯-೦೪). ೮. ವೇಗವಾಗಿ ಹೋಗು ; ಮುನ್ನುಗ್ಗು : ಕೆಲಕೆ ಹೊಳೆದವು ಕಡುಗುದುರೆ ನೆಲನಳುಕೆ ನಡೆದವು ದಂತಿ (ಕುಪ್ಪಾಕ್ರೋ. ೦೨-೬). ೯. ತೋರು ; ಕಾಣು ; ಪ್ರಕಟವಾಗು : ಮನದೊಳಗೆ ವಿಸ್ಮಯರಸಂ ತುಳುಕುತಿದೆಯಿನ್ನ ನೆನಹಿನೊಳು ಶಿವರೂಪು ಹೊಳೆವುತಿದೆ (ಸಬಪು. ೯-೬). ೧೦. ಸ್ಫುರಿಸು ; ಸ್ಫುಟವಾಗು : ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ (ಬಸವ. ೨೩೯) ; ಈ ವೇಳೆಗಾಗಲೆ ಮನದೊಳು ಹೊಳೆದಂತೆ ಕನ್ನಡಕವಿತೆಯ ರಚಿಸಿ ತೋರಿದೆ (ಇಂಶಾಪ. ೨೩-೫); ಇಂತಹ ಒಂದು ಸನ್ನಿವೇಶ ಆ ಹೊತ್ತಿನಲ್ಲಿ ನಡೆಯುವುದು ಹೇಗೆ ಸಾಧ್ಯ ? ಎಂಬುದೂ ಅವರ ವಿವೇಕಕ್ಕೆ ಹೊಳೆಯದೆ ಹೋಯ್ತು (ಶಮ್ಮಸ. ೦-೯).

[ದೇ.॥ ತಮಿ. ಪೊಲಿ ; ಮಲ. ಪುಳೆ, ಪುಳಯು ; ತೆಲು. ಪೊಲಯು]

ಪೊಳ್ಳೆ$_2$, ಹೊಳ್ಳೆ$_2$ (ನಾ). ಕಾಂತಿ ; ಹೊಳಪು : "ಬೆಳಗಿನೊಳ್ ಪೊಳೆಯೆ ನಿಕ್ಕುಂ" (ಸಂಜೀಪ. ೨೯). ಹೊಳ್ಳೆ$_2$: ವಜ್ರದಲ್ಲಿ ಬಟುವಾಗಿ ಕೆಂಪಾಗಿ ಹೊಳೆಯುತೆಯಿರುವವೆ ಬಿಂದುವು (ಸೌಗಂಧಿ. ೩೬೯-೧). [< ಪೊಳ್ಳೆ$_1$]

ಪೊಳ್ಳೆ$_3$ 'ಪೊಟ್ಟೆ' ನೋ.

ಪೊಳೆಪಿಡು (ಕ್ರಿ). ಪ್ರಕಾಶಿಸುವಂತೆ ಮಾಡು ; ಹೊಳಪು ಕೊಡು : ವಿಳಸಿತಪುಷ್ಪದೊಂದು ಪೊಳೆಪು ತಳೆವಿರ್ದುದನಿಂದುಲೇಖೆಯಂ ಪೊಳೆಪಿಡ ಪೇಟ್ಟುದೇ (ಜಗಪ. ೦೦-೦೦೨). [ಪೊಳೆಪು (< ಪೊಳಪು) + ಇಡು$_1$]

ಪೊಳೆಪು 'ಪೊಳಪು,' ನೋ.

ಪೊಳೆಪುವಡೆ (ಕ್ರಿ). ಕಾಂತಿಯನ್ನು ಹೊಂದು ; ತೇಜಸ್ಸನ್ನು ಪಡೆ : ಮತ್ತಮೊರ್ಮೆ ಮಿಸುಪೆಸಟ ಪಸರದಿನೆಸೆವ ಪೊಸಪಸೆಯೊಳ್ ಮೆಯ್ಯ ನೀಡಾಡಿ ಪೊಳೆಪುವಡೆದ ಪಾಲ್ಗಡಲ ತೆರೆದುಱುಗಲೊಳ್ ಪವಡಿಸುವ ಸಿರಿಯಂ ಪೋಲ್ತಿರ್ಪಳ್ (ಕ್ಯುಕಾ. ೩೦೫). [ಪೊಳೆಪು (< ಪೊಳಪು) + ಪಡೆ$_1$]

ಪೊಳೆಯಿಸು, ಪೊಳಯಿಸು, ಹೊಳಸು, ಹೊಳೆಯಿಸು, ಹೊಳೆಸು (ಕ್ರಿ). ೧. (ನಾಲಗೆಯು ಮಿಂಚುವಂತೆ) ಹೊರಳಿಸು ; ಆಡಿಸು : ನೀಮಿಾಗಳ್ ಪೊಟಲ್ಗೆ ಪೋಪಾಗಳ್ ನಿಮಗೆರಟ್ಕೂಳಿಂಗನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತಂ ಬಂದೊಡೆ ನೀಮೊದಱಿಯವಂ ಬಗ್ಗಿಸಿದೊಡದೃಶ್ಯಂಗಳಾಗಿ ಪೋಕುಂ (ಪಡ್ಡಾರಾ. ೦೦೦-೯). ೨. (ಮಿಂಚಿನ ಹಾಗೆ) ತಿರುಗುವಂತೆ ಮಾಡು,-ಸುತ್ತಿಸು : ಘೋಟೂಯ್ಲರ್ ಪೊಳೆಯಿಸೆ ಬಿಸಿಲ್ಗುದುರೆಗಳ್ ಪೊಳೆವಂತೆ ಪೊಳೆವ ಕಡುಗುದುರೆಗಳುಮಂ (ಪಂಪಭಾ. ೦೦-೫೦ ಪ). ೩. (ಆಯುಧ ಮೊದಲಾದುವನ್ನು ಮಿಂಚುವ ಹಾಗೆ) ಬೀಸು ; ಝಳಪಿಸು : ಪಲಗೆಗಳಂ ಪೊಳೆಯಿಸಿ ಕಡಿತಲೆಯಂ ಜಡಿದೆಯ್ದುವಣೆಯ ವೀರರನೆಚ್ಚಂ ಪಲಗೆಯುಮುರಮುಂ ತೆತ್ತಿಸೆ ತಲೆಯುಂ ಕಡಿತಲೆಯುಮೊಡನೆ ಪಱಿಯೆ ಮುಕುಂದಂ (ಜಗಪ. ೦೨-೦೭) ; ಇಭಮನಣೆದು ಬಿಟ್ಟಿಕ್ಕಲೆಂದಿರ್ಪ ವಜ್ರಾಂಕುಶಮಂ ನಾನಾಪ್ರಕಾರಂ ಪೊಳೆಯೆ ಪೊಳೆ[ಪಾಕಾಂ. ಳ]ಯಿಸುತ್ತಿರ್ಪವಂ ದೇವರಾಜಂ (ಜಗಪ. ೦೩-೬೬). ಪೊಳಯಿಸು : ೨. ಚಮ್ಮಟಿಗೆಗಳಿನೊಯ್ಯನೊಯ್ಯನೆ ಮೈವಳಿಗೆ ತಂದೊಡಂಬಡಿಸಿ ಕಡಂಗಿ ನಡೆಯಿಪ ಪೊಳಯಿಪ ದೂವಾಳಿಪ ಪೊಱಮಡಿಪಿದಿರೇಱಿಪಡ್ಡಂಬರಿಯಿಪ ವಾಘೆಯೊಳ್ಸರಿಸಂಗೊಂಡು . . . ಶಾಳಿಹೋತ್ರನನಾಳಿಗೊಳ್ವ ಘೋಳಾಯಿಲರ್ ನೆರೆದು (ರಾಜಶೇ. ೬-೦೦ ಪ) ; ಸುಳಿಸುಳಿದಶ್ವಮನೇಱುತೆ ಪೊಳಯಿಸಿ ಮಿಗೆ ದಂಡೆಗುಡುತಿದಿರ್ಚುತೆ ಪೆಱಕಾಲ್ಗೊಳಿಸಿ ಪೆಡಂಮೆಟ್ಟುತ್ತವ್ವಳಿಸುತ್ತೆ ಪಳಂಚಿದ ತುರ್ರಂಗಿಗಳದಱೊಳ್ (ರಾಜಶೇ. ೦೩-೮೫). ೩. ತ್ರಿಜಗದ್ಭೂಷಣ ಮಾದ್ಯದ್ಗಜಮಂ ಬಂದೇಱಿ ಪೊಳ[ಪಾಕಾಂ. ಳ]ಯಿಸುತ್ತಂಕುಶಮಂ ವಿಜಿಗೀಷು ಲಕ್ಷ್ಮಣಂ ಮದಗಜದಡಕಿಲಿದೆನಿಸಿ ಪೊಕ್ಕನೊಡನರಮನೆಯಂ (ಪಂರಾಮಾ. ೦೫-೯) . ಹೊಳಸು : ೨. ತುರಗಪ್ರಸರವನು ಬೋಳೈಸಿ ರಥವನು ದೆಸೆದೆಸೆಗೆ ಹೊಳಸಿದನು ಲುಳಿವಡಿಸಿದ ಮಹಾರಥವ (ಕುಪ್ಪಾಕ. ೭-೦೯). ೪. (ಮಿಂಚಿನಂತೆ) ತಿರುಗು ; ಹೊರಳು : ಹೊಳಸಿದನು ದಿನನಾಥನಾಗಳ ಹೊಳೆಯಲಿಟ್ಟಳು ಜನನಿಯಿದ ನೀ ತಿಳಿದ ಕೆಲಸವೆನುತ್ತಲಪ್ಪಿದ ನೆರಡು ಕೈ ದಣಿಯೆ (ಕ್ಯಾಕಾ. ೦೨-೨೭). ಹೊಳೆಯಿಸು: ೫. ಪ್ರಕಾಶಗೊಳಿಸು; ಸ್ಪಷ್ಟಪಡಿಸು: ಆ ತರದ ಕ್ರಮಾಲಂಕಾರವನ್ನು ತೊಡಿಸಿದರೆ ಆ ರಾಣಿಯರ ಕುರೂಪವನ್ನು ಹೊಳೆಯಿಸಿದಂತಾಗುವುದು (ನಾಡೋಜ. ೯೩); ಅವು ಕಥಾನಕದ ಸ್ಥೂಲಸ್ವರೂಪವನ್ನು ಮಿಂಚಿನಂತೆ ಹೊಳೆಯಿಸಿ ತೋರಿಸಬಹುದಾಗಿತ್ತು (ತಪಸಿ. ೫೫). ಹೊಳೆಸು : ೫. ಗವಿಯುಳಿದ ಹೊನಲಿನಂತಿವರೆನಗೆ ಹೊಳೆಸುವರು ಗುಡಿಯೆಲ್ಲೆಯನು ತಳೆದ ದೇವಕಳೆಯ (ಮಲೆಪೇ. ೯೯-೭). ೬. ತೋಚು ; ಸ್ಫುರಿಸು : ತಿಳಿದ ಮಾತೆ ಹೊಳೆಸಿದಂತೆ ಎದೆಯ ಬೀಜ ಬೆಳೆಸಿದಂತೆ (ಅರಳು. ೯೪೭-೬). [ಪೊಳ್ಳೆ$_1$ + —ಇಸು$_3$]

ಪೊಳೆವಲ್ (ನಾ). ಕಾಂತಿಯುತವಾದ ಹಲ್ಲು ; ಮಿನುಗುವ ಹಲ್ಲು : ನಿಟ್ಟಿಸಳುಗುಂಗಳ ಸುನಾಸಿಕದ ಪೊಳೆವಲ್ಲ ನಸುದೋಱುವ ಕಿಱುನಗೆಯ ಕದಪುಗಳ ಕುಂಡಲದ ಚಿಲ್ವಿನಿಂ ಮೆಱೆವ ಸದ್ವದನನಂ . . . ಕಂಡನವನೀಪಾಲನು (ಶೈಮಭಾ. ೨-೪೮). [ಪೊಳ್ಳೆ$_1$ + ಪಲ್].

ಪೊಳೆವಾಳ್ (ನಾ). ಹೊಳೆಯುವ ಕತ್ತಿ,-ಖಡ್ಗ : ಬಳೆದುದು ಕೆಂದೂಳಿ ಖುರಾವಳಿಯಿನೆನಲ್ ನೆಗೆದ ತಮ್ಮ ರಜಮಂಬರದೊಳ್ ಬೆಳಗುವ ಕಿಸು ಸಂಜೆಮುಗಿಲ್ ಪೊಳೆವಾಳ್[ಪಾಕಾಂ. ಪೊಳೆವೆಳೆ] ಮಿಂಚಿನಿಸೆ ಕಾದಿದರ್ ಘೋಟೂಯ್ಲರ್ (ಜಗಪ. ೭-೫೮). [ಪೊಳ್ಳೆ$_1$ + ಬಾಳ್$_3$]

ಪೊಳ್ತಡ 'ಪೊಟ್ತಱ್' ನೋ.

ಪೊಳ್ತಡೆ 'ಪೊಟ್ತಱ್' ನೋ.

ಪೊಳ್ತರೆ 'ಪೊಟ್ತಱ್' ನೋ.

ಪೊಳ್ತಱ್ 'ಪೊಟ್ತಱ್' ನೋ.

ಪೊಳ್ತಜೆ ' ಪೊಟ್ತಜೆ ' ನೋ.

ಪೊಳ್ತು 'ಪೊಟ್ತು' ನೋ.

ಪೊಳ್ನುಡಿ (ನಾ). ಮೋಸಗೊಳಿಸುವ ಮಾತು; ನಂಬಲು ಅನರ್ಹವಾದ ಮಾತು: ಪಾದರದ ಕುಂಟಣೆಯಂತೆ ಮಿಂಡನ ಪೊಳ್ನುಡಿಯಂತೆ (ಕರ್ನಾಕ್ಟ. ೯-೨೬ ೦೩೮). 'ಪೊಳ್ಳುನುಡಿ' ಪರಾ.

[ಪೊಳ್ (< ಪೊಳ್ಳು) + ನುಡಿ]

ಪೊಳ್ಮರ (ನಾ). ಜಳ್ಳುಮರ; ಟೊಳ್ಳಾದ ಮರ: ಪೊಳ್ಮರನಂ ಕಿಚ್ಚಳುರ್ವಂತೆ ದುಃಖಾಗ್ನಿ ತನ್ನಂ ಸುಡೆ ಪ್ರಿಯದತ್ತಸಟ್ಟಿ ಪಳಯಿಸಿ ಮಾಣ್ಬುದುಂ (ಕರ್ನಾಕ್ಟ. ೩-೨೨೩). 'ಪೊಳ್ಳುಮರ' ಪರಾ.

[ಪೊಳ್ (< ಪೊಳ್ಳು) + ಮರ]

ಪೊಳ್ಳಿಯಿಸು (ಕ್ರಿ). ನಿಸ್ಸತ್ತ್ವವಾಗು; ಜಳ್ಳಾಗು: ಬೆಳ್ಳಿಳ್ಳಿ ಬಸಿಲಿಂಗೆ ಪೊಳ್ಳಿಯಿಸಿ ಹಜ್ಜಾಂತೆ [ಜಾಣಂ. ಬೆಳ್ಳುಳ್ಳಿ ಪೊಡೆದರೆ ಹೊಳ್ಳಪ್ಪ ತೆಱನಂತೆ] ಒಳ್ಳೆಯ ಗುರುವಿನುಪದೇಶದಿಂ ಭವದ ಬಳ್ಳಿ ಹಜ್ಜಿದಿಹುದು (ಸರ್ವಜ್ಞ. ೬೨).

[< ಪೊಳ್ಳು + —ಇಸು]

ಪೊಳ್ಳಾಸೆ (ನಾ). ಬರಿಯ ಆಸೆ; ನಿರರ್ಥಕವಾದ ಬಯಕೆ: ಪೊಳ್ಳಾಸೆಯಿಂದವನ್ ತಿರುಳಾಯ್ಕೆಯಾಯ್ದುಂ, ಆ ಬೀಯೋಷಿಯದ ಬಯಲ ತಣ್ಪೊಳೆ ಆಸೋಪನ ದಡವಲ್ಲಿ ಒಳಿಗಾಲವನ್ ಮೂಂಕೆ ಬಿಡಿಸುವನು (ಜಾಡಿ. ೪೦-೬೧೦).

[ಪೊಳ್ಳು + ಆಸೆ]

ಪೈಳಿಕ ? (?). (?) : ಪತ್ತಿದರವ್ವಡವಾ ಬ್ರಾಹ್ಮಣನ ದೋಶಮವದ ನೆಯ್ದುವದು ಸವಸ್ತ ವ್ರಿತ್ತಿಕಾಜರು ಪೊಳ್ಳಿಕ ಹೊಲ್ಲವಕ ಪರಿಹರಿಸಿದಡೆ ಮಾದೋಶ ತವಗಂ (ಕಿಷ. ೪. ೪೩-೭; 1113). [?]

ಪೊಳ್ಳು, ಹೊಳ್ಳು (ನಾ). ೧. ಹುರುಳಿಲ್ಲದುದು: ಸತ್ತ್ವಹೀನವಾದುದು; ಜೊಳ್ಳು: "ಜಳ್ಳಿನೆ ಜಾಳಿನೆ ಜರಡೆನೆ ಪೊಳ್ಳಿನೆ ತಾಂ ನೀಪ್ಪಯೋಜನಾರ್ಥಮದಕ್ಕುಂ" (ಕಱಪ. ೨೦೪); ಕ್ರಮವಿಕಲ್ಪನೆಯಿಂ ಗುಣದೋಷಮುಂ ಕೀಱುಕೊಂಡು ಗುಣಮಂ ಕಳೆಗಲ್ಲಿಯ ದೋಷಮುಂ ತೋಱುಪಿಂಗಿಸುವವೊಲ್ ಪೊಸ ನೆಲ್ಲಿರೆ ಪೊಳ್ಗಳಂ (ಜಾಣಂ. ೦-೦೩೦). ☞ ಈ ಪ್ರಯೋಗದಲ್ಲಿ ಶಬ್ದವು ವ್ಯಂಜನಾಂತವಾಗಿದೆ. ಆದರೆ ಜ್ಞಾತಿಶಬ್ದಗಳಲ್ಲಿ ಹೆಚ್ಚಿಗೆ ಸ್ವರಾಂತವೇ ಇರುವುದರಿಂದ ಸ್ವರಾಂತಕ್ಕೇ ಇದನ್ನು ಪ್ರಯೋಗವಾಗಿ ಕೊಡಲಾಗಿದೆ: ಊನಮಿಲ್ಲದೆಸಕಂ ಪೊಳ್ಳಿಲ್ಲ ದಾಪ್ತಾರ್ಗ್ಗಮಂದಿರ ವಿದ್ಯಾಮಹಿಮೋದಯಂ (ವಿಕ್ರ. XII. ೨೯೦-೨೯೩ : 1077); ತನ್ನ ಪ್ರೇಮವನ್ನೇ ಪೊಳ್ಳೆಂದು ಬಗೆದು ನಿರಾಶನಾದನೋ? (ಕೃಷ್ಣ. ೮೨); ನೀನು ಇದು ಪೊಳ್ಳೆಂದು ತಿಳಿಯದೇಡ (ಜಪತಾ. ೪೬). ೨. ಹೊಟ್ಟು; ತೌಡು; ಉಮಿ: ಧಾನ್ಯಮಂ ಕೊಟ್ಟು ಪೊಳ್ಳಂ ಕೊಳ್ವ ನೆಲವಾಟಂ ಬಟ್ಟು ತಿರಿವಂಬ ಮರುಳಂ ಪೋಲ್ಮಂ (ಕರ್ನಾಕ್ಟ. ೦೦-೬೩); ನೀರಸಂ ಶ್ಲಥಿಲ್ಯವರ್ಣಂ ಕಾರಕವಿರಹಿತಂ ಕ್ರಿಯಾಳಂಕಾರಹೀನವೆನಿಪ್ಪ ಪೊಳ್ಳಂ ತೂಱಿ ಕಳೆದು (ಜಪ. ೦-೦೬). ೩. ಜಳ್ಳುಕಾಳಂ; ತಿರುಳಿಲ್ಲದ ಕಾಳು: ಪೊಳ್ಳುಂ ಬತ್ತುಂ ಸಸಿಗಳುಮೊಳ್ದುವೆನಿಸರ್ವವೆಯ್ದೆ ಫಲದೊಳ್ ತೋರ್ಕುಂ ಪೊಳ್ಪವ್ದು ಪೊಳ್ಳುಂ ಕರವೊಳ್ದಿರುವೆನಿಸರ್ದ ಬಿತ್ತು ಧಾನ್ಯಮುಮಕ್ಕುಂ (ಕರ್ನಾಕ್ಟ. ೬-೦೦೬). ೪. ಪೊಟರೆ; ಡೊಗರು; ಹೋರು: ಪೋಟಾ=ಏಸೆ ಬಂದ ಜೆಣ್ಣಾಂಗಮರದ ಪೊಳ್ಳುಂ (ಕಾಳ್ಕ. ೨೨೬); ಸಾಗವಾನಿ ಮಾಲು . . . ಅರಶಿನಟ್ಟುನ್ನಿದ್ದಿರುತ್ತವೆ. ಹಾಂಗು ಕೊಯ್ತುವದರಲ್ಲಿ ಸಾಪ ಬರುತ್ತದೆ. ಅದಕ್ಕೆ ಗಂಟು ಪೊಳ್ಳು ಮಗ್ಗೆರೆ ಡಾಗುಗಳು ಬಹಳ ಮಾಡಿ ಇರುಪದಿಲ್ಲ (ಕುಂಜಿಕಾಣ್ಣ. ೨೦೬). ೫. (ಆಲಂ) ಒಣದರ್ವ. ಹೋರು: ಕಳ್ಳ, ಸುಳ್ಳಾಡುತೀಯಾ? ನಿನ್ನ ಪೊಳ್ಳಗಂಜಲು ನಾವೇನು ಮಕ್ಕಳೆಂದರಿತೆಯಾ ? (ಕಂಪ್ರತ. ೫೬-೦೬). ೬. ನಿಷ್ಪ್ರಯೋಜಕವಾದುದು: ನುಡಿಗಟ್ಟಿದ ಗಟ್ಟದುಬ್ಬರದಿಂ ನನೆಕೊನೆವೋಗಿ ಕೊನೆವೆರ್ಚಿನ ಪುರ್ಚಿನ ಪೊಳ್ಳುಬಳ್ಳು ಮುದ್ದಣಂ (ರಾಮಾಶ್ವ. ೦೩-೭) ; ಬಾಯ್ದುದುರೆವಾಯ್ಗೆ ಕಡಿವಾಣವನ್ನಿಕ್ಕಿಲವೊ ಹೆಂಬೇಡಿ! ಬಳ್ಳಿಗ್ಕುತಿದೆ ಪೊಳ್ಳುದಂಬುಕಂ ಸಿಂಗದಿದಿರಿನಲಿ ! (ಜಣ್ಣಾಂಗ. ೭೯-ಪಾಣಿ). **ಹೊಳ್ಳು** : ೧. ನೀ ಹೊಡೆಯಲಿಕ್ಕೆ ಹೊಳ್ಳಹುದು ದೇವಾಸುರಮಹೀತಳವು (ತಂಪಪ. ೦೭-೭೭); ಮಂದಿ ಮೆಚ್ಚಲದುವೆ ಹೆಚ್ಚಿ ? ಸುಳ್ಳು ಹೊಳ್ಳು ಆ ಸ್ತುತಿ! (ಅಪೇ. ೦೭-೨). ೨. ಒಕ್ಕಿದ ಮೇಚೆ ಕಿತ್ತಿತ್ತು ಹುಲ್ಲು ಮೆದೆಗೆ ಹೋಯಿತ್ತು ಹೊಳ್ಳು ಗೂಡು ಬದ್ದಿತ್ತು (ಹೋಗಮ. ೦೫೫-೫೫೭) ; ಹೊಳ್ಳುಗಳ ತೂಜಾದೆವು ಹಿಡಿಹಿಡಿ ಬಲ್ಲ ಸುರಿಸುರಿ ಶರವನಕಟ್ಟಿನ್ನಲ್ಲಿ ಹೊಗುವೈ ಕಂದ (ಭಾಷ್ಯಕ್ರಿಯೆ. ೨-೧೭); ಅಜ ಹರಿ ಸುರಾಸುರರೆನಿಪ್ಪ ಹೊಳ್ಳುಗಳ ತೂಜುವ ಗಾಳಿಯಿಂ ಬಂದನು (ಪಚಿಪು. ೨-೪-೦೯). ೩. ಹುಸಿಯುನಾಡಿ ಲಿಂಗವ ಪೂಜಿಸಿದಡೆ ಹೊಳ್ಳ ಬಿತ್ತಿ ಫಲವನಱಸುವಂತೆ ಕಾಣಾ (ಭುತಪೇ. ೦. ೩೬-೦೪೦) ; ಹೊಳ್ಳನು ಹುರಿದರಳನು ಕಾಱುಕುವನಂತಿದನಱಿಯೆಂದನು (ಪೋಗಾಂಜ. ೪-೩೬). ೪. ಇರುಳು ಕಗ್ಗತ್ತಲೆಯೊಳ್ಗೋವಿನ ಸರಿವಳಿಗೆ ಸಲೆ ಸೇಡುಗೊಳುತುಬ್ಬರಿಸಿ ಕೃಷ್ಣನ ನೆನೆವುತಿದ್ದನು ಮರನ ಹೊಳ್ಗಿನಲಿ (ಭುತಾಕ. ೦೯-೨೩) ; ಹುತ್ತಿನೊಳಗಣ ಹೊಳ್ಳು ಪಾವಿಂಗೆತ್ತ ಹೋದೊಡೆ ಸುಸರವಲ್ಲದೆ ಮತ್ತೆ ಮಿಕ್ಕಿನ ಜೀವಜಾಳಕಭೇದ್ಯವಾದಂತೆ (ಕ್ರಕುಂ. ೫೦-೨೯); ೭. ನಿಷ್ಪ್ರಯೋಜಕನಾದವನು ; ಕೆಲಸಕ್ಕೆ ಬಾರದವನು : ಕೋಟಿ ಬ್ರಹ್ಮಾಂಡದ ನೆಪಲಿಲ್ಲನಲಂತವಱೊಳಗೊಂದಱ ಕಡೆಗೂಟಿನ ಹಳ್ಳಿಯ ಹೊಳ್ಳುಗಳೊಂಬತ್ತಱೊಳೊಬ್ಬನವಿವನು ಬಲ್ಲನೆ ಶಿವಮ (ಜಡೇಶ. ೦-೨೦); ಇಲ್ಲಿ ಬಂದಿದಿರಾಂತು ಸಾಯದೆ ಹೊಳ್ಳುಗುರಾ ಹಾಜಿನುತ್ತಾ ಬಲ್ಲಿದನು ಜಮಘೌಟಿಯೊಳು ಕುಡುಹೊಂದಿಸಿದನೊಡನೆ (ಬಸ್ತು. ೫೦-೯೦) ; ಹೈಯ ಹೊಳ್ಳುಗಳ ಲೆಕ್ಕಿಪನೆ (ಪಚಿಪು. ೬-೫-೦೦). 'ಪೊಟ್ಟು' ಪರಾ.

ಪೊಳ್ಳಾಗು, ಹೊಳ್ಳಾಗು = ೧. ಸತ್ತ್ವಗುಂದು ; ದೃಢತೆಯನ್ನು ಕಳೆದುಕೊಳ್ಳು : ದಿಟ್ಟತನ ಪೊಳ್ಳಾಯ್ತು ಶೌರ್ಯದ ಘಟ್ಟ ಕರಗಿತು (ಭುದಾ. ೦೯. ೯-೬೨) ; ತಿರುಳಿಲ್ಲದೋಟಿಗಳ ತಿಂತ್ರಿಣೀಫಲದಂತೆ ಗುಳಿಕ ಕರ್ಕೋಟಕಾದಿಗಳೊಡಲೊಳ್ಪಾದುವಿಜಹಿಗಳ ಮುತ್ತಿಗೆ ಕಂಗೆಟ್ಟುವೆ (ಕೃಬಾಶ. ೨೯-೪೩) ; ವೇದಶಾಸ್ತ್ರಪುರಾಣಗಳು ಸುಳ್ಳಾದುವು ; ಜನರು ಪೊಳ್ಳಾದರು ; ಭಗವಂತನು ಕಳ್ಳನಾದನು (ಶಿಶಾಕ. ೧೦). ೨. ಡೊಗರು ಬೀಳು; ಹೋರು ಉಂಟಾಗು: ಮೊದಲಿನ ದೋಣಿಯೆಂದರೆ ಹೊಳ್ಳಾದ ಮರದ ತುಂಡು (ಜಾಂಶ್ರ. II. ೬೮೨). ೩. ವ್ಯರ್ಥವಾಗು ; ಹಾಳಾಗು; ನಾಶವಾಗಂ : ಮನವ ಲಿಂಗ ಲಿಂಗವೇ ಮನವಾವ ಬಳಿಕ ಮಾತು ಮಾತುಗಳೆಲ್ಲ ಹೊಳ್ಳಾ[ಜಾಣಂ. ಹೋಳಾ]ದ ಕಾರಣ ಲಿಂಗೈಕ್ಯ ಲಿಂಗೈಕ್ಯವೆ (ಸಿದ್ಧಕ. ೪೨-೨೫೯) ; ನಿಚ್ಚಲೋದುವ ಪುರಾಣದ ಮಾತಿನ ಮೂಲೆ ಮಚ್ಚು ನೞಿಜಾದುವು ಹೋಮನೇಮಂದವಸಜಿಸಮಾಧಿಗಳೆಂಬವೆಲ್ಲ ಹೊಳ್ಳಾದುವೆ (ಪ್ರಸ್ತ. ೮೯. ೪೦೬-೩). ೪. ಹುಸಿಯಾಗು ; ಸುಳ್ಳಾಗು : ಆಸವೇಱಿ ನುಡಿದ ಪಾರ್ಥನ ಭಾಷೆ ಹೊಳ್ಳಾಗದು ಸುಯೋಧನ ದೇಶಮನು ಬೀಳ್ಕೊಂಡೆನೆಂದನು ಸೈಂಧವನು ಸಭೆಗೆ (ಭಾಕ್ಷಾಕ್ರಿಯೆ. ೯-೩೦). **ಹೊಳ್ಳು ಮಾಡು** = ನಿಸ್ಸಾರವಾಗಿಸಂ ; ನಿಸ್ಸತ್ತ್ವಗೊಳಿಸಂ : ಹಮಳದಿಂ ಬಲವಱೆವ ಹೊಳ್ಳು ಮಾಡ ಬಗೆವರೆ ಹೇಳಿನೆಲು (ಜಪಾಣ. ೯-೦೦) ; ಅಜ್ಞಾನ ಮಾರ್ಗವ ಹೊಳ್ಳು ಮಸಡಿ ವಿಶುದ್ಧಪೂರ್ವಜ್ಞಾನಮಾರ್ಗದರಿ ಒಳ್ಪಾಗಿಸಿ ಸುಖವ ಬಯಸಲು (ಕ್ರಕುಂ. ೬೩-೦).

[ದೇ. ॥ ತಮಿ. ಪೊಟ್ಟು, ಪೊಳ್, ಪೊಳ್ಳು; ಕುಲು. ಪೊಳ್ಳು; ಕುಳು. ಪೊಳ್ಳು, ಪೊಳ್ಳ, ಪೊಳ್ಳು; ಕೊಡ. ಪೊಳ್ಳ, ಪೊಳ್ಳ; ತಿಲು. ಪೊಳ್ಳು, ಪೊಳ್ಳ; ಪಾಯ್ಕ. ಪೊಲ್ಲೇ ; ಪರ್ಜ. ಪೂಲ್, ಪೂಲ್ಕ; ಗೊಂಡಿ. ಪೊಳ್ಲುತು ; ಕುಗಿ. ಪೊಲ್ಲು; ತುಮಿ. ಪೊವೂ]

ಪೊಳ್ಳುಗಳೆ. ಹೊಳ್ಳುಗಳೆ (ಕ್ರಿ). ೧. ವ್ಯರ್ಥವಾಗಿಸು; ಸತ್ತ್ವ ಗುಂದಿಸು: ಅಮಲಧರ್ಮಜನ ಕೀರ್ತಿ . . . ನಾಗೇಂದ್ರ ವರದಾಯುಧವ ಪೊಳ್ಳುಗಳೆದು ಮಥನಾಗೇಂದ್ರಧರನ ಜಾತೆಯ ನಿಲವುಗೆಡಿಸಿ ನೆಱ^3 ರಾಜಿಸಿತು ಮೂಜಗದೊಳು (ಸ್ವಪ್ನಾ. ೨.೦೨). ೨. ತುಚ್ಛವಾಗಿ ಕಾಣು; ಜರಿ; ಮೂದಲಿಸು: ಸುಧನ್ವ ಮತ್ತೆ ಅವನ ಅಗ್ಗಳಿಕೆಯನ್ನು ಪೊಳ್ಳುಗಳೆದುಡಿದ (ಬಿದುರಿ. ೩೮). **ಹೊಳ್ಳುಗಳೆ:** ೧. ಮಗುಳೆಚ್ಚು ಪುನರಪಿಯೆಚ್ಚು ಕರ್ಣನ ಹೊಳ್ಳುಗಳೆದನು ಪಾರ್ಥ ನಿಮಿಷದಲಿ (ಕುಪ್ಯಾಕ. ೨೩-೨೫); ಹಗೆಗೆ ಹೊಳ್ಳುಗಳೆವುದು ಹೃದಯಮಂ! (ಶ್ರೀರಾಮಾ. ೫೫೯-೦೯೬). ೨. ಹೊಗಳಿ ಕೆಲವರ ಹೊಳ್ಳುಗಳೆವುತ ನಗುತ ಕೆಲವರನವರ ಮೋಹರ ತೆಗೆದು ಹೋಯಿತು (ಕುಪ್ಯಾಕ. ೫-೨); ಎಲ್ಲರನು ನೀ ಜಱಿದು ಝಾಡಿಸಿ ಹೊಳ್ಳುಗಳೆದೊಡೆ ನಿನ್ನಲೆನ್ನಲಿ ಹೊಲ್ಲಪೊಳ್ಳಿತನಱಿವ ಮಾತಂತಿರಲಿ ಹೇಳೊಂದ ಬಲ್ಲೆಯಾದೊಡೆ ನೀನು (ಪ್ರಭುಲೀ. ೭-೬೦). ೩. ಸುಳ್ಳುಮಾಡು; ಸುಳ್ಳಾಗಿಸು: ನರನ ನುಡಿಯನು ಹೊಳ್ಳುಗಳೆವರೆ ಚರಣದಲಿ ಬೀಳುವೆವು ನಡೆಯೆಂದಿರುಳು ದ್ರೋಣನ ಮನೆಗೆ ಬಂದನು ಕೌರವರ ರಾಯ (ಕುಪ್ಯಾಕ್ರೋ. ೬-೩೪). [ಪೊಳ್ಳು + ಕಳೆ$_1$]

ಪೊಳ್ಳುಗುಂಭ (ನಾ). ಬರಿದಾದ ಮಡಕೆ; ಖಾಲಿಯ ಗಡಿಗೆ: ಬಸಿರು ಬಯಲು ಪೊಳ್ಳುಗುಂಭ ಬಂಜೆಗಾಳಿ ಅದರ ತುಂಬ (ಹೃದಸ. ೬೯-೯). [ಪೊಳ್ಳು + ಗುಂಭ$_2$ (< ಗುಂಬ$_3$)]

ಪೊಳ್ಳುಗೆಡೆ (ಕ್ರಿ). ಹುರುಳಿಲ್ಲದ ಮಾತನಾಡು; ಜಳ್ಳು ಮಾತನಾಡು: ಬಡವನೊಳ್ಳೆಯ ಮಾತ ನುಡಿದರಲ್ಲೆಂಬುವರು ಪೊಡವೀಶ ಪೊಳ್ಳುಗೆಡೆದರೂ ಕೈವಾರಿ ಕಡುನಗುತಲಿಹರು (ಸರ್ವಜ್ಞ. ೦೨೬೬). [ಪೊಳ್ಳು + ಕೆಡೆ$_2$]

ಪೊಳ್ಳುನುಡಿ, ಹೊಳ್ಳುನುಡಿ (ನಾ). ಹುರುಳಿಲ್ಲದ ಮಾತು; ಕೆಲಸಕ್ಕೆ ಬಾರದ ಮಾತು; ವ್ಯರ್ಥಾಲಾಪ: ಒಳ್ಳಿತೊಳ್ಳಿತು ಮದವಾರಣ ದೊಳಗಾಡು ಕೊಳ್ಳುಕೊಡೆಯ ಮಾಳ್ಪುದೆಂದು ಪೊಳ್ಳುನುಡಿಯಿದೇಕೆ ಪೋಗು (ಪೇಮಸಂ. ೦೭-೦೦೮); ಈ ಪೊಳ್ಳುನುಡಿಗೆ ಮೊದಲ ಮನಸು ನಗುತ್ತಿತ್ತು (ಎರಸ. ೦೦೭). **ಹೊಳ್ಳುನುಡಿ:** ಸಾಕಿದೇತಕೆ ಹೊಳ್ಳುನುಡಿಗೆ ವಿವೇಕಿಗಳು ಮೆಚ್ಚುವರೆ (ಕುಪ್ಯಾಸ. ೨-೬೯); ಹೊಳ್ಳುನುಡಿಗಳನಾಡುತ್ತ ವೃಥಾ ಹೊತ್ತು ಕಳೆಯದೆ ಸಾಮರ್ಥ್ಯವಿದ್ದರೆ ಯುದ್ಧ ಮಾಡಬೇಕು (ರಾಜಸೂ. ೨೨). [ಪೊಳ್ಳು + ನುಡಿ$_2$]

ಪೊಳ್ಳುಬೆದರಿಕೆ (ನಾ). ಸತ್ತ್ವವಿಲ್ಲದ ಬೆದರಿಕೆ; ಸುಳ್ಳುಬೆದರಿಕೆ: ನಿಮ್ಮ ಈ ತವಡು ಕುಟ್ಟೊ ಮಾತು, ಪೊಳ್ಳುಬೆದರಿಕೆ ಕೇಳಲಿಕ್ಕಂತೂ ನನಗ ಸುತರಾಂ ಅವಕಾಶ ಇಲ್ಲ (ಹೂಸಂಸಾ. ೫೫). [ಪೊಳ್ಳು + ಬೆದರಿಕೆ (< ಬೆದಱಿಕೆ)]

ಪೊಳ್ಳುಮರ (ನಾ). ಒಳಗೆ ದಿಂಡಿಲ್ಲದ ಮರ; ಟೊಳ್ಳಾದ ಮರ: ಆಗಳ್ ದುರ್ಯೋಧನಂ . . . ತನ್ನೆರ್ದೆಯುಂ ಪೊಳ್ಳುಮರನಂ ಕಿರ್ಚಳುರ್ವಂತೊಳಗೊಳಗಳುರೆ (ಪಂಪಭಾ. ೨-೬೬ ಪ). [ಪೊಳ್ಳು + ಮರ$_1$]

ಪೊಳ್ಳುಮಾತು, ಹೊಳ್ಳುವಾತು (ನಾ). ಸುಳ್ಳಾದ ಮತ್ತು ನಂಬಿಕೆಗೆ ಯೋಗ್ಯವಲ್ಲದ ಮಾತು; ಹುರುಳಿಲ್ಲದ ಮಾತು: ದ್ರೋಹ, ವಂಚನೆ, ಸುಳ್ಳು, ಸೋಗನು ಕಂಡು ಕಂಡೂ ಸಿಡಿದಿದೆ. ಪೊಳ್ಳುಮಾತಿನ ಬುರುಗು ಬೆರಗನು ಕೇಳಿ ಕೇಳಿ ಕುಸಿದಿದೆ (ಪಿಜಿದ. ೫೯-೯); ಅದು ಬರಿಯ ಪೊಳ್ಳುಮಾತೆಂಬುದು ಲಲಿತಳಿಗೂ ಗೊತ್ತು (ಮುರುಳು. ೫೦). **ಹೊಳ್ಳುವಾತು:** ಹೊಳ್ಳುವಾತಿದು ನೀತಿಯೋ (ಕುಪ್ಯಾಪಿ. ೯-೩೫); ಹೊಳ್ಳುವಾತಲ್ಲ ಕೇಳಬಲೆ (ಕುರಾಸಾಂ. ೨೫-೩೩); ಅಳ್ಳೆರ್ದೆಗರನಂಜಿಸುವೊಲು ರಕ್ಕಸ ಹೊಳ್ಳುವಾತುಗಳಾಡಬೇಡ (ಕಂಪ್ರಸಾಂ. ೬-೦೧೯). [ಪೊಳ್ಳು + ಮಾತು$_1$]

ಪೊಳ್ಳೆವಂದಿ (ನಾ). ಗಾಯಗೊಂಡ ಹಂದಿ (?); "ಓಡುವ ಹಂದಿ" (ಲೀಲಾವ. ಕೋಶ): ಜಂತ್ರದ ಪಂದಿಯ ಬಾಯಂತೆ ಬಿಟ್ಟೆಬಲ್ವ ಬಾಯುಂ ಬೆರಸು ನಾಲ್ಕುಂ ತಳೆಮಂ ತೋಱುತ್ತುಂ ಸರಳಿಸಿ ಪಾಯ್ದು ಪೋಪ ಪೊಳ್ಳೆವಂದಿಯುಂ ಕಂಡು (ಲೀಲಾವ. ೬-೦೬ ಪ). [? + ಪಂದಿ]

ಪೊಱ, ಹೊರ$_1$, ಹೊಱ (ಸಪೂರೂ). 'ಪೊಱಗು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ: 'ಪೊಱಗೋಟೆ', 'ಪೊಱದಡಿ' ಪರಾ. **ಹೊರ$_1$:** 'ಹೊರದೆಗೆ', 'ಹೊರಗಂಡಿ' ಪರಾ. **ಹೊಱ:** 'ಹೊಱದೆಗೆ', 'ಹೊಱವಳಸು' ಪರಾ. [<ಪೊಱಗು]

ಪೊಱಅಡಿ (ನಾ). ೧. ಹೆಜ್ಜೆಯ ಮೇಲುಭಾಗ: ಮನುಜಮಾಂಧಾತನ ಪೊಱಅಡಿಗಳ್ ವಿರೋಧಿಭೂಪಾಳರನಡಿಗೆಱಗಿಸಿದ ಸಂತೋಷದೊಳುನ್ನತಂಗಳಾದಂತೆ ಕೂರ್ಮೋನ್ನತಂಗಳಾದುವು (ಪಂಪಭಾ. ೨-೩೯ ಪ); ಅಳವಿಗಟಿದುರುನಿತಂಬಸ್ಥಳಭಾರಮನಾಂತ ಕಾಲ್ಗೆ ಪೊಱಅಡಿಗಳೊಳೀ ಲಳಿತತುಳಾ ಕೋಟಿಗಳಂ ತಳೆವುದದೇವಿರಿದೊ ಮದಗಜಾಲಸಗತಿಯಾ (ಕಾಪ್ಯಾಪ. ೨೯೩); ಪೊಱಅಡಿ, ಒಳಅಟ್ಟಂ, ಪೊಸಅಡಕೆ (ಕಪುದ. ಪ. ೬೬ ಪೃತ್ತಿ). ೨. (ಕಾರ್ಯೋನ್ಮುಖವಾಗಿ) ಮುಂದಕ್ಕೆ ಇಟ್ಟಿರುವ ಹೆಜ್ಜೆ,-ಮುಂದಿಟ್ಟ ಅಡಿ: ಆಗಳ್ ಮದನು ತಳ್ವದೆ ಕೋಲ್ಬಿಲ್ಗಳು ಕೊಂಡು ಪೊಱಅಡಿಯೊಳ್ . . . ತನ್ನ ಪುಸಿವಡೆವೆರಸು ತಪೋವನದತ್ತಣ್ಗೆಯ್ತರುತುಮಿರ್ದಂ (ರಾಮಾಶ್ವ. ೫೬-೯). [ಪೊಱ (< ಪೊಱಗು) + ಅಡಿ$_1$]

ಪೊಱಂಗುಟ್ಟು, ಪೊಱಕುಟ್ಟು (ಕ್ರಿ). ಬಹಿರಂಗವಾಗಿ ಹಿಂಸಿಸು, -ನೋಯಿಸು: ಪೆಱರಿಗೆ ಕೇಡುಮಾಪತ್ತುಮಟಲುಮಂ ಮಾಡದುದುಂ ಪೊಱಂಗುಟ್ಟದುದುಂ ನೊಂದು ನುಡಿಯದುದುಂ . . . ಸಾತಾವೇದನೀಯ ದಾಸ್ರವಮಕ್ಕುಂ (ಪಸಾರ. ೯೩). **ಪೊಱಕುಟ್ಟು:** ರಾಗದ್ವೇಷಂಗಳಿಂ ಪೊಱಕುಟ್ಟಿ ನುಡಿಯೆ ತನ್ನ ಮರುಳಂ ಮುಚ್ಚಿ ಕಳೆವುದು (ಪಸಾರ. ೯೮೨). [ಪೊಱ (< ಪೊಱಗು) + ಕುಟ್ಟು$_1$]

ಪೊಱಂಡ, ಪೊಱಡ (ನಾ). ಬೆನ್ನಿನ ಮೇಲೆ ಗುಬುಟೆದ್ದು ಬಾಗಿರುವವನು; ಗೂನ: ಗುಜ್ಜನುಂ ಪೊಱಂಡನುಂ ಮುರುಡನು ಮಾಗಿ ಬರೆ ಕಂಡವರ್ ನಗೆ (ಬಂಹರಿ. ೯-೨೫ ಪ). **ಪೊಱಡ:** ಹರಭಕ್ತ ನಿಂದಕಂ . . . ಕುರುಡನಾಗುವ ಕೋಟಿಜನ್ಮದೊಳ್ಬಳಿಕಲವ ಪೊಱಡನಾಗುವ ಸಪ್ತಜನ್ಮದೊಳ್ಬೆಳವನಾಗಿರುವ ಶತಜನ್ಮದೊಳ್ (ಸಕಿಂ. ೦೬-೯). [ಪೊಱಂಡು$_2$ + – ಅ$_7$]

ಪೊಱಂಡಿ (ನಾ). ಬೆನ್ನಿನ ಮೇಲೆ ಗುಬುಟೆದ್ದು ಬಾಗಿರುವವಳು; ಗೂನಿ: ಕಣ್ಗುರುಡಿಯುಂ ಪೊಱಂಡಿಯುಂ ಕೂಂಟಿಯುಂ ಪೆಟವೆಯುಂ ಕುಷ್ಠಿನಿಯುಂ ಕುಬ್ಜೆಯುಮಪ್ಪ ಮಗಳ್ದಿರಱುವರ್ (ಶಾಂತಿಪು. ೪-೬೬ ಪ). [ಪೊಱಂಡ + – ಇ$_2$]

ಪೊಱಂಡು$_1$ 'ಪೊಱಮಡು' ನೋ.

ಪೊಱಂಡು$_2$, ಪೊಱಡು$_2$, ಹೊಱಟು, ಹೊಱಡು$_2$ (ನಾ). ಉಬ್ಬಿನಿಂದ ದೇಹದ ಬೆನ್ನು ಮೊದಲಾದ ಭಾಗಗಳಲ್ಲಿ ಉಂಟಾದ ಬಾಗು,-ವಕ್ರತೆ: ಕುಟಿಯೆ ಪೊಱಂಡಾಗಿರೆಯುಂ ಕುಟಿದಿರೆಯುಂ ಬೆನ್ನನಿಷ್ಟಮುಮಾಬ್ಯುಂ (ಲೋಕೋಪ. ೦೧-೫೬). **ಪೊಱಡು$_2$:** 'ಮುಪ್ಪೊಱಡು' ಪರಾ. **ಹೊಱಟು:** ಹೊಱಟು ಪಾಂಡ್ಯನ ಚೆಲುವಳಿದು ನೆಱ^3 ಹೊಱಟು ನೆಲೆಗೊಂಡಿದ್ದ ಬೆನ್ನಿನ ಹೊಱಟು ಹೋಗಲು ಮಿಥ್ಯೆಯಾಯಿತು ಸಾಯದಿರಬಹುದೆ ಹೊಱಟ ಬೆನ್ನಿಂತೆಂಬ ನುಡಿಯದು ಧರೆಗೆ ಕೂನನೆ ನಿಪ್ಪುದು ಪರಿಹರಿಸಿ ಸೌಂದರಪಾಂಡ್ಯರಾಯನೆನಲು ಪೆಸರ್ವಡೆದ (ಬಸವು. ೫೦-೩೦). **ಹೊಱಡು$_2$:** "ಗಡು ಎಂದೊಡೆ ಕುಬ್ಜ, ಬೆನ್ನ ಹೊಱಡುಂ" (ಪಾಜಿರಾ. ೬); ಮಂಡೆಯಲಿ ಕೈಯಿಟ್ಟು ಹೊಱಡೆಡೆಗೊಂಡುದೆಂದಿಂದಿತ್ತ ವೈದ್ಯರ ಕಂಡು ಬಲ್ಲರು ತನ್ನ ಪೂರ್ವಜರೆಂದನಸುರಾರಿ (ಪಿಧಾ.ಗ. ೦೦-೩೭-೩೯); ಹೊಱಡಾಗದಂತೆ ನಾಲ್ಮೊಗ ಜಂತದಲಿ ಹೊಂಗರಡಿಗೆ

ಗೆಡೆದು ಕರ್ಮಣಿಯ ಬಿರುಡೆಯ ಬಿಗಿದಿಟ್ಟನೆಂಬಂತೆ ಬಲ್ಮೊಲೆಯೆರಡಱ ಮೊಗವು ತೋಱಿದುವು (ಸೋಕಶ. ೨೩-೨೩).

[< ಪೊಱಮಡು./ತೆಲು. ಪೊಱಡು]

ಪೊಱಂಬೇಱು (ಕ್ರಿ). (?) : ತಾನರುಮೆ ಮೆಚ್ಚುವೊನ್ತನ್ನ ಮೆಚ್ಚದೆ ಪೊಱಮ್ಬೇಱು ಬೊಜಙ್ಗರ (ಸೌಜಾ. IX-i, ೦೬-೪೫ ; ೪ಪಯ ಕಶ). [?]

ಪೊಱಕಣ್, ಹೊರಗಣ್ಣು (ನಾ). ಹೊರಗಿನ ಕಣ್ಣು ; ಬಹಿರ್ಚಕ್ಷು : ಪೊಱಕಣ್ಗಂ [ಪಾಠಾಂ. ಮಡೆಕಣ್ಗಳ್] ಮುನ್ನಂ ತಾಂ ಮಱಸಿದ ನೊಸಲೊಂದು ಕಣ್ಣುಮಾಗಳ್ ನೊಸಲಿಂ ಪೊಱಮಟ್ಟಂತಿರೆ (ಪಂಪಭಾ. ೮-೨೩). **ಹೊರಗಣ್ಣು** : ಹೊರಗಣ್ಣಿಗೆ ಕಾಣುವ ಸೃಷ್ಟಿಯು ಮೂಕವಾಗಿದೆ (ಸಾಹಿಪಿ. ೦೪೪). 'ಒಳಗಣ್' ಪರಾ. [ಪೊಱ (< ಪೊಱಗು) + ಕಣ್]

ಪೊಱಕತ್ತರ, ಹೊಱಕತ್ತರ (ನಾ). [ಸಂಗೀತ] ವಾದ್ಯಗಳನ್ನು ಬಾರಿಸುವ ಒಂದು ಕ್ರಮ,-ಗತ್ತು; ೧ ಹೆಬ್ಬೆರಳನ್ನುಳಿದು ಇತರ ಬೆರಳುಗಳನ್ನು ವಿರಳವಾಗಿ ಚಾಚಿ ಅಂಗೈಯನ್ನು ಹೊರಮುಖವಾಗಿ ವೇಗವಾಗಿ ತಿರುಗಿಸುತ್ತ, ಒಂದಾದ ಮೇಲೊಂದರಂತೆ ಬೆರಳುಗಳಿಂದ ವಾದ್ಯಮುಖವನ್ನು ಹೊಡೆದು ಶಬ್ದಗಳನ್ನು ಉತ್ಪತ್ತಿಮಾಡುವುದಕ್ಕೆ 'ಕರ್ತರೀ' ಎಂದು ಹೆಸರು. ಒಳಕರ್ತರಿ, ಹೊರಕರ್ತರಿಗಳು ಸಂಗೀತಶಾಸ್ತ್ರಗ್ರಂಥಗಳಲ್ಲಿ ವರ್ಣಿತವಾಗಿಲ್ಲ. ಕನ್ನಡಿಗ ಮದ್ದಳೆಕಾರರು ವಾದನತಂತ್ರದ ಸ್ವಸಮಯದಲ್ಲಿ ಅವುಗಳನ್ನು ನಿರ್ಮಿಸಿಕೊಂಡು ಹೆಸರಿಸಿರಬಹುದು. ಮೇಲೆ ಹೇಳಿರುವ ಕರ್ತರೀವ್ಯಾಪಾರವನ್ನು ಹೆಬ್ಬೆರಳು ಒಳಮುಖವಾಗಿ (ವಾದ್ಯಮುಖದೆಡೆಗೆ) ಚಲಿಸುವಂತೆ ನಡೆಸಿದರೆ ಒಳಕರ್ತರಿ. ಇದಕ್ಕೆ ವಿರುದ್ಧವಾಗಿ ಹೆಬ್ಬೆರಳು ಹೊರಮುಖವಾಗಿ (ವಾದ್ಯಮುಖಕ್ಕೆ ವಿಮುಖವಾಗಿ ಆಚೆಗೆ) ಚಲಿಸುವಂತೆ ಏರ್ಪಡಿಸಿದರೆ ಹೊರಕರ್ತರೀ ಎಂದಂ ಅರ್ಥ ಮಾಡಬಹುದು : ಅಳಗಂ ಸುಳಿಯಳಗಂ ದೊಟ್ಟಳವೊಳಕತ್ತರಮುಮೆಸೆವ ಪೊಱ [ಪಾಠಾಂ. ಹೊಱ]ಕತ್ತರವಗ್ಗಳಿಸಿರೆ ನಾನಾಭೇದಂಗಳ ಪಹರಣಿ ತುಡುಕು ಮೋಡಿಯಂ ಬಾಜಿಸಿದಂ (ಧರ್ಮಪ. ೨-೨೩). **ಹೊಱಕತ್ತರ** : ಆವುಜಿಗ ನಾವುಜಮನಳವಡಿಸಿಕೊಂಡು ಝಂಕಾರವಂ ಪೊಯ್ದುಳಗ ಸುಳಿಯಳಗ ಬೊಟ್ಟಾಳಂ ಒಳಕತ್ತರ ಹೊಱಕತ್ತರ ವಿಷಮಕತ್ತರಮೆಂಬ ವಿಚಿತ್ರವಾದನದ ಬಹುಲಿಕೆಯೊಳ್ವಿಹಿಲನೆನಿಸಿ...ಬಾಜಿಸುತ್ತಿರೆಯುಂ (ಶಾಂತೀಶ್ವ. ೦೬-೬೭ ಪ). 'ಒಳಕತ್ತರ' ಪರಾ. [ಪೊಱ (< ಪೊಱಗು) + ಕತ್ತರ$_1$]

ಪೊಱಕಾಲ್, ಹೊರಕಾಲು, ಹೊಱಕಾಲ್, ಹೊಱಕಾಲು (ನಾ). ೧. ಕಾಲಿನ ಹೊರಭಾಗ,- ಹೊರಗು : ಕಾಲ ಪೊಱಗು, ಪೊಱಕಾಲ್ (ಶಪ್ತಾಪು. ೩೪೮). **ಹೊರಕಾಲು** : ೨. ಅಡ್ಡವಾಗಿ ಇಡುವ ಕಾಲು ; ತೊಡರುಗಾಲು : ಓಡುತ್ತಿರುವಾಗ ಕೆಂಚನು 'ಹೊರಕಾಲು' ಕೊಟ್ಟುದರಿಂದ ಶಿವುಗ ನೆಲಕ್ಕೆ ಧೊಪ್ಪನೆ ಕೆಡೆದು (ಸುಪಸಂ. ೦೦೬). **ಹೊಱಕಾಲ್** : ೩. ಓಡಲು ಸಿದ್ಧವಾದ ಕಾಲು ; ಪಲಾಯನಕ್ಕೆ ಸಿದ್ಧವಾದ ಕಾಲು : 'ಹೊಱಕಾಲ್ಗೊಳು' ಪರಾ. **ಹೊಱಕಾಲು** : ೩. ಹೊಱಕಾಲುಗಳ ಹೋರಟೆ ಕಾಣಲಾದುದು ಪರರ ಥಟ್ಟಿನಲಿ (ಕುಪ್ಕಾಪ್ರೋ. ೩-೪೨). 'ಒಳಕಾಲು' ಪರಾ.

[ಪೊಱ (< ಪೊಱಗು) + ಕಾಲ್$_1$]

ಪೊಱಕಾಲ್ಗೊಳ್, ಹೊಱಕಾಲುಗೊಳ್, ಹೊಱಕಾಲ್ಗೊಳು (ಕ್ರಿ). ೧. ಕಾಲನ್ನು ಎತ್ತಿ ಮುಂದಿಡು : ಮುಂಗಾಲ್ಗಳಂ ನೆಗಹಿ ನಿಲ್ವ ಪಿಂಗಾಲ್ಗಳಂ ಕೀಳ್ತು ದಾಂಟುವ ಪೊಱಕಾಲ್ಗೊಳ್ವ ಮರಳಿ ಮೆಟ್ಟುವ . . . ಅಶ್ವಂಗಳ್ (ರಾಜಶೇ. ೬-೦೦ ಪ). **ಹೊಱಕಾಲುಗೊಳ್** : ೨. (ಹೆದರಿಕೆಯಿಂದ) ಪಲಾಯನ ಮಾಡು; ಓಡಲು ಸಿದ್ಧವಾಗು : ಹೊಟ್ಟ ನೂಕಿ ವೃಥಾಹವದ ಜಗಜಟ್ಟಿ ನೀ ಹೊಱಕಾಲುಗೊಂಡರೆ ಬಿಟ್ಟೆನೇ (ಕುಪ್ಕಾಳ. ೦೦-೩೪). **ಹೊಱಕಾಲ್ಗೊಳು** : ಬಿಲುದೆಗಹಿನಾ ಕರ್ಣಪೂರದ ಹಿಳುಕಿನನಿಲಜನಿರಲು ಸಿಂಹದ ಹೊಲನ ಹೊಗುವಿಭದಂತೆ ಹೊಱಕಾಲ್ಗೊಳುತಲಿರೆ ಕಂಡು ತೊಲಗದಿರಿ ತಮ್ಮಂದಿರಿರ . . . ಸುಭಟರು ನೀವೆನುತ ತೆಗೆದೆಚ್ಚನು (ಕುಪ್ಕಾಪ್ರೋ. ೦೨-೩೦). [ಪೊಱಕಾಲ್ + ಕೊಳ್$_1$]

ಪೊಱಕುಳಿ, ಹೊಱಕುಳಿ (ನಾ). ಬೇರೆಯವರ ಆಶ್ರಯದಲ್ಲಿ ವಾಸಿಸುವ ಸ್ವಭಾವವವನು : ಪೊಱಕುಳಿ [ಪಾಠಾಂ. ಪೋರ್ಕುಳಿ], ಓಡುಕುಳಿ (ಕಪುವ. ಮ. ೨೦೪ ಪ್ರಯೋ). **ಹೊಱಕುಳಿ** : "ವರಜಾತಃ, ಪರೈಧಿತಃ—ಈ ೨ ಹೊಱಕುಳಿ" (ಹಲಾಯು. ೫೮-೦೯೬).

[ಪೊಱ (< ಪೊಱಗು) + — ಕುಳಿ$_3$]

ಪೊಱಕೆಯ್, ಪೊಱಕೈ, ಪೊಱಗಯ್, ಹೊಱಕಯ್, ಹೊಱಕೆಯ್, ಹೊಱಕೈ (ನಾ). ೧. ಕೈಯ ಹೊರಭಾಗ ; ಮಣಿಕಟ್ಟಿನಿಂದ ಕಿರುಬೆರಳಿನವರೆಗಿರುವ ಕೈಯ ಹೊರಪಾರ್ಶ್ವ : "ಮಣಿಬಂಧನದಿಂದಂ ಕಿಱುಕುಣಿಕೆವರಂ ಕರಭಮೊಂಬುದಕ್ಕುಂ ಪೊಱಕೆಯ್" (ವಸ್ತುಕೋ. ೬೮-೯) ; ಸೆಂಡೆಯ್ತರಲ್ ನಲವಿಂದಂ ಪೊಱಕೆಯ್ಯೊಳಾಂತು ಮಗುಟ್ಟುರ್ಪಿಂ . . . ಪೊಯ್ದು (ಪಶಕು. ೦೨-೩೪). **ಪೊಱಕೈ** : ೧. ಕೈದುಡುಕಿ ಪಿಡಿದನಂ ನೋಡವಂತಿರ್ವ ಪಾಂಗಿಂ ಪೊಱಕೈಯೊಳ್ ಮೋದಿ ಕಂಸಾನುಜನನಧಿಕನಂ ಕೊಂದು (ಜಗಪ. ೬-೯೪). **ಪೊಱಗಯ್** : ೧. ಮಲಮಂ ಪಿಡಿಕಿಸಿ ಪೊಱಗಯ್ಯನೊರಸಿ ಕರ್ಚಿದ ತೆಱದಿಂ (ಸಮಪ. ೦೩-೨೬). **ಹೊಱಕಯ್** : ೧. ಸೂತನ ಬಾಯ ಹೊಱಕಯ್ಯಿಂದ ಹೊಯ್ದನು ಹಡಪದವರನು . . . ತಿವಿದು ಮುಱಿದನು (ಕುಪ್ಕಾಪ್ರೋ. ೦೯-೪). **ಹೊಱಕೆಯ್** : ೧. ದೇವ ಹೊಱಕೆಯ್ಯಿಂದ ತಟ್ಟಿ ಮರಳೀಶ್ವರನನಿಡೆ ನಗುತ (ಶಪಿಪು. ೩೬-೬೩). ೨. ಬೇರೆಯ ಕೈ ; ಇನ್ನೊಂದು ಹಸ್ತ : ಬಾಯೊಳುದಕಂ ಪೊಗದ ಹಾಗೊಕ್ಕಯ್ಯನಡ್ಡಂ ಬಾಚಿ ಮೇಣ್ ಹೊಱಕೆಯ್ಯ [ಪಾಠಾಂ. ಪೊಱಕೆಯ್ಯ]ಲುದಕವನೊಯ್ಯನೊಯ್ಯನವುಂಕಿ ತಿರುಹುವಳು (ಬಸಪು. ೧೫-೦೦). ೩. ಹೊರಗಡೆಗೆ (ಬೀಸಿ) ತೆಗೆದ ಕೈ : ಉಗಿದನುರಗಾಸ್ತ್ರವನು ಹೊಮ್ಮೂಡಿಗೆಯೊಳಗೆ ಹೊಱಕೆ[ಪಾಠಾಂ. ಕ]ಯ್ಯ ಗಾಳಿಗೆ ಹೊಗೆಯ ಹೊದಱಿನ ಹೊರಳಿ ಹಬ್ಬಿತು ಕೂಡೆ ಕಿಡಿಯಿಡುತ (ಕುಪ್ಕಾಳ. ೨೫-೪). **ಹೊಱಕೈ** : ೧. ಭರದೊಳೊಳಕೈಯಿಂದೆ ಹೊಱಕೈಯಿಂದೆ[ಪಾಠಾಂ. ಕೆಯ್ಯಿಂದೆ] ಹೊಡೆಹೊಡೆದು (ಬಸಪು. ೨೦-೪೩); ಗದೆಯ ಕೊಂಡಪ್ಪಳಿಸಿದನು ಹೊಱಕೈಯಲರೆದಿಟ್ಟಳಿಸಿದರನೆಡಗಾಲಲೊದೆದನು (ಕುಪ್ಕಾಳ. ೦೩-೦೬) ; ನಿಲ್ಲೆನುತ ಹದರಿಕ್ಕಿ ಹೆಡಕನು ಘಲ್ಲಿಸಲು ಹೊಱಕೈಯ[ಪಾಠಾಂ.ಕಯ್ಯ]ಲಾಬೆಯ ಹಲ್ಲುದುರೆ ಹೊಯ್ದೆಡದ ಮುಷ್ಟಿಯಲೆಱಗಿದನು ಬದಿಯ (ಶೊಪಲಾ. ೩-೧-೨). 'ಒಳಕೆಯ್' ಪರಾ. [ಪೊಱ (< ಪೊಱಗು) + ಕೆಯ್$_2$]

ಪೊಱಕೈ 'ಪೊಱಕೆಯ್' ನೋ.

ಪೊಱಗಡೆ, ಹೊರಕಡೆ, ಹೊರಗಡೆ ಹೊಱಗಡೆ (ನಾ). ೧. ಹೊರಭಾಗ; ಹೊರಪ್ರದೇಶ : ಅಱಗುಲಿಯಂ ಮುನ್ನೆಮ್ಮ ಗಱಿಗಳು ತಱಿದಿಂದ್ರನನಾ ಸಗ್ಗಮನೆನ್ನೀ ಸಱಿದಲೆಯಿಂ ಪೊತ್ತಂಬುಜಜನ್ಮಾಂಡದ ಪೊಱಗಡೆಗಾಗಿ ನುಱಿಯಪ್ಪಂದದಿ ಹಾಕದೊಡನಗೇತಱ ದೊಡ್ಡಿತ್ತು (ಜಯಕಾ. ೦-೩೩). **ಹೊರಕಡೆ** : ೨. ಕಕ್ಕಸಂ ; ಬಹಿರ್ದೇಶ : (ಕ). ೩. ಮಲವಿಸರ್ಜನೆ : ಮಗುವಿಗೆ ಹೊರಕಡೆಯಾಗದಿದ್ದರೆ—ಅರ್ಧದಿಂದ ಒಂದು ಚಮಚೆವರೆಗೆ ತುಲಸೀಎಲೆಯ ರಸ ಕುಡಿಸುವುದು (ಶುಸಮ. ೯). ೪. ಭೇದಿ; ವಿರೇಚನ : ಹೊರಕಡೆ ಹೋಗುವುದು ಕಡಿಮೆಯಾಗಲು ಔಷಧಿ ಕೊಟ್ಟಾಯ್ತು (ಮುಂಗಾಮು. ೦೦೩). **ಹೊರಗಡೆ** : ೧. ಹುಡುಗರೆಲ್ಲ ತರಗತಿಯ ಹೊರಗಡೆಯಲ್ಲೇ ಇದ್ದಾರೆ (ಕೂರಿ). ೫. ಹೆಂಗಸಿನ ಮುಟ್ಟು,- ರಜೋದರ್ಶನ : ಇವತ್ತು ಹೊರಗಡೆಯಾದ್ದರಿಂದ ಅವಳು ಪೂಜೆಗೆ ಬರಲಿಲ್ಲ (ಕೂರಿ). (ಗು). ೬. ಹೊರಭಾಗದ: ಹೊರಗಡೆ ಕೋಣೆ

ಯಲ್ಲಿ . . . ಚರ್ಚ್ ನಡೆಯುತು (ಕಾಶಾ. ೦೬೦). ೭. ಪರಸ್ಥಳದ ; ಬೇರೆ ಕಡೆಯ : ಹೊರಗಡೆ ಸಂಚಾರ ಹೊರಟರೆ ದೆಳ್ಳಿತಟ್ಟೆ, ಕ್ರಿಯಾಭ್ಯಸ್ಥಳಿಟ್ಟ ಇತ್ಯಾದಿಯೊಂದಿಗೇ ಹೊರಡಬೇಕು (ಮುಗ್ಧಾ. ೦೬). **ಹೊಱಗಡೆ** : ೧. ಮಂದಿರದ ಹೊಱಗ[ಣಾಂ. ಕ]ಡೆಯಲಾಡಿತ್ತಿರಲು (ಸಂಚಿ. ೬-೨೬ ೦೦ಕಾಚಿ. ೨) 'ಒಳಗಡ್ಡೆ' ಪರಾ. [ಪೊಱ (<ಪೊಱಗು) + ಕಡೆ]

ಪೊಱಗಱ್ 'ಪೊಱಗು' ಪರಾ.

ಪೊಱಗಣ 'ಪೊಱಗು' ಪರಾ.

ಪೊಱಗಯ್ 'ಪೊಱಕೆಯ್' ನೋ.

ಪೊಱಗು, ಪೊರಗು, ಹೊರಗು, ಹೊಱಗು (ನಾ). ೧. ಹೊರಗಡೆ : ಹೊರಭ್ಹಾಗ : ಪೊಸತ ಮೊಳೆತ ಧಾನ್ಯಂಗಳನಾ ಧರಣೀಶಂ ಕೆದಱಿಸಿದಂ ನಿರಂತರಂ ರಾಜಗೇಹದೊಳಗಂ ಪೊಱಗಂ (ಪಾಪು. ೦೩-೭) ; ಪೊಸಕಾ ಪುದೆಳದು ಪೊಱಗೊಳಗು ಸಮಮೆನಿಪ್ಪವಱೊಳ್ (ಗಾಪ್ಯಾ. ೨೬೯). ೨. ಹೊರತಾದುದು : ಇನಿತುಂ ಪುರಮೇವುದೊ ವೌದನಪುರಮೆನ್ನಾಳ್ಕೆ ಗಿಂತು ಪೊಱಗೆನಿಪಾಗಳ್ (ಆಂಪು. ೦೯-೨೮) ; ಸೆಟ್ಟಿಯಗ್ಗಂ ಪನ್ನಿಸಿಗಗ್ಗಂ ಗಾವುಣ್ಡಗಳ್ಗಂ ಬಿಟ್ಟ ಕೊಟ್ಟಣಂ ಬೀಡುದೆಸಂ ಪೊಱಗು (ಪೌಪು. IX-೧. ೭೭-೨೭ ; ೧೧೭). ೩. ಬಹಿರಂಗ ; ಬಾಹ್ಯ : ಒಳಗಂ ಭೇದಿಸದನ್ನಂ ಬೆಳಬುದ್ಧಿಗೆ ಪೊಱಗು ಬಿಟ್ಟತಾಗಿರ್ಕುಂ . . . ಜಿನಮಚನಂ (ಸಮಾಸ. ೩-೨೭). ೪. ಹೊರತಾದ ವ್ಯಕ್ತಿ : ಇದಂ ಮಹಾಜನಂಗಳ್ ಕಂಡರಪ್ಪೊಡೆ ಸಧಾಜನಕ್ಕಂ ಸಹಪಂಕ್ತಿಗಂ ಪೊಱಗೆಂದು ಸವಾಯದಾಹ್ವನಂ ಮಾಱ್ಪರ್ (ಪಂಚಮಂ. ೦೪೭-೦೮) ; ಈ ನೆಲದೊಳ್ ಪೊಱಗಾರುಮಿಲ್ಲೆನಲ್ ಮನ್ನಿಸಿ (ಪುಣ್ಡ. ೪-೦೦೯). ೫. ಉಳಿದಿರುವುದು ; ಅವಶಿಷ್ಟ : ಅಪಾಜಿತ ನಿತ್ಯ ಪರಂತಪನ ತಪಶ್ಚರಣಮೊಂದೆ ಪೊಱಗೆನೆ ನಿರ್ವೇಗಪರಾಯಣಂ ಮನಂಗೊಂಡು ಪವಿತ್ರಶ್ರಾವಕವ್ರತಂಗಳೊಳೊಣರ್ದಂ (ಜಾಂಪು. ೦-೭೭). **ಪೊರಗು** : ೧. ಒಳ್ಳಿತಂ ಸುಡುವ ಕಿಚ್ಚಂ ಪೊರಗಿನಿಂ ತಾನೆ ಒಳ್ಳಿದರ ನೆಚ್ಚಿದನೆ ಪಿಡಿದು ಪಡುಗಿಸುಗುಂ (ಕಾಪೂಲ. ೭೭-೦೯೦). **ಹೊರಗು** : ೧. ಹೊರಗಿನ ಕಳ್ಳಸನ್ನು ಹಿಡಿಯಬಹುದು, ಒಳಗಿನ ಕಳ್ಳಸನ್ನು ಹಿಡಿಯಲಾಗದು (ಗಾದೆ). **ಹೊಱಗು** : ೧. ಹೇಸುತ ಮಾಂಸಮಂ ಹೊಱಗತ್ಯ ನೂಂಕಿ ಶಿವಾಲಯವಿದವಿತ್ರವಾಯ್ತೆನುತ ಮತ್ತೆ ಮಿಂದು (ಜಪು. ೦೮-೭೯). ೨. ನಿನ್ನ ಸೌಕುಮಾರ್ಯಕ್ಕೆ ಹೂದೊಡಿಗೆ ಹೊಱ . . . ನಿನ್ನ ಲೋಚನಕ್ಕೆಳವಿಂಚು ಹೊಱಗು (ಸಂಚಿ. ೦೧-೦೨). ೩. ಅಭೇದ್ಯಚಿತ್ರಕಾಶಂಗೆ ಒಳಗು ಹೊ[ಱ]ಗಿಲ್ಲ (ಜಪು. ೪೪-೦೦೭) ; ಹೊಱಗನೆ ಕೊಯ್ದು ಹೊಱಗನೆ ಪೂಜಿಪುದರ ಕಂಡು ನಾಚಿದೆನಯ್ಯ (ಜಪಂ. ೧೭-೧೦೭). ೪. ಹೊಯ್ದಡಂಗುರವನವಂ ಹೊಱಗು ಹೊಱಗೀ ಸಭೆಗೆ ಹೊಯ್ ಡಂಗುರವನಾವನಾದೊಡಂ ಹೊಱಗೆಮಗೆ (ಕಬ್ಬಿ. ೮೧. ೭೪-೪) ; ಐದು ತಾಮಸಮೇಷಮನು ಬಳ್ಕೈದು ಪರವನಿತಾವ್ಯಸನಿಗಳಾದ ಗತಿಯನು ಹೊಱುವ ಪಾಪಕೆ ಹೊಱಗು ತಾವೆಂದ (ಕೊಡಾ. ೩-೯-೦೩).

ಪೊಱಗಱ್ = ಹೊರಗಡೆ : ಪೊಱಗಕ್ಕೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಲ್ಕೆಯೊಲಾಗಿರೆ (ಕಂಚಿಗಾ. ೧-೨೬) ; ಎಲೆಲೆ ಭಕ್ತ ಪೊಱಗಕ್ಕಗ್ಗಲಿಂದಂಡಲೆಯದೇಬ್ರದಿರಲುದ್ದಂಡನಿವಂ ಮಾಂಕೆನುತ್ತ ಪಿಡಿದರ್ ಕರಮಾ (ಕಾವ್ಯಲಿ. ೦೦-೩೭). **ಪೊಱಗಣ, ಪೊಱಗಣ, ಹೊರಗಣ, ಹೊಱಗಣ** = ೧. ಹೊರಭಾಗದ ; ಹೊರಗಡೆಯ : ಒಳಗಂ ದಕ್ಷಿಣಸುಕರದುಷ್ಕರಮಂ ಪೊಱಗಣ ಸುಕರದುಷ್ಕರಭೇದಮಂ . . . ಎಱೆಯೊಳೊರ್ವನೆ ಚಾರಿಸಲ್ ಬಲ್ಲಂ (ಪಂ. II. ೦೩೩-೩೩ : ೧೩೭) ; ಊರಿಂದಂ ಪೊಱಗಣ ಮೆಯ್ಕೊಳ್ಳು ಧರ್ಮಕ್ಕಾರಾನುಂ ಪುರಜಸವಿಟ್ಟ ಭೂಜಾಡಂ (ಪಚ್ಚು ೦೩. ೩-೦೯) ; ಬಸದಿಯ ಪೊರಗಣ ಪಟ್ಟಿಲ್ದೋ ಳ್ಪಿನಮಾ ಕಿಮ್ಮಾಲದೊಳು ಎಣ್ಗೊಳ್ವೆಡೆ ಎಳೆಮೊಮ್ಮೆದಿವ್ಯಯ ಮಗಂ . . . ಕೊಟ್ಟ ಮಾಣ್ದು (ಎಳೆ. X. ೦೩೦೫. ೧೦-೧೦ : ೪೦೩) ; ದರಿಯಾ ಬೀಬಿಯು . . . ಹೊಲಗಣ ವರ್ತ್ಮಾನವನ್ನು ತಿಳಿಸುತ್ತ ಇದ್ದಳು (೦೦೬ಮು. ೨೦೭) ; ಊರ ಹೊಱಗಣ ಮಸಣವಟ್ಟಿಗೆಯೊಳಿರಲಂದು ಹಾರ್ಯೆಸು ತೆಮ್ಮ ಮಯ್ಯುನನೊಲ್ದು ನಗುತಂದು (ಸಂಚಿ. ೬-೩೩) ; ನಱುಗಬ್ಬಿ ನೊಳಗಣ ರಸವ ಕಾಣದೆ ವಶ ಹೊಱಗಣೆಲೆಯ ಸವಿಮತೆ (ಕಬ್ಬಿ. ೦-೦೦೩). ೨. ಬಾಹ್ಯದ; ಬಹಿರಂಗದ : ಇವೆಲ್ಲ ಹೊಱಗಣ ಮಾತು (ಪಚಿ. ೬೦೦). **ಪೊಱಗಣಂ** = ಹೊರಗಿನವನಂ ; ಅನ್ಯ ; ಪರಕೀಯಂ : ಒಳಗಣಂ, ಪೊಱಗಣಂ, ಮುಂತಣಂ (ಪಮುಚ. ೦೦೦ ಪ್ರಕೃ) ; ಅರಿಷಡ್ವರ್ಗವನವನ ನೀಶ್ವರನಾಟಲೆಯೆ ಪೊಱಗಣರಿಗೆ ಜಯಾಂಗನೆ ಪಲ್ಮೊರೆದವಳೆನೆ ಪರಿಮುವ . . . ರಥಗಳ್ (ಪಾಂಚಿ. ೦೦-೧೪೯). **ಪೊಱಗಾಗು, ಹೊರಗಾಗು, ಹೊಱಗಾಗು** = ೧. ಬೇರೆಯಾಗು ; ಹೊರತಾಗು ; ಎರವಾಗು : ಕುವಳಯ ಬಾಂಧವನೆಸವನೆ ಕುವಳಯಮಂ ಬೆಳಗಿ ಕುವಳಯಂ ಪೊಱಗೆನೆ ಪಾಂಡವರೆ ಪೊಱಗಾಗೆ ನಿನಗೀ ಕುವಳಯಪತಿಯೆಂಬ ಪೆಂಪೊತಂಬಡೆ ನೃಪತೀ (ಪಂಚಕಾ. ೯-೩೭) ; ಜೀವಂ ಪೊಱಗಾಗಿ ಪದ್ಮ ಹಮುಮಾವಯ್ದಂದು ನಿರ್ಮೀರ್ಯ ಮಾಗಿರೆ (ಜಾಪಚ. ೨೬-೨೪) ; ಕೊಟ್ಟ ಹೆಣ್ಣು ಕುಲಕ್ಕೆ ಹೊರಗಾದರೂ ಹೆತ್ತೊಡಲಿಗೆ ಅವಳ ಚಿಂತನೆ ತಪ್ಪಿದ್ದೆಂದು ? (ಕೂಚ್ಚ. ೦೭) ; ಮಲ್ಲೇಶ್ವರ ದೇವರಿಗೆ ಸಿನ್ನಪೇಡದಲು ಬಿಟ್ಟ ಭೂಮಿ ಹೊಱಗಾಗಿ ಮೇಲಾದ ಭೂಮಿಯ ಪಡವಳಂ ದಂಡನಾಯಕಂ (ಶಿ. II. ೦೬-೦೬ : ೧೨೫) ; ಹೊಗಳಿಕೆಗೆ ಹೊಱಗಾದರ್ಕೆವರು ವಿಗಡರದಱೊಳಗಿಬ್ಬರೀದಿಂ ಪಗೆಗಳುಳಿದರು ಮೂವರೆಂದನು ಧಾನುಸುತ (ಕುಪಾ. ೪-೦೬). ೨. ಮಾಡದೆ ಉಳಿದಿರು,—ಹೊರಗಾಗಿರು : ಪಾರಲ್ಕೇಂ ಜೀವಿತಸಂಧಾರಣಕಿಂ ಗವನವೊಂದೆ ಪೊಱಗಾಗಿರೆ...ನಮಗಿದು ಕಾರ್ಯಂ (ಗಾದಂಕಾ. ೬೩೬). ೩. ಮುಟ್ಟಾಗು; ಋತುವಾಗು ; ಬಹಿಷ್ಠೆಯಾಗು : ಈ ದಿನ ಅವಳು ದೇವಸ್ಥಾನಕ್ಕೆ ಬರುವಂತಿಲ್ಲ, ಹೊರಗಾಗಿದ್ದಾಳೆ (ಜಾಪ). **ಹೊರಗಲ್ಲು**=ಹೊರಗಿನ ಕೆಲಸಗಳಿಗೆ ಬಳಸಂವಂಥದು ; ಮಡಿಯಲ್ಲದುದು : ಆ ಚೊಂಬನ್ನು ಅಡಿಗೆಮನೆಗೆ ತರಬೇಡ, ಅದು ಹೊರಗಲು (ಜಾಪ). **ಹೊಱಗನಾಲಿಸು**=ಹೊರಗಡೆಯಂ ಶಬ್ದವನ್ನು ಆಲಿಸು.—ಕೇಳು : ತಱಗೆಲೆ ಗಿಱಕೆಂದೊಡೆ ಹೊಱಗನಾಲಿಸುವೆ (ಶಿಪ. ೩೭೪) ; ಅಡಿಗಡಿಗೆ ಹೊಱಗನಾಲಿಸಿ ಮತ್ತೆ ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ ವನಿತೆಗಾದಾಪತ್ತನಾಲಿಸದೆ ತಿಱ್ಱು ದಟ್ಟಿಸುವರು (ಪಚಿಗಾ. ೦೩-೦೦).

[ದೇ. ತಮಿ. ಪುಜ, ಪುಱಕು, ಪುಱಕ್ಕು ; ಮಲ. ಪುಱ ; ಕೊಡ. ಪೊವೆಂ. ಕೋತ. ಪೊವಂಜಿ]

ಪೊಱಗುಂಡ, ಹೊಱಗೊಂಡ (ನಾ). ಹೊರಗಿನ ಕೆಲಸವನ್ನು ಮಾಡುವ ಆಳು. —ಸೇವಕ : ಖಂಡಿತಸ್ಮರಭಕ್ತನಳವಿಂಗೆ ಮೆಚ್ಚಿ ಶಶಿಮಂಡಲಾನನೆ ಭಕ್ತಿಯಿಂದೆಱಗಿ ಪಶುಪತಿಗೆ ಗುಂಡುದೊಳ್ತಾಗಿ ನೀನಿರ್ಪೊಡಾಂ ನಿನಗೆ ಪೊಱಗುಂಡನಾಗಿರ್ಪೆನೆನುತೆ (ಕಬ್ಬಕಾ. ೩-೪೬) ; ನಿನಗೆ ನಾನು ಪೊಱಗುಂಡನಾಗಿರುವೆನೆಂದು ಶಿವದೀಕ್ಷೆಯಾ ಪಡೆದು (ಕೃಶಿ. I. ೩೬). **ಹೊಱಗುಂಡ** : ಈ ವಿಶ್ವಂ ಸೃಜಿಸುವಲಿ ಶಂಭುವಿನ ಲೀಲಾವಿಡಂಬನದ ಹೊಱಗುಂಡನಾಗಿರ್ಪುದಱಿನಾ ವಿಮ್ಮನಗಾದುದು ಕಲತ್ರಾಪ್ತಿ (ಕಬ್ಬಕಾ. ೦೦ ೩೬).

[ಪೊಱ (<ಪೊಱಗು) + ಗುಂಡ (ಪ ← ತೆಲು. ಗುಂಡ = ಸೇವಕ)]

ಪೊಱಗೆ, ಹೊರಗೆ, ಹೊಱಗೆ (ಅ). ೧. ಹೊರಗಡೆಗೆ ; ಆಚೆಗೆ : ದುರ್ಯೋಧನಂಗಿಂ ಪುಗಲ್ಕೆಡೆ ತ್ರೈಭೂಭುವನಂಗಳಿಂ ಪೊಱಗೆ ಮತ್ತೆಲ್ಲಿತ್ತೊ ಬಾಣಾಂತಕಾ (ಕಂಚಿಗಾ. ೦೩-೩೩) ; ಒಳಗೆ ದೆಳಗು, ಪೊಱಗೆ ಕಟ್ಟಲೆ (ಶಾಪಾಶೂ. ೩೯ ಕಾದಂ.) ; ಮಹಾವಿಭವದಿಂದಿರುತೆ ಬ್ರಹ್ಮಾಂಡದಿಂ ಪೊಱಗೆ ಶಿವಲೋಕಮಂ ನೆನೆದ ಮಾತ್ರದೊಳಾಗಿಸೆ (ಕೊಪು. ೦೩-೨೦). ೨. ಬೇರೆಯಾಗಿ ; ವ್ಯತಿರಿಕ್ತವಾಗಿ : ಅವಱಿಂ ಪೊಱಗೆ ಮೂಳಾವೃತ್ತ

ದಂಡಕಂಗಳ್ ಮಾತ್ರಾನಿಯಮಸ್ಕಂಧಕಾದಿಜಾತಿಗಳೆಂಬಿವಕ್ಕುಂ (ರಂಗೋಂಬು. ೦-೪೬ ಪ). ೩. ಬಹಿರಂಗಪಲ್ಲಿ ಬಾಹ್ಯದಲ್ಲಿ: ಅತ್ತಿಯ ಪಣ್ಗಳಂತೊಳಗಶುದ್ಧನುಂ ವಟಫಲದಂತೆ ಪೊಱಗೆ ಸೇವ್ಯನುಂ (ಧರ್ಮಾಮ್ಯ. ೬-೬೨); ಪೊಱಗತುಳಧೃತಿಯನಾಂತಂ ನೆಱೆ ಮನದೊಳ್ ತ[illegible]ವ ಕುಸುಮಾವಳಿಯಂ (ಕುಸುಮಾ. ೦೦-೦೦೩); ಮನೋಜನೆಚ್ಚ [illegible] ಪಿರಿದೊಳ ನಟ್ಟಿರಲ್ ಪೊಱಗೆ ತೋಱುವ ನುಣ್ಗಱಿಯಂತಿರೊಪ್ಪುಗುಂ (ಕಾಸ್ಯಸಾ. ೩೯೩). ೪. ಬಳಿಕ; ಅನಂತರ: ಅಂತು ಪೊಱಮಟ್ಟ ಪೊಱಗೆ ಅವರೋಧ ಪ್ರಮದಾಕದಂಬವಿಗಳತ್ಕಾಶ್ಮೀರಸಾರಂ . . . ತೇಂಗೆ ತರಂಗಮಾಲೆ ರತಿ ಕಂದರ್ಪಂಗೆ ತೀವಿಟ್ಟ ಬಣ್ಣವುರಂ ತಾನೆನೆ ಕಣ್ಗೆ ಮಾಡಿದುದು ಕಾಸಾರಂ ಸುಖಾಸಾರವುಂ (ಅಸಂಪು. ೬-೩೦ ಪ). **ಹೊರಗೆ**: ೧. ಹೀನಾಮಾನವಾಗಿ ಬೈದು, ಹೊರಗೆ ಕಳುಹಿಸಿದರು (ರಾಯಳ. ೬೨); ಅವು ಹಣ್ಣಾದವೆಂದರೆ ಬಿಸಲಿಗೂ ಗಾಳಿಗೂ ಅರಳಿ ಒಳಗಿನ ಹತ್ತಿ ಹೊರಗೆ ಬರುತ್ತದೆ (ಸುಂಬಿಯಾ. ೯-೨೭). ೩. ಈ ವರ್ತಮಾನವನ್ನು ಹೊರಗೆ ಹಬ್ಬಿಸದೆ (ಸುಜಾಪಂ. I. ೨೩೨). **ಹೊಱಗೆ**: ೧. ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊಱಗೆ ತೊಳೆದಂತೆ (ಬಸಪ. ೦೦೯); ಇಱಿದು ಚಕ್ರವ್ಯೂಹವನು ಕುಱಿದಱಿಯ ಮಾಡಿ ಕಿರೀಟಿಯದಱಿಂ ಹೊಱಗೆ ಹಂಸವ್ಯೂಹದಲಿ ಕೆಣಕಿದನು ಕಾಳೆಗವ (ಕುಸ್ಯಾಪ್ರೋ. ೦೦-೦೯); ಹೊಲೆಯ ಹೊಱಗಿಹನೆ ಊರೊಳಗಿಲ್ಲವೆ (ಪುರಂದ. ೦-೦೭೬ ಪಲ್ಲವಿ). ೩. ಒಳಗೆ ಕುಟಿಲ ಹೊಱಗೆ ವಿನಯವಾಗಿ ಭಕ್ತರೆನಿಸಿಕೊಂಬವರ ಬಲ್ಲನೊಲ್ಲನಯ್ಯಾ ಲಿಂಗವು (ಬಸಪ. ೯೬); ಹೊಱಗೆ ಶಶಿಪರನಿತ್ತ ಹಸಿದೆನೆಂದೆನುತಿರಲು (ಇಳಿ.ರೇ. ೩೯-೦೮); ಒಳಗೆ ಕುಜನರು ಹೊಱಗೆ ಧರಣೀವಳೆಯ ಮಾನ್ಯರು (ಕುಸ್ಯಾಸ. ೦-೩೯). 'ಒಳಗೆ' ಪರಾ.

ಪೊಱಪೊಱಗೆ, ಹೊಱಹೊಱಗೆ (ದ್ವಿರುಕ್ತಿ): ಪಸರಿಸಿದ ಪಯಃಪೂರದ ಪೊಸವೆಳ್ಪು ನಿಜಾಂಗರುಚಿಯ ಪೊಱಪೊಱಗೆ ಪೊದಟ್ಟಿಸೆದಿರೆ (ಅಂಪು. ೬-೯೨); ಅಡ್ಡಾಯುಧನಿಹತಿಯಿಂ ಹೆಱೆದಲೆಯವನ ದೇಗುಲದ ಹೊಱಹೊಱಗೆ ಬಿದ್ದುದು ಖಳನ ತಲೆ (ಬಸಪು. ೨೮-೨೬). **ಪೊಱಗಿಕ್ಕು, ಹೊಱಗಿಕ್ಕು** = ೧. ಹೊರಗಡೆ ಇಡು: ತರುಣಿಯರಾ ವಿಲಾಸಕುಸುಮಾಸ್ತ್ರನನೀಕ್ಷಿಸಕಾಮತಾಪದಿಂ ತರುಣಮೃಣಾಳಮಂ ತೆಗೆದು ಪೂಗೊಳದಿಂ ಪೊಱಗಿಕ್ಕಿದಂದದಿಂ ಕೊರಗಿ (ಸುಲ್ಲಪು. ೩-೨೬); ಕಡೆದು ಕಲಂಕಿ ಮುನ್ನಖಿಳವಸ್ತುಗಳಂ ಪೊಱಗಿಕ್ಕಿ ಸಂಪದಂಗಿಡಿಸಿದ ಮೇರು ದೈವದಿನಿದಿಂದೊಳಗಾಯ್ತೆನಗೆಂದು ಬಂದು ಪಾಲ್ಗಡಲಮಂಬ್ರಿಯಂ ಮುಳಿದು ಮುತ್ತಿದುದೆಂಬಿನಂ (ಪುಷ್ಪಪು. ೦೦-೩೩). ೨. ದೂರೀಕರಿಸು; ಬಹಿಷ್ಕರಿಸು; ತ್ಯಜಿಸು: ಮುನ್ನಂ ಪಟ್ಟಿಯರುಮನಾಪ್ತರುಮಂ ಪೊಱಗಿಕ್ಕಿ ಪತಿಗೆ ಹಿತೋಪದೇಶಂ ಗೆಯ್ಯರ್ (ಹಂಪಕಂ. ೦೩೯-೨೦); ಆ ಗುರುಗಳಂದೈದುಮಂತ್ರವನಾಗಜಪಿಸುತೆ ಚಿತ್ತದೊಳು ಲೇಸಾಗಿ ಜಿನಪದಭಕ್ತಿಯಲ್ಲದೆ ಪೆಱವ ಪೊಱಗಿಕ್ಕಿ (ಸಾಳ್ವಾ. ೩-೩೩); ಕುಲದ ಬೇರಿಗೆ ನೀನೆ ಗುದ್ದಲಿಗೊಳಲದೇಕೆ ಸುಪುತ್ರನಾಗಿದನಲಘುವಿಪ್ರರು ಕೇಳಿದಡೆ ಹೊಱಗಿಕ್ಕರೇ ನಿನ್ನ (ಬಸಪು. ೩-೩೬). ೩. ಮೇಲಕ್ಕೆ ತಳ್ಳು; ಮೇಲಂ ಮುಖವಾಗಿ ದೂಡು: ನೀರು ಹೊಱಗಿಕ್ಕುವುದು ಮೂಱೇ ಬಾರಿ (ಕುಸ್ಯಾಪಿ. ೩-೨೬). **ಪೊಱಗಿಡು, ಹೊರಗಿಡು, ಹೊಱಗಿಡು** = ೧. ಹೊರಗಡೆಯಲ್ಲಿ ಇರಿಸು: ಅಡಗಟ್ಟ ಮಡಕೆಯಂ ಪೊಱಗಿಡುವಂತೆ ಕೂಟನಟ್ಟ ಮಡಕೆಯನೇಕೆ ಹೊಱಗಿಡರ್ (ಧರ್ಮಾಮ್ಯ. ೬-೯೩); ತಮ್ಮಾಯುಷ್ಯ ಭಾಷೆಗಳಂ ಪೊಱಗಿಡುವಂತೆ ಚಪ್ಪರದ ಪೊಱಗೆ ಮೆಲ್ಲನಿಳುಪಿ (ಪಂಬರ. ೬-೩೩); ಮಳೆಯಲ್ಲಿ ಕೊಡೆ ನೆನೆದು ಒದ್ದೆಯಾಗಿದೆ. ಬಿಡಿಸಿ ಹೊರಗಿಡು (ರೂಢಿ); ತಂದು ಹೊಱಗಿಟ್ಟು ಕಬ್ಬಿಲರ ಕೈವಿಡಿದು ನೀವೆಂದ ಪ್ರಸಾದವಿದೆ ಕೊಳ್ಳಿಯೆನಲು (ಸಿದ್ಧರಾ. ೩-೦೫). ೨. ದೂರೀಕರಿಸು: ಮುದಿಯನುಮ್, ಮಡೆಯನುಮ್ ನೀನ್ ಎಂಬುದೊರ್ಮೆಯೇ ಪೊಱಗಿಡದ ಮುನ್ನಮ್ (ಅಂತಿಗೂ. ೦೩-೨೬೯); ಬೇಡ, ತಡೆಯದಿರು, ಪೊಱಗಿಡಯ್ ಎನ್ನ ಮುಂದಿನ ಪಾಡುಮನ್ (ಬಸ್ಯಪ್ರ. ೩೩-೭೦೬).

[<ಪೊಱಗು]

ಪೊಱಗೋಟೆ, ಹೊರಕೋಟೆ, ಹೊಱಕೋಟೆ (ನಾ). ೧. ಒಳಕೋಟೆಗೆ ಬೇರೆಯಾದ ಸುತ್ತಣ ಕೋಟೆ; ಹೊರಗಿನ ಕೋಟೆ. ೨. ಕೋಟೆಯ ಹೊರಭಾಗ: ನೊಟಂಬಿ ದಡಿಗ ರಾಚಮಲ್ಲ ಮಯ್ದಾಡಿ ಗುಣ್ಡಿಗೆ × × ವಾಗಿ ಬರುಬಳಿಸಿ ಬಿಟ್ಟಡೆ ಪೊಱಗೋಟೆಯಿಟ್ಟಟಿವಲ್ಲಿ ಪಲರಾ ಪಯಣದ ಮಱು[ವ]ಕಸೂರಮಾಱ್ಪಡಿರಕಸ ಮನುಜರಾ ದೇವನಿಱಿದು ಬಿಟ್ಟ (ಸೌಸಾ. IX-i. ೦೩-೭; 900). **ಹೊರಕೋಟೆ**: ೧. ಮುತ್ತಿನ ಒಳಕೋಟೆ ಮುತ್ತಿನ ಹೊರಕೋಟೆ ಮುತ್ತ ಬಿಗಿಸ್ಯಾರ ಹುಲಿಮುಖಕ (ರೋಕಗೀ. ೭೯). **ಹೊಱಕೋಟೆ**: ೧. ಮುಱಿಯಲಿಱಿದು ಹೊಱಕೋಟೆಯ ಕೊಂಡು ಮತ್ತುಱುಬಿದರೊಳಗೋಟೆಗಂದು (ಕಂಪಪಿ. ೦೬-೦೩೯). 'ಒಳಕೋಂಟೆ' ಪರಾ. [ಪೊಱ (<ಪೊಱಗು) + ಕೋಟೆ$_1$ (<ಕೋಂಟೆ)]

ಪೊಱಡ 'ಪೊಱಂಡ' ನೋ.

ಪೊಱಡು$_1$ 'ಪೊಱಮಡು' ನೋ.

ಪೊಱಡು$_2$ 'ಪೊಱಂಡು$_2$' ನೋ.

ಪೊಱತು, ಪೊರತು, ಹೊರತು$_1$, ಹೊಱತು (ನಾ). ಹೊರಗೆ ಉಳಿದುದು; ಬೇರೆಯಾದುದು; ಪ್ರತ್ಯೇಕವಾದುದು: ಬರತೆಗೆದುದೊ ನೃಪನ ಗುಣೋತ್ಕರಮೆನೆ ಕಳುಪಲ್ಕೆ ಕಡೆಯ ಬಾಗಿಲ್ವಾಡಂಬರೆಗಂ ಬಂದುದು ಕಾದಂಬರಿ ಪೊಱತಾಗಖಳಕನ್ಯಕಾನಿಕುರುಂಬಂ (ಕಾದಂಬಾ. ೦೬೯). **ಪೊರತು**: ತಮ್ಮ ಜನಕಸುತೆ ಪೊರತಾಗಿ ಲಂಕಾನಗರಿಯನ್ನು ಕಿನಿಸಿಂದ ಭಸ್ಮಸಾತ್ಕೃತಗೈದನೇಂ ಪ್ರೌಢನೆನುತೊರೆದರಾಗಸದೊಳು (ಪಂಕಾರಾ. ೫-೦೬-೩೮); ಸಂತಾಪವನೀವ ಘೋರತರಕೋಪದಿ ಕೇಳ್ ಪೊರತಾದೆ (ಅಮಶ. ೩೭). **ಹೊರತು$_1$**: ಹೊಳೆಯ ತೀರದ ಹಸಿರುಹುಲ್ಲುಹಾಸಿಗೆಯು ಎದೆಯ ಸೆಳೆಯುವುದು ಮನವು ಹೊರತಿಹುದು (ಬಿಪಾಸೆ. ೦೨-೬); ಕಾಲ ದೇಶದ ಪ್ರಭಾವದಿಂದ ಎಂಥ ಮಹಾಕವಿಯಾದರೂ ಹೊರತಾಗಲಾರನು (ಶಪಾ. ೭೯). **ಹೊಱತು**: ತಂಮ್ಮ ಹಳಿ ಕೆಂಪಿತಿಯನು ದೇವಾಸ ಹೊಱತಾಗಿ (ಎಳ. VII. ಶಿಪಮೊ. ೯೭-೩; 1218); ಹರಹರಾ ಇನ್ನಾರೊ ತಂಗಿಗೆ ವರನು ವಾರಿಧಿ ವಲಯದವನೀಶ್ವರರು ನೆರೆದಿದೆ ರೂಪು ವಿಕ್ರಮವೆರಡು ಹೊಱತಾಗಿ (ಕುಸ್ಯಾಪ. ೦೯-೩೩); ತನಗೆ ನಿಮ್ಮೊಲವೆಂಬ ಭಾಗ್ಯದ ಘನತೆಯುಳ್ಳಡೆ ಸಾಕು ಹೊಱತನು ನೆನೆಯಲಾಗದು (ಕೌತಿರಾ. ೩-೨೯).

ಹೊರತು ಪಡಿಸು = ಬೇರೆ ಮಾಡು; ಪ್ರತ್ಯೇಕಿಸು: ಹಿಂದಿನ ಪೀಳಿಗೆಯ ಕತೆಗಳಲ್ಲಿಯ ಸೋಲನ್ನು ಮಾಸ್ತಿಯವರ ಕತೆಗಳನ್ನು ಹೊರತುಪಡಿಸಿಯೇ ಹುಡುಕಬೇಕಾಗುತ್ತದೆ (ಹೊಸಕ್ಷಿ. ೨೭೬).

[ದೇ.॥ ತಮಿ. ಪುಱತ್ತು]

ಪೊಱತೆಗೆ, ಹೊರತೆಗೆ, ಹೊರದೆಗೆ, ಹೊಱದೆಗೆ (ಕ್ರಿ). ೧. ಇರುವ ಕಡೆಯಿಂದ ಬೇರೆ ಕಡೆಗೆ ಒಯ್ಯು,—ಸಾಗಿಸು: ಸುಡಲ್ ಚಿತಾರೂಢನಾಗಿರ್ದ ಶ್ರೀವಿಜಯನುಮಂ ಕಂಡು ಬೇಗಮಗ್ನಿಕುಂಡದಿನುರ್ವೀಶ್ವರನಂ ಪೊಱತೆಗೆದು (ಶಾಂತಿಪು. ೬-೩೯ ಪ). **ಹೊರತೆಗೆ**: ೨. ಬಹಿರಂಗ ಪಡಿಸು; ಪ್ರಕಾಶಪಡಿಸು: ಅರೆಯೊಳು ಬೈತೊಂದು ಚಾರುವಿಗ್ರಹವನು ವರಶಿಲ್ಪಿ ಪರಿಭಾವಿಸುತ್ತೆ . . . ಹೊರತೆಗೆದನು ಮತ್ತೆ (ಇಂಕಾಪ. ೦೬೯-೭೬). **ಹೊರದೆಗೆ**: ೧. ನೆಕ್ಲುದೋವ್ ಚರ್ಮದ ಚೀಲವನ್ನು ಹೊರದೆಗೆದು . . . ನೋಟೊಂದನ್ನು ಕೊಟ್ಟನು (ಪುಪರು. ೨೬೬). **ಹೊಱದೆಗೆ**: ೩. ಬೇರೆಯಾಗು; ಹೊರತಾಗು: ಉನ್ನತದ ಸುಖದುಃಖದಲಿ ಸಂಪನ್ನನಾಗದೆ ಹೊಱದೆಗದು ತಾನೇಕನಾಗಿಹುದು . . . ಈ ಭವವ ದಾಂಟುವರೆ (ನಿಭಾಗ. ೦೦-೫-೦೬). 'ಒಳದೆಗೆ' ಪರಾ. [ಪೊಱ (<ಪೊಱಗು) + ತೆಗೆ$_1$]

ಪೊಱತೊಲಗು (ಕ್ರಿ). ೧. ಹೊರಕ್ಕೆ ಹೋಗು. ೨. ಮುಟ್ಟಾಗು ; ಬಹಿಷ್ಠೆಯಾಗು : ಕಾಂತೆಯರು ಪೊಱತೊಲಗೆ ಋತುವೆನಿಕು (ಸುಂಗರಾ. ೦೩೬-೪). [ಪೊಱ (<ಪೊಱಗು) + ತೊಲಗು$_1$]

ಪೊಱದಡಿ (ನಾ). ಜಲಾಶಯದ ಆಚೆಯ ದಡ : ತೊಱೆಯ ಪೊಱದಡಿಯ ಕರಂಜಕುಂಜದೊಳ್ ಸಂದಣಿಸಿ ನಿಂದು ರೋಮಂಥ ಲೀಲಾತತ್ಪರತೆಯಿಂದರನಿಮೀಲಿತಾಕ್ಷಂಗಳಾದ ಕಾಡೆರ್ಮೆಯ ಮೊಗದಿನುಗುವ ನೊರೆಯನುರುಳಿಗೊಂಡು ತಂದಡವಿಯ ಗಿಡುಗಳೊಳ್ ಗುಡಿಗಟ್ಟಿದಂತೆ ತೊಡರ್ಚಿಯುಂ (ಕಂದ್ರಪು. ೬-೪ ಪ). [ಪೊಱ (<ಪೊಱಗು) + ತಡಿ$_2$]

ಪೊಱದೋಂಟ (ನಾ). (ಊರು, ನಗರ ಮೊದಲಾದುವುಗಳ) ಹೊರಗಡೆಯಿರುವ ತೋಟ,—ಉದ್ಯಾನವನ ; ಹೊರಭಾಗದ ತೋಟ : ಕೋಂಟೆಗಳನೇಱಿಳಿದು ಪರಿಖೆಯ ಜಲಂಗಳಂ ದಾಂಟಿ ಕತ್ತಲೆಯೊಳೊರ್ವನೆ ಮಂತ್ರಿ ಪೊಳಲ ಪೊಱದೋಂಟದೆಡೆಯೊಳ್ನೆಲಸಿ ದಂಬಿಕಾಭವನಮಂ ಸಾರ್ದನು (ಕೈಮಿಪಾ. ೩೦-೩೪).

[ಪೊಱ (<ಪೊಱಗು) + ತೋಂಟ]

ಪೊಱನೋಟ, ಹೊರನೋಟ (ನಾ). ಹೊರಗಿನ ನೋಟ; ಬಾಹ್ಯ ದೃಷ್ಟಿ : ಅಱಿತು ನಿಟ್ಟಿಸೆ ಗಂಡುಮಕ್ಕಳಿಂದತಿಶಯದೆಱಕದೊಳೆಸೆವ ಪೆಣ್ಗಳನು ಪೊಱನೋಟದಿಂದ ನೋಡದೆ ಪೋಲೆನಿಸದೆ ಮಱುಕವೆರಸಿ ಮನ್ನಿಪುದು(ಹರಿಶಿ. ೩-೦೩). **ಹೊರನೋಟ** : ಹೊರನೋಟಕ್ಕೆ ಕಾಣುವ, ಪುನರಾವರ್ತನೆಯೆಂದು ತೋರುವ ಇಲ್ಲಿನ ಕೆಲವು ಭಾಗಗಳಿಗೂ . . . ಭಿನ್ನಾಭಿಪ್ರಾಯಗಳಿವೆ (ಜಗರಾ. ೨). 'ಒಳನೋಟ' ಪರಾ.

[ಪೊಱ (<ಪೊಱಗು) + ನೋಟ]

ಪೊಱಪಚ್ಚ, ಹೊಱಹಚ್ಚ (ನಾ). ೧. ಮೇಲುಹೊದಿಕೆ : ನಿಚ್ಚಿಲಿ ಕಾರಿರುಳೊಳ್ ಪೊಱಪಚ್ಚಮನುಟ್ಟಿರ್ದಿಱುಂಕಿ ಕಕ್ಷದೊಳಾ ಪಾಟಚ್ಚರಭಯದಿಂದುಟ್ಟು ಪಟಚ್ಚರಮಂ ಮನೆಗೆ ವಂದು ನಿಂದಂಗಣದೊಳ್ (ಶಾಂತಿಪು. ೬-೩೩). ೨. ಹೊರಗಿನ ವೇಷ ; ಬಾಹ್ಯವೇಷ : ಅಂತಾದೊಡಾಂ ಪುರುಷನಲ್ಲ ನಪುಂಸಕನುಮಱಿಯದವರ್ಗೆ ಪೊಱಪೊ[ಪ]ಚ್ಚದ ಶೃಂಗಾರಮಂ ಮೆಱದು ಪುರುಷಾಕಾರದೊಳಿರ್ಪಂ (ಪುಷ್ಪಾಸ್ತ್ರ. ೩-೨೩ ಪ). **ಹೊಱಹಚ್ಚ** : ೨. ಎನ್ನ ಭಕ್ತನೆಂದೆಂಬರು ಎನ್ನ ಹೊಱಹಂಚೆ[ಹಚ್ಚ]ಒಳಬೊಳ್ಳೆತನವನಱಿಯರಾಗಿ (ಐಸಪ. ೩೦೩) ; ನಿಮ್ಮ ನಿಜವನಱಿಯದ ಶರಣರು ಹೊಱಹಚ್ಚ ಒಳಬೊಳ್ಳೆವೊಲ್ಲರು ಲಿಂಗೈಕ್ಯರು (ಸಮಾಪ.ಳ. ೩೯೦-೭) ; ಇದಱ ವಿಶೇಷವೋನಿದಱ ದೊಡ್ಡಿತದೇನೊಳಬೊಳ್ಳೆಯಾದ ವೇಷದ ಬಲುಹೇನಿದಕ್ಕೆ ಹೊಱಹಂಚೆಯ[ಹಚ್ಚದ]ಲೇನಹುದು (ಕಶಳ. ೩೩) ; ಶ್ರುತಿಗಳ ಮಾರ್ಗಮೊಂದು ನಡೆಯೊಂದು . . . ನಾಡೆ ಹೊಱಹಚ್ಚದ ಭಕ್ತಿಯೊಳಿರ್ಪನಾದ್ವಿಜಂ (ತ್ರಿಪುಸಿ. ೨೬-೦೪೬). [ಪೊಱ (<ಪೊಱಗು) + ಪಚ್ಚ$_2$]

ಪೊಱಪಾಯ್ 'ಪೊರವಾಯ್' ನೋ.

ಪೊಱಪಾಳೆಯ, ಪೊರಪಾಳೆಯ, ಹೊಱಪಾಳೆಯ (ನಾ). ಊರ ಹೊರಗಿನ ಸೈನ್ಯದ ಪಾಳೆಯ,—ಬೀಡು : ಕೋಂಟೆಯಂ ಪತ್ತಿ ಪೊಱಪಾಳೆಯವನೀಕ್ಷಿಸುತ್ತಿರ್ಪಿನಂ (ಕಬಪು. ೪೨-೦೩). **ಪೊರಪಾಳೆಯ** : ಬೆದರಿದನಗಸ್ತ್ಯಂ ತ್ರಿಶಂಕು ತಲ್ಲಣಗೊಂಡ ಚದರಿ ಪೊರಪಾಳೆಯಂ ಪಾಳಾಯ್ತು (ಸಂಕಾರಾ. ೫-೦-೨೩). **ಹೊಱಪಾಳೆಯ** : ಶಾಲಾವೀಧಿಯೊಳಗೆ ಸಂದಣಿಪ ಕಾಲಾಳುಗಳಾಯುಧದೆಳಗು ಪೇಳಲಳವೆ ಹೊಱಪಾಳೆಯದರ ಕಣ್ಣ ಕೀಲಿಸಿ ಕದುಕದಿಱಿದುವು (ಕಂಪಸಿ. ೦೩-೩೨).

[ಪೊಱ (<ಪೊಱಗು) + ಪಾಳೆಯ]

ಪೊಱಪುರ್ವು (ನಾ). ಹುಬ್ಬಿನ ಹೊರಭಾಗ ; ಭ್ರೂಮಧ್ಯ : ಕಣ್ಣ ಪೊಱಪುರ್ವು[ಶಾಕಾಂ. ಬುರ್]ಗಳ್ಗಂ ನುಣ್ಣನೆ ಭ್ರೂಮಧ್ಯವೆಸರೆ ಹಯಶಾಸ್ತ್ರದೊಳಂ (ಅಶ್ವಕಾ. ೯-೦೭). [ಪೊಱ (<ಪೊಱಗು) + ಪುರ್ವು]

ಪೊಱಪೊಣ್ಮು, ಪೊರಪೊಣ್ಮು, ಹೊರಹೊಮ್ಮು, ಹೊಱಹೊಮ್ಮು (ಕ್ರಿ). ೧. ಹೊರಗೆ ಹರಿ ; ಹೊರಸೂಸು : ಅಂತು ಮನದೊಳಾದ ಮೋಹರಸಮೆ ಕಣ್ಣಿಂ ತುಳುಂಕುವಂತೆ ಪೊಱಪೊಣ್ಮುವ ನಯನಜಲಂಗಳ ನುತ್ತರೀಯವಲ್ಕಲವಸನೋಪಾಂತದೊಳೊತ್ತುತ್ತುಂ (ಪಂಪಭಾ. ೬-೨ ಪ) ; ನದಿಯಿಂ ಸ್ರವಣಂ ಪೊಱಪೊಣ್ಮೆ ಮಿಕ್ಕುವೊಕ್ಕರಣೆಯ ನೀರ್ಗಳುರ್ಕಿ ಪೊಱಪೊಣ್ಮೆ ಘನಾಗಮದೊಳ್ ವಿನಿಂದಿತಂ (ರೋಕೋಪ. ೪-೭೪). ೨. ಕಾಣಿಸಿಕೊಳ್ಳು ; ಪ್ರಕಟವಾಗು ; ವ್ಯಕ್ತವಾಗು : ಗುರುಕರುಣಾರಸಮದು ಮನದಿಂ ಪೊಱಪೊಣ್ಮೆ (ಪಂಪಭಾ. ೦೦-೦೨೯) ; ಮನೋನುರಾಗಮೆ ತನುವಿಂ ಪೊಱಪೊಣ್ಮುವಂತೆ ಪುಳಕಕುಳಂ ಭೋಂಕನೆ ನೆಗೆಯೆ (ಶಾಂತಿಪು. ೩-೩೭); ಏದೆ ಪಿಡಿದದಂ ಮನವಾರೆ ತಾಳ್ದನವರತಿದುರ್ಗುಣವನಂತಮುಖದೆ ಪೊಱಪೊಣ್ಮೆದಂತೆ (ಪದ್ಮರಾ. ೦೧-೦೯). ೩. ಹೊರಗೆಲ್ಲ ಹರಡು,-ಆವರಿಸು,-ವ್ಯಾಪಿಸು : ಆಕೆಯ ವಿಲಾಸಹಾಸಮೆ ಪೊಱಪೊಣ್ಮೆದಂತೆ ಬೀದಿಬೀದಿಗಳೊಳೆಡೆಗಿಱಿದು ಕೆದಱಿದ ಕುಸುಮರಜಂಗಳುಂ (ಅಂಪು. ೬-೩೭ ಪ) ; ಮುನೀಶನ ಹೃದಾತ್ಮಜ್ಯೋತಿ ಮೆಯ್ವೆರ್ಚಿ ಪಜ್ಜಳಿಸುತ್ತಂ ಪೊಱಪೊಣ್ಮೆತೆಂಬ ತೆಱದಿಂ (ಕುಸುಮಾ. ೦-೦೨೦) ; ಮಂಜೀರಕಧ್ವನಿ ಪಂಚಬಾಣಶರಾಸನಧ್ವನಿಯಂತೆ ವಿಸ್ತಾರದಿಂ ಪೊಱಪೊಣ್ಮಲ್ (ದಶಕು. ೦೨-೩೦). ೪. ವ್ಯಾಪಕವಾಗಿ ನೆರವೇರು : ರಾಜ್ಯಾಭಿಷೇಕೋತ್ಸವಂ ಪೊಱಪೊಣ್ಮುತ್ತಿರೆ ರಾಜ್ಯಮಂ ಕುಡೆ (ಅಂಪು. ೬-೨೩). ೫. ಹುಟ್ಟು; ಆವಿರ್ಭವಿಸು: ತತ್ಸ್ಥಳಸ್ಥೂಲಭುಜಂಗನಿಶ್ವಸಿತಮಾ ನಗದಿಂ ಪೊಱಪೊಣ್ಮೆ ಲೋಲಕಲ್ಲೋಲ ಪರಂಪರಾಪರಿಗತಂ ಮುದತ್ತು ನಗೋಪಕಂಠದೊಳ್ (ಅಪಪು. ೪-೬೩) ; ತುಂಬುವೆಱೆಯಿಂ ಪೊಱಪೊಣ್ಮುವ ಜೊನ್ನದಂತೆ (ರಾಜಕೇ. ೦-೬೪). ೬. ಮೇಲಕ್ಕೆ ಚಿಮ್ಮು; ಪುಟಿ : ಚಕಿತತರಂಗಸಂಘಹತಿಯಿಂ ಪೊಱಪೊಣ್ಮುವ ಮುತ್ತು ದಿಗ್ವಧೂನಿಕರದ ತೊಟ್ಟ ಮುತ್ತಿನೊಳೊಡಂಬಡೆ (ಜಗದಿ. ೦-೪೪). **ಪೊರಪೊಣ್ಮು** : ೨. ನಲ್ಲೆಯ ಹೃದಯಮಂದಿರದೊಳು ನಲ್ಲನು ಎನಿತೆನಿತೊಳಪೊಗುತಿಹನು ಪೊರಪೊಣ್ಮೆತನಿತನಿತಾಕೆಯ ಕೊಡವೊಲೆ ಸಂಕೋಚದಿಂದೆಂಬವೋಲೆ (ಇಂಕಾಪ. ೦೬೩-೨). **ಹೊರಹೊಮ್ಮು** : ೧. ಹೃದಯವು ಅರಳಿ ಪ್ರೇಮಪ್ರವಾಹವೇ ಹೊರಹೊಮ್ಮಿರುವ ಸಂದರ್ಭವು ರಾಮಾಯಣದಲ್ಲಿ ವರ್ಣಿತವಾಗಿರುವುದು(ಸೀಗಟ್ಟು. ೨೭). ೨. ಯಾವಾಗಲೂ ನಗು ಅವರ ಮುಖದಲ್ಲಿ ಹೊರಹೊಮ್ಮುತ್ತಿತ್ತು (ಕುಂಕುಮ. ೨೯) ; ಅವರ . . . ತತ್ತ್ವದರ್ಶನಗಳು ವಿಶಿಷ್ಟ ಗದ್ಯದ ವಚನವಾಗಿ ಹೊರಹೊಮ್ಮಿ ಕನ್ನಡಕ್ಕೆ ಸ್ವಾನುಭವಸಾಹಿತ್ಯದ ಸಂಪತ್ತಿಯನ್ನು ಒದಗಿಸಿದುವು (ಶಪಸಿ. ೩೦) **ಹೊಱಹೊಮ್ಮು** : ೨. ನುಡಿವಲ್ಲಿ ಗದ್ಗದಂಗಳು ಹೊಱಹೊಮ್ಮದಿದ್ದರೆ . . . ಆನು ಡಂಭಕ ಕಾಣೆರೇ (ಬಸವ. ೩೭೯) ; ಕಾಮಾಗ್ನಿಯಲಿ ಕಾದ ಹೃದಯಸ್ಥಗಳ ಜ್ವಾಲೆ ರೋಮಕೂಪದೆ ಹೊಱಹೊಮ್ಮಿ ಧೂಮ ತಳ್ತುದು ಚಿತ್ರಲೇಖೆಯ ವರಮುಖಸೋಮಂಗೆ ಸ್ವರ್ಭಾನುವೆನಿಸಿ (ಮೋಹಶ. ೨೬-೬೦). ೩. ಹರಿಯುದರದೊಳಿಹ ಹದಿನಾಲ್ಕುಜಗಗಳ ಪರಿಪರಿಯತುಳವಿಸ್ತಾರ ಹೊಱಹೊಮ್ಮಿ ತೋರ್ಪೊಲು ಬಹುಬಗೆ ಪುತ್ತಳಿ ಮೆಱೆದುವೊಳಪ್ರಾಕಾರದಲಿ (ಕಂಪಸಿ. ೭-೮೬). ೭. ಮುಂದೆ ಬರು ; ಹೊರಚಾಚು : ಹುಟ್ಟುದರಿದ್ರಗೆ ಬಹಳಸಂಪದ ವರೆ ನೆಟ್ಟನೆ ಕೊರ್ವುವಂದದಲಿ ಕಟ್ಟಾಯತಿ ವೆತ್ತ ಸತಿಯ ತಳೋದರ ನೆಟ್ಟನೆ ಹೊಱಹೊಮ್ಮಿತಾಗ (ಮೋಹಶ. ೦೭-೩).

[ಪೊಱ (<ಪೊಱಗು) + ಪೊಣ್ಮು]

ಪೊಱಪೊಸಂತಿಲ್ (ನಾ). ಹೊರಬಾಗಿಲಿನ ಹೊಸ್ತಿಲು ; ಹೊರಗಿನ ಹೊಸ್ತಿಲು : ತುಂಬಿದ ಗುಂಬಮಂ ಪೊಱಪೊಸಂತಿಲ ಪಕ್ಕದೊಳಿಟ್ಟು (ಜಕವಿ. ೪-೩೩). [ಪೊಱ (<ಪೊಱಗು) + ಪೊಸಂತಿಲ್]

ಪೊಱಬಳಸು, ಹೊಱವಳಸು (ನಾ). (ಕೋಟೆಯ) ಹೊರವಲಯ: ಸುತ್ತುಮುತ್ತು : ಲಗ್ಗೆವಱೆ ಮೊಳಗಿದುವು ಕೂಗಿದುವು ತಮತಮಗೆ

ಬೊಗ್ಗು ಹೆಗ್ಗಾಳೆಗಳ್ ಬಿಡದೆ ನಡೆಗೋಂಟೆಗಳ ಮೊಗ್ಗರಂ ನೂಂಕಿದುವು ಪುರದ ಪೊಱಬಳಸಿನೊಳ್ ಪಡಿಯಟ್ಟಣೆಗಳೆದ್ದುವು (ಪಂಪು ೪೨-೨೯). **ಹೊಱವಳಸು :** ಹೊಱವಳಸಿನಿಂ ಕುದುರೆ ಅದಱಿಂ ಹೊಱವಳಸಿನಲಿ ಆನೆ ನಿಂದವು (ಸಾಳ್ವಶಾ. ೨೨-೬೬). [ಪೊಱ (< ಪೂಱಗು) + ಬಳಸು$_3$]

ಪೊಱಬಿಗ, ಹೊರಬಿಗ, ಹೊಱಬಿಗ$_1$ (ನಾ). ಹೊರಗಿನವನು; ಸಂಬಂಧ ಪಡದವನು : ಅನ್ಯ ; ಪರಕೀಯ : ನಂದಿತಾದುದಿನಕುಲದೇಳ್ಗೆ ಭೂವಲಯದೊಳ್ ತನ್ನ ಬಾಣಮಂ ಬಂಜೆಗೈದಪರೆ ಪೊಱ[ಪಾಠಾಂ. ಲ]ಬಿಗರೆಂದನು (ಶೈಪುಶಾ. ೨೦-೩೯); ಏತಕೆನೆ, ತಾಮವರ್ ಕ್ರೂರಿಗಳ್. ಪೊಱಬಿಗರನುಱದವರ್ (ಐದ್ಯಪ್ರ. ೩೬-೬೦೯). **ಹೊರಬಿಗ :** ನನ್ನ ಬಾಣವನ್ನು ಬಂಜೆಗೈಯುವುದು ಹೊರಬಿಗರಿಂದ ಸಾಧ್ಯವೇ ? (ಬಿದುರಿ. ೨೨೪). **ಹೊಱಬಿಗ$_1$:** ಜಾತಿವೃತ್ತಿಗೆ ಹೊಱಬಿಗನು ತಾನಾದೆನಿನ್ನಾದರೆ ಸಲಹ ಬೇಕೆಂಬ ವಿಟರ ನೃಪಾಲನೀಕ್ಷಿಸಿದ (ಜೀವಂಶ. ೦೬-೬೦) ; ಅರಗಿಣಿ ವಜ್ರ ಪಂಜರದೊಳಗಿರ್ದ ಬಳಿಕ ಅಂಜಲಿಕೇನು ಕಾರಣ ಹೊಱಬಿಗರೆಂಬ ಮಂಜರ ಕೈದುಡುಕುವುದೆ (ಮೋಹತ. ೩೦-೩೯).

[ಪೊಱಬ್ಬು (ಪ←ತಮಿ. ಪುಱಮ್ಬು) + — ಇಗ]

ಪೊಱಬೀಡು 'ಪೊಱವೀಡು' ನೋ.

ಪೊಱಮಟ್ಟು 'ಪೊಱಮಡು' ಪರಾ.

ಪೊಱಮಡಿಸು, ಹೊರಡಿಸು, ಹೊಱಡಿಸು, ಹೊಱಮಡಿಸು, ಹೊಱವಂಡಿಸು, ಹೊಱವಡಿಸು (ಕ್ರಿ). ೧. ಹೊರಗೆ ಬರುವಂತೆ ಅಥವಾ ಹೋಗುವಂತೆ ಮಾಡು : ಈಗಳೆ ಪೋಗಿ ಪೂಗೊಳನಂ ಮುತ್ತಿ ದುರ್ಯೋಧನನಂ ಪೊಱಮಡಿಸಿ ಪಗೆಯಂ ಪಱಿವಡಿಪುದು (ಗದಾಯು. ೬-೩೮ ಪ) ; ಪೊಱಲೊಳಗೆ ಪೊಗೆಯನಿಕ್ಕಿ ಪಾವಂ ಪೊಱಮಡಿಸಿ ಕಳ್ದುಕೊಂಡೊಡವೆಯಂ ಕುಡುವೆಂ (ಪಂಪಕಂ. ೦೭೭-೦೬) ; ಒಡಲೊಳಗಣ ವಾಯುವನಲ್ಲಿಂದವೆ ಪೊಱಮಡಿಸಿದ ಮಾಳ್ಕೆಯೊಳರವಿಂದವಿಶಾಲವಿಲೋಚನೆಯಾ ನಿಡುಸುಯ್ಕುರವೊಪ್ಪಿದುದು (ಪಡುಕಾ. ೪-೩೦). ೨. ಪಾರುಗಾಣಿಸು ; ಪಾರುಮಾಡು : ಸಂಸರಣಾಂಭೋರಾಶಿಯಿಂದಂ ಪೊಱಮಡಿಸೆನಗಂ ನೀನೆ ಹಸ್ತಾವಲಂಬಂ (ಅಧಿಪು. ೨-೪೯); ದುಸ್ತರಸಂಸಾರಾಬ್ಧಿಯಿಂದಂ ಪೊಱಮಡಿಸುಗೆ ಸದ್ಧರ್ಮರಾಪಾರ್ಯರೆಂದುಂ (ಸುಳುಪಾ. ೦-೩). ೩. ಅಟ್ಟು ; ತಳ್ಳು ; ದೂರೀಕರಿಸು : ಪಡಿಯಱನಿಂದಮೆಱೆಯಿಸಿ ಪೆಡತಲೆಯಂ ಪಿಡಿದು ನೂಂಕುತ್ತರಮನೆಯಿಂದಂ ಪೊಱಮಡಿಸಿಯಟ್ಟಿ ಕಳೆದು (ಪಡ್ಮಾಣಾ. ೦೬೬-೩); ಒರ್ವ ಬೆಲೆವೆಣ್ ಕುಟಿಲತ್ವದಿಂದುಳ್ಳೊಡಮೆಯನೊಂದೊಂದು ನೆವ ಮಿಟ್ಟೆಲ್ಲವಂ ಕವರ್ದತಿದರಿದ್ರನಂ ಮಾಡಿ ಪೊಱಮಡಿಸಲ್ (ಶಾಸ್ತ್ರಪ. ೧೦-೬೬ ಪ). ೪. ಹೊರಕ್ಕೆ ಬರಲು ಸಹಾಯ ಮಾಡು : ಮತ್ತಂ ಮುತ್ತ ಕುರುಡ ತವಸಿಗಳ ಕೈಯಂ ಪಿಡಿದುಯ್ದವರ ಗುಹೆಗಳಂ ಪುಗಿಪ ಪೊಱಮಡಿಪ ಚಪಳಕಪಿಗಳುಮಂ . . . ನೋಡಿ (ಪಂಪಶಾ. ೦-೦೦೩ ಪ). ೫. ಬೀಳ್ಕೊಡು : ದೂತನಂ ಪೊಱಮಡಿಸಲಾತಂ ಬಂದು . . : ಪೇಟೆ (ಪುಷ್ಪಾಸ್ತ್ರ. ೩-೩೩ ಪ). **ಹೊರಡಿಸು :** ೧. ಸೇಕಪಾತ್ರಂ, ಸೇಚನಂ—೨ ಹಡಗಿನೊಳಹೊಕ್ಕು ಬರುವ ನೀರನ್ನು ಹೊರಕ್ಕೆ ಹೊರಡಿಸುವ ಪಾತ್ರಕ್ಕೆ ಹೆಸರುಗಳು (ಸಿದ್ಧಾಂತಿ. ೬೦) ; ಆಗ ಅಮ್ಮನು . . . ಸುಪ್ರಭೆಯನ್ನು ಗದರಿಸಿ ಕೊಠಡಿಯಿಂದ ಹೊರಗೆ ಹೊರಡಿಸಿದಳು (ಮೊಗ್ಗು. ೬೨). **ಹೊಱಡಿಸು :** ೩. ಘನವಾದೊಡವೆ ಕೈಸೇರುವ ಪರಿಯಂತ ಮನೆ ದೇವರೆಂದುಪಚರಿಸು ಅನುಗೆಡಲಾತನ ಹೊಱಡಿಸಿ ಮತ್ತೊಬ್ಬ ಧನವುಳ್ಳ ಪುರುಷನ ಕರೆಕೊ (ಳಂಪಪಿ. ೬-೦೩೦); ಸೆಟ್ಟಿ ಕಂಡು ಹಾದರವಾಡಿದಳೆಂದು ಹೆಂಡತಿಯ ಹೊಱಡಿಸಿ ಬಿಟ್ಟನು (ಶೈಕಸಾ. I. ೦೬೨). **ಹೊಱಮಡಿಸು :** ೩. ಛೀ ಛೀ ಛೀ ಹೋಗೆಂದು ಹೊಱಮಡಿಸುವೆನಮ್ಮ (ಶಿಪಗೀ. ೦೩೭-೬೯೬ ಪ). **ಹೊಱವಂಡಿಸು :** ೧. ಹೊಯ್ಸಣ ಮಣ್ಡಳಿಕ ಬಲ್ಪಿಂಗೆ ಹೋಗದಿರಲುಪಾಯದಿಂ ಹೊಱವಣ್ಡಿಸಿದ ಸಮಯದೊಳ್ (ಕಇ. IV. ೦೬-೩ ; 1166); ಪೌರಜನವೈತರಲು ಬಂಡಿಯನೂರ ಹೊಱವಂಡಿ[ಪಾಠಾಂ. ಟಿ]ಸಿದನು (ಕುಪ್ಯಾಅ. ೦೦-೨೯) ; ಬಲ್ಲಿದ ವೀರಭಟರೊತ್ತಾಗಿ ಹೊಱವಂಡಿಸಿದರನಿಲಜನ (ಕೊರರಾ. ೩-೮-೨೯). **ಹೊಱವಡಿಸು :** ೧. ತೋಪಿನೊಳಬಿದ್ದವರ ಹೊಱವಡಿಸಿ ಮುಱಿದು ತಳಿಗಳ ಬಲಿದು ಬಾಗಿಲ ಹೊಱಗೆ ನಿಂದರು (ಕುಪ್ಯಾಅ. ೦೬-೩೦) ; ಕೈಕೊಳಿಸಿ ಕಾದಿ ಕುಬೇರನನು ಹೊಱವಡಿಸಿದರು ಪುರವ (ಕೊರರಾ. ೦-೮-೨೬).

ಪೊಱಮಡಿಸಿ ಕಳೆ = ಹೊರಕ್ಕೆ ಹಾಕು ; ದೂರಮಾಡು ; ಬಹಿಷ್ಕರಿಸು : ಇನ್ತೀ ಧರ್ಮ್ಮಮಂ ನಗರಂ ಪ್ರತಿಪಾಳಿಸುವುದು ನೈಷ್ಠಿಕರಲ್ಲದರ ಪೊಱಮಡಿಸಿ ಕಳೆವುದು (ಎಕ. VII. ಶಿಕಾಂ ೦೨೬-೩೨ ; 1036) ; ಅಂತವರನರಮನೆಯಿಂ ಪೊಱಮಡಿಸಿ ಕಳೆದು ಪರವಾದಿಯಂ ದಾನ ಸನ್ಮಾನಾದಿಗಳಿಂ ಸಂತೋಷಂಬಡಿಸಿ (ಸುಳುಪಾ. ೨-೨೯ ಪ).

[ಪೊಱಮಡು + — ಇಸು$_3$]

ಪೊಱಮಡು, ಪೊರಡು, ಪೊರಮಡು, ಪೊಱಂಡು$_1$, ಪೊಱಡು$_1$, ಪೊಱವಂಡು, ಪೊಱವಡು, ಹೊರಡು$_1$, ಹೊರಮಡು, ಹೊರವಡು, ಹೊರಹೊಂಡು, ಹೊಱಂಡು, ಹೊಱಡು$_1$, ಹೊಱವಂಡು, ಹೊಱವಡು (ಕ್ರಿ). ಪೊಱಮಟ್ಟು, ಹೊಂಟು, ಹೊರಟು$_1$, ಹೊರವಟ್ಟು (ಭೂತನ್ಯೂ). ೧. ಒಂದೆಡೆಯಿಂದ ಬೇರೆಡೆಗೆ ಹೋಗು.— ಚಲಿಸು.— ತೆರಳು : ಎರಡುಮ್ಬಲದ ವೀರಭಟರ್ಕ್ಕಳೋಟ್ದು ಪೊಱಮಟ್ಟು (ಎಕ. VIII. ಸೊರಬಿ. ೦೦-೩; ಸು. 800); ಅಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ (ಪಡ್ಮಾಣಾ. ೬೬-೨೬) ; ರಾಜಮಂದಿರದಿಂ ಪೊಱಮಟ್ಟು ಬರೆ (ಪಂಪಶಾ. ೪-೬೯ ಪ) ; ಕಾಮದೇವರೀಗಳೆ ಕೊಳಗುಳಕ್ಕೆ ಪೊಱಮಡಲಕ್ಕುಂ (ರಾಮಾಶ್ವ. ೯೩-೨೨). ೨. ಹೊರಕ್ಕೆ ಬರು ; ಹೊರಬರು : ಅಱಿಪಿದಂ ಗುರುಭಾರ್ಗವನಿಂತೀಯೊಡ್ಡನಿದಂ ಗೆಲಲುವನುಂ ನೆಱೆಯನುರ್ಕಿನಳುರ್ಕೆಯನೊರ್ವಂ ಪೊಕ್ಕೊಡೆ ಪೊಕ್ಕನೆ ಮತ್ತಣಂ ಪೊಱಮಡಂ (ಪಂಪಶಾ. ೦೧-೬೬) ; ಒಱೆಯಿಂದುರ್ಚದೆ ನಡುಗುಮೆ ನೆಱೆದೆಡೆಯಂ ಖಟ್ಗಮಾಸ್ಯಕೋಶದಿನಿನಿಸುಂ ಪೊಱಮಡದೆ ಕೊಂದು ಕೂಗಲ್ ನೆಱೆದುದು ದುರ್ಜನನ ನಿಶಿತರಸನಾಖಡ್ಗಂ (ಸೂಕ್ತಿಸು. ೦-೩೦) ; ಅರೆದೆಱೆವಬ್ಬದೊಳಿರುತಿರ್ದ ಮಱಿದುಂಬಿ ಸ್ವರ ಮಾಡಿ ಪೊಱಮಡುವಂತೆ (ಭರತ. ೩-೩೭). ೩. ಹೊರಹೊಮ್ಮು ; ಹೊರಸೂಸಂ : ಪೊಱಮಟ್ಟವೊಲಾದುದುಷ್ಣದೀರ್ಘೋಚ್ಛ್ವಾಸಂ (ಅಧಿಪು. ೧೩-೩೬) ; ಕಣ್ಮಲರ್ ನಟ್ಟು ಸುಯ್ಗಳ್ ಪೊಱಮಟ್ಟೊಂದೊಂದನಟ್ಟುತ್ತಿರೆ (ಕಾದಂಪೂ. ೦೯೨). ೪. (ಮಾತು) ಹೊರಬರು ; (ಧ್ವನಿಯು) ಕೇಳಿ ಬರು ; ಕಿವಿಗೆ ಬೀಳು : ಕನಸಿನೊಳಮಿಾ ಕಪಿಂಜಲಮುನಿವದನದೊಳನೃತಭಾಷೆ ಪೊಱಮಡದು (ಕಾದಂಪೂ. ೬೬೬) ; ತಣ್ಪೇಱಿದ ಪಱೆಯಂತೆ ದನಿ ಪೊಱಮಡದೆ (ಧರ್ಮಾಮ್ಯ. ೦-೦೬೬) ; ಪೊಱಮಡುವ ಸಾಪದಕ್ಕರದ ಪೊಯ್ಲಿಂಗೆ ನಡುಗುವಂತೆ ಕೆತ್ತುವ ತುಟಿಯುಂ (ಕಬ್ಬಿಗಾ. ೩೦೦). ೫. ಹೊರಗೆ ಕಾಣಿಸಿಕೊಳ್ಳು ; ಗೋಚರವಾಗು ; ಆವಿರ್ಭವಿಸು : ಪೊಱಕಣ್ಣಂ ಮುನ್ನಂ ತಾಂ ಮಱಿಸಿದ ನೊಸಲೊಂದು ಕಣ್ಣುಮಾಗಳ್ ನೊಸಲಿಂ ಪೊಱಮಟ್ಟಂತಿರೆ ತೋಱಿದನೆಱಕದೆ ಹರಿಗಂಗೆ ರುದ್ರನಗ್ಗಳಗಣ್ಣಂ (ಪಂಪಶಾ. ೬-೨೩) ; ದೇಶಿಕೇಂದ್ರಾಕಾರದಿಂದ ಲಿಂಗಮಧ್ಯದೊಳಭವ ಪೊಱಮಟ್ಟನು (ಸೌಂದಪು. ೬-೨೬) ; ಪೆಣ್ಮೇನ ಬಸಿಱ ಬಗಿವೆನೆಂದೆನುತ ಅಸಿಧಾರೆಯಲಿ ಮೆಲ್ಲೆರ್ದೆಯ ಬಗಿಯಲಾ ಶಿಶು ಪೊಱಮಟ್ಟುದಾಶ್ಚರ್ಯ (ಮೋಹತ. ೦೦-೪೦). ೬. (ಸಭೆ, ಸ್ಥಳ, ದೇಶ ಮುಂತಾದುವನ್ನು) ಬಿಟ್ಟು ನಡೆ ; ತೊಲಗು : ಬಾಳದಿನೇಶಬಿಂಬದೊಂದೆಸಕದಿನಾ ದ್ವಿಜನ್ಮಸಭೆಯಂ ಪೊಱಮಟ್ಟೊಡೆ ಮಾಸಿದುದಮುಂ ಪಸದನದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ

(ಹಂಪಕಾ. ೬-೬೦) : ಇನ್ನೆನ್ನಾಳ್ವ ದೇಶದೊಳಿರದೆ ಪೊಱವಟ್ಟು ಪೋಗೆಂದು ಜಡಿದು ನುಡಿದೊಡೆ (ಪಡುಗಬ್ಬ. ೨-೧೮). ೭. ಬಿಡುಗಡೆ ಹೊಂದು ; ಪಾರಾಗು : ಏಮ್ಮಡಿ ನೀವೆಮ್ಮನೀಯುಪಾಯಸ್ಥಳದಿಂ ಪೊಱಮಡುವ ಪಾಯಮುಂ ಮಾಡಿದಿರಪ್ಪೊಡೆ ನಮ್ಮ ಧರ್ಮದಿಂ ಸುಖಂಬಾಳ್ವೆಮೆಂಬುದುಂ (ಹಂಪಕ. ೧೪-೯) ; ತಾಪದಲಿ ಸಂಸಾರಕೂಪದಲಿ ಬಿದ್ದವರು ಅವತ್ತನೆಲದು ಪೊಱಮಡಲು ಗುರುಪದ ಸೋಪಾನವಯ್ಕ (ಕರ್ಣಾ. ೧೩). ಪೊರಡು : ೧. ನಿಲ್ಲದಲ್ಲಿಂದ ರಾಘವ ಪೊರಟು ಮುನಿಯೊಡನೆ . . . ತೆರಳಿದಂ ಮಿಥಿಲಾಪುರಿಗೆ (ಪಚಟ. ೨-೮) ; ಅಲ್ಲಿಂದ ಪೊರಟು . . . ಪ್ರಖಾಢ ಶತವಿಶಟಾಲಯಂಗಳಂ ಶೋಧಿಸಿದನು (ಪಂಗಾಡಾ. ೬-೬-೧೨) ! ಕಳವರುಂ ಕೋಲೂರಿ ಪೊಟ್ಟುರೇಂ ಪೆರ್ಮೆ (ಕಾಒಕ. ೦೪೯-೬೫೬). ಪೊರಮಡು : ೧. ಕಣ್ಣನಾರಾಯಣನ್ ತನ್ನ ಮನೆಯನ್ಕನ್ನವಿಟ್ಟು ಪುಗುತನ್ದೊಡೆ ಅಱಿದು ಪೊರಮಟ್ಟು ಪೋತ(ಂ)ನ್ದು ಕದಿ ತಲೆಯನ್ದಟ್ಟಿ ನಾಲ್ವರಾನಱಿದೊನ್ (ಸೌಆ. IX-I, ೬-೯೦ ; ೦೬೫ು ೫೪) ; ರಣವಧೂ ವಲ್ಲಭಂ ವಿಜಯಂ ವಿದಯಕೇದು ಪೊರಮಟ್ಟು (ಜಾಗಂಗ. ೭೦-೧೧೪೪) ; ಪಡಮಿನಿಂ ಪೊರಮಡಲ್ ಕಾಲೂರ ಕಣ್ಗಳಿಂ ಪುದಿದ ಬಳಿವಿಡಿದ ಮದುಮುಗನ ಮೆರವಣಿಗೆ (ಕಾಒಕ. ೦೬೦-೬೨೯). ಪೊಱಿಂದು[1] : ೮. ಹೊರಕ್ಕೆ ಚಾಚಿಂ ; ಉಬ್ಬು : ಕವಿಗೊರಲಿಟ್ಟಾದೆರ್ದೆ ಪೊಱಿಂಟ ಬೆನ್ ಬಾಹ ಬೃಱಿಡಂಗಿದ ಜಘನಂ (ಪುಷೋಚ. ೨-೭೮). ಪೊಱಿಡು[1] : ೧. ಗಮಿಸಿದನು ಮುನಿಯೊಡನೆ ಹರುಷೋದ್ಗಮದಲಾತನ ಬೆಂಬಳಿಯಲಾ ಕ್ರಮದಿನಾ ಸೌಮಿತ್ರಿ ಸಹಾಗದಿ ತ್ವರಿತದಿಂ ಪೊಱಟ[ಜಾಣಂ. ಕಳುಹಿಸಿಕೊಂಡ ನಾ ನೃಪನ] (ಕೊಡಾ. ೦-೯-೧೨). ೭. ಭೂಕಾಂತ ಬಜ್ಜಳನೃಪಾಲಂ ಪುರವಿಹಾರಚಿತ್ತಂ ತನಗೆ ಪುಟ್ಟಿಲರಮನೆಯನೊಲವಿಂ ಪೊಱಿಡೆ (ಪಚಟ. ೦೦-೨). ಪೊಱಿವಂಡು : ೨. ಮುಳ್ಳುಂ ಸಿವುರುಗಳುಂ ನಟ್ಟಲ್ಲಿಯೆ ಪೊಱಿವಂಡದಿರ್ದು ದಾತೊಡೆ ಮತ್ತಂ ಕಲ್ಲೊತ್ತೆಗರ್ದುಗ್ದವ ವಂಳ್ಳಿಸಿ ಯೊಲೆಗಲ್ಲ ಸೇಕಗೆಯ್ಯಲ್ ಮಾಣ್ಗುಂ (ಕೋಳೂಕ. ೯-೦೬೩). ಪೊಱಿವಡು : ೨. ಒಡಲಿಂದಲಸು ಪೊಱಿವಡುವವೊಲು ಪೊಱಿಮಟ್ಟನಲ್ಲಿಂದ (ಜಾಳ್ಕಾ. ೦೩-೨). ೭. ತಳೆದ ಮಾಣಿಭೂಷಾಗಳೆಲ್ಲವ ಕಳಚಿ ದುಃಖವನು ಗುರುವಿ ವಂಳ್ಪುಗೆ ನೀವನುಪಿ ಸಹಿತೆಱಿಗಿ ಪೊ[ಜಾಣಂ. ಹೊ]ಱವಟ್ಟನು ನಿಜಾಲಯವ (ಪಚ. ೯-೧೦). ಹೊರಡು[1] : ೧. ಹಿಂದೆ ಆನವೇರಿ ಹನುವಂತದೇವರು ಹೊರಟು (ಎಳ. VII. ೫೮೫. ೦೦೭-೨೪ ; 1576 ?) ; ಗರ್ವಕ್ಕೆ ತಕ್ಕ ಫಲವನ್ನು ಈಗ್ಗಲು ಸಿದ್ಧನಾಗು. ಹೊರಡು (ಜಾಬಿ. ೬). ೨. ಒಳಗಿನಿಂದ ಹೊಗೆ ಹೊರಡುತ್ತಿದೆ. ಜನ ವಾಸವಾಗಿಲ್ಲ ಎನ್ನುತ್ತೀಯಲ್ಲ (ಕೂಪ). ೪. ಶಕ್ತಿಯಿಲ್ಲದ ಶಬ್ದ ತೀತನ ಬಾಯಿಂದ ಹೊರಡವು (ಜಾತೀಜ. ೦೦೦). ೫. ಬಿತ್ತಿರುವ ಕಾಳಿನ ಮೊಳಕೆ ಹೊರಡಲು ಒಂದು ವಾರ ಬೇಕಾಗುತ್ತದೆ (ಕೂಪ). ೯. (ಕಾರ್ಯ ವಾಡಲು) ತೊಡಗು,— ಪ್ರಾರಂಭಿಸು : ಮೊದಲು ಹೊರಟಿದ್ದು ಕನ್ನಡಕಾವ್ಯದಲ್ಲಿ ಸೌಂದರ್ಯ ಸಮೀಕ್ಷೆಗಾಗಿ (ಸೌಂದರ್ಶ. I, ಕೂಪಾ ಪುಟು). ಹೊರಮಡು : ೧. ಪಡಿವೇಳದಾ ಕರಿಯನಣ್ಣನ ಹಿಂದೆ ಹೊರಮಟ್ಟನೆಂತಾದೊಡಂ ಕೋಸಲದ ರಾಣಿಯನರಸಲೆಂದು (ಕ್ರಿಣಾಪು. ೫೫೬-೬೯೨). ಹೊರವಡು : ೧. ರಾಮದೇವನು ಬೇಟಿಗೆ ಹೊರವಟ್ಟು ಹಿರಿಯ ಹನ್ದಿಗೆ . . . ತಾಗಿ ಕೊನ್ದು (ಎಳ. IX. ಕಂಗಳೂ. ೬೨-೬ ; ಕು. 1080). ಹೊರಹೊಂದು : ೧. ಆ ದೂತರು ತಮ್ಮೊಡೆಯನಿಗೆ ಅಭವಂದನೆಯಂಗೈದು ಹಸಾದವೆಂಬ ಹೊರ ಹೊಂಟು (ಪಚಟೋಚ. ೬೬). ಹೊಱಿಂದು : ೨. ಕೊಳದಿಂ ಹೊಱಂಟು ವುರ್ವರೆಯಾನ್ನಾನುತ್ಸವ ಪಡಕ್ಷರಿಯ ಮಂತ್ರಮಂ ಸ್ಮರಿಸುತ್ತ . . . ವಾಂದಳಿರ ಮಂಟಪದಲಿ ಕಳಿತು (ಪೋಪು. ೬-೨೬). ಹೊಱಿಡು[1] : ೧. ಎಂತು ಪಾವಿಲ್ಲಿಂದ ಹೊಱಿಡುವ ಯತ್ನವೆಂದುತದ ಯೋಚನೆಗೈದು (ಕಂಪೂ. ೪-೦೩) ೨. ಮಿಕ್ಕ ಕೆಂಗಜಿಗೋಲ್ಗಳಿಂದಲ ಹೊಕ್ಕ ಮಾತ್ರದಿ ಹೊಱಿಟೆದೆಯಲ್ಲಿ ರಕುತವ ಮುಕ್ಕುಳಿಸಿತು (ಕೋಚಕ. ೪೫-೪೬). ೪. ವುರುಷರ ನುಡಿ ಹೊಱಿಡದ ಮುನ್ನ ಸ್ತ್ರೀಯರು ಹಂಸದೆ ಮೇಲಿಕ್ಕುವರು (ಕೋಚಕ. ೦೦-೦೩). ೮. ಕವಿದ ನಡುವಿನ ಹೊಱಿಟ ಬೆನ್ನಿನ ಬೀಸುಗೈಗಳ ಡೊಂಕುಗಾಲುಗಳ (ಪಚಪ್ರ. ೨೦-೦೦). ಹೊಱಿವಂಡು : ೧. ಹೃದಯದೊಳ್ಗಹನ್ನಕ್ಕರ ಲಿಂಗಪ್ರಾಣಿ ಹೃದಯದಿಂದ ಹೊಱಿಯಿಂಕೆ ಹೊಱಿವಂಟರೆ ಭವಿ (ಆಪಕ. ೦೦-೦೬) ; ಫಲಗುಣನ ತೆಕ್ಕೈಗವಿನು ಹೊಯ್ ಹೊಯ್ಮೆನುತ ಹೊಱಿವಂಟರತಿರಥರು (ಕುಣ್ಕಿಕ್ರೀ. ೦೦-೦೬) ; ಮಱಿದು ಮುಳಗಿದ ದಾಲಿಯ ಬಟ್ಟೆಡವಿಯಲಿ ಹೊಱಿವಂಟನಾ ವನವ (ಪಚಪ. ೬-೦). ೪. ಸಿಕ್ಕಿದಳಿ ಹೊಱಿವಂಟವಟ್ಟಂಗಳ ಬಸುಱಿಳಿದರ್ದು (ಪಚಪು. ೦೨-೪೬). ಹೊಱಿವಡು : ೧. ಹೊಸತಿಲ ಪೂಜೆಗೆ ಹೊಱಿವ[ಜಾಣಂ. ಹೊಡವಂ, ಹೊರವಂ]ಟ್ಟು ಹೋದ ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ (ಪಚಪ. ೪೨೨) ; ಕೋಟಿತಥಗಳು ರಣಕೆ ಹೊಱಿವಡಲು (ಶಾಖಣಾ. ೨೦-೬) ; ವಿಲಸಿತರತ್ನ ಭೂಷಿತನಾಗಿ ಹೊಱಿವಟ್ಟ ಕಲಿಗಳ ದೇವ ಕಾಳೆಗಕೆ (ಪೋಚಕ. ೪೦-೯). ೪. ಜೀವಿತ × × × ಮಾಱಿ ಹೊಱಿವಟ್ಟು ಹೋಹ ಸುಂಕ ಸಹಿತ ಧಾರೆಯನೆಱಿದು ಬಿಟ್ಟರು (ಸೌಆ. IX-I, ೦೪೬-೪೬ ; 1079) ; ಜನವು ಹೊಱಿವಡುತಿರಲು ಪದ್ಮಾವತಿ ನಿರೀಕ್ಷಿಸುತಿರ್ದಳಾ ವಿಟನ (ಪಚಂಚ. ೬-೩೬). ೭. ಹಿಂದೆ ಪರಸತಿಗಾಗಿ ಹಿಡಿವಡೆದಂದು ಭಂಗಿಸುವಲ್ಲಿ ದೃಗುಜಲಬಿಂದು ವೊಂದುಂ ಹೊಱಿವಡದು (ಪಚಪ್ರ . ೦೬-೬೭).

[ದೇ. ಪ ತವಿ. ಪುಱಿವ್ವಟು; ಮಲ. ಪುಱಿಪ್ಪೆಡು]

ಪೊಱಿಮದಿಲ್ (ನಾ)· ಹೊರಗೋಡೆ : ಭೂಗಧಿಪತ ಗೃಹಗಳ ಪೊಱಿಮದಿಲಂಗಣದ ಮರದ ಕೊನೆಯ ವೇಗೆ ... ನೋಡಿದರಾ ಪೂಗಣೆಗೆಣೆಯೆನಿಪ ಕುಮಾರನನು (ಪಪುಣಾ. ೦೦-೩೦). [ಪೊಱಿ (< ಪೊಱಿಗು)+ಮದಿಲ್]

ಪೊಱಿಮಾಱು[1] (ಕ್ರಿ)· ಓಡಿ ಹೋಗು ; ಹಿಮ್ಮೆಟ್ಟು ; ಪಲಾಯನ ಮಾಡು : "ಪೊಱಿಮಾಱು—ಪರಾಯನೇ" (ಪಪುಣ) ; ನಗೆ ಪಗೆವಾಡಿ ಗೋಗ್ರಹಣದೊಳ್ ಪೊಱಿಮಾಱಿದ ಬನ್ನಮೊಂದು ನೆಟ್ಟಗೆ ಮನವಂ ವಳಂಚಲೆಯೆ (ಪಂಕಾ. ೦೦-೦೦೦) ; ಜಯಂತಕುಮಾರಮುಖ್ಯರೆಲ್ಲುಂದು . . . ಱಿದೆ ಸಸ್ಪಂದಿತಚಿತ್ತನಾಗಿ ಪೊಱಿಮಾಱಿದನಾರೆಯುದಗ್ರಸೈನಿಕಂ (ಪಚಪ್ರ . ೦೨-೨೦೩) ; ಪೊಱಿಮಾಱದೆ ನಾನಿಱಿದು ಸಹೋಡಾತನೆ ಬರ್ದಂ (ಜಾಪಕಂ. ೦೬-೪೦).

[ದೇ. ಪ ತವಿ. ಪುಱಿವಾಱು = ಬಲವನ್ನು ಕಳೆದುಕೊಳ್ಳು]

ಪೊಱಿಮಾಱು[2], **ಪೊರವಾರ್**, **ಪೊರವಾರ**, **ಪೊರವಾರು**, **ಪೊಱಿವಾಱುಗ್**, **ಪೊಱಿವಾಱು**, **ಹೊಱಿವಾಱುಗ್** (ನಾ)· ೧. ಬೆನ್ನು ತೋರಿಸುವುದು ; ಸೋತು ಓಡುವುದು ; ಪಲಾಯನ : "ಪೊಱಿಮಾಱಿಂದು ಬೆನ್ನೀವುದಕ್ಕೆ ಬಿಡದಿರ್ಪ ನಾವುಂ" (ಕಬ್ಕೈ. ೬೪). ೨. ನಿತಂಬ; ಜಘನ. ೧. ೨ : "ಪೊಱಿ(ರ)ಮಾಱು[ಪ್ರಾಣಂ. ಱುಗ್]ಯೆಂಬೀ (ಎರಡು) ಶಬ್ದಂ=ಬೆಗೊಡುವಲ್ಲಿಯುಂ, ಸ್ತ್ರೀಯರ ವರಭಾಗದಲ್ಲಿಯುಂ" (ಱುದ. ಪು. ೫೦) ; ಆ ನೃಪೊತ್ತಮನೊಳ್ ರಾಗೋತ್ಕಂಠೆಯೆಂಬುದು ತಳಂಗಳೊಳ್ [ವೃ]ತಿಯೆಂಬುದೊರುಸ್ತಂಭದೊಳ್ ಪೊಱಿಮಾಱೆಂಬುದು ನಿತಂಬಸ್ಥಳದೊಳ್ . . . ಕಾಣಲ್ಕಕ್ಕುಮದಲ್ಲದೆ ಪೆಜವೊ[ಯ]ಱ್ದು ಮತ್ತವಿಲ್ಲಾ (ವರಾಪು. ೬-೨೪ ೫). ಪೊರವಾರ್ : ೨. ಚಲನಾಲಸೆಯರ್ ಪೊರವಾರ್ಗಳಿನೀ ಕಾವಿನಿಯರಾರ ಸೋಲಿಸದಿರ್ಪರ್ (ಧ್ವನ್ಯಕೋ. ೨೧೦), ಪೊರವಾರ್ಗಳಿಂ ಪಿಡಿವ ಹೂಮುಡಿಯು ಪಿಡಿಯಲೆನೆ ಸೆರಗು ದಡದಡಿಸಃತಿರೆ ಚಲ್ವೆಯರ್ ಮರೆದು (ಕಾಒಕ. ೦೨೯-೬೬೦). ಪೊರವಾರ : ೨. ಸೈತರಾಸಿಯಂತೆಸೆವ ಪೊವಾರದ ಪೊಂಬಾಳಿಗಂಬದಂತೆ ತೋರ್ಪ ಬಟ್ಟೆದೊಡೆಯ . . . ಕೆಂದಾವರೆಗಳಂತೆ ವಿರಾಜಿಪ ಪಾಣಿತಳಂಗಳಿಂ

ಶೋಭಿಸೆ (ಶಾಂತಿಕ. ೦-೩-೨೯ ಪ); ನೀಟವಾದ ಕಣ್ಣುಗಳುಳ್ಳವಳಾಗಿ ಒಳ್ಳೇ ಪೊರವಾರಗಳುಳ್ಳವಳಾಗಿ . . . ದ್ರೌಪದಿಯು ಹುಟ್ಟಿದಳು (ಕೃಷ್ಣಾ. ೦೦೨). **ಪೊರವಾರು** : ೨. ಹೆಬ್ಬುಲಿ, ಕಿರುಬುಲಿ, ಸುರುಸುರಿಗೆ ಈ ಸೊಪ್ಪುಗಳ ರಸ . . . ಪೊರವಾರಿಗೂ ಹಿಮ್ಮಡಿಪರ್ಯಂತವು ತೊಡಿಯಲು ಮೂರುದಿನಕ್ಕೆ ಶೀತಜ್ವರಂ ಗುಣಮಕ್ಕುಂ (ಶಿಶ್ರೃ. ೭೦); ಸೋರ್ಮುಡಿ ಕುಚದ್ವಂದ್ವವೆಸೆವ ಪೊರವಾರುಗಳ ಪೆರ್ಮೆಗೆ ಕೊರಲ್ ಮಧ್ಯಮೂರುಗಳ್ ದಡದಡಿಸೆ (ಕುಶಾಂಗ. ೨-೦೭). **ಪೊಱವಾಱು** : ೨. ಕಡೆದು ಮಾಡಿದುದಿವಿವ ಪೊಱವಾಱ ತಿನ್ಪೆನಿಂ (ಅಜಿಪು. ೪-೭ ಪಗೆ); ನೇಸಱು, ಎಟ್ಟಱು, ಪೊಱಮಾಱು (ಕಮಪ್ರ. ೧೪ ಪ್ರತಿಜ್ಞೆ); ಚಿಲ್ವ ನೊವ್ವಿವ ದಾಸಿಗೆ ಹಿಂದಾದಮೆಂದದಿರುವಂತೆಸವ ಪೊಱವಾರ್ಗಳಿಂದೊವ್ವಿವಾ ಸತಿಯರಾನಂದದಿಂದಲೆಯ್ದುಂದರು (ಶಾಪಪಾ. ೯-೨೨). **ಪೊಱವಾಱು** : ೨. ನಿತಂಬ ಮುಸುಕಿದ ವಿಪುಳಪೊಱವಾಱು ಮುಖದಗತಿ ಮುಸುಕಿದ ಪದಂ (ಪಪಾಂ. ೪-೭೪); ಬಿಗಿದ ಮೊಲೆಗಳ ಮೆಱಿವ ಪೊಱವಾಱುಗಳ ಬಿಂಬಾಧರದ . . . ವದ್ಮಿನಿಯರುಗಳಿಸೆದರು ರಾಜಸಭೆಯೊಳಗೆ (ಭುಜ್ಮಾಂ. ೬೦೩. ೬-೪೬); ಕೊಡಪೊಱಮಾಱ ಭರಕೆ ಪೊಂಬಾಳೆದೊಡೆ ದಡದಡಿಸೆ (ಪಾಪ್ಪ. ೦೪-೨೬). **ಪೊಱವಾಱು** : ೨. ಪೊಱವಾಱಲಿ ಇದ್ದ ಕುಣಿಕೆಗಳಿರಡು ಕುಕುಂದರ (ಪಾಪಾ. ೪).

[<ಪೊಱಮಾಱು$_1$./ತಮಿ. ಪುಱವುರು = ದೇಹದ ಒಂದು ಅಂಗ]

ಪೊಱಮಾಱು$_2$, ಹೊರಮಾರು, ಹೊರವಾಱು, ಹೊಱವಾಱು (ನಾ). ೧. ಹೊರಗಿನ ಮಾರಾಟ ; ಹೊರಗೆ ಮಾರುವಿಕೆ : ಎಳ ಅಂಚಿ. ಪೊಱವಾಱು, ಪೊಱಅಡಿ (ಕಾಸಾಡೂ. ೦೪೪ ಅಡಾ). **ಹೊರಮಾರು** : ೧. ಒಳಮಾರು (ಆಮದು) ಹೊರಮಾರು (ರಫ್ತು) ಸರಕುಗಳ ಮೇಲೂ ತೆರಿಗೆ ಹಾಕಿತು (ಇಷ್ಮಾಂಷಂ. ೪೨). **ಹೊರವಾಱು** : ೨. ಹೊರನಾಡಿನಲ್ಲಿ ಮಾರಾಟವಾಗುವ ಸರಕುಗಳ ಮೇಲೆ ಹಾಕುವ ಸುಂಕ : ಮಗ್ಗ ಮುದ್ರೆ ಒಳವಾಱು ಹೊರವಾಱು ಮದುವೆ . . . ಮುಂತಾದ ಏನುಳ್ಳ ಸುಂಕ ತಳವಾರಿಕೆಗೆ ಸಲುವ ಅಂಬಲಿ (ಎಳ. VII. ೫೮೫ಂ. ೭೦-೪೦; 1431); ಸುಂಕ ಪೊಳವಾಱು ಹೊರವಾಱು ಕಂಮಾಱಿದೆಱಿ . . . ಮಾದಱಿಕೆ ಮುಂತಾದ ಏನುಳ್ಳ ಸಖಿಲ ಸ್ವಾಮ್ಯವನು ಆಗುಮಡಿ (ಕ್ಯಾಶಿ. ೦೯೩೮. ೭೪-೩ ; 1507). **ಹೊಱವಾಱು** : ೨. ಹೊಱವಾಱು ಉಭಯಮಾರ್ಗ ಒಳವಾಱು ಸ್ಥಲ ಕುಳವಿಸಂಚವಿಲ್ಲಾ ಎಂದು ಕೊಟ್ಟ ಚೀಟು ನಿಮ್ಮ ಕೈಹಾಳೆಯಲ್ಲಿ ಅದೆ (ಸುಂಶಿಂ. ೪. ೬೪೯-೩) ; ಒಳವಾಱು ಹೊಱವಾಱು ತಳಸಾರಿಕೆ ಆಲೆದೆಱಿ (ಎಳ. VIII. ೫೯೪೯. ೦೩೦-೪೪ ; 1404). 'ಒಳವಾಱು' ಪರಾ. [ಪೊಱ (<ಪೊಱಗು) + ವಾಱು$_3$]

ಪೊಱಮಿಂಚು, ಹೊಱಮಿಂಚು (ನಾ). ೧. ಹೊರಗಿನ ಬೆಳಕು.—ಪ್ರಕಾಶ. ೨. ಹೊರಗಿನ ಥಳುಕು.—ಆಕರ್ಷಣೆ.—ಸೌಂದರ್ಯ. ೩. (ಆಲಂ) ಬೂಟಾಟಿಕೆ : 'ಪೊಱಮಿಂಚುಗೈ' ಪರಾ. **ಹೊಱಮಿಂಚು** : ೨. ಜವ್ವನದ ಹೊಱಮಿಂಚಿನಲ್ಲಿ ನಿಮ್ಮ ಕಣ್ಣಿಗೆ ತೋಱುವ ಕಾವನ ಸುಟ್ಟುರುಹಿದ ಭಸ್ಮವ ನೋಡಯ್ಯ (ಕುಚಾರೇ. ೨. ೭೦-೦೭೩) ; ಹೊಱಮಿಂಚಿಂ ಹೊಲೆವೆಣ್ಗೆ ಸೋಲ್ವ ತೆಱದಿಂ (ರಣ್ಣಾಕ. ೬೭). [ಪೊಱ (<ಪೊಱಗು) + ಮಿಂಚು$_3$]

ಪೊಱಮಿಂಚುಗೈ (ಕ್ರಿ). ೧. ಹೊರಗಡೆ ಬೆಳಕನ್ನು ತೋರಿಸು : ಹೊರಗೆ ಪ್ರಕಾಶವನ್ನುಂಟುಮಾಡು. ೨. (ಆಲಂ) ಬೂಟಾಟಿಕೆ ಮಾಡು : ಪೊಱಮಿಚುಗೈವನಂ ಬಱಿವಾತುಗಾಱನಂ ಕಱುಬವಂ . . . ತೊಱೆಯದುದೆಗ್ಗತನವಲ್ತೆ (ರಾಶಿಕೆ. ೦೦-೯೨).

[ಪೊಱಮಿಂಚು + ಕೆಯ್$_1$]

ಪೊಱಮುಯ್ಯು (ನಾ). ಭುಜದ ಹೊರಭಾಗ ; ಹೊರಭುಜ : ತಳ್ಳ ಪೆರ್ಮೊಲೆ ಪೊಱಮುಯ್ಯು ಬೆನ್ನಿನತುವೊರ್ಮೆಯ ನಾ[ಂದಿ]ನವುಣ್ಮೆ ಪೊಣ್ಮೆ ಕಣ್ಮಲರ್ಗಳಿನೆಚ್ಚು ಪಾಯ್ದುವರಲಂಬುಗಳಂತೆ ವಿರೋಡನಾಂಬುಗಳ್ (ಕುಪಾಪ. ೪-೦೦೬) ; ಬಳೆದು ಪೊಱಮುಯ್ಯುವೆರಗಂ ತಳೆದು ಏನತ್ಯನಕಟಿಗರುಚಿಯಂ (ಕಾದಂಪೂ. ೨೦೪) ; ಪೊಱಮುಯ್ಯಂ ತಾಗೆ ಬಿಲ್ಲಂ ತೆಗೆದೆಱಿದು ಸರೋಡಾಕ್ಷನೆಚ್ಚಗ್ನಿಬಾಣಂ . . . ಉರಿಪಿದತ್ತಾ ಪುರೀಚಕ್ರಮುಂ (ಪಗೂ. ೦೪-೦೦೬). 'ಒಳಮುಯ್ಯು' ಪರಾ.

[ಪೊಱ (<ಪೊಱಗು) + ಮುಯ್ಯು$_2$ (<ಮುಯ್ಯು)]

ಪೊಱಮೆಯ್, ಹೊರಮೈ, ಹೊಱಮೈ (ನಾ) · ೧. ಹೊರಧಾಗ ; ಹೊರಗಡೆ : ಪೊಱಮೆಪ್ಪಾ ವೇಷದಿರವೇತೆಱನಾದೊಡವೇನೊ (ಕಪಾಂ. ೨-೦೪). **ಹೊರಮೈ** : ೧. ಭೂಮಿಯ ಹೊರಮೈಯ ಬರುತಲುಗಳಲ್ಲಿ ನೀರು ಸೇರಿಕೊಳ್ಳುವುದಕ್ಕೆ (ಪಾಂಶ್ರ. I. ೦೪೩) . ೨. ಪುಸ್ತಕ ಮುಂತಾದುವುಗಳ ಮೇಲುಹೊದಿಕೆ ; ರಟ್ಟು ; ಪುಸ್ತಕದ ಹೊರಮೈ ವರ್ಣರಹಿತವಾಗಿರುವುದರಿಂದ, ಗ್ರಂಥದ ಸರಳತೆಯು ಎತ್ತಿ ತೋರಿಸಲ್ಪಡುವುದು (ಕೂಪಪಂ. ೦೯). **ಹೊಱಮೈ** : ೧. ಅದಱ ಯಿಮ್ಮಡಿ ಪ್ರತ್ಯಕ್ಷದೀಪವು ಯದಱ ಹೊಱಮೈ ಸ್ವಾದುಜಲವು (ಸಂಪಪು. ೦೦-೪). 'ಒಳಮೆಯ್' ಪರಾ. [ಪೊಱ (<ಪೊಱಗು) + ಮೆಯ್$_3$]

ಪೊಱಯಿಂಕೆ, ಪೊರಯಿಂಕೆ, ಹೊರಯಿಂಕೆ, ಹೊರಯಿಕೆ, ಹೊಱಯಿಂಕೆ, ಹೊಱಯಿಂಕೆ (ಅ). ಹೊರಗಡೆಗೆ ; ಹೊರಕ್ಕೆ : ಕಱುವಿನಡಗಂ ಕುದಿಸಿ ಶಿದುಳಿದ ದೇಹಮುಂ ಪೊಱೆಯಕ್ಕೆ [ಪೊಱಯಿಂಕೆ] ಬಿಸುಟು (ಕಾಶಿಕ. ೦೦-೪೬). **ಪೊರಯಿಂಕೆ** : ಈಕೆ ಮುಖಮಜ್ಜನಂಗ್ಗೆದು ಧುಂಡಿಸಿ ಪೊರಯಿಂಕೆ ಬರುತಿರ್ದಳು (ಪಾಂಪಪ. ೪೦-೦೨). **ಹೊರಯಿಂಕೆ** : ಶಿರಃಪೋಲಾನಿ = ತಲೆಯಂ ಕವಿಯ ಕೆಳಗಣ ಗಲ್ಲದ ಕೀಲಂ, ಧಾರಯಿತ್ವಾ = ಹಿಡಿದು, ವಿನಿರ್ಹರೇತ್ = ಹೊರಯಿಂಕೆ ಎಳೆಯಬೇಕು (ಪಾಪಪೀ. ೪-೨-೪೬ ಪ). **ಹೊರಯಿಕೆ** : ಮನೆಯ ಬದಂಕುಗಳನೊಂದೊಂದ ಹೊರಯು [ಯಿ]ಕೆ ತೆಗೆದೆ ಮನೆಯೊಳಗೆ ಬಯಲೊಂದೆ ಕಿಡದೆ ನಿಲುವಂತೆ (ಕೃಕ. ೩-೦೬-೪). **ಹೊಱಯಿಂಕೆ**: ಹೃದಯದೊಳಗಿಹನ್ನಕ್ಕರ ಲಿಂಗವ್ಯಾಪ್ತ ಹೃದಯದಿಂದ ಹೊಱಯಿಂಕೆ ಹೊಱವಂಟರೆ ಭವಿ (ಅಪಪ. ೦೦-೦೬); ಪೆಟ್ಟಿಗೆಯ ನೀಕ್ಷಿಸುತಂದು ಬೀಸಾಟನೆತ್ತಿ ಹೊಱಯಿಂಕೆ ಕೋಪಿಸುತ್ತಂದು (ಕಱುಪ. ೮೫. ೦೩-೬); ಭವಿ ನಮ್ಮ ಮನೆಗೇಕೆ ಬಂದೆ ತೊಲತೊಲಗೆಂದು . . . ಮಂದಿ ಮಕ್ಕಳುಗಳುಂ ಹೊಱಯಿಂಕೆ ನೂಲು (ಗುಚಾಂ. ೪-೪೬). **ಹೊಱಯಿಕೆ** : ತಟ್ಟುವುಟ್ಟು ಹೊಱಯಿಕೆ ಬಿಸಾಡೆಯಮ್ಮ (ಕಪಗೀ. ೦೩೯-೭೯೯ ಪ); ಆ ತಟ್ಟೆಯಂ ದೇಗುಲದ ಹೊಱಯಿಕೆ ಹಾಯಿಕಿದಂ (ಪಪಪ್ರ. ೩೩-೦೪); ಕಡು ಸುಖಿವ ಮಚ್ಚಿದ್ದ ಮನ ಹೊಱವಡಿಸಿ ಹೊಱಯಿಂಕೆ ಧೈರ್ಯದಲಿ ಸುಖಿಗಡಲೆನಿವ ಶ್ರೀಕೃಷ್ಣಚರಣಾಬ್ಜದಲಿ ಮನವಿರಿಸಿ ಮಡಿದನು (ಪಪಗೀ. ೦೦-೩೩-೩೬). 'ಒಳೆಯಿಂಕೆ' ಪರಾ. [ಪೊಱ (<ಪೊಱಗು) + ಇಂಕೆ$_1$]

ಪೊಱವಂಡು 'ಪೊಱವಮಡು' ನೋ.

ಪೊಱವದು 'ಪೊಱವಮಡು' ನೋ.

ಪೊಱವರ್, ಹೊರಬರು (ಕ್ರಿ). ೧. ಹೊರಕ್ಕೆ ಬರು : ಪೊಱವಂದು ನಿಂದು ಕೆಳೆಯರ್ಕಳೊಂದಿ ತಾಂ ಕಿಱುಮಾಡವೇಱಿ (ಪಪಪ. ೬-೦೦೩). **ಹೊರಬರು**: ೧. ಅವರಾಗಿ ಹೋಗೆಂದು ಹೇಳುವುದಕ್ಕಿಂತ ತಾವಾಗಿಯೇ ಹೊರಬರುವುದು ಮರ್ಯಾದೆಯೆಂದೆಣಿಸಿ . . . ತನ್ನ ಲೆಕ್ಕಪತ್ರಗಳನ್ನು ತೀರಿಸಿಕೊಂಡು ಹೊರಬಂದನು (ಕುಚಾಪ. ೦೪೭). ೨. ಪ್ರಕಟವಾಗು ; ಪ್ರಕಾಶಗೊಳ್ಳು : ಪಠ್ಯಪುಸ್ತಕವಾಲೆಯಲ್ಲಿ ಹೊರಬರುತ್ತಿರುವ ಮತ್ತೊಂದು ಪುಸ್ತಕ ಈ ಗೃಹವಿಜ್ಞಾನ (ಗೃಹಾ. IV. ಮುಖ್ಯ೩).

[ಪೊಱ (<ಪೊಱಗು) + ಬರ್ (<ವರ್)]

ಪೊಱವಲಯ, ಪೊಱವಳಯ, ಹೊರವಲಯ, ಹೊರವಳಯ,

ಹೊಱವಳಯ (ನಾ). ಹೊರಗಿನ ಪ್ರದೇಶ; ಹೊರಭಾಗ; ಹೊರಗಡೆ: ಪೊಳಲ ಪೊಱವಲಯದಲಿ ನಂದನಲಕ್ಷ್ಮಿ ಶೋಭಿಪಳು (ಸಾಳ್ವಭಾ. ೨-೨). **ಪೊಱವಳಯ**: ಇತ್ತ ವಿಶಾಖಭೂತಿಯರಸುಗೆಯ್ಯುತ್ತಿರೆ ಪೊಱಲ ಪೊಱವಳಯದೊಳ್[ಪಾಠಾಂ. ಪೊಱವೊಱಲೊಳ್] . . . ವಿಶ್ವನಂದಿ ಮಾಡಿಸಿದನಂದೊಂದು ನಂದನಮಂ (ಶಾಂತಿಪು. ೬-೩೨ ಪ); ಇಂತೆಸೆವ ಪಟ್ಟಣದ ಪೊಱವಳಯದೊಳ್ ಲತಾಸಂತತಿಗಳಿಂ ಕುಸುಮಶೋಭೆಯಿಂ ತರುಕುಲದ ತಿಂತಿಣಿಗಳಿಂ ಫಲಾನೀಕದಿಂ . . . ಆ ವನಂ ಕಣ್ಗೆಸೆದುದು (ಶಿಪು. ೦೦-೨೦); ಅರ್ಜುನನ ಕಟಕಮಿರ್ದುದು ಮಹಾಂಭೋನಿಧಿಯ ಮಸಕದಿಂ ಪೊಳಲ ಪೊಱವಳಯದುದ್ಯಾನವೀಧಿಗಳೊಳು (ಶೈಬುಭಾ. ೦೬-೨೨). **ಹೊರವಲಯ**: ನಗರದ ಹೊರವಲಯ (Suburb. ಇಂಕಿಸಿ). **ಹೊರವಳಯ**: ವೆಂಕಮ್ಮನ ಸಂಸಾರ ಸಂಕಾಪುರದ ಹೊರವಳಯದ ಮಾರುತೀದೇವಾಲಯದಲ್ಲಿ ಬಹುಕಾಲ ನಡೆಯಿತು! (ಇಗಡಾ. ೦೩೭); ಅವರ ಎದುರುಗಡೆ, ಕಟ್ಟಿಗೆಯ ಕಟಕಟೆಯಿಂದ ಆವೃತವಾದ ಹೊರವಳಯದ ಒಂದು ಮೂಲೆಯಲ್ಲಿ ಹೈಮವತಿ (ಎಸಸಿ. ೦೨). **ಹೊಱವಳಯ**: ಪುರದ ಹೊಱವಳಯದೊಳು ಧರಣಿಪಂ ಪೋಗುತಂ ಸುರೆಯ ಹರವಿಯ ಮೇಲೆ ಭಸಿತವಿರೆ ಕಂಡು (ಅಕಿಪಂ. ೩೨-೩೯); ನಿಲಿಸಿದರು ಕೈದುಗಳ ಕರಿ ಸಂಕುಲವ . . . ಊರ ಹೊಱವಳಯದಲಿ (ತೊರಣಾ. ೬-೦೩-೩).

[ಪೊಱ (< ಪೊಱಗು) + ವಲಯ]

ಪೊಱವಳಯ 'ಪೊಱವಲಯ' ನೋ.

ಪೊಱವಾಯ್, ಪೊಱಪಾಯ್, ಹೊರಹಾಯು (ಕ್ರಿ). ೧. ಹೊರಕ್ಕೆ ಚಾಚು; ಹೊರಬರು: ಕಣ್ಗಳ್ ಪೊಱವಾಯ್ದು ಕೋಪಶಿಖಿ ಪೊಣ್ಮೆತ್ತಂಬಿನಂ ಕೆಂಕಮಾದುವು (ಸಂಗಾಪು. ೯-೧೯); ಬಿಟ್ಟ ಬಾಯಕ್ಕುಳಿಸಿರ್ದ ಪೊಟ್ಟೆ ಪೊಱವಾಯ್ದೆರ್ದೆಯರ್ವಿಪ ಪುರ್ವು (ವರ್ಧಪು. ೦೫-೩೯); ಮರಣವೇ ಶರಣೆನುತ್ತೊಂದೇ ಕಠಾರಿಯಂ ಚರಿತದಿಂದೆತ್ತಿದಂ ನಿಷ್ಠೆಗುಪಕಾರಿಯಂ ಇಱುದುಕೊಂಡಂ ಕೆರುಳು ಪೊಱವಾಯಲು[ಪಾಠಾಂ. ಮಡಲು] (ಕಲಿಪ. ಪ್ರ. ೩೦೨-೦೩). **ಪೊಱಪಾಯ್**: ೧. ಕಣ್ಗುಬ್ಬೆಯ ಗುಳ್ಳೆಯಂತೆ ಪೊಱಪಾಯ್ವಿನಮಟ್ಟಳೆವೊಯ್ದೊಡೊರ್ವನಂ (ಸುಳುಪಾ. ೬-೬); ಗಣ್ಪಲ ನೆಟ್ಟೆಯ ಕಣ್ಪೊಱಪಾಯ್ವಿನವೊತ್ತಿ ಮುತ್ತಿ ಬಾಯ್ಬಿಡಿಸದೆ ಮಾಣ್ಬನೆ ಸಮರದೊಳ್ಕಲಿ ಬಿಜ್ಜಲದೇವಭೂಭುಜಂ (ಎಳ. XI, ದಾಪಪು. ೩೩-೨೬; ಸು. 1160). ೨. ಹೊರಗೆ ಹರಡು,-ವ್ಯಾಪಿಸು: ತನ್ಮಹೀಗುಹಾ ನಿವಹದಿನುಣ್ಮೆ ಪೊಣ್ಮೆ ಪೊಱಪಾಯ್ದಿರದಾಗಳೆ ನೋಡಿ ನೋಡಿ (ಕುಸುಪಾ. ೦-೦೬). **ಹೊರಹಾಯು**: ೩. ಹಾದುಹೋಗು: ಭೂಭಾಗದ ಮೇಲೆ, ಬಂಗಾಳಾ, ಅಸ್ಸಾಂ, ಮಣಿಪುರ ಮಾರ್ಗವಾಗಿ ಹೊರಹಾಯುವ ಕಾಲುದಾರಿಗಳು ಅನೇಕ ಇದ್ದವು (ಭಾರದ. ೩೩೯).

[ಪೊಱ (< ಪೊಱಗು) + ಪಾಯ್$_1$]

ಪೊಱವಾಱ್ 'ಪೊಱಮಾಱು$_2$' ನೋ.

ಪೊಱವಾಱು 'ಪೊಱಮಾಱು$_2$' ನೋ.

ಪೊಱವೀಡು, ಪೊಱಬೀಡು, ಹೊಱಬೀಡು (ನಾ). ಪಟ್ಟಣದ ಹೊರಗಡೆ ಹೂಡುವ ಬಿಡಾರ, -ಶಿಬಿರ, -ಠಾಣ್ಯ: ಅತಿಮನೋಹರಮಾದ ವನಿಪತಿಯ ಭವನನಿವೇಶದಿಂದಮಂದಂಬಡೆದ ಪೊಱವೀಡಂ ಸೋಮಾನ್ವಯ ಪ್ರದೀಪಂ ಪುಗುವಾಗಳ್ (ಶಾಂತಿಪು. ೦೦-೦೪೭ ಪ); ಗೊಂದವಾಡಿಯ ಪೊಱವೀಡಿನಲ್ ಸುಖದಿಂ ರಾಜ್ಯಂಗೆಯ್ಯುತ್ತಿರೆ (ಎಇ. IV, ೨೦೪-೬; 1072); ಪೊಱವೀಡ ಮಂದಿ ಇರ್ದೆಡೆಗಳೊಳೆ ಬಿಟ್ಟೆನ್ (ಅಶ್ವಶ್ಯಾ. ೩-೪೩). **ಪೊಱಬೀಡು**: ಅಂಧಕಾಸುರಂ ಪೊಱಮಟ್ಟು ಪೊಱಬೀಡನುಱ್ ಬಿಟ್ಟನು (ಶಿಪು. ೪೭-೩೨). **ಹೊಱಬೀಡು**: ಮುಂದಣ ಪಯಣವ ನಿರ್ಧರಗೈದಾಗ ಬಂದು ಬಿಟ್ಟನು ಹೊಱಬೀಡ (ಕಂಪಪಿ. ೦೦-೬೯).

ಪೊಱವೀಡಂ ಬಿಡು, ಹೊಱಬೀಡ ಬಿಡು = (ಕೋಟೆ, ಪಟ್ಟಣ ಮುಂತಾದುವುಗಳ) ಹೊರಭಾಗದ ಆವರಣದಲ್ಲಿ ಶಿಬಿರವನ್ನು ಹಾಕು,-ಪಾಳೆಯವನ್ನು ಹೂಡು: ಬೆಸವೇಟ್ಟಂ ಭುವನೈಕಮಲ್ಲನು ದಯಾದಿತ್ಯಂಗೆ ಕೈಕೊಣ್ಡು ಬನ್ದ ಸಹಾಯಂ ಬನವಾಸೆಯತ್ತ ಪೊಱವೀಡಂ [ಬಿಟ್ಟು] (ಸೌಇಇ. XX, ೪೯-೦೬; 1076 ?); ಜಿನೇಂದ್ರಭಕ್ತಸೆಟ್ಟಿ . . . ಜಿನಮಹಾಪೂಜೆಗಳುಮಂ ಮಾಡಿಸಿ ಪೊಱವೀಡಂ ಬಿಟ್ಟು ತನ್ನ ದೇಹಾರದೊಳಿರ್ದ ಬ್ರಹ್ಮಚಾರಿಗೆ ವಂದು (ಧರ್ಮಾಪ್ಯು. ೬-೬೪); ಕೂಡೆ ಹೊಱವಂಟುದು ಸಮಂತ್ರಕಗೂಡಿ ಸಚಿವ ಪಸಾಯಿತರು ಹೊಱಬೀಡ ಬಿಟ್ಟುದು ಮುಂದೆ ಮನ್ನೆಯ ಮಂಡಲೇಶ್ವರರು (ತೊರಣಾ. ೨-೩-೩೦); ನಱುಸುಯಿ ಗಂಪಿಗೆಳಸಿ ತುಂಬಿಗಳು ಬಂದು ಹೊಱಬೀಡ ಬಿಟ್ಟವೆ (ಕುಸಾಸಾಂ. ೨೪-೯೦).

[ಪೊಱ (< ಪೊಱಗು) + ಬೀಡು$_2$]

ಪೊಱವೇಱು (ನಾ). (ಊರಿನ) ಹೊರಗಿನಿಂದ ಬಂದ ಹೇರು: ಪೊಱವೇಱಂಗೆಲೆ ನೂಱುಮಂ ಮೆಣಸುಮನ್ನೇಲಕ್ಕಿ ಮುಖ್ಯಂಗಳಂ ನೆಱ ತಾಂ ಸೊಲ್ಲಗೆಯಯ್ವತೆನ್ದಡಕೆಯಂ ಮತ್ತಿಲ್ಲಿಮಾಱಾದಡಂ ತೆಱುಗೆ (ಎಳ. XI, ದಾಪಪು. ೩೯-೯೨; 1280). [< ಪೊಱ^2 + ಪೇಱು$_3$]

ಪೊಱವೊಳಲ್ 'ಪೊಱವೊಱಲ್' ನೋ.

ಪೊಱವೊಱಸು (ನಾ). ೧. ಮನೆಯ ಒಳಗೆ ಬರಲು ಅನರ್ಹವೆಂದು ನಂಬಲಾದ ಪಕ್ಷಿ; ಪಾರಿವಾಳ. ೨. (ಆಲಂ) ತಿರಸ್ಕಾರಯೋಗ್ಯವಾದುದು: ವಾತ್ಸ್ಯಾಯನನಂ ಪೊಱವೊಱಸು ಮಾಟ್ಟ ಕಂಡವರಂ ಮೂವಣ್ಣಂಬರಿಪ ನವವಾರವಿಳಾಸಿನಿಯರಿರುತಿರ್ಪ ನೆಲೆವನೆಗಳಿನೊಪ್ಪುವ ಸೂಳೆಗೇರಿ ಸೊಗಯಿಸುತಿರೆ (ಇಗಪಿ. ೨-೦೯ ಅಡಿಟಿ).

[ಪೊಱ (< ಪೊಱಗು) + ಪೊಱಸು]

ಪೊಱವೊಱಲ್, ಪೊಱವೊಳಲ್, ಹೊಱವೊಳಲು (ನಾ). ಪಟ್ಟಣದ ಹೊರಭಾಗ: ಮಾಣಿಗಳ್ವೆರಸು ಪೊಱವೊಱಲೊಳ್ ಬಟ್ಟಾಡುತ್ತಿರೆ (ಪಡ್ಡಾರಾ. ೭೩-೨೨); ಅದಱ ಪೊಱವೊಱಲ ವಿಶಾಳಕನಕಕೃತಕಗಿರಿಗಳಿಂ ಫಳ ಪ್ರಕೀರ್ಣತರುಗಳಿಂ (ಪಂಪಭಾ. ೦-೩೯ ರಗಳೆ); ಆ ಪುರದ ಪೊಱವೊಱಲ ವೈಹಾಳಿಯ ಬಯಲಿಂದೊಳಗೆ (ಗಿರಿಕ. ೨-೭೬ ಪ). **ಪೊಱವೊಳಲ್**: ಪೊಱವೊಳಲೊಳ್ಪೊದಳ್ದ ನವನನ್ದನಬೃನ್ದದಿಂ (ಎಇ. XIII, ೩೩೦-೨೬; 929); ಅಲ್ಲಲ್ಲಿಗೆ ತಿಳಿಗೊಳನುಂ ಮಲ್ಲಿಗೆಯುಂ . . . ನೋಡಲೆತ್ತಲುಂ ಪೊಱವೊಳಲೊಳ್ (ಸೌಇಇ. IX-i, ೨೯೭-೧೭; 1177); ಯಾದವರ ವೃಂದವೊಲವಿಂ ದ್ವಾರಕಾಪುರದ ಪೊಱವೊಳಲೊಳಿರುತ ದೂರ್ವಾಸ ಬರಲು (ಸೌಂದಪು. ೪-೩೪); ವಾದ್ಯರವದುಬ್ಬರದನೂನಸಂಭ್ರಮದಿಂದೆ ಕಲ್ಯಾಣಪಟ್ಟಣದ ಪೊಱವೊಳಲ್ ನೆಱ್ ಮೆಱ್ದುದು (ಶಿಪು. ೦೦-೩೦). **ಹೊಱವೊಳಲು**: ಹೊಳಲು ಹೊಸ ರೀತಿಯಲಿ ಮಿಗೆ ಕಂಗೊಳಿಸುತಿರ್ದುದು ಮುನಿಪತಿಗೆ ಹೊಱವ[ವೊ]ಳಲ ರಮ್ಯೋದ್ಯಾನವೆಸೆದುದು ಚೈತ್ರರಥವಂತೆ (ತೊರಣಾ. ೦-೯-೦೦). [ಪೊಱ (< ಪೊಱಗು) + ಪೊಱಲ್]

ಪೊಱಸಾರು (ಕ್ರಿ). ಹೊರಗೆ ಹೋಗು; ಹೊರಗಡೆಗೆ ನಡೆ: ತೆಱಪ ಬಿಡಿ ಪೊಱಸಾರೆನುತ ಪಡಿಯಱ ಸುರರು ಹೊಂಗಟ್ಟಿಗೆಯ ಪಿಡಿದುಱ್ [ಕರದಿ ಕೋಲ್ಗಳ] ಬಡಿದು ಸಮ್ಮುಖ ಬಿಡಿಸಿ ನಡಸಿದರು (ಸಾಳ್ವಭಾ. ೩೩-೩೬). 'ಒಳಸಾರ್' ಪರಾ. [ಪೊಱ (< ಪೊಱಗು) + ಸಾರು$_1$ (< ಸಾರ್)]

ಪೊಱಸು, ಹೊರಸು$_3$, ಹೊಱಸು (ನಾ). ೧. ಒಂದು ಬಗೆಯ ಪಾರಿವಾಳ; ೫ ಅಶುಭಸೂಚಕವೆಂದು ನಂಬಲಾದ ಪಕ್ಷಿ. ಇದು ಮನೆಯ ಒಳಗೆ ಬಂದರೆ ಅಮಂಗಳವೆಂಬ ನಂಬಿಕೆಯಿದೆ: ಕೋಂಟೆಯಿಂ ಪೊಱಗಣ ದೆಸೆಯೊಳ್ ವಿದ್ಯುಚ್ಚೋರಭಟಾರರ್ ಪ್ರತಿಮಾಯೋಗಂ ನಿಂದೊಡೆ ದೇವತೆ ಮುಳಿದು ಪೊಱಸುಗಳನಿವಿರಿಯುವು ದಂಸ ಮಸಕಂಗಳು ವಿಗುರ್ವಿಸೆ (ಪಡ್ಡಾರಾ. ೦೩೪-೦೮); ಜೂದಿನೊಳ್ ಪೊಱಸಟ್

ವಂತೆ ತಮ್ಮರಸುಗುಟ್ಟು ಕಟಲ್ದೆರ್ದಿಗಟ್ಟು (ಪಂತಿಪು. ೬-೨೩) : ಪ " ಪೊಜಸಟಿವಂತೆ–ಪಾರಿವಾಳವು ನಾಶ ಮಾಡುವಂತೆ . . . ಈ ವದ್ಯದಲ್ಲಿ ರೇಫ ಜಿಕಾರಗಳ ಮಿಶ್ರವ್ಯಾಸವಿದೆ. ಪಾರಿವಾಳವು ವಿನಾಶ ಕಾರಕವಕ್ಷಿ ಎಂಬ ನಂಬಿಕೆ ಇತ್ತು: 'ಭರತಾನ್ವಯರಾಜಭವನರಾಜ ಕಪೋತಂ' ಎಂಬ ರನ್ನನ ಪ್ರಯೋಗವನ್ನು ನೋಡಿ" (ಪಂತಿಪ್ರ. ೨೯೪) ; ಪಿಂಗಲಿ ಪೋದಗೆ ಪೊಜಸು ಬಕಂ ಗಿಡಿಗಂ ಗೂಗೆಯಾದಿಯಾದ ಖಗಂ ರಾಜಾಂಗಣದೊಳ್ ಚರಿಸುವೊಡೆ ಸರಂಗೆಯ್ವೊಡೆ ತಡೆಯದಾ ಗೃಹಂ ಪಾಟಕ್ಕಮಂ (ಕೋಕೋಪ. ೪-೬೬). ಹೊರಸು : ೧. ಗುಬ್ಬಳಿಸಿ ಪಟಪಟನೆ ಹಾರಿ ಬಹ ಹೊರಸುಗಳ ಸಮುದಯಂ (ಕಕ್ಕಾಗ. ೩೬-೦೪೬) ; ವಾರ್ಧಕ್ಯದ ಹೊರಸು ಅವನ ದೇಹದ ಗೂಡನ್ನು ಹೊಕ್ಕುತ್ತದೆ (ಜಾಗಕಾ. ೦೦). ಹೊಜಿಸು : ೧. ಹಂಸೆಯೊಳಗೆ ಹೊಜಿಸು ಬಂದಿರ್ಪಂತೆ ಬರ್ವುದುಂ (ರಡುಕಾಕ್ಕು. ೬-೨೨೩) ; ನರೆಯೆಂಬ ಹೊಜಿಸು ವೊಗಮೆಂಬುರವನೆಯಂ ಪೊಕ್ಕೊಡಂಗನಾಲೋಕನವೆಂಬರಸೆಂತಿರ್ದಪು (ಪುಟೋಚ. ೨-೦೨) ; ಹರಡೆ ಚಿಲುವಿಲಿಗನು ಚಲುವೆ ಗಿಜುಗಿರಳೆ ಕವ್ಮರಸುಗ ಕೊಟ್ಟುಳೆ ಹೊಜಿಸು ಹೊಡಗಳೆಂಬ ಪಕ್ಕಿಗಳವಜಿಂಳೊಳ್ಪಟ್ಟವು (ಜಾಳ್ಕಾ. ೫-೨೦)· ೨. ಮುದನಪಕ್ಷಿ· ೩. ತಿತ್ತಿರಿಪಕ್ಷಿ. ೪. ಚಕೋರಪಕ್ಷಿ. ೫. ಹಸುಬನ ಪಕ್ಷಿ· ೬. ಮಂಜುಳವೆಂಬ ಹಕ್ಕಿ: "ಜೀವಂಜೀವಃ, ಕಪಿಂಜಳಃ, ಚಕೋರಃ, ಹಾರೀತಃ, ವಂಜುಳಃ, ಕಪೋತಃ — ಈ ೬ ಹೊಜಿಸು " (ಹಶಾಯು. ೪೨-೦೦೦)· ೭. (ಆಲಂ) ಕ್ಷುದ್ರನಾದವನು ; ಅಲ್ಪ : ಫಡ ಹೊಜಿಸ ಕೇಳಿಲವೊ ರಾವಣ . . . ನಿನಗಾಂ ಬೊವ್ಮರಕ್ಕಸನು (ಶಾಣಾ. ೦೦-೪೪); ಹೊಜಿಸೆ ಬೆಳ್ಯಯ ಗುಂಡನೆತ್ತಿದ ಗರುವ ಬೇಡವು ನಾನು ಶಿವಿದರೆ ಅಜಿಸಿಯೆಲುಗಳನಾಯ್ದು ಸುಡುವಂತಹುದು ನಿನ್ನವರು (ಶಾಣಾ. ೨೨-೦೬)·

[ದೇ. ೩ತಮಿ. ಪುಜ, ಪುಜಾ, ಪುಜವ, ಪುಜವು; ಮಲ. ಪಿಜಾವು, ವ್ಯಾವು; ತುಳು. ಪುರ; ಗೊಂಡಿ. ಪುರಾ; ಕೊಂಡ. ಪೊರೊರ್ಸು; ಕುರುಖ್. ಪುರಾ : ಮಲ್ತೊ. ಪುರೆ]

ಪೊಜಿಸುಗೆ (ನಾ). (?) : ಕಿಜುನೆಲ್ಲಿಯುವ್ಪು ನೆಗವುಲಿ ತೊಜಿನಾಯ್ ಸತ್ತೆಡೆಯ ವಜಾ ಶುಕಾಸ್ಯಂ ಮದ್ಯಂ ಮುಜುದೊಂಡೆಯೆಂಬವಂ ವೆಸರ ಜಿಯದ ಬಾಹುಗಳೊಳೊರಸೆ ಪೊಜಿಸಿ(ಸು)ಗೆ ಪೋಕುಂ (ಕೋಕೋಪ. ೪-೨೦೨). [?]

ಪೊಜಿಸುತ್ತು (ಕ್ರಿ). ಹೊರಭಾಗದಿಂದ ಆವರಿಸು ; ಹೊರಗಿನಿಂದ ಸುತ್ತುಗಟ್ಟು : ಉರಿವ ಭಾಸ್ಕರಕೋಟಿತೇಜದೆ ಪೊಜಿಸುತ್ತಿ ವರಿವ ಚಕ್ರವ ನುತಿಗೆಯ್ದು ತುರಿಯದಿಂದೊಳಪೊಕ್ಕು ಕಾಮದೇವನ ವುಗನಿರುವ ಶಯ್ಯಾಗೃಹದೆಡೆಗೆ (ಕೋಚಕ. ೩೦-೦೩).

[ಪೊಜ (< ಪೊಜಗು) + ಸುತ್ತು$_1$]

ಪೊಜಿಸೂಸು, ಹೊರಸೂಸು, ಹೊಜಿಸೂಸು (ಕ್ರಿ). ೧. ಹೊರಕ್ಕೆ ತುಳುಕು ; ಹೊರಚೆಲ್ಲು : ಹಾಲ ಹಳ್ಳವೋಲಗದ ನಡುವೆ ಮಡುಗಟ್ಟಿ ಪರಿದು ಪೊಜಿಸೂಸೆ ಕಂಡು ಬಿಜ್ಜಳಂ ಕೌತುಕಂಗೊಂಡು (ಬಿಸಪ. ೦೦-೬೬); ಬಾಹುಮೂಲದೆಡೆಗೆ ದಿಟ್ಟಿ ಪರಿಪರಿದು ವೊಗವೊರ್ಗುಡಿಸೆ ಸರಿಸಕಳವಟ್ಟಿ ಜಲಧಾರೆ ಪೊಜಿಸೂಸೆ ಬಯಲಿಗೆ ಬಾಯ ಬಿಟ್ಟು ನಗಿಸುವರಲ್ಲಿ ತೃಷೆಯಿಂದೆ ಬಂದ ಪಥಿಕರ್ಕಳಾ ಬಾಲೆಯರನು (ಕೃಪಾಣಾ. ೩-೯)· ೨. ಹರಡು; ವ್ಯಾಪಿಸು : ಚಿತ್ತದೊಳ್ ಪಡೆದವ್ಯತಾಂಶುರೋಚಿ ಪೊಜಿಸೂಸಿ ಪೊಗಟ್ಟಿಗೆ ವಂದ ಚಂದವಂ ಪಡೆದುದು (ಜಪಾ. ೪-೭)· ೩. ವ್ಯಕ್ತವಾಗು ; ಪ್ರಕಟವಾಗು ; ಕಾಣಿಸಿಕೊಳ್ಳು: ವಿಲಾಸಶ್ವಾಯೆದ್ದಜಿ ನಗೆ ಪೊಜಿಸೂಸದ ಕಣ್ . . . ಮಾಸರವಾಯ್ತಿವರೊಳಡರ್ದ ಕೊಡಗೂಸುತನಂ (ಪಂರ್ಪು. ೪-೨೪)· ೪. ಪ್ರಕಟಗೊಳಿಸು ; ವ್ಯಕ್ತಪಡಿಸು : ಬಗೆ ಪೊಜಿಸೂಸದೆ ಕೈಯಂ ಮುಗಿದೊಲವಿಂ ನೋಡಿ ವೆರ್ಚುತುಂ ತಿರಿಸುಳಿಯುಂ ಪೊಗಬುತ್ತೆ (ಗತ್ಕಾ. ೦೬೨)· **ಹೊರಸೂಸು** : ೧. ಕನಕದಾಸರ ಭಕ್ತಿ ತರಂಗಿಣಿ ಅವರ ಕೀರ್ತನೆಗಳಲ್ಲಿ ಹೊರಸೂಸಿ ಹರಿದಿದ್ದಾಳೆ (ಕಪ್ರ. ೦೬೭)· ೨. ಅವು ತಮ್ಮ ಬೆಳಕನ್ನು ಎಲ್ಲಾ ಕಡೆಗಳಲ್ಲೂ ಹೊರಸೂಸುತ್ತಿರುವುವು (ಜಕಾಕ. ೪೯)· ಸೌಂದರ್ಯ ಸೌರಭ್ಯಗಳನ್ನು ಅನಂತಕಾಲ ದಿಕ್ಕುದಿಕ್ಕಿಗೆ ಹೊರಸೂಸಬೇಕು (ಕುಂಗಶ. ೭)· ೪. ಹರಿದಾಸರು ಮೆತ್ತನೆಯ ಧ್ವನಿಯಿಂದ ಮಮತೆಯನ್ನು ಹೊರಸೂಸುತ್ತಾ ಕರೆದರು (ಕಾವೀ. ೨೦) ; ವಾತಿನಿಂದ ಹೊರಬಂದ ನಿಟ್ಟುಸಿರು ಅವನ ಹೃದಯದಲ್ಲಾಗುತ್ತಿದ್ದ ಅಸಹ್ಯವೇದನೆಯನ್ನು ಹೊರಸೂಸುತ್ತಿತ್ತು (ಪುರಿ. ೦೬೦)· **ಹೊಜಿಸೂಸು** : ೧. ಗಂಗೆಯಂ ಹೊತ್ತ ಹರನೊಳ್ ಪುರುಡಿಸಿ ಶಿರೋವಮ್ಧ್ಯದೊಳಿರಿಸಿದ ಕುಂತಳ ಕಾಳಿಂದೀನದಿ ಹೊಜಿಸೂಸುಗುವೆಂಬಮ (ಜಪ. ೨-೨೦); ಮಾಸಿದ ಸೀರೆ ಮಸಿಯ ತಿಲಕದ ಹೊಜಿಸೂಸುವ ಬಾಯ ಜೊಲ್ಲಿಂದ . . . ಮುಂದಿವೇಶವ್ಯರೆಡೆಯಾಡುತಿಹರು (ಕಾವಿ. ೬-೦೯೦)· ೨. ಅಸುರದ ಕಬ್ಬೊಗೆಯ ಕವಚದ ಕೇಸುರಿಗಳೊಳಬಿದ್ದುದುರಿ ಹೊಜಿಸೂಸಿ ಹಿಡಿದವು ಹಾವುಗಳ ಬಲು ಹೊವಜಿ ಹೊರಳಿಗಳ (ಕುವಾ. ೨೦-೬೦)· ೩. ತ್ರಿವಳಿ ವೈಗರೆಯ ಹೊಕ್ಕುಳ ಗುಣ್ಪು ಹೊಜಿಸೂಸೆ (ಜಪ. ೦-೦೦೭)· ೫. ಹರಡುವಂತೆ ಮಾಡು ; ವ್ಯಾಪ್ತಗೊಳಿಸು : ಸಣ್ಣ ನನೆಯೊಳಗಣ ಪರಿಮಳವ ಹೊಜಿಸೂಸಿ ಇವಿಂಗಳುಹಿಸಬಲ್ಲುದೇ ವಾಯು (ರೇಣಾಪ. ೬೬-೦೨೬) ·

[ಪೊಜ (< ಪೊಜಗು) + ಸೂಸು$_1$]

ಪೊಜ್ಗೆ, ಹೊರಿಗೆ, ಹೊಜ್ಗೆ$_1$ (ನಾ)· ೧. ತಲೆಯ ಮೇಲೆ ಭಾರವನ್ನು ಹೊತ್ತುಕೊಳ್ಳುವಿಕೆ . ೨. ಭಾರ ; ತಲೆಹೊರೆ. ೩. ಹೊಣೆಗಾರಿಕೆ ; ಬಾಧ್ಯತೆ ; ಜವಾಬ್ದಾರಿ : ಮುಂದೆ ನಮಗುರ್ವ ಕೆಲಸದ ಪೊಜ್ಗೆಯುಂಟು ನೀನಿಂದುಹಾಸನಲ್ಲಿಗೀಗಳೊಡಗೊಂಡು ಬಾ (ಕೃಪಾಣಾ. ೩೦-೪೨). ೪. ಕೆಲಸ ; ಕಾರ್ಯ ; ವ್ಯವಹಾರ : (೬). ೫. ಅಧಿಕವಾದ ಪ್ರಯತ್ನ; ಪ್ರಯಾಸ: ಮುಜ್ಗುವುದಸುರರ ಸೇನೆಯೊರ್ವೆ ದಿವಿಜರ ದಳಂ ವೆಜದೆಗೆವುದೊರ್ವೆ ಪಡಿಬಲಿಸಿ ನೂಂಕುವುದೊರ್ವೆ ಪೊಜ್ಗೆಯಿಂ (ತಾಪು. ೨೬-೦೪)· **ಹೊರಿಗೆ** : ೧. " ವಹಃ, ವಾಹಃ, ವಹನಂ . . . ಊಧವ್ಯಂ—ಈ ೯ ಹೊರಿಗೆ " (ಶಾಕಪ್ರ. ೦೬೦). ೨. ಯಾ ಹೊನ್ನಿಗೆಯೆರಡು ಬೆಳೆಯಲು ಸಹ ವರ್ಷ ೧೫ಕ್ಕೆ ಬಹ ಅಕ್ಕಿ ಅಂಗಡಿಯ ಹೊರಿಗೆಯ ಬಳ್ಳ ಅಯ್ವತ್ತರ ಲೆಕ್ಕದ ಅಕ್ಕಿ ಮೂಡೆ ೨ (ಎಕ್ಷ. XX, ೧೪ ೧೪ ; 1556); ಹೊಕ್ಕುಗಿರಿವ ಹೊರಿಗೆಯನು ಬಿಡದೆತ್ತಿಕೊಂಡಾ ವಸ್ತುಗಳಿಗಂ . . . ಸಂಭೀದವೆಂಬುದು ತೋರದಂತಿಹುದು (ಜವೀಕ. ೪-೨೪). ೩. ಪರಿಜನ ಸಾವಂತ ತಳತಂತ್ರ ಮೂರ್ಬಲದ ಹೊರಿಗೆ ನಿನ್ನದು (ಶುಕ್ಕಾಂಗ. ೯-೪) ; ಹೊರಿಗೆಯನು ನೋಡುವರೆ ರಾಯರಿಗೆರೆಯನೆಂಬೀ ಬಿರುದು ದುರ್ಗದ ಮರೆಯ ಕಾಳಗವೇಕೆ ಗಂಡ ಸೂರ್ಯನೆಂಬವಗೆ(ಕೂಂಶ್ಯಕ. ೨೪೭). ೪. ಎಡಬಲದೊಳೊಬ್ಬರಂ ನಿಲಗೊಡದೆ ಹೊರಿಗೆಯಿಂದೀರ್ವರೆಚ್ಚಾಡಿದರು ಖಾತಿಯಿಂದ (ಕುರಂಗ. ೬೨-೦೪). **ಹೊಜ್ಗೆ**$_1$: ೨. ಹಜ್ಜೆಯ ಹೊಯ್ಲನಲವರಗಿರಿ ತಜತಜಿಸೆ ತೂಳಿದರಸ್ಯ ಶಸ್ತ್ರದ ಹೊಜ್ಗೆಯಲಿ ಹೂಳಿದರು ಹೊಗಿಸಿದರಾನೆಕುದುರೆಗಳ (ಕೂರಂ. ೩-೬-೬) ; ಹೊಜ್ಗೆಯ ಶಬದಿನದ್ಯುತಕ್ಷವಾತ್ಮದಿ ಶಾಂತ ವೆಜಿಯೆ (ಶಾಕ್ಷ ೩-೪೨). ೩. ಹೊಜ್ಗೆಯಸವಜ್ಜೀಯವಲ್ಲಿಯೆ ಕುಜುಹಡಂಗಿರಲಜುವ ತಾ ತನ್ನಜುವ ಮಜಿದಜುದ್ಗೊನು ಶಿವಮಗ್ನತೆಯೊಳಿರ್ದಹನೊ (ಜಪು. ೩೬-೨೨); ಕದಸದ ಹೊಜ್ಗೆ ದೊರೆಗಳ ಮೇಲೆ ಬಿದ್ದುದು (ಶಾಣಾ. ೨೦-೦೬); ಮಜುಗಿ ವಾಡುವುದೇನು ಮುಂದಣ ತೆಜನ ಕಾಬುದೆ ಪೌರುಷಾಂಗದ ಹೊಜ್ಗೆ (ಕೂರಂ. ೬-೨೯-೪೩)· ೫. ಹೊಜ್ಗೆಯಿಂ ಹೊಜ್ಗೆಯ ಹೊತ್ತುಂ ನಡವು ಬೇಸತ್ತು (ರಚಿಂ. ೪೭-೦೬೯) ; ಹಜ್ಜೆಯದರ್ಜುನನಿಂದ ಭೀಮನ ನೆಜವಣಿಗೆ ನೋಯಿಸದು ನಕುಲನ ಹೊಜ್ಗೆ

ಯೊದಗದು ಸೈರಿಸದು ಸಹದೇವನಾಟೋಪ ಇಱಿವಡಾ ಮಾದ್ರೇಶನನು (ಕುಮಾ. ೦-೩೦). ೬. ರೀತಿ ; ಕ್ರಮ ; ವಿಧಾನ : ಮಲೆತರನೆಱಗಿಸಿ ಕೊಂಬ ಬಲುಮಂತ್ರದ ಹೊಱಿಗೆಗಳನಱಿದು ಭೂವಲಯವನಾಳು ನೀನು (ಜಿಪಂಪಾಂ. ೨೦-೩೩) ; ಮುಂದಣ ರಾಜಕಾರ್ಯಕ್ಕೆ ಹೊಱಿಗೆ ಯಾವುದು ಪೇಳಿಂ (ರಾಮಾ. ೦೩-೭). ೭. ಹೆಚ್ಚಳ ; ಆಧಿಕ್ಯ ; ಅತಿಶಯ : ಹೊಱಿಸುವಡೆ ದುಷ್ಕೀರ್ತಿ ನಮ್ಮಲಿ ಹೊಱಿಗೆಯಾಯಿತು ನಾಭಿಯಿಂ ಕೆಳಗೆಱಗುವುದು ಗದೆಯಿಂದ ಸಲ್ಲದು ಶಸ್ತ್ರವಿದ್ಯೆಯಲಿ (ಕುಮಾ. ೧೦-೩೯); ಮುಱಿದುದಗ್ಗದ ಮಹಿಮೆ ಶೋಕದ ಹೊಱಿಗೆಯಲಿ ಕಾತರಿಸಿ ನಡೆವನು ನೃಪತಿ (ಪಳಸ. ೩-೦೯). ೮. ಫಲ ; ಪರಿಣಾಮ : ಕರೆದು ನುಡಿ ಪಂಬರದ ವಾಣಿಯ ಹೊಱಿಗೆಯನು ನಿಶ್ಚೈಸಿ (ಕೌಕಿರಾ. ೨೯-೨೩); ಇದಱ ಹೊಱಿಗೆಯನಱಿತು ಭೂಪರು ವಧಿಸುವರು ಸತ್ತವರನಲ್ಲದಡದೆ ಪರಿಹಾರಾರ್ಥವನು ನಿಶ್ಚಿತಿಯಿಂದ ನಡಿಸಲಿಕೆ (ಮೂರಿಂಗಾ. ೬-೨೯). ೯. ತೀಕ್ಷ್ಣವಾದುದು ; ಕಠೋರವಾದುದು ; ಕಠಿನವಾದುದು : ಮಂಜಿನ ನೆರವಿಯಂತಳಿವವು ಹೊಱಿಗೆಯ ತಪಕಘವವರ (ರಾಮಾ. ೨೦-೦೪೦). ೧೦. ನಂಬಿಕೆ ; ವಿಶ್ವಾಸ : ಅಱಿತು ಜಾನಕಿಯಿರ್ದ ಸೆಱೆ ವನೆಯನದೋರ್ವರಱಿಯದಂದದೊಳಾನು ಪೊಕ್ಕು ಮಱೆಯೇನು ನೋಡಿ ಬಂದಪೆನೆಂದವನೊಳು ಹೊಱಿಗೆಯ ಮಾತನಾಡಿದನು (ರಾಮಾ. ೦೯-೬೯). ೧೧. ಕ್ಲೇಶ ; ಸಂಕಟ : ನರಕಗಳ ಪರಿವಿಡಿಯ ನೋಡುತಂ ಸಾನಂದ ಬರುತಿರಲು ನುಡಿದ ಯಮನೊಂದು ಮಾತ ನರರೊಳತ್ಯಾಧಮಂ ಪಾಪಿಷ್ಠ ಜೀವಿಗಳು ಹೊಱಿಗೆಯಿಂ ಮುಕ್ತಿಯಹರಾವ ತೆಱದಿಂದೆನಲು (ಅಕಿಸಂ. ೪೦-೩೩). ೧೨. ಅಂಚು ; ಎಲ್ಲೆ ; ತುದಿ : ಚಂಬಕ ಪಟಹ ಮವುರಿ ಕೊಂಬು ಕೊಳಲಿನಾಡಂಬರ ಬುರುಗು ನಪಿರಿಯ ಇಂಬಿನ ರವ ವೆಂಟುದಿಕ್ಕಿನ ಹೊಱಿಗೆಯ ಮುಂಬರಿದೊಡನೆ ಪರಿದುದು (ಕುಸಂ. ೦೦-೨೯). ೧೩. (?): ನಾಯಿಂದರಿಗೆ ತೆಱಿಗೆ ಹೊಱಿಗೆ ಕಾಣಿಕೆ ಕಪ್ಪ ಬಿಟ್ಟಿ ಬಿರಾಡ ಆವುದೂ ಯಿಲ್ಲಯೆಂದು ಕೊಟ್ಟ ನಾಯಿಂದರ ಶಾಸನ (ಸೌಇಇ. IX-ii, ೬೨೩-೦೨ ; 1547). [< ಪೊಱು]

ಪೊಱಿಸು, ಪೊರಿಸು, ಹೊರಿಸು₁, ಹೊಱಿಸು (ಕ್ರಿ). ೧. ಭಾರವನ್ನು ಹೊರುವಂತೆ ಮಾಡು ; ಭಾರವನ್ನು ಹೇರು : ಬಲಭದ್ರಂ ದಾಸಿಯನೊರ್ಬಳಂ ನಿತಾಂತಕ್ರಯಮಾಗಲ್ ಕೊಂಡು ಪೊಱಿಸಿದಂ ಬಲ್ಲೊಱೆಯಂ (ರಸಿಂ. ೦೨-೦೪೯) ; ಒತ್ತರಿಪ ದನಿಗೇಳುತಾ ಪುರುಷೋತ್ತಮನು ನಂದನು ಬೆರಸಿ ಬರುತೊತ್ತಿನಲಿ ಮಡಿವಳನು ಪೊಱಿಸಿದ ಮಡಿಗಳನು ಕಂಡ (ಸಾಳ್ವಭಾ. ೨೨-೩೮). **ಪೊರಿಸು** : ೨. (ಅಪವಾದ ಮೊದಲಾದುವನ್ನು) ಹೇರು ; ಆರೋಪಿಸು : ನೀನು ವರನ ತಂದಪಕೀರ್ತಿ ಪೊರಿಸಿದೆಲೆ ಮಗಳೇ (ಕಂಕ. ೩೨-೧). **ಹೊರಿಸು₁** : ೧. ಋಷಿಯು . . . ಮಣಿನಿಕರವಂ ಶಿಷ್ಯನ ಕೈಯೊಳು ಹೊರಿಸಿಕೊಂಡು (ಸೌಗಂಧಿ. ೩೦೨-೩) ; ಗೂಡೆಗಳನ್ನು . . . ಕೆಲವರಿಗೆ ತಿಮ್ಮನು ಹೊರಿಸಿಕೊಟ್ಟನು (ಸಂಗಾಳ್ಯ. ೮೦). ೨. ಇಲ್ಲದ ತಪ್ಪುಗಳನ್ನು ಮೇಲೆ ಹೊರಿಸಿ ಹೇಳುವುದು (ಸಿದ್ಧಾಂತಿ. ೩೨) ; ಇಲ್ಲದ ಸಲ್ಲದ ಆರೋಪವನ್ನೆಲ್ಲಾ ಅವರ ಮೇಲೆ ಹೊರಿಸುವುದು (ಅಂಹೂ. ೪೩) ; ತಪ್ಪು ಹೊರಿಸಿದರೆ ಒಪ್ಪುವವನ್ಯಾರು ? (ಗಾರ). **ಹೊಱಿಸು** : ೧. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊಱಿಯ ಹೊಱಿಸದಿರಯ್ಯಾ (ಬಸವ. ೩೪೩) ; ಹೊಳಲ ಜನದ ಸಮಸ್ತಭುವನಾವಳಿಯ ಭರಭಾರವನು ಹೊಱಿಸಿದನಗ್ನಿದೇವರಿಗೆ (ತೊರಣಾ. ೩-೬-೩೩) ; ಸೂಳೆಯಂದದಿ ನಡೆವವಳ ತಲೆ ಬೋಳಿಸಿ ಕಸಹೆಡಿಗೆ ಹೊಱಿಸಬೇಕವಳ (ಪುರುದ. ೨-೦೯-೨). ೨. ಭಂಗವಿಲ್ಲದೆ ಬಿದ್ದ ನಿಮ್ಮಯ್ಯಂಗೆ ಹಳಿವನು ಹೊಱಿಸದಿಹ ಮನದಂಗವಣೆಯುಂಟಾಗೆ ಮೆಚ್ಚುವೆನು (ಕುಮಾ.ಪ್ರೋ. ೧೬-೦೯) ; ನಿಮಗೂಣಯವ ಹೊಱಿಸುವನೊ ಕೊಱತೆಯ ಹಾಯ್ಕುವನೊ ತನಗೆ (ತೊರಣಾ. ೩-೩ ೦೦೦). ೩. ನಿರ್ವಹಿಸುವಂತೆ ಮಾಡು ; ವಹಿಸು : ಅರಸಂ ತನ್ನ ಮಗನಲ್ಲಿಯಾದೊಡಂ ತನ್ನ ಕುಲದಲ್ಲಿಯಾದೊಡಂ ಆವನೊರ್ವನ ಮೇಲೆ ರಾಜ್ಯಭಾರವಂ ಹೊಱಿಸಿಯಿಹಂ ತಾನವನೈಶ್ವರ್ಯವನಪಹರಿಸಬೇಕಾಗಿ ಮಾಡಿದವಂ (ಪಂಪತಂ. ೯೬-೧೨). [ಪೊಱು + — ಇಸು₃]

ಪೊಱು, ಪೊರು, ಹೊರು, ಹೊಱು (ಕ್ರಿ). ಪೊತ್ತು₁, ಹೊತ್ತು (ಭೂತಕೃ). ಪೊತ್ತು₂, ಹೊತ್ತು₃ (ಭೂತನ್ಯೂ). ೧. ಭಾರವಾದ ವಸ್ತುವನ್ನು ತಲೆಯ ಮೇಲೆ ಅಥವಾ ಹೆಗಲಿನ ಮೇಲೆ ಇಟ್ಟುಕೊಳ್ಳು,—ಹೊತ್ತುಕೊಳ್ಳು : "ಪೊಱು — ಶಿರೋಧಾರಣೇ" (ಕಮಧಾ) ; ಬಲದೇವನಂತೆ ಪೆಣನಂ ಪೊತ್ತು ತೊಱಲ್ವ ಕ್ಷೇತ್ರಪಾಲರಿಂ (ಕಾವ್ಯಸಾ. ೩೨೯ ಕೂಪ್ರಕ) ; ಒಡನಂದಯ್ವರುಮಂ ನಿಜಾಂಸಯುಗದೊಳ್ ಪೊತ್ತೆತ್ತಿ ತಳ್ಳೂಳ್ವ ಸೀಱುಡುವಿಂದದ್ಭುತೆದಾ ಹಿಡಿಂಬವನಮಂ ಪೊಕ್ಕಂ ಮರುನ್ನಂದನಂ (ಪಂಪಭಾ. ೩-೯) ; ಬೆಟ್ಟಂಗಳಂ ಕಿತ್ತು ಪೊತ್ತಿವರನಿಟ್ಟು ಬೆನ್ನಟ್ಟಿದಪೆವು (ಸಂಪು. ೨೦-೨೩). ೨. ತಳೆ; ಧರಿಸು : "ಪೊತ್ತನೆನುತುಂ ಅಂತನೆನೆ ಧರಿಸಿದರ್ಥಂ" (ಕಲಿಕಾ. ೦೩೯); ಸತ್ತ ಪೊತ್ತ ಕಣ್ಣಱಿಯದ ಬೆಳ್ಳನಲ್ಲೆ ನಱಿದೆಂ ಧವಳಾಕ್ಷಿಯ ನೋಟದಂದಮಂ (ಪಂಪಭಾ. ೪-೭೬) ; ಪೊತ್ತ ಪೂತಳಿರ್ ಬಾಡಿ ಕಱಂಗಿ ಚುಯ್ಯೆನುತುಮಿರ್ದುವು (ಕಬ್ಬಿಕಾ. ೩೦೪) ; ಎಳೆವೆಱೆಯ ಪೊತ್ತನ ಕುಮಾರನಂ ತಿನ್ನೆನುತ್ತುರಗಾಸ್ತ್ರದಿಂದೆಚ್ಚನು (ಸಂಪು. ೪೩-೨೨). ೩. ಪಡೆ ; ಹೊಂದು ; ತಾಳು : ಶಿಲೆಯೊಳ್ ತಾಟಿಸಿ ತನ್ನಯ ತಲೆಯಂ ಜರ್ಜರಿತಮಸ್ತಕಂ ಮಡಿದತ್ಯಾಕುಲನೀ ವರಾಹದೇಹ ಮನಲಸದೆ ಪೊತ್ತಿರ್ದು ನಮೆದಪಂ ಧರಣಿಪತೀ (ಅಂಪು. ೩-೦೭); ಕರೆಯಂ ನೆರವಂ ವಂಶಂ ಕಱೆಯಂ ಪೊತ್ತಪ್ಪುದೆಂದು ಸಂಗರಮುಖದೊಳ್ (ಕಮಧ. ೧೯ ಪ್ರಯೋ). ೪. ಕೈಗೊಳ್ಳು; ಪರಿಗ್ರಹಿಸು : ಭವವಾರಾಶಿ ನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂಬಿವೆ ಮೆಯ್ಯಾಗಿರೆ ಸಂವ ಧರ್ಮಮೆ ವಲಂ ಪೊತ್ತೆತ್ತುಗುಂ (ಅಂಪು. ೨ ೭); ಆರೇನಂ ಪೇಳ್ದೊಡಂ ಕೈಮುಗಿದು ಸುಗಿದು ಪೆರ್ಬಿಟ್ಟಿಯಂ [ಶಾಶಾಂ. ಕೈಂಕರ್ಯಮಂ] ಪೊತ್ತು ಸಂಸಾರಾರಂಭಂಗೆಯ್ದು (ರಕ್ಷಾಕ. ೦೯). ೫. ಸಹಿಸು ; ಅನುಭವಿಸು : ಇನಿವಿರಿದು ಪರಾಭವಂ ಪ್ರಾಕೃತಪುರುಷಂಗಂ ಕಾಪುರುಷಂಗಂ ಪೊತ್ತು ನಿಲ್ವುದರಿದು (ಶಾಂತಿಪು. ೩-೬೬ ವ). ೬. ವಹಿಸಿಕೊಳ್ಳು : ಸಿಂಗಪೊತ್ತರ ಕಲಿ ನೊಱಮ್ಬದಿ ಅರಸರಾ ಪೆರ್ಮೆನಡಿಗಳ್ಬೆಸಗೆ ಬೆಸಂಬೆತ್ತು ಪೊತ್ತನ್ನು ಮೇಗೆಟ್ಟನ್ನು ಕಾದಿದೊ (ಎಕ. XI, ಪಳ್ಳಿಕೆ. ೬-೨ ; ಸು. 810 ?); ತಂಗವಿರ ಭರಭಾರಕ್ಕಮಡಸಿದ ಬಡತನಕ್ಕಮಡರ್ಗಮಳ್ಕದೆ ನೀಂ ಪೊತ್ತು ನಿತ್ತರಿಸುತ್ತುಮಿರೆ (ಶಾಂತಿಪು. ೪-೬೬ ವ). **ಪೊರು** : ೧. ದೊಡ್ಡನೊಳಬಗೆಗುದುರೆ ನಲ್ಮೆಹೇರಂ ಪೊತ್ತು ಗೊಡ್ಡದಿಂದಳ್ನೆಲದಿ ನಡೆಯುಡಿಯುತಿತ್ತು (ಕಾಲೂರ. ೩೦-೭೪) ; ಡೆಂಕಣಿಯ ಸಾಲ್ಗಳಂ ಪೊತ್ತು ನೆತ್ತಿಯೊಳೆಸೆವ ಕೊತ್ತಳಗಳಿಂದೆ (ಪತ್ರಾಂಗ. ೩೭-೩೫೭). ೨. ವರ್ಷಮೇಘಂ ರಮ್ಯಸುರಚಾಪಮಂ ಪೊತ್ತು ನಭದೊಳ್ ನಡೆಯುವಂತೆ ! (ಪತ್ರಾಂಗ. ೩೩-೦೪೯೩). ೪. ಪಡಿನೆಳಲ ಪೊತ್ತು ತಾಂ ಧನ್ಯನೆಂದಾ ಕೊಳು ಜುಮ್ಮೆಂದು ಪುಳಕಿಸುವ ಮಾಳ್ಕೆ ಕಂಪಿಸಿದತ್ತು (ಪತ್ರಾಂಗ. ೩೪-೯೦೫) ; ಒಯ್ವ ಕೇಡಂ ಪೊತ್ತು ಪೆಣ್ ತೆರಳ್ಕೆಯು ತೆರಳೆ (ಕಾಲೂರ. ೦೩೦-೨೬೯). ೬. ಸತ್ತವರ ಮೇಲೊಲ್ಮೆಯೆಂದೊಡೇಂ ಬಾಳ್ದವರ್ ಪೊತ್ತು ಚೆಲ್ವಿನೊಳವರ ಕಡೆಗೆಯ್ಮೆ ಮುಗಿಸಿ ಮತ್ತವರ ಬರ್ದಿಲರ ನಾಡಿಗೆನೆ ಕಳುಹುವುದು (ಕಾಲೂರ. ೦೬೦-೪೦೦). **ಹೊರು** : ೧. ವಿನೀತಃ, ಸಾಧುವಾಹಿನಃ — ಎಳೆಯಲಾಪುವ ಕುದುರೆಗಳಿಗೂ ಚೆನ್ನಾಗಿ ಹೊರಲುಳ್ಳ ಕುದುರೆಗಳಿಗೂ ಹೆಸರುಗಳು (ಸಿದ್ಧಾಂತಿ. ೨೪೯); ತನ್ನ ಬೆನ್ನಿನಲಿ ತನ್ನಳ್ಕರೆಯ ಹೊರೆಯ ಹೊತ್ತ ಹೆಮ್ಮೆಗೆ ಹಿಗ್ಗಿ (ಪತ್ರಾಂಗ. ೦೭-೪೩೩); ಹೊರಬಲ್ಲವನಿಗೆ ಆಳು ಬೇಡ, ಆಡಬಲ್ಲವನಿಗೆ ಹೆಂಡತಿಬೇಡ (ಗಾರ). ೫. ಹೊರಬೇಕೈ ಕಷ್ಟವ

ಸಹಿಸುವ ತನುವು ; ಪರದುಃಖಕೆ ಕೂಗುವ ಮನವು (ಕುಪು. ೭-೫). ೭. (ಪಕ್ಷ) ವಹಿಸು : ಏನೇನು ಆಗಬೇಕೆಂದಿದೆಯೋ ಅದು ಹಾಗೇ ಆಗಬೇಕಾದದ್ದು ವಿಧಿನಿಯಮ ಎಂಬುದು ಅವರ ಲೆಕ್ಕ. ಅದರಿಂದ ಗಣಪತಿಯನ್ನು ಹೊತ್ತು ಮತ್ತೆ ಹೆಂಡತಿಯಲ್ಲಿ ಅವರು ಮಾತು ಎತ್ತಲಿಲ್ಲ (ಹೊಸಕ್ಷಿ. ೩೦). **ಹೊಱು** : ೧. ಜಂಗಮವೆನ್ನವರೆನ್ನವರೆನ್ನವರೆಂಬವರ ಕೆರಹ ಹೊತ್ತಿರಿಸೆನ್ನನು (ಬಸವ. ೩೬೨) ; ಪೃಥಿವಿ ನೆಗ್ಗಿತು ಹೊತ್ತ ಕಮಠನ ವ್ಯಥೆಯನಾರು ಸುರುವರು (ಕುಪ್ಯಾಕ್ರೋ. ೨-೩೦) ; ಅಗಣಿತಲೋಕಾದಿ ಲೋಕಂಗಳುದರದಿ ಸೊಗಯಿಪ ನಾರಾಯಣನ ಹೆಗಲೊಳು ಹೊತ್ತು ಖೇಚರದೆ ಸಂಚರಿಸುವ ಖಗರಾಜ ಕರುಣಿಪುದೆಮಗೆ (ಪೋಹತ. ೦-೧೩). ೨. ಕಕ್ಷಪುಟದಲ್ಲಿ ಕತ್ತುರಿಯ ಹೊಗರೆತ್ತುತಿರೆ ಅಕ್ಷಿಗಳು ಕರುಣರಸಮಂ ಹೊತ್ತು ಬಳಲುತಿರೆ (ಬಸರ ೧-೦೦೯); ಮಹಾಪ್ರಮಥೋತ್ತಮಪುರಾತನಗಣಾಂಘ್ರಿಗಳಂ ಹೃದಯದಲ್ಲಿ ಹೊತ್ತು (ಬಸಪು. ೩೬-೩೦) ; ಹೊತ್ತ ಜೋಹದ ಜಾಳಿ ಲೇಸಾಯಿತ್ತು ನಿನಗುಪದೇಶಮಂತ್ರವನಿತ್ತವನ ವರ್ತನವದೆಂತುಟೊ (ತೊರರಾ. ೯-೯-೯೦). ೩. ತ್ರಿಣಯನನ ಬೆಸನನಾಂ ಪಡೆದೆನೆಂದುರ್ಬುತುಂ ಪರವಶೀಭೂತನಾಗುತ್ತೆ ಮಜಹಂ ಹೊತ್ತು ಹರುಷದಿಂ ದೇವಿಯರ್ಗಿತ್ತು (ಬಸರ. ೦-೩೯) ; ಹರಿಹರ ನೆನಿಪ ಪೆಸರ ಹೊತ್ತ ಹರನಂತಕಮದಹರಂ (ಬಸಪು. ೩೯-೯೩) ; ಎತ್ತಿದೆನು ನಾನಾಶರೀರವ ಹೊತ್ತು ಹೊತ್ತಳಲಿದೆನು ಸಲೆ ಬೇಸತ್ತು ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನು (ಹಂಸಾ. ೬೦). ೫. ಧನು ಮುಱಿಯೆ ದಿಟ್ಟಾಯ್ಲತನವೀತನಲಿ ಸಾಕಿನ್ನೆನುತ ಗುರುನಂದನನು ಮುರಿದನು ಹೊಗರು ಮೋಱೆಯ ಹೊತ್ತ ದುಗುಡದಲಿ (ಕುಪ್ಯಾಕ. ೦೯-೩೦); ಕುಂದು ಕೊಱತೆಯ ಹೊಱುವ ಹೆಣ್ಣೆ ನೀನು (ಕಂಪಂ. ೬-೦೬೩). ೮. ಭಾರವಾಗಿರು ; ಹೊರೆಯಾಗಿರು : ಈ ನಾಲಗೆಯ ಸಾಲವನೀಗ ಕೈಯಲಿ ತಿದ್ದಿಕೊಡುವರೆ ಹೋಗದೇ ಹೊತ್ತಿಹವೆ ಹೇಳೆನುತೆಚ್ಚನಾ ಭೀಮ (ಕುಪ್ಯಾಕ. ೨-೦೯). ೯. ಹೇರಿಕೊಳ್ಳು ; ಆರೋಪಿತಗೊಳ್ಳು : ಅದಱಿಂದಾದ ತಪ್ಪನದೆಂತು ಹೊಱುವೆನು (ಬಸಪು. ೩೯-೩೨) ; ಮನ್ನಣೆಯ ಬಿಲ್ಲ ಗುರುವಿನ ಬಿಂಕ ಬಯಲಾಯ್ತಿಲ್ಲಿಯೆಂಬಪಕೀರ್ತಿ ಹೊಱುವುದು ಬಲ್ಲೆನು (ಕುಪ್ಯಾಕ್ರೋ. ೦೩-೦೦). ೧೦. ಗರ್ಭದಲ್ಲಿ ಧರಿಸು : ಸತ್ತವರಿಗಳಲೇಕೆ ತನ್ನನು ಹೊತ್ತವರು ಹೆತ್ತವರುಗಳು ತಾ ಸತ್ತುಹೋಗುವರಲ್ಲದುಳಿವರೆ (ಹಂಸಾ. ೯೨) ; ಒಂಭತ್ತು ತಿಂಗಳು ಹೊತ್ತ ಮಾತೃಕೆಯ ಪಾದಾಂಭೋರುಹಕಲರ್ಗಱೆದು (ಪೋಹತ. ೨೯-೯೦). ೧೧. (ಋಣವನ್ನು) ಹೊಂದು : ಮಾಱಿದ ತಲೆಯ ಭಂಡವ ಹೊತ್ತಿರದೆ ಕೈಕೊಳಲಿ ಕರ್ಣಾದಿಗಳು (ಕುಪ್ಯಾಕ್ರೋ. ೩-೯). ೧೨. ಸಂಕಲ್ಪ ಮಾಡು ; ಪ್ರತಿಜ್ಞೆ ಮಾಡು : ಹೊತ್ತ ಭಾಷೆಯೊಳಿಃ ಪರಿಯೊಳೆಂಬತ್ತುವರುಷಂಗಳು ಶಿವೈಕ್ಯರ ತೊತ್ತುಗೆಲಸಂ ಮಾಡಲು (ಬಸಪು. ೨೬-೬೨).

ಪೊಱುಪೊಱು, ಹೊಱುಹೊಱು (ದ್ವಿರುಕ್ತಿ) : ಮತ್ತೆ ಪಿಟ್ಟವ್ವೆಯ ಸುಭಕ್ತಿ ನಿಮಿತ್ತದಿಂ ಚೋಳಂಗೆ ಮಣ್ಣಂ ಪೊತ್ತು ಪೊತ್ತೊತ್ತಿದ ತಲೆಯ ಕಿಱುಕುಣಿಗಳಂದದಲಿ (ಬಸಪು. ೩೯-೩೬) ; ಎತ್ತಿದೆನು ನಾನಾಶರೀರವ ಹೊತ್ತು ಹೊತ್ತಲಸಿದೆನು (ಹಂಸಾ. ೬೦). **ಪೊತ್ತುಕೊಳ್, ಹೊತ್ತುಕೊಳ್ಳು** = ತಲೆಯ ಮೇಲೆ ಹೊರು.—ಧರಿಸು : ನಿನ್ನಂ ಪೊತ್ತುಕೊಂಡು ಪೋಪೆನೆನೆ (ಸಾಪುಂಪು. ೭೬); ನಲ್ಲಳ ಪಾದಮಂ ತಲೆಯೊಳ್ ಪೊತ್ತುಕೊಂಡು (ರರ್ಮಾಮ್ಯ. ೨-೧೨೯) ; ಹೊತ್ತುಕೊಂಡೊಯ್ದಿಳುಹಿದೆನು ನದಿಯೊತ್ತಿನಲಿ ತಾಂಡವನ ಬಳಿಯಲಿ (ತೊರರಾ. ೨-೩-೨೬) ; ನೀನು ಭೂಮಿಯನ್ನು ಸ್ವಲ್ಪಕಾಲ ಹೊತ್ತುಕೊಂಡರೆ ಅವನೇ ಹೋಗಿ ಚಿನ್ನದ ಸೇಬುಗಳನ್ನು ತಂದುಕೊಡುವನು (ಮಜಿಸ. ೦೦೦). **ಪೊತ್ತು ತರ್, ಹೊತ್ತು ತರು** = ಹೊತ್ತುಕೊಂಡು ಬರು : ತಮ್ಮ ಪೊತ್ತುತಂದಿಪ್ಪೆಯ ಪೂವುಮಂ ಬೇಳದ ಪಣ್ಣುಮಂ ಕನ್ನೆಯ ಮುಂದೆ ಪೊಯ್ದು (ರರ್ಮಾಮ್ಯ. ೩-೯೩) ; ಅಮಳಾಂಬುವಂ ತಾಂ ಪೊತ್ತುತಂದು ಸುಗೋಮಯದಿ ಬೆರಸುತ್ತ (ಬಸಪು. ೦೮-೩೯) ; ಹೊರಗೆ ಇರುವ ಕಟ್ಟಿಗೆ ಹೊರೆಯನ್ನು ಹೊತ್ತುತಂದು ಒಳಗೆ ಹಾಕು (ರೂಢಿ). **ಹೊತ್ತಾಡು** = ಪುರಸ್ಕರಿಸು (?) : ವಸ್ತುಕ್ರೀವಿದನಾಗಿ ನಿತ್ಯಾನಿತ್ಯವ ಹೊತ್ತಾಡಿ . . . ಮುಕ್ತಿ ನಿಶ್ಚಯವಾದಲ್ಲಿ ಪ್ರಾಣಲಿಂಗಸಂಬಂಧ (ಪೋಳಿಪಾ. ೧೨೦-೯೭೦). **ಹೊತ್ತು ಹಾಕು** = ೧. ಕಳುಹಿಸು ; ರವಾನಿಸು : ಈ ಕಾಗದ ಪತ್ರಗಳನ್ನು ಬೇಗ ಹೊತ್ತುಹಾಕಬಾರದೇ ? (ರೂಢಿ). ೨. (ಶವವನ್ನು ಶ್ಮಶಾನಕ್ಕೆ) ಒಯ್ಯು ; ಸಾಗಿಸು : ಹೊತ್ತು ಹಾಕಲು ಜನ ಸಿಗುವುದಿಲ್ಲ, ವ್ಯಾನಿಗೆ ಹೇಳಿ ಕಳುಹಿಸು (ರೂಢಿ). [ದೇ.॥ ತಮಿ. ಮಲ. ಪೊಱು ; ಕೊಡ. ಪೊರೀ ; ಕೋತ. ಪೊರ್ ; ತೊದ. ಪೀಱ್]

ಪೊಱುಕೆ (ನಾ). ಹೊರುವಿಕೆ ; ಧರಿಸುವಿಕೆ : ಕಿಱುಕೆ, ತಿಱುಕೆ, ಪೊಱುಕೆ (ಕಬ್ಬಾಸು. ೩೩೭ ಪ್ರಯೋ). [ಪೊಱು + — ಕೆ]

ಪೊಱೆ, ಪೊರೆ, ಹೊರೆ, ಹೊಱೆ (ನಾ). ೧. ಒಜ್ಜೆ ; ತೂಕ ; ಭಾರ : ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟಿತಪ್ಪ ಬಾಯ್ದೆಱೆ (ಪಂಪಭಾ. ೦-೦೦೬) ; ಆಭರಣದ ಪೊಱೆಯಂ ತಳೆವಾಭರಣಪ್ರಿಯರ ತೆಱದೆ . . . ನಿದ್ಮೊಂದಿಗರಾಭರಣದ ಪೊಱೆಯನೇಕದಂ ಪೊತ್ತಿರ್ಪರ್ (ಕಾದಂಉ. ೦೦೬); ಅಲಸಪದಕ್ಕಲಕ್ತಕರಸಂ ಪೊಱೆಯೆಂಬಿನಿತೊಂದು ಚಿತ್ತಮಾ ಲಲನೆಗೆ ದೇವಕೀವನಿತೆಗಾದುದು ನಿರ್ಭರಪೂರ್ಣಗರ್ಭದೊಳ್ (ಜಗವಿ. ೨-೯೯). ೨. ತಲೆ, ಹೆಗಲು, ಗಾಡಿ ಮೊದಲಾದುವುಗಳ ಮೇಲೆ ಇಟ್ಟುಕೊಂಡು ಸಾಗಿಸುವ ಸೌದೆ, ಹುಲ್ಲು ಮೊದಲಾದುವುಗಳ ಕಂತೆ,—ಗಂಟು; ತಲೆಭಾರ : ಪುಳ್ಳಿಯ ಪೊಱೆಯಂ ಪೊತ್ತು (ವಡ್ಡಾರಾ. ೭೭-೨೩); ಅಂತು ಪೊಕ್ಕು ಪುಲುಪುಳ್ಳಿಯ ಪೊಱೆಯನಿಳುಪಿ ಭೇರಿಯಂ ಪೊಯ್ದು (ರರ್ಮಪ. ೨-೩೯ ಪ); ಪುಲಿದೊಗಲ ಪೊಱೆ ಜೇನುತುಪ್ಪ ನಳಿಗೆ ಮೇಣದ ಮುದ್ದೆ (ಸಾಳ್ವಭಾ. ೦೬-೬). ೩. ದೊಡ್ಡ ಆಕಾರವುಳ್ಳುದು ; ಭಾರವಾದುದು : ಒಂದು ಪೊಱೆ ಜಡೆಯುಮಂ ಪಲವಂದದ ಮುದ್ರೆಯುಮನೆಯ್ದೆ ಪೊತ್ತೆನ್ನಂ ಬಾಯೆಂದು . . . ಕರೆಯರೆಮ್ಮ ಭಳಾರರ್ (ಸಮಪ. ೯-೭೯). ೪. ಹೊಣೆ ; ಜವಾಬ್ದಾರಿ : ಎನ್ನನೋವ ಕಾವ ಪೊಱೆ ತಮ್ಮಡಿಯೊಳೆಂದು ಕಣ್ಣೇರಿಡುವುದುಂ (ರಾಮಾಶ್ವ. ೬೩-೦೦). ೫. (ಹಣದ) ಗಂಟು : ನಿನ್ನ ಪೊಱೆಗಾರ್ಪವರಿಲ್ಲಾ ದೊಡವೆನ್ನ ವಿನಯಕ್ಕಲ್ಲಿವರಂ ಪಿಡಿದು ತರಲ್ವೇಟ್ಕುಂ ತನ್ನಿಮೆಂದು ಪೊಱೆಯಂ ಕಳೆದುಕೊಳೆ ಕೊಟ್ಟು ನಡೆದು (ಬಂಹರಿ. ೯-೦೦ ಪ). ೬. ಆಧಿಕ್ಯ; ಹೆಚ್ಚಳ : ವರಿಭವದ ಪೊಱೆಯನಾಂತಿರ್ದರಾತಿಗಳ್ಗಳ್ಕಿ ತನ್ನ ಕುಲಮುಂ ಚಲಮುಂ ದೊರೆಯುಂ ಕಿಡೆ (ಆದಿಪು. ೦೨-೯೬). ೭. ಹೊರೆಯಂತಿರುವ ಮುಡಿ,—ತಲೆಗೂದಲು; ಕೇಶಭಾರ : ಮುಳಿದುಱಿ ದೋಪರಳ್ಳೆರ್ದೆ ಮುಗುಳ್ತುರಿವಂತೆ ಮುಗುಳ್ತು ನಾಣ ಜಾಣೊಳಗು ಸಡಿಲ್ವಿನಂ ಪೊಱೆ ಸಡಿಲ್ದು ಕದಂಪು ಬೆಳರ್ತು ಬಾಡೆ (ಕಾಪ್ಯಸಾ. ೭೨೩). **ಪೊರೆ** : ೧. ಉಡೆಯ ಪೊರೆಯೊಡಲ ಪೊರೆಯಾಗಿ ಬೆಮರೇರೆ (ಕಾಲೂರ. ೦೩೦-೩೩೦). ೨. ಕೆಟ್ಟಳಿವ ಕಾಡಿನುರುವಲ್ಗಳಂ ಪೊರೆಯೆರಡ ಕಟ್ಟಿಕೊಂಡೊಯ್ದರೇಂ ಪೋಯ್ತೆ ಕಾಡಂದಂ (ಕಾಲೂರ. ೦೨೬-೨೭೩). **ಹೊರೆ** : ೧. ಧರಣಿಯ ಹೊರೆಯೊಳು ತಿಣುಕುವ ಫಣಿ ಮೇಲೆ ಹಾಯಾಗಿ ಹರಿ ಮಲಗಿಹನು (ಇಂಪಾಪ. ೦೦೯-೬); ಅಂತರಾಳದ ರಸಗಳು ನಮ್ಮ ಮನಸ್ಸು ಮತ್ತು ಜೀವನವನ್ನು ಪ್ರಚೋದಿಸಲಾರದೆ ಹೋದರೆ ಆ ಜ್ಞಾನ ನಮಗೊಂದು ಹೊರೆ (ತಿಕ್ಷದ. ೨೩೮). ೨. ಯಿದನು ಬಾಣರಾವಿ ಕಸಬೇಗ್ರಾಮಾನುಗ್ರಾಮಗಳ ಆಯ ಬೆಳಿಸಿ ಮೆದೆ ಹೊರೆ ಸೊಪೆ ಆಳಿತ್ತಿ ಕಾಳು ಹಳಿಗಳ ವಳಗೆ ಯಿದನ್ತ ಮಾನ್ಯಗಳು (ಎಳ. XI, ಪೊಳಕಾ. ೨೩-೦೨೬; 1665); ಬ್ರಹ್ಮಋಷಿಗಳು . . . ಕುಶಾಸನಗಳಲ್ಲಿ ಕಟ್ಟಿರುವ ಅರಣಿ ಮೊದಲಾದ ಯಜ್ಞ

ಪಾತ್ರೆಗಳ ಹೊರೆಗಳಂ ಹೊತ್ತು (ಸೌಗಂಧಿ. ೫೦೨-೦೧). ೪. ನಾನು ಋಣ ತೀರಿಸುವ ಹೊರೆಯನ್ನು ನಿರ್ವಹಿಸುತ್ತಿರುವೆನು (ಜಾಜುತ್ತ. ೬೦); ಈ ಕೂಸಿನ ಹೊರೆಯೆಲ್ಲಾ ನಿಮ್ಮ ಮ್ಯಾಲ ಒಪ್ಪಿಸೀನಿ (ಬಂದಯ. ೬); ಬರೀ ಮಾತಿನವ ಹೊರೆ ಹೊತ್ತಾನೇ? (ಗಾರ). ೮. ಗುಂಪು; ರಾಶಿ: ಕರದ ಶೂಲದ ಪೆಣನ ಹೊರೆಗಳ ಸುರೆಯ ಘಟೆಗಳು ಮುಕ್ಕುಳಿಸಿ ಜೋಂಪಿರಿವ ಕಂಗಳ . . . ನರಕಪಾಲದ ಮಾಲೆಗಳ ಸಂಗರದ ತಾಟಕಿಯೆನಿವ ರಕ್ಕಸಿ ಬಂದಳಾಹವಕೆ (ಅಪಂಠಾ. ೦-೨೦-೨); ಅವರು ನಮಗೆ ಒಂದು ಹೊರೆ ಪುಸ್ತಕಗಳನ್ನು ಕೊಟ್ಟರು (ಶಾಲಿಪು. ೨೦೨). ೯. (ಆಲಂ) ಬೇಡವಾದ ಹೊಣೆ ಅಥವಾ ವ್ಯಕ್ತಿ: ಅವ್ಯಕ್ತರೀತಿಯಲ್ಲಿ ತನ್ನನ್ನು ಹೊರೆಯಾಗಿ ಕಾಣುತ್ತಿರುವಂತೆ ಅವನಿಗೆ ತೋರುತ್ತಿತ್ತು (ಪಿಂಗಿ. ೩೦). **ಹೊಱೆ**: ೧. ನಾಗರಾಜನುತ್ತಮಮಣಿಮಸ್ತಕಕ್ಕೆ ಹೊಱೆ ಹಿಂಗಿದುದು (ಎಇ. XVI. ೪೬-೦೩; 1147); ನಿನ್ನ ಸೌಕುಮಾರ್ಯಕ್ಕೆ ಹೂದೊಡಿಗೆ ಹೊಱೆ ನಿನ್ನ ಮುಖಮಂಡಲಕ್ಕೆ ಶಶಿಮಂಡಲಮುಪ್ಪಾರತಿಯ ಪಾತ್ರೆ (ನಂಬರ. ೦೪-೦೩); ಹಸುಳೆಗಮರಾಚಲದ ಹೊಱೆ ಸೈರಿಸುವುದೇ ಮಱಿಹುಲ್ಲೆ ಸಿಂಹದ ಮಸಕಕಿದಿರೇ (ಕುಪ್ಯಾಧೀ. ೩-೬೪); ಕ್ಷಿತಿಗೆ ಬಲುಹೊಱೆಯಾಯ್ತು ಬದುಕುವ ಗತಿಯ ಕಾಣದೆ ಸಕಲದೇವಪ್ರತತಿ ನೆರೆದೈತಂದು ಕಂಡುದು ಕಮಲಸಂಭವನ (ತೊರಗಾ. ೦-೬-೪೩). ೨. ಸಾಸಿರ್ವ್ವರುಂ ಬಿಟ್ಟ ಧರ್ಮ್ಮ ಎಲೆಯ ಹೇಱಿಂಗೆ ಬೇಳೆ ಹೊಱೆಗೆ ಬೇಳೆ ಹೊತ್ತಳಕ್ಕೆ (ಸೌಇಇ. XI-ii. ೦೨೨-೦೨; 1072); ಮಣಿಮಯದ ಮೋಹಳದ ಹಿರಿಯುಬ್ಬಣದ ಸಬಳದ ಶೂಲ ಸುರಗಿಯ ಕಣೆಯ ಹೊಱೆ ಚಾಚಿದವು ಕಟಕಾಚಾರ್ಯನಿದಿರಿನಲಿ (ಕುಪ್ಯಾಧ್ರೋ. ೦೩-೦೯); ಕರಿಯ ಮದ್ದಿನ ಪೊಟ್ಟಣ ಕಟ್ಟಿದಂಬಿನ ಹೊಱೆ ಹುರಿಮರಳಿನ ರಾಶಿ ಅರೆದ ಸಾಸವೆಗೊಡ ಕಾದಡವಿಯ ಬಹುಹರವಿಗಳೊಪ್ಪಿದುವಾಗ (ಕಂಪಪಿ. ೦೦-೦೩೩). ೭. 'ಹೊಱೆದಲೆ' ಪರಾ.

ಪೊಱೆವೊಱೆ (ದ್ವಿರುಕ್ತಿ): ನಿನ್ನೀ ಪೊಱೆವೊಱೆಯಬಲ್ಗಳ ಭಾರಕೆ ನಡುಗಿದಪೆನೆ (ಇದ್ಯಪ್ರ. ೨೬-೬೦೭). [ದೇ.॥ ತಮಿ. ಪೊಱೈ; ತುಳು. ಪುದೆ. ಹೊರೆ; ಕೊಡ. ಪೊರೆ; ತೊದ. ಪಱ್]

ಪೊಱೆಕಾಱ, ಹೊರೆಕಾರ, ಹೊಱೆಕಾಱ, ಹೊಱೆಗಾಱ (ನಾ). ೧. ಹೊರೆಯನ್ನು ಹೊತ್ತಿರುವವನು: ಪೊಱೆಕಾಱನ ಪೊಱೆಯೆಂತಂತೆ (ಪೀಠಿಪಾ. ೩-೩); ಗುಲ್ಮದಂತೊತ್ತುವರ್ ಪೊಱೆಕಾಱನಂತೆ ಬಿಗಿದು ಕಟ್ಟುವರ್ (ರರ್ಮಾಪ್ಯು. ೩-೭೩); ನಿಸಿಯೆಂಬ ಗಜದ ಪುರದ ಪೊಱೆಕಾಱನಂದೆಸೆದು ಮಱೆಯ ಸಾರೆ ಸೂರ್ಯ ವಿಷಮಕೋಪದಿ ಚಾರಿವರಿದಂತಾತಮ ದಶದಿಕ್ಕು ತುಂಬಿತೇನೆಂಬೆ (ಅಪಂತ. ೩-೦೦೩). **ಹೊರೆಕಾರ**: ೧. ದಾರಿಯಲ್ಲಿ ಹೋಗುವ ಒಬ್ಬ ಸೌದೆ ಹೊರೆಕಾರನ ಜೀವನ ಇಷ್ಟು ದುರಂತವಾಗಿರಬಹುದೆಂದು ಯಾರಿಗೆ ತೋರಬೇಕು? (ಸಪ್ಪಾಕ. VII. ೪೮). **ಹೊಱೆಕಾಱ**: ೧. "ಭಾರವಾಹ. ಭಾರಿಕ—ಹೊಱೆಕಾಱ" (ಪಾಪರಾ. ೬). ೨. ಹೊಣೆಯನ್ನು ಹೊತ್ತಿರುವವನು,—ವಹಿಸಿಕೊಂಡಿರುವವನು: ಮತ್ತೇಕೆ ಹುಸಿಯ ಹೊಲೆ ಹೊಱೆಕಾಱ ಕರೆದೆಯೆನೆ ತೆತ್ತ ಸಾಲದ ಭರದೊಳಱಿಯದಾಡಿದ ನುಡಿಗೆ ಹೊತ್ತ ಹುಸಿಯಳಿಯಬೇಕೆಂದೆನಲು ನಿನ್ನ ಕುಲವಳಿದಲ್ಲದಳಿಯದೆನಲು (ಹನಳಾ. ೧೦-೨೪); ಕ್ಷಿತಿಯ ಹೊಱೆಕಾಱರಿಗೆ ಸೌಖ್ಯಸ್ಥಿತಿಯ ಮಾಡುವೆನಿನ್ನು ಕುರುಭೂಪತಿ ವಿರೋಧಿಯ ವಿಧಿಯನೀಗಳೆ ತೋಱಿಸುವೆನು (ಕುಪ್ಯಾಧೀ. ೯-೪). **ಹೊಱೆಗಾಱ**: ೨. ಮೇದಿನಿಯ ಹೊಱೆಗಾಱರೆಲ್ಲರೂ ವೇದಿಸುತ ಬೆಂಡಾಗುತಿರ್ದರು (ಸಂಭಪ. ೪-೬).

[ಪೊಱೆ + — ಕಾಱ]

ಪೊಱೆಗಟ್ಟು, ಹೊರೆಕಟ್ಟು, ಹೊಱೆಗಟ್ಟು (ಕ್ರಿ). ಹೊರೆಯಾಗಿ ಕಟ್ಟು; ಗಂಟುಕಟ್ಟು: ಅಂತು ಪೊನ್ನಂ ಪೊಱೆಗಟ್ಟಿಕೊಂಡು ಮತ್ತಮಾ ಪುಣಿಸೆಯ ಮರದೊಳ್ ಪೊಕ್ಕಡಂಗಿರ್ಪುದುಂ (ಪಂಪಶಂ. ೦೩೩-೦೯); ಪೆರ್ಬಲೆ ಬಿಡುವಾರುಗೋಡುವಲೆಯೆಂಬಿನಿತಂ ಪೊಱೆಗಟ್ಟಿ ಕಾನನಸ್ಥಲದೊಳಗಲ್ದು ತೋಹುವಿಡಿದೊಡ್ಡಿದರೆಯ್ದೆ ಪುಳಿಂದನಾಯಕರ್ (ದಶಕು. ೨-೦೦೩). **ಹೊರೆಕಟ್ಟು**: ತೋಟಕ್ಕೆ ಹೋಗಿ ಸೋಗೆಗಳನ್ನು ಆರಿಸಿ ಹೊರೆಕಟ್ಟಿಕೊಂಡು ಬೇಗನೆ ಬಂದುಬಿಡು (ಕೂಡಿ). **ಹೊಱೆಗಟ್ಟು**: ಆ ಹುಲ್ಲ ಒಕ್ಕಿ ಮೆಟ್ಟಿಸಿ ತೂಱುವಾಗ ಹೊಟ್ಟ ಕಳೆದು ಭತ್ತ ನಿಂದು ಹುಲ್ಲು ಹೊಱೆಗಟ್ಟಿತ್ತು (ಪೋಳಿಪೂ. ೦೪೩-೩೩೩); ಬೆಳೆದ ಭೀಮಾಟವಿಯೆಡೆಯೊಳುಜ್ವಳ ಸುಗಂಧದ್ರವ್ಯಮೂಲಿಕೆಗಳನಱಸಿ ಹೊಱೆಗಟ್ಟಿ ಹೊತ್ತು ಪಳಾಸಪುರವೆಯ್ದೆ (ಸಾಳ್ವಭಾ. ೧೬-೪೦). [ಪೊಱೆ + ಕಟ್ಟು$_1$]

ಪೊಱೆಯಾಳ್, ಪೊಱೆಯಾಳು, ಹೊರೆಯಾಳ್, ಹೊಱೆಯಾಳು (ನಾ). ಹೊರೆಯನ್ನು ಹೊರುವ ಆಳು, —ಸೇವಕ: ಪೊಱೆಯಾಳ್ಗಳೊಟ್ಟೆ ವೇಸರಮೆತ್ತು ಬಂಡಿಗಳ್ನೆಱೆ ಕನಕಭಾರದಿಂದೈದಿದುವು (ಕೈಪಿಭಾ. ೩-೭೩). **ಪೊಱೆಯಾಳು**: ಆಣಿಮುತ್ತಿನ ಕಂಠಮಾಲೆ ಚೌಕುಳಿ ಪೊನ್ನ ಕಾಣಿಕೆ ಪೊಱೆಯಾಳು ಸಹಿತ ಕ್ಷೋಣಿಪ ಮಧುರೆಯ ತಿರುಮಲೇಂದ್ರನ ಸುಪ್ರವೀಣಮಂತ್ರೀಶನೈತಂದ (ಕಂಸಪಿ. ೨೦-೬೬). **ಹೊರೆಯಾಳ್**: ನಿಯೋಗಿ ಹೂವಯ್ಯ—ಕೆಳದಿ ಶಿವಪ್ಪನಾಯಕನ ರಾಯಭಾರಿ ಹೂವಯ್ಯನ ಪರಿವಾರದವರು ಹೊರೆಯಾಳ್ಗಳು (ಮಂತ್ರಕ. ೬-೭). **ಹೊಱೆಯಾಳು**: ಅಗಣಿತದ ಪೆಟ್ಟಿಗೆಯ ಹೊಱೆಯಾಳುಗಳ ಸಂದಣಿ ನೂಕಿದುದು ಸರಕುಗಳ ಸದಳದ ಭಂಡಿಗಳು ಭಾರಿಸಿದವಿಳೆ ಝುಡಿಯೆ (ತೊರಗಾ. ೦-೧೬-೦೦).

[ಪೊಱೆ + ಆಳ್$_2$]

ಪೊಱೆಯಾಳು 'ಪೊಱೆಯಾಳ್' ನೋ.

ಪೊಱೆವೊರಕ (ನಾ). (?): ಸುರಯಿಯ ಬಿರಿಮುಗುಳ್ಗಳ ಪೊರೆವೊರೆಯೊಳ್ ಪೊಱೆವೊರಕ[ಪಾಶಾಂ. ಪೊರೆವೊರ, ಪೊರೆವೊರೆ]ನಲ್ಲದಲ್ಲುಗುವ ರಜಂಬೊರೆದು ಪರಕಲಿಸಿದಳಿಕುಳಪರಿಕರಮುಮನತನುಶಿಖಿಯ ಕಿಡಿಗಳೆ ಗೆತ್ತಳ್ (ಪಂಪಭಾ. ೩-೩); "ಭಾರವನ್ನು ವಹಿಸುವುದು" (ಪಂಪಭಾ. ಶಬ್ದಕೋಶ); "ಭಾರದ ವ್ಯಾಪ್ತಿ" (ಪಂಪದೀ. ೦೬೯). [?]

ಪೊಟಕು, ಪೊಳಕು$_2$ (ನಾ). ಸಾಮಾನ್ಯವಾದ ಆಕಾರ; ಸಹಜವಾದ ರೂಪು: "ಪೊಟಕು = ಸಾಮಾನ್ಯಾಕೃತಿ" (ಶಮದ. ಪು. ೦); "ಪೊಟಕೆಂದು ಸಾಮಾನ್ಯಾಕೃತಿ" (ಕಶಸಾ. ೩೯-೨೯೨); "ಪೊಟಕೆನೆ ಸಾಮಾನ್ಯಾಕೃತಿ" (ಕವಿಕಂ. ೦೪೦); ನೋಟ್ಪೊಡಿಂದಿನ ಮುಂದಿನ ಖಲನ ಪೊಟಕು ಪೆಟಕಪ್ಪಿನೆಗಂ, ತುರಿಪದೆ ಕಾದಿ ಗೆಲ್ದು ಹಯಮಂ ತಾರದುಟಿದೆನಾದೊಡೆ (ರಾಮಾಶ್ವ. ೦೦೦-೦೬). **ಪೊಳಕು$_2$**: ಕೀಳೊರೆಯೊಳಿರ್ದೊಡಂ ಪೊಳಕೆಸೆಯದಿಹುದೇ (ಕಾಲೂರ. ೦೨೮-೨೭೦); ಮಂಜಿನೊಟ್ಟಿಲದೊಂದು ಸುಳಿಸುಳಿಗಳಾಗಿ ಪೆಣೆಪೆಣೆದುಕೊಳುತಡರ್ದೇರಿ ಪಲಪಲವು ವಿಷಮಾಕೃತಿಗಳಿಂದೆ ಧುಮ್ಮಿಕ್ಕುತೆಲ್ಲ ಪೊಳಕುಗಳಳ್ಗಿ (ಸಂಸಪ. ೩೨-೦೯೩). [?]

ಪೊಟತ್ತೊನ್? (ನಾ). ಒಬ್ಬಾತನ ಹೆಸರು (?): ಮನ್ದಿರಾವನ್ತನ್ದಿಕ್ಕಟ್ಟಿ ಪೊಟುತ್ತದು ಕಣ್ಡಿಗವೈದೆ ಕಟನಿಯು ಪಾಟುಂ ಮಗೆತ್ತಾಣಮುಂ ಸರ್ವ್ವಪರಿಹಾರಂ ಕನ್ದಪಕ್ಕೊಡಾದೊರ್ಪ್ಪಞ್ಚಮಹಾವಾತಕಪ್ಪಾಪ್ತರ್ ಪೊಟತ್ತೊನ್ಪೆತ್ತದು (ಎಕ. IX (8). ಹೂಸಕೋ. ೩-೦೩; 900). [?]

ಪೊಟರವ (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀ ರಾಚಮಲ್ಲಪೆರ್ಮ್ಮಾನಡಿ ಪ್ರಿಥುವೀರಾಜ್ಯಗೆಯ ಪೊಟರವ ಬೆಸಗೆಯ್ ಎನೆ (ಎಕ. XII. ತಿಪಟೂ. ೪೬-೦; ಸು. 880). [?]

ಪೊಟಲ್, ಪೊಳಲ್, ಪೊಳಲು, ಹೊಳಲು$_2$ (ನಾ). ೧. (ಹೆಚ್ಚು ಜನರು ವಾಸಮಾಡುವ) ಊರು; ಪಟ್ಟಣ; ನಗರ: "ಪೊಟಲೆಂದು ನಗರಂ" (ಕಶಸಾ. ೩೯-೨೯೭); ಪೊಟಲ ನಿರ್ಗ್ಗುಡಿ ಆಚದೊಳ್ ಎರಡು ದ್ರಮ್ಮ (ಪ್ರಾಲಿ. ೦೯೩೬. ೨೬-೨೦; 872); ಜಲನಿಧಿಯಂ ಪಾಯ್ದೊರ್ವನೆ ನಿಲಿಕಿ ದಶಾನನನ ಪೊಟಲನಾ ಲಂಕೆಯನಾ ಕುಲಮಿಲ್ಲದಿಱಿದು ನಿಂದಂ

(ಕಟಾ. ೩-೦೯೦) ; ಪಾಟಳೀಪುತ್ರಮೆಂಬ ಪೊಟಲ್ (ಸುಕುಮಾ. ೬-೦೬ ಪ) ; ಈಗಳಿನ್ ಪಿರಿದಾಗಿ ದ್ವೇಷಿಪೆನ್. ಪೊಟಲ್ಗೆಲ್ಲ ಸಾಱ ಪೇಟ್ ಪೋಗು (ಅಂತಿಗೂ. ೯-೭೨). ಪೊಳಲ್ : ಪೊಳಲ್ ಕುವಳಾಲವಾಗೆ (ಎಳ. VII, ಕಿಪಪೂ. ೯-೩೩ ; 1133). ಪೊಳಲು : ಸ್ವಸ್ತಿ ಶ್ರೀಮತು ನಾಲ್ಕುಯುಗದ ಪೊಳಲು ಕೋಗಳಿ (ಸೌಇಇ. XI-i, ೮೬-೩೦ ; 1050) ; ಯತಿಪನಾಜ್ಞೆಯಿಂದ ವದಿರೆಯ್ತಂದು ಪೊಳಲಂ ಸಾರ್ದರು (ಜಪಕಾ. ೦೨-೩೬) ; ಸರ್ವಸಂಭ್ರಮವ ಬೀಱುತ್ತಲಾ ಪೊಳಲೊಳು ಮೆಱೆಯುತ್ತೈತಂದ (ಕಂಪಪಿ. ೯-೫೯) ; ನಾವು . . . ದೂರದ ಪೊಳಲಿಗೆ ಯಾತ್ರೆ ಹೊರಟಿದ್ದೇವೆ (ಹಾಹುತ್ತ. ೯೦). ಹೊಳಲು$_3$: ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವ (ಮಹಾರೇ. ಬ. ೪೩-೦೦೦) ; ಹೊಳಲು ಹೊಸರೀತಿಯಲಿ ಮಿಗೆ ಕಂಗೊಳಿಸುತಿರ್ದುದು (ತೊರರಾ. ೦-೯-೦೦) ; ಹೊಳಲುಗಳ ಕಟ್ಟಿ ದೊರೆಯಾಗು ಸೊನ್ನಲಿಗೆ ಕಳಸಾಗಿ ಬೆಳಗಿ ಹೊಸಮತಕೆ (ಕಪ್ಪಣಾ. ೩೦೪).

[ದೇ.॥ ತಮಿ. ಪೊಟಿಲ್ ; ತೆಲು. ಪ್ರೋಲು]

ಪೊಟಲಬ್ಬೆ (ನಾ). ಒಬ್ಬಾಕೆಯ ಹೆಸರು : ಪೊಟಲಬ್ಬೆಯ ಕೊಟ್ಟ ಮಣ್ಣಯ್ಗೊಳ (ಎಳ. IV, ಎಳಂದೂ. ೨೩-೦೨ ; ಸು. 925?).

[ಪೊಟಲ್ + ಅಬ್ಬೆ$_1$]

ಪೊಟಲಮ್ಮ (ನಾ). ಒಬ್ಬಾತನ ಹೆಸರು : ಮತ್ತರಸರಾ ಪೊಟಲಮ್ಮನಾ ಮೇಗೆಟ್ಟು (ಎಳ. X, ಶ್ರೀಪಿವಾ. ೯೦-೨; ಸು. 900). [ಪೊಟಲ್ + ಅಮ್ಮ$_1$]

ಪೊಟಲಿಗ (ನಾ). = ಪೊಟಲಿಚ : ಪೊಟಲಿಗಂ, ಕಾಲೂರಿಗಮಿತ್ಯಾದಿ (ಭಾಷಾಪೂ. ೦೭೩ ಪ್ರಯೋ). [ಪೊಟಲ್ + — ಇಗ]

ಪೊಟಲಿಚ, ಪೊಳಲಿಚ (ನಾ). ನಗರದಲ್ಲಿ ಹಂಟ್ಟಿದವನು; ಪಟ್ಟಣಿಗ; ನಾಗರಿಕ : "ಪೊಟಲಿಚರ್ ಪೌರಾಭಿಧಾನಂಗಳೊಳ್" (ಕರ್ಣಾಪಿ. ೯೩); ಪೊಟಲಿಂದ್ರಪುರಂ ಕಾಲೂರ್ ಪೊಟಲಿಂದ್ರರ್ ಪೊಟಲ ಮಾನಸರ್ ಕಾಲುರಿಚರ್ ಪೊಟಲಿಚರೆನೆ ಸೊಗಯಿಸುವುದು ಪೊಟಲಿಂ ಕಾಲೂರ್ಗಳಿಂದಮಂತಾ ವಿಷಯಂ (ಕಾವ್ಯಾವ. ೩೩೩); ಈ ಪೊಟಲ ಪೆಂಡಿರೆಲ್ಲರಂ ಮಱೆದು . . . ಪೊಟಲಿಚರೆಲ್ಲರುಮೊಲ್ಲನುಲಿದು ಮೊಱೆಯಿಟ್ಟು (ಅರ್ಧನೇ. ೩-೬ ಪ). ಪೊಳಲಿಚ : ಮಡಿವಳರ ಕಾಲುರಿಚ ಪೊಳಲಿಚ ದಡಿಗ . . . ಕಂಚುಗಾಱರ ಕೇರಿ ಮೆಱೆದಿಹವು (ಸಾಳ್ಯಭಾ. ೨-೯).

[ಪೊಟಲ್ + — ಇಚ]

ಪೊಟಲೊಡೆಯ (ನಾ). ಊರಿನ ಯಜಮಾನ ; ನಗರಪತಿ : ತೊಟಲಲಾಱದಟಲನೆಯ್ದಿದ ಪೊಟಲೊಡೆಯನೆ ಮಗಂ (ವರ್ಧಪು. ೨-೯೯ ಪ).

[ಪೊಟಲ್ + ಒಡೆಯ$_1$]

ಪೊಟಲ್ಗಾಪು (ನಾ). ಊರಿನ ಕಾವಲು; ನಗರರಕ್ಷಣೆ.

ಪೊಟಲ್ಗಾಪಿನವರ್ = ಊರಿನ ಕಾವಲುಗಾರರು; ನಗರರಕ್ಷಕರು; ತಳವಾರರು : ಪೊಟಲ್ಗಾಪಿನವರ್ ಪೊಡಮಟ್ಟು ಪೇಟ್ದರ್ (ಅಧ್ಯುತ. ೯೨-೨೦). [ಪೊಟಲ್ + ಕಾಪು]

ಪೊಟಲ್ಚೋರ, ಪೋಳಲ್ಚೋರ, ಪೋಟಲ್ಚೋರ (ನಾ). ನೊಳಂಬ ರಾಜರಲ್ಲಿ ಒಬ್ಬಾತನ ಹೆಸರು : ಆತನ ಮಗಂ ಪೊಟಲ್ಚೋರದೇವಂ (ಮೈಎರಿ. ೦೯೩೨, ೯೮-೩; ಸು. 960); ನೊಟಮ್ಬರ ಭೀಮಂ ಪುಸಿಗೆಗೆಯ್ವೊಂ ರಾಜರಾಜಾಶ್ರಯಂ ಶ್ರೀಮತ್ಪೊಟಲ್ಚೋರದೇವಂ (ಸೌಇಇ. IX-i, ೩೦-೩೯; 965). ಪೋಳಲ್ಚೋರ : ಪೋಳಲ್ಚೋರನೆಮ ನೊಟಮ್ಬ ಮಹಾಸಾಮನ್ತನ್ (ಎಳ. XII, ಕಿಪಪೂ. ೯೭-೬; 880). ಪೋಟಲ್ಚೋರ : ಶ್ರೀವಧುಧರ ಪೋಟಲ್ಚೋರಾವನಿಪಂಗಗ್ರಮಹಿಷಿ ಭುಜನಾಮ್ಬಿಕೆ (ಎಳ. X, ಮುಳಶಾ. ೩೬-೩; ಸು. 890). ℙ ಈ ಎರಡು ರೂಪಗಳೂ 'ಪೊಟಲ್ಚೋರ' ಎಂಬುದರ ಅಪಲಿಖಿತವಿರಬಹುದು.

[ಪೊಟಲ್? + ಚೋರ]

ಪೊಟಲ್ವೀದಿ (ನಾ). ಊರಿನ ಕೇರಿ ; ನಗರದ ರಸ್ತೆ ; ಪಟ್ಟಣದ ಬೀದಿ : ಪೆಗೆಗಳುಮಂ ಪೆಂಡಿರುಮಂ ಮಿಗೆ ಸೋಲಿಪುವವನ ಬೀರಮುಂ ಗಾಡಿಯುಮಾವಗಮಡಸಿ ತಾಗೆ ಕಣೆಯುಂ ಮುಗುಳ್ಗಣೆಯುಂ ಮೊನೆಯೊಳಂ ಪೊಟಲ್ವೀದಿಯೊಳಂ (ಕಬ್ಬಿಗಾ. ೯೮).

[ಪೊಟಲ್ + ಬೀದಿ].

ಪೊಟವು (ನಾ). (?): ಪೊಟವನೆ ಭಾವಿಸದೇಱೆಯುಮಿಟಿಯೆಯುಮಾಗಳ್ ನಖಾಗ್ರವಾಲಾಗ್ರದಿನೊಂದುಟಿಯದವಯವಮನವಯವಮುಟಿಯದು ಮೆನಿಸದೆ ಕುಮಾರಿ ನೋಡಿದಳಿನಿಸಂ (ಶಾಂತಿಪು. ೩-೦೦೦).

[?]

ಪೊಟಿಯೂರ್ (ನಾ). ಒಂದು ಊರಿನ ಹೆಸರು : ಪಡುವಲು ತೊಣ್ಡಾಲದ ಪೊಟಿಯೂರ ಸಂದಿ (ಮೈಅರಿ. ೦೯೨೩, ೧೦೩-೯೯; 634).

[ಪೊಟ್ಟಿ? + ಊರ್]

ಪೊಟ್ಟಿ, ಪೊಳ್ಳೆ$_3$, ಹೊಳ್ಳೆ$_3$ (ನಾ). ೧. ನದಿ ; ತೊರೆ ; ಹಳ್ಳ : "ತೊಱೆಯೊಳ್ ಪೊಟ್ಟಿಯೆಂದು" (ಕರ್ಣಾಪಿ. ೬೨); ನೀರ ಪೊಟ್ಟಿ ಪಾಡುವೆಡೆ ಹೊಲಗೇರಿ . . . ಎಂಬೆಡೆಗಳುಚಿತವೋಸಱಿಗೇಳಲ್ (ಲೋಕೋಪ. ೦೨-೩೩). ೨. ದಾರಿ; ಹಾದಿ; ಮಾರ್ಗ : "ಪೊಟ್ಟಿ = ಬಟ್ಟೆ, ತೊರೆ (ಹೊಳೆ)" (ಕಪುದ. ಪಂ. ೦) ; "ಪಥ ನದಿಗಳೊಳ್ ಪೊಟ್ಟಿ" (ಶಬ್ದಮಂ. ೦೦೩) ; ಆ ನರಿ . . . ಅಗಸರ ಪೊಟ್ಟಿಯೊಳಾಡುತಿರ್ಪ ಕಟ್ತೆಯಂ ಕಂಡು (ಪಂಕತಂ. ೨೮೨-೨೦); ಕೊಳದ ತಡಿಯೊಳ್ ಕಾಲ್ಮೊಗಂದೊಳೆವ ಮಾನಸರಂ ಸರೋವರಮಂ ಪಾಯ್ವ ಪೊಟ್ಟಿ ಯಾವುದೆನೆ (ಅರ್ಧನೇ. ೬-೧೯ ಪ). ಪೊಳ್ಳೆ$_3$: ೧. "ಪೊಳೆಯೆನಲ್ ಹೊಳೆ" (ಕಪಿ. ೬೯) ; ಸಂಗವದ ಸಂಗವೇಶ್ವರ × × × ಯ ಪೊಳೆಗೆ ನೂಱು ಮತ್ತ (ಸೌಇಇ. XI — i, ೦೦೩-೩೬; 1070); ಬಾವಿ ಕೆಱೆ ತೊಱೆ ಕಟ್ಟೆ ಪೊಳೆಗಳಿಂದ . . . ಸೊಗಸ ಬೀಱುವುದು (ಸೌಂದಪು. ೨-೩); ಉದಕಂ ಪೊಳೆಯಂತೆ ಪರಿಯಲಾದುದು (ಮಹಾಪಿ. ೬-೦೭). ಹೊಳ್ಳೆ$_3$: ೧. ಹೊಳೆಯುಂ ನಡುವಣ ಹುದುವಿನ ಹೊರದ ಮಣ್ಣು (ಮೈಅರಿ. ೦೯೩೩, ೩-೦೩; 1169); ಹೊಳೆಗಳುಱೆ ಬತ್ತಿದುವು ನಿರ್ಜರ ಜಲವಡಂಗಿದವು (ತೊರರಾ. ೦-೩-೦೬); ಪೂವಲ ಹನುಮ ಘಳಿಲನೆ ಖಾನನ ನೇಮದೆ ತೆಂಕಣ ಹೊಳೆಯ ತಡಿಯ ಬೀಡ ಬಿಟ್ಟ (ಕಂಪಪಿ. ೦೨-೦೩); ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದ ಹಾಗೆ (ಗಾದೆ).

[ದೇ.॥ ತಮಿ. ಪುಟ್ಟೈ; ಮಲ. ಪುಟ; ತುಳು. ಹೊಳೆ; ಕೊಡ. ಪೊಳೆ]

ಪೊಟ್ಟಿಗಟ್ಟು (ಕ್ರಿ). ನದಿಯಾಗಿರುವಂತೆ ಮಾಡು : ಗಟಿಯಿಸುವ ತಮಂ ಮೂಡಲ್ ಪೊಟ್ಟಿಗಟ್ಟುವ ಸಂಜೆಗೆಂಪು ಪಡುವಲ್ ಕೈಕೊಂಡೆಟಲೆ ಧರೆಗರ್ಧನಾರಿಯ ತಟ್ಟಿವಿಡಿದಂತಾಯ್ತು ಗಗನಮಂಡಲಮಿನಿಸುಂ (ಅನಂಪು. ೬-೭೨). [ಪೊಟ್ಟಿ + ಕಟ್ಟು$_1$]

ಪೊಟ್ಟಿದುಂಗೆ (ನಾ). ಸುವಾಸನೆಯ ಹಂಲ್ಲಿನ ಗೆಡ್ಡೆ ; ಪರಿಮಳಯುಕ್ತವಾದ ಹಂಲ್ಲುಗಡ್ಡೆ : ಪಚ್ಚನೆ ಬೆಳೆದ ಹರಿತ ಶಾಡ್ವಲಮುಂ ಸುತ್ತುಂ ನೀಳ್ದ ಪೊಟ್ಟಿದುಂಗೆಯ ಜೊಂಪಮುಂ ವಿರಾಜಿಸೆ (ರಾಮಾಶ್ವ. ೩೦-೨೦). [ಪೊಟ್ಟಿ ? + ತುಂಗೆ$_1$ (< ತುಂಗ$_1$)]

ಪೊಟ್ಟಿಮೆಟ್ಟು, ಹೊಳೆಮೆಟ್ಟು (ಕ್ರಿ). ಹೊಳೆಯ ನೀರನ್ನು ಪೂಜಿಸುವುದಕ್ಕಾಗಿ ನೀರಿನಲ್ಲಿ ಇಳಿ; ℙ ಬಾಣಂತಿಯು ಸೂತಿಕಾಗೃಹವಿಂದ ಈಚೆಗೆ ಬರುವ ದಿನ ಹೊಳೆಯ ನೀರಿನ ಬಳಿ ಸ್ನಾನಮಾಡಿ ಗಂಗೆಯನ್ನು ಪೂಜಿಸಿ ಬರುವ ಪದ್ಧತಿಯಿತ್ತು ಹಾಗೂ ಇದೊಂದು ಪವಿತ್ರೀಕರಣವಿಧಿಯಾಗಿತ್ತು : ಇಟಿದೊಡೆ ಕೂರದ ಪೆಂಡಿರ ಕೆಟಗಾದಪೆವೆಂದು ರತ್ನಸೋಪಾನಕದೊಳ್ ಗಟಗಟನಿಟಿಯದೆ ಬಾಣತಿ ಪೊಟ್ಟಿಮೆಟ್ಟುವ ತೆಱದೆ ಗುಜ್ಜುಮೆಟ್ಟಿದರರೆಬರ್ (ಅನಂಪು. ೭-೩೯). ಹೊಳೆಮೆಟ್ಟು : ಗಾಳಿಯೆಂಬ ಸುಕುಮಾರನಂ ಪಡೆದು ಸಂಧ್ಯಾವನಿತೆ

ಲೇಖಾವಳಿಯಂ (೪೮
ಮೆಂಬವು ಪೊಟ್ಟಡ[ಪ
ವಂತೆ ಭಟಚ್ಛಟಸ್ವನಂ
ತೋಂದು ಬೇಗದಿಂ
೨೬-೨೬). **ಪೊಟ್ಟಜ**
(ಕಬುದ· ಕ೦. ೧); ಅ
೭೨೪); ಮಹಾಪುರುಷ
೦೦-೨೦). **ಹೊತ್ತರು**
ರಲ್ಲಿ ಬೈಗೆ ನಾಲ್ಕುಘ
ಮತದಲ್ಲಿ ನಾಲ್ಕುಘಳಿ
1261) ; ಎಳೆಯ ಬೀ
(೩೦೧೪. ೦೨-೧). ತ
ಹಾರಕ್ಕಂ (ಎಳ. VI,
ಮುಟ್ಟಲು ತೊತ್ತು
೨೯-೨೯); ವಿತ್ತಮಂ
ಹೊತ್ತಜೊಳಗಾ ಗಜ
೨-೨೩). **ಹೊತ್ತಜೆ**
ಯೊಳಗೊಂದು ಕೋ
ಅರಸಂಗಿಂತೆಂದು ಪೇ
ಪುರವ ಹೊಜಿವಂಟುಂ
ಹೊತ್ತಾರೆ : ಉದಂ
ತೊಡಗಿದ, ಕೆಂಡದ
ಕೊಟ್ಪರೆ ಕೆಂಪಿನ ವ
ಹಿಂದುಗಡೆ ಜಾರಿದುದ
(೪೨೪. ೪೪-೩); ಹೊ
ಹೊತ್ತಾಜೆ ಎದ್ದು
ಎನ್ನ ಮಂದಿರಮಕ್ಕ
ಸಾಕ್ಷಿ (೨೫೪. ೭೦೪)
ತಂಡುಲಗಳ ಮೆಲ್ಲ
ಹೊತ್ತಾಜೆ ನೆನೆದಿ
೨೬೪).

ಪೊಟ್ಟಜೆ 'ಪೊಟ್ಟಜೆ'
ಪೊಟ್ಟು, ಪತ್ತು, ಪೆ
೧. ನೇಸರು ; ಸೂ
ಪೊಟ್ಟು. ಸಾಸಿರ್ಗೆಯ
ಪೆಸರ್" (೪೭೫. ೪೮-
(೪೧೧೪. ೫೭೭ ೧೧೫
ಸಾಮಾನ್ಯಕಾಲಂ. ಪ್ರ
ತನ್ನ ನಲ್ಲಳೊಳೀಂತೆಂದ
ರೋಲಗದೊಳಿರ್ಪಂ
ಪ್ಪುದು (೪೮೫೪೪
(೪೦೬೫೫. ೦೬-೬೭೪).
= ಸಾಮಾನ್ಯಕಾಲಂ
ವಿದಿತಂ ಕಾಂತೆಗೆ ಪ
೪. ಆವರ್ತಿ ; ಸರ

. . . ಹೇಳಿಂಬ ವಿಸ್ತಾರದಿಂ
ಡಲಿಜಾದುದು (೫೫೪೫೫. ೨-೬).
೫೧]
; ನೀರುಹಕ್ಕಿ ; ಚಕ್ರವಾಕ :
ಬಲ್ಲೊಲೆ ಸುಟು ಪೊರ್ಕುಟ್
೧-೦೦). [ಪೊಟ್ + ಪಕ್ಕಿ]
ರಾ ಪ್ರಾಸುಕಮಪ್ಪ ನೀರಂ
ಕುಡಿದು ನಿಮ್ಮ ಸೇದೆಯ
ಂ ಪೊನ್ನ ಕರಗಮಂ ತೆಕ್ಕನೆ
ವುಮಪ್ಪ ನೀರ್ಗಳಂ ಪೊಟ್ಟದೊ
ಡಿಯಲಿಜೆಯಿ ಕೊಳ್ದರಿಲ್ಲಿಂ
ದೊಡಂ ಪೊಟ್ಟದೊ[ಪಾಪಾಂ.
ಂ ತಗದು (೪೫೫೧೧. ೦೦೪-೩).
ತ್ಮವಾದ]

ಟ್ಟಿ, ಪೊತ್ತಾಜೆ, ಪೊಳ್ತಡ,
ತ್ತಜೆ, ಪೊಟ್ಟಡ, ಪೊಟ್ಟಡೆ,
ಹೊತ್ತಜು, ಹೊತ್ತಜೆ,
ಪ್ರಾತಃಕಾಲ : ಪ್ರಭಾತ
ಕಾಲ : "ಪೊಟ್ಟಜೆಂದುದಯ
ತ್ತಜೆ" ಪರಾ. **ಪೊತ್ತಡೆ :**
ಕೆಯಂ ಮಾಡದವೊಲ್ ಕಡುಂಗಿ
. ತ್ತೆ, ಟ್ಟ]ಡೆ ಭೂಕಾಂತನು
(೪೪೦೫. ೩-೬೧). **ಪೊತ್ತಜೆ :**
೫೫೦. ಡಿಂ]ಗಿಲ್ಲದ ಚಂದ್ರಕಾಂತಿ
ಲ್ಲ ಮಹಾತ್ಮರುಂ ನಿಲಿಸ
೦-೭೦). **ಪೊತ್ತಜೆ :** ಕತ್ತಲೆಗೆ
ಬಲುಮಿತ್ತೆನಿಸುವರು (೪೪೪೫.
ತ್ತಾಜೆರ್ದು [ಪಾಪಾಂ. ಪೊತ್ತಜ
ರಣಂ ಬೇಂಟೆ ದೊರಕೊಳ್ಳದು
ರಣಶುಭದಿನದೊಳ್ಪೊಳ್ತಡಮಾ
ಪೊಕ್ಕು (೪೫೫೫. ೬-೦೦ ೪).
ಡೆಸಿದ ಸಂಜೆಯ ಜೀವವರ್ಣಮ
ಪೊಳ್ತರೆ : "ಪೊಳ್ತರೆಯೆನಲ್
ಯಿಂ ನಡೆದು ಪೊಳ್ತರೆಯಿಂದೆ
-೧೬೯); ಪೊಳ್ತರೆಯ ದಾಳಿಂಬ
ಖ್ : ನಿಮ್ಮಂಘ್ರಿಯುಂ ಪೊಳ್ತ
ವೇಣಾ ಧ್ಯಾನಮಂ ಮಾಡದೆ
ಸ್ತುತಿಯಿನೆನ್ನಂ ಸ್ತೋತ್ರಮಂ
ಳ್ ವಸಿಯಿಪೆಂ ತದ್ಗೇಹದೊಳ್
ಗಿನೊಳ್ತಪ್ಪದೆ ಮಜ್ಜನಮನೆಸ
ಪೊಟ್ಟಡ, ತಡಬಡ (೪೫೫೫
ಪೊಟ್ಟಜೆ) = ಉದಯಕಾಲಂ"
ಬಿಡಿದಿಟ್ಟುವ ಲಲಾಟಕುಂಕುಮ

ತಿನ್ಗಳು ೧ಕ್ಕೆ ಸಮ್ಬಳ ಎರಡು ವರಹ . . . ಸಲೂದು (ಎಳ. XIV. ಶ್ರೀರಂಗ. ೨೬೯-೦೨ ; ಸು. 1585). **ಪೊತ್ತು**$_4$: ೧. "ಪ್ರಭಾಕರನೊಳಂ ಪೊತ್ತೆಂದು" (ಕರ್ಣಾಟ. ೬೫). ೨. ಆಕೆ ನಿರುತ್ತರೆಯಾಗಿ ಎನ್ನ ದೆಸೆಯ ಮುಳಿಸನುಱಿದಂದಿಂದಿತ್ತಂಗೆ ನಿಂದು ಪೊತ್ತು ಕಾಯ್ದು ಬೇಸಱಿಸಿ ನಿರ್ವಂದ ದಿನಟ್ಟಿ ಕಳೆಯೆ (ಶಾಂತಿಪು. ೬-೬೪ ವ) ; ಮುಗಿಲಂತೆ ಪೊತ್ತಿಗೊಂದು ಬಣ್ಣ ಮಾಗದೆ (ರರ್ಮಾಮ್ಯ. ೫-೯೯) ; ಈಸು ಪೊತ್ತೇಕೆ ಪವಡಿಸಿವನೆಂದೆಬ್ಬಿಸಲ್ (ಸಬಪು. ೬-೨೩). ೩. ಒಡನೆಯೆ ಚಕ್ರವಾಕಿ ಪೊಸವಾಣತಿ ಕೋಗಿಲೆ ಯಿಱಿಲಿಂದು ಕೇಳ್ಗಡ ಗಿಳಿವೆಣ್ಗೆ ಪೊತ್ತಿನೊಳೆಯ್ದೆ ನವಿಲ್ ಮನೆದೀವಿ ಮಕ್ಕಳಂ ಪಡೆದುದ ನೋಡ (ಅರ್ಧನೇ. ೦-೯೪). **ಪೊರ್ತು** : ೨. ಆ ಪೊರ್ತ್ತುಂ ಕೋಕಿಲಂಗಳುಲಿಗುಂ ಬನದೊಳು (ಎಇ. XVI. ೩-೦೩ ; 980); ಮೂಱು ಪೊರ್ತ್ತುಂ ವರಕಾನ್ತಾಸಂಕುಳಂ ಬಂದಿರದೆ (ಎಇ. XV. ೯೦-೪೯; 1060). **ಪೊಳ್ತು** : ೧. "ಪೊಳ್ತೆನಲ್ ಸೂರ್ಯನಕ್ಕು" (ಕಶರ. ೭೦); ತೀಡಿತ್ತಲೆವ ತಂಗಾಳಿ . . . ಏರ್ದುದು ಪೊಳ್ತು (ಪತ್ರಾಂಗ. ೫೬-೦೫೨೫); ಪೊಳ್ತಿಗೆ ಕಯ್ಯ ಮುಗಿದು (ಕಾಲೂರ. ೦೦೬-೨೪೨). ೨. ಮದದಿಂದಂ ಪೊಳ್ತು[ಪಾಠಾಂ. ತ್ತು] ಪೋಗುತ್ತಿದೆ (ರಕ್ಷಾಶ. ೩೫) ; ಇನಿಸು ಪೊಳ್ತಾದೊಡಂ ಸುಖನಿದ್ರೆಗೆಯ್ವೆನೆಂಬೆನೆ (ಪದ್ಮರಾ. ೬-೬೬) ; ಇಂದೇನೊ ನಿಶಿಪೊಳ್ತಿನೊಳಗಿಂತು ಈ ಕಾಳಿಯವತಾರ! (ವಡೆಣಾ. I. ೪೫೦). **ಹೊತ್ತು**$_5$: ೧. ಬಾನಿನ ನೆತ್ತಿಯನೇರಿತು ಹೊತ್ತು (ಪಾಂಡಳಿ. ೦೨-೦೬); ನಿದ್ದೆ ತಿಳಿದಾಗ ಹೊತ್ತು ಏರಿತ್ತು (ಪಾಣಿಅ. ೨೦೫); ಹೊತ್ತು ಬಂದತ್ತ ಕೊಡೆ ಹಿಡಿ (ಗಾಡೆ). ೨. ಅರಸಿಂಗೆ ಎಲ್ಲಾ ಹೊತ್ತು ಹಿತವಂ ನುಡಿವ ಮನುಷ್ಯರ್ ಹಲವರುಂಟು (ಪಂಚತಂ. ೦೦೨-೦೩); ಹೊತ್ತು ಹೋಗದ ಮುನ್ನ ಮೃತ್ಯುವೊಯ್ಯದ ಮುನ್ನ ತೊತ್ತುಗೆಲಸವ ಮಾಡು (ಬಸವ. ೦೬೨); ಸಾಕು ಹೆಱತೆಗೆ ಘಾಯವಡೆದವಿವೇಕಿ ಮೈಮಱಿದಿದ್ದ ಹೊತ್ತಿದು (ಕುಪ್ಯಾಕ. ೦೨-೩೦); ಹೊತ್ತಲ್ಲದ ಹೊತ್ತಿನಲ್ಲಿ ತೊತ್ತು ಮೈ ನೆರೆದಳು (ಗಾಡೆ).

ಪೊತ್ತುಪೊತ್ತು, ಹೊತ್ತುಹೊತ್ತು ಹೊತ್ತೊತ್ತು (ದ್ವಿರುಕ್ತಿ) : ಪೊತ್ತುಪೊತ್ತಿಗೆ ಪೋಗಿ ಪೊಡಮಟ್ಟು ನಸು ತಲೆಗುತ್ತಿ ನಾಣ್ಚುತ ನಲವಿನೊಳು (ಹದಿಬ. ೪-೬); ಹೊತ್ತುಹೊತ್ತಿಗೆ ಉಣ್ಣಬೇಕು (ಮುಂಬಯಿ. ೪-೩೩); ಹೊತ್ತುಹೊತ್ತಿಗೆ ಅನ್ನ ನೀರನು ಹವಣಿಸಿ ಮಕ್ಕಳ ಗಿಣಿಯಂತೆ ಸಾಕಿ (ಇಂಜಾಪ. ೦೬-೬೭); ಅವುಗಳನ್ನು ಹೊತ್ತೊತ್ತಿಗೆ ಆಡಿಸಿಕೊಂಡು ಬರುತ್ತಿದ್ದನು (ಮುಂಬಯಿ. ೨-೫೪). **ಹೊತ್ತಾಗು**=ತಡವಾಗು ; ವಿಳಂಬವಾಗು : ತುಂಬಾ ಹೊತ್ತಾಯಿತಲ್ಲವೇ! (ಬೆಟ್ಟಜೇ. ೪೫). **ಹೊತ್ತಿಗೆ ಮುಂಚೆ**=ಸಮಯವಾಗುವುದಕ್ಕೆ ಮೊದಲೆ ; ಬೇಗನೆ : ಅವರು ಹೊತ್ತಿಗೆ ಮುಂಚೆ ಊರು ಸೇರಬೇಕೆಂದು ಬೇಗ ಹೊರಟರು (ರೂಢಿ). **ಹೊತ್ತಿನರಸ** = ಸಮಯದ ಒಡೆಯ ; ಸೂರ್ಯ : ಹೊತ್ತಿನರಸ ನೆತ್ತಿಯ ಮೇಲೆ ಬಂದಾಗ ಕಟ್ಟಿಗೆಯ ಹೊರೆ ಹೊತ್ತು ಮಾರಯ್ಯ ಮನೆಗೆ ಬಂದ (ಶರಸ. ೩೬೯). **ಹೊತ್ತಿನುಲಿ** = ಸಮಯವಾಯಿತೆಂದು ಸೂಚಿಸುವ ಧ್ವನಿ : ಹೊತ್ತಿನುಲಿಯಾಗದೊಡೆ ಆಟ ಮೊದಲಾಗುವುದೆ ಹೊತ್ತೆ ತೋರ್ಪುದು ಸಾವಿನಾಟಗಳ ಕೊನೆಯಂ (ಕಾಲೂರ. ೬೫-೦೬೩). **ಹೊತ್ತು ಕಂತು** = ಸೂರ್ಯ ಮುಳುಗು ; ಸೂರ್ಯಾಸ್ತವಾಗು : ಹೊತ್ತುಕಂತಿ ಎರಡು ಗಳಿಗೆ ಕಳೆದಿತ್ತು (ಪದ್ಮಸ. ೦೯) ; ಹೊತ್ತು ಕಂತಿ ಎರಡುಗಳಿಗೆ ಕೂಡ ಆಗಲಿಲ್ಲವಂತೆ (ಬೆಟ್ಟಜೇ. ೪೯). **ಹೊತ್ತುಗೊತ್ತು** = ವೇಳೆ ಮತ್ತು ಸ್ಥಳ : ಹೊತ್ತಿದ್ದಂತೆ ಹೊತ್ತಿಲ್ಲ. ಹೊತ್ತು ಗೊತ್ತು — ಒಂದೇ ಆಗಿರುವುದೂ ಇಲ್ಲ (ಬಣ್ಣಮಾ. ೨೨೫) ; ನಾವಿರಲು ಹೊಳೆವುದು ಹೊತ್ತು ಗೊತ್ತಿನ ಗತ್ತು ನಾ ಮೈಯು ಎನಲು ದಿಕ್ಕಾಲ ಕಡೆ (ಮುಕ್ತಕಂ. ೪-೦೬). **ಹೊತ್ತು ತುಂಬು** = ಹೆರಿಗೆಯ ಸಮಯವಾಗು ; ಪ್ರಸವಕಾಲ ಬರು : ಹೊತ್ತು ತುಂಬಿದವಳು ತನ್ನ ನಿತ್ತರಿಸುವ ಬೇನೆಯನಱಿವಳು (ಮೋಳಿಮಾ. ೦೯-೭೫). **ಹೊತ್ತು ನೆತ್ತಿಗೇರು** = ಸೂರ್ಯ ನಟ್ಟನಡುವಿಗೆ ಬರು; ಮಧ್ಯಾಹ್ನವಾಗು : ಹೊತ್ತು ನೆತ್ತಿಗೇರಿದೆ. ಬಿಸಿಲು ಉರಿಯುತ್ತಿದೆ (ಬೆಳುಮ. ೨೩೬) ; ನಾವು . . . ಮರಳಿ ಬರುವ ವೇಳೆಗೆ ಹೊತ್ತು ನೆತ್ತಿಗೇರಿತ್ತು (ಬೆಟ್ಟಜೇ. ೦೫೦). **ಹೊತ್ತು ಬರು** = (ಸಾವು, ಕೇಡು ಇತ್ಯಾದಿಗಳ) ಸಮಯ ಸನ್ನಿಹಿತವಾಗು, ಸಮೀಪಿಸು : ಕೌರವರಿಗೆ ಹೊತ್ತು ಬಂದಿದೆ ; ಅವರು ನಾಯಿನರಿಗಳ ಪಾಲಾಗಿ ಒರಗುತ್ತಾರೆ (ವಸಭಾ. ೨೪೬). **ಹೊತ್ತು ಮಾಡು** = ತಡಮಾಡು ; ವಿಳಂಬಿಸು : ಹೊತ್ತು ಮಾಡಿ ಆಗಬೇಕಾದುದೇನು? ಬಹಳ ದೂರ ಹೋಗಬೇಕು (ರೇವೀಕೌ. ೩) ; ಹೊಳೆಯಲ್ಲಿ ಬಹಳ ಹೊತ್ತು ಮಾಡಬೇಡಿ (ಬೆಟ್ಟಜೇ. ೩೪). **ಹೊತ್ತು ಮೀರು** = ಅವಧಿ ತೀರು ; ತಡವಾಗು : ಹೊತ್ತು ಮೀರಿದೆ (ಬೆಳುಮ. ೦೯೨) ; ಹೊತ್ತು ಮೀರಿದರೆ ತೊತ್ತು ಹೆತ್ತವಳಾದಾಳೇ ? (ಗಾಡೆ). **ಹೊತ್ತು ಮುಣುಗು, ಹೊತ್ತು ಮುಳುಗು** = ಹೊತ್ತು ಕಂತು : ಹೊತ್ತು ಮುಣುಗುತ ಬಂತು ಬತ್ತಲೆಯ ಜಗಕೆಲ್ಲ (ಕನ್ನಜಾ. ೨೪೯) ; ಸೂರಪ್ಪ ಅವ. ಹೊತ್ತು ಮುಳುಗುವಾಗ ಕಳ್ಳು ಕುಡಿದು ಮಲಗಿವರೆ ಹೊತ್ತು ಮೂಡುವಾಗಲೇ ಏಳುವವ (ಮರಮ. ೩೪). **ಹೊತ್ತು ಮೂಡು** = ಬೆಳಗಾಗು ; ಸೂರ್ಯೋದಯವಾಗು : ಸೂರಪ್ಪ . . . ಹೊತ್ತು ಮೂಡುವಾಗಲೇ ಏಳುವವ (ಮರಮ. ೩೪). **ಹೊತ್ತು ಸಾಧಿಸು**=ಸಮಯ ಕಾಯು ; ಸಮಯ ಸಾಧಿಸು : ಅವನು ಹೊತ್ತು ಸಾಧಿಸಿಕೊಂಡಿದ್ದು ತನ್ನ ಸೇಡು ತೀರಿಸಿಕೊಂಡ (ರೂಢಿ). **ಹೊತ್ತು ಹಾರು** = (ವೇಗವಾಗಿ) ಸಮಯ ಕಳೆ : ಕನಸಿನ ಭ್ರಮೆಯಲ್ಲಿ ಹೊತ್ತು ಹಾರಿಹೋಗುವುದನ್ನು ಮರೆಯುತ್ತೇನೆ (ಸ್ಕೋತಿರ್ವಿ. ೨). **ಹೊತ್ತು ಹುಟ್ಟು** = ಬೆಳಗಾಗು ; ಸೂರ್ಯೋದಯವಾಗು : ಹೊತ್ತು ಹುಟ್ಟುವುದಕ್ಕೆ ಮುನ್ನವೆ ಮಾದಣ್ಣ 'ಸ್ವಂತಮನೆ' ಯ ಮೇಲಿನಿಂದ ಹೆಂಚುಗಳನ್ನು ಕೊಡಹಿ . . . ಹಾಕುತ್ತಿದ್ದ (ಬೆಳುಮ. ೦೫೨).

[ದೇ. ಪತಮಿ. ಪೊಱುತು, ಪೋಟ್ತು, ಪೋತು ; ಮಲ. ಪಱುತು, ಪೊಱುತು, ಪೋತು, ಪೋಳ್ ; ತುಳು. ಪೊರ್ತು; ಕೊಡ. ಪೊಳೀದೀ, ಪೊದೀ ; ತೆಲು. ಪ್ರೊದ್ದು, ಪೊದ್ದು ; ಕೋಲಾ. ಪೊದ್ ; ನಾಯ್ಕಾ. ಪೊದ್ದ್ ; ಗೊಂಡಿ. ಪೊರ್ದ್]

ಪೊಟ್ಟುಗಳೆ, ಪೊತ್ತುಗಳೆ, ಹೊತ್ತುಕಳೆ, ಹೊತ್ತುಗಳೆ (ಕ್ರಿ). ಕಾಲ ಕಳೆ ; ಸಮಯಹರಣಮಾಡು : ತದ್ರಾಜಹಂಸಂ ನಿರಾಕುಳಮಿಾ ಮಾಟ್ಕಿಗಳಿಂದೆ ಪೊಟ್ಟುಗಳೆವಂ ಸಂಸಾರಸಾರೋದಯಂ (ಆದಿಪು. ೦-೬೪); ಮುನ್ನಮೊಳ್ಪಿನಿಂ ನೆಗಟ್ದ ಮಹಾಪುರುಷರ ಕಥೆಗಳುಮಂ ತಾಂ ಸ್ಮರಿಸುತ್ತುಂ ಪೊಟ್ಟುಗಳೆಯುತೀ ತೆಱದಿಂದಂ (ರರ್ಮಾಮ್ಯ. ೩-೨೬೫); ಕವಿ ಸಂಗೋಷ್ಠಿಯಿನೊರ್ಮೆ ... ಶಸ್ತ್ರವರಾಭ್ಯಾಸದಿನೊರ್ಮೆ ಪೊಟ್ಟುಗಳೆವಂ ವಿಶ್ವಂಭರೋರ್ವೀಶ್ವರಂ (ಕುಸುಮಾ. ೩-೨೪). **ಪೊತ್ತುಗಳೆ** : ಒರ್ಮೆ ಲೀಲಾವಿಲೋಕನದಿಂ ಮಾಣದೆ ಪೋಗಿ ಪೊತ್ತು[ಪಾಠಾಂ. ಟ್ತು]ಗಳೆವಂ ನಿಚ್ಚಂ (ಸುಕುಮಾ. ೯-೪೦); ಪೊತ್ತುಗ[ಪಾಠಾಂ. ಕ]ಳೆಯದೆ ತನ್ನ ತನುವನೆರಡಾಗಿ ಮಸೆವೆತ್ತ ಕರಪತ್ರದಿಂ ಸೀಳ್ವುದೆಂದಾಜ್ಞಾಪಿಸಿ (ಸ್ವಿಮಿಭಾ. ೨೬-೫೫). **ಹೊತ್ತುಕಳೆ** : ಹೊತ್ತುಕಳೆಯಲಾರದೆ . . . ಬಟ್ಟೆಯನ್ನು ನೀರಲ್ಲಿ ಅದ್ದಿ ಒಗೆಯಲಾರಂಭಿಸಿದೆ (ಬೆಟ್ಟಜೇ. ೩೫). **ಹೊತ್ತುಗಳೆ** : ಒಬ್ಬನ ಮನೆಯಲ್ಲುಂಡು ಹೊತ್ತುಗಳೆವೆ ಒಬ್ಬನ ಮನೆಯಲುಡಲೊಂದು ಗಳಿಸಿದೆ (ಬಸವ. ೭೪೧); ಹೊತ್ತುಗಳೆಯದೆ ಎನ್ನ ಕಳುಹೆಂದ (ಕುಪ್ಯಾಕ್ರೋ. ೪-೪೫); ಆ ಪೆಣ್ಗಳೊಡನೆ ಹೊತ್ತುಗಳೆಯಲೋಸುಗ ಕೇಳಿದಳಱುವತ್ತುನಾಲುಕು ವಿದ್ಯೆಗಳ (ಮೋಹತ. ೨೬-೩೭). [ಪೊಟ್ಟು + ಕಳೆ$_1$]

ಪೊಟ್ಟುಪೋಗು (ನಾ). ಕಾಲ ಕಳೆಯುವಿಕೆ ; ಹೊತ್ತು ಹೋಗುವಿಕೆ : ಪೊಟ್ಟುಪೋಗಿಂಗಮಟ್ಟುಗಮಾಡುವ ತಮ್ಮುತಿರ್ವರುಂ ಪಲಗೆಗೆ ಸಾಯಿರ

ಗದ್ಯಾಣದ ಪೊನ್ನೇ ಸಾಲ್ಗುಮಗ್ಗಳಂ ಬೇಡೆಂದು ದುರ್ಯೋಧನಂ . . . ಪಾಸಂಗೆಯಂ ಪೊರಳ್ಚಿ (ಪಂಪಭಾ. ೬-೭೦ ಪ); [ಪೊಟ್ಟುಪೋಗಿಂಗೆ . . . ಪೊನ್ನು]ಯ್ಯಲನೇಱಿ . . . ತರಳಾಕ್ಷಿಯಾಡುತುಮಿರ್ಪಿನಂ (ರರ್ಮಾಮ್ಯ. ೩-೨೭). [ಪೊಟ್ಟು + ಪೋಗ್ಯು]

ಪೊಟ್ಟು 'ಪೊರ್ದು' ನೋ.

ಪೊಟ್ಟುಗೆ 'ಪೊರ್ದುಗೆ' ನೋ.

ಪೊಟ್ಮ (ನಾ). ಒಂದು ಸ್ಥಳದ ಹೆಸರು : ಪೊಟ್ಮ ವಿನೀತೀಶ್ವರಕ್ಕುಂ ಸರ್ವ್ವ ಪರಿಹಾರಂ ಕೊಟ್ಟರ್ (ಎಕ. IV, ಶಾಮರಾ. ೬೩-೩ ; 750); ಕಮುಂಗಱ ಕನ್ತಿಯರ್ಗ್ಗೆ ಪೊಟ್ಮದ ಹಡದೆನನ್ದಾಕರ ಮಗನಯ್ಯಮ್ಮದೆನನ್ದಾಕರ ಮಗಂ . . . ಕೊಟ್ಟ ಮಣ್ಣು (ಎಕ. X, ಕೋಲಾರ. ೯೦-೯೯ ; 903). [?]

ಪೋ$_1$, ಪೋಗ್ಯು$_1$, ಹೋಗ್ಯು$_1$ (ಕ್ರಿ). ಪೋದ, ಹೋದ (ಭೂತಕೃ). ಪೋಪ, ಹೋಪ (ಭವಿಕೃ). ೧. ಇರುವ ಕಡೆಯಿಂದ ಬೇರೆಯ ಕಡೆಗೆ ಚಲಿಸು ; ತೆರಳು ; ಮುಂದೆ ನಡೆ ; ಗಮಿಸು : ಎಲೆ ಪಿಱಿತಿನಿ ಪೋ ಮುಟ್ಟದೆ ತೊಲಗು (ಪಂಪಭಾ. ೬-೯೩); ಮಾರ್ಕೊಳ್ಳದೆ ಪೋ ನೀನ್ (ರರ್ಮಾಮ್ಯ. ೨-೦೬೬); ನಾಗರಹಾವೆ . . . ಎರಗುವೆ ನಿನಗೆ, ಈಗಲೆ ಹೊರಗೆ ಪೋ ಪೋ ಪೋ (ಪಂಪಪ. ೦೫೨). ಪೋಗ್ಯು$_1$: ೧. "ಪೋಗು–ಗಮನೇ" (ಕಮಭಾ); ಅನ್ತೆ ಸಯ್ಯನೆ ಪೋಗಿ (ಇಲ. XII, ೦೬-೯೦ ; 813) ; ಅರ್ಕಂ ನಡೆ ನೋಡಿ ಪೋಗಲಾಱದೆ ತಡೆಯೆ ಪಗಲ್ ಪಿರಿಯವಪ್ಪುವಾ ಪುರವರದೊಳ್ (ಕಾವ್ಯಸಾ. ೦೭೬ ಕೂದ್ರಕ) ; ನೀಂ ಬಾ ಪೋಪಂ (ಪಂಪಭಾ. ೦-೭೦) ; ಬೇಱೂರ್ಗೆ ಪೋದ ನಲ್ಲರ ನೆನೆದು ದೂಱಿಸುವ ನೀಱಿಯರ (ಕಬ್ಬಿಕಾ. ೫೯). ೨. ಸಾಗು ; ಕಳೆ; ದಾಟು : ವರಿಷಪ್ಪೋ[ಗಿ] × × × ನೆಯ ವರಿಷ (ಸೌಇಇ. XI-1, ೭-೫ ; 837) ; ಪೋದ ಭವಂಗಳಂ ನೆನೆವಿನಂ (ಆದಿಪು. ೫ ೪೬) ; ಎನಗೀ ಜನ್ಮಮಿದಿಂತೆ ಬಂಜೆತನದಿಂದಂ ಪೋಕುಮೋ (ಸುಕುಮಾ. ೯-೦೦೯). ೩. ನಿವಾರಣೆಯಾಗು ; ಪರಿಹಾರವಾಗು : ಆ ದೀನಾನಾಥರ್ಗೆ ವೃದ್ಧ ದ್ವಿಜಮುನಿನಿಕರಕ್ಕಂದೆಡರ್ ಪೋಪಿನಂ ಕಃ ಕೇನಾರ್ಥೀ ಕೋ ದರಿದ್ರಃ ಎನ್ನುತುಮನಿತುಮಂ ಧರ್ಮಜಂ ಸೂಱಿಗೊಟ್ಟಂ (ಪಂಪಭಾ. ೬-೪೦) ; ಎನಿತೆನಿತು ಚಳಿ ಪೋಗಲನಿತನಿತು ಪಸಿವಡಸೆ (ಇಳೆರ. ದೇ. ೫೩-೦೫). ೪. ನಾಶವಾಗು ; ಸಾಯು : "ಬೀತುದು ಸವೆದುದೆನಲ್ ಪೋದ್ದುದೆಂಬರು" (ಪಕುವಿ. ೦೭೦); ಈಗಲೋ ಇನ್ನಾವಾಗಲೋ ಈ ತನುವು ಪೋಗದಿರದು (ಪಗದಾ. ೯೯). ೫. ಕಾಣದಾಗು : ಉದಿಸಿದ ದಶದಿವಸದ ಶಿಶು ಪೋಪಾಗ ವಿಧಿ ವಿಧಿಯನು ಮಿಱಬಹುದೇ (ಪೋಹತ. ೯ ೬೬). ಹೋಗ್ಯು$_1$: ೧. ನನ್ನಿಯ ಗಂಗನ ಪರಿ ಬನ್ದು ಬೆಳ್ಗೆಱಿಯಂ ಕುನ್ದೂರು ಮನಿಱಿದು ಹೊಗೆ (ಎಕ. XII, ಹಿಪಲೂ. ೫೫-೨; ಸು. 880); ಇದಱಿಂದವೊಂದು ಜನನು ನಿನಗೆದೊರಕಿತ್ತು ಮುದದಿಂದ ಹೋಗಯ್ಯ ಜನನವಂ ನೀ ಹೊತ್ತು (ಬಸರ. ೦-೬೯); ಒಗತನ ಬಿಟ್ಟು ಹೋಹಾಗ ಹಾಲಿಗೆ ಹೆಪ್ಪ ಮೊಗೆದಿಕ್ಕಿದವರಾರುಂಟು (ಪೋಹತ. ೯-೦೯); ಹೋಗು ಎನ್ನಲಾರದೆ ಹೊಗೆ ಹಾಕಿದರು (ಗಾಪ). ೨. ಆಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾನ (ಅವಸಂ. ೦೦-೯೦); ವರಿಷ ಹೋದಿಂಬಳಿಕ ವಿರೋಧಿಸಂವತ್ಸರದ ಕನ್ನೆಮಾಸ (ಪ್ಯುಆಂ. ೦೯೩೩, ೯೦-೦೯; 1177); ಹೋದ ದಿವಸಂಗಳಲಿ ಕಾಳೆಗಮಾದುದಂದಿನ ಭೀಷ್ಮರೊಡನೆ ವಿವಾದಕಾರಣ ಬೇಡಿಕೊಳಬೇಹುದು ನದೀಸುತನ (ಕುಪ್ಯಾಪ್ರೋ. ೦-೦೬). ೩. ಇಂದ್ರಿಯದ ಪೂರ್ವಾಶ್ರಯವು ಗುರುವಿನಿಂದ ಹೋಗದು ಅಂಗದಿಂದ ಹೋಗದು ತನ್ನಿಂದಹುದು ತನ್ನಿಂದ ಹೋಹುದು (ಸರ್ವಪ. ೯-೦೯); ಕಾಱುಮದ್ದಿಗೆ ಹೋಹುದೇ ಕೈಮಸ ವವನಿಪನ (ಕುಪ್ಯಾಕ. ೦-೬); ಹೋದುದು ಮನದುಮ್ಮಳವು ಮಧುಸೂದನಗೆ (ಸಾಳ್ವಭಾ. ೫೬-೬೯). ೪. ಹಗೆಯರಲಿ ಹತವಾದನೆ ಹಾ . . . ಮೊಗವ ಕಾಣದೆ ಹೋದನೇ ಎನಗೇನು ಗತಿಯೆಂದ (ಕುಪ್ಯಾಪ್ರೋ. ೯-೨೦); ಪುನರಪಿ ಕಾದ ಕಳುಹುವುದು . . . ರಣದಲಿ ನಿನ್ನ ಹಿರಿಯ ಮಗ ಹೋದನೆನಿಸುವೆನು (ಕೌಕಿರಾ. ೩೬-೨). ೬. ಮರಳು ; ಹಿಮ್ಮೆಟ್ಟು ; ಹಿಂತಿರುಗು : ಬಿಟ್ಟನು . . . ಕೌರವನೃಪತಿ ರಥವನು ಹೊಟ್ಟುಗರ ತೆಗೆ ಹೋಗಹೇಳೆಂದೆಚ್ಚನತಿರಥರ (ಕುಪ್ಯಾಪ್ರೋ. ೨-೭೦) ; ಕೆಲರು ಹಾಯಿತು ಕೆಲರು ಹೋಯಿತು ಕೆಲವರೋಡಿತು ಕೆಲವರಡಗಿತು (ಕೌಕಿರಾ. ೩೨-೨೫); ಹೊಸ ದೋಣಿಯೆಂದುಜಿ ಹೋಹೆಯು ಬೀಡಿಗೆ ಒಮ್ಮೆ ಸಾಹಸವನು ಮಾಡು (ಇಂಪಾಪ. ೭೨-೫೦). ೭. ನಂದು ; ಆರು : ಮಳೆ ಬಂದಾಗ ಹೋಗಿದ್ದ ದೀಪ ಈಗ ಬಂತು (ಕೂಡಿ). ೮. ಆಗು ; ಜರುಗು ; ನಡೆ : ನಡ[ವ]ಹಾಲ ಧಾರೆಗು ಸಹ ಅಕ್ಕಿ ಮೂಡೆ ೧೦ ತಿಂಗಳು ತಿಂಗಳು ತಪ್ಪದೆ ತಿಂಗಳಲ್ಲಿ ೧೭ ಹೋಹಾಗ ನಡವ ವಾರ ೧ ಮತ್ತಂ ಇಪ್ಪತ್ತಐದು ೨೫ ಹೋಹಾಗ ನಡವ ವಾರ ೧ ಅಂತು ತಿಂಗಳಲ್ಲಿ ಯೆರಡುವಾರ ಸಮದಾಯ ನಡವುದಕ್ಕೆ ಅಕ್ಕಿ ಮೂಡೆವು ೧೨ (ಎಇ. XX, ೯೯-೯೯ ; 1556). ೯. ನೆರೆ ; ಕೂಡು ; ಸಂಭೋಗಿಸು : ದಾಸಿಯನು ಹೋಗುವಗೆ ವೀಸ ಹತ್ತದು ಕೈಗೆ (ಸರ್ವಜ್ಞ. ೧೬೦೭).

ಪೋಪೋಗು, ಪೋವೋಗು, ಹೋಗಹೋಗು, ಹೋಗುಹೋಗು (ದ್ವಿರುಕ್ತಿ): ಪುಲಿಪುಲಿ ಪರಿಪರಿ ಪೋಪೋಗು (ಕಬಿರಾ. ೨-೨೬) ; ಕೈವಲ್ಯಂ ಕವಿಗೆಂದೆ ಶಿವ ಬಂದ ಪರಮಾನನ್ದಂ ದಲತ್ತಣ್ಗವಂ ಪೋವೋಗಲ್ ಹಾ ! (ಸಂಸಪ. ೩೦-೦೦೨); ಹೋಗಹೋಗಲು ಕಾಣ್ಬೆ ಮುಂದಣ ಭಾಗದಲಿ ಲಿಂಗಮಂ (ಬಸಪು. ೦೬-೯) ; ಹೋಗುಹೋಗ್ಯೆ ನೀನೆಮಗೆ ಬರಲಾಗದಲ್ಲಿಗೆ (ಬಸಪು. ೩೭-೦೩). ಪೋಬರವು = ಹೋಗಿ ಬರುವುದು : ಅರಸನ ಪುಟ್ಟಿ ದಿಂಬಱಿಯಮಿಾ ದಿವಿಜಾಳಿಗೆ ಮಾಣ್ದುದಿಲ್ಲ ಪೋಬರವು(ಆದಿಪು. ೯-೭೯). ಹೋಗಗೊಡು = ಹೋಗಲು ಅನುಮತಿಯನ್ನು ಕೊಡು ; ಹೋಗಬಿಡು : ನನಗೆ ಹೇಳದೆ ಹೋಹಿರಾದರೆ ಹೋಗಗೊ[ಪಾಲಾಂ. ಗು]ಡೆನು (ಸಾಳ್ವಭಾ. ೨೦-೦೦) ; ಬೀಳ್ಕೊಡು, ಕಳುಹು, ಅಪ್ಪಣೆ ಕೊಡು, ಹೋಗಗೊಡು (ಕಂಪುಹು. ೮೮). 'ಪೋಗೊಡು' ಪರಾ. ಹೋಗಬಿಡು = ಹೋಗಗೊಡು : ಹೋಗಬಿಟ್ಟು ಜಾಗಮವ ಹಿಂದೆಯಾಡುವನ ಬಾಯಲಿ ಮೆಟ್ಟಿ ಹುಡಿ ಹೊಯ್ಯದೆ ಮಾಣ್ಬನೆ (ಬಸವ. ೯೧೯); ಈಗಳಿರ್ದಂತೀ ಪಶುಗಳು ಹೋಗಬಿಡಿ ನೀವು (ಬಸಪು. ೬೦-೨೫) ; ಅರರೆ ನರ ಪೈಸರಿಸಿದನೊ ಪೈಸರಿಸಿದನೊ ಫಡ ಹೋಗಬಿಡದಿರಿ (ಕುಪ್ಯಾಕ. ೦೯-೦೩). ಹೋಗಲಾಡಿಸು = ೧. ಇಲ್ಲದಂತೆ ಮಾಡು ; ಹೋಗುವಂತೆ ಮಾಡು : ಪರಿಕರ್ಮನ್, ಅಂಗಸಂಸ್ಕಾರಃ—೨ ಶರೀರದ ಕೊಳೇ ಹೋಗಲಾಡಿಸಿ ಸೊಗಸು ಮಾಡುವಿಕೆ (ಸಿದ್ಧಾಂತಿ. ೨೦೫) ; ಎಣ್ಣೆಪಸೆಯಿದ್ದರೆ ಅದನ್ನು ಹೋಗಲಾಡಿಸಲು ಸಾಬೂನನ್ನುಪಯೋಗಿಸಬೇಕು (ಆಡುಸೌ. ೯೫). ೨. ಪರಿಹರಿಸು ; ನಿವಾರಿಸು ; ಕಳೆ : ಅವರವರ ಹೊಡಬಾಳು ಅವರವರೇ ಹೋಗಲಾಡಿಸಿಕೊಳ್ಳಬೇಕು (ಸಂಗಾಳ್ವ. ೨೦೯). ೩. ನಾಶಮಾಡು ; ಹಾಳುಮಾಡು : ತಲತಲಾಂತರದಿಂದ ಬಂದಿದ್ದ ಆಸ್ತಿಯನ್ನು ಆತ ಅಲ್ಪಕಾಲದಲ್ಲೇ ಹೋಗಲಾಡಿಸಿಬಿಟ್ಟ (ಕೂಡಿ). ೪. ಕೊಲ್ಲು ; ಸಾಯಿಸು : (ಕಿ). ಹೋಗಲಾಡು = ೧. ಹೋಗಗೊಡು : (ಕಿ). ೨. ಕಳೆದುಕೊಳ್ಳು ; ನೀಗು : (ಕಿ). ೩. ನಿರರ್ಥಕಗೊಳಿಸು ; ಹುಸಿಮಾಡು : ನಾರದಮುನಿ ಮಹಾರಾಯ ಹೋಗಲಾಡುವನಲ್ಲ ಮಾತ (ಪೋಹತ. ೩೩-೨೬). ಹೋಗಲೀಯು = ಹೋಗಗೊಡು : ಬೆಂದ ಮನವ ನಾನೆಂತು ನಂಬುವೆನಯ್ಯಾ . . . ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ (ಬಸವ. ೩೩). ಹೋಗಲೀಸು, ಹೋಗಲಿಸು = ಹೋಗಗೊಡು : ಹೋದಹೆನೆಂದರೆ ಒಳಕಾವಲವರು ಹೊಱಕಾವಲವರು ಹೋಗಲೀಸರು (ಘನವ. ೯-೨); ಭೀಮಸೇನನು ನಮಗೆದುರಾಗಿ ಬರುತಲಿದಾನೆ ; ಹೋಗಲೀಸದೆ ತಬ್ಬಿ

ಹಿಡಿದು ಸಂಹರಿಸೋಣ (ಕೃಪಾಭೀ. ೦೦೭) ; ದುರ್ಯೋಧನನನ್ನು ಯುದ್ಧಕ್ಕೆ ಹೋಗಲಿಸಬೇಡ (ಭೀಷ್ಮಪ. ೦೩೨). ಹೋಗಿಬರು, ಹೋಬರು = ೧. ತೆರಳು ; ಹೊರಡು ; ಬೀಳ್ಕೊಳ್ಳು : ವನಚರವೆ ನಾ ಹೋಗಿಬಹೆನೇ ನಿಮ್ಮನುಜ್ಞೆಯಲಿ (ಕುಪ್ಯಾಅ. ೭-೦೭) ; ನನಗೆ ಅನುಜ್ಞೆಯನ್ನು ಕೊಡು ; ಹೋಗಿ ಬರುವೆನು (ಕಬಿಕ. ೪೯). ೨. ಹೋಗು ಮತ್ತು ಬರು : ಶ್ರೀಮನ್ತರ ಹರ್ಮ್ಯಕ್ಕೆ ಇರುವೆಯೂ ಹೋಬರಲಾರದಂತೆ ಮುತ್ತಿಗೆಯಿಟ್ಟು ಏತಕ್ಕಾದರೂ ಸನ್ನದ್ಧನಾಗಿರು (ಪಟ್ಟಅ. ೦೭೪-೦೨). ಹೋಗಿಬಿಡು = ೧. ಇಲ್ಲವಾಗು : ಮೃಣಾಳಿನಿಯ ಮೇಲೆ ಪ್ರೀತಿ ಹೋಗಿ ಬಿಟ್ಟತೆಂದೂ ತಿಳಿದು ಕೊಂಡಳು (ಬಂಕಿಮ. ೦೬೦). ೨. ಸಾಯು ; ಮರಣ ಹೊಂದು : ಗಂಡನ ಕಣ್ಣುಮುಂದೆ ಹೋಗಿಬಿಡುವುದು ಹೆಂಗಸಿಗೆ ಪರಮಭಾಗ್ಯ (ಪಕಥಾ. ೪೩) ; ನಮ್ಮ ಚಿಕ್ಕಪ್ಪ ಹೋಗಿ ಬಿಟ್ಟರು (ಮುರುಳು. ೦೭). ಹೋದ ಜೀವ ಬರು = ಹೊರಟು ಹೋದ ಪ್ರಾಣ ಮರಳಿ ಬಂದಷ್ಟು ಸಂತೋಷವಾಗು,— ಸವಶಾಧಾನವಾಗು : ಕಾಳು ಬಂದು ಎಲ್ಲವನ್ನೂ ಹೇಳಿದ ಮೇಲೆ ಹೋದ ಜೀವ ಬಂದಂತಾಯಿತು (ಕಾಲೂರ. ೬ ಕಥಾಸಾರ) ; ಬಿಸಿಲಿನಲ್ಲಿ ನಡೆದು ಬಂದು ಎಳನೀರು ಕುಡಿದ ಮೇಲೆ ಹೋದ ಜೀವ ಬಂತು (ರೂಢಿ). ಹೋದ ಹೊಲಬು = ನಡೆದು ಬಂದ ದಾರಿ ; ಸಂಪ್ರದಾಯ ; ಪರಂಪರೆ : ಹೋದ ಹೊಲಬಿಲ್ಲದಱೊಳಗೆ ದುರ್ಭೇದತಪವೇ ಹೊಗೆವುತದೆ ಹೊಳ್ಳಾದವೆಮ್ಮ ಸಮಾಧಿ ಸೈರಣೆ ಶಮದಮಾದಿಗಳು (ಕುಪ್ಯಾಅ. ೩-೨೦). ☞ ಈ ಧಾತು ಅನೇಕ ಶಬ್ದಗಳ ಮುಂದೆ ಸೇರಿ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗುತ್ತದೆ.

[ದೇ.॥ ತಮಿ. ಪೋ, ಪೋಕು, ಪೋಕ್ಕು ; ಮಲ. ಪೋಕ ; ತೆಲು. ಪೋವು]

ಪೋ$_2$, ಹೋಗು$_3$ (ಅ). ಛೀ, ತೆಗೆ, ಬಿಡು ಎಂಬರ್ಥದ ಉದ್ಗಾರ ವಾಚಕಪದ : ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಪೋ ಮೆಚ್ಚೆನಾನ್ (ಪಂಪಭಾ. ೪-೩೬) ; ಪೋ ಮಾಣ ಧರ್ಮಜಂ ಗಡ ಭೀಮಂ ಗಡ (ಗದಾಯು. ೯-೦೩) ; ಸತ್ಪಾತ್ರದೊಳ್ ಧನಮಂ ಪೋ ನಲಿವಂದದಿಂ ನಲಿವನೇ ಧನ್ಯಂ ಧನಪ್ರಾಪ್ತಿಯೊಳ್ (ಪಂಠಾಮಾ. ೬-೦೦೭). ಹೋಗು$_3$: ಜನಪತಿಯ ಕಟ್ಟಳವಿಯಲಿ ರವಿತನು ಜನಡ್ಡೈಸಿದನು ಘಡ ಹೋಗೆನುತ ನಾರಾಚದಲಿ ಮುಸುಕಿದನರ್ಜುನಾತ್ಮಜನ (ಕುಪ್ಯಾಕ್ರೋ. ೬-೪೯) ; ನಿನ್ನಯ ಜೋಡಿ ಗಾರುಂಟವರ ಕರೆ ಮಾತಾಡುವೆವು ಹೋಗೆನುತ ಗಹಗಹಿಸಿದನು ಕೈ ಹೊಯಿದು (ಆನಂಠಾ. ೦-೪-೨೨). [< ಪೋ$_1$]

ಪೋಂಚಿ 'ಪೌಂಚಿ' ನೋ.

ಪೋಂಛಾವಣೆ (ನಾ). ಸೇರಿಸುವಿಕೆ ; ಕೂಡಿಸುವಿಕೆ ; ಜೋಡಣೆ : ಒಂದಕ್ಕೆ ನಾಲ್ಕುಮಾತುಗಳನ್ನು ಪೋಂಛಾವಣೆ ಮಾಡಿ ತಾನೂ ಅಳುತ್ತ ಕುಳಿತಳು (ಮಹಾಗ. ೨೪೦). [< ಪೌಂಚಾಯಿಸು + — ಅಣೆ$_4$]

ಪೋಂತು, ಪೋತ$_1$, ಪೋತ್ತು, ಹೋತ$_2$, ಹೋತ್ತು$_2$ (ನಾ). ಗಂಡು ಮೇಕೆ ; ಗಂಡಾಡು : ಪೋಂತಿನ ಮೂತ್ರದೊಳುಳ್ಳಿಯನರೆದು ನಸ್ಯಮಂ ಮಾಡೆ ಪಿಂಗುಗುಂ ಗ್ರಹನಿವಹು (ಲೋಕೋಪ. ೦೦-೪೬) ; ಮುನ್ನೊಗೆದಾಡಿನ ಬಸಿಱೊಳ್ ಬಂದುದು ಪೋಂತಿನ ರೂಪಿಂ ಬೆಳೆದು ಬಟಿಕ ಮದೋನ್ಮತ್ತಂ (ಯಶೋಪ. ೩-೩೩) ; ಸೂಕರದ . . . ಪೋಂತಿನ ವಿಗಂಧಬಂಧುರವಿಣ್ಮೂತ್ರಾಕಾರ ಗಂಧದ ಶ್ವಾನೀಕಂ ಭಯಹಾನಿಶೋಕ ರುಜ್ಮರಣಕರಂ (ಆಶ್ವಶಾ. ೩-೨೦). ಪೋತ$_1$: 'ತಿಂಡಿಪೋತ' ಪರಾ. ಪೋತು : ಪೋತಿನ ಮೂತ್ರದೊಳಂ ಪರಿಮರ್ದಿಸಿ ಕುಡಿಸಲುರಗತತಿವಿಷಮಟಿಗುಂ (ಐಪುದ. ೩-೬೨) ; ಪೋತು ಮಂಗಂ ಮೊಲಂ . . . ನೀಡುಂ ವೇಗಂಗಳು ತಾಳ್ದಪವು (ಹಾಲಾಸ್ಯ. ೯-೦೦-೩೩). ಹೋತ$_2$: ಹೋತನ ಕೊಂದು ಹೋಮವ ಬೇಳಿ ಚಾಂಡಾಲರಾಗ ಹೇಳಿತ್ತೇ ವೇದ (ಗಣಭಾ. ೦೩೬-೦) ; ಯಾತದ ಮೇಲೆ ಹೋತ ಮೇವುದ ಕಂಡೆ (ಪುರಂದ. ೨-೦೨-೨) ; ಮಾರಿಯ ಕಣ್ಣು ಹೋತನ ಮೇಲೆ (ಗಾದೆ). ಹೋತ್ತು$_2$: "ಅಜಃ . . . ಛಾಗಃ, ಛಗಳಕಃ, ಛಗಃ—ಈ ೬ ಹೋತು" (ಹಲಾಯು. ೪೬-೦೨೨) ; ತಲೆ ಬೋಟಿಸಿ ಹೋತಂ [ಪಾಠಾಂ. ಹೊಂತಂ] ಸಿಡಿದಲೆಗುಡುವರ್ (ಸಮಪ. ೯-೦೨೦) ; ವೇದಪುರಾಣ ಹೋತಿಂಗೆ ಮಾರಿ (ಬಸವ. ೩೭೨) ; ಹೋತಿನ ಕೊರಳೊಳಗೆ ಮೊಲೆ ಇದ್ದರೇನು (ಪುರಂದ. ೦-೦೩೯ ಪಲ್ಲವಿ).

ಪೊತ್ತಿಮಕ್ಕಳ್, ಪೊತ್ತಿನ್ಮಕ್ಕಳ್, ಪೊತ್ತಿರ್ಮಕ್ಕಳ್, ಪೊತ್ತಿರ್ಮಕ್ಕಳು = ಗಂಡು ಮಕ್ಕಳು (?) : ಇದೊನ್ಕೆಡಿಸಿದೊನ್ಪಞ್ಚಮಹಾಪಾತಕನಕ್ಕು ತನ್ನೊಕ್ಕಲುಳ್ ಪೊತ್ತಿಮಕ್ಕಳ್ಪುಟ್ಟದೆ ಕೆಡುಗ (ಎಕ. III, ಮೃಸೂರು. ೩೩-೨೦ ; ಸು. 740) ; ಇದಾನಟಿತ್ತೊನ್ಪಞ್ಚಮಹಾಪಾತಕನಾಗಿ ದಿಟ್ಟಗಲುಣ್ಡು ಕೊಟ್ಟತೇದು ಆಟ್ಟುವೆಣ್ಣಿತ್ತಲಪೂಸುವೋನಕ್ಕು ಒಕ್ಕಲುಳ್ಪೊತ್ತಿಮಕ್ಕಳ್ಪುಟ್ಟದೆ ಕೆಡುಗ (ಎಕ. III, ಸುಸಾಪ. ೨೬-೬ ; ಸು. 810) ; ಅದಾನ್ ಅಟಿತ್ತೊನ್ . . . ಸಾಸಿರಕವಿಲೆಯುಮಾನ್ ಕೊನ್ದೋನ್ ಅಪ್ಪೋನೆ ಒಕ್ಕಲುಳ್ ಪೊತ್ತಿನ್‌ಮಕ್ಕಳ್ ಪುಟ್ಟಲ್ಕಮ್ ಪುಟ್ಟದೊವುಮ್ ಪುರಿಗಂ (ಎಕ. IV, ಹಗ್ಗಡ. ೮೭-೦೨ ; ಸು. 700) ; ಇವಾನ್ ಕೆಡಿಸಿದೋನುಂ ದೆತ್ತೊನ್ನಮ್ ಪೊತ್ತಿರ್ಮ್ಮಕ್ಕಳ್ ಪುಟ್ಟೆಗು ವಾರಣಾಸಿಯ ಸಾಸಿರ್ವ್ವರ ಪಾರ್ವ್ವರ ಕೊನ್ದ ಕೊಲೆ ಎಯ್ದಿ × × ಪಞ್ಚಮಹಾಪಾತಕನಕ್ಕು (ಎಕ. III, ತಿರುಮ. ೦೦೩-೬ ; ಸು. 900) ; ಪರಿಯಾರಮಾನ್ಕೆಡಿಸಿದೊನ್ಪಞ್ಚಮಾಹಾಪಾತಕನಕ್ಕೆ ಬಾರಣಾಸಿಯನಟಿದ ಪಾಪಮಕ್ಕೆ ಎಟಿದೆಱೆ ಎತ್ತುವೊನ್ಗೆ ಬಿತ್ತುಂ ಪೊತ್ತಿರ್ಮ್ಮಕ್ಕಳು ಪುಟ್ಟಾದೆ ಕೆಡುವೊನ್ (ಎಕ. XIV, ತಿರುಮ. ೨೩೩-೦೦ ; ಸು. 800). ☞ ಕನ್ನಡದ 'ಪೋಂತು' ಪದವು ಒಂದು ಪ್ರಾಣಿಯ ಗಂಡನ್ನು ಸೂಚಿಸುವ ಹಾಗೆಯೇ ತಮಿ. ಮಲ. 'ಪೋತ್ತು', ತೆಲು. 'ಪೋತು' ಪದಗಳು ಪ್ರಾಣಿ, ಪಕ್ಷಿಗಳ ಗಂಡನ್ನು ಸೂಚಿಸುತ್ತವೆ. ಆದುದರಿಂದ 'ಪೊತ್ತಿಮಕ್ಕಳ್'— ಮುಂತಾದ ರೂಪಗಳು 'ಪೋಂತು' ಪದಕ್ಕೆ ಸಂಬಂಧಪಟ್ಟಿರಬಹುದು. ಪೋಂತಾನೆಯಂತರ = ಅಜಗಜಾಂತರ : ಕೇಳ್ದ ಆ ಬಣ್ಣನೆಗೆ ಕಾಣ್ಬ ಈ ಕಾಣಿಕೆಗೆ, ಸಮತೆಯೇಂ ? ಪೋಂತಾನೆಯಂತರಂ (ಕ್ರೀರಾಮಾ. ೪೨೦-೪೦).

[ದೇ.॥ ತಮಿ. ಮಲ. ಪೋತ್ತು ; ಕೊಡ. ಪೋತು ; ತೆಲು. ಪೋತು = ಪ್ರಾಣಿ ಅಥವಾ ಪಕ್ಷಿಗಳಲ್ಲಿ ಗಂಡು ; ಕೋಲಾ. ಪೊತ್ = ಹುಂಜ ; ನಾಯ್ಕೀ. ಪೋತ್ ; ಪರ್ಜಿ. ಪೋತ್ = ಗಂಡುಪಕ್ಷಿ ; ಕೊಂಡ. ಪೋತ್ = ಗಂಡುಪ್ರಾಣಿ ; ಕುವಿ. ಪೋತೂ = ಕೆಲವು ಪ್ರಾಣಿಪಕ್ಷಿಗಳಲ್ಲಿ ಗಂಡು]

ಪೋಕ, ಹೋಕ (ನಾ). ೧. ತಿರುಗಾಡುವವನು ; ಅಲೆದಾಡುವವನು ; ಅಲೆಮಾರಿ : ಕಾಪಿಲರ ಮುಟ್ಟಿ ಕಾಲ್ಗೆಡಿಸಿ ಪೋಕರ ಮಾಡಿ (ಪಸುಪು. ೪-೦೪-೦೩). ೨. (ಸಮಯವನ್ನು) ಕಳೆಯುವವನು : 'ಪೊತ್ತು ಪೋಕ' ಪರಾ. ೩. ನೀಚ ; ದುಷ್ಟ : "ಅವಿವೃತ್ತನೆನೆ ಪೋಕನಕ್ಕು" (ಮಂಗರಾ. ೬೩-೨೩) ; ಪೋಕನಿವನಿವನ ನುಡಿ ಪುಸಿ (ಪಂಪು. ೪-೦೬) ; ಕಾಕರಾಗಲವರು ವಿಷಯ ನೀಕಲಾಗಲವರು ಬಹಳ ಪೋಕರಾಗಲವರು (ಸುಸಾರ. ೬೬-೯) ; ಪೋಕನಿಗೆ ನಾಕ ಸಲ್ಲ ಮೂಕನಿಗೆ ಸ್ವಪ್ನ ಸಲ್ಲ (ಗಾದೆ). ೪. ಪೋಲಿ ; ತುಂಟ : "ಪೋಕನೆನೆ ತುಂಟಗಭಿಧಾನವು" (ಕಕರ. ೦೨೬) ; ತಂದೆಯಿದಿರೊಳು ಪುಂಡರ ಪೋಕರ ನಡೆಯೋ (ಭರಪ. ೨೬-೦೦೪) ; ಮದುವೆ ಯಾಕಾದನಿವನೂ ಪೋಕ ಪುಂಡನು (ಕಂಕ. ೯೩-೨). ಹೋಕ : ೧. 'ದಾರಿಹೋಕ' ಪರಾ. [ಪೋ$_1$ + — ಕ$_3$]

ಪೋಕತನ (ನಾ). ದುಷ್ಟತನ ; ನೀಚತನ : ಎಲೆ ಮರುಳೆ ಪೋಕತನವಿಲ್ಲಿ ಮೆರೆಯಂದು ಮರಳು (ತುರಂಗ. ೩೨-೬). [ಪೋಕ + — ತನ]

ಪೋಕರಿ, ಪೋಕ್ರಿ (ನಾ). ೧. ದುಷ್ಟನಡತೆಯುಳ್ಳ ವ್ಯಕ್ತಿ ; ನೀಚ ಸ್ವಭಾವದ ವ್ಯಕ್ತಿ : ಆತನು ಆವ ಕೆಟ್ಟ ಕೆಲಸವನ್ನು ಮಾಡುವುದಕ್ಕೂ

ಹೇಸದ ಪೋಕರಿ ಹುಡುಗ (ಪಿಶಾಪ. ೭೦) ; ಪೋಕರಿ ಇವರಲ್ಲೊಬ್ಬಳು (ಬೇಕಿಸಾ. ೦೫೦). ೨. ತುಂಟ ವ್ಯಕ್ತಿ ; ಉಡಾಳ : ಪೋಲಿ : ನಾನು ಮೊದಲಿನಿಂದಲೂ ಪೋಕರಿಯೆಂಬುದು ಸರಿಯೇ ಸರಿ (ಬಾಣಲ. ೦೦); ನಿಮ್ಮ ತಂಗಿಯ ಮಗ ಶುದ್ಧ ಪೋಕರಿ (ಸುಹಾಗ. ೯೬). ಪೋಕ್ರಿ : ೧. ಬಹಳ ಪೋಕ್ರಿಯಮ್ಮ. ಪಕ್ಕಾ ಹೆಣ್ಣುಮರುಳ ! (ಪತಿ. ೬೫). ೨. ಅಜ್ಜಿ ಯಾವಾಗಲೂ ನನ್ನನ್ನು ಪೋಕ್ರಿ ಎಂದು ಬೈಯುತ್ತಾಳೆ (ಪತಂಗ. ೯೬) ; ನಿನ್ನನ್ನು ಕಂತ್ರಿಗಳ ಕಣ್ಣುತಪ್ಪಿಸಿ ಸಾಬೀತಿನಲ್ಲಿಟ್ಟುಕೊಳ್ಳುವುದು ತೋಮನಿಗೆ ತುಂಬ ಸುಲಭವಲ್ಲ ಈ ಪೋಕ್ರಿಗಳ ಪಟಲಾಂನಲ್ಲಿ (ಹೂಸಕ್ಷಿ. ೫೦).

[ದೇ. ॥ ತಮಿ. ಪೋಕ್ಕಿರಿ, ಪೋಕ್ಕಿಲಿ ; ಮಲ. ಪೋಕ್ಕಿರಿ ; ತುಳು. ಪೋಕೆ, ಪೋಕಿರಿ, ಪೋಕುರಿ; ತೆಲು. ಪೋಕಿರಿ]

ಪೋಕರಿತನ (ನಾ). ತುಂಟತನ ; ಉಡಾಳತನ : ಅಫಜಲಖಾನನು ಕ್ರೋಧದಿಂದ, ರಹಿಮನ ಪೋಕರಿತನಕ್ಕೆ ತಕ್ಕ ಶಿಕ್ಷೆ ಮಾಡಬೇಕೆಂದು ಕತ್ತಿಯನ್ನೆತ್ತಿದನು (ಕೋಹಿಪೂ. ೦೬). [ಪೋಕರಿ + — ತನ]

ಪೋಕವಿದ್ಯೆ (ನಾ). ದುಷ್ಟವಿದ್ಯೆ ; ನೀಚವಿದ್ಯೆ : ಕಾಕುಮಾತು ಆಡಬೇಡ ಪೋಕವಿದ್ಯೆಗೆ ಹೋಗಬೇಡ (ಗಾರ). [ಪೋಕ + ವಿದ್ಯೆ]

ಪೋಕವೃತ್ತಿ (ನಾ). ಕೆಟ್ಟಸ್ವಭಾವ ; ನೀಚವೃತ್ತಿ : ಏಕಾದಶಿಯ ಮಾಡಿ ಯತಿಗಳನೊಡನಾಡಿ ಪೋಕವೃತ್ತಿಗಳನೀಡಾಡಿ (ಬಾಡಿಕೇ. ೦೩೬-೦೦).

[ಪೋಕ + ವೃತ್ತಿ]

ಪೋಕಳ (ನಾ). ನಿಜವಲ್ಲದುದು ; ತೋರಿಕೆ ; ಸುಳ್ಳಾದುದು : ಸುಳ್ಳ ನಾಟಕ-ಕಂಪನಿ ತಗೀತೇನಿ, ಅಂತ ಪೋಕಳ ಹುರುಪಿನ್ಯಾಗ ಬೇಡಿದರ ಏನು ಕೆಲಸ ಆಗಬೇಕು? (ಗಂಪೂಯಿ. ೨೯೫). [← ಮರಾ. ಪೋಕಳ್]

ಪೋಕಾಟ (ನಾ). = ಪೋಕತನ : ಮಾನಿನಿಯರೊಳಗೆ ಪೋಕಾಟವೇನಿದು (ಕಪಳ. ೦೯೯-೦). [ಪೋಕ + ಆಟ]

ಪೋಕಾಟಿಕೆ (ನಾ). ತುಂಟಾಟ ; ಪುಂಡಾಟಿಕೆ : ನೀತಿಶೀಲನಾದ ವಿದುರ್ಶಾಧಿಕಾರಿಯ ಮೇಲೆ . . . ಅಪವಾದವನ್ನು ಹಾಕುವುದು ತೀರಾ ಪೋಕಾಟಿಕೆಯೆನ್ನಬೇಕು (ಬಾಗ್ಯೇಪಿ. ೨೯೬). [ಪೋಕಾಟ + — ಇಕೆ]

ಪೋಕ್ತ (ನಾ). ೧. (ಉಕ) ಟಾಕುಠೀಕು ; ಶಿಸ್ತು ; ಠೀವಿ. ೨. ಟಾಕುಠೀಕಾದ ವ್ಯಕ್ತಿ ; ಶಿಸ್ತಾಗಿರುವ ವ್ಯಕ್ತಿ : ಎರಡು ಪೋಲಿಗಳನ್ನು ಬಾಡಿಗೆಗೆ ಹಿಡಿದಿದ್ದಾನೆ. ದೊಡ್ಡ ಪೋಕ್ತನಾಗಿ ತಿರುಗುತ್ತಾನೆ (ಮೂಕುರಾ. ೦೫೩) ; ಆಫೀಸರ ಆದ. ಇನ್ನರ ಪೋಕ್ತ ಆಗಬೇಕು ಅನ್ನೂ ಖಬರೇ ಇಲ್ಲಾ (ದೀಪಹ. II, ೨೦೯).

ಪೋಕ್ತಾಗಿ = ಆಡಂಬರದಿಂದ ಕೂಡಿ; ಠೀವಿಯಿಂದ; ಟಾಕುಠೀಕಾಗಿ : ಪಾಸ್ ' ಎಂದು ಪೋಕ್ತಾಗಿ ಎದೆ ತಟ್ಟಿಕೊಳ್ಳುತ್ತ ಗದ್ದಲದಲ್ಲಿ ನುಗ್ಗಿಬಿಡುತ್ತಿದ್ದೆ (ವೈಪಿ. ೯೦೭) ; ಆಕೆ ದಿಟ್ಟತನದಿಂದ ಎದ್ದುನಿಂತು ' ಪೋಕ್ತಾಗಿ ' ಮಾತನಾಡಿದಳು (ಸಮಜೀ. ೬೫೩).

[← ಪಾರ. ಪುಖ್ತ್ ; ಮರಾ. ಪೋಕ್ತ್]

ಪೋಕ್ತತನ (ನಾ), ಗಾಂಭೀರ್ಯ ; ದೊಡ್ಡತನ : ಒಂದು ಪ್ರಸಂಗವು ಮಾತ್ರ . . . ಆಕೆಯ ಹುಡುಗತನವನ್ನು ಕಳೆದು ಪೋಕ್ತತನವನ್ನು ಕಲಿಸಿಕೊಟ್ಟಿತು (ಗಂಪೂಯಿ. ೨೨೯). [ಪೋಕ್ತ + — ತನ]

ಪೋಕ್ರಿ ' ಪೋಕರಿ ' ನೋ.

ಪೋಗಂಡ (ನಾ). ೧. ಅಂಗಹೀನ ; ಅಂಗವಿಕಲ : " ವಿಕಲಾಂಗಃ, ಪೋಗಂಡಃ — ಈ ೨ ಅಂಗಹೀನಂ " (ಹಠಾಯು. ೬೯-೨೩೩) ; ಆ ಗಂಡನ ನಷ್ಟಿದ ತೋಳ್ ಪೋಗಂಡನನಪ್ಪುವಂತೆ ಮಾಡಿದ ಬಿದಿಯಂ ಮೂಗಂ ಕೊಯ್ದಿಟ್ಟಿಗೆಯೊಳ್ ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೇ (ಧುಶೋಕ. ೨-೬೦). ೨. ವಯಸ್ಸಾಗದ ಬಾಲಕ ; ಪ್ರೌಢನಲ್ಲದವನು.

[ಸಂ.]

ಪೋಗಂಡಿಕೆ (ನಾ). ತೋರಿಕೆಯ ಶೌರ್ಯ : ಕಳೆದುಹೋದ ಪರಾಕ್ರಮ : ' ನಲ್ಲಪೋಗಂಡಿಕೆ ' ಪರಾ. [ಪೋಗಂಡ + — ಇಕೆ]

ಪೋಗಟ್ಟು (ಕ್ರಿ). ಓಡಿಸಂ : ನೆಲೆಯೊಳ್ ಸೇರಲು ಪೋರುಗೈದು ಸತಿತಾಂ ಪೋಗಟ್ಟುವಳ್ . . . ತೊಲಗಿರಲ್ ಲಕ್ಷ್ಮೀಕಟಾಕ್ಷೇಕ್ಷಣಾಂ (ಸೋಮೇಶ. ೫೦). [ಪೋಗ್ಯು$_1$ (< ಪೋ$_1$) + ಅಟ್ಟು$_1$]

ಪೋಗತೊಟ್ ? (ಕ್ರಿ). (?): ಚಿದ್ದಯ್ಯನು ಜಕ್ಕಯ್ಯನುಮೆಂಬ ಪಾರುವರು ಗುಣ್ಡಮಯ್ಯಂದೋಱಿ ಎಡೆಯಾಯ್ಲತನದಿಂ ರಾಜಗಾಮಿತಂಗೆಯ್ದು ಮೆಣ್ಡೆಯತನದಲೂರನೆನ್ನದೆನ್ದು ಮೂಱುವರಿಷದುಣ್ಬಳಿಯ ಪೋಗತೊಟ್ಟುಣುತಮಿರ್ಪ್ಪುದಂ (ಸೌಇಇ. IX — 1, ೦೨೩-೦೬ ; 1059). [?]

ಪೋಗಾಗು (ನಾ). ಆಗುಹೋಗು ; ಲಾಭ ನಷ್ಟ : ಅಂತವಱ ಪೋಗಾಗುಗಳನೊರೆದೊರೆದು ಸುಸೂತ್ರಂ ತಪ್ಪದಂತೆ ಸೇರುವೆಗಿಕ್ಕಿ ಬರೆಯಿಸಿ (ಪರ್ಕರಾ. ೯-೨೯). [ಪೋಗ್ಯು$_2$ + ಆಗ್ಯು$_2$]

ಪೋಗಾಡು, ಹೋಗಾಡು (ಕ್ರಿ). ೧. ಕಳೆದುಕೊಳ್ಳು; ನಷ್ಟಹೊಂದು ; ನೀಗು : ರಾಜ್ಯವನಿತಂ ಪೋಗಾಡಿದಂ ರಾಕ್ಷಸಂ (ಸೋಮೇಶ. ೯೩) ; ತನ್ನಿರ್ದ ಮನೆಯಂ ಮಾಱಿಯವಳ್ಗೆ ಪೋಗಾಡಿ ತದನಂತರಂ ತನ್ನ ತಾಯಲ್ಲಿರ್ದಂತಪ್ಪ ವಸ್ತುಗಳಂ ಕಱಿಪುವುದೆಂದು ಪೇಟ್ದಟ್ಟಲ್ (ಪುಷ್ಯಾಸ್ತ್ರ. ೯-೦೮ ಪ) ; ತಂತಮ್ಮ ತಂದೆಗಳಾರ್ಜಿಸಿದ ಧನಧಾನ್ಯಂಗಳೆಲ್ಲಮಂ ಪೋಗಾಡಿ ಪರಿಕ್ಷೀಣವಾಗಿ (ಭಾರಶಾಂ. ೦೬೨). ಹೋಗಾಡು : ೧. "ಹೋಗಾಡು (ಹೋಗು + ಆಡು) — ಪ್ರಮಾದತ್ಯಜನೇ" (ಶಮರಾ) ; ನುಡಿಯಲಱಿಯದೆ ಸಕಲರಾಜ್ಯಮಂ ಹೋಗಾಡಿ . . . ನಗೆಗೆಡೆಯಾದ ಪಾತಕ ಹರಿಶ್ಚಂದ್ರ (ಹಪಕಾ. ೦೨-೯೩) ; ಕದನದಲಿ ಸುತನಿಧಿಯ ಹೋಗಾಡಿದೆ ನಿಜಾನ್ವಯಕಲ್ಪತರುವನು (ಕುಪ್ಯಾಶ. ೦-೯) ; ಇದ್ದುದನು ಹೋಗಾಡಿ . . . ಉದ್ದನ ಮರನ ತುದಿಗೇಱಿ ತಲೆಯೂಱಿ ಬಿದ್ದು ಸತ್ತಂತೆ (ಸರ್ವಜ್ಞ. ೯೫೩). ೨. (ಮಾತಿಗೆ) ತಪ್ಪು; ಮೀರು : ಒಡಲ ಹಿಡಿದಾಡದಿರು ನುಡಿಯ ಹೋಗಾಡದಿರು (ಸರ್ವಜ್ಞ. ೩೦೦) ; ಮಾತ ಹೋಗಾಡಿ ಬಳಿಕಾ ನೆನೆನೆನೆದು ಕಡೆಯಲ್ಲಿ ಹುಡುಕಾಡುವನೆ ಮೂರ್ಖ (ಪಿಪಶ. ೯೦). ೩. ಬಿಡು ; ತ್ಯಜಿಸು : ಆಡುವುದು ತತ್ವಜ್ಞರೊಡನೆಡೆಯಾಡುವದು ತತ್ಸನ್ನಿಧಿಗೆ ಹೋಗಾಡುವುದು ದುಷ್ಕೃತವನು (ಪಿಶಾಗ. ೭-೫-೯೯). ೪. ಇಲ್ಲವಾಗಿಸು ; ನಿವಾರಿಸು : ಮಾಡಿದೆನು ಮಖಶತವನದು ಹೋಗಾಡಿ ಶಿಂದ್ರನನಲ್ಲಿ ತನಗೆಡೆಮಾಡಿತರಮನೆ (ಕುಪ್ಯಾಲಿ. ೦೩-೬೯). ೫. ನೆರವೇರಿಸು ; ತೀರಿಸು ; ಪೂರೈಸು : ಬಾಣಹತಿಗಕ್ಕುಡಿಸಿ ರಾಜ್ಯಶ್ರೇಣಿ ಜರುಗಿತು ಶೌರ್ಯನಗರದ ವಾಣಿಯರು ಹೊಕ್ಕಿಱಿದು ಹೋಗಾಡಿದರು ಪತಿರಿಣದ (ಕುಪ್ಯಾಕ. ೨೯-೯೨). [ಪೋಗ್ಯು$_1$ (< ಪೋ$_1$) + ಆಡು$_1$]

ಪೋಗಿಸು, ಹೋಗಿಸು (ಕ್ರಿ). ಹೋಗುವಂತೆ ಮಾಡು ; ತೊಲಗಿಸು : ಆ ಗಿರಿತಟದಿಂದವನಂ ಪೋಗಿಸಿ (ಶಬಶಂ. ೨-೦೦೨). ಹೋಗಿಸು : " ಜಲಯತಿ = ಬಾಯಾರಿಕೆಯಂ ಹೋಗಿಸಿದಪುದು " (ಕಾಶಕ್ಯ. ೨೫೯).

[ಪೋಗ್ಯು$_1$ (< ಪೋ$_1$) + — ಇಸು$_3$]

ಪೋಗ್ಯು$_1$ ' ಪೋ$_1$ ' ನೋ.

ಪೋಗ್ಯು$_2$, ಹೋಗ್ಯು$_3$ (ನಾ). ೧. ತೆರಳುವಿಕೆ ; ನಿರ್ಗಮನ : ಆನೆ ಕುದುರೆಗಳುಂ ಮಾನಸರ ಬರುವುಮಂ ಪೋಗುಮಂ ಕಂಡು (ವಡ್ಡಾರಾ. ೬೯-೨೨) ; ಪುರಜನಗಳೆಲ್ಲಂ ನೆರೆದವರ ಪೋಗಿಂಗೆ ಸೈರಿಸಲಾಱದೆ (ಪಂಪಭಾ. ೭-೦೬ ಪ); ನಿಮ್ಮ ಪೋಗಂ ಪುರಜನಂ ಪೇಱೆ ಕೇಳ್ದು (ಧರ್ಮಾಮ್ಯ. ೦-೯೬). ೨. ಕಳೆದುಹೋಗುವಿಕೆ : ಕೈತಪ್ಪಿಹೋಗುವಿಕೆ : ತನ್ನೊಡವೆಯ ಪೋಗಿಂಗಮವಳ ಪೋಗಿಂಗಂ ನಿಗ್ಗೆಡಿ ಬೆನ್ನನಱಸಿ ಪೋದಂ (ಪಂರಾಮಾ. ೬-೩೫). ೩. (ಮಲಮೂತ್ರಾದಿಗಳ) ವಿಸರ್ಜನೆ : ಮಲಮೂತ್ರದ ಪೋಗುಂ ಮಾಳ್ಕುಮದುವೆ ಜಡತೆಯನೀಗುಂ (ಕಲ್ಯಾಕಾ. ೨-೦೬). ೪.

ಕುಸ್ತಿಯ ಒಂದು ವರಸೆ,—ಪಟ್ಟು : ಕೊಂತಮಾರವು ಲಾಟ ಡೊಕ್ಕರ ಪೋಗು ಬಾಣು[ಗು]ಗಳೂ . . . ತಳಹತ್ತ ಗಳಹತ್ತಂ ತುಳಿಲ ವಿಂದಾಣದಲಿ ಹರಿ ಕಾದಿ ಬಳಲಿಸಿದ (ಸಾಳ್ವಭಾ. ೨೨-೭೩). ಹೋಗು$_2$: ೫. ಅಳಿವು ; ನಾಶ : ಸಂಸಾರದಾಗುಂ ಬೋ ಸಂಸಾರದ ಹೋಗುಂ ಬೋ (ಬಸವ. ೦೬೮). 'ಆಗುಹೋಗು', 'ಹೋಕು' ಪರಾ.

[<ಪೋ$_1$./ತಮಿ. ಪೋಕ್ಕೈ ; ಮಲ. ಪೋಕ್ಕು ; ತುಳು. ಪೋಕು ; ಕೊಡ. ಪೋಕ್=ಮಾರ್ಗ, ರಹಸ್ಯ ; ತೆಲು. ಪೋಕ, ಪೋಕು]

ಪೋಗುಡು 'ಪೋಗೊಡು' ನೋ.

ಪೋಗುಹ (ನಾ). ಹೊರಟುಹೋಗುವಿಕೆ ; ಕಳೆದುಹೋಗುವಿಕೆ : 'ಹರೆಯಬೋಗುಹ' ಪರಾ.

[ಪೋಗು$_1$ (<ಪೋ$_1$) + — ಹ$_2$ (< — ಪ$_2$)]

ಪೋಗೊಡು, ಪೋಗುಡು (ಕ್ರಿ). ೧. ಹೋಗಲು ಅವಕಾಶ ನೀಡು : ಸಾರಿದರೆ ನೂರಾಗಿ ಹರಿದೋಡುತಿಹನು, ಸೇರಿದರೆ ಸೆರೆವಿಡಿದು ಮರಳಿ ಪೋಗೊಡನು (ಕಪು. ೦೦-೬). ಪೋಗುಡು : ೨. ಕಳೆದುಕೊಳ್ಳು ; ನೀಗಿಕೊಳ್ಳು : ಎಳನೆತ್ತರ ಕೊರ್ವಿಂ ತಲೆಯಂ ಪೋಗುಡುವೀ ನೀಂ ಮರುಳಾಗಾ ! (ರಾಮಾಶ್ವ. ೯೨-೨೬). [ಪೋಗು$_1$ (<ಪೋ$_1$)+ಕೊಡು$_1$]

ಪೋಗೊದೆ (ಕ್ರಿ). ದೂರ ಹೋಗುವಂತೆ ಕಾಲಿನಿಂದ ನೂಕು,—ಒದೆ : ಮಂದಸಿನ ಮುಚ್ಚುಳನುಂಗುಟದಿಂದೆ ಮೀಂಟಿ ಪೋಗೊದೆದು (ಜಗವಿ. ೬-೩೦).

[ಪೋಗು$_1$ (<ಪೋ$_1$) + ಒದೆ$_1$]

ಪೋಗೊಳಿಸು, ಹೋಗೊಳಿಸಂ (ಕ್ರಿ). ಹೋಗಲು ಬಿಡು ; ಬೀಳ್ಕೊಳ್ಳು; ಕಳಂಹಿಸಿ ಕೊಡಂ : ಒಮ್ಮೆಗೆನ್ನಂ ಪೋಗೊಳಿಸು ಮರಳೆ ನಮ್ಮಾ ! (ಕಪು. ೩೨-೨). ಹೋಗೊಳಿಸು : ಕೆಳದಿಯರನ್ನು ಮಾಲಿಸುತ್ತಿದ್ದು, ಶಿರಸ್ಸಂಜ್ಞೆಯಿಂದ ಹೋಗೊಳಿಸಿ . . . ಆತನಿಗೆ ಮುಗ್ಧಾಯತ ಪ್ರೌಢಿಯ ಇದಿರ್ನೋಟವನ್ನೊಡ್ಡಿರುವಳು (ಮಂತ್ರಕ. ೦೪೦-೩).

[ಪೋಗು$_1$ (< ಪೋ$_1$) + ಕೊಳ್$_1$ + — ಇಸು$_3$]

ಪೋಚ (ನಾ). ಒಬ್ಬಾತನ ಹೆಸರು : ಚಿಂಗಯ್ಯನ ಚಾವಬ್ಬೆಯ ಮಗಂ ಪೋಚನ ಕಲ್ಲ × × × (ಮೈಆರಿ. ೦೯೪೨. ೨-೬; 973). [?]

ಪೋಚಬುಕ್ಕು (ನಾ). ರಸೀತಿ ಪುಸ್ತಕ : ಜೀನಸಗಳು ಬಂದು ದಾಖಲಾದ ಪೋಚಬುಕ್ಕಿನ ಮೇಲಿಂದ ತಪಾಸ ಮಾಡೋಣದರಲ್ಲಿ ಬಹಳೇ ಅಡಚಣೆಯು ಬೀಳುವದು (ಮುಂಬಪ್ಪಾ. ೯೨).

[ಪೋಚ$_6$ (ಪ್ರ ← ಮರಾ. ಪೋಂಚ್) + ಬುಕ್ಕು]

ಪೋಚಯ್ಯ (ನಾ). ಒಬ್ಬಾತನ ಹೆಸರು : ದುಗ್ಗಮಾಯ್ಯನ ಮಗ ಪೋಚಯ್ಯ ಬೆಸಗೆಯ್ದಗಲ್ಲ ನಿಱಿಸಿ (ಎಕ. IV, ಹುಣಸೂ. ೬೪-೧೪; 976).

[ಪೋಚ + ಅಯ್ಯ$_1$]

ಪೋಚಿಗಾಮುಂಡ (ನಾ). ಒಬ್ಬಾತನ ಹೆಸರು : ಉಪ್ಪವಳ್ಳಿಯ ಪೋಚಿಗಾಮುಣ್ಡ ವಳಿಯೆಱೆ ಮುದ್ದ ಮಾಗುಣ್ಡೆಯೆಱೆಗ (ಎಕ. XV, ಪೇಲೂರು. ೩೦೯-೦೨ ; 971). [< ಪೋಚ + ಗಾಮುಂಡ]

ಪೋಚು$_1$ 'ಪೌಂಚಿ' ನೋ.

ಪೋಚು$_2$ 'ಪೋಚೆ$_2$' ನೋ.

ಪೋಚು$_3$ (ನಾ). ಮುಂದೇನಾಗುವುದೆಂದು ಕಾದಿರುವಿಕೆ ; ನಿರೀಕ್ಷೆ : ನೀ ಉಲಕೋಚಿತನ ಮಾಡಿ ನಡುವ ಬಾಯಿ ಹಾಕೀ ! . . . ಒಳ್ಳೇ ಪೋಚಿಲೆ ಕೂತಿರಬೇಕು ನೋಡು (ತಿಡುಗು. ೬೫). [←ಮರಾ. ಪೋಂಚ್=ದೂರದೃಷ್ಟಿ]

ಪೋಚೆ$_1$ 'ಪೌಂಚಿ' ನೋ.

ಪೋಚೆ$_2$, ಪೋಚು$_2$ (ಗು). ಅಲ್ಪವಾದ ; ತುಚ್ಛವಾದ : ಪಾಚಿ ತೆರನಾದ ಪೋಚಿ ಸಂಸಾರದಾಲೋಚನೆ ತೋರುವದು (ಎಸಾಸು. ೨೦-೨). ಪೋಚು$_2$: ನೀಚಮಾರ್ಗವ ಬಿಡು ಮೋಹಕವಾಗಿದ್ದ ಪೋಚುಮತವ ಸುಡು ನಲಿ ನಲಿದಾಡು (ಎಸಾಸು. ೩೬-೪). [←ಪಾರ. ಪೂಚ್ ; ಹಿಂ. ಪೋಚ್ ; ಮರಾ. ಪೋಚಟ್ ; ಗುಜ. ಪೋಚಾ]

ಪೋಟ$_1$ (ನಾ). ೧. ಶರೀರದ ಯಾವುದಾದರೂ ಒಂದು ಭಾಗ ಊನವಾದವನು ; ಪೋಟು ಬಿದ್ದವನು : ಆತಂ ಶಸ್ತ್ರದಿಂ ಗಲ್ಲಮಂ ಪಾಳಿಸಿ ವ್ರಣವೆರಸಿದಕ್ಕಿಯಂ ತೆಗೆದು ಕತ್ತಿಯಿಂದೆತ್ತಿ ತೋಱಿಯಿದುಂ ತಂಡುಲವ್ಯಾಧಿಯೆಂದು ಪೆಸರಿಟ್ಟು . . . ಆ ತಂಡುಲಮಂ ಹೊಣಕೆ ನುಂಗಿ ಕಳೆದನಂದದಿಂದೆನ್ನನೆಲ್ಲರುಂ ಗಲ್ಲಪೋಟನೆಂದು ಪೆಸರನಿಟ್ಟರ್ (ಧರ್ಮಪ. ೯-೨೮ ಪ) ; ಅಂದಿನಿಂದ ನನ್ನನ್ನು ಎಲ್ಲರೂ ಗಲ್ಲಪೋಟ ಎಂದು ಕರೆಯುತ್ತಾರೆ (ನಗೆಗ. ೫). ೨. (ಆಲಂ) ಪುಂಡ ; ಪೋಕರಿ ; ಸ್ವೇಚ್ಛಾಚಾರಿ : ದ್ಯೂತವನಾಡುತ್ತಿಹ ಪೋಟ ಸೂಳೆಯರೊಳೊಲ್ಡಿ ರ್ಪಾಟಮಿಂತೆಲ್ಲ ಮುಂ ಸವಿಯಾಗಂತ್ಯದಿ ಕಷ್ಟವೈ (ಸೋಮೇಶ. ೨೪). ಭಂಡರಿಗೆ ಬಹುಭಾಷಿಗಳಿಗೆ ಪ್ರಚಂಡರಿಗೆ ಪರಸತಿಯ ಬೇಟೆಯ ಪುಂಡತನದಲಿ ಹೇಡಿರನು ಬಿಟ್ಟರ್ಪ ಪೋಟರಿಗೆ . . . ಹೇಳದಿರು ಮಱೆದೀ ಅನುಭವಾಮೃತವ (ಅಮೃತ. ೨-೨) ; ಲೀಲೆಯ ನಾಟಕವಲ್ಲ ಮಾಟಕೂಟವಿದಲ್ಲ ಪೋಟರ ಮಾತಲ್ಲ (ಹಮಸ. ೩). [ಪೋಟು (<ಪೋಟೆ$_1$) + — ಅ$_7$]

ಪೋಟ$_2$ (ನಾ). ಅಂಜುಕುಳಿ ; ಹೇಡಿ ; ಭೀರು : "ಆ ಪೋಟನೆನೆ ಧುರದೊಳೋಡಿ ಬಹನಕ್ಕು" (ಮಂಗಲಾ. ೮೦-೮) ; ಪೋಟರಪ್ಪಜ ಹರಿ ಸುರೇಂದ್ರರಿಗಾಟವಿಕ ದಿತಿಸುತವಿತತಿಗೀ ಕೋಟೆಯಂ ಸಾಧಿಸುವುದವಗಡಂ (ಬಸಪು. ೦೬-೦೩). 'ಪೋಡಿ$_1$' ಹೋ. [ಸಂ. ಪೋಟಾ]

ಪೋಟಕ (ನಾ). =ಪೋಟ$_1$ ೨ : ಪೋಟಕರು ವೇಶ್ಯಾಂಗನೆಯರೊಡನಾಟದೊಳು ಪಗಲಿರುಳು ಬಾಳುವ (ಯಶೋರ. ೭). [<ಪೋಟ$_1$]

ಪೋಟಖರಾಬು (ನಾ). ಸಾಗುವಳಿ ಮಾಡಲಾಗದ ಜಮೀನು : ರಸ್ತೆಗಳು ಮತ್ತು ಕಾಲುವೆಗಳ ಮಗ್ಗುಲುಗಳಲ್ಲಿರುವಂಥಾ ಭೂಮಿಯನ್ನು ಬೇರೆ ನಂಬರು ಮಾಡಬೇಕೆಂದು ಹುಕುಂ ಆದಾಗ ಹಾಗೆ ಮಾಡತಕ್ಕದ್ದು. ಹಾಗಿಲ್ಲದೆಯಿದ್ದರೆ ಪೋಟಖರಾಬಿನಲ್ಲಿ ಸೇರಿಸಬೇಕು (ಭೂಮಿಅ. ೩೨).

[←ಮರಾ. ಪೋಟ್‌ಖರಾಬ್]

ಪೋಟಗಲ, ಪೋಟಗಳ (ನಾ). ೧. ಒಂದು ಬಗೆಯ ಲಾಳದ ಕಡ್ಡಿ. ೨. ಒಂದು ಬಗೆಯ ಹುಲ್ಲು ; ಜಂಬುಹುಲ್ಲು ; ಕಾಶತೃಣ. ಪೋಟಗಳ : ೧. "ನಡಃ, ಧಮನಃ, ಪೋಟಗಳಃ—೩ ದೇವನಾಳದ ಹೆಸರುಗಳು. ದೇವಲಾಲೀಕಡ್ಡಿಗಳಿಗೂ ಹೆಸರುಗಳು" (ನಿಠ್ಠಾಂತಿ. ೦೫೦). ೨. "ಕಾಶಂ, ಇಕ್ಷುಗುಧಾ, ಪೋಟಗಳಃ—೩ ಜಂಬುಹುಲ್ಲು" (ನಿಠ್ಠಾಂತಿ. ೧೫೦). [ಸಂ.]

ಪೋಟಗಳ 'ಪೋಟಗಲ' ನೋ.

ಪೋಟಗಿ 'ಪೋಟಿಗೆ' ನೋ.

ಪೋಟತನ (ನಾ). ಪುಂಡಾಟ ; ಪೋಕರಿತನ : ಮುರಾರಿ ಗೋಪಿಯರಲ್ಲಿ ಹಾದರವಾಡಿ ಸಿಕ್ಕನೆ ಪೋಟತನದಿಂದ (ಬಸಪು. ೫೪-೪೦) ; ಪೋಟತನ ನಮ್ಮಲ್ಲಿ ಕೊಂಬುದೆ ಎನುತ ಹರಿಯೆಚ್ಚ (ಕೋಗಯ. ೨೨-೯೦). [ಪೋಟ$_1$+ —ತನ]

ಪೋಟತೆ (ನಾ). =ಪೋಟತನ : ಹುಸಿ ಕೊಲೆ ಕಳವು . . . ನುಸುಳು ಘಾತಕವನ್ಯಾಯ ಪೋಟತೆಗಳು ಮಸುಳಿಹವಾ ನಾಡೊಳಗೆ (ಪೋಳಪು. ೦-೩೯).

[ಪೋಟ$_1$ + — ತೆ$_3$]

ಪೋಟಲೀಸು 'ಪೋಲ್ಟೀಸು' ನೋ.

ಪೋಟಾಧ್ಯಾಯ (ನಾ). (ಆಲಂ) ಸೂಳೆಗಾರಿಕೆ ; ಕಾಮಕ್ರೀಡೆಯ ಪ್ರಕರಣ : ಅಹಹ ಶಿವನೀ ಸೂಳೆಯೊಳ್ನೆರೆವುದೆಂತೆನಗೆ ಸಹಜವೆಂತೆಮಗೆ ಪೋಟಾಧ್ಯಾಯವೆಂದೆನಲು (ವೀಶ್ವಪು. ೯-೦೦-೨೬); ಶಿವಗೃಹದೊಳು ಆವ ಪೋಟಾಧ್ಯಾಯವೆಲೆ ಮುಂಡೆಯೆನೆ (ವೀಶ್ವಪು. ೯-೦-೩೯).

[ಪೋಟ$_1$ + ಅಧ್ಯಾಯ]

ಪೋಟಾಪೋಟಿ (ನಾ). ಸ್ಪರ್ಧೆ ; ಮೇಲಾಟ ; ಪೈಪೋಟಿ : ಮಹಾರಾಜರವರು ಅಧಿಕಾರವನ್ನು ವಹಿಸಿದ ಮೇಲೆ ಪೋಟಾಪೋಟಿಗೆ ಪ್ರಾರಂಭವಾಯಿತು (ಶಾಸುಸಂ. ೩೩೯); ಇಬ್ಬರಿಗೂ ಸಂಗೀತದ ಪೋಟಾಪೋಟಿ ಬಿತ್ತು (ಪಟಿಸಾ. ೦೪೭); ಬುದ್ಧಿಬಲಕ್ಕೂ ಬಾಹುಬಲಕ್ಕೂ ನಡೆದ ಪೋಟಾಪೋಟಿಯಲ್ಲಿ ಬಾಹುಬಲಕ್ಕೆ ಪರಾಜಯವುಂಟಾಯಿತು (ಭಾಇಪ್ರ. ೭೮).

[<ಪೋಟಿ$_1$./ತುಳು. ಪೋಟಾಪೋಟಿ]

ಪೋಟಿ$_1$, ಹೋಟಿ (ನಾ). ೧. ಈಡು; ಸಮಾನ; ಎಣೆ : ಸಿಲುಬೆಮೊಳೆಗಳ ಉಳಿಯೆ, ಪೆಟ್ಟೆ ಇದಕೆ ಸಾಟಿಯೆ? ಪೋಟಿಯೆ? (ಬ್ರಾಕ್ಷಿಡಾ. ೩೯-೨). ೨. ಸ್ಪರ್ಧೆ; ಮೇಲಾಟ ; ಹುರುಡು : ಒಂದು ದಿನ ನಗರದ ಜನಗಳನ್ನೆಲ್ಲ ಕರೆದು ಆಯುಧಾಭ್ಯಾಸದ ಪರೀಕ್ಷೆಯನ್ನೂ ಪೋಟಿಯನ್ನೂ ಏರ್ಪಾಡು ಮಾಡಿದರು (ಬ್ಯಾಸಕ್ಷಿ. ೪೮); ಯಾವ ಗರಡಿಯೋರು ಪೋಟಿ ಹಾಕ್ತಾರೋ! (ಶಿಯ್ಯಮ. ೧೫). ೩. ಕೂಡಿಸುವುದು ; ಸೇರಿಸುವುದು : (ಕ). ೪. (ಎರಡು ಭಾಗಗಳು ಸಮವಾಗುವಂತೆ) ಸೇರಿಸುವ ತುಂಡು.—ಚೂರು : ಅದು ಕತ್ತರಿಸಿ ಹೋಗಿತ್ತು, ಪೋಟಿ ಹಾಕಿ ಜೋಡಿಸಿದ್ದಾರೆ (ರೂಢಿ). **ಹೋಟಿ** : ೧. "ಸರಿ, ದೊರೆ . . . ಹೋಟಿ, ಸಂಗಡಂ—ಈ ೧೮ ಸಮಾನಕ್ಕೆ ಪೆಸರ್" (ಶಪಸಾ. ೫೯-೨೯೦) ; ದುರ್ವಾರಂಗೆ ಸುಬಾಹು ಪಾಟಿ, ಹರ್ಯಕ್ಷಂಗೆ ನೀಲರತ್ನಂ ಹೋಟಿ(ರಾಮಾಕ್ಷ. ೦೪೪-೨). 'ಹೋಡು' ಪರಾ. [ದೇ.॥ ತಮಿ. ಪೋಟಿ, ಪೋಟ್ಟಿ; ತುಳು. ತೆಲು. ಪೋಟಿ]

ಪೋಟಿ$_2$ 'ಪೋಟಿ$_1$' ನೋ.

ಪೋಟಿ$_3$ 'ಪೊಡ್ಡಿ' ನೋ.

ಪೋಟಿಕೆ 'ಪೋಟಿಗೆ' ನೋ.

ಪೋಟಿಗಾರ (ನಾ). ಪೈಪೋಟಿಗೆ ನಿಂತವನು; ಸ್ಪರ್ಧಾಳು : ಪೋಟಿಗಾರ ಎಂದರೆ ಹೋರಾಟಗಾರ, ಸ್ಪರ್ಧಿ ಎಂದರ್ಥ (ಶಪಸ. ೦೦೬).

[ಪೋಟಿ$_1$ + — ಗಾರ (< —ಕಾಱ)]

ಪೋಟಿಗೆ, ಪೋಟಗಿ, ಪೋಟಿಕೆ (ನಾ). (ಉಕ) ಜೀವನಾಂಶ; ವರ್ಷಾಶನ: ಎರಡುನೂರುರೂಪಾಯಿಗಳ ಪೋಟಿಗೆಯನ್ನು ಗೊತ್ತುಮಾಡಿ ಈ ತಾಯಿ ಮಕ್ಕಳನ್ನು ಸಾಗಹಾಕಿದ್ದರು (ಕಂಗರೋ. ೦೪); ನಿನಗೆ ಪೋಟಿಗೆ ಕೊಡುವುದು ಕಂದಾಯವನ್ನು ಪೂರ್ತಿಯಾಗಿ ವಸೂಲ್ ಮಾಡುವುದಕ್ಕೆ (ಸಾಪತ್ರಿ. ೬೦). **ಪೋಟಗಿ** : ನನ್ನ ಪೋಟಗಿ ನನಗ ಚೆಲ್ಲು. ನಿನ್ನ ಮನ್ಯಾಗ ನಾ ನಿಲ್ಲೂದಿಲ್ಲ (ಗಂಪಾಯಿ. ೨೫೦) ; ನಿಮಗೆ ಮುಂದೆ ಪೋಟಗೀ ಸಿಕ್ಕೀತು (ಶಪಸ. ೦೦೦). **ಪೋಟಿಕೆ** : ಊರ ಕಂದಾಯ ಹೆಚ್ಚಿಸುವುದು ಶ್ಯಾನುಭೋಗನಿಗೆ ಲಾಭಕರವಾಗಿತ್ತು. ಅದರಿಂದ ಅವನ ಪೋಟಿಕೆ ಏರುತ್ತಿದ್ದಿತು (ಗರುಡಾ. ೦೦೨).

[←ಮರಾ. 'ಪೋಟಗೀ, ಪೋಟಗೇ]

ಪೋಟಿಗೆದಾವೆ (ನಾ). ಜೀವನಾಂಶಕ್ಕಾಗಿ ಮಾಡುವ ದಾವೆ : ಸರಕಾರದ ಮೇಲೆ ಪೋಟಿಗೆದಾವೆ ಮಾಡ್ರಿ (ತಿಡುಗು. ೬).

[ಪೋಟಿಗೆ + ದಾವೆ$_1$ (<ದಾವಾ)]

ಪೋಟಿಬೀಳು 'ಪೋಟೆಬೀಳು' ನೋ.

ಪೋಟು 'ಪೋಟಿ$_1$' ನೋ.

ಪೋಟುಗಾರಿಕೆ (ನಾ). ತುಂಟಾಟ (?) : ನಿಮ್ಮ ಪೋಟುಗಾರಿಕೆಯನ್ನು ಹಾರಿಸಿಬಿಟ್ಟೇನು . . . ಸುಮ್ಮನೆ ಹೋಗಿರಿ (ಶಥಾಪಂ. IV. ೦೯).

[?]

ಪೋಟುಬೀಳು 'ಪೋಟೆಬೀಳು' ನೋ.

ಪೋಟೆ$_1$, ಪೊಟ್ಟೆ, ಪೊಟ್ಟೆ$_2$, ಪೋಟ್ಟೆ$_2$, ಪೋಟು, ಹೊಟ್ಟೆ, ಹೋಟೆ$_1$ (ನಾ). ೧. (ಮರದ) ಪೊಟರೆ; ಡೊಗರು: "ಮರದ ಪೋಟೆಯೆ ಪೊಟಲ್" (ಸಂಜೀವ. ೦೨); ಹುಣಿಸೆಮರದ ಪೋಟೆಯಲ್ಲಿ ದೇಹ ಬೆಂದು ಬೇಯದುದಕ್ಕಳಲೊ (ಶಿತ್ತೀಸ. ೯೯). ೨. ತೂತು ; ರಂಧ್ರ : 'ಪೋಟೆಬೀಳು' ಪರಾ. ೩. ಪೊಳ್ಳು; ಜಳ್ಳು : ಓಡು ಒಡಕು ಹುರುಳಿ ಪೋಟೆ ಹುರಿವಾಕೆಯ ಕೈಸೊತ್ತು (ಭಪಪ. ೩೫-೩೨೬). 'ಪೋಟೆಗೊಂಬು' ಪರಾ. **ಪೊಟ್ಟೆ** : ೧. ನಮ್ಮ ಪೊರೆವರಾರೆಂದು ಬರಕಂಜಿ ಪೊರಮಡಲಮ್ಮದೆ ಪನ್ನೆರಡುವರುಷಂಬರಂ ಪೊಟ್ಟೆಯೊಳಿರ್ದೆವು (ರರ್ಮಾಪ್ಯಾ. ೬-೦೩೬). **ಪೊಟ್ಟೆ$_2$** : ೧. "ಪೊಟಲ್=ಮರದ ಪೊಟ್ಟೆ ; ಪುರಂ" (ಶಮಾ. ಪಂ. ೦); ಪೊಳ್ಳು, ಪೊಟ್ಟೆ (ಹೊಟ್ಟೆ), ಪೊದರು (ಹೊದರು), ಪದರು, ಡೊಗರು (ಶಂಮಹು. ೮೮). 'ಪೊಟ್ಟೆವೋಗು' ಪರಾ. ೩. ಪೊಟ್ಟೆಯ ನುಡಿಗಳಂತಿರಲಿ ನಾರದ (ಮೋಹತ. ೦೨-೩೩). **ಪೋಟ್ಟೆ$_2$** : ೨. 'ಪೋಟಿಬೀಳು' ಪರಾ. **ಪೋಟು** : ೧. ವನಪಾಲಕರು. . .ಎಲ್ಲವನು ಮಾಮರನ ಪೋಟೊಳಿಯೊಳೆ[ಳ]ಹಾಕಲು (ಪಪಮೋ. ೨೨-೦೯). ೨. 'ಪೋಟುಬೀಳು' ಪರಾ. ೪. (ಕರಾ) ಮೈಥುನಕ್ರಿಯೆ. **ಹೊಟ್ಟೆ** : ೨. 'ಹೊಟ್ಟೆಹೋಗು' ಪರಾ. **ಹೋಟೆ$_1$** : ೧. "ಹೋಟೆ[ಪಾಠಾಂ. ಕೋಟರಂ] ಪಿತ್ತಲೆಂಬಿನಿತುಂ ನಿಷ್ಕುಟಮಕ್ಕುಂ" (ನಾನಾರ. ೦೪೩) ; ಪಟವೃಕ್ಷದ ಘಟದ ಹೋಟೆಯಲ್ಲಿ ತತ್ತಿಯನಿಕ್ಕಿತ್ತೊಂದು ಗಿಣಿ (ಪುಪುಗುಂ. ಶ. ೨೫೬-೪೬) ; ತೋಟದ ಕಬ್ಬಿಂದ ಹೋಟೆಯ ಜೇನಿಂದ. . .ಬಲ್ಲವಳ ಕೂಟವೇ ಲೇಸು (ಸರ್ವಜ್ಞ. ೦೭೦೦). ೨. ಮಣ್ಣ ಹೋ[ಪಾಠಾಂ. ಹೊ]ಟೆ ಮಳೆಗೆ ಮುಚ್ಚುವುದಲ್ಲದೆ ಕಲ್ಲ ಹೋ[ಪಾಠಾಂ. ಹೊ]ಟೆ ಮುಚ್ಚುವುದೆ (ಗುಪ್ತಮಂ.ಶ. ೨೧೬-೩೬); ಅನಲನ ಸತಿಯ ಬಲದ ಮೂಗಿನ ಹೋಟೆಯಂ. . .ಕೊಯ್ಯುತ್ತ (ವೀರವಿ. ೦೨-೬೦). ೩. ಹೊರಗೆ ನೋಡಿದರೆ ಕೋಟೆ ಒಳಗೆ ನೋಡಿದರೆ ಹೋಟೆ (ಗಾದೆ).

[ದೇ.॥ ತಮಿ. ಪೋಟು ; ಮಲ. ಪೋಡು ; ಕೊಡ. ಪೋಟೆ ; ಕೋಲಾ. ಬೋಟ್]

ಪೋಟೆ$_2$ (ನಾ). ೧. ಮೀಸೆ, ದಾಡಿ ಮುಂತಾದ ಪುರುಷಲಕ್ಷಣಗಳುಳ್ಳ ಹೆಂಗಸು ; ಖೋಜಾ : "ಪೋಟಾ—ಸ್ತ್ರೀಪುಂಸಲಕ್ಷಣಾ—ಸ್ತ್ರೀಲಕ್ಷಣವೂ ಪುರುಷಲಕ್ಷಣವೂವುಳ್ಳ ಶಿಖಂಡಿಯುಂಥಾವಳ ಹೆಸರು" (ಸಿದ್ಧಾಂತಿ. ೦೭೧). ೨. ನೀರು ಹೊರುವ ಚೇಟಿ.—ಸೇವಕಿ ; ಕುಂಭದಾಸಿ : "ಪೋಟಾ . . . ದಾಸೀ, ಕುಟಹಾರಿಕಾ—ಈ ೫ ತೊಟ್ಟು" (ಹಲಾಯು. ೮೦-೩೩೯) ; "ನೀರಡಿಕೆ ಪೋಟೆಯೆನಿಸಿಕ್ಕು" (ಮಂಗರಾ. ೯೦-೪). [ಸಂ. ಪೋಟಾ]

ಪೋಟೆಗೊಂಬು (ನಾ). ಟೊಳ್ಳು ಕೊಂಬೆ ; ಪೊಳ್ಳಾದ ಟೊಂಗೆ : ಪೋಟೆಗೊಂಬುಗಳ ಪಳಮರದಂತೆ ತಿರುಳಿಲ್ಲದೋಟೆಗಳ ತಿಂತ್ರಿಣೀಫಲದಂತೆ ಗುಳಿಕ ಕರ್ಕೋಟಕಾದಿಗಳೊಡಲ್ಪೊಳ್ಳಾದುವು (ಶೈಮಾಕಾ. ೨೪-೩೫).

[ಪೋಟೆ$_1$ + ಕೊಂಬು$_1$]

ಪೋಟೆಬೀಳು, ಪೋಟಿಬೀಳು, ಪೋಟುಬೀಳು (ಕ್ರಿ). ತೂತು ಬೀಳು; ರಂಧ್ರವುಂಟಾಗು : ಆಕಾಶ ನೋಡಿ ನೋಡಿ ಅವನ ಕಣ್ಣು ಪೋಟೆಬಿದ್ದು ಹೋಗುತ್ತದೆ (ಹಳ್ಳಿಪಾ. ೩೦). **ಪೋಟಿಬೀಳು** : ಅವನ ತಲೆಯು ಅದರ ಏಣಿನ ಸಲಾಕೆಗಳಿಗೆ ಬಲವಾಗಿ ಬಡಿಯಲು, ಪೋಟಿಬಿದ್ದು ರಕ್ತಸುರಿಯಲಾರಂಭಿಸಿತು (ಅಂಬಿಶೆ. ೮೦). **ಪೋಟುಬೀಳು** : ಕೆಳಕ್ಕೆ ಬಿದ್ದ ರಭಸಕ್ಕೆ ಅವನ ತಲೆ ಪೋಟುಬಿದ್ದಿದೆ (ರೂಢಿ).

[ಪೋಟೆ$_1$ + ಬೀಳು$_1$ (<ಬೀಳ್$_1$)]

ಪೋಟೆಹೋಗು, ಪೊಟ್ಟೆವೋಗು, ಹೊಟ್ಟೆಹೋಗು (ಕ್ರಿ). ೧.= ಪೋಟೆಬೀಳು : ಕಣ್ಣು ಪೋಟೆಹೋದ ಜಡನಂತೆ (ಭಕ್ತಿಸ. III. ೪). **ಪೊಟ್ಟೆವೋಗು** : ೧. ಕೊಂಬೊಣಗಿರ್ದ ಪೊಟ್ಟೆವೋದೊಱಗಿದ ವೃಕ್ಷದಿಂದಱುವುದಾಯೆಡೆಯೊಳ್ ಜಳಮಾಗದೆಂಬುದಂ (ಲೋಕೋಪ. ೫-೪) ; ಪೊಟ್ಟೆ[ಪಾಠಾಂ. ಪೋದೆ]ವೋದ ಮರದಂತೆ ಕರಂ ನರೆಯೇಱದಿಟ್ಟು ಮುಪ್ಪಡಸದ ಮುನ್ನಮೇಕೆ ಮನುಜರ್ಮುಱದಿಕ್ಕರೊ ಮೋಹಮಲ್ಲನಂ (ಮಲ್ಲಿಪು. ೧೩-೯೪). ೨. ಹೊಪ್ಪಳೆಯುಂಟಾಗು ; ಬೊಬ್ಬೆಯೇಳು ;

ಪುಟ್ಟಿದ ದಿನ ಮೊದಲಾಗಿ ಧರೆಯೊಳಡಿಯಿಟ್ಟಱಿಯರು ಬಾಲೆಯರು ಬಟ್ಟೆಯೊಳಗೆ ನಡೆಯಲು ಪಾದತಳಗಳು ಪೊಟ್ಟೆಪೋಪುದು ತಾನರಿದೆ (ಅಂಜನ. ೯-೬೫). **ಹೊಟ್ಟೆಹೋಗು :** ೧. ಮಂಜುನಾಥಯ್ಯನವರ ಕಿವಿ ಮರದ್ದಾಗಿದ್ದರೆ ಎಂದೇನೆ ಹೊಟ್ಟೆಹೋಗುತ್ತಿತ್ತು (ಸರಸ. ೦೦).
[ಪೋಟ್ಟೆ$_1$ + ಹೋಗು$_1$ (<ಪೋ$_1$)]

ಪೋಟ್ಲೀಸು 'ಪೋಲ್ಟೀಸು' ನೋ.

ಪೋಡಣೆ 'ಪೊಡ್ಡಣ' ನೋ.

ಪೋಡಿ$_1$ (ನಾ). ಭಯ ; ಹೆದರಿಕೆ : ಪೂವಿ ಏನು ಮಾಡಿಕೊಳ್ಳುವಳೋ ಎಂದು ನನಗೆ ಪೋಡಿ ಆಗುತ್ತೆ (ಹುಂಹಾ. ೦೯೩) : ಥೂತ್, ಪೋಡಿ ಪುಕ್ಕೇಲಗಳೇ, ಹುಟ್ಟಿದ ಮನುಷ್ಯ ಸಾಯದೇ ಕೂಡುತ್ತಾನೆಯೇ ? (ಸರಾಪ. ೬೦). [ದೇ. ॥ ತುಳು. ಪೋಡಿಗೆ ; ಕೊಡ. ಪೋಡಿ]

ಪೋಡಿ$_2$ (ನಾ). ೧. ಹಣ್ಣು ಮುಂತಾದುವುಗಳ ಚೂರು, — ತುಂಡು : (ಕ). ೨. ಅಡಕೆಯ ಚೂರು ; ಚೂರಡಿಕೆ : ಪೋಡಿಭಾಗದ ಬೆಳ್ಳೆಲೆಯ ಮೆಲ್ಲುತೆ ಸಖಿಗೂಡಿ ಬಂದಳು ದಿವಾಣಕ್ಕೆ (ಮೋಹತ. ೨೬-೬) ; ಹರ್ಮ್ಯಾಗ್ರವನಡರ್ದು ಪೋಡಿಯ ಭಾಗ ಬೆಳ್ಳೆಲೆಯ ಸ್ವೀಕರಿಸಿ ಮಾತಾಡಿದಳ್ ಮಂತ್ರಿಜೆಯೊಡನೆ (ಮೋಹತ. ೨೮-೩೩). ೩. "ಪಟ್ಟೇದಾರನ ಅರಿಕೆಯಿಂದ ಅಥವ ಕೋರ್ಟು ಅಪ್ಪಣೆ ಪ್ರಕಾರ ಮತ್ತ್ಯಾಪದಾದರೂ ಕಾರಣದಿಂದ ನಂಬರುವೊಡೆಯಬೇಕೆಂದು ಅಪ್ಪಣೆಯಾದರೆ ಹಾಗೆ ವೊಡೆಯಬೇಕು. ಇದಕ್ಕೆ ಪೋಡಿಯೆಂದು ಹೆಸರು" (ಕೂಮಿಅ. ೩೩). 'ಪೋಡು' ಪರಾ. [< ಪ್ರಾ. ಪೋಡಿ, ಪೋಡೀ]

ಪೋಡು (ನಾ). ೧. ಸೀಳುವಿಕೆ; ಕಡಿಯುವಿಕೆ: 'ಪೋಡುಂಗಾಱ' ಪರಾ. ೨. ಪಾಲು; ವಿಭಾಗ : ಜಮೀನಿನ ಪೋಡು ಮಾಡಿಸಲು ತಾಲ್ಲೋಕುಕಚೇರಿಗೆ ಹೋಗಬೇಕು (ರೂಢಿ). 'ಪೋಡ್' ಪರಾ. [<ಪ್ರಾ. ಪೋಡ್=ಸೀಳು./ತೆಲು. ಪೋಡು=ಜಮೀನಿನ ತುಂಡು]

ಪೋಡುಂಗಾಱ, ಪೋಡುಗಾಱ (ನಾ). ಸೌದೆ ಕಡಿಯುವವನು; ಮರ ಕತ್ತರಿಸುವವನು : ನೀಂ ಕೊಂಕಣನಾಡೊಳ್ ತುಂಗಭದ್ರನೆಂಬ ಪೋಡುಂಗಾಱನಯ್ ನೀಂ ಕುಮ್ಮರಿಯಂ ಸುಟ್ಟು ಪೋಗಿ ಪೊಟ್ಟಡೆ ಬಂದು ನೋಡುವನ್ನೆಗಂ (ಪಡ್ಡಾರಾ. ೧೬೦-೦) ; ಬಳೆದು ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾಱನಂತೆ (ಸಂಪಶಾ. ೦೨-೦೬೭ ಪ). **ಪೋಡುಗಾಱ :** ಒಂದೇ ಕುಠಾರದಿಂದಡವಿಯಂ ಕಡಿವಂತಿರೆ ಪೋಡುಗಾಱನೆನ್ನೊಂದೆ ಭುಜಾಸಿಯಿಂ ಶಬರಕೋಟಿಯನಿಕ್ಕಿ ಪಿಶಾಚಕೋಟಿಗಾನಂದಮನುಂಟುಮಾಟ್ಟಿಂ (ಸಂರಾಮಾ. ೯-೯೦). [ಪೋಡು + — ಕಾಱ]

ಪೋಡುಗಾಱ 'ಪೋಡುಂಗಾಱ' ನೋ.

ಪೋಣಪಟ್ಟು 'ಪೌಣಪಟ' ನೋ.

ಪೋಣಿಕೆ 'ಪವಣಿಕೆ' ನೋ.

ಪೋಣಿಗೆ 'ಪವಣಿಗೆ' ನೋ.

ಪೋಣಿಸು 'ಪವಣಿಸು' ನೋ.

ಪೋತ$_1$ 'ಪೋಂತು' ನೋ.

ಪೋತ$_2$ (ನಾ). ೧. ಯಾವುದಾದರೂ ಪ್ರಾಣಿಯ ಮರಿ ; ಶಾಬ : ವಿಯೋಗಿಗಣಾಕೂತ ಕುರಂಗಪೋತ ಭಯಕೃತ್ಕಂಠೀರವಂ (ಅಜಪು. ೬-೯೨); ಪಕ್ಷಂಗಳೊಳ್ ಪಟ್ಟನಿತುಂ ಪೋತಂ[ಪಾಠಾಂ. ಪೊತ್ತಂ]ಗಳಂ ವಿಕ್ಷಿಸುತೆ (ಶಾಂತೀಶ್ವ. ೧೧-೯೬); ಕಲ್ಲಿಯಂ ಚಿಕ್ಕನೆ ತೂತುಗೆಯ್ದು ಗಿಳಿಗಳ್ಕರೆತಂದವು ತಮ್ಮ ಪೋತಮಂ (ಹಮ್ಮೀರ. ೪-೬೨). ೨. ಶಿಶು; ಮಗು : "ಬಾಳಃ, ಪಾಕಃ, ಅರ್ಭಕಃ, ಗರ್ಭಃ, ಪೋತಃ . . . ಡಿಂಬಃ — ಈ ೯ ಮಗುವು" (ಹಲಾಯು. ೮೩-೩೯೮); ಉರುವೈರಾಗ್ಯಂ ಸಾತಿಶಯಮೆನಿಸಿ ಬಳೆಯಲ್ ಪೋತಂ ತದ್ಬಾಲನೈದೆ ಬಳೆಯುತ್ತೆಸೆದಂ (ಉದ್ಯಪ. ೦೦-೩೫). ೩. ಚಿಕ್ಕ ಹಡಗು; ದೋಣಿ; ನಾವೆ : "ಪೋತಮಾ ಪ್ರವಹಣಂ ಭೈತ್ರಮೆನೆ ಹಡಗಕ್ಕು" (ಮಂಗರಾ. ೧೨೦-೯) ; ಪಲಿಬರರಸುಗಳ್ . . . ಧರ್ಮಪೋತಚ್ಯುತರನವಧಿಸಂಸಾರವಾರಾಶಿಮಧ್ಯಾಸ್ಪದಸರ್ವಗ್ರಾಸಿಭೀಮಾಂತಕವದನಮಹಾಗರ್ತದೊಳ್ ಮಗ್ನರಾದರ್ (ಅದಿಪು. ೯-೫೮); ಆ ತಡಿಗಿರದೊಯ್ದಿಕ್ಕುವ ಪೋತದವೋಲ್ (ಸಮಪ. ೭-೩೬); ಪೋತಯಾತ್ರಿಕಜನಂ ಪುಗಲೊಲ್ಲದೆ ವಾರ್ದ್ದಿಮಧ್ಯಮಂ (ಎಕ. XI, ದಾವಣ. ೯೩-೫೩; 1164). ೪. ಹತ್ತು ವರ್ಷ ವಯಸ್ಸಿನ ಆನೆಯ ಮರಿ : ಎಸೆದುದು ಬಳಸಿರೆ ಪೋತಕಲಾಪವಲ್ಲಿ ಯೂಥನಾಥಂ (ಪುಸ್ಪಪು. ೫-೮೩). ೫. ಚಿಗುರು. ೬. ಮನೆಯ ನಿವೇಶನ ಅಥವಾ ತಳಪಾಯ. [ಸಂ.]

ಪೋತಕ (ನಾ). ೧. ಯಾವುದಾದರೂ ಪ್ರಾಣಿಯ ಮರಿ : ಮನಂ ಬೆರ್ಚದೆ ಸಿಂಹಪೋತಕಮನೋವಲುಮಾಕೆಯ ದೋಹಳಂ ಕರಂ ಪೆರ್ಚಿದುದು (ಹಂಪಭಾ. ೦-೦೯೨) ; ಮುತ್ತಿನ ಸೂಸಕಂಗಳಂ ಬಾಳಮೃಣಾಳಮೆಂದು ಕರ್ದುಕಲ್ ಬಗೆಗುಂ ಕಲಹಂಸಪೋತಕಂ (ಪಂರಾಮಾ. ೦-೦೨೬). ೨. ಎಳೆಯ ಗಿಡ; ಸಸಿ : ಚೂತಪೋತಕಂ ನನೆಯಿಂ ರಂಜಿಸುವಂತಿರೆ ತನಯಂ ರಂಜಿಸಿದಂ (ಜಗಪ. ೩-೩೯). [ಸಂ.]

ಪೋತಕಿ (ನಾ). ಒಂದು ಬಗೆಯ ಸಸ್ಯ; ಬಸಲೆ : "ಪೋತಕಿ ಮಂಥಗಾಳಿಯೆನೆ ಬಸಲೆಯಕ್ಕು" (ಮಂಗರಾ. ೯೯-೯೬). [ಸಂ. ಪೋತಕೀ]

ಪೋತಗ (ನಾ). ಒಂದು ಕ್ಷುದ್ರದೇವತೆಯ ಹೆಸರು : ಚವಡಿಕೆ ಮಾರಿ ಮಸಣಿ . . . ಕೊಲ್ಲುವ ಪೋತಗನು ಕಚ್ಚಿನ ಗಡಿಗೆಮ್ಮ (ಪಿಸಾಸು. ೫೬-೨).
[?]

ಪೋತರ್ (ಕ್ರಿ). ೧. ಹೋಗು ; ಗಮಿಸು ; ಸಾಗು : ಅರ್ಕೋದಯ ಭಯವಶದಿಂ ಪಾಣ್ಬೆ ಪೋತಂದಳೊರ್ವಳ್ (ಲೀಲಾವ. ೩-೦೯) ; ಹರಿ ಪೋತಂದಡಿವಜ್ಜೆಗಳ್ ಬಯಲೊಳಿಲ್ಲಿಂದಿತ್ತವಿನ್ನಿಲ್ಲ (ಜಗಪ. ೫-೩೦); ಕಲಿ ಅಙ್ಗನ್ಕಣ್ಡ ನಾರಾಯಣನ್ ತನ್ನ ಮನೆಯನ್ಕನ್ನಮಿಟ್ಟು ಪುಗುತನ್ದೊಡೆ ಅಱಿದು ಪೊರಮಟ್ಟು ಪೋತ(ಂ)ನ್ದು ಕಡಿತಲೆಯಿನ್ದಟ್ಟಿ ನಾಲ್ವರಾನಿಱಿದೊನ್ (ಸೌಇಇ. IX—1. ೫-೦೨ ; ?). ೨. ಹೊರಗೆ ಬರು; ಹೊರಟು ಕೊಳ್ಳು ; ಮುಂಬರು : ಉಸಿರೊತ್ತಿಂ ತಿದಿಯಂತಿರೊತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ (ಪಂಪಭಾ. ೦೨-೦೫೦); ಇಡೆ ಕಾಲಂ ಬಲಿಸಿಲ್ಕಿ ಪಲ್ಗಿರಿದು ಕಣ್ಪೋತಂದು ಸುಯ್ಗೆಟ್ಟು ಸೀರ್ಪಡಿಸುತ್ತಿರ್ದ ಧರಾಮರರ್ ನಡುಗೆ ಬಿಟ್ಟಿಲ್ಲಂ ಶರಣ್ ದೇವ ನಿಮ್ಮಡಿಯೊಂದಿರ್ಪುದುಂ (ವೇಮಿಪು. ೫-೨೯). [ಪೋ$_1$ + ತರ್]

ಪೋತವಣಿಜ (ನಾ). ೧. ಹಡಗಿನ ಮೂಲಕ (ದೇಶವಿದೇಶಗಳೊಡನೆ) ವ್ಯಾಪಾರ ಮಾಡುವವನು ; ಸಮುದ್ರವ್ಯಾಪಾರಿ : "ಸಾಂಯಾತ್ರಿಕಃ, ಪೋತವಣಿಕ್—ಈ ೨ ಭೈತ್ರದ ವ್ಯವಹಾರಿ" (ಹಲಾಯು. ೦೦೬-೩೩) ; ಪೋತವಣಿಜರ್ತಡಿಗೆಯ್ದು ತೃಷಾವಿಷಾದಮಂ ಕೊಟಚೆಯ ನೀರೊಳೇಕಳೆಗುಮೆಂದೊಡೆ (ಜಕಪ. ೦-೩೭). ೨. ಹಡಗಿನ ವ್ಯಾಪಾರ ಮಾಡುವವನು. [ಸಂ. ಪೋತವಣಿಜ್]

ಪೋತವಾಹ (ನಾ). ಹಡಗನ್ನು ನಡೆಸುವವನು : ನಾವಿಕ ; ಕಲಾಸಿ : "ನಿಯಾಮಕಾಃ, ಪೋತವಾಹಾಃ, ೨ ಹಡಗಿನ ಕಂಭದ ಮೇಲೆಯಿದ್ದು ಹಡಗು ನಡಿಸತಕ್ಕ ಉಪಾಯಗಳನ್ನು ಹೇಳುವವರ ಪೆಸರುಗಳು" (ಸಿದ್ಧಾಂತಿ. ೭೯). [ಸಂ.]

ಪೋತವಾಹಿ (ನಾ). = ಪೋತವಾಹ : "ತತ್ಪೋತವಾಹಿ ನಾವಿಕನಕ್ಕುಂ" (ವಸ್ತುಕೋ. ೨೩-೦೦). [ಸಂ. ಪೋತವಾಹಿನ್]

ಪೋತಾಧಾನ (ನಾ). ಮರಿಮೀನುಗಳ ಮೊತ್ತ : "ಕ್ಷುದ್ರಾಂಡಃ, ಮತ್ಸ್ಯಸಂಘಾತಃ, ಪೋತಾಧಾನಂ — ಈ ೩ ಕಿಱಿಯ ಮೀನ ಮೊತ್ತಂ" (ಹಲಾಯು. ೦೦೯-೩೯). [ಸಂ.]

ಪೋತಿ 'ಪೌತಿ' ನೋ.

ಪೋತು 'ಪೋಂತು' ನೋ.

ಪೋತುಂಗಲ್ಲು (ನಾ). ಒಂದು ಸ್ಥಳದ ಹೆಸರು: ತೆಂಬ್ಯಣದೆಸೆ ಗುಡ್ಡೆಗಲ್ಲು . . . ಪಡುವಣದೆಸೆ ಪೋತುಂಗಲ್ಲು ಕೊಮರುಲ ಪಱ್ರು ಕಾರ್ಮ್ಮುಗಿಲ ಪುಣುಸೆ (ಎಕ. XII. ಸಿರಾ. ೩೯-೩೬ ; 878). [?]

ಪೋತ್ರ (ನಾ). ೧. ಹಂದಿಯ ಮೂತಿ,—ಮಂಸುಡಿ: ದಬ್ಬಣದಂತೆ ನಿಬ್ಬಣವಾದ ಕೂದಲ್ಗಳೊಳ್ ಕೋದ ಪೆಣಂಗಳಿಂ ಪೋತ್ರಮೆಯ್ದದೆ ಪಡೆಯಂ ಪಿಡಿದು ಪೊಡೆಯೊಳ್ಪೂಂಕುವಂತೆಯುಂ . . . ಮೊಗಮನೆತ್ತಿ ಮೆಯ್ಯಂ ನಿಮಿರ್ದು ಅದಿರದಿದಿರೇಱುವೆಕ್ಕಲವಂದಿಯಂ ಕಂಡು (ಲೀಲಾವ. ೬-೦೪ ಪ) ; ಪೋತ್ರಮನೆತ್ತುತಮತ್ತಲಿತ್ತಲುಂ ಕೆಂದದೆ ನೋಡುತಾಲಿಸುತೆ ಮಸ್ತಿನ ಕಾಯದ ಸೊಕ್ಕಿದೆಕ್ಕಲಂ ಗೊಂದಣದೊಳ್ ವಿರಾಜಿಸಲ್ (ಹಾಲಾಸ್ಯ. ೩-೦೩-೨೩). ೨. ನೇಗಿಲಿನ ತುದಿ; ರೆಂಟೆಯ ಗುಳ: "ಹಂದಿ ನೇಗಿಲ ಮುಖಗಳೊಳ್ ಪೋತ್ರಮೆಂಬುದು" (ಮಂಗರಾ. ೦೪೩-೨೩); ಕಡುಗಾಯ್ದ ನೆಲದೊಳುಟ್ಟಂದೆಡೆವಡೆಯದೆ ಮೇಲೆ ಮೇಲೆ ಪರಿವುದು ಪೋತ್ರಂ (ಪೀಠಿಮಂ. ೮-೨೦೦). ೧, ೨: ಆ ಮಹಾವನಂ . . . ಕ್ಷೇತ್ರಾಕರ್ಷದಂತೆ ಪೋತ್ರಿಪೋತ್ರಾಹತಧರಣಿತಳಮುಂ ಗೃಹೀತಗೋಲಾಂಗೂಲಮುಂ . . . ಆಗಿಯುಂ (ಶಂದ್ರಪು. ೩-೩೨ ಪ). ೩. ಪಿಕಾಸಿ; ಗುದ್ದಲಿ. ೪. ಸಿಡಿಲು. ೫. ಹಡಗು; ನೌಕೆ. ೬. ವಸ್ತ್ರ; ಉಡುಪು. [ಸಂ.]

ಪೋತ್ರಿ (ನಾ). ೧. ಹಂದಿ; ವರಾಹ: "ಕೋಳಃ, ಕ್ರೋಡಃ, ಸೂಕರಃ, ವರಾಹಃ, ಪೋತ್ರೀ . . . ಕಿರಿಃ—ಈ ರ ಹಂದಿ" (ಹಲಾಯು. ೩೯-೬೩); ಒಂದು ಪಲ್ವಲಪ್ರಾಂತದೊಳ್ ಕಾಂತಾರಕಳಭಪ್ರಾಯಪೋತ್ರಿಸಂತಾನದೊಳಗೆ . . . ಸೊಗಯಿಸಿತ್ತುತ್ಕೇಕರಂ ಸೂಕರಂ (ಶಂದ್ರಪು. ೩-೩೯ ಪ); ಆ ಮಾಯಾಪೋತ್ರಿ ಧಾತ್ರೀಭರಮನಱಸಿ ತುಳ್ಕಾಡಿದಂದು (ಸೌಇಇ. IV. ೨೬೬-೦೦ ; 1380); ಕೌಶಿಕಂ ನಿರ್ಮಿಸಿದ ಪೋತ್ರಿಯಂ ಕಂಡು ಭಟರುಱೆ ಕೆರಳುತೆ . . . ಬೆಂಬತ್ತೆ ಸಿಕ್ಕದೆ ಬಂದು ಮುನಿಯ ಮಱೆಬಿದ್ದುದಾ ಪಂದಿ (ರಾಘಶ. ೩-೨೯). ೨. ನೇಗಿಲು; ರೆಂಟೆ. ೧, ೨: ಆ ಮಹಾವನಂ . . . ಕ್ಷೇತ್ರಾಕರ್ಷದಂತೆ ಪೋತ್ರಿಪೋತ್ರಾಹತಧರಣಿತಳಮುಂ ಗೃಹೀತಗೋಲಾಂಗೂಲಮುಂ . . . ಆಗಿಯುಂ (ಶಂದ್ರಪು. ೩-೩೨ ಪ). [ಸಂ. ಪೋತ್ರಿನ್]

ಪೋತ್ರಿಪ (ನಾ). ಹಂದಿಗಳ ಸಮೂಹದ ಮುಂದಾಳು: ಭೂವರನಂದು ತೇರನಡರಲ್ಕೋರ್ಚಿತ್ತದಂ ಪೋತ್ರಿಪಂ (ಹಾಲಾಸ್ಯ. ೩-೦೩-೪೬). [ಸಂ.]

ಪೋಥಿ (ನಾ). ೧. ಪುಸ್ತಕ; ಗ್ರಂಥ. ೨. ಪವಿತ್ರಗ್ರಂಥ; ಧಾರ್ಮಿಕ ಗ್ರಂಥ: ನನ್ನ ಕಾದಂಬರೀ ಏನು, ತುಕಾರಾಮನ ಪೋಥೀ ಅಲ್ಲಾ (ದೀಶಪ. II. ೫); ಒಂದುದಿವಸ ಗಂಗವ್ವ ದೇವರ ಮುಂದೆ ಪೋಥಿ ಹಿಡಿದು ಕೊಂಡು ಕುಳಿತಾಗ (ಗಂಮಾಯಿ. ೨೫೦).

[←ಹಿಂ. ಮರಾ. ಗುಜ. ಪೋಥೀ; ಬಂಗಾಲಿ. ಪುಥೀ; ಸಿಂಧಿ. ಪೋಥೀ, ಪೋಥು./ಪ್ರಾ. ಪೋತ್ಥಯ]

ಪೋಥೀಭಕ್ತಿ (ನಾ). ೧. ಪವಿತ್ರಗ್ರಂಥದ ಮೇಲಿರುವ ಶ್ರದ್ಧೆ,—ವಿಶ್ವಾಸ: 'ಪೋಥೀಭಕ್ತಿ'ಯಿಂದಾಗಿ ಉಂಟಾಗುವ ಅ—ಪ್ರಮಾಣಿತ ಶ್ರದ್ಧೆಯು, ಮುಖ್ಯವಾಗಿ, ನಮ್ಮಲ್ಲಿ ಬೆಳೆದು ಬಂದಿರುವ ದ್ವಿಧಾಭಾವದ ಮೂಲಕಾರಣವಾಗಿದೆ (ಕರ್ಣಾಟ. XV. ಮುನ್ನುಡಿ). ೨. (ಅಲಂ) ಮುದ್ರಿತವಿಷಯಗಳ ಮೇಲಿರುವ ಅತಿಶ್ರದ್ಧೆ. [ಪೋಥಿ+ಭಕ್ತಿ]

ಪೋದ 'ಪೋ₁' ಪರಾ.

ಪೋದಗೆ₁ (ನಾ). (ಶುಭಾಶುಭಫಲಗಳನ್ನು ಸೂಚಿಸುವುದೆಂದು ನಂಬಲಾದ) ಒಂದು ಬಗೆಯ ಪಕ್ಷಿ: "ಪೋದಗೆ—ಪೋತಕ" (ತದ್ಭಕೋ. ೨೬); ಕೋಗಿಲೆ ಚಾದಗೆ ಪೋದಗೆ . . . ಬಲಾಕೆ ಲಾವುಗೆ ಸೇನಂ (ಕಾವ್ಯಸಾ. ೦೦೪೪ ಶೂದ್ರಕ); ಪಿಂಗಲಿ ಪೋದಗೆ . . . ಗೂಗೆಯಾದಿಯಾದ ಖಗಂ ರಾಜಾಂಗಣದೊಳ್ ಚರಿಸುವೊಡೆ ಸರಂಗೆಯ್ವೊಡೆ ತಡೆಯದಾ ಗೃಹಂ ಪಾಟಕ್ಕುಂ (ಲೋಕೋಪ. ೪-೬೩); ನಲವಿಂ ಪೋದಗೆಗಳ ಪಿಂಗಲೆಗಳ . . . ದನಿಯಿಂ ಲುಬ್ಧಕರುಲಿಯಲ್ ಖಗವಿತತಿ ಬೆರ್ಚಿ ಪಾಱಿದುವಾಗಳ್ (ತ್ರಿಪುಪ. ೨೬-೬೯). [<ಸಂ. ಪೋತಕ]

ಪೋದಗೆ₂ (ನಾ). ಒಂದು ಬಗೆಯ ಸಸ್ಯ; "ಬಸಲೆಗಿಡ" (ಪಶಕಿ. ೪. II. ೬). [ಸಂ. ಪೋತಕೀ]

ಪೋದಿಯಮ್ಮ (ನಾ). ಒಬ್ಬಾತನ ಹೆಸರು: ಈ ಕಲ್ಲಂ ಚಿಕ(ಂ)ಣ್ನ × × × ಯಂ ಪೋದಿಯಮ್ಮ ಮಾಡಿಸಿದೋನ್ (ಸೌಇಇ. XI—1. ೦೦-೩೪ ; 864). [ಪೋದಿ₀ + ಅಮ್ಮ₁]

ಪೋದೆ, ಬೋದು₂ (ನಾ). ೧. ಟೊಳ್ಳು; ಪೊಳ್ಳು: 'ಪೋದೆವೋಗು' ಪರಾ. ಬೋದು₂: ೨. ಕಂಡಿ; ತೂತು; ರಂಧ್ರ: ಕೀಟಕವು ಸಣ್ಣದಿದ್ದಾಗ ಎಲೆಗಳಲ್ಲಿ ಬೋದು ಮಾಡುತ್ತದೆ (ಕೀಟಿಸಿ. ೪೯). ೩. ಸಣ್ಣ ತಗ್ಗು,—ಹಳ್ಳ: ತೋಟದಲ್ಲಿ ಮೆಣಸಿನ ಗಿಡಗಳನ್ನು ಹಚ್ಚುವದಕ್ಕೆ ಬೋದುಮಾಡಿ . . . ಆ ಬೋದಿನ ತಳದಲ್ಲಿ . . . ಅರಿಷಿಣದ ಬೀಜವನ್ನು ಊರಿ ನೀರು ಬಿಡಬೇಕು ಮತ್ತು ಬೋದು ನೆನೆದು ಹಸಿಯಾದ ಮೇಲೆ ಬೋದಿನ ತಲೆಯ ಮೇಲೆ ಒಂದೂವರೆಮೊಳ ಅಂತರವಾಗಿ ಎರಡೆರಡು ಮೆಣಸಿನ ಅಗಿಗಳನ್ನು ಹಚ್ಚಬೇಕು (ಕೃಷಿಪ್ರ. ೦೮೬). 'ಪೋಟೆ₁' ಪರಾ. [ದೇ. ॥ ತಮಿ. ಪೋತ್ತು, ಪೊತ್ತು]

ಪೋದೆವೋಗು (ಕ್ರಿ). (ಒಣಗಿ) ಟೊಳ್ಳಾಗು; ಪೊಳ್ಳುಬೀಳು: ಕೋಡಗದಂತೆ ಶಾಖೆಯೊಳ್ ನಡೆಯದೆ ಪೋದೆ[ಪಾಠಾಂ. ಪೊಟ್ಟೆ]ಪೋದ ಮರದಂತೆ ಕರಂ ನರೆಯೇಱದಿಟ್ಟು ಮುಪ್ಪಡಸದ ಮುನ್ನಮೇಕೆ ಮನುಜರ್ಮುಱಿದಿಕ್ಕರೊ ಮೋಹಮಲ್ಲನಂ (ಮಲ್ಲಪು. ೦೩-೯೪).

[ಪೋದೆ + ಪೋಗು₁ (< ಪೋ₁)]

ಪೋದೆಸೆ (ನಾ). ಹೋಗುವ ದಿಕ್ಕು: ನೃಪಾಳನಳವಂ ನಾವಿನ್ತು[ಟೆ]ನ್ದೆಯ್ದಿ ಬಾಯ್ವಲದಿಂ ಬಣ್ಣಿಸದಿರ್ದೆ[ಳ]ಣ್ನ ಚಲಮುಂ ಕೊಣ್ಡಾಡಿ ಮಾಱಾಂತು ಮುಂ ತಲೆಸುತ್ತಲ್ನೆಲೆಪೋಗಿ ಪೊರ್ದ್ದಲ್ಪಱೇ ಕಾಲೂಱಲ್ನೆಲಂ ಱೆಂಬು[ದೋ]ಗಲಣಂ ಪೋದೆಸೆ ಇಲ್ಲೆನೆಲ್ಕಳಿದರಾತಿವ್ರಾತಮೇಂ ಪೇಳದೇ (ಕಇಲ. ೨-೨-೪೩; 1058). [ಪೋ₁ + ದೆಸೆ₂]

ಪೋದೊಱೆ (ಕ್ರಿ). ಹೋಗಲು ಬಿಡು; ಹೋಗಬಿಡು: ಈ ಪೊಟ್ಟು ಪೋದೊಱೆದ ಯಜ್ಞೀಯಾಶ್ವದ ಬೆಂಬಱಪೋಗಿ ನೆರಂಗೂಡುವ ನಾಡೆಱೆಯರ ಕೊಟ್ಟಜಮನೊಟ್ಟಯಿಸಿಯುಂ (ರಾಮಾಶ್ವ. ೪೭-೧).

[ಪೋ₁ + ತೊಱೆ₁]

ಪೋನಿ (ನಾ). ಸಣ್ಣ ತಳಿಯ ಕುದುರೆ: ತನ್ನ ತಂದೆಯವರು ಐದನೆಯ ವರ್ಷದಲ್ಲಿಯೇ ಒಂದು ಪೋನಿಯನ್ನು ತಂದುಕೊಟ್ಟಿದ್ದರಷ್ಟೆ (ಇಗಸಂ. ೦೦). [←ಇಂ. Pony]

ಪೋಪ್ (ನಾ). ಕ್ರೈಸ್ತಮತದ ಮಹಾಧ್ಯಕ್ಷನಾದ ರೋಮಿನ ಧರ್ಮಗುರು: ಫ್ರಾನ್ಸಿನ ದೊರೆಯಾದ ಫಿಲಿಪ್ಪನು ಒಂದು ಬಾರಿ ಒಬ್ಬ ಫ್ರೆಂಚನನ್ನು ಪೋಪ್ ಪದವಿಗೆ ಏರಿಸಿದನು (ಪಾಲಪ್ರ. III. ೦೦೬೨). [←ಇಂ. Pop]

ಪೋಪ 'ಪೋ₁' ಪರಾ.

ಪೋಪ್ಪು₁, ಹೋಹು₁ (ಕ್ರಿ). (ಹತ್ತಿರ) ಹೋಗು: "ಪೋಪು—ಆಸನ್ನಗಮನೇ" (ಶಮಧಾ). ಹೋಹು₁: ಪರಿಸರ್ಯೆ—ಹತ್ತಿರಿಂದ ಹೋಹದೆ ಇರುಹಂ (ನಾಸರಾ. ೪). [ಪೋ₁ + —ಪ್ಪು₁]

ಪೋಪ್ಪು₂, ಹೋಹು₂ (ನಾ). ರೀತಿ; ಮಾರ್ಗ: ಆದಾ[ಪಾಠಾಂ. ವಾ]

ಗಲೆನ್ನನನುಭವಿಸುವುದಲ್ಲದೆ ಹೇಳಬಾರದಾರಿಗೆಯೂ ನೋಡಯ್ಯಾ ಕಾಣ ಬಾರದಾತಂಗೆ ಸವಿದೋಱಬಾರದ ಪೋ[ಪಾಠಾಂ. ಘಾ]ಪು ನೋಡಯ್ಯಾ (ಉಂಪ. ೨೯-೦೫). ಹೋಹ್ಯು : ಮೊಲೆ ಮುಡಿಯಿದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ-ಮೀಸೆ ಕಠಾರಿಯಿದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹೋಹು; ಬಲ್ಲವರ ನೀತಿಯಲ್ಲ (ಕರ್ಣಾಕ. ೦೬೦).

[ಪೋ$_1$ + — ಪು$_2$]

ಪೋಫಳಿ (ನಾ). ಅಡಕೆ; ಕ್ರಮುಕ : ಅಡಿಕೆ (ಪೋಫಳಿ) — ಪ್ರಸಿದ್ಧ . . . ಕಾಯಿಯ ಮೇಲಿನ ತೋಟೆಯನ್ನು ಸುಲಿದು ಚಲ್ಲಿ, ಅಡಿಕೆಗಳನ್ನು ಕುದಿಸಿ ಮಾರಾಟಕ್ಕೆ ಒಯ್ಯುವರು (ಕಭಾಗ. ೩೫).

[← ಮರಾ. ಪೋಫಳೀ, ಪೋಫಳ್./ಪ್ರಾ. ಪೋಪ್ಪಲ, ಪೋಪ್ಪಲೀ./ಸಂ. ಪೂಗಫಲ]

ಪೋಬಟಿ, ಹೋಬಳಿ$_1$ (ನಾ). ೧. ಹೋದ ದಾರಿ,—ಮಾರ್ಗ : ಸ್ಮರ ನಸ್ತ್ರಸಮಿತಿಯದು ನಿರ್ಭರಮಂಗಮನುರ್ಚಿ ಪೋಗೆಯುಂ ಪೋಬಟಿಯುಂ ದೊರೆಕೊಳಿಸಲಾಗದದಱಿಂ ಶರತತಿಯಲ್ತೆಂಬುದಿಂತು ಧರ್ಮಾಪೋಹಂ (ಕವಿರಾ. ೩-೦೬೬); ನೆಱೆದಾಯುಷ್ಯಮೆ ಮಿಟ್ಟುವನಱಸುವ ತೆಱದಿಂದಮವರ ಪೋಬಟಿಯನೆ ಬಂದಱಸಿ (ಶಾಂತಿಪು. ೩-೬೯); ಮುನಿದಂತಿರೊರ್ಮೊದಲೆ ಲೋಕಾಂತರಕ್ಕೆ ಪೋದ ನಿಜಜೀವಿತೇಶ್ವರನ ಬಟಿಸಲ್ವ ಬವಸೆಯಿಂ ಪೋಬಟಿಯನಱಸಿ ಪರಿವಂತೆ ನಿಮಿರ್ವ ಬಿಸುಸುಯ್ಗಳೊಳಂ (ವರ್ಧಪು. ೯-೬೦ ಪ). ಹೋಬಳಿ$_1$: ೧. ತಾಯ ಹೋ[ಪಾಠಾಂ. ಹೊಂ]ಬಳಿಯನಾ ವತ್ಸನಱಿವಂದವಿಂ ಆಯೆಡೆಯೊಳಱಸಿಕೊಳುತುಂ ಬಂದು (ಪಂಬರ. ೦೦-೬೦); ಮನಮುಮಂ ಕಣ್ಣುಮಂ ಮೃಗದ ಹೋಬಳಿಗಿತ್ತು . . . ಬರುತಿರೆ (ಕಣ್ಣರ. ದೇ. ೦೨೯-೦೩). ೨. ನಡೆವಳಿಕೆ; ಆಚರಣೆ; ವ್ಯವಹಾರ : ಬ್ರಹ್ಮ ಅವ್ವೆಯ ಗಂಡನಾದ ವಿಷ್ಣು ಅಕ್ಕನ ಗಂಡನಾದ ರುದ್ರ ಕಿಱುತಂಗಿಯ ಗಂಡನಾದ ಮೂವರ ಹೋ[ಪಾಠಾಂ. ಹೊಲ]ಬಳಿಯಿದೇನು ಚೋದ್ಯ (ಪಗಮಾ. ಕ. ೯೩೯-೯೯). [ಪೋ$_1$ + ಬಟ್$_3$]

ಪೋರ್$_1$, ಪೋರು$_1$, ಹೋರ್$_1$, ಹೋರು$_1$ (ಕ್ರಿ). ೧. ಸೆಣಸು; ಕಾದಾಡು; ಹೊಡೆದಾಡು : ಕಡುಗಡಿಯವಪ್ಪೆರಡಾನೆಗಳ್ ತಮ್ಮೊಳ್ ಪೋರಲ್[ಪಾಠಾಂ. ಪೆಱ]ಸಾರ್ದು ಪೆಱಪಿಂಗಿ ಪೋದುದುಮಃ . . . ಕಂಡೆಂ (ವಡ್ಡಾರಾ. ೬೩-೨೩); ಇದು ಭೀಮಂ ದೇವಧಾತ್ರೀಸುತನಿಭದೊಳಿಭಂ ಪೋರ್ವವೊಲ್ಪೋರ್ದ ತಾಣಂ (ಗದಾಯು. ೩-೨); ಎನ್ನೊಳ್ ಪೋರ್ದುಡಿ ದಿಂದ್ರಸಿಂಧುರದ ಕೋಡಿಂದಾದ ಪಲ್ಯಂಕದೊಳ್ . . . ಕೇಳೀತಲ್ಪದೊಳ್ ನಿದ್ರೆಗೆಯ್ (ಪಂಠಾಮಾ. ೯-೦೭೬). ೨. ಜಗಳವಾಡು; ಕಚ್ಚಾಡು : ಪುರುಡಿಸೆ ಪೋರದೆ ಪೆಣ್ಗಾತುರಿಸದೆ ಪಿಶಿತಕ್ಕೆ ಪುದು ಕೊಲ್ಲದೆ . . . ಸುಟಿವುವು ಕರಿ ಕೇಸರಿಯೆರಳೆ ಪುಲ್ಲೆ ಮರೆ ಸಾರಂಗಂ (ಅನಂಪು. ೩-೩೬); ಬೇವ ಪೆಣಕ್ಕೆ ಕೋಪದಿಂ ಪೋರ್ವ ಮರುಳ್ಗಳಂ . . . ಈಕ್ಷಿಸಿದಂ ಪ್ರತಿ ರೂಪಶೂದ್ರಕಂ (ಕಾವ್ಯಸಾ. ೩೩೯). ೩. ಘರ್ಷಿಸು; ಮಸೆ; ತಿಕ್ಕಾಡು : ಸಿಡಿಲೊಳೆ ತಳ್ತು ಪೋರ್ವ ಸಿಡಿಲಂತಿರೆ ಬಾಳೊಳೆ ಬಾಳ್ ಪಳಂಚಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ (ಪಂಪಶಾ. ೧೦-೯೨). ೪. ಸ್ಪರ್ಧಿಸು; ಪೈಪೋಟಿ ಮಾಡು; ಹುರುಡಿಸು : ಈಶ್ವರ ನೆಟ್ಟಂದಿದಱಗ್ರದೊಳ್ ನೆಲಸಿ ಚೆಲ್ವಂ ಕಂಡು ತತ್ಕೌತುಕೋದ್ಧುರ ನಾಂದೋಳಿಸೆ ಮೌಳಿಯಿಂದುಗುವ ಗಂಗಾವಾರಿಯೊಳ್ ಪೋರ್ವ ನಿರ್ಝರ ಧಾರಾತತಿಪಾಂಡುವಿಂ ಸೊಗಯಿಸಿತ್ತಾ ಚಿತ್ರಕೂಟಾಚಲಂ (ಕುಸುಮಾ. ೧-೬೮). ೫. ತಿವಿ; ಹಾಯು : ನೀರುಣ್ಬ ಕನಲ್ವ ಪೋರ್ವ ಮೆಲ್ಕೊತ್ತುವ . . . ಗೋರಾಜಿಯ ಲೀಲೆ ಕಣ್ಗೆ ಪಡೆದುದು ಚೆಲ್ವಂ (ಪಂದ್ರಪು. ೨-೨೬); ನೊಸಲ ತೀಂಟೆ ತೀರದೆ ಕೊಣಕಿಟ್ಟು ಮುರಿದು ಪರಿದು ಪಿರಿದಪ್ಪ ಪುತ್ತಿನೊಳೊತ್ತಿ ಪೋರ್ದು . . . ಪೊಱಮಟ್ಟ ಕಾಳರಕ್ಕಸರಂತಿರ್ಪ ಕಾಳ್ಕೋಣಂಗಳಿಂ (ಗಿರಿಕ. ೦-೦೨೬ ಪ); ತೋರ ಹೋರಿಗಳ ಡುರುಕಾರವಂ . . . ಮಾರ್ಮಲೆತು ಪೋರ್ವ ಘನವೃಷಭಶೃಂಗಾರವಂಗೂಡಿ ನಾನಾರವಂ ಕಿವಿಗಳಂ ಪೂರೈಸಿತೇವೇಳ್ವೆನು (ಪಂಪಶ. ೦೦-೦೭). ಪೋರು$_1$: ೧. ತಗರೆರಡುಂ ತಮ್ಮೊಳ್ ತಾಗಿ ಕಿಡಿಗುಟ್ಟಿದಂತಾಗೆ ಪೋರುತ್ತಿರೆ (ಪಂಪಶಂ. ೭೨-೦೯); ಪಿರಿದು ರೋಷದಿ ಕಾದಿ ಸತ್ತು ಕೋಳಿಗಳಾಗಿ ಭರದಿಂ ಪೋರುತಲಿರ್ಪವೀಗ (ಶಾಂತೀಶ. ೩-೦೬); ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು ಮುಟ್ಟದಿಳೆಯಸಿ ನಿನ್ನ (ಮಂಕುಕ. ೬೦೩). ೨. ತತ್ತಬಳ[ಪಾಠಾಂ. ಳೆ]ತಾಳಗೊಟ್ಟೆಯೆನುತ್ತಾದಂ ರುಷಿಯರೊಡನೆ ಜಡಮತಿಗಳು ಪೋರುತ್ತಿಪ್ಪರ್ (ಸಮಪ. ೦೯-೦೭); ಅರುಣವರ್ಣದ ನೀಲವಸನದ ಕಾಂತೆ ಪೋರುತ್ತ ಮರಳಿ ಕಚ್ಚುತ ತನ್ನನೆಳವುದ ನರನು ಕಂಡಡೆ ಕನಸಿನಲಿ ಅವನಿರನು ಬೇಗದಲಳಿವನೈ (ತಿಮ್ಮಲ. ೯-೨೬); ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ ದಿಟ್ಟ ಗಂಡುಗಳಂತಿರಲಿ ಕೊಟ್ಟುದಱಿಂದ ತಣಿವ ಕುವರಿಗೆ ಮನಮುಟ್ಟಿ ಕೊಡುವುದು ಕೋವಿದರು (ಹದಿಬ. ೩-೦೧). ಹೋರ್$_1$: ೧. ಕೊಣಕಿಟ್ಟು ಮಹಾರವದಿಂದೆ ಹೋರಲೆ ಟ್ಟುಟ್ಟುವ ಸೊಕ್ಕಿದಾನೆಮಕರಂಗಳನೀಕ್ಷಿಸಿದಂ ಸಮುದ್ರದೊಳ್ (ಸೂಕ್ತಿಸಾ. ೨-೨೩). ೬. ವಾದಮಾಡು; ವಾದಿಸು; ಚರ್ಚೆಮಾಡು : ಹಿಂದಿರ್ವರು ನಾವೆಕ್ಕೆಯೊಳಗೆ ಹೋರ್ವಂದದೆ ಸೋಮಪ್ರಭನೃಪನಭಿನವ ಕಂದರ್ಪಂ ಜನಿಸಿವನಾದೊಡೆ (ಜಯಕಾ. ೦-೬೭). ಹೋರು$_1$: ೧. ಕೋಣ ನೆರಡುಂ ಹೋರೆ ಗಿಡುವಿಂಗೆ ಮಿತ್ತು (ಹಡಕಾ. ೨-೦೨); ಹೋರಿದರೆ ಹುರುಳಿಲ್ಲೆನುತ ಪರಿವಾರವೊಱಲಿತು (ಕುಮ್ಮಾಕ. ೩-೦೩); ಹೋರುವೆವು ಮಲ್ಲರೊಲು ಕಾಲದೊಡನೆ ಕಾಲನೆಮ್ಮಯದಾಗಿ ಆಗುವನಕ (ಏಸೀಗೀ. X, ೦). ೨. ಮುಳಿದು ಸಮಯರಿಬ್ಬರುಂ ಜೆಡೆಗಳಿಗೆಯೊಡಲಿಗೆ ಹೋ[ಪಾಠಾಂ. ಪೋ]ರಲ್ (ಬಸಪು ೨೬-೦೦); ತನತನಗೆ ನೃಪತನಕೆ ಹೋರಲಿಕಾಗ ಮಂತ್ರಿಗಳು ವಿನಯದಲಿ ಗಜಬಜವ ಮಾಣಿಸಿ (ಸಂಭಪ. ೦೭-೭೭); ಹರಿ ವಿರಂಚಿಗಳು ತಂತಮ್ಮ ಪೆಂಪಿಗೆ ಹೋರಿ ಹರನಡಿ ಮುಡಿಗಾಣಲೆಂದು ಇರದಿಟ್ಟ ಬಟ್ಟೆಗಳೆನಲಿಹವಾ ಪುರ ಕುರುಖಾತಿಪ್ರಾಕಾರ (ಶ್ರೀಪಾಠ. ೦-೭೦). ೪. ವೇದಕ್ಕೆ ಹೋರುವರೆ ವೇದಕ್ಕತೀತ ಶಾಸ್ತ್ರಕ್ಕೆ ಹೋರುವರೆ ಬಳಸಿನವನಲ್ಲ ಪುರಾಣದಲ್ಲಿ ಹೋರುವರೆ ರೂಪಿನವನಲ್ಲ (ಮೋಳಿಮಾ. ೬-೨೦); ಶಾರದೆ ನಿನ್ನೊಳು ವಿದ್ಯಾಕಲೆಗಳಿಂ ಹೋರಿ ಸೋತಂಜಿ ಬಸತಿಯ ಸಾರಿದಳೆನೆ ನಿನ್ನ ಜಾಣ್ಮೆಗೆ ಸೋಲದರಾರವನಿಯೊಳು (ಕುರಾಸಾಂ. ೨೯-೬೭). ೬. ಹೋರ ದಿರು ಹೊಗು ಬವರಕೆನಲಸುರಾರಿಯಂಘ್ರಿಯೊಳೆಱಗೆ . . . ತುಡುಕಿದನು ಧನುವ (ಕುಮ್ಮಾರ್ರೂ. ೩-೭೩); ಶಾರದೆ ಜಡರತ್ತ ಸಾರದೆ . . . ಇನ್ನು ನೀ ಜಾಱದೆ ಹೋರದೆ ನೇರದಿ ಮಾಡೀ ಕೃತಿಯ (ವಾಗಕು. ವೀರಿಕಾಸಂಧಿ. ೦೯). ೭. ಕಾಡು; ಪೀಡಿಸು : ಹಾಲುತುಪ್ಪವನು ಕುಡಿದು ಮಱುದಿನ ಯಾವನಾಳದ ಪುಡಿಯ ಕದಡನು ಕುಡಿಯಲೊಲ್ಲದೆ ಕೆಡಹಿ ಕಳೆದನು ಯಾಳಿ ಯಾಡುತವಳುತ ಹೋರುತಿರೆ (ಸಂಭಪ. ೦೭-೬೩); ಶ್ರಮ ಪರಿಹರಿಸೆಂದು ಹೋರೋ ಹೋರೋ . . . ನಮ್ಮ ಪುರಂದರವಿಠಲನ ಸೇರೋ ಸೇರೋ (ಪುರಂದ. ೦-೧೩೯-೩); ಕ್ರೂರರೈವರ ಬಾಧೆ ಹೋರುತಲಿದೆಕೊ ಆರಿಂದ ನಿರ್ವಾಹವಾಗದು (ಜಗದಾ. ೬೯). ೮. ಕಷ್ಟಪಡು; ಬವಣೆಗೊಳಗಾಗು : ಧರೆ ಧನ ವನಿತೆಯರು ಎನ್ನವರು ತನ್ನವರೆಂದು ಹೋರಿ ಹೋರಿ ಸಾವುತ್ತಿದೆ ಜೀವ (ಬಸಹ. ೩೯-೦೬೯).

[ದೇ. ॥ ತಮಿ. ಮಲ. ಪೊರು; ತುಳು. ಪೋರಿ; ಕೊಡ. ಪೋರ್; ತೆಲು. ಪೋರು; ಗಡಬ. ಪೋರ್; ಕುಇ. ಪ್ರೊಹ್ಪ]

ಪೋರ್$_2$, ಪೋರು$_2$, ಹೋರು$_2$ (ನಾ). ೧. ಕಾಳಗ; ಹೋರಾಟ; ಸೆಣಸಾಟ : ವಾರಿಯೊಳರ್ದಿಕೊಳ್ವರಣ್ಯವಾರಣಂಗಳೊಡನೆ ಭರದಿ ಪೋರ್ಗಂ ಮೊಗಂಬುಗುವ ವೀರ ಪೇರಾನೆಗಳ ತೊಳವಿಗೆಗಳೊಳಂ (ಪಂದ್ರಪು. ೩-೯೦ ಪ);

ಸ್ವಸ್ತಿಶ್ರೀನಿರ್ಗ್ಗುನ್ದಗಾವುಣ್ಡ ತಪಸಿಯ ಪೋರಿಲ್ ಇಭದೆ ಕಾದಿ ಸತ್ತೊಡೆ (ಮೈಅಂ. ೦೯೫೬. ೦೦೩-೦೨ ; ?); ಪೋರನ್ ತಿರಿಪಿದ ಸ್ಯೂಸಿಗೆ ಬಿಟ್ಟರ್, ಕಂಚಿನ ಜೋಡನ್ ಕಾಣ್ಕೆಯೆ ಬಿಟ್ಟರ್ (ಅಂತಿಗೂ. ೭-೦೨೬). ೨. ಜಗಳ ; ಕಲಹ ; ಕಾದಾಟ : 'ಪೋರಂಗೈ', 'ಪೋರ್ನುಡಿ' ಪರಾ. ಪೋರು$_2$: ೧. "ಕಾಳಗದೊಳುಂ ಬಿಲದೊಳುಂ ಪೋರು" (ಕಬ್ಬಿಮಂ. ೦೦೩). ಹೋರು$_2$: ೨. ತಾಯಿ ಮಕ್ಕಳ ಜಗಳ—ಕೊಟ್ಟು ಕೊಂಡವರ ವಾಗ್ವಾದ—ನಂಟರಿಷ್ಟರು—ಹೋರು ಮುಂತಾದ್ದೇನಾದರು ಉಂಟೆಂದು . . . ಮಿತಿಮೀರಿದ ದಂಡಗಳು ತೆರಿಸುವನು (ಕಥಾಮಂ. IV, ೦೨೦).

[< ಪೋರ್$_1$ ./ತಮಿ. ಮಲ. ಕೋತ. ಪೋರ್ ; ತುಳು. ಪೊರ್ದು ; ತೆಲು. ಕುಇ. ಪೋರು]

ಪೋರ್$_3$, ಪೋರು$_3$, ಹೋರ್$_2$, ಹೋರು$_3$ (ನಾ). ೧. ತೂತು ; ಬಿಲ; ರಂಧ್ರ: ಮುನಿಪಂ ಚರ್ಯೆಗೆ ಪೋಗುತಿರ್ಪ ಪದದೊಳ್ ಮೈಯಲ್ಲಿ ಪತ್ತಿರ್ದ ಪುತ್ತಿನ ಪೋರಿಂ ಪೊಱಮಟ್ಟು ಪೋದ ಮಧುಪು ತನ್ನಿಂದೆ ತಾನಾಗಿ ಬರ್ಪಿನಂ (ಅರ್ಥಪೇ. ೦-೯೦) ; ಹುಲಿ ಹೊಯ್ದು ಜರಿದ ಹೆಗಲ ಪದೆದು ಕೋಣಂ ಹೊಯ್ದ ಹೋರ[ಪಾಠಾಂ. ಹೊಡೆದ ಹೋರೆ] ಭೇರುಂಡ ನೆಱಗಿದ ಗಂಟುಗಳ...ಚಿಹ್ನದ ಬೇಡನಾಯಕರು ನೆರೆದರು (ಹಕಕಾ. ೩-೫); ನೇರ್ಗೋಲ ಪೋರ್ಗಳಾ ನೃಪನಂಗದೊಳ್ಕಾಣಿಸಿದುವು ಜಾಳಂದ್ರದಂತೆ (ಕೈಮಿಭಾ. ೪-೩೩). ಪೋರು$_3$: ೧. "ಕಾಳಗದೊಳುಂ ಬಿಲದೊಳುಂ ಪೋರು" (ಕಬ್ಬಿಮಂ. ೦೦೩). ಹೋರ್$_2$: ೧. "ಬಿಲಂ=ಹೋರ್" (ಕಾಕಳ್ಳ. ೪೭). ಹೋರು$_3$: ೧. ಕಲ್ಲ ಹೋರಿನೊಳಗೊಂದು ಕಿಚ್ಚು ಹುಟ್ಟಿತ್ತ ಕಂಡೆ (ಅಪಸಂ. ೨೭-೦೦೪) ; ಉಪ್ಪು ಮೆಣಸುಗಳ ಹಿರಿಯ ಮೂಗಿನ ಹೋರು ತುಂಬಲು ಭರದಿ ಬಿಱಿಸಿಂದವನು ಸೀತರೆ ಗಿರಿಯ ತೋರದ ಭಟರು ತಱಗೆಲೆಯುತೆ ಹಾಱಿದರು (ಕೌತಿಂಗಾ. ೨೪-೫) ; ಹೆಗ್ಗಣಗಳ ಹೋರುಗಳು ಅಲ್ಲಲ್ಲಿ ಮುಚ್ಚಿಕೊಂಡಿದ್ದು, ಅವು ಪಕ್ಕನೆ ಬಾಯ್ದೆರೆದಾಗ ಮನೆಯವರೆಲ್ಲ ಅದರಲ್ಲಿ ಮಾಯವಾಗುವ ಹೆದರಿಕೆಯೂ ಹಲವೆಡೆ ಉಂಟಾಗಿದೆ (ಯಕ್ಷಪ್ರ. ೦೩).

[ದೇ.॥ ತಮಿ. ಪೋರ್, ಪೋಱೈ; ತೆಲು. ಬೊರಿಯ, ಬೊಱಿಯ, ಬೊರ್ರೆ; ಕೊಂಡ. ಬೊಱ್ಱೊ]

ಪೋರ (ನಾ). (ತುಂಟ) ಹುಡುಗ ; ಬಾಲಕ : ಪೋರಂ ನಾಂ ಗೆಯ್ದ ತಪ್ಪೇಂ (ಮೈಸೂಮ. ೨-೬೦); ಪೋರ ನಾನೆಂದು ಬಗೆಯದಿರಸುರ (ಮಲ್ಲಾರಿ. ೬-೨೮) ; ಈ ಪೋರನ ಹಣೆಯಲ್ಲಿ ಏನು ಬರೆದಿದೆಯೋ ಹಾಗೆ ಆಗಲೇ ಬೇಕಲ್ಲ (ಹೊಸಕ್ಷಿ. ೨೮).

[ದೇ.॥ ಮಲ. ಪೋಱ = ದಡ್ಡ ; ತುಳು. ಪೋರ, ಪೋರೆ ; ತೆಲು. ಪೋರಡು. /ಮರಾ. ಪೋರ]

ಪೋರಗ (ನಾ). ೧. ಒಂದು ಬಗೆಯ ಆಯುಧ : ಪೊಯೆ ಕಾಳವಟ್ಟದಿಂ ಪೋರಗದಿಂದೆ ಪೊಯ್ದನೆರಡುಂ ಸರಿಪೋದವು ಲಾಗುಬೇಗದೊಳ್ (ಅನಂಪು. ೦೦-೬೦) ; ಬಾಹುಪೋರಗದೆ ಪೊಯ್ದಂ ಭೂಪನಾ ವೀರನಂ (ಅನಂಪು. ೦೦-೬೨). ೨. ಖಡ್ಗಯುದ್ಧದ ಒಂದು ವರಸೆ,—ಪಟ್ಟು: ಚಂಕತಟ ವದ್ದಳಂ ಪೋರಗಂ [ಪಾಠಾಂ. ಪೊವಗಂ, ಪಾದಂಗಂ, ಪಾರೆಗಂ]ಗಳೆಂಬಡ್ಡ ಪೊಯಿಲಿಂ ನಿವಾರಿಸುತಿರ್ದರು (ಸೋಮಕ. ೩-೦೩). [?]

ಪೋರಗಿ (ನಾ). (ತುಂಟ) ಹುಡುಗಿ ; ಪೋರಿ : ತೋರಣಬಾಗಿಲ, ಸುಮ್ಮನೆ ತೆರೆಯೆ ಪೋರಗಿ (ಕೋಹಿಮೂ. ೧೦೨). [←ಮರಾ. ಪೋರಗೀ]

ಪೋರಟೆ, ಹೋರಟೆ (ನಾ). ೧. ಹೋರಾಟ ; ಕಾಳಗ ; ಯುದ್ಧ : ಇಳೆಯೊಡೆತನ ಪೋರಟೆಗಳಿಂ ತಣಿಯದೆ ಪಿತೃದೇವತೆಗಳ ಋಣವನುತ್ತರಿಸದೆ ರಾಯಕುವರರೆಲ್ಲ ರಣಭೂಮಿಯೊಳಡಗಿದರು (ಕರ್ಣಪ್ಯ. ೬-೨೦). ೨. ಜಗಳ ; ಕಚ್ಚಾಟ : ಕೃಷ್ಣಗಜಂಗಳ ಪೋರಟೆಯಿಂದಭಿಲಶಿತವೃಷ್ಟಿ ಯಾಗದುದಂ . . . ಸೂಚಿಸುಗುಂ (ಪುಷ್ಕಾಸ್ತ್ರ. ೯-೦೬ ಪ) ; ಪುಸಿಗೆ ಪಿಸುಣ್ಗೆ ಪೋರಟೆಗೆ ಮಾಯೆಗೆ ಹಿಂಸೆಗೆ . . . ಪುಗದಂತಿರೆಲ್ಲರಂ ಪೊಸಯಿಸಿ ಕಾರ್ತವೀರ್ಯನೆಸಕಂಬಡೆದಂ (ಸಕಲಿ. ೩-೦೩). ೩. ಪೈಪೋಟಿ ; ಹುರುಡು ; ಸ್ಪರ್ಧೆ : 'ಪೋರಟೆವೆಱು' ಪರಾ. ಹೋರಟೆ : ೧. "ಹೋರಟೆಯೆನೆ ಪೋರ್ಕೆಯು" (ಭಾರವಿ. ೩೪) ; ಹೋರಟೆಗೆ ಬರಹೇಳು ಭರ್ಗನನಿವನ ಪಾಡೇನು (ಕುಪ್ಕಾಭೀ. ೯-೪೨) ; ಹೋರಿದರು ಹರಿ ಜಂಭರಿಬ್ಬರ ಹೋರಟೆಗೆ ಹದಿನೆಂಟುಮಡಿಯೆನೆ (ತೊರಂಗಾ. ೬-೩೨-೪೬) ; ಎನಗೆ ತನಗೆಂದಮರದಾನವಜಗಕೆ ಹೋರಟೆಯಾಯ್ತು (ವಿಭಾಗ. ೬-೯-೩). ೨. ಪುರಾಣವೆಂಬುದು ಪುಂಡರ ಗೋಷ್ಠಿ ತರ್ಕವೆಂಬುದು ತಗರ ಹೋರಟೆ (ಅಪಸಂ. ೦೦೩-೪೬೩) . ೪. ತಿಕ್ಕಾಟ ; ತಾಕಲಾಟ ; ಘರ್ಷಣೆ : ಕಂಬಿಯ ಕಡಿಯಣದ ಕೀಲಣದ ಹೋರಟೆಯ ಘಾರಾ ಘಾರಿಯೊಳ್ ಜೋಳಿಸುವ ಲಾಲಾಜಲಂ ಖುರಹತಿಯಿಂ ನೆಗೆವ ದೂಳ್ಗೆ ಚಳೆಯಂಗುಡೆ (ಗಿರಿಕ. ೬-೫೩ ಪ) ; ಅಳುವ ಶಿಶುವನು ತೆಗೆದು ತೆಕ್ಕೆಯ ಪುಳಾಜಲದಲಿ ನಾದಿ ಹರುಷದ ಬಳಿಯ ಲಜ್ಜೆಯ ಭಯದ ಹೋರಟೆಗಳುಕಿ . . . ಗಂಗಾಜಲದೊಳಗೆ ಹಾಯ್ಕಿದಳು ಜನದಪವಾದಭೀತಿಯಲಿ (ಕುಪ್ಕಾಅ. ೩-೨೦); ಪೊಯ್ದಾಡಿ ತಲೆಯಂ ನಿವಾಳಿಸಿದರಾಳ್ದಂಗೆ ಕೈದುಗಳ ಹೋರಟೆಯ ಖಣಿಕಟಿಲ ರಭಸದಿಂದೆ (ಕೈಮಿಭಾ. ೨೨-೬). ೫. ವಿವಾದ ; ಚರ್ಚೆ : ಕುಱುಹಿನ ಮಱವೆಯೊಳಗಿಪ್ಪ ವಸ್ತುವ ಕಾಬ ತೆಱನಿನ್ನಾವುದೊ ಇವೆಲ್ಲವು ಮಱವೆಯ ಮಾತಲ್ಲದೆ ಬಱಿಯ ಹೋರಟೆಗೆ ಇವರು ಬಲ್ಲವರಲ್ಲವೆಂದೆ (ಪೋಳಿಮಾ. ೬೪-೨೬೦) ; ಆಱು ಬೆಟ್ಟವನೊಬ್ಬ ಹಾಱಬಹುದೆಂದಿಹರೆ ಹಾಱ ಬಹುದೆಂದು ಏನಬೇಕು ಮೂರ್ಖನೊಡ ಹೋರಟೆಯೆ ಸಲ್ಲ (ಸರ್ವಜ್ಞ. ೧೦೩೨). ೬. ಹೊಡೆತ ; ಪೆಟ್ಟು ; ಆಘಾತ : ಪೂಗಣೆಯ ಹೋರಟೆಗೆ ತರಹರಿಸದಬಲೆ ನೀನೀಗ ನೋಟದ ಹಂಬಲಂ ಬಿಟ್ಟು ಹೃನ್ಮಧ್ಯಕೀ ಗಾಡಿ ಕಾಱನಂ ತಂದು ನೆರೆದಪೆನೆಂದು ಕಣ್ಮುಚ್ಚಿ ಜಾನಿಸಿದೊಡೆ ಈ ಗಲಭೆಯೊಳ ಗಪ್ಪುದೇ (ಕಬಿಪು. ೦೯-೪೦) ; ಅಯ್ಯೊ ನಾನಾಱ ವಿಷಯದ ಹುಯ್ಯಲ ಹೋರಟೆಯ ಹೊಚ್ಚಹೊಸ ಕಮ್ಮರಿಯೊಳು ಕಯ್ಯೂಱಿ ಬಿದ್ದೆ (ಕಂಕಳಂ. ೦೦-೩೯). ೭. ಬಿರುಬು ; ರಭಸ ; ವೇಗ : ಅಳಿಕುಲಾಳಕಿ ಬಂದಳೊಬ್ಬಳೆ ಮಳೆಗೆ ಕೈಯೊಡ್ಡಿ ಬಲಿದು ಮೈ ನಡನಡುಗಿ ಹಲುಹಲು ಹಳಚಿ ನೆನೆದಳು ವಾರಿಯಲಿ ತನು ಹಳಹಳಿಸೆ ಬಳಲಿದಳು ಚರಣದ ಹೊನಲ ಹೋರಟೆಗೆ (ಕುಪ್ಕಾಅ. ೯-೨೩) ; ಬಿರಿದುದಬುಜಭವಾಂಡವಿಬ್ಬರ ಧುರದ ಹೋರಟೆಗೆ (ತೊರಂಗಾ. ೪-೨-೩೬). ೮. ಶ್ರಮ ; ಪ್ರಯಾಸ : ಮಿಕ್ಕ ಬೆವಸಾಯವನು ಮಾಡುವ ಹೆಕ್ಕಳದ ಹೋರಟೆಯ ಕಾಣುತಲಕ್ಕ ಱಿಂದಲಿ ನೋಡಿ (ಪ್ರಭುಲೀ. ೦೦-೩). ೯. ಪೀಡೆ ; ಜಂಜಾಟ ; ಹಿಂಸೆ : ಹೊಕ್ಕು ಹೋರಟೆಯೆಲ್ಲವನು ಹೊಯ್ದಿಕ್ಕಿ ಸುಖಿಸುವೊಡಂತು ನಿಜಪದದಿಕ್ಕೆ ನಿನಗಹುದು (ಪ್ರಭುಲೀ. ೦೨-೦೩); ಅಯ್ಯಯ್ಯೊ ಧ್ಯಾನವ ತುಯ್ಯಲುಂಡಾತ್ಮನೊಳುಯ್ಯಲನಾಡಿ ಸುಖಿಸದೆ ಗುಯ್ಯಲೆತ್ತುವರುತೆ ಮೆಯ್ಯ ಹೋರಟೆಯೊಳು ಹುಯ್ಯಲನುಂಡೆ ನಾನು (ಭರತ. ೭೬-೨೬).

[ಪೋರ್$_1$ + — ಅಟೆ]

ಪೋರಟೆವೆಱು (ಕ್ರಿ). ಸ್ಪರ್ಧೆಹೂಡು ; ಪೈಪೋಟಿ ನಡೆಸು : ಪುರುಡು ಪೋರಟೆವೆತ್ತು ಜೊತ್ತು ಗತಕಂ ಗನ್ನಂ ಕಚಾಕರ್ಷಣಂ . . . ಪಿರಿದುಣ್ಮಲ್ ವಧು ನಲ್ಲನೊಳ್ ನೆರೆವುತಿರ್ದಳ್ಕಾಮಸೌರಂಭದಿಂ (ತ್ರಿಪುವಿ. ೨೪-೧೬೦).

[ಪೋರಟೆ + ಪೆಱು$_1$]

ಪೋರತನ (ನಾ). ಹುಡುಗುತನ ; ಹುಡುಗುಬುದ್ಧಿ : ಇಂತಾ ಪೋರತನ ನಾನರಿಯೆ ಬೇಕೆಂದಾ ನರಪನಂತಡವಿ ಬೆನ್ನಿಗೆ ತರಿಸುವುದು ಗುಣವೆ (ದೇವಪು. ೬-೧೨೩). [ಪೋರ + — ತನ]

ಪೋರಾಟ, ಹೋರಾಟ (ನಾ). ೧. ಕಾಳಗ ; ಯುದ್ಧ ; ಕದನ :

ಘನವಂತರಿಂತು ಭಾವಿಸಿದರು ತಮ್ಮಯ ಮನದೊಳಿಂತಿವರ ಪೋರಾಟ ಘನದುಃಖಹೇತು ತಮ್ಮೊಳು ಪರಸ್ಪರ ನೋಳ್ಪ ಜನಕೆ ಪಾಪಾಸ್ರವವೆಂದು (ಶಾಂತೀಶ. ೩-೧೨). **ಹೋರಾಟ :** ೧. ಅದು ಎಲ್ಲ ರೀತಿಯಿಂದಲೂ ಅಂತಿಮಹೋರಾಟಕ್ಕೆ ಸಿದ್ಧವಾಯಿತು (ಅತ್ಯಾರ್ಪ. ೦೪೩). ೨. ಜಗಳ ; ಕಚ್ಚಾಟ : ಧಾರಿಣೀಶನ ಪಾಣಿಯೊಳು ನಿನ್ನ ಪಾಣಿಯ ಸೇರಿಸಿ ಪಿತನ ಕೈಯಿಂದ ಧಾರೆಯೆಱಸುವೆನು ನಿಮಗಿಬ್ಬರಿಗೆ ಬಂದ ಹೋರಾಟ ಹೊಳೆದು ಹೋಹಂತೆ (ಭರತ. ೯-೦೨೯). ೩. ವಾದ ; ಚರ್ಚೆ : ಮಾತಿನ ಮಾಲೆಯ ಹೆಚ್ಚು ಕುಂದಿನ ಹೋರಾಟವುಳ್ಳನ್ನಕ್ಕರ ಅದ್ವೈತಿಯಲ್ಲ (ಅದಪ. ೩೩-೯೭). ೪. ಒದ್ದಾಟ ; ಶ್ರಮ ; ಹೆಣಗಾಟ : ಪೇರೇರುಗಳ ಕಿಚ್ಚು ಸಿಡಿತದಿಂ ತೆಣರುತಿರೆ ಹೋರಾಟ ಬಾಳ್ವೆಯಂ ಬೇಡೆನ್ನುತಿತ್ತು (ಕಾಲೂರ. ೦೦೩-೨೦೩) ; ಆ ಮುಗ್ಧಪ್ರಶ್ನೆಯಲ್ಲಿ ಅವನ ಬದುಕಿನ ಸಮಸ್ಯೆಯೇ ಹುದುಗಿತ್ತು . . . ಈ ವಯಸ್ಸಿಗೇ ಇಂಥ ಹೋರಾಟವೇ (ಹೊಸಕ್ಷಿ. ೩೪).

[ಪೋರ್$_1$ + ಆಟ./ತಮಿ. ಮಲ. ಪೋರಾಟ್ಟಮ್ ; ತೆಲು. ಪೋರಾಟ]

ಪೋರಾಣ್ಮ (ನಾ). ದಂಡನಾಯಕ ; ದಳವಾಯಿ : ಪೋದವನಾ ಪೋರಾಣ್ಮನ್, ಪೋದವರಾ ಪೊನ್ನಾಳ್ಗಳೆ ಬಾರದೆ ಬಗೆ ಬೆದರುತಿಹುದು (ಪಾರಸಿ. ೦.೦೪). [ಪೋರ್$_1$ + ಆಣ್ಮ (<ಆಳ್ಮ)]

ಪೋರಾಳ್, ಹೋರಾಳು (ನಾ). ಯುದ್ಧ ಮಾಡುವವನು ; ಶೂರ : ಏಷಿಯದ ಸಾಮ್ರಾಜ್ಯಕೇಂದ್ರವೇ ! ಓ ಪರ್ಸ ! ಐಶ್ವರ್ಯಭೂಮಿಯೇ, ಪೋರಾಳ ತಾಯ್ ತವರೆ ! (ಪಾರಸಿ. ೦೦-೨೬೨). **ಹೋರಾಳು :** ನಿರ್ಧರವಾದ ದಿನ ಹೋರಾಳುಗಳು ಬರೇ ಚಡ್ಡಿ ಧರಿಸಿ ನಗುಮುಖದಿಂದ ಅಖಾಡಕ್ಕೆ ಇಳಿಯುತ್ತಾರೆ . . . ಹೋರಾಳುಗಳು ತಮ್ಮ ಇಷ್ಟದೇವರನ್ನು ಪ್ರಾರ್ಥಿಸಿದ ಮೇಲೆ, ಕತ್ತಿಗಳನ್ನು ತಾಗಿಸುತ್ತಾರೆ (ಶ್ರವಾಣ. II. ೨೮೩). [ಪೋರ್$_1$ + ಆಳ್$_3$]

ಪೋರಿ$_1$ (ನಾ). (ತುಂಟ) ಹುಡುಗಿ ; ಬಾಲಕಿ : ಊರಿಗುಕ್ಕೆಯ ಚಿಂತೆ ಪೋರಿಗೆ ಮದುವೆಯ ತೋರ ಚಿಂತೆ (ಜ್ಞಾನಪ. ೦೪-೮೮) ; ನಿನ್ನೆ ಹುಟ್ಟಿ ಇಂದು ಕಣ್ಣು ತೆಗೆದ ಪೋರಿ ನೀನು (ಶಾಪಪ್ರ. ೦೦೦) ; ಹಾಡು ಮುಗಿಸಿದ ತಾಯಿಯ ಮುಖವನ್ನೇ ನೋಡಿ ಆ ಪೋರಿ ನಕ್ಕಳು (ರಂಗಪ. ೦೪೬).

[ಪೋರ + — ಇ$_2$./ ತುಳು. ಪೋರಿ ; ತೆಲು. ಪೋರಿ, ಪೋಱಿ]

ಪೋರಿ$_2$, ಹೋರಿ (ನಾ). ೧. ಎಳೆಯ ಪ್ರಾಯದ ಬೀಜದ ದನ ; ಗಂಡುಕರು : "ಕಱವೆಳಗಱು ವತ್ಸ ಶಕೃತ್ಕರಿನಾಮಂ ತಿರ್ದಲಾ[ಪ] ಪೋರಿಯೆ ದಮ್ಯಂ" (ಪಸ್ತುಕೋ. ೬೯-೩) ; ಗೋಮಂಡಳದೊಳೊರ್ಮೆ ಪೋರಿಗಳಾಗಿ ರಾಜಮಂದಿರದ ಸೀಯಬಾರದೊಳ್ ಪೊಣರ್ದು (ಶಾಂತಿಪು. ೯-೪೭ ಪ) : ಆದೊಡವಂ ಕೊಟ್ಟು ಪಯನಾವಂ ಕೊಳ್ವೆಂ ಅವರ್ಕೆ ಪುಟ್ಟಿದ ಪೋರಿಗಳಂ ತಿರ್ದಿಯಾರಂಬಂಗೆಯ್ದು (ಪಂಚತಂ. ೦೬೬-೬) ; ಬಾಲವೃಷಭಯುಗದೊಳ್ ಪೂಡಿರ್ದಾ ರಥಮನೆಳೆಯ ಪೋ[ಪಾಠಾಂ. ಪಾ]ರಿಯನೇಱಿದ ನೃಪಪುತ್ರನಂ ನೃಪಾಳಂ ಕಂಡು (ಪುಷ್ಕಾಸ್ರ. ೯-೧೫). ೨. ಆಡು, ಎಮ್ಮೆ ಮೊದಲಾದುವುಗಳ ಗಂಡುಕರು : ತನ್ನಿಂದಂ ತಾನೋರಂತೆ ಕುದಿದು ಮಱುಗುವ ಸಾರಂಗದ ಪೋರಿಯಂದಮಂ ನೆಱೆ ಪೋಲ್ತಂ (ಧರ್ಮಾಮೃ. ೧-೧೫೯) ; ಜನಕಂ ಯಶೋಧರಂ . . . ಮಿನಾಡಿನ ಪೋರಿ [ಪಾಠಾಂ. ಪೋಂತು] ಪೋಂತು ಕುಕ್ಕುಟಮೆನೆ ಪುಟ್ಟಿಯುಮಿಗಳಭಯರುಚಿಯಾಗಿರ್ದಂ (ಯಶೋಚ. ೪-೩೭). **ಹೋರಿ :** ೧. "ತರ್ಣಕಃ, ವತ್ಸಃ — ಈ ೨ ಹೋ(ಱಿ)ರಿ" (ಹಲಾಯು. ೪೪-೦೦೯) ; ಸ್ಫಟಿಕದ ಮಧ್ಯದಲ್ಲಿ ಬಹುವರ್ಣದ ಹೋರಿಯ ತೋಱಿ ಹಿಡಿವವನಂತೆ (ಪೋಳಿಮಾ. ೧೬೦-೬೦೦) ; ಆ ಪಶುಗಳುಂ ಕಾಮಧೇನುಗಳಾ ಪುರದ ಹೋರಿಗಳು ನಂದಿಯ ರೂಪಿನಂತಹವು (ಬಸವು. ೪-೩೩) ; ತರಿಸಿ ಹೋರಿಯ ಗವಿಯ ಗೂಳಿಯ ಬರಿಸಿದನು ಕೆಲಕೆಲವ ಕೃಷಿಕರಿಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ (ಕುಮಾಕಾ. ೦೬-೩೭). ೩. ಎತ್ತು ; ಬಸವ : ತಳಾಱರ್ತಕ್ಷಕನಂ ಕನಲಪೋರಿಗಳ್ ಪೂಡಿ ಪೆಟ್ಟ ಮೆಟ್ಟಿವಪರ್ (ಸುಳುಮಾ. ೭-೩ ಪ) ; ಹಿಡಿ ಹಿಡಿ ಬಂಡಿಎತ್ತುಗಳ ಬಿಗಿದ ಬಲುಹೋರಿಯ ಕೊರಳ ಜೊತ್ತಗೆಗಳಂ ಪಱಿ ಪಱಿ (ಬಸವು. ೩೬-೨೮) ; ಭಂಡಿಯ ಹರಿದು ಸೆಳೆದೇರಿದನು ತಾ ಬಲುಹುರಿಯ ಹಗ್ಗವ ಹಿಡಿದು ಜಡಿದನು ಹೋರಿ ಕೋಣಗಳ (ಸಂಭವ. ೨೩-೬೦) ; ಹೋರಿ ನಡೆಯದಿದ್ದರೆ ದಾರಿ ಉದ್ದ ಅಂದ ಹಾಗೆ (ಗಾರೆ).

ಹೋರಿಗರು = ಗಂಡುಕರು : "ದಮ್ಯಃ, ವತ್ಸತರಃ—೨ ಹೊರುವದಕ್ಕೂ ಯೆಳೆಯುವದಕ್ಕೂ ಉಳುವದಕ್ಕೂ ತಿದ್ದಲ್ಪಟ್ಟ ಹೋರಿಗರು" (ಸಿದ್ಧಾಂತಿ. ೨೯೨).

[ದೇ.॥ ತುಳು. ಬೋರಿ, ಹೋರಿ ; ಕೊಡ. ಪೋರಿ ; ಕೋತ. ಪೋರ್ಯ್]

ಪೋರಿಸು, ಹೋರಿಸು (ಕ್ರಿ). ೧. ಹೋರಾಡಿಸು ; ಯುದ್ಧ ಮಾಡಿಸು : ನೆಗೞ್ದ ಮಲ್ಲರುಮಂ ಪಿಡಿದೊತ್ತಿ ಗೆಲ್ದ ಜೆಟ್ಟಿಗರೆನೆ ಸಂದ ಮಲ್ಲರನೆ ಪೋರಿಸಲುಂ ಪಿರಿದೊಂದು ದೋಹಳಂ ನೆಗೞ್ದುದು ಗರ್ಭದರ್ಭಕನ ದೋರ್ಬಲ ಗರ್ವಮನಂದು ಪೇೞ್ವಪೋಲ್ (ಅದಿಪು. ೬-೪೬) ; ಭೀಮನೆಯ್ದಿ ಭರದಿಂದಂ ಯುದ್ಧಮಂ ಬೇಡಿ ಮಾಗಧನೊಳ್ ಪೋರಿಸುವಲ್ಲಿ ಶಕ್ತಿಕಳೆಯಂ ಭೀಮಂಗೆ ಕೊಟ್ಟದ್ಭುತಪ್ರಧನಾಚೋಪದೆ ಭೀಮನಿಂ ಕೊಲಿಸಿದಂ ಕೃಷ್ಣಂ ಜರಾಸಂಧನಂ (ಜಗವಿ. ೦೬-೯೦). ೨. ಕಾದಾಡಿಸು ; ಜಗಳವಾಡಿಸು : ತಗರಂ ಪೋರಿಪ ಬಗೆಯಿಂ ತಗರಂ ವಿನೋದದಿಂದಂ ಪೊರೆದಂ (ಪಂಚತಂ. ೦೭೯-೦) ; ಪಟು ವೈರಿನಿರ್ಧೂತರೆನಿಪ ಜೋದರ್ಕಳುಕುಶವಿಕ್ಕಿ ಪೋರಿಸಿದರಾನೆಗಳನು (ಪಂಪು. ೨೪-೯). ೩. ಹಿಂಸೆಗೆ ಒಳಪಡಿಸು ; ಒದ್ದಾಡಿಸು ; ಹೆಣಗಿಸು : ಚಾರು ಸುರಾಂಗನಾರತಿಸುಖಾಮೃತಸೇಚನೆಗೆಂದು ಕಾಯಮಂ ಪೋರಿಸಿ ನೋಟದೊಳ್ತೊಡರ್ದು ಶಬ್ದಮನಾಲಿಸಿ ಬೇವ ಬೇವಸಂ ಪೋ ರುಚಿಯಲ್ಲಂ (ಸುಳುಮಾ. ೯-೩೬). **ಹೋರಿಸು :** ೧. ಮಲ್ಲರ ಹೋರಿಸುತ್ತಿಹ ಪಗಡೆ ನೆತ್ತಗಳಾಡಿ ನಲಿವ . . . ರಾಜಪುತ್ರರು ಸೊಗಸಿದರಾ ಬೀದಿಯೊಳಗೆ (ಕಂನವಿ. ೨-೭೬) ; ಶ್ರೀರಾಮ ರಾವಣನ ಹೋರಿಸುತ ಲಂಕೆಯನು ಸೂರೆ ಮಾಡಿಸಿದಂತ ಶೂರ್ಪನಖಿಯಂದು . . . ನರಿಯು ನೀನಿಂದು (ಕಂಕ. ೬೩-೪) ; ಕಂಡವರೆದೆ ನಡುಗುವಂತೆ ಅವರನ್ನು ಹೋರಿಸುವನು (ಕಸಾಚ. ೯೬). ೨. ನಿಮ್ಮ ಮಹಿಪನೊಬ್ಬನೆ ಹಿತವಲ್ಲ ವಹಿಸಿಬಿಟ್ಟೆಮ್ಮ ಹೋರಿಸುತ ತಾನೋಡುತುತ್ಸಹದೊಳಿದ್ದಪನೆಂದಳೊಡನೆ (ಭರತ. ೦೪-೬೭). ೩. ಅವರವರ ಕೃತಕರ್ಮಸಂಸ್ಕಾರ ಹೋರಿಸುವುದಳಿಸುವುದು ಸೌಖ್ಯಕೆ ಸೇರಿಸುವುದು (ಕುಮಾಕಾ. ೨೦-೦೬). [ಪೋರ್$_1$ + — ಇಸು$_3$]

ಪೋರು$_1$ 'ಪೋರ್$_1$' ನೋ.

ಪೋರು$_2$ 'ಪೋರ್$_2$' ನೋ.

ಪೋರು$_3$ 'ಪೋರ್$_3$' ನೋ.

ಪೋರುಗೈ (ಕ್ರಿ). ಜಗಳವಾಡು : ಕಲಹಮಾಡು : ನೆಲೆಯೊಳ್ ಸೇರಲು ಪೋರುಗೈದು ಸತಿ ತಾಂ ಪೋಗಟ್ಟುವಳ್ ಸಾಲಿಗರ್ ಕಲುಗುಂಡಂ ತಲೆಗೇಱಿಪರ್ ತೊಲಗಿರಲ್ ಲಕ್ಷ್ಮೀಕಟಾಕ್ಷೇಕ್ಷಣಂ (ಸೋಮೇಶ. ೩೦).

[ಪೋರು$_2$ (< ಪೋರ್$_2$) + ಗೈ (< ಕೆಯ್$_1$)]

ಪೋರುಗೊಳ್ (ಕ್ರಿ). = ಪೋರುಗೈ : ಪಳಿವವರೊಳು ಪೋರುಗೊಳದೆ ಮುಳುಗಿಯೆಚ್ಚವರೊಳು ಮೂದಲೆಯೆಸಗದೆ ಒಳುವೆಂಡಿರೊಳ್ಪುವಡೆವುದು (ಹದಿಬ. ೪-೪೦). [ಪೋರು$_2$ (<ಪೋರ್$_2$) + ಕೊಳ್$_1$]

ಪೋರೆ, ಬೋರು$_1$, ಬೋರೆ$_1$ (ನಾ). ೧. ಸಣ್ಣಗುಡ್ಡ ; ಮೊರಡಿ ; ದಿಬ್ಬ : ಉರಿಗಳಿಂದೋರೆಯಿಂ ಪೋರೆಯಿಂ[ಪಾಠಾಂ. ಉರಿಗಳಿಂದೊರೆಗಳಿಂ ಮೊರೆಗಳಿಂ, ಜರಿಗಳಿಂದುರಿಗಳಿಂ ಪೋರೆಯಿಂ]ದಿಡಿದ ಕಮ್ಮರಿಗಳಿಂ ಕಱೆವ ಕೆಂಡದ ಮಳೆಗಳಿಂ ಗಜರ್ವ ಮರುಳ್ಗಳಿಂ ಶಾಕಿನಿಯರಿಂ ದಾಕಿನಿಯರಿಂದಮಾ ವಥು ಬೆದಱಿಸುವುದು (ಪಂಪು. ೩೬-೨೩) ; ಲಲನಸಹಿತ

ತೆರಳಿದರು ಮುಂದಕಂ ಗಂಧಮಾದನನೆಂಬ ಗಿರಿಯನ್ನಡರ್ದೋರೆಪೋರೆಗಳ ಮುರಿಗಳಂ ಜರಿಗಳಂ ಕಳಿದು (ತುರಂಗ. ೯೪-೨೩). **ಬೋರು$_1$:** ೨. ಏಟು ತಗುಲಿದುದರಿಂದ ಉಂಟಾದ ಬುಗುಟೆ,—ಊತ : ಕಿಟಕಿ ಬಾಗಿಲು ತಾಗಿ ಮಗುವಿನ ಹಣೆ ಮೇಲೆ ಬೋರು ಬಂದಿದೆ (ರೂಢಿ). **ಬೋರೆ$_1$:** ೧. ಕುರುಬನ ಕಟ್ಟಿಗೆ ಮೂಡದಿಕ್ಕಿನ ಬೋರೆ ಮೇಲೆ ಹುಟುಗಲ್ಲು ೧ (ಎಕ. III, ಶ್ರೀರಂಗ. ೦೪-೦೩೪; 1686); ಬೆಟ್ಟಕ್ಕಿಂತಲೂ ಚಿಕ್ಕದಾದರೆ ಗುಡ್ಡ, ದಿಣ್ಣೆ, ತಿಟ್ಟು, ಮರಡಿ, ಬೋರೆ, ತೆಂಬ, ತೆವರು ಎಂಬ ಹೆಸರುಗಳು ಬರುತ್ತವೆ (ಭೂಗೋಳ. ೦೧); ರಜವಿದ್ದ ದಿನ ಮಧ್ಯಾಹ್ನ ದನಕಾಯಲು ಬೋರೆಗೆ ಹೋಗುತ್ತಿದ್ದೆ (ಧರ್ಮಶ್ರೀ. ೦೪). ೨. ಕಬ್ಬಂ ಪೊತ್ತಡೆ ಶಿರೋಭಾಗವೂಱಿದ ಬೋರೆಗಳವೊಲು ಹೊಡದು ರಾವುಗಳು ತಾಗಿದೊರಸಿದ ಮಸಗಿದೊತ್ತಿನ ಮೇಗಣೆಡೆಗಳು (ಐಸಪು. ೩೬-೩೬); ಮಕ್ಕಳ ಮಂಡೆ ಬೋರೆ ಹೋಹಂದದಿ ಹೆಟ್ಟೆ (ನೇಮಿಸಂ. ೦೩-೦೦೭); ಹೊತ್ತ ಹೊಱೆಗಳಿಂದ ನೆತ್ತಿ ಬೋರೆಯು (ಅಮ.ಸಾಂ. ೬-೩).

[ದೇ॥. ತಮಿ. ಪೊಱೆ$_{ಳ}$, ಪೊಱ್ಱೆ$_{ಳ}$; ಮಲ. ಪೊಱ್ಱ; ತುಳು. ಬೋರೆ=ಬೆಟ್ಟದ ತುದಿ]

ಪೋರ್ಕಳ (ನಾ). ಯುದ್ಧರಂಗ; ರಣರಂಗ : ಕಾಳಗದ ಪುಲಿ ತಾನ್, ಕಾಳಗದ ಪುಲಿಗಳನ್ ಪೋರ್‌ಕಳದೆ ಕಳೆಯನ್, ಸಾವಿಗೀಯನ್ (ಪಾರಸಿ. ೨೩-೨). [ಪೋರ್$_2$ + ಕಳ$_3$]

ಪೋರ್ಕಳಿ (ನಾ). ಯುದ್ಧ; ಕಾಳಗ; ಹೋರಾಟ : ಈ ಬಗೆಯಲ್ಲಿ ಪೋರ್‌ಕಳಿ ಮಂಂದುವರಿದರೆ ನಾವು ಕಾಳೆಗದಲ್ಲಿ ಗೆಲುವು ಗಳಿಸುವುದು ಪ್ರಯಾಸ (ಹುಂಹಾ. ೩೩೭). [< ಪೋರ್ಕಳ]

ಪೋರ್ಕುಳಿ, ಪೊಕ್ಕುಳಿ, ಪೊರ್ಕುಳಿ, ಹೊಕ್ಕುಳಿ, ಹೊರ್ಕುಳಿ, ಹೋಕುಳಿ (ನಾ). ೧. ಯುದ್ಧ ಮಾಡುವವನು; ಹೋರಾಡುವವನು : ಕುಳಿ ಪ್ರತ್ಯಯಕ್ಕೆ—ಪೋರ್ಕುಳಿ[ಪಾಠಾಂ. ಪೊರ್ಕುಳಿ, ಪೊಱಕುಳಿ, ಹೋರುಕುಳಿ] ಓಡುಕುಳಿ (ಕಮದ. ೨೦೩ ಪ್ರಯೋ); ಮಾಟ್ಟುದು ಶೀಲಮಿಾತಂ ಮಾಟ್ಕುಳಿ, ಏವಂ ಅಟ್ಕುಳಿ, ಪೋರ್ಕುಳಿ (ಕಬ್ಬಾಮ. ೩೪೩ ಪ್ರಯೋ). ೨. ಕಾಳಗ; ಯುದ್ಧ; ಹೋರಾಟ : ಪೂವಿನೊಳಂ ಪೋರ್ಕುಳಿ ನಮಗೇವುದೊ (ಪಂಠಾಮಾ. ೧೨-೬೦). ೩. ಜಗಳ; ಕಚ್ಚಾಟ : ಆಗಳಾಗಜದ ಪೋರ್ಕುಳಿ[ಪಾಠಾಂ. ಪೊರ್ಕುಟಿ]ಯಿನವಯವದೊಳಲ್ಲಲ್ಲಿಗಳವಟ್ಟ ರದನವಿಘಟ್ಟನರೇಖಾನಿಕಾಯಮುಂ . . . ಬೇಱೊಂದು ಚೆಲ್ವನವಟ್ಟೆಸಿ ವೀರರಸಕ್ಕಾಗರಮಾಗೆ (ಜಗವಿ. ೬-೩೩ ಪ); ಕಡೆಯೊಳ್ ಕೋಣನ ಪೋರ್ಕುಳಿ ಗಿಡುವಿಗೆ ಮಿತ್ತೆಂಬ ತೆಱದೆ (ಯಶೋಕ. ೩-೬೮). 'ಪೋರ್ಕುಳಿವಕ್ಕಿ' ಪರಾ. ೪. ಪ್ರತಿಭಟನೆ; ವಿರೋಧ; ಅಡ್ಡಿ : "ತಳ್ಪೊಯ್, ತಡಂಬರೆ, ಪೋರ್ಕುಳಿ . . . ಈ ೨೬ ಪ್ರತಿಹತಕ್ಕೆ ಪೆಸರ್" (ಕಕಸಾ. ೩೯-೨೯೬). ೫. [ಕಾಮಶಾ] (ರತಿಕ್ರೀಡೆಯಲ್ಲಿಯ) ಸೆಣಸಾಟ; ಪ್ರಣಯಕಲಹ : ವಸುಧಾವಲ್ಲಭೆ ಮೇಘಕಾಲವಿಟನೊಳ್ ಸಂಭೋಗಮಂ ಮಾಡೆ ಬಣ್ಣಸರಂ ಪೋರ್ಕು[ಪಾಠಾಂ. ಪೊಕ್ಕು]ಳಿಯಿಂದಲೇ ಪಱಿದು ಸೂಸಿತ್ತಲ್ಲದಂದೆ ತ್ತಣಿಂ ಪೊಸಮುತ್ತುಂ ಕಿಸುಗಲ್ಗಳುಂ ಕೆದಱಿ ಕಣ್ಗೆಂಬಾದುವೆಂಬಂತ ದೇನೆಸೆದೊಪ್ಪಿರ್ದುವೊ ಸೂಸಿದಾಲಿವರಲುಂ ತಳ್ತಿಂದ್ರಗೋಪಂಗಳುಂ (ಪಂಠಾಮಾ. ೭-೧೪೬); ಪೋರ್ಕುಳಿ[ಪಾಠಾಂ. ಪೊರ್ಕುಟಿ]ಯಿಂದವೆ ಹಂತಿದಪ್ಪಿ ತಾಱುಂಬಟಿಯುಂ ತೆರಳ್ದ ಕುರುಳ್ . . . ಕೂಟದೊಂದು ಸವಿಯುಂ ಪಿಸುಣಾಡುವುವೀ ಲತಾಂಗಿಯಾ (ಪಂಪ್ರಪು. ೬-೭೨). (ಗು). ೬. ಜಗಳವಾಡುವ ಸ್ವಭಾವದ; ಕಲಹಶೀಲ : ಸುಣ್ಣದೆಲೆಯನೊತ್ತೆಯಿಟ್ಟು ಮದದಾನೆಯುಮಂ ಮಾಣಿಕಮುಮನೊತ್ತೆವಿಡಿಸಲಟ್ಟುವ ಚಿಕ್ಕ ಪೋರ್ಕುಳಿ ಬೊಜಂಗರುಮಂ . . . ನೋಡಿ (ಪಂಪಭಾ. ೪-೬೭ ಪ). **ಪೊಕ್ಕುಳಿ :** ೨. ಪೂವಿನೊಳಂ ಪೊಕ್ಕುಳಿ ಕೇಳಾವಂಗಂ ಪೊಲ್ಲದು (ಉಸಾರ. ೦೨-೬೬). ೩. 'ಪೊಕ್ಕುಳಿವಕ್ಕಿ' ಪರಾ. ೫. ಆಲಿಂಗನಂ ಪಿರಿದುಂ ಪೊಕ್ಕುಳಿ ಚುಂಬನಂ . . . ಸತ್ಕಾಮಿನೀಸುರತಕ್ರೀಡೆಯೊಳೊಪ್ಪೆ ಸೌಖ್ಯದೊದವಿಂದಿರ್ವಂ ಮಹೀವಲ್ಲಭಂ (ಶ್ರೀಪುವಿ. ೦೭-೬೬). ೭. ಜಗಳವಾಡುವ ಸ್ವಭಾವದ ಹಕ್ಕಿ; ಕೋಗಿಲೆ : ವರಫಲವನುಂಬ ಪೊಕ್ಕುಳಿಗಳಿಂ ಗಿಳಿಗಳಿಂ . . . ವನವನಂಗಳ್ ಮೆಱೆದುವು (ಸಂಪು. ೪೩-೨೩). **ಪೊರ್ಕುಳಿ :** ೨. ಪೊಣರ್ದು ಕುರುಶ್ರೇಷ್ಠನೊಳ್ ಕಾದುವಾ ಯುದ್ಧದಗುರ್ವುಂ ಪೂವಿನೊಳ್ ಪೊರ್ಕು[ಪಾಠಾಂ. ಪೊಕ್ಕು]ಳಿ ನೆಗಟ್ಟಿವೊಲಾಯ್ತಾ ಮುರಧ್ವಂಸಿಗಾಗಳ್ (ಜಗವಿ. ೭-೯೨). ೩. 'ಪೊರ್ಕುಳಿವಕ್ಕಿ' ಪರಾ. ೪. "ಪೊರ್ಕುಳಿಯು ತಳ್ಪೊಯ್ಯುಂ" (ಕವಿಕಂ. ೦೩೬). ೫. ಆ ತಂತುವಾಯಂ ಮುನ್ನಮೆ ತನ್ನ ಪೆಂಡತಿ ಜೋಡೆಯೆಂದು ಸಂದೇಹಂಬಡುವಾತನವಳ ವಿಪರೀತವೇಷಂ ತನಗೆ ರೋಷಮನೀಯೆ ಸಾಯೆ ಸದೆಬಡಿದು . . . ಕಳ್ಳ ಸೊರ್ಕಿನೊಳಮವಳ ಪೊರ್ಕುಳಿಯೊಳಂ ಬಟಲ್ದು ನಿದ್ರಿತನಪ್ಪುದುಂ (ಪಂಕತಂ. ೭೩-೦). ೮. ಪೆಟ್ಟು; ಹೊಡೆತ : ನೀರಾಟವಾಡುವ ಗಾಡಿಕಾರ್ತಿಯರ ಘನಜಘನಂಗಳ ಪೆರ್ಮೊಲೆಯ ಪೊರ್ಕುಳಿಯಿಂ ಪಱಿವಱಿಯಾದ ಪೆರ್ದೆಱೆಗಳುಮಂ ತಳೆದ ಪೂಗೊಳಂಗಳೊಳಂ (ಕಾದಂಠಾ. ೩೨೬). **ಹೊಕ್ಕುಳಿ :** ೨. ಎಲೆ ಪಾತಕಿ ಕಡುಹಂದೆಯ ಕೊಂದು ಹೊಕ್ಕುಳಿಯ ಗೊಂದಣದೊಳು ಹೊಕ್ಕು ಬಹುದುಃಖವಡೆವುದಂದವಹುದೇ ಕಲಿಗಳಿಗೆ (ಶ್ರೀಪಾಠಿ. ೬-೬೬). 'ಹೊಕ್ಕುಳಿಗೊಳ್' ಪರಾ. **ಹೊರ್ಕುಳಿ :** ೨. 'ಹೊರ್ಕುಳಿಸು' ಪರಾ. **ಹೋಕುಳಿ :** ೨. 'ಹೋಕುಳಿಸು' ಪರಾ.

ಪೋರ್ಕುಳಿಯಾಗು, ಪೊರ್ಕುಳಿಯಾಗು = ೧. ಯುದ್ಧವಾಗು; ಹೋರಾಟವಾಗು : ಪೋರ್ಕುಳಿಯಾದಡೆ[ಪಾಠಾಂ. ಯಾಡದೆ, ಯೋದಡೆ]ಹರಿಯಂ ಮಾರ್ಕೊಳ್ಳದೆ ತೆಗೆದ ಕಯ್ಯ ಬಟಿಯನೆ ಬಂದಂ ಸೊರ್ಕಿದಿಭಪತಿಯ ಕಯ್ಯೊಳ್ ಸಿಕ್ಕಿ ತೊಗಲ್ಪಾವೆಯಂದದಿಂ ಚಾಣೂರಂ (ಅರ್ಧನೇ. ೮-೦೦೩). ೨. ಪ್ರಣಯಕಲಹವುಂಟಾಗು : ಒಡನಲಿವ ನಲ್ಲಳಚ್ಯುತನಡಿವಜ್ಜೆಗಳಲ್ಲಿ ಕೇಳಿಗೆಳಸಿದಳವನೀಯಡಿಯೊಳ್ ಪೋರ್ಕುಳಿ[ಪಾಠಾಂ. ದನವನೀಯೆಡೆಯೊಳ್ ಪೊರ್ಕುಳಿ]ಯಾಯ್ತೆಂದಡಿಗಡಿಗಾಯೆಡೆಯನೊರ್ವಳೀಕ್ಷಿಸುತಿರ್ದಳ್ (ಜಗವಿ. ೩-೨೬); ಒದವಿದಲಂಪು ಪೋಪಿನವನಂಕದ ಬೀಕದ ಪೆರ್ಚು ಪೊಚ್ಚಱಂಗದ ಸಱಿಮಿಂಡಿಯೊಳ್ ಪೊರಳಿ ಪೊರ್ಕುಳಿಯಾದೊಡೆ (ಸೂಕ್ತಿಸು. ೬ ೪೩೪). **ಪೋರ್ಕುಳಿಯಾಡು** = ಯುದ್ಧಮಾಡು; ಹೋರಾಡು : ಅಂತು ನೆಟಲೊಳ್ ಪೋರ್ಕುಳಿಯಾಡುವಂತೊರ್ವರೊರ್ವರಂ ಗೆಲಲ್ನೆಱೆಯದಿರೆ ದುರ್ಯೋಧನಂ ಕರು ಮುಳಿದು (ಗದಾಯು. ೮-೨೩ ಪ); ಕಳದೊಳವರಿರ್ವರುಂ ಪೋರ್ಕುಳಿಯಾಡಲ್ ಧರ್ಮಯುದ್ಧದಿಂದವನಟಿಯಲ್ (ನೇಮಿಪು. ೦೦-೦೨೬). [ಪೋರ್$_1$ + —ಕುಳಿ$_3$]

ಪೋರ್ಕುಳಿಗೊಳ್, ಪೊರ್ಕುಳಿಗೊಳ್, ಹೊಕ್ಕುಳಿಗೊಳ್ (ಕ್ರಿ). ಹೋರಾಡು; ಯುದ್ಧಮಾಡು : ಬಂಧುರಭಟರ್ಕಳ್ ಭೂಪನೊಡನೆ ವೈರಂದೆಗೆದು ಭರದೆ ಪೋರ್ಕುಳಿಗೊಳಲ್ ತೊಡಗಿದರ್ (ಅರಾಕ. ೪-೩-೧೬). **ಪೊರ್ಕುಳಿಗೊಳ್ :** ಎನ್ನೊಳು ಪೊರ್ಕುಳಿಗೊಳ್ವುದೆನುತ ವಿಕ್ರಮೋನ್ನತನಿದಿರ್ವಂದು ನಿಲಲು (ನೇಮಿಸಂ. ೩೦-೯೭). **ಹೊಕ್ಕುಳಿಗೊಳ್ :** ತನ್ನೊಳು ಹೊಕ್ಕುಳಿಗೊಂಡ ಉನ್ನತಮಪ್ಪ ಗಜರತ್ನಮೆಯ್ದಿತು ತನ್ನ ತಾನಾ ನೃಪನೆಡೆಗೆ (ಶ್ರೀಪಾಠಿ. ೧೩-೦೦); ಅಂತಕನೊಳಗೆಕ್ಕೆಯೊಳಂ ಹೊಕ್ಕುಳಿಗೊಳ್ವೆನೆನಿಪ್ಪೆಕ್ಕತುಳದ ಭಟನಿವಹಂ ನಡೆದುದಿಳಾಧಿಪನಂ ಬಳಸಿ (ಜಯಕಾ. ೬-೦೬). [ಪೋರ್ಕುಳಿ + ಕೊಳ್$_1$]

ಪೋರ್ಕುಳಿಯಿಕ್ಕು, ಪೊರ್ಕುಳಿಯಿಕ್ಕು (ಕ್ರಿ). ೧. ಹುರುಡಿಸು; ಸ್ಪರ್ಧಿಸು : ಮುಡಿವೊಱೆಯ ವಿಷಯದೆ ಮಱೆಗೆ ವಂದಂಧತಮಸಮಂ ಪೆಱಗಿಕ್ಕಿ ತನ್ನೊಳ್ ಮಲೆವ ಲಲನೆಯರ ವದನವಿಧುಬಿಂಬದೊಳ್ ಕಪೋಳಸಂಭೃತಪ್ರತಿಕೃತಿಚ್ಛದ್ಮದಿಂ ಪೊಕ್ಕು ಪೋರ್ಕು[ಪಾಠಾಂ. ಪೊಕ್ಕು]ಳಿ

ಯಿಕ್ಕಿಯುಂ (ಕರ್ಣಾ. ೬-೧೬ ಪ). **ಪೊರ್ಕುಳಿಯಿಕ್ಕು** : ೨. ಜಗಳವಾಡು ; ಕಲಹಮಾಡು : ಪೆಱರೊಳು ಪೊರ್ಕುಳಿಯಿಕ್ಕುತ್ತಂ ಮೆಯ್ಯೊರಿಸುತ್ತಂ ಬೊಟ್ಟುವರಿಸುತ್ತುಮಿವು ಮೊದಲಾದ ಪೆಱವುಂ ರಾಗದ್ವೇಷಹೇತುಗಳಪ್ಪುವಂ ಮಾಡುತ್ತಿರ್ಪುದುಂ (ಪಾಶ. ೨೦೭).

[ಪೋರ್ಕುಳಿ + ಇಕ್ಕು]

ಪೋರ್ಕುಳಿವಕ್ಕಿ, ಪೊಕ್ಕುಳವಕ್ಕಿ, ಪೊಕ್ಕುಳಿವಕ್ಕಿ, ಪೊರ್ಕುಳಿವಕ್ಕಿ (ನಾ). ಜಗಳವಾಡುವ ಸ್ವಭಾವದ ಹಕ್ಕಿ; ಕೋಗಿಲೆ : " ಪೊರ್ಕುಳಿ[ಪಾಠಾಂ. ಪೊರ್ಕುಳಿ, ಪೊಕ್ಕುಳ]ವಕ್ಕಿಯೇದು ಕೋಗಿಲೆ " (ಕಸಾ. ಕ. ೫೦); " ಪಡಿಯಜಿವಕ್ಕಿ, ಪೋರ್ಕುಳಿವಕ್ಕಿ[ಪಾಠಾಂ. ಯವಕ್ಕಿ] . . . ಪರಪುಟ್ಟಂ — ಈ ೫ ಪಿಕಂ " (ಶಪಾ. ೫೬-೨೦೩). **ಪೊಕ್ಕುಳವಕ್ಕಿ** : "ಪೊಕ್ಕುಳವಕ್ಕಿ[ಪಾಠಾಂ. ಪೊಕ್ಕುಳ್ವಕ್ಕಿ] . . . ಪಡಿಯಜಿವಕ್ಕಿ ಕೋಗಿಲೆಯೆನಿಕ್ಕು " (ಶಬ್ದಕು. ೨೯) ; ಪಂಥುಸಮಯದೊಳಗೆ ಮಾವಮರ ಚಿಗುರಲೆಳದಳಿಗ ಕರ್ದುಕಿ ಪೊಕ್ಕುಳವಕ್ಕಿ ಕೊರಳಿನಿಂಚರಮುದಿಸೆ (ಶಾಕ. II, ೧೬೭ ಕಬ್ಬಿಗಾಕಾರ್ಯಕರ್ಣಾ). **ಪೊಕ್ಕುಳಿವಕ್ಕಿ** : (೪). **ಪೊರ್ಕುಳಿವಕ್ಕಿ** : ಮೇಲಿನ ' ಪೋರ್ಕುಳಿವಕ್ಕಿ ' ಉಲ್ಲೇಖದ 'ಶವಂದ' ಪ್ರಯೋಗದ ಪಾಠಾಂತರವನ್ನು ನೋಡಿ. [ಪೋರ್ಕುಳಿ + ಪಕ್ಕಿ]

ಪೋರ್ಕೆ, ಹೋರ್ಕೆ (ನಾ). ಹೋರಾಟ ; ಕಾಳಗ : " ಹೋರಟೆಯೆನೆ ಪೋರ್ಕೆಯುಂ " (ಪಾರ್ಶ. ೪೪). **ಹೋರ್ಕೆ** : (೪). [ಪೋರ್1 + — ಕೆ]

ಪೋರ್ಚುಗೀಸ್, ಪೊರ್ತುಗೀಜ, ಪೋರ್ಚುಗೀಸ (ನಾ). ೧. ಪೋರ್ಚುಗಲ್ಲಿಗೆ ಸೇರಿದ ವ್ಯಕ್ತಿ ; ಪೋರ್ಚುಗಲ್ಲಿನವನು. ೨. ಪೋರ್ಚುಗಲ್ಲಿನ ಭಾಷೆ : ಪೋರ್ಚುಗಲ್ಲಿನ ಭಾಷೆ ಪೋರ್ಚುಗೀಸ್. ಅದು . . . ಅನೇಕ ಜರ್ಮನ್ ಮತ್ತು ಸೆಮಿಟಿಕ್ ಶಬ್ದಗಳನ್ನೊಳಗೊಂಡಿದೆ (ಕರ್ನೂ. XI, ೨೫೨). (ಗು). ೩. ಪೋರ್ಚುಗಲ್ಲಿಗೆ ಸೇರಿದ : ಈ ಪೋರ್ಚುಗೀಸ್ ಜನರು ಅನುಮಾನವಾಗದ ರೀತಿಯಲ್ಲಿ ಅವರೊಡನೆ ವರ್ತಿಸಿದರು (ಕ್ರಪಾ. II. ೦೮೪). **ಪೊರ್ತುಗೀಜ** : ೧. ಫ್ರೆಂಚರವೂ ಪೊರ್ತುಗೀಜರವೂ ಕೆಲವು ಪ್ರದೇಶಗಳು ಹಿಂದುಸ್ತಾನದಲ್ಲಿ ಉಂಟು (ಪುಂಪಾಡು. ೪-೦೦೩). **ಪೋರ್ಚುಗೀಸ** : ೧. ಒಬ್ಬೊಬ್ಬ ಪೋರ್ಚುಗೀಸ ಐದು ಆರು ಹೆಂಗಸರನ್ನು ಇಟ್ಟುಕೊಳ್ಳುತ್ತಿದ್ದ (ಕ್ರಪಾಇ. II, ೨೯೦). ' ಪುಡುತ ಕೇಶ ' ಪರಾ. [←ಇಂ. Portuguese./ ತೆಲು. ಬುಡುತಕೇಚು]

ಪೋರ್ಚುಗೀಸ ' ಪೋರ್ಚುಗೀಸ್ ' ನೋ.

ಪೋರ್ತ (ನಾ). ಹೋರಾಟ ; ಕಾದಾಟ : ವ್ಯಾಳವನಗಜದ ಪೋರ್ತದ ಕೇಳಿಗೆ ವಿಜಯಾರ್ಧಶೈಲವತಿ ಸವೆಯಿಸಿ ತಂದೋಳಿಯೆ ನಿಜಿಸಿದ ಬೆಳ್ಳಿಯ ಲಾಳಾವಿಂಡಿಗೆಮೊಲಿರ್ವುವಿಜಿ ಮಡಲ್ಗಳ್ (ಪಾಂಚಿಪು. ೨-೦೦೪) : ಭಾವಿ ಪೊಡಾಂ ಜಟ್ಟಿಯವಂ ಗೋವಳನೆಂದಂದು ದೇವ ಪೋರ್ತದೊ[ಳ] [ಪಾಠಾಂ. ಪೋರ್ತದೊಡ, ಪಾರ್ದೊಡಮ,[ಪೋ]ರ್ದೊಡಮು]ವನೆನ್ನಾವೆಡಗೆ ವರ್ಪಂ (ಕರ್ಣಪ. ೯-೬೦). 'ಪೋರ್ತಂಗೆಗೊಳ್' ಪರಾ.

[ಪೋರ್1 + — ತ್ತ]

ಪೋರ್ತಂಗೊಳ್ (ಕ್ರಿ). ಹೋರಾಡು : ಕಾದು : ಆ ಗಜಮಲ್ಲ ನೋಳ್ಪೊರ್ತಿಗೊಂಡುದೆ ಮಲ್ಲಸಿಂಗರಂಗೆಯ್ದುಂತಾಗೆ (ಕರ್ಣಪ. ೯-೬೬ ಪ).

[ಪೋರ್ತ + ಕೊಳ್1]

ಪೋರ್ನುಡಿ (ನಾ). ಜಗಳದ ಮಾತು ; ಬಯ್ಗುಳ ; ಮೂದಲಿಕೆ : ಪೆಣ್ಣಾಲಗೆಯೆ ನೋಡೆ ಮಸೆಗಣೆಯ ಡೊಣೆಯಲ್ತೆ . . . ಪುಣ್ಯಾರಿದ ಪೋರ್ನುಡಿಯ ಮಳೆಗರೆದುದೊರ್ಮೆ (ಕಾಂಪೂ. ೦೨೯-೨೬೫).

[ಪೋರ್2 + ನುಡಿ3]

ಪೋರ್ಮೆ (ನಾ). ಪ್ರೇಮಕಲಹ : ಅಗಲ್ದೊದ ಕೂರ್ಮೆ ಪೋರ್ಮೆ ಪೊರ್ದುಗೆಯೊಗೆವಿಚ್ಚೆ ಮಚ್ಚು ಎಟರಂ ಕೂಜಿಬಾಡುವ ಪಾಡು ಗಾವಡಿಯೆಂಬಗಣತಚೇಷ್ಟೆಗಳ್ ಮೆಱಿದಿರಲ್ ತಱಿಸಲ್ವುದು ಸೂಳೆವಿಜ್ಜೆಯೊಳ್ (ಪಪಳಾ. ೯-೨೨). [ಪೋರ್2 + — ಮೆ1]

ಪೋಲ್1, ಪೋಲು1, ಹೋಲ್, ಹೋಲು1 (ಕ್ರಿ). ಹೋತ1 (ಭೂತಕೃ). ಹೋತ್ತು1 (ಭೂತನಾಮ). ಎಣೆಯಾಗು ; ಸಾಟಿಯಾಗು ; ಸದೃಶವಾಗು : "ಪೋಲ್-ಸಾದೃಶ್ಯೇ" (ಹುಡಾ) ; ಕಳ್ಳ ಬೆಳ್ಳಿವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ ಶಶಿಯಂ ಕಚ್ಚಿ ನೆಲಕ್ಕಿಟ್ಟಿದ ರಾಹುವಂ ನೆಱೆ ಪೋಲ್ತಳ್ (ಗಾಕೃಣಾ. ೧೬೬ ಕೂಪ್ರಳ); ಶಚಿಮಹಾದೇವಿಯನೆ ಪೋಲ್ವ ಧಾರಿಣಿಮಹಾದೇವಿಯೆನ್ನ ಕಾಲ್ಗೆಱಗಿ ಪೊಡವಟ್ಟರ್ದಳ್ (ಪಣ್ಣಾಶಾ. ೬೦-೬); ಪಲವು ಪೂಮಾಲೆಗಳಂ ಬಗೆಯಜಿದು ನೀಡುಗುಂ ಮಾಲೆಗಾಱನುಂ ಪೋಲ್ತುದಗ್ರಮಾಲ್ಯಮಹೀದಂ (ಆಂಪು. ೫-೪೬) ; ಪ್ರತಿಬಿಮ್ಬಂ ರೂಪನೊಳ್ ಪೋಲ್ಕೆಮ (ಎಳ. VIII, ತಗಳ .೩೬-೬ ; 1077). **ಪೋಲು1**: ಈ ನೆಲದೊಳಾರುವಂ ಪೋಲದವರಿಂತಿವರು (ತಿಮು. ಕೀ. ೨೬-೦೮); ಕಾವನ ಪೋಲುವ ಸೋಮವದನನನು ಕೋಪಲಾಂಗಿಯೆ ಕರೆತರಲು ಪ್ರೇಮದಿಂ ಮುತ್ತಿನ ಹಾರವನೀವೆನು (ಕಂಪೂ. ೯-೪೨): ಭುವನ ಮೂರರೊಳರಸಿದೊಡೆ ನಿನ್ನುವನು ಪೋಲುವರಿಲ್ಲ (ಅಪಂಚಾ. ೦-೫-೦೬). **ಹೋಲ್** : ಗುರುಕಚಭಾರ ನೀಳರತ್ನಂ ನಗೆ ಪಾಕನಿಗಾಗಿ ಹೋಲ್ತಳೀ ನಿರುಪಮಕಾನ್ತೆ ಸಾನ್ತಲೆ ಶುಧಾಂಶುಕಳಾಶ್ರಿತದುಗ್ಧವಾರ್ಧಿಯಂ (ಎಳ. XVI. ಕಳ್ಳಾ. ೧೬-೩೬, 1169). **ಹೋಲು1**: ಶಬ್ದಿಯಾದಾತ ತರುಗಳ ಹೋತ ನಿಶ್ಶಬ್ದಿಯಾದಾತ ಪಾಷಾಣವ ಹೋತ (ಅಪಹಂ. ೦೦೯-೪೧೦); ಎಲವೋ ನಿನ್ನ ಹೋಲುವರಾರು ಬಾಹಿರ ಭಂಡರವನಿಯಲಿ (ಕುಚ್ಚಾಕ್ರೋ. ೦೪-೨೬): ಒಂದೂವರೆವರ್ಷದ ಚೀನಿ ತನ್ನ ತಂದೆಯ ಮೈಕಟ್ಟು ಮುಖಭಾವಗಳನ್ನು ಹೋತು ಹುಟ್ಟಿತ್ತು (ಪಂಕಸ್ಮೃ. ೪೬). [ದೇ.ಪ ತಮಿ. ಪೋಲ್; ಮಲ. ತೆಲು. ಪೋಲು]

ಪೋಲ್2 ? (ನಾ). (?) : ಬಲ್ಗಿಚ್ಚ ಪಳವ ಲಿಂಗಂ ಮೂಡೆ ಕಣ್ಗೆಟ್ಟು ಕಾಲ್ಗಾಣದಾದನಾ ಕಾಳ್ಸ್ವತಕಳ್ಕುತೆ ತುಳಲ್ದುಂದಿ ನಾಲ್ಮೊಗಂ ತಲೆಗಂಡನೇ ಶಿವನ ಬಲ್ಗಣೆಯ ಪೋಲ್ಗಾವನು (ಪಾವಾಂ. ೩-೨೩). [?]

ಪೋಲ್3 ' –ಪೋಲ್ ' ನೋ.

ಪೋಲಕ, ಪೋಲಕಾ, ಪೋಲ್ಕ (ನಾ). ಒಂದು ಬಗೆಯ ಕುಪ್ಪಸ; — ರವಿಕೆ : ವತ್ಸಲೆ ಆ ದಿನದ ಪೋಲಕ ಪರಕಾರಗಳನ್ನೇ ಧರಿಸಿದ್ದಳು (ಕ್ಷ. ೩೮) ; ಉಷಾನ ತಾಯಿ . . . ಒಗೆದ ಪರಕಾರ — ಪೋಲಕಗಳನ್ನು ತೊಡಿಸಿದ್ದರು (ಕ್ರಚಮ. ೩೦). **ಪೋಲಕಾ**: ನನ್ನ ಪೋಲಕಾದ್ಲೇ ಒರಸು (ಹೂಪಸಿ. ೨೦) ; ನೀ ಮುಂದಿನ ಜನ್ಮಕ್ಕ ಬರೋದರೊಳಗ ಪೋಲಕಾ, ರುಗಾ ಬಂದಿರತಾವೇಳು. ಕುಬಸದ ಹಂಗ್ಯಾಕ ? (ಹೂಪಂಗಾ. ೭೦). **ಪೋಲ್ಕ** : ಪೋಲ್ಕ . . . (ಹೆಂಗಸಿನ) ಗುತ್ತನಾದ (ಸಾ, ಹೊಗೆಯ) ನಡುವಂಗಿ (polka. ೨೦೪೭). [← ಇಂ. Polka. / ಮರಾ. ಪೋಲಕೇ]

ಪೋಲಕಾ ' ಪೋಲಕ ' ನೋ.

ಪೋಲಗಟ್ಟು (ನಾ). (?) : ಕಡೆಯ ಮೆಂಡೆಯ ಗೆಜ್ಜೆ ಕಣಕಾಲ ಬಾಸಿಂಗ ಮಡೆಯ ಬದ್ದುಗೆಯ ಕಿಗ್ಗಟ್ಟು ಬಿಡೆಯವಿಲ್ಲದೆ ಪೋಲಗಟ್ಟಿನ ಬಿಲ್ಲಾಳ ಪಡೆ ನಡೆಯಿತು ಬಾಣನೊಡನೆ (ಹೂಹಕ. ೧೦-೦೧). [?]

ಪೋಲಿ1 (ನಾ). ೧. ಉಡಾಳ ; ಪೋಕರಿ : ಊರಿಪ ಹಿರಿಯರು ಇವರಿಬ್ಬರು ಶುದ್ಧ ಪೋಲಿಗಳೆಂದು ಭಾವಿಸಿಬಿಟ್ಟಿರು (ಹೂಸೂಹ. ೫೦) ; ನಿನ್ನ ಸಲಿಗೆ, ಬೇಬಿಯ ಪ್ರೀತಿ — ಇವು ಅವನಿಮ್ಮ ಪೋಲಿಯನ್ನಾಗಿ ಮಾಡಿದ್ದವು (ಪುಂಗಾಕು. ೬) ; ಪೋಲೀಮುಂಡ್ಲೇದಕ್ಕೆ ತುಲೀ ಕಟ್ಟಿದರೆ ತಾಲಿ ತಾಲಿ ಪೋಲಿ ಪೋಲಿ (ಗಾದೆ) . ' ಅಪಾಪೋಲಿ ' ಪರಾ. ೨. ದುರ್ಮಾರ್ಗದಲ್ಲಿ ವರ್ತಿಸುವವನು ; ನೀತಿಗೆಟ್ಟವನು : ಅವನು ಪೋಲಿ. ಅವನ ಗಳಕೆಯ ಮಾರ್ಗ ಸನ್ಮಾರ್ಗವಲ್ಲ (ಕಕ್ಕಾಹು. ೩೮) ; ಪೋಲಿಸರೆ, ನಿಮ್ಮ ಹೆಸರಿನಂತೆ ಪೋಲಿಗಳಾಗಿ ವರ್ತಿಸಬೇಡಿರಿ (ಪೀಹು. ೩೫).

೩. ಅಸಭ್ಯ ; ಲಂಪಟ : ಆ ಪೋಲಿ ನನ್ನ ಕೈಯನ್ನೇ ಹಿಡಿದುಕೊಂಡು (ಮುಖಮಾ. ೦೬೬). ೪. ಇಷ್ಟ ಬಂದಂತೆ ವರ್ತಿಸುವಿಕೆ ; ಸ್ವೇಚ್ಛಾಚಾರ: ನಿನ್ನ ಹಾಗೆ ನಾವು ಪೋಲಿಪೋಲಿಯಾಗಿ ಅಲೆದುಕೊಂಡಿದ್ದರೆ ಹೇಗಾದೀತು? (ಕಂಕಥ. ೩೦). ೫. ವ್ಯರ್ಥ ; ಹಾಳು : 'ಪೋಲಿಗೈ' ಪರಾ. ೬. ಹಾದರ ; "ವ್ಯಭಿಚಾರ" (ಅನಂನಾ). ೭. ಹೊಣೆಗೇಡಿಯಾದ ಹೆಂಗಸು : "ಪೋಲೀ .... ಕೆಲಸಗಳ್ಳೆ" (ಕಾಶಕ್ಯ. ೪೯). (ಗು). ೮. ಹೊಣೆಗೇಡಿಯಾದ ; ಜವಾಬ್ದಾರಿಯಿಲ್ಲದ : ಅವಳ ಚಿಕ್ಕಮ್ಮ . . . ಹೇಗೋ ಕಪ್ಪಪಟ್ಟುಕೊಂಡು ತನ್ನ ಮಕ್ಕಳನ್ನು ಮತ್ತು ಪೋಲಿ ಗಂಡನನ್ನು ಸಾಕುತ್ತಿದ್ದಳು (ಪುನರು. ೯).

ಪೋಲಿದನ = ತೊಂಡುದನ ; ತುಡುಗುದನ : ಅವನ ತೋಟಕ್ಕೆ ಪೋಲಿದನ ನುಗ್ಗಿ ಗಿಡಗಳನ್ನೆಲ್ಲಾ ಹಾಳುಮಾಡಿತು (ಕೂಡಿ). ಪೋಲಿಪಟಾಲಂ - ಉಡಾಳರ ಗುಂಪು ; ಪೋಕರಿಗಳ ತಂಡ : ಬಯಲಾಟ, ಪೋಲಿ ಪಟಾಲಂ ಎಂದುಕೊಂಡು ವೀರಭದ್ರ ಬಾಲ್ಯದಲ್ಲೇ ಬೀದಿಬಸವನಾದ (ಬಡ್ಡಿಮಾ. ೦೪೨). ಪೋಲಿ ಬೀಳು = ಹೊಣೆಗೇಡಿಯಾಗಂ : ಗಂಡು ಹುಡುಗರು ಪೋಲಿ ಬೀಳದೆ ಅವರವರ ಪಾಡಿಗೆ ಓದಿ ಪ್ಯಾಸ್ ಮಾಡಿ ಸಂಪಾದನೆ ಮಾಡುತಿದ್ದರೆ ನಮ್ಮ ಜವಾಬ್ದಾರಿ ಇಳಿಯಿತಪ್ಪ (ಮಹಾಗ. ೪೬). ಪೋಲೀ ತಿರುಗು = ಸ್ವೇಚ್ಛೆಯಿಂದ ಅಲೆದಾಡು ; ಮನಬಂದಂತೆ ತಿರುಗು : ಸೌರಕುಟುಂಬದಲ್ಲಿ ಅನೇಕವೇಳೆ ಅತಿವೇಗದೊಡನೆ ಸಂಚರಿಸುತ್ತ ಪೋಲೀ ತಿರುಗುವ ವಿಷಮಗತಿಯುಳ್ಳ ಮಂಡಲಗಳೂ ಉಂಟು (ಕ್ಯೋತಿರ್ವಿ. ೦೦೪); ನೀನು ಪೋಲೀ ತಿರುಗುವುದನ್ನು ಬಿಟ್ಟು ಯಾವಾಗ ಜವಾಬ್ದಾರಿ ವಹಿಸಿಕೊಳ್ಳುತ್ತಿ ? (ಕೂಡಿ). [ದೇ. ॥ ತಮಿ. ಕೊಡ. ಪೋಲಿ; ತುಳು. ಪೋಲಿ = ಸೂರೆಮಾಡುವ, ಅಸಂಬದ್ಧ ; ತೆಲು. ಪೋಲೆ]

ಪೋಲಿ₂ (ನಾ). ಗೋಧಿಹಿಟ್ಟಿನಿಂದ ಮಾಡುವ ಒಂದು ಬಗೆಯ ಭಕ್ಷ್ಯ: ಪೇಣಿ ಗಾರಿಗೆ ಪೋಲಿ ವಡಿ ಕರಜಿಗಾಯಿ . . . ಮೊದಲಾದ ಬಲು ಸೊಗಸುಳ್ಳ ಪಾಕಂಗಳಂ . . . ದೇವ ನೀನಾರೋಗಿಸೈ (ಪುಲ್ಲಿಕ. ೫-೬).

[ಸಂ. ಪೋಲೀ]

ಪೋಲಿಕಾಱ 'ಪೋಲಿಗಾಱ' ನೋ.

ಪೋಲಿಗಾರ 'ಪೋಲಿಗಾಱ' ನೋ.

ಪೋಲಿಗಾಱ, ಪೋಲಿಕಾಱ, ಪೋಲಿಗಾರ (ನಾ). ಪೋಕರಿ ; ಉಡಾಳ : ಜಾಲಗಾಱನ ಕೈಯ ದೀಹದಂತೆ ಬಾಲೆಯರ ಮನದ ಸೋಲುವೆಯಂತೆ ಇಂತಿವರನಳವಾಡಿ ಸಿಕ್ಕಿಸುವ ಪೋಲಿಗಾಱ[ಪಾಠಾಂ. ಪೊಲೆಗಾರ, ಪೊಲ್ಲಗಾರ, ಸೋಲುಗಾಱ]ರಿಗೆಲ್ಲಿಯದೋ ಸತ್ಯ (ಮೋಳಿಮಾ. ೬೫-೨೬೪). ಪೋಲಿಕಾಱ : ಕ್ಷಯಕಾರಣವೆಂಬ ಪಟ್ಟಣಕ್ಕೆ ಲಯಕಾರಣವೆಂಬ ಅರಸು ಪೋಲಿಕಾಱ ಪ್ರಧಾನ ಮದೋನ್ಮತ್ತ ತಳವಾಱ (ಸುಂಕಬಂ. ೪. ೬೬೨-೫೨). ಪೋಲಿಗಾರ: ಶೀಲರುತ್ತಮರು ನೀವಹುದು ಪೋಲಿಗಾರರಾವು (ಸಮುಮ. ೦೩).

[ಪೋಲಿ₁ + — ಕಾಱ]

ಪೋಲಿಗೈ (ಕ್ರಿ). ನಾಶಮಾಡು ; ವ್ಯರ್ಥಗೊಳಿಸು : ಖೂಳಬಲಿಯು ಬಿಟ್ಟ ಸರಳ ಜಾಲವೆಲ್ಲವಾ ಶೀಲ ನಿರ್ಜರೇಂದ್ರನದನು ಪೋಲಿಗೈದನು (ಸಮುಮ. ೩೯). [ಪೋಲಿ₁ + ಗೈ (< ಕೆಯ್₁)]

ಪೋಲಿತನ (ನಾ). ೧. ಪೋಕರಿತನ ; ಪುಂಡಾಟಿಕೆ : ದೇವಯ್ಯನ ಪೋಲಿತನಕ್ಕಿಂತ ಇದು ಸಹಸ್ರಪಾಲು ಮೇಲು (ರಂಗವ. ೨೦೩). ೨. ಹೊಣೆಗೇಡಿತನ ; ಜವಾಬ್ದಾರಿಯಿಲ್ಲದಿರುವಿಕೆ : ಅವನ ಪೋಲಿ ತನದಿಂದ ಅದಕ್ಕೆ ಪೋಷಣೆಯೇ ಇರಲಿಲ್ಲ (ಕಂಕಥ. ೧೩೦).

[ಪೋಲಿ₁ + — ತನ]

ಪೋಲಿಮೆ 'ಪೋಲ್ಮೆ' ನೋ.

ಪೋಲಿಯೋ (ನಾ). ಮೆದುಳುಬಳ್ಳಿಯೊಳಗಿನ ಬೂದುದ್ರವ್ಯದ ಉರಿಯೂತ : ಪೋಲಿಯೋ ತಡೆಗಟ್ಟಲು ಲಸಿಕೆಗಳು ದೊರೆಯುತ್ತಿವೆ (ಕಲೋ. ೬). [P ಇದು ಇಂಗ್ಲಿಷಿನ 'Poliomyelitis' ಎಂಬ ಶಬ್ದದ ಸಂಕ್ಷಿಪ್ತರೂಪ]

ಪೋಲಿಸು, ಹೋಲಿಸು (ಕ್ರಿ). ಒಂದರೊಡನೊಂದನ್ನು ತಾಳೆನೋಡು,- ತುಲನೆಮಾಡು : ಪೋಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾ ಸುರತ ಪ್ರವೀಣೆಯಂ (ಅಂಪು. ೨-೬೬) ; ಪೆಱರಾರುಮನಾ ಸತಿಯ ಪೆಮ್ಪಿನೊಳ್ ಪೋಲಿಪುದೇ (ಎಕ. II. ೦೩೯-೦೦; ಸು. ೨೫೦) ; ಸತ್ಯಾಶ್ರಯದೇವನೆ ಪೃಥ್ವೀ ವಲ್ಲಭಂ ಕಥಾನಾಯಕನಾಗನಿಲಜನೊಳ್ಪೋಲಿಸಿ ಪೇಟ್ದನೀ ಗದಾಯುದ್ಧಮಂ ಮಹಾಕವಿ ರನ್ನಂ (ಗದಾಯು. ೦-೩೦) ; ಸಿರಿಸದ ಬಾಸಿಗಮನೆಂತು ಪೋಲಿಸುವೆಂ ಸುಂದರಿಯ ಮನೋಜನ ಪಾಶದೊಳೆರಡೆರಡೆ ಪರಲ್ಕೆ ಸಾಲ್ದ ಭುಜವಲ್ಲರಿಯಂ (ಪುಲ್ಲಿಪು. ೩-೬೯). ಹೋಲಿಸು : ಆ ಕರಿಯಾಕೃತಿಯ ಸೂಕರನ ಹೋಲಿಸಿದರೆ ಆ ಕರಿಯಾಗಲರಿವುದೆ ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದರೆ ವ್ಯಾಳೇಶನಾಗಲರಿವುದೆ (ಬಸವ. ೩೨೯); ಹೋಲಿಸು ಪಡೊಪ್ಪುವ ಪಸುರ್ವಟ್ಟಾಲವಟ್ಟಂಗಳೊ ಚೆಲುವನಹ ಬಾಳೆಯೆಲೆಗಳೊ (ಬಸಪು. ೨೬-೪೦); ಪಾರ್ಥಿವಜಾತಿಯಲಿ ರಣದಿಟ್ಟರುಂಟೇ ನಿಮ್ಮ ಹೋಲಿಸಲು (ಕುಪ್ಯಾಪ್ರೋ. ೪-೦೦) ; ಹೋಲಿಸಿ ನುಡಿದೆ ಸುರವ ಫಲ್ಗುಣರ ಸಮರಮಂ (ಕೈಪುಭಾ. ೦೬-೫೯). [ಪೋಲ್₁ + — ಇಸು₃]

ಪೋಲೀಸ್ 'ಪೋಲೀಸು' ನೋ.

ಪೋಲೀಸು, ಪೋಲೀಸ್ (ನಾ). ೧. ಸಾರ್ವಜನಿಕರಿಗೆ ಸಂಬಂಧ ಪಟ್ಟಂತೆ ಶಾಂತಿಪಾಲನೆ, ರಕ್ಷಣೆಗಳನ್ನು ಕೈಗೊಳ್ಳುವ ಸರ್ಕಾರದ ಒಂದು ಖಾತೆ ; ರಕ್ಷಣಾಇಲಾಖೆ : ಇವನು . . . ಗ್ರಾಮದ ಪೋಲೀಸಿನ ಮೇಲಧಿಕಾರಿಯಾಗಿಯೂ ಇರುವನು (ಗ್ರಾಮಾಳ. ೨) ; ಅಂತೂ ಪೋಲೀಸು ನಗರಕ್ಕೊಂದು ನಯನ (ದಿನಾಂ. ೩). ಪೋಲೀಸ್ : ೧. ಪೋಲೀಸ್ ಅಧಿಕಾರಿಗಳಿಗೆ ನಾನು ಸಲ್ಲಿಸಿದ್ದ ಪ್ರಪ್ರಥಮ ಸಲಾಂ ಅದು (ನಾಪೋಲೀ. ೨೬). ೨. ರಕ್ಷಣಾಇಲಾಖೆಯಲ್ಲಿ ದುಡಿಯುವವನು ; ಪ್ಯಾದೆ : ನೀನು ಮಾತ್ರ ಪ್ರಾಣ ಹೋಗುವ ಪ್ರಸಂಗ ಬಂದರೂ ಪೋಲೀಸ್ ಮಾತ್ರ ಆಗಬ್ಯಾಡ (ನಾಪೋಲೀ. ೦೬).

ಪೋಲೀಸರು, ಪೋಲೀಸಿನವರು = ರಕ್ಷಣಾಇಲಾಖೆಗೆ ಸೇರಿದವರು : ನನಗೆ ಶಿಕ್ಷೆಯಾಗುವುದು ಖಂಡಿತವೆಂದೇ ಎಲ್ಲ ಪೋಲೀಸರೂ ಅಭಿಪ್ರಾಯ ಪಡುತ್ತಿದ್ದರು (ನಾಪೋಲೀ. ೬೯) ; ಪೋಲೀಸಿನವರು ತಕ್ಷಣ ಅಲ್ಲಿಗೆ ಹೋಗಿ ಕಳ್ಳನನ್ನು ಹಿಡಿಯುತ್ತಾರೆ (ಜೀವಾತ್ಮ. ೭೦). [← ಇಂ. Police]

ಪೋಲು₁ 'ಪೋಲ್₁' ನೋ.

ಪೋಲು₂, ಹೋಲು₂ (ನಾ). ೧. ಅಪವ್ಯಯ ; ದುಂದುವೆಚ್ಚ : ಜನಕ್ಕೆ ದೇಶಭಾಷೆಯಲ್ಲಿ ಅಭ್ಯಾಸ ನಡೆಯದ ಅಸಹಜತೆ ಪೋಲುಗಳನ್ನು ಪ್ರಧಾನವಾಗಿಯೂ ಆನುಷಂಗಿಕವಾಗಿಯೂ ಠಾಕೂರರು ಕಾಣಿಸಿದ್ದಾರೆ (ಪಿಶಂರ. I, XII ಮುಮ್ಮಡಿ). ೨. ನಾಶ ; ಹಾಳು : ನಾಲ್ವತ್ತುಎಂಟುಯೋಜನದ ಗ್ರಾಮ ಪೋಲಿನ್ನು ಕೇಳು ನಿಸ್ಸೀಮ ಮೇಲೆ ನೀ ಗಳಿಸಿರ್ದ ಹೇಮ ಮುಂದೆ ಪಾಲಿಸುವರಿಲ್ಲ ಕಲಿಭೀಮ (ಕರಲೀ. ೪೨೩-೪) ; ಪೋಲು ಆದ ವಸ್ತು ಹಾಲಿನ ಹಾಗಿದ್ದರೇನು ? (ಗಾರ). ಹೋಲು₂: ೩. ವ್ಯರ್ಥವಾದುದು ; ಉಪಯೋಗವಿಲ್ಲದುದು ; ಪೊಳ್ಳು: ಕೋಲ ಬಲುಹುಂಟಾಗೆ ನಾಲಗೆ ಹೋಲ ನುಡಿಯದು [ಪಾಠಾಂ. ಹೋಲಲುಜುವುದು, ಹೋಲ ನುಡಿವುದು, ಹೊಲ್ಲ ದೇನಿದು] ಖೂಳ ಕಟಕಿಯ ಮಾತು ಬೇಡಂಬಿನಲಿ ಮಾತಾಡು (ಕುಪ್ಯಾಕ. ೪-೩೦).

ಪೋಲಾಗು = ೧. ಅಪವ್ಯಯವಾಗು ; ದುಂದುವೆಚ್ಚವಾಗು : ರಾಜ್ಯಕೋಶದ ಅಪಾರದ್ರವ್ಯ ಜೋಗಿ ಜಂಗಮರನ್ನು ಮೇಯಿಸುವುದಕ್ಕಾಗಿ ಪೋಲಾಗುತ್ತಿದೆ (ತುಂಗರ. ೦೭) ; ಸೊಸೈಟಿಯ ಹಣ ಪೋಲಾದ ಬಗ್ಗೆ

ಡೈರಕ್ಟರುಗಳಲ್ಲಿ ಕೆಲವರು ಬಿರುಸಾಗಿ ಚರ್ಚಿಸಿದರು (ಪುರಳಿ. ೦೬೦). ೨. ವ್ಯರ್ಥವಾಗು ; ನಿರರ್ಥಕವಾಗು : ಸರಣಾಯಾತರ್ಕ್ಕಳಂ ತಾಳ್ದಿ × × ಧಾತ್ರಿಯಮನ್ಯನೃಪಾಚಾರಕ್ಕೆ ಪೋಲಾಗೆ ವಿಸ್ತರದಿಂ ಪಾಳಿಸೆ ಕೀರ್ತ್ತಿಯಂ ಭುವನದೊಳು ಪ್ರಕಾಶನಂ ಮಾಡಿದಂ (ಸೌಇಇ. XI-i. ೯೬-೦೬ ; 1062) ; ಬಾಲೆ ನೀನಾರೆಂದ ನಾನೀಗ ಕೇಳ್ವಾತನೂಳಿಗದವಳೆಂದಳವಳು ಪೋಲಾದ ಮಾತು ನೀನೀಗ ಕೇಳ್ವನ ಪ್ರಾಣಪಾಲಕಿಯಲ್ಲವೆಯೆಂದಾ (ಧರಸ. ೯೨-೯೦); ಉದಾತ್ತವಾದ ಕಾವ್ಯಗುಣಗಳನ್ನು ಅರಿತು ಮೆಚ್ಚಿಕೊಂಡಿರುವ ನನಗೆ ಅವು ಎಲ್ಲಿ ಪೋಲಾಗಿಬಿಡುತ್ತವೆಯೋ ಎಂಬ ಹೆದರಿಕೆ ತುಂಬಿದೆ (ಅಪುಳ. ೦೯೯). ಪೋಲುಮಾಡು = ೧. ಅಪವ್ಯಯಮಾಡು ; ದುಂದುವೆಚ್ಚಮಾಡು : ಕಿಸೆಯ ಚಿಲ್ಲರೆಯನು ಪೋಲುಮಾಡುವುದಕೆ ಯಾರಿಗಾದರೂ ಗುರು ಬೇಕೆ (ಇಂಗಾಪ. ೨೩೨-೯೬). ೨. ವ್ಯರ್ಥವಾಗಿಸು ; ನಿರರ್ಥಕಗೊಳಿಸು ; ಹಾಳು ಮಾಡು : ಒಡವೇಲಿ ಅರ್ಧಾನ ಇವರು ಅರಮನೇಲೆ ಇಟ್ಟುಕೊಂಡಿದ್ದಾರೆ . . . ನಮ್ಮ ಅರಮನೆಗೆ ಬರಬೇಕು ಅಂದರೆ ನಾವು ಪೋಲು ಮಾಡತೇವನ್ನ ತಾರೆ (ಪಕರಾ. ೨೫೬) ; ಸಂಸಾರ ನಡೆಸುವುದರಲ್ಲಿ ನೀವು ಯಾವಾಗಲೂ ಹಿಡಿತ. ಒಂದು ಅಕ್ಕಿಕಾಳು ಪೋಲು ಮಾಡುವುದಿಲ್ಲ (ಮಹಾಗ. ೦೯೨).

ಪೋಲುಗ (ನಾ). ದುಂದುವೆಚ್ಚ ಮಾಡುವವನು ; ದುಂದುಗಾರ : ಆನು ಭಕ್ತನಲ್ಲಯ್ಯಾ ಆನು ವೇಷಧಾರಿಯಯ್ಯಾ ಕಾಟುಗ ಕೆತ್ತುಗ ಪೋಲುಗ[ಪಾಕಾಂ. ಹುಲ್ಲುಗ, ಪೊಲ್ಲುಗ]ನೆಂಬದು ಎನ್ನ ಹೆಸರು (ಬಸವ. ೩೩೫).

[ಪೋಲು$_2$ + — ಗ$_2$]

ಪೋಲುಮೆ 'ಪೋಲ್ಮೆ' ನೋ.

ಪೋಲೋ (ನಾ). (ಪೂರ್ವದೇಶಗಳಲ್ಲಿ ಮೊದಲು ಬಳಕೆಗೆ ಬಂದ) ಕುದುರೆಯ ಮೇಲೆ ಸವಾರಿ ಮಾಡುತ್ತಾ ಆಡುವ, 'ಹಾಕಿ' ಆಟ ದಂಥ ಒಂದು ಬಗೆಯ ಚೆಂಡಿನ ಆಟ : ಬ್ರಿಟನಿನ ತರುಣರು, ಮುದುಕರು ದೋಣಿಯ ಓಟ, ಪೋಲೋ . . . ರಗ್ಬಿ ಮೊದಲಾದ ಹಲವು ಆಟ ಪಂದ್ಯಾಟಗಳಲ್ಲಿ ಮುಂದೊತ್ತಿ ಹೋಗಿರುವರು (ಬಾಂಪ್ರ. II, ೦೦೯೯). [← ಇಂ. Polo]

ಪೋಲ್ಕ 'ಪೋಲಕ' ನೋ.

ಪೋಲ್ಕೆ (ನಾ). ಸಾದೃಶ್ಯ ; ಸಾಮ್ಯ : ಶೀರ್ಣನಾಳಿಕೇರಪರ್ಣಂಗಳೊಳಂ ಅಮರ್ಕೆಯುಂ ಪೋಲ್ಕೆಯುಂ ಒಲ್ವುಂ ಚೆಲ್ವುಮಾಗೆ ಗೊಜ್ಜಗೆಯ ಮುಗುಳ ಗೆಜ್ಜೆಯುಮಂ . . . ಮನೋಹರಮೆನೆ ಸಮೆದು ತಮತಮಗೆ ಪಸದನಂಗೊಂಡು (ಕಂಪ್ರಪು. ೬-೦೦೩ ಪ) ; ಬಿದಿರಂ ಕರ್ಬಿನ ಪೋಲ್ಕೆಗೆಂದು ಸವಿವಂತಾಯ್ತೆನ್ನ ಪುಣ್ಯೋದಯಂ (ಕಾವ್ಯಸಾ. ೩೭೬). 'ಹೋಲಿಕೆ$_1$' ಪರಾ. [ಪೋಲ್$_1$ + — ಕೆ. / ತೆಲು. ಪೋಲಿಕ, ಪೋಲಿಕೆ, ಪೋಲ್ಕಿ]

ಪೋಲ್ಕೆಗೊಳ್ (ಕ್ರಿ). ಸಾದೃಶ್ಯವನ್ನು ಹೊಂದು : ಧರಿಸಿ ಕನಕಾಂಬರ ಮನಾ ವರವಧುವಾಮೂಲಶಿಖರಪರಿಫುಲ್ಲಸುಮೋತ್ಕರದಿಂದೆ ಪುದಿದ ನವ ಕೇಸರಲತೆಯಂ ಪೋಲ್ಕೆಗೊಂಡದೇನೊಪ್ಪಿದಳೊ (ಮಹಾಸ. ೩-೭೩).

[ಪೋಲ್ಕೆ + ಕೊಳ್$_1$]

ಪೋಲ್ಟೀಸು, ಪೋಟಲೀಸು, ಪೋಟ್ಲೀಸು (ನಾ). "ಮೆತುರೊಟ್ಟಿ, ಸೀಮೆಯಗಸೆ, ಹಿಟ್ಟು, ಮೊ.ನ್ನು ಸಾ. ಕುದಿಯುವ ನೀರಿನಲ್ಲಿ ಹಾಕಿ ಮೆತು ಮಾಡಿ ಮಸ್ಲಿನ್ ಬಟ್ಟೆ, ಮೊ.ಗಳ ಮೇಲೆ ಹರಡಿ ಹುಣ್ಣು ಅಥವಾ ಉರಿಯೂತದ ಮೇಲಿಟ್ಟು ಕಟ್ಟುವಂಥದು" (Poultice. ಇಂಕಸಿ) : ಹೊಟ್ಟೆಗೆ ಪೋಲ್ಟೀಸು ಕಟ್ಟಿಸಿಕೊಂಡು ರಾಮು ಹಾಸಿಗೆಯ ಮೇಲೆ ಮಲಗಿದ್ದ (ಸಾಂಸ. ೨೬). ಪೋಟಲೀಸು : ಅವನಿಗೆ . . . ಕಟ್ಟುವುದಕ್ಕೆ ಪೋಟಲೀಸು ಬೇಯಿಸಿ, ನನ್ನ ಕೈಗೆ ಆಗಿರುವ ಗತಿ ನೋಡು (ಕಲ್ಲಿಕಾ. ೩೯). ಪೋಟ್ಲೀಸು : ಹುಣ್ಣಾದ ಕಾಲಿಗೆ ಜೇಡಿಮಣ್ಣನ್ನಾಗಲೀ ಅಥವಾ ರಾಗಿಹಿಟ್ಟಿನ ಪೋಟ್ಲೀಸನ್ನಾಗಲೀ ೪—೫ ದಿವಸಗಳು ಕಟ್ಟಿದರೆ ನೋವು ಕಡಿಮೆಯಾಗುವುದು (ಗ್ರಾಮಾಳ. ೦೯೩).

[← ಇಂ. Poultice]

ಪೋಲ್ಮೆ, ಪೋಲಿಮೆ, ಪೋಲುಮೆ (ನಾ). ೧. ಸಾದೃಶ್ಯ ; ಸಾಮ್ಯ : ರಾಹು ರವಿಯಂ ತುಡುಕುವಂತದರ ಪೋಲ್ಮೆಯಿಂದರಸ ನಿನ್ನಂ ಪಿಡಿವೆಂ (ಸುರಂಗ. ೯೯-೧೯). ಪೋಲಿಮೆ : ೨. ಒಪ್ಪವಾದುದು ; ಚೊಕ್ಕಟವಾದುದು : ಸಾರಸ್ವತರ . . . ಉಡಿಗೆಗಳು ಶೇಣವೀಜನರಿಗಿಂತ ಪೋಲಿಮೆಯಾಗಿರುತ್ತವೆ (ಕಬಾಗ. ೬೬). ಪೋಲುಮೆ : ೧. ಆವುದರ ಪೋಲುಮೆಯು ಕೊಡಲ್ಪಡುತ್ತದೆಯೊ ಅದು ಉಪಮಾನಂ (ಕುವಲಿ. ೬). 'ಪೋಲ್ವೆ' ಪರಾ. [ಪೋಲ್$_1$ + — ಮೆ$_1$. / ತಮಿ. ಪೋಲಿಮೈ]

ಪೋಲ್ವೆ, ಹೋಲುವೆ, ಹೋಲ್ವೆ (ನಾ). ೧. ಸಾಮ್ಯ ; ಸಾದೃಶ್ಯ ; ಹೋಲಿಕೆ : "ಪಾಟಿ ಪೋಲ್ವೆ . . . ಸಾಟಿ ಪಾಸಟಿಯೆನಲ್ಕೆ ಪತ್ತುಗುಂ" (ಕರ್ಪಾನಿ. ೦೯) ; ತದ್ವಿದೇಹಜನತಾಸ್ವಾಂತಾರ್ಪಿತೋದ್ಯತ್ಪ್ರಮೋದೆಯ ಸೀತೋದೆಯ ಪೋಲ್ವೆಗಿಲ್ಲ ತೊಱಗಳ್ ವಿಶ್ವಂಭರಾಭಾಗದೊಳ್ (ಅಪಿಪು. ೦-೩೯) ; ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಗಳೊಳ್ ಪತ್ತಿದ ಪೋಲ್ವೆಯಂ ಪಡೆವ ಗೋಪುರಪಂಚಕಮಾಸ್ಯಮಾಗೆ (ಅರ್ಧನೇ. ೦-೬೬) ; ನಿನ್ನೊಂದು ಪೆಸರ ಪೋಲ್ವೆಯೊಳಂದಜಾಮಿಳಂ ತನ್ನ ಪಾತಕಕೋಟಿಯಂ ಪರಿಹರಿಸಿಕೊಂಡಂ (ಸ್ವಮಿಶಾ. ೦೩-೩೭). ೨. ಸೊಗಸು ; ಸೌಂದರ್ಯ : "ಸೊಗಸುಮಲಂವುಂ ವಿಭವಮದೊಗೆಗುಂ ತಾವಂದಚಂದ ಮೆನೆ ಪೋಲ್ವೆಯೊಳಂ" (ಕವಿಕಂ. ೦೩೯). ೩. ಸ್ವರೂಪ ; ಆಕಾರ : ಅಯ್ದುಮಂತ್ರಾಕ್ಷರಂಗಳನಾಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆಯೆಂದು ಬೆಸಸಿದೊಡೆ (ಸಂಪಠಾ. ೦-೮೯ ಪ). ಹೋಲುವೆ : ೧. ಕೃತಾಂತನ ಹೋಲುವೆಯ ಹೊಸಬಿಗನು ಹೊಕ್ಕನು ಭೀಮನುರವಣಿಸಿ (ಕುಷ್ಠಾಸ್ತೋ. ೨-೬೯); ವಜ್ರಮಾಣಿಕ್ಯದ ಹೋಲುವೆಯ ದಂತಪಂಕ್ತಿಯ . . . ಪೆಣ್ಗಳೊಪ್ಪಿದರು ನವರತ್ನಮಾಲೆಗಳ ಪಾಂಗಿನಿಂದ (ಭಾವಸಂ ೩-೨೯); ಗಡ್ಡವಿರಲಿಲ್ಲ, ಗೆರೆಹೋಲುವೆಯ ಮೀಸೆಯಿತ್ತು (ಪುಪರು. ೦೬೯) ಹೋಲ್ವೆ : ೧. ರಕ್ಕಸನು . . . ಎಲವೊ ಗೌರಿಜ ಜನಿಸಿದೀವರಿಗೆ ಹೊಕ್ಕೆ ಸಮರವ ನಿನಗೆ ಕಾಣಿಕೆ ಚಕ್ಕುಲಿಗಳಿಲ್ಲದರ ಹೊ[ಹೋ]ಲ್ವೆಯ ಚಕ್ರಮಿದೆ ನೋಡಿದರ ಸವಿಯನೆನುತ್ತ ತೆಗೆದೆಚ್ಚ (ಅಂದಿಕಾ. ೨೯-೩೫) 'ಪೋಲ್ಮೆ' ಪರಾ. [ಪೋಲ್$_1$ + — ವೆ]

ಪೋಲ್ವೆವೆಱು (ಕ್ರಿ). ಸಾದೃಶ್ಯವನ್ನು ಪಡೆ ; ಸಾಟಿಯಾಗು : ಖರಕರ ಬಿಂಬದಿಂ ಕಿರಣಸಂತತಿಗಳ್ ಪೊಱಪೊಣ್ಮೆದಪ್ಪುವೆಂಬರ ನುಡಿ ಪೋಲ್ವೆ [ಪಾಕಾಂ. ಲ್ಮೆ]ವೆತ್ತುದೆನೆ ಬಾಣಧಿಯಿಂದಿರದುರ್ಚಿಕೊಂಡು ವಿಸ್ಫುರಿತ ಶರಂಗಳೆಂಟನವಱಿಳ್ ಪೊಳೆವಯ್ದುಶರಂಗಳಿಂ ಸುರುಳ್ದುರುಳ್ವಿನಮೆಚ್ಚ (ಸಂಪಠಾ. ೦೨.೭೩). [ಪೋಲ್ವೆ + ಪೆಱು$_1$]

ಪೋವಣಿಕೆ 'ಪವಣಿಕೆ' ನೋ.

ಪೋವಿಡು (ಕ್ರಿ). ಹೋಗಲು ಬಿಡು : ಅರಿಗಳ್ಗಱಿವಾಗದ ಮುನ್ನವೆ ಕಟ್ಟಿದ ಹಯಮಂ ಪೋವಿಟ್ಟು ಮನೆಗೆ ಪೋಪಂ (ರಾಮಾಕ್ಯ. ೦೩೩-೬)

[ಪೋ$_1$ + ಬಿಡು$_1$]

ಪೋಶಳ 'ಪೊಯ್ಸಳ' ನೋ.

Δಪೋಶಟ 'ಪೊಯ್ಸಳ' ನೋ.

ಪೋಷ$_1$ 'ಪುಸ್ಯ' ನೋ.

ಪೋಷ$_2$ (ನಾ). ೧. ಪರಿಪೋಷಣೆ ; ಸಾಕುವುದು. ೨. ಬೆಳವಣಿಗೆ ಅಭಿವೃದ್ಧಿ. [ಸಂ.]

ಪೋಷಕ (ಗು). ೧. ಸಲಹುವ ; ಕಾಪಾಡುವ : ಈ ಪ್ರಕಾಶನಕ್ಕೆ ದೊರೆಯಬಹುದಾದ ವಾರ್ಷಿಕ, ಪ್ರೇರಕ, ಪೋಷಕ ಸದಸ್ಯರ ಸಹಾಯವೆ ಕರಾವಲಂಬನ (ಸಂಶೋಧ. VI, ೦೦೯); ಕುಂಬಾರ ಕಮ್ಮಾರ ಕಾಯಕಗಳ

ಪೋಷಕ ದೈವತ ಅಭಿಮಾನಿದೇವತೆ 'ಪ್ರಮಿತ್ಯೂಸ್' ಅನ್ನು ಸ್ಥಳೀಯ ಅಥೀನಿಯರು ಹಿಂದಿನಿಂದ ಪೂಜಿಸುತ್ತಿದ್ದರು (ಬಿಧ್ಯಪ್ರ. I, ಬೀಕಿಳ). (ನಾ). ೨. ಪೂರಕವಾದುದು; ಪಾಲನೆ ಮಾಡುವಂಥದು: ಅವನ ಸಂದೇಶ ಆರ್ಯಸಂಸ್ಕೃತಿಯ ಪೋಷಕ ಎಂಬುದು ಇತಿಹಾಸಕಾರರ ಬಹುಮತ (ಪುಶ್ಚಾರ. ೦೦೩ ಬೀಕಿಳ); ಈ ಮೂರು ಜಾತಿಯ ದ್ರವ್ಯಗಳನ್ನು ರಾಮಾನುಜಗೀತಾಭಾಷ್ಯದಲ್ಲಿ ಧಾರಕ, ಪೋಷಕ, ಭೋಗ್ಯಕ ಎಂದು ಕರೆದಿದೆ (ಭಾರದ. ೩೩೩). ೩. ರಕ್ಷಿಸುವವನು; ಕಾಪಾಡುವವನು: "ಭರ್ತಾ = ಪೋಷಕಂ" (ಶಾಕ್ಯ. ೦೬೯); ಈ ಅಂಶವನ್ನು ಶಿಕ್ಷಣಚತುರರು ಪ್ರತಿಪಾದಿಸಿದಂತೆಲ್ಲ ಪೋಷಕರಲ್ಲೂ ಆ ಬಗ್ಗೆ ಆಸಕ್ತಿ ಹೆಚ್ಚುತ್ತಿದೆ (ಶಿಕ್ಷದ. ೦೬೪). ೪. ಬೆಳಸುವವನು; ವೃದ್ಧಿಗೊಳಿಸುವವನು. [ಸಂ.]

ಪೋಷಕಿ (ನಾ). ಸಲಹುವವಳು; ಪಾಲನೆ ಮಾಡುವವಳು: ಅವಳ ಅಜ್ಜಿಯೇ ಅವಳ ಪೋಷಕಿಯಾಗಿದ್ದಳು (ಪ್ರಭಾಸ. ೦೦೦).

[ಪೋಷಕ + — ಇ$_2$]

ಪೋಷಣ (ನಾ). ೧. ರಕ್ಷಣೆ; ಪಾಲನೆ: "ತುಷ, ಹೃಷ—ಪುಷ್ಪೌ, ಪೋಷಣದೊಳ್" (ಶಾಕ್ಯ. ೦೯೪); ಇಷ್ಟರ ವಿಶಿಷ್ಟರ ತೋಷಣ ಪೋಷಣಂಗಳೊಳ್ಳಾಗರಮೆನ್ದು ಬಂಣ್ಣ(ಣಿ)ಸುವುದೀ ಧರೆ ಪಂಡಿತಪಾರಿಜಾತನಂ ನಾಗನಂ (ಎಇ. XXI. ೦೩-೩೩; 1260). ೨. ವಿಸ್ತಾರ; ವ್ಯಾಪ್ತಿ: ಸಂಗೀತದ ಸಾಧನ, ನಿರೂಪಣ, ಪೋಷಣ ಮಿಗಿಲಾಗಿ ಅಧಿರುಚಿ ಮತ್ತು ಪ್ರವೃತ್ತಿಗಳಲ್ಲಿ ಆಗಿರುವ ಬದಲಾವಣೆಗಳು ಗಮನಾರ್ಹ (ಭಾರದ. ೩೪೩). [ಸಂ.]

ಪೋಷಣೆ (ನಾ). ರಕ್ಷಣೆ; ಪೋಷಿಸುವಿಕೆ: ಸರಿಯಾದ ಪೋಷಣೆಗೆ ಬೇಕಾದ ಮುಖ್ಯ ವಸ್ತುಗಳು ಜೀವಸತ್ತ್ವಗಳು (ಶಬಿಕೋ. XI, ೨೬೮).[ಸಂ. ಪೋಷಣ]

ಪೋಷಾಕ 'ಪೋಷಾಕು' ನೋ.

ಪೋಷಾಕು, ಪೋಷಾಕ (ನಾ). ಉಡುಪು; ಉಡುಗೆ; ತೊಡುಗೆ: ಸ್ವಯಂಸೇವಕನ ಪೋಷಾಕಿನಲ್ಲಿಯೇ ಇರುವುದರಿಂದ ಇವರ ಬಟ್ಟೆಬರೆಗಳಿಗೆ ಹೆಚ್ಚು ವೆಚ್ಚವಿಲ್ಲ (ಸೇವಾಹ. ೯೭); ಅವರು ಪೋಷಾಕನ್ನು ಗುರುತಿಸುತ್ತಾರೆ, ಮನುಷ್ಯರನ್ನು ಗುರುತಿಸುವುದಿಲ್ಲ (ನಿಬಂಧ. II, ೨೬೨). **ಪೋಷಾಕ**: ಆತನು ತನ್ನ ಸೂಪರಿಂಟೆಂಡೆಂಟ ಪದವಿಯ ಪೋಷಾಕವನ್ನೇ ಧರಿಸಿದ್ದನೆಂದು ಬೇರೆ ಹೇಳಬೇಕಾದ್ದಿಲ್ಲ (ಪಿಧಿಸ್ಕ. ೪೩).

[← ಪಾರ. ಹಿಂ. ಪೋಶಾಕ್; ಮರಾ. ಪೋಷಾಕ್, ಪೋಷಾಖ್, ಪೋಷಾಗ್, ಪೋಶಾಕ್, ಪೋಶಾಖ್, ಪೋಶಾಗ್]

ಪೋಷಿತ (ಗು). ೧. ಸಲಹಿದ; ಕಾಪಾಡಿದ. ೨. ಬೆಳೆಸಿದ; ವೃದ್ಧಿಪಡಿಸಿದ. [ಸಂ.]

ಪೋಷಿಸು (ಕ್ರಿ). ೧. ಸಲಹು; ಕಾಪಾಡು; ಸಾಕು: ಭಾವಶಿವದೇವ ಕ್ಕಿರ್ಜಿಯ ಮಾಣಿಯಂ ಕೈಕೊಣ್ಡು ಪೋಷಿಸಿ (ಸೌಇಇ. XI—I, ೬೪-೦೭; 1028); ವಿಷವಿಕ್ಕಿದವಗೆ ಷಡ್ರಸವನುಣಿಸಲುಬೇಕು ದ್ವೇಷ ಮಾಡಿದವನ ಪೋಷಿಸಲು ಬೇಕು (ಪುರಂದ. ೨-೭೩-೦); ಗಿಳಿಯ ಮಱಿಯನು ತಂದು ಪಂಜರದೊಳಗೆ ಪೋಷಿಸಿ ಕಲಿಸಿ ಮೃದುನುಡಿಗಳನು ಲಾಲಿಸಿ ಕೇಳ್ವ ಪರಿಣತರಂತೆ (ಹಂಸಾ. ೨೦). ೨. ಪುಷ್ಟೀಕರಿಸು; ಸಮರ್ಥನೆ ಮಾಡು: ಜಗತ್ತಿನ ಇನ್ನೂ ಇತರೆ ಒಂದೆರಡು ಭಾಷೆಗಳಲ್ಲಿ ಈ ಪರಿವರ್ತನೆಯನ್ನು ಪೋಷಿಸುವ ಆಧಾರಗಳು ಇವೆ (ಪ್ರಾನಿನಿ. ೩೩೩); ಒಂದೊಂದು ಸಂಪ್ರದಾಯದವರೂ ವೇದ ಪುರಾಣಗಳಿಗೆ ತಮ್ಮ ತಮ್ಮ ಧರ್ಮಕ್ಕೆ ಅನುಕೂಲವಾಗುವಂತೆ ವ್ಯಾಖ್ಯಾನ ಮಾಡಿ ತಮ್ಮ ತಮ್ಮ ವಾದಗಳನ್ನು ಪೋಷಿಸಿಕೊಂಡಿದ್ದಾರೆ (ಭಾರದ. ೨೬೪). ೩. ಅಭಿವೃದ್ಧಿ ಮಾಡು; ಬೆಳೆಸು: ಮೂಳರಂ ಪಾಳಿಸಿಯುಂ ಕೋಶಮಂ ಪೋಷಿಸಿಯುಂ ಇಂತು ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದು (ಸಂಪ್ರಪು. ೨-೬೦); ಕಾವ್ಯದಲ್ಲಿ ವರ್ಣನೆ ಯಾವ ರೀತಿಯಲ್ಲಿ ಬಂದರೆ ತನ್ನ ಸೊಗಸನ್ನೂ ಕಾವ್ಯದ ಸೊಗಸನ್ನೂ ಒಟ್ಟಿಗೆ ಪೋಷಿಸುವುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ (ಸಮಾಕೋ. ೦೦೨). [ಪೋಷಣ + — ಇಸ್ಯು$_3$]

ಪೋಷ್ಯ (ಗು). ೧. ಪಾಲಿಸಬೇಕಾದ; ಸಲಹಬೇಕಾದ; ಸಾಕಲು ಅರ್ಹವಾದ: 'ಪೋಷ್ಯವರ್ಗ' ಪರಾ. (ನಾ). ೨. ಪಾಲಿಸುವಿಕೆ; ಪೋಷಣೆ: "ಪೌಷಣಂ . . . ಪೋಷ್ಯಂ, ಪೌಷ್ಯಂ, ಪೋಷಿತವ್ಯಂ — ಈ ೭ ಹೊರೆತಂ" (ಶಾಕ್ಯ. ೦೬೭). [ಸಂ.]

ಪೋಷ್ಯವರ್ಗ (ನಾ). ರಕ್ಷಿಸಬೇಕಾದ ಬಂಧುಜನರು; ೧ ತಾಯಿ, ತಂದೆ, ಗುರು, ಪತ್ನಿ, ಆಶ್ರಯದಲ್ಲಿರುವವನು, ಮಕ್ಕಳು, ಅಭ್ಯಾಗತ, ಅತಿಥಿ ಮತ್ತು ಅಗ್ನಿ—ಈ ಒಂಬತ್ತು ಜನ ಪೋಷ್ಯವರ್ಗಕ್ಕೆ ಸೇರಿದವರು. ಇಲ್ಲಿಯ ಹೆಸರುಗಳು ಮತ್ತು ಸಂಖ್ಯೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ: ಕಡಲ ತಡಿಯೆಯ್ದೆ ನೆಲನಂ ಪಡೆದರ್ ಭವದೀಯ ಪುತ್ರರುಳ್ಳಳವಿಗಳೊಳ್ ಪಡೆದುದು ಬಂಧುಜನಂ ನಿಮ್ಮಡಿಗಾವೇಂ ಪೋಷ್ಯವರ್ಗದಿಂದಂ ಪೊಱಗೇ (ಆದಿಪು. ೯-೯೮); ಖಾವಂದರವರ ಪೋಷ್ಯವರ್ಗಕ್ಕೂ ಬಂಧುವರ್ಗಕ್ಕೂ ಸೇರಿದ ಜನರು ಹೊರತು ಉಳಿದ ಇಲಾಖೆಗಳ ನೌಕರರು ೯೬೮೭ ಮಂದಿ ಇದ್ದರು (ಮಹಾಪಂ. II, ೦೬೬). [ಸಂ.]

ಪೋಸ, ಪಾಸ$_2$, ಹೋಸ, ಹೌಸ$_1$ (ನಾ). [ಜೈನ]ಕತ್ತಲೆಯಾಗುವುದಕ್ಕೆ ಮೊದಲು ಆಹಾರ ಸ್ವೀಕಾರ ಮಾಡುವ ವ್ರತ, — ನಿಯಮ: ಅಚ್ಚುತ. . . ಅವರ ಮನೆಗೆ ಊಟಕ್ಕೆ ಹೋದೆ. ನಾಗರಾಜನಿಗೆ 'ಪೋಸ' ವಲ್ಲವೇ! (ಮುಗಿಯು. ೯೦). **ಪಾಸ$_2$**: ನಾವು ಜೈನರು, ಕತ್ತಲೆಗೆ ಮುಂಚೆ ಊಟ; ನಾವು ಪಾಸದವರು (ಪಗುಳ. ೩೬). **ಹೋಸ**: ಸ್ಥೂಳಸೂಕ್ಷ್ಮಂಗಳಪ್ಪ ಪ್ರಾಣಿಗಳು ರಾತ್ರಿಯೊಳನ್ನಪಾನಾದಿಗಳಂ ಪೊರ್ದಿದೊಡೆ ಪಿಂಗಿಸಲ್ಬಾರವಪ್ಪುದಱಿಂದನ್ನಪಾನಖಾದ್ಯಲೇಹ್ಯಂಗಳಪ್ಪ ಚತುರ್ವಿಧಾಹಾರಮಂ ರಾತ್ರಿಯೊಳು ನವಶುದ್ಧಿಯಿಂ ಪರಿಹರಿಸುವುದು ಹೋಸಮೆಂಬಾಱನೆಯಣು ವ್ರತಮಕ್ಕುಂ (ಪಸಾರ. ೩೦೭); ಉತ್ತಮಗೋಷ್ಠಿಯೊಳಿರುತಿರೆ ಹೋಸದ ಹೊತ್ತಾಗಲೂಟವಾಯ್ತೊಡನೆ (ಭರಸ. ೩೭-೯೦); ಶರಧಿಗೆ ರವಿ ಸಾರುತಿರೆ ಕಂಡು ಹೋಸಕೆ ಸರಸಿಜಮುಖಿ ಪೋಪೆನೆನಲು (ಪಸಂಗ. ೯-೬೦). **ಹೌಸ$_1$**: ತಾಂ ಹೌಸಕ್ಕೆ ಬೇಗೆಳ್ದುವರಮನೆಯ ಪುಗಲಿತ್ತ ಸೂರ್ಯಂ. . . ಪಶ್ಚಿಮಾಂಬುಧಿಯ ಸಾರಿದಂ (ಪ್ರಭುಪು. ೯-೦೩೪).

[← ತುಳು. ಪೋಸ = ಸೂರ್ಯಾಸ್ತ, ಸಂಜೆ; ಪೋಸದಾಯೆ = ಸೂರ್ಯಾಸ್ತಕ್ಕೆ ಮೊದಲು ಆಹಾರವನ್ನು ಸ್ವೀಕರಿಸುವ ವ್ರತ]

ಪೋಸಳ 'ಪೊಯ್ಸಳ' ನೋ.

△**ಪೋಸಟ** 'ಪೊಯ್ಸಳ' ನೋ.

ಪೋಸ್ಟ್ 'ಪೋಸ್ಟು' ನೋ.

ಪೋಸ್ಟು, ಪೋಸ್ಟ್ (ನಾ). ೧. ಅಂಚೆವ್ಯವಹಾರವನ್ನು ನಡೆಸುವ ಕಚೇರಿ; ಟಪಾಲುಕಚೇರಿ: ಕಾಗದಗಳನ್ನು ತಂದು ಹಂಚುವುದು ಪೋಸ್ಟಿನ ಕೆಲಸ (ಪೇಣತ್ಯ. ೬೦). ೨. ಅಂಚೆಯ ಮೂಲಕ ಬಂದಿರುವ ಅಥವಾ ಕಳುಹಿಸಲಿರುವ ಪತ್ರ ಮುಂತಾದುವು; ಟಪಾಲು: ಆ ದಿನ ಪೋಸ್ಟಿನಲ್ಲಿ ವಾಚೊಂದು ನನಗೆ ಧರ್ಮಾರ್ಥವಾಗಿ ಪಾರ್ಸಲ್ ಆಗಿ ಬಂದಿತ್ತು (ಮುಂಗಾಮು. ೦೪). **ಪೋಸ್ಟ್**: ೨. ಅಂಚೆಯವನು 'ಪೋಸ್ಟ್' ಎಂದ ಕೂಡಲೇ ಬಾಗಿಲಿನ ಕಡೆಗೆ ಓಡಿದೆ (ರೂಢಿ).

ಪೋಸ್ಟ್‌ಕಾರ್ಡು = (ಅಂಚೆಯ ಮೂಲಕ ರವಾನಿಸುವ, ಗೊತ್ತಾದ ಅಳತೆಯ) ರಟ್ಟುಕಾಗದ: ಪೋಸ್ಟ್‌ಕಾರ್ಡನ್ನು ಮರೆಯದಂತೆ ಟಪಾಲಿಗೆ ಹಾಕು (ರೂಢಿ). ಪೋಸ್ಟ್‌ಬಾಕ್ಸು = ಅಂಚೆಯನ್ನು ಹಾಕುವ ಡಬ್ಬಿ; ಟಪಾಲುಪೆಟ್ಟಿಗೆ: ಪೋಸ್ಟ್‌ಮ್ಯಾನ್ ಬಂದು ಪೋಸ್ಟ್‌ಬಾಕ್ಸಿನಲ್ಲಿದ್ದ ಕಾಗದಗಳನ್ನೆಲ್ಲಾ ತೆಗೆದುಕೊಂಡು ಹೊರಟನು (ರೂಢಿ). ಪೋಸ್ಟ್

ಮಾಸ್ಪರು = ಅಂಚೆಕಚೇರಿಯ ಯಜಮಾನ : ಅವರು ಈ ವಿಭಾಗಕ್ಕೆ ಹೊಸ ಪೋಸ್ಟ್‌ಮಾಸ್ಟರರಾಗಿ ಬಂದಿದ್ದಾರೆ (ಕಾಡಿ). ಪೋಸ್ಟಾಫೀಸು = ಅಂಚೆಯ ವ್ಯವಹಾರಗಳನ್ನು ನಡೆಸುವ ಕಚೇರಿ; ಟಪಾಲು ಕಚೇರಿ : ಪೋಸ್ಟಾಫೀಸಿನ ಹತ್ತಿರವೇ ನಮ್ಮ ಮನೆ ಇದೆ (ಕೂಡಿ). [←ಇಂ. Post]

ಪೋಸ್ತು (ನಾ). ಗಸಗಸೆ; ಅಫೀಮಿನ ಕಾಳು : ಖುರಾಸಾನಿವೋವ, ಪೋಸ್ತ, ಸೈಂಧವಲವಣ . . . ಇವ್ಹನ್ನೂ ಸಮಚೂರ್ಣ ಮಾಡಿ . . . ಒಂದು ಗುಳಿಗೆಯನ್ನು ಅನುಪಾನವರಿತು ತೆಗೆದುಕೊಂಡರೆ ರಕ್ತಗ್ರಹಣೀ, ಹೊಟ್ಟೆನುಲಿ, ಸಂಗ್ರಹಣಿ ಸಹ ನಿಲ್ಲುವುವು (ಸಕ್ಕ. ಕು. ೮೮೯).

[← ಪಾರ. ಪೋಸ್ತ್; ಹಿಂ. ಪೋಸ್ತ್, ಪೋಸ್ತಾ]

ಪೋಹಚೆ ‘ಪೌಂಚಿ’ ನೋ.

ಪೋಹಣಿಗೆ ‘ಪವಣಿಗೆ’ ನೋ.

ಪೋಹಣಿಸು ‘ಪವಣಿಸು’ ನೋ.

ಪೋಳ್[1] ‘ಪೋಟ್[1]’ ನೋ.

ಪೋಳ್[2] ‘ಪೋಟ್[2]’ ನೋ.

ಪೋಳ (ನಾ). ಯೋಧ; ಸೈನಿಕ (?) : ಪೋಳರ್ ಪೊಣ[ರ್ದುಮ] ಟ್ಯೂಬಿ ಸೂ[ಳೇ]ಜಿಜಿವಲ್ಲಿ ಸಿಡಿದ ಬಾಳುಡಿ ಬಾನೊಳ್ ತೀಲಿಸಿರೆ ಬಳ್ಳಿ ಮಿಂಚುಗಳಾಳಿ[ಗ]ಮಡರಿ ಪೊಳೆವ ತೆಱನಂ ಪೋಲ್ಕುಂ (ಪರ್ಥಪು. ೪-೬೩).

[?]

ಪೋಳರೆ (ನಾ). ಬಿರುಕು ಬಿಟ್ಟಿರುವ ಬಂಡೆ; ಸೀಳಿದ ಬಂಡೆ : ಪೋಳರೆಗೆ ಏರಿಯೋಡ ತಾಟಿ ಪೊಳ್ಕಲ್ಲದಾ ಬೋಳ ಕೈಗಾಯ್ದನೆನಲೀ ಬೋಳನುಳಿದಂ (ಕಾಂಪು. ೦೩೯-೨೧೪).

[ಪೋಳ್[2] (< ಪೋಟ್[2]) + ಅರೆ[2] (< ಅಱೆ[4])]

ಪೋಳಲ್ ‘ಪೋಟಿಲ್’ ನೋ.

ಪೋಳಲ್ಕೋರೆ ‘ಪೊಟಿಲ್ಕೋರೆ’ ನೋ.

ಪೋಳಿ (ನಾ). ಗುಂಪು; ಪಂಗಡ; ಬಣ : ಅವನ ದಾಯಾದಿಮತ್ಸರವನ್ನು ತೀರಿಸಿಕೊಳ್ಳಲು ದಾರಿಯೊಂದನ್ನು ಹುಡುಕುತ್ತಿದ್ದ. ಊರಿನಲ್ಲಿ ಅವನು ಒಂದು ಪೋಳಿಯನ್ನು ಕಟ್ಟಿದ (ಪುಗ್ಳಕಾ. ೦೧೩). [<ಸಂ. ಪೋಲ]

ಪೋಳಿಗೆ[1], ಹೋಳಿಗೆ[1] (ನಾ). ೧. ಕಣಕವನ್ನು ಹಪ್ಪಳದಂತೆ ಲಟ್ಟಿಸಿ ಹೂರಣವನ್ನಿಟ್ಟು ಮತ್ತೆ ಲಟ್ಟಿಸಿ ಹಂಚಿನ ಮೇಲೆ ಎಣ್ಣೆ ಸವರಿ ಬೇಯಿಸಿಂವ ಒಂದು ಬಗೆಯ ಸಿಹಿತಿಂಡಿ : ಒಬ್ಬಟ್ಟು : “ಪೋಳಿಗೆ—ಪೋಲಿಕಾ = ಹೋಳಿಗೆ” (ಕಪ್ಪಳೋ. ೨೭); ಪೂರಿಗೆಯಿಡ್ದಲಿಗೆ ಪೋಳಿಗೆ [ಕಾಕಾಂ. ಸೋದಿಗೆ, ಸೊಂದಿಗೆ] . . . ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ್ಯರೂಪಂಗಳುಮಂ ನಾನಾಪ್ರಕಾರದ ಪಾನಂಗಳುಮಂ ಭಟ್ಟಾರರ್ಗೆ ಬಡ್ಡಿಸಿ (ಕಜಾಂಗ. ೬೪-೦೬); ಡಾಕಿನಿಯರ ಕೈಯ ಪೋಳಿಗೆಯಂತೆ ರಕ್ಕಸಿಯರ ಮನೆಯ ಬೆಲ್ಲದಂತೆ (ಧರ್ಮಾಕ್ಕು. ೦೩-೦೩೬). ೨. (ಹೋಳಿಗೆ ಮುಂತಾದ ಭಕ್ಷ್ಯಗಳನ್ನು ತಯಾರಿಸಲು ಬಳಸುವ) ಕಣಕವನ್ನು ಲಟ್ಟಿಸಿ ಮಾಡಿದ ಹಪ್ಪಳ : ಅರೆದಿಂಬಾಗಿರೆ ಬೆಂದ ಪೋಳಿಗೆಗಳಂ ತಚ್ಚೂರ್ಣಪಂಚಾಂಶಮಾಗಿರೆ ಖಿರ್ಜೂರಮನಲ್ಲದಂದೆಱದ ಪಣ್ಣಂ ದ್ರಾಕ್ಷಿಯುಂ ಮತ್ತೆ ಶರ್ಕರೆಯಂ ಪೊಯ್ದು . . . ಖಂಡಲಡ್ಡುಗೆಗಳಂ ಮಾಟ್ಕಿಂದುಮಿ ಮಾಟ್ಕಿಯುಂ (ಕೋಕೋಚ. ೯-೦೪). ಹೋಳಿಗೆ[1] : ೧. ಸೊಗಯಿಪ ಘೃತಪೂರಂ ಹೋಳಿಗೆ ಮಂಡಿಗೆ . . . ಪೂರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ಅಜ್ಯಯುತವಮ್ಮುವಂ ಮೆಲ್ದು (ಧರ್ಮಾಪ್ರ. ೦-೦೪೬); ಸೊರ್ಕಾನೆದಿಂಬಂಗಾಡೆ ಹೋಳಿಗೆಯೆಂಬಂತೆ (ಅರ್ಥಸೇ. ೬-೬೩ ಕ); ಸಮಸ್ತ ಬ್ರಾಹ್ಮಣಸಮಾಜವು ಹೋಳಿಗೆಯುಂಡಿತು (ಹಬ್ಬ. ೦೩); ನೆರೆಮನೇ ಹೋಳಿಗೆಗೆ ತುವ್ವಾ ಕಾಯಿಸಿದ ಹಾಗೆ (ಗಾಕ). ೨. ಬೆಂದ ಕಳಲೆಯ ಹಿಟ್ಟನಿಳಿಹಿಯಾಜ್ಯಸಿ ಹಲವು ಚಂದದ ಹಸುರು ಗಾಯ ತೆಱದಿನುತ್ಪರಿಸಿಕೊಂಡು . . . ಧೂವವನಿಡುವುದು ಅದಱೊಳಗೆ ಬೆಂದ ಕಳಲೆಯ ಹೋಳಿಗೆಯ ಹೋಳನೊದವಿಸಿದ ಬಳಿಕ ಪೊಗ್ಗರಣೆಯಂ ಮಾಡುವುದು (ಸೂಪಕಣಾ. ೬-೯). ‘ಪುಲ್ಲಿಗೆ[3]’ ಪರಾ.

ಹೋಳಿಗೆ ತುಪ್ಪದಾಗ ಬೀಳು = (ಆಲಂ) ಕೆಲಸವು ಕೈಗೂಡು : ಹೋಚು ಗಿಂಚು ಎಲ್ಲಾ ಮುಗಿದು ಹೋಳಿಗೆ ತುಪ್ಪದಾಗ ಬೀಳುವ ಹೊತ್ತು ಬಂದಿದೆ (ಜಾಪೋಲೀ. ೨೩೨). ಹೋಳಿಗೆಯ ನೈವೇದ್ಯ = (ಆಲಂ) ಹೊಡೆತ; ಪೆಟ್ಟು : ಕೊಡುತ್ತೀರೋ ಇಲ್ಲವೇ ಎಲ್ಲರಿಗೂ ಹೋಳಿಗೆಯ ನೈವೇದ್ಯವಾಗಬೇಕೋ ? (ರಂಗರೋ. ೩). [< ಸಂ. ಪೋಲಿಕಾ]

ಪೋಳಿಗೆ[2], ಹೋಳಿಗೆ[2] (ನಾ). ಹೊಪ್ಪಳಿ; ಬೊಕ್ಕೆ; ಸ್ಫೋಟಕ, ಪೋಳಿಗೆ, ಸ್ಫಟಿಕ, ಪಳಕು (ಕಣ್ಣಕು. ೦೬೦ ಪ್ರಹೋ). ಹೋಳಿಗೆ[2] : “ಹೋಳಿಗೆಯೆಂದು ಸ್ಫೋಟಿಕಂ” (ಕಣಾ. ೬೫-೮೬೪); ಸ್ಫೋಟಕ ಶಬ್ದಕ್ಕಾದ ಹೋಳಿಗೆಯೆಂಬುದುಂ, ಲಾಪಟ ಶಬ್ದಕ್ಕಾದ ಲಂಬಳವೆಂಬುದುಂ ಱುಕ್ಕೆ ಸಂದೇಹಂ (ಕಪುಡ. ೨೨ ಕ್ಕೆ), ಬಸವಳಿದಂಗ ಹೋಳಿಗೆ ಮೂ[ಕಾಕಾಂ. ಮಾ]ಡುವ ಕಾಲ್ಬೀಸುವಾಂತು ತೀಡುವ ಸಾಯ್ಲುಬ್ಬೆ ಗೊಂಡೊಡಲಿಂದವೆ ಪಾಡಳಿದನು ಸುಕುಮಾರ (ಕ್ರೀಕಾಂ. ೪-೫೬). ‘ಹೋಳಿಗೆವಡೆ’ ಪರಾ. [< ಸಂ. ಪೋಟಕ, ಸ್ಫೋಟಕ]

ಪೋಳಿಸು ‘ಪೋಟಿಸು’ ನೋ.

ಪೋಳ್ಳು[1] ‘ಪೋಟ್[1]’ ನೋ.

ಪೋಳ್ಳು[2] ‘ಪೋಟ್[2]’ ನೋ.

ಪೋಳ್ಳಳಿ, ಹೋಳುಗಳಿ (ಕ್ರಿ). ೧. ತುಂಡುಮಾಡು; ಕತ್ತರಿಸು ಹಾಕು; ಕಡಿ : ಹರಿಗಳು . . . ಎಮಗೆ ಪೋಳ್ಗಳಿಯಲಿರಗಿದವಮುವು ಮುಸ್ತಕವ (ಅಂಂಕಾ. ೪೨-೬೪). ಹೋಳುಗಳಿ : ೧. ಹೋಳುಗಳೆದನು ಸುಭಟ ನಿಟ್ಟಿಲ್ಲು ಮೂಳೆಯನು (ಕಾಣ್ಮಕ್ರೀ. ೦೩-೪೦); ಕರಾಳಕುಜಮನು ಮುಸಲ ಹತಿಯಲಿ ಹೋಳುಗಳೆದನು (ಪಣಾಗ. ೦೦-೬೩-೦೪) . ೨. ನಾಶಮಾಡು; ಧ್ವಂಸಗೊಳಿಸು : ಆಯುಷ್ಮನು ರವಿ ಹೋಳುಗಳೆಯನೆ ಹರಿಪರಾಜ್ಞಾಖರಾದವರನು (ಪಣಾಗ. ೨-೨-೩). ೩. ನಾಶವಾಗು; ಧ್ವಂಸವಾಗು : ಕಾಳಗದೊಳಿರಡುದಳದಲ್ಲಿ ವಂದಕ್ಷೋಣಿ ಹೋಳುಗಳೆದುದು ಮೂರುಸಂಜೆಯೊಳು (ಕುರಂಗ. ೩೭-೦). ೪. ಛಿದ್ರವಾಗು; ತುಂಡಾಗು : ಸೀಳಿ ಬಿದ್ದಿದ್ದವು ಮದೇಭಘಟಾಳಿ ಘೋಟಕನಿಕರ ನೆಲದಲಿ ಹೋಳುಗಳೆದಿರ್ದವು (ಕೋಪಣ. ೩-೬-೦೩). [ಪೋಳ್[2] (<ಪೋಟ್[2]) + ಕಳ್[1]]

ಪೋಳ್ಗುಟ್ಟು, ಹೋಳುಗುಟ್ಟು (ಕ್ರಿ). ತುಂಡಾಗುವಂತೆ ಹೊಡೆ; ಸೀಳು : ಇದು ತವುಸ್ಸೇಬ ಪರ್ವತವ ಪೋಳ್ಗುಟ್ಟುವತಿಛಿದಾರಂ (ಕಾಪು. II. ೧೬೬ ಕಟುಕಾಕಾಥಾಪ್ರಕರಣ). ಹೋಳುಗುಟ್ಟು : ಬೆಟ್ಟಿಯ ವಜ್ರಕವಾಟವ ಸ್ಪಷ ಹೋಳುಗುಟ್ಟಿದಟ್ಟನು ನಿಮಿಷದೊಳು (ಪಪಪ. ೨೯-೬೨). [ಪೋಳ್[2] (< ಪೋಟ್[2]) + ಕುಟ್ಟು[1]]

ಪೋಳ್ಗೆಯ್ (ಕ್ರಿ). ಸೀಳು : ಹೋಳುಮಾಡು : ನಿಮ್ಮುವಂ ಸೀಳಿ ಪೋಳ್ಗೆಯ್ದು ಕುದಿಸುತ್ತಿಹರು (ಪಪಕೋ. ೯-೩೦).

[ಪೋಳ್[2] (< ಪೋಟ್[2]) + ಕೆಯ್[1]]

ಪೋಳ್ದಟ್ಟೆ (ನಾ). (ವೀಳ್ಯದೆಲೆ ಹಾಗೂ) ಚೂರಡಕೆಯನ್ನು ಇಟ್ಟಿರುವ ತಟ್ಟೆ : ಫಣವಳ್ಳಿಯ ಪರ್ಣ ಸ್ವರ್ಣವರ್ಣದಿ ಕೇವಣಿಸಿರ್ದ ಕೆತ್ತಿ ಕತ್ತುರಿಯ ಮಣಿಯೆನಲುರ್ದಿದ ಪೋಳ್ದಟ್ಟೆಯ ನಿಟ್ಟಣಿಸುದರ್ ತಲೆಗಿಂದಿ ನರಿ (ಪಣಪಕ. ೩೦-೫೩). [ಪೋಳ್[2] (< ಪೋಟ್[2]) + ತಟ್ಟೆ]

ಪೋಳ್ದಂಬು (ಕ್ರಿ). ಅಡಕೆಯ ಹೋಳನ್ನು ತುಂಬು : ಕೋಮಲವಡೆದ ಬಂದುಗವಾಯ್ಗೆ ಪೋಳ್ದಂದಿ ಧ್ರಾಮಕವಡೆದು ಚುಂಬಿಸಿದ (ಪೋಪಕ. ೦೬-೪೭). [ಪೋಳ್[2] (<ಪೋಟ್[2]) + ತುಂಬು]

ಪೋಟ್[1], ಪೋಳ್[1], ಪೋಳ್ಳು, ಹೋಳ್, ಹೋಳ್ಳು (ಕ್ರಿ). ೦.

ಕತ್ತರಿಸು ; ತುಂಡುಮಾಡು : "ಪೋಟ್[1]—ಎದಾರಣೇ. ಏಂದೇ ಚ. ಎರಚನಾರ್ಥೇ ಚ (ಎರ್ಪಡಿಸು)" (ಕವಿಂಗ) ; ಅಚ್ಚಗೊಂಡದೊಳಗುರ್ವಿಸೆ ಸೀಳಿಸಿ ಮಾಣದಿಕ್ಕೆ ಪೋಟ್ದಿರ್ವಗಿ ಮಾಡಿ ತಾಳಿಸೆ ಸುರುಳ್ಳಿನೆಗಂ ನೆಜಿ ಸಾಯಂ (ಶಾಂತಿಪು. ೭-೧೫) ; ಎನ್ನನೊದೆದ ನಿನ್ನ ಕಾಲ್ಗಳನೆನ್ನ ಮಕ್ಕಳು ಮಾನುವೊಂದಾಗಿಯುಮೇನಾಗಿಯುಂ ಸೀಳ್ದು ಪೋಟ್ದು ತಿಂಬೆವು (ಸುಳುಪಚ. ೫-೬ ಪ) ; ಎಬ್ಬಟ್ಟಿ ವೆಣ್ಗಳನ್ ಪೋಟ್ದನ್ (ಅಶ್ವತ್ಥಾ. ೩-೧೩). ೨. ಎರಡು ಭಾಗ ಮಾಡು; ಸೀಳು : ಪುಲಿ ಬಂದು ಪಾಯ್ದು ಬಸಿಜಾ ಪೋಟ್ದು ನೆತ್ತರಂ ಕುಡಿದು ತೆಗಲೆಯಂ ಪೊಟ್ದು ತಿಂಬಾಗಳ್ (ಪಡ್ಡಾರಾ. ೧೬-೧೯); ಚಲದ್ದಿ ಕೃಷ್ಣೆಯ ಕೇಶಮಂ ಪಿಡಿದ ನಿನ್ನಿಂದಾದಬಲ್ ನಿನ್ನುರಸ್ಥಲಮಂ ಪೋಟದೆ ಪೋಪುದಲ್ತು (ಪಂಪಭಾ. ೦೨-೦೪೬); ನಸುನೆನೆದೊಯ್ಯನುಳ್ಳಲರೆ ಪೋಟ್ದಿಲೆ ಕಂದದೆ ಕೂಡೆ ಕೆಂಪಿನಿಂ ರಸವೊಸರ್ವಂತಿರೊಕ್ಕ ನಱುದಂಬುಲಕಂ ಕುರುಳಿಂ ಕಟಲ್ದು ಬಿರ್ದಿಸೆವಲರ್ಗಂ ಮದಾಳಿ ಮೊರೆದೆರ್ದಱಗುತ್ತಿರೆ (ಪಂಪಭಾ. ೩-೦೭). ೩. ಸೀಳಿಹೋಗು ; ಬಿರಿ : ನಡುವೆನ್ನೊಡೆದಿರ್ಬಗಿಯಾಗಿ ಪೋಟ್ದು ನೀರೇಱಿದ ನಾಳಿಪುನ್ನೊಡೆದು ಸೌಳಿನೆ ಸೀಳ್ದುದು ದೋಣಿಪೋಪಿನಂ (ಸುಳುಪಚ. ೩-೦೬); ಬಱಿಕೆಯ್ಯಿಂ ನೆತ್ತಿ ಪೋಟ್ದಂತಿರೆ ಪೊಡಯಲ್ (ಪಡಳು. ೯-೨೮) ; ಪೋಟ್ಟುಂ ಬಲ್ಲಿರಿಗಳಂದು ವಜ್ರಾಹತಿಯಿಂ (ಪಡ್ಡಾಕು. ೧೭೩ ಶ್ರಯೋ). ೪. ಒಡೆ : ಪುಡಿಮಾಡು ; ಹುಡಿಗುಟ್ಟು : ಪೊದೆದಜ್ಞಾನಶೈಲೇನ್ದ್ರವಾನ್ಪೋಟ್[2]ದು (ಎಪ್ರ. II, ೦೨.೦ ; ಸು. 700); ತಿಱೀಲ್ಲಾಡುವೆನೋ ಕಲಾದ್ರಿಚಯಮಂ . . . ಬ್ರಹ್ಮಾಂಡಮಂ ಪೋಟ್ದಿನೋ (ಪಗರಿ. ೭-೩೫)- ೫. ನಾಶಮಾಡು ; ಧ್ವಂಸಮಾಡು : ನಿಜಾಯದ್ಭುಜಾಬಲದಿಂದೀಟ್ಟನನೇಕದುರ್ಗಚಯಮಂ ಪೋಟ್ಟಂ ರಿಪು ವ್ರಾತಮಂ (ಪಪಂ.೭-೪) ಪೋಳ್[1]: ೧. ಬಡೆನೀಶಾ ನಿಮ್ಮ ಪಾದಾಬ್ಜವ ನೆಲೆಲೆ ಬಿಡಂ ಸೀಳ್ದೊಡಂ ಪೋಳೆದ್ದೊಡಂ (ಪಶ್ವಾಕ. ೪೮) ; ಒನಂತೆ ಹರ ನೊಲಿದು ತನ್ನ ಧಾಳಾಕ್ಷಿಯಿಂ ತೋರಕಿಡಿಯಂ ಬಡಲಾಕ್ಷಣಂ ರುಧಿರಮಂ ಪೀರಿ ಮುರಿದಜನ ಶಿರಮಂ ಪೋಳ್ದುದು (ಪಪು. ೦೬-೨೩) ; ಪರಿಯ ಪಾವಂ ಪಿಡಿದ ಕರಿಯಂ ಸೀಳ್ದ ಸಿಂಹಮಂ ಪೋಳ್ದ ಶರಭಮಂ ಮಾಲಾಕಾರದಿಂ ಸಾಲ್ಗೊಂಡೆತ್ತಿ ನಭೋಮಂಡಳಕೆ ಜಿಗಿದೊಗೆದು ನೆಗೆವ ಭೀರುಂಡಂಗಳಂ (ಪಾಪಕೇ. ೩-೫೫ ಪ). ೨. ವೈರಿವೀರಾವನೀಶ್ವರವಕ್ಷಸ್ಥಳಮಂ ಸ್ವಖಿಳ್ಗ ನಖರವ್ಯಾಘಾತದಿಂ ಪೋಳ್ದು (ಪ್ರುಕಾ. ೦೯೩೯. ೦೦೭ ; 1174) ; ಜಾತಿಜಾಯಿಲಂಗಳಂ . . . ಉಂಗುಟದಿಂ ಭಾಳಾಗ್ರಂಬರಂ ಪೋಳ್ದೆತ್ತಿ ತನಗಿದಿರಂ ಕಾಣದೆ ಹೆಕ್ಕಳದಿಂ ಕೆಕ್ಕಳಿಸಿ ನೋಡುವೆಲ್ಲಂಗಳುಮಂ (ಪಂಪಕ. ೦೬-೦೪). ೪. ಸೀಳ್ದೆನಿಳೆಯಂ ಕೀಳ್ದೆನದ್ರಿಗಳಸರ್ದನಂ ತೊಳ್ದೆನೇಳಬ್ಧಿಯಂ ಪೊಳ್ದೆನಿದಿರಾದರಂ . . . ಬ್ರಹ್ಮಾಂಡಮಂ ಪೋಳ್ದೆಂ (ಪಂಪು. ೩೦-೦೦). ಪೋಳ್ು[1] : ೨. ಸುರಹೊನ್ನೆಯ ಜಿನನಂ ಸೀಳುತ್ತಂ ಅರುಹ ಪ್ರತಿಮೆಯನುಜಿ ಪೋ[ಪಾಂ. ಹೋ]ಳುತ್ತಂ (ಆಪಕ. ಪ. ೪೭೯-೨೯) ; ಮೃತ್ಯುಂಜಯಂ ಗಜಾಸುರನ ಪೋಳುವ ತೆಱದಿ ನೆತ್ತಿಯಂ ಸೀಳ್ದು (ಪಾಶಕ. ೦೭-೬೯). ಹೋಳ್ : ೧. ಬಳೆಗಳಿವ ಹೋಳ್ದ ಸೀಳ್ಗಾಜಿಸುವ ನೆಜಿ ಸುಲಿವ ಖಿಳರ ಕಳಕ್ಕಳದ ಕೋಳಾಹಳದೊಳಾ ರೌರವಂ ಭಯಂಕರವಾದುದು (ಸಿದ್ಧಾ. ೪-೨೯). ಹೋಳು[1] : ೧. " ಹೋಳು . . . ತುಂಡುಮಾಡು " (ಗೀಗಾಕರಃ. ೪೫೪). ೪. ಏಳುಕಡಲೊಡಲೆಡೆಯಲಡಗಿರ್ದ ಶೈಲಮುಂ ಹೋಳುವರು ವಡಬಶಿಖಿ ತಣ್ಣೆತೆನೆ ಕೋಪಮಂ ತಾಳುವನು (ಸಿದ್ಧಶಾ. ೦-೨೦); ಅದರ 'ರೂಕ್ಷಶಿಖಿರಾಗ್ರಮನ್ . . . ಮಿಂಚುರಿಯ ಪೊಯ್ಲಿಂದೆ' ಹೋಳುವಾಗ ತೂರುವಾಗ ಅದು ಭೂಗರ್ಭದಾಳಕ್ಕೆ ಉರುಳುವುದು (ಅದ್ಭಶ್ರ 'IV, ಪಾಖಿಕಚ ಸಮುಸ್ಕೃ). ೫. ಎನ್ನ ಜನ್ಮದ ಕೋಳಮಂ ಹೋಳಿದನೆನುತ ಸಲ್ಲೀಲೆ ಸದ್ಭಾವದಲಿ ನುತಿಸಿದ ದೇಶಿಕೋತ್ತಮನು (ಸದ್ಭಾಕು. ೨-೨೬) : ಸಚರಾಚರಂಗಳ ಜಾಲವನು . . . ಅವನಾಜ್ಞೆಯಲಿ ಹೋಳುವನು ಹಣಿಗಿಚ್ಚಿನಲಿ ಹರನು (ಪಭಾಗ. ೬-೩-೨೩). ೬. ನಾಶವಾಗು ; ಪಾಳಾಗು : ಅಳು ನಗುವನು ಸಹಜ ನೆಚ್ಚಿ ಬಾಳುವೆಯ ಹೋಳುವೆಮು ? (ಪಶಾಪ. ೧೦-೦೦).

[ದೇ. ॥ತವಿ. ಪೋಟ್[3]; ತೆಲು. ಪೋಂಚು; ಪರ್ಜಿ. ಪೋಟ್[3]]

ಪೋಟ್[3], ಪೋಳ್[3], ಪೋಳ್ು[2], ಹೋಳ್ು[3] (ನಾ). ೧. ತುಂಡರಿಸಿದ ಭಾಗ ; ಚೂರು ; ತುಂಡು : ಕರ್ಪೂರಸಮ್ಮಿಶ್ರಮಪ್ಪ ನೆಲವತ್ತಿಯಡಕೆಯ ಪೋಟ್ಗಳುಮಂ . . . ಬ್ರಹ್ಮಯ್ಯಂಗೆ ಕೊಟ್ಟು (ವಡ್ಡಾರಾ. ೭೮-೨೩) ; ನೇ [ಪಾಪಾಂ. ಸೀ]ಳ್ದ ಮಾವಿನ ಪೋಟಂದದ ಕಣ್ಗೆ ಬಾಷ್ಪಜಲಮುಂ ಚಿತ್ತಕ್ಕೆ ಸಂತಾಪಮುಂ ನಿನಗಂ ಮಾಡಿದನಾವನಾತನೆ ವಲಂ ಗಂಧೇಭವಿದ್ಯಾಧರಂ (ಪಂಪಭಾ. ೪-೭೪); ಒಂದು ಪೋಟನಿತಱೊಳಿರ್ದುದೊಂದು ಕಡಿ ಪೀಠದೊಳಿರ್ದಪುದು (ಪಪುಚ. ೯-೬). ಪೋಳ್[3]: ೧. ಸಿರವೊಡೆದೊಡೇನಾಯ್ತು ಸರಸಿರುಹಸಂಭವಂ ಧುರವರಿವ್ರನೆ ಬರಿದ ಮಸ್ತಕದ ಪೋಳ್ಗಳಂ ವರಚತುರ್ವದನಂಗಳಂ ಮಾಡಿಕೊಂಡು . . . ಹರಿಗೆ ಮಾಱಾಂತು (ಪಂಪು. ೦೬-೧೦); ಆ ಕುಮುದ್ವತಿ ನರೇಂದ್ರಮಸ್ತಕದ ಪೋಳ್ಗಳನೊಂದು ಗೂಡಿ ಪಿಡಿದು (ಕೃಪಾಶಾ. ೨೬-೬೬); ಪರಿಮಳವೆರವ ಪೂಗೀಫಲದ ಪೋಳ್ಗಳ . . . ಸರಸವಾಡುತಲೀಯಲು (ಆಪಂಶಾ. ೦-೩-೩೦). ೨. ಬಿರುಕು ; ಸೀಳು : 'ಪೋಳರೆ' ಪರಾ. ೩. ಅಡಕೆಯ ಚೂರು : ಚುಂಬಿಸಲಾಣ್ಮನ ಬಾಯೊಳು ಪೋಳ್ಗಳ ತುಂಬಿದಳರೆಗಳಿಗೆಯೊಳು (ಕೋಚಕ. ೩೨-೦೦). ' ಪೋಳ್ದಂಬು ' ಪರಾ. ಪೋಳ್ು[2] : ೧. ಉಡಿದು ಬಿದ್ದಿದೆ ಮಣಿಮೇಖಲೆ ಸಿಡಿಲುಜಿ ಹೊಡೆದ ರೋಹಣಾಪರ್ವತದ ನಿಡುಗಲ್ಲ ಪೋಳಂತೆ (ಶಾಂಶಾಂ. ೪೪-೪೨). ಹೋಳ್ು[3] : ೧. ಎತ್ತಿದವಧೂತ ಕೋಪದಲಿ ಹಿಡಿದೊತ್ತಿ ಸೀಳಲು ಹೋಳು ನಿಮಿಷಕೆ ಹತ್ತಿ ಮೂದಲಿಸುತ್ತ ಬರುತಿರೆ ಭೀಮ ಬೆಟಗಾದ (ಶಾವ್ಯಾಸ. ೬೦೩. ೨-೦೩೦); ರಕುತದ ಜಿಗಿಯ ಜೋರಿನಲೆಸೆದವಾ ಹೋಳಿರಡು ರಕ್ಕಸಿಯ (ಹರಣಾ. ೩-೦ ೨೩); ವೈರಿ ಸುಭಟನ ಗದೆಯು ಗದೆಯಲಿ ಹೊಯ್ದು ನುಗ್ಗೊತ್ತಿವನು ಸಾವಿರಹೋಳಿನಲು ಬಿದ್ದುದು ಧರಿತ್ರಿಯಲಿ (ಪಭಾಗ. ೦೦-೬೯-೦೬). ೩. ಹೋಳು ಬೆಳ್ಳಿಲೆ ಕರ್ವುರಗಳ ತಿಂಬ ಗಯ್ಯಾಳರ ತಹುದಚ್ಚರಿಯೆ (ಶಾಂಶಾಂ. ೨೪-೪೪) ; ತಿಳಿದು ನೋಡಲು ಮಧ್ಯರಾತ್ರಿಯನೊಂದರೆಗಳಿಗೆಯ ಮಾಡಿ ಕತ್ತುರಿಯ ಗುಳಿಗೆ ಸೇರಿದ ಹೋಳ ಕಾಂತನ ವಿರಹತ್ಪನಳನಕ್ಕೆ ಕೊಟ್ಟಳಳ್ತಿಯಲಿ (ಕೋಚಕ. ೦೬-೬೬).

ಪೋಳ್ಮಾಡು, ಹೋಳು ಮಾಡು, ಹೋಳ್ಮಾಡು = ೧. ಸೀಳು ; ಸಿಗಿ : ಇಡುಗಟ್ಟಿಗೆಯೊಳಿಟ್ಟು ಬಿಡದೆ ಗರಗಸದಲ್ಲಿ ನಡುನೆತ್ತಿಗಳಂದಿರು ಪೋಳ್ಮಾಡುವಾಗಳಡರ್ದು ಬಿಡಿಸುವರೆ ಸತಿಸುತರು (ಗುಪುಚೋ. ೦-೩೦) ; ಹುಡುಗನು ಕೋಪದಿಂದ ಗೊಂಬೆಯನ್ನು ಎಸೆದು ಎರಡಾಗಿ ಹೋಳು ಮಾಡಿ ಬಿಚ್ಚಿಸು (ಕೂಪ). ೨. ಒಡೆದು ಪಾಕು ; ಪುಡಿ ಮಾಡು : ವಿಜಯಾರ್ಧಶೈಲದೊಳಿಕ್ಕಿದ ವಡಿಯಾ ನಾಳೆ ಹೋಳ್ಮಾಡಿ ಬಿಡುವೆನೊಣಗಿದ ಬರಹಾಳೆಯನೊಡೆಯ ಹೊಯ್ದಂತೆ (ಪಪಚ. ೨೯-೩). **ಪೋಟಾಗು, ಹೋಳಾಗು = ೧. ಸೀಳು ; ಬಿರಿ : ಪೋಬೂದತ್ತೆನ್ನ ಹೃದಯವಾದು ಲಲಿತಾಂಗಿ (ಉಕ್ಕಪ. ೭-೮೪) ; ನಾಗನಿವಾಸವಾಲವ ಮರಂ ಶಶಕಂ ಮೃಗವೆಂದೆನುತ್ತೆ ಪೋಟಾಗಿರುತಿರ್ವುದೇನದು ವಿಚಾರಿಸಿ ನೋಡುವಡಿಂದುಮಂಡಲಾ (ಪಪಗಕ. ೦-೩೬); ಹಿಳಿದ ಲೋಹದ ಸೀಸಕಂಗಳ ಬಲಿಸಿದರು ಹೋಳಾದ ಕವಚವ ಹೊಲಿಸಿದರು (ಶಾವ್ಯಾಕ. ೪-೩೬). ೨. ಚೂರಾಗು ; ತುಂಡಾಗು : ಇಳಿಗವನ ತಲೆಯನು ಬಿಗಿಕ್ಕಿದನ ಕವಾಲ ಸಾವಿರಹೋಳಹುದು (ಶಾವ್ಯಾರ್ಜು. ೦೪-೪೦) ; ಎರಡು ಹೋಳಾಗಿ ಬಾಳೆಯ ಕಾಯ ಸಂಬಳಿಸಿ . . . ಸಂಭಾರವುಂ ತುಂಬಿ (ಪಪಪಶಾ. ೯-೬೨). ಹೋಳಡಕೆ = ತುಂಡುಮಾಡಿದ ಅಡಕೆ; ಅಡಿಕೆಯ ಚೂರು: ಹೋಳಡಕೆ ಬಿಳಿ ಎಲೆ ನೀಪ ಕೊಳ್ಳಿರಿ ಕೊಳ್ಳಿರಿ (ಪಾಪಕ. ೦೬೩ ೪

[< ಪೋಟ್ಯ್ಯ$_1$. / ತಮಿ. ಪೋಟ್ಯ್ ; ಮಲ. ಪೊಳಿ, ಪೊಳುಕ್ಕ; ತುಳು. ಪೂಳು]

ಪೋಟ್ಯ್ಯ$_3$, ಹೋಟ್ಯ್ (ನಾ). ೧. ಮರದ ಪೊಟರೆ ; ಡೊಗರು : ಕಳ್ಳರಂತೆಗೆಯ್ವೆಮೆಂದೊಡಂಬಟ್ಟು ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ಮರದ ಪೋಟ್ಯೊ[ಪಾಠಾಂ. ಪೊಟಲೊ, ಪೊಳೊ]ಳಿಟ್ಟು ದಿವಸಕ್ಕಂ ಪೋಪರ್ (ಪಡ್ಡಾರಾ. ೨೦-೬); ಪೆರ್ಮರಂಗಳ ಪೋಟ್ಗಳೊಳಗಣೆಂದಮೊಗೆದ ಕೇಸುರಿಗಳ ಬಳಗದಂತೆ (ಪಂಪಭಾ. ೦೦-೭೦ ಪ); ಪೋಟ್ಗಳೆಡೆಯಲ್ಲಿ ಕವಲ್ಗಣೆಯಲ್ಲಿ ಸುತ್ತಲುಂ ಗಿಳಿಗಳ ಹಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾಕುಳಮನುರಾಗದಿಂ ಪಲವುದೇಶದೊಳಿರ್ಪುವು ಬಂದು ಭೂಪತೀ (ಕಾದಂಪು. ೦೨೬). ೨. ಪೊಳ್ಳು; ಜಳ್ಳು: 'ಪೋಟ್ಮರ' ಪರಾ. **ಹೋಟ್ಯ್**: ೧. "ಕೋಟರಮಾಗಿ ಕೂಟಮೆನೆ ಹೋಟಕ್ಕು [ಪಾಠಾಂ. ಪೊಟಲಕ್ಕು]" (ಮಂಗರಾ. ೩೨-೩). 'ಪೋಟ್ಯ್ಯ$_1$' ಪರಾ.

[ದೇ.ಪ ತಮಿ. ಪುಟ್ಯೈ, ಪೊಳ್ಳೈ]

ಪೋಟಲ್, ಪೋಳಲ್, ಹೊಳಲು$_1$ (ನಾ). ಮರದ ಡೊಗರು; ಪೊಟರೆ; ಕೋಟರ: "ಕೋಟರಾಹ್ವಯಂ ತಾಂ ಪೋಟಲ್" (ಪಸ್ತುಕೋ. ೩೦-೬); ಪೋಟಲ ಪಾವಡರೆ . . . ಮರದ ಮೊದಲೊಳ್ ಬೀಟಲ್ ನಿಲ್ವಂತೆ ನಿಶ್ಚಲಂ ಮುನಿ ನಿಂದಂ (ಶಾಂತಿಪು. ೯-೦೦೬); ಬಸಿಱನಪ್ಪಿದ ಮಱಿಗಳಂ ಹೊತ್ತು ಸಾಲ್ಗೊಂಡು ಮರದ ಪೋಟಲ್ಗೆ ಸಾರ್ದುವು ಕೋಡಗದ ಹಿಂಡು (ಅನಂಪು. ೯-೦೬ ರಗಳೆ); ಪೋಟಲೊಳಗಿರ್ದ ದುಷ್ಟ ವ್ಯಾಳಂ ಮುಳಿದೆನ್ನ ಕೈಯನೌಡಲ್ (ದಶಕು. ೨ ೦೦೦). **ಪೋಳಲ್** : ಪೋಳಲೊಳಗಣ ಬಾಲವಿಹಂಗಂಗಳನೆಱಂಕೆಯೊಳಿಱಂಕಿಕೊಂಡು ಪಾಱಲನುವಾಗಿ ತೂಱಲ್ಗೊಂಬಿನೊಳಿರ್ಪ ವಿಹಂಗಸಂಕುಳದಿಂದತಿಸೌಂದರ್ಯಮಂ . . . ಒಳಕೊಂಡಿರ್ಪುದು (ಗಿಂಕ. ೦-೦೨೬ ಪ). **ಹೊಳಲು$_1$**: ಪ್ರಳಯ ಫಣಿಯಣಲ ಹೊಳಲೊಳಗೆ ಕೈಯ ನೀಡಿ ದಾಡೆಯಂ ಮುಱಿಯ ಬಡಿವಂತೆ (ಹಸಕಾ. ೬-೦೦); ಬೆರಣಿಯ ಶಿಖಿಯಂ ಹುಣಿಸೆಯ ಹೊಳಲೊಳಗಿಕ್ಕುತ ಕ್ಷಣದೊಳ್ಪೊಕ್ಕಳಿದನಸುವನಾ ಮಹರಾಜಂ (ಪಸ್ನಕಾ. ೩-೩೬).

[ಪೋಟ್ಯ್ಯ$_3$ + — ಅಲ್$_3$./ತಮಿ. ಪೊಳ್ಳಲ್, ಪುಟಲ್]

ಪೋಟಲ್ಚೋರ 'ಪೋಟಲ್ಚೋರ' ನೋ.

ಪೋಟಿಸು, ಪೋಳಿಸು, ಹೋಳಿಸು (ಕ್ರಿ). ೧. ಚೂರು ಮಾಡು ; ತುಂಡು ಮಾಡು : ಈಗಳೆ ಕೊಂದು ಪೋಟಿಸಿ ತಾಳಿಸಿ ಗಮ್ಮನೆ ನಿಮ್ಮ ನೆಮ್ಮ ಮಾಲಿನಿಯರ್ಗೆ ಬಲಿಗುಡುವೆಂ (ರಾಮಾಶ್ವ. ೦೦೨-೯). **ಪೋಳಿಸು**: ೧. ಕಂಡನಾ ಸಮಯದೊಳ್ ಕಮಲಜಂ ಪರಕರದೆ ಖಂಡಿಸಿದ ತನ್ನುತ್ತಮಾಂಗಮಂ ರುಧಿರಜಲಮುಂಡು ಪೋಳಿಸಿದ ನಯನಾಗ್ನಿಯಂ ಪೊಗಳುತಿಹ ಸಕಲದೃಂದಾರಕರನು (ಪಬಪು. ೦೬-೦೬). **ಹೋಳಿಸು**: ೨. ಎರಡಾಗಿ ಭಾಗಮಾಡು ; ಸೀಳು : ನರಗೆ ಕೊಟ್ಟನು ಹೋಳಿಸಿದ ಕರ್ಪುರದ ವೀಳೆಯವ (ಕುಷ್ಠಾಪ್ರೋ. ೦೦-೩೭) ; ನಾರು ಬಲಿಯದ ಹುಣಸೆಕಾಯ ಮಾವಿನಕಾಯನಾರೈದು ಕೆತ್ತಿ ಕಿಱಿದಾಗಿ ಹೋಳಿಸೆ (ಸೂಪಶಾ. ೩-೦೦). ೩. ಮುರಿಯುವಂತೆ ಮಾಡು ; ಒಡೆಯುವಂತೆ ಮಾಡು : ರದನದಿ ಹೋಳಿಸುವ ಖಾತಿಯಲಿ ನಾನಾವಿಧದ ಕೊಲೆಗಳಲಿ ಕಾಲನೊಗಡಿಸೆ ಕೊಲುವ ಮದಗಜಜಾಲಗಳೆಣಳಾರೋಹಕರು ಕೆಂಗೋಲ ಮಳೆಗಱೆ ದಾರಿದರು ನೃಪಸೇನೆಯೆರಡಱಲಿ (ಕುಷ್ಠಾಪ್ರೋ. ೯-೬೩).

[ಪೋಟ್ಯ್ಯ$_3$ + — ಇಸು$_3$]

ಪೋಟ್ಗಡಿ, ಹೋಳುಗಡಿ (ಕ್ರಿ). ಚೂರಾಗುವಂತೆ ಕತ್ತರಿಸು,— ತುಂಡರಿಸು : 'ಪೋಟ್ಗಡಿವೋಗು' ಪರಾ. **ಹೋಳುಗಡಿ** : ಹೋಳುಗಡಿದನು ಹತ್ತುವಿಶಿಖಿದಿ ಜೋಲುತಿರ್ದುದು ಕರುಳು ಪನಸಗೆ (ಕೌಶಿಕಾ. ೨೬-೯೯). [ಪೋಟ್ಯ್ಯ$_3$ + ಕಡಿ$_3$]

ಪೋಟ್ಗಡಿವೋಗು (ಕ್ರಿ). ಚೂರಾಗುವಂತೆ ಕತ್ತರಿಸಿ ಹೋಗು ; ಛಿದ್ರವಾಗು : ಅಂದು ಚಂಡಿಕೆಯ ಕೂರ್ವಾಳಿಂ ಪೋಟ್ಗಡಿವೋದ ಮಹಿಷಾಸುರನ ಬಿರಿವೊಡೆಯಿಂ ಸುರಿದ ದಂಡೆಗರುಳ್ಗೆ ಪಾಸಟಿಯಪ್ಪ ಅರೆಜರಿದ ಜಾದಿನ ಕೋಡುವೆಟ್ಟನೊತ್ತುಗೊಂಡು ಸಿಂಧೂರವಿಲಿಪ್ತಮದಸಿಂಧುರಗಂಡಮಂಡಲದೊಂದು ಪಾಂಗಿನಿಂ ತೋರ್ಪ ತಟ್ಟಲಿಂ (ರಾಮಾಶ್ವ. ೭೨-೦೯).

[ಪೋಟ್ಗಡಿ + ಪೋಗು$_1$ (< ಪೋ$_1$)]

ಪೋಟ್ಗಿದಱ್ (ಕ್ರಿ). ಹೋಳಾಗು ; ಬಿರಿ : ಬೀಗಿ ಬೆಳೆದು ಕೆಂಬಿತ್ತುಗಳಿಂ ಪೋಟ್ಗಿದರ್ದಿರೆ ದಾಳಿಂಬದ ತಾಟ್ಗಳ್ ನಿಟ್ಟಿಪರ ದಿಟ್ಟಿಗಿಟ್ಟಳ ಮೆಸೆಗುಂ (ಶಬ್ದಾಮ. ೦೯೩ ಪ್ಯಾಖ್ಯಾ). [ಪೋಟ್ಯ್ಯ$_3$ + ಕೆದಱ್]

ಪೋಟ್ಮರ (ನಾ). ಟೊಳ್ಳಾದ ಮರ ; ಜಳ್ಳಾಗಿರುವ ಮರ : ಅಲ್ಲಿ ತನ್ನಂ ಕಾಣಲೊಡನಿರ್ಮಡಿಸಿದ ಶೋಕದಾವಾನಲನೆರ್ದೆಯೊಳ್ ಪೋಟ್ಮರದ ಕಿರ್ಚಿನಂತಳುರೆ ತಳಮಳಗಾಗಿ (ಶಾಂತಿಪು. ೦-೯೯ ಪ); ಪಟುಗಟಿದಟಲ ಕಿರ್ಚು ಪೋಟ್ಮ [ಪಾಠಾಂ. ಪೊಳ್ಮ]ರದ ಕಿರ್ಚಿನಂತೊಳಗೊಳಗಳುರೆ (ಅರ್ಧನೇ. ೬-೦೨ ಪ). [ಪೋಟ್ಯ್ಯ$_3$ + ಮರ$_1$]

ಪೌಂಚಾಯಿಸು (ಕ್ರಿ). ೧. ಸೇರುವಂತೆ ಮಾಡು ; ತಲುಪಿಸು : ವೀರರಾಜೇಂದ್ರವಡೆಯರವರು ಸರಕಾರದ ಫೌಜಿಗೆ ರಸದು ವಗೈರೆ ಸಾಮಾನು ಪೌಂಚಾಯಿಸಿ ಕುಂಪನಿ ಕೆಲಸಕ್ಕಾಗಿ ಮೆಹನತ್ತು ಮಾಡಿದರಿಂದಾ (ರಾಜೇಂದ್ರ. ೨೩೦). ೨. ನ್ಯಾಯವಿರುದ್ಧವಾದ ಬೋಧನೆಯನ್ನು ಮಾಡು : (ಕ).

[ಪೌಂಚ್ಯಾ (p ← ಹಿಂ. ಪಹುಂಚಾನಾ) + — ಇಸು$_3$]

ಪೌಂಚಿ, ಪವುಂಚಿ, ಪೊಹಚಿ, ಪೋಂಚೆ, ಪೋಚು$_1$, ಪೋಚೆ$_1$, ಪೋಹಚೆ, ಪೌಚಿ (ನಾ). ಮುಂಗೈಗೆ ತೊಡುವ ಒಂದು ಬಗೆಯ ಆಭರಣ : "ಆವಾಪಕಃ, ಪಾರಿಹಾರ್ಯಃ— ೨ ಸೂಡಗವೆಂಬ ಕಡಗ, ಚೂಡಾಲುಂ, ಪೌಂಚಿ . . . ಮುಂತಾದ ಹಸ್ತಾಭರಣ" (ಸಿದ್ಧಾಂತಿ. ೨೦೦); ಓಲೆ ಮೂಗುತಿ ಕೊಪ್ಪು ಮೇಲೆ ರನ್ನದ ಕುಸುಮ ಕೀಲು ಚಿಂತಾ ಪೌಂಚಿ ಕಡಗ ಹೊನ್ನಬಳೆಯು (ಕರಲೀ. ೦೩೯-೯); ಮುಂಗೈಯಲ್ಲಿರುವ ರತ್ನಖಚಿತವಾದ ಪಟ್ಟಿಕಡಗ, ಅದರ ಮೇಲೆ ಮುದ್ದಾದ ಪೌಂಚಿ (ಪುಲ್ಲಿ. ೯೦). **ಪವುಂಚಿ** : (ಕ). **ಪೊಹಚಿ** : ಕೈಯೊಳಗಿನ ಆರುತೊಲೆಯ ಪೊಹಚಿ ಕಳೆದನು (ಮುಂಬಯಿ. ೯-೦೯೬). **ಪೋಂಚೆ** : "ಪಾರಿಹಾರ್ಯ—ಮುಂಗೈ ಆಭರಣ; ಪೋಂಚೆ" (ಗಂಗಾಮ. ೨೦೬). **ಪೋಚು$_1$** : ಮುಂಗೈಗೆ ಕಟ್ಟಿದ ಪೋಚು, ಬೆರಳಿಗೆ ಹಾಕಿದ ಉಂಗುರಗಳು (ಅಕೋಕ. ೬). **ಪೋಚೆ$_1$** : ಮುತ್ತಿನ ಪೋಚೆಯು ಕೈಯ್ಯಾಗ . . . ಹೂವಿನ ಜರದಂಗಿ ರವಿಶಂಕರ ತೊಟ್ಟಿಹನು (ಸಿದ್ಧಪು. ೦೯-೯೨); ಒಂದು ಕೈಯ ಮುಂಗೈಯಲ್ಲಿ ರಿಸ್ಟ್‌ವಾಚು, ಇನ್ನೊಂದು ಕೈಯಲ್ಲಿ ಪೋಚೆ . . . ಧರಿಸಿದ್ದನು (ಸಮಾಜ. ೯೩). **ಪೋಹಚೆ**: ಕೈಯೊಳಗಿದ್ದ ರತ್ನಜಡಿತ ಪೋಹಚೆಯನ್ನು ಕೊಟ್ಟು ಅವರನ್ನು ಹಾದಿಗೆ ಹಚ್ಚಿದೆನು (ಮಂಜುಳ. ೦೦೩). **ಪೌಚಿ** : ಕೈಗಳಿಗೆ ಹಾಕಿದ ಚಿನ್ನದ ಪೌಚಿ ತಿರುವುತ್ತಾ ಅತ್ತಿಗೆ ನರಸಮ್ಮ ' . . . ಬೆಳಿಗ್ಗೆ ಬತ್ತೀನಿ ಅಂತ ಹೇಳೂ ಅಂದ್ರು' ಎಂದಳು (ಸರ್ವಮಂ. ೦೩).

[←ಹಿಂ. ಪಹುಂಚಿ ; ಮರಾ. ಪೋಹಂಚೀ, ಪೋಂಚೀ, ಪೌಂಚೀ./ತಮಿ. ಪೋಇಚ್ಚಿ ; ತುಳು. ಪೌಂಚಿ, ಪವುಚಿ ; ತೆಲು. ಪೋಂಚಿ]

ಪೌಂಡರೀಕ (ಗು). ೧. ಕಮಲಗಳಿಗೆ ಸಂಬಂಧಿಸಿದ. ೨. ಕಮಲಗಳಿಂದ ರಚಿತವಾದ. (ನಾ). ೩. ಒಂದು ಬಗೆಯ ಕುಷ್ಠರೋಗ. ೪. ಹನ್ನೊಂದು ದಿನಗಳವರೆಗೆ ಮಾಡುವ ಸೋಮಯಾಗ : ವಾಜಪೇಯ ಪೌಂಡರೀಕಾದಿ ಮಹಾಕ್ರತುಗಳಂ ನಿತ್ಯೇಷ್ಟಿ ಕಾಮ್ಯೇಷ್ಟಿ ಮೊದಲಾದವುಗಳಂ . . . ಕ್ಷತ್ರಿಯನಾದೊಡೆ ಅಧಿಕೃತಮಾಗಿ ಮಾಳ್ಪುದು (ಎನೇಶ. ೧೯೨). [ಸಂ.]

ಪೌಂಡರ್ಯ (ನಾ). (ಕಣ್ಣಿನ ರೋಗಗಳಿಗೆ ಔಷಧಿಯಾಗಿ ಬಳಸುವ)

ಬಿಳಿನೈದಿಲೆಯ ಗಡ್ಡೆ: "ಪ್ರಪೌಂಡರೀಕಂ, ಪೌಂಡರ್ಯಂ—೨ ಪುಂಡರೀಕ ನೆಂಬುವ ಗ್ರಂಥ್ಯದ್ರವ್ಯದ ಹೆಸರುಗಳು . . . ಇದು ಬಿಳಿನೈದಿಲೆಗಡ್ಡೆ" (ನಿಘಂಟು. ೦೪೦). [ಸಂ.]

ಪೌಂಡಿಮನೆ (ನಾ). ತೊಂಡುದನಗಳನ್ನು ಹಿಡಿದು ಕೂಡುವ ಸ್ಥಳ; ಕೊಂಡವಾಡ: ರಾಮಯ್ಯನು ತನ್ನ ತೋಟದಲ್ಲಿ ಮೇಯುತ್ತಿದ್ದ ತೊಂಡುದನವನ್ನು ಹಿಡಿದು ಪೌಂಡಿಮನೆಗೆ ಹಾಕಿದನು (ರೂಢಿ).

[< ಪೌಂಡು + ಮನೆ]

ಪೌಂಡು (ನಾ). ೧. ರೋಮನ್ ಪದ್ಧತಿಯ ತೂಕದ ಒಂದು ಏಕಮಾನ: ಒಂದುದಿನಕ್ಕೆ ೨೦ ಪೌಂಡು ಒಣಮೇವಿನ ಈಡುಣಿಸು ತಿನ್ನುವದಕ್ಕೆ ೮೦ ಪೌಂಡು ನೀರು ಬೇಕೆಂದು ತಿಳಿದುಬಂದಿದೆ (ಗೋಗ್ರಾಸ. ೩೬). ೨. ಇಪ್ಪತ್ತು ಷಿಲಿಂಗುಗಳ ಬೆಲೆಯುಳ್ಳ ಒಂದು ನಾಣ್ಯ: ಬ್ರಿಟಿಷರ ಒಂದು ಬೆಳ್ಳಿಯ ನಾಣ್ಯ (= $\frac{೧}{೨೦}$ ಪೌಂಡು) (Shilling. ಇಂಕಂ); ಮೊದಲಿನ ನಾಲ್ಕು ವರುಷಗಳಲ್ಲಿ ಒಂಬೈನೂರು ಪೌಂಡುಗಳ ಸಾಲವು ನಮ್ಮ ಆಫೀಸಿಗೆ ಬಿದ್ದಿತು (ಸಂಜಿಸ್. ೨೦೯). ೩. = ಪೌಂಡಿಮನೆ: ಸದರಿ ಡಿಸ್ಟ್ರಿಕ್ಟ್‌ಮ್ಯಾಜಿಸ್‌ಟ್ರೇಟರುಗಳು ಪೌಂಡಿನಲ್ಲಿ ಕೂಡುವ ದನಕರುಗಳಿಗೆ ನೀರು, ಮೇವು ಕೊಡುವ ಏರ್ಪಾಟನ್ನು ಮಾಡುವರು (ಗ್ರಾಮಾಕ. ೦೦೪). [← ಇಂ. Pound]

ಪೌಂಡ್ರ (ನಾ). ೧. ಒಂದು ಬಗೆಯ ಕಬ್ಬು; ಪಟ್ಟೆಗಳಿರುವ ಬಿಳಿಯ ಕಬ್ಬು. ೨. ಭೀಮನ ಶಂಖ. ೩. ಆಯಾ ಮತೀಯ ಲಾಂಛನವಾಗಿ ಧರಿಸುವ ತಿಲಕ, ಬೊಟ್ಟು ಮುಂತಾದ ಗುರುತು. ೪. ಒಂದು ದೇಶ ಮತ್ತು ಆ ದೇಶದ ಜನ. [ಸಂ.]

ಪೌಂಡ್ರಕ (ನಾ). ೧. ಒಂದು ಬಗೆಯ ಕಬ್ಬು. ೨. ಭೀಮನ ಶಂಖ: ಹಳಚಲನುವಾಯುಭಯಸೇನಾಜಲಧಿ ಕಳಕಳ ಮಿಗಲು ಮಾರುತಿ ಮೊಳಗಿದನು ಪೌಂಡ್ರಕವ ಭೂಪನನುತವಿಜಯವನು (ಕುಮಾಭೀ. ೩-೦). ೩. ಪುಂಡ್ರವಂಶದ ವಸುದೇವನೆಂಬ ರಾಜನ ಮಗ: ಪೌಂಡ್ರಕ ನನಂದೀತ ಕೊಂದನು ಹಂಸ ಡಿಬಿ.ರನೀತನೊರಸಿದನರಸ ಚಿತ್ತೈಸು (ಕುಮಾಭಾ. ೯-೩೪). ೪ ಪುಂಡ್ರವಂಶದ ವಸುದೇವನೆಂಬ ರಾಜನ ಮಗನಾದ ಇವನು ವಸುದೇವಪುತ್ರ ಶ್ರೀಕೃಷ್ಣನಂತೆಯೇ ಕೀರ್ತಿವಂತನಾಗಬೇಕೆಂಬ ದುರಾಸೆಯಿಂದ ಶ್ರೀಕೃಷ್ಣನಂತೆಯೇ ಶಂಖಚಕ್ರಗಳನ್ನು ಧರಿಸಿದ್ದು, ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಹೋಗಿ ಸೋತು ಹತನಾದನು. ೪. ಪೌಂಡ್ರಕದೇಶದ ಜನ. [ಸಂ.]

ಪೌಗಂಡ (ಗು). ೧. ಹುಡುಗುತನದ; ಬಾಲಿಶ. (ನಾ). ೨. ಐದರಿಂದ ಹದಿನಾರುವರ್ಷಗಳೊಳಗಿನ ವಯಸ್ಸು; ಬಾಲ್ಯ. ೩. ಹುಡುಗ; ಬಾಲಕ: ಕಷ್ಟಿಸಿದಿರಲ್ಲ ನಾವು ಹುಟ್ಟಿದಂದಿಂದೀಗೆ ನೀವು ದುಷ್ಟಸಂಸನಷ್ಟವಾಗಿ ಹೋದ ಕಷ್ಟಬಡಿಸಿದನು ನಿಮ್ಮ ದಿಷ್ಟ್ಯಾ ಹತನಾದ ನಮ್ಮ ಪುಟ್ಟ ಪೌಗಂಡ ಕೈಶೂರತನದಿ (ಪ್ರಸಭಾ. ೬೫-೨೭). [ಸಂ.]

ಪೌಚಿ 'ಪೌಂಚಿ' ನೋ.

ಪೌಜಿಕ್ಕು (ಕ್ರಿ). ಸೇನೆಯನ್ನು ಸಿದ್ಧಪಡಿಸು; ದಂಡನ್ನು ಸಜ್ಜುಗೊಳಿಸು: ಮುಂತೆಡಬಲದಿ ಪೌಜಿಕ್ಕಿದ ಚಂದ್ರವಸಂತಮಂದಾನಿಲಾದಿಗಳು ಪಂತದ ಬಿನ್ನಹವನು ಮಾಡಿದರು ರತಿಕಾಂತಂಗೆ ಕೈ ಮುಗಿದೊಡನೆ (ಸೋಹಕ. ೬-೨೦).

[ಪೌಜು (<ಫೌಜು) + ಇಕ್ಕು]

ಪೌಜು 'ಫೌಜು' ನೋ.

ಪೌಜುಗಂದಾಯ (ನಾ). ಸೇನೆಯ ಸಲುವಾಗಿ ಹಾಕುವ ತೆರಿಗೆ,—ಕರ: ಪೂರ್ವದಿಂದ ನಡೆದುಬರುತ್ತಿರುವ ದೇವದಾಯ ಬ್ರಹ್ಮದಾಯ . . . ರಕ್ತಕೊಡಗೆ ಮುಂತಾದುವೇನೂ ಹೆಚ್ಚುಕಡಿಮೆಯಾಗದಂತೆಯೂ ಆವೊಂದು ಈ ಪೌಜುಗಂದಾಯಕ್ಕೆ ಒಳಸೇರದಂತೆಯೂ ನಮ್ಮ ಕರಣಿಕರು ಎಚ್ಚತ್ತಿರಬೇಕು (ಬರುಗಂ. ೩೬-೨೩). [ಪೌಜು (<ಫೌಜು) + ಕಂದಾಯ]

ಪೌಜುದಾರ 'ಫೌಜುದಾರ' ನೋ.

ಪೌಜುದಾರಿ 'ಫೌಜುದಾರಿ' ನೋ.

ಪೌಜೊಡೆ (ಕ್ರಿ). ಸೈನ್ಯವನ್ನು ಭೇದಿಸು,—ಚೆದರಿಸು: ಪೌಜೊಡೆಯದೆ ಪೊಱಗೆ ನಿಂದು ಪುಯಿಲೊಳ್ ಪೊಲಂಬುಗೆಟ್ಟುದಂ ನಿಟ್ಟಿಸಿಯೋಡಿಪೋದರ ಪೆಂಡಿರೋಲೆಯುಟ್ಟುದುದು (ಸಕನಂ. ೪೨-೦೬). [ಪೌಜು(<ಫೌಜು)+ಒಡೆ$_1$]

ಪೌಜೊಡ್ಡು (ಕ್ರಿ). ಪಡೆಯನ್ನು ಎದುರಿಸು; ಸೇನೆಯನ್ನು ಒಡ್ಡು: ದುರುಳರಕ್ಕಸ ಜಂಭನಾಜ್ಞೆಯಿಂ ದಾನವರ ಬಲಮಿರದೆ ಪೌಜೊಡ್ಡಿತು (ಸಂಪು. ೪೩-೩). [ಪೌಜು (<ಫೌಜು) + ಒಡ್ಡು$_1$]

ಪೌಡರ್ 'ಪೌಡರು' ನೋ.

ಪೌಡರು, ಪೌಡರ್ (ನಾ). ಮುಖ ಮತ್ತು ದೇಹಕಾಂತಿಯನ್ನು ಹೆಚ್ಚಿಸಿ ಆಹ್ಲಾದಕರವಾಗಿರುವಂತೆ ಮಾಡುವ ಸುಗಂಧಯುಕ್ತವಾದ ಪುಡಿ: ನಿನಗೇಕೆ ಬಣ್ಣ ಪೌಡರುಗಳ ಅಳಿಯಾಸೆ ಸಹಜಾಧಿರಾಮೆ ನೀನೈಸೆ (ಸಂಪ್ರವೀ. ೪೬-೬೨); ಒಳಗಡೆ ಕನ್ನಡಿ, ಪೌಡರು, ತುಟಿಯ ಕೆಂಬಣ್ಣ . . . ಇವಿಷ್ಟವೆ (ಕೈಲಾಕ. ೦೨). **ಪೌಡರ್**: ಸ್ನೋ, ಪೌಡರ್ ಬಳಿದುಕೊಂಡು ... ರೇಸ್ ಕುದುರೆಯಂತೆ ನಡೆಯುವುದು ಅವಳಿಗಿನ್ನೂ ಬಂದಿರಲಿಲ್ಲ (ಮೂಲಾನ. ೯).

[←ಇಂ. Powder]

ಪೌಣಪಟ, ಪೋಣಪಟ್ಟು (ನಾ). ನಾಲ್ಕನೆಯ ಮೂರು ಭಾಗ; ಮುಕ್ಕಾಲು ಭಾಗ: ಎಷ್ಟು ಕಿಮ್ಮತಿಯ ಮಾಲ ರವಾನೆ ಮಾಡಲ್ಪಟ್ಟಿದೆಯೋ ಅದಕ್ಕಿಂತ ಕಡಿಮೆ ಬೆಲೆಯ ಅಂದರೆ ಪೌಣಪಟ (೩) ಅಥವಾ ಅದಕ್ಕೂ ಕಡಿಮೆ ಬೆಲೆಯ ಹುಂಡಿಗಳು ಇರಬೇಕಾಗುತ್ತವೆ (ಮುಂಬಿಸ್ಯಾ. ೨೬೨). **ಪೋಣಪಟ್ಟು**: ಯಾವದು ಕಛೆ ವಜನ ಇದ್ದೀತು ಅದರ ಸೂರ್ತಿ ಮಣಾ ಮಾಡಬೇಕು, ಅಂದರೆ ಅದರ ಪೋಣಪಟ್ಟು ಮಾಡಬೇಕು (ಮುಂಬಿಸ್ಯಾ. ೦೩೨). [←ಮರಾ. ಪಾಊಣ್‌ವಾಟಾ]

ಪೌಣಿಗೆ 'ಪವಣಿಗೆ' ನೋ.

ಪೌಣೆ 'ಪಾವುಣ' ನೋ.

ಪೌತವ (ನಾ). ಒಂದು ಬಗೆಯ ಅಳತೆ: "ಪೌತವ—ವಲ ಕರ್ಷಾದಿಗಳಿಂದಳೆವ ಅಳತೆ" (ನಾಸಾರಾ. ೪). [ಸಂ.]

ಪೌತಿ, ಪವುತಿ, ಪೋತಿ, ಫೋತಿ (ನಾ). ಸಾವು; ಮರಣ: ಪೌತಿಯಾದ ಒಬ್ಬ ಮನುಷ್ಯನಿಗೆ ಉಂಟುಮಾಡಿದ ಕೆಡಕುಗಳಿಗೋಸ್ಕರ ದಾವಾಮಾಡುವುದಕ್ಕೂ ಮಾಡಲ್ಪಡುವುದಕ್ಕೂ . . . ಒಂದು ವರ್ಷ (ಗ್ರಾಮಾಕ. ೦೬೨). **ಪವುತಿ**: (ಕ). **ಪೋತಿ**: ಪುತಳಾಬಾಯಿ ಕಾಲರಾ ಬಂದು ಪೋತಿ ಆದಳು (ಗ್ರಾಮಾಯ. ೦೬೦). **ಫೋತಿ**: ಎದೀ ಬಡಕೊಂಡು ನಾನಾ ಫೋತಿ ಆದಾ ಅಂತ ಶಪ್ಪತ್ ಮಾಡಿ ಹೇಳತೀನಿ ರಾವಸಾಹೇಬ (ಗ್ರಾಮಾಯ. ೦೨೫). [←ಅರ. ಹಿಂ. ಮರಾ. ಫೌತ್]

ಪೌತಿತಃಖ್ತೆ (ನಾ). ಸತ್ತ ವ್ಯಕ್ತಿಯ ವಾರಸುದಾರರು ಮತ್ತು ಅವರ ಹಕ್ಕಿನ ವಿವರಣೆಗಳನ್ನು ಒಳಗೊಂಡ ಪಟ್ಟಿ: ಪೌತಿತಃಖ್ತೆ ಕೊಡದಿರುವುದು, ಕೊಟ್ಟರೂ ಅದನ್ನು ಯಾರು ಬಂದು ವಿಚಾರಿಸಿದರೂ, ಪೌತಿ ಆದವರನ್ನು ಬಿಟ್ಟು ಬೇರೆ ಯಾರನ್ನು ಕೇಳಿದರೂ, ಅದು ಪತ್ತೆ ಆಗದಿರುವುದು—ಇವು ನನ್ನೂರ ಶಾನುಭೋಗರ ಕಿತಾಪತಿಗಳು (ಸಸ್ಕೂರು. ೦೪೬). [ಪೌತಿ + ತಃಖ್ತೆ (<ತಖ್ತೆ)]

ಪೌತ್ರ (ಗು). ೧. ಮಕ್ಕಳಿಗೆ ಸಂಬಂಧಿಸಿದ. (ನಾ). ೨. ಮಗನ ಅಥವಾ ಮಗಳ ಮಗ; ಮೊಮ್ಮಗ: "ದೌಹಿತ್ರಃ, ನಪ್ತಾ—ಈ ೨ (ಮ)ಗಳ ಮಗಂ; ಪೌತ್ರನುಂ ಅಹುಂ" (ಹಲಾಯು. ೬೩-೩೫೦); ಅಂಗ ಮನ ಧನ ರಾಜ್ಯ ಪುತ್ರ ಪೌತ್ರ ಕಳತ್ರ ಮುಖ್ಯಸ್ವಷ್ಟೈಶ್ವರ್ಯವ ಹಿಂಗದೇ ಕೊಡದೆ ಹಿಮ್ಮೆಟ್ಟಿದಡೆ ಎನ್ನ ವ್ರತ ಭಂಗವಾದೀತು (ಪ್ರೌಢರಾ. ೦೪-೪);

ಅರ್ಜುನನು ಆ ಸೈನ್ಯಗಳಲ್ಲಿ ಪಿತೃಗಳು, ಪಿತಾಮಹರು . . . ಪೌತ್ರರು, ಸ್ನೇಹಿತರು, ಶ್ವಶುರರು, ಆಪ್ತರು ಇವರನ್ನು ನೋಡಿದನು (ಭಾಶಕ್ತ್ಯ. ೦೦೨). [ಸಂ.]

ಪೌತ್ರಕ (ನಾ). = ಪೌತ್ರ ೨ : ಎಲೈ ಪೌತ್ರಕ, ಎಲ್ಲಿಗೆ ಹೊರಟು ಹೋದೆ ? (ಭಾಸಪಾ. ೩೯). [ಸಂ.]

ಪೌತ್ರಿ (ನಾ). ಮಗನ ಅಥವಾ ಮಗಳ ಮಗಳು ; ಮೊಮ್ಮಗಳು : "ನಪ್ತ್ರೀ, ಪೌತ್ರೀ—೨ ಸುತಾತ್ಮಜಾ—ಮಗನ ಮಗಳ ಹೆಸರುಗಳು. ಮಗಳ ಮಗಳಿಗೂ ಹೆಸರು. ಮೊಮ್ಮಗಳು, ಮೊಮ್ಮಗನು" (ಸಿದ್ಧಾಂತಿ. ೦೬೫). [ಸಂ. ಪೌತ್ರೀ]

ಪೌತ್ರಿಕ (ಗು). ೧. ಮಗ ಅಥವಾ ಮೊಮ್ಮಗನಿಗೆ ಸಂಬಂಧಿಸಿದ. (ನಾ). ೨. ಮಗಳ ಮಗ. [ಸಂ.]

ಪೌದ್ಗಲಿಕ (ಗು). ೧. ಭೌತವಸ್ತುವಿಗೆ ಸಂಬಂಧಿಸಿದ; ಭೌತಿಕ ವಿಷಯದ. ೨. ಸ್ವಾಥಃದ. (ನಾ). ೩. [ಜೈನ] ಅಜೀವತತ್ವಗಳಲ್ಲಿ ಒಂದಾದ ಪುದ್ಗಲದಿಂದ ಜನ್ಯವಾದುದು ; ಪುದ್ಗಲಕ್ಕೆ ಸಂಬಂಧಿಸಿದುದು : ನೆಳಲು ಕತ್ತಲೆಗಳು ಪೌದ್ಗಲಿಕಗಳೆಂದು ಹೇಳಿದುದು ನ್ಯಾಯ ಮತಕ್ಕೆ ವಿರೋಧವಾದುದು (ಶೈನರ. ೦). [ಸಂ.]

ಪೌನಃಪುನ್ಯ (ನಾ). ಮತ್ತೆ ಮತ್ತೆ ಆಗುವಿಕೆ; ಪುನರಾವರ್ತನೆ. [ಸಂ.]

ಪೌನರುಕ್ತ್ಯ (ನಾ). [ಕಾವ್ಯಮೀ] ವಾಕ್ಯದೋಷಗಳಲ್ಲಿ ಒಂದು; ಹೇಳಿದುದನ್ನೇ ಹೇಳುವುದು; ಪುನರುಕ್ತಿ : ಕರಿಕಳಭಮೆನೆ ಶಿರಶ್ಶೇಖರಮೆನೆ ನವಪುಷ್ಪಮಾಲೆಯೆನೆ . . . ಪೌನರುಕ್ತ್ಯಮಾಗದು ವಿಶೇಷ ಸಂಭಾವನೆಯೊಳ್ (ಕಾಪ್ಯಾಪ. ೪೬೨). [ಸಂ.]

ಪೌನರ್ಭವ (ನಾ). ಪುನರ್ವಿವಾಹಿತೆಯಲ್ಲಿ ಹುಟ್ಟಿದವನು; ಎರಡನೆಯ ಮದುವೆಯಾದವಳಲ್ಲಿ ಹುಟ್ಟಿದವನು. [ಸಂ.]

ಪೌನು 'ಪವನು' ನೋ.

ಪೌಮುಡ್ಡಿಬೋಯ (ನಾ). ಒಬ್ಬಾತನ ಹೆಸರು : ಪೌಮುಡ್ಡಿಬೋಯಸ್ಯ ಕೌಣ್ಡಿಲ್ಯಗೋತ್ರ ದೇವಶರ್ಮ್ಮಣ (ಇಅ. VII, ೦೬೬-೩೬; ೦೬೮). [?]

ಪೌರ (ಗು). ೧. ನಗರಕ್ಕೆ ಸಂಬಂಧಿಸಿದ : 'ಪೌರಕಾರ್ಯ', 'ಪೌರಜನ' ಪರಾ. ೨. ಪೂರ್ವದಿಕ್ಕಿನಲ್ಲಿರುವ. ೩. ಪೂರ್ವದೇಶದ. ೪. ಪೂರ್ವಕಾಲದ. (ನಾ). ೫. ನಗರದಲ್ಲಿ ವಾಸಿಸುವವನು; ಪಟ್ಟಣಿಗ. ೬. ನಾಗರಿಕನ ಹಕ್ಕುಬಾಧ್ಯತೆಗಳನ್ನು ಪಡೆದವನು; ನಾಗರಿಕ : ಗುರುಶ್ರೇಣಿಯವರಿಗೆ, ವಿಪ್ರರಿಗೆ, ಪೌರರಿಗೆ . . . ಅವರವರ ಅಂತಸ್ತು, ಅಧಿಕಾರ, ಗೌರವಗಳಿಗೆ ತಕ್ಕಂತೆ ಸುಖಾಸನಗಳನ್ನು ಹಾಕಲಾಗಿತ್ತು (ಕಾಂತಲಾ. ೦೬). ೭. ಪುರ; ಪಟ್ಟಣ; ನಗರ : ಪೌರವಿನಿರ್ಗತೆಯಾಗಿ ಮನೋರಥಮನೆ ಕಾಣ್ಬ ತೆಱದಿನಿದಿರೊಳ್ ಕಂಡಳ್ ನಾರದನಂ (ಜಗಪ. ೦೦-೨೬). ೮. ಒಂದು ಬಗೆಯ ಸಂವಾಸನೆಯ ಹುಲ್ಲು : "ಕತ್ತೃಣಂ, ಪೌರಂ . . . ರೌಹಿಷಂ—೬ ಕಾಚೀಹುಲ್ಲು" (ಸಿದ್ಧಾಂತಿ. ೦೫೦). [ಸಂ.]

ಪೌರಂದರ (ಗು). ೧. ಇಂದ್ರನಿಗೆ ಸಂಬಂಧಿಸಿದ.—ಸೇರಿದ. (ನಾ). ೨. ಇಂದ್ರ : ಭೈರವರಾಜನ ಧೈರ್ಯವ ನೋಡಲೆಂದಾರ್ಯಮರಾಜಾಗ್ನಿ ನೇತ್ರ ಪೌರಂದರಗೆ ಪೇಳೆ (ಶೈರವೇ. ೩-೦೬೬). ೩. ಇಂದ್ರಾಸ್ತ್ರ: ಎನಗೆ ವಿದ್ಯಾಧನಮೆ ಧನಮಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರುಣ ವಾಯವ್ಯಾಗ್ನೇಯ ಪೌ[ಪಾಠಾಂ. ಪು]ರಂದರಾದಿ ಪ್ರಧಾನಾಸ್ತ್ರಂಗಳಂ ಕುಡೆ ಕೊಂಡು (ಸಂಪಭಾ. ೨-೪೬ ಪ). [ಸಂ.]

ಪೌರಕ (ನಾ). ನಾಗರಿಕ : ಅಬ್ಬಸಿ ಕಲೀಫರೆಲ್ಲರೂ ಪೌರಕ (ಮುಲ್ಕಿ) ಮತ್ತು ಸೈನಿಕ ಮುಖ್ಯಾಧಿಕಾರಗಳಿಗೆಲ್ಲಾ ಪಾರಸಿಕರನ್ನೇ ನೇಮಿಸುತ್ತಿದ್ದರು (ಇಸ್ಲಾಂಸಂ. ೪೩). [< ಸಂ. ಪೌರಿಕ]

ಪೌರಕಾರ್ಯ (ನಾ). ಪ್ರಜೆಗಳ ಕೆಲಸ; ಸಾರ್ವಜನಿಕ ಕಾರ್ಯ : ಎಲೆ ವೇತ್ರವತಿ . . . ನಡಿಸಿದ ಪೌರಕಾರ್ಯವನ್ನು ಪತ್ರಿಕಾಮುಖದಿಂದ ತಿಳಿಸುವಂತೆ ನಾವು ಹೇಳಿದೆವೆಂದು ಮಂತ್ರಿಗೆ ತಿಳಿಸು (ಕಾಕುಂಕ. ೬೩-೦೦). [ಸಂ.]

ಪೌರಜನ (ನಾ). ಪುರದ ಜನ; ನಾಗರಿಕ ವರ್ಗ; ಜನತೆ : ವಿಸ್ಮಿತಾಶೇಷ ಪೌರಜನವಿಲೋಕ್ಯಮಾನಾನೂನನಯನನಾಗಿರ್ದು (ಕಂದ್ರಪು. ೬-೦೬ ಪ) ; ನೆಱ[3] ನಿನ್ನ ನಂಬಿ ನಚ್ಚಿರ್ದ ಪರಿವಾರಮಂ ಮಱ[3]ದೆಯೋ . . . ಪೇಳು ನೇಸಱುಗುಲಜ ಎಂದೆಂದು ನುಡಿನುಡಿದು ಮಿಡುಮಿಡನೆ ಮಿಡುಕಿತ್ತು ಪೌರಜನವು (ಪಕಣಾ. ೯-೩); ಪೌರಜನವೈತರಲು ಬಂಡಿಯನೂರ ಹೊಱ ವಂಡಿಸಿದನು (ಕುಪ್ಯಾಅ. ೦೦-೨೯). [ಸಂ.]

ಪೌರತ್ವ (ನಾ). ಪಟ್ಟಣಿಗನ ಸ್ಥಾನಮಾನ : ಪೌರತ್ವ, ಸರ್ಕಾರ, ಸಂವಿಧಾನ ಮುಂತಾದ ವಿಷಯಗಳನ್ನು ಕುರಿತ ಅಧ್ಯಯನಕ್ಷೇತ್ರ (ಸಿವಿಕ್ಸ್) (ಕಪಿಕೋ. XI. ೨೬೩). [ಸಂ.]

ಪೌರಧರ್ಮ (ನಾ). ೧. ಪ್ರಜೆಯು ಪಾಲಿಸಬೇಕಾದ ಕರ್ತವ್ಯ; ಪ್ರಜಾನೀತಿ. ೨. ಪ್ರಜೆಯ ಹಕ್ಕುಬಾಧ್ಯತೆಗಳನ್ನೂ ಕರ್ತವ್ಯಗಳನ್ನೂ ಕುರಿತ ಶಾಸ್ತ್ರ : ಪೌರಧರ್ಮವನ್ನು ಕಲಿತರೂ ಸತ್ಪ್ರಜಾಜೀವನವನ್ನು ಅವರಲ್ಲಿ ಅಭ್ಯಾಸಕ್ಕೆ ತರುತ್ತಿಲ್ಲ (ಶಿಕ್ಷದ. ೦೩೦). [ಸಂ.]

ಪೌರನೀತಿ (ನಾ). ೧. ನಾಗರಿಕನು ಪಾಲಿಸಬೇಕಾದ ಕಟ್ಟಳೆ. ೨. ಪೌರರ ಹಕ್ಕುಬಾಧ್ಯತೆ, ಕರ್ತವ್ಯ ಮೊದಲಾದುವನ್ನು ವಿವರಿಸುವ ಶಾಸ್ತ್ರ: ಈಚೆಗೆ ಪ್ರಜಾಧರ್ಮ, ಪೌರನೀತಿ ಮುಂತಾದ ಹೆಸರುಗಳಿಂದ ಇದನ್ನೊಂದು ವ್ಯಾಸಂಗವಿಷಯವಾಗಿ ಪಠ್ಯಕ್ರಮದಲ್ಲೂ ಸೇರಿಸಲಾಗಿದೆ (ಕಪಿಕೋ. XI. ೨೬೩). [ಸಂ.]

ಪೌರಲೋಕ (ನಾ). ಪೌರಜನ ; ಪ್ರಜಾಸಮೂಹ : ಪ್ರಭುವಿಂ ಮತ್ಸ್ವಾಮಿ ತಾನಲ್ಲದೆ ಪೆಱರೆನುತುಂ ನೋಡೆ ತತ್ಪೌರಲೋಕಂ ವಿಭು ಸದ್ಮಂಗಂಡು ಬಂದಂ ಜಿನಸಮಯಸರಸ್ಸಾರಕೇಳೀಮರಾಳಂ (ಕಂದ್ರಪು. ೬-೦೫೫). [ಸಂ.]

ಪೌರವ (ಗು). ೧. ಪುರುವಿಗೆ ಸಂಬಂಧಿಸಿದ. (ನಾ). ೨. ಉತ್ತರ ಭಾರತದ ಒಂದು ದೇಶ ಮತ್ತು ಅಲ್ಲಿಯ ಜನತೆ. ೩. ಪುರುವಂಶದವನು ; ಕ್ಷತ್ರಿಯ : ಉತ್ಕೃಷ್ಟಮಪ್ಪ ಸರ್ವಾರ್ಥಸಿದ್ಧಿಯಿಂ ಬಂದುದಱಿಂ ಪೌರವನುಂ . . . ವಿಶ್ವಕರ್ಮವಿಧಾನದಿಂ ಶ್ರೇಷ್ಠನುಮೆನಿಸಿ (ಕಾಪುಂಪು. ೩೬). ೪. ಪುರುರಾಜನ ಮಗ. [ಸಂ.]

ಪೌರವಧು (ನಾ). ಪಟ್ಟಣದ ಹೆಂಗಸು : ಸೌರಭಕುಸುಮವಿಹಾರಂ ಪೌರವಧೂಶ್ವಸಿತ ಪದ್ಮಗಂಧವಿಚಾರಂ . . . ಸುಱುವುದಲ್ಲಿ ಚಾರು ಸಮೀರಂ (ಜಗಪ. ೨-೨೫). [ಸಂ. ಪೌರವಧೂ]

ಪೌರಸಂಸ್ಥೆ (ನಾ). ಸ್ಥಳೀಯ ಆಡಳಿತಾಧಿಕಾರವುಳ್ಳ ಸಂಸ್ಥೆ ; ನಗರ ಸಭೆ ; ಮುನಿಸಿಪಾಲಿಟಿ : ಪೌರಸಂಸ್ಥೆಯ ಒಡೆತನಕ್ಕೆ, ಆಡಳಿತಕ್ಕೆ, ಒಳಪಡಿಸು (Municipalize. ಇಂಕಪಿ). [ಪೌರ + ಸಂಸ್ಥೆ]

ಪೌರಸಭೆ (ನಾ). = ಪೌರಸಂಸ್ಥೆ : ಆ ಹಿರಿಯ ಕಲಾವಿದನನ್ನು ನಗರದ ಜನತೆಯ ಪರವಾಗಿ ಪೌರಸಭೆಯು ಸನ್ಮಾನಿಸಿತು (ರೂಢಿ). [ಪೌರ + ಸಭೆ]

ಪೌರಸ್ತ್ಯ (ಗು). ೧. ಪೂರ್ವದಿಕ್ಕಿನಲ್ಲಿ ಇರುವ : ಪೂರ್ವಭಾಗಕ್ಕೆ ಸೇರಿದ : ಆ ದಂಡನಾಯಕಂ ಪೌರಸ್ತ್ಯರಾಜನ್ಯಕಸಾಧನಪರನಾಗಿ ಮುಂದಂ ನಡೆಯೆ (ಶಾಂತಿಪು. ೦೦-೦೫೬ ಪ) ; ಪಾಶ್ಚಾತ್ಯಸಂಸ್ಕೃತಿಯು ಭಾರತವರ್ಷದಲ್ಲಿ ತೋರಿಕೊಂಡ ಕಾಲದಿಂದ, ಪೌರಸ್ತ್ಯ ಪಾಶ್ಚಾತ್ಯ ಸಂಸ್ಕೃತಿಗಳ ಪರಸ್ಪರ ಘರ್ಷಣೆಯು ಆರಂಭವಾಯಿತು (ಭಾರದ. ೩೬೩). ೨. ಪೂರ್ವ

ದೇಶದಲ್ಲಿ ಹುಟ್ಟಿದ. ೩. ಎಲ್ಲಕ್ಕೂ ಮುಂದಿರುವ ; ಮುಂಭಾಗದಲ್ಲಿರುವ. ೪. ಮೊದಲನೆಯ. (ನಾ). ೫. ಮೊದಲನೆಯದು : "ಆದಿಃ, ಪೂರ್ವಃ, ಪೌರಸ್ತ್ಯಃ, ಪ್ರಥಮಃ, ಆದ್ಯಃ —೫ ಮೊದಲನೇದರ ಹೆಸರುಗಳು" (ಸಿದ್ಧಾಂತಿ. ೩೪೪). [ಸಂ.]

ಪೌರಸ್ತ್ರೀ (ನಾ). = ಪೌರವಧು : ಪೌರಸ್ತ್ರೀನಯನಪ್ರಭಾಸಹಚರಂ ಹಾರಾಂತುವಿಸ್ತೀರ್ಣವಕ್ಷೋರಂಗಸ್ಥಲದೊಳ್ ರಸಾಭಿನಯಮಂ ತೋರ್ಪನ್ನೆಗಂ . . . ಬರ್ಪೀ ಮಹಾಧೀರರ್ ಕಾಲ್ನಡೆಯೊಳ್ ನೃಪಾವಸಥದಿಂ ಬರ್ಪಂದಮಾವಂದಮೋ (ಶಂಠಾಮಾ. ೬-೦೮೦). [ಸಂ.]

ಪೌರಾಂಗನೆ (ನಾ). = ಪೌರವಧು : ಪೌರಾಂಗನಾವಶೀಕರಣಚೂರ್ಣಮಾದುದು ಬಳೌಘಧೂಳೀಚಯಂ (ಅಂಪು. ೦೦-೦೩). [ಸಂ. ಪೌರಾಂಗನಾ]

ಪೌರಾಣ (ಗು). ೧. ಹಿಂದಿನ ; ಪೂರ್ವ : ತಾಯೆ ಬಾ ಗಾಂಧಾರಿ ಮನದಲಿ ನೋಯದಿರು ಪೌರಾಣಜನ್ಮದ ದಾಯಭಾಗದ ಭೋಗ ಭಂಗಿಸಲಳುಕಲೇಕಿನ್ನು (ಕುಣ್ಯಾಗ. ೦೨-೩). ೨. ಪುರಾಣಗಳಿಗೆ ಸಂಬಂಧಿಸಿದ. (ನಾ). ೩. ಹಳೆಯದು ; ಪ್ರಾಚೀನವಾದುದು : "ವಿಲಸತ್ಪೌರಾಣಮೆಂಬೀ ದ್ವಿತಯ ಚಿರಮೆನಿಕ್ಕುಂ" (ಪಾಪಾಕ. ೦೬೬). ೪. ಹದಿನೆಂಟು ಮಹಾಪುರಾಣ ಹಾಗೂ ಉಪಪುರಾಣಗಳಲ್ಲಿ ಒಂದು : "ಕಡುದೀರ್ಘಂ ಜರಠಂಗಳಾದಿಕಥೆಯುಂ ಪೌರಾಣ ಶಬ್ದಂ" (ಪಾಪಾರ. ೦೩೯) ; ಪೌರಾಣಮಂ ಕಲಿವ ಜಪಸಮಾಧಿಯೊಳಿಪ್ಪ . . . ಕಂದಮೂಲಫಲಮಂ ತಪ್ಪ ಚಾರುಮುನಿಪುತ್ರರ್ಗೆ ವಂದಿಸುತ ಬಂದಿದಿರೊಳೊಂದು ಕೊಳನಂ ಕಂಡನು (ಹಸಾ. ೩-೩೩) ; ಜ್ಞಾನವೃದ್ಧರು ವಿಪ್ರರಲ್ಲಿ ಸನ್ಮಾನನೀಯರು ಶೌರ್ಯವೃದ್ಧರು ಮಾನವೇಂದ್ರರೊಳಧಿಕವಿದು ಪೌರಾಣಸಿದ್ಧವಲೆ (ಕುಣ್ಯಾಸ. ೯-೩೦). ೫. ಪ್ರಾಚೀನವಾದ ಚರಿತ್ರೆಯನ್ನು ಹೊಂದಿದ ಕಾವ್ಯಪ್ರಕಾರ : ಮಪಾಕ್ಷೀತ್ರದೊಡೆಯಂ ವಿರೂಪಾಕ್ಷನೇ ಪೇಳಿಸಿದೊಡೆ ಸವಿನುಡಿಗಳಿಂದೀ ಚಿನ್ನಬಸವಪೌರಾಣಮಂ ಪೇಳ್ದೆನಧಿಕೋತ್ಸವದೊಳು (ಸಂಪು. ೦-೩೦). [ಸಂ.]

ಪೌರಾಣಿ (ನಾ). ಪುರಾಣವನ್ನು ಹೇಳುವವನು; ಪೌರಾಣಿಕ : ಬಸವನ ಕರುಣದೊಳಿಂತಾತ ಮುಕ್ತಿಸಂತಸನಾದನಿದು ಪುಸಿಯಲ್ಲ ವಸುಧೀಶ ಮಹಾದೇವರಾಯ ಕೇಳೆನುತಲಂದುಸುರಿದ ಪರಮಪೌರಾಣಿ (ಪೋಳಿಪು. ೨-೭೪) ; ಇರಲು ಶ್ರೀಕೃಷ್ಣರಾಯನು ಬಂದು ಪೌರಾಣಿ ಪರಸೆ ಯೋಗ್ಯಾಸನದಿ ಕುಳ್ಳಿರಿಸಲು (ಸಪಪೋ. ೦೦-೭). [ಸಂ. ಪೌರಾಣೀ]

ಪೌರಾಣಿಕ (ಗು). ೧. ಹಳೆಯ ಕಾಲಕ್ಕೆ ಸೇರಿದ ; ಹಿಂದಿನ ಕಾಲದ : ವಸ್ತುತಃ ತಂದೆಯವರು ಒಂದು ವೇಳೆ ತುಂಬ ರೇಗಿ ಹೋಗಿ ಜರ್ವು ಮಾಡದೆ ಬಿಟ್ಟಿದ್ದರೆ . . . ಈ ಪೌರಾಣಿಕ ಪುತ್ತಲಿಯ ಜೊತೆಗೆ ನನ್ನ ಮದುವೆ ಆಗಿಹೋಗುತ್ತಿತ್ತು (ಇಪ್ಪಕ. ೪೭೩). ೨. ಪುರಾಣಗಳಿಗೆ ಸಂಬಂಧಿಸಿದ. (ನಾ). ೩. ಪುರಾಣಗಳಿಗೆ ಸಂಬಂಧಿಸಿದುದು : ಆಂಡಯ್ಯನ ಕಾವ್ಯದ ಕಥೆ ಪೌರಾಣಿಕ, ತಿಮ್ಮಪ್ಪಯ್ಯನವರ 'ಸೊಬಗಿನ ಬಳ್ಳಿ'ಯ ಕಥೆಯೂ ಪೌರಾಣಿಕ (ಕಾಂಪ. ಮುಮ್ಮುಡಿ. ೯); ನಾಟಕದ ವಸ್ತು ಪೌರಾಣಿಕವಾಗಿದ್ದರೆ ನಮ್ಮ ಹಿಂದಿನವರ ಜೀವನವನ್ನು ಚಿತ್ರಿಸಿ ನಮ್ಮ ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ ಇವುಗಳಲ್ಲಿ ಅಭಿಮಾನ ಹುಟ್ಟಿಸುತ್ತವೆ (ಶಿಕ್ಷದ. ೫೯). ೪. ಪುರಾಣಗಳನ್ನು ಓದಿ ಚೆನ್ನಾಗಿ ತಿಳಿದು ಕೊಂಡಿರುವವನು ; ಪುರಾಣಿಕ : ಪೌರಾಣಿಕರೈತಂದು ಮಹಾರಾಜಂಗಂದು ಬಿನ್ನವಿಸಿದರ್ ಕುವರಂ ಸಾರಪುರಾಣಾರ್ಥಂಗಳನಾರಯ್ದುವಧರಿಪ ವಿಮಲಮೇಧಾಬಲಮಂ (ಪಳಿ. ೪-೦೦೪). [ಸಂ.]

ಪೌರಾತನ (ಗು). ಪ್ರಾಚೀನವಾದುದಕ್ಕೆ ಸಂಬಂಧಿಸಿದ : ಕಾಲನನು ಮಿಾಱುವವರಾರು ಪೌರಾತನಕೃತಧ್ರುವಮೃತ್ಯುವನು ಗೆಲುವಾತನಿಲ್ಲ (ಕುಣ್ಯಾಪ್ರೋ. ೬-೩೩). [ಸಂ.]

ಪೌರುಷ (ಗು). ೧. ಪುರುಷನಿಗೆ ಸಂಬಂಧಿಸಿದ. ೨. ವೀರ್ಯವತ್ತಾದ ; ಗಂಡುತನದ. (ನಾ). ೩. ಪೌರುಷತ್ವ ; ಗಂಡುಸುತನ. ೪. ಶೌರ್ಯ; ಕೆಚ್ಚು ; ಪರಾಕ್ರಮ : "ಪ್ರತಾಪಃ, ಪೌರುಷಂ . . . ಪರಾಕ್ರಮಃ —ಈ ೫ ಪರಾಕ್ರಮಂ" (ಹಲಾಯು. ೦೨೦-೩೮); ಆ ನೃಪನ ಪೌರುಷಮೇಂ ಪೊಗಟಲ್ಕೆವೇಟ್ಕುಮೇ (ಕಾದಂಪು. ೦೩); ಆರಾದೊಡಮೆಱೆವರ್ಕನ್ಯಾರತ್ನಮನೆಱೆದೊಡೀಯೆಮೆಂಬರೆ ಕುಡುವಂತಾ ರಾಮನೊಳೇಗಂಡೈ ಪೌರುಷಮಂ ತಕ್ಕುದಱಿದು ನೆಗಟಲ್ವೇಡಾ (ಶಂಠಾಮಾ. ೩-೨೦); ಕೋಪಪ್ರದರ್ಶನಂ ಪೌರುಷಕೆ ಕುರುಹೆಂದು ಬೆದರಿ ಕಂಬನಿಗರೆದು, ಸೋಲ್ತೊಮ್ಮೆ ಗೆಲ್ದಳಾಕೆ! (ಪಾಪಾಂಗ. ೨೩-೬೬೩). ೫. ಮನುಷ್ಯಪ್ರಯತ್ನ,—ಸಾಹಸ : ದೈವಬಲವೇ ಬಲವು ಪೌರುಷವೇವುದು (ಕೌಶಿಂಗ. ೨೬-೯); ದೈವದ ಹಾಗು ಪೌರುಷದ ಅತ್ಯುಕ್ತಿಯ ಸಿದ್ಧಾಂತದಿಂದ ಸಮಾಜವು ದೂಷಿತವಾದಷ್ಟು ಮತ್ತಾವುದರಿಂದಲೂ ದೂಷಿತವಾಗಲಾರದು (ಪ್ರಬಂಧ. ೩೨). 'ಪೌರುಷವಾದಿ' ಪರಾ. ೬. ಒಬ್ಬ ಮನುಷ್ಯನು ಹೊರಬಹುದಾದಷ್ಟು ಹೊರೆ, —ಭಾರ. ೭. ಸುಮಾರು ಐದರಿಂದ ಆರು ಅಡಿಯವರೆಗಿನ ಎತ್ತರ ; ಒಂದಾಳೆತ್ತರ; ಪುರುಷಪ್ರಮಾಣ : "ಅಳತೆಯಲ್ಲಿಯುಂ ಪೌರುಷಮೆಂಬುದು" (ಹಲಾಯು. ೦೩೪-೦೯). [ಸಂ.]

ಪೌರುಷವಂತ (ನಾ). ಶಕ್ತಿವಂತ ; ಪರಾಕ್ರಮಿ : ಆ ಸ್ಫುರದ್ರೂಸಿಯೂ ಪೌರುಷವಂತನೂ ಆದ ರಾಜಕುಮಾರನನ್ನು ನೋಡಿ ಅರಸನ ಸಿಟ್ಟು ಇಳಿಯಿತು (ಮಹಿಸ. ೪೭). [ಸಂ. ಪೌರುಷವತ್]

ಪೌರುಷವಾದಿ (ನಾ). ಪುರುಷಪ್ರಯತ್ನವನ್ನು ಸಮರ್ಥಿಸುವವನು : ಪೌರುಷದ ಯಾವುದೇ ಸಿದ್ಧಾಂತವು ದೈವವನ್ನು ಸುಳ್ಳೆಂದು ಸಿದ್ಧಮಾಡಿದರೆ, ಪೌರುಷವೂ ಕೂಡ ಕಳೆಗುಂದುತ್ತದೆ ಎಂಬುದು ಎಷ್ಟೋ ಪೌರುಷವಾದಿಗಳಿಗೆ ಲಕ್ಷ್ಯಕ್ಕೆ ಬರುವುದಿಲ್ಲ (ಪ್ರಬಂಧ. ೩೦). [ಸಂ. ಪೌರುಷವಾದಿನ್]

ಪೌರುಷಾಂಗ (ನಾ). ಶೌರ್ಯದಿಂದ ಕೂಡಿದುದು : ಭೀತಿ ಮನದಲಿ ಪೌರುಷಾಂಗದ ಮಾತು ಮುಖದಲಿ ಮುರಿವು ಕಾಲಲಿ (ಕುಣ್ಯಾಪ್ರೋ. ೦೩-೨೩). [ಸಂ.]

ಪೌರುಷೇಯ (ಗು). ೧. ಮನುಷ್ಯನಿಗೆ ಸಂಬಂಧಿಸಿದ. ೨. ಮನುಷ್ಯನಿಂದ ಮಾಡಲ್ಪಟ್ಟ; ಪುರುಷಕೃತವಾದ : 'ಜೀವನ' ಶಬ್ದವನ್ನು ನಾನು ಮೂರು ತೆರನಾಗಿ ಕಾಣುತ್ತಿರುವೆನು. ಅದು ಹೀಗೆ : (೧). ಪ್ರಾಕೃತಿಕ ಜೀವನ. (೨). ಪೌರುಷೇಯ ಜೀವನ. (೩). ಸಿದ್ಧ ದೈವೀ ಜೀವನ (ಪ್ರಬಂಧ. ೦. ಶೇಖಪಗಳ ತಿರುಳು). (ನಾ). ೩. ಮನುಷ್ಯನಿಂದ ನಿರ್ಮಾಣವಾದುದು ; ಮನುಷ್ಯ ಕಾರ್ಯ : ಪುರುಷಕೃತವಾಕ್ಯಾರ್ಥ ಸಾಕ್ಷಾತ್ಕಾರವೇ ಆಪ್ತಿ. ವಾಕ್ಯಾರ್ಥವನ್ನು ನೋಡದೆ ಇರುವವನು ಆಪ್ತನಲ್ಲ. ಹಾಗಾದರೆ ವೇದ ಪೌರುಷೇಯವಾಗುವುದು (ಹಿಂದಸಾ. ೦೪೪). ೪. ಜನ ಸಮೂಹ ; ಜನರ ಗುಂಪು. ೫. ಪುರುಷವಧೆ. [ಸಂ.]

ಪೌರುಸ (ನಾ). ಶಕ್ತಿ ; ಪೌರುಷ : "ಪೌರುಸ—ಪೌರುಷ" (ಕದ್ಯಕೋ. ೨೬); ಷಕಾರಕ್ಕೆ ಆಮಿಷ—ಆಮಿಸ . . . ಪೌರುಷ—ಪೌರುಸ (ಶಪುದ. ೨೩೩ ಪ್ರಯೋ); ಕಂಠೀರವನರಸೇಂದ್ರನ ಮತ ಪೌರುಸವ ಪೊಗಳುತ ಸಂತೋಷದೆ ದೆಸೆದೆಸೆಯ ಜನರು ಯಾತ್ರೆಗಂತರಿಸದೆ ತೆರಳಿದರು (ಕಂಪಿ. ೦೩-೬೯). [< ಸಂ. ಪೌರುಷ]

ಪೌರುಳಱಿ (ನಾ). ಒಂದು ಊರಿನ ಹೆಸರು : ಅನ್ದರಿಯ ಆಲನ್ತೂರ ಪೌರುಳಱಿ ಅ ಪೆರ್ನ್ನಗರಾದ್ಯನೇಕಸಮರಮುಖಮುಖಾಹುತ . . . ಪೂರ್ಬ್ಬದತ್ತ ಈಶಾನ್ಯದಿಶಾ ಅಪಕ್ಷೇತ್ರಮ್ (ಇಂ. V. ೦೩೯-೬ ; 513). [?]

ಪೌರೋಗವ (ನಾ). ಅರಮನೆಯ (ವಿಶೇಷವಾಗಿ ಪಾಕಶಾಲೆಯ)

ಮೇಲ್ವಿಚಾರಕ,—ಅಧಿಕಾರಿ : "ಪೌರೋಗವಃ, ಸೂದಾಧ್ಯಕ್ಷಃ—ಈ ೨ ಬಾಣಸುವೆಗ್ಗಡೆ" (ಹಲಾಯು. ೭೦-೨೭೭) ; "ಪೌರೋಗವಂ ಸೂಪಕಾರರ ಕರ್ತನಕ್ಕು" (ಮಂಗರಾ. ೮೦-೮). [ಸಂ.]

ಪೌರೋಭಾಗ್ಯ (ನಾ). ದೋಷವನ್ನು ಎತ್ತಿ ಹೇಳುವುದು ; ಛಿದ್ರಾನ್ವೇಷಣ : ಪೌರೋಭಾಗ್ಯವ್ಯಪೇತಮನಸ್ಕರಕ್ಕರಿಗರಧಿಕಪ್ರಜ್ಞರ್ ಕೆಯ್ಕೊಂಡು ತಿರ್ದುಗೆ ದೋಷಮಂ (ಕಾಪ್ಯಾಪ. ೯೬೩). [ಸಂ.]

ಪೌರೋಹಿತ (ಗು). ೧. ಪುರೋಹಿತನಿಗೆ ಸಂಬಂಧಿಸಿದ. (ನಾ). ೨. ವೇದೋಕ್ತ ವಿಧಿಗಳನ್ನು ಮಾಡಿಸುವವನು ; ಪುರೋಹಿತ : "ಪೌರೋಹಿತಂ ದಂಡನಾಥಂ . . . ತಳವಾಱನೆಂಬಿವರು ಭೂರಮಣರಲ್ಲಿ ವಿನಿಯೋಗಮಂ ತಾಳ್ದು ಪದಿನೆಣ್ಬರ್ ಪ್ರಧಾನರೆನಿಕುಂ" (ಮಂಗರಾ. ೮೦-೦೦) ; ಚಂಡದೈವಜ್ಞನನಧಿಕಗುಣಮಂಡನನ ಬಹುಶಾಸ್ತ್ರಪಠಣನ ಪಂಡಿತನ ಪೌರೋಹಿತನ ಮಾಡುವುದು (ಕುಪ್ಯಾಉ. ೩-೬೬). [ಸಂ.]

ಪೌರೋಹಿತ್ಯ (ನಾ). ೧. ಪುರೋಹಿತನ ಕೆಲಸ,—ವೃತ್ತಿ : ಹರಿ ಪೌರೋಹಿತ್ಯಮಂ ತಾಳ್ದೆ ರಾಗಿಸಿ ಶಕ್ರಾಂಗನೆ ದಾದಿಯಾಗೆ...ಜಿನಂಗೆಸೆದು ದಂತಾ ನಾಮಕರ್ಮೋತ್ಸವಂ (ಶಾಂತಿಪು. ೦೦-೭೮) ; ಪೌರೋಹಿತ್ಯಾಧಿಕಾರ ಪ್ರಮುಖರಿರದೆ ಬಂದುಂ . . . ದೋಷಂ ಪಾರುತ್ತಂ ಪೋಕುಮೆಂದಾಡುತಂ (ಹಾಲಾಸ್ಯ. ೩-೮-೨೯) ; ಸಾರಷ್ಟು ಆದಾಯ . . . ಕಳೆದ ಹದಿನೆಂಟು ವರ್ಷಗಳಿಂದ ಪೌರೋಹಿತ್ಯದ ಮೂಲಕ ಅವನಿಗೊದಗುತ್ತಿತ್ತು (ಪುಪರು. ೦೮೦). ೨. (ಆಲಂ) ಮುಂದಾಳುತನ : ವ್ಯರ್ಥಪ್ರೇಮದ ವೇದನೆಯ ಪೌರೋಹಿತ್ಯವನ್ನೇ ಶರಶ್ಚಂದ್ರರು ವಹಿಸಿದ್ದಾರೆ (ಶಾರತಿ. ೦) ; ಯಾವುದೇ ಒಂದು ಶಾಸ್ತ್ರದ ಅಭ್ಯಾಸದ ವಿಷಯವಾಗಿ ಯಾರೂ ಪೌರೋಹಿತ್ಯ ವಹಿಸುವ ಕಾರಣವಿಲ್ಲ (ಭಾಷಾಶಾ. ೦೯). [ಸಂ.]

ಪೌರ್ಣಮಾಸ (ನಾ). ೧. ಹುಣ್ಣಿಮೆಗೆ ಸಂಬಂಧಿಸಿದುದು. ೨. ಹುಣ್ಣಿಮೆ. ೩. ಹುಣ್ಣಿಮೆಯ ದಿನ ಆಚರಿಸುವ ಒಂದು ವ್ರತ. [ಸಂ.]

ಪೌರ್ಣಮಾಸಿ (ನಾ). ಪೂರ್ಣಚಂದ್ರನಿರುವ ದಿನ ; ಹುಣ್ಣಿಮೆ : "ಚಂದ್ರಂ ನೆಟ್ಟನೆ ನೆಱೆದು ಬಿಂಬದಿಂ ಪೂರ್ಣನಾಗೆ ರಾಕಾಖ್ಯೆ ಪೌರ್ಣಮಾಸಿಯದಕ್ಕುಂ" (ಪಸ್ತುಕೋ. ೦೬-೯) ; ಅನ್ನೆಗಮಾಷಾಢಪೌರ್ಣಮಾಸೀವಾಸರ ಸಾಯಂತನಸಮಯದೊಳ್ ಪರಭಾಗಂಬಡೆದು (ಆದಿಪು. ೬-೩೦).

[ಸಂ. ಪೌರ್ಣಮಾಸೀ]

ಪೌರ್ಣಮಾಸೆ (ನಾ). = ಪೌರ್ಣಮಾಸಿ : ಸಕವರುಸಂ ಸಾಸಿರದ ನೂಱಯೆಪ್ಪತ್ತನೆಯ ಕೀಲಕಸಂವತ್ಸರದ ಜೇಷ್ಠಸುಧಪೌರ್ಣ್ಣಮಾಸೆ ಸೊಮವಾರ ಸೋಮಗ್ರಹಣದಂದು (ಸೌಇಇ. XX, ೨೦೩-೦೭; 1248).

[<ಸಂ. ಪೌರ್ಣಮಾಸೀ]

ಪೌರ್ಣಮಿ (ನಾ). = ಪೌರ್ಣಮಾಸಿ : ಪಾಡಿಯ ಮೊದಲು ಪೌರ್ಣಮಿಯದಮಾವಾಸ್ಯೆ ಕಡೆ ಮಾಡಿ ರವಿಯಾದಿವಾರಂಗಳಕ್ಕುಮಶ್ವಿನಿಯದಾದಿನಕ್ಷತ್ರಮಕ್ಕುಂ (ಮಂಗರಾ. ೨೦-೯); ಕಂದದೆಂದುಂ ದಿನದಿನಕೆ ಕಳೆಗುಂದದೆಂದುಂ ರಾಹುಬಾಧೆಯೊಳೊಂದದೆಂದುಂ ಪೌರ್ಣಮಿಯ ದಿನದಂದು ಶರದಿಂದು (ಐಸಪು. ೯-೨೮) ; ಸುತನೆ ನೀ ಪೌರ್ಣಮಿಯ ದಿನದಲಿ ಸತಿಯ ಹೊದ್ದಲು ಬೇಡ (ಜಿಪಂಪ. ೩-೧೦). [ಸಂ. ಪೌರ್ಣಮಿಾ]

ಪೌರ್ಣಮಿಾದಿನ (ನಾ). ಹುಣ್ಣಿಮೆಯ ದಿನ,—ತಿಥಿ : ಕೈಲಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ಪೌರ್ಣಮಿಾದಿನದಂದು ಪಲ್ಯಂಕಾಸನದಿಂದು ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ (ಆದಿಪು. ೦೬-೪೦ಪ); ಕಾರ್ತಿಕಮಾಸದ ಪೌರ್ಣಮಿಾದಿನದೊಳ್ ಸುಕುಮಾರನ ಮೋಹಬಂಧದ ಬಳ್ಳವಳ್ಳಿಯ ತೊಡರ್ಪಂ ಪಱಿಪಡೆ ಬಿಡಿಸುವಂತೆ ಯೋಗವಿಡಿಸಿ (ಸುಕುಮಾ. ೦೦-೩೮ ಪ). [ಸಂ.]

ಪೌರ್ಣಿಮ (ನಾ). ಔದುಂಬರ, ವೈಪಾಸಕ, ಪ್ರಕ್ಷಾಳಿಕ ಮತ್ತು ಪೌರ್ಣಿಮ ಎಂಬ ನಾಲ್ಕು ಪ್ರಕಾರದ ಮುನಿಗಳಲ್ಲಿ ಒಬ್ಬ : ಪಂಚಾಗ್ನಿಮಧ್ಯದಲ್ಲಿ ಏಕಪಾದಸ್ಥಿತಿ ಮೊದಲಾದವಱಿಂದುಗ್ರತಪಸ್ಸನಾಚರಿಸುವಾತನಾಗಿ ಔದುಂಬರ ವೈಪಾಸಕ ಪ್ರಕ್ಷಾಳಿಕ [ಪಾಠಾಂ. ಲಿನ] ಪೌರ್ಣಿ [ಪಾಠಾಂ. ರ್ಣ] ಮನೆಂದು ಚತುರ್ವಿಧಮಾಗಿರ್ಪಾತನೇ ವಾನಪ್ರಸ್ಥನಪ್ಪಂ (ಏವೇಕ. ೦೨೬). [ಸಂ.]

ಪೌರ್ಣಿಮೆ (ನಾ). ಪೂರ್ಣಚಂದ್ರನು ಮೂಡುವ ದಿನ ; ಹುಣ್ಣಿಮೆ : ಆ ಪಕ್ಷಂಗಳೊಳಗೆ . . . ಚಂದ್ರನಧಿದೇವತೆಯಾದ ಪೌರ್ಣಿಮೆ [ಪಾಠಾಂ. ರ್ಣಮಿ] ಎಂಬ ಶುಭಾಶುಭರೂಪಮಾದ ಹದಿನೈದು ತಿಥಿಗಳುಳ್ಳುದೇ ಶುದ್ಧವೆನಿಪ ಶುಕ್ಲಪಕ್ಷ (ಏವೇಕ. ೨೬೨). [ಸಂ. ಪೌರ್ಣಿಮಾ]

ಪೌರ್ವಾತ್ಯ (ಗು). ೧. ಪೂರ್ವಭಾಗಕ್ಕೆ ಸೇರಿದ ; ಪೂರ್ವದಿಕ್ಕಿನ : 'ದಾಕ್ಷಿಣಾತ್ಯ' ಎಂಬುದನ್ನು ಅನುಕರಿಸಿ, 'ಪೌರ್ವಾತ್ಯ', 'ಪಾಶ್ಚಿಮಾತ್ಯ' ಎಂಬ ಶಬ್ದಗಳು ರೂಢಿಗೆ ಬಂದಿದೆ (ಸಂಕೋಧ. ೬೭). (ನಾ). ೨. ಪೂರ್ವದೇಶದ ನಿವಾಸಿ : ಅವಳು ಗಂಡನ ವಿಷಯದಲ್ಲಿ ಪೌರ್ವಾತ್ಯರಂತೆ ವಿಧೇಯಳಾದ ಕೂಲಿಯಾಗಿರಬೇಕು (ಮಲೆಪಾ. ೨೨). ಈ ಇದು 'ದಾಕ್ಷಿಣಾತ್ಯ' ಮುಂತಾದ ದಿಕ್ಸೂಚಕಶಬ್ದಗಳ ರೂಪಸಾಮ್ಯದಿಂದ ಆಗಿದೆ.

[<ಸಂ. ಪೂರ್ವ]

ಪೌರ್ವಾಪರ್ಯ (ನಾ). ಅನುಕ್ರಮ ; ಆನುಪೂರ್ವಿ ; ಪರಿವಿಡಿ : ಕದಂಬರಾಜರ ಪೌರ್ವಾಪರ್ಯ (Order of Succession) ಆಳಿಕೆಯ ಕಾಲಗಳನ್ನು ತೋರಿಸುವ ವಂಶವೃಕ್ಷವನ್ನು ವಾಚಕರ ಸೌಕರ್ಯಕ್ಕಾಗಿ ಕೊಟ್ಟಿದೆ (ಕರ್ಷಾಲಿ. ೦೩). [ಸಂ.]

ಪೌರ್ವಾಹ್ನಿಕ (ಗು). ೧. ಪೂರ್ವಾಹ್ನದಲ್ಲಿ ಮಾಡಬೇಕಾದ. ೨. ಮಧ್ಯಾಹ್ನಕ್ಕೆ ಮುಂಚಿನ. (ನಾ). ೩. ಮಧ್ಯಾಹ್ನಪೂರ್ವದಲ್ಲಿ ಮಾಡುವ ನಿತ್ಯವಿಧಿ: ಆಚಾರ್ಯರು ಊರಿಗೆ ಹೋಗಬೇಕಾಗಿದ್ದುದರಿಂದ ಪೌರ್ವಾಹ್ನಿಕಗಳನ್ನು ದಿನಕ್ಕಿಂತ ಬೇಗನೆ ಮುಗಿಸಿದರು (ಕೂಡಿ). [ಸಂ.]

ಪೌಲಸ್ತ್ಯ (ಗು). ೧. ಪುಲಸ್ತ್ಯಮುನಿಗೆ ಸಂಬಂಧಿಸಿದ, (ನಾ). ೨. ಪುಲಸ್ತ್ಯವಂಶದವನು. ೩. ಕುಬೇರ : "ಐಳಬಿಳಃ, ಪೌಲಸ್ತ್ಯಃ . . . ಪುಣ್ಯಜನೇಶ್ವರಃ—ಈ ೧೭ ಕುಬೇರನ ಪೆಸರ್" (ಹಲಾಯು. ೦೯-೭೮); ಇವ ನಿರುತಿ ಉದಕಪತಿಯಿವನನಿಲ ಪೌಲಸ್ತ್ಯನೀಶಾನ್ಯನೀ ಸಮಸ್ತರನು ನೋಡು (ಪ್ರೌಢರಾ. ೦೦-೯೬). ೪. ರಾವಣ : ಪೌಲಸ್ತ್ಯನ ಲಂಕಾಪುರ ಮನುರಿಪಿದಂ . . . ಹನುಮಂತಂ (ಪಂಠಾಮಾ. ೦೦-೦೭೦) ; ಪೌಲಸ್ತ್ಯ ! ಆಲಿಸು, ಬಲ್ದಣಿದೆ. ಇಂದು ಮೊದಲ್ಗೊಂಡು ತಪಸಂ ತಪಿಸೈ (ಅಮೃತ. ೨೯-೯). [ಸಂ.]

ಪೌಲಿ, ಪೌಳಿ₂ (ನಾ). ೧. ಒಂದು ಬಗೆಯ ಹೋಳಿಗೆ. ೨. ರೊಟ್ಟಿ : "ಪೌಲಿ = ಹೋಳಿಗೆ, ೨. ರೊಟ್ಟಿ" (ಗಂಗಾಮ. ೨೦೬). ಪೌಳಿ₂ : ೩. ಉಸಲಿ ; ಗುಗ್ಗರಿ : "ಆಪಕ್ವಂ, ಪೌಳಿಃ, ಆಭ್ಯೂಷಃ—೩ ಉಸಲಿಯ ಹೆಸರುಗಳು, ಗುಗ್ಗುರಿ" (ಸಿದ್ಧಾಂತಿ. ೨೬೬). [ಸಂ. ಪೌಲಿ, ಪೌಲೀ]

ಪೌಲೋಮ (ನಾ). ೧. ಪುಲೋಮೆಯ ಮಕ್ಕಳು : ಒಂದು ರಾಕ್ಷಸವರ್ಗ: ನಿವಾತಕವಚ ಕಾಳಕೇಯ ಪೌಲೋಮ ತಳ ತಾಳುಕರೆಂಬಱುವತ್ತು ಕೋಟಿರಕ್ಕಸರನೆನಗೆ ಗೆಲ್ದೀಯಲ್ವೇಟ್ಟುಂ (ಪಂಪಾ. ೬-೨೭ ಪ). ೨. ಇಂದ್ರ. [ಸಂ.]

ಪೌಲೋಮಿ, ಪೌಳೋಮಿ (ನಾ). ೧. ಪುಲೋಮನೆಂಬ ಅಸುರನ ಮಗಳು ; ಇಂದ್ರನ ಪತ್ನಿ ; ಶಚೀದೇವಿ : "ಇಂದ್ರಾಣೀ, ಪೌಲೋಮಿಾ, ಶಚೀ—ಈ ೩ ಇಂದ್ರನ ಸ್ತ್ರೀಯ ಪೆಸರ್" (ಹಲಾಯು. ೦೦-೩೩); ಮುನ್ನೊಂದು ಸಮಯದೊಳ್ ಪೌಲೋಮಿ ತಾಳಮಧುವಂ ಬಯಸಿ . . . ಪುರಂದರಪುರಸ್ಸರಂ ಬಂದು ಹೃದ್ಯಮಪ್ಪ ಮದ್ಯಮಂ ಕೇಳಿವಟ್ಟಲೊಳೆಱೆದು ಕುಡಿಯಲುಜ್ಜುಗಂಗೈವುದುಂ (ಪಗಂ. ೯-೩೯ ಪ). ೨. ಭೃಗು

ಋಷಿಯ ಹೆಂಡತಿ. **ಪೌಳೋಮಿ** : ೧. ನೇಮಿನಾಥಂಗೆ ಸುರಯೂಥನಾಥಂ ಸರ್ವಾಂಗಪ್ರಣತನಾಗಿ . . . ಪೌಳೋಮಿಾದತ್ತ ದಿವ್ಯಾರ್ಚನಾ ನಿಚಯದಿನರ್ಚಿಸಿ (ಸೇಮಿಪು. ೦೩-೯೯ ಪ). [ಸಂ. ಪೌಲೋಮಿ]

ಪೌಲೋಮಿಪತಿ, ಪೌಳೋಮಿಪತಿ (ನಾ). ಶಚೀದೇವಿಯ ಗಂಡ ; ಇಂದ್ರ : ಶ್ರೀಮಜ್ಜಿನಮಜ್ಜನದ ಮಹಾಮಹಿಮಾತಿಶಯಮಸದಳಂ ಪೊಗಟಲ್ ಪೌಲೋಮಿಪತಿಗಲ್ಲದೆ ಪೆಱರ್ಗೇಮಾತದು (ಅಜಿಪು. ೩-೦). **ಪೌಳೋಮಿಪತಿ** : ಪೌಳೋಮಿಪತಿ ತನ್ನ ದಿವ್ಯಜ್ಞಾನದೊಳ್ ನೋಡಿ ಚಕ್ರಿಯುಂ ವಿಕ್ರಮಾರ್ಜುನನುಮಪ್ಪುದನಱಿದು (ಶಂಶಭಾ. ೩-೯೩ ಪ). [ಸಂ.]

ಪೌವಗೆ 'ಪವ್ವಗೆ' ನೋ.

ಪೌವನೆ 'ಪವ್ವನೆ' ನೋ.

ಪೌವನೆವೋಗು (ಕ್ರಿ). ಬೆದರು ; ಭಯಪಡು : ತನ್ನ ನಮ್ಬಿದ ಸುದತೀಕದಮ್ಬದೆರ್ದೆ ಪೌವನೆವೋಗಿರೆ (ಎಕ. II, ೨೪೦-೨೯ ; ಸು. 1176).

[ಪೌವನೆ (<ಪವ್ವನೆ) + ಪೋಗು$_1$ (<ಪೋ$_1$)]

ಪೌಷ (ನಾ). ೧. ಪುಷ್ಯಮಾಸ : "ಪೌಷಃ, ತೃಷಃ, ಸಹಸ್ಯಃ—೩ ಪುಷ್ಯಮಾಸದ ಹೆಸರುಗಳು" (ನಿಡ್ಡಾಂತಿ. ೩೯). ೨. ಹಬ್ಬ ; ಉತ್ಸವ. ೩. ಕಾಳಗ ; ಯುದ್ಧ. [ಸಂ.]

ಪೌಷಿ (ನಾ). ೧. ಪುಷ್ಯನಕ್ಷತ್ರದಿಂದೊಡಗೂಡಿದ ಹುಣ್ಣಿಮೆಯ ರಾತ್ರಿ : "ಪೌಷೀ, ಪುಷ್ಯಯುಕ್ತಾ—ಪುಷ್ಯನಕ್ಷತ್ರದಿಂದೊಡಗೂಡಿದ ಪೌರ್ಣಮಾಸೀ ಹುಣ್ಣಿಮೆಯ ಹೆಸರು" (ನಿಡ್ಡಾಂತಿ. ೩೯). ೨. ಪುಷ್ಯಮಾಸದ ಹುಣ್ಣಿಮೆ. [ಸಂ. ಪೌಷೀ]

ಪೌಷ್ಕರ (ನಾ). ನೈದಿಲೆಗೆಡ್ಡೆ : "ಪೌಷ್ಕರಂ, ಕಾಶ್ಮೀರಂ, ಪದ್ಮಪತ್ರಂ . . . ತಾವರೇಗಡ್ಡೆ" (ನಿಡ್ಡಾಂತಿ. ೦೪೩). [ಸಂ.]

ಪೌಷ್ಟಿಕ (ಗು). ೧. ಶಕ್ತಿಯನ್ನು ಕೊಡುವ ; ಪುಷ್ಟಿದಾಯಕವಾದ : ಅಡುಗೆಯ ಕಲೆಯಲ್ಲಿ ಅವಳು ಪರಿಣತಳಾಗಿದ್ದು ದೊರೆಯುವ ವಸ್ತುಗಳಿಂದಷ್ಟೇ ರುಚಿಕರವಾದ ಮತ್ತು ಪೌಷ್ಟಿಕ ಅಡುಗೆಯನ್ನು ಮಾಡಲು ಬಲ್ಲವಳಿರಬೇಕು (ಅಡುಸೌ. ೩೬). (ನಾ). ೨. ಶಕ್ತಿಯನ್ನು ಕೊಡುವಂಥದು ; ಪುಷ್ಟಿದಾಯಕವಾದ ವಸ್ತು : ಶ್ರೀಖಂಡವು ಪೌಷ್ಟಿಕ, ವೀರ್ಯವರ್ಧಕ (ಅಷ್ಟಾಂಗ. ೦೨೦-೩೩); ಫಲಹಾರವಸ್ತುಗಳು ಕಟ್ಟಲು ಸುಲಭವಾಗಿಯೂ ಪೌಷ್ಟಿಕ ಹಾಗೂ ರುಚಿಕರವಾಗಿಯೂ ಇರಬೇಕು (ಅಡುಸೌ. ೦೨೦); ಸತ್ವಹೀನರನ್ನು ಸತ್ವಸಂಪುಷ್ಟರನ್ನಾಗಿ ಮಾರ್ಪಡಿಸಬಲ್ಲುದು ಈ ಆಧ್ಯಾತ್ಮ ಪೌಷ್ಟಿಕ (ಕಾಪ್ಯಕು. ೨೯). ೩. ವ್ಯವಹಾರದಲ್ಲಿ ಜಯವೇ ಮೊದಲಾದ ಇಷ್ಟಪ್ರಾಪ್ತಿಗಾಗಿ ಮಾಡುವ ಒಂದು ಕರ್ಮ : ಶಾಂತಿಕ ಪೌಷ್ಟಿಕಕ್ರಿಯಾಕುಶಲನುಂ ಧರ್ಮಕಾರ್ಯಾದಿಕುಶಲನುಮಪ್ಪ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ (ಅಡಿಪು. ೦೦-೩ ಪ). ೪. ನೀರಿನ ಧಾರೆಯೆರೆದು ಮಾಡುವ ದಾನ. [ಸಂ.]

ಪೌಷ್ಟಿಕಕರ್ಮ (ನಾ). = ಪೌಷ್ಟಿಕ ೩ : ಪಂಡಿತಪ್ರಿಯ ಶಾಂತಿಪೌಷ್ಟಿಕಕರ್ಮದೀಧಿತನ ಚಂಡದೈವಜ್ಞನ . . . ಪೌರೋಹಿತನ ಮಾಡುವುದು (ಕುಪ್ಯಾಕಾ. ೩-೬೬) ; ರೋಗ ವಾಸಿಯಾಗುವುದಕ್ಕೆ ಮಾಡುವ ಭೇಷಜಕರ್ಮಗಳು . . . ಪ್ರಾಯಶ್ಚಿತ್ತರೂಪವಾದ ಶಾಂತಿಕರ್ಮಗಳು, ಕೆಲಸ ಕಾರ್ಯಗಳಲ್ಲಿ ಜಯವಾಗಲೆಂದು ಪೌಷ್ಟಿಕಕರ್ಮಗಳು (ಭಾರದ. ೨೬).

[ಸಂ. ಪೌಷ್ಟಿಕಕರ್ಮನ್]

ಪೌಷ್ಟಿಕತೆ (ನಾ). ಪುಷ್ಟಿಯನ್ನುಂಟುಮಾಡುವ ಅಂಶ; ಪುಷ್ಟಿದಾಯಕತ್ವ : ತರಕಾರಿಗಳಲ್ಲಿರುವ ಜೀವಾತುಗಳು ಮತ್ತು ಪೌಷ್ಟಿಕತೆಯು ನಷ್ಟವಾಗದಂತೆ ಅವುಗಳನ್ನು ಎಷ್ಟು ಬೇಗನೆ ಬೇಯಿಸಿ ತೆಗೆಯಿತೋ ಅಷ್ಟು ಒಳ್ಳೆಯದು (ಅಡುಸೌ. ೨೬). [ಸಂ. ಪೌಷ್ಟಿಕತಾ]

ಪೌಷ್ಪಕ (ನಾ). ಹಿತ್ತಾಳೆಯ ಭಸ್ಮದಿಂದ ತಯಾರಿಸಿದ ಒಂದು ಬಗೆಯ ಕಣ್ಣುಕಪ್ಪು ; ಕುಸುಮಾಂಜನ : "ರೀತಿಪುಷ್ಪಂ, ಪುಷ್ಪಕೇತುಃ, ಪೌಷ್ಪಕಂ, ಕುಸುಮಾಂಜನಂ—೪ ಕುಸುಮಾಂಜನದ ಹೆಸರು" (ನಿಡ್ಡಾಂತಿ. ೩೦೩). [ಸಂ.]

ಪೌಷ್ಯ (ಗು). ೧. ಪುಷ್ಯಮಾಸಕ್ಕೆ ಸಂಬಂಧಿಸಿದ. (ನಾ). ೨. ಪುಷ್ಯಮಾಸ. [ಸಂ.]

ಪೌಷ್ಯಮಾಸ (ನಾ). ಪುಷ್ಯಮಾಸ : ಕೈಲಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ಪೌರ್ಣಮಿದಿನದಂದು ಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ (ಅಡಿಪು. ೦೬-೯೦ ಪ). [ಸಂ.]

ಪೌಸರ (ನಾ). ಗುಂಪು; ಸಮೂಹ : ಸಿಡಿಹಿನಿಂ ನೋಡಿ ಪಕ್ಕವ ಬಿದಿರ್ದು ಬೆದಱುತ್ತೆ ನಡುಗೊಂಬನೇಱಿ ಸುಸ್ವರಗಳಿಂ ಧ್ವನಿಗೆಯ್ವ ಪಡಿಯಱಾಂಕಿತ ವಕ್ಕಿ ಪೌಸರದೊಳಿಹವಿಂತು ಸಂತಸದೊಳುಂ ವನದೊಳು (ಶ್ರಕುಪು. ೩-೦೯).

[< ಪಸರ]

ಪೌಳಿ$_1$, ಪಉಳಿ, ಪವಲ್ಯ, ಪವಳಿ, ಪವುಳಿ (ನಾ). ೧. ಸುತ್ತುಗೋಡೆ ; ಪ್ರಾಕಾರ : ಭಕ್ತನ ದೇಹವೇ ತ್ರಿಕೂಟದ ಶಿವಾಲಯ . . . ಶಿವಾಚಾರವೆ ಪೌಳಿ (ಶನ್ನಪ. ಳ. ೦೪೯-೩೪೦) ; ನಿಂದು ನಿಂದು ನಿಲುಕಿ ನಿಲುಕಿ ಕೈಗುಂದಿ ನೋಡುತ ದೆಸೆದೆಸೆಯನಾನುದವಳಿದುಳಿದುಳಿದು ಪೌಳಿಯ ಕಡೆಗೆ ನಸುಸಾರ್ದು (ಪಸಪು. ೨೬-೩೦) ; ರಾಯನ ರಾಣಿಯ ಪೌಳಿಯ ಹಿಂದದೆ ಬಲು ಬಟ್ಟಬಯಲು (ಕುರಾಸಾಂ. ೩೦-೦); ಸುತ್ತೇಳ ಪೌಳಿ ಮನೆಯವಳೆ ನನ ಚೆಲುವೆ ಸುತ್ತಿ ಬರತೀನಿ ದನಿ ತೋರೆ (ಹಳ್ಳಿಪ. ೦೦೦); ಶಾಲೆಯ ಸಮೀಪದ ದೇವಸ್ಥಾನದ ಪೌಳಿಯಲ್ಲಿ ಕಟ್ಟಿದ ಚಿಕ್ಕ ಕೋಣೆಯೊಂದನ್ನು ಹಿಡಿದು ತಾವೇ ಕೈ ಬಾಯಿ ಸುಟ್ಟುಕೊಂಡಿದ್ದರು (ಪಾಳಿಗಿ. ೩). ೨. ಅಂಕಣ; ಆವಾರ; ಆವರಣ : ಬ್ರಹ್ಮಪುರಿಯ [ದೇವಾಲ್ಯದ]ಪೌಳಿಯ ನಿ(ನೀ)ಳದ ೨೫ ಹಸ್ತದಗಲದ ನಿವೇಶನವಂ ಪೌಳಿವಿಡಿದು ತೆಙ್ಕದೆಸೆಯ[ಲು? ಕೊ]ಟ್ಟರು (ಎಇ. XIX. ೨೩-೩೨; 1245); ಮಧ್ಯದ ಪೌಳಿಯೊಳೆಸುವುದಾ ನೃಪಗೆ ತಕ್ಕಧ್ಯಯನದ ದೀರ್ಘಶಾಲೆ (ಭರತ. ೦೬-೩); ಅಷ್ಟರವರೆಗೆ ದೇವಾಲಯದ ಪೌಳಿಯಲ್ಲಿ ವಿಶ್ರಮಿಸಿಕೊಳ್ಳುವ ಕೃಪೆ ಮಾಡಬೇಕು (ಹುಲಿಹಾ. ೦೨೩). **ಪಉಳಿ** : ೧. ಪಡು[ವಲು]ಉ[ಪ್ಪ]ರಿಗ[ಬಾ]ಗಿಲು ತೆಂಕಲು ದೇವರ ಗು[ಡಿ ಪ]ಉಳಿ ಮೇರೆ (ಸೌಇಇ. IV. ೨೪೬-೨೨ ; 1557). **ಪವಲ್ಯ** : ೧. ಸ್ವಯಂಭುದೇವರಿಗೆ ತಪಂಬಟ್ಟು ಈ ಪವಲ್ಯವ ಮಾಡಿಸಿದಂ (ಎಕ. III, ಶ್ರೀರಂಗ. ೩೪-೬; 1126). **ಪವಳಿ** : ೧. ದೇವಸ್ಥಾನದ ಸುತ್ತಲೂ ನಾಲ್ಕುಕಡೆಗೆ ದೊಡ್ಡ ಪವಳಿಯಿದೆ (ಗಂಗಾಸಾ. ೩); ಕೌಶಲ್ಯದ ಕಲ್ಲು ಪವಳಿ ಕುಸುರಿನ ಮಾದ್ವಾರೈದು (ಸಿದ್ಧಪು. ೨೬-೩). ೨. ಅರಮನೆಗೆ ಹೊಂದಿ ಇದ್ದ 'ಪವಳಿ' ಯಲ್ಲಿ ಒಂದು ಸಣ್ಣ ಉದ್ಯಾನವನ್ನು ಮಾಡಿಕೊಂಡಿದ್ದಾಳೆ (ಶಿಮಾಪ್ಯಾ. ೯೯). **ಪವುಳಿ** : ೧. ಯೀ ದೇವರ ದೇವಾಲ್ಯದ ಕಳಸ ನಿರ್ಬ್ಬಣ ಪವುಳಿ ಬಾಗಿಲುವಾಡ . . . ಯೀ ಕಟಿದ ಮರಿಯಾದೆಯ ಪಡಿ ನಡುವುದು (ಎಕ. VI, ಕಡೂರು. ೪೯-೬೩; 1291); ಪುಂಡರೆಲ್ಲರ ಕೂಡಿಕೊಂಡು . . . ಪವಳಿಯ ಹೊಱಗೆ ಮುಂಕೊಂಡಾಡು ತಿರ್ದನುಬ್ಬಿನೊಳು (ಕುರಾಸಾಂ. ೩೪-೩೦) ; ಪವುಳಿ ಉಪ್ಪರಿಗೆ ಚಿನ್ನದ ಪಂಚಕಳಸವು ವಿವರ ಚಿತ್ರದ ಚಂದ್ರಶಾಲೆ (ಐಸಪ. ೦-೬೩).

[< ಪ್ರಾ. ಪಓಲಿ=ರಾಜಮಾರ್ಗ; ಹೆಬ್ಬಾಗಿಲು./ಹಿಂ. ಪೌಲೀ, ಪೌರೀ; ಮರಾ. ಪೌಳೀ]

ಪೌಳಿ$_2$ 'ಪೌಲಿ' ನೋ.

ಪೌಳಿಂದಿನಿ (ನಾ). ಬೇಡರ ಹೆಂಗಸು; ಶಬರಿ : ಚಂದನದಿಂದೆ ಮಾಡಿದೊರಳೊಳ್ ಬಿದಿರಕ್ಕಿಯನೆಯ್ದೆ ಪೊಯ್ದು ಚೆಲ್ವೊಂದಿದ ದಂತದೊಂದೊನಕೆಯುಂ ಪಿಡಿದೊಳ್ಚಳಿಸುತ್ತುಮಿರ್ದ ಪೌಳಿಂದಿನಿ . . . ಬಿಲ್ಲ

ಬಲ್ಲಹನೆ ಸೂವಿಯೆ ಸೂವಿ ದಲೆಂದು ಪಾಡಿದಳ್ (ಶಾರವು. ೦೦-೦೦೨).

[< ಸಂ. ಪುಲಿಂದೀ]

ಪೌಳಿಗವಾಕ್ಷಿ (ನಾ). ಗೋಡೆಯ ಮೇಲ್ಭಾಗದಲ್ಲಿ ಕೊರೆದ ಕಿಂಡಿ,–ಗವಾಕ್ಷಿ : ಪಶ್ಚಿಮದ್ವಾರವೆಂಬ ನಿಜದ್ವಾರವಟ್ಟವಂ ಮಾಡಿ ಸಪ್ತವ್ಯಸನ ಪಂಚೇಂದ್ರಿಯಂಗಳೆಂಬ ಪೌಳಿಗವಾಕ್ಷಿಯನಿಕ್ಕಿ (ಕೂಪ್ಯಸಂ. ೩೦೬-೨೬).

[ಪೌಳಿ$_1$ + ಗವಾಕ್ಷಿ$_1$]

ಪೌಳಿಗೋಡೆ (ನಾ). ಪ್ರಾಕಾರದ ಗೋಡೆ ; ಸುತ್ತುಗೋಡೆ : ವೃಕ್ಷಗಳ ಸಹಾಯದಿಂದ ಪೌಳಿಗೋಡೆಯನ್ನು ಹಾರಿ ಹೋಗು (ಬಾಜಿ. ೪೬) ; ಗರ್ಭಗುಡಿಯ ಸುತ್ತ ಕಲ್ಲಿನ ಪೌಳಿಗೋಡೆ ಇರುತ್ತದೆ (ಪ್ರವಾಇ. II, ೩೦೭); ದೂರದಲ್ಲಿ ಒಂದು ದೇವಸ್ಥಾನದ ಪೌಳಿಗೋಡೆಗಳು ಕಾಣಿಸಿದುವು (ಸಂಗಾಳ್ಯ. ೫೦೬).

[ಪೌಳಿ$_1$ + ಗೋಡೆ]

ಪೌಳೋಮಿ ' ಪೌಲೋಮಿ ' ನೋ.

ಪೌಳೋಮಿಪತಿ ' ಪೌಲೋಮಿಪತಿ ' ನೋ.

ಪ್ಯಾದೆ, ಪೇದೆ (ನಾ). ೧. ಕಾಲಾಳು; ಕಾಲ್ನಡೆಯ ಭಟ: ಕುದುರೆ ೫೦೦ ಪ್ಯಾದೆ ೬೫೦ ಸಹಾ ಭರ್ತಿ ಮಾಡಿ (ಹೈದರ. ೨೦); ಟೀಪುಸುಲ್ತಾನರು ತಮ್ಮ ಕಡೆ ಆಹಶಾಂ ಪ್ಯಾದೇರಿಗೆ ತಯಾರುಮಾಡಿ . . . ಕಳುಹಿದಲ್ಲಿ (ಶಾಸೇಂಪ್ರ. ೪೨). ೨. ಪೋಲೀಸು ದಳದ ಕೆಳದರ್ಜೆಯ ಸೇವಕ : ಅವನು ನಮ್ಮೂರಿನ ಪೋಲೀಸ್ ಠಾಣೆಯಲ್ಲಿ ಪ್ಯಾದೆಯಾಗಿದ್ದಾನೆ (ರೂಢಿ). ೩. ಸೇವಕ; ಆಳು; ಜವಾನ : ನಿನ್ನೆ ಏನೇ ಎನಿಸಿಕೊಂಡವಳು ಇಂದೊಡತಿ, ತಾನೆಂದಿನಂತೆಯೇ ಪ್ಯಾದೆ (ಗೌಮಲ್ಲಿ. ೦೯) ; ಕಾಲದ ಪ್ಯಾದೆ ಅವನ ಖ್ಯಾತಿಯ ಎಲ್ಲೆಯ ಗೂಟಗಳನ್ನು ಕೀಳುವುದಕ್ಕೆ ಬಂದಾಗ ಸಮಾಲೋಚಕನು ಈ ತಮಾಷೆಯನ್ನು ನೋಡಲು ಕಾಯಲಾಗುವುದಿಲ್ಲ (ಪಿಂಗಿ. II, ೨೯೫). ೪. ಚದುರಂಗದಾಟದಲ್ಲಿ ಕನಿಷ್ಠ ನಡೆಯ ಕಾಯಿ : ಸ್ವಲ್ಪ ತಾಳು ಅವಲ್ಲ ಆಟ, ಧೊರೆಗೆ ಷಹ ಕೊಟ್ಟರೆ ಆ ಪ್ಯಾದೇಗೆ ದೇವರೇ ಗತಿ (ದುಂಬಿಕ. ೪) ; ಪ್ಯಾದೆಯನ್ನು ತೆಗೆದು ದೊರೆಗೆ ಶಹಾ ಕೊಡು (ರೂಢಿ). **ಪೇದೆ** : ೧. ರಾಣಿಯು ಕೋಟೆಯ ಮಹಲ್ಲಿನಲ್ಲಿಯೇ ತನ್ನ ಸಖಿಯರು, ಸಿಪಾಯಿಗಳು ಮತ್ತು ಪೇದೆಗಳೊಂದಿಗೆ ವಾಸಿಸುತ್ತಿದ್ದಳು (ಝಾಂಶಿ. ೦೨೯) ೨. ಎಕ್ಸೈಜ್‌ಇನ್ ಸ್ಪೆಕ್ಟರು ನಾಲ್ವರು ಪೇದೆಗಳೊಡನೆ ಹಠಾತ್ತನೆ ಪಟೇಲ ತಿಮ್ಮೇಗೌಡನ ತೋಟಕ್ಕೆ ಪೂರ್ವಭಾವಿಯಾಗಿ ಸುದ್ದಿ ಕೊಡದೆ ದಾಳಿ ಇಟ್ಟಾಗ . . . ಆ ಭಂಗಿಯ ಗಿಡವನ್ನು ಅವರಿಗೆ ತೋರಿಸಿದ (ಊರುಕ. ೬೫) ; ಪೇದೆಯ ಕೆಲಸದಿಂದ ಮುಕ್ತನಾದರೆ ಸಾಕಾಗಿತ್ತು ನನಗೆ (ಸಾಪೋಲೀ. ೦೦೨). ೩. ಏನು ಶಾಲೆಯ ಮಾಸ್ತರನೂ ನಾನೇ ಪೇದೆಯೂ ನಾನೇ ಎಂದು ತಿಳಿದಿರಾ ? (ಕಿದಾಲಾ. ೦೩೬) ; ಒಬ್ಬ ಸಭ್ಯಗೃಹಸ್ಥನು ಪೇದೆಗಳ ಮುಂದಾಳುವಿನೊಟ್ಟಿಗೆ ದ್ರಾಕ್ಷಾರಸ ಕುಡಿಯುವುದು ! ನಾಚಿಕೆಗೇಡು ! (ಯೋರರು. ೪೦).

[← ಪಾರ. ಪಿಯಾದಾ ; ಹಿಂ. ಮರಾ. ಪ್ಯಾದಾ]

ಪ್ಯಾದೆಮಾತು, ಪೇದೆಮಾತು (ನಾ). ೧. "(ಚದುರಂಗದಲ್ಲಿ ಎದುರಾಳಿಯ ದೊರೆಯ ಚಲನೆಗೆ ಅವಕಾಶವಿಲ್ಲವೆಂದು ಹೇಳುವ ಮಾತು) . . . ಪ್ಯಾದೆ ಮಾತು" (Check-mate ಸಂಕಪಿ). ೨. (ಆಲಂ) ಸಂಪೂರ್ಣ ಪರಾಭವ ; ಪೂರಾ ಸೋಲು : ಇದು ಒಳ್ಳೇ ' ಪ್ಯಾದೆ ಮಾತು ' ಆಯಿತೆಂದು ಮರುದಿನ ಪುನಃ ಯಾತ್ರೆ ಹೊರಟದ್ದೇ ! (ಕ್ರೀಕಥೆ. ೦೦೪) ; ಸುಬೇದಾರರ ಪ್ಯಾದೇಮಾತಿನ ಕಥೆಯನ್ನು . . . ಹೇಳುತ್ತೇನೆ (ಸಣ್ಣಕ. V, ೦೭). **ಪೇದೆಮಾತು** : ೧. ಇದು ಪಾರ್ಥನ ವೀರತ್ವಕ್ಕೆ ಚದುರಂಗದಾಟದೊಳಗಿನ ಕೊನೆಯ ಶಹ – ಪೇದೆಮಾತೇ – ಅಲ್ಲವೇ ? (ಬಿದುರೆ. ೭ ಪ್ರಸ್ತಾವನೆ).

ಪ್ಯಾದೆಮಾತು ಮಾಡು = ಸೋಲಿಸು ; ಪರಾಭವಗೊಳಿಸು : ನಿರ್ಮಲೆಯು ಖಂಡಿತವಾಗಿಯೂ ಔರಂಗಜೇಬನನ್ನು ಸೋಲಿಸಿದಳು ; ಪ್ಯಾದೆಮಾತು ಮಾಡಿ ಕೂರಿಸಿದಳು (ಬಂಕಿಮ. ೨೩೮).

[← ಮರಾ. ಪ್ಯಾದಮಾತ್, ಪ್ಯಾದೇಮಾತ್]

ಪ್ಯಾರಾ (ನಾ). ಗ್ರಂಥ, ಲೇಖನ ಮೊದಲಾದುವುಗಳಲ್ಲಿ ಮೊದಲನೆಯ ಪಂಕ್ತಿಯನ್ನು ಒಳಚಾಚಿ ಪ್ರಾರಂಭಿಸುವ ವಾಕ್ಯವೃಂದ : ರಿಜಿಸ್ಟರಿಗೆ ದಾಖಲ್ಮಾಡಲ್ಪಟ್ಟಿರುವವರ್ಯಾರಾದರೂ ಕಾಣದೆ ಗೈರ್‌ಹಾಜರಾದರೆ ೬ನೇ ಪ್ಯಾರಾದಲ್ಲಿರುವ ಮೆಮೊರಾಂಡಂನ ಮೂಲಕ ಸ್ಟೇಷನ್‌ಹೌಸ್ ಆಫೀಸರವರಿಗೆ ತಿಳಿಸತಕ್ಕದ್ದು (ಗ್ರಾಮಾಕ. ೪೬) ; ಬಾಹ್ಯಪರೀಕ್ಷೆಯ ವರದಿ ನಾಲ್ಕು ಪುಟಗಳಷ್ಟಿದ್ದು, ಇಪ್ಪತ್ತೇಳು ಪ್ಯಾರಾಗಳನ್ನೊಳಗೊಂಡಿತ್ತು (ಪುವರು. ೬೬).

[P ಇದು ಇಂಗ್ಲಿಷಿನ 'Paragraph' ಎಂಬುದರ ಸಂಕ್ಷಿಪ್ತರೂಪ]

ಪ್ಯಾಲೆ ' ಪೇಲೆ ' ನೋ.

ಪ್ರ—(ಉಪ). ೧. ಮುಂಭಾಗದ, ಮುಂದಿನ, ಮುಂದೆ ಇರುವ ಎಂಬರ್ಥಗಳಲ್ಲಿ ಸಂಸ್ಕೃತಧಾತುಗಳಿಗೆ ಸೇರುವ ಒಂದು ಉಪಸರ್ಗ. ೨. ಬಹಳ, ತುಂಬ, ಅತಿಶಯವಾದ ಎಂಬರ್ಥಗಳಲ್ಲಿ ಸಂಸ್ಕೃತ ಗುಣವಾಚಕಗಳಿಗೆ ಸೇರುವ ಒಂದು ಉಪಸರ್ಗ. ೩. ಪ್ರಾರಂಭ, ಆಧಿಕ್ಯ, ಸೌಂದರ್ಯ, ಶ್ರೇಷ್ಠತೆ ಎಂಬಂಥ ಅನೇಕ ವಿಶೇಷಾರ್ಥಗಳಲ್ಲಿ ಸಂಸ್ಕೃತನಾಮಪದಗಳಿಗೆ ಸೇರುವ ಒಂದು ಉಪಸರ್ಗ.

[ಸಂ.]

ಪ್ರಕಂದ (ನಾ). ದೊಡ್ಡಗಾತ್ರದ ಗಡ್ಡೆ : ಆನೆಹುಲ್ಲು ಅಥವಾ ದಪ್ಪ ನೇಪಿಯರ್‌ಹುಲ್ಲು . . . ಇದಕ್ಕೆ ತೆವಳು ಆಕಾರದ ಪ್ರಕಂದಗಳಿವೆ (ಕಪಿಕೋ. I, ೭೯೫). [ಸಂ.]

ಪ್ರಕಂಪ (ನಾ). ೧. ಅತಿಯಾಗಿ ನಡುಗುವಿಕೆ, – ಅದುರುವಿಕೆ. ೨. ಹೆಚ್ಚಾದ ನಡುಕ, –ಕಂಪನ : ರಮಣೀಹೃದಯದಲ್ಲಿ ನಾಯಕ ಸಂಸ್ಪರ್ಶಜನಿತ ಪ್ರಕಂಪದಂತೆ, ನದೀವಕ್ಷದಲ್ಲಿ ತರಂಗ ಏಳಲು ಮೊದಲಾಯಿತು (ಬಂಕಿಮ. ೦೬೮). ೩. ಒಂದು ನರಕದ ಹೆಸರು : ವಿಕರಾಳ ಪ್ರಕಂಪ ಪದ್ಮ ಸುವಕ್ತ್ರ ಕಾಲವೆಂಬೈದು ಮಂತ್ರಿನರಕಂಗಳಿಂ ಕೂಡಿ ಅಘೋರವೆಂಬರಸುನರಕವಿಹುದು (ಏನೇಕ. ೦೫೨). ೪. [ನಾಟ್ಯ] ಐದು ವಕ್ಷೋಭೇದಗಳಲ್ಲಿ ಒಂದು ; P "ಎಡೆಬಿಡದೆ ನಿಟ್ಟುಸಿರು ಬಿಡುವುದು. [ಎಡೆಬಿಡದೆ ಎದೆಯನ್ನು ಮೇಲಕ್ಕೆ ಚಲಿಸುವುದು.] ಹೆದರಿಕೆ, ನಗುವುದು, ಶ್ರಮ, ಶ್ವಾಸ, ಕಾಸರೋಗ, ತಿಕ್ಕಲು, ಅಳುವುದು ಇವುಗಳನ್ನು ಅಭಿನಯಿಸುವಾಗ" (ಶಾಸ್ತರಂ. ೨೫೬ ಗದ್ಯಾನುವಾದ) : ಸಮಮಾಭುಗ್ನಂ ನಿರ್ಭುಗ್ನಮುಮತಿವಿಲಸತ್ಪ್ರಕಂಪಮುದ್ವಾಹಿತಮುಂ ಕ್ರಮದಿಂ ವಕ್ಷೋಭೇದಂ ಸಮನಿಸುಗುಂ ನೃತ್ತದಲ್ಲಿ (ಶಾಸ್ತರಂ. ೨. ೬೫).

[ಸಂ.]

ಪ್ರಕಂಪನ (ಗು). ೧. ರಭಸವಾಗಿ ನಡುಗುತ್ತಿರುವ. (ನಾ). ೨. ಅತಿಯಾದ ನಡುಕ. ೩. ಗಾಳಿ; ವಾಯು. ೪. ನಡುಗಿಸುವವನು. ೩, ೪: ಪ್ರಕಂಪನಜೀವಪ್ರಕಂಪನನಪ್ಪೆನಗೆ ಗೋಪಾಲಯುಕ್ತನೊಳ್ ಭೇದಮಯುಕ್ತಮುಂ . . . ಅಪ್ಪುದು (೩ಗಂ. ೩-೬೦ ವ). ೫. ಒಂದು ನರಕದ ಹೆಸರು. ೬. [ಕಾವ್ಯಮೀ] ಎಂಟು ಬಗೆಯ ಸಾತ್ವಿಕಭಾವಗಳಲ್ಲಿ ಒಂದು ; ನಡುಗುವುದು : ಸ್ವೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಮಶ್ರೂದ್ಭೇದಂ ಸ್ತಂಭಂ ಲಯಮೆಂದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ (ಕಾವ್ಯಾಪ. ೭೯೬). [ಸಂ.]

ಪ್ರಕಂಪಿತ (ಗು). ೧. ಹೆಚ್ಚಾಗಿ ನಡುಗಿಸಲ್ಪಟ್ಟ : ಅತುಳೋತ್ತಾಲ ತಿಮಿಂಗಿಳಪ್ರಬಳಪಕ್ಷೋದ್ಭೂತವಾತ ಪ್ರಕಂಪಿತಕುತ್ಕೀಲಸಮಗ್ರದುರ್ಗ್ರಹಘನಗ್ರಾಸಗ್ರಹವ್ಯಗ್ರ . . . ಕೋಲಾಹಲಕಲ್ಪಕಾಲಪ್ರಸ್ಪರ್ಧಿಯಂ ವಾರ್ಧಿಯಂ (ಕಾವ್ಯಸಾ. ೭೫). ೨. ನಡುಗಿದ ; ಅಲ್ಲಾಡಿದ : ನಿಬಿಡ ಪ್ರಕಂಪಿತಕುಚಚ್ಯುತಕುಂಕುಮರೇಣು ತಮ್ಮ ಕೇಸಡಿಗಳ ಕೆಂಪು ಕೆಂದಳಿರ

ಸಾಲಿಡೆ ಸಂಚರಿಪರ್ಲತಾಂಗಿಯರ್ (ರಾಜಕೇ. ೬-೬). [ಸಂ.]

ಪ್ರಕಟ (ಗು). ೧. ವ್ಯಕ್ತವಾದ ; ಹೊರಹೊಮ್ಮಿದ ; ಸ್ಪಷ್ಟವಾದ : ಪ್ರಕಟಾಟೋಪದೆ ಪೊಯ್ದು ಪೊಯ್ದು ಶಿಲೆಯೊಳ್ ವೃಕ್ಷಂಗಳೊಳ್ ಮೋದಿ ಮೋದಿ (ಗದಾಯು. ೩-೦೩) ; ಪ್ರಕಟಯಶರ್ಗುಣನಿಧಿಗಳ್ . . . ಗುಣಧರಭಟ್ಟಾರಕರೆ . . . ಎಮಗಭಿವಂದ್ಯರ್ (ಧರ್ಮಾಮ್ಯ. ೦-೦೦) ; ಪ್ರಕಟಾನೇಕವಿಚಿತ್ರವಸ್ತುಗಳ ಜನ್ಮಸ್ಥಾನಕಂ ತಾಂ ವಸಂತಕಮೆಂಬಾ ವಿಷಯಂ ಮದೀಯ ವಿಷಯಂ (ಕುಸುಮಾ. ೦೫-೬೬). ೨. ಪ್ರಸಿದ್ಧವಾದ: ಪ್ರಕಟಾಂಗಿಕ ವಾಚಿಕ ಸಾತ್ವಿಕ ಮಹಾರ್ಯಂಗಳೆಂಬ ನಾಲ್ಕಭಿನಯಮುಂ ಸಕಲಪರೀಷಹಮೆನೆ ರಂಜಕಮಾದುವು ರಂಗಮಧ್ಯದೊಳ್ (ಅಜಿಪು. ೩-೯). ೩. ಕಣ್ಣಿಗೆ ಕಾಣುವ ; ಪ್ರತ್ಯಕ್ಷ. (ನಾ). ೪. ಸ್ಪಷ್ಟತೆ ; ನಿಚ್ಚಳತೆ : "ವಿಶದಂ, ಪ್ರಕಟಂ, ಸ್ಪಷ್ಟಂ, ಪ್ರಕಾಶಂ, ಸ್ಫುಟಂ — ಈ ೫ ಅಱಿಯಲ್ಬರ್ಪು(ಹು)ದು" (ಹಲಾಯು. ೦೨೪-೬೭). ೫. ಬಹಿರಂಗವಾದುದು ; ಸರ್ವವಿದಿತವಾದುದು : ಪ್ರಕಟಮುಮಪ್ಪಂತಿರೆ ಜಾತಕರ್ಮದೊಸಗೆಯುಮನೊಸೆದು ಮಾಡಿಸೆ (ಶಾಂತಿಪು. ೦೦-೭೭). ೬. ಪ್ರಸಿದ್ಧನಾದವನು; ಕೀರ್ತಿಶಾಲಿ : ಪ್ರಕಟರ್ ನೀತಿವಿದರ್ ನೃಪರ್ (ಪುಷ್ಪಪು. ೦೩-೬೯). ೭. ಬಹಿರಂಗವಾದ ಸ್ಥಳ ; ಸಾರ್ವಜನಿಕ ಪ್ರದೇಶ : ಅರಸಿದರು ಸೀತೆಯಂ . . . ಸೋವಿದರ್ ಗೂಢಮಂ ; ಸೋವಿದರ್ ಪ್ರಕಟಮಂ (ಶ್ರೀಕಾಮಾ. ೩೬೫-೦೦೫). ೮. ವಿಚಾರ ; ವಿವರ ; ಸಂಗತಿ : ಸಕಲಲೋಕಾತ್ಮಾಭಿರಾಮ ನೀನರಿಯದಿಹ ಪ್ರಕಟಮೊಂದಿಲ್ಲ (ಪಪಮೋ. ೪-೦೪).

ಪ್ರಕಟಂ ಮಾಡು = ಸ್ಪಷ್ಟಪಡಿಸು; ವ್ಯಕ್ತಗೊಳಿಸು: ಪರಭಾಗಭಾವ ವಿಲಸದ್ವರ್ಣಕ್ರಮಾವೃತ್ತಿಯಂ ಪ್ರಕಟಂ ಮಾಡಿರೆ (ಕವಿರಾ. ೦-೦೫೦) ; ಘ್ರಾಣೇಂದ್ರಿಯೌತ್ಸುಕ್ಯಮಂ ಪ್ರಕಟಂ ಮಾಡಿ ನೃಪಂಗಲಂಪುವಡೆದತ್ತಂ ಭೋಜಗಂಧಾಸವಂ (ಅಂಕಿಪು. ೪-೬೯). ಪ್ರಕಟವಾಗು = ೧. ಹೊರಕ್ಕೆ ಬರು ; ಗೋಚರಿಸು ; ಮೈದೋರು : ಒಂದು ಅರಳಿಮರವಾಗಿಯೂ ಮತ್ತೊಂದು ಆಲದ ಮರವಾಗಿಯೂ ಪ್ರಕಟವಾಗುತ್ತವೆ (ಜೀವಾತ್ಮ. ೦೬೪). ೨. ವ್ಯಕ್ತವಾಗು ; ಅರಿವಿಗೆ ಬರು : ನಾವು ಮೌನದಿಂದಿದ್ದರೆ ನಮ್ಮ ದಡ್ಡತನವು ಒಂದು ವೇಳೆ ಜನರಲ್ಲಿ ಪ್ರಕಟವಾಗದೆ ಇರಬಹುದು (ಮುಂಬಯಿ. ೪-೪೯); ಪ್ರಕಟವಾದರೂ ಅಗಡುತನ ಬಿಡಲಿಲ್ಲ (ಗಾರ). ೩. (ಲೇಖನ, ಪುಸ್ತಕ ಮುಂತಾದುವು) ಮುದ್ರಣ ಹೊಂದಿ ಹೊರಬರು ; ಪ್ರಕಾಶಗೊಳ್ಳು ; ಅಚ್ಚಾಗು : ಭಗವದ್ಗೀತೆಯನ್ನು ಕುರಿತು ಬರೆದ ದಿವಂಗತ ಆರ್. ಡಿ. ರಾನಡೆಯವರ ಗ್ರಂಥ ಇತ್ತೀಚೆಗೆ ಪ್ರಕಟವಾಗಿದೆ (ಧರ್ಮಾಸಾ. ೦೪೪). [ಸಂ.]

ಪ್ರಕಟಂ (ಅ). ಎಲ್ಲರಿಗೂ ತಿಳಿದಿರುವಂತೆ ; ಬಹಿರಂಗವಾಗಿ : ಪ್ರಕಟಂ ಲೋಕೋತ್ತರಲೌಕಿಕಪರಿಣತಿ ಪುನ್ನಿಗಂಗೆ ಶಾಂತೀಶ್ವರರಾಮಕಥಾ ಪ್ರಶಸ್ತಿಯಿಂದಾದ ಕೃತಿಗಳಿಂ [ಕೃತಿಯುಗಂಗಳ]ನ್ನವುಮೊಳವೇ (ಶಾಂತಿಪು. ೦೨-೬೫) ; ಪ್ರಕಟಂ ವಾರಿಧಿವೇಳೆ ವಾರ್ಧಿಗೆ ಜಲೌಘಸ್ಪರ್ಧೆಯೊಳ್ ಬಾಧ್ಯಬಾಧಕಭಾವಂ ನೆಗಟಲ್ಕೆ ನಿಲ್ವ ತೆಱದಿಂದೆ (ಜಗನಿ. ೦-೩೦) ; ಪ್ರಕಟಂ ತಾಂ ಹಾಸ್ಯರಸಪ್ರಕಾರಮದು ಮೂಱುತೆಱದಿನೆಸೆಗುಂ (ಶೃಂಗಾರ. ೦-೬೪). [ಸಂ.]

ಪ್ರಕಟಂಬೆಱು (ಕ್ರಿ). ೧. ಸ್ಪಷ್ಟವಾಗು : ಪ್ರಕಟಂಬೆತ್ತಾಭಿಘಾತಂಬಿಡದು ಬಿಡದೆ ತಮ್ಮಂ ಕ್ಷಮಾವೃತ್ತಿಯಿಂ ತಾಳ್ದಿ (ಕುಸುಮಾ. ೦-೯೩). ೨. ಹೆಸರುವಾಸಿಯಾಗು ; ಪ್ರಸಿದ್ಧವಾಗು : ಪ್ರಕಟಂಬೆತ್ತಿರ್ಪ ಪೊಂಗೋಂಟೆಯ ತೆನೆಯೆಸಟ್ಗಳ್ . . . ತಾನೆನಲ್ಕೊಪ್ಪುಗುಂ (ದಶಕು. ೦-೨೫). [ಪ್ರಕಟ + ಪೆಱು$_1$]

ಪ್ರಕಟಗೈ (ಕ್ರಿ). ಸ್ಪಷ್ಟಪಡಿಸು; ವ್ಯಕ್ತಗೊಳಿಸು: ಅಲ್ಪವಿವು ಸಾಮಾನ್ಯವೆನೆ ಪ್ರಕಟಗೈಯುತ್ತ ತಮ್ಮತುಲಸುಖದುಃಖವೀವ ಶಕ್ತಿ (ಮಲೆದೇ. ೪೯-೩). [ಪ್ರಕಟ + ಕೈ$_1$ (< ಕೆಯ್$_1$)]

ಪ್ರಕಟಗೊಳಿಸು (ಕ್ರಿ). = ಪ್ರಕಟಗೈ : "ಆಕಾರಃ, ಇಂಗಃ, ಇಂಗಿತಂ—೩ ಅಭಿಪ್ರಾಯವನ್ನು ಪ್ರಕಟಗೊಳಿಸುವ ಚೇಷ್ಟೆಯ ಹೆಸರುಗಳು" (ಸಿದ್ಧಾಂತಿ. ೩೬೦). [ಪ್ರಕಟ + ಕೊಳ್$_1$ + — ಇಸು$_3$]

ಪ್ರಕಟಗೊಳ್ಳು (ಕ್ರಿ). ಸ್ಪಷ್ಟವಾಗು ; ವ್ಯಕ್ತವಾಗು : ಈ ದುಷ್ಟರು ಮಾಡಿದ್ದ ಭ್ರಷ್ಟಾಚಾರಗಳೆಲ್ಲ ಈಗ ಒಂದೊಂದಾಗಿ ಪ್ರಕಟಗೊಳ್ಳುತ್ತಿವೆ (ರೂಢಿ). [ಪ್ರಕಟ + ಕೊಳ್ಳು$_1$ (< ಕೊಳ್$_1$)]

ಪ್ರಕಟಣಾಲಯ (ನಾ). ಪುಸ್ತಕ ಮುಂತಾದುವುಗಳನ್ನು ಮುದ್ರಿಸಿ ಪ್ರಕಾಶಪಡಿಸುವ ಕಾರ್ಯಾಲಯ : ಇಂದು ವಿವಿಧ ಪ್ರಕಟಣಾಲಯಗಳಲ್ಲಿ ಮುದ್ರಣವಾಗಿರುವ ರಾಮಾಯಣದ ಎಲ್ಲ ಪ್ರತಿಗಳಲ್ಲಿಯೂ . . . ೨೪ ಸಾವಿರ ಶ್ಲೋಕಗಳೇ ಕಾಣಬರುತ್ತವೆ (ಪಾಠಾಕ್ಷ. ೬). [< ಸಂ. ಪ್ರಕಟನಾಲಯ]

ಪ್ರಕಟಣೆ (ನಾ). ೧. ಗ್ರಂಥ ಮುಂತಾದುವುಗಳನ್ನು ಮುದ್ರಿಸುವುದು.— ಪ್ರಕಾಶಪಡಿಸುವುದು : ಎಲ್ಲಕ್ಕಿಂತ ಮೊದಲು ಆಗಬೇಕಾಗಿರುವುದು ನಾಲ್ಕೂ ಶೂನ್ಯಸಂಪಾದನೆಗಳ ಪ್ರಕಟಣೆ (ಶೂನ್ಯಕು. ೦೪೮). ೨. ಯಾವುದಾದರೊಂದು ವಿಷಯವನ್ನು ಸಾರ್ವಜನಿಕರಿಗೆ ತಿಳಿಯಪಡಿಸಲು ಸರ್ಕಾರ ಅಥವಾ ಸಂಘಸಂಸ್ಥೆಗಳು ಹೊರಡಿಸುವ ತಿಳಿವಳಿಕೆಯ ಪತ್ರ ; ಘೋಷಣೆ : ಭೂಮಿಯ ಹಿಡುವಳಿಯ ಬಗ್ಗೆ ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿದೆ (ರೂಢಿ). [< ಸಂ. ಪ್ರಕಟನ]

ಪ್ರಕಟನ (ನಾ). ೧. = ಪ್ರಕಟಣೆ ೧ : ನನ್ನ ಕಾವ್ಯ ಸದ್ಯದಲ್ಲೆ ಪ್ರಕಟನಕ್ಕೆ ಸಿದ್ಧವಾಗುತ್ತದೆ (ರೂಢಿ). ೨. = ಪ್ರಕಟಣೆ ೨ : ಮನೆ ಗಂದಾಯದ ವಿಷಯದಲ್ಲಿ ಸರ್ಕಾರಿ ಪ್ರಕಟನವೊಂದು ಇಂದು ಹೊರಬಿದ್ದಿದೆ (ರೂಢಿ). [ಸಂ.]

ಪ್ರಕಟನೆ (ನಾ). ೧. = ಪ್ರಕಟಣೆ ೧ : ಕನ್ನಡಸಾಹಿತ್ಯಪರಿಷತ್ತು ಉತ್ರಮಗ್ರಂಥಗಳ ಪ್ರಕಟನೆಯನ್ನು ಕೈಗೊಂಡಿದೆ (ರೂಢಿ). ೨. = ಪ್ರಕಟಣೆ ೨ : ರದ್ದಾದ ಸ್ಥಳಗಳಿಗೆ ಪುರವಣಿ ಚುನಾವಣೆ ನಡೆಯಲಿದೆ ಎಂದು ನಗರಸಭೆಯ ಅಧ್ಯಕ್ಷ ಶಿವಾಜಿರಾವರ ಪ್ರಕಟನೆ ಹೊರಬಿದ್ದಿತ್ತು (ಅಪನಾ. ೨೩೦) ; ಮಕ್ಕಳ ಜೀವನದಲ್ಲಿ ಪರಿಣಾಮಕಾರಿಯಾಗುವಂತೆ ಶಿಕ್ಷಣ ವೀಯುವ ಸಂಘಸಂಸ್ಥೆಗಳಲ್ಲಿ . . . ಜಾಹೀರಾತು, ಪ್ರಕಟನೆ, ವಸ್ತು ಪ್ರದರ್ಶನ . . . ಮುಂತಾದುವು ಪ್ರಧಾನವಾದವು (ಶಿಕ್ಷದ. ೫೩). [ಸಂ. ಪ್ರಕಟನ]

ಪ್ರಕಟಿತ (ಗು). ೧. ಗೋಚರವಾದ ; ವ್ಯಕ್ತಗೊಂಡ : ಪ್ರಕಟಿತ ವಿಳಾಸನಧಿರಾಜಕುಮಾರಂ ನಳಿನಕೇತು ಕಂಡವರಂ (ಶಾಂತಿಪು. ೯-೦೦). ೨. ಪ್ರಸಿದ್ಧವಾದ ; ಜನಜನಿತವಾದ : ಪ್ರಕಟಿತಜಿನಪ್ರವಚನ ಪ್ರಕಾರದೊಳ್ ಸಾರಘೋರಸಂಸಾರಂ . . . ಪಂಚವಿಧಂ (ಸುಕುಮಾ. ೬-೬). (ನಾ). ೩. ಪ್ರಕಟಗೊಳ್ಳುವಂಥದು ; ಬಹಿರಂಗವಾಗುವಂಥದು : ಕರುಳ ಕಲೆ ಪ್ರಕಟಿತವುಂಟೆ . . . ದೇವಾ (ಬಸವ. ೮೨೫). ೪. ಪ್ರಸಿದ್ಧವಾದುದು : ಸುಕುಮಾರತರಾಕ್ಷರಪದನಿಕರವಿಶಿಷ್ಟಪ್ರಯೋಗಗತಮಪ್ಪುದದಾ ಸುಕುಮಾರವೆಂಬುದಕ್ಕುಂ ಪ್ರಕಟಿತಮದಱಾ ಪ್ರಯೋಗಮಿಾ ತೆಱನಕ್ಕುಂ (ಕವಿರಾ. ೨-೭೦). [ಸಂ.]

ಪ್ರಕಟಿತೋಕ್ತಿ (ನಾ). ಸ್ಪಷ್ಟಪಡಿಸಲ್ಪಟ್ಟ ಮಾತು.—ವಚನ : ಪ್ರಕಟಿತೋಕ್ತಿ ವಿವಿಕ್ತಿಕಳಾಕಳಾಪಕ[ನು]ಪಾಹಿತಸಾಹಿತ್ಯವದ್ಯೆಯೊಳ್ (ಕವಿರಾ. ೩ ೨೦೮). [ಸಂ.]

ಪ್ರಕಟಿಸು (ಕ್ರಿ). ೧. ಪ್ರದರ್ಶಿಸು; ತೋರ್ಪಡಿಸು: ಇವಱಿಂ ಸಮ್ಯಗ್ದರ್ಶನಮವಶ್ಯಮುಜ್ವಳಿಕುಂ . . . ಅಂತದು ಕವಲ್ತು ಸಮ್ಯಕ್ಚರಿತ್ರಮಂ

ಪ್ರಕಟಿಸುಗುಂ (ಅದಿಪು. ೩-೫೯) ; ಸಕಲಸಾಮರ್ಥ್ಯಮಂ ಪ್ರಕಟಿಸುವ ಸಭೆಯೊಳಗೆ ಕುಳ್ಳಿರ್ದ ಸೌಂದರನ ಯೌವನಮುಮಂ ಕಂಡು (ಸಂಬರ. ೩-೭೮); ಭೂಷಣಖಚಿತಮೌಕ್ತಿಕಮರೀಚಿ ಪಗಲೊಳು ಜೊನ್ನಮಂ ಪ್ರಕಟಿಸೆ (ಸಂಪು. ೭-೪). ೨. ಗ್ರಂಥ ಮೊದಲಾದವನ್ನು ಪ್ರಕಾಶಿಸು,—ಹೊರತರು: ಕೆಲವು ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ತನ್ನ ಲೇಖನಗಳನ್ನು ಪ್ರಕಟಿಸಿ ಪ್ರಭಾವಿ ಬರಹಗಾರ ಎಂದು ಎನಿಸಿಕೊಂಡಿದ್ದು ರಂಗಣ್ಣನವರಿಗೆ ಧೈರ್ಯ ತಂದುಕೊಟ್ಟಿತು (ಅಪನಾ. ೦೦) ; ಪಠ್ಯಪುಸ್ತಕವನ್ನು ಸರ್ಕಾರವೇ ಪ್ರಕಟಿಸಲಿ (ಶಿಕ್ಷದ. ೭೯೯). ೩. ಸರ್ವವಿದಿತವಾಗುವಂತೆ ಮಾಡು : ತಿಳಿಯಪಡಿಸು : ಅತ್ತಿಮಬ್ಬೆ . . . ದಾನಂ ಪೂಜೆ ಶೀಲಮುಪವಾಸಮೆಂಬಿವಂ ಪ್ರಕಟಿಸಿದಳ್ (ಅಪಪು. ೦-೫೨). ೪. ಉಂಟಾಗು; ಹುಟ್ಟು; ಉದ್ಭವಿಸು: ಪಾತಕವ ನೆನೆದನೊ ಪಶಿಯೊಳಕಟು ಪ್ರಕಟಿಸಿತೆ ದುಷ್ಕರ್ಮಫಲವೆನಗೆ (ಕೊರಂಗಾ. ೩-೩-೬೯). [ಪ್ರಕಟನ + — ಇಸ್ಸು]

ಪ್ರಕಟೀಕರಣ (ನಾ). ಪ್ರಕಾಶಪಡಿಸುವುದು ; ವ್ಯಕ್ತಪಡಿಸುವುದು : ತೀರ್ಥಾಖ್ಯಾನಮೆಂಬುದು ದುರಿತವಿನಾಶಕಾಂಕ್ಷಿಗಳ್ ಸಂಸಾರಸಮುದ್ರಮನೀಸಲೆಂದು ಜಿನಪತಿಮುಖಕಮಲವಿನಿರ್ಗತಧರ್ಮಸಂತತಿಯಂ ಪ್ರಕಟೀಕರಣಂಗೆಯ್ವುದು (ಶಾಪುಂಪು. ೦೩). [ಸಂ.]

ಪ್ರಕಟೀಕೃತ (ಗು). ಪ್ರಸಿದ್ಧವಾದ : ಪರಿಗೃಹೀತ ಸಮ್ಯಗ್ದರ್ಶನ ಪ್ರಕಟೀಕೃತ ಕ್ಷಾಯಿಕ ಸಮ್ಯಗ್ದೃಷ್ಟಿಗಳುಮಾಗಿ ಬಂದು (ಶಾಪುಂಪು. ೦೦) ; ಪ್ರಕಟೀಕೃತ ನಿರ್ಮಲವಿನುತಕೀರ್ತಿಯಂ ಪುಣ್ಯಮೂರ್ತಿಯಂ ಬಾಲಕನಂ ಸುಕುಮಾರನೆಂದು ಪೆಸರಿಟ್ಟು ಕಾಂತೆ ತನಯಂಗೆ ನಾಮಕರಣಂಗೆಯ್ದಳ್ (ಸುಕುಮಾ. ೦೦-೩೬) ; ಅದು . . . ಪ್ರಕಟೀಕೃತ ರಾಜಲೀಲೊ ದಯಮಲ್ತು (ಸಂದ್ರಪು. ೯-೯೨ ಪ). [ಸಂ.]

ಪ್ರಕರ (ನಾ). ೧. ಗುಂಪು ; ಸಮೂಹ : "ನಿಕರಂ . . . ಪ್ರಕರಮಾನೀಕಂ ಗಣಂ ಸಮಿತಿ ಸಮುದಯಂ ಪ್ರತತಿ ಸಂತತಿ ಸಮೂಹಂ" (ಮುಗಂಗಾ. ೦೨೬-೦) ; ಶುಕ ಶಾರಿಕಾದಿ ವಿಹಗಪ್ರಕರು ಮುಂ ಕೇಳ್ದ ವಚನಮಂ ನುಡಿವುದು (ಕಾದಂಪು. ೬೯) ; ಪ್ರಕರಾಂದೋಳಕಿರೀಟಪ್ರಕರಂ . . . ಆಗಿಂತು ಕರಂ ಮೆಚ್ಚುತ್ತಿರ್ದುದು ಸಕಲಸಭಾಜನಮದಾ ಕುಮಾರನ ಮತಿಯಂ (ಕುಸುಮಾ. ೭-೩೨); ವಿಕಳ ದುರ್ಯೋಧನನು ನಿಗಮಪ್ರಕರಮೌಳಿಯ ಮೌಳಿಯತ್ತಲು ಸಾರ್ದು ಮಂಡಿಸಿದ (ಕುಪ್ಯಾಉ. ೦-೨೯). ೨. ಹೂಗೊಂಚಲು; ಪುಷ್ಪಗುಚ್ಛ. ೩. ಒಂದು ಬಗೆಯ ಸಂಗಂಧವಸ್ತು; ಅಗುರು. ೪. ನೆರವು; ಸಹಾಯ. ೫. ಬಳಕೆ; ಉಪಯೋಗ. ೬. ಗೌರವ. [ಸಂ.]

ಪ್ರಕರಣ (ನಾ). ೧. ಚೆನ್ನಾಗಿ ಮಾಡುವುದು. ೨. ಚೆನ್ನಾಗಿ ನಡೆಸಿಕೊಡುವುದು. ೩. ವಿವರಣೆ ; ವ್ಯಾಖ್ಯಾನ. ೪. ಪ್ರಸ್ತಾವ: ಉಲ್ಲೇಖ : ಗಾಂಧೀಜಿಯವರ ಆತ್ಮಚರಿತ್ರೆಯಲ್ಲಿ ಅಗಸನ ಪ್ರಕರಣವೂ ಇದೆ (ದೇಶನೈ. ೩೯). ೫. ಸಂದರ್ಭ ; ಸನ್ನಿವೇಶ : ದಯವಿಟ್ಟು ಪ್ರಕರಣಕ್ಕೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಕುರಿತು ಚರ್ಚೆಮಾಡಬೇಕಾಗಿ ವಿನಂತಿ (ರೂಢಿ). ೬. ಯಾವುದಾದರೊಂದು ನಿರ್ದಿಷ್ಟ ವಿಷಯವನ್ನು ಪ್ರತಿಪಾದಿಸುವ ಅಥವಾ ವಿವರಿಸುವ ಗ್ರಂಥಭಾಗ; ಅಧ್ಯಾಯ : ಆತನ ರಾಜನೀತಿಯೂ ಅಷ್ಟಾಗಿ ಯಶಸ್ವಿಯಾಗಲಿಲ್ಲವೆಂದೂ ಹಿಂದಿನ ಪ್ರಕರಣದಲ್ಲಿ ತಿಳಿಸಲಾಗಿದೆಯಷ್ಟೆ (ಕೃಪೇಪ. ೦೦); ಭಗವದ್ಗೀತೆಯನ್ನು ಕುರಿತು ಬರೆದ . . . ಗ್ರಂಥ ಇತ್ತೀಚೆಗೆ ಪ್ರಕಟವಾಗಿದೆ. 'ಟಿಳಕರ ಗೀತಾರ್ಥ'ವನ್ನು ಕುರಿತು ಒಂದು ಪ್ರಕರಣ ಅದರಲ್ಲಿದೆ (ರರ್ಮಸಾ. ೦೯೯). ೭. (ಅಹಿತಕರವಾದ) ಘಟನೆ ; ಹಗರಣ : ರಮಾನ ಹಿಂದೂ ಮುಂದೂ ಓಡಾಡುತ್ತಿದ್ದವರಿಗೆ ಕಡಮೆ ಇರಲಿಲ್ಲ. ಪ್ರಕರಣಗಳಾದುವು: ರಮಾ ಬೇಸತ್ತು ಅಧ್ಯಯನವನ್ನೇ ಬಿಟ್ಟು ಕೊಟ್ಟಳು (ಅಪ್ಸಪು. ೩೯) ; ಊರಿನ ಘಟಿಂಗರ ಸಂಗಡ "ಪ್ರಕರಣ" ಮಾಡಿ ಇವಳು ಮನೆಗೆ ಬಂದು ಇಲ್ಲದ ಹಗರಣ ಮಾಡಿದರೆ ನಾವು ಹೆದರಿ ಮಲಗಲಿಕ್ಕೆ ರಾತ್ರಿ ಹೆರವರ ಮನೆಗೆ ಹೋಗಬೇಕು (ಪುಸಾರುಣಾ. ೩೨೨). ೮. ಅವಕಾಶ; ಆಸ್ಪದ : ಯಾವುದೋ ಪ್ರಕರಣ ಬಂತು. ದಬಾಯಿಸಿಬಿಟ್ಟೆ (ರೂಢಿ). ೯. ಪೀಠಿಕೆ : ಮುನ್ನುಡಿ ; ಉಪಕ್ರಮ. ೧೦. [ಕಾವ್ಯಮೀ] ದಶರೂಪಕಗಳಲ್ಲಿ ಒಂದು ; ಕಾಲ್ಪನಿಕಕಥಾಂಶವನ್ನು ಹೊಂದಿರುವ, ಧೀರಶಾಂತನಾಯಕನುಳ್ಳ, ಇತರ ಲಕ್ಷಣಗಳಲ್ಲಿ ನಾಟಕವನ್ನು ಹೋಲುವ (ಮೃಚ್ಛಕಟಿಕ, ಮಾಲತೀಮಾಧವ ಮುಂತಾದ) ದೃಶ್ಯಕಾವ್ಯ : ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರವೀಥಿ, ಅಂಕ, ಈಹಾಮೃಗ ಎಂದು ರೂಪಕಗಳು ಹತ್ತು ವಿಧ (ಸಂಪಾಟ. ೨೯) : ಪ್ರಕರಣ. ಉದಾ:—ಮೃಚ್ಛಕಟಿಕಾ, ಮಾಲತೀಮಾಧವ (ಕೃಪಿಡಿ. ೨೦೪). ೧೧. [ತತ್ತ್ವಶಾ] ಪ್ರಮೇಯವನ್ನು ವಿವರಿಸುವ ವಾಕ್ಯಸಮೂಹ: ಪ್ರಕರಣವೆಂದರೆ ಯಾವುದಾದರೂ ಒಂದು ಪ್ರಮೇಯವನ್ನು ನಿರೂಪಿಸಲು ಹೊರಟ ವಾಕ್ಯಸಮೂಹ (ಶಾಶತ್ತ್ವ. ೨೬). ೧೨. [ನ್ಯಾಯಶಾ] ಒಂದು ನಾನಾರ್ಥವಾಚಕವಾದ ಪದಕ್ಕೆ ನಿಷ್ಕೃಷ್ಟವಾದ ಅರ್ಥವನ್ನು ಗೊತ್ತುಮಾಡಲು ಇರುವ ಸಂದರ್ಭ : ಪ್ರ'ಸೈಂಧವ ಬೇಕು' ಎಂದು ಊಟಮಾಡುವ ಸಂದರ್ಭದಲ್ಲಿ ಹೇಳಿದರೆ 'ಉಪ್ಪು, ಕುದುರೆ' ಎಂಬ ಎರಡು ಅರ್ಥವುಳ್ಳ 'ಸೈಂಧವ' ಪದವು ಸಂದರ್ಭದಿಂದ 'ಉಪ್ಪು' ಎಂಬ ಅರ್ಥವನ್ನು ಮಾತ್ರ ಕೊಡುತ್ತದೆ: ಆತ್ಮಶಬ್ದವು . . . ಪ್ರಕರಣ, ಉಪಪದ ಮುಂತಾದ ಯಾವುದಾದರೊಂದು ಕಾರಣವಿದ್ದ ಹೊರತು ಅದು ಇಂಥ ಅರ್ಥದಲ್ಲಿಯೇ ಪ್ರಯುಕ್ತವಾಗಿದೆಯೆಂದು ತೀರ್ಮಾನ ಮಾಡುವುದಾಗಲಾರದು (ಪ್ರಹ್ಮಶಾ. ೯೩). [ಸಂ.]

ಪ್ರಕರಣಿ (ನಾ). = ಪ್ರಕರಣ ೧೦ : ನಾಟಕೆಯಲ್ಲಿ ವರ್ತಕಾದಿಗಳು ನಾಯಕರಾಗಿಯೂ ನಾಯಕನ ವಂಶದಲ್ಲಿ ಹುಟ್ಟಿದವಳೇ ನಾಯಿಕೆಯಾಗಿಯೂ ಇದ್ದರೆ ಅದೇ ಪ್ರಕರಣಿ (ಸಂಪಾಟ. ೩೩). [ಸಂ. ಪ್ರಕರಣೀ]

ಪ್ರಕರಿ (ನಾ). [ಕಾವ್ಯಮೀ] ದೃಶ್ಯಕಾವ್ಯಗಳಲ್ಲಿ ಬರುವ ದೃಶ್ಯವನ್ನು ರಮಣೀಯವನ್ನಾಗಿ ಮಾಡಲು ಸಾಧಕವಾದ ಐದು ಅರ್ಥಪ್ರಕೃತಿಗಳಲ್ಲಿ ನಾಲ್ಕನೆಯದು ; ಮುಂದೆ ಬರುವ ಘಟನೆಗೆ ಪೂರಕವಾಗಿರುವಂತೆ ನಾಟಕದಲ್ಲಿ ಅಳವಡಿಸಿರುವ ಪ್ರಾಸಂಗಿಕವೃತ್ತಾಂತ : ಪ್ರಾಸಂಗಿಕವೆಂದರೆ, ಮುಖ್ಯಕಥೆಗೆ ಅಂಗವಾಗಿ ಮಧ್ಯೆ ಬರತಕ್ಕ ಕಥೆ . . . ಪ್ರಾಸಂಗಿಕವು ದೊಡ್ಡದಾಗಿದ್ದರೆ ಅದಕ್ಕೆ 'ಪತಾಕಾ' ಎಂದೂ ಸ್ವಲ್ಪವಾಗಿದ್ದರೆ . . . 'ಪ್ರಕರೀ'ಯೆಂದೂ ಹೆಸರು (ಕೃಪಿಡಿ. ೨೦೩). [ಸಂ. ಪ್ರಕರೀ]

ಪ್ರಕರೀನಾಯಕ (ನಾ). [ಕಾವ್ಯಮೀ] ನಾಟಕಾದಿಗಳ ಮಧ್ಯೆ ಬರುವ ಪ್ರಸಂಗದ ಪ್ರಧಾನವ್ಯಕ್ತಿ : ನಾಯಕ, ಪ್ರತಿನಾಯಕ, ಪತಾಕಾನಾಯಕ, ಪ್ರಕರೀನಾಯಕ, ಹೀಗೆ ಬೇರೆಬೇರೆ ಪಾತ್ರಗಳಲ್ಲಿ ಬೇರೆಬೇರೆ ರಸಗಳಿರುವಂತೆ (ರೃಪ್ಯಾಕೋ. ೧೭೩ ಅಡಿಟಿ). [ಸಂ.]

ಪ್ರಕರ್ಷ (ಗು). ೧. ಶ್ರೇಷ್ಠವಾದ : ಅದು . . . ಪ್ರಕರ್ಷಾನೇಕವರ್ಷಾನುಗತಮಾಗಿಯುಂ ಅಚಪಳಾಚರಣಪರಿಣತಮಲ್ತು (ಸಂದ್ರಪು. ೯-೯೨ ಪ). (ನಾ). ೨. ಶ್ರೇಷ್ಠತೆ: ಅತಿಶಯತೆ. ೩. ಉತ್ಕರ್ಷ ; ಆಧಿಕ್ಯ ; ಹೆಚ್ಚಳ : ಸತ್ಯಮೆಂಬಡು ಅತ್ಯಂತ ಪ್ರಕರ್ಷದಿಂ ಲೋಭನ ಸ್ವಭಾವಮಂ ನಿವೃತ್ತಿಗೆಯ್ದು ನಡೆವುದು (ವರ್ಧಮಾ. ೭-೬೨ಪ); ಕರಮೊಸೆದು ನೋಡಿ ದಶಕಂಧರನಂ ಹರ್ಷಪ್ರಕರ್ಷದಿಂದೆನ್ನಂ ಖೇಚರಪತಿಗೆ ಕೊಟ್ಟನಾಂ ದಶಶಿರನ ಬೆಸಂಬಿಡಿದು ತಾಗಿದೆಂ ಲಕ್ಷ್ಮಣನಂ (ಸಂರಾಮಾ. ೦೯-೬೭); ಎಲೆ ಕೃಷ್ಣ ನಿನ್ನ ರೂಪಮಂ ಸೌಷ್ಠವಪ್ರತಿಷ್ಠೆಯಂ ಪ್ರಭಾವಪ್ರಕರ್ಷಮಂ

. . . ನೋಡಲ್ ನೀಂ ಪರದೈವತಕಳಾಸ್ವರೂಪನಾಗಿ ತೋರ್ಪೆ (ಜಗ. ೪-೬೯ ಪ) ; ಆಖ್ಯಾಯಿಕೆಯಲ್ಲಿ ವಿಕಟಬಂಧದ ಪ್ರಕರ್ಷವೂ ಉಂಟು (ರ್ಯಾಸ್ಕೋ. ೦೪೩). ೪. ಶಕ್ತಿ ; ಬಲ. [ಸಂ.]

ಪ್ರಕಲಿತ, ಪ್ರಕಳಿತ (ಗು). ೧. ಚೆನ್ನಾಗಿ ಸೇರಿಕೊಂಡಿರುವ,—ಕೂಡಿಕೊಂಡಿರುವ : ಪರಮಮಾಹೇಶ್ವರಚರಣವಾರಿರುಹರೇಣುಪ್ರಕಲಿತವಿಭಾಸ್ಕರಲಲಾಟನನಭವಭಕ್ತಿಸ್ಥಳಕಿರೀಟನನು ... ಕೊಂಡಾಡಿ (ಬಸವ. ೪೬-೬೯). ೨. ಜೋಡಿಸಿದ ; ಸೇರಿಸಿದ. **ಪ್ರಕಳಿತ** : (ನಾ). ೩. ವಾಸಕ್ಕೆ ಉಪಯುಕ್ತವಾದ ಸಾಮಗ್ರಿಗಳಿಂದ ಸುಸಜ್ಜಿತವಾದುದು : ಪೂರೊಳಗೆ ಗುರುಗಳಿಗಿರಲು ಪ್ರಕಳಿತವಪ್ಪ ಮನೆ ೧ ಯಿನ್ನಿನಿತುಮಂ ಸರ್ವ್ವಾಭಾಧ ಪರಿಹಾರವಾಗಿ ಬಿಟ್ಟರು (ಸೌಇ. IX-1, ೨೯೬-೨೬ ; 1147). [ಸಂ.]

ಪ್ರಕಳಿತ 'ಪ್ರಕಲಿತ' ನೋ.

ಪ್ರಕಾಂಡ (ಗು). ೧. ದೊಡ್ಡದಾದ ; ಭಾರಿಯಾದ ; ಬೃಹದಾಕಾರವುಳ್ಳ : ಅವುಗಳ ಹಿಂದೆ ಐನೂರು ಪ್ರಕಾಂಡ ದೇಹವುಳ್ಳ ಮಹಾಬಲವುಳ್ಳ ಆನೆಗಳು ಗಂಭೀರವಾದ ನಡಿಗೆಯಿಂದ ಬಂದು ಪ್ರಾಸಾದಕ್ಕೆ ವಳಧಾಗದಲ್ಲಿ ನಿಂತವು (ಕೋಹಿಸೂ. ೧೩) ; ಅವರಿಬ್ಬರಿಗೂ ಹಿಂಬದಿಯ ರಕ್ಷೆಯಾಗಿತ್ತು ಆ ಪ್ರಕಾಂಡ ವೃಕ್ಷದ ದಿಂಡು (ಸುಲಿಮ. ೨೯೯). ೨. ಶ್ರೇಷ್ಠವಾದ ; ಉತ್ತಮವಾದ ; ಅತಿಶಯವಾದ. (ನಾ). ೩. ದೊಡ್ಡದು ; ಬೃಹತ್ತಾದುದು : ಸ್ನಾನ, ವ್ರತ, ಉಪವಾಸಗಳ ಅಕರ್ಮಕಾಂಡವು ಪ್ರಕಾಂಡವಾಗಿ ಬೆಳೆಯದಿದ್ದರೆ ಅವರು ಬದುಕುವ ಬಗೆ ಹೇಗೆ! (ಇತ್ಯಕ. ೯೬೬) ೪. ಉತ್ತಮವಾದುದು ; ಒಳ್ಳೆಯದು. ೫. ಒಳ್ಳೆಯವನು ; ಉತ್ತಮನಾದವನು : "ಪ್ರಕಾಂಡಃ, ಉದ್ಗಃ—ಈ ೨ ಒಳ್ಳಿದಂ" (ಹಲಾಯು. ೬೨-೨೨೩). ೬ (ಉತ್ತರಪದವಾಗಿ ಬಂದಾಗ) ತನ್ನ ಜಾತಿಯಲ್ಲಿ ಅಥವಾ ವರ್ಗದಲ್ಲಿ ಬಹಳ ಮೇಲಾದವನು, —ಶ್ರೇಷ್ಠನಾದವನು : ಪರ್ವತಶರಮುಂ ಖಂಡಿಸಿದನಕಾಂಡತಟಿತ್ಕಾಂಡಾಭಪವಿಪ್ರಕಾಂಡಕಾಂಡದೆ ಕೃಷ್ಣಂ (ಜಗದಿ. ೦೩-೯೬) ; ಸರ್ವಜ್ಞನು ಕನ್ನಡಿಗರ 'ತಿರುವಳ್ಳುವರ್' ಎಂದರು ಪಂಡಿತಪ್ರಕಾಂಡ ಎ. ಆರ್. ಕೃಷ್ಣಶಾಸ್ತ್ರಿಗಳು (ಶರಸ. ೬೬೦). ೭. ಮರದಲ್ಲಿ ಬೇರಿನಿಂದ ಕೊಂಬೆಯವರೆಗೆ ಇರುವ ಭಾಗ ; ಕಾಂಡ : "ಮರದ ಹನೆ (ಪಣೆ?)ಯಿಂ ಕೆಟಗೆ ಪ್ರಕಾಂಡಮೆಂಬುದು" (ಹಲಾಯು. ೩೦-೨೬). ೮. ಕೊಂಬೆ ; ಗೆಲ್ಲು ; ರೆಂಬೆ : "ಆ ಮರನ ಕವಲೊತ್ತು ಪ್ರಕಾಂಡಮೆನಿಸಿಕ್ಕು" (ಸುಂಗಶಾ. ೩೨-೩). ೯. ಒಂದು ಬಗೆಯ ಸರ. ೧೦. ಮೊಳಕೈಯ ಮೇಲುಭಾಗ : "ಪ್ರಕಾಂಡಮೆಂಬುದು ಮೊ(ಬ)ಣಕೈಯಿಂದ ಮೇಗಣ ಭಾಗ" (ಹಲಾಯು. ೬೬-೩೭೯) ; "ಆ ಮೊಬಕೈಯ ಮೇಲು ಪ್ರಕಾಂಡಮೆನಿಸಿಕ್ಕು" (ಸುಂಗಶಾ. ೯೫-೯). ೧೧. ತಾವರೆಯ ದಂಟು ; ಮೃಣಾಳ. ೧೨. ಕೈಬೆರಳು. ೧೩. ಕಾಲದ ಒಂದು ಗಣನೆ. ೧೪. ಕಿರಣ. ೧೫. ಒಂದು ಬಗೆಯ ಮರ : "ಕಿರಣ ಮೃಣಾಳ ಕಾಲ ತರುಭೇದ ಕರಾಂಗುಳಿಗಳ್ ಪ್ರಕಾಂಡಮಕ್ಕು" (ಪಾಜಾರ. ೬೦). [ಸಂ.]

ಪ್ರಕಾಂಡಕ (ಗು). ೧. ಶ್ರೇಷ್ಠವಾದ. (ನಾ). ೨. ರೆಂಬೆ ; ಟೊಂಗೆ. ೩. ಒಂದು ಬಗೆಯ ಸರ ; "ಮಧ್ಯದಲ್ಲಿ ಕ್ರಮವಾಗಿ ದೊಡ್ಡ ಐದು ಮುತ್ತುಗಳಿರುವ ಹಾರ" (ಅಡಿಪು. ಕೋಶ) : ಪ್ರತ್ಯೇಕಶೀರ್ಷಕೋಪಶೀರ್ಷಕಾವಘಾಟಕಪ್ರಕಾಂಡಕತರಲತರಬಂಧೋಪಪದಮಚಕಸಮೇತಂಗಳಾಗಿ (ಅಡಿಪು. ೬-೩೯ ಪ). [ಸಂ.]

ಪ್ರಕಾಮ (ನಾ). ೧. ಹೆಚ್ಚಾದ ಅಪೇಕ್ಷೆ ; ಅತ್ಯಾಸೆ. ೨. ಹೆಚ್ಚಾದ ವಿಷಯಾಭಿಲಾಷೆ ; ಭೋಗಾಸಕ್ತಿ. ೩. ಆನಂದ ; ಹಿಗ್ಗು. [ಸಂ.]

ಪ್ರಕಾಮಂ (ಅ). ೧. ಅಧಿಕವಾಗಿ ; ಹೇರಳವಾಗಿ ; ಯಥೇಚ್ಛವಾಗಿ : "ಕಾಮಂ, ಪ್ರಕಾಮಂ, ಪರ್ಯಾಪ್ತಂ, ನಿತಾಂತಂ, ಭೃಶಂ, ಅತ್ಯರ್ಥಂ, ಅತಿಮರ್ಯಾದಂ, ಅತಿವೇಳಂ—ಈ ೮ ಹಿರಿದಾಗಿರ್ದುದು" (ಹಲಾಯು. ೦೦೯-೩೩) ; ಸಂತಮಿರೆಂದು ಪೂಣ್ದು ಕಾಮಂ ಪ್ರಕಾಮಂ ತನ್ನ ಪುಸಿವಡೆ ವೆರಸು ತಪೋವನದತ್ತಣ್ಗೈತರುತುಮಿರ್ದಂ (ರಾಮಾಶ್ವ. ೩೬-೦೯). ೨. ಇಷ್ಟಬಂದಂತೆ ; ಸ್ವೇಚ್ಛೆಯಾಗಿ. ೩. ಸಂತೋಷವಾಗಿ. ೪. ತೃಪ್ತಿಯಾಗುವಂತೆ. [ಸಂ.]

ಪ್ರಕಾರ (ನಾ). ೧. ರೀತಿ ; ವಿಧಾನ ; ಬಗೆ : ಸುಕುಮಾರನೆಂಬ ಪೆಸರೀ ಸುಕುಮಾರಂಗೀ ಸಮಸ್ತಧಾರಿಣಿಯೊಳ್ ಸಾರ್ಥಕಮಾದುದೆಂದು ನಾನಾಪ್ರಕಾರದಿಂದಂ ಪ್ರಶಂಸೆಗೆಯ್ದಂ ಭೂಪಂ (ಸುಕುಮಾ. ೦೦-೩೬) ; ಲ್ಯೂಸಿ ಭಾರತದಲ್ಲಿ ಕಾಣದ ಒಂದು ನವೀನಪ್ರಕಾರವನ್ನು ವಿವರಿಸುತ್ತಾಳೆ (ಸಮಜೀ. ೦೬ ಬೀಕಿ). ೨. ಸಮಾನತೆ ; ಸಾಮ್ಯ ; ಸಾದೃಶ್ಯ : "ಪ್ರಕಾರಃ—೧. ಬೇರೆಯಾಗಿರುವಿಕೆ. ೨. ಹೋಲ್ವಿಕೆ" (ಸಿದ್ಧಾಂತಿ. ೪೦೨) ; ಅಂತಿಂತುಂತೆಂತೆಂಬಿವು ತಾಂ ಪ್ರಕಾರಕಾಲ್ಯಾರ್ಥಂಗಳ್ (ಕಸುದ. ೩೨೦). ೩. ವಿಶಿಷ್ಟತೆ ; ವೈಶಿಷ್ಟ್ಯ. ೪. ಭೇದ ; ವ್ಯತ್ಯಾಸ. ೫. [ತತ್ತ್ವಶಾ] ಗುಣವಿಶಿಷ್ಟವಾದ ವಸ್ತುವಿನ ಗುಣ,—ಧರ್ಮ : ಈ ಜಗತ್ತು ಪರಮಾತ್ಮನಿಗೆ ಶರೀರವಾಗಿ ಅಥವಾ ಪ್ರಕಾರವಾಗಿರುವುದರಿಂದ ಉಬ್ಬರ—ಇಳಿತಗಳು, ಸುಖ—ದುಃಖಗಳು . . . ನಡೆಯುತ್ತ ಇದ್ದರೂ ಪರಮಾತ್ಮನಿಗೆ ಲೇಪವಿಲ್ಲ (ಭಾರದ. ೨೬೦). [ಸಂ.]

ಪ್ರಕಾರವಾಚಕ (ನಾ). [ವ್ಯಾಕ] ನಾಮಪದದ ಬಗೆಗಳಲ್ಲಿ ಒಂದು : ಇಂಥದು ಇಂಥವನು ಎಂಬ ಶಬ್ದಗಳು ತಾವು ಹೆಸರು ಹೇಳುವ ವಸ್ತುವಿನ ಗುಣ ಯಾವುದೇ ಆಗಿರಲಿ, ಅದರ ಪ್ರಕಾರವನ್ನು (ಎಂದರೆ ರೀತಿಯನ್ನು) ಹೇಳುತ್ತವೆ. ಅಂಥದು ಎಂಬ ಶಬ್ದವೂ ಇದೇ ಬಗೆಯ ಗುಣವಾಚಕ. (ಇವನ್ನು ಪ್ರಕಾರವಾಚಕಗಳೆಂದು ಕರೆಯುವುದುಂಟು) (ಸುಧ್ಯಸು. ೨೯). [ಸಂ.]

ಪ್ರಕಾರಾಂತರ (ನಾ). ೧. ಬೇರೆ ರೀತಿ ; ಬೇರೆ ವಿಧಾನ : "ಆವರೆ ನಿಮಗೆ ಮನಸಿಲ್ಲದಿದ್ದರೆ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ" ಎಂದವಳು ಪ್ರಕಾರಾಂತರವಾಗಿ ಮಾತು ಕೂಡಿಸಿದಳು (ಪುನರು. ೨೨೦). ೨. ಪ್ರತ್ಯೇಕ ; ಅನ್ಯ : ಆಂಜನೇಯನೂ ಅವನ ಕಡೆಯ ಲಕ್ಷಗಟ್ಟಲೆ ವಾನರರೆಲ್ಲರೂ . . . ಮಾನವರೆ ಹೊರತು ಪ್ರಕಾರಾಂತರವಾಗಿರಲಾರರು (ಭಾರದ. ೮೯). [ಸಂ.]

ಪ್ರಕಾರ್ಯ (ನಾ). ಕೆಲಸ ; ಕೃತ್ಯ : ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ವಿಧಿಯಿಂದ . . . ಯಾವುವಾದರೂ ಪ್ರಕಾರ್ಯಗಳನ್ನು ರಾಷ್ಟ್ರಪತಿಯವರಿಗೆ ವರ್ಗಾಯಿಸುವಂತೆ ಭಾವಿಸತಕ್ಕುದಲ್ಲ (ಭಾರಾಪ. ೨೬). [ಸಂ.]

ಪ್ರಕಾಶ (ಗು). ೧. ಹೊಳೆಯುವ ; ಪ್ರಕಾಶಿಸುವ. ೨. ಕಣ್ಣಿಗೆ ಕಾಣುವ ; ತೋರುವ. ೩. ಸ್ಫುಟವಾದ ; ನಿಚ್ಚಳವಾದ. ೪. ಹೆಸರುವಾಸಿಯಾದ ; ಪ್ರಸಿದ್ಧವಾದ. ೫. ಬಹಿರಂಗವಾದ. ೬. ಅರಳಿದ. (ನಾ). ೭. ಬೆಳಕು ; ಹೊಳಪು ; ಕಾಂತಿ : ದೇವಿ ನೀಂ . . . ಪ್ರಕಾಶ ಗರ್ಭಪ್ರಭೆಯಂತೆಯುಂ . . . ಮಹತ್ತ್ವಮಂ ಪಡೆದೆ (ಜಗದಿ. ೨-೯೬ಪ). ೮. ಬಿಸಿಲು ; ಸೂರ್ಯಾತಪ : "ಪ್ರಕಾಶಃ, ದ್ಯೋತಃ, ಆತಪಃ—೩ ಬಿಸಿಲಿನ ಹೆಸರು" (ಸಿದ್ಧಾಂತಿ. ೩೩). ೯. ಕಣ್ಣಿಗೆ ಕಾಣುವುದು ; ತೋರುವುದು : "ವಿಶದಃ, ಪ್ರಕಟಂ, ಸ್ಪಷ್ಟಂ, ಪ್ರಕಾಶಂ, ಸ್ಫುಟಂ—೫ ಅಱಿಯಲ್ಪರ್ಪು(ಹು)ದು" (ಹಲಾಯು. ೦೨೯-೬೬) ; ಲೋಕದಲ್ಲಿ ಸಕಲವಸ್ತುಗಳಲ್ಲೂ ಅಸ್ತಿತ್ವ, ಪ್ರಕಾಶ, ಇಷ್ಟತ್ವ, ನಾಮ, ರೂಪ—ಈ ೫ ಅಂಶಗಳು ವ್ಯವಹರಿಸಲ್ಪಡುವುವು (ಹಿಂದಸಾ. ೨೨೫) ; ಅನಂತರ ನವೀನ ನಾಗರಿಕತೆಯೊಂದರ ಇರವು ಪ್ರಕಾಶಕ್ಕೆ ಬಂದಿತು

(ಶ್ರಾಮ. ೨೨). ೧೦. ಕೀರ್ತಿ: ಪ್ರಸಿದ್ಧಿ. ೧೧. ಸಾಟಿ: ಸಮಾನ: "ಸದೃಕ್ . . . ಪ್ರಕಾಶಂ, ಪ್ರತಿಮಂ, ಪ್ರಕಾರಂ, ತುಲ್ಯಂ, ಸಮಂ, ಸನ್ನಿಭಂ—ಈ ೧೧ ಸರಿ" (ಪರಾಯು. ೦೦೫-೯). ೧೨. ಬಯಲು. ೧೩. ಗ್ರಂಥದ ಪರಿಚ್ಛೇದ. ೧೪. ಅರಿವು; ಜ್ಞಾನ. ೧೫. ಒಂದು ಬಗೆಯ ಲೋಹ; ಕಂಚು. ೧೬. [ನಾಟ್ಯ] ಎಲ್ಲರಿಗೂ ಕೇಳಿಸುವಂತೆ ಪಾತ್ರಗಳು ಹೇಳುವ ಮಾತು: ೯ ಅಭಿನಯಕಾಲದಲ್ಲಿ ಪಾತ್ರಗಳು ಮನಸ್ಸಿನಲ್ಲಿ ಹೇಳುವ ಮಾತು (ಸ್ವಗತ, ಆತ್ಮಗತ), ಎಲ್ಲರಿಗೂ ಕೇಳುವಂಥದು (ಸರ್ವಶ್ರಾವ್ಯ, ಪ್ರಕಾಶ), ಕೆಲವರಿಗೆ ಮಾತ್ರ ಕೇಳಿಸಬೇಕಾದುದು (ನಿಯತಶ್ರಾವ್ಯ)—ಎಂಬ ಮೂರು ಬಗೆಯ ಕಥಾಂಶ(ವಾಕ್ಯ)ಗಳಿವೆ: ದೇವಿ . . . (ಪ್ರಕಾಶವಾಗಿ, ವಾಸುದೇವನಂ ನೋಡಿ) . . . ಆನಿಲ್ಲಿಂದು ಪೋಪೆಂ (ಮಿತ್ರಗೋ. ೩೬); ರಾಜಂ . . . (ಪ್ರಕಾಶವಾಗಿ) ಎಲೌ ಪೂಜ್ಯಳೆ . . . ನಾನು ಆಶ್ರಮವಾಸಿಗಳ ನಿರ್ವಿಘ್ನವಾದ ಕ್ರಿಯೆಯನ್ನು ತಿಳಿಯುವುದಕ್ಕೆ ಈ ಧರ್ಮಾರಣ್ಯಕ್ಕೆ ಬಂದಿರುವೆನು (ಶಾಕುಂತ. ೦೩-೦೯); ಪ್ರಕಾಶ—ಎಲ್ಲರೂ ಕೇಳಬಹುದಾದದ್ದು (ಶ್ರಾವ್ಯ) (ಸಂಪಾಟ. ೦೩). ೧೭. [ಜೈನ] ಭಿನ್ನವಾದ ಬಾಹ್ಯಪದಾರ್ಥಗಳ ಜ್ಞಾನ,-ಅರಿವು: ಪ್ರಕಾಶವೆಂದರೆ ವ್ಯವಹಾರಕ್ಕೆ ಬೇಕಾದ ಯೋಗ್ಯತೆ . . . ಜ್ಞಾನಕ್ಕೆ ವಿಚಿತ್ರಶಕ್ತಿಯೂ ವಿಚಿತ್ರವೇಗವೂ ಇರುವುದರಿಂದ ಅಂತರ ಬಾಹ್ಯವಸ್ತುಗಳ ಸಂಬಂಧವೇ ಪ್ರಕಾಶವೆಂದು ತಿಳಿಯಬೇಕು (ಹಿಂದಸಾ. ೬೩). ೧೮. [ಶೈವ] ಪರಮಶಿವನಲ್ಲಿರುವ ಒಂದು ಅಸಾಧಾರಣಧರ್ಮ: ಪರಮಶಿವನೇ ಎಲ್ಲಾ ಸೃಷ್ಟಿಗೂ ಕಾರಣನಾದವನು . . . ಪ್ರಕಾಶ ವಿಮರ್ಶಮಯನು. ಪ್ರಕಾಶವೆಂದರೆ ತನ್ನ ಶಕ್ತಿಪ್ರಸಾರ (ಭಾರದ. ೨೦೦). [ಸಂ.]

ಪ್ರಕಾಶಕ (ಗು). ೧. ಬೆಳಕು ಬೀರುವ; ಹೊಳೆಯುವ: ದೀಪದ ಪ್ರಕಾಶಕಶಕ್ತಿಯನ್ನು (illuminating Power) ತಿಳಿಯಬೇಕಾದರೆ . . . ಅವುಗಳಿಂದುಂಟಾದ ಪ್ರಕಾಶಸಾಂದ್ರತೆಗಳನ್ನು ಹೋಲಿಸಬೇಕು (ಭೌತವಿ. ೦೩೬). ೨. ಬಹಿರಂಗಗೊಳಿಸುವ; ಹೊರಗೆಡಹುವ. ೩. ವ್ಯಕ್ತಪಡಿಸುವ. ೪. ವಿಶದೀಕರಿಸುವ. ೫. ಹೆಸರುವಾಸಿಯಾದ; ಪ್ರಸಿದ್ಧವಾದ. (ನಾ). ೬. ಸೂರ್ಯ. ೭. ಗ್ರಂಥಗಳನ್ನು ಪ್ರಕಟಿಸುವವನು: ಕ್ರಮೇಣ ಪ್ರಕಾಶನೋದ್ಯಮದ ಮೂರು ಮುಖಗಳಾದ ಮುದ್ರಕ, ಪ್ರಕಾಶಕ, ಪುಸ್ತಕವ್ಯಾಪಾರಿ ಬೇರೆ ಬೇರೆಯಾದರು (ಕವಿಕೋ. XI, ೩೦೬). ೮. ವ್ಯಾಖ್ಯಾನಕಾರ. ೯. ಸಂಶೋಧಕ. ೧೦. ಒಂದು ಬಗೆಯ ಖನಿಜ; ರಂಜಕ: ಸುಣ್ಣ, ಕಬ್ಬಿಣ, ಪ್ರಕಾಶಕ ಮುಂತಾದ ಖನಿಜಗಳು . . . ಎಲುವು, ಕೂದಲು ಮುಂತಾದ ಅವಯವಗಳನ್ನು ಪೋಷಿಸುತ್ತದೆ (ಮುಂಬಯಿ. ೩-೦೬೩). [ಸಂ.]

ಪ್ರಕಾಶಗೊಳಿಸು (ಕ್ರಿ). ೧. ಬೆಳಕುಂಟಾಗುವಂತೆ ಮಾಡು: ಅವಳು ದೀಪದ ಕುಡಿಯನ್ನು ಮುಂದೂಡಿ ಪ್ರಕಾಶಗೊಳಿಸಿದಳು (ರೂಢಿ). ೨. ಹೊರಹೊಮ್ಮಿಸು: ಪ್ರಬೋಧನಂ, ಅನುಬೋಧಃ—೨ ಸುಗಂಧದ್ರವ್ಯಗಳಲ್ಲಿ ಅಡಗಿಕೊಂಡಿರುವ ಪರಿಮಳಾದಿಗಳನ್ನು ಪ್ರಕಾಶಗೊಳಿಸುವ ತೈಲಾದ್ಯುತ್ತೇಜಸಾಮಗ್ರಿಯ ಹೆಸರು (ಸಿದ್ಧಾಂತಿ. ೨೦೬).

[ಪ್ರಕಾಶ + ಕೊಳ್$_1$ + — ಇಸು$_3$]

ಪ್ರಕಾಶಗೊಳ್ಳು (ಕ್ರಿ). ೧. ಬೆಳಕಾಗು: ಹಿಂದೆ ಮೈಸೂರು ಮಹಾರಾಜರು ಸಿಂಹಾಸನವನ್ನು ಏರುತ್ತಿದ್ದಂತೆಯೇ ಇಡೀ ಅರಮನೆಯು ವಿದ್ಯುದ್ದೀಪಗಳಿಂದ ಪ್ರಕಾಶಗೊಳ್ಳುತ್ತಿತ್ತು (ರೂಢಿ). ೨. ಬಹಿರಂಗವಾಗು; ಎಲ್ಲರಿಗೂ ತಿಳಿಯುವಂತಾಗು: ಅವನ ಭ್ರಷ್ಟಾಚಾರಗಳೆಲ್ಲ ಈಗ ಪ್ರಕಾಶಗೊಳ್ಳುತ್ತಿವೆ (ರೂಢಿ). [ಪ್ರಕಾಶ + ಕೊಳ್ಳು$_1$ (<ಕೊಳ್$_1$)]

ಪ್ರಕಾಶನ (ನಾ). ೧. ಹೊಳೆಯುವಿಕೆ; ಪ್ರಕಾಶಿಸುವಿಕೆ: ಆದಿತ್ಯನು ಸಕಲ ಜಗತ್ತನ್ನೂ ತನ್ನ ಪ್ರಕಾಶನಾದಿಕರ್ಮಗಳಿಂದ ಸರ್ವತ್ರ ನೋಡುತ್ತಾನೆ (ಪುಣ್ಯಾರ. ೨೬೬). ೨. ಗ್ರಂಥ, ಪತ್ರಿಕೆ ಮುಂತಾದುವುಗಳ ಪ್ರಕಟನೆ: ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ತನ್ನದೇ ಆದ ಪ್ರಕಾಶನ ಉದ್ಯಮವನ್ನು ನಿರ್ವಹಿಸುತ್ತಿದೆ (ಕವಿಕೋ. XI, ೩೦೯); ಈ ಸುಲಭಸಾಹಿತ್ಯದ ದಿನಗಳಲ್ಲಿ, ಪ್ರಕಾಶನಕಾರ್ಯದಲ್ಲಿ ಧ್ಯೇಯವಾದಿತ್ವವೆಂದರೆ ಅದೊಂದು ಮರೀಚಿಕೆಯಾಗಿದೆ (ಬಳಸೇ. VI, ಪ್ರಕಾಶಕರ ಪುಡಿ). ೩. ಪುಸ್ತಕ ಮೊದಲಾದುವನ್ನು ಪ್ರಕಟಿಸುವ ಸಂಸ್ಥೆ: ಭಾರತೀಯಜ್ಞಾನಪೀಠ ಪ್ರಕಾಶನವು ಅನೇಕ ಪಾಂಡಿತ್ಯಪೂರ್ಣಗ್ರಂಥಗಳನ್ನು ಪ್ರಕಟಿಸಿದೆ (ರೂಢಿ). [ಸಂ.]

ಪ್ರಕಾಶಪಡಿಸು (ಕ್ರಿ). ಹೊರಗೆಡಹು; ಬಹಿರಂಗಗೊಳಿಸು: ಭಾರತದ ಇತಿಹಾಸ ಮಹಾಪುರುಷರ ಆವಿರ್ಭಾವವನ್ನು ಪ್ರಕಾಶಪಡಿಸುತ್ತಿದೆ (ಪುಣ್ಯಾರ. ೦೦೩ ಪೀಠಿಕೆ); ಅಗತ್ಯಕಾಲ ಪ್ರಾಪ್ತವಾದಾಗ ದೇವತೆಗಳು ತಮ್ಮಿಂದ ರಕ್ಷಿತವಾದ ರಹಸ್ಯವನ್ನು ಲೋಕಕ್ಕೆ ಪ್ರಕಾಶಪಡಿಸುತ್ತಾರೆ (ಪಂಚಾ. ೬). [ಪ್ರಕಾಶ + ಪಡಿಸು]

ಪ್ರಕಾಶಿತ (ಗು). ೧. ಪ್ರಕಾಶಗೊಳಿಸಿದ; ಬೆಳಗಿಸಿದ. ೨. ಪ್ರಸಿದ್ಧಪಡಿಸಿದ. ೩. ಪ್ರಕಾಶಗೊಂಡ. ೪. ಬಹಿರಂಗವಾದ; ಎಲ್ಲರಿಗೂ ತಿಳಿದ. ೫. ತೋರಿಸಿದ; ಪ್ರದರ್ಶಿಸಿದ. [ಸಂ.]

ಪ್ರಕಾಶಿಸು (ಕ್ರಿ). ೧. ಹೊಳೆ; ಬೆಳಗು: ಕನೋತಿ, ಕನುತೇ= ಪ್ರಕಾಶಿಸಿದಪು (ಕಾಶಕ್ಕ. ೨೯೦). ೨. ವ್ಯಕ್ತವಾಗು; ಪ್ರಕಟವಾಗು: ಸ್ಫುರತ್=ಪ್ರಕಾಶಿಸುವ, ಅನುಕೃತಿಗಂ—ಅನುಕರಣಶಬ್ದಕ್ಕೆಯುಂ (ಕಪುದ. ೬೦ ಪೀಠಿ); ನಿನ್ನಲ್ಲಿ ಪ್ರಶ್ನಾರೂಪವಾಗಿ, ನನ್ನಲ್ಲಿ ಉತ್ತರರೂಪವಾಗಿ ಪ್ರಕಾಶಿಸುವುವೆಲ್ಲವೂ ಒಂದೇ ಶಕ್ತಿಯ ಕ್ರಿಯೆ (ಪಂಚಾ. ೯೯). [ಪ್ರಕಾಶನ + — ಇಸು$_3$]

ಪ್ರಕೀರ್ಣ (ಗು). ೧. ತುಂಬಿದ; ಕಿಕ್ಕಿರಿದ: ಅದಱ ಪೊಱವೊಟಲ ವಿತಾಳ ಕನಕಕೃತಕಗಿರಿಗಳಿಂ ಫಳಪ್ರಕೀರ್ಣತರುಗಳಿಂ (ಪಂಪಭಾ.೦-೩೬ ರಗಳ); ಮರುದುದ್ಧೂತಪಯಃಪ್ರಕೀರ್ಣಕಣಲಾಜಂ ಮೇಲೆ ಸಾಲಿಟ್ಟು (ರಾಜಕೇ. ೦೦-೬೨). ೨. ಹರಡಿಕೊಂಡಿರುವ; ಕ್ರಮವಾಗಿರದ; ಅಸ್ತವ್ಯಸ್ತಗೊಂಡ. ೩. ಮಿಶ್ರಗೊಳಿಸಿದ; ಬೆರಸಿದ. ೪. ನಾನಾವಿಷಯಗಳನ್ನು ಸೇರಿಸಿ ರಚಿಸಿದ. ೫. ಎಸೆದ. ೬. ಸಂಬಂಧವಿಲ್ಲದ; ಅಸಂಗತವಾದ. ೭. ಸಡಿಲವಾದ; ವಿರಳವಾದ. ೮. ಅಲ್ಲಾಡುತ್ತಿರುವ; ಅಲುಗಾಡುತ್ತಿರುವ. (ನಾ). ೯. ತುಂಬಿರುವಿಕೆ; ಭರ್ತಿಯಾಗಿರುವಿಕೆ: ಎಸೆವ ಕೇತನಾನೀಕಪ್ರಕೀರ್ಣದೊಳಾತು ತೋಱುವ (ಬಸಪು. ೬-೨೦). ೧೦. (ವಸ್ತುವು) ತುಂಬಿಕೊಂಡಿರುವುದು; ವ್ಯಾಪ್ತವಾಗಿರುವುದು: ವಿಚಿತ್ರಜಿನೇಂದ್ರಪ್ರತಿಕೃತಿಪ್ರಕೀರ್ಣಮುಂ . . . ಆಗಿ . . . ಪೆಂಪಿಂದಗುಂದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಮಂದರಂ (ಆದಿಪು. ೦-೪೯ ಪ). ೧೧. ಹೊಂದಾಣಿಕೆಯಿಲ್ಲದ ವಿವಿಧ ವಿಷಯಗಳಿಂದ ಕೂಡಿದ ಗ್ರಂಥಭಾಗ: ವ್ಯವಹಾರಕಾಂಡದಲ್ಲಿ . . . ಸ್ತ್ರೀಸಂಗ್ರಹಣ, ಪ್ರಕೀರ್ಣ ಎಂಬ ೨೫ ಪ್ರಕರಣಗಳಿವೆ (ಭಾರದ. ೬೨); ೧೯ನೆಯ ಭಾಗ, ಪ್ರಕೀರ್ಣ (ಭಾಧಾಪ. ೨೦೪). [ಸಂ.]

ಪ್ರಕೀರ್ಣಕ (ಗು). ೧. ಹರಡಿಕೊಂಡಿರುವ; ಚೆಲ್ಲಾಪಿಲ್ಲಿಯಾಗಿರುವ. (ನಾ). ೨. ಮುಖ್ಯವಿಷಯಗಳನ್ನು ಹೇಳಿದ ಮೇಲೆ ಉಳಿದಿರುವ ಭಿನ್ನವಾದ ಸಣ್ಣಸಣ್ಣ ವಿಷಯಗಳು ಮತ್ತು ಅವುಗಳನ್ನು ವಿವರಿಸುವ ಗ್ರಂಥಭಾಗ; ಸಂಕೀರ್ಣಪ್ರಕರಣ: ಮುನ್ನ ಪೇಟದೆಯುಂ ಪೇಟ್ದರ್ಥಂಗಳಂ ವಿಶ್ಲೇಷಿಸಿ ಪೇಟ್ವುದು ಪ್ರಕೀರ್ಣಕಮೆಬುದು ತಾತ್ಪರ್ಯಂ (ಪೀಠಿಪಾ. ೩೦-೦). ೩. (ದೇವರು, ರಾಜ ಮೊದಲಾದವರಿಗೆ ಬೀಸುವ) ಚಾಮರ: "ಚಾಮರಂ, ಪ್ರಕೀರ್ಣಕಂ—ಈ ೨ ಸೀಗುರಿ" (ಹಣಯು.

೭೦-೨೬೯) ; "ಸುತ್ತ ಕೆದಱುವ ಚಾಮರಂ ಪ್ರಕೀರ್ಣಕಮಕ್ಕುಂ" (ಪುಂಗರಾ. ೭೬-೪). ೪. [ಜೈನ] ಪ್ರಮಾಣಗಳಲ್ಲಿ ಒಂದು : ಭಾಗಂಬೋಗದೆ ಉಬಿದಕ್ಕರಂಗಳೆಲ್ಲಂ ಪ್ರಕೀರ್ಣಕ ಪ್ರಮಾಣಮಕ್ಕುಂ (ಕಸ್ತ್ಯಪ್ರ. ೬೬). ೫. ಪ್ರಮಾಣಗ್ರಂಥಭಾಗಗಳಲ್ಲಿ ಒಂದು : ಕೇವಲ ಒಂದೇ ಸಭೆಯಲ್ಲಿ ಬರೆಯಲ್ಪಟ್ಟ—ಇನ್ನೊಂದು ಸಭೆಯಿಂದ ಆ ವಿಷಯಕ್ಕೆ ಉಲ್ಲೇಖ ಸಿಕ್ಕದೆ ಹೋಗುವ—ಸಿದ್ಧಾಂತಗಳನ್ನು 'ಪ್ರಕೀರ್ಣಕ'ಗಳಲ್ಲಿ ಉಲ್ಲೇಖಿಸಿದರು (ಕೈಪಸ. ೧೬೭). ೬. ಒಂದು ನರಕದ ಹೆಸರು : ಆ ಬಿಲಂಗಳುಮಿಂದ್ರಕ ಶ್ರೇಢೀಬದ್ಧಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ (ಅಂಪು. ೩-೬೩ ಪ) ; ಆ ನರಕಬಿಲಂಗಳೆಲ್ಲಮೆಣ್ಬತ್ತುನಾಲ್ಕುಲಕ್ಷಪರಿಪ್ರಮಾಣಮಾಗಿಯುಮಿಂದ್ರಕ ಶ್ರೇಣೀಬದ್ಧಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ (ಸುಳುಪು. ೦೦-೪೦ ಪ). ೭. ಮೂರುಬಗೆಯ ವಿಮಾನಗಳಲ್ಲಿ ಒಂದು ; ಶ್ರೇಣೀಬದ್ಧ ವಿಮಾನಗಳ ಮಧ್ಯದಲ್ಲಿ, ಹೂವನ್ನು ಎರಚಿದಂತೆ ಚೆಲ್ಲಾಪಿಲ್ಲಿಯಾಗಿರುವ ವಿಮಾನ : ಅಲ್ಲಿ ಸ್ವರ್ಗಮೆಂಬಿನಂ ಸೌಧರ್ಮೇಶಾನಾದಿಗಳ ವರವಿಮಾನಂಗಳಿಂದ್ರಕಶ್ರೇಣೀಬದ್ಧಪ್ರಕೀರ್ಣಕಂಗಳೆಂದು ಮೂದೆಱಂ (ಪಂಪ್ರಪು. ೩-೩೨ ಪ). ೮. ದೇವತೆಗಳ ಒಂದು ವರ್ಗ ; ಗ್ರಾಮಾಂತರ ಹಾಗೂ ಪಟ್ಟಣಗಳಲ್ಲಿ ಪ್ರಜೆಗಳಂತೆ ವಾಸಿಸುವ ವರ್ಗ : ಸೈನಿಕ ದೇವತೆಗಳು ಅನೀಕರೆನಿಸುವರು. ಪ್ರಜೆಗಳಂತಿರುವವರು ಪ್ರಕೀರ್ಣಕರು (ಕೈಪಧ. ೪೪). ೯. ಜ್ಯೋತಿರ್ಲೋಕದ ಜ್ಯೋತಿಗಳಲ್ಲಿ ಒಂದು ಭೇದ: ಮಧ್ಯಮಲೋಕಪ್ರತಿಬದ್ಧಮಪ್ಪ ಚಂದ್ರಾದಿತ್ಯಗ್ರಹನಕ್ಷತ್ರ ತಾರಕಾ ಪ್ರಕೀರ್ಣಕವಿಕಲ್ಪಜ್ಯೋತಿರ್ಗಣಾಲಂಕೃತಮಾಗಿರ್ದ ದಶೋತ್ತರಶತ ಯೋಜನವಿಸ್ತಾರಬಹಳತೆಯೊಳಂ (ಅಪಪು. ೦೦-೨೨ ಪ). [ಸಂ.]

ಪ್ರಕೀರ್ತನ (ನಾ). ೧. ಸಾರುವುದು ; ತಿಳಿಯಪಡಿಸುವುದು. ೨. ಹೊಗಳಿಕೆ ; ಕೊಂಡಾಟ. [ಸಂ.]

ಪ್ರಕೀರ್ತಿತ (ಗು). ೧. ಸಾರಿದ ; ಘೋಷಿಸಿದ. ೨. ಪ್ರಸಿದ್ಧಪಡಿಸಿದ. (ನಾ). ೩. ಹೊಗಳಿಕೆಗೆ ಪಾತ್ರವಾದುದು ; ಖ್ಯಾತಿಹೊಂದಿದುದು: ನಾನಾಹೆಸರುಗಳಿಂದ ಪ್ರಕೀರ್ತಿತವಾಗಿರುವ ಎರಡನೆಯ ಯುಗವು ಅತ್ಯಂತ ಚೇತೋಹಾರಿಯಾಗಿರುತ್ತದೆ (ಕೂಪ್ಯಳು. ೦ ಹಿಪ್ಪಲೆ). [ಸಂ.]

ಪ್ರಕೀರ್ಯ (ಗು). ೧. ಎರಚಿದ ; ಚೆಲ್ಲಾಪಿಲ್ಲಿಯಾಗಿರುವ. (ನಾ). ೨. ಒಂದು ಬಗೆಯ ಗಿಡ; ತವಸಿ : "ಪ್ರಕೀರ್ಯಃ, ಪೂತಿಕರಜಃ, ಪೂತಿಕಃ, ಕಲಿಕಾರಕಃ—೪ ತಪಸೀಗಿಡದ ಹೆಸರುಗಳು" (ಸಿದ್ಧಾಂತಿ. ೦೨೩). [ಸಂ.]

ಪ್ರಕುಪಿತ (ಗು). ೧. ಹೆಚ್ಚಾಗಿ ಕೋಪಗೊಂಡ ; ಕೆರಳಿದ : ಪ್ರಕುಪಿತ ಮೃಗಪತಿ ಶಿಶುಸನ್ನಿಕಾಶರತಿವಿಕಟಭೀಷಣಭ್ರೂಭಂಗರ್ ನಕುಲ ಸಹದೇವರ್ (ಪಂಪಭಾ. ೭-೬); ಅಕಟಕಟ ನೊಂದಳೆತ್ತಿರೆ ಸುಕುಮಾರಿಯನೆನುತುಮಿನಿತು ಕೊಂಕಿಂ ನುಡಿದಂ ಪ್ರಕುಪಿತ [ಪಾಕಾಂ. ಪ್ರಕಟಿತ, ಪ್ರಕುಟಿಲ] ಚಿತ್ತಂ ಭೂನಾಯಕಂ (ಯಶೋಪ. ೨-೬೮). (ನಾ). ೨. ಹೆಚ್ಚಾದ ಕೋಪ : ಪ್ರಕುಪಿತದಿಂ ತೆಗೆದಿಸೆ ಮಸ್ತಕಮಂ ಕರಿ ನೊಂದು ತಿರುಗೆ (ಗಿರಿಕ. ೦-೦೦೦). [ಸಂ.]

ಪ್ರಕೃತ$_1$ (ಗು). ೧. ಚೆನ್ನಾಗಿ ಮಾಡಿದ,—ನೆರವೇರಿಸಿದ. ೨. ಪ್ರಾರಂಭಿಸಿದ; ಉಪಕ್ರಮಿಸಿದ; ತೊಡಗಿದ. ೩. ಪ್ರಕರಣಕ್ಕೆ ಸಂಬಂಧಿಸಿದ; ಸಂದರ್ಭಾನುಸಾರವಾದ; ಪ್ರಸ್ತುತ : ಪ್ರಕೃತ ಸ್ವದ್ರವ್ಯಕ್ಷೇತ್ರಕಾಲ ಭಾವಾಶ್ರಯಂಗಳಿಂ ಪುದ್ಗಲವೃತ್ತಕಮಂ ಮರ್ಯಾದಾಪೂರ್ವಕಮಱಿಪುದದವಧಿಯೆಂಬ ಪೆಸರ್ವಡೆದಿರ್ಕುಂ (ಪಂಪ್ರಪು. ೦೪-೩೩). ೪. ಮುಖ್ಯವಾದ ; ಪ್ರಧಾನವಾದ. ೫. ಬದಲಾವಣೆ ಹೊಂದದಿರುವ ; ನೈಜವಾದ. (ನಾ). ೬. ಈಗಿನ ಪ್ರಕರಣ ; ಸದ್ಯದ ವಿಷಯ : ಈಗ ಪ್ರಕೃತಕ್ಕೆ ಸಂಬಂಧಿಸಿದಂತೆ ಮಾತನಾಡೋಣ (ಕೂಪ). ೭. ನಿಜ ; ಸತ್ಯ. ೮. [ಕಾವ್ಯಮೀ] ಉಪಮಾಲಂಕಾರದಲ್ಲಿ ಹೋಲಿಸಲ್ಪಡುವ ವಸ್ತು; ಮುಖ, ರಾಜ ಮೊದಲಾದುವು; ವರ್ಣ್ಯ; ಉಪಮೇಯ. [ಸಂ.]

ಪ್ರಕೃತ$_2$ (ಅ). ಸದ್ಯಕ್ಕೆ; ಈಗ್ಗೆ ಸಂಬಂಧಿಸಿದಂತೆ : ವಿವಿಧದೇಶಗಳ ನಾಣ್ಯಗಳ ಪರಸ್ಪರಬಾಂಧವ್ಯ 'ಪ್ರಕೃತ' ಹೇಗಿದೆಯೆಂದು ಈ ಕೆಳಗೆ ಕೊಟ್ಟಿದೆ (ಪಾಂಪ್ರ. III. ೦೩೩೩). [ಸಂ.]

ಪ್ರಕೃತತುಲ್ಯಯೋಗಿತೆ (ನಾ). [ಕಾವ್ಯಮೀ] ವರ್ಣಿತವಾದ ಹಲವಾರು ವಸ್ತುಗಳಿಗೆ ಗುಣರೂಪವಾದ ಅಥವಾ ಕ್ರಿಯಾರೂಪವಾದ ಒಂದೇ ಧರ್ಮವನ್ನು ಅನ್ವಯಿಸಿ ವರ್ಣಿಸುವುದು : ವರ್ಣ್ಯಂಗಳಾದನೇಕ ವಸ್ತುಗಳೊಳ್ ಗುಣಕ್ರಿಯಾರೂಪೈಕಧರ್ಮಾನ್ವಯಮಂ ಪೇಳೆ ಪ್ರಕೃತತುಲ್ಯಯೋಗಿತೆಯೆಂದುಂ ಅವರ್ಣ್ಯಂಗಳಾದನೇಕವಸ್ತುಗಳೊಳ್ ಅದಂ ಪೇಳೆ ಅಪ್ರಕೃತತುಲ್ಯಯೋಗಿತೆಯೆಂದುಂ ತುಲ್ಯಯೋಗಿತಾಲಂಕಾರ ಮಿರ್ತೆರಂ (ಪರಪ. ೭೬ ಪೃತ್ತಿ). [ಸಂ. ಪ್ರಕೃತತುಲ್ಯಯೋಗಿತಾ]

ಪ್ರಕೃತಿ (ನಾ). ೧. ಯಾವುದಾದರೂ ಒಂದು ವಸ್ತುವಿನ ಅಥವಾ ಪ್ರಾಣಿಯ ನಿಜಸ್ವರೂಪ,—ಮೂಲಸ್ವರೂಪ : ಅರಸನಾತನ ಮನುಷ್ಯಾತೀತಮಪ್ಪ ಪ್ರಕೃತಿಯಂ ಕಂಡು (ಶಾಂತಿಪು. ೯-೦೨೬ ಪ); ಧರಣಿಯಿಂದುದ್ಭವಿಸಿತೋಷಧಿಯೋಷಧಿಗಳಿಂದವತರಣಮನ್ನಾದಿಪುರುಷ ಪ್ರಕೃತಿ ವಿಕೃತಿಗಳ (ಕುಪ್ಯಾಕು. ೬೦೩. ೪-೬) ; ಪ್ರಕೃತಿ ವಿಕೃತಿಗಳಿಲ್ಲದಂದು . . . ಅಖಂಡೇಶ್ವರಾ ನಿಮ್ಮ ನೀವಱಿಯದೆ ಅನಂತಕಾಲವಿರ್ದಿರಂದು (ಅಖಂಡೇ. ೨-೪). ೨. ಪ್ರತಿಯೊಬ್ಬ ವ್ಯಕ್ತಿ ಅಥವಾ ಪ್ರತಿಯೊಂದು ವಸ್ತುವಿನ ಸಹಜಗುಣ,—ಸ್ವಭಾವ,—ಮನೋಧರ್ಮ : ಇರದೊಯ್ವುದಾ ತನ್ನಿಚ್ಛೆಗೆ ವರಯವ್ವನದಂದು ಪುರುಷನಂ ಪ್ರಕೃತಿ (ಕಾದಂಪೂ. ೩೩೩); ಪ್ರಕೃತಿ ಪ್ರೋದ್ಭವಮಲ್ತು ಜೈನರುಸಿರ್ವಂತಾರಯ್ಯೆ ಲೋಕಂ ಸಕರ್ತೃಕಮೆಂಬಾ ಮತಮಂ ನಿರಾಕರಿಪವೋಲ್ (ಪಾರ್ಶ್ವಪು. ೪-೬೬) ; ಈ ದೃಷ್ಟಿಯಿಂದ ನನ್ನ ಮತ್ತು ಅವರ ಪ್ರಕೃತಿಗಳು ಭಿನ್ನಭಿನ್ನವಾಗಿರಬಹುದು (ಜೀವಾಕ್ಯ. ೪೬). ೩. ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರುಬಗೆಯ ಮೂಲಗುಣಗಳು. ೪. ಪಂಚಭೂತಗಳು. ೫. ಮಾನವನಿಂದ ನಿರ್ಮಿತವಾಗದ ಸೃಷ್ಟಿ ; ನೈಸರ್ಗಿಕಸೃಷ್ಟಿ : ಪ್ರಕೃತಿಯ ಪ್ರಭಾವವನ್ನೂ ಅದು ಎಷ್ಟು ಮುಖ್ಯಮೆಬುದನ್ನೂ ಮೇಲೆ ಕೊಟ್ಟ ಉದಾಹರಣೆಗಳು ನಿಮಗೆ ತಿಳಿಸುತ್ತವೆ (ಶೂಪಿಪ. ೦೪೦) ; ವಿಶ್ವದ ಚಟುವಟಿಕೆಗಳೆಲ್ಲ ಪ್ರಕೃತಿಯ ಆಜ್ಞೆಯ ಮೇರೆಗೆ ಸಾಗುತ್ತವೆ (ಧರ್ಮಸಾ. ೦೩೨). ೬. ಜನನೇಂದ್ರಿಯ : "ಪ್ರಕೃತಿಯೊಳು ಶೈವಮೂರ್ತಿಯೊಳು ಲಿಂಗಮಕ್ಕುಂ" (ಪುಂಗರಾ. ೦೩೦-೩೦). ೭. ಮಂತ್ರಿ ; ಸಚಿವ : ಅರಸನನುಮತದಿನೊಂದು ಯಕ್ಷಪ್ರತಿಮೆಯಂ ಮಾಡಿ ಪೌದನಪುರಾಧಿಪತ್ಯಮಂ ಪ್ರಕೃತಿಗಳೆಲ್ಲಮಿರ್ದು ಕೊಟ್ಟೊಡೆ (ಪಾಪುಂಪು. ೦೬೬). ೮. ಪುರಜನ : ಪ್ರಜಾವರ್ಗ : ಆಗಳಾ ಕಂಸಕೃತವಿಕೃತಿಯಿಂ ಪ್ರಕೃತಿಕ್ಷೋಭಮಾಗೆ (ಜಗಪ. ೬-೭೦ ಪ); ನೀವ್ ಕೇಳಿ ಪೌರಪ್ರಕೃತಿಗಳು ಕರಿತುರಗವಾಹಕರು (ಪಿಭಾಗ. ೦೦-೩೦-೨೭); ಪ್ರಕೃತಿಹಿತಾರ್ಥಂ ಕ್ಷಿತಿಪಾಲಕರುದ್ಯೋಗಿಸುಗೆ (ಶಾಕುಂತ. ೦೦೬-೦೯೮). ೯. ಹೆಂಗಸು ; ಸ್ತ್ರೀ. ೧೦. ಕಾರ್ಯ. ೧೧. ಕಾರಣ : "ಪತ್ತನಜನಂಗಳೊಳು ಕಾರ್ಯದೊಳು ಕಾರಣದೊಳುತ್ತಮದ ಸಚಿವನೊಳು ಸತ್ವಾದಿ ಗುಣಮಿಪ್ಪ ಚಿತ್ತದೊಳು ನಿಜದೊಳು ಸ್ವರೂಪದೊಳು ಪ್ರಕೃತಿಯೆಂದೆಂಬಾಭಿಧಾನಮಕ್ಕುಂ" (ಪುಂಗರಾ. ೦೪೭-೩೬). ೧೨. ಶಿಲ್ಪಿ ಮೊದಲಾದ ಕುಶಲಕರ್ಮಿಗಳು : "ಶಿಲ್ಪಿಃ, ಕಾರುಃ, ಪ್ರಕೃತಿಃ, —ಈ ೩ ಪಂಚಕಾರುಕರ್" (ಹಲಾಯು. ೯೭-೪೩೯). ೧೩. ನಿಜ ; ಸತ್ಯ. ೧೪. ನಿಯಮ ; ನಿಬಂಧನೆ ; ಕಟ್ಟಳೆ. ೧೫. ಕೋಪ, ದುಃಖ ಮೊದಲಾದ ಮನೋಭಾವನೆಗಳನ್ನು ಹತೋಟಿಯಲ್ಲಿಟ್ಟು

ಕೊಳ್ಳುವುದು. ೧೬. ಕಂದಾಯ ; ತೆರಿಗೆ : (ಕ). ೧೭. ಮುಖ್ಯವಾದುದು ; ಶ್ರೇಷ್ಠವಾದುದು : "ಪ್ರಕೃತಿಯಲ್ಲಿಯುಂ ಪ್ರಧಾನಮೆಂಬುದು" (ಪಣಾಯು. ೦೩೩-೦೬). ೧೮. ಆದಿ ಮತ್ತು ಅಂತ್ಯ. ೧೯. ಬಿಡುವುದು ; ತ್ಯಾಗ. ೨೦. ನಡತೆ ; ನಡವಳಿಕೆ. ೨೧. ಸಮೂಹ : "ನಿಜದೊಳ್ ಕಾರಣದೊಳ್ ಗುಣತ್ರಯದೊಳುಂ ಸಪ್ತಾಂಗದೊಳ್ ಚಿತ್ತದೊಳ್ ವ್ರಜದೊಳ್ ಕಾರ್ಯದೊಳಾದಿಯಂತ್ಯದೊಳೆ ಛಂದೋಭೇದದೊಳ್ ಸ್ತ್ರೀಯರೊಳ್ ತ್ಯಜದೊಳ್ ತನ್ನ ಸ್ವರೂಪದೊಳ್ ಜನರೊಳುಂ ಚಾರಿತ್ರದೊಳ್ ಮುಖ್ಯದೊಳ್ ರಜದೊಳ್ತಾಂ ಪ್ರಕೃತ್ಯಾಖ್ಯ" (ಶಾಸಾರ. ೧೦೨). ೨೨. [ವೈದ್ಯಶಾ] ಶರೀರಸ್ಥಿತಿ ; ದೇಹಧರ್ಮ : ಪ್ರಕೃತಿಯೆಂತೆಂದೊಡೆ — ವಾತಪ್ರಕೃತಿ, ಪಿತ್ತಪ್ರಕೃತಿ, ಶ್ಲೇಷ್ಮಪ್ರಕೃತಿ, ಮಿಶ್ರಪ್ರಕೃತಿ ಎಂದು ಪ್ರಕೃತಿಯು ನಾಲ್ಕು ತೆರನಾಗಿರುವುದು (ಸಳಸ್ಕೃ. ೦೬) ; ಜೋಳದ ನುಚ್ಚು ತಿಂದರೆ ಪ್ರಕೃತಿ ಮತ್ತಷ್ಟು ಕೆಡುತ್ತದೆ (ಪ್ರಜಸ. ೬) ; ಸಾಹೇಬರ ಪ್ರಕೃತಿ ಮಜಭೂತ ಇದ್ದರೂ ಸೊರಗಿರುವರೆಂಬ ಸುಳ್ಳು ಸಾಂತ್ವನವನ್ನು ಕೂತರೆ ನಿಂತರೆ ಗಾಯತ್ರಿ ಮಾಡಿಕೊಂಡೆವು (ದೀಪಹ. II. ೨೩೯). ೨೩. [ವ್ಯಾಕ] ನಾಮಪದ ಕ್ರಿಯಾಪದಗಳಲ್ಲಿ ಪ್ರತ್ಯಯಾಂಶವನ್ನು ಬೇರ್ಪಡಿಸಿದರೆ ಉಳಿಯುವ ಮೂಲರೂಪ ; ಪ್ರಾತಿಪದಿಕ: ಪ್ರಕೃತಿಗಳಂ ಧಾತ್ವರ್ಥದ ವಿಕಲ್ಪದಿಂದ ಱಿದು ಸಮಱಿಕೊಳ್ವುದು (ಶಾಸ್ಕಾಪ. ೯೨೦) ; ಪದದರ್ಥಮಂ ವಿಭಾಗಿಸುವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂಬುದು ತತ್ಪ್ರತ್ಯಯದಿಂ ಪೂರ್ವದೊಳಿರ್ಕುಂ ಪ್ರಕೃತಿ (ಶಮದ. ೩೫) ; ಒಂದು ಶಬ್ದದ ಮೂಲರೂಪಕ್ಕೆ 'ಪ್ರಕೃತಿ' ಎಂದು ಹೆಸರು (ಕೃಬಿಸಿ. ೦೯). ೨೪. [ಛಂದ] ಇಪ್ಪತ್ತಾರು ಬಗೆಯ ವರ್ಣಛಂದಸ್ಸುಗಳಲ್ಲಿ ಇಪ್ಪತ್ತೊಂದನೆಯದು ; ಪ್ರತಿಸಾಲಿನಲ್ಲಿಯೂ ಇಪ್ಪತ್ತೊಂದು ಅಕ್ಷರಗಳಿರುವ ಒಂದು ಛಂದಸ್ಸು : "ಅತಿಧೃತಿ ಕೃತಿ ಪ್ರಕೃತಿಯಾಕೃತಿ ವಿಕೃತಿ . . . ಉತ್ಕೃತಿಗಳೆಂದೆನಿಪುವಿಪ್ಪತ್ತಾಱು ಛಂದಂಗಳಕ್ಕುಂ" (ಮಂಗರಾ. ೦೦೬-೦೯) ; ಅಲ್ಲಿ ಉಕ್ತ ಅತ್ಯುಕ್ತ . . . ಪ್ರಕೃತಿ ಆಕೃತಿ ವಿಕೃತಿ ಸಂಕೃತಿ ಅತಿಕೃತಿ ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ರಂದೋಂಬು. ೦-೯೬ ಪ). ೨೫. [ತತ್ತ್ವಶಾ] ಸಾಂಖ್ಯಮತದಂತೆ ಪ್ರಪಂಚಕ್ಕೆ ಮೂಲಕಾರಣವಾದ, ಸತ್ತ್ವ, ರಜಸ್ಸು ಮತ್ತು ತಮೋಗುಣಗಳ ಸಾಮ್ಯಾವಸ್ಥೆ ; ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ ಮೊದಲನೆಯದು ; ಪುರುಷನಿಂದ ಭಿನ್ನವಾದುದು : ಆ ಪ್ರಕೃತಿ ಪುರುಷರಿರ್ವರ್ಗಮೊಂದೆಡೆಯೊಳುಂ ಸ್ವಾತಂತ್ರ್ಯಮುಂ ಕಾರಣತ್ವಮುಮಿಲ್ಲೆಂದು ಪೇಳಲ್ಪಡುಗುಂ (ಯಾದಸಂ. ೬-೨೦ ಪ) ; ಪ್ರಕೃತಿಯು ಇನ್ನೊಂದನ್ನು ಹುಟ್ಟಿಸುತ್ತದೆಯೇ ಹೊರತು ತಾನು ಯಾವುದರಿಂದಲೂ ಹುಟ್ಟಿದ್ದಲ್ಲ . . . ಈ ಪ್ರಕೃತಿಯ ಮೇಲೆ ಪ್ರಭುವಾದ ಈಶ್ವರನೊಬ್ಬನಿಲ್ಲ (ಭಾರದ.೦೨೬). ೨೬. [ವೇದಾಂತ] ಭಗವಂತನ ಮಾಯಾಶಕ್ತಿ ; ಮೂಲಾಜ್ಞಾನ, ಮಾಯೆ, ಅವಿದ್ಯೆ ಮೊದಲಾದ ಶಬ್ದಗಳಿಂದ ಹೇಳುವ ಪ್ರಪಂಚದ ಪೂರ್ವಸ್ಥಿತಿ : ಇಹದಲ್ಲಿ ಸುಖಿ ಪರದಲ್ಲಿ ಪರಿಣಾಮಿ ಎಂಬರು ಅದು ಹುಸಿ ನಿಲ್ಲು ಇಹದಲ್ಲಿ ದುಃಖಿ ಪರದಲ್ಲಿ ಪ್ರಕೃತಿ ಎಂದೆ (ಪೋಳಿಮಾ. ೦೯-೭೯) ; ಮೂಲಪ್ರಕೃತಿ ಒಂದರಲಿ ವಿಸ್ತರಿಸೆ ಬ್ರಹ್ಮಾಂಡತಂಡಗಳೆತ್ತಲೆತ್ತಲು ತೋರುತಿಹವು (ಜ್ಞಾನಸಿಂ. ೨೬-೩) ; ಈ ಶಕ್ತಿ ಶಿವನಿಗಧೀನವಾಗಿ ಅವನಲ್ಲಿ ಗುಣವೆನಿಸಿರುವುದು. ಅವನ ಇಚ್ಛೆಯಂತೆ ಪ್ರಪಂಚಾಕಾರವಾಗಿ ಪರಿಣಮಿಸಿದಾಗ ಅದೇ ಶಕ್ತಿ ಸ್ವತಂತ್ರದ್ರವ್ಯವಾಗಿ ಪ್ರಕೃತಿಯೆನಿಸುವುದು (ಶಕ್ತಿಪಿ. ೩೭). ೨೭. [ದ್ವೈತ] ಜೀವನನ್ನೂ ಪರಮಾತ್ಮನನ್ನೂ ಮುಚ್ಚಿಕೊಂಡಿರುವ ಆವರಣ : ಮೇಲೆ ಹೇಳಿದ ಪೋಡಶಕಳೆಗಳುಳ್ಳ ಲಿಂಗಶರೀರಕ್ಕೂ ಅನಿರುದ್ಧಶರೀರಕ್ಕೂ ಮಧ್ಯದಲ್ಲಿ ಜೀವಾಚ್ಛಾದಿಕವೆಂತಲೂ ಪರಮಾಚ್ಛಾದಿಕವೆಂತಲೂ . . . ದುಷ್ಟವಾದ ಎರಡು ಪ್ರಕೃತಿಗಳು ಸೇರಿಕೊಂಡಿರುವುವು (ಹಸಾರ. ೯-೦೯ ಶಾಸ್ತ್ರರ್ಯ). ೨೮. [ಜೈನ] ಆತ್ಮನಿಗೆ ಅಜ್ಞಾನ ಮುಂತಾದ ಫಲವನ್ನು ಉಂಟು ಮಾಡಿಕೊಡುವುದು ; ಜೀವನಿಗೆ ವರ್ತಮಾನ ಮತ್ತು ಭವಿಷ್ಯತ್ಕಾಲಗಳಲ್ಲಿ ಫಲವನ್ನು ಕೊಡುವ ಕರ್ಮಸ್ಕಂಧ : ತದುಪಾಂತ ಸಮಯದೊಳನ್ಯತರವೇದನೀಯ . . . ನೀಚೈರ್ಗೋತ್ರಂಗಳೆಂಬೆಟ್ಟತ್ತೆರಡುಂ ಪ್ರಕೃತಿಗಳಂ ದೂರೀಕೃತಂ ಮಾಡಿ (ಶಂಠಾಮಾ. ೦೬-೯೦ ಪ) ; ಪ್ರಕೃತಿಗಳೊಳ್ ಸಮ್ಯಕ್ತ್ವಪ್ರಕೃತಿಯೆ ತಲೆದೋಱೆ . . . ಉದಯಿಸಿತಾ ಗಜೇಂದ್ರನೊಳ್ ಸಮ್ಯಕ್ತ್ವಂ (ಶಾರ್ಶ್ವಪು. ೫-೯೩). ೨೯. ಆತ್ಮನ ಗುಣಕ್ಕೆ ಘಾತಕವಾದ ಕರ್ಮ ; ಘಾತಿಕರ್ಮ : ಜ್ಞಾನಾವರಣಮುಂ ದರ್ಶನಾವರಣಮುಂ ಮೋಹನೀಯಮುಮಂತರಾಯಮುಮೆಂಬಿ ನಾಲ್ಕುಂ ಪ್ರಕೃತಿಗಳು ಘಾತಿಗಳಪ್ಪುವು (ಗೂಮ್ಮಸಾ. ೨-೨). ೩೦. [ರಾಜನೀ] ಸ್ವಾಮಿ, ಅಮಾತ್ಯ, ಸುಹೃತ್ತು, ಕೋಶ, ಬಲ, ರಾಷ್ಟ್ರ ಮತ್ತು ದುರ್ಗ ಎಂಬ ರಾಜನ ಏಳುಬಗೆಯ ರಾಜ್ಯಾಂಗಗಳು : ಈ ರಾಜ್ಯಾಂಗಗಳೇ ಪ್ರಕೃತಿಗಳು (ಸಿದ್ಧಾಂತಿ. ೨೩೯). ೩೨. [ಸಂಗೀತ] ಧ್ವನಿವ್ಯತ್ಯಾಸ ಹೊಂದದಿರುವ ಸ್ವರ ; ಮೂಲಸ್ವರ : ಪ್ರಕೃತಿ ಮತ್ತು ವಿಕೃತಿಸ್ವರ ಸ್ಥಾನಗಳ ಮತ್ತು ಅವುಗಳ ಧ್ವನಿಭೇದಗಳನ್ನು ವೀಣಾವಾದ್ಯದ ಮೊದಲ ಹನ್ನೆರಡು ಮೆಟ್ಟಲುಗಳು . . . ಪರಿಚಯ ಮಾಡಿಕೊಡುತ್ತವೆ (ಸಂಗೀಸಂ. ೦೭). [ಸಂ.]

ಪ್ರಕೃತಿಚಿಕಿತ್ಸೆ (ನಾ). ಗಾಳಿ, ನೀರು, ಬೆಳಕು, ಮಣ್ಣು ಮೊದಲಾದ ನೈಸರ್ಗಿಕ ವಸ್ತುಗಳಿಂದ ರೋಗಗಳಿಗೆ ಮಾಡುವ ಚಿಕಿತ್ಸೆ : ಬೆಳಕಿಗೆ ಸಂಬಂಧಪಟ್ಟ ಈ ಚಿಕಿತ್ಸೆಯು ಪ್ರಕೃತಿಚಿಕಿತ್ಸೆ (Naturo Therapy)ಯ ಒಂದು ಶಾಖೆ (ಅಸಿಕ. X. ಮುತ್ತುಪಿ). [ಸಂ. ಪ್ರಕೃತಿಚಿಕಿತ್ಸಾ]

ಪ್ರಕೃತಿಬಂಧ (ನಾ). [ಜೈನ] ಜ್ಞಾನಾವರಣಾದಿ ಅಷ್ಟವಿಧಕರ್ಮಗಳು ತಮಗೆ ಅನುಗುಣವಾದ ಪುದ್ಗಲದ್ರವ್ಯವನ್ನು ಸ್ವೀಕರಿಸುವುದು ; ಕರ್ಮಸಂಬಂಧವೆಂಬ ಬಂಧದಲ್ಲಿ ಒಂದು : ಮೂಲಪ್ರಕೃತಿಗಳೆಂಟುಮಂಬಾದರಸ್ವರೂಪದಿಂ ನೂಱ ನಾಲ್ವತ್ತೆಂಟು ವಿಕಲ್ಪಮಾದುತ್ತರಪ್ರಕೃತಿಗಳು ಮನೊಳಕೊಂಡನುಬಂಧಿಸುವ ಬಂಧಂ ಪ್ರಕೃತಿಬಂಧಮೆಂಬುದಕ್ಕುಂ (ಸುಳುಮಾ. ೬-೨೭ ಪ); ಕರ್ಮಸಂಬಂಧವೆಂಬ ಬಂಧವು ಪ್ರಕೃತಿ, ಸ್ಥಿತಿ, ಅನುಭಾಗ, ಪ್ರದೇಶವೆಂದು ನಾಲ್ಕುವಿಧ. ಕರ್ಮಾಣುಗಳ ಸ್ವಭಾವದಿಂದ ಉಂಟಾಗುವ ಬಂಧವು ಪ್ರಕೃತಿಬಂಧ (ಹಿಂದಸಾ. ೬೯). [ಸಂ.]

ಪ್ರಕೃತಿಭಾವ (ನಾ). ೧. ಯಾವುದಾದರೊಂದು ವಸ್ತುವಿನ ಸ್ವಾಭಾವಿಕ ಸ್ಥಿತಿ,—ಸ್ವರೂಪ : ಲಿಂಗದೇಹಿಯ ಅಂಗದಲ್ಲಿ ತೋಱುವ ತೋಱಿಕೆ ಬೇಱೊಂದು ಪ್ರಕೃತಿಭಾವದಲ್ಲಿ ಕಂಡರೆ ಲಿಂಗದಂಗವಾದುದಕ್ಕೆ ಅದೆದೂರ (ಶಜಿಗೋ. ೦೨-೯೯). ೨. [ವ್ಯಾಕ] ಸ್ವರಕ್ಕೆ ಸ್ವರ ಪರವಾದ ಸಂದರ್ಭವಿದ್ದು ಸಂಧಿಯಾಗದೆ ಇರುವುದು : ಸ್ವರಕ್ಕೆ ಸ್ವರ ಪರವಾದಾಗ ಕೆಲವು ವೇಳೆ ಸಂಧಿಯಾಗುವುದಿಲ್ಲ. ಇದಕ್ಕೆ ಪ್ರಕೃತಿಭಾವವೆಂದು ಹೆಸರು (ಕೃಬಿಸಿ. ೯). [ಸಂ.]

ಪ್ರಕೃತಿಶಾಸ್ತ್ರ (ನಾ). ಪ್ರಕೃತಿಯ ರಹಸ್ಯ, ನಿಯಮ ಮೊದಲಾದುವುಗಳನ್ನು ನಿರೂಪಿಸುವ ಶಾಸ್ತ್ರ ; ಭೌತಿಕಶಾಸ್ತ್ರ : ಪ್ರಕೃತಿಶಾಸ್ತ್ರವೆಂದರೆ ಕೇವಲ ಯಂತ್ರಾತ್ಮಕವಾದ ಪ್ರಕೃತಿನಿಯಮಜ್ಞಾನವಲ್ಲ (ಮುಕ್ತಾರ. ೩೯ ಬೀಂಕೆ). [ಸಂ.]

ಪ್ರಕೃತಿಸೌಂದರ್ಯ (ನಾ). ನಿಸರ್ಗದ ಚೆಲುವು; ನೈಸರ್ಗಿಕ ಸೌಂದರ್ಯ: ರೊಮ್ಯಾಂಟಿಕ್ ಕವಿಗಳೇ ಪ್ರಕೃತಿಸೌಂದರ್ಯವನ್ನನುಭವಿಸುವ ಭಾವುಕ ಶಕ್ತಿಯ ಮಹತ್ವವನ್ನು ತೋರಿಸಿಕೊಟ್ಟರು (ಮುಕ್ತಾರ ೩೨ ಬೀಂಕೆ). [ಸಂ.]

ಪ್ರಕೃತಿಸ್ಥ (ನಾ). ಮೊದಲಿನ ಪರಿಸ್ಥಿತಿಗೆ ಹೊಂದಿಕೊಂಡಿರುವಂಥದು : ಒಂದು ಪಕ್ಷದ ಸರ್ವಾಧಿಕಾರದಿಂದ ಜನತೆ ಪ್ರಕೃತಿಸ್ಥವಾಗಿರಲು ಆಗಲಾರದು (ಏಬಂಧ. I. ೦೦೦). [ಸಂ.]

ಪ್ರಕೃತಿಸ್ವರ (ನಾ). ೧. [ವ್ಯಾಕ] ಶಬ್ದದ ಮೂಲರೂಪಕ್ಕೆ ಸಂಬಂಧಿಸಿದ ಅಂತ್ಯದ ಸ್ವರಾಕ್ಷರ : ಸ್ವರಮಿದಿರೊಳಿರೆ ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕ ಮಕ್ಕುಂ ಲೋಪಂ (ಶಮದ. ೩೨). ೨. ಅ, ಇ, ಉ, ಎ ಎಂಬ ಹ್ರಸ್ವ ಸ್ವರಗಳು : ಕ್ರಿ. ಶ. ೧೬೫೦ರಲ್ಲಿದ್ದ ಸಿದ್ಧನಂಜೇಶನೆಂಬ ವೀರಶೈವಕವಿ . . . ಹ್ರಸ್ವಸ್ವರಗಳನ್ನು "ಪ್ರಕೃತಿಸ್ವರ"ಗಳೆಂದೂ ದೀರ್ಘಸ್ವರಗಳನ್ನು "ವಿಕೃತಿಸ್ವರ"ಗಳೆಂದೂ ಹೆಸರಿಸಿದ್ದಾನೆ (ಸಂಶೋಧ. ೦೬). ೩. [ಸಂಗೀತ] ಸಪ್ತಸ್ವರಗಳಲ್ಲಿ ಯಾವ ಧ್ವನಿಭೇದವನ್ನೂ ಹೊಂದದೆ ಇರುವ ಷಡ್ಜ ಮತ್ತು ಪಂಚಮ : ಷಡ್ಜ ಮತ್ತು ಪಂಚಮಗಳು ಯಾವಾಗಲೂ ನಿರ್ದಿಷ್ಟ ಶ್ರುತಿಗಳನ್ನೇ ಪಡೆದು ಮತ್ತಾವ ಧ್ವನಿಭೇದವನ್ನೂ ಹೊಂದದೆ ಇರುವುದರಿಂದ ಇವೆರಡೂ ಪ್ರಕೃತಿಸ್ವರಗಳೆನಿಸಿಕೊಂಡಿವೆ (ಸಂಗೀತಂ. ೦೫). [ಸಂ.]

ಪ್ರಕೃಷ್ಟ (ಗು). ೧. ಹೆಚ್ಚಾಗಿ ಎಳೆದ,—ಸೆಳೆದ. ೨. ದೀರ್ಘವಾದ ; ನೀಳವಾದ. ೩. ಶ್ರೇಷ್ಠವಾದ ; ಉತ್ಕೃಷ್ಟವಾದ : ಸಕಲಸುಹೃದ್ವರ್ಗಂಬೆರಸನುಭವಿಸುಗೆ ದುರ್ಗಂ ವರ್ಗತ್ರಯಪ್ರಕೃಷ್ಟೋದಯಮಂ (ಹಂಚಕಂ. ೩೦೦-೨೫). ೪. ಪ್ರಧಾನವಾದ ; ಮುಖ್ಯವಾದ. ೫. ಹೆಚ್ಚಾದ; ಅಧಿಕವಾದ : ಅಪಾಕೃತಪ್ರಕೃಷ್ಟಾಷ್ಟಲೋಕಪಾಲಪರಿಪಾಲಿತ ಸಾಹಸನುಂ . . . ಅಪ್ಪ ಸ್ತಿಮಿತಸಾಗರಮಹೀವಲ್ಲಭಂಗೆ (ಶಾಂತಿಪು. ೦-೬೦ ಪ). ೬. ಬಲವಾದ ; ಶಕ್ತಿಯುತವಾದ. (ನಾ). ೭. ಶ್ರೇಷ್ಠವಾದುದು ; ಉತ್ಕೃಷ್ಟವಾದುದು : ಅಪ್ರಿಯವಾದದ್ದನ್ನು ತಪ್ಪಿಸಿಕೊಂಡು ಹೋದರೆ ನಡೆಯುವುದಿಲ್ಲ ; ಅದನ್ನು ತಳ್ಳಿ ಹೋಗುವುದೇ ಪ್ರಕೃಷ್ಟವಾದ ದಾರಿ (ಏಬಂಧ. II, ೦೫೫). ೮. ಮುಖ್ಯವಾದುದು : ಪ್ರಕೃತಿ ಶಬ್ದಕ್ಕೆ ಅರ್ಥ ಪ್ರಕೃಷ್ಟವಾದ ಕೃತಿಯೆಂದು (ಭಾರದ. ೦೦೫). [ಸಂ.]

ಪ್ರಕೋಪ (ನಾ). ೧. ಕೋಪಾಟೋಪ ; ರೋಷಾವೇಶ : ರಾಹುತಾಂ ದಿನಕರನಂ ಪ್ರತಾಪಭರನಂ ವಿಳಸತ್ಕರನಂ ಪ್ರಕೋಪದುರ್ವಿನೊಳೆನುಂಗುವಂ (ಜೀವಸಂ. ೩೨-೬) ; ಕಣ್ಣೀರ ಪೆರ್ವೊನಲಿಂ ನಂದಿಸಿದಳ್ಳಕೋಪ ಶಿಖಿಯಂ ಪಾಯ್ದುಪ್ಪಿದಳ್ನಲ್ಲನಂ (ರಾಜಶೇ. ೦೦-೦೩೫). ೨. [ವೈದ್ಯಶಾ] ಆಧಿಕ್ಯ ; ಅತಿರೇಕ : ವಾತಾದಿಗಳಿಗೆ ಸಂಚಯವೂ ಪ್ರಕೋಪವೂ ಶಾಂತಿಯೂ ಇರುವುವು (ಸಳಸ್ಕ. ೦೫). [ಸಂ.]

ಪ್ರಕೋಪಿಸು (ಕ್ರಿ). ೧. ಹೆಚ್ಚಿಸು ; ಉತ್ತೇಜಿಸು ; ಅಧಿಕಗೊಳಿಸು : ಅವನ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ಅವನ ಆಸೆಯನ್ನು ಪ್ರಕೋಪಿಸುತ್ತಿದ್ದ ವ್ಯಕ್ತಿಯೆಂದರೆ ಶಾಂತಾಳೊಬ್ಬಳೇ (ಭ್ರಮಾವ. ೬೬). ೨. [ವೈದ್ಯಶಾ] ಹೆಚ್ಚಾಗು ; ಉಲ್ಬಣವಾಗು : ಪ್ರಕೋಪಿಸಿದ ವಾತಾದಿ ದೋಷಗಳಿಂದ . . . ಮೂಲವ್ಯಾಧಿ ಮೂರು ಪ್ರಕಾರವಾಗಿ ಅಪಾನದ್ವಾರದ ಮೂರು ನರಗಳ ಮೂಲದಲ್ಲಿ ಕಾಣಿಸಿಕೊಂಬುದು (ಸಳಸ್ಕ. ೨೬೭).

[ಪ್ರಕೋಪ+—ಇಸ್ಸು]

ಪ್ರಕೋಷ್ಠ (ನಾ). ೧. ಮೊಳಕೈಯಿಂದ ಮಣಿಕಟ್ಟಿನ ವರೆಗಿನ ಭಾಗ: "ಪ್ರಕೋಷ್ಠಮೆಂಬುದು ಮುಂಗೆಯ್" (ಹಲಾಯು. ೬೮-೩೭೯) ; ವೃತ್ತಘನಪ್ರಕೋಷ್ಠಯುಗಳು ಮೇಲಾದ ಮಾಣಿಕ್ಯಕಂಕಣದಿಂ . . . ಅಲಂಕೃತನಾಗಿಯುಂ (ಶಾಂತಿಪು. ೦೦-೫೬) ; ಸರಸೀರುಹನಾಳಮನಾವರಿಸಿದ ಶೈವಾಲಮೆನೆ ಹರಿದ್ರತ್ನಮಯಸ್ಫುರಿತಕಟಕಂ ಪ್ರಕೋಷ್ಠದೊಳರುಣಾಧರೆ ತೊಳಗಿ ಬೆಳಗದಿರ್ಪುದಿದೇನೋ (ಸಂದ್ರಪು. ೩-೫೬). ೨. ನಾಲ್ಕು ಪಕ್ಕಗಳಲ್ಲಿಯೂ ಕಟ್ಟಡಗಳಿಂದ ಸಂತ್ತುವರಿದ ಅಂಗಳ ; ಹಜಾರ ; ತೊಟ್ಟಿ : "ಕಕ್ಷಾಂತರಂ, ಪ್ರಕೋಷ್ಠಂ—ಈ ೨ ನೆಲೆ" (ಹಲಾಯು. ೫೦-೧೪೯) ; "ಕಕ್ಷಾಂತರಂ ಪ್ರಕೋಷ್ಠಂ ಮನೆಯ ನಿಲುವದು" (ಮಂಗರಾ. ೬೦-೦೪). [ಸಂ.]

ಪ್ರಕ್ರಮ (ನಾ). ೧. ಮುಂದೆ ಹೆಜ್ಜೆಯಿಡುವುದು ; ಮುಂದಕ್ಕೆ ಹೋಗುವಿಕೆ. ೨. ಹೆಜ್ಜೆ. ೩. ಒಂದು ಹೆಜ್ಜೆಯಷ್ಟು ದೂರ; ದಾಪು. ೪. (ಕಾರ್ಯದ) ಪ್ರಾರಂಭ ; ಉಪಕ್ರಮ : "ಪ್ರಕ್ರಮಃ, ಉಪಕ್ರಮಃ—೨ ಕೆಲಸಕ್ಕೆ ಮೊದಲುಮಾಡುವಿಕೆ" (ಸಿದ್ಧಾಂತಿ. ೩೬೪) ; ಜನ್ಮೋತ್ಸವಪ್ರಕ್ರಮಮೆಂದಾನುದನೃತ್ಯಪ್ರಮದಮನಧಿಕಂ ಮಾಡಿ (ಅದಿಪು. ೬-೦೨೬) ; ಅಮಿತಗುಣವರ್ಣನಪ್ರಕ್ರಮಕ್ಕೆ ಸಲೆ ನಾಣ್ಚೆ ತಲೆಯನೆಱಗಿದ ಸುಜನೋತ್ತಮರಂತೆ ಭರದಿನೆಱಗಿದುವಮೇಯಪರಿಪಕ್ವಗಂಧಶಾಲಿವನಂಗಳ್ (ಶಾಂತಿಪು. ೦-೫೯). ೫. ವಿಧಾನ ; ಕ್ರಮ ; ರೀತಿ : ಪುರಾಣಗಳಿಗೆ ಯಾವೊಂದು ತರ್ಕಪ್ರತಿಷ್ಠಿತವಾದ ದಾರ್ಶನಿಕಪ್ರಕ್ರಮದೊಡನಾಗಲಿ ಅಥವಾ ಯಾವೊಂದು ಪಾಂಥಿಕಧರ್ಮದೊಡನಾಗಲಿ ತಾದಾತ್ಮ್ಯವಿಲ್ಲ (ತತ್ಕಪ್ರಾ. ೦೨೧). [ಸಂ.]

ಪ್ರಕ್ರಯ (ನಾ). ಬೆಲೆ : "ಪ್ರಕ್ರಯಃ, ಕ್ಲಿಪ್ತಕಃ—ಈ ೨ ಬೆಲೆ" (ಹಲಾಯು. ೯೪-೪೧೯). [ಸಂ.]

ಪ್ರಕ್ರಿಯೆ (ನಾ). ೧. ಪ್ರಕಾರ ; ವಿಧಾನ ; ರೀತಿ : ಇದುವರೆಗೆ ತೋರಿಸಲಾದ 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ' ಇವುಗಳ ಪ್ರಕ್ರಿಯೆಗೆ ಇನ್ನೂ ಒಂದು ಫಲವಿದೆ (ರೃಷ್ಯಾಲೋ. ೨೩೯). ೨. ಕಾರ್ಯವಿಧಾನ : ವಿಧಿದ್ವಾರಾ ಏರ್ಪಟ್ಟಿರತಕ್ಕ ಪ್ರಕ್ರಿಯೆಯನ್ನು ಬಿಟ್ಟು ಮತ್ತಾವ ರೀತಿಯಲ್ಲಿಯೂ ಯಾವನೊಬ್ಬನಿಗೂ ಪ್ರಾಣಹಾನಿಯಾಗುವಂತೆ ಅಥವಾ ದೈಹಿಕಸ್ವಾಧೀನತೆಯಿಲ್ಲದಂತೆ ಮಾಡತಕ್ಕುದಲ್ಲ (ಭಾರಾವ. ೦೨). ೩. ಬದಲಾವಣೆ ; ಪರಿವರ್ತನೆ : ಏಕಕಾಲಿಕವಾಗಿ ಒಂದೇ ರೀತಿ ಪ್ರಕ್ರಿಯೆಯನ್ನು ತೋರಿಸುವ ಮನಸ್ಸುಗಳಿಗೆ ಏನೆನ್ನಬೇಕು ? (ದೂರಸ. ೫೭). ೪. ಶಾಸ್ತ್ರೋಕ್ತವಾದ ಕರ್ಮಾಚರಣೆ ; ವಿಧಿ : ಸಾಂಖ್ಯಶಾಸ್ತ್ರದ ಕೆಲವು ಪ್ರಕ್ರಿಯೆಗಳು ವೇದಗಳಲ್ಲಿ ದೃಗ್ಗೋಚರಿಸುವುದರಿಂದ ಅದು ಸಿದ್ಧವಾಗುತ್ತದೆ (ಭಾರದ. ೦೨೫). ೫. ಉನ್ನತಸ್ಥಾನ : "ಪ್ರಕ್ರಿಯಾ, ಅಧಿಕಾರಃ—೨ ಅಧಿಕಾರದ ಹೆಸರು. ನಿರ್ವಹಿಸತಕ್ಕ ಕೆಲಸಕ್ಕೂ ಪ್ರಜೆಗಳ ಕಾರ್ಯನಿರ್ವಾಹಕ್ಕೂ ಅಧಿಕಾರನಿರ್ವಾಹಕ್ಕೂ ಹೆಸರು" (ಸಿದ್ಧಾಂತಿ. ೨೪೪). ೬. ಪುಸ್ತಕದ ಒಂದು ಪರಿಚ್ಛೇದ. ೭. ಹಕ್ಕು ; ಸ್ವಾಮ್ಯ. ೮. ಸೌಕರ್ಯ. ೯. [ವ್ಯಾಕ] ಶಬ್ದನಿಷ್ಪತ್ತಿಯಲ್ಲಿ ನಡೆಯುವ ಶಾಸ್ತ್ರೋಕ್ತವಾದ ಕ್ರಮ : ಕೊಂದಂ, ಬೆಂದಂ ಎಂಬ ಕ್ರಿಯಾಪದಗಳ ಪ್ರಕ್ರಿಯೆಯನ್ನು ಬರೆಯಿರಿ (ಕೂಡಿ). [ಸಂ. ಪ್ರಕ್ರಿಯಾ]

ಪ್ರಕ್ವಾಣ (ನಾ). ವೀಣೆಯ ಧ್ವನಿ : "ಪ್ರಕ್ವಾಣಃ, ಪ್ರಕ್ವಣಃ, ಅನುಕ್ವಣಃ ಇತ್ಯಾದಿಗಳು ವೀಣೆಯ ಧ್ವನಿಗೆ ಹೆಸರುಗಳು" (ಸಿದ್ಧಾಂತಿ. ೫೬). [ಸಂ.]

ಪ್ರಕ್ಷಾಲನ, ಪ್ರಕ್ಷಾಳನ (ನಾ). ೧. ನೀರಿನಿಂದ ತೊಳೆಯುವುದು,—ಶುದ್ಧಿಗೊಳಿಸುವುದು : ಉಚ್ಚಾಸನಮಂ ಕೊಟ್ಟು ಪ್ರಾಸುಕೋದಕಂಗಳಿಂ ಪಾದಪ್ರಕ್ಷಾಲನಂಗೆಯ್ದು (ಪಸಾಕ. ೩೦೮). ೨. ಚೊಕ್ಕಟಗೊಳಿಸುವುದು; ಶುದ್ಧಮಾಡುವುದು. ೩. ಸ್ನಾನಮಾಡುವುದು. ೪. ತೊಳೆಯಲು ಉಪಯೋಗಿಸುವ ನೀರು. ಪ್ರಕ್ಷಾಳನ : ೧. ಅಂತು ನೃಪತಿ ವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡವಿಯೊಳಂಜಳಿಯಿಂ ಜಲಮಂ ತಂದು (ಶಾದಂಪೂ. ೭೦೧) ; ಕೆಳಗಿಳಿದು, ತಣ್ಣನೆಯ ನೀರಿನಲ್ಲಿ ಮುಖಪ್ರಕ್ಷಾಳನ, ಪಾದಪ್ರಕ್ಷಾಳನಗಳನ್ನು ಮಾಡಿ (ಶಾಂತಲಾ. ೨೯೬). 'ಪ್ರಕ್ಷಾಲನಂಗೆಯ್' ಪರಾ. [ಸಂ.]

ಪ್ರಕ್ಷಾಲನಂಗೆಯ್, ಪ್ರಕ್ಷಾಳನಂಗೆಯ್ (ಕ್ರಿ). ನೀರಿನಿಂದ ತೊಳೆ,—ಶುದ್ಧಿಗೊಳಿಸು : ಸ್ತುತಿಸುತಂ ಸಾಷ್ಟಾಂಗದಲಿ ನಮಿಸುತ ಗುರುಶ್ರೀಚರಣಯುಗಮಂ ರತಿ ಮಿಗಲ್ ಪ್ರಕ್ಷಾಲನಂಗೆಯ್ದು (ಬಸಪು. ೩೯-೫).

ಪ್ರಕ್ಷಾಳನಂಗೆಯ್ : ಇದಿರ್ಗೊಂಡುದ್ದದೊಳೇಱಲಿಕ್ಕಿ ಚರಣಪ್ರಕ್ಷಾಳನಂಗೆಯ್ದು ಸನ್ಮುದದಿಂದರ್ಚಿಸಿ ಭಕ್ತಿಯಿಂದೆ ಪೊಡೆವಟ್ಟಾಗಳ್ (ಸುಳುಮಾ. ೪-೨೨) ; ಮುದದೊಳೆದ್ದು ಶರೀರಧರ್ಮಮಂ ಚರಿಸಿ ಕರಪದಮುಖ ಪ್ರಕ್ಷಾಳನಂಗೆಯ್ದು (ಹನಕಾ. ೪-೫೯). [ಪ್ರಕ್ಷಾಲನ + ಕೆಯ್$_1$]

ಪ್ರಕ್ಷಾಲಿತ, ಪ್ರಕ್ಷಾಳಿತ (ಗು). ೧. ನೀರಿನಿಂದ ತೊಳೆದ,–ಶುದ್ಧಿಗೊಳಿಸಿದ : ಆ ಮರುದೇವಿಮಹಾದೇವಿ ಚತುರ್ಥಸ್ನಾನದೊಳ್ ಕಲ್ಪದ್ರುಮದುಕೂಲವಸನೆಯುಮಾರ್ಜಿತ ದಶನಮಯೂಖಜಲಪ್ರಕ್ಷಾಲಿ [ಶಾಶಾಂ. ೪]ತ ದಶನವಸನೆಯುಂ . . . ಆಗಿ (ಆದಿಪು. ೭-೨೬ ಪ). (ನಾ). ೨. ನೀರಿನಿಂದ ತೊಳೆದುದು,–ಶುದ್ಧಿಗೊಳಿಸಿದುದು. **ಪ್ರಕ್ಷಾಳಿತ** : ೨. "ನಿರ್ನಿಕ್ತಂ, ಪ್ರಕ್ಷಾಳಿತಂ, ಧೌತಂ—ಈ ೩ ತೊಳೆಯಲ್ಪಟ್ಟುದು" (ಹಲಾಯು. ೬೯-೨೫೪). ೩. ತೊಳೆದುಬಿಡುವಿಕೆ ; ತಳ್ಳಿಹಾಕುವಿಕೆ ; ಕೊಚ್ಚಿಸಿ ಬಿಡುವಿಕೆ : ಮಱೆದೀ ಕುಲಕ್ರಮಮನಾನಿಂತಿರ್ದು ಸನ್ಮಾರ್ಗಪದ್ಧತಿಯಂ ಹಾಸ್ಯರಸಪ್ರವಾಹಭರದಿಂ ಪ್ರಕ್ಷಾಳಿತಂ ಮಾಟ್ಟಿನೇ (ಸಂರಾಮಾ. ೬-೯೧). [ಸಂ.]

ಪ್ರಕ್ಷಾಲಿಸು, ಪ್ರಕ್ಷಾಳಿಸು (ಕ್ರಿ). ೧. ನೀರಿನಿಂದ ತೊಳೆ,–ಶುದ್ಧಿಗೊಳಿಸು: ಸೂಕ್ಷ್ಮಪರಮಾರ್ಥತತ್ವಭಾವನಾಜಲದಿಂ ಪ್ರಕ್ಷಾಲಿಸಿ ಕಟ್ಟಿದ ಸೆರೆಯೊಳು ನಸುಗೆಂಪಿನಂತೆ (ಶಾಸ್ತ್ರಪೀ. ೦೦೩-೪) ; ಆಳಿಯರ್ ಗಂಧೋದಕಹೂಜೆಯಿಂದೆ ಪ್ರಕ್ಷಾಲಿಸಿದರ್ ಪದಯುಗವ (ಮೋಹತ. ೨೬-೩೩). **ಪ್ರಕ್ಷಾಳಿಸು** : ೧. ಭಟಾರರ ಕಾಲಂ ಮಹಾದೇವಿ ನೀರ್ವೊಯ್ಯೆ ಅರಸು ತಾನೆ ಪ್ರಕ್ಷಾಳಿಸಿ [ಶಾಶಾಂ. ಕರ್ಚಿದ] (ಪಡ್ಡಾಶಾ. ೭೯-೯) ; ಪುಣ್ಯಜಲದಿಂ ಪ್ರಕ್ಷಾಳಿಸುವಂತೆ ಶಾಂತದೃಷ್ಟಿಗಳಿಂದೆನ್ನಂ ಮುನ್ನಂ ಕಂಡಱುವನಂತೆ . . . ನೋಡಿ (ಕಾದಂಪೂ. ೨೬೨) ; ಜಿನಮುನಿಗಳ್ಗೆ ಆಹಾರಮಂ ಕುಡುವುದುಂ . . . ಪಾದಯುಗಳಮಂ ಗುಣಾನುರಾಗದಿಂ ತನ್ನೆರಡುತೊಡೆಯ ಮೇಲಿಟ್ಟೊತ್ತುವುದುಂ ಒರಸುವುದುಂ ಪ್ರಕ್ಷಾಳಿಸುವುದುಂ ಮತ್ತಂ ಪೆಱವು ವ್ಯಾಪಾರಂಗಳಂ ವೈಯಾವೃತ್ಯಮೆಂಬುದು (ಪಸಾರ. ೩೦೯). ೨. (ಆಲಂ) ಅವಮಾನ ಮಾಡು : ಹೀನಾಯಗೊಳಿಸು : ಅವರ ಹತ್ತಿರ ಹೋದರೆ ಚೆನ್ನಾಗಿ ಪ್ರಕ್ಷಾಳಿಸಿ ಕಳುಹಿಸುತ್ತಾರೆ (ರೂಢಿ). [ಪ್ರಕ್ಷಾಲನ + – ಇಸ್ಸು$_3$]

ಪ್ರಕ್ಷಾಳನ 'ಪ್ರಕ್ಷಾಲನ' ನೋ.

ಪ್ರಕ್ಷಾಳನಂಗೆಯ್ 'ಪ್ರಕ್ಷಾಲನಂಗೆಯ್' ನೋ.

ಪ್ರಕ್ಷಾಳನೆ (ನಾ). ೧. = ಪ್ರಕ್ಷಾಲನ ೧. ೨. (ಆಲಂ) ಅವಮಾನ ; ಮಾನಹಾನಿ : ಆತ ಅಲ್ಲಿಗೆ ಹೋಗಿ ಚೆನ್ನಾಗಿ ಪ್ರಕ್ಷಾಳನೆ ಮಾಡಿಸಿಕೊಂಡು ಬಂದ (ರೂಢಿ). [ಸಂ. ಪ್ರಕ್ಷಾಲನ]

ಪ್ರಕ್ಷಾಳಿತ 'ಪ್ರಕ್ಷಾಲಿತ' ನೋ.

ಪ್ರಕ್ಷಾಳಿಸು 'ಪ್ರಕ್ಷಾಲಿಸು' ನೋ.

ಪ್ರಕ್ಷಿಪ್ತ (ಗು). ೧. ಎಸೆದ; ತೂರಿದ. ೨. ಒಳಕ್ಕೆ ಹಾಕಿದ; ಒಳಗೆ ಸೇರಿಸಿದ. (ನಾ). ೩. ಗ್ರಂಥದಲ್ಲಿ ಕವಿಯು ಬರೆಯದೆ ಇದ್ದುದನ್ನು ಇತರರು ಅನಂತರ ಸೇರಿಸಿದ ಭಾಗ : ಈ ಕೊನೆಯ ಮಾತು ಪ್ರಕ್ಷಿಪ್ತವೆಂದು ಸಿದ್ಧವಾದರೆ ಮಾತು ಬೇರೆ (ಕಸಾಸ. ೫೩) ; ಜಯದ್ರಥನು ದ್ರೌಪದಿಯನ್ನು ಹೊತ್ತುಕೊಂಡು ಹೋದ ವೃತ್ತಾಂತವೇ ಪ್ರಕ್ಷಿಪ್ತ (ಪಸಭಾ. ೪೧೫). [ಸಂ.]

ಪ್ರಕ್ಷಿಪ್ತಪಾಠ (ನಾ).=ಪ್ರಕ್ಷಿಪ್ತ ೩ : ಗಂಗನ ಪ್ರತಿಗಳಲ್ಲಿ . . . ಸಂಕ್ಷಿಪ್ತ ಮತ್ತು ಪ್ರಕ್ಷಿಪ್ತಪಾಠಗಳೆರಡೂ ವಿದಿತವಾಗುತ್ತವೆ (ಕುಮಾಸಾಂ. ೯೦). [ಸಂ.]

ಪ್ರಕ್ಷೀಣ (ಗು). ೧. ತುಂಬ ಕಂಗ್ಗಿದ,—ಕಡಮೆಯಾದ. ೨. ಸೊರಗಿದ; ಕೃಶವಾದ. ೩. ನಷ್ಟವಾದ ; ನಾಶವಾದ : ತಮೇವ ಪ್ರಾಪ್ತಕ್ಷಯೋಪಶಮಂ ಪ್ರಕ್ಷೀಣಾವರಣಂ ವಾ ಪ್ರತಿನಿಯತಂ ಪ್ರತ್ಯಕ್ಷಮೆಂಬೀ ವ್ಯುತ್ಪತ್ತಿಯಿಂ ಪರಾಯತ್ತಮಲ್ತೆಂಬುದರ್ಥಂ (ತತ್ತ್ವಪ್ರ. ೫೪). [ಸಂ.]

ಪ್ರಕ್ಷುಬ್ಧ (ಗು). ೧. ಅಲ್ಲೋಲಕಲ್ಲೋಲವಾದ ; ಕದಡಿದ : ವಿಸ್ತೃತ ವಕ್ತ್ರೋದರಭಾಗಭೂರಿಕಮಠಪ್ರಕ್ಷುಬ್ಧಕಲ್ಲೋಲಕಲ್ಪಿತಕೋಲಾಹಲಕಲ್ಪಕಾಲರಭಸಪ್ರಸ್ಪರ್ಧಿಯಂ ವಾರ್ಧಿಯಂ (ಕಾಪ್ಯಸಾ. ೭೫). ೨. ನೆಮ್ಮದಿಯಿಲ್ಲದ ; ಶಾಂತಿಯನ್ನು ಕಳೆದುಕೊಂಡ : ಆಕೆಯ ಬುದ್ಧಿಯ ಶಕಲವೊಂದು . . . ಆಕೆಯ ಪ್ರಕ್ಷುಬ್ಧಚಿತ್ತಕ್ಕೆ ಸಮಾಧಾನ ಹೇಳಿತು (ಶಿತಂಬಾ. ೦೨). ೩. ಗೊಂದಲಗೊಂಡಿರುವ : ದೇಶವಲ್ಲಿ ಪ್ರಕ್ಷುಬ್ಧಪರಿಸ್ಥಿತಿಯುಂಟಾದಾಗ ಜನರು ಭೇದಭಾವ ಮರೆತು ಒಂದಾಗ ಬೇಕು (ರೂಢಿ). [ಸಂ.]

ಪ್ರಕ್ಷುಭಿತ (ಗು). ೧. = ಪ್ರಕ್ಷುಬ್ಧ ೧ : ನಾನಾಜಲಚರನಿಕರಾಸ್ಫಾಳನ ಪ್ರೋಚ್ಚಲತ್ಪ್ರಚ್ಛದನಚ್ಛನ್ನಚ್ಛಟಾಪ್ರಕ್ಷುಭಿತಲಹರಿಕಾಸ್ಪಾರರೌದ್ರಂ ಸಮುದ್ರಂ (ಕಾಪ್ಯಸಾ. ೭೪). ೨. =ಪ್ರಕ್ಷುಬ್ಧ ೨: ಶಂಬರನಾಗಸ್ಥಾನಮಂ ಪ್ರಕ್ಷುಭಿತ ಬಹುಜನಧ್ವಾನಮಂ ಪೊಕ್ಕಂ . . . ರಾಜಹಂಸಂ (ಸುಳುಮಾ. ೫-೬೨). [ಸಂ.]

ಪ್ರಕ್ಷೇಪ (ನಾ). ೧. ಎಸೆಯುವುದು ; ತೂರುವುದು. ೨. ಇಡುವುದು; ಇರಿಸುವುದು. ೩. ಮೂಲಗ್ರಂಥದಲ್ಲಿ ಇಲ್ಲದುದನ್ನು ಹೊಸದಾಗಿ ಸೇರಿಸುವಿಕೆ ಮತ್ತು ಹಾಗೆ ಸೇರಿಸಿದ ಅಂಶ : ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು (ಇನಪ. VII ಮುಮ್ನುಡಿ) ; ಕುಮಾರವ್ಯಾಸಭಾರತವು ವ್ಯಾಸಭಾರತವನ್ನು ಎಷ್ಟು ಮಟ್ಟಿಗೆ ಅನುಸರಿಸಿದೆ . . . ಎರಡೂ ಭಾರತಗಳಲ್ಲಿ ಅನೇಕ ಪ್ರಕ್ಷೇಪಗಳಾಗಿವೆ (ಕಸಾಸ. ೨೪೭). [ಸಂ.]

ಪ್ರಕ್ಷೇಪಕ (ನಾ). ೧. ಎಸೆಯುವವನು. ೨. ಇರಿಸುವವನು. ೩. ಮೂಲಗ್ರಂಥದಲ್ಲಿ ಇಲ್ಲದುದನ್ನು ಹೊಸದಾಗಿ ಸೇರಿಸುವವನು: ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ ! (ಇನಪ. VII ಮುಮ್ನುಡಿ). ೪. ದೂರವಾಣಿ ಅಥವಾ ದೂರಲೇಖಕ ಸಲಕರಣೆಗಳಲ್ಲಿ ಸುದ್ದಿಗಳನ್ನು ಬಿತ್ತರಿಸುವ ಸಾಧನ ; ರೇಡಿಯೋ ನಿಸ್ತಂತುತರಂಗಗಳನ್ನು ಕಳುಹಿಸುವ ಯಂತ್ರಸಲಕರಣೆ : ೧೯೩೫ಕ್ಕೆ ಮುಂಚೆ ಬೊಂಬಾಯಿ ಮತ್ತು ಕಲ್ಕತ್ತನಗರಗಳಲ್ಲಿ ೧೫ ಕಿಲೋ ವ್ಯಾಟ್ ಸಾಮರ್ಥ್ಯದ ಎರಡು ಪ್ರಕ್ಷೇಪಕಗಳು (Transmitters) ಇದ್ದವು (ಕಿಲ್ಪನಾ. ೫೦೨). [ಸಂ.]

ಪ್ರಕ್ಷೇಪಕಾರ (ನಾ). ಮೂಲಗ್ರಂಥದಲ್ಲಿ ಮೊದಲು ಇಲ್ಲದ ಅಂಶವನ್ನು ಹೊಸದಾಗಿ ಸೇರಿಸುವವನು : ಈ ಒಂದು ಪ್ರಸಂಗವನ್ನು ಕುರಿತು ಪ್ರಕ್ಷೇಪಕಾರರ ಬುದ್ಧಿ ಎಷ್ಟು ವೈವಿಧ್ಯಮಯವಾಗಿ ಕೆಲಸ ಮಾಡಿದೆ (ಪಂಕೀ. ೦೯೨). [ಸಂ.]

ಪ್ರಕ್ಷೇಪಣ (ನಾ). ಸರಿಸುವುದು : ಭೂಪಾಳಂಗವಟಯಿಸಿದುದಾ ಪೂಗೊಳದೊಳ್ವಿಚಿತ್ರಕಾಂಡಪಟೀಪ್ರಕ್ಷೇಪಣವಿಳಾಸಮಂ ತತ್ಸೋಪಾನೋತ್ತಾನಮಣಿಮಯೂಖವಿತಾನಂ (ಮಲ್ಲಿಪು. ೬-೦೦೪). [ಸಂ.]

ಪ್ರಕ್ಷೇಪಿತ (ನಾ). ೧. ಎಸೆದುದು ; ಬಿಸಾಡಿದುದು. ೨. ಇಟ್ಟುದು; ಇರಿಸಿದುದು. [ಸಂ.]

ಪ್ರಕ್ಷೇಪಿಸು (ಕ್ರಿ). ಮೂಲಗ್ರಂಥದಲ್ಲಿ ಇಲ್ಲದುದನ್ನು ಹೊಸದಾಗಿ ಸೇರಿಸು : ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗ ಬರದಂತೆ ತಮ್ಮ ಸ್ವಂತರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು (ಇನಪ. VII ಮುಮ್ನುಡಿ). [ಪ್ರಕ್ಷೇಪ + – ಇಸ್ಸು$_3$]

ಪ್ರಕ್ಷೋಭ (ನಾ). ೧. ಅಲ್ಲೋಲಕಲ್ಲೋಲ ; ಪ್ರಕ್ಷುಬ್ಧತೆ : ಅಗುರ್ವ ವೆತ್ತುದಂ ತ್ರೈಲೋಕ್ಯಕಂಟಕಮೆಂಬಾನೆಯನೇಱಿ ಪ್ರಳಯಪ್ರಕ್ಷೋಭ ಮಾದಂತೆ ಮುಳಿದು ಬರೆ (ಶಂಶಾಮಾ. ೦೩-೦೩೬ ಪ). ೨. ಗೊಂದಲ ; ತಳಮಳ : ಆಕಾಶಂ ಮೇಗೆ ಕವಿದಪುದು ಗಾಳಿಯೆ ನಂಜಾದುದು ಎಂಬ ಸಕಲಪ್ರಕ್ಷೋಭದೊಳ್ ವಿಹ್ವಳರಾಗಿರ್ದ ನಿರಯಜರನೆಯ್ದಿ (ಶಾಂತಿಪು. ೬-೯೯ ಪ) ; ಬನ್ನಿಮಿನ್ನುಮಱಸುವಮೆಂದು ಪುರಪ್ರ[ಕ್ಷೋ]ಭಮಾಗೆ ಪುರದೊಳಗೆ ತೊಟಲ್ದಱಸುತ್ತುಂ (ಸುಕುಮಾ. ೦೨-೨೦ ಪ). [ಸಂ.]

ಪ್ರಕ್ಷೋಭಿಸು (ಕ್ರಿ). ಅಲ್ಲೋಲಕಲ್ಲೋಲವುಂಟಾಗು ; ಪ್ರಕ್ಷುಬ್ಧ ಗೊಳ್ಳು : ಬಾಹಾಗದಾಯುಧವಿಕ್ಷೇಪವಿಜೃಂಭಣಭ್ರಮಣದಿಂ ಪ್ರಕ್ಷೋಭಿಸಲ್ ಯುದ್ಧಕೇಳಿಧುರೀಣರ್ . . . ಪೊಯ್ದರ್ ಗದಾದಂಡದಿಂ (ಜಗನಿ. ೯-೭೩). [ಪ್ರಕ್ಷೋಭ + — ಇಸು$_3$]

ಪ್ರಕ್ಷ್ವೇಡನ (ನಾ). ೧. ಗದ್ದಲ ; ಗಜಿಬಿಜಿ. ೨. ಕಬ್ಬಿಣದ ಬಾಣ : "ಪ್ರಕ್ಷ್ವೇಡನಃ, ನಾರಾಚಃ—೨ ನಾರಸದ ಹೆಸರುಗಳು" (ಸಿದ್ಧಾಂತಿ. ೨೬೯). [ಸಂ.]

ಪ್ರಖರ (ಗು). ೧. ಬಹಳ ಬಿಸಿಯಾದ ; ಚುರುಕಾದ. ೨. ತೀಕ್ಷ್ಣ ವಾದ ; ಕಟುವಾದ. (ನಾ). ೩. ಬಹಳ ಬಿಸಿಯಾದುದು; ಚುರು ಕಾದುದು : ಸೂರ್ಯನ ಪ್ರಖರವಾದ ಕಿರಣಗಳು ಒಳಗೆ ತೂರಿಬರದಂತೆ ತಕ್ಕ ಪ್ರಮಾಣದ ಕಾಜಿನ ಕಿಟಕಿಗಳು . . . ಹಚ್ಚಿರಬೇಕು (ಗ್ರಂಪಾಲ. ೭) ; ಸೂರ್ಯನು ಒಳ್ಳೆ ಪ್ರಖರವಾಗಿ . . . ಬಿಸಿಯಾದ ಕಿರಣಗಳನ್ನು ಅವನ ಮೇಲೆ ಬಿಡುತ್ತಿದ್ದನು (ಮಲಿನಾ. ೦೦೦). ೪. ನಾಯಿ. ೫. ಹೇಸರಗತ್ತೆ. [ಸಂ.]

ಪ್ರಖರತೆ (ನಾ). ೧. ತೀಕ್ಷ್ಣತೆ : ಮಾಯಾದೇವಿಯು ಆ ಭೇದಕಕಣ್ಣು ಗಳ ಪ್ರಖರತೆಯನ್ನು ಸಹಿಸಲಾರದಾದಳು (ಪ್ರಸಂ. ೯). ೨. ಕಾವು; ಬಿಸುಪು : ಅವನ ಆತ್ಮವಿಶ್ವಾಸದಲ್ಲಿ ಒಂದು ಪ್ರಖರತೆಯಿತ್ತು (ಸಮಜೀ. ೪೦೯). [ಸಂ. ಪ್ರಖರತಾ]

ಪ್ರಖೇಣ (ನಾ). ಒಂದು ಬಗೆಯ ಮರ ; ಕದಂಬವಕ್ಷ : ಷಟ್ಪದೇಷ್ಟ . . . ಪ್ರಖೇಣ . . . ನೀರುಕಡವಾಲ (ಹಸುಹೊ. ೯೬). [ಸಂ.]

ಪ್ರಖ್ಯ (ಗು). ೧. ಕಾಣುವ ; ಸ್ಫುಟವಾದ. ೨. ಹೋಲುವ ; ಸಮಾನ ವಾದ : ಪರಮೇಷ್ಠಿಪ್ರಖ್ಯವಿಪ್ರಪ್ರತತಿಗಳಿನಿಳಾಪ್ರಖ್ಯಶೂದ್ರಾಳಿಯಿಂ ಖೇಚರಕಾಂತಪ್ರಖ್ಯರಪ್ಪಾ ವಣಿಜರಿಂ ಇನಜಪ್ರಖ್ಯ ಕೊಯ್ಯಾಳ್ಗಳಿಂ . . . ಅರಸಿಯ ಕೆರೆ ಭೂಭಾಗದೊಳ್ ಶೋಭಿಸಿರ್ಕ್ಕುಂ (ಪ್ರಸಂ. ೦೯೨೮. ೦೦-೯೩ ; 1189). ೩. ಪ್ರಖ್ಯಾತ ; ಶ್ರೇಷ್ಠ : ಇಳಾಪ್ರಖ್ಯಶೂದ್ರಾಳಿಯಿಂ . . . ಶೋಭಿಸಿರ್ಕ್ಕುಂ (ಪ್ರಸಂ ೦೯೨೮. ೦೦-೯೨ ; 1189). (ನಾ). ೪. ಸಮಾನವಾದುದು : "ಸದ್ಯಕ್, ಸಮಾಸಂ, ಸದೃಶಂ, ಸದೃಕ್ಷಂ, ಪ್ರಖ್ಯಂ . . . ಸನ್ನಿಭಂ—ಈ ೧೧ ಸರಿ" (ಹಲಾಯು. ೦೦೫-೯). [ಸಂ. ಪ್ರಖ್ಯಾ]

ಪ್ರಖ್ಯಾತ (ಗು). ೧. ಹೆಸರುವಾಸಿಯಾದ ; ಪ್ರಸಿದ್ಧವಾದ : ಪ್ರಖ್ಯಾತ ಕವಿಯಾದ ಮುದ್ದಣನ ಬರವಣಿಗೆ ಬಹು ರಮ್ಯವಾಗಿದೆ (ಕೂಡಿ). ೨. ಮಾನ್ಯತೆಯುಳ್ಳ ; ಅಂಗೀಕೃತವಾದ. (ನಾ). ೩. ಹೆಸರುವಾಸಿ ಯಾದುದು ; ಪ್ರಸಿದ್ಧವಾದುದು : ಕನ್ನಡಸಾಹಿತ್ಯದಲ್ಲಿ ಕುಮಾರವ್ಯಾಸ ಭಾರತವು ಪ್ರಖ್ಯಾತವಾಗಿದೆ (ಕೂಡಿ). ೪. ಪ್ರಸಿದ್ಧನಾದವನು ; ಕೀರ್ತಿ ವಂತ. ೫. ಎಲ್ಲರಿಗೂ ತಿಳಿದುದು ; ಸರ್ವವಿದಿತ ; ಬಹಿರಂಗ : ಲೆಕ್ಕದಲ್ಲಿ ಲೇಖಿತವಾಹರಿಗೇಕೆ ಅಜಾತನ ಸುದ್ದಿ ಪ್ರಖ್ಯಾತದಲ್ಲಿ ನೀತಿಯ ಹೇಳಿಹೆನೆಂದು ದೇಶದಲ್ಲಿ ಸುಳಿವವರಿಗೇಕೆ ಪರದೋಷನಾಶನದ ಸುದ್ದಿ (ಪೋಳಿಮಾ. ೦೨-೯೯). ೬. [ಕಾವ್ಯಮಿಾ] ರೂಪಕಗಳಲ್ಲಿನ ಮೂರು ಬಗೆಯ ಕಥಾಂಶಗಳಲ್ಲಿ ಒಂದು ; ರಾಮಾಯಣ, ಭಾರತ ಮೊದ ಲಾದ ಪ್ರಾಚೀನಗ್ರಂಥಗಳಲ್ಲಿ ನಿರೂಪಿಸಿರುವ ಕಥೆ : ಈ ಮೂರು ವಿಧವಾದ ವಸ್ತುವೂ "ಪ್ರಖ್ಯಾತ" ಎಂದರೆ—ರಾಮಾಯಣ, ಭಾರತ, ಕಥಾಸರಿತ್ಸಾಗರ ಮುಂತಾದ ಗ್ರಂಥಗಳಲ್ಲಿ ಬಂದು—ಪ್ರಸಿದ್ಧವಾಗಿರಬಹುದು (ಕೃಪಿಡಿ. ೨೦೩) ; ನಾಟಕ—ಇದರ ವಸ್ತು ಪ್ರಖ್ಯಾತ (ಸಂಪಾಟಿ. ೨೯). [ಸಂ.]

ಪ್ರಖ್ಯಾತಿ (ನಾ). ೧. ಯಶಸ್ಸು ; ಕೀರ್ತಿ : ಪ್ರಖ್ಯಾತಿ ಹೊಂದಿ ಅಪಖ್ಯಾತಿ ಪಟ್ಟ (ಗಾರ). 'ಪ್ರಖ್ಯಾತಿವೆಱು' ಪರಾ. ೨ ಹೊಗಳಿಕೆ ; ಸ್ತುತಿ. ೩. ಅರಿವು ; ತಿಳಿವಳಿಕೆ. [ಸಂ.]

ಪ್ರಖ್ಯಾತಿವೆಱು (ಕ್ರಿ). ಹೆಸರುವಾಸಿಯಾಗು ; ಪ್ರಸಿದ್ಧಿ ಹೊಂದು : ಸಂತತಜಿನಸವನೋದ್ಯತ್ಪಯೋಧಾರೆಯಿಂ ಮಾಡಿ ಕರಂ ಪ್ರಖ್ಯಾತಿವೆತ್ತಂ ನೃಪತನಯನನೇಕಾಂತವಿದ್ಯಾವಿನೋದಂ (ಶಂಪ್ರಪು. ೯-೮೯) [ಪ್ರಖ್ಯಾತಿ + ಪೆಱು$_1$]

ಪ್ರಖ್ಯಾಪನ (ನಾ). ಪ್ರಸಿದ್ಧಪಡಿಸುವುದು ; ಎಲ್ಲರಿಗೂ ತಿಳಿಯ ಪಡಿಸುವುದು : ಅದನ್ನು ರಾಷ್ಟ್ರಪತಿಯವರು ಪ್ರಖ್ಯಾಪನ ಮಾಡಿದಾಗ, ಅದು ಅಂಥ ರಾಜ್ಯಕ್ಷೇತ್ರಕ್ಕೆ ಅನ್ವಯಿಸುವಂಥ ಸಂಸತ್ತಿನ ಒಂದು ಅಧಿನಿಯಮದಂತೆಯೇ . . . ಪ್ರಭಾವ ಉಳ್ಳದ್ದಾಗಿ ಇರತಕ್ಕುದು (ಶಾಧಾಪ. ೦೩೬). [ಸಂ.]

ಪ್ರಖ್ಯೆ (ನಾ). ೧. ಗ್ರಹಣಶಕ್ತಿ : ಪಂಪನು . . . ಮಹಾಕವಿಪ್ರತಿಭೆಗೆ ಮಾತ್ರ ಸಹಜವಾದ ಪ್ರಖ್ಯೆಯಿಂದ ಕತೆಯನ್ನು ನಡೆಸಿಕೊಂಡು ಹೋಗು ತ್ತಾನೆ (ಕಶಾಪ. ೯೬). ೨. ಕೀರ್ತಿ ; ಪ್ರಸಿದ್ಧಿ ; ಪ್ರಖ್ಯಾತಿ. [ಸಂ. ಪ್ರಖ್ಯಾ]

ಪ್ರಗಂಡ (ನಾ). ಮೊಳಕೈಯಿಂದ ಹೆಗಲಿನ ವರೆಗಿನ ತೋಳಿನ ಭಾಗ : "ಪ್ರಗಂಡಃ . . . ಅಸ್ಯೋಪರಿ, ಮೊಳಕೈಗಿಂತಲೂ ಮೇಲೆ ಕಂಕಳವರೆಗೂ ಮೇಲುತೋಳಿನ ಪೆಸರು" (ಸಿದ್ಧಾಂತಿ. ೦೯೨). [ಸಂ.]

ಪ್ರಗಣಿತ (ಗು). ೧. ಎಣಿಸಿದ ; ಗುಣಿಸಿದ. ೨. ಗಮನಿಸಿದ : ಬಗೆದು ಮೇಣ್ ಪರಮಧರ್ಮಮನರ್ಥಿಯಿನನ್ವಯಪ್ರಗ(ತಿ)ಣಿತಾಭ್ಯು ದಯಮೋಕ್ಷಸುಖಾಶ್ರಯಹೇತುವಂ ನೆಗೞ್ಗೆ (ಕವಿರಾ. ೩-೨೨೩) ; ನಿಗುರ್ವ ಚೌಕುಳವೆಂಬ ಶಾರಿರ ಸುಗತಿಯಿಂದನುಬದ್ಧಗೂಡಿ ಪ್ರಗಣಿತಾಳತಿಯೆಸೆಯೆ ಸಂಧಿಸೆ ಗಮಕಸಪ್ತಕವು (ಬಸಪು. ೦೯-೦೦). (ನಾ). ೩. ಅತಿಶಯತೆ : ಕನಕಾಂಚೇನಿನದಪ್ರಗಣಿತಮಗಲ್ದ ನಲ್ಲಳ ಜಗನಮಿದೆನ್ನೆರ್ದೆಯನೆಂತು ಪೊಕ್ಕಳಿಪುವುದೋ (ಪಂಪಶಾ. ೯-೭೩). [ಸಂ.]

ಪ್ರಗತ (ಗು). ೧. ಮುಂದುವರಿದ : ಇಂದಿನ ಪ್ರಗತ ದೇಶಗಳು ಬಟ್ಟೆ ಯನ್ನೂ ಅರಿಯದ ಕಾಲದಲ್ಲಿ ಭರತಖಂಡವು ಜ್ಞಾನವಿಜ್ಞಾನದ ಶಿಖರದಲ್ಲಿ ಇದ್ದಿತು (ಕರ್ನಾಟಿ. XIV ಮುನ್ನುಡಿ). ೨. ಅಪರೂಪವಾದ ; ವಿರಳ ವಾದ : ಲೋಕೋತ್ತರವಾದ : ಸಕಲಜನವಿನುತನಂ . . . ಪ್ರಗತ ಗುಣಗಣನನರಿಬಲವಿಘಟನನಂ ಕಂಡನಣುವನಾ ರಾಘವನಂ (ಕವಿರಾ. ೨-೨೮). ೩. ಹೆಚ್ಚಾಗಿ ಬಳಕೆಯಲ್ಲಿರುವ,—ವ್ಯವಹಾರದಲ್ಲಿರುವ : ಮಧ್ಯ ಮೋತ್ತಮಪುರುಷಪ್ರಗತಬಹೂಕ್ತಿಯೊಳಿಮಮೆಂದೊಗೆತರ್ಕುಂ (ಶಪುದ. ೨೨೯). [ಸಂ.]

ಪ್ರಗತಿ (ನಾ). ಏಳಿಗೆ ; ಮುನ್ನಡೆ ; ಪುರೋಭಿವೃದ್ಧಿ : ಇತರ ಕಾರ್ಯ ಕ್ಷೇತ್ರಗಳಲ್ಲಿಯೂ ದೇಶವು ಪ್ರಗತಿಯನ್ನು ಹೊಂದಿತು (ಪ್ರಸಾಸ್ತು. ೨೦); ಅಡಿಗೆಯು ಅನಾಗರಿಕಸ್ಥಿತಿಯಿಂದ ಮನುಷ್ಯನು ಹೊಂದಿದ ಪ್ರಗತಿಯ ಸೂಚಿಕೆ (ಅಡುಸೌ. ೬೬). [ಸಂ.]

ಪ್ರಗತಿಪಥ (ನಾ). ಏಳಿಗೆಯ ಹಾದಿ ; ಅಭಿವೃದ್ಧಿಯ ಮಾರ್ಗ : ಜೀವನ ಹಿಂದಿನದಕ್ಕಿಂತ ನವೀನವೂ ಉತ್ತಮವೂ ಆಗಿ ಪ್ರಗತಿಪಥದಲ್ಲಿ ಸಾಗುತ್ತಿದೆ (ಶಿಕ್ಷದ. ೦). [ಸಂ.]

ಪ್ರಗತಿಪರ (ಗು). ೧. ಏಳಿಗೆಯಲ್ಲಿ ಆಸಕ್ತಿಯುಳ್ಳ ; ಪ್ರಗತಿಶೀಲ :

ಅದು ಪ್ರಗತಿಪರ ವಿಚಾರಶೀಲರ ಸಂಘವಾಗಿತ್ತು (ಕವಿಕೋ. I. ೦೫೮). (ನಾ). ೨. ಏಳಿಗೆಯಲ್ಲಿ ಆಸಕ್ತಿಯುಳ್ಳವನು : ಬೇ ಪ್ರಗತಿಪರನಾದ ವ್ಯಕ್ತಿ. ಪ್ರಕೃತಶತಮಾನದ ಉತ್ತರಾರ್ಧದ ಪ್ರಾರಂಭದಲ್ಲಿ ಪ್ರಚಾರದಲ್ಲಿದ್ದ ಪ್ರಗತಿಪರಸಂಪ್ರದಾಯ ಅತ್ಯಂತ ಪವಿತ್ರವಾದದ್ದೆಂದು ಅವನು ಪರಿಗಣಿಸಿದ್ದನು (ಪುನರು. ೩೬೩). [ಸಂ.]

ಪ್ರಗತಿವಾದಿ (ನಾ). (ಹಳೆಯ ಕಂದಾಚಾರಕ್ಕೆ ಶರಣಾಗದೆ) ಯಾವುದಾದರೊಂದು ಕ್ಷೇತ್ರದಲ್ಲಿ ಸುಧಾರಣೆಯನ್ನು ಮಾಡಬೇಕೆಂದು ವಾದಿಸುವ ವ್ಯಕ್ತಿ : ನಾನು ಪ್ರಗತಿವಾದಿಯೋ ಅಲ್ಲವೋ ನನಗೆ ಗೊತ್ತಿಲ್ಲ (ಪುನರು. ೨೨೪) ; ಅತಿತ್ವರಿತದಲ್ಲಿ ಸುಧಾರಣೆಯನ್ನು ಬಯಸುವ ಪ್ರಗತಿವಾದಿಗಳನ್ನು ಗುರುತಿಸಬಹುದು (ಶಾಶಾ. ೨೩). [ಸಂ. ಪ್ರಗತಿವಾದಿನ್]

ಪ್ರಗತಿಶೀಲ (ಗು). ೧. = ಪ್ರಗತಿಪರ ೧ : ಭಾರತದ ಇತರ ಭಾಷೆಗಳಲ್ಲಿ ನವ್ಯಕವಿಗಳು ಹಾಗು ಪ್ರಗತಿಶೀಲಪಂಥಗಳವರು ನಡೆಸುತ್ತಿರುವ ಚಳವಳಿಗಳನ್ನು ಗಮನಿಸಬೇಕಾದುದು ಅಗತ್ಯ (ಕವಿಕೋ. I, ೦೮೩). (ನಾ). ೨. ದೀನದಲಿತರನ್ನು ಕುರಿತು ಕೃತಿರಚನೆ ಮಾಡಬೇಕೆಂಬ ತತ್ತ್ವವನ್ನು ಅನುಸರಿಸಿ ಬರೆದ ಸಾಹಿತ್ಯ : ಪ್ರಗತಿಶೀಲಲೇಖಕರು ಸಾಹಿತ್ಯಕ್ಕೆ ಹೆಚ್ಚಿನ ವಸ್ತುವೈವಿಧ್ಯ, ವಿಸ್ತಾರಗಳನ್ನು ತಂದರು (ಕವಿಕೋ. XI. ೩೦೯) ; ಇತರ ಸಾಹಿತಿಗಳ ಸಾಹಿತ್ಯಸೃಷ್ಟಿಯನ್ನು ೧. ಅನುಭಾವಿಸಾಹಿತ್ಯ—ರಹಸ್ಯವಾದ . . . ೩. ಪ್ರಗತಿಶೀಲ, ೪. ನವ್ಯಕಾವ್ಯ ಅಥವಾ ಪ್ರಯೋಗವಾದ ಎಂದು ವಿಭಾಗಿಸಬಹುದಾಗಿದೆ (ಶಾರದ. ೪೭೨). ೩. ದೀನದಲಿತರನ್ನು ಕುರಿತು ಕೃತಿರಚನೆ ಮಾಡಬೇಕೆಂದು ಹುಟ್ಟಿಕೊಂಡ ಲೇಖಕರ ಬಳಗದ ಸದಸ್ಯ : ಬಡವರು, ಕಾರ್ಮಿಕರು, ಕೂಲಿಕಾರರು ಮೊದಲಾದವರ ಬದುಕಿನ ನೋವುನಲಿವುಗಳಿಗೆ ಅಭಿವ್ಯಕ್ತಿ ನೀಡಿ ಪ್ರಗತಿಶೀಲರು ಕನ್ನಡಸಾಹಿತ್ಯಕ್ಕೆ ಹೊಸ ಆಯಾಮಗಳನ್ನಿತ್ತರು (ಕವಿಕೋ. XI. ೩೦೮). [ಸಂ.]

ಪ್ರಗಲ್ಭ (ಗು). ೧. ಪ್ರತಿಭೆಯಿಂದ ಕೂಡಿದ. ೨. ಧೈರ್ಯದಿಂದ ಕೂಡಿದ : ಕೆಚ್ಚುಳ್ಳ. ೩. ಚೆನ್ನಾಗಿ ಬೆಳೆದಿರುವ. ೪. ಪಾಂಡಿತ್ಯಪೂರ್ಣವಾದ ; ಪ್ರೌಢವಾದ : ನೃಪನಂ ಜಾಣ್ಗೊಂಡ ನಿಜಪ್ರಗಲ್ಭವಚನದೆ ನುಡಿದಳ್ (ಕಾದಂಶಾ. ೬೬೦). (ನಾ). ೫. ಧೈರ್ಯಶಾಲಿ ; ದಿಟ್ಟ. ೬. ಪ್ರೌಢ ; ಪ್ರವೀಣ ; ನಿಪುಣ : "ಪ್ರಗಲ್ಭಃ, ಪ್ರೌಢಃ—ಈ ೨ ಪ್ರೌಢಂ" (ಹಲಾಯು. ೬೪-೨೩೨) ; ನೆಗಟ್ದೂರೆ ಪುಣ್ಯಾಹಸ್ವರಂ . . . ಪುಗವೇಟ್ದಂ ವಿವಿಧಾಸ್ತ್ರಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ (ಪಂಪಭಾ. ೨-೬೯) ; ಬಹುಶ್ರುತನುಂ ಅತಿಪ್ರಗಲ್ಭನುಂ . . . ಆಚಾರ್ಯನಕ್ಕುಂ (ಅಜಪು. ೦೦-೨ ಪ). ೭. ಚುರುಕಾದ ಬುದ್ಧಿಯುಳ್ಳವನು ; ಪ್ರತಿಭಾವಂತ : "ಪ್ರಗಲ್ಭಃ, ಪ್ರತಿಭಾನ್ವಿತಃ—೨ ಆಗಾಗ್ಯೆ ಹೊಸಹೊಸದಾಗಿ ಪ್ರಕಾಶಿಸುವ ಪ್ರಜ್ಞೆಯುಳ್ಳವನ ಪೆಸರು" (ನಿಠ್ಠಾಂತಿ. ೩೨೯). [ಸಂ.]

ಪ್ರಗಲ್ಭತೆ (ನಾ). ೧. ಧೈರ್ಯ ; ಕೆಚ್ಚು. ೨. ಆಳವಾದ ತಿಳಿವಳಿಕೆ ; ಪಾಂಡಿತ್ಯ : "ಪ್ರತಿಪತ್ತಿಃ, ಪ್ರಗಲ್ಭತಾ — ಈ ೨ ಅಱಿವುದು" (ಹಲಾಯು. ೦೨೬-೯೪) ; ಪ್ರಗಲ್ಭತೆಯಿನಾಯ್ದವೋಲ್ ಬೆಳಗುವೂಗಳಂ ಗಾಳಿ ದುಂಬಿಗಳ್ ಬಗೆದು ಮೊಲ್ಲೆ ಮಲ್ಲಿಗೆಯ ಮಾಲೆ ಮೆಲ್ಪಿಂಗೆ ಪಾಯ್ತೆಗೆತ್ತೆಱಗೆ (ಲೀಲಾವ. ೦೩-೯೭). ೩. ಪ್ರೌಢಿಮೆ ; ನೈಪುಣ್ಯ : ಆ ಕೃತಿ ಮುನ್ನಂ ಚಿಲ್ವಿಂಗಾಕರಮೆನಿಸಿರ್ದು ಮತ್ತೆ ಕನ್ನಡಿಸಿತ್ತಿನ್ನೀ ಕವಿತೆಯಿಂ ಪ್ರಗಲ್ಭತೆಯಾ ಕಾದಂಬರಿಯ ಸೊಬಗದೇನಚ್ಚರಿಯೋ (ಕಾದಂಪೂ. ೬). [ಸಂ. ಪ್ರಗಲ್ಭತಾ]

ಪ್ರಗಲ್ಭೆ (ನಾ). ೧. ದಿಟ್ಟ ಹೆಂಗಸಂ. ೨. ಪ್ರೌಢವಯಸ್ಸಿನ ಮಹಿಳೆ. ೩. ಗಯ್ಯಾಳಿ : ಗಟವಾಣಿ. ೪. [ಕಾವ್ಯಮೀ] ಯೌವನದ ಅನುಭವದ ಪರಿಣಾಮವಾಗಿ ಭಾವಪರವಶತೆಯುಳ್ಳವಳು : ಅನುರಕ್ತೆ ಸರಸತರಮಾನಿನಿ ಪರಿಚಿತೆಯಖಿಳವಿಷಯನಿಶ್ಚಿತಮತಿ ಕಾಮಿನಿಯೆನಿಸಿದಾಕೆ ಕವಿಕಾಮನ ಮತದಿಂ ಪ್ರಗಲ್ಭೆಯೆನೆ ಪೆಸರ್ವಡೆಗುಂ (ಶೃಂಗಾರ. ೩-೩೩) : ಮತಿಯನುಳ್ಳ ವೈಶಿಕಕ್ಕೆ ಗತಿಯೆನಿಸುವ ಮಾತಿನಿಂದೆ ರತಿಗೆ ತಪ್ಪದಂತೆ ರತಿಯನ್ನೆದೆ ಬೆಳೆಯಿಪ ಚತುರರಿಚ್ಛೆಗೆಯ್ವ ಠಕ್ಕರತಿಶಯವನೆ ಗೆಲ್ವ ಪಲವು ಕೃತಕಮಱಿವಳೇ ಪ್ರಗಲ್ಭೆ (ಜಪಪ. ೩-೦೨). [ಸಂ. ಪ್ರಗಲ್ಭಾ]

ಪ್ರಗಾಢ (ಗು). ತೀವ್ರವಾದ ; ಗಾಢವಾದ : ಇತರರ ಮೇಲೆ ಕೂಡ ಪ್ರಗಾಢ ಪ್ರಭಾವವನ್ನು ಬೀರುವ ದುಷ್ಟಪ್ರವೃತ್ತಿ ನೆಗಡಿಗೆ ಇದೆ (ದೇಶಸ್ಥ. ೦೪). [ಸಂ.]

ಪ್ರಗಾಥ (ನಾ). ೧. [ಛಂದ] ಮಿಶ್ರಛಂದಸ್ಸುಗಳಿಂದಾದ ಒಂದು ಬಗೆಯ ವೈದಿಕಛಂದಸ್ಸು : ೮ ಮತ್ತು ೧೨ ಅಕ್ಷರಗಳ ಪಾದಗಳನ್ನು ಬೆರಸಿ ನಾಲ್ಕುಪಾದದ ವೃತ್ತವನ್ನು ಏಳರ ವರೆಗೆ ವಿಸ್ತರಿಸಿ ಪ್ರಗಾಥಗಳನ್ನು ವೈದಿಕಕವಿಗಳು ರಚಿಸಿರುತ್ತಾರೆ (ಕೃವಿಪಿ. ೦೦೯) ; ವೈದಿಕಛಂದಸ್ಸಿನಲ್ಲಿ ಗಾಯತ್ರಿ, ಅನುಷ್ಟುಭ್, ತ್ರಿಷ್ಟುಭ್, ಜಗತೀ, ಪ್ರಗಾಥ ಹೀಗೆ ಐದು ಮುಖ್ಯ ಪ್ರಕಾರಗಳೆಂದು ತೋರುತ್ತದೆ (ಛಂದೋವಿ. ೪೭). ೨. ಆಧುನಿಕ ಕವಿಗಳು ರಚಿಸುವ, ಸಾಮಾನ್ಯವಾಗಿ ದೀರ್ಘಪಾದಗಳಿರುವ, ಘನವಾದ ವಸ್ತುವನ್ನು ಕುರಿತು ಸಂಭೋಧನಪರವಾದ ಒಂದು ಕವಿತೆಯ ಪ್ರಕಾರ : ಇಂಗ್ಲೀಷಿನ ಮುಖಾಂತರ ಕನ್ನಡಕಾವ್ಯಕ್ಷೇತ್ರದಲ್ಲಿ ಸುಳಿದು ಬಂದ ಛಂದೋರೂಪಗಳಲ್ಲಿ ಪ್ರಗಾಥವು ಒಂದು . . . ಪ್ರಗಾಥವು ಭಾವಗೀತದ ಒಂದು ಪ್ರಕಾರ (ಛಂದೋವಿ. ೩೦೬) ; ಕನ್ನಡದಲ್ಲಿ ಅನೇಕ ಕವಿಗಳು ಪ್ರಗಾಥಗಳನ್ನು ಬರೆದಿದ್ದಾರೆ (ಕವಿಕೋ. XI. ೩೦೮). [ಸಂ.]

ಪ್ರಗೀತ (ಗು). ೧. ಹಾಡಿದ. (ನಾ). ೨. ಹಾಡು; ಗೀತೆ. ೩. ಕೊಂಡಾಟಕ್ಕೆ ಪಾತ್ರನಾದವನು ; ಪ್ರಸಿದ್ಧ : ಮೊನೆಗಾಱರಂ ಪ್ರಗೀತರನಿಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರೊಡನೆಸೆಯೆ ನೆರೆದ ಪುರಜನಸಹಿತಂ (ಪಂಪಭಾ. ೨-೬೬). ೪. ಹ್ರಸ್ವಸ್ವರವನ್ನು ದೀರ್ಘಸ್ವರದಂತೆ ಹೇಳುವುದು : ಸಾಮಗಾನದಂತೆ ಎಳೆದು ಹೇಳುವುದು "ಪ್ರಗೀತ" ವೆನಿಸುವುದು (ಸಂಶೋಧ. ೦೨೦). [ಸಂ.]

ಪ್ರಗೀತಿ (ನಾ). ೧. ಪ್ರಶಂಸೆಯ ಉಲ್ಲೇಖ : ಮಿಗೆ ಕನ್ನಡಗಬ್ಬಂಗಳೊಳಗಣಿತಗುಣಗದ್ಯಪದ್ಯಸಮ್ಮಿಶ್ರಿತಮಂ ನಿಗದಿಸುವರ್ಗದ್ಯಕಥಾಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ (ಕವಿರಾ. ೦-೨೬). ೨. [ಛಂದ] ಸಂಸ್ಕೃತದ ಒಂದು ಬಗೆಯ ಛಂದಸ್ಸು. [ಸಂ.]

ಪ್ರಗುಣ (ಗು). ೧. ಪ್ರಶಸ್ತವಾದ ಗುಣಗಳಿಂದ ಪರಿಪೂರ್ಣವಾದ,—ಶ್ರೇಷ್ಠವಾದ : ಬಗೆದು ಮಾರ್ಗದ್ವಿತಯಗತಿಗಳಂ ಪ್ರಗುಣಗುಣಗಣೋದಯರ್ಕಳೆ . . . ಬೆರಸಿ ಪೇಟ್ಗೆ ರಸವಿಶೇಷದೊಳ್ (ಕವಿರಾ. ೨-೯೮) ; ತರವೇಟ್ ಕೇಯೂರಹಾರಪ್ರಗುಣಮಣಿವಿಭೂಷಾವಿಶೇಷಂಗಳಂ (ಅಜಪು. ೩-೭೯). ೨. ನೇರವಾಗಿರುವ ; ವಕ್ರವಲ್ಲದ : "ಪ್ರಗುಣಮಕುಟಿಲಂ ರಿಜು ಸರಲಂ" (ವಸ್ತುಕೋ. ೦೦೪-೩೮). [ಸಂ.]

ಪ್ರಗ್ರಹ (ನಾ). ೧. ಬಿಗಿಯಾಗಿ ಹಿಡಿದುಕೊಳ್ಳುವಿಕೆ. ೨. ತೆಗೆದುಕೊಳ್ಳುವಿಕೆ ; ಸ್ವೀಕರಿಸುವಿಕೆ. ೩. (ಇಂದ್ರಿಯಗಳ) ಹತೋಟಿ ; ನಿಗ್ರಹ. ೪. ಹಗ್ಗ ; ರಜ್ಜು : "ಆ ಹಗ್ಗದಲ್ಲಿಯುಂ ಪ್ರಗ್ರಹಮೆಂಬುದು" (ಹಲಾಯು. ೦೩೪-೦೯). ೫. ಕುದುರೆಯ ಕಡಿವಾಣ : ನಾನಾರತ್ನಕೂಟಾಂಶುಜಾಲದಿನಾಶಾವಧುಗಿತ್ತು ಚಿತ್ರಪಟಮಂ ಚೈತ್ಯಾಲಯಂ ಮತ್ತಮಿತ್ತುದು ಸಪ್ತಾಶ್ವನ ಸಪ್ತಸಪ್ತಿಗೆ ಸಮಗ್ರ ಪ್ರಗ್ರಹಾಶಂಕೆಯಂ (ಪಂಪಾಮಾ. ೪-೦೨೯). ೬. ಸೆರೆ ಸಿಕ್ಕವನು ; ಬಂದಿ ; ಸೆರೆಯಾಳು : "ಪ್ರಗ್ರಹಃ, ಗ್ರಾಹಕಃ, ವಂದೀ—ಈ ೩ ಬಂದಿ"

(ಹಲಾಯು. ೦೨೬-೬೯). ೭. ಸೆರೆಹಿಡಿಯುವಿಕೆ ; ದಸ್ತಗಿರಿ ಮಾಡುವುದು : "ಗ್ರಾಹಕಂ ಪ್ರಗ್ರಹವೆನಲ್ಬಂದಿವಿಡಿಹವಕ್ಕು" (ಮಂಗರಾ. ೧೩೬-೪೦). ೮. ಕಿರಣ ; ಕದಿರು : "ಉಸ್ರಃ . . . ಪ್ರಗ್ರಹಃ, ಉಪಧೃತಿಃ . . . ಗೌಃ—ಈ ೩೨ ರಶ್ಮಿಗಳ ಪೆಸರ್" (ಹಲಾಯು. ೬-೩೯) ; "ಪ್ರಗ್ರಹಂ ದೀಪ್ತಿ . . . ಪ್ರದ್ಯೋತಮಾ ರಶ್ಮಿ" (ಮಂಗರಾ. ೦೦-೩). ೯. ತೂಕವು ಏರುಪೇರಾಗದಿರಲು ತಕ್ಕಡಿಯ ಮಧ್ಯದಲ್ಲಿ ಕಟ್ಟಿರುವ ದಾರ: "ಪ್ರಗ್ರಾಹಃ, ಪ್ರಗ್ರಹಃ—೨ ತ್ರಾಸಿನ ದಾರ, ಕುದುರೆ ಮುಂತಾದುವನ್ನು ಕಟ್ಟುವ ಹಗ್ಗ" (ಸಿದ್ಧಾಂತಿ. ೪೨೮). ೧೦. ಮುಖಂಡ ; ನಾಯಕ : ಅಂತು ಪ್ರಥಮನಾಕನಾಯಕ ಪ್ರಗ್ರಹಾಮರರ್ ಬಂದು ಷೋಡಶತೀರ್ಥಕರಪಾದಪಯೋಜಂಗಳ್ಗವನತಮಣಿಮಕುಟರಾಗಿ ಪರಿಚಾರಕಕೃತ್ಯದೊಳ್ ನೆಗಟ್ (ಶಾಂತಿಪು. ೦೦-೯೯ ಪ). ೧೧. ತೋಳು ; ಭುಜ. ೧೨. ದಯೆ ; ಅನುಗ್ರಹ. ೧೩. ವಿಷ್ಣು. ೧೪. ಚಿನ್ನ. [ಸಂ.]

ಪ್ರಗ್ರಾಹ (ನಾ). ೧. ತೆಗೆದುಕೊಳ್ಳುವುದು. ೨. ತಕ್ಕಡಿಯ ಮಧ್ಯದಲ್ಲಿರುವ ದಾರ. ೩. ಕುದುರೆಯ ಕಡಿವಾಣ. ೪. ಕುದುರೆಯನ್ನು ಕಟ್ಟುವ ಹಗ್ಗ : "ಪ್ರಗ್ರಾಹಃ, ಪ್ರಗ್ರಹಃ—೨ ತ್ರಾಸಿನ ದಾರ, ಕುದುರೆ ಮುಂತಾದುವನ್ನು ಕಟ್ಟುವ ಹಗ್ಗ" (ಸಿದ್ಧಾಂತಿ. ೪೨೮). [ಸಂ.]

ಪ್ರಘಟ್ಟ (ನಾ). ೧. ಸಂದರ್ಭ ; ಸನ್ನಿವೇಶ ; ಪ್ರಸಂಗ : ಅನಿತೊಂದು ಮಹಾಪ್ರಘಟ್ಟದೊಳಗ್ರಪೂಜೆಯಂ ನಾರಾಯಣಂಗೆ ಕೊಟ್ಟು (ಶಂಪಶಾ. ೬-೬೩ ಪ). ೨. ಸಂಗತಿ ; ವಿಷಯ : ಕಪಿತ್ಥತರುವಂ ನೆಲದೊಳಿಕ್ಕಿ ಮಗುಟ್ಟು ಬಪ್ಪುದುಮಾ ಪ್ರಘಟ್ಟಮಂ ವಿಶಾಖಭೂತಿಭೂಪಾಳಂ ಕೇಳ್ದು (ಪರ್ಸಮಾ. ೨-೩೩ ಪ). [ಸಂ.]

ಪ್ರಘಟ್ಟಕ (ನಾ). ೧. = ಪ್ರಘಟ್ಟ ೧ : ಇನಿತೊಂದುಗ್ರರಣಪ್ರಘಟ್ಟಕದೊಳೀ ಭಾರಾವತಾರಂ ಧರಾಂಗನೆಗೀಯಿರ್ವರಿನಾದುದಾಯ್ತು (ಪಂಪಭಾ. ೦೯-೦೦); ಚೋಳಿಕರ ಪ್ರಘಟ್ಟಕದಿಂ ಕೆಟ್ಟ ಸಮ್ಮನ್ಧಿಯಿಂ ಪುನರ್ಭ್ಭರಣಂ ಮಾಡಿ (ಎಇ. XV, ೬೯-೦೭; 1050) ; ನಲ್ಲನೊಲ್ಲದೆ ಪೋದೀ ವಿರಹಪ್ರಘಟ್ಟಕದೊಳೀ ನೈಪಥ್ಯಮುಂ ಪಥ್ಯಮೇ (ಕಂದ್ರಪು. ೬-೬೮). ೨. ವಿಧಿ ; ಆಜ್ಞೆ ; ನಿಯಮ ೩. ಬೋಧನೆ ; ಉಪದೇಶ. [ಸಂ.]

ಪ್ರಘಟ್ಟನ (ನಾ). ೧. = ಪ್ರಘಟ್ಟ ೧ : ಐವರ್ ಮಂತ್ರಿಗಳಂ ಬರಿಸಿ ಮೇಘವರ್ಣಂ ಈ ಪ್ರಘಟ್ಟನಕ್ಕೇಗೆಯ್ವಮೆಂದು ಪೇಟ್ ಮಂತ್ರಿಗಳಿಂತೆಂದರ್ (ಪಂಪಕಂ. ೨೦೪-೨) ; ಅಂತು ಮೂವರುಂ ಪ್ರೀತಿಮತಿಕನ್ಯಾಸ್ವಯಂವರ ಪ್ರಘಟ್ಟನದೆ ಜಿನರೂಪಮಂ ತಳೆದು (ಪೇಮಿಪು. ೨-೬ ಪ). ೨. ವಿಧಿ ; ನಿಯಮ. [ಸಂ.]

ಪ್ರಘಣ (ನಾ). ೧. ಮನೆಯ ಮುಂದಿನ ಅಂಗಳ ; ಮೊಗಸಾಲೆ : "ಪ್ರಘಣಃ, ಪ್ರಘಾಣಃ, ಅಳಿಂದಕಃ—ಈ ೩ ಮೊಗಸಾಲೆ" (ಹಲಾಯು. ೩೦-೦೯೯); ಆ ಪದಿನಾಱುಂ ನಾಟ್ಯಗೃಹದ ಪ್ರಘಣಂಗಳೊಳಿರ್ಕುಂ ದೂಪಘಟಂಗಳ್ (ಮಲ್ಲಿಪು. ೦೯-೦೯೯). ೨. ನೆಲಗಟ್ಟು : ಅಂತು ನಿಜಮುಖ ಪ್ರತಿಬಿಂಬಕದಂಬದಿಂ ಮರಕತಪ್ರಘಣದೊಳ್ ಪದ್ಮಪುಷ್ಪೋಪಹಾರಮಂ ವಿರಚಿಸಿ (ಕಂದ್ರಪು. ೦೦-೦೨೯ ಪ) ; ತಾರಾತತಿ ಮಾರ್ಪೊಳೆಯೆ ಮನಂಗೊಳಿಪ ತಿಳಿಗೊಳಂಗಳ ತೆಱನಂ ತಳೆದುವು ಬಲಿಗೆದಱಿದ ವಿಚಕಿಳದಲರಿಂ ನೀಲಮಣಿಮಯಪ್ರಘಣಂಗಳ್ (ಪುಷ್ಪಪು. ೯-೩೯). ೩. ಕಬ್ಬಿಣದ ಹಾರೆ. ೪. ತಾಮ್ರದ ಪಾತ್ರೆ. [ಸಂ.]

ಪ್ರಘಾಟ (ನಾ). ಗುಂಪು ; ಸಮೂಹ : ಆದಡೆಲೆ ಪವಮಾನಸುತ ನೀನಾದರಿಸು ನಡೆ ನೃಪತಿಯನು ನಾ ಕಾದುವೆನು ಕೌರವರ ಸಕಲಬಲ ಪ್ರಘಾಟದಲಿ (ಕುಷ್ಠಾಕ. ೦೯-೩೯). [<ಸಂ. ಪ್ರಘಟಾ]

ಪ್ರಘಾಣ (ನಾ) ೧. = ಪ್ರಘಣ ೧ : "ಪ್ರಘಣಃ, ಪ್ರಘಾಣಃ, ಅಳಿಂದಕಃ—ಈ ೩ ಮೊಗಸಾಲೆ" (ಹಲಾಯು. ೩೦-೦೯೯). ೨. ಮರದ ಕವಲು : "ಪ್ರಘಾಣಃ, ಸ್ಕಂಧಂ—ಈ ೨ ಮರದ ಪಣೆ" (ಹಲಾಯು. ೩೦-೨೬); "ಮರದ ಕವಲು ಪ್ರಘಾಣಂ ಸ್ಕಂಧಮಕ್ಕುಂ" (ಭುಂಗಶಾ. ೩೨-೩). [ಸಂ.]

ಪ್ರಘಾತ (ನಾ.) ೧. ಕಾಳಗ; ಯುದ್ಧ : "ಸಂಗ್ರಾಮಃ . . . ಪ್ರಘಾತಃ, ಜನ್ಯಂ, ಅಭಿಸಂಪಾತಃ, ಸಮ್ಮರ್ದಃ, ವಿಗ್ರಹಃ—ಈ ೩೫ ಕಾಳಗಂ" (ಹಲಾಯು. ೭೩-೩೦೦). ೨. ಕೊಲೆ ; ವಧೆ. ೩. ಕಡಿಯುವುದು; ಛೇದ: ಸಮ್ಯಕ್ತ್ವಂ . . . ಸಾಮ್ಯೋರ್ವೀಜಪ್ರಘಾತಂ ರಜನಿಸುರತರಾಗಂ ಮಹದ್ಭ್ರಹ್ಮಚರ್ಯಂ (ಶಾಂತಿಪು. ೬-೩೦). ೪. ಕೆಡುಕು; ಅಪಾಯ: ಜಾನಕಿಬಾಯರು ತಮ್ಮ ಸತೀತ್ವವನ್ನು ನಿಧಿಯನ್ನು ಕಾಯುವ ಘಟಸರ್ಪದಂತೆ ಕಾಯ್ದುಕೊಂಡು ಬಂದಿದ್ದರು. ಈ ಸತೀತ್ವದ ಮೇಲೆ ಪ್ರಘಾತ ಬರುವ ಸನ್ನಿವೇಶಗಳು ಸಂಭವಿಸಿದ್ದಿಲ್ಲ ನಿಜ (ಸಮಸೀ. ೨೨೬). [ಸಂ.]

ಪ್ರಘೋಷಣ (ನಾ). ದೊಡ್ಡ ಧ್ವನಿ; ಉದ್ಘೋಷಣೆ : ವಿನುತಶಿವವಿದ್ಯಾಗಮದಿ ಸಂಜನಿತ ಸಾನುಭವಪ್ರಘೋಷಣವನವರತಮುಂ ಬಸವರಸನರ ಮನೆಯೊಳೇಂ ಪೇಳ್ವೆ (ಬಸಪು. ೩೬-೬೯). [ಸಂ.]

ಪ್ರಚಂಡ (ಗು). ೧. ಬಹಳ ಉಗ್ರವಾದ; ತೀಕ್ಷ್ಣವಾದ. ೨. ಕ್ರೂರವಾದ ; ಭಯಂಕರವಾದ : ಮತ್ತೇಭವಧಪ್ರಚಂಡಯಮದಂಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ (ಜಗಿ. ೨-೩೯). ೩. ಶಕ್ತಿಯುತವಾದ; ಬಲದಿಂದ ಕೂಡಿದ : ಮಹಾಸಾಮನ್ತಪ್ರಚಣ್ಡದಣ್ಡ[ನಾ]ಥ ಶ್ರೀಮತು ಬಯ್ಸರೊಳ್ಗಣ್ಡರೆಬ್ಬರಸರ್ (ಸೌಇಇ. XX, ೨೨-೦೨; 1027) ; ಸರಳರಾಜ್ಯಕಂಟಕೋತ್ಪಾಟನಪ್ರಚಣ್ಡದೋರ್ದಣ್ಡನುಂ (ಕಇಲ. ೩-೨-೦೯೯; 1058). (ನಾ). ೪. ಭಯಂಕರವಾದುದು : ಸಿಂಹವು . . . ಪ್ರಚಂಡವಾದ ಗರ್ಜನೆ ಮಾಡುವುದು (ಮುಂಬಯಿ. ೯-೨೦೮) ; ಬಹುಶಃ ಬಹು ಪ್ರಚಂಡವಾದ ಮತ್ತು ಅಪೂರ್ವವಾದ ಪದ್ಧತಿಯಲ್ಲಿ ನಾನು ಆರಂಭಿಸಿದ್ದೇನೆಂದು ತೋರುತ್ತದೆ (ಪೇಕನ್ಯ. ೩೯). ೫. ನಿಪುಣ ; ಪ್ರಗಲ್ಭ : ಅಜಂತಾ ಚಿತ್ರಗಳನ್ನು ನಿರ್ಮಿಸಿದ ಕಲಾವಿದರು ಕಲಾಕೌಶಲ್ಯದಲ್ಲಿ ಪ್ರಚಂಡರಾಗಿದ್ದರು (ಶಾಕದ. ೩೨೩). ೬. ಪರಾಕ್ರಮಿ : ಈ ವಜ್ರಾವರ್ತಕೋದಂಡ ಮನವಯವದಿಂದೇಱಿಸಲ್ ಸಾಲ್ವ ದೋರ್ದಂಡಾವಷ್ಟಂಭಪ್ರಚಂಡಂ ಜನಕಜೆಗೆ ವರಂ ಬರ್ಪುದು (ಪಂಠಾಮಾ. ೩-೬೬). ೭. ಅಸಾಮಾನ್ಯನಾದವನು ; ಅಸಾಧಾರಣ ವ್ಯಕ್ತಿ : ಅವರ ಕಡೆಯ ಮಗ ಬಲು ಪ್ರಚಂಡ. ಎಲ್ಲ ತರಗತಿಗಳಲ್ಲೂ ಅವನೇ ಮೊದಲಿಗ (ರೂಢಿ). ೮. ಒಂದು ನರಕದ ಹೆಸರು : ಉಗ್ರ ವೃಕಾಸ್ಯ ಗ್ರಾಹ ಕುಂಭಿ ನಕ್ರವೆಂಬೈದು ಮಂತ್ರಿ ನರಕಂಗಳಿಂದೊಡಗೂಡಿ ಪ್ರಚಂಡವೆಂಬರಸುನರಕವಿಹುದು (ಶಿಪೇಕ. ೦೬೦).

ಪ್ರಚಂಡದಂಡನಾಯಕ=ಒಂದು ಬಿರುದು : ಮಹಾಪ್ರಚಣ್ಡದಣ್ಡನಾಯಕಂ . . . ಶಂಕರಕಿಂಕರಂ ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮದ್ದಣ್ಡನಾಯಕರೀಶ್ವರ ಭಟ್ಟರ್ಗ್ಗೆ (ಸೌಇಇ. XX, ೪೬-೨೦; 1072). [ಸಂ.]

ಪ್ರಚಂಡಿ (ನಾ). ಬೆದೆ ಬಂದ ಹಸು, —ಆವು "ಪ್ರ[ಶಾಶಾ. ಅ]ಚಂಡೀ, ಸುರತಾ—ಈ ೨ ಬೆದೆಯಾವು" (ಹಲಾಯು. ೪೩-೦೦೩) ; "ಪ್ರಚಂಡಿಯೆನೆ ಬೆದೆಯಾಕಳೆಂದೆನಿಕ್ಕುಂ" (ಮಂಗರಾ. ೩೩-೩). [ಸಂ. ಪ್ರಚಂಡೀ]

ಪ್ರಚಂಡೆ (ನಾ). ೧. ಬುದ್ಧಿವಂತೆ ; ನಿಪುಣೆ : ನೀನು ಬಿಡಮ್ಮ. ಕೆಲವು ವಿಷಯಗಳಲ್ಲಿ ಪ್ರಚಂಡೆ (ದೂಪಟ್ಟ. ೬). ೨. ಮೊಂಡುಸ್ವಭಾವದವಳು : ಹಟಮಾರಿ : ಅವರೇನೆಂದೊಡಮೇಗೆಯ್ದೊಡಮುಸಿರದಿರಲಾರ್ಪಿರಪ್ಪೊಡೆ ಪೋಗಿಮಲ್ಲದಾಗಳ್ ಪೋಗಲ್ವೇಡೆಂದೊಡಾ ಪ್ರಚಂಡೆ ಇಂತೆಂದಳ್ (ಪಂಪಕಂ. ೦೩೬-೭). [ಸಂ. ಪ್ರಚಂಡಾ]

ಪ್ರಚಕ್ರ (ನಾ). ೧. ಆಕ್ರಮಣಕ್ಕಾಗಿ ಸೈನ್ಯವು ಪಾಳೆಯದಿಂದ ಹೊರಡಂ

ವುದು: "ಪ್ರಚಕ್ರಂ. ಚಲತಾರ್ಥಕಂ—ದಂಡು ಠಾಣ್ಯದ ಸ್ಥಲ ಬಿಟ್ಟು ಹೊರಟದ್ದಕ್ಕೆ ಹೆಸರು" (ಸಿದ್ಧಾಂತಿ. ೨೬೬). ೨. ಚಲನೆಯಲ್ಲಿರುವ ಸೈನ್ಯ. [ಸಂ.]

ಪ್ರಚಯ (ನಾ). ೧. ಒಟ್ಟುಗೂಡಿಸುವಿಕೆ; ಕಲೆಹಾಕುವಿಕೆ. ೨. ಗುಂಪು; ಸಮೂಹ: ಸಕಲಮಧುವ್ರತಪ್ರಚಯಮೆಂಬ ಪಿಕಾವಳಿಯೆಂಬ ಸದ್ವಚಃಶುಕಕುಳಮೆಂಬ ಮೆಚ್ಚಿಸಿದ ಗಾಯಕ ಸತ್ಪ್ರತಿಹಾರವೃತ್ತಪಾಠಕ ತತಿಗಿತ್ತಂ . . . ಜೀವಿತಮಂ ಮದನಂ ಬಸಂತದೊಳ್ (ಶಾಂತಿಪು. ೬-೦೨೯): ಕೊಳಲ್ಕುಚಿತಮದಲ್ಗು [ಲ್ತು] ವಿನೇಯಪ್ರಚಯಕ್ಕುಪಭೋಗ ಭೋಗಪರಿಮಿತಗತಿಯೊಳ್ (ಪರ್ಯಪಾ. ೭-೦೬); ಉಮೇಶನ ಮುಂದೆ ಮಲುಹಣನೀಕ್ಷಿಸುತ ಕಾಂತಾಕಚಪ್ರಚಯ ಎಂದೆನುತಲಿ (ಬಸಪು. ೪೨-೩೬). ೩. ವೃದ್ಧಿ; ಅಭ್ಯುದಯ; ಏಳಿಗೆ: ದಿನವೇಂದುಪ್ರಚಯಾದ್ರಿಯಿಂದೆ . . . ಮೇರೆಯಾಗೆ ತಳೆದಂ ಭೂಚಕ್ರಮಂ ಭೂಭುಜಂ (ಕಾದಂಪು. ೩೦೦). ೪. ವೇದಗಳ ಉಚ್ಚಾರಣೆಯಲ್ಲಿ ಒಂದು ಬಗೆಯ ಸ್ವರವಿಶೇಷ: ಆ ಬ್ರಾಹ್ಮಣಂ ಬ್ರಹ್ಮಸಭೆಯ ಮುಂದೆ ಉದಾತ್ತಅನುದಾತ್ತಸ್ವರಿತ ಪ್ರಚಯವೆಂಬ ಚತುಸ್ಸ್ವರಂಗಳಿಂ . . . ನಾಲ್ಕು ವೇದಂಗಳಿಂ ಮಂತ್ರ ವನುಚ್ಚರಿಸೆ (ಪತ್ನಶಾ. ೨-೦೩೦ ಪ); ಹರಿಯೆ ಪಂಚಾಶದ್ವರಣಸುಸ್ವರ ಉದಾತ್ತಾನುದಾತ್ತಪ್ರಚಯಸ್ವರಿತಸಂಧಿವಿಸರ್ಗಬಿಂದುಗಳೊಳಗೆ ತದ್ವಾಚ್ಯ (ಹಸಾರ. ೯-೦); ವೇದದಲ್ಲಿ ಹೇಳಲ್ಪಡುವ ಉದಾತ್ತಾನುದಾತ್ತಸ್ವರಿತ ಪ್ರಚಯಗಳೆಂಬ ಸ್ವರಗಳು . . . ಅರ್ಥಜ್ಞಾನಕ್ಕೆ ಉಪಯೋಗವಿಲ್ಲವೆಂದು ನಿರ್ಣಯಿಸಿದ್ದಾರೆ (ಹಿಂದಸಾ. ೦೪೯). ೫. [ತತ್ವಶಾ] ಪರಿಮಾಣ ವನ್ನುಂಟುಮಾಡುವ ಒಂದು ಸಂಯೋಗ; ಶಿಥಿಲಸಂಯೋಗ: ಅನಿತ್ಯವಸ್ತುವಿನ ಪರಿಮಾಣವು ಸಂಖ್ಯೆಯಿಂದಲೂ ಪರಿಮಾಣದಿಂದಲೂ ಪ್ರಚಯದಿಂದಲೂ ಹುಟ್ಟುವುದು . . . ಶಿಥಿಲವಾದ ಸಂಯೋಗಕ್ಕೆ ಪ್ರಚಯ ಎಂದು ಹೆಸರು. ಉದಾ. ಹತ್ತಿ (ಭಾತತ್ತ್ವ. ೨೯೯). [ಸಂ.]

ಪ್ರಚರ (ನಾ). ೧. ಹೋಗುವಿಕೆ; ಗಮನ: ಕುಪ್ರತರ್ಕಿಗನಾವನಾದಡೆ ಭೂಪ್ರಚರನಾಗೆಯ್ದೆ ತಿರಿತಿಂಬ ಪ್ರಸಿದ್ಧನಶುದ್ಧನಲ್ಲದೆ ಭಕ್ತನೆಂತಹನು (ಬಸಪು. ೪೩-೬೨). ೨. ಜಡವಲ್ಲದಂದು; ಚೈತನ್ಯವುಳ್ಳ ಪ್ರಾಣಿ: ಹರಿಯ ನಾಭಿಸರೋಜದೊಳಗವತರಿಸಿಯಚರಪ್ರಚರಗಳ ವಿಸ್ತರಿಸಿ . . . ರಾಜಿಪ ವರಚತುರ್ಮುಖ ಪಾಲಿಪುದು (ಅಪಂಠಾ. ೦-೦-೩). ೩. ಆಚರಣೆ; ನಡವಳಿಕೆ; ಪದ್ಧತಿ. ೪. ದಾರಿ; ಮಾರ್ಗ. [ಸಂ.]

ಪ್ರಚರಿಸು (ಕ್ರಿ). ಸಂಚರಿಸು; ಪ್ರಯಾಣ ಮಾಡು: ಭರತಖಂಡವನು ಪ್ರಚರಿಸಿ ಕೀರ್ತಿ ಪಡೆದು (ವಿಧಾಕ್ಯ. ೬೯-೫). [ಪ್ರಚರ + —ಇಸ್ಸು]

ಪ್ರಚರ್ಯ (ನಾ). ಹೋಗುವುದು; ಗಮನ: ಮಹಿತವೀರೋದಗ್ರಭಕ್ತಿ ಸ್ಪೃಹದಿನೊಮ್ಮೆ ಪ್ರಾಣಮಂ ಕುಡಬಹುದು ಜಂಗಮದೊಳು ನಿಜಪ್ರಾಣ ಪ್ರಚರ್ಯ[ಪಾಠಾಂ. ರಿಯ]ದಲಿ ಸಹಜಮಾಗಲೆಹಂಗೆ ಸಂಧಿಸಬಹುದು (ಬಸಪು. ೩೬-೫೭). [ಸಂ. ಪ್ರಚರ್ಯಾ]

ಪ್ರಚಲ, ಪ್ರಚಳ (ಗು). ೧. ಅಲುಗಾಡುವ; ನಡುಗುವ. ೨. ಬಳಕೆಯ; ರೂಢಿಯ. (ನಾ). ೩. ಚಂಚಲವಾದುದು; ಸ್ಥಿರವಲ್ಲದುದು; ಅಸ್ಥಿರ. **ಪ್ರಚಳ**: ೩. "ಲೋಲಂ, ಚಪಳಂ, ಚಟುಳಂ, ಪ್ರಚಳಂ, ತರಳಂ . . . ಸಂಚಳಂ—ಈ ೧೦ ಸಂಚಳಂ" (ಹಲಾಯು. ೧೦೫-೦೦). [ಸಂ.]

ಪ್ರಚಲನ (ನಾ). ೧. ಹೆಚ್ಚಾಗಿ ನಡುಗುವುದು. — ಕಂಪಿಸುವುದು. ೨. ಬಳಕೆ; ಚಲಾವಣೆ. ೩. ಹಿಂಜರಿತ; ಪಲಾಯನ. ೪. [ವಿಜ್ಞಾನ] "(ಕಣಗಳ ಚಲನೆಯಿಂದಾಗುವ) ಶಾಖದ ಅಥವಾ ವಿದ್ಯುತ್ತಿನ ಪ್ರಸರಣ; ಪ್ರಚಲನ" (Convection. ಇಂಕನಿ). [ಸಂ.]

ಪ್ರಚಲಾಕ, ಪ್ರಚಳಾಕ (ನಾ). ನವಿಲುಗರಿ; ಪಿಂಛ: "ಪ್ರಚಲಾಕಂ ಬರ್ಹಂ" (ಪಸ್ತುಕೋ. ೪೨-೦೨). **ಪ್ರಚಳಾಕ**: "ಪ್ರಚಳಾಕಃ, ಶಿಖಂಡಃ —ಈ ೨ ಹೀಲಿ" (ಹಲಾಯು. ೪೦-೬೦); "ಪ್ರಚಳಾಕಂ ಶಿಖಂಡಮೆನೆ ಹೀಲಿ" (ಮಂಗರಾ. ೫೦-೩). [ಸಂ.]

ಪ್ರಚಲಾಕಿ (ನಾ). ಪಿಂಛವನ್ನುಳ್ಳುದು; ನವಿಲು: "ಪ್ರಚಲಾಕಿ ಮಯೂರಂ" (ಪಸ್ತುಕೋ. ೪೨-೧೨); "ಕೇಕೀ, ಶಿಖೀ, ಶಿಖಂಡೀ, ಪ್ರಚಲಾಕೀ . . . ಶ್ಯಾಮಕಂಠ(ಃ)—ಈ ೧೦ ನವಿಲ್" (ಹಲಾಯು. ೪೦-೬೬). [ಸಂ. ಪ್ರಚಲಾಕಿನ್]

ಪ್ರಚಲಾಪ್ರಚಲೆ, ಪ್ರಚಳಾಪ್ರಚಳೆ (ನಾ). [ಜೈನ] ನಿದ್ರೆಯ ಒಂದು ಭೇದ; ಪದೇಪದೇ ತೂಕಡಿಸುವುದು. ಜೊಲ್ಲು ಸುರಿಸುವುದು ಮೊದಲಾದ ಲಕ್ಷಣಗಳುಳ್ಳ ನಿದ್ರಾಭೇದ: ಪೂರ್ವೋಕ್ತ ವಿಧಾನ ದಿನಂತಮುಹೂರ್ತದಿಂ ನಿದ್ರಾನಿದ್ರಾಪ್ರಚಲಾಪ್ರಚಲಾಸ್ತ್ಯಾನಗೃದ್ಧಿ ನರಕಗತಿ . . . ಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮಪ್ರಕೃತಿಗಳಂ ನಿರವ ಶೇಷಂ ಕಿಡಿಸಿ (ಅಧಿಪು. ೦೦-೦೪ ಪ); ಕೇವಲದರ್ಶನಾವರಣೀಯಂ ನಿದ್ರಾ ನಿದ್ರಾ ನಿದ್ರಾಪ್ರಚಲಾಪ್ರಚಲಾಪ್ರಚಲಾಸ್ತ್ಯಾನಗೃದ್ಧಿಭೇದದಿಂ ನವವಿಧ ಭೇದಮಪ್ಪ ದರ್ಶನಾವರಣೀಯಮುಮಂ (ಸುಕುಮಾ. ೩-೩೯ ಪ). **ಪ್ರಚಳಾಪ್ರಚಳೆ**: ಅಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಳಾ ಪ್ರಚಳಾಸ್ತ್ಯಾನಗೃದ್ಧಿನರಕಗತಿ . . . ಸೂಕ್ಷ್ಮಂ[ಗಳೆಂಬ]ಪೋಡಕಶರ್ಮ ಪ್ರಕೃತಿಗೆ ವಿಳಯಂ ಮಾಡಿ (ಶಾಂತಿಪು. ೦೦-೦೦೦ ಪ). [ಸಂ. ಪ್ರಚಲಾಪ್ರಚಲಾ]

ಪ್ರಚಲಾಯಿತ (ನಾ). ತೂಕಡಿಸುವವನು: "ಘೂರ್ಣಿತಃ, ಪ್ರಚಲಾಯಿತಃ — ೨ ತೂಕಡಿಕೆಯಿಂದ ತಲೆತಿರುಗಿ ಬೀಳುವವನ ಹೆಸರು" (ಸಿದ್ಧಾಂತಿ. ೩೩೦). [ಸಂ.]

ಪ್ರಚಲಿತ, ಪ್ರಚಳಿತ (ಗು). ೧. ಅಲುಗಾಡಿದ; ಕ್ಷೋಭೆಗೊಂಡ. ೨. ಚಲಿಸುವ. ೩. ಅಲೆದಾಡುತ್ತಿರುವ. ೪. ಮುಂದುವರಿದ; ಮುನ್ನಡೆದ. ೫. ಇಂದಿನ; ಪ್ರಸಕ್ತ; ಸದ್ಯದ: ಪ್ರಸಿದ್ಧವಿಜ್ಞಾನಿಗಳ ಅಭಿಪ್ರಾಯಗಳನ್ನು ಉಲ್ಲೇಖಿಸುವುದರ ಮೂಲಕ ಪ್ರಚಲಿತ ಸಮಸ್ಯೆ ಗಳಿಗೆ ಪರಿಹಾರ ಸೂಚಿಸಿದೆ (ಪ್ರಾವಿವಿ. ೪. ಮುನ್ನುಡಿ). ೬. ಬಳಕೆಯಲ್ಲಿರುವ. (ನಾ). ೭. ಆಚರಣೆಯಲ್ಲಿರುವುದು; ಚಾಲ್ತಿ; ಬಳಕೆ: ಎಲ್ಲರಿಗೂ ತಿಳಿದಿರುವಂತೆ ಮೂಷಕನಿಯಂತ್ರಣಕ್ಕೆ ಪ್ರಚಲಿತವಾದ ವಿಧಾನ ಮೂರು (ಬೇಕಸ್ಕೆ. ೪೭); ತಮ್ಮ ಭಾಗದಲ್ಲಿ ಪ್ರಚಲಿತವಿಲ್ಲದ ಹೊಸ ಅಡುಗೆ ಗಳನ್ನು ಮಾಡಲು ಪ್ರಯತ್ನಿಸುವ ಗೃಹಿಣಿಯರು ಕಡಿಮೆ (ಅಪಸಾ. ೯೨). **ಪ್ರಚಳಿತ**: ೪. ಮತ್ತಂ ಸಸಂಭ್ರಮಪ್ರಚಳಿತ ಸಮದ ಗಜಘಟಾ ಘಂಟಾರವಂಗಳಿಂದು . . . ಅಗುರ್ವಾಗೆ (ಪಂಪಭಾ. ೯-೦೦೪ಪ). [ಸಂ.]

ಪ್ರಚಲೆ (ನಾ). [ಜೈನ] ಒಂಬತ್ತು ವಿಧವಾದ ದರ್ಶನಾವರಣೀಯ ಕರ್ಮಗಳಲ್ಲಿ ಒಂದು; ನಿದ್ರೆ, ನಿದ್ರಾನಿದ್ರೆ, ಪ್ರಚಲೆ, ಪ್ರಚಲಾ ಪ್ರಚಲೆ, ಸ್ತ್ಯಾನಗೃದ್ಧಿ ಎಂಬ ಐದು ಬಗೆಯ ನಿದ್ರೆಗಳಲ್ಲಿ ಒಂದು; ಶೋಕ, ಶ್ರಮ, ಮದ ಮೊದಲಾದ ಕಾರಣಗಳಿಂದ ಉಂಟಾಗಿ ಕುಳಿತುಕೊಂಡೇ ಕಣ್ಣು ಮತ್ತು ದೇಹಗಳಲ್ಲಿ ವಿಕ್ರಿಯೆಯನ್ನು ಉಂಟುಮಾಡುವ ಹಾಗೂ ದೇಹವನ್ನು ತೂಗಾಡುವಂತೆ ಮಾಡುವ ನಿದ್ರೆ: ಚಕ್ಷುರ್ದರ್ಶನಾವರಣೀಯಮಚಕ್ಷುರ್ದರ್ಶನಾವರಣೀಯಮವಧಿ ದರ್ಶನಾವರಣೀಯಂ ಕೇವಲದರ್ಶನಾವರಣೀಯಂ ನಿದ್ರಾನಿದ್ರಾನಿದ್ರಾ ಪ್ರಚಲಾಪ್ರಚಲಾಪ್ರಚಲಾಸ್ತ್ಯಾನಗೃದ್ಧಿಭೇದದಿಂ ನವವಿಧಭೇದಮಪ್ಪ ದರ್ಶನಾವರಣೀಯಮುಮಂ (ಸುಕುಮಾ. ೩-೩೯ ಪ); ಅಳಿಯಲುಳಿದ ಕರ್ಮ ಜರಿವುತಿರಲು ಬಾಣ ಕೊಳಲು ನಿದ್ರಾಪ್ರಚಲೆಗಳು (ಪರ್ಯಪ. ೦೨-೫೭). [ಸಂ. ಪ್ರಚಲ]

ಪ್ರಚಳ 'ಪ್ರಚಲ' ನೋ.

ಪ್ರಚಳಾಕ 'ಪ್ರಚಲಾಕ' ನೋ.

ಪ್ರಚಳಾಪ್ರಚಳೆ 'ಪ್ರಚಲಾಪ್ರಚಲೆ' ನೋ.

ಪ್ರಚಳಿತ 'ಪ್ರಚಲಿತ' ನೋ.

ಪ್ರಚಾರ (ನಾ). ೧. ಎಲ್ಲ ಕಡೆಗಳಲ್ಲೂ ಇರುವಂಥದು ; ಬಳಕೆಯಲ್ಲಿರುವಂಥದು: ಯೋಗಂಗಳು ಜಗತ್ತಿನೊಳಗಣಿತಗಳುಂಟದರಿನೊಳ್ಳೆವಗೆಯ ಯೋಗಂಗಳೆ ಪ್ರಚಾರವು ಮುಖ್ಯವೆನಿಸುವುವು (ಗಗಶಾ. ೦೦–೦೮). ೨. ಸಾರ್ವಜನಿಕರ ಗಮನವನ್ನು ಸೆಳೆಯಲು ಮಾಡುವ ಬಹಿರಂಗ ಪ್ರಕಟಣೆ : ಹೆಚ್ಚು ಪ್ರಚಾರವಿಲ್ಲದುದರಿಂದ ಅಂದಿನ ಕಾರ್ಯಕ್ರಮಕ್ಕೆ ತುಂಬಾ ಜನ ಬಂದಿರಲಿಲ್ಲ (ಕೂಡಿ). ೩. ಜನಬಳಕೆ ; ವ್ಯವಹಾರ ; ಚಾಲ್ತಿ : ಯಹೂದ್ಯರು ಮುಸಲ್ಮಾನರು ಮತ್ತು ಕ್ರೈಸ್ತರು ಇವರ ವಿನಹ ಉಳಿದ ಎಲ್ಲಾ ಜನಾಂಗದವರಲ್ಲೂ ಈ ಸಿದ್ಧಾಂತ ಪ್ರಚಾರದಲ್ಲಿತ್ತು (ಜೀವಾತ್ಮ. ೦೬೪) ; ಅಕ್ಷರವೆಂದರೆ ವರ್ಣ ಎಂಬ ಅರ್ಥವೇ ಇಂದಿಗೂ ಪ್ರಚಾರದಲ್ಲಿ ನಿಂತಿತು (ಪ್ರಾಮಿ. ೯೩). ೪. ಚಲಾವಣೆ ; ಬಳಕೆ : ಆಣೆ ಕಾಸುಗಳ ಪ್ರಚಾರ ಈಗ ಇಲ್ಲ (ಕೂಡಿ) ; ದಕ್ಷಿಣಭಾರತದಲ್ಲಿ ರಾಗಿ ಹೆಚ್ಚು ಪ್ರಚಾರದಲ್ಲಿದೆ (ಕೂಡಿ). ೫. ಪದ್ಧತಿ ; ರೂಢಿ ; ಸಂಪ್ರದಾಯ. ೬. ನಡತೆ ; ವರ್ತನೆ ; ಚರ್ಯೆ. ೭. ನಡೆಯುವುದು ; ತಿರುಗಾಟ ; ಸಂಚಾರ: ಮಾನಧ್ವಜವನಳವಡಿಸಿ ವಿದ್ಯುತ್ಪ್ರಚಾರಮಂ ಗೆಲ್ವ ಹಯಮಂ ಪೂಡಿ . . . ಬಂದನಾಹವಕೆ ನಲಿದು (ಶೈಮಿಭಾ. ೭–೩೬) ; ಮುಳ್ಗಳಂಘ್ರಿಯಂ ಬಾರಿಪುದೆಂದು ಬಿಟ್ಟುದೆ ಮದದ್ವಿರದಂ ಗಹನಪ್ರಚಾರಮಂ (ರಾಜಶೇ. ೦೩–೦೯).

ಪ್ರಚಾರ ಮಾಡು = ಎಲ್ಲರಿಗೂ ತಿಳಿಯಪಡಿಸು ; ಪ್ರಸಿದ್ಧಪಡಿಸು : ಬುದ್ಧನ ತತ್ವಗಳನ್ನು ಪ್ರಚಾರ ಮಾಡಲು ಆತನ ಅನುಯಾಯಿಗಳು ದೇಶ ವಿದೇಶಗಳಲ್ಲೆಲ್ಲಾ ಸಂಚಾರ ಮಾಡಿದರು (ಕೂಡಿ). [ಸಂ.]

ಪ್ರಚಾರಕ (ನಾ). ಎಲ್ಲರಿಗೂ ತಿಳಿಯುವಂತೆ ಮಾಡುವವನು ; ಪ್ರಚಾರ ಮಾಡುವವನು : ಜೈಮಿನೀಯಮೀಮಾಂಸಾಶಾಸ್ತ್ರಕ್ಕೆ ಪ್ರಮುಖ ಪ್ರಚಾರಕನು ಕುಮಾರಿಲಭಟ್ಟ (ಭಾರದ. ೦೨೯); ಫ್ರಾನ್ಸಿಸ್ ಜೇವಿಯರ್ ಎಂಬಾತ ಭಾರತಕ್ಕೆ ಬಂದ ಜೆಸ್ಯೂಟ್ ಪ್ರಚಾರಕರಲ್ಲಿ ಮೊದಲನೆಯವ (ಕವಿಕೋ. V, ೬೦೩). [ಸಂ.]

ಪ್ರಚಾರಕಾರ್ಯ (ನಾ). ಯಾವುದಾದರೊಂದು ವಿಷಯವನ್ನು ಸಾರ್ವಜನಿಕವಾಗಿ ತಿಳಿಯಪಡಿಸುವುದು : ಅವರು ಘೋಷಣೆಗಳನ್ನು ಪ್ರಕಟಿಸಿದರು ; ಗಿರಣಿಗಳಲ್ಲಿ ಪ್ರಚಾರಕಾರ್ಯ ಕೈಗೊಂಡರು (ಪುವರು. ೨೪೦); ದಕ್ಷಿಣಭಾರತದಲ್ಲಿ ಕ್ರೈಸ್ತಧರ್ಮದ ಪ್ರಚಾರಕಾರ್ಯ ಮೂರೂ ಸಮುದ್ರ ತೀರಗಳ ರೇವುಗಳಲ್ಲಿ ಆರಂಭವಾಯಿತು (ಕವಿಕೋ. V, ೬೦೪). [ಸಂ.]

ಪ್ರಚಾರಗೊಳಿಸು (ಕ್ರಿ). ಎಲ್ಲರಿಗೂ ತಿಳಿಯುವಂತೆ ಮಾಡು ; ಪ್ರಸಿದ್ಧಪಡಿಸು: ಭಿಕ್ಕುಗಳು . . . ಬುದ್ಧನ ತರುವಾಯವೂ ಅವನ ಉಪದೇಶವನ್ನು ಪ್ರಚಾರಗೊಳಿಸುತ್ತ ನಡೆದರು (ಬಾಲಪ್ರ. I, ೫೦೬).

[ಪ್ರಚಾರ + ಕೊಳ್$_1$ + – ಇಸು$_3$]

ಪ್ರಚಾರತೆ (ನಾ). ಹರಡುವಿಕೆ ; ವಿಸ್ತರಿಸುವಿಕೆ : ಆಸ್ಯಮಿಂಬಿಲ್ಲ ಭಾಸುರನೇತ್ರದ್ವಿತಯಪ್ರಚಾರತೆಗೆ ಬೆನ್ನಿಂಬಿಲ್ಲ ಧಮ್ಮಿಲ್ಲಬಂಧುರಸೀಮಾವಳಯಕ್ಕೆ (ಗಿರಿಕ. ೪–೩೯). [ಸಂ. ಪ್ರಚಾರತಾ]

ಪ್ರಚಾರಮಾಧ್ಯಮ (ನಾ). ದೇಶದ ರಾಜಕೀಯ, ಕಲೆ, ಕ್ರೀಡೆ ಮುಂತಾದುವುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸಲು ಬಳಸುವ ರೇಡಿಯೋ, ದೂರದರ್ಶನ, ಚಲನಚಿತ್ರ ಮುಂತಾದ ಸಾಧನ : ಇಪ್ಪತ್ತನೆಯ ಶತಮಾನದ ಅಗಾಧವೈಜ್ಞಾನಿಕ ತಾಂತ್ರಿಕ ಬೆಳವಣಿಗೆಯ ಫಲವಾಗಿ ಪ್ರಚಾರಮಾಧ್ಯಮಗಳು ವೈವಿಧ್ಯಮಯವೂ . . . ವಿಶ್ವರೂಪಿಗಳೂ ಆಗಿವೆ (ಕವಿಕೋ. XI, ೩೦೯). [ಸಂ.]

ಪ್ರಚಾರಸಾಧನ (ನಾ). = ಪ್ರಚಾರಮಾಧ್ಯಮ : ಅತ್ಯಂತಸಂಕೀರ್ಣವಾದ, ಅಗಾಧಪ್ರಚಾರಸಾಧನಗಳಿಂದ ಕೂಡಿದ ಇಂದಿನ ಸಮಾಜದಲ್ಲಿ ಈ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ (ಕವಿಕೋ. XI, ೩೦೯). [ಸಂ.]

ಪ್ರಚಿಂತೆ (ನಾ). ಆಲೋಚನೆ ; ವಿಮರ್ಶೆ : ಆಚಂದ್ರಾರ್ಕ್ಕಸ್ತಾಯಿಯಾಗಿ × × × ಸಲ್ವನ್ತಿರೆ ಪ್ರಚಿಂತೆಯಂ ಮಾಡಿ ಪರಿರಕ್ಷಿಸಲುವೇರ್ಕ್ಕುಂ (ಸೌಇ. XX, ೦೦೦–೪೯ ; 1140). [ಸಂ. ಪ್ರಚಿಂತಾ]

ಪ್ರಚುರ (ಗು). ೧. ಹೆಚ್ಚಾದ ; ಅತಿಶಯವಾದ ; ಮಹತ್ತರವಾದ : ಪ್ರಚುರಕಲಾನ್ವಿತರ್ . . . ದೋಷಾಪಚಯಪ್ರಕಾಶರೆನೆ ಬಾಲಚಂದ್ರದೇವಪ್ರಭಾವಮೇನಚ್ಚರಿಯೋ (ಮಲ್ಲಿಪು. ೦–೨೦) ; ಸ್ತುತಿಗೆಯ್ವೆಂ . . . ಚತುರೋಕ್ತಿಪ್ರಚುರಾರ್ಥಕಾವ್ಯಜನಿತೋರ್ವೀಹರ್ಷನಂ ಹರ್ಷನಂ (ಜಗವಿ. ೦–೬). ೨. ಹೆಸರುವಾಸಿಯಾದ ; ಪ್ರಸಿದ್ಧವಾದ : ಎಸೆಗುಂ ವೃಂದಾವನಂ ಕೀರಕೇಕಿಮರಾಳವ್ರಜದಾ ವನಂ ಪ್ರಚುರಕಾಳಿಂದೀವನಂ ಪಾವನಂ (ಜಗವಿ. ೩–೬೩). (ನಾ). ೩. ಹೆಚ್ಚಳ ; ಆಧಿಕ್ಯ ; ಹೇರಳ : "ಪ್ರಾಜ್ಯಂ, ಭೂರಿ, ಪ್ರಭೂತಂ, ಪ್ರಚುರಂ . . . ಅದಭ್ರಂ—ಈ ೧೮ ಮೊಕ್ಕಳಂ" (ಹಲಾಯು. ೦೦೬–೦೬). ೪. ಗಾಢವಾದುದು ; ತೀವ್ರವಾದುದು : ಕವಿಯಲ್ಲಿ ಪ್ರಚುರವಾಗಿರುವುದು ಮುಕ್ತಿಯ ಆಸೆ (ಕಾವ್ಯಕು. ೦). ೫. ಪ್ರಚಾರದಲ್ಲಿರುವುದು ; ವ್ಯವಹಾರದಲ್ಲಿರುವುದು ; ಚಾಲ್ತಿಯಲ್ಲಿರುವುದು : ಸಿಲ್ವಿಯಸ್–ಫೀಬಿಯರ ಪ್ರಣಯ ಇಂಗ್ಲೆಂಡಿನಲ್ಲಿ ಆಗ ಪ್ರಚುರವಾಗಿದ್ದ ಪಾಸ್ಟೊರಲ್ ಕವನಗಳಲ್ಲಿ ಕಾಣುವಂಥ ಪ್ರೇಮ (ಕೇಕ್ಸ್‌ಪಿ. ೩೩೦) ; ಭಾರತದಲ್ಲಿ ಪ್ರಚುರವಾದ ಜೈನ ಮತ್ತು ಬೌದ್ಧಧರ್ಮಗಳೆರಡು ಈ ಲೋಕಸೌಂದರ್ಯಕ್ಕಾಗಲೀ ಆ ಕೇವಲ ಪರಮತತ್ತ್ವ ಸೌಂದರ್ಯರೂಪಿ ಎಂಬ ಭಾವನೆಗಾಗಲೀ ಗಮನಕೊಟ್ಟಂತೆ ತೋರುವುದಿಲ್ಲ (ಸೌಂದಸ. ೦೦೬). ೬. ಕಳ್ಳ ; ಚೋರ. [ಸಂ.]

ಪ್ರಚುರಂ (ಅ). ಹೆಚ್ಚಾಗಿ ; ಬಹಳ ಮಟ್ಟಿಗೆ : ಪ್ರಚುರಂ ಪತ್ತೊಳಗಾಗೆ ರಂಧ್ರವನೆ ಕೈಗೊಂಡೆಂಟನೀಗೇಟ ಬಿಟ್ಟು . . . ಒಂದಱೊಳ್ ನಿಲ್ಲದಾ ವಚನಬ್ರಹ್ಮದೆ ಮುಕ್ತಿಯೇ (ಸೋಮೇಶ. ೦೦೦) ; ಪ್ರವಿಲೋಮಕ್ರಿಯೆಗದುವೆಂದವೆಂದು ಬಂದಿರ್ಕುಮುದುಗಮುವುಗಂ ಪ್ರಚುರಂ (ಕಮದ. ೨೪೪).

[< ಪ್ರಚುರ]

ಪ್ರಚುರಗೊಳಿಸು (ಕ್ರಿ). ಪ್ರಸಾರ ಮಾಡು ; ಬಿತ್ತರಿಸು : ಆಕಾಶವಾಣಿಯವರು ಈ ಕೃತಿಯನ್ನು . . . ತಜ್ಞಕಲಾವಿದರ ಮೂಲಕ ಬಾನುಲಿಯಲ್ಲಿ ಪ್ರಚುರಗೊಳಿಸಿದ್ದಾರೆ (ಗೋಕುವಿ. X, ಪೀಠಿಕೆ).

[ಪ್ರಚುರ + ಕೊಳು (< ಕೊಳ್$_1$) + – ಇಸು$_3$]

ಪ್ರಚುರಗೊಳ್ಳು (ಕ್ರಿ). ಹರಡು ; ವ್ಯಾಪಿಸು ; ಪ್ರಚಾರವಾಗು : ಭಾರತೀಯ ವೇದಾಂತ ಮತ್ತು ಅದರ ಪರಿಣಾಮವಾಗಿ ಪ್ರಚುರಗೊಂಡ ಧರ್ಮಗಳೆಲ್ಲವೂ . . . ಒಂದು ಆಂತರಿಕಸೂತ್ರವನ್ನು ರಚಿಸಿವೆ (ಸೌಂದಸ. ೦೦೬). [ಪ್ರಚುರ + ಕೊಳ್ಳು$_1$ (< ಕೊಳ್$_1$)]

ಪ್ರಚುರತೆ (ನಾ). ಹೆಚ್ಚಳ ; ಆಧಿಕ್ಯ ; ಅತಿಶಯ : ವಾಚ್ಯವಾಚಕ ವಿಶೇಷ್ಯವಿಶೇಷಣಲಕ್ಷ್ಯಲಕ್ಷಣಪ್ರಚುರತೆ ಕಾಳಿದಾಸನುಮನೇಳಿಸಿತೀ ಕೃತಿ ನಾಗವರ್ಮನಾ (ಛಂದೋಂಬು. ೦–೭) ; ಉಪವಾಸಪ್ರಚುರತೆಯಿಂ ವಪು ಗಿಡಿಗಿಡಿಜಂತ್ರಮಾದುದು (ಸುಕುಮಾ. ೪–೪) ; ಮತ್ತವಱ ವಿಪರ್ಯಯ ವೃತ್ತಿಯೆ ಬವರಿಸುಗುಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ (ಕಾವ್ಯಾವ. ೩೨೦). [ಸಂ. ಪ್ರಚುರತಾ]

ಪ್ರಚುರದುಗ್ಧೆ (ನಾ). ಹೆಚ್ಚಾಗಿ ಹಾಲು ಕರೆಯುವ ಹಸು : "ದ್ರೋಣದುಘಾ, ಪ್ರಚುರದುಗ್ಧಾ—ಈ ೨ ಕೊಡವಾಲ್ ಕಱೆವಾವು" (ಹಲಾಯು. ೪೩–೦೦೬). [ಸಂ. ಪ್ರಚುರದುಗ್ಧಾ]

ಪ್ರಚುರಪಡಿಸು (ಕ್ರಿ). ಪ್ರಚಾರ ಮಾಡು ; ಹರಡುವಂತೆ ಮಾಡು ; ಪ್ರಸಿದ್ಧಪಡಿಸು : ಅಕೆಡೆಮಿಷಿಯನ್ ಷ್ಮಿಡ್ಟ್ ಎಂಬುವನು ಭೂಮಿ ಮತ್ತಿತರ ಗ್ರಹಗಳ ಮೂಲದ ವಿಷಯವಾಗಿ ಒಂದು ಸಿದ್ಧಾಂತವನ್ನು ಪ್ರಚುರಪಡಿಸಲು ಆರಂಭಿಸಿದನು (ಕೂಹುಟ್ಟು. ೩೨); ಒಳ್ಳೆಯ ರಸರೂಪಕಗಳನ್ನು ಬರೆದು ಬರೆಸಿ ಆಡಿ ಆಡಿಸಿ ಪ್ರಚುರಪಡಿಸಬೇಕು (ಸಾಹಿಸ. ೬೮).
[ಪ್ರಚುರ+ಪಡಿಸು]

ಪ್ರಚೇತ (ನಾ). ಎಂಟುಜನ ದಿಕ್ಪಾಲಕರಲ್ಲಿ ಒಬ್ಬ; ಪಶ್ಚಿಮದಿಕ್ಕಿನ ಅಧಿಪತಿ ; ವರುಣ : "ವರುಣಃ, ಯಾದಸಾಂನಾಥಃ, ಪಾಶಪಾಣಿಃ, ಪ್ರಚೇ(ತಸ್)ತಾಃ, ಜಲಾಧಿದೈವತಂ, ಪ್ರತ್ಯಗಾಶಾಪತಿಃ — ಈ ೬ (ಪ್ರಾಹುರ್ಬುಧಾ) ವರುಣನ ಪೆಸರ್" (ಹಲಾಯು. ೦೩-೭೯) ; ತನ್ನೊಳ್ ಸಮುದ್ರಾಧಿಪತಿತ್ವಂ ಸಂದ ಪಾಶಾನ್ವಿತನುರುಮಕರಾರೂಢನೀತಂ ಪ್ರಚೇತಂ (ಜಗನಿ. ೦೩-೬೦). [ಸಂ. ಪ್ರಚೇತಸ್]

ಪ್ರಚೇತಸ (ನಾ). ೧. = ಪ್ರಚೇತ : "ವರುಣಂ ಪಶ್ಚಿಮದಿಕ್ಪತಿ . . . [ವಾರಿರಾಶಿ]ನಿಳಯಂ ಪ್ರಚೇತಸಂ ಪೆಸರಿಂದಂ" (ವಸ್ತುಕೋ. ೬-೯೩). ೨. ವಾಲ್ಮೀಕಿಯ ತಂದೆ : ವೇದಗಳು . . . ಪ್ರಚೇತಸನ ಮಗನಾದ ವಾಲ್ಮೀಕಿಯಿಂದ ರಾಮಾಯಣದ ರೂಪದಲ್ಲಿ . . . ಅವತರಿಸಿದವು (ಭಾರದ. ೬೩). [ಸಂ. ಪ್ರಚೇತಸ್]

ಪ್ರಚೋದಕ (ಗು). ೧. ಪ್ರೇರಿಸುವ ; ಪ್ರೇರಣೆ ಮಾಡುವ : ಇದಕ್ಕೆ ಪ್ರಚೋದಕಶಕ್ತಿ ಆ ಹುಟ್ಟುಗುಣದಲ್ಲೇ ಇದೆ (ಶಿಕ್ಷಣ. ೯೨೩). (ನಾ). ೨. ಪ್ರೇರಿಸುವುದು ; ಪ್ರೇರಣೆ ಮಾಡುವುದು : ನಮ್ಮ ಮುನ್ನಡೆಗೆ ಜೀವನದ ಚೇತೋಝರಿಗಳು ಪ್ರಚೋದಕಗಳಾದರೆ ತತ್ವದೃಷ್ಟಿ ಮಾರ್ಗದರ್ಶನ ನೀಡುತ್ತದೆ (ಶಿಕ್ಷದ. ೬೬೬). [ಸಂ.]

ಪ್ರಚೋದನ (ನಾ). ೧. ಪ್ರೇರಿಸುವುದು ; ಪ್ರೇರಣೆ : 'ಪ್ರಚೋದನಗೊಳಿಸು' ಪರಾ. ೨. ಹೇಳುವುದು. ೩. ಕಳುಹಿಸುವುದು. ೪. ವಿಧಿಸುವುದು ; ನಿಯಮಿಸುವುದು. [ಸಂ.]

ಪ್ರಚೋದನಗೊಳಿಸು (ಕ್ರಿ). ಪ್ರೇರಿಸು ; ಉತ್ತೇಜನಗೊಳಿಸು ; ಹುರಿದುಂಬಿಸು : ನಮ್ಮ ಬುದ್ಧಿಯನ್ನು ಪ್ರಚೋದನಗೊಳಿಸು — ಎಂಬುದೇ ಇವರ ಬೇಡಿಕೆ. ಪ್ರಾರ್ಥನೆ (ಭಾರದ. ೯೬೦).
[ಪ್ರಚೋದನ + ಕೊಳು (< ಕೊಳ್$_1$) + — ಇಸು$_3$]

ಪ್ರಚೋದನಿ (ನಾ). ಒಂದು ಬಗೆಯ ಗಿಡ ; ಹೆಗ್ಗುಳ್ಳ : "ನಿದಿಗ್ಧಿಕಾ, ಸ್ಪೃಶೀ, ವ್ಯಾಘ್ರೀ, ಬೃಹತೀ, ಕಂಟಕಾರಿಕಾ, ಪ್ರಚೋದನೀ . . . ರಾಷ್ಟ್ರಿಕಾ — ೧೦ ಹೆಗ್ಗುಳ್ಳದ ಹೆಸರು" (ಸಿದ್ಧಾಂತಿ. ೦೩೩).
[ಸಂ. ಪ್ರಚೋದನೀ]

ಪ್ರಚೋದನೆ (ನಾ). = ಪ್ರಚೋದನ ೧ : ಪ್ರತಿಯೊಂದು ಮನೋವ್ಯಾಪಾರಕ್ಕೂ ಒಂದೊಂದು ಪ್ರಚೋದನೆ ಅಗತ್ಯ (ಶಿಕ್ಷದ. ೯೦೯) ; 'ಬೇಕು' ಎನ್ನುವುದು ಪ್ರಯತ್ನಕ್ಕೆ ಪ್ರಚೋದನೆ (ಬೆಂಬಾ. ೩೩).
[ಸಂ. ಪ್ರಚೋದನ]

ಪ್ರಚೋದಿತ (ಗು). ೧. ಪ್ರೇರಣೆ ಹೊಂದಿದ. (ನಾ). ೨. ಪ್ರೇರಣೆ ಹೊಂದಿದುದು : ಕಲೋಪಾಸನೆ ಪ್ರಚೋದಿತವಾಗಿ ಕಲಾವಿದರೂ ಆಗಬಹುದು (ಶಿಕ್ಷದ. ೨೩೭). ೩. ಮುಂದಕ್ಕೆ ಅಟ್ಟಿದುದು, — ಹೊಡೆದುದು. ೪. ಚಿತಾವಣೆ ಹೊಂದಿದುದು. [ಸಂ.]

ಪ್ರಚೋದಿಸು (ಕ್ರಿ). ೧. ಪ್ರೇರಣೆ ಮಾಡು ; ಪ್ರೇರಿಸು : ಗಾಯತ್ರಿಯನೆ ಪರಮಮಂತ್ರವೆಂದಾರ್ಯರ್ ಧೀಯಂ ಪ್ರಚೋದಿಸೆಂದನುದಿನದಿ ಬೇಡಿದರು (ಮಂಕುಳ. ೩೯೬) ; ಎಲ್ಲ ತರಂಗಮಾನಗಳು . . . ಸಮನಾಗಿ ಪ್ರಚೋದಿಸುವುದಿಲ್ಲ (ಕೀಟಿಸ. ೩೯) ; ಸೌಂದರ್ಯ ಪ್ರಚೋದಿಸುವುದು ಒಂದು ನಿರ್ದಿಷ್ಟವಾದ ಭಾವವನ್ನು (ಸೌಂದಸ. ೭೯). ೨. ಹೆಚ್ಚಿಸು ; ಅಭಿವೃದ್ಧಿಗೊಳಿಸು ; ಉದ್ಬೋಧಿಸು : ಅವರ ವಿವೇಚನೆಯನ್ನು ಪ್ರಚೋದಿಸಿ ಉಚಿತವೆನಿಸುವ ಮಾರ್ಗ ಅರಿವಾಗುವಂತೆ ಮಾಡಬೇಕು (ಶಿಕ್ಷದ. ೦೦೯). [ಪ್ರಚೋದನ + — ಇಸು$_3$]

ಪ್ರಚ್ಛದ (ನಾ). ೧. ಹೊದಿಕೆ; ಮೇಲುಹೊದಿಕೆ. ೨. ಹಾಸುಗೆ ಮೊದಲಾದುವುಗಳ ಮೇಲೆ ಹಾಸುವ ಬಟ್ಟೆ; ಹಾಸುಗೆಯ ಹೊದಿಕೆ : "ಪ್ರಚ್ಛದಃ, ಉತ್ತರಚ್ಛದಃ — ಈ ೨ ಹಚ್ಚವಡಿಗೆ" (ಹಲಾಯು. ೩೦-೦೩೩); ಶಯ್ಯಾಶ್ರಿತಸಿತಮೃದುಳಪ್ರಚ್ಛದಚ್ಛನ್ನಶಯ್ಯಾತಲದೊಳ್ . . . ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್ (ಕಾದಂಪೂ. ೬೦) ; ಹಂಸಾಂಸೋಪಧಾನಪ್ರಧಾನಮೃದುಪ್ರಚ್ಛದತಲ್ಪದೊಳ್ ನೆಲಸಿದಂ ಸಾಹಿತ್ಯವಿದ್ಯಾಧರಂ (ಮಲ್ಲಪು. ೯-೦೩೯). [ಸಂ.]

ಪ್ರಚ್ಛದಪಟ (ನಾ). ೧. = ಪ್ರಚ್ಛದ ೧. ೨. = ಪ್ರಚ್ಛದ ೨ : "ನಿಚೋಳಃ, ಪ್ರಚ್ಛದಪಟಃ — ೨ ಮೇಲುಹಾಸಿಗೆ. ಹಾಸಿಗೆ ಮೇಲೆ ಹಾಸುವ ನೌರುಬಟ್ಟೆ" (ಸಿದ್ಧಾಂತಿ. ೨೦೯). [ಸಂ.]

ಪ್ರಚ್ಛನೆ (ನಾ). ೧. ಪ್ರಶ್ನೆಯನ್ನು ಕೇಳುವುದು; ಪ್ರಶ್ನಿಸುವುದು. ೨. [ಜೈನ] ವಾಚನೆ, ಪ್ರಚ್ಛನೆ, ಅನುಪ್ರೇಕ್ಷೆ, ಚಿಂತನೆ ಮತ್ತು ಧರ್ಮೋಪದೇಶಗಳೆಂಬ ಸ್ವಾಧ್ಯಾಯದ ಐದು ಭೇದಗಳಲ್ಲಿ ಎರಡನೆಯದು ; (ತಿಳಿಯಬೇಕಾದ ವಿಷಯದಲ್ಲಿ ಸಂಶಯವನ್ನು ಪರಿಹರಿಸಿಕೊಳ್ಳಲು ಹಾಗೂ ನಿಷ್ಕೃಷ್ಟಜ್ಞಾನವನ್ನು ಪಡೆಯಲು) ತಿಳಿದವರನ್ನು ಕೇಳುವುದು : ತನಗೆ ಸಂದೇಹಮಾದುದಂ ಪೆಱರ ಬೆಸಗೊಳ್ವುದುಂ ಪ್ರಚ್ಛನೆಯೆಂಬುದು (ಶ್ರಾವಕಾ. ೬೬). [ಸಂ. ಪ್ರಚ್ಛನಾ]

ಪ್ರಚ್ಛನ್ನ (ಗು). ೧. ಮುಚ್ಚಿರುವ; ಹೊದಿಸಿರುವ : ನೀಲವಸನ ಪ್ರಚ್ಛನ್ನಪರ್ಯಂಕಮಂಡಳದೊಳ್ . . . ಕುಳ್ಳಿರ್ದ ಕೋಮಳೆಯಂ ದೂರದೆ ನೋಡಿ ಕಂಡನರಸಂ ಕಾದಂಬರೀದೇವಿಯಂ (ಕಾದಂಪೂ. ೦೦೦೩). ೨. ವೇಷಾಂತರದ ; ಛದ್ಮವೇಷದ : ವಿವಿಧವೇಷವಿದ್ಯಾಶಾರದ ಪ್ರಚ್ಛನ್ನಪ್ರಣಿಧಿಗಳಂ ಪ್ರಯೋಗಿಸಿಯುಂ (ಸಂಧ್ರಪು. ೨-೬೧) ; ಕಲಿಯುಗದ ಪ್ರಚ್ಛನ್ನ ಕಲ್ಕಿ ಸತ್ಯಾಗ್ರಹಿ ! (ಪಾಂಸಜ. ೨೦-೦೭). (ನಾ). ೩. ಗೋಪ್ಯ; ರಹಸ್ಯ; ಗುಟ್ಟು : "ರಹಃ, ಪ್ರಚ್ಛನ್ನಂ . . . ರಹಸ್ಯಂ, ಗುಹ್ಯಂ — ಈ ೯ ಏಕಾಂತಂ" (ಹಲಾಯು. ೦೦೭-೨೩) ; ಪ್ರಚ್ಛನ್ನಮಪ್ಪೆಡೆಯೊಳ್ ಮೃತಕಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು (ವಡ್ಡಾರಾ. ೨೯ ೦) ; ಬೆನ್ನೊಳೆ ಪೋದಂ . . . ಅರಸಂ ಪ್ರಚ್ಛನ್ನದಿಂ (ಯಶೋಸ. ೨-೯೬). ೪. ಕಣ್ಣಿಗೆ ಕಾಣದಿರುವವನು; ಅಗೋಚರ; ಪರಮಾತ್ಮ : ಸ್ವೇಚ್ಛಾಶೀಲನ ಪ್ರಚ್ಛನ್ನನ. . .ನುತಿಪೆಂ (ಉದ್ಭರೇ. ೬-೦). ೫. ರಹಸ್ಯವಾದ ದ್ವಾರ ; ಒಳಬಾಗಿಲು : "ಪ್ರಚ್ಛನ್ನಂ, ಅಂತರ್ದ್ವಾರಂ — ೨ ಒಳಬಾಗಿಲ ಹೆಸರು, ರಹಸ್ಯವಾದ ಬಾಗಿಲು" (ಸಿದ್ಧಾಂತಿ. ೦೦೨). ೬. ನಡುನಡುವೆ ಕಂಡಿಗಳುಳ್ಳ ಅಡ್ಡಪಟ್ಟಿಗಳ ಚೌಕಟ್ಟು; ಜಾಲಂದ್ರ. ೭. ಬಂದೂಕು ಮೊದಲಾದುವುಗಳಿಂದ ಹೊಡೆಯುವುದಕ್ಕಾಗಿ ಅಥವಾ ಗಾಳಿ ಬೆಳಕು ಬರುವುದಕ್ಕಾಗಿ ಗೋಡೆಯಲ್ಲಿ ಮಾಡಿರುವ ಕಿರಿದಾದ ಉದ್ದ ಕಂಡಿ. ೮. ತಪ್ಪಿಸಿಕೊಂಡು ಹೋಗಲು ಅನುಕೂಲವಾಗುವಂತೆ ಕೋಟೆ ಮೊದಲಾದುವುಗಳಲ್ಲಿ ಮಾಡಿರುವ ಕಂಡಿ. [ಸಂ.]

ಪ್ರಚ್ಛನ್ನತೆ (ನಾ). ಮುಚ್ಚುವುದು ; ಮರೆಮಾಚುವುದು : ಸಂಭಾಷಣೆಯ ವಿಮರ್ಶಾತ್ಮಕಪರಿಶೀಲನೆಯಲ್ಲಿ ಸಹಜಮೌನದ ಮತ್ತು ಒಮ್ಮೊಮ್ಮೆ ಉದ್ದೇಶಪೂರ್ವಕ ಪ್ರಚ್ಛನ್ನತೆಯ ಅಗತ್ಯಗಳಿಗೆ ಅವಕಾಶ ಕೊಡಬೇಕಾಗುವುದು (ಸಾಹಿಪ್ರ. ೧೬೩). [ಸಂ. ಪ್ರಚ್ಛನ್ನತಾ]

ಪ್ರಚ್ಛನ್ನವೇಷ (ನಾ). ವೇಷಾಂತರ ; ಮಾರುವೇಷ : ಕದ್ದೋಡಿ ಬಂದು ಪ್ರಚ್ಛನ್ನವೇಷದಿ ಕಳ್ಳರಲ್ಲಿರಲು ಭೂತಿಲಕನೃಪತಿ ಹಿಡಿತರಿಸಿ ಕೇಳೆ (ಗುರುಸಾ. ೬-೬೨). [ಸಂ.]

ಪ್ರಚ್ಛರ್ದಿಕೆ (ನಾ). ೧. ವಾಂತಿ; ಕಾರಿಕೆ ; ವಮನ: "ಪ್ರಚ್ಛರ್ದಿಕಾ, ವಮಿಃ, ವಮಥುಃ —೩ ಕಕ್ಕುರೋಗ, ವಾಂತಿ, ವಮನ" (ಸಿದ್ಧಾಂತಿ. ೦೮೯). ೨. ವಾಂತಿ ಮಾಡಿಸುವ ಔಷಧಿ. [ಸಂ. ಪ್ರಚ್ಛರ್ದಿಕಾ]

ಪ್ರಚ್ಛಾದನ (ನಾ). ೧. ಮುಚ್ಚಿಡುವುದು; ಕಾಣದಂತೆ ಮಾಡುವುದು : ಸ್ವಗುಣಪ್ರಚ್ಛಾದನಮನ್ಯಗುಣಾವಿಷ್ಕರಣಂ . . . ಉಚ್ಚಗೋತ್ರದಾಸ್ರವ ಮಕ್ಕುಂ (ಸುಕುಮಾ. ೬-೨೩). ೨. ಹೊದೆಯುವ ವಸ್ತ್ರ; ಉತ್ತರೀಯ. [ಸಂ.]

ಪ್ರಚ್ಛಾದಿತ (ಗು). ೧. ಹೊದಿಸಿದ; ಆಚ್ಛಾದಿಸಿದ. ೨. ಬಚ್ಚಿಟ್ಟ; ಮರೆಮಾಡಿದ. [ಸಂ.]

ಪ್ರಚ್ಛಾದಿಸು (ಕ್ರಿ). ಮುಚ್ಚು; ಮರೆಮಾಡು : ರಾಹುವಿನ ವಿಮಾನಂ . . . ಚಂದ್ರವಿಮಾನಮಂ ಪ್ರಚ್ಛಾದಿಸಿ ಷಣ್ಮಾಸಕ್ಕೊಮ್ಮೆ ಪುಣ್ಣಮಿಯ ಕಡೆಯೊಳು ಸೋಮಗ್ರಹಣಮಕ್ಕುಂ (ಶ್ರಾವಕಾ. ೪೦).

[ಪ್ರಚ್ಛಾದನ+ —ಇಸ್ಸು]

ಪ್ರಜ (ನಾ). ೧. ಹುಟ್ಟು; ಜನ್ಮ; ಉತ್ಪತ್ತಿ. ೨. ಸಂತತಿ; ಸಂತಾನ. ೩. ಒಂದು ಸಂತತಿಗೆ ಸೇರಿದ ವ್ಯಕ್ತಿ; ವಂಶಜ. ೪. ಮನುಷ್ಯ ಜಾತಿ; ಮಾನವಕುಲ. ೫. ಸೃಷ್ಟಿಯಾದ ಯಾವುದೇ ಜೀವಿ. ೬. ಒಂದು ದೇಶದಲ್ಲಿ ವಾಸಿಸುವ ಜನ; ಪ್ರಜೆ : ಸೃಜಿಸಿದಳು ಭೂವನಿತೆ ರಾಜನ ಪ್ರಜರ ಹಿತ ಸಾಧಿಸಲು ವಿಧವಿಧರಜತಮೌಕ್ತಿಕ ಹೇಮರತ್ನಗಳನ್ನು ಮೋದದಲಿ (ರಘುವಂ. ೬-೨೭); ನಾನು ನಾಳೆ ನಿಮ್ಮ ಕಚೇರಿಯಲ್ಲಿ ಬಂದು ಕುಳಿತುಕೊಳ್ಳುವೆ . . . ಎಲ್ಲ ಪ್ರಜರಿಗೂ ತಿಳಿಸು (ಹೋಡತಿ. ೯). ೭. ವೀರ್ಯ; ರೇತಸ್ಸು. [ಸಂ. ಪ್ರಜಾ]

ಪ್ರಜನ (ಗು). ೧. ಸೃಷ್ಟಿಸುವ; ಉತ್ಪತ್ತಿಮಾಡುವ. (ನಾ). ೨. ಹುಟ್ಟುವುದು; ಜನಿಸುವುದು. ೩. ಹುಟ್ಟಿಸುವುದು; ಉತ್ಪತ್ತಿ ಮಾಡುವುದು. ೪. ಗರ್ಭಧಾರಣೆ ಮಾಡುವುದು. ೫. ಪಶುಗಳಿಗೆ ಗರ್ಭಧಾರಣೆ ಮಾಡಿಸುವುದು,—ಹೋರಿ ಕೊಡುವುದು:"ಪ್ರಜನಃ, ಉಪಸರಃ — ೨ ದನಗಳ ಮೇಲೆ ಗೂಳಿಗಳು ಹಾರುವ ಸಮಯ" (ಸಿದ್ಧಾಂತಿ. ೩೬೯). 'ಉಪಸರ' ಹೋ. ೬. ಉತ್ಪತ್ತಿಗೆ ಕಾರಣ ವಾದುದು; ಜನನಹೇತು. ೭. ಜನನೇಂದ್ರಿಯ. [ಸಂ.]

ಪ್ರಜನನ (ಗು). ೧. ಹುಟ್ಟಿಸುವ; ಸೃಷ್ಟಿಮಾಡುವ : ಭೂಮಿತಾಯ್ಗೆ ಪ್ರಜನನಚಾಪಲ್ಯ (ಕ್ರೌಂಚರ್ಯ. ೯೯-೮); ನಿರ್ಜೀವಿಗಳಲ್ಲಿ ಪ್ರಜನನಕ್ರಿಯೆ ಇಲ್ಲ (ಕವಿಕೋ. XI, ೩೨೦). (ನಾ). ೨. ಹುಟ್ಟುವಿಕೆ; ಜನನ. ೩. ಹುಟ್ಟಿಸುವುದು; ಉತ್ಪತ್ತಿಮಾಡುವುದು : ಜೀವಿಗಳು ನಿರ್ಜೀವಿಗಳಿಗಿಂತ ಭಿನ್ನವಾಗಿರುವುದಕ್ಕೆ ಪ್ರಜನನ ಕೂಡ ಒಂದು ಕಾರಣ (ಕವಿಕೋ. XI, ೩೨೦). ೪. ಗರ್ಭಧಾರಣೆ ಮಾಡುವುದು. ೫. ಪಶುಗಳ ಗರ್ಭಧಾರಣೆ. ೬. ಹೆರುವುದು; ಹಡೆಯುವುದು. ೭. ಸಂತಾನ; ಸಂತತಿ. ೮. ಜನನೇಂದ್ರಿಯ. ೯. ವೀರ್ಯ; ರೇತಸ್ಸು. [ಸಂ.].

ಪ್ರಜವ (ನಾ). ಹೆಚ್ಚಾದ ವೇಗ,—ಚುರುಕು: ನಿಜರಾಜ್ಯದೊಳುತ್ಪತ್ತಿಯ ನಿಜಮಂ ಕಾಣಲ್ಕೆ ಭೂಪ ಮನಮಂ ಮಾಡಲ್ ಪ್ರಜವದೆ ಲೇಖಕಜನ ಕಾಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರ್ ಪೆಗಲೊಳ್ (ಕರ್ಣಕ. ೩೯). [ಸಂ.]

ಪ್ರಜಾತ (ಗು). ಹುಟ್ಟಿದ; ಜನಿಸಿದ; ಉತ್ಪನ್ನವಾದ : ಪಾತಕವ್ರಾತ ಪ್ರಜಾತನಿಕೇತನಂಗಳು ತುಡುಗುಣಿಗಳು ನಿಘಾತಕರ್ಮಕ್ರಿಯೆಗಳವಿಚಾರಿಗಳು ಕೋಪಿಗಳು (ಜಸಪು. ೪೦-೬೩). [ಸಂ.]

ಪ್ರಜಾತಂತ್ರ (ನಾ). ಪ್ರಜೆಗಳೇ ಪರಮಾಧಿಕಾರವನ್ನು ಹೊಂದಿರುವ ಆಡಳಿತ ; ಪ್ರಜಾಪ್ರಭುತ್ವ: ವ್ಯಾಕರಣವು ನಿರಂಕುಶಪ್ರಭುವಿನ ಶಾಸನ ವಲ್ಲ. ಅದು ಧರ್ಮನಿಷ್ಠ ಪ್ರಜಾತಂತ್ರ ಜನತೆಯ ರಾಜ್ಯಸಂವಿಧಾನ (ಸಂಕೋರ. ೮೩). [ಸಂ.]

ಪ್ರಜಾತೆ (ನಾ). ಬಾಣಂತಿ; ಪ್ರಸೂತೆ : "ಜಾತಂ ಪ್ರಜಾತಂ ಪ್ರಸೂತೆಯೆನೆ ಬಾಣಂತಿಯಕ್ಕು" (ಮಂಗರಾ. ೯೦-೬). [ಸಂ. ಪ್ರಜಾತಾ]

ಪ್ರಜಾಧರ್ಮ (ನಾ). ೧. ಒಂದು ದೇಶದ ಪ್ರಜೆಗಳು ಅನುಸರಿಸ ಬೇಕಾದ ನಡವಳಿಕೆ,—ಕರ್ತವ್ಯ : ಕುಲಧರ್ಮವೆಂದರೆ ಒಂದು ಕುಲ ದವರು ಮಾತ್ರ ಅನುಸರಿಸುವ ಸಂಪ್ರದಾಯವು ಅಥವಾ ಪದ್ಧತಿಯು. ರಾಜಧರ್ಮ ಪ್ರಜಾಧರ್ಮ ಇತ್ಯಾದಿಗಳಲ್ಲಿ ಕರ್ತವ್ಯವೆಂದರ್ಥವು (ಆರ್ಯಧ. ೦೦). ೨. ಪ್ರಜೆಗಳಿಗೆ ಸಂಬಂಧಿಸಿದ ಹಕ್ಕು, ಕರ್ತವ್ಯ ಮೊದಲಾದ ವಿಷಯಗಳನ್ನು ಒಳಗೊಂಡಿರುವ ಶಾಸ್ತ್ರ; ಪೌರನೀತಿ : "ಪ್ರಜೆಯ ಹಕ್ಕು—ಬಾಧ್ಯತೆಗಳನ್ನೂ ಕರ್ತವ್ಯಗಳನ್ನೂ ಕುರಿತ ಶಾಸ್ತ್ರ; ಪ್ರಜಾಧರ್ಮ; ಪ್ರಜಾನೀತಿ" (civics. ಇಂಕವಿ). [ಸಂ.]

ಪ್ರಜಾಧಿಪ (ನಾ). ಪ್ರಜೆಗಳ ಒಡೆಯ; ಅರಸು; ರಾಜ : "ನೃಪತಿ ರಾಟ್ ರಾಜಂ ನರಾಮರಂ ಪಾರ್ಥವಂ ಕುಪತಿ ಮೂರ್ಧಾಭಿಷಿಕ್ತಂ ಕ್ಷತ್ರಿಯಂ ಪ್ರಜಾಧಿಪನೆನಲ್ಕರಸಕ್ಕು" (ಮಂಗರಾ. ೬೮-೧). [ಸಂ.]

ಪ್ರಜಾಧಿಪತ್ಯ (ನಾ). ಪ್ರಜೆಗಳ ಪರಮಾಧಿಕಾರದಿಂದ ನಡೆಯುವ ಆಡಳಿತ ; ಪ್ರಜಾಪ್ರಭುತ್ವ: ಪ್ರಪಂಚದ ಅತ್ಯಂತ ಪುರಾತನ ಚಕ್ರಾಧಿ ಪತ್ಯಗಳಲ್ಲಿ ಒಂದಾದ ಚೀನಾ ೧೯೧೨ರಲ್ಲಿ ಪ್ರಜಾಧಿಪತ್ಯವಾಯಿತು (ಭೂವಿವ. ೪೦೭). [ಸಂ.]

ಪ್ರಜಾನೀತಿ (ನಾ). = ಪ್ರಜಾಧರ್ಮ ೨: "ಪ್ರಜೆಯ ಹಕ್ಕುಬಾಧ್ಯತೆ ಗಳನ್ನೂ ಕರ್ತವ್ಯಗಳನ್ನೂ ಕುರಿತ ಶಾಸ್ತ್ರ : ಪ್ರಜಾಧರ್ಮ; ಪ್ರಜಾನೀತಿ" (civics. ಇಂಕವಿ). [ಸಂ.]

ಪ್ರಜಾನುರಾಗ (ನಾ). ಪ್ರಜೆಗಳ ಪ್ರೀತಿಗೆ ಪಾತ್ರನಾದವನು : ಅತಿಪ್ರವರ್ಧನಪ್ರಜಾನುರಾಗನುಮತಿಪ್ರಬಲರಣರಾಮನುಮೆನಿಸಿದ ರಣ ರಂಗಸಿಂಹನಿಂ . . . ಪುಟ್ಟಿದಂ (ಗದಾಯು. ೨-೬ ವ). [ಸಂ.]

ಪ್ರಜಾಪಕ್ಷೀಯ (ನಾ). ಪ್ರಜಾಪಕ್ಷಪಾತಿಯಾದ ವ್ಯಕ್ತಿ; ಪ್ರಜೆಗಳ ಹಿತಚಿಂತಕನಾದವನು : ಮಂತ್ರಿಯಾದವನು ನಿಜವಾಗಿ ಪ್ರಜಾ ಪಕ್ಷೀಯನಾಗಿದ್ದಲ್ಲಿ ಅವನ ಮೇಲುಸ್ತುವಾರಿ ಒಹುಮಟ್ಟಿಗೆ ಸಹಾಯಕಾರಿ ಯಾಗುತ್ತದೆ (ರಾಜ್ಯಶಾ. ೩೪೭). [ಸಂ].

ಪ್ರಜಾಪತಿ (ನಾ). ೧. ಪ್ರಜೆಗಳನ್ನು ಸೃಷ್ಟಿಮಾಡುವವನು ; ಸೃಷ್ಟಿಕರ್ತ ; ಪರಮಾತ್ಮ. ೨. ಬ್ರಹ್ಮ : "ಬ್ರಹ್ಮಾ . . . ಪ್ರಜಾಪತಿಃ, ಪಿತಾಮಹಃ, ಜಗತ್ಕರ್ತಾ, ವಿಶ್ವಾತ್ಮಾ, ಕಮಲಾಸನಃ — ಈ ೨೦ ಬ್ರಹ್ಮನ ಪೆಸರ್" (ಹಡಾಯು. ೨-೭); ಪ್ರಜಾಪತಿಯ ರೂಪ ನಿರ್ಮಾಣಕೌಶಲಮುಮಂ . . . ನೀನುಂ ಕಾಣ್ಬೆಯೆಂದೆಂತಾನುಮಿಲ್ಲಿ ಗೊಡಗೊಂಡು ಬಂದೆಂ (ಕಾದಂಕಾ. ೪೧); ಅಪ್ರತಿಮಪ್ರಜಾಪತಿಸಮಾನ ನೆನೆನ್ನ ಮಗಳ್ಗೇನಾನುಮುಪಾಯದ ಮಾಯೆಯಿಂ ವ್ರತಮನಾಗ್ರಹ ದಿಂದಮೆ ನೀವಿಂತೀವುದಿದಾವುದು ಸಮ್ಮದಂ. (ಸುಕುಮಾ. ೭-೩೯). ೩. ವಿಷ್ಣು. ೪. ಪ್ರಜಾಸೃಷ್ಟಿಗಾಗಿ ಬ್ರಹ್ಮನಿಂದ ಮೊದಲು ಸೃಷ್ಟಿ ಹೊಂದಿದ ಹತ್ತುಜನ ಸೃಷ್ಟಿಕರ್ತರು ; ಬ್ರಹ್ಮನ ಮಾನಸ ಪುತ್ರರು ; ೫ ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಸಿಷ್ಠ, ಭೃಗು ಮತ್ತು ನಾರದ—ಇವರು ದಶಪ್ರಜಾಪತಿಗಳು. ಈ ವಿವರಣೆಯ ಬಗೆಗೆ ಭಿನ್ನಾಭಿಪ್ರಾಯವೂ ಇದೆ. ಬ್ರಹ್ಮ, ಸ್ಥಾಣು, ಮನು, ದಕ್ಷ, ಭೃಗು, ಧರ್ಮ, ಯಮ, ಮರೀಚಿ, ಅಂಗಿರಸ್ಸು, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಪರಮೇಷ್ಠಿ, ವಿವಸ್ವಾನ್, ಸೋಮ, ಕರ್ದಮ, ಕ್ರೋಧ, ಅರ್ವಾಕ್ ಮತ್ತು ಪ್ರೀತ—ಈ ಇಪ್ಪತ್ತೊಂದು ಜನ ಪ್ರಜಾಪತಿಗಳೆಂದು ಮಹಾಭಾರತದ ಮೋಕ್ಷಧರ್ಮಪ್ರಕರಣದಲ್ಲಿ ಹೇಳಿದೆ. ೫. ವಿಶ್ವಕರ್ಮ. ೬. ಸೂರ್ಯ. ೭. ಅಗ್ನಿ.

೮. ಇಂದ್ರ. ೯. ಮನು. ೧೦. ಪ್ರಜೆಗಳ ಒಡೆಯ; ಅರಸ; ರಾಜ: "ರಾಜಾ, ರಾಜನ್ಯಃ, ರಾಟ್, ಪ್ರಜಾಪತಿಃ . . . ಲೋಕ ಪಾಲಃ—ಈ ೧೨ ಅರಸು" (ಹಲಾಯು. ೬೯-೨೬೭). ೧೧. ಅಳಿಯ; ಜಾಮಾತ. ೧೨. ತಂದೆ; ಜನಕ. ೧೩. ಒಂದು ಯಾಗದ ಹೆಸರು. ೧೪. ಹಿಂದೂಕಾಲಮಾನದ ಅರುವತ್ತು ಸಂವತ್ಸರಗಳಲ್ಲಿ ಒಂದು. ೧೫. ಪುರುಷನ ಜನನೇಂದ್ರಿಯ; ಶಿಶ್ನ: ಯಿ ದರ್ಮಕೆ ಆಳುಪಿದವ ಕತ್ತೆ ಪ್ರಜಾಪತಿಗೆ ಆಳುಪಿದಾಗೆ (ಸ್ಕೃಲಿ. ೦೯೩೦. ೨೫-೨೦; 1656). [ಸಂ.]

ಪ್ರಜಾಪತಿತ್ವ (ನಾ). ಅರಸುತನ; ರಾಜತ್ವ: ಕುಲಧ್ವಜ ಬೆಸಸು ನಿನ್ನವೋಲೀ ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ (ಆದಿಪು. ೬-೬೩). [ಸಂ.]

ಪ್ರಜಾಪತಿಯೋಗ (ನಾ). [ಜ್ಯೋತಿ] ಶುಭಕಾರ್ಯಗಳಿಗೆ ಪ್ರಶಸ್ತವಾದ ಇಪ್ಪತ್ತೇಳುಯೋಗಗಳಲ್ಲಿ ಇಪ್ಪತ್ತೈದನೆಯ ಬ್ರಹ್ಮವೆಂಬ ಯೋಗ; ಬ್ರಹ್ಮಜ್ಞಾನೋತ್ಪತ್ತಿಗೆ ಸೂಕ್ತವಾದ ಕಾಲ: ಕೃತ ಭವ್ಯೋತ್ಸವ ಮಾಘಶುದ್ಧದಶಮೀಪುಣ್ಯಾಹಯುಕ್ತಂ ಪ್ರಜಾಪತಿಯೋಗಂ ಬೆರೆದಂದು ... ಆದುದಂದಜಿತತೀರ್ಥೇಶಾಬ್ಜಮಿತ್ರೋದಯಂ (ಅಜಿಪು. ೩-೨೨). [ಸಂ.]

ಪ್ರಜಾಪತಿವ್ರತ (ನಾ). ಪ್ರಾಜಾಪತ್ಯ, ಸೌಮ್ಯ, ಆಗ್ನೇಯ ಮತ್ತು ವೈಶ್ವದೇವ ಎಂಬ ನಾಲ್ಕು ವೇದವ್ರತಗಳಲ್ಲಿ ಒಂದು; ಪ್ರಾಜಾಪತ್ಯವ್ರತ: ಪ್ರಜಾಪತಿವ್ರತವೇ ಮುಂತಾದವುಗಳನ್ನು ಬಿಟ್ಟರೆ ಮಿಕ್ಕ ಕಡೆಗಳಲ್ಲೆಲ್ಲ ಪ್ರತಿಷೇಧಕ್ಕೆ ಇದೇ ಅರ್ಥವು ಎಂದು ನಮ್ಮ ಅಭಿಪ್ರಾಯ (ಬ್ರಿಹ್ಮಶಾ. ೬೩). [ಸಂ.]

ಪ್ರಜಾಪಾಲನ (ನಾ). ಪ್ರಜೆಗಳನ್ನು ಕಾಪಾಡುವುದು: ಕ್ಷತ್ರಿಯಜಾತಿಗೆ ಸತ್ಯತ್ಯಾಗಪ್ರಜಾಪಾಲನಶರಣಾಗತರಕ್ಷಣಪ್ರಹರಣಕ್ಷಮಾದಿಗುಣಾಚರಣಮುಮಂ . . . ನಿಱಿಸಿ (ಆದಿಪು. ೬-೬೩ ಪ). [ಸಂ.]

ಪ್ರಜಾಪಾಲನೆ (ನಾ). = ಪ್ರಜಾಪಾಲನ: ಹಿಂದಿನ ಕಾಲದಲ್ಲಿ ಪ್ರಜಾಪಾಲನೆಯೇ ರಾಜನ ಮುಖ್ಯಕರ್ತವ್ಯವಾಗಿದ್ದಿತು (ರೂಢಿ). [ಸಂ. ಪ್ರಜಾಪಾಲನ]

ಪ್ರಜಾಪ್ರತಿನಿಧಿ (ನಾ). ಪ್ರಜೆಗಳಿರುವ ಆಡಳಿತಾಧಿಕಾರವನ್ನು ನಿರ್ವಹಿಸುವುದಕ್ಕಾಗಿ ಮತದಾನದ ಮೂಲಕ ಆರಿಸಿ ಬಂದ ಮುಂದಾಳು: ಪ್ರಜಾಪ್ರತಿನಿಧಿಗಳಾದ ದೇಶಪ್ರಮುಖರು ಸಮರ್ಥರೂ ಯೋಗ್ಯರೂ ಆಗಿರಬೇಕೆಂಬುದು ಸ್ವತಃ ಸಿದ್ಧವಾದ ಸಂಗತಿ (ರಾಜ್ಯಶಾ. ೨೬೦). [ಸಂ.]

ಪ್ರಜಾಪ್ರತಿನಿಧಿಸಭೆ (ನಾ). (ರಾಜ್ಯದ ಆಡಳಿತವಿಚಾರಗಳಲ್ಲಿ ಸಲಹೆ ಕೊಡಲು ನೇಮಿತರಾದ) ಚುನಾಯಿತ ಪ್ರತಿನಿಧಿಗಳ ಸಭೆ: ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆ ಮುಂತಾದ ಸಂಸ್ಥೆಗಳಲ್ಲಿ 'ಮೆಂಬರು' ಗಳಾಗಿರುವವರು ಮತ್ತು ಹಾಗೆ ಸದಸ್ಯರುಗಳಾಗಲು ಬಯಸುವವರು (ಸಾಹಿಕ. ೪೬). [ಪ್ರಜಾಪ್ರತಿನಿಧಿ + ಸಭೆ]

ಪ್ರಜಾಪ್ರಭುತ್ವ (ನಾ). = ಪ್ರಜಾಧಿಪತ್ಯ: ಆಧುನಿಕ ಪ್ರಜಾಪ್ರಭುತ್ವವು, ರಾಜ್ಯದ ವಿಶಾಲತೆಯ ಕಾರಣದಿಂದ, ಪ್ರತಿನಿಧಿಪ್ರಭುತ್ವವನ್ನು ಒಪ್ಪಲೇಬೇಕಾಯಿತು (ರಾಜಪ. ೪); ಪ್ರಜಾಪ್ರಭುತ್ವವು ಇಂದಿನ ಜಗತ್ತಿನಲ್ಲಿ ಪ್ರಚಲಿತವಾದ ಒಂದು ನಿಯಂತ್ರಣ ಪದ್ಧತಿಯಾಗಿದೆ (ಪವ್ಯಕಾ. ೦೭). [ಸಂ.]

ಪ್ರಜಾವತಿ (ನಾ). ೧. ಮಕ್ಕಳುಳ್ಳವಳು. ೨. ತಾಯಿ; ಜನನಿ. ೩. ಸಹೋದರನ ಹೆಂಡತಿ; ನಾದಿನಿ: "ಪ್ರಜಾವತೀ, ಭ್ರಾತೃವಧೂಃ—ಈ ೨ ನಾಮ[ದಿ]ನಿ" (ಹಲಾಯು. ೬೩-೩೫೦); "ನಾದಿನಿ ಪ್ರಜಾಪತಿಯಕ್ಕು" (ಮಂಗರಾ. ೯೨-೦೨). [ಸಂ. ಪ್ರಜಾವತೀ]

ಪ್ರಜಾಲ (ನಾ). ದೊಡ್ಡ ಗುಂಪು,—ಸಮೂಹ: ಭಾಳಾಕ್ಷನಂ ಸ್ತುತಿಸಿ ಯೊಲಿಸನ್ಯಸಮಯಪ್ರಜಾಲಮಂ ಗೆಲಿದ ಹಂಪೆಯ ಹರೀಶ್ವರಂ (ರಾಘಶ. ೦-೦೬). [ಸಂ.]

ಪ್ರಜಾಸಂಬಂಧಾಂತರ (ನಾ). [ಜೈನ] ಜೈನಬ್ರಾಹ್ಮಣನಿಗಿರಬೇಕಾದ ಹತ್ತು ಬಗೆಯ ಅಧಿಕಾರಗಳಲ್ಲಿ ಒಂದು; ☞ ಜೈನಗ್ರಂಥವಾದ ಉಪಾಸನಾಧ್ಯಯನ ಸೂತ್ರದಲ್ಲೂ ಸಂಸ್ಕೃತ ಭಾಷೆಯಲ್ಲಿರುವ ಆದಿಪುರಾಣದಲ್ಲೂ ಹತ್ತುಬಗೆಯ ಅಧಿಕಾರಗಳನ್ನು ಜೈನಬ್ರಾಹ್ಮಣನಿಗೆ ಉಪದೇಶ ಮಾಡಲಾಗಿದೆ. ೧. ಅತಿಬಾಲವಿದ್ಯೆ—ಬ್ರಾಹ್ಮಣನು ಬಾಲ್ಯದಿಂದಲೆ ಯಾವ ವಿದ್ಯೆಯನ್ನು ಕಲಿಯಲು ಪ್ರಯತ್ನ ಮಾಡಿ ಸಾಧಿಸಿದನೊ ಆ ವಿದ್ಯೆ. ೨. ಕುಲಾವಧಿ—ಕುಲಾಚಾರವನ್ನು ರಕ್ಷಿಸುವುದು. ೩. ವರ್ಣೋತ್ತಮತ್ವ—ಇತರ ವರ್ಣದವರಿಗಿಂತ ತಾನು ಮೇಲೆನಿಸಿರುವುದು. ೪. ಪಾತ್ರತ್ವ—ಗುಣಾಧಿಕನಾಗಿರುವುದರಿಂದ ದಾನಮಾನಾದಿಗಳಿಗೆ ಸತ್ಪಾತ್ರನಾಗಿರುವಿಕೆ. ೫. ಸೃಷ್ಟ್ಯಧಿಕಾರಿತೆ—ತೀರ್ಥಂಕರರಿಂದ ಜನ್ಮ ತಾಳಿ ಪ್ರಾಚೀನಕಾಲದಿಂದಲೂ ಬಂದಿರುವ ಧರ್ಮವನ್ನೇ ಪ್ರಚಾರ ಮಾಡುವುದು. ೬. ವ್ಯವಹಾರೇಶಿತ್ವ—ಜೈನಧರ್ಮಾವಲಂಬಿಗಳಾದವರಿಗೆ ಪ್ರಾಯಶ್ಚಿತ್ತ ಮೊದಲಾದ ವ್ಯವಹಾರಗಳನ್ನು ಜೈನಸಂಪ್ರದಾಯಾನುಸಾರವಾಗಿ ನಿರ್ವಹಿಸುವ ಹೊಣೆಗಾರಿಕೆ,—ಸ್ವಾತಂತ್ರ್ಯ. ೭. ಅವಧ್ಯತ್ವ—ಸಾಮಾನ್ಯವಾಗಿ ಯಾವ ಪ್ರಾಣಿಗಳನ್ನೂ ಕೊಲ್ಲಬಾರದು. ವಿಶೇಷವಾಗಿ ಬ್ರಾಹ್ಮಣನನ್ನಂತೂ ಕೊಲ್ಲಲೇಬಾರದು. ಅವನು ವಧೆಗೆ ಯೋಗ್ಯನಲ್ಲ, ಅವಧ್ಯ. ೮. ಅದಂಡ್ಯತ್ವ—ಬ್ರಾಹ್ಮಣನು ದಂಡನೆಗೆ ಅರ್ಹನಲ್ಲ, ಶಿಕ್ಷಾರ್ಹನಲ್ಲ. ೯. ಮಾನಾರ್ಹತೆ—ಬ್ರಾಹ್ಮಣನು ಎಲ್ಲರ ಮನ್ನಣೆಗೂ ಪಾತ್ರನಾದವನು. ಎಲ್ಲರೂ ಅವನನ್ನು ಗೌರವಿಸಬೇಕು. ೧೦. ಪ್ರಜಾಸಂಬಂಧಾಂತರ—ಹೇಗೆ ಸಿದ್ಧರಸವು ತನ್ನೊಡನೆ ಸಂಬಂಧ ಹೊಂದಿದ ಲೋಹಗಳನ್ನೆಲ್ಲಾ ಚಿನ್ನವನ್ನಾಗಿ ಮಾಡುವುದೋ ಹಾಗೆ ತನ್ನ ಸಂಗವನ್ನು ಮಾಡಲು ಬಂದ ಎಲ್ಲರನ್ನೂ ತನ್ನಂತೆಯೇ ಒಳ್ಳೆಯವರನ್ನಾಗಿ ಮಾಡಿ, ತಾನು ಮಾತ್ರ ತನ್ನತನವನ್ನು ಉಳಿಸಿಕೊಂಡಿರುವಿಕೆ: ಅತಿಬಾಲವಿದ್ಯಾಕುಲಾವಧಿ ವರ್ಣೋತ್ತಮತ್ವ ಪಾತ್ರತ್ವ ಸೃಷ್ಟ್ಯಧಿಕಾರ ವ್ಯವಹಾರೇಶಿತ್ವಾವಧ್ಯತ್ವಾದಂಡ್ಯತ್ವ ಮಾನಾರ್ಹತ್ವ ಪ್ರಜಾಸಂಬಂಧಾಂತರಮೆಂಬ ಪತ್ತುಮಧಿಕಾರಂಗಳುಮನಱಿಪಿ (ಆದಿಪು. ೦೫-೦೬ಪ); ದಶಾಧಿಕಾರಮುಪಾಸಕಾಧ್ಯಯನದೊಳ್ಪೇಟ್ಟುದವಾವುವೆಂದಡೆ ಅತಿಬಾಳವಿದ್ಯೆಯುಂ . . . ಪ್ರಜಾಸಂಬಂಧಾಂತರ [ಶಾಕಾಂ. ಪ್ರಜಾಸಂಬಂಧತ್ವ]ಮುಮೆಂದು ದಶವಿಧಮುಮಕ್ಕುಂ (ಶಾಪುಂಪು. ೨೩೬). [ಸಂ.]

ಪ್ರಜಾಸತ್ತೆ (ನಾ). = ಪ್ರಜಾಧಿಪತ್ಯ: ಪಟೇಲಸಾಹೇಬರು . . . ಪ್ರಜಾಸತ್ತೆಯ ಈ ಕಾಲದಲ್ಲಿ ಪ್ರಜರ ಬೇಡಿಕೆಗೆ ಗೌರವ ಕೊಟ್ಟು . . . ನಮ್ಮ ಪ್ರಾಂತವನ್ನು ಕೊಡಬೇಕು (ಹನ್ನೊಂದ. ೦೦೨); ನಿಜವಾದ ಪ್ರಜಾಸತ್ತೆಯ (Democratic) ಸಮಾಜವು ಏರ್ಪಡಬೇಕಾದರೆ . . . ಸಹಕಾರಬುದ್ಧಿಯಿಂದ ವರ್ತಿಸುವುದು ಹೆಚ್ಚಬೇಕು (ಕ್ರಿಯಾತಿ. ೦೪೨). [ಸಂ. ಪ್ರಜಾಸತ್ತಾ]

ಪ್ರಜಾಸರ್ಕಾರ (ನಾ). = ಪ್ರಜಾಧಿಪತ್ಯ: ಭಾರತವು . . . ಪ್ರಜಾಸರ್ಕಾರಪದ್ಧತಿಯನ್ನೂ ಗ್ರಾಮಾಡಳಿತವ್ಯವಸ್ಥೆಯ ಮೂಲಕ ನಮಗೆ ಕೃಪೆ ಮಾಡಿದ ನಮ್ಮ ತಾಯಿ (ಭಾರದ. ೩೬೩). [ಸಂ. (ಪ್ರಜಾ+ಸರ್ಕಾರ)]

ಪ್ರಜಾಸ್ವಾತಂತ್ರ್ಯ (ನಾ). ಮಾನವನ ಆಜನ್ಮಸಿದ್ಧವಾದ ಹಾಗೂ ಮೂಲಭೂತವಾದ ಸ್ವಾತಂತ್ರ್ಯ: ಒಂದು ಸ್ವತಂತ್ರರಾಷ್ಟ್ರದಲ್ಲಿ ಜನರಿಗಿರುವ ಪರಮಾಧಿಕಾರ: ಒಂದು ದೇಶದ ಪ್ರಜಾಸ್ವಾತಂತ್ರ್ಯಗಳ ನಿರಾಕರಣೆಯೆಂದರೆ ಅಲ್ಲಿ ನಿರಂಕುಶಆಡಳಿತವಿದೆಯೆಂದೇ ಪರಿಗಣಿಸಲಾಗುತ್ತದೆ (ಕವಿಕೋ. XI. ೩೫೦). [ಸಂ.]

ಪ್ರಜಾಹಿತ (ನಾ). ಜನರ ಕ್ಷೇಮ,—ಸೌಖ್ಯ : ಪ್ರಜಾಹಿತವೂ ಮತ್ತು ಧರ್ಮಸಹಿಷ್ಣುತೆಯೂ ಈತನಲ್ಲಿ ನೆಲೆಸಿತ್ತು (ಮೊಳಂಬ. ೨೯) ; ಪತ್ರಿಕೆ . . . ಪ್ರಜಾಹಿತಸಾಧನಾಧ್ಯೇಯದಿಂದ ಸಮಾಜದಲ್ಲೊಂದು ಅಪೂರ್ವಸ್ಥಾನಮರ್ಯಾದೆಯನ್ನು ಕಲ್ಪಿಸಿಕೊಂಡಿರುತ್ತದೆ (ಶನಿಶೋ. I. ೦೮೬). [ಸಂ.]

ಪ್ರಜೆ (ನಾ). ೧. ಹುಟ್ಟು ; ಜನ್ಮ ; ಉತ್ಪತ್ತಿ. ೨. ಸಂತತಿ ; ಸಂತಾನ. ೩. ಒಂದು ಸಂತತಿಗೆ ಸೇರಿದ ವ್ಯಕ್ತಿ ; ವಂಶಜ. ೪. ಮನುಷ್ಯ ಜಾತಿ ; ಮಾನವಕುಲ. ೫. ಸೃಷ್ಟಿಯಾದ ಯಾವುದೇ ಜೀವಿ. ೬. ಒಂದು ದೇಶದಲ್ಲಿರುವ ಜನ ; ಒಂದು ಆಧಿಪತ್ಯಕ್ಕೆ ಸೇರಿದ ಜನವರ್ಗ : "ಲೋಕಂ ಬಹುತ್ವಂ ಜನಂ ಪ್ರಜೆಗೆ ಪೆಸರಕ್ಕು" (ಪುಂಗಣಾ. ೩೬-೨) ; ಪ್ರಜೆಯೆಲ್ಲಂ ಕ್ಷೇಮದಿಂದಿರ್ದುದು (ಶಾಪಂಣಾ. ೨೫೯) ; ರಾಜ್ಯವೆಂದರೆ ಕೆಲವು ಮೂಲನಿಬಂಧನೆಗಳಿಗೆ ಅನುಸಾರವಾಗಿ ಒಟ್ಟುಗೂಡಿಕೊಂಡು ಬದುಕಲು ಒಡಂಬಟ್ಟಿರುವ ಜನರ ಸಂಘ . . . ಹಾಗೆ ಒಡಂಬಟ್ಟಿರುವ ಜನಕ್ಕೆ ರಾಜ್ಯಭಾಷೆಯಲ್ಲಿ "ಪ್ರಜೆ" ಎಂದು ಹೆಸರು (ರಾಜ್ಯಶಾ. ೪೩). ೭. ವೀರ್ಯ ; ರೇತಸ್ಸು. [ಸಂ. ಪ್ರಜಾ]

ಪ್ರಜೇಶ (ನಾ). ೧. = ಪ್ರಜಾಪತಿ ೪: 'ನವಪ್ರಜೇಶ' ಪರಾ. ೨. ರಾಜ ; ದೊರೆ. [ಸಂ.]

ಪ್ರಜೇಶ್ವರ (ನಾ). ೧. ಪ್ರಜೆಗಳ ಒಡೆಯ ; ರಾಜ. ೨. = ಪ್ರಜಾಪತಿ ೪: ಇಂದು ಕಮಳಭವ ಪ್ರಜೇಶ್ವರರೊಂದು ಮೂರುತಿ ವಿಷ್ಣು ಮನುಗಳು ಸಂದ ಪಾರ್ಥಿವಲೋಕಪಾಲಕರೊಂದು ಮೂರ್ತಿಯದು (ಶುಸ್ಕಾರ್ಪ್ರೋ. ೩-೬೮). ೩. ಮರೀಚಪುತ್ರನಾದ ಕಶ್ಯಪಪ್ರಜಾಪತಿ ; P ಪ್ರಜಾಪತಿಗಳ ಸಾಲಿನಲ್ಲಿ ಕಶ್ಯಪನಿಗೆ ಗಣನೆಯಿಲ್ಲವಾದರೂ ದೇವತೆಗಳು ರಾಕ್ಷಸರೇ ಮೊದಲಾದ ದೇವಯೋನಿಗಳ ಜನಕನಾದುದರಿಂದ ಇವನಿಗೂ ಈ ಹೆಸರು ಸಲ್ಲುತ್ತದೆ : ಸರಸಿಜಭವನಿಂ ಪುಟ್ಟಿದ ಮರೀಚಿ ಗಣುಗಂ ಪ್ರಜೇಶ್ವರಂ . . . ಚರಿಪಂ ಸತಿವೆರಸು ತಪವನೀ ಪರ್ವತದೊಳ್ (ಶಾಕುಂತ. ೦೦೮-೦೭೨). [ಸಂ.]

ಪ್ರಜೈತ್ರ (ನಾ). ಹೆಚ್ಚಾದ ಗೆಲುವನ್ನು ಪಡೆದವನು; ಅತಿಪರಾಕ್ರಮಿ: ವಿನುತನಿಸ್ಪೃಹನಿರಾತಂಕ ಸಂಸೃತಿಲತಾಸಂಕುಲಗುಣಪ್ರಜೈತ್ರಂ (ರಾಘಕ. ೦೯-೯೦). [ಸಂ.]

ಪ್ರಜೋತ್ಪತ್ತಿ (ನಾ). ಹಿಂದೂಕಾಲಮಾನದ ಅರುವತ್ತು ಸಂವತ್ಸರಗಳಲ್ಲಿ ಐದನೆಯದು : ಶ್ರೀಮತು ಪ್ರಜೋತ್ಪತ್ತಿಸಂವತ್ಸರದ ಮಾರ್ಗ್ಗಸಿರ ಬ ೭ ಸೋ (ಎಳ. V. ಪೇಲೂರು. ೦೯೨-೦ ; 1211 ?). [ಸಂ.]

ಪ್ರಜ್ಞ (ಗು). ೧. ಬಹಳ ವಿಷಯಗಳನ್ನು ತಿಳಿದುಕೊಂಡಿರುವ ; ವಿದ್ವಾಂಸನಾದ: ಮಾತಿಗಾರ್ಯನು ನೆನಹುಗಳಿಗೆಯತೀತನಪ್ಪ ಮಹಾನುಭಾವ ಪ್ರಜ್ಞಮಾನಸನು (ಜಸಪು. ೮-೦೨). ೨. ಬುದ್ಧಿವಂತನಾದ ; ತಿಳಿವಳಿಕೆಯುಳ್ಳ. (ನಾ). ೩. ಬಹಳ ವಿಷಯಗಳನ್ನು ತಿಳಿದುಕೊಂಡಿರುವವನು ; ವಿದ್ವಾಂಸ ; ಪಂಡಿತ : ಬಹುಶ್ರುತನ ಮಂತ್ರನಿಶ್ಚಯಮುಮಂ ... ಪ್ರಜ್ಞರುಂ ನಿರ್ಮತ್ಸರರುಂ ... ಸಚಿವ ಸಮೂಹಂ ಮೆಚ್ಚಿ (ಶಾಂತಿಪು. ೨-೭೦ ಪ); ಪ್ರಜ್ಞರ್ಗಾಗಮಮಂ ಲೋಕಜ್ಞರ್ಗಱಿವನಿತನುಸಿರ್ಪುದೆಗ್ಗು (ಅಪಂಪು. ೩-೨). ೪. ಬುದ್ಧಿವಂತ. [ಸಂ.]

ಪ್ರಜ್ಞಪ್ತ (ಗು). ೧. ಗೊತ್ತುಪಡಿಸಿದ ; ವಿಧಿಸಿದ. (ನಾ). ೨. ಚೆನ್ನಾಗಿ ಬೋಧಿಸುವುದು ; ತಿಳಿವಳಿಕೆಯನ್ನು ನೀಡುವುದು. ೩. [ಬೌದ್ಧ] ಕ್ರಮವಾಗಿರುವುದು ; ಕ್ರಮಬದ್ಧವಾಗಿರುವುದು : ಮಿಲಿಂದ ಪ್ರಶ್ನೆಯು ಪಿಟಕಗಳಷ್ಟೇ ಪ್ರಜ್ಞಪ್ತವಾದ ಪ್ರಮಾಣಗ್ರಂಥವಾಗಿತ್ತು (ಬುದ್ಧತ. ಮಿಲಿಂದ. ೦೦). [ಸಂ.]

ಪ್ರಜ್ಞಪ್ತಿ (ನಾ). ೧. ಅರಿವು ; ಜ್ಞಾನ ; ಪ್ರಜ್ಞೆ. ೨. ಬುದ್ಧಿ. ೩. ತಿಳಿಸುವುದು ; ಕಲಿಸುವುದು. ೪. [ಜೈನ] ಒಬ್ಬ ದೇವತೆಯ ಹೆಸರು ; ವಿದ್ಯಾದೇವಿ. [ಸಂ.]

ಪ್ರಜ್ಞಪ್ತಿವಿದ್ಯೆ (ನಾ). [ಜೈನ] ಒಂದು ಬಗೆಯ ವಿದ್ಯೆ : ಅವರ್ಗಂ ಪ್ರಜ್ಞಪ್ತಿವಿದ್ಯೆ ಮೊದಲಾಗಿ ಕುಲಜಾತಿಸಾಧಿತಮ್ಮಿದ್ಯೆಗಳ್ ಪಲವುಂ ಬೆಸಕೆಯ್ವುವು (ಅದಿಪು. ೯-೦೨೦ ಪ) ; ಅಂತು ಪ್ರಜ್ಞಪ್ತಿವಿದ್ಯಾಲಾಭಾಂತರಾಯಮಂ ಮಾಡಲ್ (ಶಾಂತಿಪು. ೯-೫ ಪ) ; ಅಂತು ನಡನಡ ನಡಗುತ್ತುಮಾಂ ವಿಜಯೆಯೆಂಬೆಂ ಪ್ರಜ್ಞಪ್ತಿವಿದ್ಯೆಯಿಂ ಕಿಱಿಯಳೆಂ (ಸಂರಾಮಾ. ೦೯-೬೬ ಪ). [ಸಂ. ಪ್ರಜ್ಞಪ್ತಿ ವಿದ್ಯಾ]

ಪ್ರಜ್ಞಾಗ್ರಾಹಿತ್ವ (ನಾ). ಸಂಪೂರ್ಣಾರ್ಥವನ್ನು ಸ್ವೋಪಜ್ಞವಾಗಿ (ಅಂತರಂಗದ ಚೇತನದಿಂದ) ಕಂಡುಕೊಳ್ಳುವುದು : ಒಂದು ಉತ್ತಮರೂಪಕವು ಭಿನ್ನವಸ್ತುಗಳಲ್ಲಿರುವ ಸಾದೃಶ್ಯದ ಪ್ರಜ್ಞಾಗ್ರಾಹಿತ್ವ (Intutive Perception)ವನ್ನು ಸೂಚಿಸುತ್ತದೆ (ಅರಿಕಾ. ೦೨೭). [ಸಂ.]

ಪ್ರಜ್ಞಾತೀತ (ನಾ). ಬುದ್ಧಿಗೆ ಮೀರಿದುದು ; ಊಹೆಗೆ ನಿಲುಕದಿರುವುದು : ಅಂಥ ಪ್ರೇಮ ಪ್ರಜ್ಞಾತೀತವಾಗಿ ಅಂತರ್ಜ್ಞಾನಪ್ರೇರಿತವಾಗಿರುತ್ತದೆ (ಪುಪರು. ೭೩). [ಸಂ.]

ಪ್ರಜ್ಞಾನ (ನಾ). ೧. ಹೆಚ್ಚಾದ ತಿಳಿವಳಿಕೆ ; ಅಧಿಕವಾದ ಜ್ಞಾನ : ಈ ಪ್ರಜ್ಞಾನಕ್ಕಾಗಿ, ವಿಶುದ್ಧಬುದ್ಧಿಗಾಗಿ ಮೂಲತಃ ಬೇಕಾದದ್ದು ಅಂತರಂಗದ ಒಂದು ಸುಸಂಬದ್ಧತೆ (ಎಜಾವಾ. ೨೦) ; ದುರಾಚಾರದಿಂದ ನಿವೃತ್ತನಾಗದವನೂ ಶಾಂತನಲ್ಲದವನೂ ಸಮಾಹಿತನಲ್ಲದವನೂ ಮನಶ್ಶಾಂತಿಯಿಲ್ಲದವನೂ ಪ್ರಜ್ಞಾನದಿಂದ ಇವನನ್ನು ಪಡೆಯಲಾರರು (ಕಠಶ್ರಾ. ೬೩). ೨. ವಿಚಾರ ಮಾಡುವ ಶಕ್ತಿ ; ವಿವೇಚನೆ. ೩. ಚೈತನ್ಯ. ೪. ತಿಳಿದವನು ; ಬುದ್ಧಿವಂತ. ೫. ಗುರುತು ; ಅಭಿಜ್ಞಾನ : "ಪ್ರಜ್ಞಾನಂ—೧. ಶುದ್ಧಬುದ್ಧಿ, ಗುರ್ತು ೨" (ನಿಧ್ಯಾಂತಿ. ೪೦೩). [ಸಂ.]

ಪ್ರಜ್ಞಾನಿ (ಗು). ೧. ಬಹಳ ಬುದ್ಧಿವಂತನಾದ. ೨. ವಿಶೇಷ ಜ್ಞಾನಿಯಾದ : ಪ್ರಜ್ಞಾನಿ ರಾಮಚಂದ್ರಂ . . . ನಿಂದನಚಲಂ ಧನುಷ್ಪಾಣಿ ಬಾಣಧಿ ನಿಮಿರೆ ಬೆನ್ನಿನಲಿ ! (ಶ್ರೀ ರಾಮಾ. ೬೯೦-೩೯೩). [ಸಂ. ಪ್ರಜ್ಞಾನಿನ್]

ಪ್ರಜ್ಞಾಪಾರಮಿತೆ (ನಾ). [ಬೌದ್ಧ] ಅತ್ಯಂತ ಶ್ರೇಷ್ಠವಾದ ಜ್ಞಾನ,—ತಿಳಿವಳಿಕೆ : ಈ ಸಾಕ್ಷಾತ್ಕಾರವೆಂಬ ಭಾವನೆಯು ವೇದಾಂತಿಗಳ ಶ್ರವಣ, ಮನನ, ನಿದಿಧ್ಯಾಸಗಳಂತೆ ಶ್ರುತಿಮಯಿಾ, ಚಿಂತಾಮಯಿಾ, ಭಾವನಾಮಾಯಿಾ ಎಂಬ ಕ್ರಮದಿಂದ ಪ್ರಜ್ಞಾಪಾರಮಿತಾ ಎಂಬ ನಾಮಧೇಯದಿಂದ ಪ್ರಸಿದ್ಧವಾಗಿರುವುದು (ಹಿಂದಸಾ. ೪೦). [ಸಂ. ಪ್ರಜ್ಞಾಪಾರಮಿತಾ]

ಪ್ರಜ್ಞಾವಂತ (ನಾ). ಅರಿವುಳ್ಳವನು ; ಜ್ಞಾನಿ : ಅಶಾಶ್ವತಸುಖವನ್ನು ಕೊಡುವ ಈ ಯಾವ ವರವೂ ಆ ಪ್ರಜ್ಞಾವಂತನಾದ ಬಾಲಕನಿಗೆ ಬೇಡವಾಯಿತು (ಪುಕ್ಕಾರ. ೨ ಪಿ:೫೯); ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಆಧ್ಯಾತ್ಮಿಕವಿಚಾರಗಳು . . . ಸರ್ವಕಾಲದ ಪ್ರಜ್ಞಾವಂತರಾದ ಮಾನವರ ಧ್ಯಾನಚಿಂತನೆಗಳಿಗೆ ಮುಗಿಯದ ತತ್ವಸಂಪತ್ತನ್ನು ಒದಗಿಸಿಕೊಡುತ್ತಿವೆ (ಶಾರದ. ೬೩). [ಸಂ. ಪ್ರಜ್ಞಾವತ್]

ಪ್ರಜ್ಞಾವಾದ (ನಾ). (ಆಲಂ) ತಾನು ಬುದ್ಧಿವಂತನೆಂದು ಭಾವಿಸಿ ಆಡುವ ಮಾತು : 'ಪ್ರಜ್ಞಾವಾದವನ್ನೇ ಆಡುತ್ತಿರದೆ, ಜಿಜ್ಞಾಸೆ ಮಾಡಿ . . . ಇಲ್ಲಿಯೇ ಮುಕ್ತಿಯನ್ನು ಪಡೆಯಬೇಕು (ಶಬಸಾ. ೦೯೯). [ಸಂ.]

ಪ್ರಜ್ಞಾವಾದಿ (ನಾ). (ಆಲಂ) ತಾನು ಬುದ್ಧಿವಂತನೆಂದು ಭಾವಿಸಿ ಮಾತುಗಳನ್ನಾಡುವವನು : ಅಲ್ಲದ ಕೆಲಸದಲ್ಲಿ ಅವರು ಸಲ್ಲದ ರೀತಿ

ಯಲ್ಲಿ ಕೈಯಿಕ್ಕುತ್ತಿರುವರೆಂದು ಗೊಣಗುಟ್ಟುವ ಪ್ರಜ್ಞಾವಾದಿಗಳೂ ವಿಪುಲರಾಗಿದ್ದಾರೆ (ವಿಶಾಸಂ. ೩೯); ಪ್ರಜ್ಞಾವಾದಿಯಾಗಿದ್ದೀಯಾಗಲಿ ಪ್ರಜ್ಞಾವಿದನಾಗಿಲ್ಲ (ಶಾಕರ. ೦೦೩). [ಸಂ. ಪ್ರಜ್ಞಾವಾದಿನ್]

ಪ್ರಜ್ಞಾಶೂನ್ಯ (ನಾ). ೧. ಬುದ್ಧಿಗೇಡಿ; ಅಜ್ಞ. ೨. ಮೈಮನಸ್ಸುಗಳ ಮೇಲೆ ಅರಿವು ಇಲ್ಲದ ವ್ಯಕ್ತಿ; ಮೂರ್ಛಾವಸ್ಥೆಯಲ್ಲಿರುವವನು: ರಸ್ತೆಯ ಅಪಘಾತದಲ್ಲಿ ಪ್ರಜ್ಞಾಶೂನ್ಯನಾದವನನ್ನು ಆಸ್ಪತ್ರೆಗೆ ಸಾಗಿಸಿದರು (ಕೂಡಿ). [ಸಂ.]

ಪ್ರಜ್ಞಾಸ್ತ್ರ (ನಾ). ಮೂರ್ಛೆಗೊಂಡವರನ್ನು ಎಚ್ಚರಗೊಳಿಸುವ ಒಂದು ಬಗೆಯ ಮಂತ್ರಾಸ್ತ್ರ: ವಿಭೀಷಣನು ಬಂದು ಅವರನ್ನು ಪ್ರಜ್ಞಾಸ್ತ್ರದಿಂದ ಎಚ್ಚರಗೊಳಿಸಿದನು (ಪಸಭಾ. ೪೧೦). [ಸಂ].

ಪ್ರಜ್ಞಾಹೀನ (ನಾ). ೧. = ಪ್ರಜ್ಞಾಶೂನ್ಯ ೧. ೨. = ಪ್ರಜ್ಞಾಶೂನ್ಯ ೨: ತೀವ್ರವಾದ ಜ್ವರದಿಂದ ಅವನು ಪ್ರಜ್ಞಾಹೀನನಾಗಿದ್ದಾನೆ (ಕೂಡಿ). [ಸಂ.]

ಪ್ರಜ್ಞಾಹೀನತೆ (ನಾ). ೧. ಬುದ್ಧಿಯಿಲ್ಲದಿರುವಿಕೆ; ದಡ್ಡತನ; ಅಜ್ಞತೆ: ಪ್ರಜ್ಞಾಹೀನತೆಯಿಂದ ಮೆಱಸಿದ ಸಂಬಂಧ ನೀ[ಉ] ಮಾಡಿದ ಶಿಕ್ಷೆಗಳಿಗೊಳಗಾಗಿ . . . ನಾಉ ನಂಮ ಜಿನಸಮಯಕ್ಕೆ . . . ಸಲ್ಲವೆಂದು ಕೊಟ್ಟ ಜಯಪತ್ರಿಕೆ (ಸೌಇಇ. XX, ೩೯೦-೯; 1538). ೨. ಮೈಮನಸ್ಸುಗಳ ಮೇಲೆ ಅರಿವು ಇಲ್ಲದ ಸ್ಥಿತಿ; ಮೂರ್ಛಾವಸ್ಥೆ. [ಸಂ. ಪ್ರಜ್ಞಾಹೀನತಾ]

ಪ್ರಜ್ಞು (ನಾ). ಕಿಸುಗಾಲು ಹಾಕುವವನು: "ಪ್ರಜ್ಞುಃ, ಪ್ರಗತ ಜಾನುಕಃ, ಒಂದಕ್ಕೊಂದು ದೂರವಾಗಿ ಅಗಲವಾದ ಮೊಳಕಾಲುಗಳುಳ್ಳವನ ಹೆಸರು, ಕಿಸುಗಾಲವನು" (ಸಿದ್ಧಾಂತಿ. ೦೬೦). [ಸಂ.]

ಪ್ರಜ್ಞೆ (ನಾ). ೧. ತಿಳಿವಳಿಕೆ; ಅರಿವು; ಬುದ್ಧಿ: "ಸಂಖ್ಯಾರುಚಿಮತಿ ಪ್ರಜ್ಞೆ ಮೇಧೆ ಸಂವಿತ್ತುಮುಪಲಬ್ಧಿಯೆನೆ ಬುದ್ಧಿಯಕ್ಕುಂ" (ಮಂಗರಾ. ೬೬-೨); ಮಾಯವಾದತ್ತುಳಿದುದನಿತುಮುಂ ಪ್ರಜ್ಞೆಯಿಂ ಜಗುಳ್ದು ಲಯವೊಂದಿ (ಶ್ರೀರಾಮಾ. ೦೭-೪೪೫); ಓದುಗನ ಪ್ರಜ್ಞೆಯಲ್ಲಿ ವಂಗಲದರ್ಶನವನ್ನು ಸ್ಫುರಿಸಲೆಂದೇ ಕಲಾಕೃತಿಯಲ್ಲಿ ಇಂತಹ ಬಗೆಬಗೆಯ ಹೊಂಚನ್ನು ಹಾಕಿರುತ್ತದೆ (ಸಮಸೇ. ೦ ಪೀಠಿಕೆ). ೨. ಪ್ರತಿಭೆ. ೩. ವಿವೇಕ; ವಿವೇಚನೆ. ೪. ಪೂರ್ವಸಂಸ್ಕಾರ; ವಾಸನೆ. ೫. ಭಾವನೆ; ಚಿತ್ತವೃತ್ತಿ. ೬. ಮೈ, ಮನಸ್ಸುಗಳ ಮೇಲಿನ ಎಚ್ಚರ.– ಅರಿವು: ಅಪಘಾತದಲ್ಲಿ ತಲೆಗೆ ಏಟು ಬಿದ್ದು ಅವನಿಗೆ ಪ್ರಜ್ಞೆ ತಪ್ಪಿದೆ (ಕೂಡಿ). ೭. ಒಂದು ನಿರ್ದಿಷ್ಟವಾದ ಶಕ್ತಿ. ೮. ಸರಸ್ವತಿ. ೯. ತಿಳಿವಳಿಕೆಯುಳ್ಳ ಹೆಂಗಸು. ೧೦. [ಬೌದ್ಧ] ಬೌದ್ಧರ ಪ್ರಧಾನದೇವತೆ; ತಾರಾದೇವಿ: ಈ ಶಾಸನದಲ್ಲಿ ತಾರಾಭಗವತಿಯನ್ನು 'ಪ್ರಜ್ಞಾ' ಎಂದೂ 'ಬೋಧಿಸ್ವರೂಪ' ಎಂದೂ ಕರೆದಿರುವುದರ ಔಚಿತ್ಯವನ್ನು ಕಾಣಬಹುದು (ಕಶಾಲಿ. ೦೨೨). ೧೧. ಪಾರಮಾರ್ಥಿಕವಾದ ಜ್ಞಾನ. [ಸಂ. ಪ್ರಜ್ಞಾ]

ಪ್ರಜ್ವಲ, ಪ್ರಜ್ವಳ (ಗು). ೧. ಚೆನ್ನಾಗಿ ಉರಿಯುವ; ಧಗಧಗಿಸುವ. ೨. ಹೆಚ್ಚಾಗಿ ಪ್ರಕಾಶಿಸುವ. (ನಾ). ೩. ಚೆನ್ನಾಗಿ ಉರಿಯುವುದು; ಧಗಧಗಿಸುವುದು. ೪. ಹೆಚ್ಚಾಗಿ ಪ್ರಕಾಶಿಸುವುದು; ಉಜ್ವಲವಾಗಿರುವುದು. ೫. ಬೆಳಕು; ಪ್ರಕಾಶ; ದೀಪ್ತಿ. ೬. [ಜೈನ] ಒಂದು ನರಕಬಿಲದ ಹೆಸರು: ವಾಲುಕಾ ಪ್ರಭೆಯೊಳ್ ತಪ್ತತಪಿತ ತಪನ ತಾಪನ ವಿತಾನ ಉಜ್ವಲ ಪ್ರಜ್ವಲ . . . ಪ್ರಕೀರ್ಣಕವಿಕಲ್ಪದಿಂ ಪಂಚದಶಲಕ್ಷಬಿಲಂಗಳಪ್ಪುವು (ತತ್ತ್ವಾತ್ರ. ೦೨೦). ಪ್ರಜ್ವಳ: ೩. ಪ್ರಜ್ವಳಮಾಯ್ತು ವಹ್ನಿ ಹಿಮಗಂಧೋದ್ಗಾರಿಯಾಯ್ತುಂದು ಗಾಳಿ (ಪುತ್ರಪು. ೦೦-೩). [ಸಂ.]

ಪ್ರಜ್ವಲನ (ನಾ). ೧. ಚೆನ್ನಾಗಿ ಉರಿಯುವುದು, – ಜ್ವಲಿಸುವುದು. ೨. ಪ್ರಕಾಶಿಸುವುದು. [ಸಂ.]

ಪ್ರಜ್ವಲಿತ (ಗು). ೧. ಹೆಚ್ಚಾಗಿ ಉರಿಯುವ,– ಜ್ವಲಿಸುವ. ೨. ಪ್ರಕಾಶಿಸುವ; ಉಜ್ವಲವಾದ: ಪರಮಜ್ಞಾನ ಪ್ರಕಾಶಜ್ಞಾನ ಪ್ರಜ್ವಲಿತಜ್ಞಾನ ಪ್ರಭಾವಜ್ಞಾನ (ಅಲಾಮಾ.ಕ. ೦೫೬-೨೦೦). (ನಾ). ೩. ಪ್ರಕಾಶಿಸುವುದು; ಉಜ್ವಲವಾಗಿರುವುದು: ಸವಿತೃವಿನ ತೇಜಸ್ಸು ಪ್ರಜ್ವಲಿತವಾಗಿದೆ (ಪುಸ್ವಾರ. ೨೬೯). [ಸಂ.]

ಪ್ರಜ್ವಲಿಸು, ಪ್ರಜ್ವಳಿಸು (ಕ್ರಿ). ೧. (ಬೆಂಕಿಯು) ಚೆನ್ನಾಗಿ ಉರಿ; ಧಗಧಗಿಸು: ಆ ಅಸ್ತ್ರವು ಖಾಂಡವವನವಂ ದಹಿಸುವ ಅಗ್ನಿಯಂತೆ ಪ್ರಜ್ವಲಿಸುತ ಚಾಪದಿಂ ಹೊರಡುತ್ತಿರಲು (ಸೌಗಂಧಿ. ೨೯೭-೬); ಕಳೆದ ನೆನಪಿನ ಒಡಲು ಅಗ್ನಿಕುಂಡವದಿಹುದು ಪ್ರಜ್ವಲಿಸಬಹುದೊಮ್ಮೆ ಬೂದಿ ಹಾರಿ (ವಿಶಾಸ. ೩೯-೪); ಘೃತದ ಧಾರೆಗಳು ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತವೆ (ಪುಸ್ವಾರ. ೨೦೦). ೨. ಹೊಳೆ; ಪ್ರಕಾಶಿಸು: ಬಾಲಾರ್ಕನಂತೆ ಪ್ರಜ್ವಲಿಸುವ ರತ್ನದ ಬೆಳಗಂ ಕಂಡು ಕಳಕಳರವಮಂ ಮಾಡುವುದುಂ (ಧರ್ಮಾಮ್ಯ. ೬-೬೬); ನಾಸಿಕಾಗ್ರಭ್ರೂನಿಟಿಲಮಧ್ಯದೊಳ್ಪ್ರಜ್ವಲಿಸಿ ಬೆಳಗುವ ಸ್ವಯಂಪ್ರಕಾಶಲಿಂಗಕ್ಕೆ . . . ಅಷ್ಟವಿಧಾರ್ಚನೆಯಿಂದರ್ಚಿಸಿ (ಅದಪ. ೨೯-೯೪); ಪ್ರಜ್ವಲಿಸುತ್ತಿರುವ ಆ ನೀಲೀವರ್ಣಜಾಲದಲ್ಲಿ ಪರವಶಳಾದಳು ಆ ಊರ್ಮಿಳೆ (ಮೊಗ್ಯು. ೪೩). ೩. (ದೀಪವು) ಹೆಚ್ಚು ಬೆಳಕನ್ನು ಬೀರುತ್ತಾ ಉರಿ,– ಪ್ರಕಾಶಮಾನವಾಗಿ ಬೆಳಗು: ಕೆಲಬಲದ ದೀವಿಗೆಗಳುಂ ಪ್ರಜ್ವಲಿಸದಿದ್ದುವೊ (ಬಸಪು. ೪೭-೦೭). ೪. ಕಳೆಯೇರು; ಕಾಂತಿಯುಕ್ತವಾಗು: ಹುಸಿನಗೆಯಿಂದ ವದನವು ಪ್ರಜ್ವಲಿಸಿತು (ಸಂಗಾಳ್ಯ. ೦೨೨). ೫. (ಆಲಂ) ಉಲ್ಬಣವಾಗು; ಕ್ಷೋಭೆಗೊಳಗಾಗು: ಜನರಲ್ಲಿ ಕ್ರಾಂತಿಯ ಬೇಗೆ ಕುದಿಯುತ್ತಿತ್ತು. ಅದು ಯಾವ ಗಳಿಗೆಯಲ್ಲಿ ಯಾವ ರೂಪದಿಂದ ಹೊರಬಿದ್ದು ಪ್ರಜ್ವಲಿಸುವುದೋ ಎಂಬ ಭೀತಿ ಎಲ್ಲರಲ್ಲಿಯೂ ಇದ್ದಿತು (ರಾಜಪ. ೪೬). ಪ್ರಜ್ವಳಿಸು: ೬. ಪ್ರಕಾಶಗೊಳಿಸು; ಪ್ರಸಿದ್ಧಪಡಿಸು: ವೀರಲಕ್ಷ್ಮೀನಿವಾಸಂ ಧರಣೀಸಂಕೀರ್ತ್ತಿಯಂ ಪ್ರಜ್ವಳಿಸಿದ ವಿನಯಾದಿತ್ಯನಾದಿತ್ಯತೇಜಂ (ಎಕ. V, ಅರಸೀ. ೦೬೬-೪; ಸು. 1060). [ಪ್ರಜ್ವಲನ + – ಇಸ್ಸು]

ಪ್ರಜ್ವಲ್ಯ (ನಾ). ಹೊಳಪು; ಕಾಂತಿ; ಪ್ರಕಾಶ: ವಿಚಿತ್ರಕನಕಪ್ರಜ್ವಲ್ಯ ದಿನ್ಮಿಕ್ಕುದಾನ್ ಸಾಸಿರ್ವ್ವರ್ವ್ವರಪೂಜೆದನ್ದುಯೆ ಅವರ್ ಸ್ವರ್ಗ್ಗಾಗ್ರ ಮಾನೇಱಿದಾರ್ (ಎಕ. II, ೨೬-೨; ಸು. 700). [ಸಂ.]

ಪ್ರಜ್ವಳ 'ಪ್ರಜ್ವಲ' ನೋ.

ಪ್ರಜ್ವಳಿಸು 'ಪ್ರಜ್ವಲಿಸು' ನೋ.

ಪ್ರಡೀನ (ನಾ). (ಪಕ್ಷಿ ಮುಂತಾದುವು) ಹಾರುವಿಕೆ: "ಉಡ್ಡೀನಂ ಪ್ರಡೀನಂ ಪಕ್ಷಿಗಳ ಗತಿಯಕ್ಕು" (ಮಂಗರಾ. ೫೦-೨). [ಸಂ.]

ಪ್ರಣತ (ಗು). ೧. ಬಾಗಿರುವ; ಬಗ್ಗಿರುವ. ೨. ಎರಗುತ್ತಿರುವ; ನಮಸ್ಕರಿಸುತ್ತಿರುವ: ಪ್ರಣತರಿಪುನೃಪತಿಚೂಡಾಮಣಿರಂಜಿತಪಾದನಧಿಕ ಸತ್ವಗುಣೈಕಾಗ್ರಣಿಗಾ ನೃಪಂಗೆ ಮನದೊಳ್ ತೃಣವಲ್ಲಘುವಾದುದಾವಗಂ ಸ್ತೈಣಸುಖಂ (ಕಾದಂಪು. ೦೯); ಪ್ರಣತಕ್ಷತ್ರಿಯಪುತ್ರರಂ ಸಚಿವರಂ . . . ರಾಗದಿಂ ಕಟುಪಿದಂ ಶ್ರೀರಾಜಕಂಠೀರವಂ (ಪುತ್ರಪು. ೭-೨೦). ೩. ವಿಧೇಯವಾದ; ವಿನೀತವಾದ. ೪. ಚಾತುರ್ಯದಿಂದ ಕೂಡಿದ; ಬುದ್ಧಿಯುಳ್ಳ. (ನಾ). ೫. ನಮಸ್ಕರಿಸಿದವನು: ರಾಜೇಂದ್ರಚಂದ್ರ . . . ಮಾತಾಪಿತೃಗಳಲ್ಲಿಗೆ ವಂದು ತತ್ಪಾದಪ್ರಣತನಾಗಿ ತದೀಯಾ ಶೀರ್ವಾದಶತಸಹಸ್ರಂಗಳಂ ತಲೆಯೊಳಾಂತು (ಕಾದಂಶಾ. ೬೦೬). ೬. ವಿನೀತ; ವಿಧೇಯ: ಪ್ರಣತನಿಚಯಚೀತಶ್ಚಾತಕಕ್ಕೀಗೆ ಬೇಗಂ ತಣಿವಂ. . .ಗಣಧರವಿಭುದತ್ತಂ (ಸಂಪ್ರಪು. ೦-೭); ಪ್ರಣತನಿಕುಂರುಂಬ

ರಕ್ಷಾಮಣಿಯೆನಿಪಾ ನಾಯನಾರಮಾಹೇಶಂಗಂ ಗಣಪದಮನಿತ್ತು ಮೆಱೆದತಿ ಗುಣನಿಧಿ ಸೋಮೇಶನೊಲ್ದು ಪಾಲಿಕೆ ನಮ್ಮಂ (ಕ್ರಿಪುಂ. ೦೩-೦). ೭. ಚತುರ ; ಬುದ್ಧಿವಂತ. [ಸಂ.]

ಪ್ರಣತಾರಾತಿ (ನಾ). ನಮಸ್ಕರಿಸುತ್ತಿರುವ ಶತ್ರುರಾಜರನ್ನುಳ್ಳವನು; ಪರಾಕ್ರಮಿ : ಪ್ರಣತಾರಾತಿ ಧನುರ್ಗುಣ ಕಿಣೀಕೃತೋದ್ಯತ್ಪ್ರಕೋಷ್ಠ ನನುಪಮಧೈರ್ಯಂ . . . ಎನೆ ನೆಗೞ್ದ ನೃಪಂ (ಪಂಪಶಂ. ೩೦೮-೩೦೨). [ಸಂ.]

ಪ್ರಣತಾರಿ (ನಾ). = ಪ್ರಣತಾರಾತಿ: ಪ್ರಣತಾರಿ[ಘ]ಟಿತಮುಕ್ತಾ [ಮಣಿಗಣಮು]ತ್ತಂಸದಿಂ ಕಟಿಲ್ದುದುರೆ ಸಭಾಂಗಣಮೊಪ್ಪೆ (ಕಬಿಂ. ೩-೦೬೦); ಈಯೊಳ್ಗುಣಮುಂ ಕಲಿತನಮುಮಿವೇಂ ಪ್ರಣತಾರೀ ಸೂತಸುತನೊಳೊಡವುಟ್ಟುಗುಮೇ (ಪಂಪಭಾ. ೦೨-೯೬). [ಸಂ.]

ಪ್ರಣತಿ$_1$ 'ಪಣತೆ' ನೋ.

ಪ್ರಣತಿ$_2$ (ನಾ). ೧. ಬಗ್ಗುವಿಕೆ ; ಬಾಗುವಿಕೆ. ೨. ನಮಸ್ಕಾರ; ವಂದನೆ : "ಪ್ರಣಿಪಾತಮನುನಯಂ ಪ್ರಣತಿಯೆಂದೆನೆ ಸಂತವಣೆಯಕ್ಕುಂ" (ಮಂಗರಾ. ೦೩೪-೩೩) ; ಕಲಶೋದ್ಧಾರಮಂತ್ರಪೂರ್ವಕಂ ಪ್ರಣತಿ [ಪಾಠಾಂ. ವ,ಯ]ಪ್ರಸ್ತಾವನಾಪುರಸ್ಸರಂ ಮಾಡಿ ಪ್ರಥಮಕಲ್ಪೇಶ್ವರನುಮೀಶಾನೇಂದ್ರನುಮೆತ್ತಿಕೊಳೆ (ಆದಿಪು. ೬-೬೦ ಪ); ವೃದ್ಧಸೇವೆ ಯಾನಂ ತ್ರಿಜಗದ್ಗುರು ಪ್ರಣತಿಯೆಂಬಿವನಾಗಳುಮೊಂದೆ ಕೀಲೆ ದಲ್ ಜಂತ್ರದ ಪಾಪೆಯಂತೊಡನೊಡರ್ಚುವನಿಂದ್ರನುಮಾ ಪ್ರತೀಂದ್ರನುಂ (ಶಾಂತಿಪು ೬-೦೦೦); ನೆರೆದ ಶರಣಗಣಂಗಳ ಶ್ರೀಪಾದಂಗಳಿಗೆ ಪ್ರಣತಿಗಳನ್ನು ಸಮರ್ಪಿಸಿ ಶರಣದಂಪತಿಗಳು . . . ನಿರ್ವಯಲನೈದಿದರು (ಪೋಳಿಮಾ. ೬೩ ಪ್ರಸ್ತಾವನೆ). ೩. ವಿನಯ : ನಮ್ರತೆ. [ಸಂ.]

ಪ್ರಣತೆ 'ಪಣತೆ' ನೋ.

ಪ್ರಣಮ (ನಾ). ವೇದಮಂತ್ರಗಳ ಆರಂಭದಲ್ಲಿ ಸೇರಿಸುವ ಪವಿತ್ರವಾದ ಬೀಜಾಕ್ಷರ; ಓಂಕಾರ ಪ್ರಣವ : ಇಂತಪ್ಪ ಮಹಾಪ್ರಣಮಂಗಳೇ ಬಸವಣ್ಣನಾಗಿ ಆ ಬಸವಣ್ಣನೆ ಮಹಾಪ್ರಣಮಂಗಳಾಗಿ ತನ್ನ ಮಠಕ್ಕೆ ತಾನೆ ಬಂದು ಭಕ್ತಿವಸ್ತುವನಿತ್ತಡೆ (ಪೋಳಿಮಾ. ೨೦-೬೦); ಪ್ರಣಮೋಚಿತಕಲಶೋದ್ಧಾರಣಮಂತ್ರದಿನಿಂದ್ರರಿರ್ವರುಂ ಕಲಶೋದ್ಧಾರಣಮಂ ಸ್ವಚಿತ್ತವಸತಿಗೆ ಮಣಿಕಲಶಮನಿಡುವ ತೆಱದೆ ಮಾಡಿದರೊಲವಿಂ (ಪಾರ್ಶ್ವಪು. ೦೪-೬೩); ಆ ಸಿಂಹಾಸನದಗ್ರದಲ್ಲಿ ಗುಣತ್ರಯಾತೀತನಾದ ಪ್ರಣಮದರ್ಥಮಾದ . . . ಮಹೇಶ್ವರನೊಪ್ಪುತ್ತಿರಲಾಗಿ (ಶೈರಸೂ. I, ೦೭). [< ಸಂ. ಪ್ರಣವ]

ಪ್ರಣಮನ (ನಾ). ನಮಸ್ಕಾರ; ವಂದನೆ : ಗಣಧರಾದಿ ಮುನಿಸಮುದಾಯಕ್ಕೆ ಅಭ್ಯುತ್ಥಾನಮುಂ ಅಭಿಮುಖಗಮನಮುಂ ಅಂಜಲಿಕರಣಮುಂ ಪ್ರಣಮನಮುಂ . . . ಪರೋಕ್ಷೋಪಚಾರವಿನಯಮಕ್ಕುಂ (ತತ್ವಪ್ರ. ೩೪೩). [ಸಂ.]

ಪ್ರಣಮಪಂಚಾಕ್ಷರಿ (ನಾ). ಓಂಕಾರವೆಂಬ ಬೀಜಾಕ್ಷರದಿಂದ ಕೂಡಿದ ಪಂಚಾಕ್ಷರೀಮಂತ್ರ; ಓಂನಮಃಶಿವಾಯ ಎಂಬ ಮಂತ್ರ: ಪ್ರಣಮ[ಪಾಠಾಂ. ವ] ಪಂಚಾಕ್ಷರಿಯ ಜಪಿಸಿಹೆನೆಂದು ತನುವ ಮಱೆದು ನಿಜಮುಕ್ತಳಾದೆನಯ್ಯಾ (ಲಿಂಗಪ. ಳ. ೭೯-೬೫). [ಪ್ರಣಮ + ಪಂಚಾಕ್ಷರಿ]

ಪ್ರಣಮಮೂಲ (ನಾ). ಓಂಕಾರವನ್ನೆ ತಳಹದಿಯಾಗಿ ಹೊಂದಿ ಪ್ರತಿಪಾದಿತನಾಗುವವನು ; ಪರಮಾತ್ಮ : ತ್ರಿಪುರಕೋಲಾಹಲ ಪ್ರಣಮಮೂಲ (ವೀಶೈಪು. ೬-೦೩-೦). [ಪ್ರಣಮ + ಮೂಲ$_2$]

ಪ್ರಣಯ (ನಾ). ೧. ಸ್ತ್ರೀಪುರುಷರಲ್ಲಿ ಪರಸ್ಪರವಾಗಿರುವ ನಲ್ಮೆ ; ಗಂಡು ಹೆಣ್ಣಿನ ಅನುರಾಗ : ಅವತಂಸೋತ್ಪಲತಾಡನಂ . . . ತರಳಿತ ತಾಮ್ರಾಧರಂ ಚಕ್ರಿಗಿತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ (ಆದಿಪು. ೦೨-೪೭); ಪ್ರಣಯದಿನಾದ ಹೋರಟೆಯೆ ಹೋರಟೆ ಮಾಣ್ದೊಡೆ ಕೂಟದೊಳ್ ಮನಂ ತಣಿಯದದೊಂದು ಕೋಟಲೆಯೆ (ಪಂದ್ರಪು. ೬-೩೪); ಸೆಣಸುವ ಮಹೀಶರಮೌಳಿಮಣಿಕಿರಣ ಓಲಗಿಸಿತು ಪ್ರಣಯದಮರೀಬಾಲೆಯರ ಪದನಖವನು (ಕುಸ್ಯಾಲ. ೪-೬). ೨. ವಿನಯ; ವಿಧೇಯತೆ: ದೇವಿ ನೀಂ . . . ಪ್ರಣಯಗರ್ಭಭಕ್ತಿಯಂತೆಯುಂ . . . ಮಹತ್ತ್ವಮಂ ಪಡೆದೆಯೆಂದಮರಸಮುದಯಂ . . . ಸ್ತುತಿಗೆಯ್ದು ಪೋಗೆ (ಜಗಪಿ. ೨-೯೬ ಪ). ೩. ದಯೆ; ಕರುಣೆ; ಕನಿಕರ. ೪. ಬೇಡಿಕೆ: "ಪ್ರಣಯಃ . . . ನಂಬಿಕೆ, ಯಾಚನೆ, ಪ್ರೇಮ" (ಸಿದ್ಧಾಂತಿ. ೪೦೯). ೫. ಸಂತೋಷ ; ಆನಂದ : ಕೆಳರ್ದಂದುಗ್ರರಣಾಗ್ರಹಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇೞ್ದು (ಪಂಪಭಾ. ೧-೭೯) ; ಘಣಿಪತಿಗಮಮರಪತಿಗಂ ಪ್ರಣಯಪ್ರದಮಪ್ಪ ಪಿರಿಯ ಸಿರಿಯಂ ದೇವರ್ ತೃಣಮಾತ್ರಮಾಗಿ ಬಗೆವೊಡಮಣುಗುಣರಿದನೆಮ್ಮವಂದಿಗರ್ತಾಳ್ದುವರೇ (ಮಲ್ಲಿಪು. ೯-೯೧); ಪ್ರಣಯಾಲಂಬವಿಧಾಯನರ್ತನವಿಧಂ ಕರ್ಣಾಮೃತಂ ಘರ್ಘರೀಕ್ವಣಿತಂ (ಅಪಂಪು. ೩-೯೬). ೬. ಗಾಢವಾದ ಆಪ್ತತೆ, -ಸ್ನೇಹ: ಗುಣಮಿದು ದೋಷಮಿದೆಂಬೀ ಗಣಿದಮನೆತ್ತಱಿಗುಮಶ್ರುತಪ್ರಕೃತಿಜನಂ ತೃಣಸಸ್ಯಘಾಸವಿಷಯಪ್ರಣಯಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ (ಕಬಿಂಗಾ. ೦-೬); ಪ್ರಣಯಮಿದನನ್ಯಸಾಧಾರಣಮೆನಿಪ ಭವತ್ಪ್ರಸಾದಮೆಂಬ ಮೃತದಿನಾಂ ತಣಿದೆಂ (ಆದಿಪು. ೪-೩೦). ೭. ವಾತ್ಸಲ್ಯ; ಮಮತೆ: ಪ್ರಣಯವಚೋವಿಲಾಸಮಣಮಲ್ತು ದಿಟಕ್ಕೆ ವಿಚಾರಿಪಂದು ದಕ್ಷಿಣಭುಜಮಲ್ತೆ ನೀನೆನಗೆ (ಪಂದ್ರಪು. ೪-೦೯); ತರುಣಿ ತಾರೆಂದೀಶ್ವರಂ ಪಾತ್ರೆಯಂ ಪ್ರಣಯದಿನೀಳ್ದುಕೊಳ್ಳುತ್ತುಂ ಘಣಿಕಟಕಂ ಸವಿದು ಪುಳ್ಗಿಯಂ ಬಟ್ಟಲನಂಗಣಕಿಟ್ಟಂ (ವೃಷಪಿ. ೨೨-೦೪). ೮. ದೇವರು, ಗುರುಹಿರಿಯರಲ್ಲಿ ತೋರುವ ಅತಿಶಯವಾದ ಗೌರವ ; ಭಕ್ತಿ : ಪ್ರಣಯಂ ಕೈಮಿಗೆ . . . ಪೊಡೆವಟ್ಟಂ ರಾಜರಾಜಚ್ಛಿರೋಮಣಿ ವಿಶ್ವಂಭರನಾ ತ್ರಿಲೋಕವಿಭು ವಿಶ್ವೇಶಂಗೆ ಸದ್ಭಕ್ತಿಯಿಂ (ಕುಸುಮಾ. ೦೩-೦೪೯); ಪ್ರಣಯಂ ಕೆಯ್ಗಣ್ಮೆರಲ್ ಕಣ್ಮಲರೊಳಲಸವಾನಂದವಾರ್ಬಿಂದುಗಳ್ ಸಂದಣಿಸಲ್ ಸೌರಂಭದಿಂ ವಂದಿಸಿ ಮುನಿಪತಿಯಂ (ಧರ್ಮಪಾ. ೪-೦೨೨). ೯. ಮನಸ್ಸು ನಿರ್ಮಲವಾಗಿರುವುದು: "ಪ್ರಸಾದಂ ಪ್ರಣಯಂ" (ವಸ್ತುಕೋ. ೦೦೩-೦೭); "ಪ್ರಣಯಂ ಪ್ರಸಾದವೆನೆ ತಿಳಿವಕ್ಕು" (ಮಂಗರಾ. ೦೩೪-೩೩). ೧೦. ಮುಂದಾಳು; ಮುಖಂಡ; ನಾಯಕ. ೧೧. ಮಾರ್ಗದರ್ಶನ ; ನೇತೃತ್ವ. ೧೨. ಮುಕ್ತಿ : ಮೋಕ್ಷ. [ಸಂ.]

ಪ್ರಣಯಕಲಹ (ನಾ). (ಪ್ರೇಮಿಗಳು) ಪ್ರೀತಿಗಾಗಿ ಮಾಡುವ ಹುಸಿಜಗಳ : ಒಂದೆಡೆಯೊಳೊರ್ವಂ ಪ್ರಣಯಕಲಹಕಲುಷಿತೆಯಾದ ವಲ್ಲಭೆಯ ನಿರ್ಭರಪ್ರೇಮಭರದಿನೆಱಗಿದ ನಿಜಸಖನ ಸೌಭಾಗ್ಯಮನೆ ಕೊಂಡುಕೊನೆದು (ಮಲ್ಲಿಪು. ೭-೬೩); ಪರವೆಗೆ ನಂಬಿಗೆ ಪಲವುಕಾಲದಗಲ್ಕೆ ಪಯನಾಗಿ ಪ್ರಣಯಕಲಹಂ ಕಾಲೂಱಿ (ಪಂಬರ. ೦೬-೯೬). [ಸಂ.]

ಪ್ರಣಯಕೇಲಿ, ಪ್ರಣಯಕೇಳಿ (ನಾ). ಶೃಂಗಾರದ ಕ್ರೀಡೆ ; ಸುರತ ; ಸಂಭೋಗ: ಅದು ಪ್ರಣಯಕೇಲಿಯಲ್ಲ ಪ್ರಾಣಕಲಹ! (ಮೇದಿಮ. ೪೭). **ಪ್ರಣಯಕೇಳಿ:** ದೇವಕೀದೇವಿ . . . ಬಹುವಿಧಪ್ರಣಯಕೇಳೀಕಳಾವಿಡಂಬ ಸಂಭೋಗಸುಖಸುಧಾರಸತೃಪ್ತಿಯಿಂ ಸುಖಸುಪ್ತೆಯಾಗಿರ್ಪಿನಂ (ಜಗಪಿ. ೨-೩೯ ಪ). [ಸಂ.]

ಪ್ರಣಯಕೇಳಿ 'ಪ್ರಣಯಕೇಲಿ' ನೋ.

ಪ್ರಣಯಚೇಷ್ಟೆ (ನಾ). (ಪ್ರೇಮಿಗಳು) ಪ್ರೀತಿಯಲ್ಲಿ ಮಾಡುವ ಆಂಗಿಕವಾದ ಚಲನವಲನ ಮುಂತಾದುವು: ಅವನ ವಿದ್ವತ್ಪ್ರಕಾಶನವೂ, ವಿಧವೆಯೂ ದಾಸಿಯೂ ಆದ ಆಶ್ಮನಿಯೊಡನೆ ಪ್ರಣಯಚೇಷ್ಟೆಯೂ ತುಂಬ ಆಭಾಸವಾಗಿವೆ (ಬಂಕಿಮ. ೦೩೩); ಆಗಾಗ್ಗೆ ತನ್ನ ದೃಷ್ಟಿಪಥಕ್ಕೆ

ಬೀಳುತ್ತಿದ್ದ ಪುರುಷರ ಪ್ರಣಯಚೇಷ್ಟೆಗಳಿಂದ ಅವಳ ಹೃದಯ ತಲ್ಲಣಿಸುತ್ತಿತ್ತು (ಪುಷರು. ೪೯೨). [ಸಂ. ಪ್ರಣಯ ಚೇಷ್ಟಾ]

ಪ್ರಣಯದೌತ್ಯ (ನಾ). ಒಬ್ಬರ ಅನುರಾಗವನ್ನು ಮತ್ತೊಬ್ಬರಿಗೆ ತಿಳಿಸುವ ಮಧ್ಯಸ್ಥಿಕೆ,–ದೂತಭಾವ : ದಮಯಂತಿಯ ಬಗೆಗೆ ತನಗಿದ್ದ ಪ್ರೀತಿಯನ್ನೂ ಅವರಿಗಾಗಿ ಬದಿಗೊತ್ತಿ ಅವರ ಪರವಾಗಿ ಪ್ರಣಯದೌತ್ಯವನ್ನು ವಹಿಸುವಂಥ ಮನಃಸ್ಥೈರ್ಯ ಅವನಲ್ಲಿದೆ (ಪಂಕೀ. ೦೦೪). [ಸಂ.]

ಪ್ರಣಯಪ್ರಸಂಗ (ನಾ). ಪ್ರೇಮದ ಘಟನೆ : ಕತ್ತಲೆಯಲ್ಲಿ ಹಕ್ಕಲದ ದಾರಿಯಲ್ಲಿ ಪ್ರಣಯಪ್ರಸಂಗ ನಡೆಯುತ್ತದೆ ಎಂಬ ಕಲ್ಪನೆಯೂ ಅವರಿಗಿರಲಿಲ್ಲ (ಪದ್ಮಸ. ೦೬೮). [ಸಂ.]

ಪ್ರಣಯಭಿಕ್ಷೆ (ನಾ). ಪ್ರೇಮವನ್ನು ನೀಡುವುದು : ಪ್ರೀತಿಯ ದಾನ : ವೀರ ಅರ್ಜುನದೇವ, ಅಪರಿಚಿತೆಯಾದಡಂ ನಿನ್ನ ಪ್ರೇಯಸಿ ನಾನು ಪ್ರಣಯಭಿಕ್ಷೆಯ ಬೇಡಿ ಬಂದೆ ನಾಂ (ಪತ್ರಾಂಗ. ೨೪-೬೫೦). [ಸಂ. ಪ್ರಣಯಭಿಕ್ಷಾ]

ಪ್ರಣಯಾಲಂಬಿನಿ (ನಾ). ವಾತ್ಸಲ್ಯವನ್ನು ಹೊಂದಿರುವವಳು; ಮಮತೆಯುಳ್ಳವಳು : ಪ್ರಣಯಾಲಂಬಿನಿಯಂತೆ ಪೂತನಿ ಯಶೋದಾಕಾರದಿಂ ಬಂದು (ಪಗವಿ. ೩-೨೪). [ಸಂ. ಪ್ರಣಯಾಲಂಬಿನೀ]

ಪ್ರಣಯಿ (ಗು). ೧. ಪ್ರೀತಿಯಿಂದಿರುವ ; ಅನುರಕ್ತನಾದ : ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ (ಎಳ. XI, ಪತ್ರದು. ೪೩-೩; ಸು. ೫೦೦ ?). ೨. ವಿಶ್ವಾಸಪಾತ್ರನಾದ. ೩. ಮಮತೆಯುಳ್ಳ. (ನಾ). ೪. ಪ್ರೀತಿಯುಳ್ಳವನು ; ನಲ್ಲ ; ಕಾಂತ : ಉಪಮೆಗಳಲ್ಲಿ ಸುಂದರವಾದ ಯುವಕ. ಸುಂದರಳಾದ ಯುವತಿ, ಪ್ರಣಯಿ, ಪ್ರಣಯಿನಿ–ಇತ್ಯಾದಿ ಮಾತುಗಳು ಬರುತ್ತವೆ (ಸೌಂದಸ. ೦೦೦). ೫. ಗಂಡ ; ಪತಿ : "ಪ್ರಭುಪರಿವೃಢನೀಶಂ . . . ವಲ್ಲಭಂ ಪ್ರಿಯಂ ಪ್ರಣಯಿ ಕಾಂತನಿಷ್ಟಂ ದಯಿತಂ" (ಪಸ್ತುಕೋ. ೯೯-೯). [ಸಂ. ಪ್ರಣಯಿನ್]

ಪ್ರಣಯಿನಿ (ನಾ). ಪ್ರೀತಿಯುಳ್ಳವಳು ; ನಲ್ಲೆ ; ಕಾಂತೆ : ಪ್ರಣಯಿನ್ಯಾಸಕ್ತಿಯುಕ್ತಂ ಗಗನಗಹನಸದ್ಯುಕ್ತಿಯವ್ಯಕ್ತಮಲ್ತೇ (ಪಂಪ್ರಪು. ೦-೬೪) ; ತನ್ನ ಪ್ರಣಯಿನಿಯ ವಿಷಯದಲ್ಲಿ 'ಈಕೆಯು ಯೋಗ್ಯನಾದ ವರನಿಲ್ಲದೆ ಶೋಚನೀಯಳಾಗಿರುವಳು' ಎಂದು ಹೇಳುವುದು ಅಸಂಭವ (ರ್ವಸ್ಯಾಕೋ. ೨೨೨) ; ಉಪಮೆಗಳಲ್ಲಿ . . . ಪ್ರಣಯಿ, ಪ್ರಣಯಿನಿ ಇತ್ಯಾದಿ ಮಾತುಗಳು ಬರುತ್ತವೆ (ಸೌಂದಸ. ೦೦೦). ೨. ಹೆಂಡತಿ ; ಪತ್ನಿ. [ಸಂ. ಪ್ರಣಯಿನೀ]

ಪ್ರಣವ (ನಾ). ೧. ವೇದಮಂತ್ರಗಳ ಪ್ರಾರಂಭದಲ್ಲಿ ಸೇರಿಸುವ ಪವಿತ್ರವಾದ ಬೀಜಾಕ್ಷರ : ಓಂಕಾರ ; ೫ ಓಂಕಾರಕ್ಕೆ ಪ್ರಣವ ಅಥವಾ ಏಕಾಕ್ಷರ ಎಂಬ ಹೆಸರೂ ಇದೆ. ಓಂಕಾರದಲ್ಲಿ 'ಅ' 'ಉ' ಮತ್ತು 'ಮ್' ಎಂಬ ಮೂರು ಅಕ್ಷರಗಳ ಸಮ್ಮಿಲನವಿದೆ. 'ಅ' ಎನ್ನುವುದು ವೈಶ್ವಾನರ, 'ಉ' ಎನ್ನುವುದು ತೈಜಸ, 'ಮ್' ಎಂಬುದು ಪ್ರಜ್ಞ–ಇವುಗಳ ಸಮ್ಮಿಲನದಿಂದ ಓಂಕಾರ ಉಂಟಾಗುತ್ತದೆ ಎಂದು ನಂಬಲಾಗಿದೆ. ಬರಬರುತ್ತ ಇದು ಬ್ರಹ್ಮ, ವಿಷ್ಣು, ಮಹೇಶ್ವರರ ಕೂಟವನ್ನು ತಿಳಿಸುತ್ತದೆ : "ಓಂಕಾರಃ, ಪ್ರಣವಃ (ಪ್ರೋಕ್ತಃ)—ಈ ೨ ಓಂಕಾರಕ್ಕೆ ಪೆಸರ್" (ಹಠಾಯು. ೩-೮) ; ಪ್ರಣವೋಚ್ಚಾರಣಪೂರ್ವಪ್ರಣೀತನಾಂದೀಸ್ತವಂಗಳಂ . . . ಗಂಭೀರಪ್ರಣಾದದಿಂದೋದಿದರ್ ಮರುದ್ಗಣರಮಣರ್ (ಪರಸಪು. ೦೪-೨೨); ಅಕಾರವೇ ನಾದ ಉಕಾರವೇ ಬಿಂದು ಮಕಾರವೇ ಕಳೆ ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು ಇಂತೀ ನಾಲ್ಕು ಒಂದಾದಲ್ಲು ಓಂಕಾರವೆಂಬ ಪ್ರಣವ ಉತ್ಪತ್ತಿಯಾಯಿತ್ತು ಆ ಓಂಕಾರವೆಂಬ ಪ್ರಣವವೇ ಅಖಂಡಪರಿಪೂರ್ಣಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ನೋಡಾ (ಸಿದ್ಧೇಪ. ೦೦-೩೩); ಅಣುರೇಣುವಂದ್ಯದ ಪ್ರಣವದ ಬೀಜವನು ಅಣುವಿನೊಳಗಣುವೆಂದಱಿದ ಮಹಾತ್ಮನು ತ್ರಿಣಯ ತಾನಕ್ಕು (ಸರ್ವಜ್ಞ. ೩೧೩). ೨. ಒಂದು ಬಗೆಯ ವಾದ್ಯ. ೩. ಪರಮಾತ್ಮ : ಭಗವಂತ. ೪. ನವೀನವಾದುದು : 'ಪ್ರಣವೋತ್ಥ' ಪರಾ. [ಸಂ.]

ಪ್ರಣವನ್ಯಾಸ (ನಾ). ವೈದಿಕಮಂತ್ರಗಳನ್ನು ಪಠನಮಾಡುವುದಕ್ಕೆ ಮುಂಚೆ ಓಂಕಾರವನ್ನು ಉಚ್ಚರಿಸುವುದು : ಪ್ರತ್ಯೇಕಾಂಗುಳಿಗಳಲ್ಲಿಯೂ ಸಮಷ್ಟೀಕರಿಸಿ ಪ್ರಣವನ್ಯಾಸಮಂ ಮಾಡುವುದು (ವಿಪೇಕ. ೮೬). [ಸಂ.]

ಪ್ರಣವಬೀಜ (ನಾ). ಪ್ರಣವವೆಂಬ ಬೀಜಾಕ್ಷರ : ಓಂಕಾರ : ವಿಶ್ವಮಯನಾಗಿ ವಿಶ್ವಾಸಕ್ಕೆ ಒಡಲಾಗಿ ಪ್ರಣವಬೀಜವಾಗಿ ಉತ್ಪತ್ತಿ ಸ್ಥಿತಿಲಯಕ್ಕೆ ಕರ್ತರ ಕೊಟ್ಟು . . . ನಿನ್ನ ಲೀಲೆಗೆ ನೀನೇ ಹಂಗಾದೆಯಲ್ಲಾ (ಕೋಳಿಪು. ೫೦-೨೦೦). [ಸಂ.]

ಪ್ರಣವಮಂತ್ರ (ನಾ). ಓಂಕಾರರೂಪವಾದ ಮಂತ್ರ : ಪಂಚಬ್ರಹ್ಮವ ಕೆಡಿಸಿತ್ತು ಪ್ರಣವಮಂತ್ರವನೀಡಾಡಿತ್ತಲ್ಲಾ . . . ಕೂಡಲಸಂಗಯ್ಯನ ಭಕ್ತಿಗಜ ಹೋ (ಬಸಪ. ೬೪೮). [ಸಂ.]

ಪ್ರಣವಸ್ವರೂಪ (ನಾ). ಓಂಕಾರಸ್ವರೂಪನಾದವನು : ಪರಮಾತ್ಮ : ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ ಕಾಣಲಾರಿಗೆಯೂ ಬಾರದಯ್ಯಾ (ಬಸಪ. ೮೧೩) ; ಎಲೆ ಅಯ್ಯಾ ಎಲೆ ಅಯ್ಯಾ ಪ್ರಣವಸ್ವರೂಪ ಬಸವಾ (ವೀರಪ. ಕ. ೯-೦೬). [ಸಂ.]

ಪ್ರಣವೋತ್ಥ (ಗು). ೧. ಓಂಕಾರದಿಂದ ಹೊರಟ. ೨. ನವೀನತೆಯಿಂದ ಉಂಟಾದ. ೧, ೨ : ಪ್ರಣವೋತ್ಥ ಶ್ರುತಿಮಧುರಕ್ವಣಿತಂ ದ್ವಿಜಮುಖ್ಯವೃತ್ತಿ ಕೃಷ್ಣರುಚಿತ್ವಂ ಪೆಣೆದಿರೆ ಪುರೋಹಿತಬ್ರಾಹ್ಮಣನೆನಿಸಿದುದತನು ನೃಪತಿಗೀ ಪರಪುಷ್ಟಂ (ಪಂಪ್ರಪು. ೬-೮೮). [ಸಂ.]

ಪ್ರಣಷ್ಟ (ಗು). ೧. ನಾಶಮಾಡಿದ; ಪರಿಹರಿಸಿದ: ಪ್ರಣಷ್ಟಪ್ರಮಾದ ಪ್ರಕೃಷ್ಟಪ್ರಮೋದ ಪ್ರಧೃಷ್ಯದ್ಗಭಸ್ತೇ ನಮಸ್ತೇ ನಮಸ್ತೇ (ಅಪಪು. ೭-೦೫ ಪ). ೨. ನಾಶಹೊಂದಿದ. [ಸಂ.]

ಪ್ರಣಾದ (ನಾ). ೧. ದೊಡ್ಡ ನಾದ, –ಶಬ್ದ : ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ ಕಡುರಯ್ಯಮಪ್ಪ ಹಸ್ತಿನಪುರಮಂ ಜಿತೇಂದ್ರಪುರಮಂ ಪರಮೇಶ್ವರರಾಗಳೆಯ್ದಿದರ್ (ಪಂಪಭಾ. ೪-೫); ಆಗಡೆ ಪೊಣ್ಮಿತ್ತಲ್ಲಿ ಮಧ್ಯಂದಿನಸಮಯಸಮುದ್ಭೂತಶಂಖಪ್ರಣಾದಂ (ಕಾದಂಪು. ೬೬); ಘಟಿಕಾಭೇರೀ ಭೂರಿಪ್ರಣಾದಮೊಗೆದತ್ತಾದಂ (ಪಂಪ್ರಪು. ೮-೦೭). ೨. ಗಟ್ಟಿಯಾದ ಕೂಗು ; ಗರ್ಜನೆ. ೩. ಆರ್ತನಾದ. ೪. [ಕಾಮಶಾ] ಸಂಭೋಗಸಮಯದ ಸೀತ್ಕಾರ; ಮಣಿತ: "ಪ್ರಣಾದಃ–೧–ಅನುರಾಗಜಃ—ಅನುರಾಗದ ದೆಸೆಯಿಂದ ಹುಟ್ಟಿದ ಶಬ್ದ" (ಸಿದ್ಧಾಂತಿ. ೫೨). [ಸಂ.]

ಪ್ರಣಾಮ (ನಾ). ೧. ಬಗ್ಗುವುದು; ಬಾಗುವುದು. ೨. ನಮಸ್ಕಾರ; ವಂದನೆ : ಕಾಯದಿಗ್ಬಂಧ ಪ್ರಣಾಮ ವಿಧೇಯವರ್ಚನೆ ಯೋಗಸಿದ್ಧಿನಿಕಾಯ ನಾಲ್ಕಱ ಇಂದ್ರಿಯಸ್ಥಿತಿಗತಿಯನಾರೈದು . . . ನಿಶ್ಚಯಿಸಬೇಹುದು (ಕುಪ್ಯಾಲಾ. ೪-೩೫)); ಮನೆಯವರಿಗೆಲ್ಲ ನನ್ನ ಪ್ರಣಾಮಗಳು (ಕಂಬಹು. ೦೨೮). ೩. ಸಾಷ್ಟಾಂಗನಮಸ್ಕಾರ. [ಸಂ.]

ಪ್ರಣಾಯ್ಯ (ನಾ). ೧. ಪ್ರೀತಿಪಾತ್ರನಾದವನು ; ಪ್ರಿಯ. ೨. ಪ್ರಾಮಾಣಿಕ : ಋಜುಬುದ್ಧಿಯುಳ್ಳವನು. ೩. ಯೋಗ್ಯನಾದವನು; ಅರ್ಹನಾದವನು. ೪. ಇಷ್ಟವಾಗದವನು; ಬೇಡವಾಗಿರುವವನು: "ಅಕ್ಷಿಗತಃ, ದ್ವೇಷ್ಯಃ, ಪ್ರಣಾಯ್ಯಃ, ಅಸಮ್ಮತಃ—ಈ ೪ ಅನಿಷ್ಟಂ" (ಹಠಾಯು. ೬೦-೨೦೦). ೫. ಐಹಿಕವಿಷಯಂಗಳಲ್ಲಿ

ಆಸಕ್ತಿಯಿಲ್ಲದವನು; ವಿರಕ್ತ. ೬. ಬಿಡಬೇಕಾದುದು; ತ್ಯಾಜ್ಯ. [ಸಂ.]

ಪ್ರಣಾಲ, ಪ್ರಣಾಳ (ನಾ). ನೀರು ಮುಂತಾದುವು ಹರಿಯುವ ಮಾರ್ಗ; ನೀರಿನ ದೋಣಿ: 'ಜಲಪ್ರಣಾಲ' ಪರಾ. **ಪ್ರಣಾಳ** : ತ್ರಿಭುವನಪ್ರಾಸಾದರಮ್ಯಪ್ರಣಾಳದವೋಲ್ ಕಣ್ಗೆಸೆವಿಂದುಮಂಡಲದಿನೇಂ ಗಂಗಾಪ್ರವಾಹಂಗಳುಣ್ಮೆದುವೋ (ಕಾದಂಪು. ೬೯೯) : ಸುಟಿಪೆಳವೆಂಡಿರ ಕಡೆಗಣ್ಬಟಿಯಂ ಪಸರಿಸುವ ಬೆಳಗು ಬೆಳದಿಂಗಳ ಪೊಂಪುಟಿಯೆಂದು ಸುರಿವುವದಱೊಳ್ ಮಟಿಯಿಲ್ಲದೆಯುಂ ಪ್ರಣಾಳಶಶಿಕಾಂತಂಗಳ್ (ಕಂದ್ರಪು. ೬-೪೭). [ಸಂ.]

ಪ್ರಣಾಲಿ, ಪ್ರಣಾಳಿ (ನಾ). ೧. = ಪ್ರಣಾಲ. ೨. ಅವಿಚ್ಛಿನ್ನವಾಗಿ ಮುಂದುವರಿಯುವುದು; ಅನುಕ್ರಮ; ಸರಣಿ: ತನ್ನ ಹೃದಯೇಶ್ವರಿಯನನ್ಯಕಾಪುರುಷರಿಂ ಪೊರೆವ ಹರಕೃಪಾರೂಪಿಯೇಂ ಜಾಪಮಾತ್ರಮೆ ಪೇಳಾ? ಶಿವೇಚ್ಛಾಪ್ರಣಾಲಿಯೆ ದಿಟಂ! (ಶ್ರೀರಾಮಾ. ೩೫-೨೦೯); ಈ ವರೆಗೆ ನಾವು ಪಾಶ್ಚಾತ್ಯಶಾಸ್ತ್ರಗಳನ್ನೆಲ್ಲ ಹೇಗೆ ದೈಷ್ಟಾನಿಕ, ಐತಿಹಾಸಿಕ ಮತ್ತು ಯುಕ್ತಿ ಮೂಲಕ ಪ್ರಣಾಲಿಗಳ ಮೂಲಕ ಪರಿಶೀಲಿಸುತ್ತಾ ಬರುವೆವೊ ಹಾಗೆ ನಮ್ಮ ಶಾಸ್ತ್ರಗಳನ್ನು ಮಾಡುತ್ತಿಲ್ಲ (ಪಿಸಂಧ. I. ೩೬೦). **ಪ್ರಣಾಳಿ**: ೧. "ಪ್ರಣಾಳೀ, ಜಳಪ್ಪದತಿ—ಈ ೨ ಹರಿನಾಳಿ" (ಹಲಾಯು. ೦೦೩-೬೩); ಎರಡುಂ ತಟಮಳಿಮಿಳಿತು ಸರೋವರಂ ಸುರಿವ ಮದಜಲಂ ನದಿಯೆನೆ ಪುಷ್ಕರ ವರಕರಪ್ರಣಾಳೀಪರಿಕಳಿತಂ ನೀಳಗಿರಿಗೆ ಕರಿ ದೊರೆಯೆನಿಕುಂ (ಪಾರ್ಶ್ವಪು. ೪-೦೨೪). [ಸಂ. ಪ್ರಣಾಲೀ]

ಪ್ರಣಾಲಿಕೆ, ಪ್ರಣಾಳಿಕೆ (ನಾ). ೧. = ಪ್ರಣಾಲ. ೨. = ಪ್ರಣಾಲಿ ೨. ೩. ಅಭಿಪ್ರಾಯಗಳನ್ನು ಪ್ರಚುರಪಡಿಸಲು ಉಪಯೋಗಿಸುವ ಮಾಧ್ಯಮ : ಸಾಹಿತ್ಯದ ವಿವಿಧಪ್ರಕಾರಗಳು ತನ್ನ ಸಾಮಾಜಿಕತೆಯ ಹೊರಹೊಮ್ಮುವಿಕೆಗಾಗಿ ಅವನು ತೆರೆದ ಹಲವು ಪ್ರಣಾಲಿಕೆಗಳೆಂದೂ . . . ಪರಿಗಣಿಸಬೇಕು (ಸಾಹಿತ್ಯ. ೬). **ಪ್ರಣಾಳಿಕೆ**: ೩. ಈ ದಿವ್ಯ ಸಂದೇಶ ಉಪನಿಷತ್ತು, ಗೀತಾ, ಬ್ರಹ್ಮಸೂತ್ರ . . . ಇತ್ಯಾದಿ ನಾನಾ ಪ್ರಣಾಳಿಕೆಗಳ ಮೂಲಕ ಅವಿಚ್ಛಿನ್ನವಾಗಿ ಪ್ರವಹಿಸಿ . . . ತನ್ನ ಪ್ರಭಾವವನ್ನು ಬೀರಿದೆ (ಪುಕ್ಕಾಕ. ೧೬ ಬೀಕಿ). ೪. ತತ್ತ್ವ, ರಾಜನೀತಿ, ಸಾಹಿತ್ಯ ಮುಂತಾದುವುಗಳಲ್ಲಿ ಯಾವುದೊಂದರ ರೀತಿನೀತಿಗಳನ್ನು ಪಟ್ಟಿಮಾಡಿ ಪ್ರಚುರಪಡಿಸುವ ಘೋಷಣೆಯ ಬರಹ, — ಹೇಳಿಕೆ : ವಿಶ್ವಸಂಸ್ಥೆಯ ಸರ್ವತೋಮುಖ ಉದ್ದೇಶಗಳನ್ನೂ ಮೂಲಭೂತತತ್ತ್ವಗಳನ್ನೂ ಪ್ರಣಾಳಿಕೆಯಲ್ಲಿ (Charter) ವಿವರಿಸಲಾಗಿದೆ (ಅಂತಸಂ. ೦೩); ಶಾಲೆಯ ಕಾರ್ಯಕ್ರಮಗಳ ಪ್ರಣಾಳಿಕೆ, ಶಾಲೆಯ ವಾರ್ಷಿಕ ವರದಿ, ಶಾಲೆಯ ಪತ್ರಿಕೆ—ಮುಂತಾದುವನ್ನು ಪೋಷಕರಿಗೂ ಬೋಧಕರಿಗೂ ಹಂಚುವುದು ಅಗತ್ಯ (ಶಿಕ್ಷದ. ೩೨೦). [ಸಂ. ಪ್ರಣಾಲಿಕಾ]

ಪ್ರಣಾಶ (ನಾ). ೧. ಹಾಳಾಗುವುದು; ಇಲ್ಲದಂತಾಗುವುದು : ಈ ಪ್ರಣಾಶದಿಂದ ಪಾರಾದ ಒಂದೇ ಒಂದು ಗ್ರಂಥವೆಂದರೆ ಈಶ್ವರಕೃಷ್ಣನ "ಸಾಂಖ್ಯಕಾರಿಕೆ" (ಕಕ್ಕಪ್ರಾ. ೨೩೯). ೨. ಸಾವು ; ಮರಣ : ಅದು ಬುದ್ಧಿನಾಶದವರೆಗೂ ಹೋಯಿತು. ಆದರೆ ಅದಕ್ಕೆ ಸಕಾಲದಲ್ಲಿ ತಕ್ಕ ಪ್ರತೀಕಾರ, ಚಿಕಿತ್ಸೆ ನಡೆದದ್ದರಿಂದ ಅದು ಅವಳ ಪ್ರಣಾಶದಲ್ಲಿ ಪರಿಣಮಿಸಲಿಲ್ಲ (ಬಂಕಿಮ. ೨೦೯). [ಸಂ.]

ಪ್ರಣಾಳ 'ಪ್ರಣಾಲ' ನೋ.

ಪ್ರಣಾಳಿ 'ಪ್ರಣಾಲಿ' ನೋ.

ಪ್ರಣಾಳಿಕೆ 'ಪ್ರಣಾಲಿಕೆ' ನೋ.

ಪ್ರಣಿತೆ 'ಪಣಿತೆ' ನೋ.

ಪ್ರಣಿಧಾನ (ನಾ). ೧. ಸರಿಯಾಗಿ ಇಡುವುದು.—ಇರಿಸುವುದು. ೨. ಅಧಿಕವಾದ ಪ್ರಯತ್ನ. — ಸಾಹಸ. ೩. ಕಣ್ಣು ಅಥವಾ ಬುದ್ಧಿಯನ್ನು ಒಂದು ಕಡೆ ನೆಲೆಗೊಳಿಸುವುದು. ೪. ತಪಸ್ಸು; ಧ್ಯಾನ; ಸಮಾಧಿ : "ಪ್ರಣಿಧಾನಂ, ಸಮಾಧಾನಂ, ಸಮಾಧಿ—ಈ ೩ ಸಮಾಧಿಯ ಪೆಸರ್" (ಹಲಾಯು. ೨೦-೦೨೬); ಪತಂಜಲಿಯ ಪುನರ್ಜನ್ಮಗಳ ಬಂಧದಿಂದ ಮುಕ್ತಿಗೆ ಒಯ್ಯುವ ಜ್ಞಾನಕ್ಕೆ ಭಕ್ತಿಪೂರ್ವಕವಾದ ಈಶ್ವರಪ್ರಣಿಧಾನವೊಂದೇ ಮಾರ್ಗವೆಂದು ಹೇಳುವುದಿಲ್ಲ (ಕಕ್ಕಪ್ರಾ. ೨೬೯). ೫. (ದೇವರಿಗಾಗಿ) ಎಲ್ಲ ಕರ್ಮಫಲಗಳನ್ನು ತ್ಯಾಗ ಮಾಡುವಿಕೆ : ಪ್ರಣಿಧಾನವೆಂದರೆ ಈಶ್ವರನನ್ನು ಕುರಿತು ನಿರಪೇಕ್ಷವಾದ, ನಿಷ್ಕಲಂಕವಾದ ಪೂಜೆ (ರರ್ಮಸಂ. ೨೨). ೬. ಭಕ್ತಿ. [ಸಂ.]

ಪ್ರಣಿಧಿ (ನಾ). ೧. ಗೂಢಚಾರನಾಗಿರುವಿಕೆ ; ಬೇಹುಗಾರಿಕೆ. ೨. ಬೇಹುಗಾರ; ಗುಪ್ತಚಾರ; ಗೂಢಚಾರ : "ಪ್ರಣಿಧಿಃ, ಗುಪ್ತಪೂರುಷಃ—ಈ ೨ ಗುಪ್ತಹೇರಿಗಗಳ್" (ಹಲಾಯು. ೬೦-೨೬೦); ಇತ್ತ ದುರ್ಯೋಧನನ ಗೂಢಪ್ರಣಿಧಿಗಳಾ ಮಾತಂ ಜಲಕ್ಕನಱಿದು (ಶಂಪಕಾ. ೯-೮೨ ಪ); ವಿವಿಧವೇಷವಿದ್ಯಾವಿಶಾರದಪ್ರಚ್ಛನ್ನಪ್ರಣಿಧಿಗಳಂ ಪ್ರಯೋಗಿಸಿಯುಂ . . . ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದಂ (ಕಂದ್ರಪು. ೨-೬೦). ೩. ರಾಯಭಾರಿ : "ಒಂದು ದೇಶದ ರಾಜನಿಗಾಗಲಿ ರಾಜ್ಯಕ್ಕಾಗಲಿ ಪ್ರತಿನಿಧಿಯಾಗಿ ಪರರಾಜ್ಯದಲ್ಲಿ ಸಾರ್ವಕಾಲಿಕವಾಗಿರುವ ನಿಯೋಗಿ ; ಪ್ರಣಿಧಿ ; ರಾಜದೂತ ; ನಿಯೋಗಿ" (Ambassador. ಇಂಕಪಿ). ೪. ಬೇಡಿಕೆ; ಪ್ರಾರ್ಥನೆ : "ಪ್ರಣಿಧಿ:—ಪ್ರಾರ್ಥನೆ, ಬೇಹಿನ ಗೂಢಚಾರ" (ನಿದ್ಧಾಂತಿ. ೩೯೬). ೫. ಆನೆಯ ಅನುಚರ : ಆನೆಯನ್ನು ಪಳಗಿಸಿ ಹತೋಟಿ ಮಾಡುವವನು : ನಯನಿಪುಣಸೂತ್ರಧಾರರ್ ನಿಯಮಿಸುವರ್ ಭದ್ರಮಂದಮೃಗ ಸಂಕೀರ್ಣಾನ್ವಯದ ನೃಪಕರಿಗಳಂ ಪ್ರಣಿಧಿಯೊಡಂಬಡದೆ ಸಕಳಶಿಕ್ಷೆ ಕಣ್ದೋಱುವಿನಂ (ಪುಷ್ಪಪು. ೨-೩೬). ೬. ಗಮನ; ಎಚ್ಚರಿಕೆ; ಅವಧಾನ. [ಸಂ.]

ಪ್ರಣಿಪತ್ತಿ (ನಾ). = ಪ್ರಣಿಪಾತ ೧ : ಇತ್ತಲೀ ಬಸವಣ್ಣನಿಂ ಪ್ರಣಿಪತ್ತಿಯಂ ಕೈಗೊಳುತ ಕೂರ್ತು (ಬಸಪು. ೨೦-೬). [ಸಂ.]

ಪ್ರಣಿಪಾತ (ನಾ). ೧. ನಮಸ್ಕರಿಸುವುದು ; ನಮಸ್ಕಾರ : ಬರ್ದುಂಕಿದೊರುಂ ಪಿರಿಯನ ಮುನಿಸೆಂಬುದು ಪ್ರಣಿಪಾತಪ್ರತೀಕಾರಮೆಂದಱಿದರಸನ ದಂಡನಾಯಕಂಗೆ ಶರಣಾಗತರಾಗಿ ನಿಜಶಿರಸ್ತ್ರಾಣಪರಾಯಣರಾದರ್ (ಶಾಂತಿಪು. ೦೦-೨೪ ಪ); ತಮ್ಮ ಮಗನಂತಿರುವ ನನಗೆ ಸಾಷ್ಟಾಂಗಪ್ರಣಿಪಾತ ಮಾಡುವುದುಂಟೇ ಎಲ್ಲಿಯಾದರು! (ಗೌರಾಂಗ. ೩೨). ೨. ಕಾಲಿಗೆ ಬಿದ್ದು ಶರಣಾಗತನಾಗುವುದು. [ಸಂ.]

ಪ್ರಣಿಹಿತ (ಗು). ೧. ಇರಿಸಿದ; ಸ್ಥಾಪಿಸಿದ : ಪ್ರಣಿಹಿತಕಲಶಾವಳಿ ಕಿಂಕಿಣಿಯೊಳ್ ಪೊಱಮಡುವ ಪುಗುವ ಜನದುಲಿಯುಲಿಯೊಳ್ ತೊಣೆಯಾಗೆ . . . ಗೋಪುರಂ ಸೊಗಯಿಸುಗುಂ (ಪುಷ್ಪಪು. ೨-೬೬). ೨. ಕೊಟ್ಟ; ನೀಡಿದ. ೩. ಸೇರಿಸಿದ ; ಕೂಡಿಸಿದ : ಗುಣದೋಷಾದಿಗಳಿಂದನುಗುಣಮಾಗಿರೆ ಪೇೞ್ದು ತದನುಸದೃಶದಿನೊಂದಂ ಪ್ರಣಿಹಿತನಿದರ್ಶನ ಕ್ರಮದೆಣಿಸುವುದಕ್ಕುಂ ನಿದರ್ಶನಾಲಂಕಾರಂ (ಕವಿರಾ. ೨-೦೪೦). ೪. ಪಡೆದ ; ಹೊಂದಿದ. ೫. ಒದಗಿದ; ಪ್ರಾಪ್ತವಾದ. ೬. ಸಾವಧಾನವಾದ ಮನಸ್ಸುಳ್ಳ. (ನಾ). ೭. ಇರಿಸಿದುದು. ೮. ಕೊಟ್ಟುದು ; ನೀಡಿದುದು. ೯. ಒದಗಿದುದು; ಪ್ರಾಪ್ತವಾದುದು : "ಪ್ರಾಪ್ತಂ, ಪ್ರಣಿಹಿತಂ — ೨ ಹೊಂದಲ್ಪಟ್ಟುದು" (ನಿದ್ಧಾಂತಿ. ೩೪೬). ೧೦. ಒಂದು ವಿಷಯದ ಮೇಲೆ ಚಿತ್ತೈಕಾಗ್ರತೆಯನ್ನು ಹೊಂದಿರುವುದು.— ಅವಧಾನವನ್ನು ಹೊಂದಿರುವುದು. [ಸಂ.]

ಪ್ರಣೀತ (ಗು). ೧. ಮುಂದಕ್ಕೆ ಒಯ್ದ. ೨. ಮಾರ್ಗದರ್ಶನ

ಮಾಡಿದ; ನಿರ್ದೇಶಿಸಿದ: ಆ ರಾಮಯತಿಪತಿ ಪರಮಾಗಮಪ್ರಣೀತ ಮಾರ್ಗದಿಂ ... ಗುಪ್ತಿಗಳಂ ಪಾಲಿಸಿ ಪಂಚಮಹಾವ್ರತಲೀಲೆಯನೆಸೆದಂ (ಸಂರಾಮಾ. ೦೬-೩೯ ಪ); ಪ್ರಣೀತವೇದಾಗಮಶಾಸ್ತ್ರಸಂಕುಳೇ ... ಗುಣಾಭಿರಾಮೇ ಜಯ ಸರ್ವಮಂಗಳೇ (ಪ್ರಸಂ. ೨೦-೩೬). ೩. ಕೊಟ್ಟ; ನೀಡಿದ. ೪. ಆಗುಮಾಡಿದ; ನೆರವೇರಿಸಿದ; ಸಾಧಿಸಿದ. ೫. ರಚಿತವಾದ; ನಿರ್ಮಿತವಾದ: ಮಹಾಕವೀಶ್ವರಕೃತಿ ಶಾಸ್ತ್ರಾಂತರಸ್ಮಾರತೆ ನಿಲ್ಕೆ ನಿರಂತರಮಸ್ಮತ್ಪ್ರಣೀತ ಜಾತಕಕೃತಿಯೊಳ್ (ಜಾತಕ. ೦-೩). (ನಾ). ೬. ಹೇಳಿದುದು; ನಿರ್ದೇಶಿಸಿದುದು: ಇಂಡಿಯಾದೇಶದಲ್ಲಿರುವ ಹಲವಾರು ಗಮನಾರ್ಹವಾದ ಪದ್ಧತಿಗಳಲ್ಲಿ ಪುರಾತನ ಋಷಿಗಳಿಂದ ಪ್ರಣೀತವಾದ ಒಂದು ಪದ್ಧತಿ ಇದೆ (ಪ್ರವಾಇ. I. ೧೬); ಟಿಳಕರ ಪೌರುಷ-ಪ್ರಕೃತಿ ... ಸರ್ವರಿಗೆ ಉಪದೇಶಿಸಲು ಯೋಗ್ಯವಾದ ಕರ್ಮಯೋಗರೂಪವನ್ನು ತಾಳಿ ಅವರ ಮುಖದಿಂದ ಪ್ರಣೀತವಾಯಿತು (ಧರ್ಮಾ. ೦೧೨). ೭. ಬರೆದುದು; ರಚಿತವಾದುದು: ಬಹುಕಾಲದ ಹಿಂದೆ ಪ್ರಣೀತವಾಗಿ ಈಗಲೂ ನಮ್ಮಿಂದ ಆದರಿಸಲ್ಪಡುತ್ತಿರುವ ಕಾವ್ಯಗಳೆಲ್ಲವೂ ಈ ಅಲೌಕಿಕ ಆಲೋಕದಿಂದ ತುಂಬಿವೆ (ಕಾಪ್ಯಕು. ೭೯). ೮. ರುಚಿಯಾಗಿ ತಯಾರಿಸಿದ ಅಡುಗೆ; ರಸಪಾಕ: "ಪ್ರಣೀತಂ, ಉಪಸಂಪನ್ನಂ-೨ ಪಾಕದಿಂದಲೂ ರಸದಿಂದಲೂ ಯುಕ್ತವಾಗಿ ಶಾಕಾದಿ ಸಮಗ್ರವಾದ ಅಡಿಗೆ; ರುಚಿಯಾಗಿ ಅಟ್ಟಲ್ಪಟ್ಟ ಅಡಿಗೆ" (ಸಿದ್ಧಾಂತಿ. ೨೮೭). ೯. ಮಂತ್ರಸಂಸ್ಕಾರವನ್ನು ಹೊಂದಿದ ಅಗ್ನಿ: "ಕಿಚ್ಚುಂ ಪ್ರಣೀತಮಕ್ಕುಂ" (ಮಂಗರಾ. ೭೭-೦೩); "ಪ್ರಣೀತಃ, ಸಂಸ್ಕೃತಃ—ಮಂತ್ರದಿಂದ ಸಂಸ್ಕರಿಸಲ್ಪಟ್ಟು ಹುತನಾದ ಅಗ್ನಿಗೆ ಹೆಸರು" (ಸಿದ್ಧಾಂತಿ. ೨೦೯). [ಸಂ.]

ಪ್ರಣೀತೆ (ನಾ). ಯಜ್ಞ, ಯಾಗ, ಹೋಮಗಳಲ್ಲಿ ಬಳಸುವ ಒಂದು ಬಗೆಯ ಪಾತ್ರೆ; ಯಜ್ಞಪಾತ್ರೆ. [ಸಂ. ಪ್ರಣೀತಾ]

ಪ್ರಣುತ (ಗು). ೧. ಹೊಗಳಿದ; ಕೊಂಡಾಡಿದ. ೨. ಹೆಸರಾಂತ; ಪ್ರಸಿದ್ಧವಾದ: ಪ್ರಣುತಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾಗುಣಮನೆ ತರ್ಕಂ (ಕವಿರಾ. ೦-೦೨೨); ಪ್ರಣುತಜಿನ ಚರಿತಮಂ ಲಕ್ಷಣಮಿಲ್ಲದೆ ಕುಕವಿ ಕಬ್ಬದೊಳ್ಕಟ್ಟೆ ... ಅಪ್ಪುದೆ ಶುಭದಂ (ಅರ್ಧಪೇ. ೦-೩೦); ಪ್ರಣುತ ಶ್ರುತಿಗಳ್ ನಾಲ್ಕು (ಪಿಷ್ಟಾಪು. ೩-೦-೦೦೯). [ಸಂ.]

ಪ್ರಣುತಿ (ನಾ). ಅತಿಶಯವಾದ ಹೊಗಳಿಕೆ; ವಿಶೇಷವಾದ ಸ್ತೋತ್ರ: ಶಿವಶರಣರಂ ಕಂಡುಕಂಡುಬ್ಬಿ ವಿನತನಾಗಿ ಪ್ರಣುತಿಯಿಂ ಪುಗೆ ಮನಮೊಸೆದೊಸೆದು ಹಾಡಿಹಾಡಿ (ಬಸವು. ೩೫-೩). [ಸಂ.]

ಪ್ರಣುತಿಸು (ಕ್ರಿ). ಅತಿಶಯವಾಗಿ ಹೊಗಳು; ಬಹಳವಾಗಿ ಸ್ತೋತ್ರಮಾಡು: ಪ್ರಣವಮಂತ್ರಾಗಮದ ಕಳೆಗಳೊ ಪ್ರಣುತಿಸಲ್ಕಿಂತೊಪ್ಪುವಾ ಕಲಧೌತಶೈಲದಲಿ (ಬಸವು. ೦-೩೯); ಭಕ್ತಿಯಲಿ ಪ್ರಣುತಿಸಲು ಶರ್ವಾಣಿ ರತಿಯರಿಗೆಣೆಯೆನಿಪ ಸುಂದರಿಗೆ ಮಿಕ್ಕಿನ ಬಣಗುಸತಿಯರು ಸರಿಯೆ ಲೋಕದೊಳು (ಪಳಸ. ೦-೩೯) [ಪ್ರಣುತಿ + — ಸ್ಯು]

ಪ್ರಣುತೆ 'ಪಣಿತೆ' ನೋ.

ಪ್ರಣೂತ (ಗು) ೧. ವಿಶೇಷವಾಗಿ ಹೊಗಳಿದ,—ಪ್ರಶಂಸೆ ಮಾಡಿದ. ೨. ಪ್ರಸಿದ್ಧವಾದ; ಹೆಸರುವಾಸಿಯಾದ: ವ್ಯಾಸಮುನಿಪ್ರಣೂ[ಪಾಣಾಂ. ಣೇ]ತಕೃತಿಯಂ ಸಲೆ ಪೇಟ್ದು ... ನಾಡೊವಜನಾದನೊ ಪೇಟ್ ಕವಿತಾಗುಣಾರ್ಣವಂ (ಪಂಪಭಾ. ೦೯-೬೨); ಮನ್ವಾದಿಪುರಾಣಮುನಿಗಣಪ್ರಣೂತಶ್ರುತಿವಿಹಿತ ವಿಶುದ್ಧಮಾರ್ಗನುಂ ... ಧರಾಮರಾಗ್ರಗಣ್ಯನುಮಾಗಿ ... ದುರ್ಗಮಯ್ಯಂ ನೆಗಟ್ದಂ (ಪಂಪಸಂ. ೯-೦೦); ಪರಮಾನಂತಗುಣಪ್ರಣೂತಪರಿನಿರ್ವಾಣೋರ್ವಿಯಂ ... ಭಕ್ತಿಯಿನಂದು ವಂದಿಸಲ್ (ಸುಕುಮಾ. ೮-೬೩). (ನಾ). ೩. ಹೆಚ್ಚಾಗಿ ಹೊಗಳಿದುದು; ವಿಶೇಷವಾಗಿ ಪ್ರಶಂಸಿತವಾದುದು. ೪. ಪ್ರಸಿದ್ಧವಾದುದು; ಹೆಸರುವಾಸಿಯಾದುದು: ಆ ಮಹಾವನಂ ... ನಾಕಿನಿಳಯದಂತೆ ಅನೂನಾಪ್ಸರೋಗಣಪ್ರಣೂತಮುಮತರ್ಕ್ಯಗೋಚರಮುಂ (ಸಂಪ್ರಪು. ೩-೩೨ ಪ). ೫. ವಿಶೇಷವಾಗಿ ಹೊಗಳಿಕೆಯನ್ನು ಹೊಂದಿದವನು,— ಪ್ರಶಂಸಿತನಾದವನು: ಈತನತ್ಯಂತವಿದ್ವಜ್ಜನಸಂದೋಹ ಪ್ರಣೂತಂ ಪರಮಜಿನಮತಾಂಭೋಜಿನೀರಾಜಹಂಸಂ (ಸುಕುಮಾ. ೦-೯೯). [ಸಂ.]

ಪ್ರಣೇತಾರ (ನಾ). ೧. (ಉತ್ತಮನಾದ) ನಾಯಕ,—ಮುಂದಾಳು: ಪ್ರಣೇತಾರನು ಇಲ್ಲದಿದ್ದರೆ ಮಹತ್ತಮವಾದ ಸೈನ್ಯವಾದರೂ ಯುದ್ಧದಲ್ಲಿ ಭಗ್ನವಾಗುವುದು (ಭೀಷ್ಮಪ. ೦೬೫). ೨. (ಗ್ರಂಥವನ್ನು) ರಚಿಸುವವನು; ಕರ್ತೃ. [ಸಂ. ಪ್ರಣೇತೃ]

ಪ್ರಣೇತೃ (ನಾ). ೧. ನಾಯಕ; ಮುಂದಾಳು. ೨. ಬೋಧಿಸುವವನು; ಗುರು. ೩. = ಪ್ರಣೇತಾರ ೨: ನಮಗೆ ಈಗ ಉಪಲಬ್ಧವಾಗಿರುವ ವೇದಾಗಮಗಳಲ್ಲಿಯ ಪ್ರವರ್ತಕರಾಗಲಿ ಅನುವಾದಕರಾಗಲಿ ಪ್ರಣೇತೃಗಳಲ್ಲ (ಭಾರದ. ೭೨). [ಸಂ.]

ಪ್ರಣೇಯ (ನಾ). ೧. ವಿನಯವಂತ; ವಿನೀತ. ೨. ವಶೀಕರಣ ವಿಧಾನದಿಂದ ವಶವರ್ತಿಯಾಗಿರುವವನು: "ವಶ್ಯಃ, ಪ್ರಣೇಯಃ, ೨ ಔಷಧಾದಿಗಳಿಂದ ವಶ್ಯನಾದವನ ಹೆಸರು" (ಸಿದ್ಧಾಂತಿ. ೩೨೯). [ಸಂ.]

ಪ್ರತತ (ಗು). ಹರಡಿರುವ; ವಿಸ್ತಾರವಾದ; ವ್ಯಾಪ್ತವಾದ. [ಸಂ.]

ಪ್ರತತಿ (ನಾ). ೧. ಗುಂಪು; ಸಮೂಹ: ನಾಗವಿಭೂಷಣಪ್ರತತಿ ನಾಗರಖಂಡಮಪೂರ್ವಮಪ್ಪ ಪುನ್ನಾಗದ ದಾಸಿಗಂ (ಪಂಪಭಾ. ೪-೦೭); ಭುವನದೊಳು ಧರ್ಮಗುಣಪ್ರತತಿಗೆ ನೆಲೆಯಾಗಿ ಮಹಾಸತಿ ಮೇಚಲದೇವಿ ಸನ್ತತಂ ಸೊಗಯಿಸುಗುಂ (ಎಕ. V, ಮಂಜರಾ. ೦೯-೩೯; 1095); ಅವದಿರ ನಿಬರು ಕ್ಷಿತಿಸುರರ ಕೊಂದಮಳಭೂಷಪ್ರತತಿಯನು ಕೊಂಡೊಯ್ದರು (ಕುಪ್ಯಾಕ. ೦೭-೦೫). ೨. ಬಳ್ಳಿ; ಲತೆ: "ಲತೆ ಪ್ರತಾನನಿ ಪ್ರತತಿ ವಲ್ಲರಿ ವಲ್ಲಿ ವೀರುದೆನೆ ಬಳ್ಳಿಯೆನಿಕುಂ" (ಮಂಗರಾ. ೩೨-೯). [ಸಂ.]

ಪ್ರತನ (ನಾ). ಹಳೆಯದು; ಪ್ರಾಚೀನವಾದುದು: "ಪುರಾಣಃ, ಪ್ರತನಃ, ಪ್ರತ್ನಃ, ಪುರಾತನಃ, ಚಿರಂತನಃ—೫ ಹಳೇದು, ಬಹುಕಾಲದ್ದು" (ಸಿದ್ಧಾಂತಿ. ೩೯೩). [ಸಂ.]

ಪ್ರತಪನ (ನಾ). ೧. ಹೆಚ್ಚಾಗಿ ಬಿಸಿಮಾಡುವುದು,—ಕಾಯಿಸುವುದು. ೨. (ಆಲಂ) ಕ್ಲೇಶಕ್ಕೀಡುಮಾಡುವುದು; ಸಂಕಟಪಡಿಸುವುದು: ಸ್ವರೂಪಪ್ರತಪನಲಕ್ಷಣನಿಶ್ಚಯತಪಶ್ಚರಣಹೇತುಭೂತಾನಶನಾದಿ ದ್ವಾದಶವಿಧಾನುಷ್ಠಾನಂ ತಪಮೆಂಬುದಕ್ಕುಂ (ಕತ್ತ್ವಪ್ರ. ೨೮೮). [ಸಂ.]

ಪ್ರತರ (ಗು). ೧. ಹೆಚ್ಚಾದ; ಅಧಿಕವಾದ: ಅತಿತೂರ್ಯಚ್ಛಕ್ರರೋಚಿರ್ವಳಯವಿಳಸನಂ ನನ್ನ[ವೋ]ನ್ಮೌಳಿರತ್ನಪ್ರತರಾಭೀಷುಪ್ರಕಾಶಂ ಬೆಳಗೆ (ಪರ್ಧಮಾ. ೯-೩೩). ೨. ವಿಸ್ತಾರವಾದ: ದಂಡಕವಾಟ ಪ್ರತರಲೋಕಪೂರಣಕ್ರಿಯೆಗಳಂ ಪ್ರತಿಸಮಯಂ ಪ್ರಯೋಗಿಸಿ (ಸಂರಾಮಾ. ೦೬-೭೯ ಪ). 'ಪ್ರತರಕ್ರಿಯೆ' ಪರಾ. [ಸಂ.]

ಪ್ರತರಕ್ರಿಯೆ (ನಾ). [ಜೈನ] ಪರಿನಿರ್ವಾಣಕಾಲದಲ್ಲಿ ಒದಗುವ ಅವಸ್ಥಾವಿಶೇಷ; ಆತ್ಮವು ವಿಸ್ತಾರವಾಗಿ ವ್ಯಾಪಿಸುವುದು: ಲೋಕಾಕಾಶವ್ಯಾಪಕಕವಾಟಕ್ರಿಯೆಯಂ ನೆಱಪಿ ತದನಂತರಸಮಯದೊಳ್ ವಾತವಲಯಮುಟಿಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿನಿರ್ವರ್ತಿತ ಪ್ರತರಕ್ರಿಯಾವಿಶೇಷಂ (ಅದಿಪು. ೦೬-೯೯ ಪ); "ಪ್ರತರಕ್ರಿಯೆ— ಪ್ರತರಾವಸ್ಥೆಯಲ್ಲಿ ಲೋಕದ ಅಸಂಖ್ಯಾತಭಾಗಗಳು ಕೇವಲಿಯ ಪ್ರತರಾಕಾರದ ಆತ್ಮಪ್ರದೇಶಗಳಿಂದ ವ್ಯಾಪ್ತವಾಗುತ್ತವೆ" (ಅದಿಪು. ಜೈನ ಪಾಂಭಾಷಿಕ ಶಬ್ದಕೋಶ). [ಸಂ. ಪ್ರತರಕ್ರಿಯಾ]

ಪ್ರತರಾಂಗುಲ (ನಾ). [ಜೈನ] ಒಂದು ಚದರಳತೆ; ಸೂಚ್ಯಂಗುಲದ ವರ್ಗ : ತದ್ಭಾಗಹಾರಮುಂ ಯಥಾಕ್ರಮದಿಂ ಪ್ರತರಾಂಗುಲಸಂಖ್ಯೇಯ ಭಾಗಮುಮಕ್ಕುಂ (ಕಕ್ಷ್ಯಪ್ರ. ೨೦); ಕಾಲಪ್ರಮಾಣದಲ್ಲಿ ವಿವರಿಸಿದ ಆದ್ದಾಪಲ್ಯದಲ್ಲಿ ಬರುವ ಸಂಖ್ಯೆಯೊಳಗೆ ಅರ್ಧಮಾಡಿ, ಒಂದರಿಂದ ಇನ್ನೊಂದು ಗುಣಿಸಿದರೆ ಸೂಚ್ಯಂಗುಲದ ಪ್ರಮಾಣ ಬರುತ್ತದೆ. ಸೂಚ್ಯಂಗುಲದ ವರ್ಗಕ್ಕೆ ಪ್ರತರಾಂಗುಲವೆಂದೂ ಘನಕ್ಕೆ ಘನಾಂಗುಲವೆಂದೂ ಹೇಳುವರು (ಕೃಪಕ. ೩೦೯). [ಸಂ.]

ಪ್ರತರೆ (ನಾ). = ಪ್ರತರಕ್ರಿಯೆ : ನೀರು ಪನಿವಂತೆ ಪ್ರತರೆಯ ಪರಮನು ಮಾಡಲು ಘನಕರ್ಮಪಿಂಡವಾಱಿದುದು (ಸ್ಥಾಪಕ. ೧೩-೧೬).

[ಸಂ. ಪ್ರತರ]

ಪ್ರತಲ, ಪ್ರತಳ (ನಾ). ೧. ಬೆರಳುಗಳನ್ನು ನೀಡಿ ಅಗಲಿಸಿರುವ ಅಂಗೈ : "ಚಪೇಟಃ, ಪ್ರತಲಃ, ಪ್ರಹಸ್ತಃ — ೩ ವಿಸ್ತೃತಾಂಗುಳೌ — ಚಾಚಲ್ಪಟ್ಟ ಬೆರಳುಗಳುಳ್ಳ ಅಂಗೈ ಹೆಸರುಗಳು" (ನಿಘಂಟು. ೦೯೩). ೨. ಸಪ್ತಪಾತಾಳಲೋಕಗಳಲ್ಲಿ ಒಂದು. ಪ್ರತಳ : ೧. ಬೆರಲುಂ ತಳಮುಂ ಬೆರಸಿದೊಡೆ ಪ್ರತಳಮೆಂಬುದು ಅದನೆ ತಳಮುಮೆಂಬುದು (ಪಂಚಾಯು. ೬೬-೩೬೩). [ಸಂ.]

ಪ್ರತಳ 'ಪ್ರತಲ' ನೋ.

ಪ್ರತಾನ (ನಾ). ೧. ಕವಲುಕವಲಾಗಿ ಹರಡುವುದು; ಶಾಖೋಪಶಾಖೆಗಳಾಗಿ ವಿಸ್ತರಿಸುವುದು. ೨. ಗುಂಪು; ಸಮೂಹ : ಮಣಿಗಣಾತ್ತ ಮರೀಚಿಲತಾಪ್ರತಾನಸಂವಳಯಿತ ವಿದ್ರುಮದ್ರುಮವಿಳಾಸ ವಿಶೇಷಿತಬಾಡವಾನಳಾವಿಳಜಳಮಂ ಮನಂ ಬಯಸಿ ನೋಡಿದನರ್ಣವಮಂ ಗುಣಾರ್ಣವಂ (ಪಂಪಭಾ. ೪-೨೩); ಲಸದುವ್ಯತ್ಕೀರಪಾರಾವತಶಿಖಿಹರಿಣೀ ಹಂಸಶಾರೀಪ್ರತಾನಂ (ರಾಜಕೇ. ೯-೪೦). ೩. ಬಳ್ಳಿಯ ಕುಡಿ; ಸಣ್ಣ ಹಂಬು : 'ಪ್ರತಾನಿನಿ' ಪರಾ. ೪. (ನೆಲದಲ್ಲಿಯೇ ಹಬ್ಬುವ) ಬಳ್ಳಿ; ಹಂಬು. [ಸಂ.]

ಪ್ರತಾನಿನಿ (ನಾ). ಬಳ್ಳಿ; ಹಂಬು; ಲತೆ : "ಲತಾ, ಪ್ರತಾನಿನೀ, ವಲ್ಲೀ, ಪ್ರತತೀ, ಪ್ರತತಿಃ — ಈ ೫ ಬಳ್ಳಿ" (ಹಲಾಯು. ೩೦-೨೬).

[ಸಂ. ಪ್ರತಾನಿನೀ]

ಪ್ರತಾಪ (ನಾ). ೧. ಬಿಸಂಪು; ಕಾವು; ಉಷ್ಣ : ದಿವಸ್ಪತಿಗೆ ಪ್ರತಾಪಮಂ . . . ಕೊಟ್ಟ ಗುರುಮೂರ್ತಿ ಪಂಪಾಪತಿವಿರೂಪಾಕ್ಷ ನೆಮಗಿಷ್ಟಸಿದ್ಧಿಯಂ ಮಾಳ್ಕೆ (ಪಕಣಾ. ೦-೦). ೨. ಬಿಸಿಲು. ೩. ಬೆಳಕು; ಪ್ರಕಾಶ. ೪. ಶಕ್ತಿ; ಬಲ; ಪರಾಕ್ರಮ : "ಪ್ರತಾಪಃ, ಪೌರುಷಂ, ತೇಜಃ, ವಿಕ್ರಮಃ, ಪರಾಕ್ರಮಃ — ಈ ೫ ಪರಾಕ್ರಮಂ" (ಹಲಾಯು. ೦೨೦-೩೬); ಪತಿವಿಯೋಗ [ಖಿದ್ಯಧ್ವನಿತಾ] ಹೃದಯಂಗಳೊಳಾವಗಮುರಿವುದು ಕಡುಪಿನೊಳಾ ನೃಪಪ್ರತಾಪಜ್ವಲನಂ (ಕಾಪಂಪು. ೦೪); ರಣರಂಗಭೈರವನುಭಯ ಬಳಸುಭಟಕೀರ್ತ್ತಿತಪ್ರತಾಪಂ ವೈರಿಸಂತಾಪಂ (ಸೌಇ. XX, ೪೬-೩೪; 1072). ೧. ೪: ಉಚ್ಚಂಡಪ್ರತಾಪೋದಯಮರಿಕುಮುದಾಭೋಗವಿಧ್ವಂಸಿಯಾಗಿರ್ಪಿನಂ . . . ಒಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂ ಗೋಪಮಾರ್ತಾಂಡದೇವಂ (ಜಗದಿ. ೦-೪). ೫. ತೇಜಸ್ಸು; ಪ್ರಭಾವ; ವರ್ಚಸ್ಸು : "ಪ್ರತಾಪಃ, ಪ್ರಭಾವಃ — ೨ . . . ಪ್ರಭುಕಳೆ ಯಾವದೋ ಅದರ ಹೆಸರು" (ನಿಘಂಟು. ೨೪೦). ೬. ಕೀರ್ತಿ; ಯಶಸ್ಸು. ೭. ಹಿಂದಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯ: ಪ್ರತಾಪದ ಲೆಕ್ಕ . . . ಪ್ರತಾಪಕೆ ಪಣವು ಬಾಣಂ ಪ್ರತಾಪಕಂ ಧರಣವೆರಡು ಚೌಲ ನಾಲ್ಕುಂ (ಕೃಪಕಾ. ಅಮರಿಂ. I, ೩); ಆರು ವರುಷಾವಧಿಯ ಪಂಚಪರ್ವಗಳ ಮಹೋತ್ಸಾಹಕ್ಕೆ ಪ್ರತಾಪ ಇಪತ್ತುಂ ಬೆಲ್ಲಪತ್ರೆ ಹುವ ತಹದಕೆ ಪ್ರತಾಪ ಹನೆರಡು (ಎಳ. XI, ಸೊಳಕಾ. ೩೦-೦೭; 1356); ರಾಮಟೆಂಕೀನಾಣ್ಯವು ಕಟಾಳಟಿ ನಾಲ್ಕು ತೊಲಿ ಇರುತ್ತಿತ್ತು. ಅದರ ಅರ್ಧದ ನಾಣ್ಯಕ್ಕೆ ಪ್ರತಾಪವೆನ್ನುವರು (ಕಥಾಗೆ. ೨೬೦). ೯ ಸಂಸ್ಕೃತಕೋಶಗಳಲ್ಲಿ ಈ ಅರ್ಥವಿಲ್ಲ. ಆದರೆ ಮರಾಠಿಕೋಶದಲ್ಲಿ, ಧಾರವಾಡದ ಕಡೆ ಪ್ರಚಾರದಲ್ಲಿರುವ ಎರಡು ರೂಪಾಯಿ ಬೆಲೆಯ ಒಂದು ನಾಣ್ಯ, ಅರ್ಧಹೊನ್ನು ಎಂಬರ್ಥದ ಸಂಸ್ಕೃತಶಬ್ದ ಎಂದು ಹೇಳಿದೆ.

ಪ್ರತಾಪಗದ್ಯಾಣ = ಪ್ರತಾಪ ೭ : ಸೀಮೆ ಸಂಣ ಪ್ರತಾಪಗದ್ಯಾಣ ೧೦ (ಸೌಇ. IX - ii, ೪೬೦-೦೯; 1465). **ಪ್ರತಾಪಚಕ್ರವರ್ತಿ** = ಪರಾಕ್ರಮಿಯಾದ ಹಾಗೂ ಪ್ರಭಾವಶಾಲಿಯಾದ ಸಾರ್ವಭೌಮ; ಹೊಯ್ಸಳ ವೀರಬಲ್ಲಾಳನ ಒಂದು ಬಿರುದು : ಸಮಸ್ತಭುವನಾಶ್ರಯಂ ಯಾದವನಾರಾಯಣಂ ಪ್ರತಾಪಚಕ್ರವರ್ತಿ ವೀರಬಲ್ಲಾಳದೇವರ ಬೆಸ (ಕಇ. IV, ೬-೦; 1204). **ಪ್ರತಾಪಜನಾರ್ದನ** = ಪರಾಕ್ರಮದಲ್ಲಿ ಹಾಗೂ ಪ್ರಭಾವದಲ್ಲಿ ನಾರಾಯಣನಂತೆ ಇರುವವನು; ಚಾಲುಕ್ಯ ವಿಜಯಾದಿತ್ಯದೇವನ ಒಂದು ಬಿರುದು : ವೈರಿಮದಮರ್ದ್ದನ ಪ್ರತಾಪಜನಾರ್ದ್ದನನಚಳಿತವಾಕ್ಯ ವಿಷ್ಣುವರ್ಧನಮಹಾರಾಜವಿಜಯಾದಿತ್ಯದೇವರ್ . . . ಆಳುತ್ತಮಿರೆ (ಎಳ. XI, ಕಕ್ರಮ. ೪೭-೬; 1067). **ಪ್ರತಾಪಲಂಕೇಶ್ವರ** = ೧. ಪರಾಕ್ರಮದಲ್ಲಿ ರಾವಣನಂತಿರುವವನು; ಶತ್ರುಗಳಿಗೆ ಭಯವನ್ನುಂಟುಮಾಡುವ ಪರಾಕ್ರಮವುಳ್ಳವನು; ಕಳಚುರ್ಯವಂಶದ ರಾಜರ ಒಂದು ಬಿರುದು : ಕಲಿಗಳಂಕುಶಂ ಗಜಸಾಮನ್ತಶರಣಾಗತ ವಜ್ರಪಂಜರಂ ಪ್ರತಾಪಲಂಕೇಶ್ವರಂ (ಕಇ. II, ೦೦-೦೦; 1092); ಮಾರ್ತಂಡಪ್ರತಾಪಲಂಕೇಶ್ವರ ರಿಪುಮದನಮಹೇಶ್ವರ (ಕಇಲ. ೬೪-೦೨-೦೯; 1170). ೨. [ವೈದ್ಯಶಾ] ಒಂದು ಬಗೆಯ ಗುಳಿಗೆ, — ಮಾತ್ರೆ : ಪ್ರತಾಪಲಂಕೇಶ್ವರ-ಶಂಕುಪಾಷಾಣ . . . ಸಾಸಿವೆಪ್ರಮಾಣ ಗುಳಿಗೆಯಂ ಮಾಡಿ ಸಮಜ್ವರಕ್ಕೆ ಜೀರಿಗೆ ಸಕ್ಕರೆಯಲ್ಲಿ ಕೊಡುವುದು (ವಿಸ್ತರಿ. ೩೯).

[ಸಂ.]

ಪ್ರತಾಪವಂತ (ನಾ). ಪ್ರಭಾವಶಾಲಿ; ತೇಜಸ್ವಿ: ಪ್ರತಾಪವಂತಂ ಕೆಳೆಗೀತ ತಕ್ಕವಂ (ಗೋಕಂದಿ. ೦೬-೦೨). [ಸಂ. ಪ್ರತಾಪವತ್]

ಪ್ರತಾಪವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಶೋಕವರಾಳಿ . . . ಪ್ರತಾಪವರಾಳಿ . . . ನಾಗವರಾಳಿಯೆಂಬ ವರಾಳೀ ಸಪ್ತಕವೇ ಶುದ್ಧವರಾಳಿಗೆ ಮಿಶ್ರಂಗಳು (ಶಿವೇಕ. ೨೩೩).

[ಸಂ. ಪ್ರತಾಪವರಾಲೀ]

ಪ್ರತಾಪಶಾಲಿ (ಗಂ). ೧. ಪರಾಕ್ರಮವುಳ್ಳವ; ಶೂರ : ಮಹೇಂದ್ರನು ನೊಳಂಬವಂಶದಲ್ಲೇ ಅತೀಪ್ರತಾಪಶಾಲಿ ರಾಜನಾಗಿ ಮೆರೆದಿದ್ದಾನೆ (ಸೊಳಂಬ. ೩೩). (ನಾ). ೨. ಶೂರನಾದವನು; ವೀರ.

[ಸಂ. ಪ್ರತಾಪಶಾಲಿನ್]

ಪ್ರತಾಪಸ (ನಾ). ಬಿಳಿ ಎಕ್ಕದ ಗಿಡ : "ಅಲರ್ಕಃ, ಪ್ರತಾಪಸಃ — ೨ . . . ಶ್ವೇತಾರ್ಕ — ಬೆನಕನ ಯಕ್ಕೆ" (ನಿಘಂಟು. ೦೩೦). [ಸಂ.]

ಪ್ರತಾಪಿ (ನಾ). = ಪ್ರತಾಪಶಾಲಿ ೨ : ದಾರುಣಕೋಪಂ ಪ್ರತಾಪಿ ಸಾಹಸಭೀಮಂ (ಗಣಾಯು. ೭-೦). [ಸಂ. ಪ್ರತಾಪಿನ್]

ಪ್ರತಾಪೋದಯ (ನಾ). ೧. ಪರಾಕ್ರಮದ ಏಳಿಗೆ; ಶೌರ್ಯೋನ್ನತಿ : ವೀರನಾರಾಯಣನಪ್ರತಿಶಯಧಹಳಂ ನಮಗೀಗತರ್ಕಿತೋಪಸ್ಥಿತ ಪ್ರತಾಪೋದಯಮಂ (ಕಪಿಶಾ. ೦-೨). ೨. ಶೌರ್ಯೋನ್ನತಿಯನ್ನು ಹೊಂದಿದವನು; ಅತಿಪರಾಕ್ರಮಿ : ಪದ್ಮರಾಜನರಿದುಷ್ಪಾಪಪ್ರತಾಪೋದಯಂ (ಪುಷ್ಪಪು. ೩-೦೮). [ಸಂ.]

ಪ್ರತಾಪೋಷ್ಮ (ನಾ). ಪರಾಕ್ರಮದ ಕಾವು; ಶೌರ್ಯದ ತೀಕ್ಷ್ಣತೆ: ಉಲಕ್ರಮಾಯಾತ ಪ್ರತಾಪೋಷ್ಮಮಂ ಪತ್ತುವಿಡುವರಾತಿಗಳ ಸಂಖ್ಯೆಯೊಳಂ (ಅಂಪು. ೦೪-೦೪ ಪ). [ಸಂ.]

ಪ್ರತಾರಕ (ನಾ). ಮೋಸಗಾರ; ವಂಚಕ : ಈ ವಿಷಯದಲ್ಲಿ ನನಗೆ ಪುತ್ರಪ್ರತಾರಕನೆಂದರೂ ಸರಿ. ಮಗನ ಅವಿವೇಕಕ್ಕೆ ತಡೆ ಹಾಕಲೇಬೇಕು (ಪೂರಣ. ೪೦). [ಸಂ.]

ಪ್ರತಾರಣ (ನಾ). ೧. ಮೋಸ; ವಂಚನೆ : ವಾರಣಾವತಂ ಸಂದ ಸಭಾಪ್ರತಾರಣಕೆ ಕಾರಣಮೆಂದಱಿಪಲ್ಕೆ ಬೇಡಿದರ್ ಸಂಧಿಗೆಯಲ್ಕೆ ಬೇಡಿದರೆ ಪಾಂಡುತನೂಭವರಯ್ದುಬಾಡಮಂ (ಗದಾಯು. ೩ -೨೦). ೨. ಮೋಸಗೊಳಿಸುವಂಥದು; ವಂಚಿಸುವಂಥದು: ಕೋಪಮೆಂಬುದೆ ಸಾಧು ಸಂಗಪ್ರತಾರಣಂ ಕೋಪಮೆಂಬುದೆ ಸಕಲಸನ್ಮಾರ್ಗದಾರಣಂ ಚಿತ್ತ ವೈಕಲ್ಯಕರಣಂ (ಸಂಕಾರಾ. ೨-೯-೦೬). ೩. ಹೊಳೆ ದಾಟಿಸುವುದು. ೧, ೩ : ಪ್ರತಾರಣಂ ನಾವೆಯೊಳ್ . . . ಮಹಾಮಾತ್ರವರ್ತನಂ ಸೃಣಿಯೊಳಲ್ಲದಿಲ್ಲಮೆಲ್ಲಿಯುಂ (ಸಂಪ್ರಪು. ೩-೯ ಪ). [ಸಂ.]

ಪ್ರತಾರಿಸು (ಕ್ರಿ). ಮೋಸಗೊಳಿಸು ; ವಂಚನೆ ಮಾಡು : ಕಾಮಿನೀತತಿ ವಿಲಾಸಾಪಾಂಗದಿಂದಂ ಪ್ರತಾರಿಸದಂತಾಗಿರಲಾತ್ಮವಂತನೆನಿಸೆಂದುಂ ರಾಜ್ಯ ವಿದ್ಯಾಧರಾ (ಕಾದುಪು. ೩೭೯). [ಪ್ರತಾರಣ+—ಇಸು$_3$]

ಪ್ರತಿ (ನಾ). ೧. ಸರಿ; ಸಾಟಿ; ಸಮಾನ : "ಸದೃಶಂ ಸರಿ ಪ್ರತಿ ಸದೃಕ್ಷಂ ಪ್ರಕಾಶಂ ಸಮಾನಮೆನೆ ಪಾಸಟಿಗೆ ನಾಮಮಕ್ಕುಂ" (ಪುಂಗಣಾ. ೦೨೬-೩). ೨. ಸಮಾನವಾದುದು ; ಸಾಟಿಯಾದುದು : ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲಾ ಕೂಡಲಸಂಗಮದೇವಾ (ಬಸವ. ೩೭೨); ಬೊಮ್ಮನ ಸತಿಯ ಸೊಬಗಂತಿರಲಿಯೊ ಬಾಲಕಿಯ ರೂಪಿಂಗೆ ಪ್ರತಿಯ ಕಾಣೆನು (ಕುಪ್ಯಾಪ. ೨-೦೦). ೩. ಸಮಾನನಾದ ವ್ಯಕ್ತಿ; ಸರಿಸಾಟಿಯಾದ ವ್ಯಕ್ತಿ : ಪ್ರತಿ ತನಗಿಲ್ಲ ಸಲ್ಲಲಿತರೂಪದಿನೀ ತ್ರಿಜಗಂಗಳಂಗನಾತತಿಯೊಳಿದೊಂದೆ ತಾಂ ಪ್ರತಿ ನಿಜಪ್ರತಿಮಾನಂ (ಕಾಂಶೀಸ್ವ. ೯-೨೯೩). ೪. ಎದುರು; ವಿರೋಧ : ನನ್ನಿಂದ ಏನಾದರೂ ಆಗತಕ್ಕ ಕಾರ್ಯವಿದ್ದರೆ ನಾನು ಸಿದ್ಧನಾಗಿದ್ದೇನೆ. ನಿಮ್ಮ ಮಾತಿಗೆ ಪ್ರತಿಯುಂಟೆ ? (ತ್ರೀರಾಯ. ೦೦೯). ೫. ಒಂದಕ್ಕೆ ಬದಲಾಗಿ ಇನ್ನೊಂದನ್ನು ಕೊಡುವುದು; ಮುಯ್ಯಿ : "ಪ್ರತಿಯಾತನಂ ಪ್ರತಿ ಪ್ರತಿಕೃತಿಯೆನಲ್ಕೆ ಮುಯಿ" (ಪುಂಗಣಾ. ೦೩೩-೩೬). ೬. ಎದುರಾದುದು; ವಿರುದ್ಧವಾದುದು : ಅವನ ತೀರ್ಮಾನಕ್ಕೆ ಪ್ರತಿಯಾವುದೂ ಇಲ್ಲ (ಕೂಡಿ). ೭. ಒಂದಕ್ಕೆ ಬದಲಾಗಿ ಇರುವ ಇನ್ನೊಂದು: 'ಪ್ರತಿನಿಧಾನ', 'ಪ್ರತಿನಿಧಿ' ಪರಾ. ೮. ಒಂದೊಂದು: ಪ್ರತಿಗೃಹಕುಂಕುಮಚ್ಛಟೆಗಳಿಂ ಪ್ರತಿಮಂದಿರರಂಗವಲ್ಲಿಯಿಂ ಪ್ರತಿನಿಲಯ ಪ್ರರೂಢಮಣಿತೋರಣದಿಂ ಪ್ರತಿಸದ್ಮವಾದ್ಯದಿಂ ಪ್ರತಿಭವನೋತ್ಸವ ಧ್ವಜದಿನಾ ಪೊಟಲೊಪ್ಪಿರೆ (ಜಗಂ. ೦೨-೩೮); ವರ್ಷಕ್ಕೆ ಮೂರರಿಂದ ಆರು ಸಲ ಇಲಿ ಬಾಣಂತಿಯಾಗುತ್ತದೆ. ಪ್ರತಿ ಹೆರಿಗೆಯಲ್ಲಿ ಆರರಿಂದ ಹತ್ತು ಮಕ್ಕಳು (ಬೇಕಸ್ವ. ೯೩). ೯. ಒಬ್ಬೊಬ್ಬ : ಪ್ರತಿ ಮನುಷ್ಯನಿಗೂ ತನ್ನ ಕರ್ತವ್ಯ, ಜವಾಬ್ದಾರಿಗಳ ಅರಿವಿರಬೇಕು (ಕೂಡಿ). ೧೦. ದರ್ಜೆ; ಮಟ್ಟ : ಕೂಲಿಕಾರರು ಕಡಿಮೆ ಪ್ರತಿಯ ಒಕ್ಕಲಿಗರಿಗಿಂತ ವಾಡಿಕೆಯಾಗಿ ಹೆಚ್ಚು ಸುಖದಿಂದ ಇದ್ದಾರೆಂದು ಹೇಳಬಹುದು (ಕಭಾಗೆ. ೨೬೬); ಭೌತಿಕಶಾಸ್ತ್ರಗಳಿಗಿಂತ ಆಧ್ಯಾತ್ಮಿಕಶಾಸ್ತ್ರಗಳು ಗೂಢವೆನಿಸುವುವೆಂಬುದು ನಿಜ. ಆದರೆ ಅಷ್ಟು ಮಾತ್ರದಿಂದಲೇ ಅವು ಕಡಿಮೆ ಪ್ರತಿಯವು ಎಂದು ನಿರ್ಧರಿಸಲಾಗುವುದಿಲ್ಲ (ಪ್ರಬಂಧ. ೦೦೬). ೧೧. ಒಂದು ಮೂಲಗ್ರಂಥದ ನಕಲು : ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿ, ಅದರ ಕೆಲವು ಪ್ರತಿಗಳಲ್ಲಿ ಮಾತ್ರ—ದ್ರವಿಡ ಪದಕ್ಕೆ ಬದಲು ದ್ರಮಿಡ ಎಂಬ ಅನುನಾಸಿಕದ ಉಚ್ಚಾರ ಪಡೆದ ಪದವಿದೆ (ದ್ರಾವಿಡ. ೦೦೯); ನಾಡಿದ್ದಿನ ಹೊತ್ತಿಗೆ ನನಗೆ ಇದರ ಪ್ರತಿ ಬೇಕು (ಪಾಱಿ. ೯).

ಪ್ರತಿ ನಿಲ್ಲು = ವಿರುದ್ಧವಾಗಿ ನಿಲ್ಲು : ಆ ದುಷ್ಟನಿಗೆ ಪ್ರತಿನಿಲ್ಲುವವರು ಆ ಊರಿನಲ್ಲಿ ಯಾರೂ ಇಲ್ಲ (ಕೂಡಿ). ಪ್ರತಿ ಮಾಡಿಸು = ಮೂಲಕೃತಿಯನ್ನು ಯಥಾವತ್ತಾಗಿ ಬರೆಸು,—ನಕಲು ಮಾಡಿಸು : ಅತ್ತಿಮಬ್ಬೆ . . . ಅಚ್ಚಕನ್ನಡಕೃತಿಗಳಲ್ಲಿ ಒಂದೊಂದನ್ನೂ ಸಹಸ್ರಸಹಸ್ರವಾಗಿ ಪ್ರತಿ ಮಾಡಿಸಿದಳು (ದಾಪಸಂ. ೦೬೯). ಪ್ರತಿ ಮಾಡು = ಮೂಲಕೃತಿಯನ್ನು ಯಥಾವತ್ತಾಗಿ ಬರೆ,—ನಕಲು ಮಾಡು : ಹರಿಶಂಕರಾಖ್ಯನು ಶಿಷ್ಯ ಸನ್ಮಿತ್ರನು ಪ್ರತಿ ಮಾಡಿದನು ಕೃತಿಯಿದನು (ಜಂಗಾಪ. ೨೯೯-೦೦೯). ಪ್ರತಿಯಿಡು = ಸಮಾನನಾದ ವ್ಯಕ್ತಿಯನ್ನು ಹುಡುಕು: ಪ್ರತಿಯಿಡಲು ಬಾರದ ಮಹಾಗರ್ವಿತಹೃದಯನಂ ಕಪಟನಂ . . . ಸೈರಿಸಿ (ಬಸಪು. ೨೩-೯೦). ಪ್ರತಿಯೆತ್ತು = ಪ್ರತಿ ಮಾಡು : ಪುಸ್ತಕಭಂಡಾರಕ್ಕೆ ಹೋಗಿ ಈ ಪುಸ್ತಕದ ಭಾಗವನ್ನು ಪ್ರತಿಯೆತ್ತಿಕೊಂಡು ಬಂದೆ (ಕೂಡಿ).

[ಗ ಸಂಸ್ಕೃತದಲ್ಲಿ ಇದೊಂದು ಉಪಸರ್ಗಾವ್ಯಯ. 'ಪ್ರತಿಗಾಣು', 'ಪ್ರತಿಮಾತು', 'ಪ್ರತಿಯೊಂದು', 'ಪ್ರತಿಯೊಬ್ಬ' ಮುಂತಾದುವುಗಳಲ್ಲಿಯಂತೆ ನಾಮಪ್ರಕೃತಿ ಮತ್ತು ಧಾತುಗಳೊಡನೆ ಸೇರಿದಾಗ ಬೇರೆಬೇರೆ ಅರ್ಥಗಳನ್ನು ಕೊಡುತ್ತದೆ]

ಪ್ರತಿಕಂಟ (ನಾ). ಪ್ರತಿಯೊಂದು ಬರಹ,—ಬರವಣಿಗೆ : ನಿರತಿಶಯೋನ್ನತಮತಿ ಭಾಸ್ಕರ ಸರಸಕವೀಂದ್ರರಚಿತಶಾಸನಮಂ ಬಿತ್ತರದಿಂ ಪ್ರತಿಕಂಟಂ ಸಾಕ್ಷರನಿಳಯಂ ತಿರ್ದಿ ಭಾಸ್ಕರಯ್ಯಂ ಬರೆದಂ (ಕಇಲ. ೦೯-೦-೯೨ : 1127). [ಸಂ.]

ಪ್ರತಿಕಕ್ಷಿ (ನಾ). ಎದುರಾಳಿ ; ಪ್ರತಿಸ್ಪರ್ಧಿ ; ವಿರೋಧಿ : ಮಣಿಗೆ ಒಬ್ಬ ಪ್ರತಿಕಕ್ಷಿ ಸಿಕ್ಕಿದ (ಸ್ವಾಮಿಸ್ವೇ. ೦೬) ; ನಮ್ಮ ದಿನಗಳು ಕಳೆದ ಮೇಲೆ ಲಕ್ಷ್ಮಿಯ ಸಂತಾನ ತನ್ನದೆಂದು ಸಿಂಹಾಸನಕ್ಕೆ ಹೊಡೆದಾಡಿದರೆ ? ದೇಶದಲ್ಲಿ ಕಕ್ಷಿ ಪ್ರತಿಕಕ್ಷಿಗಳು ಎದ್ದರೆ ? (ಕಾಂಶಲಾ. ೨೯೦). [ಪ್ರತಿ+ಕಕ್ಷಿ]

ಪ್ರತಿಕರ್ಮ (ನಾ). ೧. ಪ್ರತ್ಯುಪಕಾರ ಮಾಡುವುದು ; ಪ್ರತಿಫಲ ನೀಡುವುದು. ೨. ಸೇಡು ತೀರಿಸಿಕೊಳ್ಳುವಿಕೆ ; ಪ್ರತೀಕಾರ. ೩. ವಿರೋಧ; ಪ್ರತಿಭಟನೆ. ೪. ಅಲಂಕಾರ ಮಾಡಿಕೊಳ್ಳುವುದು; ಸಿಂಗರಿಸಿಕೊಳ್ಳುವುದು : "ಆಕಲ್ಪಃ, ಮಂಡನಂ, ವೇಷಃ, ಪ್ರತಿಕರ್ಮ, ಪ್ರಸಾಧನಂ—ಈ ೫ ಶೃಂಗಾರಂಗೆಯ್ವುದು" (ಪಣಾಯು. ೯೯-೩೯೩). [ಸಂ. ಪ್ರತಿಕರ್ಮನ್]

ಪ್ರತಿಕಾಯ (ನಾ). (ಒಂದು ವಸ್ತು ಅಥವಾ ವ್ಯಕ್ತಿಯನ್ನು ಹೋಲುವ ಲೋಹ, ಶಿಲೆ ಮುಂತಾದುವುಗಳ) ಪ್ರತಿಮೆ ; ಪ್ರತಿರೂಪ : "ಪ್ರತಿಬಿಂಬಂ, ಪ್ರತಿರೂಪಂ . . . ಪ್ರತಿಕಾಯಂ . . . ಪ್ರತಿಚ್ಛಾಯಂ—ಈ ೯ ಪ್ರತಿಬಿಂಬದ ಪೆಸರ್" (ಪಣಾಯು. ೨೦-೦೩೦). [ಸಂ.]

ಪ್ರತಿಕಾರ$_1$ (ನಾ). ಗ್ರಂಥದ ಪ್ರತಿಗಳನ್ನು ಬರೆದು ಸಿದ್ಧಪಡಿಸುವವನು : ಪ್ರತಿಕಾರರ ಮತ್ತು ತಿದ್ದುಗಾರರ ಹೆಸರುಗಳೂ ಇಂದಿಗೂ ಇರುವುದನ್ನು ನೋಡಬಹುದು (ಕನ್ನಸಂ. ೨೦) ; ಓಲೆಗರಿಯ ಪ್ರತಿಕಾರರಿಗೆ ಬರಹಕಾರರೆಂದು ಕರೆಯುತ್ತಿದ್ದರು (ದ್ರಾವಿಡ. ೩೯). [ಪ್ರತಿ+—ಕಾರ$_1$ (<—ಕಾಱ)]

ಪ್ರತಿಕಾರ$_2$ (ನಾ). ೧. ಮಾಡಿದಂದಕ್ಕೆ ಪ್ರತಿಯಾಗಿ ಮಾಡುವುದು ; ಪ್ರತಿಕ್ರಿಯೆ : ಹತದೇಹ ಹತಭುಜದ್ವಯ . . . ಹತಹೃತ್ಪ್ರತಿಕಾರಮೆಂಬುದುಂಟೇ ಗತಿಯಂ ಸಾಧಿಸುವುದಲ್ತೆ ತಾಂ ಪ್ರತಿಕಾರಂ (ಗದಾಯು. ೯-೨೬) ; ಪ್ರತಿಕಾರೋಪಾಯಮೇನಿಲ್ಲಿಗೆ ನುಡಿಯಿಂ (ಜಗಂ. ೯-೩೨). ೨. ಪರಿಹಾರ : ನಿವಾರಣೆ. ೩. [ವೈದ್ಯಶಾ] ರೋಗಪರಿಹಾರಕ್ಕೆ ಮಾಡುವ ಚಿಕಿತ್ಸೆ : 'ಪ್ರತೀಕಾರ' ಪರಾ. [ಸಂ.]

ಪ್ರತಿಕೂಲ (ಗು). ೧. ದಡಕ್ಕೆ ಎದುರಾದ. ೨. ಅನುಕೂಲವಲ್ಲದ ; ವ್ಯತಿರಿಕ್ತವಾದ ; ವಿರುದ್ಧವಾದ : ಪ್ರತಿಕೂಲಾನಿಲನಿಂ ಪತಾಕೆ ಮಗುಟೆಂಬಂತಾಗೆ ಕೈಸನ್ನೆಯಿಂ . . . ಸಾರ್ತಂದುದು . . . ಪುಷ್ಪಕವಿಮಾನಂ

ದಂಡಕಾರಣ್ಯಮಂ (ಶಂಕಾಪು. ೯-೭೩) ; ಪ್ರತಿಕೂಲಕರ್ಮಮೇಘಂ ಪ್ರತಿಸಮಯಾನಂತಗುಣವಿಶೋಧಿಮಹಾಮಾರುತನಿಂ ಕಿಡೆ (ಶಾರ್ಶ್ವಪು. ೩-೩೯) ; ಭಾಳಲಿಪಿಗಳ ಲೆಕ್ಕವನು ಪ್ರತಿಕೂಲವಿಧಿ ಪಲ್ಲಟಿಸಿ ಬರೆದಡೆ ಹೇಳಿ ಫಲವೇನು (ಕುಪ್ಯಾಗ. ೩-೨೬). (ನಾ). ೩. ಎದುರು ದಡ ; ಆಚೆಯ ದಡ. ೪. ಅನುಕೂಲವಲ್ಲದುದು ; ವ್ಯತಿರಿಕ್ತವಾದುದು ; ವಿರುದ್ಧವಾದುದು : "ಪ್ರತಿಕೂಲಂ, ಪ್ರತಿಲೋಮಂ, ಪ್ರತೀಪಂ, ಪ್ರಸವ್ಯಂ—ಈ ೪ ಪ್ರತಿಕೂಲಂ" (ಹಲಾಯು. ೦೨೨-೩೬) ; ಇಲ್ಲಿ ಕೊಟ್ಟು ಸಂಗತಿಗಳು ಇತಿಹಾಸಕ್ಕೆ ಪ್ರತಿಕೂಲವಿಲ್ಲ (ಕರ್ಪಾಳ. ೬೦). ೩, ೪ : ನಿಟ್ಟಿಸೆ ಕುಮುದ ವುಂಟಾಗಿಯುಂ ಕುಮುದವಿಲ್ಲಲ್ಲಿ ಪ್ರತಿಕೂಲವುಂಟಾಗಿಯುಂ ಹೆಸರಿಡಲು ಪ್ರತಿಕೂಲವಿಲ್ಲಲ್ಲಿ (ಹಪಕಾ. ೩-೪೨). [ಸಂ.]

ಪ್ರತಿಕೂಲತೆ (ನಾ). ವ್ಯತಿರಿಕ್ತವಾಗಿರುವಿಕೆ ; ವಿರುದ್ಧವಾಗಿರುವಿಕೆ: ಅವಳ ಪ್ರತಿಕೂಲತೆಯನು ಅಂತರಿಸದೆಲ್ಲಮಂ ಪೇಳ್ದೊಡೆ (ಕೈಟಿಕಾ. ೦೦-೨೩). [ಸಂ. ಪ್ರತಿಕೂಲತಾ]

ಪ್ರತಿಕೂಲದೈವ (ನಾ). ೧. ವಿರುದ್ಧವಾದ ವಿಧಿ ; ದುರದೃಷ್ಟ : ಆಕೆಯ ಪ್ರತಿಕೂಲದೈವಶಮನಾರ್ಥವಾಗಿ ಸೋಮತೀರ್ಥಕ್ಕೆ ಈಗ ತಾನೆ ಹೋಗಿರುವರು (ಶಾಕುಂತ. ೬-೦೦). ೨. ದುರದೃಷ್ಟಶಾಲಿ ; ದುರ್ದೈವಿ : ಪ್ರತಿಕೂಲದೈವನೈ ನೀಂ ಪ್ರತಿನೃಪರನುಕೂಲದೈವರ್ (ಗದಾಯು. ೩-೪೩); ಪ್ರತಿಕೂಲದೈವರಿಗಾರು ಸಹಾಯಕರು ತಂದೆಯೆ ತಾಯಿಯೆ ಮಗನೆ (ಇಂಪಾಶ. ೦೬೩-೩). [ಸಂ.]

ಪ್ರತಿಕೂಲವರ್ಣ (ನಾ). [ಕಾವ್ಯಮೀ] ಕಾವ್ಯಗಳಲ್ಲಿ ಬರಬಹುದಾದ ವಾಕ್ಯದೋಷಗಳಲ್ಲಿ ಒಂದು ; ರಸೋಚಿತವಲ್ಲದ ಅಕ್ಷರಗಳಿಂದ ಕೂಡಿರುವುದು ; ಶೃಂಗಾರ, ಕರುಣ, ಶಾಂತರಸಗಳನ್ನು ಪ್ರತಿಪಾದಿಸುವಾಗ ಮೃದುವಾದ ವರ್ಣಗಳೂ ರೌದ್ರ, ವೀರ, ಬೀಭತ್ಸರಸಗಳನ್ನು ಪ್ರತಿಪಾದಿಸುವಾಗ ಕಠೋರವಾದ ಅಕ್ಷರಗಳೂ ದೀರ್ಘಸಮಾಸವೂ ಇರಬೇಕೆಂಬ ನಿಯಮವಿದೆ. ಇದಕ್ಕೆ ವಿರುದ್ಧವಾಗಿರುವ ವರ್ಣಗಳಿಂದ ಕೂಡಿದ ವಾಕ್ಯವು ಪ್ರತಿಕೂಲವರ್ಣದೋಷವುಳ್ಳುದಾಗುವುದು : ಪ್ರತಿಕೂಲವರ್ಣ—ಪ್ರಸಕ್ತವಾದ ರಸಕ್ಕೆ ಅನುಗುಣವಲ್ಲದ ಅಕ್ಷರಗಳಿರುವದು (ಕೈಟಿಕಾ. ೨೨೬). [ಸಂ.]

ಪ್ರತಿಕೂಲೋಕ್ತಿ (ನಾ). ಅನುಕೂಲವಲ್ಲದ ನುಡಿ ; ವಿರುದ್ಧವಾದ ಮಾತು,—ವಚನ : ಪ್ರತಿಕೂಲೋಕ್ತಿಗಳೆನ್ನ ಮಾತುಗಳಿವಜ್ಞರ್ಗೆಂ ವಿವೇಕಾನ್ವಿತರ್ಗತಿಪಥ್ಯಂಗಳೆನಿಕ್ಕುಂ (ಶಾರ್ಶ್ವಪು. ೨-೬೪). [ಸಂ.]

ಪ್ರತಿಕೃತ (ಗು). ೧. ಪ್ರತಿಯಾಗಿ ಮಾಡಿದ ; ಪ್ರತಿಫಲ ನೀಡಿದ. ೨. ಪ್ರತೀಕಾರ ಮಾಡಿದ ; ಸೇಡು ತೀರಿಸಿದ. ೩. ಪರಿಹರಿಸಿದ ; ನಿವಾರಿಸಿದ. ೪. [ವೈದ್ಯಶಾ] (ರೋಗ ಮುಂತಾದುವುಗಳಲ್ಲಿ) ಚಿಕಿತ್ಸೆ ಮಾಡಿದ. (ನಾ). ೫. ಅಡ್ಡಿ ; ಅಡಚಣೆ ; ವಿರೋಧ. ೬. ಪ್ರತಿಬಿಂಬ ; ಪ್ರತಿರೂಪ : "ಪ್ರತಿಬಿಂಬಂ, ಪ್ರತಿರೂಪಂ, ಪ್ರತಿಮಾನಂ, ಪ್ರತಿಕೃತಂ . . . ಪ್ರಸಿಬ್ಬಾಯಂ—ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦-೦೩೦). [ಸಂ.]

ಪ್ರತಿಕೃತಿ (ನಾ). ೧. ಪ್ರತಿಮೆ ; ವಿಗ್ರಹ : ಅಂತು ತನ್ನ ಮಾಡಿಸಿದ ಚೈತ್ಯಾಲಯಂಗಳೊಳ್ ಆದಿಭಟ್ಟಾರಕರಾದಿಯಾಗಿ ಭವಿಷ್ಯತ್ತೀರ್ಥಕರ ಪ್ರತಿಕೃತಿಗಳಂ ಪಂಚರತ್ನಮಯಂಗಳಂ ಮಾಡಿಸಿ (ಅದಿಪು. ೦೬-೦ ಪ) ; ಅತಿಶಯ ಪಂಚರುಚಿಪ್ರತಿಕೃತಿಹರಿತಂ ತಾಮ್ರಕೃಷ್ಣಪೀತಸಿತಶ್ರೀಧೃತಮಾಗಿ ಸೂಯಿಯಾಣದ ವಿತಾನಮಂ ಪೋಲ್ತುದು (ಶಾಂತಿಪು. ೦೦-೨೨). ೨. ಪ್ರತಿಬಿಂಬ ; ಪ್ರತಿಚಿತ್ರ : "ಆ ಪ್ರತಿಕೃತಿ ಪ್ರತಿಕಾಯಮಾ ಪ್ರತಿಪ್ರಾಣಮೆಂದೆನಲದುಂ ಪ್ರತಿಯಪ್ಪ ರೂಪೆನಿಕ್ಕುಂ" (ಮುಂಗಾ. ೬-೨೮) ; ಮರ್ಗಾದ ನೀಂ ಪ್ರತಿಕೃತಿಯೆ ವಲಂ ಪೊನ್ನೊಡವೆ ನನ್ನ ಸೀತಾಸ್ಥಿತಿಗೆ ! (ಕ್ರೀಶಾಪು. ೨೯೩-೨೮೦) ; ಸುಭಾಷಿಣಿಯೂ ಅವಳ ಗಂಡ ರಮಣಬಾಬುವೂ ವಿಷವೃಕ್ಷದ ಕಮಲಮಣಿ ಶ್ರೀಶರ ಪ್ರತಿಕೃತಿಗಳು (ಬಂಕಿಮ. ೦೨೩). ೩. ಸದೃಶವಾದುದು ; ಸಮಾನವಾದುದು. ೪. ಒಂದು ಕೆಲಸದಿಂದ ಉಂಟಾಗುವ ಪರಿಣಾಮ,— ಪ್ರತಿಕ್ರಿಯೆ : ಸ್ಮೃತಿಶಕ್ತಿಯು ಸಾಲುಸಾಲಾಗಿ ನೆನಹುಗಳನ್ನೂ ಮಾನಸಿಕ ಪ್ರತಿಕೃತಿಗಳನ್ನೂ ತಂದೊದಗಿಸುತ್ತದೆ (ಪಪ್ಯಕಾ. ೦೨೦). ೫. ಪ್ರತಿಭಟನೆ ; ವಿರೋಧ. ೬. ಒಂದು ಕಾರ್ಯಕ್ಕೆ ಪ್ರತಿಯಾಗಿ ಮಾಡುವ ಕಾರ್ಯ ; ಮುಯ್ಯಿ : "ಪ್ರತಿಯಾತನಂ ಪ್ರತಿ ಪ್ರತಿಕೃತಿಯೆನಲ್ಕೆ ಮುಯಿ" (ಮುಂಗಾ. ೦೩೫-೩೬). [ಸಂ.]

ಪ್ರತಿಕೃತಿಸು (ಕ್ರಿ). ಪ್ರತಿಬಿಂಬಿಸು ; ಪ್ರತಿಫಲಿಸು : ಅದೊ ನದಿಯ ನೀರ್ ಮಿರುಗುತ್ತಿದೆ ಪಾದರಸದೊಲ್, ಪ್ರತಿಕೃತಿಸಿ ದಿವಾಕೀರ್ತಿಯಂ ! (ಕ್ರೀಶಾಪು. ೨೦೨-೨೨೦). [ಪ್ರತಿಕೃತಿ + —ಇಸ್ಯು]

ಪ್ರತಿಕೃಷ್ಟ (ನಾ). ೧. ಹಿಂದಕ್ಕೆ ಎಳೆದುದು ; ಹಿಮ್ಮೆಟ್ಟಿಸಿದುದು. ೨. ಕಡೆಗಣಿಸಿದುದು ; ತಿರಸ್ಕೃತವಾದುದು. ೩. ನೀಚ ; ಅಧಮ : "ನಿಕೃಷ್ಟಃ, ಪ್ರತಿಕೃಷ್ಟಃ . . . ಗರ್ಹ್ಯಃ ಅಣಕಃ, ೧೩ ಜಾತ್ಯಾಚಾರ ಗುಣಾದಿಗಳಿಂದ ಕಡಿಮೆಯಾದಂಥಾ ಅಧಮನ ಪೆಸರುಗಳು" (ಸಿದ್ಧಾಂತಿ. ೩೩೭). [ಸಂ.]

ಪ್ರತಿಕ್ರಮಣ : (ನಾ). ೧. ಮುಂದಕ್ಕೆ ಹೋಗುವುದು. ೨. [ಜೈನ] ಸಾಧುಗಳಿಗೆ ಹೇಳಿರುವ ಇಪ್ಪತ್ತೆಂಟು ಮೂಲಗುಣಗಳಲ್ಲಿ ಒಂದು ; ಪ್ರಮಾದದಿಂದ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಗುರುಗಳ ಸನ್ನಿಧಿಗೆ ಬಂದು ಪಶ್ಚಾತ್ತಾಪಪೂರ್ವಕವಾಗಿ ಒಪ್ಪಿಕೊಳ್ಳುವುದು : ಪರಮಾಳೋಚನದೊಳ್ ಪ್ರತಿಕ್ರಮಣದೊಳ್ . . . ಶುದ್ಧಿ ತಳ್ತಿರೆ ದೋಷಪ್ರತಿಕಾರಸಾರತಪಮಂ ತತ್ತಾಪಸಂ ತುಳ್ದಿದಂ (ಸುಳುಪು. ೪-೦೩). 'ಪಡಿಕಮಣ' ಪರಾ. ಶ ಬೌದ್ಧರಲ್ಲೂ ಈ ತಪ್ಪೊಪ್ಪಿಗೆಯ ಪ್ರಾಯಶ್ಚಿತ್ತವಿದೆ. [ಸಂ.]

ಪ್ರತಿಕ್ರಿಯೆ (ನಾ). ೧. ಒಂದು ಕ್ರಿಯೆಯಿಂದ ಉಂಟಾಗುವ (ಒಳ್ಳೆಯ ಅಥವಾ ಕೆಟ್ಟ) ಪರಿಣಾಮ : ಅವನ ಈ ಹೆದರಿಕೆಯು ಆ ಹತ್ತೆಂಟು ದಿನಗಳು ಮಾತ್ರ ಸ್ವಲ್ಪ ಪ್ರತಿಕ್ರಿಯೆಯನ್ನುಂಟು ಮಾಡಿದ್ದರೂ ಅದರಿಂದ ಶಾಶ್ವತವಾದ ಯಾವ ಉಪಯೋಗವೂ ಉಂಟಾಗಲಿಲ್ಲ (ಪಶೆಸ. ೦೦೭). ೨. ವಿರುದ್ಧವಾದ ಕಾರ್ಯ,— ಕೆಲಸ : ಓದುವುದನ್ನು ಮಾಡಲೇಕೂಡದೆಂದು ಡಾಕ್ಟರರು ವಿಧಿಸಿದ್ದರು. ಅದರ ಪ್ರತಿಕ್ರಿಯೆಯೆಂದು ಆಕೆ ಆ ಅವಧಿಯಲ್ಲಿ . . . ಒಂದು ನಾಟಕವನ್ನೂ ಬರೆದಿದ್ದಳು (ಪ್ರಬಂಧ. ೬೪); ಮೋನಪ್ಪನಾಯ್ಕರು ಅಂಗಡಿ ಬಿಟ್ಟು ಹೋದದ್ದೇ ಅವರೊಡನೆ ಆದ ಚರ್ಚೆಗೆ ಪ್ರತಿಕ್ರಿಯೆ ಸುರುವಾಗಿತ್ತು (ಮೂಕುದಾ. ೨೬೦). ೩. ಸೇಡು ತೀರಿಸಿಕೊಳ್ಳುವಿಕೆ; ಪ್ರತೀಕಾರ. ೪. ವಿರೋಧ; ಪ್ರತಿಭಟನೆ. ೫. [ವೈದ್ಯಶಾ] ರೋಗನಿವಾರಣೋಪಾಯ ; ಚಿಕಿತ್ಸೆ : "ಚಿಕಿತ್ಸಾ, ರುಕ್ಪ್ರತಿಕ್ರಿಯಾ—ರೋಗಕ್ಕೆ ಶಾಮಕವಾಗಿ ಔಷಧಾದಿ ಪ್ರತಿಕ್ರಿಯೆಗಳನ್ನು ಮಾಡುವಿಕೆ" (ಸಿದ್ಧಾಂತಿ. ೦೬೨); ರಾಜಕೀಯದ ಸಹಜವಿಷಕ್ಕೆ ಸತ್ಕಾವ್ಯದ ಸಹಜ ಅಮೃತವನ್ನು ಬಿಟ್ಟರೆ ಬೇರೆ ಪ್ರತಿಕ್ರಿಯೆ ಇಲ್ಲವೆಂದು ಹೇಳುತ್ತಾರೆ (ಸಾಹಿಕ. ೦೪). [ಸಂ. ಪ್ರತಿಕ್ರಿಯಾ]

ಪ್ರತಿಕ್ಷಣಂ (ಅ). ಪ್ರತಿಯೊಂದು ಕ್ಷಣದಲ್ಲೂ ; ಕ್ಷಣಕ್ಷಣದಲ್ಲೂ ; ಮತ್ತೆ ಮತ್ತೆ: "ಪ್ರತಿಕ್ಷಣಂ, ಅಭೀಕ್ಷಣಂ, ಭೂಯಃ, ಅಸಕೃತ್, ಮುಹುಃ—ಈ ೫ ಮಗುಟ್ ಮಗುಟ್" (ಹಲಾಯು. ೦೨೦-೩೯) ; ಪ್ರತಿಕ್ಷಣಂ ವಿಶರಾರುಗಳ್ ಚಿತ್ತಕ್ಷಣಂಗಳ್ ಪೂರ್ವಾಪೂರ್ವಚಿತ್ತವಿಶೇಷಪ್ರಭವಂಗಳ್ ಪ್ರಬಂಧದಿಂದಂ ಪ್ರವರ್ತಿಸುವುವು (ಶಾಂತಿಪು. ೬-೦೪೨ ಪ). [ಸಂ.]

ಪ್ರತಿಕ್ಷಿಪ್ತ (ಗು). ೧. ತಿರಸ್ಕಾರ ಹೊಂದಿದ ; ನಿರಾಕೃತವಾದ.

೨. ಆಕ್ಷೇಪಣೆಯನ್ನು ಹೊಂದಿದ; ನಿಂದಿತವಾದ. ೩. ವಿರೋಧಕ್ಕೆ ಒಳಗಾದ; ಪ್ರತಿಭಟನೆ ಹೊಂದಿದ. ೪. ಪರಿಹಾರವಾದ; ನಿವಾರಣೆಯಾದ. ೫. ಕಳುಹಿಸಿದ; ರವಾನಿಸಿದ. (ನ). ೬. ತಿರಸ್ಕರಿಸಿದುದು; ನಿರಾಕೃತವಾದುದು: "ಪ್ರ(ತ್ಯಾ)ಖ್ಯಾತಂ, ಪ್ರತಿಕ್ಷಿಪ್ತಂ, ಪ್ರತ್ಯಾದಿಷ್ಟ, ನಿರಾಕೃತಂ . . . ಪರಿಹೃತಂ — ಈ ೭ ಪರಿಹರಿಸಲ್ಪಟ್ಟುದು" (ಪಶಾಯು. ೦೦೬-೧೯). ೭. ಆಕ್ಷೇಪಣೆಯನ್ನು ಹೊಂದಿದವನು; ನಿಂದಿತನಾದವನು: "ಅಧಿಕ್ಷಿಪ್ತಃ, ಪ್ರತಿಕ್ಷಿಪ್ತಃ — ೨ ಆಕ್ಷೇಪಿಸಲ್ಪಟ್ಟವನ ಪೆಸರುಗಳು" (ನಿಘಂಟು. ೩೩೯). ೮. (ಇನ್ನೊಬ್ಬರು) ಕಳುಹಿಸಿದವನು; ಪ್ರೇಷಿತ. ೯. ನಿರಾಕರಣೆ: "ನಿರಾಕೃತಿ ಪ್ರತಿಕ್ಷಿಪ್ತವೆನಲು" (ಮಂಗರಾ. ೦೨೯-೯). [ಸಂ.]

ಪ್ರತಿಕ್ಷೇತ್ರ (ನಾ). ಒಂದು ಭೂಮಿಯನ್ನು ಕೊಟ್ಟು ಅದರ ಬದಲಾಗಿ ತೆಗದುಕೊಂಡ ಭೂಮಿ, ಹೊಲ, ಗದ್ದೆ ಮೊದಲಾದುವು; ವಿನಿಮಯವಾಗಿ ತೆಗೆದುಕೊಂಡ ಭೂಮಿ: ಆಚಾರ್ಯ್ಯ ಅಪ್ಪಯ್ಯನು ಮಗ ರಂಗಯ್ಯನು ಅಳಿಯ ಕಸವದೇವನು ತಂಮ ಇತಿಕೆಱ್ಯಂ ಕೊಟು ಹಿರಿಯಕೆಱ್ಯ ಕೆಳಗಣ ಕಡೆಯ ಗದ್ದೆ ನಾಗುಸಲಗೆಯಂ ಪ್ರತಿಕ್ಷೇತ್ರವಂ ಕೊಂಡರು (ಎಳ. V, ಹಾಸಪ. ೦೫೦-೩೨ ; 1156 ?). [ಸಂ.]

ಪ್ರತಿಗಾಣು (ಕ್ರಿ). ಬೇರೊಬ್ಬರನ್ನು ಕಾಣು; ಮತ್ತೊಬ್ಬರನ್ನು ನೋಡು: ಯತಿಗಳೊಳು ನಿನ್ನಂಥವರುಗಳ ಪ್ರತಿಗಾಣೆನು ಈ ಕ್ಷಿತಿಯೊಳಗೆ ಯತಿರಾಯ (ಜಗದಾ. ೧೫). [ಪ್ರತಿ + ಕಾಣು (< ಕಾಣ್)]

ಪ್ರತಿಗಾಮಿ (ಗು). ೧. ಎದುರಾಗಿ ಹೋಗುವ; ವಿರುದ್ಧವಾಗಿ ಹೋಗುವ. ೨. (ಸಂಘ, ಸರ್ಕಾರ, ರಾಜಕೀಯಪಕ್ಷ ಮೊದಲಾದುವುಗಳಲ್ಲಿ) ವಿರುದ್ಧಾಭಿಪ್ರಾಯವನ್ನು ಹೊಂದಿರುವ; ಆಡಳಿತ ಕ್ರಮದ ರೀತಿನೀತಿಗಳನ್ನು ವಿರೋಧಿಸುವ: ೧೯೧೧ರಲ್ಲಿ ವಿದೇಶೀಯ ದ್ಯಾಂಕರ ಜನ ಪ್ರತಿಗಾಮಿ ನಾಯಕನಾದ ಯುವಾನ್-ಶಿ-ಕೈ ಎಂಬವನಿಗೆ ೨೫೦ ಲಕ್ಷ ಪವನಿನ ಸಾಲ ಕೊಟ್ಟಿತು (ಐಕಿಸಂ. ೦೯). (ನಾ). ೩. ದೇಶದ ಪ್ರಗತಿಗೆ ವಿರುದ್ಧವಾದುದು; ರಾಷ್ಟ್ರದ ಕಲ್ಯಾಣಕ್ಕೆ ವ್ಯತಿರಿಕ್ತವಾದುದು: ವಿಜ್ಞಾನ ಯಾವಾಗಲೂ ಪ್ರಗತಿಮುಖವಾದುದು. ಭಂಡವಾಳಶಾಹಿ ಪ್ರತಿಗಾಮಿಯಾದುದು (ಕಾಂಯಾ. ೩೯); ತನ್ನ ಹಿತವನ್ನೇ ಸ್ವಾರ್ಥವನ್ನೇ ಅದು ಮೊದಲು ಗಮನಿಸತೊಡಗುತ್ತದೆ. ಅಂದಿನಿಂದ ಅದೇ ವರ್ಗವು ಪ್ರಗತಿವಿರೋಧಿಯಾಗುತ್ತದೆ, ಪ್ರತಿಗಾಮಿಯಾಗುತ್ತದೆ (ಮಾಪಾದ. ೯೯). ೪. ವಿರುದ್ಧಪಕ್ಷಕ್ಕೆ ಸೇರಿದವನು; ಪ್ರತಿಪಕ್ಷಕ್ಕೆ ಸೇರಿದವನು: ಕೈಲಾಸದಲ್ಲಿ ಕಮ್ಯೂನಿಷ್ಟರನ್ನು ಕಂಡು ಪುರೋಗಾಮಿಗಳಂತೆಯೇ ಪ್ರತಿಗಾಮಿಗಳೂ ಹೌಹಾರಬಹುದು (ಕೈಲಾಳ- ೦ ಮುಸ್ಸುಡಿ). [ಸಂ. ಪ್ರತಿಗಾಮಿನ್]

ಪ್ರತಿಗಾಮಿಪಕ್ಷ (ನಾ). ಒಂದು ಪಕ್ಷವು ಪ್ರಗತಿಪರವೆಂದು ಭಾವಿಸಿರುವ ತತ್ತ್ವಕ್ಕೆ ವಿರುದ್ಧವಾದ ಪಕ್ಷ; ವಿರೋಧ ಪಕ್ಷ: ಸಂಪ್ರದಾಯಬದ್ಧವಾದ ಪ್ರತಿಗಾಮಿಪಕ್ಷದ ಪತ್ರಿಕೆಯೊಂದರಲ್ಲಿ ಕಳೆದ ಹನ್ನೆರಡು ತಿಂಗಳಿಂದ ಪ್ರಕಟವಾಗುತ್ತಿದ್ದ ಅಭಿಪ್ರಾಯವನ್ನವನು ಓದಿದ್ದನು (ಪುಸರು. ೨೨೯). [< ಸಂ. ಪ್ರತಿಗಾಮಿಪಕ್ಷ]

ಪ್ರತಿಚೈ (ಕ್ರಿ). ಪ್ರತಿಕ್ರಿಯೆಯನ್ನು ತೋರಿಸು. — ವ್ಯಕ್ತಪಡಿಸು: ಮೇಳೈಸಿ ನಾನಾರವಕ್ಕೆ ಪ್ರತಿಗೈವವಂ ಚರ್ಮಣಂ ವಾಗ್ಮಿಯಕ್ಕುಂ (ಮಂಗರಾ. ೦೦೬-೦೬). [ಪ್ರತಿ + ಗೈ (< ಕೆಯ್ 1)]

ಪ್ರತಿಗ್ರಹ (ನಾ). ೧. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹಗಳೆಂಬ ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಒಂದು; ದಾನವನ್ನು ತೆಗೆದುಕೊಳ್ಳುವುದು. — ಸ್ವೀಕರಿಸುವುದು: ಅಂತು ಭವಿಷ್ಯದ್ವಿಜನ್ಮವರ್ಣಕ್ಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ . . . ನಿಱಿಸಿ (ಅಧಿಪು. ೯-೭೩ ಪ); ಎಮಗಂ ಪ್ರತಿಗ್ರಹ ಸಲ್ಲದು (ಪಶಾಯು. ೯-೬೬); ಕ್ಷತ್ರವೈಶ್ಯಾದಿಗಳು ಕೊಡುವರು ತತ್ಪ್ರತಿಗ್ರಹ ಯೋಗ್ಯವಲ (ಕುಪ್ಪಾಪಿ. ೭-೦೬). ೨. ಮತ್ತೊಬ್ಬರು ಕೊಟ್ಟುದನ್ನು ತೆಗೆದುಕೊಳ್ಳುವುದು. — ಸ್ವೀಕರಿಸುವುದು: ಪ್ರಾಚೀನ ಕಾಲದಲ್ಲಿ . . . ಪ್ರತಿಗ್ರಹಕ್ಕೇ ಪ್ರಾಶಸ್ತ್ಯವಿರಲಿಲ್ಲ (ಆರ್ಯರ. ೮೩). ೩. ದಾನ; ಕೊಡುಗೆ. ೪. ದಾನವನ್ನು ಸ್ವೀಕರಿಸುವವನು. ೫. (ಒಬ್ಬ ವ್ಯಕ್ತಿಯನ್ನು) ಸ್ನೇಹಪೂರ್ವಕವಾಗಿ ಅಥವಾ ಕನಿಕರದಿಂದ ಬರಮಾಡಿಕೊಳ್ಳುವುದು. ೬. ಸೈನ್ಯದ ಹಿಂಭಾಗ: "ಪಡೆಯ ಹಿಂದಣ ಮೆಯ್ಯಲ್ಲಿಯುಂ ಪ್ರತಿಗ್ರಹಮೆಂಬುದು" (ಪಶಾಯು. ೦೩೨-೬). ೭. ಉಗುಳುವ ಪಾತ್ರೆ; ಪೀಕದಾನಿ: 'ಪ್ರತಿಗ್ರಾಹ' ಪರಾ. [ಸಂ.]

ಪ್ರತಿಗ್ರಹಿಸು (ಕ್ರಿ). ೧. ದಾನವಾಗಿ ತೆಗೆದುಕೊಳ್ಳು: ಋತ್ವಿಜರೆಲ್ಲರ್ ಕೊಳಗ ಮತ್ತಮಿರ್ಬಳ್ಳ ರನ್ನಮಂ ಪೊನ್ನ ಹೇಱಂ ಚಿನ್ನಾಕಳಂ ಪ್ರತಿಗ್ರಹಿಸಿ ರಾಮನಂ ಪರಸಿ ಬೀಟ್ಕೊಂಡರ್ (ರಾಮಾಶ್ವ. ೦೬೬-೦೩). ೨. ಒಪ್ಪಿಕೊಳ್ಳು; ಅಂಗೀಕರಿಸು: ಆ ರಾಜ ಋಷಿವಾಕ್ಯವಂ ಕೇಳಿ ಹಾಗೆ ಆಗಲಿ ಎಂದು ಪ್ರತಿಗ್ರಹಿಸಿದನು (ಶಕುಮಾ. ೨೯೨-೬). ೩. ಬರಮಾಡಿಕೊಳ್ಳು; ಸ್ವೀಕರಿಸು: ಗರ್ಭಿಣಿಯಾದ ಈಕೆಯನ್ನು ಧರ್ಮಾಚರಣಾರ್ಥವಾಗಿ ಪ್ರತಿಗ್ರಹಿಸುವುದು (ಶಾಕುಂತ. ೬೬-೯). [ಸಂ. ಪ್ರತಿಗ್ರಹಣ + — ಇಸ್ಸು]

ಪ್ರತಿಗ್ರಾಹ (ನಾ). ಉಗುಳುವ ಪಾತ್ರೆ; ಪಡಿಗ; ಪೀಕದಾನಿ: "ಪ್ರತಿಗ್ರಾಹಃ, ಪತದ್ಗಹಃ — ೨ ಪಡಿಗದ ಪೆಸರು" (ನಿಘಂಟು. ೨೦೦). [ಸಂ.]

ಪ್ರತಿಗ್ರಾಹಕ (ನಾ). ಅಂಗೀಕರಿಸುವವನು: ಪ್ರಾಣಲಿಂಗಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತವಾಗಿ ನಡೆದ ಪರಿಯಿನ್ನೆಂತೊ (ಐಸಪ. ೭೯೬). [ಸಂ.]

ಪ್ರತಿಘ (ನಾ) ೧. ನಿರಾಕರಣೆ: ತಿರಸ್ಕಾರ. ೨. ಪ್ರತಿಭಟನೆ; ವಿರೋಧ. ೩. ಪರಸ್ಪರ ಹೊಡೆದಾಟ, — ಕದನ. ೪. ಸಿಟ್ಟು; ಕೋಪ; ಕ್ರೋಧ: "ಕೋಪ, ಕ್ರೋಧಃ, ಅಮರ್ಷಃ, ರೋಷಃ, ಪ್ರತಿಘಃ — ಈ ೫ ಮುನಿಸು" (ಪಶಾಯು. ೫೯-೨೦೬); ಆಸ್ಯದಿಂ ಪ್ರತಿಘದೊಳೊತ್ತಿ ಬೀಸುವುದದೊಂದು ಮದದ್ವಿರದಂ ಮಹಾಹಿಯಂ (ಜಗದಾ. ೦೬-೬). ೫. ಶತ್ರು; ವೈರಿ. [ಸಂ.]

ಪ್ರತಿಘಾತ (ನಾ). ೧. ನಿರಾಕರಣೆ; ತಿರಸ್ಕಾರ. ೨. ವಿರೋಧ; ಪ್ರತಿಭಟನೆ. ೩. ಹೊಡೆತಕ್ಕೆ ಪ್ರತಿಯಾಗಿ ಹೊಡೆಯುವುದು: "ಪ್ರತಿಘಾತೇ — ಮಗುಳ್ಚಿ ಹೊಡೆವಲ್ಲಿ" (ಕಾಶಕ್ಯ. ೦೩೦); ಪ್ರತಿಘಾತ ಪ್ರಕಟಾಸ್ತ್ರಶಸ್ತ್ರಚಯದಿಂ ದೈತೇಯಸಾಮಂತರದ್ಭುತಮಾಯಾಮಯ ಶಕ್ತಿಯಂ ಕೆಡಿಸಿ ಭೂಮಾನಕ್ಕೆ ಬಂದಾಹವಪ್ರತಿಮಲ್ಲಂ . . . ಕ್ರೋಧಾನಳಂಗಿತ್ತನಾಹುತಿಯಂ (ಅಸಂಪು. ೦೯-೦೦); ಪ್ರತಿಘಾತಾಯತಲೋಲ ಕಂಠಣ ಝಣಜಂಕಾರಚಂಚತ್ಕಳಾಹತಿ . . . ರಮ್ಯಮಾಯ್ತು (ಸೂಕ್ತಿಸು. ೦೯-೩೦). ೪. ಸಂಘರ್ಷ; ತಿಕ್ಕಾಟ: ಸಾವಿರಾರು ವರ್ಷಗಳಿಂದ ಭಾರತಕ್ಕೆ ನಾನಾ ಸಂಸ್ಕೃತಿಗಳು ಹರಿಯುತ್ತಿವೆ. ಕೆಲವು ತೀಕ್ಷ್ಣವಾದ ಪ್ರತಿಘಾತವನ್ನೂ ಉಂಟುಮಾಡಲು ಯತ್ನಿಸಿದವು (ಮಾಸ್ಕಾರ. ೦೨೨ ಪೀಠಿಕೆ). ೫. ಹೊಡೆತ; ಏಟು: ನಡುಗೆ ಧರಾತಲಂ ಕದಳಿಕಾಪರಿಘಪ್ರತಿಘಾತದಿಂ (ಪಂಠಾಮಾ. ೦೩-೭೫). ೬. ಹೊಡೆತದಿಂದ ತಪ್ಪಿಸಿಕೊಳ್ಳುವುದು. ೭. ಹಾಳುಮಾಡುವುದು; ನಾಶಪಡಿಸುವುದು. ೮. [ಗಣಿತ] ಒಂದು ಬಗೆಯ ಗಣನಾಪದ್ಧತಿ; ಲಘುಗಣಕ; ೯ ಲೆಕ್ಕಾಚಾರ ಮಾಡುವುದನ್ನು ಸುಲಭಗೊಳಿಸಲು ಗುಣಾಕಾರ ಭಾಗಾಕಾರಗಳಿಗೆ ಬದಲಾಗಿ ಸಂಕಲನ ವ್ಯವಕಲನವನ್ನೂ, ಸಂಖ್ಯಾಘಾತ ಮತ್ತು ಘಾತಮೂಲವನ್ನೂ ಕಂಡುಹಿಡಿ

ಯುವುದಕ್ಕೆ ಬದಲಾಗಿ ಗುಣಾಕಾರ ಭಾಗಾಕಾರಗಳನ್ನೂ ಉಪಯೋಗಿಸುವಂತೆ ಕೋಷ್ಟಕವನ್ನು ರಚಿಸಿರುವ ಗಣನಾಸೌಲಭ್ಯ ಪದ್ಧತಿ : ಎರಡು ಬಹುಮುಖ್ಯವಾದ ಹೊಸ ಭಾವನೆಗಳು ಮೂಡಿದುವು . . . ಎರಡನೆಯದು, ಅಂಕಗಣಿತ ಬೀಜಗಣಿತಗಳೆರಡಕ್ಕೂ ವಿಶೇಷ ಉಪಯೋಗವಾದ Logarithms ("ಪ್ರತಿಘಾತಗಳು") ಎಂಬ ಭಾವನೆ (ಗಣಿತ. ೦೦೩). [ಸಂ.]

ಪ್ರತಿಘಾತಕೋಷ್ಟಕ (ನಾ). [ಗಣಿತ] ಲಘುಗಣಕದ ಪಟ್ಟಿ : ಪ್ರತಿಘಾತಕೋಷ್ಟಕಗಳೂ (tables of logarithms), ಕೊಟ್ಟ ಪ್ರತಿಘಾತವುಳ್ಳ ಸಂಖ್ಯೆಯ ಕೋಷ್ಟಕಗಳೂ . . . ಇದ್ದರೆ, ಇವುಗಳ ಸಹಾಯದಿಂದ ಅಂಕಗಣಿತದ ಪರಿಕರ್ಮಗಳು ಎಷ್ಟು ಸುಲಭವಾಗುತ್ತವೆ ಎಂಬುದನ್ನು ಉದಾಹರಿಸೋಣ (ಗಣಿತ. ೦೦೩). [ಪ್ರತಿಘಾತ + ಕೋಷ್ಟಕ]

ಪ್ರತಿಘಾತನ (ನಾ). ಕೊಲ್ಲುವಿಕೆ ; ವಧೆ : "ಪ್ರಮಾಪಣಂ, ನಿಬರ್ಹಣಂ . . . ವಿಶಸನಂ, ಮಾರಣಂ, ಪ್ರತಿಘಾತನಂ . . . ವಧಃ—ಈ ೩೦ ಕೊಲ್ಲುವುದಕ್ಕೆ ಹೆಸರುಗಳು ; ಸಂಹಾರ ಮಾಡುವಿಕೆ" (ನಿಡ್ಡಾಂತಿ. ೨೬೨). [ಸಂ.]

ಪ್ರತಿಘೋಷ (ನಾ). ಮಾರ್ದನಿ ; ಪ್ರತಿಧ್ವನಿ : ಕುವರನ ಬಾಹಾಸ್ಫಾಲನರವಮುರ್ಬಿಸೆಯಗಿದು ಪಾಡಿ ಬಿಡದೊದಱುತ್ತಿರ್ದವೊಲಾದುದು ತದ್ಗಹ್ವರನಿಪಹಪ್ರಭವಾತಿಭೀಷಣಂ ಪ್ರತಿಘೋಷಂ (ಕಂಪ್ರಪು. ೩–೭೭). [ಸಂ.]

ಪ್ರತಿಚಿತ್ರ (ನಾ). ಮೂಲಚಿತ್ರದ ಪ್ರತಿಕೃತಿ : ಅವರು ರ್‍ಯಾಫೇಲ್, ಮೈಖೇಲ್‌ಏಂಜೆಲೊ . . . ಅವರ ಪ್ರತಿಬಿಂಬಗಳಾಗಿದ್ದರೆ ಜಗತ್ತು ಮೂಲಕೃತಿಗಳಿಗೆ ಗೌರವವೀಯುತ್ತಿತ್ತೇ ವಿನಾ ಪ್ರತಿಚಿತ್ರಗಳಿಗಲ್ಲ (ಭಾಕಪ್ರ. ೩೬೦). [ಸಂ.]

ಪ್ರತಿಚ್ಛಂದ (ನಾ). ೧. ಒಂದರಂತೆ ಮತ್ತೊಂದು ಇರುವುದು; ಪ್ರತಿಬಿಂಬ : "ಪ್ರತಿಬಿಂಬಂ, ಪ್ರತಿರೂಪಂ, ಪ್ರತಿಮಾನಂ, ಪ್ರತಿಕೃತಂ, ಪ್ರತಿಚ್ಛಂದಂ . . . ಪ್ರತಿಚ್ಛಾಯಂ—ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦–೦೩೦) ; ಶ್ರೀಮತಿಯೆಂಬರಸಿಯೊಳ್ ಕಳಾಭಿನೂತಚಂದ್ರ ಪ್ರತಿಚ್ಛಂದಂ ಚಂದ್ರನೆಂಬೊಂ ಮಗನಂ ಪಡೆದು ಸಂತಸದಿಂದಿರ್ಪಿನಂ (ಶಾಂತಿಪು. ೬–೬೦ ಪ). ೨. ವಿಗ್ರಹ; ಪ್ರತಿಮೆ. ೩. ಪ್ರತಿನಿಧಿ. [ಸಂ.]

ಪ್ರತಿಚ್ಛಂದತೆ (ನಾ). ಸಮಾನವಾಗಿರುವಿಕೆ; ಪ್ರತಿರೂಪವಾಗಿರುವಿಕೆ: ಮುನೀಂದ್ರಕಳಾಪಕ್ಕೆ ನಿಮಿರ್ಚಿದಂ ಪ್ರತಿಚ್ಛಂದತೆಯಂ (ಶಾಂತಿಪು. ೯–೦೦೪). [ಸಂ. ಪ್ರತಿಚ್ಛಂದತಾ]

ಪ್ರತಿಚ್ಛನ್ನ (ಗು). ೧. ಮುಚ್ಚಿದ; ಹೊದಿಸಿದ. ೨. ಮುಚ್ಚಿಟ್ಟ; ಅಡಗಿಸಿದ ; ಮರೆಮಾಡಿದ. ೩. ಆವರಿಸಿದ ; ಆಕ್ರಮಿಸಿದ. ೪. (ಉಡುಪನ್ನು) ಧರಿಸಿದ; ತೊಟ್ಟ. [ಸಂ.]

ಪ್ರತಿಚ್ಛಾಯ (ನಾ). ೧.—ಪ್ರತಿಚ್ಛಾಯೆ ೧ : "ಪ್ರತಿಬಿಂಬಂ, ಪ್ರತಿರೂಪಂ . . . ಪ್ರತಿಯಾತನಂ, ಪ್ರತಿಚ್ಛಾಯಂ — ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦–೦೩೦). ೨.—ಪ್ರತಿಚ್ಛಾಯೆ ೨: "ಪ್ರತಿಬಿಂಬಮಾ ಪ್ರತಿಚ್ಛಾಯಮಾ ಪ್ರತಿನಿಧಿ . . . ಪ್ರತಿಪ್ರಾಣಮೆಂದೆನಲದುಂ ಪ್ರತಿಯಪ್ಪ ರೂಪೆನಿಕ್ಕುಂ" (ಮಂಗಣ. ೯–೨೯). [ಸಂ. ಪ್ರತಿಚ್ಛಾಯಾ]

ಪ್ರತಿಚ್ಛಾಯೆ (ನಾ). ೧.—ಪ್ರತಿಬಿಂಬ ೧: ಮಂಗಳಮಯಂ ನೋಡಿದಂ ವಿಷದ ವಿರಳಮಂ ನೋಡಲದಱೊಳ್ ಪ್ರತಿಚ್ಛಾಯೆ ತೋಱುತ್ತಮಿರೆ (ಸಂಜಿಪ. ೦–೨೯). ೨. ಒಂದರಂತೆಯೇ ಒಂದು ಇರುವ ಆಕೃತಿ ; ಪ್ರತಿರೂಪ. ೩. ವಿಗ್ರಹ ; ಪ್ರತಿಮೆ : "ಪ್ರತಿಮಾನಂ . . . ಪ್ರತಿಚ್ಛಾಯಾ, ಪ್ರತಿಕೃತಿ, ಅರ್ಚಾ, ಪ್ರತಿನಿಧಿ—ರ ವಿಷ್ಣು ಮೊದಲಾದವರ ಆಕಾರಗಳಿಗೆ ಸಮನಾಗಿ ಶಿಲಾದಿಗಳಿಂದ ಮಾಡಿದ ಪ್ರತಿಮೆ ಹೆಸರು" (ನಿಡ್ಡಾಂತಿ. ೩೦೭). [ಸಂ. ಪ್ರತಿಚ್ಛಾಯಾ]

ಪ್ರತಿಜಾಗರ (ನಾ). ಎಚ್ಚರಿಕೆಯಿಂದ ಇರುವುದು ; ಗಮನವಿಟ್ಟಿರುವುದು : "ಅವೇಕ್ಷಾ, ಪ್ರತಿಜಾಗರಃ—ಈ ಎರಡು ಎಚ್ಚತ್ತಿರ್ಪುದು" (ಹಲಾಯು. ೦೨೯–೯೭). [ಸಂ.]

ಪ್ರತಿಜ್ಞಾಜಯ (ನಾ). ಶಪಥವನ್ನು ಈಡೇರಿಸಿಕೊಳ್ಳುವುದು,—ಸಾಧಿಸುವುದು : ನಯನಿಕ್ಷೇಪಪ್ರಮಾಣಂಗಳೊಳೆ ಪಡೆದನೈಕಾಂತಸಿದ್ಧಿ ಪ್ರತಿಜ್ಞಾಜಯಮಂ (ಕಂಪ್ರಪು. ೦–೪). [ಸಂ].

ಪ್ರತಿಜ್ಞಾತ (ನಾ). ೧. ಒಪ್ಪಿಕೊಂಡುದು ; ಅಂಗೀಕರಿಸಿದುದು. ೨. ವಾಗ್ದಾನ; ಭಾಷೆ. ೩. ಪ್ರತಿಜ್ಞೆ; ಶಪಥ. ೪. ಶಪಥ ಮಾಡಿದುದು ; ಪ್ರತಿಜ್ಞೆ ಮಾಡಿದುದು : "ಊರೀಕೃತಂ, ಉರರೀಕೃತಂ, ಅಂಗೀಕೃತಂ, ಆಶ್ರುತಂ, ಪ್ರತಿಜ್ಞಾತಂ . . . ಉಪಗತಂ—ಈ ೧೧ ಅಂಗೀಕರಿಸಲ್ಪಟ್ಟದ್ದು, ಒಪ್ಪಿಕೊಳ್ಳಲ್ಪಟ್ಟದ್ದು, ಪ್ರತಿಜ್ಞೆ ಮಾಡಿ ನುಡಿಯಲ್ಪಟ್ಟದ್ದು" (ನಿಡ್ಡಾಂತಿ. ೩೩೨). [ಸಂ.]

ಪ್ರತಿಜ್ಞಾನ (ನಾ). ೧. ಒಪ್ಪಿಕೊಳ್ಳುವುದು; ಒಪ್ಪಿಗೆ ; ಅಂಗೀಕಾರ: "ಸಂವಿತ್, ಆಗೂಃ, ಪ್ರತಿಜ್ಞಾನಂ . . . ಸಮಾಧಿಃ—೧೦ ಅಂಗೀಕಾರದ ಹೆಸರುಗಳು" (ನಿಡ್ಡಾಂತಿ. ೪೩). ೨. ಭರವಸೆ ; ವಾಗ್ದಾನ. ೩. ಪ್ರತಿಜ್ಞೆ; ಶಪಥ. [ಸಂ.]

ಪ್ರತಿಜ್ಞಾಪತ್ರಿಕೆ (ನಾ). [ರಾಜನೀ] ಚುನಾವಣೆಯ ಸಮಯದಲ್ಲಿ ರಾಜಕೀಯಪಕ್ಷಗಳು ತಾವು ಅಧಿಕಾರಕ್ಕೆ ಬಂದರೆ ಈಡೇರಿಸುವುದಾಗಿ ತಿಳಿಸುವ ಸೌಕರ್ಯಗಳ ಭರವಸೆಯ ಪಟ್ಟಿ : ಅನೇಕ ಮಂದಿ ಅಭ್ಯರ್ಥಿಗಳ ವಾಗ್ದತ್ತಗಳಲ್ಲಿ ಸಮಾನವಾಗಿರುವ ಅಂಶಗಳನ್ನು ಕಲೆಹಾಕಿದರೆ ಅದು ಒಂದು ನೂತನ ರಾಜಕೀಯಪಕ್ಷಕ್ಕೆ ಮೂಲಸೂತ್ರಸಂಗ್ರಹವಾಗುತ್ತದೆ. ಇಂಥ ಆದರ್ಶನಿರೂಪಣೆಯೇ (ಮ್ಯಾನಿಫೆಸ್ಟೊ) ಪಕ್ಷದ ಪ್ರತಿಜ್ಞಾಪತ್ರಿಕೆ (ರಾಜ್ಯಶಾ. ೭೬). [ಸಂ. ಪ್ರತಿಜ್ಞಾಪತ್ರಿಕಾ]

ಪ್ರತಿಜ್ಞಾಭಾರ (ನಾ). ಶಪಥದ ಹೊಣೆಗಾರಿಕೆಯನ್ನು ಹೊತ್ತವನು; ಪ್ರತಿಜ್ಞೆ ಮಾಡಿದವನು : ಕುರುರಾಜನಿರ್ವ್ಯಾಜನಿಬಿಡೋರುದ್ವಯ ಭಂಗಪ್ರತಿಜ್ಞಾಭಾರನುಂ . . . ಸಾಹಸಾಂಕನುಮೆನಿಸಿದ ಭೀಮಸೇನಂ (ಗದಾಯು. ೨–೦ ಪ). [ಸಂ.]

ಪ್ರತಿಜ್ಞಾರೂಢ (ನಾ). ಶಪಥವನ್ನು ಕೈಗೊಂಡವನು ; ಪ್ರತಿಜ್ಞೆ ಮಾಡಿದವನು : ಅಚಲಿತಪ್ರತಿಜ್ಞಾರೂಢನಾದ ಗಾಂಗೇಯನನೇಗೆಯ್ದು ಮೊಡಂಬಡಿಸಲಾಱದೆ (ಶಂಕಪಾ. ೦–೯೪ ಪ) ; ಭೀಮಸೇನನಂತು ಆರೂಢಕೋಪನುಂ ಪ್ರತಿಜ್ಞಾರೂಢನುಮಾಗಿ (ಗದಾಯು. ೨–೦ ಪ) ; ಅತಿಪ್ರತಿಜ್ಞಾರೂಢನುಂ ರಥಾರೂಢನುಮಾಗಿ . . . ವಂದಂ . . . ಸುವರ್ಣನಾಭಂ (ಕಂಪ್ರಪು. ೦೦–೯೦ ಪ). [ಸಂ.]

ಪ್ರತಿಜ್ಞಾವಚನ (ನಾ). ೧. ಶಪಥದ ಮಾತು. ೨. [ರಾಜನೀ] ರಾಷ್ಟ್ರಪತಿ, ಮುಖ್ಯಮಂತ್ರಿ ಮೊದಲಾದವರು ತಮ್ಮ ಹುದ್ದೆಯನ್ನು ವಹಿಸಿಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ನಿಯಮಪೂರ್ವಕವಾಗಿ ಮಾಡಬೇಕಾದ ಪ್ರತಿಜ್ಞೆ : ಪ್ರತಿಯೊಬ್ಬರೂ ರಾಷ್ಟ್ರಪತಿಯವರೂ . . . ತಮ್ಮ ಪದಗ್ರಹಣ ಮಾಡುವುದಕ್ಕೆ ಪೂರ್ವಭಾವಿಯಾಗಿ . . . ಕೆಳಗೆ ಕಂಡ ಪ್ರಪತ್ರದ ಮೇರೆಗೆ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕಾರ ಮಾಡತಕ್ಕುದು (ಶಾರಾಸ. ೩೦). [ಸಂ.]

ಪ್ರತಿಜ್ಞಾವಾಕ್ಯ (ನಾ.) [ತರ್ಕಶಾ] ಶಾಸ್ತ್ರಗಳಲ್ಲಿ ವಾದ ಮಾಡುವಾಗ ಸ್ವಸಿದ್ಧಾಂತವನ್ನು ಪ್ರತಿಪಾದಿಸುವ ವಾಕ್ಯ,—ಮಾತು : ಬಳಿಕ ಆಯನುಮಾನಪ್ರಮಾಣಕ್ಕೆ ಪ್ರತಿಜ್ಞೆ ಹೇತು ದೃಷ್ಟಾಂತಗಳೆಂಬ ಅಂಗತ್ರಯ ಮುಂಟದಱೊಳು ಪರ ಪ್ರತಿಪತ್ಯರ್ಥವಾಗಿ ಪ್ರಯೋಗಿಸುವಾಗ ಪರ್ವತವಗ್ನಿವುಳ್ಳದ್ದೆಂಬುವುದೇ ಪ್ರತಿಜ್ಞಾವಾಕ್ಯವು (ಬಿನೇಕ. ೦೮). [ಸಂ.]

ಪ್ರತಿಜ್ಞಾಸ್ಥಾಪನ (ನಾ). ಮಾಡಿದ ಶಪಥವನ್ನು ಈಡೇರಿಸುವಿಕೆ :

ಕೋಪ ಕುಡಿಯಿಡಲೀ ವೃಕೋದರನಾಪನಿತ ನುಡಿದನು ಪ್ರತಿಜ್ಞಾಸ್ಥಾಪನಕೆ ಬಳಿಕೇನ ಮಾಡುವುದೆಂದನಸುರಾರಿ (ಕುಣ್ಡಾಗ. ೯-೩೯). [ಸಂ.]

ಪ್ರತಿಜ್ಞೆ (ನಾ). ೧. ಒಪ್ಪಿಗೆ ; ಅಂಗೀಕಾರ ; ಸಮ್ಮತಿ. ೨. ಕ್ರಮಬದ್ಧವಾದ ಘೋಷಣೆ. ೩. (ವಿವಾಹ ಮುಂತಾದ ಸಂದರ್ಭಗಳಲ್ಲಿ) ಮಾಡುವ ವಾಗ್ದಾನ; ನಿಶ್ಚಿತಾರ್ಥ. ೪. ಶಪಥ; ಪೂಣ್ಕೆ: "ಆಗೂಃ, ಸಂಗರಃ, ಸಂಧಾ, ಪ್ರತಿಶ್ರವಃ, ಸುಶ್ರವಃ, ಪ್ರತಿಜ್ಞಾ—ಈ ೬ ಪ್ರತಿಜ್ಞೆ" (ಪಠಾಯು. ೦೦೮-೩೦) ; ಪೂಣ್ದ ಪ್ರತಿಜ್ಞೆಯಂ ನೆನೆವೆಯೊ ನೆನೆಯೆಯೊ (ಪಡ್ಡಾಣಾ. ೦೨೩-೬) ; ನೀನುಂ ನಿನ್ನ ಪ್ರತಿಜ್ಞೆಯಂ ನೆಱೆಪಿದೆಯಾನುಮೆನ್ನ ಪ್ರತಿಜ್ಞೆಯಂ ನೆಱಪುವೆಂ (ಪಂಪಭಾ. ೦೨-೦೩೬ ಪ). ೫. [ನ್ಯಾಯಶಾ] ಹಿಂದಿನ ಕಾಲದಲ್ಲಿ ನ್ಯಾಯಾಲಯಗಳಲ್ಲಿ ಫಿರ್ಯಾದಿಯು ನ್ಯಾಯಪಡೆಯಲು ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದ ದೂರು; ಫಿರ್ಯಾದು: ಪ್ರತಿಯೊಂದು ವ್ಯವಹಾರವೂ ನಾಲ್ಕು ಹಂತಗಳನ್ನು ಹೊಂದಬೇಕಾಗಿತ್ತು. ಅವು ಕ್ರಮವಾಗಿ ಪ್ರತಿಜ್ಞಾ (Complaint), ಉತ್ತರ (Written Statement), ಸಂಶಯಹೇತುಪರಾಮರ್ಶ (Weighing of evidence) ಮತ್ತು ನಿರ್ಣಯಪ್ರಮಾಣ (Final Conclusion) ಎಂದು ವಿಭಾಗಿಸಲ್ಪಟ್ಟಿದ್ದವು (ಭಾರದ. ೩೬). ೬. [ತರ್ಕಶಾ] ಅನುಮಾನಪ್ರಮಾಣದಲ್ಲಿ ಪ್ರಯೋಗಿಸುವ ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿರ್ಗಮನ ಎಂಬ ಪಂಚಾವಯವಗಳಲ್ಲಿ ಮೊದಲನೆಯದು ; ಸಾಧಿಸಬೇಕೆಂದಿರುವ ವಿಷಯವನ್ನು ತಿಳಿಸುವುದು; ಸಾಧ್ಯನಿರ್ದೇಶ: ನ್ಯಾಯವಾಕ್ಯಗಳಾದ ಪ್ರತಿಜ್ಞಾಹೇತೂದಾಹರಣೋಪನಯನಿಗಮನಗಳಲ್ಲಿ ಐದೂ ಅವಶ್ಯಕವಿಲ್ಲ (ಹಿಂದಸಾ. ೨೦೨) ; ಪರಾರ್ಥಾನುಮಾನವು ಪ್ರತಿಜ್ಞಾ . . . ನಿಗಮನ ಎಂಬ ಐದು ಅಂಗವುಳ್ಳದ್ದು (ಭಾತತ್ತ್ವ. ೨೬೩). [ಸಂ. ಪ್ರತಿಜ್ಞಾ]

ಪ್ರತಿಜ್ಞೆಗೆಯ್, ಪ್ರತಿಜ್ಞೆಗೈ (ಕ್ರಿ). ಶಪಥ ಮಾಡು ; ಪ್ರತಿಜ್ಞೆ ಮಾಡು: ಇರ್ವರುಮೋರೊರ್ವರಂ ಮೂದಲಿಸಿ ಪ್ರತಿಜ್ಞೆಗೆಯ್ದು (ಪಡ್ಡಾಣಾ. ೦೨೯-೦೨); ಗಂಗಾಸುತಂ ಪೃಥಾಸುತರಂ ಗೆಲ್ವೊಡೆ ತಪಕೆ ಪೋಪೆಂ . . . ಎಂದು ಕರ್ಣಂ ಪ್ರತಿಜ್ಞೆಗೆಯ್ದುದುಂ (ಪಂಪಭಾ. ೦೦-೨೨ ಪ). **ಪ್ರತಿಜ್ಞೆಗೈ** : ಹಯಮೇಧವಿಧಿಯಂ ತನಗೆ ಸೂಚಿಸೆ ಪ್ರತಿಜ್ಞೆಗೈದಂ ಭೀಮನದಕಶ್ವಮಂ ತಂದು ಕುಡುವೆನೆಂದು (ಸ್ವಪ್ನಾಶಾ. ೨-೩೩).

[ಪ್ರತಿಜ್ಞೆ + ಕೆಯ್$_1$]

ಪ್ರತಿಜ್ಞೆಗೈ 'ಪ್ರತಿಜ್ಞೆಗೆಯ್' ನೋ.

ಪ್ರತಿಜ್ಯೋತಿ (ನಾ). ಒಂದು ದೀಪದಿಂದ ಹತ್ತಿಸಿದ ಮತ್ತೊಂದು ದೀಪ : ದೀಪ ಒಂದಱಲ್ಲಿ ಉದೈಸಿ ಪ್ರತಿಜ್ಯೋತಿ ಪ್ರಮಾಣಿಸಿದಾಗವೇ ಪ್ರಾಣಲಿಂಗಿಯ ಪ್ರಾಣಲಿಂಗಸ್ಥಲ (ಪೋಳಿಪಾ. ೦೪೭-೩೬೦).

[ಸಂ. ಪ್ರತಿಜ್ಯೋತಿಸ್]

ಪ್ರತಿಟ್ಟೆ 'ಪದಿಟೆ' ನೋ.

ಪ್ರತಿಟ್ಟೆಗೆಯ್ 'ಪದಿಟೆಗೆಯ್' ನೋ.

ಪ್ರತಿಟ್ಟೆಗೆಯಿಸು 'ಪದಿಷ್ಟೆಗೆಯ್ಸು' ನೋ.

ಪ್ರತಿತುನಿ (ನಾ). ಒಂದು ಬಗೆಯ ವಾಯುರೋಗ : ಅಪಾನಪ್ರದೇಶದಿಂದ ಪಕ್ವಾಶಯಕ್ಕೆ ಮೇಲು ಮುಂತಾಗಿ ಹಾಯುವ ವೇದನೆಯನ್ನುಂಟುಮಾಡುವ ವಾಯು ಪ್ರತಿತುನಿ ಎನಿಸಿಕೊಂಬುದು (ಸ್ವೈದ್ಯಸಾ. I, ೩೨೩). 'ತುನಿ$_2$' ಪರಾ. [< ಸಂ. ಪ್ರತಿತೂಣಿ./ತೆಲು. ಪ್ರತಿತೂಣಿ]

ಪ್ರತಿದಿನ (ನಾ). ೧. ಪ್ರತಿನಿತ್ಯ ; ಪ್ರತಿದಿವಸ : ಆತ್ಮಪತಿಸೇವೆಯಂ ಪ್ರತಿದಿನದೊಳಲಸದೆ ನೆಗಳ್ಚಿದೊಡೆ ಸತಿಯರ್ಗೆ ಕೀರ್ತಿ ಸುಗತಿಗಳಪ್ಪುವಿಹಪರದೊಳು (ಸ್ವಪ್ನಾಶಾ. ೩-೬೨) ; ಪ್ರತಿದಿನದೊಳಮಿಾ ಪರಿಯೆಸಗುತಿರೆ ಯುಪಕ್ರಾಂತಮೇಕಮುಪಸಂಹೃತಿಯಾಗಿ ಪೂರ್ತಿಯಿಲ್ಲದನಿತಱಿಂ ಪೂರಿಸಲೆ ವೇಳ್ಕುಮಿನ್ನೆಂತಾನುಂ (ದಿಶ್ಯಸ. ೯-೨೬). [ಸಂ.]

ಪ್ರತಿದಿನಂ (ಅ). ಪ್ರತಿನಿತ್ಯದಲ್ಲೂ ; ನಿತ್ಯವೂ : ಪ್ರತಿದಿನಮಭ್ಯಾಸಚಮತ್ಕೃತಿಯಂ . . . ಮಾಡುತ್ತುಮಿರ್ಪನಾ ಕಂದರ್ಪಂ (ಕುಸುಪಾ. ೬-೬೩) ; ಪ್ರತಿದಿನಮಿಾ ತೆಱದಿಂ ಸನ್ನುತಮಹಿಮಂ . . . ಮೃಗಯಾವಿನೋದಮಂ ತಳೆದೆಸೆದಂ (ಪ್ರಸಂ. ೨೨-೪೦). [ಸಂ.]

ಪ್ರತಿದಿವಸ (ನಾ).—ಪ್ರತಿದಿನ : ಅವನು ಪ್ರತಿದಿವಸವೂ ಒಂದೊಂದು ಮೈಲಿ ದೂರವನ್ನು ನಡೆಯುತ್ತಾನೆ (ಕೂಡಿ). [ಸಂ.]

ಪ್ರತಿದಿವಸಂ (ಅ).—ಪ್ರತಿದಿನಂ : ಆ ಕೂಟಾಷ್ಟಕದೊಳ್ ಪ್ರತಿದಿವಸಂ ರಮಿಯಿಪ ದೇವತೆಗಳ್ ಸುಪ್ರಣಿಧಿ . . . ನುತಸುಸ್ಥಿತೆ ಸುಪ್ರಬುದ್ಧೆ ಚಿತ್ರಿಕೆಯೆಂಬಳ್ (ಶಾಂತಿಪು. ೯-೦೬೬). [ಸಂ.]

ಪ್ರತಿದೇಯ (ನಾ). ೧. ಹಿಂದಕ್ಕೆ ಕೊಡಬೇಕಾದುದು ; ಮರುಪಾವತಿ ಮಾಡಬೇಕಾದುದು. ೨. ಒತ್ತೆಯಿಟ್ಟ ವಸ್ತು ; ಗಿರವಿಯಿಟ್ಟ ಪದಾರ್ಥ. ೩. ಕೊಂಡ ಮೇಲೆ ಪುನಃ ಹಿಂತಿರುಗಿಸಿದ ವಸ್ತು.

[ಸಂ.]

ಪ್ರತಿದೋಱು (ಕ್ರಿ). ೧. (ಮಾಡಿದ ಉಪಕಾರ ಅಥವಾ ಅಪಕಾರಕ್ಕೆ) ಪ್ರತಿಯಾಗಿ ಮಾಡಿ ತೋರಿಸು : ದುರುಳನರನಂ ಕೊಲುವುದಿಂತೇನರಿದೆ ಮೂದಲಿಸಿದ ಬಳಿಕ್ಕೀ ಧರಣಿಯೊಳ್ ಪ್ರತಿದೋಱದಿದ್ದಡೆ ಪಥವಿದಲ್ಲಲ್ಲ (ಭಸಪು. ೪೯-೦೩). ೨. ಹೋಲಿಸು; ಪಡಿಯಿಡು : ರತಿಯೂರ್ವಶಿ ರಂಭೆ ಮೇನಕಿಯರ ನೆಱೆ ಪ್ರತಿದೋಱಲಿವಳ ಚಿಲ್ವಿಕೆಗೆ ಮತಿಗೆ ಮಾಂಗಲ್ಯಕೆ ಚದುರತೆಗೆಣೆಯಲ್ಲ (ಕಂಪಪಿ. ೯-೦೭). [ಪ್ರತಿ + ತೋಱು]

ಪ್ರತಿದ್ವಂದ್ವಿ (ನಾ). ಹಗೆ ; ವಿರೋಧಿ; ಶತ್ರು : ಇಂತಹ ಪ್ರಬಲಪ್ರತಿದ್ವಂದ್ವಿಯನ್ನು ಜಯಿಸಿದರಲ್ಲವೇ ನನ್ನ ಹೆಸರು ಉಳಿಯುವುದು (ರಾವಿಜ. ೩೨). [ಸಂ. ಪ್ರತಿದ್ವಂದ್ವಿನ್]

ಪ್ರತಿಧ್ವನಿ (ನಾ). ಶಬ್ದ ತರಂಗಗಳ ಪ್ರತಿಫಲನದಿಂದ ಉಂಟಾಗುವ ಮರುದನಿ.—ಪಡಿನುಡಿ.—ಹೊಳಲು : ನೃಪನೀತಿಶಾಸ್ತ್ರಮಂ ನೀನ ಪೂರ್ವಮಂ ನುಡಿಯೆ ನುಡಿಯೆ ಮತ್ತದನನುವರ್ಣಿಪನ ನುಡಿಗಳ್ ಪ್ರತಿಧ್ವನಿಯ ಪೋಲ್ವೆಗಳ್ ನಿನ್ನ ನುಡಿಗೆ ಸಮನಾದಪುವೇ (ಶಾಂತಿಪು. ೨-೩೬); ನಿಧಾನವಾಗಿ ಕಾಡಿನಲ್ಲಿ ಧ್ವನಿಯಾಗುತ್ತಾ ಮತ್ತೆ ಪ್ರತಿಧ್ವನಿಯಾಗುತ್ತಾ ದೂರದೂರದಲ್ಲಿ ಆ ಧ್ವನಿ ಸುರುಳಿಸುರುಳಿಯಾಗಿ ಕೇಳಿಸಿತು (ಮುರಿಪಾ. ೦೦೮); ಪ್ರತಿಫಲಿತವಾದ ಶಬ್ದವು ಮೂಲದಿಂದ ಬಂದ ಶಬ್ದದಿಂದ ಪ್ರತ್ಯೇಕವಾಗಿ ಕೇಳಿದರೆ ಅದಕ್ಕೆ ಪ್ರತಿಧ್ವನಿ (Echo) ಯೆಂದು ಹೆಸರು (ಭೌತವಿ. ೦೪೬). [ಸಂ.]

ಪ್ರತಿಧ್ವನಿತ (ಗು). ೧. ಮಾರ್ದನಿಗೊಂಡ. ೨. ಮಾರ್ದನಿಯಂತಿರುವ: ಪಾಶ್ಚಾತ್ಯರ ಮಿಕ್ಕ ಪ್ರತಿಧ್ವನಿತ ಅಭಿಪ್ರಾಯಗಳಂತೆ ಈಅಭಿಪ್ರಾಯವೂ ತಪ್ಪಾದುದು (ಭಾರದ. ೫೭೦). [ಸಂ.]

ಪ್ರತಿಧ್ವನಿಸು (ಕ್ರಿ). ೧. ಪ್ರತಿಧ್ವನಿಯನ್ನುಂಟುಮಾಡು ; ಮಾರ್ದನಿಯನ್ನು ಕೊಡು; ಹೊಳಲುಕೊಡು: ಕಾಲೇಜಿನ ಕುರಿತಾದ ಮಾತುಕತೆ ಇಡೀ ಮನೆಯಲ್ಲಿ ಪ್ರತಿಧ್ವನಿಸಿತೋ ಎಂಬಂತೆ ಶ್ರೀಧರನಿಗೆ ವಸಂತರಾಯರಿಂದ ಕರೆ ಬಂತು (ಭಾತತ್ತ್ವ. ೯೩); ಕೇರಿಯ ಗೋಡೆಗೋಡೆಯಲ್ಲೂ ಆ ಮನೆಯ ಬಗ್ಗೆ ಪಿಸುಮಾತಿನ ಗುಲ್ಲು ಪ್ರತಿಧ್ವನಿಸುತ್ತಿದೆ (ಪಶ್ಚಸ. ೦೩೯). ೨. ಮೂಡು ; ಉಂಟಾಗು : ಮಕ್ಕಳ ಸಂತೋಷ ತಾಯಿಯ ಎದೆಯಲ್ಲೂ ಅಸ್ಪಷ್ಟವಾಗಿ ಪ್ರತಿಧ್ವನಿಸದಿರಲಿಲ್ಲ (ರಂಗಪ. ೦೩೩). ೩. ಇನ್ನೊಬ್ಬರು ಹೇಳಿದುದನ್ನು ಮತ್ತೊಮ್ಮೆ ಹೇಳು ; ಇನ್ನೊಬ್ಬರ ಮಾತನ್ನು ಪುನರುಚ್ಚರಿಸು : 'ಗ್ರೀನ'ರು ಪುನರ್ಜನ್ಮವನ್ನು ಕುರಿತು ಬೈಬಲ್ಲಿನ ಒಂದು ಮಾತನ್ನು ಓದಲು . . . ಜನಕ್ಕೆ ಹೇಳಿದರು. ಈ ಸಂಗತಿ ಭಗವದ್ಗೀತೆಯ ಕೆಳಗಿನ ಮಾತನ್ನು ಪ್ರತಿಧ್ವನಿಸುತ್ತದೆ (ರರ್ಪುಸಾ. ೦೪೭). [ಪ್ರತಿಧ್ವನಿ + — ಇಸು$_3$]

ಪ್ರತಿಧ್ವಾನ (ನಾ). = ಪ್ರತಿಧ್ವನಿ : ಯುವತಿಯರೋರೊರ್ವರ ತಲೆನವಿರಂ ತಲೆನವಿರೊಳಡಸಿ ಕಟ್ಟುತ್ತಂ ಮೋದುವುದುಂ ದ್ವಿಗುಣಿಸಿದುದು ಹಾರವಂ ಪ್ರತಿಧ್ವಾನದಿಂ ಜಿನೇಂದ್ರಾಲಯದೊಳ್ (ಶಂರಾಮಾ. ೦೯-೦೦೦). [ಸಂ.]

ಪ್ರತಿನಾದ (ನಾ). = ಪ್ರತಿಧ್ವನಿ : ಭೂಚರಖೇಚರವಂದನಾಸುಂದರರವ ಪ್ರತಿನಾದಮುಂ. . . ಕರಮೊಪ್ಪೆ (ಶಾಂತಿಪು. ೦೨-೦೯ ಪ). [ಸಂ.]

ಪ್ರತಿನಾದಿತ (ನಾ). ಪ್ರತಿಧ್ವನಿಯುಳ್ಳದು ; ಮಾರ್ದನಿಗೊಂಡಿರುವುದು : ದುಮುಕುತಿದೆ ಆ ತಪೋವನದ ನೇಮಿಯೊಳೊಂದು ನಿರ್ಝರಿಣಿ . . . ಘೋಷದೋಂಕೃತಿಗೆ ಪರ್ವತಾರಣ್ಯಮಂ ಪ್ರತಿನಾದಿತಂ ಮಾಡಿ (ಶ್ರೀಕಾಮಾ.೦೩೨-೨೦೭). [ಸಂ.]

ಪ್ರತಿನಾಮ (ನಾ). ಒಂದು ಊರು ಅಥವಾ ಒಬ್ಬ ವ್ಯಕ್ತಿಗೆ ಇಟ್ಟಿರುವ ಮತ್ತೊಂದು ಹೆಸರು ; ಅಡ್ಡಹೆಸರು : ವರದನದೀತೀರದ ವದಿರಾಪುರ ಗ್ರಾಮ ೧ಕ್ಕೆ ಪ್ರತಿನಾಮವಾದ ನಾರಸಿಂಹ್ಯಪುರವೆಂಬ ಸರ್ವಮಾ(ಂ)ನ್ಯದ ಅಗ್ರಹಾರದಲ್ಲಿ (ಸೌಇಇ. XX, ೨೪೦-೨೦; 1571); ಎಱೆಗಂಗನ ಶಿವಮಾರನ ಮಾಂಡಲಿಕನೋ ಆ ಪ್ರತಿನಾಮವುಳ್ಳ ಶಿವಮಾರನೋ ಎಂಬುದಾದರೂ ಸ್ಪಷ್ಟವಿಲ್ಲ (ಕಪಾಲಿ. ೦೩೩). [ಸಂ. ಪ್ರತಿನಾಮನ್]

ಪ್ರತಿನಾಯಕ (ನಾ). [ಕಾವ್ಯಮೀ] ಕಾವ್ಯ ನಾಟಕಾದಿಗಳಲ್ಲಿ ಕಥಾನಾಯಕನನ್ನು ವಿರೋಧಿಸುವ ಅಥವಾ ನಾಯಕನು ಪಡೆಯಲಿರುವ ಫಲಪ್ರಾಪ್ತಿಗಾಗಿ ಸ್ಪರ್ಧಿಸುವ ಪುರುಷಪಾತ್ರ : ದುರ್ಯೋಧನನು ಮಹಾಭಾರತದಲ್ಲಿ ಪ್ರತಿನಾಯಕ (ಕೂಡಿ). [ಸಂ.]

ಪ್ರತಿನಾಯಿಕೆ (ನಾ). [ಕಾವ್ಯಮೀ] ಕಾವ್ಯ ನಾಟಕಾದಿಗಳಲ್ಲಿ ಕಥಾನಾಯಿಕೆಯನ್ನು ವಿರೋಧಿಸುವ ಅಥವಾ ನಾಯಿಕೆಯು ಪಡೆಯಲಿರುವ ಫಲಪ್ರಾಪ್ತಿಗಾಗಿ ಸ್ಪರ್ಧಿಸುವ ಸ್ತ್ರೀಪಾತ್ರ : ನಾಯಿಕೆ ಅಸಿಲತೆ ನಾಯಕ ಭೂಪತಿ ಧುರವೆ ಅಂತಃಪುರ ಕೇಳು ಸಮ್ಮುಖಿಯಾದರು ವೈರಿವಾಹಿನಿ ಪ್ರತಿನಾಯಿಕೆ ಮೊಗದಿರುಹಿದಳು (ಇಂಪಾಪ. ೦೪೩-೦೦). [ಸಂ. ಪ್ರತಿನಾಯಿಕಾ]

ಪ್ರತಿನಾರಾಯಣ (ನಾ). [ಜೈನ] ಅರುವತ್ತುಮೂವರು ಶಲಾಕಾ ಪುರುಷರಲ್ಲಿ ಒಂದು ವರ್ಗಕ್ಕೆ ಸೇರಿದವನು; ನಾರಾಯಣನ ಪ್ರತಿನಾಯಕ; ಪ್ರತಿವಾಸುದೇವ; ೯ ಅಶ್ವಗ್ರೀವ, ತಾರಕ, ಮೇರಕ, ನಿಶುಂಭ, ಮಧುಕೈಟಭ, ಬಲಿ, ಪ್ರಹರಣ, ರಾವಣ ಮತ್ತು ಜರಾಸಂಧ ಎಂದು ಇವರು ಒಂಬತ್ತು ಜನ ಇರುವರು. [ಸಂ.]

ಪ್ರತಿನಿತ್ಯ1 (ನಾ). ಪ್ರತಿದಿವಸ; ಎಲ್ಲಾ ದಿವಸ : ಸುತ್ತಮುತ್ತ ಎಲ್ಲಿ ನೋಡಿದರೂ ಪ್ರತಿನಿತ್ಯವೂ ಯಾವುದೋ ಒಂದು ಅಕ್ರಮ. . . ಅವರ ಕಣ್ಣಿಗೆ ಬೀಳುತ್ತಿರುತ್ತದೆ (ಶಾಸ್ತ್ರಾ. ೨೪೩). [ಸಂ.]

ಪ್ರತಿನಿತ್ಯ2 (ಅ). ಪ್ರತಿದಿನವೂ ; ಎಲ್ಲಾ ದಿವಸವೂ : ಅವರು ಪ್ರತಿನಿತ್ಯ ನಮ್ಮ ಮನೆಗೆ ಬರುತ್ತಾರೆ (ಕೂಡಿ). [ಸಂ. ಪ್ರತಿನಿತ್ಯಂ]

ಪ್ರತಿನಿಧಾನ (ನಾ). ಒಂದಕ್ಕೆ ಬದಲಾಗಿ ಮತ್ತೊಂದನ್ನು ಇರಿಸುವುದು : ನುತಸಂಪ್ರದಾನರೂಢಂ ಚತುರ್ಥಿಯದು . . . ಪ್ರತಿನಿಧಾನದೊಳಮಿಷ್ಟದೊಳಂ (ಕಸುದ. ೦೩೦) ; ಪ್ರತಿನಿಧಾನದೊಳಂ=ಪ್ರತಿನಿಧಿಯಲ್ಲಿಯುಂ (ಕಸುದ. ೦೩೦ ಟೀಳು). [ಸಂ.]

ಪ್ರತಿನಿಧಿ (ನಾ) .೧. ಪ್ರತಿಬಿಂಬ; ಪ್ರತಿರೂಪ : "ಪ್ರತಿಬಿಂಬಂ, ಪ್ರತಿರೂಪಂ . . . ಪ್ರತಿನಿಧಿಃ, ಪ್ರತಿಯಾತನಂ, ಪ್ರತಿಚ್ಛಾಯಂ – ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦-೦೩೦). ೨. ಒಂದಕ್ಕೆ ಬದಲಾಗಿರುವಂಥದು. ೩. ಒಂದು ರಾಷ್ಟ್ರದ ಅಥವಾ ರಾಜನ ಪರವಾಗಿ ಅಧಿಕಾರವನ್ನು ನಿರ್ವಹಿಸುವ ಅಧಿಕಾರಿ : ಆವೇದನ ಪತ್ರವನ್ನು ತತ್ಕಾಲದಲ್ಲಿ ತಾನು ವಾಸ ಮಾಡುತ್ತಿರುವ ದೇಶದಲ್ಲಿರುವ ಭಾರತದ ರಾಜ್ಯವ್ಯವಹಾರ ಅಥವಾ ವಾಣಿಜ್ಯವ್ಯವಹಾರ ಪ್ರತಿನಿಧಿಗೆ . . . ಕೊಟ್ಟು ಆ ಪ್ರತಿನಿಧಿಯಿಂದ ತನ್ನ ಹೆಸರನ್ನು ರಿಜಿಸ್ಟರು ಮಾಡಿಸಿಕೊಂಡಿದ್ದ ಪಕ್ಷದಲ್ಲಿ ಆತನು ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕುದು (ಶಾಧಾಪ. ೬). ೪. ಒಂದು ಸಂಸ್ಥೆ ಅಥವಾ ವ್ಯಕ್ತಿಯ ಪರವಾಗಿ ವ್ಯವಹಾರ ನಡೆಸುವವನು : ತಾವು ತಯಾರು ಮಾಡಿದ ಪದಾರ್ಥಗಳನ್ನೆಲ್ಲ . . . ಸ್ವಂತವಾಗಿಯೊ ತಮ್ಮ ಪ್ರತಿನಿಧಿಗಳ ಮೂಲಕವೊ ಮಾರಿಸಿ, ಬಂದ ಲಾಭವನ್ನು ತಾವೇ ಹಂಚಿಕೊಳ್ಳುವುದು (ಪಾಪ್ರ.೦೬೩). ೫. ಜಾಮೀನು. [ಸಂ.]

ಪ್ರತಿನಿಧಿತ್ವ (ನಾ). (ವಿಧಾನಸಭೆ ಮೊದಲಾದುವುಗಳ) ಪ್ರತಿನಿಧಿಯಾಗಿರುವಿಕೆ ; ಚುನಾಯಿತ ಸದಸ್ಯತ್ವ : ವಿಧಾನಮಂಡಲಗಳಲ್ಲಿಯ ಅಥವಾ ಸಂಸತ್ತಿನಲ್ಲಿಯ ಪ್ರತಿನಿಧಿತ್ವದ ವಿಚಾರವಾದ ಉಪಬಂಧಗಳೂ ಸೇರಿ . . . ಅಡಕವಾಗಿರಬಹುದು (ಶಾಧಾಪ.೩). [ಸಂ.]

ಪ್ರತಿನಿಧಿಸು (ಕ್ರಿ). ೧. (ವ್ಯಕ್ತಿ, ಭಾವನೆ, ನಿರೂಪಣೆ ಮುಂತಾದ ವಿಚಾರಗಳಲ್ಲಿ) ಒಂದರ ಬದಲು ಮತ್ತೊಂದು ಇರು : ವಿಭೀಷಣ, ಆಂಜನೇಯ ಮೊದಲಾದ ಪಾತ್ರಗಳನ್ನು ಪ್ರತಿನಿಧಿಸುವವರ ವಾಕ್ಚಾತುರ್ಯ, ಕುಳಿತಲ್ಲೇ ಅವರು ಮಾಡುವ ಅಭಿನಯ . . . ಇವುಗಳನ್ನು ನೋಡಿ, ಕೇಳಿ ಮೋಹಗೊಂಡು (ಯಕ್ಷಗಾ. ೦೬); ಚಳಿಗಾಲದಲ್ಲಿ ಈ ಜಿಟಿಯಾ ನೃತ್ಯವನ್ನಾಡುತ್ತಾರೆ. ಪ್ರೇಮವನ್ನು ಪ್ರತಿನಿಧಿಸುವುದೇ ಇದರ ತತ್ವ (ಶಾರಣಾ. ೬೭); ಮೇಳದವರು . . . ಪ್ರಕೃತಿಯ ಪರಿತಾಪವನ್ನು ಪ್ರತಿನಿಧಿಸುತ್ತಾರೆ, ಪ್ರತಿಧ್ವನಿಸುತ್ತಾರೆ (ಇಂದ್ರಪ್ರ.XXXI ಪಾಟಿಕದ ಸಹುಸ್ಯ). ೨. ತಿಳಿಸಂ; ಸ್ಪಷ್ಟಪಡಿಸು; ಅಭಿವ್ಯಕ್ತಗೊಳಿಸಂ: ಅನುಭವ, ಭಾವನೆ, ಸನ್ನಿವೇಶ, ಸಂಬಂಧ, ಅನುಮೇಯ, ನಿರ್ಣಯ ಇತ್ಯಾದಿ ಅಂಶಗಳನ್ನು ಸರಿಯಾದ ಪಾರಿಭಾಷಿಕಪದಗಳಿಂದ ಪ್ರತಿನಿಧಿಸಬೇಕು (ಶಿಕ್ಷದ. VI. ಮುಸ್ಕುಂ). ೩. ಒಬ್ಬರ ಪರವಾಗಿ ಕಾರ್ಯವನ್ನು ನಿರ್ವಹಿಸು ; ಪ್ರತಿನಿಧಿಯಾಗಿರು : ನಾನು ಮನವಿದಾರನನ್ನು ಪ್ರತಿನಿಧಿಸುತ್ತೇನೆ (ಕೂಡಿ). [ಪ್ರತಿನಿಧಿ + —ಇಸ್ಸು]

ಪ್ರತಿನಿಯತ (ಗು). ೧. ಮೊದಲೇ ಗೊತ್ತು ಮಾಡಿದ,–ತೀರ್ಮಾನಿಸಿದ. ೨. ವ್ಯತ್ಯಾಸವಾಗದಿರುವ ; ಬದಲಾಗದ : ನಿಗೂಢಚತುರ್ಥಂ ಪ್ರತಿನಿಯತಗತಪ್ರತ್ಯಾಗತಂ ದಲೆಂದಿಂತು ಪೆಱವುಮಕ್ಕುಂ ಚಿತ್ರಂ (ಕಾಪ್ಯಾಪ. ೩೬೭); ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ (ಕಾಪ್ಯಾಪ. ೬೯೪). [ಸಂ.]

ಪ್ರತಿನಿರ್ಯಾತನ (ನಾ). ೧. ನ್ಯಾಸವನ್ನು ಅದರ ಯಜಮಾನನಿಗೆ ಮರಳಿ ಒಪ್ಪಿಸುವುದು. ೨. ಸೇಡು ತೀರಿಸಿಕೊಳ್ಳುವುದು : "ಪ್ರತಿನಿರ್ಯಾತನವೆಂಬುದು ಮುಯ್ಯಂ ಮಗುಟ್ಟುವುದು" (ಹಲಾಯು. ೦೨೬-೮೦). ೩. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು.[ಸಂ.]

ಪ್ರತಿನೃಪ (ನಾ). ಎದುರಾಳಿಯಾದ ಅರಸು; ಶತ್ರುರಾಜ : ಪ್ರತಿಕೂಲದೈವನೈ ನೀಂ ಪ್ರತಿನೃಪರನುಕೂಲದೈವರ್ (ಗದಾಯು. ೩-೪೩). [ಸಂ.]

ಪ್ರತಿಪಕ್ಷ (ನಾ). ೧. ಶತ್ರುಪಕ್ಷ: ವೈರಿವರ್ಗ : ಪ್ರತಿಪಕ್ಷಕ್ಷೋಣಿಪಾಳ ಪ್ರಕರಹೃದಯಶೂಲೋಪಮಸ್ಥೂಳಶಾತಾಯತಕುಂತನ್ಯಸ್ತಹಸ್ತಂ . . . ಈ ಸೈನ್ಯಮಾಂಧ್ರಂ (ಪಾರ್ತ್ವಪು. ೦೦-೩೩); ಪ್ರತಿಪಕ್ಷೋರ್ವೀಶವಂಶಕ್ಷಿತಿರುಹತತಿಯಂ ಕಿಟ್ಟು ಬೇರಿಂದೆ (ಪುಷ್ಪಪು.೭-೨೪); ಪ್ರತಿಪಕ್ಷಕ್ಷತ್ರಿಯ ಪ್ರಾಕ್ತನನಿಖಿಳಧರಾಕೋಶಸೇನಾಚಯಸ್ವೀಕೃತನುದ್ಯದ್ಧಾರ್ಮಿಕಂ . . . ಋತುಪರ್ಣಂ (ಪಳಸಂ. ೬೩೭). ೨. ಹಗೆ; ಶತ್ರು : "ಅಭಿಯಾತಿಃ, ಅರಾತಿಃ, ಅಮಿತ್ರಂ, ರಿಪುಃ, ಪ್ರತಿಪಕ್ಷಃ . . . ದ್ವಿಷತ್ —ಈ ೨೪ ಹಗೆ" (ಹಲಾಯು. ೭೩-೩೦೦) ; ಪ್ರತಿಪಕ್ಷಮುಂಟೆ ಲಂಕಾಪತಿಗಣುವಂ ರಾವಣಂಗಿದಿರ್ಚುವನೆ (ಶಂರಾಮಾ. ೦೦-೦೩೮) ; ಕೋಪನಪ್ರತಿಪಕ್ಷಕುಲನಿರ್ವಾಪಣೈಕಸಮರ್ಥ ಎನುತಭಿರೂಪನನು ಹೊಗ

ಳಿದರು ವಂದಿಗಳು (ಕುಣ್ಯಾಗ. ೬-೨೯). ೩. ವಿಧಾನಸಭೆ, ಚುನಾವಣೆ, ಚರ್ಚಾಕೂಟ, ಮೊದಲಾದಂವುಗಳಲ್ಲಿ ಇರುವ ವಿರೋಧಪಕ್ಷ; ಒಂದು ಪಕ್ಷದವರು ಹೇಳಿದ ಅಭಿಪ್ರಾಯವನ್ನು ಖಂಡಿಸುವ ಮತ್ತೊಂದು ಪಕ್ಷ: ಪ್ರತಿಪಕ್ಷದಲ್ಲಿ ಆವನು ಬಹಳ ಚೆನ್ನಾಗಿ ಮಾತನಾಡಿದನು (ಕೂಡಿ). [ಸಂ.]

ಪ್ರತಿಪಕ್ಷಿ (ನಾ). ವಿರೋಧಪಕ್ಷದವನು; ವೈರಿ; ಶತ್ರು: ಇಬ್ಬರೂ ಪ್ರತಿಪಕ್ಷಿಗಳು ಈ ವಿಚಾರದಲ್ಲಿ ತಾಕಲಾಟದಲ್ಲಿದ್ದಾರೆ (ಸಮಾಪ್ತಾ. ೦೪೯); ಅರ್ಜುನನಿಗೆ ಕರ್ಣನು ಪ್ರತಿಪಕ್ಷಿಯಿರಬಹುದು (ಸಾಹಿಮಿ. ೩೦).

[ಸಂ. ಪ್ರತಿಪಕ್ಷಿನ್]

ಪ್ರತಿಪತ್ತಿ (ನಾ). ೧. ಪಡೆಯುವುದು; ಪ್ರಾಪ್ತಿ. ೨. ಅರಿವು; ಜ್ಞಾನ; ತಿಳಿವಳಿಕೆ: ಬಹುತ್ವನಿರ್ದೇಶಂ ವ್ಯಾಖ್ಯಾತಭೇದಪ್ರತಿಪತ್ತ್ಯರ್ಥಮಾದುದು (ಶಕ್ತಪ್ರ. ೨೩೨). ೩. ನಿರ್ಣಯ; ನಿರ್ಧಾರ. ೪. ಜಾಣ್ಮೆ; ಬುದ್ಧಿಮತ್ತೆ: "ಪ್ರತಿಪತ್ತಿಃ, ಪ್ರಗಲ್ಭತಾ — ಈ ೨ ಅಱಿಯುವುದು" (ಹಣಾಯು. ೧೨೯-೯೪). ೫. ಪ್ರತಿಭೆ. ೬. ಒಪ್ಪಿಗೆ; ಸಮ್ಮತಿ. ೭. ಕಾರ್ಯವನ್ನು ಕೈಗೊಳ್ಳುವುದಂ; ಕಾರ್ಯನಿರ್ವಹಣೆ. ೮. ನಡವಳಿಕೆ; ಪ್ರವೃತ್ತಿ. ೯. ಗೌರವ; ಮನ್ನಣೆ; ಮರ್ಯಾದೆ: ಅವರ ದಾಯಿಗಂ ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿಪದವಿಯಂ ಬಾಱುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದರ್ವರು ಮುಬ್ಬೆಗಂಬಟ್ಟು (ವಡ್ಡಾರಾ. ೨-೨೫); ನದೀತನೂಜ ಭಾರದ್ವಾಜ ಕೃಪಾದಿಗಳ್ವೆರಸಿದಿರ್ವಂದು ಯಥೋಚಿತಪ್ರತಿಪತ್ತಿಗಳಿಂದಯ್ವರುಮಂ ನಿಬಿಡಾಲಿಂಗನಂಗೆಯ್ದು (ಸಂಪರಾ. ೪-೫೨); ನಿತ್ಯ ಪರೀಕ್ಷಣಸ್ಥಳವಿಪರ್ಯಯ ಪ್ರತಿಪತ್ತಿ ದಾನಂಗಳಿಂ ನಿಯೋಗಿಗಳಂ ಕಾಮದುಘರ್ ಮಾಡಿಯುಂ (ಸಂಪ್ರಪು. ೨-೬೧). ೧೦. ಸ್ಥಾನ; ಅಧಿಕಾರ: ಪ್ರತಿಪತ್ತಿಯ ಮೈಮೆಯ ನಾನತಿಶಯಿಸಲು ಕರೆಯೆ ಕೇಳಿ ಸಿಂಹಾಸನದೌಸ್ಥಿತಿಯುಟಿಯೆ ರೇಚಗಾತ್ಮ ಪ್ರತಿಪತ್ತಿಯನಿತ್ತನೊಸೆದು ಜಯಸಿಂಹನೃಪಂ (ಪುದಶಿ. ೦-೯); ಭೂಮಂಡಲದಲ್ಲಿ ಸಮಸ್ತ ರಾಜಕುಲಗಳೊಳಗೆ ಧನ ಮಾನ ಪ್ರತಿಪತ್ತಿಗಳಲ್ಲಿ ನಮ್ಮ ಕುಲವು ಶ್ರೇಷ್ಠವಾಗಿರುವುದು (ರೇಷ್ಠಕ. ೨೩). ೧೧. ಕೀರ್ತಿ; ಯಶಸ್ಸು. ೧೨. ದಿಟ್ಟತನ; ಧೈರ್ಯ. ೧೩. ಉಪಾಯ; ಯುಕ್ತಿ. ೧೪. "ಯಜ್ಞದಲ್ಲಿ ಉಳಿದಿರುವದನ್ನೆಲ್ಲ ವಿನಿಯೋಗಿಸುವುದು" (ಪುಹಾಣ. ೦೦೭ ೮೩೮). ಪ್ರತಿಪತ್ತಿಕರ್ಮ' ಪರಾ. [ಸಂ.]

ಪ್ರತಿಪತ್ತಿಕರ್ಮ (ನಾ). ಯಜ್ಞ ಯಾಗಾದಿಗಳಲ್ಲಿ ಮಾಡುವ ಒಂದು ಕ್ರಿಯೆ; P ಹೋಮ ಮಾಡಿದ ಮೇಲೆ ಉಳಿದಿರುವ ದ್ರವ್ಯವನ್ನು ಮತ್ತಾವ ವಿಧದಿಂದಲೂ ಅಪವಿತ್ರವಾಗದಂತೆ ಅಗ್ನಿಗೆ ಹಾಕುವುದು, ಪೂಜೆ ಮಾಡಿ ವಿಸರ್ಜನೆ ಮಾಡಿದ ಗಣಪತಿಪ್ರತಿಮೆ ಮೊದಲಾದುವನ್ನು ಜಲದಲ್ಲಿ ವಿಸರ್ಜಿಸುವುದು ಮುಂತಾದುವು ಪ್ರತಿಪತ್ತಿಕರ್ಮವೆನಿಸಿಕೊಳ್ಳುತ್ತವೆ: ವಿಶ್ವಾಮಿತ್ರನು ವಿಶ್ವಜಿದ್ಯಜ್ಞವನ್ನು ಸಂಕಲ್ಪ ಮಾಡಿ, ತ್ರಿಶಂಕುವಿನ ಸೋಮಯಾಗದ ಅವಭೃತವನ್ನು ನೆರವೇರಿಸಿದನು. ಪ್ರತಿಪತ್ತಿಕರ್ಮವೂ ನಡೆಯಿತು (ಪುಹಾಣ. ೦೦೭).

[ಸಂ. ಪ್ರತಿಪತ್ತಿಕರ್ಮನ್]

ಪ್ರತಿಪತ್ತಿಮೂಢೆ (ನಾ). ಏನಂ ಮಾಡಬೇಕೆಂದು ತಿಳಿಯಲಾರದವಳು; ದಿಕ್ಕು ತೋಚದಿರುವವಳು; ದಿಙ್ಮೂಢೆ: ಪ್ರತಿಪತ್ತಿಮೂಢೆಯೆನಿಸಿರ್ದ ತರುಣಿಯುಂ ಗುರುಜನಕ್ಕೆ ಪೊಡವಡಿಪುದುಂ (ಕಾರಂಉ. ೬೮೧).

[ಸಂ. ಪ್ರತಿಪತ್ತಿಮೂಢಾ (ಪ್ರತಿಪತ್ತಿ + ಮೂಢ + —)]

ಪ್ರತಿಪತ್ತಿವಿಧಿ (ನಾ). [ಅದ್ವೈತ] ಮೋಕ್ಷಕ್ಕಾಗಿ ಜ್ಞಾನವನ್ನು ಸಂಪಾದಿಸು ಎಂದು ನೇಮಿಸುವುದು: ಇದರಲ್ಲಿ ಧ್ಯಾನನಿಯೋಗವಾದ, ನಿಷ್ಪ್ರಪಂಚೀಕರಣನಿಯೋಗವಾದ ಇವೇ ಮೊದಲಾದ ಪ್ರಭೇದಗಳಿರುವುವು. ಇವುಗಳಿಗೆಲ್ಲಾ ಒಟ್ಟು ಪ್ರತಿಪತ್ತಿವಿಧಿಯೆಂದು ಹೆಸರು (ಹಿಂದೂ. ೨೨೫).

[ಸಂ.]

ಪ್ರತಿಪತ್ತಿಶಾಲಿ (ನಾ). ಗೌರವಾರ್ಹನಾದವನು; ಸನ್ಮಾನ್ಯ: ನಮ್ಮ ನಡುವೆ ಇದ್ದ ವಿಪುಲಸಂಪತ್ತಿಶಾಲಿಯಾದ ಮತ್ತು ಪ್ರತಿಪತ್ತಿಶಾಲಿಯಾದ ಒಬ್ಬ ಗೃಹಸ್ಥರು ವರ್ತಮಾನಪತ್ರ ಓದುತ್ತಿದ್ದರು (ಇಶಕ. ೯೯೦).

[ಸಂ. ಪ್ರತಿಪತ್ತಿಶಾಲಿನ್]

ಪ್ರತಿಪತ್ತು (ನಾ). ೧. ಚಾಂದ್ರಮಾನದ ತಿಂಗಳುಗಳಲ್ಲಿ ಬರುವ ಎರಡು ಪಕ್ಷಗಳ ಮೊದಲನೆಯ ದಿನ; ಪಾಡ್ಯ: "ಪಕ್ಷತಿಃ, ಪ್ರತಿಪತ್—೨ ಪಾಡ್ಯದ ಹೆಸರುಗಳು" (ನಿಗ್ಗಂಟಿ. ೭೯). ೨. ಬುದ್ಧಿ: "ಬುದ್ಧಿಃ, ಮನೀಷಾ . . . ಪ್ರತಿಪತ್, ಜ್ಞಪ್ತಿಃ, ಚೇತನಾ — ೧೪ ಬುದ್ಧಿಯ ಹೆಸರುಗಳು" (ನಿಗ್ಗಂಟಿ. ೯೯). ೩. ಮುಂದಕ್ಕೆ ಹೋಗುವುದು; ಮುಂದುವರಿಯುವುದು. ೪. ಹತ್ತಿರಕ್ಕೆ ಹೋಗುವುದು; ಸಮೀಪಿಸುವುದು. ೫. ಒಳಹೊಗುವಿಕೆ; ಪ್ರವೇಶ. ೬. ಮೊದಲು ಮಾಡುವುದು; ಪ್ರಾರಂಭ. ೭. ಅಂತಸ್ತು; ಪದವಿ; ಸ್ಥಾನ. ೮. ಒಳ್ಳೆಯ ಹೆಂಗಸರ ಗುಂಪು: "ಅಸನ್ನಮುಂ ಪಾಡ್ಯ ಸದ್ವನಿತಾ ಸಂಚಯಮಿಂತಿವೆಯ್ದೆ ಪ್ರತಿಪತ್ತಾಖ್ಯಾನಮುಂ" (ಪಾಪಾರ. ೦೬೯).

[ಸಂ. ಪ್ರತಿಪದ್]

ಪ್ರತಿಪತ್ನಿ (ನಾ). ಸವತಿ; ಸವತ್ನಿ: ಕ್ಷಿತಿನಾಥಾಪಾಂಗವಿಲೋಕಿತೆಯರ್ ಶ್ರೀಯೊರ್ವಳಾ ಜಯಶ್ರೀಯೊರ್ವಳ್ ಪ್ರತಿಪತ್ನಿಯರೊಳರೆನಿಸಲ್ಕತರ್ಕ್ಯ ನೇಪಥ್ಯಮವರ್ಗದೇಂ ಸೊಗಯಿಸಿತೋ (ಶಾಂತಿಪು. ೦-೭೯). [ಸಂ.]

ಪ್ರತಿಪತ್ರ (ನಾ). ಒಂದು ಪತ್ರದ ಪ್ರತಿ,—ನಕಲು: ವಿನಿಮಯ ಪತ್ರಗಳು ಚಿಕ್ಕುಗಳು . . . ಋಣಪತ್ರಗಳು ಪ್ರತಿಪತ್ರಗಳು ಮತ್ತು ಸಲಿಕೆಗಳು ಇವುಗಳ ವಿಷಯದಲ್ಲಿ ಮುದ್ರಾಂಕಶುಲ್ಕದ ದರಗಳು (ಕಾರಾಸ. ೨೮೬). [ಸಂ.]

ಪ್ರತಿಪದ (ನಾ). ೧. ಒಂದು ಪದದ ಸಮಾನಾರ್ಥಕವಾದ ಪದ; ಪರ್ಯಾಯಪದ: ಅಗ್ನಿ, ವಾಯು, ಸೂರ್ಯ ಎಂಬ ಪದಗಳಿಗೆ ಪ್ರತಿಪದಗಳನ್ನು ಬರೆಯಿರಿ (ಕೂಡಿ). ೨. ಪ್ರತಿಯೊಂದು ಪದ: ಇಲ್ಲಿ ಕೊಟ್ಟಿರುವ ಪ್ರತಿಪದಕ್ಕೂ ಅರ್ಥ ಬರೆಯಿರಿ (ಕೂಡಿ). [ಸಂ.]

ಪ್ರತಿಪದಿ (ನಾ). ೧. ಪಾಡ್ಯ; ಪ್ರತಿಪದೆ. ೨. ಮನ್ನಣೆ; ಗೌರವ. ೩. ವಿರೋಧವಾಗಿ ಹೋಗುವಿಕೆ. ೪. ಕೆಳಮಟ್ಟ; ಅವನತಿ: "ಪಾಡ್ಯಮುಂ ಮನ್ನಣೆಯುಂ ಕೀಟಿಂಬಿವುಂ ತಾಂ ಪ್ರತಿಪದಿಯೆನಿಕು" (ಪಾಪಾರ. ೦೫೬). [ಸಂ. ಪ್ರತಿಪದೀ]

ಪ್ರತಿಪದೆ (ನಾ). = ಪ್ರತಿಪತ್ತು ೧: ದೀಪಾವಳಿಯಲ್ಲಿ ಬಲಿಪ್ರತಿಪದೆಯಿದೆ (ಭಾಷಾಶಾ. ೭೩); ಶಾಲಿವಾಹನಶಕದ ವರ್ಷ ಚೈತ್ರಶುದ್ಧಪ್ರತಿಪದೆಯಿಂದ ಆರಂಭವಾಗುತ್ತಿದೆ (ಭಾಹಸ್ಕ. ೫೭). [ಸಂ. ಪ್ರತಿಪದಾ]

ಪ್ರತಿಪದ್ದಿನ (ನಾ). ಪಾಡ್ಯ: ವಿತತಾಷಾಢದ ಬಹುಲಪ್ರತಿಪದ್ದಿನದಂದು ಕೀರ್ತಿ ನೆಗೞ್ದಿರೆ (ಆದಿಪು. ೯-೬೬); ನುತಮಾರ್ಗಶಿರದ ಶುದ್ಧಪ್ರತಿಪದ್ದಿನದ ಪರಯಾಮದೊಳ್ (ಪುತ್ವಪು. ೦೩-೦೦೩). [ಸಂ.]

ಪ್ರತಿಪನ್ನ (ಗು). ೧. ಸಮೀಪಿಸಿದ; ಹತ್ತಿರಕ್ಕೆ ಬಂದ. ೨. ಪಡೆದ; ಹೊಂದಿದ. ೩. ಮಾಡಿದ; ನಿರ್ವಹಿಸಿದ; ನೆರವೇರಿಸಿದ: ಪ್ರತಿಪನ್ನಯಜ್ಞವಿಳಾಸನೊಪ್ಪಿದನಿಂದ್ರವಿಭವದಲಿ (ಕುಣ್ಯಾಸ. ೦೦-೯). ೪. ಒಪ್ಪಿದ; ಸ್ವೀಕೃತವಾದ. ೫. ತಿಳಿದ: ಅರಿತ. ೬. ಪ್ರಾರಂಭಿಸಿದ; ತೊಡಗಿದ. ೭. ಗೆದ್ದ; ಜಯಸಿದ. (ನಾ). ೮. ಒಪ್ಪಿಗೆಯಾದುದು; ಸ್ವೀಕೃತವಾದುದು: ಎನಗಂ ತಾಂ ಪ್ರತಿಪನ್ನಮೆಂಬ ಬಗೆಯುಂ ತಾನಂತುಪಾದೇಯಮೇ (ಸಂಪ್ರಪು. ೯-೯೯). ೯. ತಿಳಿದುದು; ಅರಿತುದು: "ಬುದ್ಧಂ, ಬುಧಿತಂ, ಮನಿತಂ, ವಿದಿತಂ, ಪ್ರತಿಪನ್ನಂ,

ಅವಸಿತಂ. ಅವಗತಂ—೭ ತಿಳಿಯಲ್ಪಟ್ಟುದು (ಸಿದ್ಧಾಂತಿ. ೩೫೨). ೧೦. ಗೆದ್ದುದು ; ಜಯಿಸಿದುದಂ.

ಪ್ರತಿಪನ್ನಮಂದರ = (ದೃಢತೆಯಲ್ಲಿ) ಮಂದರಪರ್ವತವನ್ನು ಮೀರಿದವನು ; ಒಂದು ಬಿರುದು : ಗಣ್ಡರ ಗಣ್ಡಂ ವೈರಿಭೇರುಣ್ಡಂ ಪ್ರತಿಪನ್ನಮಂದರಂ ಶರಣಾಗತವಜ್ರಪಂಜರಂ ಶ್ರೀಮತ್‌ಶಾನ್ತಿವರ್ಮ್ಮರಸರ ವಂಶಾವತಾರಮೆಂತೆಂದೊಡೆ (ಸೌಇಇ. XX. ೦೯-೯ ; ೯೮೦) ; ವಿಬುಧವರ ದಾಯಕಂ × × × ಪ್ರತಿಪನ್ನಮಂದರಂ ವಾಣಸ್ಯನ್ವಯಪುರಂದರಂ . . . ಮಧುವವರಸಂ (ಕಇಅ. ೭-೩-೨೬೨ ; 1062). ಪ್ರತಿಪನ್ನಮೇರು = (ದೃಢತೆಯಲ್ಲಿ) ಮೇರುಪರ್ವತವನ್ನು ಜಯಿಸಿದವನು ; ಒಂದು ಬಿರುದು : ಶರಣಾಗತವಜ್ರಪಂಜರಂ ಪ್ರತಿಪನ್ನಮೇರು ನಾಮಾದಿ ಸಮಸ್ತ ಪ್ರಸಸ್ತಿಸಹಿತಂ (ಸೌಇಇ. XX. ೩೬-೯ ; 1056). [ಸಂ.]

ಪ್ರತಿಪನ್ನತೆ (ನಾ). ವಿವೇಕ ; ವಿವೇಚನೆ : ಇನ್ನು ಧೃತರಾಷ್ಟ್ರಾವನೀಶನು ತನ್ನ ಮಕ್ಕಳ ಬಾಂಧವಪ್ರತಿಪನ್ನತೆಯ ನೆಱೆ ಕಾಬನೆಂದನು ಧರ್ಮಸುತ ನಗುತ (ಕುಣ್ಡಾಲಾ. ೨-೩೬). [ಸಂ. ಪ್ರತಿಪನ್ನತಾ]

ಪ್ರತಿಪನ್ನಿಕೆ (ನಾ). =ಪ್ರತಿಪನ್ನತೆ: 'ಪ್ರತಿಪನ್ನಿಕೆಗಿಡು' ಪರಾ. [ಪ್ರತಿಪನ್ನ + — ಇಕೆ]

ಪ್ರತಿಪನ್ನಿಕೆಗಿಡು (ಕ್ರಿ). ವಿವೇಚನೆಯನ್ನು ಕಳೆದುಕೊಳ್ಳು; ವಿವೇಕ ಶೂನ್ಯವಾಗು : ಮುಳಿಗುಂ ಪ್ರತಿಪನ್ನಿಕೆಗಿಡೆ ದಶರಥಸುತನಾ ವಿಭು ಮುಳಿದವಂಗೆ ಜವನುಂ ಮುಳಿಗುಂ (ಪಂಠಾಪಾ. ೦೦-೪೭).

[ಪ್ರತಿಪನ್ನಿಕೆ + ಕಿಡು (< ಕೆಡು$_1$)]

ಪ್ರತಿಪಾಕ (ನಾ). [ವೈದ್ಯಶಾ] ಬೇಯಿಸದ ಹಸಿರಸಗಳ ಮಿಶ್ರಣ: "ಔಷಧಂ ಬೇಯಲು ಕಷಾಯವೆನಿಸಿಕ್ಕು ಹಸಿ ಬೆರಸೆ ಪ್ರತಿಪಾಕಮಕ್ಕುಂ" (ಸುಂಗರಾ. ೦೦೫-೭); ಕಿರುಗಡಸಿಗೆ ಸಮೂಲವಂ ಕಷಾಯವಿಕ್ಕಿ ಶುಂಠಿ ೪ ವರಹ ತೂಕ ಪ್ರತಿಪಾಕವಂ ಕೂಡಿ ಕೊಡಲು ಗ್ರಹಿಣೀರೋಗಂ ಗುಣಮಕ್ಕುಂ (ಸಕಪ್ಯ. ೩೩೬). [ಸಂ.]

ಪ್ರತಿಪಾತಿ (ನಾ). ಎದುರು ಬೀಳುವವನು; ವಿರೋಧಿ: ಸ್ವಾಮಿಗಳ್ ಕಷಾಯೋದಯದಿಂ ಎಲ್ಲಿಯಾನುಂ ಹೀಯಮಾನಚಾರಿತ್ರೋದಯರಪ್ಪುದಱಿಂ ಋಜುಮತಿಮನಃಪರ್ಯಾಯಂ ಪ್ರತಿಪಾತಿಯಕ್ಕುಂ (ಸತ್ವಪ್ರ. ೬೦).

[ಸಂ. ಪ್ರತಿಪಾತಿನ್]

ಪ್ರತಿಪಾದಕ (ಗು). ೧. ಹೇಳುವ; ವಿವರಿಸುವ. ೨. ಬೋಧಿಸುವ; ತಿಳಿಸುವ. ೩. ಸಮರ್ಥಿಸುವ; ದೃಢಪಡಿಸುವ. (ನಾ). ೪. ಹೇಳುವವನು; ವಿವರಿಸುವವನಂ. ೫. ಬೋಧಿಸುವವನು; ಬೋಧಕ. ೬. ಸಮರ್ಥಿಸುವವನು; ಸಾಧಿಸುವವನು: ಕಾಶ್ಮೀರ ದೇಶದ ಅಭಿನವಗುಪ್ತನೆ (ಹತ್ತನೆಯ ಶತಮಾನ) ಕಾಶ್ಮೀರದೇಶದ ಪ್ರಖ್ಯಾತವಿದ್ವಾಂಸ ಮತ್ತು ತತ್ತ್ವಜ್ಞಾನಿ. ಅವನೇ ಈ ಸಿದ್ಧಾಂತದ ಪ್ರಮುಖಪ್ರತಿಪಾದಕ (ಸತ್ವಪ್ರಾ. ೩೦೯). [ಸಂ.]

ಪ್ರತಿಪಾದನ (ನಾ). ೧. ನೀಡುವಿಕೆ; ದಾನ: "ತ್ಯಾಗಃ, ವಿಹಾಪಿತಂ, ದಾನಂ . . . ಪ್ರತಿಪಾದನಂ . . . ಸತ್ಪಾತ್ರದಲ್ಲಿ ಶಾಸ್ತ್ರೋಕ್ತಪ್ರಕಾರ ತಾನಾಗಿ ಕೊಡುವಿಕೆ, ತನ್ನ ಒಡವೆಯನ್ನು ಪುಣ್ಯಕ್ಕಾಗಿ ಮತ್ತೊಬ್ಬರಿಗೆ ಕೊಟ್ಟು ತನ್ನ ಸ್ವತ್ವಸಂಬಂಧವನ್ನು ಬಿಡುವಿಕೆ" (ಸಿದ್ಧಾಂತಿ. ೨೨೨). ೨. ಹೇಳುವುದು ; ವಿವರಿಸುವುದು. ೩. ಉಪದೇಶಿಸುವುದು; ಬೋಧಿಸುವುದು. ೪. ಪ್ರಚುರಪಡಿಸುವುದು ; ಪ್ರಸಿದ್ಧ ಪಡಿಸುವುದು. ೫. ಪ್ರಮಾಣಗಳಿಂದ ಸಿದ್ಧಪಡಿಸುವುದು. ದೃಢಪಡಿಸುವುದು; ೬. ಉತ್ಪಾದಿಸುವುದು. [ಸಂ.]

ಪ್ರತಿಪಾದನೆ (ನಾ). ೧. ವಿವರಣೆ; ನಿರ್ವಚನ: ಅದರ ನಿರೂಪಣೆಯು ಕೆಲವು ಪ್ರಸಿದ್ಧವಾದ ಅಲಂಕಾರವಿಶೇಷಗಳ ಪ್ರತಿಪಾದನೆಗೆ ಯಾವ ಬಗೆಯಿಂದಲೂ ಸಮಾನವಲ್ಲವೆಂಬುದೂ ಮನದಟ್ಟಾಗುವುದು (ರ್ವಾಸ್ತಾಲೋ. ೩೯); ಈ ಪ್ರತಿಪಾದನೆ ಕನ್ನಡನುಡಿಯ ಅಭಿಮಾನಿಗಳಿಗೆ ಸದ್ಯೋ ರಮಣೀಯವಾಗಿ ತೋರಿದರೂ . . . ಇನ್ನೂ ನಿಷ್ಕರ್ಷೆ ಮಾಡಬೇಕಾಗಿದೆ (ಪ್ರಾಮಿ. ೨೫); ಗಹನವಾದ ವಿಷಯದ ಪ್ರತಿಪಾದನೆಯಾಗಬೇಕಾಗಿದ್ದರೂ ಸರಳವೂ ಆಕರ್ಷಣೀಯವೂ ಆದ ಶೈಲಿ ಮಕ್ಕಳ ಬೇಸರವನ್ನು ಕಡಮೆ ಮಾಡೀತು (ಶಿಕ್ಷದ. ೨೬೯). ೨. ಪ್ರಮಾಣಗಳಿಂದ ಸಿದ್ಧಪಡಿಸಿದುದು; ಸಿದ್ಧಾಂತ: ಇವನ ಪ್ರತಿಪಾದನೆಯಂತೆ ಜಗತ್ತಿನ ಉಪಾದಾನ ಕಾರಣ (Material Cause) "ಅಪ್" ತತ್ವ (ಪುಕ್ಷಾರ. ೭ ಪೀಠಿ).

[ಸಂ. ಪ್ರತಿಪಾದನ]

ಪ್ರತಿಪಾದಿತ (ಗು). ೧. ವಿವರಣೆಯನ್ನು ಹೊಂದಿದ.—ಒಳಗೊಂಡ. ೨. ತಿಳಿಸಿದ; ಹೇಳಿದ. ೩. ಸ್ಥಿರಪಡಿಸಿದ; ಸಮರ್ಥನೆಯನ್ನು ಹೊಂದಿದ. (ನಾ). ೪. ಹೇಳಿದುದು; ವಿವರಿಸಿದುದು: ಪ್ರತಿ ಪಾದಿತವಾಗಿರುವ ವಿಷಯ ಮಕ್ಕಳಿಗೆ ಆಸಕ್ತಿ ಹುಟ್ಟಿಸುವಂತಿರಬೇಕು (ಶಿಕ್ಷದ. ೭೪೯). [ಸಂ.]

ಪ್ರತಿಪಾದಿಸು (ಕ್ರಿ). ೧. ವಿವರಿಸು; ಹೇಳು: ಬೃಹದಾರಣ್ಯಕಶ್ರುತಿಯು ಪರಶಿವನ ಮೂರ್ತ, ಅಮೂರ್ತರೂಪಗಳೆರಡನ್ನೂ ಪ್ರತಿಪಾದಿಸುತ್ತದೆ (ಕಕ್ತಿ. ೨೩); ವಿಷಯವನ್ನು ಪ್ರತಿಪಾದಿಸುವಾಗ ಲೇಖಕರ ವೈಯಕ್ತಿಕ ಅಭಿಪ್ರಾಯಗಳನ್ನು . . . ಸ್ಪಷ್ಟಪಡುವಂತೆ ಮಾಡಬೇಕು (ಶಿಕ್ಷದ. ೨೭೦). ೨. ಬೋಧಿಸು; ಉಪದೇಶಿಸು: ಧರ್ಮಾನುಧರ್ಮವಂ ಪ್ರತಿಪಾದಿಪಂ . . . ತಥಾಗತಂ(ಪ್ರಶಾಖ. ೭೫-೩೦೫); ಪುರಾಣಗಳು ಕೂಡ ಭಕ್ತಿಮಾರ್ಗವನ್ನೇ ಪ್ರತಿಪಾದಿಸಿರುವುವು (ಕಗಂಗಾ. ೦೦); ಚೈತನ್ಯರು ಪ್ರತಿಪಾದಿಸಿದ ತತ್ವಗಳ ಮೇಲೆ ನಿಂತ ವೈಷ್ಣವಸಂಪ್ರದಾಯವೇ ಇಂದು ಮಣಿಪುರದಲ್ಲಿ ಸಜೀವತ್ವವನ್ನು ಪಡೆದಿದೆ ಎನ್ನಬಹುದು (ಭಾರಣಾ. ೪೩). ೩. ಪ್ರಚಾರ ಮಾಡು; ಪ್ರಸಿದ್ಧಪಡಿಸು: ಪ್ರೌಢವಿವಾಹ, ವಿಧವಾವಿವಾಹ . . . ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ಈ ಧರ್ಮವು ಬಂಗಾಲದ ಈ ವಿಚಾರವಂತರನ್ನು ಆಕರ್ಷಿಸಿತು (ರರ್ಮಾಗಾ. ೬೫). ೪. ದೃಢಪಡಿಸು; ಸಮರ್ಥಿಸು; ಸಾಧಿಸು : ವಿಮರ್ಶೆ ಮಾಡುವ ಅಧಿಕಾರ ಎಲ್ಲರಿಗೂ ಇದೆಯೆಂದು ನಾನು ಮೊದಲಿಂದ ಪ್ರತಿಪಾದಿಸಿದ್ದೇನೆ (ಸಮುಕೀ. ೦೨೫೩).

[ಪ್ರತಿಪಾದನ + — ಇಸ್ಸು]

ಪ್ರತಿಪಾದುಕ (ನಾ). ಮಂಚ ಮೊದಲಾದುವನ್ನು ಇಡುವುದಕ್ಕಾಗಿ ಮಾಡಿದ ಎತ್ತರದ ಪೀಠ.—ವೇದಿಕೆ: ಅನೇಕರತ್ನರಚಿತಪ್ರತಿಪಾದುಕ ವಿನ್ಯಸ್ತಕಾಂಚನಮಂಚೋಪಶೋಭಿತದೊಳ್ . . . ನಿದ್ರಾರಸವಶಗತ ರಾಗಿರ್ದರ್ (ಅದಿಪು. ೫-೨೨ ಪ). [ಸಂ. ಪ್ರತಿಪಾದುಕಂ]

ಪ್ರತಿಪಾದ್ಯ (ಗು). ೧. ವಿವರಣೆ ಹೊಂದುವ.—ಹೇಳುವ : ಗ್ರಂಥಾ ರಂಭದಲ್ಲಿ ಮಂಗಳಾಚರಣಾದಿಗಳು ಮಾಡಬೇಕಾದರೆ ಅದಕ್ಕೆ ಅರ್ಹರಾದ ದೇವತೆಗಳು ಎರಡು ವಿಧ. ಗ್ರಂಥ ಪ್ರತಿಪಾದ್ಯದೇವತೆ; ಇಷ್ಟದೇವತೆ (ಹಸಾರ. ೦-೦ ವಿಶೇಷಾರ್ಥ). ೨. ಸಮರ್ಥನೆ ಹೊಂದುವ. (ನಾ). ೩. ಉಪಯೋಗಿಸಲು ಅರ್ಹವಾದುದು ; ಪ್ರಯೋಗಿಸಲು ಯೋಗ್ಯವಾದುದು : ಪ್ರತಿಪಾದ್ಯಮುತ್ವಮಿತ್ವಂ ಮತಿವಂತರಿನೆಯ್ದೆ ಪೂರ್ವಕಾಲಕ್ರಿಯೆಗೆ (ಶಮದ. ೨೩೬). ೪. ವರ್ಣನೆ ಹೊಂದುವಂಥದು; ವಿವರಿಸುವಂಥದು : ಸಕಲಜ್ಞ ಪ್ರತಿಪಾದ್ಯಮಪ್ಪ ಭುವನಂ ದೇಶಂ . . . ಇವೆಂಟೆನಿಕ್ಕುಂ (ಪುಲ್ಲಿಪು. ೦-೫೪). ೫. [ಕಾವ್ಯಮೀ] ವ್ಯಕ್ತಿಯು ಮಾತಿನಿಂದ ಹೇಳಬೇಕೆಂದಿರುವ ಅರ್ಥ : 'ಪ್ರತಿಪಾದ್ಯ' ವಾದರೋ ಹೇಳುವವನ ಅರ್ಥಪ್ರತಿಪಾದನೇಚ್ಛೆಗೆ ಲಕ್ಷ್ಯವಾದ ಅರ್ಥ; (ಶಬ್ದವಲ್ಲ). ಆ ಅರ್ಥವೂ ಎರಡು ವಿಧ : (೧) 'ವಾಚ್ಯ' ಮತ್ತು (೨) 'ವ್ಯಂಗ್ಯ' (ರ್ವಾಸ್ತಾಲೋ. ೨೦೫). [ಸಂ.]

ಪ್ರತಿಪಾನ (ನಾ). ೧. ಕುಡಿಯುವುದು. ೨. ಕುಡಿಯುವ ನೀರು. ೩. [ಅಶ್ವಶಾ] ಕುದುರೆಗಳಿಗೆ ಕುಡಿಸುವ ಬಲವರ್ಧಕಪಾನೀಯ : ಪ್ರತಿಪಾನಮೆಂಬುದಾಱುಂ ಋತುಗಳೊಳಂ ಬೇಱೆವೇಱೆ ದಿವ್ಯೌಷಧಸಂಯುತದೊಳ್ ಕುಡುಗುಂ (ಅಶ್ವಶಾ. ೭-೬೮); ಮಾಗಧತೈಲಂ ಸೈಂಧವನಾಗರ ಸುರದಾರುಗಳ್ ಸುರಾಪಾನದ ಸಂಯೋಗದೊಳಶ್ವಂಗಳ್ಗೆ ಘನಾಗಮದೊಳ್ ಕೊಡೆ ಮನೋಹರಂ ಪ್ರತಿಪಾನಂ (ಅಶ್ವಶಾ. ೭-೬೬). [ಸಂ.]

ಪ್ರತಿಪಾನಕ (ನಾ). = ಪ್ರತಿಪಾನ ೩ : ಪಿಪ್ಪಲಿ ಸಿಂಧೂತ್ಥಂ ಸದಗುಪ್ಪೆ [ಯು] ಮರಿಚಾಗ್ನಿ ನಾಗರಂ ವಾಸಿತದಿಂದೊಪ್ಪುವ ಕಳ್ ಪ್ರತಿಪಾನಕ ಮಪ್ಪುದು ತುರಗಕ್ಕೆ ವರುಷಋತುವರ್ತಕದೊಳ್ (ಅಶ್ವಶಾ. ೭-೬೭). [ಸಂ.]

ಪ್ರತಿಪಾಪ (ನಾ). ಒಂದಂ ಪಾಪಕ್ಕೆ ಬದಲಾಗಿ ಮಾಡುವ ಅಥವಾ ಮಾಡಿಸುವ ಮತ್ತೊಂದು ಪಾಪ : ಅವನ ತೊಡೆಯಡಗನೆ ತಳ್ವಿಲ್ಲದ ವಂಗಿಕ್ಕುವರೇಂ ಪೊಲ್ಲದುದೋ ಮಾಂಸಸೇವನಪ್ರತಿಪಾಪಂ (ಶಾಂತಿಪು. ೭-೧೬). [ಸಂ.]

ಪ್ರತಿಪಾಲ (ನಾ). ಕಾಪಾಡುವವನು ; ಸಂರಕ್ಷಿಸುವವನು ; ರಕ್ಷಕ : ಪುರಾರಿಯ ದೇಗುಲಕ್ಕವರೆಯ್ದಿ ತಚ್ಚರಣಾಗತಪ್ರತಿಪಾಲನಂ ಕಾಣುತ್ತ ಪೊಡವಂಟು (ಬಸವು. ೨೮-೩೭). [ಸಂ.]

ಪ್ರತಿಪಾಲನ (ನಾ). ೧. ಕಾಪಾಡುವುದು ; ರಕ್ಷಿಸುವುದು. ೨. ಪೋಷಿಸುವುದು ; ಪೋಷಣೆ. [ಸಂ.]

ಪ್ರತಿಪಾಲನೆ (ನಾ). = ಪ್ರತಿಪಾಲನ ೧ : ಕೋಲಾರಜಿಲ್ಲೆಯ ಎರಡು ಶಾಸನಗಳಲ್ಲಿ . . . ಬೀರನೊಳಂಬ ಅಣ್ಣೆಗನು ' ದುಷ್ಟನಿಗ್ರಹಶಿಷ್ಟಪ್ರತಿಪಾಲನೆ 'ಯನ್ನು ಮಾಡಿ ರಾಜ್ಯವನ್ನು ಆಳುತ್ತಿದ್ದನೆಂದು ಹೇಳಿದೆ (ಸೊಳಂಬ. ೪೦). [ಸಂ. ಪ್ರತಿಪಾಲನ]

ಪ್ರತಿಪಾಲಿತ (ಗು). ಕಾಪಾಡಿದ ; ರಕ್ಷಿತವಾದ : ಅನಂತಭೋಗನಿಲಯಂ ಪ್ರತಿಪಾಲಿತಧರ್ಮಚಕ್ರನಬ್ಜಾಯತನೇತ್ರನಾದಿಪುರುಷಂ . . . ಈಗೆಮಗೆ ಮಂಗಳಕಾರಣಮುತ್ಸವಂಗಳಂ (ಗಣಾಯು. ೦-೦). [ಸಂ.]

ಪ್ರತಿಪಾಲಿಸು, ಪ್ರತಿಪಾಳಿಸಂ (ಕ್ರಿ) ೧. ಕಾಪಾಡು ; ರಕ್ಷಿಸು : ಎಲ್ಲಾ ಋಷಿಸಮುದಾಯಮುಮಂ ಪ್ರತಿಪಾಲಿಸಲ್ಕೆ ಸಮರ್ಥರಾಗಿರ್ಪನ್ನೆಗಂ ಗೋವರ್ಧನಭಟ್ಟಾರರ್ ಸಮಾಧಿಮರಣದಿಂದಂ . . . ದೇವಲೋಕಕ್ಕೆ ಪೋದರ್ (ವಡ್ಡಾರಾ. ೭೪-೨೭) ; ನೆಲನಂ ಪ್ರತಿಪಾಲಿಸಿ ಧರ್ಮಸೂನು ಸುಖಮಿರ್ದಂ ರಿಪುಬಳತಿಮಿರಭಾನು (ಪಂಪಭಾ. ೪-೦೦) ; ಮಹಾಮಂಡಳೇಶ್ವರ ಪದವಿಯನಲಂಕರಿಸಿ ಮಹೀಮಂಡಲಮಂ ಪ್ರತಿಪಾಲಿಸಿ . . . ಸಾಮ್ರಾಜ್ಯಲಕ್ಷ್ಮಿಯಂ ತಾಳ್ದಿ (ಅಜಿಪು. ೯-೬ ಪ). ೨. ನಡೆಸು ; ನೆರವೇರಿಸು : ಅರಸುಗಳವಿಚಾರದಿಂದಾರಾನುಮಂ ಕೊಲಲುಂ ಕಿಡಿಸಲುಮೆಂದಿರ್ದರಲ್ಲದೆ ಮಂತ್ರಿಗಳಿಚ್ಚೆಯಂ ಪ್ರತಿಪಾಲಿಸರ್ (ಪಂಪಸಂ. ೦೩೬-೩); ಪೊಲ್ಲರೊಳ್ಳೆಳೆಗೊಳ್ಳದಿರ್ಪುದು ಶಿಷ್ಟರೊಳ್ ವಿನಯಮಂ ಪ್ರತಿಪಾಲಿಸಿರ್ಪುದು (ಧರ್ಮಾಮೃ. ೩-೦೦೦). ೩. ಯಥಾಸ್ಥಿತಿಯಾಗಿರುವಂತೆ ನೋಡಿಕೊಳ್ಳು ; ಲೋಪಬರದಂತೆ ಆಸಕ್ತಿವಹಿಸು : ಸೋದರರೆಣ್ಬರುಂ ಪಸುಗೆಯಂ ಪ್ರತಿಪಾಲಿಸಿ ಲೋಕಪಾಲರಂತಾದರದಿಂದೆ ಬೆಚ್ಚು ಬೆಸಕೆಯ್ಯೆ (ಅರ್ಧನೇ. ೪-೦೩೦); ಈ ಧರ್ಮ್ಮಮಂ ಸಾಸಿರ್ವ್ವರು ತಪ್ಪದೆ ಪ್ರತಿಪಾಲಿಸುವದು (ಇಅ. IV. ೨೭೬-೯೯ ; 1184). **ಪ್ರತಿಪಾಳಿಸು** : ೧. ಪಲವುಂ ಋದ್ಧಿಗಳಿಂ ಕೂಡಿದೊರೆಲ್ಲಾ ಋಷಿಸಮುದಾಯಮುಮಂ ಪ್ರತಿಪಾಳಿಸುತ್ತಂ (ವಡ್ಡಾರಾ. ೭೫-೩); ಕ್ಷಿತಿಯಂ ನಯವಿಕ್ರಮದಿಂ ಪ್ರತಿಪಾಳಿಸಿ ಪಡೆದು ಗೋತ್ರನಿಸ್ತಾರಕನಂ ಸುತನಂ (ವರ್ಧಮಾ. ೨-೩೯). ೩. ಮೇಂಟಿ ಖಣ್ಡುಗ ದೇವರ್ಗ್ಗೆ ಇನ್ತೀ ಧರ್ಮ್ಮಮಂ ಪ್ರತಿಪಾಳಿಸಿದವರ್ . . . ಪತ್ತು [ಸಾ]ಸಿರಕಪಿಳೆಯಂ ದಾನಂಗೊಟ್ಟ ಫಳಮಕ್ಕುಂ (ಸೌಇಇ. XI - I, ೨೨-೪೦ ; 897) ; ಆ ನೆಲನ ದೇವರ್ಗ್ಗೆ ಧಾರೆಯೆಱೆದು ಕೊಟ್ಟು ತಮ್ಮ ಧರ್ಮ್ಮಂ ಮಾಡಿ ಪ್ರತಿಪಾಳಿಸಿದರ್ (ಸೌಇಇ. XX, ೨೦-೭೩ ; 1019) ; ಇನ್ನು ಬಿಟ್ಟ ದತ್ತಿಯಂ ಪ್ರತಿಪಾಳಿಸಿದ ಮಹಾಪುರುಷಂಗೆ . . . ದಾನಂಗೊಟ್ಟ ಫಳಮನೆಯ್ದುವಂ (ಎಕ. VIII, ಶಿಪಸೊ. ೫೭-೬೯ ; 1115). [ಪ್ರತಿಪಾಲನ + — ಇಸ್ಕು₃]

ಪ್ರತಿಪಾಳಿಸು 'ಪ್ರತಿಪಾಲಿಸು' ನೋ.

ಪ್ರತಿಪೂಜೆ (ನಾ). ಗೌರವ ; ಮರ್ಯಾದೆ : ವಸುಧೆಯೊಳು ಮುನ್ನ ಪ್ರತಿಷ್ಠಿಸಿದ ಲಿಂಗಗಳಿಗೆಸಗದಿರು ಪ್ರತಿಪೂಜೆಯನ್ನು ಶ್ರೀವೀರಶೈವಾಚಾರಕದು ಹಾನಿಯು (ಪಸಸೋ. ೦೯-೪೦). [ಸಂ. ಪ್ರತಿಪೂಜಾ]

ಪ್ರತಿಪ್ರಾಣ (ನಾ). ಪ್ರತಿಬಿಂಬ: "ಪ್ರತಿಬಿಂಬಂ...ಪ್ರತಿಪ್ರಾಣಮೆಂದೆನಲದುಂ ಪ್ರತಿಯಪ್ಪ ರೂಪೆನಿಕ್ಕುಂ" (ಮುಂಗರಾ. ೬-೨೬). [ಸಂ.]

ಪ್ರತಿಫಲ (ನಾ). ೧. ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರಕುವ ಫಲ, -ಪ್ರಯೋಜನ : ಸಾಮಾನುಗಳನ್ನು ಕೊಂಡುಕೊಳ್ಳುವಾಗ ನೀವು ಕೊಡುವ ಬೆಲೆಗೆ ಸರಿಯಾದ ಪ್ರತಿಫಲ ಸಿಗಬೇಕಾದರೆ . . . ದೂರದೃಷ್ಟಿಯಿರಬೇಕು (ಅಡುಸೌ. ೦೬೯); ಯಾವ ಕೆಲಸಕ್ಕೂ ಪ್ರತಿಫಲವನ್ನು ಅಪೇಕ್ಷಿಸುತ್ತೇವೆ. ಪ್ರತಿಫಲ ಬಾರದಿದ್ದಲ್ಲಿ ಮರುಗುತ್ತೇವೆ (ಧರ್ಮಾಸಾ. ೦೩೩); ತೋಟಗಾರರಿಗೆ ಸಲ್ಲುತ್ತಿದ್ದ ಪ್ರತಿಫಲ ವಿಧವಿಧವಾದುವು (ಶಾಸಗಿ. ೩೬). ೨. ಪ್ರತಿಬಿಂಬ ; ಪಡಿನೆಳಲು. ೩. ಪ್ರತ್ಯುಪಕಾರ. [ಸಂ.]

ಪ್ರತಿಫಲನ (ನಾ). ೧. ಪ್ರತಿಬಿಂಬ; ಪಡಿನೆಳಲು : ಪರಶಿವನು . . . ಅಧಿಕಭಾವವನ್ನು ಹೊಂದಿದ ಸ್ವಪ್ರಕಾಶತ್ವದಲ್ಲಿ ಪ್ರತಿಫಲನರೂಪದಿಂದ ಸ್ಫುರಿಸಿ ಲಿಂಗವೆನಿಸಿದನು (ಭಾರದ. ೨೫೩); ಮಯೂರದ ಗರಿಗಳ ಪ್ರತಿಫಲನವು ಅವನ ಮೇಲೆ ಬಿದ್ದುದರಿಂದ ಮಯೂರವರ್ಮನೆಂದೂ ಬಿರುದಾಂಕಿತನಾದನು (ತುಳುವಾ. ೦೦೪). ೨. ಪ್ರತಿಬಿಂಬಿಸುವುದು. ೩. ಪ್ರತಿಫಲ. [ಸಂ.]

ಪ್ರತಿಫಲಿತ, ಪ್ರತಿಫಳಿತ (ಗು). ೧. ಪ್ರತಿಫಲಿಸಿದ ; ಪ್ರತಿಬಿಂಬಿತವಾದ. ೨. ಪ್ರತಿಫಲವನ್ನುಂಟುಮಾಡಿದ ; ಪರಿಣಾಮ ಬೀರಿದ: ಜಲಧಿಯಲಿ ಫಣಿವದನದಲಿ . . . ಸಿಲುಕಿದಡೆ ಬಿಡಿಸುವವಲೇ ಪ್ರತಿಫಲಿತ ಪೂರ್ವಾದತ್ತಪುಣ್ಯಾವಳಿಗಳೆಂಬುದು ತನ್ನೊಳಾದುದು (ಕುಮ್ಮಾಗ. ೪-೨೫). (ನಾ). ೩. ಪ್ರತಿಬಿಂಬಿತವಾದುದು : ಕನ್ನಡಿಯಂತಹ ಪ್ರತಿಫಲನ ಕಾರಕವಾದ ಮೇಲ್ಮೈಯಿಂದ ಒಂದು ನಿಯಮವನ್ನನುಸರಿಸಿ ಪ್ರತಿಫಲಿತವಾದರೆ ಅಂತಹ ಮೇಲ್ಮೈಯು ನಮಗೆ ಗೋಚರವಾಗುವುದಿಲ್ಲ (ಭೌತವಿ. ೦೩೪). **ಪ್ರತಿಫಳಿತ** : ೧. ಲಲನಾನಿಕಾಯನಿವಳಿತ ನೀರಾಂಜನ ದೀಪಕಳಿಕಾಪ್ರತಿಫಳಿತಮೌಳಿಮಾಣಿಕ್ಯನುಂ (ಕಂಪ್ರಪು. ೮-೨೪ ಪ). [ಸಂ.]

ಪ್ರತಿಫಲಿಸು (ಕ್ರಿ). ೧. ಪ್ರತಿಬಿಂಬಿಸು : ನಲಕೂಬರನು. . . ದೂರದರ್ಶಕವೆಂಬ ಕನ್ನಡಿಯೊಳ್ ಪ್ರತಿಫಲಿಸಿದ ದಿಕ್ಪಾಲಕಪುರುಗಳನೀಕ್ಷಿಸುತ್ತಲು (ಸೌಗಂಧಿ. ೩೦೬-೯); ಈ ಎಲ್ಲ ವಸ್ತುಗಳಲ್ಲಿ ಬೆಳಕನ್ನು ಕೊಡುವ ಶಕ್ತಿ ಇಲ್ಲದಿದ್ದರೂ ಬೆಳಕನ್ನು ಪ್ರತಿಫಲಿಸುವ ಶಕ್ತಿ ಇದೆಯಷ್ಟೆ (ಶಾಲಪ್ರ. II, ೮೭೩). ೨. ಪರಿಣಾಮವಾಗಿ ಬರು,—ಆವಿರ್ಭವಿಸು : ಅತಿಮಥನಿಸಿದರೆ ಶ್ರೀಗಂಧದೊಳು ಕಿಚ್ಚು ಪ್ರತಿಫಲಿಸುವುದಲ್ತೆ (ಭರತ. ೦೯-೯೬); ಅವನ ಧ್ವನಿಯಲ್ಲಿ ಅಷ್ಟೊಂದು ಹೊತ್ತಿನವರೆವಿಗೂ ಮನೆಗೆ ಹೋಗದೆ ಇರಬೇಕಲ್ಲಾ ಎಂಬ ಜುಗುಪ್ಸೆಯು ಪ್ರತಿಫಲಿಸಿತು (ಮೊಗ್ಗು. ೩೪). [ಪ್ರತಿಫಲನ + — ಇಸ್ಕು₃]

ಪ್ರತಿಫಳಿತ 'ಪ್ರತಿಫಲಿತ' ನೋ.

ಪ್ರತಿಬಂದಿ₁ (ನಾ). ವಿರೋಧವಾದುದು ; ಪ್ರತಿಯಾದುದು : ನಾನು ಹೇಳಿದ್ದಕ್ಕೆಲ್ಲ ಪ್ರತಿಬಂದಿಯಾಗಿಯೇ ಉತ್ತರ ಕೊಡುತ್ತೀಯಲ್ಲ (ರೂಠಿ). [ಸಂ. ಪ್ರತಿಬಂದೀ]

ಪ್ರತಿಬಂದಿ₂ (ನಾ). ಮೋಜಣಿ ; ಸರ್ವೆ; ಚಕ್ಕುಬಂದಿ : ಯಾವತ್ತು

ಧೂಮಿಯನ್ನು ಅಳಿದು ಪ್ರತಿಬಂದಿಯ ದರಗಳನ್ನು ಗೊತ್ತುಮಾಡಿದ ಬಳಿಕ ಪೊಟ್ಟು ಸರಕಾರಿ ಕಂದಾಯದಲ್ಲಿ ಶೇಕಡಾ ಮೂವತ್ತರಂತೆ ಸರಕಾರಕ್ಕೆ ಸುಕಸಾಸು ಬಂತು (ಕಥಾಗ. ೬೬೬). [ಪ್ರತಿ + < ಬಂದ್ಯು]

ಪ್ರತಿಬಂಧ (ನಾ). ೧. ತಡೆ; ಅಡಚಣೆ; ಅಡ್ಡಿ: "ಏಷ್ಟಂಭಃ, ಪ್ರತಿಬಂಧಃ— ಈ ೨ ತಗುವುದು" (ಪರಾಯು. ೦೨೬-೯೪). ೨. ಸಂಬಂಧವನ್ನು ಹೊಂದುವುದು. [ಸಂ.]

ಪ್ರತಿಬಂಧಕ (ಗು). ೧. ಅಡ್ಡಿಯನ್ನುಂಟುಮಾಡುವ; ಅಡಚಣೆಯನ್ನುಂಟುಮಾಡುವ: ದೇವತಾಕಾರ್ಯಕ್ಕೆ ಪ್ರತಿಬಂಧಕವಾಕ್ಯಗಳನ್ನು ಹೇಳಬೇಡಿ (ಕೂಡಿ). (ನಾ). ೨. ಅಡ್ಡಿಯಾಗಿರುವುದು; ಅಡಚಣೆಯಾಗಿರುವುದು: ಸುತಜನ್ಮಕ್ಕಂ ಪಿರಿದುಂ ಪ್ರತಿಬಂ[ಧಕಾಂ. ಬೋ] ಧಕಮೊಂದು ಪೂರ್ವಜನ್ಮಾಂತರಸಂಗತಮುಂಟು (ಸಂಸ್ಕೃತ. ೩-೭೬). ೩. ಅಡ್ಡಿ; ಅಡಚಣೆ; ತಡೆ: ಧರ್ಮಚಿಂತನೆಗೆ ಪ್ರಬಲವಾದ ಪ್ರತಿಬಂಧಕಗಳಿನ್ನೂ ಇವೆ (ಅರ್ಯಾಧ. ೩); ಈ ಅಹಂಕಾರ ವಿಶ್ವಸಾಮರಸ್ಯದರ್ಶನಕ್ಕೆ ಪ್ರತಿಬಂಧಕವಾಯಿತು (ಮಕ್ಕಾಕ. ೩೨ ಪೀಠಿಕೆ). ೪. ಅಡ್ಡಿಪಡಿಸುವವನು; ತಡೆಗಟ್ಟುವವನು: ಅಂಧತೆಯನೇನೆಂದೆನೈ ಪ್ರತಿಬಂಧಕರು ಬೇಡೆನಲು ನಯದಭಿಸಂಧಿಯಲಿ ಸೀವರಿಸಿ ಸಂವರಿಸಿದನು ಸೈನಿಕವ (ಕುಸ್ಮಾಲ. ೨೨-೨). ೫. [ನ್ಯಾಯಶಾ] ಕಾರ್ಯವು ನಿಂತುಹೋಗುವುದಕ್ಕೆ ಕಾರಣವಾದುದು: ಪ್ರತಿಬಂಧಕವೆಂದರೆ ಸಾಮಗ್ರಿಯೆಂಬ ಕಾರಣಸಮುದಾಯಕ್ಕೆ ನ್ಯೂನತೆಯನ್ನುಂಟುಮಾಡುವುದು. ಅದೇ ಸಾಮಗ್ರಿಕವೈಕಲ್ಯವು. ಅದನ್ನುಂಟುಮಾಡುವುದು ಪ್ರತಿಬಂಧಕ (ಹಿಂದಸಾ. ೦೩೦). [ಸಂ.]

ಪ್ರತಿಬಂಧಕಾಜ್ಞೆ (ನಾ). [ರಾಜನೀ] ಜನರು ಗುಂಪುಗೂಡುವುದರಿಂದ ಶಾಂತಿಭಂಗವಾಗುವುದೆಂದು ನಿರ್ಧಾರವಾದಾಗ (ನಾಲ್ಕು ಜನರಿಗಿಂತ ಹೆಚ್ಚು ಜನರು ಒಟ್ಟಿಗೆ ಸೇರಬಾರದು, ಮೆರವಣಿಗೆ ನಡೆಸಬಾರದು ಮೊದಲಾದ) ನಿರ್ಬಂಧಗಳನ್ನು ವಿಧಿಸುವ ರಕ್ಷಣಾಧಿಕಾರಿಗಳ ಅಪ್ಪಣೆ; ಭಾರತಶಾಸನದ ೫೬, ೧೪೪ ಮೊದಲಾದ ವಿಧಿಗಳ ಚಲಾವಣೆ: ತುರ್ತುಪರಿಸ್ಥಿತಿಯಲ್ಲಿ ಜಾರಿಗೊಳಿಸಿದ ಪ್ರತಿಬಂಧಕಾಜ್ಞೆಯನ್ನು ಮೀರಿ ನಡೆದವರನ್ನು ದಸ್ತಗಿರಿ ಮಾಡಲಾಗುವುದು (ಕೂಡಿ). 'ನಿಷೇಧಾಜ್ಞೆ' ಪರಾ. [ಪ್ರತಿಬಂಧಕ + ಆಜ್ಞೆ]

ಪ್ರತಿಬಂಧನ (ನಾ). ೧. ಕಟ್ಟಿ ಹಾಕುವುದು. ೨. ತಡೆಯುವುದು; ಅಡ್ಡಿಪಡಿಸುವುದು. ೩. ಸೆರೆ; ಬಂಧನ. [ಸಂ.]

ಪ್ರತಿಬಂಧಪಡಿಸು (ಕ್ರಿ). ಅಡ್ಡಿಪಡಿಸು; ತಡೆ: ಎಲೈ ಸೂಚಕನೆ, ಎಲ್ಲವನ್ನೂ ಕ್ರಮವಾಗಿ ಹೇಳಲಿ, ಅಷ್ಟರೊಳಗೆ ಇವನನ್ನು ಪ್ರತಿಬಂಧಪಡಿಸಬೇಡ (ಶಾಕುಂತ. ೬೫-೦೩). [ಪ್ರತಿಬಂಧ + ಪಡಿಸು]

ಪ್ರತಿಬಂಧಿನಿ (ನಾ). ಪ್ರತಿಸ್ಪರ್ಧಿಯಾದುದು: ಕಟ್ಟಿದ ಕಂಠಿಕೆಗ ಮೆತ್ತಿದಯ್ಯಗೊಡೆಗಂ ದಯೆಗೆಯ್ದು ಯುವರಾಜಲಕ್ಷ್ಮಿಗಂ ಪ್ರತಿಬಂಧಿ [ಶಾಕಾಂ. ಬದ್ಧಿ]ನಿಯೆನಿಸಿದ ಮಧುಮಹೀಪಾಲನ ವಕುಲಮುಕುಲದ ಕಂಠಿಕೆಯುಂ . . . ಮಾಧವೀಲಕ್ಷ್ಮಿಯುಂ ತನಗಮರೆ (ಶಾಂತಿಪು. ೬-೨೩ ಪ). [ಸಂ. ಪ್ರತಿಬಂಧಿನೀ]

ಪ್ರತಿಬಂಧಿಸು (ಕ್ರಿ). = ಪ್ರತಿಬಂಧಪಡಿಸು: ಅವನ ಈ ಸುತ್ತಾಟವನ್ನು . . . ಅವಳು ಎಂದೂ ಪ್ರತಿಬಂಧಿಸುತ್ತಿರಲಿಲ್ಲ (ರಂಗರೋ. ೩೩); ನಿನ್ನ ದೀರ್ಘಜೀವನದ ಗುಟ್ಟೇನು? ನೆಗಡಿಯನ್ನು ಹೇಗೆ ಪ್ರತಿಬಂಧಿಸಿದಿ? (ರೇಳನ್ಯ. ೦೦). [ಪ್ರತಿಬಂಧನ + — ಇಸು]

ಪ್ರತಿಬದ್ಧ (ಗು). ೧. ಕೂಡಿಕೊಂಡಿರುವ; ಸೇರಿದ: ಪೂರ್ವವಿದೇಹದ . . . ವತ್ಸಕಾವತೀವಿಷಯಪ್ರತಿಬದ್ಧಪ್ರಭಾವತೀಪುರಿಯೊಳ್ (ಅದಿಪು. ೩-೫೮ ಪ); ಹಾ ಮನಃಪ್ರಿಯ ಪುಂಡರೀಕ ಜನ್ಮಾಂತರಾವಿಸ್ಮೃತಮದನುರಾಗ . . . ಎಂದುದ್ಗತಶೋಕೆಯಾಗಿ (ಕಾದಂಬಾ. ೬೦೯). (ನಾ). ೨. ಕೂಡಿಕೊಂಡಿರುವುದು; ಸೇರಿರುವುದು; ಸಂಬಂಧಿಸಿದುದು: ಇಂತೀ ಕಥೆಗಳೆಲ್ಲಂ ಗುರುದತ್ತಭಟಾರರ ಕಥೆಗೆ ಪ್ರತಿಬದ್ಧಂಗಳ್ (ಪಡ್ಮಾರಾ. ೦೬೦-೨೦); ಹಾರಲತೆಯಂತೆ ಕಂಠಯೋಗ್ಯಮುಂ ಗ್ರಹಪಂಕ್ತಿಯಂತೆ ಧ್ರುವಪ್ರತಿಬದ್ಧಮುಂ . . . ಅಪ್ಪ ಗೀತೆಯಿಂ ವೀಣೆಯಂ ಬಾಜಿಸುತ್ತಿರ್ದಳ್ (ಕಾದಂಪು. ೬೬೮); ಈ ಮಧ್ಯಮಲೋಕದ ಪ್ರತಿಬದ್ಧಮಾಗಿ ಚಿತ್ತೆಯೆಂಬ ನೆಲದಿಂ ಮೇಗೆ . . . ತಾರಾಗಣವಿಮಾನಂಗಳಿರ್ಕುಂ (ಸುಕುಮಾ. ೦೦-೫೯). ೩. ಅಡ್ಡಿಪಡಿಸಿದುದು; ಪ್ರತಿಭಟನೆಯನ್ನು ಹೊಂದಿದುದು. ೪. ಬಂಧಿಸಿದುದು; ಬಂಧನಕ್ಕೊಳಗಾದುದು. ೫. ಚಿನ್ನ ಮೊದಲಾದ ಲೋಹಗಳಲ್ಲಿ ಕುಂದಣಿಸಿರುವುದು,—ಮೆಟ್ಟಿರುವುದು. ೬. ನಿರಾಶೆಗೊಂಡವನು; ಹತಾಶ: "ಮನೋಹತಃ ಪ್ರತಿಹತಃ, ಪ್ರತಿಬದ್ಧಃ, ಹತಃ—೪ ಮನಸ್ಸಿನ ಉತ್ಸಾಹವು ತಪ್ಪಿದವನ ಹೆಸರು" (ಸಿದ್ಧಾಂತಿ. ೩೩೯). [ಸಂ.]

ಪ್ರತಿಬಲ (ನಾ). ೧. ಶತ್ರುವಿಗೆ ಸಮಾನವಾದ ಬಲವುಳ್ಳವನು,—ಸಾಮರ್ಥ್ಯವುಳ್ಳವನು. ೨. ಸಮರ್ಥ; ಶಕ್ತ. ೩. ಶತ್ರುಸೈನ್ಯ; ಪರಬಲ. ೪. ಹಗೆ; ಅರಿ; ಶತ್ರು: ಅಸಹಾಯನೆ ನೀಂ ಪ್ರತಿನೃಪರ ಸಹಾಯರ್ವೀಂ ಪ್ರತಿಬಲನದಱಿಂದನರ್ಥಕಂ ವಾಕ್ಯಾರ್ಥಂ (ಗದಾಯು. ೩-೪೫). [ಸಂ.]

ಪ್ರತಿಬಿಂಬ (ನಾ). ೧. ನೀರು, ಕನ್ನಡಿ ಮೊದಲಾದುವುಗಳಲ್ಲಿ ತೋರುವ ವಸ್ತುವಿನ ಪಡಿನೆಳಲು, —ಪ್ರತಿಚ್ಛಾಯೆ: "ಮಾರ್ಪೊಳೆದುದು ಪಡಿನೆಟಲಿಂಗಕ್ಕುಂ ಬುಧರಿಂ ಪ್ರತಿಬಿಂಬ" (ಕವಿಕಂ. ೨೩೨); ರತ್ನಸ್ತ್ರೀ ಪ್ರತಿಕೃತಿಯೊಳರ್ಕಬಿಂಬಪ್ರತಿಬಿಂಬಂ ನೆಲಸಿ ಪೀಡೆಯಂ ಮಾಡುಗುಮೇ (ಶಾಂತಿಪು. ೯-೨೦೪); ಪ್ರತಿಬಿಂಬದ ನೆವದಿಂ ವನತತಿಶೈಲಗ್ರಹನಿಕಾಯತಾರಾಂಕ ಜಗತ್ತ್ರಿತಯಮನಬ್ಜೋದರನಾಕೃತಿಯಂ ತನ್ನೊಳಗೆ ತಳೆದು ತಿಳಿಗೊಳನೆಸೆಗುಂ (ಕಾದಂಪು. ೬೩೮). ೨. ಮೂಲಾಕೃತಿಗೆ ಸದೃಶವಾದ ರೂಪ, ವಿಗ್ರಹ, ಪ್ರತಿಮೆ, ಚಿತ್ರ ಮುಂತಾದುವು: "ಪ್ರತಿಬಿಂಬಮಾ ಪ್ರತಿಚ್ಛಾಯಂ . . . ಪ್ರತಿಪ್ರಾಣಮೆಂದೆನಲದುಂ ಪ್ರತಿಯಪ್ಪ ರೂಪೆನಿಕ್ಕುಂ" (ಪುಂಗರಾ. ೯-೨೮); ನಿರ್ಮಲಪ್ರತಿಬಿಂಬ ಕಾಣಿಸಿತಾದಿನಾರಾಯಣನ ಮೂರುತಿಯ ಅಂಬುಜಾನನೆ ಕೌಸಲೆಯ ಗರ್ಭಾಂಬುನಿಧಿಯಲಿ (ಕೂರರಾ. ೬-೪); ಪರಮಾತ್ಮನ ಪ್ರತಿಬಿಂಬ ಅಥವಾ ಸಾದೃಶ್ಯಕ್ಕೆ "ಪ್ರತಿಮಾ" ಎಂಬ ಶಬ್ದವನ್ನು ಭಾರತೀಯರು ಉಪಯೋಗಿಸುತ್ತಾರೆ (ಭಾರದ. ೩೦೮). ೩. [ದ್ವೈತ] ಇಪ್ಪತ್ತು ಬಗೆಯ ದ್ರವ್ಯಗಳಲ್ಲಿ ಒಂದು; ಉಪಾದಾನ ಕಾರಣವಾಗಿರುವುದು: ಪರಮಾತ್ಮ, ಲಕ್ಷಿ . . . ವಾಸನಾ, ಪ್ರತಿಬಿಂಬ ಎಂದು ದ್ರವ್ಯಗಳು ಇಪ್ಪತ್ತು (ಹಿಂದಸಾ. ೨೬೫). [ಸಂ.]

ಪ್ರತಿಬಿಂಬಕಲ್ಪ (ನಾ). [ಕಾವ್ಯಮೀ] ಪೂರ್ವಕವಿಗಳು ಹೇಳಿರುವ ವಿಷಯವನ್ನು ತನ್ನ ಕೃತಿಯಲ್ಲಿ ಅಳವಡಿಸಿಕೊಳ್ಳುವ ಮೂರು ಬಗೆಗಳಲ್ಲಿ ಒಂದು; ಹಿಂದಿನ ಕವಿಗಳ ಕಾವ್ಯಾರ್ಥವನ್ನು ಬೇರೆ ಮಾತುಗಳಲ್ಲಿ ತನ್ನ ಕೃತಿಯಲ್ಲಿ ವರ್ಣಿಸುವುದು: ಹೋಲಿಕೆಗಳನ್ನು ಆನಂದವರ್ಧನನು "ಪ್ರತಿಬಿಂಬಕಲ್ಪ", "ಆಲೇಖ್ಯಪ್ರಖ್ಯ", "ಸಮಾನದೇಹಿಕಲ್ಪ" ಎಂದು ಮೂರು ಬಗೆಯಾಗಿ ವಿಂಗಡಿಸುತ್ತಾನೆ... "ಪ್ರತಿಬಿಂಬಕಲ್ಪ" ಎಂಬುದರ ಹೆಸರೇ ಸೂಚಿಸಿರುವಂತೆ, ಅದರ ತಿರುಳೆಲ್ಲವೂ ಪರಕವಿಯದು. ಮಾತಿನ ಹೊದಿಕೆ ಮಾತ್ರ ಇವನದು (ಭಾರದಿಮಾ. ೦೯೬). [ಸಂ.]

ಪ್ರತಿಬಿಂಬಚೈತನ್ಯ (ನಾ). [ಅದ್ವೈತ] ಜೀವಿಯ ಅಂತಃಕರಣದಲ್ಲಿ ಮೂಡಿರುವ ಪರಮಾತ್ಮ; ಶುದ್ಧಚೈತನ್ಯ: ಅಧಿಷ್ಠಾನಚೈತನ್ಯವು ಪ್ರತಿಬಿಂಬಚೈತನ್ಯವೂ ಯೀಯೆರಡು ಕೂಡಿ ಯೀಶ್ವರನು (ಉಕ್ಷಸ್ವ. ೨-೬). [ಸಂ.]

ಪ್ರತಿಬಿಂಬನ (ನಾ). ೧. =ಪ್ರತಿಬಿಂಬ ೧. ೨. ಹೋಲಿಕೆ ; ಸಾದೃಶ್ಯ; ಎಣೆ: ಎಲ್ಲಕ್ಕೂ ಹೆಚ್ಚಿನ ಪ್ರತಿಬಿಂಬನ ಸ್ವಾಮಿದಾಸರ ಹಿಮಾಲಯ ಯಾತ್ರೆಯನ್ನು ವರ್ಣಿಸುವ ೧೪೩ನೆಯ ಪ್ರಕರಣದಲ್ಲಿ ದೊರೆಯುತ್ತದೆ (ಸಮಾಜ. ೩೩ ಬೀಕಿಕೆ). [ಸಂ.]

ಪ್ರತಿಬಿಂಬಿತ (ಗು). ೧. ಪಡಿಮೂಡಿದ; ಪ್ರತಿಫಲಿತವಾಗಿರುವ : ಅನರ್ಘರತ್ನಮಣಿಮಕುಟಕಿರೀಟಮಯೂಖಮಾಲಿಕಾಪರಿಚಿತಪ್ರಭಾಕದಂಬಕ ಪ್ರತಿಬಿಂಬಿತವಿಮಾನಭಿತ್ತಿವಿತಾನಂ (ಕಾಂತಿಪು. ೬-೦೩ ಪ). (ನಾ). ೨. ಪಡಿಮೂಡಿದುದು; ಪ್ರಕಾಶಿತವಾದುದು: ಭರತನು . . . ನುಡಿಯುವ ಮಾತುಗಳಲ್ಲಿ ಸನಾತನಹಿಂದೂಧರ್ಮದ ಸಾರವೇ ಪ್ರತಿಬಿಂಬಿತವಾಗಿದೆ (ಭಾರತ. ೪೪೬). [ಸಂ.]

ಪ್ರತಿಬಿಂಬಿಸು (ಕ್ರಿ). ೧. ಪಡಿಮೂಡು ; ಪ್ರತಿಫಲಿತವಾಗು : ಚಂದ್ರಾಪೀಡನಂ . . . ಅಂಗನಾಜನಘನಸ್ತನದೊಳ್ ಪ್ರತಿಬಿಂಬಿಸುತ್ತಿರಲ್ ಪುರುಡಿಸಿದಳ್ (ಕಾದಂಕಾ. ೩೨); ಅಂಬುವನೆಱೆವಾಗಳ್ ಪ್ರತಿಬಿಂಬಿಸೆ ಕೆಯ್ನೀರೊಳವಳ ವದನಂ ಪಥಿಕಂ ನಂಬಿ ನಲಿದೀಂಟಿದಂ (ಗಿರಿಕ. ೨-೨೬); ಪೊಂಬಣ್ಣದಿಹ ಜಡೆಯ ಬಂಬಲೊಳ್ ಥಳಥಳಿಸುವಂಬರಾಪಗೆಯ ವಿಮಲಾಂಬುವೊಳ್ ನೋಡೆ ಪ್ರತಿಬಿಂಬಿಸುವ ಚೆಲ್ವುವಡೆದಂಬು ಜಾರಿಯ ಕಲೆಯ ತುಂಬಿ (ಶಿಪು. ೦೯-೦). ೨. ಪಡಿಮೂಡಿಸು; ಪ್ರತಿಫಲಿತವಾಗುವಂತೆ ಮಾಡು: ಎಂದೋ ನಿರ್ಮಿಸಿದ ಪಠ್ಯವಸ್ತು ಪ್ರಗತಿಪಥದಲ್ಲಿ ಮುಂದುವರಿಯುತ್ತಿರುವ ಜೀವನವನ್ನು ಪ್ರತಿಬಿಂಬಿಸಲಾರದು (ಶಿಕ್ಷದ. ೦೩೩). [ಪ್ರತಿಬಿಂಬನ + —ಇಸು$_3$]

ಪ್ರತಿಬುದ್ಧ (ಗು). ೧. ಎಚ್ಚತ್ತಿರುವ; ಎಚ್ಚರಗೊಂಡಿರುವ. ೨. ಪ್ರಜ್ಞೆಯಿಂದ ಕೂಡಿದ; ಜ್ಞಾನೋದಯವಾದ. ೩. ಅರಳಿದ; ವಿಕಸಿತವಾದ. ೪. ಪ್ರಕಾಶಪಡಿಸಿದ; ಪ್ರಸಿದ್ಧಪಡಿಸಿದ. (ನಾ). ೫. ಅರಳಿದುದು; ವಿಕಸಿತವಾದುದು: ಪ್ರತಿಬುದ್ಧಂ ತ್ವನ್ಮುಖಮುಚಿತ ತಾರಕಂ ತುಂಬಿವೆರಸಿದಂಬುಜಮೆಂಬೀ ದ್ವಿತಯಮುಮೋರೊಂದಂ ಪೋಲ್ತು ತೋಱೆ ಗತನಿದ್ರನಾಗು ನೀಂ ಜಿನಚಂದ್ರಾ (ಕಾಂತಿಪು. ೩-೬೭). ೬. ಗಮನಿಸಿದುದು; ಗುರುತಿಸಿದುದು. ೭. ಪ್ರಸಿದ್ಧವಾದುದು; ಹೆಸರಾದುದು. ೮. ಮೂರ್ಛೆಯಿಂದ ಎಚ್ಚತ್ತಿರುವವನು; ಪ್ರಜ್ಞೆಯಿಂದ ಕೂಡಿದವನು. ೯. ಪ್ರಜ್ಞಾವಂತ; ಬುದ್ಧಿವಂತ: ಪ್ರತಿಬುದ್ಧರಂ ಕುಱಿತ್ತೀ ಸ್ಥಿತಿಯಿಂದಂ ಕಿಱಿದು ಮಾರ್ಗಸೂಚನೆಗೆಯ್ದಂ ಮತಿವಂತರಱಿದು ಪೇೞ್ವುದು ವಿತರ್ಕದಿಂ ಮತ್ತಮುಕ್ತಶೇಷಮನಿದ ಱೊಳ್ (ಕಾವ್ಯಾಪ. ೪೦೨). [ಸಂ.]

ಪ್ರತಿಬೋಧಕ (ನಾ). ೧. ನಿದ್ದೆಯಿಂದ ಎಚ್ಚರಗೊಳಿಸುವವನು. ೨. ಬೋಧಿಸುವವನು ; ಉಪದೇಶಿಸುವವನು : ಇಂದ್ರಕದಂಬ ಪ್ರತಿಬೋಧಕರ್ . . . ತಮ್ಮ ನೆಲೆಯಿಂ ಲೋಕಾಂತಿಕರ್ ಬರ್ಪುದುಂ (ಕಾಂತಿಪು. ೦೦-೯೨). [ಸಂ.]

ಪ್ರತಿಬೋಧನ (ನಾ). ೧. ಬೋಧಿಸುವಿಕೆ ; ತಿಳಿಸುವಿಕೆ; ಅರಿವುಂಟು ಮಾಡುವಿಕೆ: ಮುನಿಪತಿ ನಿಮ್ಮಿಂ ಪ್ರತಿಬೋಧನಮಿಂದಾದತ್ತು (ಸುಳುಮಾ. ೧೨-೦೪). ೨. ಅರಿವು; ಜ್ಞಾನ. [ಸಂ.]

ಪ್ರತಿಬೋಧಿಸು (ಕ್ರಿ). ತಿಳಿವಳಿಕೆಯನ್ನುಂಟುಮಾಡು; ಜ್ಞಾನೋದಯವಾಗುವಂತೆ ಮಾಡು : ಅವರ್ಪ್ರತಿಬೋಧಿಸಿ ಪೋಗಲೊಡಂ ಪರಿನಿಷ್ಕ್ರಮಣಕಲ್ಯಾಣೋತ್ಸವೋತ್ಸುಕರಾಗಿರಲ್ (ಅಂಪು. ೯-೬೩ ಪ); ಅವರ್ ತನ್ನಂ ಪ್ರತಿಬೋಧಿಸಿ ಮೂದಲಿಸಿ ನುಡಿಯಲೊಡಂ (ಅಪಪು. ೬-೬೪ ಪ) ; ಮುನ್ನಿನ ಭವದೊಳ್ ತನ್ನಂ ಪ್ರತಿಬೋಧಿಸಿ ಮಹಾಪುರುಷನಪ್ಪುದನಱಿದು (ಸುಳುಮಾ. ೬-೨ ಪ). [ಪ್ರತಿಬೋಧನ + —ಇಸು$_3$]

ಪ್ರತಿಭಟ (ನಾ). ೧. ಹುರುಡಿಸುವವನು; ಪ್ರತಿಸ್ಪರ್ಧಿ. ೨. ಶತ್ರುಪಕ್ಷದ ಸೈನಿಕ; ಎದುರಾಳಿ : ಎಲವೊ ಸಾರಥಿಯಾಗು ನಡೆ . . . ಕೊಲುವೆನೀ ಪ್ರತಿಭಟನಿಕಾಯವ ನಿನ್ನ ಸಾಕ್ಷಿಯಲಿ (ಕುಪ್ಯಾಪಿ. ೬-೩೦); ಬೇಗದಿಂ ಪ್ರತಿಭಟನ ಶಿರವನಿಳುಹು (ಶೈಮಿಭಾ. ೦೩-೩೭). [ಸಂ.]

ಪ್ರತಿಭಟನೆ (ನಾ). ಎದುರಿಸುವಿಕೆ ; ವಿರೋಧಿಸುವಿಕೆ : ಇದು ತನ್ನ ಮಗನಾದವನಿಗೂ ಆಗಬಾರದೆಂದು ಅವನು ಯೋಚಿಸುತ್ತಿರುವುದೇ ಅವನ ಪ್ರತಿಭಟನೆಗೆ ಕಾರಣವಾಗಿತ್ತು (ಕಂಗಸೋ. ೦೯೮); ರಚನೆ, ಪ್ರತಿಭಟನೆ, ಹೋರಾಟ, ಪರಾಜಯ, ಸಂಗ್ರಹಾಸಕ್ತಿ—ಇವು ಸನ್ನಿವೇಶಗಳಿಗೆ ಪ್ರತಿಕ್ರಿಯಾತ್ಮಕವಾದವು (ಶಿಕ್ಷದ. ೬೬). [ಸಂ. ಪ್ರತಿಭಟನ]

ಪ್ರತಿಭಟಿಸು (ಕ್ರಿ). ಎದುರಿಸು ; ವಿರೋಧಿಸು : ಮುಂದೆ ನಿಂತ ಕಾಮನನ್ನು ಪ್ರತಿಭಟಿಸುವ ಧೈರ್ಯ ಈಶ್ವರನಿಗಿಲ್ಲ (ಸಾಹಿಸ. ೦೪೯); ಘಟ್ಟಿವಾಳಯ್ಯ . . . ಸಂಪ್ರದಾಯವನ್ನು ಪ್ರತಿಭಟಿಸಿ ನಿಂತ ವ್ಯಕ್ತಿ (ಕೂಪ್ಯಕು. ೦೨೬). [ಸಂ. ಪ್ರತಿಭಟನ + —ಇಸು$_3$]

ಪ್ರತಿಭಾನ (ನಾ). ೧. ಬೆಳಕು ; ಕಾಂತಿ; ಪ್ರಕಾಶ. ೨. ಅರಿವು; ಜ್ಞಾನ; ತಿಳಿವಳಿಕೆ. ೩. ಹೊಸಹೊಸ ವಿಷಯಗಳು ಹೊಳೆಯುವಂತೆ ಮಾಡುವ ಚೈತನ್ಯ ; ಪ್ರತಿಭೆ : ಪ್ರತಿಭಾನಂ ಕಾವ್ಯವಿದ್ಯಾ ಪ್ರಚಯಪರಿಚಯಂ . . . ಕವಿತೆಗೆ ನಿಯತಂ ಕಾರಣಂ (ಕಾವ್ಯಾಪ. ೪೨೪); ಹಳೆಯ ಶಬ್ದಗಳೆಂದು ಮೂಲೆಗಿಟ್ಟು ನಮ್ಮ ಪ್ರತಿಭಾನಶಕ್ತಿಯನ್ನು ಮಂಕುಗೊಳಿಸುವುದೇಕೆ ? (ಮೋಳಿಮಾ. ೦೩೦ ಪ್ರಸ್ತಾವನೆ). ೪. ಸಮಚಿತ್ತತೆ. ೫. ದಿಟ್ಟತನ; ಧೈರ್ಯ. [ಸಂ.]

ಪ್ರತಿಭಾನ್ವಿತ (ಗು). ೧. ಪ್ರಕಾಶದಿಂದ ಕೂಡಿದ. ೨. ತಿಳಿವಳಿಕೆಯುಳ್ಳ. ೩. ಹೊಸಹೊಸ ವಿಷಯಗಳು ಸ್ಫುರಿಸುವ ಚೈತನ್ಯವುಳ್ಳ; ಪ್ರತಿಭೆಯಿಂದ ಕೂಡಿದ : ಪ್ರತಿಭಾನ್ವಿತವ್ಯಕ್ತಿಗಳಿಗೆ ಸರಿಯಾದ ಅವಕಾಶ ಸಿಕ್ಕಿದರೆ ಒಳ್ಳೆಯ ಕಾರ್ಯಗಳಾಗುತ್ತವೆ (ರೂಠಿ). (ನಾ). ೪. ಹೊಸಹೊಸ ವಿಷಯಗಳು ಸ್ಫುರಿಸುವ ಚೈತನ್ಯವುಳ್ಳವನು ; ಪ್ರತಿಭಾವಂತ; ಧೀಮಂತ: "ಪ್ರಗಲ್ಭಃ, ಪ್ರತಿಭಾನ್ವಿತಃ— ೨ ಆಗಾಗ್ಯೆ ಹೊಸ ಹೊಸದಾಗಿ ಪ್ರಕಾಶಿಸುವ ಪ್ರಜ್ಞೆಯುಳ್ಳವನ ಪೆಸರು" (ಸಿದ್ಧಾಂತಿ. ೩೨೯). ೫. ಧೈರ್ಯಶಾಲಿ. [ಸಂ.]

ಪ್ರತಿಭಾವಂತ (ಗು). ೧. =ಪ್ರತಿಭಾನ್ವಿತ ೩ : ನೀನು ಶಿಶ್ಯನನ್ನು ಅನುಸರಿಸಲು ಅವನೇನಂಥ ಪ್ರತಿಭಾವಂತವಿದ್ಯಾರ್ಥಿಯೇ ? (ಶಾಲಿಮ. ೯೨); ಪಾಶ್ಚಾತ್ಯವೈಜ್ಞಾನಿಕಸಂಸಿದ್ಧಿಗಳು . . . ಭಾರತೀಯ ಪ್ರತಿಭಾವಂತ ತರುಣರನ್ನು ಆಕರ್ಷಿಸಿದವು (ಪುಕ್ಷಾಕ. ೦೦೭ ಬೀಕಿಕೆ). (ನಾ). ೨. =ಪ್ರತಿಭಾನ್ವಿತ ೪ : ನಿಜವಾದ ಪ್ರತಿಭಾವಂತನ ಸೃಷ್ಟಿ ಎಲ್ಲವೂ ಸೌಂದರ್ಯವಾಗುತ್ತದೆ (ಸೌಂದಸ. ೬೦). [ಸಂ. ಪ್ರತಿಭಾವತ್]

ಪ್ರತಿಭಾವತ್ವ (ನಾ). ಪ್ರತಿಭೆಯನ್ನು ಹೊಂದಿರುವಿಕೆ : ಪ್ರತಿಭಾವತ್ವ ಮುಮಕೃತಕಚತುರತೆಯುಂ . . . ತರ್ಕಂ ಪ್ರತೀತಿಯಂ ವಾಗ್ವಿದಗ್ಧತಾ ನಿಪುಣತೆಯೊಳ್ (ಕವಿರಾ. ೦-೦೦). [ಸಂ.]

ಪ್ರತಿಭಾವನೆ (ನಾ). ಬೇರೆಯ ಭಾವನೆ,— ಅಭಿಪ್ರಾಯ : ನೆವದ ತಪವಲ್ಲದಲೆ ಮತ್ತಿನ್ನವಗೆ ಪ್ರತಿಭಾವನೆಗಳಿಲ್ಲದೆ ತವಗೆ ತಾ ದೇವಾಗಿ ಪಡೆದನು ಕೇವಲಜ್ಞಾನ (ಶಿಪ್ಪಿಪು. ೦೨-೩೦). [ಸಂ. ಪ್ರತಿಭಾವನ]

ಪ್ರತಿಭಾಶಾಲಿ (ನಾ). = ಪ್ರತಿಭಾನ್ವಿತ ೪: ಸ್ಕಾಟ್ ಎಡಿಸನ್ ಇವರು ಬಾಲ್ಯದಲ್ಲಿ ಮಂಕುದಿಣ್ಣೆಗಳಾಗಿದ್ದರು. ಅನಂತರ ಪ್ರತಿಭಾಶಾಲಿಗಳೆನಿಸಿದರು (ಶಿಕ್ಷದ. ೬೦೩); ಪ್ರತಿಭಾಶಾಲಿಯಾದ ಈ ಲೇಖಕ ಆ ವೇಳೆಗಾಗಲೇ ಕೆಲವು ಧ್ವನಿತತ್ವಗಳನ್ನು ಕುರಿತು ಪ್ರಸ್ತಾಪಿಸುತ್ತಾನೆ (ಧ್ವಾಪಿ. ೦೩ ಹಿನ್ನೆಲೆ). [ಸಂ. ಪ್ರತಿಭಾಶಾಲಿನ್]

ಪ್ರತಿಭೂ (ನಾ). ಹೊಣೆಗಾರ ; ಜಾಮೀನುದಾರ :"ಪ್ರತಿಭೂಃ, ಲಗ್ನಕಃ — ಈ ೨ ಹೊಣೆ(ಗಾಱು)" (ಹಲಾಯು. ೬೨-೨೨೩); ವ್ರತವು

ಸುಸ್ಥಿರವಾಗೆ ನಿನ್ನೊಳು ಮೃತಿವಡೆಯದರ ಸುದತಿಯರು ನಿಶ್ಚಿತದಿ ನಿನಗಾಗುವರು ನಾನೀ ವಿಷಯದೊಳ್ ಪ್ರತಿಭೂ (ಸೌಪಂದ. ೦೦-೬೩). [ಸಂ.]

ಪ್ರತಿಭೂತ್ವ (ನಾ). ಹೊಣೆಗಾರಿಕೆ; ಜವಾಬ್ದಾರಿ: ನನಗಪ್ಪರೆಯರ್ಕಳೊಳ್ ಅವರಿಂ ಫಲಮಿಲ್ಲಾಗೆ ಬಿಟ್ಟೆಂ ತ್ವತ್ಪ್ರತಿಭೂತ್ವಮಂ (ಸೌಪಂದ. ೦೨-೦೩). [ಸಂ.]

ಪ್ರತಿಭೆ (ನಾ). ೧. ಹೊಳಪು; ಕಾಂತಿ; ಪ್ರಕಾಶ "ಪ್ರತಿಭೆ" ಎಂಬ ಶಬ್ದದ ಅಕ್ಷರಾರ್ಥ "ಹೊಳಹು" (ಭಾರವಿ. ೦೬೨). ೨. ಪ್ರತಿಬಿಂಬ. ೩. ಬುದ್ಧಿಶಕ್ತಿ; ಜ್ಞಾನಬಲ: ಪ್ರತಿಭೆಗೆ ಫಲಮಱಿವಿನ ಗತಿ ಗತಿಗೆ ಫಲಂ ವಿಷಯವಿರತಿ (ಪುಷ್ಪಕ. ೦೩-೩೯); ಶಿವಾಜಿಯ ಪುತ್ರನಾದ ಶಂಭುವಿಗೆ ತಂದೆಯ ಪ್ರತಿಭೆಯಾಗಲಿ ನೀತಿಶಕ್ತಿಯಾಗಲಿ ಇರಲಿಲ್ಲ (ಮುಕ್ಸಾರ. ೦೦೩ ಪೀಠಿಕೆ); ಅವನ ಪ್ರತಿಭೆಗೆ ಪಾಂಡಿತ್ಯಕ್ಕೆ ದೊರೆತ ಬಹುಮಾನ, ಪ್ರಮಾಣಪತ್ರಗಳಿಗಂತೂ ಲೆಕ್ಕವಿಲ್ಲ (ಮೂಸಕ್ಷಿ. ೩೭). ೪. ಕವಿಯು ಕಾವ್ಯವನ್ನು ಬರೆಯಲು ಪ್ರಧಾನಸಹಾಯಕವಾದ, ಹೊಸಹೊಸ ಭಾವನೆಗಳನ್ನು ಮೂಡಿಸುವ ಒಂದು ಬಗೆಯ ಪ್ರಜ್ಞೆಯ ಅಥವಾ ಭಾವನೆಯ ಶಕ್ತಿವಿಶೇಷ: ಪ್ರತಿಭೆ ನಿಸರ್ಗಮುಂಟು ಕಿಱಿದೋದುಗಳೊಳ್ ಕಿಱಿದುಂಟು ಬಲ್ಮೆ (ಗದಾಯು. ೦-೫೦); ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ (ಶಮದ. ೦೪೯ ಪ್ರಯೋ); ಶಬ್ದಸಮೂಹ, ಅರ್ಥಸಂಪತ್ತು, ಅಲಂಕಾರವೈಚಿತ್ರ್ಯ, ಉಕ್ತಿಕ್ರಮ ಮುಂತಾದವು ಮನಸ್ಸಿನಲ್ಲಿ ಪ್ರತಿಫಲಿಸುವಂತೆ ಮಾಡತಕ್ಕದ್ದೇ ಪ್ರತಿಭೆ ಎಂದು ರಾಜಶೇಖರನೂ ಹೇಳಿದ್ದಾನೆ (ಕೃಪಿಡಿ. ೦೭೪ ಅಡಿಟಿ). ೫. ದಿಟ್ಟತನ; ಧೈರ್ಯ. ೬. [ಯೋಗ] ಸಮಾಧಿಗೆ ಪ್ರತಿಬಂಧಕವಾಗಿರುವ ಕೇವಲ ಲೌಕಿಕಸಿದ್ಧಿ: ಮತಿಯುತನೆ ಪ್ರತಿಭಾಶ್ರವಣಮೇಣತಿಶಯದ ವಾರ್ತಾದರುಶನಗಳು ... ಬ್ರಹ್ಮಾಭ್ಯಾಸಕಾಲವಲಂತರಾಯಗಳು (ಅಮೃತ. ೬-೬೯); "ಪ್ರತಿಭಾ – ಪ್ರತಿಭಾದ್ವಾಸರ್ವಂ" ಎಂಬ ಯೋಗಸೂತ್ರದಂತೆ ಪ್ರತಿಭೆಯೆಂಬ ಶಕ್ತಿಯಿಂದ ಎಲ್ಲಾ ತಿಳಿವಳಿಕೆಯೂ ಆಗುವುದು ... ಯೋಗಸೂತ್ರದಂತೆ ಇವು ಸಮಾಧಿಗೆ ಅಡ್ಡಿಗಳು. ವ್ಯವಹಾರದಲ್ಲಿ ಸಿದ್ಧಿಗಳು (ಅಮೃತ. ೬-೬೯ ಟೀಕೆ). [ಸಂ. ಪ್ರತಿಭಾ]

ಪ್ರತಿಭೋಗ (ನಾ). ಸುಖಾನುಭವ; ಉಪಭೋಗ: ರತಿಕಾಮದಂಪತಿಗಳಿಂದೆ ಸಮರಿಲ್ಲೆಂದು ಕ್ಷಿತಿಯೊಳಗೆ ಸಾರುತಿರೆ ರೂಪು ಗುಣಯವ್ವನ ಪ್ರತಿಭೋಗಮೈಶ್ವರ್ಯದೊಳೊಂದು ಕೊರತೆಯಿಲ್ಲ (ನವಮೋ. ೭-೨೩). [ಸಂ.]

ಪ್ರತಿಮ (ಗು). ೧. ಸಾಟಿಯಾದ; ಸಮಾನವಾದ: ಅಮೃತಾಂಭೋರಾಶಿಪೂರಪ್ರತಿಮನಿಜತಪಸ್ಸಂಚಯಂ ಪರ್ವಿತೋ ಲೋಕಮಂ (ಕಾದಂಪೂ. ೬೫೯). 'ಅಪ್ರತಿಮ' ಹೋ. (ನಾ). ೨. ಸಮಾನವಾದುದು; ಸದೃಶವಾದುದು: "ಸದೃಕ್ ... ಪ್ರತಿಮಂ, ಪ್ರಕಾರಂ, ತುಲ್ಯಂ, ಸಮಂ, ಸನ್ನಿಭಂ—ಈ ೧೧ ಸರಿ" (ಹಲಾಯು. ೦೦೫-೯). ೩. ಸಮಾನನಾದವನು; ಸಾಟಿಯಾದವನು: ಅಖಂಡಭೂಮಂಡಲೈಕಪತಿ ದಕ್ಷಿಣದೊಳ್ ಸುಖಮರಸುಗೆಯ್ಯೆ ಕುರುಕುಲಶಿಖಾಮಣಿ ಪ್ರತಿಮನಾಗಿ ನೃಪನ ಪ್ರತಿಮಂ (ಶಾಂತಿಪು. ೯-೦೬೦); ಪಾಂಡವಪ್ರತಿಮನಲ್ಲನೆ ಮಂಡಲಸಾಮಿ ಲೋಕದೊಳ್ (ಎಕ. IV, ನಾಗಮಂ. ೪೭-೩೩; 1199); ಗೋದಾವರಿಯ ಮಿಂದರರ್ಘ್ಯಮೆತ್ತಿದರಿನಗೆ, ವಂಶಾಧಿದೇವತಾಪ್ರತಿಮನಿಗೆ (ಶ್ರೀರಾಮಾ. ೨೨೯-೩೦). ೪. ಸಮಾಸದ ಕೊನೆಯಲ್ಲಿ ಸದೃಶವಾದ, ಸಮಾನವಾದ ಎಂಬರ್ಥದಲ್ಲಿ ಸೇರುವ ಶಬ್ದ. [ಸಂ.]

ಪ್ರತಿಮಧ್ಯಮ (ನಾ). [ಸಂಗೀತ] ಶುದ್ಧಮಧ್ಯಮ ಮತ್ತು ಪ್ರತಿಮಧ್ಯಮ ಎಂಬ ಮಧ್ಯಮಸ್ವರದ ಭೇದಗಳಲ್ಲಿ ಒಂದು: ಉನ್ನತ ಶ್ರುತಿ ಸಂಖ್ಯೆಯ ಮಧ್ಯಮಸ್ವರ: ಆಲಾಪನೆಯಲ್ಲಿ ಪ್ರತಿಮಧ್ಯಮವನ್ನು ಅಂಶಸ್ವರವನ್ನಾಗಿ ತೆಗೆದುಕೊಂಡು, ಅದರ ಸುತ್ತ ಇಬ್ಬರೂ ರಾಗದ ಸೊಬಗಿನ ಚಿತ್ತಾರವನ್ನು ಸುಂದರವಾಗಿ ಹೆಣೆದರು (ಸಂಗೀತ. ೦೦೦). [ಸಂ.]

ಪ್ರತಿಮಲ್ಲ (ನಾ). ಎದುರಾಳಿಯಾದ ಜಟ್ಟಿ: ಪ್ರತಿಮಲ್ಲರ್ ಗಿರಿಕಲ್ಪನೆಂದಿತರರೆಲ್ಲರ್ ಬಾಲನೆಂದು ... ಈಕ್ಷಿಸಲ್ (ಜಗವಿ. ೬-೫೬). [ಸಂ.]

ಪ್ರತಿಮಾತಂತ್ರ (ನಾ). ಕವಿಯು ಪ್ರಯೋಗಿಸುವ ರೂಪಕವಿಧಾನ: ಈ ಪ್ರತಿಮಾತಂತ್ರವನ್ನು ತಿಳಿದು ಅರ್ಥ ಮಾಡಿಕೊಳ್ಳುವ ರೂಢಿಯಿದ್ದವರಿಗೆ ಇದರಿಂದ ಹೆಚ್ಚಿನ ಆನಂದವಾಗುತ್ತದೆ (ಪಪ್ಯಕಾ. ೪೫). [ಸಂ.]

ಪ್ರತಿಮಾತು (ನಾ). ಮಾತಿಗೆ ಬದಲಾಗಿ ಆಡುವ ಮಾತು; ಎದುರು ಮಾತು: ಯಶೋದೆ ಪ್ರತಿಮಾತು ಹೇಳಲಿಲ್ಲ (ಪಾತ್ಸಲ್ಯ. ೨೨೯); ಹಾಗಾದರೆ ಯೇಸುವನ್ನು ಏನು ಮಾಡಲಿ ಎಂದು ಆತನು ಕೇಳಿದ ಪ್ರತಿಮಾತಿಗೆ, ಅವನನ್ನು ಸಿಲುಬೆಗೆ ಹಾಕು! ಎಂದು ಅವರು ಮರಳಿಯೂ ಕೋಲಾಹಲಿಸಿದರು (ಗೊಲ್ಡೊಥಾ. VII, ಮುಪ್ಪುಡಿ). [ಪ್ರತಿ + ಮಾತು$_1$]

ಪ್ರತಿಮಾನ (ನಾ). ೧. ಹೋಲಿಕೆ; ಸಾದೃಶ್ಯ. ೨. ಸದೃಶವಾದುದು; ಸಮಾನವಾದುದು: ಅರವಿಂದಾಸ್ಯೆಯ ನೊಸಲ ಸಮಾನಂ ನಿರುಪಮ ಮರ್ಧೇಂದುಪ್ರತಿಮಾನಂ (ಸುಕುಮಾ. ೩-೫೦ ರಗಳೆ); ರೌದ್ರರಸ ಕುಂಭಂ ಕುಂಭಮುಚ್ಚೈಶ್ಶಿಲಾಪ್ರತಿಮಾನಂ ಪ್ರತಿಮಾನಂ ... ನಾಗಾರಿಚ್ಛದಾಕಾರದಿಂ ಶ್ರುತಿಗಳ್ ವಿಶ್ರುತಿ ಮೀಱಿ ಬೀಱಿದವುದೀ ಸ್ತಂಬೇರಮಂ ಬೀರಮಂ (ಜಗವಿ. ೬-೫೦). ೩. ಪ್ರತಿಬಿಂಬ; ಪ್ರತಿಕೃತಿ: "ಪ್ರತಿಬಿಂಬಂ ... ಪ್ರತಿಮಾನಂ, ಪ್ರತಿಕೃತಂ—ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦-೦೩೦); ಪ್ರತಿ ತನಗಿಲ್ಲ ಸಲ್ಲಲಿತರೂಪದಿನೀ ತ್ರಿಜಗಂಗಳಂಗನಾತತಿಯೊಳಿದೊಂದೆ ತಾಂ ಪ್ರತಿ ನಿಜಪ್ರತಿಮಾನಂ (ಶಾಂತೀಶ್ವ. ೯-೨೪೫). ೪. ಒಂದು ಆಕಾರಕ್ಕೆ ಸಮಾನವಾಗಿರುವ ಪ್ರತಿಮೆ, ವಿಗ್ರಹ, ಚಿತ್ರ ಮೊದಲಾದುವು: "ಪ್ರತಿಮಾನಂ, ಪ್ರತಿಬಿಂಬಂ ... ಪ್ರತಿನಿಧಿ—ರ ವಿಷ್ಣು ಮೊದಲಾದವರ ಆಕಾರಗಳಿಗೆ ಸಮನಾಗಿ ಶಿಲಾದಿಗಳಿಂದ ಮಾಡಿದ ಪ್ರತಿಮೆ ಹೆಸರು" (ಸಿದ್ಧಾಂತಿ. ೩೦೭). ೫. ಸಮಾನನಾದ ವ್ಯಕ್ತಿ; ಸರಿಸಾಟಿಯಾದ ಮನುಷ್ಯ: ಪ್ರತಿಮಾನಂ ಶರವಿದ್ಯೆಯೊಳಿತರರ್ ತನಗಿಲ್ಲೆನಿಪ್ಪನಲ್ಲಿ ಕುರಂಗಂ (ಪಾರ್ಶ್ವಪು. ೦೮-೬೦). ೬. ಆನೆಯ ಎರಡು ದಂತಗಳ ಮಧ್ಯಪ್ರವೇಶ, —ಕುಂಭಸ್ಥಳದ ಕೆಳಭಾಗ: "ದಂತವೆರಡಱ ನಡು ಪ್ರತಿಮಾನಮಕ್ಕುಂ" (ಮಂಗರಾ. ೪೬-೩); ರೌದ್ರರಸಕುಂಭಂ ಕುಂಭಮುಚ್ಚೈಶ್ಶಿಲಾಪ್ರತಿಮಾನಂ ಪ್ರತಿಮಾನಂ ... ನಾಗಾರಿಚ್ಛದಾಕಾರದಿಂ ಶ್ರುತಿಗಳ್ ವಿಶ್ರುತಿಮೀಱಿಬೀಱಿದವುದೀ ಸ್ತಂಬೇರಮಂ ಬೀರಮಂ (ಜಗವಿ. ೬-೫೦); ಏನ ಹೇಳುವೆ ಗಜಘಟಾಪ್ರತಿಮಾನದಲಿ ಕೋದಂಬುಗಳು ಹಿಂಡಾನೆಗಳನೇಳೆಂಟನೊದೆದೋಡಿದವು ಪಂ[ಪೇ]ಚಕವ (ಕುಪ್ಯಾಕ. ೩-೧೫); ಕೊಳದೊಳೆ ಕಿಳ್ತು ಪಂಕರುಹಮಂ ಪ್ರತಿಮಾನದೊಳೊಟ್ಟಿಕೊಂಡು ... ಕರೇಣುವಿರ್ದೆಡೆಗದೇಂ ತಳರ್ದತ್ತೊ ಮದಾಂಧಸಿಂಧುರಂ (ಕದಕಂ. ೩-೪೨). [ಸಂ.]

ಪ್ರತಿಮಾನಿಷ್ಠ (ಗು). ೧. ನಿರ್ದಿಷ್ಟವಾದ ಕಲ್ಪನಾಚಿತ್ರಗಳ ಮೂಲಕ ಭಾವವನ್ನು ಸ್ಪಷ್ಟಪಡಿಸುವ: ಪ್ರತಿಮಾನಿಷ್ಠ ಆಂಗ್ಲಕವನಗಳಲ್ಲಿಯೂ ಇಂಥ ಪ್ರತೀಕಗಳ ಆರಾಧನೆ ನಡೆದಿತ್ತು (ಪಪ್ಯಕಾ. ೩೨). 'ಪ್ರತಿಮಾನಿಷ್ಠಕವಿ' ಪರಾ. (ನಾ). ೨. ನಿರ್ದಿಷ್ಟವಾದ ಕಲ್ಪನಾಚಿತ್ರಗಳ ಮೂಲಕ ಭಾವವನ್ನು ಸ್ಪಷ್ಟಪಡಿಸುವುದು: 'ಜಾರ್ಜಿಯನ್', 'ಪ್ರತಿಮಾನಿಷ್ಠ' (Imagist) ಮೊದಲಾದ ಶತಮಾನದ ಆದಿಯಲ್ಲಿಯ ಸಣ್ಣಪುಟ್ಟ ಸಾಹಿತ್ಯಕಚಳುವಳಿಗಳು ನವ್ಯಮಾರ್ಗದಲ್ಲಿಯೇ ಲಯವಾಗಿ ಸಫಲವಾದವು (ಪಪ್ಯಕಾ. ೨೭). [ಸಂ.]

ಪ್ರತಿಮಾನಿಷ್ಠಕವಿ (ನಾ). ನಿರ್ದಿಷ್ಟವಾದ ಕಲ್ಪನಾಚಿತ್ರಗಳ ಮೂಲಕ

ಭಾವವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಬೇಕೆಂಬ ಆಧುನಿಕಮಾರ್ಗದ ಕವಿ: ಪ್ರತಿಮಾನಿಷ್ಠಕವಿ (Imagist-poet)ಯು ಸಮರ್ಥಿಸುವ ಏರಿಳಿತವೂ ತೂಕವೂ ಎಚ್. ಡಿ. ಎಂಬ ಕವಯಿತ್ರಿಯ ಕೃತಿಗಳಲ್ಲಿ ಉತ್ತಮವಾಗಿ ಕಾಣುತ್ತವೆ (ಗೊತ್ತುಗು. ೦೦೯). [ಸಂ.]

ಪ್ರತಿಮಾಭಾಷಣ (ನಾ). ವಿಗ್ರಹ, ಪ್ರತಿಮೆ ಮೊದಲಾದುವುಗಳೊಂದಿಗೆ ಮಾತನಾಡುವುದು; ತಂತ್ರವಾರ್ತಿಕ ಮುಂತಾದ ಗ್ರಂಥಗಳಲ್ಲಿ ಹೇಳಿರುವ ಒಂದು ಬಗೆಯ ಕುತ್ಸಿತಸಿದ್ಧಿ: ಪಾಷಂಡಿಸಹವಾಸ, ಪಾಷಾಣಪಾಟನ, ಪ್ರತಿಮಾಭಾಷಣ, ವೃಕ್ಷಶೋಷಣ ಮೊದಲಾದ ಕಪಟ ಕುತ್ಸಿತಸಿದ್ಧಿಗಳಿಂದ ಸಾಧುಜನವಂಚನೆ ಮೊದಲಾದುವುಗಳು . . . ಗ್ರಂಥಗಳಲ್ಲಿ ವಿಸ್ತರಿಸಲ್ಪಟ್ಟಿರುವುದು (ಹಿಂದಸಾ. ೦೩೨). [ಸಂ.]

ಪ್ರತಿಮಾಭೋಗ (ನಾ). (?) : ಪ್ರಾಣಾಮಾನಸಮಯದೊಳು ಅನಾದ್ಯನುಸ್ಯೂತ ಸುಕೃತ ದುಷ್ಕೃತಪರಿಪಾಕ ವೈಚಿತ್ರ್ಯಾನುಸಾರವಾಗಿ ಚರಮವೃತ್ತಿಯೊಳಗಾವ ಭಾವವು ಸ್ಫುರಿಸುವುದೋ ಅಂತಾ ಜನ್ಮ ಪ್ರಾಪ್ತಿಯಹುದೆಂದು ನರಭೋಗ ಶಿಲಾಭೋಗ ಪ್ರತಿಮಾಭೋಗ . . . ದ್ರವ್ಯಭೋಗಾದಿಗಳ ವೈಚಿತ್ರ್ಯಮುಳ್ಳ ಲೋಕದೃಷ್ಟಾಂತಗಳಿಂ (ಪಿಪೇಳ. ೦೧೬). [ಸಂ.]

ಪ್ರತಿಮಾಮಾನ (ನಾ). ಪ್ರತಿಮೆಯ ಅಳತೆ,—ಪ್ರಮಾಣ : ಪ್ರತಿಮೆಗಳನ್ನು ಮಾಡಲಿಚ್ಛಿಸುವವರು ಪ್ರತಿಮಾಮಾನಲಕ್ಷಣವನ್ನು . . . ಅರಿತಿರಲೇಬೇಕು (ಭಾರದ. ೩೦೭). [ಸಂ.]

ಪ್ರತಿಮಾಯೋಗ (ನಾ). [ಜೈನ] ಒಂದು ಬಗೆಯ ತಪಸ್ಸು ; ೯ "ಆಹಾರತ್ಯಾಗ ಮಾಡಿ ಒಂದು ವರ್ಷದವರೆಗೆ ಒಂದೇ ಸ್ಥಳದಲ್ಲಿ ನಿಂತುಕೊಂಡು ತಪ ಮಾಡುವುದು. ಅದರೊಳಗೆ ಅಭ್ರಾವಕಾಶಯೋಗ, ಆತಾಪನಯೋಗ, ವರ್ಷಾಯೋಗವೆಂದು ಮೂರು ಭೇದಗಳಿವೆ" (ಅಪ್ರಿ. ಶೈಪಪಾಂಭಾಷಿಕ ಪಬ್ಬಕೋಶ. ೬೪) : ಅಂತು ಜೈನ ದೀಕ್ಷೆಯಂ ಕೈಕೊಂಡು . . . ಏಕವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಲೆ (ಅಪ್ರಿ. ೦೪-೦೩೯ ಪ) ; ತಪಶ್ಚರಣಪರಾಯಣರಾಗಿ ಕೈಲಾಸಾಚಲದೊಳ್ ಅಚಲಿತಪ್ರತಿಮಾಯೋಗದೊಳಿರ್ದು (ಸುಕುಮಾ. ೦೨-೬೩ ಪ) ; ಪ್ರತಿಮಾಯೋಗನಿಯುಕ್ತರೆಂಟುದಿವಸಂ ಕೈಯೆತ್ತೆವೆಂದಿರ್ದರ್ (ಪಂರಾಪಾ. ೦೦-೩೬). [ಸಂ.]

ಪ್ರತಿಮಾಯೋಗಿ (ನಾ). ಪ್ರತಿಮಾಯೋಗದಲ್ಲಿ ನಿರತನಾದವನು : ಇಡೀ ಮೆಯ್ಯೇ ಸ್ತಬ್ಧವಾಗಿ ನೋಟಕರಿಗೊಂದು ಪ್ರತಿಮಾಯೋಗಿಯಾಗಿ ಭಾಸವಾದನವನು (ಪೀರಪಂ. ೩೬). [ಸಂ. ಪ್ರತಿಮಾಯೋಗಿನ್]

ಪ್ರತಿಮಾರೂಪ (ನಾ). = ಪ್ರತಿಮಾಯೋಗ : ಪ್ರತಿಮಾರೂಪಮಘಾತಿ ಪ್ರತಿರೂಪದ ಗರ್ವಪರ್ವತಾರೂಢತೆಯಂ ಶತಖಂಡಂ ಮಾಡಿದುವು (ಶಾಂತಿಪು. ೦೨-೩೨). [ಸಂ.]

ಪ್ರತಿಮಾರೋಹಣ (ನಾ). ದೇವತಾಪ್ರತಿಮೆಗಳನ್ನು ಪೀಠಗಳಲ್ಲಿ ಪ್ರತಿಷ್ಠಿಸುವುದು; ವಿಗ್ರಹಪ್ರತಿಷ್ಠೆ: ವ್ರತ, ದೀಕ್ಷಾವಿಧಿ, ಕುಂಡಮಂಡಳ ವಿಧಾನ, ಲಿಂಗಪೀಠಕ್ರಮ, ಪ್ರತಿಮಾರೋಹಣ . . . ಇಂತಹ ಆಗಮಸ್ಥಿತ ವಿದ್ಯಾವಳಿಗಳನ್ನು ಅರಿತವರಾಗಿದ್ದರಂತೆ (ಕರ್ಪಾಸಂ. ೨೨೬). [ಸಂ.]

ಪ್ರತಿಮಾಲಕ್ಷಣ (ನಾ). ೧. ಪ್ರತಿಮೆಗಳ ಸ್ವರೂಪ ; ವಿಗ್ರಹಗಳ ಲಕ್ಷಣ. ೨. ಪ್ರತಿಮೆಗಳ ಸ್ವರೂಪವನ್ನು ವಿವರಿಸುವ ಆಗಮಶಾಸ್ತ್ರದ ಒಂದು ಪ್ರಕರಣ : ಆಗಮಶಾಸ್ತ್ರದ ಪ್ರತಿಮಾಲಕ್ಷಣದಲ್ಲಿ ಎಲ್ಲಾ ಮೂರ್ತಿಗಳ ಲಕ್ಷಣವನ್ನೂ ಹೃದಯಂಗಮವಾಗಿ ವರ್ಣಿಸಿದ್ದಾರೆ (ಭಾರದ. ೬೬). [ಸಂ.]

ಪ್ರತಿಮಾವಿಧಾನ (ನಾ). ಆನಂದಾತಿಶಯವನ್ನುಂಟುಮಾಡುವ ಪ್ರತಿಮೆಗಳನ್ನು ಕಾವ್ಯದಲ್ಲಿ ಉಪಯೋಗ ಮಾಡುವ ರೀತಿ; ರಸ ಭಾವಗಳೆರಡನ್ನೂ ಹೊಂದಿಸುವ ಒಂದು ಕಾವ್ಯರಚನಾಕ್ರಮ : ವರಕವಿಯ ಕಾವ್ಯಸತ್ತೆಯೊಳಾತ್ಮರಸಸತ್ಯಮಂ ಪ್ರಕಟಿಸುವನೀ ಬ್ರಹ್ಮನನ್ಯವಿಧದಿಂದೆಮ್ಮ ಮರ್ತ್ಯಪೃಥಿವೀತತ್ತ್ವದೊಳ್ . . . ಪ್ರತಿಮಾವಿಧಾನದಿಂ ರಸಋಷಿ ಪ್ರತಿಭಾನಮಾತ್ರಸಂವೇದ್ಯಮಂ (ಶ್ರೀರಾಮಾ. ೩೬-೭) ; ಆ ಕತೆಗಳ ಭಾಷೆಯಲ್ಲಿಯ ಆಕ್ರೋಶ ಮತ್ತು ಪ್ರತಿಮಾವಿಧಾನದ ಜಟಿಲತೆಗಳು ಈ ತಪ್ಪು ತಿಳುವಳಿಕೆಯ ಸೂಕ್ಷ್ಮತೆಯನ್ನು ಮರೆಸಿಬಿಡುತ್ತವೆ (ಹೊಸಕ್ಷಿ. ೨೮೬). [ಸಂ.]

ಪ್ರತಿಮಾಶಾಸ್ತ್ರ (ನಾ). ಪ್ರತಿಮೆ, ವಿಗ್ರಹಗಳ ರಚನಾಕ್ರಮವನ್ನು ಕುರಿತು ಬರೆದಿರುವ ಶಾಸ್ತ್ರ : (Iconology. ೨೦೪೮.). [ಸಂ.]

ಪ್ರತಿಮಾಶಿಲ್ಪ (ನಾ). ೧. ಪ್ರತಿಮೆಗಳನ್ನು ರಚಿಸುವ ಕಲೆ. ೨. ಒಂದು ವಿಷಯವನ್ನು (ಕಲ್ಲು, ಕಾಗದ, ಬಟ್ಟೆ ಮುಂತಾದುವುಗಳ ಮೇಲೆ) ಚಿತ್ರಗಳ ವಿನ್ಯಾಸದಿಂದ ತಿಳಿಸುವುದು : "ಒಂದು ವಿಷಯವನ್ನು ಚಿತ್ರಗಳಿಂದ, ರೇಖನಗಳಿಂದ, ಉದಾಹರಿಸುವುದು : ಚಿತ್ರೋದಾಹರಣೆ; ಪ್ರತಿಮಾಶಿಲ್ಪ" (Iconography. ೨೦೪೮). [ಸಂ.]

ಪ್ರತಿಮಾಸೃಷ್ಟಿ (ನಾ). = ಪ್ರತಿಮಾವಿಧಾನ : ಅರ್ಥವನ್ನೆಲ್ಲ ಪ್ರತಿಮಾಸೃಷ್ಟಿಯಲ್ಲಿ ಬಚ್ಚಿಡಲು ನವ್ಯಕವಿಯು ಹವಣಿಸುವಂತೆ ನಮಗೆ ತೋರುತ್ತದೆ (ಪಪ್ಪಕಾ. ೪೪). [ಸಂ.]

ಪ್ರತಿಮಿತ (ನಾ). ೧. ಅನುಕರಿಸಿದುದು; ಅನುಕರಣೆ ಮಾಡಿದುದು. ೨. ಹೋಲಿಸಿದುದು; ತುಲನೆಮಾಡಿದುದು. ೩. ಪ್ರತಿಬಿಂಬಿತವಾದುದು. ೪. ಸ್ಥಾಪಿತವಾದುದು. ೫. ವ್ಯಕ್ತಿಯ ಆಕಾರದಲ್ಲಿ ನಿರ್ಮಿಸಿದ ಪ್ರತಿಮೆ : ಪಂಚಧ್ಯಾನಿಬುದ್ಧರು . . . ಸಾಮಾನ್ಯವಾಗಿ ಪ್ರತ್ಯೇಕವಾಗಿ ಮೂರ್ತೀಕೃತರಾಗುವುದಿಲ್ಲ. ಎಲ್ಲರೂ ಒಂದೆಡೆ ಪ್ರತಿಮಿತರಾಗುವರು (ಭಾರದ. ೩೦೪). [ಸಂ.]

ಪ್ರತಿಮಿಸು (ಕ್ರಿ). (ಕಣ್ಣಿಗೆ ಕಟ್ಟುವಂತೆ) ಚಿತ್ರೀಕರಿಸಂ; ರೂಪಿಸು : ಕುವೆಂಪು ಅವರು 'ಈ ಚೈತನ್ಯದ ಚಿರನಿಧಿ'ಯನ್ನು 'ಕಲಾಸುಂದರಿ'ಯಾಗಿ ಪ್ರತಿಮಿಸಿದ್ದಾರೆ (ಸೌಂದಸ. ೩೫).; ಭರತೇಶವೈಭವದಲ್ಲಿ ಅಲ್ಲಲ್ಲಿ ಕವಿಗೆ ಸಂಪ್ರದಾಯದತ್ತವಾದ ಭರತನ ಕಥೆಗೂ ತಾನು ಪ್ರತಿಮಿಸಲಿರುವ ದರ್ಶನಕ್ಕೆ ಪಾತ್ರವಾಗಿರುವ ಭರತನ ಕಥೆಗೂ ಉದ್ದಕ್ಕೂ ಒದಗಿರುವ ಎಷ್ಟೋ ಸಂದಿಗ್ಧತೆಗಳೂ ಆಭಾಸಗಳೂ ನಿವಾರಣೆಯಾಗಬಹುದಾಗಿತ್ತು (ಪಂಶೀ. ೦೩೩). [ಪ್ರತಿಮೆ + — ಇಸ್ಸು]

ಪ್ರತಿಮುಕ್ತ (ಗು). ೧. ಬಿಡುಗಡೆ ಹೊಂದಿದ. ೨. ಧರಿಸಿದ; ತೊಟ್ಟ. ೩. ಬಂಧಿಸಿದ. ೪. ಹಿಂತಿರುಗಿದ; ಹಿಂದಕ್ಕೆ ಹೋದ. ೫. (ಯುದ್ಧದ) ಆಯುಧ ಹಾಗೂ ಉಡುಪುಗಳನ್ನು ತೊಟ್ಟು ಸಜ್ಜಾದ,—ಸನ್ನದ್ಧವಾದ. ೬. ಎಸೆದ; ಒಗೆದ. (ನಾ). ೭. ಬಿಡುಗಡೆ ಹೊಂದಿದುದು. ೮. ಉಡುಪುಗಳನ್ನು ಹಾಕಿಕೊಂಡವನು; ಪೋಷಾಕು ತೊಟ್ಟವನು : "ಆಮುಕ್ತಃ, ಪ್ರತಿಮುಕ್ತಃ, ಪಿನದ್ಧಃ, ಅಪಿನದ್ಧಃ—ಬಟ್ಟೆಗಳನ್ನು ತೊಟ್ಟುಟ್ಟು ಕಟ್ಟಿಕೊಂಡವನ ಪೆಸರುಗಳು" (ಸಿದ್ಧಾಂತಿ. ೨೫೬). ೯. (ಯುದ್ಧಕ್ಕಾಗಿ) ಆಯುಧ ಹಾಗೂ ಉಡುಪುಗಳಿಂದ ಸಜ್ಜಾದವನು. [ಸಂ.]

ಪ್ರತಿಮುಖ (ನಾ). ೧. ಎದುರುಮುಖವನ್ನು ಹೊಂದಿರುವುದು; ಅಭಿಮುಖವಾಗಿರುವುದು. ೨. ಎದುರುಗಡೆ; ಮುಂಭಾಗ : ದೂರದೊಳಂ ಪ್ರತಿಮುಖಾವಲೋಕನದೊಳಂ ವೀಪ್ಸೆಯೊಳಂ . . .' ಚಪಳತೆಯೊಳಂ ಪದಮನೆರಡು ಸೂಟುಚ್ಚರಿಪುದು (ಶಪುದ. ೦೯೫ ಪೃತ್ತಿ); ಉಗ್ರಭಾಷೆಯದೇಕೆ ಶಿವಶಿವ ವಿಗ್ರಹಪ್ರತಿಮುಖದ ವಿಷಮಾವಗ್ರಹದಲಿದು ಬೆಂದು ಹೋಗದೆ ಭರತಸಂತಾನ (ಕುಪ್ಯಾಸ. ೦೬-೩೨). ೩. ಹತ್ತಿರ; ಸಮೀಪ. ೪. [ಕಾವ್ಯಮೀ] ನಾಟಕಾದಿ ದೃಶ್ಯಕಾವ್ಯಗಳ ವಸ್ತುನಿರೂಪಣೆಯಲ್ಲಿ ಹೇಳಿರುವ ಐದು ಬಗೆಯ ಸಂಧಿಗಳಲ್ಲಿ ಎರಡನೆಯದು; ಕಾಣಿಸಿಕೊಂಡು ಮರೆಯಾದಂತಿರುವ

ಮೂಲಕಥಾಂಶವನ್ನು ಹೊರಪಡಿಸುವುದು : ಸವಸಂದ ಮುಖಂ ಪ್ರತಿಮುಖಮವಮರ್ಶಂ ಗರ್ಭಮಂತೆ ನಿರ್ವಹಣಮೆನಿಪ್ಪುವವೆಯ್ದೆ ಸಂಧಿಯಕ್ಕುಂ (ಕಾವ್ಯಾ. ೧೫೭); ಮೇಲೆ ಹೇಳಿದ ಐದು 'ಅರ್ಥಪ್ರಕೃತಿ'ಗಳೂ ಐದು ಅವಸ್ಥೆಗಳೂ ಕ್ರಮವಾಗಿ ಸೇರಿದರೆ ವಸ್ತುವಿನಲ್ಲಿ ಮುಖ, ಪ್ರತಿಮುಖ, ಗರ್ಭ, ಅವಮರ್ಶ, ಉಪಸಂಹೃತಿ (ನಿರ್ವಹಣ) 'ಸಂಧಿ'ಗಳೆಂಬ ಐದು ವಿಭಾಗಗಳಾಗುತ್ತವೆ (ಸಂಸಾಟ. ೦೬). [ಸಂ.]

ಪ್ರತಿಮುಖರ (ನಾ). ನಾಯಕ; ಮುಂದಾಳು : ತದ್ವೇತ್ರಹಸ್ತಪ್ರತಿಮುಖರ ಪ್ರೋದ್ಗತಾಭೀಳಘೋಷಂ . . . ಸಭಾವಾಸವಕ್ತ್ರಂ (ಗಂಳ. ೩-೪). [ಸಂ.]

ಪ್ರತಿಮೆ (ನಾ). ೧. ಮರ, ಲೋಹ ಮೊದಲಾದುವುಗಳಿಂದ ಮಾಡಿದ ಮೂರ್ತಿ; ವಿಗ್ರಹ, ಬೊಂಬೆ ಮೊದಲಾದುವು : "ಅರ್ಚಾ, ಪ್ರತಿಮಾ- ಈ ೨ ಪ್ರತಿಮೆಯ ಪೆಸರ್" (ಹಲಾಯು. ೨೨-೦೩೦); ಅರಸನುಮಿರ್ವರು ಮನೆರಡು ಕಾಯ್ದು ಕರ್ಬೊನ್ನ ಪ್ರತಿಮೆಗಳನಪ್ಪವೇಟಿಮೆಂದು ತಳಾಱಂಗೆ ಬೆಸವೇಟ್ಟೊಡಂ (ಪಡ್ಮಾರಾ. ೨೧-೨೦); ಪ್ರತಿಮೆಗಳಟ್ಟುವು ಮೊಟಗಿದುದತಿ ರಭಸದೆ ಧಾತ್ರಿ (ಪಂಪಭಾ. ೧-೦೩೨); ಕೃಷ್ಣ ಶಿಶುಪಾಲರ ಮಹಾಸಂಗ್ರಾಮ ಮಧ್ಯದೊಳು . . . ಮಿಡುಕಿದವು ಪ್ರತಿಮೆಗಳು (ಕುಪ್ಯಾಸ. ೦೦-೬೦). ೨. ಒಂದರಂತೆ ಒಂದು ಇರುವುದು ; ಹೋಲಿಕೆ ; ಸಾದೃಶ್ಯ. ೩. ಪ್ರತಿಫಲನ ಹೊಂದಿದ ಆಕೃತಿ ; ಪ್ರತಿಬಿಂಬ ; ಪ್ರತಿಚ್ಛಾಯೆ. ೪. ಸ್ವರೂಪ ; ಆಕೃತಿ : ತನ್ನ ನಾಯಕನ ವಿರಹದಿಂ ಚಿತ್ತದೊಳು ಅವನ ಪ್ರತಿಮೆಯಂ ನೋಡುವುದು ಒಂದು (ಕಾಮತಾ. ೨೪೬). ೫. ಆನೆಯ ದಂತಗಳ ಮಧ್ಯಪ್ರದೇಶ. ೬. ಆಧುನಿಕ ಸಾಹಿತ್ಯದಲ್ಲಿ ಲೇಖಕನು ಮನಸ್ಸಿನ ಭಾವನೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ರೂಪ, ಚಿತ್ರ ಇತ್ಯಾದಿ : ತೀರ ವಾಸ್ತವಿಕವಾದ ಪ್ರತಿಮೆಗಳಲ್ಲಿ ಐಂದ್ರಿಯಕ ಅನುಭವವು ಮನದಟ್ಟಾಗುವಂತೆ ಕವಿಯು ಮಾಡುತ್ತಾನೆ (ಪಸ್ಕಾ. ೩೨); ಭಾಷೆ ಹಾಗೂ ಪ್ರತಿಮೆಗಳ ಧ್ವನಿಪೂರ್ಣವಾದ ನಿರ್ವಹಣ ತೀರ ಖಚಿತವಾಗಿ ಈ ಕತೆಗಳಲ್ಲಾಗಿದೆ (ಹೊಸಕ್ಷಿ. ೨೬೮) ; ತಮಿಳರಿಗೆ ಕದಂಬಮರ ಸಂಗ್ರಾಮವಿಜಯದ ಪ್ರತಿಮೆಯಾಗಿ ಅಡಿಗಡಿಗೆ ಕಾಣಿಸಿಕೊಳ್ಳುತ್ತದೆ (ಪಸುಹೂ. ೪೬). ೯ ಇದು ಇಂಗ್ಲಿಷಿನ 'Image' ಎಂಬ ಪದದ ಅರ್ಥಾನುವಾದ. ೭. [ಜೈನ] ಶ್ರಾವಕನು ಸಾಧಿಸಬೇಕಾದ ಆಧ್ಯಾತ್ಮಿಕೋನ್ನತಿಯ ಸಾಧನೆಯ ಕ್ರಮವಾದ ಮೆಟ್ಟಿಲು.-ನೆಲೆ; ೯ "ಪರಿಸ್ಥಿತಿ, ಅನುಕೂಲ, ಶಾರೀರಿಕ ಮತ್ತು ಮಾನಸಿಕವೃತ್ತಿಗಳಿಗೆ ಅನುಸರಿಸಿ ಶ್ರಾವಕಧರ್ಮದಲ್ಲಿ ರೂಪಿಸಿರುವ ಹನ್ನೊಂದು ನೆಲೆಗಳು" (ಸ್ವೈಕೋ. ೦೬೪). ಇವುಗಳಲ್ಲಿ ಶ್ರಾವಕರು ಹಿಂದಿನ ಪ್ರತಿಮೆಗಳಲ್ಲಿನ ಆಚಾರಗಳನ್ನು ಮುಂದಿನ ಪ್ರತಿಮೆಗಳಲ್ಲಿಯೂ ನಡೆಸಬೇಕಾಗುತ್ತದೆ. ೧. ದರ್ಶನಪ್ರತಿಮೆ- ಮದ್ಯ, ಮಾಂಸ, ಮಧು ಇವುಗಳ ತ್ಯಾಗ. ೨. ವ್ರತಪ್ರತಿಮೆ- ಅಣುವ್ರತ, ಗುಣವ್ರತ, ಶಿಕ್ಷಾವ್ರತಗಳನ್ನು ಸ್ವೀಕರಿಸುವುದು. ೩. ಸಾಮಾಯಿಕ-ಮುಂಜಾನೆ, ಮಧ್ಯಾಹ್ನ ಮತ್ತು ಸಂಜೆಯಲ್ಲಿ ಸಾಮಾಯಿಕ ಮಾಡುವುದು. ೪. ಪ್ರೋಷಧೋಪವಾಸ-ಅಷ್ಟಮಿ, ಚತುರ್ದಶಿ ದಿವಸಗಳಲ್ಲಿ ಉಪವಾಸ ಮಾಡುವುದು. ೫. ಸಚಿತ್ತತ್ಯಾಗ - ಕಾಯಿಪಲ್ಯ, ಹೂವು ಮುಂತಾದುವುಗಳನ್ನು ಉಪಯೋಗಿಸದಿರುವುದು. ೬. ರಾತ್ರಿಭೋಜನತ್ಯಾಗ-ರಾತ್ರಿಯಲ್ಲಿ ಊಟ ಮಾಡದಿರುವುದು. ೭. ಬ್ರಹ್ಮಚರ್ಯ-ಅವಿವಾಹಿತನಾಗಿರುವುದು. ೮. ಆರಂಭತ್ಯಾಗ-ಕೃಷಿ, ವಾಣಿಜ್ಯ ಮುಂತಾದ ಹಿಂಸಾತ್ಮಕವ್ಯಾಪಾರಗಳನ್ನು ಮಾಡದಿರುವುದು. ೯. ಪರಿಗ್ರಹತ್ಯಾಗ-ಮನೆ ಮಾರು, ಧನಧಾನ್ಯಗಳ ಮೇಲಿನ ಪ್ರೀತಿಯ ತ್ಯಾಗ. ೧೦. ಅನುಮತಿತ್ಯಾಗ-ಆರಂಭ, ಪರಿಗ್ರಹ, ವಿವಾಹ ಮುಂತಾದ ಕಾರ್ಯಗಳಲ್ಲಿ ಆಪ್ತರಿಗೆ ಸಮ್ಮತಿ ಕೊಡದಿರುವುದು. ೧೧. ಉದ್ದಿಷ್ಟಾಹಾರತ್ಯಾಗ-ತಮ್ಮ ದೆಸೆಯಿಂದಲೇ ಮಾಡಿದ ಆಹಾರವನ್ನು ತ್ಯಾಗಮಾಡುವುದು : ಕ್ರಿಯಾದೇವತಾಯೆಂಬುದು ಛತ್ರತ್ರಯಮುಂ ಚಕ್ರತ್ರಯಮುಂ ಅಗ್ನಿತ್ರಯಮುಂ ಪ್ರತಿಮೆಯುಮೆಂದಿಂತು ದಶವಿಧಮಕ್ಕುಮಿವು ಶಾಂತಿಹೇತುಗಳ್ (ಶಾಪುಂಪು. ೨೨೨) ; ಅಜ್ಜಣನ್ದಿಭಟಾರರ್ ಪ್ರತಿಮೆ ಮಾಡಿದಾರ್ (ಎಷ. IV, ೧೪೦-೯; ೯) ; ನೈಷ್ಠಿಕಶ್ರಾವಕರಲ್ಲಿ ಹನ್ನೊಂದು ತರಗತಿಗಳುಂಟು. ಈ ತರಗತಿಗಳಲ್ಲಿ ತೇರ್ಗಡೆ ಹೊಂದುತ್ತ ಮುಂದೆ ಸಾಗಿದಂತೆ, ಶ್ರಾವಕನು ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಂಡುತಾಗುವುದು. ಈ ಹನ್ನೊಂದು ತರಗತಿಗಳಿಗೆ ಜೈನಪರಿಭಾಷೆಯಲ್ಲಿ "ಪ್ರತಿಮೆ"ಗಳೆಂದು ಕರೆಯುವರು (ಸ್ವೈಕ. ೪೬೬). 'ಏಕಾದಶನಿಳಯ' ಪರಾ. [ಸಂ. ಪ್ರತಿಮಾ]

ಪ್ರತಿಯತ್ನ (ನಾ). ೧. ಒಂದು ಪ್ರಯತ್ನಕ್ಕೆ ಪ್ರತಿಯಾಗಿ ಮಾಡುವ ಮತ್ತೊಂದು ಪ್ರಯತ್ನ ; ಪ್ರತಿಕ್ರಿಯೆ : ಯತ್ನ ಪ್ರತಿಯತ್ನಗಳು ಒಂದಕ್ಕೊಂದಕ್ಕೆ ಸಮನಾಗಿ ಮತ್ತು ವಿರುದ್ಧವಾಗಿ ಇರುವುವು (ಶಾಕಂ. ೬೪). ೨. ಪ್ರಯತ್ನ; ಉದ್ಯಮ. ೩. ಸೇಡು ತೀರಿಸಿಕೊಳ್ಳುವುದು ; ಪ್ರತೀಕಾರ. ೪. ಅಭಿಲಾಷೆ ; ಅಪೇಕ್ಷೆ. ೫. ಸೆರೆಹಿಡಿಯುವುದು ; ಬಂಧಿಸುವುದು : "ಪ್ರತಿಯತ್ನಃ-೧. ಅಭಿಲಾಷೆ. ೨. ಸೆರೆಹಿಡಿಯುವಿಕೆ" (ಸಿದ್ಧಾಂತಿ. ೪೦೦). ೬. ವಿರೋಧ ; ಪ್ರತಿಭಟನೆ. [ಸಂ.]

ಪ್ರತಿಯಾತನ (ನಾ). ೧. ಸೇಡು; ಮುಯ್ಯಿ : "ಪ್ರತಿಯಾತನಂ ಪ್ರತಿ ಪ್ರತಿಕೃತಿಯೆನಲ್ಕೆ ಮುಯಿ" (ಮುಂಗಾರಾ. ೦೩೫-೩೬). ೨. ಪ್ರತಿರೂಪ ; ಪ್ರತಿಬಿಂಬ : "ಪ್ರತಿಬಿಂಬಂ, ಪ್ರತಿರೂಪಂ . . . ಪ್ರತಿಯಾತನಂ, ಪ್ರತಿಚ್ಛಾಯಂ- ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦-೦೩೦). [ಸಂ.]

ಪ್ರತಿಯಾತನೆ (ನಾ). ೧.=ಪ್ರತಿಯಾತನ ೨ : "ಪ್ರತಿಬಿಂಬಂ . . . ಪ್ರತಿಯಾತನಾ ಪ್ರತಿಚ್ಛಂದಮಾ ಪ್ರತಿಕೃತಿ ಪ್ರತಿಕಾಯಮಾ ಪ್ರತಿಪ್ರಾಣಮೆಂದೆನಲದುಂ ಪ್ರತಿಯಪ್ಪ ರೂಪೆನಿಕ್ಕುಂ" (ಮುಂಗಾರಾ. ೯-೨೬). ೨. ವಿಗ್ರಹ, ಪ್ರತಿಮೆ, ಚಿತ್ರ ಮುಂತಾದ ಪ್ರತಿಕೃತಿ : "ಪ್ರತಿಮಾನಂ, ಪ್ರತಿಬಿಂಬಂ, ಪ್ರತಿಮಾ, ಪ್ರತಿಯಾತನಾ . . . ಪ್ರತಿನಿಧಿಃ- ೮ ವಿಷ್ಣು ಮೊದಲಾದವರ ಆಕಾರಗಳಿಗೆ ಸಮನಾಗಿ ಶಿಲಾದಿಗಳಿಂದ ಮಾಡಿದ ಪ್ರತಿಮೆ ಹೆಸರು" (ಸಿದ್ಧಾಂತಿ. ೩೦೭). [ಸಂ. ಪ್ರತಿಯಾತನಾ]

ಪ್ರತಿಯಿಕ್ಕು (ಕ್ರಿ). ಒಂದು ವಸ್ತುವಿನ ಸ್ಥಾನಕ್ಕೆ ಮತ್ತೊಂದನ್ನು ಇಡು ; ಒಂದರ ಸ್ಥಾನದಲ್ಲಿ ಮತ್ತೊಂದನ್ನು ಭರ್ತಿಮಾಡು : ಅಱಿಯದೆ ದಕ್ಷನ ಶಿರಮಂ ತಱಿಯಲು ಶಿವನಿತ್ತ ನೇಮವಂ ನೆನೆದಾಗಳ್ ಕುಱಿದಲೆಯಂ ಪ್ರತಿಯಿಕ್ಕುತ ಭರದಿಂ ವೀರೇಶನಿತ್ತ ಪ್ರಾಣವನವಗಂ (ಪಸ್ವಕಾ. ೬-೯೯). [ಪ್ರತಿ + ಇಕ್ಕು]

ಪ್ರತಿಯಿಡು (ಕ್ರಿ). ೧. ಹೋಲಿಸು : ಪ್ರತಿಯಿಡಲು ಬಾರದ ಮಹಾಗರ್ವಿತಹೃದಯನು ಕಪಟನಂ . . . ಸೈರಿಸಿ (ಬಸಪು. ೨೩-೪೦). ೨. ತಿರುಗಿ ಬರೆ; ಬೇರೆಯಾಗಿ ಬರೆ: ಬೆಸಗೊಂಡಿರ್ದುದಯಕ್ಕೆ ಪೂರ್ವಗದಿತವ್ಯಾಪಾರಮಂ ಕೂಡಿ ಯೋಜಿಸಿ ನಾಲ್ಕುಂ ಪ್ರತಿಯಿಟ್ಟು (ಶಾಕಂ. ೨೪-೨೬). ೩. (ತೂಗಲು) ಪಡಿಯಿಡು ; ಬೆಲೆಕಟ್ಟು : ಬಾವಂನ ನಿರತಂ ತಂದಾವಗಮೊಂದೆಸೆಯೊಳಿಟ್ಟು ತಂನಂ ಪ್ರತಿಯಿಟ್ಟ ವೀರರೊಡನೆ ತೂಗಿದೊಡೋವತ ವೀರಕ್ಕೆ ಮಾಧವಂ ಗೆಲೆವಂದಂ (ಸೌಇಇ. IX-i, ೨೪೯-೪೬ ; 1147). [ಪ್ರತಿ + ಇಡು]

ಪ್ರತಿಯಿನ (ನಾ). ಅಂತರಿಕ್ಷದಲ್ಲಿ ಎರಡನೆಯ ಸೂರ್ಯನಂತೆ ಕಾಣಿಸುವ ಒಂದು ಉತ್ಪಾತ : ಜಗತಿಯೊಡೆಯನು ಶರಸುವಿಲ್ಲದ

ಬಿಗಿದ ಹೆಣನಂ ಕಂಡನುದಯಾದ್ರಿಗೆ ತರಣಿ ಬಹ ಸಮಯದಲಿ ಪ್ರತಿಯಿನನುಪಯಿಸಿದನು (ಬಸಪು. ೬೧-೦೨). 'ಪ್ರತಿಸೂರ್ಯ' ಪರಾ. [ಸಂ.]

ಪ್ರತಿಯೋಗ (ನಾ). ೧. ವಿರೋಧ; ಪ್ರತಿಭಟನೆ. ೨. ಸಹಯೋಗ; ಸಹಕಾರ. ೩. ಪ್ರತೀಕಾರ. ೪. ರೋಗವನ್ನು ನಿವಾರಿಸುವ ಮದ್ದು; ಪರಿಹಾರೌಷಧ. [ಸಂ.]

ಪ್ರತಿಯೋಗಿ (ಗು). ೧. ವಿರೋಧಿಸುವ; ಸ್ಪರ್ಧಿಸುವ. (ನಾ). ೨. ಸರಿಸಮಾನವಾದುದು; ಈಡಾದುದು : ಹನ್ನೊಂದನೆಯ ಶತಾಬ್ದದಲ್ಲಿ ಹೂಗ್ಲಿಯು ನೂತನವಾದ ಸೌಷ್ಠವದಿಂದ ಸಪ್ತಗ್ರಾಮಕ್ಕೆ ಪ್ರತಿಯೋಗಿ ನಗರವಾಗಿತ್ತು (ಕಪಾಕುಂ. ೫೬). ೩. ಎದುರಾಳಿ; ವಿರೋಧಿ. ೪. ಬೇರೆಯಾಗಿರುವುದು; ಭಿನ್ನವಾಗಿರುವುದು : ಇಲ್ಲಿ ಈಶ, ಜೀವ, ಜಡ ಎಂದು ಮೂರೇ ಪ್ರತಿಯೋಗಿಗಳು (ಹಿಂದಸಾ. ೨೭೨). ೫. [ನ್ಯಾಯ] ಯಾವ ವಸ್ತುವಿನ ಅಭಾವವನ್ನು ಹೇಳಬೇಕೋ ಆ ಪದಾರ್ಥ; ಅಭಾವಕ್ಕೆ ಪಕ್ಕಾದ ವಸ್ತು : ಅನ್ಯೋನ್ಯಾಭಾವವೆಂಬ ಭೇದಪದಾರ್ಥವು ಪ್ರತಿಯೋಗಿಭೇದದಿಂದ ಬೇರೆ ಬೇರೆಯಾಗಿ ಘಟಭೇದ, ಪಟಭೇದ ಎಂದು ವಿಭಿನ್ನಗಳಾಗಿದ್ದರೂ ಆಶ್ರಯಭೇದದಿಂದ ಬೇರೆ ಬೇರೆಯಲ್ಲವೆಂದು ಇತರರ ಅಭಿಪ್ರಾಯವು (ಹಿಂದಸಾ. ೨೬೦). [ಸಂ. ಪ್ರತಿಯೋಗಿನ್]

ಪ್ರತಿರಕ್ಷಣ (ನಾ). ೧. ಕಾಪಾಡುವುದು; ರಕ್ಷಣೆ. ೨. [ರಾಜನೀ] ಅಪಾಯವೊದಗದಂತೆ ನೋಡಿಕೊಳ್ಳುವುದು; ಅಪಾಯದ ದೆಸೆಯಿಂದ ರಕ್ಷಿಸುವುದು : ನಾನು. . . ಭಾರತಸಂವಿಧಾನದ ಮತ್ತು ವಿಧಿಯ ಪರಿರಕ್ಷಣ, ಸಂರಕ್ಷಣ ಮತ್ತು ಪ್ರತಿರಕ್ಷಣ ಮಾಡುತ್ತೇನೆಂದೂ... ಪ್ರತಿಜ್ಞೆ ಮಾಡುತ್ತೇನೆ (ಭಾಧಾನ. ೩೦). [ಸಂ.]

ಪ್ರತಿರಕ್ಷಣೆ (ನಾ). ೧. = ಪ್ರತಿರಕ್ಷಣ ೧. ೨. ನ್ಯಾಯಾಲಯ ಮುಂತಾದ ಕಡೆಗಳಲ್ಲಿ ಅಪರಾಧವು ಹೊರಿಸಲ್ಪಟ್ಟರೆ ತಾನು ನಿರ್ದೋಷಿಯೆಂದು ಸಾಧಿಸುವಿಕೆ : ಅವನಿಗೆ ವಿರೋಧವಾಗಿ ಹೂಡಲಾದ ಕಾನೂನುಸಂಬಂಧವಾದ ವ್ಯವಹರಣೆಗಳಲ್ಲಿ ಪ್ರತಿರಕ್ಷಣೆ ಮಾಡಿಕೊಳ್ಳುವುದಕ್ಕಾಗಿ. . . ಪರಾಮರ್ಶನ ನಡೆಯತಕ್ಕುದು (ಭಾಧಾನ. ೦೬೬). [ಸಂ. ಪ್ರತಿರಕ್ಷಣ]

ಪ್ರತಿರಕ್ಷೆ (ನಾ). ೧. = ಪ್ರತಿರಕ್ಷಣ ೧ : ನನಗೆ ತಿಳಿದ ಮಟ್ಟಿಗೆ ಪ್ರತಿರಕ್ಷೆಯ ಸನ್ನಾಹವನ್ನು ಪೂರೈಸಿ ಹಾಸಿಗೆಯನ್ನು ಆಶ್ರಯಿಸಿದೆನು (ಸಂಟಿರು. ೪೬). ೨. = ಪ್ರತಿರಕ್ಷಣೆ ೨ : ಬಂದೀಕರಣ ಮಾಡಿದ ಯಾವ ವ್ಯಕ್ತಿಯನ್ನೂ. . . ಆ ವ್ಯಕ್ತಿಯು ತನಗೆ ಇಷ್ಟವುಳ್ಳ ಲಾಯರ ಪರಾಮರ್ಶವನ್ನು ಕೇಳುವ ಮತ್ತು ಆತನಿಂದ ಪ್ರತಿರಕ್ಷೆ ಪಡೆಯುವ ಅಧಿಕಾರವು ಆ ವ್ಯಕ್ತಿಗಿಲ್ಲದಂತೆ ಮಾಡತಕ್ಕುದಲ್ಲ (ಭಾಧಾನ. ೦೨). [ಸಂ. ಪ್ರತಿರಕ್ಷಾ]

ಪ್ರತಿರಣನೆ (ನಾ). ಪ್ರತಿಧ್ವನಿ; ಅನುರಣನ : ಮೃದಂಗವನ್ನು ಸರಿಯಾಗಿ ತಯಾರಿಸಿದ್ದರೆ, ಅದರ ನಾದಭಾಗವು ಒಂದೇ ಸಮನಾದ . . . ಪ್ರತಿರಣನೆಗೊಳ್ಳುವ ತುಂಬುನಾದವನ್ನು ಕೊಡುತ್ತದೆಂದೂ ಅವರು ಚೆನ್ನಾಗಿ ಬಲ್ಲರು (ಸಂಗೀತ. ೦೧೨). [ಸಂ. ಪ್ರತಿರಣನ]

ಪ್ರತಿರಣಿತ (ನಾ). ಮಾರ್ದನಿಗೊಂಡುದು; ಪ್ರತಿಧ್ವನಿತವಾದುದು : ಮಹಾಧ್ವಾನಮಸುರನುಸಿರಿಂದುರ್ಕಿ ರೋದಿಸಿತು, ಗಗನಗಿರಿವನಗುಹಾಮುಖಂಗಳಿಂ ಪ್ರತಿರಣಿತಮಾಗಿ ! (ಕ್ರೀಂಗಪು. ೨೩೮-೨೬೯). [ಸಂ.]

ಪ್ರತಿರವ (ನಾ). ಪ್ರತಿಧ್ವನಿ : ಬಂಹಿಮವನ್ನಂದರಕಂದರಪ್ರತಿರವಂ ಕೂಟಕ್ಕೆ ಮೆಯ್ಯೊಡ್ಡೆ ಪಂಚಮಮಾಂಗಲ್ಯದೊಳಿಂದ್ರಗಾಯಕರದೇನಿಂಬಿಂ ನಯಂಬೆತ್ತರೋ (ಶಾಂತಿಪು. ೦೦-೩೫). [ಸಂ.]

ಪ್ರತಿರವಂಗುಡು (ಕ್ರಿ). ಮಾರ್ದನಿಯನ್ನು ಕೊಡು; ಪ್ರತಿಧ್ವನಿಸು : ಉರುತರಪರ್ವತಂ ಪ್ರತಿರವಂಗುಡೆ. . . ಜವದಿನೇಳ್ತರುತಿರ್ದುದು ಸೊರ್ಕಿದೆಕ್ಕಲಂ (ಶಬಕಾ. ೪-೩). [ಪ್ರತಿರವ + ಕುಡು$_1$ (<ಕೊಡು$_1$)]

ಪ್ರತಿರಹಿತ (ಗು). ೧. ಎದುರಿಲ್ಲದ; ಸಾಟಿಯಿಲ್ಲದ : ಯೋಗಮಂ ಕೊಡುವ ದೇವಿಗಂ ಪ್ರತಿರಹಿತಯೋಗಿಗಳ ಗುರುರೂಪಗಂ. . . ನಮೋ ನಮೊಯೆಂದೆನು (ಪೀಶ್ಯಪು. ೨-೨-೩೪). (ನಾ). ೨. ಸಾಟಿಯಿಲ್ಲದವನು; ಅಸದೃಶನಾದವನು : ಪ್ರತಿರಹಿತ ನುತವಿಹಿತ . . . ಶರಣಾಗು ಗುರುಮೂರ್ತಿ ಪಂಪಾಪುರಾಧೀಶ್ವರ (ಹಸಕಾ. ೦-೩). [ಸಂ.]

ಪ್ರತಿರೂಪ (ಗು). ೧. ತದ್ರೂಪವಾದ; ಸದೃಶವಾದ : ನಿರಂತರಂ ಪಾರ್ವ ಪುರಾಣರಾಕ್ಷಸರನೀಕ್ಷಿಸಿದಂ ಪ್ರತಿರೂಪಶೂದ್ರಕು (ಕಾನ್ಯಸಾ. ೫೩೪). (ನಾ). ೨. ಪ್ರತಿಮೆ; ವಿಗ್ರಹ : ಅಂತು ತಾಮ್ರಮಯಗುಹ್ಯ ಪ್ರತಿರೂಪಂ ಕಿಚ್ಚಿಂಗೆ ತೋಱದರಗು ಕರಗುವಂತೆ ಕರಗಿ ಪೊನಲ್ವರಿಯೆ (ಶಾಂತಿಪು. ೬-೨೯ ಪ); ನೆನೆದ ಘಳಿಗೆಯೊಳಾತ ಕಟ್ಟುಕ್ಕಿನಲಿ ಸರ್ವಾವಯವವನು ಸಂಜನಿಸಿದನು ಪ್ರತಿರೂಪವನು ಪವಮಾನನಂದನನ (ಕುಣ್ಯಾಗ. ೦೧-೩೭). ೩. ಪ್ರತಿಬಿಂಬ : "ಪ್ರತಿಬಿಂಬಂ, ಪ್ರತಿರೂಪಂ. . . ಪ್ರತಿಚ್ಛಾಯಂ – ಈ ೯ ಪ್ರತಿಬಿಂಬದ ಪೆಸರ್" (ಹಲಾಯು. ೨೦-೦೩೦). ೪. ತದ್ರೂಪವಾಗಿ ಇರುವುದು; ತದ್ವತ್ತಾಗಿರುವುದು : ಪ್ರತಿಮಾರೂಪಮಘಾತಿಪ್ರತಿರೂಪದ ಗರ್ವಪರ್ವತಾರೂಢತೆಯಂ ಶತಖಂಡಂ ಮಾಡಿದುವು (ಶಾಂತಿಪು. ೦೨-೩೨); ಆಳು ಸೂಳೆಯು ನಾಯಿ ಕೋಳಿ ಜೋಯಿಸ ವೈದ್ಯ ಗೂಳಿಯು ತಗರು ಪ್ರತಿರೂಪ ಕಂಡರೆ ಕಾಳಗವೆಂದ (ಸರ್ವಜ್ಞ. ೦೫೧೬). [ಸಂ.]

ಪ್ರತಿರೂಪು (ನಾ). ಪ್ರತಿಬಿಂಬ : ಅಂಬುರುಹದೊಳಾ ಪ್ರತಿರೂಪು ಕರಂ ಬಿಂಬಿಸೆ ಕಣ್ಗೆಡ್ಡಂಬಡೆದುದು (ಜಯಕಾ. ೦-೪೩). [<ಸಂ. ಪ್ರತಿರೂಪ]

ಪ್ರತಿರೋಧ (ಗು). ೧. ತಡೆಯುವ; ನಿರೋಧಿಸುವ : ನೀವು ನಿಮ್ಮ ಘ್ರಾಣೇಂದ್ರಿಯವನ್ನು ಚಳಿಗೂ, ಕಾವಿಗೂ ಬೀಳದಂತೆ ಮಾಡಿ ಮಾಡಿ ಅದರ ಪ್ರತಿರೋಧಶಕ್ತಿಯನ್ನೇ ಕಳೆದಿದ್ದೀರಿ (ದೇಶನ್ಯ. ೯). (ನಾ). ೨. ವಿರೋಧ; ಪ್ರತಿಭಟನೆ. ೩. ಅಡಚಣೆ; ಅಡ್ಡಿ; ತಡೆ. ೪. ಎದುರಾಳಿ; ವಿರೋಧಿ. ೫. ಅಕ್ರಮಣ. ೬. ತಿರಸ್ಕಾರ. ೭. ಕಳ್ಳತನ; ಚೌರ್ಯ. [ಸಂ.]

ಪ್ರತಿರೋಧಕ (ಗು). ೧. ತಡೆಯುವ; ಅಡ್ಡಿಪಡಿಸುವ. (ನಾ). ೨. ತಡೆ; ಅಡ್ಡಿ; ಅಡಚಣೆ. ೩. ಎದುರಾಳಿ; ವಿರೋಧಿ. ೪. ತಡೆಯುವವನು; ಅಡ್ಡಿಪಡಿಸುವವನು. ೫. ಕಳ್ಳ; ದರೋಡೆಕೋರ: "ಏಕಾಗಾರಿಕಃ, ತಸ್ಕರಃ, ದಸ್ಯುಃ, ಪ್ರತಿರೋಧಕಃ . . . ಸ್ತೇನಃ — ಈ ೧೦ ಕಳ್ಳಂ" (ಹಲಾಯು. ೫೬-೦೬೩). [ಸಂ.]

ಪ್ರತಿರೋಧಿ (ನಾ). ಕಳ್ಳ; ದರೋಡೆಕೋರ : "ಚೋರಃ, ಏಕಾಗಾರಿಕಃ, . . . ಪ್ರತಿರೋಧಿಃ, ಪರಾಸ್ಕಂದೀ, ಪಾಟಚ್ಚರಃ, ಮಲಿಮ್ಲುಚಃ – ೧೦ ಕಳ್ಳನ ಪೆಸರುಗಳು" (ಸಿದ್ಧಾಂತಿ. ೩೦೪). [ಸಂ. ಪ್ರತಿರೋಧಿನ್]

ಪ್ರತಿರೋಧಿಸು (ಕ್ರಿ). ತಡೆ; ಅಡ್ಡಿಪಡಿಸು : ಪ್ರತಿರೋಧಿಸಿ ವಜ್ರದ ಪರ್ವತುಗಳೆನಿತಾನುಮಿರ್ದೋಡವನವಯವದಿಂ ಸ್ವತನುವೆ ಭೇದಿಸಲಾರ್ಪ ಪ್ರತಿಘಾತದಿನಾದಮೆಸೆದನಿಂದ್ರಪ್ರತಿಮಂ (ಶಂಧ್ರಪು. ೦೪-೩೩). [ಸಂ. ಪ್ರತಿರೋಧನ + — ಇಸ್ಯು$_3$]

ಪ್ರತಿಲಿಪಿ (ನಾ). ಮೂಲದಾಖಲೆಯ ನಕಲು : ಅಂಥ ವರದಿಯು ತಲಪಿದ ತರುವಾಯ ರಾಷ್ಟ್ರಪತಿಯವರು, ಅದರ ಒಂದು ಪ್ರತಿಲಿಪಿಯನ್ನೂ . . . ಸಂಸತ್ತಿನ ಪ್ರತಿಯೊಂದು ಸದನದ ಸಮಕ್ಷಮ ಇರಿಸುವಂತೆ ಏರ್ಪಡಿಸತಕ್ಕುದು (ಭಾಧಾನ. ೦೫೮). [ಸಂ.]

ಪ್ರತಿಲೇಖನ (ನಾ). ೧. = ಪ್ರತಿಲಿಪಿ. ೨. [ಜೈನ] ಪ್ರತಿನಿತ್ಯವೂ ಭೂಶುದ್ಧಿ, ಉಪಕರಣಗಳ ಶುದ್ಧಿ ಮುಂತಾದುವನ್ನು ಮಾಡುವುದು:

ಪ್ರತಿಲೇಖನದೊಳನಾಲೋಕಿತಮನುಚಿತಮೆಂದು ಪಲವು ಕಣ್ಬಡೆದವೊಲಾ ಯತಿಪತಿಯ ದಯಾಧ್ವಜಮೇನತಿಶಯಮಾದತ್ತೊ ಮೇದುರಂ ಮಾಯೂರಂ (ಸುಭಿಷಿ. ೦೦-೦೩೫) ; ನೋಡದೆ ಪ್ರತಿಲೇಖನವನು ಮಾಡದೆ ಕೂಡಿ ಪೂಜೋಪಕರಣವ ರೂಢಿಯೊಳಿಡುವುದು ತೆಗೆವುದು ಮೆಂಬಿದು ನೋಡಲು ಗ್ರಹಣಾತಿಚಾರ (ಧ್ವಾದಶಾ. ೦೦-೩೦೯). [ಸಂ.]

ಪ್ರತಿಲೇಖನೆ (ನಾ). = ಪ್ರತಿಲೇಖನ ೨ : ನೋಡದೆ ಪ್ರತಿಲೇಖ [ಶಾಶಾ. ಪ]ನೆಯಂ ಮಾಡದೆ ಮಡಗಿಡುವ ಕೊಳ್ವ ಪಾಸುವುದುಂ ಕೊಂಡಾಡದುದುಂ ನೆನೆಯದುದುಂ ಕೇಡಿನಿತುಂ ಪ್ರೋಷಧೋಪವಾಸವ್ರತ ದೊಳ್ (ಸುಕುಮಾ. ೬-೨೩). [ಸಂ. ಪ್ರತಿಲೇಖನ]

ಪ್ರತಿಲೇಖಿಸು (ಕ್ರಿ). [ಜೈನ] ಪ್ರತಿನಿತ್ಯವೂ ಭೂಶುದ್ಧಿ, ಉಪಕರಣ ಗಳ ಶುದ್ಧಿ ಮುಂತಾದುವನ್ನು ಮಾಡು : ನೋಡದೆ ಪ್ರತಿಲೇಖಿಸದೆ ಮೂತ್ರ ಪುರೀಷಂಗಳಂ ಕಳೆವ ಅಪ್ರತ್ಯವೇಕ್ಷಿತಾಪ್ರಮಾರ್ಜಿತೋತ್ಸ ರ್ಗಮುಂ ನೋಡದೆ ಪ್ರತಿಲೇಖಿಸದೆ ಚಿನ್ಮಯಾರ್ಹದಾಚಾರ್ಯಾದಿ ಪೂಜೋಪಕರಣಂಗಳುಮಂ . . . ಕೊಳ್ವ ಅಪ್ರತ್ಯವೇಕ್ಷಿತಾಪ್ರಮಾರ್ಜಿ ತಾದಾನಮುಂ (ತತ್ತ್ವಾಪ್ರ. ೨೬೩) ; ನೋಡದೆ ಪ್ರತಿಲೇಖಿಸದೆ ಪೂಜೋಪ ಕರಣಂಗಳಂ ಕೊಳ್ವ ಅಪ್ರತ್ಯವೇಕ್ಷಿತಾಪ್ರಮಾರ್ಜಿತಾದಾನಮುಂ . . . ಇವಯ್ದುಂ ಪ್ರೋಷಧೋಪವಾಸದತಿಚಾರಮಕ್ಕುಂ (ಪಸಾರ. ೩೦೬) ; ಹಾಸಿಕೆಯನು ಹಾಸಿಕೊಂಬಲ್ಲಿ ತೆಗೆದಿಡುವಾ ಸಮಯದಿ ಠಾವ ನೋಡಿ ಲೇಸಾಗಿ ಪ್ರತಿಲೇಖಿಸದಿರಿಸುವುದದು ಸಂಸ್ತರಣವುಯೆಂಬ ದೋಷ (ಧ್ವಾದಶಾ. ೦೦-೩೨೦). [ಪ್ರತಿಲೇಖನ + —ಇಸ್ಸು]

ಪ್ರತಿಲೋಮ (ಗು). ೧. ಯಥಾಕ್ರಮವಲ್ಲದ ; ನಿಯಮಕ್ಕೆ ವಿರುದ್ಧವಾದ: 'ಪ್ರತಿಲೋಮವಿವಾಹ' ಪರಾ. ೨. ನಿಮ್ನವರ್ಗದ. (ನಾ). ೩. ನಿಯಮವಿರುದ್ಧವಾದುದು ; ಯಥಾಕ್ರಮವಲ್ಲದುದು: "ಪ್ರತಿಕೂಲಂ, ಪ್ರತಿಲೋಮಂ, ಪ್ರತೀಪಂ, ಪ್ರಸವ್ಯಂ — ಈ ೪ ಪ್ರತಿಕೂಲಂ" (ಹಲಾಯು. ೦೨೨-೫೮) ; ವಾಯುವು ಊರ್ಧ್ವಮುಖವಾಗಿ ಶ್ಲೇಷ್ಮವನ್ನು ಪ್ರತಿಲೋಮವಾಗಿ ಶಿರಸ್ಸಿಗೈದಿಸಿ ತಮಕವೆಂಬ ಶ್ವಾಸ ವನ್ನುಂಟುಮಾಡುವುದು (ಸಕೃ. ೨೨೯) ; ಪ್ರಾಯೋಗಿಕವಿಜ್ಞಾನವು ಪ್ರತಿಲೋಮವಾಗಿ ಬೆಳೆದಿದೆ (ಕಿಲ್ಪಾ. ೦೨೯). ೪. ಹಿಂದೂಜನಾಂಗ ದಲ್ಲಿರುವ ನಾಲ್ಕು ವರ್ಣಗಳಲ್ಲಿ ಮೇಲುವರ್ಣದ ಹೆಣ್ಣನ್ನು ಕೀಳುವರ್ಣದ ಗಂಡಿಗೆ ಕೊಟ್ಟು ಮಾಡುವ ಮದುವೆ : 'ಅನು ಲೋಮ' ಸಲ್ಲುವುದು ; 'ಪ್ರತಿಲೋಮ'ಶಾಸ್ತ್ರಕ್ಕೆ ವಿರೋಧ (ವ್ಯಾಸಸಿ. ೨೬); ಈ ವಿವಾಹಗಳೇ ಅನುಲೋಮ ಪ್ರತಿಲೋಮಗಳೆಂದು ಹೆಸರು ಪಡೆದಿರತಕ್ಕವು (ಭಾಇತ್ರ. ೬೮). [ಸಂ.]

ಪ್ರತಿಲೋಮಕ್ರಿಯೆ (ನಾ). ವಿಪರೀತವಾದ ಕಾರ್ಯ ; ವಿರುದ್ಧ ವಾದ ಕೆಲಸ : ಭಾಗಾಹಾರವು ಗುಣಾಕಾರದ ಪ್ರತಿಲೋಮಕ್ರಿಯೆ (ಇನ್‌ವರ್ಸ್ ಪ್ರೋಸೆಸ್) (ಕಪಿಕೋ. I, ೪). [ಸಂ. ಪ್ರತಿಲೋಮಕ್ರಿಯಾ]

ಪ್ರತಿಲೋಮಜ (ನಾ). ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಲ್ಲಿ ಮೇಲುವರ್ಣದ ಹೆಣ್ಣಿನಲ್ಲಿ ಕೀಳುವರ್ಣದ ಗಂಡಿನಿಂದ ಹುಟ್ಟಿದವನು. [ಸಂ.]

ಪ್ರತಿಲೋಮವಿವಾಹ (ನಾ). = ಪ್ರತಿಲೋಮ ೪ : ಪ್ರತಿಲೋಮ ವಿವಾಹಗಳು ಎಂದೂ ಅಷ್ಟು ಮನ್ನಣೆಯನ್ನು ಪಡೆಯಲಿಲ್ಲ (ಕರ್ಣಾಪೂ. ೦೦೭); ಹಿಂದೆ ಅನುಲೋಮವಿವಾಹಗಳು ಜಾರಿಯಲ್ಲಿದ್ದು ಪ್ರತಿಲೋಮ ವಿವಾಹಗಳು ನಿಷಿದ್ಧವಾಗಿದ್ದವು (ಭಾರದ. ೫೫). [ಸಂ.]

ಪ್ರತಿವಸ್ತೂಪಮಾಲಂಕಾರ (ನಾ). = ಪ್ರತಿವಸ್ತೂಪಮೆ : ಉಪಮಾ ನೋಪಮೇಯವಾಕ್ಯಂಗಳೊಳ್ ಒಂದೇ ಸಾಧಾರಣಧರ್ಮವಾಗಿ ಬೇಱೆ ವೇಱೆ ಪೇಳಿರೆ ಪ್ರತಿವಸ್ತೂಪಮಾಲಂಕಾರಂ (ಪರಿ. ೯೦ ವೃತ್ತಿ) ; ವರ್ಣ್ಯ ವರ್ಣಕ್ಕೆ ಪರವಾದ ವಾಕ್ಯಗಳು ಪ್ರತ್ಯೇಕ ಪ್ರತ್ಯೇಕವಾಗಿದ್ದು ಅವುಗಳಲ್ಲಿ ಸಮಾನಧರ್ಮವೂ ಪ್ರತ್ಯೇಕ ಪ್ರತ್ಯೇಕವಾಗಿ ಉಕ್ತವಾಗಿದ್ದರೆ ಪ್ರತಿವಸ್ತೂ ಪಮಾಲಂಕಾರವಾಗುವುದು (ಕೃಬಿಡಿ. ೨೬೦). [ಸಂ.]

ಪ್ರತಿವಸ್ತೂಪಮೆ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು : ಯಾವುದಾದರೂ ಒಂದು ವಸ್ತುವನ್ನು ಕುರಿತು ಹೇಳಿ ಅದಕ್ಕೆ ಸಮಾನವಾದ ಧರ್ಮವುಳ್ಳ ಇನ್ನೊಂದು ವಸ್ತುವನ್ನು (ಪ್ರತಿವಸ್ತುವನ್ನು) ತಿಳಿಸುವುದರ ಮೂಲಕ ಅವುಗಳ ನಡುವಣ ಸಾಮ್ಯವು ಪ್ರತೀತವಾಗುವಂತೆ ವರ್ಣಿಸುವುದು : ಪ್ರತಿವಸ್ತೂಪಮಿ ತಾಲಂಕೃತಮಿಂತಕ್ಕುಂ ಧರಾಧಿಪಾ ನಿನ್ನನ್ನಂ ವಿತತಯಶನಿಲಯ ತಾರಾಪತಿ ದಿನಕರಸದೃಶತೇಜನೆಂಬುದುಮುಂಟೇ (ಪ್ರತಿವಸ್ತೂಪಮೆ) (ಕಪಿರಾ. ೬-೬೪) ; ಪ್ರತಿವಸ್ತೂಪಮೆಗೆ — ನಿನ್ನನ್ನೆನೊರ್ವನುಂ ಸಂಪನ್ನ ಗುಣಂ ಪುಟ್ಟಲರಿಯನಿನ್ನುಂ ಮುನ್ನುಂ ಸನ್ನುತನಮೇರುಭೂರುಹದನ್ನವು ವೆಱತಾವಮರನುಮೇಂ ಪುಟ್ಟುಗುಮೇ (ಕಾವ್ಯಾನ. ೬೬೬) ; ಉಪ ಮಾನೋಪಮೇಯ ಪರವಾಕ್ಯಂಗಳೊಳ್ಸಮಾನಧರ್ಮಮೊಂದಾಗಿರೆಯದು ಪ್ರತಿವಸ್ತೂಪಮೆಯೆನಿಪುದು (ಅಪ್ರತಿ. ೬೦-೬೭). [ಸಂ. ಪ್ರತಿವಸ್ತೂಪಮಾ]

ಪ್ರತಿವಾದ (ನಾ). ೧. ಒಂದು ಹೇಳಿಕೆಗೆ ವಿರುದ್ಧವಾದ ಹೇಳಿಕೆ ; ಒಂದು ಅಭಿಪ್ರಾಯವನ್ನು ಖಂಡಿಸಿ ಹೇಳುವ ಮಾತು : ಶ್ರುತಿ-ಮೂಲವಾಗಿರಲಿಲ್ಲ ನೋಡೆನ್ನ ಪ್ರತಿಜ್ಞೆಯನೆಲ್ಲರುಂ ಪ್ರತಿವಾದಮೆಂದೆ ನಲಾಗದಿದನಿಂತು (ಬಸಪು. ೫೪-೫೪). ೨. ಪ್ರತ್ಯುತ್ತರ : "ಪ್ರತಿವಾದಃ— ಪಡಿನುಡಿ" (ಕಾಶಕ್ಯ. ೦೬೦) ೩. ನ್ಯಾಯಾಲಯ, ಆಯೋಗ ಮೊದಲಾದ ಕಡೆ ಕಕ್ಷಿದಾರನ ಕಡೆಯ ನ್ಯಾಯವಾದಿಯ ವಾದಕ್ಕೆ ಪ್ರತಿಕಕ್ಷಿಯ ವಕೀಲನು ಕೊಡುವ ಎದುರುತ್ತರ : ಅವನು ತನ್ನ ಪ್ರತಿವಾದ ಮುಗಿಸಿದ ನಂತರ ಪ್ರತ್ಯುತ್ತರ ನೀಡುವ ಸಲುವಾಗಿ ಸರ್ಕಾರಿವಕೀಲ ನಿಂತನು (ಪುನರು. ೯೫). [ಸಂ.]

ಪ್ರತಿವಾದಿ (ನಾ). ೧. ತನ್ನ ಸಿದ್ಧಾಂತವು ಸರಿಯೆಂದು ವಾದಿ ಸುತ್ತಿರುವವನಿಗೆ ವಿರುದ್ಧವಾಗಿ ಅದು ಸರಿಯಲ್ಲವೆಂದು ವಾದಿಸು ವವನು; ವಾದಿಯ ಮತವನ್ನು ಖಂಡಿಸುವವನು, —ಆಕ್ಷೇಪಿಸು ವವನು: ಶತಮತಿವೆರಸು ಮೂವರುಂ ಪ್ರತಿವಾದಿಗಳನಪ್ರತಿಹತಪ್ರತಿಭೆಯಿನ ಪಗತಪ್ರತಿಭರ್ಮಾಡಿ (ಆದಿಪು. ೨-೦೦ ವ); ಕಂಡಲ್ಲದಱಿಯೆನೆಂಬರ್ ಎಂಬ ನಾಣ್ಣುಡಿಯುಂ ಪೋಲ್ಕುಮೆಂಬುದುಂ ಪ್ರತಿವಾದಿ ನಿರುತ್ತರನಾಗಿ ಪಕ್ಷಪರಿ ತ್ಯಾಗಂ ನಿಗ್ರಹಸ್ಥಾನಮೆಂಬುದಱಿಂ ನಿಗ್ರಹಸ್ಥಾನಮನೆಯ್ದಿಯುಮಿರದೆ . . . ಸುಗತಮತಮಂ ಪಿಡಿದು (ಶಾಂತಿಪು. ೬-೦೪೦ ವ); ವಾದವೆಂಬ ವಿಚಾರ ಗುರು ಶಿಷ್ಯರುಗಳಿಗೂ ವಾದಿ ಪ್ರತಿವಾದಿಗಳಿಗೂ ನಡೆಯುವುದು (ಹಿಂದಸಾ. ೦೦೭). ೨. ವಿರುದ್ಧವಾಗಿ ಮಾತನಾಡುವವನು; ವಿರೋಧಿಸುವವನು; ಅಸಮ್ಮತಿಯನ್ನು ಸೂಚಿಸುವವನು : ಗಾಬರಿಗೊಳಬೇಡ ನಾಚಿಕೆಯನು ಬಿಡು ಪ್ರತಿವಾದಿಯನು ಕಡೆಗಣಿಸು (ಇಂಶಾಪ. ೦೭೬-೬೬); ಸುಸಂಬದ್ಧ ವ್ಯವಸ್ಥೆಯನ್ನು ತೋರಿಸಿ ಈ ಸೂಚಿಯನ್ನು ಬಣ್ಣಿಸುವ ಪ್ರತಿವಾದಿಗಳೂ ಇದ್ದಾರೆ (ಗ್ರಂಥಾಲ ೫೯). ೩. ನ್ಯಾಯಾಲಯ, ಆಯೋಗ ಮೊದ ಲಾದ ನ್ಯಾಯನಿರ್ಣಯಸ್ಥಾನಗಳಲ್ಲಿ ಬೇರೊಬ್ಬನಿಂದ ಆರೋಪ ವನ್ನು ಹೊಂದಿರುವವನು ; ಆರೋಪಿತ : ವಾದಿ ಮತ್ತು ಪ್ರತಿ ವಾದಿಗಳು ಸಂಕಟದಿಂದ ಸುತ್ತಾಡುತ್ತಿದ್ದರು (ಪುನರು. ೨೩) ; ವಾದಿಯು ತನ್ನ ದಾವಾ ಅರ್ಜಿಯಲ್ಲಿ ಅಂಥಾ ಮನುಷ್ಯನನ್ನು ನೇಮಿಸಿದ್ದರೆ, ಪ್ರತಿ ವಾದಿಯು ಸಹ ಒಬ್ಬನನ್ನು ನೇಮಿಸಬೇಕೆಂದು ಸಮನ್ ಮೂಲಕ ಆತನಿಗೆ ತಿಳಿಸತಕ್ಕದ್ದು (ಗ್ರಾಮಾಕ. ೦೭). [ಸಂ. ಪ್ರತಿವಾದಿನ್]

ಪ್ರತಿವಾದಿಸು (ಕ್ರಿ). ೧. ಎದುರಿಸಿ ಮಾತನಾಡು ; ವಿರುದ್ಧವಾಗಿ ಮಾತನಾಡು : ಕೆಡೆನುಡಿಯುವೆ ಅನ್ಯರ ಪ್ರತಿವಾದಿಸದಿದ್ದರೆ ಏನ

ಮಾಡನಯ್ಯಾ ಲಿಂಗವು (ಬಸವ. ೨೩೬). ೨. ಒಬ್ಬನ ಸಿದ್ಧಾಂತವನ್ನು ಖಂಡಿಸಿ ಮಾತನಾಡು ; ಒಬ್ಬನು ಪ್ರತಿಪಾದಿಸುವ ವಿಷಯವನ್ನು ಒಪ್ಪದೆ ನಿರಾಕರಿಸು : ಮತಮತಾಂತರಗಳ ಸಂಘರ್ಷಣದ ಯುಗದಲ್ಲಿ . . . ಒಬ್ಬನು ಒಂದನ್ನು ಕುರಿತು ವಾದಿಸುವುದು ಮತ್ತೊಬ್ಬನು ಅದನ್ನು ಪ್ರತಿವಾದಿಸುವುದು . . . ಎಲ್ಲ ಮತಗಳಲ್ಲಿಯೂ ಕಂಡುಬರುವ ಮಾತು (ಸಾಹಿಸ. ೦೪೬); ಶೂನ್ಯವಾದಿಗಳಾದ ಬೌದ್ಧರು 'ಸರ್ವಂ ಶೂನ್ಯಂ' ಎಂದು ವಾದಿಸಿದರೆ ಸಾಂಖ್ಯರು 'ಸರ್ವಂ ಸತ್ಯಂ' ಎಂದು ಪ್ರತಿವಾದಿಸುತ್ತಾರೆ (ಭಾರದ. ೦೨೫). [ಪ್ರತಿವಾದ +— ಇಸ್ಸು]

ಪ್ರತಿವಾಸುದೇವ (ನಾ). =ಪ್ರತಿನಾರಾಯಣ: ತನ್ನಿವಾಸಿಗಳ ದೇಹಾಯುಃ ಪ್ರಮಾಣಂಗಳುಮಂ ಸುಖದುಃಖಾದಿಗಳುಮಂ ತೀರ್ಥಕರ ಚಕ್ರಧರ ಬಲದೇವ ವಾಸುದೇವ ಪ್ರತಿವಾಸುದೇವ ಕಥಾಸಂಬಂಧಮುಮಂ ನಿರ್ಣಯಂ ಮಾಡಿದಾಗಳ್ (ಆದಿಪು. ೦೦-೬೩ ಪ); ಬಲದೇವರುಂ ನಂದಿಪ್ರಮುಖನವ ವಾಸುದೇವರುಂ ಶ್ರೀಕಂಠಪ್ರಮುಖನವಪ್ರತಿವಾಸುದೇವರುಂ ಅಪ್ಪರ್ (ಶತ್ರ್ಯಪ್ರ. ೦೪೪). [ಸಂ.]

ಪ್ರತಿವಿತರ್ಕಿತ (ಗು). ,ಚೆನ್ನಾಗಿ ಚರ್ಚಿಸಿದ, — ವಿಚಾರ ಮಾಡಿದ : ಪ್ರತಿವಿತರ್ಕಿತ ಲಕ್ಷಣಲಕ್ಷ್ಯ[ನಾ]ಶ್ರಿತಮಹಾನೃಪತುಂಗಸಭಾಸದಂ (ಕವಿರಾ. ೩-೨೦೯). [ಸಂ.]

ಪ್ರತಿವಿದ್ಯೆ (ನಾ). [ಜೈನ]ಮಾಯೆಯಿಂದ ಏನನ್ನಾದರೂ ಸೃಷ್ಟಿಸುವ ವಿದ್ಯೆಗೆ ವಿರುದ್ಧವಾಗಿ ಅದನ್ನೆಲ್ಲ ನಾಶಪಡಿಸುವ ವಿದ್ಯೆ : ಪ್ರತಿವಿದ್ಯೆಯನಾಕೆ ಕುಲಕ್ಷತಿಯುಂ ಪತಿಗಪ್ಪ ಹಾನಿಯಂ ಬಗೆಯದೆ ದುರ್ಮತಿ ಕೊಟ್ಟಳ್ (ಸಂಶಾಪಾ. ೦೦-೦೯೩). [ಸಂ. ಪ್ರತಿವಿದ್ಯಾ]

ಪ್ರತಿವಿಷ (ನಾ). ವಿಷವನ್ನು ಪರಿಹರಿಸುವ ವಿಷ : ಪ್ರತಿವಿಷಮಗ್ನಿಗಗ್ನಿ ವಿಷಕಂ ವಿಷಮೆಂಬವೊಲಾ ನಿಶಾಚರಂಗತಿಬಲರೀ ನಿಶಾಟರಿವರಕ್ಕೆ (ಪಂಪಭಾ. ೦೨-೯). [ಸಂ.]

ಪ್ರತಿವಿಷೆ (ನಾ). ಒಂದು ಬಗೆಯ ಗಂದಿಗೆಪದಾರ್ಥ; ಅತಿಬಜೆ : "ವಿಶ್ವಾ, ವಿಷಾ, ಪ್ರತಿವಿಷಾ . . . ಮಹೌಷಧಂ—೮ ಅತಿಬಜೆ ಹೆಸರು ; ಗ್ರಂಧಿಕದ್ರವ್ಯವಿಶೇಷವು" (ಸಿದ್ಧಾಂತಿ. ೦೩೪). [ಸಂ. ಪ್ರತಿವಿಷಾ]

ಪ್ರತಿವಿಹೀನ (ನಾ). ಸಮಾನವಿಲ್ಲದುದು; ಅಸದೃಶವಾದುದು : ಚಲುವಿನಿಂ ತ್ರೈಲೋಕ್ಯದೊಳು ಪ್ರತಿವಿಹೀನವೆನಿಸಿರ್ಪ ಕೀರ್ತ್ಯಾಳಾಪದಿಂದಯೋಧ್ಯಾಪುರದ ದುರ್ಗಮಿಂತೆಸೆದುದೇವಣ್ಣಿಸುವೆನು (ಹರಿಶಾ. ೦೦-೩೫). [ಸಂ.]

ಪ್ರತಿವೀರ (ನಾ). ಎದುರಿಸುವ ಶೂರ : ಈಷಣತ್ರಯದೂರ . . . ರೋಷಣಪ್ರತಿವೀರ ರಣವಿಜಿಗೀಷಣಾಧಿಕಶೂರ (ಬಸಪು. ೨೦-೩೬). [ಸಂ.]

ಪ್ರತಿವೆರಸು (ಕ್ರಿ). ಒಂದಕ್ಕೆ ಬದಲಾಗಿ ಮತ್ತೊಂದನ್ನು ಸೇರಿಸು ; ಪ್ರತಿವಸ್ತುವನ್ನು ಬೆರಸು : ನೆವದೊಳೆಡೆಯಾಡಿಸುತ ತವೆ ಸಖನ ನುಡಿಯಿಸುತ ಕವಿದಿರಲು ಒಗಿದ ಚಿನ್ನವನು ಪ್ರತಿವೆರಸಿ ತವಕದಲಿ ತೆಗೆವ (ಸರ್ವಜ್ಞ. ೧೪೦೩). [ಪ್ರತಿ+ಬೆರಸು$_1$ (<ಬೆರೆಯಿಸು)]

ಪ್ರತಿವೆಱು (ಕ್ರಿ). ಬೇರೊಂದು ಆಕಾರವನ್ನು ಪಡೆ ; ರೂಪಾಂತರವನ್ನು ಹೊಂದು : ಶ್ರುತಿ ಶಾಸ್ತ್ರಾಗಮಮುಪನಿಷತ್ಪಾರಾಣ ಪ್ರತಿವೆತ್ತು ಹರಿಯ ನಿಟ್ಟಿಸಲು ಅತಿಭಕುತಿಯಲಿ ಬಂದಂತೆ ರಂಜಿಸಿತು ಗೋಮತಿನದಿ ದ್ವಾರಕಾಪುರದಿ (ಪೋಹತ. ೨-೫೬). [ಪ್ರತಿ+ಪೆಱು$_1$]

ಪ್ರತಿವ್ಯೂಹ (ನಾ). ಶತ್ರುಗಳು ಒಡ್ಡಿರುವ ಸೇನಾರಚನೆಗೆ ಪ್ರತಿಯಾಗಿ ಒಡ್ಡುವ ಸೇನಾರಚನೆ : ಎಲೈ ದುರ್ವಿಧಿಯೆ, ನಿನ್ನ ವ್ಯೂಹಕೆ ಪ್ರತಿವ್ಯೂಹವಂ ಒಡ್ಡದಿರೆ ನಷ್ಟಬುದ್ಧಿಯೆ ನಾ ದಿಟಂ, ದುಷ್ಟಬುದ್ಧಿಯಲ್ತು ! (ಪಂಪ್ರಸ. ೯೨-೨೬); ಪಾಂಡವರು ತಮ್ಮ ಕಡೆ ಅರ್ಧಚುದ್ರಾಕಾರದ ಪ್ರತಿವ್ಯೂಹವನ್ನು ರಚಿಸಿದರು (ಪಸಭಾ. ೨೬೦). [ಸಂ.]

ಪ್ರತಿಶಾಸನ (ನಾ). ೧. ಭೃತ್ಯನಿಗೆ ಕಾರ್ಯಗಳನ್ನು ನಿಯಮಿಸುವುದು.- ಆಜ್ಞಾಪಿಸುವುದು : "ಪ್ರತಿಶಾಸನಂ . . . ಭೃತ್ಯರನ್ನು ಕರೆದು ಹೀಗೆ ಮಾಡು ಎಂಬದಾಗಿ ಆಜ್ಞಾಪಿಸುವುದು" (ಸಿದ್ಧಾಂತಿ. ೩೬೬). ೨. ಮೂಲಶಾಸನದ ಇನ್ನೊಂದಂ ಪ್ರತಿ : ಆ ಶಾಸನಂ ಸ್ಫುಟಿತವಾಗಲು . . . ಧಾರಾ ಪೂರ್ವ್ವಕಮ್ಮಾಡಿ ಪ್ರತಿಶಾಸನಮಂ ಕೊಟ್ಟರು (ಸೌಇಇ. XI – i. ೫೦-೩೩ ; 1138). ೩. ಚಾಲ್ತಿಯಲ್ಲಿರುವ ಆಜ್ಞೆ, ಕಾನೂನು ಮುಂತಾದುವನ್ನು ತಡೆ ಹಿಡಿಯುವುದು. [ಸಂ.]

ಪ್ರತಿಶ್ಯಾಯ (ನಾ). ಒಂದಂ ಬಗೆಯ ಮೂಗಿನ ರೋಗ ; ಪೀನಸ : "ಪ್ರತಿಶ್ಯಾಯಃ, ಪೀನಸಃ—೨ ಪೀನಸರೋಗದ ಹೆಸರುಗಳು" (ಸಿದ್ಧಾಂತಿ. ೦೮೩). [ಸಂ.]

ಪ್ರತಿಶ್ರಯ (ನಾ). ೧. ಆಶ್ರಯ ; ಆಸರೆ. ೨. ಸಹಾಯ ; ಸಹಕಾರ. ೩. ಬಡವರಿಗೆ ಅನ್ನದಾನ ಮಾಡುವ ಸ್ಥಳ ; ಛತ್ರ; ಧರ್ಮಶಾಲೆ : "ಸತ್ರಶಾಲಾ, ಪ್ರತಿಶ್ರಯಃ—ಈ ೨ ಸತ್ರದ ಮನೆ" (ಹಲಾಯು. ೫೦-೦೪೨). ೪. ಮನೆ; ಗೃಹ. ೫. ಸಭೆ : "ಪ್ರತಿಶ್ರಯಃ—ಸಭೆ ಇರತಕ್ಕ ಸ್ಥಳ, ಮನೆ" (ಸಿದ್ಧಾಂತಿ. ೪೦೦). ೬. ಯಜ್ಞಶಾಲೆ. ೭. ಜೈನಮಠ. ೮. ಒಪ್ಪಿಗೆ ; ಅಂಗೀಕಾರ. [ಸಂ.]

ಪ್ರತಿಶ್ರವ (ನಾ). ೧. ಪ್ರತಿಧ್ವನಿ. ೨. ಭಾಷೆ ; ಪ್ರತಿಜ್ಞೆ : "ಆಗೂಃ, ಸಂಗರಃ, ಸಂಧಾ, ಪ್ರತಿಶ್ರವಃ, ಸಂಶ್ರವಃ, ಪ್ರತಿಜ್ಞಾ—ಈ ೬ ಪ್ರತಿಜ್ಞೆ" (ಹಲಾಯು. ೦೦೬-೩೦). ೩. ಒಪ್ಪಿಗೆ ; ಸಮ್ಮತಿ. [ಸಂ.]

ಪ್ರತಿಷಿದ್ಧ (ನಾ). ೧. ತಡೆದುದು ; ನಿಷೇಧಿತವಾದುದು: ಯಾರೊಬ್ಬರೆ ಆಗಲಿ . . . ಸಂಸತ್ತಿನ ದ್ವಾರಾ ರಚಿತವಾದ ಯಾವುದಾದರೂ ವಿಧಿಯ ಉಪಬಂಧಗಳಿಂದ ತಾವು ಹಾಗೆ ಮಾಡಕೂಡದೆಂದು ಪ್ರತಿಷಿದ್ಧವಾಗಿರುವುದು ಅವರಿಗೆ ತಿಳಿದಿದ್ದೂ ಅವರು ಅದರ ಸದಸ್ಯಸ್ಥಾನದಲ್ಲಿ ಕುಳಿತರೆ . . . ದಂಡದ್ರವ್ಯವನ್ನು ಕೊಡಲು ಬದ್ಧರಾಗಿರತಕ್ಕುದು (ಭಾಧಾಪ. ೫೦). ೨. ತಿರಸ್ಕೃತವಾದುದು. [ಸಂ.]

ಪ್ರತಿಷೇಧ (ನಾ). ೧. ಅಡ್ಡಿ ; ತಡೆ ; ನಿಷೇಧ : ಪ್ರತಿಪದಾರ್ಥತತ್ವ ಭೇದದೊಳ್ ಪ್ರತಿಷೇಧಮಂ ನೆಗಟ್ಗುಮನಿತೆ ಮಾಟ್ಕೆಯಿಂದತಿಶಯಾಕ್ಷೇಪ ಗಣನಾ ಸ್ಯತಿಗತಿ (ಕವಿರಾ. ೩-೦೦೭) ; ಕುರುಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತನಾಗತ ಬಾಧಾಪ್ರತಿಷೇಧಂ ಮಾಡುವಂತಟ್ಟಿ (ಪಂಪಭಾ. ೦೩-೬೦ ಪ) ; ಸಂಭಾವನಾರ್ಥದಲ್ಲಿ ಮಧ್ಯಮಪುರುಷದ ರೂಪಗಳು ಕೆಲವು ವೇಳೆ 'ಈ ಕೆಲಸವನ್ನು ಮಾಡಬೇಡ' ಎಂಬ ಪ್ರತಿಷೇಧದ ಅರ್ಥವನ್ನೂ ಕೊಡುತ್ತವೆ (ಪುರ್ಯಪು. ೯೬). ೨. ಇಲ್ಲವೆಂದು ಹೇಳುವುದು ; ನಿಷೇಧಿಸುವುದು : ಜೀವನಿಲ್ಲೆಂಬ ನಿನ್ನ ಪ್ರತಿಷೇಧೋಕ್ತಿಯಿಂದಮೆ ಜೀವಸಿದ್ಧಿ ಹೇಳಾಸಾಧ್ಯಂ (ಶಾಂತಿಪು ೯-೦೩೯ ಪ). ೩. ವಿರುದ್ಧವಾದ ಮಾತು ; ವ್ಯತಿರಿಕ್ತವಾದ ನುಡಿ. ೪. [ಕಾವ್ಯಮೀ] ಅರ್ಥಾಲಂಕಾರದ ಒಂದು ಭೇದ ; ಪ್ರಸಿದ್ಧವಾದ ವಿಷಯವನ್ನು ಇಲ್ಲವೆನ್ನುವುದು : ಖ್ಯಾತ ನಿಷೇಧದ ಕೀರ್ತನಂ . . . ಪ್ರತಿಷೇಧಂ(ಪರಸ. ೦೦೬-೩೦೬). ೫. [ವ್ಯಾಕ] ನಿಷೇಧಾರ್ಥ: ಪುದಿಯದು ಲೋಪಂ ಪ್ರತಿಷೇಧದೊಳ್(ಕಮದ. ೪೭). ೬. [ರಾಜನೀ] ನಿಷೇಧಾಜ್ಞೆ ; ಪ್ರತಿಬಂಧಕಾಜ್ಞೆ : ಉಚ್ಚತಮನ್ಯಾಯಾಲಯದವರು ಆಯಾ ಸಂದರ್ಭದಲ್ಲಿ ಉಚಿತವಾಗಿರಬಹುದಾದಂತೆ ೧. ಬಂದೀಪ್ರತ್ಯಕ್ಷೀಕರಣ, ೨. ಪರಮಾದೇಶ, ೩. ಪ್ರತಿಷೇಧ, ೪. ಅಧಿಕಾರಪೃಚ್ಛಾ . . . ಅಥವಾ ನಿರೂಪಲೇಖವನ್ನಾಗಲಿ ಸಾದರು ಮಾಡಲು ಶಕ್ತರಾಗಿ ಇರತಕ್ಕುದು (ಭಾಧಾಪ. ೦೯). [ಸಂ.]

ಪ್ರತಿಷೇಧಕ್ರಿಯೆ (ನಾ). [ವ್ಯಾಕ] ನಿಷೇಧಾರ್ಥವನ್ನು ತಿಳಿಸುವ ಕ್ರಿಯಾಪದ : ಪರಿಭಾವಿಸೆ ಕಾಲತ್ರಯಪರಿಣಾಮಿಗಳೆನಿಸಿ ನೆಗಟ್ಟು

ಮೂಱುಂ ಕ್ರಿಯೆಯೊಳ್ ನಿರುತಂ ಪ್ರತಿಷೇಧಕ್ರಿಯೆ ಬರೆ ಭೂತಾರ್ಥ ದೊಳೆ ಸಲ್ವುದೆಂಬರ್ ಪಿರಿಯರ್ (ಕಪುಪ. ೨೨೨). [ಸಂ. ಪ್ರತಿಷೇಧಕ್ರಿಯಾ]

ಪ್ರತಿಷೇಧವಾದ (ನಾ). [ಅದ್ವೈತ] ಮೋಕ್ಷದಶೆಯಲ್ಲಿ ಆತ್ಮವ್ಯತಿರಿಕ್ತವಾದ ಯಾವುದೂ ಇರುವುದಿಲ್ಲವೆಂದು ಪ್ರತಿಪಾದಿಸುವುದು : ಈ ಮಾರ್ಗದಲ್ಲಿ ಬಹುಕಾಲ ಪರಿಶ್ರಮಪಟ್ಟವರು ಮೂರನೆಯ ಸೋಪಾನವೆಂಬ ಸುಷುಪ್ತ್ಯವಸ್ಥಾಸದೃಶವಾದ ಪರಮಾರ್ಥಾವಸ್ಥೆಗೆ ಉತ್ತಮಾಧಿಕಾರಕ್ಕೆ ಅರ್ಹರಾಗುವರು. ಇದೇ ಪ್ರತಿಷೇಧವಾದ, ಪರಮಾರ್ಥವಾದ (ಹಿಂದಸಾ. ೦೯೨). [ಸಂ.]

ಪ್ರತಿಷೇಧಾಲಂಕಾರ (ನಾ). =ಪ್ರತಿಷೇಧ ೪ : ಪ್ರಸಿದ್ಧಮಾದ ನಿಷೇಧಮುಂ ಬಣ್ಣಿಸಲ್ ಪ್ರತಿಷೇಧಾಲಂಕಾರಂ (ಪರಶ. ೦೦೬-೩೦೮ ವೃತ್ತಿ). [ಸಂ.]

ಪ್ರತಿಷೇಧಿಸು (ಕ್ರಿ). ತಡೆ ; ನಿರೋಧಿಸು : ಯೇಸುವೆ . . . ಬಂದಿಗಳಿಗೆಲ್ಲ ಸ್ವಾತಂತ್ರ್ಯ ನೀಡುವ ಸಲುವಾಗಿ ತಾನು ಬಂದಿದ್ದುದಾಗಿ ತಿಳಿಸಿ, ಹಿಂಸಾಕಾರ್ಯವನ್ನೆಲ್ಲ ಪ್ರತಿಷೇಧಿಸಿದ್ದನು (ಪುನರು. ೦೬೯).

[ಪ್ರತಿಷೇಧ + — ಇಸ್ಸು$_3$]

ಪ್ರತಿಷ್ಟಂಭ (ನಾ). ಅಡ್ಡಿ ; ಅಡಚಣೆ ; ನಿರೋಧ : "ಪ್ರತಿಬಂಧಃ, ಪ್ರತಿಷ್ಟಂಭಃ — ೨ ಕಾರ್ಯವಿಘಾತವು" (ಸಿದ್ಧಾಂತಿ. ೩೬೫). [ಸಂ.]

ಪ್ರತಿಷ್ಠಾಕರಣ (ನಾ). ದೇವತಾವಿಗ್ರಹದ ಪ್ರತಿಷ್ಠಾಪನೆಯನ್ನು ಮಾಡುವುದಂ : ಪ್ರತಿಷ್ಠಾಕರಣ, ಯಂತ್ರೋದ್ಧಾರಣ . . . ಮೊದಲಾದ ವಿವರಣಗಳು . . . ಪಾಂಚರಾತ್ರಾಗಮದಲ್ಲಿಯೂ ಸುಂದರವಾಗಿ ಚಿತ್ರಿತವಾಗಿವೆ (ಭಾರತ. ೬೬). [ಸಂ.]

ಪ್ರತಿಷ್ಠಾನ (ನಾ). ೧. ತಳಪಾಯ. ೨. ನಿವೇಶನ. ೩. ವೇದಿಕೆ. ೪. ಯಾವುದಾದರೊಂದು ಸತ್ಕಾರ್ಯವು ನಡೆಯಲೆಂದು ನಿಧಿಯನ್ನು ಸ್ಥಾಪಿಸುವುದು, — ನೆಲೆನಿಲ್ಲುವಂತೆ ಮಾಡುವುದು. ೫. ದತ್ತಿಸ್ಥಾಪನೆಯನ್ನು ನೋಡಿಕೊಳ್ಳಲು ಇರುವ ಸಂಸ್ಥೆ ಅಥವಾ ವ್ಯವಸ್ಥೆ : ನನಗೆ ನ್ಯೂಯಾರ್ಕಿನ ರಾಕಿಫೆಲರ್ ಪ್ರತಿಷ್ಠಾನದವರ (The Rockefeller Foundation) ಒಂದು ವಿಶೇಷವೇತನ . . . ದೊರೆಯಿತು (ಸಂಟರು. vii, ೮೦೪). ೬. ಚಂದ್ರವಂಶದ ಮೊದಲಿನ ದೊರೆಗಳ ರಾಜಧಾನಿಯಾಗಿದ್ದ ಗಂಗಾತೀರದಲ್ಲಿನ ಒಂದು ನಗರ. ೭. ಶಾಲಿವಾಹನನ ರಾಜಧಾನಿಯಾಗಿದ್ದ ಪೈಠಣ. [ಸಂ.]

ಪ್ರತಿಷ್ಠಾಪಕ (ನಾ). ಸ್ಥಾಪಿಸುವವನು ; ನೆಲೆಗೊಳಿಸುವವನು : 'ಧರ್ಮಪ್ರತಿಷ್ಠಾಪಕ' ಪರಾ. [ಸಂ].

ಪ್ರತಿಷ್ಠಾಪನ (ನಾ). ನೆಲೆಗೊಳಿಸುವುದು ; ಸ್ಥಾಪಿಸುವುದು : ವಿಶುಧ ವೈದಿಕಾದ್ವೈತಸಿದ್ಧಾಂತಪ್ರತಿಷ್ಠಾಪನ ಶಿವಗುರುಭಕ್ತಿಪರಾಯಣರಾದ ಕೆಳದಿ ವೆಂಕಟಪ್ಪನಾಯಕರು . . . ಪುತ್ರರಾದ ವೀರಭದ್ರನಾಯಕರು (ಸ್ಮೃಅಂ. ೦೯೪೪, ೪೭-೯ ; 1641). [ಸಂ.]

ಪ್ರತಿಷ್ಠಾಪನಾಸಮಿತಿ (ನಾ). [ಜೈನ] ಸಾಧಕರ ಇಪ್ಪತ್ತೆಂಟು ಮೂಲಗುಣಗಳಲ್ಲಿ ಹೇಳಿರುವ ಪಂಚಸಮಿತಿಗಳಲ್ಲಿ ಒಂದು ; ಉತ್ಸರ್ಗಸಮಿತಿ : ಈ ಅವಸ್ಥೆಯಲ್ಲಿದ್ದ ಸಾಧುಗಳಿಗೆ ಇಪ್ಪತ್ತೆಂಟು ಮೂಲಗುಣಗಳನ್ನು ಹೇಳಿದ್ದಾರೆ. (೧). ಅಹಿಂಸೆ . . . (೧೦). ಪ್ರತಿಷ್ಠಾಪನಾಸಮಿತಿ (ಜೀವರಹಿತಸ್ವಚ್ಛಭೂಮಿಯಲ್ಲಿ ಮಲಮೂತ್ರ ವಿಸರ್ಜಿಸುವುದು) ಈ ಗುಣಗಳಿಂದ ಸಾಧಕನು ತನ್ನ ಅಧ್ಯಾತ್ಮಸಾಧನೆಯಲ್ಲಿ ಪ್ರಗತಿಯನ್ನು ಹೊಂದುವನು (ಶೈಪಕ. ೪೯೬). [ಸಂ.]

ಪ್ರತಿಷ್ಠಾಪನೆ (ನಾ). ದೇವತಾವಿಗ್ರಹವನ್ನು ಶಾಸ್ತ್ರೋಕ್ತವಾಗಿ ಸ್ಥಾಪಿಸುವುದು : ಪ್ರತಿಷ್ಠಾಪನೆಗೆ ಪೂರ್ವಭಾವಿಯಾದ ವಿಧಿಗಳೆಲ್ಲ ಸಾಂಗವಾಗಿ ನಡೆದುವು (ಶಾಂತಶಾ ೧೨೯) ; ಭಗವಾನ್ ಶಾಂತಿನಾಥಸ್ವಾಮಿಯವರ ಪ್ರತಿಷ್ಠಾಪನೆಯ ನೆನಪಿಗಾಗಿ . . . ಒಂದು ಪುಸ್ತಕವನ್ನು ಪ್ರಕಟಿಸಬೇಕೆಂದು ಪಿರಿಯರು ಸಲಹೆ ಇತ್ತರು (ನಿಟ್ಟೂಶಾಂ. II, ೮೦೪).

[ಸಂ. ಪ್ರತಿಷ್ಠಾಪನ]

ಪ್ರತಿಷ್ಠಾಪನೆಗೊಳ್ಳು (ಕ್ರಿ). ನೆಲಸು ; ಸ್ಥಿರವಾಗಿರು : ಅವಳ ಹೃದಯದಲ್ಲಿ ಪತಿಪ್ರೇಮ ಅಧಿಷ್ಠಾನಗೊಂಡಿದ್ದಂತೆಯೇ ಭ್ರಾತೃಪ್ರೇಮವೂ ಪ್ರತಿಷ್ಠಾಪನೆಗೊಂಡಿತ್ತು (ಪುನರು. ೪೬೦).

[ಪ್ರತಿಷ್ಠಾಪನೆ + ಕೊಳ್ಳು$_1$ (< ಕೊಳ್$_1$)]

ಪ್ರತಿಷ್ಠಾಪಿಸು (ಕ್ರಿ). ೧. ನೆಲೆಗೊಳಿಸು ; ಸ್ಥಾಪಿಸು : ನೊಳಂಬರ ಪ್ರಭುತ್ವವನ್ನು ಪುನಃ ಪ್ರತಿಷ್ಠಾಪಿಸಿದ ನೊಳಂಬಾಧಿರಾಜ ಮಹೇಂದ್ರನು, ಒಂದನೆಯ ಮಹೇಂದ್ರನಂತೆ ಮಹತ್ವಾಕಾಂಕ್ಷೆಯುಳ್ಳ ದೊರೆಯಾಗಿದ್ದನು (ನೊಳಂಬ. ೫೦). ೨. ದೇವತಾವಿಗ್ರಹವನ್ನು ಪ್ರತಿಷ್ಠೆ ಮಾಡು : ಚಾವುಂಡರಾಯನು ಬಾಹುಬಲಿವಿಗ್ರಹವನ್ನು . . . ವಿಂಧ್ಯಗಿರಿಯ ಮೇಲೆಯೇ ಏಕೆ ಪ್ರತಿಷ್ಠಾಪಿಸಿದನೆಂಬುದನ್ನು ತಿಳಿಸಲು ಹಳೆಯ ಕಥೆಗಳಿವೆ (ಸಮಾಶೋ. ೨೬೦). [ಪ್ರತಿಷ್ಠಾಪನ + — ಇಸ್ಸು$_3$]

ಪ್ರತಿಷ್ಠಿತ (ಗು). ೧. ನೆಲೆಗೊಂಡಿರುವ ; ಸ್ಥಿರವಾಗಿರುವ ; ಶಾಶ್ವತ : ನಿಜರೂಪವಿಜಿತಮಕರಧ್ವಜನಖಿಳದಿಶಾಂತರಪ್ರತಿಷ್ಠಿತಕೀರ್ತಿಧ್ವಜನದನಾಳ್ವಂ ಧರಣೀಧ್ವಜನೆಂಬಂ ಖೇಚರೇಂದ್ರಂ (ಶಂದ್ರಪು. ೬-೬). ೨. ಇರಿಸಿದ ; ಸ್ಥಾಪಿಸಿದ : ಆ ಜಂಬೂದ್ವೀಪದ ನಟ್ಟನಡುವೆ . . . ವಿಶಾಲರತ್ನಶಿಲಾತಳಪ್ರತಿಷ್ಠಿತಭಗವಜ್ಜನ್ಮಾಭಿಷೇಕಸಿಂಹಾಸನಾಲಂಕೃತಮುಮಾಗಿ (ಅದಿಪು. ೦-೪೯ ವ). ೩. (ದೇವತಾಮೂರ್ತಿಗಳ ವಿಷಯದಲ್ಲಿ) ಶಾಸ್ತ್ರೋಕ್ತವಿಧಾನದಿಂದ ಪ್ರತಿಷ್ಠೆಮಾಡಿದ,— ಸ್ಥಾಪನೆಮಾಡಿದ. (ನಾ). ೪. ಯಾವುದಾದರೊಂದು ಪದವಿ ಅಥವಾ ಸ್ಥಾನದಲ್ಲಿ ಇರುವವನು,—ಅಧಿಕಾರವನ್ನು ನಿರ್ವಹಿಸುವಂತೆ ನೆಲೆಗೊಂಡವನು : ಅಂತು ಯುವರಾಜಪದವೀಪ್ರತಿಷ್ಠಿತಂ ಮಾಡಿ (ಪುಲ್ಲಿಪು. ೪-೧೪೫ ವ). ೫. ದೃಢವಾದ ಪಾಂಡಿತ್ಯವುಳ್ಳವನು : ಮತ್ತಂ ತುಂಬುರ ಕೌಶಿಕರೊಲ್ ಪಾಡುಂಗಾಱಿಕೆಯೊಳಾಂ ಪ್ರತಿಷ್ಠಿತನಪ್ಪಂತೆ ಬಟ್ಟೆದೋಱಿಸೈ (ಅದ್ಭುತ. ೨೦ ೦೮). ೬. ಹೆಸರುವಾಸಿಯಾದವನು ; ಕೀರ್ತಿವಂತ ; ಗೌರವಾನ್ವಿತ ವ್ಯಕ್ತಿ : ಅಮಳತತ್ವವರಿಷ್ಠಗೋಷ್ಠೀವಾಗ್ವರಿಷ್ಠಯಶಃಪ್ರತಿಷ್ಠಿತನು (ಬಸಪು. ೨೦-೪) ; ಪ್ರತಿಷ್ಠಿತರಾದ ದೇಸಾಯರ ಮನೆಗೆ ಪ್ರತಿಷ್ಠಿತರಾದ ಆಚಾರ್ಯರು ಹೆಣ್ಣು ಕೊಟ್ಟರು (ಸಮಾಶೇ. ೪೭). ೭. ಶ್ರೇಷ್ಠವಾದುದು ; ಉತ್ತಮವಾದುದು : ಧರ್ಮವೇ ಸರ್ವಪ್ರತಿಷ್ಠಿತ ಧರ್ಮವೆಂಬುದು ಪರಮಪದವಾ ಧರ್ಮವನು ಬಿಟ್ಟಿಹುದು ಬದುಕಲ್ಲ (ಕುಪ್ಯಾಲಾ. ೪-೫೯). ೮. ಸ್ಥಾಪನೆ ಹೊಂದಿದವನು; ಪ್ರತಿಷ್ಠಾಪಿತನಾದವನು : ಸರಸರನೆ ಸೌರಾಷ್ಟ್ರನಾಥನು ಪಿರಿಯ ಕಣಜವನೊಡೆದುಕೊಳುತಂ ಕರಮೆಸೆದು ಧರೆಯೊಳ್ ಪ್ರತಿಷ್ಠಿತನಾದನಂದು (ಬಸಪು. ೫೩-೫೬). [ಸಂ.]

ಪ್ರತಿಷ್ಠಿಸು (ಕ್ರಿ). ೧. ನೆಲೆಗೊಳಿಸು ; ಸ್ಥಾಪಿಸು; ಸ್ಥಿರಪಡಿಸು : ಕನ್ನೆಯಿಲ್ಲದೆ ಗಡ ಪೋಗನೆಂದು ಕಡೆಯೊಳ್ ನುಡಿದಾ ನುಡಿಯಂ ಪ್ರತಿಷ್ಠಿಸಲ್ ಪದೆದೊಡೆ ಪೋಗು ನಿನ್ನ ಪತಿಯಂ ಬರವೇೞ್ (ಶಂದ್ರಪು. ೬-೨೪) ; ಪರವಾದಮಂ ತಿರಸ್ಕರಿಸುತೆ ಶಿವಾಧಿಕ್ಯಮಂ ಪ್ರತಿಷ್ಠಿಸುತೆ (ಶಪ್ಮಣಾ. ೩-೬) ; ಪೊಸತಪ್ಪ ವೀರಶೈವಾಚಾರಮಂ ಪ್ರತಿಷ್ಠಿಸಿ . . . ನಿಜಪದವನು ಒಸೆದೀವನೌ ನಿನ್ನ ಗರ್ಭದರ್ಭಕನುದಯಿಪೊಸಗೆಯ ಸಕಲಗಣಂಱಿಪು (ಶಪಿಪು. ೪-೫). ೨. (ದೇವರ ವಿಗ್ರಹವನ್ನು) ಪ್ರತಿಷ್ಠೆ ಮಾಡು ; ಸ್ಥಾಪನೆ ಮಾಡು : ಆ ದೈತೇಯಂ . . . ಈ ಮಹೇಂದ್ರನ ಮಕುಟಪೀಠದೊಳ್ ನಿಜಾಜ್ಞಾದೇವತೆಯಂ ಪ್ರತಿಷ್ಠಿಸಿಯುಂ (ಜಗನಿ. ೦೦-೬೦ ವ); ಒಡನೆ ಗುಡ್ಡಾದೇವಿಗಱಿಪಲಲ್ಲಿಗೆ ಪೋಗಿ ಮೃಡಮೂರ್ತಿಯಂ ಪ್ರತಿಷ್ಠಿಸಿ ಪರರ ಸಮಯಮಂ ಜಡಿದು ಭಂಗಿಸಿ (ಶಪಿಪು. ೫೫ ೪೯). [ಪ್ರತಿಷ್ಠೆ + — ಇಸ್ಸು$_3$]

ಪ್ರತಿಷ್ಠೆ (ನಾ). ೧. ಇರುವಿಕೆ ; ಸ್ಥಿತಿ. ೨. ಉನ್ನತಸ್ಥಾನ. – ಸ್ಥಿತಿ : ಕೃಷ್ಣ ನಿನ್ನ ರೂಪವಂ ಸೌಷ್ಠವಪ್ರತಿಷ್ಠೆಯಂ . . . ನೋಡಲ್ ನೀಂ ಪರದೈವತಕಳಾಸ್ವರೂಪನಾಗಿ ತೋರ್ಪೆ (ಜಗನಿ. ೪-೭೯ ಪ). ೩. ಭದ್ರವಾಗಿರುವಿಕೆ : ಸ್ಥಿರತೆ. ೪. ಸ್ಥಾಪನೆ ಮಾಡುವುದು ; ಸ್ಥಾಪಿಸುವುದು. ೫. ದೇವತಾವಿಗ್ರಹಗಳನ್ನು ಶಾಸ್ತ್ರೋಕ್ತವಾಗಿ ಸ್ಥಾಪಿಸುವುದು : ತಮ್ಮಯ್ಯನ ಹೆಸರಲು ಚೋಳೇಶ್ವರದೇವರೆಂದು ಪ್ರತಿಷ್ಠೆಯಂ ಮಾಡಿ (ಎಕ. XII. ಶಿಕಟೂ. ೬೦-೩೯ ; 1162). ; ಪಂಡಿತರೂ ಆಗಮಿಕರೂ ಸೇರಿ ಶುಭದಿನ ಶುಭಮುಹೂರ್ತವನ್ನು ಪ್ರತಿಷ್ಠೆಗೆ ನಿಶ್ಚಯಿಸಿದರು (ಕಾಂಕಶಾ. ೦೨೯). ೬. ಕೀರ್ತಿ ; ಪ್ರಸಿದ್ಧಿ : ಗೌರವವೂ ಪ್ರತಿಷ್ಠೆ ಅಧಿಕಾರಗಳೂ ಕೆಲಸಕ್ಕೆ ಬಾರದ ವಸ್ತುಗಳೆಂದು ಅವನಿಗೆ ಬಹಳ ಕಾಲದಿಂದಲೂ ಗೊತ್ತಾಗಿದ್ದಿತು (ಸುಶಾ. ೯). ೭. ಗೌರವ ; ಹಿರಿಮೆ ; ಮರ್ಯಾದೆ : ವಸಿಷ್ಠನು ಯಾವ ದಿಕ್ಕಿನಲ್ಲಿ ಜನ್ಮವನ್ನೈದಿ ಪ್ರತಿಷ್ಠೆಯನ್ನೂ ಧರ್ಮವನ್ನೂ ಪಡೆದನೋ (ಕೃಷಾಣಾ. ೦೭೬). ೮. ರಾಜನೇ ಮೊದಲಾದವರನ್ನು ಪಟ್ಟಕ್ಕೇರಿಸುವುದು. –ಅಧಿಕಾರಕ್ಕೆ ತರುವುದು. ೯. (ಆಲಂ) ಜಂಭ ; ಅಹಂಕಾರ : ಹೀಗೆ ನಾನಾ ವಿಧವಾಗಿ ಪ್ರತಿಷ್ಠೆಯನ್ನು ಕೊಚ್ಚಿಕೊಳ್ಳುತಾ ನನ್ನನ್ನು ಸಡ್ಡೆ ಮಾಡದೆ ಇರುವರು (ನೀತಿಸಂ. XV. ೦೭). ೧೦. [ಛಂದ] ವರ್ಣಛಂದಸ್ಸಿನಲ್ಲಿರುವ ಇಪ್ಪತ್ತಾರು ಛಂದಸ್ಸುಗಳಲ್ಲಿ ನಾಲ್ಕನೆಯದು ; ಪ್ರತಿಪಾದದಲ್ಲೂ ನಾಲ್ಕು ಅಕ್ಷರಗಳಿರುವ ನಾಲ್ಕುಸಾಲಿನ ವೃತ್ತ : ಅಲ್ಲಿ ಉಕ್ತೆ ಅತ್ಯುಕ್ತೆ ಮಧ್ಯೆ ಪ್ರತಿಷ್ಠೆ . . . ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಂಬು. ೦-೪೬ ಪ); ೪ನೆಯ ಪ್ರತಿಷ್ಠೆಯೆಂಬ ಛಂದಸ್ಸಿನ ಪ್ರತಿಪಾದದಲ್ಲಿಯೂ ಭಗಣ ಮತ್ತು ಒಂದು ಗುರುವುಳ್ಳ ಪದ್ಯವು ಸೌಂದರವೃತ್ತವೆನಿಸುವುದು (ಕೃಬಿಪಿ. ೭೯). ೧೧. [ಶೈವ] ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ ಮತ್ತು ಶಾಂತ್ಯತೀತಗಳೆಂಬ ಪರಮೇಶ್ವರನ ಐದು ಕಲೆಗಳಲ್ಲಿ ಒಂದು : ಷಡ್ಗುಣೈಶ್ವರ್ಯ ಸಂಪನ್ನನಾದ ಪರಮೇಶ್ವರನು –ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ, ಶಾಂತ್ಯತೀತಗಳೆಂಬ ಐದು ಕಲೆಗಳಿಗಾಶ್ರಯವಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಮುಖಗಳಿಂದ . . . ಪಂಚಕೃತ್ಯಗಳನ್ನು . . . ಪಂಚಮೂರ್ತಿಗಳಿಂದ ನೆರವೇರಿಸುತ್ತ ಭಕ್ತಾನುಗ್ರಹ ಮಾಡುತ್ತಾನೆಂಬುದು ಶೈವಾಗಮದ ಸಿದ್ಧಾಂತ (ಭಾಕಪ. ೬೪). ೧೨. [ವೀಶೈ] ಸ್ಥಾವರಲಿಂಗ : ಆಕಾಶದ ಸೂರ್ಯ ಹಲವು ಕುಂಭದಲ್ಲಿ ತೋಱುವ ತೆಱ ಮಱೆದಡೆ ಪ್ರತಿಷ್ಠೆ ಅಱಿದಡೆ ಸ್ವಯಂಭು (ಸೋಲಿಸಾ. ೦೦-೪೦).

ಪ್ರತಿಷ್ಠೆಯ ಮಾಡು = ಸ್ಥಾಪನೆ ಮಾಡು ; ನೆಲೆಗೊಳಿಸು ; ಸ್ಥಿರಪಡಿಸು : ಶರೀರಂಗಳು ಅನಂತ ಆತ್ಮನೊಬ್ಬನೇ . . . ಇನ್ನು ಆವ ಠಾವಿನಲ್ಲಿ ನಿಮ್ಮ ಕುಲವ ಪ್ರತಿಷ್ಠೆಯ ಮಾಡಿ ತೋಱುವಿರೋ (ಸರ್ವಪ. ೦೭೭-೬೨೯). [ಸಂ. ಪ್ರತಿಷ್ಠಾ]

ಪ್ರತಿಷ್ಠೆಗೆಯ್ (ಕ್ರಿ). (ದೇವತಾವಿಗ್ರಹ ಮುಂತಾದುವನ್ನು) ಸ್ಥಾಪಿಸು : ನುಗುನಾಡ ಒಱೆಯ ಬೆಳೆತೂರ ಒಡೆದು ಬಿಟ್ಟು ಭೂಮಿಲಮ್ಬಮಾಗಿ ಕೊಟ್ಟ ದೇಗುಲಮಂ ಮಾಡಿಸಿ ಕಿಟ್ಟು ಪಟ್ಟಲಿಂಗಮಂ ಪ್ರತಿಷ್ಠೆಗೆಯ್ದು (ಎಕ. IV. ಹಗ್ಗಡ. ೦೬-೬; ೨ಪಯ ೫೫).

[ಪ್ರತಿಷ್ಠೆ + ಕೆಯ್$_1$]

ಪ್ರತಿಸಂಧಿ (ನಾ). ೧. ಮತ್ತೆ ಸೇರುವುದು. –ಒಟ್ಟುಗೂಡುವುದು. ೨. ಮರುಹುಟ್ಟು ; ಪುನರ್ಜನ್ಮ : 'ಪ್ರತಿಸಂಧಿಸು' ಪರಾ. ೩. ವಿರಾಮ ; ನಿಲುಗಡೆ. ೪. ಎರಡು ಯುಗಗಳ ನಡುವಿನ ಸಂಕ್ರಮಣಕಾಲ; ಮನ್ವಂತರ. [ಸಂ.]

ಪ್ರತಿಸಂಧಿಸು (ಕ್ರಿ). ೧. ಮತ್ತೆ ಸೇರು, – ಕೂಡು ; ಪುನರ್ಮಿಲನ ಹೊಂದು. ೨. ಮತ್ತೆ ಹುಟ್ಟು ; ಪುನರ್ಜನ್ಮವನ್ನು ಪಡೆ : ಕ್ಲೇಶದಿಂದ ಕೂಡಿದವರು ಪ್ರತಿಸಂಧಿಸುವರು. ಕ್ಲೇಶದಿಂದ ಕೂಡದವರು ಪ್ರತಿಸಂಧಿಸುವುದಿಲ್ಲ (ಬುದ್ಧಪ. ಬುಲಂದ. ೪೩). [ಪ್ರತಿಸಂಧಿ + – ಇಸ್ಸು$_3$]

ಪ್ರತಿಸಮಯಂ (ಅ). ಎಲ್ಲಾ ಕಾಲದಲ್ಲೂ ; ಯಾವಾಗಲೂ ; ಸರ್ವದಾ : ಪ್ರತಿಸಮಯಮನಂತಗುಣಶಕ್ತಿಖಚಿತೈಕಪರಿಣಾಮನಿವೃತ್ತಿಕರಣಕ್ಷಪಕನಾಗಿ (ಅದಿಪು. ೦೦-೦೪ ಪ) ; ದಂಡಕವಾಟಲೋಕಪೂರಣಾಪ್ರತರಕ್ರಿಯೆಗಳೊಳಂ ಪ್ರತಿಸಮಯಂ ಪ್ರಯೋಗಿಸಿ (ಸುಗ್ಗಪು. ೦೪-೨೫೮)

[ಸಂ.]

ಪ್ರತಿಸರ (ನಾ). ೧. ರಕ್ಷೆಗಾಗಿ ಕೈ ಅಥವಾ ಕುತ್ತಿಗೆಗೆ ಕಟ್ಟುವ ಮಂತ್ರಿಸಿದ ದಾರ; ತಾಯಿತಿ; ಯಂತ್ರ. ೨. ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಕೈಗೆ ಕಟ್ಟುವ ಅಭಿಮಂತ್ರಿಸಿರುವ ದಾರ; ಕಂಕಣ ; ೩ ಶುಭಕಾರ್ಯಗಳಲ್ಲಿ ಅರಿಶಿನದ ದಾರಕ್ಕೆ ಕೊನೆಯನ್ನು ಕಟ್ಟಿ ಶಾಸ್ತ್ರೋಕ್ತವಾದ ವಿಧಾನದಿಂದ ಪೂಜಿಸಿ ವೇದಮಂತ್ರಗಳಿಂದ ಅಭಿಮಂತ್ರಿಸಿ ಹೆಂಗಸರ ಎಡಮಣಿಕಟ್ಟಿಗೆ ಹಾಗೂ ಗಂಡಸರ ಬಲಮಣಿಕಟ್ಟಿಗೆ ಕಟ್ಟುವ ಸಂಪ್ರದಾಯವಿದೆ : "ಕಂಕಣಂ, ಹಸ್ತಸೂತ್ರಂ, ಪ್ರತಿಸರಂ–ಈ ೩ ನೂಲ ಕಂಕಣಂ" (ಹಲಾಯು. ೯೨-೪೦೪). ೩. ಬಳೆ ; ಕಡಗ : "ಪ್ರತಿಸರು ಬಳೆಯಕ್ಕು" (ಸುಂಗಶಾ. ೦೦೦-೨೬). ೪. ಮಾಲೆ ; ಹೂವಿನ ಸರ. ೫. ಸೇವಕ ; ಆಳು. ೬. ಸೈನ್ಯದ "ಹಿಂಭಾಗ : "ಪ್ರತಿಸರಃ — ಸೈನ್ಯದ ಹಿಂಭಾಗ" (ಸಿದ್ಧಾಂತಿ. ೪೦೪). [ಸಂ.]

ಪ್ರತಿಸರ್ಗ (ನಾ). ೧. ಪ್ರಥಮಸೃಷ್ಟಿಕರ್ತನಾದ ಬ್ರಹ್ಮನ ಸೃಷ್ಟಿಗೆ ಸಮಾನವಾಗಿ ಮನು, ದಕ್ಷ ಮೊದಲಾದ ಪ್ರಜಾಪತಿಗಳು ಮಾಡಿದ ಸೃಷ್ಟಿ ; ಪ್ರತಿಸೃಷ್ಟಿ ; ೩ ಇದರ ವರ್ಣನೆ ಪುರಾಣದ ಪಂಚಲಕ್ಷಣಗಳಲ್ಲಿ ಒಂದು. ಬ್ರಹ್ಮನು ಸೃಷ್ಟಿಸಿದ ಮನು ಮಾನವರೇ ಮೊದಲಾದವರನ್ನೂ ದಕ್ಷನು ಪಿತೃಗಣವನ್ನೂ ಮರೀಚಿಯು ಕಶ್ಯಪನನ್ನೂ ಸೃಷ್ಟಿಸಿದರು. ೨. ಪ್ರಳಯ; ನಾಶ. ೩. ಪ್ರತಿಯೊಂದು ಸರ್ಗ. [ಸಂ.]

ಪ್ರತಿಸಾರಣ (ನಾ). ೧. ಹಿಂದಕ್ಕೆ ಹೋಗುವಂತೆ ಮಾಡುವುದು : ಉತ್ತರತುದಿಗಳನ್ನೇ ಅಥವಾ ದಕ್ಷಿಣತುದಿಗಳನ್ನೇ ಒಂದಕ್ಕೊಂದು ಹೊಂದಿಸಿದರೆ ಅವು ಒಂದರಿಂದೊಂದು ಹಿಂದಕ್ಕೆ ಸರಿಯುತ್ತವೆ. ಈ ಧರ್ಮಕ್ಕೆ ಪ್ರತಿಸಾರಣವೆಂಬ ಹೆಸರು (ಸುಂಬಿಯು. – ೫-೨೨೯). ೨. ಗಾಯಕ್ಕೆ ಮಾಡುವ ಚಿಕಿತ್ಸೆ. ೩. ಗಾಯಕ್ಕೆ ಮುಲಾಮು ಹಚ್ಚುವ ಸಾಧನ. [ಸಂ.]

ಪ್ರತಿಸೀರೆ (ನಾ). (ನಾಟಕಾದಿಗಳಲ್ಲಿ ಉಪಯೋಗಿಸುವ) ಬಟ್ಟೆಯ ತೆರೆ ; ಪರದೆ : "ಅಪಟೀ, ಕಾಂಡಪಟಃ, ಪ್ರತಿಸೀರಾ, ಯವನಿಕಾ, ತಿರಸ್ಕರಿಣೀ – ಈ (೫)ತೆರೆ" (ಹಲಾಯು. ೩೨-೨೫೪). [ಸಂ. ಪ್ರತಿಸೀರಾ]

ಪ್ರತಿಸೂರ್ಯ (ನಾ). ೧. = ಪ್ರತಿಯಿನ : ಪ್ರತಿಸೂರ್ಯಂ ಸೂರ್ಯನಿಂದಂ ಬಡಗಲೊಗೆಯೆ ವೃಷ್ಟಿಪ್ರದಂ (ಲೋಕೋಪ. ೪-೩೭) ; ಪ್ರತಿಸೂರ್ಯಂ ಪಿಂಗಿದಾದಿತ್ಯನೊ ಘನತಿಮಿರಂ ಪಿಂಗಿದೊಂದಿಂದುವೋ . . . ಎಂಬಂತೆ . . . ಶೋಭಾನ್ವಿತನಾಗಿರ್ದಂ ನಳಂ (ಪಳಸಂ. ೪೦೫). ೨. ಸೂರ್ಯನಿಗೆ ಸಮಾನನಾಗಿರುವವನು; ಮತ್ತೊಬ್ಬ ಸೂರ್ಯ : ಅರ್ಕ ಬಾಂದಳದೊಳಂ ಬೆಳಗುತಿರೆ ಪ್ರತಿಸೂರ್ಯಯೆತ್ತಣಿಂದಲಿ ಬಂದನೊ (ಸಪಸೋ. ೨೭-೩೨). ೩. ಒಂದು ಬಗೆಯ ಓತಿಕೇತ; ಗೋಸುಂಬೆ : "ಪ್ರತಿಸೂರ್ಯಃ, ಶಯಾನಕಃ—ಈ ೨ ಗೋಸುಂಬೆ" (ಹಲಾಯು. ೩೯-೬೦).

[ಸಂ.]

ಪ್ರತಿಸೃಷ್ಟಿ (ನಾ). ೧. = ಪ್ರತಿಸರ್ಗ ೧. ೨. (ಆಲಂ) ಹಿಂದಿನಿಂದಲೂ ಬಂದಿರುವ ಯಾವುದಾದರೂ ವೇಷ, ಭೂಷಣ. ಪದ್ಧತಿಗಳಿಗೆ ಪ್ರತಿಯಾಗಿ ಮತ್ತೊಂದನ್ನು ಕಲ್ಪಿಸುವುದು: ಈಗಿನ ಅದ್ಭುತಕಲಾಕೃತಿಗಳನ್ನು ನೋಡಿ ಅವನ್ನು ವಿಶ್ವಾಮಿತ್ರಸೃಷ್ಟಿಯೆಂದು ಕರೆಯುವ ರೂಢಿ ಈಗಲೂ ಇದೆ. ಇಂತಹ ಪ್ರತಿಸೃಷ್ಟಿಯ ರಚನೆಗೆ ಆಧಾರವಾದ ವಿಜ್ಞಾನವು ಪ್ರತ್ಯಕ್ಷಾದಿ ಪ್ರಮಾಣಗಳಿಂದಲೇ ಸಾಧ್ಯ (ಜೀವಾತ್ಮ. ೨೨); ಈ ಎಲ್ಲ ಸೌಂದರ್ಯದ ಪ್ರತಿಸೃಷ್ಟಿಯನ್ನು—ನಿರೂಪಣೆಯನ್ನು—ಕಲೋಪಾಸಕನು ತನ್ನ ಕೃತಿಯಲ್ಲಿ ಮಾಡುತ್ತಾನೆ (ಪಪ್ಯಕಾ. ೬೯). [ಸಂ.]

ಪ್ರತಿಸ್ಪಂದನ (ನಾ). ಕಾವ್ಯ ಮುಂತಾದ ಕಲೆಗಳಲ್ಲಿ ಅಭಿವ್ಯಕ್ತವಾಗಿರುವ ಭಾವಗಳಿಗೆ ಅನುಕೂಲಕರವಾದ, ವಿಮರ್ಶಕನ ಮನಸ್ಸಿನಲ್ಲಿ ಹೊಳೆಯುವ ಭಾವನೆ: ಎಷ್ಟೋ ವೇಳೆ ಕುಮಾರವ್ಯಾಸನ ಕಾವ್ಯಸೃಷ್ಟಿಗೆ ಅನೇಕರು ಪ್ರತಿಸ್ಪಂದನ ಮಾಡಲಾರರು (ಕೂಡಿ). [ಸಂ.]

ಪ್ರತಿಸ್ಪಂದಿಸು (ಕ್ರಿ). ಮೆಚ್ಚಿ, ಪ್ರತಿಕ್ರಿಯೆಯನ್ನು ತೋರಿಸು: ಕುಮಾರವ್ಯಾಸಭಾರತದಂಥ ಕಾವ್ಯಗಳಿಗೆ ಪ್ರತಿಸ್ಪಂದಿಸುವುದು ವಿಮರ್ಶಕನಿಗೆ ಹಿರಿಮೆಯನ್ನು ತರುತ್ತದೆ (ಕೂಡಿ). [ಪ್ರತಿಸ್ಪಂದನ + —ಇಸ್ಯು]

ಪ್ರತಿಸ್ಪರ್ಧಿ (ನಾ). ೧. ಒಬ್ಬನು ಸಾಧಿಸಲಿರುವ ಗುರಿಯನ್ನು ಸಾಧಿಸಲು ಪೈಪೋಟಿಮಾಡುವ ವ್ಯಕ್ತಿ; ಪ್ರತಿದ್ವಂದ್ವಿ: ಸ್ಥಳಗಳ ಭರತಿಯ ಕಾಲಕ್ಕೆ ಅವಳು ನನಗೆ ಪ್ರತಿಸ್ಪರ್ಧಿಯಾಗಿ ಬರುವಳೆಂದು ನಾನು ಎಣಿಸಿರಲಿಲ್ಲ (ಹೇಮಂತ. ೨೬೬); ಮಹಾವೈದ್ಯನಾಥ ಅಯ್ಯರ್ ಅವರು ...ಪರಮೇಶ್ವರಭಾಗವತರಿಗೆ ಸರಿಯಾದ, ಸಮನಾದ ಪ್ರತಿಸ್ಪರ್ಧಿ (ಸಂಗೀತ. ೪೩). ೨. ಎದುರಾಳಿ; ವಿರೋಧಿ: ಪ್ರತಿಸ್ಪರ್ಧಿವೀರ ಆಲಾಪಮಾಗೈವಂತೆ ಬೆಸಗೊಂಡಳೊರಟಾಗಿ ಆಟವಿಕಸ್ತ್ರೀಯವೋಲ್ (ಚಿತ್ರಾಂಗ. ೦೨-೩೩೩); ಹಿಮಶೈಲವು ಜ್ಯೂಪಿಟರ್ ತನ್ನ ಪ್ರತಿಸ್ಪರ್ಧಿಯನ್ನು ಶಿಕ್ಷಿಸಲು ನಿರ್ಮಿಸಿದ ಕಾರಾಗೃಹವೆಂಬುದು ಬಹುಸೀಮಿತ ದೃಷ್ಟಿಯಲ್ಲಿ ಮಾತ್ರ ನಿಜ (ಬೃಪ್ರ. XXIV, ಬೀಠಿಕೆ); ಈ ಎರಡೂ ಕೋಟೆಗಳು ಪ್ರತಿಸ್ಪರ್ಧಿಗಳಾಗಿ ಮತ್ಸರವನ್ನೇ ಕಾರುತ್ತಿದ್ದವು (ರಂಗರೋ. ೦೮೪). [ಸಂ. ಪ್ರತಿಸ್ಪರ್ಧಿನ್]

ಪ್ರತಿಹತ (ಗು). ೧. ಹಿಂದಿರುಗಿ ಹೊಡೆಯಿಸಿಕೊಂಡ; ಪ್ರತಿಯಾಗಿ ಹೊಡೆತ ತಿಂದ. ೨. ಗಾಯಗೊಂಡ. ೩. ಹಿಂದಕ್ಕೆ ಅಟ್ಟಿದ; ಹಿಮ್ಮೆಟ್ಟಿಸಿದ. ೪. ಪ್ರತಿಭಟನೆಯನ್ನು ಹೊಂದಿದ; ಎದುರಿಸಿದ. ೫. ಸೋತ; ಸೋಲನ್ನು ಹೊಂದಿದ. ೬. ಕೆಳಕ್ಕೆ ಬಿದ್ದ; ಪತಿತ. ೭. ನಿರಾಶೆಗೊಂಡ; ಆಸೆಯನ್ನು ತೊರೆದ. ೮. ಅಡ್ಡಿಪಡಿಸಿದ; ಪ್ರತಿರೋಧವನ್ನು ಹೊಂದಿದ: ಬಂಗಾಳದಲ್ಲಿ ಅತೃಪ್ತಿಲಕ್ಷಣ ಅತ್ಯಂತ ಪ್ರಬಲವಾಗಿ ಕಂಡುಬರುತ್ತಿರುವುದರ ಏಕಮಾತ್ರಕಾರಣ ನಮ್ಮ ಪ್ರತಿಹತಗಮನ (ಪಿಬಾರ. II, ೦೯೦). ೯. ಇನ್ನೊಬ್ಬರ ದ್ವೇಷಕ್ಕೊಳಗಾದ. ೧೦. ಹೋಗಲಾಡಿಸಿದ; ನಾಶಪಡಿಸಿದ. (ನಾ). ೧೧. ಸೋತುದು; ಪರಾಭವಗೊಂಡುದು: ಪ್ರತಿಹತಮಾದುದಾ ಪರಶುರಾಮನಿಗಾ ರಘುರಾಮನಾ ಸರಿತ್ಪತಿ ಕುವರಂಕರಾಮನಿನದೇಂ ಕಟಿಪಾದುದೊ ಮೂಱುಸೂಟಿಳು (ಗದಾಯು. ೦-೨೯). ೧೨. ಅಡ್ಡಿಪಡಿಸುವುದು; ತಡೆಯುವುದು: "ಪಟಿಹತ ಪ್ರತಿಹತಮಪಕ್ಕು" (ಕವಿಕಂ. ೨೪೩). ೧೩. ನಿರಾಶನಾದವನು: "ಮನೋಹತಃ, ಪ್ರತಿಹತಃ, ಪ್ರತಿಬದ್ಧಃ, ಹತಃ —ಳ ಮನಸ್ಸಿನ ಉತ್ಸಾಹವು ತಪ್ಪಿದವನ ಹೆಸರು, ಮನಗೆಟ್ಟವನು" (ನಿಧ್ಯಾಂತಿ. ೩೩೯). [ಸಂ.]

ಪ್ರತಿಹರ್ತೃ (ನಾ). ೧. ಹೊಡೆಯುವವನಿಗೆ ಪ್ರತಿಯಾಗಿ ಹೊಡೆಯುವವನು. ೨. ಪರಿಹರಿಸುವವನು; ನಿವಾರಿಸುವವನು. ೩. ಯಾಗಗಳಲ್ಲಿ ಭಾಗವಹಿಸುವ ಹದಿನಾರುಜನ ಋತ್ವಿಜರಲ್ಲಿ ಒಬ್ಬ; ಉದ್ಗಾತೃವಿಗೆ ಸಹಾಯಕನಾಗಿರುವವನು: ಯಥಾವಿಹಿತಮಾಗಿ ಮಂತ್ರಮಂತ್ರಾರ್ಥಗಳೆಂಬಲ್ಲಿ ನೈಷಿಕ್ಕರಾದ...ಪ್ರತಿಹರ್ತೃ... ಆಗ್ನೀಧ್ರಪ್ರಮುಖ ಋತ್ವಿಕ್ಸಂಪತ್ತಿಯಿಂದಲೂ (ವಿವೇಶ. ೦೩೪); ಪ್ರತಿಹಾರದ ದೇವತೆ ಯಾವುದು? ಎಂಬ ಪ್ರತಿಹರ್ತೃವಿನ ಪ್ರಶ್ನೆಗೆ ಅನ್ನವೆಂದೂ ಚಾಕ್ರಾಯಣನು ಉತ್ತರವನ್ನು ಕೊಟ್ಟಿರುತ್ತಾನೆ (ಬ್ರಹ್ಮಶಾ. ೦೯೬ ಅಡಿಟಿ). ೯ ಬ್ರಹ್ಮ, ಉದ್ಗಾತೃ, ಹೋತೃ, ಅಧ್ವರ್ಯು, ಬ್ರಾಹ್ಮಣಾಚ್ಛಂಸಿ, ಪ್ರಸ್ತೋತೃ, ಮೈತ್ರಾವರುಣ, ಪ್ರತಿಪ್ರಸ್ಥಾತೃ, ಪೋತೃ, ಪ್ರತಿಹರ್ತೃ, ಅಚ್ಛಾವಾಕ, ನೇಷ್ಟೃ, ಆಗ್ನೀಧ್ರ, ಸುಬ್ರಹ್ಮಣ್ಯ, ಗ್ರಾವಸ್ತೋತೃ ಮತ್ತು ಉನ್ನೇತೃ ಎಂಬ ಹದಿನಾರು ಜನರು ಯಾಗದಲ್ಲಿ ಭಾಗವಹಿಸುವ ಋತ್ವಿಜರು. [ಸಂ.]

ಪ್ರತಿಹಸ್ತ (ನಾ). ಒಬ್ಬನಿಗೆ ಪ್ರತಿಯಾಗಿ ಇರುವವನು; ಪ್ರತಿನಿಧಿ: "ಪಟಿಯತ್ತ[ಶಾಕಾಂ. ಪಟಿಹತ್ತ]ನೆಂದು ಪ್ರತಿಹಸ್ತಂ" (ಕಶಸಾ. ೬೩-೬೫೬); ಈ ಧರ್ಮಮಂ ನಿಮ್ಮ ಪ್ರತಿಹಸ್ತನಾಗಿ [ಮಾ]ಡಿಸಿದ ರಾಜರಕ್ಷಿತಂ ಧರ್ಮಮೆಂಬುದಂ (ಸೌಇಇ. XX, ೦೦೧-೪೭; 1140). [ಸಂ.]

ಪ್ರತಿಹಾರ (ನಾ). ೧. ಬಾಗಿಲು; ದ್ವಾರ: "ದ್ವಾರದಲ್ಲಿಯುಂ ಪ್ರತಿಹಾರವೆಂಬುದು" (ಹಲಾಯು. ೧೩-೦೨); ಪ್ರತಿಹಾರನೇತ್ರ ಪುತ್ರಿಕಮತಿ ವಿಪುಳಕವಾಟಪಕ್ಷ್ಮಮೆಸೆವುದು ರಾಜಾಯತನಕ್ಕೆ ನೊಸಲ ಕಣ್ಣಿನಿಸಿ, ತೇಜಮಂ ತೆಱೆಯೆ ಮೆಱೆವ ಪೂರ್ವದ್ವಾರಂ (ಪರ್ಶಪು. ೦-೬೩). ೨. ಬಾಗಿಲು ಕಾಯುವವನು; ಪಡಿಯರ ದ್ವಾರಪಾಲಕ: "ಪಡಿಯಱನೆನೆ ಪ್ರತಿಹಾರನುಂ" (ಕವಿಕಂ. ೦೫೯); ತನ್ನ ಬೆಸನನೆ ಪಾರ್ದುಲಲಾಟತಟಘಟಿತಮುಕುಳಿತಕರಕಮಳನಾಗಿರ್ದ ಮಹಾಪ್ರತಿಹಾರನ ಮೊಗಮಂ ನೋಡಿ (ಪಂಪಶಾ. ೯-೩೦ ಪ); ಪ್ರತಿಹಾರು ತಾನೆ ಚಂಚಚ್ಚಮರ ರುಹಧರಂ ತಾನೆ ಪೀಠಾರ್ಚನಾಪ್ರಸ್ತುತಿಯುಕ್ತಂ ತಾನೆ (ಪಂಪ್ರಪು. ೦೫-೦೨೨). ೩. ಗಾರುಡಿಗ; ಐಂದ್ರಜಾಲಿಕ. ೪. ಕಣ್ಕಟ್ಟುವಿದ್ಯೆ; ಇಂದ್ರಜಾಲ. ೫. ಸಾಮಗಾನದ ಒಂದು ಅಂಗ: ಉದ್ಗೀಥ, ಪ್ರಸ್ತಾವ, ಹಿಂಗಿರ, ಪ್ರತಿಹಾರ, ನಿಧನವೆಂಬ ೫ ಪ್ರಕಾರವಾಗಿ ಸಾಮಗಾನವು ಭಾಗಿಸಲ್ಪಟ್ಟಿರುವುದು (ಹಸಾರ. ೬-೦೪ ತಾತ್ಪರ್ಯ); ಪ್ರತಿಹಾರದ ದೇವತೆ ಯಾವುದು? ಎಂಬ ಪ್ರತಿಹರ್ತೃವಿನ ಪ್ರಶ್ನೆಗೆ ಅನ್ನವೆಂದೂ ಚಾಕ್ರಾಯಣನು ಉತ್ತರವನ್ನು ಕೊಟ್ಟಿರುತ್ತಾನೆ (ಬ್ರಹ್ಮಶಾ. ೦೯೬ ಅಡಿಟಿ). ೬. [ದ್ವೈತ] ವಿಷ್ಣು, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ಪರಮಾತ್ಮನ ಐದು ವ್ಯೂಹಗಳಲ್ಲಿ ಒಂದು; ಅನಿರುದ್ಧ: ಒಂದೊಂದು ಕಾರ್ಯದಲ್ಲಿಯೂ ಈ ಜಗತ್ತನ್ನು ಪ್ರತಿಹರಣ ಮಾಡುವುದರಿಂದಲೂ ಮೂರ್ತಿಗಳನ್ನು ಪ್ರತಿಹರಣಮಾಡುವುದರಿಂದಲೂ ಪ್ರತಿಹಾರನೆಂದು ಅನಿರುದ್ಧನೆಂದು ಹೆಸರು (ಹಸಾರ. ೬-೦೪ ತಾತ್ಪರ್ಯ). [ಸಂ.]

ಪ್ರತಿಹಾರಕ (ನಾ). ೧. ಬಾಗಿಲು ಕಾಯುವವನು; ದ್ವಾರಪಾಲಕ: ಪ್ರತಿಹಾರಕರುಂ ಗೋಪುರಚತುಷ್ಕಮುಂ ಪುದಿದ ಶಾಳಮುಂ ಪೂರ್ವೋಕ್ತಸ್ಥಿತಿಯಿಂ ಕಣ್ಗಂ ಬಗೆಗಂ ಪ್ರತೀತಿಯಂ ಪಡೆದು ಪಡೆದುವಧಿಕೋತ್ಸವಮಂ (ಮಲ್ಲಿಪು. ೦೪-೧೩೫); ಪಸರಿಸಿದತ್ತು . . . ಮಹಾಪ್ರತಿಹಾರಕಸ್ವನಂ (ಬಾರಪು. ೦೬-೨೨). ೨. ಗಾರುಡಿಗ. [ಸಂ.]

ಪ್ರತಿಹಾರಿ (ನಾ). ರಾಜನ ಹದಿನೆಂಟು ಬಗೆಯ ಪರಿವಾರದವರಲ್ಲಿ ಒಬ್ಬ; ದ್ವಾರಪಾಲಕ: "ಪೌರೋಹಿತಂ . . . ಪ್ರತಿಹಾರಿಯುಂತಸ್ಥಿತಂ ದ್ವಾರಪಾಲಂ ಕರಣಿಕಂ ದಂಡಪಾಣಿ ಕೊಠಾರಿ ಯುವರಾಜನಾ ತಳವಾಱನೆಂಬಿವರು ಭೂರಮಣರಲ್ಲಿ ವಿನಿಯೋಗಮಂ ತಾಳ್ದು ಪದಿನೆಣ್ಬರ್ ಪ್ರಧಾನರೆನಿಕುಂ" (ಮಂಗರಾ. ೮೦-೦೦). ೯ ಈ ಪ್ರಯೋಗದಲ್ಲಿ ಪ್ರತಿಹಾರಿ, ದ್ವಾರಪಾಲ ಎಂಬ ಎರಡೂ ಸೇರಿರುವುದು ವಿಚಾರಯೋಗ್ಯ. [ಸಂ. ಪ್ರತಿಹಾರಿನ್]

ಪ್ರತಿಹಾಸ (ನಾ). ೧. ಇನ್ನೊಬ್ಬರ ನಗುವಿಗೆ ಪ್ರತಿಯಾಗಿ ನಗುವುದು. ೨. ಕಣಗಿಲೆ ಗಿಡ; ಪಡ್ಡಳಿ : "ಪ್ರತಿಹಾಸಃ, ಶತಪ್ರಾಸಃ, ಚಂಡಾತಃ, ಹಯಮಾರಕಃ, ಕರವೀರಃ — ೫ ಗನ್ನೇರಳೆ, ಕಣಗಿಲಗಿಡದ ಹೆಸರು" (ನಿಘಂಟು. ೦೨೯). [ಸಂ.]

ಪ್ರತಿಹಿಂಸೆ (ನಾ). ಒಬ್ಬನು ಮಾಡಿದ ಹಿಂಸೆಗೆ ಪ್ರತಿಯಾಗಿ ಹಿಂಸೆ ಮಾಡುವ ಪ್ರವೃತ್ತಿ ; ಸೇಡಿನ ಬುದ್ಧಿ : ಹೃದಯದೊಳಗೆ ಮನೋಹರನ ಬಗೆಗೆ ಭೀಷಣಪ್ರತಿಹಿಂಸೆ ಇದ್ದಿತು (ಕೂಕಣಾ. ೫೯). [ಸಂ. ಪ್ರತಿಹಿಂಸಾ]

ಪ್ರತೀಂದ್ರ (ನಾ). [ಜೈನ] ಇಂದ್ರನಿಗಿಂತ ಸ್ವಲ್ಪ ಕೆಳಮಟ್ಟದ ಇಂದ್ರ; ಇತರ ದೇವತೆಗಳಿಗಿಂತಲೂ ಹೆಚ್ಚಾದ ಅಣಿಮಾದಿ ಗುಣಗಳನ್ನು ಪಡೆದಿರುವ ದೇವಯೋನಿವಿಶೇಷ; ೯ ನಾಲ್ಕು ಪ್ರಕಾರದ ದೇವವರ್ಗಗಳಲ್ಲಿಯೂ ಇಂದ್ರನ ಕೆಳಗೆ ಪ್ರತೀಂದ್ರರಿರುತ್ತಾರೆ. ಭವನವಾಸಿ ದೇವರುಗಳಲ್ಲಿ ಇಪ್ಪತ್ತುಜನ ಇಂದ್ರರೂ ಇಪ್ಪತ್ತುಜನ ಪ್ರತೀಂದ್ರರೂ ಇರುತ್ತಾರೆ. ವ್ಯಂತರದೇವರುಗಳಲ್ಲಿ ಹದಿನಾರು ಜನ ಇಂದ್ರರೂ ಹದಿನಾರು ಜನ ಪ್ರತೀಂದ್ರರೂ ಇರುತ್ತಾರೆ. ಜ್ಯೋತಿರ್ದೇವರುಗಳಲ್ಲಿ ಚಂದ್ರನು ಇಂದ್ರನಾದರೆ ಸೂರ್ಯನು ಪ್ರತೀಂದ್ರ. ಕಲ್ಪವಾಸಿಗಳಲ್ಲಿ ಹನ್ನೆರಡು ಜನ ಇಂದ್ರರೂ ಹನ್ನೆರಡು ಜನ ಪ್ರತೀಂದ್ರರೂ ಇರುತ್ತಾರೆ : ಕೇಶಪನುಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತಸಕಲರಾಜ್ಯಪರಿಚ್ಛೇದಂ ಪ್ರವ್ರಜ್ಯಪದವಿಯೊಳ್ ಪರಿತಕ್ತ್ಯನುಮಾ[illegible]ಚ್ಯುತಕಲ್ಪದೊಳ್ ಪ್ರತೀಂದ್ರನಾದಂ (ಆದಿಪು. ೬-೦೨ ಪ); ಕೇಶವ[illegible]ಗದೊಳು ದೀಕ್ಷೆಯಂ ಕೈಕೊಂಡಲ್ಲಿಯೆ ಪ್ರತೀಂದ್ರನಾದೊಂ ([illegible]) [ಸಂ.]

ಪ್ರತೀಕ (ಗು). ೧. ಪ್ರತಿಕೂಲವಾದ; ವಿರುದ್ಧವಾದ; ವ್ಯತಿರಿಕ್ತವಾದ. ೨. ತಲೆಕೆಳಗಾದ; ವಿಲೋಮವಾದ. (ನಾ). ೩. ಭಾಗ; ಅಂಶ; ಪಾಲು. ೪. ಅಂಗ; ಅವಯವ: "ಅಂಗಂ, ಪ್ರತೀಕಃ, ಅವಯವಃ, ಅವಘನಃ — ೪ ಕೈ ಕಾಲು ಮುಂತಾದ ಅಂಗಗಳ ಹೆಸರುಗಳು" (ನಿಘಂಟು. ೦೬೯). ೫. ಗುರುತು ; ಚಿಹ್ನೆ ; ಸಂಕೇತ : ಧೂಮ ಪ್ರತೀಕದಿಂ ರಾಮನಂ ಭಾವಿಸಿರೆ ಬಂದು ಮುಟ್ಟಿತ್ತೋಡಮಾ ಪಾರಮಂ (ಶ್ರೀರಾಮಾ. ೦೬೨-೨೭೫); ಬಿಳಿವರ್ಣವು ಯಾವಾಗಲೂ ಪರಿಶುದ್ಧತೆಗೆ ಪ್ರತೀಕವಾಗಿರುವುದು (ಹೇಮಂತ. ೭೦). ೬. ಪ್ರತಿಕೃತಿ ; ಪ್ರತಿರೂಪ : ದಾಂಪತ್ಯಜೀವನವು. . . ಸಮರಸವಾಗಿ ಬೆಳೆದುಕೊಂಡು ಬಂದ ಅಂತಃಕರಣ ಪ್ರವೃತ್ತಿಗಳ ಏಕೀಭೂತವಾದ ಪ್ರತೀಕವೆಂಬುದನ್ನು ರಾಮನು ನಮಗೆ ಕಲಿಸಿ ಕೊಟ್ಟಿದ್ದಾನೆ (ಪಾರಾಕ್ಯ. ೦೦೫) ; ಮಾತು ಅಂತರಂಗದ ಪ್ರತೀಕ (ಹೊಸಕ್ಷ. ೩೫). ೭. ಒಂದಕ್ಕೆ ಬದಲಾಗಿ ಇರುವಂಥದು ; ಪ್ರತಿನಿಧಿಯಾಗಿರುವುದು : ಯಾವುದನ್ನು ಯಾವುದರ ಸ್ಥಾನದಲ್ಲಿ ಉಪಾಸ್ಯವೆಂದು ಹೇಳಿದೆಯೋ ಅದು ಅದರ ಪ್ರತೀಕವು (ಬ್ರಹ್ಮಶಾ. ೨೦೦) ; ಪ್ರತಿಯೊಂದು ಊರಿಗೂ ಚಾವಡಿಯೊಂದು ಬೇಕೇಬೇಕು. ಸಾರ್ವಭೌಮಸರಕಾರದ ಪ್ರತೀಕವದು (ಗಾಳಿಗು. ೧). ೮. ಆಕೃತಿ ; ಸ್ವರೂಪ ; ಆಕಾರ : 'ಪ್ರತೀಕಂಗೊಳ್ಳು' ಪರಾ. [ಸಂ.]

ಪ್ರತೀಕಂಗೊಳ್ಳು (ಕ್ರಿ). ಆಕೃತಿಯು ಕಣ್ಣಿಗೆ ಕಟ್ಟಿದಂತಾಗು ; ಮೂರ್ತಿವತ್ತಾಗು : ಇಂತೆಲ್ಲಮುಂ ಪ್ರತೀಕಂಗೊಳ್ಳಲೊರ್ದಿನಂ ಹೊಳೆಯ ನುಣ್ಮಳಲ ಬೆಣ್ಣೆಯ ದಿಣ್ಣೆ ಮೇಲಿರ್ದು, ಸೀತೆ ತಾಂ ಪತಿ ಮೈದುನರ ಕೂಡೆ ಮಾತಾಡುತಿರೆ (ಶ್ರೀರಾಮಾ. ೦೯೭-೬೬).

[ಪ್ರತೀಕ + ಕೊಳ್ಳು$_1$ (< ಕೊಳ್$_1$)]

ಪ್ರತೀಕವಾದ (ನಾ). ೧. ಸಾಹಿತ್ಯದಲ್ಲಿ ಸಂಕೇತಗಳ ಮೂಲಕ ವಿಷಯನಿರೂಪಣೆ ಮಾಡಬೇಕೆಂಬ ವಾದ ; ೯ ಕಾವ್ಯಗಳಲ್ಲಿ ಒಂದು ಪದದ ಅಥವಾ ವಾಕ್ಯದ ಅರ್ಥಕ್ಕೆ ಪ್ರತಿಯಾಗಿ ಬೇರೊಂದು ಸಾಂಕೇತಿಕಪದವನ್ನಾಗಲೀ ವಾಕ್ಯವನ್ನಾಗಲೀ ಪ್ರಯೋಗಿಸುವ ವಿಧಾನ ; ಅಂತರಾರ್ಥವನ್ನಿಟ್ಟು ಬರೆಯುವ ತತ್ತ್ವ : 'ಸಿಂಬಾಲಿಝುಂ' ಅಂದರೆ ಪ್ರತೀಕವಾದವೇ 'ಆಯ್‌ಡಿಯಾಲಿಝುಂ' ಅಂದರೆ ಆದರ್ಶವಾದ ಎಂಬ ಮಾತನ್ನು ತಂದೆ . . . ನನ್ನೆದುರಿಗೆ ಚರ್ಚಿಸಿದ್ದಾರೆ (ಇಪ್ಪಳ. ೯೭೪). [ಸಂ.]

ಪ್ರತೀಕಾರ (ನಾ). ೧. ಪರಿಹಾರ ; ನಿವಾರಣೆ : ಪುರುಪರಮೇಶ್ವರ ತನೂಭವರ ಯುದ್ಧಾಡಂಬರೋಪಸರ್ಗದೊಳಮಾಕುಲವ್ಯಾಕುಲರಾಗಿ ತತ್ಪ್ರಶಮನಪ್ರತೀಕಾರಮಾಗೆ ನಾಕಲೋಕಸುಂದರಿಯರೊಡನೆ ಅನಿಮೇಷರ್, . . . ಸರ್ವಜ್ಞಬಿಂಬಾವಳಿಗೆ ಪರಸಿದರ್ (ಆದಿಪು. ೧೯-೦೦೫ ಪ); ಬರ್ದುಕಿದೊರುಂ ಪಿರಿಯನ ಮುನಿಸೆಂಬುದು ಪ್ರಣಿಪಾತಪ್ರತೀಕಾರಮೆಂದ ಆದರಸನ ದಂಡನಾಯಕಂಗೆ ಶರಣಾಗತರಾಗಿ ನಿಜಶಿರಸ್ತ್ರಾಣಪರಾಯಣರಾದರ್ (ಶಾಂತಿಪು. ೦೦-೨೪ ಪ). ೨. ಅಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುವುದು ; ಸೇಡು ತೀರಿಸಿಕೊಳ್ಳುವುದು : "ವೈರ ಶುದ್ಧಿಃ, ಪ್ರತೀಕಾರಃ, ವೈರ ನಿರ್ಯಾತನಂ — ೩ ಹಗೆ ತೀರಿಸಿಕೊಳ್ಳುವುದರ ಹೆಸರು" (ನಿಘಂಟು. ೨೬೦) ; ನಂಜರಾಜನು . . . ಕೃಷ್ಣಪ್ಪನಾಯಕನ ಮೇಲೆ ಪ್ರತೀಕಾರವನ್ನು ಮಾಡುವುದಾಗಿ ಸಂಕಲ್ಪ ಮಾಡಿದನು (ಶ್ರೀರಾಯ. ೦೦೬). ೩. [ವೈದ್ಯಶಾ] ರೋಗ ಪರಿಹಾರಕ್ಕಾಗಿ ಮಾಡುವ ಚಿಕಿತ್ಸೆ ; ರೋಗನಿವಾರಣೋಪಾಯ : ಸ್ಥಾವರವಿಷ, ಜಂಗಮವಿಷ, ಕುಷ್ಠ . . . ಮುಂತಾದ ರೋಗಗಳು ಕಾಣಿಸಿದಲ್ಲಿಯೇ ಜಾಪ್ಯ ಮಾಡದೆ ಶೀಘ್ರದಲ್ಲಿಯೇ ಪ್ರತೀಕಾರವಂ ಮಾಡಬೇಕು (ಪಕಸ್ಕ. ೨೨). [ಸಂ.]

ಪ್ರತೀಕಾರಸಂಧಿ (ನಾ). [ರಾಜನೀ] ಹದಿನಾರಂಬಗೆಯ ಸಂಧಿಗಳಲ್ಲಿ ಒಂದು ; ಒಬ್ಬ ರಾಜನು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡುವೆನೆಂಬ ಒಪ್ಪಂದ : ಪರಸ್ಪರೋಪಕಾರಂಗೆಯ್ವುದು ಪ್ರತೀಕಾರಸಂಧಿಯೆಂಬುದಕ್ಕುಂ (ಸಂಸಕಂ. ೨೨೦-೧೨). 'ಸಂಧಿ' ಪರಾ. [ಸಂ.]

ಪ್ರತೀಕಾಲಂಬನ (ನಾ). ೧. ದೇವತೆಯ ಪ್ರತಿಮೆ, ಸಾಲಿಗ್ರಾಮಶಿಲೆ ಮೊದಲಾದುವುಗಳನ್ನು ಉಪಾಸ್ಯದೇವತೆಯೆಂದು ನಂಬಿ ಪೂಜಿಸುವುದು. ೨. [ದ್ವೈತ] ತನ್ನ ಶರೀರದಲ್ಲಿಯೇ ಭಗವಂತನನ್ನು ಕಾಣುವವನು : ತೃಣ, ಕ್ರಿಮಿ, ಪಶು, ಮನುಷ್ಯೋತ್ತಮರು, ಚಕ್ರವರ್ತಿಗಳು, ಮನುಷ್ಯ, ಗಂಧರ್ವರೆಂಬ ಏಳುವಿಧ ಜೀವರು ನಿರಂಶವೆನಿಸುವರು . . . ಇವರಿಗೆ ಪ್ರತೀಕಾಲಂಬನರೆಂತಲೂ ಮತ್ತೊಂದು ಹೆಸರು. ಪ್ರತೀಕವೆಂದರೆ ತನ್ನ ಶರೀರವು, ತನ್ನ ಶರೀರದಲ್ಲೆ ಹರಿಯನ್ನು ಅವರೋಕ್ಷದಲ್ಲಿ ಕಾಣುವವರಾದುದರಿಂದ ಪ್ರತೀಕಾಲಂಬನರೆಂದು ಹೆಸರು (ಪಸಾರ. ೨೩-೩ ತಾತ್ಪರ್ಯ). [ಸಂ.]

ಪ್ರತೀಕಾಶ (ನಾ). ೧. ಪ್ರತಿಬಿಂಬ. ೨. ಕಾಣ್ಕೆ ; ನೋಟ. ೩. (ಸಮಾಸದ ಉತ್ತರಪದವಾಗಿ ಬಂದಾಗ) ಸಮಾನವಾದುದು : ಸದೃಶವಾದದು : "ನಿಭಃ, ಸಂಕಾಶಃ, ನೀಕಾಶಃ, ಪ್ರತೀಕಾಶಃ, ಉಪಮಾ . . . ಸಮಾಸದಲ್ಲಿ ತುದಿಪದಗಳಾಗಿಯೇ ಸಮಾನವಸ್ತುವಿನ ಹೆಸರಾಗುವುವು" (ನಿಘಂಟು. ೩೦೭). [ಸಂ.]

ಪ್ರತೀಕ್ಷಣ (ನಾ). ಎದುರುನೋಡುವುದು ; ನಿರೀಕ್ಷಣೆ : ಅತಿಪುರಸ್ಸರ ಮಿದಿರ್ಗೊಂಡು ತತ್ಕ್ರಿಯಾಪರಿಸಮಾಪ್ತಿಪ್ರತೀಕ್ಷಣಪರನವರಂ ಗುರುಭಕ್ತಿಪೂರ್ವಕಂ ಬಂದಿಸಿ (ಆದಿಪು. ೨-೩೩ ಪ). [ಸಂ.]

ಪ್ರತೀಕ್ಷಿಸು (ಕ್ರಿ). ಎದುರು ನೋಡು ; ಕಾಯು ; ನಿರೀಕ್ಷಿಸು ; ಸೌಗಂಧಿಕಾದೇವಿಯು ಬರುವುದಂ ಪ್ರತೀಕ್ಷಿಸುತ್ತಿರಲು (ಸೌಗಂಧಿ. ೨೦೯-೬);

ನಮಿಸಿದರು ತಪೋರುದ್ರಂಗೆ, ಚಿತ್ರಕೂಟಕೆ ರಾಮನೈತಂದ ವಾರ್ತೆಯಂ ಕೇಳ್ದಂದಿನಿಂದಾತನಂ ಪ್ರತೀಕ್ಷಿಸುತಿರ್ದ ಕೆಂಜೆಡೆಯ ಕಿತ್ತಡಿಗೆ (ಶ್ರೀರಾಮಾ. ೦೮೪-೨೨೦). [ಪ್ರತೀಕ್ಷಣ + — ಇಸ್ಯು]

ಪ್ರತೀಕ್ಷೆ (ನಾ). = ಪ್ರತೀಕ್ಷಣ : ನಮ್ಮ ಅಂತಃಕರಣದ ಆಸೆ ಒಂದಿಲ್ಲೊಂದು ದಿನ ಈಡೇರಿತೆಂಬ ಪ್ರತೀಕ್ಷೆಯಲ್ಲಿ ಇನ್ನೆಲ್ಲವನ್ನೂ ಅಲ್ಲಗಳೆದು ನಿಂತಿದ್ದೇವೆ (ದೇಶಸ್ಥ. ೩); ಭಾರತೀಯಸಂಸ್ಕೃತಿಯನ್ನು ತಿಳಿಯಲು ಸಹಾಯವಾಗುವುದೆಂದೂ ಅವನ ಪ್ರತೀಕ್ಷೆಯಿತ್ತು (ಸಮಜೀ. ೬೬೩). [ಸಂ. ಪ್ರತೀಕ್ಷಾ]

ಪ್ರತೀಕ್ಷ್ಯ (ಗು). ೧. ಕಾಯಬೇಕಾದ ; ನಿರೀಕ್ಷಿಸತಕ್ಕ. ೨. ಪರಿಗಣಿಸಬೇಕಾದ ; ಲಕ್ಷಿಸಬೇಕಾದ. ೩. ಗೌರವಕ್ಕೆ ಪಾತ್ರವಾದ ; ಮನ್ನಣೆಗೆ ಅರ್ಹವಾದ. (ನಾ). ೪. ಮನ್ನಣೆಗೆ ಅರ್ಹನಾದವನು; ಪೂಜ್ಯ ; ಮಾನ್ಯ : "ಪ್ರತೀಕ್ಷ್ಯಃ, ಪೂಜ್ಯಃ — ಈ ೨ ಪೂಜಿಸಲ್ತಕ್ಕವಂ" (ಹಲಾಯು. ೬೩-೨೨೯). [ಸಂ.]

ಪ್ರತೀಚಿ (ನಾ). ಪಡುವಣದಿಕ್ಕು ; ಪಶ್ಚಿಮ: "ಪ್ರತೀಚಿಯೆನೆ ಪಡುವಲು" (ಮಂಗರಾ. ೦೭-೦೯); ಆನುಂ ಪ್ರತೀಚೀಸಮಾಗಮಸಂತುಷ್ಟನೆನಪ್ಪೆನೆಂದು ದಿನಪಂ ರಕ್ತತ್ವದಿಂ ಪೋಗೆ (ಶಾಂತಿಪು. ೯-೬೦); ಆ ಪ್ರತೀಚೀಜಲಧಿಗಿಱಿದ ನಂಭೋಜಿನೀಜೀವಿತೇಶಂ (ಸಂದ್ರಪು. ೨-೪೩). [ಸಂ. ಪ್ರತೀಚೀ]

ಪ್ರತೀಚೀನ (ನಾ). ಪಶ್ಚಿಮದಿಕ್ಕಿನದು : "ಪ್ರತ್ಯಕ್, ಪ್ರತೀಚೀನಂ — ಈ ೨ ಪಡುವಲಾದುದು" (ಹಲಾಯು. ೦೭-೦೦೩). [ಸಂ.]

ಪ್ರತೀಚ್ಯ (ಗು). ೧. ಪಶ್ಚಿಮಕ್ಕೆ ಸಂಬಂಧಿಸಿದ ; ಪಡುವಣದ. ೨. ಪಶ್ಚಿಮದೇಶದ ; ಪಾಶ್ಚಾತ್ಯದೇಶಕ್ಕೆ ಸೇರಿದ : ಈ ರೀತಿ ಪ್ರಾಚ್ಯ — ಪ್ರತೀಚ್ಯ ಶಾಸ್ತ್ರಗಳಲ್ಲಿ ಕಾವ್ಯಾನುಭವ ಅಥವಾ ಕಾವ್ಯಾನಂದದ ವಿಷಯದಲ್ಲಿ . . . ಸಿದ್ಧಾಂತಗಳು ಕಾಣದೊರೆಯುತ್ತವೆ (ಶ್ರೀತೃತ್ರ. ೨೩). (ನಾ). ೩. ಪಶ್ಚಿಮದೇಶಕ್ಕೆ ಸಂಬಂಧಪಟ್ಟವನು ; ಪಾಶ್ಚಾತ್ಯ : ಆಧುನಿಕಪಂಡಿತರೆಂದರೆ ಪ್ರಾಚ್ಯಶಾಸ್ತ್ರಗಳನ್ನು ತಿಳಿದ ಪ್ರತೀಚ್ಯರು ಮತ್ತು ಅವರ ದೃಷ್ಟಿವಿಶೇಷಕ್ಕೆ ಸಂಗತವಾಗಿ ಪ್ರಾಚ್ಯತತ್ತ್ವಶಾಸ್ತ್ರಗಳಿಗೆ ವ್ಯಾಖ್ಯಾನ ಮಾಡುವ ಆಧುನಿಕಭಾರತೀಯರು (ಭಾತತ್ತ್ವ. XVI ಬೀಠಿಕೆ). [ಸಂ.]

ಪ್ರತೀತ (ಗು). ೧. ಎದುರಿಗೆ ಬಂದ ; ಅಭಿಮುಖವಾಗಿ ಬಂದ. ೨. ಒಪ್ಪಿಕೊಂಡ ; ಸಮ್ಮತಿಸಿದ. ೩. ನಿಜವಾದ : ಸತ್ಯವಾದ. ೪. ಅನುಭವಸಿದ್ಧವಾದ. ೫. ಚೆನ್ನಾಗಿ ತಿಳಿದ ; ಸುಪ್ರಸಿದ್ಧವಾದ: ಯತಿಯೆಂಬುದುಸಿರ್ವ ತಾಣಂ . . . ಸತತಂ ಛಂದೋವಿದಿತಪ್ರತೀತ ಶಾಸ್ತ್ರೋಕ್ತಮಾರ್ಗದಿಂದಱಿವುದಿದಂ (ಕವಿರಾ. ೦-೭೦) ; ಚತುರಂಗಸ್ತನ ವಿನುತಂ ಪ್ರತೀತನಯವತ್ಸವತ್ಸಲಂ . . . ಗೋಮಂಡಲಮಾಕ್ಷಿತಿಪತಿ ಗೋರುತೆ ಕಱಿವುದಿರುಳುಂ ಪಗಲುಂ (ಸಂದ್ರಪು. ೭-೩೬). ೬. ತೃಪ್ತನಾದ; ಸಂತುಷ್ಟ: ಅತ್ಯಂತಪ್ರಿಯಂ ಪ್ರತೀತಸ್ವಾಂತಂ ನೃಪನೆಟ್ಟು ಸಿಂಹವಿಷ್ಟರದಿಂದ . . . ಮಚ್ಚುಗೊಟ್ಟುಂ (ಶಾಂತಿಪು. ೦-೬೨). (ನಾ). ೭. ಹೆಸರುವಾಸಿಯಾದುದು ; ಪ್ರಸಿದ್ಧವಾದುದು: ಇಂತಿವಱ ತೋರ್ಕೆಯಿಂ ಗರ್ಭದರ್ಭಕನಳುರ್ಕೆಯುಮದಟುಮಖಿಲಜನ ಪ್ರತೀತಮಾಗೆ (ಶಂರಾಮಾ. ೧೦-೦೪೪ಪ); ಆಗುಂಬೆಯಿಂದ ಕಾಣುವ ಸೂರ್ಯಾಸ್ತಮಯವು ಎಷ್ಟು ಪ್ರತೀತವೋ ಅದರ ಕಾಡುಗಳೂ ಅಷ್ಟೇ (ಹಸುಹೂ. ೨೩೦). ೮. ಹೆಸರುವಾಸಿಯಾದವನು ; ಪ್ರಸಿದ್ಧನಾದವನು : "ಪ್ರತೀತಃ, ಪ್ರಥಿತಃ, ಖ್ಯಾತಃ, ವಿತ್ತಃ, ವಿಜ್ಞಾತಃ, ವಿಶ್ರುತಃ — ೬ ಧನಾಧಿಗಳಿಂದ ಪ್ರಸಿದ್ಧನಾದವನ ಪೆಸರು" (ಸಿದ್ಧಾಂತಿ. ೩೨೫). ೯. ತಿಳಿವಳಿಕೆಗೆ ಬಂದುದು; ಅರಿವಾದುದು. ೧೦. ತೃಪ್ತನಾದವನು ; ಸಂತುಷ್ಟನಾದವನು. [ಸಂ.]

ಪ್ರತೀತಿ (ನಾ). ೧. ಎದುರಾಗಿ ಹೋಗುವುದು ; ಅಭಿಮುಖಗಮನ. ೨. ಸ್ಪಷ್ಟವಾದ ತಿಳಿವಳಿಕೆ; ಪರಿಜ್ಞಾನ: ಮಾನಿತಪದಮಂ ಪದಸಂಧಾನಮನರ್ಥಪ್ರತೀತಿಯಂ ಕವಿಹೃದಯಸ್ಥಾನಮನಱಿದೋದದ ಕಣ್ಬೇನೆಯ ಕರಡಿಯವೊಲೂಳ್ದಪಂ ವಾಚಕನೇ (ಲಂದೋಂಬು. ೦-೩೦ ಅಡಿಪದ್ಯ); ನಿಮ್ಮನ್ನರಪ್ಪ ನಿಶಿತಮತಿಗಳ್ಗೆ ಪಂಚರಾತ್ರಿಯೊಳೆ ಪ್ರತೀತಿಯಕ್ಕುಂ (ಸುಕುಮಾ. ೩-೩೭ ಪ); ದೇವಸಮಾನವಾದ ಸಹಾಯಭೂತಿ ಅನುಕಂಪಗಳೂ ಅವುಗಳಲ್ಲಿ ತುಂಬಿರುವುದರಿಂದ ಕವಿಹೃದಯದ ಪ್ರತೀತಿಯು ಹೆಜ್ಜೆಹೆಜ್ಜೆಗೂ ಬರುತ್ತಿರುವುದು (ಪ್ರಬಂಧ. ೭೮). ೩. ಪ್ರಸಿದ್ಧಿ ; ಖ್ಯಾತಿ : ಪ್ರತಿಭಾವತ್ವಮುಮಕೃತಕ ಚತುರತೆಯುಂ ಪರಮಬುಧಜನೋಪಾಸನಮುಂ ಶ್ರುತಪರಿಚಯಮುಂ ತರ್ಕುಂ ಪ್ರತೀತಿಯಂ ವಾಗ್ವಿದಗ್ಧತಾನಿಪುಣತೆಯೊಳ್ (ಕವಿರಾ. ೦-೦೦). ೪. ನಂಬಿಕೆ ; ವಿಶ್ವಾಸ : "ಪ್ರತೀತಿಃ, ಪ್ರತ್ಯಯಃ, ಶ್ರದ್ಧಾ — ಈ ನಂಬುಗೆ" (ಹಲಾಯು. ೧೨೯-೯೫) ; ನೀಲಮ್ಮನೇ ರಚಿಸಿದವುಗಳೆಂದು ಪ್ರತೀತಿಯಿರುವ ಇನ್ನೂ ಕೆಲವು ವಚನಗಳು ಸಿದ್ಧರಾಮನನ್ನು ಕುರಿತು ಹೇಳಿದವುಗಳು ಇವೆ (ಕರ್ನಾಳ. ೦೨೬); ಮೊದಲನೆಯ ಸುಕುಮಾರಸ್ವಾಮಿಯ ಕಥೆಯನ್ನು ನೋಡಿದರೆ ಈ ಮಾತಿನ ಪ್ರತೀತಿಯಾಗುತ್ತದೆ (ಕಸಾಸ. ೭೨). ೫. ಕರ್ಣಪರಂಪರೆಯಿಂದ ಬಂದಿರುವ ಸಂಗತಿ ; ಜನಶ್ರುತಿ ; ಜನಜನಿತವಾದ ವೃತ್ತಾಂತ : ಗಾಂಧರ್ವವಿಧಿಯಿಂದೆ ಮದುವೆ ನಿಲೆ, ಬಭ್ರುವಾಹನಜನನಮಾಯ್ತೆಂದು ಕರ್ಣಪ್ರತೀತಿಯಿದೆ (ಕಪ್ರಾಂಗ. ೬೩-೧೯೯೯); ಸೋಲಿಗಯ್ಯ ಎಂಬುವನು ಸೋಲಿಗರ ಮೂಲಪುರುಷನೆಂಬ ಪ್ರತೀತಿಯಿದೆ (ದ್ರಾವಿವಿ. ೪೦೦). ೬. ಸಂತೋಷ ; ಆನಂದ : ಕಾಟ್ಟುರಮಾಗೆ ಕಾವ್ಯರಸಂ ಅರ್ಥಮುಮಕ್ಕರಮುಂ ಪ್ರತೀತಿಯಂ ಮಾಟ್ಟುನೆಗಂ (ಕಸುದ. ೬೬ ಪ್ರಯೋ). ೭. ಮನ್ನಣೆ: ಗೌರವ. ೮. ವರ್ತಮಾನ ; ಸಮಾಚಾರ : ಈ ತಿಂಗಳ ಕೊನೆಯಲ್ಲಿ ನಮ್ಮ ರಾಜ್ಯಕ್ಕೆ ರಾಷ್ಟ್ರಪತಿಯವರು ಬರುವರೆಂಬ ಪ್ರತೀತಿ ಇದೆ (ಕೂಧಿ). ೯. [ವೇದಾಂತ]ಪ್ರತ್ಯಕ್ಷಾದಿ ಪ್ರಮಾಣಗಳಿಂದ ಉಂಟಾಗುವ ಜ್ಞಾನ : ಇಂತಹ ಸತ್ತ್ವವಿಲ್ಲದಿರುವುದು ಅಸತ್ಪದಾರ್ಥ. ಇದಕ್ಕೆ ಪ್ರಮಾಣಸಂಬಂಧವಿಲ್ಲ . . . ಪ್ರತೀತಿಯೆಂಬ ಪ್ರಮಾಣಜ್ಞಾನ ಗೋಚರವಲ್ಲ (ಹಿಂದಸಾ. ೦೯೯). [ಸಂ.]

ಪ್ರತೀಪ (ಗು). ೧. ಪ್ರವಾಹಕ್ಕೆ ವಿರುದ್ಧವಾಗಿರುವ. ೨. ಪ್ರತಿಕೂಲವಾದ ; ವಿರುದ್ಧವಾದ. ೩. ಎದುರುಪಕ್ಷದ ; ಪ್ರತಿಪಕ್ಷದ. (ನಾ). ೪. ಪ್ರತಿಕೂಲವಾದುದು ; ವಿರುದ್ಧವಾದುದು : "ಪ್ರತಿಕೂಲಂ, ಪ್ರತಿಲೋಮಂ, ಪ್ರತೀಪಂ, ಪ್ರಸವ್ಯಂ — ಈ ೪ ಪ್ರತಿಕೂಲಂ" (ಹಲಾಯು. ೦೨೨-೫೮). ೫. [ಕಾವ್ಯವಿಶಾ] ಒಂದು ಅರ್ಥಾಲಂಕಾರ : ವರ್ಣನೀಯವಾದ ವಸ್ತುವಿಗೆ ಅಂದರೆ ಉಪಮೇಯಕ್ಕೆ ಕನಿಕರವನ್ನಾಗಲೀ ತಿರಸ್ಕಾರವನ್ನಾಗಲೀ ತೋರಿಸುವುದು ; ೯ ಇದರಲ್ಲಿ ಐದು ಬಗೆಗಳಿವೆ. ೧. ಪ್ರಸಿದ್ಧವಾದ ಉಪಮಾನವಸ್ತುವನ್ನು ಉಪಮೇಯವನ್ನಾಗಿ ಮಾಡಿ ವರ್ಣಿಸುವುದು. ೨. ಉಪಮಾನವಸ್ತುವಿದೆಯೆಂದು ಉಪಮೇಯವನ್ನು ಕಡೆಗಣಿಸಿ ಹೇಳುವುದು. ೩. ವರ್ಣಿಸುವ ವಸ್ತುವಿನ ಅತಿಶಯದಿಂದ ಉಪಮಾನವಸ್ತುವಿಗೆ ಅನಾದರಣೆ ಮಾಡುವುದು. ೪. ವರ್ಣಿಸುವ ವಸ್ತುವಿಗೆ ಅಂದರೆ ಉಪಮೇಯಕ್ಕೆ ಉಪಮಾನವಸ್ತು ಯೋಗ್ಯವಲ್ಲವೆಂದು ಹೇಳುವುದು. ೫. ವರ್ಣಿಸುವ ವಸ್ತುವಿನಿಂದಲೇ ಬೇಕಾದ ಕೆಲಸವಾಗುವುದರಿಂದ ಉಪಮಾನವಸ್ತುವೇತಕ್ಕೆಂದು ಹೇಳುವುದು : ಅನುಕಂಪೆಯಕ್ಕೆ ಮೇಣ್ ಕುತ್ಸನಮುಪಮೇಯಸ್ಥಿತಂ ಪ್ರತೀಪಂ (ಕಾಪ್ಯಾಪ. ೭೦೭); ಪ್ರಸಿದ್ಧಮಾದುಪಮಾನವಸ್ತುವಂ ಉಪಮೇಯಂಗೆಯ್ದು ಪೇಟಿಯದು ಪ್ರತೀಪಂ (ಅಪ್ರತಿ. ೩೯-೦೭); ಸಂಗತಮಾಗಲ್ಕುಪಮೆಗೆ ಮಂಗಳಮೂರ್ತಿ ಪ್ರತೀಪಮುಪಮೇಯತೆ ತಾಂ (ಪರಸ. ೦೫-೦೩). [ಸಂ.]

ಪ್ರತೀಪದರ್ಶಿನಿ (ನಾ). ಹೆಂಗಸಂ ; ಸ್ತ್ರೀ : "ರಾಮಾ . . . ಪ್ರತೀಪದರ್ಶಿನೀ, ವಧೂಃ, ವಶಾ, ಯುವತಿಃ—ಈ ೨೮ ಸ್ತ್ರೀಯರ್" (ಹಲಾಯು. ೬೯-೩೨೮). [ಸಂ. ಪ್ರತೀಪದರ್ಶಿನೀ]

ಪ್ರತೀಪಾಲಂಕಾರ (ನಾ). = ಪ್ರತೀಪ ೫ : ಪ್ರತೀಪಾಲಂಕಾರಮಯ್ದುಂ ತೆಱಂ (ಅಶ್ರತಿ. ೩೯-೦೩) ; ಉಪಮಾನವೆಂದು ಸುಪ್ರಸಿದ್ಧವಾಗಿರುವ ವಸ್ತುವನ್ನು ಉಪಮೇಯವಾಗಿ ಉಪಯೋಗಿಸುವುದು 'ಪ್ರತೀಪಾಲಂಕಾರ' (ಕೃಪಿಡಿ. ೨೫೯). [ಸಂ.]

ಪ್ರತೀಯಮಾನ (ಗು). ೧. ತೋರುವ ; ಕಾಣುವ ; ಪ್ರಕಟವಾಗುವ : ಅಂತವರೋಧಪರಿಚಾರಿಕಾಚತುರವಿಳಾಸಿನೀಪ್ರತೀಯಮಾನಶೋಭಾವಿಭವನಪ್ಪಕಳಂಕಾಚಾರಸಾರನಪ್ಪವಜ್ರಾಯುಧನೆರಡುಂ ಕೆಲದೊಳಂ . . . ಬಂದರ್ ಕೆಲರುಂ ಯೋಷಿಜ್ಜನಂ (ಶಾಂತಿಪು. ೬-೨೨ ಪ). (ನಾ). ೨. [ಕಾವ್ಯಮೀ] ವಾಚ್ಯಾರ್ಥ ಮತ್ತು ಲಕ್ಷ್ಯಾರ್ಥಕ್ಕಿಂತ ಬೇರೆಯಾದ ವ್ಯಂಗ್ಯಾರ್ಥ ; ವಾಚ್ಯವಾಗಿ ತೋರದಿದ್ದರೂ ಪ್ರಕರಣಾದಿ ಪರ್ಯಾಲೋಚನೆಯಿಂದ ತೋರುವ ಅರ್ಥವಿಶೇಷ ; ಧ್ವನಿ : "ವಾಚ್ಯ" ವಾದುದಕ್ಕಿಂತಲೂ ಬೇರೆಯಾದ "ಪ್ರತೀಯಮಾನ" ವೆನಿಸುವ ವಸ್ತುವು ಮಹಾಕವಿಗಳ ವಾಣಿಗಳಲ್ಲಿ ಉಂಟು (ರೃಷ್ಯಾಲೋ. ೦೩) ; ವಾಕ್ಯದಿಂದ ತಿಳಿದುಬರುವ ವಕ್ತೃವಿನ ಒಟ್ಟು ಅಭಿಪ್ರಾಯಕ್ಕೇ ಇಲ್ಲಿ ತಾತ್ಪರ್ಯವೆಂದು ಹೆಸರು. ಇದು ಅಭಿಧೀಯಮಾನ, ಪ್ರತೀಯಮಾನ, ಧ್ವನಿರೂಪ ಎಂದು ಮೂರು ಬಗೆ . . . ಪ್ರತೀಯಮಾನಕ್ಕೂ ಧ್ವನಿರೂಪಕ್ಕೂ ವ್ಯತ್ಯಾಸವೇನೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ (ಭಾರಮಾ. ೯೯). [ಸಂ.]

ಪ್ರತೀರ (ನಾ). ಅಂಚು ; ದಡ ; ದಂಡೆ : "ಕೂಲಂ, ರೋಧಃ, ತೀರಂ, ಪ್ರತೀರಂ, ತಟಂ—೫ ದಡದ ಹೆಸರುಗಳು" (ಸಿದ್ಧಾಂತಿ. ೭೭). [ಸಂ.]

ಪ್ರತೀವಾಪ (ನಾ). ೧. ಸೇರಿಸುವುದು ; ಕೂಡಿಸುವುದು ; ಬೆರಸುವುದು. ೨. (ಹಾಲಿಗೆ) ಹೆಪ್ಪು ಹಾಕುವುದು : "ಅತಂಚನಂ . . . ಪ್ರತೀವಾಪಕ್ಕೆ ಹೆಸರು. ಅಂದರೆ ಹೆಪ್ಪಿಡುವಿಕೆ" (ಸಿದ್ಧಾಂತಿ. ೪೦೨). ೩. ಚಿನ್ನ ಮೊದಲಾದ ಲೋಹಗಳನ್ನು ಭಸ್ಮಮಾಡುವುದು. ೪. ಒಂದು ಬಗೆಯ ರೋಗ ; ಪ್ಲೇಗು. [ಸಂ.]

ಪ್ರತೀಷ್ಟ (ನಾ). ಒಪ್ಪಿಕೊಂಡುದು; ಅಂಗೀಕರಿಸಿದುದು : "ಪ್ರತೀಷ್ಟಂ, ಪ್ರತಿನೋದ್ಧೃತಂ — ಈ ೨ ಕೊಟ್ಟು ಆಗುಮಾಡಲ್ಪಟ್ಟುದು" (ಹಲಾಯು. ೦೨೯-೯೬). [ಸಂ.]

ಪ್ರತೀಹಾರ (ನಾ). ೧. ಹಿಂದಕ್ಕೆ ಅಟ್ಟುವುದು; ಹಿಮ್ಮೆಟ್ಟಿಸುವುದು. ೨. ಬಾಗಿಲು; ದ್ವಾರ : "ದ್ವಾರಮುಂ ಪ್ರತೀಹಾರಮೆಂಬುದಕ್ಕುಂ" (ವಸ್ತುಕೋ. ೦೩೯-೦೨೫). ೩. ಬಾಗಿಲು ಕಾಯುವವನು ; ದ್ವಾರಪಾಲಕ : "ಪ್ರತೀಹಾರಃ, ದ್ವಾರಪಾಲಃ, ದ್ವಾರ್ಸ್ಥಃ, ದ್ವಾರ್ಸ್ಥಿತಃ, ದರ್ಶಕಃ—೫ ಬಾಗಿಲುಕಾಯುವ ಜವಾನನ ಹೆಸರುಗಳು" (ಸಿದ್ಧಾಂತಿ. ೨೩೬). ೪. ಕಣ್ಕಟ್ಟುವಿದ್ಯೆಯನ್ನು ಬಲ್ಲವನು ; ಗಾರುಡಿಗ. ೫. ಕಣ್ಕಟ್ಟುವಿದ್ಯೆ ; ಗಾರುಡಿ. [ಸಂ.]

ಪ್ರತೀಹಾರಕ (ನಾ). ೧. ಬಾಗಿಲು ಕಾಯುವವನು ; ದ್ವಾರಪಾಲಕ : ಪ್ರತೀಹಾರಕತರ್ಜನಂ ಪರವಿನಂ ಪರೆದತ್ತು ನರೇಂದ್ರನೋಲಗಂ (ಮಲ್ಲಿಪು. ೬-೭೨); ಮಸ್ತಕಾವೇಷ್ಟಿತೋದಂಚತ್ಪೀತಪಟಂ ಪ್ರಸನ್ನವದನಂ ಬಂದಂ ಪ್ರತೀಹಾರಕಂ (ರಾಜಶೇ. ೫-೨೩). ೨. = ಪ್ರತೀಹಾರ ೪. [ಸಂ.]

ಪ್ರತೀಹಾರಕಿ (ನಾ). ಬಾಗಿಲು ಕಾಯುವವಳು ; ದ್ವಾರಪಾಲಿಕೆ : ತಚ್ಚರಣಸರಸಿರುಹಯುಗದೊಳ್ ಸರಭಸಮಿದಿರೆಱಗಿದರ್ ಪ್ರತೀಹಾರಕಿಯರ್ (ಕಾದಂಪೂ. ೯೯೬). [ಸಂ. ಪ್ರತೀಹಾರಕೀ]

ಪ್ರತೀಹಾರಿ (ನಾ). ೧. = ಪ್ರತೀಹಾರಕಿ : ಒಯ್ಯನೆ ಬರುತ್ತಿರ್ದಳ್ ಪ್ರತೀಹಾರಿ ಭೂವಳಯಾಧೀಶ್ವರನಲ್ಲಿಗಾಗಿ ನಯದಿಂ ವಿಜ್ಞಾಪನೋತ್ಕಂಠೆಯಿಂ (ಕಾದಂಪೂ. ೨೪). ೨. ಬಾಗಿಲು ಕಾಯುವವನು ; ದ್ವಾರಪಾಲಕ: ರಾಜನು ಪ್ರತೀಹಾರಿ ವಿದೂಷಕರೊಡನೆ ಬರುವನು (ಶಾಕುಂಶ. ೬೨-೯). [ಸಂ. ಪ್ರತೀಹಾರೀ]

ಪ್ರತೀಹಾರಿಕೆ (ನಾ). = ಪ್ರತೀಹಾರಕಿ : ಆಗಳರಸನು ತತ್ಪ್ರತೀಹಾರಿಕಾಜನೋಪದಿಶ್ಯಮಾನಮಾರ್ಗನಾಗಿ ಪೊಕ್ಕು ನೋಟ್ಟನ್ನೆಗಂ (ಕಾದಂಪೂ. ೯೯೭). [ಸಂ. ಪ್ರತೀಹಾರಿಕಾ]

ಪ್ರತೀಹಾಸ (ನಾ). = ಪ್ರತಿಹಾಸ. [ಸಂ.]

ಪ್ರತುಮೆ 'ಪಡಿಮೆ' ನೋ.

ಪ್ರತೂರ್ಣ (ನಾ). ವೇಗವುಳ್ಳವನು : "ಪ್ರತೂರ್ಣಃ, ತ್ವರಿತಃ, ತೂರ್ಣಃ, ಉತ್ಸುಕಃ, ಪ್ರಸೃತಂ — ಈ ೫ ಚಿಚ್ಚರಿಗಂ" (ಹಲಾಯು. ೫೬-೧೯೬). [ಸಂ.]

ಪ್ರತೋದ (ನಾ). ೧. ಹೂಡಿದ ಎತ್ತು, ಕುದುರೆ ಮೊದಲಾದುವನ್ನು ನಡೆಸುವ, ಉದ್ದವಾವ ದಾರವುಳ್ಳ ಕೋಲು; ಚಾವಟಿ. ೨. ತಿವಿಗೋಲು; ಚುಚ್ಚುಗೋಲು : "ಪ್ರತೋದಃ, ವ್ರಾಜನಂ, ತೋತ್ರಂ — ಈ ೩ ಮುಳುಹುಗೋಲ್" (ಹಲಾಯು. ೯೪-೪೨೩). ೩. ಅಂಕುಶ. [ಸಂ.]

ಪ್ರತೋಲಿ, ಪ್ರತೋಳಿ (ನಾ). ೧. ನಗರದ ಮುಖ್ಯರಸ್ತೆ ; ರಾಜಮಾರ್ಗ : ಪಂಚರತ್ನತೋರಣದ್ಯುತಿಸಮುದ್ಯೋದಿತಕನಕಪ್ರಾಕಾರ ಪ್ರತೋಲಿದ್ವಾರಮನೆಯ್ದೆವಂದಾಗಳ್ (ಅದಿಪು. ೦೦-೨೩ ಪ). ಪ್ರತೋಳಿ: ೧. "ಪ್ರತೋಳಿ, ವಿಶಿಖಾ, ರಥ್ಯಾ — ಈ ೩ ಬೀದಿ" (ಹಲಾಯು. ೯೬-೦೩೪); ನಿರಂತರಾಟ್ಟಾಳಕಪ್ರತೋಳೀಂದ್ರಕೋಶದೇವಪಥಸನಾಥಂಗಳುಂ (ಅದಿಪು. ೦೩-೫೭ ಪ); ಅಂಶುದ್ಯಾನಪ್ರತೋಳೀದ್ವಾರದಿಂ ಪೊಱಮಟ್ಟು ಸೌಜನ್ಯಕಂದಾಂಕುರಂ ರಾಜಭವನಾಭಿಮುಖನಪ್ಪುದುಂ (ಶಾಂತಿಪು. ೬-೫೭ ಪ). ೨. ಚಾವಡಿಯ ಜಗಲಿ : "ರಥ್ಯಾ, ಪ್ರತೋಳಿಃ, ವಿಶಿಖಾ — ೩ ಊರೊಳಗಿರುವ ಮುಖ್ಯವಾದ ಚಾವಡಿಜಗಲಿ, ಬೀದಿಜಗುಲಿ" (ಸಿದ್ಧಾಂತಿ. ೯೯). [ಸಂ. ಪ್ರತೋಲೀ]

ಪ್ರತೋಳಿ 'ಪ್ರತೋಲಿ' ನೋ.

ಪ್ರತೋಳಿಕೆ (ನಾ). = ಪ್ರತೋಲಿ ೧ : ಅನಂತರಂ ಬಂಧುರಸಿಂಧುರಸ್ಕಂಧದಿನಿಟಿದು ವನಪ್ರತೋಳಿಕಾದ್ವಾರಮಂ ಪೊಕ್ಕು (ಸಂಪ್ರಪು. ೬-೬೩ ಪ); ಪ್ರತೋಳಿಕಾಯುಕ್ತಪುರಮಧ್ಯದಲ್ಲಿ ಎಡೆಯಾಡುತ್ತಿರ್ಪ ನಾರೀಜನದ ವಿಪುಳ ಭೂಷಾಂಶುತೋಯಪ್ರತಾನಂ ಗಡಣಂಗೊಂಡೆತ್ತಲುಂ ತೀವಿರೆ (ಹಾಲಾಸ್ಯ. ೦-೪-೭೩ ಪ). [ಸಂ. ಪ್ರತೋಲಿಕಾ]

ಪ್ರತ್ನ (ಗು). ೧. ಹಳೆಯ ; ಪ್ರಾಚೀನ ; ಪುರಾತನ : ಪ್ರತ್ನಕವಿಪ್ರವರರ್ ಮೇಣ್ ನೂತ್ನಕವಿಪ್ರವರರಕ್ಕೆ (ಅಪಿಪು. ೯-೯೨); ನರನ ಪ್ರಾಕ್ತನಕೆ ನೂತನಸತ್ತ್ವ ಬೆರೆತು ಪರಿವುದೀ ವಿಶ್ವಜೀವನಲಹರಿಯನವರತ ಚಿರಪ್ರತ್ನನೂತ್ನಜಗ (ಮಂಕುಕ. ೦೨೯). (ನಾ). ೨. ಹಳೆಯದು ; ಪುರಾತನವಾದುದು : "ಜೀರ್ಣಂ, ಜರತ್, ಪುರಾಣಂ, ಪ್ರತ್ನಂ, ಪ್ರತನಂ, ಪುರಾತನಂ— ಈ ೬ ಪ(ಹ)ಟದು" (ಹಲಾಯು. ೦೦೬-೨೬). ೩. [ಛಂದ] ಸಂಸ್ಕೃತದ ಒಂದಂ ವೃತ್ತ. [ಸಂ.]

ಪ್ರತ್ಯಂಗ (ನಾ). ಶರೀರದ ಬೇರೆ ಬೇರೆ ಭಾಗ,— ಪ್ರತಿಯೊಂದು ಅಂಗ : ಕೊರಲುಂ ತೋಳ್ ಬೆನ್ ಪೊಡೆ ತೊಡೆ ಕರಮೆಸೆವೀ ಜಂಘಯೆಂಬಿವಾಱುಂ ಭೇದಂ ಉರು ಮಣಿಬಂಧಂ ಮೊಳಕಾಲ್ ವಿರಚಿಪಲಂಕಾರಮಿಂತು ಪ್ರತ್ಯಂಗಂಗಳ್ (ಲಾಸ್ಯರಂ. ೨-೦೦೩); ಅಂಗ ಪ್ರತ್ಯಂಗ ಉಪಾಂಗವೆಂಬ ಆಂಗಿಕದಲ್ಲಿ ರಸಭಾವಂ ತುಳ್ಕುವಂತೆ ಗೀತ ಶಬ್ದ ನೇಮ ಉರುಪು ಪದ ಪಟ್ಟಿ ದರುಗಳಂ ತೋಱಿಸುವ . . . ಪಾತ್ರಂಗಳಿಂ (ದಪಾಪ. ೨-೦೦ ಪ); ಪುರುಷನ ಶರೀರದಲ್ಲಿರುವ ವೀರ್ಯವೇ ಗರ್ಭ: ಈ

ವೀರ್ಯವು ಶರೀರದ ಪ್ರತ್ಯಂಗಗಳಿಂದಲೂ ಸ್ರವಿಸಿ ಬಂದುದು (ಕೀಣಾತ್ಮ. ೦೬೦). [ಸಂ.]

ಪ್ರತ್ಯಂಚ (ಗು). ೧. ಅಭಿಮುಖವಾದ ; ಎದುರಿಗಿರುವ. ೨. ಹಿಂದಿರುವ; ಹಿಂಬದಿಯಲ್ಲಿರುವ. ೩. ಹಿಂತಿರುಗಿದ ; ವಿಮುಖವಾದ. ೪. ಪಶ್ಚಿಮಕ್ಕೆ ಸಂಬಂಧಿಸಿದ ; ಪಡುವಣ. ೫. ಸಮಾನವಾದ ; ಸದೃಶವಾದ. ೬. ಒಳಗಿನ ; ಅಂತಃಸ್ಥಿತವಾದ. (ನಾ). ೭. ಪಶ್ಚಿಮದಿಕ್ಕು. ೮. ಪಶ್ಚಿಮದಿಕ್ಕಿಗೆ ಸಂಬಂಧಿಸಿದುದು. ೯. ಪಶ್ಚಿಮದೇಶ ; ಪಾಶ್ಚಾತ್ಯದೇಶ. ೧೦. ಒಳಗಿರುವುದು ; ಅಂತಃಸ್ಥಿತವಾದುದು : ಮಹಾಂತಂ, ಪ್ರಾಂಚಂ, ಪ್ರತ್ಯಂಚಂ (ಕಪ್ಪಾಸು. ೦೩೬ ಪ್ರಯೋ). ೧೧. ಭವಿಷ್ಯತ್ಕಾಲ. ೧೨. ಜೀವಾತ್ಮ. [ಸಂ. ಪ್ರತ್ಯಂಚ್]

ಪ್ರತ್ಯಂತ (ಗು). ೧. ಗಡಿಯಲ್ಲಿರುವ ; ಎಲ್ಲೆಯಲ್ಲಿರುವ : ಭವತ್ಪ್ರತಾಪಕಥೆಯಂ ಪ್ರತ್ಯಂತಭೂಚಕ್ರದೊಳ್ ಬಿಡೆ ಕೇಳ್ವಾಗ್ರಹಮಾಯ್ತು (ಪುಷ್ಪಪು. ೩-೬). 'ಪ್ರತ್ಯಂತಭೂಪಾಲಕ' ಪರಾ. ೨. ಹತ್ತಿರದಲ್ಲಿರುವ ; ಸಮೀಪದಲ್ಲಿರುವ : ಪ್ರತ್ಯಂತದೇಶಭೂಭೃದಪತ್ಯರನೆಟ್ಟಟ್ಟಿ ಪುಗಿಸಿ ಕಾಂತಾರನಗೋಪತ್ಯಕಮಂ ಕೌಸಲ್ಯಾಪತ್ಯಂಗೋಲಗಿಪೆನವರ ಹರಿವಿಷ್ಟರಮಂ (ಶಂಕಾಮಾ. ೬-೦೫೪). (ನಾ). ೩. ಗಡಿ ; ಎಲ್ಲೆ; ಸರಹದ್ದು. ೪. ಗಡಿಯಲ್ಲಿರುವ ದೇಶ ; ಗಡಿನಾಡು : ಪೊಂಗುವ ಮಲೆಪರ ಮಲೆಗಳಡಂಗಂ ಕಣ್ಮಲೆವ ಮಂಡಲಂಗಳ್ ಪ್ರತ್ಯಂತಂಗಳಿನಲೊಳವೆ ಪಾಂಡವರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ (ಪಂಪಭಾ. ೯-೩೯). ೫. ಮ್ಲೇಚ್ಛದೇಶ : "ಮ್ಲೇಚ್ಛದೇಶಃ, ಪ್ರತ್ಯಂತಃ—ಭಾರತವರುಷದ ತುದಿಯಲ್ಲಿರುವ ಕಾಮರೂಪಾದಿ ದೇಶದ ಹೆಸರು" (ನಿಂಗಾಂತಿ. ೯೯). ೬. ಹತ್ತಿರ; ಸಮೀಪ : ಸವಿಧಂ ದೂರಂ ಪ್ರತ್ಯಂತವಿದೆನ್ನದೆ ಭೂತ ಭಾವಿ ಭವದಖಿಳ ಪದಾರ್ಥವನೊರ್ಮೆಯೆ ಕರಣವನಾಸೆವಡೆಯದೆ ನೆಗಟ್ಟತ್ತಗಾಧಬೋಧಂ ಜನನೊಳ್ (ಪುಷ್ಪಪು. ೦೯-೯೦); ಘೋರಾಟವಿಯ ದೂರದಿಂ, ಗಿರಿಭುಜ ಪ್ರತ್ಯಂತದಿಂ ಕರೆದ ಲಕ್ಷ್ಮಣನ ಕೊರಳುಲಿಯನಾಲಿಸಿವನಂತರಂ . . . ಸಲಿಲಕೇಳೀನಿರತರಾಯಿರ್ವರುಂ ಚಿಚ್ಚರಂ ದಡಕಡರಿದರ್ (ಶ್ರೀರಾಮಾ. ೦೩೫-೬೬). [ಸಂ.]

ಪ್ರತ್ಯಂತಭೂಪಾಲಕ (ನಾ). ನೆರೆನಾಡಿನ ದೊರೆ ; ಗಡಿಯಾಚೆಯ ನಾಡಿನ ರಾಜ : ಬಲವತ್ಪ್ರತ್ಯಂತಭೂಪಾಲಕನಿಕರಮಹಾವಾಹಿನೀವಾಹಿನೀಸಂಕುಲ ಮತ್ಯುತ್ಸಾಹದಿಂದ ಪುಗೆ ದೆಸೆದೆಸೆಯಂ (ಆದಿಪು. ೦೩-೪೫). [ಸಂ.]

ಪ್ರತ್ಯಂತವಾಸ (ನಾ). ಸರಹದ್ದಿನ ಸ್ಥಳ; ಗಡಿಪ್ರದೇಶ: ತೀವಿದ ಕೆಜ್ಜೆ ನಡುಬತ್ತಿದುದಂ ಕಂಡುದಱಿನಯ್ದೆನೆಯ ಕಾಲದ ಕಡೆಯೊಳು ಪ್ರತ್ಯಂತವಾಸಂಗಳೊಳಲ್ಲದೆ ನಡುನಾಡೊಳಱನಾಗದು (ಶಾಪುಂಪು. ೫೩). [ಸಂ.]

ಪ್ರತ್ಯಂತವಾಸಿ (ನಾ). ಗಡಿಪ್ರದೇಶದಲ್ಲಿ ವಾಸಿಸುವವನು: ನಿಜಾಧೀಶ್ವರ ರಾಜ್ಞೆಯಿಂ ಪ್ರತ್ಯಂತವಾಸಿಗಳಾಗಿ ಮಲೆದ ರಿಪುನ್ರಿಪರ ಸಮಿತಿಯ ದರ್ಪ್ಪಮಂ ಪೊಡರ್ಪ್ಪುಮನಡಂಗಿಸಿ (ಶಾಂದೇಡ್. ೩-೨೨ ಪ; 1047); ಒಂದು ದಿನಂ ಪ್ರತ್ಯಂತವಾಸಿಗಳೆತ್ತಿ ಬಂದು ನಾಡ ಗಡಿಗಳಂ ಕೊಂಡು ನಂದನನಂ ಸಮರಕ್ಕೆ ಬರವೇಳ್ದುದಂ ಸಕಟಾಳ ಮಂತ್ರಿ ಪೇಳೆ (ಕಗವಿ. ೬೯ ರಾಜಾವಳೀಕಥೆ). [ಸಂ. ಪ್ರತ್ಯಂತವಾಸಿನ್]

ಪ್ರತ್ಯಂತಸೀಮೆ (ನಾ). ಅಕ್ಕಪಕ್ಕದ ಪ್ರದೇಶ ; ಹತ್ತಿರದ ಸ್ಥಳ : ಬಹುದಿನಗಳಾಶೆ ಸಿದ್ಧಿಸಿತೆಂದು ಸಡಗರಿಸಿ ಶರಧಿಗುರುದರ್ಶನಕ್ಕೆ ಮುಟ್ಟಿ ಬೆಟ್ಟವನದರ ಪ್ರತ್ಯಂತಸೀಮೆಯನಡರಿದುದು ಸೇನೆ (ಶ್ರೀರಾಮಾ. ೫೪೩-೬೦). [ಸಂ. ಪ್ರತ್ಯಂತಸೀಮಾ]

ಪ್ರತ್ಯಂಬರ (ನಾ). ಸುತ್ತಲೂ ಹಾಕಿರುವ ತೆರೆ : ಸುತ್ತುದೆರೆ : "ಪ್ರತ್ಯಂಬರಂ ಕಾಂಡಪಟಮಪಟಿಯವನಿಕೆಯು ಸುತ್ತುದೆರೆಯಕ್ಕು" (ನುಂಗರಾ. ೬೦-೦೬). [ಸಂ.]

ಪ್ರತ್ಯಕ್ಛ್ರೇಣಿ (ನಾ). ಇಲಿಯಾಲದ ಗಿಡ ; ಇಲಿಕಿವಿಗಿಡ : "ಚಿತ್ರಾ, ಉಪಚಿತ್ರಾ . . . ಪ್ರತ್ಯಕ್ಛ್ರೇಣೀ, ಸುತಶ್ರೇಣೀ, ರಂಡಾ, ಮೂಷಕ ವರ್ಣೀ— ಈ ೧೦ ಎಲಿಯಾಲದ ಮರಕ್ಕೆ ಹೆಸರು" (ನಿಂಗಾಂತಿ. ೦೩೨). [ಸಂ. ಪ್ರತ್ಯಕ್ಛ್ರೇಣೀ]

ಪ್ರತ್ಯಕ್ಪರ್ಣಿ (ನಾ). ಉತ್ತರಣೆ ಗಿಡ : "ಅಪಾಮಾರ್ಗಃ . . . ಪ್ರತ್ಯಕ್ಪರ್ಣೀ, ಕೇಶವಲ್ಲೀ, ಕಿಣಿಹೀ, ಖರಮಂಜರೀ—೮ ಉತ್ತರಣೀ ಗಿಡದ ಹೆಸರುಗಳು" (ನಿಂಗಾಂತಿ. ೦೩೨). [ಸಂ. ಪ್ರತ್ಯಕ್ಪರ್ಣೀ]

ಪ್ರತ್ಯಕ್ಷ (ನಾ). ೧. ಕಣ್ಣಿಗೆ ಕಾಣುವುದು ; ಚಕ್ಷುರಿಂದ್ರಿಯಕ್ಕೆ ಗೋಚರವಾಗುವುದು : ಪದಾರ್ಥಂಗಳೆಲ್ಲಂ ಪ್ರತ್ಯಕ್ಷಂಗಳಲ್ಲದುವಿಲ್ಲ (ಕಾಂತಿಪು. ೬-೦೪೦ ಪ); ಪ್ರತ್ಯಕ್ಷಮಾಗೆ ದಯೆಯಿಂ ಕಾತ್ಯಾಯಿನಿದೇವಿ [ಚಿತ್ರಮತಿದೇವಿ]ಗೆ ತಾನಿತ್ತಳ್ ಪ್ರಸೂನಮಾಲೆಯಂ (ಕುಸುಮಾ. ೦೨-೨೩); ಚಿತ್ರಾಂಗದೆಗೆ ಸಂತಸಂ ಕೈಗಣ್ಮೆದತ್ತು, ಬಹುಕಾಲದಾನಂತರಂ ಪ್ರತ್ಯಕ್ಷವಹುದೆಂದು ಪತಿಯ ಸಂದರ್ಶನಂ (ಜಕ್ರಾಂಗ. ೬೦-೦೯೫೨). ೨. ಸಮರ್ಥನೆ ಮಾಡುವ ಸಾಧನ ; ನಿದರ್ಶನ ; ದೃಷ್ಟಾಂತ : ನಾನು ಮರ್ತ್ಯಲೋಕದ ಹಂಬಲ ಹಱಿದು ನಿನ್ನ ನಂಬಿ ನಚ್ಚಿದೆನೆಂಬುದಕ್ಕೆ ಪ್ರತ್ಯಕ್ಷಮಂ ತೋಱುತಿರ್ಪೆ ನೋಡಯ್ಯ ಲಿಂಗವೆ (ಘನಪ. ೦೨-೦೦). ೩. ಪವಾಡ; ಅತಿಮಾನುಷಕೃತ್ಯ ; ಅದ್ಭುತಕೆಲಸ : ಪರಸಮಯದ ಗರ್ವಮಂ ನಿಲಿಸಿ ಭಕ್ತರಂ ಗೆಲಿಸಿ ಪ್ರತ್ಯಕ್ಷಂಗಳಂ ತೋಱು . . . ಬಿಜಯಂ ಗೆಯ್ಯೆ (ಬಸರ. ೯-೫೯). ೪. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಮತ್ತು ಮನಸ್ಸು ಎಂಬ ಇಂದ್ರಿಯಂಗಳಿಗೆ ಗೋಚರವಾಗುವುದು,-ಅನುಭವವಾಗುವುದು : "ಪ್ರತ್ಯಕ್ಷಂ, ಐಂದ್ರಿಯಕಂ—೨ ಚಕ್ಷುರಾದಿ ಬಹಿರಿಂದ್ರಿಯಂಗಳಿಂದುಂಟಾಗುವ ರೂಪಾದಿ ಸಾಕ್ಷಾತ್ಕಾರಗಳಿಗೂ, ಅಂತಃಕರಣದಿಂದುಂಟಾಗುವ ಸುಖಾದಿ ಸಾಕ್ಷಾತ್ಕಾರಗಳಿಗೂ ಹೆಸರು" (ನಿಂಗಾಂತಿ. ೩೯೩). ೫. ನಿಸ್ಸಂದೇಹವಾದುದು; ಸ್ಪಷ್ಟವಾದುದು. ೬. [ತತ್ತ್ವಶಾ] ಇಂದ್ರಿಯ ಮತ್ತು ವಿಷಯದ ಸಂಬಂಧದಿಂದ ಉಂಟಾಗುವ ಜ್ಞಾನ; ೫ ಆತ್ಮವು ಮನಸ್ಸಿನೊಂದಿಗೆ ಸೇರುತ್ತದೆ. ಮನಸ್ಸು ಇಂದ್ರಿಯದೊಂದಿಗೆ ಸೇರುತ್ತದೆ. ಇಂದ್ರಿಯವು ಗಡಿಗೆ ಮೊದಲಾದ ಪದಾರ್ಥದೊಂದಿಗೆ ಸೇರುತ್ತದೆ. ಬಳಿಕ ಪ್ರತ್ಯಕ್ಷವುಂಟಾಗುತ್ತದೆ ಎಂದು ನ್ಯಾಯಶಾಸ್ತ್ರ ಹೇಳುತ್ತದೆ. ಪ್ರಮಾಣದ ಸಂಖ್ಯೆಯಲ್ಲೂ ಹೇಗೆ ಪ್ರತ್ಯಕ್ಷವುಂಟಾಗುತ್ತದೆ ಎಂಬ ಅಂಶದಲ್ಲೂ ಪ್ರತ್ಯಕ್ಷವು ಎಷ್ಟು ವಿಧ ಎಂಬ ವಿಷಯದಲ್ಲೂ ಬೇರೆ ಬೇರೆ ಶಾಸ್ತ್ರಕಾರರು ಬೇರೆ ಬೇರೆ ಅಭಿಪ್ರಾಯಗಳನ್ನು ತಳೆದಿರುತ್ತಾರೆ : ಆ ವಸ್ತುವಂ ತಿಳಿವ ಪ್ರಮಾಣಂಗಳ್ ಪ್ರತ್ಯಕ್ಷಮೆಂದುಂ ಅನುಮಾನಮೆಂದುಂ ಶಬ್ದಮೆಂದುಂ ಮೂಱುಂತೆಱನಾಗಿರ್ಕುಂ (ಕಕಂ. ೩-೦೬ ಪ) ; ಈ ಸಪ್ತಪದಾರ್ಥಗಳು ಪ್ರತ್ಯಕ್ಷ, ಅನುಮಾನ, ಉಪಮಾನ, ಮತ್ತು ಶಬ್ದವೆಂಬ ಪ್ರಮಾಣಗಳಿಗೆ ಗೋಚರಿಸುವುವು (ಭಾರದ. ೦೨೯).

ಪ್ರತ್ಯಕ್ಷ ಚಾಣಾಕ್ಯ=ಚಾಣಕ್ಯನಂತೆ ನೀತಿಶಾಸ್ತ್ರಪಾರಂಗತನಾಗಿರುವವನು ; ಒಂದು ಬಿರುದು : ಕಾಂಚೀಪುರವರೇಶ್ವರಂ ಪ್ರತ್ಯಕ್ಷಚಾಣಾಕ್ಯನಮೋಘವಾಕ್ಯಂ (ಸೌಇಇ. XX, ೩೯-೦೧; 1064). ಪ್ರತ್ಯಕ್ಷ ಪಾರ್ವತಿ = (ಸೌಂದರ್ಯದಲ್ಲಿ) ಪಾರ್ವತಿಯಂತಿರುವವಳು ; ಒಂದು ಬಿರುದು : ಕಳಹಂಸಯಾನೆ ಕಲಿಕಾಲ ಸರಸ್ವತಿ ಪ್ರತ್ಯಕ್ಷಪಾರ್ವ್ವತಿ ಪರಿವಾರಸಮುದ್ಧರಣೆ . . . ಪಟ್ಟಮಹಾದೇವಿ (ಸೌಇಇ. XX, ೬೦-೬; 1094). ಪ್ರತ್ಯಕ್ಷ ಭೂರಿಶ್ರವ=ಪರಾಕ್ರಮದಲ್ಲಿ ಭೂರಿಶ್ರವನಂತಿರುವವನು ; ಒಂದು ಬಿರುದು : ಸ್ವಸ್ತಿಸಮಧಿಗತ[ಪಂಚಮಹಾಶಬ್ದ]ಮಹಾಸಾಮನ್ತಂ ಪ್ರತ್ಯಕ್ಷ ಭೂರಿಶ್ರವಂ . . . ಶ್ರೀಮದಾಹವಮಲ್ಲದೇವಪಾದಪಂಕೇಜಭ್ರಮರಂ ಶ್ರೀಮತ್ಸೋಭನರಸರ್ (ಶಾಸನ. ೨೩; 991). ಪ್ರತ್ಯಕ್ಷವಾಗು=ಮೈದೋರು;

ಕಣ್ಣಿಗೆ ಕಾಣು : ಸೋಮೇಶ್ವರನೊಸೆದು ನಿನಗಿಲ್ಲಿಯೇ ಪ್ರತ್ಯಕ್ಷವಾದಹನು (ರಸಪು. ೩೩-೦೮) ; ಟಾಂಗಾ ರಿಕ್ಷಾಗಳ ಸೆಳೆಗೊಳಗಾಗದೆ ನಿಂತೆ ತಾಸಿನ ತಪಗೈದೆ ಪ್ರತ್ಯಕ್ಷವಾಯಿತು ಕಡೆಗೊಮ್ಮೆ ಆ ಬಸ್ಸು (ಇಂಜಾತ. ೦೨೩-೩). ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು (ಗಾದೆ). [ಸಂ.]

ಪ್ರತ್ಯಕ್ಷಕಥನ (ನಾ). ೧. ಎದುರಿಗೆ ಹೇಳುವುದು. ೨. [ವ್ಯಾಕ] ಒಬ್ಬರಂ ಹೇಳಿದುದನ್ನು ಅದೇ ರೀತಿಯಲ್ಲಿ ಪುನರಾವೃತ್ತಿ ಮಾಡುವುದು.—ನೇರವಾಗಿ ಹೇಳುವುದಂ : "ಆಡಿದ ಭಾಷಣದ ಮಾತುಗಳನ್ನೇ ಉಪಯೋಗಿಸಿ ಹೇಳುವುದು (ಬೇರೆ ಮಾತುಗಳಲ್ಲಲ್ಲ). ಪ್ರತ್ಯಕ್ಷಕಥನ" (Direct-speech. ಇಂಕನಿ). [ಸಂ.]

ಪ್ರತ್ಯಕ್ಷಜ್ಞಾನ (ನಾ). ೧. ವಸ್ತುವನ್ನು ಸಾಕ್ಷಾತ್ತಾಗಿ ನೋಡುವುದರಿಂದಾಗುವ ಅನುಭವ. ೨. [ಜೈನ] ಇಂದ್ರಿಯ ಮತ್ತು ಮನಸ್ಸುಗಳ ನೆರವಿಲ್ಲದೆ ನೇರವಾಗಿ ಆತ್ಮನಿಗೆ ಉಂಟಾಗುವ ಜ್ಞಾನ : ಅವಧಿ, ಮನಃಪರ್ಯಯ ಮತ್ತು ಕೇವಲಜ್ಞಾನಗಳು ಪ್ರತ್ಯಕ್ಷವೆನಿಸುತ್ತವೆ (ಶೈವಪ. ೨೯೭). [ಸಂ.]

ಪ್ರತ್ಯಕ್ಷಪ್ರಮಾಣ (ನಾ). ೧. ಕಣ್ಣೆದುರಿಗೆ ಕಾಣುವ ಸಾಕ್ಷಿ,—ಪುರಾವೆ; ಸ್ಪಷ್ಟವಾದ ಆಧಾರ : ಪ್ರತ್ಯಕ್ಷಪ್ರಮಾಣಪೂರ್ವಕವಾಗಿ ಸಿಕ್ಕು ಬೀಳುತ್ತಲೇ ಅವನು ರೂಕ್ಷಸ್ವರ ತೆಗೆದು ಹೇಳಿದನು (ಇತ್ಯಕ. ೨೬೨). ೨. = ಪ್ರತ್ಯಕ್ಷ ೪ : ಪಿಷ್ಟೋದಕಗುಡಧಾತಕ್ಯಾದಿಯತ್ತಣಿಂ ಮದಶಕ್ತಿ ಪುಟ್ಟುವಂತೆ ಪುಟ್ಟುಗುಮಾ ಭೂತಂಗಳುಂ ಕಾಯಾಕಾರಪರಿಣತಂಗಳಕ್ಕುಮಿದು ಪ್ರತ್ಯಕ್ಷಪ್ರಮಾಣಸಿದ್ಧಂ (ಶಾಂತಿಪು. ೮-೧೨೬ ಪ). ೩. ಪ್ರತ್ಯಕ್ಷಕ್ಕೆ ಸಾಧನವಾದ ಕಣ್ಣು, ಕಿವಿ ಮೊದಲಾದ ಇಂದ್ರಿಯ : ಪ್ರತ್ಯಕ್ಷಪ್ರಮಾಣವೆಂದರೆ ಸಾಕ್ಷಾತ್ಕಾರವೆಂಬ ಪ್ರಮೆಗೆ ಸಾಧ್ಯವಾಗಿರುವ ಚಕ್ಷುರಾದಿ ಇಂದ್ರಿಯಗಳು (ಹಿಂದಸಾ. ೦೩೬) ; ಘಟಾದಿದರ್ಶನವೆಂಬ ಸಾಕ್ಷಾತ್ಕಾರಕ್ಕೆ ಮುಖ್ಯಕಾರಣಗಳಾದ ಚಕ್ಷುರಾದಿಗಳೇ ಪ್ರತ್ಯಕ್ಷಪ್ರಮಾಣವೆನಿಸುವುದು (ಏವೇಕ. ೧೯). [ಸಂ.]

ಪ್ರತ್ಯಕ್ಷಫಲ (ನಾ). ಕಣ್ಣಿಗೆ ಕಾಣುವ ಫಲ; ಅನುಭವಕ್ಕೆ ಬರುವ ಪ್ರಯೋಜನ : ಸತ್ಕರ್ಮಂ ಪ್ರತ್ಯಕ್ಷಫಲಮನೀವುದು ಪುಸಿಯೇ (ಪುತ್ರಪು. ೩-೦೮೬). [ಸಂ.]

ಪ್ರತ್ಯಕ್ಷವೀಕ್ಷಣ (ನಾ). ತನ್ನ ಕಣ್ಣಿನಿಂದಲೇ ನೋಡುವುದು ; ಸ್ವತಃ ನೋಡಿ ತಿಳಿದುಕೊಳ್ಳುವುದು : ಈ ಸತ್ಯಾಂಶಗಳು ತನ್ನ ದೀರ್ಘಕಾಲದ ಪ್ರತ್ಯಕ್ಷವೀಕ್ಷಣ ಮತ್ತು ಅನುಭವಗಳಿಂದೂ ನಿರ್ಭಯವಾಗಿ ಸಾರಿದನು (ಪುಕ್ಕಾರ. ೦೪ ಪೀಠಿಕೆ). [ಸಂ.]

ಪ್ರತ್ಯಕ್ಷಾನುಭವ (ನಾ). ಸ್ವಂತ ಅನುಭವ ; ತಾನು ನೋಡಿ ಪಡೆದುಕೊಂಡಿರುವ ತಿಳಿವಳಿಕೆ : ಸ್ತುತ್ಯವು ಜನಪ್ರಿಯವಲ್ಲವೆಂಬುದು ಪ್ರತ್ಯಕ್ಷಾನುಭವದ ವಿಚಾರವಾಗಿದೆ (ರೂಢಿ). [ಸಂ.]

ಪ್ರತ್ಯಗಾತುಮ (ನಾ). = ಪ್ರತ್ಯಗಾತ್ಮ : ಪ್ರತ್ಯಗಾತುಮ ತೋರ್ವನೊಬ್ಬನು ಅದು ನಿದಿಧ್ಯಾಸ (ಜ್ಞಾನಸಿಂ. ೦೨-೩೪); ತಿಳಿ ತ್ವಂ ಪ್ರತ್ಯಗಾತುಮ ಪರಮಸತ್ಯಜ್ಞಾನರೂಪದ ಪರಿಯ (ಗಗತಾ. ೨-೯).

[< ಸಂ. ಪ್ರತ್ಯಗಾತ್ಮನ್]

ಪ್ರತ್ಯಗಾತ್ಮ (ನಾ). ಎಲ್ಲಾ ಜೀವಿಗಳಲ್ಲಿರುವ ಆತ್ಮ ; ಜೀವಾತ್ಮ : ಕೇಳು ಧಾರುಣಿಯಲ್ಲಿಯೂ ಪ್ರತ್ಯಗಾತ್ಮನಿಂದನ್ಯನಪ್ಪಂತೆಸೆವ ವಿಶ್ವೇಶನೇ (ವೀಶೈಪು. ೩-೦೩-೦೨); ಸತ್ಯವತಿಯಾತ್ಮಜನು ಪುತ್ರಗೆ ಪ್ರತ್ಯಗಾತ್ಮವೆನಿಪ್ಪ ತ್ವಂಪದವಸ್ತುನಿರ್ದೇಶವನು ಬೋಧಿಸಿ ತಿಳುಹಿದನು ನಿಜವ (ಅಮೃತ. ೩ ಸೂಚನೆ); ಪ್ರತ್ಯಗಾತ್ಮನು ನೀನು (ಮಂಕುಕ. ೬೫೦). [ಸಂ. ಪ್ರತ್ಯಗಾತ್ಮನ್]

ಪ್ರತ್ಯಗ್ಬೋಧ (ನಾ). "ತನ್ನೊಳಗಿರುವ ಶುದಾತ್ಮನ ಅರಿವು" (ಅಮೃತ. ೩-೨೬. ೦೧೫) : ಈ ವಿಧದಲೀ ದೇಹದೊಳಗೊಳಗೋವಿ ದೃಗ್ದೃಶ್ಯಗಳ ಸಾಧಿಸಿ ತೀವಿ ಪ್ರತ್ಯಗ್ಬೋಧವನು ಸಂಪಾದಿಸುವದು (ಅಮೃತ. ೩-೨೬). [ಸಂ.]

ಪ್ರತ್ಯಗ್ಬೂಧ (ರನಾ). ಪಶ್ಚಿಮದ ಪರ್ವತ; ಅಸ್ತಾಚಲ: ಪ್ರತ್ಯಗ್ಬೂಧರವಾತ್ಮಾಧಿತ್ಯಕದೊಳ್ ತಳೆದುದಸ್ತಗತಿಯಿಂ ಬೀಟ್ವೊದಿತ್ಯನಂ (ಸಂಪ್ರಪು. ೮-೩). [ಸಂ.]

ಪ್ರತ್ಯಗ್ರ (ಗು). ೧. ಹೊಸದಾದ ; ನವೀನವಾದ : ದೈತ್ಯನಸಂಖ್ಯಾತಕೋಟಿಮೂರ್ತಿಯನಾಂತೊಂದತ್ಯಾರಭಟಿಯಿನಿರ್ದಂ ಪ್ರತ್ಯಗ್ರಭ್ರಾಂತಿ ಕೃಷ್ಣನೊಳ್ ನೆಗಟ್ವಿನೆಗಂ (ಜಗನಿ. ೦೩-೬). ೨. ಶುದ್ಧವಾದ : ಪ್ರತ್ಯಗ್ರಸಮುತ್ಪನ್ನಾಪತ್ಯಮುಖಾಳೋಕಸುಖಮನಱಿಯದ ದಿವಿಜಸ್ತುತ್ಯಸುಖಂ ಸುಖಮಲ್ತೆಂದತ್ಯಂತಸುಖಾನಭವದೊಳರಸಂ ತಣಿದಂ (ಮುಣಿಸು. ೯-೦೨೨). (ನಾ). ೩. ಹೊಸದಾದುದು ; ನವೀನವಾದುದು : "ಪ್ರತ್ಯಗ್ರಃ, ಅಭಿನವಃ, ನವ್ಯಃ, ನವೀನಃ, ನೂತನಃ, ನವಃ, ನೂತ್ನಃ—೭ ಹೊಸದು" (ಸಿದ್ಧಾಂತಿ. ೩೬೩). [ಸಂ.]

ಪ್ರತ್ಯಗ್ರೂಪ (ನಾ). ಅಂತರಾತ್ಮ; ಸ್ವರೂಪ : ಆತ್ಮನು ಪ್ರತ್ಯಗ್ರೂಪನು ಎಂದರೆ ನಮ್ಮೊಳಗಿನ ಸ್ವರೂಪ ; ಅನಾತ್ಮವು ಪರಾಗ್ರೂಪ ಎಂದರೆ ನಮಗೆ ಹೊರಗೆ ಎದುರಿಗೆ ತೋರುವ ವಸ್ತು (ಪ್ರಹ್ಮಭಾ. ೦೬); ಜೀವನು ಈಶ್ವರನಂತೆ ಪ್ರತ್ಯಗ್ರೂಪ . . . ಪ್ರತ್ಯಗ್ರೂಪ ಎಂದರೆ ತನಗೆ ತಾನೆ ಭಾಸಮಾನನಾಗುವನು ಎಂದರ್ಥ (ಭಾತತ್ತ್ವ. ೭೬೯). [ಸಂ.]

ಪ್ರತ್ಯನೀಕ (ನಾ). ೧. ಹಗೆ ; ಶತ್ರು : "ಅಭಿಯಾತಿಃ, ಅರಾತಿಃ . . . ಭಾತೃವ್ಯಃ, ಪ್ರತ್ಯನೀಕಃ, ದ್ವಿಷತ್—ಈ ೨೪ ಹಗೆ" (ಹಲಾಯು. ೭೫-೩೦೨). ೨. ಶತ್ರುಸೈನ್ಯ. ೩. ಶತ್ರುತ್ವ. ೪. ನಿವಾರಣೆ ; ಪರಿಹಾರ : ಕಾಲಸ್ವರೂಪನಿರೂಪಣಂಗೆಯ್ದವರ ಶೋಕಪ್ರತ್ಯನೀಕಮನದಿರ್ಪಿದಂ ಈ ಪೇಟ್ದ ಕುಲಧರಸಂಕುಲಕ್ಕೆ (ಸಂಪಭಾ. ೦-೮೯ಪ). ೫. = ಪ್ರತ್ಯನೀಕಾಲಂಕಾರ : ಸಮಾಸೋಕ್ತಿ . . . ಪ್ರತ್ಯನೀಕ ಪ್ರತೀಪ . . . ಉದಾತ್ತವೆಂಬ ಅಱವತ್ತೈದಲಂಕಾರಂಗಳಿಂದೊಡಗೂಡಿ (ಏವೇಕ. ೦೬೯). [ಸಂ.]

ಪ್ರತ್ಯನೀಕಾಲಂಕಾರ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಶತ್ರುವು ಪ್ರಬಲನಾದಾಗ ಸೇಡು ತೀರಿಸಿಕೊಳ್ಳಲಾರದೆ ಅವನ ಕಡೆಯವರ ಮೇಲೆ ಪರಾಕ್ರಮವನ್ನು ತೋರಿಸಿದಂತೆ ಚಮತ್ಕಾರವಾಗಿ ವರ್ಣಿಸುವುದಂ : ಬಲವಂತನಾದ ಶತ್ರುವಿನೊಳ್ಸೆಣಸಲಾಱದೆ ಆ ಪಕ್ಷದವರ ಮೇಲೆ ಪರಾಕ್ರಮಂಗೆಯ್ವುದು ಪ್ರತ್ಯನೀಕಾಲಂಕಾರಂ (ಅಪ್ರತಿ. ೦೦೩-೭). [ಸಂ.]

ಪ್ರತ್ಯಭಿಜ್ಞಾದರ್ಶನ (ನಾ). [ಶೈವ] ಕಾಶ್ಮೀರದೇಶದಲ್ಲಿ ಬಹಳ ಪ್ರಚಾರದಲ್ಲಿದ್ದ ಶೈವಮತತತ್ತ್ವದ ಒಂದು ಪ್ರಭೇದ ; 'ಶಿವನೇ ನಾನು' ಎಂದು ಗುರುತಿಸುವುದೇ ಮೋಕ್ಷವೆಂದು ಬೋಧಿಸುವ ಶೈವದರ್ಶನ : ಈಗ ಮುಖ್ಯವಾಗಿ ಜೀವಂತವಾಗಿ ಉಳಿದು ಪ್ರಚಾರದಲ್ಲಿರುವ ಶೈವಸಂಪ್ರದಾಯಗಳೆಂದರೆ ಕಾಶ್ಮೀರದ ಪ್ರತ್ಯಭಿಜ್ಞಾದರ್ಶನ, ವೀರಶೈವರ ವಿಶೇಷಾದ್ವೈತ, ತಮಿಳರ ಶೈವಸಿದ್ಧಾಂತ (ಭಾರದ. ೨೦೦); ಸರ್ವದರ್ಶನಸಂಗ್ರಹದಲ್ಲಿ ಮಾಧವಾಚಾರ್ಯರು ಈ ಸಂಪ್ರದಾಯವನ್ನು ಪ್ರತ್ಯಭಿಜ್ಞಾದರ್ಶನವೆಂದು ಕರೆದಿರುವರು (ತತ್ತ್ವಪ್ರಾ. ೪೦೯). [ಸಂ.]

ಪ್ರತ್ಯಭಿಜ್ಞಾನ (ನಾ). ೧. ಗುರುತುಹಿಡಿಯುವುದು ; ಗುರುತಿಸುವುದು. ೨. ತಿಳಿಯುವುದು ; ಅರಿಯುವುದು : ತದೇಕತ್ವಗ್ರಾಹಕ ಪ್ರತ್ಯಭಿಜ್ಞಾನಮುಂ ಲೂನಪುನರ್ಜಾತ ನಖಕೇಶಾದಿಗಳೊಳ್ ಪೂರ್ವಾಪರೈಕತ್ವಮಿಲ್ಲದಲ್ಲಿಯುಂ ಕಾಣಲಕ್ಕುಂ (ಅದಿಪು. ೨-೯ ಪ); ಅದುವೆ ಇದೆಂಬ ನೆನವಿ ಪ್ರತ್ಯಭಿಜ್ಞಾನಂ (ತತ್ತ್ವಪ್ರ. ೨೯೭); ಅದೇ ಇದು ಎಂದಾಗುವ ಅರಿವಿಗೆ ಪ್ರತ್ಯಭಿಜ್ಞಾನವೆಂದು ಹೆಸರು (ಪ್ರಹ್ಮಭಾ. ೯೭೦ ೦೧೫). [ಸಂ.]

ಪ್ರತ್ಯಭಿಜ್ಞೆ (ನಾ). ೧. ಗುರುತಿನ ವಸ್ತುವಿನಿಂದ ಉಂಟಾಗುವ ಪೂರ್ವಸ್ಮರಣೆ : ಕಟಕದ ನಡುವನೆಯ್ದಿ ಬರ್ಪನ್ನೆಗಮಿಂದ್ರಾಯುಧ ಪ್ರತ್ಯಭಿಜ್ಞೆಯೊಳಂ . . . ಚಂದ್ರಾಪೀಡದೇವನೆಂದಱಿದು (ಕಾದಂಬ. ೧೩೬) ; ಹಿಂದೊಮ್ಮೆ ನೋಡಿದ್ದನ್ನು ನಡುವೆ ಮರೆತಿದ್ದು ಆಮೇಲೆ ಗುರ್ತಿಸುವುದಕ್ಕೆ ಪ್ರತ್ಯಭಿಜ್ಞೆಯೆಂದು ಹೆಸರು (ಅಮೃತ. ೭-೦೫ ಟೀಕು); ತಿಳಿದ ವಸ್ತುವಿನ ಸೂಕ್ಷ್ಮತರಸಂಧಾನವೇ ಪ್ರತ್ಯಭಿಜ್ಞೆ (ರೃಣ್ಯಕೋ. ೨೨ ಅಪಿ). ೨. [ಶೈವ] "ತನ್ನ ಶಿವತ್ವವನ್ನು ಮರೆತು ಜೀವಿಯಾದವನಿಗೆ ಮರಳಿ ತನ್ನ ಶಿವತ್ವದ ಅರಿವು ಮರುಕಳಿಸುವುದೇ ಪ್ರತ್ಯಭಿಜ್ಞೆಯೆನಿಸುವುದು" (ಪ್ರ.ರಹ. ೦೩೦). ೩. [ಜೈನ] ಪರೋಕ್ಷಪ್ರಮಾಣಗಳಲ್ಲಿ ಒಂದು : ಪರೋಕ್ಷ-ಸ್ಮೃತಿ ಪ್ರತ್ಯಭಿಜ್ಞಾ, ತರ್ಕ, ಅನುಮಾನ, ಆಗಮ ಎಂದು ಐದು ವಿಧ. ಇವುಗಳು ಜ್ಞಾನಸ್ವರೂಪಗಳಾಗಿರುವುದರಿಂದ ಆಯಾ ವಿಷಯದಲ್ಲಿರುವ ಅಜ್ಞಾನನಿವೃತ್ತಿಯನ್ನು ಫಲವಾಗಿ ತಿಳಿಯಬೇಕು (ಹಿಂದಸಾ. ೬೬). [ಸಂ. ಪ್ರತ್ಯಭಿಜ್ಞಾ]

ಪ್ರತ್ಯಭಿಯೋಗ (ನಾ). ಒಂದು ಆರೋಪಣೆಗೆ ಪ್ರತಿಯಾಗಿ ಆರೋಪಿಸುವುದು. [ಸಂ.]

ಪ್ರತ್ಯಯ (ನಾ). ೧. ಅಭಿಮುಖವಾಗಿ ಹೋಗುವುದು. ೨. ನಂಬಿಕೆ ; ವಿಶ್ವಾಸ ; ಶ್ರದ್ಧೆ : "ಪ್ರತೀತಿಃ, ಪ್ರತ್ಯಯಃ, ಶ್ರದ್ಧಾ—ಈ ೩ ನಂಬುಗೆ" (ಹಲಾಯು. ೦೨೯-೯೫) ; ಚಂದ್ರಾಪೀಡಚರಣಕಮಲಂಗಳಂ ದೃಢಪ್ರತ್ಯಯದಿನಾರಾಧಿಸುತ್ತಿರ್ದಳ್ (ಕಾದಂಬ. ೬೩೦) ; ಅನಿಲಾತ್ಮಜಂ . . . ಬ್ರಹ್ಮಚರ್ಯಜದೃಢಪ್ರತ್ಯಯಮಹೋದಾರಶಾಂತಿಯಿಂ ಪರಿಚಯಿಸಿದನು ದಶರಥಾತ್ಮಜಗೆ ಕಿಷ್ಕಿಂಧೆಯಂ (ಕ್ರೀಂಗಾಮಾ. ೨೯೦-೦೯೩). ೩. ನಂಬಿಕೆಯನ್ನುಂಟುಮಾಡುವ ಕೆಲಸ.—ಕಾರ್ಯ : ಇರುಳ್ ಪೊಚಲೆಲ್ಲಮಂ ಕಳ್ದು ದಿವಸಕ್ಕೀ ಪಾಂಗಿನೊಳ್ ತೊನ್ನನಾಗಿರ್ಪೊಂ ನೀಮುಂ ನಂಬದಾಗಳ್ ಪ್ರತ್ಯಯಮಂ[ಪಾಠಾಂ.ಪ್ರತ್ಯಕ್ಷಂ] ಮಾಡಿ ತೋರ್ಪೆಂ (ಪಡ್ಡಾಂ. ೦೨೯-೦೦); ಪ್ರತ್ಯಯದಿಂದವನಿಗೆ ಪ್ರಬೋಧವನ್ನುಂಟುಮಾಡಲೆಂದು ... ಒಂದು ಹಿರಿಯ ಬೊಬ್ಬುಲಿಮರದ ನೆರಳಿನಲ್ಲಿ ಕುಳ್ಳಿರಿಸಿ . . . ಹೋಗುತ್ತಾನೆ (ಕರಸ. ೨೬೬). ೪. ತಿಳಿವಳಿಕೆ ; ಜ್ಞಾನ ; ಅರಿವು : ಪ್ರತ್ಯಯ ಎಂಬ ಮಾತಿಗೆ ಸಂಸ್ಕೃತದಲ್ಲಿ ಅನೇಕ ಅರ್ಥಗಳುಂಟು. ಇಲ್ಲಿ ಅರಿವು ಎಂಬರ್ಥದಲ್ಲಿ ಇದನ್ನು ಉಪಯೋಗಿಸಿರುತ್ತದೆ (ಬ್ರಹ್ಮಶಾ. ೩) ; ಶಾಲೆಯ ಹೊರಗೂ ಈ ಮಾತು ನಮ್ಮ ಪ್ರತ್ಯಯಕ್ಕೆ ಬರುವುದು (ಕಥಕ. ೬೫). ೫. ಶಪಥ ; ಪ್ರತಿಜ್ಞೆ : 'ಪ್ರತ್ಯಯಂಗೆಯ್' ಪರಾ. ೬. ಕಾರಣ ; ಹೇತು ; ಉದ್ದೇಶ. ೭. ನಿಶ್ಚಯ ; ನಿರ್ಧಾರ : "ಸೂರುಳೊಳ್ ವಿಶ್ವಾಸದೊಳ್ ನಿಶ್ಚಯದಱಿವಿನಾರಯಿಕೆಯೊಳು ಪ್ರತ್ಯಯಾಖ್ಯವೆನಿಸಿರ್ಕು" (ಪುಂಗಶಾ. ೦೪೫-೨೯). ೮. ಪ್ರಖ್ಯಾತಿ ; ಪ್ರಸಿದ್ಧಿ. ೯. ಭಾವನೆ; ಕಲ್ಪನೆ. ೧೦. ಕಂಡಿ; ರಂಧ್ರ. ೧೧.[ವ್ಯಾಕ] ನಾಮಪ್ರಕೃತಿ ಅಥವಾ ಕ್ರಿಯಾಪ್ರಕೃತಿ(ಧಾತು)ಯ ಮುಂದೆ ಯಾವುದಾದರೊಂದು ಅರ್ಥವನ್ನು ತಿಳಿಸುವುದಕ್ಕಾಗಿ ಸೇರುವ ಅಕ್ಷರ ಅಥವಾ ಪದಾಂಶ; ಇದರಲ್ಲಿ ವಿಭಕ್ತಿಪ್ರತ್ಯಯ, ಆಖ್ಯಾತಪ್ರತ್ಯಯ, ಕೃತ್ಪ್ರತ್ಯಯ, ತದ್ಧಿತಪ್ರತ್ಯಯ ಮೊದಲಾದ ಭೇದಗಳಿವೆ : ಇವು ಪುಣ್ಯಮಿವರ್ಗೆ ಮೇಣಿಂತಿವು ಶಿಲ್ಪಂ ಮೇಣ್ ನಿಯೋಗಮಿವ ನಱಿವಂ ಮೇಣಿವನಾಚರಿಸುವನೆಂದಿಂತಿವಱೊಳಿಗಪ್ರತ್ಯಯಂ ಯಥೋಕ್ತಿಯಿನಕ್ಕುಂ (ಕಾಪ್ಯಾಪ. ೩೨೨) ; ಪದದರ್ಥಮಂ ವಿಭಾಗಿಸುವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂಬುದು ತತ್ಪ್ರತ್ಯಯದಿಂ ಪೂರ್ವದೊಳಿರ್ಕುಂ ಪ್ರಕೃತಿಯೆರಡುಮಮರ್ದೊದವೆ ಪದಂ (ಕಮದ. ೩೫) ; ವಾಕ್ಯದಲ್ಲಿ ಶಬ್ದಗಳಿಗಿರುವ ಸಂಬಂಧವನ್ನು ಪ್ರತ್ಯಯ ಸೂಚಿಸುತ್ತವೆ (ಕೃಪಿಡಿ. ೩೩). [ಸಂ.]

ಪ್ರತ್ಯಯಂಗೆಯ್ (ಕ್ರಿ). ಪ್ರತಿಜ್ಞೆಮಾಡು : ನೀನೆನ್ನಂ ಕಾಡವೇಡಾಂ ತೊಡರ್ದವಸರದೊಳ್ ಪ್ರತ್ಯಯಂಗೆಯ್ದೆನೊರ್ವಂಗೆ (ಸುಕುಮಾ. ೬-೨೦). [ಪ್ರತ್ಯಯ + ಕೆಯ್$_1$]

ಪ್ರತ್ಯಯಾಂತ (ನಾ). ಪ್ರತ್ಯಯಸಹಿತವಾದ ಪದ : ಏಕ ದ್ವಿ ತ್ರಿ ಚತುಃ ಶಬ್ದಾಕೃತಿಗೆಕ್ಕ ದು ತಿ ಚೌಗಳಾದೇಶಂಗಳ್ ಸ್ವೀಕೃತ ಸಮಾಸಪೂರ್ವದೊಳಾಕರಿಪರ್ ಪ್ರತ್ಯಯಾಂತದೊಳಮಿಾ ವಿಧಿಯಂ (ಕಮದ. ೨೯೦) ; ಧಾತುಗಳಲ್ಲಿ ಸಹಜ, ಪ್ರತ್ಯಯಾಂತ(ವ್ಯುತ್ಪನ್ನ), ಸಂಯುಕ್ತ (ಸಮಗ್ರ) ಎಂದು ಮೂರು ವಿಧಗಳಿವೆ (ಕೃಪಿಡಿ. ೯೨). [ಸಂ.]

ಪ್ರತ್ಯಯಾಂತಧಾತು (ನಾ). [ವ್ಯಾಕ]ಸಹಜಧಾತು, ಪ್ರತ್ಯಯಾಂತಧಾತು ಮತ್ತು ಸಂಯುಕ್ತಧಾತು ಎಂಬ ಮೂರು ಬಗೆಯ ಧಾತುಗಳಲ್ಲಿ ಒಂದು ; ಸಹಜ ಧಾತುವಿಗೆ ಇಸು ಮೊದಲಾದ ಪ್ರತ್ಯಯವನ್ನು ಸೇರಿಸಿ ಸಾಧಿಸಿದ ಧಾತು : ಸಹಜಧಾತುಗಳಿಗೆ ಪ್ರೇರಣಾರ್ಥದಲ್ಲಿ ಇಸು ಮೊದಲಾದ ಪ್ರತ್ಯಯಗಳು ಸೇರಿ ಪ್ರತ್ಯಯಾಂತಧಾತುಗಳಾಗುತ್ತವೆ. ಉದಾ. . . . ಮಾಡಿಸು, ಬೇಯಿಸು (ಕೃಪಿಡಿ. ೯೨). [ಸಂ.]

ಪ್ರತ್ಯಯಿತ (ನಾ). ನಂಬಿಕೆಗೆ ಯೋಗ್ಯನಾದವನು ; ಆಪ್ತ: "ಆಪ್ತಃ, ಪ್ರತ್ಯಯಿತಃ—೨ ಆಪ್ತನಾದವನ ಹೆಸರು, ನಂಬಿಕೆಯುಳ್ಳ ಯಥಾರ್ಥವಾದಿ" (ಸಿದ್ಧಾಂತಿ. ೨೩೬). [ಸಂ.]

ಪ್ರತ್ಯಯೋಪಮೆ (ನಾ). [ಕಾವ್ಯಮಿಾ]ಉಪಮಾಲಂಕಾರದ ಒಂದು ಭೇದ ; ಉಪಮಾನಾರ್ಥಕ ಪ್ರತ್ಯಯಗಳುಳ್ಳ ಪದಗಳಿಂದ ಸಾದೃಶ್ಯವು ತೋರುವ ಅಲಂಕಾರ : ಪ್ರತ್ಯಯೋಪಮೆಗೆ ಜಲಜಾಯಮಾನಮಲರ್ಗಣ್ ಪುಲಿನಂಮನ್ಯಂ ನಿತಂಬಮಳಿದೇಶೀಯಂ ಚಲದಳಿಪ್ರತತಿ ಮೃಣಾಳಲತಾಕಲ್ಪಂಗಳಾ ಲತಾಂಗಿಯ ತೋಳ್ಗಳ್ (ಕಾಪ್ಯಾಪ. ೬೬೬). [ಸಂ. ಪ್ರತ್ಯಯೋಪಮಾ]

ಪ್ರತ್ಯರ್ಥಿ (ಗು). ೧. ವಿರೋಧಿಸುವ ; ವಿರುದ್ಧವಾದ. (ನಾ). ೨. ಹಗೆ ; ಶತ್ರು; ವೈರಿ : ಜಿತಜಗತ್ಪ್ರತ್ಯರ್ಥಿಯಂ . . . ಮನುಜೇಶರ್ ಮಲೆರಾಜರಾಜನನದೇಂ ಬಲ್ಲಾಳನಂ ಪೋಲ್ವರೇ (ಎಕ. V, ಅರಸೀ. ೦-೦೭ ; 1169) ; ಗುರ್ಜರಪೃಥ್ವೀಶಂ ಪ್ರತ್ಯರ್ಥಿಮಹೀಶಮದವದಿಭಮಸ್ತಕವಿದಲನ ಪಂಚಾಸ್ಯಂ (ಉದ್ಧರೇ. ೩-೦೬). ೩. (ನ್ಯಾಯಾಲಯದಲ್ಲಿ) ಎದುರಾಳಿ ; ಪ್ರತಿವಾದಿ : ದುಷ್ಟಬುದ್ಧಿ . . . ಧರ್ಮಾಧಿಕರಣಕ್ಕಿಂತೆಂದು ಪ್ರತ್ಯರ್ಥಿ ಬಂದನಿಲ್ಲ ಪಿರಿದುಂ ಪೊಬ್ಬುಪೋದುದು (ಪಂಚತು. ೦೭೫-೨೦). ೪. ಅಡ್ಡಿ; ತಡೆ. [ಸಂ. ಪ್ರತ್ಯರ್ಥಿನ್]

ಪ್ರತ್ಯವಸಾನ (ನಾ). ಊಟ ; ಭೋಜನ : "ವಲ್ಪನಂ, ಅಭ್ಯವಹಾರಃ, ಪ್ರತ್ಯವಸಾನಂ . . . ಸ್ವದನಂ—ಈ ೧೧ ಊಟ" (ಹಲಾಯು. ೫೪-೦೭೦). [ಸಂ.]

ಪ್ರತ್ಯವಸಿತ (ನಾ). ೧. ಊಟ ಮಾಡಿದುದು ; ತಿಂದುದು : "ಭಕ್ಷಿತಂ, ಚರ್ವಿಂ, ಲಿಪ್ತಂ, ಪ್ರತ್ಯವಸಿತಂ . . . ಭುಕ್ತಂ—೧೪ ಭುಜಿಸಲ್ಪಟ್ಟದ್ದು, ಉಣ್ಣಲ್ಪಟ್ಟದ್ದು, ತಿನ್ನಲ್ಪಟ್ಟದ್ದು" (ಸಿದ್ಧಾಂತಿ. ೩೫೨). [ಸಂ.]

ಪ್ರತ್ಯವಾಯ (ನಾ). ೧. ತೊಂದರೆ ; ಹಾನಿ : ಈತನ ಕಟಕಕ್ಕೆ ನಿತ್ಯ ಕ್ಷಯವ್ಯಯಪ್ರತ್ಯವಾಯಂಗಳಂ ಮಾಡಿ ಬೇಸಱಿಸಿ ನೆಲೆಯಿಂ ತಳರ್ಚುವಂ (ಅಪಿಪು. ೦೩-೫೬ ಪ). ೨. ಅಡ್ಡಿ; ತಡೆ : ಸಾಮಾನ್ಯವಾಗಿ ನಾವು ಈ ಗೀತಾಸಂದೇಶದಲ್ಲಿ ತೋರಿಸಿರುವ ಮಾರ್ಗದಲ್ಲಿ ಹೋಗಲು ಯಾವ ಪ್ರತ್ಯವಾಯವೂ ಇರುವುದಿಲ್ಲ (ಗೀತಾಸಂ. ೦೪೨) ; ಮೇಲೆ ಹೇಳಿದ ಎಲ್ಲ ಲಕ್ಷಣಗಳು ಅವನಲ್ಲಿ ತೋರಿದರೆ ಅವನಿಗೆ ನಿಸ್ಸಂಶಯವಾಗಿ ಚೋರನೆಂದನ್ನಲಿಕ್ಕೆ ಪ್ರತ್ಯವಾಯವಿಲ್ಲ (ಬ್ರಹ್ಮಶಾ. ೨೬). ೩. ಪಾಪ ; ದೋಷ : ನಿತ್ಯನೈಮಿತ್ತಿಕವ ಕಳೆದಾ ಪ್ರತ್ಯವಾಯಕೆ ಮಾಡಿ ಪ್ರಾಯಶ್ಚಿತ್ತವನು . . . ಮೋಕ್ಷವನರ್ಥಿಸುತ್ತಿಹ ಸಾಧುಗಳೆ ತತ್ತ್ವಾಧಿಕಾರಿಗಳು (ಅಮೃತ. ೦-೨೦) ; ಅಖಂಡಜ್ಞಾನವರ್ಜಿತರಿಂಗೆ ಕರ್ಮದನ್ನೂನದಿಂದವೆ ಪ್ರತ್ಯವಾಯವುಪಾಧಿಬಾಧಕವು (ಗಗತಾ. ೦೬ ೩೨). ೪.

ಅಗಲಿಕೆ ; ವಿಯೋಗ : "ಅಗಲ್ಕೆಯಲ್ಲಿಯುಂ ಹೊಲ್ಲಮೆಯಲ್ಲಿಯುಂ ಪ್ರತ್ಯವಾಯಮೆಂಬುದು" (ಹಲಾಯು. ೦೩೭-೩೯). ೫. ವಿರುದ್ಧವಾದುದು. ೬. ಸೋಲು ; ಅಪಜಯ : "ಅಪಜಯದೊಳತ್ಯಗಲಿಕೆಯೊಳಂ ಪ್ರತ್ಯವಾಯಮೆಂಬುದು" (ಮಂಗಾ. ೦೪೨-೦೯). [ಸಂ.]

ಪ್ರತ್ಯಸ್ತ್ರ (ನಾ). ಒಂದು ಅಸ್ತ್ರವನ್ನು ತಡೆಗಟ್ಟಲು ಪ್ರಯೋಗಿಸುವ ಮತ್ತೊಂದು ಅಸ್ತ್ರ : ಹರಿಸಿದರು . . . ಪರಿಪರಿಯ ಪ್ರತ್ಯಸ್ತ್ರವನು ಗಾಂಗೇಯ ಫಲುಗುಣರು (ಕುಪ್ಪಾರ. ೬-೬೦) ; ಅರ್ಜುನನು ಪ್ರತ್ಯಸ್ತ್ರಗಳನ್ನು ಬಲ್ಲವನಾದ್ದರಿಂದ . . . ಅಶ್ವತ್ಥಾಮನು ನಿರುತ್ಸಾಹನಾಗಿ ಶಿಬಿರಕ್ಕೆ ಹಿಂತಿರುಗಿದನು (ಪಕಣಾ. ೨೯೦). [ಸಂ.]

ಪ್ರತ್ಯಹ (ನಾ). ಪ್ರತಿದಿನ : ಪ್ರತ್ಯಹವೂ ನಿಷ್ಠೆಯಿಂದ ತನ್ನ ಕರ್ತವ್ಯವನ್ನು ನೆರವೇರಿಸುತ್ತ . . . ಒಮ್ಮುಖವಾದ ಅಧಿಕಾರವನ್ನು . . . ನೆಲೆಗೊಳಿಸಿದನು (ಶೈಗಂಪ. ೦೩೨). [ಸಂ. ಪ್ರತ್ಯಹಂ]

ಪ್ರತ್ಯಹಂ (ಅ). ಪ್ರತಿನಿತ್ಯದಲ್ಲೂ; ದಿನದಿನವೂ : ಪ್ರತ್ಯಹಮೊಪ್ಪುಗುಂ ವಿವಿಧರತ್ನವಿನಿರ್ಮಿತಕೂಟಕೋಟಿಮಚ್ಚೈತ್ಯಗೃಹಾವಹಂ ಶುಕಪಿಕಾಕುಳ ಸೌಂದರನಂದನಾವಳೀವೃತ್ಯುಪಶೋಭಿತಂ . . . ಪುರರತ್ನಗೋಪುರಂ (ಸಂಧ್ರಪು. ೬-೩). [ಸಂ.]

ಪ್ರತ್ಯಾಕರ (ನಾ). ಒರೆ ; ಕೋಶ : "ಕೃಪಾಣಮೆಂದಿರಲಡಾಯುಧಮೆನಿಕ್ಕು ಪ್ರತ್ಯಾಕರಂ ಕೋಶಮವರೊಱೆಗಳಕ್ಕುಂ" (ಮಂಗಾ. ೬೬-೩೭). [< ಸಂ. ಪ್ರತ್ಯಾಕಾರ]

ಪ್ರತ್ಯಾಕಾರ (ನಾ). = ಪ್ರತ್ಯಾಕರ : "ಕೋಶಃ, ಪ್ರತ್ಯಾಕಾರಃ, ಖಡ್ಗಪಿಧಾನಂ—ಈ ೩ ಒಱೆ" (ಹಲಾಯು. ೭೬-೩೦೯). [ಸಂ.]

ಪ್ರತ್ಯಾಖ್ಯಾತ (ನಾ). ತಿರಸ್ಕೃತವಾದುದು; ನಿರಾಕೃತವಾದುದು : "ಪ್ರತ್ಯಾಖ್ಯಾತಂ, ಪ್ರತಿಕ್ಷಿಪ್ತಂ . . . ಪರಿಹೃತಂ—ಈ ೭ ಪರಿಹರಿಸಲ್ಪಟ್ಟುದು" (ಹಲಾಯು. ೦೦೭-೦೬). [ಸಂ.]

ಪ್ರತ್ಯಾಖ್ಯಾನ (ನಾ). ೧. ತಿರಸ್ಕಾರ; ನಿರಾಕರಣೆ : ಕ್ರೋಧ ಪ್ರತ್ಯಾಖ್ಯಾನ-ಮುಳಿಸಂ ತೊಱೆವುದುಂ (ತತ್ತ್ವಪ್ರ. ೨೭೦). ೨. [ಜೈನ] ಮುಂದೆ ಪಾಪ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವುದು ಮತ್ತು ಸೀಮಿತಕಾಲದವರೆಗೆ ಆಹಾರಾದಿಗಳನ್ನು ತ್ಯಜಿಸುವುದು ; ℙ ಇದರಲ್ಲಿ ಮನಸ್ಸಿನಿಂದ ಪಾಪವನ್ನು ಮಾಡುವುದಿಲ್ಲವೆಂದು ಸಂಕಲ್ಪಿಸುವುದು ಮನಃಪ್ರತ್ಯಾಖ್ಯಾನ, ಮಾತಿನಲ್ಲಿ ಪಾಪವನ್ನು ಮಾಡುವುದಿಲ್ಲವೆಂದು ಸಂಕಲ್ಪಿಸುವುದು ವಚನಪ್ರತ್ಯಾಖ್ಯಾನ, ಶರೀರದಿಂದ ಪಾಪ ಮಾಡದಿರುವುದು ಶರೀರಪ್ರತ್ಯಾಖ್ಯಾನ : ನಾಗಶ್ರೀಯುಂ ಭುಕ್ತಪ್ರತ್ಯಾಖ್ಯಾನವಿಧಿಯಿಂ ರತ್ನತ್ರಯಮಂ ಸಾಧಿಸಿ (ಪಣ್ಡಾಕಾ. ೨೪-೨೦); ಆ ಸ್ವಯಂಬುದ್ಧಂ . . . ಮಹಾಬಲನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರಶರೀರಪ್ರತ್ಯಾಖ್ಯಾನಮಂ ಕೊಟ್ಟು (ಅದಿಪು. ೨-೩೦ ಪ). ೩. ಇಪ್ಪತ್ತೆಂಟು ಬಗೆಯ ಮೋಹನೀಯಗಳಲ್ಲಿ ಒಂದು : ಅಪ್ರತ್ಯಾಖ್ಯಾನಪ್ರತ್ಯಾಖ್ಯಾನಸಂಜ್ವಲನಕ್ರೋಧಮಾನಮಾಯಾಲೋಭಕಷಾಯವೇದನೀಯಮೆನಿಸಿಯುಮಿರ್ಪತ್ತೆಂಟು ತೆಱನಪ್ಪ ಮೋಹನೀಯಮುಮಂ (ಸುಕುಮಾ. ೩-೩೯ ಪ); ಅಪ್ರತ್ಯಾಖ್ಯಾನಾಖ್ಯಮಂ . . . ಪ್ರತ್ಯಾಖ್ಯಾನಕಷಾಯಮನತ್ಯೂರ್ಜಿತಸತ್ವನೆಂಟುಮಂ ವಿಘಟಿಸಿದಂ (ಪಾರ್ಶ್ವಪು. ೦೫-೦೪೬). [ಸಂ.]

ಪ್ರತ್ಯಾಗತ (ನಾ). ೧. ಹಿಂದಿರುಗಿ ಬಂದುದು. ೨. ಹಿಂದಿರುಗಿ ಬಂದವನು. [ಸಂ.]

ಪ್ರತ್ಯಾಗಮನ (ನಾ). ಹಿಂದಿರುಗಿ ಬರುವುದು : ಶ್ರೀಗಧಿಪನೊಳಗೆ ಪೊಱಮಡುವಾಗಡಿನ ವಿಳಾಸಮಮರಸಮಿತಿಯ ಕಣ್ಗೆಂಬಾಗೆ ನದೀಗಮನಪ್ರತ್ಯಾಗಮನದ ಸುಪ್ರತೀಕಗಜಮನೆ ಪೋಲ್ತಂ (ಶಾಂತಿಪು. ೦೦-೯೬) ; ಪತಿಯು ಪ್ರವಾಸಿಯಾದಾಗ ಪತ್ನಿಯು ಪತಿಯ ಪ್ರತ್ಯಾಗಮನವನ್ನು ನಿರೀಕ್ಷಿಸುತ್ತಾ ಪತಿಪರಾಯಣಳಾಗಿರಬೇಕು (ಅರ್ಯರ. ೦೫೯) [ಸಂ.]

ಪ್ರತ್ಯಾದಿಷ್ಟ (ನಾ). ೧. ತಿರಸ್ಕೃತವಾದುದು ; ನಿರಾಕೃತವಾದುದು : "ಪ್ರ(ತ್ಯಾ)ಖ್ಯಾತಂ, ಪ್ರತಿಕ್ಷಿಪ್ತಂ, ಪ್ರತ್ಯಾದಿಷ್ಟಂ . . . ಪರಿಹೃತಂ—ಈ ೭ ಪರಿಹರಿಸಲ್ಪಟ್ಟುದು" (ಹಲಾಯು. ೦೦೭-೦೬). ೨. ತಿರಸ್ಕೃತನಾದವನು ; ನಿರಾಕೃತನಾದವನು : "ಪ್ರತ್ಯಾದಿಷ್ಟಃ . . . ನಿರಾಕೃತಃ – ೪ ನ್ಯಾಯದಿಂದ ಪರಿಹರಿಸಲ್ಪಟ್ಟವನ ಪೆಸರುಗಳು" (ಸಿದ್ಧಾಂತಿ. ೩೩೪). [ಸಂ.]

ಪ್ರತ್ಯಾದೇಶ (ನಾ). ತಿರಸ್ಕರಿಸುವಿಕೆ ; ನಿರಾಕರಣೆ : "ಪ್ರತ್ಯಾಖ್ಯಾನಂ, ನಿರಸನಂ, ಪ್ರತ್ಯಾದೇಶಃ, ನಿರಾಕೃತಿಃ - ೪ ತಿರಸ್ಕರಿಸುವಿಕೆ, ಜರಿಯುವಿಕೆ" (ಸಿದ್ಧಾಂತಿ. ೩೬೬). [ಸಂ.]

ಪ್ರತ್ಯಾಪತ್ತಿ (ನಾ). ೧. ಹಿಂದಿರುಗುವುದು. ೨. ಐಹಿಕವಿಷಯಗಳಲ್ಲಿ ತೋರುವ ಅನಾಸಕ್ತಿ,—ಉದಾಸೀನತೆ ; ವೈರಾಗ್ಯ. [ಸಂ.]

ಪ್ರತ್ಯಾಮ್ನಾಯ (ನಾ). ೧. ಒಂದು ವಸ್ತು ಅಥವಾ ವ್ಯಕ್ತಿಯ ಬಿಡುಗಡೆಗೆ ಪ್ರತಿಯಾಗಿ ಕೊಡಬೇಕಾದ ವಸ್ತು ಅಥವಾ ದ್ರವ್ಯ: ಈಗ ನಮ್ಮ ರಾಜರು ಸೆರೆ ಸಿಕ್ಕಿದ್ದಾರೆ . . . ಆ ಬಿಡುಗಡೆಯ ಪ್ರತ್ಯಾಮ್ನಾಯವೇನೆಂದು ತಾವು ಅರುಹಬೇಕು (ಶ್ರೀಕಾಯ. ೩೪೨). ೨. ವಿರುದ್ಧವಾದ ನಿರ್ಣಯ. [ಸಂ.]

ಪ್ರತ್ಯಾಲೀಢ (ನಾ). ೧. ಬಿಲ್ಲು, ಗದೆ ಮುಂತಾದ ಆಯುಧಗಳನ್ನು ಹಿಡಿದು ಯುದ್ಧ ಮಾಡುವಾಗ ನಿಲ್ಲುವ ಆಲೀಢ, ಪ್ರತ್ಯಾಲೀಢ, ಸಮಪದ, ವಿಶಾಖ ಮತ್ತು ಮಂಡಲಗಳೆಂಬ ಐದು ಬಗೆಯ ವರಸೆಗಳಲ್ಲಿ ಒಂದು : "ಪ್ರತ್ಯಾಲೀಢ—ಎಡದ ಕಾಲು ಹೆಜ್ಜೆ ಮುಂದಕ್ಕೆ ನೀಡಿಟ್ಟು ಬಲದ ಮೊಳಕಾಲಾಗಲಿ ಅಂಗುಷ್ಠವಾಗಲಿ ಹಿಂದುಕಡೆಗೆ ನಿಲ್ಲಿಸಿ ಮಂಡಿಯೂರಿ ಕುಳಿತಂತೆ ವಾರೆಯಾಗಿ ಹಿಂದಾಗುವ ಹಾಗೆ ನಿಲ್ಲುವಿಕೆ" (ಸಿದ್ಧಾಂತಿ. ೨೬೪) ; ಆಲೀಢ ಪ್ರತ್ಯಾಲೀಢ ಸಮಪಾದಂಗಳೆಂಬಾಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳತಿಪ್ರವೀಣರುಂ ಜಾಣರುಮಾಗಿ (ಪಂಪಾ. ೦೩-೩೬ಪ) ; ಗದೆಗಳುಮನಿರ್ಪರುಮಾಯ್ದುಕೊಂಡು ಆಲೀಢ ಪ್ರತ್ಯಾಲೀಢ ಸಮಪಾದ ವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧಸ್ಥಾನಕೃತಂಗಳೊಳಂ . . . ಅತಿಪರಿಚಿತರಾಗಿ ವೈಶಾಖಸ್ಥಾನದೊಳ್ ನಿಂದು (ಗದಾಯು. ೬-೦೫). ೨. [ನಾಟ್ಯ] ವೈಷ್ಣವ, ಸಮಪಾದ, ವೈಶಾಖ, ಮಂಡಲ, ಆಲೀಢ ಮತ್ತು ಪ್ರತ್ಯಾಲೀಢವೆಂಬ ಆರು ಬಗೆಯ ಪುರುಷಸ್ಥಾನಕಗಳಲ್ಲಿ ಒಂದು,—ಪುರುಷರು ನಿಲ್ಲುವ ಭಂಗಿಗಳಲ್ಲಿ ಒಂದು ; ℙ "ಆಲೀಢಸ್ಥಾನಕವನ್ನು ಪಾರ್ಶ್ವವ್ಯತ್ಯಾಸದಿಂದ ಮಾಡುವುದು. ಇದಕ್ಕೂ ರುದ್ರನು ಅಧಿದೇವತೆ. ಶಸ್ತ್ರಮೋಕ್ಷಣದಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಕರಂ. ೩೨೬ ಗದ್ಯಾನುಪಾದ) : ಇಂತೆಸೆವಾಲೀಢಮನತ್ಯಂತದೆ ವಿಪರೀತಮಾಗಿ ಮಾಡಲ್ಕದು . . . ಪ್ರತ್ಯಾಲೀಢಂ (ಲಾಸ್ಕರಂ. ೭-೨೩). [ಸಂ.]

ಪ್ರತ್ಯಾಶೆ (ನಾ). ಒಂದು ವಸ್ತುವು ತನಗೆ ದೊರಕುವುದೆಂಬ ಭರವಸೆ ; ಇಷ್ಟವಾದ ವಸ್ತುವಿನ ನಿರೀಕ್ಷಣೆ : ಆವಿರ್ವರುಂ ಸಮಸುಖದುಃಖವೃತ್ತಿಗಳಾದೆವದಱಿಂ ಪ್ರಿಯತಮಸಮಾಗಮಪ್ರತ್ಯಾಶೆಯಿಂ ಕರಣೀಯವಾವುದದನೆ ಮಾಡವೇಟ್ಟುದು (ಕಾದಂಬಾ. ೬೨೭) ; ವಿರಹದಿಂ ಪ್ರಿಯತಮಸಮಾಗಮಪ್ರತ್ಯಾಶೆ ಹೃದಯಮಂ ಬೇಯಿಸಲ್ಕಾ ಬೇಟವೆಣ್ ಸೋಗೆ ನವಿಲುಕಲ್ಲಿಗೆ ಮರಳಿ ಬಂದು ಕರೆವುದು ತೇಗಿ ತನ್ನೆರೆಯನಂ (ಪಣ್ಡಾಂಗ. ೫೫-೦೫೦೦). [ಸಂ. ಪ್ರತ್ಯಾಶಾ]

ಪ್ರತ್ಯಾಸತ್ತಿ (ನಾ). ೧. ನಿಕಟವಾದ ಸಮೀಪ,— ಸಂಬಂಧ : ಸಮ್ಯಗ್ದರ್ಶನಕ್ಕೆ ವಿಧಿಪ್ರತಿಷೇಧಗ್ರಹಣಂ ಸಿದ್ಧಮಾದೊಡಂ ಪ್ರಧಾನ ಪ್ರತ್ಯಾಸತ್ತಿಯಿಂ ನೋಡೆ (ತತ್ತ್ವಪ್ರ. ೬). ೨. ಸಾದೃಶ್ಯ ; ಸಾಮ್ಯ. [ಸಂ.]

ಪ್ರತ್ಯಾಸನ್ನ (ಗು). ೧. ಹತ್ತಿರದ ; ಸಮೀಪದಲ್ಲಿರುವ ; ಸನ್ನಿಹಿತವಾಗಿರುವ : ಪ್ರತ್ಯಾಸನ್ನಮೃತ್ಯು' ಪರಾ. (ನಾ). ೨. ಹತ್ತಿರ ; ಸಮೀಪ : ಪ್ರತ್ಯಾಸನ್ನದೊಳಿರ್ಪುದು ಯತ್ಯಾಶ್ರಮಂ (ಶಾದಂಪು. ೨೦೦) ; ಪ್ರತ್ಯಾಸನ್ನದೆ ನಡೆವಾದಿತ್ಯನ ರುಚಿ ಪೊನ್ನ ಕೋಂಟೆಯಂ ಕರಗಿಸಿದಂತ ತ್ಯುಷ್ಣಕೂಟಹತಿಯಿಂ ನಿತ್ಯಂ ಪಱಿಪಱಿದು ಸಾರ್ವುವಲ್ಲಿಯ ಮುಗಿಲ್ಗಳ್ (ಕುಸ್ತಪು. ೨-೬೫). [ಸಂ.]

ಪ್ರತ್ಯಾಸನ್ನಭವ್ಯ (ನಾ). ಬೇಗನೆ ಮೋಕ್ಷವನ್ನು ಪಡೆಯುವವನು : ಆ ಜೀವನಭವ್ಯನಲ್ಲ ಪ್ರತ್ಯಾಸನ್ನಭವ್ಯಂ (ಸುಕುಮಾ. ೩-೨೨ಪ). [ಸಂ.]

ಪ್ರತ್ಯಾಸನ್ನಮೃತ್ಯು (ನಾ). ೧. ಸಾವು ಸಮೀಪಿಸಿರುವುದು ; ಮರಣ ಸನ್ನಿಹಿತವಾಗಿರುವಿಕೆ. ೨. ಮರಣಕಾಲ ಸಮೀಪಿಸಿರುವವನು : ಬಹ್ವಾರಂಭಸಂರಂಭತೌದ್ರಧ್ಯಾನಪರಿಣತನುಪಾರ್ಜಿತನರಕಾಯುಷ್ಯಂಪ್ರತ್ಯಾಸನ್ನಮೃತ್ಯುವಾಗಿ (ಆದಿಪು. ೨.೦೦ ಪ). [ಸಂ.]

ಪ್ರತ್ಯಾಸಾರ (ನಾ). ಸೈನ್ಯದ ಹಿಂಭಾಗ ; ಹಿಂಚೂಣಿ : "ಪ್ರತ್ಯಾಸಾರಃ, ವ್ಯೂಹಪಾರ್ಷ್ಣಿಃ—ಅಂಥಾ ವ್ಯೂಹಕ್ಕೆ ಹಿಂದುಗಡೇ ಕಾವಲಾಗಿರುವ ಹಿಮ್ಮತ್ ಭೌಜಿನ ಹೆಸರು" (ಸಿದ್ಧಾಂಶಿ. ೨೬೦). [ಸಂ.]

ಪ್ರತ್ಯಾಹತ (ಗು). ೧. ಹಿಮ್ಮೆಟ್ಟಿಸಿದ; ಮರಳಿ ಹೋಗುವಂತೆ ಮಾಡಿದ. ೨. ಕುಂಠಿತಗೊಳಿಸಿದ ; ಶಕ್ತಿ ಕಡಿಮೆ ಮಾಡಿದ ; ಶಕ್ತಿ ಕುಂದಿಸಿದ : ಪ್ರತ್ಯಾಹತಂಗೆಯ್' ಪರಾ. ೩. ಪ್ರತಿಯಾಗಿ ಹೊಡೆದ : (ಕ). (ನಾ). ೪. [ಸಂಗೀತ] ಆರೋಹಣ, ಅವರೋಹಣ, ಢಾಲು, ಸ್ಫುರಿತ, ಕಂಪಿತ, ಆಹತ, ಪ್ರತ್ಯಾಹತ, ತ್ರಿಪುಚ್ಛ, ಆಂದೋಳನ ಮತ್ತು ಮೂರ್ಛನ ಎಂಬ ಹತ್ತು ಬಗೆಯ ದೇಶೀಗಮಕಗಳಲ್ಲಿ ಒಂದು : ವೀಣೆಯಂಗೈಗಿತ್ತು . . . ಜಾಣುಣ್ಮೆ. ಜೋಕೆಯಿಂ ಜತಿ ರೀತಿ ತಾಳ ಪ್ರಮಾಣ ಕಂಪಿತ ಮೂರ್ಛೆ ರಸ ಪಾಡು ಬೆಡಗು ಬಿನ್ನಾಣ ಲಯಮಾಹತಪ್ರತ್ಯಾಹತವ್ಯಾಪ್ತಿಯಱಿದು ಕೇಳಿಸಿದರವರು (ಸೈಮಿಶಾ. ೨೦-೩೭); ಪ್ರತ್ಯಾಹತ—ಅವರೋಹಣಕ್ರಮದ ಆಹತ. ಉದಾ : ಸನಿ ನಿಧ ಧಪ ಪಮ (ಸಂಗೀತಂ. ೨೯). 'ಆಹತ' ಪರಾ. [ಸಂ.]

ಪ್ರತ್ಯಾಹತಂಗೆಯ್ (ಕ್ರಿ). ಶಕ್ತಿಗುಂದಿಸು ; ಕುಂಠಿತಗೊಳಿಸು : ಪ್ರಾಣಾಯಾಮದಿನೊಪ್ಪಿಯಿಂದ್ರಿಯಗಣಪ್ರತ್ಯಾಹತಂಗೆಯ್ಯುತುಂ (ಮೈಸೂಪು. ೩-೦೦೭). [ಪ್ರತ್ಯಾಹತ + ಕೆಯ್$_1$]

ಪ್ರತ್ಯಾಹರಿಸು (ಕ್ರಿ). ನಿಯಂತ್ರಿಸು ; ಅಧೀನದಲ್ಲಿಡು : ವಿವಿಧ ವಿಷಯಂಗಳೊಳ್ ಬಾಹ್ಯೇಂದ್ರಿಯಂಗೂಡಿ ತವೆ ಚರಿಪ ಚಿತ್ತಮಂ ಪ್ರತ್ಯಾಹರಿಸಿ (ಪದ್ಮಣಾ. ೨-೪೮). [< ಪ್ರತ್ಯಾಹಾರ + — ಇಸು$_3$]

ಪ್ರತ್ಯಾಹಾರ (ನಾ). ೧. ಹಿಂದಕ್ಕೆ ತೆಗೆದುಕೊಳ್ಳುವುದು ; ಮರಳಿ ಪಡೆಯುವುದು : ನಿನ್ನನ್ನು ಪ್ರಸನ್ನ ಮಾಡುವುದಕ್ಕಾಗಿ ಮತ್ತೆ ಅದನ್ನು ಪ್ರತ್ಯಾಹಾರ ಮಾಡುತ್ತಿದ್ದೇನೆ (ಕುರಿಹಿಂ. ೬೩). ೨. [ಯೋಗ] ಅಷ್ಟಾಂಗಗಳಲ್ಲಿ ಒಂದು ; ಇಂದ್ರಿಯಗಳನ್ನು ಆಯಾ ವಿಷಯಗಳಿಂದ ಹಿಂತಿರುಗಿಸಿ ಉದ್ದಿಷ್ಟವಾದ ಕಡೆಯಲ್ಲಿ ಮನಸ್ಸನ್ನು ನಿಲ್ಲಿಸುವುದು ; ಇಂದ್ರಿಯಗಳನ್ನು ವಿಷಯಗಳಿಂದ ನಿಗ್ರಹಿಸಿ ನಿರ್ಬಂಧದಲ್ಲಿಟ್ಟುಕೊಳ್ಳುವುದು. — ನಿಯಂತ್ರಿಸುವುದು : ಯಮ ನಿಯಮಆಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣ ಸಮಾಧಿಗಳೆಂಬ ಅಷ್ಟಾಂಗಯೋಗದೊಳಗೆ (ಅಖಂಡೇ. ೨೦೪-೫೫) ; ಪ್ರತ್ಯಾಹಾರವ ಕೊಂಬ ಮಿಥ್ಯಾಯೋಗವ ಬಿಡಿಸಿ ತಥ್ಯವಾಗಿರ್ದ ನಿತ್ಯತೃಪ್ತಿಯ ಲಿಂಗವಿತ್ತ ಶ್ರೀ ಗುರುವೆ ಕೃಪೆಯಾಗು (ಮೈಲಾರ. ೫೦-೯೭); ಪ್ರತ್ಯಾಹಾರವೆಂದರೆ ಚಕ್ಷುರಾದೀಂದ್ರಿಯಗಳನ್ನು ಅವುಗಳ ವಿಷಯಗಳಿಂದ ಹಿಂತಿರುಗಿಸಿ ಅಂತಃಕರಣಕ್ಕೆ ಅನುಕೂಲವಾಗಿರಿಸುವುದು (ಹಿಂದಸಾ. ೦೦೬). ೩. [ಕಾವ್ಯಮೀ] ದೃಶ್ಯ ಕಾವ್ಯಗಳನ್ನು ಅಭಿನಯಿಸುವಾಗ ಮಾಡುವ ಪೂರ್ವರಂಗದ ಒಂದು ಕ್ರಿಯೆ ; ಉಪಕರಣಗಳನ್ನು ತಂದಿಟ್ಟುಕೊಳ್ಳುವುದು : ಇದರಲ್ಲಿ 'ಪ್ರತ್ಯಾಹಾರ' (ವಾದ್ಯಗಳನ್ನು ತಂದು ಇಟ್ಟುಕೊಳ್ಳುವುದು) . . . ರಂಗದೇವತಾಪೂಜೆ ಮುಂತಾದ ನಾನಾಅಂಗಗಳಿವೆ (ಕೈಬಿಡಿ. ೨೦೨). ೪. [ವ್ಯಾಕ] ಸಂಸ್ಕೃತವ್ಯಾಕರಣದಲ್ಲಿ ಒಂದು ಸಂಜ್ಞೆ; ಪ್ರ ಹದಿನಾಲ್ಕು ಮಾಹೇಶ್ವರಸೂತ್ರಗಳ 'ಇತ್' ಸಂಜ್ಞೆಯುಳ್ಳ ಕೊನೆಯ ವರ್ಣದೊಡನೆ ಸೇರಿಸಿ ಹೇಳುವ ಮೊದಲನೆಯ ವರ್ಣಕ್ಕೆ ಮತ್ತು ಅವೆರಡರ ಮಧ್ಯದ ವರ್ಣಗಳಿಗೆ ಉಪಯೋಗಿಸುವ ಸಂಜ್ಞೆ. [ಸಂ.]

ಪ್ರತ್ಯುಕ್ತಿ (ನಾ). ಮರುನುಡಿ ; ಜವಾಬು : ಉಕ್ತಿ ಪ್ರತ್ಯುಕ್ತಿಯಿಂದಲೇ ಕಾಲವನ್ನು ಕಳೆಯುತ್ತಿದ್ದರೆ ಕೆಲಸ ಸಾಗುವುದಿಲ್ಲ (ಕೂಡಿ). [ಸಂ.]

ಪ್ರತ್ಯುತ್ಕ್ರಮ (ನಾ). ೧. ಯುದ್ಧಕ್ಕಾಗಿ ನಡೆಸುವ ಪ್ರಯತ್ನ,—ಸನ್ನಾಹ : "ಪ್ರತ್ಯುತ್ಕ್ರಮಃ, ಪ್ರಯೋಗಾರ್ಥಃ.—ಯುದ್ಧಕ್ಕೆ ಸೈನಿಕರು ಕೆಲಸವನ್ನು ನಡೆಸುವಿಕೆ" (ಸಿದ್ಧಾಂಶಿ. ೩೬೪). ೨. ತೊಡಗುವುದು ; ಮೊದಲು ಮಾಡುವಿಕೆ. [ಸಂ.]

ಪ್ರತ್ಯುತ್ತರ (ನಾ). ೧. = ಪ್ರತ್ಯುಕ್ತಿ : ವನ್ಯೂಕನು ಪ್ರತ್ಯುತ್ತರವನ್ನು ಕೊಡಲಿಲ್ಲ (ಮುಲಪಾ. ೫೬). ೨. ಎದುರುಮಾತು ; ಪ್ರತಿಮಾತು: ಸ್ವಾಮಿಭೃತ್ಯಸಂಬಂಧವೆ ಎನ್ನ ಭಕ್ತಿ ಪ್ರತ್ಯುತ್ತರ ನಾಯಕನರಕ ಕೂಡಲ ಸಂಗಮದೇವಾ (ಬಸವ. ೨೯೮) ; ಗುರುಭಕ್ತನಾದ ಬಳಿಕ ಗುರುವಿಂಗೆ ಪ್ರತ್ಯುತ್ತರವ ಕೊಡದಿರದೇಕು (ಅಖಂಡೇ. ೦೨೩-೮೦). [ಸಂ.]

ಪ್ರತ್ಯುತ್ತುರಂಗುಡು (ಕ್ರಿ). ಜವಾಬನ್ನು ಹೇಳು ; ಉತ್ತರ ಕೊಡು : ಸತ್ಯಭಾಮಾದೇವಿ ನುಡಿದ ಕಟಕಿಯ ಮಾತಿಗೆ . . . ಪ್ರತ್ಯುತ್ತರಂಗುಡುವೆ ನೆಂಬನಿತಱೊಳ್ (ಸೈಮಿಶಾ. ೬-೫೦).

[ಪ್ರತ್ಯುತ್ತರ+ಕುಡು$_1$ (< ಕೊಡು$_1$)]

ಪ್ರತ್ಯುತ್ತರಂಬಡೆ (ಕ್ರಿ). ಜವಾಬನ್ನು ಪಡೆ; ಉತ್ತರವನ್ನು ಹೊಂದು: ಸಮ್ಮುಖದೊಳೊಮ್ಮೆ ಮಾತಾಡಿದವನೇ ಶೈವಮಾರ್ಗಿ ಪ್ರತ್ಯುತ್ತರಂಬಡೆದವನೆ ನಿತ್ಯನು (ಸಿಪು. ೦-೨೨). [ಪ್ರತ್ಯುತ್ತರ + ಪಡೆ$_1$]

ಪ್ರತ್ಯುತ್ಥಾನ (ನಾ). ಅತಿಥಿಯ ಆಗಮನವಾದಾಗ ಗೌರವಸೂಚಕವಾಗಿ ಆಸನದಿಂದ ಎದ್ದು ನಿಲ್ಲುವುದು : ಪ್ರತ್ಯುತ್ಥಾನಾನಂತರಮತ್ಯುನ್ನತಕನಕಪೀಠಮಂ ಮುನಿಗಿತ್ತು (ಪಗಂ. ೨-೪೨). [ಸಂ.]

ಪ್ರತ್ಯುತ್ಪನ್ನ (ಗು). ೧. ಕೂಡಲೆ ಉಂಟಾದ ; ತತ್ಕ್ಷಣದಲ್ಲಿ ಸ್ಫುರಿಸಿದ : 'ಪ್ರತ್ಯುತ್ಪನ್ನಬುದ್ಧಿ' ಪರಾ. ೨. ಪ್ರತಿಕ್ರಿಯೆಯ.

ಪ್ರತ್ಯುತ್ಪನ್ನವಾಚಸ್ಪತಿ=(ಹೊಯ್ಸಳಚಕ್ರವರ್ತಿ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆಯ) ಒಂದು ಬಿರುದು: ಪ್ರತ್ಯುತ್ಪನ್ನವಾಚಸ್ಪತಿಯುಂ ಮುನಿಜನವಿನೇಯಜನವಿನೀತೆಯುಂ . . . ಅಪ್ಪ ವಿಷ್ಣುವರ್ದ್ಧನ ಪೊಯ್ಸಳದೇವರ ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ . . . ಸವತಿಗಂಧವಾರಣಜಿನಾಲಯಮಂ ಮಾಡಿಸಿ (ಎಕ. II (R), ೦೬೨-೩೯ ; 1128). [ಸಂ.]

ಪ್ರತ್ಯುತ್ಪನ್ನಪ್ರತಿಭ (ನಾ). ಸಮಯಕ್ಕೆ ಸರಿಯಾಗಿ ಸ್ಫುರಿಸುವ ಬುದ್ಧಿಯುಳ್ಳವನು: ಆಯಾ ಕಾಲಕ್ಕೆ ತಕ್ಕಂತೆ ಸ್ಫುರಿಸುವ ಬುದ್ಧಿಯುಳ್ಳವನು : ಮಹಾಸಂಧಿವಿಗ್ರಹಿಗೆ ಬೆಸಸಿದೊಡಾಗಳಾತಂ . . . ಪ್ರತ್ಯುತ್ಪನ್ನಪ್ರತಿಭನುಂ . . . ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು (ಆದಿಪು. ೦೪-೪೩ ಪ). [ಸಂ.]

ಪ್ರತ್ಯುತ್ಪನ್ನಬುದ್ಧಿ (ನಾ). ಸಮಯಕ್ಕೆ ತಕ್ಕಂತೆ ಹೊಳೆಯುವ ಬುದ್ಧಿ; ಸಮಯಸ್ಫೂರ್ತಿ: ಈ ಪ್ರತ್ಯುತ್ಪನ್ನಬುದ್ಧಿಯ ಸಹಾಯದಿಂದಲೇ ಅನೇಕ ಅನರ್ಥಗಳಿಂದ ಆತನು ಪಾರಾದನು (ಶಾರದ. ೦೦೬). [ಸಂ.]

ಪ್ರತ್ಯುತ್ಪನ್ನಮತಿ (ನಾ). ೧. = ಪ್ರತ್ಯುತ್ಪನ್ನಬುದ್ಧಿ : ಆಕೆಯ ಪ್ರತ್ಯುತ್ಪನ್ನಮತಿಯಂ ಮನಂಗೊಂಡು ಪೊಗಟುತ್ತುಂ (ಶಾಂತಿಪು. ೮-೮೫ಪ) ; ಈ

ಬಗೆಯ ಅಧ್ಯವಸಾಯವೂ, ದೃಢಸಂಕಲ್ಪವೂ, ಇಂತಹ ಪ್ರತ್ಯುತ್ಪನ್ನ ಮತಿಯೂ ಹುಚ್ಚರಿಗಿರಲು ಸಾಧ್ಯವೇ ? (ಶಿನ್ನಶೇ. ೧೩೪). ೨. = ಪ್ರತ್ಯುತ್ಪನ್ನಪ್ರತಿಭ : "ಪ್ರತ್ಯುತ್ಪನ್ನಮತಿಃ, ತತ್ಕಾಲೋತ್ಪನ್ನಧೀಃ — ಈ ೨ ಉತ್ಪನ್ನಮತಿ" (ಹಲಾಯು. ೬೨-೨೨೧). [ಸಂ.]

ಪ್ರತ್ಯುದ್ಗಮನ (ನಾ). ಗಣ್ಯರಂ ಬಂದಾಗ ಮರ್ಯಾದೆಯಿಂದ ಎದ್ದು ಎದುರಿಗೆ ಹೋಗುವುದು,— ಎದುರುಗೊಳ್ಳುವುದು,— ಸ್ವಾಗತಿಸುವುದು: ಚಂದ್ರಾಪೀಡನುಂ ವೈಶಂಪಾಯನಪ್ರತ್ಯುದ್ಗಮನಾರ್ಥಂ ಶುಕನಾಸಮುಖದಿಂ ತಂದೆಯಿಂ ಬೀಟ್ಕೊಂಡು (ಕಾದಂಉ. ೪೧೭). [ಸಂ.]

ಪ್ರತ್ಯುದ್ಭವ (ನಾ). ಮತ್ತೆ ಹುಟ್ಟುವಿಕೆ ; ಜೀವ ಬರುವಿಕೆ : ಒರ್ವನಮೃತಸ್ವರೂಪದೊಳೊರ್ವಂ ತಾನಿರ್ದಪಂ ತದಮೃತದಿನಂತಾಯಿರ್ವರ್ಗಂ ಪ್ರತ್ಯುದ್ಭವಮುರ್ವೀಪತಿ ಸಮನಿಸಿರ್ಪುದೇಂ ಸಂದೆಯಮೇ (ಕಾದಂಉ. ೬೫೦). [ಸಂ.]

ಪ್ರತ್ಯುಪಕಾರ (ನಾ). ಒಬ್ಬರು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಮಾಡುವ ಉಪಕಾರ ; ತಾನು ಪಡೆದ ಉಪಕಾರಕ್ಕೆ ಪ್ರತಿಯಾಗಿ ಮಾಡುವ ಉಪಕಾರ : ಪ್ರತ್ಯುಪಕಾರಮಂ ನಿನಗೆ ಮಾಡುವ ಸೈಪೆನಗಿಲ್ಲ (ಪುಷ್ಪಪು. ೬-೩೩) ; ಬಿಸತಂತುವನು ತಿಂದೆ . . . ಪ್ರತ್ಯುಪಕಾರವನೇನನು ನಿನ್ನಿಂದೆ ಪಡೆಯಿತು ಕೊಳವು (ಇಂಪಾಪ. ೦೭೪-೫೯). [ಸಂ.]

ಪ್ರತ್ಯುಪಕೃತಿ (ನಾ). = ಪ್ರತ್ಯುಪಕಾರ : ಪ್ರತ್ಯುಪಕೃತಿಯಿದಕಿಲ್ಲದು ಸತ್ಯಂ ಪ್ರಾಣೋಪಕಾರಕದಱಿಂ ಭುವನಸ್ತುತ್ಯ ಸಲೆ ನಿಮ್ಮ ಭೃತ್ಯರ ಭೃತ್ಯಕೆಯಿಂ ಬಾಳ್ವೆವೆಮ್ಮನುದ್ಧರಿಸೊಲವಿಂ (ಪೃಷಪ. ೨೦-೪೫). [ಸಂ.]

ಪ್ರತ್ಯುಪಕೃತಿವಡೆ (ಕ್ರಿ). ಪ್ರತ್ಯುಪಕಾರವನ್ನು ಹೊಂದು : ರತಖಿನ್ನ ಕಿನ್ನರೀಸನ್ನತೆಯಂ ತಣ್ಮಲೆದು ಬಳೆದು ಸುಯ್ಯಿಂ ಸುರಭೀಕೃತಮಾಗುತ್ತುಂ ಪ್ರತ್ಯುಪಕೃತಿವಡೆವುದು ತದುಪವನದ ಪಾವನಪವನಂ (ಶಂದ್ರಪು. ೦೦-೪೨).

[ಪ್ರತ್ಯುಪಕೃತಿ + ಪಡೆ$_1$]

ಪ್ರತ್ಯುಪಾಯ (ನಾ). ಒಂದು ಉಪಾಯಕ್ಕೆ ಪ್ರತಿಯಾಗಿ ಮಾಡುವ ಉಪಾಯ ; ಹಂಚಿಕೆಗೆ ಮಾಡುವ ಪ್ರತಿಹಂಚಿಕೆ : ಇಂತಹ ಮೋಸದ ಕೃತ್ಯಗಳನ್ನು ಬಯಲು ಮಾಡುವುದರಿಂದ ಆವ ಪಾಪವೂ ಬರಲಾರದೆಂದು . . . ಇಲ್ಲಿ ಪ್ರತ್ಯುಪಾಯಗಳನ್ನು ಅವಲಂಬಿಸುವೆನು (ಶಿನ್ನಶೇ. ೨೪). [ಸಂ.]

ಪ್ರತ್ಯುಪಾಯನ (ನಾ). ಕಾಣಿಕೆಗೆ ಪ್ರತಿಯಾಗಿ ಕೊಡುವ ಕಾಣಿಕೆ : ಅದಱಿಂ ನೀನುಮಾತಂಗೆ ಸಾಮಪುರಸ್ಸರಂ ಪ್ರತ್ಯುಪಾಯನಂಬೆರಸು ಅನುಮತನುಮಾಪ್ತನುಮಧಿಗತಶಾಸ್ತ್ರನುಂ . . . ಅಪ್ಪ ದೂತಮುಖ್ಯನ ನಟ್ಟಿ (ಶಾಂತಿಪು. ೨-೫೦ ಪ). [ಸಂ.]

ಪ್ರತ್ಯುಷ (ನಾ). ಬೆಳಗಿನ ಜಾವ ; ಪ್ರಾತಃಕಾಲ ; ಮುಂಜಾವ : "ಪ್ರತ್ಯೂಷಃ, ಅಹರ್ಮುಖಂ, ಕಲ್ಯಂ, ಉಷಃ, ಪ್ರತ್ಯುಷಃ, ಪ್ರಭಾತಂ-೬ ಪ್ರಾತಃಕಾಲದ ಹೆಸರುಗಳು ಅಂದರೆ ಬೆಳಗ್ಯೆ" (ನಿಘಂತಿ. ೩೪). [ಸಂ.]

ಪ್ರತ್ಯುಷೆ (ನಾ). = ಪ್ರತ್ಯುಷ : ಮುನಿವರಂ ಮರುದಿನಂ ಪ್ರತ್ಯುಷೆಗೆ, ಕರೆದೊಯ್ದನವರಿರ್ವರಂ ಕೂಡಲಿಯ ದರ್ಶನಕೆ (ಶ್ರೀರಾಮಾ. ೦೩೭-೩೩೫). [ಸಂ. ಪ್ರತ್ಯುಷ]

ಪ್ರತ್ಯೂರ್ಜಿತ (ನಾ). ಮತ್ತೆ ಏಳಿಗೆಯನ್ನು ಪಡೆದವನು; ಮತ್ತೆ ನೆಲೆಯಾಗಿ ನಿಂತವನು; ಸತ್ತ ಮೇಲೆ ಮತ್ತೆ ಬದುಕಿ ಬಂದ ವ್ಯಕ್ತಿ : ಚಂದ್ರಮನೆ ದೇವರ್ಗೆ ಚಂದ್ರಾಪೀಡನಾಗಿ ಪುಟ್ಟಿದನೆಂಬುದುಮನವರ್ ಕತಿಪಯದಿನದಿಂ ಪ್ರತ್ಯೂರ್ಜಿತರಾದಪ್ಪುದುಮು . . . ಬಿನ್ನವಿಸೆ (ಕಾದಂಉ. ೬೪೩). [ಸಂ.]

ಪ್ರತ್ಯೂಷ (ನಾ). = ಪ್ರತ್ಯುಷ : "ಕಾಲ್ಯಂ, ಉಷಃ, ಪ್ರತ್ಯೂಷಂ . . . ವ್ಯುಷ್ಟಂ—ಈ ೧೦ ಸಮಟ್ಟ(ಡೆ)ಱ^3" (ಹಲಾಯು. ೦೯-೦೦೦); ಸೊಗಯಿಪ ತಾಮರೆಗೊಳನಂ ಪ್ರತ್ಯೂಷದೊಳ್ ಜಿನಾಂಬಿಕೆ ಕಂಡಳ್ (ಶಾಂತಿಪು. ೯-೨೦೫); ಏಳು ನೀ ಪ್ರತ್ಯೂಷದಲಿ ಶಶಿಮೌಳಿ ಮೈದೋಱಲಿ (ಕುಮಾಲಿ. ೪-೨೧). [ಸಂ.]

ಪ್ರತ್ಯೂಷಕೃತ್ಯ (ನಾ). ಬೆಳಗಿನ ಜಾವದಲ್ಲಿ ಮಾಡಬೇಕಾದ ವಿಧಿಪೂರ್ವಕವಾದ ಕರ್ಮ : ನಿದ್ರಾಲಿಂಗನವಿಮುಖನಾಗಿ ಸೆಜ್ಜೆಯಿಂದೆಟ್ಟು ಪ್ರತ್ಯೂಷಕೃತ್ಯಮಂ ನಿರ್ವರ್ತಿಸಿ (ಶಾಂತಿಪು. ೮-೧೧೪ ಪ) ; ನೃಪನೊಡರಿಸಿದಂ ಬೇಗಂ ಪ್ರತ್ಯೂಷಕೃತ್ಯಮಂಗಳವಿಧಿಯರೆ (ಪುಷ್ಪಪು. ೬-೨೪). [ಸಂ.]

ಪ್ರತ್ಯೂಹ (ನಾ). ಅಡ್ಡಿ ; ತಡೆ ; ಅಡಚಣೆ: "ವಿಘ್ನಃ, ಅಂತರಾಯಃ, ಪ್ರತ್ಯೂಹಃ, ವ್ಯಪಾಯಃ—ಈ ೪ ವಿಘ್ನಂ" (ಹಲಾಯು. ೬೬-೨೪೭); ಮುನಿಯ ತಪಕ್ಕೆ ಏನಾನುಂ ಪ್ರತ್ಯೂಹಂ ಜನಿಯಿಸಿದೊಡೆ ಮಾಬ್ಬಿ ತತ್ಸಂಧಾರಣಾತ್ಮಕಸಮಾಧಿಯುಂ (ತತ್ಪ್ರಪ್ರ. ೨೬೬) ; ಬೋಧಿಸಿದಳಮಿತ ಕುಟಿಲೋಪಾಯತಂತ್ರಗಳ . . . ಮಂದರೆಯು ರಾಮಾಭಿಷೇಕಕಂ ಪ್ರತ್ಯೂಹರೂಪಳಾಗಿ (ವಂಕಾರಾ. ೨-೪ ಸೂಪನ). [ಸಂ.]

ಪ್ರತ್ಯೇಕ (ಗು). ೧. ಬೇರೆ ಬೇರೆಯಾದ; ಭಿನ್ನ ಭಿನ್ನವಾದ: ಪ್ರತ್ಯೇಕಾಷ್ಟೋತ್ತರಶತಮಿತ್ಯುಪಯುಕ್ತಂಗಳಿರ್ಪುವೊಪ್ಪದಿಂ (ಶಂದ್ರಪು. ೦೫-೦೪); ಪ್ರತ್ಯೇಕಗ್ರಾಮಾನುಗ್ರಾಮಗಳು ಹಳ್ಳಿ ಹಿರಿಊರು ಪುರಗಳು ಮೊದಲಾದ ಪ್ರತ್ಯೇಕ ಗ್ರಾಮಗಳಿಂದ (ಎಕ. XIV, ಗುಂಡ್ಡುಪೇ. ೬-೦೦ ; 1520); ನಾಟಕಶಾಲೆಯಲ್ಲಿ ಸ್ತ್ರೀಯರಿಗೂ ಪುರುಷರಿಗೂ ಪ್ರತ್ಯೇಕ ಸ್ಥಾನಗಳನ್ನು ಏರ್ಪಡಿಸಿದೆ (ಕೂಡಿ). (ನಾ). ೨. ಬೇರೆಯಾದುದು; ಭಿನ್ನವಾದುದು: ಉತ್ತರವನ್ನು ಪ್ರತ್ಯೇಕವಾಗಿ ಬರೆಯಬೇಕಾಗಿಲ್ಲ (ಶಿಕ್ಷದ. ೩೫೨); ಅದಕ್ಕೊಂದು ಪ್ರತ್ಯೇಕವಾದ ವ್ಯಾಕರಣರಚನೆ ಇದೆ (ದ್ರಾಪಿಪ. ೦೪೦). [ಸಂ.]

ಪ್ರತ್ಯೇಕಂ (ಅ). ಬೇರೆಯಾಗಿ; ಭಿನ್ನವಾಗಿ; ಅನ್ಯರೀತಿಯಲ್ಲಿ: ಪ್ರತ್ಯೇಕಂ ಪಾರ್ಥನಿರಲ್ ದೈತ್ಯನಸಂಖ್ಯಾತಕೋಟಿಮೂರ್ತಿಯನಾಂತೊಂದತ್ಯಾರ ಭಟೆಯಿನಿರ್ದಂ (ಜಗನಿ. ೦೫-೬); ಪೋಲೆಂಬುದುಂ ಅಂತೆ ಎಂಬುದುಂ ಉಪಮೆಯೊಳ್ ಪ್ರತ್ಯೇಕಂ ಪತ್ತುಗುಂ (ಕಮದ. ೨೦೪ ವೃತ್ತಿ); ಬೇಱೆಬೇಱ ವರವರ್ಗೆ ಪ್ರತ್ಯೇಕಮೊಂದೊಂದು ಬಳ್ಳ ಮುಕ್ತಾಫಲವನು . . . ಕುಡುವುದು (ಶ್ರೀಪಾಣಾ. ೨-೨೭). [ಸಂ.]

ಪ್ರತ್ಯೇಕತಾವಾದ (ನಾ). [ರಾಜನೀ] ಮೊದಲು ಸಂಯುಕ್ತವಾಗಿದ್ದ ರಾಜ್ಯವು ಬೇರ್ಪಟ್ಟು ಸ್ವತಂತ್ರರಾಜ್ಯವಾಗಬೇಕೆಂದು ವಾದಿಸುವುದು, — ಕೇಳುವುದು: "(ಸಾಮ್ರಾಜ್ಯ, ಮೊ.ಗಳಲ್ಲಿ) ಪ್ರತಿಯೊಂದರ ಸಂಸ್ಥಾನಕ್ಕೂ ರಾಜಕೀಯ ಸ್ವಾತಂತ್ರವಿರಬೇಕೆಂಬ ವಾದ, ತತ್ತ್ವ ; ಪ್ರತ್ಯೇಕತಾವಾದ" (Particularism. ಇಂಕನಿ). [ಸಂ.]

ಪ್ರತ್ಯೇಕತೆ (ನಾ). ಬೇರೆಯಾಗಿರುವಿಕೆ ; ಭಿನ್ನತೆ: ಇಲ್ಲಿ ಮಹತ್ವದ ಪ್ರಶ್ನೆಯೆಂದರೆ ಕೊನೆಯ ಹಂತದಲ್ಲಿ ಜೀವವು ದೇವನಲ್ಲಿ ಪೂರ್ಣವಾಗಿ ಲೀನವಾಗುವುದೋ ಅಥವಾ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಬರುವುದೋ ಎಂಬುದು (ಧರ್ಮಸಾ. ೦೨೩). [ಸಂ. ಪ್ರತ್ಯೇಕತಾ]

ಪ್ರತ್ಯೇಕಿಸು (ಕ್ರಿ). ಬೇರೆ ಮಾಡು ; ಬೇರ್ಪಡಿಸು : ಅಡುಗೆಮನೆಯು ಸುವ್ಯವಸ್ಥಿತವಾದುದೆಂದಾಗಬೇಕಾದರೆ ಬೇರೆ ಬೇರೆ ಕೆಲಸಗಳಿಗೆ ಸ್ಥಳವನ್ನು ಪ್ರತ್ಯೇಕಿಸಿಡುವುದರಲ್ಲಿ ಪರಸ್ಪರ ಹೊಂದಾಣಿಕೆಯಿರಬೇಕು (ಅಡುಸಾ. ೦೨).

[ಪ್ರತ್ಯೇಕ + —ಇಸು$_3$]

ಪ್ರತ್ಯೇಕೀಕರಣ (ನಾ). ಬೇರ್ಪಡಿಸುವಿಕೆ; ಬೇರೆ ಮಾಡುವಿಕೆ: ಅವರ ಆಸಕ್ತಿಯನ್ನು ಈಡೇರಿಸಿ ಪರಿಪೂರ್ಣವಾದ ಜ್ಞಾನ ಹುಟ್ಟುವಂತೆ ಮಾಡುವುದು ಈ ಪ್ರತ್ಯೇಕೀಕರಣದಿಂದ ತೊಡಕಾಗಿ ಪರಿಣಮಿಸುತ್ತದೆ (ಶಿಕ್ಷದ. ೨೪೯). [ಸಂ.]

ಪ್ರಥನ (ಗು). ಹರಡಿರುವ ; ವಿಸ್ತರಿಸಿರುವ. [ಸಂ.]

ಪ್ರಥಮ (ಗು). ೧. ಮೊದಲನೆಯ ; ಆದಿಯಾದ : ಪ್ರಥಮ

ದ್ವಿತೀಯಕಲ್ಪಪ್ರಥಿತಸುರಾಂಗನೆಯರಿತರಕಲ್ಪಜರ್ಗೆ ಮನೋರಥಮಂ ಪುಟ್ಟಿಸುವರ್ (ಆಸಪು. ೦೦-೫೭). ೨. ಪ್ರಧಾನವಾದ ; ಮುಖ್ಯವಾದ (ನಾ). ೩. ಮೊದಲನೆಯದು. ೪. ಮೊದಲನೆಯವನಂ ; ಮೊದಲಿಗ : ನಮ್ಮ ಊರಿನಿಂದ ವಿದೇಶಕ್ಕೆ ಹೋದವರಲ್ಲಿ ಅವನೇ ಪ್ರಥಮ (ರೂಢಿ). ೫. ಹಿಂದಿನದು ; ಪೂರ್ವ : "ಆದಿಃ, ಅಗ್ರಂ, ಪು(ರಾ)ರಂ, ಪೂರ್ವಂ, ಪ್ರಥಮಂ, ಪ್ರಾಕ್, ಪುರಃ - ಈ ೭ ಮುನ್ನಂ" (ಹಲಾಯು. ೦೦೭-೨೨) ; ಪ್ರಥಮಕ್ಕುತ್ತರರಾಮಚಂದ್ರಚರಿತಂ ಗೀರ್ವಾಣಸದ್ವಾಣಿಯಿಂದತಿರಮ್ಯಂ ಭವಭೂತಿಯಿಂ ವಿರಚಿತಂ (ಉರಾಶ. ೦). ೬. ಊಟದಲ್ಲಿ ಎಲ್ಲಕ್ಕಿಂತ ಮುಖ್ಯವಾದುದು ಮತ್ತು ಮೊದಲು ಬಡಿಸುವುದು ; ಪರಮಾನ್ನ ; ಪಾಯಸ. ೭. [ಜೈನ] (ಜೈನವೇದವೆಂದು ಪ್ರಸಿದ್ಧವಾದ) ನಾಲ್ಕು ಅನುಯೋಗಗಳಲ್ಲಿ ಮೊದಲನೆಯದು : ಪ್ರಥಮ, ಕರಣ, ಚರಣ, ದ್ರವ್ಯ ಎಂಬ ನಾಲ್ಕು ಅನುಯೋಗಗಳನ್ನು ಜೈನರ ಚತುರ್ವೇದಗಳೆಂದು ಕರೆಯಬಹುದು (ಭಾರದ. ೧೭೯). 'ಅನುಯೋಗ' ಪರಾ. [ಸಂ.]

ಪ್ರಥಮಋತು (ನಾ). ಹೆಣ್ಣಿನ ಮೊದಲನೆಯ ಮುಟ್ಟು ; ಮೈನೆರೆಯುವಿಕೆ. [ಸಂ.]

ಪ್ರಥಮಕಲ್ಪ (ನಾ). ೧. ಮೊದಲನೆಯ ನಿಯಮ,—ವಿಧಿ : (ಕಿ). ೨. [ಜೈನ] ಮೊದಲನೆಯ ಸ್ವರ್ಗ ; ಸೌಧರ್ಮ : ಕಲಶೋದ್ಧಾರಮಂತ್ರಪೂರ್ವಕಂ ಪ್ರಣತಿಪ್ರಸ್ತಾವನಪುರಸ್ಸರಂ ಮಾಡಿ ಪ್ರಥಮಕಲ್ಪೇಶ್ವರನುಮೀಶಾನೇಂದ್ರನುಮೆತ್ತಿಕೊಳೆ (ಆದಿಪು. ೭-೮೦ವ) ; ಪ್ರಥಮಕಲ್ಪಾಮರೇಂದ್ರಂ . . . ದಿವಿಜೇಂದ್ರಲೋಕೋತ್ತಮಭೂಷಣಂಗಳಂ ತುಡಿಸೆ (ಶಾಂತಿಪು. ೦೦-೫೭ ವ). [ಸಂ.]

ಪ್ರಥಮಕಲ್ಯಾಣ (ನಾ). [ಜೈನ] ತೀರ್ಥಂಕರನ ಜೀವಿತದ ಐದು ಮಹಾಕಲ್ಯಾಣಗಳಲ್ಲಿ ಮೊದಲನೆಯದು ; ಪಂಕಚಲ್ಯಾಣಗಳಲ್ಲಿ ಒಂದು ; ಗರ್ಭಾವತರಣ : ದೇವೇಂದ್ರಂ . . ಪ್ರಥಮಕಲ್ಯಾಣಮಂ ನಿರ್ವರ್ತಿಸಿದಂ (ಆದಿಪು. ೭-೩೨ವ). [ಸಂ.]

ಪ್ರಥಮಚಿಕಿತ್ಸೆ (ನಾ). ಅಪಾಯಕರವಾದ ಸಂದರ್ಭಗಳಲ್ಲಿ ಮೊತ್ತಮೊದಲು ನಡೆಸಬೇಕಾದ ವೈದ್ಯಕೀಯಚಿಕಿತ್ಸೆ,— ಶುಶ್ರೂಷೆ : ತಿಮ್ಮಪ್ಪ ತನಗೆ ತಿಳಿದ ಪ್ರಥಮಚಿಕಿತ್ಸೆಯನ್ನೆಲ್ಲ ಉಪಯೋಗಿಸಿದ (ಮುಂಗಾಮು. ೬೩). [ಸಂ. ಪ್ರಥಮಚಿಕಿತ್ಸಾ]

ಪ್ರಥಮತಃ (ಅ). ಮೊತ್ತಮೊದಲು : ಮದ್ರಾಸಿನ ಸಭೆಯೊಂದರಲ್ಲಿ ಸ್ವಾಮಿಗಳು ಚಿಕ್ಕಾಗೋದ ಸರ್ವಧರ್ಮಸಮ್ಮೇಳನಕ್ಕೆ ಹೋಗುವುದಾಗಿ ಪ್ರಥಮತಃ ಬಹಿರಂಗ ಪಡಿಸಿದರು (ಧರ್ಮಸಾ. ೪೮); ಪ್ರಥಮತಃ ಅವನು ತೀರ ಹತ್ತಿರವಿದ್ದ . . . ದೊಡ್ಡ ಜಮೀನಿಗೆ ಹೋದನು (ಪುನರು. ೨೬೦). [ಸಂ.]

ಪ್ರಥಮತರಗತಿ (ನಾ). ೧. ಮೊದಲನೆಯ ವರ್ಗ,—ದರ್ಜೆ : ರೈಲಿನ ಪ್ರಥಮತರಗತಿಯ ಟಿಕೆಟ್ಟಿನ ದರವನ್ನು ಕಚೇರಿಯವರೇ ಕೊಟ್ಟಿದ್ದರು (ರೂಢಿ). ೨. ಪರೀಕ್ಷೆಯಲ್ಲಿ ಶೇಕಡಾ ಅರುವತ್ತಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆಯಾಗುವಿಕೆ : ಮಕ್ಕಳಿಬ್ಬರೂ ಪ್ರಥಮತರಗತಿಯಲ್ಲಿ ಪಾಸಾಗಿದ್ದಾರೆ (ರೂಢಿ). [ಪ್ರಥಮ + ತರಗತಿ]

ಪ್ರಥಮತ್ವ (ನಾ). ೧. ಮೊದಲನೆಯದಾಗಿರುವಿಕೆ. ೨. [ವ್ಯಾಕ] ವರ್ಗದ ಮೊದಲನೆಯ ಅಕ್ಷರವಾಗುವಿಕೆ : ಧಾತುವಿನಂತ್ಯದ ವರ್ಗೋಪೇತತೃತೀಯಾಕ್ಷರಕ್ಕೆ ತಾಂ ಪ್ರಥಮತ್ವಂ (ಶಮದ. ೨೩೯). [ಸಂ.]

ಪ್ರಥಮದ್ವೀಪ (ನಾ). [ಜೈನ] ಗ್ರಂಥಗಳಲ್ಲಿ ಹೇಳಿರುವ ಮುಖ್ಯವಾದ ಎಂಟುದ್ವೀಪಗಳಲ್ಲಿ ಮೊದಲನೆಯದು ; ಲವಣಸಮುದ್ರದಿಂದ ಸುತ್ತುಗಟ್ಟಲ್ಪಟ್ಟಿರುವ ಜಂಬೂದ್ವೀಪ : ಆಂತತಿಕ್ರಾಂತ ಜ್ಯೋತಿಃಕಳಾಪಮಾಂ ಪ್ರಾಪ್ತಪ್ರಥಮದ್ವೀಪಮುಮಾಗಿ (ಕಂದ್ರಪು. ೦೨-೧೪೩ ವ). 'ದ್ವೀಪ' ಪರಾ. [ಸಂ.]

ಪ್ರಥಮನಂದೀಶ್ವರ (ನಾ). [ಜೈನ]ವರ್ಷದಲ್ಲಿ ಮೊದಲ ಸಲ ಮಾಡುವ ನಂದೀಶ್ವರವ್ರತ : ಜಯಕೇಶಿನ್ರಿಪಂ ಸ್ವಸ್ತಿ ಸಕವರ್ಷ ೯೯೬ನೆಯಾನನ್ದ ಸಂವತ್ಸರದ ಚೈತ್ರಸುದ್ಧ ಪ್ರಥಮನನ್ದೀಶ್ವರದ ೮ ಆದಿತ್ಯವಾರದನ್ದು ಪುರಿಗೆಱೆಗೆ ಬಿಜಯಂಗೆಯ್ದು (ಸೌಇಇ. ೪೭-೨೮ ; 1074). 'ನಂದೀಶ್ವರ' ಪರಾ. [ಸಂ.]

ಪ್ರಥಮಪುರುಷ (ನಾ). ೧. ಮೊದನೆಯ ಪುರುಷ ; ಆದಿಪುರುಷ ; ಪರಮಾತ್ಮ. ೨. [ವ್ಯಾಕ] ಕನ್ನಡದ ಪುರುಷವಾಚಕ ಸರ್ವನಾಮಗಳಲ್ಲಿ ಒಂದಂ ; ಉತ್ತಮಪುರುಷ, ಮಧ್ಯಮಪುರುಷ ಮತ್ತು ಪ್ರಥಮಪುರುಷ ಎಂಬ ಮೂರು ಪುರುಷವಾಚಕಗಳಲ್ಲಿ ಮೂರನೆಯದು : ಉದುವುವುವೆಂಬಾದೇಶಂ ಪುದಿದಿರ್ಕುಂ ಪ್ರಥಮಪುರುಷದೇಕಬಹುತ್ವಕ್ಕೆ (ಶಮದ. ೨೨೫) ಮಾತಾಡುವವರನ್ನೂ ಯಾರೊಂದಿಗೆ ಮಾತಾಡುತ್ತಾರೋ ಅವರನ್ನು ಬಿಟ್ಟು ಮಿಕ್ಕ ಎಲ್ಲ ಜನರನ್ನೂ ವಸ್ತುಗಳನ್ನೂ ವಿಷಯಗಳನ್ನೂ ಅವನು, ಅವರು, ಅದು ಮೊದಲಾದುವು ಸೂಚಿಸುತ್ತವೆ. ಇವಕ್ಕೆ ಪ್ರಥಮಪುರುಷದ ಸರ್ವನಾಮಗಳೆಂದು ಹೆಸರು (ಮಧ್ಯಮ. ೨೯). 'ಪುರುಷ' ಪರಾ. [ಸಂ.]

ಪ್ರಥಮಮಂಗಳ (ನಾ). ಅತ್ಯಂತ ಶುಭಕರವಾದುದು ; ಅಧಿಕಕಲ್ಯಾಣವನ್ನುಂಟುಮಾಡುವುದು : ಲೋಕಪತಿಗಿಟ್ಟನನುಸ್ಮೃತಮಾತ್ರ ಪಾಪವಿಚ್ಛೇದನಮಂ ಜಗತ್ಪ್ರಥಮಮಂಗಳಮಂ ಹರಿಶಾಂತಿನಾಮಮಂ (ಶಾಂತಿಪು. ೦೦-೭೯). [ಸಂ. ಪ್ರಥಮಮಂಗಲ]

ಪ್ರಥಮಮಂಜರಿ (ನಾ). [ಸಂಗೀತ] ಒಂದು ರಾಗದ ಹೆಸರು : ಕೌಶಿಕಿ ವೇಳಾವಳಿ . . . ಪ್ರಥಮಮಂಜರಿ . . . ಶಯಸೋದರಿಯೆಂಬ ಮೂವತ್ತನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ಏವೇಳ. ೨೩೪). [ಸಂ. ಪ್ರಥಮಮಂಜರೀ]

ಪ್ರಥಮವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಸಿಂಧುವರಾಳಿ ಕನ್ನಡವರಾಳಿ ದ್ರಾವಿಡವರಾಳಿ ಪ್ರಥಮವರಾಳಿಯೆಂಬ ನಾಲ್ಕು ಉಪಾಂಗವರಾಳಿಗಳು (ಏವೇಳ. ೦೮೮). [ಸಂ. ಪ್ರಥಮವರಾಲೀ]

ಪ್ರಥಮಸಂಗಮ (ನಾ). ಮೊದಲನೆಯ ಕೂಟ ; ಪ್ರಥಮಸಂಭೋಗ : ನಾಣ್ಗಿಡೆ ನೆರೆದೂಢೆಯಂ ಪ್ರಥಮಸಂಗಮದೊಳ್ ಕುವರಂ ಮರುಳ್ಚಿದಂ (ಕಂದ್ರಪು. ೬-೮೨). [ಸಂ.]

ಪ್ರಥಮಸ್ತನ್ಯ (ನಾ). ಹೆರಿಗೆಯಾದ ಮೂರು ನಾಲ್ಕು ದಿನಗಳ ಬಾಣಂತಿಗೆ ಉತ್ಪತ್ತಿಯಾಗುವ ಎದೆಹಾಲು : "ಪ್ರಸವವಾದ ಮೇಲೆ ಸಸ್ತನಿಪ್ರಾಣಿಗಳಲ್ಲಿ ಉತ್ಪತ್ತಿಯಾಗುವ ಮೊದಲ ಮೊಲೆಹಾಲು ; ಪ್ರಥಮಸ್ತನ್ಯ" (Colostrum. ಇಂಕಪಿ). [ಸಂ.]

ಪ್ರಥಮಸ್ಥಾನ (ನಾ). ೧. ಮೊದಲನೆಯ ಸ್ಥಾನ ; ಆದ್ಯಸ್ಥಾನ. ೨. ಪರೀಕ್ಷೆ ಮುಂತಾದುವುಗಳಲ್ಲಿ ಎಲ್ಲರಿಗಿಂತ ಅತಿ ಹೆಚ್ಚಿನ ಅಂಕಗಳನ್ನು ಪಡೆದು, ಹೊಂದುವ ಮೊದಲ ಸ್ಥಾನ : ನಮ್ಮ ಹುಡುಗನಿಗೆ ಪರೀಕ್ಷೆಯಲ್ಲಿ ಪ್ರಥಮಸ್ಥಾನ ದೊರಕಿದೆ (ರೂಢಿ). [ಸಂ.]

ಪ್ರಥಮಾಂತ (ನಾ). [ವ್ಯಾಕ] ಪ್ರಥಮಾವಿಭಕ್ತಿಯ ಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವ ಪದ : ಉವು—ಆ ಪ್ರಥಮಾಂತವಾದ ಪದಂಗಳ್, ಅನ್ವಯಮುಖದೊಳ್ = ಅರ್ಥದ . . . ಮುಖದಲ್ಲಿ, ತಳೆವುವು = ಧರಿಸುವುವು (ಶಮದ. ೦೪೦ ಟೀಕೆ). [ಸಂ.]

ಪ್ರಥಮಾದ್ರಿ (ನಾ). ಮೊದಲನೆಯ ಬೆಟ್ಟ ; ಮೇರುಪರ್ವತ : ಪ್ರಥಮಾದ್ರಿಶಿಖರದಿಂದುದಿಸಿ ಪೊಂಬಿಸಿಲ್ಗರೆದು ಬಾಲಾರ್ಕ ಪ್ರಜ್ವಲಿಸುವಾ ಅತಿಶಯದಲಿ (ಪಪಮೋ. ೯-೩೨). [ಸಂ.]

ಪ್ರಥಮಾನುಯೋಗ (ನಾ). [ಜೈನ] ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮುದಾಯದಲ್ಲಿ ಮೊದಲನೆಯದು ; ೫ ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮುದಾಯಕ್ಕೆ ಶ್ರುತಸ್ಕಂಧವೆಂದು ಹೆಸರು. ಈ ಶ್ರುತಸ್ಕಂಧದಲ್ಲಿ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗವೆಂಬ ನಾಲ್ಕು ಭಾಗಗಳಿವೆ. ಪ್ರಥಮಾನುಯೋಗದಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರು ಮತ್ತು ೬೩ ಶಲಾಕಾಪುರುಷರು ಇವರುಗಳ ಚರಿತ್ರೆಗಳನ್ನು ವಿವರಿಸಿದೆ. ಮಹಾಪುರಾಣ ಮುಂತಾದ ಪುರಾಣಗಳು ಪ್ರಥಮಾನುಯೋಗಕ್ಕೆ ಸೇರಿವೆ : ಎರಡು ಪರಿಕರ್ಮಮುಮನೆಂಭತ್ತೆಂಟುಸೂತ್ರಂಗಳುಮಂ ಪ್ರಥಮಾನುಯೋಗಮುಮಂ . . . ಯಥೋಚಿತವಿಧಿಯಿಂ ನೋಂತು (ಆದಿಪು. ೩-೪೦ ಪ). 'ಅನುಯೋಗ' ಪರಾ. [ಸಂ.]

ಪ್ರಥಮಾವಿಭಕ್ತಿ (ನಾ). [ವ್ಯಾಕ] ನಾಮಪದಗಳಿಗೆ ಬರುವ ಏಳು ವಿಭಕ್ತಿಗಳಲ್ಲಿ ಮೊದಲನೆಯದು ; ಕರ್ತೃವಿನ ಅರ್ಥವನ್ನು ತಿಳಿಸುವ ವಿಭಕ್ತಿ : ಅಭಿರೂಪದಿನಾ ಪ್ರಥಮಾವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್ ಪ್ರಭವಿಪ್ಪುದು (ಶಮದ. ೦೨೬) ; ಬಹುವಚನದಲ್ಲಿ, ಬಹುವಚನ ಪ್ರತ್ಯಯವನ್ನುಳ್ಳ ರೂಪಗಳೇ ಪ್ರಥಮಾವಿಭಕ್ತಿಯ ರೂಪಗಳಾಗುತ್ತವೆ (ಮಧ್ಯಮ. ೫೭). [ಸಂ.]

ಪ್ರಥಮೆ (ನಾ). = ಪ್ರಥಮಾವಿಭಕ್ತಿ : ಪಿಂತೆ ಪೇಟ್ದ ನಾನಾತೆಱದ ಲಿಂಗಂಗಳ್ಗೆ ಪರವಾಗಿ ನಾಮವಿಭಕ್ತಿಗಳ ಮ್, ಅಮ್, ಇಮ್, ಕೆ, ಅತ್, ಒಳ್ ಎಂದು ಪ್ರಥಮೆಗುಂ ದ್ವಿತೀಯೆಗಂ . . . ಪತುಗಂ (ಶಮದ. ೯೩ ವೃತ್ತಿ). [ಸಂ. ಪ್ರಥಮಾ]

ಪ್ರಥಮೈಕಾದಶಿ (ನಾ). ಆಷಾಢಮಾಸದ ಶುಕ್ಲಪಕ್ಷದ ಏಕಾದಶಿ ; ಚಾತುರ್ಮಾಸದ ಮೊದಲನೆಯ ಏಕಾದಶಿ : ಪ್ರಥಮೈಕಾದಶಿಯ ದಿನಕ್ಕೆ ಪಟದ ಹಬ್ಬ ಎಂದೂ ಹೆಸರಿದೆ (ರೂಢಿ). [ಸಂ. ಪ್ರಥಮೈಕಾದಶೀ]

ಪ್ರಥಿತ (ಗು). ೧. ಹರಡಿದ ; ವಿಸ್ತರಿಸಿದ. ೨. ಬಹಿರಂಗವಾಗಿ ಘೋಷಣೆಯಾದ ; ಪ್ರಕಟಿಸಿದ. ೩. ಹೆಸರಾದ ; ಪ್ರಖ್ಯಾತವಾದ ; ಪ್ರಸಿದ್ಧವಾದ : ಆ ಪರಮೇಶ್ವರಂ ಪ್ರಥಿತಷೋಡಶತೀರ್ಥಕರಂ ಸಚೋದ್ಯವಿದ್ಯಾಪರಿಪಾಕಶಾಸನಸಭಾವಳಯಂ . . . ಇಂತೆಂದು ಬೆಸಸಿದಂ (ಶಾಂತಿಪು. ೦೨-೩) ; ಕೆಡೆದುವು ನೋಡಾ ರಥಚೋದಕರೊಂದೆಸೆಯೊಳ್ ಪೃಥಾಸುತಪ್ರಥಿತಪೃಥುಗದಾಪ್ರಹರಣೆಯಿಂ (ಗದಾಯು. ೩-೬) ; ಭೂಭುವನಪ್ರಥಿತಯಶಂ ಶ್ರೀಭೂತಿ ಸುಭೂತಿವೆಸರ ಸುತನಂ ಪಡೆದಂ (ಶಂಠಾಮಾ. ೬-೬೦). (ನಾ). ೪. ಪ್ರಖ್ಯಾತವಾದುದು ; ಪ್ರಸಿದ್ಧವಾದುದು : ಹರಿ ನಿನ್ನ ಮಹತ್ತ್ವಂ ಪ್ರಥಿತಮಗಾಧಮಗಾಧಮುಮುನ್ನತೋನ್ನತೋನ್ನತಮಲ್ತೇ (ಜಗಿ. ೩-೦೦೫). ೫. ಪ್ರಸಿದ್ಧನಾದವನು; ಕೀರ್ತಿಶಾಲಿ : "ಪ್ರತೀತಃ, ಪ್ರಥಿತಃ, ಖ್ಯಾತಃ, ವಿತ್ತಃ, ವಿಜ್ಞಾತಃ, ವಿಶ್ರುತಃ — ೭ ಧನಾದಿಗಳಿಂದ ಪ್ರಸಿದ್ಧನಾದವನ ಹೆಸರು" (ನಿದ್ಧಾಂತಿ. ೩೨೫). [ಸಂ.]

ಪ್ರಥಿಮ (ನಾ). ೧. ದೊಡ್ಡತನ ; ಹಿರಿಮೆ ; ಮಹತ್ವ. ೨. ಅಗಲ; ವಿಸ್ತಾರ. [ಸಂ. ಪ್ರಥಿಮನ್]

ಪ್ರಥೆ (ನಾ). ೧. ಹರಡುವಿಕೆ ; ವಿಸ್ತರಿಸುವಿಕೆ : (ಕಿ). ೨. ಕೀರ್ತಿ; ಪ್ರಸಿದ್ಧಿ : "ಪ್ರಥಾ, ಖ್ಯಾತಿಃ . . . ೨ ಪ್ರಸಿದ್ಧಿಯ ಪೆಸರುಗಳು, ಬಹುಮಂದಿಗೆ ತಿಳಿಯುವಿಕೆ ; ಹೆಸರುವಾಸಿ" (ನಿದ್ಧಾಂತಿ. ೩೫೭) ; ಪ್ರಥೆಯನ್ನುಳ್ಳವರಲ್ಲಿ ಕೂಡುವೆನೆಂಬಳಿಂದುಮುಖಿ (ವಿಭಾಗ. ೦೦-೦೫-೦). [ಸಂ. ಪ್ರಥಾ]

ಪ್ರದಕ್ಷಿಣ (ನಾ). (ಗೌರವಸೂಚಕವಾಗಿ ದೇವರು ಅಥವಾ ಹಿರಿಯರನ್ನು) ಎಡಗಡೆಯಿಂದ ಪ್ರಾರಂಭಿಸಿ ಬಲಗಡೆಯಲ್ಲಿ ಮುಗಿಯುವಂತೆ ಸುತ್ತುವುದು ; ಬಲಕ್ಕೆ ತಿರುಗುತ್ತಾ ಸುತ್ತು ಬರುವುದು : ಶ್ರೀಪಾದದ್ವಿತಯಪ್ರದಕ್ಷಿಣಕೃತಿವ್ಯಾಸಕ್ತಗೀರ್ವಾಣಕಾಂತಾಪಾಂಗಪ್ರತಿಬಿಂಬ ಕೋಟಿಘಟಿತಸ್ಮೇರಸ್ಥಳೇಂದೀವರ ಶ್ರೀಪೂರ್ಣಂ (ಶಂದ್ರಪು. ೦-೦) ; ಉರಿ ಪ್ರದಕ್ಷಿಣವಾಗಿ ಚರಿಸಿತು ಸಿರಿಯ ಸೂಚಿಸುತಿರ್ದುದಸುರಗೆ (ಕೃಷ್ಣಿಶಾ. ೨೬-೦೩) ; ಅದರ ಸುತ್ತು ಪ್ರದಕ್ಷಿಣಕ್ಕೆ ಸ್ಥಳ ಬಹು ಇಕ್ಕಟ್ಟು . . . ಬಹಳ ಎಚ್ಚರದಿಂದ ಪ್ರದಕ್ಷಿಣ ಬರಬೇಕು (ಶಾಂತಲಾ. ೨೯೬). [ಸಂ.]

ಪ್ರದಕ್ಷಿಣೆ (ನಾ). = ಪ್ರದಕ್ಷಿಣ : ತನ್ನ ಮೋಕ್ಷಕ್ಕೆ ತನ್ನ ದೇವತೆಯಂ ಪ್ರದಕ್ಷಿಣಾಪೂರ್ವಕಂ ಪ್ರಾರ್ಥಿಸುವಳೆಂಬಂತೆ ಮಂತ್ರಘೋಷಂಗೈದು (ಶ್ರೀರಾಮಾ. ೨೭೬-೩೩೬) ; ಮಹಾರಾಣಿಯವರು ಕೋಡುಗಲ್ಲು ಬಸವನ ಪ್ರದಕ್ಷಿಣೆ ಮಾಡುತ್ತಿರುವಾಗ . . . ಈ ಅನ್ಯಾಯವಾಗಿರಬೇಕು (ಶಾಂತಲಾ. ೩೦೩). [ಸಂ. ಪ್ರದಕ್ಷಿಣ]

ಪ್ರದರ (ನಾ). ೧. ಹರಿಯುವುದು ; ಸೀಳುವುದು. ೨. ಸೀಳು; ಬಿರುಕು. ೩. ಬಾಣ : "ಕಂಕಪತ್ರಃ, ಶರಃ . . . ಪ್ರದರಃ, ಕಾಂಡಃ — ಈ ೧೬ ಅಂಬು" (ಹಲಾಯು. ೭೭-೩೦೨) ; ಮೇಘಮುಖಾಸ್ತ್ರಂಗಳ್ಗೆ ವಾಯುಪ್ರದರಮಂ. . .ತೊಟ್ಟು (ವರ್ಧಮಾ. ೪-೯೫). ೪. (ಯೋನಿಯಲ್ಲಿ ರಕ್ತ ಮೊದಲಾದ ಧಾತುಗಳು ಅಕಾಲದಲ್ಲಿ ಸ್ರವಿಸುವ) ಹೆಂಗಸರ ಒಂದು ಬಗೆಯ ರೋಗ : "ಪ್ರದರಃ — ಮುರಿಯುವಿಕೆ, ಕುಸುಮಜಾಡ್ಯ, ಬಾಣ, ೩" (ನಿದ್ಧಾಂತಿ. ೪೦೩) ; ದುಃಖದಿಂದಲೂ ಉಪವಾಸದಿಂದಲೂ ಬಹಳ ಸಂಯೋಗದಿಂದಲೂ ವಿದಾಹಗಳಾದ ವಸ್ತುಗಳ ಸೇವನೆಯಿಂದಲೂ ಆ ರಕ್ತಪೈತ್ಯವೆಂಬ ದುಷ್ಟರಕ್ತವು ಅಕಾಲದಲ್ಲಿ ಯೋನಿಯಲ್ಲಿ ಸ್ರವಿಸುವುದು, ಅಸೃಗ್ಧರವೆಂದೂ ಪ್ರದರವೆಂದೂ ಎರಡು ಪ್ರಕಾರವಾಗಿ ಪೇಳ್ವರು (ಸಕವೈ. ೦೯೯). ೫. ಸೈನ್ಯವು ಚೆದರುವಿಕೆ ; ಸೈನ್ಯದ ಪಲಾಯನ. [ಸಂ.]

ಪ್ರದರ್ಶಕ (ನಾ). ೧. ತೋರಿಸುವುದು ; ಪ್ರದರ್ಶಿಸುವುದು. ೨. ಮುಂದಿನದನ್ನು ಈಗಲೇ ಹೇಳುವುದು ; ಭವಿಷ್ಯ ನುಡಿಯುವುದು. ೩. ನಾಟಕ, ಚಿತ್ರ, ಯಕ್ಷಿಣಿ ಮುಂತಾದ ಕಲೆಗಳನ್ನು ತೋರಿಸುವವನು.— ಪ್ರದರ್ಶಿಸುವವನು. ೪. ಮುಂದೆ ಸಂಭವಿಸುವುದನ್ನು ಮೊದಲೇ ಹೇಳುವವನು; ಭವಿಷ್ಯ ಹೇಳುವವನು. [ಸಂ.]

ಪ್ರದರ್ಶನ (ನಾ). ೧. ತೋರಿಸುವುದು ; ತೋರ್ಪಡಿಸುವುದು ; ಪ್ರಕಟಿಸುವುದು : ಕೋಪಪ್ರದರ್ಶನಂ ಪೌರುಷಕೆ ಕುರುಹೆಂದು ಬೆದರಿ, ಕಂಬನಿಗರೆದು, ಸೋಲ್ಪೊಮ್ಮೆ ಗೆಲ್ದಳಾಕೆ! (ಜಿಪ್ರಾಂಗ. ೨೫-೬೭೯). ೨. ಭವಿಷ್ಯವನ್ನು ತಿಳಿಸುವುದು. ೩. ವಿವರಿಸುವುದು ; ಕಲಿಸುವುದು; ಬೋಧನೆ. ೪. ದೃಷ್ಟಾಂತ; ಉದಾಹರಣೆ. ೫. ನಾಟಕ, ಚಿತ್ರಪಟ, ಕಲಾವಸ್ತುಗಳು ಮೊದಲಾದುವುಗಳನ್ನು ತೋರಿಸುವುದು.-ಪ್ರದರ್ಶಿಸುವುದು : ಎರಡನೆಯ ಸೋಪಾನ ಪ್ರದರ್ಶನ. ಉಪಾಧ್ಯಾಯರು ಮಾದರಿಯ ಚಿತ್ರ . . . ಇನ್ನಾವುದಾದರೊಂದನ್ನು ಪ್ರದರ್ಶಿಸಬೇಕು (ಶಿಕ್ಷದ. ೨೩೩) : ಮರುದಿನ ಪ್ರದರ್ಶನವು ಪ್ರಾರಂಭವಾಯಿತು. ಅತಿಥಿಗಳೆಲ್ಲರು ಪ್ರದರ್ಶನವನ್ನು ನೋಡುತ್ತ ಹೊರಟರು (ಕಪಪು. ೪-೩೭). [ಸಂ.]

ಪ್ರದರ್ಶಿತ (ಗು). ೧. ತೋರಿಸಿದ : ಶಯ್ಯಾತಳದಿನರಸಿವೆರಸೇಳ್ದು ತತ್ಪ್ರದರ್ಶಿತಾದರ್ಶದೊಳ್ನಿಜಮುಖಾವಲೋಕನಂಗೈದ ನಂತರಂ (ರಾಜಶೇ. ೦೩-೪೫ ಪ). ೨. ಭವಿಷ್ಯ ಹೇಳಿದ. (ನಾ). ೩. ತೋರ್ಪಡಿಸಿದುದು : ಈ ಸಿನಿಮಾಗೃಹದಲ್ಲಿ ಕನ್ನಡ ಚಿತ್ರಗಳು ಮಾತ್ರ ಪ್ರದರ್ಶಿತವಾಗುತ್ತವೆ (ರೂಢಿ). [ಸಂ.]

ಪ್ರದರ್ಶಿಸು (ಕ್ರಿ). ತೋರಿಸು ; ತೋರ್ಪಡಿಸು ; ಪ್ರಕಟಗೊಳಿಸು : ಪಾಠ ಮಾಡುವಾಗ ಹಾಕುವ ಪ್ರಶ್ನೆಗಳು, ಉಪಯೋಗಿಸುವ ಪಠ್ಯ ಪುಸ್ತಕ, ಪ್ರದರ್ಶಿಸುವ ಚಿತ್ರ . . . ಮಕ್ಕಳ ನೋಟುಪುಸ್ತಕಗಳು— ಇವೆಲ್ಲ ಬೋಧಿಸಲೂ ಕಲಿಸಲೂ ನೆರವಾಗುತ್ತವೆ (ಶಿಕ್ಷದ. ೨೬೫) ; ಮಾನವನಿಗೆ ಸ್ತ್ರೀಚಾಪಲ್ಯವನ್ನು ಧಿಕ್ಕರಿಸಿ ನಿಲ್ಲುವುದು ಸಾಧ್ಯವೆಂದು ನನ್ನ ಜೀವಮಾನದಲ್ಲಿ ಅನೇಕವೇಳೆ ಪ್ರದರ್ಶಿಸಿದೆ (ಸಂಗಾಳ್ಯ. ೦೫೦).

[ಪ್ರದರ್ಶನ + — ಇಸ್ಸು$_3$]

ಪ್ರದಾತ (ನಾ). ಕೊಡುವವನು; ದಾನ ಮಾಡುವವನು: ಚಿಪಳೂಣಕರರು ಪ್ರಬಂಧಕಾರರಾಗಿರುವರಲ್ಲದೆ . . . ಬೌದ್ಧಿಕವಿವೇಕದ ದೃಷ್ಟಿ ಪ್ರದಾತರು (ಮುಸಾಹಿ. ೩೨). [ಸಂ. ಪ್ರದಾತೃ]

ಪ್ರದಾನ (ನಾ) ೧. ಕೊಡುವುದು; ದಾನ; ಕೊಡುಗೆ: ಆ ಪ್ರದಾನ ಲಾಭದಾಯಕವೆಂದೂ ಅದರ ಸ್ವೀಕರಣದಿಂದ ಅಪಾಯವಿಲ್ಲವೆಂದೂ ಪಕ್ಷ ತನಗರ್ಥವಾಗದ ಪ್ರದಾನ ಸಂಶಯಾತ್ಮಕವೆಂದು ಒಂದು ಹೆದರಿದ ಮತ್ತೊಂದು ಪಕ್ಷ (ಪುಸರು. ೩೦೬). ೨. ಅರ್ಪಿಸುವುದು; ಅರ್ಪಣೆ : 'ಪಿಂಡಪ್ರದಾನ' ಪರಾ. [ಸಂ.]

ಪ್ರದಾಯ (ನಾ). ಕೊಡುವುದು ; ಕೊಡುಗೆ; ಬಳುವಳಿ. [ಸಂ.]

ಪ್ರದಾಯಕ (ಗು). ೧. ಕೊಡುವ ; ಅನುಗ್ರಹಿಸುವ ; ನೀಡುವ: ಸಮಸ್ತಸಿದ್ಧಿಪ್ರದಾಯಕ ವಿನಾಯಕ ಮಾಳ್ಪುದೆಮಗೆ ನಿರ್ವಿಘ್ನತೆಯನು (ಶೈಮಭಾ. ೦-೩). (ನಾ). ೨. ಕೊಡುವವನು ; ನೀಡುವವನು : ವಿಬುಧಹೃದಯಾನನ್ದಪ್ರದಾಯಕಂ ಪತಿಹಿತವೈನತೇಯಂ (ಸೌಇಇ. XX. ೪೬-೨೦; 1072); ಉದ್ಯತಾಯುಷ್ಯಪ್ರದಾಯಕನು . . . ಎನೆ ಜನರು ಕೀರ್ತಿಸಲು ವರ್ತಿಸುತ (ಬಸಪು. ೪೬-೪). [ಸಂ.]

ಪ್ರದಾಯಕಿ (ನಾ). ಕೊಡುವವಳು; ನೀಡುವವಳು: ಅನುಗ್ರಹಿಸುವವಳು : ಸಮಸ್ತಾನ್ತಟ್ಟುರಜಗದಳವವಿತ್ರೀಕೃತ ವಿಶುದ್ಧಕುಳೆ ರಾಯನಾರಾಯಣಹೃ[ದಯಾ]ನಂದಪ್ರದಾಯಕಿ ಗೌರೀಪದಾಂಬುಜಾರಾಧಕಿ (ಎಇ. XXVIII. ೩೫-೪೨; 1082). [ಪ್ರದಾಯಕ + — ಇ$_2$]

ಪ್ರದಾರಿತ (ಗು). ಸೀಳಿದ ; ಭೇದಿಸಿದ: ವಿಳೋಳವೀಚೀರಯ ಪ್ರದಾರಿತ ಕುಳಾಚಲೋದಧಿಪರೀತಮಾಗಿರ್ದ ಜಂಬೂದ್ವೀಪದೊಳಗೆ (ಪಂಪಭಾ. ೦-೫೦ ವ). [ಸಂ.]

ಪ್ರದ್ಧಿಗ (ಗು). ೧. ಬಳಿದ; ಲೇಪಿಸಿದ. (ನಾ). ೨. ಮಾಂಸದಿಂದ ತಯಾರಿಸಿದ ಒಂದು ಬಗೆಯ ಖಾದ್ಯ. [ಸಂ.]

ಪ್ರದಿಟೆ 'ಪದಿಟೆ' ನೋ.

ಪ್ರದಿಶ (ನಾ). ೧. ಸೂಚನೆ; ಆಜ್ಞೆ; ನಿರ್ದೇಶನ. ೨. ದಿಕ್ಪ್ರದೇಶ ; ದಿಕ್ಕು. ೩. ಆಗ್ನೇಯ, ನೈರುತ್ಯ, ವಾಯವ್ಯ ಮತ್ತು ಈಶಾನ್ಯವೆಂಬ ನಾಲ್ಕು ಮೂಲೆದಿಕ್ಕು: ವಿರುಕ್ಕು : "ಅಂತರಾಳದಿಶಃ, ವಿದಿಶಃ, ಪ್ರದಿಶಃ — ಈ ೩ ಗೊಂಟುಗಳ ಪೆಸರ್" (ಹಲಾಯು. ೧೭-೦೦೨).

[ಸಂ. ಪ್ರದಿಶ್]

ಪ್ರದಿಶೆ (ನಾ). = ಪ್ರದಿಶ ೨ : "ಪ್ರದಿಶೆ ವಿದಿಶೆಯೆನೆ ಗೊಂಟೆನಿಕ್ಕುಂ" (ಮಂಗರಾ. ೦೬-೨೦). [ಸಂ. ಪ್ರದಿಶಾ]

ಪ್ರದೀಪ (ನಾ). ೧. ದೀವಿಗೆ; ದೀಪ: "ದೀಪ, ಪ್ರದೀಪ, — ೨ ದೀವಿಗೆ" (ಸಿದ್ಧಾಂತಿ. ೨೦೦); ಆ ಸಮಯದೊಳರಿಬಲಸಂತ್ರಾಸಿ ಬಲಿಷ್ಠಂ ತ್ರಿಪೃಷ್ಠನಶ್ವಗ್ರೀವೋದ್ಭಾಸಿ ಪ್ರದೀಪಮಂ ಕಿಡೆ ಬೀಸುವವೋಲ್ (ಶಾಂತಿಪು. ೩-೫೨); ತನಗಿನಿಯನಿತ್ತ ಮೆಚ್ಚಂ ನೆನೆದಳ್ . . . ಕಾಂತೆ ಚಿಂತಾಘನಾಂಧಕಾರ ಪ್ರದೀಪರೂಪೋಪಮಮಂ (ಪಂಗಾಮಾ. ೬-೯೨); ಅಂಧಕಾರದಿಂದ ಮುಚ್ಚಿ ಹೋಗಿರುವವರು ನೀವು. ಪ್ರದೀಪವನ್ನು ಹುಡುಕಿಕೊಂಡು ಹೋಗುವುದಿಲ್ಲವೇಕೆ? (ಭಾರದ. ೨೦೦). ೨. (ಆಲಂ) ಹೆಚ್ಚಾಗುವಿಕೆ; ಅಭಿವೃದ್ಧಿ : ಮೇಘವರ್ಣಂ ಪ್ರದೀಪಿಯ ಮಾತುಗಳ್ಗೆ ಕೋಪಂ ಪ್ರದೀಪಮಾಗೆ ಮನದೊಳ್ ಮುನಿದು (ಪಂಪತಂ. ೨೦೬-೦೦). [ಸಂ.]

ಪ್ರದೀಪಕ (ಗು). ೧. ಬೆಳಗುವ ; ಬೆಳಕು ಕೊಡುವ. (ನಾ). ೨. ಬೆಳಗುವವನು : ಪಾರ್ವನೀ ಭವದೊಳೆ ಕರ್ಮಕ್ಷಯಭಾಗಿಯೆನಿಕ್ಕುಂ ಸಾಕ್ಷಾಜ್ಜಿನಶಾಸನಪ್ರದೀಪಕನಕ್ಕುಂ (ಸುಕುಮಾ. ೩-೧೦). [ಸಂ.]

ಪ್ರದೀಪಕತೆ (ನಾ). ಬೆಳಗುವಿಕೆ : ಪ್ರಕಾಶಿಸುವಿಕೆ : ಇದು ಚಿತ್ರಂ ವಜ್ರಾಂಗಂಗೆ ದೃಢೀಕೃತಮಾರ್ದ್ರವಪ್ರಭಾವಂ ನಿಸ್ನೇಹದವಂಗೆ ಭುವನ ಭವನಪ್ರದೀಪಕತೆ ನಿನಗೆ ಜಿನ ಜಗತ್ತ್ರಯಮಿತ್ರಾ (ಕಂದ್ರಪು. ೬-೧೨).

[ಸಂ. ಪ್ರದೀಪಕತಾ]

ಪ್ರದೀಪಕಲಿಕೆ (ನಾ). ದೀಪದ ಕುಡಿ : ಅಮಲತರಪ್ರದೀಪಕಲಿಕಾಕೃತಿಯಿಂ ಸ್ವಪರಪ್ರಕಾಶನ ಕ್ಷಮಮೆನಿಸಿರ್ದ ತಮ್ಮ ಮತಿಯಿಂ ಜಿನರಾಜಚರಿತ್ರಮಂ ಪವಿತ್ರಮನೊಲವಿಂದೆ ಪೇಟ್ದು (ಕಂದ್ರಪು. ೦-೩೬). [ಸಂ. ಪ್ರದೀಪಕಲಿಕಾ]

ಪ್ರದೀಪನ (ನಾ). ೧. ಬೆಳಗಿಸುವುದು ; ಪ್ರಕಾಶಿಸುವಂತೆ ಮಾಡುವುದು. ೨. ಕೆರಳಿಸುವುದು; ಉದ್ರೇಕಗೊಳಿಸುವುದು. ೩. ಕೆಂಪು ಬಣ್ಣದಿಂದ ಕೂಡಿ ಪ್ರಕಾಶಮಾನವಾದ, ಸೇವಿಸಿದರೆ ಬಹಳ ಉರಿಯನ್ನುಂಟುಮಾಡುವ ಒಂದು ಬಗೆಯ ವಿಷ : "ಬ್ರಹ್ಮಪುತ್ರಃ ಶೌ(ಕ್ಲಿ)ಲ್ಕಿಕೇಯಃ, ದಾರದಃ, ಪ್ರದೀಪನಃ, ರಸಃ, ಸೌರಾ(ಷ್ಟ್ರಿ)ಷ್ಟ್ರಕಃ, ಕ್ಷ್ವೇಡಃ, ತೀಕ್ಷ್ಣಃ, ವಿಷಂ— ಈ ೯ ವಿಷಂ" (ಹಲಾಯು ೦೦೬-೨೪). [ಸಂ.]

ಪ್ರದೀಪ್ತ (ಗು). ೧. ದೀಪ ಹತ್ತಿಸಿದ. ೨. ಪ್ರೇರಿತವಾದ ; ಉತ್ತೇಜಿತವಾದ. [ಸಂ.]

ಪ್ರದೀಪ್ತಿ (ನಾ). ಹೆಚ್ಚಾದ ಬೆಳಕು.—ಕಾಂತಿ. [ಸಂ.]

ಪ್ರದುಷ್ಟ (ಗು). ಬಹಳ ಕೆಟ್ಟ; ದೋಷಪೂರಿತವಾದ : ಸರ್ವದೋಷಪ್ರದುಷ್ಟಗಜಂಗಳನುಪಲಾಲನೆಯೊಳಮಿಚ್ಛಾನುವರ್ತನದೊಳಮಳವಡಿಸುವ ಕುಶಲಗಜೋಪಜೀವಿಯಂತೆ ಪ್ರಸಂಗಾಭಿಪ್ರಾಯವಚನಂಗಳಿನಳವಡಿಸಿ (ಶಾಂತಿಪು. ೩-೭೨ ವ). [ಸಂ.]

ಪ್ರದೇಯ (ಗು). ಕೊಡಲು ಅರ್ಹವಾದ. [ಸಂ.]

ಪ್ರದೇಶ (ನಾ). ೧. ತೋರಿಸುವುದು; ನಿರ್ದೇಶಿಸುವುದು : (ಕಿ). ೨. ಸ್ಥಳ ; ಎಡೆ ; ಸ್ಥಾನ : ತದನಂತರಸಮಯದೊಳ್ ವಾತವಲಯ ಮುಟಿಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿ (ಆದಿಪು. ೦೬-೪೯) ; ಮನೆಯನ್ನು ನಗರದ ಒಳ್ಳೆಯ ಪ್ರದೇಶದಲ್ಲಿ ಕಟ್ಟಬೇಕು (ಗೃಹಪಿ. ೦೫೩). ೩. ದೇಶ; ಪ್ರಾಂತ್ಯ; ನಾಡು : ದ್ರಾವಿಡರು ಆರ್ಯರಿಗಿಂತ ಸ್ವಲ್ಪ ಮುಂಚೆ ಬಂದರೆಂದೂ ಬಹುಶಃ ಮೆಸಪೊಟೇಮಿಯಾ ಪ್ರದೇಶಗಳಿಂದ ಬಂದರೆಂದೂ . . . ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ (ದ್ರಾವಿಪಿ. ೨೦). ೪. ಚಾಚಿದ ಹೆಬ್ಬೆರಳಿನ ತುದಿಯಿಂದ ತೋರುಬೆರಳ ತುದಿಯ ವರೆಗಿನ ಅಳತೆ ;ಚೋಟು :(ಕಿ). ೫. [ಜೈನ]ಒಂದು ಪರಮಾಣು ಇರುವಷ್ಟು ಸ್ಥಳ ; ಪುದ್ಗಲದ್ರವ್ಯದ ಅಂಶ : ಕಾಲವನ್ನು ಬಿಟ್ಟು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶಗಳು ಸತ್ತಾಯುಕ್ತವಾಗಿದ್ದು, ಬಹಳ ಪ್ರದೇಶವುಳ್ಳವುಗಳಾಗಿವೆ (ಸೈನಪ. ೪೨೩); ಅಣುಗಳ ಪುಂಜವೇ ಪುದ್ಗಲದ್ರವ್ಯವು ಅದರಲ್ಲೂ ಅಸಂಖ್ಯಾತ ಅಂಶಗಳಿರುವುವು. ಅವುಗಳಿಗೆ ಪ್ರದೇಶವೆಂದು ಹೆಸರು (ಹಿಂದಸಾ. ೬೦). [ಸಂ.]

ಪ್ರದೇಶನ (ನಾ). ೧. ತೋರುವಿಕೆ ; ನಿರ್ದೇಶನ. ೨. ಕೊಡುವುದು ; ಕಾಣಿಕೆ ; ಕೊಡುಗೆ. ೩. ದೇವರು, ಅರಸ ಮುಂತಾದವರಿಗೆ ಅರ್ಪಿಸುವ ಕಾಣಿಕೆ : "ವಿಶ್ರಾಣನಂ, ವಿಹಾಯನಂ . . . ಉತ್ಸರ್ಗಃ, ಪ್ರದೇ(ಶ)ನಂ, ದಾನಂ — ಈ ೧೦ ಕುಡುವುದು" (ಹಲಾಯು. ೬೯-೨೬೫). ೪. ಸಲಹೆ ; ಸೂಚನೆ. [ಸಂ.]

ಪ್ರದೇಶನಿ (ನಾ). ತೋರುಬೆರಳು ; ತರ್ಜನಿ. [ಸಂ. ಪ್ರದೇಶನೀ]

ಪ್ರದೇಶಬಂಧ (ನಾ). [ಜೈನ] ಬಂಧನವನ್ನು ಹೊಂದಿರುವ ಕರ್ಮಗಳ ಸಂಖ್ಯೆಯ ನಿರ್ಣಯ : ಒದವಿದ ಕರ್ಮದ ಶಕ್ತಿಯೆ ವಿದಿತಮದನುಭಾಗ ಬಂಧಮಕ್ಕುಂ ಬಹುಭೇದದಿನಾದ ಜೀವ ಕರ್ಮ ಪ್ರದೇಶಯೋಗಂ ಪ್ರದೇಶ ಬಂಧಮೆನಿಕ್ಕುಂ (ಕಂದ್ರಪು. ೦೬-೨೩) ; ಜೀವನಿಗೆ ಫಲಪ್ರದಾನಾವಸ್ಥೆಯಲ್ಲಿರುವ ಪುಣ್ಯ ಪಾಪವೆಂಬ ಕರ್ಮದ ಅಣುಗಳು ಜೀವದೊಡನೆ ಸೇರುತ್ತವೆ, ಬೆರೆಯುತ್ತವೆ. ಇದಕ್ಕೆ ಪ್ರದೇಶಬಂಧವೆಂದು ಹೆಸರು (ಹಿಂರಸಾ. ೬೪). [ಸಂ.]

ಪ್ರದೇಶಸಂಹರಣ (ನಾ). [ಜೈನ] ಜೀವಪ್ರದೇಶದ ಸಂಕೋಚ,-ಆಕುಂಚನ ; ಕಾರ್ಮಣಶರೀರದಲ್ಲಿರುವುದರಿಂದ ಆ ಶರೀರಕ್ಕೆ ಅನುಸಾರವಾಗಿ ಚಿಕ್ಕದು ಅಥವಾ ದೊಡ್ಡದಾಗುವ ಜೀವದ ಸ್ಥಿತಿ : ಕರ್ಮವಶದಿಂ ಅಣು ಮಹಚ್ಚರೀರಂಗಳಂ ಕೊಳುತಿರ್ದು ತದ್ವಶದಿಂ ಪ್ರದೇಶಸಂಹರಣವಿಸರ್ಪಣಸ್ವಭಾವಸಮನ್ವಿತಜೀವಕ್ಕೆ ತಾವತ್ಪ್ರಮಾಣ ಮಪ್ಪುದಱಿಂ ಅಸಂಖ್ಯೇಯಭಾಗಾದಿಗಳಲ್ಲಿ ವೃತ್ತಿವಿರುದ್ಧಮಲ್ತು (ಕತ್ತ್ವಪ್ರ. ೨೩೬). [ಸಂ.]

ಪ್ರದೇಶಸೌಷ್ಠವ (ನಾ). ಕಲಾಕೃತಿಯ ಅವಯವಗಳ ಸೌಂದರ್ಯ,-ಸೌಷ್ಠವ : ಇದು ಭೂಮಾಪನರೂಪಿದು ಲೆಪ್ಪದ ರೂಪೆನಲೆಂತುಮಱಿಯಲರಿದೆನೆ ಬಗೆಗೊಂಡುದು ನಡೆವ ನುಡಿವ ತೆಱದಿಂ ಪ್ರದೇಶಸೌಷ್ಠವ ಮಂದೇಂ ವಿಚಿತ್ರಮೊ ಚಿತ್ರಂ (ಪಂರಾಮಾ. ೩-೨೬). [ಸಂ.]

ಪ್ರದೇಶಿನಿ (ನಾ). ೧. ತೋರುಬೆರಳು ; ತರ್ಜನಿ : "ಪ್ರದೇಶಿನೀ— ಹೆಬ್ಬೆಟ್ಟಿನ ವತ್ತುಬೆರಳು" (ಸಿದ್ಧಾಂತಿ. ೧೯೩) ; ದರಸ್ಮಿತೆಯಾಗಿ, ಕುಳಿತು ಅಭೀಕ್ಷಿಸುತ್ತಾ ಪ್ರದೇಶಿನಿಯನ್ನು ನೀಡಿ (ಮಂತ್ರಕ್ರ. ೯೦-೨೫). ೨. ಕಾಲಿನ ಹೆಬ್ಬೆರಳ ಪಕ್ಕದ ಬೆರಳು : ಎಡದ ಕಾಲ ಹೆಬ್ಬೆರಳ ಬಳಿಯ ಕೊಂಚ ಉದ್ದವಾದ ಬೆರಳು ಪ್ರದೇಶಿನಿ (ಕಾಮಶಾ. ೩೫೩). ೩. [ಸಾಮುದ್ರಿ] ಒಂದು ರೇಖೆ : ಆವ ಪುರುಷನ ಪ್ರದೇಶಿನಿಯೆಂಬ ರೇಖೆ ಆವಾತನು ಕುಳ್ಳನು ಕುಟಿಲವಾಗಿರೆ ಡೊಂಕಾಗಿರೆ ಆತನು ಭೋಗವಿಲ್ಲದಾತನು (ಸಾಮುಂ. ೬-೦೭). [ಸಂ. ಪ್ರದೇಶಿನೀ]

ಪ್ರದೋಷ (ನಾ). ೧. ತಪ್ಪು ; ಪಾಪ ; ಅಪರಾಧ. ೨. ರಾತ್ರಿಯ ಮೊದಲನೆಯ ಭಾಗ ; ಮುಚ್ಚಂಜೆ : "ಬೈಗಿನ ಪೊಟ್ಟಂ ಸಾಯಮೆಂಬುದು – ಮುನ್ನಿರುಳಂ ಪ್ರದೋಷಮೆಂಬುದು" (ಹಲಾಯು. ೦೬-೦೦೯) ; ಕಡೆಗೆ ಒಮ್ಮಿಂದೊಮ್ಮೆ ಪ್ರದೋಷದ ಕತ್ತಲೆಯು ಬಂದು ಕಪ್ಪಾದ ಜಲದ ಮೇಲೆ ಹರಡಿಕೊಂಡಿತು (ಕಪಾಕು. ೦೬). ೩. ಶುಕ್ಲ ಮತ್ತು ಕೃಷ್ಣಪಕ್ಷಗಳಲ್ಲಿ ಸಾಯಂಕಾಲಕ್ಕೆ ತ್ರಯೋದಶಿ ಬರುವ ದಿನ : ತರುವಾಯ ಪ್ರದೋಷ ಬಂತು. ಸಾಯಂಕಾಲದಲ್ಲಿ ಎಂದಿನಂತೆ ಸರಸ್ವತೀಪೂಜೆ ಮೊದಲಾದ್ದು ಜರುಗಿತು (ಮಾಮಶಾ. ೩೪). ೪. [ಜೈನ] ಮೋಕ್ಷಕ್ಕೆ ಕಾರಣವಾದ ತತ್ತ್ವಜ್ಞಾನವನ್ನು ಉಪದೇಶಿಸುವಾಗ ಅಥವಾ ಅದರ ಗುಣಗಾನ ಮಾಡುವಾಗ ಏನನ್ನೂ ಮಾತನಾಡದಿರುವಿಕೆ: ಪ್ರದೋಷ (ಪರರ ಜ್ಞಾನವನ್ನು ಹೊಗಳದೆ ಮೌನವನ್ನು ಧರಿಸುವುದು) (ಕೃಪರ. ೬೩). ೫. ಜ್ಞಾನಾವರಣಕರ್ಮದ ಬಂಧಕ್ಕೆ ಕಾರಣವಾದ ಭಾವ; ಮನಸ್ಸಿನ ದ್ವೇಷಭಾವ : ತತ್—ಆ ಜ್ಞಾನದರ್ಶನಂಗಳೊಳಪ್ಪ, ಪ್ರದೋಷ—ಮುಳಿಸುಂ (ತತ್ತ್ವಪ್ರ. ೨೫೯). [ಸಂ.]

ಪ್ರದೋಷಕಾಲ (ನಾ). ೧. ರಾತ್ರಿಯ ಪ್ರಾರಂಭಕಾಲ; ಸಾಯಂಕಾಲ: ಆ ಘನಸಮಯಂ . . . ಪ್ರದೋಷಕಾಲದಂತೆ ನೀಲಕಂಠತಾಂಡವಾಡಂಬರಮುಂ . . . ಎನಿಸಿರ್ದುದು (ರಾಜಶೇ. ೬-೦೦೬ ಪ) ; ಸರ್ಪಭೂಷಣರು ಅಂದಿನ ಪ್ರದೋಷಕಾಲದ ಪೂಜೆಗೆ ಕುಳಿತುಕೊಳ್ಳುತ್ತಾರೆ (ಶರಸ. ೭೬೬) ; ನನ್ನ ಚಿತ್ತವಂತೂ ಗೂಡು ಕಳೆದುಕೊಂಡು ಗುಬ್ಬಳಿಸುವ ಗುಬ್ಬಚ್ಚಿಯ ಹಾಗೆ. ಪ್ರದೋಷಕಾಲದಲ್ಲಿ . . . ಹಾರಾಡಿ ಸುತ್ತುತ್ತಿತ್ತು (ಇಪ್ಪಕ. ೦೬೬). ೨. ಬಹಳ ದೋಷಯುಕ್ತವಾದ ಕಾಲ ; ಬಹಳ ಪಾಪಕೃತ್ಯಗಳು ನಡೆಯುವ ಕಾಲ. ೧,೨ : ಪಿರಿದುಂ ಪ್ರದೋಷಕಾಲಂ ಬರೆ ಮೆಯ್ಗುರೆದಂ ಪ್ರಭಾಕರಂ ವಾರಿಧಿಯೊಳ್ ಧರೆಯೊಳ್ಳದೋಷಕಾಲದೊಳಿರ ಲಾರ್ಪರೆ ಹೂನ್ಯವಂತರೀ ಾರಿಣಿಯೊಳ್ (ಪೀರವಿ. ೬-೨೦). [ಸಂ.]

ಪ್ರದೋಷಪೂಜೆ (ನಾ). ಸಾಯಂಕಾಲದಲ್ಲಿ ಮಾಡುವ ಪೂಜೆ : ಈಗ ಪ್ರದೋಷಪೂಜಾದಿಗಳನ್ನು ಮುಗಿಸಿ ಧಾನ್ಯಮಗ್ನನಾಗಿದ್ದಾಗ ನಿನ್ನ ಪೂರ್ವಾಪರವೆಲ್ಲವೂ ತಿಳಿಯಿತು ! (ಹೇಮಕೂ. ೬೦). [ಸಂ. ಪ್ರದೋಷಪೂಜಾ]

ಪ್ರದೋಷವ್ರತ (ನಾ). ಪ್ರತಿಪಕ್ಷದಲ್ಲೂ ಸಾಯಂಕಾಲದಲ್ಲಿ ತ್ರಯೋದಶಿ ಇರುವ ದಿನ ಮಾಡುವ ಒಂದು ಪವಿತ್ರವಾದ ವ್ರತ ; ೫ ಹಗಲು ಉಪವಾಸವಿದ್ದು ಸಾಯಂಕಾಲ ಸ್ನಾನ ಮಾಡಿ ಮಡಿಯುಟ್ಟು, ಕಲ್ಪೋಕ್ತಕ್ರಮದಿಂದ ಆಚರಿಸುವ ಶಿವಪೂಜೆ ಮತ್ತು ರುದ್ರಾಭಿಷೇಕ ಹಾಗೂ ಸಹಸ್ರನಾಮಾರ್ಚನೆ. ಇವುಗಳಿಂದ ಬಡತನವು ಪರಿಹಾರವಾಗುತ್ತದೆಯೆಂಬ ನಂಬಿಕೆಯಿದೆ : ಪ್ರದೋಷವ್ರತವನ್ನು ಮಾಡಲು ಆರಂಭಿಸಿದ ಮೇಲೆ ಅವನಿಗೆ ಅದೃಷ್ಟ ಒದಗಿ ಬಂತು (ಕೂರಿ). [ಸಂ.]

ಪ್ರದ್ಯುತಿ (ನಾ). ಹೆಚ್ಚಾದ ಹೊಳಪು,-ಪ್ರಕಾಶ : ಕೌಸ್ತುಭಪ್ರದ್ಯುತಿ ಬೀಱುತ್ತಿರ್ಪಿನಂ ಶಾಶ್ವತನವತರಿಸಿರ್ದಂ . . . ವಾಸುದೇವಂ (ಜಗಂ. ೨-೦೦೦); ವಿಳಸತ್ಸಂಧ್ಯಾರುಣ ಪ್ರದ್ಯುತಿಗೆ ರುಧಿರವಿಭ್ರಾಂತಿಯಿಂ ಬಗ್ಗವಿಂಡವ್ವಳಿಕುಂ (ರಾಜಶೇ. ೬-೨೦). [ಸಂ.]

ಪ್ರದ್ಯುಮ್ನ (ನಾ). ೧. ಹೆಚ್ಚಾದ ಶಕ್ತಿಯುಳ್ಳವನು ; ಬಹು ಸಮರ್ಥನಾದವನು. ೨. ಕೃಷ್ಣನ ಮಗ; ಮನ್ಮಥ ; ಕಾಮ : "ಪ್ರದ್ಯುಮ್ನಃ. ಮಕರಧ್ವಜಃ . . . ಮನೋಭವಃ—ಈ ೨ರ ಕಾಮದೇವನ ಪೆಸರ್" (ಹಲಾಯು. ೬-೩೩) ; ಉಳಿದ ಪ್ರದ್ಯುಮ್ನ ಗದ ಸಾಂಬನನಿರುದ್ಧ ನಿಶಠಶಠನಕ್ರೂರ ಸಾತ್ಯಕಿ ಪ್ರಮುಖಯಾದವರೆಮ್ಮ ಕೂಡೆ ಬರಲಿ (ಕೃಮಿಣಾ. ೬-೨). ೩. [ವಿಶಿಷ್ಟಾ]ವ್ಯೂಹರೂಪನಾದ ನಾರಾಯಣನ ನಾಲ್ಕು ವ್ಯೂಹಗಳಲ್ಲಿ ಒಂದು ; ೫ನಾರಾಯಣನಂ ಪರ, ವ್ಯೂಹ, ವಿಭವ, ಅಂತರ್ಯಾಮಿ. ಮತ್ತು ಅರ್ಚಾವತಾರ ಎಂಬ ಐದು ಪ್ರಕಾರ ಉಳ್ಳವನಾಗಿದ್ದಾನೆ. ವ್ಯೂಹ ಎಂದರೆ ಪರನೇ ಉಪಾಸನೆಗೋಸ್ಕರವೂ ಜಗತ್ಸೃಷ್ಟಿ ಮೊದಲಾದುವುಗಳಿಗೋಸ್ಕರವೂ ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಭೇದವನ್ನು ಹೊಂದುವ ರೂಪ. ಪ್ರದ್ಯುಮ್ನನು ಐಶ್ವರ್ಯ ಮತ್ತು ವೀರ್ಯದಿಂದ ಪರಿಪೂರ್ಣನಾಗಿರುತ್ತಾನೆ : ವ್ಯೂಹ ಎಂದರೆ . . . ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಭೇದವನ್ನು ಹೊಂದುವ ರೂಪ (ಶಾಶತ್ತ್ವ. ೬೬೯). [ಸಂ.]

ಪ್ರದ್ಯುಮ್ನಗೋತ್ರ (ನಾ). ೧. ಪ್ರಸಿದ್ಧವಾದ ವಂಶಕ್ಕೆ ಸೇರಿದವನು. ೨. ಮನ್ಮಥಸಮಾನನಾದವನು. ೧, ೨ : ವಿಳಸತ್ಕಳಾಧರಸಖಂ ಪ್ರದ್ಯುಮ್ನಗೋತ್ರಂ ರಮೋತ್ಸವಧಾಮಂ ಸುಮನೋವಿನಿರ್ಮ್ಮಿತ ಸುಧರ್ಮ್ಮಂ ತಾನೆನಲ್ಕೀ ಸುಕೇಶವವುತ್ರಂಗೆಸೆವಾಚಿರಾಜವಿಭುವಿಂಗೊಪ್ಪಿ ಪುದೇಂ ಚೋದ್ಯಮೇ (ಎಕ. VI, ಅಸೂರು. ೬೬-೩೬: 1172). [ಸಂ.]

ಪ್ರದ್ಯೋಗ (ನಾ). ಹೆಚ್ಚಾದ ಪ್ರಯತ್ನ ; ಮಹಾಪ್ರಯತ್ನ: ಶಕ್ತಿ ಸಾಧಕನಿಂತು ರೌದ್ರವಿದ್ಯಾಶಕ್ತಿಯಂ ಸಾಧಿಪ ಪ್ರದ್ಯೋಗದೊಳ್ ಯೋಗಿಯಾಗಿರಲು (ಶ್ರೀರಾಮಾ. ೭೦೭-೨೩೭). [ಸಂ.]

ಪ್ರದ್ಯೋತ (ನಾ). ೧. ಕಿರಣ ; ರಶ್ಮಿ : "ರೋಚಿಃ. ಶೋಚಿಃ. ಅಭೀಷುಃ. ಪ್ರದ್ಯೋತಃ . . . ಗೌಃ—ಈ ೩೨ ರಶ್ಮಿಗಳ ಪೆಸರ್" (ಹಲಾಯು. ೬-೩೯) ;

ಅಂತು ಕನಕಶಾಂತಿಮುನಿರಾಜಂ ಕೇವಲಬೋಧಪ್ರದ್ಯೋತಕ್ಕಾದಿತ್ಯನಾಗೆ (ಕಾಂತಿಪು. ೯-೨೩ ಪ); ವಿಕ್ರಮಾಂಕಂ ಸೋಮಪ್ರದ್ಯೋತಕೀರ್ತಿ ಪ್ರಕಟಿತದಶ ದಿಗ್ಭಿತ್ತಿ (ಎಕ. VIII, ಸೊರಬ. ೨೭೬-೩೭; 1070). ೨. ಕಾಂತಿ; ಪ್ರಕಾಶ; ತೇಜಸ್ಸು : ದಿನಲಕ್ಷ್ಮೀಕಾಂತೆ . . . ಎಯ್ತರ್ಪಲ್ಲಿ ಕಾಲಿಂ ನವಮಣಿ ಮಯಮಂಜೀರಕಂ ನುಣ್ಚುತಂ ತೀವಿ ನಿಜಪ್ರದ್ಯೋತದಿಂ ಪಶ್ಚಿಮಶಿಖರಿ ಶಿರೋಭಾಗದೊಳ್ ಬಿಟ್ಟುದೆಂಬಂತಿನಬಿಂಬಂ ರಂಜಿಸಿತ್ತಸ್ತಮಯಸಮಯ ದೊಳ್ ಮುಕ್ತಪಾದಾವಲಂಬಂ (ಕಾದಂಪು. ೩೦೭) ; ಕಾಂತಾಕಪೋಲೇಂದು ನವಪ್ರದ್ಯೋತಮಂ ಮುಂ ತಳೆಯೆ ಹಿಮಕರಂ ಪಿಂತೆ (ರಾಜಶೇ. ೯-೪೪).

[ಸಂ.]

ಪ್ರದ್ಯೋತನ (ನಾ). ಸೂರ್ಯ; ರವಿ : "ಆದಿತ್ಯಃ, ಸವಿತಾ, ಸಹಸ್ರ ಕಿರಣಃ, ಪ್ರದ್ಯೋತನಃ . . . ತ್ರಯಿತನುಃ -ಈ ೪೭ ಆದಿತ್ಯನ ಪೆಸರ್" (ಹಲಾಯು. ೭-೩೩). [ಸಂ.]

ಪ್ರದ್ಯೋತಿ (ನಾ). ಬೆಳಕು; ಕಾಂತಿ; ಪ್ರಕಾಶ : ತಳಿರ್ದೊಂಗಲ್ ಪುದಿದಂದದಿಂದಿರೆ ತಳಪ್ರದ್ಯೋತಿಯಿಂದುದ್ಗಮೋಜ್ವಳದಾಮಂ ತದುದಾರ ಸೌರಭಚಯಂ ಸುಯ್ಗಂಪಿನಿಂದಾವಗಂ ದಳವೆ ಱುತ್ತಿರೆ (ಕಂದ್ರಪು. ೦-೧೩೨).

[ಸಂ. ಪ್ರದ್ಯೋತಿಸ್]

ಪ್ರದ್ರಾವ (ನಾ). ೧. ಓಡುವುದು; ವೇಗವಾದ ಚಲನೆ. ೨. ಹಿಂಜರಿದಂ ಓಡಿಹೋಗುವಿಕೆ; ಪಲಾಯನ : "ಪ್ರದ್ರಾವಃ . . . ಅಪಯಾನಂ-೮ ಪಲಾಯನವಾಗುವುದಕ್ಕೆ ಹೆಸರು, ತಪ್ಪಿಸಿಕೊಂಡು ಓಡಿ ಹೋಗುವಿಕೆ" (ಸಿದ್ಧಾಂತಿ. ೨೭೦). [ಸಂ.]

ಪ್ರಧನ (ನಾ). ೧. ಕಾಳಗ; ಯುದ್ಧ; ಸಮರ : ಸಮಧಿಕರಸ್ತ್ರಶಸ್ತ್ರಬಲ ದೊಳ್ ದೃಢಕಾಯದೊಳತ್ಯುದಗ್ರವಿಕ್ರಮದೊಳನಂತವೀರ್ಯದೊಳನೇಕ ವಿಧಪ್ರಧನಂಗಳೊಳ್ (ಪಂಡಾಮಾ. ೦೪-೦೩೬). ೨. ಯುದ್ಧದಲ್ಲಿ ಸೂರೆ ಮಾಡಿದ ಲೂಟಿ,-ಕೊಳ್ಳೆ. ೩. ಹರಿದು ಹಾಕುವುದು. ೪. ಹಾಳು ಮಾಡುವುದು; ನಾಶಮಾಡುವುದು. ೫. ಧನವಂತ; ಐಶ್ವರ್ಯ ವಂತ. ೬. ಒಂದು ನರಕದ ಹೆಸರು : ಪ್ರಥ[ಧ]ನ. . . ಬಾಧೆಯೊಂ ಬೈದು ಮಂತ್ರಿನರಕಂಗಳಿಂ ಕೂಡಿ ಅಘೋರಮೆಂಬರಸುನರಕವಿಹುದು (ವಿವೇಕ.೦೭೯). [ಸಂ.]

ಪ್ರಧಾನ (ಗು). ೧. ಪ್ರಮುಖವಾದ; ಮುಖ್ಯವಾದ : ಪ್ರಧಾನ ಪುರುಷಾಧ್ಯಾಸಿತಂಗಳಪ್ಪ ಪುರಂಗಳುಮಂ (ಆದಿಪು. ೬-೬೩ ಪ). ೨. ಶ್ರೇಷ್ಠ ವಾದ; ಉತ್ಕೃಷ್ಟವಾದ: (ಕ). (ನಾ). ೩. ಮುಖ್ಯವಾದುದು; ಪ್ರಮುಖವಾದುದು : "ಅಗ್ರ್ಯಂ, ಪ್ರಧಾನಂ, ಪ್ರಮುಖಂ, ಪುರೋಗಂ, ಮುಖ್ಯಂ. . . ಅಗ್ರಣೀಃ _ ಈ ೧೩ ಮುಖ್ಯಂ" (ಹಲಾಯು. ೦೦೩-೩); ಅಖಿಲಮಂತ್ರಿಮುಡಳಿಕಪ್ರಧಾನನುಮಪ್ಪ ಕುಮಾರಪಾಲಿತನೆಂಬ ಮಂತ್ರಿಮುಖ್ಯನನಿಂತೆಂದಂ (ಕಾದಂಪು. ೬೨); ಮಾನವಇತಿಹಾಸದಲ್ಲಿ ನದಿ ಗಳ ಪಾತ್ರ ಬಹು ಪ್ರಧಾನವಾದುದು (ಸನದಿ. ೦೮). ೪. ಮುಖ್ಯವಾದ ನಿಯಮ : ವಚನಗಳನ್ನು ವಿಧಿನಿಷೇಧ ಅರ್ಥವಾದಗಳೆಂದೂ ಪ್ರಧಾನ ಲಿಂಗಗಳೆಂದೂ, ಮುಖ್ಯ ಗೌಣಗಳೆಂದೂ, ಗುರುಲಘುಗಳೆಂದೂ ಸಾಮಾನ್ಯ ವಿಶೇಷಗಳೆಂದೂ, ವಿಂಗಡಿಸಿಕೊಂಡು ನಡೆಯಬೇಕು (ಆರ್ಯರ. ೩೪). ೫. [ವೇದಾಂತ] ಜಗತ್ತಿಗೆ ಮೂಲಕಾರಣವೆಂದು ಹೇಳಲಾಗಿರುವ ಪ್ರಕೃತಿ : ಮೂಲಪ್ರಕೃತಿ ; ಸತ್ತ್ವ, ರಜಸ್ಸು ಮತ್ತು ತಮಸ್ಸು— ಮೂರು ಗುಣಗಳುಳ್ಳ ಪ್ರಕೃತಿ ; ೯ ಸಾಂಖ್ಯರೇ ಮೊದಲಾದ ಅನೇಕ ದಾರ್ಶನಿಕರು ಪ್ರಧಾನ ಅಥವಾ ಪ್ರಕೃತಿಯನ್ನು ತಾವು ಗಣಿಸಿರುವ ಇಪ್ಪತ್ತೈದು ತತ್ತ್ವಗಳಲ್ಲಿ ಮೊದಲನೆಯದು ಹಾಗೂ ಮುಖ್ಯವಾದುದು ಎಂದು ಹೇಳಿದ್ದಾರೆ. ಪ್ರಧಾನ ೧, ಮಹತ್ತತ್ತ್ವ ೧, ಅಹಂಕಾರತತ್ತ್ವ ೧, ಭೂತತನ್ಮಾತ್ರೆಗಳು ೫, ಮಹಾಭೂತ ಗಳು ೫, ಇಂದ್ರಿಯಗಳು ೧೧, ಪುರುಷ ೧—ಹೀಗೆ ಇಪ್ಪತ್ತೈದು ತತ್ತ್ವಗಳು ಉಕ್ತವಾಗಿವೆ : "ಪ್ರಕೃತಿಯಲ್ಲಿಯುಂ ಪ್ರಧಾನವೆಂಬುದು" (ಹಲಾಯು. ೦೩೩-೧೬) ; ಅಚೇತನವಾದ ಪ್ರಧಾನದಿಂದಾಗಲಿ, ಅಣುಗಳಿಂದಾ ಗಲಿ ... ಜಗತ್ತಿನ ಉತ್ಪತ್ತಿಯೇ ಮುಂತಾದದ್ದು ಆಗಿರಬಹುದೆಂದಿಟ್ಟು ಕೊಳ್ಳುವುದಕ್ಕೆ ಆಗಲಾರದು (ಬ್ರಹ್ಮಭಾ. ೨೦). ೬. ಪರಮಾತ್ಮ ; ದೇವರು. ೭. ಬುದ್ಧಿ ; ಪ್ರಜ್ಞೆ : "ಪ್ರಧಾನಂ, ಪರಮಾತ್ಮ, ಬುದ್ಧಿ, ಮೂಲಪ್ರಕೃತಿ, ಪ್ರಧಾನಿ, ಮುಖ್ಯನಾದವನು, ಸಾಂಖ್ಯ ಜಗತ್ಕಾರಣ" (ಸಿದ್ಧಾಂತಿ. ೪೦೩). ೮. ರಾಜನಿಗೆ ಮುಖ್ಯಸಹಾಯಕನಾದ ಹಿರಿಯ ಅಧಿಕಾರಿ ; ಮಹಾಮಾತ್ರ : "ಮಹಾಮಾತ್ರಃ, ಪ್ರಧಾನಂ -೨ ಅರಸನ ಬಳಿಯಲ್ಲಿ ಅಧಿಕಾರಿಗಳಾದ 'ದೊಡ್ಡಮನುಷ್ಯರಿಗೆ ಹೆಸರುಗಳು, ದಳವಾಯಿ ಮುಂತಾದವರಿಗೂ ಹೆಸರುಗಳು" (ಸಿದ್ಧಾಂತಿ. ೨೩೬); ಮಂಡಲಿಕಮಹಾಸಾಮಂತ ಮಂತ್ರಿಪ್ರಧಾನಪುರೋಹಿತಾಂತರ್ವಂಶಿಕಾದಿ ಪರಿವಾರಪರಿವೃತಂ (ಆದಿಪು. ೨-೨ ಪ); ಪಿರಿಯರಸಿ ಕಂಚಲಮಹಾದೇವಿಯರ ಸಮೀಪದಲ್ . . . ಸಮಸ್ತಪ್ರಧಾನವೆಲ್ಲರುಮಿರೆ (ಸೌಇಇ. XX, ೪೬-೩೧ ; 1072). 'ಅಷ್ಟಾದಶಪ್ರಧಾನ' ಪರಾ. ೯. ಒಂದು ಬಗೆಯ ಆಭರಣ : ಅಶ್ವರತ್ನದ ಆಭರಣದ ಲೆಖ್ಕಾ . . . ೫ ಹಿಡಕಿ ೪ ಪ್ರಧಾನ ೧ ಭಾಲೆ (ಎಕ. XIV, ನಂಜನ. ೨೯೩, ಪುಟ ೧೪೩ ; 1847). ೧೦. ಒಳ್ಳೆಯ ಕುಲದಲ್ಲಿ ಹುಟ್ಟಿದವನು ; ಸದ್ವಂಶಜ. ೧೧. ಒಳ್ಳೆಯ ನಡತೆ : "ಮಂತ್ರಿ ಸತ್ಕುಲಜಂ ಸಚ್ಚರಿತಂಗಳೆಂಬಿವು ಪ್ರಧಾನಾಖ್ಯಂ" (ವಾನಾರ. ೦೬೦). ೧೨. [ವ್ಯಾಕ] ಸಮಾಸದಲ್ಲಿ ಪ್ರಧಾನವಾದ ಅರ್ಥವನ್ನು ಕೊಡುವ ಪದ. [ಸಂ.]

ಪ್ರಧಾನಕ್ರಿಯೆ (ನಾ). [ವ್ಯಾಕ] ವಾಕ್ಯದಲ್ಲಿರುವ ಮುಖ್ಯವಾದ ಕ್ರಿಯಾ ಪದ : ಕಾದುತ್ತುಂ ಬಂದಂ . . . ಕಡೆದೊಡೆ ಪಾಲ್ಗಡಲ್ ವಿವಿಧವಸ್ತು ವನೀಯದೆ . . . ಮೊದಲನೆಯ ವಾಕ್ಯದಲ್ಲಿ 'ಬರುವುದೂ' ಎರಡನೆಯ ವಾಕ್ಯದಲ್ಲಿ 'ಈವುದೂ' ಪ್ರಧಾನಕ್ರಿಯೆಗಳು (ಕೃಪಿಡಿ. ೪೯).

[ಸಂ. ಪ್ರಧಾನಕ್ರಿಯಾ]

ಪ್ರಧಾನತೆ (ನಾ). ಪ್ರಾಮುಖ್ಯತೆ : ಹೊನ್ನಿನ ಪ್ರಧಾನತೆಯಿಂದ ಹೆಂಜೇರು ಅಥವಾ ಹೇಮಾವತಿ ಎಂಬ ಹೆಸರು ಈ ಪಟ್ಟಣಕ್ಕೆ ಬಂದಿರಬಹು ದೆಂಬುದು ಊಹೆ (ಮೊಳಂಬಿ. ೬೬). [ಸಂ. ಪ್ರಧಾನತಾ]

ಪ್ರಧಾನಮಂತ್ರಿ (ನಾ). ೧. ಮುಖ್ಯಸಚಿವ ; ಮೊದಲ ಸಚಿವ ; ಪ್ರಧಾನ ಅಮಾತ್ಯ : ನಿಜಪ್ರಿಯಪ್ರಧಾನಮಂತ್ರಿಮತಿವರನೊಳಂ . . . ಆಲೋಚಿಸಿ (ಆದಿಪು. ೪-೬೯ ಪ) : ಅರಸು ಪ್ರಧಾನಮಂತ್ರಿ ಆನೆ ಸೇನೆ ಪ್ರಜೆ ಪರಿವಾರವೆಲ್ಲವೂ ಸತ್ತು ಅರಸಿನ ಅರಸುತನ ಕೆಟ್ಟಿತ್ತು ನೋಡು (ಸಿದ್ಧೇಪ. ೧೯೯-೬೭೦). ೨. ಸಂಸದೀಯವ್ಯವಸ್ಥೆಯುಳ್ಳ ದೇಶಗಳ ಸರ್ಕಾರದ ಕಾರ್ಯಾಂಗದ ಪ್ರಮುಖವ್ಯಕ್ತಿ ; ರಾಷ್ಟ್ರದ ಮುಖ್ಯ ಮಂತ್ರಿ : ಜವಹರಲಾಲರು ಭಾರತದೇಶದ ಪ್ರಧಾನಮಂತ್ರಿಗಳು ಆದರು (ಕಶಪು. ೩-೯೪). [ಸಂ. ಪ್ರಧಾನಮಂತ್ರಿನ್]

ಪ್ರಧಾನಶ್ರೇಷ್ಠಿ (ನಾ). ಪ್ರಮುಖನಾದ ವರ್ತಕ ; ಮುಖ್ಯ ವ್ಯಾಪಾರಿ: ಪ್ರಧಾನಶ್ರೇಷ್ಠಿ ಧನಮಿತ್ರನೊಳಮಾಲೋಚಿಸಿ (ಆದಿಪು. ೪-೬೯ ಪ).

[ಸಂ. ಪ್ರಧಾನಶ್ರೇಷ್ಠಿನ್]

ಪ್ರಧಾನಿ (ನಾ). ೧. = ಪ್ರಧಾನಮಂತ್ರಿ ೧ : ಜೈನಪಂಡಿತನಿಗೆ ಪ್ರಧಾನೀ ಕೆಲಸ ಕೊಟ್ಟು (ಮುಂಬಿಯು. ೪-೯೦). ೨. = ಪ್ರಧಾನಮಂತ್ರಿ ೨ : ಆ ಸಮಾರಂಭದ ಉದ್ಘಾಟನೆಯನ್ನು ಪ್ರಧಾನಿಯವರು ನೆರವೇರಿಸಿದವರು (ಕೂಡಿ). [ಪ್ರಧಾನ + — ಇ]

ಪ್ರಧಾನಿಕೆ (ನಾ). ಪ್ರಧಾನಮಂತ್ರಿಯ ಪದವಿ ; ಪ್ರಧಾನಿಯ ಅಧಿಕಾರ : ತಪ್ಪದೊಪ್ಪಿಸಿ ಹೋಗು ಸಾಕಿನ್ನೊಪ್ಪದಿಂ ಭಂಡಾರದೊಡೆ

ತನಮುಂ ಪ್ರಧಾನಿಕೆಯುಂ (ಐಸಪು. ೦೧-೭). [ಪ್ರಧಾನ + — ಇಕೆ]

ಪ್ರಧಾನಿತಿ (ನಾ). ಪ್ರಧಾನಮಂತ್ರಿಯ ಹೆಂಡತಿ : ಅರಸನ ಪೆಂಡತಿ, ಅರಸಿತಿ. ಏವಂ ಪ್ರಧಾನಿತಿ, ತಳವಱಿತಿ (ಶಬ್ದಾನು. ೦೯೦ ಪ್ರಯೋ).
[ಪ್ರಧಾನ + — ಇತ್ತಿ₁ (< — ಇತ್ತಿ)]

ಪ್ರಧಿ (ನಾ). ೧. ಚಕ್ರದ ಅಂಚು ; ಗಾಲಿಯ ಸಂತ್ತು,-ಪರಿಧಿ : "ಚಕ್ರಧಾರಾ, ಪ್ರಧೀಃ, ನೇಮಿಃ — ಈ ೩ ನೆತ್ತಿವಟ್ಟಿಗೆ" (ಹಲಾಯು. ೬೩-೨೯೩). ೨. ಬಾವಿಯ ರಾಟೆ : "ಅಂಧುಃ, ಕೂಪಃ — ಈ ೨ ಬಾವಿ, ಪ್ರಧೀಃ, ನೇಮಿಃ (ಅದಱ ಱ್ಯಾಟ)" (ಹಲಾಯು. ೦೦೩-೬೨).
[ಸಂ.]

ಪ್ರಧ್ವಂಸ (ನಾ). ಸಂಪೂರ್ಣ ನಾಶ : ನೃಸಿಂಹನೆನಿಪ್ಪಾಕೃತಿಯಿಂ ಹಿರಣ್ಯಕಶಿಪು ಪ್ರಧ್ವಂಸಮಂ ಮಾಡಿದೈ (ಜಗವಿ. ೦-೩೮); ಖಳಕರ್ಮಾಷ್ಟವಿಧೋಗ್ರ ಕಂಟಕಕುಳಪ್ರಧ್ವಂಸದಿಂದಂ ನಿರ್ಮಾಳರುಂ . . . ತಾಮಾಗಿ (ಜೀವಸಂ. ೨-೨). [ಸಂ.]

ಪ್ರಧ್ವಂಸನ (ನಾ). ೧. ಸಂಪೂರ್ಣನಾಶ ಮಾಡುವಿಕೆ ; ಪೂರ್ತಿ ಹಾಳುಮಾಡುವಿಕೆ : ಅಘಕುಲಪ್ರಧ್ವಂಸನೋಪಾಯಮಂ ಬಗೆಯುತ್ತುಂ (ಸುಕುಮಾ. ೦-೩); ಆಚಾರ್ಯರ್ ತಾಮೆಮಗೀವರಕ್ಕೆ ದುರಿತಪ್ರಧ್ವಂಸ ನೋಪಾಯಮಂ (ಜೀವಸಂ. ೧-೩). ೨. ಹಾಳು ಮಾಡುವವನು.
[ಸಂ.]

ಪ್ರಧ್ವಂಸಾಭಾವ (ನಾ.) [ದ್ವೈತ] ನಾಲ್ಕು ಬಗೆಯ ಅಭಾವಗಳಲ್ಲಿ ಒಂದು; ವಿನಾಶ ಹೊಂದುವ ಅಭಾವ : ಪುಟ್ಟದ ಘಟನೊಡದ ಬಳಿಕಿನ್ನಿಲ್ಲವೆಂಬುದೇ ಪ್ರಧ್ವಂಸಾಭಾವವೆನಿಸುವುದು (ವಿವೇಕ. ೨೩); ಈ ಅಭಾವವೆಂಬುದು ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ, ಅನ್ಯೋನ್ಯಾಭಾವವೆಂದು ನಾಲ್ಕು ಪ್ರಕಾರ (ಹಿಂದಸಾ. ೧೯೪). [ಸಂ.]

ಪ್ರಧ್ವಾನ (ನಾ). ದೊಡ್ಡ ಶಬ್ದ,-ಧ್ವನಿ,-ಮೊಳಗು : ವನಧಿಪ್ರಧ್ವಾನದಿಂ ಮಂಗಳಪಟಹರವಂ ಪೆರ್ಚೆ (ಪಂಪಶಾ. ೦೪-೦೮); ನಿನ್ನೊಳ್ಗುಣಂಗಳ ನಾಲೋಳಮದಾಳಿ ಮಂದ್ರಮಧುರಪ್ರಧ್ವಾನದಿಂ ಪಾಡಿದಳ್ (ಎಕ. VIII, ಸಾಗರ. ೦೦೯-೪೦ ; 1042); ಪಟುಪ್ರಧ್ವಾನಮಂ ಬೀಱಿದುವು ಕಹಳೆಗಳ್ (ರಾಜಶೇ. ೬-೦೭). [ಸಂ.]

ಪ್ರನವ (ಗು). ತೀರ ಹೊಸ ; ಬಹಳ ನವೀನವಾದ : ಮನಸಿನ ಮಾತಿದು ಮನದಂತಾದರೆ ಪ್ರನವಸುಮಂಗಲೆಯಾಗುವೆನು (ಪಪಲ್ಲಿ. ೩೦-೩). [ಸಂ. (ಪ್ರ+ನವ). / ℘ ವ್ಯಾಕರಣದ ನಿಯಮದ ಪ್ರಕಾರ ಇದು ಅಶುದ್ಧ ರೂಪ]

ಪ್ರನಾಳ (ನಾ). ರಾಸಾಯನಿಕಪರೀಕ್ಷೆಯ ಪ್ರಯೋಗ ಮುಂತಾದುವುಗಳಲ್ಲಿ ಬಳಸಂವ ಗಾಜಿನ ಕೊಳವೆ : ಹೀಲಿಯಂ ತುಂಬಿದ ಪ್ರನಾಳವನ್ನು ಹೀಲಿಯಂ ಪಾತ್ರೆಯ ಮೇಲೆ ಹಿಡಿದಾಗ ಪ್ರನಾಳದ ಹೀಲಿಯಂ ಗೋಡೆಯ ಅಂಚಿನಲ್ಲಿ ಹರಿದು ಪಾತ್ರೆಗೆ ಬೀಳುತ್ತದೆ (ಕವಿಕೋ. I, ೨೩೬).
[ಸಂ. ಪ್ರನಾಲ]

ಪ್ರನಾಳಶಿಶು (ನಾ). ಭ್ರೂಣವನ್ನು ವೈಜ್ಞಾನಿಕವಾಗಿ ಗಾಜಿನ ಪಾತ್ರೆಯಲ್ಲಿ ಮೊದಲು ವೃದ್ಧಿಪಡಿಸಿ, ನಂತರ ತಾಯಿಯ ಗರ್ಭದ ಮೂಲಕ ಜನಿಸಂವಂತೆ ಮಾಡುವ ಶಿಶು, [ಸಂ. ಪ್ರನಾಲಶಿಶು. / ℘ ಇದು ಇಂಗ್ಲಿಷಿನ 'Test-tube baby' ಎನ್ನುವುದರ ಅನುವಾದ]

ಪ್ರಪಂಚ (ನಾ). ೧. ಹರವು ; ವಿಸ್ತಾರ : "ವ್ಯಾಸಃ, ಪ್ರಪಂಚಃ, ವಿಸ್ತಾರಃ—ಈ ೩ ಹಿರಿದು ಮಾಡುಹ" (ಹಲಾಯು. ೦೨೬-೮೧); ಪ್ರಪಂಚವೆಂದರೆ ವಿಸ್ತಾರ (ಶಕ್ತಿವಿ. ೩೩). ೨. ಜಗತ್ತು ; ವಿಶ್ವ; ಲೋಕ : ಪ್ರಪಂಚವು ಮುಳುಗಿಹೋದರೂ ಅದನ್ನು ಮತ್ತೊಬ್ಬರಿಗೆ ಕೊಟ್ಟಾನೇ ? (ಕವಿಕ. ೨೩) ; ಕಲೆಯ ಪ್ರಪಂಚದೊಳಿಂತೆನಗವರಾದಿಗುರುವಾಗಿ ತೆರೆದರು ಹಾದಿ (ಇಂಕಾಪ. ೦೦-೪೧). ೩. ಲೌಕಿಕವಾದ ಬಾಳು; ಸಂಸಾರ: ಬಿಡೆಯಲಾನಿನ್ನ ಪ್ರಪಂಚವ ನಾನು ನನ್ನೊಡಹುಟ್ಟಿದವರೆಂದ ಮೇಲೆ ಕಡುಬೇಗ ಕರೆಸುವೆನೆನ್ನದೆ ನೀನಿದ ನುಡಿವರೆ (ಭರಕ. ೩೯-೦೨೯); ತಿಂಗಳಿಗೆ ಒಟ್ಟು ನೂರಾ ಐವತ್ತು ಸಂಬಳ, ಪ್ರಪಂಚ ಸಾಗುವುದು ಬಿಗಿ (ಕುಂಹಿಂ. ೨೬) ; ಪ್ರಪಂಚ ಬಿಡುತ್ತೇನೆಂದು ಪಂಚಮಹಾಪಾಪ ಹೊಂದಿಕೊಂಡ (ಗಾದೆ). ೪. ಮೋಸ ; ವಂಚನೆ. ೫. ಸಮೂಹ ; ಮೊತ್ತ ; ಗುಂಪು : ಅದೇ ವಾನರಪ್ರಪಂಚ. ಆ ಪ್ರಪಂಚದಿಂದ ಪ್ರಾರಂಭವಾಗುವ ದೃಶ್ಯಗಳು ವೀರರಸಕ್ಕೆ ಎಡೆಗೊಡುತ್ತವೆ (ಭಾರದ. ೬೯). ೬. ವರ್ತಮಾನ ; ಸಂಗತಿ : ಅಬ್ಜದಳಾಕ್ಷಿ ಪೇಳ ಸಾಮಾನ್ಯಮೆ ಬಗೆಯ ಭವತ್ಕೇಶಪಾಶಪ್ರಪಂಚಂ (ಪಂಪಶಾ. ೦೨-೧೫೬); ನಾಗಶರ್ಮನಾ ಪ್ರಪಂಚಮೆಲ್ಲಮಂ ತಳಾಱನಂ ಬೆಸಗೊಂಡು (ಸುಕುಮಾ. ೭-೩೫ವ) ; ಕಂಸಕೃತಾಪಚಾರಮಂ ತತ್ಪ್ರಪಂಚಮನಱಿಪೆ (ಜಗವಿ. ೩-೩ ವ). ೭. ವಿವಿಧತೆ; ವೈವಿಧ್ಯ; ಭಿನ್ನತೆ; ವೈಚಿತ್ರ್ಯ. ೮. ವಿಭಜನೆ ; ವಿಶ್ಲೇಷಣೆ. ೯. ಆವಿರ್ಭಾವ; ತೋರಿಕೆ. [ಸಂ.]

ಪ್ರಪಂಚಜ್ಞಾನ (ನಾ). ಲೌಕಿಕಜ್ಞಾನ ; ವ್ಯವಹಾರಜ್ಞಾನ : ದೇವರು ನಿಮಗೆ ವಿವೇಕ ಕೊಟ್ಟಿದ್ದಾನೆ. ಪ್ರಪಂಚಜ್ಞಾನವಿದೆ (ದೇವಹಂ. ೭೨).
[ಸಂ.]

ಪ್ರಪಂಚತೆ (ನಾ). ಮೋಸ ; ವಂಚನೆ : ಸತಿಯರಲ್ಲಿಯ ಪ್ರಪಂಚತೆಯನೆಲ್ಲವನು ಕಾಣುತ . . . ಕ್ಷಿತಿಯೊಡೆತನವ ಬಿಟ್ಟತಿದೇಗದಿಂದ ವಿರತಿದಾಳಿ ಪೋದೊಲಿದಲ್ಲ (ಮೋಳಿಮಾ. ೩-೦೯). [ಸಂ. ಪ್ರಪಂಚತಾ]

ಪ್ರಪಂಚನ (ನಾ). ಹರಡುವುದು ; ವಿಸ್ತರಿಸುವುದು ; ಅರಳುವುದು : ಅಮಿತಪ್ರಪಂಚನಾಕುಂಚನಾವರ್ತನಕ್ರಮವೆ ವಿಶ್ವಚರಿತ್ರೆ (ಮಂಕುಕ. ೯೦).
[ಸಂ.]

ಪ್ರಪಂಚಿ (ನಾ). ೧. ಸಂಸಾರದಲ್ಲಿ ಆಸಕ್ತನಾದವನು ; ಲೌಕಿಕವ್ಯಕ್ತಿ. ೨. ಮೋಸಗಾರ ; ವಂಚಕ : ತನು ಮನ ಧನದಲ್ಲಿ ವಂಚನೆಯುಳ್ಳ ಪ್ರಪಂಚಿಯ ಮನೆಯ ಕೂಳು ಶುನಕನ ಬಾಯ ಎಲುವ ಪ್ರತಿಶುನಕ ತಿಂದಂತೆ (ದೇದಾವ. ೩೦-೩೩); ನುಡಿದು ಹುಸಿವ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವ (ಬಸವ. ೨೩೭). ೩. ವ್ಯವಹಾರಕುಶಲನಾದವನು. [ಸಂ. ಪ್ರಪಂಚಿನ್]

ಪ್ರಪಂಚಿಸು (ಕ್ರಿ). ವಿವರಿಸು ; ವಿಸ್ತಾರವಾಗಿ ತಿಳಿಸು : ಕ್ರಿಯಾಕರ್ಮಮೆಂಬುದು ಅರ್ಹತ್ಸಿದ್ಧಾಚಾರ್ಯಬಹುಶ್ರುತಸಾಧುಪೂಜಾಕ್ರಿಯೆಯಂ ಪ್ರಪಂಚಿಸುಗುಂ (ತತ್ತ್ವಪ್ರ. ೬೩); ಇಂತು ಪಂಚಾಶ್ಚರ್ಯಮಂ ಪ್ರಪಂಚಿಸುತ್ತುಮಿರೆ (ಭಾಧಪು. ೭-೨೦ವ) ; ಸಂಧಿ . . . ಅವ್ಯಯವೆಂಬಷ್ಟ ಪ್ರಕಾರಮಂ ಪ್ರಪಂಚಿಸುವ ವ್ಯಾಕರಣದೋಷಮಿಲ್ಲದೆ (ವಿವೇಕ. ೨೨೬).
[ಪ್ರಪಂಚ + — ಇಸ್ಸು₃]

ಪ್ರಪಂಚು (ನಾ). ೧. ವ್ಯಾಪ್ತಿ; ವಿಸ್ತಾರ: ಸಂಚುವ ಸತೀಜನದೊಳಂಗಭವ ಕೇಳೀಪ್ರಪಂಚುವರನೊಳ್ಸಮನಿಸಿ (ಶೈಮಿಶಾ. ೨೬-೧೦). ೨. ಲೌಕಿಕವಾದ ಬದುಕು ; ಸಂಸಾರ : ಪ್ರಪಂಚಿನ ಡಂಬಿನಲಿ ಎನ್ನನೊಂದು ರೂಹು ಮಾಡಿ ನೀವಿರಿಸಿದಿರಿ (ಬಸವ. ೨೯). 'ಪ್ರಪಂಚುಜೀವಿ' ಪರಾ. ೩. ಮೋಸ; ವಂಚನೆ : ಸಟೆಯಿಲ್ಲದಂತೆ ಪ್ರಪಂಚುವಿಲ್ಲದಂತೆ ವೈಶಿಕವಿಲ್ಲದಂತೆ ನಡೆಸಯ್ಯಾ ಲಿಂಗತಂದೆ (ಬಸವ. ೩೧) ; ಪ್ರಪಂಚಿಲ್ಲದುಱಿ ತೂಗಿದಾ ಬಯಲ ಲಿಂಗಣನ ಚರಣಾಂಬುಜಕ್ಕೆ ಶರಣು (ಲಕಿಸಂ. ೩೮-೬೬) ; ಸವಿನೋಟದೊಳ್ಸಂಚು ನಗೆಯೊಳ್ ಪ್ರಪಂಚು . . . ಗಣಿಕೆಯರ ತಂಡಮಿಾ ತೆಱದೆ ಚೆಲ್ವಂ ಪಡೆದುದು (ಶೈಮಿಶಾ. ೬-೩೪). ೪. ಮಾಯೆ ; ಮೋಹ : ಮಣ್ಣು ದೇಹ ಹೊನ್ನು ಪ್ರಾಣ ಹೆಣ್ಣು ಸರ್ವಪ್ರಪಂಚು (ನೋಳಿಮಾ. ೪೩-೦೬೮) ; ಪ್ರಾಣಲಿಂಗವಾದ ಶರಣಂಗೆ ಪ್ರಪಂಚಿನ ಕುಱುಹಿಲ್ಲ (ಅಖಂಡೇ.

೦೦೬-೪೪). ೫. ಜೀವಿ ; ಬದುಕುವ ವ್ಯಕ್ತಿ (?) : ಕುಸುಮಬಾಣ ಪ್ರಪಂಚುಗಳತಿರಹಸ್ಯದಿಂದೊಸೆದು ತಮ್ಮುಪವಲ್ಲಭರನಗಲ್ದು ಮನೆಗೆಯ್ದಿ ಪೋಪ ಜಾರೆಯರೆಸೆದರು (ಬಕೋಪು. ೪-೬೬). 'ಪರಪಂಚ' ಪರಾ.

[<ಸಂ. ಪ್ರಪಂಚ]

ಪ್ರಪಂಚುಜೀವಿ (ನಾ). ಲೌಕಿಕಜಗತ್ತಿನಲ್ಲಿ ಆಸಕ್ತಿ ಇರುವವನು ; ಲೌಕಿಕವ್ಯಕ್ತಿ : ಜೀವನೋಪಾಯಕ್ಕೆ ಪರಮಾರ್ಥವನು ಅಲ್ಲ ಎಂಬ ಪ್ರಪಂಚುಜೀವಿಗಳ ಮೆಚ್ಚನು ಕಾಣಾ (ಸಿದ್ಧೇನ. ೫೬-೦೬೫).

[ಪ್ರಪಂಚು + ಜೀವಿ$_1$]

ಪ್ರಪಂಚುಭಾವ (ನಾ). ಇಹಲೋಕದ ಆಸಕ್ತಿ ; ಲೌಕಿಕಭಾವ : ಈ ಹೊನ್ನು ಹೆಣ್ಣು ಮಣ್ಣು ಎಂಬಿವು ಪ್ರಾಣಂಗೆ ಪ್ರಪಂಚುಭಾವವೆಂದಱಿದು (ಸಿದ್ಧೇನ. ೯೪-೨೬೫). [ಪ್ರಪಂಚು + ಭಾವ$_2$]

ಪ್ರಪತ್ತಿ (ನಾ). ೧. ಮರೆಹೊಗುವಿಕೆ ; ಆಶ್ರಯಿಸುವುದು : ರಿಪುಜಯ ಕಾರಣಶರಮಂ ಪ್ರಪತ್ತಿಯಿಂ ಪಡೆವೆಂ (ಕಬಕಂ. ೨-೦೦೭). ೨. [ವಿಶಿಷ್ಟಾ] ಮೋಕ್ಷಸಾಧನೆಯ ಮಾರ್ಗಗಳಲ್ಲಿ ಒಂದು ಬಗೆ ; ಶರಣಾಗತಿ ; ಪ ಆಳ್ವಾರರ ಕಾಲದಲ್ಲಿ ಆರಂಭವಾದ ಈ ಸಂಪ್ರದಾಯಕ್ಕೆ ಶ್ರೀವೈಷ್ಣವರಲ್ಲಿ ಒಂದು ವಿಶಿಷ್ಟಸ್ಥಾನವಿದೆ : ಜೀವಸಾಮಾನ್ಯವೂ ಪ್ರಪತ್ತಿ ಎಂಬ ಮಾರ್ಗದಿಂದ ಆಯಾ ಜನ್ಮದಲ್ಲೇ ಮೋಕ್ಷವನ್ನು ಹೊಂದ ಬಹುದು (ಹಿಂದಸಾ. ೨೬೦) ; ಈ ಪ್ರಪತ್ತಿಯು ಆರ್ತಪ್ರಪತ್ತಿ, ದೃಪ್ತ ಪ್ರಪತ್ತಿ ಎಂದು ಎರಡು ಬಗೆಯಾಗಿರುತ್ತದೆ (ಭಾರದ. ೨೬೪). [ಸಂ.]

ಪ್ರಪತ್ತಿಮಾರ್ಗ (ನಾ). ಶರಣಾಗತಿಯ ಮಾರ್ಗ : ರಾಮಾನುಜರಿಂದ ಪ್ರಪತ್ತಿಮಾರ್ಗಕ್ಕೆ (ಭಕ್ತಿಪಂಥಕ್ಕೆ) ದೊರೆತ ಪುರಸ್ಕಾರದಿಂದಾಗಿ ಹಾಗೂ . . . ರಾಜಾಶ್ರಯದಿಂದಾಗಿ, ಅನೇಕರು ಈ ಭಕ್ತಿಪಂಥವನ್ನು ಹಿಡಿದರು (ಕರ್ನಾಳ. ೬೫) ; ಇವೆಲ್ಲಕ್ಕಿಂತಲೂ ಪ್ರಪತ್ತಿಮಾರ್ಗವು ಶ್ರೇಷ್ಠತಮವಾದ ಮಾರ್ಗವೆಂಬುದನ್ನೂ ಶ್ರೀಚಿಕ್ಕದೇವರಾಜರ ಬಿನ್ನಪದಲ್ಲಿ ಹೀಗೆ ವರ್ಣಿಸಿದ್ದಾರೆ (ಶಾಂಪನೇ. ೫೬). [ಸಂ.]

ಪ್ರಪತ್ರ (ನಾ). ಅರ್ಜಿಯ ನಮೂನೆ ; ಅಭ್ಯರ್ಥಿಪತ್ರದ ನಮೂನೆ : ಭಾರತಸರ್ಕಾರದಿಂದ ವಿಧಾಯಕವಾದ ಪ್ರಪತ್ರದಲ್ಲಿ ಅಥವಾ ರೀತಿಯಲ್ಲಿ ಆವೇದನಪತ್ರವನ್ನು. . .ರಿಜಿಸ್ಟರು ಮಾಡಿಸಿಕೊಂಡಿದ್ದ ಪಕ್ಷದಲ್ಲಿ ಆತನು ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕುದು (ಶಾಧಾನ. ೬). [ಸಂ.]

ಪ್ರಪದ (ನಾ). ೧. ಪಾದದ ಅಗ್ರಭಾಗ,—ಮುಂಭಾಗ ; ಕಾಲಿನ ತುದಿ : "ಪಾದಾಗ್ರವಂತದಕ್ಕು ಪ್ರಪದಂ" (ಪಸ್ತುಕೋ. ೬೬-೩) : ವಸುಧೆ ಪದತಳದಲ್ಲಿ ಪ್ರಪದದಲಿ ಶಕ್ರನಜನೆಸೆವ ಜಂಘೆಯಲಿ (ಸಿಕ್ಕೈಪು. ೦-೬-೦೨) ; ಪೋಗಿ ಚರಣಂಗಳಿಗೆ ನಮಿಸಿ ಬರುವೆನಗ್ರಜವೆರಸಿ ಪ್ರಪದಾಕಲಂಕನೆನಿಸಿ ಪರಿಪೂರ್ಣದಯೆಯಿಂದ ಪಾಲಿಸುವುದು (ಪಂಕಾರಾ. ೨-೨೬-೨೬). ೨. ಹೆಬ್ಬೆರಳಿನ ತುದಿ. [ಸಂ.]

ಪ್ರಪದ್ಯ (ನಾ). ಉತ್ಕೃಷ್ಟವಾದ ಕಾವ್ಯ : ಸಕಲವಿಬುಧಹೃದ್ಯಂ ಸಮಂತೀ ಪ್ರಪದ್ಯಂ (ಜಗಪ. ೦-೨೨). [ಸಂ.]

ಪ್ರಪನ್ನ (ನಾ). ಮರೆಹೊಕ್ಕವನು ; ಶರಣಾಗತನಾದವನು : ಪ್ರಪನ್ನ ರಪ್ಪವರ್ಗೆ ಸಕಲಸಾಂಸಾರಿಕದುಃಖನಿವೃತ್ತಿ (ಗೀತಗೋ. ೫೪-೩ ಪ) ; ಪ್ರಪನ್ನನು ಸರ್ವಸಂಗಪರಿತ್ಯಾಗ ಮಾಡಿ ಅನನ್ಯಗತಿಕನಾಗಿ, ಭಗವಂತನನ್ನು ಆಶ್ರಯಿಸಿದವನು (ಶಾತತ್ವ. ೭೭೦). [ಸಂ.]

ಪ್ರಪನ್ನತ್ವ (ನಾ). ಶರಣಾಗತಿ. [ಸಂ.]

ಪ್ರಪನ್ನೆ (ನಾ). ಹೊಂದಿದವಳು ; ಪಡೆದವಳು : ಅಪರಾಜಿತಪ್ರಸಾದ ಪ್ರಪನ್ನೆಯಾ ಕನ್ನೆ (ಶಾಂಕಿಪು. ೪-೭೫) ; ಬಾಯಬಿದು ಪಳವಿಸುತ್ತಂ ಮೂರ್ಛಾಪ್ರಪನ್ನೆಯಾಗಿ (ಶಾದಂಕಾ. ೬೪೦). [ಸಂ. ಪ್ರಪನ್ನಾ]

ಪ್ರಪಾಂಗನೆ (ನಾ). ಪಥಿಕರಿಗೆ ನೀರು ಕೊಡುವ ಅರವಟ್ಟಿಗೆಯಲ್ಲಿರುವ ಹೆಂಗಸು : ಲಾವಣ್ಯತೋಯಮನಾಲೋಕನಮಾತ್ರದಿಂ ಮಱೆದು ಪಾಂಥಶ್ರೇಣಿ ನೀರಟ್ಕೆಯಂ ಶ್ರಮಮಂ ತೀರಮೆಯಂ ಪ್ರಪಾಂಗನೆಯರಂ ಕಣ್ಗಾವುದಾ ದೇಶದೊಳ್ (ಶಂರಾಮಾ. ೦-೦೦೩). [ಸಂ. ಪ್ರಪಾಂಗನಾ]

ಪ್ರಪಾಂಥ (ನಾ). ಪ್ರಯಾಣಿಕ ; ದಾರಿಹೋಕ : ಪುಷ್ಪಚಾಪಾಸ್ತ್ರಟಂಕಾರ ರವೋದ್ಭಿನ್ನಪ್ರಪಾಂಥಪ್ರಕರಹೃದಯರಕ್ತಾಂಬುಗಳ್ ಕೂಡೆ ಮಾರ್ಗಾಂತರ ದೊಳ್ ಸೂಸುತ್ತಿರಲ್ ಬಂದುದು ಶಿಶಿರನೃಪೋದ್ಯತೃತಾಂತಂ ವಸಂತಂ (ಕಾದಂಪೂ. ೭೨೦). [ಸಂ.]

ಪ್ರಪಾಕಳಾಪ (ನಾ). ಅರವಟ್ಟಿಗೆಯ ಕೆಲಸ : ನಿರುಪಮ ಪ್ರಪಾಕಳಾಪ ಪ್ರಕಾಂಡಮಂಡಪಂಗಳಲ್ಲಿ (ಬಾರಪು. ೦-೬೯ ಪ). [ಸಂ. ಪ್ರಪಾಕಲಾಪ]

ಪ್ರಪಾಠಕ (ನಾ). ಗ್ರಂಥದ ಒಂದು ಭಾಗ ; ಅಧ್ಯಾಯ, ಪ್ರಕರಣ, ಸಂಧಿ ಇತ್ಯಾದಿ : ಛಾಂದೋಗ್ಯದ ಕಡೆಯ ಪ್ರಪಾಠಕದಲ್ಲಿ ಇಂದ್ರ ವಿರೋಚನನ ಉಪಾಖ್ಯಾನವು ಬಂದಿದೆ (ಭಾರದ. ೪೦). [ಸಂ.]

ಪ್ರಪಾಣ (ನಾ). ಕುದುರೆಯ ಮೇಲ್ದುಟಿಯ ಒಳಭಾಗ : ಮೇಗಣ ತುಟಿಯ ಮುಂದುಗಡೆ ಪ್ರಪಾಣ (ಅಶ್ವಪೀ. ೫೬-೧೨). [<ಸಂ. ಪ್ರಪಾನ]

ಪ್ರಪಾತ (ನಾ). ೧. ಕಡಿದಾದ ಕೊರಕಲು ; ಕಣಿವೆ : ವಿಜಯಾರ್ಧ ಪರ್ವತದ ಕಾಂಡಕಪ್ರಪಾತಗುಹೆಗಭಿಮುಖನಾಗಿ (ಶಾಂಕಿಪು. ೦೦-೬೬ ಪ). ೨. ತಡಸಲು ; ಜಲಪಾತ. ೩. ಆಕ್ರಮಣ ; ಮುತ್ತಿಗೆ ; ದಾಳಿ : "ಅವಸ್ಕಂದಃ, ಪ್ರಪಾತಃ—ಈ ಎರಡು ದಾಳಿ" (ಹಲಾಯು. ೬೪-೨೯೬) ; ಪವನಪ್ರಪಾತಚಲಿತಕಲ್ಲೋಲಮಾಲೆಯಿಂ (ರಾಜಶೇ. ೨-೬ ಪ). ೪. ದಂಡೆ : ತೀರ ; ದಡ : "ತೀರಂ, ಕೂಲಂ, ತಟಂ, ಕಚ್ಛಃ, ಪ್ರಪಾತಃ, ರೋಧಃ—ಈ ಆಱು ತೊಱೆಯ ತಡಿ" (ಹಲಾಯು. ೧೦೦-೪೫) ; ಹಿಮ ವತ್ಪರ್ವತದ ಸಿಂಧುಪ್ರಪಾತಮನೆಯ್ದಿ (ಜಿದಿಪು. ೦೩-೬೬ ಪ). [ಸಂ.]

ಪ್ರಪಾನ (ನಾ). ೧. ಕುಡಿಯುವುದು. ೨. = ಪ್ರಪಾಣ : ಉತ್ತರದೋಷ್ಠದ ನಡುವದು ಬಿತ್ತರಿಪ ಪ್ರಪಾನಮೆಂಬ ಪೆಸರಾ ಪ್ರಪಾನ ದುತ್ತರಪ್ರೋಥಮದಕ್ಕುಂ (ಅಶ್ವಶಾ. ೯-೦೨). [ಸಂ.]

ಪ್ರಪಾಪಾಲಿಕೆ (ನಾ). ನೀರನ್ನು ಒದಗಿಸುವವಳು ; ಅರವಟ್ಟಿಗೆಯನ್ನು ನಡೆಸುವವಳು : ಕೆಯ್ವೊಲಗಾವ ಪಾಮರಿಯರುಂ ಮಾರ್ಗಪ್ರಪಾಪಾಲಿಕಾ ಜನಮುಂ . . . ಪುರವರವ್ಯಾವರ್ಣನಕ್ಕಾಸ್ಪದಂ (ಸೂಕ್ತಿಸು. ೪-೦) ; ಅಷ್ಟರಲ್ಲಿ ಸಮೀಪದ ಅರವಂಟಿಗೆಯ ಪ್ರಪಾಪಾಲಿಕೆ ಅಲ್ಲಿಗೆ ಬಂದು . . . ಹರಿವಾಣವನ್ನು ಎದುರಿಗಿಟ್ಟಳು (ರೂಲೇಪಾ. ೦೨೯).

[ಸಂ. ಪ್ರಪಾಪಾಲಿಕಾ]

ಪ್ರಪಾಪ್ರಣಯಿನಿ (ನಾ). = ಪ್ರಪಾಂಗನೆ : ಪಾಂಥರ್ . . . ದಿಟ್ಟಿ ಗಳಿಂದೀಂಟುವರಾ ಪ್ರಪಾಪ್ರಣಯಿನೀಲಾವಣ್ಯನೀರಂಗಳು (ಮಲ್ಲಿಪು. ೨-೨೯) ; ಜಳಪಾನಚ್ಛಳದಿಂ ಪ್ರಪಾಪ್ರಣಯಿನೀಶೃಂಗಾರಲೀಲಾಸುಧಾಜಳಮಂ ಕಣ್ಗಳಿನೀಂಟಿ (ಕಂದ್ರಪು. ೦-೯೯). [ಸಂ. ಪ್ರಪಾಪ್ರಣಯಿನೀ]

ಪ್ರಪಾಪ್ರಮದೆ (ನಾ). = ಪ್ರಪಾಂಗನೆ : ಕುಡಿನೀರೆತ್ತುವವೊಲ್ ಪ್ರಪಾ ಪ್ರಮದೆಯರ್ ಸತ್ರಂಗಳೊಳ್ (ಅನಂಪು. ೦-೬೪).

[ಸಂ. ಪ್ರಪಾಪ್ರಮದಾ]

ಪ್ರಪಾಮಂಟಪ (ನಾ). ಪಥಿಕರಿಗೆ ನೀರನ್ನು ಒದಗಿಸುವ ಸ್ಥಳ ; ಅರವಟ್ಟಿಗೆ : ಕಣ್ಗೊಳಿಕುಂ ನಾನಾಲತಾಂತಪ್ರಸರಸರಯುತಂಗಳ್ ಪ್ರಪಾಮಂಟಪಂಗಳ್ (ರಾಜಶೇ. ೨-೨೦). [<ಸಂ. ಪ್ರಪಾಮಂಡಪ]

ಪ್ರಪಾವಧು (ನಾ). = ಪ್ರಪಾಂಗನೆ : ಏಂ ವ್ಯಾಧವಧುಗಳೋ ಮೇಣ್ ಪ್ರಪಾವಧುಗಳೋ (ಶದ್ಮರಾ. ೬-೯). [ಸಂ.]

ಪ್ರಪಾಶಾಲೆ (ನಾ). = ಪ್ರಪಾಮಂಟಪ : ಜಳಧಾರೆ ಕಂಗೊಳಿಸು ತಿರ್ಪುದಧ್ವಶ್ರಮಗಳನಾಂತು ಬಂದ ಪಥಿಕರ್ಕಳೀಂಟುವ ಸಮಯ ದೊಳ್ಪ್ರಪಾಶಾಲೆಗಳೊಳು (ಶೈಮಾಭಾ. ೩-೦೦). [ಸಂ. ಪ್ರಪಾಶಾಲಾ]

ಪ್ರಪಾಸದನ (ನಾ). = ಪ್ರಪಾಮಂಟಪ : ಇದು ಕಾಮೋನ್ಮಾದ ಪಾನ ಪ್ರಪಾಸದನಂ . . . ಎನೆ ಚಿಲ್ವಾದತ್ತು ಚುಂದ್ರಾತಪಂ (ಮಲ್ಲಿಪು. ೬-೪೫). [ಸಂ.]

ಪ್ರಪಿತಾಮಹ (ನಾ). ತಂದೆಯ ತಂದೆಯ ತಂದೆ ; ತಾತನ ತಂದೆ ; ಮುತ್ತಜ್ಜ : ಭಕ್ತಾಂಗನೆಯ ಸುತಸಹ ಸದ್ಭಕ್ತಂಗೆ ಪಿತನು ಗುರು ಪಿತಾಮಹನ ಜಂಗಮ ಪ್ರಪಿತಾಮಹನು ಮಹಾಲಿಂಗ ಉಂಟು ಕೇಳಿರಣ್ಣಾ (ಅಂಬಿಗ. ೩೨-೩೮) ; ಪಿತೃ, ಪಿತಾಮಹ, ಪ್ರಪಿತಾಮಹ ರೆಂಬ ಮೂರು ವಿಧ ಪಿತೃಗಳಿಗೆ ಅಧಿಪತಿಗಳು ವಸುಗುಣ, ರುದ್ರಗಣ, ಆದಿತ್ಯಗಣ ಎಂಬ ಮೂರು ಗಣಗಳು (ಹಸಾರ. ೧೯-೦ ತಾತ್ಪರ್ಯ). [ಸಂ.]

ಪ್ರಪಿತಾಮಹಿ (ನಾ). ತಂದೆಯ ತಂದೆಯ ತಾಯಿ ; ತಾತನ ತಾಯಿ ; ಮುತ್ತಜ್ಜಿ. [ಸಂ. ಪ್ರಪಿತಾಮಹೀ]

ಪ್ರಪುನಾಟ (ನಾ). ಒಂದು ಬಗೆಯ ಸಸ್ಯ ; ಚಗಚೆ : "ಏಡಗಜಃ, ಪ್ರಪುನಾಟಃ, ದದ್ರುಘ್ನಃ, ಚಕ್ರಮರ್ದನಃ - ಈ ೪ ತಗ(ಚೆ)ಟೆ" (ಹಲಾಯು. ೦೦೦-೪೬೫). [ಸಂ.]

ಪ್ರಪುನ್ನಾಟ (ನಾ). = ಪ್ರಪುನಾಟ : "ಪ್ರಪುನ್ನಾಟಮದೇಡಗಜಂ" (ಪಸ್ತುಕೋ. ೩೬-೨೦). [ಸಂ.]

ಪ್ರಪುನ್ನಾಡ (ನಾ). = ಪ್ರಪುನ್ನಾಟ.

ಪ್ರಪೂರ (ನಾ). ಅತಿಶಯವಾದ ಪ್ರವಾಹ ; ದೊಡ್ಡ ಪ್ರವಾಹ : ಚಕೋರವ್ರಜಕೆ ಶಾಂತಿರಸದ ಪ್ರವಾಹಪ್ರಪೂರವೆನೆ ನವರಸೋದಯಮಯವೆನಿಸಿದ ಹಿಮಕರನೆಸೆದಿರುತ್ತಿರ್ದನು (ಹರಿಶಾ. ೩-೦೩). [ಸಂ.]

ಪ್ರಪೂರಿತ (ಗು). ತುಂಬಿದ ; ಭರ್ತಿಯಾದ : ಅಖಿಳಕಳಾಪ್ರಪೂರಿತ ಹೃದಯ ಭೀಮಕವಿ ಪ್ರಣೀತಾಖ್ಯದಯ ಬಸವಪುರಾಣಕಥೆಯೊಳು ನಾಲ್ಕನೆಯ ಕಾಂಡ (ಬಸಪು. ೨೭-೬೦). [ಸಂ.]

ಪ್ರಪೂರ್ಣ (ಗು). ೧. ತುಂಬಿದ ; ಭರ್ತಿಯಾದ ; ಇಡಿಕಿರಿದ : ಪ್ರಪೂರ್ಣಸಪ್ತಸುರೋಚಿಕನದಂಕುಶಕೃತದೀರ್ಘ ಪ್ರಣೂತ ಕೋಪನಂ (ಶಾಂತಿಪು. ೦೦-೦೪೩); ಪರಿಗ್ರಹಸಂಗತಿಯೂ ಸುಧಾಮಯವ್ಯಾಪೃತಿಯೂ ಪ್ರಪೂರ್ಣವಲಯಾಕೃತಿಯಾಗಳದೆತ್ತವೋದುದು (ಸಂಪ್ರಪು. ೯-೬). ೨. ಪೂರ್ತಿಯಾದ ; ಪೂರ್ಣಗೊಂಡ. (ನಾ). ೩. ಪೂರ್ತಿಯಾದುದು ; ತುಂಬಿದುದು : "ಭರಿತಂ ಪ್ರಪೂರ್ಣಮಾಚಿತನಿಚಿತಮಾಕುಳಂ ಪರಿಕೀರ್ಣಮಾಚ್ಛಾದನಮೆನಲು ಸಂದಣಿಯಕ್ಕು" (ಪಂಗಣಾ. ೦೨೮-೯). [ಸಂ.]

ಪ್ರಪೂರ್ತಿ (ನಾ). ತುಂಬಿರುವಿಕೆ ; ಭರ್ತಿಯಾಗಿರುವಿಕೆ : ಅವಿರಳಿತ ತೇಜಃಪ್ರಪೂರ್ತಿ ಸಮಸ್ತ ವಿಸ್ಫೂರ್ತಿ (ಬಸಪು. ೪೬-೦೦). [ಸಂ.]

ಪ್ರಪೆ (ನಾ). ಪಥಿಕರಿಗೆ ನೀರು, ಪಾನಕ ಮೊದಲಾದುವನ್ನು ಕೊಡುವ ಗೃಹ ; ಅರವಟ್ಟಿಗೆ : "ಪ್ರಪೆಯೆಂಬುದಱಿಗೆ ಪಾನೀಯಶಾಲೆ" (ಪಸ್ತುಕೋ. ೯೯-೨೦); ಉಪವನತಟಾಕಪ್ರತಿಷ್ಠೆ ದೇವಾಲಯ ಪ್ರಪೆಗಳ . . . ಸುಕೃತಂಗಳಾದವುವು ಜೈಮಿನಿಭಾರತದೊಳೊಂದು ವರ್ಣಮಂ ಪ್ರೀತಿಯಿಂ ಕೇಳ್ದವರ್ಗೆ (ಕೃಷ್ಣಾಭಾ. ೩೯-೯೩). [ಸಂ. ಪ್ರಪಾ]

ಪ್ರಪೌಂಡರೀಕ (ನಾ). ಒಂದು ಬಗೆಯ ಔಷಧೀಸಸ್ಯ; ಬಿಳಿನೈದಿಲೆಗಡ್ಡೆ : ಪ್ರಪೌಂಡರೀಕ . . . ಚಂಗಲನೀರಕೋಷ್ಠ, ಇವಿಷ್ಟನು ಸಮಾಂಶವಾಗಿ ನೀರಲ್ಲಿ ಅರೆದು ಲೇಪನಂಗೈಯಲು ವಾತದಿಂದ ಉಂಟಾದ ಉಪದಂಶ ಶಮನವಹುದು (ವೈದ್ಯಜೀ. II. ೦೬೬). [ಸಂ.]

ಪ್ರಪೌತ್ರ (ನಾ). ಮಗನ ಮಗನ ಮಗ; ಮೊಮ್ಮಗನ ಮಗ ; ಮರಿಮಗ. [ಸಂ.].

ಪ್ರಪ್ರಥಮ (ಗು). ಮೊತ್ತ ಮೊದಲ ; ಅತ್ಯಂತ ಆದಿಯ : ಕೇವಲ ಮಾರ್ಗದರ್ಶಕವಾಗಿ ತೋರಿದರೂ, ಅದಕ್ಕೆ ಪ್ರಪ್ರಥಮ ಪ್ರಾಮುಖ್ಯತೆಯನ್ನು ನೀಡಬೇಕೆಂಬುದಾಗಿ ... ಪ್ರತಿಪಾದಿಸಿದೆ (ಪುಪರು. ೨೦೩). [ಸಂ.]

ಪ್ರಫುಲ್ಲ (ಗು). ೧. ಅರಳಿದ ; ವಿಕಸಿತವಾದ. ೨. ಪ್ರಸನ್ನವಾದ : ಎಲ್ಲರೂ ಪ್ರಫುಲ್ಲ ಮಾನಸರಾಗಿದ್ದರು (ಸಮಾಸ. ೦೩೩) ; ಗಂಗರಾಜರು ಪ್ರಫುಲ್ಲವದನರಾಗಿ . . . ವೀರಪ್ರತಿಜ್ಞೆ ಮಾಡಿದರು (ಶಾಂತಲಾ. ೦೪೬). (ನಾ). ೩. ಅರಳಿದುದು : "ಪ್ರಫುಲ್ಲಂ ಫುಲ್ಲಂ" (ಪಸ್ತುಕೋ. ೦೦೩-೪೦). ೪. ಪ್ರಸನ್ನವಾದುದು : ಜವಾನನೊಬ್ಬ ಮೂರು ರೂಬಲ್ ಹಣ ತಂದಾಗ ಅವಳ ಮುಖ ಪ್ರಫುಲ್ಲವಾಯಿತು (ಪುಸರು. ೦೩೭). [ಸಂ.]

ಪ್ರಫುಲ್ಲಿಸು (ಕ್ರಿ). ಅರಳಿಸು ; ವಿಕಾಸವಾಗುವಂತೆ ಮಾಡು : ನಡೆ, ವಿನಾಯಕ, ಪ್ರಫುಲ್ಲಿಸು ರಘೂತ್ತಮಮನೋಂಬುಜದಿ ಅಭವಸಂಜ್ಞಾನ ಮಹದಿಚ್ಛೆಯಂ (ಸಮಾಲೋ. ೨೦೪). [ಪ್ರಫುಲ್ಲ + — ಇಸು$_3$]

ಪ್ರಬಂಧ (ನಾ). ೧. ಬಾಂಧವ್ಯ ; ಕಟ್ಟು. ೨. ವ್ಯವಸ್ಥೆ ; ಏರ್ಪಾಡು: ಸಂಸ್ಥಾನದ ಪ್ರಬಂಧವನ್ನು ಮಾಡಿದಳು (ಜಮಾಖಾ. ೦೩). ೩. ನಿರಂತರತೆ; ಎಡೆಬಿಡದಿರುವಿಕೆ ; ಪರಂಪರೆ : ಪೂರ್ವಾಪೂರ್ವ ಚಿತ್ತವಿಶೇಷ ಪ್ರಭವಂಗಳ್ ಪ್ರಬಂಧದಿಂದಂ ಪ್ರವರ್ತಿಸುವುವು (ಶಾಂತಿಪು. ೯-೧೪೨ ಪ) ; ಈ ಮಹೋತ್ಪಾತ ಪ್ರಬಂಧ ವಿರಾಮಕರ್ಮವ ಬೆಸಸಿಯೆನೆ (ಕುಮಾಸ. ೦೦-೨೬). ೪. ಕಾವ್ಯ ಗ್ರಂಥ : ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಟ್ಟೊಡೆ ಪಂಪನೆ ಪೇಟ್ಟುಮೆಂದು ಪಂಡಿತರೆ ತಗುಳ್ದು ಬಿಚ್ಚಟಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ (ಪಂಪಭಾ. ೦-೦೦) ; ಕಿವಿಗಿನಿದಾಗೆ ನಿಚ್ಚ ಪೊಸತಾಗೆ . . . ಪೇಟಲೊಡರ್ಚಿದೆನೀ ಪ್ರಬಂಧಮಂ (ರಂಗೋಂಬು. ೦-೦೦). ೫. ಆಧುನಿಕ ಗದ್ಯಸಾಹಿತ್ಯದ ಒಂದು ಪ್ರಕಾರ : ನಿಬಂಧ ; P ಇದು ಇಂಗ್ಲಿಷಿನ 'Essay' ಎಂಬ ಶಬ್ದಕ್ಕೆ ಸಮಾನಾರ್ಥಕವಾದ ಶಬ್ದ : ಈ ಸಂಕಲನದೊಳಗಿನ ಕೆಲವು ಪ್ರಬಂಧಗಳು ಸ್ವತಂತ್ರ ಹಾಗೂ ಕೆಲವು ಅನುವಾದಗಳಾಗಿರುವುವು (ಪ್ರಬಂಧ. ಹ್ಯರ್ಷ. ೯). ೬. ಸಂಗೀತಕ್ಕೆ ಅಳವಟ್ಟ (ಆಧ್ಯಾತ್ಮಿಕ ವಿಚಾರವುಳ್ಳ) ಸಾಹಿತ್ಯರಚನೆ : ಸ್ವರ, ರಾಗ ಮತ್ತು ತಾಳಯುಕ್ತವಾಗಿ, ಅನೇಕ ಭಾಗಗಳನ್ನೊಳಗೊಂಡ ಭಗವದ್ವಿಷಯಸಾಹಿತ್ಯವುಳ್ಳ ಯಾವ ರಚನೆಗೂ ಪ್ರಬಂಧವೆಂಬ ಹೆಸರು ಅನ್ವಯಿಸುತ್ತದೆ . . . ಅಷ್ಟಪದಿಗಳು ಪ್ರಬಂಧವೂ ಹೌದು (ಸಂಗೀಕಂ. ೭೩). ೭. (ತಮಿಳುದೇಶದ ವೈಷ್ಣವಭಕ್ತರು ರಚಿಸಿದ, ವೇದಾಂತ ತತ್ವಗಳನ್ನೊಳಗೊಂಡ) ಕೃತಿ ; ಆಳ್ವಾರುಗಳ ರಚನೆ : ಶ್ರೀವೈಷ್ಣವ ಪ್ರಬಂಧಗಳಿಗೆ ದ್ರಾವಿಡವೇದವೆಂಬ ಪೂಜ್ಯನಾಮಕರಣವಾಯ್ತು (ಕಥಾ. ೨೩) ; ಆಳ್ವಾರುಗಳು ಮುಖ್ಯವಾಗಿ ಹನ್ನೆರಡು ಜನರು. ಇವರುಗಳ ತಮಿಳುಪ್ರಬಂಧಗಳು ನಾಲ್ಕು ಸಾವಿರ ಪದ್ಯಗಳನ್ನೊಳಗೊಂಡಿವೆ (ಭಾರತ. ೨೩೭). 'ದ್ರಾವಿಡಪ್ರಬಂಧ', 'ದ್ರಾವಿಡವೇದ' ಪರಾ. [ಸಂ.]

ಪ್ರಬಂಧಧ್ವನಿ (ನಾ). [ಕಾವ್ಯಮೀ] ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದ ಒಟ್ಟು ಕಾವ್ಯದ ಧ್ವನಿವಿಶೇಷ : ಸುಲಭವಾಗಿ ಗ್ರಹಿಸುವುದಕ್ಕಾಗಿ ಕ್ಲೇಶವಿಲ್ಲದೆ ವಿಚಾರ ಮಾಡುವುದಕ್ಕಾಗಿ . . . ಕಾವ್ಯದಿಂದ ಒಂದು ಧ್ವನಿ ಹೊರಡುತ್ತದೆ ; ಇದನ್ನೇ ಪ್ರಬಂಧಧ್ವನಿಯೆಂದು ಕರೆಯುವುದು (ಕಾರಿಕಾ. ೩೦೩). [ಸಂ.]

ಪ್ರಬಂಧಲಿಪಿ (ನಾ). ಒಂದು ಬಗೆಯ ಲಿಪಿ : ಮೃಗಲಿಪಿ ಪ್ರಬಂಧಲಿಪಿ ರಗಣಲಿಪಿ . . . ಯಿಂ ಅಗಣಿತ ಲಿಪಿಗಳ ನೋಡಲಱಯದೆ ಬಿಚ್ಚಳರಾಯನ ಸಭೆಯೊಳು ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲ (ಭಾಸ್ಕರ. ೭೭-೬). [ಸಂ.]

ಪ್ರಬರ್ಹ (ಗು). ೧. ಉತ್ಕೃಷ್ಟವಾದ ; ಶ್ರೇಷ್ಠವಾದ. (ನಾ). ೨. ಮುಖ್ಯವಾದುದು ; ಪ್ರಧಾನವಾದದು ; ಉತ್ತಮವಾದುದು ; "ಪ್ರಮುಖಂ ಪ್ರಬರ್ಹಂ" (ಪಸ್ತುಕೋ. ೯೯ ೨) ; "ಅಗ್ರೇಸರಂ ಪ್ರಬರ್ಹಂ ಪ್ರಮುಖಮಾ ಪ್ರವರಮಗ್ರಗಣ್ಯಮುತ್ತಮಂ ಸತ್ತಮಂ

ಗ್ರಾಮಣೀಯೆನಲು ಮುಖ್ಯಕ್ಕೆ ನಾವಂ" (ಪುಂಗರಾ. ೦೨೬-೯). [ಸಂ.]

ಪ್ರಬಲ, ಪ್ರಬಳ (ಗು). ೧. ಹೆಚ್ಚು ಶಕ್ತಿಯುತವಾದ ; ಬಹಳ ಬಲವಾದ : ಪ್ರಬಲಶುಂಡಾಲವಿಭುವಂ ತನ್ನಿ (ಚಪ್ರ. ೩೯-೩೩); ಅಂತಃಕರಣದ ಪ್ರಬಲ ಸ್ವಭಾವದಂತೆ ವಸ್ತುಸ್ವಭಾವವೂ ವ್ಯಕ್ತವಾಗುವುದು (ಹಿಂದಣಾ. ೬೨). ೨. ತೀವ್ರವಾದ ; ತೀಕ್ಷ್ಣವಾದ. ೩. ಮುಖ್ಯವಾದ ; ಪ್ರಧಾನವಾದ. ೪. ವಿನಾಶಕಾರಕ ; ಹಾನಿಕರವಾದ. ೫. ತುಂಬಿದ ; ಸಮೃದ್ಧಿಯಾದ. (ನಾ). ೬. ಬಹಳ ಶಕ್ತಿಶಾಲಿ; ಗಟ್ಟಿಗ : ಪ್ರಬಲನಬಲನವೊಲಂತಾ ಶಬರಂ ಬೀಟ್ಟೊಂಡು (ಕಂರಾಪು. ೯-೭೩). ೭. ಚಿಗುರು ; ಪಲ್ಲವ. ಪ್ರಬಳ : ೧. ಅತುಳೋತ್ತಾಲ ತಿಮಿಂಗಿಳಪ್ರಬಳಪಕ್ಷೋದ್ಧೂತವಾತಪ್ರಕಂಪಿತ . . . ವಾರ್ಧಿಯಂ (ಶಾಸ್ತ್ರಸಾ. ೭೩). ೬. ಅದಿರ್ಪುವೆಂ ಪ್ರಬಳಂ ಬಳನಂ (ಜಗಂ. ೦೭-೩೩). [ಸಂ.]

ಪ್ರಬಲಿ (ನಾ). ಪ್ರಬಲನಾದವನು ; ಹೆಚ್ಚು ಶಕ್ತಿಶಾಲಿ ; ಗಟ್ಟಿಗ : ಯಾವ ಬಲಿಯೋಳುವನೋ, ಎಂತು ತುಳಿಯಲು ಬೇಕೋ ಯಾವನೋ ಪ್ರಬಲಿ (ಕ್ರಾಕ್ಷಿಣಾ. ೨೨-೩). [ಸಂ. ಪ್ರಬಲಿನ್]

ಪ್ರಬಲಿತ (ಗು). ಬಲಗೊಂಡ ; ಶಕ್ತಿಶಾಲಿಯಾದ : ನಿನ್ನ ಮಹನೀಯ ಪ್ರಬಲಿತೋತ್ತನ್ನ ನಿಜಗುರುಭಕ್ತಿಯುತ ಮಹಿಮೋನ್ನತಿಕೆಯನದಾರು ಬಲ್ಲರು (ಚಪ್ರ. ೬೯-೬೬). [ಸಂ.]

ಪ್ರಬಲಿಸು (ಕ್ರಿ). ಬೆಳೆ ; ವೃದ್ಧಿಯಾಗು ; ಹೆಚ್ಚಾಗು : ಇನ್ನು ಮುಂದೆ ಕಾವ್ಯಗಳಲ್ಲಿ ಹೊಸಗನ್ನಡವು ಇನ್ನೂ ಪ್ರಬಲಿಸುವ ಚಿಹ್ನೆಗಳಿವೆ (ಸಪಾರೋ. ೦೬೨) ; ನೆಗಡಿ ಅಜೀರ್ಣದಿಂದ ಪ್ರಬಲಿಸುತ್ತದೆ (ಪಂಟಿರು. ೩೮). [ಪ್ರಬಲ + — ಇಸ್ಯು]

ಪ್ರಬಲೆ (ನಾ). ಶಕ್ತಿವಂತೆ ; ಸಮರ್ಥೆ : ಶ್ರೀಪಾದಪ್ರಕ್ಷಾಳನಂ ಮಾಡಿ ವಾದೋದಕದಿಂ ಪ್ರಬಲೆಯಾಗಿ . . . ಬಿಬ್ಬನೆ ಬಿರಿಧರಲ್ವ ಶಿವದೇವಿಯರಂ ಕಂಡು (ಸಂಬರ. ೦೨-೦೦೯). [ಸಂ. ಪ್ರಬಲಾ]

ಪ್ರಬಳ 'ಪ್ರಬಲ' ನೋ.

ಪ್ರಬಾಲ (ನಾ). ೧. ಮರ ಗಿಡ ಬಳ್ಳಿಗಳಲ್ಲಿ ಹೊಸದಾಗಿ ಹುಟ್ಟಿದ ಎಲೆ ; ಚಿಗುರು. ೨. ಹವಳ. ೩. ಕೊಳಲಿನ ತುದಿ. [ಸಂ.]

ಪ್ರಬುದ್ಧ (ಗು). ೧. ಎಚ್ಚರಗೊಂಡ ; ಎದ್ದ. ೨. ಅರಿವಿಗೆ ಬಂದ ; ತಿಳಿದ. ೩. ಸಂಪೂರ್ಣವಾಗಿ ಅರಳಿದ, — ವಿಕಾಸವಾದ. ೪. ಪ್ರೌಢವಾದ : ಪ್ರಬುದ್ಧ ಭಾಷಣಗಳಿಂದ ಮಕ್ಕಳು ವಿಷಯವರಂಪರೆಯನ್ನಾಗಲಿ . . . ಅರಿತುಕೊಳ್ಳಲಾರರು (ಶಿಕ್ಷದ. ೨೬೬). (ನಾ). ೫. ಜ್ಞಾನಿ ; ವಿದ್ವಾಂಸ ; ಪ್ರೌಢ : "ಧೀರಃ . . . ಪ್ರಬುದ್ಧಃ . . . ಮತಿಮಾನ್ — ಈ ೨೮ ವಿದ್ವಾಂಸರ್" (ಹಲಾಯು. ೩೫-೦೭೭) ; ಅವರು ವಿಷಯವನ್ನು ಪ್ರಬುದ್ಧರ ವಿಚಾರದೃಷ್ಟಿಯಿಂದ ತರ್ಕಸಮ್ಮತವಾಗಿ ಬರೆದಿರುತ್ತಾರೆ (ಶಿಕ್ಷದ. ೨೬೬). [ಸಂ.]

ಪ್ರಬೋಧ (ನಾ). ೧. ಎಚ್ಚರಗೊಳ್ಳುವುದು ; ಜಾಗೃತವಾಗುವುದು : ಚೇಷ್ಟಿಸಲೀಯವು ನಿದ್ರೆಯವೋಲ್ ನಿಸದಂ ನರರಂ ಪ್ರಬೋಧಮಪ್ಪನ್ನೆವರಂ (ಕಂಪ್ರಪು. ೨-೩೪). ೨. ಅನುಗ್ರಹ : ಪ್ರಬೋಧವೆಂದರೆ ಅನುಗ್ರಹ (ಹಿಂದಣಾ. ೬೦). ೩. ಜ್ಞಾನ ; ತಿಳಿವು ; ಪಾಂಡಿತ್ಯ : ಇನಿತಾಗಮಾರ್ಥಮಿಲ್ಲಿನಿತುವರಂ ಪ್ರಬೋಧಮಣಮಿಲ್ಲ (ಅಪ್ರಪು. ೦೨-೩೩). ೪. ಎಚ್ಚರಿಸಂವವನು : "ಕೀರ್ತಿಪ ನರಂ ವಂದಿ ವೈತಾಳಿಕಂ ಮಾಗಧಂ ಸೂತಂ ಪ್ರಬೋಧನಕ್ಕುಂ" (ಪುಂಗರಾ. ೮೦-೯). [ಸಂ.]

ಪ್ರಬೋಧಕ (ಗು). ೧. ಜಾಗೃತಿಯನ್ನುಂಟುಮಾಡುವ ; ತಿಳಿವಳಿಕೆಯನ್ನುಂಟುಮಾಡುವ : ಶ್ರೀ ಕೃಷ್ಣಶಾಸ್ತ್ರಿಗಳು ಈಗ ನಾಲ್ಕು ಐದು ದಶಕಗಳಿಂದಲೂ ಕನ್ನಡದ ಪ್ರಬೋಧಕಶಕ್ತಿಗಳಲ್ಲಿ ಪ್ರಮುಖವಾದ ಪ್ರಬೋಧಕಶಕ್ತಿಯಾಗಿ ಕೆಲಸ ಮಾಡಿದರು (ಪಂಕಮ. X ಮುನ್ನುಡಿ). (ನಾ). ೨. ತಿಳಿವಳಿಕೆಯನ್ನುಂಟುಮಾಡುವವನು. ೩. = ಪ್ರಬೋಧಳಿ : "ವೈತಾಳಿಕ ಪ್ರಬೋಧಕ ಸೂತ ಸ್ತುತಿಪಾಠಕಾಖ್ಯೆ ವಂದಿಯೊಳಕ್ಕುಂ" (ಪಸ್ತುಕೋ. ೬೫-೭೫). [ಸಂ.]

ಪ್ರಬೋಧನ (ನಾ). ೧. ಎಚ್ಚರಗೊಳ್ಳುವಿಕೆ ; ಜಾಗೃತಿ : ಮುಕುಳನ ನಿಮೀಳನಂಗಳ್ ವಿಕಾಸಹಾಸಪ್ರಬೋಧನೋನ್ಮೇಷಂಗಳ್ ಪ್ರಕಟಸುಗುಮೈಕ್ಯಮಂ (ಕಾಪ್ರಾಪ. ೯೦೯). ೨. ತಿಳಿವು ; ಜ್ಞಾನ. ೩. ಬೋಧಿಸುವುದು. ೪. ಸುವಾಸನೆಯನ್ನು ಉದ್ದೀಪನಗೊಳಿಸುವುದು : "ಸ್ಥಾಸಕಂ ಪ್ರಬೋಧನಮಕ್ಕುಂ" (ಪಸ್ತುಕೋ. ೬೬-೯). [ಸಂ.]

ಪ್ರಬೋಧಿತ (ಗು). ೧. ಜಾಗೃತಗೊಂಡ : ನಿಜಪ್ರಮೋದಪ್ರಬೋಧಿತ ನಿಜದಿವ್ಯಪರಿಮಲಾಮೋದಿತ ದಿಗಂಗನಾಮುಖಂಗಳಪ್ಪ ಸುಗಂಧದ್ರವ್ಯಗಳಂ ಪೂಸಿ (ಆದಿಪು. ೬-೦೦೬ ಪ) ; ಪ್ರಥಮಕಲ್ಪಾಮರೇಂದ್ರಂ ಸಾಂದ್ರಭಕ್ತಿ ಪ್ರಬೋಧಿತಾಶಯಕುಶೇಶಯನಾ ಗುಣಗಣಮಣಿಭೂಷಣಾಂಗೆ ದಿವಿಜೇಂದ್ರಲೋಕೋತ್ತಮಭೂಷಣಂಗಳಂ ತುಡಿಸೆ (ಶಾಂತಿಪು. ೦೦-೫೭ ಪ). (ನಾ). ೨. [ಕಾಮಶಾ] ಒಂದು ಬಗೆಯ ರತಿಬಂಧ : ಪುರುಷನ ತಿಕದ ಕೆಳಗೆ ಮೊಳಕಾಲನಿಕ್ಕಿ ಒತ್ತಿ ಪುರುಷಾಯಿತಂಗೈದು ಅಲ್ಲಾ ಪುರುಷನ ಕಟಿಯನ್ನು ವಿತತಭಾವದಿಂ ಕುಳ್ಳಿರ್ದು ಕಾಲ ನೀಡಿ ಕೀಲ ತಪ್ಪದ ಹಾಗೆ ಕೂಡಿದಡೆ ಪ್ರಬೋಧಿತಮೆಂಬ ಕರಣಂ (ಕಾಮಶಾ. ೨೩೯). [ಸಂ.]

ಪ್ರಭಂಜನ (ನಾ). ೧. ಚೂರು ಮಾಡುವುದು ; ಪುಡಿ ಮಾಡುವುದು. ೨. ಗಾಳಿ ; ವಾಯು : "ಪವನಃ . . . ಪ್ರಭಂಜನಃ . . . ಮಹಾಬಲಃ —ಈ ೨೦ ಗಾಳಿಯ ಪೆಸರ್" (ಹಲಾಯು. ೦೯-೭೫) ; ನಿಜರಾಜಸದನಸರಸೀಸರೋದರಜಮನಟ್ಟಿಕೊಂಡು ಸುಟಾವ ಸುಪ್ರಭಾತಪ್ರಭಂಜನನುಂ (ಪಂರಾಪು. ೩-೯೦ ಪ) ; ಬೀಸಿದುದಸದೃಶಸೋಷ್ಮಪ್ರಭಂಜನಂ ಬೇಸಗೆಯೊಳ್ (ರಾಜಶೇ. ೫-೩೨). ೩. ಗಾಳಿಯ ಅಧಿದೇವತೆ ; ವಾಯುದೇವ: ಮೃಗವಾಹನಿವಂ ಪ್ರಭಂಜನಂ (ಜಗಂ. ೦೩-೬೦) ; ನೀನೆ ಅನಂತಂ, ನೀನೆ ಹವ್ಯವಾಹಂ, ಪ್ರಭಂಜನಂ ನೀನೆ (ಆದ್ಭುತ. ೬-೨೩). 'ಪ್ರಭಂಜನ ಸಂತ' ಪರಾ. ೪. ನಾಲ್ಕು ಬಗೆಯ ಜೀವಸಂಬಂಧವಾಯುಗಳಲ್ಲಿ ಒಂದು : ವೈರಂಭ ಮುಖ್ಯ ಪ್ರಭಂಜನ ಅಂತರ್ಯಾಮಿಸೌಂಜ್ಞಯುಳ್ಳ ನಾಲ್ಕು ಜೀವಸಂಬಂಧವಾದ ವಾಯುಗಳೇ ಮಾನಸಾದ್ಯಂತಃಕರಣ ಚೇಷ್ಟಾಕಾರಣಂಗಳಾಗಿರ್ಕುಂ (ಪಿಪೇಕ. ೩೯). ೫. ಬಿರುಸಾಗಿ ಬೀಸುವ ಗಾಳಿ ; ಬಿರುಗಾಳಿ : ಯುಗಾಂತಪ್ರಭಂಜನನೀರಾವತಚಕ್ರದಂತೆ ತಿರಿವಂತಾಳ್ಗುಂ (ಅಪ್ರಪು. ೨-೩) ; ಶ್ರೀಮಹಿತನಹಿತಸಕಲ ಮಹೀಮಹಿತಪಯೋಧರಪ್ರಭಂಜನಂ (ಸುಕುಮಾ. ೨-೧). ೬. ಧ್ವಂಸಮಾಡಿದವನು ; ನಾಶಕ: ಪ್ರಭಂಜನಸಖ ಪ್ರಭಾವಪ್ರಭಂಜನನಪ್ಪೆನಗೆ ಕುಲಹೀನವನಿತಾಸ್ತನ್ಯೋಪಪುಷ್ಟನೊಳನುಬಂಧಿಕೆಯತಿಕಷ್ಟಮುಂ (ಜಗಂ. ೫-೬೦ ಪ). [ಸಂ.]

ಪ್ರಭಂಜನಪ್ರದರ (ನಾ). ಒಂದು ಬಗೆಯ ಅಸ್ತ್ರ ; ವಾಯುವ್ಯಾಸ್ತ್ರ : ಆ ಪ್ರಭಂಜನಪ್ರದರಂ ಮೇಘಮಾರ್ಗದೊಳೆ ಮೇಘಬಾಣಮಂ ಪ್ರತಿಹತಂ ಮಾಡೆ (ಜಗಂ. ೦೩-೦೦೫ ಪ). [ಸಂ.]

ಪ್ರಭಂಜನಪ್ರಿಯ (ನಾ). ಗಾಳಿಯನ್ನು ಪ್ರೀತಿಸುವವನು ; ಅಗ್ನಿ : ಪ್ರಭಂಜನಪ್ರಿಯನತಿನಿಷ್ಠುರಜಿಹ್ವಂ (ಕಂಪ್ರಪು. ೦-೪೨). [ಸಂ.]

ಪ್ರಭಂಜನಸಖ (ನಾ). = ಪ್ರಭಂಜನಪ್ರಿಯ : ಪ್ರಭಂಜನಸಖಪ್ರಭಾವ ಪ್ರಭಂಜನನಪ್ಪೆನಗೆ ಕುಲಹೀನವನಿತಾಸ್ತನ್ಯೋಪಪುಷ್ಟನೊಳನುಬಂಧಿಕೆಯತಿಕಷ್ಟಮುಂ (ಜಗಂ. ೫-೬೦ ಪ). [ಸಂ.]

ಪ್ರಭಂಜನಸುತ (ನಾ). ವಾಯುಪುತ್ರ ; ಭೀಮ : ಕುರುರಾಜಾನುಜರಂ ಪ್ರಭಂಜನಸುತಂ ಕೊಂದಿಕ್ಕುಗುಂ (ಗದಾಯು. ೫-೫೯). [ಸಂ.]

ಪ್ರಭಗ್ನ (ಗು). ಹೆಚ್ಚಾಗಿ ಮುರಿದ ; ಚೂರುಚೂರಾದ : ಗಜದಂತಾಕಾರಂಗಳ್ ಗಜದಂತಾದ್ರಿಗಳಿವಲ್ತೆ ತೋರ್ಪುವು ಮಧುಪವ್ರಜಪರಿವಾರಿತ

ಮಾದ್ಯದ್ಗಜಕಟಕರ್ಷಣಪ್ರಭಗ್ನಚಂದನತರುಗಳ್ (ಆದಿಪು. ೨-೨೬). [ಸಂ.]

ಪ್ರಭವ (ಗು). ೧. ಉತ್ತಮವಾದ; ವೈಶಿಷ್ಟ್ಯಪೂರ್ಣವಾದ. ೨. ಉಂಟಾದ; ಹುಟ್ಟಿದ: ಎಸೆಗುಂ...ಮತ್ತಾಳಿಪರಭೃತಪ್ರಭವ ರವಂ (ಆಪಶಾ. ೬-೧೦); ಸಂಗಳಿಸದೆ ತನಯನ ಲೀಲಾವಿಳೋಕನಪ್ರಭವ ಸೌಖ್ಯಮಾ ದಂಪತಿಯೊಳ್ (ಕಂಪ್ರಪು. ೩-೪೦). ೩. ಉತ್ಪತ್ತಿಸ್ಥಾನ; ಉಗಮಸ್ಥಾನ: ಅನೇಕಲಕ್ಷಣಗುಣಪ್ರಭವಂ ಮೃದಪಾದಮಾದ ವಾಕ್ಸ್ರೀಸುಭಗಂ ಕಳಾಕಳಿತಮೆಂಬ ನೆಗಟ್ತಿಯನಾಳ್ದ ಕಬ್ಬಮಂ... ಈವುದು (ಶಂಪಶಾ. ೧-೯). ೪. ಹುಟ್ಟು; ಉತ್ಪತ್ತಿ: ಅಭಮತಕ್ರೀಡಾ ವಿನೋದದ ರಭಸದಲಿ ದಿನ ಸವೆಯೆ ಗರ್ಭಪ್ರಭವವಾಯ್ತು (ಕುಮಾಸಂ. ೦೯-೦೦). ೫. ಮೂಲಕಾರಣ; ಮುಖ್ಯ ಕಾರಣ. ೬. ಬಲ; ಪರಾಕ್ರಮ. ೭. ಅರುವತ್ತು ಸಂವತ್ಸರಗಳಲ್ಲಿ ಮೊದಲನೆಯದು: ಆ ವರುಷವೇ ಪ್ರಭವ ... ಅಕ್ಷಯವೆಂದಱವತ್ತು ತೆಱನಾಗಿಹುದು (ಏಪೇಕ. ೩೦೦); ನಿನ್ನ ಹೆಸರಳಿದು ನೀರಾದುದಾ ಪ್ರಭವಂ (ಗಿಕಾಂ. ೫೬-೦). ೮. ನದಿಯ ಉಗಮಸ್ಥಾನ. ೯. ವಿಷ್ಣುವಿನ ಹೆಸರು. ೧೦. ಏಳಿಗೆ; ಅಭಿವೃದ್ಧಿ. ೧೧. (?): ಪ್ರಭವಂ ನೀಳಘನಾಘನಂ ಸಮ ವಸೃತ್ಯುರ್ವಿತಳಂ . . . ನವಮೇಘಕಾಲಮೆನೆ ಬಂದಂ ದೇವದೇವಂ ಸ್ವಯಂಪ್ರಭನುದ್ಮನ್ಮುನಿಜಾತಕಂ ಕಱೆಯುತುಂ ಧರ್ಮಾಮೃತಾಸಾರಮಂ (ಶಂಪ್ರಪು. ೭-೩). [ಸಂ.]

ಪ್ರಭವಿಷ್ಣು (ಗು). ೧. ಸರ್ವೋತ್ಕೃಷ್ಟವಾದ. ೨. ಬಲಿಷ್ಠವಾದ; ಬಲಶಾಲಿಯಾದ. (ನಾ). ೩. ಒಡೆಯ; ಸ್ವಾಮಿ: ಭೂಪರ್ ಕಪ್ಪಮಂ ತರ್ಪರುದ್ಧತವೃತ್ತಪ್ರಭವಿಷ್ಣುಸಿಂಹಳನದೆಂದುಂ ತೆತ್ತನಲ್ತು (ರಾಶಕೇ. ೬-೩೩). [ಸಂ.]

ಪ್ರಭವಿಸು (ಕ್ರಿ). ೧. ಹುಟ್ಟು: ಜನಿಸು: ಅಭಯಕರವರದಪುತ್ರಂ ಪ್ರಭವಿಸಲೊಡನೀಶಭಕ್ತಿಪಂಕಜಮಿತ್ರಂ ಶುಭಮಯವಾದುದು ಭೂಮಿ (ಹಮ್ಮೀರ. ೨-೨೩); ರೂಪಿಸಿದ ಷಟ್ಕಾಂಡಗಳ ಶುಕರೂಪ ತದನಂತರದಿ ಜಂಬೂದ್ವೀಪದೊಳು ಪ್ರಭವಿಸಲು ಉತ್ತರಕಾಂಡಕಥನವನು ಶ್ರೀಪತಿಯು ತಾ ಪೇಳ್ವೆನೆಂದು ನಿರೂಪಿಸಲು (ಕಾತ್ಯ. ೦-೦೯). ೨. ಉಂಟಾಗು; ಸಮನಿಸು; ಘಟಿಸು: ಪ್ರಭವಿಸಿದುದು ಭಾನುಗೆ ಚಿತ್ರಭಾನುವೆಸರೀ ಗಳೆನಿಸಿ...ನಭದೊಳೆಸೆದಂ ಕೃಷ್ಣಂ (ಹರಿವಂ. ೦೩-೯೯); ಸಭೆಯೊಳು ಕುಳಿ ತಾಗ ನಾಲ್ಕೆಂಟು ವಚನ ದುರ್ಲಭವಾಗಿಹವು ಭಾವ ನಿನಗೆ ಅಭಿಮುಖವಡೆ ದೀಗ ವಚನಸುಲಭನಾಗಿ ಪ್ರಭವಿಸಿದಂದವಿದೇನು (ಭರತ. ೯-೦೦೯); ಮುಂತಿವರ್ಗಾ ಕ್ರೂರಾಸದ್ರಾಜನಿಂದೇಂ ಪ್ರಭವಿಕುವೊ (ದಿವ್ಯತ. ೦೯-೦೩). ೩. ರಚಿಸು; ಉಂಟುಮಾಡು: ದೇವಿಯ ರೂಪವಿದ್ಧಮಂ ಪ್ರಭವಿಸುವಲ್ಲಿ ಬಿಟ್ಟ ಪರಮಾಣುಗಳಿಂ ಸಮೆದಂ ಸುಧಾಬ್ಧಿಯಂ (ಪಾರಪು. ೨-೩೦); ಶುಭಲಗ್ನವಱಿದು ಮಂಗಲವ ಪ್ರಭವಿಸಿದನು (ಭರತ. ೯೩-೧೧೬). [ಪ್ರಭವ + —ಇಸು$_3$]

ಪ್ರಭಾಕರ (ನಾ). ೧. ಬೆಳಕನ್ನುಂಟುಮಾಡುವವನು: ಅಹಿತತಮೋಪಹಂ ದನುಜಸಂಹೃತಿಶಕ್ತಿಧರಂ ಪ್ರಭಾಕರಂ (ರಾಶಕೇ. ೧-೯). ೨. ಇನ; ಸೂರ್ಯ: "ಆದಿತ್ಯಃ, ಸವಿತಾ...ಪ್ರಭಾಕರಃ...ತ್ರಯೀತನುಃ—ಈ ೪೭ ಆದಿತ್ಯನ ಪೆಸರ್" (ಹಲಾಯು. ೬-೩೬). ೩. ಚಂದ್ರ. ೪. ಅಗ್ನಿ. ೫. ಸಮುದ್ರ. [ಸಂ.]

ಪ್ರಭಾಕರದಾಸ (ನಾ). ಒಬ್ಬಾತನ ಹೆಸರು: ಶ್ರೀ ಪ್ರಭಾಕರದಾಸನ್ (ಪ್ರಾಶಿ. ೦೯೩೯, ೨೧-೦; ಸು. ೩೫೫. ೫೩). [ಸಂ.]

ಪ್ರಭಾಗ (ನಾ). ವಿಭಾಗ: ದ್ವೀಪ ಸಮುದ್ರಂಗಳ್ ಕಲ್ಪವೃಕ್ಷವನಾಕೀರ್ಣಂ ಭಾಗಿಗಳಾಗಿ ಪುಟ್ಟಿ ಜಘನ್ಯಭೋಗಭೂಮಿಪ್ರಭಾಗಂಗಳಾಗಿರ್ಕುಂ (ಸುಳಿಮಾ. ೦೦-೩೯ ವ). [ಸಂ.]

ಪ್ರಭಾಚಕ್ರ (ನಾ). ಬೆಳಕಿನ ವರ್ತುಲ; ಪ್ರಕಾಶದ ವೃತ್ತ: ಚಕ್ರರತ್ನಮೊದೆಯಲ್ತು ಚಕ್ರಿಗಾನುಮಲ್ತೆ ದೋಶ್ಚಕ್ರಮೊಂದು ಬಂದು ಮುಂದೆ ನಿಲ್ವ ಮಾಟ್ಕೆಯಿಂ ಪ್ರಭಾಚಕ್ರಮೆಸೆಯೆ (ಆದಿಪು. ೦೨-೩೩). [ಸಂ.]

ಪ್ರಭಾತ್‌ಫೇರಿ 'ಪ್ರಭಾತಫೇರಿ' ನೋ.

ಪ್ರಭಾತ (ನಾ). ೧. ಬೆಳಗು: ಪ್ರಾತಃಕಾಲ; ಉದಯಕಾಲ: "ಕಾಲ್ಯಂ . . .ಪ್ರಭಾತಂ. . .ವ್ಯುಷ್ಟಂ—ಈ ೧೦ ಸಮಟ್ತಿ(ಡೆ)ಱ" (ಹಲಾಯು. ೦೯-೦೦೧); ಪ್ರಭಾತಪಟಹಧ್ವನಿಗಳ್ ದೆಸೆದೆಸೆಯೊಳೆಸೆಯೆಯುಂ (ಆದಿಪು. ೬-೨೬ ಪ); ಪುಷ್ಯಪ್ರಭಾತದೊಳ್ ಕ್ರೌಂಚಪಕ್ಷಿಯ ಪಂಕ್ತಿ ನೆರೆದು...ದನಿಸಂತೆಗೈವಂತೆ ಪೋಲ್! (ಶ್ರೀರಾಪು. ೯೦-೩೫೯). ೨. [ಛಂದ] ಒಂದು ವೃತ್ತದ ಹೆಸರು; ಹದಿಮೂರು ಅಕ್ಷರಗಳ ಒಂದು ವೃತ್ತ: ನಜಜರಗಂ ಮುಱಿಯಲ್ ಪ್ರಭಾತವೃತ್ತಂ (ಕೃಷಿ. ೬೨). [ಸಂ.]

ಪ್ರಭಾತಕಾಲ (ನಾ). ಬೆಳಗಿನ ಹೊತ್ತು; ಉದಯಕಾಲ: "ಪೊಱೞ್ ಯೆಂದೆನಲ್ ಪ್ರಭಾತಕಾಲಂ" (ಕಬ್ಬಿಗ. ೦೯). [ಸಂ.]

ಪ್ರಭಾತಫೇರಿ, ಪ್ರಭಾತ್‌ಫೇರಿ (ನಾ). ೧. ಯಾವುದಾದರೂ ಧಾರ್ಮಿಕ ಅಥವಾ ಅನ್ಯಉತ್ಸವಗಳ ಆಚರಣೆಯ ಅಂಗವಾಗಿ ಮಾಡುವ ಪ್ರಾತಃಕಾಲದ ಸಾಮೂಹಿಕಮೆರವಣಿಗೆ: ಮುಂಜಾವಿನ ನಾಲ್ಕು ಗಂಟೆಯಿಂದಲೇ ಪ್ರಭಾತಫೇರಿಗೆ ಪ್ರಾರಂಭ (ಶ್ರಸಂಧ. ೧೬); ಪ್ರಭಾತಫೇರಿ ಯನ್ನು ಪೋಲೀಸರು ಲಾಠಿಪ್ರಯೋಗ ಮಾಡಿ ಚದುರಿಸಿದರು (ಕರ್ವಾ. ೦೬೯) **ಪ್ರಭಾತ್‌ಫೇರಿ**: ೨. ಬೆಳಗಿನ ಜಾವದಲ್ಲಿ ಮಾಡುವ ತಿರುಗಾಟ.— ಸುತ್ತಾಟ: ಪ್ರಭಾತ್‌ಫೇರಿ—ಉದಯಕಾಲದಲ್ಲಿ ಹಾಕುವ ಸುತ್ತು (ಪಮ್ಮಪು. ೦೨೬). [←ಹಿಂ. ಪ್ರಭಾತ್‌ಫೇರೀ]

ಪ್ರಭಾತವಿಧಿ (ನಾ). ಬೆಳಗಿನ ಹೊತ್ತು ಆಚರಿಸುವ ನಿಯಮ: ಪ್ರಾತರ್ವಿಧಿ: ಪಾಸರೆಯ ತುದಿಗೈದಿ, ಪ್ರಭಾತವಿಧಿಗಳಂ ಪೂರಯಿಸಿ . . .ಕುಳಿತರ್ಕೆ (ಶ್ರೀರಾಪು. ೨೬೩-೦೨). [ಸಂ.]

ಪ್ರಭಾಮಂಡಲ, ಪ್ರಭಾಮಂಡಳ (ನಾ). ೧. ಬೆಳಕಿನ ವರ್ತುಲ; ತೇಜೋವಲಯ. ೨. [ಜೈನ] ಜನಕರಾಜನ ಮಗ: ಸೀತೆಯ ಸೋದರ. ೧. ೨: ಪ್ರಭಾಮಂಡಲನ ಮಂಡಲಾಗ್ರಮಂ ಚಂದ್ರಹಾಸ ಪ್ರಭಾಮಂಡಲದಿಂ ಹತಪ್ರಭಾಮಂಡಲಂ ಮಾಡಲುಂ ನಳನ ಕೋಪಾ ನಲನಂ ಖಡ್ಗಧಾರಾಜಲದಿಂ ನಂದಿಸಲುಂ. . .ಉತ್ಕಂಠನಾಗಿ (ಹಂಸಾಪು. ೦೩-೦೩೩ ವ). ೩. ಪರಿವೇಷ; ಪ್ರಭಾವಳಿ: ರಾಜವಂಶೀಯರ ಚಿತ್ರ ಗಳನ್ನು ಪ್ರಭಾಮಂಡಲ (Halo) ಮತ್ತಿತರ ಅರಸೊತ್ತಿಗೆಯ ಕುರುಹುಗಳ ಸಹಿತವಾಗಿ ಬರೆಯುತ್ತಿದ್ದರು (ಭಾಶಕ್ರ. ೩೦). **ಪ್ರಭಾಮಂಡಳ**: ೧. ಇಂಬಾದುದು ಕೆಯ್ಯ ಚಾಮರ ಚಳತ್ಕಾಂಡುಪ್ರಭಾಮಂಡಳಂ (ಶ್ರೀಪ್ರಪು. ೦೦-೨೯). [ಸಂ.]

ಪ್ರಭಾಮಂಡಳ 'ಪ್ರಭಾಮಂಡಲ' ನೋ.

ಪ್ರಭಾವ (ನಾ). ೧. ಬಲ; ಪರಾಕ್ರಮ: ಪ್ರಭಾವಪ್ರಕಟೀಕೃತ ಕದಂಬಕುಳಾಂಬರಪ್ರಚಣ್ಡಮಾರ್ತ್ತಂಡಂ (ಸೌಇಇ. XX. ೯೦-೩; 1068). ೨. ಘನತೆ; ಹಿರಿಮೆ: ಸಿದ್ಧಪುರುಷರ ಆತ್ಮಪ್ರಭಾವದಿಂದ ಅವರ ವಾಕ್ಯಗೆ ಅನಂತವಾದ ಪ್ರಭಾವವಿದೆ (ಭಾಕಥ. ೦೩೯). ೩. ಪ್ರಾಬಲ್ಯ; ಮಾಹಾತ್ಮ್ಯ; ಮಹಿಮೆ: ಮಾನವನು ಮಹಾ ದೇವನ ಅಂಶನೇ ಆಗಿದ್ದರೂ, ಮಾಯಾಶಕ್ತಿಯ ಪ್ರಭಾವದಿಂದ ತನ್ನ ಜ್ಞಾನಕ್ರಿಯೆಗಳ ಪ್ರಾಬಲ್ಯವನ್ನು ಕಳೆದುಕೊಂಡಿರುವನು (ಶಕ್ತಿವಿ. ೦). ೪. ಅತಿಮಾನುಷಶಕ್ತಿ: ಶ್ರೀಮಾಸೇನರ್ಪ್ಪರಮಪ್ರಭಾವರಿಷಿಯರ್ ಕಟ್ಟಿಟ್ಟನಾವೆಟ್ಟದುಳ್ಳಿರ್ಪ್ಪಂಗಳ ಪೇಟ್ಟ ಸಿದ್ಧಸಮಯನ್ತಪ್ಪಾದೆ ನೋನ್ತು (ಎಇ. II. ೨೬-೦; ಸು. 700). ೫. ತೇಜಸ್ಸು;

ವರ್ಚಸ್ಸು : ದೇವಿ ನೀಂ ... ಪ್ರಭಾವಗರ್ಭಶಕ್ತಿಯಂತೆಯುಂ . . . ಮಹತ್ವಮಂ ಪಡೆದೆ (ಜಗನಿ. ೨-೯೬ ಪ); ದೇಶದ ಪ್ರತಿಷ್ಠೆ ಪ್ರಭಾವಗಳನ್ನು ಹೆಚ್ಚಿಸಲಿಕ್ಕಾಗಿ ಹೊಡೆದಾಡಿದ ಆ ನಾಯಕರಿಗೆ ತಾವು ಎಷ್ಟು ಋಣಗಳೋ (ಸಂಗೀತ. III, ೮ ಮುಖ).

ಪ್ರಭಾವ ಬೀರು = ಪರಿಣಾಮವನ್ನುಂಟುಮಾಡು : ಸರಸಮ್ಮ ಪಕ್ಕದ ಮನೆಗೆ ಬಂದ ಮೇಲೆ . . . ನನ್ನ ಮೇಲೆ ತುಂಬಾ ಪ್ರಭಾವ ಬೀರಿ ಬಿಟ್ಟಿದ್ದಾರೆ (ಕಪಾಸಂ. ೮೬). [ಸಂ.]

ಪ್ರಭಾವಕಾರಿ (ನಾ). ವರ್ಚಸ್ಸನ್ನುಂಟು ಮಾಡುವಂಥದು ; ಪರಿಣಾಮ ಕಾರಿಯಾದುದು : ಭೂಸ್ವಾಮ್ಯಸಂಬಂಧವಾದ ಸ್ಪೆನ್ಸರ್‌ನ ಅಭಿಪ್ರಾಯ ಗಳು ಅವನ ಮನಸ್ಸಿನ ಮೇಲೆ ತುಂಬ ಪ್ರಭಾವಕಾರಿಯಾದುವು (ಪುನರು. ೩೪). [ಸಂ. ಪ್ರಭಾವಕಾರಿನ್]

ಪ್ರಭಾವತೆ (ನಾ). ಘನತೆ ; ಹಿರಿಮೆ : ಕವಿಕಾವ್ಯಪ್ರಕಟಪ್ರಭಾವಮ ನದಂ ಕೀಳ್ಕಬ್ಬಿಗಂ ಗುಪ್ತಿಗೈದವರಾತ್ಮೀಯಕೃತಿಪ್ರಭಾವತೆಯನಾದಂ ತೋರ್ಪವೋಲ್ (ರಾಜಶೇ. ೬-೯೯). [ಸಂ. ಪ್ರಭಾವತಾ]

ಪ್ರಭಾವನೆ (ನಾ). ೧. ಭಾವನೆ: ಆ ಪ್ರವರರಿಗೆ ಬಿನ್ನವಿಸಿಯವರ ಪ್ರಸನ್ನವನಾ ಜ್ಞೆಯಂ ಕರುಣಾಪ್ರಭಾವನೆಯಂ ಪಡೆದು ತಾ ಮತ್ತೆ ವಂದಿಸುತ (ಐಸಪು. ೪೬-೬೩). ೨. [ಜೈನ] ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಕೊನೆಯದು : ☞ "ಜೈನಧರ್ಮದ ಪ್ರಭಾವವನ್ನು ಬೆಳಗುವುದು" (ಸ್ವಸಂಕೋ. ೦೭೭) : ಸಮ್ಯಗ್ದರ್ಶನಜ್ಞಾನಚಾರಿತ್ರರತ್ನತ್ರಯಪ್ರಭಾವ ದಿಂದಾತ್ಮಪ್ರಕಾಶಂಗೆಯ್ವುದು ಪ್ರಭಾವನೆ (ಶಾಪುಂಪು. ೨೪೦) ; ಪುಣ್ಯ ಕಥಾಶ್ರವಣಸಂಭಾವನೆಯೊಳಂ ಜಿನಪೂಜಾಪ್ರಭಾವನೆಯೊಳಂ (ಸಂಪ್ರಪು. ೪-೮೭ ಪ). 'ಮಾರ್ಗಪ್ರಭಾವನೆ' ಪರಾ. [ಸಂ. ಪ್ರಭಾವನಾ]

ಪ್ರಭಾವಮುದ್ರೆ (ನಾ). ವರ್ಚಸ್ಸಿನ ಮುದ್ರೆ, – ಪರಿಣಾಮ : ಪ್ರತಿ ಯೊಬ್ಬರಲ್ಲಿಯೂ ಸ್ವಪ್ರತಿಷ್ಠೆಯ ಮತ್ತು ಶ್ರೀಮಂತಿಕೆಯ ಪ್ರಭಾವ ಮುದ್ರೆ ಎದ್ದು ಕಾಣುತ್ತಿತ್ತು (ಪುನರು. ೪೭೭). [ಸಂ. ಪ್ರಭಾವಮುದ್ರಾ]

ಪ್ರಭಾವಲಯ (ನಾ). ೧. ಬೆಳಕಿನ ವರ್ತುಲ ; ವೃತ್ತಾಕಾರವಾದ ಬೆಳಕು : (ಸೂರ್ಯನ ಅಥವಾ ಚಂದ್ರನ ಸುತ್ತಲೂ ಕಾಣುವ ಕಿರಿದಾದ) ಪ್ರಭಾವಲಯ (Corona. ೩೦೪೩). ೨. (ಆಲಂ) ತೇಜೋವಲಯ ; ಸೊಗಸು : ನಾಯಕಪಾತ್ರಕ್ಕೆ ರಸಭಾವಗಳ ಪ್ರಭಾವಲಯವನ್ನು ಕಟ್ಟುವುವು. (ಸಖೀಗೀ. ೨ ಭಾವಸಂದರ್ಶ). [ಸಂ.]

ಪ್ರಭಾವಲ್ಲಭ (ನಾ). ಬೆಳಕಿನ ಒಡೆಯ ; ಸೂರ್ಯ : ಸುಕವಿವೃಂದ ಸ್ತೋತ್ರಪಾತ್ರಂ ಷಡಕ್ಷರಿದೇವಂ ಸರಸಪ್ರಬಂಧಸುಭಗಾಂಭೋಜಪ್ರಭಾ ವಲ್ಲಭಂ (ರಾಜಶೇ. ೦-೬೮). [ಸಂ.]

ಪ್ರಭಾವಶಾಲಿ (ಗು). ೧. ವರ್ಚಸ್ವಿಯಾದ ; ಪ್ರಭಾವವನ್ನು ಬೀರುವ : ಅರ್ಜಿಸಮಿತಿಯ ಪ್ರಭಾವಶಾಲೀ ವ್ಯಕ್ತಿಯೊಬ್ಬನ ಹೆಸರಿಗೆ ಮತ್ತೊಂದು ಪತ್ರ ಬರೆದು . . . ಕೊಟ್ಟನು (ಪುನರು ೩೩೪). (ನಾ). ೨. ಶಕ್ತಿಯುತವಾದುದು; ಪರಿಣಾಮಕಾರಿಯಾದುದು : ಬರೆಹ ಕ್ಕಿಂತ ಮಾತೇ ಹೆಚ್ಚು ಪ್ರಭಾವಶಾಲಿಯಾದುದಲ್ಲವೇ ? (ವಾತ್ಸಲ್ಯ. ೨೫೭); ಕೊಪರ್ನಿಕಸ್ ಮತ್ತು ನ್ಯೂಟನ್ನರ ಕಾಲಗಳಲ್ಲಿ ನಡೆದ ಸಂಶೋಧನೆಗಳಷ್ಟು ಪ್ರಭಾವಶಾಲಿಗಳಾಗಲಿಲ್ಲ (ಶುಕ್ಸಾರ. ೩೩ ವೀರಿಕೆ). ೩. ವರ್ಚಸ್ವಿಯಾದ ವ್ಯಕ್ತಿ; ಪ್ರಭಾವವನ್ನು ಬೀರುವವನು : ಆತ ತುಂಬಾ ಪ್ರಭಾವಶಾಲಿ. ನಮ್ಮ ಕೆಲಸಕ್ಕೆ ಅವನು ಸಹಾಯ ಮಾಡಬಹುದು (ರೂಢಿ).

[ಸಂ. ಪ್ರಭಾವಶಾಲಿನ್]

ಪ್ರಭಾವಳಿ (ನಾ). ವಿಗ್ರಹದ ಶಿರೋಭಾಗದಲ್ಲಿ ಅಳವಡಿಸುವ ವರ್ತುಳಾಕಾರದ ಒಂದು ಅಲಂಕಾರಸಾಧನ : ಶ್ರೀಆದಿತೀರ್ಥೇಶ್ವರ ರಿಂಗೆ ಮಾಡಿಸ್ತ ಲೋಹದ ಪ್ರಭಾವಳಿಗೆ ಆ ಸಮಸ್ತಜನಂಗಳಿಗೆ ಮಂಗಳ ಮಹಾಶ್ರೀ (ಮೃಆಂ. ೦೯೪೪, ೪೪-೨; 1583); ಉಮಾಮಹೇಶ್ವರನ ಮೇಲೆ ಕೆತ್ತಿರುವ ಪ್ರಭಾವಳಿಯು ಅತ್ಯಂತ ಸುಂದರವಾದ ಬಳ್ಳಿಯಿಂದ ಕೂಡಿದಂತೆ ಕೆತ್ತಲ್ಪಟ್ಟಿದೆ (ಶಾರದ. ೫೦೨). [ಸಂ. ಪ್ರಭಾವಲಿ]

ಪ್ರಭಾವಳೆ, ಪ್ರಭಾಳಿ (ನಾ). = ಪ್ರಭಾವಳಿ : ಇದರಲ್ಲಿ ತರಹೇವಾರಿ ಉತ್ಸವಗಳಿರುತ್ತವೆ. ಪ್ರಭಾವಳೆ, ಶೇಷ, ಗರುಡ, ಪುಷ್ಪಮಂಟಪ ಇತ್ಯಾದಿ (ಗರುಡಾ. ೫೩). **ಪ್ರಭಾಳಿ** : ನವರತ್ನ [ಖಚಿತ]ವಾದ ಚಿಂನದ ಪ್ರಭಾಳಿಯನೂ ಸಮರ್ಪಿಸಿ (ಸೌಇಇ. IX – ii, ೪೮೯-೩೭; 1513).

[<ಪ್ರಭಾವಳಿ./ ಮರಾ. ಪ್ರಭಾವಳ, ಪ್ರಭಾಳ]

ಪ್ರಭಾವಿ (ಗು). ೧. ವರ್ಚಸ್ಸಿನಿಂದ ಕೂಡಿದ; ಪರಿಣಾಮಕಾರಿಯಾದ: ತನ್ನ ಲೇಖನಗಳನ್ನು ಪ್ರಕಟಿಸಿ ಪ್ರಭಾವಿ ಬರಹಗಾರ ಎಂದು ಎನಿಸಿ ಕೊಂಡಿದ್ದು ರಂಗಣ್ಣನವರಿಗೆ ಧೈರ್ಯ ತಂದುಕೊಟ್ಟಿತು (ಅಪನಾ. ೦೦). (ನಾ). ೨. ವರ್ಚಸ್ವಿಯಾದಂದು : ಅಷ್ಟು ಪ್ರಭಾವಿಯಾಗಿತ್ತು ಮಹಾದೇವಯ್ಯನವರ ಉಜ್ವಲವ್ಯಕ್ತಿತ್ವ (ರಂಗರೋ. ೦೭೦). ೩. ಪ್ರಭಾವ ಬೀರಬಲ್ಲವನು : ಎಲ್ಲ ಅಂಗಗಳಲ್ಲಿಯೂ ಜೈನರೇ ಪ್ರಭಾವಿ ಗಳಾಗಿದ್ದ ಕಾಲವು ಮುಗಿದುಹೋಗಿತ್ತು (ಸಾಹಿಸ. ೦೩೫).

[ಸಂ. ಪ್ರಭಾವಿನ್]

ಪ್ರಭಾವಿತ (ನಾ). ವರ್ಚಸ್ಸಿಗೊಳಗಾದವನು: ಅವರ ಮುಗ್ಧ ನಡೆನುಡಿ ಗಳಿಂದ ಪ್ರಭಾವಿತರಾದವರು . . . ನಿಜವಾಗಿ ಧನ್ಯರು (ಶಿಕ್ಷದ. ೬೭೮) ; ಅವಳ ಸೊಬಗಿನಿಂದ ಅವನು ಪ್ರಭಾವಿತನಾದನು (ಯೋಧರು. ೦೦).

[ಸಂ.]

ಪ್ರಭಾವಿಸು (ಕ್ರಿ). ೧. ಬೆಳಗು ; ಪ್ರಕಾಶಪಡಿಸು : ಮಣೋರಥಮೆ ಪುಟ್ಟುವ ಮಾಳ್ಕೆಯಿನೊಲ್ದು ಪುಟ್ಟಿ ವಂಶಾಂಬರಮಂ ಪ್ರಭಾವಿಸಿದನ ಪ್ರತಿಮಪ್ರಬಳಪ್ರತಾಪಿವೀರಾಂಬುಧಿ ಪದ್ಮಿದೇವನ್ (ಸೌಇಇ. IX-i, ೨೭೭-೨೦; 1184). ೨. ಹೊಮ್ಮಿಸು ; ಪ್ರಕಟಪಡಿಸು : ಸಾಕ್ಷಾತ್ಸರಸ್ವತಿ ತಾನೆಂಬಿನಮೇಂ ಪ್ರಭಾವಿಸಿದಳೋ ನಾನಾಕಳಾಳಾಪಮಂ (ಸುಕುಮಾ. ೭-೫೩); ನೋಂಪಿಯೊಳಾದ ಮಹಾಮಹಿಮೆಯಂ ಪ್ರಭಾವಿಸುತ್ತಂ ನಾನಾಜಿನ ಜಿನಾಲಯಂಗಳಂ (ಸೇವೆ) ಮಾಡುತ್ತಂ (ಮಡಿಕ್ಯಾ. III, ೫೯೦ ನಪುಧಿಭಂಡಾರದ ಸೋಂಬಿ). [ಪ್ರಭಾವ + – ಇಸು$_3$]

ಪ್ರಭಾಳಿ 'ಪ್ರಭಾವಳೆ' ನೋ.

ಪ್ರಭಿನ್ನ (ಗು). ೧. ಒಡೆದ; ಚೂರುಚೂರಾದ : ನೆಱೆದ ಚಾತುರ್ದಂತ ಬಲಜಲಧರರಭಸಂ ಪ್ರಭಿನ್ನ ಬ್ರಹ್ಮಾಂಡಾಖಂಡಶಂಕೆಯಂ ಪುಟ್ಟಿಸೆ (ಶಾಂತಿಪು. ೩-೦೦೦ ಪ) ; ಶುತೀರ್ತ್ಥಧ್ವಾನ್ತಸಂಘಾತಪ್ರಭಿನ್ನಘನಭಾನವೇ (ಸೌಇಇ. XX, ೪೬-೨; 1072). ೨. ಅರಳಿದ : ಬಾಸಣಿಸಿದುದುತ್ಕಟ ಕುಸುಮಾಸವಸೌರಭದೆ ದೆಸೆಗಳೊಡನಳಿಕುಳಮಂ ವಾಸವವನಿತಾವದನಾ ಬ್ಜಾಸವಸೇಕಪ್ರಭಿನ್ನಮುಕುಲಂ ವಕುಲಂ (ಆದಿಪು. ೬-೯೭). (ನಾ). ೩. ಮದವೇರಿದ ಆನೆ ; ಮದ್ದಾನೆ : "ಲಗ್ನಃ, ಪ್ರಭಿನ್ನಃ, ಮತ್ತಃ —ಈ ೩ ಮದದಾನೆ" (ಹಲಾಯು. ೩೭-೬೭). [ಸಂ.]

ಪ್ರಭು (ನಾ). ೧. ರಾಜ; ಅರಸು; ಒಡೆಯ: "ಅರ್ಯಃ, ಪರಿವೃಢಃ, ಸ್ವಾಮೀ, ಪ್ರಭುಃ . . . ಅಧಿಪತಿಃ- ಈ ೧೦ ಒಡೆಯಂ" (ಹಲಾಯು. ೫೭-೦೮೮); ಪ್ರಭುಗಳ್ ಭಯದೊಡನೆ ಕೂಡಿ ಚಿಂತಿಪರಾಗಳ್ (ಹಮ್ಮೀರ. ೨-೨೫); ವೈದ್ಯಗ್ರಂಥವನ್ನು ಬರೆದಾತನು ಕಳಲೆಯ ಪ್ರಭುವಾದ ವೀರ ರಾಜನು (ಸಕವೈ. V. ಪ್ರಸ್ತಾವನೆ). ೨. ಬಸವಣ್ಣನ ಸಮಕಾಲೀನ ನಾಗಿದ್ದ ಶರಣನೊಬ್ಬನ ಹೆಸರು ; ಅಲ್ಲಮ : ಸಿದ್ಧರಾಮನ ಪುರಕೆ ಪ್ರಭು ಬಾದ (ಪ್ರಶುಲಿಂ. ೧೮-೩). ೩. ಒಬ್ಬಾತನ ಹೆಸರು : ಇದಱ ಮುನ್ದೆ ಕೊಣ್ಡಿಶುಲರಕುಪ್ಪ ಕೀರ್ತ್ತಿವರ್ಮ ಗೋಸಾಸಿಯ ನಿಱಿಸಿದು ಕೀರ್ತ್ತನ ದಿಶಾಪಾಲಸ್ಯಲಿಖಿತಂ ಪ್ರಭುನಾಮಂ (ಎಇ. XXI, ೩೪-೦೪; 751).

ಪ್ರಭುಗಳುಂಬಳಿ = ರಾಜನು ಬಿಟ್ಟ ಮಾನ್ಯ : ಮಹಾಜನಂ ಪ್ರಭುಗಳುಂಬಳಿಯುಮಂ ದೇವರುಂಬಳಿಯುಮಂ ಸರ್ವ್ವಬಾಧಾಪರಿಹಾರಮಾಗಿ ಕಾದೂಡುವರು (ಸಾಂದೇಡ್. ೩-೨೨; 1047). [ಸಂ.]

ಪ್ರಭುಗೊಡಗೆ (ನಾ). ರಾಜನು ಕೊಟ್ಟ ಕೊಡುಗೆಯ ಭೂಮಿ : ಪ್ರಭುಗೊಡಗೆ ಗಉಡುಗಳೂ ಗ್ರಾಮದ ಸೇನಬೋವನ ಕೊಡಗಿ ಮುನ್ತಾದ ಮಾನ್ಯಗಳನೂ ಸರ್ವಮಾನ್ಯವಾಗಿ ಬಿಟ್ಟು (ಎಕ. XIV, ಶ್ರೀರಂಗ. ೦೪೯-೨೦; 1563). [ಪ್ರಭು + ಕೊಡಗೆ (<ಕೊಡಂಗೆಯ್$_2$)]

ಪ್ರಭುತೆ (ನಾ). ಪ್ರಭುವಾಗಿರುವಿಕೆ; ರಾಜನ ಅಧಿಕಾರ; ಪ್ರಭುತ್ವ: ಗಭೀರದೊಳ್ ಗರಿಮೆಯೊಳೂರ್ಜಿತಪ್ರಭುತೆಯೊಳ್ . . . ನಿನಗಾರ್ ದೊರೆ ಮಾನವರೀ ಧರಿತ್ರಿಯೊಳ್ (ಪುಷ್ಪಪು. ೧-೬೦); ಪ್ರಭುತೆಯ ತೆರನಂತೆ ಜನರನು ಸೆಳೆವಳು (ಇಂಶಾಪ. ೦೦೬-೨೦). [ಸಂ. ಪ್ರಭುತಾ]

ಪ್ರಭುತ್ತಿಕೆ (ನಾ). = ಪ್ರಭುತ್ವ : ಅಸಗೋಡ ಪಲ್ಲವಸಾವಂತನು ಉಚ್ಚಂಗಿ ಮೂವತ್ತಱೋಳು ತಂನ ಪ್ರಭುತ್ತಿಕೆಯ ಕೂಚಿಗೋಳದ ಮೂಲಸ್ಥಾನ ಕಲಿದೇವ × × × ನಿವೇದ್ಯಕ್ಕಂ . . . ಬಿಟ್ಟ ದತ್ತಿ (ಸೌಇಇ. IX-i, ೩೩೯-೨೨; 1222). [< ಪ್ರಭುತ್ವ + — ಇಕೆ]

ಪ್ರಭುತ್ವ (ನಾ). ಒಡೆತನ; ಅಧಿಕಾರ : ಆರ ನೆಗೞ್ತೆಯುಂ ಬಲಮುಮಾಯತಿಯುಂ ಚಲಮುಂ ಪ್ರಭುತ್ವಮುಂ ದೂರದೊಳಿರ್ದು ನೋಡೆ ಸೊಗಯಿಪ್ಪುದು ಬೆಟ್ಟದ ನುಣ್ಪಿನಂತೆ (ಕಾವ್ಯಸಾ. ೪೩೫) ; ಪ್ರಭುತ್ವಗಳು —ಇವು . . . ರಾಜಾಧೀನಪ್ರಭುತ್ವವೆಂತಲೂ . . . ಪ್ರಜಾಧೀನ ಪ್ರಭುತ್ವವೆಂತಲೂ ಎರಡು ವಿಧವು (ಭೂಗೋಳ. ೦೯). [ಸಂ.]

ಪ್ರಭುಮಾಣಿ (ನಾ). ಒಬ್ಬಾತನ ಹೆಸರು : ಶ್ರೀಪ್ರಭುಮಾಣಿ ಪರಮ ಸುಭಗನ್ ಪಗೆವರ ಗಂಧಾಸ್ತಿ ಪಾರ್ವ್ವರ ಇಚ್ಛೆ (ಎಕ. XVI, ಮದ್ದಗಿ. ೦೦೬-೦: ೩ಪೆಯ ಶತ). [ಪ್ರಭು + ಮಾಣ್ಯ]

ಪ್ರಭುವಳಿತ (ನಾ). ಅರಸನ ಅಂಕಿತಕ್ಕೆ ಒಳಪಟ್ಟುದು ; ರಾಜನ ಅಧೀನಕ್ಕೊಳಗಾದಂದು : ನಾವು ಎಲ್ಲರನ್ನೂ ಜಯಿಸಿ ರಾಜ್ಯಗಳನ್ನು ಕಟ್ಟಿಕೊಂಡು ಕಳಲೆಯನ್ನು ಮಾತ್ರ ಅವನಿಗೆ ಪ್ರಭುವಳಿತವಾಗಿ ಕೊಟ್ಟು ಇದ್ದೆವು (ಶಾಮವಂ. ೪೬); 'ಪ್ರಭುವಳಿತವಾದ ಕಟ್ಟುಂಬಳಿ' ಎಂಬ ಒಕ್ಕಣೆಯಿದೆ (ಮಂತ್ರಶ. ೦೬-೨). [ಸಂ. ಪ್ರಭುವಲಿತ]

ಪ್ರಭುಶಕ್ತಿ (ನಾ). [ರಾಜನೀ] ಮಂತ್ರಶಕ್ತಿ, ಪ್ರಭುಶಕ್ತಿ ಮತ್ತು ಉತ್ಸಾಹಶಕ್ತಿಗಳೆಂಬ ಮೂರು ಶಕ್ತಿಗಳಲ್ಲಿ ಒಂದು ; ರಾಜನ ಅಧಿಕಾರದಿಂದ ಬರುವ ಶಕ್ತಿ; ಕೋಶಬಲ ಮತ್ತು ದಂಡಿಸುವ ಶಕ್ತಿ—ಇವುಗಳಿಂದ ಬರುವ ತೇಜಸ್ಸು,—ವರ್ಚಸ್ಸು ; ಆಳುವ ಶಕ್ತಿ : ಉತ್ತಮಪ್ರಭುಶಕ್ತಿಯುಕ್ತೆ ಜಿನೇಂದ್ರಶಾಸನಭಕ್ತೆ (ಎಕ. VII, ಶಿಕಾಂ. ೨೦೯-೦೯; 918) ; ಪ್ರಭುಶಕ್ತಿ ಶಕ್ತಿ ನಿರ್ಮಳ ಮಣಿಭೂಷಣಂ ಫಣಿವಿಭೂಷಣಮಾಗೆ ನೆಗೞ್ತೆಯಂ ಪುದುಗೊಳಿಸಿದನೀಶ್ವರಂ ನೆಗೞ್ದುದಾರಮಹೇಶ್ವರನೀಗೆ ಭೋಗಮಂ (ಪಂಪಭಾ. ೦-೨); ರಾಜಕೀಯವ್ಯವಸ್ಥೆಗಳು ಪ್ರಭುಶಕ್ತಿ ಇರುವವರ ಅಭಿಪ್ರಾಯಗಳಿಗೆ ಸರಿಯಾಗಿ ರೂಪಾಂತರಗಳನ್ನು ಪಡೆಯುತ್ತವೆ (ಭಾರದ. ೨೨೦). 'ಉತ್ಸಾಹಶಕ್ತಿ' ಪರಾ. [ಸಂ.]

ಪ್ರಭುಸಮ್ಮಿತ (ನಾ). [ಕಾವ್ಯಮೀ] ಪ್ರಭುಸಮ್ಮಿತ, ಮಿತ್ರಸಮ್ಮಿತ ಮತ್ತು ಕಾಂತಾಸಮ್ಮಿತವೆಂಬ ಮೂರು ಬಗೆಯ ಸಮ್ಮಿತಗಳಲ್ಲಿ ಒಂದು ; ನಮಗೆ ಪ್ರಿಯವಾಗಿರಲಿ ಇಲ್ಲದಿರಲಿ ರಾಜಶಾಸನದಂತೆ ಅವುಗಳನ್ನು ಅನುಸರಿಸಿ ನಡೆಯಬೇಕಾದುದು : ಆಲಂಕಾರಿಕರು ಗ್ರಂಥರಾಶಿಯನ್ನು ಉಪದೇಶದೃಷ್ಟಿಯಿಂದ ಪ್ರಭುಸಮ್ಮಿತ, ಮಿತ್ರಸಮ್ಮಿತ, ಕಾಂತಾಸಮ್ಮಿತ ಎಂದು ಮತ್ತೊಂದು ಪ್ರಕಾರವಾಗಿ ಮೂರು ಭಾಗ ಮಾಡುವರು. "ಹೀಗೆ ಮಾಡಬೇಕು, ಹೀಗೆ ಮಾಡಕೂಡದು" ಎಂದು ಕರ್ತವ್ಯಾಕರ್ತವ್ಯಗಳನ್ನು ವಿಧಿಸುವ ಮತ್ತು ನಿಷೇಧಿಸುವ ವೇದಶಾಸ್ತ್ರಾದಿಗಳು ಪ್ರಭುಸಮ್ಮಿತ (ಕೈವಿಡಿ. ೦೬೮ ೮೩೮) ; ವಿಧಿ-ನಿಷೇಧಗಳನ್ನು ಪ್ರಭುಸಮ್ಮಿತವಾಗಿ ನಿರೂಪಿಸುವ ವೇದಗಳಲ್ಲಿ ಶ್ರದ್ಧೆಯಿಟ್ಟು ಪ್ರವರ್ತಿಸುವುದೇ ಪ್ರಸ್ತುತವಾಗಿತ್ತು (ಭಾರದ. ೦೨೦). [ಸಂ.]

ಪ್ರಭೂತ (ಗು). ೧. ಸಮೃದ್ಧವಾದ ; ಹೆಚ್ಚಾದ ; ಅಧಿಕವಾದ : ಆ ವಿವಿಧಪ್ರಭೂತಭುವನಸ್ತುತಸಾರಸಮಸ್ತವಸ್ತುವಂ ತೀವಿದ ಭಂಡಿಯೊಳ್ . . . ಸಂಜೀವಕ ನಂದಕಾಖ್ಯ ವೃಷಭಂಗಳನಿಂಬೆನೆ ಪೂಡಿ (ಪಂಪಕಂ. ೨೩ ೪). ೨. ಹುಟ್ಟಿದ ; ಉಂಟಾದ : ಪುರಾಣಕವಿಪ್ರಭುಪ್ರಯೋಗಾವಿಳಸದ್ಗುಣೋದಯಮನಾಯ್ದವಱಿಂ ಸಮೆದೊಂದು ಕಾವ್ಯದಿಂ ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ (ಕವಿರಾ. ೨-೦೫೫); ಅಭಿಮನ್ಯುಮರಣವಾರ್ತಾಪ್ರಭೂತಶೋಕಾಗ್ನಿ ಧರ್ಮತನಯನನಿರದಂದಭಿಭವಿಸಿ ತನ್ನನಳುರ್ದಂತೆ ಭಾಸ್ಕರಂ ಕಂಕಮಾದನಸ್ತಾಚಲದೊಳ್ (ಪಂಪಾಭಾ. ೦೦-೦೦೬). ೩. ಪಕ್ವವಾದ ; ಬಲಿತ. (ನಾ). ೪. ಹೆಚ್ಚಳ ; ಆಧಿಕ್ಯ: "ಪ್ರಾಜ್ಯಂ, ಭೂರಿ, ಪ್ರಭೂತಂ . . . ಅದಭ್ರಂ-ಈ ೧೮ ಮೊಕ್ಕಳಂ" (ಹಲಾಯು. ೦೦೬-೦೬) ; ಜನಸಾಧಾರಣವೆಂದರೆ, ಒಂದು ದೊಡ್ಡ ಜೀವವನ್ನು ಸೂಚಿಸುತ್ತದೆ ; ಸ್ವಭಾವವಾಗಿ ಅದರ ಅವಶ್ಯಕತೆ ಪ್ರಬಲ ಮತ್ತು ಪ್ರಭೂತ (ಎಬಿಂಧ. II, ೧೯೬). ೫. ಶ್ರೇಷ್ಠವಾದುದು. ೬. ಒಬ್ಬ ವ್ಯಕ್ತಿಯು ಸತ್ತ ನಂತರದ ಹತ್ತನೆಯ ದಿನ ಕೊಡಲಾಗುವ ಮೊಸರನ್ನದ ಬಲಿ : (ಕ್ರಿ). [ಸಂ.]

ಪ್ರಭೂತೆ (ನಾ). ಸಮೃದ್ಧವಾದುದು ; ವಿಪುಲವಾಗಿರುವಿಕೆ : "ಬಹುಳಂ ಪ್ರಭೂತಂ ಪ್ರಭೂತಿ [ಪಾಶಾಂ. ೦] ಬಹುಪುಷ್ಕಳಂ ಪುಷ್ಪಮೆನೆ ಮೊತ್ತಮಕ್ಕುಂ" (ಮಂಗರಾ. ೦೨೬-೬); ಶೈಲಸಾಗರಧರಾಶಾಚರ್ರವಾಳಾಂಬರಂ ಪರಮಶ್ರೀವಿಜಯ ಪ್ರಭೂತಿಜಯಶ [ಂ] . . . ಪರಮಾನಂದಿತ ಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ (ಕವಿರಾ. ೩-೨೩೦). [ಸಂ.]

ಪ್ರಭೃತಿ$_1$ (ನಾ). ೧. ತೂಕವುಳ್ಳುದು ; ಶ್ರೇಷ್ಠವಾದುದು ; ಉತ್ತಮವಾದುದು : ಭಾಸ್ವದ್ಗುಣಯುತಕಪಿಲಾದ್ಯ ಪ್ರಭೂತಾವನೀಪಾವನರೂಪ ಶ್ರೀವಿಭೂತಿಪ್ರಭೃತಿಯನುಱೆ ಪತ್ಪೂರ್ವಕಂ ಲೇಪನಂಗೈದು (ರಾಜಶೇ. ೦೩-೪೬). ೨. ತೂಕದ ವ್ಯಕ್ತಿ; ಶ್ರೇಷ್ಠಪುರುಷ ; ಶ್ರೇಷ್ಠವ್ಯಕ್ತಿ : ಕೊಳಾಗಾಲದ ವೀರಣ್ಣಶೆಟ್ಟಿ, ಅಣ್ಣಯ್ಯಶಾಸ್ತ್ರಿ ಪ್ರಭೃತಿಗಳೆಲ್ಲಾ ಯೋಚಿಸಿ (ಹೈರರ. ೪೬); ಆಧಾರಗ್ರಂಥಗಳಲ್ಲಿ ನಮೂದಿಸಲ್ಪಟ್ಟ ಕೆಲವು ಹೆಸರುಗಳನ್ನು . . . ನಮ್ಮ ತುಳುನಾಡಿಗೆ ಹೊಂದಿಸಿಕೊಳ್ಳುವ ಪ್ರಯತ್ನವನ್ನು ನಮ್ಮ ನಾಡಿನ ಪ್ರಭೃತಿಗಳು ಮಾಡಿದ್ದಾರೆ (ತುಳುವಾ. ೦೭). [<ಸಂ. ಭೃತಿ=ಭಾರವಾದುದನ್ನು ಹೊತ್ತುಕೊಂಡಿರಂವುದು]

ಪ್ರಭೃತಿ$_2$ (ಅ). ಮೊದಲಾಗಿ; ಮೊದಲುಗೊಂಡು ; ಪ್ರಾರಂಭಿಸಿ : ಸಿದ್ಧಾಯತನ ಪ್ರಭೃತಿ ನವಕೂಟಂಗಳೊಳಂ ನೆಱೆದು (ಆದಿಪು. ೧-೬೨ ಪ) ; ಯಾಚಕ ವಾಚಕ ನರ್ತನ ಕಥಕ ಪುಣ್ಯಪಾಠಕ ಪ್ರಭೃತಿ ಸಮಸ್ತಜನಕ್ಕಂ ಬೇಡಿದುದಂ ಕೊಟ್ಟು (ಸುಕುಮಾ. ೬-೨೫ ಪ). [ಸಂ.]

ಪ್ರಭೆ (ನಾ). ೧. ಕಾಂತಿ; ಪ್ರಕಾಶ : "ವರ್ಚಃ . . . ಪ್ರಭಾ, ರಶ್ಮಿಃ —ಈ ೧೧ ದೀಪ್ತಿ" (ಹಲಾಯು. ೦೨-೬೫); ಪ್ರಭೆಯಿಂ ಚಿಂತಾಮಣಿ ಕಲ್ಪಭೂರುಹಂ ಪುಷ್ಪಮಂಜರಿಯಿನೆಸೆವವೊಲಾ ತ್ರಿಭುವನಭೂಷಣನೆಸೆದಂ (ಅರ್ಧನೇ. ೪-೩೯) ; ಆ ಚಿತ್ತಿನ ಪ್ರಭೆಯಲ್ಲಿ ಶರಣನುದಯಿಸಿದನು (ಸಿದ್ಧೇಪ. ೦೭-೪೩). ೨. ರಶ್ಮಿ ; ಕಿರಣ. "ರೋಚಿಃ . . . ದ್ಯುತಿಃ, ಪ್ರಭಾ ...ಗೌಃ— ಈ ೩೨ ರಶ್ಮಿಗಳ ಪೆಸರ್" (ಹಲಾಯು. ೭-೩೬).

ಪ್ರಭಾಪ್ರಭಾವನ್ಯಾಯ = ದೀಪ ಮತ್ತು ಅದರ ಪ್ರಕಾಶ ಎರಡೂ ಒಂದೇ ಎಂಬ ನ್ಯಾಯ: ಪ್ರಭಾಪ್ರಭಾವನ್ಯಾಯದಂತೆ ಈ ವಿಶ್ವವು ಈಶ್ವರನಿಗೆ ಶರೀರವಾಗಿದೆ (ಭಾರದ. ೨೬೬). [ಸಂ. ಪ್ರಭಾ]

ಪ್ರಭೆವೆಱು (ಕ್ರಿ). ಪ್ರಕಾಶವನ್ನು ಹೊಂದು; ತೇಜಸ್ಸನ್ನು ಪಡೆ;

ಅತುಳಿತಪ್ರಭವೆತ್ತು ಸುತನೀ ಗತಿಯೊಳೀಶಧ್ಯಾನತತ್ಪರಮತಿಯೊಳಿರ್ದನು ತಾಯ ಬಸುಱಲಿ ವತ್ಸರತ್ರಯವು (ಬಸವು. ೩-೦೨). [ಪ್ರಭೆ+ಪೆಱು$_1$]

ಪ್ರಭೇದ (ನಾ). ೧. ಒಡೆಯುವಿಕೆ; ಮುರಿಯುವಿಕೆ. ೨. ವಿಭಾಗ. ೩. ಪ್ರಕಾರ; ರೀತಿ; ವಿಧ: ರಘಟೆಗಳ (ತೆಲುಗು–ರಗಡ) ಪ್ರಭೇದಗಳನ್ನು ತಿಳಿಸುವ . . . ಈ ಎರಡು ಪದ್ಯಗಳು ಪ್ರಕ್ಷಿಪ್ತಗಳಾಗಿ ಕಾಣುತ್ತವೆ (ಕೈಪಡಿ. ೦೩೬). ೪. ವ್ಯತ್ಯಾಸ; ಭೇದ: ಇಂತೀ ಅಂಗ ಪ್ರಾಣಂಗಳಲ್ಲಿಯೂ ಲಿಂಗವೇ ಎಡೆಕಡೆ ಇಲ್ಲದಿರ್ಪ ಪ್ರಭೇದ [ಪಾಠಾಂ. ಭೇಧ]ವನು ಅಱಿದಾತನೇ ಸರ್ವಾಂಗಲಿಂಗಿ (ಸಿದ್ಧೇಪ. ೦೦೬-೩೩೩). [ಸಂ.]

ಪ್ರಭೇದಕ (ನಾ). ಭೇದಿಸುವವನು; (ಇಂಗಿತವನ್ನು) ಅರಿಯುವವನು: ಪರರಿಂಗಿತಾಕಾರಪ್ರಭೇದಕನ ಮನ್ನಣೆಗೆ ಬೆಱೆಯದನನು . . . ಪಡಿಹಾಱಕನ ಮಾಡುವುದು (ಕುಪ್ಯಾಕಾ. ೩-೯೯). [ಸಂ.]

ಪ್ರಭ್ರಷ್ಟಕ (ನಾ). ತಲೆಯಲ್ಲಿ ಧರಿಸಿದ ಹೂಮಾಲೆ: "ಚಂಡಿಕೆಯಲ್ಲಿ ಮುಡಿದ ಹೂ ಪ್ರಭ್ರಷ್ಟಕವೆಂಬುದು" (ಹಲಾಯು. ೯೦-೩೯೯). [ಸಂ.]

ಪ್ರಮಂಥ (ನಾ). ಅಗ್ನಿಯನ್ನುಂಟುಮಾಡಲು ಬಳಸುವ ಮರದ ತುಂಡು; ಅರಣಿ: ಮನುಷ್ಯ ಬಿದಿರುಜಾತಿಯ ಕಾಷ್ಠದ ಮೆತ್ತನೆ ಮರದಲ್ಲಿ 'ಪ್ರಮಂಥ'ದಿಂದ (ಅರಣಿಯಿಂದ) . . . ಮಥಿಸಿದಾಗ ಬೆಂಕಿಯಡಗಿದೆಯೆಂದು ತಿಳಿಯುತ್ತಾನೆ (ಬದ್ಧಪ್ರ. V ಬೀಕಿಕೆ). [ಸಂ.]

ಪ್ರಮತ್ತ (ಗು). ೧. ಸೊಕ್ಕುವ; ಮದವೇರುವ: ಸೌಂದರ್ಯದಿಂದ ಪ್ರಮತ್ತವಾಗುವ ಚೇತನ ಶಿವದ ನೆನಹಿನಲ್ಲಿ ನಾಂದು ಹಗುರವಾಗಲಿ (ಸೌಂದಸ. ೪೦೮). ೨. ಅಜಾಗರೂಕವಾದ; ಎಚ್ಚರಗೇಡಿಯಾದ. (ನಾ). ೩. [ಜೈನ] ಆತ್ಮನ ಎರಡು ಅವಸ್ಥೆಗಳಲ್ಲಿ ಒಂದು; ೪ "ಅಶುದ್ಧಾತ್ಮನಲ್ಲಿ ಕೆಳತರಗತಿಯ ಆರು ಗುಣಸ್ಥಾನಗಳಲ್ಲಿ ಕಾಣಬರುವ ಪರಿಣಾಮ" (ಕೈಪಕೋ. ೦೭೭): ಅಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತಪರಾವರ್ತನಸಹಸ್ರಂಗೆಯ್ದು (ಆದಿಪು. ೦೦-೦೯ ಪ); [ಮತ್ತಂ]ಮಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತ ಪರಿವೃತ್ತಿ . . . ಪ್ರವೃತ್ತಕರಣಕ್ಷಪಕನಾಗಿ (ಶಾಂತಿಪು. ೦೦-೦೦೦ ಪ). 'ಅಪ್ರಮತ್ತ'ಪರಾ. [ಸಂ.]

ಪ್ರಮತ್ತತೆ (ನಾ). ಸೊಕ್ಕುವಿಕೆ; ಅಮಲೇರುವಿಕೆ: ಈ ಲಲನೆಯರ ಸೌಂದರ್ಯಾನುಭವದಲ್ಲಿ ಒಂದು ರೀತಿಯ ಪ್ರಮತ್ತತೆ ಮೊದಪೊದಲಿಗೆ ಕಂಡುಬಂದರೂ (ಹಂಕೀ. ೮). [ಸಂ. ಪ್ರಮತ್ತತಾ]

ಪ್ರಮತ್ತಯೋಗ (ನಾ). [ಜೈನ] "ಕಷಾಯಕ್ಕೆ ಅಧೀನವಾಗಿ ಅಸತ್ಯವನ್ನಾಡುವುದು" (ಕೈಪಕೋ. ೦೭೭): ಉಮಾಸ್ವಾಮಿಯವರು 'ತತ್ತ್ವಾರ್ಥ ಸೂತ್ರ'ದಲ್ಲಿ 'ಪ್ರಮತ್ತಯೋಗದಿಂದ ಪ್ರಾಣದ ನಾಶವಾಗುವುದೇ ಹಿಂಸೆ' ಎಂದು ಪ್ರತಿಪಾದಿಸುತ್ತಾರೆ (ಕೈಪಪ. ೨೩೦). [ಸಂ.]

ಪ್ರಮತ್ತಸಂಯುತ (ನಾ). [ಜೈನ]ಪ್ರಮತ್ತಗುಣಗಳಿಂದ ಕೂಡಿದವನು: ಸಂಜ್ವಲನಕಷಾಯ . . . ದುನ್ವಪ್ನಾದಿ ವ್ಯಕ್ತಾವ್ಯಕ್ತ ಪ್ರಮಾದಂಗಳೊಳು ವರ್ತಿಸುವ ತಪಸ್ವಿಯಾರನೆಯ ಗುಣಸ್ಥಾನವರ್ತಿ ಪ್ರಮತ್ತಸಂಯುತನಕ್ಕುಂ (ಕ್ರಾಪಕಾ. ೬೮-೦೯). [ಸಂ.]

ಪ್ರಮತ್ತಿ (ನಾ). = ಪ್ರಮಾದಿ ೨: × × × ವಹಳನ ಪ್ರಮತ್ತಿ ಸಂವತ್ಸರದ ಕಾರ್ತ್ತಿಖ ಬಹಿ ಸೋಲುದೊಡ ತಂಮಣ್ಣಗೆ ನಿಂದ ವೀರಗಲ್ಲು (ಮೈಆಂ. ೦೯೯೬, ೦೬-೨; 1399). [< ಪ್ರಮಾದಿ ?]

ಪ್ರಮಥ (ನಾ). ಶಿವನ ಪರಿವಾರವರ್ಗದಲ್ಲಿ ಒಬ್ಬ: "ಆತನ ಗಣಂಗಳಂ ಪ್ರಮಥರೆಂಬುದು" (ಹಲಾಯು. ೯-೦೯); ಎಲ್ಲಿ ನೋಡಿದಡಲ್ಲಿ ಮನವೆಳಸಿದರೆ ಆಣೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ (ಬಸವ. ೯೪೩); ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ ಉದಯಿಸಿದ ಶುದ್ಧಚಿದ್ರೂಪರಪ್ಪ ಪ್ರಮಥರು (ಸಿದ್ಧೇಪ. ೨೦-೩೩). [ಸಂ.]

ಪ್ರಮಥಗಣ (ನಾ). ಶಿವನ ಪರಿವಾರ; ಶಿವಗಣ; ಪ್ರಮಥರ ಸಮೂಹ: ಕಲ್ಯಾಣಕ್ಕೆ ಪ್ರಮಥಗಣಂಗಳ ರುದ್ರಗಣಂಗಳ ಅಮರಗಣಂಗಳ . . . ತಂದು ನೆರಹಿದಾತ ನಮ್ಮ ಬಸವಯ್ಯನು (ವೀಲಿಪ. ೪. ೩-೯); ಘನತರ ಪ್ರಮಥಗಣರೊಡನೆ ತಾಂಡವಮನೆಸಗುವನು (ವೀಕೈಪು. ೨-೦-೩೭). [ಸಂ.]

ಪ್ರಮಥತ್ವ (ನಾ). ಶಿವಗಣದ ಪದವಿ: ಕಾಲಕಾಲಂ ಮೆಚ್ಚಿ ಕರುಣಾಲೋಲದಿಂ ಪ್ರಮಥತ್ವಮಂ ಕೊಡೆ (ಬಸವು. ೨೭-೪೬). [ಸಂ.]

ಪ್ರಮಥನ (ನಾ). ೧. ಕಡೆಯುವಿಕೆ; ಮಥಿಸುವಿಕೆ: ಸುಪ್ರಸನ್ನರು ನೀವು ನಿಮ್ಮುಭಯಪ್ರಕಟತರ ವಚನಪೀಯೂಷಪ್ರಮಥನಾಭಾವದಿಂದೀ ಶಿವಗಣಾವಳಿಯು . . . ವರ್ಧಿಸಿತು (ಬಸವು. ೩೬-೯೯). ೨. ಪೀಡಿಸುವಿಕೆ; ಹಿಂಸಿಸುವುದು. ೩. ಕೊಲೆ; ವಧೆ. [ಸಂ.]

ಪ್ರಮಥನಾಥ (ನಾ). ೧. ಪ್ರಮಥರ ಒಡೆಯ; ಈಶ್ವರ: ಬರುತಿರ್ದನಾ ಪ್ರಮಥನಾಥಂ (ವೀಕೈಪು. ೨-೩-೦೬). ೨. ಗಣಪತಿ: (ಕಿ). [ಸಂ.]

ಪ್ರಮದ (ಗು). ೧. ಮತ್ತೇರಿದ; ಸೊಕ್ಕಿದ: 'ಪ್ರಮದಾಳಿ' ಪರಾ. ೨. ಎಚ್ಚರಗೇಡಿಯಾದ. (ನಾ). ೩. ಸಂತೋಷ; ಆನಂದ: "ಪ್ರಮೋದಃ, ಪ್ರಮದಃ . . . ಸುಖಂ—ಈ ೧೩ ಸುಖದ ಪೆಸರ್" (ಹಲಾಯು. ೨೦-೦೨೩); ಆನಂದನೃತ್ಯಪ್ರಮದಮನಧಿಕಂ ಮಾಡಿ (ಆದಿಪು. ೭-೦೨೮); ಧರ್ಮ್ಮಜನಕಂ ಸನ್ಮಾರ್ಗ್ಗವಿದ್ಯೋತನಂ ಪ್ರಮದಾಪೂರಿತ ಮಿತ್ರಚಕ್ರನಜಡಂ ನಿತ್ಯೋದಯಭ್ರಾಜಿ ಲೋಕಮನೆಲ್ಲಂ ಬೆಳಗುತ್ತುಮಿರ್ಕ್ಕೆ (ಎಕ. VI. ಕಡೂರು. ೬೬-೩೮,1172). ೪. ದತ್ತೂರ. ೫. ಕಾಲಿನ ಹರಡು. [ಸಂ.]

ಪ್ರಮದಂಬೆಱು (ಕ್ರಿ). ಆನಂದವನ್ನು ಹೊಂದು: ಪ್ರಮದಂಬೆತ್ತ ಚಕೋರದಂಪತಿಯ ಪೋಲ್ (ಕುಸುಮಾ. ೯. ೫೯). [ಪ್ರಮದ + ಪೆಱು$_1$]

ಪ್ರಮದವನ (ನಾ). ರಾಜನ ಅಂತಃಪುರದ ಸ್ತ್ರೀಯರ ವಿಹಾರಕ್ಕಾಗಿರುವ ಉದ್ಯಾನವನ: "ಅರಸರುಂ ಅರಸಿಯರುಂ ಕೂಡಿಹ ಬನಮಂ ಪ್ರಮದವನಮೆಂಬುದು" (ಹಲಾಯು. ೩೬-೬೦); ಅಂತಃಪುರಪ್ರಮದವನ ಪ್ರವಿಷ್ಟನಾಗಿ (ಆದಿಪು. ೬-೯೦ಪ); ತರಳಿಕೆವೆರಸು ಪ್ರಮದವನಪಕ್ಷದ್ವಾರದಿಂ ಪೊಱಮಟ್ಟು ಪೋಗುತ್ತಂ (ಕಾದಂಪೂ. ೬೯೨). [ಸಂ.]

ಪ್ರಮದಾಳಿ (ನಾ). ೧. ಮದಿಸಿದ ದುಂಬಿ; ಸೊಕ್ಕಿದ ಭ್ರಮರ. ೨. ಸ್ತ್ರೀಯರ ಸಮೂಹ; ಹೆಂಗಸರ ಗುಂಪು: ೧, ೨: ಆ ಮಂಟಪಂ ಮಧುಸಮಯದಂತೆ ಪೋಲ್ಪ್ರಮದಾಳಿ ಸಂಮನೋಜ್ಞಮುಂ (ರಾಜಕೇ. ೬-೬೪). [ಸಂ. ಪ್ರಮದಾಲಿ (ಪ್ರಮದಾ + ಆಳಿ (= ಆಲಿ); ಪ್ರಮದ+ಅಳಿ (= ಅಲಿ)]

ಪ್ರಮದೆ (ನಾ). ೧. ಹೆಂಗಸು; ಸ್ತ್ರೀ: "ರಾಮಾ . . . ಪ್ರಮದಾ, ರಮಣಿ . . . ಯುವತಿಃ —ಈ ೨೮ ಸ್ತ್ರೀಯರ್" (ಹಲಾಯು. ೭೯ ೩೨೬). ೨. ತರುಣಿ; ಯುವತಿ ವಿಳಾಸವಿಭ್ರಮಸಿಂಹಾಸನಾಸೀನನುಂ ಪ್ರಮದಾಹಸ್ತವಿನ್ಯಸ್ತವಾಮಕ್ರಮಕಮಳನುಂ (ಪಂಪಭಾ. ೯-೨೮ಪ); ಪ್ರಮದೆಯರಂ ಮನೋಭವನೆ ಸೂಟಱಿದೆಚ್ಚಪನಗ್ನಿಬಾಣದಿಂ (ಪಂಪ್ರಪು. ೭-೦೩೩). ೩. ಸುಂದರಿ. ೪. ಹೆಂಡತಿ; ಪತ್ನಿ. [ಸಂ. ಪ್ರಮದಾ]

ಪ್ರಮದೋದ್ಯಾನ (ನಾ). = ಪ್ರಮದವನ: ಪ್ರಮದೋದ್ಯಾನದೊಳಾವನಿರ್ದನವನಂ ಕೊಂದಿಕ್ಕಿಂ (ಪಂಠಾಮಾ. ೦೦-೦೦೬). [ಸಂ.]

ಪ್ರಮದೋನ್ಮತ್ತ (ನಾ). ಅತಿಶಯವಾಗಿ ಮತ್ತೇರಿದವನು; ಮದೋನ್ಮತ್ತನಾದವನು: ಮತ್ತನತಿಶ್ರಾಂತನು ಪ್ರಮದೋನ್ಮತ್ತನತಿ ಕುಪಿತಾನನನು . . . ಇಂತೀ ಹತ್ತುಜನವಾವಾಗ ಧರ್ಮದ ತತ್ತವಣೆಗಳ ನಱಿಯರೈ (ಕುಪ್ಯಾಕಾ. ೩-೬೬). [ಸಂ.]

ಪ್ರಮಯೆ (ನಾ). ೧. ಮರಣ; ಸಾವು. ೨. ಕೊಲ್ಲುವುದು; ಕೊಲೆ:

"ಮಾರಣಂ . . . ಪ್ರಮಯೂ, ಹಿಂಸಾ . . . ಸಂಜ್ಞಪನಂ—ಈ ೨೧ ಕೊಲೆ" (ಕಠಾಹಯು. ೬೬-೩೨). ೩. ನಾಶ ; ಅಳಿವು. [ಸಂ. ಪ್ರಮಯ]

ಪ್ರಮಾಣ (ನಾ). ೧. (ಎತ್ತರ, ಉದ್ದ ಮತ್ತು ಅಗಲ ಇತ್ಯಾದಿಗಳ) ಅಳತೆ : "ಪ್ರಮಾಣ ಪವಣೆಂದಕ್ಕುಂ" (ಕವಿಕಂ. ೨೯೦) ; ಮಾನ್ಯದ ಭೂಮಿಯ ನಿವೇಶನದ ಪ್ರಮಾಣಮನ್ತೆನೆ (ಎಇ. XX. ೬-೦೬; 1012); ತಾರೆಕಾಯ ಪ್ರಮಾಣ ಗುಳಿಗೆಯಂ ಮಾಡಿ (ಹಳಕ್ಕ. ೩೮೩). ೨. ಎರಡು ಮೊತ್ತಗಳಿಗಿರುವ ಪರಸ್ಪರ ಭಾಜ್ಯ, ಭಾಜಕಸಂಬಂಧ : ಗಾತ್ರವು ಯಾವ ಪ್ರಮಾಣ (Ratio)ದಲ್ಲಿ ಹೆಚ್ಚುವುದೋ . . . ಒತ್ತಡವು ಅದೇ ಪ್ರಮಾಣದಲ್ಲಿ ಹೆಚ್ಚುತ್ತಡೆ(ಶಾಶಪ. ೨೯೨). ೩. ಮರ್ಯಾದೆ. ೪. ಯಥಾರ್ಥಜ್ಞಾನ ; ಸತ್ಯ : ಪ್ರಮಾಣಮಂ ಜ್ಞಾನಮೆಂಬುದು (ಕಸೂಟೀ. ೩೦); ದೂರತ್ವ ಸೂಕ್ಷ್ಮತ್ವ ಮೊದಲಾದ ವಿಷಯದೋಷಗಳು, ಕಾಚಕಾಮಲ ಅನವಧಾನ ನಿದ್ರಾ ಮೊದಲಾದ ಕರಣದೋಷಗಳು ಇಲ್ಲದಿರುವಾಗ, ಬರುವಂಥ ಜ್ಞಾನವು ಪ್ರಮಾಣವು (ಹಿಂದಶಾ. ೦೬೮). ೫. ವಿಧಿ; ನಿಯಮ. ೬. ಕಾರಣ ; ಹೇತು : ಜ್ಞಾನೋತ್ಪತ್ತಿ, ವ್ಯಾವಹಾರಾಶ್ರಯದ ಅಸಾಧಾರಣ ಹೇತುವೇ ಪ್ರಮಾಣವೆನ್ನಿಸಿಕೊಂಬುದು (ಪಪ್ರಕಿ. ೦೬) ೭. ವಸ್ತುವಿನ ಯಥಾರ್ಥಜ್ಞಾನವನ್ನು ಕೊಡುವ ಸಾಧನ ; ಆಧಾರ ; ಸಾಕ್ಷಿ ; ರುಜುವಾತು : ಸದ್ಗುರುವಿನ ವಚನ ಪ್ರಮಾಣಮೇ ಅಲ್ಲ (ಸಿದ್ಧಚಿ. ೨೦-೩೭); ಪರಮಾತ್ಮಸ್ವರೂಪವನ್ನು ತಿಳಿಸಲು ಶ್ರುತಿಗಿಂತಲೂ ಅಧಿಕವಾದ ಪ್ರಮಾಣವನ್ನು ನಾವು ಕಾಣಲಾರೆವು (ಶಕ್ತಿ. ೨೩). ೮. ಶಾಸ್ತ್ರ; ಆಗಮ . ೯. ಅಧಿಕೃತವಾಗಿ ತೀರ್ಮಾನ ಹೇಳುವವನು ; ತೀರ್ಪುಗಾರ. ೧೦. ಅವಧಿ; ಗಡುವು: ಯಶೋಭದ್ರೆಯ ಬೇಡಿದ ಮೋನದ ದಿವಸದ ಪ್ರಮಾಣಾವಸಾನದೊಳ್ . . . ಸುಕುಮಾರ ಸ್ವಾಮಿ ಕೇಳ್ದು ಜಾತಿಸ್ಮರನಾಗಿ (ವಡ್ಡಾರಾ. ೨೬-೬). ೧೧. [ಯೋಗ] ಐದು ಬಗೆಯ ಚಿತ್ತವೃತ್ತಿಗಳಲ್ಲಿ ಒಂದು : ಪ್ರಮಾಣ, ವಿಪರ್ಯಯ ವಿಕಲ್ಪ, ನಿದ್ರೆ ಸ್ಮೃತಿ—ಈ ಐದೂ ಅಂತಃಕರಣ ವೃತ್ತಿಗಳು (ಶಾರದ. ೦೨೭); ಅಬಾಧಿತವಾದ ಚಿತ್ತವೃತ್ತಿಗೆ ಪ್ರಮಾಣವೆಂದು ಹೆಸರು (ಹಿಂದಶಾ. ೦೦೩). ೧೨. [ನ್ಯಾಯಶಾ] ಹದಿನಾರು ಪದಾರ್ಥಗಳಲ್ಲಿ ಒಂದು : ನ್ಯಾಯದರ್ಶನದಲ್ಲಿ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ . . . ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದಶಾ. ೧೦೨). 'ಪ್ರಮಾಣಶಾಸ್ತ್ರ' ಪರಾ. ೧೩. ಸನ್ನಿಧಿ ; ಸಮೀಪ : "ಸಮಸ್ಥಾನ ಮುಂಜುಳಮುಂ ಕಾರಣ ನಿತ್ಯಶಾಸ್ತ್ರ ತಟ ಸತ್ಯಂ ಕೂಟಮುಂ ಧರ್ಮಮುಂ ವಿಳನುಂ ಸನ್ನಿಧಿಯುಂ ಪ್ರಮಾಣಮೆನಿಕುಂ" (ಪಾಪಾರ. ೦೪೦).

ಪ್ರಮಾಣ ಮಾಡು = (ಸಾಕ್ಷಿಯ ಎದುರು) ಆಣೆ ಮಾಡು : ಪ್ರಮಾಣ ಮಾಡಿಸಬೇಕಾದರೆ ಇದನ್ನು ಮುಟ್ಟಿ ಪ್ರಮಾಣ ಮಾಡಬೇಕು (ಪಪೂಕ್ಷ. ೦೦); ಅವರು ದೇವಸ್ಥಾನಕ್ಕೆ ಹೋಗಿ ಅಲ್ಲಿ ಪ್ರಮಾಣ ಮಾಡಬೇಕು (ಕ್ರಪಾಇ. II. ೪೬೪). **ಪ್ರಮಾಣವಾಗಿ ಹೇಳು** = ಆಣೆ ಮಾಡಿ ಹೇಳು: ಸುಳ್ಳು ಹೇಳಬೇಡ, ಪ್ರಮಾಣವಾಗಿ ಹೇಳಂ (ಕಾಪ). [ಸಂ.]

ಪ್ರಮಾಣಗ್ರಂಥ (ನಾ). ಆಧಾರಗ್ರಂಥ; ಅಧಿಕೃತವಾದ ಗ್ರಂಥ : ಕೆಲವೊಂದು ಪ್ರಮಾಣಗ್ರಂಥಗಳ ಕೊರತೆಯನ್ನು ಇಂದು ನಾವು ಅನುಭವಿಸುತ್ತಿದ್ದೇವೆ (ಪವ್ಯಕಾ. ೬) ; ಈ ವಿಷಯದಲ್ಲಿ ನಾವು ಅನೇಕ ಪ್ರಮಾಣಗ್ರಂಥಗಳನ್ನು ನಿರೀಕ್ಷಿಸಬಹುದು (ಕ್ರಾಏಶಾ. ೪ ಹನ್ನಿಕ). [ಸಂ.]

ಪ್ರಮಾಣತೆ (ನಾ). ಅಧಿಕಾರ ; ಪ್ರಭುತ್ವ : ಸರ್ವಜ್ಞಪ್ರಮಾಣತೆಯಿಂ ತತ್ಪ್ರಮಾಣಾಗಮದೊಳ್ ವೇಟ್ಟುದೆಲ್ಲಂ ಅವಶ್ಯಂ ತಪ್ಪುವುದಲ್ಲೆಂದು (ಅಪಕ್ಷ. ೯-೨೮ ವ). [ಸಂ. ಪ್ರಮಾಣತಾ]

ಪ್ರಮಾಣನ (ನಾ). ೧. ದೃಢೀಕರಿಸುವಿಕೆ; ಸಮರ್ಥನೆ : ರಚಿತವಾದ ರಾಜ್ಯದ ಯಾವುದಾದರೂ ವಿಧಿಯನ್ನು . . . ಅವರು ಅದನ್ನು ಪ್ರಮಾಣನ ಮಾಡುವುದಕ್ಕಾಗಿ ಒಪ್ಪಿಸಬಹುದು (ಶಾಶಾಪ. ೧೯). ೨. = ಪ್ರಮಾಣ ಪತ್ರ ೧ : ಅದರ ಮೇಲೆ ಲೋಕಸಭೆಯ ಅಧ್ಯಕ್ಷರವರ ಹಸ್ತಾಕ್ಷರ ಸಹಿತವಾಗಿ ಪ್ರಮಾಣನವು ಲಿಖಿತವಾಗಿರತಕ್ಕುದು (ಶಾಶಾಪ. ೩೬). [ಸಂ.]

ಪ್ರಮಾಣನಿರ್ಮಾಣ (ನಾ). [ಜೈನ] ಸ್ಥಾನನಿರ್ಮಾಣ, ಪ್ರಮಾಣ ನಿರ್ಮಾಣವೆಂಬ ಎರಡು ಬಗೆಯ ನಿರ್ಮಾಣನಾಮಕರ್ಮಗಳಲ್ಲಿ ಒಂದು; ಯೋಗ್ಯಪ್ರಮಾಣದಲ್ಲಿ ಇಂದ್ರಿಯಗಳೆನ್ನು ರಚಿಸುವಂಥದು : ನಿರ್ಮಾಣಂ ತದ್ವಿವಿಧಂ ಸ್ಥಾನನಿರ್ಮಾಣಂ ಪ್ರಮಾಣ ನಿರ್ಮಾಣಂ (ಗೊಕ್ಕ.ಜೀ. ೬-೪). [ಸಂ.]

ಪ್ರಮಾಣಪತ್ರ (ನಾ). ೧. ವಿಷಯವನ್ನು ರುಜುವಾತು ಪಡಿಸಲು ಲಿಖಿತದ ಮೂಲಕ ಸಮರ್ಥಿಸಿಕೊಳ್ಳುವ ಪತ್ರ ; ದೃಢೀಕರಣಪತ್ರ; ಆಧಾರಪತ್ರ : ಕಮಂಡಲಮುಂ ಪ್ರಮಾಣಪತ್ರಮುಂ ಸಹಿತ ಬಂದು ನಂಬಿಯಣ್ಣನ ಸಿಂಹಾಸನದ ಮುಂದೆ ನಿಲೆ (ಪಂಚಕ. ೬-೬೬); ಆಸ್ಪತ್ರೆಯಿಂದ ಪ್ರಮಾಣಪತ್ರವನ್ನು ಪಡೆದು ಹೆಂಡತಿಯ ಪರವಾಗಿ ತಾನೇ ಅರ್ಜಿಯನ್ನು ಬರೆದು (ಪಂಕಕ್ಕ. ೩೦೦). ೨. ಅರ್ಹತಾಪತ್ರ; ಯೋಗ್ಯತಾಪತ್ರ : ಅವನ ಪ್ರತಿಭೆಗೆ ಪಾಂಡಿತ್ಯಕ್ಕೆ ದೊರೆತ ಬಹುಮಾನ, ಪ್ರಮಾಣಪತ್ರಗಳೆಗಂತೂ ಲೆಕ್ಕವಿಲ್ಲ (ಹೂಕಕ್ಷ. ೩೭). [ಸಂ.]

ಪ್ರಮಾಣಪುರುಷ (ನಾ). ೧. ಯಾರ ನಿರ್ಧಾರದಲ್ಲಿ ನಂಬಿಕೆಯಿಂಟಾಗುವುದೊ ಅಂಥ ಪಾಂಡಿತ್ಯದ ಅಧಿಕಾರವುಳ್ಳ ವ್ಯಕ್ತಿ; ಆಧಾರವಾಗಿರಬಲ್ಲ ವ್ಯಕ್ತಿ : ಕೇಶರಾಜನು ತನ್ನ ವ್ಯಾಕರಣಗ್ರಂಥದಲ್ಲಿ 'ಸುಮಾರ್ಗವಿದಜೊಳ ಲಕ್ಷ್ಯಂ' ಎಂದು ಹೇಳಿದ ಪ್ರಮಾಣಪುರುಷರಲ್ಲಿ ಗುಣನಂದಿಯನ್ನು ಹೆಸರಿಸಿದ್ದಾನೆ (ಕಶಾಕ. ೧೬). ೨. ನ್ಯಾಯಾಧಿಕಾರಿ; ನ್ಯಾಯಾಧೀಶ; ತೀರ್ಪುಗಾರ. [ಸಂ.]

ಪ್ರಮಾಣಪೂರಣ (ನಾ). ಪರಿಮಾಣವನ್ನು ಸೂಚಿಸುವಿಕೆ; ವರ್ಗೀಕರಣ : ಅನೆಯ ಪ್ರತ್ಯಯಮನಿತಿನಿತೆನಿತೆಂಬ ಲಸತ್ಪ್ರಮಾಣಪೂರಣದೊಳ್ ನೆಟ್ಟನೆ ಸಂಖ್ಯಾಪೂರಣದೊಳ್ ಜನಿಯಿಪುದು ಮೆಯೆಂಬುದಕ್ಕುಮೆಣಿಸುವ ಸೂಟಿಯೊಳ್ (ಕಮದ. ೨೦೬). [ಸಂ.]

ಪ್ರಮಾಣವಚನ (ನಾ). (ಅಧಿಕಾರ ಸ್ವೀಕಾರದ ಪ್ರಾರಂಭದಲ್ಲಿ ಮಾಡುವ) ಪ್ರತಿಜ್ಞೆ ;ಆಣೆ : ಈ ಕಳಗೆ ಕಂಡ ಪ್ರಪತ್ರದ ಮೇರೆಗೆ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕಾರ ಮಾಡತಕ್ಕುದು (ಶಾಶಾಪ.೩೦): ವಧುಗಳಿಬ್ಬರೂ ಹೆಜ್ಜೆ ಹೆಜ್ಜೆಗೂ ನಿಂತು ಅಗ್ನಿ, ಸದಸ್ಸುಗಳ ಎದುರಿಗೆ ಪ್ರಮಾಣವಚನಗಳನ್ನಿತ್ತರು (ಶಾಂಕಶಾ. ೧೦೩). [ಸಂ.]

ಪ್ರಮಾಣವಾಕ್ಯ (ನಾ). ಆಧಾರಸಹಿತವಾದ ವಾಕ್ಯ; ಅಧಿಕಾರವಾಣಿ: ತಾನಾಡಿದುದು ಪ್ರಮಾಣವಾಕ್ಯ. ಅದಕ್ಕೆ ಯಾರೂ ಇದಿರಾಡಬಾರದು (ಕಕಂಶಾ. ೯೦). [ಸಂ.]

ಪ್ರಮಾಣವಾಚಕ (ನಾ). [ವ್ಯಾಕ] ಅನಿತು, ಇನಿತು, ಎನಿತು ಇತ್ಯಾದಿ ಪರಿಮಾಣವನ್ನು ಸೂಚಿಸುವ ಶಬ್ದ : 'ಪ್ರಮಾಣ ಸೂಚಕ' ಪರಾ. [ಸಂ.]

ಪ್ರಮಾಣಶಾಸ್ತ್ರ (ನಾ). ಸಾಕ್ಷಿ, ಆಧಾರಗಳಿಂದ ಪರೀಕ್ಷೆ ಮಾಡುವ ಶಾಸ್ತ್ರ; ನ್ಯಾಯಶಾಸ್ತ್ರ : ವೈಶೇಷಿಕವನ್ನು ಪ್ರಮೇಯಶಾಸ್ತ್ರವೆಂದೂ ನ್ಯಾಯವನ್ನು ಪ್ರಮಾಣಶಾಸ್ತ್ರವೆಂದೂ ಪರಿಗ್ರಹಿಸಿ ಒಂದು ಶಾಸ್ತ್ರವಾಗಿ ಪರಿಷ್ಕರಿಸಿರುವರು (ಹಿಂದಶಾ. ೦೦೦). [ಸಂ.]

ಪ್ರಮಾಣಶ್ರುತಿ (ನಾ). [ಸಂಗೀತ] ಶ್ರುತಿಯ ಏರಿಕೆಯ ಮೂರು ಹಂತಗಳಲ್ಲಿ ಒಂದು; ಶ್ರುತಿಯಲ್ಲಿರುವ ಪ್ರಮಾಣಶ್ರುತಿ, ನ್ಯೂನ ಶ್ರುತಿ ಮತ್ತು ಪೂರ್ಣಶ್ರುತಿ ಎಂಬ ಮೂರು ಬಗೆಯ

ಪ್ರಮಾಣಾಂತರಗಳಲ್ಲಿ ಒಂದು : ಈ ಪ್ರಮಾಣಾಂತರಗಳು ಕ್ರಮವಾಗಿ ಏರಿಕೆಯ ಕ್ರಮದಲ್ಲಿವೆ. ಇವುಗಳಲ್ಲಿ ಮೊದಲ ಹಂತ 'ಪ್ರಮಾಣಶ್ರುತಿ' (ಸಂಗೀತಂ.೯). [ಸಂ.]

ಪ್ರಮಾಣಸಪ್ತಭಂಗಿ (ನಾ). [ಜೈನ] ಪ್ರಮಾಣಸಪ್ತಭಂಗಿ ಮತ್ತು ನಯಸಪ್ತಭಂಗಿ ಎಂಬ ಎರಡು ಬಗೆಯ ಸಪ್ತಭಂಗಿಗಳಲ್ಲಿ ಒಂದು : "ಪ್ರಮಾಣಸಪ್ತಭಂಗಿಯೆಂದರೆ—ಒಂದು ಧರ್ಮವನ್ನು ತಿಳಿಸುವುದರ ಮೂಲಕ ನಿಯಮವಾಗಿ ಆ ಧರ್ಮದೊಡನೆ ಎಲ್ಲ ಧರ್ಮ ಸ್ವರೂಪವಾದ ವಸ್ತುವನ್ನು ಬೋಧಿಸತಕ್ಕ ವಾಕ್ಯ ಎಂದರ್ಥ" (ಭಾತತ್ತ್ವ. ೨೪೬). 'ನಯಸಪ್ತಭಂಗಿ' ಪರಾ. [ಸಂ.]

ಪ್ರಮಾಣಸಿದ್ಧ (ನಾ). ಆಧಾರಗಳಿಂದ ಸಾಧಿಸಿದುದು ; ದೃಢೀಕರಿಸಿದುದು : ಅದಱಿಂದಮಾತ್ಮವಚನಂ ಪ್ರಮಾಣಸಿದ್ಧಂಗಳಾಗಿ ಪದಾರ್ಥಂಗಳೆಲ್ಲಂ ಪ್ರತ್ಯಕ್ಷಂಗಳಲ್ಲದುವಿಲ್ಲ (ಶಾಂತಿಪು. ೦೯-೪೦ವ). [ಸಂ.]

ಪ್ರಮಾಣಸೂಚಕ (ನಾ). ಪರಿಮಾಣವನ್ನು ಸೂಚಿಸುವಂಥದು ; ಅಳತೆಯನ್ನು ತೋರಿಸುವಂಥದು : ಅನಿತಿನಿತುಯೆನಿತೆನೆ ಪ್ರಮಾಣ ಸೂಚಕಮಕ್ಕುಂ (ಕಬ್ಬಿಕೈ. ೬೦). [ಸಂ.]

ಪ್ರಮಾಣಸ್ವೀಕಾರ (ನಾ). (ಅಧಿಕಾರಸ್ವೀಕಾರದ ಪ್ರಾರಂಭದಲ್ಲಿ) ಪ್ರತಿಜ್ಞೆಯನ್ನು ಕೈಗೊಳ್ಳುವುದು : ಈ ದಿನ ಮಂತ್ರಿಗಳ ಪ್ರಮಾಣ ಸ್ವೀಕಾರ ಕಾರ್ಯಕ್ರಮವಿದೆ (ಕೂಢಿ). [ಸಂ.]

ಪ್ರಮಾಣಾಲಂಕಾರ (ನಾ). [ಕಾವ್ಯಮೀ] ಅನುಮಾನ, ಪ್ರತ್ಯಕ್ಷ ಮೊದಲಾದುವುಗಳನ್ನು ಬಳಸಿ ಮಾಡಿದ ಕಾವ್ಯಾಲಂಕಾರ : ರಸವದಾದಿ ಏಳು ಅಲಂಕಾರಗಳೂ, ಪ್ರತ್ಯಕ್ಷಾದಿ ಎಂಟು 'ಪ್ರಮಾಣಾಲಂಕಾರ'ಗಳೂ ವಸ್ತುತಃ ಅಲಂಕಾರಗಳೇ ಅಲ್ಲ (ಕೃಪಿಡಿ. ೨೫೦). [ಸಂ.]

ಪ್ರಮಾಣಿಕ$_1$ (ನಾ). [ಛಂದ] ಅನುಷ್ಟುಪ್ಪು ಛಂದಸ್ಸಿನ ಒಂದು ವೃತ್ತದ ಹೆಸರು : ಜರಂಲಗಂ ಪ್ರಮಾಣಿಕಂ (ಕೃಪಿಡಿ. ೭೯). [ಸಂ. ಪ್ರಮಾಣಿಕಾ]

ಪ್ರಮಾಣಿಕ$_2$ (ನಾ). ೧. ಅಳತೆಯಾಗಿರುವಿಕೆ. ೨. ಆಧಾರವನ್ನೊದಗಿಸುವಿಕೆ. ೩. ಒಂದು ಅಳತೆ; ಮೊಳ : "ಅಳೆವ ಮೊಟನು ಪ್ರಮಾಣಿಕಮೆನಿಕ್ಕು" (ಮಂಗರಾ.೯೫-೯). [ಸಂ.]

ಪ್ರಮಾಣಿಸು (ಕ್ರಿ). ೧. ಅಳೆ ; ತೂಕ ಮಾಡು : ಎಲ್ಲಾ ಲೋಕಮುಂ ಪದಿನಾಲ್ಕು ರಜ್ಜುವೆಂದು ಪ್ರಮಾಣಿಸುವುದಾಗದು (ಶಾಸ್ತ್ರಪೀ. ೧೦೦-೩). ೨. ಆಧಾರಸಮೇತವಾಗಿ ಪರೀಕ್ಷಿಸಂ; ಪರಿಶೀಲಿಸಂ : ಪ್ರತ್ಯಕ್ಷಮಿರೆ ಪ್ರಮಾಣಿಸಿ ನೋಡಬೇಕೆಂಬುದತ್ಯಧಿಕ ನೀತಿಶಾಸ್ತ್ರಮದು (ತಬಪು. ೪-೨೬); ಇದನ್ನು ಪ್ರಯೋಗಪರೀಕ್ಷೆಯಿಂದ ಪ್ರಮಾಣಿಸಿ ನೋಡಿರುವೆನು (ಏಕಾಸ. ೨೯) ; ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು (ಗಾದೆ). ೩. ಅರಿ ; ತಿಳಿ : ಕೃಷಿಯ ಮಾಡುವಾಗ ಪಶುಪತಿಗೆಂದೇ ಪ್ರಮಾಣಿಸಿ . . . ಮಾಡುತಿಪ್ಪ ಭಕ್ತನ ಅಂಗಳವೇ ವಾರಣಾಸಿ (ಮೋಳಿಮಾ. ೦೫-೫೭). ೪. ರುಜುವಾತು ಮಾಡು : ಶಿವಂ ಶಿವಂಕರನೆಂಬುದಂ ಪ್ರಮಾಣಿಸಿ ತನ್ನಿಗಮಭಕ್ತಿಯಂ ಉರ್ವಿಯೊಳ್ ಪ್ರಕಟೀಕರಿಪೆನು (ಪದ್ಮರಾ. ೧-೯) ; ಈ ಮಾತನ್ನು ಅವಳು ಪ್ರಮಾಣಿಸಿ ಕೊಡದೆ ಬಿಡತಕ್ಕವಳಲ್ಲ (ಇಪ್ಪಳ. ೨೫೦). [ಪ್ರಮಾಣ + — ಇಸು$_3$]

ಪ್ರಮಾಣು (ನಾ). ೧. ಅಳತೆ ; ಪ್ರಮಾಣ : ನಾಯಕವಾಡಿಗಳು ಪೂರ್ವ ಭೊ × ಹಾನುಭವಿಸಿ ಬಹ ಹುಟ್ಟುವಳಿ × ಕು ಪ್ರಮಾಣು ಹೊಂನು (ಎಕ. VII, ಶಿವಮೊ. ೭೧-೨೬ ; 1431) ; ಯಿ ಪ್ರಮಾಣಿನ ಉಂಬಳಿಯ ಸರ್ವಮಾನ್ಯದ ಗ್ರಾಮವನೂ ನಡಸಿ ಬಾರದೆ ಆರೊಬ್ಬರು ಅಳುಪಿದರೆ ವಾರಣಾಸಿಯಲಿ ತಮ್ಮ ತನ್ದೆ ತಾಯನೂ ಗೋವು ಬ್ರಾಂಹ್ಮರನು ಕೊನ್ದ ಪಾಪಕೆ ಹೋಹರು (ಎಕ. XIV, ಗುಂಡ್ಲುಪೇ. ೦೩೨-೧೪ ; 1540). ೨. ಸಾಕ್ಷಿ ; ಆಧಾರ : ಆಚಾರವೇ ಸ್ವರ್ಗ ಅನಾಚಾರವೇ ನರಕ ಕೂಡಲಸಂಗಮದೇವಾ ನೀವೆ ಪ್ರಮಾಣು (ಬಸವ. ೨೫೯) ; ಭೃತ್ಯಾಪರಾಧ ಸ್ವಾಮಿನೋ ದಂಡ ಕೂಡಲಸಂಗಮದೇವಾ ನೀವೇ ಪ್ರಮಾಣು (ಬಸವ. ೩೪೦). [<ಸಂ. ಪ್ರಮಾಣ]

ಪ್ರಮಾತ (ನಾ). [ತರ್ಕಶಾ] ಯಥಾರ್ಥಜ್ಞಾನವನ್ನು ಉಂಟು ಮಾಡುವವನು ; ನಿಶ್ಚಿತಜ್ಞಾನವನ್ನು ಕೊಡುವವನು : ಪ್ರಮಾಣವೆಂದರೆ ಪ್ರಮೆಗೆ ಸಾಧನ, ಪ್ರಮೆಯೆಂದರೆ ಯಥಾರ್ಥಜ್ಞಾನ, ಇದಕ್ಕೆ ಆಶ್ರಯನಾಗಿರುವವನು ಪ್ರಮಾತ (ಹಿಂದಣಾ. ೦೩೨). [ಸಂ. ಪ್ರಮಾತೃ]

ಪ್ರಮಾತೃ (ನಾ). = ಪ್ರಮಾತ: ಅಱಿಯಲ್ಪಡುವದೆ ನೀನಱಿ ಸುಪ್ರಮೇಯಾಖ್ಯವಱಿವಾತನಾ ಪ್ರಮಾತೃವೆನಿಕ್ಕು (ಪರಬೋ. ೩-೦೭-೪); ಪ್ರಮಾತೃ ಎಂದರೆ ಸರಿಯಾದ ತಿಳಿವಳಿಕೆಯನ್ನು ಸಂಪಾದಿಸುವುದಕ್ಕೆ ಪ್ರಮಾಣಗಳನ್ನು ಉಪಯೋಗಿಸುವವನು (ಬ್ರಹ್ಮಶಾ. ೨-೨೫). [ಸಂ.]

ಪ್ರಮಾತೃತ್ವ (ನಾ). ಯಥಾರ್ಥಜ್ಞಾನದ ಅರಿವನ್ನು ಹೊಂದಿರುವ ಸ್ಥಿತಿ : ಇದಿಷ್ಟೂ ಆಗದಿದ್ದರೆ ಯಾವುದರ ಸೋಂಕೂ ಇಲ್ಲದ [ಅಸಂಗಸ್ಯ] ಆತ್ಮನಿಗೆ ಪ್ರಮಾತೃತ್ವವು ಕೂಡುವುದಿಲ್ಲ (ಬ್ರಹ್ಮಶಾ. ೫). [ಸಂ.]

ಪ್ರಮಾಥಿ (ಗು). ೧. ಕಲಕಂವ ; ಕದಡುವ. ೨. ಒಡೆಯುವ ; ಸೀಳುವ. ೩. ದುಃಖ ಕೊಡುವ ; ಸಂಕಟವನ್ನುಂಟು ಮಾಡುವ. ೪. ಕೊಲ್ಲುವ; ವಧಿಸುವ. (ನಾ). ೫. ಕೊಲ್ಲುವವನು; ನಾಶಪಡಿಸುವವನು. [ಸಂ. ಪ್ರಮಾಥಿನ್]

ಪ್ರಮಾದ (ನಾ). ೧. ಅಲಕ್ಷ್ಯ; ಅನಾದರ. ೨. ಗಮನವಿಲ್ಲದಿರುವಿಕೆ; ಅಜಾಗರೂಕತೆ; ಎಚ್ಚರಗೇಡಿತನ : "ಪ್ರಮಾದಃ, ಅನವಧಾನಂ— ಈ ೨ ಮಱಹು" (ಹಲಾಯು. ೦೨೪-೬೯); "ಅನವಧಾನಮಾ ಪ್ರಮಾದ ಮೆನಲ್ಕೆ ಮೈಮಱಹು" (ಮಂಗರಾ. ೦೩೩-೩೯). ೩. ಹಂಚ್ಚು ; ಉನ್ಮಾದ. ೪. ತಪ್ಪು ; ದೋಷ ; ಅಪರಾಧ : ಧರ್ಮಾರ್ಥಂಗಳಿಂಗೆ ಕಾಮಂ ಪ್ರತಿಕೂಲಮಾ ಕಾಮಮಂ ನಿಲಿಸುವಡೆ ಪಿರಿದುಂ ಪ್ರಮಾದಮಗ್ರಾಹ್ಯಮ ವಿಶ್ವಾಸಂ (ಮದಶಿ. ೦-೫೮ ವ); ಆ ರಾಮಯತಿಪತಿ... ಗುಪ್ತಿಗಳಂ ಪಾಲಿಸಿ ಪಂಚಮಹಾವ್ರತಲೀಲೆಯಿನೆಸೆದಂ ಪ್ರಮಾದಮಿಲ್ಲೆಂಬಿನೆಗಂ (ಪಂರಾಮಾ. ೦೬-೫೯); ಏನೋ ಪ್ರಮಾದವಾಯಿತು ನನ್ನಿಂದ ಎಂಬ ಭಯವಾಗಿ ನೆಟ್ಟಗೆ ಮನೆಗೆ ಹೋದೆ (ಮೂಳಿಸ್ಟ. ೦೦). ೫. ಕೆಡುಕು; ಅಪಾಯ; ಆಪತ್ತು : ರಾಮಲಕ್ಷ್ಮಣರ ದೆಸೆಯಿಂ ಕೂಸುಗಳ್ಗೆ ಪ್ರಮಾದಮಕ್ಕುಂ (ಪಂರಾಮಾ. ೦೬-೯ ವ); ಪರಮ ಪರಮಾ ನಂಬಲಾಱೆನು ಕೊರಳ ಗರಳವದಿ ನಿತಿನಿತು ವೊತ್ತರಿಸಿ ನಿಮ್ಮುದರದೊಳಗಿಳಿದಡತಿಪ್ರಮಾದವಲ (ಬಸಪು. ೦೩-೦೩); ಉಚ್ಚಬೃಂಹಿತನಾದಮಮರಪ್ರಮಾದಮುನ್ನತಕರಂ ಭೀಕರಂ . . . ಎನಲ್ಕಾ ಮಷ್ಟಗಜದದ್ಭುತಾಕೃತಿಯ ಬಣ್ಣಿಸುವೊಡಹಿಪತಿಗೆ ಸಾಧ್ಯಮಲ್ತು (ತಬಪು. ೨೯-೬). ೬. [ಜೈನ] ಸ್ತ್ರೀಕಥೆ, ಭೋಜನಕಥೆ, ರಾಷ್ಟ್ರಕಥೆ, ಅವನೀಪಾಲಕಥೆ ಎಂಬ ನಾಲ್ಕು ವಿಕಥೆಗಳು, ಕ್ರೋಧ, ಮಾನ, ಮಾಯೆ, ಲೋಭ ಎಂಬ ನಾಲ್ಕು ಬಗೆಯ ಕಷಾಯಗಳು, ಸ್ಪರ್ಶೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಕರ್ಣೇಂದ್ರಿಯ ಎಂಬ ಐದು ಇಂದ್ರಿಯಗಳು, ನಿದ್ರೆ ಮತ್ತು ಸ್ನೇಹ—ಹೀಗೆ ಹದಿನೈದು ಬಗೆಯ ದೋಷಗಳು: ಹದಿನೈದುತೆಱದ ಪ್ರಮಾದದಿಂ ಚಿಲ್ವಾದ ವಿದಿತ ಹುಲಿಯ ಮುಖಗಳನು ತುದಿಮೊದಲಾಗಿ ಬಣ್ಣಿಸುವೊಡೆಮಗೆ ತೋಱದಧಮಮತಿಗೆ ಗೋಚರವೆ (ತ್ರಿಪುಸಾಂ. ೪-೪೩). 'ಪಂಚದಶಪ್ರಮಾದ' ಪರಾ. ೭. ಜೀವನಿಗೆ ಉಂಟಾಗುವ ಮಿಥ್ಯಾದರ್ಶನ, ಅವಿರತಿ, ಪ್ರಮಾದ, ಕಷಾಯ

ಮತ್ತು ಯೋಗಗಳೆಂಬ ಐದು ವಿಧವಾದ ಸಂಸಾರಸ್ವರೂಪ ಭೇದಕ್ಕೆ ಬಂಧಹೇತುವಾಗಿರುವಂಥದ್ದರಲ್ಲಿ ಒಂದು ; ಭಾವಶುದ್ಧಿ ಮೊದಲಾದ ಎಂಟು ಶುದ್ಧಿಗಳು ಹಾಗೂ ದಶಧರ್ಮಗಳಲ್ಲಿ ಉಂಟಾಗುವ ಉತ್ಸಾಹರಾಹಿತ್ಯ : ವಿಪ್ರಾದರ್ಶನಾವಿರತಿಪ್ರಮಾದ ಕಷಾಯಯೋಗೋಪಾರ್ಜಿತಜ್ಞಾನಾವರಣೀಯಾದಿ ಕರ್ಮಂಗಳ್ ಸಂಸಾರಕಾರಣಂಗಳನಾದಿ ಬಂಧನಬದ್ಧದ್ರವ್ಯಭಾವಕರ್ಮವಿಗಮದಿನತಂನ ಜ್ಞಾನಾದಿ ನಿಜರೂಪಮಂ ಪಡೆವುದು ಮುಕ್ತಿ (ಜೀವಕ. ೦೦-೬೬ ಪ) ; ವಿಪ್ರಾದರ್ಶನಾವಿರತಿಪ್ರಮಾದಕಷಾಯಯೋಗಂಗಳೆಂಬ ಬಂಧಹೇತುಗಳಂ ಪರಿಹರಿಸುತ್ತಂ (ಜೀಪ್ರ. ೬-೬ ಪ) ; ವಿಪ್ರಾದರ್ಶನ ಅವಿರತಿಪ್ರಮಾದ ಕಷಾಯ ಯೋಗಗಳು ಬಂಧಹೇತುಗಳು (ಪಂಪಾ. ೧೯). ೮. ಆತ್ಮಾಕಾರವಾಗದೆ ಸ್ತಬ್ಧವಾಗಿದ್ದ ಮನಸ್ಸನ್ನು ಆತ್ಮಾಕಾರವಾಗಿ ಮಾಡುವುದಕ್ಕೆ ಉಂಟಾಗುವ ಹತ್ತು ಬಗೆಯ ವಿಘ್ನಗಳಲ್ಲಿ ಒಂದು ; ಪ ಆಲಸ್ಯ, ರೋಗ, ದುಃಖತ್ರಯಗಳು (ಶರೀರದಲ್ಲಿ ಹುಟ್ಟಿದ ಆಧ್ಯಾತ್ಮಿಕ, ಇತರ ಪ್ರಾಣಿಗಳಿಂದುಂಟಾಗುವ ಆಧಿಭೌತಿಕ, ಪಂಚಭೂತಗಳಿಂದುಂಟಾಗುವ ಆಧಿದೈವಿಕ) ಸಂಶಯ, ಪ್ರಮಾದ (ತಪ್ಪು), ಅನವಸ್ಥೆ (ದೃಢವಾಗಿಲ್ಲದಿರುವಿಕೆ ಅಥವಾ ಒಂದಕ್ಕೊಂದು ಕಾರಣವಾಗುತ್ತ ಕೊನೆಯಿಲ್ಲದಿರುವಿಕೆ), ಅದು ಎಂದರೆ ತನಗಿಂತ ಭಿನ್ನವಾದುದು ತತ್ತ್ವವೆನ್ನುವುದು, ಒಂದೇ ಮನಸ್ಸಿನಿಂದ ವಿಷಯಚಿಂತನೆ, ದರ್ಶನಭ್ರಾಂತಿ (ಭ್ರಾಂತಿದರ್ಶನ ಎಂದರೆ ಬೇರೆ ತಿಳಿಯುವುದು), ಅಶ್ರದ್ಧೆ—ಹೀಗೆ ಹತ್ತು ಬಗೆಯ ವಿಘ್ನಗಳಿವೆ : ತನಯ ಕೇಳಾಲಸ್ಯರೋಗಗಳನುಗಶದ ದುಃಖತ್ರಯಂಗಳು ಮನದಲುದಿಸಿದ ಸಂಶಯಪ್ರಮಾದಗಳು . . . ದರುಶನಭ್ರಾಂತಿಯಶ್ರದ್ಧೆಗಳು ವಿಘ್ನಗಳು (ಜಜ್ಜುತ. ೬-೧೮). [ಸಂ.]

ಪ್ರಮಾದಚರಿತ (ನಾ). [ಜೈನ] ಅಪಧ್ಯಾನ, ಪಾಪೋಪದೇಶ, ಪ್ರಮಾದಚರಿತ, ಹಿಂಸಾಪ್ರದಾನ ಮತ್ತು ಅಶುಭಶ್ರುತಿ ಎಂಬ ಐದು ಬಗೆಯ ಅನರ್ಥದಂಡಗಳಲ್ಲಿ ಒಂದು; ಅವಶ್ಯವಿಲ್ಲದೆ ನೆಲವನ್ನು ಅಗೆಯುವುದು, ಗಿಡಗಳನ್ನು ಕಡಿಯುವುದು ಇವೇ ಮುಂತಾದ ಅನ್ಯರಿಗೆ ಹಾನಿಯನ್ನು ಉಂಟುಮಾಡುವಂಥ ಕಾರ್ಯ : ಅಪಧ್ಯಾನಂ ಪಾಪೋಪದೇಶಂ ಪ್ರಮಾದಚರಿತಂ ಹಿಂಸಾ ಪ್ರದಾನಮಶುಭಶ್ರುತಿಯೆಂದು ನಿರರ್ಥಕಪಾಪಹೇತುಭೂತಾನರ್ಥದಂಡಂ ಐದುತಱಂ (ಕಕ್ರ.ಶ್ರ. ೨೭೬). [ಸಂ.]

ಪ್ರಮಾದಚರ್ಯೆ (ನಾ). =ಪ್ರಮಾದಚರಿತ : ಪಾಪೋಪದೇಶ, ಹಿಂಸಾದಾನ, ಅಪಧ್ಯಾನ, ದುಃಶ್ರುತಿ ಮತ್ತು ಪ್ರಮಾದಚರ್ಯೆ—ಹೀಗೆ ಐದು ಅನರ್ಥದಂಡದ ಭೇದಗಳೆಂದು ಗಣಧರ ಮೊದಲಾದವರು ಹೇಳಿದ್ದಾರೆ (ಶ್ರಾಪ್ರಕಾ. ೦೮೩-೬೩ ೨೯೯); ಪ್ರಮಾದಚರ್ಯೆ :—ಅವಶ್ಯವಿಲ್ಲದೆ ನೆಲವನ್ನು ಅಗೆಯುವುದು . . . ಬೆಂಕಿಯನ್ನು ಉರಿಸುವುದು ಮೊದಲಾದ ಕೆಲಸಗಳನ್ನು ಮಾಡಬಾರದು (ಕ್ರಿಕೆ. ೧೬೯). [ಸಂ. ಪ್ರಮಾದಚರ್ಯಾ]

ಪ್ರಮಾದಫಲಕ (ನಾ). ಜಲಪ್ರಯಾಣದಲ್ಲಿ ಅಪಾಯ ಸಂಭವಿಸಿದಾಗ ಜೀವವನ್ನು ರಕ್ಷಿಸುವಂಥ ಹಲಗೆ; "ಹಡಗಿನೆಲ್ಲಿ ಸಮುದ್ರ ಪ್ರಯಾಣ ಮಾಡುವಂದು ಯಾವುದಾದರೂ 'ಪ್ರಮಾದ' ಸಂಭವಿಸಿ, ಹಡಗು ಒಡೆದು, ಪ್ರಯಾಣಿಕರು ನೀರುಪಾಲಾಗ ಬೇಕಾದ ಅಪಾಯಸಂಭವವು ಒದಗಿದಾಗ, ಜೀವವನ್ನು ಸಂರಕ್ಷಿಸಿ ಕೊಳ್ಳಲಂ ಉಪಯೋಗಿಸುವ ಫಲಕ (ಹಲಗೆ)" (ಕಪಾಂ. ೨-೩೬ ಪಠ್ಯ): ಪತ್ತಿ ಪ್ರಮಾದಫಲಕಮನತ್ಯುಗ್ರಾಹನವಹಸಂಕ್ಷೋಭಿತದೊಳ್ ಮತ್ತೀ ರತ್ನಾಕರದೊಳ್ ಪ್ರತ್ರಿಕೆಯನೆ ಬಟ್ಟುಸಿಂತು ದಾಟ್ವುದೆ ಚೋದ್ಯಂ (ಕಪಾಂ. ೨-೩೬). 'ಪ್ರಮಾದವಲಗೆ' ವರಾ. [ಸಂ.]

ಪ್ರಮಾದವಲಗೆ (ನಾ). =ಪ್ರಮಾದಫಲಕ : ಯಮನೆಂಬ ಸೋರೆ ಮೊಗಂ ನುಂದು ಮುಟ್ಟುಗಿಸಲ್ಬನ್ನಜಳಧಿಯೊಳ್ ದೇಹಬಹಿತ್ರಮದೊಡೆಯೆ ಜೈನಮೆಂಬಾ ಪ್ರಮಾದವಲಗೆಯನೆ ಪಿಡಿಯದಪನಡಿಗಿಟ್ಟಿಗುಂ (ಶಶುಶ. ೦೩-೬೩); ರಂಡಿದೇನಸದುದ್ಯಮಂ ನಿಲ್ಲಿಮೆಂದಲ್ಲಿ ಸೆಜಗೆಯ್ದು ಪ್ರಮಾದವಲಗೆಯನತಿವೇಗದಿಂ ತಂದು ಸಾರ್ಚಿ ಚ್ಚಾರುದತ್ತನೇಜಿ ನೂಂಕುವುದುಂ (ಪೀಚುಪು. ೪-೭೪ ಪ). [ಪ್ರಮಾದ + ವಲಗೆ]

ಪ್ರಮಾದಿ (ಗು). ೧. ಅಲಕ್ಷ್ಯದಿಂದ ಕೂಡಿರುವ; ಗಮನವಿಲ್ಲದ. ೨. ಪಾನಮತ್ತನಾದ; ಅಮಲೇರಿದ. (ನಾ). ೩. ಮರುಳ; ಹುಚ್ಚ : ಅವರಿಗುರುವಾಣಿ ಮುದಿರಾಪ್ರಮತ್ತ ವಾಣೀಸಮಾನಮುನ್ಮತ್ತವಚಃ ಸಮುಮಂಕಲ್ಲದೊಡೆಂತೀ ಪ್ರಮಾದಿ ಚಾರ್ವಾಕನೆಂಬ ಪೆಸರಂ ಪಡೆಗುಂ (ಶಾಂಶಿ. ೬-೦೩೬); ಭೈತ್ರಮನೇಱಿದರ್ ಸಡಿಲ್ದ ಬಂಧಂಗಳರಿ ಬಿಗಿಯದಿರ್ದೊಡಂ ಅಱಿವನೊಳಕೊಂಡವರ್ ಪ್ರಮಾದಿಗಳಾಗದಿರ್ದೊಡಂ ಅವರ್ ಸಮುದ್ರದೊಳಗಬ್ದ(ದೇವ)ರ್ ಇವರ್ ಸಂಸಾರಸಮುದ್ರದೊಳಗೆಬ್ಬರ್ ಎಂಬುದೇ ವಿಸ್ಮಯಮೆ (ಪೀಪಾಂ.೦೩೩-೦೦೪). ೪. ಅರುವತ್ತು ಸಂವತ್ಸರಗಳಲ್ಲಿ ಹದಿಮೂರನೆಯ ಸಂವತ್ಸರದ ಹೆಸರು : ಆ ವರುಷವೇ ಪ್ರಭವ ವಿಭವ ಶುಕ್ಲ ಪ್ರಮೋದೂತ . . . ಪ್ರಮಾದಿ [ಜಾಣಾ. ೫] ವಿಕ್ರಮ ... ಕ್ರೋಧನ ಅಕ್ಷಯವೆಂದಱವತ್ತುತೆಱನಾಗಿಹುದು (ಜಪೀಗೀ. ೩೨). ೫. ೪ : ಮನೆ ಸಲೆ ಹೇವಿಳಂಬಿ . . . ಮೈದುನನೆ ೀರಂ ಪ್ರಮಾಥಿ [೮] ನಿಜವಲ್ಲಭೆ ದುರ್ಮುಖಿಯೆಂದೊಡೆನ್ನ ವೆಂಪಿನ ವಿಭವಂ ಪ್ಲವಂಗದ ವೊಲಾದುದು ಮನ್ಮಥಚಿತ್ರಧಾನುವಿಂ (ಸೂಪ್ರಸಂ. ೬-೪೩೬).

[ಸಂ. ಪ್ರಮಾದಿನ್]

ಪ್ರಮಾಪಣ (ನಾ). ಕೊಲೆ; ವಧೆ: "ಮಾರಣಂ, ನಿಶರಣಂ . . . ಪ್ರಶಮನಂ, ಪ್ರಮಾಪಣಂ, ವರ್ಜನಂ . . . ಹಿಂಸಾ, ಸಂಜ್ಞಪನಂ—ಈ ೨೧ ಕೊಲೆ" (ಹಂಗಡಿಯು.೬೬-೬೩೬); "ವಿಶಸನಂ ಸೂದನಂ ಮಾರಣಂ ಘಾತನಂ . . . ಪ್ರಮಾಪಣಂ ಕೊಲೆಗೆ ನಾಮಂ" (ಭುಂಗಣಾ. ೦೮-೬೯). [ಸಂ.]

ಪ್ರಮಾರ್ಜನ (ನಾ). ೧. ತೊಳೆಯುವಿಕೆ; ಶುಚಿಗೊಳಿಸುವಿಕೆ. ೨. ಒರಸುವುದು; ತೊಡೆಯುವಿಕೆ. ೩. ನಿವಾರಣೆ; ಪ್ರಾಯಶ್ಚಿತ್ತ : "ಪ್ರಾಯಶ್ಚಿತ್ತ, ಪ್ರಮಾರ್ಜನ" (Atonement. ಪಾಅಕೋ. ೬). [ಸಂ.]

ಪ್ರಮಾರ್ಜಿತ (ಗು). ೧. ಒರಸಿದ. ೨. ನಿವಾರಿಸಿದ; ಹೋಗಲಾಡಿಸಿದ: "ವೃಷ್ಣಂ ಪ್ರಮಾರ್ಜಿತಂ" (ಜಚ್ಚು.ಕೋ. ೦೦೬-೩೦). [ಸಂ.]

ಪ್ರಮಾಳೆ (ನಾ). (?) : ಯಿ ಧರ್ಮ್ಮ ಪ್ರಮಾಳೆ ಹಲಡಣ ಹಾವಾಳ ಯಿ ಧರ್ಮ್ಮವಂನು ಆರು ವುಂಬರು ಲರಿ ಎಂದರೆ ದಕ್ಷಿಣವಾರಣಾಸಿಯಲಿ ಕಪಿಲೆಯ ಕೊನ್ದ ಪಾಪಕೆ ಹೋಹನು (ಎಳ XIV. ಕಿಬಹು. ೨೧೬-೬; ?).

[?]

ಪ್ರಮಿತ (ಗು). ೧. ಪ್ರಮಾಣಕ್ಕೆ ತಕ್ಕ; ಅಳತೆಗೆ ಒಳಪಟ್ಟ : ಸಪ್ತಸಾಗರಪ್ರಮಿತಜೀವಿತನುಂ ಲಬ್ಧಾವಧಿಲೋಚನನುಮಾಗಿ (ಆಪ್ತ. ೨-೦೯ ಪ). ೨. ಚೆನ್ನಾಗಿ ತಿಳಿದ, — ಗ್ರಹಿಸಿದ. ೨. ಮಿತಿಗೆ ಒಳಪಟ್ಟ; ಪರಿಮಿತವಾದ : ಅಡಗಿತೀತನ ಕೋಪಮಸು ಸಿಡಿದೊಡಲಿನ ಸುರನ ಕಾಣುತೆಡೆಯಲಿ ಮಿಡುಕಿನಂಶಾಂಶ [ಕಾಣಂ. ೫] ಪ್ರಮಿತದಸುವಱೞೆ ಗುಡದಂತೆ (ಕೂಹಾ. ೬-೨೯-೬೨). ೪. ಎಲ್ಲರಿಗೂ ತಿಳಿದಿರುವ; ಪ್ರಸಿದ್ಧವಾದ : ಭಕ್ಷೀಪದಂಶಪ್ಕೃತಿತನಿಚಯಹೃದ್ಯದಿಂ ವರ್ತಿಕಾರತ್ನ ಪ್ರಮಿತದೀಪ್ತದೀಪದಿಂ (ಹಂದ್ರಕೃ. ೬-೦೦೦ ೮೧೪). (ನಾ). ೫. ಅಳತೆಯುಳ್ಳದು : ನಿರ್ಮಿರ್ದ ಚತುರ್ದಶರಜ್ಜುಪ್ರಮಾಣಮಿರ್ದಪುದು ಸಯ್ದು ಧೋಲೋಕಂ ಮಧ್ಯಮಲೋಕಮೂರ್ಧ್ವಲೋಕಂ ಕ್ರಮದಿಂ ತ್ರಸನಾಳ ವೇಕರಜ್ಜುಪ್ರಮಿತಂ (ಆಪ್ತ. ೬-೩೬). ೬. ಮಿತಿಗೆ ಒಳಪಟ್ಟುದು; ಪರಿಮಿತವಾದುದು : ಅದೆಂದರೆ—ಜೀವನ, ವಿಷಯ ಮತ್ತು ಭಾವ

ಗಳೊಡನೆ ಸ್ಫುಟವೂ ಪ್ರಮಿತವೂ ಆದ ರೀತಿಯಿಂದ ವ್ಯವಹರಿಸುವುದು (ಪಕ್ಷಿ. ೦೦೭). ೭. [ಸಂಗೀತ] ಇಪ್ಪತ್ತೆರಡು ಶ್ರುತಿಗಮಕಗಳಲ್ಲಿ ಒಂದು : ಸ್ಫುರಿತ ಪ್ರಮಿತ ದೀರ್ಘ. . . ಕೋಮಲವೆಂಬ ಇಪ್ಪತ್ತೆರಡೇ ಶ್ರುತಿಗಮಕಗಳೆಂತಲುಂ (ಏಕೇಶ. ೨೩೨). 'ಶ್ರುತಿ' ಪರಾ. [ಸಂ.]

ಪ್ರಮಿತಾಕ್ಷರ$_1$ (ನಾ). [ಛಂದ] ಜಗತೀಛಂದಸ್ಸಿನಲ್ಲಿ ಪ್ರತಿಯೊಂದು ಸಾಲಿನಲ್ಲಿಯೂ ಹತ್ತು ಅಕ್ಷರಗಳಿರುವ ಒಂದು ಅಕ್ಷರವೃತ್ತದ ಹೆಸರು: ೧೨ನೆಯ ಜಗತಿಯಲ್ಲಿ . . . ಪ್ರಮಿತಾಕ್ಷರಂ ಸಜಸಸಂಗಳಿರಲ್ (ಕೃಷ್ಣ. ೬೦). [ಸಂ. ಪ್ರಮಿತಾಕ್ಷರಾ]

ಪ್ರಮಿತಾಕ್ಷರ$_2$ (ನಾ). ಮಿತವಾದ ಮಾತು ; ಮಿತಭಾಷಣ: ಕಮನೀಯವಿಭ್ರಮಗುಣಾನ್ವಿತೆಯರ್ ಪ್ರಮಿತಾಕ್ಷರಾಭರಣಭೂಷಿತೆಯರ್ ತಮರೂರ್ಗೆವೋಪ ಬಲಜಾಂಗನೆಯರ್ ಕಮಲೋದರರುಗೆ ಪಡೆದರ್ ಮುದಮಂ (ಶಾಸ್ತ್ರಾ. ೭೨). [ಸಂ.]

ಪ್ರಮಿತಿ (ನಾ). ೧. ಅಳತೆ; ಪ್ರಮಾಣ : ಒಸೆದಱುದಿಂಗಳ್ವರಂ ಪಂಚರತ್ನೋತ್ಕರದಿಂ ಸಾರ್ದ ತ್ರಿಕೋಟಿಪ್ರಮಿತಿಯ ಮಱೆಯಂ ಪಣ್ಣಿದಂ ಲೋಕಪಾಳಂ (ಶಾಂತಿಪು. ೯-೦೬೨). ೨. [ವೇದಾಂತ] (ಪ್ರತ್ಯಕ್ಷಾದಿ ಪ್ರಮಾಣಗಳಿಂದ ಉಂಟಾದ) ನಿಶ್ಚಿತಜ್ಞಾನ ; ಸರಿಯಾದ ತಿಳಿವು ; ಯಥಾರ್ಥಜ್ಞಾನ : "ಪ್ರಮಿತಿಃ, ಪ್ರಮಾ—೨ ನಿಜವಾಗಿ ತಿಳಿಯುವಿಕೆ ; ಯಥಾರ್ಥಜ್ಞಾನ, ಪ್ರಮಾಣಜನ್ಯಜ್ಞಾನ, ಯಥಾರ್ಥಾನುಭವ" (ಸಿದ್ಧಾಂತ. ೩೫೬); ಪ್ರಮೆ ಎಂದರೆ ಸರಿಯಾದ ಅನುಭವ. ಇದನ್ನು ಪ್ರಮಿತಿ ಎಂದೂ ಕರೆಯುವರು (ಬ್ರಹ್ಮಶಾ. ೨-೨೫). ೩. ಯಥಾರ್ಥಜ್ಞಾನವನ್ನುಂಟು ಮಾಡುವ ಉಪಾಯ; ಪ್ರಮಾಣ. [ಸಂ.]

ಪ್ರಮಿತ್ರ (ಗು). ೧. ಮರಣ ಹೊಂದಿದ ; ಸತ್ತ. (ನಾ). ೨. ಯಜ್ಞದಲ್ಲಿ ಬಲಿ ಕೊಟ್ಟ ಪಶು : "ಪ್ರಮಿತಃ, ಉಪಸಂಪನ್ನಃ, ಪ್ರೋಕ್ಷಿತಃ—ಇನ್ನು, ಹತೇ—ಯಜ್ಞದಲ್ಲಿ ಕೊಲ್ಲಲ್ಪಟ್ಟ ಪಶು ಮುಂತಾದವುಗಳ ಹೆಸರುಗಳು" (ಸಿದ್ಧಾಂತ. ೨೨೦). ೩. ಸತ್ತವನು ; ಮರಣ ಹೊಂದಿದವನು: "ಪರಾಸುಃ, ಉಪಸಂಪನ್ನಃ, ಪ್ರಮಿತಃ, ಸಂಸ್ಥಿತಃ, ಮೃತಃ—ಈ ೫ ಸತ್ತಾತಂ" (ಹಲಾಯು. ೦೦೯-೭). [ಸಂ.]

ಪ್ರಮಿಲೆ, ಪ್ರಮಿಳೆ (ನಾ). ೧. ಯಾವ ಕೆಲಸದಲ್ಲೂ ಉತ್ಸಾಹ ವಿಲ್ಲದಿರುವುದು ; ಆಲಸ್ಯ ; ಜಡತೆ. ೨. (ಆಲಸ್ಯದಿಂದುಂಟಾಗುವ) ತೂಕಡಿಕೆ; ಮಂಪರು; ನಿದ್ರಾಪರತೆ : "ತಂದ್ರೀ, ಪ್ರಮಿಲಾ—೨ ಆಲಸ್ಯದಿಂದ ಕಣ್ಣು ಮುಚ್ಚಿ ಮೈಮರೆತು ಗುರುಕಿಡುತ ಬರುವ ಗಾಢನಿದ್ರೆಗೆ ಹೆಸರುಗಳು. ತೂಕಡಿಕೆ ಎಂದು ಕೆಲವರನ್ನುವರು" (ಸಿದ್ಧಾಂತ. ೭೦). ೩. ಒಂದು ಸ್ತ್ರೀರಾಜ್ಯದ ರಾಣಿಯ ಹೆಸರು ; ಧರ್ಮಾಧಿಷ್ಠಿರನ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿ ಹಾಕಿ, ಅರ್ಜುನನೊಡನೆ 'ಯುದ್ಧ ಮಾಡು ಇಲ್ಲವೇ ವರಿಸು' ಎಂದು ಪಂಥ ಹೂಡಿ ಅರ್ಜುನನನ್ನು ವರಿಸಿದವಳು : ಆ ಪ್ರಮಿಲೆ ಪಾರ್ಥನ ಮೇಲೆ ಕಣಿಗಱೆದಳು (ಕೃಷ್ಣಶಾ. ೦೬-೦೩). **ಪ್ರಮಿಳೆ** : ೩. ಎಸೆವ ಭದ್ರಾಸನವನಿಳಿದು ಸಂಗ್ರಾಮಕ್ಕೆ ಪೊಱಮಟ್ಟಳಾ ಪ್ರಮಿಳೆ (ಕೃಷ್ಣಶಾ. ೦೬-೨); ಪೆಣ್ಣ ದಳಮೈದೆ ಜೋಡಿಸಿತು ಪಾರ್ಥನ ಸಮರಕಾ ಪ್ರಮಿಳೆಯ ಸುತ್ತಲು (ಕೃಷ್ಣಶಾ. ೦೬-೩). ೪. (ಆಲಂ) ಗಂಡುಬೀರಿ; ದಿಟ್ಟೆ : "ಸಿಥಿಯಾದೇಶದಲ್ಲಿದ್ದರೆಂದು ಪ್ರಸಿದ್ಧಿಯಾಗಿರುವ ಸ್ತ್ರೀಯೋಧಜಾತಿ. ವೀರಸ್ತ್ರೀ, ವೀರಕನ್ಯೆ; ರಣಶೂರಳಾದ ಹೆಂಗಸು; ಪ್ರಮಿಳೆ. ಗಂಡುಬೀರಿ" (Amazon. ಇಂಗಿ).

ಪ್ರಮಿಳಾರಾಜ್ಯ—೧. ಹೆಂಗಸರೇ ಆಡಳಿತವನ್ನು ನಡೆಸುವಂಥ ಪ್ರದೇಶ. ೨. ಕೇವಲ ಹೆಂಗಸರು ಮಾತ್ರ ಇರುವ ಪ್ರದೇಶ. [ಸಂ. ಪ್ರಮಿಲಾ]

ಪ್ರಮಿಳೆ 'ಪ್ರಮಿಲೆ' ನೋ.

ಪ್ರಮುಕ್ತ (ಗು). ೧. ಅಳ್ಳಕಗೊಳಿಸಿದ; ಸಡಿಲಮಾಡಿದ. ೨. ಬಂಧನದಿಂದ ಬಿಡುಗಡೆಹೊಂದಿದ. ೩. (ಬಾಣದಂತೆ) ಎಸೆದ; ಪ್ರಯೋಗಿಸಿದ : ಹುಂಕೃತಿ ಬಲ್ಗಾಱರ ಗುಣಠಂಕೃತಿ ಚಾಪಪ್ರಮುಖ [ಶಾಕಾಂ. ಯು]ಕ್ತಶರನಿಕರಮಹಾಭೀಂಕೃತಿ ನೋಳ್ಪಮರರ್ಗೆ ಭಯಂಕೃತಿಗೆಯ್ದುದು ತದೀಯ ರಣಭೂತಳದೊಳ್ (ರಾಶಕ. ೬-೧೬). [ಸಂ.]

ಪ್ರಮುಖ (ಗು). ೧. ಮುಂಭಾಗದಲ್ಲಿರುವ; ಸಮ್ಮುಖದ; ಎದುರಿನ. ೨. ಮುಖ್ಯವಾದ; ಪ್ರಧಾನವಾದ : ಬಡಗಭಾಷೆ ಕನ್ನಡದ ಒಂದು ಪ್ರಮುಖ ಶಾಖೆ (ಡ್ರಾವಿ. ೦೧೩). ೩. ಮೊದಲಾದ; ಮುಂತಾದ : ಸಿದ್ಧಿಸೆಟ್ಟಿ ಸೋಭನಯ್ಯ ಮಲ್ಲಯ್ಯಸೆಟ್ಟಿ ಅಣ್ಣಮ್ಮನಿನ್ತಿವರ್ಪ್ರಮುಖವಾಗಿ ತಂಬುಲಿಗ ಸಾಸಿರ್ವ್ವರುಂ ಅಯ್ನೂರ್ವ್ವರುಂ ಪೋಗಿ (ಶಾಸಾ. IX-i, ೭೬-೦೦ ; 991) ; ಮತ್ತಮನೇಕಪನಸಜಂಬೀರನಾರಿಕೇಳಸಹಕಾರಕದಳೀ ಪ್ರಮುಖಫಲಿತಭೂಜರಾಜಿಗಳ್ (ಪುಷ್ಪಪು. ೩-೫೭ ವ). (ನಾ). ೪. ಶ್ರೇಷ್ಠನಾದುದು; ಮುಖ್ಯವಾದುದು; ಪ್ರಧಾನವಾದುದು : "ಅಗ್ರಂ ಪ್ರಧಾನಂ . . . ಪ್ರಮುಖಮಾ ಪ್ರವರಂ . . . ಗ್ರಾಮಣೀಯೆನಲು ಮುಖ್ಯಕ್ಕೆ ನಾಮಂ" (ಪಂಗರಾ. ೦೨೬-೪). ೫. ಮುಖಂಡ ; ಮುಖ್ಯಸ್ಥ : "ಅಗ್ರ್ಯಂ, ಪ್ರಧಾನಂ, ಪ್ರಮುಖಂ, ಪುರೋಗಂ . . . ಅಗ್ರಣೀ—ಈ ೧೩ ಮುಖ್ಯಂ" (ಹಲಾಯು. ೦೫೫-೫). ೬. ಒಂದು ನರಕದ ಹೆಸರು : ಕುಂಭೀಪಾಕ ಸುಪಾಕ ಪ್ರಮುಖದಾರುಣ ಅಂಗಾರಕಮೆಂಬೈದು ಮಂತ್ರಿನರಕಂಗಳಿಂ ಸೇರಿ ತರಳತಾರವೆಂಬರಸುನರಕವಿಹುದು (ಏಕೇಶ. ೦೬೦). ೭. ಗುಂಪು ; ಸಮೂಹ. [ಸಂ.]

ಪ್ರಮುಖಕರಣ (ನಾ). ಲೆಕ್ಕದ ಮುಖ್ಯಾಧಿಕಾರಿ; ಪ್ರಧಾನಕರಣಿಕ : ಪ್ರಭುಮಂತ್ರೋತ್ಸಾಹಸಕ್ತಿತ್ರಯಸಂಪನ್ನರಪ್ಪ ಶ್ರೀಮತ್ಪೆರ್ಗ್ಗಡೆ ನಾರಣಯ್ಯ ಪ್ರಮುಖಕರಣಂ ಬನವಾಸಿ ಪನ್ನಿರ್ಬ್ಬಾಸಿರಕ್ಕಂ ಪೆರ್ಗ್ಗಡೆ ತನಂಗೆಯ್ಯ (ಶಾಇಇ. XX, ೩೫-೭; 1055). [ಸಂ.]

ಪ್ರಮುಗ್ಧ (ಗು). ೧. ಮೈಮೇಲೆ ಪ್ರಜ್ಞೆ ಇಲ್ಲದ ; ಎಚ್ಚರವಿಲ್ಲದ. ೨. ಮನೋಹರವಾದ. [ಸಂ.]

ಪ್ರಮುದ (ನಾ). ಅತಿಯಾದ ಸಂತೋಷ,—ಆನಂದ : ಕರಮೆಸೆವಾದಿ ನಂದಿಯನು ಪ್ರಮುದ[ಶಾಕಾಂ. ಮಥ]ಚಿತ್ತದಿ ನೋಡಿ (ಬಸಪು. ೨-೭). [ಸಂ. ಪ್ರಮುದ್]

ಪ್ರಮುದಿತ (ಗು). ೧. ಸಂತೋಷ ಹೊಂದಿದ ; ಆನಂದಪಟ್ಟ : ಅಮರನದೀಪ್ರವಾಹದೊಳಗಿಂದೊಗತರ್ಪ ವಿಶಾಲಪುಣ್ಯವೋ ಪ್ರಮುದಿತ ಶೈವಕೀರ್ತಿ ಬರುತಿರ್ದಪುದೋ ಎನೆ ಬಂದನಳ್ಕಱಂ (ಗಿಂಕ. ೪-೫೭). ೨. ಆನಂದವನ್ನುಂಟುಮಾಡುವ ; ಸಂತೋಷದಾಯಕವಾದ : ಪ್ರಮುದಿತಭವ್ಯಮಂ ಸುಕವಿಸಂಕುಳಸೇವ್ಯಮಂ . . . ಜಿನಾನ್ವಯ ಕ್ರಮಯುತಕಾವ್ಯಮಂ ನೆಱೆಯೆ ನಿರ್ಮಿಸಿ (ಶಂದ್ರಪು. ೧೬-೬೨). ೩. (ಆಲಂ) ಅರಳಿದ ; ಬಿರಿದ : ಪ್ರಮುದಿತ ಕಂಕೇಲ್ಲಿಯವೋಲ್ ಪ್ರಮದಾಪದ ಜತುರಸಾಂಕಿತಂ ಸರಸೀವಿಭ್ರಮದಂತೆ ನೀರಜಸ್ತೋಮವಾಗಿ ರಾಜಿಪುದು ಪುರದ ವೀಥಿಯೂಥಂ (ಕುಸುಮಾ. ೨-೯೯). ೪. ನ್ಯಾಪ್ತವಾದ : ಅಮರಗಣಯುಗ್ಮದಿಂ ಮುಂದಮರ್ದೇಱುಂ ಶಿಖಿಗಣಂ ಬರಲ್ ದಂಡಕದಾ ಪ್ರಮುದಿತಲಕ್ಷಣಮಕ್ಕುಂ (ಛಂದೋಂಬು. ೩-೨೯); ಕ್ರಮದಿಂದ ಸಂಧಿ ನಾಮಂ ಸಮಾಸಮಾ ತದ್ಧಿತಂ ಪೊದಱ್ದಾಖ್ಯಾತಂ ಪ್ರಮುದಿತಧಾತು ವಪಭ್ರಂಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್ (ಶಮದ. ೦). (ನಾ). ೫. ಸಂತೋಷಪಟ್ಟವನು ; ಆನಂದಪಟ್ಟವನು: "ಹೃಷ್ಟಃ, ಮತ್ತಃ ತೃಪ್ತಃ, ಪ್ರಹ್ಲನಃ, ಪ್ರಮುದಿತಃ, ಪ್ರೀತಿಃ—೬ ಸಂತೋಷಪಟ್ಟವನು" (ಸಿದ್ಧಾಂತ. ೩೫೦). [ಸಂ.]

ಪ್ರಮೃಷ್ಟ (ಗು). ೧. ಉಜ್ಜಿದ ; ತಿಕ್ಕಿದ. ೨. ಲೇಪಿಸಿದ ; ಬಳಿದ : ಘನಸಾರಚಂದನಸಾರಪ್ರಮೃಷ್ಟ ಕರತಳನುಮಂಗೀಕೃತಕಸ್ತೂರಿಕಾವಿಲೇಪನ ನುಂ (ಆದಿಪು. ೦೦-೨೬ ಪ). ೩. ಸಾಣೆ ಹಿಡಿದ ; ಮೆರುಗು ಕೊಟ್ಟ. [ಸಂ.]

ಪ್ರಮೆ (ನಾ). ೧. ಅಳತೆ ; ಪರಿಮಾಣ ; ಪ್ರಮಾಣ. ೨. [ತರ್ಕಶಾ] ಸರಿಯಾದ ತಿಳಿವಳಿಕೆ ; ನಿಶ್ಚಿತಜ್ಞಾನ ; ಪ್ರಮಿತಿ ; ಪ್ ಇದರಲ್ಲಿ ಸಾಕ್ಷಾತ್ಕಾರ, ಅನುಮಿತಿ, ಉಪಮಿತಿ ಮತ್ತು ಶಾಬ್ದಬೋಧವೆಂಬುದಾಗಿ ನಾಲ್ಕು ಪ್ರಕಾರಗಳು ಇವೆ : "ಪ್ರಮಿತಿಃ, ಪ್ರಮಾ—೨ ನಿಜವಾಗಿ ತಿಳಿಯುವಿಕೆ, ಯಥಾರ್ಥಜ್ಞಾನ" (ಸಿದ್ಧಾಂತಿ. ೩೫೯); ಪ್ರಮೆ ಎಂದರೆ ಸರಿಯಾದ ಅನುಭವ. ಇದನ್ನು ಪ್ರಮಿತಿ ಎಂದೂ ಕರೆಯುವರು (ಭ್ರಿಹ್ಮಣಾ. ೨.೨೩); ಪ್ರಮೆ, ಬುದ್ಧಿ ಉಪಲಬ್ಧಿ-ಮೊದಲಾದ ಪದಗಳಿಂದ ಹೇಳಲ್ಪಡುವ ಜ್ಞಾನವೆಂಬುದು ಸೂಕ್ಷ್ಮವಾದ ಅತೀಂದ್ರಿಯವಾದ ಕ್ರಿಯೆ (ಹಂದಾಶಾ. ೦೭೬). [ಸಂ. ಪ್ರಮಾಣ]

ಪ್ರಮೇಯ (ಗು). ೧. ಅಳೆಯಬಹುದಾದ ; ಅಳೆಯಲು ಶಕ್ಯವಾದ. ೨. ಸೂಕ್ಷ್ಮವಾಗಿ ಪರೀಕ್ಷಿಸಬೇಕಾದ ; ವಿವೇಚಿಸಬೇಕಾದ. (ನಾ). ೩. ಪ್ರಸಂಗ ; ಸನ್ನಿವೇಶ ; ಸಂದರ್ಭ : ನೀನು ದಿನಾ ಸಕಾಲದಲ್ಲಿ ಊಟ ತಿಂಡಿ ಇಲ್ಲದೆ ರೈಲಿನಲ್ಲಿ ತಿರುಗಿ ಹೋಗಿ ಓದೋ ಪ್ರಮೇಯ ವೇನು ? (ಪಂಚತಂ. ೬೯); ಇವರು ನಮ್ಮ ಗುಂಪನ್ನು ಬಿಟ್ಟು ಬೇರೆಯಾಗ ಬೇಕಾಗಿದ್ದ ಪ್ರಮೇಯವೇನಿತ್ತು? (ಹಸುಹೂ. ೦೭೩); ನಿಮ್ಮನ್ನೆಲ್ಲ ಇಲ್ಲಿಗೆ ಬರಮಾಡಿಕೊಳ್ಳುವ ಪ್ರಮೇಯವಾದರೂ ಏನಿದ್ದಿತು ? (ಶಾಂತಲಾ. ೦೯). ೪. [ತರ್ಕಶಾ] (ಮುಖ್ಯವಾದ) ವಿಷಯ ; ತತ್ತ್ವ; ಸಿದ್ಧಾಂತ : ಮಂತ್ರ, ಬ್ರಾಹ್ಮಣ ಮುಂತಾದವುಗಳ ಕರ್ಮಸಿದ್ಧಾಂತವನ್ನೇ ಆಧಾರ ವಾಗಿಟ್ಟುಕೊಂಡು ಕರ್ಮದಿಂದ ಜ್ಞಾನಪ್ರಾಪ್ತಿಯೆಂಬ ಪ್ರಮೇಯದ ಮೇಲೆ ಉಂಟಾದದ್ದು ಪೂರ್ವಮೀಮಾಂಸೆ (ಶಾರಚ. ೦೩೦); ಈ ಬಗೆಯ ಹೇರಳವಾದ ದೃಷ್ಟಾಂತಗಳಿಂದ ಅತ್ಯಂತಗಹನವಾದ ಪ್ರಮೇಯವನ್ನೂ ತಿಳಿಹೇಳುವುದರಲ್ಲಿ ರಂಗನಾಥಕವಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ (ಕಾಸಾ. ೩೦೨). ೫. [ರೇಖಾಗ] ತರ್ಕಸರಣಿಯ ಮೂಲಕ ಸಿದ್ಧಪಡಿಸಬೇಕಾದ ವಿಷಯ ; ರೇಖಾಗಣಿತದಲ್ಲಿ ಸಾಧನೀಯ ತತ್ತ್ವ,—ನಿಯಮ : ಯೂಕ್ಲಿಡ್ (Euclid) ಬರೆದ ರೇಖಾಗಣಿತದಲ್ಲಿನ ಪ್ರಮೇಯಗಳನ್ನೂ ಸಾಧನೆಗಳನ್ನೂ ನೋಡಿದರೆ ಅವುಗಳನ್ನು ಕಂಡುಹಿಡಿದವರು ಯಾರು, ಈ ಪ್ರಮೇಯಗಳನ್ನು ಊಹಿಸಿದುದು ಹೇಗೆ ಎಂಬುದು ಸ್ವಲ್ಪವೂ ತಿಳಿಯುವುದಿಲ್ಲ (ಶಾಕಲ. ೬೩); ರೇಖಾಗಣಿತದಲ್ಲಿ ಹೆಚ್ಚಿನ ಪರಿಜ್ಞಾನವೂ ಅಭ್ಯಾಸವೂ ಆಗುವಂತೆ ಪ್ರಮೇಯಗಳನ್ನೂ ರಚನೆಗಳನ್ನೂ ಸೇರಿಸಬೇಕು (ಶಕ್ಷಕ. ೦೬೫). ೬. [ತತ್ತ್ವಶಾ] ಯಥಾರ್ಥಜ್ಞಾನದಿಂದ ತಿಳಿಯಲಾಗುವ ವಸ್ತು ; ನಿಶ್ಚಿತಜ್ಞಾನದಿಂದ ಗ್ರಹಿಸುವ ವಿಷಯ,—ತತ್ತ್ವವಿಚಾರ: ಪ್ರಮಾಣವೆಂದರೆ ಪ್ರಮೆಗೆ ಸಾಧನ. ಪ್ರಮೆಯೆಂದರೆ ಯಥಾರ್ಥಜ್ಞಾನ. ಇದಕ್ಕೆ ಆಶ್ರಯನಾಗಿರುವವನು ಪ್ರಮಾತ. ವಿಷಯವಾಗಿರುವುದು ಪ್ರಮೇಯ (ಹಂದಾಶಾ. ೦೩೨); ಪ್ರಮೇಯ:—ಯಥಾರ್ಥಜ್ಞಾನದಿಂದ ತಿಳಿಯಲ್ಪಡುವ ವಸ್ತು (ಶಾತತ್ತ್ವ. ೧೭೩). ೭. [ನ್ಯಾಯಶಾ] ಆತ್ಮ, ಶರೀರ, ಇಂದ್ರಿಯ, ಅರ್ಥ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ ಮತ್ತು ಅಪವರ್ಗವೆಂಬ ಹನ್ನೆರಡು ವಿಧವಾದ ವಿಷಯ : ನ್ಯಾಯಶಾಸ್ತ್ರದಲ್ಲಿ ಹೇಗೆಂದರೆ —ಆತ್ಮ ಶರೀರ . . . ಅಪವರ್ಗವೆಂದು ಹನ್ನೆರಡು ವಿಧವಾಗಿ ಪ್ರಮೇಯವನ್ನು ಒಂಬತ್ತನೆಯ ಸೂತ್ರದಲ್ಲಿ ವಿಭಾಗ ಮಾಡಿರುವರು (ಹಂದಾಶಾ. ೦೧೩). ೮. ಆತ್ಮಾನಾತ್ಮ ವಿವೇಕಕ್ಕೆ ಬೇಕಾದ ಪ್ರಮಾಣ, ಪ್ರಮೇಯಂ, ಸಂಶಯಂ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡಾ, ಹೇತ್ವಾಭಾಸ, ಛಲ, ಜಾತಿ ಮತ್ತು ನಿಗ್ರಹಸ್ಥಾನ ಎಂಬ ಹದಿನಾರು ಬಗೆಯ ಪದಾರ್ಥಗಳಲ್ಲಿ ಒಂದು: ಗೌತಮೋಕ್ತನ್ಯಾಯವು ಪ್ರಮಾಣ ಪ್ರಮೇಯ ಸಂಶಯ . . . ನಿಗ್ರಹಸ್ಥಾನಗಳೆಂಬ ಷೋಡಶಪದಾರ್ಥಂಗಳಂ ನಿರೂಪಿಸುತ್ತಲೀ ಪ್ರಪಂಚಕ್ಕೆ ಪರಮೇಶ್ವರಕರ್ತೃಕಮಂ ನಿಶ್ಚಯಿಸುವುದು (ಏಕೇಶ.೧೦); ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ . . . ನಿಗ್ರಹಸ್ಥಾನ ಎಂದು ಹದಿನಾರುಪದಾರ್ಥಗಳನ್ನು ನಿರೂಪಿಸಿರುವರು (ಹಂದಾಶಾ. ೧೧೨). [ಸಂ.]

ಪ್ರಮೇಹ (ನಾ). ೧. ಮೂತ್ರಕೋಶದಲ್ಲಿ ಕಲ್ಲು ಉಂಟಾಗುವ ಒಂದು ಬಗೆಯ ರೋಗ ; ಶಿಲಾಮೇಹ : "ಅಶ್ಮರಿಯೆನೆ ಪ್ರಮೇಹ ಮಕ್ಕುಂ" (ಮುಂಗಣ. ೦೧೪-೯); ಎಲೆಹುರಿಯ ಬೇರು ಹಳೇನೀರಿಂ ಕುಡಿಯೆ ಪ್ರಮೇಹಂ ತೀರ್ಗುಂ. ಕಲ್ಲು ಒಡೆದು ಬೀಳ್ಗುಂ (ಏಕೈ. ೦೧೯) ; ಚಿಲ್ಲದ ಬೀಜದ ಗಂಧವನ್ನು ತೆಗೆದು ಅದಕ್ಕೆ ಸ್ವಲ್ಪ ಶ್ರೀಗಂಧ ಹಾಕಿ ತೆಗೆದುಕೊಂಡರೆ ಪ್ರಮೇಹದ ಕಲ್ಲು ಬೀಳುತ್ತದೆ (ಸಕಪೈ. ಪಂ. ೪೯೩). ೨. (ಶುಕ್ರಧಾತುವು ಯಾವಾಗಲೂ ಸ್ರವಿಸುವುದು ಮತ್ತು ಮಧುಮೇಹ ಇತ್ಯಾದಿ ಯಾವುದಾದರೂ) ಮೂತ್ರರೋಗ. ೩. ಗುಹ್ಯಪ್ರದೇಶದಲ್ಲಿ ಉಂಟಾಗುವ ವ್ರಣರೋಗ ; ಭಗಂದರ. [ಸಂ].

ಪ್ರಮೋದ (ನಾ). ೧. ಸಂತೋಷ ; ಆನಂದ: "ಪ್ರಮೋದಃ, ಪ್ರಮದಃ, ಹರ್ಷಃ . . . ಶಂ, ಸುಖಂ—ಈ ೧೩ ಸುಖದ ಪೆಸರ್"(ಹಲಾಯು. ೨೦-೦೨); ಜಲಪಾಲಂಗೆ ಪ್ರಮೋದಮಾಗೆ ರಾಗಿಸಿ ಪಲಕಾಲಕ್ಕೆನ್ನ ಪಗೆಯೊಳಗಾದಂ ಬನ್ನಿಮೆಂಬುದುಂ (ಪಂಚತಂ. ೨೭೦-೯); ಮೇದಿನೀದೇವಿಗತಿಪ್ರಮೋದಮಂ ಪಡೆದು ಕಟಿಪಿ (ಇಗಪ. ೦-೩೯ ಪ). ೨. ಸುಗಂಧ ; ಸುವಾಸನೆ. ೩. ಅರುವತ್ತು ಸಂವತ್ಸರಗಳಲ್ಲಿ ನಾಲ್ಕನೆಯ ಸಂವತ್ಸರದ ಹೆಸರು : ಆ ವರುಷವೇ ಪ್ರಭವ ವಿಭವ ಶುಕ್ಲ ಪ್ರಮೋದ [ಪಾಕಾಂ. ಪ್ರಮಾದಿತ, ಪ್ರಮಾದೌತ, ಪ್ರಮೋದೂತ] . . . ಕ್ರೋಧನ ಅಕ್ಷಯವೆಂದಱವತ್ತು ತೆಱನಾಗಿಹುದು (ಏಕೇಶ. ೩೨೧). ೪.[ಯೋಗ] ಸಾಂಖ್ಯದರ್ಶನದ ಶಾಸ್ತ್ರಾಭ್ಯಾಸ, ಶಾಸ್ತ್ರಜ್ಞಾನವಿಚಾರ, ಗುರುಶಿಷ್ಯಸಹವಾಸ, ಸದಾಮುದಿತ, ವಿವೇಕಖ್ಯಾತಿ, ಪ್ರಮೋದ, ಮುದಿತ ಮತ್ತು ಮೋದಮಾನಗಳೆಂಬ ಎಂಟು ಸಿದ್ಧಿಗಳಲ್ಲಿ ಒಂದು; ಪ್ರತ್ಯಯಸರ್ಗದ ಒಂದು ಭಾಗ : ಶಾಸ್ತ್ರಾಭ್ಯಾಸ . . . ಪ್ರಮೋದ ಮುದಿತ ಮೋದ ಮಾನಗಳೆಂಬುವು ಅಷ್ಟಸಿದ್ಧಿಗಳು(ಹಂದಾಶಾ. ೬೪). [ಸಂ.]

ಪ್ರಮೋದಿತ (ಗು). ೧. ಸಂತೋಷಗೊಂಡ ; ಹರ್ಷ ಹೊಂದಿದ. ೨. ಸುಗಂಧಗೊಳಿಸಿದ ; ಪರಿಮಳವುಂಟುಮಾಡಿದ. [ಸಂ.]

ಪ್ರಮೋದೂತ (ನಾ). = ಪ್ರಮೋದ ೩ : ಪ್ರಮೋದೂತ ಸಂವತ್ಸರದ ಮಾರ್ಗಶಿರ ಬ ೧ ಲೂ ಶ್ರೀಮತು ಕೆಳದಿ ಚೆಂನ್ನಮಾಜಯವರು ದೊಡ್ಡ ಚೆಂನಪ್ಪಯಗೆ ಬರಶಿ ಕಳುಹಿದ ಪ್ರಯೋಜನ (ಪ್ರೈಇಂ. ೦೯೩೯, ೯-೦; 1690). [ಪ್'ಪ್ರಮೋದ' ಎಂಬ ಹೆಸರಿನ ಸಂವತ್ಸರದ ರೂಪಾಂತರವಾಗಿ ಈ ಶಬ್ದರೂಪವು ಪ್ರಚಾರದಲ್ಲಿದೆ]

ಪ್ರಯತ (ಗು). ೧. ಶುದ್ಧವಾದ; ಪವಿತ್ರವಾದ. ೨. ನಮ್ರವಾದ ; ವಿನೀತವಾದ. ೩. ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಂಡ ; ಜಿತೇಂದ್ರಿಯನಾದ. (ನಾ). ೪. ಶುದ್ಧವಾದುದು ; ಶುಚಿ ; ಪವಿತ್ರತೆ : " ಪ್ರಯತಃ, ಅನುಚ್ಛಿಷ್ಟಃ - ಈ ೨ ಶುಚಿ " (ಹಲಾಯು. ೬೬-೨೪೮); ಕ್ಷಯವೃಜಿನಂ ಜನಸಮಯಂ ಸ್ಮಯರಹಿತಂ ಹಿತವಚಃ ಪ್ರಿಯಂ ಪ್ರಿಯಧರ್ಮಂ ಪ್ರಯತಯುತಂ ಸದ್ವಿನಯಂ ನಯವಾಕ್ಯಸರಂ

ಸರಸ್ವತೀಮುಖಮುಕುರಂ (ಶುಕಶ. ೦-೫೦). ೫. ಪವಿತ್ರನಾದವನು ; ಪರಿಶುದ್ಧನಾದವನು : "ಪವಿತ್ರಃ, ಪ್ರಯತಃ, ಪೂತಃ—ಪವಿತ್ರನಾದವನ ಹೆಸರುಗಳು. ಪರಿಶುದ್ಧನು " (ಓಜಾ.೦೫. ೨೨೮). [ಸಂ.]

ಪ್ರಯತ್ನ (ನಾ). ೧. ಉದ್ಯಮ ; ಉದ್ದೇಶ ; ಯತ್ನ : ಪ್ರಯತ್ನ ಮಲ್ಲದ ಗುರುತ್ವಕ್ಕೆ— ಎಮ್ಮ ತಂದೆಗಳ್ (ಹರಿವಂ. ೦೦೨ ಕ್ರಮೋ); ಚಂದ್ರನಿಗೊ ಮಂಗಳಗ್ರಹಕ್ಕೊ ವಲಸೆ ಹೋಗುವ ಪ್ರಯತ್ನ . . . ಕಾಣುತ್ತದೆ (ಹೋಳ್ಕ. ೧೬) ; ಸಮಂಜಸವಾದ ಉತ್ತರ ಹೇಳುವ ಹತ್ತಾರು ಪ್ರಯತ್ನಗಳು ನಡೆದಿವೆ (ಪ್ರಾಷ. ೨೦). ೨. ಹೆಚ್ಚು ಶ್ರಮ ; ಬಹುಶ್ರಮ : ಪತ್ನಿಯರ ದೆಸೆಯಿಂದೆ ಮುಡಿದಿರ್ದ ಪಾರ್ಥಂ ಪ್ರಯತ್ನದಿಂ ವಿಜಯುತಂ ತಂದ ಸಂಜೀವಕದ ರತ್ನದಿಂ ಕೃಷ್ಣಪ್ರಸಾದದಿಂ ಜೀವಿಸಿದನು (ಕೃಷ್ಣಾ. ೨೪ ಸೂಚನೆ). ೩. ತೊಂದರೆ ; ಕಷ್ಟ. ೪. "ಒಂದು ಭಾಗವು ಇನ್ನೊಂದರ ಮೇಲೆ ಪ್ರಯೋಗಿಸುವ ಬಲವನ್ನು ಆ ಭಾಗದ ಖಂಡವಿಸ್ತಾರದಿಂದ (Area of cross section) ಭಾಗಿಸಿದರೆ ಬರುವ ಲಬ್ಧಕ್ಕೆ ಪ್ರಯತ್ನವೆಂದು ಹೆಸರು" (ಶಾಕಾ. ೦೦೬).

ಪ್ರಯತ್ನಪಡು—ಯತ್ನ ಮಾಡು : ಎಮ್ಮ ಪ್ರಯತ್ನಪಟ್ಟರೂ ನಮ್ಮಿಂದ ಅವಗಳನ್ನು ತೆರೆಯಲಾಗಲಿಲ್ಲ (ಕೃಕಕ್ಕ. ೯೪); ಮುಂದೆ ನಡೆಯ ಬೇಕೆಂದು ಎಷ್ಟೂ ಹೆಚ್ಚಾಗಿ ಪ್ರಯತ್ನ ಪಟ್ಟರೆ, ಅವು ಅಷ್ಟೂ . . . ಹಿಂದಕ್ಕೆ ಎಳೆಯಲು ಪ್ರಾರಂಭ ಮಾಡುವುವು (ಕಂಮೂಶ್ರೆ. ೧೬). **ಪ್ರಯತ್ನ ಮಾಡು**— ಯತ್ನ ಮಾಡು ; ಉದ್ಯೋಗಿಸು : ತಾವು ಅಧ್ಯಾಸ ಮಾಡಿದ ಪುಸ್ತಕ ಯಾವುದೆಂದಾಗಲಿ, ಅದರ ವಿವರಗಳನ್ನಾಗಲಿ ಅವರು ತಿಳಿಸುವ ಪ್ರಯತ್ನ ಮಾಡಿಲ್ಲ (ಪೀಳಕ್ಕೆ. ೭೮) : ಮುಂದೆ ಪ್ರಯತ್ನ ಮಾಡುವುದಾದರೂ ಏಕೆ (ಕೃಕಕ್ಕ. ೩೭). [ಸಂ.]

ಪ್ರಯತ್ನಿಸು (ಕ್ರಿ). ಯತ್ನ ಮಾಡು : ರತ್ನಪರೀಕ್ಷೆ ಗಜಾಶ್ವಪರೀಕ್ಷೆ ಪ್ರಯತ್ನಿಸೆ ಬಾಹ್ಯವಿಜ್ಞಾನ ರತ್ನತ್ರಯರೂಪವಸಾತ್ಮನೆಂದಱಿವುದು ನೂತ್ನಾಂತಕಂಗವಿಜ್ಞಾನ (ಕಕಚ. ೨-೦೯): ಭಾರತದೇಶವು ಬಡಜನರ ಜೀವನಸ್ತರಗಳನ್ನು ಸುಧಾರಿಸುವುದಕ್ಕಾಗಿ ಪ್ರಯತ್ನಿಸುತ್ತಿದೆ (೨೮೫೫.೩೦); ಅವಳಿಗಾದರೂ ಮಾಧವಿಯ ಪಾಲಿನ ನೃತ್ಯಗಾನಗಳನ್ನು ಕಲಿಸೋಣವೆಂದು ಎಣಿಸಿ ಪ್ರಯತ್ನಿಸಿದಳು (ಕೊಗ್ಯು. ೪೬). [ಪ್ರಯತ್ನ + —ಇಸು]

ಪ್ರಯಸ್ತ (ನಾ). ಸಂಬಾರ ಪದಾರ್ಥ, ಒಗ್ಗರಣೆ ಮುಂತಾದುವುಗಳನ್ನು ಹಾಕಿ ಸಂಸ್ಕರಿಸಿದ ವ್ಯಂಜನ.—ಅಡುಗೆ : "ಪ್ರಯಸ್ತಂ, ಸುಸಂಸ್ಕೃತಂ-ಉದ್ದಿನಬೇಳೆ, ಕಡಲೆ, ಸಾಸುವೆ, ಜೀರಿಗೆ, ಪುಣಸಿಹಣ್ಣಾಯಿ, ತುಪ್ಪ ಮುಂತಾದವುಗಳಿಂದ ವಗ್ಗರಿಸಿ ಹಿಂಗು, ಕರಿಬೇವು ಮುಂತಾದ ಪರಿಮಳ ಗಳಂ ಕಲ್ಪಿಸಿದ ರುಚಿಯಾದ ಪದಾರ್ಥಗಳು" (ಓಜಾ.೦೫. ೨೪೬). [ಸಂ.]

ಪ್ರಯಾಗ (ನಾ). ೧. ಯಜ್ಞ; ಯಜ್ಞಗ. ೨. ಯಜ್ಞ ಮಾಡುವ ಸ್ಥಳ; ಯಾಗಭೂಮಿ. ೩. ಈಗಿನ ಅಲಹಾಬಾದ್ ಬಳಿಯ ಒಂದು ಪುಣ್ಯ ಕ್ಷೇತ್ರ ; ಗಂಗೆ, ಯಮುನೆ ಮತ್ತು (ಗುಪ್ತಗಾಮಿನಿಯಾದ) ಸರಸ್ವತಿ ನದಿಗಳ ಸಂಗಮ ಸ್ಥಳ : ☞ ಬ್ರಹ್ಮನು ಈ ಪ್ರದೇಶದಲ್ಲಿ ಅನೇಕ ಯಜ್ಞಯಾಗಗಳನ್ನು ಮಾಡಿದ ಕಾರಣ ಇದಕ್ಕೆ ಪ್ರಯಾಗವೆಂಬ ಹೆಸರು ಬಂದಿತೆಂಬ ನಂಬಿಕೆಯಿದೆ : ಅಸುರವಿದ್ವಂಸನ ದೆಸೆದಿಂ ಪ್ರಯಾಗದೊಳ್ಪಡುವೇ ಶರಮಂ ಬಱ್ದೆ ಗಾಸಿಯಾಗದಿರು (ಕೃಬಭಾ. ೫೯-೬೦) : ನಾವು ಮೂರು ದಿನಗಳಲ್ಲಿ ಕಾಶಿ, ಹರಿದ್ವಾರ, ಗಯಾ, ಪ್ರಯಾಗ ಮೊದಲಾದ ಮಹಾಮಹಾಕ್ಷೇತ್ರಗಳಿಗೆ ಹೊರಡಬೇಕಾದೀತು! (ಪ್ರಾಷ. ೧೩). ೪. ಇಂದ್ರ. ೫. ಕುದುರೆ. [ಸಂ.]

ಪ್ರಯಾಗ (ನಾ). = ಪ್ರಯಾಗ ೩ : ಶ್ರೀಪರ್ವತದೊಳಂ ಪ್ರಯಾಗ ಯೊಳಂ ಜಾಣರಾಸಿಯೊಳಂ ಕುರುಕ್ಷೇತ್ರದೊಳಂ ಹತ್ತು ಸಾಸಿರ ಕವಿಲೆಯುಮಂ ಹತ್ತು ಸಾವಿರ ವೇದವಾರಗರುಮನಿತಿದ ಬ್ರಹ್ಮಾತಿಯಕ್ಕು (ಧಶಾ. ೦೦೬-೨೨-೬೨ ; 1078) ; ಇನ್ನೀ ಧರ್ಮ್ಮಮನಾವ ನೋರ್ವ್ವ ಪ್ರತಿಪಾಳಿಸಿದಂಗೆ ಗಂಗೆ ವಾರಣಾಸಿ ಗುರುಕ್ಷೇತ್ರ ಪ್ರಯಾಗೆಯಲು ಸಾಸಿರ್ವ್ವ ಬ್ರಂಹ್ಮಣರ್ಗ್ಗೆ ಸಾಸಿರ ಕವಿಲೆಯು ದಾನಂಗೆಯ್ದು ಫಲವಕ್ಕು (ಎಸ್. XII. ಕಪಿಲೊ. ೬೦-೫೭ ; 1168). [ಸಂ.]

ಪ್ರಯಾಣ (ನಾ). ೧. ಪಯಣ ; ಸಂಚಾರ ; ಯಾತ್ರೆ : "ಯಾತ್ರಾ, ಪ್ರಯಾಣಾ, ಪ್ರಸ್ಥಾನಂ—ಈ ೩ ಪಯಣಂ" (ಕಣಾಶು. ೬೪-೨೧೯) ; ನಂದಗೋಪಂ . . . ಕತಿಪಯಪ್ರಯಾಣಂಗಳಿಂ ಪೋಗಿ (ಜಗನ್ನಾ. ೬-೬೫ ಕ); ಪ್ರಯಾಣ ಅಲೆದಾಟ ಮೊದಲಾದುವುಗಳ ಆಯಾಸದಿಂದ ನಿದ್ರೆಯೇನೋ ತಡವಿಲ್ಲದೆ ಬಂದಿತು (ಪಂಚಾ. ೮೯). ೩. ಯುದ್ಧಕ್ಕೆ ಹೊರಡುವಿಕೆ ; ಆಕ್ರಮಣ ; ಧಾಳಿ. ೪. (ಪ್ರಪಂಚದಿಂದ) ನಿರ್ಗಮನ ; ಸಾವು. ೫. [ಸಂಗೀತ]ಗಾಯಕನು ಹಾಡುವಾಗ ಆದಕ್ಕನುಗುಣವಾಗಿ ಮಾಡುವ ಮೈಯ ಚಲನವಲನ ; ಒಂದು ಬಗೆಯ ದೋಷ : ಕಂಪಿತ . . . ಪ್ರಯಾಣ [ಶಾಕಾಂ. ಣಾ] . . . ತಾಲವಿಹೀನವೆಂಬ ಪದಿನೈದು ಸ್ವರದೂಷಣಂ ಪೊರ್ದದೆ ಪಾಡಿ ಮೋಹಿಸುವ ಗಾಯಕರಿಂ (ಅಕಚಿ. ೦೪೦). 'ಪ್ರಸಾರ' ಪರಾ.

ಪ್ರಯಾಣ ಮಾಡು—೧. ಸಂಚಾರ ಮಾಡು : ಆಗುಂದೆಯಲ್ಲಿ ಎರಡು ದಿನ ತಂಗಿದ್ದು ಮುಂದಕ್ಕೆ ಪ್ರಯಾಣ ಮಾಡುತ್ತಾರೆ (ಪಪುಚ. ೨೬೬). ೨. ಸಾಯು ; ಮರಣ ಹೊಂದು. [ಸಂ.]

ಪ್ರಯಾಣಿಕ (ನಾ). ಸಂಚಾರ ಮಾಡುವವನು; ಪಯಣಿಗ ; ಪ್ರವಾಸಿ: ನನಗಂತೂ ಬಹುದೂರ ಎಲ್ಲೂ ಹೋಗಿ ಊರಿಗೆ ಹಿಂತಿರುಗಿದ ಪ್ರಯಾಣಿಕನಂತೆ ಆಗಿತ್ತು (ಜಾಕಥಾ. ೨) ; ಸೋಮೇಶ್ವರದ ಮೂಲಕ ಹಾದು ಹೋಗುವ ಪ್ರಯಾಣಿಕರ ಸಂಖ್ಯೆ ಹೆಚ್ಚು (ಪಪುಚ. ೨೯೦). [ಸಂ.]

ಪ್ರಯಾತ (ಗು). ೧. ಹೊರಟಿರುವ : ಹೋಗುವ. ಆಯಾತಪ್ರಯಾತಾಂಗನಾನಿಕರೋದ್ಯಚ್ಚರಣಾಂಶುವಲ್ಲವಿತಂ . . . ರಾಜಗೇಹಾಜಿರಂ (ಹರಪ್ರ. ೦-೫೦). ೨. ಹೊಂದಿರುವ. ಪಡೆದಿರುವ : (ನಾ). ೫. ಪ್ರಯಾಣ ; ಸಂಚಾರ. ೪. ಪ್ರಪಾತ ; ಕೊಳ್ಳ. [ಸಂ.]

ಪ್ರಯಾಮ (ನಾ). ೧. (ಆಹಾರಧಾನ್ಯ, ನೀರು ಮೊದಲಾದುವುಗಳ) ಕೊರತೆ. ೨. ಆಹಾರಧಾನ್ಯಗಳ ಕೊರತೆಯಿರುವಾಗಿ ಕೊಳ್ಳುವಮರಲ್ಲಿ ಉಂಟಾಗುವ ಪೈಪೋಟಿ. ೩. ಕ್ಷಾಮ ; ಬರ. [ಸಂ.]

ಪ್ರಯಾಸ (ನಾ). ೧. ಶ್ರಮ; ಆಯಾಸ: ಕಾದಂಬರಿಯಂ ಪ್ರಯಾಸದಿಂದ ನಾಲ್ಕಡಿಯಿಟ್ಟು . . . ವಂಹಾಶ್ವತೆಯನ್ನು ಕಂಠಾಲಿಂಗನ ಮಾಡಿಕೊಳ್ಳಲಾಗಿ (ಪಚಂಗ. ೩೬). ೨. ಕಷ್ಟ ; ತೊಂದರೆ : ಅಕ್ಷರ ಕಲಿಯುವುದು ಹೆಚ್ಚಿನ ಪ್ರಯಾಸವಾಗದಾರದು (ಪ್ರಾಷ. ೬೬). ೩. ಅನುಭವ ; ಪರಿಶ್ರಮ : ಧನುರ್ವಿದ್ಯಾಪ್ರಯಾಸಗಳಲ್ಲಿ ಕೃತಯುಗದಲ್ಲಿ ತಾನು ಸಮರ್ಥನು (ಜಕ್ಕೀ. ೦-೬೯-೬).

ಪ್ರಯಾಸ ಪಡು—ಕಷ್ಟಪಡು; ಶ್ರಮಪಡಂ : ಆ ವಿವಾಹವನ್ನು ನಿಲ್ಲಿಸಲು ನನ್ನ ತಾಯಿ ಎಷ್ಟೋ ಪ್ರಯಾಸ ಪಟ್ಟಳು (ಕ್ರಕಾಕ. ೫೬) ; ಪ್ರಯಾಸ ಪಟ್ಟು ಮೇಲೆದ್ದರು (ಪಪುಚ. ೨೫೬). [ಸಂ.]

ಪ್ರಯುಕ್ತ1 (ಗು). ೧. ಕೂಡಿದ ; ಹೊಂದಿಕೊಂಡ ; ಸೇರಿದ. ೨. ಹೊಡಿಸಿದ ; ಸೇರಿಸಿದ. (ನಾ). ೫. ಕೂಡಿದಂದಂ ; ಹೊಂದಿಕೆ : "ಯುತಮನ್ವಿತಂ ಸಂಹಿತಂ ಸಮನ್ವಿತಮುಚಿತಮಾ ಪ್ರಯುಕ್ತಂ . . . ಕೂಡಲ್ಕೆ ನಾವಂ" (ಕುಗಡಾ. ೦೭೦-೦೬). ೪. ಕಾರಣ ; ಹೇತು ; ನಿಮಿತ್ತ : ಈ ಪರಿಯೊಳತ್ಯಂತಧರ್ಮಕಳಾಪರೂಪವಿಳಾಸದಿಂ ಲೋಕೋಪಕಾರಾರ್ಥಪ್ರಯುಕ್ತನಿರೂಢಿಯಲಿ ಮೆಱೆದು (ಜಕಕ್ಷ. ೨-೬);

ಅದರ ಪ್ರಯುಕ್ತವಾಗಿ ಕೆಲವು ವಾಸಸ್ಥಳಗಳು ನೀರಿನಲ್ಲಿ ಮುಳುಗಡೆ ಆಗುವ ಸಂಭವವಿದ್ದಿತು (ಕಾಗ್ಯ. ೭೮). [ಸಂ.]

ಪ್ರಯುಕ್ತ೨ (ಅ). ಕಾರಣದಿಂದ ; ಸಂಬಂಧವಾಗಿ ; ಸಲುವಾಗಿ : ಈ ಪ್ರಯುಕ್ತ ನಂದವನಕ್ಕಾಗಿ ಭೂಮಿಯನ್ನು ದಾನ ಮಾಡಿದ ಸಂಗತಿಯನ್ನು ಕೊಂಗುನಾಡಿನ ಶಾಸನವೊಂದು ತಿಳಿಸುತ್ತದೆ (ಜಾಶಾ. ೭೭).

[<ಪ್ರಯುಂಕ್ತ್]

ಪ್ರಯುಕ್ತಿ (ನಾ). ೧. ಬಳಕೆ ; ಪ್ರಯೋಗ ; ಉಪಯೋಗ : ಇಂತು ವರ್ತಿಸುತಿರ್ದುದಿದು ನಿಶ್ಚಿಂತಗಂರುಧಕ್ತಿಪ್ರಯುಕ್ತಿಯದಂತುಮಲ್ಲದು ದರನಿಮಿತ್ತಕ್ಕೆ ಭಾಷೆಯಂ ನೀಗಿ (ಜಸಾ. ೭೯-೦೭) ೨. ಕಾರಣ ; ಹೇತು ; ನಿಮಿತ್ತ ; ಉದ್ದೇಶ : ಧಾತ್ರಿಯೊಳಗಾ ಅಯ್ಮನ ಮಳಚರಿತ್ರವಂ ಕೇಳ್ದೆ ತಾನತಿಚಿತ್ರವತಿಶಯಶೀಲಸಂಬಂಧಪ್ರಯುಕ್ತಿಯಲಿ . . . ಗೃಹಚರರೆನೆಲ್ಲಂ ಶಿವಸಹಿತರಂ ಮಾಡಿ (ಜಪ್ರ.೭೦-೦೩).

[ಸಂ.]

ಪ್ರಯುತ (ಗು). ೧. ಕೂಡಿದ ; ಸೇರಿದ ; ಹೊಂದಿಕೊಂಡ : ಮಡಿವಾಳ ಮಾಚಯ್ಯಂ ಶಿವಗಣಾಚಲೋಲನತಿವೀರವ್ರತಾಚಾರ ಪ್ರಯುತಚ [ಜಾಣಾ. ತಾಚಾ]ರ್ಯ ಕಾಲಕರ್ಮವಿರಹಿತನು (ಜಪ್ರ. ೨೦-೩). ೨. ಕೂಡಿಲ್ಲದ ; ಸೇರಿಲ್ಲದ ; ಬೇರೆಯಾದ. (ನಾ). ೩. ಒಂದು ಸಂಖ್ಯೆ ; ಹತ್ತು ಲಕ್ಷ : ಅಂಕೆಗಳ ಶ್ರೇಣಿ ಹದಿನೆಂಟರ ವರೆಗೂ ಹೋಗುತ್ತದೆ . . . ಸಹಸ್ರಂ, ಅಯುತ, ಲಕ್ಷ, ಪ್ರಯುತ, ಕೋಟಿ (ಕ್ರಜಾಶಾ. I, ೩೫೭). [ಸಂ.]

ಪ್ರಯೋಕ್ತೃ (ನಾ). ೧. ಉಪಯೋಗಿಸುವವನು ; ಬಳಸುವವನು. ೨. ನಡೆಸುವವನು ; ನಿರ್ದೇಶಿಸುವವನು : ಭೇದೋಪಾಯದ ಸಾಧನೆಯಲ್ಲಿ ಮುಖ್ಯವಾಗಿ ಬೇಕಾದವು ಪ್ರಯೋಕ್ತೃವಿನ ಬುದ್ಧಿ, ಕಾರ್ಯನಿರ್ವಾಹದಲ್ಲಿನ ಗುಟ್ಟು (ಸಂಜಾಟ. ೦೬೨). ೩. ಬಡ್ಡಿಯಂ ಮೇಲೆ ಹಣ ಸಾಲ ಕೊಡುವವನಂ. ೪. ಬಾಣ ಹೊಡೆಯುವವನು ; ಬಾಣಪ್ರಯೋಗ ಮಾಡುವವನಂ. [ಸಂ.]

ಪ್ರಯೋಗ (ನಾ). ೧. ಒಂದಾಗಿ ಸೇರುವುದಂ ; ಜೊತೆಯಾಗಿರುವಿಕೆ ; ಒಟ್ಟಿಗೆ ಸೇರುವುದು. ೨. (ಶಬ್ದ, ವಾಕ್ಯ ಇತ್ಯಾದಿಗಳ) ಬಳಕೆ ; ಉಪಯೋಗ : ತಮಿಳು ಮತ್ತು ಕನ್ನಡ ಭಾಷೆಯಲ್ಲಿ ಈ ಪದದ ಪ್ರಯೋಗಗಳು ಇಂತಿವೆ (ಕ್ರಾಪ್ರ. ೩೩) : ಭಾಷೆಯು ಪ್ರಯೋಗದಿಂದ ಅಭಿವೃದ್ಧವಾಗುವ ಅಥವಾ ಜನಿಸುವ ಎಲ್ಲಾ ವಿಷಯಗಳು (ಕಾಗಾ. ೦೦೪). ೩. ಉದಾಹರಣೆ ; ನಿದರ್ಶನ ; ದೃಷ್ಟಾಂತ : ಡಕಾರಕ್ಕಾದೇಶವಾದ ಉಬಕ್ಕ ಪ್ರಯೋಗಂ, ಕಾಡುವೆನ್ನ್ – ಕಾಣ್ಬೆನ್ನ್ (ಕಪುಚ.-೦೯ ಕ್ರಿಯೋ). ೪. ಆರಂಭ ; ಪ್ರಾರಂಭ. ೫. ಅಪ್ಪಣೆ ; ಆಜ್ಞೆ : " ಆ ಪ್ರಯೋಗಂ ತಾನಸಂ ಪೇಟ್ಟುದಕೆ ಪೆಸರೆನಿಕ್ಕುಂ" (ಕುಂಗಶಾ. ೦೩೦-೦೪). ೬. ಹಂಚಿಕೆ ; ಯೋಜನೆ. ೭. ಕಾರ್ಯ ; ಕೆಲಸ : ಮಿಂಚು ಮಿಂಚಿದಪ ಮಿಂಚಿನಲುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು (ಕಕ್ಕಸ. ೪. ೩೭೭-೦೫೬). ೮. ಧಾರ್ಮಿಕಕರ್ಮಗಳನ್ನು ಮಾಡಿಸುವ ಕ್ರಮ.—ನಿಯಮಾಚರಣೆಯ ರೀತಿ ; ಕರ್ಮಕಾರ್ಯವಿಧಾನ. ೯. ಬಿಡುವುದಂ ; ಎಸೆಯುವುದು ; ಹೊಡೆತ : 'ಬಾಣಪ್ರಯೋಗ' ಪದಾ. ೧೦. ನಾಟಕ ಅಥವಾ ನೃತ್ಯ ಇತ್ಯಾದಿ ಪ್ರದರ್ಶನ : ನೃತ್ಯ—ಸಂಗೀತಗಳಿಂದೊಡಗೂಡಿದ ಪ್ರಯೋಗವೇ ನಾಟಕದ ಕೊನೆಯ ಕೂವ ಎಂದು ನಾವು ತಿಳಿಯಬಹುದು (ಜಾಕಥ. ೩೬). ೧೧. ಪರೀಕ್ಷೆ ಮಾಡಿ ನೋಡುವಿಕೆ ; ಪರಿಶೀಲನಾಕಾರ್ಯ : ಅದು ಸಾಧನ ದೂಷಣ ಪ್ರಯೋಗಾನ್ಯಥಾನುಪತ್ತಿಯಿಂ ಬಹಿರರ್ಥಸಿದ್ಧಿಯಕ್ಕುಂ (ಜಪ್ರ. ೨-೦೦ ಪ) ; ಬೇರೆಬೇರೆ ವಿಜ್ಞಾನಭಾಗಗಳು ತಮ್ಮದೇ ಆದ ದಾರಿಗಳನ್ನು ಹಿಡಿದು ಬೆಳೆಯುತ್ತಿದ್ದರೂ ಅವುಗಳಿಗೆಲ್ಲಾ ಸಾಮಾನ್ಯವಾದ ಒಂದು ಮಾರ್ಗವುಂಟು. ಊಹೆ, ಪ್ರಯೋಗ, ಸಾಧನೆ, ನಿದರ್ಶನ ಇವುಗಳೇ ಈ ಮಾರ್ಗದ ಬೇರೆ ಬೇರೆ ಘಟ್ಟಗಳು (ಕಾಕಪ. ೬). ೧೨. ಫಲ ; ಪರಿಣಾಮ. ೧೩. ಉಪಕರಣ ; ಸಾಧನ. ೧೪. ಬಡ್ಡಿಗೆ ಸಾಲ ಕೊಡುವಿಕೆ. [ಸಂ.]

ಪ್ರಯೋಗಶಾಲೆ (ನಾ). ತತ್ತ್ವಗಳ ಸತ್ಯವನ್ನು ಅರಿಯಲು ನಡೆಸಂವ ಪರಿಶೀಲನಾಕಾರ್ಯದ ವಂದಿರ,—ಶಾಲೆ : ಪ್ರಯೋಗಶಾಲೆಯಲ್ಲಿ ಆಹಾರದಿಂದ ರಂಜಕವನ್ನು ದೇರ್ವಡಿಸಿ ಅದನ್ನು ಇಲಿಗಳಿಗೆ ಕೊಟ್ಟರೆ, ಆಹಾರದಲ್ಲಿ ರಂಜಕದ ನ್ಯೂನತೆ ಕಂಡುಬರುತ್ತದೆ (ಗೃಹಾ. ೨೦).

[ಸಂ. ಪ್ರಯೋಗಶಾಲಾ]

ಪ್ರಯೋಗಋದ್ಧಿ (ನಾ). ಪ್ರದರ್ಶನದಿಂದ ಬರುವ ಆನಂಭವ,—ಪಡೆಯುವ ಸಿದ್ಧಿ : ಇಂಥ ನಾಟಕಗೃಹದೊಳಗೆ ಪ್ರಯೋಗಋದ್ಧಿಯನ್ನು ಪಡೆದ ನಾಟಕವು ರಂಗಭೂಮಿಯ ಮೇಲೆ ರಸದ ಸುರಿಮಳೆಯನ್ನು ಸುರಿಸೀತು (ಕ್ರಜಾಂಕ. ೭೪).

ಪ್ರಯೋಗಿಸು (ಕ್ರಿ). ೧. ಬಳಸು ; ಉಪಯೋಗಿಸು : ವಿದಿತಾರ್ಥ ವಿಷಯಾಸಾಸ್ಪದಮೆ ದಲಾಕ್ಷೇಪಮೆಂಬಳಂಕಾರಂ ಮತ್ತದಱ ವಿಶೇಷ ವಿಭಾಗಮನುದಾಹರಣಮಾರ್ಗದಿಂ ಪ್ರಯೋಗಿಸಿ ತೋರ್ವೆಂ (ಕವಿಗ. ೩-೮೪) ; ಭಟ್ಟಾರರವಧಿಜ್ಞಾನಮಂ ಪ್ರಯೋಗಿಸಿ ಇಂತೆಂದು ಪೇೞ್ದರ್ (ಕಜ್ಞಾಚಾ. ೦೨-೨೮) ; ಕಾರ್ಯವನಱಿವಾತನು ಮೊದಲಲ್ಲಿ ಸಾಮವನೆ ಪ್ರಯೋಗಿಸುವುದು (ಹಂತಕಂ. ೦೭೯-೦೫) ; ಮಾರ್ಗವಿದರ್ ಸಂಖ್ಯೆಯೊಳಂ ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ದರ್ (ಕಭಾದ. ೦೪). ೨. (ಅಸ್ತ್ರ ಶಸ್ತ್ರಾದಿಗಳನ್ನು) ಬಿಡು ; ಎಸೆ ; ಹೊಡೆ : ಕಾಲದೇಶವನ್ನರಿತು ಶತ್ರುಗಳ ಮೇಲೆ ಪ್ರಯೋಗಿಸುತ . . . ಯಶೋವಂತನಾಗು (ಜೈಗೀ. ೨೫೦-೦೩) ; ಕಾಮನು ಪ್ರಯೋಗಿಸಿದ ಕುಸುಮ ಬಾಣಗಳಿಂದ ಈಶ್ವರನು ಅರವೆಣ್ಣಾಗುವನು (ಜಾಒಸ. ೦೬೨). ೩. ಹರಿಸಂ; ಹಾಯಿಸು ; ಪ್ರವಹಿಸುವಂತೆ ಮಾಡು : ಬಿತ್ತುವ ಮುನ್ನ ಬೀಜಗಳ ಮೇಲೆ ವಿದ್ಯುತ್ತನ್ನು ಪ್ರಯೋಗಿಸುತ್ತೇವೆ (ಕಾಂಡಾ. ೦೦೦).

[ಪ್ರಯೋಗ + — ಇಸು]

ಪ್ರಯೋಜಕ (ಗು). ೧. ಉಪಯುಕ್ತವಾದ ; ಅಗತ್ಯವಾದ : ಪ್ರಯೋಜನಕಾರಿಯಹದ : ನಿರ್ಮಾಪಕಶಾಸ್ತ್ರಗಳಾದಕೋ ಜ್ಞಾತವನ್ನು ಪ್ರಯೋಜಕ ಮತ್ತು ಸುಂದರ ವಸ್ತುಗಳ ನಿರ್ಮಾಣಕ್ಕೆ ಉಪಯೋಗಿಸುತ್ತವೆ (ಕಾಕಾ. ೦೦ ಪೀಠಿಕೆ). (ನಾ). ೨. ಉಪಯುಕ್ತವಾದುದು : ರಾಜಕೀಯದೃಷ್ಟಿಯಿಂದ ಮಾತ್ರ ಪಾಶ್ಚಾತ್ಯಕ ಅದಕಲ್ಲೂ ಆಂಗ್ಲರ ರಾಜ್ಯಸ್ಥಾಪನೆ ಭರತಖಂಡಕ್ಕೆ ಬಹಳ ಪ್ರಯೋಜಕವಾಯಿತು (ಜುಗ್ಯಾ. ೦೦೭ ಪೀಠಿಕೆ). ೩. ಉಪಯುಕ್ತನಾದವನು : (ಅ). [ಸಂ.]

ಪ್ರಯೋಜನ (ನಾ). ೧. ಬಳಕೆ ; ಉಪಯೋಗ ; ಪ್ರಯೋಗ : ಸಂಧಿವಿಷಯಂ—ಸಂಧಿಪ್ರಯೋಜನಂ (ಕಭಾಪ ೧. ೩೦ ಪೀಠಿಕೆ). ೨. ಬೇಕಾಗಿರುವಿಕೆ ; ಅಗತ್ಯ ; ಆವಶ್ಯಕತೆ : ಹಸಸಾದ ಕರೆಭೂಮಿಯಲ್ಲಿ ವರ್ಷವರ್ಷ ಕಂಟಿ ಹೊಡೆಯುವ ಪ್ರಯೋಜನವಿಲ್ಲ (ಕಜಾಪ. ೩೩೭). ೩. ಲಾಭ ; ನಫೆ : ಲೋಕದಲ್ಲಿ ಯಾರಿಗೆ ಯಾವುದು ಇಷ್ಟವೋ ಅದೇ ಅವರಿಗೆ ಪ್ರಯೋಜನ (ಹಂಪಾ. ೭೯); ಮಾತಲಿಯೆ ಈ ನನ್ನ ಪ್ರಯೋಜನವು ಇಂದ್ರನಿಗೆ ತಿಳಿಯಲಿಲ್ಲವಲ್ಲಾ (ಜಾಕುಂಕ. ೦೦೩-೩೩). ೪. ಉದ್ದೇಶ : ಗುರಿ : ಕೆಲದಿ ಚೆಂನ್ನವಾಜಿಯವರು ದೊಡ್ಡ ಚೆಂನಪ್ಪಯಗೆ ಬರಶಿ ಕಳುಹಿಸಿದ ಪ್ರಯೋಜನ (ಪ್ರಾಲಿ. ೦೯೭; ೯-೨; ೧೮೫೬). ೫. ಸಮಾರಾಧನೆ ; ಅನ್ನಸಂತರ್ಪಣೆ : ಒಂದಾನೊಂದು ದಿವಸ ಊರೊಳಗೆ ಲಿಂಗವಂತರು ದೊಡ್ಡ ಪ್ರಯೋಜನವನ್ನುಮಾಡಿರಲಾಗಿ (ಕಜಾಗಿ. ೪೩೧).

೬. [ನ್ಯಾಯಶಾ]ಪದಿನಾರು ಬಗೆಯ ಪದಾರ್ಥಗಳಲ್ಲಿ ಒಂದು : ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ. . . ನಿಗ್ರಹಸ್ಥಾನ ಎಂದು ಪದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಶಂರಹಾ· ೦೦೨). [ಸಂ.]

ಪ್ರಯೋಜನಕಾರಿ (ಗು). ೧. ಉಪಯೋಗಕರವಾದ. (ನಾ). ೨. ಉಪಯೋಗಕರವಾದುದು ; ಉಪಯುಕ್ತವಾದುದು : ಸಲಕರಣೆಗಳು ಸರಳರೀತಿಯವುಗಳಾಗಿದ್ದು ಪ್ರಯೋಜನಕಾರಿಯೂ ಆಗಿರಬೇಕು (ಶಪುಸಾ. ೬೨); ಈ ಪೀಠಿಕೆ ಅನುಬಂಧಗಳು ಅತ್ಯಂತ ಅವಶ್ಯಕವಾದುವೂ ಪ್ರಯೋಜನಕಾರಿಗಳೂ ಆಗಿವೆ (ಆಂಶಾ· X ಮುಖ್ಯಾ). [ಸಂ. ಪ್ರಯೋಜನಕಾರಿನ್]

ಪ್ರಯೋಜನವಸ್ತು (ನಾ). ಬಳಕೆಯ ವಸ್ತು; ಉಪಯೋಗಿಸುವ ಪದಾರ್ಥ : ಪ್ರಯೋಜನವಸ್ತುವಿನೊಳ್ ಕರ್ತೃವಿವಕ್ಷೆಯಾಗೆ ಇಸುವಕ್ಕುಂ (ಕಮುಪ್ರ. ೫೬೦ ವೃತ್ತಿ). [ಸಂ.]

ಪ್ರಯೋಜ್ಯ (ಗು). ೧. ಬಳಸಬಹುದಾದ ; ಉಪಯೋಗಿಸಲರ್ಹವಾದ. ೨. ಬಿಟ್ಟ ; ಪ್ರಯೋಗಿಸಿದ ; ಎಸೆದ. (ನಾ). ೩. ಬಳಸಬಹುದಾದುದು ; ಉಪಯುಕ್ತವಾದುದು : ವಿದ್ಯಾಧರ ಶ್ರೇಣಿಯ ಪರಿಭಾಷೆಗಳ್ ನಿನ್ನವಾಗದೆ ಸಾವುಂ ಪ್ರಯಜನಪ್ರಯೋಜ್ಯಂ ಅಲ್ಲದೆಡೆಯೊಳುನ್ಮತ್ತವಿಳಸಿತಂ (ಶಾಂಶಾ. ೬-೧೩ ಪ). ೪. ಆಳು ; ಸೇವಕ. ೫. ಬಡ್ಡಿಗೆ ಕೊಟ್ಟ ಹಣ ; ಮೂಲಧನ ; ಅಸಲು. [ಸಂ.]

ಪ್ರರತ್ನ (ನಾ). ಶ್ರೇಷ್ಠವಾದ ರತ್ನ : ಭೂಭುಜನಿಕರಕಿರೀಟಪ್ರರತ್ನ ಪ್ರಭೂನತಾಂತಪ್ರದ್ಯೋತ ನೂತ್ನೋದಕಜನಿತಫಾಂಭೋಜಂ (ಗಂಗ. ೬-೨). [ಸಂ.]

ಪ್ರರೂಢ (ಗು). ೧. ಪೂರ್ತಿಯಾಗಿ ಬೆಳೆದ; ಚೆನ್ನಾಗಿ ವೃದ್ಧಿಯಾದ : ಆ ಶೈಶವಪ್ರಭೃತಿಪ್ರರೂಢನಿರ್ಭರಪ್ರೇಮರಸರುಮನೇಕಾರ್ಥಶಾಸ್ತ್ರ ಪ್ರಯೋಗಕುಶಲರುಂ (ಆಂಪು. ೦-೬೦ ಪ); ಪ್ರರೂಢಯೌವನಮನೋಹರನುಂ ಕವಚಹರನುಂ ಆದ ನಿಜತನೂಜನಂ ನೋಡಿ (ಶಂತ್ರಪು. ೨-೬೬). ೨. ಹೆಚ್ಚಾದ; ಅಧಿಕವಾದ : ಬರಿಸಿ ಕ್ಷಿತಿಪತಿಯಂ ಸಯ್ತುರಿಸಿ ಪ್ರಿಯ ಕುಶಲವಾರ್ತೆಯಂ ಬೆಸಗೊಂಡು ಸ್ಥಿರಮಿರ್ದು ಪ್ರಭು ನುಡಿಯೆ ಪ್ರರೂಢ ಮುದನಾದನಾತನೆಂಬುದು ದೂಷ್ಯಂ (ಕಚಾ· ೨-೬). (ನಾ). ೩. ಹೊಟ್ಟೆ; ಜಠರ. [ಸಂ.]

ಪ್ರರೂಪಣ (ನಾ). ಚೆನ್ನಾಗಿ ರೂಪಿಸುವಿಕೆ; ಉತ್ತಮವಾದ ನಿರೂಪಣೆ: ನಿರೂಪಿತಾವನಿ ಮನುಷ್ಯಸ್ಥಿತಿ ಪ್ರರೂಪಣಾರ್ಥಂ ಉತ್ತರಸೂತ್ರಾವತಾರಂ (ಕಕ್ರ್ಕಪ್ರ. ೦೬೬). [ಸಂ.]

ಪ್ರರೂಪಿತ (ನಾ). ಹೇಳಿಕೆ; ನಿರೂಪಿತವಾದುದು : ನಿರತಿಶಯಾಲಂಕಾರ ಪ್ರರೂಪಿತಂಗಳ್ಪುರಾಣಕವಿವಿದಿತಂಗಳ್ (ಕಪಾಗ. ೨-೦); ಕರ್ಮಕಾಂಡ ಬಂಧೋದಯ ಸತ್ಯಯುಕ್ತಸ್ವಂ ಮಹಾಧಿಕಾರಂ ಪ್ರರೂಪಿತವಾದುದು (ಗೂಶ್ಯಾ. ೧೬-೦೦). [ಸಂ.]

ಪ್ರರೂಪಿಸು (ಕ್ರಿ). ಹೇಳಿ; ನಿರೂಪಿಸು : ಸ್ಥಾನಸಮುತ್ಕೀರ್ತನಮೇನು ನಿಮಿತ್ತಂ ಬಂದುದೆಂದೊಡೆ ಮುನ್ನಂ ಪ್ರಕೃತಿ ಸಮುತ್ಕೀರ್ತನದಿಂದ ಮಾವುವು ಕೆಲವು ಪ್ರಕೃತಿಗಳು ಪ್ರರೂಪಿಸಲ್ಪಟ್ಟುವವಕ್ಕೆ ಬಂಧಮೇನು ಕ್ರಮದಿಂದಮಕ್ಕುಮೋ ಮೇಣಕ್ರಮದಿಂದಮಕ್ಕುವೋಯೆಂದಿಂತು ಪ್ರಶ್ನ ಮಾಗುತ್ತವಿರಲು (ಗೂಶ್ಯಾ. ೦೦೩-೪). [ಪ್ರರೂಪಣ + —ಇಸು]

ಪ್ರರೋಚನ (ನಾ). ೧. ರುಚಿ ಹುಟ್ಟಿಸುವುದು; ಪ್ರೋತ್ಸಾಹಿಸುವುದು. ೨. [ನಾಟ್ಯ] (ನರ್ತಕಿಯಂ ರಂಗಪ್ರವೇಶದ ಮೂಲಕ ಪ್ರೇಕ್ಷಕರಲ್ಲಿ) ಅಭಿರುಚಿಯನ್ನುಂಟು ಮಾಡುವುದು,– ಆಸಕ್ತಿಯನ್ನು ಕೆರಳಿಸುವುದು: ವಿಚಿತ್ರಸುರಸೂತ್ರಧಾರನಪ್ಸರಃವಾಕ್ರೀ ಪ್ರವೇಶ ಪ್ರದೇಶಪ್ರರೋಚನಾಸಂತರಂ ಪುಷ್ಪಾಂಜಲಿವಿಕ್ಷೇಪಂಗೆಯ್ಮೆ (ಶಾಂಶಾ· ೬-೩೦ ಪ). [ಸಂ.]

ಪ್ರರೋಚನೆ (ನಾ). = ಪ್ರರೋಚನ ೨ : ಸಚಿವೋತ್ತಮರೊಳ್ ರಾಜನೀತಿಶಾಸ್ತ್ರನಾಟಕಪ್ರಾರಂಭಕ್ಕೆ ಸೂತ್ರಧಾರನಾಗಿ ತತ್ಪೂರ್ವರಂಗ ಪ್ರಸಂಗಕ್ಕೆ ಪ್ರರೋಚನೆಯಪ್ಪ ಪ್ರಥಮಪಾತನಿಕೆಯಂ ಪ್ರಸ್ತುತಂ ಮಾಡಿ (ಶಾಂಶಾ· ೨-೩೦ ಪ). [ಸಂ. ಪ್ರರೋಚನ]

ಪ್ರರೋಹ (ನಾ). ೧. ಮೊಳೆಯುವಿಕೆ ; ಅಂಕುರಿಸುವಿಕೆ. ೨. ಮೊಳಕೆ ; ಅಂಕುರ : ಬಲದೇವ ವಾಸುದೇವರ್ . . . ಸುಖದ್ರುಮ ಪ್ರರೋಹದಂತೆಯುಂ . . .ಪ್ರವೇದಪ್ರವರ್ಧಮಾನಮಾಗೆ ಸುಖಮಿರ್ಪ ನ್ನೆಗಂ (ಶಾಂಶಾ. ೦-೬೦ ಪ); ವಿಜಿತೇಂ ಸತ್ಯಪ್ರರೋಹಂ ತುಜುಗಿದಪ್ಪುದು (ಕಾದಂಪು. ೨೩೪); ಕಣ್ಮರಲರೆಮುಚ್ಚಿ ಕಂಡು ಕೊಣಟ್ಟಪ್ಪುದಲ್ಲಿಗೆ ಗೋರಿ ಗೊಂಡದೊಂದೆರಳೆಯನಲ್ಲಿರುಳ್ ಶಶಿ ತೊಡರ್ಚುವನಾತ್ಮವಟಪ್ರರೋಹ ದೊಳ್ (ತಂಪ್ರಕೃ. ೦-೧೨೪). [ಸಂ.]

ಪ್ರರೋಹಣ (ನಾ). = ಪ್ರರೋಹ ೧ : ನಿಖಿಲಶರೀರಪ್ರರೋಹಣಬೀಜ ಭೂತಕಾರ್ಮಣಶರೀರಂ ಕರ್ಮಮೆನೆ ಪಡುಗುಂ (ಕಕ್ರ್ಕಪ್ರ. ೧೧). [ಸಂ.]

ಪ್ರಲಂಪಟ (ನಾ). ಅತಿ ಲಂಪಟ ; ಬಹಳ ಕಾಮುಕನಾದವನು : ದೇವ ಪರನಾರಿಪ್ರಲಂಪಟ ದನುಜಪಾಲಕನೆ . . . ಬಾಳೆಂದಸುರಪಾಠಕರೋವಿ ಕೈವಾರಿಸಲು ಮುಂದೆಯ್ತಂದ ದಶಕಂಠ (ಕಾಶಿಖಂ. ೨೦-೨೨). [ಸಂ.]

ಪ್ರಲಂಬ, ಪ್ರಳಂಬ (ಗು). ೧. ತೂಗುಬಿದ್ದ ; ಇಳಿಬಿದ್ದ ; ಜೋತಾಡುವ : ಪ್ರಲಂಬಕರ್ಣಾಭರಣಪುರಿಕಾವಿತಾಡ್ಯಮಾನ ಕಪೋಲಫಲಕಂ (ಶಾಂಶಾ· ೬-೦೩ ಪ); ನೀಲದ ನೆಲಗಟ್ಟಿಂ ಮಣಿಧೂಲೀಸಾಳಂ ಪ್ರಲಂಬಪಲ್ಲವ ಮೆಸೆಗುಂ (ಅರ್ಧನೇ. ೨-೪೨). ೨. ಉದ್ದವಾದ; ದೊಡ್ಡದಾದ : ಕಂಬುಳಿ ಹುಳು . . .ಹೊಟ್ಟೆಯ ಕೆಳಗೆ ೨-೮ ಜೊತೆ ಹೊಟ್ಟೆಯ ಪ್ರಲಂಬ ಮಾಂಸಲ ಕೀಲುಗಳಿಲ್ಲದ ಬದಲುಕಾಲುಗಳವೆ (ಕೀಟಶ. ೦೫). (ನಾ). ೩. ಇಳಿಬಿದ್ದಿರುವ ಸರ; ಜೋಮಾಲೆ: ಅತಿತರಲಮುಕ್ತಾಮಣಿಪ್ರಲಂಬಂಗಳಿಂದಂ . . . ಅಸುಕ್ರಮಂದಪ್ಪದರ್ಚಿಸಿ(ಆಂಪು· ೨-೩೨ ಪ) ೪. ಕೊಂಬೆ; ರೆಂಬೆ. ೫. ಹಾರ; ಮಾಲೆ. ೬. ಸೌತೆಕಾಯಿ. ೭. ಒಂದು ಬಗೆಯ ಲೋಹ; ತಪರ. ೮. ಪದ್ಯ; ಗಾಥೆ. ೯. ಸ್ತನ. ೧೦. ಬಲರಾಮನು ಕೊಂದ ಒಬ್ಬ ರಾಕ್ಷಸನ ಹೆಸರು : 'ಪ್ರಲಂಬಘ್ನ' ಪರಾ. ಪ್ರಳಂಬ : ೧೧. ಆಧಿಕ್ಯ; ಅತಿಶಯ. ೧೦, ೧೧: ನಿಸ್ಸೀಮ ನಿಕಾಮ ಬಾಹುಸಾಹಸಾತಂಬರಪ್ರಳಂಬನೆಂಬ ಪ್ರಳಂಬನುಮಂ . . . ಕರೆದು (ಜಗಂ. ೩-೨೨ಪ). [ಸಂ.]

ಪ್ರಲಂಬಘ್ನ (ನಾ). ಪ್ರಲಂಬನೆಂಬ ರಾಕ್ಷಸನನ್ನು ಕೊಂದವನು; ಬಲರಾಮ : "ಬಲದೇವಃ . . . ಪ್ರಲಂಬಘ್ನಃ . . . ಹಲಾಯುಧಃ- ಈ ೧೮ ಬಲದೇವನ ಪೆಸರ್" (ಹಶಾಪು· ೬-೨೯); ವಿಘ್ನದಾಯಕ ಶ್ರೇಷ್ಠ ನೆರ್ದಗೇಡಿಯ ಪ್ರಲಂಬಘ್ನ ತಾನೊಡಗೊಂಡು ಬಂದು ವಿಘ್ನವಿಲ್ಲದೆ ಮಾನೆ ದುಂಬಿಸಬೇಕೆಂದು ಲಗ್ನವ ಪೇಳ್ದನನುಜಗೆ (ತೋಹಕ. ೦೩-೦೩). [ಸಂ.]

ಪ್ರಲಗ್ನಕ (ನಾ). ಜವಾಬ್ದಾರಿಯನ್ನು ಹೊತ್ತವನು; ಹೊಣೆಗಾರ: "ಪ್ರತಿಭೂ ಪ್ರಲಗ್ನಂ ಹೊಣೆಗಾಜನಕ್ಕು" (ಪುಂಗಣಾ. ೭೦-೧೬). [ಸಂ.]

ಪ್ರಲಪನ(ನಾ). ೧. ಮಾತನಾಡುವುದು; ಸಂಭಾಷಣೆ. ೨. ಪ್ರಯೋಜನವಿಲ್ಲದ ಮಾತು; ಅಸಂಬದ್ಧಪ್ರಲಾಪ. ೩. ಅಳುವಿಕೆ ; ರೋದನ. [ಸಂ.]

ಪ್ರಲಪಿತ (ಗು). ೧. ಮಾತನಾಡಿದ; ಹೇಳಿದ. ೨. ಗಳಹಿದ: ಹರಟಿದ. (ನಾ). ೩. ಮಾತನಾಡುವುದು. ೪. ಪ್ರಯೋಜನವಿಲ್ಲದ ಮಾತು; ಹರಟೆ. ೫. ಅಳು; ರೋದನ. [ಸಂ.]

ಪ್ರಲಪಿಸು (ಕ್ರಿ). ೧. ಮಾತನಾಡು. ೨. ಗಳಹು; ಹರಟೆ ಹೊಡೆ. ೩. ಅಳು; ರೋದಿಸು: ಇಂತು ಪ್ರಲಪಿಸುವ ರಾಘವನರ್ಧಾಂಗಿಯಿರವಂ ಕಂಡು (ರಾಮಾಶ್ವ. ೩೪-೦೩); ಅವಳು ಯಾವ ಮೂಲೆಯಲ್ಲಿ ಕುಳಿತು ನಾದಿನಿಗಾಗಿ ಪ್ರಲಪಿಸುತ್ತಿದ್ದಾಳೋ (ಮೂಲಾನ. ೨೦೮). [ಪ್ರಲಪನ + — ಇಸು$_3$]

ಪ್ರಲಯ, ಪ್ರಳಯ (ನಾ). ೧. ನಾಶ; ನಿರ್ಮೂಲನ: ಸುಭಟಜನ ಚಮತ್ಕಾರಿ ತೇಜೋಮಹೌರ್ವಾನಲಮುಗ್ರಾರಾತಿವರ್ಗಪ್ರಲಯಕರಮ ದೊಂದೆಯ್ದೆ ತಾಳ್ಪಿತ್ತಗುರ್ವಂ (ಆದಿಪು. ೧೩-೪೫). ೨. ಕಲ್ಪದ ಕೊನೆಯಲ್ಲಿ ಉಂಟಾಗುವ ಪ್ರಪಂಚದ ನಾಶ,-ಅಳಿವು; ಇದರಲ್ಲಿ ನಿತ್ಯಪ್ರಲಯ, ಪ್ರಾಕೃತಪ್ರಲಯ, ನೈಮಿತ್ತಿಕ ಪ್ರಲಯ ಮತ್ತು ಆತ್ಯಂತಿಕಪ್ರಲಯ ಎಂಬ ನಾಲ್ಕುವಿಧಗಳಿವೆ. (೧) ನಿತ್ಯಪ್ರಲಯ-ಸುಷುಪ್ತಿ (ನಿದ್ರೆ). ಆಗ ಪ್ರಾಣಿಗಳ ಸಮಸ್ತ ಶಕ್ತಿಯೂ ಅಡಗಿ ಹೋಗಿರುತ್ತದೆ. (೨) ಪ್ರಾಕೃತಪ್ರಲಯ-ಈಗಿರುವ ಬ್ರಹ್ಮನ ಅವಧಿ ಮುಗಿದ ನಂತರ ಪ್ರಕೃತಿಯೆಂಬ ಮಾಯೆಯಲ್ಲಿ ಆ ಬ್ರಹ್ಮನೊಡನೆ ಆಗುವ ಇಡೀ ಬ್ರಹ್ಮಾಂಡವಿನಾಶ. (೩) ನೈಮಿತ್ತಿಕ ಪ್ರಲಯ-ಚತುರ್ಯುಗಸಹಸ್ರಪರಿಮಿತವಾದ ಕಾಲವು ಬ್ರಹ್ಮನಿಗೆ ಒಂದು ದಿನವಾಗುತ್ತದೆ. ಆ ಕಾಲಮಾನದ ಕೊನೆಯಲ್ಲಿ ಮೂರು ಲೋಕಗಳೂ ನಾಶವಾಗುತ್ತವೆ. (೪) ಆತ್ಯಂತಿಕಪ್ರಲಯ-ಪ್ರತಿ ಜೀವನಿಗೂ ಬ್ರಹ್ಮಜ್ಞಾನದಿಂದ ಉಂಟಾಗುವ ಪರಬ್ರಹ್ಮೈಕ್ಯ: ಪ್ರಲಯೋಗ್ರಜ್ವಾಲೆಯಂ ತಾಳನೆ ಗಣವರನೊರ್ವಂ ಲಲಾಟಾಕ್ಷಿಯೊಳ್ (ವೃತವಿ. ೨೯-೦೬೨); ಪ್ರಪಂಚದ ಸಂಹಾರವೇ ಪ್ರಲಯ (ಹಿಂದಸಾ. ೨೮೪). ೩. ಸಾವು; ಮರಣ. ೪. ಮೂರ್ಛೆ; ವಿಸ್ಮೃತಿ. ೫. ಓಂ ಎಂಬ ಮಂತ್ರಾಕ್ಷರ; ಓಂಕಾರ. ೬. ಲಯ; ಐಕ್ಯ. ೭. [ಕಾವ್ಯಮೀ] ಸ್ತಂಭ, ಸ್ವೇದ, ರೋಮಾಂಚ, ಸ್ವರಭಂಗ, ವೇಪಥು, ವೈವರ್ಣ್ಯ, ಅಶ್ರು ಮತ್ತು ಪ್ರಲಯಗಳೆಂಬ ಎಂಟು ವಿಧವಾದ ಸಾತ್ವಿಕಭಾವಗಳಲ್ಲಿ ಒಂದು; ಮೂರ್ಛೆ; ಪ್ರಜ್ಞೆ ಕಳೆದುಕೊಳ್ಳುವುದು: ಸ್ತಂಭ, ಪ್ರಲಯ, ರೋಮಾಂಚ, ಸ್ವೇದ, ವೈವರ್ಣ್ಯ, ವೇಪಥು, ಅಶ್ರು, ವೈಸ್ವರ್ಯ-ಈ ಎಂಟು [ಸಾತ್ತ್ವಿಕ ಭಾವಗಳಾಗಿವೆ]. ಅವುಗಳಲ್ಲಿ ಪ್ರಜ್ಞೆ ಕಳೆದುಕೊಳ್ಳುವುದು 'ಪ್ರಲಯ' (ದಶರೂ. ೦೯೯). **ಪ್ರಳಯ** : ೨. ಪ್ರಳಯದುರಿ ಕಾಳಕೂಟದ ಗುಳಿಗೆ ಪುರಾಂತಕ ಲಲಾಟನೇತ್ರಾನಳನೊಂದಳವಿಗಮಗ್ಗಳಮವರ್ಗಳ ಮುಳಿಸುಗಳುಂ ಮುಳಿದು ತುಡುವ ದಿವ್ಯೇಷುಗಳುಂ (ಶಂಪಭಾ. ೬-೬೬); ಪ್ರಳಯಕ್ಕೆ ಹೊಱಗು ಕಲಿಕಾಲ ಹೊಗದಂತಕನ ಸುಳಿವವಱೊಳಿಲ್ಲ (ಹಸಕಾ. ೮-೫೯). ೩. "ಪಂಚತಾ, ಕಾಲಧರ್ಮಃ, ದಿಷ್ಟಾಂತಃ, ಪ್ರಳಯಃ . . . ೧೦ ಸಾಯುವುದಕ್ಕೆ ಹೆಸರುಗಳು, ಮರಣ" (ಸಿದ್ಧಾಂತಿ. ೨೬೨). ೭. ಕಾರುಣ್ಯಂ ಹಾಸ್ಯಂ ಶೃಂಗಾರಮಿವಿನಿತಱೊಳಮಕ್ಕೆ ವೈದರ್ಭಿ ಮನೋಹಾರಿ ಪ್ರಳಯಾದ್ಭುತರಸ ವೀರರಸಂಗಳ್ಗೆ ಪೇಟ್ಗೆ ಪಾಂಚಾಳಿಕೆಯಂ (ಕಾವ್ಯಾಪ. ೭೮೮); ಸ್ತಂಭ . . . ಪ್ರಳಯಂಗಳೆಂಬಷ್ಟವಿಧ ಸಾತ್ವಿಕಭಾವಗಳಿಂ (ವಿವೇಕ. ೨೨೬). [ಸಂ.]

ಪ್ರಲಯಕಾಲ, ಪ್ರಳಯಂಕಾಲ (ನಾ). ಪ್ರಪಂಚದ ವಿನಾಶದ ಕಾಲ; ಜಗತ್ತಿನ ಕೊನೆಗಾಲ. **ಪ್ರಳಯಕಾಲ** : "ಸಂವರ್ತಃ, ಪರಿವರ್ತಃ : . . ಮಹಾಪ್ರಳಯಃ-ಈ ಪ್ರಳಯಕಾಲಂ" (ಹಲಾಯು. ೨೦-೦೧೭); ಬಱಿಯ ಬಱಸಿಡಿಲ್ಗಳೆತ್ತೆತ್ತಲುಂ ತುಱಗಿತೆತ್ತೆತ್ತಲುಂ ಪ್ರಳಯಕಾಲದ ಮೇಘಮೆಱಗುತಿವೆ (ಕೈಮಿಭಾ. ೪-೧೦). [ಸಂ.]

ಪ್ರಲಯಭೈರವ (ನಾ). ಪ್ರಳಯಕಾಲದ ರುದ್ರ; ಮಹಾರುದ್ರ : ಪ್ರಲಯಭೈರವನೆಂಬ ಬಿರುದು ಅವನಿಯ ಮೇಲೆ ನೆಲೆಗೊಳಿಸಿ (ಪುರಂದ. ೦-೨೦೬-೩). [ಸಂ.]

ಪ್ರಲಯಾಗ್ನಿ, ಪ್ರಳಯಾಗ್ನಿ (ನಾ). ಪ್ರಪಂಚದ ಲಯಕಾಲದಲ್ಲಿ ಏಳುವ ಬೆಂಕಿ ; ಪ್ರಳಯಕಾಲದ ಬೆಂಕಿ : ಬಂದ ತತ್ಪ್ರಲ[ಪಾಠಾಂ. ೪]ಯಾಗ್ನಿಯೊಲು ಜಗದಂದವಂ ಮಾಡುತ್ತ (ಬಸಪು. ೫೪-೫೬); ಪ್ರಲಯಾಗ್ನಿ ಪೊತ್ತಿ ಲೋಕಂ ದಹಿಸುತಿರೆ (ಶ್ರೀರಾಮಾ. ೦೦೪-೦೨೦). **ಪ್ರಳಯಾಗ್ನಿ**: ಪ್ರಳಯಾಗ್ನಿಯಾದುದೋ ನಿಜಬಳದಳವಂ ತೋಱಲಗ್ನಿ ಬಳೆದೊದವಿದುದೋ (ಬಂಹರಿ. ೦೦-೪೦). [ಸಂ.]

ಪ್ರಲಾಪ, ಪ್ರಳಾಪ (ನಾ). ೧. ಮಾತನಾಡುವಿಕೆ ; ಸಂಭಾಷಣೆ : ಅದೊಂದು ವ್ಯರ್ಥಪ್ರಲಾಪವೆಂದು ಆಕ್ಷೇಪಕರ ಅಭಿಪ್ರಾಯ (ಜೀವಾತ್ಮ. ೦೦೨). ೨. ಅಸಂಬದ್ಧವಾದ ಮಾತು ; ಹರಟೆ : "ಪ್ರಲಾಪಃ, ಅನರ್ಥಕಂ, ವಚಃ — ಪ್ರಯೋಜನವಿಲ್ಲದ ಮಾತಿಗೆ ಪೆಸರು" (ಸಿದ್ಧಾಂತಿ. ೫೪); ಮೆದುಳಿನ ಕಸರತ್ತಿನಿಂದ ಬರುವ ಭಾಗ್ಯವಾದರೂ ಏನು ? ಎಂಬ ಪ್ರಶ್ನೆ ಮೂರ್ಖರ ಪ್ರಲಾಪ (ಜೀವಾತ್ಮ. ೬). ೩. ಅಳು ; ರೋದನ : ಇವಳ ಪ್ರಲಾಪವನ್ನು ನೆರೆಮನೆಯಲ್ಲಿದ್ದ ಕುಂತಿದೇವಿಯು ಕೇಳಿ . . . ಎಂದಳು (ವೀತಿಸಂ. XII, ೨೦) ; ಯುದ್ಧದಲ್ಲಿ ಮೃತರಾದವರ ಸಂಬಂಧಿಗಳಾದ ಸ್ತ್ರೀಯರ ಪ್ರಲಾಪ (ಭಾರದ. ೯೯). ೪. ರೋಗಿಯು (ಸನ್ನಿಪಾತದಿಂದ) ಬಡಬಡಿಸುವುದು ; (ಜ್ವರವು ಅತಿ ಹೆಚ್ಚಾದಾಗ ರೋಗಿಯು) ವ್ಯರ್ಥವಾದ ಮಾತುಗಳನ್ನಾಡುವುದು : ನಡುಕ, ಪ್ರಲಾಪ, ದಾಹ, ಮೈನೋವು (ವೈದ್ಯಸಾ. I, ೮೫) ; ಅಳಿಲೆಕಾಯಿ, ಪರ್ಪಾಟಕ . . . ಕಷಾಯ ಹಾಕಿ, ಶೋಧಿಸಿ ದ್ರಾಕ್ಷಿ ಹಣ್ಣು ಕೊಡಲು, ಪ್ರಲಾಪ, ಮೂರ್ಛೆ . . . ಪೈತ್ಯಜ್ವರ ಮಾಣುವುವು (ಸಕವೈ. ೮೨). 'ಪ್ರಲಾಪಸನ್ನಿಪಾತ' ಪರಾ. **ಪ್ರಳಾಪ** : ೨. "ಪ್ರಳಾಪಮೆಂಬುದು ಬಱುವಾತು" (ಹಲಾಯು. ೨೪-೦೪೯). ೩. ಜೀಯ ನಿಮ್ಮಡಿಗಳಿಗೆ ಗುರು ಗಾಂಗೇಯ ವಿದುರಾದಿಗಳು ಹೇಳಿದ ಜೋಯಿಸವ ಕೈಕೊಂಡಿರೇ ನಮ್ಮಿ ಪ್ರಳಾಪದಲಿ (ಕುಪ್ಯಾಗ. ೩-೩೪) ; ಅಳದವರಳು ತಿರ್ದರು ರತಿಕಾಂತನ ಹಳವಳಿಸುವ ಪ್ರಳಾಪದಲಿ (ಮೋಹತ. ೮-೨೫). ೪. ತೆಗಪಿ ಕುಡಿಯಿಸುಗೆ ಶಿವೆ ಕಳವಿಗೆ ಬಾಳಂ ಕಕ್ಕೆ ಮುಸ್ತೆ ಕರ್ಕಟಕಂ ಮುಟ್ಟಿಗೆಯೆಂಬಿವನಿತುಮುಂ ಪೈತ್ತಿಗಜ್ವರಂ ದಾಹಮುಂ ಪ್ರಳಾಪಮುಮಱಿಗುಂ (ಲೋಕೋಪ. ೯-೦೮). [ಸಂ].

ಪ್ರಲಾಪಂಗೆಯ್ (ಕ್ರಿ). ಅಳು ; ರೋದಿಸು : ಬಡವರ ನಂಟನಾವೆಡೆ ದಯಾಪರನಾವೆಡೆ . . . ಮನೋರಮನಾವೆಡೆ ಪೇಟಲಾಗದೇ ಎಂದು ಪ್ರಲಾಪಂಗೆಯ್ದು (ಆಸಪು. ೬-೧೨೦ ಪ) ; ಅಂತು ಕಾಲಪ್ರಾಪ್ತನಪ್ಪುದುಂ ಲಕ್ಷ್ಮಣನಂತಃಪುರಪುರಂಧ್ರಿಯರ್ ಕಂಡತಿಪ್ರಲಾಪಂಗೆಯ್ವುದುಂ (ಶಂರಾಮಾ. ೦೬-೪೯ ಪ). [ಪ್ರಲಾಪ + ಕೆಯ್$_1$]

ಪ್ರಲಾಪಸನ್ನಿಪಾತ, ಪ್ರಳಾಪಸನ್ನಿಪಾತ (ನಾ). = ಪ್ರಲಾಪ ೪: ಗಂಧಿಕತಗರ, ಹಿರಿಮದ್ದು . . . ಕಾಸಿ ಕೊಡಿಸಲು ಪ್ರಲಾಪಸನ್ನಿಪಾತ ಮಾಣ್ಗುಂ (ವೈದ್ಯಸಾ. I, ೮೭). **ಪ್ರಳಾಪಸನ್ನಿಪಾತ** : ಮೈಯಲ್ಲಿ ನಡುಕ, ಪ್ರಳಾಪ, ದಾಹ . . . ಇವೆಲ್ಲವು ಉಂಟಾದುದೆ ಪ್ರಳಾಪಸನ್ನಿಪಾತವೆಂದರಿವುದು (ಸಕವೈ. ೦೬೫). [ಸಂ.]

ಪ್ರಲಾಪಿಸು, ಪ್ರಳಾಪಿಸು (ಕ್ರಿ). ೧. ಮಾತನಾಡು: (*). ೨. ವ್ಯರ್ಥವಾದ ಮಾತನಾಡು ; ಹರಟು : (*). ೩. ಅಳು ; ರೋದಿಸು : ಪರಮನೀ ಬಾರಿಗೆ ಬದುಕಿದಡೆ ಮರಣವಿಲ್ಲೆನ್ನೆಂದಿಗೆಂದಿಗೆ ನಿರತವೆನುತಂ ರುದ್ರಪಶುಪತಿ ತಾಂ ಪ್ರಲಾ[ಪಾಠಾಂ. ಳಾ]ಪಿಸುತ (ಬಸಪು. ೦೩-೮) ; ನನ್ನ ಕಂದಾ ! ಹಾಹಾ ! ಎಂದು ಪ್ರಲಾಪಿಸಿ ಮೂರ್ಛೆ ಹೋದನು (ವೀತಿಸಂ. I, ೨೩). **ಪ್ರಳಾಪಿಸು** : ೩. ಕಂದರ್ಪನ ದೇಹ ಹತವಾಗೆ . . . ರತಿ ದುಕ್ಕದಿಂದೆ ಪ್ರಳಾಪಿಸುತಿರಲು (ಮೋಹತ. ೮-೩). [ಪ್ರಲಾಪ + — ಇಸು$_3$]

ಪ್ರಲೀನ (ಗು). ೧. ಕರಗಿದ ; ಲೀನವಾದ. ೨. ಹಾಳಾದ ; ನಾಶವಾದ. (ನಾ). ೩. ಲೀನವಾದವನು ; ಐಕ್ಯ ಹೊಂದಿವನು : ಜಂಗಮಪ್ರಾಣಪ್ರಲೀನಾ ಜಂಗಮಪ್ರಾಣಪ್ರದಾನಾ (ಬಸಪು. ೩೬-೦೨). [ಸಂ.]

ಪ್ರಲೋಕಿತ (ನಾ). [ನಾಟ್ಯ] ಕಣ್ಣುಗುಡ್ಡೆಗಳ ಎಂಟು ಬಗೆಯ ಚಲನೆಗಳಲ್ಲಿ ಒಂದು : ಕಣ್ಣು ಆಲಿಗಳ ೮ ಚಲನೆಗಳಿವೆ . . . ೧. ಸಮ . . . ೬. ಪ್ರಲೋಕಿತ (ಅಭಾಸ್ಯ. ೪೬). [ಸಂ.]

ಪ್ರಲೋಭನ (ನಾ). ಆಸೆ ಹುಟ್ಟಿಸುವುದು ; ಮರುಳು ಮಾಡುವುದು ; ಆಮಿಷ : ಸೀತಾಪ್ರಲೋಭನಂ ದೀಪಿಸುವ ಮಾಳ್ಕೆಯಿಂ . . . ತೋರಿದತ್ತೊಮ್ಮೆ (ಶ್ರೀರಾಮಾ. ೨೩೨-೦೦೬) ; ನೀನು ನಾನಾ ವಿಧದ ಪ್ರಲೋಭನವನ್ನು ಬೀರಿ ನನ್ನನ್ನು ನನ್ನ ಬಾಲವಿಧವಾಪದದಿಂದ ಚ್ಯುತಿಗೊಳಿಸಿದೆ (ಅಂಬಿಕೆ. ೦೬). [ಸಂ.]

ಪ್ರಲೋಭನೆ (ನಾ). = ಪ್ರಲೋಭನ : ಚಿತ್ತೈಕಾಗ್ರತೆಯನ್ನು ಭಂಗಗೊಳಿಸುವಂಥ ಪ್ರಲೋಭನೆಗಳಾವುವೂ ಅಲ್ಲಿಲ್ಲದುದರಿಂದ, ಅವನು ಆ ಜಾಗವನ್ನಾರಿಸಿಕೊಂಡಿದ್ದನು (ಪುಸರು. ೩೪) ; ನೀತಿತತ್ವಗಳಿಗೂ ಪ್ರಾಪಂಚಿಕ ಪ್ರಲೋಭನೆಗಳಿಗೂ ನಡುವಣ ಘರ್ಷಣೆ . . . ಪ್ರತಿಪಾದಿತವಾಗಿದೆ (ಕಸಿಕೋ. I, ೬೪೪). [ಸಂ. ಪ್ರಲೋಭನ]

ಪ್ರವಕ್ತೃ (ನಾ). ವಿವರಿಸಿ ಹೇಳುವವನು ; ಪ್ರವಚನಕಾರ ; ವಾಗ್ಮಿ : ಶ್ರದ್ಧಾಳುವೆಂಬೊಂ . . . ಪ್ರವಕ್ತೃವಚನ ಪಾರಾವಾರಾವಗಾಹನ ಪರಿಣತಮತಿವಿಶೇಷನುಂ (ಶಾಪುಂಪು. ೬) ; ಉಪನಿಷತ್ತಿನ ಪ್ರವಕ್ತೃಗಳು ಋಷಿಗಳು (ಭಾರದ. ೩೭). [ಸಂ.]

ಪ್ರವಚ (ನಾ). ೧. ದೊಡ್ಡ ಧ್ವನಿ ; ಭಾರಿ ಶಬ್ದ : "ಕಂಚುಕಂ ಮರ್ಮರ ವರ್ಮ ಚರ್ಮ ಕುಟಜಂ ಪ್ರವಚಂ ಕವಚಾಭಿಧಾನಕಂ" (ಶಾಪಾರ. ೯೯). ೨. ಸಾರುವಿಕೆ ; ಘೋಷಣೆ : (ಕಿ). [ಸಂ.]

ಪ್ರವಚನ (ನಾ). ೧. ಮಾತು ; ನುಡಿ. ೨. ವಿವರಣೆ ; ವ್ಯಾಖ್ಯಾನ : ನಾನೇನು ವಿದ್ಯಾರ್ಥಿಯೆ ತಮ್ಮ ಪ್ರವಚನಕ್ಕೆ ? (ಸಂದ್ರಸ. ೪೪); ಪಾಠ ಪ್ರವಚನಗಳು ನಡೆಯುತ್ತಿರುವಾಗ ಉಪಾಧ್ಯಾಯರ ಕೊರಲಿನೊಂದಿಗೆ ತಮ್ಮದನ್ನೂ ಸೇರಿಸುತ್ತವೆ (ಹಸುಹೊ. ೦೩೬). ೩. ಒಳ್ಳೆಯ ಮಾತು; ಉತ್ತಮವಾದ ಮಾತು. ೪. [ಜೈನ] "ವೀತರಾಗ ಸರ್ವಜ್ಞರಾದ ಆಪ್ತರ ದ್ವಾದಶಾಂಗರೂಪ ಜಿನವಾಣಿ ; ವ್ಯಾಖ್ಯಾನ, ವಿವರಣೆ" (ಶೈಸಕೋ. ೦೬೮) : ಪ್ರಕಟಿತಜಿನಪ್ರವಚನಪ್ರಕಾರದೊಳ್ (ಸುಕುಮಾ. ೬-೬); ಪ್ರವಚನಪರಿಪಠನಕ್ಷಮತೆ ವಾಣಿಯಂ ತೀರ್ಥಯಾನದಕ್ಷತೆ ಪದಮಂ ಕಿವಿಯಂ ಜಿನವರಚರಿತಶ್ರವಣಪಟುತೆ ಪಿಂಗದನ್ನಮಾರ್ಜಿಪೆನಱನಂ (ಸಂದ್ರಪು. ೪-೦೭). [ಸಂ.]

ಪ್ರವಚನಕಾರ (ನಾ). ಧಾರ್ಮಿಕ ವಿಷಯಗಳನ್ನು ವಿವರಿಸುವವನು,— ವ್ಯಾಖ್ಯಾನ ಮಾಡುವವನು : ಇದರಲ್ಲಿ ಧಾಂದೋಗ್ಯರ ಪ್ರವಚನಕಾರರು...ಆತ್ಮವಾದದ ಮಹಿಮೆಯನ್ನು ಬಹಳ ಸುಂದರವಾಗಿ ವರ್ಣಿಸಿದ್ದಾರೆ (ಭಾರದ. ೪೦) ; ಜೈನತತ್ವವನ್ನು ಪ್ರವಚನಕಾರನಂತೆ ವಿವರಿಸಿ, ಕೀರ್ತನಕಾರನಂತೆ ಕಥೆಯಿಂದ ಅದನ್ನು ಉದಾಹರಿಸಿ ಹೇಳುವ ರೀತಿ ಪ್ರೌಢ ಕಾವ್ಯಮಾರ್ಗದಲ್ಲಿ ಹೊಸದಾಗಿದೆ (ಕಸಾಸ. ೦೯೮). [ಸಂ.]

ಪ್ರವಚನಭಕ್ತಿ (ನಾ). [ಜೈನ] ನಾಮಕರ್ಮದ ಹದಿನಾರು ಭಾವನೆಗಳಲ್ಲಿ ಒಂದು ; ಅರ್ಹಂತರ ಅಥವಾ ಆಗಮಗಳ ಮೇಲಿರುವ ಭಕ್ತಿ : ಪ್ರವಚನಭಕ್ತಿ: — ಅರ್ಹದ್ಭಟ್ಟಾರಕರುಂ ಆಚಾರ್ಯರುಂ ಉಪಾಧ್ಯಾಯರುಂ ಆಗಮಮುಂ ಎಂದಿವಱೊಳಪ್ಪ ಭಕ್ತಿಯುಂ (ಕಸ್ತೃಪ್ರ. ೨೬೩). [ಸಂ.]

ಪ್ರವಚನವತ್ಸಲತ್ವ (ನಾ). = ಪ್ರವಚನಭಕ್ತಿ : ದರ್ಶನವಿಶುದ್ಧಿ... ಮಾರ್ಗಪ್ರಭಾವನಾಪ್ರವಚನವತ್ಸಲ [ಶಾಕಾಂ. ೪]ತ್ವಮೆಂಬ ಷೋಡಶ ಭಾವನೆಗಳೊಳ್ (ಶಾಪುಂಪು. ೨೪) ; ಪ್ರವಚನವತ್ಸಲತ್ವಮಿತಿ—ಚಾತುರ್ವರ್ಣ್ಯದೊಳಪ್ಪ ವಾತ್ಸಲ್ಯಮುಂ (ಕಸ್ತೃಪ್ರ. ೨೬೩). [ಸಂ.]

ಪ್ರವಣ (ಗು). ೧. ಇಳಿಜಾರಾದ. ೨. ಬಾಗಿದ ; ಬಗ್ಗಿರುವ. ೩. ಆಸಕ್ತವಾದ; ತತ್ಪರವಾದ; ಮಗ್ನವಾದ: ಗುರುಶೈಕ್ಷ್ಯಗ್ಲಾನಸಂಘ ಪ್ರವಣಗಣತಪೋನಿಷ್ಠಿತಾನೀತಸಾಧೂತ್ಕರದೊಳ್...ಕೈಕೊಂಡು ಪರ್ಯಷ್ಟಿಯಂ (ಸುಕುಮಾ. ೪-೦೭) ; ಪ್ರಣವಧ್ಯಾನಪ್ರವಣಪದ್ಮಾಸನಸ್ಥರೈ (ಕ್ರೌಂಪರ್ಯ. ೨೨). ೪. ನಮ್ರನಾದ ; ವಿನೀತನಾದ : ಪ್ರವಣ ಪಂಡಿತ ತಪೋಭರಮಂಡಿತಚಿಂತನಾ (ಶಾಲಾಸ್ಯ. ೧-೦೦-೨೩). (ನಾ). ೫. ಆಸಕ್ತನಾದವನು ; ತತ್ಪರನಾದವನು : ಪ್ರವಣನೆಂದರೆ ಆಸಕ್ತಿಯುಳ್ಳವನು (ಹೊಸುಗ. ೬೬). ೬. ಆಸಕ್ತಿ; ತತ್ಪರತೆ : ಆವೊಂ ವಾದಿ ಕಥಾತ್ರಯ ಪ್ರವಣದೊಳ್ ವಿದ್ವಜ್ಜನಂ ಮೆಚ್ಚೆ ವಿದ್ಯಾವಷ್ಟಂಭಮನಪ್ಪುಕೆಯ್ದು... ತ್ರೈವಿದ್ಯಶ್ರುತಕೀರ್ತಿದಿವ್ಯಮುನಿವೋಲ್ ವಿಖ್ಯಾತಿಯಂ ತಾಳ್ದಿದಂ (ಶಂಠಾಮಾ. ೦-೨೪). ೭. ವಿನೀತ ; ನಮ್ರನಾದವನು : "ಪ್ರವಣಃ, ಪ್ರಹ್ವಃ—ಈ ೨ ವಿನೀತಂ" (ಹಲಾಯು. ೫೯-೦೯೭) ; ರಿಪುಗೆ ಮಾರಿ ಪಗೆವರ ಗಣ್ಡಂ ಪ್ರವಣಂಗಂ ಜಕ್ಕಿಗನತಿಧವಳಯಸಂ (ಸೌಇಇ. XX, ೨೪-೨೦;1034). ೮. ಪ್ರಸಿದ್ಧನಾದವನು ; ಕೀರ್ತಿಶಾಲಿ : ಪ್ರವಣನೊಳ್—ಪ್ರಸಿದ್ಧವಾದವನಲ್ಲಿ (ಕಸುದ. ೨೦೪ ಪೀಕ). ೯. ನಾಲ್ಕು ದಾರಿಗಳು ಕೂಡುವ ಸ್ಥಳ ; ಚೌಕ : "ಪ್ರವಣಃ—೧. ಕ್ರಮದಿಂದ ವಾಟವಾಗಿ ಇಳಿಯತಕ್ಕ ನೆಲ, ಬೊಗ್ಗಿದವನು, ಈ ೨ ಕ್ಕೂ ಪೆಸರು, ನಾಲ್ಕು ಬೀದಿಗಳೂ ಸೇರಿದ ಚೌಕಕ್ಕೆ ಪೆಸರಾದಾಗ" (ಸಿದ್ಧಾಂತಿ. ೩೮೮). [ಸಂ.]

ಪ್ರವಣತೆ (ನಾ). ತತ್ಪರತೆ ; ಆಸಕ್ತಿ : ಮರಾಠ ಸರದಾರರ ವೀರವೃತ್ತಿಯೂ, ಸಾಹಸ ಪ್ರವಣತೆಯೂ. ಲಾವಣಿಕಾರರ ರಸಿಕವೃತ್ತಿಯೂ ಮಹಾರಾಷ್ಟ್ರಮನೋಧರ್ಮದ ಕೆಚ್ಚಿನ ಘಟಕಗಳಾಗಿವೆ (ಮಸಾಹಿ. ೨೯) ; ಆಯಾ ಮಾರ್ಗದಲ್ಲಿ ಹೆಚ್ಚಿನ ಪ್ರವಣತೆ ಇದ್ದವರನ್ನು ಆಯಾ ಅಂಕಿತಗಳಿಂದ ಕರೆದುದಾಗಿರಬೇಕು (ಕನ್ನಇ. ೦೭). [ಸಂ. ಪ್ರವಣತಾ]

ಪ್ರವತೆ (ನಾ). ಒಂದು ಬಗೆಯ ಸಸ್ಯ : "ಪ್ರವತಾ— ಕೋಟಿಕುಟುಮ" (ಕಿಷಧಿ. ೯೪). [?]

ಪ್ರವಯಣ (ನಾ). ರಥದ ಕುದುರೆ ಮೊದಲಾದುವನ್ನು ನಡೆಸಲು ಉಪಯೋಗಿಸುವ ಕೋಲು,—ಚಾವಟಿ,—ಮೊನೆಗೋಲು. [ಸಂ.]

ಪ್ರವಯಸ್ಕ (ನಾ). ೧. ತುಂಬ ವಯಸ್ಸಾದವನು ; ಅತಿವೃದ್ಧ. ೨. ಶಕ್ತಿವಂತನಾದವನು : ಮೂಱನೆಯ ವಕ್ತೃವೆಂಬೊಂ ಪ್ರವಯಸ್ಕನುಂ ವಪುಷ್ಮಂತನುಂ . . . ಚಾರಿತ್ರವಂತನುಮೆಂದಷ್ಟಗುಣಸಮನ್ವಿತನಕ್ಕುಂ. ಅಲ್ಲಿ ಪ್ರವಯಸ್ಕನೆಂಬೊಂ ಅತಿವೃದ್ಧನುಮತಿಬಾಳಕನುಮಲ್ಲದೆ ಸಮತಿಕ್ರಾಂತ ದಶವರ್ಷನುಮತಿಕ್ರಾಂತಸಪ್ತತಿಸಂವತ್ಸರನುಮಕ್ಕುಂ (ಶಾಪುಂಪು. ೫). [ಸಂ.]

ಪ್ರವರ (ಗು). ೧. ಶ್ರೇಷ್ಠವಾದ ; ಉತ್ತಮವಾದ ; ಮುಖ್ಯವಾದ : ಪ್ರವರನೃಪಕುಮಾರಾತ್ತೋದಯಾ[ದಿ] ಪ್ರಮೋದಾಸವಸಮುದಿತಸೇನಾರಾತಿವೃತ್ತಾಂತವೃತ್ತಂ (ಕವಿರಾ. ೩-೨೦೨) ; ನಮ್ಮೊಳಗೊರ್ವನಂ . . . ಪ್ರವರವಿಹಂಗಮಕುಲಚರ್ಕ್ರವರ್ತಿಪಟ್ಟಕ್ಕೆ ಯೋಗ್ಯನಂ ಮಾಡಿ (ಪಂಶಕಂ. ೨೨೩-೫). ೨. ಹಿರಿಯ ; ಜ್ಯೇಷ್ಠ. (ನಾ). ೩. ಪ್ರಮುಖವ್ಯಕ್ತಿ ; ಪ್ರಧಾನವ್ಯಕ್ತಿ : "ಅಗ್ರ್ಯಂ . . . ಪ್ರವರಂ . . . ಅಗ್ರಣೀ —ಈ ೧೩ ಮುಖ್ಯಂ" (ಹಲಾಯು. ೧೧೫-೫) ; ಕವಿ ಗಮಕಿ ವಾದಿ ವಾಗ್ಮಿ ಪ್ರವರರ್ ಗುಣವರ್ಮನೊಳ್ ಸಮಂಬರ್ಪರಾರ್ (ಪುಸ್ಕಪು. ೦-೬೪) ; ಅಪ್ರತಿಮ ಶಿವಗುಣಕುಲಕೆ ದಂಡಪ್ರಣಾಮವನಾಚರಿಸಿ . . . ಆ ಪ್ರವರರಿಗೆ

ಬಿನ್ನವಿಸಿ (ಬಸಪು. ೪೬-೬೩). ೪. ಪೀಳಿಗೆ ; ವಂಶ : ಅವರು ಪಿತ್ರಾರ್ಜಿತದ ರಾಜ್ಯಪ್ರವರಪಾತ್ರರು (ಕುಬ್ಯಾಸ. ೦೨-೦೪) ; ನಿನಗೆ ಸಂಧ್ಯಾವಂದನೆ ಬರುವುದೇ ? ನಿನ್ನ ಪ್ರವರವೇನು ಹೇಳುವಿಯಾ (ಕಪಿ. ೩೯೦). ೫. ಸಂತತಿಯ ಮೂಲಪುರುಷರ ವರ್ಗ. ೬. ಕುಲದ ಪೂರ್ವಿಕ ; ವಂಶದ ಮೂಲಪುರುಷ ; ಪೂರ್ವಜ. ೭. ನಲವತ್ತೆರಡು ಗೋತ್ರಗಳಲ್ಲಿ ಯಾವುದಾದರೂ ಒಂದು. ೮. ಸಂತಾನ ; ಸಂತತಿ. ೯. ಒಂದು ಬಗೆಯ ಸಸ್ಯ : "ಪ್ರವರ—ತ್ರಿಫಲೆ, ಕುಸ್ತುಂಬರಿ, ಲಾಮಂಚ[ಲಾಮಚ]" (ಓಸಧಿ. ೯೪). ೧೦. (ಆಲಂ) ಅನವಶ್ಯಕವಾದ ವಿವರಣೆ : ತನ್ನ ಪ್ರವರವನ್ನು ಶುರು ಮಾಡುವ ಲಕ್ಷಣಗಳನ್ನು ತೋರಿಸಿದ (ಸುಸೋಸಂ. ೦೦೦). ೧೧. [ಛಂದ] ಅಕ್ಷರಛಂದಸ್ಸಿನಲ್ಲಿ ಮೂರನೆಯ ಛಂದಸ್ಸಾದ ಮಧ್ಯೆಯಲ್ಲಿ ಒಂದು ಭೇದದ ಹೆಸರು : ಪವನೋದ್ಭವದಿಂ ಪ್ರವರಂ ಪ್ರವರೇ (ಛಂದೋಂಬು. ೨-೩೬). [ಸಂ.]

ಪ್ರವರಶೈವ (ನಾ). ೧. ಶೈವಧರ್ಮದ ಆರು ಬಗೆಗಳಲ್ಲಿ ಒಂದು : ಆದಿಶೈವ ಮಹಾಶೈವ ಅನುಶೈವ ಅಂತರ (ಅವಾಂತರ) ಶೈವ ಪ್ರವರಶೈವ ಅಂತ್ಯಶೈವ ಎಂಬ ಈ ಆಱು ಶೈವದ ನೀತಿಯಲ್ಲ (ಸಿಪ್ಠೇಸ. ೪-೯). ೨. (ಸೂಕ್ಷ್ಮಾಗಮದ ಪ್ರಕಾರ) ಶೈವಧರ್ಮದ ಏಳು ಬಗೆಗಳಲ್ಲಿ ಒಂದು : ಅನಾದಿಶೈವ ಆದಿಶೈವ ಮಹಾಶೈವ ಅನುಶೈವ ಅವಾಂತರಶೈವ ಪ್ರವರಶೈವ ಅಂತರಶೈವವೆಂಬವೇ ಸಪ್ತಶೈವಂಗಳವಱಲ್ಲಿ . . . ಶಿವದೀಕ್ಷಾಯುಕ್ತರಾದ ಅಂಭಷ್ಠ ಕುಲಾಲಾದಿಗಳೇ ಪ್ರವರಶೈವರು (ಏಪೇಕ. ೬೭). [ಸಂ.]

ಪ್ರವರಾಕ್ಷರ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಹನ್ನೆರಡನೆಯ ಛಂದಸ್ಸಾದ ಜಗತಿಯಲ್ಲಿ ಒಂದು ಪ್ರಭೇದ : ಪವಮಾನಮರ್ಕಮರುತದ್ವಯ ಸಂತವಿರಾಮಮೆಂಬಿನೆಗಮಾಱನೆಯೊಳ್ ಕವಿರಾಜಹಂಸಮತದಿಂ ಜಗದೊಳ್ ಪ್ರವರಾ[ಶಾಕಾಂ. ವಿತಾ]ಕ್ಷರಾಹ್ವಯಮನೋದಬಲೇ (ಛಂದೋಂಬು. ೨-೦೩೫). [ಸಂ.]

ಪ್ರವರೆ (ನಾ). ಶ್ರೇಷ್ಠಳಾದವಳು : ಪವನೋದ್ಭವದಿಂ ಪ್ರವರಂ ಪ್ರವರೇ (ಛಂದೋಂಬು. ೨-೩೭). [ಸಂ. ಪ್ರವರಾ]

ಪ್ರವರ್ತ (ಗು). ತೊಡಗಿದ ; ವ್ಯವಹರಿಸಿದ : ಪೂಗಳಂ ತವೆ ಕೊಯ್ದು ಧರಣೀಭಾಗದೊಡೆಯನನಂತು ಕಾಣುತನಾಗತಾತೀತಪ್ರವರ್ತಜ್ಞಾನನಿಧಿಯಾಗಿ (ಬಸಪು. ೪೬-೬). [ಸಂ.]

ಪ್ರವರ್ತಕ (ಗು). ೧. ಕಾರ್ಯದಲ್ಲಿ ತೊಡಗುವಂತೆ ಮಾಡುವ,—ತೊಡಗಿಸುವ. ೨. (ದುಷ್ಕಾರ್ಯಕ್ಕೆ) ಪುಸಲಾಯಿಸುವ ; ಚಿತಾವಣೆ ಮಾಡುವ : 'ಪ್ರವರ್ತಕಿ' ಪರಾ. (ನಾ). ೩. ಕೆಲಸದಲ್ಲಿ ತೊಡಗಿರುವುದು ; ಪ್ರವೃತ್ತಿ : ಪುಣ್ಯ ಪಾಪ ಸ್ವರ್ಗ ನರಕ ಬಂಧ ಮೋಕ್ಷ ಪ್ರವರ್ತಕ ನಿವರ್ತಕ ಆದಿಯಾದ ಕರ್ಮಭ್ರಮೆ (ಸನ್ಮತ. ೪. ೫೬೨-೦೨೩೦). ೪. ಮೂಲಪುರುಷ ; ಮೊದಲಿಗ : ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ (ಆದಿಪು. ೩-೦೩ ಪ) ; ಭವಕರ್ಮ ಸಂಸ್ಕಾರಪ್ರವರ್ತಕನು (ಬಸಪು. ೫೫-೦೯). ೫. ಸ್ಥಾಪಕ ; ಸ್ಥಾಪನೆ ಮಾಡಿದವನು ; ಸಂಸ್ಥೆ, ಮತ, ಸಿದ್ಧಾಂತ ಮೊದಲಾದುವುಗಳನ್ನು ಪ್ರಾರಂಭಿಸಿದವನು : ಡಿಥಿರಾಂಬ್ ಎಂಬ ಸಾಮೂಹಿಕಗೀತಗಳ ರಚನಕಾರರೇ ರುದ್ರಪಾಟಕದ ಪ್ರವರ್ತಕರಾದರು (ಅಂಕಾ. ೨೦). ೬. ನಿರ್ಣಯಕಾರ ; ನ್ಯಾಯನಿರ್ಣಯ ಮಾಡುವವನು. [ಸಂ.]

ಪ್ರವರ್ತಕಿ (ನಾ). ದಂರ್ಬೋಧನೆ ಮಾಡುವ ವ್ಯಕ್ತಿ : ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯ ಪ್ರವರ್ತಕಿಯ ದಾಸಿಯ . . . ಒಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿವರು (ಕೈಮಿಶಾ. ೩-೫೮). [ಸಂ. ಪ್ರವರ್ತಕೀ]

ಪ್ರವರ್ತನ (ನಾ). ೧. ಮುನ್ನಡೆ ; ಮುಂದುವರಿಯುವಿಕೆ : ನರಕಂ ತುರಗನಿಕುರುಂಬ ಕೀಲಾಲಕಲ್ಲೋಲಪ್ರವರ್ತನಾನೇಕನದನದೀಪ್ರವಾಹ ಬಾಹುಳ್ಯದುಸ್ತರಾವತ ರಣಮಾರ್ಗಮುಂ (ಸಂಶಾಪ. ೦೩-೫೦ ಪ) ; ಜಘನ್ಯ ಭೋಗಭೂಮಿಪ್ರವರ್ತನಮೆರಡು ಕೋಟಿ ಕೋಟಿ ಸಾಗರೋಪಮದ ಕಡೆಯ ಪಳಿತೋಪಮದೆಂಟನೆಯ ಭಾಗಮುಳಿಯೆ (ಸಂಶಾಪ. ೦-೬೯ ಪ). ೨. ತೊಡಗುವುದು : ಪಂಚಾಣುವ್ರತಾದಿಪ್ರವರ್ತನಸ್ವಭಾವಸಂಯಮಮುಂ (ಆದಿಪು. ೦೫-೦೩ ಪ). ೩. ಚಟುವಟಿಕೆ ; ಕಾರ್ಯಶೀಲತೆ. ೪. ನಡತೆ ; ನಡವಳಿಕೆ : ದ್ವಿಜಮಾರ್ಗವನೆ ದಿಟವಾಗಿ ನೀ ಹಿಡಿದಾಡಿದಡೆಯಮಗಾಗದೀ ಕರ್ಮಕ್ರಿಯಾಚಾರಪ್ರವರ್ತನವು (ಬಸಪು. ೩-೬೯). ೫. ರೀತಿ ; ಕ್ರಮ. [ಸಂ.]

ಪ್ರವರ್ತನೆ (ನಾ). = ಪ್ರವರ್ತನ ೧ : ಸರ್ವಜಗದ ಜೀವದ ಪ್ರವರ್ತನೆಯ ಚಾರಿತ್ರಂಗಳ ನೆನಹುಮಾತ್ರದಿಂದ ಶಿವನು ಒಂದೇ ವೇಳೆಯಲ್ಲಿ ನಿರ್ಮಿಸಿದನು (ಸನ್ಮತ. ೪. ೦೬೦-೩೬೦) ; ಹಿಂದಣದ ಕಾಲ ಪ್ರವರ್ತನೆಯಿಂದೆ ಸಜ್ಜನಭಕ್ತಿಯೊಳು ಬಳಿಸಂದು ನಿಶ್ಚಲಭಾವದಿಂದಾ ಚರಿಸುತಿರು (ಬಸಪು. ೪-೬೦). [ಸಂ. ಪ್ರವರ್ತನ]

ಪ್ರವರ್ತಿ (ಗು). ೧. ಮುನ್ನಡೆವ ; ಕ್ರಮಿಸುವ. ೨. ಕ್ರಿಯಾಶೀಲವಾಗಿರುವ. ೩. ವ್ಯಾಪ್ತವಾದ ; ವಿಸ್ತಾರವಾದ. (ನಾ). ೪. ತೊಡಗುವವನು ; ಅನುಸರಿಸುವವನು : ಯಮ ನಿಯಮಯೋಗವ್ರತಾಯತಶಮದಮಾಶ್ರಯಸಚ್ಚರಿತನುತ್ತಮ ಶಿವಾಚಾರ ಪ್ರವರ್ತಿನಿರಸ್ತ ಸಕಳಾರ್ಥಿ (ಬಸಪು. ೦೯-೩). [ಸಂ. ಪ್ರವರ್ತಿನ್]

ಪ್ರವರ್ತಿತ (ಗು). ೧. ಮುನ್ನಡೆಸಿದ ; ಸಾಗಿಸಿದ : ಮಂತ್ರಿಮುಖ್ಯರುಂ ಪುರಾತನಚಕ್ರವರ್ತಿಪ್ರವರ್ತಿತಮಾರ್ಗಮಿದೆಂದು ಕಾಕಿಣೀರತ್ನದಿಂದಲ್ಲಿ ಮುನ್ನಿರ್ದೊಂದು ಪ್ರಶಸ್ತಿಯಂ ಪರಾಮೃಷ್ಟಂ ಮಾಡಿ (ಶಾಂತಿಪು. ೦೦-೬೩ ಪ). ೨. ತೊಡಗಿದ : ನಿತ್ತ್ಯಪ್ರವರ್ತ್ತಿತದಯದಾನಧರ್ಮ್ಮೋದ್ಯೋಗಿನಿ (ಸೌಇಇ. XX. ೪೬-೦೦ ; 1072). ೩. ಹಬ್ಬಿದ ; ವ್ಯಾಪ್ತವಾದ : ಸೌಭಾಗ್ಯನಿಧಾನದೀಪವರ್ತ್ತಿ ಸಕಳದಿಗನ್ತರಪ್ರವರ್ತ್ತಿತಕೀರ್ತ್ತಿ (ಸೌಇಇ. XX. ೪೬-೦೪ ; 1072). [ಸಂ.]

ಪ್ರವರ್ತಿಸು (ಕ್ರಿ). ೧. ವರ್ತಿಸು ; ವ್ಯವಹರಿಸು : ಪ್ರತಿಕ್ಷಣಂ ವಿಶರಾರುಗಳ್ ಚಿತ್ತಕ್ಷಣಂಗಳ್ ಪೂರ್ವಾಪೂರ್ವ ಚಿತ್ತವಿಶೇಷಪ್ರಭವಂಗಳ್ ಪ್ರಬಂಧದಿಂದಂ ಪ್ರವರ್ತಿಸುವುವು (ಶಾಂತಿಪು. ೬-೦೪೨ ಪ) ; ಶೋಷಣೆ ದೋಹನೆ ಸ್ಥಾಪನೆ ಚಾಲನೆ ಕಳಾಪಮಂ ಮಾಡಿ ತ್ರಿದೋಷಾದಿಗಳಂ ಪ್ರವರ್ತಿಸಲೀಯದೆ (ಆದಪ. ೨೯-೮೭) ; ಕಷ್ಟಮಂ ಮಾಳ್ಪಾ ಜಗಚ್ಛತ್ರು ಮನಸಿಜಭ್ರಷ್ಟನಂ ಗೆಲ್ವವೋಲ್ ಶೈವವಂ ತತ್ವಸನ್ನಿಷ್ಠೆ ತಲ್ಲೋಕಂಗಳೊಳ್ ಪ್ರವರ್ತಿಸಲೀಶನರಸುಗೆಯ್ವುತ್ತಿರ್ದನು (ಸಿಪು. ೨೯-೪೩). ೨. (ಕಾಲವು) ನಡೆ ; ಸಾಗು : ವ್ಯಯಮೆಮ್ಬು ಸ[ಂ]ವತ್ಸರಂ ಪ್ರವರ್ತ್ತಿಸೆ (ಇಆ. XII. ೨೦೯-೦೫; 814) ; ಶಕವರ್ಷಮೆಣ್ಬುನೂಱ ಅಯ್ದನೆಯ ವರ್ಷಂ ಪ್ರವರ್ತ್ತಿಸುತ್ತಿರೆ (ಎಇ. XXI. ೩೫-೩ ; 883) ; ತ್ರಿಸಾಗರೋಪಮ ಕೋಟಾಕೋಟಿಸ್ಥಿತಿಯಿಂ ಪ್ರವರ್ತಿಸುವಂದಾ ಕಾಲದ ಮನುಷ್ಯರು ಚಾಮೀಕರನಿರ್ಮಳಶರೀರರುಂ (ಕಾಪುಂಪು. ೯). ೩. ಆರಂಭವಾಗು ; ಪ್ರಾರಂಭವಾಗು : ಒದಗದಿನ್ನುಂ ಮುರಾರಿಯ ಸಮರಮರ್ಜುನನ ಕದನಂ ಪ್ರವರ್ತಿಸದು (ಕೈಮಿಶಾ. ೦೦-೫೨). ೪. ಆಚರಿಸು ; ಅನುಸರಿಸು : ಪರಮೇಶ್ವರ ಧರ್ಮಪ್ರಭಾವನೆಯಂ ಪ್ರತಿದಿನಂ ಪ್ರವರ್ತಿಸಿಯುಂ (ಅಜಪು. ೦೨-೪); ಭಕ್ತಗೋಷ್ಠಿಸುಸಂಗತಿಯೊಳಾ ಬಸವನುಂ ತಾವುಂ ಪ್ರವರ್ತಿಸಲು (ಬಸಪು. ೬೦-೨). [ಪ್ರವರ್ತನ+ —ಇಸ್ಸು]

ಪ್ರವರ್ಧ (ಗು). ಬೆಳೆಯುವ : ಅಮಿತಸಂಸೃತಿಜೀವಘಟಚಕ್ರಮಲ ಕರ್ಮಬಲಪ್ರವರ್ಧಭ್ರಮಣಮೊಡಗೂಡಲ್ಕೆ (ಬಸಪು. ೨೦-೨೯). [ಸಂ.]

ಪ್ರವರ್ಧತೆ (ನಾ). ಬೆಳವಣಿಗೆ : ಬಳಿಕಾ ಗರ್ಭದೊಳಗೆ ಮೂಱು ಪೊಱಗೆ ಮೂಱು ವರ್ತಿಸುವಜಾಯತೆ ಅಸ್ತಿತೆ ವಿಪರಿಣತೆ ಪ್ರ[ಪಾಠಾಂ.ವಿ] ವರ್ಧತೆ ಅಪಕ್ಷೀಯತೆ ವಿನಶ್ಯತೆ ಎಂಬ ಷಡ್ಭಾವವಿಕಾರಮುಳ್ಳಾತನೆನಿಸಿ (ಏಪೇಶ-೨೫೬). [ಸಂ. ಪ್ರವರ್ಧತಾ]

ಪ್ರವರ್ಧನ (ಗು). ೧. ವೃದ್ಧಿಪಡಿಸುವ ; ಹೆಚ್ಚಿಸುವ : ಬಸವನೆಂಬ ಪ್ರಮಥನೊರ್ವಂ ನಿಶಿತಸದ್ಭಕ್ತಿಪ್ರವರ್ಧನಕಾರಣಾರ್ಥದಲಿ ವಸುಮತಿಗೆ ಬಂದಿದ್ದಪನು (ಬಸವು. ೨೦-೨೯). ೨. ಬೆಳೆಯುವ ; ವರ್ಧಿಸುವ : ಅತಿ ಪ್ರವರ್ಧನಪ್ರಜಾನುರಾಗನುಮತಿಪ್ರಬಲರಣರಾಮನುಮೆನಿಸಿದ ರಣರಂಗ ಸಿಂಹನಿಂ (ಗದಾಯು.೨-೭ ಪ). (ನಾ). ೩. ಬೆಳವಣಿಗೆ ; ವೃದ್ಧಿ : ವಿಶ್ವಯಶಃಪ್ರವರ್ಧನಮಂ ಆಚಾಮ್ಲವರ್ಧನಮಂ ನೋಂತಳ್ (ಸುಕುಮಾ.೯-೦೪). [ಸಂ.]

ಪ್ರವರ್ಧಮಾನ (ಗು). ೧. ಅಭಿವೃದ್ಧಿ ಹೊಂದುತ್ತಿರುವ ; ಏಳಿಗೆ ಹೊಂದುತ್ತಿರುವ : ಬಲದೇವ ವಾಸುದೇವರ್ . . . ಮಾತಾಪಿತೃಗಳನುರಾಗದೊಡನೆ ಪ್ರಮೋದಪ್ರವರ್ಧಮಾನಮಾಗೆ ಸುಖಮಿರ್ಪನ್ನೆಗಂ (ಶಾಂತಿಪು. ೦-೬೦ ಪ). ೨. ಬೆಳೆಯುತ್ತಿರುವ. [ಸಂ.]

ಪ್ರವರ್ಧಿತ (ಗು). ಬೆಳೆದ ; ವೃದ್ಧಿಯಾದ : ಮೋದದಿಂ ಜಾಬಾಲ ಕೈವಲ್ಯಾದಿ ಶಾಖೆಗಳೊಳ್ ಪ್ರವರ್ಧಿತವಾದ ಭಸ್ಮೈಶ್ವರ್ಯಪದವಿ ಸಮಗ್ರವಾಯ್ತೆನಗೆ (ಬಸವು.೪೩-೭೫). [ಸಂ.]

ಪ್ರವರ್ಧಿಸು (ಕ್ರಿ). ಬೆಳೆ; ವೃದ್ಧಿಯಾಗು : (ಕ). [ಪ್ರವರ್ಧನ+-ಇಸ್ಸು]

ಪ್ರವಲ್ಹಿಕೆ (ನಾ). ಒಗಟು ; ಸಮಸ್ಯೆ : "ಓಗಟೆಯದು ಪ್ರಹೇಳಿಕೆ ಪ್ರವಲ್ಹಿಕೆ [ಪಾಠಾಂ. ಪ್ರವಲ್ಲಿಕೆ, ಪ್ರವವ್ವಿಕೆ] ಯುಂ" (ಮಂಗರಾ. ೨೬-೭); ಉಲ್ಲಸಿತ ಪ್ರವಲ್ಹಿ [ಲ್ಹಿ] ಕಾಪಾನಗಾನಾದಿ ವಿವಿಧವಿನೋದವಿಧಾಯಿಬಾಳಿಕಾ ಲೋಳಲೋಚನಮರೀಚಿಪುಂಜವಿಸರದಿಂ ಕುಸುಮಿತಮಾಗೆಯುಂ (ಪರ್ಧಪು. ೬-೪೪ ಪ). 'ಪ್ರಹೇಳಿಕೆ' ಪರಾ. [ಸಂ. ಪ್ರವಲ್ಹಿಕಾ]

ಪ್ರವಹ (ಗು). ೧. ಮುಂದಕ್ಕೆ ಹೋಗುವ ; ಹರಿಯುವ ; ಪ್ರವಹಿಸುವ. (ನಾ). ೨. ಹೊರಗೆ ಹೊರಡುವುದು : "ಪ್ರವಹಃ, ಬಹಿಃಗಮನಂ — ಗೃಹಾದಿಗಳಿಂದ ಈಚೆಗೆ ಬರುವಿಕೆ, ಹೊರಕ್ಕೆ ಹೊರಡುವಿಕೆ "(ಸಿದ್ಧಾಂತಿ. ೩೬೦). ೩. ಗಾಳಿ; ವಾಯು. ೪. ವಾಯುದೇವ : ಗಣಪ ಮಿತ್ರರು ಸಪ್ತಋಷಿಗಳು ವಹ್ನಿ ನಾರದ ವರುಣನು ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು (ಪುರಂದ. ೦-೦೩೦-೩). [ಸಂ.]

ಪ್ರವಹಣ (ನಾ). ೧. ಓಟ; ಹರಿವು : "ಪ್ರವಹಣಂ, ಡಯನಂ — ಈ ೨ ರಥದ ಹರಿ" (ಹಲಾಯು. ೬೩-೨೯೦); ಇವುಗಳ ಯೋಗದಿಂದ ಈ ಪ್ರಜ್ಞಾ ಪ್ರವಹಣತಂತ್ರಗಳೂ ನವ್ಯವಾಗುತ್ತವೆ (ಕಾವ್ಯಕು.೩೨). ೨. ಹಡಗು ; ಜಹಜು : "ಪೋತಃ, ಪ್ರವಹಣಃ—ಈ ೨ ಭೈತ್ರಂ" (ಹಲಾಯು. ೦೦೬-೩೩). ೩. ತೆರೆಯಿರುವ ಮೇನೆ ; ಅಂದಣ : "ಕರ್ಣೀರಥಃ, ಪ್ರವಹಣಂ, ಡಯನಂ — ೩ ಮನುಷ್ಯರು ಹೊರುವ ವಿಮಾನದ ಹೆಸರು, ಡೋಲಿಗೂ ಹೆಸರು " (ಸಿದ್ಧಾಂತಿ.೨೫೨). [ಸಂ.]

ಪ್ರವಹಿಸು (ಕ್ರಿ). (ನೀರು) ಮುಂದೆ ಸಾಗು : ವಸುಮತಿಯೊಳು ಶುಭ್ರಸಂಕಾಶದಿಂ ಪ್ರವಹಿಸುತಿರ್ದಳಾ ಪುಣ್ಯಗಂಗೆ (ಪೋಷಕ. ೬-೩೪); ವನ ಮಧ್ಯದೊಳ್ ಪ್ರವಹಿಸುತ್ತಲಿರುವ ನದಿ (ಸೌಗಂಧಿ. ೨೯೯-೯); ಮೆಯ್ ಸಿರಿಗೆ ಪೋಡಶವಸಂತವೀಚಿಯನೊತ್ತಿ ಪ್ರವಹಿಸಿತು ಕಾಲನದಿ ರಾಮ ಲಕ್ಷ್ಮಣಭರತಶತ್ರುಘ್ನಜೀವನದಿ (ಶ್ರೀರಾಮಾ. ೨೬-೨). [ಪ್ರವಹ + — ಇಸ್ಸು]

ಪ್ರವಳ (ಗು). ವೇಗವಾಗಿ ಚಲಿಸುವ ; ರಭಸವಾಗಿ ಚಲಿಸುವ : ಪ್ರವಳ ಕರಿ ಮಕರ ಪೂತ್ಕಾರವಾತದಿಂದುದ್ದಮೊಗೆವ ಜಲಬಿಂದುಗಳಿಂ ದಿವದೊಳೆ ತಾರಕಿತಂ ಮಾಡುವುದು ನಭೋಭಾಗಮಂ ತದಂಭಃಪೂರಂ (ಕಂದ್ರಪು. ೦೦-೪೯). [ಸಂ. ಪ್ರವಲ]

ಪ್ರವಾಣಿ (ನಾ). ನೆಯ್ಗೆಯವರ ಲಾಳಿ ; ಹಾಸಂಎಳೆಗಳ ನಡುವೆ ಹೊಕ್ಕುಎಳೆಗಳನ್ನು ಹಾಯಿಸುವ ಲಾಳಿ. [ಸಂ.]

ಪ್ರವಾದ (ನಾ). ೧. ಶಬ್ದವನ್ನು ಮಾಡುವುದು. ೨. ಹೇಳುವುದು; ಹೇಳಿಕೆ : 'ಪ್ರವಾದಿಸು' ಪರಾ. ೩. ಸುದ್ದಿ ; ಸಮಾಚಾರ : ಅವರು ಮಹಮ್ಮದನಿಗೆ ಭೂತವು ಹಿಡಿದಿದೆಯೆಂದು ಪ್ರವಾದವನ್ನೆಬ್ಬಿಸಿ ಹರಡತೊಡಗಿದರು (ಶೈಗಂಬ. ೨೨); ಅವನನ್ನು ಕಾಳಗುಡ್ಡನೆಂದು ಪ್ರತಿ ನಾಮಧೇಯದಿಂದ ಕರೆಯುತ್ತಿದ್ದರೆಂದೂ ಪ್ರವಾದವಿತ್ತು)ಕೋಹಿಪೂ.೪೪). ೪. ಜನರ ಆಡುಮಾತು ; ವದಂತಿ ; ಗಾಳಿಸುದ್ದಿ : ಇಲ್ಲಿ ವಿಶೇಷವಾಗಿ ಮಹತ್ತು ನಡೆಯುವುದೆಂದು ಪ್ರವಾದವಿದೆ (ಮಾಮರಾ. ೪೬); ನಿಂತು ಕೊಂಡೇ ಮಠದ ಬೋದು ಹಾಗೂ ತೊಲೆಗಳ ಮೇಲೆ ಬರೆಯುತ್ತಿದ್ದನೆಂಬ ಪ್ರವಾದವಿದೆ (ಶರಸ. ೭೬೦). [ಸಂ.]

ಪ್ರವಾದಿ (ನಾ). ೧. ಶಬ್ದವನ್ನು ಮಾಡುವುದು; ೨. ಮಾತನಾಡುವುದು. ೩. (ದೇವರ ಪ್ರತಿನಿಧಿಯಾಗಿ) ಪ್ರಚಾರ ಮಾಡುವವನು, ಬೋಧಕ : ಸರ್ವಜ್ಞ ಪಂಡಿತರ ಕವಿಯಲ್ಲ, ಪಾಮರರ ಪ್ರವಾದಿ (ಶರಸ. ೬೭೦); ಅದಕ್ಕೆ ಸಾಧುಗಳು, ಸಂತರು, ಪ್ರವಾದಿಗಳು . . . ಉತ್ತರ ಕೊಡುತ್ತ ಬಂದಿದ್ದಾರೆ (ಧರ್ಮಸಾ .೦). [ಸಂ. ಪ್ರವಾದಿನ್]

ಪ್ರವಾದಿಸು (ಕ್ರಿ). ದೈವಿಕವಾದ ಮಾತುಗಳನ್ನು ಹೇಳು,—ವಿವರಿಸು. [ಪ್ರವಾದ + — ಇಸ್ಸು]

ಪ್ರವಾರಣ (ನಾ). ೧. ಕೇಳಿದುದನ್ನು ಕೊಡುವುದು ; ಬಯಸಿದುದನೆಲ್ಲ ಪೂರೈಸುವ ದಾನ ; ಮಹಾದಾನ : "ಪ್ರವಾರಣವೆಂಬುದು ಮಹಾದಾನಂ" (ಹಲಾಯು. ೦೨೬-೬೬). ೨. ಫಲಾಭಿಲಾಷೆಯಿಂದ ಮಾಡುವ ದಾನ ; ಕಾಮ್ಯದಾನ : "ಪ್ರವಾರಣಂ — ಕಾಮ್ಯದಾನಂ, ಫಲಾಪೇಕ್ಷೆಯಿಂದ ಕೊಡುವದಕ್ಕೆ ಪೆಸರು" (ಸಿದ್ಧಾಂತಿ. ೩೫೫). [ಸಂ.]

ಪ್ರವಾಲ, ಪ್ರವಾಳ (ನಾ). ೧. ಚಿಗುರು ; ಪಲ್ಲವ : "ಪಲ್ಲವಾಂಕುರಮಾ ಪ್ರವಾಲ[ಪಾಠಾಂ. ಳ]ಮೆನಲು ಎಳೆಯ ಕೊನರಕ್ಕುಂ" (ಮಂಗರಾ. ೩೨-೪). ೨. ಹವಳ ; ವಿದ್ರುಮ : "ಪವಳಂ ಪ್ರವಾಲಂ[ಪಾಠಾಂ ಳಂ] ಕಪೋತಾಂಘ್ರಿ ವಿದ್ರುಮಂ ಹವಳಮಕ್ಕು" (ಮಂಗರಾ. ೪೩-೪೦) ೩. ವೀಣೆಯ ದಂಡ : ಮೂರುಸ್ಥಾಯಿಗಳಲ್ಲಿ (ಸ್ವರ)ಶುದ್ಧಿಗಾಗಿ ಇದರ ಪ್ರವಾಲವು ಸ್ವಲ್ಪ ಉದ್ದವಾಗಿರುತ್ತದೆ (ಕಶುಪ್ರ. ೧). ಪ್ರವಾಳ: ೧. "ಪ್ರವಾಳಃ, ಪಲ್ಲವಾಂಕುರಃ—ಈ ೨ ಮರದ ಕೊನರ್" (ಹಲಾಯು. ೩೦-೩೦) ; ಲೋದ್ರ ಲವಂಗಪ್ರಕರ ಪ್ರವಾಳರುಚಿರಂ . . . ಕಣ್ಗೊಳಿಸುಗುಂ ಋಷ್ಯಾಶ್ರಮೋಪಾಂತದೊಳ್ (ಶಾದಂಪೂ. ೨೦೩); ಕಾಂತಾ ಕಚಾಳಿಪ್ರಚಯದೊಳಬಳಾಂಘ್ರಿಪ್ರವಾಳೌಘದೊಳ್ . . . ತಾನಿರ್ದನಾ ಸ್ಥಾನದೊಳತುಳ ವನಸ್ಪರ್ಧಿಯೊಳ್ಳೂವಸಂತಂ (ರಾಜಶೇ. ೯-೬೬). ೨. ಕಣ್ಗೆಸೆವುದು ಲಹರೀಲೋಳಬಾಳಪ್ರವಾಳ (ಎಳ. VIII, ಸೂರಣ. ೩೨೫-೬ ; 1178) ; ಭಾಳಾಕ್ಷದ್ಯುತಿ ಬಾಡವಾಗ್ನಿಗೆ ಜಟಾಜೂಟಂ ಪ್ರವಾಳಕ್ಕೆ ಸರ್ಪ್ಪಾಳಂಕಾರಮದಾಹಿಕೋಟಿಗೆ . . . ಎಣೆಯಾಗಲು (ಶಾಸಪ. ೬೫-೫ ; 1179) ; ವದನಂ ಚಂದ್ರನಿಭಂ ವಿಲೋಚನಯುಗಂ ಪಂಕೇಜಪತ್ರಪ್ರಭಂ ರದನಂ ವಜ್ರಸಮಂ ಪ್ರವಾಳಸದೃಶಂ ದಂತಚ್ಛದಂ . . . ಭೂಪಾಳನಾ (ರಾಜಶೇ. ೩-೬). ೧, ೨ : ಕೃತಿಯಿಂತಿದಕ್ಕೆ ಮೊದಲಾವುದೆಂದೆನೆ ಪತಿವ್ರತೆಯಂತೆ ಕಾಂತಾನುಕೂಲದಿಂ ಕೌರವಕ್ಷಿತಿವರನ ಸೇನೆಯಂತಾ ದ್ರೌಣಿಯಿಂ ವೃಕ್ಷದಂತಾ ಪ್ರವಾಳದಿಂದ . . . ಒಪ್ಪಿತು ಸಮುದ್ರಂ (ಭಾವಸಂ. ೦-೨೩). ೩. "ಪ್ರವಾಳಃ, ವೀಣಾದಂಡಃ — ವೀಣೆಯ ದಂಡಿಗೆಕೋಲಿನ ಹೆಸರು" (ಸಿದ್ಧಾಂತಿ. ೫೯); ಬೀಣೆಯಂ ಮಿಡಿದು

ನೋಡಿ ತಂತಿಯೊಳ್ ತನುರೋಮಮಂ ಸೋರೆಯೊಳ್ ಶಲ್ಯಮಂ ಪ್ರವಾಳದೊಳ್ ಪಾಷಾಣಮಂ ತೋಱಿ ಕುಡುವೊಡೆ ನಿರ್ದೋಷಮಪ್ಪ ವೀಣೆಯಂ ಕುಡಿಮನೆ (ಅರ್ಥಪಂ. ೬-೦೮ ಪ). ೪. ಕೂದಲು. ೫. ಹಸಿರು ಬಣ್ಣ. ೬. ಕೆಂಪು ಬಣ್ಣ : "ಎಳೆದಳಿರುಂ ರೋಮ ನೇಗಿಲ ಈಚು ಪಚ್ಚೆ ವಿಪಂಚಿ ಬಾಲಂ ಪವಳಂ ಸಲೆ ಕೆಂಪಿದೆಂಟು ನಾಮಂ ಚಲುವಿಂ ರಾಜಿಪ ಪ್ರವಾಳಶಬ್ದಂ" (ಪಾಪಾಕಂ. ೩೮). [ಸಂ.]

ಪ್ರವಾಸ (ನಾ). ೧. ಪರಸ್ಥಳಕ್ಕೆ ಹೊರಟು ಬರುವುದು; ಪರಸ್ಥಳದ ಪ್ರಯಾಣ.—ಸಂಚಾರ : ತನ್ನೊಡವುಟ್ಟಿದರ್ಗಾದ ಪ್ರವಾಸಾಯಾಸಂ ಗಳ್ಗಂ ದೆಸೆಗಂ ಮನ್ಕು ಮಿಕ್ಕು ಬರೆ (ಶಂಶಕಾ. ೩-೮೦ ಪ) ; ಹಿಂದೆ ಯಾರಣ್ಯಪ್ರವಾಸದಿ ಬಂದ ದೂರ್ವಾಸಾದಿ ಋಷಿಗಳಿಗಂದು ತೃಪ್ತಿಯ ನೆಸಗಲೋಸುಗ (ಗಗಶಾ. ೦೩-೪೮) ; ಬಲು ಚಿನ್ನಾಗಿದೆ, ನಿಮ್ಮ ಪ್ರವಾಸದ ಏರ್ಪಾಟು ! (ಹಸುಹೂ. ೩೨೮). ೨. [ಕಾವ್ಯಮೀ] ವಿಪ್ರಲಂಭಶೃಂಗಾರದ ಪೂರ್ವಾನುರಾಗ, ಮಾನ, ಪ್ರವಾಸ ಮತ್ತು ಕರುಣಾತ್ಮಕವೆಂಬ ನಾಲ್ಕು ಬಗೆಗಳಲ್ಲಿ ಒಂದು ; ನಲ್ಲನು ಸಂಚಾರದಲ್ಲಿರುವುದು: ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಿಂತೆ ನೀನುಮೆನ್ನನೆ ನಡೆ ನೋಡುತುಂ ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾನನುವಿವೆನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ—ಇದು ಪ್ರವಾಸಂ (ಕಾವ್ಯಪ. ೩೦೭) : ಪೂರ್ವಾನುರಾಗ ಮಾನಾಖ್ಯ ಪ್ರವಾಸ ಕರುಣಾತ್ಮಕ ವೆಂಬ ವಿಯೋಗಚತುಷ್ಟಯವಿಶಿಷ್ಟರಿಂ ಪ್ರಚ್ಛನ್ನ ಪ್ರಕಾಶ ವಿಪ್ರಲಂಭ ವಿದಗ್ಧರಿಂ (ಏಪೇಕ. ೦೮೯). [ಸಂ.]

ಪ್ರವಾಸಕಥನ (ನಾ). ದೇಶ, ವಿದೇಶಗಳಲ್ಲಿ ಮಾಡಿದ ಪ್ರವಾಸವನ್ನು ಕುರಿತ ವಿವರಣಾತ್ಮಕವಾದ ನಿರೂಪಣೆ : ತನ್ನ ಪ್ರವಾಸಕಥನವನ್ನು ಬರೆದಿಟ್ಟು ಎಂಬತ್ತೆಂಟನೆಯ ವಯಸ್ಸಿನಲ್ಲಿ ಇಹಲೋಕಯಾತ್ರೆ ಮುಗಿಸಿದನು (ಪ್ರವಾಇ. I, ೦೩೮). [ಸಂ.]

ಪ್ರವಾಸನ (ನಾ). ೧. ಪರಸ್ಥಳಕ್ಕೆ ಕಳುಹಿಸುವುದು ; ಊರಿನಿಂದ ಹೊರಗೆ ಕಳುಹಿಸುವುದು. ೨. ದೇಶಭ್ರಷ್ಟನನ್ನಾಗಿ ಮಾಡುವುದು; ಗಡೀಪಾರು ಮಾಡುವುದು. ೩. ಕೊಲ್ಲುವಿಕೆ ; ವಧೆ : "ಮಾರಣಂ . . . ಪ್ರವಾಸನಂ . . . ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೯-೩೨೩) ; ಪ್ರವಾಸನಕ್ಕೆ (ಕೊಂದು ಹಾಕುವುದಕ್ಕೆ) ನಾನೊಪ್ಪುವುದಿಲ್ಲ (ಶಶಾಕುಂ. ೦೦೦). [ಸಂ.]

ಪ್ರವಾಸಪತ್ರ (ನಾ). (ಒಬ್ಬನು ಒಂದು ದೇಶದಲ್ಲಿ ಪ್ರಯಾಣ ಮಾಡಲು ಮತ್ತು ಹಾಗೆ ಮಾಡುವಾಗ ತಕ್ಕ ಸಂರಕ್ಷಣೆ ಪಡೆಯುವ ಹಕ್ಕನ್ನು ಹೊಂದಿರಲು ಆ ದೇಶದ ನಿಯುಕ್ತಾಧಿಕಾರಿಯು ಕೊಡುವ) ಪ್ರವಾಸಾಧಿಕಾರಪತ್ರ ; ರಹದಾರಿ : "ಪ್ರವಾಸದ ರಹದಾರಿ ; ಪ್ರವಾಸಪತ್ರ ; ಪಾಸ್‌ಪೋರ್ಟು" (Pass—port. ಪತ್ರಿಕಾ. ೬೦) ; ಸಾಮಾನುಗಳನ್ನು ತೂಕ ಹಾಕಿಸುವುದು, ಪ್ರವಾಸಪತ್ರ ("ಪಾಸ್‌ಪೋರ್ಟ್") "ವೀಸಾ" ಮೊದಲಾದುವುಗಳನ್ನು ತನಿಖೆ ಮಾಡಿಸುವುದು . . . ಇದರಲ್ಲಿ ವೇಳೆ ಹಾಗೂ ಹೀಗೂ ಕಳೆಯಿತು (ಸಂಟಲು. ೯೯). [ಸಂ.]

ಪ್ರವಾಸಮಂದಿರ (ನಾ). ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ : ಅವರು ಪ್ರವಾಸಮಂದಿರದಲ್ಲಿ ಇಳಿದುಕೊಂಡರು (ಶಕಪು. ೩-೫೩). [ಸಂ.]

ಪ್ರವಾಸಸಾಹಿತ್ಯ (ನಾ). ಪ್ರವಾಸಕಥನದ ಬರವಣಿಗೆ : ನಮ್ಮಲ್ಲಿ ಪ್ರವಾಸ ಸಾಹಿತ್ಯ ಬಂದುದು ಈಚೆಗೆ (ರೂಢಿ). [ಸಂ.]

ಪ್ರವಾಸಿ (ನಾ). ಪ್ರವಾಸ ಮಾಡುವವನು ; ಯಾತ್ರಿಕ : ತಾನು ಕಂಡ ಪ್ರವಾಸಿಗಳನ್ನೂ ನಾವಿಕರನ್ನೂ ವಿಚಾರಿಸಿ ತಾನೆ ರಚಿಸಿದ ಆತನ ಗ್ರಂಥವು ಪ್ರತ್ಯಕ್ಷತಃ ತೀರ ನಿರ್ದುಷ್ಟವೂ ಅಲ್ಲ . . . ನಿಷ್ಕೃಷ್ಟವೂ ಅಲ್ಲ (ಪ್ರಾಪ್ರಸಿ. ೬೦) ; ನಮ್ಮ ದೇಶಕ್ಕೆ ಬಂದು ಹೋದ ಪ್ರವಾಸಿಗಳ . . . ಕಥನಗಳನ್ನು ಹೇಳಿದ್ದಾಗಿದೆ (ಪ್ರವಾಇ. II. vii ಪ್ರಸ್ತಾವನೆ). [ಸಂ.]

ಪ್ರವಾಸಿಕೇಂದ್ರ (ನಾ). ಪ್ರವಾಸಿಗಳ ಆಕರ್ಷಣೆಯ ಮುಖ್ಯಸ್ಥಳ : ನಂದಿಬೆಟ್ಟ ಪ್ರವಾಸಿಕೇಂದ್ರವಾಗಿದೆ (ರೂಢಿ). [ಸಂ.]

ಪ್ರವಾಸಿಗ (ನಾ). = ಪ್ರವಾಸಿ : ಆ ವೃದ್ಧಿಯಲು ಎಣ್ಬರ್ ಪ್ರವಾಸಿಗರುಣ್ಬ ಸತ್ರಕ್ಕೆ ಕೊಟ್ಟ ಮೊದಲ್ ಗದ್ಯಾಣಮಿರ್ಪ್ಪತ್ತಯ್ದು (ಸೌಇ. XI-i, ೯೨-೩೯; 1054) ; ಹದಿಮೂಱು ಕಮ್ಮ ಗರ್ದ್ದೆಯಂ ಬಂದ ಪ್ರವಾಸಿಗರುಣ್ಬಂತಾಗಿ ಆಚಂದ್ರಾರ್ಕಸ್ತಾಯಿ ಮಾಡಿ (ಕಇ. IV. ೨೫-೨೦; 1054); ದೇಸಿಗ ಪ್ರವಾಸಿಗಳ ಆಹಾರದಾನಕ್ಕೆ ಬಿಟ್ಟ ಸತ್ರಂ (ಎಇ. VII. ೫೧೦. ೦೯-೦೪ ; 1080). [ಪ್ರವಾಸ + —ಇಗ]

ಪ್ರವಾಸಿಬಂಗಲೆ (ನಾ). = ಪ್ರವಾಸಮಂದಿರ : ಪ್ರವಾಸಿಬಂಗಲೆಯ ಆಳುಗಳು ಕಾಫಿ ತಂದರು (ಹಸುಹೂ. ೩೬೨). [ಪ್ರವಾಸಿ + ಬಂಗಲೆ]

ಪ್ರವಾಸಿಮಂದಿರ (ನಾ). = ಪ್ರವಾಸಮಂದಿರ : ಆ ಊರಿಗೆ ಒಂದು ಮೈಲಿ ದೂರದಲ್ಲಿ ಲಕ್ಷಣವಾದ ಪ್ರವಾಸಿಮಂದಿರವಿದೆ (ಸಂಟಲು. ೪೬) ; ಹರ್ಷವರ್ಧನ . . . ದೇಶದಲ್ಲೆಲ್ಲ ಪ್ರವಾಸಿಮಂದಿರಗಳನ್ನೂ, ಬೌದ್ಧಸಂಘಾರಾಮಗಳನ್ನೂ ನಿರ್ಮಿಸಿದ್ದಾನೆ (ಪ್ರವಾಇ. I. ೨೨೨). [ಸಂ.]

ಪ್ರವಾಸೋದ್ಯಮ (ನಾ). ದೇಶ ವಿದೇಶಗಳ ಜೀವನಪದ್ಧತಿ, ಸಂಸ್ಕೃತಿ, ನಾಗರಿಕತೆಗಳನ್ನು ಅರಿಯಲು ಅಥವಾ ವಿಹಾರಾರ್ಥವಾಗಿ, ಪ್ರೇಕ್ಷಣೀಯಸ್ಥಳಗಳಿಗೆ ಪ್ರವಾಸ ಮಾಡುವ ಜನರಿಗೆ ಅನುಕೂಲಗಳನ್ನು ಒದಗಿಸುವ, ಸಂಚಾರಕ್ಕೆ ಸಂಬಂಧಿಸಿದ ವ್ಯವಸ್ಥಿತವಾದ ಏರ್ಪಾಟು : ಅಭಿವೃದ್ಧಿಶೀಲದೇಶಗಳಲ್ಲಿ ಪ್ರವಾಸೋದ್ಯಮಕ್ಕೆ ಸರ್ಕಾರದಿಂದ ಹೆಚ್ಚು ಪ್ರೋತ್ಸಾಹ ದೊರೆಯಬೇಕು (ರೂಢಿ). [ಸಂ.]

ಪ್ರವಾಹ (ನಾ). ೧. ಹರಿಯುವಿಕೆ ; ಪ್ರವಹಿಸುವಿಕೆ: "ಓಘಃ, ಪ್ರವಾಹಃ . . . ರಯಃ —ಈ ೬ ತೊಱೆಯ ಹರಿಹಂ" (ಹಲಾಯು. ೦೦೦-೪೬); ನವರೌಪ್ಯಕುಂಭಮೋ ನಾಕತರಂಗಿಣೀಪ್ರವಾಹದೊಳಿದೆ ಕಾಣಲಾದುದೆನಲ್ . . . ಪೊಳೆಯುತಿರ್ದ್ದುದು ಚಂಡಮರೀಚಿಮಂಡಲಂ (ಜಗಿ. ೯-೬೦). ೨. ದಂಡೆಯ ನೈಸರ್ಗಿಕಮಿತಿಯನ್ನು ಅತಿಕ್ರಮಿಸಿ ಹರಿಯುವ ಹೊನಲು ; ನೆರೆ : ದಕ್ಷಿಣದ ನದಿಗಳು ಆಳದಲ್ಲಿ ಹರಿಯುವುದರಿಂದ ಪ್ರವಾಹದ ಅಪಾಯವೇನೋ ಕಡಿಮೆ (ಪಪಕಾ. ೨೫). ೩. ಎಡೆ ಬಿಡದಿರುವಿಕೆ ; ಅವಿಚ್ಛಿನ್ನವಾದ ಮುನ್ನಡೆ : "ಪ್ರವಾಹಃ, ಪ್ರವೃತ್ತಿಃ—ಅವಿಚ್ಛಿನ್ನವಾಗಿ ಹರಿಯುವ ನೀರು ಮುಂತಾದವುಗಳ ಪರಂಪರೆ, ಪ್ರಸರಿಸುತ್ತಾ ಇರುವುದು" (ಸಿದ್ಧಾಂತಿ. ೩೬೦). ೪. ಒಂದು ನರಕದ ಹೆಸರು : ನಾದ ಪ್ರವಾಹ ರುಕ್ಷಸುಪ್ರವಾಹ ಮೇಷವೆಂಬೈದು ಮುತ್ರಿನರಕಂಗಳ ಮಧ್ಯದಲ್ಲಿ ಚಂಡವೆಂಬರಸುನರಕವಿಹುದು (ಏಪೇಕ. ೦೫೨). [ಸಂ.]

ಪ್ರವಾಹಿ (ನಾ). ಹರಿಯುವಂತಹುದು ; ದ್ರವ : ಘನ, ಪ್ರವಾಹಿ, ವಾಯುರೂಪ ಈ ಮೂರು ರೂಪಗಳಿಂದ ಪದಾರ್ಥಗಳು ಕಣ್ಣಿಗೆ ಬೀಳುತ್ತವೆ (ಮುಂಅಇ. ೩-೫೦). [ಸಂ. ಪ್ರವಾಹಿನ್]

ಪ್ರವಾಹಿಕೆ (ನಾ). ಅತಿಸಾರದಲ್ಲಿ ಒಂದು ವಿಧ : ವಾಯುವಿನಿಂದ ಮಲ ಶ್ಲೇಷ್ಮ ರಕ್ತಂಗಳು ಕೆಲನಾಗುತ್ತಿರಲಾಗಿ ಮಲವಿಲ್ಲದೆ ನೊರೆಸಹಿತ ಬರೀ ನೀರೇ ಸುರಿವುದು ಅದು ಪ್ರವಾಹಿಕೆ ಎನಿಸಿಕೊಂಬುದು. ಭಾಷೆಯಲ್ಲಿ ಇದನೇ ನೀರಕೊಂಬು ಎಂಬರು. ಅದಕ್ಕೆ ಎಣ್ಣೆ, ತುಪ್ಪ, ಮೊಸರು, ಜೇನುತುಪ್ಪ, ಶುಂಠಿ, ಖಂಡಸಕ್ಕರೆ, ಇಷ್ಟನೂ ಸಮಾಂಶವಾಗಿ ಕೂಡಿಸಿ ಕೊಡಲು ಆ ಕ್ಷಣದಲ್ಲಿ ಪ್ರವಾಹಿಕೆ ಪರಿಹರವಹುದು (ವೃಕೃಶಾ. I, ೨೨೩). [ಸಂ. ಪ್ರವಾಹಿಕಾ]

ಪ್ರವಾಹಿನಿ (ನಾ). ನದಿ : ಮಹಾಪ್ರವಾಹಿನೀಸಲಿಲಸಮ್ಮಿಶ್ರಕರ್ಪೂರದಳ ಬಹುಳಕಾಂತಿದಂತುರಿತ ಚಂದ್ರಕಾಂತಕಲಶಂಗಳಿಂ . . . ಮನಂಗೊಳಿಪ ದೇವಪೂಜಾಗೃಹಮಂ ಪೊಕ್ಕು (ಹಂಪಾಪು. ೦೨-೨ ಪ). [ಸಂ. ಪ್ರವಾಹಿನೀ]

ಪ್ರವಾಹಿಸು (ಕ್ರಿ). ಹರಿ ; ಪ್ರವಹಿಸಂ : ಪರಮನೆರ್ದೆ ಕಟ್ಟನೆ ಕರಗಿ ಮೇಣ್ಪ್ರವಾಹಿಸಿತೊಯೆನೆ ಗಂಗೆ ಕಂಗೊಳಿಸಿತು (ಪಜ್ಜಾ. ೦೩-೩೦) ; ಅಡಿಗಡಿಗೆ ಹತ್ತುಸಾವಿರಲಕ್ಷಕೋಟಿಗಿಮ್ಮಡಿಯಾಗಿ ಪೆಚ್ಚಿ ಪ್ರವಾಹಿಸಿ . . . ಜಲಮಯವಾಗಲು (ಕಾಪ್ರ. ೨೬-೨೬) ; ಕಾವೇರಿಯು . . . ಪ್ರವಾಹಿಸಳು (ಕೇಪಪ. ೨೩-೩೦). [ಪ್ರವಾಹ + —ಇಸ್ಸು]

ಪ್ರವಾಳ ' ಪ್ರವಾಲ ' ನೋ.

ಪ್ರವಾಳಮಣಿ (ನಾ). ೧. ಒಂದು ಬಗೆಯ ರತ್ನ ; ಹವಳ. ೨. [ಕಾಮಶಾ] ಒಂದು ವಿಧವಾದ ದಂತಕ್ಷತ : ರಾಗೋಪಗೂಢ ಅಂಕುಲಯಾನಕ ಪ್ರವಾಳಮಣಿ . . . ವರಾಹಚರ್ವಿತಮೆಂಬಷ್ಟವಿಧ ರದನಕ್ಷತ ಲಾಕ್ಷಣಿಕರಿಂ (ಪಜ್ಜಿ. ೦೮೯) ; ಆ ಎಡಗಲ್ಲದಲ್ಲಿ ಪಲ್ಲು ತುಟಿಯ ಎರಡರ ಶೇಷಯೋಗದಿಂ ಅಡಿಗಡಿಗೆ ಒಂದೇ ಠಾವಿನಲ್ಲಿ ದಂತಕ್ಷತ ಮಾಡುತ್ತಿರಲು ಅಭ್ಯಾಸಸಾಧನೆಯಿಂ ಪ್ರವಾಳಮಣಿ ಎಂಬುದಹುದು (ಕಾಮಶಾ. ೨೨೬). [ಸಂ. ಪ್ರವಾಲಮಣಿ]

ಪ್ರವಿಕಸಿತ(ಗು). ಚೆನ್ನಾಗಿ ಅರಳಿರುವ ; ವಿಕಾಸವಾದ : ಪ್ರವಿಕಸಿತಾಂ ಬುಜವನಮಂ ಸವಿಶೇಷಂ ಪೋಲ್ಗುಮೆಂಗೆ ವಾಕ್ಯೋಪಮೆಯಂ (ಕಂಪಾ. ೩-೬೨). [ಸಂ.]

ಪ್ರವಿಖ್ಯಾತಿ (ನಾ). ಬಹಳ ಪ್ರಸಿದ್ಧಿ ; ಅತಿಖ್ಯಾತಿ : "ವಿಶ್ರಾವಃ, ಪ್ರವಿಖ್ಯಾತಿಃ—೨ ಅಧಿಕವಾದ ಪ್ರಸಿದ್ಧಿ, ಹೆಚ್ಚಾದ ಹೆಸರುವಾಸಿ" (ಸಿದ್ಧಾಂತಿ. ೩೬೩). [ಸಂ.]

ಪ್ರವಿಘಟನ (ನಾ). ಸೀಳುವುದು : ಕುಟಿಲಪರಸಮಯಕ್ರಿಯಾಪ್ರವಿಘಟನ ದೇವರ ದಾಸಿಗಳ ತತ್ಪಟುಕರಸ್ಥಳಘಟಿತಮಾಗಿ ಪ್ರಭವಿಸುತಮಿರಲು (ಅಪಪು. ೩೦-೬೨) . [ಸಂ.]

ಪ್ರವಿಚಾರ (ನಾ). ೧. ಗೌರವ. ೨. ಬಗೆ ; ರೀತಿ. ೩. [ಜೈನ] ಇಂದ್ರಿಯಸುಖಾನುಭವ : 'ಕಾಯಪ್ರವಿಚಾರ', 'ಪ್ರವೀಚಾರ' ಪರಾ. [ಸಂ.]

ಪ್ರವಿತತ (ಗು). ಹರಡಿದ ; ವ್ಯಾಪ್ತವಾದ : ಪ್ರವಿತತ ಪುಣ್ಯೋದಯದಿಂ ಭುವನಸ್ತುತಸುಕೃತಿಯೆನಿಪ ಕುವಳಯಕಮಳೋತ್ಸವಕರನೆನಿಪೀ ಸ್ವಾಮಿಗೆ ಸುವಿಧಿವೆಸರ್ ಪುಷ್ಪದಂತವೆಸರನ್ವರ್ಥಂ (ಪುಷ್ಪಪು. ೦೨-೩೩) ; ಭವಭವದಂಘ್ರಿಸ್ಮರಣಮಿದವಿರತಮಿರ್ಕೆಮಗೆ ನಿನ್ನ ಗಣಮುಂ ನೀನುಂ ಪ್ರವಿತತಸುಖಮಿರ್ಪುದು (ಪ್ರಕಪಿ. ೯-೬೩). [ಸಂ.]

ಪ್ರವಿದಾರಣ (ನಾ). ೧. ಸೀಳುವಿಕೆ ; ಒಡೆಯುವುದು. ೨. ಕಾಳಗ ; ಯುದ್ಧ : "ಸಂಗ್ರಾಮಃ . . . ಪ್ರವಿದಾರಣಂ . . . ವಿಗ್ರಹಃ—ಈ ೩೫ ಕಾಳಗಂ" (ಪಠಾಯು. ೭೩-೨೯೯). [ಸಂ.]

ಪ್ರವಿದಿತ (ಗು). ಚೆನ್ನಾಗಿ ತಿಳಿದ ; ಪ್ರಸಿದ್ಧವಾದ : ಇವು ಕಾಳಿಂಗಾಭಿಧೇಯಪ್ರವಿದಿತಮಿವು ಕಾಂಭೋಜ ಬಾಹ್ಲೀಕದೇಶೋದ್ಭವಮಶ್ವಂ ರಾಶಿಯಾಗಿರ್ದಪುವು (ಕಾಪಂಕಾ. ೬೨೩) ; ಪ್ರವಿದಿತಕೌಶಿಕಪಾದಂ ದಿವಿಜಾಶಾಶಿಖರಿ ಶಿಖರತೇಖರನಾದಂ (ಹಂಪಕಂ. ೭೮-೦೯). [ಸಂ.]

ಪ್ರವಿನಾಶನ (ನಾ). ಸಂಪೂರ್ಣವಾದ ನಾಶ : ಘನಮಿಥ್ಯಾತ್ವದವಾಸಳಿಪಿನದ್ದಜೀವಕ್ಕೆ ದೃಷ್ಟಿಮೋಹಪ್ರವಿನಾಶನೆಮಿಲ್ಲದಂದು ಪುಟ್ಟದು ಮನದೊಳ್ ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ (ಅಪಪು. ೩-೩೨). [ಸಂ.]

ಪ್ರವಿಪುಳ (ಗು). ಹೆಚ್ಚಾದ ; ಬಹಳವಾದ : ಪ್ರವಿಪುಳಲಕ್ಷ್ಮೀನಂದನಂ . . . ಪ್ರಾಪ್ತಮಹಾರ್ಣವಮಪ್ಪುದಱಿಂದವನಿಪ ಭವದಾಜ್ಞೆವೊಲಿದಱಿಕನಕವೇದಿಕೆಯೆಸೆಗುಂ (ಪಾರ್ಶ್ವಪು. ೯-೬). [ಸಂ. ಪ್ರವಿಪುಲ]

ಪ್ರವಿಭಕ್ತ (ಗು). ಬೇರೆಯಾದ ; ಪ್ರತ್ಯೇಕವಾದ : ಅವಱ ವಿಪರ್ಯಯವೃತ್ತಿ ಪ್ರವಿಭಕ್ತವಿಕಲ್ಪಮಕ್ಕುಮುತ್ತರಮಾರ್ಗಂ (ಕವಿರಾ. ೨-೩೩). [ಸಂ.]

ಪ್ರವಿಭಗ್ನ (ಗು). ಚೆನ್ನಾಗಿ ಮುರಿದ ; ಬಹಳವಾಗಿ ತುಂಡಾದ : ಅದು ಮದದಂತಿದಂತಮುಸುಲ ಪ್ರವಿಭಗ್ನಮಹಾಮಹೀರುಹಾಸ್ಪದಂ (ಹಂಪಾಪು. ೩-೦೦). [ಸಂ.]

ಪ್ರವಿಭಾಗ (ನಾ). ಭಾಗ ; ಪಾಲು : ಎಸೆದಿರೆ ಲೋಕವಿಭಾಗಪ್ರಸರ ಪ್ರವಿಭಾಗಮಂ ಸವಿಸ್ತರಮಭಿವರ್ಣಿಸಲಸದಳಂ (ಸುಕುಮಾ. ೦೦-೯೦) ; ಯೋಗಂ ಪಲವುಮಲಂಕೃತಿಗಾಗಿರೆ ಸಂಶ್ಲೇಷಮೆಂಬುದನ್ವರ್ಥಗತಂ ಯೋಗಮುಮಂಗಾಂಗಿಪ್ರವಿಭಾಗಂ ಸಮಕ್ಷಕಮೆಂದೆರಟ್ಟೆಱನಕ್ಕುಂ (ಕಾಪ್ರಾಪ. ೭೭೦). [ಸಂ.]

ಪ್ರವಿಭಾಸಿ (ನಾ). ಬಹಳವಾಗಿ ಪ್ರಕಾಶಿಸುತ್ತಿರುವವನು ; ತೇಜಸ್ವಿ : ಗಂಧೇಭಕಂಧರಬಂಧಪ್ರವಿಭಾಸಿಯಪ್ಪರಿಗನಂ ಕಾಣುತ್ತೆ ಕಣ್ಸೋಲ್ತು (ಹಂಪಾಪು. ೯-೩೮). [ಸಂ. ಪ್ರವಿಭಾಸಿನ್]

ಪ್ರವಿಮಲ, ಪ್ರವಿಮಳ (ಗು). ೧. ಬಹಳ ಪರಿಶುದ್ಧವಾದ, —ನಿರ್ಮಲವಾದ : ಪ್ರವಿಮಲಮತಿಗನಿತುಂ ರಾಜವಿದ್ಯೆಗಳ್ ನೆಱೆಯವಮಲಕೀರ್ತಿಗೆ ದಶದಿಗ್ವಿವರಂ ನೆಱೆಯವು (ಶಾಂತಿಪು. ೨-೩) ; ಪ್ರವಿಮಲರುಚಿಬಿಂಬಂ ವರ್ಧಿತೋದ್ಯನ್ಮನೋಜಂ . . . ಮೂಡಿದಂ ಪೂರ್ಣರಾಜಂ (ಕಾಪ್ರಪು. ೦೦-೦೯). ಪ್ರವಿಮಳ : ೧. ಪ್ರವಿಮಳಜಿನಶಾಸನದಿಂ ಪವಿತ್ರಮೆನೆ ಮಾಡಿ (ಸಮಪ. ೦-೯೯). (ನಾ). ೨. ಬಹಳ ಪವಿತ್ರನಾದವನು : ಪ್ರವಿಮಳನಶಿಸ್ವತಂತ್ರಂ ಭವಮೃತಿಸಂಸಾರಕರ್ಮರಹಿತಂ (ಪ್ರಕಪಿ. ೩೩-೩೬). [ಸಂ.]

ಪ್ರವಿಮಳ ' ಪ್ರವಿಮಲ ' ನೋ.

ಪ್ರವಿರಳ (ಗು). ೧. ಅಪರೂಪವಾದ ; ದುರ್ಲಭವಾದ ; ಶ್ರೇಷ್ಠವಾದ : ' ಪ್ರವಿರಳಮಣಿ ' ಪರಾ. [ಸಂ. ಪ್ರವಿರಲ]

ಪ್ರವಿರಳಮಣಿ (ನಾ). ಅತ್ಯಂತ ದುರ್ಲಭವಾದ ಮಣಿ ; ಅಪರೂಪವಾದ ರತ್ನ : ಪ್ರವಿರಳಮಣಿಯಿರೆ ವರ್ತಿಯನವಿರಳಗುಣಸಹಜಕವಿಯ ಕಾವ್ಯಮದಿರೆ ಬಲ್ಲವರಿತರಕಾವ್ಯಮಂ ಮಾಡುವನ್ನರಾರ್ ಕರ್ಣಹೃದಯನವಭೂಷಣಮಂ (ಪಾರ್ಶ್ವಪು. ೦-೬೭). [ಸಂ. ಪ್ರವಿರಲಮಣಿ]

ಪ್ರವಿಲಿಪ್ತ (ಗು). ಅಂಟಿಕೊಂಡ ; ಅಂಟಿದ : ದಿವಿಜೇಂದ್ರವನಿತೆ ದೇವಾಂಗವಸ್ತ್ರದಿಂ ತೊಡೆದಳಾ ಜಿನಾರ್ಭಕದೇಹಪ್ರವಿಲಿಪ್ತಸ್ನಪನಪಯೋಲವಮಂ ನೀರಂಜಿಪಂತೆ ರತ್ನಮನಾಗಳ್ (ಮುಂಪು. ೦೩-೩). [ಸಂ.]

ಪ್ರವಿಲೀನ (ನಾ). ಲೀನಗೊಳಿಸುವುದು ; ಒಳಸೇರುವಂತೆ ಮಾಡುವುದು : ದಿವಸಕರನುದಯಗಿರಿಶಿಖರವಿಶೇಷಭೂಷಣಂ ತಮೋರಿಪುಬಳಮಂ ಪ್ರವಿಲೀನಂ ಮಾಡಿದನವಯವದೊಳ್ ತಾರಾವಿತಾನತೇಜಮನಟಿದಂ (ಕಾಪಾ. ೩-೩೬). [ಸಂ.]

ಪ್ರವಿಲೋಮ (ನಾ). ವಿರುದ್ಧಕ್ರಮ ; ಪ್ರತಿಷೇಧ : 'ಪ್ರವಿಲೋಮಕ್ರಿಯೆ' ಪರಾ. [ಸಂ.]

ಪ್ರವಿಲೋಮಕ್ರಿಯೆ (ನಾ). [ವ್ಯಾಕ] ವಿರುದ್ಧಕ್ರಿಯೆ ; ಪ್ರತಿಷೇಧಕ್ರಿಯೆ ; ನಿಷೇಧಕ್ರಿಯೆ : ಅವಕರಿಸಿರ್ಕುಮದುಳ್ಳಾತುವಿನ ಳಕಾರಕ್ಕೆ ಣತ್ವಮುದುಗೆ ಟುಕಾರಂ ಪ್ರವೆಲೋಮಕ್ರಿಯೆಗದುವೆಂದವೆಂದು ಬಂದಿರ್ಕುಮುದುಗಮುವುಗಂ ಪ್ರಚುರಂ (ಕಪುಪ. ೨೯೯). 'ವಿಲೋಮಕ್ರಿಯೆ' ಪರಾ. [ಸಂ. ಪ್ರವಿಲೋಮಕ್ರಿಯಾ]

ಪ್ರವಿವೇಕ (ನಾ). ೧. ಅತಿಶಯವಾದ ಜ್ಞಾನ, —ವಿವೇಕ : ಲೋಕವೈದಿಕಮುಖ್ಯಸಕಲಕಲಾಕುಶಲರಾದರು ಧನುಃಪ್ರವಿವೇಕನಿಪುಣರನಱಸುತ್ತಿದ್ದನು ಮತ್ತೆ ಗಾಂಗೇಯ (ಕುಪ್ರಾಪ. ೬-೨೦). ೨. ಪೂರ್ಣವಾದ ಏಕಾಂತ. [ಸಂ.]

ಪ್ರವಿಷ್ಟ (ಗು). ೧. ಪ್ರವೇಶಿಸಿದ ; ಒಳಗೆ ಹೋದ. (ನಾ). ೨. ಒಳಗಿರುವುದು ; ಸೇರಿರುವುದು : ರಾಜಧಾನಿ ಉದ್ಯಾಗವೊಳಲ ಪ್ರವಿಷ್ಟಂ ವಂಕಸಮುದ್ರದ ತ್ರೈಮತ್ಸಾಧೊರೆ (ಕಾಪಾ. ೦೬-೩-೨೫; 1126). ೩. ತಲ್ಲೀನನಾದವನು: ರಾಮಭಟ್ಟಾರಕರಂತುಮಸ್ಪಲಿತಚಿತ್ತದಿಂ ಶುಕ್ಲಧ್ಯಾನಪ್ರವಿಷ್ಟರಾಗಿ (ಸಂಶಾಮ. ೦೬-೬೬ ಸ). [ಸಂ.]

ಪ್ರವೀಚರಣ (ನಾ). — ಪ್ರವಿಚಾರ ೩ : ಒಯ್ಯದೆ ಪೊಯ್ಯದೊಂದು ಪುರುಡಪ್ಪದ ಚುಂಬಿಸದಿಂಪು ದೇವಿಯರ್ ಮೆಯ್ಯಳವಾರೆ ಕೂಡಿಸದ ಕೂಟದ ಸಂತಸಮಂದಿವೆಲ್ಲಮಾರಯ್ಯ ಮನಃಪ್ರವೀಚರಣದಿಂ ಸಮಸಂದು ಚಿತಾರ್ಥವೃತ್ತಿ ತಳ್ಪೊಯ್ಯ ಮನೋಜಕೇಳಿಗಮರಂ ತಣಿದಂ ಸುರತೋಪ ಭೋಗದೊಳ್ (ಸಂಪ್ರಕ್ರ. ೯-೩೩). ☞ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ. [< ಸಂ. ಪ್ರವಿಚರಣ]

ಪ್ರವೀಚಾರ (ನಾ). — ಪ್ರವಿಚಾರ ೩ ; ☞ ಕಾಯಪ್ರವೀಚಾರವೂ ಸೇರಿದಂತೆ ಸ್ಪರ್ಶಪ್ರವೀಚಾರ, ರೂಪಪ್ರವೀಚಾರ, ಶಬ್ದ ಪ್ರವೀಚಾರ, ಮನಃಪ್ರವೀಚಾರಗಳೆಂದು ಪ್ರವೀಚಾರಗಳು ಐದು ಬಗೆ. ಇವುಗಳಲ್ಲಿ ಕಾಯಪ್ರವೀಚಾರವು ಈಶಾನಕಲ್ಪದವರೆಗೂ ಇರುತ್ತದೆ. ಇಲ್ಲಿನ ದೇವತೆಗಳು ಮನುಷ್ಯರಂತೆ ಸ್ತ್ರೀವಿಷಯ ಸುಖವನ್ನು ಅನುಭವಿಸುವರು. ಮುಂದೆ ಸನತ್ಕುಮಾರ, ಮಾಹೇಂದ್ರಕಲ್ಪಗಳ ದೇವತೆಗಳು ದೇವಾಂಗನೆಯರ ಸ್ಪರ್ಶಮಾತ್ರದಿಂದಲೇ ಇಂದ್ರಿಯಜನಿತಸುಖವನ್ನು ಹೊಂದುವರು. ಬ್ರಹ್ಮ ಬ್ರಹ್ಮೋತ್ತರ, ಲಾಂತವ, ಕಾಪಿಷ್ಠಕಲ್ಪಗಳ ದೇವತೆಗಳು, ದಿವ್ಯಾಂಗನೆಯರ ಶೃಂಗಾರವಿಲಾಸದ ವೇಷಗಳ ಅವಲೋಕನ ಮಾತ್ರದಿಂದಲೇ ಇಂದ್ರಿಯಜನಿತಸುಖವನ್ನು ಹೊಂದುವರು, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರಕಲ್ಪಗಳ ದೇವತೆಗಳು ದೇವವನಿತೆಯರ ಮಧುರಸಂಗೀತ, ಮೃದುಲಲಿತವಾದ ನಗು ಹಾಗೂ ಭೂಷಣಗಳ ಧ್ವನಿಯ ಶ್ರವಣಮಾತ್ರದಿಂದಲೇ ಇಂದ್ರಿಯ ಜನಿತಸುಖವನ್ನು ಹೊಂದುವರು. ಆನತ, ಪ್ರಾಣತ, ಆರಣ, ಅಚ್ಯುತಕಲ್ಪಗಳ ದೇವತೆಗಳು ಸುರಾಂಗನೆಯರನ್ನು ಹೊಂದುವ ಮನಃಸಂಕಲ್ಪಮಾತ್ರದಿಂದಲೇ ಇಂದ್ರಿಯಜನಿತಸುಖವನ್ನು ಹೊಂದುವರು: ಪ್ರವೀಚಾರಮೆಂಬುದು ವೇದನಾಪ್ರತೀಕಾರಂ (ಪಸ್ತ್ರಶ್ರ. ೦೬೨); ಪುರುಷಂ ತನ್ನೊಳೊಡರ್ಚುತಿರ್ಪ ವಿಳಸದ್ರೂಪಪ್ರವೀಚಾರ ಮುಂ ಸುರಲೋಕಸ್ಥಿತಿ ಬೇಱೊಂದೆನಿಸಿದತ್ತಾ ಕಾಂತೆಗಾ ಗರ್ಭದೊಳ್ (ಸಂಪ್ರಕ್ರ. ೦೨-೨೯). 'ಕಾಯಪ್ರವೀಚಾರ' ಪರಾ. [< ಸಂ. ಪ್ರವಿಚಾರ]

ಪ್ರವೀಣ (ನಾ). ೧. ಕುಶಲ; ಪರಿಣತ ; ನಿಪುಣ : "ಚತುರಃ . . . ಪ್ರವೀಣಃ — ಈ ೧೧ ಬಲ್ಲವಂ" (ಪಶಾಯು.೩೩-೦೯೦); ದಿವಸೇಂದ್ರಂ ಕನ್ನೆಯೊಳ್ ಕೂಡಿರೆ ಲಿಪಿಗಣಿತಾಲೇಖ್ಯಕಾವ್ಯಪ್ರವೀಣಂ (ಜಾಶಕ. ೦೭-೦೬); ಅವನು ಕಂದುಕಾಗಮ (A kind of Polo) ಎಂಬ ಆಟದಲ್ಲಿ ಪ್ರವೀಣನಾಗಿದ್ದನೆಂದು ಉಲ್ಲೇಖಿಸಿದೆ (ಜಾಶಕ. ೦೨); ಸಸ್ಯಶಾಸ್ತ್ರದ ಪರಿಚಯವಿಲ್ಲದವರು ಈ ಕಾರ್ಯವನ್ನು . . . ಒಣಸಸ್ಯಸಂಗ್ರಹಾಲಯಗಳಿಗೆ ಕಳುಹಿಸಿ, ಅಲ್ಲಿರುವ ಪ್ರವೀಣರಿಂದ ಮಾಡಿಸಬಹುದು (ಪಸುಕೂ. ೦೨೮). ೨. ಒಬ್ಬ ದೇವತೆಯ ಹೆಸರು : ಮಕರಧ್ವಜ ನಳಕೂಬರ ಜಯಂತ ಅನಿರುದ್ಧ ಕೂಚಿಮಾರ ಪಾಂಚಾಲ ಪಲ್ಲವ ಪ್ರವೀಣಾದಿ ದೇವವಿಟರುಂ (ಪಪಳ. ೦೭೦). [ಸಂ.]

ಪ್ರವೀಣತೆ (ನಾ). ನಿಪುಣತೆ ; ಪರಿಣತಿ : ಬರೆಹ ವಾಚನ ಗಣಿತ ಶಬ್ದಾರ್ಥರಸ ಭಾವೋಕ್ತಿ ಪ್ರವೀಣತೆ ಭರತ ಛಂದೋವ್ಯಾಕರಣ . . . ಕಲೆಗಳು ಸ್ಮರಿಸಲೊಡನೆ ಮುಖೋದ್ಗತಂ ಬಸವಂಗೆ (ಬಸಪು. ೩-೮೨). [ಸಂ. ಪ್ರವೀಣತಾ]

ಪ್ರವೀಣೆ (ನಾ). ಪರಿಣತೆ ; ನಿಪುಣೆ : ತನ್ನೊಳಿಂತು ಪೋಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾ ಸುರತಪ್ರವೀಣೆಯಂ (ಅಪಪು. ೨-೭೭); ಅವಳು ಸಂಗೀತದಲ್ಲಿ ಪ್ರವೀಣೆ (ಕೂಪ). [ಸಂ. ಪ್ರವೀಣಾ]

ಪ್ರವೀರ (ಗು). ೧. ಪರಾಕ್ರಮಶಾಲಿಯಾದ : 'ಪ್ರವೀರಪುರುಷ' ಪರಾ. (ನಾ). ೨. ಶೂರ ; ವೀರ ; ಪರಾಕ್ರಮಿ : ನಿಸ್ಸಹಾಯ ಸಾಹಸೋತ್ಕೀರ್ಣ ಮಹಾಹವಾರ್ಣವ ಪ್ರವೀರಪ್ರಾರಬ್ಧಾರಧಟೀ ಸಮುದ್ಧಟಕಥೆಗಳನೆ ಕೇಳಲುಂ (ಅಪಪು. ೮-೩೫); ಬಗೆಯದೆ ದಾನವಾಧಿಪನ ದೋರ್ಬಲಮಂ ಖಚರಪ್ರವೀರರಂ ಬಗೆಯದೆ (ಸಂಶಾಮ. ೦೦-೦೩೯). ೩. ಶ್ರೇಷ್ಠಪುರುಷ ; ಉತ್ತಮಪುರುಷ. [ಸಂ.]

ಪ್ರವೀರಪುರುಷ (ನಾ). ಪರಾಕ್ರಮಿಯಾದವನು ; ವೀರಪುರುಷ : ವಿವಿಧಾಯುಧಪೂರ್ಣಂಗಳ್ ಪ್ರವೀರಪುರುಷಪ್ರತಿಷ್ಠಿತಂಗಳ್ . . . ರಥಂಗಳ್ (ಅಪಪು. ೦೦-೩೨). [ಸಂ.]

ಪ್ರವುಡ, ಪವುಡ, ಪ್ರಹುಡ (ನಾ). ೧. ನಿಪುಣ; ಪ್ರೌಢ: ಗವುಡನೊಳು ಹಗೆತನವು ಕಿವುಡನೊಳು ಏಕಾಂತ ಪ್ರವುಡನೊಳು ಮೂಢನುಪದೇಶ ಹುಸಿದೆದ್ದು ತವುಡು ತಿಂದಂತೆ (ಸರ್ಗಶ್ರ. ೦೩೪೨). ೨. [ಕಾಮಶಾ] ರತಿ ಶಾಸ್ತ್ರದಲ್ಲಿ ಚತುರನಾದವನು : ಕೊಡಬಲ್ಲಂಗೆ ದರಿದ್ರಮಂ ಪ್ರವುಡ [ಡ]ಗಂ ಮೂಢಾಂಗನಾಲಾಭವುಂ . . . ನೀಡುವಂ ಸುಡು ಪಾಪಿಷ್ಠನ ಬೊಮ್ಮನಂ (ಸೋಮೇಶ. ೩೩). **ಪವುಡ** : ೧. "ಪವುಡ (ಪಹುಡ) — ಪ್ರೌಢ — ಬಲ್ಲಿದ" (ಕಪ್ರಕೋ. ೨೫). **ಪ್ರಹುಡ** : ೨. ಪುರುಷಪ್ರಹುಡನು ವಾವನೆಂದರೆ ಸುರಸ ನಡವಳಿಯಿಂದ ತಿಳಿವರು (ಕಕ್ಕೋಕ. ೯-೦೯). [< ಸಂ. ಪ್ರೌಢ]

ಪ್ರವುಡೆ (ನಾ). ೧. ಚತುರೆ ; ಪರಿಣತೆ : ಡವುಡೆ ಜೇಗಟೆ ಮಲಹರಿಯ ಹಾಡಿಸಿಕೊಂಬ ಪ್ರವುಡೆಯರಿರ್ದರು (ಪೋಪಕ. ೨೦-೩೯). ೨. [ಕಾಮಶಾ] ರತಿಶಾಸ್ತ್ರನಿಪುಣೆ ; ವಿದಗ್ಧೆ : ಪ್ರವುಡೆ ಬಲುಬುದ್ಧಿ ಪೇಳಲು ಬಾಲೆಯಂದಾಱುಭುಜವಾಗೆ ಹಿಗ್ಗಿ (ಕಂಪಪ. ೬-೦೪೫). [< ಸಂ ಪ್ರೌಢಾ]

ಪ್ರವೃತ್ತ (ಗು). ೧. ತೊಡಗಿದ ; ಪ್ರವರ್ತಿಸಿದ. (ನಾ). ೨. ಪ್ರವರ್ತಿತವಾದುದು : ಎಲ್ಲಿದೆಲೊ ಭಾನುಮತಿ . . . ಎಲ್ಲಿತ್ತೊ ಗೀತವಾದ್ಯಂ ಸಲ್ಲಲಿತವಧೂಜನಪ್ರವೃತ್ತಂ ನೃತ್ತಂ (ಗಧಾಯು. ೩-೧೩). ೩. ಉಪಯೋಗವಾದುದು : ದ್ರಾವಿಡ ಎಂಬ ಈ ಹೆಸರು ಹಳೆಯದಾದರೂ ಈಗಿನ ಅರ್ಥದಲ್ಲಿ ಅದು ಹೊಸದೇ. ಈ ಶಬ್ದ ಮಹಾಭಾರತದಲ್ಲಿ ಒಂದು ಪ್ರಾಂತದ ಹೆಸರಾಗಿ ಪ್ರವೃತ್ತವಾಗಿದೆ (ಪಕ್ಷುಸು. ೦೩). ೪. ತೊಡಗಿದವನು ; ಆರಂಭಿಸಿದವನು : ಅಸಮರಸವತ್ತಾಂಡವಾರಂಭಣಕ್ಕಾರ ಭಟೀವೃತ್ತಪ್ರವೃತ್ತಂ ಸುರಪರಿವೃಢನೊಲ್ದಾಡಿದಂ ಭಕ್ತಿಯಿಂದಂ (ಶಾಂತಿಪು. ೦೦-೬೨) ; ವಿವೇಕಹೀನರಂತೆ ಆತ್ಮಘಾತಕ್ಕೆ ಪ್ರವೃತ್ತನಾಗಬೇಡ (ಕ್ಷಕ್ಷ. ೯). [ಸಂ.]

ಪ್ರವೃತ್ತಿ (ನಾ). ೧. ನಡೆ ; ಓಟ ; ಹರಿವು ; ಗತಿ. ೨. ಪ್ರಾರಂಭ ; ಉಪಕ್ರಮ. ೩. (ಐಹಿಕಜೀವನದಲ್ಲಿ ತೋರುವ) ಆಸಕ್ತಿ, — ಅಭಿಲಾಷೆ : ಇಂತೀ ಪ್ರಕಾರದಿಂ ಷಟ್ಸ್ಥಲಬ್ರಹ್ಮವು ನಿರಂತರಂ ಸೃಷ್ಟಿ ಮಾರ್ಗದೊಳುಂ ಪ್ರವೃತ್ತಿಮುಖಮಂ ತಳೆವುತ್ತೈಕ್ಯಾದಿಭಕ್ತಾಂತ ವಾಗಿಪ್ಪುದದುವೆ ಸಂಕ್ಷೇಪದಿಂದ (ಲಿಕಿಂ ೩೦-೨೨): ವೇದಾಂತವು ಬರಿಯ ಸನ್ಯಾಸವನ್ನು ಬೋಧಿಸುವುದಿಲ್ಲ. ಪ್ರವೃತ್ತಿ — ನಿವೃತ್ತಿಗಳ ಸಾಮರಸ್ಯವನ್ನು ಸೂಚಿಸಿ . . . ಏಕ್ಯರ ಮಾಡಿಕೊಡುತ್ತದೆ (ಧರ್ಮಾಶಾ. ೩೨) ; ಅದರ ಮಹಿಮೆ ನಮ್ಮ ದಿನದಿನದ ಪ್ರತಿಯೊಂದು ವ್ಯಾಪಾರದಲ್ಲೂ ಪ್ರತಿಯೊಂದು ಕ್ರಿಯೆಯಲ್ಲೂ ಪ್ರತಿಯೊಂದು ಪ್ರವೃತ್ತಿಯಲ್ಲೂ ತೋರಿ ಬರಬೇಕು (ಜಾಶಕ. ೩೦). ೪. ಬಳಕೆ ; ಅಭ್ಯಾಸ ; ಉಪಯೋಗ : ಮೃಗಪಶುಶಕುನಿಗಣಂಗಳೊಳಗಣಿತನಿಜಜಾತಿಜನಿತಭಾಷೆಗಳಿಂದುಂ

ನೆಗಟ್ಟಂತಿರೆ ನರರೊಳಮಪ್ರಗಲ್ಭವಚನಪ್ರವೃತ್ತಿ ನೆಗಟ್ಟುಂ ಸಹಜಂ (ಕಸಿಂ. ೦೬). ೫. ವ್ಯವಹರಿಸುವುದು ; ವ್ಯವಹಾರ : ಜ್ಞಾನ ಹುಟ್ಟಿದ ಮೇಲೆ ಮನುಷ್ಯನು ಪ್ರವರ್ತಿಸುತ್ತಾನೆ. ಪ್ರವೃತ್ತಿ ಸಫಲವಾದರೆ ಜ್ಞಾನ ಸರಿಯಾದುದೆಂದೂ . . . ತಿಳಿಯುವನು (ಹಿಂದಸಾ. ೦೩೬). ೬. ಗುಣ ; ಸ್ವಭಾವ : ಶಕ್ತಿಯೆ ಪ್ರವೃತ್ತಿಯೆನಿಸಿತ್ತು (ಪಪರ. ೦೦); ವೃತ್ತಿಯಿಂದ ಅಂಬಿಗನಾದರೂ ಪ್ರವೃತ್ತಿಯಿಂದ ಕ್ಷತ್ರಿಯನೆಂಬಂತೆ ಇದ್ದಾನೆ ಅಂಬಿಗರ ಚೌಡಯ್ಯ (ಕರಪ. ೪೭೨). ೭. ಸಂದ್ದಿ ; ವಾರ್ತೆ ; ಸಮಾಚಾರ : "ವಾರ್ತಾ, ಉದಂತಃ, ಪ್ರವೃತ್ತಿಃ, ವೃತ್ತಾಂತಃ —ಈ ೪ ವಾರ್ತೆ" (ಹಲಾಯು. ೨೪-೦೪೫). ೮. ಭೇದಿ ; ವಿರೇಚನ : ಸೂರ್ಯನಿಗೆ ಅಭಿಮುಖವಾಗಿ ಇದ್ದ ಕಗ್ಗಲೀ ಕೊನರು ಒಂದು ಹಿಡಿಯನ್ನು ಮೂರು ಉಗುನಿಯ ಎಲೆಯಲ್ಲಿ ಪೊಟ್ಟಣಂಗಟ್ಟಿ . . . ಮೂರನೆಯ ದಿನ ೯ ಗುಳಿಗೆಯ ಕೊಡಲು ಪ್ರವೃತ್ತಿ ನಿಲ್ಲುವುದು (ಸಕಸ್ಯ. ೩೫೫); ಅತಿಸಾರವೆಂದರೆ ಒಮ್ಮಿಂದೊಮ್ಮೆಲೇ ಹೊಟ್ಟೆ ಜಾಡಿಸುವ ರೋಗವು. ಇದಕ್ಕೆ ದಕ್ಷಿಣ ದೇಶದಲ್ಲಿ ಭೇದಿ — ಪ್ರವೃತ್ತಿ — ರೋಗವೆಂದೂ ಹೇಳುವರು (ಗೃಹವೈ. ೨೬). 'ಕಾಲಪ್ರವೃತ್ತಿ' ಪರಾ. ೯. ನೀರು ಮೊದಲಾದ ದ್ರವ ಪದಾರ್ಥದ ಹೊನಲು ; ಪ್ರವಾಹ : "ಪ್ರವಾಹಃ, ಪ್ರವೃತ್ತಿಃ, —ಅವಿಚ್ಛಿನ್ನವಾಗಿ ಹರಿಯುವ ನೀರು ಮುಂತಾದುವುಗಳ ಪರಂಪರೆ, ಪ್ರಸರಿಸುತ್ತಾ ಇರುವುದು" (ಸಿದ್ಧಾಂತಿ. ೩೬೦). ೧೦. [ನಾಟ್ಯ] "ಪಾತ್ರ ಮತ್ತು ದೇಶಭೇದಗಳನ್ನು ಅನುಸರಿಸಿ ನಟರು ಉಪಯೋಗಿಸುವ ಭಾಷಾವೇಷಭೂಷಣಭೇದಗಳಿಗೆ ಪ್ರವೃತ್ತಿಯೆಂದು ಹೆಸರು" (ಕೃಪಿಪಿ. ೨೦೦) : ಪಾತ್ರಭೇದ ದೇಶಭೇದಗಳನ್ನು ಅನುಸರಿಸಿ ಅವುಗಳಿಗೆ ಉಚಿತವಾಗುವಂತೆ, ನಟರು ಉಪಯೋಗಿಸುವ ಭಾಷೆ, ವೇಷ ಭೂಷ ಮುಂತಾದವುಗಳ ಭೇದಗಳು 'ಪ್ರವೃತ್ತಿ'ಗಳೆನ್ನಿಸಿಕೊಳ್ಳುತ್ತವೆ (ಸಂಪಾಟ. ೦೩). ೧೧. [ನ್ಯಾಯಶಾ] ನ್ಯಾಯಶಾಸ್ತ್ರದಲ್ಲಿ ವಿಭಾಗ ಮಾಡಿರುವ ಹನ್ನೆರಡುವಿಧವಾದ ಪ್ರಮೇಯಗಳಲ್ಲಿ ಒಂದು: ನ್ಯಾಯಶಾಸ್ತ್ರದಲ್ಲಿ ಹೇಗೆಂದರೆ — ಆತ್ಮ ಶರೀರ ಇಂದ್ರಿಯ ಅರ್ಥ ಬುದ್ಧಿ ಮನಸ್ಸು ಪ್ರವೃತ್ತಿ ಅಪವರ್ಗವೆಂದು ಹನ್ನೆರಡು ವಿಧವಾಗಿ ಪ್ರಮೇಯವನ್ನು ಒಂಬತ್ತನೆಯ ಸೂತ್ರದಲ್ಲಿ ವಿಭಾಗ ಮಾಡಿರುವರು . . . ಪ್ರವೃತ್ತಿಯೆಂಬುದು ಪುಣ್ಯ ಪಾಪಗಳು (ಹಿಂದಸಾ. ೦೦೫). ೧೨. [ತರ್ಕಶಾ] ಕರ್ಮ ; ಕ್ರಿಯೆ ; ನಡವಳಿಕೆ : ಅವು ಮೇಲ್ಕಂಡ ಶುಭಾಶುಭರೂಪವಾದ ಹತ್ತುಹತ್ತು ಕರ್ಮಗಳಿಂದ ಹುಟ್ಟುವುವು. ಈ ಕರ್ಮಗಳಿಗೆ ಪ್ರವೃತ್ತಿಯೆಂದು ಹೆಸರು (ಹಿಂದಸಾ. ೦೨೨). [ಸಂ.]

ಪ್ರವೃತ್ತಿಮಾರ್ಗ (ನಾ). [ವೇದಾಂತ] ಪರಲೋಕಸಾಧನೆಯ ಎರಡು ಮಾರ್ಗಗಳಲ್ಲಿ ಒಂದು; ೫ ಸಾಧಕನು ಪ್ರಪಂಚವ್ಯವಹಾರವನ್ನು ಬಿಡದೆ ದೇವತಾರಾಧನೆ, ಜಪ ಇತ್ಯಾದಿ ಪುಣ್ಯಕರ್ಮಗಳನ್ನು ಮಾಡಿ, ಆ ಪುಣ್ಯದಿಂದ ಪರಲೋಕಸಾಧನೆಗೆ ಪ್ರಯತ್ನಿಸುವುದು : ಅದು ಪ್ರವೃತ್ತಿಮಾರ್ಗ ನಿವೃತ್ತಿಮಾರ್ಗವೆಂದೆರಡುಬಗೆಯಾಗಿಪ್ಪುದು (ವಿವೇಕ. ೬೯) ; ನಿವೃತ್ತಿಮಾರ್ಗಕ್ಕಿಂತ, ಪ್ರವೃತ್ತಿಮಾರ್ಗವನ್ನು ಅನುಸರಿಸುವುದು ಅಗತ್ಯ (ಭಾಕದ. ೪೬೦); ದಾಸರದು ಮುಖ್ಯವಾಗಿ ನಿವೃತ್ತಿಮಾರ್ಗ, ಗೀತಾಂಜಲಿಯ ಕವಿಯದು ಪ್ರವೃತ್ತಿಮಾರ್ಗ (ರರ್ಶುಸಾ. ೬೯). [ಸಂ.]

ಪ್ರವೃದ್ಧ (ಗು). ೧. ಬೆಳೆದ; ವೃದ್ಧಿಯಾದ. ೨. ಹೆಚ್ಚಾದ ; ಅಧಿಕವಾದ: ಪ್ರವೃದ್ಧಪಟಹಸ್ವನಂ ಮಧುರಗೀತಗಾನಂ ವಲಂ ಸುವೃದ್ಧ ಜನಮಂಗಳೋಕ್ತಿ ನೆಗಟ್ಟಂತು (ಜಗವಿ. ೦೬-೬೦). ೩. ಅಹಂಕಾರವನ್ನುಳ್ಳ; ಗರ್ವಿತವಾದ. (ನಾ). ೪. ಬೆಳೆದುದು ; ವೃದ್ಧಿಯಾದುದು : "ಪ್ರವೃದ್ಧಂ, ಪ್ರೌಢಂ, ಏಧಿತಂ—೩ ಬೆಳೆದಂಥಾದ್ದು" (ಸಿದ್ಧಾಂತಿ. ೩೪೩). ೫. [ನಾಟ್ಯ] ನಿಃಶ್ವಾಸದ ಭೇದಗಳಲ್ಲಿ ಒಂದು; ೫ "ಶಬ್ದವಾಗುವಂತೆ ಜೋರಾಗಿ ಬಾಯಿಂದ ಉಸುರು ಬಿಡುವುದು. ವ್ಯಾಧಿ ಮೊದಲಾದವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಕರಂ. ಗದ್ಯಾನುವಾದ. ೨೬೬): ಪಿರಿದುಂ ಸ್ವಸ್ಥಂ ಸಂಚಲಮುರುಪ್ರವೃದ್ಧ ನಿರಸ್ತೆಯುಮುಲ್ಲಾಸಿತಮುಂ ಸ್ಥಿರದ ವಿಮುಕ್ತಂ ವಿವೃತಂ ತರುಣೇ ಪ್ರಸೃತಮುಮಿವಿಂತು ಕೋಹಳನ ಮತಂ (ಲಾಸ್ಕರಂ. ೩-೬೬). [ಸಂ.]

ಪ್ರವೃದ್ಧಿ (ನಾ). ಬೆಳವಣಿಗೆ; ವೃದ್ಧಿ. [ಸಂ.]

ಪ್ರವೇಕ (ಗು). ೧. ಶ್ರೇಷ್ಠವಾದ; ಉತ್ಕೃಷ್ಟವಾದ. (ನಾ). ೨. ಒಳ್ಳೆಯಂದು; ಒಳ್ಳಿತು: "ಪ್ರಾಗ್ರ್ಯಂ, ಪ್ರಾಗ್ರಹರಂ, ಪ್ರವೇಕಂ . . . ಪೇಶಲಂ—ಈ ೨೯ ಒಳ್ಳಿತು" (ಹಲಾಯು. ೦೦೪-೪). ೩. ಶ್ರೇಷ್ಠನಾದವನು: ಧವಳಯಶಂ ತ್ರೈವಿಧ್ಯಪ್ರವೇಕರಮಳಿನಚರಿತ್ರರೆನೆ ಸಂದಂ ಭೂಭುವನಕ್ಕೆ ಚಂದ್ರಿಕಾವಾದಿವಂಶದೊಳ್ ನೆಗಟ್ಟ ಧರ್ಮಸೇನಾಚಾರ್ಯರ್ (ಜಾವುಂಪು. ೩); ನರ್ಮಸಚಿವಪ್ರಧಾನಪ್ರಕೃತಿಪುರುಷಪ್ರವೇಕಪರಿವೃತಂ ಪ್ರಜಾಪತಿಮಹರಾಜನಾಸ್ಥಾನಭೂಮಿಯೊಳಿಪ್ಪುದುಂ (ಪರ್ಧಮಾ. ೩-೨೩ ಪ) ; ಕಿವಿಗಳೊಳ್ ಪೀಯೂಷಮಂ ಪಿಂಡಲುರ್ವರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆಱರ್ ಬಲ್ಲರೇ (ಲೀಲಾವ. ೦-೦೩). [ಸಂ.]

ಪ್ರವೇಣಿ (ನಾ). ೧. ಹೆಣೆದ ಕೂದಲು; ಜಡೆ: "ವೇಣೀ, ಪ್ರವೇಣೀ . . . ಹೆಣೆದ ಜಡೆಯ ಹೆಸರುಗಳು" (ಗುರುಪಾ. ೨೩೦). ೨. (ಗಂಡನು ಊರಿನಲ್ಲಿಲ್ಲದಾಗ ಸತಿಯರು ಹಾಕಿಕೊಳ್ಳುತ್ತಿದ್ದ) ತಲೆಗಂಟು ; ಮುಂಡಿ. ೩. ಆನೆಯ ಮೇಲೆ ಹಾಕುವ ಗೌಸಂ: "ಆಸ್ತರಣಮಾ ಪ್ರವೇಣಿಯೆನೆ ಗವಸಣಿಗೆಯಕ್ಕು" (ಮಂಗರಾ. ೬೦-೦೬). [ಸಂ. ಪ್ರವೇಣೀ]

ಪ್ರವೇಶ (ನಾ). ೧. ಒಳಕ್ಕೆ ಹೋಗುವುದು; ಒಳಹೊಗುವಿಕೆ : ಅಲ್ಲಿ ಸಾಮಾನ್ಯವಾಗಿ ಯಾರಿಗೂ ಪ್ರವೇಶವಿಲ್ಲ (ಪಕರಾ. ೦೬೬); ದ್ರಾವಿಡ ಭಾಷೆಗಳಲ್ಲಿ ಕರ್ಮಣಿಪ್ರಯೋಗವಿಲ್ಲದಿದ್ದರೂ ಅಲ್ಲಲ್ಲಿ ಇಂದಿಗೂ ಹೇಗೂ ಬಾಯಿಮಾತಿನಿಂದ ಬರವಣಿಗೆಯವರೆಗೂ ಪ್ರವೇಶ ಗಿಟ್ಟಿಸಿಕೊಂಡಿವೆ (ದ್ರಾವಿವಿ. ೩೦೦). ೨. ಪ್ರಾರಂಭ; ಮೊದಲು. ೩. ಶಾಸ್ತ್ರಗ್ರಂಥಗಳ ತಿಳಿವಳಿಕೆಗಾಗಿ ಬರೆದಿರುವ ಪರಿಚಯಂಭಾಗ. ೪. ಬಾಗಿಲು ; ದ್ವಾರ. ೫. [ನಾಟ್ಯ]ಕಣ್ಣುಗುಡ್ಡೆಯ ಚಲನೆಯಲ್ಲಿ ಒಂದು ಬಗೆ; ೫ "ಆಲಿಯನ್ನು ರೆಪ್ಪೆಯೊಳಕ್ಕೆ ಸೇರಿಸುವುದು" (ಲಾಸ್ಕರಂ. ಗದ್ಯಾನುವಾದ. ೨೬೪) : ಭ್ರಮಣ, ವಲನ, ಪಾತ, ಚಲನ, ಪ್ರವೇಶ, ವಿವರ್ತ, ಸಮುದ್ವೃತ್ತ, ನಿಷ್ಕ್ರಾಮ, ಪ್ರಾಕೃತ—ಈ ಒಂಬತ್ತು[ಸ್ವನಿಷ್ಠ]ಆಲಿಯ ಭೇದಂಗಳ್ (ಲಾಸ್ಕರಂ. ೩-೫೪ ಪ) ; ಗೆಳೆಗೊಂಡ ತಾರೆಯದು ತಾಂ ನಳಿನಾಕ್ಷೀ ಕೇಳ್ ಪ್ರವೇಶಮೆಂದೆನಿಸಿರ್ಕುಂ (ಲಾಸ್ಕರಂ. ೩-೫೬). ೬. [ಕಾವ್ಯಮೀ]ರಂಗದ ಮೇಲೆ ಬರುವುದು; ರಂಗಪ್ರವೇಶ. ೭. = ಪ್ರವೇಶಕ : 'ಪ್ರವೇಶ', 'ಪ್ರವೇಶಕ' ಎಂಬೆರಡೂ ಹೆಸರುಗಳು ಬಳಕೆಯಲ್ಲಿವೆ (ದಕರೂ. ೬೦). [ಸಂ.]

ಪ್ರವೇಶಂಗೈ (ಕ್ರಿ). ಒಳಕ್ಕೆ ಹೋಗು; ಪ್ರವೇಶಿಸು : ನೃಪಂ . . . ಮಡಿಯೆ ಕೇಳ್ದು ಚಿತ್ರಭಾನುಪ್ರವೇಶಂಗೈದಳಂದು ಶತಪತ್ರಲೋಚನೆ ಪತಿವ್ರತೆಯಾಗಿ (ಕೃಮಿಭಾ. ೨೬-೦೫). [ಪ್ರವೇಶ+ಗೈ (<ಕೆಯ್$_1$)]

ಪ್ರವೇಶಕ (ನಾ). [ಕಾವ್ಯಮೀ] ದೃಶ್ಯಕಾವ್ಯಗಳಲ್ಲಿ ಬರುವ ಐದು ಬಗೆಯ ಸೂಚನೆಯ ಸಾಧನೆಗಳಲ್ಲಿ ಒಂದು; ಐದು ವಿಧವಾದ ಅರ್ಥೋಪಕ್ಷೇಪಕಗಳಲ್ಲಿ ಒಂದು; ಹಿಂದೆ ನಡೆದ ಮತ್ತು ಮುಂದೆ ನಡೆಯಲಿರುವ ಕಥೆಯ ವಸ್ತುವನ್ನು ನೀಚಪಾತ್ರಗಳ ಮೂಲಕ ಸೂಚಿಸುವುದು; ೫ ಇದಕ್ಕೆ ಮೊದಲನೆಯ ಅಂಕದಲ್ಲಿ ಅವಕಾಶವಿಲ್ಲ: ಉದಾತ್ತವಲ್ಲದ ಮಾತುಗಳು [ಮತ್ತು] ನೀಚಪಾತ್ರಗಳಿಂದ, ಎರಡು ಅಂಕಗಳ ನಡುವೆ, ಯೋಜಿತವಾಗುವ 'ಪ್ರವೇಶ[ಕ]'ವು ಅದರಂತೆಯೇ [ಎಂದರೆ, ವಿಷ್ಕಂಭದಂತೆಯೇ] ಉಳಿದ [ಹಿಂದುಮುಂದಿನ] ವಿಷಯಗಳನ್ನು

ಸೂಚಿಸುವುದು (ದಶರೂ. ೭೧); ಹಿಂದೆ ನಡೆದ ಮತ್ತು ಮುಂದೆ ನಡೆಯುವ ಕಥಾಂಶಗಳನ್ನು ಬರಿಯ ನೀಚಪಾತ್ರಗಳಿಂದಲೇ ಸೂಚಿಸುವುದು. ಇದು ಎರಡು ಅಂಕಗಳ ಮಧ್ಯದಲ್ಲಿಯೇ ಬರುತ್ತದೆ (ಎಂದರೆ, 'ವಿಷ್ಕಂಭ'ವು ನಾಟಕದ ಮೊದಲಲ್ಲಿಯೇ ಬರಬಹುದು ; ಪ್ರವೇಶಕವು ಹಾಗೆ ಬರುವುದಿಲ್ಲ. ಒಂದು ಅಂಕವು ಮುಗಿದು ಮತ್ತೊಂದು ಅಂಕವು ಆರಂಭವಾಗುವುದಕ್ಕಿಂತ ಮುಂಚೆ ಬರತಕ್ಕದ್ದು (ಕೃಪಿ. ೨೦೬); ಪ್ರವೇಶಕ ನಡೆದು ಹೋದ ಕಥಾಂಶವನ್ನು ಬರಿಯ ನೀಚಪಾತ್ರಗಳಿಂದಲೇ ಸೂಚಿಸುವುದು (ಸಂನಾಟ. ೦೫). [ಸಂ.]

ಪ್ರವೇಶದ್ವಾರ (ನಾ). ಹೆಬ್ಬಾಗಿಲು; ಮಹಾದ್ವಾರ; ತಲೆಬಾಗಿಲು: ಪ್ರವೇಶದ್ವಾರದ ಹಿಂದಿದ್ದ ಕೋಣೆ ದೊಡ್ಡದಾಗಿದ್ದು ಕಮಾನುಚಾವಣೆಯಿಂದ ಕೂಡಿತ್ತು (ಪುಸರು. ೦೫೫). [ಸಂ.]

ಪ್ರವೇಶಪತ್ರ (ನಾ). ಒಂದು ದೇಶವನ್ನು ಪ್ರವೇಶಿಸಲು ಕೊಡುವ ಅಪ್ಪಣೆಯ ಪತ್ರ; ರಹದಾರಿ: "ಪ್ರವೇಶಪತ್ರ" (Visa. ಪತ್ರಿಪಿ. ೬೭). [ಸಂ.]

ಪ್ರವೇಶಪರೀಕ್ಷೆ (ನಾ). ೧. ಯಾವುದಾದರೂ ಉದ್ಯೋಗಕ್ಕೆ ಅಥವಾ ಉನ್ನತವಿದ್ಯಾಭ್ಯಾಸಕ್ಕೆ ಅರ್ಹತೆಯನ್ನು ಪರೀಕ್ಷಿಸಲು ನಡೆಸುವ ಪರೀಕ್ಷೆ: ವಿಶ್ವವಿದ್ಯಾನಿಲಯದ ಪ್ರವೇಶಪರೀಕ್ಷೆಯಲ್ಲಿ ಮೊದಲನೇ ತರಗತಿಯನ್ನು ದೊರಕಿಸಿದ ಶ್ರೇಯಸ್ಸು ನರೇಂದ್ರನದು (ರರ್ಮಸಾ. ೪೬). [ಸಂ. ಪ್ರವೇಶಪರೀಕ್ಷಾ]

ಪ್ರವೇಶಿಸು (ಕ್ರಿ). ೧. ಒಳಕ್ಕೆ ಹೋಗು ; ಒಳಸೇರು : ಹಿಡಿಯ ಪೋಪುದಱಿಂದ ಮುನ್ನವೆ ಮೃಡನ ಹೊಱಗೊಮ್ಮಾಱು ಸೀರೆಯ ಕಡೆ ಸೆಱಂಗಿರೆ ಲಿಂಗದೊಳಗಾತಂ ಪ್ರವೇಶಿಸಿದ (ಬಸಪು. ೩೩-೪೯); ಪರಮರ್ಷಿ ನಾರದಂ ತನಗೊರೆದು ಕೂಡೆ ತಾನುರಿಯೊಳ್ಪ್ರವೇಶಿಸಿದನೆನೆ (ಶೈಪುಭಾ. ೩-೩೨). ೨. ರಂಗದ ಮೇಲೆ ಬರು; ರಂಗಪ್ರವೇಶ ಮಾಡು : ಕೃಷ್ಣನು ಬಾಲಕನಾಗಿ ಗೊಲ್ಲರ ಹುಡುಗರೊಂದಿಗೆ ಪ್ರವೇಶಿಸುವುದನ್ನು ನಾವು ಕಾಣುತ್ತೇವೆ (ಭಾರಸಾ. ೨೬). [ಪ್ರವೇಶ + — ಇಸ್ಸು]

ಪ್ರವೇಷ್ಟ (ನಾ). ೧. ತೋಳು ; ಬಾಹು ; ಭುಜ : "ದೋಃ, ಪ್ರವೇಷ್ಟಃ, ಭುಜಃ, ಬಾಹುಃ, ಭುಜಾ — ಈ ೫ ತೋಳ್" (ಹಲಾಯು. ೬೬-೩೬೬). ೨. ಕೈಯ ಹರಡು ; ಮಣಿಕಟ್ಟು. ೩. (ಮಾವುತನು ಕುಳಿತುಕೊಳ್ಳುವ) ಆನೆಯ ಬೆನ್ನಿನ ಮೇಲಿನ ಮಾಂಸಲವಾದ ಪ್ರದೇಶ. ೪. ಆನೆಯ ದಂತದ ಮೇಲ್ಭಾಗ. ೫. ಆನೆಗೆ ಹೊದಿಸುವ ಗೌಸಂ. [ಸಂ.]

ಪ್ರವೇಷ್ಟನ (ನಾ). ಮುಸುಕು; ಆಚ್ಛಾದನೆ: 'ಪ್ರವೇಷ್ಟಿಸಂ' ಪರಾ. [ಸಂ.]

ಪ್ರವೇಷ್ಟಿಸು (ಕ್ರಿ). ಆವರಿಸಂ ; ಮುಸುಕು : ಕುಸುಮದಿಂದ ಕಾಯಿ ಕಾಯಿಂದ ಹಣ್ಣು ಇಂತಿವೆಲ್ಲಕ್ಕೂ ಮೂಲ ಬುಡ ಒಂದೇ ಭೂಮಿ ಅಲ್ಲಿ ಗಿಡ ನಿಂದು ಪ್ರವೇಷ್ಟಿಸಿಕೊಂಡಿರ್ಪಂತೆ (ಮೋಳಿಮಾ. ೨೪೭-೭೯೯); ಮತ್ತ ಹಂಕಾರಮಂ ಬಳಸಿಕೊಂಡಿರ್ಪುದು ಮಹತ್ತಾಮಹತ್ತನವ್ಯಕ್ತಂ ಪ್ರವೇಷ್ಟಿಸಿರ್ದತ್ತು (ಶಿಪಪು. ೦೩-೬). [ಪ್ರವೇಷ್ಟನ + — ಇಸ್ಸು]

ಪ್ರವ್ಯಕ್ತ (ಗು). ೧. ಸ್ಫುಟವಾದ; ಸ್ಪಷ್ಟವಾದ. (ನಾ). ೨. ಪ್ರಕಟವಾದುದು ; ವೇದ್ಯವಾದುದು : "ಸ್ಪಷ್ಟಂ, ಸ್ಫುಟಂ, ಪ್ರವ್ಯಕ್ತಂ, ಉಲ್ಬಣಂ — ಪ್ರಕಟವಾದದ್ದು" (ಸಿದ್ಧಾಂತಿ. ೩೪೪); ಸೂಕ್ತಂ ಭವ್ಯಜನ ಪ್ರವ್ಯಕ್ತಂ ಜೈನಾಗಮೋಕ್ತಮಿಂ ನಿನಗೆ ಮದೀಯೋಕ್ತಮಿದರ್ದೆಯೊಳ್ ನೆಲಸುಗೆ (ಆದಿಪು. ೩-೬೦). [ಸಂ.]

ಪ್ರವ್ರಜನ (ನಾ). ೧. ಸಂಚಾರ ; ಪ್ರವಾಸ ; ಪ್ರಯಾಣ: ಅವನು . . . ಮುಂಚಿತವಾಗಿ ಆ ರೀತಿ ಪ್ರವ್ರಜನ ಮಾಡಿ ಬಂದಿದ್ದು, ತಾನು ಪ್ರವ್ರಜನ ಮಾಡಿ ಬಂದ ತಾರೀಖಿನಿಂದ ಭಾರತರಾಜ್ಯ ಕ್ಷೇತ್ರದಲ್ಲಿ ಸಾಮಾನ್ಯವಾಗಿ ನಿವಾಸಿಸುತ್ತಿದ್ದ ಸಂದರ್ಭದಲ್ಲಿ . . . ಭಾರತದ ನಾಗರಿಕನೆಂಬುದಾಗಿ ಭಾವಿಸಲ್ಪಡತಕ್ಕುದು (ಭಾರಾಸ. ೪). ೨. ಸಂನ್ಯಾಸ ಸ್ವೀಕಾರ : 'ಪ್ರವ್ರಜಿಸಂ' ಪರಾ. [ಸಂ.]

ಪ್ರವ್ರಜಿತ (ಗು). ೧. (ದೇಶದಲ್ಲಿ) ತಿರುಗಾಡುವ; ಸಂಚರಿಸುವ. (ನಾ). ೨. ಮುನಿ; ಸಂನ್ಯಾಸಿ. ೩. ಬೌದ್ಧ ಅಥವಾ ಜೈನ ಭಿಕ್ಷು: "ಮುನಿಃ . . . ಪ್ರವ್ರಜಿತಃ, ಶ್ವೇತವಾಸಾಃ, ಸಂಯತಃ — ಈ ೯ ಸವಣರ ಪೆಸರ್" (ಹಲಾಯು. ೩೭-೦೯೦); ಕ್ಷಿತಿಯ ನಯವಿಕ್ರಮದಿಂ ಪ್ರತಿಪಾಳಿಸಿ ಪಡೆದು ಗೋತ್ರವಿಸ್ತಾರಕನಂ ಸುತನಂ ಬಟಿಕ್ಕಮೆಮ್ಮಿ ಸ್ಥಿತಿಯಿಂ ಪ್ರವ್ರಜಿತಮಪ್ಪುದುಚಿತಂ ಮಗನೇ (ವರ್ಧಮಾ. ೨-೩೯); ಹೀನಮುಭಯ ಮನರ್ಥಕರಮನಾರ್ಯಂ ಗಡಾ! ಪ್ರವ್ರಜಿತರಿಗೆ ಸಲ್ಲವು (ನೈಶಾಖ. ೬೪-೩೫೬). ೪. ಸಂನ್ಯಾಸ : ದ್ವಿಜಕುಲನೆನಿಸುವನೀ ಪ್ರವ್ರಜಿತದೊಳೆಸಗಿದೊಡೆ ದೋಷಮುಂಟು (ಸುಳುಮಾ. ೩-೩೦). [ಸಂ.]

ಪ್ರವ್ರಜಿಸು (ಕ್ರಿ). ಸಂನ್ಯಾಸವನ್ನು ಸ್ವೀಕರಿಸು : ಮೊದಲು ಒಂದು ಸಾಮಾಜಿಕಬಂಧಕ್ಕೆ ಒಳಗಾಗದೆ ವಿರಕ್ತಿಯನ್ನು ಹೊಂದಲು ಅಸಾಧ್ಯ ಎನ್ನುತ್ತಾನೆ ತಂದೆ; ಆದರೆ ಮಗ ಭ್ರಾಂತಿನಿರಸನವಾದ ಕ್ಷಣದಲ್ಲೇ ಪ್ರವ್ರಜಿಸಬೇಕು . . . ಎಂದೇ ವಾದಿಸುತ್ತಾನೆ (ಕತ್ಯಪ್ರಾ. ೮೭). [ಪ್ರವ್ರಜನ + — ಇಸ್ಸು]

ಪ್ರವ್ರಜ್ಯ (ನಾ). (ದೇಶವಿದೇಶಗಳಲ್ಲಿ ಸುತ್ತಾಡುವ) ಸಂನ್ಯಾಸದೀಕ್ಷೆ : ಮೊದಲೊಳ್ ದೇವರ ದಯೆಗೆಯ್ದುದಲ್ತೆ ಯುವರಾಜಪದವಿಯೆನಗೀಗಳು ಮಭ್ಯುದಯಕರಪ್ರವ್ರಜ್ಯದ ಪದವಿಯ ಯುವರಾಜಪದವಿಯಂ ದಯೆಗೆಯಿಸಿಂ (ಆದಿಪು. ೦೪-೦೩೮); ಮಹಾಪ್ರಜಾಪತಿ ಗೌತಮಿಯು ಐನೂರು ಶಾಕ್ಯರನ್ನು ಜೊತೆಗೊಂಡು ಹೊರಟು ಪ್ರವ್ರಜ್ಯವನ್ನು ಬೇಡಿ, ಪ್ರವ್ರಜ್ಯವನ್ನೂ ಉಪಸಂಪದೆಯನ್ನೂ ಪಡೆದಳು (ಬುದ್ಧಪ. ೦೦). [ಸಂ. ಪ್ರವ್ರಜ್ಯಾ]

ಪ್ರವ್ರಜ್ಯಪದವಿ (ನಾ). ಸಂನ್ಯಾಸದೀಕ್ಷೆ : ಕೇಶವನುಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತಸಕಲರಾಜ್ಯಪರಿಚ್ಛೇದಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ತದಬ್ಯುತಕಲ್ಪದೊಳ್ ಪ್ರತೀಂದ್ರನಾದಂ (ಆದಿಪು. ೬-೦೨ ಪ). [ಸಂ.]

ಪ್ರವ್ರಜ್ಯೆ (ನಾ). ಸಂನ್ಯಾಸದೀಕ್ಷೆ : "ಪರಿವ್ರಜ್ಯಾ, ವ್ರತಾದಾನಂ, ಪ್ರವ್ರಜ್ಯಾ, ಗತಿಃ — ಈ ೪ ತಪಂಬಡುಹ" (ಹಲಾಯು. ೦೨೯-೯೦). [ಸಂ. ಪ್ರವ್ರಜ್ಯಾ]

ಪ್ರವ್ರಾಜ್ಯ (ನಾ). = ಪ್ರವ್ರಜ್ಯ : ವರಸೇನಮುನಿಯಲ್ಲಿ ಪರಮ ಪ್ರವ್ರಾಜ್ಯವ ಎಱಕದಿಂದವೆ ತಾ ಧರಿಸಿ (ಜ್ಞಾನಪ. ೨೪-೬೩). [< ಸಂ. ಪ್ರವ್ರಾಜ್]

ಪ್ರಶಂಸಕ (ನಾ). ಹೊಗಳುವವನು. [ಸಂ.]

ಪ್ರಶಂಸಾಪತ್ರ (ನಾ). ಮೆಚ್ಚುಗೆಯ ಪತ್ರ: ರಾಯರು . . . ಪ್ರಶಂಸಾಪತ್ರಗಳನ್ನು ತೋರಿಸಿದರು (ರಾಯಕ. ೪). [ಸಂ.]

ಪ್ರಶಂಸಿಸು (ಕ್ರಿ). ಹೊಗಳು; ಕೊಂಡಾಡು; ಸ್ತುತಿಸು : ಸರಕಾರವು ಸಹ ಅವರನ್ನು ಕೊಂಡಾಡಿ ಅವರ ಕಾರ್ಯನಿರ್ವಾಹಕಶಕ್ತಿಯನ್ನು ಪ್ರಶಂಸಿಸಿತು (ರಾಜಪ. ೩೬); ಅವನ ಸ್ವಾಮಿನಿಷ್ಠೆಯನ್ನು ಪ್ರಶಂಸಿಸುವನು (ಸಂಕಪ. ೩೬); ದಾಸರು ರಾಜಕೀಯವನ್ನು ಸಮಯೋಚಿತವಾಗಿ ಟೀಕಿಸುತ್ತಲೂ ಪ್ರಶಂಸಿಸುತ್ತಲೂ ಇದ್ದರು (ಬದುಪ್ಕ. ೩). [ಪ್ರಶಂಸೆ + — ಇಸ್ಸು]

ಪ್ರಶಂಸೆ (ನಾ). ೧. ಹೊಗಳಿಕೆ ; ಕೊಂಡಾಟ ; ಸ್ತುತಿ : "ಅರ್ಥವಾದಃ, ಪ್ರಶಂಸಾ . . . ವರ್ಣನಂ (ನಾ) — ಈ ೧೦ ಸ್ತುತಿಯ ನಾಮಂ" (ಹಲಾಯು. ೨೪-೧೪೪); ಸುಕುಮಾರನೆಂಬ ಪೆಸರೀ ಸುಕುಮಾರಂಗೀ ಸಮಸ್ತ

ಧಾರಿಣಿಯೊಳ್ ಸಾರ್ಥಕಮಾದುದೆಂದು . . . ಪ್ರಶಂಸೆಗೆಯ್ದಂ (ಸುಕುಮಾ. ೦೦-೩೬); ತಮ್ಮ ಬಾಯಲ್ಲಿ ತಮ್ಮ ಪ್ರಶಂಸೆ ಹೇಳಿಕೊಳ್ಳಬಾರದು (ಮುಂಬಯಿ. ೯-೩೯). ೨. ಕೀರ್ತಿ ; ಪ್ರಸಿದ್ಧಿ. [ಸಂ. ಪ್ರಶುಸಾ]

ಪ್ರಶಂಸೋಪಮೆ (ನಾ). [ಕಾವ್ಯಮೀ] ಉಪಮಾಲಂಕಾರಗಳಲ್ಲಿ ಒಂದು : ಅಮೃತಭವಂ ಶಿಶಿರಕರಂ ಕಮಳಂ ಜಗದೇಕಪಾವನೀಯಶ್ರೀಕಂ ಸಮನವಱೊಳ್ ನಿನ್ನ ಮೊಗಂ ಕ್ರಮದೆಂಬುದನಱಿವುದಾ ಪ್ರಶಂಸೋಪಮೆಯಂ (ಕವಿರಾ. ೩-೬೯). [ಸಂ. ಪ್ರಶಂಸೋಪಮಾ]

ಪ್ರಶಮ (ನಾ). ೧. ಶಾಂತತೆ; ಸಮಾಧಾನ; ಪ್ರಶಾಂತಿ : ಶಾಂತಿದಾಂತಿ ಪ್ರಶಮದಯಯುತಕಾಂತನೇಕಾಂತೈಕಭಕ್ತನಿತಾಂತಂ (ಬಸಪು. ೯೯-೩). ೨. ಉಪಶಮನ ; ತಣಿವು. ೩. [ಕಾವ್ಯಮೀ] ತಗ್ಗುವುದು ; ಇಳಿಯುವುದು : ವ್ಯಭಿಚಾರಿಭಾವಗಳಿಗೆ "ಉದಯ", "ಸ್ಥಿತಿ", "ಪ್ರಶಮ" ಎಂಬ ಮೂರು ಅವಸ್ಥೆಗಳುಂಟು (ರ್ಯಾಸ್ಕಾಲೋ. ೫೯); ಏಕೆಂದರೆ ವೀರವು ಅಭಿಮಾನಮಯವಾದುದೆಂದು ವ್ಯವಸ್ಥಿತವಾಗಿದೆ ; ಇದಾದರೋ ಅಹಂಕಾರದ ಪ್ರಶಮವೆಂಬ ಒಂದೇ ಸ್ವರೂಪವನ್ನುಳ್ಳುದು (ರ್ಯಾಸ್ಕಾಲೋ. ೦೯೩). [ಸಂ.]

ಪ್ರಶಮನ (ನಾ). ೧. = ಪ್ರಶಮ ೨ : ಆತಂಗೆ ತದುತ್ಥಿತಶಿಖಿಶಿಖಾಕಳಾಪ ಪ್ರಶಮನದರ್ಶನದಿಂದೊಂದು ತಿಂಗಳಾಯುಷ್ಯಂ (ಅದಿಪು. ೨-೯೩ ಪ). ೨. ನಿವಾರಣೆ ; ಪರಿಹಾರ; ಉಪಶಮನ: ದುಸ್ಸ್ವಪ್ನಫಲಪ್ರಶಮನಾರ್ಥಂ ಚೈತ್ಯಾಲಯ ಪೂಜೆಗೆ ಕಾಂತವತಿಯುಂ ರತಿವೇಗೆಯುಂ . . . ಪರಿಜನಂ ವೆರಸು ಬಂದು (ಶಾಪುಂಪು. ೭೬). ೩. (ತೊಂದರೆ ಮುಂತಾದುವುಗಳನ್ನು) ನಿವಾರಣೆ ಮಾಡುವುದು ; ಪರಿಹರಿಸುವುದು. ೪. ನಾಶ ಮಾಡುವುದು ; ಅಡಗಿಸುವುದು. ೫. ಪಾತ್ರರಾದವರಿಗೆ ಮಾಡುವ ದಾನ. ೬. ರಕ್ಷಿಸುವುದು; ರಕ್ಷಣೆ ಮಾಡುವುದು. ೭. ರೋಗವನ್ನು ಹತೋಟಿಗೆ ತರುವುದು,-ಗುಣಪಡಿಸುವುದು. ೮. ಕೊಲೆ; ಸಂಹಾರ : "ಮಾರಣಂ . . . ಪ್ರಶಮನಂ . . . ಸಂಜ್ಞಪನಂ —ಈ ೨೧ ಕೊಲೆ" (ಹಲಾಯು. ೭೯-೩೨೯). [ಸಂ.]

ಪ್ರಶಮಾವಸ್ಥೆ (ನಾ). ಉಪಶಮನದ ಸ್ಥಿತಿ : ಪ್ರಣಯಕೋಪನಪ್ರಶಮಾವಸ್ಥೆ ಆಸ್ವಾದ್ಯವಾದ್ದರಿಂದ 'ಭಾವಪ್ರಶಮ' (ರ್ಯಾಸ್ಕಾಲೋ. ೫೯). [ಸಂ. ಪ್ರಶಮಾವಸ್ಥಾ]

ಪ್ರಶಮಿತ (ಗು). ೧. ಉಪಶಮನ ಹೊಂದಿದ ;ಆರಿದ ; ಶಾಂತವಾದ : ಪ್ರಚಂಡಕೋಪಪಾವಕಪ್ರಶಮಿತಶೋಕರಸನುಂ . . . ಆಗಿ (ಶಂಪಭಾ. ೦೦-೦೦೭ಪ). ೨. ನಿಗ್ರಹಗೊಂಡ : ನವೋದಯದೊಳವಾ ಪ್ರಶಮಿತತಮನೊಳಾ ನೆಱೆದುದು ಶಿಶುತೆಯೊಳಂ ನಾಡೆ ರೂಢಿವೆತ್ತ ವಿವೇಕಂ (ಶಂಪ್ರಪು. ೨-೦೯). (ನಾ). ೩. ಶಾಂತನಾದವನು : ಆಂಡಯ್ಯನ ಕಾಮದೇವನು . . . ಕೋಪಾವಿಷ್ಟನಾಗಿದ್ದರೂ ಪ್ರಶಮಿತನಾಗಿ ಗದಗದನೆ ನಡುಗುತ್ತ ವಂದನೆಯನ್ನರ್ಪಿಸುವನು (ಶಾಹಿಸ. ೦೯೦). [ಸಂ.]

ಪ್ರಶಮಿಸು (ಕ್ರಿ). ೧. ಉಪಶಮನವಾಗು : ಪ್ರಶಮಿಸುಗುಂ ಲಕ್ಷ್ಮೀಧರನ ಶಕ್ತಿಯಿಂದಾದ ಬಾಧೆ (ಸಂರಾಮಾ. ೦೯-೬೦). ೨. ಕ್ಷೋಭೆಯಿಲ್ಲದಿರು ; ಸ್ಥಿರವಾಗು : ವಿಶದಯಶಧರ್ಮಮಷ್ಟಾದಶಕೋಟ್ಯನುಕೋಟಿ ಸಾಗರೋಪಮಕಾಲಂ ಪ್ರಶಮಿಸಿ ನಿಂದುದದಂ ನೀಂ ವಿಶದಂ ಮಾಟ್ಟುದು ಜಗದ್ವಿಶೇಷಕಚರಿತಾ (ಅದಿಪು. ೯-೬೩). ೩. ನಾಶವಾಗು : ಬೆಸಸಿಮಿದನೆನ್ನ ಮನದೊಂದು ಸಂಶಯಂ ಪತ್ತುವಿಡುವಿನಂ ವ್ಯಾಮೋಹಂ ಪ್ರಶಮಿಸುವಿನ ಮೆಂಬುದುಮಂದೆಸೆದುದು ವಾಕ್ಪಸರಮಾಗಳಾ ಯತಿಪತಿಯಾ (ಸುಕುಮಾ. ೩.೬); ಪ್ರಶಮಿಸಿದ ಮೋಹನೀಯಪ್ರಶಾಂತಿಯಿಂ ಸೂಕ್ಷ್ಮಸಾಂಪರಾಯ ಕ್ಷಪಕೋಪಶಮಕಸಂಯುತನಾದಂ ದಶಮಗುಣಸ್ಥಾನವರ್ತಿ ಮುನಿಮುಖತಿಲಕಂ (ಅಪಂಪು. ೯-೩೯). ೪. ನಿಗ್ರಹವಾಗು ; ಹತೋಟಿಗೆಬರು ; ನಿವಾರಣೆಯಾಗು : ಮೋದಕದಿಂ ಮಧು ಪೀಲಿಯ ಬೂದಿಕಣಾಚೂರ್ಣಮೆಂಬಿವಂ ತಿನೆ ರುಜೆಯಿಂದಾದಿರ್ಕುಟುಮೂರ್ಧ್ವಶ್ವಾಸೋದಯಮುಂ ಕಂಠರೋಗಮುಂ ಪ್ರಶಮಿಸುಗುಂ (ಲೋಕೋಪ. ೯-೩೨) ; ಬಿಸು(ಸಿ ನೀರೊಳ್ ಕುಡೆ ವಾತಂ ಪ್ರಶಮಿಸುಗುಂ (ಅಶ್ವಶಾ. ೭-೯೭). [ಪ್ರಶಮನ + —ಇಸ್ಕು]

ಪ್ರಶಮೆ (ನಾ). = ಪ್ರಶಮ ೧ : ನಿಮಗಭ್ಯುದಯಮೆ ತಾಮೆಮಗೆ ನಿತ್ಯಕರ್ಮಾನುಷ್ಠಾನದ ಪ್ರಶಮೆಯಪ್ಪುದೆಂದತಿಮುದದಿಂದಭ್ಯುದಯಮಾಗೆ ಪರಸಲ್ಬಂದೆಂ (ಅಪಂಪು. ೦೩-೩೨). [ಸಂ. ಪ್ರಶಮ]

ಪ್ರಶಸ್ತ (ಗು). ೧. ಹೊಗಳಿದ ; ಕೊಂಡಾಡಿದ. ೨. ಉತ್ತಮವಾದ ; ಶ್ರೇಷ್ಠವಾದ : ಆತ್ಮೀಯಗೃಹಾಭ್ಯಂತರಪ್ರಶಸ್ತಪ್ರದೇಶಂಗಳೊಳಂ ಪ್ರಶಸ್ತಮೃತ್ತಿಕಾವಿರಚಿತೋನ್ನತವೇದೀತಲಾಷ್ಟಮಹಾಪ್ರಾತಿಹಾರ್ಯ ಸಮನ್ವಿತಜಗತ್ಪೂಜ್ಯಪೂಜಿತಾರ್ಹತ್ಪ್ರತಿಮೆಗಳ ನಿಱಿಸಿ (ಅದಿಪು. ೦೫-೦೬ ಪ). ೩. (ಗ್ರಹ, ತಾರೆಗಳಂತೆ) ಮಂಗಳಕರವಾದ ; ಶುಭಕರವಾದ : ಪ್ರಶಸ್ತಲಗ್ನದೊಳಾತ್ಮೀಯಸ್ವಾಮಿಯಪ್ಪತಿಬಳಮಹಾರಾಜನನು ಚಿತಪ್ರತಿಪತ್ತಿಗಳಿಂ ಕಂಡು (ಸುಕುಮಾ. ೨-೭೩ ಪ). (ನಾ). ೪. ಉತ್ತಮವಾದುದು; ಶ್ರೇಷ್ಠವಾದುದು: "ಪ್ರಶಸ್ತಂ, ಸಂಸ್ಕೃತಂ —ಈ ೨ ಲೇಸು ಮಾಟ್ಟುದು" (ಹಲಾಯು. ೦೨೯-೯೬); ಆಹಾ ! ತುಂಬಾ ಪ್ರಶಸ್ತವಾಗಿ (ರಾಕ್ಷಮು. ೯೦). ೫. ಚೆಲುವಾದುದು ; ಸುಂದರವಾದುದು: "ಕಮನೀಯಮಭಿರಾಮಂ. . . ಪ್ರಶಸ್ತಂ ವರಂ ರಮಣೀಯಂ" (ಮುಂಗರಾ. ೦೨೬-೨). ೬. ಮಂಗಳವನ್ನು ನುಡಿಯುವವನು ; ಶುಭ ನುಡಿಯುವವನು : "ಪ್ರಶ್ರುತಂ ಪ್ರಶಸ್ತನೆನೆ ಗೆಲೆ ನುಡಿವವಂ" (ಮುಂಗರಾ. ೭೦-೦೬). ೭. [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು: ಧ್ರುವ . . .ಪ್ರಶಸ್ತ . . . ಜಯಾಳವೆಂಬಿವು ಮೊದಲಾದ ನೂಱೆಂಟು ತಾಳಂಗಳುಂ (ವಿವೇಕ. ೨೩೯). [ಸಂ.]

ಪ್ರಶಸ್ತಕಾಲ (ನಾ). ಶುಭಸಮಯಂ ; ಒಳ್ಳೆಯಂ ಕಾಲ : ಅವರ ಮದುವೆ ಪ್ರಶಸ್ತಕಾಲದಲ್ಲಿ ನೆರವೇರಿತು (ರೂಢಿ). [ಸಂ.]

ಪ್ರಶಸ್ತಮುಹೂರ್ತ (ನಾ). = ಪ್ರಶಸ್ತಕಾಲ : ವಧೂವರರಿರ್ವರುಮಂ ಮೌಹೂರ್ತಿಕಗಣನಿರೂಪಿತಪ್ರಶಸ್ತಮುಹೂರ್ತದೊಳ್ . . . ಮುಂದಿಟ್ಟುತಂದು (ಅದಿಪು. ೯-೯೭ ಪ). [ಸಂ.]

ಪ್ರಶಸ್ತಿ (ನಾ). ೧. ಹೊಗಳಿಕೆ ; ಪ್ರಶಂಸೆ : ದರ್ಪಕನ ವರ್ಣನೆ ದರ್ಪಕನ ಪ್ರಶಸ್ತಿ (ಗಿರಿಕ. ೯-೦೨೦) ; ಕನ್ನಡಸಾಹಿತ್ಯದಲ್ಲಿ ಕಬ್ಬಿಗರ ಕಾವಕ್ಕೆ ಅನ್ನೊಂದು ಪ್ರಶಸ್ತಿ ! (ಸಾಹಿಸ. ೦೦೭). ೨. ಹೊಗಳಿಕೆಯನ್ನೊಳಗೊಂಡ ಶಾಸನ : ಕಾಕಿಣಿರತ್ನದಿಂದಲ್ಲಿ ಮುನ್ನಿರ್ದುದೊಂದು ಪ್ರಶಸ್ತಿಯಂ ಪರಾಮೃಷ್ಟಂ ಮಾಡಿ (ಶಾಂತಿಪು. ೦೦-೬೩ ಪ). ೩. ಗೌರವಸೂಚಕವಾದ ಪದವಿ ; ಬಿರುದು : ಸಮನೆನಿಸುವ[ರ್] ಪ್ರಶಸ್ತಿಕ್ರಮದೊಳ್ ಸ್ವಸ್ತಿಸಮಧಿಗತ ಪಂಚ[ಮಹಾ]ಮಹಾಸಾಮಂತರೆನಲ್ ಸಮನೆನಿಪರೆ ಗುಣದೊಳರಿಗನೊಳ್ ಸಾಮಂತರ್ (ಶಂಪಭಾ. ೦-೯೯); ಅಯ್ಯನ ಗಂಧವಾರಣಂ ನಾಮಾದಿ ಸಮಸ್ತಪ್ರಶಸ್ತಿಸಹಿತಂ (ಕಇಲ. ೦-೦-೯; 1092)- ೪. ಉತ್ಕೃಷ್ಟತೆ ; ಶ್ರೇಷ್ಠತೆ. ೫. ಪ್ರಚಾರ ; ಪ್ರಸಾರ ; ಹರಡುವಿಕೆ. ೬. ಮಾರ್ಗದರ್ಶನ ; ನಿರ್ದೇಶನ. ೭. ಕಲ್ಯಾಣ ; ಶ್ರೇಯಸ್ಸು. [ಸಂ.]

ಪ್ರಶಸ್ತಿಪತ್ರ (ನಾ). ಪ್ರಶಂಸೆಯನ್ನು ಸೂಚಿಸುವ ಪತ್ರ; ಯೋಗ್ಯತಾಪತ್ರ : "ಪ್ರಮಾಣಪತ್ರ, ಯೋಗ್ಯತಾಪತ್ರ, ಪ್ರಶಸ್ತಿಪತ್ರ" (Certificate. ಪತ್ರಿವಿ. ೦೯). [ಸಂ.]

ಪ್ರಶಸ್ತಿಲೇಖನ (ನಾ). ಹೊಗಳಿಕೆಯ ಬರಹದ ಶಾಸನ : ಪ್ರೇಂಖೋಲಿತಮನಸಿಜವಿಜಯಪ್ರಶಸ್ತಿಲೇಖನೋಚಿತಚ್ಛದ ಶ್ರೀತಾಳಿಕಮುಮಪ್ಪ ವೇಲಾವನದೊಳಾವಾಸಿತವಿಜಯಕಟಕನಾಗಿ (ಅದಿಪು. ೦೩-೩ ಪ). [ಸಂ.]

ಪ್ರಶಾಂತ (ಗು). ೧. ಸದ್ದು ಗದ್ದಲವಿಲ್ಲದ ; ನಿಃಶಬ್ದವಾದ : ಆ ಪ್ರಭಾಮಯಪಾದ ಪ್ರಶಾಂತನಿಶಿಯಲ್ಲಿ . . . ಗಾನಮಾಧುರ್ಯದಲ್ಲಿ ಮಗ್ನನಾದ ಖಾನನು ಎಲ್ಲವನ್ನೂ ಮರೆತಿದ್ದಾನೆ (ಗೊಂಕ. ೫೩). ೨. ತಾಳ್ಮೆಯಿಂದ ಕೂಡಿದ ; ಶಾಂತವಾಗಿರುವ. (ನಾ). ೩. ಶಾಂತತೆ : ಪ್ರಸನ್ನಗಂಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ (ಕವಿರಾ. ೨-೧೯). ೪. ಶಾಂತನಾಗಿರುವವನು ; ಸಮಾಧಾನಿ : ತಂದೆ ಅಪ್ಪರ ಮಟ್ಟಿಗೆ ಪ್ರಶಾಂತರಾದುದನ್ನು ಕಂಡು ರಾಮಯ್ಯನಿಗೆ ಆಶ್ಚರ್ಯವಾಯಿತು (ಕಾಪುರು. ೬೭೯). [ಸಂ.]

ಪ್ರಶಾಂತಿ. (ನಾ). ೧. ಸದ್ದುಗದ್ದಲವಿಲ್ಲದುದು ; ಪ್ರಶಾಂತವಾದುದು. ೨. ಶಾಂತತೆ ; ಸಮಾಧಾನ : ಭೂಪಾಟೋಪಂ ಬರ್ಕುಮೆ ವೃಜಿನವಿಲೋಪಿ ಜಿನೇಂದ್ರಪ್ರಶಾಂತಿಯೊರೆಗಂ ದೊರೆಗಂ (ಶಾಂತಿಪು. ೦೦-೬೯). ೩. [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು ; ಪ್ ವಂಶೋದ್ಧಾರಕನಾದ ಮಗನನ್ನು ಪಡೆದು, ಅವನು ಸಮರ್ಥನಾದ ಮೇಲೆ ಸಂಸಾರವನ್ನು ಅವನಿಗೆ ವಹಿಸಿ ತಾನು ಸಂಸಾರದಿಂದ ನಿವೃತ್ತನಾಗುವುದು ; ವೈರಾಗ್ಯ ವೃತ್ತಿ: ಪ್ರಶಾಂತಿಯುಂ ಸ್ವಗೃಹತ್ಯಾಗಮುಂ . . . ಅಪ್ಪಯ್ವತ್ತು ಮೂಱು ಗರ್ಭಾನ್ವಯಕ್ರಿಯೆಯೊಳ್ (ಶಾಪುಂಪು. ೨೦೨). 'ದೀಕ್ಷೆ' ಪರಾ. [ಸಂ.]

ಪ್ರಶಾಸನ (ನಾ). ಆಳುವುದು ; ಆಡಳಿತ : ಸಂಘಕಾರ್ಯಗಳ ಪ್ರಶಾಸನಸಂಬಂಧವಾಗಿ . . . ರಾಷ್ಟ್ರಪತಿಯವರು ತಮಗೆ ಒದಗಿಸಬೇಕೆಂದು ಕೋರುವಂಥ ಸಂಗತಿಗಳನ್ನು ಅವರಿಗೆ ಒದಗಿಸುವುದೂ . . . ಪ್ರಧಾನಮಂತ್ರಿಯವರ ಕರ್ತವ್ಯವಾಗಿರತಕ್ಕುದು (ಶಾಶಾ. ೩೯). [ಸಂ.]

ಪ್ರಶಿಕ್ಷಣ (ನಾ). ೧. ಉಚ್ಚ ಶಿಕ್ಷಣ. ೨. ಬೇರೆ ಬೇರೆ ವೃತ್ತಿಗಳಿಗಾಗಿ ನೀಡುವ ತರಬೇತಿ ; ವೃತ್ತಿಶಿಕ್ಷಣ : ಕೆಲವು ಸ್ಥಳಗಳಲ್ಲಿ ಪ್ರಶಿಕ್ಷಣ ಹಾಗೂ ಸಂಶೋಧನಕೇಂದ್ರಗಳನ್ನು ತೆರೆಯಲಾಗಿದೆ (ಕಬಿಕೋ. I.೬೯). [ಸಂ.]

ಪ್ರಶಿಷ್ಯ (ನಾ). ಶಿಷ್ಯನ ಶಿಷ್ಯ : ವಿದ್ಯಾರ್ಥಿಯ ವಿದ್ಯಾರ್ಥಿ : ಪ್ರತಿಯೊಬ್ಬ ದೊಡ್ಡ ಅಧ್ಯಾಪಕನಿಗೂ ಈ ಪಂಗಡದ ಶಿಷ್ಯ ಪ್ರಶಿಷ್ಯರ ಸಂಖ್ಯೆಯೇ ಅಧಿಕ (ಕಬಾ. IV ೨೧೬೯); ಅಭಿನವಗುಪ್ತನು (೧೬೦ ಕ್ರಿ. ಶ.) ಉತ್ಪಲಾಚಾರ್ಯನ ಪ್ರಶಿಷ್ಯನು (ಕತ್ರ್ಯಶ್ರಾ. ೪೦೯). [ಸಂ.]

ಪ್ರಶ್ನ (ನಾ). ಕೇಳುವಿಕೆ ; ಪ್ರಶ್ನೆ : "ಪ್ರಶ್ನಃ, ಅನುಯೋಗಃ—ಈ ಬೆಸಗೊಳುಹ" (ಹಲಾಯು. ೨೫-೦೫೩). [ಸಂ.]

ಪ್ರಶ್ನಕಾರ (ನಾ). ಪ್ರಶ್ನೆಯನ್ನು ಕೇಳುವವನು : "ಪ್ರಶ್ನೆ ಕೇಳುವವನು ; ಪ್ರಶ್ನಕಾರ" (Querist. ಇಂಇಸಿ). [ಸಂ.]

ಪ್ರಶ್ನಚಿಹ್ನೆ (ನಾ). ಪ್ರಶ್ನೆಯನ್ನು ಸೂಚಿಸಲು ಹಾಕುವ ಗುರುತು : ಪ್ರಶ್ನಾರ್ಥಕವಾಕ್ಯದ ಕೊನೆಯಲ್ಲಿ ಪ್ರಶ್ನಚಿಹ್ನೆಯನ್ನು ಹಾಕಬೇಕು (ಕೂಡಿ). [ಸಂ. ಪ್ರಶ್ನಚಿಹ್ನ]

ಪ್ರಶ್ನಲಗ್ನ (ನಾ). [ಜ್ಯೋತಿ] ಜೋಯಿಸರಿಗೆ ಪ್ರಶ್ನೆಯನ್ನು ಹಾಕುವ ಕಾಲ.—ಲಗ್ನ: ರವಿಜಂ ಮೇಣ್ ಬುಧನಕ್ಕೆ ಕೇಂದ್ರಗೃಹದೊಳ್ ನಿಂದಂದು ಮೇಣ್ ಪ್ರಶ್ನಲಗ್ನವನಾಳೋಕಿಸೆ (ಜಾತಕ. ೩-೦) [ಸಂ].

ಪ್ರಶ್ನವ್ಯಾಕರಣ (ನಾ). = ಪ್ರಶ್ನವ್ಯಾಕರಣಾಂಗ : ಆಚಾರಮುಂ . . . ಅನುತ್ತರೋಪಪಾದಿಕದಶಮುಂ ಪ್ರಶ್ನವ್ಯಾಕರಣಮುಂ . . . ಎಂದು ಅಂಗಪ್ರವಿಷ್ಟಭೇದದಿಂ ದ್ವಾದಶವಿಕಲ್ಪಮುಂ ಅಕ್ಕುಂ (ಕತ್ರ್ಯಶ್ರ. ೫೯) ; ಆಚಾರ, ಸೂತ್ರಕೃತ, ಸ್ಥಾನ, ಸಮವಾಯ, ವ್ಯಾಖ್ಯಾಪ್ರಜ್ಞಪ್ತಿ . . . ಪ್ರಶ್ನವ್ಯಾಕರಣ, ವಿಪಾಕಸೂತ್ರ, ದೃಷ್ಟವಾದ ಎಂಬುವು ಹನ್ನೆರಡು ಅಂಗಗಳು (ಭಾಕತ್ರ. ೨೨೮) ; ಅಂಗಶ್ರುತಜ್ಞಾನವು ಆಚಾರ . . . ಪ್ರಶ್ನವ್ಯಾಕರಣ, ವಿಪಾಕಸೂತ್ರ, ದೃಷ್ಟಿವಾದ ಎಂದು ಹನ್ನೆರಡು ಬಗೆಯಾಗಿದೆ (ಕ್ಷಪರ. ೦೦೪). [ಸಂ.]

ಪ್ರಶ್ನವ್ಯಾಕರಣಾಂಗ (ನಾ). [ಜೈನ] ಅಂಗಶ್ರುತಜ್ಞಾನದ ಹನ್ನೆರಡು ಬಗೆಗಳಲ್ಲಿ ಒಂದು ; ಆಕ್ಷೇಪಣೀಯ, ವಿಕ್ಷೇಪಣೀಯ, ಸಂವೇದನೀಯ, ನಿರ್ವೇದನೀಯವೆಂಬ ನಾಲ್ಕು ಬಗೆಯ ಧರ್ಮಕಥೆಗಳ ವರ್ಣನೆ ; ಅನೇಕ ಪ್ರಶ್ನೆಗಳಿಗೆ ಉತ್ತರ ಹೇಳುವ ರೀತಿ ; "ಶ್ರುತಾಂಗಗಳಲ್ಲಿ ಒಂದು—ಪ್ರಾಣಿಗಳ ಸುಖದುಃಖಗಳ ಸಂಬಂಧವಾದ ಪ್ರಶ್ನೆಗಳಿಗೆ ಉತ್ತರ ಕೊಡುವ ರೀತಿ. ಇದು ತೊಂಬತ್ತಮೂರು ಲಕ್ಷದ ಹದಿನಾರುಸಾವಿರಪದಗಳುಳ್ಳ ಶಾಸ್ತ್ರ" (ಕ್ಷಸಕೋ. ೦೭೯) ; ಪ್ರಶ್ನವ್ಯಾಕರಣಾಂಗ (ಪ್ರಶ್ನ ಮಾಡುವುದು, ವ್ಯಾಕರಣವಿವರವುಳ್ಳುದು) (ಕ್ಷಸಪ. ೯೯೯) ; ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತ್ಯಂಗ, ಜ್ಞಾತೃಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಅನುತ್ತರೋಪಪಾದಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ, ದೃಷ್ಟಿವಾದಾಂಗಗಳೆಂಬ ಹನ್ನೆರಡು ಅಂಗಗಳಿವೆ (ಭಾಕರ. ೦೭೯). 'ದ್ವಾದಶಾಂಗ' ಪರಾ. [ಸಂ.]

ಪ್ರಶ್ನಾರ್ಥಕ (ಗು). ಪ್ರಶ್ನೆಯಿಂದ ಕೂಡಿದ ; ಪ್ರಶ್ನೆಯ ಅರ್ಥವುಳ್ಳ: ಅವಳು ಪ್ರಶ್ನಾರ್ಥಕ ದೃಷ್ಟಿಯಿಂದ ಮಾಸ್ತರರ ಕಡೆಗೆ ನೋಡತೊಡಗಿದಳು (ರಂಗರೋ. ೦೦೩) ; ಈ ಕೆಳಗಿನ ವಾಕ್ಯಗಳಲ್ಲಿ ಪ್ರಶ್ನಾರ್ಥಕ ವಾಕ್ಯ ಯಾವುದು ? (ಕೂಡಿ). [ಸಂ.]

ಪ್ರಶ್ನಾರ್ಥಕಸರ್ವನಾಮ (ನಾ). [ವ್ಯಾಕ] ಪ್ರಶ್ನೆಯನ್ನು ಕೇಳುವಾಗ ಉಪಯೋಗಿಸುವ ಸರ್ವನಾಮಗಳಲ್ಲಿ ಒಂದು : ಯಾರು, ಯಾವುದು, ಏನು ಮುಂತಾದ ಸರ್ವನಾಮಗಳು ಪ್ರಶ್ನೆಗೆ ವಿಷಯವಾಗಿರುವ ಪದಾರ್ಥಗಳನ್ನು ಸೂಚಿಸುತ್ತವೆ. ಇವು ಪ್ರಶ್ನಾರ್ಥಕಸರ್ವನಾಮಗಳು (ಮರ್ಕು. ೬೦). [ಸಂ. ಪ್ರಶ್ನಾರ್ಥಕಸರ್ವನಾಮನ್]

ಪ್ರಶ್ನಾವಳಿ (ನಾ). ಪ್ರಶ್ನೆಗಳ ಪಟ್ಟಿ.—ಯಾದಿ: "(ನಿರ್ದಿಷ್ಟರೂಪಕ್ಕಿಳಿಸಿದ) ಪ್ರಶ್ನಾವಳಿ" (Questionary. ಇಂಇಸಿ). [ಸಂ. ಪ್ರಶ್ನಾವಲಿ]

ಪ್ರಶ್ನಿಸು (ಕ್ರಿ). ೧. ಕೇಳು ; ಪ್ರಶ್ನೆ ಹಾಕು : ನಾನು ಪುನಃ ಪ್ರಶ್ನಿಸುವುದರಲ್ಲಿ ಸುಬ್ಬಾವಧಾನಿಗಳು ಮನೆಯೊಳಕ್ಕೆ ಹೊರಟರು (ಶಂಗಾಳ್ಳ. ೦೫೩) ; ಪ್ರಶ್ನಿಸಿದ ದಿವಿಜೇಂದ್ರಸೂನುವಿಗೆ ತರುಣಿಯೆಂದಳ್ ನಗುತೆ (ಶಕ್ರಾಂಗ. ೪೭-೦೨೯೬). ೨. ವಿರೋಧಿಸು ; ಪ್ರತಿಭಟಿಸು : ಕೇಂದ್ರದ ತೀರ್ಮಾನವನ್ನು ಪ್ರಾಂತಸರ್ಕಾರವು ಪ್ರಶ್ನಿಸಿತು (ಕೂಡಿ).

[ಪ್ರಶ್ನ + — ಇಸ್ಯ$_3$]

ಪ್ರಶ್ನೆ (ನಾ). ೧. ಕೇಳುವುದು ; ಪೃಚ್ಛೆ: ಬೋಧಾಯನಸ್ಮೃತಿ—ಇದು ಸೂತ್ರರೂಪದಲ್ಲಿದೆ. ನಾಲ್ಕು ಪ್ರಶ್ನೆಗಳು, ೪೦೬ ಅಧ್ಯಾಯಗಳಿವೆ (ಭಾಧರ. ೬೬) ; ನಮ್ಮ ಪ್ರಶ್ನೆಗಳೇ ಯಾರಿಗೂ ಅರ್ಥವಾಗಲಿಲ್ಲ (ಹಸುಹೂ. ೨೫೮). ೨. ಸಂಶಯ ; ಸಂದೇಹ : ಆ ಮಾತುಗಳು ಯಾವ ಭಾಷೆಯ ಮಾತುಗಳು ಎಂಬುದೇ ಮುಖ್ಯ ಪ್ರಶ್ನೆ (ಬ್ರಾಬಿ. ೬೯).

ಪ್ರಶ್ನೆ ಮಾಡು = ಕೇಳು ; ಪ್ರಶ್ನಿಸು : ನಚಿಕೇತ ಮೌನವಾಗಿ ಕುಳಿತು ಏನೋ ವಿಚಾರಿಸಿ, ಬಳಿಕ ಪ್ರಶ್ನೆ ಮಾಡಿದ (ಶಕಂಶಾ. ೦೩೨). **ಪ್ರಶ್ನೆ ಹಾಕು** = ಪ್ರಶ್ನೆ ಮಾಡು : ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಪ್ರಶ್ನೆ ಹಾಕಿದರು (ಕೂಡಿ). [ಸಂ. ಪ್ರಶ್ನ]

ಪ್ರಶ್ನೆಕೇಳು 'ಪ್ರಶ್ನೆಗೇಳು' ನೋ.

ಪ್ರಶ್ನೆಗೇಳು, ಪ್ರಶ್ನೆಕೇಳು (ಕ್ರಿ). ೧. ಪ್ರಶ್ನಿಸು ; ಕೇಳು. ೨. (ಭವಿಷ್ಯವನ್ನು ತಿಳಿಯಲು) ಜ್ಯೋತಿಷಿಯ ಬಳಿ ಶಕುನವನ್ನು ಕೇಳು : ನಾಟಕವಲ್ಲದೆ [ವೆ] ನರರಂತೆ ನಕ್ಷತ್ರಪಾಠರ ಪ್ರಶ್ನೆಗೇಳುವುದು ಕೀಟಕರೇನ ಬಲ್ಲರು ಕೃಷ್ಣ ನಿನಗೆ ಚುನ್ನಾಟ ಬೇಡ (ಪೋಹಕ. ೦೩-೬೦). **ಪ್ರಶ್ನೆ ಕೇಳು:**

೧. ಪ್ರಶ್ನೆಕೇಳುವುದಕ್ಕಾಗಿ ಎದ್ದು ನಿಂತಳು (ಹಸುಹೊ. ೩೩೭).
[ಪ್ರಶ್ನೆ + ಕೇಳು (< ಕೇಳ್)]

ಪ್ರಶ್ನೋಪನಿಷತ್ತು (ನಾ). (ಆರು ಪ್ರಶ್ನೆಗಳು ಮತ್ತು ಆರು ಉತ್ತರಗಳನ್ನು ಒಳಗೊಂಡ) ಒಂದು ಉಪನಿಷತ್ತಿನ ಹೆಸರು : ಪ್ರಶ್ನೋಪನಿಷತ್ತು, ಅಥರ್ವವೇದದ ಪೈಪ್ಪಲಾದಶಾಖೆಗೆ ಸೇರಿದೆ. ಇದರಲ್ಲಿ ಸುಕೇಶಾ, ಸತ್ಯಕಾಮ, ಸೌರ್ಯಾಯಣಿ, ಅಶ್ವಲಾಯನ, ಭಾರ್ಗವ, ಕಬಂಧಿ — ಈ ಆರು ಮಂದಿ ಕೇಳಿದ ಆರು ಪ್ರಶ್ನೆಗಳಿಗೆ ಪೈಪ್ಪಲಾದರು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಪ್ರಾಣವಿದ್ಯೆ, ತನ್ಮಾತ್ರಗಳು, ಮಹಾಭೂತಗಳು, ದಶೇಂದ್ರಿಯಗಳು — ಮೊದಲಾದ ವಿಚಾರಗಳಿವೆ. ಸಾಂಖ್ಯದರ್ಶನದ ಮೂಲಸಿದ್ಧಾಂತಗಳು ಇದರಲ್ಲಿವೆ (ಶಾರದ ೩೯.).[<ಸಂ. ಪ್ರಶ್ನೋಪನಿಷದ್]

ಪ್ರಶ್ರಯ (ನಾ). ವಿಧೇಯತೆ ; ನಮ್ರತೆ ; ವಿನಯ : ಉಡುಗಿ ಪಿಂಛಚ್ಛತ್ರಮಂ ಪ್ರಶ್ರಯಾಕಾರವೇಷೋಚಿತರರ್ಘ್ಯಹಸ್ತರಿದಿರಂ ಬಂದರ್ ಭಯಭ್ರಾಂತಿಯಿಂ (ಆದಿಪು. ೦೨-೬೮) ; ತನ್ಮುನೀಂದ್ರಪಾದಪಾರ್ಶ್ವದೊಳ್ ಮುಕುಳಿತಕರಸರೋಜನುಂ ಪ್ರಶ್ರಯಾವನತಶಿರಸ್ಸರೋಜನುಮಾಗಿ ಕುಳ್ಳಿರ್ದು (ಸಂಪ್ರಪು. ೩-೭೦ ಪ). [ಸಂ.]

ಪ್ರಶ್ರಿತ (ನಾ). ೧. ವಿನಯ ; ನಮ್ರತೆ : ಸಂಜೆಪೂಜೆಯಾರತಿ ಗೆಲವಾಗಿ ನಡೆದಿರೆ ನಾ ಪ್ರಶ್ರಿತವನು ಮಾರೆತು. . .ಬೆನಕನ ಬಣ್ಣನೆಯೊಳು ಬೇಡಲು (ಗಣೇಶ. ೦೯-೩೩೩). ೨. ವಿನೀತನಾದವನು ; ನಮ್ರನಾದವನು : "ನಿಭೃತಃ, ವಿನೀತಃ, ಪ್ರಶ್ರಿತಃ — ೩ ಶಿಕ್ಷಸಲ್ಬಟ್ಟವನ ಹೆಸರು" (ನಿಘಂಟು. ೩೨೯). [ಸಂ.]

ಪ್ರಶ್ವಾಸ (ನಾ). ಉಸಿರಾಟ : ಹೆಚ್ಚು ಗಮನಿಸಿ ಕಿವಿಗೊಟ್ಟು ಕೇಳಿದನು; ನಿಶ್ವಾಸ ಪ್ರಶ್ವಾಸದ ಶಬ್ದವು ಕೇಳಿತು (ಶಕಾಳಂ ೪೦) ; ಪ್ರಾಣಶಕ್ತಿಯಿಂದ ನಡೆಯುವುದು ಕೇವಲ ಶ್ವಾಸ ಪ್ರಶ್ವಾಸಗಳೇ ಅಲ್ಲ (ಜೀವಾತ್ಮ. ೧೫೨). [ಸಂ.]

ಪ್ರಷ್ಠ (ಗು). ೧. ಮುಂಭಾಗದಲ್ಲಿ ನಿಲ್ಲುವ ; ಮುಂದಿರುವ. ೨. ಮುಖ್ಯವಾದ ; ಪ್ರಧಾನವಾದ. (ನಾ). ೩. ನಾಯಕ; ಮುಂದಾಳು. ೪. ಮುಂದುಗಡೆಯಲ್ಲಿ ಹೋಗುವ ಸೇವಕ : "ಪುರೋಗಃ, ಅಗ್ರೇಸರಃ, ಪ್ರಷ್ಠಃ ... ಪುರೋಗಾಮಿ—೭ ಮುಂದುಕಡೇ ನಡಿಯುವ ಊರ್ಗದವನು" (ನಿಘಂಟು. ೨೫೬). [ಸಂ.]

ಪ್ರಷ್ಠೌಹಿ (ನಾ). ಮೊದಲನೆಯ ಸಲ ಗರ್ಭವಾದ ಹಸು: "ಪ್ರಷ್ಠೌಹೀ, ಗರ್ಭಿಣೀ—ಈ ೨ ತೆನೆಯಾವು" (ಹಲಾಯು. ೪೫-೦೦೯) ; "ತೆನೆ ನಿಲಲು ಪ್ರಷ್ಠೌಹಿ [ಜಾಣಾಂ. ಸ್ವಲೂಹಿ]ಯದು" (ಮಂಗರಾ. ೫೯-೩). [ಸಂ. ಪ್ರಷ್ಠೌಹೀ]

ಪ್ರಸಂಗ (ನಾ). ೧. ಸೇರಿಕೆ ; ಕೂಟ : ಹರಗಣಂಗಳನೆಗ್ಗ ಹಿಡಿದೆನೆ ಹರಿಯುರುಗಳಂ ನಾಚಿಸಿದೆನೇ ಶರಣಜನತತ್ವಾನುಭವಗೋಷ್ಠಿಪ್ರಸಂಗದಲಿ (ಬಸಪು. ೪೫-೦೫). ೨. ಸಂಪರ್ಕ; ಸಹವಾಸ ; ಸಂಬಂಧ : ತನ್ನ ಪರಿಚಾರಕಜನದ ವಧೂಜನದ ಪ್ರಸಂಗಮನಲ್ಲದುಟ್ಟಿದ ಜನದ ಸೋಂಕುಮಾ ಪ್ರಸಂಗಮುಮಂ ಎಂತುಂಟೆಂದಟ್ಟಿದವನಲ್ಲಂ (ಸುಳುವಾ. ೦೦-೩೫ ಪ) ; ಮಹಾಲಿಂಗದ ಪ್ರಸಂಗಿಯಾಗಿಪ್ಪಾತನಂಗವೆನಗೆ ಮಂಗಳತರಂಗ ಆತನ ಪ್ರಸಂಗದಲ್ಲಿರಿಸಾ ಉರಿಲಿಂಗದೇವ (ವಚಸಂ. ೨೩೬-೪೦). ೩. ಸಂದರ್ಭ ; ಘಟನೆ ; ಸನ್ನಿವೇಶ : ದಿವಿಜೇಂದ್ರಂಗಾದುದು ಗೀತವಾದ್ಯನೃತ್ಯಪ್ರಸಂಗ ಮಪಿತನ ಕೆಲದೊಳ್ (ಅಪಪು. ೫-೦೩); ಬಲ್ಲವರ ಬೆಸಗೊಂಡರೆ ಎನ್ನ ಬಿಮ್ಮು ಕಿಟ್ಟಿಹುದೆಂದು ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ (ಬಸವ. ೬೬೯) ; ದೇಶಾಧಿಪತಿ ಹರಿಶ್ಚಂದ್ರರಾಯನ ಸತ್ಯ ವಾಸವನ ಸಭೆಯೊಳಗೆ ನೆಗಳ್ದ ಪ್ರಸಂಗದಿಂ ಕೌಶಿಕ ವಶಿಷ್ಠಮುನಿಗಳಿಗೆ ಘನತರದ ಸಂವಾದಮಂ ಮಾಡಿತಂದು (ಹಕಶಾ. ೦ ಸೂಪಸಿ). ೪. ವಾದ; ವಿವಾದ: ಅನುಭಾವ ಅನುಭಾವವೆಂದೆಂಬಿರಿ...ಅನುಭಾವ ಬಂದ ಬಂದಲ್ಲಿ ಪ್ರಸಂಗ [ಜಾಣಾಂ. ಅನುಭಾವ]ವ ಮಾಡುವ ಪಾತಕರ ತೋಱದಿರಯ್ಯಾ (ಕನ್ನಪ. ಕ. ೩೯೮-೬೯೦) ; ಇನ್ನೊಂದು ಪ್ರಸಂಗದಲ್ಲಿ ಅಲ್ಲಮ ತನ್ನ ಅಭಿಪ್ರಾಯಗಳನ್ನು ಇತರರು ಖಂಡಿಸಿದಾಗ ಅವರ ವಾದವನ್ನು ಒಪ್ಪಿಕೊಳ್ಳುತ್ತಾನೆ (ಶೂನ್ಯಸಂ. ೦೩೯) ; ಈಗಲಾದರೂ ಈ ಪ್ರಸಂಗವನ್ನು ಇಲ್ಲಿಗೇ ಮುಕ್ತಾಯ ಮಾಡುವುದು ನಿಮ್ಮ ಕೈಲೇ ಇದೆ (ಹಸುಹೊ. ೦೩೯). ೫. ವಾರ್ತೆ ; ಸುದ್ದಿ : ನಿನ್ನ ಪ್ರಸಂಗವನ್ನು ಇವನಿಗೆ ಬಹು ಬಗೆಯಲ್ಲಿ ಹೇಳಿದ್ದೇನೆ (ವಕಶಾ. ೫೭). ೬. (ಕರಾ) ಯಕ್ಷಗಾನಕ್ಕಾಗಿ ರಾಮಾಯಣ, ಭಾರತ, ಭಾಗವತ ಮುಂತಾದುವುಗಳಿಂದ ಆರಿಸಿಕೊಂಡ ಕಥಾವಸ್ತು, ಕಥಾನಕ ಮತ್ತು ಅವುಗಳಿಂದ ಆಡುವ ನಾಟಕರೂಪ : ಬಾಲ್ಯದಲ್ಲಿ ಈತನ ಪ್ರಸಂಗಗಳನ್ನು ಓದಿ ಹಾಡಿ ಕನ್ನಡ ಸಾರವನ್ನು ಹೀರಿದುದರಿಂದಲೇ ತೊರವೆರಾಮಾಯಣ — ಗದುಗಿನ ಭಾರತಗಳನ್ನು ಓದಬೇಕೆಂಬ ಆಸೆ ನನಗಾಯಿತು (ಶಾರ್ಕಿಸು. V ಮುನ್ನುಡಿ); ಆಟದವರು ಒಂದು ರಾತ್ರಿಯಲ್ಲಿ ಎರಡು ಮೂರು ಬೇರೆ ಬೇರೆ ಪ್ರಸಂಗಗಳನ್ನು ಆಡಿ ಮುಗಿಸಿದರೂ ಮುಗಿಸಬಹುದು (ಯಕ್ಷಪ. ೩೯); ಇಂದಿನ ಬಯಲಾಟದಲ್ಲಿ ಯಾವ ಪ್ರಸಂಗವನ್ನು ಆಡಿ ತೋರಿಸಲಿರುವರು ? (ಕಪಪು. ೬-೭೨).

ಪ್ರಸಂಗವಾಡು = ೧. ಸಲ್ಲಾಪಿಸು ; ಸಂಭಾಷಿಸು ; ಆ ಕಪೋಜಲನು ನನ್ನ ಕೂಡೆ ಪ್ರಸಂಗವಾಡುತ್ತ ಇದ್ದಲ್ಲಿಯೆ ಆ ಪುಂಡರೀಕನು ನನ್ನ ಸಮೀಪಕ್ಕೆ ಬಂದು (ವಕಶಾ. ೨೦). ೨. ಲೋಕಾಭಿರಾಮವಾಗಿ ಮಾತನಾಡು. [ಸಂ.]

ಪ್ರಸಂಗಕಾರ (ನಾ). ಯಕ್ಷಗಾನ ಅಥವಾ ಬಯಲಾಟದ ನಾಟಕಗಳನ್ನು ರಚಿಸುವವನು; ಭಾಗವತ : ನಮ್ಮ ಪ್ರಸಂಗಕಾರರು ಗದುಗಿನ ಭಾರತದಿಂದಲೋ, ಜೈಮಿನಿಭಾರತದಿಂದಲೋ ... ಹೆಚ್ಚಾಗಿ ಕಥೆಗಳನ್ನು ಆರಿಸಿಕೊಂಡರು (ಯಕ್ಷಪ. ೩೪). [ಸಂ.]

ಪ್ರಸಂಗತ (ಗು). ಕೂಡಿದ ; ಸೇರಿದ : ಗಂಗಾತರಂಗಪ್ರಸಂಗತಜಟಾಪಟಲಮಂಗಳಾತ್ಮಕ ಭಕ್ತಸಂಘಮಂ ರಕ್ಷಿಪುದು (ಶಪಪು. ೩೫-೦). [ಸಂ.]

ಪ್ರಸಂಗತಿ (ನಾ). ಕೂಟ; ಸೇರುವೆ; ಐಕ್ಯ : ವರಕರತಳಸ್ಪರ್ಶನಂ ವಿಸ್ತರಿಸುವಡೆ ತಾಂ ಪರುಷವೇದಿಗಳಿರವಘನನಂಘ್ರಿಪ್ರಸಂಗತಿ ಮುಕ್ತಿಗಾಗರವು (ಬಸಪು. ೩೦-೦೯). [ಸಂ.]

ಪ್ರಸಂಗಾವಧಾನ (ನಾ). ಸಂದರ್ಭೋಚಿತವಾದ ಉಪಾಯಗಳನ್ನು ತಿಳಿದಿರುವುದು ; ಪ್ರತ್ಯುತ್ಪನ್ನಮತಿ : ಗಂಡಾಂತರ ಬಂದಾಗ ಧೈರ್ಯಗೊಂಡು, ಅದನ್ನು ದಾಟಿ ಹೋಗತಕ್ಕ ಹಂಚಿಕೆಗಳನ್ನು ನೋಡಿಕೊಳ್ಳುವ ಗುಣಕ್ಕೆ ಪ್ರಸಂಗಾವಧಾನ ಅನ್ನುತ್ತಾರೆ (ಮುಂಬಯಿ. ೪-೬೨) ; ಪ್ರಸಂಗಾವಧಾನ ಚನ್ನಾಗಿ ಸಾಧಿಸಿತು (ಸ್ವೃತಿಕಿ. ೨೯೦). [ಸಂ.]

ಪ್ರಸಂಗಿ (ಗು). ೧. ಸೇರಿದ; ಸಂಬಂಧಿಸಿದ. ೨. ಅವಲಂಬಿಸಿದ. ೩. ಪ್ರಾಸಂಗಿಕವಾದ. ೪. ಎರಡನೆಯ ದರ್ಜೆಯ. (ನಾ). ೫. ವಾದಿಸುವವನು; ಚರ್ಚೆ ಮಾಡುವವನು : (ಕ). ೬. ಸಂಬಂಧವಿರುವವನು; ಸಂಬಂಧ ಹೊಂದಿದವನು : ಮಂಗಳಮಯಲಿಂಗವ ಮನ ಹಿಂಗದೆ ಸುಸಂಗಿಯಾಗಿ ಮಹಾಲಿಂಗದ ಪ್ರಸಂಗಿಯಾಗಿಪ್ಪಾತನಂಗವೆನಗೆ ಮಂಗಳತರಂಗ (ವಚಸಂ. ೨೩೬-೪೦). [ಸಂ. ಪ್ರಸಂಗಿನ್]

ಪ್ರಸಂಗಿಸು (ಕ್ರಿ). ೧. ವಾಖ್ಯಾನ ಮಾಡು : ಶಬ್ದಸಮುದ್ರವ ಹೊಕ್ಕೊಂದು ಪದಕೆ ನೂಱುಬ್ದ ಪ್ರಸಂಗಿಸಬಹುದು (ಭರತ. ೨-೯೦). ೨. ಮಾತನಾಡು; ಸಲ್ಲಾಪಿಸು : ತಂಗೀ ನೀ ಕೇಳು ಸಮಸ್ತಚಿತ್ರಂಗಳ ಭಂಗಿಸಿಬಿಟ್ಟೆ ನಿನ್ನೆರ್ದೆಗೆ ಅಂಗೀಕೃತ ಪ್ರಾಣಕಾಂತನಾರೆಂದು ಪ್ರಸಂಗಿಸಿದಳು ನಸುನಗುತೆ (ವೋಹತ. ೩೦ - ೨೦); ಆ ಗೌತಮೇಂದ್ರನ

ಯೇಕೋರಾಮೈಯನವರು ಕುಳ್ಳಿರಿಸಿಕೊಂಡು ಆತನ ಕೂಡೆ ಪ್ರಸಂಗಿಸುತಿರ್ದರು (ಕೊಲ್ಹಪು. ೦೦೩-೬). ೩. ಪ್ರಸ್ತಾಪಿಸು : ಪಂಪ ಮೊದಲಾದವರು ಬಗೆಬಗೆಯ ರಗಳೆಗಳನ್ನುಪಯೋಗಿಸಿದ್ದರೂ ಅವುಗಳನ್ನು ಕುರಿತು ಅವನು ಪ್ರಸಂಗಿಸಿಲ್ಲ (ಸಮಾಲೋ. ೦೭೬).

[ಪ್ರಸಂಗ + — ಇಸ್ಸು]

ಪ್ರಸಕ್ತ (ಗು). ೧. ಕೂಡಿದ; ಸೇರಿದ. ೨. ಅಂಟಿರುವ. ೩. ಎಡೆಬಿಡದ; ನಿರಂತರವಾದ. ೪. ಪಡೆದ; ಹೊಂದಿದ. ೫. ಐಹಿಕದಲ್ಲಿ ಆಸಕ್ತವಾದ; ಪ್ರಾಪಂಚಿಕವಾದ. ೬. ವಿವರಗೊಳಿಸಿದ. (ನಾ). ೭. ಆಸಕ್ತಿಯಿಂದ ಮಾತನಾಡುವವನು; ಚಿತ್ತಾಕರ್ಷಕವಾಗಿ ಸಂಭಾಷಿಸುವವನು: "ಪ್ರಸಕ್ತಃ, ಪ್ರಸೃತಃ ಈ— ೨ ಗೆಲೆ ನುಡಿವವಂ" (ಹಲಾಯು. ೬೦-೨೦೯). [ಸಂ.]

ಪ್ರಸಕ್ತಿ (ನಾ.) ೧. ಕೂಡಿರುವುದು; ಸೇರಿಕೆ; ಹೊಂದಿಕೆ. ೨. ತೊಡಗಿರುವುದು; ಪ್ರವರ್ತನೆ. ೩. ಪ್ರಸಂಗ; ಪ್ರಸ್ತಾಪ : ಆ ಪ್ರಸಕ್ತಿಗೆ ಹೋಗದೆ, ಭಾಮಹ ದಂಡಿಗಳ ಕಾಲವು ಕ್ರಿ.ಶ. ಏಳನೆಯ ಶತಮಾನವಾಗಿರಬಹುದೆಂದೂ... ಹೇಳಿ ಮುಗಿಸುವುದು ವಾಸಿ(ಭಾಕಮಾ. ೨೬); ಶೂನ್ಯಸಂಪಾದನೆಯಲ್ಲಿ ಅನೇಕ ಧಾರ್ಮಿಕತತ್ವಗಳ... ಪ್ರಸಕ್ತಿ ಬರುತ್ತದೆ (ಕೂಪ್ಯಕು. ೦೨೯). ೪. ಸಂದರ್ಭ; ಅವಕಾಶ: ಅವರಿಗೆ ನನ್ನಿಂದ ನಿರಾಶೆಯಾಗುವ ಪ್ರಸಕ್ತಿಯೆ ಇರುತ್ತಿದ್ದಿಲ್ಲ (ಗಾಳಿಪ. ೦೩೯). ೫. ಸತತ ಪ್ರಯತ್ನ. ೬. ಲಾಭ. [ಸಂ.]

ಪ್ರಸನ್ನ (ಗು.) ೧. ತಿಳಿಯಾದ ; ಸ್ವಚ್ಛವಾದ ; ಕಶ್ಮಲವಿಲ್ಲದಿರುವ: ಲಲಿತಾಲಂಕರಣಪ್ರಸನ್ನರಸವದ್ಗೇಯಂಗಳೊಳ್ ಮೂಡುತುಂ ಮುಟುಗುತ್ತುಂ (ಅದಿಪು. ೦-೯೯). ೨. ಸ್ವಸ್ಥವಾದ; ಶಾಂತವಾದ. ೩. ಸಂತುಷ್ಟವಾದ; ಸಂಪ್ರೀತವಾದ. ೪. ಕೃಪೆಯುಳ್ಳ; ದಯೆಯಿಂದ ಕೂಡಿದ. (ನಾ). ೫. ತಿಳಿಯಾದುದು; ಸ್ವಚ್ಛವಾದುದು : "ಪ್ರಸನ್ನಃ, ಅಚ್ಛಃ — ೨ ನಿರ್ಮಲವಾದ ವಸ್ತುವಿನ ಹೆಸರುಗಳು"(ಸಿದ್ಧಾಂತಿ. ೯೦). ೬. ತೃಪ್ತಿ; ಸಂತುಷ್ಟಿ : ಇನ್ನೆಯ್ದಿ ನಿಮ್ಮರಮನೆಗೆಂದರವರು ಪ್ರಸನ್ನದೊಳೆಯ್ದಿದರೊಡನೆ (ಪರಸ. ೩೯-೩೭); ನೀರು . . .ಪೂಜೆಗೊಂಡು ಪ್ರಸನ್ನವಾಗುವುದಿಲ್ಲ (ಕಲ್ಯೋಲ.೦೦-೬). ೭. (ಆಲಂ) ಸಾಕ್ಷಾತ್ಕಾರ ; ಎದುರಿಗೆ ಬರುವುದು; ಪ್ರತ್ಯಕ್ಷ : ಅನ್ನೆಗಮಿಶಂ ಪ್ರಸನ್ನನಾದಂ ತರುಣೇಪ್ರಸನ್ನಮಾದಂತಕವೈರಿಯಂ ನಿರೀಕ್ಷಿಸುತ್ತೆ (ಕಾರ್ಯಪು. ೦೨-೯೭). ೮. [ಕಾವ್ಯಮಿಾ] ಕಾವ್ಯದ ಹತ್ತು ಗುಣಗಳಲ್ಲಿ ಒಂದು ; ಮೃದುತ್ವ ; ಮಾರ್ದವತೆ ; ಕೋಮಲತೆ : ಲೋಕಪ್ರತೀತ ಸುಭಗವಿವೇಕಾಳಾಪಂ ಪ್ರಸನ್ನಮದುಮಿಂತಕ್ಕುಂ (ಕವಿರಾ. ೨-೭೭) ; ಕರಮಸ್ತಾಕ್ಷರಮುಚಿತಾಕ್ಷರಮವಲಂಬಪ್ರಸನ್ನಮತಿಮಧುರಮಲಂಕರಣಯುತಮೆನಿಸಿ (ರಂದೋಂಬು. ೦-೯) ; ಪ್ರಸನ್ನ (=ಮೃದುವಾದ ಶಬ್ದಗಳಿಂದಲೇ ಈ ಅರ್ಥದ ಓಜಸ್ಸನ್ನು ಸಂಪಾದಿಸಬಹುದು(ರ್ಯಾಕೋ. ೭೨). ೫. ೮ : ವಿಳಸಿತಮಪ್ಪಳಂಕರಣಶಾಸ್ತ್ರದವೊಲ್ದೆಸೆಗಳ್ಪ್ರಸನ್ನಮಂತಳೆದು ಪೊದಟ್ಟುವಾ ರುಚಕಭೂಷೆಯದೊಲ್ನೆಲೆಗೊಂಡು ಕಂಠದೊಳ್ ಪೊಳೆವ ಪಯಃಪ್ರವಾಹಮಯಮಾಯ್ತು ನದೀತತಿ ಸತ್ಕವೀಂದ್ರನುಜ್ವಳ ಕವಿತೋಕ್ತಿವೊಲ್ಮೃದುಪದನ್ಯಸನೋಚಿತಮಾಯ್ತಿಳಾತಳಂ (ಶಾಂತೀಕ್ಯ. ೦೨-೬೩). [ಸಂ.]

ಪ್ರಸನ್ನತೆ (ನಾ). ೧. ಶುದ್ಧವಾಗಿರುವುದು ; ಸ್ವಚ್ಛತೆ; ನೈರ್ಮಲ್ಯ : ಪಂಪಾಂಬಿಕೆ ಮದೀಯ ಮತಿಗೀಗೆ ಪ್ರಸನ್ನತೆಯನುತ್ಸವದೊಳು (ಪಸಕಾ. ೦-೬). ೨. ತೃಪ್ತಿ; ಸಂತುಷ್ಟಿ : ಪ್ರಸನ್ನತೆಯನಾಂತುವಾ ಪದದೊಳಾಸೆಗಳ್ (ಪರ್ಧಪು. ೩೦-೭೯); ಇಳಿವಯಸ್ಸಾದರೂ ... ಮುಖದಲ್ಲಿ ಪ್ರಸನ್ನತೆ ಅರಳಿತು (ಸಪತಿ. ೩೨). [ಸಂ. ಪ್ರಸನ್ನತಾ]

ಪ್ರಸನ್ನಭಾವ (ನಾ). ೧. ನಿರ್ಮಲವಾದ ಸ್ಥಿತಿ. ೨. ಸಂತೋಷದ ಮನಸ್ಸ್ಥಿತಿ; ಸಂತುಷ್ಟದ ಭಾವ : ಮುಖದ ಪ್ರಸನ್ನಭಾವದಿಂದಲೂ ಆಶೀರ್ವದಿಸುತ್ತ ಪ್ರಕಟನಾದ, ಯಜ್ಞೇಶ್ವರನನ್ನು ಕಾಣುತ್ತಿದ್ದ ಹಾಗೇ ಬಾಧ್ಯೋಗಮುನಿಗಳು ... ನಮಸ್ಕರಿಸಿದರು (ಪಕಂಪಾ. ೩). ೧, ೨ : ಪ್ರಸನ್ನಭಾವಂ ಜಲದೊಳಂ ಜನದೊಳಮಾದ ಶರತ್ಸಮಯದೊಳ್ (ಜಗವಿ. ೪-೭೩ ಪ). [ಸಂ.]

ಪ್ರಸನ್ನಮನ (ನಾ). ಸಂತೋಷಗೊಂಡವನು; ಸಂತುಷ್ಟನಾದವನು: ಭರತೇಶ್ವರಂ ಪ್ರಸನ್ನಮನನಾಗಿ ವೃಷಭಸೇನಾದ್ಯನುಪಮಪರ್ಯಂತ ಗಣಧರದೇವಚರಿತಾಕರ್ಣನಮನೆ ತನಗೆ ಕರ್ಣಪೂರಂ ಮಾಡಿ (ಅದಿಪು. ೧೩-೪೭ ಪ). [ಸಂ. ಪ್ರಸನ್ನಮನನ್]

ಪ್ರಸನ್ನವದನ (ನಾ.) ೧. ಅನುಗ್ರಹಿಸುವಂತಿರುವ ಮುಖ; ಪ್ರಸನ್ನವಾದ ಮುಖ. ೨. ಮುಖದಲ್ಲಿ ಪ್ರಸನ್ನತೆಯುಳ್ಳವನು : ನೀಂ ದರಸ್ಮಿತಪ್ರಸನ್ನವದನನಪ್ಪ ಕಾರ್ಯವೇ ಕರಣೀಯಮೆಂದು ಮಹೇಂದ್ರಮಹಮಂ ಮಾಣ್ದು (ಜಗವಿ. ೪-೭೯ ಪ); ರಾಯರು ಪ್ರಸನ್ನವದನರಾಗಿದ್ದರು (ಕಂಬಹು. ೦೨೩). [ಸಂ.]

ಪ್ರಸನ್ನೆ (ನಾ). ೧. ಸಂತೋಷಗೊಂಡವಳು. ೨. ಅನುಗ್ರಹಿಸುವ ಮನಸ್ಸುಳ್ಳವಳು. ೩. ಅಮಲು ಬರಿಸುವ ವಸ್ತು; ಹೆಂಡ; ಮದ್ಯ: "ಆಸವಃ ... ಪ್ರಸನ್ನಾ...ಮಧು—ಈ ೨೪ ಕಳ್ಳು" (ಹಲಾಯು. ೩೩-೦೬೩). ೪. [ಸಂಗೀತ] ನಿಷಾದಸ್ವರದಿಂದ ಉತ್ಪತ್ತಿಯಾಗುವ ಎರಡು ಶ್ರುತಿಗಳಲ್ಲಿ ಒಂದು : ಪ್ರಸನ್ನೆ ಸರ್ವವ್ಯಾಪಿಯೆಂಬೆರಡು ನಿಷಾದಸ್ವರದಿಂದುತ್ಪತ್ತಿಯಾದವು (ವಿವೇಶ. ೨೩೨). [ಸಂ. ಪ್ರಸನ್ನ]

ಪ್ರಸಭ (ನಾ). ಒತ್ತಾಯ; ಬಲವಂತ : "ಹಠಃ, ಪ್ರಸಭಂ — ಈ ೨ ಬಲುಹು (ಬಲ್ಪು)" (ಹಲಾಯು. ೦೨೩-೭೯). [ಸಂ.]

ಪ್ರಸರ (ನಾ). ೧. ಹರಡುವುದು; ವಿಸ್ತರಣೆ. ೨. ಹರಹು; ವಿಸ್ತಾರ : ತಪಶ್ಚರಣಪರಾಯಣನಾದಂ ಪ್ರತಿಮನುಂ ಪ್ರತಾಪಪ್ರಸರಪ್ರಕಟಪಟುವಾಗಿ ಪಲವುಕಾಲಮರಸುಗೆಯ್ದು (ಪಂಪಭಾ. ೦-೬೩ ಪ). ೩. ವೇಗ; ರಭಸ : "ರಂಹಃ . . . ಪ್ರಸರಃ . . . ವಾಜಃ— ಈ ೮ ಕುದಿರೆಯ ವೇಗಂ" (ಹಲಾಯು. ೬೩-೨೯೯). ೪. ಪ್ರವಾಹ: ಝರಿ. ೫. ಮುನ್ನಡೆಯುವುದು. ೬. ಹೆಚ್ಚಳ; ಆಧಿಕ್ಯ : ಓಲಗಕ್ಕೆ ಪದಪಿಂ ಬಂದಿರ್ದ ಕಾಂತಾಜನೋತ್ಕರರತ್ನಾಭರಣಪ್ರಭಾಪ್ರಸರವಾದಂ ತಳ್ತು . . . ನಡೆದಂ ಭೂಪಾಲವಿದ್ಯಾಧರಂ (ಕಾದಂಪೂ. ೦೦೦೦). ೭. ಪ್ರಭಾವ. ೮. ಗುಂಪು; ಸಮೂಹ : ದೆಸೆದೆಸೆಗೋಡಿದನ್ಯಕರಿದಿಕ್ಕರಿಯಾದುದರಾತಿಭೂಭುಜಪ್ರಸರಮೆ ದಿಕ್ಪತಿಪ್ರಸರಮಾದುದು (ಗದಾಯು. ೦-೩೩); ವಿಲಸತ್ಪುಷ್ಕರಶೀಕರಪ್ರಸರದಿಂ ಸೇಸಿಕ್ಕುತಿರ್ಪಂತೆ . . . ಉದ್ಭಮಾಂಗಲ್ಯಮಂ ತಳೆದೊರ್ಪಿರ್ದುದನೇಱುದಂ ದ್ವಿರದಮಂ ವ್ಯಾಳೇಭವಜ್ರಾಂಕುಶಂ (ಪುತ್ರಪು. ೩-೦೩); ಬಸವರಾಜಂ ಮುಗ್ಧಭಕ್ತಪ್ರಸರದುತ್ತಮಕಥೆಗಳಂ ಸಲೆ ಪಸರಿಸಿದನಾ ಚನ್ನಬಸವಂ ಕೂರ್ತು ಕೇಳುತಿರೆ (ಇಸಪು. ೦೬-೦೦೭). ೯. ಒಲುಮೆ; ಪ್ರೀತಿ. ೧೦. ಕದನ; ಕಾಳಗ. ೧೧. ಕಬ್ಬಿಣದ ಬಾಣ. ೧೨. ನಾಶ. ೧೩. ಅವಕಾಶ. [ಸಂ.]

ಪ್ರಸರಣ (ನಾ). ೧. ಹರಡುವಿಕೆ; ವಿಸ್ತರಣೆ; ಪ್ರಸಾರ : "ಪ್ರಸ[ಪಾಠಾಂ. ಸಾ]ರಣ ಸಮೂಹಂಗಳೊಳ್ ಪೆಸರು" (ಕಬ್ಬಿಂ. ೦೦೯); ಭಾವನಾಪ್ರಸರಣವೇ ಸಾಹಿತ್ಯದ ಮುಖ್ಯಕೆಲಸ (ಕಾಪ್ಯಕು. ೬೨). ೨. ಸೈನ್ಯವು ಮುತ್ತುವುದು,—ವ್ಯಾಪಿಸುವುದು : "ಆಸಾರಃ, ಪ್ರಸರಣಂ—ಎಲ್ಲ ಕಡೆಗಳಲ್ಲಿಯೂ ಸೇನೆ ವ್ಯಾಪಿಸುವಿಕೆ, ಮುತ್ತಿಕೊಳ್ಳುವಿಕೆ" (ಸಿದ್ಧಾಂತಿ. ೨೬೬). [ಸಂ.]

ಪ್ರಸರಣೆ (ನಾ). = ಪ್ರಸರಣ ೧ : ಹಣ ಪ್ರಸರಣೆಯಲ್ಲಿರಬೇಕಾ

ದಂತೆ ವಿದ್ಯೆ ಪ್ರಚಾರದಲ್ಲಿರಬೇಕು (ಹೂಸಕ್ಷಿ. ೪೦) : ಕೀಟಗಳ ಮೊಟ್ಟೆಗಳಲ್ಲಿ ಉಸಿರಾಟ ಪ್ರಸರಣೆಯಿಂದ (diffusion); ಸೂಕ್ಷ್ಮರಂಧ್ರದ (Micro pyle) ಮೂಲಕ ಅನಿಲಗಳ ಬದಲಾವಣೆ (ಕೀಟಪ. ೩೬). [ಸಂ. ಪ್ರಸರಣ]

ಪ್ರಸರಿಸು (ಕ್ರಿ). ಹರಡಂ; ವ್ಯಾಪಿಸಂ; ಹಬ್ಬು : ಪ್ರಸರಿಸಿದುನ್ನತ ತಿಮಿರಪ್ರಸರದೊಳೆಡೆಸಿಲ್ಕಿ ಮಿಱುಪ ಕಿಸುಸಂಜೆಯವೋಲ್ ಮಿಸುಗುವ ಬೈತಲೆವಟ್ಟೆಯೊಲೆಸೆದುದು ಸಿಂದೂರಲೇಖೆ ತದ್ಬಾಲಿಕೆಯಾ (ಉದ್ಯಟ. ೩-೪೩) ; ಇತಿಹಾಸ ಪುರಾಣಗಳು, ಅತ್ಯುತ್ತಮಕಾವ್ಯಗಳು, ಶಿಲ್ಪಕಲೆಗಳು ಇವುಗಳ ಮೂಲಕ ಧರ್ಮಸಂದೇಶ ಸರ್ವತ್ರ ಪ್ರಸರಿಸುವಂತಾಯಿತು (ಪುಕ್ಸಾರ. ೦೦೭ ಬೀಕಿಕೆ). [ಪ್ರಸರ + — ಇಸ್ಕು]

ಪ್ರಸರ್ಪಿತ (ಗು). ೧. ಹರಡಿದ; ವ್ಯಾಪ್ತವಾದ. (ನಾ). ೨. [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು; ℘ "ಒಂದು ಕೈಯನ್ನು ರೇಚಿತ ಮಾಡಿ, ಆ ಪಾರ್ಶ್ವದ ಚರಣದಿಂದ ನೆಲವನ್ನು ಉಜ್ಜುತ್ತ ನಡೆದು ಇನ್ನೊಂದು ಪಾರ್ಶ್ವದ ಕೈಯನ್ನು ಲತಾ ಹಸ್ತದಲ್ಲಿ . . . ಹಿಡಿದು, ಕಾಲನ್ನು ಎತ್ತೆತ್ತಿ ಇಡುವುದು" (ಶಾಸ್ಕರಂ. ಗದ್ಯಾಸುವಾದ ೩೦೨) : ಕರಮದುವೆ ರೇಚಿತಂಬೆತ್ತಿರಲಾ ಪದ ಮಿಳೆಯನುರ್ದುತವೆ ನಡೆಯೆ ಲತಾಕರವಾಗೆ ಹಸ್ತಮೊಂದಾಚರಿಸುತ್ತಂ ನೆಗೆಯೆ ಕೇಳ ಪ್ರಸರ್ಪಿತಕರಣಂ (ಶಾಸ್ಕರಂ. ೪-೧೪೩). [ಸಂ.]

ಪ್ರಸವ (ನಾ). ೧. ಹಡೆಯುವುದು; ಹೆರಿಗೆ; ಪ್ರಸೂತಿ : ಪ್ರಸವ ಪರಿಕ್ಷಾಮಪಾಂಡುಮೂರ್ತಿಯಪ್ಪ ವಿಳಾಸವತೀಮಹಾದೇವಿಯುತ್ಸಂಗ ದೊಳ್ . . . ಬಾಲಕನಾದಮೊಪ್ಪಿದಂ (ಕಾದಂಪೂ. ೪೦೩); ಕೊನೆಯ ಎರಡು ದಿನದ ಕ್ಷೋಭೆಯನ್ನು ಸಹಿಸಲಾರದೆ ಪ್ರಸವ ಸ್ವಲ್ಪ ಮುಂದಾಗಿ ಆಗಿರಬೇಕು (ಸಕಾ. ೨೧೩). ೨. ಹುಟ್ಟುವಿಕೆ; ಜನನ; ಜನ್ಮ : ಆವಗಂ ತ್ರಿಭುವನಪ್ರಸವಕ್ಕಿದು ಭೂಮಿಯೆಂಬ ಪೆಂಪೊದವಿರೆ ಪೆರ್ಮೆಯಿಂ ವಿದಿಸೆಯೆಂಬುದು ನಚ್ಚಿನ ರಾಜಧಾನಿಯಾದುದು . . . ಮಾಳವಮಧ್ಯ ದೇಶದೊಳ್ (ಕಾದಂಪೂ. ೦೩). ೩. ಮೂಲ; ಆಕರ; ಉತ್ಪತ್ತಿಸ್ಥಾನ. ೪. ಹೂವು; ಪುಷ್ಪ: "ಪುಷ್ಪಂ, ಪ್ರಸವಃ . . . ಸುಮನಸ್—ಈ ೫ ಪೂವಿನ ಪೆಸರ್" (ಹಲಾಯು. ೩೦-೩೨); ಅರವಿಂದೋತ್ಪಲಮಲ್ಲಿಕಾಪ್ರಸವಸೌರಭ್ಯಂ ಗಳಂ ಪೇಱಿ ಬರ್ಪೆಲರುಂ (ಸುಕುಮಾ. ೪-೪೪); ಕಂಪಿಡಿದ ಸುರದ್ರುಮ ಪ್ರಸವ[ಸಾಕಾಂ. ರ]ದಂತೆ ಪರಾಪರಮುಕ್ತಿಯಂತೆ ಸಂಗಡಿಸಿದ ಕಾಮ ಧೇನುವಿನವೋಲ್ ಗಿರಿರಾಜತನೂಜೆಯೊಪ್ಪಿದಳ್ (ಗಿರಿಕ. ೩-೪೬). ೫. ಹಣ್ಣು ; ಫಲ : "ಪ್ರಸವಃ—ಹುಟ್ಟುಹಾಕುವಿಕೆ, ಹಣ್ಣು, ಹುವ್ವು, ಹೆರುವಿಕೆ" (ಸಿದ್ಧಾಂತಿ. ೪೨೦). ೬. ಸಹಾಯ; ಅನುಕೂಲ. ೭. ಸಂತಾನ; ಸಂತತಿ. ೮. ಸೋಮರಸವನ್ನು ಹೊರತೆಗೆಯುವುದು. ೯. ಮುನ್ನಡೆಯುವುದು. ೧೦. ಪ್ರವಾಹ; ಹೊನಲು. ೧೧. ಉತ್ಸಾಹ; ಸಡಗರ. ೧೨. ಕಟ್ಟಳೆ ಮಾಡುವುದು. ೧೩. ಲಾಭ.

ಪ್ರಸವಮಾಗು, ಪ್ರಸವವಾಗು = ಹೆರಿಗೆಯಾಗು : ತೋಟೆಯ ಬಡಗ ಹಱಿದ ಬೇರಂ ನೀರಲ್ಲಿ ಅರೆದು ಯೋನಿಯಿಂದಿಳಿಯ ಪೂಸಲು ಪ್ರಸವ ಮಾಗುವುದು (ಎಸ್ಕಿ. ೦೦೭) ; ವೈದ್ಯರಿಂದ ಪರೀಕ್ಷೆ ಮಾಡಿಸಿಕೊಂಡು ಹೆರಿಗೆಯ ಸಮಯದಲ್ಲಿ ಯಾವ ತೊಡಕೂ ಇಲ್ಲದೆ ಸುಖವಾಗಿ ಪ್ರಸವ ವಾಗುವುದೆಂದು ಆಶ್ವಾಸ ಪಡೆಯಬೇಕು (ಗೃಹವಿ. ೦೦೨). [ಸಂ.]

ಪ್ರಸವಕಾಲ (ನಾ). ಹೆರಿಗೆಯ ಕಾಲ; ಹಡೆಯುವ ಸಮಯ : ತತ್ಸಂಖ್ಯೆ ಗೇಹದಿನತ್ತಲ್ ನಿಲೆ ಚಂದ್ರಮಂ ಪ್ರಸವಕಾಲಂ ಕಾಂತೆಗಂತಾ ದಿನಂ (ಸಾಕತಿ. ೩-೦೮). [ಸಂ.]

ಪ್ರಸವದಿನ (ನಾ). ಹೆರಿಗೆಯ ದಿನ; ಪ್ರಸೂತಿದಿನ : ಸ್ತ್ರೀ ಪೂರ್ಣಗರ್ಭಿಣಿ; ಪ್ರಸವದಿನದಲ್ಲಿ ಎಷ್ಟು ಹೊತ್ತಿಗೆ ಜನನವಾಗುತ್ತದೆ? (ಸಾಕತಿ. ೩-೦೯ ಬೀಕೆ). [ಸಂ.]

ಪ್ರಸವನಕ್ಷತ್ರ (ನಾ). [ಜ್ಯೋತಿ] ಮಗು ಹುಟ್ಟಿದ ಕಾಲದಲ್ಲಿ ಪ್ರಧಾನ ವಾಗಿರುವ ನಕ್ಷತ್ರ ; ಜಾತಕನ ನಕ್ಷತ್ರ; ಜನ್ಮತಾರೆ : ಆಧಾನ ಅಥವಾ ಪ್ರಶ್ನಕಾಲದ ಚಂದ್ರಸ್ಫುಟದಿಂದ ಪ್ರಸವನಕ್ಷತ್ರವನ್ನೂ ತಿಳಿಯಬಹುದು (ಸಾಕತಿ. ೩-೦೯ ಬೀಕೆ). [ಸಂ.]

ಪ್ರಸವಬಂಧ (ನಾ). ಹೂವಿನ ತೊಟ್ಟು.—ಕಾವು : "ಪ್ರಸವಬಂಧಂ ವೃಂತಮೆನೆ ಪೂದೊಡಂಬೆಗಳ ಪೆಸರಕ್ಕು" (ಪಾಂಗರಾ. ೩೩-೩). [ಸಂ.]

ಪ್ರಸವಬಂಧನ (ನಾ). = ಪ್ರಸವಬಂಧ : "ವೃಂತಂ, ಪ್ರಸವಬಂಧನಂ—ಈ ೨ ಹೂವಿನ ತೊಡಂಬೆ" (ಹಲಾಯು. ೩೦-೩೦). [ಸಂ.]

ಪ್ರಸವವೇದನೆ (ನಾ). ಹೆರಿಗೆಯ ಕಾಲದ ನೋವು.—ಯಾತನೆ : ಬೆಳಗ್ಗೆ ಶುರುವಾದ ಪ್ರಸವವೇದನೆ ರಾತ್ರಿಯಾಗಿ ಮತ್ತೆ ಬೆಳಗಾದರೂ ಮುಗಿಯಲಿಲ್ಲ (ಅನಾಥ. ೨೦೬). [ಸಂ. ಪ್ರಸವವೇದನ]

ಪ್ರಸವವೇಧೆ (ನಾ). = ಪ್ರಸವವೇದನೆ : ಸಮುದ್ರಾಂಬೆ ತಾಂ ದ್ವೀಪ ಪ್ರಸವವೇಧೆಯಿಂದೊಯ್ಯನುತ್ತರಿಸಿ (ಕ್ರೀಶಾಪಾ. ೦೬೩-೩೬೩). [ಸಂ. ಪ್ರಸವವೇಧ]

ಪ್ರಸವಶಾಸ್ತ್ರ (ನಾ). ಹೆರಿಗೆಯ ವಿಷಯಕ್ಕೆ ಸಂಬಂಧಿಸಿದ ಶಾಸ್ತ್ರ : ಪ್ರಸವಶಾಸ್ತ್ರದ ವ್ಯಾಸಂಗ ಮುಗಿದ ನಂತರ ಅವಳು ಕ್ರಾಂತಿಸಮ್ಮೇಲನದ ಜನರೊಂದಿಗೆ ಸಂಬಂಧ ಬೆಳೆಸಿದಳು (ಪುಪರು. ೨೪೦). [ಸಂ.]

ಪ್ರಸವಶಾಸ್ತ್ರಜ್ಞ (ನಾ). ಹೆರಿಗೆಯ ಶಾಸ್ತ್ರವನ್ನು ತಿಳಿದವನು: ಗರ್ಭದ ಚಲನೆಗಳ ಮುಖಾಂತರ ಕಾರ್ಯಕಾರಿಯಾಗುವಂತೆ ಕಾಣುವ ಭಗವಂತನ ಆಂತರಿಕ ಇಕ್ಕುಳಗಳು, ಆಧುನಿಕ ಪ್ರಸವಶಾಸ್ತ್ರಜ್ಞರ ಬಾಹ್ಯ ಇಕ್ಕುಳಗಳು—ಇವುಗಳಲ್ಲಿಯ ವಿರೋಧವನ್ನು ಕಾಣಿಸಲಾಗಿದೆ (ಪರಪ. ೧೩೮). [ಸಂ.]

ಪ್ರಸವಸಮಯ (ನಾ). = ಪ್ರಸವಕಾಲ : ಪ್ರಸವಸಮಯದೊಳಾದಾ ಪತ್ತಂ . . . ಉಣ್ಬುದುಂ (ಸಾವುಂಪು. ೩೦೩); ಪ್ರಸವಸಮಯಮನೆ ಪಾರ್ದಿರ್ದಸುರಂ ಬಂದೆನ್ನ ಶಿಶುವನುಯ್ವುದುಗೆಟ್ಟೇ ಬಸಿಱೊಳ್ ಕರಗಿಸೆ ಪಡೆದೆಂ ಪೊಸತಪ್ಪದವಟಲಂ (ಜಗವಿ. ೨-೬೩); ತನ್ಮಹಾದೇವಿಯ ಪರಿಪೂರ್ಣ ಪ್ರಸವಸಮಯಂ ಮಾರ್ಗಶಿರ ಬಹುಳದಶಮಿಯಾಗೆ (ಪುಷ್ಪಪು. ೦೦-೦೨). [ಸಂ.]

ಪ್ರಸವಾಂಗ (ನಾ). [ಜೈನ] ಹತ್ತು ಬಗೆಯ ಕಲ್ಪಕುಜಗಳಲ್ಲಿ ಒಂದು; ಹೂಮಾಲೆಗಳನ್ನು ಒದಗಿಸುವ ಕಲ್ಪವೃಕ್ಷ : ವಸನಾಂಗಾತೋದ್ಯಾಂಗ ಪ್ರಸವಾಂಗ ಜ್ಯೋತಿರಂಗ ದೀಪಾಂಗಾನ್ನಾಂಗ ಸುರಾಂಗ ಭಾಜನಾಂಗಾ ವಸಥಾಂಗ ವಿಭೂಷಣಾಂಗ ದಶಕಲ್ಪಕುಜಂ (ಸಂದ್ರಪು. ೩-೩೪). [ಸಂ.]

ಪ್ರಸವಾಗಾರ (ನಾ). ಹೆರಿಗೆಮನೆ; ಸೂತಿಕಾಗೃಹ : ಪ್ರಸವಾಗಾರದಂತೆ ನಿಷಿದ್ಧಾನ್ಯಪ್ರವೇಶಮುಂ ರಾಜಭವನದಂತೆ ಕೃತರಕ್ಷಾವಿಧಿಯುಂ. . .ಅಪ್ಪ ತಮಿಸ್ರಗುಹೆಯನೆಯ್ದಿದಾಗಳ್ (ಅದಿಪು. ೦೩-೪೬ ನ). [ಸಂ.]

ಪ್ರಸವಾಲಯ (ನಾ). = ಪ್ರಸವಾಗಾರ : ಪ್ರಸವಾಲಯದೊಳ್ ಜಗತೀ ಪ್ರಸವಾಭಾರಕ್ಕೆ ಕಿಟ್ಟು ಕೆಲದೊಳ್ಸಾರ್ಚಿರ್ದಸಿಲತೆಗೆ ಕಾಳಬಜ್ಜರಿವೆಸ ರಾಯ್ತಂದಿಂಗೆ ಕೃಷ್ಣನಂಗಚ್ಛವಿಯಿಂ (ಅನಂಪು. ೦೨-೮೩). [ಸಂ.]

ಪ್ರಸವಿತ (ಗು). ಹೂವು ಬಿಟ್ಟ ; ಪುಷ್ಪಿತವಾದ : ಸುರದ್ರುಮ ವಂಕುರಿತ ಪಲ್ಲವಿತ ಕೋರಕಿತ ಪ್ರಸವಿತ ಫಲಿತ ಪರಂಪರದಾ ವಿವರದಿಂ ವರ್ಧಿಸಿತೆನುತ (ಬಸಪು. ೩೬-೪೯).

[℘ ಇದು 'ಪಲ್ಲವಿತ', 'ಕೋರಕಿತ' ಮುಂತಾದ ಸಂಸ್ಕೃತಶಬ್ದಗಳ, ರೂಪಸಾಮ್ಯದಿಂದ ಮಾಡಿಕೊಂಡ ಶಬ್ದವಿರಬಹುದು]

ಪ್ರಸವಿತೃ (ನಾ). ಜನ್ಮ ಕೊಡುವವನು; ತಂದೆ. [ಸಂ.]

ಪ್ರಸವಿಸು (ಕ್ರಿ). ಹೆರು; ಹಡೆ : ಭೂಮಿಯೆ ರಾಕ್ಷಸಸೇನೆಯಂ ಪ್ರಸವಿ ಸಿತೊ (ಸೌಗಂಧಿ. ೨೬೬-೨). [ಪ್ರಸವ + — ಇಸ್ಕು]

ಪ್ರಸವೋತ್ಸವ (ನಾ). ಹೆರಿಗೆಯಾದಾಗ ಮಾಡುವ ಸಮಾರಂಭ ;

ಜನ್ಮೋತ್ಸವ : ಮಹತ್ತರದಿಕ್ಕುಮಾರಿಯರೆಣ್ಬರುಮಂ ಪ್ರಸವೋತ್ಸವೋತ್ಸವದೊಳ್ ತುಂಗಭೃಂಗಾರುಗಳಂ ಪೊತ್ತು ನಡೆಯಲಿಂದ್ರಂ ಬೆಸಸಿದಂ (ಶಾಂತಿಪು. ೯-೦೬೪ಪ); ಮೂಡಿದ ಶೀತದೀಧಿತಿಗೆ ಕಾಲಪಿತಂ ಪ್ರಸವೋತ್ಸವಂಗಳಂ ಮಾಡುವ ಮಾಳ್ಕೆಯಿಂ . . . ಮಾಡಿದನಳ್ಕಱಿಂದೆ ಗಿರಿರಾಜನಜಾತೆಗೆ ಜಾತಕರ್ಮಮಂ (ಗಿರಿಕ. ೩-೫೬). [ಸಂ.]

ಪ್ರಸವ್ಯ (ಗು). ೧. ಎಡಗಡೆಗೆ ತಿರುಗಿದ. ೨. ಪ್ರತಿಕೂಲವಾದ; ವಿರುದ್ಧವಾದ. ೩. ಅನುಕೂಲವಾದ. (ನಾ). ೪. ವಿರುದ್ಧವಾದುದು ; ಪ್ರತಿಕೂಲವಾದುದು : "ಪ್ರತಿಕೂಲಂ, ಪ್ರತಿಲೋಮಂ, ಪ್ರತೀಪಂ, ಪ್ರಸವ್ಯಂ—ಈ ೪ ಪ್ರತಿಕೂಲಂ" (ಹಲಾಯು. ೦೨೨-೫೬). [ಸಂ.]

ಪ್ರಸಸ್ತಿ (ನಾ). ಗೌರವಸೂಚಕವಾದ ಪದವಿ ; ಬಿರುದು : ಪಾರ್ವತೀವಲ್ಲಭಚರಣಸರಸೀರುಹಭೃಂಗಂ ಮಹಾಮಹಿಮೋತ್ತುಂಗಂ ನಾಮಾದಿ ಸಮಸ್ತಪ್ರಸಸ್ತಿಸಹಿತಂ (ಸೌಇಇ. XX. ೪೬-೩೫; 1072) : ಆಂಗೀರಸಂವತ್ಸರದ ಫಾಲ್ಗುಣ ಸು ೧ ಆ ಸ್ವಸ್ತಿಸಮಸ್ತಪ್ರಸಸ್ತಿಸಹಿತಂ ವೊಡರಹಳಿಯ ಚೇಚಗವುಡನ ಮಗ ಕೇತಗವುಡನು . . . ಎತಿಸಿದ ಬೀರಗಲು (ಎಕ. II, ೪೦೫-೨;1273). [ಪ ಇದು 'ಪ್ರಶಸ್ತಿ' ಎಂಬುದರ ಅಪಲಿಖಿತ]

ಪ್ರಸಹ (ಗು). ೧. ಸ್ಥಿರವಾದ; ಶಾಶ್ವತವಾದ : ಅಸಹಾಯಸಾಹಸವಿನೋದಿ ವಿವಿಕ್ತಚಿತ್ರಪ್ರಸಹ[ಪಾಠಾಂ. ವ]ಪ್ರಕಾಶಿತಮಹೋದಯತತ್ತ್ವಸತ್ತ್ವಂ ವ್ಯಸನವ್ಯಪೇತ[ನು]ಪನೀತಕಲಾಕಲಾಪಂ ಶಶಿಖಂಡನಿರ್ಮಲಯಶೋವಿವಿಧಾವತಂಸಂ (ಕವಿರಾ. ೩-೨೨೯). (ನಾ). ೨. ಸಹನೆ; ತಾಳ್ಮೆ. ೩. ಮಾಂಸಾಹಾರಿಯಾದ ಪಕ್ಷಿ ಅಥವಾ ಪ್ರಾಣಿ. [ಸಂ.]

ಪ್ರಸಹ್ಯ (ಗು). ೧. ಬಲವಂತದ; ಒತ್ತಾಯದ. (ನಾ). ೨. ಒತ್ತಾಯ; ಬಲಾತ್ಕಾರ : "ಪ್ರಸಹ್ಯಂ — ೧. ಹಠಾರ್ಥಕಂ — ಬಲಾತ್ಕಾರವು" (ನಿಲ್ಕಾಂತಿ. ೪೩೪). [ಸಂ.]

ಪ್ರಸಾದ (ನಾ). ೧. ಅನುಗ್ರಹ; ಕೃಪೆ : ಕುಲಮುದ್ದ ನೀನೀ ಕಯ್ಯ ಪೊಕ್ಕು ಕಾದೆನ್ದು ಬೆಸಸೆ ಪ್ರಸಾದಮೆನ್ದಯ್ದಿ ಕಿಟ್ಟಿ ಕಾದಿ (ಎಕ.VIII, ಸೊರಬ. ೦೦-೬, ಸು; 800) ; ಪದ್ಮಲದೇವಿ ರಾಜಿಸುತಮಿರ್ಪ್ಪಳು ಹುಳ್ಳರಾಜಾನ್ತರಂಗ ಮರಾಳಂ ರಮಿಯಿಪ್ಪ ಪದ್ಮಿನಿಯವೊಲು ನಿತ್ಯಪ್ರಸಾದಾಸ್ಪದಂ (ಎಕ.II, ೩೪೬-೦೨; ಸು, 1165); ಈ ಶಾಸನದಲ್ಲಿ ವಿಕ್ರಮಾದಿತ್ಯನು ಪಲ್ಲವರನ್ನು ನಿರ್ಮೂಲ ಮಾಡಿದ್ದನೆಂದೂ ಅವನ ಪ್ರಸಾದದಿಂದ ಜಯಸಿಂಹವರ್ಮನಿಗೆ ರಾಜ್ಯ ಸಿಕ್ಕಿತೆಂದೂ ಬರೆದಿದೆ (ಕಣಾಇಲ.೭೬). ೨. ಶಾಂತಿ; ಸಮಾಧಾನ; ಸ್ವಾಸ್ಥ್ಯ: ಕೋಪಪ್ರಸಾದಮಂ ತದ್ಭೂಪತಿ ದುಷ್ಟರೊಳದುಷ್ಟರೊಳ್ ತಳೆದಂ (ಕಂರ್ರಪು. ೨-೬೨). ೩. ಸ್ಪಷ್ಟಗೊಳಿಸುವುದು; ತಿಳಿಯುವಂತೆ ಹೇಳುವುದು: "ಪ್ರಸಾದಃ, ಪ್ರಣಯಃ—ಈ ೨ ತಿಳಿ(ಪು)ಹುವುದು" (ಹಲಾಯು. ೦೨೬-೮೬). ೪. ನೈರ್ಮಲ್ಯ ; ಪರಿಶುದ್ಧತೆ. ೫. ದೇವರಿಗೆ ಅಥವಾ ಗುರುವಿಗೆ ನಿವೇದಿಸಿ ಅನುಗ್ರಹರೂಪವಾಗಿ ಪಡೆಯುವ ಆಹಾರ; ನೈವೇದ್ಯ ಮಾಡಿದ ಪದಾರ್ಥ : 'ತೀರ್ಥ ಕುಡಿದರೆ ಥಂಡಿ ; ಪ್ರಸಾದ ತಿಂದರೆ ಅಜೀರ್ಣ' ಎನ್ನುವಂತಹ ನಾಜೂಕಾದ ಪ್ರಕೃತಿ (ಮೂರುದಾ. ೪೯); ಪ್ರತಿದಿನ ಪುರಾಣ ಮುಗಿದ ಬಳಿಕ ಅವನು ಪ್ರಸಾದ ಹಂಚುವಾಗಲೂ ತಿಮ್ಮಿಯನ್ನು ಕಾಣುತ್ತಿರಲಿಲ್ಲ (ಜೀವರಂ.೫೦) ; ದಾಸಿ ಅಲ್ಲಿ ತಂದಿಟ್ಟಿದ್ದ ಚಿನ್ನದ ಹರಿವಾಣದಲ್ಲಿ ತಾವು ತಂದಿದ್ದ ತೀರ್ಥ ಪ್ರಸಾದಗಳನ್ನಿಟ್ಟರು (ಕೃತ್ಯಭೂ.೨೪). ೬. ರುಚಿಕರವಾದ ಆಹಾರ. ೭. ಅನ್ನ : ಮಠದ ಸಂತರ್ಪಣೆಯಲ್ಲಿ ಅನ್ನವನ್ನು ಬಡಿಸುವಾಗ, 'ಪ್ರಸಾದ ಬೇಕೆ?' ಎಂದು ಕೇಳುತ್ತಾರೆ (ರೂಢಿ). ೮. (ಆಲಂ) ಹೊಡೆತ; ಏಟು; ಪೆಟ್ಟು : ಘನವಾದ ಪ್ರಸಾದ ಪಡೆದು ಮೂರು ತಿಂಗಳು ಆಸ್ಪತ್ರೆಯಲ್ಲಿ ಮಲಗಿ ಮೊನ್ನೆ ಮೊನ್ನೆ ಡ್ಯೂಟಿಗೆ ಬಂದಿದ್ದ (ಬೆಂಗಬ. ೦೦೩) ; ಕಾಲಿನ ಬೆರಳಿಗೆ ಅರಿವೆ ಸುತ್ತಿಕೊಂಡದ್ದು ಕಾಣಿಸಿತು. "ಇದೇನು ಮಹಾರಾಯ ?" ಎಂದು ಪ್ರಶ್ನಿಸಿದೆ. "ನಿನ್ನೆಯ ಪ್ರಸಾದ, ಮೂರು ಮೂರು ಸಾರಿ ಬಲ ಹೆಬ್ಬೆರಳಿಗೆ ಬೇರು ಬಡಿದು ಇಷ್ಟು ಬಾತು ಕೊಂಡಿವೆ . . . ಎಂಬ ಉತ್ತರ ಬಂದಿತು (ಮೂಕಜ್ಜಿ. ೮೦). ೯. [ವೀಶೈ] ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬ ಅಷ್ಟಾವರಣಗಳಲ್ಲಿ ಒಂದು; ಗುರು, ಲಿಂಗ, ಜಂಗಮಕ್ಕೆ ಎಡೆಮಾಡಿ ಅವರಿಂದ ಅನುಗ್ರಹವಾಗಿ ಬಂದುದೆಂದು ಸ್ವೀಕರಿಸುವ ಭೋಜ್ಯಪದಾರ್ಥ : ಗಂಡ ಕೊಂಬುದು ಪಾದೋದಕಪ್ರಸಾದ ಹೆಂಡತಿ ಕೊಂಬುದು ಸುರೆ ಮಾಂಸ (ಬಸವ.೦೦೪); ಮೋಹದ ಮುನಿಸು ಮನದೊಳ್ ತೀವಿ ಪ್ರಣಯಕಲಹಂ ಬಲಿದು ಪ್ರಸಾದ ಮನೊಲ್ಲದೆ ಬಸವಂ ಮುಸುಂಕಿಟ್ಟು . . . ಪಟ್ಟಿರ್ದಿರೆ (ಬಸರ.೪-೪೩); ಜೀವನು ಗಡಿಗೆಯಿಂದ ನೀರನ್ನು ತರುವಾಗ ಆ ನೀರು ಪದಾರ್ಥ; ಶಿವನಿಗರ್ಪಿತವಾದ ಮೇಲೆ, ಅವನಿಗೆ ಅದು ಪ್ರಸಾದ (ಶಕ್ತಿ.೩೬). ೧೦. [ಕಾವ್ಯಮೀ] ಕಾವ್ಯದ ಹತ್ತು ಅರ್ಥಗುಣಗಳಲ್ಲಿ ಒಂದು; ಸುಲಭವಾಗಿ ತಿಳಿಯುವಂಥ ಕಾವ್ಯರಚನಾಶೈಲಿ; ಸ್ಫುಟವಾದ ಶೈಲಿ; ಪ "ಓಜಸ್ಸು (ಬಿಗಿಯಾದ ರಚನೆ) ಮತ್ತು ಶೈಥಿಲ್ಯ (ಬಿಗಿಯಿಲ್ಲದ ರಚನೆ) ಇವುಗಳ ಬೆರಕೆ" (ಕೃಬಿಡಿ.೨೩೩): ಅಸಮಸ್ತಪದನ್ಯಾಸಂ ಪ್ರಸಾದ ಮಾಧುರ್ಯ ಗುಣಸಮಗ್ರಮುದಾರಂ ರಸಭಾವಭಾವಿತೋಕ್ತಿಪ್ರಸರಂ ವೈದರ್ಭರೀತಿಯೆನೆ ಪೆಸರ್ವಡೆಗುಂ (ಕಾವ್ಯಾವ. ೬೮೨); ಪ್ರಸಾದ ಎಂದರೆ ಕಿವಿಗೆ ಬೀಳುತ್ತಿದ್ದ ಹಾಗೆಯೇ ಕ್ಲೇಶವಿಲ್ಲದೆ ವಾಚ್ಯಾರ್ಥವನ್ನು ಸಮರ್ಪಿಸುವ ಶಕ್ತಿ (ಭಾರಮಾ. ೬೨). [ಸಂ.]

ಪ್ರಸಾದಂಗೆಯ್ (ಕ್ರಿ). (ಅನುಗ್ರಹ ಅಥವಾ ಪ್ರಸನ್ನತೆಯನ್ನು ಪಡೆಯುವ ಉದ್ದೇಶದಿಂದ) ದಾನವಾಗಿ ಕೊಡು: ಪರಮಕೂಳರ್ಮ್ಮಗನ್ದಿ ರರಕೇಸಿಗಳಾಣತ್ತಿ ಆಗ ಪಳ್ಳಿಟ್ಟಿಟ್ಟು ಪ್ರಸಾದಂಗೆಯ್ದಾರ್ (ಎಕ. III. ತಿರುಮ. ೦-೯; 726) ; ರಣವಿಕ್ರಮರಸರ್ನ್ನಾಡಾಳೆ ರಸಪ್ತಮೇ ನೋನ್ತು ಪ್ರಸಾದಂಗೆಯ್ದರ್ (ಎಕ.XVI, ಗುಬ್ಬಿ. ೬೫-೪೬;733) ; ಈ ಊರನ್ನ ಸರ್ವ್ವ ಬಾಧಾಪರಿಹಾರಮಾಗೆ ಪ್ರಸಾದಂಗೆಯಿ (ಸೌಇಇ. IX-i, ೪೬-೫; ೩ಪೆಯ ಶತ). [ಪ್ರಸಾದ + ಕೆಯ್$_1$]

ಪ್ರಸಾದಕರ್ಮ (ನಾ). [ವೀಶೈ] ಶುಭ, ಅಶುಭ, ಜ್ಞಾನ, ಪ್ರಸಾದಗಳೆಂಬ ನಾಲ್ಕು ಬಗೆಯ ಕರ್ಮಗಳಲ್ಲಿ ಒಂದು ; ಶಿವನ ಅನುಗ್ರಹವನ್ನು ಪಡೆಯುವ ಕಾರ್ಯ: ಕರ್ಮ ಅಶುಭಕರ್ಮವು, ಶುಭಕರ್ಮ, ಜ್ಞಾನಕರ್ಮ, ಪ್ರಸಾದಕರ್ಮವೆಂದು ನಾಲ್ಕು ತೆರನಾಗಿರುವುದು . . . ಪಾಪ ಪುಣ್ಯ ಜ್ಞಾನಗಳು ಮೂರನ್ನು ಬಿಟ್ಟು, ಶಿವಪ್ರಸಾದವನ್ನು ಸಂಪಾದಿಸಿದರೆ, ಆ ಪ್ರಸಾದಕರ್ಮದಿಂದ ಭಕ್ತಿಯು ಲಭಿಸುವುದು (ಕಿವಾಸೂ.೦೩೦). [ಸಂ. ಪ್ರಸಾದಕರ್ಮನ್]

ಪ್ರಸಾದಕಾಯ (ನಾ). [ವೀಶೈ] ಲಿಂಗಪೂಜೆಯ ನಂತರ ಮತ್ತೊಂದು ಪೂಜೆಗೆ ಪ್ರಾರಂಭಿಸುವ ತನಕದ ಅವಧಿಯಲ್ಲಿ ಶಿವಭಕ್ತನ ದೇಹವು ಪಡೆಯುವ ಹೆಸರು : ಕೂಡಲಸಂಗಮದೇವನೊಲಿಸ ಬಂದ ಪ್ರಸಾದಕಾಯವು ಕೆಡಿಸಲಾಗದು (ಬಸವ. ೭೪) ; ಪ್ರಸಾದಕಾಯವಾದ ಬಳಿಕ ಸರ್ವಾಂಗ ಉತ್ತಮಾಂಗ (ಚನ್ನವ.ಕ-೩೨೩-೦೨೬೫); ಭಕ್ತನು ತನ್ನ ಭಕ್ತಿ ಪ್ರಭಾವದಿಂದ ಪೂಜಾದಿಯಿಂದ ಪೂಜಾಂತದವರೆಗೂ ಪದಾರ್ಥಕಾಯನಾಗಿರುವನು ಮತ್ತು ಪೂಜಾಂತದಿಂದ ಪೂಜಾದಿಯವರೆಗೂ ಪ್ರಸಾದಕಾಯನಾಗಿರುವನು (ಕಿವಾಸೂ.೦೦೮). [ಸಂ.]

ಪ್ರಸಾದತ್ರಯ (ನಾ). [ವೀಶೈ] ಗುರು, ಲಿಂಗ, ಜಂಗಮಗಳಿಗೆ ಸಮರ್ಪಿಸಿ ಪಡೆಯುವ ಶುದ್ಧ, ಸಿದ್ಧ, ಪ್ರಸಿದ್ಧಗಳೆಂಬ ಮೂರು ಬಗೆಯ ಪ್ರಸಾದಗಳು : "ಪ್ರಸಾದತ್ರಯ—ಶುದ್ಧ, ಸಿದ್ಧ, ಪ್ರಸಿದ್ಧ" (ಶರಸಾ. ೨೪-೭). 'ತ್ರಿವಿಧಪ್ರಸಾದ' ಪರಾ. [ಸಂ.]

ಪ್ರಸಾದದ್ರೋಹ (ನಾ). [ವೀಶೈ] ಪಂಚಮಹಾಪಾತಕಗಳಲ್ಲಿ ಒಂದು; ಗುರುಪ್ರಸಾದಕ್ಕೆ ಸರಿಯಾಗಿ ನಡೆದುಕೊಳ್ಳದಿರುವುದು : ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದರೆ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ ಆಚಾರದ್ರೋಹ ಪ್ರಸಾದದ್ರೋಹ ಇಂತೀ ಪಂಚಮಹಾಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಯದೊ (ಬಸವ.೭೬೭). [ಸಂ.]

ಪ್ರಸಾದನ (ನಾ). ೧. ಶುದ್ಧಪಡಿಸುವಿಕೆ ; ಸ್ವಚ್ಛತೆಗೊಳಿಸುವುದು. ೨. ಸಮಾಧಾನಪಡಿಸುವುದು ; ಸಂತೈಸುವುದು. ೩. ಸಂತೋಷಗೊಳಿಸುವುದು : ಇಲ್ಲಿ ಕೋಪ ಪ್ರಸಾದನಪರವಾದ 'ಚಾಟು' ವ್ಯಂಗ್ಯ ಎನ್ನಬಹುದು (ರ್ಮಾಕೋ. ೦೬ ಅಡಿಟಿ). ೪. ಉಪಚಾರ ಮಾಡುವುದು ; ಸೇವೆ ; ಶುಶ್ರೂಷೆ: "ವರಿವಸ್ಯಾ . . . ಪ್ರಸಾದನಃ, ಆರಾಧನಃ, ಉಪಚಾರಃ—ಈ ೧೧ ಬೆಸಕೆಯ್ವುದರ್ಕೆ ಪೆಸರ್" (ಹಲಾಯು. ೨೦-೦೨೯). [ಸಂ.]

ಪ್ರಸಾದಭಕ್ತ (ನಾ). [ವೀಶೈ] ದೈವಾನುಗ್ರಹಕ್ಕೆ ಪೂರ್ಣಪ್ರಾಪ್ತನಾದವನು ; ಪರಮಶರಣ: ಶಿವಾಶಿವಾ ಪ್ರಸಾದಭಕ್ತರ ತೋಱಿಸಯ್ಯಾ ಹರಹರಾ ಪ್ರಸಾದವೇ ಪ್ರಾಣಿ[ಣ]ವಾಗಿರ್ಪ ಪರಮಭಕ್ತರ ತೋಱಿಸಯ್ಯಾ (ಅಖಂಡೇ.೦೬೦-೨೦). [ಸಂ.]

ಪ್ರಸಾದಲಿಂಗ (ನಾ). [ವೀಶೈ] ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂಬ ಆರು ವಿಧವಾದ ಲಿಂಗಗಳಲ್ಲಿ ಒಂದು : ಪ್ರಸಾದಲಿಂಗವುಳ್ಳನ್ನಕ್ಕರ ಪ್ರಾಣಲಿಂಗವೆಂಬ ವಾರ್ತೆ ಭಂಗ ನೋಡಾ (ಅವಸಂ. ೨೫೩-೦೦೫೩); ಪರಂಜ್ಯೋತಿಸ್ವರೂಪ, ಸತ್ಯ, ಅಖಂಡ, ಇಂದ್ರಿಯಗೋಚರ, ಅಮೃತಸ್ವರೂಪ ಜಗತ್ಪರಿಣಾಮಕಾರಣವೂ ಆಗಿ, ಪರಾಶಕ್ತಿಯುಕ್ತವೂ ಸಾದಾಖ್ಯತತ್ತ್ವಾಶ್ರಯವೂ ಉಪಾಧಿರಹಿತವೂ ಜ್ಞಾನಗಮ್ಯವೂ ಆಗಿರುವ ಲಿಂಗವನ್ನೇ ಪ್ರಸಾದಲಿಂಗವೆಂದು ಹೇಳುತ್ತಾರೆ (ಶಿವಾಸೂ. ೪೦-೨೯ ಅಡಿಟಿ). [ಸಂ.]

ಪ್ರಸಾದವಿಕಾರಿ (ನಾ). [ವೀಶೈ]ಅನುಗ್ರಹದ ಅಭಿಮಾನಕ್ಕೆ ಒಳಗಾದವನು : ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ (ಬಸವ.೭೯೫). [ಸಂ. ಪ್ರಸಾದವಿಕಾರಿನ್]

ಪ್ರಸಾದವಿನಿಯೋಗ (ನಾ). ಪ್ರಸಾದವನ್ನು ಹಂಚುವುದು; ಚರಪು ಹಂಚುವುದು : ವಿರೂಪಾಕ್ಷನಿಗೆ ಮಹಾಮಂಗಳಾರತಿ ಬಹುವಿಜೃಂಭಣೆಯಿಂದ ನಡೆಯುತ್ತಿದೆ. ಮುಂದೆ—ಮಂತ್ರಪುಷ್ಪ ; ರಾಜಾಶೀರ್ವಾದ ; ಪ್ರಸಾದವಿನಿಯೋಗ (ಕಂಯಾತ್ರೆ. ೫೨). [ಸಂ.]

ಪ್ರಸಾದಶರೀರಿ (ನಾ). [ವೀಶೈ] ಭಸ್ಮ ಮೊದಲಾದುವುಗಳನ್ನು ದೇಹದ ಮೇಲೆ ಧರಿಸಿಕೊಂಡಿರುವವನು : ಅನುರಕ್ತಿಸಲು ಸದ್ಯ ಪ್ರಸಾದಶರೀರಿಯಂ ಮಾಡಿ ತ್ಯಕ್ತವಾಯುಪ್ರಾಣಸದ್ವಿದ್ಯೋಕ್ತಿಗಳನಳವಡಿಸಿ (ಬಸಪು. ೪೯-೩೪). [ಸಂ. ಪ್ರಸಾದಶರೀರಿನ್].

ಪ್ರಸಾದಸೇವನೆ (ನಾ). [ವೀಶೈ] ಗುರು, ಲಿಂಗ, ಜಂಗಮಾದಿಗಳಿಗೆ ಅರ್ಪಿಸಿ ಅನುಗ್ರಹವಾಗಿ ಪಡೆದುದನ್ನು ತಿನ್ನುವುದು,—ಸೇವಿಸುವುದು : ಸದ್ಗುರುಶಂಭುಸೋಮೇಶ್ವರನ ಭಜಿಸಿ ಪ್ರಸಾದಸೇವನೆಯ ಮಾಡದಿರಲಘೋರನರಕ (ಶಿವಗೀ. ೪೬-೨೦೭). [ಸಂ. ಪ್ರಸಾದಸೇವನ]

ಪ್ರಸಾದಿ (ನಾ). ೧. ಶುದ್ಧಗೊಳಿಸುವುದು. ೨. ಸಮಾಧಾನಗೊಳಿಸುವುದು ; ಸಂತೈಸುವುದು. ೩. ಸಂತೋಷಗೊಳಿಸುವುದು ; ಹರ್ಷವನ್ನುಂಟುಮಾಡುವುದು. ೪. [ವೀಶೈ] ಪ್ರತಿಯೊಂದು ಭೋಗಪದಾರ್ಥವನ್ನೂ ಮೊದಲು ಲಿಂಗಕ್ಕೆ ಅರ್ಪಿಸಿ, ಆಮೇಲೆ ಅದನ್ನು ಭಕ್ತಿಪೂರ್ವಕವಾಗಿ ಪ್ರಸಾದರೂಪದಲ್ಲಿ ಸ್ವೀಕರಿಸುವವನು : ಪರಸ್ತ್ರೀಯ ಪರರರ್ಥದಾಸೆ ಬಿಡದನ್ನಕ್ಕ ಪ್ರಸಾದಿಯೆಂತೆಂಬೆನಯ್ಯಾ (ಬಸವ. ೫೦೧) ; ರುದ್ರಪಶುಪತಿ ಮಂತ್ರವಾದಿ ಜಗದ್ರಮಣ ನಿಮ್ಮ ಪ್ರಸಾದಿ . . . ಚೀರಮಮಹೀಶನು ನಿಮ್ಮ ದಳವಾಯಿ (ಬಸಪು. ೯-೪೫) ; ಪ್ರತಿಯೊಂದು ಇಂದ್ರಿಯದ ಮುಖದಿಂದಲೂ ತಾನು ಅನುಭವಿಸುವ ಪದಾರ್ಥಗಳನ್ನು ಮೊದಲು, ಲಿಂಗಕ್ಕೆ ಸಮರ್ಪಿಸಿ, ಬಳಿಕ ಅರ್ಪಿತಪದಾರ್ಥವನ್ನು ಅವಧಾನಭಕ್ತಿಪೂರ್ವಕವಾಗಿ . . . ಪರಿಗ್ರಹಿಸುತ್ತಿರುವುದೇ ಪ್ರಸಾದಿಯ ಲಕ್ಷಣ (ಶಿವಾಸೂ. ೫೪). ೫. ಷಟ್ಸ್ಥಲಗಳಲ್ಲಿ ಒಂದು ; ಮೂರನೆಯ ಸ್ಥಲ : ಈ ಭಕ್ತಿಮಾರ್ಗವನ್ನು ಅನುಸರಿಸುತ್ತಾ ಹೋದರೆ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಆಧ್ಯಾತ್ಮಿಕಸ್ಥಾನಗಳನ್ನು ಹೊಂದುತ್ತಾನೆ (ಭಾರದ. ೨೦೭). [ಸಂ. ಪ್ರಸಾದಿನ್]

ಪ್ರಸಾದಿತ (ಗು). ೧. ತಿಳಿಯಾದ ; ಪರಿಶುದ್ಧವಾದ. ೨. ತೃಪ್ತಿಗೊಂಡ ; ಸಮಾಧಾನ ಹೊಂದಿದ. ೩. ಅನುಗ್ರಹಕ್ಕೊಳಗಾದ ; ಕೃಪೆ ಹೊಂದಿದ : ಕರುಮಾಡದ ಮುಂದಣ ಮಣಿಮಯಪ್ರಘಣದೊಳ್ ಕತಿಪಯಪ್ರಸಾದಿತ ಪರಿವಾರಪರಿವೃತಪಾದಪೀಠನುಂ . . . ಆಗಿ (ಕಂದ್ರಪು. ೯-೨೪ ಪ). ೪. ಪ್ರಸಾದವನ್ನು ಪಡೆದ : (ಕಿ). (ನಾ). ೫. ಬಹುಮಾನ ; ಬಳುವಳಿ : (ಕಿ). [ಸಂ.]

ಪ್ರಸಾದಿಸು (ಕ್ರಿ). ಅನುಗ್ರಹ ಮಾಡು ; ದಯಪಾಲಿಸು ; ನೀಡು : ಪದವಿಗಳು ಗಿದವಿಗಳವೇತಕೆ ಮದನಹರ ನಿಮ್ಮಚಲಭಕ್ತಿ ಸುಪದವಿಯುಂ ಕೃಪೆಯಿಂ ಪ್ರಸಾದಿಸಿ ಸಲುಹು (ಬಸಪು.೨-೨೪). [ಪ್ರಸಾದ+—ಇಸು$_3$]

ಪ್ರಸಾದಿಸ್ಥಲ (ನಾ). [ವೀಶೈ] ಷಟ್ಸ್ಥಲಗಳಲ್ಲಿ ಒಂದು ; ಮೂರನೆಯ ಸ್ಥಲ : ಪ್ರಸಾದಿಸ್ಥಲ ತ್ರಿವಿಧ ಅರ್ಪಿತಪ್ರಸಾದಿ ಅವಧಾನಪ್ರಸಾದಿ ಪರಿಣಾಮಪ್ರಸಾದಿ (ಕನ್ನಪ ಕ. ೪೭-೦೦೧) ; ಚರಲಿಂಗಗತವಾದ ಇಚ್ಛಾಶಕ್ತಿಯಿಂದ ಜ್ಯೋತಿರ್ಮಯ ಸುಶೋಭನಶಿವಲಿಂಗವು ಜನಿಸಿತು, ಅದರ ಉಪಾಸನೆಗಾಗಿ ಪ್ರಸಾದಿಸ್ಥಲವುಂಟಾದುದು (ಶಿವಾಸು. ೪೪). [ಸಂ.]

ಪ್ರಸಾದೋಕ್ತಿ (ನಾ). ೧. ಅನುಗ್ರಹಿಸುವ ಮಾತು,—ನುಡಿ. ೨. ಸಮಾಧಾನದ ಮಾತು ; ಸಂತೈಸುವ ನುಡಿ : ವನರುಹಗರ್ಭ ಪ್ರಸಾದೋಕ್ತಿಯಂ ಕೇಳ್ದೆನಿತಾನುಂ ಗದ್ಗದತ್ವಂ ನೆಗೞ್ ವಸುಮತೀಕಾಂತೆಯಿಂತೆಂದಳಾಗಳ್ (ಜಗವಿ. ೧-೨೯). [ಸಂ.]

ಪ್ರಸಾಧಕ (ಗು). ೧. ಶುದ್ಧಗೊಳಿಸುವ ; ಸ್ವಚ್ಛಮಾಡುವ. ೨. ಅಲಂಕರಿಸುವ. (ನಾ). ೩. ಅಲಂಕರಿಸುವವನು. [ಸಂ.]

ಪ್ರಸಾಧನ (ನಾ). ೧. ಸಿಂಗರಿಸುವುದು ; ಅಲಂಕರಿಸುವುದು : "ಆಕಲ್ಪಃ . . .ಪ್ರಸಾಧನಂ—ಈ ೫ ಶೃಂಗಾರಂಗೆಯ್ವುದು" (ಹಲಾಯು. ೮೯-೩೮೫). ೨. ಅಲಂಕಾರ ; ಶೃಂಗಾರ : ಪ್ರಸಾಧನವಿರಹಿತೆಯುಂ ನಿರಾನಂದಜನೋಪೇತೆಯುಂ . . . ಆಗಿರ್ದ ತನ್ನನ್ವಯ ರಾಜಧಾನಿಯನನುಜಸಮೇತನಪರಾಜಿತನೆಯ್ದೆ ವಂದು (ಶಾಂತಿಪು. ೦-೯೩ ಪ) ; ಮಾಲತಿ ಸ್ನಾನ, ಪ್ರಸಾಧನ ತೀರಿಸಿ ಇವರಿದ್ದಲ್ಲಿಗೆ ಬಂದಳು (ವಾತ್ಸಲ್ಯ. ೨೬). ೩. ಒಡವೆ ; ಆಭರಣ : ತನು ತನುವಾದ ಗರ್ಭಿಣಿಗೆ ತತ್ಸಮಯೋಚಿತ ಮಂಗಳಪ್ರಸಾಧನಮೆಸೆದತ್ತು ಕಪ್ಪುರದ ಕಂಠಿಕೆ . . . ಪೂವಿನ ಪಿಂಡುಗಂಕಣಂ (ಕಂಠಾಮಾ. ೩-೧೦೬). [ಸಂ.]

ಪ್ರಸಾಧನಕರಣ (ನಾ). ಅಲಂಕರಿಸುವ ಕೆಲಸ ; ಶೃಂಗಾರಕಾರ್ಯ : ಅಂತಃಪುರಕಾಂತೆಯರುಂ ಶಶಿಪ್ರಭಾಪ್ರಸಾಧನಕರಣನಿರತೆಯರಾಗಿ . . . ಪೊಸದುಗುಲಮಂ ನಿಱಿವಿಡಿದುಡಿಸಿಯುಂ (ಕಂದ್ರಪು. ೬-೬೩ ಪ). [ಸಂ.]

ಪ್ರಸಾಧನಿ (ನಾ). ಬಾಚಣಿಗೆ ; ಹಣಿಗೆ : "ಪ್ರಸಾಧನೀ ಕಂಕತಿಕಾಶಬ್ದಗಳು ಬಾಚಣಿಗೆಯ ಹೆಸರುಗಳು" (ಗುರುಶಾ. ೨೪೩). [ಸಂ. ಪ್ರಸಾಧನೀ]

ಪ್ರಸಾಧಿತ (ಗು). ೧. ಅಲಂಕರಿಸಿದ; ಸಿಂಗರಿಸಿದ : ತೀರ್ಥಕರಕುಮಾರಂಗೆ ಸೌಧರ್ಮೇಂದ್ರಂ ಪ್ರಸಾಧಿತ ವಿಷ್ಟಪತ್ರಿತಯನಪ್ಪುದನಱಿದು ಪ್ರಸಾಧನ ಪ್ರಾರಂಭಂಗೆಯ್ಯೆ (ಶಾಂತಿಪು. ೧೦-೫೬ ಪ). (ನಾ). ೨. ಅಲಂಕಾರ ಗೊಂಡವನು ; ಸಿಂಗರಿಸಿಕೊಂಡವನು : ಸುರರಾಜಸಮರ್ಪಿತಸಂತಾನ ಕುಸುಮದಾಮಾಂಬರಭೂಷಣಪ್ರಸಾಧಿತಂ ಪುರುದೇವಂ ಮೃಗೇಂದ್ರ ವಿಷ್ಟರದೊಳಿರೆ (ಆದಿಪು. ೮-೭೦ ಪ). [ಸಂ.]

ಪ್ರಸಾರ (ನಾ). ೧. ಹರಡುವಿಕೆ ; ಹಬ್ಬುವಿಕೆ ; ವ್ಯಾಪ್ತಿ : ಆರ್ಯಸಂಸ್ಕೃತಿಯ ಪ್ರಸಾರವನ್ನು ಪ್ರಭಾವಯುತವನ್ನಾಗಿ ಮಾಡಲು ಇತಿಹಾಸ ಪುರಾಣಗಳ ಪರಿಷ್ಕರಣ ಬಹುಮಟ್ಟಿಗೆ ನಡೆಯಿತು (ಪುಕ್ಸಾರ. ೦೦೭ ಪೀಠಿಕೆ); ಜನಪದಕಥೆಗಳ ಪ್ರಸಾರ (Diffusion)ದ ದೃಷ್ಟಿಯಿಂದ ಕಿನ್ನರಕಥೆಗಳು ತುಂಬ ಮಹತ್ವದವಾಗಿವೆ (ಸುವರ್ಣ. ೨೫). ೨. ವ್ಯಾಪಾರದ ಮಳಿಗೆ; ಅಂಗಡಿ. ೩. [ಸಂಗೀತ] ಗಾಯಕನ ದೋಷಗಳಲ್ಲಿ ಒಂದು : ಗಾಯಕ ದೋಷಗಳು ೧. ಸಂದಷ್ಟ – ಹಲ್ಲು ಕಚ್ಚಿ ಹಾಡುವವನು . . . ೧೬. ಪ್ರಸಾರ – ಅಮಯವಗಳ ಚೇಷ್ಟೆಗೂಡಿ ಹಾಡುವವನು (ಸಂಗೀತಂ. ೦೦೩).

ಪ್ರಸಾರ ಮಾಡು = ಹರಡುವಂತೆ ಮಾಡು ; ಬಿತ್ತರಿಸಂ : ಅಂದಂದು ಭವ್ಯವಾದ ಸಂಗೀತವನ್ನು ಪ್ರಸಾರ ಮಾಡುತ್ತ ಸಹಸ್ರಮೈಲಿಗಳ ವಿಷಯಗಳನ್ನು ಅಂದಂದೇ ಹರಡುತ್ತಿರುವ ರೇಡಿಯೋ (ಶಿಕ್ಷದ. ೬). [ಸಂ.]

ಪ್ರಸಾರಣ (ನಾ). ೧. ಹರಡುವಿಕೆ ; ಹಬ್ಬುವುದು : ಈತನ ಹೆಸರಿನಲ್ಲಿರುವ ತರಂಗಗಳೇ (Hertzian waves) ಆಮೇಲೆ ರೇಡಿಯೋ ಪ್ರಸಾರಣದಲ್ಲಿ ಉಪಯೋಗವಾದವು (ಶಿಲ್ಪಾ. ೦೧೬). ೨. (ಬಟ್ಟೆ ಮುಂತಾದುವುಗಳ) ಮಡಿಕೆಯನ್ನು ಬಿಚ್ಚಿ ಹರಡುವುದು. [ಸಂ.]

ಪ್ರಸಾರಣೆ (ನಾ). ಒಂದು ಬಗೆಯ ಬಳ್ಳಿ; ಹೆಸರಣೆ ; ಮುಳ್ಳಗಸೆ : " ಸಾರಣೇ, ಪ್ರಸಾರಣೇ, ಕಟುಂಭರಾ, ರಾಜಬಲಾ, ಭದ್ರಬಲಾ – ೫ ಕಿರಿಯ ಹಸಾರಣೇಗಿಡ, ಸಾರಣೇಗಿಡ" (ಸಿದ್ಧಾಂತಿ. ೦೪೭); ಗೊಂತೆಮೊಗರು ಚೆಟ್ಟು, ಪ್ರಸಾರಣೆ, ಹೆಸರಣೆ ಹಸರಾಣೆ (ಸಸ್ಯವಿ. ೧೦೦). [ಸಂ. ಪ್ರಸಾರಣೇ]

ಪ್ರಸಾರಾಂಗ (ನಾ). (ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷವಾಗಿ) ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರಕ್ಕಾಗಿ ಇರುವ ವಿಭಾಗ : ವಿಶ್ವವಿದ್ಯಾನಿಲಯದ ಪ್ರಕಟನ ಹಾಗೂ ಪ್ರಸಾರಾಂಗದ ಮುಖ್ಯಾಧಿಕಾರಿಗಳು (ಮುದ್ರಕ. V ಮೊದಲ ಮಾತು). [ಸಂ.]

ಪ್ರಸಾರಿಣಿ (ನಾ). = ಪ್ರಸಾರಣೆ : "ರಾಜಬಲಾ—ಮಹಾಬಲೆ, ಪ್ರಸಾರಿಣಿ" (ಓಷಧಿ. ೦೩೬). [ಸಂ. ಪ್ರಸಾರಿಣೀ]

ಪ್ರಸಾರಿತ (ಗು). ೧. ಹರಡಿದ ; ಹಬ್ಬಿದ : ಕುಟ್ಮಳಿತವದನಂ ಸ್ನಿಗ್ಧಾಲೋಕಂ ಪ್ರಸಾರಿತ ಕಜ್ಜಲಂ . . . ತಳೆದಂ ಚಲ್ವಂ ಲಂಬಾಳಕಂ ನೃಪ ಬಾಲಕಂ (ಮಲ್ಲಿಪು. ೪-೧೩೦). ೨. (ಬಟ್ಟೆಯ ಮಡಿಕೆಯನ್ನು ಬಿಚ್ಚಿ) ಮಾರಾಟಕ್ಕೆ ಇಟ್ಟ. (ನಾ). ೩. [ನಾಟ್ಯ] ಸ್ಥಾನಕಗಳಲ್ಲಿ ಒಂದು ಬಗೆ ; ೪ " ಕಾಲುಗಳನ್ನು ನೀಡಿ ಒಂದು ಕೈಯನ್ನು ತಲೆದಿಂಬಾಗಿ ಇರಿಸುವುದು. ಸುಖವಾಗಿ ನಿದ್ರಿಸುವುದನ್ನು ಅಭಿನಯಿಸುವಾಗ ಇದನ್ನು ವಿನಿಯೋಗಿಸಬೇಕು " (ಶಾಸ್ತ್ರರಂ. ಗದ್ಯಾಪುವಾದ. ೩೩೩) : ಸಮ, ಆಕುಂಚಿತ, ಪ್ರಸಾರಿತ, ವಿವರ್ತಿತ, ಉದ್ವಾಹಿತ, ನತ ಈ ಆಱು ಮಲಗಿರ್ದ ಸ್ಥಾನಕಂಗಳ್ (ಶಾಸ್ತ್ರರಂ. ೭-೦೨ ಪ). [ಸಂ.]

ಪ್ರಸಾರಿಸು (ಕ್ರಿ). ಹರಡು ; ಹಬ್ಬಿಸು ; ಬಿತ್ತರಿಸು : ತನಿಸೊಬಗಂ ಪ್ರಸಾರಿಸಿ ಸಮಂಚಿತಕೈತವಮಂ ನಿಮಿರ್ಚಿ ಮಿಂಡನ ಕೆಳೆಯರ್ಕಳೊಳ್ ಬಱಿದೆ ಮೆಚ್ಚಿದವೊಲ್ಪಥೆಯಂ ನಿಮಿರ್ಚಿ (ಉದ್ಯಪು. ೦೦-೬೦); ತತ್ಪ್ರದೇಶಗತ ಶಕ್ತಿಯಂ ಬುದ್ಧಿಯಿಂದಂ ಪ್ರಸಾರಿಸಿ (ಗೊಮ್ಮಸಾ. ೪೭-೫).

[ಪ್ರಸಾರ + – ಇಸ್ಸು]

ಪ್ರಸಿತ (ಗು). ೧. ಬಿಗಿದ ; ಕಟ್ಟಿದ ; ಬಂಧಿಸಿದ. ೨. ತೊಡಗಿದ ; ಆಸಕ್ತಿ ಹೊಂದಿದ;ಮಗ್ನವಾದ : ಸದಮಲಪ್ರಚುರವಿಶ್ರುತಪರಮಭಕ್ತ ಗಣಪದಸರೋರುಹಸಾಂದ್ರಮಕರಂದಪಾನಸಮ್ಮುದಿತಚಂಚಚ್ಚಂಚರೀಕನ ನವರತ ಪಂಚಾಕ್ಷರೀಪ್ರಸಿತಹೃದಯಂ (ಆರಾಸ. ೦-೦-೦೦೨). (ನಾ). ೩. ಆಸಕ್ತಿಯುಳ್ಳ ವ್ಯಕ್ತಿ ; ಆಸಕ್ತನಾದವನು : " ತತ್ಪರಃ, ಪ್ರಸಿತಃ, ಆಸಕ್ತಃ -೩ ಒಂದು ಪದಾರ್ಥದಲ್ಲಿ ತಗಲಿದ ಮನಸ್ಸುಳ್ಳವನ ಪೆಸರುಗಳು" (ಸಿದ್ಧಾಂತಿ. ೩೨೪). ೪. ಕೀವು. [ಸಂ.]

ಪ್ರಸಿದ್ಧ (ಗು). ೧. ಎಲ್ಲರಿಗೂ ತಿಳಿದ ; ಹೆಸರುವಾಸಿಯಾದ : ವಿಂಬರ್‌ಡನ್ ಮೊದಲಾದ ಪ್ರಸಿದ್ಧ ಕ್ರೀಡಾಕ್ಷೇತ್ರಗಳು . . . ಸುತ್ತಲಿನ ನಿಸರ್ಗಮಯ ಸುಂದರತಮ ಪ್ರದೇಶಗಳು ; ಇವನ್ನೆಲ್ಲ ನೋಡಿ (ಸಮಸೀ ೬೦೨).(ನಾ). ೨. ಎಲ್ಲರಿಗೂ ತಿಳಿದುದು; ಹೆಸರುವಾಸಿಯಾದುದು. ಶೇಷಪಂಡಿತರ ಕೈಗುಣ ಸುತ್ತಮುತ್ತಲೆಲ್ಲ ಬಹಳ ಪ್ರಸಿದ್ಧ (ಅಪಾಥ. ೨೬). ೩. ಕೀರ್ತಿಶಾಲಿಯಾದವನು; ಪ್ರಖ್ಯಾತ: ಜೈನಸಾಹಿತ್ಯದಲ್ಲಿ ಕುಣಿಕನೆಂದೂ, ಬೌದ್ಧಸಾಹಿತ್ಯದಲ್ಲಿ ಅಜಾತಶತ್ರುವೆಂದೂ ಪ್ರಸಿದ್ಧನಾದ ಮಗಧರಾಜನು ಚೇಟಕನ ಮೊಮ್ಮಗನು (ಭಾರದ. ೦೭೫). ೪. [ವೀಶೈ] ಶುದ್ಧ, ಸಿದ್ಧ, ಪ್ರಸಿದ್ಧಗಳೆಂಬ ಮೂರು ಬಗೆಯ ಪ್ರಸಾದಗಳಲ್ಲಿ ಒಂದು ; ಜಂಗಮರು ಸ್ವೀಕರಿಸಿ ಉಳಿದುದು : ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯಾ ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯಾ ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯಾ (ಬಸವ. ೭೬೩) ; ವರಲಿಂಗಮುಖಸಮರ್ಪಿತ ಶುದ್ಧವೆನಿಸುವುದು ಚರಲಿಂಗ ಕರ್ಪಿಸಿದುದು ಪರಮಸಿದ್ಧಂ ನಾಡೆ ಗುರುಭುಕ್ತಶೇಷದಿಂ ಧರಿಸಿ ಪ್ರಸಿದ್ಧ ಮೆಂಬಿನಿತುಮಂ ನಿಯಮದಿಂದಿರದೆ ಕೊಂಬರ ವಿವರಮಂ ಪೇಳ್ವೆಂ (ಲಿಕಿಸಂ. ೪೭-೦೫); ಜಂಗಮಭುಕ್ತಶೇಷವೇ ಪ್ರಸಿದ್ಧಮೆನಿಸುವುದು (ವಿವೇಕ. ೨೩).

ಪ್ರಸಿದ್ಧವಾಗು = ಎಲ್ಲರಿಗೂ ತಿಳಿದಿರು ; ಖ್ಯಾತವಾಗು : ಚಹಾ ವ್ಯಾಪಾರದಲ್ಲಿ ಬಹಳ ಪ್ರಸಿದ್ಧವಾದವು (ಮುಂಬಯಿ. ೪-೦೫೯); ಅರಿಸ್ಟಾಟಲನು . . . ಪ್ರಸಿದ್ಧವಾದ ರುದ್ರನಾಟಕದ ಲಕ್ಷಣವನ್ನು ರಚಿಸಿದ್ದಾನೆ (ಅಂಕಾ. ೭೨). [ಸಂ.]

ಪ್ರಸಿದ್ಧತೆ (ನಾ). ಕೀರ್ತಿ ; ಪ್ರಖ್ಯಾತಿ : ಈ ವಿನುತ ಸಿತಕೀರ್ತಿಯಿಾ ಸದ್ಭಾವಶುದ್ಧತೆಯಿಾ ಪ್ರಸಿದ್ಧತೆಯಿಾ ವಿಬುಧಸನ್ಮಾನತೆಯು ನಿಮಗೀಯ ಹಂಕೃತಿಯೆ ಇಂದು ನೀವೆನ್ನರಿ ಪರಸದಡೆ ಕುಂದುವುದೆ ಇನಿತಾಯುವದು (ಬಸವು. ೪೬-೧೦). [ಸಂ. ಪ್ರಸಿದ್ಧತಾ]

ಪ್ರಸಿದ್ಧಾಂತ (ನಾ). [ವೀಶೈ] ಅತಿಶ್ರೇಷ್ಠವಾದ ಅರಿವು ; ಪರಮತತ್ವ: ಗುರುಸ್ಥಲವೆ ವೇದಾಂತ ಲಿಂಗಸ್ಥಲವೆ ಸಿದ್ಧಾಂತ ಜಂಗಮಸ್ಥಲವೆ ಪ್ರಸಿದ್ಧಾಂತ (ಮೋಳಿಮಾ. ೦೫೬-೫೯೬). [ಸಂ.]

ಪ್ರಸಿದ್ಧಾನ (ನಾ). ಕೀರ್ತಿ ; ಪ್ರಸಿದ್ಧಿ ; ಪ್ರಖ್ಯಾತಿ: ಪ್ರಸಿದ್ಧಾನಮಂ ಪಡೆದ ಪರಾರ್ಥಮಂ ಶಾಶ್ವತಮೆಂಬುದನುಕ್ತಸಿದ್ಧಮಲ್ಲದಂದಭಿಧಾನಂ ನಿರರ್ಥಕರಮುಮಾಧಾರರಹಿತಮುಮಕ್ಕುಂ (ಶಾಂತಿಪು. ೬-೦೩೬ ಪ). [?]

ಪ್ರಸಿದ್ಧಿ (ನಾ). ೧. ಹೆಸರುವಾಸಿ; ಖ್ಯಾತಿ; ಕೀರ್ತಿ: ಮಧ್ವಾಚಾರ್ಯರೆಂಬ ನಾಮಪ್ರಸಿದ್ಧಿಯನು ಪಡೆದನುದಿನದಿ (ಪುರಂದ. ೪-೩೬-೩); ಪಾರ್ಸಿಜನಗಳ ಭಾಷೆಯು ಹಿಂದಿನ ಕಾಲದಲ್ಲಿ ಝುಂಡ್ (ಅಥವಾ ಅವೆಸ್ಥಾ) ಎಂದು ಪ್ರಸಿದ್ಧಿ ಪಡೆದಿತ್ತು (ಭಾರಗ ೪೩೪) ; ನಮ್ಮ ಆಸುಪಾಸಿನ ಜನಕ್ಕೆಲ್ಲ ಅವರ ಹೆಸರು ಗೊತ್ತಿತ್ತು. ಅಷ್ಟು ಪ್ರಸಿದ್ಧಿಯಿದೆ (ಮೂಕಜ್ಜ. ೨೬). ೨. ಕಾರ್ಯ ಕೈಗೂಡುವುದು ; ಕಾರ್ಯಸಿದ್ಧಿ. [ಸಂ.]

ಪ್ರಸಿದ್ಧಿಸು (ಕ್ರಿ). ಎಲ್ಲರಿಗೂ ತಿಳಿಯುವಂತೆ ಮಾಡು ; ಪ್ರಕಟಪಡಿಸು; ಬಹಿರಂಗಪಡಿಸು: ೧೯೦೪ರಲ್ಲಿ ಪ್ರಕಟವಾಗಿದ್ದ ಒಂದು ಪುಸ್ತಕವನ್ನು. . . ೧೯೨೭ರಲ್ಲಿ ಸೂಕ್ತ ಬದಲಾವಣೆಗಳೊಂದಿಗೆ ಮತ್ತೆ ಪ್ರಸಿದ್ಧಿಸಿದನು

(ಸಸ್ಯಕ. ೯೦) ; ನಿಮ್ಮ ದೇಶಸೇವೆಯನ್ನು ಪ್ರಸಿದ್ಧಿಸುವ ಸಲುವಾಗಿಯೇ ಹೊರಟಿದ್ದೇನೆ (ದೇಶರು. ೬೩) ; ಇಂದಿನ ಪತ್ರದಲ್ಲಿ ನಿನ್ನೆ ಅದೃಶ್ಯರಾದ ಜನರ ಹೆಸರುಗಳು ಪ್ರಸಿದ್ಧಿಸಲ್ಪಟ್ಟಿರುತ್ತವೆ (ಕೃತಕೃ. ೦೬೧).

[ಪ್ರಸಿದ್ಧ + —ಇಸ್ಯು]

ಪ್ರಸುಪ್ತ (ಗು). ೧. ನಿದ್ರಿಸುತ್ತಿರುವ. (ನಾ). ೨. ನಿದ್ರಿಸಿದವನು : ಶಯ್ಯಾಗೃಹಕ್ಕೆ ಬಿಜಯಂಗೆಯ್ದು ದುಕೂಲಪ್ರಚ್ಛದಾಚ್ಛಾದಿತವಿಶಾಲಹಂಸ ತೂಲತಲ್ಪತಲದೊಳ್ ಸುಖಪ್ರಸುಪ್ತನಿರೆ (ಹಂಠಾಮಾ. ೦೦-೧೬೩ ಪ).

[ಸಂ.]

ಪ್ರಸೂಚಕ (ಗು). ೧. ತಿಳಿಸುವ ; ಹೇಳುವ ; ಸೂಚಿಸುವ. (ನಾ). ೨. ತಿಳಿಸುವ ವಸ್ತು ; ಸೂಚಿಸುವಂಥದು : ಮುಂಚಿ ಬಂದ ಜಳದಾಗಮಪ್ರಸೂಚಕಂಗಳಪ್ಪಾಲಿವರಲ್ಗಳೆಂದುಂ ಸರೋಜವನದಿಂ ಶಾಳಿವನಕ್ಕೆ ಪರಿವ ಪರಿಕಾಲ್ಗಳಂ ನೆರೆದು (ಸುಕುಮಾ. ೦೦-೩೭ ಪ). [ಸಂ.]

ಪ್ರಸೂತ (ಗು). ೧. ಹುಟ್ಟಿದ ; ಜನಿಸಿದ ; ಜನ್ಮ ತಾಳಿದ : ಪ್ರಸೂತ ಭೂತಾಳಿನಗಾಗಸಂಕುಳಂ ವಸಂತಲಕ್ಷ್ಮೀಚಿರಭೃತ್ತರುವ್ರಜಂ ಲಸತ್ಸುರಾಧೀಶ ಭಯಂಕರಪ್ರಭಾಪ್ರಸನ್ನಶೈಲಾವಳಿಯಲ್ಲಿ ರಂಜಿಕುಂ (ವೃತ್ತಿ. ೦೦-೩೨). (ನಾ). ೨. ಹುಟ್ಟಿದವನು; ಜನ್ಮ ತಾಳಿದವನು: ದಿವಸಕರನಕ್ಕಿಳಾಸಂಭವನಕ್ಕಿರೆ ನಾಲ್ಕಱೊಳ್ ದಶಸ್ಥಾನಕದೊಳ್ ರವಿಸುತನಿರೆ ಶೂಲದೊಳಿಕ್ಕುವರಾ ಲಗ್ನಪ್ರಸೂತನಂ ಪಾತಕನಂ (ಪಾತಕ. ೨೩-೬) ; ಕನಸಿನೊಳಪ್ಪೊಡಂ ಭಯದ ಲೋಭದ ಮಾತು ಮನುಪ್ರಸೂತರೊಳ್ ಜನಿಯಿಸದು (ಹಂಠಾಮಾ. ೮-೦೯). ೩. ಹಡೆಯುವಿಕೆ ; ಹೆರಿಗೆ : ತುಂಬಿಯಂ ಪ್ರೀತಿಯೊಳಪ್ಪಿ ಗರ್ಭಿಣಿಯದಾಯ್ತು ಸರೋರುಹಮುತ್ಪಲಂ ಪ್ರಸೂತಾತುರೆಯಾಗಿ ಪೆತ್ತುದಳಿಯಂ (ಗಿಂಕ. ೯-೦೦೨). ೪. ಹೂವು ; ಪುಷ್ಪ. [ಸಂ.]

ಪ್ರಸೂತಿ (ನಾ). ೧. ಹಡೆಯುವಿಕೆ; ಹೆರಿಗೆ: ಉತ್ತರಣಿಯ ಬೇರಂ ಯೋನಿಯೊಳಗೆ ಇಕ್ಕೆ ಪ್ರಸೂತಿಯಕ್ಕು (ವಿವೃವಿ. ೬೫). ೨. ಮಗು : "ಸೂನುಃ . . . ಪ್ರಸೂತಿಃ . . . ಅಪತ್ಯಂ—ಈ ೧೨ ಮಗುವು" (ಹಲಾಯು. ೬೨-೩೯೩) ; ಓತು ಮಾಡುವ ಲಿಂಗವಂತರ ಭಾತಿಗಳು ಶಿವಭಕ್ತಿ ಬೀಜಕೆ ಪಾತಿಗಳು ಪರಮಾರ್ಥನಿಜಯೋಗಪ್ರಸೂತಿಗಳು (ಬಸವು. ೩೬-೯೭).

[ಸಂ.]

ಪ್ರಸೂತಿಕರ್ಮ (ನಾ). ಮಗು ಹುಟ್ಟಿದಾಗ ಅದಕ್ಕೆ ಮಾಡುವ ಒಂದು ವಿಧಿ; ಜಾತಕರ್ಮ : ಎಲ್ಲ ಪ್ರಸೂತಿಕರ್ಮವ ತೀರ್ಚಿ ತೊಟ್ಟಿಲ ಸಮುಲ್ಲಾಸದಿಂ ಕಟ್ಟಿ (ಪಪಮೋ. ೨೨-೨೯). [ಸಂ. ಪ್ರಸೂತಿಕರ್ಮನ್]

ಪ್ರಸೂತಿಕಾಗೃಹ (ನಾ). ಹೆರಿಗೆಯ ಮನೆ: ಪ್ರಸೂತಿಕಾಗೃಹನಿಹಿತ ನಿಖಿಳಜನಮುಮಂ . . . ಮನಮೊಸೆದು ಮನ್ನಿಸಿ (ಪುಷ್ಪಪು. ೯-೩೯ ಪ).

[ಸಂ.]

ಪ್ರಸೂತಿಕೆ (ನಾ). ೧. ಮಗುವನ್ನು ಹೆತ್ತಿರುವವಳು : ಬಾಣಂತಿ. ೨. ಹೆರಿಗೆ : ಅಭೂತಪೂರ್ವಮಾದ ಪ್ರಸೂತಿಕಾಕೌತುಕಮನಾತ್ಮೀಯಾಪ್ತಗುಪ್ತವಾಕ್ಯದಿಂ ಕೇಳ್ದು (ಜಗವಿ. ೩-೦ ಪ). [ಸಂ. ಪ್ರಸೂತಿಕಾ]

ಪ್ರಸೂತಿಕ್ರಿಯೆ (ನಾ). = ಪ್ರಸೂತಿಕರ್ಮ : ಪ್ರಸೂತಿಕ್ರಿಯಾಪರಿಣತಾಂತಃಪುರಪರಿಚರಾತಿ ಸಂತಾನನಿರಂರತಮುಂ (ಸಂಧ್ರಪು. ೩-೯೭ ಪ).

[ಸಂ. ಪ್ರಸೂತಿಕ್ರಿಯಾ]

ಪ್ರಸೂತಿಗೃಹ (ನಾ). = ಪ್ರಸೂತಿಕಾ ಗೃಹ : ಮರುದೇವೀವಿಳಸತ್ಪ್ರಸೂತಿಗೃಹಮಂ . . . ಪೊಕ್ಕು (ಅದಿಪು. ೬-೯೯); ಹುಟ್ಟಿದ ಕುಸೂ ಒಮ್ಮೆ ಪ್ರಸೂತಿಗೃಹದಿಂದ ಹೊರಗೆ ಬಂದಿತೆಂದರೆ ಅದಕ್ಕೆ ತಾಯಿ ಮೋರೆ ತಿರುಗಿ ಕಾಣುವ ಹಾಗಿರಲಿಲ್ಲ (ಸಮಜೀ. ೯೬೯). [ಸಂ.]

ಪ್ರಸೂತಿವೈರಾಗ್ಯ (ನಾ). ಹೆರಿಗೆಯ ನೋವನ್ನು ತಾಳಲಾರದೆ, ತಾತ್ಕಾಲಿಕವಾಗಿ ಉಂಟಾಗುವ ವೈರಾಗ್ಯ: ಮಗುವಿನ ಮುದ್ದುಮುಖ ನೋಡಿದ ಕೂಡಲೆ ಅರ್ಧಗಂಟೆಯ ಹಿಂದೆ ಉಂಟಾಗಿದ್ದ ಪ್ರಸೂತಿವೈರಾಗ್ಯ ಎಲ್ಲಿಗೆ ಓಡಿತೋ ! (ರೂಢಿ). [ಸಂ.]

ಪ್ರಸೂತೆ (ನಾ). ೧. ಮಗುವನ್ನು ಹೆತ್ತವಳು : ಬಾಣಂತಿ. ೨. ಹೆಣ್ಣುಕುದುರೆ : "ಅರ್ವತೀ . . . ಪ್ರಸೂತಾ, ವಾಜಿನೀ—ಈ ೫ ಘೋಟಿಗೆ" (ಹಲಾಯು. ೬೨-೨೬೬). [ಸಂ. ಪ್ರಸೂತಾ]

ಪ್ರಸೂನ (ಗು). ೧. ಹುಟ್ಟಿದ ; ಉತ್ಪತ್ತಿಯಾದ. (ನಾ). ೨. ಹುಟ್ಟು; ಉತ್ಪತ್ತಿ. ೩. ಹೂವು ; ಪುಷ್ಪ : ನನೆಯ ಕೊನೆಯ ತಳಿರ ಮುಗುಳವನಲತಾನಿಕುಂಜದಿಂ ಪ್ರಸೂನರಜದ ಪುಂಜದಿಂ (ಪಂಪಭಾ. ೦-೩೭ ರಗಳೆ) ; ಅತುಳಸ್ವಚ್ಛಾಂಬುವಿಂ ಮಜ್ಜನಕೆಱೆದು ನವೀನಪ್ರಸೂನಪ್ರತಾನದ್ಯುತಿ ಸುತ್ತಲ್ (ರಕ್ಷಾಕ. ೬೯) ; ಹಗಲಿರುಳು ನಿನ್ನೊಡನೆ ನಲಿದಾಡಿದೀ-ದೀನ ಕಾನನಪ್ರಸೂನಮಂ, ಹೇ ಕಾಂತ, ಮರೆಯದಿರು (ಪತ್ರಾಂಗ. ೯೬-೦೨೩೯). ೪. ಮೊಗ್ಗು. ೫. ಹಣ್ಣು ; ಫಲ. [ಸಂ.]

ಪ್ರಸೂನಕ (ನಾ). ಹೂವು ; ಪುಷ್ಪ : "ಪುಷ್ಪಂ . . . ಪ್ರಸೂನಕಂ, ಸುಮನಸ್—ಈ ೫ ಪೂವಿನ ಪೆಸರ್" (ಹಲಾಯು. ೩೦-೩೨). [ಸಂ.]

ಪ್ರಸೂನಾಯುಧ (ನಾ). ೧. (ಮನ್ಮಥನ) ಹೂವಿನ ಬಾಣ : ಉಪೇಶ್ವರನೊಳ್ ನೆರೆವಟ್ಕಱಿಂ ಪ್ರಸೂನಾಯುಧತಾಪತಪ್ತೆ . . . ನಿಜಾಲಯದಿಂ ಪೊಱಮಟ್ಟಳ್ (ಪಂಚತಂ. ೭೯-೬). ೨. ಹೂವಿನ ಬಾಣವನ್ನುಳ್ಳವನು ; ಕಾಮ. [ಸಂ.]

ಪ್ರಸೂನಾಸ್ತ್ರ (ನಾ). ೧. ಹೂವಿನ ಬಾಣ ; ಕುಸುಮಾಸ್ತ್ರ : ಮೀನಾಂಕನು ಬಲುಮಾನದಿ ತನ್ನ ಪ್ರಸೂನಾಸ್ತ್ರ [ಪಾಕಾಂ. ಯುಧ] ಗಳನು ತೊಡರ್ಚಿ ಮಾನನಿಧಿಯ ಪರಿವಾರವನಿಸಲು ಸುಮ್ಮಾನವಳಿದರತಿ ರಥರು (ಕ್ರಿಪುಸಾಂ. ೨೦-೨೩೦). ೨. = ಪ್ರಸೂನಾಯುಧ ೨. [ಸಂ.]

ಪ್ರಸೃತ (ಗು). ೧. ಮುನ್ನಡೆದ ; ಗಮಿಸಿದ. ೨. ಹರಡಿದ ; ವಿಸ್ತರಿಸಿದ. (ನಾ). ೩. ಒಳ್ಳೆಯ ಮಾತನಾಡುವವನು ; ವಿನಯಶಾಲಿ: "ಪ್ರಸಕ್ತಃ, ಪ್ರಸೃತಃ—ಈ ೨ ಗೆಲೆ ನುಡಿವವಂ" (ಹಲಾಯು. ೬೦೯-೨೦೯). ೪. ಉತ್ಸಾಹವುಳ್ಳವನು : "ಪ್ರತೂರ್ಣಃ, ತ್ವರಿತಃ, ತೂರ್ಣಃ, ಉತ್ಸುಕಃ, ಪ್ರಸೃತಃ—ಈ ೫ ಚೆಚ್ಚರಿಗಂ" (ಹಲಾಯು. ೫೬-೦೯೬). ೫. ಬೊಗಸೆ ; ಅರ್ಧಾಂಜಲಿ. ೬. [ಗಣಿತ] ಒಂದು ಅಳತೆ ; ಎರಡು ಪಲಗಳ ಪ್ರಮಾಣ : ಅಳತೆ ವಿವರಾ ಭತ್ತ ನಾಲ್ಕಕೆ ವಂದಂ ಕಾಕಣ್ಯಮೆನಿಪುದದು ಮತ್ತೆ ಪಂಚಕಕೊಂದು ಪಣ ಮಕ್ಕುಮಾ ಪಣ ಮೂವತ್ತೆನಿಸಲದು ನಿಷ್ಕ ನಿಷ್ಕತ್ರಯಕ್ಕೆ ಕರುಷ ದ್ವಾದಶಕ್ಕೆ ಮಾಗಧಮೆನೆ ಬಿತ್ತರಿಸದೆರಡ ಕೂಡಲು ಪ್ರಸೃತಮೆನಿಪುದದು (ಭಾಸ್ಕರ. ೬೯-೬). ೭. [ನಾಟ್ಯ] ನಿಃಶ್ವಾಸದ ಭೇದಗಳಲ್ಲಿ ಒಂದು ; ೫. "ಮಲಗಿರುವಾಗ ಶಬ್ದ ಮಾಡುತ್ತ ಬಾಯಿಂದ ಉಸಿರು ಬಿಡುವುದು" (ಲಾಸ್ಕರಂ. ಗದ್ಯಾನುವಾದ. ೨೭೭) : ಸ್ವಸ್ಥ, ಚಲ . . . ಪ್ರಸೃತ—ಈ ಒಂಬತ್ತೂ ಕೋಹಳನ ಮತದಂತೆ ಗಾಳಿಯ ಭೇದಂಗಳ್ (ಲಾಸ್ಕರಂ. ೩-೭೮ ಪ). ೮. ರೆಪ್ಪೆಯ ಒಂಬತ್ತು ವಿಧವಾದ ಚಲನೆಗಳಲ್ಲಿ ಒಂದು; ೫ "ರೆಪ್ಪೆಗಳನ್ನು ವಿಶಾಲವಾಗಿ ತೆರೆಯುವುದು" (ಲಾಸ್ಕರಂ. ಗದ್ಯಾನುವಾದ. ೨೭೩) : ಪ್ರಸೃತ, ಕುಂಚಿತ . . . ಸಮ—ಈ ಒಂಬತ್ತು ಎವೆಯ ಭೇದಂಗಳ್ (ಲಾಸ್ಕರಂ. ೩-೯೯ ಪ). ೯. "ಕಾಲ್ಬೆರಳುಗಳನ್ನು ಚಲಿಸದೆ ನೀಡುವುದು" (ಲಾಸ್ಕರಂ. ಗದ್ಯಾನುವಾದ. ೨೮೩) : ಅಧಃಕ್ಷಿಪ್ತ . . . ಪ್ರಸೃತ, ಸಂಲಗ್ನ—ಈ ಐದು ಚರಣಾಂಗುಲಿಯ ಭೇದಂಗಳ್ (ಲಾಸ್ಕರಂ. ೩-೦೦೫ ಪ). ೧೦. ಕೈಬೆರಳುಗಳ ಏಳು ವಿಧವಾದ ಚಲನೆಗಳಲ್ಲಿ ಒಂದು: ಸಂಯುತ . . . ಪ್ರಸೃತ—ಈ ಏಳು ಹಸ್ತಾಂಗುಲಿಯ ಭೇದಂಗಳ್ (ಲಾಸ್ಕರಂ. ೩-೧೧೩ ಪ). [ಸಂ.]

ಪ್ರಸೃತಕರಣ (ನಾ). [ಕಾಮಶಾ] ರತಿಬಂಧಗಳಲ್ಲಿ ಒಂದು : ಸಲೆ ಮಗುಳ್ದೊಱಗಿದ ಲಲನೆಯಿನೆಯನ ಪೆಗಲೊಳಗೆ ಕಾಲಿಟ್ಟಿರ್ತೊಡೆಯ ಅಲರ್ವಸೆಯೊಳಗಿಟ್ಟೊಲವಿಂ ರತಿಗಗ್ಗಲಿಸಲದೇ ಪ್ರಸೃ[ಪಾಠಾಂ. ಸ್ತ. ಸ್ತು]ತಕರಣಂ (ಜನವ. ೯-೨೪). [ಸಂ.]

ಪ್ರಸೃತಿ (ನಾ). ೧. ಮುನ್ನಡೆ : ಪ್ರಗತಿ ; ಬೆಳವಣಿಗೆ. ೨. ಬೊಗಸೆ ; ಅರ್ಧಾಂಜಲಿ : "ಅಂಗುಳಿ ಮಡಿದ ಕುಡಿತೆಯಂ ಪ್ರಸೃತಿಯೆಂಬುದು" (ಹಲಾಯು. ೫೮-೩೬೩). ೩. [ಗಣಿತ] ಒಂದು ಅಳತೆ ; ಎರಡು ಪಲಗಳ ಪ್ರಮಾಣ : ಶಿವನ ನೈವೇದ್ಯದಳತೆಯ ಗಣನೆಗಳ ಪೇಳುವೆವು ನೆಲ್ಗಳಿಂ ನೂಱಯಿರ್ಪತ್ತ ಐದೆಂಬುದವನಿಯೊಳು ಶುಕ್ತಿ . . . ಸಾವಿರ ದೆಂಟುನೂರ್ನೆಲ್ ಪ್ರಸೃತಿಯೆನಿಸುವವು (ವೀಶೈಪು. ೬-೦೦-೬೦). [ಸಂ.]

ಪ್ರಸೃತೆ (ನಾ). ಮೊಳಕಾಲು ; ಜಂಘೆ : "ಪ್ರಸೃತಾ, ಜಂಘಾ—ಈ ೨ ಕಿಱುದೊಡೆ" (ಹಲಾಯು. ೬೫-೩೬೦). [ಸಂ. ಪ್ರಸೃತಾ]

ಪ್ರಸೇಕ (ನಾ). ಮೂಗು ಅಥವಾ ಬಾಯಿಯಿಂದ ಸುರಿಯುವ ನೀರಿನ ಸ್ರಾವ : ವಮನಯೋಗ್ಯರು — ಮಂದಾಗ್ನಿಯವರು . . . ಪ್ರಸೇಕ ರೋಗದವರು, ಶ್ವಾಸರೋಗದವರು (ಸಕವೈ. ೨೫). [ಸಂ.]

ಪ್ರಸೇವ (ನಾ). ೧. ಬಿದಿರಿನಿಂದ ಹೆಣೆದ ತಟ್ಟೆ ಅಥವಾ ಮಂಕರಿ : "ಸ್ಯೂತಃ, ಪ್ರಸೇವಃ . . . ೨ ಬಿದುರುತಟ್ಟೆಗಳು, ಮಕ್ಕರಿಗಳಿಗೂ ಹೆಸರು" (ನಿದ್ಧಾಂತಿ. ೩೮೨). ೨. ವೀಣೆಯ ಬುರುಡೆ. [ಸಂ.]

ಪ್ರಸೇವಕ (ನಾ). ವೀಣೆಯ ಬುರುಡೆ : "ಪ್ರಸೇವಕಃ . . . ವೀಣೆಯ ಹೆರಳಿನ ಹೆಸರುಗಳು" (ನಿದ್ಧಾಂತಿ. ೫೯). [ಸಂ.]

ಪ್ರಸ್ಖಲಿತ (ಗು). ಎಡವಿದ; ಮುಗ್ಗುರಿಸಿದ : ವಿದ್ಯುತ್ಕೇಶವಿದ್ಯಾಧರಂ ತ್ವರಿತಪ್ರಸ್ಖಲಿತಪ್ರಯಾಣರಭಸಂ ಶುದ್ಧಾಂತಕಾಂತಾಜನಂ ಬೆರಸುತ್ಕಂಪಿತ ನೋಡಿ ದಿವ್ಯಮುನಿಪಾದಾಂಭೋಜಮಂ ಪೊರ್ದಿದಂ (ಪಂಠಾಮಾ. ೦೦-೦೦೯). [ಸಂ.]

ಪ್ರಸ್ತ (ನಾ). ೧. ಅವಕಾಶ ; ಸಂದರ್ಭ ; ಸಮಯ : ಎಱಗುವುದಕೆ ಪ್ರಸ್ತವೇನು ತನ್ನಯ ಹಂಗು ಕಿಱಿದುಂಟೆ ನನಗಯ್ಯನಂದು ಪಿರಿಚಿ ಕೊಟ್ಟುಂಬಳಿಯಲ್ಲಿ ನಾನಿಹೆನು (ಭರತ. ೪೮-೩೬) ; ಪ್ರಸ್ತಕ್ಕೆ ನುಡಿದಿಹರೆ ಬೆಸ್ತಂತೆ ಇರಬೇಕು ಪ್ರಸ್ತವ ತಪ್ಪಿ ನುಡಿದಿಹರೆ ನಡು ಬೆನ್ನಿನಸ್ತಿ ಮುಱಿ ದಂತೆ (ಸರ್ವಜ್ಞ. ೦೩೩೬). ೨. ಶುಭಕಾರ್ಯ ; ಮಂಗಳಕಾರ್ಯ : ನೆರೆಹೊರೆಮನೆಯಲ್ಲಿ ಪ್ರಸ್ತವಾಗಲು ಆಗ ಕರೆಯದೆ ಪೋಗಿನ್ನು ಹಾಳು ಹರಟೆ ಬಱಗೆಟ್ಟು ನೂಱಾಱು ಸುದ್ದಿ ಹೇಳುತ ಅವನ ಹಿರಿಯ ಮಗನಂತೆ ಉದರವ ಪೊರೆದೆ ಮನವೆ (ಪುರಂದ. ೪-೫೨-೪); ದೀನನಾದೆನಗೊಂದು ಕವಡೆಯು ಪಾಣಿಯೊಳಗಿಲ್ಲವರ್ಗೆ ಸರಿಯಾಗಾನು ಪ್ರಸ್ತವ ಮಾಡಬಲ್ಲೆನೆ (ಅರ್ಜಾವಿ. ೦೯-೦೦). ೩. ಗರ್ಭಾಧಾನದ ಶುಭಕಾರ್ಯ ; ನಿಷೇಕ ; ಒಸಗೆ : ಲಗ್ನ ಮುಗಿದ ಮೇಲೆ ಪ್ರಸ್ತವೂ ರಾಘಪ್ಪನ ಮನೆಯಲ್ಲಿಯೆ ಆಗಬೇಕಾಗಿತ್ತು (ಗಂಪಾಯಿ. ೦೩೪).

ಪ್ರಸ್ತದ ಊಟ = ಶುಭಸಮಾರಂಭದ ಔತಣ,—ಭೋಜನ : ಪ್ರಸ್ತದ ಊಟದಲ್ಲಿ ಹೆಂಗಳೆಯರು ಬಡಿಸುವಾಗ (ಸಮಜೀ. ೯ ಬೀಠಕೆ) ; ಪ್ರಸ್ತದ ಊಟಕ್ಕೆ ಹೋಗಿ ಸ್ವಸ್ಥವಿಲ್ಲದೆ ಬಿದ್ದ (ಗಾದೆ).

[< ಸಂ.ಪ್ರಸ್ತುತ./ಮರಾ. ಪ್ರಸ್ತ ; ತುಳು. ಪ್ರಸ್ತ]

ಪ್ರಸ್ತರ (ನಾ). ೧. ಹೂವು, ಎಲೆ ಮೊದಲಾದುವುಗಳಿಂದ ನಿರ್ಮಿಸಿದ ಹಾಸುಗೆ. ೨. ಹಾಸುಗೆ ; ಶಯ್ಯೆ. ೩. ಸಮತಲವಾದ ಪ್ರದೇಶ; ಬಯಲು. ೪. ಕಲ್ಲು ; ಶಿಲೆ : "ಶಿಲಾ . . . ಪ್ರಸ್ತರಃ, ದೃಷತ್ —ಈ ೭ ಕಲ್ಲ ಪೆಸರ್" (ಹಲಾಯು. ೨೬-೦೪); ಸುರೆಯಿಂ ಸೊರ್ಕಂ ಸುರೋರ್ವೀರುಹಕಿಸಲಯದಿಂ ರಾಗಮಂ ಕೌಸ್ತುಭಪ್ರಸ್ತರದಿಂ ನೈಷ್ಠುರ್ಯಮಂ . . . ತಾಳ್ದಿ (ಕಾದಂಪೂ. ೫೪೬); ಅಹಲ್ಯಾದೇವಿ ಶಿಲೆ ಯಾಗಿ ಧರಿಸಿದಳು ನಿಜತನುವನಾ ಪ್ರಸ್ತರವಿದೀಗಾ ಸತಿಗೆನುತ ಹತ್ತಿರಕೆ ಬರೆ ರಾಮಾಂಘ್ರಿರಜವಾವರಿಸಿತಾ ಶಿಲೆಯ (ತೂರಶಾ. ೦-೦೨-೦೫). [ಸಂ].

ಪ್ರಸ್ತರಣ (ನಾ). ೧. ಹರಡುವುದು; ಹಾಸುವುದು. ೨. ಹಾಸುಗೆ; ಶಯ್ಯೆ : ತಮಾಳದಳಪ್ರಸ್ತರಣಂ ಲತಾಂಗಿ ಮಳಯಕ್ರೀಡಾಚಳಂ ನೀನುಮಿಾ ಮದನಾಕಾರನುಮಲ್ಲಿ ನಿಚ್ಚಲುಮಿರಿಂ ಕೇಳೀವಿನೋದಂಗಳಿಂ (ಶಾಂತಿಪು. ೫-೦೪೨). ೩. ಪೀಠ ; ಆಸನ. [ಸಂ.]

ಪ್ರಸ್ತರಭವನ (ನಾ). ಕಲ್ಲಿನಿಂದ ಕಟ್ಟಿದ ಮನೆ ; ಶಿಲಾಭವನ : ಹೇಯೋಪಾದೇಯತತ್ವಮನಱಿಪಿ ಮತ್ತಮಿವರ್ಕಾಧಾರಭೂತಜಗತ್ತ್ರ ಯಾಂತಸ್ಥಿತೈಕೋನಪಂಚಾಶನ್ನರಕ ಪ್ರಸ್ತರ [ಪಾಠಾಂ.ಪ್ರಸಾರ] ಭವನವ್ಯಂತ ರಾವಾಸಾಸಂಖ್ಯಾತದ್ವೀಪಾಬ್ಧಿತ್ರಿಷಷ್ಠಿಸ್ವರ್ಗಪಟಲಂಗಳುಮಂ ವಿಸ್ತರಿಸಿ (ಆದಿಪು. ೦೦-೬೩೮). [ಸಂ.]

ಪ್ರಸ್ತರಿಸು (ಕ್ರಿ). ೧. ಹರಡು ; ವಿಸ್ತರಿಸು. ೨. [ಛಂದ] ಲಘು ಮತ್ತು ಗುರುಗಳನ್ನು ಗುರುತಿಸು ; ಪ್ರಸ್ತಾರ ಹಾಕು : ಎರಡುಂ ಮೂಱುಂ ನಾಲ್ಕುಂ ಗುರುವಿಂ ಪ್ರಸ್ತರಿಸಲಂಬುನಿಧಿಗಜ[ಪಾಠಾಂ. ಪ್ರಸ್ತಾರಮಾಗಿಯುಂ ಜಗ] ಧರಣೀಶ್ವರಗಣಮೊಗೆಗುಂ (ಛಂದೋಂಬು. ೫-೨೪೦); ಪಾದ ಈಗಿರುವಂತೆಯೇ ಪ್ರಸ್ತರಿಸಿದರೆ ಧರೆ, ಗೆ, ಲ್ಲಂ ಎಂಬ ಕೊನೆಯ ಗಣವೂ ವಿಷ್ಣುವೇ ಆಗುತ್ತದೆ (ಸಮಾಲೋ. ೨೨೯).

[ಪ್ರಸ್ತರಣ + —ಇಸ್ಸು$_3$]

ಪ್ರಸ್ತಾಪ (ನಾ). ೧. ಯಾವುದಾದರೊಂದು ವಿಷಯದ ಅಥವಾ ಮಾತಿನ ಪ್ರಾರಂಭ : "ಪ್ರಸ್ತಾಪ—ಪ್ರಸ್ತಾವ= ಮಾತೆತ್ತುವಿಕೆ" (ತದ್ಭಕೋ. ೨೭); ಮಗುವಿನ ವಿದ್ಯಾಭ್ಯಾಸ ಪೂರ್ಣವಾಗುವವರೆಗೂ ದಯವಿಟ್ಟು ಈ ಪ್ರಸ್ತಾಪ ಬೇಡ (ಶಾಂತಶಾ. ೧೦). ೨. ವಿಷಯ; ಸಂಗತಿ : ಅದೇ ಪ್ರಸ್ತಾಪ ಹೇಳಬೇಕು ಎಂದು ಇಲ್ಲಿಗೆ ಬಂದೆ (ತ್ಯಾಗಮ. ೯೪). ೩. ಸಂದರ್ಭ; ಅವಕಾಶ ; ಸಮಯ : ನಾಟಕದ ಒಂದು ಪಾತ್ರವಾದ ಶ್ಯಾಮಲಾ ಕುಮಾರಿಯ ವಿವಾಹದ ಪ್ರಸ್ತಾಪ (ವೀರಯೋ. xii, ಅನುವಾದಕನ ಬಿನ್ನಪ) ; ಪ್ರಸ್ತಾಪಕ್ಕೆ ಬಾರದ ಗಾದೆ ಪ್ರಸ್ತಕ್ಕೆ ಆಗದ ಖಜ್ಜಾಯ (ಗಾದೆ).

<ಸಂ. ಪ್ರಸ್ತಾವ]

ಪ್ರಸ್ತಾಪಿಸು (ಕ್ರಿ). ಮಾತಿನಲ್ಲಿ ವಿಚಾರವನ್ನು ಪ್ರಾರಂಭಿಸು ; ಮಾತು ಎತ್ತು : ಬೊಮ್ಮರಸಪಂಡಿತರ ಯೋಗ್ಯತೆಯ ವಿಚಾರವನ್ನು ಪ್ರಸ್ತಾಪಿಸಿದರು (ಸಂಗಾಳ್ಯ. ೬೦); ಶಾಲೆಯು ಆರಂಭವಾಗುವ ತನಕ ಗೋವಿಂದಮಾಸ್ತರರು ಮೇರಿಯೊಡನೆ ವಿಷಯ ಪ್ರಸ್ತಾಪಿಸಲಿಲ್ಲ (ಕಾವೇರಿ. ೯೪); ಇಲ್ಲದ ಧೈರ್ಯ ತಂದುಕೊಂಡು ಶ್ರೀಧರ ಮಾಲತಿಗೆ ಅಪ್ರಿಯವಾದ ವಿಚಾರವನ್ನೇ ಮತ್ತೆ ಪ್ರಸ್ತಾಪಿಸಿದ್ದ (ಶಾತ್ಸಲ್ಯ. ೦೭೯).

[ಪ್ರಸ್ತಾಪ + —ಇಸ್ಸು$_3$]

ಪ್ರಸ್ತಾರ (ನಾ). ೧. ಹರಡುವುದು ; ವ್ಯಾಪಿಸುವುದು. ೨. ಹಾಸುಗೆ; ಶಯ್ಯೆ. ೩. ಸಮತಲವಾದ ಭೂಮಿ,—ಪ್ರದೇಶ ; ಬಯಲು. ೪. (ದಟ್ಟವಾದ) ಕಾಡು ; (ಗಹನವಾದ) ಅರಣ್ಯ. ೫. [ಛಂದ] ವೃತ್ತದ ಪ್ರತಿಸಾಲಿನಲ್ಲಿಯೂ ಗುರುಲಘುಗಳನ್ನು ಗುರುತಿಸಿ ಬಳಿಕ ಅಕ್ಷರ ಗಣಗಳನ್ನು ಕಂಡುಹಿಡಿದು ವೃತ್ತವು ಯಾವ ಛಂದಸ್ಸಿಗೆ ಸೇರಿದುದು ಎಂಬುದನ್ನು ಕಂಡುಹಿಡಿಯುವ ಕ್ರಮ : ಮಿಗಿಲಾಗಲಧ್ವ ಯೋಗಂ ನೆಗೞ್ದಪದೇಶದೊಳಪರಿಮಿತಂ ಪ್ರಸ್ತಾರಂ (ಛಂದೋಂಬು. ೬-೨೬೬). ೬. ಒಂದು ಛಂದಸ್ಸಿನಲ್ಲಿ ಎಷ್ಟು ವೃತ್ತಗಳಾಗಬಹುದು ಎಂಬುದನ್ನು ಕಂಡುಹಿಡಿಯುವ ಕ್ರಮ : ಉಕ್ತೆ ಮೊದಲಾದ ಆಯಾ ಛಂದಸ್ಸಿನ ಅಕ್ಷರಗಳ ಸಂಖ್ಯೆಯಷ್ಟು ಗುರುಗಳನ್ನು ಮೊದಲು ಸಾಲಾಗಿ ಬರೆದು . . . ಮುಂದುಮುಂದಕ್ಕೆ ಇಪ್ಪತ್ತಾರರವರೆಗೂ ಆಯಾಸ್ಥಾನ ದಲ್ಲಿ ಗುರು ಲಘುಗಳು ಅದರ ಹಿಂದಿನ ಸ್ಥಾನಕ್ಕಿಂತ ದ್ವಿಗುಣವಾಗಿರು

ವಂತೆ ಕಡೆಗೆ ಎಲ್ಲವೂ ಲಘುಗಳಾಗುವವರೆಗೆ ಗುರು ಲಘುಗಳನ್ನು ಸಾಲು ಸಾಲಾಗಿ ಬರೆಯುವುದು. ಇದಕ್ಕೆ ಪ್ರಸ್ತಾರವೆಂದು ಹೆಸರು (ಕೃಪಿಡಿ. ೯೦). ೭. [ಸಂಗೀತ] ತಾಳಾಂಗದ ವಿಸ್ತರಣೆ : ತಾಳಕ್ಕೆ ಹತ್ತು ಪ್ರಾಣಗಳುಂಟು ; ಕ್ರವಾವಾಗಿ ಅವು—೧. ಕಾಲ . . . ೧೦. ಪ್ರಸ್ತಾರ (ಸಂಗೀತಂ. ೭೨); ಪ್ರಸ್ತಾರ : ಪ್ರಸ್ತರಿಸುವುದು ಎಂದರೆ ವಿಶದವಾಗಿ ಕಾಣುವಂತೆ ಹರಡುವುದು ಅಥವಾ ವಿಸ್ತರಿಸುವುದು. ಒಂದು ತಾಳಾಂಗವನ್ನು ವಿಸ್ತರಿಸುವುದು ಎಂದರೆ ಅದರಲ್ಲಿ ಬರುವ ಉಪಾಂಗಗಳೂ ಗೋಚರವಾಗುವಂತೆ ವಿಂಗಡಿಸುವುದು (ಸಂಗೀತಂ. ೫೬).

ಪ್ರಸ್ತಾರ ಹಾಕು = ಲಘು, ಗುರುಗಳನ್ನು ಗುರುತಿಸು : ಸಾಂಗತ್ಯದ ಲಕ್ಷಣಗಳನ್ನು ಹೀಗೆ ಪ್ರಸ್ತಾರ ಹಾಕಿ ಇದು ಸಾಂಗತ್ಯವೆನ್ನುವುದು . . . ಅಸ್ಥಿಪಂಜರವನ್ನು ತೋರಿಸಿ ಇವನು ಮನುಷ್ಯ ಎಂದಂತೆ ಆಗುತ್ತದೆ (ಇಂಜಾಪ. V ೫೦೪). [ಸಂ.]

ಪ್ರಸ್ತಾರಿಸು (ಕ್ರಿ). [ಛಂದ] ಲಘು ಗುರುಗಳನ್ನು ಗುರುತಿಸು : ಗುರುವೊಂದಂ ಲಘುವೊಂದನೆಂಟುವರೆಗಂ ಪ್ರಸ್ತಾರಿಸು (ಛಂದೋಂಬು. ೦-೪೦). [ಪ್ರಸ್ತಾರ + — ಇಸ್ತು]

ಪ್ರಸ್ತಾವ (ನಾ). ೧. ಉಪಕ್ರಮ ; ಆರಂಭ ; ಪ್ರಾರಂಭ. ೨. ಪ್ರಸಂಗ; ಸಂದರ್ಭ : ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮಱ ದೊಱಗಿದಾ ಪ್ರಸ್ತಾವದೊಳ್ (ಸಂಪಭಾ. ೦-೦೦೯ ಪ) ; ಸಂನ್ಯಸನದಿಂ ಪರತ್ರೆಯಂ ಸಾಧಿಸುವೆನೆಂದು ಪರಮಾಗಮಭಾವನೆಯಿಂದಿರ್ಪನ್ನೆಗಮಾ ಪ್ರಸ್ತಾವದೊಳ್ (ಸಂರಾಮಾ. ೦೫-೭೯ ಪ) ; ಹರ್ಷಚಿತ್ತರಾದಾ ತವಸಿಗಳುಂ ವರ್ಣಾಶ್ರಮಧರ್ಮಂಗಳಂ ರಾಘವಂಗೆ ನಿರವಿಸುತುಮಿರ್ದರ್ ಆ ಪ್ರಸ್ತಾವದೊಳ್ (ರಾಮಾತ್ಯ. ೦೬-೦೯). [ಸಂ.]

ಪ್ರಸ್ತಾವನೆ (ನಾ). ೧. ಪ್ರಾರಂಭ ; ಉಪಕ್ರಮ. ೨. ವಿಷಯ ; ಸಮಾಚಾರ : ದೇವಾರಣ್ಯಂ ದೇವರ ದೇವನ ಮನಕಿಂಬನೀಯೆ ತನ್ನಂದನದೊಳ್ ದೇವರ್ ಸಿವಿಗೆಯನಾ ಪ್ರಸ್ತಾವನೆಯಂ ಕಟಿಪದಿಟಿಪೆ ಪುಳಿನಸ್ಥಳದೊಳ್ (ಶಾಂತಿಪು. ೬-೦೨೨). ೩. ವಿಚಾರಸೂಚನೆ ; ವಿಷಯ ಮಂಡನೆ ; ಪೀಠಿಕೆ : ಅಂಥ ದೋಷಾರೋಪವನ್ನು ಮಂಡಿಸುವ ಪ್ರಸ್ತಾವನೆಯು ಲಿಖಿತಮೂಲಕವಾದ ಒಂದು ಸಂಕಲ್ಪದಲ್ಲಿ ಉಲ್ಲಿಖಿತವಾಗಿ ನಮೂದಾಗಿದ್ದು (ಶಾರಾಪ. ೩೦) ; ಮುಂದಿನ ಮಾತಿನ ಪ್ರಸ್ತಾವನೆಯನ್ನು ಮಾಡುತ್ತ . . . ಕೇಳಿದ (ಅಕೋಕ. ೯೦). ೪. ಪುಸ್ತಕದ ಪೀಠಿಕೆ ; ಉಪೋದ್ಘಾತ : ವಿಷಯ ನಿರ್ಣಯಿಸುವಾಗ ಗ್ರಂಥದ ಶಿರೋನಾಮ, ಮುನ್ನುಡಿ, ಪ್ರಸ್ತಾವನೆ, ಪರಿವಿಡಿ . . . ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ (ಗ್ರಂಥಾಂ. ೦೬). ೫. [ಕಾವ್ಯಮೀ] ನಾಟಕ (ರೂಪಕ)ಗಳ ಪ್ರಾರಂಭದಲ್ಲಿ ನಟಿ, ವಿದೂಷಕ ಅಥವಾ ಪಾರಿಪಾರ್ಶ್ವಕನಂ ಸೂತ್ರಧಾರನೊಡನೆ ಕಲೆತು ಮಾತನಾಡುವುದು; ನಟಿ, ಸೂತ್ರಧಾರರು ತಮ್ಮ ಸ್ವಂತವ್ಯವಹಾರದಿಂದ ನಾಟಕದ ಕಥಾವಸ್ತುವನ್ನು ಸೂಚಿಸಿ ಮುಂದಿನ ಪಾತ್ರ ಪ್ರವೇಶವನ್ನು ಸೂಚಿಸುವುದು ; ಆಮುಖ : ಸೂತ್ರಧಾರನು ಈ ಮಂಗಳಶ್ಲೋಕವನ್ನು ಹೇಳಿ . . . ಹೊರಟು ಹೋಗುವನು. ಅನಂತರ ಕಥೆಯು ಆರಂಭವಾಗುವುದು. ಇಲ್ಲಿಯವರೆಗೆ 'ಆಮುಖ' ಅಥವಾ 'ಪ್ರಸ್ತಾವನೆ' ಎಂದು ಹೆಸರು (ಕೃಪಿಡಿ. ೨೦೨). [ಸಂ. ಪ್ರಸ್ತಾವನಾ]

ಪ್ರಸ್ತಾವಿತ (ಗು). ೧. ಪ್ರಾರಂಭವಾದ ; ತೊಡಗಿದ. ೨. ಹೊರಸೂಸಿದ ; ಸಂರಿದ : ವ್ಯೋಮಮುಮಂ ತೀವಿದುದು ತತ್ಕರಪ್ರಸ್ತಾವಿತ ಮಂದಾರಪಾರಿಜಾತಾಸಾರಂ (ಸಂದ್ರಪು. ೬-೯೦). [ಸಂ.]

ಪ್ರಸ್ತಾವಿಸು (ಕ್ರಿ). = ಪ್ರಸ್ತಾಪಿಸು : ಲೌಕಿಕದೃಷ್ಟಿಗೆ ಕೂಡ ಈ ಭಾಷೆಯಲ್ಲಿ ಗೋಚರವಾಗುವ ಇನ್ನೊಂದು ಅಮರತ್ವವನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ಪ್ರಸ್ತಾವಿಸಬೇಕೆನ್ನಿಸುತ್ತದೆ (ಸಮಾಲೋ. ೧೨೯).

[ಪ್ರಸ್ತಾವ + — ಇಸ್ತು]

ಪ್ರಸ್ತುತ (ಗು). ೧. ಹೊಗಳಿದ ; ಪ್ರಶಂಸಿಸಿದ. ೨. ಸಿದ್ಧವಾದ ; ತಯಾರಾದ : ಸನ್ಮಾರ್ಗನಾಟಕಾರಂಭಪ್ರಸ್ತುತಪವಿತ್ರಸೂತ್ರಧಾರನೆ ಮುಂದೆ ನಿಂದು ಪುಷ್ಪಾಂಜಳಿಯಂ ಕೆದಱ (ಶಾಂತಿಪು. ೦೦-೬೦ ಪ). ೩. ಸೇರಿದ ; ಸಮೀಪಿಸಿದ. ೪. ತತ್ಕಾಲದ ; ಸದ್ಯದ ; ಈಗಿನ : ಪ್ರಸ್ತುತ ಪ್ರಸಂಗದಲ್ಲಿ ಅವನ ವಾಗ್‌ವೈಖರಿಯನ್ನು ಕತ್ತರಿಸಿ ಒಗೆಯಲು ನನ್ನ ಬತ್ತಳಿಕೆಯಲ್ಲಿ ಅಸ್ತ್ರವಿಲ್ಲ (ದೇಕಸ್ಯ. ೩೪) ; ಪ್ರಶ್ನೆಗಳಿಗೆ . . . ಉತ್ತರವೀಯುತ್ತವೆಯೇ ಎಂಬುದನ್ನು ತಿಳಿಯುವ ಕುತೂಹಲವೇ ಪ್ರಸ್ತುತ ಅಧ್ಯಯನದ ಉದ್ದೇಶ (ಶಾಸಗಿ. ೪ ಮುನ್ನುಡಿ). ೫. ಸಂದರ್ಭೋಚಿತವಾದ : ಭೃಂಗಿನಾಟ್ಯಸ್ವನಂ ಪ್ರಸ್ತುತನಾನಾವಾದ್ಯಘೋಷಂಬೆರಸಿ ಬಳೆದುದೆತ್ತೆತ್ತಲುಂ ಪರ್ಬಿತಾಗಳ್ (ರಾಜಶೇ. ೦೯-೦೬೯). (ನಾ). ೬. ಸಂದರ್ಭ ; ಪರಿಸ್ಥಿತಿ : ಅವಳುಕ್ತಿವಕ್ರಿಮಕ್ಕೆ ಸೂಕ್ತಿರತ್ನಾಕರಂ ಮನದೊಳ್ ಮೆಚ್ಚಿ ಮತ್ತೊರ್ವನಾ ಪ್ರಸ್ತುತಕ್ಕಿಂತೆಂದಂ (ಸಂದ್ರಪು. ೬-೭೯ ಪ). ೭. ಸಂದರ್ಭಕ್ಕೆ ತಕ್ಕುದು ; ಸಂದರ್ಭೋಚಿತವಾದುದು : ಪ್ರಸ್ತುತಮಲ್ಲದುದನೆ ಮಿಗೆ ವಿಸ್ತಾರಿಸಿ ನೆಗಟ ಪೇಟ್ಟೊಡಕ್ಕುಂ ಮತ್ತಪ್ರಸ್ತುತಮೆಂಬುದಳ್ಳೃಕತಿ (ಕವಿರಾ. ೩-೦೩೬). ೮. ಅಗತ್ಯ ; ಆವಶ್ಯಕತೆ : ಪ್ರಸ್ತುತವೆಂಬಾಗ ಹೇರಳದ ಹರುಗೋಲವದಗಿಸಿ ಕೊಟು (ಎಕ. VI, ಕಿವಮೊ. ೩-೦೦; 1671) ; ಆವ ಕಡೆಯಿಂದ ಬಿಜೆಮಾಡಿದಿರಿ ನಿಮ್ಮಿಂದಲಾದ ಪ್ರಸ್ತುತಮಿಹುದು (ಸವಮೋ. ೫-೭) ; ವಿಧಿನಿಷೇಧಗಳನ್ನು ಪ್ರಭುಸಮ್ಮಿತವಾಗಿ ನಿರೂಪಿಸುವ ವೇದಗಳಲ್ಲಿ ಶ್ರದ್ಧೆಯಿಟ್ಟು ಪ್ರವರ್ತಿಸುವುದೇ ಪ್ರಸ್ತುತವಾಗಿತ್ತು (ಭಾರದ. ೦೨೦). ೯. [ಸಂಗೀತ] ಶ್ರುತಿಗಮಕಗಳಲ್ಲಿ ಒಂದು ಬಗೆ : ಸ್ಫುರಿತ . . . ಪ್ರಸ್ತುತ. . . ಕೋಮಲವೆಂಬ ಯಿಪ್ಪತ್ತೆರಡೇ ಶ್ರುತಿಗಮಕಂಗಳು (ವಿವೇಕ. ೨೩೨). [ಸಂ.]

ಪ್ರಸ್ತುತಕಾಲ (ನಾ). ಯೋಗ್ಯವಾದ ಕಾಲ ; ತಕ್ಕ ಸಮಯ ; ಜನನಪ್ರಸ್ತುತಕಾಲದೊಳ್ ಸ್ವಭವನದ್ರೇಕ್ಕಾಣ ವರ್ಗೋತ್ತಮಾಂಶನವಾಂಶೋಪಗತ ಸಕೃದ್ವಿಗುಣಮಂ . . . ಈಗುಂ (ಜಾಪತಿ. ೬-೩). [ಸಂ.]

ಪ್ರಸ್ತುತಮತಿ (ನಾ). ಸಂದರ್ಭದ ಅರಿವಿರುವವನು : ಪ್ರಸ್ತುತಮತಿಯಾದ ಜನಮೇಜಯನಿಗೆ ತಟಕ್ಕನೆ ರಾಮಾಯಣದ ಆ ಕಥೆಯನು ಕೇಳುವ ಹಂಬಲ ಮೂಡುತ್ತದೆ (ಪರಿಶೀ. ೦೨೯). [ಸಂ.]

ಪ್ರಸ್ತುತಾಂಕುರ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ೧ ಒಂದು ಪ್ರಸ್ತುತ ವಿಷಯದ ವರ್ಣನೆಯಲ್ಲಿ ಮತ್ತೊಂದು ಪ್ರಸ್ತುತವಾದ ವಿಚಾರವು ಹೊರಹೊಮ್ಮುವುದು: ವರಪ್ರಸ್ತುತದೊಳು ಪ್ರಸ್ತುತವು ತೋರಲು ಉರೆ ಪ್ರಸ್ತುತಾಂಕುರವು (ಕುಪಂ. ೬೦). [ಸಂ.]

ಪ್ರಸ್ತುತ್ಯ (ಗು). ೧. ಹೊಗಳಿದ ; ಕೀರ್ತಿಸಿದ : ಕಥೆಯುಂ ತದಾದಿ ಪುರುಷಪ್ರಸ್ತುತ್ಯಜನ್ಮಾಳಿಬಂಧುರಮೆಂದಂದೆ ಮದೀಯ ವಾಗ್ವಿಭವವಿನ್ಯಾಸಂ ಬಲಂಬೆತ್ತುದು (ಆದಿಪು. ೦-೨೫). (ನಾ). ೨. ಹೊಗಳಿಕೆಗೆ ಪಾತ್ರನಾದವನು; ಕೀರ್ತಿಶಾಲಿ: ಶ್ರೀವೀರನಾರಾಯಣಂ ವಿಸ್ತಾರೋಜ್ವಳ ಕೀರ್ತ್ತಿಸೌರ್ಯ್ಯನಿಳಯಂ . . . ದಾಯಾದಕೋಳಾಹಳಂ ಪ್ರಸ್ತುತ್ಯಂ ನಯನಾಭಿನನ್ದನೆಸೆದಂ ಶ್ರೀವೀರಭೂಪಾಳಕಂ (ಎಕ. VIII, ಪಗರ. ೯೬-೬; 1060); ಆಸ್ತೇಯಮಹಾವ್ರತಮಂ ಸಲಿಸಿಂ ಪ್ರಸ್ತುತ್ಯರೆನಿಪ್ಪವರಂ ನಿಲಿಸಿಂ (ಜೀವಸಂ. ೦೬೯-೩೨ ರಗಳೆ). [ಸಂ.]

ಪ್ರಸ್ಥ (ಗು). ೧. ಮುನ್ನಡೆಯುವ; ಗಮಿಸುವ. ೨. ಇರುವ; ನೆಲಸುವ: 'ವನಪ್ರಸ್ಥ' ಹೋ. (ನಾ). ೩. ಹೋಗಿ ಬರುವಿಕೆ; ಓಡಾಟ: ಅವರ ದೃಷ್ಟಿಯಲ್ಲಿ ಕುಡಚಿಯ ಸ್ಥಾನಇನ್ನಿಷ್ಟುಉನ್ನತವಾಯಿತು. ಅವರ ಮನೆಯಲ್ಲಿ ಅವನ ಪ್ರಸ್ಥವು ವಿಶೇಷವಾಗಿ ಬೆಳೆಯಿತು (ಸಮಜೀ. ೯೫೨); ಮಹಾರಾಜರ ದರ್ಬಾರದಲ್ಲಿ ಅವನ ಪ್ರಸ್ಥ ಚನ್ನಾಗಿ ಬೆಳೆಯಿತು (ಗ್ರಾಮಾಯ. ೪೬೦). ೪. ಬೆಟ್ಟದ ಮೇಲಿನ ಸಮತಲಭೂಮಿ; ಸಾನು; ತಪ್ಪಲು: "ನಿತಂಬಃ, ಕಟಕಃ, ಸಾನುಃ, ಪ್ರಸ್ಥಂ, ತಟಂ, ಭೃಗುಃ- ಈ ೬ ತಟ್ಟಲ್" (ಹಲಾಯು. ೨೭-೧೨); ರಜತಾದ್ರಿಪ್ರಸ್ಥವೇದಿಕಾವಕಾಶಂ ಬಿಡಿದು . . . ಪಡುವಣ ಮ್ಲೇಚ್ಛಖಂಡಮಂ ಮೂವಳಸು ಬಳಸಿ ಸಾಧಿಸಿ (ಶಾಂತಿಪು. ೧೦-೪೨ ಪ). ೫. ಬೆಟ್ಟದ ತುದಿ.—ಅಗ್ರಭಾಗ. ೬. ಹಿರಿಮೆ; ಔನ್ನತ್ಯ: ಬ್ರಾಹ್ಮಣ, ಬೌದ್ಧ ಹಾಗೂ ಜೈನಸಂಪ್ರದಾಯಗಳಲ್ಲಿ ಆಗ ತಮ್ಮ ತಮ್ಮ ಪ್ರಸ್ಥ ಬೆಳಸಿಕೊಳ್ಳುವ ಒಳಸಂಚುಗಳು ನಡೆದಿದ್ದುದು ಈ ಐತಿಹ್ಯಗಳಿಂದ ಸ್ಪಷ್ಟವಾಗುತ್ತಿದೆ (ಕರ್ಣಾಟ. ೦೬೭). ೭. ಮೂವತ್ತೆರಡು ಪಲಗಳ ಒಂದು ಅಳತೆ: ಮೃದ್ವಗ್ನಿಯಿಂದ ಪಾಕ ಮಾಡಿ ಶೋಧಿಸಿ ಆ ಘೃತದಲ್ಲಿ ದ್ರಾಕ್ಷಿ ಒಂದು ಪ್ರಸ್ಥ ಹಾಕಬೇಕು (ಸಕವೈ. ಪಂ. ೪೫೦). ೮. ಒಂದು ಕೊಳಗ ಅಥವಾ ಬಳ್ಳ; ಎಂಟು ಸೇರು: "ಬಳ್ಳದಲ್ಲಿಯುಂ ಪ್ರಸ್ಥಮೆಂಬುದು" (ಹಲಾಯು. ೦೩೩-೧೫); ಯಿದ್ದ ಪ್ರಸ್ಥಕ್ಕೆ ವಸು (ಚತು)ಸಾಸಿರ ? ತಿದ್ದಿದ ಕೊಳಗಕ್ಕೆ ಲಕ್ಷಗೂಡಿತ್ತೆರಡುಂ ಸಾಸಿರ ಬುದ್ಧಿಯ ಖಂಡುಗವೊಂದಕೆ ನಿರ್ಧರ ಮೂವತ್ತ ಎಂಟುಲಕ್ಷಸಾಸಿರ ಕಾಳಂ (ವೃಷಹಾ. ಅನುಬಂಧ. ೦-೨); ಒಂದು ಸೊಲ್ಲಗೆಯೇ ನಿಕುಂಜವದು ನಾಲ್ಕಾಗಲೊಂದು ಕುಡುಬವದು ನಾಲ್ಕಾಗಲೊಂದು ಪ್ರಸ್ಥವಾ ಪ್ರಸ್ಥವೆರಡಾಗಲೊಂದು ವಾಹ (ವಿವೇಕ. ೬). [ಸಂ.]

ಪ್ರಸ್ಥಪುಷ್ಪ (ನಾ). ಸಂವಾಸನೆಯ ಎಲೆಗಳುಳ್ಳ ಒಂದು ಬಗೆಯ ಪತ್ರೆ; ಮರುಗ: "ಸಮೀರಣಃ, ಮರುವಕಃ, ಪ್ರಸ್ಥಪುಷ್ಪಃ, ಘರ್ಣಿಜಕಃ, ಜಂಬೀರಃ — ೫ ಮರುವ, ಮರುಗದ ಹೆಸರು" (ನಿಘಂಟು. ೦೩೦). [ಸಂ.]

ಪ್ರಸ್ಥಭೂಮಿ (ನಾ). ಎತ್ತರವಾದ ಸಮತಲಭೂಮಿ: ವಿಶಾಲವಾಗಿ ಮೇಲ್ಮಟ್ಟ ಸಮವಾಗಿರುವ ಎತ್ತರ ಪ್ರದೇಶಕ್ಕೆ ಪ್ರಸ್ಥಭೂಮಿ ಎಂದು ಹೆಸರು (ಭೂವಿಪ. ೦೩೩); ಸಾಮಾನ್ಯವಾಗಿ ನದಿಯ ಬಯಲುಗಳು, ತೀರ ಪ್ರದೇಶಗಳು, ಪ್ರಸ್ಥಭೂಮಿಗಳೆಂದು ವಿಭಾಗ ಮಾಡಿದ್ದಾಗ್ಗೂ ಈ ದೇಶವು . . . ಭಿನ್ನಭಿನ್ನವಾಗಿಲ್ಲ (ಭಾಇಪ್ರ. ೩) ; ಚೋಟಾನಾಗಪುರದ ಬಳಿಯ ಪ್ರಸ್ಥಭೂಮಿಯ ಹರವು (ದ್ರಾವಿವಿ. ೪೩೬). [ಸಂ.]

ಪ್ರಸ್ಥಾನ (ನಾ). ೧. ಪ್ರಯಾಣ; ಯಾತ್ರೆ; ಸಂಚಾರ: "ಯಾತ್ರಾ, ಪ್ರಯಾಣಂ, ಪ್ರಸ್ಥಾನಂ—ಈ ೩ ಪಯಣಂ" (ಹಲಾಯು. ೭೪-೨೯೬); ಹರಿಗಂಗುತ್ಸಾಹದಿಂ ಪಟ್ಟಬಂಧನಮಂ ಮಾಡುವಮಿಂದೆ ಹಸ್ತಿನಪುರ ಪ್ರಸ್ಥಾನಮಂ ಮಾಡುವಂ (ಪಂಪಭಾ. ೦೪-೦೦) ; ಭೀಮಂಗೆ ನೀಂ ಪಟ್ಟಬಂಧನಮಂ ಮಾಟ್ಟುದದರ್ಕೆ ಹಸ್ತಿನಪುರಪ್ರಸ್ಥಾನಮಂ ಮಾಡುವಂ (ಗದಾಯು. ೦೦-೨೦) ; ಇನ್ನು ತಮ್ಮ ಮುಂದಿನ ಪ್ರಸ್ಥಾನದ ದಿನವನ್ನು ಅವರು ನಿರ್ಣಯಿಸಬೇಕಾಗಿತ್ತು (ವಂಶವೃ. ೪೬೬). ೨. ಶತ್ರುಗಳನ್ನು ನಿಗ್ರಹಿಸಲು ಮಾಡುವ ಪ್ರಯಾಣ ; ದಂಡಯಾತ್ರೆ : ಪಳಿಕಿನ ಶಿಲಾಪಟ್ಟಂ ಪ್ರಸ್ಥಾನದೊಳ್ ವಿಜಯದ್ವಿಪಾವಳಿಯ ದರಿಗೊಂಡುದ್ದೇಶಂ ಚಕ್ರವರ್ತಿಯ ನಾಮದಗ್ಗಳದ ಸಿರಿಯಂ ಪೋಲ್ವನ್ನಂ (ಶಾಂತಿಪು. ೦೦-೦೬) ; ತನ್ನ ವಜೀರನಿಗೆ ಆ ಮಂತ್ರಿಯು ತಕ್ಕ ಸತ್ಕಾರ ಮಾಡೆಂದು ಶಾಸನವಿರಿಸಿ ತಾನು ಪ್ರಸ್ಥಾನದ ಸಿದ್ಧತೆ ಮಾಡತೊಡಗಿದನು (ಕಗದ್ಯ. ೦೫). ೩. [ನಾಟ್ಯ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು; ಕೆಳವರ್ಗದ ನಾಟಕಗಳಲ್ಲಿ ಒಂದು : ಉಪರೂಪಕಗಳು—೧. ನಾಟಿಕಾ . . . ೬. ಪ್ರಸ್ಥಾನ (ಸಂನಾಟ. ೩೨). [ಸಂ.]

ಪ್ರಸ್ಥಾನಂಗೆಯ್ (ಕ್ರಿ). ಪ್ರಯಾಣ ಮಾಡು; ಯಾತ್ರೆ ಹೋಗು : ಆ ಸ್ಥಳದೊಳಿನ್ನೆಗಂ ದೇವಸ್ಥಪತಿ ನಿಜಾಜ್ಞೆಯಿಂದೆ ನಿರ್ಮಿಸುಗುಂ ರತ್ನ ಸ್ಥಗಿತಮೆನಲ್ ಪುರಮಂ ಪ್ರಸ್ಥಾನಂಗೆಯ್ಗೆ ತಡೆಯದಲ್ಲಿಗೆ ಕಟಕಂ (ಜಗವಿ. ೯-೨೫). [ಪ್ರಸ್ಥಾನ + ಕೆಯ್$_1$]

ಪ್ರಸ್ಥಾನತೂರ್ಯ (ನಾ). ಪ್ರಯಾಣ ಹೊರಡುವಾಗ ಮಾಡುವ ವಾದ್ಯಘೋಷ: ಅನಂತರಂ ವಸಂತವನಕೇಳೀಪ್ರಸ್ಥಾನತೂರ್ಯಂಗಳಂ ಪೊಯ್ಸಿದಾಗಳ್ (ಸಂದ್ರಪು. ೭-೭೭ ಪ). [ಸಂ.]

ಪ್ರಸ್ಥಾನತ್ರಯ (ನಾ). ಬ್ರಹ್ಮಸೂತ್ರ, ಉಪನಿಷತ್ತುಗಳು ಮತ್ತು ಭಗವದ್ಗೀತೆಗಳೆಂಬ ಮೂರು ಪ್ರಮಾಣಗ್ರಂಥಗಳು : ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ಭಗವದ್ಗೀತೆ ಎಂಬವು ಇಂದಿಗೂ ಪ್ರಸ್ಥಾನತ್ರಯಗಳೆಂದು ಪ್ರಸಿದ್ಧ (ಭಾಇಪ್ರ. ೨೭೦) ; ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ — ಈ ಮೂರೂ ಪ್ರಸ್ಥಾನತ್ರಯವೆಂದು ಹೆಸರು ಪಡೆದು ವೈದಿಕಧರ್ಮಕ್ಕೆ ಅತಿಪ್ರಮಾಣಗ್ರಂಥಗಳೆಂದು ನಿರ್ಧರಿತವಾಗಿದೆ (ಭಾರದ. ೧೦೯). [ಸಂ.]

ಪ್ರಸ್ಥಾನತ್ರಯಿ (ನಾ). = ಪ್ರಸ್ಥಾನತ್ರಯ : ಕರ್ಮಮಾರ್ಗವೇ ಶ್ರೇಷ್ಠವೆಂದು ಪ್ರಸ್ಥಾನತ್ರಯಿಗಳಲ್ಲಿ ಒಂದಾದ ಗೀತೆಯೂ ಹೇಳಿದೆ (ಜೀದಾಪ. ೦೦೦) ; ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ- ಪ್ರಸ್ಥಾನತ್ರಯಿಗೆ ಟೀಕೆ ಬರೆಯದೆ ಆಚಾರ್ಯರಿಗೆ ಪ್ರಧಾನ್ಯ ದೊರೆಯುತ್ತಿರಲಿಲ್ಲ (ಕರ್ಪಾಕ. ೩೦). [ಸಂ. ಪ್ರಸ್ಥಾನತ್ರಯಿಾ]

ಪ್ರಸ್ಥಾನಪಾಂಶು (ನಾ). (ರಥದ) ಚಲನೆಯಿಂದ ಉಂಟಾದ ಧೂಳು : ದಿನನಾಥರಥಪ್ರಸ್ಥಾನಪಾಂಶುವೆನಿಸಿ ದಿಶಾಸ್ಥಗಿತಂ ರಂಜಿಸಿತ್ತು ಸಂಧ್ಯಾರಾಗಂ (ಮಲ್ಲಿಪು. ೭-೧೦೫). [ಸಂ.]

ಪ್ರಸ್ಥಾನಭೇರಿ (ನಾ). ೧. ದಿಗ್ವಿಜಯಕ್ಕಾಗಿ ಕೈಗೊಂಡ ದಂಡಯಾತ್ರೆಗಳಲ್ಲಿ ಮಾಡುವ ವಾದ್ಯಘೋಷ : ವಿಜಯೋದ್ಯೋಗಮನೆತ್ತಿಕೊಣ್ಡು ಪ್ರಸ್ಥಾನಭೇರಿಯಂ ಪೊಯ್ಸಿದುದು (ಸೌಇಇ. XX. ೪೯-೦೫ ; 1076 ?) ; ಅಷ್ಟದಿಗ್ಭಿತ್ತಿಯಂ ಧೀಂಕಿಟ್ಟತ್ತು ರಘುಪ್ರವೀರವಿಜಯಪ್ರಸ್ಥಾನಭೇರೀರವಂ (ಪಂರಾಮಾ. ೦೨-೦೭) ; ಮಗಧರಾಜಂ ಪ್ರಸ್ಥಾನಭೇರಿಯಂ ಪೊಯ್ಸೆಂದು ಸೇನಾಗ್ರಣಿಗೆ ಬೆಸಸಿದಾಗಳ್ (ಜಗವಿ. ೭-೩೬ ಪ). [ಸಂ. ಪ್ರಸ್ಥಾನಭೇರೀ]

ಪ್ರಸ್ಥಾನಮಂಗಳ (ನಾ). ಪ್ರಯಾಣಕ್ಕೆ ಹೊರಡುವ ಮೊದಲು ಮಾಡುವ ಮಂಗಳಕಾರ್ಯ : ಎಲೆ ಸಖಿ, ಏಳು ಏಳು ! ಶಕುಂತಳೆಯ ಪ್ರಸ್ಥಾನಮಂಗಳವನ್ನು ನೆರವೇರಿಸೋಣ (ಶಾಕುಂತ. ೪೬-೨೩). [ಸಂ. ಪ್ರಸ್ಥಾನಮಂಗಲ]

ಪ್ರಸ್ಥಾನಶಿಬಿರ (ನಾ). ಪ್ರಯಾಣಕಾಲದಲ್ಲಿ ತಂಗಲು ಏರ್ಪಡಿಸುವ ಬಿಡಾರ, — ವಿಶ್ರಾಂತಿಸ್ಥಳ : ಗೃಹಮಹತ್ತರಂ ಮುನ್ನಮೆ ಸಮೆದುದಂ ಪ್ರಸ್ಥಾನಶಿಬಿರಮಂ ಪೊಕ್ಕು (ಸಂದ್ರಪು. ೦೦-೧೭ ಪ) ; ಆ ಪ್ರಸ್ಥಾನಶಿಬಿರದಿಂದಂ ತಳರ್ದಾಗಳ್ (ಬಾರಪು. ೦೦-೩೩ ಪ). [ಸಂ.]

ಪ್ರಸ್ಥಾಪಿಸು (ಕ್ರಿ). ಪ್ರಚಾರಕ್ಕೆ ತರು ; ಪ್ರಚಲಿತಗೊಳಿಸು : ಸ್ವಾಮಿ ವಿವೇಕಾನಂದರು ಭಾರತೀಯ ಆಧ್ಯಾತ್ಮದ ಮೌಲ್ಯಗಳನ್ನು ಸಪ್ತಸಾಗರಗಳಾಚೆಯಲ್ಲಿ ಪ್ರಸ್ಥಾಪಿಸಿದರು (ಪ್ರಬಂಧ. ೭೦) ; ಒಬ್ಬರಿಗೊಬ್ಬರು ತಮ್ಮ ಮತವೇ ಶ್ರೇಷ್ಠವೆಂದು ಪ್ರಸ್ಥಾಪಿಸಲು ಹೆಣಗುತ್ತಿದ್ದರು (ಸಾಹಿಸ. ೦೩೫). [ಸಂ. ಪ್ರಸ್ಥಾಪನ + — ಇಸ್ಸು$_3$]

ಪ್ರಸ್ಥಿತಿ (ನಾ). ಮುನ್ನಡೆಯುವುದು ; ಸಂಚಾರ ; ಗಮನ. [ಸಂ.]

ಪ್ರಸ್ಪರ್ಧಿ (ಗು). ೧. ಪೈಪೋಟಿ ಮಾಡುವ ; ಸ್ಪರ್ಧಿಸುವ : ನೀಹಾರ ಪ್ರಸ್ಪರ್ಧಿ ಚಂಚಚ್ಚಮರಜಕಲಹಂಸಾಸ್ಪದಂ (ಆದಿಪು. ೦೦-೦೯) ; ಮದನ ಪ್ರಸ್ಪರ್ಧಿಸೌಂದರ್ಯದೆ ನೃಪಸುತೆಯಂ ಸತ್ಕಳಾಜಾಳಚಾತುರ್ಯದೆ . . . ಎಱಗಿಸಿ (ಸಂದ್ರಪು. ೫-೦೩೯). (ನಾ). ೨. ಎದುರಾಳಿಯಾದುದು ; ಪ್ರತಿ

ಸ್ಪರ್ಧಿಯಾದುದಂ: ವೃಕ್ಷಬ್ಧಿಕಲ್ಲೋಲಕಲ್ಪಿತಕೋಲಾಹಲಕಲ್ಪಕಾಲರಭಸ ಪ್ರಸ್ಪರ್ಧಿಯಂ ವಾರ್ಧಿಯುಂ (ಕಾಶ್ಯಾ. ೬೩). [ಸಂ. ಪ್ರಸ್ಪರ್ಧಿನ್]

ಪ್ರಸ್ಫಾರ (ಗು). ೧. ಹೊಳೆಯುವ : ಲೋಕೈಕಭೀಕರಮಾಟಂದುದು ನೀಲ ಮೇಘನಿಕಟಪ್ರಸ್ಫಾರದಂಭೋಳಿವೊಲ್ (ಕಂಠೀರವ. ೦೪-೦೭೪). ೨. ಉಬ್ಬಿದ; ಊದಿದ ; ಹಿಗ್ಗಿದ. ೩. ಅಹಂಕಾರವುಳ್ಳ. [ಸಂ.]

ಪ್ರಸ್ಫುಟ (ಗು). ೧. ಅರಳಿದ ; ವಿಕಾಸವಾದ. ೨. ಪ್ರಕಟವಾದ. ೩. ಸ್ಪಷ್ಟವಾದ ; ವ್ಯಕ್ತವಾದ. ೪. ಹೊಳೆಯುವ; ಪ್ರಕಾಶಿಸುವ ; ಬೆಳಗುವ : ವಿನುತಶ್ವೇತಾತಪತ್ರಾವಳಿಯರುಣಮಣಿಪ್ರಸ್ಫುಟೋತ್ತುಂಗ ಸಿಂಹಾಸನಮಂ . . . ತಂದರ್ (ಕಂಚಿಕಂ. ೨೩೩-೦೭) ; ಚೀನಚೇಲಾವೃತ ಮಧ್ಯಂ ಮೌಕ್ತಿಕಪ್ರಸ್ಫುಟಮಕುಟನುದಂಚಿತ್ತು ವರ್ಣೋರುವೇತ್ರಾಂಚಿತ ಹಸ್ತಂ ನಿಂದು ಕಣ್ಗೊಪ್ಪಿದಂ (ರಾಜಶೇ. ೦೪-೦೩೨). [ಸಂ.]

ಪ್ರಸ್ಫುಟಿಸು (ಕ್ರಿ). ವ್ಯಕ್ತವಾಗು ; ಪ್ರಕಟವಾಗು : ಈಶ್ವರಪ್ರಕೃತಿ ರೂಪಂ ಪ್ರಸ್ಫುಟಿಸುತೀಯೆಡೆಯ ಸತ್ಯಶಿವಸುಂದರದ ಸಚ್ಚಿದಾನಂದಸ್ವರೂಪಂ (ಪುರಶೇ. ೩೪-೦೦). [ಪ್ರಸ್ಫುಟ + — ಇಸ್ಕು]

ಪ್ರಸ್ಫುರಿತ(ಗು). ೧. ನಡುಗುವ ; ಅದುರುವ; ಚಂಚಲವಾದ: ಪ್ರಸ್ಫುರಿತ ದಶನವಸನನುಮಾಗಿ (ಕಂದ್ರಕೃ. ೩-೦೦೦ ಪ). ೨. ಹೊಳೆಯುವ ; ಪ್ರಕಾಶಿಸುವ : ಹೇಮಪ್ರಭಾಪ್ರಸ್ಫುರಿತ ಗಿರಿಶಚಂಚಜ್ಜಟಾಜಾಲಜೂಟವ್ಯೋಮ ವ್ಯೋದ್ಯಾಚಿಚಂದ್ರಂ ಶ್ರಿಭುವನಜನಕ್ಷಾನಂದಮಂ ಮಾಡುಗೆಂದುಂ (ಕಾಕಂಪು. ೦); ಒಡಗೊಂಡು ಬಂದತ್ಯಂತವಿಭವದಲಿ ಇರಿಸಿ ಕೃಷ್ಣಾಜಿನಕುಶಾ ಪ್ರಸ್ಫುರಿತಪೀಠದೊಳ್ಳರ್ಘ್ಯಪಾದ್ಯಾದ್ಯುರುಸಪರ್ಯೆಗಳಿಂದ ಸತ್ಕರಿಸಿದರು ಮುನಿವರನ (ತಿಮ್ಮಕ್ಕ. ೩-೮೩). ೩. ಬೆದರಿಸಿದ ; ಚೆಲ್ಲಾಪಿಲ್ಲಿ ಮಾಡಿದ: ಯುವತೀಸಂತಾನ ನಾನಾಚಲದಳಕಲಸಲ್ಲಾಸ್ಯಲೀಲಾಪ್ರಬದ್ಧಂ ವಿವಿಧಾ ಗಾರಾಂಗಣಪ್ರಸ್ಫುರಿತಕೃತಕಕಾಸಾರಪಾನೀಯಭಂಗೋದ್ಭವಬಿಂದುವ್ರಾತ ಶೀತಾವರಣನೊಲವಿನಿಂ ತೀಡಿದಂ (ಗಿರಿ. ೪-೦೦೯) ; ಕರಿ ಕೇಸರಿಯಂ ಕಣಕಿದ ಪರಿಯಂ ಪರುಟವಿಸಿದರ್ ಮದಾಂಧತೆಯಿಂದಾಂತರಬಲಬಲಾಹಕ ಪ್ರಸ್ಫುರಿತಮಹಾನಿಲನೊಳ್ (ಶಶಿಂ. ೪-೩೯). [ಸಂ.]

ಪ್ರಸ್ಫುರಿಸು (ಕ್ರಿ). ಶೋಭಿಸು ; ಪ್ರಕಾಶಿಸು : ಅವರ ಮನದಜ್ಞಾನಮಂ ಬಿಡಿಸಿ ಸಹಜವೆನಿಸುವದೇ ವಿಶೇಷವೆಂದೀರ್ಮೈದುಭುಜಗಳಂ ತವೆ ಪಂಚ ಮುಖಿತ್ರಿಲೋಚನಗಳಂ ತೋಱಿ ಪ್ರಸ್ಫುರಿಸುತ್ತಿರ್ದನಯ್ಯಂ (ಗುರುಚಾ. ೩-೪). [ಪ್ರಸ್ಫುರಣ್ಯ + — ಇಸ್ಕು]

ಪ್ರಸ್ಫೋಟನ (ನಾ). ೧. ಅರಳುವಿಕೆ ; ವಿಕಸನ. ೨. ಬಿರಿಯುವುದು ; ಒಡೆಯುವುದಂ . ೩. ಕೇರುವುದು ; ತೂರುವುದು. ೪. ಕೇರುವ ಸಾಧನ ; ಮೊರ : "ಪ್ರಸ್ಫೋಟನಂ, ಶೂರ್ಪ – ೨ ಮೊರ" (ನಿಘಂ೩. ೨೬೦). [ಸಂ].

ಪ್ರಸ್ಯಂದ (ನಾ). ೧. ಸ್ರವಿಸುವುದು ; ಸೋರುವುದು; ಸ್ರಾವ. ೨. ಸ್ರವಿಸಂವ ದ್ರವ ಕರಕಂಜಾತಕ್ಕೆ ಪುಟ್ಟದರ್ಘಾಜಮೆನಿಸೆ ಲೀಲಾಂಬುಜಂ ತುಂಬಿ ಬಿಂಬಾಧರರಾಗಂ ಸೂಸಿತೆಂಬಂದದೊಳೆ ಪೊಳೆಯೆ ಕೆಂಬಲ್ಗಳೊಳ್ಗೆಂವು ವಾದಾಂಬುರುಹಪ್ರಸ್ಯಂದವೊಕ್ಕಂತಿರೆ (ರಾಜಶೇ. ೬-೩೨). [ಸಂ.]

ಪ್ರಸ್ಯಂದಿ (ಗು). ಸುರಿಯುವ : ಅವಿರಳಪ್ರಸ್ಯಂದಿಬಾಷ್ಪೋದಕಾನನನಾ ಕಾನನದೊಳ್ಕೊಟಲ್ದು ರಘುರಾಮಂ ಸೇದೆವಚ್ಚಿರ್ದುದುಂ (ಕಂಠೀರವ. ೯-೦೨೦). [ಸಂ. ಪ್ರಸ್ಯಂದಿನ್]

ಪ್ರಸ್ರವ (ಗು). ೧. ಹರಿಯುವ ; ಸ್ರವಿಸುವ. (ನಾ). ೨. ಪ್ರವಾಹ. ೩. ಬೆಟ್ಟದ ಝರಿ ; ಅಬ್ಬಿ. ೪. ಮೂತ್ರ. [ಸಂ.]

ಪ್ರಸ್ರವಣ (ನಾ). ೧. ಬೆಟ್ಟದ ಝರಿ; ಒಜ್ಜರ; ಅಬ್ಬಿ: "ಒಲಿತೆಯೊಜ್ಜರ ಪ್ರಸ್ರವಣಮೆನಿಕಂ" (ಕುಂಗಣ. ೦೨೪-೦೩) ; ಪರ್ವತ ಮುಂತಾದ ಎತ್ತರವಾದ ಪ್ರದೇಶದಿಂದ ಜಿನುಗಿ ರಿದು ಬರುವ ನೀರು ಪ್ರಸ್ರವಹಣವು (ಕರ್ನಾಡ. ೧೭೬). ೨. ಜಲಪಾತ : ವಿವಿಧಗುಲ್ಮನಿಕುಂಜದಲಿ . . . ಪವನನಿಸ್ವನ ಪರ್ಣರವಪ್ರಸ್ರವಣಧಾರಾಧ್ವಾನಖಗಮೃಗನಿವಹನಿನದದಲಲಿಸಿ ನೋಡಿದ ರಿವರು ಜಾನಕಿಯ (ತೊರಣ. ೩-೦೦-೩೨) ; ಪ್ರಸ್ರವಣಸ್ನಾನವು ಪ್ರಸ್ರವಣ ಗಳಿರುವ ಗಿರಿದುರ್ಗಪ್ರದೇಶದ ನಿವಾಸಿಗಳಿಗಲ್ಲದೆ ಮೈದಾನದಲ್ಲಿರುವವರಿಗಲ್ಲ (ಕರ್ನಾಡ. ೩೦). ೩. ನೆಲದೊಳಗಿಂದ ಉಕ್ಕಿ ಬರುವ ನೀರು; ಬುಗ್ಗೆ ; ತಲಪರಿಗೆ ; ಊಟೆ. ೪. ಬೆವರು ; ಸ್ವೇದ. ೫. ಮೂತ್ರ ವಿಸರ್ಜನೆ. [ಸಂ.]

ಪ್ರಸ್ರಾವ (ನಾ). ೧. ಹರಿಯುವಿಕೆ ; ಸ್ರವಿಸುವಿಕೆ. ೨. ಮೂತ್ರ : "ಮೂತ್ರಂ, ಪ್ರಸ್ರಾವಃ– ೨ ಮೂತ್ರದ ಹೆಸರುಗಳು" (ನಿಘಂ೩. ೦೬೬). [ಸಂ.]

ಪ್ರಸ್ರಾವಣ (ನಾ). ೧. ನಿದ್ರಿಸಂವಂತೆ ಮಾಡುವುದು; ನಿದ್ರೆಯನ್ನುಂಟು ಮಾಡುವುದು. ೨. ಜೃಂಭಕ, ಪ್ರಸ್ರಾವಣ, ಅಪ್ರತಿಹತ, ನಿಶ್ಶೇಷೀಕರಣ, ಜೀವಗ್ರಾಹಗಳೆಂಬ ಐದು ಬಗೆಯ ಮಂತ್ರ ಗಳಲ್ಲಿ ಒಂದು ; ಎದುರಾಳಿಗೆ ನಿದ್ರೆಯನ್ನುಂಟುಮಾಡುವ ಒಂದು ಮಂತ್ರ: ಜೃಂಭಕ ಪ್ರಸ್ರಾವಣ ಅಪ್ರತಿಹತ . . . ಎಂಬ ಪಂಚಶಕ್ತಿಯ ಮಂತ್ರಗಳಂ (ಪಾವೀಕ. ೮೦). [ಸಂ.]

ಪ್ರಸ್ವಿನ್ನ (ಗು). ಚೆನ್ನಾಗಿ ಬೆವತಿರುವ : ದೀನಂ ವಿವರ್ಣವದನಂ ಕೃಶಂ ದಿಂಡುರುಳಿ, ಪ್ರಸ್ವಿನ್ನಚೀರವಲ್ಕಲಜಟಾಜಟಿಲನಂ ಕಷ್ಟದಿಂ ಗುರುತಿಸಿ (ಶ್ರೀರಾಮಾ. ೦೬೯ ೩೨). [ಸಂ.]

ಪ್ರಸ್ವೇದ (ನಾ). ೧. ಅತಿಯಾದ ಬೆವರು : ಆಮರಣಮಸ್ನಾನವ್ರತಮುಂ ತಾಳ್ದಿದನುಂ ರವಿಕಿರಣಪ್ರತಾಪಜನಿತಪ್ರಸ್ವೇದಾಕುಲಪವನಾನೀತಪಾಂಶು ನಿಚಯನುಂ . . . ಅಪ್ಪ ಜಿನಮುನಿಗೆ ಮಲಪರೀಷಹಜಯಂ ಅಱಿಯೆ ಪಡುಗುಂ (ಶಕ್ತ್ಯಕ್ಕ. ೩೩೬). ೨. ಆನೆ. [ಸಂ.]

ಪ್ರಹತ (ಗು). ೧. ಹೊಡೆದ ; ಬಾಜಿಸಿದ : ಮೌಹೂರ್ತಿಕಗಣನಿರೂಪಿತ ಪ್ರಶಸ್ತಮುಹೂರ್ತದೊಳತಿಪ್ರಮೋದನಿರ್ಭರಪ್ರಣಯಪ್ರಹತಮಂಗಳ ಪಟ ಹರವಂಗಳುಂ . . . ಅಂತಃಪುರಜನಾಶೀರ್ವಾದಕೋಳಾಹಳಮುಂ ಮಿಸೆಯೆ (ಕರಪು. ೪-೪೭ ಪ). ೨. (ಚಪ್ಪಾಳೆಯಂತೆ) ತಟ್ಟಿದ : ತಾಳ ತ ತ್ಪರ ಶಿಶು ನರ್ತ ನ ಪ್ರಹತಕರತಲಧ್ವನಿಕೃತಹಸ್ತತೂರ್ಯಸುಂದರರವ ದಿಂದದಂ ಮಱೆಸಿದಳ್ ಗಡ ಮುಗ್ಧೆಯದೇಂ ವಿದಗ್ಧೆಯೋ (ಶಾಂತಿಪು. ೯-೬೩). ೩. ಹೊಡೆತ ತಿಂದ ; ಗಾಯಗೊಂಡ. ೪. ಸೋತ ; ಅಪಜಯ ಹೊಂದಿದ. ೫. ಹರಿದಿದ; ವಿಸ್ತಾರಗೊಂಡ. ೬. ಅರಿತ; ತಿಳಿದಿರುವ. (ನಾ). ೭. ತಿಳಿದವನು ; ಪ್ರಾಜ್ಞ ; ಜ್ಞಾನಿ : "ವ್ಯುತ್ಪನ್ನಃ, ಪ್ರಹತಃ, ಕ್ಷುಣ್ಣಃ, ಸಂಸ್ಕೃತಃ – ಈ ೪ ಪಂಡಿತಂ" (ಕಂಠಾಭು. ೩೬-೦೧೭). [ಸಂ.]

ಪ್ರಹತಿ (ನಾ). ಹೊಡೆತ ; ಏಟು ; ಪೆಟ್ಟು : ನೀಂ ಕೆರಳ್ದಿ ವೇಣ್ಪ್ರಾ ಹತಿಯನಾನದೆಯ್ದುವೆಯದೆಂತೆಲೆ ತೀರ್ದೆ ನಿನ್ನನಿರ್ಪನೇ (ರಾಜಶೇ. ೬-೯೦). [ಸಂ.]

ಪ್ರಹತಿಸು (ಕ್ರಿ). ೧. ಹೊಡೆ ; ಏಟು ಕೊಡು ; ಪೆಟ್ಟು ಹಾಕು. ೨. ನಾಶ ಮಾಡು : ಶರತ್ಕಾಲದವೊಲ್ ಪ್ರಹತಿಸುಗೆ ಸಮಗ್ರಪಂಕಮಂ ಸುಜನೌಘಂ (ರಾಘಪು. ೦-೩೦). [ಪ್ರಹತ + — ಇಸ್ಕು]

ಪ್ರಹರ (ನಾ). ೧. ಹೊಡೆತ ; ಏಟು ; ಪೆಟ್ಟು : 'ಪ್ರಹರಿಸು' ಪರಾ. ೨. ನಿವಾರಣೆ ; ನಾಶ : ದುಸ್ತರಜ್ಞಾನಪ್ರಪಂಚತಮಸ್ತತಿ ಪ್ರಹರಾರ್ಥದತ್ತಪ್ರಸ್ತುತಜ್ಞಾನ (ರಸಕ. ೬-೯೯). ೩. ಒಂದು ದಿವಸದ ಎಂಟನೆಯ ಭಾಗ ; ಜಾವ ; ಯಾಮ : "ಪ್ರಹರಃ, ಯಾಮಃ – ಈ ೨ ಜಾಮಂ" (ಹಲಾಯು. ೦೬-೦೦೬) ; ಎರಡನೆಯ ಪ್ರಹರದ

ರಕ್ಷಕರು ಬರುವುದರೊಳಗಾಗಿ ಇವರು ತಮ್ಮ ಕಾರ್ಯಸಾಧನೆ ಮಾಡಿಕೊಳ್ಳಬೇಕಾಗಿತ್ತು (ಶಾಂತಲಾ. ೨೨೬); ಜೈಲಿನಲ್ಲಿ . . . ಎಂಟೂ ಪ್ರಹರ ಮತ್ತು ಅರವತ್ತ ನಾಲ್ಕುಗಳಿಗೆಯಲ್ಲೂ ಹೃದಯದಲ್ಲಿ ಅಂಕಿತವಾದ ನಿನ್ನ ಮೂರ್ತಿಯ ದರ್ಶನ ಮಾಡುತ್ತಲೇ ಇದ್ದೆ (ಪ್ರಕಾಶ. ೦೬೩). [ಸಂ.]

ಪ್ರಹರಣ (ನಾ). ೧. ಹೊಡೆತ ; ಏಟು ; ಪೆಟ್ಟು : ರಣಾಂಗಣದಂತೆ ಚಮೂರಚಿತಪ್ರಹರಣವಿಶೀರ್ಣರೂಪಮುಂ (ಸಂಪ್ರಪು. ೩-೩೨ ಪ). ೨. ಗದಾಯುದ್ಧದ ಒಂದು ವರಸೆ : ವಿಳಂಬಿತಮಾಕುಂಚಿತಮಾಸ್ಫೋಟಿತ ಮಾಕ್ಷಿಪ್ತಮುದ್ಭ್ರಾಮಿತಂ ದಿಗ್ಭ್ರಾಮಿತಮುಚಿತವಿರುದ್ಧಮಚಿಂತ್ಯಮು ಮೆಂಬೆಂಟುಂತೆಱದ ಪ್ರಹರಣಂಗಳೊಳಂ ಅತಿಪರಿಚಿತರಾಗಿ (ಗದಾಯು. ೬-೦ಪ). ೩. ಯಾವುದಾದರೊಂದು ವಾದ್ಯದ ಬಾಜನೆ, —ವಾದನ : ಪ್ರಹರಣಮಿಂಪಂ ಪಡೆದಿರೆ ಸುರವಧು ಮೃದಂಗಮಂ ಬಾಜಿಸಿದಳ್ (ಸಂಪ್ರಪು. ೦೦-೦೪೩). ೪. ಎಸೆಯುವುದು ; ಬಿಸಾಡುವುದು. ೫. ಆಕ್ರಮಣ : ಕ್ಷತ್ರಿಯಜಾತಿಗೆ ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತ ರಕ್ಷಣಪ್ರಹರಣಕ್ಷಮಾದಿ ಗುಣಾಚರಣಮುಮಂ . . . ನಿಱಿಸಿ (ಆದಿಪು. ೬-೭೩ ಪ). ೬. ನಿವಾರಿಸುವುದು ; ತೆಗೆದುಹಾಕುವುದು. ೭. ಆಯುಧ; ಶಸ್ತ್ರ : "ಹೇತಿಃ, ಶಸ್ತ್ರಂ, ಪ್ರಹರಣಂ, ಆಯುಧಂ, ಅಸ್ತ್ರಂ—ಈ ೫ ಕೆಯ್ದು" (ಹಲಾಯು. ೭೬-೩೦೬). ೮. ಕಾಳಗ; ಯುದ್ಧ : "ಸಂಗ್ರಾಮಃ . . . ಪ್ರಹರಣಂ . . . ವಿಗ್ರಹಃ—ಈ ೩೫ ಕಾಳೆಗಂ" (ಹಲಾಯು. ೭೩-೨೯೯); ಅರವಿಂದಬಾಂಧವತನೂಜನ ಮಹಾಪ್ರಹರಣಹತಿಯೊಳ್ ಯಮನಂದನನ ನೋವುಮನಾತ್ಮೀಯಬಲದ ನಾಯಕರ ಸಾವುಮನಱಿದು (ಸಂಪಭಾ. ೦೨-೦೨೦ ಪ). [ಸಂ.]

ಪ್ರಹರಣಕಲಿಕ (ನಾ). [ಛಂದ] ಪಾದವೊಂದಕ್ಕೆ ಹದಿನಾಲ್ಕು ಅಕ್ಷರಗಳನ್ನುಳ್ಳ, ಪ್ರತಿಸಾಲಿನಲ್ಲಿಯೂ ನನಭನಲಗವೆಂಬ ಗಣಗಳೂ ಒಂದು ಲಘು ಮತ್ತು ಒಂದು ಗುರುವೂ ಇರುವ, ಶಕ್ವರೀ ಛಂದಸ್ಸಿನ ಒಂದು ವೃತ್ತ : ನನಭನಲಗವೆಂಬಿವು ಗಣನಿವಹಂ ಜನಿಯಿಸಿಯತಿ ನಿಲ್ತಿರೆ ಹಯತತಿಯೊಳ್ ನಿನಗಿದನಱಿಮತಿರೆ ವಿರಚಿಸಿದೆಂ ವನರುಹವದನೇ ಪ್ರಹರಣಕಲಿಕಂ [ಶಾಕಾಂ. ತಂ] (ಛಂದೋಂಬು. ೨-೦೪೭).

[ಸಂ. ಪ್ರಹರಣಕಲಿಕಾ]

ಪ್ರಹರಣಶ್ರಮ (ನಾ) ೧. ಇತರರನ್ನು ಹೊಡೆದು ಆಯಾಸ ಪಡಿಸುವುದು, —ನೋಯಿಸುವುದು. ೨. ಆಯುಧಗಳಿಂದ ಮಾಡುವ ವ್ಯಾಯಾಮ ; ಶಸ್ತ್ರಾಭ್ಯಾಸ . ೧, ೨ : ಪ್ರಹರಣಶ್ರಮಂ ಖುರಳಿಯೊಳ್ ಮುಖರತೆ ಪುರ[ರು]ಳಿಯೊಳ್ . . . ಅಲ್ಲದಿಲ್ಲಮೆಲ್ಲಿಯುಂ (ಸಂಪ್ರಪು. ೩-೯ ಪ). [ಸಂ.]

ಪ್ರಹರಣೆ (ನಾ). = ಪ್ರಹರಣ ೧ : ಅತ್ವಕ್ಕೆತ್ವಂ—ಅರ್ಕೆ—ಎರ್ಕೆ... ಪ್ರಹರಣ—ಪ್ರಹರಣೆ (ಶಮದ. ೨೬೬ ಪ್ರಯೋ). [ಸಂ. ಪ್ರಹರಣ]

ಪ್ರಹರಿ (ನಾ). (ಸರದಿಯಂತೆ) ಕಾಯುವವನು ; ಕಾವಲುಗಾರ : ನವಕುಮಾರನು. . .ಕಪಾಲಕುಂಡಲೆಗೆ ಸಲುವಾಗಿ ಒಬ್ಬ ದಾಸಿಯನ್ನೂ ಒಬ್ಬ ಪ್ರಹರಿಯನ್ನೂ. . . .ಕಳುಹಿದನು (ಕಪಾಕುಂ. ೪೦).

[ಸಂ. ಪ್ರಹರಿನ್]

ಪ್ರಹರಿಣಿ (ನಾ). [ಜೈನ] ಮಂತ್ರದ ಸಹಾಯದಿಂದ ಪೆಟ್ಟು ಕೊಡುವ ಒಂದು ವಿದ್ಯೆ : ಪ್ರಮೋಹಿನಿ ಪ್ರಹರಿ [ಶಾಕಾಂ. ರ]ಣಿ ಸಂಕ್ರಮಣಿ. . . ಆಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಶಾಪುಂಪು. ೧೯೩).

[ಸಂ. ಪ್ರಹರಿಣೀ]

ಪ್ರಹರಿಸು (ಕ್ರಿ). ೧. ಹೊಡೆ ; ಏಟು ಹಾಕು : ಸ್ವಾಧೀನವಾಗದಿದ್ದರೆ ಶೂಲಗಳಿಂ ಪ್ರಹರಿಸುತ (ಸೌಗಂಧಿ. ೨೪೨-೩) ; ಅವರು ಅವನನ್ನೂ ಅವನ ಕುದುರೆಯನ್ನೂ ದೊಣ್ಣೆಯಿಂದ ಪ್ರಹರಿಸುತ್ತಿದ್ದರು (ಮಲೆಪಾ. ೦೬೭). ೨. ನಾಶಪಡಿಸು ; ನಾಶ ಮಾಡು : ವಹಿಸು ಕೆಲಭಾರಗಳ ; ಸಹಿಸು ಕೆಲನೋವುಗಳ ಪ್ರಹರಿಸರಿಗಳನನಿತುಯುಕ್ತಗಳನರಿತು (ಮಂಕುಳ. ೯೦೪).

[ಪ್ರಹರ + — ಇಸ್ಸು]

ಪ್ರಹರ್ಷ (ನಾ). ಅತಿಶಯವಾದ ಆನಂದ ; ಸಂತೋಷ. [ಸಂ.]

ಪ್ರಹರ್ಷಣ (ನಾ). ೧. ಬುಧಗ್ರಹ. ೨. ಅತಿಶಯವಾದ ಆನಂದ, —ಸಂತೋಷ. ೩. ಅತಿಶಯವಾದ ಸಂತೋಷವನ್ನುಂಟು ಮಾಡುವುದು. ೪. [ಕಾವ್ಯವಿಾ] ಅರ್ಥಾಲಂಕಾರಗಳಲ್ಲಿ ಒಂದು; ೫ ಇದು ೧. ಯತ್ನವಿಲ್ಲದೆ ಅಪೇಕ್ಷಿತ ಫಲಸಿದ್ಧಿ. ೨. ಅಪೇಕ್ಷಿತಕ್ಕಿಂತಲೂ ಅಧಿಕ ಫಲಸಿದ್ಧಿ. ೩. ಫಲಸಿದ್ಧಿಗಾಗಿ ಉಪಾಯವನ್ನು ಹುಡುಕುವ ಪ್ರಯತ್ನದಿಂದಲೇ ಫಲಪ್ರಾಪ್ತಿ—ಎಂದು ಮೂರು ವಿಧ : ಮನದಲ್ಲಿ ಘನೇಚ್ಛೆ ಪ್ರಯಾಸವಿಲ್ಲದಲೆ ಅನುಕೂಲವಾಗೆ ಪ್ರಹರ್ಷಣಾ ಇನಿಯನಲ್ಲಿಹ ದೂತಿಕೆಯನು ಧ್ಯಾನವ ಮಾಡೆ ವಿನಯದಿ ಬಂದಳು ತಾನೆ (ಕುವಂ. ೦೨೩-೦); ಮನದಲ್ಲಿಚ್ಛೆಯು ಪ್ರಯತ್ನ ಮಾಡದೆ ಸಿದ್ಧವಾದಡೆ ಪ್ರಹರ್ಷಣವೆನಿಸುವುದು (ಕುವಂ. ೦೨೩-೦ಪಿಪ್ಪಣಿ). ೫. [ಛಂದ] ಪಾದವೊಂದಕ್ಕೆ ಹದಿಮೂರು ಅಕ್ಷರಗಳನ್ನುಳ್ಳ, ಪ್ರತಿಸಾಲಿನಲ್ಲಿಯೂ ಮನಜರಗ ಗಣಗಳೂ ಒಂದು ಗುರುವೂ ಇರುವ, ಅತಿಜಗತಿಛಂದಸ್ಸಿನ ಒಂದು ವೃತ್ತ : ಕಣ್ಗೊಪ್ಪಲ್ ಮನಜರಗಂ ಪ್ರಹರ್ಷಣಂ ತಾಂ (ಕೃಪಿಡಿ. ೬೨). [ಸಂ.]

ಪ್ರಹಸನ (ನಾ). ೧. ಬಹಳವಾದ ನಗು ; ಅತಿಯಾದ ನಗೆ ; ಅಟ್ಟಹಾಸ. ೨. ನಗಿಸುವುದು: ನೃಪಸೇವನಾಪ್ರಹಸನಪ್ರಾವೀಣ್ಯಮುಂ ಬುದ್ಧಿವರ್ಧನಮುಂ ಮಾಸರಮಕ್ಕುಮೈಂದವದಶೋಕ್ತಾರೋಹಗೇಹಂಗಳೊಳ್ (ಶಾಕಶಿ. ೯-೨೩). ೩. [ಕಾವ್ಯವಿಾ] ಹತ್ತು ಬಗೆಯ ರೂಪಕಗಳಲ್ಲಿ ಒಂದು ವಿಧ ; ಕೆಳವರ್ಗದ ನಾಟಕಗಳಲ್ಲಿ ಒಂದು ; ಆಧುನಿಕಸಾಹಿತ್ಯದ ಹಾಸ್ಯನಾಟಕ ; ೫ ಇದು ಇಂಗ್ಲಿಷಿನ 'Farce' ಎಂಬುದರ ಅನುವಾದ : ಪ್ರಹಸನ — ಇದರ ವಸ್ತು ಕಲ್ಪಿತ ಮತ್ತು ಕೀಳುಜನರ ಚರಿತ್ರೆ ; ಹಾಸ್ಯಪ್ರಧಾನ ರಸ ; ಸಂಧಿ, ಸಂಧ್ಯಂಗ, ಲಾಸ್ಯಾಂಗ,ಅಂಕ ಇವು ಭಾಣದಲ್ಲಿರುವಂತೆಯೇ ; ವೀಥ್ಯಂಗಗಳು ಇರುವುದೂ ಉಂಟು ಇಲ್ಲದ್ದೂ ಉಂಟು ಆರಭಟೀವೃತ್ತಿಯಾಗಲಿ , ವಿಷ್ಕಂಭಕ ಪ್ರವೇಶಕಗಳಾಗಲಿ ಇಲ್ಲ (ಸಂಪಾಲಿ. ೩೦) ; ನಾಟಕ, ಪ್ರಕರಣ, ಭಾಣ ಪ್ರಹಸನ. . . ಈಹಾಮೃಗ ಎಂಬುದಾಗಿ (೧೦) ದಶರೂಪಕಗಳಿರುವುವು (ಶಾಕಶಿ. ೪೩೪). [ಸಂ.]

ಪ್ರಹಸನಶೀಲ (ನಾ). ನಗುವ ಸ್ವಭಾವದವನು : ತುಹಿನಾಂಶಂ ಕೂಡಿರೆ ಝಷಗೃಹದೊಳ್ ಬುಧ ಜೀವ ಶುಕ್ರರೀಕ್ಷಿಸುವೊಡವಂ ಪ್ರಹಸನಶೀಲಂ (ಶಾಕಶಿ. ೨೦-೦೨). [ಸಂ.]

ಪ್ರಹಸಿತ (ಗು). ೧. ನಗುವ ; ಹರ್ಷಿಸುವ ; ಆನಂದಿಸುವ. ೨. ನಗುವಿನಿಂದ ಕೂಡಿದ : ಪ್ರಹಸಿತವದನನಾಗಿ ಪೇಚರರೆಂಬೆರಲೆಗಳಂ ನಿಪಾತಿಸಲ್ಕೆನಗೆ ವಿದ್ಯೆಯುಂ ಬೇಟ್ಕುಮೆ ಎಂದೊಲ್ಲದೆ (ಪಶ್ಚಾಶಾ. ೬೦-೬) ; ಕಿಂಚಿತ್ಪ್ರಹಸಿತಾನನವನಜನಾಗುತ (ಪಸಪು. ೪೩-೬೩). [ಸಂ.]

ಪ್ರಹಸ್ತ (ನಾ). ೧. ಚಾಚಿದ ಕೈ; ನೀಡಿದ ಹಸ್ತ : ಅಂತು ಸಮಱದ ಸಂಗ್ರಾಮರಂಗದೊಳ್ ಪರಸ್ಪರವಿರೋಧಕ್ರೋಧವಿಕ್ಷೇಪಹರ್ಷಿತಮಾರ್ಗ ಪ್ರಹಸ್ತಪ್ರಾಸಾಧಿತಘೋರಸಂಗ್ರಾಮರುಂ (ಸಂಪಭಾ. ೦೩-೪೨ ಪ). ೨. ಒಬ್ಬ ರಾಕ್ಷಸನ ಹೆಸರು ; ರಾವಣನ ಮಂತ್ರಿಗಳಲ್ಲಿ ಒಬ್ಬ: ಆರೆಮಗಿದಿರ್ಚುವರ್ ಸಮರಾರಂಭಕ್ಕಾಮೆ ಮುಖ್ಯನಾಯಕರೆನುತ್ತಾರಿಂ ಮುನ್ನಂ ಸೆರಗಂ ಪಾರದೆ ಹಸ್ತಪ್ರಹಸ್ತರುಱದೊಡ್ಡಿರ್ದರ್ (ಸಂಶಾಮಾ. ೦೩-೦೨).

[ಸಂ.]

ಪ್ರಹಾರ (ನಾ). ೧. ಹೊಡೆಯುವಿಕೆ ; ಪೆಟ್ಟು ಕೊಡುವುದು. ೨. ಹೊಡೆತ ; ಏಟು ; ಪೆಟ್ಟು : ಅನ್ಯಶರಪ್ರಹಾರಜರ್ಜರಿತಶರೀರನಾಗಿ (ಗದಾಯು.-೪-೫೩) ; ನಖಪ್ರಹಾರಭರದಿಂದೈದಾಱು. . . ಏಣಶ್ರೇಣಿಯಂ ಪಾಯ್ದು ಕೊಂದುದು (ಪುತ್ರಪು. ೫-೭೦); ಭೀಮ. . . ಮೇಲಾಳ ಮುಱಿದನು ವಿವಿಧಶಸ್ತ್ರಾಸ್ತ್ರಪ್ರಹಾರದಲಿ (ಕುಮಾಕ. ೦೦-೦೬). [ಸಂ.]

ಪ್ರಹಾರತ್ರಯ (ನಾ). [ಸಂಗೀತ] ಸಮ, ವಿಷಮ ಮತ್ತು ಸಮ ವಿಷಮಗಳೆಂಬ ಮೂರು ಬಗೆಯ ವಾದ್ಯಬಾಜನಗಳು : ಸಮ ಪ್ರಹಾರ ವಿಷಮಪ್ರಹಾರ ಸಮವಿಷಮಪ್ರಹಾರಮೆಂಬ ಪ್ರಹಾರತ್ರಯ ದೊಳಂ (ಅಸಪು. ೫-೩೨ ಪ). [ಸಂ.]

ಪ್ರಹಾರಿ (ನಾ). ನಾಶಪಡಿಸುವವನು; ಪರಾಕ್ರಮಿ : ಸೂರ್ಪಕಪ್ರಹರ ಪ್ರಹಾರಿಗೆ ದರ್ಪಿತ ತ್ರಿಪುರೇಂದ್ರನಾಗ್ನಿಗಹರ್ಪತಿಪ್ರಣುತ ಪ್ರಭಾಮಯ ದಿವ್ಯದೇಹಂಗೆ. . . ಅರ್ಪಿಸುವೆನಿಂದುಗ್ರಗರಳವ (ಬಸಪು. ೫೬-೪೦).
[ಸಂ. ಪ್ರಹಾರಿನ್]

ಪ್ರಹಾರಿಸು (ಕ್ರಿ). ಹೊಡೆ; ಏಟು ಕೊಡು; ಪೆಟ್ಟು ಹಾಕು : ನಾನಾ ಯುಧಂಗಳಿಂದಂ ಪ್ರಹಾರಿಸುವ ಸುಭಟಾನೀಕದಬ್ಬರದ. . .ಅನೂನಸಂಭ್ರಮ ದಿಂದೆ ಕಲ್ಯಾಣಪಟ್ಟಣದ ಪೊಱವೊಳಲ್ ಮೆಱಿದುದು (ಕಬಪು. ೦೦-೬೦); ಖುರದಿಂ ಪ್ರಹಾರಿಸಲ್ ಸೀಳ್ದುದದು ಸಕ್ಕಸಮಮಾಗಿ (ಕಬಪು. ೪೪-೨೫).
[ಪ್ರಹಾರ + — ಇಸ್ಸು]

ಪ್ರಹಿ (ನಾ). ಬಾವಿ : "ಅಂಧುಃ, ಪ್ರಹಿಃ, ಕೂಪಃ, ಉದಪಾನಂ – ೪ ಸೇದುವ ಭಾವಿಯ ಹೆಸರುಗಳು" (ಸಿದ್ಧಾಂತಿ. ೮೫). [ಸಂ.]

ಪ್ರಹಿತ (ಗು). ೧. ಇಟ್ಟ; ಇರಿಸಿದ : ಐಕಿಲ ಭರದೆ ಪಡಲ್ಪಟ್ಟು ಗೇಣಾಗಿ ಪಾಂಥರ್ತೊಡೆ ತೋಳ್ಗಳ್ಕೂಡೆ ಜಾನುಪ್ರಹಿತಶಿರರದೇನಿರ್ದರೋ ಶೀತ ಭೀತರ್ (ರಾಜಕೇ. ೯-೨೨). ೨. ಕಳುಹಿಸಿದ : ಅಮರಾಧಿಪಪ್ರಹಿತ ಸುರತರುಪ್ರಸೂನಗ್ರಥಿತಸುರಭಿದಾಮದುಕೂಲಾಂಬರವಿಚಿತ್ರಭೂಷಸುರಭಿ ವಿಲೇಪನಪ್ರಮುಖಭೋಗೋಪಭೋಗಂಗಳೊಳಂ (ಅಬಿಪು. ೬-೩ ಪ).
೩. (ಬಾಣದಂತೆ) ಬಿಟ್ಟ; ಪ್ರಯೋಗಿಸಿದ. [ಸಂ.]

ಪ್ರಹುಡ 'ಪ್ರವುಡ' ನೋ.

ಪ್ರಹುಡಿ (ನಾ). ನೈಪುಣ್ಯ; ಪಾಂಡಿತ್ಯ ; ಪ್ರೌಢಿ : ಕಂಡೆವೈ ಕೌಣಪನ ಸಾಹಸತಂಡವನು ಪುಸಿಯಲ್ಲ ಪ್ರಥಮದಿ ಚಂಡ ಚಾಮುಂಡರಿಗೆ ನಮ್ಮಿಂದ ಳಿಯದುಗ್ಗಡದಖಂಡವರಗಳನಿತ್ತಿರಿನ್ನೇನಂಡಿಸಿಕೆ ಮಾರ್ಗವನು ಬಿಡುವದೆ ಪಂಡಿತತ್ವದ ಪ್ರಹುಡಿ (ಅಂಬಿಕಾ. ೦೭-೬೫). [<ಸಂ. ಪ್ರೌಢಿ]

ಪ್ರಹುಡಿಕಾಱ (ನಾ). ನೈಪುಣ್ಯವುಳ್ಳವನು ; ನಿಪುಣ : ಲೆತ್ತ ಪಗಡೆ ಜೂಜು ಪ್ರಹುಡಿಕಾಱರೊಳುಬ್ಬಿ ಚಿತ್ತವಿಭ್ರಮಿತರಾಗಿಹರು [ಪಾಕಾಂ. ಜತ್ತಿಲಿ ಪಗಡೆಯನಾಡುತಿರಲು. ಓರ್ವ ಚಿತ್ತಭ್ರಮನಾಗುತಿಂತು] (ಅಬ್ಬಲೂ. ೩-೬೫). [ಪ್ರಹುಡಿ + — ಕಾಱ]

ಪ್ರಹುಡಿಕೆ (ನಾ). = ಪ್ರಹುಂಡಿ : ಯೋಗ್ಯವಯೋಗ್ಯವರಿಯದಲೆ ಮಾಡುವರು ಪ್ರಹುಡಿಕೆಯ [ಯೆ] (ಬಿಸ್ಸಪು. ೬೨-೪೦).
[ಪ್ರಹುಡ (<ಪ್ರವುಡ) + — ಇಕೆ]

ಪ್ರಹುಡು (ನಾ). ನೈಪುಣ್ಯ; ಪ್ರೌಢಿಮೆ : ಆನೆಗಳು ವೃಷಭಾದಿ ರೆಕ್ಕೆಯ ನಾನುವರೆ ಅವರೀಗ ಕುಲಗೆಟ್ಟೇನು ಪ್ರಹುಡೆನಲಕ್ಕು (ಬಿಸ್ಸಪು. ೬೨-೫೫).
[ಪ್ರಹುಡ (<ಪ್ರವುಡ) + — ಉ]

ಪ್ರಹೃತಿ (ನಾ). ಅಳಿವು; ಲಯ; ನಾಶ : ಆತಂ ನಿಮಗಭೇದ್ಯನಾತನಿಂದೀ ಜಗದ್ವ್ರಾತದುತ್ಪತ್ತಿಸ್ಥಿತಿಪ್ರಹೃತಿಗಳ್ ನಡೆಗುಂ (ಪದ್ಮರಾ. ೦೦-೨೫೨).
[ಸಂ.]

ಪ್ರಹೃಷ್ಟ (ಗು). ಸಂತುಷ್ಟವಾದ ; ಆನಂದಿತ: ಓರ್ವ ಪುರುಷಂ ಪ್ರಹೃಷ್ಟವದನಂ ತ್ವರಿತಗತಿಯಿಂ ಬಂದು (ಕಾದಂಪೂ. ೪೨೫). [ಸಂ.]

ಪ್ರಹೇಯ (ನಾ). ಅತ್ಯಂತ ಹೇಯವಾದುದು : ಈಯೊಡಲಂ ಪಿಡಿ ದಾವಂ ಸಾಯದೆ ಪುಟ್ಟದೆ ಸಮಸ್ತಪಾಪಾಯಾಸಕ್ಕಾಯತನಮಾಗದಿರ್ಕುಂ ಶ್ರೇಯೋರ್ಥಿಜನ ಪ್ರಹೇಯಮಿದೆ ದಲ್ ಮೊದಲೊಳ್ (ಕಾಸಾರ. ೨೫೪).
[ಸಂ.]

ಪ್ರಹೇಲಿಕೆ, ಪ್ರಹೇಳಿಕೆ (ನಾ). ಗೂಢಾರ್ಥವುಳ್ಳ ಮಾತು; ಒಗಟು; ಸಮಸ್ಯೆ : "ಒಗಟೆಯದು ಪ್ರಹೇಲಿ[ಪಾಕಾಂ.೪]ಕೆ ಪ್ರವಲ್ಹಿಕೆ" (ಮಂಗರಾ. ೨೭-೭). **ಪ್ರಹೇಳಿಕೆ** : "ಪ್ರವ(ಲ್ಲೀ)ಲ್ಹೀಕಾ, ಪ್ರಹೇಳಿಕಾ—ಈ ೨ ಒಗಂಟೆ" (ಹಲಾಯು. ೨೫-೦೫೦): ರಸವತ್ಕಾವ್ಯಕಥಾಪ್ರಹೇಳಿಕೆಗಳಂ ಪೇಳುತ್ತುಂ. . . ಓಲಗಿಪ್ಪರವನೀಭೃತ್ಕಾಂತೆಯಂ ಕಾಂತೆಯರ್ (ಕುಸುಮಾ. ೫-೦೯); ಮಣಿಮಯಮಂಟಪದ ಮತ್ತವಾರಣದೊಳ್ಮಲಂಗಿ ತನ್ನೋಪಂಗೆ ಜಾಣಂ ಪ್ರಹೇಳಿಕೆಯಂ ಪೇಳ್ದೊಡೆ (ತ್ರಿಪುಪಿ. ೨೪-೦೭೦ ಪ); "ಕಾಯವೆ ಮೂರು ಕಾಲಾರು ಮಸ್ತಕ ನವ ಬಾಯಿ ಒಂಬತ್ತು ಬಾಲೆರಡು ಕೈಗಳು ನಾಲ್ಕು ಕಂಗಳ ರವೆ ಹದಿನೆಂಟು ಮೈಯಿಕ್ಕಿ ನಾನೆರಗುವೆನು" ಎಂಬ ಪ್ರಹೇಳಿಕೆಯೂ ಅನೇಕ ಪ್ರತಿಗಳಲ್ಲಿ ಕಂಡುಬರುತ್ತದೆ (ಕುಮಾಸಾಂ. ೯೦).
ℙ ದಂಡಿಯ ಕಾವ್ಯಾದರ್ಶದಲ್ಲಿ ಸಮಾಗತಾ, ವಂಚಿತಾ, ವ್ಯುತ್ಕ್ರಾಂತಾ, ಪ್ರಮುಷಿತಾ, ಸಮಾನರೂಪಾ, ವರುಷಾ, ಸಂಖ್ಯಾತಾ, ಪ್ರಕಲ್ಪಿತಾ, ನಾಮಾಂತರಿತಾ, ನಿಭೃತಾ, ಸಮಾನ ಶಬ್ದಾ, ಸಂಮೂಢಾ, ಪರಿಹಾರಿಕಾ, ಏಕಚ್ಛನ್ನಾ, ಉಭಯಚ್ಛನ್ನಾ ಮತ್ತು ಸಂಕೀರ್ಣಾ ಎಂಬ ಹದಿನಾರು ಬಗೆಯ ಪ್ರಹೇಲಿಕೆಗಳು ವಿವರಿಸಲ್ಪಟ್ಟಿವೆ. [ಸಂ.ಪ್ರಹೇಲಿಕಾ]

ಪ್ರಹೇಳಿಕೆ 'ಪ್ರಹೇಲಿಕೆ' ನೋ.

ಪ್ರಹ್ಲಾದ (ನಾ). ೧. ಅಧಿಕವಾದ ಸಂತೋಷ ; ಅತಿಶಯವಾದ ಆನಂದ : ಪರಮತತ್ತ್ವಪರಿಚಿತಗುರುಜನಮನಃಪ್ರಹ್ಲಾದಜನಕನುಂ (ಕಂಪ್ರಪು. ೪-೬೦ ಪ). ೨. ಅವ್ಯಕ್ತವಾದ ಶಬ್ದ. ೩. ಹಿರಣ್ಯಕಶಿಪು ಎಂಬ ಅಸುರನ ಮಗ : ಈತ ತಾ ಪ್ರಹ್ಲಾದದೇವನು (ಸಂಭಪ. ೬-೩೦); ಓಂ ನಮಶ್ಶಿವ ಎಂಬ ವರ್ಣಗಳ ತೇದು ತೇದವ ಬರಸಿ ಮಿಗೆ ಪ್ರಹ್ಲಾದ ನೀನೇ ಬರೆಯೆನಲು ಮಧುಸೂದನನ ನಾಮಗಳನೊಂದೊಂದಾಗಿ ವಿರಚಿಸಿದ (ತ್ರಹ್ಮಾಕ. ೬-೦). [ಸಂ.]

ಪ್ರಹ್ವ (ಗು). ೧. ನಮ್ರನಾದ; ವಿನೀತನಾದ. (ನಾ). ೨. ಬಾಗಿದ ವನು; ವಿನೀತನಾದವನು : "ಪ್ರವಣಃ, ಪ್ರಹ್ವಃ—ಈ ೨ ವಿನೀತಂ" (ಹಲಾಯು. ೫೬-೦೯೭). [ಸಂ.]

ಪ್ರಳಂಬ 'ಪ್ರಲಂಬ' ನೋ.

ಪ್ರಳಯ 'ಪ್ರಲಯ' ನೋ.

ಪ್ರಳಯಕರ (ನಾ). ವಿನಾಶಕಾರಿಯಾದುದು : ಸುಭಟಜನಚಮತ್ಕಾರಿ ತೇಜೋಮಹೌರ್ವಾನಲಮುಗ್ರಾರಾತ್ರಿವರ್ಗಪ್ರಳ[ಪಾಕಾಂ.ಲ]ಯಕರಮ ದೊಂದೆಯ್ದೆತಾಳ್ದಿತ್ತಗುರ್ವಂ (ಅಬಿಪು.೦೩-೪೫). [ಸಂ.ಪ್ರಲಯಕರ]

ಪ್ರಳಯಕಾಲ 'ಪ್ರಲಯಕಾಲ' ನೋ.

ಪ್ರಳಯಗತ (ಗು). ೧. ನಾಶ ಹೊಂದಿದ ; ನಾಶವಾದ. (ನಾ). ೨. ನಾಶವಾದ ವ್ಯಕ್ತಿ : ಕೃತಯುಗಕ್ಕೆ ಅರಸು ಶೂಲಿ . . . ಆ ಶೂಲಿ ಆಚಾರ್ಯನಾದ. . . ಇಷ್ಟವ ಹಂಚಿಕೊಂಡರು ದೃಷ್ಟವ ಕಾಬುದಕ್ಕೆ ಮಾಟವನಿರಿಸಿ ಪ್ರಳಯಗತರಾದರಯ್ಯಾ (ವೋಳಿಮಾ. ೪-೦೦).
[ಸಂ. ಪ್ರಲಯಗತ]

ಪ್ರಳಯಗಲುರ ? (ನಾ). ಒಂದು ಬಗೆಯ ಚಿನ್ನದ ನಾಣ್ಯ : ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು. ಯಾವವೆಂದರೆ—೧ ಗಬರು . . . ಧಾರವಾಡಿ ೧ ಪ್ರಳಯಗಲುರ ೧ ಪಾಪನಾಯಕಿಹೊನ್ನು (ಸಿತ್ರಪಾ. ೦೦೪). [?]

ಪ್ರಳಯತಿಮಿರ (ನಾ). ವಿನಾಶಕಾಲದಲ್ಲಿ ಕವಿಯುವ ಕತ್ತಲು ; ಮಹಾಂಧಕಾರ : ಪ್ರಳಯತಿಮಿರದ ಬೀಜ ನೀಲಾಚಳದ ಸಾಯುಜ್ಯವೊ ನಭೋಮಂಡಲದೊಳದನೇವೊಗಳುವೆನು ಮಸಗಿತು ತಮಸ್ತೋಮ (ಶುಪ್ರಾಕ್ರೂ. ೦೭-೨೮). [ಸಂ. ಪ್ರಲಯತಿಮಿರ]

ಪ್ರಳಯಪಯೋಧಿ (ನಾ). ವಿನಾಶಕಾಲದಲ್ಲಿ ಉಕ್ಕಿ ಜಗತ್ತನ್ನು ನಾಶ ಮಾಡುವ ಸಮುದ್ರ : ಪ್ರಳಯಪಯೋಧಿವೋಲಳುರ್ದು ಪೆಂಕುಳಿಗೊಂಡ ಮದೇಭವೈರಿವೋಲ್ ಕೆಳರ್ದು . . . ತಾಗಿದಂ (ಪಂಪಭಾ. ೦೦-೦೦೩). [ಸಂ. ಪ್ರಲಯಪಯೋಧಿ]

ಪ್ರಳಯವಹ್ನಿ (ನಾ). = ಪ್ರಲಯಾಗ್ನಿ : ಪ್ರಳಯವಹ್ನಿ ತಪವೊತ್ತುದೋ ಭಾಳಲೋಚನನ ಕೋಪ ಕಡುಗಿ ಮುನಿಯಾಯ್ತೊ ಪೇಳೆನೆ ಕಣ್ಣ ಕಡೆ ತೋರಗಿಡಿಗೆದಱ್ . . . ವಿಶ್ವಾಮಿತ್ರನುರವಣಿಸಿ ಬಂದನು (ಹಕಶಾ. ೬-೦). [ಸಂ. ಪ್ರಲಯವಹ್ನಿ]

ಪ್ರಳಯಾಗ್ನಿ 'ಪ್ರಲಯಾಗ್ನಿ' ನೋ.

ಪ್ರಳಯಾತೀತ (ನಾ). ವಿನಾಶವನ್ನು ಮೀರಿದವನು ; ನಾಶವಾಗದ ವನು : ಪ್ರಳಯಾತೀತ ಶರಣಸನ್ನಿಹಿತ ನಮ್ಮ ಅಖಂಡೇಶ್ವರ (ಅಖಂಡೇ. ೦೦೭-೬೦). [ಸಂ. ಪ್ರಲಯಾತೀತ]

ಪ್ರಳಯಾನಿಳ (ನಾ). ಪ್ರಳಯಕಾಲದಲ್ಲಿ ಬೀಸುವ ಬಿರುಗಾಳಿ : ಪ್ರಳಯಾನಿಳನಿಂ ಕನಕಾಚಳಮೆಂತು ತರಳದಂತೆ ದರ್ಶನಶುದ್ಧಂ ಚಳಿಯಿ ಸಲರಿಯಂ ಕುಮತಂಗಳಿನಾಪ್ತಪದಾರ್ಥದಲ್ಲಿ ದೃಢನಪ್ಪುದಱಿಂ (ಸಮಾಪ. ೯-೦೩೩). [ಸಂ. ಪ್ರಲಯಾನಿಲ]

ಪ್ರಳಾಪ 'ಪ್ರಲಾಪ' ನೋ.

ಪ್ರಳಾಪಸನ್ನಿ (ನಾ). = ಪ್ರಲಾಪ ೪ : ಇವು ಮುಂತಾದ ಚಿಕಿತ್ಸೆಗಳು ಪ್ರಯೋಗಿಸಲು ಪ್ರಳಾಪಸನ್ನಿ ಪರಿಹರವಹುದು (ಸಶಸ್ತ್ರ. ೦೬೬). [ಪ್ರಳಾಪ (=ಪ್ರಲಾಪ)+ಸನ್ನಿ]

ಪ್ರಳಾಪಸನ್ನಿಪಾತ 'ಪ್ರಲಾಪಸನ್ನಿಪಾತ' ನೋ.

ಪ್ರಳಾಪಿಸು 'ಪ್ರಲಾಪಿಸು' ನೋ.

ಪ್ರಾಂಗಣ (ನಾ). ಅಂಗಳ ; ಅಂಗಣ : "ಅಜಿರಂ, ಪ್ರಾಂಗಣಾ_ ಈ ೨ ಅಂಗಣಂ" (ಹಶಾಯು. ೩೦-೦೧೧) ; ಶ್ರೀದೇವಂ ವಿಮಾನೋಪಾಂತಸ್ಥಿತಿ ಯೊಳ್ ಜಿನನಿಲಯಪ್ರಾಂಗಣದೊಳ್ . . . ತ್ರಿಲೋಕತಿಲಕಂಗೆ ಮಹಾ ಮಹಮಂ ಪೊಣರ್ಚಿದಂ (ಶಾಂತಿಪು. ೭-೨೯ ಪ) ; ವಿಸರುಹವದನೆಯರ ನೂಪುರಂಗಳ ದನಿಯಿಂ . . . ಅಳಿಗಳ ರಸಿತಂ ದ್ವಿಗುಣಿಸಿತು ನೃಪಗೃಹ ಪ್ರಾಂಗಣದೊಳ್ (ಶಾಸ್ತ್ರಪು. ೯-೩೩) ; ಊಟ ಮುಗಿದ ಮೇಲೆ ಮಠದ ಪ್ರಾಂಗಣದಲ್ಲಿ ತಂಪಾದ ಸಿಮೆಂಟುನೆಲದ ಮೇಲೆ ಕೂತ ಬ್ರಾಹ್ಮಣರ ನಡುವೆ (ಸಂಸ್ಕಾರ. ೯೦). [ಸಂ.]

ಪ್ರಾಂಚಿತ (ಗು). ೧. ಮನೋಹರವಾದ. (ನಾ). ೨. ಮನೋಹರ ವಾದುದು ; ರಮಣೀಯವಾದುದು : ಕಾಂಚನದಂತೆ ರತ್ನತರಮಪ್ಪ ಜಿನಾಧಿಪಮೂರ್ತಿ ಸತ್ಪ್ರಭಾಸಂಚಯ ಮಧ್ಯವರ್ತಿಯೆನಿಸಿರ್ದು ಸುರೇಂದ್ರ ಮದೇಭಮಸ್ತದೊಳ್ ಪ್ರಾಂಚಿತವಾಗಿ ತಾಂ ಪೊಳೆಯುತಿರ್ದುದು . . . ಚಂದ್ರನಂದದಿಂ (ಶಾಪಪು. ೭-೯೦) ; ವಿತತಾನೇಕ ಪದಾವಭಾಸಿ ಹರಿನಾಗ ಪ್ರಾಂಚಿತಂ ಖಡ್ಗಿಮಂಡಿತಮುಷ್ಕೀರ್ಣವರಾಹವಾಸಮಬಲಾಂಚದ್ಧೀವರೌ ಘಾಶ್ರಿತಂ (ಪ್ರಸಪ. ೦೦-೩೦). ೩. ಗೌರವಾರ್ಹವಾದುದು: ಅದು ಪಂಚಾ ಕ್ಷರದಂತೆವೋಲ್ಪ್ರಣವರ್ಣಪ್ರಾಂಚಿತಂ ಭಸ್ಮದಂತುದಿತಶ್ರೀಕರಲಕ್ಷಣಪ್ರಕ ಟಿತಂ (ಪ್ರಸಪ. ೨೬-೯೯). [ಸಂ.]

ಪ್ರಾಂಜಲ, ಪ್ರಾಂಜಳ (ಗು). ೧. ಮನೋಹರವಾದ ; ಸುಂದರ ವಾದ : ಭಕ್ತಿರಸಾರ್ದ್ರಚಿತ್ತಯುತಹೃದ್ರಾಜೀವಸಂಪೂರ್ಣಸಂಕಾಶಂ ಪ್ರಾಂಜಲ[ಶಾಶಾಂ. ಕಾಶಪ್ರಜ್ವಲ]ಮೂರ್ತಿಕೀರ್ತಿಭರಿತಂ ಶ್ರೀ ಮಾದಿರಾಜಾಹ್ವಯಂ (ಗಿರಿ. ೦-೩೬). ೨. ಸರಳವಾದ; ನೇರವಾದ.

ಪ್ರಾಂಜಳ (ನಾ). ೩. ಗೌರವಾರ್ಹ ವ್ಯಕ್ತಿ ; ಪೂಜ್ಯನಾದವನಂ : ಶಾಂಭವಭಕ್ತಿಪ್ರಾಂಜಳರ್ಭೂಮಹಿತಮಹಿಮರೇಳ್ವಂದರಾನಂದದಿಂದಂ (ಪ್ರಸಪ. ೩-೯೩).

ಪ್ರಾಂಜಲವಾಗು = ಸರಳವಾಗು ; ನೇರವಾಗು : ಇಷ್ಟದೇವತೆಯ ಇದಿರಿನಲ್ಲಿ ಭಕ್ತಿನಮ್ರವಾದ ಪ್ರಾಂಜಲವಾದ ಅಂತರಂಗನಿರೀಕ್ಷಣೆ (ಕಣಾಸ. ೦೬೯) ; ಅವರಲ್ಲಿ ನನಗಿರುವ ಭಕ್ತಿಯನ್ನು ಪ್ರಾಂಜಲವಾಗಿ ಈ ರೀತಿ ಅರ್ಪಿಸಿಕೊಂಡಿದ್ದೇನೆ (ಗಾಶಪ. ೬೯) ; ತಾವು ಕಂಡುಂಡ ಬಾಳನ್ನು ಪ್ರಾಂಜಲವಾಗಿಯಾದರೂ ಪರಿಣಾಮಕಾರಕವಾಗಿ ಇಲ್ಲಿ ಕೊಟ್ಟಿದ್ದಾರೆ (ಸಾಸಮಾ. ೦೬೬). [ಸಂ.]

ಪ್ರಾಂಜಲತೆ (ನಾ). ಸರಳತೆ : ಥಂಡಿ ನೆಗಡಿ ಆದಾಗ ಕುಡೀತಿರತೇನಿ ನಾನೆ ಒಮ್ಮೊಮ್ಮೆ ಎಂದು ಆಚಾರ್ಯರು ತಮ್ಮ ಪ್ರಾಂಜಲತೆಯನ್ನಷ್ಟು ತೋರಿಸಿದರು (ಸಮಸಾ. ೩೯೯). [ಸಂ. ಪ್ರಾಂಜಲತಾ]

ಪ್ರಾಂಜಲಿ (ಗು). ೧. ಕೈಮುಗಿದಿರುವ : ಅಂಜನದಿಂ ಪುದಿದ ತಮಃ ಪುಂಜಂ ಕಿಡೆ ಸೂಕ್ಷ್ಮದೃಷ್ಟಿ ಸಮನಿಸುವವೊಲಾ ಪ್ರಾಂಜಲಿ ವಿಬುದ್ಧಮತಿಗೆ ನಿರಂಜನನಿಂದಾದುದಮಳದೃಷ್ಟಿವಿಕಾಸಂ(ಧರ್ಮಪಾ. ೦೯-೦೬). (ನಾ). ೨. ಹಸ್ತಗಳ ಜೋಡಣೆ ; ಅಂಜಲಿ. [ಸಂ.]

ಪ್ರಾಂಜಳ 'ಪ್ರಾಂಜಲ' ನೋ.

ಪ್ರಾಂತ (ನಾ). ೧. ದಡ ; ಅಂಚು. ೨. ಮೇರೆ ; ಗಡಿ ; ಸೀಮೆ. ೩. ತುದಿ ; ಮೊನೆ. ೪. ಪಕ್ಕ ; ಪಾರ್ಶ್ವ. ೫. ಎಡೆ ; ಸ್ಥಳ ; ಪ್ರದೇಶ : ಆಕಾಶದ ಪ್ರಾಂತದಿಂದ ಭಯಂಕರವಾದ ವೇಗದಿಂದ ಗಾಳಿಯು ಗರ್ಜಿಸಿಕೊಂಡೆದ್ದುದು ಕೇಳಿಸಿತು (ಬೇಸಿಕಾ. ೦೩೦). ೬. ರಾಜ್ಯ; ನಾಡು : ಆ ಪ್ರಾಂತಗಳೊಳಗಿಂದ ಸಹ ಬದಕು ಬಹಳ ಬರಬೇಕೆಂದು ನಮ್ಮ ಅಪೇಕ್ಷೆ (ಮುಂಬಣ್ಣಾ. ೬ ಪ್ರಸ್ತಾವನೆ) ; ಹೊಗೆಸೊಪ್ಪಿನ ಕಾರ್ಖಾನೆ ಗಳು ಮದ್ರಾಸು, ಬರ್ಮಾ ಮುಂತಾದ ಪ್ರಾಂತಗಳಲ್ಲಿಯೂ ಅನೇಕ ಭಾಗಗಳಲ್ಲಿ ಸಕ್ಕರೆ ಕಾರ್ಖಾನೆಗಳೂ ಇವೆ (ಭಾಸಪ. ೨೬೬). [ಸಂ.]

ಪ್ರಾಂತಭೇದ (ನಾ). ೧. ನಾಡುಗಳಲ್ಲಿರುವ ವ್ಯತ್ಯಾಸ, _ ಅಂತರ : ಈಗ ಪ್ರಯಾಣ ಸೌಕರ್ಯಗಳೂ ವ್ಯವಹಾರಸಾಧನಗಳೂ ಹೆಚ್ಚಾಗಿರುವುದ ರಿಂದ ದೂರವಾಗಲಿ ಪ್ರಾಂತಭೇದಗಳಾಗಲಿ ಪರ್ವತ ನದಿಗಳಾಗಲಿ ಪ್ರಾಂತ ಭೇದಕ್ಕೆ ಅಷ್ಟು ಮುಖ್ಯ ಕಾರಣಗಳಾಗಿಲ್ಲ (ಕೃಸಿಪ. ೨೯೬). ೨. ಒಂದು ಭಾಷೆಯನ್ನು ಆಡುವ ನಾಡಿನಲ್ಲಿಯೇ ಪ್ರತ್ಯೇಕವಾಗಿ ಕಂಡು ಬರುವ ವ್ಯತ್ಯಾಸ : ಈಗ ಕನ್ನಡದಲ್ಲಿ ಧಾರ್ವಾಡದ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ ಎಂದು ಮೂರು ಪ್ರಾಂತಭೇದಗಳಿವೆ (ಕೃಸಿಪ. ೨೯೯). [ಸಂ.]

ಪ್ರಾಂತರ (ನಾ). ೧. ಎರಡು ಊರಿನ ಮಧ್ಯಪ್ರದೇಶ ; ಎಡೆಯ ನಾಡು : "ಎರಡೂರೆಡೆಯ(ಂ) ನಿಡುಮಾಳ(ಮ)ಂ ಪ್ರಾಂತರಮೆಂಬುದು" (ಹಶಾಯು. ೧೩-೦೦೬). ೨. ಬಹಳ ದೂರ ನಡೆಯಬೇಕಾದ ದಾರಿ. ೩. ಬಹಳ ದೂರ ಮರ, ನೆರಳು, ನೀರು ಯಾವುದೂ ಇಲ್ಲದ ದಾರಿ ೪. ಕಾಡು; ಅರಣ್ಯ : ಆಕಾಶ, ಪ್ರಾಂತರ, ಸಮುದ್ರ, ಸರ್ವತ್ರನಿಶ್ಶಬ್ದ —ಅವಿರತವಾಗಿ ಕಲ್ಲೋಲವಾಗಿದ್ದ ಸಮುದ್ರ ಗರ್ಜನೆ (ಶಪಾಶಾಂ. ೦೨). [ಸಂ.]

ಪ್ರಾಂತರಕ್ಷಕ (ನಾ). ಗಡಿಯನ್ನು ಕಾಯುವವನು ; ಸೀಮಾರಕ್ಷಕ : ಪ್ರಾಂತರಕ್ಷಕರಿಗೆ 'ಸದ್ಯದಲ್ಲಿಯೇ ಯವನಸಾಮ್ರಾಟನಿಂದ ಕೆಲವು ಜನ ದೂತರು ಬರುತ್ತಾರೆ ; ಅವರಿಗೆ ಅಡ್ಡಿಪಡಿಸಬೇಡಿ !' ಎಂದು ತಿಳಿಸಿ ದ್ದನು (ಬಂಕಚಾ. ೦೮೨). [ಸಂ.]

ಪ್ರಾಂತಲೋಪ (ನಾ). [ವ್ಯಾಕ]ಅಂತ್ಯಾಕ್ಷರದ ಲೋಪ : ಸಾಸಿರಮಿರ

ಮುಂದೊತ್ತಿ ಸಮಾಸದೊಳಕ್ಕುಂ ಪಯಿನ್ನದರ್ಕೆ ಯಥೋಕ್ತಂ ಶಾಸಿಸುವರ್ ನೂಱರ್ಕಂ ಸಾಸಿರಕಂ ಪ್ರಾಂತಲೋಪವುಂ ಕೆಲವೆಡೆಯೊಳ್ (ಶಾಸ್ತ್ರಾಪ. ೨೭೯). [ಸಂ.]

ಪ್ರಾಂತು (ನಾ). = ಪ್ರಾಂತ ೬ : ಇಲ್ಲಿ ಕರ್ನಾಟಕ ಪ್ರಾಂತಿನ ಪೈಕಿ ಬೆಳಗಾಂವಿ ಎಂಬಲ್ಲಿಯ ತುಪ್ಪ ಬಹಳ ಉತ್ತಮವೆಂದು ತಿಳಿಯುತ್ತಾರೆ (ಮುಂಬಪ್ರಾ. ೩೬). [<ಸಂ. ಪ್ರಾಂತ]

ಪ್ರಾಂತ್ಯ (ನಾ). = ಪ್ರಾಂತ ೬ : ಡಾನ್‌ಕಾಸಕ್ಸ್ ಪ್ರಾಂತ್ಯದಲ್ಲಿ ಆಗಲೇ ಅವನ ಕುದುರೆಯ ಗಾಡಿಯನ್ನು ಎತ್ತಿನ ಗಾಡಿಗೆ ಬದಲಾಯಿಸಿಯಾಗಿದ್ದಿತು (ಮಲೆಪಾ. ೦೭); ನನ್ನ ಅಜ್ಜಂದಿರಾದ ಏಕಾಂಬರಮುದಲಿಯಾರರು ಈ ಪ್ರಾಂತ್ಯವನ್ನು ಆಳುತ್ತಿದ್ದ ನವಾಬರಲ್ಲಿ, ದಿವಾನಗಿರಿ ನಡೆಸಿ ತುಂಬಾ ಆಸ್ತಿ ಮಾಡಿದರು (ಪ್ರತಾಪ. ೦); ಪ್ರಾಂತ್ಯ ಸೇರಿದರೂ ಭ್ರಾಂತಿ ಬಿಡಲಿಲ್ಲ (ಗಾಡೆ). [< ಪ್ರಾಂತ]

ಪ್ರಾಂಶು (ಗು). ೧. ಎತ್ತರವಾದ; ಉನ್ನತವಾದ: ಸಾಲಪ್ರಾಂಶು ವಿಶಾಲಲೋಲನಯನಂ . . . ಗಂಗಾತ್ಮಜನ್ಮಂ ಜಯಶ್ರೀಲೋಲಂ ಜಮದಗ್ನಿ ರಾಮಮುನಿಯೊಳ್ ಕಲ್ತಂ ಧರ್ಮವಿದ್ಯೆಯಂ (ಪಂಪಭಾ. ೦-೬೮). ೨. ಉದ್ದವಾದ ; ನೀಳವಾದ : ರಾಜತ್ಕಳಕಂಠನಿಸ್ವನೆ ಕಳಾಪಿಪ್ರಾಂಶು ಧಮ್ಮಿಲ್ಲೆಯೆಂಬ ನಿಜಾಕಾರಮನುಂಟುಮಾಡಿ (ಸುಳುಮಾ. ೯-೫೯) (ನಾ). ೩. ಉದ್ದವಾಗಿರುವುದು : "ಪ್ರಾಂಶು, ಉಚ್ಚಂ, ಉನ್ನತಂ, ತುಂಗಂ, ಉದಗ್ರಂ_ಈ ೫ ಉದ್ದಿತು" (ಹಲಾಯು. ೦೨೯-೬೬); ಪುರನಾರೀನಯನಾಂಚಳಸ್ಮಿತಲಸದ್ಬಿಂಬಾಧರಪ್ರಾಂಶು ಸ್ವೆವರಿದೊಂದಾಗಿ ಕಳಿಂದಜಾಮರನದೀ ಶೋಣಾಪಗಾವಾರಿಗಳ್ಬೆರಸಿರ್ದಂದಮನಾನೆ . . . ಚಾಮರವೃಂದಂ ನೆಗೆವಲ್ಲಿ ಪಾಱುವ ಮರಾಳವ್ರಾತದಂತೊಪ್ಪುಗುಂ (ಪ್ರಕಟ. ೩-೦೨). ೪. ಎತ್ತರವಾಗಿರುವ ವ್ಯಕ್ತಿ : ರೋಧೋವಳಯಮೆಲ್ಲಮವಿರಳ ಬಹಳಪ್ರಾಂಶುಪ್ರಕರಮಯಮಾಗೆಯುಂ (ವರ್ಧಮಾ. ೬-೩೦ ಪ); ವನಿತಾರತ್ನಂ ದಲಾ ಕೋಮಲೆ ಜನಕಜೆ ರಾಮಂ ದಲಾ ಬರ್ಪ ನೀಹಾರನಗೇಂದ್ರಪ್ರಾಂಶು (ಪಂಠಾಮಾ. ೭-೯೩). [ಸಂ.]

ಪ್ರಾಂಶುಪಾಲ (ನಾ). ಉನ್ನತಶಿಕ್ಷಣಸಂಸ್ಥೆಯ ಮುಖ್ಯಸ್ಥ ; ಪ್ರಿನ್ಸಿಪಾಲ್ : ಅವರು ಧಾರವಾಡದ ಕಾಲೇಜೊಂದರಲ್ಲಿ ಪ್ರಾಂಶುಪಾಲರಾಗಿದ್ದಾರೆ (ಕೂಡಿ). [ಬಳಕೆಯಲ್ಲಿರುವ ಈ ಶಬ್ದವು ಸಂಸ್ಕೃತದಲ್ಲಿ ಈ ಅರ್ಥದಲ್ಲಿ ವ್ಯುತ್ಪನ್ನವಾಗುವುದಿಲ್ಲ. ಇಂಗ್ಲಿಷಿನ 'ಪ್ರಿನ್ಸಿಪಾಲ್' ಎಂಬ ಶಬ್ದಕ್ಕೆ ರೂಪ ಸಾಮ್ಯವಿರುವುದರಿಂದ ಇದಕ್ಕೆ ಪ್ರಯೋಗಾರ್ಹತೆಯಿದೆ]

ಪ್ರಾಂಸರಿನೋಟು 'ಪ್ರಾವಿಂಸರಿನೋಟು' ನೋ.

ಪ್ರಾಕಟ (ನಾ). ಎಲ್ಲರಿಗೂ ತಿಳಿದುದು; ಪ್ರಕಟವಾದುದು : ಅಭ್ಯುದಯ ಪರಮನಿಃಶ್ರೇಯಸಮುಂ ಪ್ರಾಕಟಮಕ್ಕುಂ ವಿದಿತಾನೇಕ ಕವೀಶ ಪ್ರಯೋಗಪದಪದ್ಧತಿಯೊಳ್ (ಕವಿಶಾ. ೦-೦೯) ; ಕೇಕರಪಿಂಗವಿಳೋಕನ ಮುಗ್ರಂ ಪ್ರಾಕಟಕಟಕಟ ದಶನಸಮಗ್ರಂ (ವರ್ಧಮಾ. ೦೩-೨೦ ರಗಳೆ); ಪ್ರಾಕಟದೆ ಹೊಳೆವ ಪೂರ್ನಮಿಯ ಚಂದ್ರನವೋಲನೇಕರೂಪಾಗಿ (ಪೀಶ್ಯಪು. ೨-೬-೩೯). [< ಪ್ರಕಟ]

ಪ್ರಾಕಟ್ಯ (ನಾ). ಹೊರಗೆ ಕಾಣುವಿಕೆ ; ಪ್ರಕಟವಾಗುವಿಕೆ : ಪ್ರಕಾಶವೆಂದರೆ ವ್ಯವಹಾರಕ್ಕೆ ಬೇಕಾದ ಯೋಗ್ಯತೆ. ಇದನ್ನು ತಾರ್ಕಿಕರು ವಿಷಯತೆ ಎನ್ನುವರು. ಮೀಮಾಂಸಕರು ಪ್ರಾಕಟ್ಯವೆನ್ನುವರು (ಹಿಂದಸಾ. ೯೩); ಜ್ಞಾನದಿಂದ ಉತ್ಪನ್ನವಾಗಿ, ಜ್ಞಾನಕ್ಕೆ ವಿಷಯವಾದ ವಸ್ತುವಿನಲ್ಲಿ ಪ್ರಾಕಟ್ಯವೆಂಬ ಧರ್ಮ ಕಾಣಿಸಿಕೊಳ್ಳುತ್ತದೆ (ತತ್ವಪ್ರಾ. ೨೬೯). [ಸಂ.]

ಪ್ರಾಕಾಮ್ಯ (ನಾ). ೧. ತನ್ನ ಇಷ್ಟಕ್ಕೆ ಅನುಸಾರವಾಗಿ ನಡೆಯುವ ಸ್ವಾತಂತ್ರ್ಯ ; ಇಚ್ಛಾಸ್ವಾತಂತ್ರ್ಯ. ೨. ವಿಧೇಯವಾಗಿಲ್ಲದಿರುವಿಕೆ ; ಸ್ವೇಚ್ಛೆ. ೩. ಶಿವನ ಎಂಟು ಬಗೆಯ ಸಿದ್ಧಿಗಳಲ್ಲಿ ಒಂದು ; ಆರನೆಯ ಸಿದ್ಧಿ ; ಶಕ್ತಿ, ಸೌಂದರ್ಯ, ಆಯುಸ್ಸು, ಮಹಿಮೆಂ, ಮತ್ತು ಕಾಂತಿಗಳನ್ನು ಉಂಟುಮಾಡುವ ಸಿದ್ಧಿ : ಅಣಿಮಾ . . . ಪ್ರಾಕಾಮ್ಯ . . . ಕಾಮರೂಪಿತ್ಯಾದಿ ಭೇದದಿಂ ಕ್ರಿಯಾಗೋಚರರ್ದ್ಧಿ ಬಹುವಿಧಂ (ತತ್ವಪ್ರಾ. ೦೭೯); ಸ್ವೇಚ್ಛೆಯಿಂದಾಕಾಶಗಮನಾದಿ ಸರ್ವಸಿದ್ಧಿಯೇ ಪ್ರಾಕಾಮ್ಯವೆನಿಸುವದು ಸ್ವಶರೀರಪ್ರಕಾಶದಿಂ ಸರ್ವಾಥಂಗಳಂ ಬೆಳಗುವ ತನಮಾದೊಡಂ ಪ್ರಾಕಾಮ್ಯಮಕ್ಕುಂ (ವಿವೇಳ. ೨೯೦); ಪ್ರಾಕಾಮ್ಯ ಸಿದ್ಧಿಯ ತಿಳಿಯು ಪರರಿಗೆ ಕೊಡುವ ವಿವರವ, ಬಲುಬಲವು ಬಲುಸುಂದರಾಯುಷು ಬಲುಮಹಿಮೆ ಬಲುಕಳೆಯುಯೆಂಬವನೊಲಿವುಯಿವುದೆಯಿದುವೆ ಪ್ರಾಕಾಮ್ಯನಿಪ ಸಿದ್ಧ್ಯಂದ (ಪ್ರಾಸನಿಂ. ೨೦-೯೯); ಐಶ್ವರ್ಯವು ಅಣಿಮಾ, ಲಘಿಮಾ, ಗರಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ ಎಂದು ಎಂಟು ವಿಧ (ಭಾತತ್ವ. ೩೨೯). [ಸಂ.]

ಪ್ರಾಕಾರ (ನಾ). ೧. ಬೇಲಿ. ೨. ಸುತ್ತಲೂ ಕಟ್ಟಿರುವ ಗೋಡೆ; ಸುತ್ತುಗೋಡೆ ; ಪಾಳಿ: "ವಪ್ರಂ, ಸಾಲ (ಂ):, ಪ್ರಾಕಾರಃ–ಈ ೩ ಕೋಂಟೆ" (ಹಲಾಯು. ೯೬-೧೩೩); ಎನಗೀ ಪ್ರಾಕಾರವಿಭೇದನಮಾವುದೊಗಹನಂ (ಪಂಠಾಮಾ. ೦೧-೬೮); ದೊಡ್ಡ ದೇವಾಲಯಗಳಲ್ಲಿ ಇಂತಹ ದ್ವಾರಗಳೂ ಗೋಪುರಗಳೂ ಪ್ರಾಕಾರದ ನಾಲ್ಕು ದಿಕ್ಕುಗಳಲ್ಲಿಯೂ ಇರುವುದುಂಟು (ಪ್ರಾಸ್ತು. ೩೯). [ಸಂ.]

ಪ್ರಾಕು$_1$, ಪ್ರಾಕ್ಕು$_1$ (ಗು). ೧. ಹಿಂದಿನ; ಪೂರ್ವಕಾಲದ. (ನಾ). ೨. ಹಿಂದಿನ ಕಾಲ ; ಪೂರ್ವಕಾಲ : "ಆದಿಃ . . . ಪ್ರಾಕ್, ಪುರಃ_ಈ ೭ ಮುನ್ನಂ" (ಹಲಾಯು. ೧೦೭-೨೨); ದಾರಿಯ ಎರಡು ಸಾಲುಗಳಲ್ಲೂ ಪ್ರಾಕಿನಲ್ಲಿ ನಟ್ಟಿದ್ದ ಈ ಧೂಪದ ಮರಗಳು (ಸ್ವತ್ಯಹೂ. ೯೯); ಭಾರೀ ಪುರಾತನವಾದ ಮನೆ ಇಷು, ಪ್ರಾಕಿನ ಕಟ್ಟೋಣ ಬೇರೆ (ಳಂಬಹು. ೬೦). ೩. ಮೂಡಲು; ಪೂರ್ವದಿಕ್ಕು: "ಪ್ರಾಚೀನಂ, ಪ್ರಾಕ್–ಈ ೨ ಮೂಡಲಾದುದು" (ಹಲಾಯು. ೧೬-೦೦೩); "ಪ್ರಾಕ್ ಪುರಮೆಂದನುಗ್ರಹಿಸೆ ಪೂರ್ವಕ್ಕೆ ಪೆಸರಕ್ಕು" (ಮಂಗರಾ. ೧೨೭-೯). ಪ್ರಾಕ್ಕು: ೨. ಜೋಕೆಯೊಳ್ತಿಳಿದು ಕ್ರಯವನು ಪೇಳ್ವುದಲ್ಲದೊಡೆ ಪ್ರಾಕ್ಕಿನೊಳ್ಪೇಳುತಿಹ ಪದ್ಮರಾಗದ ಪರಿಯೊಳೀ ಕತೆಯೊಳರಿದು ಪೇಳ್ವುದು (ರತ್ನಶಾ. ೦೯-೬).

ಪ್ರಾಕಿನ ಬಾಕಿ =ಹಳೆಯ ಬಾಕಿ; ಬಹಳ ಹಿಂದಿನ ಸಾಲ : ಕೊನೆಗೆ ಪ್ರಾಕಿನ ಬಾಕಿ ಹಣ ಖಂಡಣೆ ಸಹಾ ೩ ಲಕ್ಷರೂಪಾಯಿ ಮೇಲೆ ಚುಕಾಯಿಸಿ (ಹೃದಶ. ೯೩). ಪ್ರಾಕಿನವ = ಹಿಂದಿನ ಕಾಲದವನು ; ಪುರಾತನ ವ್ಯಕ್ತಿ : ನಮ್ಮ ಎಳಚಿತ್ತಾಯರು ಹೇಳಿದರು–ನೀನು ಈ ಊರಿಗೇನೆ ಪ್ರಾಕಿನವನೆಂದು; ವಯಸ್ಸಾದವನೆಂದು (ಪಗುಳ. ೯೫). [<ಸಂ. ಪ್ರಾಚ್]

ಪ್ರಾಕು$_2$, ಪ್ರಾಕ್ಕು$_2$ (ಅ). ಹಿಂದೆ; ಮೊದಲು: ಯಿದಕ್ಕೆ ನೀಉ ಪ್ರಾಕು ಕೊಡುವ ಗುತ್ತಿಗೆ ರೊಕ್ಕ ಬಿಟ್ಟಿ ಬಿರಾಡು ಕ್ರಯಾದಾಯ × × × ವೆಚ್ಚ ಬಿರಾಡ ಗಉಡ ಸೇನಬೋವ ಆಯಗಾಱರಿಗೆ ಕೊಡುವ ಉಪ್ಪು ಸಹಾ ಎನಿಸಿ ಸರ್ವಮಾನ್ಯದ ಶಿಲಾಶಾಸನ (ಎಳ. XI, ಮೊಳಕಾ. ೮-೦೦; 1551); ಎಱದಿಮ್ಮ ರಾಜಯ್ಯಗೆ ಪುಣ್ಯವಾಗಬೇಕೆನ್ದು ಪ್ರಾಕು ತೆಱುವ ರೊಕವನೂ ಸರ್ವಮಾನವಾಗಿ ಬಿಟೆಉ (ಎಳ. XI. ಹಿಂಯೂ. ೯೦-೦೬; 1556 ?); ಪ್ರಾಕು ರೈತರು ಮಾಡಿದ್ದ ಭೂಮಿಯಲ್ಲಿ ಪೌತಿ ಪರಾರಿ ಆದವರ ಪಾಳು ಭೂಮಿಯು . . . ಸಾಗುವಳಿ ಮಾಡಬೇಕು (ಮಜಾವಂ. II, ೬೦).

ಪ್ರಾಕ್ಕು$_2$.

ಪ್ರಾಕ್ಕು ಮುತ್ತೆಯ್ದೆ = ಹಿಂದೆ ಮುತ್ತೈದೆಯಾಗಿದ್ದವಳು ; ವಿಧವೆ : (ಕಿ). [< ಸಂ. ಪ್ರಾಕ್]

ಪ್ರಾಕುಪ್ರಮಾಣ (ನಾ). ಪುರಾತನಕಾಲದ ಪ್ರಮಾಣ : ಗುತ್ತಿ ಗೆಪ್ರಾಕು ಪ್ರಮಾಣನು . . . ಸೋಮೇಶ್ವರದೇವರ ಭಂಡಾರಕ್ಕೆ ಮಾಸಗದಿಯಾಗಿ ಸಲಿಸುವಿರಿ (ಮೈಱಿ. ೦೯೯೬. ೨೯-೦೩; 1530). [ಪ್ರಾಕು$_1$+ಪ್ರಮಾಣ]

ಪ್ರಾಕೃತ (ಗು). ೧. ನೈಸರ್ಗಿಕವಾದ; ಸಹಜವಾದ: ಮೊದಲು ಸ್ತ್ರೀಯು ಯಾವ ಸೌಂದರ್ಯದಿಂದ ಸೃಷ್ಟಿಕರ್ತನಿಂದ ಸೃಷ್ಟಳಾಗಿ ಈಚೆಗೆ ಬಂದಳೋ ಅಂತಹ ಪ್ರಾಕೃತ ಗಂಭೀರಸೌಂದರ್ಯದ ಸ್ತ್ರೀಯನ್ನು ನೀವು ನೋಡಬೇಕು (ಸುಲೆಸಾ. ೦೭೩); ಪ್ರಾಕೃತಘಟನೆಗಳ್ಗೆ ಪ್ರಕೃತಿಕಾರಣದಂತೆ ದೇವಕಾರಣ ಮಿರ್ಪುದೆಂದು ಗುರು ಕಲಿಸಿದನ್ ನನಗೆ (ಶ್ರೀರಾಮಾ. ೩೭-೯೯). ೨. ಸಾಮಾನ್ಯವಾದ; ಸಾಧಾರಣವಾದ. ೩. ಒರಟಾದ; ಅಸಂಸ್ಕೃತವಾದ; ಅಸಭ್ಯವಾದ. (ನಾ). ೪. ಸಾಮಾನ್ಯವಾದುದು; ಸಾಧಾರಣವಾದುದು: ಈಕೆಯ ರೂಪಿನ ಪರಿಯಂ ಕೋಕನದಜನಂದು ಕಂಡೊಡಂತಾ ಗೌರೀ ಶ್ರೀಕಾಂತೆಯರಾಕೃತಿಯಂ ಪ್ರಾಕೃತಮೆನೆ ಮಾಡನೆನಿಸಿರುಕ್ಮಿಣಿಯೆಸೆಗುಂ (ಪಗಪ. ೦೦-೯೯). ೫. ಸಾಮಾನ್ಯನಾದವನು; ನಾಡಾಡಿ; ಪಾಮರ: ಪ್ರಾಕೃತನಲ್ಲನೀ ದಶರಥಾಗ್ರತನೂಭವಂ (ಸಂರಾಮಾ. ೩-೬೨); ಅರಿಯನೀ ಲಕ್ಷ್ಮಣನು ಮಾಯಾನಿರುಗೆಯಾಕೃತಿಯಾದ ಸೀತೆಯ ತೆರನ ವಂಚಿಪೆನೀತನನು ಪ್ರಾಕೃತನ ತೆರದಂತೆ (ಆರಾಮಾ. ೩-೬-೨), ನೀನು ಭಾವಿಸುವನಿತ್ತು ಗಾಲವನು ಪ್ರಾಕೃತನೆ? (ಸಂಪ್ರಸ. ೦೩). ೬. ಪ್ರಕೃತಿತತ್ತ್ವವಾದಿ; ನಿಸರ್ಗವಾದಿ: ಶಾಸ್ತ್ರವನ್ನು ನಂಬದೆ ಕೇವಲ ಜಗತ್ತನ್ನು ನೋಡಿ ಸಿದ್ಧಾಂತಗಳನ್ನು ಕಲ್ಪಿಸತಕ್ಕ ಪ್ರಾಕೃತರು ಮತ್ತು ಚಾರ್ವಾಕರು ನಾಲ್ಕು ತತ್ತ್ವಗಳನ್ನು ಮಾತ್ರ ನಂಬುತ್ತಾರೆ (ಜೀವಾತ್ಮ. ೦೭). ೭. ಯಾಗದ ಪಶು; ಯಜ್ಞಪಶು: "ಯಾಗಕೆಯ್ದಿರ್ದ ಪಶುವು ಪ್ರಾಕೃತವೆನಿಕು" (ಸುಂಗರಾ. ೭೭-೦೯). ೮. ಆರ್ಯಭಾಷಾ ವರ್ಗದ ಪ್ರಾಚೀನಭಾರತದ ದೇಶಭಾಷೆಗಳು ಮತ್ತು ಆ ಭಾಷೆಗಳಲ್ಲಿ ಯಾವುದಾದರೊಂದು: ಸಂಸ್ಕೃತಂ ಪ್ರಾಕೃತಂ ಅಪಭ್ರಂಶಿಕಂ ಪೈಶಾಚಿಕಮೆಂಬ ಮೂಱುವರೆ ಭಾಷೆಗಳೊಳ್ ಪುಟ್ಟುವುವೆಲ್ಲಂ ಸರ್ವವಿಷಯಭಾಷಾಜಾತಿಗಳಕ್ಕುಂ (ಛಂದೋಂಬು. ೦-೯೬ ಪ); ಸಂಸ್ಕೃತ ಪ್ರಾಕೃತ ಅಪಭ್ರಂಶ ಪೈಶಾಚಿಕಾದಿ ಭಾಷಾಭೇದದಿಂ ಪೇಳ್ವ ಲಾಕ್ಷಣಿಕರಪ್ಪ ಕವೀಶ್ವರರಿಂ (ಏವೇಶ. ೦೬೦). ೯. ಕ್ಷುದ್ರಮಂತ್ರಗಳಲ್ಲಿ ಒಂದು ಬಗೆ: ದ್ರಾವಿಡ, ವೈಕೃತ, ಪ್ರಾಕೃತ ಇತ್ಯಾದಿ ಕ್ಷುದ್ರಮಂತ್ರಂಗಳಂ . . . ತಿಳಿದಿರಲಕ್ಕುಂ (ಏವೇಶ. ೬೦). ೧೦. ನಿತ್ಯ, ನೈಮಿತ್ತಿಕ, ಪ್ರಾಕೃತ ಮತ್ತು ಆತ್ಯಂತಿಕಗಳೆಂಬ ನಾಲ್ಕುವಿಧ ಪ್ರಳಯಗಳಲ್ಲಿ ಒಂದು; ಪ್ರಕೃತಿಯ ನಾಶರೂಪವಾದ ಪ್ರಳಯ: ಪ್ರಲಯವು, ನಿತ್ಯ, ಪ್ರಾಕೃತ, ನೈಮಿತ್ತಿಕ, ಆತ್ಯಂತಿಕ ಎಂದು ನಾಲ್ಕು ವಿಧ . . . ಪ್ರಾಕೃತ ಪ್ರಲಯವೆಂದರೆ ಪ್ರಕೃತಿಯೆಂಬ ಮಾಯೆಯಲ್ಲಿ ಬ್ರಹ್ಮನೊಡನೆ ಬ್ರಹ್ಮಾಂಡ ವಿನಾಶ (ಹಿಂದಸಾ. ೦೯೭). ೧೧. [ಯೋಗ]ಪ್ರಾಣಾಯಾಮದ ಪ್ರಾಕೃತ, ವೈಕೃತ, ಕೇವಲಕುಂಭಕಗಳೆಂಬ ಮೂರು ಪ್ರಕಾರಗಳಲ್ಲಿ ಒಂದು: ಪ್ರಾಕೃತ ವೈಕೃತಮಾದ ದ್ವಿವಿಧರೇಚಕ ಪೂರಕ ಕುಂಭಕ ಉತ್ಕರ್ಷ ಅಪಕರ್ಷ ಶೂನ್ಯ ಉತ್ಕ್ರಾಂತಿ ಎಂಬ ಸಪ್ತ ಪ್ರಾಣಾಯಾಮಲಕ್ಷಣಂಗಳಂ (ಏವೇಶ. ೦೩೩); ಪ್ರಾಕೃತಪ್ರಾಣಾಯಾಮವೆಂದು ವೈಕೃತಪ್ರಾಣಾಯಾಮವೆಂದು ಆ ಎರಡಱಂ ಪೊಱತಾದ ಕೇವಲಕುಂಭಕವೆಂದು ಮೂಱು ಪ್ರಕಾರವಾಗಿರ್ಪುದದೆಂತೆನೆ ದಿನವೊಂದಕ್ಕೆ ಇಪ್ಪತ್ತೊಂದುಸಾವಿರದ ಆಱುನೂಱು ಹಂಸ ಹಂಸವೆಂದುಚ್ಚರಿಸುವ ಅಹಂಕಾರಾತ್ಮಕವಾದ ಜೀವಜಪವೇ ಪ್ರಾಕೃತ ಪ್ರಾಣಾಯಾಮವೆನಿಸುವುದು (ಅಪಿಂಡೇ. ೨೦೬-೩೬). ೧೨. [ನಾಟ್ಯ] ಕಣ್ಣುಗುಡ್ಡೆಯ ಒಂಬತ್ತು ವಿಧವಾದ ಚಲನೆಗಳಲ್ಲಿ ಒಂದು; ಕಣ್ಣುಗುಡ್ಡೆಯ ಸ್ವಾಭಾವಿಕಚಲನೆ; ೨ "ಆಲಿಗಳು ಸ್ವಭಾವವಾಗಿರುವುದು . . . ಪ್ರಾಕೃತವನ್ನು ಅದ್ಭುತರಸ ಮತ್ತು ಆವೇಶಗಳಲ್ಲೂ ವಿನಿಯೋಗಿಸಬೇಕು" (ಲಾಸ್ಯಕಂ. ಗದ್ಯಾಪುವಾದ. ೨೭೯); ಭ್ರಮಣಂ ವಲನಂ ಪಾತಂ . . . ಸಮುದ್ವೃತಂ ನಿಷ್ಕ್ರಾಮಂ ಅಮಿತಪ್ರಾಕೃತಗಳಾಲಿಯೊಂಬತ್ತಕ್ಕುಂ (ಲಾಸ್ಯಕಂ. ೩-೩೯). [ಸಂ.]

ಪ್ರಾಕೃತಕಾವ್ಯ (ನಾ). ಪ್ರಾಕೃತಭಾಷೆಗಳಲ್ಲಿ ರಚಿತವಾಗಿರುವ ಕಾವ್ಯ: ಆನಂದವರ್ಧನನ ಕಾಲದಲ್ಲಿ ಪ್ರಾಕೃತಕಾವ್ಯಕ್ಕೆ ಇನ್ನೂ ಹೆಚ್ಚಾದ ಮನ್ನಣೆಯಿತ್ತು (ರ್ವಸ್ಯಾಲೋ. XI ಮುಸ್ಸುಡಿ). [ಸಂ.]

ಪ್ರಾಕೃತಜನ (ನಾ). ಪಾಮರಜನ; ನಾಡಾಡಿಜನ: ವಲಂ ವಿಷಯಾಸಕ್ತಿಯೊಳಾಯಾಸೈಕನಿರತರಾಗಿರ್ಪ ಪ್ರಾಕೃತಜನಂಗಳ ಗಮನಮೇ ಸಮಸ್ತವೇದಿಗೆ ಹೃದಯಂಗಮಮಾಗದು (ಶಾಂತಿಪು. ೯-೦೦೨ ಪ). [ಸಂ.]

ಪ್ರಾಕೃತಪುರುಷ (ನಾ). ಸಾಮಾನ್ಯಮನುಷ್ಯ; ನಾಡಾಡಿ; ಪಾಮರ: ಮೊಗಮಂ ನೋಡುತ್ತುಮಿನಿವಿರಿದು ಪರಾಭವಂ ಪ್ರಾಕೃತಪುರುಷಂಗಂ ಕಾಪುರುಷಂಗಂ ಪೊತ್ತು ನಿಲ್ವುದರಿದು (ಶಾಂತಿಪು. ೩-೬೬ ಪ). [ಸಂ.]

ಪ್ರಾಕೃತಭಾಷೆ (ನಾ). = ಪ್ರಾಕೃತ ೮: ಪ್ರಾಕೃತಭಾಷೆಗೆ ಸಂಸ್ಕೃತವೇ ಮೂಲವಾಗಿ (ಪ್ರಕೃತಿಯಾಗಿ)ರುವುದು. ಇದು ಸಂಸ್ಕೃತದಿಂದ ಹುಟ್ಟಿದುದೆಂದಾಗಲಿ, ಸಂಸ್ಕೃತದಿಂದ ಬಂದಿತೆಂದಾಗಲಿ . . . ಈ ಭಾಷೆಗೆ ಪ್ರಾಕೃತಭಾಷೆಯೆಂದು ಹೆಸರು ಬಂದಿದೆ (ಭಾರದ. ೯೩೬).

[ಸಂ. ಪ್ರಾಕೃತಭಾಷಾ]

ಪ್ರಾಕೃತಾಸ್ತ್ರ (ನಾ). ಸಾಮಾನ್ಯವಾದ ಬಾಣ — ಅಸ್ತ್ರ: ಪ್ರಾಕೃತಾಸ್ತ್ರನಿಕರಂಗಳಿನಂತಾ ಭೀಕರರ್ ಕರಮೆ ಕಾದೆ ಬಟಿಕ್ಕಪ್ರಾಕೃತಾಸ್ತ್ರನಿಧಿಯಂ ತೆಗೆದಂ ಶೌರ್ಯಾಕರಂ ನೆಗಟ್ಟ ಮಾಗಧಭೂಪಂ (ಶೇಮಿಪು. ೦೨-೨೯೦). [ಸಂ.]

ಪ್ರಾಕೃತಿಕ (ಗು). ಪ್ರಕೃತಿಗೆ ಸಂಬಂಧಿಸಿದ; ಸ್ವಾಭಾವಿಕವಾದ; ನೈಸರ್ಗಿಕವಾದ: ಘ್ರಾಣ ಮೊದಲಾದುವು ಪ್ರಕೃತಿಯಿಂದ ಸಿದ್ಧಿಸಿದುವು. ಇವಕ್ಕೆ ಪ್ರಾಕೃತಿಕ ಎಂದು ಹೆಸರು (ಭಾತತ್ವ. ೮೩೬); ಬೆಂಗೂರಿನ ಪ್ರಾಕೃತಿಕಸ್ವರೂಪ ಅಂಥದು (ದಂಬಪಾ. ೦). [ಸಂ.]

ಪ್ರಾಕ್ಕು$_1$ 'ಪ್ರಾಕು$_1$' ನೋ.

ಪ್ರಾಕ್ಕು$_2$ 'ಪ್ರಾಕು$_2$' ನೋ.

ಪ್ರಾಕ್ತನ (ಗು). ೧. ಹಿಂದಿನ; ಪೂರ್ವದ: ಪ್ರಾಕ್ತನಜನ್ಮವಿದ್ಯೆಗಳ್ ಬಂದನಿತುಂ ನೆಲಸಿದವು ಸಕಲವಿದ್ಯಾನಿಧಿಯೊಳ್ (ಅಪಿಪು. ೩-೬೮); ಪ್ರಾಕ್ತನಪುಣ್ಯಪ್ರಾಪ್ತಿಯಿಂದಾ ಬಯಕೆ ಸಮನಿಕುಂ ಚಿಂತೆವೇಡಂ (ಸುಲ್ಲಿಪು. ೯-೨೯); ಮನದೊಳನಗೀಶ ಮತ್ಪ್ರಾಕ್ತನಜನ್ಮಾವಳಿಯನೆಯ್ದೆ ಕೇಳ್ವಟ್ತಿ ಕರಂ ಜನಿಯಿಸಿದಪುದು (ಸಂಪ್ರಪು. ೩-೬). (ನಾ). ೨. ಅತಿ ಹಿಂದಿನ ಕಾಲ; ಪೂರ್ವಕಾಲ: ವ್ಯಕ್ತವಾಗಿಹ ಶಬ್ದವುದಿಸದು ಪ್ರಾಕ್ತನದ ಜನ್ಮದಲಿ ಪುಣ್ಯದ ಶಕ್ತಿಯಿಲ್ಲದರಿವುದಕಾರ್ಯವು ದುರ್ಲಕ್ಷ್ಯವೆಂದೆನಲು (ಏವೇಶ. ೩-೩೦); ಪ್ರಾಕ್ತನವೇ ಹೂತ ಹಾಗೆ ನೂತನವಿದು ರಯ್ಯಮಾಗೆ (ಕರುಕ್ರಾ. ೯೬-೦೩). ೩. ಹಿಂದಿನ ಕಾಲದ ವಿದ್ವಾಂಸ: ವರ್ಗದಕ್ಕರಂಗಳ್ ನಾಲ್ಕುಂ ಶಾಂತಮಿರೆ ಪೇಟ್ದ ತಾಣದೊಳಂತಕ್ಕುಂ ಪ್ರಾಕ್ತನೋಕ್ತವರ್ಗಪ್ರಾಸಂ (ಛಂದೋಂಬು. ೦-೯೬ ಅಡಿಪ). ೪. ಹಣೆಯ ಬರೆಹ; ವಿಧಿ; ಅದೃಷ್ಟ: ಪ್ರಾಕ್ತನದಲ್ಲಿ ಸುಖವನ್ನು ನೋಡದೆ ಕಷ್ಟವನ್ನೇ ಅನುಭವಿಸಬೇಕೆಂದಿದ್ದರೆ ಅದಕ್ಕೆ ನಾನಾದರೂ ಏನು ಮಾಡಲಿ? (ಶರಮೇ. ೦೩). [ಸಂ.]

ಪ್ರಾಕ್ತನವಿಮರ್ಶಕ (ನಾ). ಪ್ರಾಚೀನಕಾಲದ ವಿಷಯವನ್ನು ಪರಿಶೀಲಿಸುವವನು, ಅಭ್ಯಾಸ ಮಾಡುವವನು: ಇದು ಕೃಷ್ಣಾ-ಗೋದಾವರೀನದಿಗಳ ನಡುವಣ ಆಂಧ್ರಶಿಲ್ಪಿಯೊಬ್ಬನ ಕೈಕೆಲಸವೆಂದು ಪ್ರಾಕ್ತನ ವಿಮರ್ಶಕರ ನಿರ್ಣಯ (ಭಾರದ. ೩೩೯). [ಸಂ.]

ಪ್ರಾಕ್ತನಶಾಸ್ತ್ರ (ನಾ). ಪ್ರಾಚೀನಅವಶೇಷಗಳ ಶೋಧನೆಗೆ ಸಂಬಂಧಿಸಿದ ಶಾಸ್ತ್ರ: ಅವನು ಅಭ್ಯಾಸಕ್ಕೆ ಪ್ರಾಕ್ತನಶಾಸ್ತ್ರವನ್ನು ಮುಖ್ಯವಿಷಯವಾಗಿ ಆರಿಸಿಕೊಂಡನು (ರೂಢಿ). [ಸಂ.]

ಪ್ರಾಕ್ತನಶೋಧಕ (ನಾ). ಪ್ರಾಚೀನಅವಶೇಷಗಳನ್ನು ಶೋಧಿಸುವವನು: ಪ್ರಾಕ್ತನಶೋಧಕನ ಕೆಲಸ ಬಹಳ ಕಷ್ಟಕರವಾದುದು (ರೂಢಿ). [ಸಂ.]

ಪ್ರಾಕ್ತನಶೋಧನೆ (ನಾ). ಪ್ರಾಚೀನ ಅವಶೇಷಗಳನ್ನು ಅನ್ವೇಷಿಸುವುದು : ರಾಷ್ಟ್ರೀಯಮಹತ್ತ್ವವುಳ್ಳವೆಂದು ಸಂಸತ್ತಿನಿಂದ ವಿಧಿದ್ವಾರಾ ಘೋಷಿತವಾದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಅಭಿಲೇಖಗಳು ಮತ್ತು ಪ್ರಾಕ್ತನಶೋಧನೆಯ ನಿವೇಶನಗಳು ಮತ್ತು ಅವಶೇಷಗಳು (ಶಾಧಾಸ. ೨೬೪). [ಸಂ.]

ಪ್ರಾಕ್ಪ್ರಣೀತ (ನಾ) ಐದು ಬಗೆಯ ಭಿಕ್ಷೆಗಳಲ್ಲಿ ಒಂದು ; ತಂಗಳು : ಮಾಧೂ[ಧು]ಕರ ಅಸಂಕ್ಲುಪ್ತ ಪ್ರಾಕ್ಪ್ರಣೀ [ಪ್ರಾಕಾಂ·ಣಿ]ತ ಅಯಾಚಿತ ತಾತ್ಕಾಲಿಕವೆಂಬ ಪಂಚವಿಧಭಿಕ್ಷಂಗಳನಾದೊಡಂ . . . ಭೋಜನಗೈದು (ವಿವೇಕ· ೦೨೬). [ಸಂ.]

ಪ್ರಾಗಲ್ಭ್ಯ (ನಾ). ೧. ದಿಟ್ಟತನ ; ಧೈರ್ಯ : ಅಕಠೋರಶಿರೀಷಪುಷ್ಪ ಸುಕುಮಾರಪ್ರಕೃತಿಯಪ್ಪ ನಾರೀಜನಕೆ ಪ್ರಾಗಲ್ಭ್ಯಂ ದೊರೆಕೊಳ್ಳುವುದಲ್ಲ (ಕಾದಂಕಾ· ೩೦೩). ೨. ಜಂಬ ; ಹೆಮ್ಮೆ ; ಅಹಂಕಾರ. ೩. ಪ್ರಾವೀಣ್ಯ ; ನಿಪುಣತೆ ; ಕೌಶಲ : ಸುಹೃದ್ಬಲಕಂ ಮಾರ್ವಲಕಂ ಗುಣಾರ್ಣವ ಶರಪ್ರಾಗಲ್ಭ್ಯಮಂ ತೋಱುವಂ (ಪಂಪಭಾ· ೩-೩೩) ; ಚಿತ್ರಕನ ಚಿತ್ರವಿದ್ಯಾಪ್ರಾಗಲ್ಭ್ಯಮಂ ಪ್ರತ್ಯೇಕಮವಳೋಕಿಸಿ (ಮಲ್ಲಿಪು. ೩-೪೩); ಹೀಗೆ ಉಚಿತವಾದ ಪದಮೈತ್ರಿಯಿಂದಲೂ ರೀತಿಯಿಂದಲೂ ಚಿಂತನೆಯ ಪ್ರಾಗಲ್ಭ್ಯದಿಂದಲೂ ನವ್ಯರಸಸ್ಯಂದಿಯಾದ ಭಾವನೆ (ಕಾವ್ಯಕು. ೪೬). ೪. ಪ್ರವೀಣ; ನಿಪುಣ : ಅಪ್ರತಿಹತಪ್ರಾಗಲ್ಭ್ಯರೀಗಳ್ ಪೃಥಾಸುತರ್ (ಪಂಪಭಾ. ೬-೬೭). [ಸಂ.]

ಪ್ರಾಗವಸ್ಥೆ (ನಾ). ಹಿಂದಿನ ಸ್ಥಿತಿ; ಪೂರ್ವದ ಅವಸ್ಥೆ : ಪ್ರಧಾನವೂ ಜಗತ್ತಿನ ಪ್ರಾಗವಸ್ಥೆ ಅತ್ಯಾಕೃತವೂ ಪ್ರಾಗವಸ್ಥೆ (ಬ್ರಹ್ಮಶಾ. ೩೬೦). [ಸಂ. ಪ್ರಾಗವಸ್ಥಾ]

ಪ್ರಾಗೈತಿಹಾಸಿಕ (ಗು). ಇತಿಹಾಸಕ್ಕೂ ಪೂರ್ವಕಾಲದ : ಜನಪದ ಸಾಹಿತ್ಯವು ಪ್ರಾಗೈತಿಹಾಸಿಕಜೀವನದ ಪರಂಪರಾಗತಸಂಗತಿಯಾಗಿದೆ (ಕನ್ನಶಾ. IV. ಪ್ರಸ್ತಾವನೆ) : ಆಗ ಹಳೆಗಾಲದ ಪ್ರಾಗೈತಿಹಾಸಿಕಜನರ ಪರಿಶೀಲನೆಯೂ . . . ಅಗತ್ಯವಾಗಿ ಕಂಡು ಬಂತು (ತುಳುವಾ· ೪). [ಸಂ.]

ಪ್ರಾಗ್ಜನ್ಮ (ನಾ). ಹಿಂದಿನ ಹುಟ್ಟು; ಪೂರ್ವಜನ್ಮ : ಪ್ರಾಗ್ಜನ್ಮಕಥಾವಳಿಯೆಲ್ಲಮಂ ಬಗೆದು ನೋವೆನಗಾದುದು (ಆದಿಪು· ೩-೩೩) ; ಮಿಗೆ ಮತಂಗನು ಮತ್ತೆ ಪ್ರಾಗ್ಜನ್ಮಗಳ ಕರ್ಮವಿಶೇಷದಿಂದಱಿಕೆಗಳನ್ನುಳ್ಳವತಿಳಿವ ತಿರ್ಯಗ್ಜಾತಿಭಾಷೆಗಳ (ತಿಮ್ಮಕ. ೨-೩). [ಸಂ.]

ಪ್ರಾಗ್ಭವ (ನಾ). ೧. ಮೂಡಲಲ್ಲಿ ಹುಟ್ಟಿದುದು ; ಪೂರ್ವದಲ್ಲಿ ಅವತರಿಸಿದುದು : "ಪ್ರಾಚೀನಂ, ಪ್ರಾಗ್ಭವು-ಮೂಡಲಲ್ಲಿ ಹುಟ್ಟಿದ್ದು" (ಸಿದ್ಧಾಂತಿ. ೨೬). ೨. ಹಿಂದಿನ ಜನ್ಮ,-ಹುಟ್ಟು. [ಸಂ.]

ಪ್ರಾಗ್ಭಾರತೀಯ (ಗು). ಭಾರತದ ಚರಿತ್ರೆಗೆ ಹಿಂದಿನ : ಹರಪ್ಪ ಸಂಸ್ಕೃತಿ ಅಥವಾ ಪ್ರಾಗ್ಭಾರತೀಯಸಂಸ್ಕೃತಿ (ಪ್ರೋಟೋ-ಇಂಡಿಕ್) ಆಕಸ್ಮಿಕವಾಗಿ ಬೆಳಕಿಗೆ ಬಂದಿತು (ಶಾರದ. ೯). [ಸಂ.]

ಪ್ರಾಗ್ರ (ಗು). ೧. ಎತ್ತರವಾದ ; ಉನ್ನತವಾದ. (ನಾ). ೨. ತುತ್ತತುದಿ. ೩. ಮುಖ್ಯನಾದವನು; ಪ್ರಮುಖ : ಉಗ್ರತಪದಿಂದೆಯತುಳ ಸಮಗ್ರೆಯನಭವಂಗೆ ವಧುವೆನಿಪ್ಪಳನಾನವ್ಯಗ್ರದೆ ಪಡೆವೆಂ ಕುಧರಪ್ರಾಗ್ರನೆ ಕಳಿಪೆಂದು ಮೇನೆ ನುಡಿವವಸರದೊಳ್ (ಗಿರಿಕ. ೩-೬). [ಸಂ.]

ಪ್ರಾಗ್ರೂಪ (ನಾ). ೧. ಹಿಂದಿನ ಆಕಾರ; ಪೂರ್ವರೂಪ. ೨. ರೋಗವು ವ್ಯಕ್ತವಾಗುವ ಮೊದಲು ತೋರುವ ರೋಗಲಕ್ಷಣ : ಪ್ರಾಗ್ರೂಪವೆಂಬುದು ರೋಗ ಹುಟ್ಟುವ ಮೊದಲೇ ಅವ್ಯಕ್ತವಾದ ಲಕ್ಷಣ (ವೈದ್ಯಸಾ· I. ೨೫); ಪ್ರಾಗ್ರೂಪ ಎಂದರೆ ರೋಗ ಹುಟ್ಟುವುದಕ್ಕೆ ಮೊದಲೇ ಉಂಟಾದ ಅವ್ಯಕ್ತವಾದ ರೋಗಲಕ್ಷಣ (ಸಕವ್ಯ. ೨೦). [ಸಂ.]

ಪ್ರಾಗ್ವಂಶ (ನಾ). ಹೋಮದ್ರವ್ಯವಿರುವ ಗೃಹಕ್ಕೆ ಪೂರ್ವಭಾಗದಲ್ಲಿರುವ. ಯಜಮಾನ ಮತ್ತು ಋತ್ವಿಕ್ಕುಗಳು ಇರುವ ಗೃಹ ; ಯಜ್ಞಶಾಲೆಯ ಒಂದು ಭಾಗ : "ಪ್ರಾಗ್ವಂಶಃ . . . ಹವಿಸ್ಸೆಂಬ ಹೋಮದ್ರವ್ಯವಿರುವ ಮನೆಗಿಂತಲೂ ಮೂಡಲಲ್ಲಿ ಯಜಮಾನ ಮುಂತಾದವರಿಗಿರುವುದಕ್ಕೆ ನಿರ್ಮಿಸಿದ ಮನೆಗೆ ಹೆಸರು" (ಸಿದ್ಧಾಂತಿ. ೨೦೭) ; ಮಯಂ ವಿಸ್ಮಯಮಾಗೆ ಮಾಡಿದ ಸಭಾವಿಸ್ತಾರಮಂ . . . ಯಾಗದೇವ ಯಜನಪ್ರಾಗ್ವಂಶಪತ್ನೀವಿಚಿತ್ರಮಹಾಶಾಲೆಗಳಂ (ಜಗವಿ· ೦೬-೬) ; ಈ ಜನವಳಯದೊಳು ಪ್ರಾಗ್ವಂಶದಲಿ ಪರಿಮಿಳಿತವಾಯ್ತು ಸದಸ್ಯ ಋತ್ವಿಜರ ವಿಧಾನದಲಿ (ಕುಪ್ಯಾಸ. ೭-೩೦). [ಸಂ.]

ಪ್ರಾಗ್ವಾಸನೆ (ನಾ). ಹಿಂದಿನ ಜನ್ಮದ ಸ್ವಭಾವಗಳ ತೋರಿಕೆ : ಮತ್ತೆ ಪ್ರಾಗ್ವಾಸನೆಯ ಪೆಸರಿನ ಸುತ್ತುವಳ್ಳಿಯ ಮೆಟ್ಟಿರದೆ ಮೈಪತ್ತುತಿಹ ಸಂಕಲ್ಪ ಚಿಗುರಿಗೆ ಜುಟ್ಟುತಗಲಿಸದೇ (ಗಗತಾ· ೦೬-೧೬). [ಸಂ. ಪ್ರಾಗ್ವಾಸನಾ]

ಪ್ರಾಗ್ವೈಭವ (ನಾ). ಹಿಂದಿನ ಕಾಲದ ವೈಭವ : ಪುಟಿಯುತ್ತಿದೆ ಪಾಷಾಣಾದಿ ಪ್ರಾಗ್ವೈಭವ ಜೀವ (ಕರುತ್ರಾ· ೭೦-೦). [ಸಂ.]

ಪ್ರಾಘಾರ(ನಾ). ೧. ಸೋರುವಿಕೆ; ಒಸರುವಿಕೆ: "ಶ್ಚ್ಯೋತಃ, ಪ್ರಾಘಾರಃ —೨ ಸೋರಿಹೋಗುವಿಕೆ, ಸೋರುವಿಕೆ" (ಸಿದ್ಧಾಂತಿ. ೩೫೬). ೨. ಹೋಮದಲ್ಲಿ ಅಗ್ನಿಗೆ ಮಾಡುವ ಆಜ್ಯಾಹುತಿ. [ಸಂ.]

ಪ್ರಾಘುಣಕ (ನಾ). ಆಮಂತ್ರಣವನ್ನು ಪಡೆದು ಅಥವಾ ಪಡೆಯದೆ ಮನೆಗೆ ಬರುವ ಗೌರವಸ್ಥ ; ಅತಿಥಿ ಅಥವಾ ಅಭ್ಯಾಗತ : "ಅತಿಥಿ ಯಾಗಂತು ಪ್ರಾಘುಣಕನೆನೆ ಬಿರ್ದಿನಂ" (ಮಂಗರಾ· ೭೦-೦೬). [ಸಂ.]

ಪ್ರಾಙ್ಮುಖ (ಗು). ೧. ಪೂರ್ವದಿಕ್ಕಿಗೆ ಮುಖ ಮಾಡಿಕೊಂಡಿರುವ; ಪೂರ್ವಾಭಿಮುಖವಾದ : ಮಹಾಪಥಗಮನವುಪವಾಸವ್ರತವ ಪಿಡಿದ ಮಲಚರಿತರು ಮನವ ಬಲಿದಿಹ ಗಾಢಧೈರ್ಯದಲಿ ಅಮರಶೈವಲಿನೀತಟಕೆ ನಿರ್ಗಮಿಸಿ ಪ್ರಾಙ್ಮುಖವರ್ತನದಿನುತ್ತಮವೆನಿಪ ನಿಜಯೋಗಬಲದಲಿ ನಡೆದರಲ್ಲಿಂದ (ತಿಮ್ಮಮ· ೦-೨೬). (ನಾ). ೨. ಪೂರ್ವಾಭಿಮುಖವಾಗಿರುವುದು : ಮುನ್ನಮೆ ನಿಱಿಸಿದ ಮಣಿಖಚಿತೋನ್ನತಹರಿಪೀಠದೋಳ್ ಜಗತ್ಪತಿಯ ಮಾನೋನ್ನತನಂ ಪ್ರಾಙ್ಮುಖದಿಂದುನ್ನತಸುರಮಾಲಿ ಲಾಲಿತಾಂಘ್ರದ್ವಯನಂ ಇರಿಸಿ (ಆದಿಪು· ೬-೬೮). [ಸಂ.]

ಪ್ರಾಚಾರ್ಯ (ನಾ). ಮುಖ್ಯ ಉಪಾಧ್ಯಾಯ; ಪ್ರಮುಖ ಗುರು : ಹೆಂಜೇರುಪಟ್ಟಣ ಒಂದು ಮಹಾಘಟಿಕಾಸ್ಥಾನವಾಗಿತ್ತು . . . ಅನಂತಶಿವದೇವರು ಎಂಬ ಗುರು ಅದರ ಪ್ರಾಚಾರ್ಯರಾಗಿದ್ದರು (ಪೊಳಂಬ· ೬೭); ಪ್ರಾಚಾರ್ಯ ಪರಾಂಜಪೆಯವರ ಕಡೆಗೆ ಹೋದಾಗ ಅವನ ವಿಷಯವನ್ನೆಲ್ಲ ಜ್ಞಾಪಕಕ್ಕೆ ತಂದುಕೊಂಡು ಅವರು ನರಹರಿಗೆ ನಗುತ್ತ ನುಡಿದಿದ್ದರು (ಸಮಜೀ. ೦೨೨೪). [ಸಂ.]

ಪ್ರಾಚಿಕೆ (ನಾ). ೧. ಒಂದು ಬಗೆಯ ಪಕ್ಷಿ; ಗಿಡುಗ; ಡೇಗೆ : "ಪ್ರಾಚಿಕೆ ವಿಷಮತ್ಪೀಡನಂ ಶ್ಯೇನಮೆನೆ ಗಿಡುಗನಕ್ಕುಂ" (ಮಂಗರಾ. ೩೨-೬). ೨. ಕಾಡುನೊಣ. ೩. ಸೊಳ್ಳೆ. [ಸಂ. ಪ್ರಾಚಿಕಾ]

ಪ್ರಾಚೀನ (ಗು). ೧. ಪೂರ್ವದಿಕ್ಕಿನಲ್ಲಿರುವ. ೨. ಹಳೆಯ; ಹಿಂದಿನ; ಪುರಾತನಕಾಲದ : ಸತ್ಯಕ್ಕೇ ಅಂತಿಮವಿಜಯ ಸುನಿಶ್ಚಿತ . . . ಎಂದು ಪ್ರಾಚೀನಮುನಿಪುಂಗವರು ಹೇಳಿದರು (ರರ್ಮಸಾ· ೩); ಪ್ರಾಚೀನ ಆಸ್ಟ್ರೇಲಿಯನರೇ ಭಾರತದ ಮೂಲನಿವಾಸಿಗಳೆನ್ನಬಹುದು (ದ್ರಾವಿವಿ· ೨೯). (ನಾ). ೩. ಹಳೆಯದು; ಪುರಾತನವಾದುದು : ದಕ್ಷಿಣಭಾರತದಲ್ಲಿ ಚಿತ್ರಕಲೆ ಸಾಕಷ್ಟು ಪ್ರಾಚೀನವಾದುದೇ ಆಗಿದೆ (ಶಾರದ. ೩೨೬); 'ವಿಂಧ್ಯಗಿರಿ' ಎಂಬ ಹೆಸರು ಎಷ್ಟು ಪ್ರಾಚೀನವೋ ತಿಳಿಯದು (ಸಂಶೋತ. ೬೭). ೪. ಮೂಡಲಿಗೆ ಸೇರಿದುದು; ಪೂರ್ವಕ್ಕೆ ಸಂಬಂಧಿಸಿದುದು : "ಪ್ರಾಚೀನಂ, ಪ್ರಾಕ್—ಈ ೨ ಮೂಡಲಾದುದು" (ಹಲಾಯು. ೦೬-೧೦೩).

೫.=ಪ್ರಾಚೀನಕರ್ಮ : ನಮ್ಮ ಪ್ರಾಚೀನಕ್ಕೆ ಯಾರು ಹೊಣೆ ರಂಗಮ್ಮ (ಶಾಯಿಕ. ೦೦೭); ಹೇಗೆ ಪ್ರಾಚೀನದಲ್ಲಿ ಬರೆದಿದೆ ಹಾಗೆ ಇರಬೇಕು ಸಂಸಾರದಲ್ಲಿ (ಹೇಮಕೂ. ೧೭). ೬.=ಪ್ರಾಚೀನಾವೀತ : "ಜನ್ನಿವಾರವ ನೆಡಂದೊಡಲು ಪ್ರಾಚೀನಂ" (ಮಂಗರಾ. ೭೫-೮). ೭. ಬೇಲಿ; ಗೋಡೆ; ಪೌಳಿ : "ಪ್ರಾಚೀನಂ . . . ಊರ ಸುತ್ತಲೂ ಹಾಕಿರುವ ಬೇಲೀ ಮುಂತಾದ ತಡೆಗಳ ಹೆಸರುಗಳು" (ಸಿದ್ಧಾಂತಿ. ೧೧). ೮. ಹಳಬ; ಮುದುಕ; ವೃದ್ಧ : ಅವರಲ್ಲೊಬ್ಬ ವೃದ್ಧನೂ ಒಬ್ಬ ಯುವಕನೂ . . . ಎಚ್ಚರವಾಗಿದ್ದರು. ಪ್ರಾಚೀನನು ಯುವಾಪುರುಷನ ಸಂಗಡ ಮಾತಾಡುತ್ತಿದ್ದನು (ಕಪಾಕುಂ. ೦). 'ಅರ್ವಾಚೀನ' ಪರಾ. [ಸಂ.]

ಪ್ರಾಚೀನಕರ್ಮ (ನಾ). ಪೂರ್ವಜನ್ಮಗಳಲ್ಲಿ ಮಾಡಿದ ಪಾಪಕರ್ಮ ಮತ್ತು ಅದರ ಫಲ : ಪ್ರಾಚೀನಕರ್ಮವು ಬಿಡಲರಿಯದು (ಪುರಂದ. ೯-೦೭ ಪಲ್ಲವಿ). [ಸಂ. ಪ್ರಾಚೀನಕರ್ಮನ್]

ಪ್ರಾಚೀನಕಾಲ (ನಾ). ಹಿಂದಿನ ಕಾಲ : ನಮ್ಮ ದೇಶದಲ್ಲಿ ಬಹಳ ಪ್ರಾಚೀನಕಾಲದಿಂದ ಅರಳೆಯ ನೂತು ಬಟ್ಟೆಗಳನ್ನು ಮಾಡುವ ರೀತಿಯು ಜನರಿಗೆ ಗೊತ್ತುಂಟು (ಮುಂಬಯಿ. ೯-೨೯); ಈ ಸಾಹಿತ್ಯದ ಸಮಗ್ರವಾದ ಇತಿಹಾಸವನ್ನು ಪ್ರಾಚೀನಕಾಲದ ಯಾರೂ ಬರೆಯಲಿಲ್ಲ (ಅಂಕಾ. ೨೦೫). [ಸಂ.]

ಪ್ರಾಚೀನತೆ (ನಾ). ಹಳೆಯದಾಗಿರುವಿಕೆ : ಭಾರತದಲ್ಲಿ ಮೂರ್ತಿಶಿಲ್ಪದ ಪ್ರಾಚೀನತೆಯನ್ನು ಸಮರ್ಥಿಸಲು ನಮಗೆ ಅನೇಕ ಗ್ರಂಥಗಳ ಆಧಾರ ದೊರೆತಿದೆ (ಭಾರದ. ೫೦೯); ದ್ರಾವಿಡಭಾಷೆಗಳ ಉಗಮ ವಿಕಾಸ ವರ್ಗೀಕರಣ ಅವುಗಳ ಪ್ರಾಚೀನತೆ . . . ಇವೇ ಮೊದಲಾದ ಅನೇಕ ವಿಷಯಗಳನ್ನೊಳಗೊಂಡಿದೆ (ದ್ರಾವಿನಿ. V, ಮುಮ್ಮಡಿ). [ಸಂ. ಪ್ರಾಚೀನತಾ]

ಪ್ರಾಚೀನಪಾಠ (ನಾ). ಹಸ್ತಪ್ರತಿಗಳಲ್ಲಿ ತುಂಬಾ ಹಳೆಯದಾದ ಪ್ರತಿಯ ಪಾಠ : ಇದು ಪ್ರಾಚೀನಪಾಠವೂ (Antiquarian's text) ಆಗಿರದೆ ವಿಮರ್ಶನಪಾಠವೂ (Critic's text) ಆಗಿರದೆ ಎರಡರ ಮಧ್ಯದ ಒಡಂಬಡಿಕೆಯಾಗಿರುತ್ತದೆ (ಭಾರಪ. ೮೫). [ಸಂ.]

ಪ್ರಾಚೀನಬರ್ಹಿ (ನಾ). ಇಂದ್ರ; ೯ ನೂರು ಯಜ್ಞಗಳನ್ನು ಮಾಡಿರುವುದರಿಂದ ಹಿಂದೆ ಬಹುಕಾಲ ಅಗ್ನಿಯ ಮುಂದೆ ಕುಳಿತಿದ್ದವನು: "ಇಂದ್ರಃ . . . ಪ್ರಾಚೀನಬರ್ಹಿಃ . . . ಮೇಘವಾಹನಃ — ಈ ೩೯— ದೇವೇಂದ್ರನ ಪೆಸರ್" (ಹಲಾಯು. ೦೦-೩೨); ಪ್ರಾಚೀನಬರ್ಹಿರುಪಮಂ ಪ್ರಾಚೀಹರಿದಭಿಮುಖಂ ಮರುದ್ಧತಕೇತೂತ್ಕೋಚಿತಶರ್ಜಿತರಿಪುಚಳಿತಾಚಳ ಸ್ನಾಭಗಜಾಧಿರೂಢನಧೀಶಂ (ಶಾಂತಿಪು. ೦೦-೦೯೬); ಪ್ರಾಚೀನಬರ್ಹಿ [ಸಕಲ]ಚರಾಚರಂ ಗುರುಸವನ[ದ] ಸಮಯದೊಳಾ [ಹೇಮಾ]ಚಳಮೆ ಬೇವಸಂ ಕಾಳೋಚಿತಗತಿ ನೆಗಟ್ ಬಹುವಿಧಂ ನರ್ತಿಸುಗುಂ (ಸರ್ಗಮಾ. ೦೨-೯೯); ಆ ಮೇರುಪರ್ವತಂ . . . ಪ್ರಾಚೀನಬರ್ಹಿಯಂತೆ ನವಖಂಡ ಗೋತ್ರಾವಲಂಬಿಯುಂ (ದಶಾಪ. ೦-೩೨ ಪ). [ಸಂ. ಪ್ರಾಚೀನಬರ್ಹಿಸ್]

ಪ್ರಾಚೀನವಾಸನೆ (ನಾ). = ಪ್ರಾಗ್ವಾಸನೆ : ತ್ರಿಗುಣವಾದ ಅಂತಃಕರಣದಲ್ಲೂ ಪ್ರಾಚೀನವಾಸನೆಯೆಂಬ ಕರ್ಮಾಧೀನವಾಗಿ ಆಯಾ ಕಾಲದಲ್ಲಿ ಒಂದೊಂದು ಗುಣವು ಉತ್ಕಟವಾಗಿ ಪ್ರಬಲವಾಗುವುದು (ಹಿಂದಾ. ೬೦). [ಸಂ. ಪ್ರಾಚೀನವಾಸನಾ]

ಪ್ರಾಚೀನಾವೀತ (ನಾ). ಎಡತೋಳಿನ ಕೆಳಗಡೆಯೂ ಬಲಭುಜದ ಮೇಲೆಯೂ ಬರುವಂತೆ ಧರಿಸುವ ಯಜ್ಞೋಪವೀತ ; ೯ ಪಿತೃಕಾರ್ಯಗಳಲ್ಲಿ ಮಾತ್ರ ಹೀಗೆ ಧರಿಸುತ್ತಾರೆ : "ಜನ್ನವಿರಮಂ . . . ಎಡದೊಡುವುದು ಪ್ರಾಚೀನಾವೀತಮೆಂಬುದು" (ಹಲಾಯು. ೬೬-೨೫೩). [ಸಂ.]

ಪ್ರಾಚೀನಾವೀತಿ (ಗು). ಜನಿವಾರವನ್ನು ಎಡತೋಳಿನ ಕೆಳಗಡೆಯೂ ಬಲಭುಜದ ಮೇಲೆಯೂ ಬರುವಂತೆ ಧರಿಸಿರುವ. [ಸಂ. ಪ್ರಾಚೀನಾವೀತಿನ್]

ಪ್ರಾಚೀನೆ (ನಾ). ಒಂದು ವಿಧವಾದ ಮೂಲಿಕೆ ; ಅಗಳುಶುಂಠಿ : "ಪ್ರಾಚೀನಾ, ವನತಿಕ್ತಕಾ . . . ಅಗರುಶೊಂಠಿ, ಅಗಳುಶೊಂಠಿ" (ಸಿದ್ಧಾಂತಿ. ೦೩೦). [ಸಂ. ಪ್ರಾಚೀನಾ]

ಪ್ರಾಚೀರ (ನಾ). ಸುತ್ತುಗೋಡೆ; ಪೌಳಿ: ಅಲ್ಲಿ ಕೊಂಚದೂರ ಹೋಗಿ ನೋಡಲಾಗಿ, ಒಬ್ಬ ಹೆಂಗುಸು ತಮ್ಮ ಮನೆಯ ಪ್ರಾಚೀರ(ಮನೆಯ ಬಹಿರಾವರಣದ ಗೋಡೆ)ವನ್ನು ಅವಲಂಬಿಸಿಕೊಂಡು ಹೊರಗೆ ಏನನ್ನೋ ನೋಡುತ್ತಿದ್ದಳು (ಬಿಶಾಪ. ೨೯); ಸೌಭಾಗ್ಯಮಂದಿರದ ಪ್ರಾಚೀರದ ಮೇಲೆ ಮುಳ್ಳಿನ ಸಲಾಕೆಗಳು ಒತ್ತೊತ್ತಾಗಿ ನಡಲ್ಪಟ್ಟಿರುವುವು (ಶಿಸ್ನಶೇ. ೦೨೯). [ಸಂ.]

ಪ್ರಾಚುರ (ನಾ). ಅಧಿಕವಾಗಿರುವಿಕೆ ; ಸಮೃದ್ಧಿಯಾಗಿರುವಿಕೆ : ಖೇಚರರುಯೆಡೆಗೆಯ್ದು ತಮ್ಮಯ ಪಥಶ್ರಮವಿಮೋಚನಂಗೆಯ್ದು ಪೋಗಲಿಮೆಂದು ರಚಿಸಿದ್ದ ಪ್ರಾಚುರದ ವೈಜಯಂತಿಗಳು ಕರಮೆಸೆದವಾಪುರದ ಕೇರಿಗಳ ನಡುವೆ (ಗುರುಪಾ. ೦-೨೯). [< ಸಂ. ಪ್ರಚುರ]

ಪ್ರಾಚುರ್ಯ (ನಾ). ಹೆಚ್ಚಾಗಿರುವುದು ; ಅಧಿಕವಾಗಿರುವುದು ; ಸಮೃದ್ಧಿ : ಪ್ರಾಚುರ್ಯಾತಿಶಯಂ ಪೊದಟ್ದಮಳಷಟ್ತ್ರಿಂಶದ್ಗುಣಶ್ರೇಣಿ ಪಂಚಾಚಾರಂ ಸುತಪಃಪರೀಷಹಜಯಂ . . . ಸಪ್ತರ್ಧಿಸಂಪನ್ನರ ಪ್ಪಾಚಾರ್ಯರ್ ನಮಗೀಗೆ ನಿರ್ಮಳತೆವೆತ್ತಾಚಾರಸಂಪತ್ತಿಯಂ (ಶಾಂತೀಶ್ವ. ೦-೩) ; ಪ್ರಾಚುರ್ಯಸಮ್ಯಗ್ಧವಲಕೀರ್ತಿಯುಷ್ಮತ್‌ಪ್ರಭಾಚಾರುತರಕಟಾಕ್ಷ ಪ್ರಭಾವದೆ ದಲಾ ವಾಚಾಲವಾದಿಯಂ ಗೆಲ್ದು ಬರ್ಪೆಂ (ಪದ್ಮರಾ. ೯-೨೬) ; ಕನ್ನಡ ಭಾಷೆಯು ಸಂಸ್ಕೃತಜನ್ಯವೆಂದು ಕರೆಯಲ್ಪಡಲು ಪ್ರಮುಖವಾದ ಕಾರಣವೆಂದರೆ ಈ ಭಾಷೆಯ ಕೋಶದಲ್ಲಿ ಕಂಡುಬರುವ ಸಂಸ್ಕೃತಶಬ್ದಗಳ ಪ್ರಾಚುರ್ಯವೆಂದೇ ಹೇಳಬೇಕು (ಭಾಷಾಶಾ. ೯೩). [ಸಂ.]

ಪ್ರಾಚೇತಸ (ನಾ). ೧. ವಾಲ್ಮೀಕಿ : "ಪ್ರಾಚೇತಸಃ, ವಾಲ್ಮೀಕಿಃ, ಮೈತ್ರಾವರುಣಃ—(ಈ ೩) ವಾಲ್ಮೀಕಿ" (ಹಲಾಯು. ೬೮-೨೫೮) ; ಕುಶಲವರಿಗಱುಹಿದನು ಪ್ರಾಚೇತಸನಗಸ್ತ್ಯನು ರಾಮಚಂದ್ರಗೆ ಬೆಸಸಿದುತ್ತರ ರಾಮಕಥೆಯನು ಸಾಂಗವಾಗಿರಲು (ಶಾತ್ತಳ. ೨ ಸೂಚನೆ); ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಂ (ರಾಮಾಶ್ವ. ೯೯-೦೦). ೨. [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು; "ಶತಭಿಶೆ" (ಜಾತಕಿ. ಸಂ. ೩). [ಸಂ.]

ಪ್ರಾಚ್ಯ (ಗು). ೧. ಎದುರಿಗಿರುವ ; ಸಮ್ಮುಖದ ; ಮುಂದಿನ. ೨. ಹಳೆಯದಾದ; ಪುರಾತನವಾದ. ೩. ಮೂಡಲ ದಿಕ್ಕಿನ; ಪೂರ್ವದಲ್ಲಿರುವ : ಪ್ರಾಚೀನಕಾಲದಲ್ಲಿ ಚೈನ, ಭಾರತ ಮುಂತಾದ ಪ್ರಾಚ್ಯದೇಶಗಳಲ್ಲಿ ಈ ಬೆಳವಣಿಗೆ ಮೊದಲು ಆರಂಭವಾಯಿತು (ಶಿಕ್ಷದ. ೩೫). (ನಾ). ೪. ಪೂರ್ವದಿಕ್ಕಿನಲ್ಲಿರುವ ದೇಶ : 'ದೂರಪ್ರಾಚ್ಯ' ಪರಾ. [ಸಂ.]

ಪ್ರಾಚ್ಯತೆ (ನಾ). = ಪ್ರಾಚೀನತೆ : ಈ ಕಲೆಯು ಸುಮಾರು ಇನ್ನೂರು ವರ್ಷಗಳ ಪ್ರಾಚ್ಯತೆಯುಳ್ಳುದಿರಬಹುದು ಎಂಬ ಊಹೆಯಿಂದ ತೃಪ್ತನಾಗಿದ್ದೆ (ಯಕ್ಷಣ. ೦೦). [ಸಂ. ಪ್ರಾಚ್ಯತಾ]

ಪ್ರಾಚ್ಯವೃತ್ತಿ (ನಾ). [ಛಂದ] ಮಾತ್ರಾಛಂದಸ್ಸಿನಲ್ಲಿರುವ ಒಂದು ವೃತ್ತ; ವೈತಾಲೀಯದಲ್ಲಿ ಒಂದು ಭೇದ: ಔಪಚ್ಛಂದಸಿಕಂ ಮೊದಲಾಗೆ ವೈತಾಳಿಯುಂ ಉದೀಚ್ಯವೃತ್ತಿಯುಂ ಪ್ರಾಚ್ಯವೃತ್ತಿಯುಮಪರಾಂತಿಕೆಯುಮೆಂದು ಮಾತ್ರಾಗಣಂಗಳಿಂ ವೈತಾಳಿಗಳ್ ಬೇಱ್ವೇಱ್ ಪೆಸರ್ವಡೆಗುಂ (ಛಂದೋಂಬು. ೩-೨೨೦ ಪ). [ಸಂ.]

ಪ್ರಾಚ್ಯಶೈಲ (ನಾ). ಮೂಡಲ ಗಿರಿ; ಪೂರ್ವಾಚಲ: ಮನುವಂಶಪ್ರಾಚ್ಯಶೈಲದ್ಯುಮಣಿ ಜನಿಯಿಸಿದಂ ಚಕ್ರವರ್ತಿಪ್ರಧಾನಂ (ಅಂಪು. ೯-೩೯). [ಸಂ.]

ಪ್ರಾಚ್ಯಶೋಧನೆ (ನಾ). = ಪ್ರಾಕ್ತನಶೋಧನೆ : ಪ್ರಾಚ್ಯಶೋಧನೆಯನ್ನು ವೈಜ್ಞಾನಿಕವಾಗಿ ನಡೆಸಬೇಕಾದರೆ ಬಹಳ ಹಣವು ಬೇಕಾಗುತ್ತದೆ (ಕೂಡಿ). [ಸಂ. ಪ್ರಾಚ್ಯಶೋಧನ]

ಪ್ರಾಜನ (ನಾ). ಚಾವಟಿ ; ಚಾಟಿಕೋಲು ; ಬಾರುಕೋಲು : "ಪ್ರತೋದಃ, ಪ್ರಾಜನಂ, ತೋತ್ರಂ – ಈ ೩ ಮುಳುಹುಗೋಲ್" (ಹಲಾಯು. ೯೪-೪೨೩); "ತೋತ್ರಮಱಿ ಕೋಲಕ್ಕು ಪ್ರಾಜನಂ ಮುಳುಹು" (ಮಂಗರಾ. ೦೦೯-೨). [ಸಂ.]

ಪ್ರಾಜಾಪತ್ಯ (ಗು). ೧. ಪ್ರಜಾಪತಿಗೆ ಸೇರಿದ. – ಬ್ರಹ್ಮನಿಗೆ ಸಂಬಂಧಿಸಿದ. (ನಾ). ೨. ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ದೈವ, ಗಾಂಧರ್ವ, ಆಸುರ, ರಾಕ್ಷಸ ಮತ್ತು ಪೈಶಾಚಗಳೆಂಬ ಎಂಟು ವಿಧವಾದ ಮದುವೆಗಳಲ್ಲಿ ಒಂದು; ವರನಿಂದ ತೆರ, ಕಾಣಿಕೆ ಮುಂತಾದುವನ್ನು ತೆಗೆದುಕೊಳ್ಳದೆ, ಇಬ್ಬರೂ ಧರ್ಮಕಾರ್ಯಗಳನ್ನು ಆಚರಿಸುತ್ತ ಸಂತೋಷವಾಗಿ ಬಾಳುತ್ತಿರಬೇಕೆಂದು ಹಾರೈಸಿ ಕನ್ಯಾಪ್ರದಾನ ಮಾಡುವುದು. ೩. ಗಂಗಾ ಮತ್ತು ಯಮುನಾ ನದಿಗಳು ಸಂಗಮಗೊಳ್ಳುವ ಸ್ಥಳ; ಪ್ರಯಾಗ. ೪. ವಿಷ್ಣು. ೫. ಒಂದು ಬಗೆಯ ತಪಸ್ಸು. ೬. ಪಿತೃಗಳ ಲೋಕ; ಪಿತೃಲೋಕ. ೭. ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ಮೊದಲು ತನ್ನ ಸ್ವತ್ತೆಲ್ಲವನ್ನೂ ಇತರರಿಗೆ ದಾನ ಮಾಡುವಿಕೆ. ೮. ರೋಹಿಣೀನಕ್ಷತ್ರ. ೯. (ರಾಜನ) ಅಧಿಕಾರ; ಆಳ್ವಿಕೆ : ಪಶ್ಚಿಮದೇಶಗಳ ಪ್ರಾಜಾಪತ್ಯ ಇಂಥಲ್ಲಿ ಕ್ರಮೇಣ ಶಿಥಿಲವಾಗುತ್ತಿದೆ (ಐತಿಸಂ. ೦೯). ೧೦. ಶಿಲ್ಪಶಾಸ್ತ್ರದ ಹಸ್ತಪ್ರಮಾಣಗಳಲ್ಲಿ ಒಂದು : ಈ ಪ್ರಕಾರದಿಂದಂಗುಲಿಗಳ ಭೇದವನಱುವುದಿನ್ನು ಹಸ್ತಭೇದವೆಂತೆನೆ ಪೂರ್ವೋಕ್ತಮಾನಾಂಗುಲವಿಪ್ಪತ್ತು ನಾಲ್ಕಾಗಲೊಂದು ಕಿಷ್ಕಹಸ್ತವೆನಿಸುವುದು ಅದು ಇಪ್ಪತ್ತೈದಾದೊಡೆ ಪ್ರಾಜಾಪತ್ಯಹಸ್ತವೆನಿಸುಗು (ಏನೇಳ. ೨೪೦). [ಸಂ.]

ಪ್ರಾಜಾಪತ್ಯಕೃಚ್ಛ್ರ (ಗು). ಹೆಚ್ಚಾದ ಕಾಯಂಕ್ಲೇಶದಿಂದ ನಿರ್ವಹಿಸಬೇಕಾದ ಒಂದು ಬಗೆಯ ತಪಸ್ಸು : ದೋಷಪರಿಹಾರಾರ್ಥಮಾಗಿ ಶರೀರಬಾಧಾತ್ಮಕತ್ವದಿಂ ಮಹಾಕಷ್ಟಂಗಳಾದ ತಪ್ತಕೃಚ್ಛ್ರ ಪ್ರಾಜಾಪತ್ಯಕೃಚ್ಛ್ರ . . . ಯಾವಕಕೃಚ್ಛ್ರಾದಿ ಕೃಚ್ಛ್ರಂಗಳಿಂ ಪಕ್ಷ ಮಾಸಾದಿಗಳಲ್ಲಿ ಅನ್ನಮಂ ಪೆಚ್ಚಿಸಿ ತಗ್ಗಿಸಿಕೊಂಬುದು (ಏನೇಳ. ೦೨೨). [ಸಂ.]

ಪ್ರಾಜ್ಞ (ನಾ). ೧. ಜಾಣ ; ಬುದ್ಧಿವಂತ; ಪಂಡಿತ : "ಧೀರಃ . . . ಪ್ರಾಜ್ಞಃ . . . ಮತಿಮಾನ್ – ಈ ೨೮ ವಿದ್ವಾಂಸರ್" (ಹಲಾಯು. ೫೫-೦೭೭); ದಿವಿಜೇಜ್ಯಂ ನಿಲೆ ಜನ್ಮಲಗ್ನಗೃಹದೊಳ್ ಪ್ರಾಜ್ಞಂ (ಜಾತಕ. ೦೫-೦೦); ಲೋಭವೀ ವೆಗ್ಗಳದ ನಿರ್ಬಂಧನವು ಪ್ರಾಜ್ಞರಿಗುಚಿತವಲ್ಲೆಂದ (ಕುಪ್ಯಾಕಾ. ೯-೯); ರಾಮನೇನೊಂದುಮಂ ನುಡಿಯಲಾರದೆ ನೋಡುತಿರ್ದನ್ ಮನೋಜ್ಞನಂ, ವಾನರಮಹಾಪ್ರಾಜ್ಞನಂ! (ಶ್ರೀರಾಮಾ. ೨೯೯-೦೨೬). ೨. ಪರಮಾತ್ಮ. ೩. [ತತ್ತ್ವಶಾ] ಆತ್ಮನ ಒಂದು ಅವಸ್ಥೆ; ಕಾರಣಶರೀರದಲ್ಲಿದ್ದು ಸುಷುಪ್ತಾವಸ್ಥೆಯನ್ನು ಅನುಭವಿಸುವ ಜೀವ : ಕಾರಣಶರೀರದಲ್ಲಿರುವ ಜೀವನಿಗೆ ಪ್ರಾಜ್ಞನೆಂದೂ, ಪರಮಾತ್ಮನೆಂದೂ... ಹೇಳುವರು (ಶಿಖಾಸೂ. ೯೪); ಈ ವಿಧದವಸ್ಥೆಯಲಿ ಹೊಳೆಯುವ ಜೀವನೆನಿಸುತ ವಿಶ್ವ, ತೈಜಸನೋವಿ ಪ್ರಾಜ್ಞನೆನಿಪ್ಪ ಪೆಸರನು ತಳೆದು ತೋಱುವನು (ಅಮೃತ. ೯-೦೨) ; ಒಬ್ಬನೇ ಪರಮಾತ್ಮನು ವಿಶ್ವ, ತೈಜಸ, ಪ್ರಾಜ್ಞ ಎಂಬ ರೂಪಗಳಿಂದ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಜೀವರಿಗೆ ಕೊಡಿಸುವನೆಂದು ತಾತ್ಪರ್ಯ (ಹಸಾರ. ೯-೦೪ ಪೇಳು). [ಸಂ.]

ಪ್ರಾಜ್ಞಕ (ನಾ). = ಪ್ರಾಜ್ಞ ೩ : ನಿತ್ಯಂ ಸಕಲಾತ್ಮಂ ಸೂತ್ರವೈಶ್ವಾನರರಧಿಗತವಿಶ್ವಾತ್ಮನುಂ ತೈಜಸಂ ಪ್ರಾಜ್ಞಕನಾದಂ (ಕಪಿಶಂ. ೫-೩೫). [ಸಂ.]

ಪ್ರಾಜ್ಞಮತಿ (ನಾ). ಬುದ್ಧಿವಂತ ; ಪಂಡಿತ : ಪ್ರಾಜ್ಞಮತಿ ಭರತನುರಿಯಿಕ್ಕಿದನ್ (ಶ್ರೀರಾಮಾ. ೦೨೦-೨೨೩). [ಸಂ.]

ಪ್ರಾಜ್ಞೆ (ನಾ). ೧. ತಿಳಿದವಳು; ಪಂಡಿತೆ : "ಪ್ರಾಜ್ಞೆ, ಪ್ರಜ್ಞಾ – ೨ ಲೌಕಿಕವ್ಯವಹಾರದಲ್ಲಿ ಜಾಣೆಯಾದವಳು" (ಸಿದ್ಧಾಂತಿ. ೦೬೦). ೨. ಪಂಡಿತನ ಪತ್ನಿ. [ಸಂ. ಪ್ರಾಜ್ಞೇ]

ಪ್ರಾಜ್ಞೆ (ನಾ). ೧. ಅರಿವು ; ಬುದ್ಧಿ ; ತಿಳಿವಳಿಕೆ : ಆಗಲೇನಾಯ್ತಾಗ ಕಾಂಬೆವು ಯೋಗಪುರುಷನ ನೆಲೆಯನೆಂದೆನುತಾಗಲೇ ಹೊತ್ತಿಕ್ಕಿ ಪ್ರಜ್ವಲಿಸಿದುದು ಪ್ರಾಜ್ಞೆಯಲಿ (ಸಿಖಾಗ. ೪-೭-೩೬). ೨. = ಪ್ರಾಜ್ಞೆ ೧ : "ಪ್ರಾಜ್ಞಾ, ಧೀಮತೀ—೨ ಬಹಳ ಬುದ್ಧಿಯುಳ್ಳವಳು" (ಸಿದ್ಧಾಂತಿ. ೦೬೦). [ಸಂ. ಪ್ರಾಜ್ಞಾ]

ಪ್ರಾಜ್ಯ (ಗು). ೧. ಬಹಳವಾದ; ಅತಿಶಯವಾದ. ೨. ಉತ್ತಮವಾದ; ಶ್ರೇಷ್ಠವಾದ : ಹಿತಪುರೋಹಿತ ಪ್ರಾಜ್ಯಾಜ್ಯಾಹುತಿಹುತಹುತವಹ ಸಮಕ್ಷರೊಳ್ (ಹುಪಭಾ. ೩-೭೪ ಪ) ; ಪರಪೀಡಾಮುಖದುಷ್ಪದುರ್ಜನನೀ ಕಾಯಾತಂಕದಿಂ... ಮೇಣಜೀರ್ಣಭಯದಿಂ ಪ್ರಾಜ್ಯಾಜ್ಯಮೇಂ ತ್ಯಾಜ್ಯಮೇ (ಸಂಧ್ರಪು. ೦-೪೫). (ನಾ). ೩. ಬಹಳವಾದುದು ; ಹೆಚ್ಚಾದುದು : "ಪ್ರಾಜ್ಯಂ ... ಅದಭ್ರಂ—ಈ ೧೮ ಮೊಕ್ಕಳಂ" (ಹಲಾಯು. ೦೦೬-೦೬). ೪. ಉತ್ತಮವಾದುದು ; ಶ್ರೇಷ್ಠವಾದುದು : ನಿನಗಿಂ ತ್ಯಾಜ್ಯಂ ಪರಿಗ್ರಹಂ ದಲ್ ಪ್ರಾಜ್ಯಂ ತಪಮದುವೆ ಪಾಲ್ಯಮಾ ಕೈವಲ್ಯಂ (ಅಜಿಪು. ೬-೭೭) ; ಪೂಜ್ಯರುಮೇಕೆ ಪೇಟ್ಪಸುಗೆದಪ್ಪುವರಾ ಪುರುಷಾರ್ಥಸಂಗ್ರಹ ಪ್ರಾಜ್ಯ [ಶಾಕಾಂ ಪ್ರಾಜ, ಪೂಜ್ಯ] ಮಿದೆನ್ನದಾಂ ಪಿರಿದುಮೊಲ್ಲದೊಡಂಬಡೆ (ಅರ್ಧನೇ. ೨-೫೨). [ಸಂ.]

ಪ್ರಾಡ್ವಿವಾಕ (ನಾ). (ನ್ಯಾಯಾಲಯದ) ವ್ಯವಹಾರಗಳನ್ನು ತೀರ್ಮಾನಿಸುವ ಅಧಿಕಾರಿ ; ನ್ಯಾಯಾಧಿಪತಿ : "ಪ್ರಾಡ್ವಿವಾಕಃ... ನ್ಯಾಯಾಧ್ಯಕ್ಷಃ — ಈ ೪ ನ್ಯಾಯಾಧ್ಯಕ್ಷಂ" (ಹಲಾಯು. ೬೦-೨೬೫) ; ವಿಳಸತ್ಸುಂದರನೆಯ್ದೆ ಮಾತುಳತೆಯಿಂದಿಂದುದು ದಾಯಾದ್ಯರಂ ಬಳಿ ಸಂದಾಡಿಸುತೆಂದಿನಂತೆ ದಯೆಯಿಂ ಕಾಪಾಡುತಂ ಬಾಲನಂ ಮಿಳಿತ ಜ್ಞಾತಿಗಳೀ ತೆಱಂ ಜಗದೊಳೆಂದಾ ಪ್ರಾಡ್ವಿವಾಕ [ಶಾಕಾಂ. ಪ್ರೌಢಿವಾಕ್ಯ]ರ್ಗೆ ತಾಂ ಜ್ವಳನಾಕ್ಷಂ ನುಡಿಯಲ್ (ಹಾಲಾಸ್ಯ. ೩-೭-೩೯); ಒಡನೆಯೆ ಈ ಊರಿನ ಪ್ರಾಡ್ವಿವಾಕನ ಹತ್ತಿರ ಶರ್ಮನ ಮೇಲೆ ಅಭಿಯೋಗವನ್ನು ತಂದು ನಮ್ಮ ಹುಡುಗಿಯನ್ನು ನಾವು ಸ್ವಾಧೀನ ಮಾಡಿಕೊಳ್ಳಬೇಕು (ಲಕ್ಷ್ಮೀಪ್ರ. ೨೭೭). [ಸಂ.]

ಪ್ರಾಣ (ನಾ). ೧. ಉಸಿರಾಟ. ೨. ಗಾಳಿ; ಉಸಿರು ; ವಾಯು : 'ಪ್ರಾಣ' ಎಂದರೆ 'ಉಸಿರು' ಎಂದು ಅರ್ಥ (ಮರ್ಕಮ. ೧೪). ೩. ಪ್ರತಿಯೊಂದು ಜೀವಿಯಲ್ಲೂ ಇರುವ ಚೈತನ್ಯವಸ್ತು ; ಜೀವ : "ಅಸವಃ, ಜೀವಿತಂ, ಪ್ರಾಣಾಃ, ಜೀವಃ, ಜೀವಾ—ಈ ೫ ಪ್ರಾಣದ ಪೆಸರ್" (ಹಲಾಯು. ೨೨-೦೩೪) ; ಎನ್ನೊಡಲ್ಗೆ ನೀಂ ಪ್ರಾಣಮಮೋಘಮಪ್ಪುದಱಿನೋಪನೆ ನಿನ್ನನಗಲ್ವಗಲ್ಕೆಯುಂ ಪ್ರಾಣದಗಲ್ಕೆಯುಂ ಸಮನದಕ್ಕೆ ವಿಯೋಗಮನೆಂತು ಸೈರಿಪೆಂ (ಅಧಿಪು. ೦೨-೩೫); ಪ್ರಾಣದಿನಧಿಕಮೆನಗೆ ನೀಂ ಪ್ರಾಣಮಣಂ ತೃಣಮೆಗೆತ್ತು ನವೆಯುತ್ತಾ ನೀ ಕ್ಷೋಣಿಗೆ ನಿನ್ನ ವಿಯೋಗಮನೇಣೇಕ್ಷಣೆ ಎನಿತು ಸೈರಿಸದ ಕಾರಣದಿಂ (ಪಾರ್ಶ್ವಪು. ೩-೨೪). ೪. ಅನ್ನ; ಆಹಾರ : "ಬಾಹ್ಯಾ—ಪ್ರಾಣ, ಅನ್ನ" (ಓಹಧಿ. ೦೦೬). ೫. ಬಲ ; ಶಕ್ತಿ: "ಪ್ರಾಣಃ, ಸ್ಥಾಮ, ಬಲಂ . . . ಸಹಃ—ಈ ೮ ಬಲ್ಪು (ಬಲುಹು)" (ಹಲಾಯು. ೦೨೦—೩೬). ೬. ಶರೀರದೊಳಗಿರುವ ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೆಂಬ ಐದು ಬಗೆಯ ವಾಯುಗಳಲ್ಲಿ ಒಂದು : ಪ್ರಾಣಾದಿ ವಾಯುಗಳು — ಪ್ರಾಣ, ಅಪಾನ, ಸಮಾನ,

ಉದಾನ, ವ್ಯಾನ (ಅಮೃತ. ೩-೩೨ ಟೀಳು); ಸಮುದಾಯದಿಂದ ಪ್ರಾಣಾಪಾನ ವ್ಯಾನೋದಾನ ಸಮಾನಗಳೆಂಬ ಪಂಚಪ್ರಾಣಗಳು ಹುಟ್ಟುವುವು (ಹಿಂದಾ. ೦೯೬). ೭. ಪರಮಾತ್ಮ; ಈಶ್ವರ: ಪ್ರಾಣನೂ ಪರಮನೂ ಕಾಣದಲೆ ಒಳಗಿರಲು ಮಾಣದೆ ಸಿಲೆಯ ಹಿಡಿದದಕೆ ಮೂರ್ಖ ತಾ ಪ್ರಾಣಾತ್ಮನೆಂಬ (ಸರ್ವಜ್ಞ. ೨೦೬); ಪ್ರ+ಅ+ಣ=ಪ್ರಾಣ, ಎಂದು ಪರಮಾತ್ಮನಿಗೆ ಹೆಸರು (ಹಸಾರ. ೬-೨೯ ತಾತ್ಪರ್ಯ). ೮. ಒಂದು ಬಗೆಯ ಸಸ್ಯ; ಬಾಣಂತಿಬೋಳ: "ಬೋಲಃ, ಗಂಧರಸಃ, ಪ್ರಾಣಃ . . . ರಸಃ— ೬ ಬೋಳದ ಹೆಸರುಗಳು, ಬಾಣಂತೀಬಾಳ" (ಸಿದ್ಧಾಂತಿ. ೩೦೬). ೯. ಪ್ರೀತಿಪಾತ್ರ ವ್ಯಕ್ತಿ ಅಥವಾ ವಸ್ತು: ಹೊಳ್ಳರೇ ಹೇಳುತ್ತಿದ್ದರು ಹೆಂಡತಿಗೆ ನಾನೆಂದರೆ ಪ್ರಾಣ ಎಂದು (ಪದ್ಮಸ. ೦೨೬); ಅವನಿಗೆ ಚಕ್ಕುಲಿಯೆಂದರೆ ಪ್ರಾಣ (ರೂಢಿ).

ಪ್ರಾಣ ಕಳೆದುಕೊಳ್ಳು=ಜೀವ ತೆಗೆದುಕೊಳ್ಳು: ಹೆಂಗಸು, ಪಾಪ! ಕಾಲು ಜಾರಿ ಬಿದ್ದು ಸತ್ತಿರಬೇಕು. ಆಕೆಯ ತಮ್ಮಂದಿರಾದ ಈ ರಾಜರು ಆ ದುಃಖದಿಂದ ತಾವೂ ದುಮುಕಿ ಪ್ರಾಣ ಕಳೆದುಕೊಂಡರು (ಶಾಂತಲಾ. ೩೦೦); ನಾನೆಲ್ಲಿ ಪ್ರಾಣ ಕಳೆದುಕೊಂಡು ಬಿಟ್ಟೆನೋ ಎಂದು ಅಜ್ಜಿ ಎಷ್ಟು ಗೋಳಿಡುತ್ತಾಳೋ ? (ಮಲೆಮ. ೭೦೦). ಪ್ರಾಣಕ್ಕೆ ಬರು=(ಆಲಂ)ವಿಪರೀತ ಕಷ್ಟವಾಗ: ಈ ಬಿಸಿಲಲ್ಲಿ ಎರಡು ಮೈಲು ನಡೆದರೆ ನಮಗೇ ಪ್ರಾಣಕ್ಕೆ ಬರುತ್ತದೆ (ತಿಸುತ. ೦೭೬). ಪ್ರಾಣಪ್ರಯತ್ನಮಾಡು=(ಆಲಂ) ಬಹಳ ಕಷ್ಟಪಡು: ದಂಡಿಗೆ ಬೇಕಾದ ಸಾಮಾನು ಸರಂಜಾಮು ಪ್ರಾಣಪ್ರಯತ್ನ ಮಾಡಿ ತರಿಸಿಕೊಟ್ಟು (ರಾಶೇಂದ್ರ. ೪೪). ಪ್ರಾಣ ಹಿಂಡು = (ಆಲಂ) ಅತಿಶಯವಾಗಿ ಕಾಡು; ಬಹಳ ತೊಂದರೆ ಕೊಡು: ಹೆಂಡತಿ ಪ್ರಾಣ ಹಿಂಡುತಿ (ಪುರಂದ. ೩-೨೦೦-೪). ಪ್ರಾಣ ಹಿಡಿ=(ಆಲಂ) ಜೀವಧಾರಣೆ ಮಾಡು; ಬದುಕಿರು: ಅರೆಹೊಟ್ಟೆ ತುಂಬಿಸಿಕೊಂಡಾದರೂ ಪ್ರಾಣ ಹಿಡಿದರು (ಮಜ್ಜಿಮ. ೬). ಪ್ರಾಣ ಹೋಗು=ಜೀವ ಹೋಗು: ಪ್ರಾಣ ಹೋಗಲು ಮುಟ್ಟಲಂಜ್ವಳು ಜಾಣೆ ಕರೆದರು ಬಾರಳು (ಪುರಂದ. ೩-೨೦೦-೪); ಪ್ರಾಣ ಹೋಗುವ ಆಸನ್ನವಾದ ಕಾಲದಲ್ಲಿ . . . ಕಪಾಲಕುಂಡಲೆಯ ಕಂಠದಿಂದ ಅಂತಹ ಸ್ವರವು ಹುಟ್ಟುವುದೆಂದಾರು ಬಲ್ಲವರಾಗಿದ್ದರು (ಕಪಾಳುಂ. ೦೩೦). [ಸಂ.]

ಪ್ರಾಣಂಬಡೆ (ಕ್ರಿ). ಜೀವವನ್ನು ಪಡೆ: ವೀರಭಕ್ತಿಯೊಳಟ್ಟೆಯಲಿ ತಲೆ ಸೇರಿಸಲು ಪ್ರಾಣಂಬಡೆ [ಪಾಣಾಂ. ಪಡೆ]ದನು (ಬಸವು. ೪೯-೦೫).

[ಪ್ರಾಣ + ಪಡೆ$_1$]

ಪ್ರಾಣಂಬೊಯ್ (ಕ್ರಿ). ಜೀವ ತುಂಬು; ಜೀವಂತವಾಗಿಸು: ಪ್ರಾಣಂಬೊಯ್ದನೊ ಚಿತ್ರಿಸುತ್ತುಮವಳಂ ಸೌಂದರ್ಯಸಾರಂಗಳಿಂ (ಕಾಳುಂತ. ೨೫-೪೪). 'ಜೀವಂಬೊಯ್' ಪರಾ. [ಪ್ರಾಣ+ಪೊಯ್$_1$]

ಪ್ರಾಣಕಂಟಕ (ನಾ). ೧. ಜೀವಕ್ಕೆ ಉಂಟಾಗುವ ಅಪಾಯ; ಪ್ರಾಣಕ್ಕೆ ಆಗುವ ಆಘಾತ: ಪ್ರಾಣಕಂಟಕವಾಗುವ ಭಯಂಕರ ಖಾಯಿಲೆ ಅದು (ರೂಢಿ). ೨. ಜೀವಕ್ಕೆ ಅಪಾಯವನ್ನುಂಟುಮಾಡುವವನು; ಪ್ರಾಣ ತೆಗೆಯುವವನು; ಕೊಲೆಗಡುಕ: ಆ ಪ್ರಾಣಕಂಟಕನಿಂದ ಕೊನೆಗೂ ಅವರಿಗೆ ಬಿಡುಗಡೆ ಸಿಗಲಿಲ್ಲ (ರೂಢಿ).

[ಸಂ.]

ಪ್ರಾಣಕಾಂತ (ನಾ). ಜೀವಕ್ಕೆ ಸಮನಾದವನು; ಪ್ರಿಯವ್ಯಕ್ತಿ; ಪತಿ: ಕಾಣದಿರಲಾಱೆ ಪ್ರಾಣಕಾಂತನ ವೇಣುನಾದನ ತೋಱಿಸೆ (ಪುರಂದ. ೩-೦೩೬ ಪಲ್ಲವಿ); ಪ್ರಾಣಕಾಂತಾ ಲಾಲಿಸಿನ್ನಾ ಕ್ಷೋಣಿಪನೀ ಪರಿಯೊಳ್ ನಿನ್ನಾ ತಾನೇ ಸಲಹಿರಲ್ಕೆ ಪಿತಸಮಾನನವನ ಕಾವುದೈಸೆ (ರತ್ನಾಳ. ೦೯).

[ಸಂ.]

ಪ್ರಾಣಕಾಂತೆ (ನಾ). ಜೀವಕ್ಕೆ ಸಮನಾದವಳು; ಪ್ರಿಯೆ; ಪತ್ನಿ: ನನ್ನ ಪ್ರಾಣಕಾಂತೆಯಿಂದ ಉಪಭೋಗಿಸಲ್ಪಟ್ಟ ಈ ಲತಾಮಂಟಪದಲ್ಲಿಯೇ ಒಂದು ಮುಹೂರ್ತನಿಲ್ಲುವೆನು (ಕಾಳುಂತ. ೪೩-೦೦). [ಸಂ. ಪ್ರಾಣಕಾಂತಾ]

ಪ್ರಾಣಕೊಡು (ಕ್ರಿ). ೧. (ಇನ್ನೊಬ್ಬರ ಪ್ರಯೋಜನಕ್ಕಾಗಿ) ಜೀವ ಕೊಡು; ಬಲಿಯಾಗು: ನೀನು ನನಗಾಗಿ ಪ್ರಾಣಕೊಡಲು ನಿಜವಾಗಿಯೂ ಸಿದ್ಧಳಿದ್ದೀಯಾ ? (ವಿಕೆಲಾ. ೭೬). ೨. (ಆಲಂ) ಯಾವುದಾದರೂ ಕಾರಣಕ್ಕಾಗಿ ಸರ್ವಸ್ವವನ್ನೂ ತ್ಯಜಿಸು: ಪ್ರಾಣ ಕೊಟ್ಟಾದರೂ ಹಿಡಿದಿರುವ ಕೆಲಸವನ್ನು ಪೂರೈಸುತ್ತೇನೆ (ರೂಢಿ).

[ಪ್ರಾಣ + ಕೊಡು$_1$]

ಪ್ರಾಣಗುಣ (ನಾ). ಜೀವದ ಸ್ವಭಾವ; ಪ್ರಾಣದ ಗುಣ: ಅಂತರಂಗದಲ್ಲಿ ಸುಳಿದಾಡುವ ತನುಗುಣಾದಿಗಳ ಮನಗುಣಾದಿಗಳ ಪ್ರಾಣಗುಣಾದಿಗಳ ಕಳೆದಲ್ಲಿ ಶರಣರಹರೆ (ಅನಸಂ. ೯೦-೪೦೪). 'ತನುಗುಣ' ಪರಾ. [ಸಂ.]

ಪ್ರಾಣಗೇಡಿ (ನಾ). ಜೀವವನ್ನು ತೆಗೆಯುವವನು; ಪ್ರಾಣಘಾತಕ: ಪ್ರಾಣಗೇಡಿಯ ಮಾಡಿದರು ಪಾಲಕನನೀ ಧರೆಗೆ (ವಿಭಾಗ. ೪-೦೦-೦೪).

[ಪ್ರಾಣ + ಕೇಡಿ$_1$]

ಪ್ರಾಣಘಾತಕ (ಗು). ೧. ಜೀವಕ್ಕೆ ಹಾನಿಯನ್ನುಂಟುಮಾಡುವ: ಇವರು ಪ್ರಾಣಘಾತಕ ಗಾಯ ಹೊಂದಿ ಸರಕಾರೀ ರುಗ್ಣಾಲಯದಲ್ಲಿ ವಾಸವಾಗಿರುವರು (ಸ್ಕೂಲಿಮಿ. ೦೪೨). (ನಾ). ೨. ಜೀವವನ್ನು ತೆಗೆಯುವುದು; ಕೊಲೆ; ಪ್ರಾಣವಧೆ: ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕೊಯ್ದೆಯಯ್ಯಾ (ಬಸವ. ೬೫). ೩. ಜೀವವನ್ನು ತೆಗೆಯುವವನು; ಕೊಲೆಗಡುಕ: ಇವನಂತಹ ಪ್ರಾಣಘಾತಕರು ಅವರ ವಂಶದಲ್ಲಿ ಯಾರೂ ಇರಲಿಲ್ಲ (ರೂಢಿ). [ಸಂ.]

ಪ್ರಾಣತ (ನಾ). [ಜೈನ] ಹದಿನಾರು ಸ್ವರ್ಗಗಳಲ್ಲಿ ಒಂದು; ೫ ಊರ್ಧ್ವಲೋಕದಲ್ಲಿರುವ ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ, ಆನತ, ಪ್ರಾಣತ, ಅರುಣ ಮತ್ತು ಅಚ್ಯುತಗಳೆಂಬವು ಹದಿನಾರು ಸ್ವರ್ಗಗಳು. ಇವುಗಳಿಗೆ ಕಲ್ಪಗಳೆಂದೂ ಹೆಸರಿದೆ. ಈ ಎಲ್ಲದರ ಗುಂಪಿಗೂ ಕಲ್ಪವೆಂಬ ಹೆಸರಿದೆ: ಅತಿಬಲಕೃಷ್ಣಂ ಗತಜೀವಿತನಾಗೆ ಮಹಾಬಲಂ ಮಹಾವ್ರತದಿಂದನ್ವಿತಮತಿ ಸಮಾಧಿಗುಪ್ತವ್ರತಿಯುಪದೇಶದೊಳೆ ಪುಟ್ಟಿದಂ ಪ್ರಾಣತದೊಳ್ (ಅಪಿಪು. ೩-೭೭); ಆನತ ಪ್ರಾಣತ ಆರಣಾಚ್ಯುತ ಕಲ್ಪಸಂಭವದೇವರ್ (ತತ್ತ್ವಾಕ್ರ. ೦೬೨). [ಸಂ.]

ಪ್ರಾಣತಕಲ್ಪ (ನಾ). = ಪ್ರಾಣತ: ಆರಾಧನಾವಿಧಿಯಿಂ ಪ್ರಾಣತಕಲ್ಪದೊಳ್ ಪ್ರಾಣತವಿಮಾನದೊಳ್ ಪ್ರಾಣತೇಕದ್ರನಾಗಿ . . . ಸುಖಮಿರ್ಪಿನಂ (ಕಾಪುಂಪು. ೨೭೭); ಪ್ರಾಣತಕಲ್ಪದೊಳತುಳಪ್ರಾಣತಸುರರಾಜನಾಗಿ . . . ಸುಖಮಿರ್ದಂ (ಪುಷ್ಪಪು. ೯-೦೦). [ಸಂ.]

ಪ್ರಾಣತೆಗೆ (ಕ್ರಿ). ಜೀವವಿಲ್ಲದಂತೆ ಮಾಡು; ಜೀವ ಕಳೆ; ಕೊಲ್ಲು: ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕುವುದೆ ? (ಧೇವಪು. ೦೬೬).

ಪ್ರಾಣ ತೆಗೆದುಕೊಳ್ಳು = ಆತ್ಮಹತ್ಯೆ ಮಾಡಿಕೊಳ್ಳು; ಜೀವವಿಲ್ಲದಂತೆ ಮಾಡಿಕೊಳ್ಳು: ಧಾರೆಯ ದಿನವೇ ಹಳ್ಳಕ್ಕೆ ಹಾರಿ ಪ್ರಾಣ ತೆಗೆದುಕೊಂಡ ಸುದ್ದಿ ಕಿವಿಗೆ ಬಿದ್ದಿದ್ದೇ ತಡ . . . ಪ್ರಜ್ಞೆತಪ್ಪಿ ಕಣ್ಣು ಮುಚ್ಚಿದವರು ಮತ್ತೆ ಕಣ್ಣು ತೆರೆಯಲೇ ಇಲ್ಲವಂತೆ (ಮಲೆಮ. ೬೯೬).

[ಪ್ರಾಣ + ತೆಗೆ$_1$]

ಪ್ರಾಣತ್ಯಾಗ (ನಾ). ೧. ಜೀವವನ್ನು ಬಿಡುವುದು; ಪ್ರಾಣವನ್ನು ತ್ಯಜಿಸುವುದು; ಆತ್ಮಹತ್ಯೆ: ಯಾವುದಾದರೂ ಪುಣ್ಯಕ್ಷೇತ್ರದ ಕೆರೆ ಹಾರಿ ಪ್ರಾಣತ್ಯಾಗ ಮಾಡುವುದೇ ಒಳ್ಳೆಯದೆಂಬ ಯೋಚನೆಯೂ ಒಮ್ಮೆ ಮನಸ್ಸನ್ನು ಹದಗೆಡಿಸಿತು (ಪದ್ಮಸ. ೦೫೦). ೨. ಸಾವು; ಮರಣ:

ಭೋಗಿವಿಷಂಬೋಲ್ಪ್ರಾಣತ್ಯಾಗಮನಾಗಿಸುಗುಮಮಳಕೃತಿವಧುಗಿನಿತುಂ (ಕಬಿಶಾ. ೦-೬೦). [ಸಂ.]

ಪ್ರಾಣದಾನ (ನಾ). ೧. ಜೀವವನ್ನು ಉಳಿಸುವುದು; ಪ್ರಾಣಾಪಾಯದಿಂದ ಕಾಪಾಡುವುದು : ಒಡೆಯನಟ್ಟಿದ ದಂಡು ಮೇಲ್ಪರಿದಡೆ ತೆರಳ್ದೋಡುವುದು ವೀರವೆ ಕಡಗಿ ಬಂದು ಪ್ರಾಣದಾನವನೊಮ್ಮೆಯುಂ ಬೇಡಿ (ಬಸವು. ೪೬-೫೦); ಪ್ರಾಣದಾನದ ಹಿರಿಮೆ ತಾಂ ಪ್ರಾಣಮಯಕೆ (ಅಪಿಕೇ. ೫೬-೯). ೨. (ಆಲಂ) ಅಧಿಕಾರ ಅಥವಾ ಅವಕಾಶವನ್ನು ಉಳಿಸಿ ಕೊಡುವುದು : ಹಲವಾರು ಬಾರಿ ಅವನು ತಪ್ಪು ಮಾಡಿ ಸಿಕ್ಕಿಬಿದ್ದಿದ್ದರೂ ಅವನ ಹೆಂಡತಿ ಮಕ್ಕಳ ಮುಖ ನೋಡಿ ಸಾಹೇಬರು ಅವನಿಗೆ ಪ್ರಾಣದಾನ ನೀಡಿದ್ದಾರೆ (ಕೂಡಿ). [ಸಂ.]

ಪ್ರಾಣದೇವರು (ನಾ). [ದ್ವೈತ] ಜೀವಕ್ಕೆ ಒಡೆಯನಾದವನು; ವಾಯುಪುತ್ರನಾದ ಮಾರಂತಿ : ಹೀಗೆಯೆ ಪ್ರಾಣದೇವರಲ್ಲಿ ಪರಮಾತ್ಮನಿದ್ದರೂ ಮುಖ್ಯಪ್ರಾಣರೂಪಿಯಾಗಿಯೇ ತೋರುತ್ತಿರುವನು (ಹಸಾರ. ೪-೦೬ ಶಾಕೃರ್ಯ). [ಪ್ರಾಣ + ದೇವರು]

ಪ್ರಾಣಧರ್ಮ (ನಾ). ಜೀವದ ರೀತಿ,-ನೀತಿ : ಅನಲಯೋಗದೊಳನ್ನವನು ಜೀರ್ಣಿಸುತ ಮೇಲಲ್ಲಿಂದ ತನುವಂ ದಿನದಿ ಚೇಷ್ಟಿಸಿ ಧರಿಸಿಹುದೆ ಕೇಳ್ ಪ್ರಾಣಧರ್ಮವದು (ಗಗತಾ. ೯-೬೫). [ಸಂ.]

ಪ್ರಾಣಧಾರಣೆ (ನಾ). ಜೀವವನ್ನು ಹಿಡಿದಿರುವುದು; ಬದುಕಿರುವುದು : ಪ್ರಾಣಧಾರಣೆಗೆ ಬೇಕಾದಷ್ಟು ವೆಚ್ಚ ಮಾಡಿ ಮಿಕ್ಕಿದುದನ್ನು ಸಹಾಯಹೀನರಾದ ಹೆಂಗಸರ ಸೇವಾರ್ಥವಾಗಿ ದಾನ ಮಾಡುವೆನು (ಕಪಾಕುಂ. ೦೬೦). [ಸಂ. ಪ್ರಾಣಧಾರಣ]

ಪ್ರಾಣನ (ನಾ). ೧. ಕಂಠ; ಕುತ್ತಿಗೆ. ೨. ನೀರು; ಜಲ. ೩. ಬದುಕಿಸುವುದು; ಜೀವವನ್ನು ಉಳಿಸುವುದು : ಜಾಯಾವಿಯೋಗದಿಂ ದುಃಖಿತನಾಗಿಯುಮ್ಮೆನ್ನ ತಂದೆ ಪುತ್ರಸ್ನೇಹದಿಂದಳವಿಗಟಿದ ಹೃದಯಶೋಕಮನಡಂಗಿಸಿರ್ದು ಮಾಣ್ಪ್ರಾಣನಪ್ರಯತ್ನತತ್ಪರನಾಗಿ (ಕಾದಂಪೂ. ೦೩೯). [ಸಂ.]

ಪ್ರಾಣನಷ್ಟ (ನಾ). ಜೀವ ಹೋಗುವುದು; ಸಾವು; ಮರಣ : ಬಸ್ಸು ಅಪಘಾತಕ್ಕೊಳಗಾದರೂ ಹೆಚ್ಚು ಪ್ರಾಣನಷ್ಟವಾಗಲಿಲ್ಲ (ಕೂಡಿ). [ಸಂ.]

ಪ್ರಾಣನಾಥ (ನಾ). ೧. ಗಂಡ; ಪತಿ : ಮತ್ತೊಂದೆಡೆಯೊರ್ವಳ್ ಆತ್ಮೀಯಪ್ರಾಣನಾಥನಗಲ್ಕೆಯಂ ಸೈರಿಸಲಾಱದೆ (ಆದಿಪು. ೦೨-೩೯ ಪ). ೨. ಯಮ. ೩. ಜೀವದ ಒಡೆಯ; ಶಿವ : ಎನ್ನ ಭಾವದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿವ್ವೆಯಯ್ಯಾ ಕೂಡಲಸಂಗಮದೇವಾ ನೀನೆನ್ನ ಪ್ರಾಣನಾಥನಾಗಿ (ಬಸವ. ೮೦೨); ಕೇಳು ಕೇಳಯ್ಯಾ ಪ್ರಾಣನಾಥನೆ ಎನ್ನ ಪ್ರಾಣಪೂಜೆಯ ಬಗೆಯ ಬಣ್ಣಿಸುತಿರ್ಪೆನು (ಅಪಂಡೇ. ೨೯೦-೮೬). [ಸಂ.]

ಪ್ರಾಣನಾಥೆ (ನಾ). ಹೆಂಡತಿ; ಪತ್ನಿ : ಸಾಣವಿಡಿದಿರ್ದ ಕರಪತ್ರಮಂ ಕೊಡಿಸಿದಂ ಪ್ರಾಣನಾಥೆಯ ಕೈಯೊಳು (ಸೈಮಿಶಾ. ೨೬-೬೦). [ಪ್ರಾಣನಾಥ + – ಎ$_2$]

ಪ್ರಾಣನಾಶಕ (ಗು). ಸಾವನ್ನುಂಟುಮಾಡುವ; ಜೀವ ಕಳೆಯುವ : ಗಿಡಗಳಿಗೆ ಹಾಕಲು ತಂದಿರುವ ಆ ಪ್ರಾಣನಾಶಕದ್ರವ್ಯವನ್ನು ಮಕ್ಕಳ ಕೈಗೆ ಸಿಗುವಂತೆ ಇಡಬೇಡ (ಕೂಡಿ). [ಸಂ.]

ಪ್ರಾಣಪಂಚಕ (ನಾ). ಶರೀರದೊಳಗಿರುವ ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೆಂಬ ಐದು ಬಗೆಯ ಪ್ರಾಣವಾಯುಗಳು : ಸುಜ್ಞನಱಿ ಇದು ಪ್ರಾಣಪಂಚಕನಿರ್ಗಮ ಸಾಮಾನ್ಯ ವ್ಯಾನವು ಗರ್ಭವೂ ದಾನವು ಅಪಾನವು ಪ್ರಾಣಗಳುಯೆಂದ (ಸ್ಥಾನಸಿಂ. ೫-೨೯). 'ಪಂಚಪ್ರಾಣ' ಪರಾ. [ಸಂ.]

ಪ್ರಾಣಪಣ (ನಾ). ಜೀವವನ್ನೇ ಒಡ್ಡುವುದು; ಪ್ರಾಣವನ್ನೇ ಪಣವಾಗಿಡುವುದು : ಪ್ರಾಣಪಣ[ಪಾಣಾಂ. ಪಥ, ಪದ]ವಿದು ನಿಖಿಳವಿದ್ಯದ ಜಾಣತನವಿದು ವಿನಯವೆಂದಿದು ಕೇಣವಿಲ್ಲದೆ ನೆರವಿ ನೆಱೆ ಹೊಗಳಿತು ಧನಂಜಯನ (ಕುಪ್ಯಾ. ೮-೬-೯೬). [ಸಂ.]

ಪ್ರಾಣಪತಿ (ನಾ). = ಪ್ರಾಣನಾಥ ೧ : ಮಧುರೆಯಲಿ ಬಿಲ್ಲ ಹಬ್ಬ ಪುಟ್ಟಿಸಿ ಕುಟಿಲದಲಿಯೆಮ್ಮ ಪ್ರಾಣಪತಿಯ ಕರೆಸಿದ ಸುದತಿಯರ ಮನದಳಲು ತಟ್ಟದಿಹುದೆ ನಮ್ಮ ಎದೆಗಿಚ್ಚು ಕಂಸನ ತಲೆಗೆ ಮೂಡಲಿಯೆನುತ (ಕುರುಂದ. ೪-೦೦೦-೧೪). [ಸಂ.]

ಪ್ರಾಣಪದ (ನಾ). ಜೀವಕ್ಕೆ ಸಮವಾಗಿ ಪ್ರೀತಿಸುವ ವಸ್ತು; ಅತಿಪ್ರಿಯವಸ್ತು : ಧರೆಯೊಳೆಲ್ಲಂ ಸ್ವಾತಿವರುಷಂ ಸುರಿಯಲೆಂತಹ ಹನಿಗಳಿಗೆ ಏ ಪರಿಯೊಳಂ ಕಱೆಗೊಳ್ಳದಂತಾಗಿದಱ ಪರಿ ಬೇಱೆ ನಿರತವದಱಿಂ ಪ್ರಾಣಪದವಾದಿರವಿಗಲ್ಲದೆ ಬಾಯಿದೆಱೆಯದು ಕರಮೆಸೆವ ಸಿಂಪೊಂದು ನೆನೆವುತಮಿಹುದು ಮಳೆಗಳಿಗೆ (ಬಸವು. ೫೦-೨೯). [ಸಂ.]

ಪ್ರಾಣಪದಕ (ನಾ). ಬದುಕಿನಲ್ಲಿ ಪ್ರಿಯವಾದ ವಸ್ತು : ಓದಿಗಿಂತಲೂ ಕ್ರಿಕೆಟ್ ಆಟ ಅವನ ಪ್ರಾಣಪದಕವಾಗಿತ್ತು (ಕೂಡಿ). [ಸಂ.]

ಪ್ರಾಣಪರಿಚ್ಛೇದ (ನಾ). ಜೀವ ಬಿಡುವುದು; ಪ್ರಾಣ ಕಳೆದುಕೊಳ್ಳುವುದು : 'ಪ್ರಾಣಪರಿಚ್ಛೇದಂಗೆಯ್' ಪರಾ. [ಸಂ.]

ಪ್ರಾಣಪರಿಚ್ಛೇದಂಗೆಯ್ (ಕ್ರಿ). ಜೀವ ಬಿಡು; ಪ್ರಾಣ ಕಳೆದುಕೊಳ್ಳು : "ಪ್ರಾಣಪರಿಚ್ಛೇದಂಗೆಯ್ವವನಂ ಆಯಶ್ಶೂಳಿಕನೆಂಬುದು" (ಹಲಾಯು. ೬೦-೨೦೬). [ಪ್ರಾಣಪರಿಚ್ಛೇದ + ಕೆಯ್$_1$]

ಪ್ರಾಣಪವನ (ನಾ). ಜೀವದ ಉಸಿರು; ಪ್ರಾಣವಾಯಂ : ಪ್ರಾಣಪವನನ ಬೀಡು ಬಿಟ್ಟುದು ಗೋಣಿನಲಿ (ಕುಪ್ಯಾ. ೦೯-೯೬). [ಸಂ.]

ಪ್ರಾಣಪೂಜೆ (ನಾ). ಪರಮಾತ್ಮನ ಅರ್ಚನೆ; ದೇವರ ಪೂಜೆ : ಕೇಳು ಕೇಳಯ್ಯಾ ಪ್ರಾಣನಾಥನೆ ಎನ್ನ ಪ್ರಾಣಪೂಜೆಯ ಬಗೆಯ ಬಣ್ಣಿಸುತಿರ್ಪೆನು (ಅಪಂಡೇ. ೨೯೦-೮೬). [ಸಂ. ಪ್ರಾಣಪೂಜಾ]

ಪ್ರಾಣಪ್ರತಿಷ್ಠಾಪನೆ (ನಾ). ೧. ವಿಧಿಪೂರ್ವಕವಾಗಿ ಪ್ರಾಣವನ್ನು ಆವಾಹನೆ ಮಾಡಿ ವಿಗ್ರಹವನ್ನು ಪ್ರತಿಷ್ಠಿಸುವ ಪೂಜೆಯ ಒಂದು ಅಂಗ : ವಿಗ್ರಹದಲ್ಲಿ ದೇವತ್ವವನ್ನು ಆವಾಹಿಸುವುದು. ೨. ಜೀವ ತುಂಬುವುದು ; ಜೀವಂತಗೊಳಿಸುವುದು : ಘಟನೆಗಳನ್ನು ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಅವುಗಳಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ . . . ಅವು ಜೀವಿಸುವಂತೆ ಮಾಡಿಕೊಳ್ಳಬೇಕು (ಪಂಡಾಕ್ರೆ. ೬೨). [ಸಂ. ಪ್ರಾಣಪ್ರತಿಷ್ಠಾಪನ]

ಪ್ರಾಣಪ್ರತಿಷ್ಠೆ (ನಾ). = ಪ್ರಾಣಪ್ರತಿಷ್ಠಾಪನೆ ೧ : ಶಾಸ್ತ್ರೋಕ್ತವಾಗಿ ನಿರ್ಮಿತವಾದ ಪ್ರತಿಮೆಯಲ್ಲಿ ನಿರ್ದಿಷ್ಟದೇವತೆಯನ್ನು ಆವಾಹನೆ ಮಾಡುತ್ತಾರೆ. ಈ ವಿಧಿಗೆ 'ಪ್ರಾಣಪ್ರತಿಷ್ಠಾ' ಎಂದು ಹೆಸರು (ಶಾರದ. ೫೦೬); ಮೂಲಬೇರದ ಸ್ಥಾಪನೆಯಾದ ಮೇಲೆ ಪ್ರಾಣಪ್ರತಿಷ್ಠಾ ನೇತ್ರೋನ್ಮೀಲನಾದಿ ಕರ್ಮಗಳನ್ನು ವಿಧಿವತ್ತಾಗಿ ಮಾಡಿ (ಹೊಯ್ಸಾ. ೦೯). [ಸಂ. ಪ್ರಾಣಪ್ರತಿಷ್ಠಾ]

ಪ್ರಾಣಪ್ರಿಯ (ಗು). ಜೀವಕ್ಕೆ ಸಮವಾದ ; ಬಹಳವಾಗಿ ಪ್ರೀತಿಸುವ : ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾರ್ತಾಜಿಗೆ ಬಂದೊಡ್ಡಲ್ಕೆ ಪೇಟ್ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ (ಆದಿಪು. ೦೯-೮೨) ; ಪ್ರಾಣಪ್ರಿಯಾಣ್ಮನಂ ಕಾಣದಿರೆ ಪೊತ್ತುವುದು ಹರಣದುರಿ (ಕಪಾಕ್ರಂಗ. ೫೫-೦೫೦೩). [ಸಂ.]

ಪ್ರಾಣಪ್ರಿಯೆ (ನಾ). ಹೆಂಡತಿ; ಪತ್ನಿ : ಪ್ರಾಣಪ್ರಿಯೆಯಿಲ್ಲದೆ ನಿಃಪ್ರಾಣಮದೆಂತುಣ್ಬುದೀಗಳೀಯೊಡಲಹಿತಪ್ರಾಣಾನಿಲನಿಂದೆನ್ನ ಕೃಪಾಣಾಹಿಯನೂಡಿ ಬಟಿಕಮಾನುಂಡಪ್ಪೆಂ (ಅಪಂಪು. ೦೦-೬೬). [ಸಂ. ಪ್ರಾಣಪ್ರಿಯಾ]

ಪ್ರಾಣಬಾಧೆ (ನಾ). ಜೀವ ಹೋಗುವ ಸ್ಥಿತಿಯಲ್ಲಿ ಆಗುವ ತೊಂದರೆ ; ಪ್ರಾಣ ಹೋಗುವಾಗ ಆಗುವ ಹಿಂಸೆ : ಅವರು ಪ್ರಾಣಬಾಧೆ ತಡೆಯಲಾರದೆ ಬಹಳ ನರಳಾಡುತ್ತಿದ್ದರು (ರೂಢಿ). [ಸಂ. ಪ್ರಾಣಬಾಧಾ]

ಪ್ರಾಣಬಿಡು (ಕ್ರಿ). ೧. ಸಾಯು; ಮರಣವನ್ನು ಹೊಂದು : ಶುಕ್ಲ ಶೋಣಿತಶರೀರ . . . ಪ್ರಾಣಬಿಟ್ಟರೆ ದುರ್ಗಂಧ ನಾಱುವುದು (ಪುರಂದ. ೩-೯೩-೨); ಹೆತ್ತ ತಾಯಿ ದುಸ್ಸಹ ಸಮಾಚಾರವನ್ನು ಕೇಳಿ ಪ್ರಾಣಬಿಟ್ಟರು (ಕಾಂತಲಾ. ೦೭೦); ಫಕೀರನು ಪ್ರಾಣಬಿಟ್ಟಿದ್ದಾನೆ ಎಂದು ಹೇಳಿದರು (ರೌಂಕ್. ೨೯೭). ೨. (ಆಲಂ) ಅತ್ಯಂತ ಕಷ್ಟಪಡು ; ಶ್ರಮಿಸು : ಇಷ್ಟು ಪ್ರಾಣಬಿಟ್ಟರಲ್ಲ ನೀವು, ಕೊನೆಗೂ ಒಂದು ಕುಂಟುಪಂಕ್ತಿ ಬರೆದೇ ಹೋದರು ಅವರು (ಶುಗಿಯು. ೩೪೬). [ಪ್ರಾಣ + ಬಿಡು$_1$]

ಪ್ರಾಣಭಯ (ನಾ). ಜೀವಕ್ಕೆ ಉಂಟಾಗುವ ಅಪಾಯದ ಅಂಜಿಕೆ ; ಪ್ರಾಣದ ಹೆದರಿಕೆ : ನಿಮ್ಮ ಪ್ರಸಾದದಿಂ ಪ್ರಾಣಭಯಂ ಪಿಂಗಿದುದು (ಧರ್ಮಾಮ್ಯ. ೦೨-೦೭೩) ; ಪ್ರಾಣಭಯ ತನ್ನಂತೆ ಸಕಲಪ್ರಾಣಿಗಳಿಗುಂಟು (ಕಿಮ್ಮಂ. ೯-೩೦). [ಸಂ.]

ಪ್ರಾಣಮಯಕೋಶ (ನಾ). ಜೀವವನ್ನು ಆವರಿಸಿಕೊಂಡಿರುವ ಐದು ಬಗೆಯ ಆವರಣಗಳಲ್ಲಿ ಒಂದು: ಸೂಕ್ಷ್ಮತನುವಿನಲ್ಲಿ ಪ್ರಾಣಮಾರುತನುಂ ಕರ್ಮೇಂದ್ರಿಯಂಗಳುಂ ಕೂಡಿ ಪ್ರಾಣಮಯಕೋಶವೆನಿಸುವುದು (ವಿವೇಕ. ೪೦) ; ಪಂಚಪ್ರಾಣವು ಕರ್ಮೇಂದ್ರಿಯವು ಕೂಡಿ ಪ್ರಾಣಮಯ ಕೋಶವೆಂದು ಹೇಳಲ್ಪಡುವುದು (ಈಶ್ವಸ್ಥ. ೦೩-೦೦) ; ದೇಹದಲ್ಲಿ ಪೂರ್ಣಬಲ ವನ್ನು ಕೊಡತಕ್ಕ ಇಂದ್ರಿಯಗಳನ್ನು ಪ್ರೇರಿಸತಕ್ಕ ವಾಯುವೇ ಪ್ರಾಣಮಯಕೋಶ (ಜೀವಾತ್ಮ. ೦೩೦). 'ಕೋಶಪಂಚಕ' ಪರಾ. [ಸಂ.]

ಪ್ರಾಣಮಿತ್ರ (ನಾ). ಜೀವಕ್ಕಿಂತಲೂ ಅತಿಶಯವಾದ ಸ್ನೇಹವನ್ನು ಹೊಂದಿರುವವನು ; ಪ್ರಾಣಸಖ : ಪ್ರಾಣಮಿತ್ರನೆನಿಪ್ಪ ಭಕ್ತತ್ರಾಣನಂ ಬಸವಣನನಗಲಿಂದ ತೇಣಧರಧರನಲ್ಲಿಗೆಂತುಱೆ ಹೋಗಬಹುದಯ್ಯಾ (ಬಸವು. ೩೬-೩೨) ; ಅವರಿಬ್ಬರೂ. . . . ಪ್ರಾಣಮಿತ್ರರು (ಪುಶರು. ೩೮೦). [ಸಂ.]

ಪ್ರಾಣಯಾತನೆ (ನಾ). — ಪ್ರಾಣಬಾಧೆ : ಕೃಷ್ಣನನ್ನು ನೋಡುತ್ತ, ಪ್ರಾಣಯಾತನೆಯನ್ನೂ ಲಕ್ಷಿಸದೆ...ನಮ್ಮೊಡನೆಯೆಲ್ಲಾ ಋಜುಮಾರ್ಗದಲ್ಲಿ ಯುದ್ಧಮಾಡಿದರೆ ಖಂಡಿತವಾಗಿಯೂ ನಿಮಗೆ ವಿಜಯವಾಗುತ್ತಿರಲಿಲ್ಲ ಎಂದನು (ಪಸಭಾ. ೩೦೯). [ಸಂ. ಪ್ರಾಣಯಾತನಾ]

ಪ್ರಾಣರಕ್ಷಣೆ (ನಾ). ಜೀವವನ್ನು ಕಾಪಾಡಿಕೊಳ್ಳುವುದು : ಅಂತು ಮೆಯ್ಯಱಿಯದಿರ್ದನಂ ಕಂಡು ಭಯಂಗೊಂಡುಪದೇಶಕ್ಕಡೆಯಿಲ್ಲದೆ ಪ್ರಾಣ ರಕ್ಷಣೋಪಾಯಮನಾದೊಡಂ ಮಾಟ್ಟಿನೆಂದಲ್ಲಿಂದ ಮೆಟ್ಟ ಚ್ಛೋದ ಸರೋವರಮಂ ಪೊಕ್ಕು (ಕಾದಂಪೂ. ೬೩೩) ; ಸುಲ್ತಾನನನ್ನು ನಗರದಿಂದ ಚಿತ್ರದುರ್ಗದ ಕೋಟೆಗೆ ಹೋಗಿ ಪ್ರಾಣರಕ್ಷಣೆ ಮಾಡಿಕೊಳ್ಳುವಂತೆ ಮಾಡಿದ್ದೇನೆ (ರೌಂಕ್. ೦೩೩). [ಸಂ. ಪ್ರಾಣರಕ್ಷಣ]

ಪ್ರಾಣಲಿಂಗ (ನಾ). ೧. ಪರಮಾತ್ಮ ; ಶಿವ : "ಶಿವ ಃ = ಪ್ರಾಣಲಿಂಗ" (ಕಾಶಕ್ಯ. ೦೭೨). ೨. [ಶೈವ] ಐದು ಬಗೆಯ ಲಿಂಗಗಳಲ್ಲಿ ಒಂದು : ಶೈವಸಿದ್ಧಾಂತಸಮ್ಮತವಾದ ಪಂಚಲಿಂಗಾರ್ಚನದೊಳು ಸ್ವಯಂಭುಲಿಂಗ ಬಾಣಲಿಂಗ ಚರಲಿಂಗ ಸಂಕೀರ್ಣಲಿಂಗ ಪ್ರಾಣಲಿಂಗವೆಂಬೈದಱೊಳಗೆ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಅರ್ಚನತತ್ಪರರಾಗಬೇಕೆಂದು ನಿಶ್ಚಯಿಸ ಲಕ್ಕುಂ (ವಿವೇಕ. ೦೦೨). ೩. [ವೀಶೈ] ಇಷ್ಟಲಿಂಗ, ಭಾವಲಿಂಗ ಮತ್ತು ಪ್ರಾಣಲಿಂಗಗಳೆಂಬ ಮೂರು ಬಗೆಯ ಲಿಂಗಗಳಲ್ಲಿ ಒಂದು; ದೇಹಗುಣವ್ಯಾಪ್ತಿಯನ್ನು ಬಿಟ್ಟು ಶಿವಸ್ವರೂಪದಲ್ಲಿ ಮನಸ್ಸು ಲೀನವಾಗುವ ಒಂದು ಸ್ಥಿತಿ : ಪ್ರಾಣಲಿಂಗವು ಸಕಲ ನಿಷ್ಕಲರೂಪ ವಾಗಿದ್ದು, ಮನಸ್ಸಿನಿಂದ ಗ್ರಹಿಸತಕ್ಕುದಾಗಿರುವುದು (ಶಿವಾಸೂ. ೩೩) ; ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗವೆಂದು ಶಿವಲಿಂಗತ್ರಯಭೇದಂಗಳವು ಗಳಲ್ಲಿ ದೇಹಗುಣವ್ಯಾಪ್ತಿಯಂ ಬಿಟ್ಟು ಶಿವಲಿಂಗಸ್ವರೂಪದಲ್ಲಿ ಮನವು ಮುಟ್ಟಿಹುದೇ ಪ್ರಾಣಲಿಂಗವೆನಿಸುವುದು (ವಿವೇಕ. ೦೨೩). [ಸಂ.]

ಪ್ರಾಣಲಿಂಗಿ (ನಾ). [ವೀಶೈ] ಷಟ್ಸ್ಥಲಗಳಲ್ಲಿ ನಾಲ್ಕನೆಯ ಹಂತವಾದ ಪ್ರಾಣಲಿಂಗಸ್ಥಲವನ್ನು ತಲಪಿರುವವನು ; ನಾನಂ, ನನ್ನದು ಎಂಬ ಮೋಹವನ್ನು ತೊರೆದು ಸರ್ವವನ್ನೂ ಲಿಂಗಮಯವೆಂದು ಭಾವಿಸುವವನು: ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನೈಕ್ಯನು ಮೆಲ್ಲಮೆಲ್ಲನೆ ಆದಹೆನ್ನೆಂಬನ್ನಬರ ನಾನೇನು ವಜ್ರದೇಹಿಯೆ (ಬಸವ. ೬೯೬); ನಾನು ನನ್ನದೆಂಬ ಭ್ರಮಾಜನ್ಯವಾದ ಮೋಹವನ್ನು ತ್ಯಜಿಸಿ ಇದೆಲ್ಲವೂ ಲಿಂಗಮಯವಾದುದೆಂದು ತಿಳಿದು ತದೇಕಯತ್ತ ಮಾನಸನಾಗಿರುವುದೇ ಪ್ರಾಣಲಿಂಗಿಯ ಸ್ವರೂಪವು (ಶಿವಾಸೂ. ೩೪) ; ಎನ್ನ ಸಿದ್ಧರಾಮನಂತೆ ಶುದ್ಧ ಪ್ರಾಣಲಿಂಗಿಯೆಂದೆನಿಸಯ್ಯ (ಅಖಂಡೇ. ೭೩-೪೩). [ಸಂ. ಪ್ರಾಣಲಿಂಗಿನ್]

ಪ್ರಾಣಲಿಂಗಿಸ್ಥಲ (ನಾ). [ವೀಶೈ] ವೀರಶೈವಮತದಲ್ಲಿ ಸಾಧನೆಯ ಷಟ್ಸ್ಥಲಮಾರ್ಗದ ನಾಲ್ಕನೆಯ ಸೋಪಾನ,— ಹಂತ; ಷಟ್ಸ್ಥಲ ಗಳಲ್ಲಿ ಒಂದು : ಅನಿಲಾಂಗದಲ್ಲಿ ಮನೋಹಸ್ತದಿಂದ ಚರಲಿಂಗಾರ್ಚನ ಯುಕ್ತವಾದುದೇ ಪ್ರಾಣಲಿಂಗಿಸ್ಥಲ (ಶಿವಾಸೂ. ೯೭) ; ಪ್ರಾಣಲಿಂಗಿಸ್ಥಲ . . . ಅಂಗಲಿಂಗಿಸ್ಥಲ ಈ ಐದು ಪ್ರಾಣಲಿಂಗಿಸ್ಥಲಂಗಳು (ಅಖಂಡೇ. ೨೩೦-೦೦೯). [ಸಂ.]

ಪ್ರಾಣವಂಚಕ (ನಾ). (ತನ್ನ) ಜೀವಕ್ಕೆ ವಂಚನೆ ಮಾಡಿಕೊಳ್ಳು ವವನು : ಮೂದಲಿಸಲುಂ ಪ್ರಾಣವಂಚಕನಾದವಂಗಂ ಲಿಂಗಭಕ್ತಿ ಸುವೇ ಧಿಸದು ಧನವಂಚಕಂಗೆ ಸುಸಾಧ್ಯವಾಗದದು ಆದಿಜಂಗಮಭಕ್ತಿ (ಬಸವು. ೩೯-೦೯). [ಸಂ.]

ಪ್ರಾಣವಧೆ (ನಾ). ಕೊಲ್ಲುವುದು ; ಪ್ರಾಣಹಾನಿ : ಜಿನಚಂದ್ರದೇವಂ ನಡೆಯೆ ಧರ್ಮಚಕ್ರಂ ಮುಂದೆ ನಡೆಯೆ ನಡೆವ ನಾಲ್ಕುಂ ದೆಸೆಗಳೊಳಂ ನೂಱುಯೋಜನಪ್ರಮಾಣಾಂತರದೊಳಾವ ಜೀವಕ್ಕಂ ಪಸಿವು ಪಸವುಂ ಪ್ರಾಣವಧೆಯುಮಾಗದಿರೆಯುಂ (ಶಾಂತಿಪು. ೦೨-೦೪ ವ) ; ಶಾಸ್ತ್ರ ಘನ ವೆಂಬೆನೆ ಕರ್ಮವ ಭಜಿಸುತ್ತಿದೆ ವೇದ ಘನವೆಂಬೆನೆ ಪ್ರಾಣವಧೆ [ಪಾಶಾಂ. ವೇಧೆ] ಯ ಹೇಳುತ್ತಿದೆ (ಬಸವ. ೨೦೬). [ಸಂ. ಪ್ರಾಣವಧ]

ಪ್ರಾಣವಲ್ಲಭ (ನಾ). ೧. ಪ್ರೀತಿಪಾತ್ರ ವ್ಯಕ್ತಿ : ಬಿಡದೆ ಪೊಗೆ ಸುತ್ತೆ ತೋಳಂ ಸಡಲಿಸದಾ ಪ್ರಾಣವಲ್ಲಭರ್ ಪ್ರಾಣಮನಂದೊಡೆಗಳೆದರೋವ ರೋಪರೊಳೊಡೆಸಾಯಲ್ಪಡೆದರಿನ್ನವೇಂ ಸೈಪೊಳವೇ (ಅದಿಪು. ೩-೨೪). ೨. ಗಂಡ ; ಪತಿ : ಹಾ ಮದೀಯ ಪ್ರಾಣವಲ್ಲಭನೆ . . . ಎಮ್ಮ ದೃಷ್ಟಿಗೆ ದೂರವಾದೈ (ಕೌಶಿರಾ. ೩೭-೭). [ಸಂ.]

ಪ್ರಾಣವಲ್ಲಭೆ (ನಾ). ಹೆಂಡತಿ ; ಪತ್ನಿ: ಪೊಲ್ಲಮೆಯೊಳ್ ತೀವಿರ್ದ ಗೃಹಸ್ಥರೆಲ್ಲಂ ಕಣ್ಣೆವೆ ಮಱೆಯಾದೊಡೆ ಬಾಟದನಿತಂ ಮಾಟ್ಟ ಸ್ನೇಹದ ಪ್ರಾಣವಲ್ಲಭೆಯುಮಂ ದೋಷಂಗೆಯ್ದಳೆಂಬುದಂ ಕೇಳ್ದನಿತಱೊಳೆ ಪೊಱ ಮಡಿಸಿ ಕಳೆವರ್ (ಜೀವಸಂ. ೩೪-೦೪ವ) ; ಶಕುಂತಲೆ . . . ತಾನು ಹೃದ ಯೇಶ್ವರನ ಪ್ರಾಣವಲ್ಲಭೆಯಾಗಿ, ರಾಣಿಯಾಗಿ ಬಾಳಿ ಸುಖಿಸುವೆನೆಂದಾಶಿಸಿದಳು (ಧರ್ಮಗಾ. ೭೦). [ಸಂ. ಪ್ರಾಣವಲ್ಲಭಾ]

ಪ್ರಾಣವಾಯು (ನಾ). ೧. ಜೀವನಾಧಾರವಾದ ಗಾಳಿ ; ಆಮ್ಲಜನಕ : ಪ್ರಾಣವಾಯುಗಳವರು ಸುಭಟಶ್ರೇಣಿದೇಹಕೆ ನಿನ್ನ ತನು ನಿತ್ರಾಣವದ ಱಿಂದಾಯ್ತು ಪರಿಭವವು (ಕುಷ್ಠಾಲಿ. ೨೦-೦೨) ; ಶ್ಲೇಷ್ಮದಿಂದ ತಡೆಯಲ್ಪಟ್ಟ ಪ್ರಾಣವಾಯುವು ಅನ್ನಜೆ, ಯಮಳೆ, ಗಂಭೀರೆ, ಕ್ಷುದ್ರೆ, ಮಹತೆ ಎಂಬೈದು ಪ್ರಕಾರದಿಂದ ಬಿಕ್ಕುಳನ್ನುಂಟುಮಾಡುವುದು (ಸಕಪ್ಯ. ೨೫೦). ೨. [ಯೋಗ] ಪ್ರಾಣವೆಂಬ ಹೆಸರುಳ್ಳ ವಾಯು : ರೇಚಕ ಪೂರಕ ಕುಂಭಕ ರೂಪಿಂದೆ ಚೇಷ್ಟಿಸುವುದೊಂದು ಪ್ರಾಣವಾಯು (ಕಪ್ಯತ. ೩೩-೦೩). [ಸಂ.]

ಪ್ರಾಣವಿಯೋಗ (ನಾ). ಜೀವವು ಶರೀರದಿಂದ ಬೇರೆಯಾಗುವುದು ; ಸಾವು ; ಮರಣ : ಚೈತ್ಯವೃಕ್ಷದೊಳು ಪಂಚನಮಸ್ಕಾರಮನುಚ್ಚರಿಸುತ್ತಂ ಪ್ರಾಣವಿಯೋಗಮಾಗೆ (ಶಾಸುಂಪು. ೦೬) ; ಪಾಪದಿ ನವೆದಜಾಮಿಳಗೊಲಿದು ಪ್ರಾಣವಿಯೋಗಕಾಲದಲಿ ಕಾಯ್ದವನು ನೀ (ಹಂಸಾ. ೪೫) ; ಕೈನಾಡಿಯನ್ನು ಹಿಡಿದು ನೋಡಿದನು ; ನಾಡಿಯ ಗತಿಯು ಕಾಣಲಿಲ್ಲ, ಪ್ರಾಣವಿಯೋಗವಾಗಿದ್ದಿತೇ ? (ಕಪಾಳುಂ. ೯೦). [ಸಂ.]

ಪ್ರಾಣಸಂಕಟ (ನಾ). ೧. ಸಾಯುವಾಗ ಉಂಟಾಗುವ ನೋವು ; ಪ್ರಾಣಬಾಧೆ : ಗಡ್ಡಂ ಮೀಸೆಗಳು ಬೇಯಲು ಸಮೀಪದ ಗಡಿಗೆ ಬಾವಿಗಳೊಳಗೆ ಧುಮ್ಮಿಕ್ಕುವರು ತಮ್ಮಯ ಪ್ರಾಣಸಂಕಟಕೆ (ಬಸಪು. ೫೬–೩೯) ; ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ (ಗಾರ). ೨. (ಆಲಂ) ಅತ್ಯಂತ ಹಿಂಸೆ ; ಪೇಚು : ಕರಿ ಕೊಳೆಗಳಿಂದುಂಟಾಗುವ ವಿಷಣ್ಣತೆ, ಒದ್ದೆಸಾದೆಯಿಂದಾಗಿ ಪ್ರಾಣಸಂಕಟ ಇವುಗಳಿಂದ ಕೂಡಿದ ಅನಾರೋಗ್ಯಕರವಾದ ಅಡುಗೆಮನೆಗಳಿಂದಾಗಿ ಎಷ್ಟು ಮಂದಿ ಸ್ತ್ರೀಯರು ತಮ್ಮ ಆರೋಗ್ಯವನ್ನು ಕಳೆದುಕೊಂಡಿಲ್ಲ ? (ಅಡುಸಾ. ೨೦). [ಸಂ.]

ಪ್ರಾಣಸಂಯಮ (ನಾ). ೧. ಉಸಿರಾಟವನ್ನು ಹತೋಟಿಯಲ್ಲಿಡುವುದು. ೨. [ಜೈನ] ಷಟ್ಕಾಯಜೀವಗಳ ವಧೆ ಮಾಡದಿರುವುದು : ಅಭ್ಯಂತರಂ ಬಾಹ್ಯಮೆಂಬೆರಡುಂ ತೆಱದ ಪರಿಗ್ರಹಮನೀಡಾಡಿ ಪ್ರಾಣಸಂಯಮಮಿಂದ್ರಿಯಸಂಯಮಮೆಂಬೆರಡುಂ ತೆಱದ ಸಂಯಮಮಂ ತಾಳ್ದಿ (ಜೀವಸಂ. ೦೦–೦ ಪ). 'ಇಂದ್ರಿಯಸಂಯಮಂ' ಪರಾ. [ಸಂ.]

ಪ್ರಾಣಸಖಿ (ನಾ). ಜೀವಕ್ಕೆ ಸಮವಾದ ಗೆಳತಿ : ಅತ್ಯಂತ ಪ್ರಿಯಳಾದವಳು : ಕ್ಷಮಿಸು ನೀಂ ಪ್ರಾಣಸಖೀ ರಮಣೀ ರಾಕೇಂದುಮುಖೀ (ಶಾಕುಂತ. ೦೦೦ ಅಡಿಪರ್ಯ). [ಸಂ. ಪ್ರಾಣಸಖೀ]

ಪ್ರಾಣಸಮೆ (ನಾ). ೧. ಜೀವಕ್ಕೆ ಸಮನಾದವಳು; ಪ್ರಾಣಪ್ರಿಯೆ : ಪ್ರಾಣಸಮೆ ಹೃದಯದಿಂ ಮತ್ಪ್ರಾಣದೊಳೊಡಗೂಡಿ ಪೋಗಲಾಗೆಂದೆನ್ನಂ ಮಾಣಿಪವೋಲ್ ಕಯ್ ಸುಮನೋಬಾಣಾಗ್ನಿಸ್ಫುರಿತಹೃದಯದೊಳ್ ಸೊಗಯಿಸುಗುಂ (ಕಾರುಪು. ೯೦೫). ೨. ಹೆಂಡತಿ ; ಪತ್ನಿ. [ಸಂ. ಪ್ರಾಣಸಮಾ]

ಪ್ರಾಣಸ್ಥಾನ (ನಾ). ಜೀವವಿರುವ ಸ್ಥಳ ; ಹೃದಯ : ವಾತಾದಿದೋಷಗಳು . . . ಅತ್ಯಂತಬಲವುಳ್ಳುದಾಗಿ ಪ್ರಾಣಸ್ಥಾನವಾದ ಹೃದಯವನ್ನಾಶ್ರಯಿಸಿ ಸನ್ಯಾಸವೆಂಬ ರೋಗವನ್ನುಂಟುಮಾಡುವುದು (ಸಕಪ್ಯ. ೨೮೦). [ಸಂ.]

ಪ್ರಾಣಸ್ನೇಹಿತ (ನಾ). ಜೀವಕ್ಕೆ ಸಮನಾದ ಗೆಳೆಯ ; ಪ್ರಿಯಮಿತ್ರ : ನಾವು ಧನಿಕರಲ್ಲದಿದ್ದರೂ ಪ್ರಾಣಸ್ನೇಹಿತರನ್ನು ಹೇಗೆ ಆದರಿಸಬೇಕೆಂದು ನಮಗೆ ಗೊತ್ತು (ಮರಣಾ. ೦೨೪) ; ಪ್ರಾಣಸ್ನೇಹಿತನಾದರೂ ಮೀನಿನ ಬುಟ್ಟಿಗೆ ಕೈಹಾಕಬೇಡ (ಗಾರ). [ಸಂ.]

ಪ್ರಾಣಸ್ವರೂಪ (ನಾ). ಜೀವದ ರೂಪದಲ್ಲಿರುವವನು; ಪ್ರಾಣಪ್ರಿಯ: ವತಿಯೆನಗೆ ಪ್ರಾಣಸ್ವರೂಪನಾಗಿದ್ದಾನೆ (ಕಪಾಳುಂ. ೦೨೦). [ಸಂ.]

ಪ್ರಾಣಹತಿ (ನಾ). ಮರಣ ; ಸಾವು : ಸಹಜಾಶುಚಿದೇಹಂ ಪ್ರಾಣ[ಪಾಕಾಂ. ಣಿ]ಹತಿ ಪ್ರಾರಂಭಮೆಂದು ವನಿತಾರತಿನಿಸ್ಪೃಹನಾಗಿ ತೊಱೆದು ನೆಗೞ್ವಂ ಗೃಹಸ್ಥರೊಳ್ ಬ್ರಹ್ಮಚಾರಿಯೇಱನೆಯಾತಂ (ಸುಕುಮಾ. ೬–೩೨). [ಸಂ.]

ಪ್ರಾಣಹತ್ಯೆ (ನಾ). ಕೊಲ್ಲುವುದು ; ಸಾಯಿಸುವುದು : ಬಿರಡಿಗಳನ್ನು ತಾನು ಕೊಲ್ಲುವುದಿಲ್ಲವೆಂತಲೂ ಇಸ್ತ್ರಿಯ ಬಾಯಿಗೆ ಸಿಕ್ಕು ಅವು ತಾವೆ ಪ್ರಾಣಹತ್ಯೆ ಮಾಡಿಕೊಳ್ಳುತ್ತವೆಂತಲೂ ಅಗಸನು ಹೇಳುತ್ತಾನೆ (ದೇಕಪ್ಯ. ೩೨); ಪ್ರಾಣಹತ್ಯೆಗೆ ಪ್ರವೃತ್ತವಾಗಲು, ನಿನಗೊದಗಿದ ವಿಪತ್ತಿ ಯಾವದು ? (ಕೃತಕ್ಕೆ. ೬). [ಸಂ. ಪ್ರಾಣಹತ್ಯ]

ಪ್ರಾಣಹರ (ಗು). ೧. ಜೀವವನ್ನು ತೆಗೆಯುವ ; ಕೊಲ್ಲುವ. (ನಾ). ೨. ಜೀವವನ್ನು ತೆಗೆಯುವಂಥದು ; ಸಾಯಿಸುವಂಥದು : "ಕ್ಷ್ವೇಳಃ ಗರಳಂ, ವಿಷಂ–೩ ಸಾಮಾನ್ಯವಾಗಿ ಸಕಲ ವಿಷಗಳಿಗೂ ಹೆಸರುಗಳು. ಅಂದರೆ ಪ್ರಾಣಹರವಾದ ಪಿತ್ತನಂಜು" (ಸಿದ್ಧಾಂತಿ. ೬೩). [ಸಂ.]

ಪ್ರಾಣಾಂತಿಕ (ಗು). ೧. ಮರಣವು ಸಮೀಪಿಸಿದ ; ಸಾವು ಸಮೀಪಕ್ಕೆ ಬಂದ : ಪ್ರಾಣಾಂತಿಕ ಸಂಕಟವು ದೊಡ್ಡದಲ್ಲವೆ ? (ಕೃತಕ್ಕೆ. ೬೯). (ನಾ). ೨. ಸಾವು ; ಮರಣ. [ಸಂ.]

ಪ್ರಾಣಾತಿಪಾತ (ನಾ). ೧. ಕೊಲ್ಲುವಿಕೆ ; ಸಾಯಿಸುವಿಕೆ. ೨. [ಜೈನ] ಇಪ್ಪತ್ತೈದು ಕ್ರಿಯೆಗಳಲ್ಲಿ ಒಂದು; ಆಯುಸ್ಸು, ಇಂದ್ರಿಯ, ಪ್ರಾಣಗಳ ವಿಯೋಗದಿಂದಾಗುವ ಕ್ರಿಯೆ : ಪಂಚವಿಂಶತಿಕ್ರಿಯೆಗಳು ೧ ಸಮ್ಯಕ್ತ್ವಕ್ರಿಯೆ . . . ೧೦ ಪ್ರಾಣಾತಿಪಾತ (ಆಯುಸ್ಸು, ಇಂದ್ರಿಯಶಕ್ತಿ, ಪ್ರಾಣ ಇವುಗಳ ವಿಯೋಗಕ್ರಿಯೆ) (ಕೈಪಧ. ೬೩). 'ಪಂಚವಿಂಶತಿಕ್ರಿಯೆ' ಪರಾ. [ಸಂ.]

ಪ್ರಾಣಾಪಹರಣ (ನಾ). ಜೀವವನ್ನು ತೆಗೆದುಕೊಂಡು ಹೋಗುವುದು; ಸಂಹಾರ ; ಕೊಲ್ಲುವುದು : ಪ್ರಾಣಾಪಹರಣದ ದುರುದ್ದೇಶದಿಂದ ಅವಳು ಪ್ರೇರಿತಳಾಗಿದ್ದಳೆಂಬುದಕ್ಕೆ ಸಾಕಷ್ಟು ರುಜುವಾತಿಲ್ಲ(ಪುಸಡು. ೨೦೪). [ಸಂ.]

ಪ್ರಾಣಾಪಾಯ (ನಾ). ಜೀವಕ್ಕೆ ಉಂಟಾಗುವ ತೊಂದರೆ,—ಅಪಾಯ: ಪ್ರಾಣಾಪಾಯದ ಭೀತಿ ಇಲ್ಲವೆಂದು ಹರ್ಷ ತಾಳಿದರು (ಕುಡಿಕೂ. ೨೬); ತಾನು ಪ್ರಾಣಾಪಾಯದಿಂದ ಪಾರುಗಾಣಬಹುದೆಂಬ ಆಶೆ ಜನಿಸಿತು (ಕೃತಕ್ಕೆ. ೯). [ಸಂ.]

ಪ್ರಾಣಾಯಾಮ (ನಾ). [ಯೋಗ] ಪ್ರಾಣವಾಯುವನ್ನು ಒಂದು ಕ್ರಮದಲ್ಲಿ ವ್ಯವಸ್ಥೆಗೊಳಿಸುವುದು : ವಿಪ್ರೋತ್ತಮರನುಮತದಿಂ ಪ್ರಾಣಾಯಾಮಂ ಮಂತ್ರಿಸಿ (ಗಿರಿಕ.೦೦–೯೭ ಪ) ; ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಂಗ ಯೋಗದೊಳಗೆ (ಅಖಂಡೇ. ೨೦೯–೫೫). [ಸಂ.]

ಪ್ರಾಣಾರ್ಪಣೆ (ನಾ). ಜೀವವನ್ನು ಅರ್ಪಿಸುವುದು ; ಸಾಯುವುದು : ದೇಶದ ಸಲುವಾಗಿ ಹಠಾತ್ ಪ್ರಾಣಾರ್ಪಣೆ ಮಾಡುವುದು ಅತ್ಯಂತ ಅವಶ್ಯಕ (ಇಪ್ಪಳ. ೯) ; ದಂಬನ ಕಾಲುಬುಡದಲ್ಲಿ ಹೋಗಿ ತನ್ನ ಪ್ರಾಣಾರ್ಪಣೆ ಮಾಡಿತು–ಬಾಡು (ದಂಬಾ. ೦೦೬). [ಸಂ. ಪ್ರಾಣಾರ್ಪಣ]

ಪ್ರಾಣಾವಧಿ (ನಾ). ಜೀವಿತದ ಅವಧಿ ; ಸಾಯುವವರೆಗಿನ ಕಾಲ : ಪ್ರಾಣಾವಧಿಯ ರಿಪುಗಳಂ ನುತಿಗೆ ರಕ್ಷಿಪ ಧುರೀಣಯನ್ನವಗುಣಗಳಂ ಹರಿಸು (ಶೀಕೃಪು. ೫–೭–೦). [ಸಂ.]

ಪ್ರಾಣಾಹುತಿ (ನಾ). ೧. ಜೀವದ ಬಲಿ ; ಸಾವು ; ಮರಣ : ಗಾಳದ ತುದಿಯೊಳಿಪ್ಪ ಭೂನಾಗನಂ ಕಂಡು ಪ್ರಾಣಾಹುತಿಯೆಂದು ಸವಿವ ಮೀನಿನಂತೆ (ಕವಳ. ೬೯–೩). ೨. ಊಟಕ್ಕೆ ಮೊದಲು ಪಂಚಪ್ರಾಣಗಳ ಹೆಸರಿನಿಂದ ಇಡುವ ಅನ್ನದ ಬಲಿ : ರಾಯರು ಪ್ರಾಣಾಹುತಿಯನ್ನಿಟ್ಟು ಊಟವನ್ನು ಪ್ರಾರಂಭಿಸಿದರು (ಕೂಡಿ). [ಸಂ.]

ಪ್ರಾಣಿ (ನಾ). ೧. ಜೀವವನ್ನು ಹೊಂದಿರುವಂಥದು ; ಜೀವಿ. ೨. ಮೃಗ ; ಪಶು : ಅಲ್ಲಿ ನಾನಾಜಾತಿಯ ಪ್ರಾಣಿಗಳು ಇದ್ದವು (ಕಪಪು. ೨–೨೭) ; ಮನುಷ್ಯಶಿಶು ಇತರ ಪ್ರಾಣಿಗಳ ಶಿಶುಗಳಿಗಿಂತ ದುರ್ಬಲ (ಕರ್ಣಾಟ. ೦೭೯). ೩. ಮನುಷ್ಯ; ಮಾನವ : ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ (ಬಸವ. ೦೨೬) ; ಪಂಥ ಬೇಡಿ ಪ್ರಾಣಿಗಳಿರಾ ಸಂತತ ಹರಿದಾಸರಾಗಿ (ಪುರಂದ. ೫–೦೦೩ ಪಠ್ಯ). [ಸಂ. ಪ್ರಾಣಿನ್]

ಪ್ರಾಣಿದ್ಯೂತ (ನಾ). ೧. ಯುದ್ಧ ; ಕಾಳಗ : " ಯುದ್ಧದಲ್ಲಿಯುಂ ಪ್ರಾಣಿದ್ಯೂತಮೆಂಬುದು" (ಹಲಾಯು. ೦೩೦-೪). ೨. ಹುಂಜ, ಟಗರು ಮೊದಲಾದ ಪ್ರಾಣಿಗಳ ಮೇಲೆ ಪಣವಿಟ್ಟು ನಡೆಸುವ ಕಾಳಗ : "ಪ್ರಾಣಿದ್ಯೂತಂ, ಸಮಾಹ್ವಯಃ—೨ ಕೋಳಿ ಮೊದಲಾದ ಜಂತುಗಳ ಪಂದ್ಯದ ಹೆಸರುಗಳು " (ಸಿದ್ಧಾಂತಿ. ೬೨೦). [ಸಂ.]

ಪ್ರಾಣಿಧರ್ಮ (ನಾ). ಜೀವಿಗಳು ಬದುಕಿರಲು ಕೈಗೊಳ್ಳುವ ಕಾರ್ಯ: ಪ್ರಾಣಿಧರ್ಮ ಎಂಬಲ್ಲಿ ಜೀವಿಗಳಲ್ಲಿ ಪ್ರಾಣರಕ್ಷಣ ಅಥವಾ ಪ್ರಾಣಧಾರಣಕ್ಕಾಗಿ ಸ್ವಾಭಾವಿಕವಾಗಿ ನಡೆಯುವ ಕಾರ್ಯಗಳು (ಅರ್ಥಾ. ೦೦). [ಸಂ.]

ಪ್ರಾಣಿವಧೆ (ನಾ). ಪ್ರಾಣಿಗಳನ್ನು ಕೊಲ್ಲುವುದು : ಪ್ರಾಣರಕ್ಷಣಮೆ ಪರಮಧರ್ಮಂ ಪ್ರಾಣಿವಧೆಯೆ ಪರಮಪಾತಕಮೆಂಬುದಱಿಂ ಪ್ರಾಣಿವಧೆಗೆಯ್ಯಲಾಗದು (ಪಂಚತಂ. ೬೦-೨೦) ; ಪ್ರಾಣಿವಧೆ . . . ಸುಳ್ಳಾಡುವುದು ಎಂಬ ನಾಲ್ಕು ಕೆಟ್ಟಕೆಲಸಗಳನ್ನು ಅವನು ನೀಗುವನು (ಬಾಧ್ಯ. ೦೬೮). [ಸಂ. ಪ್ರಾಣಿವಧ]

ಪ್ರಾಣಿವಧೆಗೆಯ್ (ಕ್ರಿ). ಜೀವಿಗಳನ್ನು ಕೊಲ್ಲು ; ಪ್ರಾಣಿಗಳನ್ನು ವಧಿಸು : ವಿಧಿಪೂರ್ವಕಂ ಪ್ರಾಣಿವಧೆಗೆಯ್ವರಲ್ಲದೆ ವೃಥಾ ವಧೆಗೆಯ್ವರಿಲ್ಲ (ಪಂಚತಂ. ೬೨-೦೦). [ಪ್ರಾಣಿವಧೆ + ಕೆಯ್$_1$]

ಪ್ರಾಣಿಶಾಸ್ತ್ರ (ನಾ). ಪ್ರಾಣಿಗಳ ಜೀವನಕ್ಕೆ ಸಂಬಂಧಿಸಿದ ಶಾಸ್ತ್ರ ; ಪ್ರಾಣಿಗಳನ್ನು ಕುರಿತ ಶಾಸ್ತ್ರ : ಭೌತಶಾಸ್ತ್ರ (Physics) ರಸಾಯನಶಾಸ್ತ್ರ (Chemistry) ಸಸ್ಯಶಾಸ್ತ್ರ (Botany) ಪ್ರಾಣಿಶಾಸ್ತ್ರ (Zoology) . . . ಬೇರೆಬೇರೆಯಾದವು (ಭೌತಪ. ೦೨) ; ನಾನು ಆ ಕಾಲದಲ್ಲಿ ಪ್ರಕೃತಿಶಾಸ್ತ್ರ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರಗಳನ್ನು ಅವರಿಂದ ಕಲಿತೆನು (ಪುಚಿಸ. ೨೨). [ಸಂ.]

ಪ್ರಾಣಿಶಾಸ್ತ್ರಜ್ಞ (ನಾ). ಪ್ರಾಣಿಶಾಸ್ತ್ರವನ್ನು ತಿಳಿದವನು : ಪ್ರಾಣಿಶಾಸ್ತ್ರಜ್ಞರ ಪರಿಶೋಧನೆಗಳಿಂದ ಹೊರಪಡುವ ವಿಷಯಗಳನ್ನು ಶಾಸ್ತ್ರೀಯವಾಗಿ ವಿಂಗಡಿಸುವುದು ವರ್ಗೀಕರಣದ ಮೊದಲನೆಯ ಮಜಲು (ಪ್ರಾಣಿಶಾ. ೦೨). [ಸಂ.]

ಪ್ರಾಣಿಸಂಗ್ರಹಾಲಯ (ನಾ). ಸಾರ್ವಜನಿಕರ ಪ್ರದರ್ಶನಕ್ಕಾಗಿ ವಿಸ್ತಾರವಾದ ಪ್ರದೇಶದಲ್ಲಿ ಕಾಡುಮೃಗಗಳನ್ನು ಕೂಡಿಟ್ಟಿರುವ ಸ್ಥಳ ; ಮೃಗಾಲಯ ; ಖಾಸಬಂಗಲೆ : ಮನುಷ್ಯನೆಂಬ ಒಂದು ಪ್ರಾಣಿಯೂ ಇದೆ. ಆದರೆ ಅವನಿಗೆ ಪ್ರಾಣಿಸಂಗ್ರಹಾಲಯ ಕಟ್ಟಿ ಪ್ರದರ್ಶಿಸುವ ಬುದ್ಧಿ ಇದೆ (ಅಪಹಾ. ೨೪೨). [ಸಂ.]

ಪ್ರಾಣಿಸು (ಕ್ರಿ). ಬದುಕುವಂತೆ ಮಾಡು ; ಬದುಕಿಸು : ಗೋಣ ಕೊಯ್ದರೆ ನೆನೆಯಲಾ ಹರಿಯೆನ್ನ ಪ್ರಾಣಿಸುವ (ಸಂಭಪ. ೬-೬೦). [ಪ್ರಾಣ + — ಇಸ್ಸು$_3$]

ಪ್ರಾಣಿಹಿಂಸೆ (ನಾ). ಪ್ರಾಣಿಗಳನ್ನು ಕೊಲ್ಲುವಿಕೆ ; ಪ್ರಾಣಿವಧೆ ; ಜೀವಹಿಂಸೆ : ಯಮ ತನ್ನ ಪುರದಿ ಸಾಱಿದನು . . . ಪ್ರಾಣಿಹಿಂಸೆಯ ಮಾಳ್ಪ ಬ್ರಹ್ಮತ್ಯಗಾಱರ ಎಳೆದು ತನ್ನಿರೋ ಎಂದು (ಪುರಂದ. ೨-೦೨೩-೨); ಕೆಲವು ನಿರೂಪಕರು ಪ್ರಾಣಿಹಿಂಸೆ ತ್ಯಾಗ ಮಾಡಿದರು (ಹಿಂದಸಾ. ೦೪). 'ಜೀವಹಿಂಸೆ' ಪರಾ. [ಸಂ.. ಪ್ರಾಣಿಹಿಂಸಾ]

ಪ್ರಾಣೇಶ (ನಾ). ೧. ಗಂಡ ; ಪತಿ : ಪ್ರಾಣೇಶನ ಬರವಿಂಗಿವು ಮಾಣದೆ ಕೆತ್ತಿದಪುವೆಡದ ಕಣ್ಣುಂ ತೋಳುಂ ಪ್ರಾಣೇಶನ ಬರವಿಲ್ಲಂ (ಜಗಪ. ೦೦-೫೩); ಬರ್ಹಿವಧು ತಾಂ ಪ್ರಾಣಭಯದಿಂದೆ ಪ್ರಾಣೇಶನಂ ಮರಣಮುಖನಂ ಬಿಟ್ಟು . . . ಪಾರಿದಪುದು (ಜಕ್ರಾಂಗ. ೫೪-೦೪೧೦). ೨. ಪರಮಾತ್ಮ : ಈಶ ಸರ್ವೇಶ ಪ್ರಾಣೇಶ ನೀಂ ರಕ್ಷಿಪುದು (ರೀಶ್ವಾಸೋ. ೪-೦೪); ಇತ್ತಲೀ ಪ್ರಾಣೇಶನಿದ್ದ ನಿಮಿತ್ತದಲಿ ಪಶುಗಳು ಬೆಳೆದ ಹೊಲದತ್ತ ತೆಗೆಯಲು (ಬಸಪು. ೬೦-೨೩). ೩. ಯಮ : ಪ್ರಾಣೇಶಂ ಬರ್ಕುಮೆನ್ನನುಯ್ಯಲ ಮೋಘಂ (ಜಗಪ. ೦೦-೫೩). ೪. ಗಾಳಿಯ ಅಧಿದೇವತೆ ; ವಾಯು. [ಸಂ.]

ಪ್ರಾಣೇಶ್ವರ (ನಾ). = ಪ್ರಾಣೇಶ ೧ : ಒರ್ವಳ್ ನಿಜಪ್ರಾಣೇಶ್ವರನನೆಂತುಂ ತನ್ನೊಳಳವಡಿಸಲಾಱದೆ ನಿಜಪ್ರಿಯಸಖಿಗಿಂತೆಂದಳ್ (ಅಪಿಪು. ೦೨-೩೫ ಪ); ಪ್ರಾಣೇಶ್ವರನೊಳ್ ಮನ್ನಣೆಗಾಣೆಗೆ ಗೋಸನೆಗೆ ಸೂಟ ಪಾಟಿಗೆ ನಮ್ಮೊಳ್ಮಾಣದೆ ಮಚ್ಚರಿಪಂತಿರೆ ಹೂಣಿಸಿ ಮುಂಚಲ್ಕೆವೇಟ್ಕುಮೊರ್ವರಿ ನೊರ್ವರ್ (ಅಪಂಪು. ೦೨-೦೫). [ಸಂ.]

ಪ್ರಾಣೇಶ್ವರರಸ (ನಾ). [ವೈದ್ಯಶಾ] ಪ್ರಾಣವಾಯುವು ಶ್ಲೇಷ್ಮವನ್ನು ಕತ್ತರಿಸಿ ಶ್ವಾಸ ನಿಶ್ವಾಸಗಳು ನೇರ್ಪಡುವಂತೆ ಮಾಡುವ ಒಂದು ಬಗೆಯ ಔಷಧಿ : ಶ್ವಾಸ ಬಿಕ್ಕುಳುಗಳೆಂಬ ಎರಡು ರೋಗಕ್ಕೂ ಪ್ರಾಣೇಶ್ವರರಸವ ಕೊಡುವುದೆಂದು ಅಶ್ವಿನೀದೇವತೆಗಳ್ಮುನ್ನದು ವಚಿಸಿ ಇರ್ಪರು (ಸಳಸ್ಯ. ೨೪೦). [ಸಂ.]

ಪ್ರಾಣೇಶ್ವರಿ (ನಾ). ೧. ಹೆಂಡತಿ : ಪತ್ನಿ : ಆತನ ಪ್ರಾಣೇಶ್ವರಿ ವಜ್ರಮಾಳಿನಿ ಕಂಡು (ಶಾಂತಿಪು. ೪-೯೬ ಪ); ದಿಲ್ಲೀಶ್ವರನ ಪ್ರಾಣೇಶ್ವರಿಯಾಗಲು ಯೋಗ್ಯೆಯಾದವಳು (ಶಪಾಶುಂ. ೭೬). ೨. ನಲ್ಲೆ; ಪ್ರೇಯಸಿ : ಒರ್ವಂ ತನ್ನ ಪ್ರಾಣೇಶ್ವರಿಯ ಮೊಗಮಂ ನೋಡಿ (ಅಪಿಪು. ೦೨-೦೩ ಪ). [ಸಂ. ಪ್ರಾಣೇಶ್ವರೀ]

ಪ್ರಾಣೋಪ (ನಾ). ಜೀವಕ್ಕೆ ಸಮವಾದವನು ; ಗಂಡ : ಪೋಪು ದುಚಿತವಲ್ಲ ಜೀಯ ಕೇಳ್ ದೈತ್ಯಚಮೂಪನ ಮಹದೈಶ್ವರ್ಯ ನೀ ಪರಿಗ್ರಹಿಸಿಕೊಂಡಿಹುದೆಂದು ರತಿಯ ಪ್ರಾಣೋಪಗೆ ಖಳಮಂತ್ರಿ ನುಡಿದ (ಪೋಹಕ. ೦೩-೯); ಅರಿದು ಭ್ರಮಿಸುವರೆ ಸ್ತ್ರೀಯು ಪ್ರಾಣೋಪಂಗೆ ಉತ್ತರಮನೀಯ (ಪಪಪೋ. ೯-೦೪). [ಸಂ.]

ಪ್ರಾಣೋಪಕಾರ (ನಾ). ಜೀವವನ್ನು ಉಳಿಸುವುದು ; ಕೊಲೆಯನ್ನು ತಪ್ಪಿಸುವುದು : ನಿಮ್ಮಡಿ ನೀಮೆನೆಗೆ ಪ್ರಾಣೋಪಕಾರಮಂ ಗೆಯ್ದರ್ (ಪಂಚತಂ. ೦೦೦-೬) ; ಪ್ರಾಣೋಪಕಾರಮಂ ಕಲ್ಯಾಣಮನೆನಗಿತ್ತು ದೇವ ಶಣಿಯದ ನಿಮ್ಮೀ ತ್ರಾಣ ಪ್ರವೀಣ ಪರಮಪ್ರಾಣಿ ಹಿತಾಚರಣವಿತರ ಸಾಧಾರಣಮೇ (ಪಂಚಾಮಾ. ೭-೭೬). [ಸಂ.]

ಪ್ರಾತ (ನಾ). ಬೆಳಗು ; ಪ್ರಭಾತಸಮಯ : ವಸಂತಪ್ರಾತದಲ್ಲಿ ಬಿರಿದು ಅರಳುತ್ತಿರುವ ಗುಲಾಬಿಯಂತೆ ಇರುವ ಮುಖ (ಪಂಯಾತ್ರೆ. ೫೩). [<ಸಂ. ಪ್ರಾತರ್]

ಪ್ರಾತಃಕಾಲ (ನಾ). ಬೆಳಗಿನ ಹೊತ್ತು ; ಹೊತ್ತಾರೆ : ಪ್ರಾತಃಕಾಲದಲ್ಲಿ ಅಗ್ರೋದಕವ ತಂದು ಲಿಂಗದನುವನಱಿದು ಪಾದೋದಕವ ತಪ್ಪದೆ ಕೊಂಬುದು (ಕಪ್ಪಪ.ಳ. ೦೦೫-೨೬೨) ; ಅವ್ಯಯಸಮಾಸಕ್ಕೆ—ಅಂತರ್ಮುಖ . . . ಪುನಃಪಾಕ, ಪ್ರಾತಃಕಾಲ (ಕಪುದ.೮೦ ಪ್ರಯೋ). [ಸಂ.]

ಪ್ರಾತಃಸವನ (ನಾ). ಬೆಳಗಿನ ಸಮಯದಲ್ಲಿ ಸೋಮರಸವನ್ನು ಅಗ್ನಿಗೆ ಆಹುತಿ ಮಾಡುವುದು : ಪ್ರಾತಃಸವನ ಮಾಧ್ಯಂದಿನವು ಸಾಯಮಸವನಗಳು ವಸುರುದ್ರ ಆದಿತ್ಯರೊಳು ರಾಜಿಸುವ . . . ಮೂರ್ತಿತ್ರಯವ ಚಿಂತಿಸಿ ದಿವಸವೆಂಬಾಹುತಿಗಳಿಂದರ್ಚಿಸುತ ಸುಖಿಸುತಿರು (ಪಸಾರ. ೦೨-೩೪). [ಸಂ.]

ಪ್ರಾತಃಸ್ನಾನ (ನಾ). ಬೆಳಗಿನ ಹೊತ್ತು ಮಾಡುವ ಸ್ನಾನ : ಹೇಗೆ ಉದ್ಧಾರ ಮಾಡ್ಡಾನು ಶ್ರೀಹರಿ . . . ಮಱಿತು ಪ್ರಾತಃಸ್ನಾನ ಮಾಡದೆ ಮನೆಮನೆ ತೆಱನಾಗಿ ಬೆಸಗೊಂಡು ತಿಂಬವನ (ಪುರಂದ. ೧-೦೫೩-೦); ಪ್ರಾತಃಸ್ನಾನವ ಮಾಡಿ ರಕ್ಕಸರಾಯ ಭೂತೇಶನ ಪಾದಯುಗವ ಶ್ವೇತಾಬ್ಜದಿಂದರ್ಚಿಸಿ ದಾನವಬುಧವ್ರಾತಕೆ ಕೊಟ್ಟನುತ್ಸವದಿ (ಪೋಹಕ. ೦೦-೩೦). [ಸಂ.]

ಪ್ರಾತಃಸ್ಮರಣೀಯ (ಗು). ೧. ಬೆಳಗಿನ ಹೊತ್ತು ಪ್ರಪ್ರಥಮವಾಗಿ

ಸ್ಮರಿಸಲು ಯೋಗ್ಯವಾದ : ವಿಜ್ಞಾನಾಸಕ್ತಿಯಿರುವವರೆಲ್ಲರಿಗೂ ಪ್ರಾತಃಸ್ಮರಣೀಯನಾಮ ಮೈಕೇಲ್ ಫ್ಯಾರಡೆ (ವಿಕಾಸ. XIV ವಿಶಾರದರ್ಶನ). (ನಾ). ೨. ಲೋಕಕಲ್ಯಾಣವನ್ನು ಸಾಧಿಸಿರುವ, ದೇವತೆಗಳ ಸಾಲಿನಲ್ಲಿ ನೆನೆಯಲು ಯೋಗ್ಯನಾದ ವ್ಯಕ್ತಿ : ಇಂತಹ ಪ್ರಾತಃಸ್ಮರಣೀಯರಾದ ನಿರೀಹಪುರುಷರು ನಮ್ಮ ದೇಶದಲ್ಲಿರುವುದೇ ನಮ್ಮ ಭಾಗ್ಯೋದಯವು (ಪಸ್ವಪೇ. ೦೨೬). [ಸಂ.]

ಪ್ರಾತರಾಶ (ನಾ). ಬೆಳಗಿನ ಊಟ ; ಪ್ರಾತಃಕಾಲದ ಭೋಜನ : ಭಿಲ್ಲನು ಇವರನ್ನು ನೋಡಿ ಪ್ರಾತರಾಶ(ಬೆಳಗಿನ ಭೋಜನ)ವು ಎಷ್ಟು ಹೊತ್ತಿಗೆ ಸಿದ್ಧವಾಗುವುದೆಂದು ಕೇಳಿದನು (ಪಸ್ವಪೇ. ೩೪). [ಸಂ.]

ಪ್ರಾತರ್ವಿಧಿ (ನಾ). ಪ್ರಾತಃಕಾಲದಲ್ಲಿ ಮಾಡಬೇಕಾದ ದೇಹಶೌಚ, ಸಂಧ್ಯಾವಂದನಾದಿ ಕಾರ್ಯಗಳು ; ಬೆಳಗಿನ ಕರ್ತವ್ಯ : ಮರುದಿನ ಬೆಳಗ್ಗೆ ಕೃಷ್ಣನು ತನ್ನ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸಿದ್ಧನಾಗಲು . . . ತಿಳಿಸಿದರು (ಪಸಭಾ. ೨೫೦); ದಾಣಸಿಗರೂ . . . ಹತ್ತಿರದ ಹಳ್ಳಕೆ ಹೋಗಿ ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿಕೊಂಡು ಬಂದದ್ದಾಯಿತು (ಕಂಬಹು. ೨೯). [ಸಂ.]

ಪ್ರಾತಿಕೂಲ್ಯ (ನಾ). ವಿರೋಧ ; ಪ್ರತಿಕೂಲ : ನಾನು ಇನ್ನು ಮುಂದೆ ತಮಗೆ ಆನುಕೂಲ್ಯವನ್ನೇ ಮಾಡುತ್ತೇನೆ. ಪ್ರಾತಿಕೂಲ್ಯವನ್ನು ಮಾಡುವುದಿಲ್ಲ (ಹಿಂದಸಾ. ೨೬೩). [ಸಂ.]

ಪ್ರಾತಿನಿಧಿಕ (ಗು). ೧. ಪ್ರತಿನಿಧಿಸುವ : ಇದು ನವೀನಪ್ರಜ್ಞೆಯಲ್ಲಿ ಬರೆದ ಶ್ರೇಷ್ಠಕೃತಿಗಳ ಪ್ರಾತಿನಿಧಿಕಸಂಗ್ರಹವೇನಲ್ಲ (ಹೊಸಕ್ಷಿ. ೨೯೭) ; ಕರುಣರಸಾಸ್ವಾದನೆಯೂ ಶೃಂಗಾರಾದಿ ರಸಗಳ ಆಸ್ವಾದನೆಯಂತೆಯೇ ಸುಖಾತ್ಮಕವಾಗಿರುತ್ತದೆ ಎಂಬುದು ಭಾರತೀಯ ಕಾವ್ಯಮೀಮಾಂಸೆಯ ಪ್ರಾತಿನಿಧಿಕ ಅಭಿಪ್ರಾಯ (ಕ್ರೇಷ್ಠಪ್ರ. ೩೦). (ನಾ). ೨. ಪ್ರತಿನಿಧಿಸುವಂತಹುದು : ಅದೃಷ್ಟವಶಾತ್ ಗ್ರೀಕ್ ದುರಂತನಾಟಕದಲ್ಲಿ ಹೆಚ್ಚು ವಿಪುಲವಾದ ಮತ್ತು ಪ್ರಾತಿನಿಧಿಕವಾದ ಕೃತಿಸಮೂಹ ಉಳಿದು ಬಂದಿದೆ (ಸಾಹಿಪ್ರ. ೨೨೬). [ಸಂ.]

ಪ್ರಾತಿನಿಧ್ಯ (ನಾ). ಒಬ್ಬರ ಪ್ರತಿಯಾಗಿ ಅಧಿಕಾರವನ್ನು ವಹಿಸಿಕೊಂಡಿರುವುದು ; ಪ್ರತಿನಿಧಿತ್ವ : ಪ್ರೊ. ರೈಟ್ . . . ಪ್ರಾತಿನಿಧ್ಯ ದೊರಕಿಸಿಕೊಡುವದಾಗಿ ಸಮ್ಮೇಳನದ ಅಧಿಕಾರಿಗಳಿಗೆ ಪತ್ರ ಬರೆದು (ಧರ್ಮಸಾ. ೪೯). [ಸಂ.]

ಪ್ರಾತಿಪದಿಕ (ನಾ). [ವ್ಯಾಕ] ವಿಭಕ್ತಿಯ ಪ್ರಕಾರ ಸಿದ್ಧವಾದ ನಾಮಪದದ ಮೂಲರೂಪ : ಪ್ರಾತಿಪದಿಕಂಬೊಲಾತನಧಾತುಕನವಿಭಕ್ತಿ ಭೂಷಿತಂ ನಿಯತಾರ್ಥೋಪೇತಂ ನಿಶ್ಚಿತನಾಮಖ್ಯಾತಂ ತಾಂ ಪ್ರತ್ಯಯಾರ್ಹನಾದಂ ದಿವಿಜಂ (ಪರ್ಧಪು. ೩-೨೪) ; ಸುಪ್ಪ್ರತ್ಯಯಕ್ಕೂ ಸ್ತ್ರೀಪ್ರತ್ಯಯಕ್ಕೂ ಪ್ರಕೃತಿಯಾದದ್ದು ಲಿಂಗವು ; ಈ ಲಿಂಗಕ್ಕೆ ಸಂಸ್ಕೃತ ವ್ಯಾಕರಣದಲ್ಲಿ ಪ್ರಾತಿಪದಿಕವೆಂದು ಹೆಸರು (ಹೊಸುಗ. ೪). [ಸಂ.]

ಪ್ರಾತಿಭ (ಗು). ೧. ಪ್ರತಿಭೆಯಿಂದ ಕೂಡಿದ : 'ಪದಪದದಕ್ಕರಕ್ಕರದ ವಾಕ್ಯದ ವಾಕ್ಯದ' ಪರೆಪರೆಗಳನ್ನು ಉಜ್ಜಿ, ಬಿಚ್ಚಿ, ಬಿಡಿಸಿ ನೋಡುವ ಸೂಕ್ಷ್ಮದರ್ಶಕವಾದ ಸಹೃದಯತೆಯ ಪ್ರಾತಿಭನೇತ್ರ ಬೇಕು (ಸಾಹಿವಿ. ೭೩). (ನಾ). ೨. ಹೊಸಹೊಸದಾಗಿ ವಿಷಯಗಳು ಹೊಳೆಯುವ ಬುದ್ಧಿ ; ಪ್ರತಿಭೆ. ೩. [ತರ್ಕಶಾ] ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿ, ಸಂಭವ, ಐತಿಹ್ಯ, ಲಿಪಿ, ಲೋಕಪ್ರಸಿದ್ಧಿ, ಚೇಷ್ಟೆ ಮತ್ತು ಪ್ರಾತಿಭಗಳೆಂಬ ಹನ್ನೆರಡು ಬಗೆಯ ಪ್ರಮಾಣಗಳಲ್ಲಿ ಒಂದು : ಪ್ರಮಾಣವು ಪ್ರತ್ಯಕ್ಷ . . . ಚೇಷ್ಟೆ, ಪ್ರಾತಿಭ ಎಂದು ಹನ್ನೆರಡು ವಿಧವೆಂದು ಕೆಲವರು ಹೇಳುತ್ತಾರೆ (ಹಿಂದಸಾ. ೦೩೩). [ಸಂ.]

ಪ್ರಾತಿಭಾವ್ಯ (ನಾ). ಹೊಣೆಗಾರಿಕೆ ಜಾಮೀನು : ಈಡು. [ಸಂ.]

ಪ್ರಾತಿಭಾಸಿಕ (ಗು). ೧. ತೋರಿಕೆಗೆ ಮಾತ್ರ ಕಾಣುವ ; ವಾಸ್ತವವಲ್ಲದ : ಕವಿಯ ಪ್ರಾತಿಭಾಸಿಕ ಅನುಭವದಿಂದ ನಾವು ಜೀವನದ ಸ್ವಾರಸ್ಯವನ್ನು ಕಂಡುಕೊಳ್ಳುತ್ತೇವೆ (ಜಾಸಮಾ. ೩೯). (ನಾ). ೨. ಭ್ರಮೆಯ ತತ್ಕಾಲದಲ್ಲಿ ಮಾತ್ರ ಸತ್ಯವೆನಿಸುವ ತೋರಿಕೆ ; ೩ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯಿದೆಯೆಂಬ ಜ್ಞಾನವು ಪ್ರಾತಿಭಾಸಿಕವೆನಿಸುವುದು : ಪಾರಮಾರ್ಥಿಕ ವ್ಯಾವಹಾರಿಕ ಪ್ರಾತಿಭಾಸಿಕ ತುಚ್ಛವೆಂದು ಪದಾರ್ಥಗಳು ನಾಲ್ಕಾಗಿ ತಿಳಿಯಲಕ್ಕುಂ ಅವುಗಳೊಳು ರಜ್ಜುಭುಜಂಗ ಶುಕ್ತಿಕಾರಜತ ಮರುಮರೀಚಿಕಾದಿಗಳೇ ಪ್ರಾತಿಭಾಸಿಕಗಳು (ವಿವೇಕ. ೨೦) ; ಅನಿರ್ವಾಚ್ಯವು ವ್ಯಾಹಹಾರಿಕ, ಪ್ರಾತಿಭಾಸಿಕ ಎಂದು ಎರಡು ವಿಧ. ವ್ಯಾವಹಾರಿಕವು ಗವಾದಿಗಳು, ಪ್ರಾತಿಭಾಸಿಕವು ಭ್ರಾಂತಿಯಲ್ಲಿ ತೋರಿ ಬರುವ ರಜ್ಜು ಸರ್ಪಾದಿಗಳು (ಹಿಂದಸಾ. ೦೯೪). [ಸಂ.]

ಪ್ರಾತಿವೇಶ್ಯ (ನಾ). ೧. ಪಕ್ಕದ ಮನೆಯ ವ್ಯಕ್ತಿ ; ನೆರೆ. ೨. ಒಂದೇ ಮನೆಯ ಬೇರೆ ಭಾಗದಲ್ಲಿ ವಾಸಮಾಡುವ ವ್ಯಕ್ತಿ : ಸ್ತ್ರೀಯಿದ್ದ ಮನೆಯ ಬಿಟ್ಟು ಕೆಲದ ಮನೆಯೊಳಿರ್ಪನಂ ಪಾರ್ಶ್ವಸ್ಥನೆಂಬುದು ಇದ್ದ ಮನೆಯೊಳಿರ್ಪುದು ಪ್ರಾತಿವೇಶ್ಯನೆಂಬುದು (ಕಾಮಶಾ. ೨೫೨). [ಸಂ.]

ಪ್ರಾತಿಶಾಖ್ಯೆ (ನಾ). ವೇದದ ಪ್ರತಿಯೊಂದು ಶಾಖೆಗೂ ಇರುವ ವ್ಯಾಕರಣ : ನ್ಯಾಯ ವೈಶೇಷಿಕ . . . ಪ್ರಾತಿಶಾಖ್ಯೆ ಕಲ್ಪ ಹೋರಾ ದೋಹಳ ಧರ್ಮ ವೇದಾಂತ ಸಿದ್ಧಾಂತಗಳಲ್ಲಿ ಪ್ರಮಾಣಪ್ರಮೇಯೋಪನ್ಯಾಸ ದೃಷ್ಟಾಂತ ಸಮನ್ವಯಾದಿ ಸದ್ಯುಕ್ತಿ ನಿರೂಪಕರಾದ ವಾದಿಗಳಿಂ (ವಿವೇಕ. ೨೨೬). [ಸಂ. ಪ್ರಾತಿಶಾಖ್ಯ]

ಪ್ರಾತಿಹಾರಕ (ನಾ). ಯಕ್ಷಿಣಿ ಮಾಡುವವನು ; ಮಾಟಗಾರ ; ಗಾರುಡಿಗ : "ಮಾಯಾಕಾರಃ, ಪ್ರಾತಿಹಾರಕಃ – ೨ ಮಾಯೆ ಮಾಡುವವನ ಹೆಸರುಗಳು" (ಸಿದ್ಧಾಂತಿ. ೩೦೦). [ಸಂ.]

ಪ್ರಾತಿಹಾರ್ಯ (ನಾ). ೧. ಗಾರುಡಿ ; ಯಕ್ಷಿಣಿ. ೨. [ಜೈನ] ಕೇವಲಜ್ಞಾನವನ್ನು ಪಡೆದ ತೀರ್ಥಂಕರನಿಗೆ ಒದಗುವ ಅಶೋಕವೃಕ್ಷ, ದಿವ್ಯಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಆಸನ, ಭಾಮಂಡಲ, ದೇವದುಂದುಭಿ ಮತ್ತು ಆತಪತ್ರಗಳೆಂಬ ಎಂಟು ವಿಧದ ಸಂಪತ್ತು : ಪುರುಪರಮೇಶ್ವರನಂದನ ದೊರೆಕೊಳಿಸುಗೆ ನಿನಗೆ ತಡೆಯದಾ ಪುರುಪರಮೇಶ್ವರನ ನಿರತಿಶಯಗುಣಪರಿಕರಮುಂ ತತ್‌ಪ್ರಾತಿಹಾರ್ಯಮುಂ ಮಂಗಳಮುಂ (ಆದಿಪು. ೦೨-೫೩) ; ಯತಿಪಂ . . . ಚೈತ್ಯಕ್ಷಿತಿಜಾತಪ್ರಾಂತದೇಶಸ್ಥಿತ ಕನಕಮಯಪ್ರಾತಿಹಾರ್ಯಾಷ್ಟಕಾರ್ಹತ್ಪ್ರತಿಬಿಂಬಭ್ರಾಂತಿಯಂ ಮಾಡಿದಂ (ಕಂದ್ರಪು. ೨-೬೨). [ಸಂ.]

ಪ್ರಾತ್ಯಕ್ಷಿಕ (ಗು). ೧. ತನ್ನ ಕಣ್ಣುಗಳಿಂದಲೇ ನೋಡಿದ ; ಪ್ರತ್ಯಕ್ಷವಾಗಿ ನೋಡಿದ. (ನಾ). ೨. ಕಣ್ಣಾರೆ ನೋಡಿದುದು : ಪ್ರತಿತಾಳೆಯು ಕೇವಲ ಮಾನಸಿಕವಾಗಿರದೆ ಪ್ರಾತ್ಯಕ್ಷಿಕವಾಗಿರಬೇಕು (ಪ್ರವಿಂಧ. ೩೩). [ಸಂ.]

ಪ್ರಾತ್ಯಯಿಕ (ಗು). ೧. ಬೇರೆಯಾದ ; ಪ್ರತ್ಯೇಕವಾದ : ಪ್ರಾತ್ಯಯಿಕ ಸೀಮೆ ಸೀಮೆಗೆ ಶಿಲಾಶಾಸನವ ಬರಸಿ (ಸೌಇಇ. XX, ೨೩೯-೦೫ ; 1547). (ನಾ). ೨. ಸಾಲಗಾರನಿಗೆ ಜಾಮೀನಾಗಿ ನಿಲ್ಲುವವನು : ಜಾಮೀನುದಾರ. [ಸಂ.]

ಪ್ರಾತ್ಯಯಿಕಿ (ನಾ). [ಜೈನ] ಇಪ್ಪತ್ತೈದು ಕ್ರಿಯೆಗಳಲ್ಲಿ ಒಂದು ; ಭೋಗ್ಯವಸ್ತುಗಳನ್ನು ಸಂಗ್ರಹಿಸುವುದು : ಪಂಚವಿಂಶತಿಕ್ರಿಯೆಗಳು –೧. ಸಮ್ಯಕ್ತ್ವಕ್ರಿಯೆ . . . ೧೩. ಪ್ರಾತ್ಯಯಿಕಿ (ಭೋಗ್ಯವಸ್ತು ಸಂಗ್ರಹ), ೧೪. ಸಮಂತಾನುಪಾತ (ಪ್ರಾಣಿಗಳು ವಾಸಿಸುವಲ್ಲಿ ಮಲ

ಮೂತ್ರತ್ಯಾಗ) (ಶೈಸರ. ೬೩). 'ಪಂಚವಿಂಶತಿಕ್ರಿಯೆ' ಪರಾ.
[ಸಂ. ಪ್ರಾತ್ಯಯಿಕೀ]

ಪ್ರಾಥಮಿಕ (ಗು). ೧. ಮೊದಲನೆಯ ; ಪ್ರಾರಂಭದ : ಪ್ರಾಥಮಿಕ ನಾಲ್ಕನೆಯ ತರಗತಿಯೊಳು ಕಿರಿಯವನೋದುತಲಿಹನು (ಇಂಶಾಪ. ೫೬-೬೮). (ನಾ). ೨. ಮೊದಲನೆಯದು ; ಪ್ರಾರಂಭದ ಹಂತಕ್ಕೆ ಸೇರಿದುದು : ಈ ಅಕ್ಷರಸಂಜ್ಞೆಗಳ ಸರಿಯಾದ ಪರಿಜ್ಞಾನವೇ ಭಾಷಾಭ್ಯಾಸಕ್ಕೆ ಪ್ರಾಥಮಿಕವೆನಿಸುವ ಸಾಧನವೆಂದು ವೈಯಾಕರಣರು ಹೇಳುತ್ತಾರೆ (ಸಂಶೋಧ. ೦). ೩. ಮೊದಲನೆಯವನು : ತದಾಗಮದರ್ಥೋಕ್ತಿ ಪದಾರ್ಥಮೆಂದು ನಿಶ್ಚಯಿಪ ಪರಮದರುಶನಿಕನುತವಂ ಪ್ರಾಥಮಿಕಂ (ಸುಕುಮಾ. ೬-೨೬). [ಸಂ.]

ಪ್ರಾಥಮಿಕವಿದ್ಯಾಭ್ಯಾಸ (ನಾ). ಆರಂಭದ ವಿದ್ಯಾಭ್ಯಾಸ : ಲಚ್ಚನು ಈ ನಡುವೆ ತನ್ನ ಪ್ರಾಥಮಿಕವಿದ್ಯಾಭ್ಯಾಸವನ್ನು ಮುಂದುವರಿಸಿದನು (ಸುರಸು. ೦೯೪). [ಸಂ.]

ಪ್ರಾಥಮಿಕಶಾಲೆ (ನಾ). ಪ್ರಾರಂಭದ ಶಿಕ್ಷಣವನ್ನು ನೀಡುವ ಶಾಲೆ ; ಪ್ರೈಮರಿಸ್ಕೂಲು: ಬೆಂಗಳೂರಿನ ಹತ್ತಾರು ಪ್ರಾಥಮಿಕಶಾಲೆಗಳ ಬಳಿಗೂ ರಾಯರು ಹೋಗಿ ನಿಂತಿದ್ದರು (ಕಂಬಹು. ೦೩೦). [ಸಂ. ಪ್ರಾಥಮಿಕಶಾಲಾ]

ಪ್ರಾಥಮಿಕಶಿಕ್ಷಣ (ನಾ). = ಪ್ರಾಥಮಿಕವಿದ್ಯಾಭ್ಯಾಸ : ಎಲ್ಲರೂ ಪ್ರಾಥಮಿಕಶಿಕ್ಷಣವನ್ನು ಪಡೆಯುವಂತಾದರೆ ಅವರು ಮುಂದೆ ತಮ್ಮ ಅಭಿರುಚಿ ಆಸಕ್ತಿಗಳನ್ನು ಬೆಳೆಸಿಕೊಂಡು ಸಮಾಜಕ್ಕೆ ತಮ್ಮ ವಿಶಿಷ್ಟಕಾಣಿಕೆಯನ್ನು ಸಲ್ಲಿಸಲು ಅವಕಾಶವಾಗುತ್ತದೆ (ಶಿಕ್ಷದ. ೦೬೬). [ಸಂ.]

ಪ್ರಾದಕ್ಷಿಣ (ನಾ). ಬಲಗಡೆಯಿಂದ ಸಂತ್ತು ಹಾಕುವುದು; ಪ್ರದಕ್ಷಿಣೆ : ಕೂಡೆ ಪ್ರಾದಕ್ಷಿಣವ ಬಂದಡಿಮಾಡಿ ಕಾಯವ ನೀಡಿ ಕರಣಗಳ ಬೇಡಿಕೊಂಡನು ಗುರುವೆ ಭವಗಳು ಬೇಡವೆನಗೆನುತ (ಗಗಶಾ. ೨-೨೦).
[<ಸಂ. ಪ್ರಾದಕ್ಷಿಣ್ಯ]

ಪ್ರಾದುರ್ಭವಿಸು (ಕ್ರಿ). ಕಾಣಿಸಿಕೊಳ್ಳು ; ಹುಟ್ಟು ; ಆವಿರ್ಭವಿಸು : ವೇದವು ವ್ಯರ್ಥ, ವೇದವು ಅನರ್ಥ ಎನ್ನುವ ನಾಸ್ತಿಕವಾದ ಆಸ್ತಿಕರಲ್ಲಿಯೇ ಪ್ರಾದುರ್ಭವಿಸಿದಾಗ ವೇದಾರ್ಥನಿರ್ಣಯಕ್ರಮವನ್ನು ಮೀಮಾಂಸಾಕಾರರು ಕೈಗೊಂಡರು (ಭಾರದ. ೦೨೮). [ಪ್ರಾದುರ್ಭಾವ + —ಇಸ್ಕು]

ಪ್ರಾದುರ್ಭಾವ (ನಾ). ಕಣ್ಣಿಗೆ ಕಾಣಿಸಿಕೊಳ್ಳುವುದು ; ಗೋಚರಿಸುವುದು; ಆವಿರ್ಭಾವ: ಕಾರ್ಯಸಿದ್ಧಿ ಪ್ರಾದುರ್ಭಾವಕ್ಕೆ ವಿಘ್ನಂ ಪಲವೊಳವಱಿಯಲ್ಬ[ರ್ಕು]ಮೇ ಬಾರದು (ಸಂಪಭಾ. ೬-೩೦); ಅಂತು ಗರ್ಭನಿರ್ಭರ ಪ್ರಾದುರ್ಭಾವವಾಗಿ ನವಮಾಸಂ ತೀವೆ (ಜಗಂ. ೨-೯೬ ಪ). [ಸಂ.]

ಪ್ರಾದೇಶ (ನಾ). ೧. ನೀಡಿದ ಹೆಬ್ಬೆರಳು ಮತ್ತು ತೋರುಬೆರಳುಗಳ ನಡುವಿನ ಅಳತೆ : "ಪ್ರಾದೇಶಮೆಂಬುದು ಒಚ್ಚೋಟು" (ಹಲಾಯು. ೬೯-೩೬೯); ಚಂದ್ರಾಪೀಡಂ ಅಂತದನೇಱಿ ದಿವ್ಯವಾಜಿಯ ಮಹಾಜವಮಂ ಕಂಡು ಭುವನತ್ರಯಮಂ ಪ್ರಾದೇಶಮಾತ್ರಮಾಗಿ ಬಗೆದು (ಕಾದಂಪು. ೯೬೫). ೨. ಪ್ರದೇಶ; ಸ್ಥಳ. [ಸಂ.]

ಪ್ರಾದೇಶನ (ನಾ). ಕಾಣಿಕೆ ; ಕೊಡುಗೆ : "ತ್ಯಾಗಃ . . . ಪ್ರತಿಪಾದನಂ, ಪ್ರಾದೇಶನಂ, ಅಂಹತಿಃ — ೧೩ ಕೊಡುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೨೨೨). [ಸಂ.]

ಪ್ರಾದೇಶಿಕ (ಗು). ೧. ಒಂದು ಪ್ರದೇಶಕ್ಕೆ ಸೇರಿದ,—ಸಂಬಂಧಿಸಿದ: 'ಪ್ರಾದೇಶಿಕಭಾಷೆ' ಪರಾ. (ನಾ). ೨. ಒಂದು ಪ್ರದೇಶಕ್ಕೆ ಸೇರಿದುದು,—ಸಂಬಂಧಿಸಿದುದು: ಪ್ರಾದೇಶಿಕವಾಗಿ ಇತರ ಮೌಲ್ಯಗಳನ್ನು ಅವಲಂಬಿಸಿರುವ ಕೌಶಲ್ಯವಾಗಿಯೇ ಉಳಿದುಕೊಂಡಿದೆ(ಶಿಕ್ಷದ. ೩೩೦). ೩. ಒಂದು ಪ್ರದೇಶಕ್ಕೆ ಸೇರಿದವನು : ದ್ಯಾವಾಪೃಥಿವೀಮೂರ್ತಿ ಗದಾವಂ ಪ್ರಾದೇಶಿಕಂ ಪೊಣರ್ಕೆಗೆ ನೆಱೆವಂ (ಜಗಂ. ೦೭-೩). [ಸಂ.]

ಪ್ರಾದೇಶಿಕಭಾಷೆ (ನಾ). ಒಂದು ಪ್ರದೇಶಕ್ಕೆ ಸೀಮಿತವಾದ ನುಡಿ; ಸ್ಥಳೀಯಭಾಷೆ : ಇಲ್ಲಿ ನಮಗೆ ಪ್ರಾದೇಶಿಕಭಾಷೆಯ ತೊಂದರೆ ಬೇರೆ (ಜೇಮಂತ. ೨೨೯). [ಸಂ. ಪ್ರಾದೇಶಿಕಭಾಷಾ]

ಪ್ರಾದೇಶಿಕಸೈನ್ಯ (ನಾ). ಬೇರೆ ಬೇರೆ ಪ್ರಾಂತ್ಯಗಳಲ್ಲಿ ಶಾಂತಿರಕ್ಷಣೆಗಾಗಿ ವ್ಯವಸ್ಥೆ ಮಾಡಿರುವ (ಕೇಂದ್ರದ) ಸೈನ್ಯ: "ದೇಶರಕ್ಷಣೆಗೆ ಪ್ರಾಂತವಾರಾಗಿ ವ್ಯವಸ್ಥೆ ಮಾಡಿದ ಸೈನ್ಯ: ಪ್ರಾದೇಶಿಕಸೈನ್ಯ" (Territorial army. ಇಂಕಿ). [ಸಂ.]

ಪ್ರಾದೋಷಿಕ (ಗು). ೧. ಸಾಯಂಸಂಧ್ಯೆಗೆ ಸಂಬಂಧಿಸಿದ. (ನಾ). ೨. [ಜೈನ] ಇಪ್ಪತ್ತೈದು ಕ್ರಿಯೆಗಳಲ್ಲಿ ಒಂದು; ಕೋಪಾವೇಶದಲ್ಲಿ ಇತರರನ್ನು ತಿರಸ್ಕಾರ ಅಥವಾ ನಿಂದೆಗೆ ಗುರಿಮಾಡುವುದು : ಪಂಚವಿಂಶತಿಕ್ರಿಯೆಗಳು :—೧ ಸಮ್ಯಕ್ತ್ವಕ್ರಿಯೆ . . . ೬. ಪ್ರಾದೋಷಿಕ (ಕ್ರೋಧಾವೇಶದಲ್ಲಾಗುವ ಪ್ರಮಾದ) (ಶೈಸರ. ೬೩). 'ಪಂಚವಿಂಶತಿಕ್ರಿಯೆ' ಪರಾ. [ಸಂ.]

ಪ್ರಾಧಾನ್ಯ (ನಾ). ಪ್ರಧಾನತೆ ; ಪ್ರಾಮುಖ್ಯ : ಟಿಳಕರು . . . ಕರ್ಮಯೋಗಕ್ಕೇನೇ ಹೆಚ್ಚು ಪ್ರಾಧಾನ್ಯವಿತ್ತಿರಬಹುದು (ರರ್ಮಾ. ೦೩೯); ಯುರೋಪುಖಂಡದಲ್ಲಿ ಅವನ ಪ್ರಾಧಾನ್ಯವು ತಗ್ಗುತ್ತಿರುವಂತೆ ಕಂಡರೂ... ಅವನ ಮಹತ್ತ್ವವು ನವಜೀವನವನ್ನು ಪಡೆಯಲಾರಂಭಿಸಿದೆ (ಅಂಕಾ. ೨). [ಸಂ.]

ಪ್ರಾಧಾನ್ಯತೆ (ನಾ).—ಪ್ರಾಧಾನ್ಯ : ನಿನಗೆ ವಯಸ್ಸು ಎಷ್ಟೇ ಆಗಿರಲಿ, ಅದರ ಪ್ರಾಧಾನ್ಯತೆಯಿಲ್ಲ (ಜೇಮಂತ. ೩೩೨). ೯ ಇದು ವ್ಯಾಕರಣಬದ್ಧರೂಪವಲ್ಲ. [ಪ್ರಾಧಾನ್ಯ + —ತೆ]

ಪ್ರಾಧಿಕಾರ (ನಾ). ೧. ವಿಶೇಷವಾದ ಅಧಿಕಾರ; ಹೆಚ್ಚಿನ ಅಧಿಕಾರ: ಪರಂತು ಪಾಕಿಸ್ಥಾನದ ಈಗಿನ ರಾಜ್ಯಕ್ಷೇತ್ರಕ್ಕೆ ಪ್ರವಜನಮಾಡಿದ್ದು ಮತ್ತೆ ಭಾರತದಲ್ಲಿ ನೆಲಸುವುದಕ್ಕಾಗಿ ಅಥವಾ ಖಾಯಮಾಗಿ ಭಾರತಕ್ಕೇ ಹಿಂತಿರುಗುವುದಕ್ಕಾಗಿ ಯಾವುದಾದರೂ ವಿಧಿಯಿಂದ ಅಥವಾ ಯಾವುದಾದರೂ ವಿಧಿಯ ಪ್ರಾಧಿಕಾರದ ಮೇರೆಗೆ ಕೊಡಲಾದ ಅನುಜ್ಞೆ (ಭಾಧಾಪ. ೫). ೨. ವಿಶೇಷವಾದ ಅಧಿಕಾರವನ್ನು ಕೊಟ್ಟು ಸ್ಥಾಪಿಸಿರುವ ಸರಕಾರದ ಒಂದು ಸಂಸ್ಥೆ ಅಥವಾ ವ್ಯವಸ್ಥೆ : ಕರ್ನಾಟಕ ಸರಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿದೆ (ರೂಠಿ). [ಸಂ.]

ಪ್ರಾಧಿಕಾರಿ (ನಾ). ಹೆಚ್ಚಿನ ಅಧಿಕಾರವುಳ್ಳವನು ; ವಿಶೇಷ ಅಧಿಕಾರಿ : ಉಚ್ಚತಮ ನ್ಯಾಯಾಲಯದ ನ್ಯಾಯಾಧೀಶ ಪದಧಾರಣೆ ಮಾಡಿದ್ದವರು ಯಾರೊಬ್ಬರೇ ಆಗಲಿ . . . ಯಾವುದೇ ಪ್ರಾಧಿಕಾರಿಯ ಸಮಕ್ಷಮ ವಕಾಲತ್ತನ್ನಾಗಲಿ ಕಾರ್ಯವನ್ನಾಗಲಿ ನಡೆಯಿಸತಕ್ಕದಲ್ಲ (ಭಾಧಾಪ. ೬೮). [ಸಂ. ಪ್ರಾಧಿಕಾರಿನ್]

ಪ್ರಾಧ್ಯಾಪಕ (ನಾ). ಪ್ರಧಾನ ಅಧ್ಯಾಪಕ; ಮುಖ್ಯೋಪಾಧ್ಯಾಯ : ವಿದ್ಯಾಲಯಗಳಲ್ಲೂ ಸಹ ಪ್ರಾಧ್ಯಾಪಕರು . . . ಪ್ರಮಾಣ ಮಾಡಬೇಕಾಯಿತು (ಮುಕ್ಕಾರ. ೦೭ ವೀಠಿಕೆ); ಮುಂದೆ ವಿಶ್ವವಿದ್ಯಾನಿಲಯದಲ್ಲಿ ಆತ ಹಿರಿಯ ಪ್ರಾಧ್ಯಾಪಕನಾಗಿ ತಮಗೆ ಗೌರವ ತರಬೇಕೆಂಬ ಬಯಕೆ ಅವರಿಗಿತ್ತು (ರಂಗನ. ೦೨೦). [ಸಂ.]

ಪ್ರಾಧ್ವ (ಗು). ೧. ದೂರದ; ದೂರದಲ್ಲಿರುವ. ೨. ಬಗ್ಗಿದ ; ಬಾಗಿರುವ. ೩. ಕಟ್ಟಿದ; ನಿರ್ಮಿಸಿದ. ೪. ಅನುಕೂಲಕರವಾದ ; ಸಹಾಯಕವಾದ. ೫. ಪ್ರಯಾಣ ಮಾಡುತ್ತಿರುವ. (ನಾ). ೬. ಸಾಗಿಸುವ ಸಾಧನ ; ವಾಹನ. ೭. ಪ್ರಾರಂಭ ; ಉಪಕ್ರಮ. ೮. ದೂರದ ಪ್ರಯಾಣ. ೯. ಕಟ್ಟುವಿಕೆ ; ಬಂಧನ. ೧೦. ಗೇಲಿ ; ತಮಾಷೆ ; ಹಾಸ್ಯ. [ಸಂ.]

ಪ್ರಾಪಂಚಿಕ (ಗು). ೧. ಪ್ರಪಂಚಕ್ಕೆ ಸಂಬಂಧಿಸಿದ. ೨. ಲೋಕ

ವ್ಯವಹಾರದ; ಲೌಕಿಕವಾದ; ಐಹಿಕ : ಅವಳ ಜೀವನ ಪ್ರಾಪಂಚಿಕ ಭೋಗವಿಲಾಸಗಳಿಗೆ ಮಾರುಹೋಯಿತು (ಕುಪರು. ೩೭೦). (ನಾ). ೩. ಲೋಕವ್ಯವಹಾರ ; ಲೌಕಿಕತೆ : ಪ್ರಾಪಂಚಿಕವನಱಿಯದೆ ಪರಮ ಭಕ್ತಂ ಚಮತ್ಕೃತಿಯಿಂದೆ ಕಿನ್ನರವೀಣೆಯಂ ಪಿಡಿದು. . . ಕೇಳಿಸಲು (ಜಸಪು. ೨೬-೩). ೪. ಲೋಕವ್ಯವಹಾರವನ್ನು ಬಲ್ಲ ವ್ಯಕ್ತಿ; ಲೌಕಿಕ ವ್ಯಕ್ತಿ : ಗುರುಗೋವಿಂದಭಟ್ಟರು ಪ್ರಾಪಂಚಿಕರು (ಕಂಕ. ೩೯ ಕಂಕಾಪ್ಯ ಸಂಸಂಪು) ; ನಾನೊಳ್ಳೆಯ ಪ್ರಾಪಂಚಿಕಳು. ನನ್ನ ಸಂಗ್ರಾಹಕಬುದ್ಧಿಯೂ ಆಶ್ಚರ್ಯಕರವಾದದ್ದು (ಸ್ಮೃತಿಪ. ೩೦೯). [ಸಂ.]

ಪ್ರಾಪಕ (ಗು). ೧. ಪಡೆಯುವ ; ಹೊಂದುವ. (ನಾ). ೨. ಪಡೆದಂದು; ಹೊಂದಿದುದು : ನಿರತಿಶಯನಿಜಾನಂದಸುಧಾರಸಸ್ಯಂದಿ ಚಿನ್ಮಯನಿಜಾತ್ಮಸ್ವರೂಪಪ್ರಾಪಕಮುಂ (ಕಾಸಾರ. ೫೦-೩೦೨ ಪ). ೩. ಪಡೆದವನು; ಹೊಂದಿದವನು : ಪಾಪಪುಣ್ಯಗಳು ಬರಲಾಪವೇ ನಿನ್ನುಳಿದು ಪ್ರಾಪಕನು ನೀನು ಇರಲಾಗಿ (ಕಪು. ೨೦೨). [ಸಂ.]

ಪ್ರಾಪಣ (ನಾ). ೧. ಹೊರೆದುವುದು; ಪಡೆಯುವುದು. ೨. ತೆಗೆದು ಕೊಳ್ಳುವುದು ; ಸ್ವೀಕರಿಸುವುದು : ನಿಷ್ಕುಟಕ್ಷೇತ್ರದೊಳ್ ಪುಟ್ಟುವ ಜೀವಕ್ಕೆ ನಿಷ್ಕುಟಕ್ಷೇತ್ರಾನುಪೂರ್ವ್ಯನುಶ್ರೇಣ್ಯಜಗತ್ಯಭಾವಂ ನಿಷ್ಕುಟಕ್ಷೇತ್ರ ಪ್ರಾಪಣನಿಮಿತ್ತಂ ತ್ರಿವಿಗ್ರಹಗತಿಯಕ್ಕುಂ (ತತ್ತ್ವಾಪ್ರ. ೦೦೦); ಮತ್ತ ಮುತ್ಪಾದಿತ ಘ್ರಾಣೇಂದ್ರಿಯಪ್ರಾಪಣಂಗಳಪ್ಪ ಗಂಧಾಪಣಂಗಳೊಳ್ (ಕಂಪ್ರಪು. ೦-೦೨೯) ೩. ಸ್ಪಷ್ಟಪಡಿಸುವುದು; ಸ್ಪಷ್ಟೀಕರಣ; ವಿವರಣೆ. [ಸಂ.]

ಪ್ರಾಪಣಿಕ (ನಾ). ವ್ಯಾಪಾರ ಮಾಡುವವನು; ವ್ಯಾಪಾರಿ; ವರ್ತಕ : "ಪಣ್ಯಾಜೀವಃ, ವಣಿಕ್, ಪ್ರಾಪಣಿಕಃ, ನೈಗಮಃ, ನೈದೇಹಃ — ಈ ೫ ಹರದಂ" (ಹಲಾಯು. ೯೩-೯೦೭). [ಸಂ.]

ಪ್ರಾಪನ್ನ (ನಾ). ಮರೆಹೊಕ್ಕವನು ; ಶರಣಾಗತ : ಎನ್ನ ಪಾಲಿಸಿದಂದದಿ ಸಕಲ ಪ್ರಾಪನ್ನರ ಸಲಹೊ (ಜಗಣಾ. ೦೬೨). [<ಸಂ. ಪ್ರಪನ್ನ]

ಪ್ರಾಪ್ತ (ಗು). ೧. ಪಡೆದ; ದೊರೆತ ; ಲಬ್ಧವಾದ : ಶ್ರೀಪೇಣ ಭೂಪತಿ . . . ಪ್ರಾಪ್ತಸಪ್ತಪರಮಸ್ಥಾನನಾದಂ (ಸಂಪ್ರಪು. ೯-೨೯ ಪ). ೨. ಯೋಗ್ಯವಾದ; ತಕ್ಕ : 'ಪ್ರಾಪ್ತವಯಸ್ಕ' ಪರಾ. (ನಾ). ೩. ದೊರೆತುದು ; ಲಾಭ ; ಲಬ್ಧ : ಒಂದು ಮುಗಿಯುವುದರೊಳಗೆ ಇನ್ನೈದು ಪ್ರಾಪ್ತ (ಕಾಂಕಲಾ. ೨೯೯). ೪. ಯೋಗ್ಯವಾದುದು; ತಕ್ಕುದು : "ಯುಕ್ತಂ, ಉಚಿತಂ, ನ್ಯಾಯಂ, ಪ್ರಾಪ್ತಂ, ಔಪಯಿಕಂ — ಈ ೬ ಉಚಿತಂ" (ಹಲಾಯು. ೦೨೩-೬೦). ೫. ತಿಳಿದವನು; ಪಂಡಿತ : "ಸೂರಿ, ಮೇಧಾವಿ. . . ಪ್ರಾಪ್ತಂ, ವಿಶಾರದಂ. . . ವಿದ್ವಾಂಸನೆನಿಸಿಕ್ಕು" (ಮಂಗರಾ. ೬೬-೨). [ಸಂ.]

ಪ್ರಾಪ್ತವಯಸ್ಕ (ನಾ). ಯೋಗ್ಯವಾದ ವಯಸ್ಸನ್ನು ಮುಟ್ಟಿದವನು; ಪ್ರೌಢ : ಅವನು ಪ್ರಾಪ್ತವಯಸ್ಕನಾದನು (ಕುಪರು. ೬೦) ; ಈ ಕಾಯಿಲೆ ಹೆಚ್ಚಾಗಿ ಮಕ್ಕಳಿಗೆ ಮತ್ತು ಪ್ರಾಪ್ತವಯಸ್ಕರಿಗೆ ಬರುತ್ತದೆ (ಕಂಠೋ. ೬೯). [ಸಂ.]

ಪ್ರಾಪ್ತಿ (ನಾ). ೧. ಪಡೆಯುವಿಕೆ ; ಹೊಂದುವಿಕೆ. ೨. ಸೇರುವಿಕೆ ; ತಲುಪುವಿಕೆ. ೩. ದೊರಕಿದುದು ; ಲಭ್ಯವಾದುದು ; ಲಾಭ : ಪ್ರಾಪ್ತಿಯನಸಕಟಿಯಲುಮಪ್ರಾಪ್ತಿಯನಾಗಿಸಲುಮಾಗದದಱಿಂ ದೋಷಾವಾಪ್ತಿಯನೇಂ ನಿಮ್ಮನ್ನರ್ ಸುಪ್ತರವೋಲ್ಮೋಹಮೂರ್ಛೆಯಂ ತಾಳ್ದುವರೇ (ಶಂಕಾಮಾ. ೬-೦೨೦). ೪. ಸುದೈವ ; ಅದೃಷ್ಟ: ಪ್ರಾಪ್ತಿ ಇಲ್ಲದ್ದಕ್ಕೆ ಬಾಯಿ ಬಿಟ್ಟರೆ ಬರುತ್ತದೆಯೆ ? (ಶ್ರೀಕಥೆ. ೦೩೯). ೫. ಸಾಧ್ಯವಾದುದು; ಶಕ್ಯವಾದುದು : ಕಂತುಹರನ ಸಮಾನವೆನಿಪ ಮಹಂತರುಗಳಂತರವನಱಸಲು ಪ್ರಾಪ್ತಿಯೇ ನಿನಗ (ಜಸಪು. ೦೨-೦೧). ೬. [ಯೋಗ] ಎಂಟು ಬಗೆಯ ಸಿದ್ಧಿಗಳಲ್ಲಿ ಒಂದು ; ಯಾವುದನ್ನು ಬೇಕಾದರೂ ಪಡೆಯುವ ಶಕ್ತಿ: ಮಹರ್ಧಿಕದೇವರಾಗಿ ಅಣಿಮಾ ಮಹಿಮಾ ಲಘಿಮಾ ಪ್ರಾಪ್ತಿ ಪ್ರಾಗಲ್ಭ್ಯ ಮೀಶತ್ವ ವಶಿತ್ವ ಕಾಮರೂಪಿತ್ವಮೆಂದೀ ಅಷ್ಟಗುಣೈಶ್ವರ್ಯಂಗಳೊಳ್ ಕೂಡಿ (ಪಣ್ಣಾಗಾ. ೯೬-೩). [ಸಂ.]

ಪ್ರಾಪ್ತಿಸು (ಕ್ರಿ). ಉಂಟಾಗು ; ಒದಗು ; ಲಭಿಸು : ಇಕ್ಕುವ ಸೂಲ ಪ್ರಾಪ್ತಿಸಲಿ . . . ಮತ್ತೆಯೂ ಲಿಂಗಾರಾಧನೆಯ ಮಾಡುವೆ (ಬಸವ. ೭೦೬); ಮಾತಂಗಸಂಗತಮಿತ್ರದೋಷವು ಪ್ರಾಪ್ತಿಸುವುದು (ಬಸಪು. ೬೦-೦೦) ; ಮಳೆ ಹೆಚ್ಚಿ, ನೀರ ಒರತೆ ಪ್ರಾಪ್ತಿಸಿ, ಬೆಟ್ಟದ ಮಗ್ಗುಲುಗಳು ಎಷ್ಟೋ ಕಡೆಗಳಲ್ಲಿ ಜರಿದು, ಹೀಗೆ ಕುಸಿದು ಮುಕ್ಕುಗೊಂಡಿದ್ದವು (ಕುಡಿಕೂ. ೩೦೩). [ಪ್ರಾಪ್ತಿ + — ಇಸ್ಕು]

ಪ್ರಾಪ್ತ್ಯಾಶೆ (ನಾ). [ಕಾವ್ಯಮೀ] ನಾಟಕದ ಕಥಾಸಂವಿಧಾನದಲ್ಲಿ ಇರುವ ಆರಂಭ, ಯತ್ನ, ಪ್ರಾಪ್ತ್ಯಾಶಾ, ನಿಯತಾಪ್ತಿ ಮತ್ತು ಫಲಾಗಮಗಳೆಂಬ ಐದು ಹಂತಗಳಲ್ಲಿ ಮೂರನೆಯದು ; ಫಲವನ್ನು ಪಡೆಯುವ ಆಸೆಯನ್ನು ಸೂಚಿಸುವ ಅಂಕ : ಪ್ರಾಪ್ತ್ಯಾಶೆ ಸಾಧನೋಪಾಯಗಳೂ ಅವುಗಳಿಗೆ ಅಡಚಣೆಗಳೂ ಇರುವುದರಿಂದ ಫಲಪ್ರಾಪ್ತಿ ಆದರೂ ಆಗಬಹುದೆಂಬ ಸಂಭವ (ಕೃಪಿಡಿ. ೨೦೬). [ಸಂ. ಪ್ರಾಪ್ತ್ಯಾಶಾ]

ಪ್ರಾಪ್ಯ (ಗು). ೧. ಪಡೆಯಬಹುದಾದ ; ಹೊಂದಲು ಯೋಗ್ಯವಾದ. (ನಾ). ೨. ಪಡೆಯಬಹುದಾದುದು : ಪ್ರಾಪ್ಯಮೆಂದು ಎಯ್ದಲ್‌ಪಡುವುದು (ಶಮದ. ೦೨೬ ಸೃತ್ತಿ). (ನಾ). ೩. ದೊರೆಯುವವನು ; ಲಭಿಸುವವನು : ಹಾಲು ಮೊಸರಂದದ ವಿಕಾರ್ಯನು ಕೇಳು ಸ್ವರ್ಗದ ವೋಲು ಪ್ರಾಪ್ಯನು (ಅಮ್ಮಕ. ೬-೨೦). [ಸಂ.]

ಪ್ರಾಬಲ್ಯ (ನಾ). ೧. ಹೆಚ್ಚಳ ; ಆಧಿಕ್ಯ : ಈ ರೋಗದ ಪ್ರಾಬಲ್ಯವನ್ನು ತಡೆಯಬೇಕಾದರೆ . . . ಮರಿಗಳ ಬೆಳವಣಿಗೆಗೆ ನೆರವಾಗುವ ಸನ್ನಿವೇಶಗಳನ್ನು ಹತೋಟಿಯಲ್ಲಿಡಬೇಕು (ಪ್ರಾಪೆಕಾ. ೦೭೨). ೨. ಸಾಮರ್ಥ್ಯ ; ಪ್ರಭಾವ : ವಿಶೇಷವಾಗಿ ಕಲಿಯ ಪ್ರಾಬಲ್ಯದಿಂದ ಈಗ ಇಂತಹ ಕಾರ್ಯಕ್ಕಾರೂ ಸಹಕಾರಿಗಳಾಗುವುದಿಲ್ಲ (ಕಪಾಕುಂ. ೦೦೬). ೩. ಏಳಿಗೆ ; ಅಭ್ಯುದಯ : ಉತ್ತರಖಂಡದಲ್ಲಿ ಅಲ್ಲಲ್ಲಿ ತುರುಷ್ಕರ ಪ್ರಾಬಲ್ಯವಿದ್ದಿತೆಂಬುದು ನಿಜ (ಶ್ರೀರಾಯ. ೦೩೯). [ಸಂ.]

ಪ್ರಾಬೋಧಿಕ (ನಾ). ೧. ಬೆಳಗಿನ ಕಾಲ ; ಮುಂಜಾವು ; ಪ್ರಾತಃಕಾಲ. ೨. ರಾಜನನ್ನು ಉದಯಕಾಲದಲ್ಲಿ ಎಬ್ಬಿಸಲು ಹೊಗಳಿ ಹಾಡುವ ಸ್ತುತಿಪಾಠಕ. [ಸಂ.]

ಪ್ರಾಭಂಜನ (ನಾ). ಗಾಳಿ ; ವಾಯು : ಕಂಜವೃಜಿನಘನನಿರ್ಧೂತ ಪ್ರಾಭಂಜನ ಕಂಜಾಂಬಕ ಪೂಜಿತಪದಕಂಜಮುನಿನುತ ಧನಂಜಯನಯನ ಧನಂಜಯವರದ ಜಯ (ಕಾಪ್ಯದೇ. ೬೯-೨೨). [<ಪ್ರಭಂಜನ]

ಪ್ರಾಭವ (ನಾ). ಅತಿಶಯತೆ ; ಹೆಚ್ಚುಗಾರಿಕೆ ; ಮೇಲ್ಮೆ : ಇಂತಿದು ವಿಸ್ತಾರಿತ ಕಾಮಹೋಮಹುತ ಭುಕ್ಪ್ರಜ್ವಾಲೆಯೋ ಎಂಬ ಸಂಪದಮಂ ಬೀಱಿದುದಿಂದ್ರದಿಗ್ವಿವರದೊಳ್ ಚಂದ್ರದ್ಯುತಿಪ್ರಾಭವಂ (ಗಿರಿಕ. ೯-೯೯); ಎವಗೆ ರಚಿಸಿತು ರಾಜ್ಯವಿಭ್ರಂಶವನು ತತ್ಸುಕೃತೋದಯ ಪ್ರಾಭವವೆ ತಿರುಗಿಸಿತೆಂದು ನಯದಲಿ ಧರ್ಮಸುತ ನುಡಿದ (ಕುಪ್ಯಾಗ. ೧೦-೯೯). [ಸಂ.]

ಪ್ರಾಭಾಕರ (ಗು). ೧. ಪೂರ್ವಮೀಮಾಂಸಾಪ್ರಚಾರಕನಾದ ಪ್ರಭಾಕರನಿಗೆ ಸಂಬಂಧಿಸಿದ : ಧರ್ಮವೆಂಬುದು ಸುಖಕ್ಕೆ ಸಾಧನೆಯೆಂಬುದು ಭಾಟ್ಟಮತವಾದರೆ ಧರ್ಮವೇ ಈ ಪುರುಷಾರ್ಥವೆಂಬುದು ಪ್ರಾಭಾಕರ ಮತ (ಶಾರದ. ೦೨೯). (ನಾ). ೨. ಪ್ರಭಾಕರನು ಬೋಧಿಸಿದ ಮತ. ೩. ಪೂರ್ವಮೀಮಾಂಸಾ ಪ್ರಚಾರಕನಾದ ಪ್ರಭಾಕರನ ಮತದ ಅನುಯಾಯಿ : ಚಾರ್ವಕ ಬೌದ್ಧ ಸಾಂಖ್ಯರಖರ್ವ ಪ್ರಾಭಾಕರರ್ . . .

ಉರ್ವೀಶನ ಸಭೆಯೊಳಿರ್ದರತಿಮುದದಿಂ (ಶಾಕಪು. ೬-೧೨) ; ಪ್ರಾತಿಜ್ಞಾನ ದಲ್ಲಿಯೂ ಆತ್ಮನು ಪ್ರತ್ಯಕ್ಷನಾಗಿರುವನು ಎಂದು ಪ್ರಾಭಾಕರರು ತಿಳಿಯುವರು (ಶಾತತ್ತ್ವ. ೪೦೩). [ಸಂ.]

ಪ್ರಾಭಾತ (ನಾ). ಬೆಳಗಿನ ಕಾಲ ; ಪ್ರಾತಃಕಾಲ : ಕುಂಕುಮದ ತೀರ್ಥದೊಳ್ ಮಿಂದೇಳ್ವ ಫಾಲ್ಗುಣ ಪ್ರಾಭಾತರವಿಯಂತೆ ಮೆರೆದುದು ವದನಮಂಡಲಂ (ಕ್ರೀರಾಮಾ. ೦೩-೩೫೯). [ಸಂ.]

ಪ್ರಾಭಾತಿಕ (ಗು). ಬೆಳಗಿನ : ಪ್ರಾತಃಕಾಲದ : ಸಕಲ ಪ್ರಾಭಾತಿಕ ಕ್ರಿಯೆಯಂ ನಿರ್ವರ್ತಿಸಿ (ಅಮಪು. ೦೫-೨೦ ಪ) ; ಅಂತು ಚಿಂತಿಸುತಿರ್ದಿರುಳಂ ಕಳೆದು ಬೆಳಗಪ್ಪುದುಂ ಕೃತಪ್ರಾಭಾತಿಕ ನಿಯಮನಾಗೆ ಮಹಾಶ್ವೇತೆಯು ಮಘಮರ್ಷಣನಿಯಮಜಪಂಗಳಂ ಮಾಡುತಿರ್ದಳ್ (ಕಾದಂಪು. ೧೯೬). [ಸಂ.]

ಪ್ರಾಭೃತ (ನಾ). ೧. ರಾಜ, ದೇವತೆ ಮೊದಲಾದ ಹಿರಿಯರ ಸಂದರ್ಶನಕ್ಕೆ ಹೋದಾಗ ಕೊಡುವ ಕಾಣಿಕೆ. — ನಜರು : "ಪ್ರಾಭೃತಂ . . . ಉಪದಾ—೬ ರಾಜದರ್ಶನಾರ್ಥವಾಗಿ ತರತಕ್ಕ ಕಾಣಿಕೆ, ನಜರ್ ಮುಂತಾದಕ್ಕೆ ಪೆಸರು" (ಸಿದ್ಧಾಂತಿ. ೨೪೩); ನಿಜೋಚಿತ ಸ್ಥಾನ ದೊಳಿಕ್ಕಿದಾಸನದೊಳ್ ಕುಳ್ಳಿರ್ಪುದುಮನಂತರಮರಸನಾ ಪ್ರಾಭೃತಂ ಕೋಶಾಧ್ಯಕ್ಷರಿಂ ಕೈಕೊಳಲ್ಪೆಟ್ಟು (ಸರ್ಗಪಾ. ೩-೩೬ ಪ) ; ಪ್ರಾಭೃತತ್ರಯ ಗಳನುರ್ವಿ ಸೋಂಕದೆ ತರಲು (ನಾಗಳು. ೦-೯). ೨. ಕಾರ್ಯವನ್ನು ಸಾಧಿಸುವ ಉದ್ದೇಶದಿಂದ ನ್ಯಾಯವಿರುದ್ಧವಾಗಿ ಕೊಡುವ ಹಣ ; ಲಂಚ ; ರುಷುವತ್ತು. [ಸಂ.]

ಪ್ರಾಮಾಣಿಕ (ಗು). ೧. ಅಳತೆಗೆ ಸಿಕ್ಕಿದ ; ಪ್ರಮಾಣದ. ೨. ಆಧಾರ ದಿಂದ ಸಾಬೀತು ಪಡಿಸಿದ ; ಪ್ರಮಾಣದಿಂದ ಸಿದ್ಧವಾದ. ೩. ವಿಶ್ವಾಸಾರ್ಹವಾದ ; ನಂಬಿಕೆಗೆ ಅರ್ಹವಾದ. (ನಾ). ೪. ವಿಶ್ವಾಸಾರ್ಹವಾದುದು : ಅವರ ಈ ವಿಧಾನಕ್ಕೆ ಪ್ರಾಮಾಣಿಕ ವಾದ ಯಾವ ಆಧಾರವೂ ಇಲ್ಲ (ಅಂಶಾ. ೬). ೫. ನಂಬಿಕೆಗೆ ಅರ್ಹನಾದವನು ; ನಂಬಿಕಸ್ಥ : ನೀನು ಪ್ರಾಮಾಣಿಕನಾಗಿದ್ದೆ (ಕಂಬಹು. ೦೩೪); ಇದನ್ನು ಪ್ರಾಮಾಣಿಕರಾದವರು ಒಪ್ಪದಿರಲು ಸಾಧ್ಯವಿಲ್ಲ (ರಾಶ್ಯಶಾ. ೦೦). [ಸಂ.]

ಪ್ರಾಮಾಣಿಕತನ (ನಾ). ನಂಬಿಕೆಗೆ ಅರ್ಹವಾಗಿರುವಿಕೆ : ಅವನ ಪ್ರಾಮಾಣಿಕತನವನ್ನು ಪರೀಕ್ಷಿಸಿ ನೋಡಬೇಕೆಂಬ ಲವಲವಿಕೆ ಅವನಲ್ಲಿ ಹುಟ್ಟಿತು (ಮುಂಬಿಯಾ. ೯-೩೦) ; ಸಂವಾದಕರ ಪ್ರಾಮಾಣಿಕತನಕ್ಕೆ ಮೆಚ್ಚಿ, ಒಳನೋಡಿದೆ (ಹುಕ್ಕುಹು. ೩೫). [ಪ್ರಾಮಾಣಿಕ + — ತನ]

ಪ್ರಾಮಾಣಿಕತೆ (ನಾ). = ಪ್ರಾಮಾಣಿಕತನ : ಕೃತ್ರಿಮರಾಹಿತ್ಯ ಪ್ರಾಮಾಣಿಕತೆಗಳಿಗೆ ಹೆಸರಾಗಿದ್ದ ಅವನು ಮತತ್ಯಾಗದ ವಿಷಯವನ್ನು ಗೆಳೆಯರಿಗೆ ತಿಳಿಸಿದ್ದನು (ಪುವರು. ೩೭೨) ; ಪ್ರಾಮಾಣಿಕತೆ ಎನ್ನುವ ಮಾತೇ ಇಲ್ಲ ನಿಮ್ಮ ಜಾತಕದಲ್ಲಿ (ಕಂಗಲ. ೭೬). [ಸಂ. ಪ್ರಾಮಾಣಿಕತಾ]

ಪ್ರಾಮಾಣ್ಯ (ನಾ). ೧. ಆಧಾರ ; ಪುರಾವೆ ; ಸಾಕ್ಷಿ : ಜನ ಗಳಿಸ ಬಯಸುವ ಅಪೂರ್ವಗುಣ ಬರಿಯ ಹೊಸತನವಲ್ಲ, ಪ್ರಾಮಾಣ್ಯ ಮಾತ್ರ (ಸಾಹಿಪ್ರ. ೦೨) ; ಜ್ಞಾನಸ್ವರೂಪದಲ್ಲಿರುವ ಪ್ರಾಮಾಣ್ಯ, ಸಂಶಯ, ಸಂಭಾವನಾ ಮೊದಲಾದ ಅಂಶಗಳು ಸಾಕ್ಷಿಸ್ವರೂಪೇಂದ್ರಿಯಕ್ಕೆ ಗೋಚರ ಗಳಾಗುವುವು (ಹಿಂದುಸಾ. ೨೫೬). ೨. ಆಧಾರಭೂತವಾದುದು; ಸಮರ್ಥನೆ ಮಾಡುವ ಪ್ರಮಾಣ : ಬಹು ಹಿಂದಿನಿಂದ ಭಗವದ್ಗೀತೆಗೆ ಸಾಕಷ್ಟು ಪ್ರಾಧಾನ್ಯವೂ ಪ್ರಾಮಾಣ್ಯವೂ ಇತ್ತು (ಶಾರದ. ೦೦೯). ೩. ಅಳತೆ ; ಪ್ರಮಾಣ : (ಕ). [ಸಂ.]

ಪ್ರಾಮಿಸರಿನೋಟು, ಪರಮೇಶ್ವರಿನೋಟು, ಪರಮೇಸೂರನೋಟು, ಪ್ರಾಂಸರಿನೋಟು (ನಾ). ಒಂದು ಗೊತ್ತಾದ ಮೊಬಲಗನ್ನು ಒಬ್ಬ ಗೊತ್ತಾದ ವ್ಯಕ್ತಿಗೆ ಅಥವಾ ಆ ಪತ್ರ ತಂದವನಿಗೆ ಒಂದು ಗೊತ್ತಾದ ದಿನ ಅಥವಾ ಯಾವಾಗ ಕೇಳಿದರೆ ಆವಾಗ ಪಾವತಿಮಾಡುವುದಕ್ಕಾಗಿ ವಾಗ್ದಾನ ಮಾಡಿ ರುಜು ಹಾಕಿಕೊಟ್ಟ (ಸಾಲ) ಪತ್ರ ; ವಾಗ್ದಾನ ಪತ್ರ ; ಪ್ರೋನೋಟು : ಬೇಕಾದರೆ ಪ್ರಾಮಿಸರಿನೋಟು ಬರೆದು ಕೊಡುತ್ತೇನೆ (ಮೋಹನೀ. ೫೯); ಸಾಹುಕಾರರು ತಾಳುವ ಹಾಗಿದ್ದರೆ ಒಂದು ಪ್ರಾಮಿಸರಿ ನೋಟನ್ನು (ವಾಗ್ದಾನದ ಸಾಲಪತ್ರ) ಬರೆದುಕೊಟ್ಟು ಮುಂದಕ್ಕೆ ತೀರಿಸುವೆವೆನ್ನಬಹುದು (ಹಣಶ್ರ. ೬೭). **ಪರಮೇಶ್ವರಿನೋಟು** : ನೀನು ಸರಳ ಮನುಷ್ಯನೆಂಬುದು ಊರೊಳಗೆ ಯಾರಿಗೇನು ಗೊತ್ತಿಲ್ಲವೆ ? . . . ನೆನಪಿಗೆಂದು ಪರಮೇಶ್ವರಿನೋಟು ಬರೆದುಕೊಡು (ಎರೆಸ. ೬೯). **ಪರಮೇಸೂರನೋಟು** : ಪರಮೇಸೂರನೋಟು ಬರಕೊಟ್ಟು ತಗೊಂಡು ಹೋಗು (ಬಲಿಪ. ೩೯). **ಪ್ರಾಂಸರಿನೋಟು** : ಸಾಲ ಪಡೆಯಲು ಪ್ರಾಂಸರಿನೋಟು ಬರೆದುಕೊಟ್ಟಿದ್ದಾರೆ (ಕೂಡ).

[←ಇಂ. Promissorynote./ ತುಳು. ಪ್ರಮೇಸ್ರಿನೋಟು]

ಪ್ರಾಮುಖ್ಯ (ನಾ). ಮುಖ್ಯವಾಗಿರುವಿಕೆ; ಪ್ರಧಾನತೆ ; ಮಹತ್ವ : ಧರೆಯಲ್ಲಿ ಸೊಗಸಾದ ಮಾಳಿಗೆ ಮನೆಗಳಿರಲಿ . . . ಕೊರತೆಯೇಂ ತನ್ನದೇ ಪ್ರಾಮುಖ್ಯವೆಂದು ? (ಕಬಿ. ೦೯-೦). [ಸಂ.]

ಪ್ರಾಮುಖ್ಯತೆ (ನಾ). ಪ್ರಮುಖವಾಗಿರುವುದು : ಈ ದೃಷ್ಟಿಯನ್ನವಳು ತ್ಯಜಿಸಿದ್ದರೆ ಅವಳ ಜೀವನದ ಪ್ರಾಮುಖ್ಯತೆಯೆ ಕುಂಠಿತವಾಗುತ್ತಿತ್ತು (ಪುವರು. ೦೧೯) ; ಜ್ಞಾನದ ಪ್ರಾಮುಖ್ಯತೆ ವಿಷಯವಾಗಿ ಹೋರಾಡಿದ ಶ್ರೀ ಶಂಕರಾಚಾರ್ಯರು ಪ್ರಚಂಡಬೌದ್ಧಿಕಕರ್ಮವಾದಿಗಳಾಗಿದ್ದರು (ಧರ್ಮಗಾ. ೦೫೦). [ಪ್ರಾಮುಖ್ಯ + — ತೆ]

ಪ್ರಾಯ (ನಾ). ೧. ಜೀವ ಹೋಗುವಿಕೆ ; ಮರಣ. ೨. ಪ್ರಾಣ ತ್ಯಾಗಕ್ಕಾಗಿ ಮಾಡುವ ಉಪವಾಸ. — ಆಹಾರತ್ಯಾಗ : "ಪ್ರಾಯಃ, ಭೋಜನತ್ಯಾಗಃ, ಸನ್ಯಾಸಃ, ಅನಶನಂ—ಈ ೪ ಕಡೆಗಾಲದ ಅನಶನಂ" (ಹಲಾಯು. ೦೨೫-೭೫). ೩. ತಾರುಣ್ಯ; ಹರೆಯ; ಯೌವನ : "ಯೌವನಂ —ಪ್ರಾಯಂ" (ಕಾಶಕ್ರ. ೦೬೩) ; ಪ್ರಾಯದ ಪೆಂಪೆ ಪೆಂಪೆಮಗೆ (ಶಂಶಾ. ೦೯-೦೭) ; ಪ್ರಾಯದ ಮಿಂದರಿಂದೆ ಗಳಿಸಿರ್ದ ಧನಂಗಳಿನಾಗಳುಂ . . . ತೃಷ್ಣಯನಾಗಿಸುತ್ತೆ (ಹಾಲಾಸ್ಯ. ೩-೯-೦೦). ೪. ವಯಸ್ಸು : ಕ್ರಮ ಕ್ರಮದಿಂ ಸುಖದಿಂ ಬೆಳೆದು ಮುಂಜಿಗಟ್ಟುವ ಪ್ರಾಯಮಾದೊಡೆ . . . ಮುಂಜುಂಧನಕ್ರಿಯೆಯಂ ಮಾಡಿ (ಪದ್ಮಾಚಾ. ೭೩-೨೦) ; ಪ್ರಾಯಂ ಕೂಸಾ ದೊಡಭಿಪ್ರಾಯಂ ಕೂಸಕ್ಕುಮೆ (ಕಪುದ. ೨೯೩ ಪ್ರಯೋ) ; ನರಸಿಂಹನಿಗೆ ಈಗ ಹದಿನೆಂಟು ವರ್ಷ ಪ್ರಾಯವಾಗಿತ್ತು (ಸುರಮ. ೦೬೩). ೫. ಸಮಾ ಸಾಂತ್ಯಗಳಲ್ಲಿ ಸಮಾನವಾದುದು ಎಂಬರ್ಥದಲ್ಲಿ ಸೇರುವ ಶಬ್ದ . ಅನಂತ . . . ಅವಘಡಪ್ರಾಯವಾದ ಅಪವಾದಗಳು ಬಂದರೂ ಅಕ್ಕರ ಅಕ್ಕಸ ತಾಳದೆ ಸಮುದ್ರನಾಥನಂತೆ ಎಲ್ಲವನ್ನೂ ಒಡಲಿನಲ್ಲಿ ನುಂಗಿಕೊಂಡು ಸಾಗಹತ್ತಿದ್ದ (ಜೀಪಾಸ. ೨೯).

ಪ್ರಾಯಕ್ಕೆ ಬರು=೧. ವಯಸ್ಸಿಗೆ ಬರು; ಪ್ರೌಢವಾಗು: ಅನೇಕ ಜೀವಿಗಳು ಪ್ರಾಯಕ್ಕೆ ಬರುವ ಮೊದಲೇ ನಾಶವಾಗುತ್ತವೆ (ಕೀಟಪ. ೦). ೨. ಮೈನೆರೆ ; ಪುಷ್ಪವತಿಯಾಗು: ದೊಡ್ಡವಳಾಗು : ನಾನು ಪ್ರಾಯಕ್ಕೆ ಬಂದ ಹೊಸದು ; ಆಗ ಒಂದು ದಿನ ಪರಾಶರಮಹಿಯು ಯಮುನಾನದಿಯನ್ನು ದಾಟಬೇಕಾಯಿತು (ಪಶಕಾ. ೬); ಅವಳು ಪ್ರಾಯಕ್ಕೆ ಬಂದ ಕೂಡಲೆ ದುರಾಚಾರಿಯಾದ್ದರಿಂದ ಅವಳನ್ನು ಯಾರೂ ವರಿಸಲಿಲ್ಲ (ಸ್ಕೂಲಿಯಾ. ೨೦೬). **ಪ್ರಾಯ ತುಂಬು**=ಬಾಲ್ಯಾವಸ್ಥೆ ಕಳೆದು ಯೌವನ ಬರು; ತಾರುಣ್ಯವನ್ನು ಹೊಂದು : ನಾರಾಯಣಮಾಸ್ತರರ ಹಿರಿಮಗು, ಮೆಟ್ರಿಕ್‌ನಲ್ಲಿದ್ದವ, ಪ್ರಾಯ ತುಂಬಿದ ಮಗು, ಕೇಶವ ಹೋದನಂತೆ ವಿಷಮಜ್ವರದಿಂದ (ಮುಗಿಯು. ೩೮೭); ಪ್ರಾಯ ತುಂಬಿರಲು

ಪಾತ್ರೆ ತುಂಬಿರಲಿ, ಬರಿದು ಭ್ರಾಂತಿ ಏಕೆ ? (ಅರಳು. ೦೦೯-೯). ಪ್ರಾಯ ಬರು = ಪ್ರಾಯ ತುಂಬು : ಪುರುವಿಗೆ ಪ್ರಾಯ ಬಂತು (ಪಿಕಿಸಂ. I, ೨೦೬); ಶಾಲೆಗೆ ಸೇರಿದ್ದು ತಡ, ಪಾಸಾದುದು ಮೆಲ್ಲಗೆ ಹೊರತು, ಈಗಾಗಲೇ ಪ್ರಾಯ ಬಂದಿದೆ (ಮುಗಿಯು. ೫೭). ಪ್ರಾಯ ಮೀರು = ವಯಸ್ಸಾಗು ; ವಯಸ್ಸು ಕಳೆ: ಇಬ್ಬರೂ ಸುಮಾರು ಐವತ್ತುವರ್ಷ ಪ್ರಾಯ ಮೀರಿದವರು (ಮರಸು. ೫೦೯). ಪ್ರಾಯ ಸಲ್ಲು = ವಯಸ್ಸಾಗು: ನಿನಗೆ ಪ್ರಾಯ ಸಂದಿತಲ್ಲ ; ನಾಳೆ ಯಾರು ನಿನ್ನ ನಂತರ ಗುರಿಕಾರನೆಂದು ಯೋಚಿಸಿದ್ದೀಯಾ ? (ಕುಡಿಕೂ. ೬೭). ಪ್ರಾಯ ಹೋಗು = ಪ್ರಾಯ ಸಲ್ಲು: ಪ್ರಾಯ ಹೋದರೂ ಪ್ರಯಾಸ ಬಿಡದು (ಗಾಡ). [ಸಂ.]

ಪ್ರಾಯಃ (ಅ). ಬಹುಮಟ್ಟಿಗೆ ; ಬಹುಪಾಲು : ಆತ್ಮನಿರುವ ಕಡೆಗಳಲ್ಲೆಲ್ಲಾ ಈ ಚಿಹ್ನೆಗಳು ಪ್ರಾಯಃ ಕಂಡುಬರುತ್ತವೆಯೆಂದು ಅದರ ಅಭಿಪ್ರಾಯ (ಜೀವಾತ್ಮ. ೩೯). [ಸಂ. ಪ್ರಾಯಸ್]

ಪ್ರಾಯತ (ನಾ). ಇಂದ್ರಿಯಂಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ವ್ಯಕ್ತಿ ; ಸಂಯಮಿ : ಮಿಥಿಲೆಯಲಿ ಮುನ್ನೊಬ್ಬ ವೇಶಿಯ ಕಥೆಯ ಪೇಳುವೆ ಕೇಳು ಭೂಪತಿ ಮಥಿಸುವಳು ಪ್ರಾಯತರ ಮನಗಳನಧಿಕಚಲುವಿನಲಿ (ಪಿಭಾಗ. ೦೦-೦೫-೦); ಏಕಪತ್ನೀವ್ರತಂ ಪ್ರಾಯತಂ ಕೋಮಲಂ (ಶೈಮಭಾ. ೦೦-೯೦). [ಪ್ರಯತ]

ಪ್ರಾಯತೆ (ನಾ). ಇಂದ್ರಿಯವನ್ನು ಹತೋಟಿಯಲ್ಲಿ ಇಟ್ಟುಕೊಂಡಿರುವವಳು; ಇಂದ್ರಿಯಲಾಲಸೆಯಿಲ್ಲದವಳು: ಆ ರಾಜ್ಯದೊಳ್ ಬಱಿಯ ನಾರಿಯರ್ ಪ್ರಾಯತೆಯರಾಗಿ . . . ಸ್ತ್ರೀಯೋರ್ವಳರಸಾಗಿರಲ್ಕವಳ ಕೆಳಗಾಗಿ ಬದುಕುವರ್ (ಶೈಮಭಾ. ೦೫-೯೨). [ಸಂ. ಪ್ರಾಯತ + —ಎ$_2$]

ಪ್ರಾಯಶಃ (ಅ). ೧. ಬಹುಮಟ್ಟಿಗೆ; ಬಹುಪಾಲು; ಬಹುಶಃ: ನೊಳಂಬ ರಾಜ್ಯವನ್ನು ಪೂರ್ಣವಾಗಿ ಗಂಗಮಾರಸಿಂಹನು ಆಕ್ರಮಿಸಿಕೊಂಡಿದ್ದರಿಂದ . . . ಪ್ರಾಯಶಃ ಅವರೆಲ್ಲರೂ ತಮ್ಮ ರಾಜ್ಯವನ್ನು ಬಿಟ್ಟು ತಲೆಮರೆಸಿಕೊಂಡು ಹೋದಂತೆ ತೋರುತ್ತದೆ (ಸೊಳಂಬ. ೯೬); ಪ್ರಾಯಶಃ ನಾನು ಕಾಕಸಸ್‌ನಿಂದ ಹಿಂದಿರುಗುವುದಿಲ್ಲ (ಮಲೆಣ. ೭). ೨. ಸಾಮಾನ್ಯವಾಗಿ: ಪ್ರಾಯಶಃ ಎಲ್ಲಾ ಪ್ರಾಚೀನ ನಾಟಕಕಾರರ ವಿಷಯದಲ್ಲಿಯೂ ಇದನ್ನೇ ಹೇಳಬಹುದು (ಅಂಕಾ. ೭೬). [ಸಂ. ಪ್ರಾಯಶಸ್]

ಪ್ರಾಯಶ್ಚಿತ್ತ (ನಾ). ೧. ಮಾಡಿದ ತಪ್ಪಿಗಾಗಿ ವ್ಯಥೆ ಪಟ್ಟು ಪರಿಹಾರ ಮಾಡಿಕೊಳ್ಳುವ ಕರ್ಮ.- ವಿಧಿ : ಈ ನಾಯನೀಡಾಡಿ ಪ್ರಾಯಶ್ಚಿತ್ತಮಂ ಕೈಕೊಳ್ಳಿರಿ (ಪಂಚತಂ. ೦೪೭-೦೯); ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ ಫಲವೇನು ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ (ಬಸವ. ೨೮೯); ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವುದಿಲ್ಲ (ಝಾರಾಜ. ೫೨); ಪಾದಕ್ಕೆ ತಕ್ಕ ಪಾಪೋಸು, ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ (ಗಾಡ). ೨. [ಜೈನ] ಅಭ್ಯಂತರತಪಗಳಲ್ಲಿ ಒಂದು ; ಪ್ರಮಾದದೋಷಗಳ ಪರಿಹಾರಕ್ಕಾಗಿ ಆಲೋಚನೆ ಮೊದಲಾದ ಚಿತ್ತಶೋಧಕಕ್ರಿಯೆಗಳಲ್ಲಿ ಮನಸ್ಸು ಪ್ರವೃತ್ತವಾಗುವುದು: ಅಭ್ಯಂತರತಪಷಟ್ಕದೊಳಂ ಪ್ರಾಯಶ್ಚಿತ್ತವಿನಯವೈಯಾಪೃತಸ್ವಾಧ್ಯಾಯಧ್ಯಾನವ್ಯುತ್ಸರ್ಗಂಗಳಂ ಕೈಕೊಂಡು (ಅಪಿಪು. ೬-೩೩ ಪ). [ಸಂ.]

ಪ್ರಾಯಶ್ಚಿತ್ತಕರ್ಮ (ನಾ). ನಿತ್ಯ, ನೈಮಿತ್ತಿಕ, ಪ್ರಾಯಶ್ಚಿತ್ತ, ಕಾಮ್ಯ ಮತ್ತು ನಿರ್ಮಲಗಳೆಂಬ ಐದು ಬಗೆಯ ಕರ್ಮಗಳಲ್ಲಿ ಒಂದು; ತಾನು ಮಾಡಿದ ತಪ್ಪಿನ ಪರಿಹಾರಕ್ರಿಯೆಯಾಗಿ ಮಾಡುವ ಕರ್ಮ: ಕರ್ಮವಾದೊಡೆ ನಿತ್ಯ ನೈಮಿತ್ತಿಕ ಪ್ರಾಯಶ್ಚಿತ್ತ ಕಾಮ್ಯ ನಿರ್ಮಲವೆಂದು ಪಂಚವಿಧಂ (ವಿವೇಕ. ೦೩೮); ಜ್ಞಾತಾಜ್ಞಾತ ವಾಸಕ ಪರಿಹಾರದ್ದೆಶೆಯಿಂದ ಮಾಡುವುದೇ ಪ್ರಾಯಶ್ಚಿತ್ತಕರ್ಮವು (ಪಿಗಮ. ೦-೪-೦). [ಸಂ. ಪ್ರಾಯಶ್ಚಿತ್ತಕರ್ಮನ್]

ಪ್ರಾಯಸ್ಥ (ನಾ). ವಯಸ್ಸಿಗೆ ಬಂದವನು ; ತರುಣ : ಒಬ್ಬ ಪ್ರಾಯಸ್ಥನ ಸಮತೂಕಆಹಾರವೆಂದರೆ . . . ಜೀವಾತುಗಳು ಸಾಕಷ್ಟು ಪ್ರಮಾಣದಲ್ಲಿ ಇರುವುದು ಅಗತ್ಯ (ಅಡುಸೌ. ೭೦) ; ಪ್ರಾಯಸ್ಥನಾದರೂ ಪ್ರಾಚೀನ ಬಿಡಲಿಲ್ಲ (ಗಾಡ). [ಸಂ.]

ಪ್ರಾಯಸ್ಥೆ (ನಾ). ವಯಸ್ಸಿಗೆ ಬಂದವಳು ; ತರುಣಿ : (ಕ). [ಪ್ರಾಯಸ್ಥ + —ಎ$_2$]

ಪ್ರಾಯಿಕ (ನಾ). ಸಾಮಾನ್ಯವಾದುದು: ನಾಮಪದಗಳೇ ಮುಂತಾದುವಲ್ಲಿ . . . ವ್ಯಂಜಕತ್ವವಿರುವುದನ್ನು ಮಹಾಕವಿಗಳ ಪ್ರಬಂಧಗಳಲ್ಲಿ ಪ್ರಾಯಿಕವಾಗಿ ನೋಡಬಹುದು (ರ್ವಸ್ಯಾಲೋ. ೦೫೬) ; ಹಿಂದಿನ ಸಾಹಿತಿಗಳು ಬಾಯಿಮಾತಿನಲ್ಲಾಗಲಿ, ಬರವಣಿಗೆಯಲ್ಲಾಗಲಿ ಪ್ರಾಯಿಕವಾಗಿ ನನಗೆ ಪ್ರೋತ್ಸಾಹ ಕೊಡಲಿಲ್ಲ (ಪಿಬಂಧ. II, ೪). [ಸಂ.]

ಪ್ರಾಯೋಗಿಕ (ಗು). ೧. ಪರೀಕ್ಷೆಯ ಮೂಲಕ ಮಾಡಿ ತೋರಿಸುವ ; ಪ್ರಯೋಗದ ಮೂಲಕ ಸಿದ್ಧಪಡಿಸುವ : ಫ್ಯಾರಡೆ ಅತ್ಯುತ್ತಮ ವರ್ಗದ ಪ್ರಾಯೋಗಿಕ ವಿಜ್ಞಾನಿ (ವಿಕಾಸ. XV, ಪವಿಜಾಕೆದರ್ಶಣ). (ನಾ). ೨. ಪ್ರಯೋಗದಿಂದ ಕೂಡಿರುವುದು : ವಿಷಯಗಳನ್ನು ಪ್ರಾಯೋಗಿಕವಾಗಿ ಉಪಯೋಗಿಸಿಕೊಳ್ಳುವ ರೀತಿ . . . ಅಲ್ಲಿರಬೇಕು (ಶಿಕ್ಷಣ. ೨೬೨). ೩. ಪ್ರಯೋಗವನ್ನು ಮಾಡಿ ತೋರಿಸುವವನು : ಶುದ್ಧವಿಜ್ಞಾನಿಗೆ ಇಷ್ಟವಿರಲಿ, ಇಲ್ಲದಿರಲಿ, ಅವನ ತಪಸಾರ್ಜಿತವಾದ ಜ್ಞಾನವನ್ನು ಪ್ರಾಯೋಗಿಕನು ಬಳಸಿಕೊಳ್ಳದೆ ವಿಧಿಯಿಲ್ಲ (ಶಿಲ್ಪಾ. ೬೨). ೪. [ಜೈನ] ಅಭಾಷಾತ್ಮಕವಾದ ಶಬ್ದಬೇಧ, ಪ್ರಯೋಗಜನ್ಮವಾದ ವೀಣಾದಿಗಳ ತತಶಬ್ದ, ಡೋಲು ಮೊದಲಾದುವುಗಳ ವಿತತಶಬ್ದ, ತಾಳ ಮೊದಲಾದುವುಗಳ ಘನಶಬ್ದ ಮತ್ತು ಕೊಳಲು ಮೊದಲಾದುವುಗಳ ಸುಶಿರಶಬ್ದ : ಶಬ್ದವು ಪ್ರಾಯೋಗಿಕ, ವೈಸ್ರಸಿಕ (ಸ್ವಾಭಾವಿಕ) ಎಂದು ಎರಡು ವಿಧವಾಗಿದೆ (ಶೈಪಧ. ೫೬). [ಸಂ.]

ಪ್ರಾಯೋಗಿಕವಿಮರ್ಶೆ (ನಾ). ವಿಮರ್ಶೆಯಲ್ಲಿ ಕಾವ್ಯಾರ್ಥವಿಶ್ಲೇಷಣೆಯನ್ನು ಅನುಸರಿಸಿ ರಚಿಸಿರುವ ಪ್ರಯೋಗಾತ್ಮಕ ಬರಹ ; ೯ ಇದು ಇಂಗ್ಲಿಷಿನ 'practical criticism' ಎಂಬುದರ ಅನುವಾದ : ನಮ್ಮ ಕಾವ್ಯಮೀಮಾಂಸೆಯ ಕೂಲಂಕಷವಾದ ಪರಿಜ್ಞಾನವನ್ನು ಪಡೆದು ಅದರ ಬೆಳಕಿನಲ್ಲಿ ಪ್ರಾಯೋಗಿಕವಿಮರ್ಶೆಯನ್ನು ಬೆಳೆಸಬೇಕು (ಬಂಕಿಮ. IX, ಮುಮ್ಮುಡಿ). [ಸಂ. ಪ್ರಾಯೋಗಿಕ ವಿಮರ್ಶ]

ಪ್ರಾಯೋಗ್ಯತಾಲಬ್ಧಿ (ನಾ). [ಜೈನ] ಕಾಲಲಬ್ಧಿ, ಕರಣಲಬ್ಧಿ, ಉಪಶಮಲಬ್ಧಿ, ಕ್ಷಯೋಪಶಮಲಬ್ಧಿ ಮತ್ತು ಪ್ರಾಯೋಗ್ಯತಾಲಬ್ಧಿಗಳೆಂಬ ಐದು ಬಗೆಯ ಲಬ್ಧಿಗಳಲ್ಲಿ ಒಂದು ; ಕರ್ಮವು ಕ್ರಮ ಕ್ರಮವಾಗಿ ಕಡಮೆಯಾಗುವ ಪ್ರಾಪ್ತಿ : ಕಾಲಲಬ್ಧಿ ಕರಣಲಬ್ಧಿ ಉಪಶಮಲಬ್ಧಿ ಕ್ಷಯೋಪಶಮಲಬ್ಧಿ ಪ್ರಾಯೋಗ್ಯತಾಲಬ್ಧಿಯೆಂಬ ಲಬ್ಧಿಪಂಚಕಮುಮಂ (ಸುಕುಮಾ. ೩-೩೯ ಪ); ಭವ್ಯಾಭವ್ಯಸಾಮಾನ್ಯಂ ಪ್ರಾಯೋಗ್ಯತಾಲಬ್ಧಿಯಕ್ಕುಂ (ತತ್ತ್ವಪ್ರ. ೮೦). [ಸಂ.]

ಪ್ರಾಯೋಜಿತ (ಗು). ಯಾವುದಾದರೂ ಒಂದು ಕೆಲಸದ ಖರ್ಚಿನ ಜವಾಬ್ದಾರಿಯನ್ನು ಹೊತ್ತಿರುವ.

ಪ್ರಾಯೋಜಿತ ಕಾರ್ಯಕ್ರಮ = (ಜಾಹಿರಾತಿನ ಪ್ರಚಾರಕ್ಕಾಗಿ) ಹಣ ಕೊಟ್ಟು ಪ್ರಚುರಪಡಿಸುವ ಕಾರ್ಯಕ್ರಮ : ಟಿ.ವಿ.ಯಲ್ಲಿ ಈಗೀಗ ಪ್ರಾಯೋಜಿತ ಕಾರ್ಯಕ್ರಮಗಳು ಚಿನ್ನಾಗಿರುತ್ತವೆ (ಕೂಡಿ). [ಸಂ.]

ಪ್ರಾಯೋಪಗಮನ (ನಾ). [ಜೈನ] ಉಪವಾಸದಿಂದ ಮರಣ ಹೊಂದುವ ವ್ರತ ; ೯ ಏಕಾಂಗಿಯಾಗಿ, ನಿರಾಹಾರಿಯಾಗಿ ನಿಶ್ಚಲನಾಗಿ ನಿಂತು ತಪಸ್ಸು ಮಾಡುವುದು : ದ್ವಾದಶವಿಧವಪ್ಪ ತಪದೊಳ್

ನೆಗಟ್ಟು ಪ್ರಾಯೋಪಗಮನದಿಂ ಸಂನ್ಯಸನಂಗೆಯ್ದು ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆ ಪೋದ . . . ಸುಕುಮಾರಸ್ವಾಮಿಯ ಕಥೆಯಂ ಪೇಳ್ವೆಂ (ಪಡ್ಮಾಕಾ. ೦-೦೦) ; ಚತುರ್ವಿಧಾರಾಧನಾಪೂರ್ವಕಂ ವಿಹಿತಪ್ರಾಯೋಪಗಮನವಿಧಾನನಾಗಿ (ಕಂದ್ರಪು. ೦೦-೨೩ ಪ). [ಸಂ.]

ಪ್ರಾಯೋಪವೇಶ (ನಾ). = ಪ್ರಾಯೋಪಗಮನ : ಮುನಿರಾಜಂ . . . ಅಳ್ಕದಾಚಾಮ್ಲವರ್ಧನಮಂ ತಪ್ಪದೆ ನೋಂತು ತಪ್ಪತ ನುವಂ ಪ್ರಾಯೋಪವೇಶಕ್ಕೆ ತಂದು (ಶಾಂತಿಪು. ೯-೬೪) ; ನಾನು ಪ್ರಾಯೋಪವೇಶ ಮಾಡಿ ಈ ಪ್ರಾಣತ್ಯಾಗಮಾಡಲು ನೀನು ಸಮ್ಮತಿಸಬೇಕು (ಪಾಳೀಸಂ. ೦೦೩). [ಸಂ.]

ಪ್ರಾರಂಭ (ನಾ). ೧. ಮೊದಲು ಮಾಡುವಿಕೆ; ಉಪಕ್ರಮ; ಆರಂಭ : ಶ್ರೀಮನ್ ಮಿನಾಕ್ಷ್ಯಧೀಶಂ . . . ಕಲಾಶಾಲಿಧೈರ್ಯಂ ಕ್ಷೇಮ ಪ್ರಾರಂಭಮಂ ಮಾಳ್ಕೆಮಗತಿದಯೆಯಿಂ (ಜಾಲಾಸ್ಯ. ೦-೦-೦) ; ಸಂಗರ ಪ್ರಾರಂಭಸಮಯತೂರ್ಯಧ್ವನಿಗೆ ವೇಗದುದ್ವೇಗದಿಂ ರೋಷದಿಂ ಘೋಷದಿಂ ಸಂಧಿಸಿತುಭಯಬಲಂ (ಸಪ್ರಾಂಗ. ೮೨-೨೨೪೭). ೨. ಕೆಲಸ ; ಕಾರ್ಯ : ಸಕಳಕ್ಷತ್ರಿಯಮೋಹದಿಂ ನಿಜಭುಜಪ್ರಾರಂಭದಿಂ ಪೋಗೆ ತಾಗಿ ಕೆಲರ್ ನೊಂದೊಡೆ (ಪಂಪಭಾ. ೧-೬೪). ೩. [ಜೈನ] ಇಪ್ಪತ್ತೈದು ಕ್ರಿಯೆಗಳಲ್ಲಿ ಒಂದು ; ಭೇದನಭೇದನಾದಿ ಕ್ರಿಯೆಗಳಲ್ಲಿ ತಾನು ಪ್ರವೃತ್ತನಾಗುವುದು ಅಥವಾ ಅನ್ಯರನ್ನು ಪ್ರವರ್ತಿಸಿ ಆನಂದಪಡುವುದು : ಪಂಚವಿಂಶತಿಕ್ರಿಯೆಗಳು ೧. ಸಮ್ಯಕ್ತ್ವಕ್ರಿಯೆ . . . ೨೧. ಪ್ರಾರಂಭ (ಸ್ವಕೃತ – ಪರಕೃತಭೇದನ ಭೇದನಗಳಲ್ಲಿ ಹರ್ಷ) (ಶೈಪಧ. ೬೪). 'ಪಂಚವಿಂಶತಿಕ್ರಿಯೆ' ಪರಾ. [ಸಂ.]

ಪ್ರಾರಂಭಿಗ (ನಾ). ಮೊದಲು ಮಾಡುವವನು ; ಆರಂಭಿಸುವವನು ; ಮೊದಲಿಗ : ಸಮಶುದ್ಧಸ್ಫುಟಮಪ್ಪುದೊಂದು ಸುತಿಯಂ ಪ್ರಾರಂಭಿಗಂ ಮಾಡೆ (ಶಾಂತಿಪು. ೦೦-೩೫). [ಪ್ರಾರಂಭ + — ಇಗ]

ಪ್ರಾರಂಭಿಸು (ಕ್ರಿ). ಮೊದಲು ಮಾಡು ; ಆರಂಭಿಸು : ವಿದ್ಯುಚ್ಛಕ್ತಿಯನ್ನು ಉರವಲಾಗಿ ಬಳಸಲು ಹೆಚ್ಚು ಹೆಚ್ಚು ಜನರು ಪ್ರಾರಂಭಿಸುತ್ತಿರುವುದರಿಂದ ಇಲ್ಲಿ ಅದರ ಕುರಿತು ಒಂದೆರಡು ಮಾತುಗಳು ಅನವಶ್ಯವಾಗಲಾರವು (ಇಡುಸೌ. ೦೬) ; ಜಾನಕಮ್ಮನವರೇ ಊಟದ ಮಧ್ಯದಲ್ಲಿ ಮಾತಿಗೆ ಪ್ರಾರಂಭಿಸಿದರು (ಮೂಲಾಪ. ೦೫೬). [ಪ್ರಾರಂಭ + — ಇಸು$_3$]

ಪ್ರಾರಂಭೋತ್ಸವ (ನಾ). (ಸಂಘ, ಸಂಸ್ಥೆ ಮೊದಲಾದುವುಗಳನ್ನು ವಿಧ್ಯುಕ್ತವಾಗಿ) ಆರಂಭಿಸುವಾಗ ನಡೆಸುವ ಸಮಾರಂಭ ; ಆರಂಭೋತ್ಸವ : ದೇವಯ್ಯಗೌಡರ ಮತಾಂತರವನ್ನು . . . ಮೇಗರವಳ್ಳಿಯ ಮಿಷನ್‌ಸ್ಕೂಲಿನ ಪ್ರಾರಂಭೋತ್ಸವ ನಡೆಸಲು ಬಂದಾಗ ತಾವೆ ಖುದ್ದಾಗಿ ನಡೆಸಿಕೊಡುತ್ತಾರೆ (ಮಲೆನ. ೬೨) ; ಸರಕಾರಿಸ್ಕೂಲಿನ ಪ್ರಾರಂಭೋತ್ಸವಕ್ಕೆ ತಾವೇ ದಯಮಾಡಿಸಬೇಕು (ರಗಂಳ. ೨೩೬). [ಸಂ.]

ಪ್ರಾರಬುದ (ನಾ). ಹಿಂದೆ ಮಾಡಿದ ಕರ್ಮ : ಸ್ತುತ್ಯನಹುದೆಂದಾಡಿ ಪ್ರಾರಬುದಿದೇನೆನಗೆ ಹತ್ತಿಕೊಂಡುದು ಜೀಯ ವಿವರಿಸು (ಪರಶು. ೦೪-೩೪). [< ಸಂ. ಪ್ರಾರಬ್ಧ]

ಪ್ರಾರಬ್ಧ (ಗು). ೧. ಮೊದಲು ಮಾಡಿದ ; ಆರಂಭಿಸಿದ. (ನಾ). ೨. ಹಿಂದೆ ಮಾಡಿದ ಪಾಪದ ಫಲ ; ಕರ್ಮ ; ವಿಧಿ : ಪ್ರಾರಬ್ಧ ಪ್ರಯತ್ನಗಳ ತಾರತಮ್ಯವನಿಲ್ಲಿ ಹೇಳಿಹೆ ಕೇಳಿರಯ್ಯಾ ಪ್ರಯತ್ನದ ಹೆಚ್ಚು ಕುಂದಿನಂತೆ ಇಂದಾಗಲಿ ಮುಂದಾಗಲಿ ಪ್ರಾರಬ್ಧವು ಫಲಪದವನೀವುದು (ಪನ್ನವ.ಳ. ೪೫-೧೦೬) ; ಊರು ಬಿಟ್ಟು ಬೇಱೂರಿಗೆ ಹೋದರೆ ಪ್ರಾರಬ್ಧವು ಬೇಱಾದೀತೆ (ಪುರಂದ. ೦-೦೫೭-೦) ; ತನ್ನ ಪಿತೃಗಳು ನರಕದಲ್ಲಿರುವುದನ್ನು ತಿಳಿದು ಉದ್ದಾಲಕನು ಪ್ರಾರಬ್ಧವನ್ನು ಬರೆದಂತೆ ವಿಧಿಯನ್ನೇ ಕೇಳುವೆನೆಂದು ಬ್ರಹ್ಮನ ಬಳಿಗೆ ಹೋದನು (ಕರ್ಪಾಕ. ೨೬೫). ೩. (ಆಲಂ) (ಪಾಪದಂತೆ) ಹಿಂಬಾಲಿಸುವ ವ್ಯಕ್ತಿ : ಎಲ್ಲಿಲ್ಲದ ಪ್ರಾರಬ್ಧಗಳು ಎಂದುಕೊಂಡು ಕೊಂಚ ಬೇಗ ಪಾಠ ಮುಗಿಸಿ ಮನೆಗೆ ಹೊರಟು ನಿಂತರು (ಕಾವೇರಿ. ೦೦). [ಸಂ.]

ಪ್ರಾರಬ್ಧಕರ್ಮ (ನಾ). ಹಿಂದೆ ಮಾಡಿದ ಕರ್ಮ : ಪಂಡಿತನಾಗಲಿ ಮೂರ್ಖನಾಗಲಿ ಸಂಚಿತಕರ್ಮ ಉಂಡಲ್ಲದೆ ಬಿಡದು ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದು (ಬಸವ. ೬೭೩) ; ಪ್ರಾರಬ್ಧಕರ್ಮವದುಂಡು ತೀರುವುದು (ಗಗತಾ. ೨೨-೬೦). [ಸಂ. ಪ್ರಾರಬ್ಧಕರ್ಮನ್]

ಪ್ರಾರ್ಥನ (ನಾ). ಬೇಡಿಕೊಳ್ಳುವುದು ; ಮೊರೆಯಿಡುವುದು : 'ಪ್ರಾರ್ಥನಂಗೆಯ್' ಪರಾ. [ಸಂ.]

ಪ್ರಾರ್ಥನಂಗೆಯ್ (ಕ್ರಿ). ಬೇಡು ; ಮೊರೆಯಿಡು : ಅನಘಂ ತ್ರೈಲೋಕ್ಯಚೂಡಾಮಣಿ ವರಮಹಿಮಂ ಚಿತ್ತವೃತ್ತಿಸ್ಥಿರಾಢ್ಯಂ ಘನವೇದಾಭೇದ್ಯಚೋದ್ಯಪ್ರಭುವಿಭು ಶಿವನಂ ಪ್ರಾರ್ಥನಂಗೆಯ್ಯೆ (ಪಂಪಾಕ. ೨-೦೭). [ಪ್ರಾರ್ಥನ + ಕೆಯ್$_1$]

ಪ್ರಾರ್ಥನಾಪತ್ರ (ನಾ). ಬೇಡಿಕೆಯ ಪತ್ರ ; ಮನವಿ : ಪಂಥಾಭಿಮಾನಿಗಳ ಪ್ರಾರ್ಥನಾಪತ್ರವನ್ನು ಚಕ್ರವರ್ತಿಗೆ ನೇರವಾಗಿ ತಲುಪಿಸುವಂತೆ ನೆಕ್ಕುದೋವ್ ಅವನನ್ನು ಕೇಳಿಕೊಂಡಿದ್ದನು (ಪುಪರು. ೩೭೬). [ಸಂ.]

ಪ್ರಾರ್ಥನೆ (ನಾ). ೧. ಬೇಡುವುದು ; ಕೋರಿಕೆ : "ಅಧ್ಯೇಷಣಾ . . . ಪ್ರಾರ್ಥನಾ, ಅರ್ಥನಾ — ಈ ೬ ಬೇಡುಹ" (ಹಲಾಯು. ೫೯-೨೦೫) ; ಸಿಂಹವು ಇಲ್ಲಿಯ ಪ್ರಾರ್ಥನೆಯನ್ನು ಕೇಳಿ . . . ಪಂಜರದೊಳಗಿಂದ ಬಿಟ್ಟುಬಿಟ್ಟಿತು (ಮುಂಬಯಿ. ೪-೬೭). ೨. ಆಸೆ ; ಬಯಕೆ ; ಇಚ್ಛೆ. ೩. ದೇವರಲ್ಲಿ ಬೇಡಿಕೊಳ್ಳುವುದು ; ಭಗವಂತನಲ್ಲಿ ಮೊರೆಯಿಡುವುದು : ನಾನಾಭಾಷೆಗಳಲ್ಲಿ ಮನುಷ್ಯರು ಅವನ (ದೇವರ) ಪ್ರಾರ್ಥನೆ ಮಾಡುತ್ತಾರೆ (ಮುಂಬಯಿ. ೪-೧೪೦). ೪. ದೇವರನ್ನು ಕುರಿತ ಸ್ತುತಿಪರವಾದ ಹಾಡು ; ಸ್ತೋತ್ರ : "ಇಲಿಗಳಿಂದ ನಮ್ಮನ್ನು ರಕ್ಷಿಸಿ" ಎಂಬ ಒಂದು ಪ್ರಾರ್ಥನೆ ವೇದದಲ್ಲಿ ಇದೆಯಂತೆ (ದೇಶನ್ಯ. ೪೬) ; ಸಭೆಯು ವಿನಾಯಕನ ಪ್ರಾರ್ಥನೆಯಿಂದ ಆರಂಭವಾಯಿತು (ಕೂತಿ). [ಸಂ. ಪ್ರಾರ್ಥನಾ]

ಪ್ರಾರ್ಥಿತ (ಗು). ೧. ಬೇಡಿದ ; ಯಾಚಿಸಿದ. ೨. ಇಚ್ಛಿಸಿದ ; ಬಯಸಿದ : ಪ್ರಾರ್ಥಿತ ತ್ರಿವಿಧೈಕಭಕ್ತಿ ಸುಖಾರ್ಥಿಗಳನಾ ತ್ರಿವಿಧಭಕ್ತಿ ಸವರ್ಥಸುಖತರಶರಧಿಯಲಿ ನೆಱೆಯದ್ದಿ ನೆಱೆಯದ್ದಿ (ಬಸವು. ೬-೨೬). (ನಾ). ೩. ಬೇಡಿದುದು : ಇದೆ ಸಾರಂ ಸ್ವರ್ಗಲೋಕಕ್ಕಿದೆ ಸುರಸಮಿತಿ ಪ್ರಾರ್ಥಿತಂ (ಶಾಂತಿಪು. ೬-೨೪). [ಸಂ.]

ಪ್ರಾರ್ಥಿಸು (ಕ್ರಿ). ಬೇಡು ; ಕೇಳಿಕೊಳ್ಳು ; ಯಾಚಿಸು : ಅಸುರಾಂತಕನುಂ ತಾನುಮೆಂತಾನುಂ ಪ್ರಾರ್ಥಿಸಿದೊಡೊಡಂಬಟ್ಟಜಾತಶತ್ರುಗೆ ಪೊಡವಟ್ಟು (ಪಂಪಭಾ. ೦೨-೦೩೪ ಪ) ; ಈ ಕೋಮಳೆಯಂ ಪ್ರಾರ್ಥಿಸಿದೊಡೆ ನಿಷ್ಫಲಮಾಗದು (ಕಾದಂಪು. ೬೯೫) ; ಸುರಕ್ಷಿತವಾಗಿ ತಲುಪಲಿ ಎಂದು ದೇವರಿಗೆ ಪ್ರಾರ್ಥಿಸಿದರೆಂದು ಕಾಣುತ್ತದೆ (ಪಂಗಾಳ್ಯ. ೩೦). [ಪ್ರಾರ್ಥನ + — ಇಸು$_3$]

ಪ್ರಾಲಂಬ (ಗು). ೧. ನೇತಾಡುವ ; ಜೋಲಾಡುವ : ಪ್ರಾಲಂಬರಕ್ಷಾಪ್ರಗುಚ್ಛಸಂದೋಹದಿಂ . . . ಎಸೆದು ತೋರ್ಪಳಂ . . . ಕಂಡನುರ್ವೀಶ್ವರಂ (ಕಾದಂಉ. ೨೭೧ ರಗಳೆ). (ನಾ). ೨. ಕಂಠದಿಂದ ಎದೆಯವರೆಗೆ ಇಳಿಬಿದ್ದಿರುವ ಉದ್ದವಾದ ಹಾರ : "ಪ್ರಾಲಂಬಂ . . . ಕತ್ತಿನಿಂದ ಎದೆಯ ಮೇಲೆ ನೆಟ್ಟಗೆ ಜೋಲಾಡುವಂತೆ ಹಾಕಿಕೊಂಡ ಹುವ್ವಿನ ಹಾರ ; ಪುಷ್ಪಮಾಲಿಕೆ" (ಸಿದ್ಧಾಂತಿ. ೨೦೦). [ಸಂ.]

ಪ್ರಾಲಂಬಕ (ನಾ). = ಪ್ರಾಲಂಬ ೨ : "ಕೊರಲೊಳಿಕ್ಕಿದ ಹೂವಿನ ಮಾಲೆ ಪ್ರಾಲಂಬಕಮೆಂಬುದು" (ಹಲಾಯು. ೯೦-೪೦೦). [ಸಂ.]

ಪ್ರಾಲಂಬಿಕೆ (ನಾ). ಚಿನ್ನದ ಸರ ; ಸುವರ್ಣಹಾರ : "ಪ್ರಾಲಂಬಿಕಾ

. . . ಭಂಗಾರದಿಂದಲೆ ರಚಿಸಲ್ಪಟ್ಟ ಕಂಠಹಾರ, ಕಂಠಿಸರ, ಚಂದ್ರಹಾರ, ಗೋಧಿಸರ ಮುಂತಾದದ್ದು" (ಸಿದ್ಧಾಂತಿ. ೦೧೯). [ಸಂ. ಪ್ರಾಲಂಬಿಕಾ].

ಪ್ರಾಲೇಯ, ಪ್ರಾಳೇಯ (ನಾ). ೧. ಹಿಮ; ಮಂಜು: "ಪ್ರಾಲೇಯ ಶಿಶಿರಂ ತುಷಾರಂ ನೀಹಾರ . . . ಹಿಮಮೆನಿಕ್ಕುಂ" (ಶುಂಗರಾ. ೦೨೦-೦); ನಿಯತಪ್ರಾಲೇಯದೀಪ್ತಿದ್ಯುಮಣಿಭಗಣದೀಪೋಜ್ವಳಾಕೃತ್ರಿಮಾತ್ಮೋದಯಮಪ್ಪಾಕಾಶಮೆಂಬಾಗಸವಳಿಕನನಂತೈಕಸಂಶುದ್ಧಸಿದ್ಧಾಲಯದೊಳ್ ಸಾಮರ್ಥ್ಯದಿಂ ಮುಟ್ಟದೆ ನತಭುವನರ್ಸಿದ್ಧರೇಱಿರ್ದ ಪೀಠತ್ರಯಮೆಂಬಂತಿರ್ಪುದು (ಅರ್ಧನೇ. ೦-೩೩); ಪ್ರಾಲೇಯಂ ಬಯಲಾಗೆ ದೈತ್ಯಪರಿವೃಢನು ಕುಲಶೈಲಗಳೊಳಿಡಲು (ಪ್ರಶುಪು. ೬-೩೨). ೨. ಪಚ್ಚ ಕರ್ಪೂರ: "ಪ್ರಾಲೇಯಮೆನಲು ಘನಸಾರಮೆನೆ ಪಚ್ಚೆ" (ಶುಂಗರಾ. ೯೯-೨೨). ಪ್ರಾಳೇಯ: ೧. "ಪ್ರಾಳೇಯಂ . . . ನೀಹಾರಃ—ಈ ೮ ಮಂಜು" (ಪಲಾಯು. ೦೦೭-೨೬). [ಸಂ.]

ಪ್ರಾಲೇಯಕರ (ನಾ). ೧. ತಂಪಾದ ಕಿರಣಗಳುಳ್ಳವನು: ಚಂದ್ರ; ಶೀತಕರ: ಎರಳೆ ಮೊಲ ಮತ್ತಾಲವೆಂದು ಪ್ರಾಲೇಯಕರನುರದೊಳೊಪ್ಪುವ ಕಳಂಗಕ್ಕೆ ಪೆಸರಿಡುವರು (ರಾಘಶ. ೭-೦೯); ಪೂರ್ಣಪ್ರಾಲೇಯಕರಬಿಂಬಸಮವಕ್ತ್ರಮುಡಲನೀಲಾಲಕಂ (ಕುಮಾಪು. ೦-೬೪). ೨. ಕರ್ಪೂರ. [ಸಂ.]

ಪ್ರಾಲೇಯಾಂಶು (ನಾ). ೧. ಚಂದ್ರ: ಪ್ರಾಲೇಯಾಂಶುವಿಭೂಷಿತಂ (ಕಾದಂಪೂ. ೨೮೩); ಕಾಲವ್ಯಾಲೇಭಪಂಚಾನನ . . . ಚಿಂತಾರಹಿತ ಚಿದಮಿತಾನಂದ ನಿರ್ದ್ವಂದ್ವ ಪೂರ್ಣಪ್ರಾಲೇಯಾಂಶುಪ್ರಭಾಪ್ರಸ್ಫುರಿತನುತಯಶೋಭಾಸಿ ಮಾದಾರ್ಯವರ್ಯಾ (ಪ್ರಶಸ. ೩೨-೫೮). ೨. ಕರ್ಪೂರ. [ಸಂ.]

ಪ್ರಾಲೇಯಾದ್ರಿ (ನಾ). ಹಿಮದಿಂದ ಕೂಡಿರುವ ಪರ್ವತ; ಹಿಮಾಚಲ: ಪ್ರಾಲೇಯಾದ್ರಿನವಪ್ರಸೂನಭಿದುರಂ ಗಂಗಾಸರಿಲ್ಲೋಲ . . . ಮಾರುತಂ (ಕಾಪ್ಯಾಪ. ೯೪೭). [ಸಂ.]

ಪ್ರಾವರಣ (ನಾ). ಹೊದೆಯುವ ವಸ್ತ್ರ; ಉತ್ತರೀಯ: "ಪ್ರಾವರಣಂ . . . ಉತ್ತರೀಯಂ — ಈ ೪ ಮೇಲುದು" (ಪಲಾಯು. ೯೦-೩೯೨); ಕ್ಷೌಮದುಕೂಲಾದಿ ದಿವ್ಯವಸನವಿವಿಧಪ್ರಾವರಣವಿಶೇಷಂಗಳುಂ (ಅದಿಪು. ೦೩-೩ ಪ); ಗಾಂಡೀವಿ ಮುಕ್ತಕಳಂಬಕಂಡಪ್ರಾವರಣದಲಿ ಮುಸುಕಿದನು ಗುರುನಂದನನ ರಥವ (ಕುಪ್ಯಾಕ. ೦೪-೦೬). [ಸಂ.]

ಪ್ರಾವರಣಾಂಶುಕ (ನಾ). = ಪ್ರಾವರಣ: ಬೈತಿಟ್ಟು ಕಾಪಿಟ್ಟನೋ ನೀಳಪ್ರಾವರಣಾಂಶುಕಾಂತರದೊಳಂಭೋಜೋದ್ಭವಂ ನನ್ನಿಯೆಂಬಾಳಾಪಕ್ಕೆಡೆಯಾಗಿ ಮೂಜಗಮದೇನೊಪ್ಪಿತ್ತೊ ಪೆರ್ಮರ್ಬಿನಿಂ (ಪಕವಿ. ೬-೦೨). [ಸಂ.]

ಪ್ರಾವಾರ (ನಾ). = ಪ್ರಾವರಣ: "ಪ್ರಾವಾರಃ . . . ಉತ್ತರೀಯಂ — ೫ ಉತ್ತರೀಯದ ಹೆಸರು. ಮೈ ಮೇಲೆ ಹೊದ್ದಿರುವ ವಸ್ತ್ರ" (ಸಿದ್ಧಾಂತಿ. ೨೦೪). [ಸಂ.]

ಪ್ರಾವಿಡೆಂಟ್‌ಫಂಡು (ನಾ). ಭವಿಷ್ಯಕ್ಷೇಮನಿಧಿ; ಭವಿಷ್ಯನಿಧಿ: ವಿಮೆ ಕಂಪನಿಗಳೂ ಪ್ರಾವಿಡೆಂಟ್‌ಫಂಡು ಏರ್ಪಾಡೂ ಹೀಗೆಯೇ ಸರಕಾರಿ ಅಥವಾ ಸಹಕಾರಿ ಆಡಳಿತದಲ್ಲಿರಬಹುದು (ಪಡಪ್ರ. ೦೪೬).

[← ಇಂ. Provident fund]

ಪ್ರಾವಿರ್ಭೂತ (ನಾ). ಕಾಣಿಸಿಕೊಂಡವನು; ಆವಿರ್ಭೂತನಾದವನು: ದ್ವಾವಿಂಶತಿಪಾರಾವಾರಾವಧಿಗೆಟೆದುಯ್ವ ನಾರಣಾಚ್ಯುತಕಲ್ಪಪ್ರಾವಿರ್ಭೂತರನೆಂದಂದಾವೆಡೆಯುಂ ಜವನ ಧಾಟಿ ಮುಟ್ಟದುದುಂಟೇ (ಮಲ್ಲಿಪು. ೦೩-೦೦೭). [ಸಂ.]

ಪ್ರಾವೀಣ್ಯ (ನಾ). ಜಾಣ್ಮೆ; ಪ್ರವೀಣತೆ: ನೃಪಸೇವನಾಪ್ರಹಸನ ಪ್ರಾವೀಣ್ಯಮುಂ ಬುದ್ಧಿವರ್ಧನಮುಂ ಮಾಸರಮಕ್ಕುಮೈಂದವದಶೋಕ್ತಾರೋಹಗೇಹಂಗಳೊಳ್ (ಶಾಕಶಿ. ೯-೨೩); ಆಯಾ ವಿಷಯದಲ್ಲಿ ಪ್ರಾವೀಣ್ಯ ಪಡೆದಿರುವ ಉಪಾಧ್ಯಾಯರು ಮಾರ್ಗದರ್ಶನ ಮಾಡಲು ಕಾದಿರುತ್ತಾರೆ (ಶಿಕ್ಷದ. ೬೯೬). [ಸಂ.]

ಪ್ರಾವೀಣ್ಯತೆ (ನಾ). = ಪ್ರಾವೀಣ್ಯ: ವಧುವಿದ್ಯಾಸಂಪನ್ನರೂ ಲಲಿತಕಲೆಗಳಲ್ಲಿ ಪ್ರಾವೀಣ್ಯತೆ ಪಡೆದವರೂ ಎಂದು ಕೇಳಿರುವ ನಮಗೆ ನಿಮ್ಮಲ್ಲಿ ಒಂದು ಬೇಡಿಕೆಯಿದೆ (ಹೇಮಂತ. ೪೪೯). [ಪ್ರಾವೀಣ್ಯ + —ತೆ]

ಪ್ರಾವೃಟ (ನಾ). ಒಂದು ಬಗೆಯ ಸಸ್ಯ: "ಪ್ರಾವೃ(ಷ)ಟಃ—ಕಡವ" (ಓಷಧಿ. ೯೬). [ಸಂ.]

ಪ್ರಾವೃಟ್ಕಾಲ (ನಾ). ಮಳೆಗಾಲ; ಕಾರ್ಗಾಲ: ಪ್ರಾವೃಟ್ಕಾಲದೊಳಡಸಿ ಮಹಾವರ್ತದ ಮಟಿಗಳೋಘಮೇಘಂ ಕೊಳೆ (ಅಪಪು. ೦೨-೨). [ಸಂ.]

ಪ್ರಾವೃತ (ಗು). ೧. ಬಳಸಿದ; ಸುತ್ತುವರಿದ: ಎನಗೆ ವಿದ್ಯಾಕಾಂಕ್ಷೆಯೆತ್ತೊಂದಿದ ಜ್ಞಾನಪ್ರಾವೃತಮಾಯೆಯಿಂದೆ ತಪಮಂ ಕೈಕೊಳ್ವುದೆತ್ತ (ಸುಕಮಾ. ೩-೪೨); ಖಟ್ಗಿನಿಕಾಯಪ್ರಾವೃತೋದ್ಯನ್ಮಣಿಮಯಶಿಬಿಕಾರೂಢೆ ಮಾದೇವಿಯಲ್ತೆ (ಕಂದ್ರಪು. ೬-೯೬). (ನಾ). ೨. ಹೊದೆಯುವ ಬಟ್ಟೆ.—ವಸ್ತ್ರ: "ನಿವೀತಂ, ಪ್ರಾವೃತಂ—ಹೊದಿಯುವ [ಬಟ್ಟೆ, ಅಂಗವಸ್ತ್ರ" (ಸಿದ್ಧಾಂತಿ. ೨೦೩). ೩. [ನಾಟ್ಯ] ದೇಶೀಯ ಆಕಾಶಚಾರಿಗಳಲ್ಲಿ ಒಂದು ಬಗೆ; ೫ "ಪಾದವನ್ನು ಮುಂದುವರಿಸಿ [ಸಂಕುಚಿಸಿ] ಮನೋಹರವಾಗಿ ಮೇಲಕ್ಕೆ ಎತ್ತುವುದು" (ಶಾಸ್ತ್ರರಂ. ೩೨೫ ಗದ್ಯಾಪುವಾದ); ಮಿಗೆ ವೇಷ್ಟನಮುದ್ವೇಷ್ಟಂ ನೆಗಳ್ದೆಸೆವುತ್ಕ್ಷೇಪಮೊಸೆವ ಪೃಷ್ಠೋತ್ಕ್ಷೇಪಂ ಬಗೆವಡೆದ ಸೂಚಿವಿದ್ಧಂ ನಗೆಮೊಗದೊಳೆ ಪ್ರಾವೃತಾಖ್ಯಮುಲ್ಲೋಲಮಿವುಂ (ಶಾಸ್ತ್ರರಂ. ೬-೦೬). [ಸಂ.]

ಪ್ರಾವೃಷ (ನಾ). ೧. ಮಳೆಗಾಲ; ಕಾರ್ಗಾಲ: ಅನುರಾಗಾಂತಂ ವಸಂತಪ್ರಿಯನ ವಿರಹದೊಳ್ ಗ್ರೀಷ್ಮತಾಪಜ್ವರಂ ಮೇದಿನಿಗಾದಂ ಪುಟ್ಟಿ ಮೇಲೇಂ ತಳೆದುದೊ ಮಟಿಯಂ ಪ್ರಾವೃಷಂ (ಅರ್ಧನೇ. ೩-೦೦೨). ೨. ಒಂದು ಬಗೆಯ ಮರ; ಅರಳಿ: "ಪ್ರಾವೃಷಃ—ಅರಳಿ" (ಓಷಧಿ. ೯೭). [ಸಂ.]

ಪ್ರಾವೃಷೇಣ್ಯ (ಗು). ಮಳೆಗಾಲಕ್ಕೆ ಸಂಬಂಧಿಸಿದ; ಮಳೆಗಾಲದ: ಚಾಮೀಕರಕಳಶಮೆ ಕುರುಭೂಮಿಗೆ ತಾಂ ನೇಲೆ ಮಾಡಮಂ ಬಳಸಿ ನಭಶ್ಯಾಮಂ ನಂದನವನಮಭಿರಾಮ ಘನಪ್ರಾವೃಷೇಣ್ಯಪಟಲಮನಿಟಿಕುಂ (ಶಾಂತಿಪು. ೯-೦೪೦.) [ಸಂ.]

ಪ್ರಾವೃಷ್ಯ (ನಾ). ೧. ಒಂದು ಬಗೆಯ ಮರ; ಕೊಡಸಿಗೆ. ೨. ಒಂದು ಬಗೆಯ ಮರ; ಕದಂಬವೃಕ್ಷ: "ಪಾವೃಷ್ಯಃ — ವಿಟಂಕ, ಕಡವ, ಕೊಡಸಿಗ" (ಓಷಧಿ. ೯೭). ೩. ಒಂದು ಬಗೆಯ ರತ್ನ; ವೈಡೂರ್ಯ: "ಪ್ರಾವೃಷ್ಯಂ—ವೈಢೂರ್ಯ" (ಓಷಧಿ. ೯೬). [ಸಂ.]

ಪ್ರಾಶನ (ನಾ). ೧. ರುಚಿ ನೋಡುವುದು; ಸೇವಿಸುವುದು: ಬಸಿದು ನೆತ್ತರ ಕಾಸು ಖಂಡಗಳ ಕೊಯ್ದು ಶೋಧಿಸುತಲಾ ಪ್ರೌಢಾಸನ ಪ್ರಾಶನಗಳ ಮಾಡಿಸು ಪಾರ್ವತಿಗೆ (ವೀಶೈಪು. ೩-೩-೯); ಘಾಟುನೀರನ್ನು ತೀರ್ಥದಂತೆ ಪ್ರಾಶನ ಮಾಡಿದೆ (ನಂಟರು. ೩೬). ೨. ತಿನ್ನುವಂತೆ ಮಾಡುವುದು; ತಿನ್ನಿಸುವುದು: 'ಅನ್ನಪ್ರಾಶನ' ಪರಾ. ೩. ಆಹಾರ. [ಸಂ.]

ಪ್ರಾಶಸ್ತ್ಯ (ನಾ). ೧. ಸರ್ವೋತ್ಕೃಷ್ಟವಾಗಿರುವಿಕೆ; ಶ್ರೇಷ್ಠವಾಗಿರುವಿಕೆ: ಪ್ರಾಧಾನ್ಯ: ಅಂತೇ ಶೈಕ್ಷಣಕಕ್ಷೇತ್ರಕ್ಕೆ ಇಲ್ಲಿ ಪ್ರಾಶಸ್ತ್ಯವಿದೆ (ಸಮಜೀ. ೦೨ ಪೀಠಿಕೆ); ಸೂರ್ಯನು ಕೃತ್ತಿಕಾನಕ್ಷತ್ರದಲ್ಲಿದ್ದಾಗ ವಸಂತಕಾಲ ಆಗ ಆರಂಭವಾಗುತ್ತಿದ್ದುದರಿಂದ ಕೃತ್ತಿಕಾನಕ್ಷತ್ರಕ್ಕೆ ಅಷ್ಟೊಂದು ಪ್ರಾಶಸ್ತ್ಯ ಬಂದಿತ್ತು (ನಕ್ಷತ್ರ. ೯). ೨. ಕೀರ್ತಿ; ಪ್ರಸಿದ್ಧಿ. [ಸಂ.]

ಪ್ರಾಶಿತ (ಗು). ೧. ತಿಂದ ; ಸೇವಿಸಿದ. (ನಾ). ೨. ತಿನ್ನುವಿಕೆ. ೩. ಪಿತೃಗಳಿಗೆ ನೀಡುವ ತರ್ಪಣ, ಪಿಂಡ ಮುಂತಾದುವು. [ಸಂ.]

ಪ್ರಾಶ್ನಿಕ (ಗು). ೧. ಪ್ರಶ್ನೆಗಳಿಂದ ಕೂಡಿರುವ. (ನಾ). ೨. ಪ್ರಶ್ನಿಸುವವನು ; ಪರೀಕ್ಷಿಸುವವನು : ಸಭಾಪತಿಯಾಗಿರ್ದ ಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ (ಅಂಪು. ೨-೦೦ ಪ) ; ಆತನುಂ ಪ್ರಾಶ್ನಿಕರಾಗಿರ್ದ ವಿಶ್ವಾವಸು ತುಂಬುರ ನಾರದರ್ಕಳನ್ನರಪ್ಪ ಗಂಧರ್ವನಿಪುಣಾಚಾರ್ಯರೆಲ್ಲಮೊಂದೆ ಸರದೊಳ್ ಪೊಗಟ್ (ಬಂಹಂ. ೨-೩೨ ಪ). ೩. ನ್ಯಾಯವನ್ನು ನಿರ್ಣಯಿಸುವವನು ; ತೀರ್ಪುಗಾರ. [ಸಂ.]

ಪ್ರಾಶ್ಯ (ಗು). ೧. ತಿನ್ನುವ ; ಸೇವಿಸುವ. (ನಾ). ೨. ಆಹಾರ. [ಸಂ.]

ಪ್ರಾಸ (ನಾ). ೧. ಎಸೆಯುವುದು ; ಎಸೆತ. ೨. ಒಂದು ಬಗೆಯ ಆಯುಧ ; ಕೊಂತ : "ಪ್ರಾಸಃ, ಕುಂತಃ—ಈ ೨ ಕುಂತಂ" (ಹಲಾಯು. ೬೮-೩೨೦) ; ಉದ್ವೀಚಿಮರುಮರೀಚಿನಿಚಯಚಂಚಲೋದ್ದಾಮಬಲಬಹುಲನಿಷ್ಕವಚಪ್ರಾಸಪಾಣಿ . . . ಅಸಿತಭುಜಗಶಿಶುತರಳತರವಾರಿಖಡ್ಗಖೇಟಕವ್ಯಗ್ರಕರದ್ವಯೋದ್ದಾಮಪದಾತಿಬಹಳಮಿದು ಲಾಟಬಲಂ (ಅಂಪು. ೦೩-೪೫ ಪ) ; ಪ್ರಾಸ ಪಟ್ಟಸ ಪರಿಘ ಬಾಣ ಶರಾಸನಾದಿ ಸಮಸಶಸ್ತ್ರವಿಲಾಸ ವಿಭವದಲೇಜಿದನು ರಣವಾದ್ಯರಭಸದಲಿ (ಕೊರಂಗ. ೬-೨೯-೨೨). ೩. [ಛಂದ] ಪದ್ಯದ ನಿಯತಸ್ಥಳಗಳಲ್ಲಿ ಬರುವ ನಿಯತಾಕ್ಷರ ; P ಪದ್ಯದ ಪ್ರತಿ ಪಾದದ ಆದಿಯಲ್ಲಿ ಮೊದಲ ಎರಡು ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರುವುದು. ಇದು ಹರಿ, ಕರಿ, ವೃಷಭ, ತುರಗ, ಶರಭ ಮತ್ತು ಅಜ ಎಂದು ಆರು ವಿಧ : ನುತಶಬ್ದಾಲಂಕಾರದೊಳತಿಶಯಮಿಾ ಕನ್ನಡಕ್ಕೆ ಸತತಂ ಪ್ರಾಸಂ (ಕವಿರಾ. ೨-೩೦) ; ಪ್ರಾಸವಿಲ್ಲದ ಪದವ ಶಾಸು ಹಾಡಿದರೇನು (ಸರ್ವಜ್ಞ. ೦೨೦೯) ; ಪ್ರಾಸದ ದೃಷ್ಟಿಯಿಂದ ಕನ್ನಡಛಂದಕ್ಕೆ ವೈಶಿಷ್ಟ್ಯ ಉಂಟೇ ಉಂಟು (ಛಂದೋಪಿ. ೬೦). 'ಅನುಪ್ರಾಸ' ಪರಾ. [ಸಂ.]

ಪ್ರಾಸಂಗ (ನಾ). ಎರಡು ಎತ್ತುಗಳನ್ನು ಆರಿಗೆ ಹೂಡುವ ನೊಗ : "ಪ್ರಾಸಂಗಃ . . . ಕಲೆಯಾರ ನೊಗ" (ನಿದ್ಧಾಂತಿ. ೨೫೪). [ಸಂ.]

ಪ್ರಾಸಂಗಿಕ (ಗು). ೧. ಸನ್ನಿವೇಶಕ್ಕೆ ಸಂಬಂಧಿಸಿದ. (ನಾ). ೨. ಸನ್ನಿವೇಶಕ್ಕೆ ಸಂಬಂಧಿಸಿದುದು ; ಪ್ರಸಂಗಕ್ಕೆ ಹೊಂದಿರುವಂತಹುದು : ಜೀವನದ ಅತ್ಯಂತ ಮೂಲಭೂತವಾದ . . . ವಿಷಯಗಳನ್ನು ತೀರ ಪ್ರಾಸಂಗಿಕವೆನ್ನಬಹುದಾದ ಮಾತುಕತೆಗಳಲ್ಲಿ, ಘಟನೆಗಳಲ್ಲಿ ನಿರೂಪಿಸಲಾಗಿದೆ (ಕೂಪಕ್ಷಿ. ೨೫೬). ೩. [ಕಾವ್ಯಮೀ] ನಾಟಕದ ಕಥೆಯಲ್ಲಿರುವ ಎರಡು ವಿಧಗಳಲ್ಲಿ ಒಂದು ; ಸಂದರ್ಭಕ್ಕೆ ಹೊಂದಿಕೊಂಡಂತೆ ಸೇರಿ ಬರುವ ಉಪಕಥೆ : ಪ್ರಾಸಂಗಿಕವೆಂದರೆ, ಮುಖ್ಯಕಥೆಗೆ ಅಂಗವಾಗಿ ಮಧ್ಯೆ ಬರತಕ್ಕ ಕಥೆ (ಕೃಬಿಡಿ. ೨೦೫).

ಪ್ರಾಸಂಗಿಕವಾಗಿ = (ಮಾತುಕತೆಯಾಗುತ್ತಿರುವ) ವಿಷಯಕ್ಕೆ ಸಂಬಂಧಿಸಿದಂತೆ ; ಸಾಂದರ್ಭಿಕವಾಗಿ : ಅರ್ಥವ್ಯಂಜಕತ್ವ ಪ್ರಾಸಂಗಿಕವಾಗಿ ಅಲ್ಲಿ ಬರುತ್ತದೆ (ಧ್ವನ್ಯಾಲೋ. ೦೦೬) ; ಪಾಠದಲ್ಲಿ ಕಲಿಯುವ ಅಂಶಗಳನ್ನೇ ಅಲ್ಲದೆ ಕಲಿಯುವ ಉತ್ತಮಕ್ರಮವನ್ನೂ ಪ್ರಾಸಂಗಿಕವಾಗಿ ಮಕ್ಕಳಲ್ಲಿ ಬೆಳಸಬೇಕು (ಶಿಕ್ಷದ. ೪೪೭). [ಸಂ.]

ಪ್ರಾಸಂಗ್ಯ (ನಾ). ನೊಗ ಕಟ್ಟಿ ಪಳಗಿಸಬೇಕಾದ ಎತ್ತು : "ಯುಗ್ಯಃ, ಪ್ರಾಸಂಗ್ಯಃ, ಶಾಕಟಃ— ಈ ೩ . . . ನೊಗವನ್ನು ಹೊರುವ ಎತ್ತು" (ನಿದ್ಧಾಂತಿ. ೨೪೩). [ಸಂ.]

ಪ್ರಾಸಕ (ನಾ). ೧. ಈಟಿಯಂತೆ ಚೂಪಾದ ತುದಿಯುಳ್ಳ ಒಂದು ಬಗೆಯ ಸಾಧನ ; P ಮಾಂಸವನ್ನು ಈ ಸಾಧನದಲ್ಲಿ ಚುಚ್ಚಿ ಬೆಂಕಿಯಲ್ಲಿ ಬೇಯಿಸುವ ಕ್ರಮ ಈಗಲೂ ಇದೆ. ೨. ಈಟಿ. ೩. (ಕೆಂಡದ ಮೇಲಿಟ್ಟು) ಬೇಯಿಸಿದುದು : ಪ್ರಾಸ[ಪಾಠಾಂ. ಸು]ಕವ ಮಾಡಿ ಬದನೆಯ ಕಾಯ್ಗಳಂ ಕಿವುಚಿ ಸಾಸುವೆಯನಿಕ್ಕಿ ಸಮತಳಗೊಡುವುದೊಂದು ತೆಱ ಸೂಸಲಂ ತಳಿದು ವೊಗ್ಗರಣೆಯಂ ಮಾಡುವು[ದ]ದೊಂದು ತೆಱ (ಸೂಪಶಾ. ೪-೨೬). ೪. ಬೇಯಿಸಿದ ತಿನಿಸು : ಸಂಡಿಗೆ ಸಂಭಾರಗಡಲೆ ಪ್ರಾಸಕ ಕುಕ್ಕುಟಾಂಡವನವಲಕ್ಕಿಗಳನು ದುಂಡರಳ್ಗಡಲೆ ಭಕ್ಷ್ಯಗಳ ಬಡ್ಡಿಸಿಕೊಳುತುಂಡರು ನೆಱ ಸೊಕ್ಕುವನಕ (ಪೋಹತ. ೦೮-೬೭). [ಸಂ.]

ಪ್ರಾಸಾಕ್ಷರ (ನಾ). [ಛಂದ] ಪ್ರಾಸವಾಗಿ ಬರುವ ಅಕ್ಷರ : ಒಂದೇ ಪಾದದಲ್ಲಿಯಾಗಲಿ, ಅನೇಕ ಪಾದಗಳಲ್ಲಿಯಾಗಲಿ ; ಪಾದದ ಆದಿ ಮಧ್ಯಗಳಲ್ಲಿಯಾಗಲಿ, ಮಧ್ಯಾಂತಗಳಲ್ಲಿಯಾಗಲಿ, ಆದ್ಯಂತಗಳಲ್ಲಿಯಾಗಲೀ ; ಪ್ರಾಸಾಕ್ಷರವು ಒಂದೇ ಆಗಲಿ, ಅನೇಕವಾಗಲಿ-ಈ ರೀತಿ ಯಥೇಷ್ಟವಾಗಿರುವುದು (ಕೃಬಿಡಿ. ೯೭) ; ಕನ್ನಡಜಾನಪದಕವಿವರನಾದ ಸರ್ವಜ್ಞನು ಪ್ರಾಸಾಕ್ಷರಕ್ಕೆ ಕೊಟ್ಟಿರುವ ಮಹತ್ವವನ್ನು ಈ ತ್ರಿಪದಿಯಲ್ಲಿ ಕಾಣಬಹುದು (ಸಂಕೋಧ. ೦೨೫). [ಸಂ.]

ಪ್ರಾಸಾದ$_1$ (ನಾ). [ವೀಶೈ] ಪ್ರಸಾದ : ವಿನಯದಿಂ ಗುರುವಿಗೆ ಸಮರ್ಪಿಸಿ ಘನದ ಲಿಂಗ ಸಮರ್ಥಮಂ ಮತ್ತನಘಜಂಗಮಭಕ್ತಿಯಂ ಪ್ರಾಸಾದಮಂ ಪಡೆದು (ಬಸವು. ೩೯-೦೬). [< ಸಂ. ಪ್ರಸಾದ]

ಪ್ರಾಸಾದ$_2$ (ನಾ). ೧ (ಕಲ್ಲು, ಇಟ್ಟಿಗೆ ಮೊದಲಾದುವುಗಳಿಂದ ಕಟ್ಟಿದ) ಮಹಡಿಯ ಮನೆ, ಕರುಮಾಡ, ಅರಮನೆ, ದೇವಾಲಯ ಮುಂತಾದವು : "ಇಟ್ಟಿಗೆ ಮೊದಲಾದವಱಂ ಮಾಡಿದರಮನೆ ದೇಗುಲುಂಗಳಂ ಪ್ರಾಸಾದವೆಂಬುದು" (ಹಲಾಯು. ೪೯-೦೩೬) ; ಗೈರಿಕದಿ ಮುಕ್ತಾಫಲದಿ ಸಮೆದ ಕಲಶಂಗಳೋರಣಿಪ ಪ್ರಾಸಾದ ಸೌಧ ಹರ್ಮ್ಯಂಗಳಿಂದೆಸೆದುದಾ ದ್ವಾರಾವತಿ (ಭಾಶ. ೨-೩). ೨. ಮೇಲಿನ ಅಂತಸ್ತು ; ಉಪ್ಪರಿಗೆ ; ಮಹಡಿ : ನಿನಗೆ ಮುಕ್ತಿಪ್ರಾಸಾದಮನಡರಲಿವುವೆ ಸೋಪಾನಂಗಳ್ (ಅಂಪು. ೫-೬೦) ; ಕನ್ಯಾಂತಃಪುರಪ್ರಾಸಾದಮನೇಱಿ (ಕಾದಂಪೂ. ೭೮೮). ೩. [ಜೈನ] ಚೈತ್ಯಾಗಾರ, ಬಸದಿ ಮುಂತಾದುವು ; P ಸ್ವರ್ಗದಲ್ಲಿ ವೈರಾಜ, ಪುಷ್ಪಕ, ಕೈಲಾಸ, ಮಣಿಕ, ತ್ರಿವಿಷ್ಟಪಗಳೆಂಬ ಐದು ಮಹಾಪ್ರಾಸಾದಗಳು ಮತ್ತು ಭೂಮಿಯ ಮೇಲೆ ಸ್ವಸ್ತಿಕ, ವರ್ಧಮಾನ, ನಂದ್ಯಾವರ್ತ, ಸರ್ವತೋಭದ್ರ, ವಲಭಿಚ್ಛಂದ ಎಂಬ ಐದು ಪ್ರಾಸಾದಗಳು ಇವೆಯೆಂದು ಜೈನರು ನಂಬುತ್ತಾರೆ : ಪ್ರಾಸಾದಾನ್ತರಮಾನ್ವಿಚಿತ್ರಕನಕಪ್ರಜ್ವಲ್ಯದಿನ್ನಿಕ್ಕುದಾನ್ಸಾಸಿರ್ವ್ವರ ಪೂಜೆದನ್ದುಯೆ ಅವರ್ಸ್ವರ್ಗ್ಗಾಗ್ರಮಾನೇಱಿದಾರ್ (ಎಕ. II, ೨೭-೨; ಸು. 700) ; ಪ್ರಾಸಾದಾಂತರದಿಂದಮಯ್ದು ಜಿನಚೈತ್ಯಾಗಾರಮೊಂದಿಂತೆ ವಿನ್ಯಾಸಂ ನಾಡೆ ಬೆಡಂಗುವೆತ್ತಿರೆ . . . ತದ್ಭೂಮಿ ಕಣ್ಗೊಪ್ಪುಗುಂ (ಕಂಪ್ರಪು. ೦೫-೨೨). [ಸಂ.]

ಪ್ರಾಸಾದಿ (ನಾ). [ವೀಶೈ] ತಾನು ಅನುಭವಿಸುವ ಪ್ರತಿಯೊಂದು ಪದಾರ್ಥವನ್ನು ಮೊದಲು ಲಿಂಗಕ್ಕೆ ಅರ್ಪಿಸಿ, ಅರ್ಪಿತಪದಾರ್ಥವನ್ನು ಭಕ್ತಿಪೂರ್ವಕವಾಗಿ ಪ್ರಸಾದರೂಪದಲ್ಲಿ ಸ್ವೀಕಾರ ಮಾಡುವವನು ; ಷಟ್ಸ್ಥಲಗಳಲ್ಲಿ ಮೂರನೆಯ ಹಂತವಾದ ಪ್ರಸಾದಿಸ್ಥಲವನ್ನು ತಲುಪಿದವನು ; ಪ್ರಸಾದಿ : ಪ್ರಾಸಾದಿಗೆ ಪ್ರಸಾದಸ್ಥಲ (ಪೋಳಿಮಾ. ೪೩-೦೭೬) ; ಲಿಂಗನಿಷ್ಠೆ ಮೊದಲಾದ ಸ್ಥಳಗಳ ಪರಿಜ್ಞಾನದಿಂದ ಆ ಆಚರಣವುಳ್ಳ ಸಮಸ್ತಪಾಪಪರಿಹಾರ ಮಾಡಿಕೊಂಡ ಮಾಹೇಶ್ವರನು ಮನೋನೈರ್ಮಲ್ಯಸಂಬಂಧದಿಂದ 'ಪ್ರಾಸಾದಿ' ಎನಿಸುವನು (ಭಾಶತ್ತ್ವ. ೬೭೬). [< ಸಂ. ಪ್ರಸಾದಿನ್]

ಪ್ರಾಸಾದಿಕ (ಗು). ೧. ಆನಂಗ್ರಹಿಸುವ ; ಪ್ರಸನ್ನವಾದ : ಜಗತ್ತಿನಲ್ಲಿ ಇಂದಿನವರೆಗೆ ಶ್ರೇಷ್ಠರಾದ ಕವಿಗಳು 'ಆವೇಶ', 'ಪ್ರಾಸಾದಿಕವಾಣಿ' ಮೊದಲಾದವುಗಳ ಗೊಡವೆಗೆ ಹೋಗದೆ . . . ಅನುಪಮಸೌಂದರ್ಯವನ್ನು ನಿರ್ಮಿಸಿರುವರು (ಗೊಡ್ಡುಗು. ೩೩). ೨. ರಮ್ಯವಾದ; ಸುಂದರವಾದ. [ಸಂ.]

ಪ್ರಾಸಾಭಾಸ (ನಾ). ಪ್ರಾಸದಂತೆ ತೋರುವುದು ; ಪ್ರಾಸದ ಹಾಗಿರುವುದು : ಪ್ರಾಸಾನುಪ್ರಾಸಾಂತಪ್ರಾಸಂಗಳ್ಮೂಱುಮತಿಶಯಂಗಳ್ಪ್ರಾಸಾಭಾಸಂಗಳುಱಿದ ಮೂಱುಂ (ಕಡಿಂ. ೨-೪೫). [ಸಂ.]

ಪ್ರಾಸಿಕ (ನಾ). ಈಟಿಯನ್ನು ಹಿಡಿದಿರುವವನು : "ಪ್ರಾಸಿಕಃ, ಕೌಂತಿಕಃ – ಈ ೨ ಈಟಿಯೇ ಆಯುಧವಾಗಿ ಉಳ್ಳವನು, ಸಬಳಿಗನು" (ಸಿದ್ಧಾಂತಿ. ೨೫೭). [ಸಂ.]

ಪ್ರಾಸು (ನಾ). = ಪ್ರಾಸ ೩ : ಸನೇಮ = ಪ್ರಾಸು (ಕಮಂದ. ೪. ೦೯ ಟೀಕು) ; ಪದ ತಪ್ಪಿದರೆ ಪ್ರಾಸು ತಪ್ಪೀತೆ ? (ಗಾದೆ). [<ಸಂ. ಪ್ರಾಸ]

ಪ್ರಾಸುಕ (ಗು). ೧. ಹುಳುಬೀಳದ; ಶುದ್ಧವಾದ : ಕಾಯಿಸಿ ಸೋಸಿದ ಸ್ವಚ್ಛನೀರು (ಪ್ರಾಸುಕ ಜಲ) (ಕೃಷಿ. ೬೬). (ನಾ). ೨. ಹುಳುಬೀಳದುದು ; ಶುದ್ಧವಾದುದು : ಭಟಾರಾ ಪ್ರಾಸುಕಮಪ್ಪ ನೀರಂ ಪೊಟ್ಟದೊಳ್ ಬಂದುದಂ ಕುಡಿದು ನಿಮ್ಮ ಸೇದೆಯನಾಱಿಸಿಂ (ಪಡ್ಡಾರಾ. ೦೦೩-೩೦). [<ಪ್ರಾ. ಫಾಸುಅ, ಫಾಸುಗ]

ಪ್ರಾಸುಕಾಹಾರ (ನಾ). ಹುಳುಬೀಳದ ಆಹಾರ ; ಶುದ್ಧವಾದ ಆಹಾರ: ಜ್ಞಾನಸಂಯಮತಪೋನಿಮಿತ್ತಮಾಗಿ ಪರಕೃತಪ್ರಶಸ್ತಪ್ರಾಸುಕಾಹಾರಮಂ ರಾಗದ್ವೇಷಮಿಲ್ಲದುಂಬುದುಂ (ತಸೂಪ್ಯ. ೨೯೩). [ಪ್ರಾಸುಕ + ಆಹಾರ]

ಪ್ರಾಸ್ತಾವಿಕ (ಗು). ೧. ಸಾಂದರ್ಭಿಕವಾದ; ಸಮಯಕ್ಕೆ ತಕ್ಕುದಾದ: ಅವನು ಉಚ್ಚಸ್ವರದಿಂದ ಮಿಕ್ಕ ಸಭಿಕರನ್ನು ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದನು (ಅಂಬಿಕ. ೦೬೩). (ನಾ). ೨. ಸಮಯೋಚಿತವಾದುದು ; ಸಂದರ್ಭೋಚಿತವಾದುದು : ಈಗ ನಡೆಯುತ್ತಿರುವ ನಾಡ ಹಬ್ಬದ . . . ಸಮಾರಂಭದಲ್ಲಿ ಪ್ರಾಸ್ತಾವಿಕವಾದ ನಾಲ್ಕು ಮಾತುಗಳನ್ನು ಹೇಳಬೇಕೆಂದು ನನಗೆ ಕರೆ ಬಂದಾಗ ಮನಸ್ಸಿನಲ್ಲಿ ಮೊದಲು ಮೂಡಿದ ಭಾವಗಳೆಂದರೆ ಆಶ್ಚರ್ಯ ಮತ್ತು ಅಧೈರ್ಯ (ಸಮಾಲೋ. ೦೨೬.) [ಸಂ.]

ಪ್ರಾಹ್ಣ (ನಾ). ದಿನದ ಮೊದಲನೆಯ ಭಾಗ; ಬೆಳಗ್ಗೆ ; ಪ್ರಾತಃಕಾಲ. [ಸಂ.]

ಪ್ರಾಳೇಯ 'ಪ್ರಾಲೇಯ' ನೋ.

ಪ್ರಾಳೇಯಾಚಲ, ಪ್ರಾಳೇಯಾಚಳ (ನಾ). ಹಿಮದಿಂದ ಕೂಡಿದ ಬೆಟ್ಟ; ಹಿಮಗಿರಿ ; ಹಿಮಾಲಯ : ಪ್ರಸ್ಫುರತ್ಪ್ರಾಳೇಯಾಚಲಮಿಾತನೆಮ್ಮ ಪೊಲಿಳಾಭೃನ್ನಾಥಂ (ಶಂಪಭಾ. ೦೯-೩೩). ಪ್ರಾಳೇಯಾಚಳ : ಪೋಗವೇಟ್ದು ಪ್ರಸನ್ನಕತಿಪಯಪ್ರಯಾಣಂಗಳಿಂ ಪ್ರಾಳೇಯಾಚಳಮಧ್ಯಮ ಕೂಟಮನೆಯ್ದೆವರ್ಪುದುಂ (ಶಾಂತಿಪು. ೦೦-೫೭ ಪ). [ಸಂ. ಪ್ರಾಲೇಯಾಚಲ]

ಪ್ರಾಳೇಯಾಚಳ 'ಪ್ರಾಳೇಯಾಚಲ' ನೋ.

ಪ್ರಿತುವಿ 'ಪೃಥುವಿ' ನೋ.

ಪ್ರಿಥಿವಿಸಾಗರ (ನಾ). ಒಬ್ಬಾತನ ಹೆಸರು : ಶ್ರೀಪ್ರಿಥಿವಿಸಾಗರನ್ ಪಟ್ಟಂ ಗಟ್ಟಿಸಿ (ಎಇ. IX. ೦೯-೦ ; ಸು. 800). [P ಇದು 'ಪೃಥ್ವೀಸಾಗರ' ಎಂಬುದರ ಅಪಲಿಖಿತ]

ಪ್ರಿಥುವಿ 'ಪೃಥುವಿ' ನೋ.

ಪ್ರಿನ್ಸಿಪಾಲ್ (ನಾ). ಉನ್ನತಶಿಕ್ಷಣಸಂಸ್ಥೆಯ ಮುಖ್ಯಸ್ಥ : ಪಾಠಶಾಲೆಗಳಲ್ಲೂ ವಿದ್ಯಾಶಿಕ್ಷಣಾದಿ . . . ಕೆಲಸಗಳನ್ನು ನೋಡಿಕೊಂಡಿರಲು ಪ್ರಿನ್ಸಿಪಾಲ್ ಎಂದೊಬ್ಬ ಅಧಿಕಾರಿಯನ್ನು ನಿಯಮಿಸಿದ್ದರು (ಇಬಿದು. ೩೩). [←ಇಂ. Principal]

ಪ್ರಿಯ (ಗು). ೧. ಅಕ್ಕರೆಯ ; ಪ್ರೀತಿಪಾತ್ರವಾದ ; ನಲ್ಮೆಯ. ೨. ಪದಾರ್ಥಗಳ ವಿಷಯದಲ್ಲಿ ಬೆಲೆ ಅಧಿಕವಾಗಿರುವ; ತುಟ್ಟಿಯ. (ನಾ). ೩. ಅಕ್ಕರೆ ; ಪ್ರೀತಿ; ವಾತ್ಸಲ್ಯ: ಪ್ರಿಯದಿಂದೆ ಮಹಾಕಾಳಾಹ್ವಯನೀಶಂ ನೆಲಸೆ ನಗರಿಯೊಂದಧಿಕಖ್ಯಾತಿಯಿನೆಸೆದು ತೋರ್ಪುದು (ಶಾಂತಿಪು. ೨೯೦) ; ಪಿರಿದುಂ ಪ್ರಿಯದಿಂದವೆ ಮುಂ ಪೆತ್ತವರಿರವಂ ಪೋಲ್ವುದು ಪುಟ್ಟಿದ ಶಿಶು (ಜಯಕಾ. ೩-೩೯). ೪. ಹಿತವಾದುದು ; ಇಷ್ಟವಾದುದು : ಪ್ರಿಯಮಾದುದು ಧರ್ಮಂ ಪೃಥ್ವಿಯ ಸೂನುವಿನಿಂದ ಧರ್ಮಮಂತದು ತಾನಪ್ರಿಯಮಾಯ್ತು ತನಗೆ (ಪರ್ಧಮಾ. ೭-೫೫). ೫. ಒಳ್ಳೆಯದು; ಶುಭವಾದುದು: "ಪ್ರಾಗ್ರ್ಯಂ . . . ಪ್ರಿಯಂ . . . ವೇಶಲಂ–ಈ ೨೯ ಒಳ್ಳಿತು" (ಹಲಾಯು. ೦೪೪-೯). ೬. ಪ್ರೀತಿಪಾತ್ರನಾದವನು ; ನಲ್ಲ : "ವಲ್ಲಭಃ, ದಯಿತಃ, ಪ್ರಿಯಃ – ಈ ೩ ಕೂರ್ಪವಂ" (ಹಲಾಯು. ೬೦-೨೦೨) ; ಆ ಜಯವಧುಗನಂತವೀರ್ಯಂ ಪ್ರಿಯನಾದೊಂ (ಶಾಂತಿಪು. ೯-೯೭). ೭. ಬೇಕಾದ ವ್ಯಕ್ತಿ ; ಆಪ್ತ ; ಆತ್ಮೀಯ : ನಿನ್ನಪೋಲೆನಗಾತನುಂ ಪ್ರಿಯಂ (ಶ್ರೀರಾಮಾ. ೫೯-೦೬೦). ೭. ಬೆಲೆಯೇರಿಕೆ ; ತುಟ್ಟಿ : ಬಹಳ ಪ್ರಿಯವಾದ ಕಾಲದಲ್ಲಿ ಧಾನ್ಯವನ್ನೆಲ್ಲಾ ಮಾರಿ ನಾಲ್ಕಾರು ತಿಂಗಳು ಪೂರ್ತಿ ತಮಗೆ ಬೇಕಾದಷ್ಟು ಇಟ್ಟುಕೊಂಡಿರುವರು (ಕೃಷಿಪ್ರ. ೯೫) ; ಎಂಥೆಂಥ ಪ್ರಿಯದ ಮಾಲುಗಳನ್ನು . . . ಕಡಿಮೆ ಬೆಲೆಗೆ ಕೊಂಡ ಸಾಹಸ ಹೇಳಿಯಾಯಿತು (ಮರಮ. ೯೨). [ಸಂ.]

ಪ್ರಿಯಂಕರಿ (ನಾ). ಒಂದು ಬಗೆಯ ಸಸ್ಯ ; ಹೆಗ್ಗುಳ್ಳ : "ಪ್ರಿಯಂಕರೀ–ಹೆಬ್ಬಾಲೆ, ಬಿಳಿಯ ನೆಲಗುಳ್ಳ" (ಓಷಧಿ. ೯೯). [ಸಂ. ಪ್ರಿಯಂಕರೀ]

ಪ್ರಿಯಂಗು (ನಾ). ೧. ಒಂದು ಬಗೆಯ ಸಸ್ಯ ; ನವಣೆ : "ಪ್ರಿಯಂಗುಃ, ಕಂಗು : – ಈ ೨ ನವಣೆ" (ಹಲಾಯು. ೯೫-೯೨೬) ; ಅಭಿನವಪ್ರಿಯಂಗು ಶ್ಯಾಮಾಂಗಮರ್ಧಚಂದ್ರಬುದ್ಬುದವ್ಯಾಕೀರ್ಣತ್ರಿಶೂಲಕರಾಲವಿಶಾಲವೇತ್ರಖೇಟಕಂ (ಆದಿಪು. ೦೩-೯೫ ಪ). ೨. ಒಂದು ಬಗೆಯ ಮರ : ಮಾಡಿದ ವೈವಾಹಕದಿಂ ಪ್ರಿಯಂಗುಫಲಮಕ್ಕುಂ (ಲೋಕೋಪ. ೬-೯೨) ; ರತಿಪ್ರಿಯನಂ ಪ್ರಿಯಂಗು ತನ್ನಲರ್ಗಣೆಯಿಂ ಜಗತ್ತ್ರಯಮುಮಂ ಗಲಿಸಿತ್ತು (ಜಗಂ. ೧೯-೬). ೩. ಒಂದು ಬಗೆಯ ಬಳ್ಳಿ : "ಶ್ಯಾಮವಲ್ಲೀ – ಪ್ರಿಯಂಗು" ಓಷಧಿ. ೦೬೯). [ಸಂ.]

ಪ್ರಿಯಂನುಡಿ (ಕ್ರಿ). ಹಿತವಾದುದನ್ನು ಹೇಳು ; ಇಷ್ಟವಾದುದನ್ನು ತಿಳಿಸು: ಸಂಸ್ಕೃತದ ನಿತ್ಯಬಿಂದುಗೆ–ಗುಣಂಗೊಂಡಂ . . . ಪ್ರಿಯಂನುಡಿದಂ, ಧನಂಬಡೆದಂ (ಕಮಂದ. ೦೬೬ ಪ್ರಯೋ). [ಪ್ರಿಯ + ನುಡಿ$_1$]

ಪ್ರಿಯಂಬಡಿಸು (ಕ್ರಿ). ಹಿತವನ್ನುಂಟುಮಾಡು ; ತೃಪ್ತಿಪಡಿಸು : ಘನತರೋತ್ಸುಕಚಿತ್ತದಿಂ ಮೇದಿನಿಯೊರಸಲಭಿವಂದಿಸುತ ತಾನನುನಯೋಚಿತ ಸತ್ಕ್ರಿಯಾದಿಗಳಿಂ ಪ್ರಿಯಂಬಡಿಸಿ (ಬಸಪು. ೨೬-೬). [ಪ್ರಿಯ + ಪಡಿಸು]

ಪ್ರಿಯಂವದ (ನಾ). ೧. ಇಷ್ಟವಾದುದನ್ನು ಹೇಳುವುದು ; ಹಿತವಾದುದನ್ನು ನುಡಿಯುವುದು. ೨. ಇಷ್ಟವಾದುದನ್ನು ಹೇಳುವವನು ; ಹಿತವಾದುದನ್ನು ನುಡಿಯುವವನು : ಶ್ಲಕ್ಷ್ಣಃ, ಪ್ರಿಯಂವದಃ –೨ ಪ್ರಿಯವನ್ನು ನುಡಿಯುವವನ ಪೆಸರುಗಳು" (ಸಿದ್ಧಾಂತಿ. ೩೩೨). [ಸಂ.]

ಪ್ರಿಯಕ (ನಾ). ೧. ಮೈಮೇಲೆ ಚುಕ್ಕೆಗಳುಳ್ಳ ಒಂದು ಬಗೆಯ ಜಿಂಕೆ; ಚಿಗರೆ. ೨. ಒಂದು ಬಗೆಯ ಮರ: ಹೊನ್ನೆ: "ಪೀತಸಾಲಕಃ . . . ಪ್ರಿಯಕಃ, ಜೀವಕಃ –೬ ಹೊನ್ನೇಮರದ ಹೆಸರುಗಳು" (ಸಿದ್ಧಾಂತಿ. ೦೨೨) ; ಪ್ರಿಯಾಳ ಪ್ರಿಯಕ ಕುರವಕಾಶೋಕ . . . ಭೂಜಾವಕೀರ್ಣಂ

(ಅರ್ಥಪ. ೩-೩೫). ೩. ಒಂದು ಬಗೆಯ ಮರ; ಈಚಲು: "ನೀಪಃ, ಪ್ರಿಯಕಃ, ಕದಂಬಃ, ಹಲಪ್ರಿಯಃ – ೪ ಕಡಹದ ಗಿಡದ ಹೆಸರುಗಳು, ಈಚಲ ಗಿಡದಲ್ಲಿ ಉತ್ತಮಜಾತಿ" (ಸಿದ್ಧಾಂತಿ. ೦೨೦). ೪. ಒಂದು ಬಗೆಯ ಗಿಡ : ಪ್ರಿಯಂಗು : "ಪ್ರಿಯಕಃ-ಕಡವ, ಹೊನ್ನೆ, ಪ್ರಿಯಂಗು" (ಓಷಧಿ. ೯೯). [ಸಂ.]

ಪ್ರಿಯಕರ (ಗು). ೧. ಪ್ರೀತಿಯನ್ನುಂಟುಮಾಡುವ ; ಅಕ್ಕರೆಯನ್ನು ತೋರುವ. ೨. ಪ್ರೀತಿಗೆ ಪಾತ್ರವಾದ. (ನಾ). ೩. ಪ್ರೀತಿಯನ್ನುಂಟುಮಾಡುವುದು; ಅಕ್ಕರೆಯುಳ್ಳುದು : ಅವನಿಗೆ ತನ್ನ ತಾಯಿಯ ಜೀವ ನೂರು ಬಲೀಂದ್ರ ಹೋತಗಳ ಜೀವಕ್ಕಿಂತಲೂ ಹೆಚ್ಚು ಪ್ರಿಯಕರವ ಗಿತ್ತು (ಕಾಸೂರು. ೫೬೬). ೪. ಪ್ರೀತಿಯನ್ನು ತೋರುವವನು; ಪ್ರೇಮವುಳ್ಳವನು : ವಿಧುವಿಂದಂ ವಿಬುಧೋತ್ಕರಪ್ರಿಯಕರಂ ತೀವ್ರಾಂಶುವಿಂದಂ ಪ್ರತಾಪಧನಂ ದಳತ್ಪದ್ಮದಿಂದಧಿಕಶ್ರೀನಿಳಯಂ ಸುಪುತ್ರನೊಗೆತರ್ಕುಂ (ಪುಷ್ಪಕ. ೩-೦೨೨). ೫. ನಲ್ಲ; ಪ್ರೇವಿಂ : ಆಕೆ ತನ್ನ ಪ್ರಿಯಕರನಿಗೊಂದು, 'ಕೊನೆಯ ಪತ್ರ' ಬರೆದಿಟ್ಟು 'ಆತ್ಮಹತ್ಯೆ' ಮಾಡಿಕೊಳ್ಳುತ್ತಾಳೆ (ಕೂಪಸಂ. ೩೯). [ಸಂ.]

ಪ್ರಿಯಕಾರಿಣಿ (ನಾ). ಪ್ರೀತಿಗೆ ಕಾರಣಳಾದವಳು ; ಪ್ರಿಯೆ : ಪ್ರಿಯಕಾರಿಣಿ ಭುವನಜನಪ್ರಿಯಕಾರಿಣಿ ನೆಗಟ್ (ಪರ್ಧಮಾ. ೧೧-೨೫). [ಸಂ. ಪ್ರಿಯಕಾರಿಣೀ]

ಪ್ರಿಯಕಾವೇರಿ (ನಾ). ಒಂದು ಬಗೆಯ ಚಿನ್ನದ ನಾಣ್ಯ : ದುರ್ಗವು ಕೈವಶವಾದ ಮೇಲೆ ಈ ದೊರೆಯ ಬೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ . . . ೧. ಗಬರು, ೧. ಪ್ರಿಯಕಾವೇರಿ (ಚಿತ್ರಪಾ. ೦೦೩). [?]

ಪ್ರಿಯಗಳ್ಳ (ನಾ). ಪ್ರೀತಿಯನ್ನು ಪಡೆದವನು; ಒಂದು ಬಿರುದು : ಅಮ್ಮನ ಗಂಧವಾರಣಂ ಪಡೆಮೆಚ್ಚೆಗಂಡಂ ಪ್ರಿಯಗಳ್ಳಂ[ಪಾಣಾಂ. ಪ್ರಗಳ್ಳಂ] ಗುಣನಿಧಿಗುಣಾರ್ಣವಂ (ಪಂಪಭಾ. ೦-೦೪೮ ವ): "ಪ್ರಿಯಳನ್ನು ಅಪಹರಿಸಿದವನು, ಅರ್ಜುನ ಸುಭದ್ರೆಯನ್ನು ಅಪಹರಿಸಿದಂತೆ" (ಪಂಪಧ್ರೀ. ೫೫). 'ಗುಣಗಳ್ಳ' ಪರಾ. [ಪ್ರಿಯ + ಕಳ್ಳ1]

ಪ್ರಿಯಜನ (ನಾ). ಆತ್ಮೀಯಜನ; ಆಪ್ತೇಷ್ಟರು : ಈ ವಿದ್ಯಾಧರ ಶ್ರೇಣಿಯ ಪರಿಭಾಷೆಗಳ್ ನಿನ್ನವಾಗದೆ ಸಾಮಂ ಪ್ರಿಯಜನಪ್ರಯೋಜ್ಯಂ ಅಲ್ಲದೆಡೆಯೊಳುನ್ಮತ್ತವಿಳಸಿತಂ (ಶಾಂತಿಪು. ೩-೯೩ವ); ಪ್ರಿಯಜನದಿನಲ್ಲದಾಱುಗುಮೆ ಯುವತಿಯ ವಿರಹಶಿಖಿ ಸಖೀಕೃತಶಿಶಿರಕ್ರಿಯೆಯಿಂ (ಪರ್ಧಪು. ೪-೬೩). [ಸಂ.]

ಪ್ರಿಯಜೀವ (ನಾ). ಒಂದು ಬಗೆಯ ಮರ : "ಪ್ರಿಯಜೀವಃ— ಹೆಮ್ಮರ" (ಓಷಧಿ. ೯೯). [ಸಂ.]

ಪ್ರಿಯತಮ (ನಾ). ೧. ಅತಿಹಿತವಾದುದು ; ಅತ್ಯಂತ ಪ್ರೇಮವುಳ್ಳುದು : ಪ್ರಿಯತಮ[ಮಂ] ತಾಳ್ದಿದರಯನಯಮಯರೇಕಾದ ಶಾಂಗಮಂ ನಕ್ಷತ್ರ[ಂ] ಜಯಪಾಳಮಹಾಮುನಿ ಪಾಂಡುಯತಿ ದ್ರುಮಸೇನಸೂರಿ ಕಂಸಾ[ಚಾ]ರ್ಯರ್ (ಪರ್ಧಮಾ. ೦೬-೩೪). ೨. ಪ್ರಿಯನಾದವನು; ನಲ್ಲ : ವಿರಹದಿಂ ಪ್ರಿಯತಮಸಮಾಗಮಪ್ರತ್ಯಾಶೆ ಹೃದಯಮಂ ಬೇಯಿಸಲ್ಕೆ (ಚಿತ್ರಾಂಗ. ೫೫-೦೫೦೦). ೩. ಅತ್ಯಂತ ಹಿತವಾದವನು; ಆಪ್ತ : ಪ್ರಿಯತಮನೆನಾಗು ರತ್ನತ್ರಯದೊಳೆ ನಿನ್ನಡಿಗೆ ತಡೆಯದೆಱಗಿಸು ಭುವನತ್ರಯಮಂ (ಅಜಿಪು. ೬-೭೪); ಆನೀತನಂ ಸತ್ಕ್ರಿಯಾನಲನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ (ಗದಾಯು. ೫-೩೦). [ಸಂ.]

ಪ್ರಿಯತಮೆ (ನಾ). ಪ್ರಿಯಳಾದವಳು; ನಲ್ಲೆ: "ನಲ್ಲಳಿನಿಯಳೋಪಳು ಕಾದಲೆಯೆನಲ್ಕೆ ಮನದನ್ನೆಯೆಂದೊಡಂ ಪ್ರಿಯತಮೆಗೆ ನಾಮಮಕ್ಕುಂ" (ಶಬ್ದಮಂ. ೭೫); ಪ್ರಿಯತಮೆಯನಗಲ್ದ ಶರೀರಿಯ ಜೀವನಮೇವುದೆಂದು ಮರಣಮನಾಂ ನಿಶ್ಚಯಮಂ ಮಾಡುವ ಪದದೊಳ್ (ದಶಕು. ೪-೪೭). [ಸಂ. ಪ್ರಿಯತಮಾ]

ಪ್ರಿಯಮಿತ್ರ (ನಾ). ಬಹಳ ಪ್ರಿಯನಾದವನು ; ಪ್ರಾಣಮಿತ್ರ : ಪ್ರಿಯಮಿತ್ರನೆನಗೆ ಕಮಲಪ್ರಿಯನಂದನನವನನೆನ್ನ ಪಕ್ಕದೆ ತೇಜಸ್ವಿಯನಂ ತಾಡಿದನಾ ಕಳಶಯೋನಿ ನೆಗಟ್ದಿಂದ್ರಸುತನಿನೇಗುಂದಿದನೋ (ಗದಾಯು. ೨-೧೯) ; ಪ್ರಿಯಮಿತ್ರ ಚಕ್ರವರ್ತಿಯ ಭಯದಿಂದುಗಿದರಿಕದಂಬದಂ ತಂಬುರುಹಪ್ರಿಯಬಿಂಬಂ ತೇಜದಳುರ್ಕೆಯ ಬಿಸುಪಂ ಬಿಸುಟು ಮಗುಟ್ದು ತೋಱುದುದಾಗಳ್ (ಪರ್ಧಮಾ. ೯-೪೦). [ಸಂ.]

ಪ್ರಿಯವಚ (ನಾ). ಪ್ರೀತಿಯ ಮಾತು ; ನಲ್ನುಡಿ : ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ...ಹಂಪೆಯ ಹರಿದೇವನುನ್ನತಕೃತಿಪ್ರಸರಂ ಭುವನೈಕಭಾಸುರಂ (ಗಿರಿಕ. ೦-೦೬). [ಸಂ.]

ಪ್ರಿಯವಚನ (ನಾ). = ಪ್ರಿಯವಚ : "ಚಟು(ಃ), ಚಾಟು(ಃ)—ಪ್ರಿಯವಚನಂ" (ಹಲಾಯು. ೨೪-೦೪೫); ಪ್ರಿಯವಚನಂಗಳಿಂ ಕರೆದು ಕೆಯ್ಮುಗಿದು (ಧರ್ಮನಾ. ೦-೯೦). [ಸಂ.]

ಪ್ರಿಯವತಿ (ನಾ). ಒಂದು ಬಗೆಯ ಸಸ್ಯ : "ಪ್ರಿಯವತೀ—ಹೊನಗನ್ನೆ" (ಓಷಧಿ. ೯೯). [ಸಂ. ಪ್ರಿಯವತೀ]

ಪ್ರಿಯವನಿತೆ (ನಾ). ಪ್ರೀತಿಪಾತ್ರಳಾದ ಸ್ತ್ರೀ ; ನಲ್ಲೆ : ಪ್ರಿಯವನಿತಾ ಚರನೊಗೆದಂ ಪ್ರಿಯತನಯಂ ಕೇಶವಾಂಕನಾದನಿದೇಂ ವಿಸ್ಮಯಕರವೊ (ಆದಿಪು. ೬-೩); ಪ್ರಿಯವನಿತಾಘನಸ್ತನದಿಱುಂಬಿನೊಳ್ . . . ಒಳಪೊಕ್ಕು ಕಾಮುಕಜನಂ ಬರ್ದುಕಿರ್ದುದು ಬಂದ ಮಾಗಿಯೊಳ್ (ಶಾಂತೀಶ್ವ. ೧೨-೮೭). [ಸಂ. ಪ್ರಿಯವನಿತಾ]

ಪ್ರಿಯವಲ್ಲಿ (ನಾ). ಒಂದು ಬಗೆಯ ಸಸ್ಯ : "ಪ್ರಿಯವಲ್ಲೀ—ಪ್ರಿಯಂಗು" (ಓಷಧಿ. ೯೯). [ಸಂ. ಪ್ರಿಯವಲ್ಲೀ]

ಪ್ರಿಯವಾದಿನಿ (ನಾ). ಹೆಣ್ಣು ಗಿಳಿ : "ಪ್ರಿಯವಾದಿನೀ—ಹೆಣ್ಣು ಗಿಳಿ" (ಓಷಧಿ. ೯೯). [ಸಂ. ಪ್ರಿಯವಾದಿನೀ]

ಪ್ರಿಯವಾರ್ತೆ (ನಾ). ಸಂತೋಷದ ಸುದ್ದಿ : ಈ ಪ್ರಿಯವಾರ್ತೆಯನ್ನು ನಾವು ತಿಳಿಸಲೇಬೇಕು (ಶಾಕುಂತ. ೦೦೫-೬). [ಸಂ. ಪ್ರಿಯವಾರ್ತಾ]

ಪ್ರಿಯಶೈಲ (ನಾ). ಕಲ್ಲಿನ ಮೇಲೆ ಬೆಳೆಯುವ ಪಾಚಿ ; ಕಲ್ಲುಹೂವು : "ಪ್ರಿಯಶೈಲಂ-ಕಲ್ಲ ಹೂ" (ಓಷಧಿ. ೯೯). [ಸಂ.]

ಪ್ರಿಯಸಂಭಾಷಣ (ನಾ). ಹಿತವಾದ ಸಲ್ಲಾಪ,—ಸಂವಾದ : ಪ್ರಿಯಸಂಭಾಷಣಸಹಿತಂ ಬಯಸಿದುದಂ ಪರಿಜನಕ್ಕೆ ಸಾಲ್ವಿನಮಿತ್ತ ಪ್ರಿಯಮಂ ಪುಟ್ಟಿಸಿದಂ ಸುರಭಿಯೊಳೇನೌದಾರ್ಯನಿಧಿಯೊ ಜನಕನರೇಂದ್ರಂ (ಪಂಠಾಮಾ. ೫-೩೦); ಪ್ರಿಯಸಂಭಾಷಣದಿಂದಾತನಂ ಸಂತೋಷಂಬಡಿಸುತ್ತುಂ (ಜಾಧಪು. ೦೦-೦೯ ವ). [ಸಂ.]

ಪ್ರಿಯಸಖ (ನಾ). ೧. = ಪ್ರಿಯಮಿತ್ರ : ಒರ್ವನೆ ಪೋಗಿ ಕಾಣ್ಕೆಯಿಂ ಭೋಂಕನೆ ಮಾಟ್ಪಿಂ ಪ್ರಿಯಸಖಂಗೆ ಸಂತಸದೊದವಂ (ಕಾದಂಕಾ. ೪೩೩); ಪ್ರಿಯಸಖನಿಂತೆನೆ ಸಲಿಲಾಶಯಕ್ಕೆ ತದ್ರಾಜಹಂಸನೊಯ್ಯನೆ ಮುದಿತಾಶಯನಾಗಳ್ ನಡೆದಂ (ಲೀಲಾವ. ೫-೫೯). ೨. ಖದಿರವೃಕ್ಷ. [ಸಂ.]

ಪ್ರಿಯಸಖಿ (ನಾ). ಪ್ರೀತಿಪಾತ್ರಳಾದ ಗೆಳತಿ,—ಸ್ನೇಹಿತೆ : ಮದೀಯ ಪ್ರಿಯಸಖಿಯ ಕೂರ್ಮೆಯ ತೊಡರ್ಪಂ ಪಱಿದು (ಕಾದಂಕಾ. ೫೪೬) ; ಯಾಮಿನೀಪ್ರಿಯಸಖಿಯೆ, ಹೇ ಸ್ವಪ್ನಕಾಮಿನಿಯೆ, ಲಲನೆಯಾತ್ಮದೊಳಾವ ಕಮನೀಯನಾಕಮಂ ಕಟ್ಟುತಿಹೆ (ಚಿತ್ರಾಂಗ. ೩-೫೩). [ಸಂ. ಪ್ರಿಯಸಖೀ]

ಪ್ರಿಯಸ್ರಾಹೆ (ನಾ). ಒಂದು ಬಗೆಯ ನಾಣ್ಯ (?) : ಪರಿವರ್ತ್ತನಕ್ಕೆ ಸಲುವ ಪ್ರಿಯಸ್ರಾಹೆ ನಿಜಗಟಿವರಹ ಗದ್ಯಾಣ ಗ ೩೦ (ಮೈಆರಿ. ೦೯೩೦. ೦೦-೦೬; 1585). [?]

ಪ್ರಿಯಾಂಬು (ನಾ.) ಮಾವಿನ ಮರ : "ಪ್ರಿಯಾಂಬುಃ—ಮಾವು" (ಓಷಧಿ. ೧೮). [ಸಂ.]

ಪ್ರಿಯಾಲ, ಪ್ರಿಯಾಳ (ನಾ). ಒಂದು ಬಗೆಯ ಸಸ್ಯ : "ರಾಜಾದನಂ, ಪ್ರಿಯಾಲಃ, ಸನ್ನಕದ್ರುಃ, ಧನುಃಪಟಃ—ಮೊರಷೀಗಿಡ, ಮೊರಟೀಗಿಡ" (ನಿಘಂಟು. ೦೧೯). ಪ್ರಿಯಾಳ : "ಪ್ರಿಯಾಳಂ—ಚಾರುಬೀಜ" (ಓಷಧಿ. ೧೮). [ಸಂ.]

ಪ್ರಿಯಾಳ 'ಪ್ರಿಯಾಲ' ನೋ.

ಪ್ರಿಯೆ (ನಾ). ೧. ಪ್ರೀತಿಪಾತ್ರಳಾದವಳು ; ನಲ್ಲೆ : "ನಲ್ಲಳೆ ನಲ್ಕಂದನುನಯದಿಂ ಪ್ರಿಯೆ" (ಕವಿಕಂ. ೦೬೨); ಪ್ರಿಯೆ ತನಗೆಂಬಿದಂ ಬಗೆಯದೆನ್ನನವಂ ಪೆಱಗಿಕ್ಕಿ ಪೋಗಿ ಸಂಜೆಯೊಳನುರಕ್ತನಾಗಿ ನೆರೆದಿರ್ದಪಂ (ಮಲ್ಲಿಪು. ೭-೦೯); ಪ್ರಿಯೆ ಮಿಗೆ ನೋಡಿ ತನ್ನ ಪೊಸವೇಷಮನಕ್ಕಟ ಪೊಳ್ತುಪೋದುದನ್ನೆಯಮನದೆಂತು ಸೈರಿಪೆಂ . . . ಎನುತ್ತೆ (ಪ್ರಸಂ. ೦೬-೭೯). ೨. ಪ್ರೀತಿ; ವಾತ್ಸಲ್ಯ; ಅಕ್ಕರೆ : ನಿನಗೆ ಪ್ರಿಯೆಯಿಂದಿತ್ತ ಜ್ಞಾನಾಂಜನದ ಬೀಜವನಿನ್ನು ಸದ್ಭಾವನದ ಸಜ್ಜನಭೂಮಿಯಲಿ ನೀ ಬಿತ್ತಿ ಪರಸುಖದ ಘನವೆಳೆಯನನುಗೈದು ಜನಪಾವನರಿಗುಣಬಡಿಸು (ಗಗಣಾ. ೦೭-೪೬). ೩. ಹೆಂಗಸು ; ಸ್ತ್ರೀ. ೪. ಸಣ್ಣ ಏಲಕ್ಕಿ. ೫. ಸಮಾಚಾರ; ವಾರ್ತೆ. ೬. ಮಾದಕಪಾನೀಯ. ೭. ಒಂದು ಬಗೆಯ ಮಲ್ಲಿಗೆ. [ಸಂ. ಪ್ರಿಯಾ]

ಪ್ರಿಯೋದ್ಭವ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಗರ್ಭಿಣಿಯು ಹೆತ್ತ ಮೇಲೆ ಮಾಡಬೇಕಾದ ಕರ್ಮ; ಜಾತಕರ್ಮ : ಆಧಾನ ಪ್ರೀತಿ ಸುಪ್ರೀತಿ ಧೃತಿ ಮೋದ ಪ್ರಿಯೋದ್ಭವ ನಾಮಕರ್ಮ ಬಹಿರ್ಯಾನ . . . ನಿರ್ವೃತಿಯೆಂಬಯ್ವತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೦೫-೦೫ ಪ). [ಸಂ.]

ಪ್ರೀಣನ (ನಾ). ೧. ಸಂತೋಷಗೊಳಿಸುವಿಕೆ ; ಆನಂದಪಡಿಸುವಿಕೆ : "ತರ್ಪಣಂ, ಪ್ರೀಣನಂ, ಅವನಂ—೩ ತೃಪ್ತಿ ಹೊಂದಿಸುವಿಕೆ" (ನಿಘಂಟು. ೩೫೫); ಬುಧಜನಪ್ರೀಣನಾಗ್ರೇಸರಗ್ರಾಮಣಿಯಾದಂ (ಆಪಿಪು. ೧೨-೦೫). ೨. ತೃಪ್ತಿಗೊಳಿಸುವಂತಹುದು : ಪ್ರೀಣನಮಾದುದು ಮುನಿಗೀರ್ವಾಣ ಮುಖಾಂಬುಜಮನಡರ್ದಿರಲ್ ಶೈಶವದೊಳ್ ವಾಣೀವಧು ನಿಱಿಸಿದ ನಿಶ್ರೇಣಿಯವೊಲ್ ಶ್ರುತದ ಠವಣೆಕೋಲ ವಿಳಾಸಂ (ಅನಂಪು. ೩-೫೦). ೩. ಅನ್ನ : "ಪ್ರೀಣನಃ—ಅನ್ನ" (ಓಷಧಿ. ೦೦೦). [ಸಂ.]

ಪ್ರೀಣನಕರ (ಗು). ೧. ಪ್ರೀತಿಯನ್ನುಂಟುಮಾಡುವ; ಆನಂದಕರವಾದ. (ನಾ). ೨. ಆನಂದಕರವಾದುದು : ಪ್ರಾಣಿಹಿತಮಂ ವಿನೇಯಪ್ರೀಣನಕರಮಂ ಆದಿಪುರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ (ಆದಿಪು. ೦-೪೨) ; ಜಾಣಿನ ಬೆಡಂಗು ವಿಬುಧಪ್ರೀಣನಕರಮೆನಿಸಿ ನೇರ್ಪು ನೇರ್ಪೊಡೆ ಪೇಟ್ಟಂ (ಸುಳುಪಾ. ೦-೩೯). [ಸಂ.]

ಪ್ರೀಣಿತ (ಗು). ಸಂತೋಷಗೊಳಿಸಿದ ; ಆನಂದಪಡಿಸಿದ : ಪರಮಂ ಪ್ರೀಣಿತವಸ್ತುಸ್ವರೂಪಮಂ ನವಪದಾರ್ಥಮಂ ನಂಬುಗೆಯಂ ಪರಿಭಾವಿಸಿದಂ ಯೋಗೀಶ್ವರನಾಜ್ಞಾನಿಚಯಮಂ ಶುಭಧ್ಯಾನಪರಂ (ಮಲ್ಲಿಪು. ೧೯-೬೦). [ಸಂ.]

ಪ್ರೀತ (ಗು). ೧. ತೃಪ್ತಿಹೊಂದಿದ; ತಣಿದ. ೨. ಸಂತೋಷಗೊಂಡ; ಹರ್ಷಗೊಂಡ. (ನಾ). ೩. ತೃಪ್ತಿ ಹೊಂದಿದವನು ; ಸಂತುಷ್ಟನಾದವನು : ಈತನೆಮ್ಮಯ ಬಂಧು ಕೃತಮಾಳಸುರನು ವಿನೀತನು ನಿನ್ನ ಸೇವೆಯೊಳು ಪ್ರೀತನು (ಪರಶ. ೨೯-೧೦೦). ೪. ಸಂತೋಷಗೊಂಡವನು ; ಹರ್ಷಿತನಾದವನು : "ಹೃಷ್ಟಃ . . . ಪ್ರಮುದಿತ, ಪ್ರೀತಃ—೬ ಸಂತೋಷಪಟ್ಟವನು" (ನಿಘಂಟು. ೩೫೦); ಭಂಗಿ ಭಾಷಿತದಿನಾತನಂ ಪ್ರೀತನಂ ಮಾಡಿ (ಪುಸ್ತಪು. ೭-೯೯ ಪ). ೫. ಪ್ರಿಯನಾದವನು : ನವಿಲುಗರಿಯ ನವನೀತಚೋರನಾಬಾಲವೃದ್ಧಪ್ರೀತ (ಸಂಪು. ೩೯-೮). [ಸಂ.]

ಪ್ರೀತಿ (ನಾ). ೧. ಸುಖ ; ಸಂತೋಷ ; ಆನಂದ : "ಪ್ರಮೋದಃ, ಪ್ರಮದಃ, ಹರ್ಷಃ, ಪ್ರೀತಿಃ . . . ಸುಖಂ—ಈ ೧೩ ಸುಖದ ಪೆಸರ್" (ಹಲಾಯು. ೨೦-೦೨೩) ; ಪ್ರೀತಿಮಿಗೆ ಶಂಖಪಟಹವಿನೂತೋದ್ಧುರ ಸಿಂಹಘಂಟಿಕಾನಿಸ್ವನಸಂಕೇತದೆ . . . ವೈಮಾನಿಕಾಮರರ್ನೆರೆತಂದರ್ (ಸುಳುಪಾ ೯-೬೯). ೨. ಗೆಳೆತನ; ಸ್ನೇಹ: "ಸಖ್ಯಂ . . . ಪ್ರೀತಿಃ . . . ಸಭಾಜನಂ—ಈ ೯ ಕೆಳೆ" (ಹಲಾಯು. ೦೦೭-೨೦) ; ರುಕ್ಮಿಣಿಯ ಮುಂದೆನ್ನೊಂದು ಸೌಭಾಗ್ಯಮಂ ಪರಿಹಾಸಂಗೆಯುತಿರ್ಪ ನಾರದನ ಮಾತಂ ಪ್ರೀತಿಯಿಂ ಕೇಳ್ದು (ಹಗಿಪು. ೦೨-೦೦೩) ; ಜಗನ್ನಾಥನು . . . ಸ್ವಲ್ಪಕಾಲದಲ್ಲಿಯೇ ಯಜಮಾನನ ಪ್ರೀತಿಯನ್ನು ಸಂಪಾದಿಸಿದನು (ಮುಂಬಿಯಿ. ೯-೫೦). ೩. ಅನುರಾಗ ; ಒಲವು ; ಪ್ರೇಮ : ತನ್ನ ಪ್ರೀತಿಯ ಸಮಸ್ಯೆಯನ್ನು ತನ್ನಿಂದ ಸಹ ಬಚ್ಚಿಡಲು ಪ್ರಯತ್ನಿಸುವ ನರಹರಿ ಅದನ್ನು ಪಾಟಣಕರನೆದುರಿಗೆ ಬಿಚ್ಚುವದು ಹೇಗೆ ಸಾಧ್ಯ ? (ಸಮಸೇ. ೨೩೨). ೪. [ಜ್ಯೋತಿ] ಇಪ್ಪತ್ತೇಳು ಬಗೆಯ ಯೋಗಗಳಲ್ಲಿ ಎರಡನೆಯದು : ಪ್ರೀತಿಯೋಗಕೆ ವೀರ ೨೪ ಗಳಿಗೆ ಮೇಲೆ ತ್ಯಾಜ್ಯಾ (ಶಾಸ್ಕರ. ೭೦-೫); ವಿಷ್ಕಂಭ ಪ್ರೀತಿ . . . ವೈಧೃತಿಗಳೆಂಬಿಪ್ಪತ್ತೇಳುಯೋಗಂಗಳುಂ (ವಿವೇಳ. ೩೨೦). ೫. [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು ; ಗರ್ಭವತಿಯಾದ ಮೂರನೆಯ ತಿಂಗಳಲ್ಲಿ ಮಾಡುವ ಜಿನಪೂಜೆ: ಆಧಾನ ಪ್ರೀತಿ ಸುಪ್ರೀತಿ . . . ನಿರ್ವೃತಿಯೆಂಬಯ್ವತ್ತುಮೂಱು . . . ಗರ್ಭಾನ್ವಯಕ್ರಿಯೆಗಳುಂ (ಆದಿಪು. ೦೫-೦೫ ಪ) ; ಆದಾನಮುಂ ಪ್ರೀತಿಯುಂ . . . ಅಗ್ರನಿವೃತ್ತಿಯುಮೆಂದಾಧಾನಾದಿ ನಿರ್ವಾಣಪರ್ಯಂತಮಪ್ಪಯ್ವತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). [ಸಂ.]

ಪ್ರೀತಿಂಕರವಿಮಾನ (ನಾ). [ಜೈನ] ಒಂದು ಸ್ವರ್ಗದ ಹೆಸರು : ಸಿಂಹಚಂದ್ರಚಾರಣರುಂ . . . ಊರ್ಧ್ವಗ್ರೈವೇಯಕದೊಳ್ ಪ್ರೀತಿಂಕರವಿಮಾನದೊಳ್ ಅಹಮಿಂದ್ರನಾದೊಂ (ಚಾವುಂಪು. ೦೫೯). [ಸಂ.]

ಪ್ರೀತಿಪಾತ್ರ (ನಾ). ಪ್ರಿಯವಾದ ವ್ಯಕ್ತಿ : ಜಾತೆ, ಪತಿಗೆ ಪ್ರೀತಿಪಾತ್ರಳಾಗು! (ಶಾಕುಂತ. ೫೦-೦೩) ; ಉದಿಪುರಿ ಪ್ರಧಾನಮಹಿಷಿಯಲ್ಲದಿದ್ದರೂ ಅತ್ಯಂತ ಪ್ರೀತಿಪಾತ್ರಳಾದ ಮಹಿಷಿ (ಬಂಕಿಪು. ೨೪೫). [ಸಂ.]

ಪ್ರೀತಿಬಡು 'ಪ್ರೀತಿವಡು' ನೋ.

ಪ್ರೀತಿಭೂಮಿ (ನಾ). (ಆಲಂ) ಪ್ರೇಮಕ್ಕೆ ಪಾತ್ರಳಾದ ಹೆಂಗಸು ; ಪತ್ನಿ : ಹಿರಣ್ಯಪುರಮನಾಳ್ವ ಗರುಡವೇಗಂಗಂ ತದೀಯ ಪ್ರೀತಿಭೂಮಿ ಪ್ರೀತಿಷೇಣಗಂ ಮಕ್ಕಳಿಂದ್ರತಿಲಕನುಂ ನಭಸ್ತಿಲಕನುಂ (ಶಾಂತಿಪು. ೯-೪೯ ಪ). [ಸಂ.]

ಪ್ರೀತಿವಡು, ಪ್ರೀತಿಬಡು (ಕ್ರಿ). ೧. ಅಕ್ಕರೆಯನ್ನು ತೋರಿಸು; ಪ್ರೀತಿಸು : ಆ ಯತಿನಾಯಕನೊಂದು ಸಾರಮೇಯಶಿಶುವಂ ಕಂಡು ಪ್ರೀತಿವಟ್ಟು (ಪಂತಕು. ೨೬೦-೦೯) ; ಅಟ್ಕರ್ತನೆನೆ ಪ್ರೀತಿವಟ್ಟಂಗಕ್ಕುಮಿಸುಪ ನಾಮಂ (ಕಬ್ಬಿಕ್ಕ. ೭೯). ಪ್ರೀತಿಬಡು : ೨. ಇಚ್ಛಿಸು; ಬಯಸು: ಅನಂಗಸೌಂದರಿಯಾ ಪದಕದ ಮೇಲೆ ಪ್ರೀತಿಬಟ್ಟು . . . ತಂದೀವುದೆಂದು ಲಲ್ಲೆಗೈದು ಪ್ರಾರ್ಥಿಸುವುದುಂ (ರರ್ಮಾಪ್ಯ. ೨-೦೦೮). [ಪ್ರೀತಿ + ಪಡು$_1$]

ಪ್ರೀತಿಸು (ಕ್ರಿ). ಅಕ್ಕರೆಯನ್ನು ತೋರು : ಅವರುಗಳು ನನ್ನನ್ನು ಪ್ರೀತಿಸುತ್ತಿದ್ದುದಲ್ಲದೆ ಗೌರವದಿಂದಲೂ ವರ್ತಿಸುತ್ತಿದ್ದರು (ಸಂಗಾಳ್ವ. ೯೭); ನನ್ನ ಕಕ್ಕನು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದನು (ಕ್ಷತಕ್ಕ. ೯೭). [ಪ್ರೀತಿ + — ಇಸು$_3$]

ಪ್ರೀಯ (ನಾ). ಅಕ್ಕರೆ; ಪ್ರೀತಿ: ಪ್ರೀಯದೆ ಬಂದು ನಿನ್ನ ಮನಮೊಲ್ದಲ

ರೋಳಿಗಳಿಂ ವಿಚಿತ್ರಶೋಭಾಯುತಭೂಷಣಪ್ರಸರಮಂ ಸಮೆದು (ಶಾಂತೀಶ್ವ. ೦೦-೩೮). [<ಸಂ. ಪ್ರಿಯ]

ಪ್ರೇಂಖ (ನಾ). ೧. ಉಯ್ಯಾಲೆ. ೨. ನಾಟ್ಯ ; ನೃತ್ಯ : "ಉಯ್ಯಲೊಳು ನೃತ್ಯದೊಳು ಪ್ರೇಂಖಮಕ್ಕುಂ" (ಮಂಗರಾ. ೦೩೩-೬೩). ೩. ಹೊಳಪು ; ಪ್ರಕಾಶ: "ನೃತ್ಯ ಮುಯ್ಯಲುಂ ಪೊಳಪಿವು ಪ್ರೇಂಖ ಶಬ್ದ" (ಶಾಶಾರ. ೦೩೦). [ಸಂ.]

ಪ್ರೇಂಖಣ (ನಾ). ೧. ತೂಗಾಟ ; ತೂಗಾಡುವುದು. ೨. ಉಯ್ಯಾಲೆ. ೩. ಒಂದು ಬಗೆಯ ಮರ : ಜಾಯಿಕಾಯಿ, ಪ್ರೇಂಖಣ, ತಾಳೀಸಪತ್ರೆ . . . ಜೇನುತುಪ್ಪದಲ್ಲಿ ಸೇವಿಸಲು ಅಶ್ಮರೀ, ಮೂತ್ರಕೃಚ್ಛ್ರ, ಗರ್ಭವಾತ ಸಹ ಮಾಣುವುವು (ಸಳಸ್ಯ. ಸಂ. ೪೯೬). ೪. [ನಾಟ್ಯ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು ; ಸೂತ್ರಧಾರನಿಲ್ಲದ ಏಕಾಂಕ ನಾಟಕ : ನಾಟಕಾ . . . ೯ ಪ್ರೇಂಖಣ . . . ೧೮ ಭಾಣಿಕಾ—ಎಂದು ಉಪರೂಪಕಗಳು ಹದಿನೆಂಟು ವಿಧ (ಸಂಶಾಟ. ೩೨). [ಸಂ.]

ಪ್ರೇಂಖಿತ (ಗು). ೧. ಅಲ್ಲಾಡುವ; ತೂಗಾಡುವ : ಮಣಿಪ್ರಭಾ ಪ್ರೇಂಖಿತ ರಥ್ಯಾಮಂಡನಮಂ ಕಂಡಂ (ಶಾದಂಪು. ೦೦೦೨); ಪ್ರೇಂಖಿತ ಶಂಖಸಮುದಾಯಮೆ ಬೆಳ್ದಾವರೆಗಳಾಗೆಯುಂ (ಜಗಂ. ೦೪-೮೯ ಪ). (ನಾ). ೨. ತೂಗಾಟ; ಅಲ್ಲಾಡುವುದು : "ಪ್ರೇಂಖೋಳಿತಂ, ತರಳಿತಂ, ಪ್ರೇಂಖಿತಂ, ಲುಳಿತಂ—ಈ ೪ ಅಲ್ಲಾಡುವುದು" (ಹಲಾಯು. ೦೨೩-೬೦). ೩. ಉಯ್ಯಾಲೆ. [ಸಂ.]

ಪ್ರೇಂಖೋಲ (ನಾ). ೧. ಅಲ್ಲಾಡುವಿಕೆ ; ತೂಗಾಟ ; ಒಲೆದಾಟ : ಉದ್ವೀಚಿಮರುಮರೀಚಿನಿಚಯಚಂಚಲೋದ್ದಾಮಬಲಬಹುಲನಿಷ್ಕವಚಪ್ರಾಸಪಾಣಿವಾರಾಶ್ಚಿಕಮುಗ್ರಪುಂಖ ಪ್ರೇಂಖೋಲಾನೇಕನೇತ್ರಪಟ್ಟಿಕಾ . . . ಲಾಟಬಲಂ (ಆದಿಪು. ೦೩-೪೩ ಪ). ೨. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : ಸಲೆ ಡೋಲ ಪಾದಚಾರಿಯೆನೊಲವಿಂದಂ ಮಾಡೆ ಪದದೆ ಮತ್ತೊಂದು [ಪದಂ] ಕೆಲದಿಂದೆ ನೆಗೆದು ತಿರುಗಲ್ ಲಲನೇ ಪ್ರೇಂಖೋಲ ಕರಣಮೆಂದೆನಿಸಿರ್ಕುಂ (ಲಾಸ್ಕರಂ. ೪-೦೪೦). [ಸಂ.]

ಪ್ರೇಂಖೋಲನ, ಪ್ರೇಂಖೋಳನ (ನಾ). ೧. ಒಲೆತ ; ತೂಗಾಟ ; ಒಲೆದಾಟ: "ಪ್ರೇಂಖೋಲ[ಪಾಠಾಂ. ೪]ನಂದೋಳಮೆನಲದೊಲಹಿಂಗಕ್ಕು" (ಮಂಗರಾ. ೦೩೬-೩೯). ೨. ತೂಗುಮಣೆ ; ಉಯ್ಯಾಲೆ ; ಜೋಕಾಲಿ. ಪ್ರೇಂಖೋಳನ : ೧. "ಡೋಳಾ, ಪ್ರೇಂಖೋಳನಂ, ಪ್ರೇಂಖಾ—ಈ ೩ ಅಲ್ಲಾಟಂ" (ಹಲಾಯು. ೦೨೬-೭೮); ಆಗಳ್ ಪ್ರೇಂಖೋಳನವಿಳಾಸದಿಂದಾಸರಮಂ ಲೀಲಾಸರಮನುತ್ತರಿಸುವಂತುತ್ತರಿಸಿ (ಶಂಪ್ರಪು. ೩-೪೩ಪ). [ಸಂ.]

ಪ್ರೇಂಖೋಲಿತ, ಪ್ರೇಂಖೋಳಿತ (ಗು). ೧. ಅಲ್ಲಾಡುವ; ತೂಗಾಡುವ: ಅತಿಪ್ರಚುರಚಲದವನಿಪಾಲ ಸಂಚಲಚ್ಚಾಮರಮರುತ್‌ಪ್ರೇಂಖೋಲಿ [ಪಾಠಾಂ. ೪]ತಾಭರಣವಿಚಿತ್ರನೇತ್ರವೈಜಯಂತಿಕಾಂಚಲನುಂ . . . ನಡೆಯೆ (ಆದಿಪು. ೦೨-೬೦ ಪ). (ನಾ). ೨. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; "ಒಂದು ಕಾಲಿನಿಂದ ಡೋಲಪಾದಚಾರಿಯನ್ನು ಮಾಡಿ ಇನ್ನೊಂದು ಕಾಲಿನಿಂದ ನೆಗೆದು ಸುತ್ತುವುದು" (ಲಾಸ್ಕರಂ. ೩೦೦ ಗದ್ಯಾನುವಾದ): ಪ್ರೇಂಖೋಲಿತ ಸಲೆ ಡೋಲಪಾದಚಾರಿಯನೊಲವಿಂದಂ ಮಾಡೆ ಪದದೆ ಮತ್ತೊಂದು [ಪದಂ] ಕೆಲದಿಂದೆ ನೆಗೆದು ತಿರುಗಲ್ ಲಲನೇ ಪ್ರೇಂಖೋಲಕರಣಮೆಂದೆನಿಸಿರ್ಕುಂ (ಲಾಸ್ಕರಂ. ೪-೦೪೦). ಪ್ರೇಂಖೋಳಿತ : ೩. [ಕಾಮಶಾ] ಸಂಭೋಗದಲ್ಲಿ ಒಂದು ಬಗೆ : ಪಟ್ಟಿಹಿನೆಯನ ತಿಗಂ ಮುಟ್ಟೆ ಸತಿ ಮೊಳಕಾಲನಿಟ್ಟೊಮ್ಮೆಯೊಮ್ಮೆ ಕಟಿಯನೆ ಕಾಲ್ಗಳಿಂ ಮೆಟ್ಟಿ ಕಿಬ್ಬರಿಗಳನೆ ತಟ್ಟಿ ಮರ್ಮಂಗಳಂ ಮುಟ್ಟಿ ರಮಿಸಲ್ಕದೇ ಪ್ರೇಂಖೋಳಿತಂ (ಜಪಪ. ೦೦-೦೦). [ಸಂ.]

ಪ್ರೇಂಖೋಳನ 'ಪ್ರೇಂಖೋಲನ' ನೋ.

ಪ್ರೇಂಖೋಳಿತ 'ಪ್ರೇಂಖೋಲಿತ' ನೋ.

ಪ್ರೇಕ್ಷಕ (ನಾ). (ನಾಟಕ, ಸಿನಿಮಾ, ನೃತ್ಯ ಮೊದಲಾದುವುಗಳನ್ನು) ನೋಡುವವನು; ನೋಟಕ : ಆಯಾ ಶ್ರೇಣಿಯ ಪ್ರೇಕ್ಷಕರಿಗೆ ತಕ್ಕ ಹಾಗೆ ಬೇರೆ ಬೇರೆಯ ಸ್ಥಲವು ಏರ್ಪಟ್ಟಿತು (ಭೀಷ್ಮಕ. ೬೦). [ಸಂ.]

ಪ್ರೇಕ್ಷಣ (ನಾ). ೧. ಕಣ್ಣು. ೨. ನೋಡುವಿಕೆ ; ನೋಟ : "ಪ್ರೇಕ್ಷಣಕೆ ಪೆಕ್ಕಣಂ ನೋಟಂ" (ಕಬ್ಬಿಕ್ಕ. ೩೮); ಪ್ರೇಕ್ಷಣ – ಪೆಕ್ಕಣ (ಶಮದ. ೨೬೨ ಪ್ರಯೋ). ೩. ಪ್ರದರ್ಶನ; ದೃಶ್ಯ. ೪. ಒಂದು ಬಗೆಯ ನೃತ್ಯ ಪ್ರದರ್ಶನ : ಪ್ರೇಕ್ಷಣಮಂ ಮುದದಿಂ ಬಂದೀಕ್ಷಿಪ ವಿಟತತಿಯ ಕಣ್ಗೆ ಬಲೆಯೆನಿಸಿದ ಕಂಜಾಕ್ಷಿಯರಿರೆ ಪಲರಲ್ಲಿ ವಿವಕ್ಷಿತನಾ ಚಾರುದತ್ತನಭಿವೀಕ್ಷಿಸಿದಂ (ಸೇಮಿಪು. ೪-೪೬). [ಸಂ.]

ಪ್ರೇಕ್ಷಣೀಯ (ಗು). ನೋಡಲು ಅರ್ಹವಾದ ; ನೋಡಬೇಕಾದ ; ರಮ್ಯವಾದ : ಆ ದಿನವನ್ನೆಲ್ಲ . . . ಮುಂಬಯಿಯಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದರಲ್ಲಿ ಅವರು ಕಳೆದರು (ಸಮಜೀ. ೦೦೩೪). [ಸಂ.]

ಪ್ರೇಕ್ಷಾಗಾರ (ನಾ). ನಾಟಕ ಮುಂತಾದುವುಗಳ ಪ್ರದರ್ಶನಸ್ಥಳ : ಅಲ್ಲಿ ಪ್ರೇಕ್ಷಾಗಾರವನ್ನು ಕಟ್ಟಿಸಿ ಅದರಲ್ಲಿ ರಾಜನೂ ಅರಮನೆಯ ಹೆಂಗಸರೂ ಕುಳಿತುಕೊಳ್ಳುವುದಕ್ಕೆ ಮಂಚಗಳನ್ನು ರಚಿಸಿದನು (ಪಸಭಾ. ೨೨) ; ಪ್ರೇಕ್ಷಾಗಾರವು ಚಿತ್ರವಿಚಿತ್ರವಾದ ಶಿಲ್ಪಕಾರ್ಯದಿಂದಲೂ ನಾನಾವರ್ಣದ ಮಣಿಗಳಿಂದಲೂ ಶೋಭಿಸುತ್ತಿದ್ದಿತು (ಭೀಷ್ಮಕ. ೬೦). [ಸಂ.]

ಪ್ರೇಕ್ಷಾಗೃಹ (ನಾ). = ಪ್ರೇಕ್ಷಾಗಾರ : ವರ್ಧಮಾನಮೆಂಬೀಕ್ಷಣಪ್ರಿಯ ಪ್ರೇಕ್ಷಾಗೃಹಮುಂ (ಆದಿಪು. ೦೩-೩೮); "ಪ್ರೇಕ್ಷಾಗೃಹ" ವನ್ನು ಹೇಗೆ ಕಟ್ಟಬೇಕು ? (ಭಾರಮಾ. ೦೩). [ಸಂ.]

ಪ್ರೇಕ್ಷಾಸದನ (ನಾ). = ಪ್ರೇಕ್ಷಾಗಾರ : ವರ್ಧಮಾನಾಭಿಧಾನ ಪ್ರೇಕ್ಷಾಸದನಂಗಳಿಂದಂ (ಶಾಂತಿಪು. ೦೦-೮೪ ಪ). [ಸಂ.]

ಪ್ರೇಕ್ಷೆ (ನಾ). ೧. ನೋಡುವುದು; ನೋಟ; ದರ್ಶನ : ನಕ್ಷತ್ರಮಂಡಲದಿನಾಚೆಯಿಂದೊಂದು ದನಿ ವಕ್ಷೋಗುಹಾಂತರದಿನೊಂದು ದನಿಯಿಂತೀ ಸಾಕ್ಷಿದ್ವಯವು ನಿನ್ನೊಳೊಂದುಗೂಡಿದೊಡದೇ ಪ್ರೇಕ್ಷೆ ಪರಬೊಮ್ಮನದು (ಮಂಕುಳ. ೬೦). ೨. ಪ್ರದರ್ಶನ: ದೃಶ್ಯ. ೩. ಬುದ್ಧಿ; ಚಾತುರ್ಯ; ಜಾಣ್ಮೆ : "ಪ್ರೇಕ್ಷಾ . . . ಉಪಲಬ್ಧಿಃ—ಈ ೧೩ ಬುದ್ಧಿ" (ಹಲಾಯು. ೩೩-೦೭೯). [ಸಂ. ಪ್ರೇಕ್ಷಾ]

ಪ್ರೇತ (ನಾ). ೧. ಜೀವವಿಲ್ಲದ ದೇಹ ; ಹೆಣ; ಶವ: "ಪ್ರೇತಃ, ಪರೇತಃ, ಕುಣಪಃ, ಶವಃ—ಈ ೪ ಪೆ(ಹೆ)ಣಂ" (ಹಲಾಯು. ೦೦೪-೬); ಬಿಡದಟಲ್ವ ಬಂಧುಜನದೊಟ್ಟುಡಿಯದ ಕಣ್ಣೀರ ಪೂರಮಾ ಪ್ರೇತಮನೋಗಡಿಸದೆ ಸುಡುವುದು (ಮಂಪಶಾ. ೨-೨೮); ಮಗುವನ್ನು . . . ಸ್ಮಶಾನದವರೆಗೆ ಹೆಂಡತಿಯ ಪ್ರೇತದ ಜೊತೆಗೆ, ಅದನ್ನು ತಾನೇ ಒಯ್ದನು (ಗುಮಾಯಿ. ೨೮೦). ೨. ಪಿಶಾಚಿ; ದೆವ್ವ; ವ್ಯಂತರ : "ಪ್ರೇತಃ . . . ನರಕಯಾತನೆ ಪಡುವ ಪ್ರಾಣಿ, ಸತ್ತು ಹೋಗಿ ಸಂಸ್ಕಾರವಿಲ್ಲದೆಯಿರುವವನು" (ಸಿದ್ಧಾಂತಿ. ೩೮೯) ; ಬಿಡದೆ ಬಸಿವೇಱುಗಳ ರಕುತದ ಕಡಲು ಕಡಲನು ಕಲಕೆ ಕಾಗೆಯ ಗಡಣ ನಾಯ್ನರಿ ಹದ್ದು ಭೂತ ಪ್ರೇತ ನೆಱೆದಣಿಯೆ (ಕೌತಿಶಾ. ೩೩-೦೦). ೩. ದೇಹವನ್ನು ಅಗಲಿದ ಜೀವ : ಎಷ್ಟೋ ದಿನಗಳ ಹಿಂದೆಯೇ ಗತಿಸಿ ಹೋದ ಕುಮಾರಿಯ ಪ್ರೇತವು ಇಂದು ನಿನ್ನೊಡನೆ ಮಾತನಾಡುತ್ತಿದೆ (ಆರ್ಯಕ. ೪೬). ೪. ಪಿತೃದೇವತೆ. [ಸಂ.]

ಪ್ರೇತಕ (ಗು). ಹೆಣಕ್ಕೆ ಸಂಬಂಧಿಸಿದ : ಶಿವನ ಪಾದಾಂಭುವಂ ಧರಿಸಿರ್ಪ ಮಾನವಂ ತವೆ ಸೂತಕ ಪ್ರೇತಕಾದ್ಯಶೌಚಂಗಳೊಳಗವಿರತಂ ವರ್ತಿಸುತ್ತಿರ್ದೊಡಂ ನೋಡವನೆ ಅಣಿಯರಂ ಶುದ್ಧಂ (ಆಂಶ. ೦-೩-೦೦). [ಸಂ.]

ಪ್ರೇತಕರ್ಮ (ನಾ). ಸತ್ತವನ ದೇಹಕ್ಕೆ ಮಾಡುವ ಸಂಸ್ಕಾರ; ಅಂತ್ಯ

ಕ್ರಿಯೆ; ಶವಸಂಸ್ಕಾರ : ಆದೊಡಂ ಪ್ರೇತಕರ್ಮಂಗಳೊಳ್, ಓ ವಾಸುದೇವಾ—ನಿನ್ನನೆಮ್ಮೊಳ್ ಕೂಡೆ ಅಳ್ಕುವೆನ್ (ಅಶ್ವಶ್ವಾ. ೪೬-೧೭೦). [ಸಂ. ಪ್ರೇತಕರ್ಮನ್]

ಪ್ರೇತಕಳೆ (ನಾ). ಲವಲವಿಕೆ ಇಲ್ಲದಿರುವ ಸ್ಥಿತಿ ; ತುಂಬ ಮಂಕಾಗಿರುವಿಕೆ : ಮಾಡಿದ ತಪ್ಪಿನಿಂದಾಗಿ ಅವನ ಮುಖದಲ್ಲಿ ಪ್ರೇತಕಳೆ ಹರಿಯುತ್ತಿತ್ತು (ರೂಪ). [ಸಂ. ಪ್ರೇತಕಲಾ]

ಪ್ರೇತಕಾರ್ಯ (ನಾ). = ಪ್ರೇತಕರ್ಮ : ಧೀರಮತಿ ಪಾರ್ಥಿವಕುಮಾರ. ತಡೆ ಶೋಕಮಂ; ಪ್ರೇತಕಾರ್ಯವನೆಸಗಿ ಪಿತೃಗೆ, ಕಳುಹಾತನಂ ಲೋಕದುತ್ತಮಗತಿಗೆ (ಶ್ರೀರಾಮಾ. ೧೦೭-೧೫೩). [ಸಂ.]

ಪ್ರೇತಗಾಹು (ನಾ). ಹೆಣಗಳನ್ನು ಸುಡುವ ಸ್ಥಳವನ್ನು ಕಾಯುವಿಕೆ; ಸುಡುಗಾಡಿನ ಕಾವಲು : ವರವಾರಣಾಸಿಮಧ್ಯವೆ ಲಾಳದೇಶವಚ್ಚರಿಯ ಕಾಶೀಪುರವಯೋಧ್ಯೆ ಶ್ಮಶಾನಧರೆಯರಮನೆ ಪ್ರೇತಗಾಹಿನ ತವಗ ಮಣಿಪೀಠ (ಹಕಶಾ. ೦೦-೪೬). [ಪ್ರೇತ + ಕಾಹು$_1$ (< ಕಾಪು)]

ಪ್ರೇತತರ್ಪಣ (ನಾ). ಸತ್ತವರಿಗೆ ಅರ್ಪಿಸುವ ತರ್ಪಣ : "ಪ್ರೇತತರ್ಪಣಮೆನೆ ನಿವಾಪಮೊಂದೆನೆ ಕರ್ಮದಾ ತಿಲೋದಕಮಕ್ಕುಂ" (ಮಂಗರಾ. ೦೦೭-೪). [ಸಂ.]

ಪ್ರೇತನಾಥ (ನಾ). ಯಮ : ಶ್ವೇತಮುನಿಯಂ ಕಾಯ್ದು ತನ್ನ ನಿಶಾತ ಶೂಲದೊಳಿಟ್ಟನುಗ್ರನು ಪ್ರೇತನಾಥನ ವಕ್ಷಮಂ (ಪಸಪು. ೪೦-೨೯). [ಸಂ.]

ಪ್ರೇತಪತಿ (ನಾ). = ಪ್ರೇತನಾಥ : "ಶಮನಃ, ಸಮವರ್ತಿಃ, ಪ್ರೇತಪತಿಃ . . . ಶ್ರಾದ್ಧದೇವಃ— ಈ ೧೬ ಜವನ ಪೆಸರ್" (ಹಲಾಯು. ೦೩-೭೦); ಭೂತಳದೊಳಾ ಗೋವಧಾದೋಷಿಗಳ್ಗೆ ಯಾ ಪಾತಕಂ ನಾನಾ ಪ್ರಕಾರದಿಂ ಬಿಡದೆ ಯಿಾ ಪ್ರೇತಪತಿಯಾಜ್ಞೆಯಿಂ ನರಕದಿಂ ಬೇವುತಿರ್ಪರು ಮಹಾಪ್ರಳಯತನಕಾ (ಲೀಲಾವ. ೪-೨-೦೩); ಪ್ರೇತಪತಿಯಿದಿರೊಳಂದೀ ಭೂತಳಸುರನಸುವನೊಯ್ದು ತೋಱಲು (ಪಪ್ರಕಾ. ೪-೦೦೭). [ಸಂ.]

ಪ್ರೇತಪೀಡೆ (ನಾ). ದೆವ್ವದ ಕಾಟ : ನೆಮ್ಮದಿಯಿಂದಿರುವಾಗ ಈ ಪ್ರೇತಪೀಡೆ ಬೇರೆ (ಪರ್ಮಸ. ೦೩೦). [ಸಂ. ಪ್ರೇತ ಪೀಡಾ]

ಪ್ರೇತಬಲಿ (ನಾ). ಉತ್ತರಕ್ರಿಯೆ ಮಾಡುವಾಗ ಪ್ರೇತಕ್ಕೆ ಅರ್ಪಿಸುವ ಪಿಂಡ : (ಕ). [ಸಂ.]

ಪ್ರೇತಭೂಮಿ (ನಾ). ಸುಡುಗಾಡು ; ಶ್ಮಶಾನ : ಏನು ಗೂಗೆಯ ಕೂಗಿನಿತು ಕರ್ಕಶ, ಏಕಾರ! ಸುತ್ತಲಿಹ ಪ್ರೇತಭೂಮಿಯ ಮಹಿಮೆಯಿರಬೇಕು! (ಕಂಪ್ರಸ. ೦೦೦-೨೬). [ಸಂ.]

ಪ್ರೇತಯಾತ್ರೆ (ನಾ). ಶ್ಮಶಾನಯಾತ್ರೆ : ತಾವಿಂದು ಗುರುಮಹಾರಾಜರ ಪ್ರೇತಯಾತ್ರೆಯನ್ನೇ ನೋಡುತ್ತಿರುವದೆಂದು ಅನಿಸಿಬಿಟ್ಟಿತ್ತು ಅವರಿಗೆ (ಸ್ಮೃತಿಚಿ. ೪೩೦). [ಸಂ. ಪ್ರೇತಯಾತ್ರಾ]

ಪ್ರೇತವನ (ನಾ). = ಪ್ರೇತಭೂಮಿ : ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ (ಹಕಶಾ. ೭-೦೯). [ಸಂ.]

ಪ್ರೇತವಿದ್ಯೆ (ನಾ). "ಸತ್ತವರೊಂದಿಗೆ ವ್ಯವಹಾರ ನಡೆಸಿ ಭವಿಷ್ಯ ಹೇಳುವ ವಿದ್ಯೆ: ಪ್ರೇತವಿದ್ಯೆ; ಕಣ್ಕಟ್ಟು; ಯಕ್ಷಿಣಿ ; ಇಂದ್ರಜಾಲ" (Necromancy. ಇಂಕವಿ). [ಸಂ. ಪ್ರೇತವಿದ್ಯಾ]

ಪ್ರೇತಸಂಸ್ಕಾರ (ನಾ). = ಪ್ರೇತಕರ್ಮ : ಬೇರೆ ರೀತಿಯ ಸೂಕ್ತಗಳೂ ಕೆಲವು ಋಗ್ವೇದಸಂಹಿತೆಯಲ್ಲಿ ಸೇರಿಕೊಂಡಿವೆ. ಇವುಗಳಲ್ಲಿ . . . ಕೆಲವು ವಿವಾಹಕ್ಕೆ ಮತ್ತು ಪ್ರೇತಸಂಸ್ಕಾರಕ್ಕೆ ಸಂಬಂಧಪಟ್ಟವು (ಭಾರತ. ೨೩); ಹೆಂಡತಿಯ ಹಾಗು ಮಗನ ಪ್ರೇತಸಂಸ್ಕಾರವನ್ನು ರಾಘಪ್ಪ...ಮಾಡಿಸಿದನು (ಗಂಸೂಯಿ. ೨೮೦). [ಸಂ.]

ಪ್ರೇತಸೂತಕ (ನಾ). ಐದು ಬಗೆಯ ಸೂತಕಗಳಲ್ಲಿ ಒಂದು ; ಸತ್ತ ವ್ಯಕ್ತಿಯ ಸಂಬಂಧದಿಂದ ಉಂಟಾಗುವ ಸೂತಕ ; ಮರಣ ಸೂತಕ : ಪ್ರೇತಸೂತಕ ಜಾತಿಸೂತಕ ಜಾತವಿರಹಿತನಾಗಿ ದಿವಿಜವ್ರಾತದೊಳು ತಾನುತ್ತಮಾಂಗಮದಾಯ್ತು ಸರ್ವಾಂಗ (ಪಸಪು. ೧೮-೧೯); ಜಾತಿ ಸೂತಕ ಪ್ರೇತಸೂತಕ ಜನನಸೂತಕ ಉಚ್ಛಿಷ್ಟಸೂತಕ ರಜಸ್ಸೂತಕವೆಂಬ ಪಂಚಸೂತಕಂಗಳ ಕಳೆದು (ಅಪಂಡೇ. ೬೭-೯೦). [ಸಂ.]

ಪ್ರೇತಾಂಗಳ (ನಾ). = ಪ್ರೇತಭೂಮಿ : ಎಳೆಯ ರವಿರಶ್ಮಿಯಲಿ ಪ್ರೇತಾಂಗಳದ ಧೂಮಜ್ವಾಲೆಯಲಿ . . . ಆಯುಷವಿಳಿದು ಹೋಗದೆ ದಿನದಿನದೊಳು (ಕುಪಾ$_2$ಕಾ. ೩-೫೬). [ಪ್ರೇತ + ಅಂಗಳ$_2$]

ಪ್ರೇತಾರಾಧನೆ (ನಾ). ಭೂತಗಳಿಗೆ ಮಾಡುವ ಪೂಜೆ ; ಆರಾಧನೆ : ಕಲೆ, ಮಾಟ , ಪ್ರೇತಾರಾಧನೆ—ಇವು ಇದೇ ಕಾಲದಲ್ಲಿ ಪ್ರಾರಂಭವಾದವು (ಶಿಪ್ರಾ. ೨೦). [ಸಂ. ಪ್ರೇತಾರಾಧನಾ]

ಪ್ರೇತಾವಾಸ (ನಾ). = ಪ್ರೇತಭೂಮಿ: ಭೂತಪತಿಯೊಗೆವುದುಂ ತನ್ಮಾತೆ ವಲಂ ಮಡಿದಳಕ್ಕುಮಲ್ಲದೊಡಾತಂ ಪ್ರೇತಾವಾಸದೊಳಾಡುವ ಭೂತಂಗಳ ಕೂಡೆ ವಿಹರಣಂಗೆಯ್ದುಪನೆ (ಪೃಕವಿ. ೯-೦೦೨). [ಸಂ.]

ಪ್ರೇತಿ (ನಾ). ೧. ಸಾವು ; ಮರಣ. ೨. ಬೇರೆಯಾಗುವುದು ; ಅಗಲುವುದು. ೩. ವಿರುದ್ಧವಾದುದು ; ಪ್ರತಿಕೂಲವಾದುದು : ನಾನು ಏತಿ ಅಂದರೆ ಅವರು ಪ್ರೇತಿ (ಪರ್ಗದ. ೬೯). 'ಏತಿಪ್ರೇತಿ'ಪರಾ. ☞ 'ಪ್ರೇತಿ'ಯೆಂಬುದು ಏತಿಪ್ರೇತಿ ಎಂಬ ಕೂಡುನುಡಿಯಲ್ಲಿಯೂ ಕೆಲವೊಮ್ಮೆ ಬಿಡಿಯಾಗಿಯೂ ಪ್ರಯೋಗವಾಗುತ್ತದೆ. [ಸಂ.]

ಪ್ರೇಮ (ನಾ). ೧. ಒಲವು ; ಪ್ರೀತಿ : ಪ್ರೇಮದೊಳೆ ತನ್ನ ಬೆನ್ನನೆ ಧೂಮಪ್ರಭೆ ನಾರಕತ್ವಮೆಟ್ಟಿಂದವೊಲ್ (ಪಾರ್ಶ್ವನಾ. ೬-೦೦೩). ೨. ಅನುರಾಗ ; ಪ್ರಣಯ : ಪ್ರೇಮರಸಾಮೃತಾಂಬಧಿಯ ಮೇರೆಯೆ ತಾನೆನೆ (ಶಾಂತೀಶ್ವ. ೦೦-೬೬). ೩. ಅಕ್ಕರೆ ; ವಾತ್ಸಲ್ಯ : ಪ್ರೇಮದೆ ಧರ್ಮೋದ್ಭವನಾ ಭೀಮಂಗಾ ಸತಿಯೊಳಂತು ಪರಿಣಯನಮನುಷ್ಠಾಮಯಶನಂದು ಮಾಡಿ (ಪಂಪಿಪು. ೯-೬೩); ಪ್ರೇಮವೆ ನಿಖಿಲಪೂಜೆಯಾಯ್ತು (ಶ್ರೀರಾಮಾ. ೦೭-೪೧೩). ೪. ಸಂತೋಷ ; ಆನಂದ. ೫. [ಛಂದ] ಒಂದೊಂದು ಪಾದದಲ್ಲಿಯೂ ಒಂದು ಭಗಣ, ಒಂದು ಲಘು ಮತ್ತು ಒಂದು ಗುರುವೂ ಇರುವ ವೃತ್ತ : ಸೋಮ ಹರಿಯುಂ ಕಾಮಹರನುಂ ತಾಮಿರೆ ಪೆಸರ್ ಪ್ರೇಮಂ (ರಂಗೋಂಬಾ. ೨-೬೨). ೬. ಪ್ರತಿಸಾಲಿನಲ್ಲಿಯೂ ನಾಲ್ಕು ಗುರುಗಳುಳ್ಳ ಒಂದು ವೃತ್ತ ; ಪ್ರತಿಷ್ಠಾಛಂದಸ್ಸಿನಲ್ಲಿ ಒಂದು ವೃತ್ತ : ಪ್ರೇಮಂ ಗಗಗ ಗಂ (ರಂಗೋಂಬಾ. ೫. ೨-೬೫). [ಸಂ. ಪ್ರೇಮನ್]

ಪ್ರೇಮಂಗೈ (ಕ್ರಿ). ಪ್ರೀತಿಸು ; ಒಲವುದೋರು : ಪ್ರೇಮಿ ಪ್ರಿಯಂ ಸಹಚರಂ ಪರಾಯಣನೆನಲ್ ಪ್ರೇಮಂಗೈವ[ಪಾಕಶಾ. ಪ್ರೇಮಗೈವ] ನೆನಿಕ್ಕು (ಮಂಗರಾ. ೬೮-೮). [ಪ್ರೇಮ + ಕೈ$_1$ (< ಕೆಯ್$_1$)]

ಪ್ರೇಮಕಥೆ (ನಾ). ಪ್ರಣಯದ ಕಥೆ : ಶಾಕುಂತಲವು ದುಷ್ಯಂತ ಶಕುಂತಲೆಯರ ಪ್ರೇಮಕಥೆ (ಧರ್ಮಗಾ. ೬೭). [ಸಂ. ಪ್ರೇಮಕಥಾ]

ಪ್ರೇಮಕಲಹ (ನಾ). ಪ್ರೀತಿಯ ಹುಸಿಜಗಳ : ಈ ಮಾತಿನಿಂದ ನಮ್ಮಲ್ಲಿ ಸ್ವಲ್ಪ ಪ್ರೇಮಕಲಹವಾಗಿ ಅಕ್ಕಿ ತರಬೇಕೆಂದು ಹೇಳಿ ಅವರನ್ನು ಸಾಗಹಾಕಿದೆ (ಸ್ಮೃತಿಚಿ. ೦೨೯). [ಸಂ.]

ಪ್ರೇಮಗೀತ (ನಾ). ಪ್ರೀತಿಯನ್ನು ವಸ್ತುವಾಗಿಟ್ಟುಕೊಂಡಿರುವ ಹಾಡು ; ಪ್ರಣಯಗೀತೆ : ಠಾಕೂರರ ಪ್ರೇಮಗೀತಗಳ ಸಮುಚ್ಚಯ 'ತೋಟಗಾರ' (ಧರ್ಮಗಾ. ೫೯) ; ಬುದ್ಧಿಪ್ರಧಾನತೆಯು ವಿದ್ವತ್ ಪ್ರಚುರವಾಗದೆ ಬರಿ ಜೀವನದೃಷ್ಟಿಯ ಒಂದು ಅಂಗವಾಗಿ ಬರುವುದನ್ನು ವಿಡಂಬನಗೀತಗಳಲ್ಲಿಯೂ ಪ್ರೇಮಗೀತಗಳಲ್ಲಿಯೂ ಬೇರೆ ಭಾವಗೀತಗಳಲ್ಲಿಯೂ ನಾವು ಕಾಣುತ್ತೇವೆ (ಪವ್ಯಕಾ. ೩೦). [ಸಂ.]

ಪ್ರೇಮಪಾತ್ರ (ನಾ). ಪ್ರೀತಿಗೆ ಪಾತ್ರವಾದ ವ್ಯಕ್ತಿ : ಸೌ. ರಾಧಾದೇವಿಯವರು ಕೃಷ್ಣರಾಯರ ಪ್ರೇಮಪಾತ್ರರಿರುವರೆಂಬ ಸಂಗತಿಯು ನಿಜವೇ ಹೇಗೆ? (ಸ್ಕೂಲಮಿ. ೦೪೯). [ಸಂ.]

ಪ್ರೇಮಭಂಗ (ನಾ). ಪ್ರಣಯಕ್ಕೆ ಅಡ್ಡಿಯುಂಟಾಗುವುದು : ಪ್ರೇಮಭಂಗವು ಅನೇಕಸಾರಿ ತೆರತೆರನಾದ ಉನ್ಮಾದಗಳಲ್ಲಿ ಪರ್ಯವಸಾನವಾಗುತ್ತದೆ (ಕಾಮೂರು. ೨೬೬) ; ಪ್ರೇಮಭಂಗದಿಂದಾದ ಒಂದು ಆತ್ಮಹತ್ಯೆಯ ವಿಷಯವನ್ನು . . . ಚರ್ಚಿಸುತ್ತಿದ್ದಳು (ಜಯಂತ. ೨೬೩). [ಸಂ.]

ಪ್ರೇಮಲ, ಪ್ರೇಮಳ (ಗು). ಪ್ರೀತಿಯಿಂದ ಕೂಡಿದ ; ಪ್ರೇಮಪೂರಿತವಾದ : ಕವಿತೆಯಿಂದ ನಾವು ಬಯಸುವುದೇನನ್ನು ? ನಿರ್ಲಿಪ್ತವೂ ಜ್ಞಾದೀಪ್ತವೂ ಪ್ರೇಮಲವೂ ಆದ ಚಿತ್ತದ ಸಂಸರ್ಗವನ್ನು (ಕಾವ್ಯಕು. ೩೩); ಇವನು . . . ಸಾಕಷ್ಟು ಸುಂದರ, ಹಣವಂತ ; ಪ್ರೇಮಲಸ್ವಭಾವದ ವ್ಯಕ್ತಿ (ಭೇಮ್ಸ್‌ಗಂ. ೦೭). ಪ್ರೇಮಳ : ನನ್ನಲ್ಲಿ ಏನಾದರೂ ಒಳ್ಳೆಯ ಗುಣ, ಏನಾದರೂ ಪ್ರೇಮಳಸ್ವಭಾವ ಇದ್ದುದಾದರೆ ಅದರ ಶ್ರೇಯಸ್ಸು ಮಾತೃನಿಷ್ಠ ಸಹೋದರನಿಗೂ . . . ಸಲ್ಲುತ್ತದೆ (ಶ್ಯಾಮತಾ. ೩೬). [ಸಂ.]

ಪ್ರೇಮಲೆ (ನಾ). ಪ್ರೀತಿಪಾತ್ರಳಾದವಳು : ಸ್ವಪ್ನರೋಹಿಣಿ ಪ್ರೇಮಚಂದ್ರಗೆ ಲಕ್ಷರೂಪಿಣಿ ಪ್ರೇಮಲೆ (ಮಾನಸ. ೦೯–೦೨). [ಸಂ. ಪ್ರೇಮಲಾ]

ಪ್ರೇಮವಿವಾಹ (ನಾ). ಗಂಡು, ಹೆಣ್ಣು ಪರಸ್ಪರ ಪ್ರೀತಿಯಿಂದ ಒಪ್ಪಿ ಮಾಡಿಕೊಳ್ಳುವ ಮದುವೆ : ತಮ್ಮ ಈ ಪ್ರೇಮವಿವಾಹಕ್ಕೆ ತನ್ನ ತಾಯಿಯೂ ಒಪ್ಪಿದ್ದಾಳೆ ಎಂಬ ಆನಂದದ ಸುದ್ದಿಯನ್ನಷ್ಟೇ ತಿಳಿಸಿದಳು (ಆಶೋಲೀ. ೦೦೦). [ಸಂ.]

ಪ್ರೇಮಳ : 'ಪ್ರೇಮಲ'ನೋ.

ಪ್ರೇಮಾನುಬಂಧ (ನಾ). ಅನುರಾಗಬಂಧನ : ಭವವಾರ್ಧಿಪ್ರತಿಮಗ್ನ ಜೀವನಿವಹಂ ಪ್ರೇಮಾನುಬಂಧಂ ಮನೋಭವರಾಗಾಶಯಮಂ ನಿಮಿರ್ವ ಭವಸಂತಾನಂಗಳೊಳ್ ಕೂರ್ಪ ಕೂಡುವ ತ[ಟ್ತಿ]ರ್ಪ ಬಯಕ್ಕೆಯಂ ಬಯಸುಗುಂ (ಶಾಂತಿಪು. ೯–೭). [ಸಂ.]

ಪ್ರೇಮಾಲೋಕನ (ನಾ). ಪ್ರೀತಿಯಿಂದ ನೋಡುವುದು ; ಅನುರಾಗದೃಷ್ಟಿ : ಪ್ರೇಮಾಲೋಕನಸುಮನೋದಾಮದೆ ಬರೆತೆಗೆಯೆ ಭೂಭುಜಂ ನಿಜತನುದಿವ್ಯಾಮೋದಂ ಬಳಸೆ ಲತಾಕೋಮಳೆ ಕುಳ್ಳಿರ್ದಳೊಡನೆ ಹೇಮಾಸನದೊಳ್ (ಮಲ್ಲಿಪು. ೯–೭೮). [ಸಂ.]

ಪ್ರೇಮಿ (ನಾ). ಪ್ರೀತಿಸುವ ವ್ಯಕ್ತಿ ; ಪ್ರಣಯಿ : "ಪ್ರೇಮಿ ಪ್ರಿಯಂ ಸಹಚರಂ ಪರಾಯಣನೆನಲ್ ಪ್ರೇಮಗೈವನೆನಿಕ್ಕು" (ಮಂಗರಾ. ೬೮–೬) ; ಮತ್ತೆ ಮರುದಿನ ಮುಂಜಾನೆ ಭೆಟ್ಟಿಯೆಂದು ಪ್ರೇಮಿಗಳಿಬ್ಬರೂ ಅಗಲಿದರು (ಸಮಜೀ. ೯೦೬). [ಸಂ. ಪ್ರೇಮಿನ್]

ಪ್ರೇಮಿಸು (ಕ್ರಿ). ಪ್ರೀತಿಸು ; ಒಲವುದೋರು : ನೀನೆಂದೆಂದಿಗೂ ಪ್ರೇಮಿಸುತ್ತಿರು ಅವಳೆಂದೆಂದಿಗೂ ಸುಂದರಿಯಾಗಿರಲಿ (ಭಾರಜಾ. ೬೬). [ಪ್ರೇಮ + – ಇಸ್ಸು]

ಪ್ರೇಮೋನ್ಮಾದ (ನಾ). ಹಂಚ್ಚುಪ್ರೀತಿ ; ಪ್ರೇಮದ ಉದ್ವೇಗ : ಪ್ರೇಮೋನ್ಮಾದ, ಪ್ರಣಯಕೋಪ, ವಿರಹತಾಪ. . .ಎಲ್ಲವನ್ನೂ ಕಲಾವಿದ ನಿರೂಪಿಸಿದ (ಭಾರದ. ೩೩೦). [ಸಂ.]

ಪ್ರೇಯ (ನಾ). ೧. ಸುಖ ; ಕ್ಷೇಮ : ನಿಮ್ಮ ಜೀವನವು ಪ್ರೇಯಮೇಣ್ ಶ್ರೇಯಕ್ಕಾಗಿ ! (ಕರುಶ್ರಾ. ೭೭–೦೪). ೨. [ಕಾವ್ಯಮೀ] ಅಲಂಕಾರಗಳಲ್ಲಿ ಒಂದು ; ಪ್ರೀತಿಪರವಾದ ಮಾತುಗಳಿಂದ ಕೂಡಿದ ಬರಹವೇ ಪ್ರೇಮವೆಂಬ ಅಲಂಕಾರದಿಂದ ಕೂಡಿರುವುದು: ಪ್ರೇಯಂ, ಪ್ರಿಯತರವಚನಾಖ್ಯೇಯಮಹಂಕಾರಿಗರಿಮಮೂರ್ಜಸ್ವಿ ಶುಭಪ್ರಾಯಾರ್ಥಾಶಂಸಾಭಿಪ್ರಾಯಮಲಂಕಾರಮಾಶಿಯೆಂಬರ್ ಕೆಲಬರ್ (ಕಾವ್ಯಾವ. ೬೬೨) ; 'ರಸವತ್', 'ಪ್ರೇಯ', 'ಊರ್ಜಸ್ವಿ', 'ಸಮಾಹಿತ'. —ಈ ಅಲಂಕಾರಗಳಲ್ಲಿ ರಸಾದಿಗಳಿಗೆ ಅಂಗತ್ವವುಂಟು (ರ್ಶ್ಯಾಲೋ. ೬೦). [ಸಂ. ಪ್ರೇಯಸ್]

ಪ್ರೇಯಸಿ (ನಾ). ಪ್ರೀತಿಪಾತ್ರಳಾದವಳು ; ನಲ್ಲೆ : ಸುದತೀ ಸದ್ರೂಪಮಂ ತಾಳ್ದಿದ ವನಜಭವಪ್ರೇಯಸೀನಾಮಮಂ ತಾಳ್ದಿದ . . . ವಾಕ್ಸುಂದರಿ ಪರಮವಚೋವೃದ್ಧಿಯಂ ಮಾಡುಗೆಮ್ಮೊಳ್ (ಸುಕುಮಾ. ೦–೭) ; ಪ್ರೇಯಸಿ ಬಂದು ನಿನ್ನ ಮನಮೊಲ್ದರಲೋಳಿಗಳಿಂ ವಿಚಿತ್ರಶೋಭಾಯತಪ್ರಸರಮಂ ಸಮೆದು (ಕುಸುಮಾ. ೩–೬೯) ; ಆದಿದೇವ ರಾಗರಸಿಕ, ಈತನ ರಸಿಕತೆಗೆ ಮೆರುಗು ಕೊಡಲು ಯಶಸ್ವತಿ ಹಾಗೂ ಸುನಂದೆಯರು ಪ್ರೇಯಸಿಯರಾಗಿ ಬಂದರು (ದಾವಜಂ. ೦೬). [ಸಂ. ಪ್ರೇಯಸೀ]

ಪ್ರೇಯಸ್ಸು (ನಾ). ಸುಖ ; ಕ್ಷೇಮ : ಇದೇ ಶ್ರೇಯಸ್ಸಿನ ದಾರಿ, ಪ್ರೇಯಸ್ಸಿನ ದಾರಿಯೂ ಹೌದು (ರಾಜ್ಯೋದ. ೨೦೯) ; ಅಪಾರಸಂಪತ್ತನ್ನು ಗಳಿಸಿಯೂ ಪ್ರೇಯಸ್ಸಿಗಿಂತ ಶ್ರೇಯಸ್ಸೇ ಮುಖ್ಯವೆಂದು ಭಾರತವು ಸಾರಿತು (ಭಾರದ. ೩೮೯). [ಸಂ. ಪ್ರೇಯಸ್]

ಪ್ರೇರಕ (ಗು). ೧. ಉತ್ತೇಜನಗೊಳಿಸುವ ; ಪ್ರಚೋದಿಸುವ. (ನಾ). ೨. ಉತ್ತೇಜನಗೊಳಿಸುವುದು ; ಪ್ರಚೋದನೆ : ಭಾರ್ಯರಿಂದೊಡಗೂಡಿ ಕಾರಣಕಾರ್ಯವಸ್ತುಗಳಲ್ಲಿ ಪ್ರೇರಕಪ್ರೇಯರೂಪಗಳಿಂದೆ ಪಟತಂತುಗಳವೊಲಿದ್ದು . . . ಈತನ ವಿಹಾರವು ಗೋಚರಿಪುದೇನೋ (ಹಸಾರ. ೩–೯) ; ಹಿಂದೆ ಸೃಷ್ಟಿಕ್ರಿಯೆಗೆ ಪ್ರೇರಕವಾಗಿರುವ ಶಕ್ತಿ ಒಂದು ಯುಗಧರ್ಮ (ಭಾವಗೀ. ೯). ೩. ಕಾರ್ಯದಲ್ಲಿ ತೊಡಗಿಸುವವನು ; ಪ್ರಚೋದಕ : ಪ್ರೇರಕಂ ನೀಂ ಬರಲು ಸಾಕ್ಷಿಯಂಟೇ ತಂದೆ (ಪಂಬರ. ೭–೦೩೩) ; ವ್ಯಾಸಮಹರ್ಷಿ ಭರತಖಂಡದ ಐಕ್ಯ ಮತ್ತು ಸಂಘಟನೆಗೆ ಪ್ರೇರಕನಾದನು (ಪುಕ್ಷಾರ. ೦೦೨ ಬೀಠಿಕೆ). [ಸಂ.]

ಪ್ರೇರಕಶಕ್ತಿ (ನಾ). ಉತ್ತೇಜನಗೊಳಿಸುವ ಶಕ್ತಿ ; ಪ್ರಚೋದಿಸುವ ಚೈತನ್ಯ : ಈ ಎರಡು ವಿರುದ್ಧಪಂಥಗಳಿಗೂ ಪ್ರೇರಕಶಕ್ತಿಯೊಂದೇ ಎಂಬುದು ವಿಚಿತ್ರಸಂಗತಿ. ಈ ಪ್ರೇರಕಶಕ್ತಿ ಅರಿಸ್ಟಾಟಲ್ಲನ ಸಿದ್ಧಾಂತ (ಪುಕ್ಷಾರ. ೦೦ ಬೀಠಿಕೆ) ; ಹಿಂದಿನ ಪ್ರೇರಕಶಕ್ತಿಯಾಗಲೀ . . . ಉದಾರ ಮನೋಭಾವವಾಗಲೀ ಈಗ ಉಳಿದಿರಲಿಲ್ಲ (ಪುನರು. ೦೯). [ಸಂ.]

ಪ್ರೇರಣ (ನಾ). ೧. ಒಂದು ಕಾರ್ಯದಲ್ಲಿ ಪ್ರವರ್ತಿಸುವಂತೆ ಮಾಡುವುದು ; ಕಾರ್ಯಮಗ್ನನಾಗಲು ಪ್ರಚೋದಿಸುವುದು : ಭಕ್ತಿಪ್ರಿಯಾಪ್ರೇರಣದಿಂ ತದ್ವರ್ಣನೋಪಕ್ರಮದೊಳೆಳಸಿದೆಂ ಭ್ರಾಂತನೆಂ (ಪಂಪ್ರಪು. ೦–೬೯). ೨. [ವ್ಯಾಕ] "ಪ್ರೇರಣ ಎಂದರೆ ಇನ್ನೊಬ್ಬನಿಂದ ಕೆಲಸ ಮಾಡಿಸುವುದು ಎಂದು ಅರ್ಥ" (ಮರ್ಶ್ಯಮು. ೦೩೦). [ಸಂ.]

ಪ್ರೇರಣಾರ್ಥ (ನಾ). [ವ್ಯಾಕ] ಇನ್ನೊಬ್ಬರಿಂದ ಕೆಲಸ ಮಾಡಿಸುವುದನ್ನು ತಿಳಿಸುವುದು : ಎಲ್ಲ ಧಾತುಗಳಿಗೂ ಪ್ರೇರಣಾರ್ಥದಲ್ಲಿ – ಇಸು ಪ್ರತ್ಯಯ ಸೇರಿ ಹೊಸ ಧಾತುಗಳಾಗುತ್ತವೆ (ಮರ್ಶ್ಯಮು. ೦೩೦) ; ಪ್ರೇರಣಾರ್ಥದ ಇಸು ಪ್ರತ್ಯಯದ ಮೇಲೆ ಮತ್ತೆ ಪ್ರೇರಣಾರ್ಥದಲ್ಲಿ ಇಸು ಪರವಾದರೆ ಪೂರ್ವದ ಇಸುವಿಗೆ ಲೋಪವಾಗುವುದು (ಕ್ರಿಪಿ. ೯೨). [ಸಂ.]

ಪ್ರೇರಣಿಸು (ಕ್ರಿ). ಉತ್ಸಾಹಗೊಳಿಸು ; ಪ್ರಚೋದಿಸು : ಅಣಾದೋಱಿ ನಿಂದು ಬಣ್ಣಕೆ ನಿನ್ನ ಕಳುಹಿ ಪ್ರೇರಣಿಸುತಿದ್ದನು ಭಾವುನೋಡ (ಭರತ. ೯೮–೯೦). [ಪ್ರೇರಣ + – ಇಸ್ಸು]

ಪ್ರೇರಣೆ (ನಾ). ಒಂದು ಕಾರ್ಯದಲ್ಲಿ ಪ್ರವರ್ತಿಸುವಂತೆ ಮಾಡುವುದು ; ಪ್ರಚೋದನೆ : ಅರಣ್ಯದ ಭೂತ ಭೇತಾಳವಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝಂಕಿಸಿದುವಾ ಕೌಶಿಕನ ಪ್ರೇರಣೆಯೊಳು (ಹಸಕಾ. ೯–೯೩); ಅಜೇಯವಾದ ಪ್ರಕೃತಿಗೆ ಎದುರಾಗಿ, ಅದಕ್ಕೆ ಸೋತು,

ದಾಸನಾಗಿ ಅದರ ಪ್ರೇರಣೆಯಂತೆ ವರ್ತಿಸುವುದರ ಬದಲು . . . ಅದರೊಡನೆ ಸಹಕರಿಸುವುದು ಒಳಿತಾದ ಮಾರ್ಗ (ಭಾರದ. ೦೦೩). [ಸಂ. ಪ್ರೇರಣ]

ಪ್ರೇರಿತ (ಗು). ೧. ಉತ್ತೇಜನಗೊಂಡ ; ಪ್ರಚೋದನೆಗೊಳಗಾದ : ಪೌರವನಾಂತರಾಳದೊಳಗೊರ್ಮೆ ವಸಂತವಿಲಾಸಕೌತುಕಪ್ರೇರಿತಮಾನಸಂತೊಳಗುತಿರ್ದು (ಕಂದ್ರಪು ೩-೬೯). (ನಾ). ೨. ಪ್ರಚೋದಿತವಾದುದು; ಹುರುಪುಗೊಂಡುದು : ಕಾಗದವನ್ನು ಕೈಗಳು ಯಂತ್ರಶಕ್ತಿಯಿಂದ ಪ್ರೇರಿತವಾದಂತೆ ಮಡಚಿ ಮುದ್ದೆ ಮಾಡಿದ್ದವು (ಪುರುಷಾ. ೪೯). ೩. ಪ್ರಚೋದನೆಗೊಂಡ ವ್ಯಕ್ತಿ; ಹುರುಪುಗೊಂಡ ವ್ಯಕ್ತಿ: ತದ್ ಭ್ರೂವಿಕ್ಷೇಪಣಪ್ರೇರಿತಂ ಮೇಘನಾದನಾದರದಿಂ ಬಂದು (ರಾಜಕೇ. ೬-೩೦ ಪ) ; ವಾಜಶ್ರವಸರಿಂದ ಪ್ರೇರಿತನಾಗಿ ನಾನು ಇಲ್ಲಿಗೆ ಬಂದಿಲ್ಲ (ಪತಂಬಾ. ೭). ೪. ರಾಯಭಾರಿ. [ಸಂ.]

ಪ್ರೇರಿಸು (ಕ್ರಿ). ಪ್ರಚೋದಿಸು ; ಹುರುಪುಗೊಳಿಸು : ಯಾತ್ರೆಗವನೀತಲಪತಿಯಂ ಪ್ರೇರಿಸಿತ್ತು ಪುಗಿಲೊಳ್ ಶರದಂ (ಶಾಂತಿಪು. ೦೦-೦೪೦) ; ಇಸುವೆನ್ನೀ ಮನಮಂ ಪ್ರೇರಿಸುವೀತನನಖಿಳಲೋಕಗುರುವಂ . . . ಇಸುವಸಮಾಸ್ತ್ರರ್ ಜಲಧಿವಸನವಸುಧೆಯೊಳುಂಟೇ (ಗಿಂಳ. ೭-೨೯). ಅವರೀರ್ವರೂ ಗಜಾರೋಹಣವಂ ಮಾಡಿ ಗಜವಂ ಪ್ರೇರಿಸಲು ಆ ಗಜವು . . . ತೆರಳುತ್ತ (ಸೌಗಂಧಿ. ೩೦೨-೨೦). [ಪ್ರೇರಣೆ+—ಇಸ್ಸು$_3$]

ಪ್ರೇರೇಪಕ (ಗು). ಹುರುಪುಗೊಳಿಸುವ : ಪ್ರಚೋದಿಸುವ. [< ಪ್ರೇರಕ]

ಪ್ರೇರೇಪಣೆ (ನಾ). = ಪ್ರೇರಣೆ : ಅವಳು ಪ್ರೇರೇಪಣೆ ಮಾಡದಿದ್ದರೆ ಕೈಕೆಗೆ ದುರ್ಬುದ್ಧಿ ಹುಟ್ಟುತ್ತಲೇ ಇರಲಿಲ್ಲ (ಭಾರದ. ೯೨) ; ಇಷ್ಟು ಸುಲಭವಾಗಿ ನಮಗೆ ಅಷ್ಟು ಪುಣ್ಯ ಪ್ರಾಪ್ತಿಯಾಗಬೇಕೆಂದೇ ಈ ಕಡೆ ಬರಲು ಪ್ರೇರೇಪಣೆ ಮಾಡಿದಿ ? (ಪತಂಬಾ. ೩೭). [<ಪ್ರೇರಣೆ]

ಪ್ರೇರೇಪಿತ (ನಾ). ಪ್ರಚೋದಿತನಾದವನು ; ಪ್ರೇರಣೆಗೊಂಡವನು : ಸರ್ವಶುಭಾಕಾಂಕ್ಷೆಯಿಂದ ಪ್ರೇರೇಪಿತನಾಗಿ ಆಡುತ್ತಿದ್ದೇನೆ (ಪತಂಬಾ. ೦೬೦). [< ಪ್ರೇರಿತ]

ಪ್ರೇರೇಪಿಸು (ಕ್ರಿ). = ಪ್ರೇರಿಸು : ಅವನ ಕಡೆಯವರು ಜನಗಳನ್ನು ಪ್ರೇರೇಪಿಸುತ್ತಿದ್ದಾರೋ ಏನೋ (ಸಂಗಾಳ್ಯ. ೩೭೦) ; ಕೇಶವಣ್ಣನೇ ಈ ಬಣ್ಣದ ಸೀರೆಯನ್ನು ಕೊಂಡುಕೊಳ್ಳಲು ಪ್ರೇರೇಪಿಸಿದ್ದು (ಪವಶೀ. ೬). [< ಪ್ರೇರಿಸು]

ಪ್ರೇಷಕ (ನಾ). ೧. ಕಳಿಸುವುದು ; ರವಾನಿಸುವುದು. ೨. ಕಳುಹಿಸುವ ಸಾಧನ : ಟೆಲಿಫೋನ್ ಪದ್ಧತಿಯಲ್ಲಿ ಎರಡು ಮುಖ್ಯ ಭಾಗಗಳಿವೆ. ಮೊದಲನೆಯದನ್ನು ಪ್ರೇಷಕವೆಂದೂ ಎರಡನೆಯದನ್ನು ಗ್ರಾಹಕವೆಂದೂ ಕರೆಯುತ್ತಾರೆ (ವಿಜ್ಞಾವಿ. ೩೦). [ಸಂ.]

ಪ್ರೇಷಣ (ನಾ). ೧. (ದೂತನನ್ನು) ಕಳುಹಿಸುವುದು ; ರವಾನಿಸುವುದು. ೨. ಪ್ರಚೋದಿಸುವುದು. ೩. [ಜೈನ] ದೇಶವ್ರತಾತಿಚಾರದ ಪ್ರೇಕ್ಷಣ, ಶಬ್ದ, ಆನಯನ, ರೂಪಾಭಿವ್ಯಕ್ತಿ, ಪುದ್ಗಲಕ್ಷೇಪಗಳೆಂಬ ಐದು ವಿಧಗಳಲ್ಲಿ ಒಂದು ; P "ಎಲ್ಲೆಯ ಹೊರಕ್ಕೆ ಹೋಗಿ ನಿರ್ದಿಷ್ಟಕಾರ್ಯವನ್ನು ಮಾಡಿಕೊಂಡು ಬರುವಂತೆ ಹೇಳುವುದು" (ಶೈವಕೋ. ೧೮೨) : ಕಪಟದೊಳೇಂ ಪ್ರೇಷಣಶಬ್ದ ಪುದ್ಗಲಕ್ಷೇಪಸಮುದಿತಾನಯನಂ ತಾವಪಚಾರಂಗಳ್ ರೂಪಾನುಪಾತಮುಂ ಪ್ರಮಿತ ದೇಶನಿಯಮವ್ರತದೊಳ್ (ಸುಕುಮಾ. ೬-೧೯) : ತನ್ನ ಸೀಮೆಯೊಳಿರ್ದು ದಾಸಿ ದಾಸರನ್ನು ಕಳುಹಿ ಲೇಸಾಗಿ ಕೆಲಸವ ಮಾಡಿಸುತಿರ್ಪುದು ಪ್ರೇಷಣವೆಂಬತಿಚಾರ (ದ್ವಾದಶಾ. ೦೧-೩೦೩). [ಸಂ.]

ಪ್ರೇಷಿತ (ಗು). ೧. ಕಳುಹಿಸಿದ ; ರವಾನಿಸಿದ : ಅಜಿತಂಜಯ ಮಹಾರಾಜಂ . . . ಪ್ರೇಷಿತಾಶೇಷಪ್ರಕೃತಿಸಮೇತಸಚಿವಸಂದೋಹಸಂದರ್ಶನಾರ್ಥಂ . . . ಅಖಿಳಪ್ರಧಾನಪರಿವಾರಪರಿಕೃತನುಮಾಗಿರೆ (ಕಂದ್ರಪು. ೩-೨ ಪ); ಸೇನಾಪತಿಪ್ರೇಷಿತಪ್ರೇಷ್ಯಜನದೆ ಬಟಿಸಂದು (ಪುಷ್ಪಪು. ೩-೦೦೦ ಪ). ೨. ಆಜ್ಞಾಪಿಸಿದ ; ನಿರ್ದೇಶಿಸಿದ. (ನಾ). ೩. ಕಳುಹಿಸಲ್ಪಟ್ಟವನು ; ದೂತ : ಪತಿಮೋಹಿ ಮಂತ್ರಿಪಂ ರಾಜಶೇಖರ ಪ್ರೇಷಿತನಲ್ಲಿಗೇಳ್ತಂದು ನಿಜವಿನಯದಿಂ ಮೆಱೆದು (ರಾಜಕೇ. ೭-೯೭ ಪ). [ಸಂ.]

ಪ್ರೇಷ್ಯ (ಗು). ೧. ಕಳುಹಿಸಿದ ; ರವಾನಿಸಿದ. (ನಾ). ೨. ಕಳುಹಿಸಲ್ಪಟ್ಟವನು; ದೂತ : ತತ್ಸಮಯದೊಳ್ ಸೇನಾಪತಿಪ್ರೇಷಿತಪ್ರೇಷ್ಯಜನದೆ ಬಟಿಸಂದು (ಪುಷ್ಪಪು. ೩-೦೦೮ ಪ). ೩. ಸೇವಕ; ಜವಾನ. ೪. ಕೂಲಿ ಕೆಲಸ ಮಾಡುವವನು; ಕೂಲಿಗಾರ : "ಪ್ರೇಷ್ಯಃ, ಪ್ರತಿಸ್ಕಂದಃ—ಈ ೨ ಕೂಲಿಕಾಱ" (ಹಲಾಯು. ೬೧-೨೦೪). [ಸಂ.]

ಪ್ರೊಫೆಸರ್ (ನಾ). ಪ್ರಾಧ್ಯಾಪಕ; ಹಿರಿಯ ಅಧ್ಯಾಪಕ: ಹೌದು ಪ್ರೊಫೆಸರ್, ನನ್ನ ಪ್ರಯೋಗದಲ್ಲಿ ನಾನು ಜಾಗರೂಕನಾಗಿಯೆ ಇದ್ದೇನೆ (ಹೊಸಕ್ಷಿ. ೦೨). [← ಇಂ. Professor]

ಪ್ರೋಕ್ತ (ಗು). ೧. ಹೇಳಿದ ; ಪ್ರಕಟಿಸಿದ ; ತಿಳಿಸಿದ : ಇನ್ನದಕ್ಕೇ ಬಾರದುವೆಲ್ಲಂ ವ್ಯಕ್ತಂ ನ್ಯಾಯವಿರುದ್ಧಂ ಪ್ರೋಕ್ತಮಹಾದೋಷಮಂತು ಪೇಟಲ್ಕೆಂತುಂ (ಳವಿರಾ. ೦-೦೦೬); ಮಹಾಸ್ಕಾಂದಪುರಾಣಪ್ರೋಕ್ತ ಕಾಶಿಯೊಳು ಮಣಿಕರ್ಣಿಕೆಯೊಳು ಧನ್ಯರಹರಿಲ್ಲಿಯವಗಾಹನಂ (ಹಸಕಾ. ೩-೭೬). (ನಾ). ೨. ತಿಳಿಸಿದುದು ; ಹೇಳಿಕೆ : ನಿನ್ನ ಸುತನಂ ಪಿಡಿದ ಸಿಂಹಮುಂಟೆ ಅಪ್ರಸಿದ್ಧ ಪ್ರೋಕ್ತಮಿದು (ಶೈಮಿಭಾ. ೨೬-೩೬). ೩. ಒಂದು ಬಗೆಯ ಸಸ್ಯ: "ಪ್ರೋಕ್ತಃ— ಬೆಳುವಾಲಿ" (ಓಷಧಿ. ೦೦೩). [ಸಂ.]

ಪ್ರೋಕ್ತಿ (ನಾ). ಹೇಳಿಕೆ: ಆವ ನೀತಿಯಿದಾವ ಧರ್ಮವಿದಾವ ಶಾಸ್ತ್ರಪ್ರೋಕ್ತಿ ಭುವನದೊಳಾವ ಭಕ್ತಿಯಿದೆಂತು ಸೈರಿಸಬಹುದು ಹೇಳಯ್ಯ (ಬಸಪು. ೩೩-೩೬). [ಸಂ.]

ಪ್ರೋಕ್ಷಣ (ನಾ). ೧. (ನೀರು, ತೀರ್ಥ ಮೊದಲಾದುವುಗಳನ್ನು) ಸಿಂಪಡಿಸುವಿಕೆ; ಚಿಮುಕಿಸುವಿಕೆ. ೨. ಯಜ್ಞಪಶುವನ್ನು ಪರಿಶುದ್ಧಗೊಳಿಸಲು ತೀರ್ಥವನ್ನು ಚಿಮುಕಿಸಿ ವಧೆಮಾಡುವುದು : "ಪರಂಪರಾಕಂ, ಶಪನಂ, ಪ್ರೋಕ್ಷಣಂ . . . ಯಜ್ಞದಲ್ಲಿ ವೇದೋಕ್ತಪ್ರಕಾರವಾಗಿ ಮಾಡುವ ಪಶುವಿಶಸನವೆಂಬ ಶ್ರೌತಪಶುವಧೆ" (ಸಿದ್ಧಾಂತಿ. ೨೨೦). ೩. ಊಟ ಮಾಡುವುದಕ್ಕೆ ಮುಂಚೆ ಎಲೆಗೆ ಬಡಿಸಿದ ಭೋಜನ ಪದಾರ್ಥಗಳ ಮೇಲೆ ನೀರನ್ನು ಚಿಮುಕಿಸಿ ಶುದ್ಧಿಗೊಳಿಸುವಿಕೆ. [ಸಂ.]

ಪ್ರೋಕ್ಷಣೆ (ನಾ). ೧. = ಪ್ರೋಕ್ಷಣ ೧: ಪ್ರೋಕ್ಷಣೆ ಮಾಡಿದರೆ ಪ್ರಹುಡನಾದಾನೆ? (ಗಾರ). ೨. = ಪ್ರೋಕ್ಷಣ ೩ : ಆಚಾರ್ಯರು ಪ್ರೋಕ್ಷಣೆ ಮಾಡಿ ಊಟವನ್ನು ಪ್ರಾರಂಭಿಸಿದರು (ರೂಢಿ). [ಸಂ. ಪ್ರೋಕ್ಷಣ]

ಪ್ರೋಕ್ಷಿತ (ಗು). ೧. ಪ್ರೋಕ್ಷಣೆ ಮಾಡಿ ಶುದ್ಧಗೊಳಿಸಿದ ; ನೀರು ಚಿಮುಕಿಸಿ ಶುದ್ಧವಾದ. (ನಾ). ೨. ಯಜ್ಞದ ಬಲಿಪಶು : "ಪ್ರಮಿತಃ, ಉಪಸಂಪನ್ನಃ, ಪ್ರೋಕ್ಷಿತಃ . . . ಯಜ್ಞದಲ್ಲಿ ಕೊಲ್ಲಲ್ಪಟ್ಟ ಪಶು ಮುಂತಾದವುಗಳ ಹೆಸರುಗಳು" (ಸಿದ್ಧಾಂತಿ. ೨೨೦). [ಸಂ.]

ಪ್ರೋಕ್ಷಿಸು (ಕ್ರಿ). ಸಿಂಪಡಿಸು; ಚಿಮುಕಿಸು: ಕಮಂಡಲೂದಕದಿಂದೆ ಮುನಿವರಂ ಪ್ರೋಕ್ಷಿಸಿದೊಡುರಗತಲ್ಪದೊಳುಪ್ಪವಡಿಸುವಬ್ಜಾಕ್ಷನೀತಂ ತಪ್ಪದೆಂಬಂತೆ ಕಣ್ದೆಱೆದು ವಾಲ್ಮೀಕಿಗಭಿನಮಿಸಲು (ಶೈಮಿಭಾ. ೨೦-೩೦); ಹಿಮಾಲಯನು ಆ ಮುನಿಯನ್ನು ಬಹಳವಾಗಿ ಸನ್ಮಾನಿಸಿ . . . ಪಾದ ಪ್ರಕ್ಷಾಲನ ಮಾಡಿ ಚರಣತೀರ್ಥವನ್ನು ಮನೆ ತುಂಬ ಪ್ರೋಕ್ಷಿಸಿದನು (ತುಳಸೀ. ೨೦). [ಪ್ರೋಕ್ಷಣ +—ಇಸ್ಸು$_3$]

ಪ್ರೋಚ್ಚಂಡ (ಗು). ೧. ಅತಿಭಯಾನಕವಾದ: ವೀರಲಕ್ಷ್ಮೀಸದನ ಪ್ರೋಚ್ಚಂಡ ದೋರ್ಮಂಡನಂ . . . ಇರ್ಪಂ (ಪುಷ್ಪಪು. ೨-೯೬). ೨. ಅಧಿಕವಾದ ; ಹೆಚ್ಚಾದ. (ನಾ). ೩. ಹೆಚ್ಚು ; ಅಧಿಕ : ನನಗೆ ಪ್ರೋಚ್ಚಂಡವಾದ ಭರತಿ ಬಹುಶಃ ನಸುಕಿನಲ್ಲಿಯೆ ಬರುವುದು (ಗಾಳಿಪ. ೦೬೮). [ಸಂ.]

ಪ್ರೋಚ್ಚಳಿತ (ಗು). ಮೇಲಕ್ಕೆ ಚಲಿಸಿದ; ನೆಗೆದ: ಜಿನಜನ್ಮೋತ್ಸವದೊಳ್ ಮೇದಿನಿಗಿರಿಸಿದ ಕಾಂಚನಧ್ವಜಸ್ತಂಭಮಿದೆಂಬಿನೆಗಂ ಸೊಗಯಿಸಿದುದು ಮೇರುನಗಂ ಪ್ರೋಚ್ಚಳಿತದುಗ್ಧಪೂರದುಕೂಲಂ (ಪಂಪ್ರಪು. ೦೨-೦೫೬). [ಸಂ. ಪ್ರೋಚ್ಚಲಿತ]

ಪ್ರೋಜ್ವಲ (ಗು). ೧. ತೀಕ್ಷ್ಣವಾಗಿ ಉರಿಯುವ; ಪ್ರಜ್ವಲಿಸುವ. (ನಾ). ೨. ದೊಡ್ಡಬೆಂಕಿ; ಮಹಾಜ್ವಾಲೆ : ಮುಂದೆ ಸಂಭವಿಸಿತ್ತು . . . ಗಾಂಗೇಯದ್ರೋಣಾದಿ ಕರ್ಣದುರ್ಯೋಧನರ ಜೀವಕಾನನ ದಹನಪ್ರೋಜ್ವಲಂ (ಪಶ್ರಾಂಗ. ೬೯-೦೮೯೭). [ಸಂ.]

ಪ್ರೋಜ್ವಲಿಸು (ಕ್ರಿ). ಬಹಳವಾಗಿ ಉರಿ; ಪ್ರಜ್ವಲಿಸು: ಪ್ರೋಜ್ವಲಿಸಿದುದು ಕೋಪನಜ್ವಾಲೆ ಭೂಮಿಪಗೆ (ಶ್ರೀರಾಮಾ. ೨-೪೬೬) ; ರಾಗಾರುಣಜ್ವಾಲೆ ಪ್ರೋಜ್ವಲಿಸುವೋಲ್ ಉಗ್ರದಾವಾಗ್ನಿ ತರುನಿಚಯಮಂ ಕೊಂಡುರಿಯುವಂತೆ ಪೊತ್ತಿದುದು ಚಿತ್ರಾಂಗಿಯಂ ಪ್ರಣಯಪ್ರಲಯಶಿಖಿ (ಪಶ್ರಾಂಗ. ೪೦-೦೦೦೦). [ಪ್ರೋಜ್ವಲ + —ಇಸು$_3$]

ಪ್ರೋಜ್ಝಿತ (ಗು). ಬಿಟ್ಟ; ತ್ಯಜಿಸಿದ: 'ಪ್ರೋಜ್ಝಿತಚಾಪ' ಪರಾ. [ಸಂ.]

ಪ್ರೋಜ್ಝಿತಚಾಪ (ನಾ). (ಯುದ್ಧದಲ್ಲಿ) ಬಿಲ್ಲನ್ನು ಬಳಸುವುದನ್ನು ಬಿಟ್ಟವನು; ಧನುಸ್ಸನ್ನು ತ್ಯಜಿಸಿದವನು: ಗುರುವಂ ಪ್ರೋಜ್ಝಿತ ಚಾಪನಂ ಪುಸಿದು ಕೊಂದು (ಗದಾಯು. ೩-೫೫). [ಸಂ.]

ಪ್ರೋಡ್ಡೀಣ (ನಾ). ಹಾರುವುದು; ನೆಗೆತ: ಉಡ್ಡೀಣ ಪ್ರೋಡ್ಡೀಣದಿಂದ ಹೊಳೆಹೊಳೆದು (ಪಪಮು. ೨೨-೯). [<ಸಂ. ಪ್ರೋಡ್ಡೀನ]

ಪ್ರೋಡ್ಡೀನ (ಗು). ಹಾರಿದ ; ನೆಗೆದ; ಮೇಲೆದ್ದ : ಉಚ್ಛಾಸಖಿನ್ನ ಶ್ರಮಮಂ ಪ್ರೋಡ್ಡೀನದೀನಶ್ರಮದೊಳೊಗೆದ ರೋಮಾಂಚಮಂ ಶೀತವಾತಸ್ತಿಮಿತೋಪಸ್ಪರ್ಶರೋಮಾಂಚದೊಳ್ ಬೆರಸಿದಳ್ ಕನ್ನೆಗೇಕಿನ್ನ ಮಂದಂ (ಅರ್ಧನೇ. ೩-೨೨) ; ಗಂಭೀರಸ್ಫಾರವೇಳಾಬಹಳಪರಿವೃತೋಲ್ಲೋಲ ಕಲ್ಲೋಲಮಾಲಾರಂಭಪ್ರೋಡ್ಡೀನಫೇನ . . . ಘನಘನಾರಾವರೌದ್ರಂ ಸಮುದ್ರಂ (ಕಾವ್ಯಸಾ. ೭೩). [ಸಂ.]

ಪ್ರೋತ (ಗು). ೧. ಹೆಣೆದ ; ಹೊಲಿದ. ೨. ಕೂಡಿಸಿದ ; ಜೋಡಿಸಿದ. ೩. ಕುಂದಣಿಸಿದ ; ಮೆಟ್ಟಿದ : ಶ್ರೀಧರಾಧಿಪ ಭೋಜರಾಜ ಮಕುಟಪ್ರೋತಾಶ್ಮರಶ್ಮಿಚ್ಛಟಾಚ್ಛಾಯಾಕುಂಕುಮಪಂಕಲಿಪ್ತ (ಎಳ. II. ೯೯-೬೨ ; ಸು. 1100). ೪. ಕಟ್ಟಿದ ; ಬಂಧಿಸಿದ. ೫. ಚುಚ್ಚಿದ. ೬. ನೆಯ್ಗೆಯಲ್ಲಿ ಅಡ್ಡಡ್ಡವಾಗಿ ಜೋಡಿಸಿದ. (ನಾ). ೭. ನೆಯ್ದ ಬಟ್ಟೆ : 'ಓತಪ್ರೋತ' ಪರಾ. [ಸು.]

ಪ್ರೋತ್ಕರ (ನಾ). ಗುಂಪು; ಸಮೂಹ : ಗಿರಿಪತಿಯಂ ಮೇನೆಯನಾದರದಿಂ ಬೀಳ್ಕೊಟ್ಟು ಮಕುಟರತ್ನಪ್ರಕರಸ್ಫುರಿತಪ್ರದ್ಯೋತಪ್ರೋತ್ಕರ ವಿಳಸಿತವಳಯದೊಳಗೆ ಶಿವನೆಸೆದಿರ್ದಂ (ಗಿರಿಕ. ೦೦-೦೦೭). [ಸಂ.]

ಪ್ರೋತ್ಕಲಿತ (ಗು). ಮೇಲೆದ್ದ ; ಹಾರಿದ : ನಕ್ರಚಕ್ರಸ್ಫುರದುರುತರಯಾದಶ್ವರಾಧ್ಯಾಸಿತ ಪ್ರೋತ್ಕಲಿತಾಂಭಃಕುಂಭಿಕುಂಭೋನ್ಮದರಸ ವಿಲಸತ್ಕ್ಷೋಭರೌದ್ರಂ ಸಮುದ್ರಂ (ಪಂಪತಂ. ೦೩೦-೭). [ಸಂ.]

ಪ್ರೋತ್ತುಂಗ (ಗು). ಬಹಳ ಎತ್ತರವಾದ ; ಬಹು ಉನ್ನತವಾದ : ವರರತ್ನಕನಕಮಯವಿಸ್ಫುರಿತ ಪ್ರೋತ್ತುಂಗತೋರಣಪ್ರಾಕಾರಂ (ಸುಳುಮಾ. ೯ ೬೩) ; ಆತ್ಮಭವಪ್ರೋತ್ತುಂಗ ಮೂರ್ಧಾಗ್ರದೊಳಿಟಿಪಲೊಡಂ (ಪಂಪ್ರಪು. ೨ ೫೬). [ಸಂ.]

ಪ್ರೋತ್ಥಾನ (ಗು). ೧. ಮೇಲಕ್ಕೆ ಎತ್ತುವ ; ಮೇಲೆತ್ತುವ. ೨. ಉದ್ಧರಿಸುವ : ಜಾಪಕರಿಗೆ ಸುಯೋಗಿಗಳಿಗೆ ಮಹಾಪೃಥುಲಪುಣ್ಯಗಳುಂಟಾ ಜಾಪಕರು ನಿಜನಿರ್ಜರಪ್ರೋತ್ಥಾನಶಕ್ತಿಯಲಿ ದೀಪಿಸುವರು (ತಿಮ್ಮಶಾಂ. ೫-೭೭). [ಸಂ.]

ಪ್ರೋತ್ಪಾಟನ (ನಾ). ಉತ್ಪಾಟನ ; ನಾಶ : ತ × × × ತ ಪ್ರೋತ್ಪಾಟನ ಪಟುವೆನಿಪ್ಪ ನಾಚುಗಿಭೂಪ ಜಗವೆಲ್ಲಂ ಕಡುಪಿಂಗೆ ಕಂಟಳಿಪಿನಂ [ಪೆ] × × × (ಸೌಇಇ. XV, ೯೨-೯ ; ಸು. 12ನೆಯ ಶತ). [ಸಂ.]

ಪ್ರೋತ್ಪಿಹಿತ (ಗು). ಚೆನ್ನಾಗಿ ಮುಚ್ಚಿದ;-ಮರೆಮಾಡಿದ : ವಿನಿರ್ಧೂತ ಧಾತ್ರಿರಜಃಪ್ರೋತ್ಪಿಹಿತಾಂಗಂ . . . ಅಂಭೋವಾಹಮಂಭೋದಸಿಂಧುರಮಂ ಪಾಯ್ದು ಪಳಂಚಿ ಪೊಯ್ದುದು ರಟಜ್ಜಂಝಾಮರುತ್ಕುಂಜರಂ (ರಾಜಶೇ. ೬-೦೦೬). [ಸಂ.]

ಪ್ರೋತ್ಫುಲ್ಲ (ಗು). ೧. ಚೆನ್ನಾಗಿ ಅರಳಿದ,-ಬಿರಿದ. ೨. ವಿಶಾಲವಾದ ಖೇಚರಕಿನ್ನರಾಮರಯುಗಂ ನಾನಾವಿನೋದಂಗಳಂ ಮದನಾವೇಶಕರಂಗಳಂ ಸಲಿಸುತಂ ಪ್ರೋತ್ಫುಲ್ಲ ಚಂಚಲ್ಲತಾಸ್ಪದದೊಳ್ . . . ತಳ್ತಿರೆ ಕಾಮರಾಗಮಯಮಾಯ್ತೇನೀ ನಗಂ ರಯ್ಯವೋ (ಅಂಪು. ೯-೦೦೬). (ನಾ). ೩. ಚೆನ್ನಾಗಿ ಬಿರಿದುದು,—ಅರಳಿದುದು : ಓರ್ವಂ ದ್ವಿಜಪ್ರವರಂ ಮೌಕ್ತಿಕಮಾಲಿಕಾವಲಯಮಂ ಪ್ರೋತ್ಫುಲ್ಲಮಂ ಪುಂಡರೀಕವನಂದಲ್ತೆ ಮನೋರಮಾಂಕತಳದೊಳ್ ತಂದಿಕ್ಕಿದಂ ಸ್ವಪ್ನದೊಳ್ (ಕಾದಂಪು. ೩೭೩). [ಸಂ.]

ಪ್ರೋತ್ಸಾಹ (ನಾ). ೧. ಬಹಳವಾದ ಉತ್ಸಾಹ,—ಹುರುಪು. ೨. ಉತ್ತೇಜನ ; ಪ್ರಚೋದನೆ : ರಾಜಮಹಾರಾಜರು ಮತ್ತು ಮಹಾಮಂಡಲೀಕರು ಘಟಿಕಾಸ್ಥಾನಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದರು (ಪೊಳಂಬ. ೬೭). [ಸಂ.]

ಪ್ರೋತ್ಸಾಹಕ (ನಾ). ಹುರಿದುಂಬಿಸುವವನು ; ಉತ್ತೇಜನ ಕೊಡುವವನು : ಎಲೋ ಪ್ರೋತ್ಸಾಹಕನೆ ತೆಗೆ ನಮ್ಮ ಪ್ರಭು ಭೇಟಿಯಲ್ಲಿ ವಿಮುಖನಾದನು (ಶಾಕುಂತ. ೨೩-೦). [ಸಂ.]

ಪ್ರೋತ್ಸಾಹಗೊಳಿಸು (ಕ್ರಿ). ಹುರಿದುಂಬಿಸು; ಉತ್ತೇಜಿಸು : ತುಂದಾ ನಿರಾಶೆಗೊಂಡಿದ್ದ ಅವನನ್ನು ಅವನ ಮಾಸ್ತರರು ಪ್ರೋತ್ಸಾಹಗೊಳಿಸಿದರು (ರೂಢಿ). [ಪ್ರೋತ್ಸಾಹ + ಕೊಳ್$_1$ + — ಇಸು$_3$]

ಪ್ರೋತ್ಸಾಹಗೊಳ್ಳು (ಕ್ರಿ). ಉತ್ತೇಜನಗೊಳ್ಳು ; ಉತ್ತೇಜನವನ್ನು ಪಡೆ: ಸಾಹಿತ್ಯರಚನೆಗಳನ್ನು ಬೆಲೆಗೆ . . . ಕೊಳ್ಳುವ—ಕೊಡುವ, ಪ್ರೋತ್ಸಾಹಿಸುವ—ಪ್ರೋತ್ಸಾಹಗೊಳ್ಳುವ . . . ಈ ಕಾರ್ಯಕ್ಕೆ ಉದಾರಚರಿತರು ನೆರವು ನೀಡಬೇಕಾಗಿ ಪ್ರಾರ್ಥನೆ (ಸಂಶೋಧ. vii ಅಂಕ). [ಪ್ರೋತ್ಸಾಹ + ಕೊಳ್ಳು$_1$ (<ಕೊಳ್$_1$)]

ಪ್ರೋತ್ಸಾಹಿಸು (ಕ್ರಿ). ಹುರಿದುಂಬಿಸು ; ಉತ್ತೇಜಿಸು : ಯಾ ಸ್ಥಳವನ್ನಾಕ್ರಮಿಸಿ ಪಟ್ಟಣವಂ ಕಟ್ಟಿ ಉಪಾಯದಿಂದ ಪ್ರೋತ್ಸಾಹಿಸುತ ಯಿದರಿಂದ ಬೇಕಾದ ವಸ್ತುಗಳಂ ಪಡದು ಸುಖದಿಂದಿರಬಹುದು (ಸೌಗಂಧಿ. ೪೦೬-೯) ; ಮನಸ್ಸಿಗೆ ಹಿತವೆನಿಸುವ ಸಾಮೂಹಿಕ ಅಭ್ಯಾಸಗಳನ್ನು ಆಚರಿಸಲು ಪ್ರೋತ್ಸಾಹಿಸಬೇಕು (ಶಿಕ್ಷಣ. ೩೦೦). [ಪ್ರೋತ್ಸಾಹ + —ಇಸು$_3$]

ಪ್ರೋಥ (ಗು). ೧. ಪ್ರಸಿದ್ಧವಾದ. ೨. ಇಟ್ಟ ; ಇರಿಸಿದ. (ನಾ). ೩. ಕುಮರೆಯ ಮೂಗಿನ ಹೊಳ್ಳೆ : ಕೆತ್ತುತ್ತಮತ್ಯಂತವಿಸ್ಫುರಿತ ಪ್ರೋಥಮನೊಮೆಯುಂ . . . ಇರ್ದತ್ತುದಾತ್ತಂ ಹಯಂ (ಮಲ್ಲಿಪು. ೯-೫೫) ; ಆ ಪ್ರಪಾನದುತ್ತರಪ್ರೋಥಮದಕ್ಕುಂ ಬಿತ್ತರ ಪ್ರೋಥದೆರಡುಕೆಲದ ನಾಸಾಪುಟಮುಂ ಪ್ರೋಥದ ಕಣ್ಣೆಡೆ ಘೋಣಮದು (ಅಶ್ವಶಾ. ೯-೦೩). ೪. ಟೊಂಕ ; ಸೊಂಟ. ೫. ಪ್ರಯಾಣಿಕ ; ಪಯಣಿಗ. [ಸಂ.]

ಪ್ರೋದ್ಗತ (ಗು). ೧. ಮುಂದಕ್ಕೆ ಚಾಚಿಕೊಂಡಿರುವ : ಸ್ಫುರದೀಪ

ತ್ಪ್ರೋದ್ಗತೋರೋರುಹವುಕಳಿಯರುನ್ಮತ್ತಹಂಸೀಕ್ಷಣನ್ಮೂಪುರೆಯರ್ . . . ಪೊಡೆವಟ್ಟೆಯ್ದೆವಂದಿರ್ದರಾಗಳ್ (ಆದಿಪು. ೯-೩೬). ೨. ಹೊರ ಹೊಮ್ಮಿದ : ವೇತ್ರಹಸ್ತಪ್ರತಿಮುಖರ ಪ್ರೋದ್ಗತಾಭೀಳಘೋಷಂ (ಗಿಂಪು. ೩-೪). [ಸಂ.]

ಪ್ರೋದ್ಗಮ (ನಾ). ಉಂಟುಮಾಡುವಂಥದು ; ಒದಗಿಸುವಂಥದು : ಚಂಡಾಂಶುಬಿಂಬಕ್ಕವಮೆಯ ರಜನೀಪ್ರೋದ್ಗಮಂ . . . ತಾನೆಂಬಿನಂ ಬಂದುದು ತಟಿದ್ಬಾಲವಂಭೋದಕಾಲಂ (ಕಾದಂಕಾ. ೩೫೯). [ಸಂ.]

ಪ್ರೋದ್ದಂಡ (ಗು). ಬಹಳ ಕಠಿಣವಾದ ; ಅತ್ಯುಗ್ರವಾದ : ಮಂಡಿತೋರುಜಟಾಭಟಪ್ರೋದ್ದಂಡಹತಿಯಿಂದಂಬುರುಹಗರ್ಭಾಂಡಕೂಟಕಟಾಹಮೊಡೆಯಲು (ಪಾಪು. ೦೭-೦೬). [ಸಂ.]

ಪ್ರೋದ್ದಾನ (ನಾ). ಸುರಿಯುಂತ್ತಿರುವ ಮದಜಲ ; ಸೂಸುವ ಮದೋದಕ : ಕ್ಷಿತಿಚಕ್ರಂ ಗತಿಚಕ್ರಗಂಧಗಳಿತ ಪ್ರೋದ್ದಾನಜಂಭಾಳ ಶೋಭಿತಂ (ಪುಣಾಸ್ರ. ೦-೪೦) ; ಭ್ರಮದ್ಭೃಂಗಸಂಗವ್ರಥಿತಪ್ರೋದ್ದಾನ ಧಾರಾಘಟಿತಕಟತಟಂ . . . ಘನನಿನದಮದಂ ಬಂದುದೋ ದಂತಿ ಜಾಳಂ (ಕಾಪ್ರ. ೦೩-೬೭). [ಸಂ.]

ಪ್ರೋದ್ದಾಮ (ಗು). ೧. ಅಪರಿಮಿತವಾದ ; ಹೆಚ್ಚಾದ : ಸಮದಾನೇಕಪಮಂ ಮಹಾಭಯದಮಂ ಪ್ರೋದ್ದಾಮ ಜಾಬೂಕದಂಬಮನಭ್ರಂಕಷ ಕೂಟಮಂ . . . ಎಯ್ದಿದಂ ಸಕಲಕಾಕಾನೀಕಲಕ್ಷ್ಮೀಶ್ವರಂ (ಶಂಕತಂ. ೨೩೮-೦೨) ; ಆ ಮಹಾವಜ್ರಾಯುತ ಪ್ರೋದ್ದಾಮದಾಯಸಭೀಮತನು ನಿರ್ಜಾಮನೆನೆ ನುಗ್ಗಾಗಿ ಬಿದ್ದುದು ನೃಪನ ಶಕ್ಕೆಯಲಿ (ಕುವಾ.ಗ. ೦೦-೭೯). ೨. ಶ್ರೇಷ್ಠವಾದ ; ಹಿರಿದಾದ ; ಅತಿಶಯವಾದ : ಸಕಲಕ್ಷತ್ರಮಣಿ ಪೂಜ್ಯನಮಳಚರಿತ್ರಂ ಪ್ರೋದ್ದಾಮಸೋಮವಂಶಲಲಾಮಂ (ಶಂಶಭಾ. ೦-೬೦). (ನಾ). ೩. ಶ್ರೇಷ್ಠವಾದುದು : ರಮಣೀಯಂ . . . ವಿಲಸತ್ಕಾವ್ಯಂ ಮಹೀಚಕ್ರದೊಳ್ ಸುಮನೋಮಾಲ್ಯದ ಪೊಲ್ ಸನಾಯಕ ಗುಣಪ್ರೋದ್ದಾಮಮಾಗಿರ್ದಡುತ್ತಮಪುಣಾ ಧಿಕಕಂಠಭೂಷಣಮದಕ್ಕುಂ (ಚಾರಪು. ೦-೪೦). [ಸಂ.]

ಪ್ರೋದ್ಧೂತ (ಗಂ). ಮೇಲೇಳುತ್ತಿರುವ : ಇಂತಿದ ತೋಱುತ್ತು ಮದಾಂಧಸೈರಿಭ ಪ್ರಮಿರಪ್ರೋದ್ಧೂತರೇಣುವ್ರಜಂ[ಪಾಣಾಂ. ಮವಾಂತ ಸೈರಿಭಕರಪ್ರೋದ್ಧತ್ಕರೇಣುಬ್ರಣಂ] (ಕಾದಂಪೂ. ೦೫೫). [ಸಂ.]

ಪ್ರೋದ್ಭವ (ಗು). ೧. ಹುಟ್ಟಿದ ; ಜನ್ಮ ತಾಳಿದ. (ನಾ). ೨. ಹುಟ್ಟಿದವನು ; ಜನ್ಮ ತಾಳಿದವನಂ : 'ಘಟಪ್ರೋದ್ಭವ' ಪರಾ. [ಸಂ.]

ಪ್ರೋದ್ಭಾಸಿ (ಗಂ). ೧. ವಿಶೇಷವಾಗಿ ಹೊಳೆಯುವ.—ಪ್ರಕಾಶಿಸುವ : ಗೋಪಣನ್ದಿದಿಗಭಪ್ರೋದ್ಭಾಸಿಗನ್ಧದ್ವಿಪಂ (ಎಕ. II, ೬೯-೧೬ ; ಸು. 1100) ; ರತ್ನಪ್ರಭಾಪ್ರೋಜ್ಜೃಂಭತ್ಪ್ರೋದ್ಭಾಸಿವೀಚೀನಿಚಯಘನಘನಾರಾವರೌದ್ರಂ ಸಮುದ್ರಂ (ಕಾವೃಸಾ. ೬೩). ೨. ವಿಶೇಷವಾಗಿ ಹೊಳೆಯುವಂಥದು : ರತ್ನಮಯಪ್ರಸಿದ್ಧಶಿಬಿರಾಲಂಕಾರ ಸಿದ್ಧಾಲಯಾಸ್ಪದಮಂ ಪೇಚರ ಚಕ್ರವರ್ತಿವಿಭವಪ್ರೋದ್ಭಾಸಿಯಂ ಮೆಚ್ಚಿ ನೋಡಿದನಾ ಭೂಚರಚಕ್ರವರ್ತಿ (ಆಪು. ೯-೨೦). [ಸಂ.]

ಪ್ರೋದ್ಭೂತ (ಗು). ೧. ಹುಟ್ಟಿದ ; ಆವಿರ್ಭವಿಸಿದ : ಎನ್ನೀ ಕಾವ್ಯಕ್ಕೆ . . . ಭೃಂಗಾವಳೀಸಂಪನ್ನಪ್ರೋದ್ಭೂತರುಂಕಾರಿತರವಮುದಿತಾನಂದವೇಶಂ ಗಣೇಶಂ (ಗಿಂಪು. ೦-೩). (ನಾ). ೨. ಹುಟ್ಟಿದುದು ; ಮೂಡಿದುದು : ಮಾತೇಸುದ್ಭಾತದೋಷಪ್ರಕರರಹಿತನೆನಿಪನಾಪ್ತಂ ತದಾಪ್ತಾನನಪ್ರೋದ್ಭೂತಂ (ಸುಳುಪ್ರ. ೩-೩೯). [ಸಂ.]

ಪ್ರೋದ್ಭೇದ (ಗು). ೧. ಒಡೆದ ; ಮುರಿದ. ೨. ಹೊರಹೊಮ್ಮಿದ ; ಹೊರಬಂದ : ಪುಳಕಪ್ರೋದ್ಭೇದಘರ್ಮೋದಕವಿಸರಮನೊತ್ತಂಬದಿಂ ತಾಗೆಯುಂ (ಆದಿಪು. ೪-೩೦). (ನಾ). ೨. ವಿಯರಿಯುವಿಕೆ ; ಮುರಿತ : ಮಾದ್ಯದ್ಗಜಗಂಡಭಿತ್ತಿಕ್ಷಣಪ್ರೋದ್ಭೇದದಿಂ ಸಾರ್ದು ಬಂದಿರೊಳ್ ಕೂಡುವುದಿಲ್ಲಿ ಚಂದನರಸಂ ಕಂಬೊನ್ನ ಟಂಕಂಗಳೊಳ್ (ಶಂಪಾ. ೪-೨೨). [ಸಂ.]

ಪ್ರೋದ್ವೃತ್ತ (ನಾ). ಅತಿಶಯವಾಗಿ ಸೊಕ್ಕಿದವನು ; ಉನ್ಮತ್ತನಾದವನು : ಅಣ್ಮೆ ತಾಗಿದರಂ ಸೀಳ್ದು ಕೆಲಂಬರಂ ಕೆಲಬರಂ ಪ್ರೋದ್ವೃತ್ತರಂ ದೈತ್ಯರಂ ತುದಿಗಾಲಂ ಪಿಡಿದೆತ್ತಿ ಪೊಯ್ದು ನೆಲದೊಳ್ ಕೊಂದಂ ಮರುನ್ನಂದನಂ (ಶಂರಾಮಾ. ೨೦-೦೪). [ಸಂ.]

ಪ್ರೋನೋಟು (ನಾ). ಸಾಲಗಾರನು ಸಾಲಿಗನಿಗೆ ಬರೆದು ಕೊಟ್ಟ ಕರಾರುಪತ್ರ; ಪ್ರಾಮಿಸರಿನೋಟು : ಪ್ರೋನೋಟಿನ ವಾಯಿದೆ ಮುಗಿಯುತ್ತ ಬಂತಲ್ಲ ಎಂಬ ವಿಚಾರವೂ ಹೊಳೆಯುತ್ತದೆ (ಸ್ವಹೃ. ೦೪೭) ; ನೀವು . . . ಪ್ರೋನೋಟು ಬರಕೊಟ್ಟು ನಮ್ಮಿಂದ ಪಡಕೊಂಡ ಹಣ . . . ಕೊಟ್ಟಿಲ್ಲ (ಕುರುಗಾ. ೩).

[P ಇದು 'Promissory note' ಎಂಬುದರ ಸಂಕ್ಷಿಪ್ತರೂಪ]

ಪ್ರೋನ್ನತ (ಗಂ). ಬಹಳ ಎತ್ತರವಾದ.—ಉನ್ನತವಾದ : ತನ್ನ ನೊರ್ವಾ ತ್ರಿಲೋಕಶ್ರೀಯೆಲ್ಲಂ ಪೊರ್ದಿದಂತೇನೊಸೆದನೊ ಮನದೊಳ್ ಸೂಕ್ತಕರ್ಣಾವತಂಸಂ ಶ್ರೀಯಾಂಸಂ ಪ್ರೋನ್ನತಾಂಸಂ (ಆದಿಪು. ೯-೦೩೨) ; ತತ್ಸಭಾಮಧ್ಯದೊಳ್ ತದ್ವಿದರೆಲ್ಲಂ ಕೀರ್ತಿಸುತ್ತಿರ್ಪುದುಮದನೆ ಮನಂಗೊಂಡು ಚಿತ್ತೋದಿತಾನಂದದಿನಿರ್ದಂ ಪ್ರೋನ್ನತಾಂಸಂ (ಸುಳುಪ್ರ. ೨-೭೫). [ಸಂ.]

ಪ್ರೋನ್ನತಿ (ನಾ). ೧. ಬಹಳ ಎತ್ತರ. ೨. ಹಿರಿಮೆ ; ಶ್ರೇಷ್ಠತೆ : ಇನ್ನಱಿಯಲ್ಕೆ ಬರ್ಪುದೆಲೆ ಧೂರ್ತಕಿರಾತ ಭವತ್ಪರಾಕ್ರಮ ಪ್ರೋ[ಪಾಣಾಂ. ದು]ನ್ನತಿಯೆಳ್ತರಂ (ಕಬಹಂ. ೪-೦೦೬). [ಸಂ.]

ಪ್ರೋನ್ಮತ್ತ (ಗು). ಬಹಳವಾಗಿ ಕೊಬ್ಬಿದ ; ಸೊಕ್ಕಿದ : ಪ್ರೋನ್ಮತ್ತ ವೈರೀಭಕೇಸರಿಸಿಂಗಂ ಪತಿಯೆಂದೊಡನ್ನತಿಯನಿನ್ನೇವಣ್ಣೆವೆಂ. ದುರ್ಗಾನಾ (ಕಂಕತಂ. ೦೨-೩) ; ವಿಚಾರಿಪೊಡೆನ್ನವೋಲಿತರನೃಪನಿಂತಾವೊಂ ಪ್ರೋನ್ಮತ್ತ ವೃತ್ತಿಯಿನಿರ್ದವಂ (ಶಂದ್ರಶ. ೨-೯೦). [ಸಂ.]

ಪ್ರೋನ್ಮಿಳಿತ (ಗು). ಕೂಡಿರುವ ; ಸೇರಿರುವ : ಪ್ರಬಲಜಲಚರಾನೀಕ ಗಂಭೀರಭೀಮೋಜ್ವಳರಾವಪ್ರೋದ್ಭೂತಪ್ರೋನ್ಮಿಳಿತ ಘುಳುಘುಳುಧ್ವಾನ ಮಂಭೋನಿಧಾನಂ (ಗಿಂಪು. ೦-೪೬). [ಸಂ. ಪ್ರೋನ್ಮಿಲಿತ]

ಪ್ರೋಷಧ (ನಾ). [ಜೈನ] ಉಪವಾಸದ ಹಿಂದಿನ ದಿನ ಮತ್ತು ಮರುದಿನ ಒಪ್ಪತ್ತು ಮಾತ್ರ ಊಟ ಮಾಡುವ ಒಂದು ಬಗೆಯ ಉಪವಾಸವ್ರತ ; P ಉಪವಾಸವು ಸಾಧ್ಯವಾಗದೆ ಹೋದರೆ ಕೇವಲ ನೀರನ್ನು ಕುಡಿದು ಇರಬಹುದು. ಅದಕ್ಕೂ ಅಸಮರ್ಥರಾದವರು ಒಂದು ಹೊತ್ತು ಶುದ್ಧ ಸಾತ್ವಿಕ ಹಗುರು ಅನ್ನವನ್ನು ಸ್ವೀಕರಿಸಬಹುದು. ಅಷ್ಟಮಿ, ಚತುರ್ದಶಿ ದಿನಗಳಲ್ಲಿ ಉಪವಾಸವನ್ನು ಮಾಡಬೇಕೆನ್ನುವವರು ಮುಂಚಿನ ದಿನ ಮಧ್ಯಾಹ್ನ ಊಟ ಮಾಡಿಕೊಡನೆಯೇ ಮರುದಿವಸ ಉಪವಾಸದ ಪ್ರತಿಜ್ಞೆಯನ್ನು ಮಾಡಬೇಕು. ಆಗಿನಿಂದಲೇ ತನ್ನ ಮನೆತನದ ಎಲ್ಲ ಕೆಲಸಗಳನ್ನು ಬಿಟ್ಟು ಏಕಾಂತಸ್ಥಳಕ್ಕೆ ಹೋಗಿ ಧ್ಯಾನ ಸ್ವಾಧ್ಯಾಯಗಳನ್ನು ಮಾಡುವುದರಲ್ಲಿ ತೊಡಗಬೇಕು. ಈ ರೀತಿ ಇರುಳು ಹಾಗೂ ಅಷ್ಟಮಿ, ಚತುರ್ದಶಿಗಳ ಪೂರ್ಣ ಹಗಲು ಮತ್ತು ಇರುಳುಗಳನ್ನು ಕಳೆಯಬೇಕು. ಆಮೇಲೆ ಮರುದಿನ ಮಧ್ಯಾಹ್ನದಲ್ಲಿ ಅತಿಥಿಗೆ ಮೊದಲು ಊಟ ಹಾಕಿ ತಾನು ಅನಾಸಕ್ತವೃತ್ತಿಯಿಂದ ಊಟ ಮುಗಿಸಬೇಕು. ಈ ಉಪವಾಸವು ಕೇವಲ ಹೊಟ್ಟೆಗಾಗಿ ಮಾತ್ರ

ವಲ್ಲ. ಆ ಅವಧಿಯಲ್ಲಿ ಪಂಚೇಂದ್ರಿಯಗಳೂ ಉಪವಾಸದಲ್ಲಿರಬೇಕು. ಇಂದ್ರಿಯಗಳು ಸ್ವಾದಿಷ್ಟಭೋಜನ, ಸುಂದರಸ್ತ್ರೀ, ಸುಗಂಧದ್ರವ್ಯ, ಇಂಪಾದ ಸಂಗೀತದ ಕಲ್ಪನೆಯಲ್ಲಿ ಸಹ ಇರಬಾರದು : ಸಂಯಮಿಗಳ್ಗುತ್ಕೃಷ್ಟದಿಂ ದಾನಮನತಿಮುದದಾರ್ತೀವುದುಂ ಪ್ರೋಷಧಪ್ರಕ್ರಮದಿಂ ಪರ್ವಂಗಳಂ ನೋಂಪುದುಂ . . . ಶಿಕ್ಷಾಬ್ರತಂಗಳ್ (ಸುಕುಮಾ. ೬-೦೦). [ಸಂ.]

ಪ್ರೋಷಧೋಪವಾಸ (ನಾ). = ಪ್ರೋಷಧ : ನೋಡದೆ ಪ್ರತಿಲೇಪನೆಯಂ ಮಾಡದೆ ಮಡಗಿಡುವ ಕೊಳ್ವ ಪಾಸುವುದುಂ. ಕೊಂಡಾಡದುದುಂ ನೆನೆಯದುದುಂ ಕೇಡಿನಿತುಂ ಪ್ರೋಷಧೋಪವಾಸವ್ರತದೊಳ್ (ಸುಕುಮಾ. ೬-೨೩) ; ಪ್ರೋಷಧೋಪವಾಸಕ್ಕೈದತಿಚಾರವಿದೋಷವನುಳಿದನವರತ ಲೇಸಾಗಿ ನಡೆವರು ಷೋಡಶಸ್ವರ್ಗನಿವಾಸಿಗಳಹರತಿಮುದದಿಂ (ದ್ವಾದಶಾ. ೦೦-೩೨೩) ; ಪ್ರತಿಯೊಂದು ಅಷ್ಟಮಿ, ಚತುರ್ದಶಿತಿಥಿಗಳಲ್ಲಿ ಮನ, ವಚನ, ಕಾಯಗಳ ಸ್ಥಿರತ್ವವನ್ನು ಸಾಧಿಸುವುದಕ್ಕಾಗಿ ನಾಲ್ಕೂಪ್ರಕಾರದ ಆಹಾರವನ್ನು ತ್ಯಾಗಮಾಡಿ ಉಪವಾಸವನ್ನು ಆಚರಿಸುವುದು (ಸೈನಪ. ೪೬೯). [ಸಂ.]

ಪ್ರೋಷಧೋಪವಾಸಿ (ನಾ). [ಜೈನ] ಪ್ರೋಷಧೋಪವಾಸವನ್ನು ಮಾಡುತ್ತಿರುವವನು ; ಪ್ರೋಷಧವ್ರತವನ್ನು ಕೈಗೊಂಡಿರುವವನು: ಪರಮನಿರಂಜನ ನಿಜಪರಮಾತ್ಮನನಱಿದು ಲೇಸಾಗಿ ಧ್ಯಾನಿಸುತ ತಱಿಸಂದಿಂತು ನೆಗಳುತಿಪ್ಪಾತನು ಉಱುವ ಪ್ರೋಷಧೋಪವಾಸಿ (ದ್ವಾದಶಾ. ೦೧-೭೩೩) ; ಪ್ರೋಷಧೋಪವಾಸಿ :— ಅಷ್ಟಮಿ, ಚತುರ್ದಶಿ ತಿಥಿಗಳಲ್ಲಿ ಮನ, ವಚನ, ಕಾಯಗಳ ಸ್ಥಿರತ್ವವನ್ನು ಸಾಧಿಸುವುದಕ್ಕಾಗಿ ಉಪವಾಸವನ್ನು ಮಾಡುವನು (ಭಾರದ. ೦೮೯). [ಸಂ. ಪ್ರೋಷಧೋಪವಾಸಿನ್]

ಪ್ರೋಷಿತ (ಗು). ಪ್ರಯಾಣದಲ್ಲಿರುವ ; ಪ್ರವಾಸದಲ್ಲಿರುವ. [ಸಂ.]

ಪ್ರೋಷಿತಭರ್ತೃಕೆ (ನಾ). [ಕಾವ್ಯಮೀ] ಎಂಟು ಜನ ನಾಯಿಕೆಯರಲ್ಲಿ ಒಬ್ಬಳು ; ವಿದೇಶಕ್ಕೆ ಹೋಗಿರುವವನ ಪತ್ನಿ : ಪ್ರೋಷಿತಭರ್ತೃಕೆ ನಾಯಿಕೆಯಾಗಿರುವಾಗ ಪ್ರವಾಸವಿಪ್ರಲಂಭ (ರೃಷ್ಯಾಶೋ. ೭೩). [ಸಂ. ಪ್ರೋಷಿತಭರ್ತೃಕಾ]

ಪ್ರೋಷ್ಠ (ನಾ). ೧. ಎತ್ತು ; ವೃಷಭ. ೨. ಕಾಲುಗಳುಳ್ಳ ಮಣಿ. ೩. ಒಂದು ಬಗೆಯ ಮೀನು. ೪. [ಕಾಮಶಾ] ರತಿಬಂಧಗಳಲ್ಲಿ ಒಂದು ಬಗೆ : ಮೆಲ್ಲನೆ ಮಲಗಿರ್ದವಳು ತನ್ನೆರಡು ಪಾದಂಗಳಂ ಮೇಲಕ್ಕೆಯೆತ್ತಿ ತೋರಣಕಂಭದಾಕಾರಂಗೆಯ್ದು ತನ್ನ ಕಾಲ್ಗಳಂ ತಿರುವುತ ಕೂಡಿದರೆ ಪ್ರೋಷ್ಠ[ಪಾಶಾಂ. ಷ್ಟ]ಮೆಂಬ ಕರಣಂ (ಕಾಮಶಾ. ೨೩೩). [ಸಂ.]

ಪ್ರೋಷ್ಠಪದ (ನಾ). ೧. [ಜ್ಯೋತಿ] ಪೂರ್ವಾಭಾದ್ರಾ, ಉತ್ತರಾಭಾದ್ರಾ ಎಂಬ ಎರಡು ನಕ್ಷತ್ರಗಳು. ೨. ಚಾಂದ್ರಮಾನದಲ್ಲಿನ ಮೂರು ಮತ್ತು ನಾಲ್ಕನೆಯ ನಕ್ಷತ್ರಗಳಿಗೆ ಸಂಬಂಧಿಸಿದ ತಿಂಗಳು ; ಭಾದ್ರಪದಮಾಸ. [ಸಂ.]

ಪ್ರೋಷ್ಠಿ (ನಾ). ಹೆಣ್ಣುಮೀನು : "ಪ್ರೋಷ್ಠಿಯೆನೆ ಶಫರಿಯೆಂದೆನೆ ಹೆಣ್ಣುಮೀನಕ್ಕು" (ಮಂಗರಾ. ೦೨೦-೬). [ಸಂ. ಪ್ರೋಷ್ಠೀ]

ಪ್ರೋಹ (ನಾ). ಆನೆಯ ಕಾಲು : ಸುಸಂಚಿತಪ್ರೋಹಫಳೀಹಸ್ತಗಾತ್ರನುಂ ಪರಿಪೂರ್ಣಶ್ಲಿಷ್ಟಪಾರ್ಷ್ಣಿಯುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು (ಆದಿಪು. ೦೨-೫೬ ವ). [ಸಂ.]

ಪ್ರೌಢ (ಗು). ೧. ಚೆನ್ನಾಗಿ ಬೆಳೆದ; ವೃದ್ಧಿಯಾದ : ಪ್ರೌಢವಿಲಾಸಿನೀ ಮನಸಿಜಂ. . . ಶ್ರೀಧರಂ (ಜಾತಕ. ೦-೫). ೨. ಗಾಢವಾದ; ಸಾಂದ್ರ : ೩. ವೇಗವುಳ್ಳ; ರಭಸವಾದ. ೪. ಪಾಂಡಿತ್ಯದಿಂದ ಕೂಡಿದ; ಬುದ್ಧಿವಂತಿಕೆಯಂ. ೫. ಮದುವೆಯಾದ; ವಿವಾಹ ಮಾಡಿಕೊಂಡ. (ನಾ). ೬. ಪಾಂಡಿತ್ಯದಿಂದ ಕೂಡಿರುವುದು; ವಿದ್ವತ್ಪೂರ್ಣವಾಗಿರುವುದು : ಶಾಸನಗಳ ಭಾಷೆ, ವ್ಯಾಕರಣ, ಛಂದಸ್ಸು ಇವು ಪ್ರೌಢವಾಗಿವೆ (ಸಾಹಿಸ. ೦೩). ೭. ವಯಸ್ಸಿಗೆ ಬಂದವನು ; ಪ್ರಾಯಸ್ಥ : ನೀನು ಇನ್ನೂ ಸಣ್ಣವನು. ಸ್ವತಂತ್ರನಾಗಿ ನಡೆಯತಕ್ಕಷ್ಟು ಪ್ರೌಢನಾಗಿಲ್ಲ (ಮುಂದಿಯು. ೪-೩೮). ೮. ಪಂಡಿತ; ಪ್ರಗಲ್ಭ : ನಿಮ್ಮಯ ಸಭೆಯೊಳಿಪ್ಪ ಪ್ರೌಢರ ವಿಚಾರಿಸೆ ತಾವೆ ಪೇಳ್ವರು (ಪ್ರೌಢರಾ. ೨-೨೮); ಒರ್ವ ವಿಟನಿದಿರ್ವಂದು ಮತ್ತೇಭಗಾಮಿನಿ ಭೃಂಗನೀಲಕುಂತಳೆ ಪನ್ನಗಾಭಸುಂದರ ವೇಣಿ ಬೆದಱಬೇಡೆನುತೆ ತಕ್ಕೈಸಿದನದೇಂ ಪ್ರೌಢನೋ (ಸೈಮಿಭಾ. ೨೬-೯). [ಸಂ.]

ಪ್ರೌಢತೆ (ನಾ). ಜಾಣ್ಮೆ; ನೈಪುಣ್ಯ; ಪ್ರಾವೀಣ್ಯ : ದುರ್ಧರಸಮರ ಜಯಪ್ರೌಢತಾರೂಢದೋಶ್ಶೌರ್ಯದೆ ಶೂರಾರಾತಿಸಂದೋಹಮನೆಱಗಿಸಿ (ಸಂಪ್ರಪು. ೫-೦೩೯) ; ತುಳುಂಕಿದರಂಬುವಂ ನಿಜಪ್ರೌಢತೆಯಿಂದವೊಲ್ದು ವಿಸಟಂಬರಿದಾಡಿದರ್. . .ಲಲಿತಾಂಗಿಯೆರ್ (ಹಮ್ಮೀರ. ೪-೨೭). [ಸಂ. ಪ್ರೌಢತಾ]

ಪ್ರೌಢವತ್ಸೆ (ನಾ). ಅನೇಕ ಕರಂಗಳನ್ನು ಹಾಕಿರುವ ಹಸಂ : "ಬಷ್ಕಯಣೀ, ಪ್ರೌಢವತ್ಸಾ—ಈ ೨ ಕಡೆಗಂದಿ" (ಹಲಾಯು. ೪೫-೦೦೫). [ಸಂ. ಪ್ರೌಢವತ್ಸಾ]

ಪ್ರೌಢವಯಸ್ಕ (ನಾ). ವಯಸ್ಸಿಗೆ ಬಂದವನು : ಪುಲಿಕೇಶಿ ಸಾಯುವಾಗ ಅಂದರೆ ಸುಮಾರು ೬೪೨ರಲ್ಲಿ ವಿಕ್ರಮಾದಿತ್ಯನು ಪ್ರೌಢವಯಸ್ಕನಾಗಿರಬೇಕು (ಕರ್ಣಾಲಿ. ೭೬). [ಸಂ.]

ಪ್ರೌಢವಿದ್ಯಾಭ್ಯಾಸ (ನಾ). ೧. ಹೆಚ್ಚಿನ ತಿಳಿವಳಿಕೆಯನ್ನು ನೀಡುವ ಶಿಕ್ಷಣ : ಇದ್ದ ಊರಿನಲ್ಲಿ ಪ್ರೌಢಶಾಲೆಯಿಲ್ಲವಾದ್ದರಿಂದ ಮಗನನ್ನು ಪ್ರೌಢವಿದ್ಯಾಭ್ಯಾಸಕ್ಕಾಗಿ ಬೇರೆ ಊರಿಗೆ ಕಳುಹಿಸಬೇಕಾಯಿತು (ರೂಢಿ). ೨. (ವಿಶ್ವವಿದ್ಯಾನಿಲಯದ ಮಟ್ಟದ) ಉನ್ನತಶಿಕ್ಷಣ : ಎಷ್ಟೇ ಕಷ್ಟವಾದರೂ ಸರಿ, ಮಗನಿಗೆ ಪ್ರೌಢವಿದ್ಯಾಭ್ಯಾಸ ಮಾಡಿಸಬೇಕೆಂಬ ಅವನ ಹಟ ಸಾರ್ಥಕವಾಯಿತು (ರೂಢಿ). [ಸಂ.]

ಪ್ರೌಢವಿವಾಹ (ನಾ). ವಯಸ್ಸಿಗೆ ಬಂದ ವಧೂವರರ ವಿವಾಹ : ಪ್ರೌಢವಿವಾಹ, ವಿಧವಾವಿವಾಹ . . . ವಿಚಾರವಂತರನ್ನು ಆಕರ್ಷಿಸಿತು (ಧರ್ಮಸಾ. ೬೫). 'ಬಾಲ್ಯವಿವಾಹ' ಪರಾ. [ಸಂ.]

ಪ್ರೌಢಶಾಲೆ (ನಾ). ಹೆಚ್ಚಿನ ವಿದ್ಯಾಭ್ಯಾಸವನ್ನು ನೀಡುವ ಶಾಲೆ ; ಹೈಸ್ಕೂಲು : ತೀರ್ಥಹಳ್ಳಿಗೆ ಮುಂದೆ ತಂದೆ ಕರೆತಂದರು ಪ್ರೌಢಶಾಲೆಗೆ ಸೇರಿಸಿದರು (ಇಂಜಾಪ. ೦೯-೫೯) ; ಮಾಧ್ಯವಿಕಶಾಲೆ ಸೆಕೆಂಡರೀಶಿಕ್ಷಣದ ಒಂದು ಅಂಗ ಮಾತ್ರವಾದ್ದರಿಂದ ಅದು ಪ್ರೌಢಶಾಲೆಯೆ ಕಡೆ ಕೈ ತೋರಿಸಲೇಬೇಕು (ಶಿಕ್ಷದ. ೦೮೦). 'ಪ್ರಾಥಮಿಕಶಾಲೆ' ಪರಾ. [ಸಂ. ಪ್ರೌಢಶಾಲಾ]

ಪ್ರೌಢಶಿಕ್ಷಣ (ನಾ). ೧. = ಪ್ರೌಢವಿದ್ಯಾಭ್ಯಾಸ ೧: ಶಿಕ್ಷಣ ವ್ಯವಸ್ಥೆಯನ್ನು ಕೆಳಗಿನ ನಕ್ಷೆಯ ಮೂಲಕ ವಿವರಿಸಬಹುದು: ಪ್ರಾಥಮಿಕ ಶಿಕ್ಷಣ→ ಪ್ರೌಢಶಿಕ್ಷಣ → ವಿಶ್ವವಿದ್ಯಾನಿಲಯದ ಶಿಕ್ಷಣ (ಶಿಕ್ಷದ. ೦೯೨). ೨. = ಪ್ರೌಢವಿದ್ಯಾಭ್ಯಾಸ ೨: ಇದ್ದ ಊರಿನಲ್ಲಿಯೇ ಕಾಲೇಜು ಬಂದುದರಿಂದ ಅವನ ಮಗನ ಪ್ರೌಢಶಿಕ್ಷಣಕ್ಕೆ ಸುಲಭವಾಯಿತು (ರೂಢಿ). [ಸಂ.]

ಪ್ರೌಢಿ (ನಾ). ೧. ಬಲಿಯುವಿಕೆ; ಪಕ್ವವಾಗುವಿಕೆ. ೨. ಚತುರತೆ; ಜಾಣ್ಮೆ; ನಿಪುಣತೆ : "ಪ್ರೌಢಿಃ — ಜಾಣತನಂ" (ಕಾತಕ್ಕ. ೦೬೦); ಆಚಾರ್ಯರೆಮ್ಮಂ ನಿಯಮಿಸುಗೆ ನಿಜಾನುಗ್ರಹಪ್ರೌಢಿಯಿಂದಂ (ಪುಷ್ಪಪು. ೧-೩); ಪ್ರೌಢಿಯಲ್ಲಿದು ಕೇಳಿ ಬಲ್ಲೆವು ರೂಢಿಯಲಿ ಸಮಬಲರು ಭೀಮ ಸಗಾಢದಲಿ ಬಲಭದ್ರ ಕೀಚಕ ಶಲ್ಯರೆಂಬುವರು (ಕುಷ್ಠಾಪಿ. ೪-೯). ೩. ಸೊಕ್ಕು; ಗರ್ವ. ೪. ಧೈರ್ಯ; ಎದೆಗಾರಿಕೆ. ೫. ಸಾಹಸ; ಶೌರ್ಯ. ೬. [ಕಾವ್ಯಮೀ] ಅರ್ಥಗುಣಗಳಲ್ಲಿ ಒಂದು ; ದೀರ್ಘ

ಸಮಾಸವನ್ನು ರಚಿಸುವ ಅಥವಾ ಸಮಾಸದ ಅರ್ಥವನ್ನು ಸರಳವಾದ ಮತ್ತು ವಿರಳ ಶಬ್ದಗಳಲ್ಲಿ ನಿರೂಪಿಸುವ ಬರಹದ ಗುಣ : ಅರ್ಥಗುಣಗಳಲ್ಲಿ ಓಜಸ್ಸು (ಅಥವಾ ಪ್ರೌಢಿಯು) ಮೊದಲು ನಾಲ್ಕು ಭೇದಗಳು ಕೇವಲ ವೈಚಿತ್ರ್ಯ ಮಾತ್ರ (ಕೃಪಿ. ೨೫೯). [ಸಂ.]

ಪ್ರೌಢಿಮೆ (ನಾ). ೧. ಜಾಣ್ಮೆ; ಚಾತುರ್ಯ; ನೈಪುಣ್ಯ : ಯಾವನೋ ನಿಪುಣನಾದ ಕಲಾವಿದನು ವರ್ಷಗಟ್ಟಲೆ ದುಡಿದು ಅದರಲ್ಲಿ ತನ್ನ ಕಲಾ ಪ್ರೌಢಿಮೆಯನ್ನು ಭಟ್ಟಿ ಇಳಿಸಿದ್ದನು (ಕಂಬಿಹು. ೦). ೨. ಅತಿಶಯವಾದ ಕೌಶಲ್ಯ : ಅದು... ಗ್ರೀಕರ ರುದ್ರನಾಟಕದ ಪ್ರೌಢಿಮೆಯನ್ನೂ ಗಾಂಭೀರ್ಯವನ್ನೂ ಗಳಿಸಿತು (ಅಂಕಾ. ೬೬). [ಪ್ರೌಢಿ + — ಮೆ$_1$]

ಪ್ರೌಢಿವೆಱು (ಕ್ರಿ). ನೈಪುಣ್ಯವನ್ನು ಹೊಂದು ; ಪ್ರೌಢಿಮೆಯನ್ನು ಪಡೆ : ಸಮಗ್ರತರಶಿಷ್ಯಾನುಗ್ರಹ ಪ್ರೌಢಿವೆತ್ತನವದ್ಯರ್ ದಯೆಗೆಯ್ವರಕ್ಕೆ ದಯೆಯಿಂ ಭವ್ಯಾಳಿಗೆ (ಪಂಚಾಮಾ. ೦-೩). [ಪ್ರೌಢಿ + ವೆಱು$_1$]

ಪ್ರೌಢೆ (ನಾ). ೧. ತಾರುಣ್ಯಾವಸ್ಥೆಯನ್ನು ಮೀರಿದ ಹೆಂಗಸು; ಮಧ್ಯಮ ವಯಸ್ಸಿನವಳು : ಐದುವರ್ಷಪರ್ಯಂತರ ಕೂಟವಾಗಿ ಮೂವತ್ತುವರ್ಷ ಪರ್ಯಂತ ಪ್ರೌಢೆ ಎನಿಸಿಕೊಂಬಳು (ಸಕಸ್ಯ. ೬೦). ೨. ತಿಳಿದವಳು; ಪ್ರಾಜ್ಞೆ : ಅತಿಪ್ರೌಢೆಯೆನಿಸಿದ ಕೆಳದಿ (ಜಗಪಿ. ೨-೬೬ ಪ); ನಾನು ನಿನಗಿಂತ ಚಿಕ್ಕವಳು. ಹುಡುಗಿಯೂ ಅಲ್ಲ, ಪ್ರೌಢೆ ಮೊದಲೇ ಅಲ್ಲ (ಶಾಂಕಲಾ. ೬೬). ೩. [ಕಾವ್ಯಮೀ] ಬಾಲೆ, ಮುಗ್ಧೆ, ವಿದಗ್ಧೆ ಮತ್ತು ಪ್ರಗಲ್ಭೆಯರೆಂಬ ನಾಯಿಕೆಯರ ನಾಲ್ಕು ಭೇದಗಳಲ್ಲಿ ಮೂರನೆಯ ವರ್ಗಕ್ಕೆ ಸೇರಿದವಳು ; ವಿದಗ್ಧೆ : ವಯಸವಿಭೇದದಿಂ ಬಾಲೆ ಯೌವನೆ ಪ್ರೌಢೆ ಲೌಲ್ಯೆಯೆಂದಿಂತು ಧರಿತ್ರಿಯೊಳಪ್ಪರ್ನಾಲ್ವರ್ಕಾಂತೆಯರ್ (ಶುಚಿ. ೭-೦). [ಸಂ. ಪ್ರೌಢಾ]

ಪ್ರೌಢೋಕ್ತಿ (ನಾ). = ಪ್ರೌಢಿ ೬ : ವರಕಾರ್ಯೋತ್ಕರ್ಷಕ್ಕೆ ತಾಂ ಕಾರಣವಾಗದಲೆಯುರೆ ಕಾರಣವಾಗೆ ಪ್ರೌಢೋಕ್ತಿ (ಕುಪಂ. ೦೨೦); ವಿಷಯವು ಇಲ್ಲಿ ಕವಿಯ ಪ್ರೌಢೋಕ್ತಿಯಿಂದ ಅರ್ಥಾಂತರಕ್ಕೆ ವ್ಯಂಜಕವಾಗಿದೆ (ರ್ಯಾಸ್ಕಾರೋ. ೦೨೨). [ಸಂ.]

ಪ್ಲಕ್ಷ (ನಾ). ೧. ಒಂದು ಬಗೆಯ ಮರ : ಬಸರಿ : "ಎತ್ತೆಗುದಿ ಪ್ಲಕ್ಷ ಮಕ್ಕುಂ" (ಮಂಗಣಾ. ೩೭-೦೯). ೨. ಅತ್ತಿಮರ. ೩. ಆಲದ ಮರ : ಬರ್ಪಾ ಪಥದೊಳೆಸೆದುದುದ್ದಂಡಶಾಖಾಕದಂಬೋಜ್ವಳಪರ್ಣೋದೀರ್ಣ ಶುಂಭತ್ಪಳಕುಳವಿಳಸಚ್ಛಾಯಕಂ ಪ್ಲಕ್ಷವೃಕ್ಷಂ (ಪ್ರಕಟ. ೨೦-೦೭). ೪. ನೆರಳು ; ಛಾಯೆ : "ಪ್ಲಕ್ಷ—ಛಾಯಾಯಾಂ, ನೆಳಲೊಳ್" (ಕಾಶಕ್ಯ. ೦೦೬). ೫. ಭೂಮಿಯ ಸಪ್ತದ್ವೀಪಗಳಲ್ಲಿ ಒಂದರ ಹೆಸರು. [ಸಂ.]

ಪ್ಲವ (ಗು). ೧. ತೇಲುವ. ೨. ಹಾರುವ ; ನೆಗೆಯುವ. ೩. ಉತ್ತಮವಾದ ; ಶ್ರೇಷ್ಠವಾದ. (ನಾ). ೪. ತೇಲುವಿಕೆ. ೫. ಹಾರುವಿಕೆ ; ನೆಗೆತ. ೬. ಪ್ರವಾಹ ; ಹರಿವು : ನಿರ್ಭರಪೂರ ಮಾಗಿಯುಮತಿಸ್ನಿಗ್ಧಾಶ್ರುಧಾರಾಜಲಪ್ಲವಮುಂ ಬಾರಿಸಲೆಂತುಮಾಱವು ವಲಂ ಕಾಲೋರಗಗ್ರಸ್ತನಂ (ಅಪಿಪು. ೩-೬೪) ; ಅವಳಸಿಯ ಬಾಸೆಯೆಂಬೀ ನವಯೌವನವನದ ಲತೆಯ ಲಾವಣ್ಯಜಳಪ್ಲವಮನೊಳಕೊಳ್ಳುದೆಂದಾಳ ವಾಳಮೆನೆ ನಿಮ್ನನಾಭಿಮಂಡಲಮೆಸೆಗುಂ (ಶುಲ್ಕಪು. ೩-೬೨) ; ವರನೊತ್ತಿದ ಘುಸೃಣರಸಂ ಗುರುಕುಚನಗಧಾತು ನಿರ್ಝರಪ್ಲವಮಿಳಿವಂತಿರೆ ನುಸುಳ್ದೈತರೆ ತಳ್ತೇಂ ಕರಮೆಸೆದುದೊ ಬಾಸೆವಳ್ಳಿ ತಳಿರೇಱಿದವೋಲ್ (ರಾಜಕೇ. ೦೦-೬೬). ೭. ನೀರಿನ ಮೇಲೆ ತೇಲುವ ಸಾಧನ : ತೆಪ್ಪ, ದೋಣಿ, ಮೊದಲಾದುವು : "ತಳ್ಪಂ, ಉಡುಪಃ, ಪ್ಲವಃ—ಈ ೩ ತೆಪ್ಪಂ" (ಹಲಾಯು. ೦೦೦-೪೯). ೮. ಕಪ್ಪೆ. ೯. ಕೋತಿ. ೧೦. ಚಂಡಾಲ ; ಹೊಲೆಯ. ೧೧. ಒಂದು-ಬಗೆಯ ನೀರು ಹಕ್ಕಿ : ಕೃಕರ ಕರೇಟು ಕುಕ್ಕುಟ ... ಕಂಕವರ್ತಕ ಕುರರೀಪ್ಲವಪ್ರಕರದಿಂದೆ ವಿರಾಜಿಕುಮುನ್ನತಂ ವನಂ (ಹಪ್ಪಿರ. ೪-೬೨); ಆಗಳ್ ಸಮುದ್ರಂಗಳೆಯ್ದುತ್ತಿರ್ದವೆಂತೆನೆ ... ನೊರೆಗಳ್ ಸದ್ಬುದ್ಬುದಂಗಳ್ ಗಜ ತುರಗ ನರರ್ ಕುಕ್ಕುಟಂಗಳ್ ಪ್ಲವಂಗಳ್ ನೆರೆದೆತ್ತಂ ತುಂಬಿ ಘೋಷಂ ಪೊರೆದೊರೆಯೆ ದಿಶಾಭಾಗಮಂ ಬಂದವಾಗಳ್ (ಹಾಲಾಸ್ಯ. ೦-೦೦-೩೦). ೧೨. ಅರವತ್ತು ಸಂವತ್ಸರಗಳಲ್ಲಿ ಮೂವತ್ತೈದನೆಯ ಸಂವತ್ಸರ : ಪ್ರಭವ... ತಾರ್ವರಿ ಪ್ಲವ ... ಅಕ್ಷಯವೆಂದಱುವತ್ತು ತೆಱನಾಗಿಹುದು (ಪಿಸೇಕ. ೨೬೩). [ಸಂ.]

ಪ್ಲವಂಗ (ನಾ). ೧. ಕೋತಿ ; ಮಂಗ : "ಬಲೀಮುಖಃ, ಮರ್ಕಟಕಃ, ವನೌಕಾಃ, ಪ್ಲವಂಗಮಃ, (ಪ್ಲವಂಗಃ), ಪ್ಲವಗಃ ... ವಾನರಃ— ಈ ೧೧ ಕೋಡಗಂ" (ಹಲಾಯು. ೩೯-೭೬) ; ನೆತ್ತರ ಹೂರದಲಿ ಹೋಹ ಪ್ಲವಂಗಕ್ಕವಧಿಯಿಲ್ಲ (ಕೊರಣಾ. ೬-೩೫-೪೪). ೨. ಕಪ್ಪೆ : "ಮಂಡೂಕಃ ... ಪ್ಲವಂಗಃ—ಈ ೮ ಕಪ್ಪೆ" (ಹಲಾಯು. ೦೦೯-೪೦). ೩. ಒಂದು ಬಗೆಯ ಜಿಂಕೆ. ೪. ಅಂಜೂರ ವೃಕ್ಷ. ೫. ಅರವತ್ತು ಸಂವತ್ಸರಗಳಲ್ಲಿ ನಲವತ್ತೈದನೆಯ ಸಂವತ್ಸರ : ಆ ವರ್ಷವೇ ಪ್ರಭವ ... ಪ್ಲವಂಗ ಕೀಲಕ ... ಅಕ್ಷಯವೆಂದಱುವತ್ತುತೆಱನಾಗಿಹುದು (ಪಿಸೇಕ. ೨೬೩). ೧. ೫ : ಮನೆ ಸಲೆ ಹೇವಿಳಂಬಿ ಸಹಕಾರಿ ವಿಕಾರಿ ... ನಿಜವಲ್ಲಭೆ ದುರ್ಮುಖಿಯೆಂದೊಡೆನ್ನ ಪೆಂಪಿನ ವಿಭವಂ ಪ್ಲವಂಗದವೊಲಾದುದು ಮನ್ಮಥಚಿತ್ರಭಾನುವಿಂ (ಸೂಕ್ತಿಸು. ೬-೪೩೬); ಸೌಮ್ಯ ಶ್ರೀಮುಖಂ ಪ್ರಭವ ಶುಕ್ಲಾನಂದನಿವನಿರಲ್ಕೆ ಕೃತಕಂ ಪ್ಲವಂಗದುರ್ಮುಖಿಯಂ ವಿಕಾರಿಯಂ ಪ್ರತಿದಿನಂ ಕರೆಯೆಂಬೆಯೆಂದು 'ಸಂವತ್ಸರಮನತಿಶಯಂ ಪೇಳ್ವಂತೆ ರೌದ್ರಿ ರಕ್ತಾಕ್ಷಿ ತಾಯಂ ಮಗಳ್ ಕೋಪಿಸಿದಳು (ಕಪಿಪು. ೦೦-೪೦). ೬. ಕುದುರೆ ; ಅಶ್ವ : "ತುರಂಗಂ ಕಪಿ ಭೇಕಂಗಳಿಂತು ಪ್ಲವಂಗಮಕ್ಕು" (ಶಾಹಾರ. ೪೭). [ಸಂ.]

ಪ್ಲವಂಗಮ (ನಾ). ೧. = ಪ್ಲವಂಗ ೧ : "ಬಲೀಮುಖಃ ... ಪ್ಲವಂಗಮಃ ... ವಾನರಃ — ಈ ೧೧ ಕೋಡಗಂ" (ಹಲಾಯು. ೩೯-೭೬). ೨. ಕಪ್ಪೆ : "ಮಂಡೂಕಃ ... ಪ್ಲವಂಗಮಃ, ಪ್ಲವಂಗಃ —ಈ ೮ ಕಪ್ಪೆ" (ಹಲಾಯು. ೦೦೯-೪೦). [ಸಂ.]

ಪ್ಲವಂಗವಿದ್ಯೆ (ನಾ). [ಜೈನ] ವಿದ್ಯೆಗಳಲ್ಲಿ ಒಂದು ; ಮರ್ಕಟವೇಷವನ್ನು ತಾಳುವ ವಿದ್ಯೆ : ಅಣುವಂ ಪ್ಲವಂಗವಿದ್ಯೆಯಿಂ ಕಪಿಮೂರ್ತಿಯಂ ಕೈಕೊಂಡು ಕಾಪಿನವರ್ಗೆಲ್ಲಂ ಮಹಾನಿದ್ರೆಯಂ ಮಾಡೆ (ಶಾಪುಂಪು. ೩೦೬). [ಸಂ. ಪ್ಲವಂಗವಿದ್ಯಾ]

ಪ್ಲವಕ (ನಾ). ೧. ತೇಲುವವನು : "ಪ್ಲವಕಃ, ಪ್ಲವಮಾನ. —ಈ ೨ ತೇಲ್ವಂ" (ಕಾಶಕ್ಯ. ೦೨೬). ೨. ಕಪ್ಪೆ. ೩. ಡೊಂಬ. ೪. ಚಂಡಾಲ. ೫. ಕೋತಿ ; ಮಂಗ. [ಸಂ.]

ಪ್ಲವಗ (ನಾ). ೧. = ಪ್ಲವಂಗ ೧ : "ಬಲೀಮುಖಃ ... ಪ್ಲವಗಃ ... ವಾನರಃ — ಈ ೧೧ ಕೋಡಗಂ" (ಹಲಾಯು. ೩೯-೭೬); ನವರಸರಸಿಕಂ ಸುಮನಸ್ತವನೀಯವೆನಿಪ್ಪ ಕಾವ್ಯದತಿಶಯಮಂ ದುಃಕವಿಯಱಿಯನೆಂದು ಜಱಿಯೆ ಪ್ಲವಗಕ್ಕೇವಾಟ್ತೆ ಪಾರಿಜಾತಸ್ತಬಕಂ (ಧರ್ಮಶಾ. ೦-೩೬). ೨. ಕಪ್ಪೆ ; ಮಂಡೂಕ : "ಮಂಡೂಕಃ, ಪ್ಲವಗಃ ... ಪ್ಲವಂಗಃ—ಈ ೮ ಕಪ್ಪೆ" (ಹಲಾಯು. ೦೦೯-೪೦) ; ಪ್ಲವಗಪ್ಲುತದಿಂ ಚಾರಣನಿವಹಂ ಚಾರಣಗಣಂಗಳಂ ತಾಗೆ ಪಯಃಪ್ಲವದೊಳಗೆ ಮುಟ್ಕಿ ಪಾರಿಪ್ಲವನೇತ್ರೆಯರಮರಕಾಂತೆಯರ್ ಸೊಗಯಿಸಿದರ್ (ಅಪಿಪು. ೪-೬೦). ೩. ಒಂದು ಬಗೆಯ ನೀರು ಹಕ್ಕಿ; ನೀರುಕೋಳಿ. ೪. ಸೂರ್ಯನ ಸಾರಥಿ ; ಅರುಣ. [ಸಂ.]

ಪ್ಲವಗಕೇತು (ನಾ). ಕಪಿಯನ್ನು ಧ್ವಜದಲ್ಲಿ ಉಳ್ಳವನು; ಕಪಿಧ್ವಜ:

ಅಮಿತಚತುರಂಗಸೇನಾಸಮನ್ವಿತರ್ ಪ್ಲವಗಕೇತುಗಳ್ಮಾರುತಮಾರ್ಗಮನೆಳಸಿ ಬಳಸಿ ನಡೆದರ್ (ಸಂಗಾಪು. ೦೩-೨೬). [ಸಂ.]

ಪ್ಲವನ (ನಾ). ೧. ತೇಲುವುದು : "ಪ್ಲವನಂ, ಪ್ಲವನೀಯಂ—ಈ ೨ ತೇಲ್ಕೆ" (ಕಾಶಕ್ಯ. ೦೨೬). ೨. ಮೀಹ ; ಸ್ನಾನ. ೩. ಕುಪ್ಪಳಿಸುವುದು; ನೆಗೆತ. ೪. ಪ್ರವಾಹ ; ನೆರೆ : ಉದ್ಗತನಿರ್ಝರಪ್ಲವನದಿಂ ಗಂಗಾಸರಿತ್ಪೂರಮಂ ನಗುವಂತುನ್ನತಿವೆತ್ತ ಕಲ್ಪತರುಸಾನೂದ್ಯಾನದಿಂ ಮೇರುವಂ ನಗುವಂತೊಪ್ಪುವುದಂ ವಸಂತ ಗಿರಿಯಂ ಕಂಡಂ ಮಹೀಮಂಡನಂ (ಸಂಗಾಪು. ೨-೦೩). ೫. ಇಳುಕಲು ; ಇಳಿದಾರು. ೬. ಕುದುರೆಯ ನಡಗೆಗಳಲ್ಲಿ ಒಂದು ಬಗೆ. [ಸಂ.]

ಪ್ಲವಿಸು (ಕ್ರಿ). ಹರಿ ; ಪ್ರವಹಿಸು : ಪ್ಲವಿಸಿತ್ತಸೀಮರೋದನಮೆತ್ತಲುಂ ! ರಣಂ ಮಿಂದತ್ತು ಕರೆವ ಕಂಬನಿಮಳೆಯ ತೀರ್ಥದಲಿ ! (ಸಪ್ತಾಂಗ. ೬೮-೨೪೨೩). [ಪ್ಲವನ+—ಇಸ್ಸು]

ಪ್ಲಾಂಟೇಷನ್ (ನಾ). ಹತ್ತಿ, ಹೊಗೆಸೊಪ್ಪು, ಕಾಫಿ, ಟೀ ಮೊದಲಾದ ಗಿಡಗಳ ತೋಟ : ಪಬ್ಲಿಕ್‌ರಸ್ತೆಗಳ ಉದ್ಯಾನ ತೋಟಗಳ ಪ್ಲಾಂಟೇಷನ್‌ಗಳ ನಾಲಾಗಳ . . . ಸ್ವಾಧೀನಗಾರರು (ಗ್ರಾಮಾಕ. ೦೦೬); ಅಲ್ಲಿಯ ಪ್ಲಾಂಟೇಷನ್ ಕೃಷಿಯ ಹೊಲಗಳ ವಿಸ್ತಾರ ಸ್ವಾಭಾವಿಕವಾಗಿ ದೊಡ್ಡದೇ ಇರುತ್ತದೆ (ಬಕಿಸಂ. ೪೮). [← ಇಂ. Plantation]

ಪ್ಲಾಟಿನಂ (ನಾ). ಒಂದು ಬಗೆಯ ಲೋಹ ; "ಅಸಂಮಿಶ್ರಿತ ಆಮ್ಲಗಳಿಂದ ಕ್ಷಯಿಸದ, ಬಹಳ ತೀವ್ರಶಾಖದಲ್ಲಿ ಮಾತ್ರ ಕರಗುವ, ತಗಡಾಗಿ ಬಡಿಯಲೂ ತಂತಿಯೆಳೆಯಲೂ ಆಗುವ, ಭಾರವಾದ, ಒಂದು ಬಿಳಿಯ ಲೋಹ" (Platinum. ೨೦೪೨) : ಈಗ ನಮಗೆ ಗೊತ್ತಿರುವ ಧಾತುಗಳಲ್ಲಿ ಪ್ಲಾಟಿನಮ್ ಎಂಬ ಧಾತುವಿನ ಹೊರತು ಚೆನ್ನದಷ್ಟು ಭಾರವುಳ್ಳ ಧಾತುವು ಎರಡನೆಯದಿಲ್ಲ (ಮುಂಬಯಿ. ೪-೦೦೨). [←ಇಂ. Platinum]

ಪ್ಲಾವ (ನಾ). ೧. ಹರಿಯುವುದು. ೨. ಹಾರುವಿಕೆ ; ನೆಗೆತ. ೩. ಉಕ್ಕಿ ಹರಿಯುವುದು ; ದಡ ಮೀರಿ ಹರಿಯುವುದು. [ಸಂ.]

ಪ್ಲಾವಕ (ಗು). ತೇಲುವ : ಕೃತಿ ವರ್ತಮಾನದಲ್ಲಿ ಜನ್ಮವೆತ್ತಿದರೂ ಅದರ ಸೆಳೆತಕ್ಕೆ ಸಿಕ್ಕಿಕೊಳ್ಳದೆ ಸಂತತ ವರ್ತಮಾನಕ್ಕಿರುತ್ತದೆ, ತನ್ನಲ್ಲಿ ತುಂಬಿಕೊಂಡಿರುವ ನಲವಿನ ಪ್ಲಾವಕಶಕ್ತಿಯಿಂದ (ಕಾಸ್ಯಕು. ೦೦). [ಸಂ.]

ಪ್ಲಾವನ (ನಾ). ೧. ಮೇರೆ ಮೀರಿ ಹರಿಯುವುದು ; ದಡ ಮೀರಿ ಹರಿಯುವುದು. ೨. ನೆರೆ ; ಪ್ರವಾಹ. ೩. ಸ್ನಾನ : ಶೋಷಣ ದಾಹನ ಪ್ಲಾವನಗಳೆಂಬ ಮೂಱುಕ್ರಿಯೆಗಳು (ವಿವೇಕ. ೦೦೩). ೪. ತೇಲುವವನು : ಅಲಘುಪ್ರಸಾದಾಮೃತಪ್ಲಾವನರ್ಗೆ ಮತ್ತೊಲವಿನಿಂ ಪ್ಲಾವನಕ್ರಿಯೆಗೆಯ್ಯಲೇಕೆ (ಆಶಾಸ. ೦-೦೦-೨೦). [ಸಂ.]

ಪ್ಲಾವಿತ (ನಾ). ಆವೃತವಾಗುವಿಕೆ : ಕಾಳಿಯ ಪೂಜಾಸ್ಥಾನವು ನರಮಾಂಸರಕ್ತದಿಂದ ಪ್ಲಾವಿತವಾಗುವುದೆಂಬುದನ್ನು . . . ಅವಳ ಹೃದಯವು ಸಹಿಸಲಾರದಾಗಿದ್ದಿತು (ಕಪಾಳು. ೦೨೪). [ಸಂ.]

ಪ್ಲಾಸ್ಟಿಕ್ಕು (ನಾ). ರಬ್ಬರಿನಂತೆ ಮೃದುವಾಗಿರುವ ವಸ್ತು ; ಒಂದು ಬಗೆಯ ಮೇಣ : ಪ್ಲಾಸ್ಟಿಕ್ಕು ಗೊಂಬೆಯನಾಟಕೆ ತಂದಳು (ಸಂಧ್ರವೀ. ೬-೩೩). [←ಇಂ. Plastic]

ಪ್ಲೀಡರು (ನಾ). ನ್ಯಾಯವಾದಿ ; ವಕೀಲ : ಒಬ್ಬ ಅಡ್ವೋಕೇಟ್ ಯಾ ಪ್ಲೀಡರ್ ಖರ್ಚುಗಳನ್ನು ಫಲಾನೆ ಕಾಲದಲ್ಲಿ ಕೊಡುವಂತೆ ಕಂಠೋಕ್ತವಾಗಿ ಯಾವ ಕರಾರೂ ಮಾಡಲ್ಪಡದೆ ಇದ್ದರೆ ಆ ಖರ್ಚಿನ ಬಗ್ಗೆ ಅಡ್ವೋಕೇಟ್ ಯಾ ಪ್ಲೀಡರಿಂದ ಮೂರು ವರ್ಷಗಳು (ಗ್ರಾಮಾಕ. ೦೬೬). [←ಇಂ. Pleader]

ಪ್ಲೀಹ (ನಾ). ೧. ಹೊಟ್ಟೆಯ ಎಡಭಾಗದಲ್ಲಿ ಇರುವ ಮಾಂಸಗ್ರಂಥಿ ; ಗುಲ್ಮ ; ತೊರಳೆ : ಮುಂದೆ ಅವು ಪ್ಲೀಹಕ್ಕೆ ಹೋಗಿ, ಅಲ್ಲಿ ಈ ಸತ್ತ ಕಣಗಳನ್ನು ಒಪ್ಪಿಸಿ ಬರುವುವು (ಶಾಂಪ್ರ. I. ೩೦೮); ಹಾಗಾದರೆ ಈ 'ನಾಗಸೇನ' ಎಂಬುದು ಉಗುರೇ ? ಹಲ್ಲೆ ? . . . ಮೂತ್ರಕೋಶವೆ ? ಪ್ಲೀಹವೇ ? (ಬುದ್ಧಪ್ರ. ಪುರಿಂದ. ೩೪). ೨. ಗುಲ್ಮರೋಗ : ಬಿಸರುಹಸಖನಿರೆ ಮಕರದೊಳಸದ್ಗ್ರಹದ್ವಿತಯಮಿರೆ ನಿಶಾನಾಥಂಗಿರ್ದೆಸೆಯೊಳ್ ಮನುಜಂ ಪ್ಲೀಹ ಶ್ವಸನ ಕ್ಷಯ ಗುಲ್ಮ ವಿದ್ರಧಿವ್ಯಾಧಿಯುತಂ (ಶಾಕತಿ. ೨೦-೦೩); ತಾಳೀಸಪತ್ರೆ ೧ ತೂಕ . . . ಚೂರ್ಣವಂ ಮಾಡಿ ಸಕ್ಕರೆವೆರಸಿ ಸೇವಿಸೆ . . . ಪ್ಲೀಹ, ಎದೆನೋವು . . . ಮಾಣ್ಗುಂ (ಸಕಪ್ಯ. ೨೦೩). [ಸಂ.]

ಪ್ಲೀಹಾಪಹೆ (ನಾ). ಒಂದು ಬಗೆಯ ಮರ : "ಪ್ಲೀಹಾಪಹಾ—ದೇವದಾರು" (ಓಷಧಿ. ೦೦೦). [?]

ಪ್ಲುತ (ಗು). ೧. ತೇಲುತ್ತಿರುವ. ೨. ಕುಪ್ಪಳಿಸುವ ; ನೆಗೆಯುವ ; ಹಾರುವ : ಪ್ಲುತ ಲೀಲಾಮೃಗಜಾಳಮಂ ಶುಕಪಿಕವ್ಯಾಹಾರಸಂಪಾದಿತ ಪ್ರತಿನಾದೋದಯಮಂ . . . ಪೊಕ್ಕಂ ಮಹೀವಲ್ಲಭಂ (ಲೀಲಾವ. ೪-೦೬). ೩. ಮುಳುಗಿದ ; ಲೀನವಾದ. (ನಾ). ೪. [ಅಶ್ವಶಾ] ಕುದುರೆಯ ಐದು ಬಗೆಯ ನಡಗೆಗಳಲ್ಲಿ ಒಂದು; ಕುಪ್ಪಳಿಸುತ್ತ ನಡೆಯುವುದು: ಆಸ್ಕಂದಿತ ರೇಚಿತ ಧೌರಿತ ವಲ್ಗಿತ ಪ್ಲುತಮೆಂಬೈದುಂ ತೆಱದ ನಡೆಯಿಂ ಬೆಡಂಗುವಡೆದ ಪಟ್ಟದ ವಾರುವವರ್ಗಂ (ಶಾಪಕ್ಯ. ೦೬-೨೦೩); ಕುಪ್ಪಳಿಸಿ ಕುಪ್ಪಳಿಸಿ ಹಾರಿ ಓಡುವುದು ಪ್ಲುತವೆನಿಸಿಕೊಂಬುವುದು (ಅಶ್ವಪೀ. ೨೫-೩). ೫. [ಛಂದ] ಉಚ್ಚಾರಣೆಯಲ್ಲಿ ಮೂರು ಮಾತ್ರೆಗಳ ಕಾಲವನ್ನು ತೆಗೆದು ಕೊಳ್ಳುವ ಅಕ್ಷರ ; ದೀರ್ಘಕ್ಕಿಂತಲೂ ಸ್ವಲ್ಪ ಕಾಲಾವಕಾಶವನ್ನು ಹೆಚ್ಚಿಗೆ ತೆಗೆದುಕೊಳ್ಳುವ ಅಕ್ಷರ ; ತ್ರಿಮಾತ್ರಕ : ಮಾತ್ರಾತ್ರಯ ಪರಿಗತಮಪ್ಪುದೆ ವಲಂ ಪ್ಲುತಂ (ಕಾಪ್ಯಾವ. ೦೦); ಹ್ರಸ್ವಮದೇಕ ಮಾತ್ರಕಂ ದೀರ್ಘಮುಭಯಮಾತ್ರಂ ತ್ರಿಮಾತ್ರಕಂ ಪ್ಲುತಮಕ್ಕುಂ (ಶಮರ. ೦೦); ಪ್ಲುತಕ್ಕೆ ಮಾತ್ರೆ ಮೂರು. ಆದರೆ ಛಂದೋದೃಷ್ಟಿಯಲ್ಲಿ . . . ಪ್ಲುತವನ್ನು ಗುರುವಾಗಿಯೇ ಗುಣಿಸಿದ್ದಾರೆ (ಸಂಕೋಧ. ೧೦೩). ೬. [ಸಂಗೀತ] ತಾಳದ ಆರು ಅಂಗಗಳಲ್ಲಿ ಒಂದು ; ಲಘುವಿನ ಮೂರರಷ್ಟು ಅಕ್ಷರಕಾಲವನ್ನು ಹೊಂದಿರುವುದು : ತಾಳಕ್ಕೆ ಬರುವ ಅವಯವಗಳಿಗೆ ಅಂಗಗಳು ಎಂದು ಹೆಸರು. ಅನುದ್ರುತ, ದ್ರುತ, ಲಘು, ಗುರು, ಪ್ಲುತ ಮತ್ತು ಕಾಕಪಾದ ಇವೇ ಷಡಂಗಗಳು . . . ಲಘುವಿನ ಮೂರರಷ್ಟು ಅಕ್ಷರಕಾಲವನ್ನು ಪ್ಲುತವೂ ಲಘುವಿನ ನಾಲ್ಕರಷ್ಟು ಅಕ್ಷರಕಾಲವನ್ನು ಕಾಕಪಾದವೂ ಹೊಂದುತ್ತವೆ (ಸಂಗೀಸಂ. ೫೪). [ಸಂ.]

ಪ್ಲುಷ್ಟ (ಗು). ೧. ಸುಟ್ಟ ; ಕರಿಕಾದ. (ನಾ). ೨. ಸುಟ್ಟುದು ; ಕರಿಕು : ದೀರ್ಘೋಷ್ಣಘೂತ್ಕಾರಂಗೆಯ್ವ ನಾಗರಾಜಚಕ್ರದಿಂ ಪ್ಲುಷ್ಟಮಾದ ಸಪ್ತಸಾಗರಸಲಿಲದೊಳ್ ಮಲಮಲನೆ ಮಱುಗುವ ಜಲವಿಚರಚಕ್ರದಿಂ (ಗದಾಯು. ೬-೨೦). [ಸಂ.]

ಪ್ಲೇಗು (ನಾ). ಜ್ವರ, ಬಲಹೀನತೆಗಳುಂಟಾಗಿ ಕೈಕಾಲುಸಂದುಗಳಲ್ಲಿ ಗಡ್ಡೆಯೆದ್ದು ಬಾಧಿಸುವ ಒಂದು ಬಗೆಯ ಅಂಟುರೋಗ ; ಮಾರಿರೋಗ : ಪ್ಲೇಗನೆ ಪೋಗಿಸು ಮಾರಿಯೇ (ಮೈಸೂಮ. ೨-೪೩) ; ಪ್ಲೇಗು ಮುಖ್ಯವಾಗಿ ಪ್ರಾಣಿಸಂಬಂಧ ರೋಗ (ಕವಿಕೋ. XI, ೩೩೫). [← ಇಂ. Plague]

ಪ್ಲೇಟು (ನಾ). ತಟ್ಟೆ ; ತಾಟು. ರಾಮಣ್ಣ ಉಪ್ಪಿಟ್ಟಿಗೆ ಮುಹೂರ್ತ ಮಾಡಬೇಕೆಂದು ಪ್ಲೇಟನ್ನು ಮುಂದಕ್ಕೆ ಎಳೆದುಕೊಂಡ (ಮೂರಾಬ. ೪೨) ; ಬೋಂಡಾದ ಪ್ಲೇಟುಗಳನ್ನು ಮೇಜಿನ ಮೇಲಿಡುತ್ತ ಮಾಣಿ ಹೇಳಿದನು (ಸಂದುಷ. ೪೨). [←ಇಂ. Plate]

ಪ್ಲೋಷ (ಗು). ೧. ಸುಡುವ ; ದಹಿಸುವ : ಸದ್ಯಸ್ಸಂತಾಪಿತಲೋಹ

ಪುತ್ರಿಕಾಪರಿರಂಭಸಂಭವಪ್ಲೋಷಗಲಜ್ಜಾಂಗಲಗಲ ದ್ರುಧಿರವಿಚಲದಸ್ಥಿ ನಿರ್ಯನ್ಮಜ್ಜಾ ಶುಷ್ಯತ್ಕಂಠ . . . ಆಕ್ರಂದತ್ಸ್ವರಪರಿಗತರ್ ಸೈರಿಸ ಅಾಱದೆ ತಡದಡಿಸಿ (ಅಂಪು. ೩-೮೭ ಪ). (ನಾ). ೨. ಸುಡುವಿಕೆ; ದಹಿಸುವಿಕೆ. ೩. ನಾಶ; ಧ್ವಂಸ: ದ್ವಿಟ್ಟುರಪ್ಲೋಷ[ಶಾಶಾಂ. ಧ್ವಂಸ] ರತಕ್ರೋಧಂ . . . ರಕ್ಷಿಸುಗೆ (ಜಗವಿ. ೦-೩). [ಸಂ.]

ಫ (ನಾ). ೧. ಕನ್ನಡವರ್ಣಮಾಲೆಯ ನಲವತ್ತೆರಡನೆಯ ಅಕ್ಷರ. ೨. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ: "ಖಠಫರಮ ದೆರಡಕ್ಕು" (ಮಂಗಣಾ. ೦೦೪-೦೧).

ಫಂಜಿಕೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಬೇರು; ಗಂಟುಭಾರಂಗಿ. 'ಹಂಜಿಕೆ' ಪಠಾ. [ಸಂ. ಫಂಜಿಕಾ]

ಫಂಟ 'ಪಂಟು' ನೋ.

ಫಂಟತನ (ನಾ). ಮೋಸಗಾರಿಕೆ; ವಂಚಕತನ: ಇದೆಲ್ಲಾ ಫಂಟತನದ ಮಾತು ಬಿಟ್ಟುಬಿಡು (ಗ್ರಾಮಾಯ. ೨೦೨). [ಫಂಟ (<ಪಂಟು) + — ತನ]

ಫಕತ 'ಪಕತ್' ನೋ.

ಫಕಫಕ (ನಾ). ಒಂದು ಅನುಕರಣ ಶಬ್ದ: 'ರಾತ್ರಿ' ಗಳಲ್ಲಿ ಕರಂಟು ಆಗೀಗ ಫಕಫಕ ಮಾಡುವದು (ಪಲಮು. IX ಪಾಲ್ಕುಮಾತು).

ಫಕೀರ್ 'ಪಕೀರ' ನೋ.

ಫಕೀರ 'ಪಕೀರ' ನೋ.

ಫಕ್ಕಡ 'ಫಾಕಡ' ನೋ.

ಫಕ್ಕನೆ (ಅ). ಇದ್ದಕ್ಕಿದ್ದಂತೆ; ಒಮ್ಮೆಲೆ: ಗಂಗೆಯೊಳು ಕೋಣನ ಹಾಗೆ ಮೈಗೆಟ್ಟು ಫಕ್ಕನೇ ಮುಳುಗಿ (ಪಶಶಾ. I, ೩೩೬); ಫಕ್ಕನೆ ವಸಂತ ದುರುಘರ್ಮದೊಳು ದಾಕ್ಷಿಣ್ಯಮೊಕ್ಕರಿಸಲೆಳೆಗಾಳಿಯುರೆ ಬಿಡದೆ ಸುಳಿವಂತೆ (ಪರಶು. ೬-೩); ಇನಿಯನ ಮುಖ ಅರಳಿತು ಫಕ್ಕನೆ(ಪಂರುಪ.೦೬).

[ಫಕ್$_0$ + — ಅನೆ$_1$]

ಫಕ್ಕಿ (ನಾ). ರೀತಿ; ರೂಢಿ; ಪದ್ಧತಿ: ಇದು "ಸುರು ಹಚ್ಚು" ಎಂಬ ಉತ್ತರಕರ್ನಾಟಕದ ಫಕ್ಕಿಯನ್ನು ಹೋಲುತ್ತದೆಯಲ್ಲವೆ? (ಕುಮಾಸಾಂ. ೩೪೯); ಮಾತಿನ ಫಕ್ಕಿಯಂತೆಯೇ ಪಂಪನು ಅನೇಕ ನಾಣ್ಣುಡಿ ಗಳನ್ನು ಜೀವಂತವಾಗಿ ಪ್ರಯೋಗಿಸಿದ್ದಾನೆ (ಸುವರ್ಣ. ೦೦೦).

[ಸಂ. ಫಕ್ಕೀ./ತೆಲು. ಫಕ್ಕಿ]

ಫಕ್ತ 'ಪಕತ್' ನೋ.

ಫಜೀತಿ, ಪಜೀತಿ(ನಾ). ತೊಂದರೆ; ಇಕ್ಕಟ್ಟು; ಕಷ್ಟ; ಗೋಳು: ಬಂದ ಮೇಲೆ ಅವನ ಫಜೀತಿ ಎಷ್ಟಂತ ಹೇಳಲಿ? (ಮುಂಬಯಿ. ೦೯೪); ನೆಶ್ಯವು ಮೂಗಿನೊಳಕ್ಕೆ ಹೋದುದೇ ತಡ ಬುಳುಬುಳುಗುಟ್ಟಿ ಅಸಾಧ್ಯ ಫಜೀತಿ ಮಾಡಿಬಿಟ್ಟಿತು (ಕಳಹು. ೬೭); ನಾನದನ್ನು ತಂದೆಯವರಿಗೆ ತೋರಿಸುವ ಫಜೀತಿಯೇ ಇರುವುದಿಲ್ಲ (ಶಾಲೆಮ. ೯೧). **ಪಜೀತಿ**: ಇದರಿಂದ ಎಷ್ಟೋಸಲ ತಿಂಗಳ ಕೊನೆಯ ದಿನಗಳಲ್ಲಿ ಪಜೀತಿಯಾಗುತ್ತಿತ್ತು (ಪರೀಕ್ಷೆ. ೪೬); ಅವನ್ನು ಮುಟ್ಟಿಕೊಂಡು ದಿನಕ್ಕೆರಡು ಸ್ನಾನ ಮಾಡುವ ಪಜೀತಿ ಬೇಡ (ಸ್ವಪ್ನಹೂ. ೭).

ಫಜೀತಿ ಪಡು = ಕಷ್ಟಕ್ಕೆ ಒಳಗಾಗು; ಸಂಕಟದಲ್ಲಿ ಸಿಲುಕು: ಫಜೀತಿ ಪಡಲಿ . . . ಅವರದೇ ತಪ್ಪು (ಸಾಬಿಸ. ೦೮). **ಫಜೀತಿ ಬೀಳು** = **ಫಜೀತಿ ಪಡು**: ನೀವು ಯಾಕೆ ಕಟ್ಟಿಕೊಂಡು, ಬಿಟ್ಟುಕೊಂಡು, ಕರೆದು ಕಳಿಸಿ ಫಜೀತಿ ಬೀಳಬೇಕು (ಶಾಳಹೂ. ೯). **ಫಜೀತಿ ಮಾಡು** = ಗೋಳಾಡಿಸು; ತೊಂದರೆಪಡಿಸು; ಪೀಡಿಸು: ಅವರನ್ನು ಸುತ್ತುಗಟ್ಟಿ ಫಜೀತಿ ಮಾಡುವದೇ ನನಗೊಂದು ಹಬ್ಬವಾಗಿತ್ತು (ಮೇದಿಮ. ೩); ಕಳ್ಳರು ವರ್ತಕನ ಮೇಲೆ ಬಿದ್ದು ಹೊಡದು ಫಜೀತಿ ಮಾಡಿ ಹಣದ ಚೀಲ ಕಿತ್ತು ಕೊಂಡು ಹೋದರು (ಕಥಾಮಂ. IV, ೦೯).

[←ಅರ .ಹಿಂ. ಫಜೀಹತ್; ಮರಾ. ಫಜೀತೀ]

ಫಟ್ (ನಾ). ಒಂದು ಅನುಕರಣ ಪದ: ಕಂಚುಕಿ ಫಟ್ಟೆಂದು ವೊಡೆವೋಲ್ಲಿಗ್ಗಿ ಕೇಳಿದಳ್ (ಪಪಮು. ೪೭-೩೬); ಒಮ್ಮೆ ಫಟ್ ಎಂದು ಸಿಡಿದು ಬಿಗಿಯಿತೋ, ಆಯಿತು (ಪೇಳಸ್ಯ.೪೯).

ಫಟಕ 'ಪಟಿಕ' ನೋ.

ಫಟಕಿ, ಫಟಾಕಿ, ಫಟಿಕಿ, ಫಟಿಕೆ (ನಾ). ಬೆತ್ತ ಅಥವಾ ಚರ್ಮದ ಚಾಪಟಿಯಿಂದ ಕೊಡುವ ಏಟು,—ಹೊಡೆತ: ಪಹರೇಕರಿಯವರ ಕಡೆಯಿಂದ ಐವತ್ತು ಫಟಕಿಗಳನ್ನು ಹೊಡಿಸಿದಳು (ಮಂಜುಳ.೧೪೦). **ಫಟಾಕಿ**: 'ಫಟಾಕಿಶಿಕ್ಷೆ' ಪರಾ. **ಫಟಿಕಿ**: ದಂಡ, ಫಟಕಿ, ಹದ್ದುಪಾರು . . . ಇವೇ ಮೊದಲಾದವುಗಳು ಶಿಕ್ಷೆಯ ವಿಧಾನಗಳಾಗಿದ್ದುವು (ಹಿಂದುಇ.೬೨). **ಫಟಿಕೆ**: ಸರಕಾರದವರು ಅವನಿಗೆ ಬೆನ್ನ ಮೇಲೆ ಫಟಿಕೇ ಹೊಡೆಯುವ ಶಿಕ್ಷೆಯನ್ನು ನಿರ್ಣಯಿಸಿದರು (ಮುಂಬಯಿ.೩-೪೩). [← ಮರಾ. ಫಟಕಾ]

ಫಟಕಿಶಿಕ್ಷೆ, ಫಟಾಕಿಶಿಕ್ಷೆ (ನಾ). ಬೆತ್ತ ಅಥವಾ ಚಾಪಟಿಯಿಂದ ಹೊಡೆಯುವ ಶಿಕ್ಷೆ: ಕಾಯದೆಯನ್ನು ಧಿಕ್ಕರಿಸಿದ ಸರಿ. ಆ ತಪ್ಪಿಗೆ ಫಟಕಿಶಿಕ್ಷೆಯ ಪ್ರಾಯಶ್ಚಿತ್ತವನ್ನುಂಡ (ಎಲಗ್ನೇ.೨೭); ಫಟಕೀಶಿಕ್ಷೆ ಕೊಡಿಸಿದನೇ? . . . ಈ ಸೇಡು ತೀರಿಸಿಕೊಳ್ಳದೆ ಬಿಡುವೆನೆ? (ಕುಂಬಳ.೯). **ಫಟಾಕಿಶಿಕ್ಷೆ**: ದೇವರು ಕೊಟ್ಟ 'ಫಟಾಕಿ'ಶಿಕ್ಷೆಯ ಬಾರನ್ನು ಮೈಮೇಲೆ ಮೂಡಿಸಿ ಕೊಂಡಂತೆ ಕೊನ್ನಿನ ವರ್ಧಂತಿ ವರ್ತುಲವನ್ನು ಬೆನ್ನ ಮೇಲೆ ಕಟ್ಟಿಕೊಂಡು ಅವರು ಬಾಳುವದು ಹೇಗೆ? (ಸಮಜೀ.೩೦೬). [ಫಟಕಿ + ಶಿಕ್ಷೆ]

ಫಟಾಕಿ 'ಫಟಕಿ' ನೋ.

ಫಟಾಕಿಶಿಕ್ಷೆ 'ಫಟಕಿಶಿಕ್ಷೆ' ನೋ.

ಫಟಾಕ್ಷಿ 'ಪಟಾಕಿ' ನೋ.

ಫಟಿಂಗ, ಪಟಿಂಗ (ನಾ). ೧. ಪೋಕರಿ; ಉಡಾಳ: ಸಕ್ಕರೆ ಇದ್ದಲ್ಲಿ ಇರುವೆಗಳು ಮುಕ್ಕುರುವುವು; ಗಾಂಜಾ ಇದ್ದಲ್ಲಿ ಫಟಿಂಗರು ನೆರೆಯುವರು (ಜಯಂತ.೦೬೯); ದಡ್ಡನಾಗಿ ಸಂಭಾವಿತನೆಂದೆನಿಸಿಕೊಳ್ಳುವುದಕ್ಕಿಂತ, ಜ್ಞಾನಿಯಾಗಿ ಫಟಿಂಗನಾಗಿ ಉಳಿಯುವುದೇ ಮೇಲು (ವಾತ್ಸಲ್ಯ. ೩೦೩). ೨. ತಂಟೆಕೋರ; ತುಂಟ: ನಾವು ದಿಟದ ಶೀಲವಂತರೆಂದು ನುಡಿದುಕೊಂಬ ಫಟಿಂಗ ಭಂಡರ ವಿಧಿ ಎಂತಾಯಿತ್ತೆಂದರೆ ಹೆಂಡದ ಮಡಕೆಗೆ ವಿಭೂತಿಮಂಡಲವ ಬರೆದಂತಾಯಿತ್ತು (ಅಖಂಡೇ. ೨೯೨-೬೦); ನೀನು ಮಾಡಿದ್ದು ಫಟಿಂಗರ ಕೆಲಸ; ಇದು ಸರಿಯಲ್ಲ (ಅಪಾಠ. ೦೦೪). **ಪಟಿಂಗ**: ೨. ಈ ನಾಸ್ತಿಕ ಪಟಿಂಗ ಎಲ್ಲಿದ್ದಾನೆ (ನಗಹೂ.೨೯೬); ಅವನು ಶುದ್ಧ ಪಟಿಂಗ (ಪಡದಾ. II, ೦೨೬೫); ಮತ್ತೆ ಪಟ್ಟಂಗ ಹೊಡಿತಾನೆ ಪಟಿಂಗ, ಬಾಯಿಗೆ ಬಂದ್ಹಾಂಗೆ (ಮಲೆಮ.೨೮೯).

[←ಮರಾ. ಫಟಿಂಗ]

ಫಟಿಂಗತನ, ಪಟಿಂಗತನ (ನಾ). ತುಂಟತನ; ಚೇಷ್ಟೆ; ತಂಟೆ: ಈಗೆಂಥ ಫಟಿಂಗತನ ಮಾಡಹತ್ತಿದಿರಿ? (ಪರಾಪ.೭೫). **ಪಟಿಂಗತನ**: ಈಗ ನಿಮ್ಮ ಮುಂದೆ ತುರುಕರ ಪಟಿಂಗತನ ನಡೆಯುವುದಿಲ್ಲ (ಗುರುದಾ. ೦೭).

[ಫಟಿಂಗ + — ತನ]

ಫಟಿಂಗಿ (ನಾ). ತುಂಟೆ; ತಂಟೆಕೋರಿ: ಲೇ ಪದ್ದೀ, ಫಟಿಂಗೀ, ಸುಳ್ಳುಕೋರೀ (ಪಡದಾ. I,೩೦೭). [ಫಟಿಂಗ + — ಇ$_2$]

ಫಟಿಕಿ 'ಫಟಕಿ' ನೋ.

ಫಟಿಕೆ 'ಫಟಕಿ ನೋ.

ಫಟೆ (ನಾ). ನಾಗರಹಾವಿನ ಹೆಡೆ: "ಫಣಃ ಫಣಾ,ಫಟಾ — ಈ ೩ ಹಾವಿನ ಹೆಡೆ" (ಹಲಾಯು ೦೦೩-೦೯). [ಸಂ. ಫಟಾ]

ಫಡ$_1$, ಪಡ$_5$ (ನಾ). (ಜೋಳ, ಕಬ್ಬು ಮೊದಲಾದುವುಗಳ) ಬೆಳೆದು ನಿಂತ ಪೈರು; ಎತ್ತರವಾದ ಬೆಳೆ: ಅಕ್ಕನ ಊರಾಗ ಮೆಕ್ಕಿಯ ಫಡದಾಗ ಗಕ್ಕನೆ ಬಾರೊ ಮಳೆರಾಜ (ಹಳ್ಳಿಯ. ೦೪೩); ಕಾಯಿಪಲ್ಲೆಗಳ ಮಡಿ

ಗಳಾಗಲಿ . . . ಕಬ್ಬು ಬಾಳಿಗಳ ಫಡಗಳಾಗಲಿ ಅಬಾಧಿತವಾಗಿದ್ದು ಸಸಿ ಬಳ್ಳಿಗಿಡಗಳೆಲ್ಲ ಪ್ರಫುಲ್ಲಿತವಾಗಿ ತೋರಿ ದೇಸಾಯರ ಮನಸ್ಸಿಗೆ ಆನಂದವನ್ನಿತ್ತವು (ತೊಳಮು. ೬೩); ತೋಟದಲ್ಲಿಯ ಬಾಳೀ ಫಡವನ್ನೆಲ್ಲ ಒಂದು ರಾತ್ರಿ ಕಡಿದು ಹಾಕಿದರು (ಮನಸೆ. ೨೦). **ಪಡ$_5$** : ಕಬ್ಬಿನ ಪಡದಲ್ಲಿ ಕಬ್ಬು ಕಡಿದು ರವದೆ ಸವರಿ ಹೊರೆಕಟ್ಟುವ ಕೆಲಸದಲ್ಲಿ ನಿರತನಾಗಿದ್ದ ರಾಮ (ಬೀದಿಬಿ. ೪೬); ಭೀಮಪ್ಪ . . . ತೋಟದಲ್ಲಿ ನುಗ್ಗಿ ಅಲ್ಲಿದ್ದ ಗೊಂಜಾಳಿನ ಪಡದಲ್ಲಿಯ ತೆನೆ ಕೊಯ್ದುದ್ದಲ್ಲದೆ, ಮೆಣಸಿನ ಕಾಯಿಯನ್ನು ಹರಿದು . . . ಹಾಕಿದ (ಮನಸೆ. ೮). [← ಹಿಂ. ಮರಾ. ಫಡ]

ಫಡ$_3$ (ಅ). ತಿರಸ್ಕಾರ ಹಾಗೂ ಕೋಪಗಳನ್ನು ಸೂಚಿಸುವ ಒಂದು ಪದ : ಸಾರುಸಾರಭಿಮನ್ಯು ಫಡ ಇನ್ನಾರ ಬಸುಱನು ಹೊಗುವೆ (ಕುಪ್ಯಾಕ್ರೋ. ೩-೩೨); ಗಿರಿಜೆ ಕೋಪದಿಂ ಖೂಳ ಫಡ ಹೋಗೆನುತೆ ಶಪಿಸುವನಿತಱೊಳೀಶನೊಲಿದು ನಿಜದಿಂದಿರ್ದನು (ಶಬಪು. ೩೬-೯).

ಫಡಫಡ$_2$ (ದ್ವಿರುಕ್ತಿ) : ಫಡಫಡಾನಿರುತಿರಲು ರಾಯನ ಹಿಡಿವವನ ಹೆಸರೇನು (ಕುಪ್ಯಾಕ್ರೋ. ೨-೩೩); ಫಡಫಡೆಲೊ ದುಮಾರ್ಗ ಮುನ್ನಿನ ನುಡಿಗಳನು ನುಡಿ (ಅನಂರಾ. ೦-೩-೭೩).

ಫಡಕು 'ಪಡಕು'$_2$ ನೋ.

ಫಡಗಳ್ಳಿ (ನಾ). (ಉಕ) ಪಾಪಾಸುಗಳ್ಳಿ; ಮುಳ್ಳುಗಳ್ಳಿ: ಹೋಗಲಿ ಊರೊಳಗಿನ ಫಡಗಳ್ಳಿ ಹೋಯಿತೆಂದು ತಿಳಿಯಿರಿ (ಹೂಲಮು. ೬೩); ದಾರಿಯಲ್ಲಿ ಬಳಸಿ ನಿಂತ ಫಡಗಳ್ಳಿಯನ್ನು ನಾವು ಕಿತ್ತುಹಾಕಿ ಸುಗಮವಾದ ದಾರಿ ಮಾಡಬೇಕು (ಹಣ್ಣಿಬಿ. ೬೯). [ಫಡಂ + ಕಳ್ಳಿ$_2$]

ಫಡಣೀಸ 'ಫಡನವೀಸ' ನೋ.

ಫಡನವೀಸ, ಫಡಣೀಸ, ಫಡನೀಸ (ನಾ). ಸರಕಾರಿ ಲೆಕ್ಕಪತ್ರಗಳ ಮುಖ್ಯಾಧಿಕಾರಿ; ಮುಖ್ಯದಫ್ತರದಾರ: ಹರಿಮಹಾದೇವಭಾನುವನ್ನು ತನ್ನ ಫಡನವೀಸನನ್ನೂ ಮಾಡಿಕೊಂಡನು (ಶಂಸಂ. ೬೯). **ಫಡಣೀಸ** : ಪೇಂಡಶೆಯವರ ಕಾಲದ ಒಬ್ಬ ಫಡಣೀಸರು ಫಂಡರಪುರದಲ್ಲಿದ್ದರು (ಸ್ಮೃತಿಶ. ೨೪೬). **ಫಡನೀಸ** : ತನ್ನ ಮುಖ್ಯ ಫಡನೀಸನಾದ ಖ್ವಾಜಾಶಹಾ ಮನಸೂರನನ್ನು ತನ್ನ ಸಂಗಡಲೆ ಒಯ್ದನು (ಅಕ್ಕರ. ೬೩).

[← ಪಾರ. ಫರ್ದನವೀಸ್; ಹಿಂ. ಮರಾ. ಫಡನವೀಸ್, ಫಡನೀಸ್]

ಫಡನೀಸ 'ಫಡನವೀಸ' ನೋ.

ಫಡಪೋಶಿ 'ಪಡಪೋಸಿ' ನೋ.

ಫಡಪೋಶಿತನ (ನಾ). ಅಲಕ್ಷ್ಯ; ಅಜಾಗರೂಕತೆ : ರಾಘಪ್ಪ . . . ಫಡಪೋಶಿತನದಿಂದ ಹೇಳಿ ದೇಸಾಯರತ್ತ ನೋಡುತ್ತ ಹುಚ್ಚುನಗೆ ನಕ್ಕು, 'ನಾ ಬರತೇನಿ' ಅನ್ನುತ್ತ ಎದ್ದನು (ಗಂಮಾಯಿ. ೨೪೨).

[ಫಡಪೋಶಿ (< ಪಡಪೋಸಿ) + – ತನ]

ಫಡಪೋಸಿ 'ಪಡಪೋಸಿ' ನೋ.

ಫಡಫಡ$_1$ (ಅ). ಒಂದು ಅನುಕರಣ ಶಬ್ದ: ಫಡಫಡ ಪಾಯಿನೆ [ಯ್ವೆ]ರ್ದೆ ನಡನಡುಗುವ ತನು . . . ಆದೊಡೆ ಬಿಡೆ ನಂಬುಗೆ ಕೂರ್ತಳೆಂದು ಕೂಟದ ಪಥದೊಳ್ (ಮದತಿ. ೦೦-೩೬).

ಫಡಫಡ$_2$ 'ಫಡ$_2$' ಪರಾ.

ಫಡಫಡಾಟ (ನಾ). ಫಡಫಡ ಎಂಬ ಸದ್ದು: ದಿನ ಹೋದ ಮನುಷ್ಯರ ಬಿಳಿಯ ಪರದೆಯ ಫಡಫಡಾಟ ಸಾಕು (ಶಂದುಪಿ. ೯೨).

[ಫಡಫಡ$_1$ + ಆಟ]

ಫಡಫಡಿಸು (ಕ್ರಿ). ಫಡಫಡ ಎಂದು ಸದ್ದು ಮಾಡು: ಹಿನ್ನೆಲೆಗೆ ಕ್ರೌಂಚವುರೆಕ್ಕೆ ಫಡಫಡಿಸಿ ನರಳುವ ಸದ್ದು (ಕ್ರೌಂಚರ್ಕ. ೩೨-೨೨); ಹಕ್ಕಿಗಳು ಫಡಫಡಿಸುತ್ತ ಹಾರಾಡಿ ಮತ್ತೆ ಕುಳಿತವು (ಬಂಗಾಹ. ೨೬).

[ಫಡಫಡ$_1$ + – ಇಸು$_3$]

ಫಡಾಳಿ 'ಪಡಾಳ್ಳಿ$_2$' ನೋ.

ಫಡಿ 'ಪಡ್ಡೆ$_3$' ನೋ.

ಫಡಿಕೆ 'ಪಡಿಕ್ಕೆ$_3$' ನೋ.

ಫಡ್ಚ, ಪಡಚ, ಪಡಿಚ, ಪಡ್ಚ (ನಾ). ೧. ನಿರ್ನಾಮ; ನಾಶ; ಧ್ವಂಸ : ಬೇಲಿ ಮುಟ್ಟಿದರೆ ಶೋಕ್ ಹೊಡೆದು ಆಸಾಮಿಯೇ ಫಡ್ಚ! (ಸಗುಕ. ೦೮೨). **ಪಡಚ** : ೧. ಬಿರುಗಾಳಿ ಬಡೀತದಲ್ಲಾ ಅಂತ ಏಕ್‌ದಂ ನಿಲ್ಲಿಸುವುದಕ್ಕೆ ಹೊರಟರೆ, ನಮ್ಮ ಪ್ರಾಣವೇ ಪಡಚ (ಶಂಗೂಲಿ. ೦೯೨). ೨. ಸಾಲ ಮೊದಲಾದ ವ್ಯವಹಾರಗಳನ್ನು ಮುಗಿಸುವುದು ; ಫೈಸಲಾತಿ : (ಕಿ). **ಪಡಿಚ** : ೩. (ಪದಾರ್ಥಗಳನ್ನು) ನಿಶ್ಶೇಷವಾಗಿ ಬಳಸುವಿಕೆ, – ಫೈಸಲು ಮಾಡುವಿಕೆ : (ಕಿ). **ಪಡ್ಚ** : ೧. ಕನಿಷ್ಠ ಒಂದು ವರ್ಷದ, ಮನೆಯ ಸಾಮಾನು ದಾಸ್ತಾನು ಇರಿಸಿಕೊಳ್ಳದಿದ್ದರೆ, ನಾವು ಪಡ್ಚವೇ ಸರಿ (ಮುಗಿಯು. ೩೬೩) ; ಪಡ್ಚ ಆಯಿತು. ನನ್ನ ಅಮ್ಮನ ಹಾಗೆ . . . ನೀವೂ ಹೇಳುತ್ತೀರಲ್ಲಾ ? (ಜಾಕುದಾ. ೨೪೦).

ಪಡ್ಚ ಮಾಡು, ಪಡಚಾ ಮಾಡು = ನಾಶಮಾಡು ; ನಿರ್ನಾಮಗೊಳಿಸು : ಅದರ ಪ್ರಾಣ ತೆಗೆಯಲಿಕ್ಕೆ ಹೋದರೆ ನಾಳೆ ಊರಿಗೆ ಊರನ್ನೇ ಅದು ತಿಂದು ಪಡ್ಚ ಮಾಡೀತು (ಪರಾವ. ೩೨) ; ಒಬ್ಬೊಬ್ಬ ಕಾಫರ್‌ನನ್ನೂ ಹಿಡಿದು, ಗಂಟಲನೊತ್ತಿ ಪಡಚಾ ಮಾಡಿಬಿಡುತ್ತಿದ್ದೆ (ಅಶಾಂತಿ. ೧೮೦). [←ಮರಾ. ಫಡಚ್ಯಾ, ಫಡಛ್ಯಾ, ಫಡಶಾ. ತುಳು. ಫಡ್ಚ, ಫಡಿಚ, ಪಡಚ, ಪಡಿಚ, ಪಡಿಚಿ, ಪಡ್ಚ]

ಫಡ್ಡಳಿ 'ಪಡ್ಡಳ್ಳಿ$_1$' ನೋ.

ಫಣ$_1$ 'ಪಣವು$_1$' ನೋ.

ಫಣ$_2$ 'ಬಣ್ಣ' ನೋ.

ಫಣ$_3$ (ನಾ). ಹಾವಿನ ಹೆಡೆ : "ಫಣಃ, ಫಣಾ, ಫಟಾ – ಈ ೩ ಹಾವಿನ ಹೆಡೆ" (ಹಲಾಯು. ೦೦೩-೦೯) ; ಫಣಮಯ್ದಂ ಪಡೆದಂ ತನಗೆಣೆವಡೆದಂ ಶೇಷನುರ್ವಿಯಂ ತಾಳ್ದನೆನಲ್ . . . ಕಣ್ಬೊಣರಂ ತಣಿಪಿದುದು ಭುಜಯುಗಂ ರಘುಸುತನಾ (ಪಂರಾಮಾ. ೦೨-೦೪) ; ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು ಫಳಫಳಿಸುತ್ತಾತ ನಾಟ್ಯವನಾಡೆ (ಪುರಂದ. ೨-೦೦೩-೨) ; ಸಹಸ್ರಫಣಗಳುಳ್ಳ ಶೇಷನೇ ವಿಶ್ವದ ಸ್ವಾಮಿಯಾದ ಲಕ್ಷ್ಮಣನಿರುವನು (ತುಳಸೀ. ೦೪೮). [ಸಂ.]

ಫಣಕಟ್ಟು 'ಪಣಕಟ್ಟು$_2$' ನೋ.

ಫಣಗೆಲಸ (ನಾ). ಒಂದು ಪಂಗಡಕ್ಕೆ ಸೇರಿದ ಕೆಲಸ : ಗಾಣದವರ ಕೆಲಸ : ತೇಲಿಗರ ಮಗ ನಾನು ಫಣಗೆಲಸವ ಬಲ್ಲೆಯಂಬಲಿ ನೀಡಿ ಸಲಹೆನೆ ಸುದ್ದಿ ಕೇಳುತ ಕರದು ತಂದನು ಮನೆಗೆ ಕಲುಶೆಟ್ಟಿ (ರೇವಕಾ. ೨-೨೩). [ಫಣ$_2$ (<ಬಣ್ಣ) + ಕೆಲಸ]

ಫಣಪರ (ನಾ). [ಜ್ಯೋತಿ] ಲಗ್ನದಿಂದ ಎರೆಡು, ಐದು, ಎಂಟು ಮತ್ತು ಹನ್ನೊಂದನೆಯ ಸ್ಥಾನಗಳ ಸಂಜ್ಞೆ, — ಸಂಕೇತ : ಉದಯದಶಾಸ್ತಮಯ ಚತುರ್ಥದೆಡೆಗೆ ಕೇಂದ್ರಂ ಚತುಷ್ಟಯಂ ಕಂಟಕ ಮೆಂಬುದು ಸಂಜ್ಞೆ ತತ್ಪರಂ ತಾನದು ಫಣಪರಮದಱ ಪರಮದಾಪೋಕ್ಲೀಬಂ (ಜಾತತಿ. ೦-೩೬). [ಸಂ. ?]

ಫಣಭೃತ್ತು (ನಾ). ೧. ಹೆಡೆಯುಳ್ಳುದು ; ನಾಗರಹಾವು. ೨. ಹಾವು : "ವಿಷಧರಃ . . . ಫಣಭೃತ್ . . ಭುಜಂಗಮಃ – ಈ ೨೫ ಪಾವಿನ ಪೆಸರ್" (ಹಲಾಯು. ೦೦೩-೦೮).

[ಸಂ. ಫಣಭೃತ್]

ಫಣಮಣಿ (ನಾ). ಹಾವಿನ ಹೆಡೆಯಲ್ಲಿರುವ ರತ್ನ : ಚೂಡಾಮಣಿಗೆಱಗೆ ಚಕ್ರಿಪದದೊಳ್ ಫಣಮಣಿ ಪುನರುಕ್ತಿ ಪಾಂಡ್ಯಪತಿಗಾಯ್ತಾಗಳ್ (ಶಾಂತಿಪು. ೧೧-೪). [ಸಂ.]

ಫಣಸ್ತ (ನಾ). ಗುಂಪು ; ವರ್ಗ ; ಪಣಕಟ್ಟು : ಈಯುಭಯಪೇಟೆ ಸೆಟ್ಟಿ ವರ್ತಕರು ಮುಂತಾದ ಸಕಲ ಫಣಸ್ತರಿಂದ ಕುಳ ೧ಕ್ಕೆ × × ಅಡ್ಡ ಮದೆ×ವೆ ೧ ಕ್ಕೆ ೧ ವಂದು ಹಣ . . . ಕೊಡುವ ಪ್ರಕಾರ ಸರ್ವಜನ ಸಮ್ಮತಿಯಿಂದ ದಾನಪತ್ರ ಬರಸಿಕೊಟ್ಟು (ಎಕ. IX. ಹೊಸಕೋ. ೦೦೩-೦೫ ; 1693). [ಫಣ್ಣ (<ಬಣ್ಣ) + — ಸ್ತ]

ಫಣಾಧರ (ನಾ). = ಫಣಭೃತ್ತು ೨ : "ಫಣಾಧರನಕ್ಷಿಕರ್ಣಂ . . . ವ್ಯಾಳನೆನಲು ಸರ್ಪಂಗೆ ನಾಮಂ" (ಮಂಗರಾ. ೦೦೬-೦). [ಸಂ.]

ಫಣಾಪತಿ (ನಾ). ಸರ್ಪಗಳ ಒಡೆಯ ; ಆದಿಶೇಷ : ಅದು . . . ಬಹುವಿಷಧರಮೆಂದೊದವಿದ ಮಹತ್ವದಿಂದಿಟ್ಟುದು ಧನಪತಿ ದಿವಿಜ ಪತಿ ಫಣಾಪತಿಪುರಮಂ (ಪುಷ್ಪಕ. ೨-೩೩). [ಸಂ.]

ಫಣಾಮಣಿ (ನಾ). = ಫಣಮಣಿ : ಧರೆ ಘನವೆಂಬೆನೆ ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು (ಐಸಪ. ೬೬೬) ; ಫಣಿಯ ಫಣಾಮಣಿಯುಂ ವಾರಣರದಮುಂ . . . ಅತಿಕೃಪಣನ ಪಣಮುಂ ಬಾಟಲ್ಕೆ ಸಾರವಾರು ಮನೆಂದುಂ (ಲೀಲಾವ. ೦-೪೯). [ಸಂ.]

ಫಣಾರತ್ನ (ನಾ). = ಫಣಮಣಿ : ದೀಪದೊಳ್ ಪನ್ನಗಪತಿಯ ಫಣಾರತ್ನದೀಪಂ ವಿತಾನಾವಳಿಯೊಳ್ ದಿವ್ಯಂ ವಿತಾನಂ ತುಱುಗಿದುವಮರೇಂದ್ರಾರ್ಚನಕ್ಕೆ (ಅಧಿಪು. ೦೬-೨) ; ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ ಪೇಟ್ಟು ಪರೀಕ್ಷಿಪಂಗೆಂಟೆರ್ದೆಯೇ (ಗದಾಯು. ೦-೪೪) ; ನಾನಾಫಣಾರತ್ನಮೊಪ್ಪಿರೆ ಬಂದಂ ಮಟ್ಟಿಯಂ ನಿವಾರಿಸಲನಂತಂಗಂದ ನಂತೋರಗಂ (ಅಗಸ. ೩-೯). [ಸಂ.]

ಫಣಿ (ನಾ). ೧. ಹೆಡೆಯುಳ್ಳ ಹಾವು ; ಸರ್ಪ : "ಉರಗಂ ಭೋಗಿ ಸರೀಸೃಪಂ ಫಣಿ ಭುಜಂಗಂ ಚಕ್ರಿ ದರ್ವೀಕರಂ" (ಪಸ್ತುಕೋ. ೦೯-೬) ; ಫಣಿ ಗರುಡಾಂಗದ ಪಚ್ಚಿಯ ಮಣಿಯಂ ಕಂಡಂತೆ (ಸಂರಾಷಣ. ೪-೦೮) ; ಹುತ್ತಿನಿಂ ಫಣಿವೆರಸಿ ಕೆಡೆಯೆ ಕಂಡು (ಹಕಾ. ೦೨-೦೦) ; ಗರುಡ ಮೆಟ್ಟಿದ ಫಣಿಯ ವೋಲ್ . . . ದುರುಳದಾನವ ಮಾಸುತಿ ಚಿಂತಿಸಿ ಮೂಗನಾಗಿರಲು (ಕೌತಿರಾ. ೩೬-೨). ೨. ಆಶ್ಲೇಷ ನಕ್ಷತ್ರದ ಅಭಿಮಾನಿದೇವತೆ; ನಾಗ : ಸ್ವಾತಿ ಫಣಿ ಭರಣಿ ಶತಭಿಷೆ ಭೂತೇಶಂ ಜ್ಯೇಷ್ಠೆ ಮುಂಚೆ ಕಱ್ಱಿದೊಡೆ ಮಟ್ಟಿ ಧಾತ್ರೀತಳಕೆ ನೆಱ್ಱಿಯೆ ಕಱ್ಱಿಯದು (ಅಟ್ಟಿಮ. ೬ ೧೦೬). ೩. ರಾಹು ೪. (ಆಲಂ) ಬೆನ್ನಿನ ಮೇಲಾಗುವ ಒಂದು ಬಗೆಯ ಕುರು ; ಸರ್ಪಹುಣ್ಣು : ಬೆನ್ನ ಫ'ಳೆ' (ಣಿ)ಗೆ ಎನ್ನ ಕೇಳಬೇಡ ಅಂಗಾಲ ಹುಣ್ಣಿಗೆ ಎನ್ನ ಕೇಳಬೇಡ . . . ಮಿಕ್ಕಾದ ವ್ಯಾಧಿಗೆ ನಾನರಸು (ಸರ್ವಪ. ೦೨೬-೬೪೪). ೫. [ಗಣಿತ] ಮೂವತ್ತುಮೂರು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ: ಎಕ್ಕಂ ದಾಹಂ . . . ಫಣಿ ಮಹಾಫಣಿ ಕ್ರತು ಮಹಾಕ್ರತು ಸಾಗರ ಮಹಾಸಾಗರ ಪರಿಮಿತ ಮಹಾಪರಿಮಿತ — ಈ ೪೦ ಸ್ಥಾನದ ಉಗ್ಗಡಣೆ (ಪ್ರಪಹಾ. ೬) ; ಎಕ್ಕಂ ದಾಹಂ . . . ಫಣಿ ಮಹಾಫಣಿ ಕ್ರತುಮಹಾಕ್ರತುವೆಂಬಿವೇ [೪] ಉಗಭಡಣೆಗಳು (ವಿವೇಕ. ೬). [ಸಂ. ಫಣಿನ್]

ಫಣ್ಣಿ 'ಫಳ್ಳಿ' ನೋ.

ಫಣಿಕಟಕ (ನಾ). ಹಾವುಗಳನ್ನೇ ಕಡಗವಾಗಿ ಉಳ್ಳವನು ; ಶಿವ : "ವಿರೂಪಾಕ್ಷಂ ಮೃಡಂ ಧೂರ್ಜಟಿ ಫಣಿಕಟಕಂ ವಾಮದೇವಂ ವೃಷಾಂಕಂ" (ಪಸ್ತುಕೋ. ೩-೦೩) ; ಚಣಮರಾಳಕಗಮನೆ ಬಂದಳು ಫಣಿಕಟಕನಲ್ಲಿರ್ದು ಮಣಿಕಂಠಣಕರಾಂಬುಜೆ ಬಂದಳು (ಐಸಪ. ೩೦-೦೦) ; ಆಂ ಪೋಗಿ ಫಣಿಕಟಕ ನಂಘ್ರಗೆಯೆರಗಲವರು ಮುತ್ತೈದೆಯಾಗೆಂದು ಪರಕೆಯನಿಯ್ಯಲು (ಪಪಮೋ. ೬-೩೭). [ಸಂ.]

ಫಣಿಕುಂಡಲ (ನಾ). ಹಾವಿನಿಂದಾದ ಕಿವಿಯ ಆಭರಣ : ಮೂಡಿದನು . . . ಫಣಿಕುಂಡಲದ ಪಂಚಮುಖದ ವಿಶ್ವನಾಥಂ (ಹಕಾ. ೦೩-೦೯). [ಸಂ.]

ಫಣಿಕೇತನ (ನಾ). ಹಾವಿನ ಚಿಹ್ನೆಯ ಧ್ವಜವುಳ್ಳವನು ; ದುರ್ಯೋಧನ : ಖತಿಯ ಹಿಡಿದನು ಶೌರಿ ಮಣಿಯದ ಮತಗುಡದ ಫಣಿಕೇತನನ ಕಂಡು (ಕುಪ್ಪಾಉ. ೯-೩೬). [ಸಂ.]

ಫಣಿಗೃಹ (ನಾ). ಹಾವುಗಳ ನೆಲೆ ; ಹುತ್ತ : ಸುಖನಿಧಿ ಕಂಠೀರವವಿಷ್ಟರ ದಿನಧಿಕನಮರಾಲಯದಿಂ ಧೀರಂ ಫಣಿಗೃಹದಿಂದಂ ವೀರಂ (ಶಾಂತಿಪು. ೯-೨೦೦). [ಸಂ.]

ಫಣಿಗೇಹ (ನಾ). = ಫಣಿಗೃಹ : ಫಣಿಫಣಾಸ್ಫುರಿತಮಣಿದೀಪಿಕಾವ್ಯೂಹಮಂ ಕ್ವಣಿತಮಣಿಕಿಂಕಿಣೀನಿನದಫಣಿಗೇಹಮಂ . . . ನೋಡಿ (ಅಧಿಪು. ೬-೨೬ ಕಗಳ). [ಸಂ.]

ಫಣಿಜ್ಝಕ (ನಾ). ತುಳಸಿ. ಪುದಿನ ಮೊದಲಾದ ಸಸ್ಯಜಾತಿಗೆ ಸೇರಿದ ಗಿಡ ; ಬಿಳಿಮರುಗದ ಗಿಡ : " ಪಣಿಜ್ಝಕ—ಬಿಳೇಮರುಗದ ಗಿಡ " (ಗಂಗಾಮ. ಕಿ.). [ಸಂ.]

ಫಣಿತಲ್ಪ (ನಾ). ಹಾವನ್ನೇ ಹಾಸುಗೆಯನ್ನಾಗಿ ಮಾಡಿಕೊಂಡವನು ; ವಿಷ್ಣು : ಅಪ್ಪ ಬಾ ಫಣಿತಲ್ಪ ಬಾ . . . ಮಱಿಯಾನೆ ಬಾ ಮಾಣಿಕ್ಯ ಬಾ (ಕೌತಿರಾ. ೦-೭೩). [ಸಂ.]

ಫಣಿತಿ (ನಾ). ಮಾತು ; ವಾಕ್ಕು : ವಿತತಕಲಾತತಿಯೊಳ್ ಪರಿಣತಿಯಂ ಸೂಚಿಸುವ ಸರಸಫಣಿತಿಗಳಂ ಸಂಗತಮಾಗೆ ನುಡಿದೊಡಂ ದುರ್ಗತರವು ಕಾನನದ ಜೊನ್ನದಂತಿರೆ ವಿಫಲಂ (ವೀತಿಮಂ. II, ೩೩೬). [ಸಂ.]

ಫಣಿಧರ (ನಾ). ಹಾವನ್ನು ಧರಿಸಿದವನು ; ಶಿವ : ಫಣಿಧರನಿಂ ಪಡೆದಂ ಗಡ ಪಣೆಗಣ್ಣಂ (ಪ್ರಕಪ. ೦೩-೪೦). [ಸಂ.]

ಫಣಿನಾಯಕ (ನಾ). ಸರ್ಪಗಳ ಒಡೆಯ : ದಿವಿಜನೋ ಫಣಿನಾಯಕನೋ ಮನೋಭವನಿವಂ ಕರಮೊಪ್ಪಿದಂ (ಕಪಿಂ. ೦-೦೪೦) ; ನಿಜಾಂಗರುಚಿಯೊಳ್ . . . ಫಣಿನಾಯಕಂ ಕರಂ ಸೊಗಯಿಸಿದಂ (ಅಧಿಪು. ೯-೦೦೦). [ಸಂ.]

ಫಣಿನಿ (ನಾ). ಹೆಣ್ಣು ಹಾವು ; ನಾಗಕನ್ಯೆ : ಕಾಲು ಸೋಂಕಿದ ಫಣವುಳ್ಳ ಫಣಿನಿಯು ಫಣವನೆತ್ತಿಕೊಂಡು ನಿಲ್ಲುವಂತೆ ಉನ್ಮಾದಿನಿಯಾದಾಯವನಿಯು ಮಸ್ತಕವನ್ನೆತ್ತಿಕೊಂಡು ನಿಂತು ' . . . ನೀನೆನ್ನವನೇ ಆಗಿರುವೆ' ಎಂದಳು (ಕಪಾಕುಂ. ೯೦). [ಸಂ. ಫಣಿನೀ]

ಫಣಿನಿಲಯ (ನಾ). = ಫಣಿಗೃಹ : ಫಣಿನಿಲಯಂ ಪರೀಕ್ಷಿಸುವೊಡಾಲದ ಮೂಡಣ ಮೆಯ್ಯೊಳಾಗೆ ತೆಂಕಣದೆಸೆಯತ್ತಲಯ್ದುಪುರುಷಂಬರೆಗಂ ನೆಱ್ಱಿ ತೋಡುಗುಪ್ಪುನೀರ್ (ಶೋಕೋಪ. ೩-೩೦). [ಸಂ.]

ಫಣಿಪ (ನಾ). ೧. ಹಾವುಗಳ ಒಡೆಯ ; ಆದಿಶೇಷ : ಪೊಡವಿಯಂ ಬಗಿವ ಫಣಿಪನನುಗಿವ ಜಲಧಿಯಂ ಕುಡಿವ . . . ಕಡುಗಲಿಗಳು (ಹಕಾ. ೦-೪೭). ೨. ಸರ್ಪಲೋಕದ ಒಡೆಯ : ಧಾತ್ರಿಪ ಫಣಿಪರೆ ಖೇಚರಪ ತ್ರಿದಶಪರೆಯ್ದೆ ವಿಶ್ವಕರ್ಮಂ ಬರೆದಂ ಚಿತ್ರಪಟಮಂ ದಲೆನೆ ಭುವನ ತ್ರಿತಯ ಕಾಣಲಾದುದಭವನ ಸಭೆಯೊಳ್ (ಶಾಂತಿಪು. ೯-೬೯). [ಸಂ.]

ಫಣಿಪತಿ (ನಾ). = ಫಣಿಪ ೧ : ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ ಪೇಟ್ಟು ಪರಿಕ್ಷಿಪಂಗೆಂಟೆರ್ದೆಯೇ (ಗದಾಯು. ೦-೪೪); ಜಿನನ ವಿಧಿಗಳ ಕೋಟಲೆಯನೆಣಿಸುವಡೆ ತಾಂ ಫಣಿಪತಿಗೆ ಹವಣಲ್ಲ (ಐಸಪ. ೩೦-೭೩) ; ತಲೆವೊಱ್ಱಿಯ ತೂಕದಲ್ಲಿ ಫಣಿಪತಿ ಬಳುಕತೊಡಗಿದ (ಕುಪ್ಪಾಉ. ೦೦-೦೩). [ಸಂ.]

ಫಣಿಪತಿಕೇತನ (ನಾ). = ಫಣಿಕೇತನ : ಫಣಿಪತಿಕೇತನಧೂಮಕೇತುವುಂ ಪಾಂಡವಬಾಲಪ್ರದೀಪನುಂ . . . ಎನಿಸಿದ ಭೀಮಸೇನಂ (ಗದಾಯು. ೨-೦ ಪ). [ಸಂ.]

ಫಣಿಪತಿತಲ್ಪ (ನಾ). = ಫಣಿತಲ್ಪ : ಪಡೆದ ವೈಭವದೇಳಿಗೆಯಲಿ ಪಾಲ್ಗಡಲ ನಡುವೆಸೆವ ಫಣಿಪತಿತಲ್ಪನಂ . . . ಮೆಚ್ಚಿಸುವ ಬೆಱಗುವಡಿಪ ಸೋಲಿಸುವ ವೇಶ್ಯಾಂಗನೆಯರೆಸೆದಿರ್ದರು (ಶಿಕ್ಷಾಪ. ೨-೦೬). [ಸಂ.]

ಫಣಿಪಾಶ (ನಾ). [ಕಾಮಶಾ] ರತಿಬಂಧಗಳಲ್ಲಿ ಒಂದು ; (ಹಾವುಗಳಂತೆ ಹೆಣೆದುಕೊಳ್ಳುವ) ಒಂದು ಬಗೆಯ ಆಲಿಂಗನ ; ನಾಗಬಂಧ : ಕೃತಬಂಧುರಿತಕ್ರೀಡಾಮತದೆ ತಗುಳ್ದಬಲೆ ತನ್ನ ಜಾನುದ್ವಯ ನಿರ್ಗತ ಹಸ್ತದ್ವಿತಯವ್ಯಾಪ್ತತೆಯಂ ನೆಗಳ್ದೊಂದೆ ಕಾಂತನೊಳ್ ಫಣಿಪಾಶಂ (ಪುಷ್ಪದ. ೦೯-೨೯); ಮೆಲ್ಲನೆ ಮಲಗಿರ್ದವಳಂ . . . ತನ್ನೆರಡು ಕೈಗಳಂ ಮೊಳಕಾಲ ಕೆಳಗಿಕ್ಕಿಯಿರಲಾಗಿ ಪುರುಷ ತನ್ನೆರಡು ಕೈಗಳಂ ಅವಳ ಕೈಗಳಂ ಮಲಕಿಕ್ಕಿ ಮೊಳಕೈವಳಗಿಕ್ಕಿ ಕೊರಳಂ ತಕ್ಕಿಸಿ ರಮಿಸಲ್ಕೆ ಫಣಿಪಾಶಮೆಂಬ ಕರಣಂ (ಶಾಮಶಾ. ೨೩೬). 'ನಾಗಪಾಶಕರಣ' ಪರಾ. [ಸಂ.]

ಫಣಿಪೇಂದ್ರ (ನಾ). = ಫಣಿಪ ೧ : ಮಂದರಗಿರಿಯಾದುದು ಗಡ ಧನು ಫಣೀಂದ್ರನು ಹೆದೆಯಾದ ಗಡ ಸಂದ ಮುಕುಂದನಾದನು ಬಾಣವೆಂಬುದು ಸಂದೇಹವೇನಲ್ಲದಿಹುದೆ (ತ್ರಿಪುರಾಂ. ೩-೨೬). [ಸಂ.]

ಫಣಿಭುಕ್ಕು (ನಾ). ೧. ಸಣ್ಣ ಹಾವುಗಳನ್ನು ತಿಂದು ಬದುಕುವ ಒಂದು ಬಗೆಯ ದೊಡ್ಡ ಹಾವು : "ಫಣಿಭುಗ್ರಾಜಫಣಿಯೆನಲ್ಕರವಾವು" (ಮುಂಗರಾ. ೦೦೮-೩). ೨. ನವಿಲು. ೩. ಗರುಡ. [ಸಂ. ಫಣಿಭುಜ್]

ಫಣಿಭೋಗ (ನಾ). ಹಾವಿನ ಸುರುಳಿ, – ಮಂಡಲ : ಅಡವಿಯಲಿ ಫಣಿಭೋಗದಲಿ ಬಿಗಿವಡೆದು ಬಳಲಿದ ಭೀಮಸೇನನ ಬಿಡಿಸಿದನು ಯಮಸೂನು ಧರ್ಮಕಥಾಪ್ರಸಂಗದಲಿ (ಶಾಪ್ರಾಶ. ೦೩ ಸೂಪರ್ವ). [ಸಂ.]

ಫಣಿಯಾಲ 'ಪಣಿಯಾಲ' ನೋ.

ಫಣಿರಾಜ (ನಾ). = ಫಣಿಪ ೧ : ಫಣಿರಾಜಂ ಬಾರಿಯಿಟ್ಟಿಟ್ಟದೊಡನು ದಿನಂ ಬರ್ಪ ಸರ್ಪಂಗಳಂ ಬಲ್ಕಣಿ ತಾರ್ಕ್ಷ್ಯಂ ಭಕ್ಷಿಸುತ್ತುಂ ಮಳೆಯಗಿರಿಯೊಳಿರ್ಪಂ (ಶಾಪ್ರಾಶ. ೯೦೦) ; ಫಣಿರಾಜನಂ ಶಶಿಚೂಡನಿಕ್ಕಿದನೊಂದು ಬೆರಳಿಗೆ ಮುದ್ರಿಕೆಯ ತೆಱದಿ (ಪಾಪ. ೩೯-೩೩). [ಸಂ. ಫಣಿರಾಜನ್]

ಫಣಿರಾಜಕೇತನ (ನಾ). = ಫಣಿಕೇತನ : ಕಮಲಾಕರದಿಂ ಪೊಱಮಟ್ಟ ನಾಗಳುಂ ಭುಜಯುಗತೋರಣಾಯಿತಗದಾಪರಿಘಂ ಫಣಿರಾಜಕೇತನಂ (ಗದಾಯು. ೬-೨೬). [ಸಂ.]

ಫಣಿರಾಜನಂದನೆ (ನಾ). ಸರ್ಪರಾಜನ ಮಗಳು; ಆದಿಶೇಷನ ಮಗಳು: ಫಣಿರಾಜನಂದನೆಯುಲೂಪಿ . . . ಮೂರ್ಛಿತರಾಗಿ ಸಮರಧಾರಿಣಿಯೊಳಿಹ ದೊರೆಗಳಂ ತರಿಸಿ ಮಂತ್ರೌಷಧಗಳಿಂದೆ ಪಾಲಿಸುತಿರ್ದಳು (ಕೃಷ್ಣಶಾ. ೨೩-೯). [ಸಂ. ಫಣಿರಾಜನಂದನಾ]

ಫಣಿರಾಜಶಯನ (ನಾ). = ಫಣಿತಲ್ಪ : ಸರಸಿರುಹನಯನ ಫಣಿರಾಜಶಯನ . . . ವರಕೌಸ್ತುಭಾಭರಣ ಸಲಹು (ಕೃಷ್ಣಶಾ. ೨-೩೦). [ಸಂ.]

ಫಣೆರ್ಜಕ (ನಾ). = ಫಣೆಜ್ಜಕ : "ಫಣೆರ್ಜಕಂ ಮರು ಮರುವಕಂ" (ಪಸ್ತುಕೋ. ೩೭-೨೩); "ಮರು ಮರುವಕಂ ಫಣೆರ್ಜಕವಕ್ಕು" (ಮುಂಗರಾ. ೩೯-೨೬). [ಸಂ.]

ಫಣೆಲೋಕ (ನಾ). ಸರ್ಪಲೋಕ; ನಾಗಲೋಕ: ಅನಿಮಿಷಲೋಕಮಂ ವಿಬುಧರಿಂ ಫಣೆಲೋಕಮನುಗ್ರನಾಗಸಾಧನದಿಂ . . . ಅದೇನನುಕರಿಸಿತ್ತೊ ರಾಜಭವನಂ (ಶಾಂತಿಪು. ೩-೦೨); ಗಗನವೀತನ ನಾಭಿ ದಶದಿಕ್ಕುಗಳು ಕಿವಿ ಫಣೆಲೋಕ ವಿಮಲಾಂಭ್ರಗಳು ಧ್ರುವನಿಂ ಮೇಲುಭಾಗ ಮುರಾಂತಕನ ಮುಕುಟ (ಶಾಪ್ರಾಸ. ೯-೨೩). [ಸಂ.]

ಫಣೆವೇಣಿ (ನಾ). ಹಾವಿನಂತೆ ಜಡೆಯುಳ್ಳವಳು ; ನಾಗವೇಣಿ : ರಕ್ಷಿಸು ವಿನುತ ಗೀರ್ವಾಣಿ ಫಣೆವೇಣಿ ಶರ್ವಾಣಿ ಶಿವನ ರಾಣಿ (ಕಾಶೀಕಂ. ೩-೯); ಅಜನ ಪಟ್ಟದ ರಾಣಿ ವರದೆ ಕಲ್ಯಾಣಿ ಫಣೆವೇಣಿ ವಾಣಿ . . . ಸುಮತಿಯು ತಾಯೆನಗೆ (ಕೃಷ್ಣಶಾ. ೦-೯). [ಸಂ. ಫಣಿವೇಣೀ]

ಫಣಿಶಯನ (ನಾ). = ಫಣಿತಲ್ಪ : ರಕ್ಷಿಪುದೀ ಕಾಳಿಯ ಫಣೀಂದ್ರನಂ ಫಣಿಶಯನಾ (ಪಗಪ. ೩-೦೦೯). [ಸಂ.]

ಫಣಿಶಾಯಿ (ನಾ). = ಫಣಿತಲ್ಪ : ದಯೆ ಮಾಡಿ ಸಲಹಯ್ಯ . . . ಫಣಿಶಾಯಿ ಅವಗುಣವ ನೋಡದೇ ಚರಣಸ್ಮರಣೆಯ ಮಾಡುವಂಥ ಭಕುತಿಯನಿತ್ತು (ಕುರಂದ. ಶಾ. ೨೦-೬೯-೧). [ಸಂ. ಫಣಿಶಾಯಿನ್]

ಫಣೀಂದ್ರ (ನಾ). ೧. ಹಾವು ; ಸರ್ಪ : ಫಣೀಂದ್ರವೃಂದಂ . . . ಒಪ್ಪಿತಾ ಶ್ರೀಗೇತ್ರನುತ್ತುಂಗಸಭಾಂತರಾಳದೊಳ್ (ಉತ್ಕಲಿ. ೦೨-೦೨೯). ೨. = ಫಣಿಪ ೧ : ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂದ್ರೋತ್ತಮಾಂಗದಿಂ . . . ಒಕ್ಕೆಳಮುತ್ತನಾಯುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕಳಂ (ಶಾಪ್ರಾಸ. ೦೦೯); ಅವಧರಿಸೆಲೆ ಫಣೀಂದ್ರ ಭೂಮಂಡಲದ ರಾಯರೊಳ್ಪಾಂಡುಸುತ ಕೌರವರ್ಗಾದುದಾಹವಂ (ಕೃಷ್ಣಶಾ. ೨೯-೦೬). [ಸಂ.]

ಫಣೆ$_1$ 'ಪಣೆ' ನೋ.

ಫಣೆ$_2$ (ನಾ). ಹಾವಿನ ಹೆಡೆ; ಫಣ : "ಫಣಃ. ಫಣಾ, ಫಟಾ—ಈ ೩ ಹಾವಿನ ಹೆಡೆ" (ಹಲಾಯು. ೦೦೩-೦೯). [ಸಂ. ಫಣಾ]

ಫಣೆಕಟ್ಟು 'ಪಣೆಗಟ್ಟು' ನೋ.

ಫಣೆಗಣ್ಣು 'ಪಣೆಗಣ್' ನೋ.

ಫಣೇರವೆಟ್ಟಿಗೆ (ನಾ). ಬಾಚಣಿಗೆ, ಕುಂಕುಮದ ಭರಣಿ, ಕನ್ನಡಿ ಮೊದಲಾದುವನ್ನು ಇಡುವ ಪೆಟ್ಟಿಗೆ : ಅಳಿಯತನದಲ್ಲಿ . . . ಬೇಕಾದರೆ ಒಂದು ಫಣೇರವೆಟ್ಟಿಗೆಯನ್ನೇ ಬೇಡಲು ನಿನ್ನ ಮಗನಿಗೆ ಹೇಳು (ರಾಮಾಶ. ೩೩).

[ಫಣೇರಂ (ಪ್ರ ← ಮರಾ. ಫಣೇರೇ = ಕನ್ನಡಿ, ಬಾಚಣಿಗೆ ಮೊದಲಾದುವನ್ನಿಡುವ ಚೀಲ) + ಪೆಟ್ಟಿಗೆ]

ಫಣ್ಣಾಕಲ್ಪ (ನಾ). ಹಾವುಗಳನ್ನೇ ಆಭರಣವಾಗುಳ್ಳವನು ; ಶಿವ : ಲುಪ್ತಾಘನ ಫಣ್ಣಾಕಲ್ಪನ ನತಫಣಿತಲ್ಪನ . . . ಸನ್ನುತಿಪೆಂ (ಉತ್ಕಲಿ. ೯-೦). [ಸಂ.]

ಫತ್ತೆ (ನಾ). ಗೆಲವು; ವಿಜಯ : ಇಂಗ್ರೇಜಸರಕಾರಕ್ಕೆ ಫತ್ತೆ ಆದ ಸಂತೋಷದ ಬಗ್ಗೆ ಮಡಿಕೇರಿ ಕೋಟೆಯಲ್ಲಿ ಇಪ್ಪತ್ತೊಂದು ಫಿರಂಗಿ ಹಾರಿಸಿದರು (ರಾಕೇಂಪ್ರ. ೦೬೨).

[← ಅರ. ಹಿಂ. ಫತಹ್; ಮರಾ. ಫತೇ, ಫತ್ತೇ]

ಫತ್ತೆಮಾರಿ, ಪತ್ತೇಮಾರಿ, ಫತ್ತೇಮಾರಿ (ನಾ). ಒಂದು ಬಗೆಯ ದೊಡ್ಡ ನಾವೆ,—ದೋಣಿ : ಎಲ್ಲಕ್ಕೂ ದೊಡ್ಡ ನಾವೆಗೆ ಫತ್ತೆಮಾರಿಯೆಂದೆನ್ನುವರು (ಶಾಗಾ. ೩೦೭); ಈ ದೇಶದ ವ್ಯಾಪಾರಸ್ಥರು ಫತ್ತೆಮಾರಿಗಳಲ್ಲಿಯೂ ಬಗಲಗಳಲ್ಲಿಯೂ ಸರಕುಗಳನ್ನು ತುಂಬಿಕೊಂಡು . . . ಸಮುದ್ರಪ್ರಯಾಣ ಮಾಡುತ್ತಿದ್ದರು (ಮುಂಅಯಾ. ೩-೦೦೬). **ಪತ್ತೇಮಾರಿ:** ಆ ದಳವಾಯಿಗೂ ಆ ಐದುಸಾವಿರ ಕೊಡಗರಿಗೂ ಪತ್ತೇಮಾರಿ ಮೇಲೆ ಹಾಕಿಸಿ . . . ಕುಂಬಳೆಕಾಲ್ಲೂಕಿನಲ್ಲಿ ಇಳಿಸಿಬಿಟ್ಟರು (ರಾಕೇಂಪ್ರ. ೦೨). **ಫತ್ತೇಮಾರಿ :** ಫತ್ತೇಮಾರಿಯಲ್ಲಿ ೧೫ರಿಂದ ೫೦ ಟನ್ನಿನ ವರೆಗೆ ಮಾಲು ಹೇರುವರು (ಶಾಗಾ. ೩೦೭). [← ಮರಾ. ಫತ್ತೇಮಾರೀ, ಫತೇಮಾರಿ]

ಫತ್ತೇಮಾರಿ 'ಫತ್ತೆಮಾರಿ' ನೋ.

ಫನ (ನಾ). ಸಂಪೂರ್ಣ ಹಾಳು ; ಸರ್ವನಾಶ : ಅವನ್ನ ಸ್ವಲ್ಪ ನಮ್ಮ ಬಲೆಗ್ಹಾಕ್ಕೊಂಡ್ರೆ? . . . ರಾಮಣ್ಣೋರ ಕಡೆ ಕೇಸ್ನ ಫನ ಮಾಡ್ಬಿಡಬಹುದು (ರಿಂಬಿ. ೨೦); ಮನೆ ಅಥವಾ ಹೋಟೇಲಿನ ಹಿಂಬದಿಯ ಜಗಲಿಯಲ್ಲಿ ಅದರ ಫನಾ ನಡೆಯುತ್ತದೆ (ಶಕಡ. ೦೦೩).

[← ಅರ. ಹಿಂ. ಫನಾ; ಮರಾ. ಫನಾ, ಫನ್ನಾ]

ಫರ (ನಾ). ಗುರಾಣಿ; ಢಾಲು. [ಸಂ.]

ಫರಂಗಿ 'ಫಿರಂಗಿ' ನೋ.

ಫರಂಗಿಮಣಿ, ಪರಂಗಿಮಣಿ (ನಾ). ತಪ್ಪು ಮಾಡಿದವನನ್ನು ಕುರ್ಚಿಯ ಆಕಾರದಲ್ಲಿ ಕೂರಿಸುವ ಒಂದುಬಗೆಯ ಶಿಕ್ಷೆ; ಕುರ್ಚಿ ಕೂರಿಸುವುದು:

ಏತ ಹಾಕುವುದು. ಫರಂಗಿಮಣೆಯಲ್ಲಿ ಕುಳಿತುಕೊಳ್ಳುವುದು ಮೊದಲಾದ ಏಗಳ ಒಂದೊಂದು ಭಯಂಕರಶಿಕ್ಷೆಯನ್ನನುಭವಿಸಿದವರು ಮತ್ತೊಮ್ಮೆ ಓದಿಗೆ ಕಳ್ಳಮನಸ್ಸನ್ನು ಮಾಡುತ್ತಿರಲಿಲ್ಲ (ಕುರುಕಾ. ೬೮); ಕೋದಂಡ, ಫರಂಗಿಮಣೆ—ಇವುಗಳ ಶಿಕ್ಷೆಯೊಂದಿಗೆ . . . ಯಕ್ಷಗಾನಗಳನ್ನು ಅಲ್ಲಿ ಹೇಳಿಕೊಡುತ್ತಿದ್ದರು (ಹುಮುಖ. ೦೬). **ಪರಂಗಿಮಣೆ** : ಆ ದಿನ ಅವನನ್ನು ಅಧ್ಯಾಪಕರು ಪರಂಗಿಮಣೆ ನಿಲ್ಲಿಸಿದ್ದರು (ಅಪಾಥ. ೦೪೪) ; ಪರಂಗಿಮಣೆ, ಉಬ್ಬೆಗಳಿಗಾಗಿ . . . ನಮ್ಮ ಶಾಲೆ ಇತ್ತಂತೆ (ರೂಪಸಂ. ೩೭).

[← ತುಳು. ಪರಂಗಿಮಣೆ]

ಫರಕ 'ಫರಕು' ನೋ.

ಫರಕು, ಫರಕ (ನಾ). ಹೆಚ್ಚುಕಡಮೆ; ವ್ಯತ್ಯಾಸ; ಭೇದ ; ಅಂತರ : ಅದಕ್ಕೂ ಭೀಮಸೇನಾಚಾರ್ರು ಕೊಟ್ಟ ಕುಂಡಲೀಗೂ ತುಸು ಫರಕು ಅದ (ಸಮನೀ. ೨೫೪). **ಫರಕ** : ಮೂರುರೂಪಾಯಿಯ ಬದಲಿ ಈಗ ಒಂದು ಒಂದುವರೆ ರೂಪಾಯಿಯ ಫರಕವನ್ನು ತೋರುತ್ತದೆ (ಮುಂಬಪ್ಯಾ. ೨೬೯). [←ಅರ. ಫರ್ಕ್; ಹಿಂ. ಮರಾ. ಫರಕ್]

ಫರಜು, ಫರ್ಜು (ನಾ). [ಸಂಗೀತ] ಒಂದು ರಾಗದ ಹೆಸರು : ಚಿಂತಾಮಣಿ . . . ಫರಜು ಮುಂತಾದ ಕಷ್ಟರಾಗಗಳಲ್ಲಿ ಕೃತಿರಚನೆ ಮಾಡಿ ಶಾಸ್ತ್ರಿಗಳು . . . ಮಾರ್ಗದರ್ಶಕರಾಗಿದ್ದಾರೆ (ಸಂಗೀಸಂ. ೨೯೪) ; ಹಿಂದಿನವರು ಹಾಡುತ್ತಿದ್ದ ಧಾಟಿಗಳು—ಫರಜು, ಕಾಪಿ, ಖಮಾಚು, ಮಧ್ಯಮಾವತಿ, ಆನಂದಭೈರವಿಯಂಥ ರಾಗಗಳಿಂದ ಕೂಡಿದ್ದುವು (ಶಾಸಗೀ. ೦೦೬). **ಫರ್ಜು** : ರಾಗ ಫರ್ಜು, ಆದಿತಾಳ (ಹನುಮ. ೦೮).

[←ಹಿಂ. ಪರಜ್, ಫರ್ಜ್; ಮರಾ. ಪರಜ್]

ಫರದೆ 'ಪರದೆ' ನೋ.

ಫರಫರೆ (ನಾ). ಮಂಟಪ ಮೊದಲಾದುವುಗಳಲ್ಲಿ ಅಲಂಕಾರಕ್ಕಾಗಿ ಕಟ್ಟುವ ತೆಳುವಾದ ಕಾಗದಗಳ ತೋರಣ : ಅವರಿಂದಲೇ ಕಾಗದದ ಫರಫರೆಗಳನ್ನು ದೊರಕಿಸಿದಳು (ಗಂಪಾಯಿ. ೦೩೨). [?]

ಫರಮಾನಾ 'ಫರ್ಮಾನು' ನೋ.

ಫರಮಾನು 'ಫರ್ಮಾನು' ನೋ.

ಫರಮಾಯಿಶಿ 'ಫರಮಾಯಿಷಿ' ನೋ.

ಫರಮಾಯಿಷಿ, ಪರಮಾಯಿಷಿ, ಪರಮಾಶಿ, ಫರಮಾಯಿಶಿ, ಫರಮಾಶಿ (ಗು). ೧. ಅಪ್ಪಣೆಯಂತೆ ಸಿದ್ಧಪಡಿಸಿದ ; ಹೇಳಿ ಮಾಡಿಸಿದ. ೨. ಅತ್ಯುತ್ತಮವಾದ ; ಸೊಗಸಾದ ; ಉತ್ಕೃಷ್ಟವಾದ : ಸರ್ಕಾರಕ್ಕೆ ಫರಮಾಯಿಷಿ ಜಿನಿಸಿ ಮುಂತಾದುದನ್ನು ಕಳುಹಿಸತಕ್ಕ ವಿಷಯ (ಮಹಾಪಂ. II, ೩೮). **ಪರಮಾಯಿಷಿ** : ೨. ಪ್ರಮಿಳೆ . . . ಪರಮಾಯಿಷಿ ಉಪ್ಪಿಟ್ಟಿಗೆ ಬಾಯಲ್ಲಿ ನೀರೂರಿಸಿಕೊಂಡು ಹಾರಿಹೋದಳು (ಮಾಮನ. ೦೨). (ನಾ). ೩. ಇಷ್ಟವಾದುದು : ಬೈರಾಗಿಗೆ ಅವನ ಸಂಗೀತ ತುಂಬ ಪರಮಾಯಿಷಿ ! (ಮರುಸ. ೬೪). **ಪರಮಾಶಿ** : ೨. ಓಹೋ, ಇದೇಯೊ ನಿನ್ನ ಪರಮಾಶಿ ಮಿಾನು ? (ನಗುಬಿ. ೮೩) ; ನಾಗಪ್ಪಯ್ಯನಿಗೂ ಸುಬ್ಬಣ್ಣವೈದ್ಯರಿಗೂ ಪರಮಾಶಿ ಜೋಡಿಯಂತೆ (ಸ್ವಸ್ವಹೂ. ೬೬). ೪. ಸೊಗಸಾದುದು ; ಶ್ರೇಷ್ಠವಾದುದು : ನಸ್ಯ ಒಳ್ಳೆಯ ಪರಮಾಶಿಯದು (ಭೃಸರ್ವ. ೯೬). **ಫರಮಾಯಿಶಿ** : ೨. ನಮ್ಮ ಮಾವ ಊರಿನಿಂದ ಫರಮಾಯಿಶಿ ಮಾವಿನ ಹಣ್ಣುಗಳನ್ನು ತಂದಿದ್ದಾರೆ (ರೂಢಿ). **ಫರಮಾಶಿ** : ೨. ಫರಮಾಶಿ ನಂಟುತನ (ಸ್ವಸ್ವಹೂ. ೨೨೦).

[←ಪಾರ. ಹಿಂ. ಫರ್ಮಾಇಶೀ ; ಮರಾ. ಫರಮಾಶೀ, ಫರಮಾಸೀ, ಫರ್ಮಾಶೀ, ಫರ್ಮಾಸೀ]

ಫರಮಾಯಿಸು 'ಫರ್ಮಾಯಿಸು' ನೋ.

ಫರಮಾಶಿ 'ಫರಮಾಯಿಷಿ' ನೋ.

ಫರಮಿಾನು (ನಾ). ಒಂದು ಬಗೆಯ ದೀಪ (?) : ಇಲಾಲುಗಳು, ಫರಮಿಾನುಗಳು, ಅದಕ್ಕೆ ಬತ್ತಿ ಎಣ್ಣೆ ಸಹಾ . . . ಕಳುಹಿಸಬೇಕೆಂದು ಅಪ್ಪಣೆಯಾಯಿತು (ಮಾಮರಾ. ೬೩). [?]

ಫರವಾನೆ 'ಪರವಾನೆ' ನೋ.

ಫರಶಿ 'ಫರಸಿ' ನೋ.

ಫರಶಿಕಲ್ಲು 'ಫರಸುಗಲ್ಲು' ನೋ.

ಫರಸಿ, ಫರಶಿ, ಫರಸು (ನಾ). ೧. ಗಾರೆಯಿಂದ ಅಥವಾ ಹಾಸುಗಲ್ಲುಗಳಿಂದ ಸಿದ್ಧಪಡಿಸಿದ ನೆಲ : ನಾನು ಫರಸಿಯ ಮೇಲೆಯೆ ಕಂಬಳಿ ಹಾಸಿಕೊಂಡು ಮಲಗುತ್ತೇನೆ (ಶಾರತಿ. ೯೩). ೨. ನೆಲಗಟ್ಟಿಗೆ ಉಪಯೋಗಿಸುವ ಹಾಸುಗಲ್ಲು : ಕಲ್ಲಿನ ಫರಸಿ ಹಾಕಿ ಸಿದ್ಧಗೊಳಿಸಿದ ದೊಡ್ಡ ಪಡಸಾಲೆ (ಪೀಸಮು. ೦೨). **ಫರಶಿ** : ೨. ೫೩ ಪೊಹರೆಗಳು (ಪಾವರೆಗಳು) ೫೪ ಫರಶಿಗಳು (ಮುಂಬಪ್ಯಾ. ೦೦೨). 'ಫರಶಿಕಲ್ಲು' ಪರಾ. **ಫರಸು** : ೧. ಗೋಡೆಗಳಿಗೆ ಗಿಲಾಯಿ ಮಾಡಿಸುವದು, ಫರಸು ಮಾಡುವದು . . . ಇತ್ಯಾದಿ ಕೆಲಸ ಪ್ರಾರಂಭವಾಯಿತು (ಸಂಮುಟ. ೯೩).

[← ಅರ. ಫರ್ಶ್ ; ಮರಾ. ಫರರ್ಶಿ]

ಫರಸು 'ಫರಸಿ' ನೋ.

ಫರಸುಗಲ್ಲು, ಪರಸಿಗಲ್ಲು, ಫರಶಿಗಲ್ಲು (ನಾ). ನೆಲಗಟ್ಟು, ಕಟ್ಟೆ, ಜಗಲಿ ಮೊದಲಾದುವುಗಳಿಗಾಗಿ ಬಳಸುವ ಹಾಸುಗಲ್ಲು : ಫರಸುಗಲ್ಲಿನ ಬೀದಿಯ ಮೇಲೆಲ್ಲ ಮಣಗಟ್ಟೆ ಮಿಾನುಗಳು ಸೂರೆಯಾಗಿದ್ದುವು (ಬಿರುಗಾ. ೯). **ಪರಸಿಗಲ್ಲು** : ಅವಳು ಪರಸಿಗಲ್ಲಾಗಿ ತನ್ನ ಮೈಯನ್ನು ಎಂದಿನಂತೆ ಅದಕ್ಕೆ ಮತ್ತೆ ಒಡ್ಡಿದಳು (ಪಿರಾಭ. ೩೩). **ಫರಶಿಕಲ್ಲು** : ಆ ಜಾಗದಾಗ ತುಸಾ ದೂರಾ ನಾಕಾರು ಫರಶಿಕಲ್ಲು ಒಗೆ (ಕಮ್ಮಟ. ೨೮).

[ಫರಸು (< ಫರಸಿ) + ಕಲ್ಲು (< ಕಲ್ಲ್ಯ)]

ಫರಮೋಷಿ, ಪರಮೋಶಿ, ಪರಾಮೋಶಿ (ನಾ). ಅಜಾಗ್ರತೆ ; ಕಣ್ಣು ತಪ್ಪಿ ಆದ ತಪ್ಪು : ಫರಾಮೋಷಿಯಾದರೂ ಪಡಪೋಸಿಯಾಗಬಾರದು (ಗಾರ). **ಪರಮೋಶಿ** : ಪರಮೋಶಿಯಾಯಿತು. ಬಟ್ಟೆಗಿಟ್ಟೆ ಹಾಳಾಗಿಲ್ಲವಷ್ಟೆ (ಕುರುಕಾ. ೬). **ಪರಾಮೋಶಿ** : ಹೀಗೊಂದು ಪರಾಮೋಶಿ ಆಯಿತಲ್ಲ (ಕರುಕ. ೪).

[←ಪಾರ. ಹಿಂ. ಮರಾ. ಫರಾಮೋಶೀ]

ಫರಾರಿ$_1$, ಪರಾರಿ$_2$, ಫರಾರೆ (ನಾ). ಕಣ್ಣು ತಪ್ಪಿಸಿ ಹೊರಟು ಹೋಗುವಿಕೆ ; ಓಡಿಹೋಗುವಿಕೆ ; ನಾಪತ್ತೆ : ತನ್ನ ಕೆಟ್ಟಬುದ್ಧಿ ಬಿಡದೆ, ಇಲ್ಲಿಂದಾ ಫರಾರಿ ಆಗಿ ಹೋಗಬೇಕು (ರಾಸೇಂದ್ರ. ೨೬೩); ನಿನ್ನೆ ಮಧ್ಯಾನಕ್ಕ ಫರಾರಿ ಆಗಿ ಹೋದವ ಈವತ್ತು ಇಷ್ಟು ತಡ ಆಗಿ ಯಾಕ ಬಂದೊ. (ರವಂಪ. ೯೩) ; ಹಣ ಸಿಗದಿದ್ದರೆ ಫರಾರಿಯಾಗುವುದೊಂದೇ ಪರಿಹಾರವಾಗಿದೆ (ಮುತ್ತೈರ. ೨೦೪). **ಪರಾರಿ$_2$** : ಮಕ್ಕಳುಯಿಬ್ಬರು ಪರಾರಿಯಾಗಿ ಕೆಲವು ದಿವಸದ ಮೇಲೆ (ಎಕ. VIII. ಸಾಗರ. ೪೬–೨೦ ; 1646 ?) ; ನನ್ನ ಧಾಂಡಿಗ ದೂತರಂತೂ ಯಾವಾಗಲೋ ಫರಾರಿಯಾಗಿದ್ದಾರೆ (ಹಸ್ನೊಂದ. ೦೪೬). **ಫರಾರೆ** : ಆಸಾಮಿ ಫರಾರೆಯಾದ (ವರದಾ. II. ೯೩೬).

ಫರಾರಿ ಮಾಡು = ಕಣ್ಣಿಗೆ ಬೀಳದಂತೆ ಓಡಿಸಿ ಬಿಡು ; ನಾಪತ್ತೆ ಮಾಡು : ಅವನಿಂದ ಕೈಮರೆ ಮಾಡಿಕೊಂಡು ಅವನನ್ನು ಫರಾರಿ ಮಾಡಿ ಬಿಡುವುದೂ ಉಂಟು (ಕೃತಕ್ಕ. ೦೬೨). [←ಅರ. ಹಿಂ. ಮರಾ. ಫರಾರೀ]

ಫರಾರಿ$_2$ (ನಾ). ೧. ಹಾರಾಡುವ ಬಟ್ಟೆಯ ತುಂಡು: (ಕಿ). ೨. ನಾವೆಯ ಹಾಯಿಪಟ : (ಕಿ). [←ಮರಾ. ಫರಾರಾ]

ಫರಾರೆ 'ಫರಾರಿ$_1$' ನೋ.

ಫರಾಶೀಸ, ಫರಾಷೀಸ, ಫರಾಸಿಸ (ನಾ). ಫ್ರಾನ್ಸ್‌ದೇಶದವನು : ಕೊಡೆಯಾಲಕ್ಕೆ ಫರಾಶೀಸರ ಕೆಲವು ಮಂದಿ ಬಂದು, ಇಳಿದಿದ್ದರಿಂದ

(ರಾಶೇಂದ್ರ. ೦೦೪). **ಫರಾಷೀಸ** : ಮೊಮದಲ್ಲಿಖಾನರು ತಮ್ಮ ಮೇಲೆ ಪುಲಚೇರಿಯಿಂದ ಫರಾಷೀಸತ ಫಉಜು ಸುದಾ ಚಂದಾಸಾಬರು ಬಂದು ಮುತ್ತಿಗೆ ಹಾಕಲಾಗಿ (ಹೈದರ. ೩೩). **ಫರಾಸಿಸ** : ನವಾಬನು . . . ತನ್ನ ಕಡೆಯ ಫರಾಸಿಸರ ಸೇನಾಪತಿಯಾದ ಲಾಲಿ ಮೊದಲಾದ ಸರದಾರರನ್ನು ಕರೆಯಿಸಿ (ಚಿತ್ರಶಾ. ೬೪).

[←ಪಾರ. ಹಿಂ. ಫರಾಸೀಸ್ ; ಮರಾ. ಫರಾಶೀಸ್, ಫರಾಸೀಸ್]

ಫರಾಷೀಸ 'ಫರಾಶೀಸ' ನೋ.

ಫರಾಸಿಸ 'ಫರಾಶೀಸ' ನೋ.

ಫರಾಳ 'ಫೆಲಾರ' ನೋ.

ಫರುಜು 'ಪರಜು' ನೋ.

ಫರೆ (ನಾ). ಧಾನ್ಯಗಳನ್ನು ಅಳೆಯುವ ಒಂದು ಪ್ರಮಾಣ : ೧೭ ಪಾಯಲಿ ಅಂದರೆ ೧ ಫರಾ ೮ ಫರೆಗಳು ಅಂದರೆ ೧ ಖಂಡಗ (ಮುಂಬಿಪ್ಯಾ. ೦೦೩). [←ಮರಾ. ಫರಾ]

ಫರ್ಜಿ (ನಾ). ಚದುರಂಗದ ಆಟದ ವಜೀರ,–ಮಂತ್ರಿ : ಈಗ ತಮ್ಮ ಆ ಸೋತ ಆಟಕ್ಕೆ ಶ್ರದ್ಧೆಯೇ ಫರ್ಜಿ (ಶ್ರೇಮಾಶ್ರ. ೯೯).

[←ಪಾರ. ಮರಾ. ಫರ್ಜಿ ; ಹಿಂ. ಫರಜೀ]

ಫರ್ಜು 'ಫರಜು' ನೋ.

ಫರ್ನಾದಿ (ನಾ). ಮಾವಿನ ಹಣ್ಣಿನಲ್ಲಿ ಒಂದು ಬಗೆ : (ಮುಂಬಿಯ. ೨–೬೨).

[←ಮರಾ. ಫರ್ನಾದೀನ್, ಫರ್ನಾದೀಸ್./ಪೋರ್ಚು. ಫರ್ನಾದೀಜ್]

ಫರ್ಮಾನ್ 'ಫರ್ಮಾನು' ನೋ.

ಫರ್ಮಾನ 'ಫರ್ಮಾನು' ನೋ.

ಫರ್ಮಾನು, ಪರಮಾನು, ಫರಮಾನಾ, ಫರಮಾನು, ಫರ್ಮಾನ್, ಫರ್ಮಾನ (ನಾ). ೧. ಆಜ್ಞೆ ; ಹುಕುಮಂ : ಬಡಜನರಿಂದ ಹತ್ತು ರೂಪಾಯಿ ವಸೂಲು ಮಾಡಲು ಫರ್ಮಾನು ಹೊರಟಿತು (ಸೇಧಾನ. ೬೩) ; ಪುಣೆಯಿಂದ ಕಾಕಾನ ಫರ್ಮಾನು ಬಂದಿತು (ದೀಪಹ. II, ೬). ೨. ಆಜ್ಞಾಪತ್ರ : ಹೆಡ್‌ಮಾಸ್ತರರ ಹಸ್ತಾಂಕಿತವಿದ್ದ ಫರ್ಮಾನು ಅದು (ರಶ್ತರ್ಯ. ೦೩೭). **ಪರಮಾನು** : ೧. ಅಧಿಕಾರಿಗಳ್ಗೆ ಪರಮಾನು ನಿರೂಪ ಲೇಖನಮಂ ಬರೆಸಿತ್ತು (ಕೆಳನ್ಯ. ೩–೩೧). **ಫರಮಾನಾ** : ೧. ಕಂಬಕ್ಕೆ ಬಿಗಿಯಲು 'ಫರಮಾನಾ' ಹೊರಡಿಸಿದರು (ಸೆಹೂರ. ೦೨೬). **ಫರಮಾನು** : ೨. ಇವರಿಂಗೆ ಫರಮಾನ ತಂದಿತ್ತರಾಕ್ಷಣ ನೋಡಿ (ಬೀಳವಂ. ೦–೦೩೩). **ಫರ್ಮಾನ್** : ೨. ಸುಲ್ತಾನರು ತಮ್ಮ ಎರಡು ಆಣೆಗಳನ್ನು ಪ್ರಕಟಿಸಿದರು. ಅವುಗಳನ್ನು ಫರ್ಮಾನ್ ತಯಾರಿಸಿ . . . ಡಂಗೂರ ಹೊಡೆಸಿದರು (ಕೊಪಸ್ಯೈ. ೦೨೪) ; ಸಾರ್‌ಚಕ್ರವರ್ತಿ ಏನಾದರೂ ಫರ್ಮಾನ್ ಹೊರಡಿಸಿ . . . ರೈತರಿಗೆ ಹಂಚಿ ಬಿಡಬೇಕೆಂದು ಹೇಳಿದರೆ ನೀವೇನು ಮಾಡ್ತೀರಿ? (ಪುವರು. ೩೦೩). **ಫರ್ಮಾನ** : ೨. ಬುಂದೇಲಖಂಡದ ಸ್ವಾತಂತ್ರ್ಯದಾನದ ಫರ್ಮಾನವನ್ನು ಬರೆದನು (ರಾರ್ಮಿಶೇ. ೨೨೦). [←ಪಾರ. ಫರ್ಮಾನ್ ; ಹಿಂ. ಫರಮಾನ ; ಮರಾ. ಫರ್ಮಾನ, ಫರ್ಮಾನಾ]

ಫರ್ಮಾಯಿಸು, ಫರಮಾಯಿಸಂ (ಕ್ರಿ). ವಿಧಿಸಂ ; ಅಪ್ಪಣೆ ಮಾಡು ; ಆಜ್ಞೆಮಾಡು : ನಿಮಗೆ ೧೦೦೦ ರೂಪಾಯಿ ದಂಡ ಅಥವಾ ೬ ತಿಂಗಳು ಶಿಕ್ಷೆಯನ್ನು ಫರ್ಮಾಯಿಸಿದ್ದೇನೆ (ಸ್ಯಾಪಲಂ. ೦೭) ; ಕೈದಿಯನ್ನು ಜತೆಯಲ್ಲಿಯೇ ಕರೆದು ತರಬೇಕೆಂದು ಅಪ್ಪಣೆ ಬೇರೆ ಫರ್ಮಾಯಿಸಿದ್ದಾಳೆ (ಐದುಸ. ೦೨೫). **ಫರಮಾಯಿಸು** : ಇಂಗ್ರೇಜಫೌಜು ಹೊರಡಿಸ ಬೇಕಾದ್ದಕ್ಕೆ ಹುಕುಂ ಫರಮಾಯಿಸಲು . . . ತಿಳಿಸಿ ಇದ್ದೇವೆ (ರಾಶೇಂದ್ರ. ೦೫೪). [<ಫರ್ಮಾನು + – ಇಸು$_3$]

ಫರ್ಲಾಂಗು (ನಾ). ದೂರವನ್ನು ಅಳೆಯುವ ಒಂದು ಪ್ರಮಾಣ; ಒಂದು ಮೈಲಿಯ ಎಂಟನೆಯ ಒಂದು ಭಾಗ : ಅವರಿಗೂ ಆಕೆಗೂ ಸುಮಾರು ಒಂದರ್ಧ ಫರ್ಲಾಂಗು ಅಂತರವಿತ್ತು (ಕಂದುಪಿ. ೫೩).

[←ಇಂ. Furlong]

ಫರ್ಲೋ (ನಾ). ನಿರ್ದಿಷ್ಟವಾದ ನೌಕರಿಯ ಅವಧಿಯ ನಂತರ ನೌಕರದಾರನಿಗೆ ಸಿಕ್ಕುವ ಪೂರ್ಣವೇತನದ ರಜ : ಒಂದು ವರ್ಷ ಫರ್ಲೋ ರಜವನ್ನು ಪಡೆಯುವುದಕ್ಕಾಗಿ . . . ಗವರ್ನರನ್ನು ಭೇಟಿ ಮಾಡಿದರು (ಜಗಸಂ. ೨೫). [←ಇಂ. Furlough]

ಫಲ$_1$, ಫಳ (ನಾ). ೧. ಹಣ್ಣು : ಫಲಮೂಲಂಗಳನಾಂತು ವಲ್ಕಲದಿ ನೊಪ್ಪಂಬೆತ್ತು . . . ಇರ್ದಪ್ಪುವು ಪಾರ್ಶ್ವದೊಳ್ ನಿಯಮಮಂ ತಾಳ್ದಿರ್ದವೋಲ್ ಭೂರುಹಂಗಳ್ (ಶಾಪಂಪು. ೨೬೨); ಚರಿಪಾರಣ್ಯದ ಪಕ್ಷಿಗೊಂದುತರು ಗೊಡ್ಡಾಗಲ್ ಫಲಂ ತೀವಿದಾ ಮರಗಳ್ ಪುಟ್ಟವೆ (ಸೋಮೇಶ. ೨೬); ಫಲಮಿಲ್ಲದ ಮರನುಂ ಮಕ್ಕಳಿಲ್ಲದೊಂದರಸು ಮೊಪ್ಪದು (ಬಂಹರಿ. ೬–೦೯). ೨. ಬೆಳೆ ; ಉತ್ಪತ್ತಿ : "ಫಲಂ—೧ ಬೆಳೆದ ಧಾನ್ಯಾದಿ ಫಲ, ಪ್ರಯೋಜನ ೨" (ಸಿದ್ಧಾಂತಿ. ೪೨೦); ಫಲ ನೋಡದೆ ಕೆಟ್ಟಿತು, ಹೊಲ ಹೂಡದೆ ಕೆಟ್ಟಿತು (ಗಾದೆ). ೩. ಲಾಭ ; ಪ್ರಯೋಜನ : ಅಂಧಕನ ಕೈಯಲ್ಲಿ ದರ್ಪಣವಿರ್ದು ಫಲವೇನು (ಬಸವ. ೧೦೬); ಫಲಂ ಸ್ವರ್ಗಭೋಗಭೂಮಿಸಂಭವಂ (ಕಂದ್ರಪು. ೩–೩೨ ವ); ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆಱೆದೇನು ಫಲ (ಪುರಂದ. ೦–೬೦ ಕಲ್ಲಿ). ೪. ಕಾರ್ಯದ ಪರಿಣಾಮ; ಫಲಿತಾಂಶ : ದ್ರವ್ಯಮುಂ ಕ್ಷೇತ್ರಮುಂ ಕಾಲಮುಂ ಭಾವಮುಂ ಪ್ರಕೃತಿಯುಂ ತೀರ್ಥಮುಂ ಫಲಮು ಮೆಂದು ಕಥೆಗೆ ಸಪ್ತಾಂಗಮಕ್ಕುಂ . . . ಫಲಮೆಂಬುದು ತತ್ವಜ್ಞಾನಂ (ಶಾಪುಂಪು. ೬); ಏನನೋದಿ ಏನ ಕೇಳಿ ಏನ ಮಾಡಿಯೂ ಫಲವೇನು ನಿಮ್ಮವರೊಲಿಯದನ್ನಕ್ಕ (ಬಸವ. ೨೯೬); ವೇದಪಾರಾಯಣದ ಫಲ ಗಂಗಾದಿ ತೀರ್ಥಸ್ನಾನಫಲ . . . ವಸ್ತ್ರಾದಿ ಕನ್ಯಾದಾನಫಲವಹುದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ (ಕುಪ್ಯಾಲ. ೦–೨೦). 'ಫಲಭೋಗ' ಪರಾ. ೫. ಇಚ್ಛೆ; ಬಯಕೆ: 'ಫಲಸಿದ್ಧಿ' ಪರಾ. ೬. ಮುಟ್ಟು; ರಜೋದರ್ಶನ. ೭. ಕತ್ತಿ, ಚಾಕು ಮೊದಲಾದುವುಗಳ ಅಲಗು,—ಧಾರೆ. ೮. ಹಲಗೆ. ೯. ಗುರಾಣಿ; ಢಾಲು: "ಫಲಕಃ, ಫಲಂ, ಚರ್ಮನ್—೩ ಹಲಿಗೆ . . . ಹರಿಗೆ" (ಸಿದ್ಧಾಂತಿ. ೨೬೫). ೧೦. ಒಂದು ಬಗೆಯ ಚರ್ಮವಾದ್ಯ ; ತಮಟೆ : ಈಶಾನ ಈಶ್ವರಮುಡಿಯಾರ್ಗ್ಗೆ ಕೊಟ್ಟ ತಿವಳಿ ೧ ದಟ್ಟ ೩ ಖಣ್ಡಿಕೆ ೩ ಫಲಂ ೬ ಜಯಘಂಟೆ ೧ ಫಲಕಾಳೆ ೩ ಫಲ ೧೫ (ಮೈಲಿ. ೦೯೪೬, ೨೬–೦೫; 1032). ೧೧. ನೇಗಿಲಿನ ಮರ. ೧೨. ನೇಗಿಲಿನ ಕುಳ. ೧೩. ಹಣ್ಣಿನ ಒಳಭಾಗ,– ತಿರುಳು. ೧೪. ಸ್ಥಳದ ಅಳತೆ,—ಆಯ : 'ಕ್ಷೇತ್ರಫಲ', 'ಘನಫಲ' ಪರಾ. ೧೫. [ಗಣಿತ]ಗುಣಿಸುವುದರಿಂದ ಅಥವಾ ಭಾಗಿಸುವುದರಿಂದ ಬರುವ ಲಬ್ಧ; ಗುಣಲಬ್ಧ ಅಥವಾ ಭಾಗಲಬ್ಧ. ೧೬. ತ್ರೈರಾಶಿಕ ದಲ್ಲಿ ಎರಡನೆಯ ರಾಶಿ : ಇಚ್ಛೆ ಫಲಂ ಪ್ರಮಾಣಮೆಂಬವು ನಿಚ್ಚಲು ತಾಂ ಮೂಱುರಾಶಿ ಪೆಸರಿವು ನಿರುತಂ ಯಿಚ್ಛೆಯನು ಪಳದಿ ಗುಣಯಿಸಿ ಬೆಚ್ಚರದಿಂ ಪವಣೊಳೊತ್ತೆ ಮಧ್ಯದ ಫಲಮುಂ (ವ್ಯವಹಾ. ಅನುಬಂಧ. I, ೦೦). ೧೭. [ನ್ಯಾಯಶಾ] ಪ್ರಮೇಯದ ಹನ್ನೆರಡು ವಿಭಾಗಗಳಲ್ಲಿ ಒಂದು : ನ್ಯಾಯಶಾಸ್ತ್ರದಲ್ಲಿ ಹೇಗೆಂದರೆ–ಆತ್ಮ ಶರೀರ ಇಂದ್ರಿಯ ಅರ್ಥ ಬುದ್ಧಿ ಮನಸ್ಸು ಪ್ರವೃತ್ತಿ ದೋಷ ಪ್ರೇತ್ಯಭಾವ ಫಲ ದುಃಖ ಅಪವರ್ಗವೆಂದು ಹನ್ನೆರಡು ವಿಧವಾಗಿ ಪ್ರಮೇಯವನ್ನು . . . ವಿಭಾಗ ಮಾಡಿರುವರು . . . ಸುಖದುಃಖಾನುಭವವು ಫಲ (ಹಿಂದಸಾ. ೦೦೫). ೧೮. ಹದಿನಾರು ಪದಾರ್ಥಗಳಲ್ಲಿ ಒಂದು : ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯವಾದ ಜಲ್ಪ ವಿತಂಡಾ ಹೇತ್ವಾಭಾಸ ಫಲ

ಜಾತಿ ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಂಪಣಾ. ೦೦೨). ೧೯. (ಆಲಂ) ಗರ್ಭ; ಬಸಿರು : ಫಲಮನ ವೇಕ್ಷಿಸದಿರ್ದೊಡೆ ಪಲಾಶತರುಬೀಜಚೂರ್ಣದೊಳ್ ಮಧುಘೃತಮಂ ಕಲಸಿ . . . ಭಗದೊಳಿಟ್ಟೊಡಾಗದು ಗರ್ಭಂ (ಕೋಳೂಕ. ೯-೦೬೯). 'ಫಲವತಿ' ಪರಾ. **ಫಳ** : ೧. ಫಳದೊಳ್ ದೇವೇಂದ್ರನುದ್ಯಾನದ ವಿವಿಧಫಲಂ ಪೂಗಳೊಳ್ ಕಲ್ಪವೃಕ್ಷಂಗಳ ಪೂಗಳ್ (೦೦೪. ೦೬-೨); ಫಳಮೊಂದುಂ ಕಟಿವಣ್ಗಾಗವಲರೆಂದುಂ ಬೀಯವು (೩೧೦. ೨-೦೬). ೧೬. ಬಲದ ಭಾಗ ಆದಿಯಾಗಿ ಯಿಚ್ಛೆಯೆಂಬುದೆ ಪ್ರಥಮರಾಶಿ ಫಳಮೆಂಬುದೆ ರಾಶಿ ಪ್ರಮಾಣಮೆಂಬುದೆ ಕಡೆಯ ರಾಶಿ (೪ಪಪಣಾ. ೦೦೦೦೦೦ I, ೦೦). ೨೦. ಕಪ್ಪುಹಲಗೆ : ಶಿಕ್ಷಕನು ಫಳದ ಮೇಲೆ ಸಣ್ಣ ಬಿಂದು ರೇಖೆ ತೋರಿಸುತ್ತಾನೆ (೩೩೪೦. ೨೨೮).

ಫಲ ನಿಲ್ಲು = ಬಸಿರಾಗು; ಗರ್ಭ ಕಟ್ಟು: (೬). **ಫಲವಾಗು** = ೧. ಹಣ್ಣು ಬಿಡು: ಬಾಳೆಗ ಫಲವಾಯಿತ್ತ ಕಡೆ...ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ (೦೪೮. ೬೬೪); ನಿಮ್ಮಿಷ್ಟಸಿದ್ಧಿಯ ಬೆಳಸು ಫಲವಾಯ್ತು (೪೩೧೦೬೦. ೬-೦೪). ೨. ಪ್ರಯೋಜನವಾಗು : ಅಳಲಿ ಮನೆಯಲಿ ಕಾಳುಗೆಡೆದಡೆ ಫಲವಹುದೆ (೪೩೧೦೬೦. ೮-೩೨). ೩. ಸಿದ್ಧಿಸು; ನೆರವೇರು; ಕೈಗೂಡು : ಕಂದನ ರಣಕೆ ನೂಕಿದಿರಿ ಬಗೆಯೊಲವು ಫಲವಾಯ್ತಲಾ (೪೩೧೦೬೦. ೬-೦೩). ೪. ಬೆಳೆಯಿಂದ ಕೂಡಿರು; ಫಸಲು ಸಹಿತವಾಗಿರು: ಫಲವಾದ ಮಾಣ್ಗೆಯಾಱುವಣಂ (೫೦೩೨. ೩೫-೩೬: ೧೧೭). ೫. (ಆಲಂ) ಗರ್ಭ ನಿಲ್ಲು; ಬಸಿರಾಗು : ಫಲವಾದೊಡಲಿಗೆ ತಮ್ಮೊಳ್ತಲೆಗಳನುಱಿ ತೂಗುತಿರ್ಪುವೆಂದೆನೆ ಮಂದಾನಿಲನಿಂ ತೂಗಾಡುತ್ತಂ ಸಲೆ ನಿಲೆ ಕಳವೆಗಳ ಗರ್ದೆಗಳ್ ಪಿರಿದೆಸೆಗುಂ (೬೪೦೦. ೨-೪೯). [ಸಂ.]

ಫಲ್ಯ (ನಾ). ಒಂದು ಬಗೆಯ ನಾಣ್ಯ : ಹೊನ್ನಿನ ನಾಲ್ಕನೇ ಒಂದು ಪಾಲಿನಷ್ಟು ಒಂದು ಚಿನ್ನದ ನಾಣ್ಯವಿರುತ್ತಿತ್ತು. ಅದಕ್ಕೆ ಹಣವೆಂತಲೂ ಫಲವೆಂತಲೂ ಅನ್ನುವರು (೪೩೧೧. ೨೬೦). [← ಮರಾ. ಫಲಮ್]

ಫಲಂಗುಡು. ಫಲಕೊಡು (ಕ್ರಿ). ೧. ಫಸಲು ಕೊಡು; ಬೆಳೆಯನ್ನು ನೀಡು : ಸಮಯದೊಳ್ ಬಿತ್ತಿ ಬೀಜವನಮಿತಫಲಂಗುಡುವ ಪೊಲನನುಳಿಯುವ ತೆರದಿಂ . . . ಧರ್ಮಪತ್ನಿಯನುಳಿದೆಂ (೩೩೪೦೦. ೯೪-೦೩೩). **ಫಲ ಕೊಡು** ೨. ೨. ಫಲ ನೀಡು ; ಹಣ್ಣು ಬಿಡು : ಒಂದೆರಡು ಮಾಲ್ಪಾಲಿಂಬಿಗಿಡಗಳನ್ನು ನೆಟ್ಟರೆ, ಅದು ಯಾವಾಗಲೂ ಫಲಕೊಡುತ್ತಿರುವುದು (೪೪೦೦. ೦೬೦). ೩. ಪ್ರಯೋಜನ ಕೊಡು; ಪರಿಣಾಮವುಂಟು ಮಾಡು: ಅದೃಷ್ಟವು ಫಲಕೊಡಬೇಕಾದರೆ ದೃಷ್ಟವಾಗಿ ಕರ್ಮ ಮಾಡಬೇಕು (೪೩೧೦. ೦೦). [ಫಲ$_1$ + ಕುಡು$_1$ (< ಕೊಡು$_1$)]

ಫಲಂದೋಱು. ಫಲದೋಱು (ಕ್ರಿ). ೧. ಹಣ್ಣು ಬಿಡು : ಮಾವೆಲ್ಲಿ ಫಲಂದೋಱುವುದೀ ಕಾಲದೊಳು (೪೪೦೦. ೨-೪೧). **ಫಲದೋಱು**: ೨. ಪರಿಣಾಮವನ್ನು ಬೀರು : ಮದನಮೋಹನಿಗಾಗ ಚಿಂತೆ ಮೊಳೆತು . . . ಕಾತುರ ಪರ್ಬ ವಿರಹಾಗ್ನಿ ಸಂತತ ಫಲದೋಱುದುದು (೪೦೨೦. ೯-೦೭). [ಫಲ$_1$ + ತೋಱು]

ಫಲಕ, ಫಳಕ (ನಾ). ೧. ಲೋಹ, ಮರ, ಗಾಜು ಮುಂತಾದುವುಗಳ ತೆಳುವಾದ ಹಾಳೆ : "ಹಲಗೆ ಫಲಕಮಕ್ಕುಂ" (೪೦೪೧೦. ೬೨-೨೧); ಒಂದು ಉಕ್ಕಿನ ಫಲಕದ (Plate) ಮೇಲೆ... ಒತ್ತಿದ ಇನ್ನೊಂದು ಫಲಕವಿದೆ (೪೦೧೦. ೨೦೪); ಪೆಟ್ಟಿಗೆಯಲ್ಲಿ . . . ಛಾಯಗಾಹಿ ಫಲಕವನ್ನಿಡಲಿಕ್ಕೆ ತಕ್ಕ ವ್ಯವಸ್ಥೆಯಿದೆ (೦೦೪೦. ೬). ೨. ಬರೆಯಲು ಅಥವಾ ಕಂಡರಿಸಲು ಸಿದ್ಧಪಡಿಸಿದ ಸಪಾಟಾದ ಮೇಲ್ಪಾಗ : ಅದರ ಸುತ್ತಲೂ ಇರುವ ಫಲಕಗಳಲ್ಲಿ ವಾರ್ದತಿ ... ಗಾಯಕರು ಮುಂತಾದವುಗಳು ಇವೆ (೪೪೦೦೦೦೦೦. ೦೦೦). . ೩. ಪುಟ; ಪಾನು : ಪತಿ ಪುತ್ರ ಪಿತನೆಂಬ ಮಿತ್ರ ಬಾಂಧವ ನೆಂಬ ಭವವಿತ್ತ ಫಲಕಗಳ ತಿರುವುತ್ತ ನಿಂತು (೪೪೦೦೦. ೩೯-೬). ೪. ಹರಿಗೆ; ಗುರಾಣಿ : "ಫಲಕಂ, ಫಲಂ, ಚರ್ಮನ್—೩ ಹಲಿಗೆ . . . ಹರಿಗೆ" (೪೦೩೧೦. ೨೬೩); ಖಡ್ಗ ಫಲಕ ಚಾಪಬಾಣಾಗಳಾಂತ ವಾಮದಕ್ಷಿಣಕರ ಚತುಷ್ಟಯದಿಂ . . . ಪೃಥಿವ್ಯಾದಿ ಸೂಕ್ಷ್ಮಭೂತವರ್ಗದಲ್ಲಿರ್ಪಂ (೦೦೪೦. ೨೧೨); ರಾವುತರ ಅಂಗರಕ್ಷಣೆಗೆ ಹಲವು ಪದರಗಳ ಚರ್ಮದ ಕವಚ; ವೀರಲ್ ಮೈಗೆ ಕಬ್ಬಿಣದ ಫಲಕಗಳು (೩೧೦೪. ೦೨೩). ೫. ಹಣ್ಣು : ನವಕಳಿ ಕಾಂಕುರಪ್ರಕರಮಂ . . . ನವಫಲಕಂಗಳಂ ಮಿಳಿರ್ವ ಕೊಂಬುಗಳಿಂಬ ಕರಂಗಳಿಂ ಮಧೂತ್ಸವದೊಳಿವೆಮ್ಮ ತಂದೊಡಮೆಯೆಂದಿದಿರೊಳ್ ಪಿಡಿದಂಗಜಂಗೆ ಲಕ್ಕವಣಿಗೆದೋಱುವಂತೆಸೆದು ತೋಱುದುವಂದಿನ ಬಂದ ಮಾವುಗಳ್ (೩೩೪೦. ೬-೨೯). **ಫಳಕ** : ೨. ಆ ಫಣಿಕಾಂತಗಮರಿಕಾಂತಾಳಿಕ ಫಳಕತಿಳಕಹರನೆನಿವರಿಗಂಗಂ ತನಯನಧಿಕತೇಜೋವಂತಂ (೬೦೪೩೦. ೯-೦೬). ೩. ಒಂದು ಫಳಕ ಇದ್ದಂತೆ ಇತಿಹಾಸ. ಒಂದು ರಮ್ಯಕಾವ್ಯವನ್ನೂ ಬರೆಯಬಹುದು, ಅಥವಾ ಕಿರಾಣಿಸಾಮಾನಿನ ಲೆಕ್ಕಪತ್ರವನ್ನೂ ಬರೆಯಬಹುದು. (೩೪೪೦. ೦೩೪). ೪. " ಖೇಟಕಂ, ಫಳಕಂ, ಚರ್ಮ, ಆವರಣಂ—ಈ ೪ ಹರಿಗೆ" (೪೪೦೪೦. ೭೭-೩೦೭); ಕೊಳ್ಳಿಲೆ ಮಗನೆ ಅಸಿ ಫಳಕವಿದೆ (೦೪೪೦.೮೮. ೦೦೭-೨೩). [ಸಂ.]

ಫಲಕಪಾಣಿ (ನಾ). ಗುರಾಣಿಯನ್ನು ಹಿಡಿದಿರುವವನು : "ಚರ್ಮಿನ್, ಫಲಕಪಾಣಿ—ಈ ೨ ಕಡಿತಲೆಗಾಱಿಂ" (೪೪೦೦. ೦೩೪). [ಸಂ. ಫಲಕಪಾಣಿನ್]

ಫಲಕಾರಿ (ನಾ.) ಪ್ರಯೋಜನವುಳ್ಳದು; ಫಲಪ್ರದವಾದುದು : ನಮ್ಮ ಅರ್ಜಿಯು ಫಲಕಾರಿಯಾಗದೆ ಇರಲಾರದು (೪೪೦೦. ೦೦೦). [ಸಂ. ಫಲಕಾರಿನ್]

ಫಲಕಾಳೆ (ನಾ.) ಒಂದು ಬಗೆಯ ಕಹಳೆ (?) : ಈಶಾನ ಈಶ್ವರ ಮುಡಿಯಾರ್ಗ್ಗಿ ಕೊಟ್ಟ ತಿವಳಿ ೧ ದಟ್ಟ ೩ ಖಣ್ಡಿಕೆ ೩ ಫಲಂ ೬ ಜಯಘಂಟೆ ೧ ಫಲಕಾಳೆ ೩ ಫಲ ೧೫ (೪೪೦೦. ೦೯೪೬, ೨೬-೦೩: 1032). [ಫಲ$_1$ + ಕಾಳೆ (< ಕಹಳೆ)]

ಫಲಕೊಡು 'ಫಲಂಗುಡು' ನೋ.

ಫಲಚಕ್ರ (ನಾ). [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು : ಚಂಚತ್ಪುಟ...ಫಲಚಕ್ರ . . . ಜಯಾಳವೆಂಬಿವು ಮೊದಲಾದ ನೂಱೆಂಟು ತಾಳಂಗಳುಂ (೪೪೦೦. ೨೩೬). [ಸಂ.]

ಫಲಜೀವಿ (ನಾ). ಹಣ್ಣು ಮೊದಲಾದುವನ್ನು ಒದಗಿಸುವ ಜೀವ; ಸಸ್ಯ : ಎಂತು ತಪಸಿಗಳಂತೆ ನಿಂತ ಫಲಜೀವಿಗಳ ಜಂತುವಲ್ಲೆಂದು ಜನ ತಿಂದು ಮತ್ತದನು ಸಂತೆಯೊಳಗಿಡುವ (೪೪೦೪. ೦೦೨೬). [ಸಂ.ಫಲಜೀವಿನ್]

ಫಲಜ್ಞಾನ (ನಾ). ತತ್ತ್ವದ ತಿಳಿವು; ಪರತತ್ತ್ವದ ಜ್ಞಾನ : ಜ್ಞಾನವೆಂಬ ಪ್ರಮಾಣಕ್ಕೂ ಆ ಪ್ರಮಾಣದಿಂದ ಬ್ರಹ್ಮವನ್ನು ಅರಿತುಕೊಳ್ಳುವುದೆಂಬ ಫಲಜ್ಞಾನಕ್ಕೂ ಇರುವ ತಾರತಮ್ಯವನ್ನು ಇಲ್ಲಿ ತಿಳಿಯಿಸಿದೆ (೨೨೬೦೦. ೦೪ ೦೩೩). [ಸಂ.]

ಫಲಜ್ಯೋತಿಷ (ನಾ). [ಜ್ಯೋತಿ]ಗಣಿತಜ್ಯೋತಿಷ, ಪ್ರಶ್ನಜ್ಯೋತಿಷ, ಫಲಜ್ಯೋತಿಷ ಎಂಬ ಜ್ಯೋತಿಷದ ಮೂರು ಅಂಗಗಳಲ್ಲಿ ಒಂದು: ಜಾತಕವನ್ನು ನೋಡಿ ಮುಂದಿನ ಆಗುಹೋಗು ಮೊದಲಾದ ಫಲವನ್ನು ಹೇಳುವ ಜ್ಯೋತಿಷದ ಭಾಗ : ಫಲಜ್ಯೋತಿಷ (astrology)ದಲ್ಲಿ ಬಹಳ ನಂಬಿಕೆ ಮತ್ತು ಜ್ಞಾನ, ತತ್ವಶಾಸ್ತ್ರದಲ್ಲೂ ಭೌತಶಾಸ್ತ್ರದಲ್ಲೂ ಬಹಳ ಆಸಕ್ತಿ (೧೪೪೦. ೧೯). [ಸಂ.]

ಫಲತ್ರಿಕ (ನಾ). ಅಳಲೆಕಾಯಿ, ತಾರೆಕಾಯಿ ಮತ್ತು ನೆಲ್ಲಿಕಾಯಿ; ತ್ರಿಫಲೆ : "ತ್ರಿಫಲಾ, ಫಲತ್ರಿಕಂ – ಅಳಲೇಕಾಯಿ, ತಾರೇಕಾಯಿ, ನೆಲ್ಲಿಕಾಯಿಗಳೆಂಬ ತ್ರಿಫಲಗಳಿಗೆ ಹೆಸರು" (೪೦೧೦೦. ೩೦೭). [ಸಂ.]

ಫಲದ (ಗು). ೧. ಫಲವನ್ನು ಕೊಡುವ. ೨. ಪ್ರಯೋಜನಕಾರಿಯಾದ; ಲಾಭದಾಯಕವಾದ. (ನಾ). ೩. ಫಲವನ್ನು ಕೊಡುವಂತಹುದು; ಫಲದಾಯಿಯಾದುದು : ನಿಲೆ ಪೆಱತಂಶದೊಳುದಯ ಶಶಾಂಕದಲ್ಲಿ ಬಲ್ಲಿತೆ ಫಲದಂ (ಶಾಕಶ. ೨೨-೦೦); ಉದಗ್ರಮನೋಜ್ಞಫಲದಂ . . . ನೀತಿಸುರಮಹೀರುಹಂ (ರಾಜಶೇ. ೦೩-೦೬). ೪. ಮರ; ವೃಕ್ಷ. [ಸಂ.]

ಫಲದಾನ, ಫಳದಾನ (ನಾ). ೧. ಹಣ್ಣುಗಳನ್ನು ನೀಡುವುದು,—ಒದಗಿಸುವುದು : ಕುಸುಮಫಲಪರಿಣತಫಲದಾನಂಗಳಪ್ಪ ವನಸ್ಪತಿ ವೃಕ್ಷೌಷಧಿಗುಲ್ಮಂಗಳಪ್ಪನೋಕಹಜಾತಿಗಳಿಂ (ಶಾಂತಿಪು. ೦೨-೦೪ ಪ). ೨. ದಾನವಾಗಿ ಅಥವಾ ಪ್ರಸಾದರೂಪವಾಗಿ ಹಣ್ಣು ಇಲ್ಲವೆ ತೆಂಗಿನ ಕಾಯಿ ಕೊಡುವುದು. **ಫಳದಾನ** : ೧. ಫಳದಾನಂಗಳನಿಷ್ಟತುಷ್ಟಿಯ ನನಾಥ ಪ್ರೀತಿಯಂ . . . ವಿನಯದಿಂ ಮಾಡುತ್ತಿರಲ್ ನಾಡೆ ಸಂಗಳಿಕುಂ ಕಾಮಿತಸಿದ್ಧಿ (ಕುಸುಮಾ. ೩-೬೬). [ಸಂ.]

ಫಲದಾಯಕ (ನಾ). ೧. ಫಲವನ್ನು ನೀಡುವಂತಹುದು : ಮಾಡುವನ್ನಕ್ಕ ಫಲದಾಯಕ (ಬಸವ. ೮೬೩). ೨. ಕರ್ಮಕ್ಕೆ ಸರಿಯಾದ ಫಲವನ್ನು ನೀಡುವವನು; ದೇವರು. [ಸಂ.]

ಫಲದಾಯಿ (ನಾ). ಪರಿಣಾಮಕಾರಿಯಾದುದು; ಸಫಲವಾದುದು : ಈ ಪೂರ್ವಸಿದ್ಧತೆ . . . ಪ್ರೇಕ್ಷಕರ ಕಡೆಯಿಂದ ಆದಾಗ ಮಾತ್ರ ಆ ಪ್ರದರ್ಶನ ಸಂಪೂರ್ಣ ಫಲದಾಯಿ (ರಾಮರಾ. ೮೦). [ಸಂ. ಫಲದಾಯಿನ್]

ಫಲದೋಱು 'ಫಲಂದೋಱು' ನೋ.

ಫಲಪೂಜೆ (ನಾ). ೧. ಶುಭಕಾರ್ಯಗಳಲ್ಲಿ ಭಾಗವಹಿಸಿದ ಎಲ್ಲ ಜನರಿಗೆ ಫಲದಾನ ಕೊಡುವುದಕ್ಕೆ ಮುಂಚಿತವಾಗಿ ಬಾಳೆಹಣ್ಣು, ತೆಂಗಿನಕಾಯಿ ಮುಂತಾದುವುಗಳಿಗೆ ಮಾಡುವ ಪೂಜೆ. ೨. ಹೊಸ ಬೆಳೆಯನ್ನು ಒಕ್ಕುವಾಗ (ಕಣದಲ್ಲಿ) ಮಾಡುವ ಧಾನ್ಯದ ಪೂಜೆ; ರಾಶಿಪೂಜೆ. ೩. ಹೊಸಹಣ್ಣುಗಳನ್ನು ಕಿತ್ತು ತಂದಾಗ ಅವುಗಳಿಗೆ ಮಾಡುವ ಪೂಜೆ : (ಕಿ). [ಸಂ. ಫಲಪೂಜಾ]

ಫಲಪೂರ (ನಾ). ಮಾದಳದ ಮರ ಮತ್ತು ಅದರ ಹಣ್ಣು : ಫಲಪೂರಂ ಜನ್ಮಸಾಫಲ್ಯಸಂಸ್ಥಿತಿಯಂ ಮಾಡಿದುದೆಂದು ನೋಡಿದಳಲಂಪಿಂ (ಪುಷ್ಪಪು. ೩-೦೦೩). [ಸಂ.]

ಫಲಪೂರಕ (ನಾ). = ಫಲಪೂರ : "ಫಲಪೂರಕಃ, ಬೀಜಪೂರಕಃ, ರುಚಕಃ, ಮಾತುಲುಂಗಕಃ— ೪ ಮಾದೀಗಿಡ, ಮಾದಾಳದ ಗಿಡ" (ಸಿದ್ಧಾಂತಿ. ೦೩೦). [ಸಂ.]

ಫಲಪ್ರದ (ನಾ). = ಫಲದಾಯಿ : ಹಾಕತಕ್ಕ ತೆರಿಗೆಯು ಚೆನ್ನಾಗಿ ಫಲಪ್ರದವಾಗಿ ಹಣವನ್ನು ಒದಗಿಸುವಂಥದುದಾಗಿರಬೇಕು (ಶಾರದ. ೩೫೯); ಅವನ ಪ್ರಯತ್ನ ಫಲಪ್ರದವಾಗಲಿಲ್ಲ (ದಕ್ಷಿಪಿ. ೩೮೬). [ಸಂ.]

ಫಲಪ್ರಾಪ್ತಿ (ನಾ). ಫಲವು ದೊರಕುವಿಕೆ : ಮಾಟಕೂಟ ಫಲಪ್ರಾಪ್ತಿ ಎಂಬ ಮಾತ ಕೇಳಲಾಗದು (ಬಸವ. ೫೦೯); ಸುಖದ ಫಲಪ್ರಾಪ್ತಿಯನಾಗಿಪ ಕಲ್ಪವೃಕ್ಷಮಲ್ಲದೆ ಧರ್ಮಂ (ಪುಷ್ಪಪು. ೦೩-೫೫). [ಸಂ.]

ಫಲಭರ, ಫಳಭರ (ನಾ). ೧. ಹಣ್ಣುಗಳ ಭಾರ : ಧರ್ಮಾಮೃತ ವರ್ಷದಿಂ . . . ಭವ್ಯಸಸ್ಯಂಗಳನನೇಕಬ್ರತಫಲಭರವಿನತಂಗಳ್ ಮಾಡಿ (ಅಧಿಪು. ೦೬-೪೦ ಪ); ಫಲಭರದಿಂದೆಱಗುವ ಚೂತಲತಿಕೆಯಂತಿರೆ . . . ಆ ಲಲನೆ ಭೂಪತಿಗೆ ಪೊಡಮಟ್ಟಳ್ (ಕುಸುಮಾ. ೫-೪೬). ೨. ಹಣ್ಣುಗಳ ಭಾರವನ್ನು ಹೊಂದಿದುದು ; ವಿಪುಲವಾದ ಫಲವುಳ್ಳುದು : ಧರಣಿ ಬಿತ್ತದೆ ಬೆಳೆಯಬೇಹುದು ತರುಸಸಿಗಳನವರತ ಫಲಭಾರವಾಗಬೇಕು (ಕೌಶಿರಾ. ೪೪-೫೫). **ಫಳಭರ** : ೧. ಸೆಳೆಗೊಂಬಲ್ಲಾಡುವವೊಲ್ ಫಳಭರದಿಂ . . . ಸೆಳೆದಲ್ಲಾಡಿಯುಮಾಕೆಯ ಸೆಳೆನಡು ನೋಡಿದರ ಮನಮನಲ್ಲಾಡಿಸುಗುಂ (ಮಲ್ಲಿಪು. ೩-೬೫); ಫಳಭರನಮ್ರಕಮ್ರಲತೆಯಂ ಲತೆ ತೆಂಬೆಲರಿಂದ ಮಪ್ಪಿದಂತೆಳಸಿದ ಸೋದರಪ್ರಣಯದಿಂ ಲಲಿತಾಂಗಿಯರಪ್ಪಿ (ಅನಂಪು. ೨-೪೯). [ಸಂ.]

ಫಲಭರಿತ (ಗು). ೧. ಹಣ್ಣುಗಳಿಂದ ತುಂಬಿದ. (ನಾ). ೨. ಫಸಲಿನಿಂದ ತುಂಬಿದುದು : ಫಲಭರಿತಂಗಳನೀ ಕೆಯ್ವೊಲಂಗಳಂ ಕಾವರಿಲ್ಲ (ಶಂಕಾಮಾ. ೭-೩೨). [ಸಂ.]

ಫಲಭಾಗ (ನಾ). [ಜ್ಯೋತಿ] ಫಲಜ್ಯೋತಿಷದ ವಿಭಾಗ : ಬೇಬಿಲೋನಿಯನರು ಜ್ಯೋತಿಷ್ಯದ ಫಲಭಾಗವನ್ನು ಬೆಳೆಸಿದರು (ಶಿಲ್ಪಿ ಪಾ ೬೪). [ಸಂ.]

ಫಲಭಾಗಿ (ನಾ). ಫಲವನ್ನು ಪಡೆಯುವವನು,—ಅನುಭವಿಸುವವನು: ಸುರೇಜ್ಯನಿರೆ . . . ಕುಂಭದೊಳ್ ಕೂಡೆ ತತ್ಸಮಾನಫಲಭಾಗಿ (ಶಾಕಶ. ೦೭-೨೬); ಪ್ರಜೆಗಳು ಮಾಡುವ ಎಲ್ಲಾ ಒಳ್ಳೆಯ ಮತ್ತು ಕೆಟ್ಟ ಕೆಲಸಗಳಿಗೂ ರಾಜರು ಫಲಭಾಗಿಗಳಾಗಿರುತ್ತಾರೆ (ಪಸಭಾ. ೩೬೬). [ಸಂ. ಫಲಭಾಗಿನ್]

ಫಲಭಾರ, ಫಳಭಾರ (ನಾ). = ಫಲಭರ ೧: ಫಲಭಾರಾಕ್ರಾಂತ ಸಾರ್ವರ್ತುಕನಿಕಟವನಂ . . . ಕಣ್ಗಂ ಮನಕ್ಕಂ ಪಡೆದುದು ಪದೆವಂ (ಶಂಕಾಮಾ. ೭-೩೦); ಫಲಭಾರಾನತಭೂರುಹಾವಳಿಗಳಿಂ ನೀರೇಜಷಂಡಂಗಳಿಂ ಬೆಳೆಗೆಯ್ಯಿಂದೆಸೆಗುಂ ಕಳಿಂಗವಿಷಯಂ (ಪೇಮಿಪು. ೩-೬೯). **ಫಳಭಾರ** : ಫಳಭಾರಾನಮ್ರಕಮ್ರಾವನಿಜಮಂ . . . ಅನುಪಮಾನಂದದಿಂದೆಯ್ದಿದರ್ . . . ಪಾಂಡವರ್ಕಳ್ (ಪೇಮಿಪು. ೯-೦೦೯); ಫಳಭಾರಾನತಮಾಯ್ತು ಮಾವು (ಶಾಂತೀಶ್ವ. ೦೫-೦೦೦). [ಸಂ.]

ಫಲಭೋಗ (ನಾ). ಪರಿಣಾಮವನ್ನು ಅನುಭವಿಸುವಿಕೆ : ಏವೆನೇವೆನೆಂದೊಡೆ ಮಾಣದು ಕಾಯದ ಕರ್ಮದ ಫಲಭೋಗವು (ಬಸವ. ೦೯); ನೀನು ನನಗೆ ಒಂದು ಕರ್ಮವನ್ನು ಮಾಡಲು ಹೇಳುವೆ ಮತ್ತು ಅದರ ಫಲಭೋಗವನ್ನು ಮಾತ್ರ ತಪ್ಪಿಸಿಕೊಳ್ಳುವೆ (ಪರಪ. ೦೩೯). [ಸಂ.]

ಫಲಮಂಜರಿ, ಫಳಮಂಜರಿ (ನಾ). ೧. ಹಣ್ಣುಗಳ ಗೊಂಚಲು. ೨. [ಸಂಗೀತ] ಒಂದು ರಾಗದ ಹೆಸರು : ಮಧು ಮಾಧವಿ . . . ಫಲ[ಪಾಠಾಂ.ಪಳ]ಮಂಜರಿ ಶಯಸೋದರಿಯೆಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂ ಪುಟ್ಟಿದವು (ವಿವೇಶ. ೨೩೪); ಲಲಿತ ಸಾಳಂಗ ಸಾವೇರಿ ಗುಜ್ಜರಿ ಗೌಳ ಫಲ [ಪಾಠಾಂ. ಪಳ] ಮಂಜರಿಗಳೆಂಬ ರಾಗಂಗಳಿಂ ಬಳಸಿ ಪಾಡಿಸಿದಂ . . . ಕುಶಲವರನು (ಸ್ವೈಮಿಭಾ. ೨೦-೫೬). **ಫಳಮಂಜರಿ**: ೧. ಅದು ಮುಕ್ತಿಪುರಕೆ ಗೋಪುರಮದು ನಾಕಾನೋಕಹಕ್ಕೆ ಫಳಮಂಜರಿ (ಸಂಧ್ರಪು. ೦೦-೨೯). [ಸಂ. ಫಲಮಂಜರೀ]

ಫಲಮರಿ (ನಾ). (ಬಲಿ ಕೊಡುವುದಕ್ಕೆ ತಂದ) ಗಬ್ಬದ ಕುರಿ : ಪಕ್ಕದಲ್ಲೇ ಹಿಡಿದುಕೊಂಡಿರುವ ಫಲಮರಿಗಳನ್ನು ಒಂದೊಂದಾಗಿ ಅವನ ಕೈಗೆ ಕೊಡುತ್ತಾರೆ (ಪಸ್ಕೂರು. ೬೪). [ಫಲ$_1$+ಮರಿ$_2$ (<ಮಱಿ)]

ಫಲವಂತ (ನಾ). ೧. ಫಲವತ್ತಾದುದು ; ಫಲಕೊಡುವಂತಹುದು. ೨. [ಜೈನ]ಕರ್ಮಗಳನ್ನು ನಾಶಪಡಿಸುವ ಎಂಟುಧರ್ಮಗಳಲ್ಲಿ ಒಂದು : ಫಲ[ಪಾಠಾಂ.ಳ]ವಂತಮೆಂಬುದು ಜಾತಿಜರಾರೋಗ ಮರಣವಿಚ್ಛೇದದಿಂದಂ ಶಿವಮಜರಮಕ್ಷಯಮವ್ಯಾಬಾಧಮಪ್ಪ ಪರಮ ನಿರ್ವಾಣಮಂ ಪುಟ್ಟಿಸುವ ಧರ್ಮಂ (ಶಾಪುಂಪು. ೬). [ಸಂ. ಫಲವತ್]

ಫಲವತಿ, ಫಳವತಿ (ನಾ). ೧. ಬಸುರಿ; ಗರ್ಭಿಣಿ : ಪಲಕಾಲಂ ಪುಷ್ಪವತಿಯೆನಾದಪೆನೆಂದುಂ ಫಲವತಿಯಾದಪೆನಿಲ್ಲೆಂದು ಲತಾಲಲಿತಾಂಗಿ ಬಾಡಿ ಪಾಡಟಿದೆಂಗುಂ (ಸುಕುಮಾ. ೯-೯೮); ನೀ ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರುರಾಯಭವನದಲಿ (ಕುಪ್ಯಾಸ. ೦೪-೬೫). **ಫಳವತಿ**: ೨. ಹಣ್ಣುಗಳನ್ನು ಬಿಡುವ ಮರ ಅಥವಾ ಬಳ್ಳಿ : ಫಳವತಿಯಪ್ಪ ಕಲ್ಪಲತೆ ಪುಷ್ಪವಿಲಾಸಮನಪ್ಪುಕೆಯ್ವವೊಲ್ (ಮಲ್ಲಿಪು. ೪-೫೨). [ಸಂ. ಫಲವತೀ]

ಫಲವತ್ತು (ನಾ). ೧. ಸಾರವತ್ತಾದುದು; ಒಳ್ಳೆಯ ಫಸಲು ಕೊಡಂ ವಂತಹುದು; ಫಲಪ್ರದವಾದುದು : ಫಲವತ್ತಿಲ್ಲದ ರಾಜ್ಯದಲ್ಲಿ ಪ್ರಭು ದಂಡಕ್ಕಾಸೆಗೆಯ್ವಲ್ಲಿ ಬಲ್ಲರ್ ನಿಲೆ ಸಲ್ಲದೈ (ಸೋಮೇಶ. ೧೫); ನೆಲವೋ ಫಲವತ್ತಾದ ಕಪ್ಪುಭೂಮಿ (ಕಳಹು. ೯೨); ತರಕಾರಿಗಳನ್ನು ಬೆಳೆಯಲು ಫಲವತ್ತಾದ ಜಿಗುಟುಮಣ್ಣು ಒಳ್ಳೆಯದು (ಅಡುಸೌ. ೦೨೬). ೨. ಹಣ್ಣುಗಳಿಂದ ತುಂಬಿದುದು; ಫಲಪೂರ್ಣವಾದುದು. [ಸಂ. ಫಲವತ್]

ಫಲವಳಿಗೆ, ಫಳವಳಿಗೆ (ನಾ). ಮಂಟಪಕ್ಕೆ ಕಟ್ಟುವ ಎಲೆ, ವಸ್ತ್ರ, ಹಣ್ಣು, ಆಹಾರಪದಾರ್ಥ ಮೊದಲಾದುವು : ಮತ್ತೆ ಮುಖಮಂಟಪಕೆ ಕಟ್ಟಿ ಫಲವಳಿಗೆಯಂ ಸುತ್ತಲೊಪ್ಪಿತು ಶಾಲೆ (ತುರಂಗ. ೨೦-೯). **ಫಳವಳಿಗೆ:** ಫ[ಪಾಠಾಂ.ಪ]ಳವಳಿಗೆ ಮೇಲ್ಕಟ್ಟು ಹೊಳೆವ ಭಸಿತಂಗಳೊಳು ... ವಿಭವದಿಂ ಶ್ರೀಗುರು ಪ್ರಭು ಬಂದ ಪುಣ್ಯದಿಂ (ದೀಕ್ಷಾಪೋ. ೫೫-೦೦೩೬); ನವಗ್ರಹಹೋಮಕ್ಕೆ ಸಲೆಗೆವೊಂದು ಫಳವಳಿಗೆಯ ಚಕ್ಕುಲಿಗೆ ಕೊಳಗ ಹನ್ನೊಂದು (ಎಕ. III, ತಿರುಮ. ೯೬-೫೩; 1276); ಮಂಟಪದೊಳು ಸಿಂಹ ಪೀಠಮನಿಕ್ಕಿ . . . ಉತ್ತಮದ ಸಪುರಂಗಳಾ ವಿಸ್ತರದಿನಳವಡಿಸಿ ಫಳವಳಿಗೆಯಂ ಕಟ್ಟಿ (ಅಂಗಪು. ೦೫-೯೮). 'ಪಳವಳಿಗೆ' ಪರಾ. [ಫಲ$_1$+?]

ಫಲಶೋಭನ (ನಾ). ನಿಷೇಕ; ಪ್ರಸ್ತ : ತಿಂಗಳೊಪ್ಪತ್ತಿನಲ್ಲಿ ಫಲಶೋಭನ ಕಾರ್ಯವನ್ನು ಮುಗಿಸಿಬಿಡಬೇಕೆನ್ನುತ್ತೇನೆ (ಸಮಜೀ. ೯೬೩). [ಸಂ.]

ಫಲಶ್ರುತಿ (ನಾ). ೧. (ಪುರಾಣ ಮೊದಲಾದುವುಗಳ ಕೊನೆಯಲ್ಲಿ ಸತ್ಕಥಾಶ್ರವಣದ) ಫಲವನ್ನು ಹೇಳುವುದು : ಆರನೆಯ ಕಾಂಡದ ಕೊನೆಯಲ್ಲೆ . . . ಫಲಶ್ರುತಿಯೂ ಬಂದಿರುವುದರಿಂದ ಅಲ್ಲಿಗೇ ಕಾವ್ಯವು ಮುಗಿದಿರಬೇಕು (ಭಾರದ. ೮೯) ; ಅಧ್ಯಾತ್ಮಿಕ ಫಲಶ್ರುತಿಯನ್ನು ಕವಿ ಮತ್ತೆ ಮತ್ತೆ ಹೇಳಿದ್ದಾನೆ (ಪಂಶೀ. ೦೩೩). ೨. ಪರಿಣಾಮ ; ಲಾಭ ; ಪ್ರಯೋಜನ : ಫಲಶ್ರುತಿ—ಇದು ಪೆಂಪಿಂ ನಡೆನೋಡುತಿರ್ಪ ಸುಜನರ್ಗಿಷ್ಟಾರ್ಥಸಂಸಿದ್ಧಿಯಂ . . . ಮಾಳ್ಕುಂ (ಲಾಸ್ಕರಂ. ೦-೨೨) ; ಅದರ ಫಲಶ್ರುತಿಯೇ—ಅವರ ಈ ಹೊಸನೋಟಕ್ಕೆ ಕಾರಣವಾಯಿತು (ಒಂಟಿದ. ೨೬೯). [ಸಂ.]

ಫಲಸಂಬಂಧ (ನಾ). ಯಾಗಾದಿ ಕರ್ಮಗಳಿಗೂ ಅವುಗಳನ್ನು ಆಚರಿಸುವ ವ್ಯಕ್ತಿಗೂ ಇರತಕ್ಕ ಮೂರು ಬಗೆಯ ಸಂಬಂಧಗಳಲ್ಲಿ ಒಂದು : ಕರ್ಮಗಳಿಂದ ಉಂಟಾಗುವ ಪ್ರಯೋಜನದಲ್ಲಿ ಅಪೇಕ್ಷೆಯುಳ್ಳವನಾದರೆ ಅಧಿಕಾರಿಯೆನ್ನಲ್ಪಡುವನು. ಇದೇ ಫಲಸಂಬಂಧ (ಹಿಂದಸಾ. ೨೫೬). [ಸಂ.]

ಫಲಸಾರಸನ (ನಾ). ಹಣ್ಣುಗಳ ಸಾಲ್ಕು—ಮಾಲೆ : ಫಲಸಾರಸನವ ವಂತೆತ್ತಲುಮೊದವಿರೆ ಕುಳಿರ್ವ ಪುಟಿಲೊಳೆರ್ದೆಗೊಳ್ವಿನೆಗಂ ಕಲರುತಿಯಂ ಪಾಡಿದುದುತ್ಪಲಸಾರಸನಂ ಪುಳಿಂದಲಲನಾನಿಕರಂ (ಕಾವ್ಯಾವ. ೫೨೬). [ಸಂ.]

ಫಲಸಿದ್ಧಿ (ನಾ). ೧. ಇಷ್ಟಾರ್ಥವು ನೆರವೇರುವಿಕೆ; ಇಷ್ಟವಾದ ಫಲ ಪ್ರಾಪ್ತಿ : ಒದವಿದ ಸಾಮಗ್ರಿಯೊಳೇಕದೇಶವೈಕಲ್ಯಮಾಗೆಯುಂ ಮತ್ತಂ ತ್ರತ್ಸದೃಶಫಲಸಿದ್ಧಿಯಂ ತೋರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ (ಕಾವ್ಯಾವ. ೭೫೦) ; ಅಂಗಿ-ಚೊಣ್ಣ-ಟೊಪ್ಪಿಗೆಗಳು ಅಲ್ಲೇ ಬಿದ್ದು ತಾಯಿಯ ಆಜ್ಞೆಯ ಫಲಸಿದ್ಧಿಯನ್ನು ಹೇಳುವಂತೆ ಅಣಕಿಸುತ್ತಿದ್ದವು (ಜಯಂತ. ೯). ೨ ಉತ್ತಮವಾದ ಪರಿಣಾಮ. [ಸಂ.]

ಫಲಹಾರ 'ಫಲಾರ' ನೋ.

ಫಲಾಖ್ಯಾನ (ನಾ). [ಜೈನ] ಶಲಾಕಾಪುರಷನಿಗೆ ಮುಂದೆ ಬರಲಿರುವ ಸುಖವನ್ನು ತಿಳಿಸುವುದು: ಫಲಾಖ್ಯಾನಮೆಂಬುದು ಆ ತ್ರಿಷಷ್ಟಿಶಲಾಕಾಪುರುಷರ ಪುಣ್ಯಕರ್ಮಪರಿಪಾಕದೊಳ್ಪುಟ್ಟಿದಭ್ಯುದಯಸುಖಮನಕ್ಕೆ ಕರ್ಮಕ್ಷಯದೊಳ್ಪುಟ್ಟಿದ ನಿಶ್ಶ್ರೇಯಸದ ಸುಖಮನಕ್ಕೆ ಪೇಳ್ವುದು (ಶಾಪುಂಪು. ೦೩) [ಸಂ.]

ಫಲಾಗಮ (ನಾ). [ಕಾವ್ಯಮೀ] ನಾಯಕನ ಕಾರ್ಯದೃಷ್ಟಿಯಿಂದ ನಾಟಕದ ವಸ್ತುವಿನಲ್ಲಿರುವ ಐದು ಅವಸ್ಥೆಗಳಲ್ಲಿ ಕೊನೆಯದು ; ಇಷ್ಟಾರ್ಥ ನೆರವೇರುವುದು : ಫಲಾಗಮ—ಕಾರ್ಯ ಕೈಗೂಡುವಿಕೆ (ಸಂಪಾಟ. ೧೬). [ಸಂ.]

ಫಲಾತನ್ (ನಾ). ಗಟ್ಟಿಗ; ಮಹಾಪರಾಕ್ರಮಿ; ಶೂರ: ಇನ್ನೊಂದು ಹತ್ತುದಿನ ಕಳೆದಿದ್ದರೆ. . . . ನಾನಲ್ಲ, ಫಲಾತನ್ ಬಂದಿದ್ದರೂ ಏನೂ ಮಾಡಕ್ಕಾಗ್ತಾ ಇರ್ನಿಲ್ಲ (ಸರ್ವಮಂ. ೩೫೨). [?]

ಫಲಾದನ (ನಾ). ೧. ಹಣ್ಣು ತಿನ್ನುವುದು. ೨. ಹಣ್ಣು ಮಾತ್ರ ಆಹಾರವಾಗಿರುವುದು ; ಫಲಾಹಾರ : ತ್ರಿದಿನಕ್ಕೊರ್ಮೆ ಫಲಾದನಂ ನೆಗಳ್ದುದಾತಂಗೊಂದು ತಿಂಗಳ್ (ಶಬಶಂ. ೨-೯೯). ೩. ಗಿಳಿ ; ಶುಕ. [ಸಂ.]

ಫಲಾಧ್ಯಕ್ಷ (ನಾ). ಒಂದು ಬಗೆಯ ಗಿಡ ; ಹಾಲೆ : "ರಾಜಾವನಂ, ಫಲಾಧ್ಯಕ್ಷಂ, ಕ್ಷೀರಿಕಾ—೩ ಹಾಲೇಗಿಡ, ಹಾಲುಬಳ್ಳಿ ಹೆಸರು" (ಸಿದ್ಧಾಂತಿ. ೦೨೨). [ಸಂ.]

ಫಲಾನ, ಪಲಾನಾ, ಪಲಾನೆ, ಫಲಾನಾ, ಫಲಾನೆ (ಗು). ಈ ಬಗೆಯ; ಇಂತಹ : ಫಲಾನ ಕುಲದ ಹೆಣ್ಣು ಫಲಾನ ಕುಲದ ಗಂಡಿಗೆ ಕೊಟ್ಟಿದೆ (ಎಸಮ್ಮ. XXVII, ೫). **ಪಲಾನಾ** : ಪಲಾನಾ ಊರಿನಲ್ಲಿ ಪಲಾನಾ ಬ್ರಾಹ್ಮಣನಿದ್ದಾನೆ . . . ಆತನನ್ನು ಕರೆಸಿದರೆ ನಾನು ಬಿಟ್ಟು ಹೋಗುವೆ (ಕಥಾಮಂ. IV, ೯೬-೭೬). **ಪಲಾನೆ** : ಪಲಾನೆ ಮನುಷ್ಯ ಕೆಟ್ಟ ನಡತೆಯವನೆಂದು ಗುಮಾನೆಗೆ ಕಾರಣವಿದೆ (ಪಡೆದಾ. II, ೬೫೬). **ಫಲಾನಾ** : ಪ್ರತಿವಾದಿಯನ್ನು ಫಲಾನಾ ದಿವಸದಲ್ಲಿ . . . ಪ್ರತ್ಯುತ್ತರ ಕೊಡಬೇಕೆಂದು ತಿಳಿಸತಕ್ಕದ್ದು (ಗ್ರಾಮಾಕ. ೨೫). **ಫಲಾನೆ** : (ಕಿ).

[←ಪಾರ. ಅರ. ಹಿಂ. ಫಲಾನಾ; ಮರಾ. ಫಲಾಣಾ]

ಫಲಾನಾ 'ಫಲಾನ' ನೋ.

ಫಲಾನುಮೇಯ (ಗು). ೧. ಪರಿಣಾಮದ ಮೂಲಕ ಊಹಿಸಬಹುದಾದ. (ನಾ). ೨. ಪರಿಣಾಮದ ಮೂಲಕ ಊಹಿಸಬಹುದಾದುದು. [ಸಂ.]

ಫಲಾನೆ 'ಫಲಾನ' ನೋ.

ಫಲಾಭಿಸಂಧಿ (ನಾ). ಫಲ ದೊರೆಯಬೇಕೆಂಬ ಉದ್ದೇಶ; ಫಲಾಪೇಕ್ಷೆ: ಚಿತ್ತಶುದ್ಧಿಯು . . . ಮಾಡಿದ ಕರ್ಮಗಳನ್ನು ಫಲಾಭಿಸಂಧಿ ಇಲ್ಲದೆ ಈಶ್ವರನಲ್ಲಿ ಸಮರ್ಪಿಸುವುದರಿಂದಲೂ ಸಂಭವಿಸುವುದು (ಭಾತತ್ತ್ವ. ೩೩೬). [ಸಂ.]

ಫಲಾರ, ಪರಾಳ, ಪಲಹಾರ, ಪಲಾರ, ಪಳಾರ, ಫರಾಳ, ಫಲಹಾರ, ಫಳಾರ (ನಾ). ೧. ಕೇವಲ ಹಣ್ಣುಗಳನ್ನು ಆಹಾರವಾಗಿ ತೆಗೆದಂ ಕೊಳ್ಳುವಿಕೆ ; ಫಲಮಾತ್ರ ಸೇವನೆ : ಪ್ರವೃತ್ತಿಮಾರ್ಗದ ಶೈವ ಭಿನ್ನಯೋಗಿಯ ವಿಶುದ್ಧಿಚಕ್ರ ಪರಮಾನ್ನ ಪಂಚಕಜ್ಜಾಯ ಫಲಾರಂಗಳಿಗೆ ಮುಖವಾಗಿ ಅರಳಿರ್ಪುದು (ವಚಶಾ. II, ೦೭೬); ತೋರಬಾರದ ಹಣ್ಣಂತೆ ಕಾಣೆ ಫಲಾರಕ್ಕೆ ಆಗಬೇಕಂತೆ ಕಾಣೆ (ನಾಪದ. ೨೦೯). ೨. ಅಲ್ಪೋಪಹಾರ ; ತಿಂಡಿ ; ತಿನಿಸು : ಅವನ ಫಲಾರವೆಂದರೆ ಲೋಟಾ ನೀರು (ಪಾಡ್ಡುಡಿ. ೦೯). **ಪರಾಳ** : ೨. ಅವುಗಳ ಪರಿವಾರವಾದ ಚಹಾ ಪರಾಳದಂಗಡಿಗಳೂ ಬೀಡಿ ದುಕಾನುಗಳೂ . . . ಸೌಖ್ಯ ಸೌಕರ್ಯಗಳನ್ನು ಒದಗಿಸುತ್ತಿವೆ (ಕನಕ. ೦೨). **ಪಲಹಾರ** : ೨. ಪರಲೋಕವೆಂಬುದು ಪಲಹಾರದ ಗುಡ್ಡೆಯೆ ? (ಗಾದೆ) ; ಊಟ ಹಾಗ, ಪಲಹಾರ ಮುಪ್ಪಾಗ (ಗಾದೆ). **ಪಲಾರ** : ೨. ರಜ್ಜಸ್ವಾಮಿಯವರ ಪಾದಕೆ ರಜ್ಜಾಪುರದ ಪರದೇಸಿ ಪಲಾರದ ನಿಗ್ರಿಯೆತ್ತಿ ಭಿಕ್ಷಾವೃತ್ತಿಯಲ್ಲಿ ಮಾಡಿ ಸಮರ್ಪಿಸಿದವ ದೀಪಮಾಲೇ ಕಂಭ (ಎಕ. XII, ತಿಪಟೂ. ೭೯-೫, 1748). **ಪಳಾರ** : ೨. ಟೇಶನ್ನಾಗ

ಪಳಾರ ತಿನಿಸಿ ಚಾ ಕುಡಿಸಿದ್ರೆ ಆತು (ಎಳೆಳ. ೦೬). **ಫರಾಳ** : ೨. ಬ್ರೆಡ್ಡು, ಬಾಳೆಹಣ್ಣು, ಪುರೀ ಭಾಜಿ ಏನೇನೋ ಗುಡ್ಡ ಎತ್ತರ ಫರಾಳ ಕಟ್ಟಿಸಿ . . . ಶೇಷಣ್ಣ ಬಂದ (ವೃಪಿ. ೩) ; ಅನೇಕ ಬಗೆಯ ಫರಾಳದ ವಸ್ತು ಗಳಿದ್ದರೂ ಅದನ್ನೆಲ್ಲ ಬದಿಗೆ ಸರಿಸಿದರು (ಸ್ಮೃತಿಶಿ. ೨೫) ; ಅಲ್ಲಿಂದ ಚಹಾ ಫರಾಳದ ಗಡಿಬಿಡಿಗೆ ಮೊದಲಾಯ್ತು (ಅನ್ನ. ೨೬). **ಫಲಹಾರ** : ೨. ಮುದ್ರಾಧಾರಣೆಯ ಕೆಲಸವು ತೀರಿದ ತರುವಾಯ ಶ್ರೀಪಾದಂಗಳ ಫಲಹಾರವು ಮುಗಿಯಿತು (ವಾಗ್ಮೇಪಿ. ೫). **ಫಳಾರ** : ೨. ಸುಮಾರು ಎರಡು ತಂಬಿಗೆಯಷ್ಟು ಬಿಸಿನೀರು . . . ಒಂದೂವರೆ ರಾಗಿರೊಟ್ಟಿ – ಇವಿಷ್ಟು ಅವರ ಬೆಳಗಿನ ಹೊಟ್ಟೆ ಗಟ್ಟಿ ಮಾಡುವ ಫಳಾರಗಳು (ಪರಾವ ೨೯) ; ನಾವು. . . ಏಕಾದಶಿ ದಿನ ಯಾರೂ ಕಾಣದಂತೆ ರಾತ್ರಿ ಫಳಾರ ಮಾಡುತ್ತಿದ್ದಿಲ್ಲವೆ ? ಬ್ರಹ್ಮನು ನಾಲ್ಕು ಬಾಯಿಗಳಿಂದಲೂ ಫಳಾರ ಮಾಡುತ್ತಿದ್ದ ! (ಕೃಣಾಕ. ೬೯). [< ಫಲಾಹಾರ]

ಫಲಾವಾಪ್ತಿ (ನಾ). ೧. ಇಷ್ಟಾರ್ಥವನ್ನು ಪಡೆಯುವಿಕೆ ; ಫಲ ಪ್ರಾಪ್ತಿ. ೨. ಸಂತಾನಪ್ರಾಪ್ತಿ, —ಲಾಭ : ದೇವಿಯರೊಂದಭಿಲಷಿತ ಫಲಾವಾಪ್ತಿಗೆ ದೇವ ನಿಮ್ಮ ದಯೆಗೆಯ್ದ ಫಳಂ ಕೇವಲ ಶುಭಸೂಚಕಂ (ಮಲ್ಲಿಪು. ೯-೩೫). [ಸಂ.]

ಫಲಾಸಿ 'ಪಲಾಸಿ' ನೋ.

ಫಲಾಹಾರ (ನಾ). ೧. ಹಣ್ಣುಗಳನ್ನು ಮಾತ್ರ ಆಹಾರವಾಗಿ ತೆಗೆದು ಕೊಳ್ಳುವುದು, —ಸೇವಿಸುವುದು : ಆ ವರುಷದಲ್ಲಿಯ ಜನರು ಮೂಱು ತಾಳದುದ್ದವರಾಗಿಕಲ್ಪವೃಕ್ಷಫಲಾಹಾರದಿಂದಿಪ್ಪತ್ತುಸಾವಿರವರ್ಷದಾಯುಷ್ಯ ವಂತರೆನಿಸಿ . . . ಸದಾನಂದಿಗಳಾಗಿರ್ಕುಂ (ಏವೇಕ. ೨೦೪); ಫಲಾಹಾರವನು ಮಾಡೊ ಪರಮಪುರುಷ ಭೂಬಲನೆ ಲಕ್ಷ್ಮೀಕಂದರ್ಪರ ಸಹಿತ (ಪುರಂದ. ರಾ. ೦-೦೩೦ ಪಲ್ಲವಿ). ೨. (ಉಪವಾಸ ಮಾಡುವವರು ತೆಗೆದು ಕೊಳ್ಳುವಃ ಅಲ್ಪಪ್ರಮಾಣದ ತಿಂಡಿ, — ತಿನಿಸು ; ಅಲ್ಪೋಪ ಹಾರ : ಫಲಾಹಾರಕ್ಕೆ ಉಪ್ಪಿಟ್ಟು ಮಾಡುತ್ತೇನೆ (ಮಹಾಗ. ೬) ; ರಾತ್ರೆ ಫಲಾಹಾರಕ್ಕೆ ಕಡಬು ಕಾಯಿಹಾಲು ಮಾಡಿತ್ತು (ವಾಗ್ಮೇಪಿ. ೨೦). [ಸಂ.]

ಫಲಾಹಾರಮಂದಿರ (ನಾ). ದುಡ್ಡು ತೆಗೆದುಕೊಂಡು ತಿಂಡಿ, ತೀರ್ಥ ಗಳನ್ನು ಒದಗಿಸುವ ಸ್ಥಳ ; ಹೋಟೆಲು : ಆ ಫಾಸಲೆಗೇ ಅದೊಂದು ಒಳ್ಳೆಯ ಫಲಾಹಾರಮಂದಿರವಾಗಿದೆ (ರೂಢಿ). [ಸಂ.]

ಫಲಿ$_1$ (ಗು). ೧. ಹಣ್ಣು ಬಿಟ್ಟಿರುವ. (ನಾ). ೨. ಹಣ್ಣು ಬಿಟ್ಟಿರುವ ಮರ : "ಫಲವಾನ್, ಫಲಿನಃ ಫಲೀ – ೩ ತತ್ಕಾಲದಲ್ಲಿ ಹಣ್ಣು ಬಿಟ್ಟಿರುವ ಮರದ ಹೆಸರುಗಳು" (ಸಿದ್ಧಾಂತಿ. ೦೦೦). [ಸಂ. ಫಲಿನ್]

ಫಲಿ$_2$ (ನಾ). ಒಂದು ಬಗೆಯ ಬಳ್ಳಿ ; ಪ್ರಿಯಂಗು : "ಶ್ಯಾಮಾ . . . ಫಲಿನೀ, ಫಲೀ . . . ಪ್ರಿಯಕಃ – ೧೨ ಪ್ರೇಂಕಣಗಿಡದ ಹೆಸರು, ಪ್ರಿಯಂಗು ಪ್ರಸಿದ್ಧವಾದದ್ದು" (ಸಿದ್ಧಾಂತಿ. ೦೨೯). [ಸಂ. ಫಲೀ]

ಫಲಿತ, ಫಳಿತ (ಗು). ೧. ಹಣ್ಣುಗಳುಳ್ಳ ; ಫಲಸಹಿತವಾದ : ಅನೇಕ ಪನಸ . . . ಕದಳೀಪ್ರಮುಖಫಲಿತಭೂಜರಾಜಿಗಳ್ (ಪುಷ್ಪಪು. ೩-೬೭ ವ) ; ಕೃತಾಂಶನ ಫಲಿತ ಶಾಳೀವನವ ಮುತ್ತಿದ ಗಿಳಿಗಳೋ ಆಚಾರ್ಯನಂಬುಗಳೋ (ಕುಷ್ಠಾಕ್ರೋ. ೦೬-೯). (ನಾ). ೨. ಹಣ್ಣು ಗಳನ್ನುಳ್ಳುದು : ಶುಕವ್ರಜಮುತ್ಸುಕತ್ವದಿಂ ಸವಿವ ಫಲಂಗಳಿಂ ಫಲಿತಮಾಯ್ತು ಮನೋಜಮನೋರಥದ್ರುಮಂ (ಅಪಪು. ೬-೦೦) ; ವಧೂವರರಾಗವಿಷಯವಲ್ಲರಿ ಫಲಿತಮಾದುದು (ಜಗವಿ. ೨-೩೨ವ). ೩. ಪರಿ ಣಾಮ ; ಸಿದ್ಧಿ : ಆ ನೀತಿ . . . ಒಂದು ಬುದ್ಧಿಯ ಎಚ್ಚರಿಕೆಯ ಮತ್ತು ಒಂದು ಎದೆಯ ಗಟ್ಟಿತನದ ಸಂಯೋಗದ ಫಲಿತ (ಮಹಾಗ. ೪ ಸ್ನೇಹರ ಮಾತು). 'ಫಲಿತಾಂಶ' ಪರಾ. ೪. ಪರಿಣಾಮವಾಗಿ ಬಂದ ಫಲ : ಅನೇಕ ಬಲಗಳಿಗೆ ಸಮಾನವಾದ ಒಂದು ಬಲವನ್ನು ಆ ಬಲಗಳ ಫಲಿತವೆಂದು (Resultant) ಹೇಳುವರು (ಭಾತವಿ. ೯೯). **ಫಳಿತ**: ೧. ಫಳಿತ ಪನಸಾಮ್ರಸನ್ಮಾತುಳಂಗ . . . ಅನೋಕಹಕುಳಂಗಳಿಂದೆಸೆವುದದಱ ಬಹಿ ರುದ್ಯಾನಂ (ವರ್ಧಪು. ೦-೩೩); ಫಳಿತ ಕುಜಂಗಳಿಂದಧಿಕನಂತಿರೆ . . . ದಾಡಿಮ ತರುವ್ರಜಮಾ ಬನದೊಳ್ ವಿರಾಜಿಕುಂ (ಕುಸುಮಾ. ೦-೯೦). [ಸಂ.]

ಫಲಿತಾಂಶ (ನಾ). ೧. ಪರೀಕ್ಷೆಯ ಪರಿಣಾಮ: ಫಲಿತಾಂಶಕ್ಕಾಗಿ ಕಾದ ವಿದ್ಯಾರ್ಥಿಯಂತೆ ವಾಸಂತಿಯ ಮನಸ್ಸಿನ ಸ್ಥಿತಿಯಾಗಿತ್ತು (ತೇಮೋಡ. ೦೦೩); ನೀವು ಹೇಗೆ ಇಷ್ಟು ಒಳ್ಳೆಯ ಫಲಿತಾಂಶವನ್ನು ಪಡೆದಿರಿ (ಶಾಲೆಮ. ೨೨೩). ೨. ಯಾವುದಾದರೊಂದು ಸಂಶೋಧನೆಯಿಂದ ತಿಳಿವಿಗೆ ಬಂದ ವಿಷಯ: ಅವರ ಮಹತ್ತರವಾದ ಸಂಶೋಧನೆಯ ಫಲಿತಾಂಶದಿಂದ ಮಾನವಕುಲಕ್ಕೇ ಉಪಕಾರವಾಯಿತು (ರೂಢಿ). [ಸಂ.]

ಫಲಿತಾರ್ಥ (ನಾ). ಪರಿಣಾಮದ ಫಲ : ಆತನಿದಿರೊಳಗಸುವ ಲುಲಿತ ಮೆಂದೆನಿಸಿ ಶಮನಿಲಯಮಂ ಸಾರುವೊಡೆ ಫಲಿತಾರ್ಥಮೆಂದು ತಿಳಿ (ವಂಕಾರಾ. ೨-೩-೩೨). [ಸಂ.]

ಫಲಿನ, ಫಳಿನ (ಗು). ೧. ಫಲವನ್ನು ಕೊಡುವ. ೨. ಫಲ ಸಹಿತವಾದ ; ಸಫಲವಾದ. (ನಾ). ೩. ಹಣ್ಣು ಬಿಟ್ಟಿರುವ ಮರ : "ಫಲ ಹಿಡಿದ ಮರನಂ ಫಲಿನಮೆಂಬುದು" (ಹಲಾಯು. ೨೯-೨೯) ; "ಮರ ಗಳೊಳು ಫಲಿನಮೆನೆ ಫಲಮುಳ್ಳವಕ್ಕುಂ" (ಮಂಗರಾ. ೩೦-೧). ೪. ಹಲಸಿನ ಮರ ; ಪನಸವೃಕ್ಷ. **ಫಳಿನ** : ೩. "ಫಲಮುಳ್ಳುದು ಫಳಿನಂ" (ವಸ್ತುಕೋ. ೩೦-೨). [ಸಂ.]

ಫಲಿನಿ, ಫಳಿನಿ (ನಾ). ೧. ಒಂದು ಬಗೆಯ ಬಳ್ಳಿ; ಪ್ರಿಯಂಗು : "ಪ್ರಿಯಂಗುಃ, ಫಲಿನೀ, ಶ್ಯಾಮಾ–ಈ ೩ ಪ್ರಿಯಂಗು" (ಹಲಾಯು. ೩೨-೪೦) ; "ಪ್ರಿಯಂಗು ಶ್ಯಾಮೆ ಫಲಿನಿ" (ಮಂಗರಾ. ೩೯-೯). ೨. ಒಂದು ಬಗೆಯ ಸಸ್ಯ; ಜಾಲಿನಿ : "ಫಲಿನಿ ಜಾಳಿನಿಯಕ್ಕು" (ಮಂಗರಾ. ೪೯-೪೯). ೩. ಒಂದು ಬಗೆಯ ಸಸ್ಯ; ಅಗ್ನಿಶಿಖೆ : "ವಿಶಲ್ಯಾ, ಅಗ್ನಿ ಶಿಖಾ, ಅನಂತಾ, ಫಲಿನೀ, ಶಕ್ರಪುಷ್ಪೀ–೫ ಬೆಣ್ಣೆಬಿದುರುಸೊಪ್ಪು, ಅಗ್ನಿಶಿಖೆ" (ಸಿದ್ಧಾಂತಿ. ೦೪೩). **ಫಳಿನಿ** : ೧. "ಫಳಿನಿ ಶ್ಯಾಮಂ ಪ್ರಿಯಂಗುನಾಮಂ ನೆಗಟ್ಗುಂ" (ವಸ್ತುಕೋ. ೩೩-೯). [ಸಂ. ಫಲಿನೀ]

ಫಲಿನೀಫಲ (ನಾ). ಪ್ರಿಯಂಗುಬಳ್ಳಿಯ ಹಣ್ಣು: ಇವು ಜಂಬೂಫಲ ಮಂಜರಿಯಿವು ಫಲಿನೀಫಲದ ಗುಚ್ಛಂ . . . ಎಂದು ತೋಱುದನವನೀ ಪಾಲಂಗೆ ಲೀಲೆಯಿಂ ವನಪಾಲಂ (ಪಂಪ್ರಪು. ೨-೬೬). [ಸಂ.]

ಫಲಿಯಿಸು 'ಫಲಿಸು' ನೋ.

ಫಲಿಸಿಕೆ (ನಾ). ಹೊಂದಿಕೊಳ್ಳುವಿಕೆ ; ಪ್ರಯೋಜನಕರವಾಗಿರುವಿಕೆ ; ಕೂಡಿಬರುವಿಕೆ : ಈ ಊರಿನಲ್ಲಿ ಫಲಿಸಿಕೆಯಿಲ್ಲವೆಂದು ಅವರು ಊರು ಬಿಟ್ಟು ಬೇರೆ ಊರಿಗೆ ಹೋದರು (ರೂಢಿ). [ಫಲಿಸು + – ಇಕೆ]

ಫಲಿಸು, ಫಲಿಯಿಸು, ಫಳಿಯಿಸು, ಫಳಿಸು (ಕ್ರಿ). ೧. ಹಣ್ಣು ಬಿಡು ; ಫಲ ಕೊಡು : ಫಲಿಸಿತರಸಾ ನಿನ್ನ ಭಾಗ್ಯದ ಬೆಳಸು (ಕುಷ್ಠಾಕ್ರೋ. ೦೩-೩) ; ರಾಮ ನಿನ್ನಲಿ ಫಲಿಸಿತಗ್ಗದ ಸತ್ಯತರು (ತೊರರಾ. ೨-೩-೨೯) ; ಪಲ್ಗಿರಿದುಸಿರುವವೋಲ್ಫಲಿಸಿ ದಾಳಿಂಬದ ಮರಗಳೊಪ್ಪಿಹುವು (ಕಂಪವಿ. ೩-೬೦); ಬಾಳೇ ಅಗಿಗಳನ್ನು ಹಚ್ಚಿದ ಬಳಿಕ ಮೂರನೇ ವರ್ಷ ಫಲಿಸುತ್ತವೆ (ಕಭಾಗ. ೨೬೬). ೨. ಉಂಟಾಗು; ಪ್ರಾಪ್ತವಾಗು; ಒದಗು : ಇನ್ನಿವರಿಂ ದಿವ್ಯ ಫಲಿಕ್ಕೆ (ಧರ್ಮಾಮೃ. ೪-೯೭); ಸದುಗುರುಭಜನೆಂ ಫಲಿಸುವುದ ದೆಂದೋ (ಬಸಪು. ೯೫-೪೨); ಸುಮಂತ್ರಮುಖದಲಿ ಫಲಿಸುವುದೆ ಸುತಲಾಭ (ತೊರರಾ. ೦-೩-೫); ಕೊನೆಯ ಗಳಿಗೆಯು ಫಲಿಸೆ ಕುಡಿ ಗಾಳಿಪಾಲು (ವಿಜಾಸೆ. ೩೦-೦೩). ೩. ಪ್ರಯೋಜನವಾಗು; ಉಪಯೋಗಕ್ಕೆ ಬರು: ಆವನೋಲೆಯಕಾಱತನ ಗಾಂಡೀವಿಯಿದಿರಲಿ ಫಲಿಸುವುದು ಮೇಣಾವನದ್ಭುತ ಮಂತ್ರಶಕ್ತಿಗೆ ಮಣಿವನಸುರಾರಿ ಕಾವರಿಲ್ಲರ್ಜುನನ ಕೈಯಲಿ ಸಾವವರು

ನಾವಲ್ಲ (ಕುಪ್ಯಾಕ್ರೋ. ೬-೩೩); ಅವರ ಕೈಯಿಂದಲೇ ಹಿಡಿದು ಕೊಡಬೇಕು ಹಾಗಲ್ಲದಿದ್ದರೆ ಆ ದಾನವು ಫಲಿಸುವುದಿಲ್ಲ (ಸಂಗಾಳ್ಯ. ೦೩೬). ೪. ಈಡೇರು; ನೆರವೇರು; ಸಿದ್ಧಿಯನ್ನು ಪಡೆ: ನುಡಿದುದು ಫಲಿಸಲರಿಯದು ದೈವ ಗತಿಯಲಿ ಫಲಿಸಿತಾದಡೆ ರಾಜ್ಯಲಕ್ಷ್ಮಿಗೆ ಸೂಳೆತನವಹುದೆ (ಕುಪ್ಯಾಕ. ೩-೦೦); ಮಾತಿದು ಫಲಿಸದಿರ್ದರೆ ಪತಿಕರಿಸಬೇಡ (ಕೊರಣಾ. ೬-೧೭-೦೦) : ಇನಿಯನ್ನೆ ತರುವ ಅವಧಿಯ ದಿನಂ, ಷಣ್ಮಾಸದ ನಿರೀಕ್ಷಣಂ ಫಲಿಸುವಾ ದಿನಂ (ಸತ್ರಾಂಗ. ೬೨-೦೭೦೩); ಅರ್ಜುನನು ಮಹಾಸಂಗ್ರಾಮಕ್ಕೆ ಅಣಿಯಾಗುತ್ತಾನೆ. ಹೀಗೆ ಭಗವಂತನ ಕಾರ್ಯ ಫಲಿಸುತ್ತದೆ (ರರ್ಮಸಾ. ೧೩೮). ೫. ದೊರಕಿಸಿ ಕೊಡು; ಲಾಭವಾಗುವಂತೆ ಮಾಡು: ಗ ೬೦ ವರಹದ ಭುಮಿಯಂನು ಕಂಲು ನೆಟು ಫಲಿಸಿ ಕೊಟದರಿಂದ (ಎಕ. VII, ಶಿವಮೊ. ೦೦೬-೨೨; 1558 ?). ಫಲಿಯಿಸು : ೨. ತೀರ್ಥಕರನಪ್ಪ ಪುಣ್ಯಂ ಬೇಗಂ ಫಲಿಯಿಸಿತು (ರರ್ಮಾಸ್ಯು. ೯-೬೯) ; ಫಲಿಯಿಸಿದುದು ಕೆಯ್ಯೊಳ್ ಪರಲಲನಾಪರಿರಂಭವೊಲ್ಲದಿರ್ದೊಡಂ (ಲೀಲಾವ. ೦೯-೦೦೭); ಹುಂ ಎನೆಯುಂ ಅಲ್ತೆಯಲ್ತೆಯೆನೆಯುಂ ಫಲಿಯಿಸುಗುಂ ಪ್ರಶ್ನಾರ್ಥೋಜ್ಜ್ವಲಾನುಮಾನಾರ್ಥಯುಗಳಮವು (ಶಮದ. ೩೦೩). ಫಳಿಯಿಸು : ೧. ಫಳಿಯಿಸಲಾರ್ತುದೇ ಅಸುಕೆ (ಸಂಪ್ರಪು. ೭-೯೨). ಫಳಿಸು : ೧. ಫಳಿಕುಂ ತ್ರಿವರ್ಗಮುಂ ಕೈಗೊಳಿಕುಂ ತತ್ಸಾಧನಂಗಳುಂ (ಜಕವಿ. ೯-೭೯).

[ಫಲ$_1$ + — ಇಸ್ಯು$_3$]

ಫಲೀನ (ನಾ). ೧. ಹಣ್ಣು; ಫಲ. ೨. ಸಜ್ಜನ; ಉತ್ತಮ ಮನುಷ್ಯ. ೩. ಮುನಿ; ಯತಿ. ೪. ಮೋಕ್ಷ; ಮುಕ್ತಿ. ೫. ತಲೆಯ ಕೂದಲು. ೬. ಕೆಸರು: "ಉತ್ತಮನುಂ ಪಂಕ ಶಿರೋರುಹಂ ಮುನಿ ಫಲಂ ಮೋಕ್ಷಂ ಫಲೀನಾಹ್ವಯಂ" (ನಾನಾರ. ೯೬). [?]

ಫಲುಗುಣ 'ಪಲುಗುಣ' ನೋ.

ಫಲೋತ್ತರ (ನಾ). ಒದಗಲಿರುವ ಫಲ; ಬರಲಿರುವ ಪರಿಣಾಮ : ಧೌಮ್ಯಾದಿ ಋಷಿಗಳು ಹೇಳಿದರು ತಚ್ಛಕುನಸಂಗತಿಗಳ ಫಲೋತ್ತರವ (ಕುಪ್ಯಾಅ. ೦೦-೦). [ಸಂ.]

ಫಲೋತ್ಸುಕ (ನಾ). ಫಸಲನ್ನು ಬಯಸುವವನು : ಬೇಸಱನಾಳ್ವನೇ ಬೆಳೆವ ಬಿತ್ತಿನ ಸಂಕ್ರಮದೊಳ್ ಫಲೋತ್ಸುಕಂ (ಪುಷ್ಪಪು. ೩-೬೦). [ಸಂ.]

ಫಲೋದಯ (ನಾ). ೧. ಫಲವುಂಟಾಗುವುದು ; ಫಲಪ್ರಾಪ್ತಿ ; ಲಾಭ: ಜೀವವಿವಾದಮೆತ್ತ ಪರಲೋಕಫಲೋದಯಮೆತ್ತ (ಶಾಂತಿಪು. ೬-೦೨೯). ೨. ಫಸಲು ಉಂಟಾಗುವುದು,—ದೊರಕುವುದು : ದುಷ್ಟಪ್ರಸರದೇಳಿಗೆ ಪಾಪಿಯೋಲಗ ಹುಸಿಯ ಬಾಳುವೆ ಹುದುವಿನಾರಂಭದ ಫಲೋದಯವು ನಸಿದು ಹೋಗದೆ (ಕುಪ್ಯಾಅ. ೬-೯೬). [ಸಂ.]

ಫಲ್ಗು (ಗು). ೧. ಚಿಕ್ಕ ; ಕ್ಷುದ್ರ ; ಅಲ್ಪವಾದ. ೨. ಸಾರವಿಲ್ಲದ ; ನೀರಸವಾದ. (ನಾ). ೩. ಚಿಕ್ಕದು ; ಸಣ್ಣದು: ಕೂಸನೆಯಿನ್ನುಂ ಶಾಸ್ತ್ರಾಭ್ಯಾಸಂ ಪಿರಿದಿಲ್ಲ ಫಲ್ಗು ಬಹುವಚನೋಪನ್ಯಾಸದೊಳಮೆಸೆದು ನೀನಿಂತೀ ಸಭೆಯಂ ಪೊಕ್ಕು ಬಾದುಗೆಯ್ಯಲ್ ನೆಱೆವೋ (ವರ್ಧಮಾ. ೦೯-೧೩). ೪. ಸಾರವಿಲ್ಲದುದು : "ರಿಕ್ತಂ, ತುಚ್ಛಂ, ಅಸಾರಂ, ಫಲ್ಗು, ವ್ಯುಷ್ಟಫಲಂ — ಈ ೫ ತುಚ್ಛಂ" (ಹಲಾಯು. ೦೨೬-೯೨). ೫. ಒಂದು ಬಗೆಯ ಸಸ್ಯ : "ಕಾಕೋದುಂಬರಿಕಾ, ಫಲ್ಗುಃ, ಮಲಪೂಃ, ಜಘನೇ ಫಲಾ-೪ ಕಲ್ಲತ್ತೀಗಿಡದ ಹೆಸರುಗಳು" (ಸಿದ್ಧಾಂತಿ. ೦೨೩). [ಸಂ.]

ಫಲ್ಗುಣ 'ಪಲುಗುಣ' ನೋ.

ಫಲ್ಗುನ (ನಾ). ೧. ಫಾಲ್ಗುಣಮಾಸ. ೨. ಅರ್ಜುನ ; ಫಲುಗುಣ. ೩. ಇಂದ್ರ. [ಸಂ.]

ಫಲ್ಗುನಿ (ನಾ). ಪುಬ್ಬಾ ಮತ್ತು ಉತ್ತರೆ ಎಂಬ ಎರಡು ನಕ್ಷತ್ರಗಳ ಜೋಡಿ. [ಸಂ. ಫಲ್ಗುನೀ]

ಫವುಚಾಯಿಸು 'ಪೌಂಚಾಯಿಸು' ನೋ.

ಫವುಜು 'ಫೌಜು' ನೋ.

ಫಶಿ (ನಾ). ಮೋಸ ; ವಂಚನೆ.

ಫಶಿ ಹಾಕು = ಮೋಸಮಾಡು : ಗಿರಾಇಕರು ಹಳೆಮಾಲಿಗೆ ಹೊಸಾದರ ಧಾರಣೆಯು ಕೊಟ್ಟು ಫಸಾಸುವ ಅಂದರೆ ಫಶಿ ಹಾಕುವ ಅಥವಾ ಠಕ್ಕಿಸುವ ಸಂಭವವಿರುತ್ತದೆ (ಮುಂಬಪ್ಯಾ. ೯೦). [←ಮರಾ. ಫಶಿ]

ಫಸಗಿ (ನಾ). = ಫಶಿ.

ಫಸಗಿ ಹಾಕು = ಮೋಸ ಮಾಡು: ನೀವು ನಮಗೂ ಫಸಗಿ ಹಾಕಿದ್ರೆಲ್ಲಾ (ಮಂಜಹು. ೦೭೬) ; ಕಾಕಾನ್ನ ಹ್ಯಾಂಗ ಫಸಗೀ ಹಾಕಿದೇ ಅಂತ (ದೀಪಹ. II, ೨೦೨). [← ಮರಾ. ಫಸಗತ್]

ಫಸಫಸಿಸು (ಕ್ರಿ). ಫಸಫಸ ಎಂಬ ಶಬ್ದವಾಗುವಂತೆ ನೊರೆ ಬಿಡು,—ಬುರುಗೇಳು : ಆಸಿಡ್ ಅಥವಾ ಲಿಂಬೀರಸ ಹಿಂಡಲು ಯಾವ ಜಸದ ಭಸ್ಮವು ಶಾಂತ, ಸ್ಥಿರವಾಗಿ ನಿಲ್ಲುವದೋ, ಫಸಫಸಿಸುವುದಿಲ್ಲವೋ ಅದು . . . ಶರೀರದಲ್ಲಿ ಸೇರಲು ಯೋಗ್ಯವಾಯಿತೆಂದು ತಿಳಿಯಬೇಕು (ಶಿಷಧೀ. ೩೩). [ಫಸಫಸ$_0$ + — ಇಸ್ಯು$_3$]

ಫಸಲ್, ಫಸಲು (ನಾ). ಬೆಳೆ; ಬೆಳಸು : ಮುಂದಿನ ಸಾಲಿಗೆ ತೀರ್ವೇ ಜಾಸ್ತಿ ಫಸಲ್ ಜಾಸ್ತಿ ಮುಂತಾದವುಗಳನ್ನು ಭರ್ತಿ ಮಾಡಿ ಪಟ್ಟಾ ಕೊಡಲ್ಪಡುವದು (ಗ್ರಾಮಾಳ. ೬೯). ಫಸಲು : ಬಂಗಾರದಂಥ ಫಸಲು ಬಂದು ಮನೆ ತುಂಬುತ್ತದೆ (ಸಂದಶೋ. ೦೮೬); ಫಸಲು ಕಣಜಕ್ಕೆ ಬಂದು ಸೇರಿತೆಂದರೆ ಆಗ ಅದನ್ನು ತೂಕ ಮಾಡಿ ಬೆಲೆ ಕಟ್ಟುವುದು ಹದಕ್ಕೆ ಬರುತ್ತದೆ (ವಿಬಂಧ. II, ೬) ; ಖರ್ಜೂರದ ಫಸಲು ಇನ್ನೆಷ್ಟು ಬಂದಿದೆ ಮನೆಗೆ (ಪುಟ್ಟರ. ೮೩). [← ಅರ. ಫಸ್ಲ್ ; ಹಿಂ. ಮರಾ. ಫಸಲ್]

ಫಸಲಿ, ಫಸ್ಲಿ (ನಾ). ಒಂದು ಮುಸಲ್ಮಾನ ವರ್ಷಗಣನೆ : (ಕಿ). ಫಸ್ಲಿ: ಹೈದರಾಬಾದಿನ ಜಹಗೀರುಗಳ (ವಿನಿಯಮದ) ಫಸ್ಲಿ ೧೩೫೯ನೆಯ ವರ್ಷದ ವಿನಿಯಮನ (ಫಸ್ಲಿ ೧೩೫೯ನೆಯ ವರ್ಷದ ೨೫ನೆಯ ವಿನಿಯಮನ) (ಭಾಧಾವ. ೩೦೭ ಒಂಬತ್ತನೆಯ ಅನುಸೂಚಿ). ℘ ಈ 'ಫಸಲಿ' ಎಂಬ ಗಣನೆಯ ಕ್ರಮವನ್ನು ಅಕ್ಬರ್ ಉತ್ತರಭಾರತದಲ್ಲಿ ೧೫೫೬ರಲ್ಲಿ ಪ್ರಾರಂಭಿಸಿದನು. ಇದನ್ನೇ ಶಹಜಹಾನನು ೧೬೩೬ರಲ್ಲಿ ದಕ್ಷಿಣ ಭಾರತಕ್ಕೂ ಅನ್ವಯಿಸಿದನು.

[←ಪಾರ. ಫಸ್ಲೀ; ಹಿಂ. ಫಸಲೀ ; ಮರಾ. ಫಸಲೀ, ಫಸ್ಲೀ]

ಫಸಲು 'ಫಸಲ್' ನೋ.

ಫಸಾದ (ನಾ). ಬಂಡು ; ದಂಗೆ : ಫಸಾದ ಮಾಡಲಿಕ್ಕೆ ನೋಡುವವರನ್ನು ಕೊತ್ವಾಲರಿಂದ ಕೋಳ ಹಾಕಿಸಿ ಬಿಡುತ್ತೇನೆ (ವಾಗ್ಯೇವಿ. ೦೦೬).

[←ಅರ. ಹಿಂ. ಮರಾ. ಫಸಾದ್]

ಫಸಾಯಿಸು, ಫಸಾಸು (ಕ್ರಿ). ಮೋಸ ಮಾಡು : ನೀವು ಹೀಂಗ ನನ್ನ ಫಸಾಯಿಸಬಾರದಿತ್ತು (ಮೂಣಾವಿ. ೨೩೦) ; ಈ ವಿಶ್ವನಾಥ . . . ಒಬ್ಬಿಬ್ಬರನ್ನು ಫಸಾಯಿಸಿದ್ದಾನೆಯೆ? (ಮೂರುದಾ. ೭೦). ಫಸಾಸು : ಫಸಾಸುವ ಅಂದರೆ ಫಶಿ ಹಾಕುವ ಅಥವಾ ಠಕ್ಕಿಸುವ ಸಂಭವವಿರುತ್ತದೆ (ಮುಂಬಪ್ಯಾ. ೯೦) ; ನಾಳೆ ನೀನ ಅನಬಾರದು ಕಾಕೂ ಫಸಾಸಿದರೂ ಅಂತ (ದೀಪಹ. I, ೦೭೩). [ಫಸ್ಸಾ$_0$ (℘←ಮರಾ. ಫಸವಿಣೇ) + — ಇಸ್ಯು$_3$]

ಫಸಾಸು 'ಫಸಾಯಿಸು' ನೋ.

ಫಸ್ಲಿ 'ಫಸಲಿ' ನೋ.

ಫಳ 'ಫಲ$_1$' ನೋ.

ಫಳಕ 'ಫಲಕ' ನೋ.

ಫಳಕಾರ (ನಾ). ಪ್ರಯೋಜನವನ್ನು ಉಂಟುಮಾಡುವವನು ; ಉಪಕಾರಿ : ಇಳೆಯೊಳಗೆಲ್ಲ ಸಿಂಹಚೂಡನೆ ಫಳಕಾರಂ ಚಂಡಶಾಸನಂ ಬಗೆವೊಡೆ ಭೂತಳದೊಳ್ಕೃತಘ್ನಂ (ಆನಂಪು. ೦೦-೩೩). [ಸಂ. ಫಲಕಾರ]

ಫಳಣಿ 'ಫಾಳಣಿ' ನೋ.

ಫಳದಾನ 'ಫಲದಾನ' ನೋ.

ಫಳಪಾಕಾಂತತೆ (ನಾ). ೧. ಫಲ ಬಿಟ್ಟೊಡನೆ ನಾಶವಾಗುವ ವಾರ್ಷಿಕಬೆಳೆಯ ಸ್ವಭಾವ. ೨. ಸಂತಾನಪ್ರಾಪ್ತಿಯಾದೊಡನೆ ತಂದೆ ತಾಯಿಗಳು ಸಾಯುವಿಕೆ. ೧. ೨ : ಫಳಪಾಕಾಂತತೆಯೋಷಧಿಗಳ ತೆಱದಿಂದೆಯ್ದೆ ಸಮನಿಸಿತ್ತಕ್ಕಟ ಸಂಗಳಿಸದೆ ತನಯನ ಲೀಲಾವಿಳೋಕನ ಪ್ರಭವಸೌಖ್ಯಮಾ ದಂಪತಿಯೊಳ್ (ಕಂದ್ರಪು. ೩-೪೦).

[ಸಂ. ಫಲಪಾಕಾಂತತಾ]

ಫಳಫಳ (ನಾ). ಒಂದು ಅನುಕರಣಪದ : ಅವಳ ಕಿವಿಯ ಓಲೆಗಳು ದೀಪದ ಬೆಳಕಿನಲ್ಲಿ ಫಳಫಳ ಎಂದು ಹೊಳೆಯುತ್ತಿದ್ದುವು (ರೂಡಿ).

ಫಳಫಳನೆ (ಅ). ೧. ಪ್ರಕಾಶಮಾನವಾಗಿ : ಜನಿವಾರವು ರಾತ್ರಿಯ ಮಿಂಚಿನಂತೆ ಫಳಫಳನೆ ಹೊಳೆಯುತ್ತಾ ಇತ್ತು (ಹುಟ್ಟಿಹ. ೬೦). ೨. ವೇಗವಾಗಿ ; ರಭಸವಾಗಿ : ಫಳಫಳನೆ ಅರ್ಭಟಿಸಿ ಭಾವುರೇ ರಾವಣನ ಬೆಳೆ ಬೆಳೆದ ನಂದನವನವ ಕಿತ್ತೆ (ಶಾಂತೀ. ೨-೬೩).

[ಫಳಫಳ + — ಅನ್ನೆ$_1$]

ಫಳಫಳಿಸು (ಕ್ರಿ). ಹೊಳೆ ; ಮಿಂಚು : ನಂದಿಯ ಪತಾಕೆಗಳ್ ಫಳಫಳಿಸೆ ಗಗನದೊಳ್ (ಶೇರಪು. ೦೦-೨೫); ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು ಫಳಫಳಿಸುತ್ತ ನಾಟ್ಯವನಾಡೆ (ಪುರಂದ ೨-೦೦೩-೨) ; ಬೆಳಕು ಅವನ ಮುಖದ ಮೇಲೆ ಬಿದ್ದು ಫಳಫಳಿಸಿದುದರಿಂದ ಅವನು ಒಳ್ಳೇ ಗೌರವರ್ಣದ ಸುಂದರತರುಣನೆಂದೂ ಹೊಳೆಯಿತು (ಕಾಬರೂ. ೩).

[ಫಳಫಳ + — ಇಸು$_3$]

ಫಳಭರ 'ಫಲಭರ' ನೋ.

ಫಳಭಾರ 'ಫಲಭಾರ' ನೋ.

ಫಳಮಂಜರಿ 'ಫಲಮಂಜರಿ' ನೋ.

ಫಳರಸ (ನಾ). ಹಣ್ಣಿನ ರಸ : ಫಳರಸದೆ ಬೆಳೆವ ನವಶಾಳೀವನಂಗಳ್ (ತಿರುರ. ರೇ. ೨-೦೦) ; ಫಳರಸದಿಂದೆ ಮುಂ ಬಳೆದೆಮೆಂಬಿದಱಿಂ ನವಪುಷ್ಪ ವಾಟಸಂಕುಳಕುಸುಮಾಸವಂ ಪೊರೆಯೆ ತತ್ಫಳಮಂ ಮಧುಪಾಳಿ ಮುತ್ತೆ (ಪಾರ್ಶ್ವಪು ೦೩-೯೯). [ಸಂ. ಫಲರಸ]

ಫಳವತಿ 'ಫಲವತಿ' ನೋ.

ಫಳವಳಿಗೆ 'ಫಲವಳಿಗೆ' ನೋ.

ಫಳಹೀನತೆ (ನಾ). ಫಲವಾಗದಿರುವಿಕೆ ; ನಿಷ್ಫಲತೆ : ಅತಿರಾಗತೆಯಿಂ ಸ್ತ್ರೀಪದಹತಿಗಂ ದಳವೇಱಿಯಲರ್ದಶೋಕಂ ಫಳಹೀನತೆಗೆಡೆಯಾದುದು (ಕಂದ್ರಪು. ೬-೯೫). [ಸಂ. ಫಲಹೀನತಾ]

ಫಳಾರ್ (ನಾ). ಒಂದು ಅನುಕರಣಪದ : ಒಂದು ತಣಿಗೆಯನ್ನು . . . ಉಜ್ಜಿದರು. ಅದು ಫಳಾರ್ ಎಂದು ಮಿಂಚಿತು (ಹುಟ್ಟಿಹ. ೭೯).

ಫಳಾರ 'ಫಲಾರ' ನೋ.

ಫಳಿ$_1$ (ನಾ). ಒಂದು ಬಗೆಯ ಉತ್ತಮವಾದ ಬಟ್ಟೆ : ಫ [ಪಾಕಾಂ. ಪ]ಳಿಯ ಸೀರೆಯ ಪಟ್ಟೆಱವಕೆಯ ಪೆಣ್ಗಳ ತಂಡವೆಳಸಿದುದಾರತಿವಿಡಿದು (ಕುರಾಸಾಂ. ೪೦-೭೦) ; ಭೀಮಸೇನಂ ಥಟ್ಟನೆದ್ದನು ಫಳಿಯನುಟ್ಟು ಶೃಂಗರದಿಂದ ತೊಟ್ಟು ಕುಪ್ಪಸಗಳಂ ಹೆಣ್ಣ ರೂಪಂ ತಾಳ್ದು . . . ಪವಡಿಸಿದ (ತುರಂಗ. ೩೫-೫೦). [ಸಂ. ಫಲಿ]

ಫಳಿ$_2$, ಫಣಿ$_2$ (ನಾ). ೧. ಮರದಿಂದ ಮಾಡಿದ ತೆಳುವಾದ ಉದ್ದನೆಯ ತುಂಡು ; ಹಲಗೆ : ನೆಲಕ್ಕೆ ಕಟ್ಟಿಗೆಯ ಫಳಿಗಳನ್ನು ಜೋಡಿಸಿದ್ದರು (ಶಾರತಿ. ೩); ಶೇಷಣ್ಣ ಸಾಮಾನು ಇಡುವ ಫಳಿಯ ಮೇಲೆ ಚಾದರ ಹಾಸಿದ (ಸ್ವಪ್ನ. ೨) ; ಫಳಿಗಳನ್ನು ಜೋಡಿಸಿ ರಂಗಭೂಮಿಯನ್ನು ರಚಿಸಲಾಗಿತ್ತು (ರಂಗರೋ. ೦೩೮). **ಫಣಿ$_2$** : ೨. ಕೋಲು ; ದಂಡ : ಯಾವ ಕ್ಷೇತ್ರದ ಅಳತೆಯು ತಿಳಿಯಬೇಕಾಗಿರುವದೋ ಆ ನಂಬರಿನ ಮೇಲೆ ಈ ಫಣಿಯನ್ನು ಇಡಬೇಕು (ಶೂಖಾ. ೬೯). ೩. ಚಿಣ್ಣಿಕೋಲಾಟದಲ್ಲಿ ಬಳಸುವ ಕೋಲು ; ದಾಂಡು : ಬಣ್ಣದ ಫಣಿಯು ಉರೀ ಹಚ್ಚುವ ಕಟ್ಟಿಗೆಯಾಯಿತು (ಮುಂಬಿಯಿ. ೫-೨೬೮). 'ಚಿಣಿಫಣಿ' ಪರಾ.

[←ಮರಾ. ಫಳೀ]

ಫಳಿತ 'ಫಲಿತ' ನೋ.

ಫಳಿದ್ಯ 'ಪಳಿದ್ಯ' ನೋ.

ಫಳಿನ 'ಫಲಿನ' ನೋ.

ಫಳಿನಿ 'ಫಲಿನಿ' ನೋ.

ಫಳಿಯಿಸು 'ಫಲಿಸು' ನೋ.

ಫಳಿಸು 'ಫಲಿಸು' ನೋ.

ಫಳಿಹತ 'ಪಟಿಹತ್ತ' ನೋ.

ಫಳೆಯಕಾಱ (ನಾ). ಗುರಾಣಿಯನ್ನು ಹಿಡಿದಿರುವವನು ; ಹಲಗೆ ಕಾರ : ಫಳೆಯಕಾಱಂ, ಫೆಳಾವುಗಂ (ಕಪುದ. ೧೫ ಪ್ರಯೋ).

[ಫಳೆಯ್ಯ (ಪ್ರ← ಪ್ರಾ. ಫಲಅ) + — ಕಾಱ]

ಫಾಂಟ (ನಾ). ೧. ಸೋಸುವುದೆ ಮೊದಲಾದ ಕ್ರಿಯೆಗಳಿಂದ ಸುಲಭವಾಗಿ ಸಿದ್ಧಪಡಿಸಿದುದು : "ಫಾಂಟಂ ಎಂಬುದು ಸುಗಮಂ" (ಹಲಾಯು. ೦೨೬-೯೯) ; ಆ ಕ್ಷಣದಲ್ಲಿ ಔಷಧಗಳ ನೀರಿನಲ್ಲಿ ನೆನೆಯಿಕ್ಕಿ ಆಗತಾನೆ ಹಿಂಡಿದ ರಸ ಫಾಂಟ–ಕಷಾಯ (ಸ್ವದ್ಯಸಾ. I. ೦೦೫). ೨. ಕಷಾಯ ; ಅರ್ಕ : ಔಷಧದ ಚೂರ್ಣದಲ್ಲಿ ಅದರ ನಾಲ್ಕುಪಟು ಎಸರುನೀರು ಸುರಿವಿ ಸ್ವಚ್ಛವಾದ ಅರಿವಿಯಲ್ಲಿ ಹಾಕಿ ಸೋಸಬೇಕು. ಇದಕ್ಕೆ ಫಾಂಟವೆನ್ನುತ್ತಾರೆ (ಗೃಹವೈ. ೦೦). [ಸಂ.]

ಫಾಕಡ, ಪಾಕಡ, ಪಾಕಡಾ, ಫಕ್ಕಡ, ಫಾಕಡಾ (ಗಂ). ೧. ಚಾಲಾಕಾದ ; ಚತುರತೆಯಿಂದ ಕೂಡಿದ : ಫಾಕಡ ಆಸಾಮಿ ಕಾಣಪ್ಪ (ಐರುಸ್ಕೆ. ೩೫). **ಪಾಕಡ** : ೧. ನೀನು ಪಾಕಡ ಆಸಾಮಿ ಅಂತ ನನಗೆ ಗೊತ್ತು (ಪಟಿಸಾ. ೫೭೯). (ನಾ). ೨. ಬುದ್ಧಿವಂತ ; ಚತುರ : ಈತ ದಕ್ಷ, ಗಟ್ಟಿಗ, ಪಾಕಡ, ಘಾಟಿ (ಪ್ರಸ್ತ. ೨೨). **ಪಾಕಡಾ** : ೩. ಕಿಲಾಡಿ ; ಪಟಿಂಗ : ನಮ್ಮ ರೈಲಿನಲ್ಲಿ ಒಬ್ಬ ಪಾಕಡಾ ಇದ್ದಾನೆ (ಅಳಿ. ೨೬೩). **ಫಕ್ಕಡ** : (ಗು). ೪. ಸೊಗಸಾದ ; ಅಚ್ಚುಕಟ್ಟಾದ : ಇಂದು ಫಕ್ಕಡ ಮಸರು ಅವಲಕ್ಕಿ ಆಗಿ ಬಿಡಲಿ (ಳಪಕೆ. ೦೩) ; ಎಂಥ ಫಕ್ಕಡ ಕನ್ನಡ ಮಾತಾಡತಾನಲ್ರೀ (ಹೂಸಂಸಾ. ೦೦೨). **ಫಾಕಡಾ** : ೧. ಫಾಕಡಾ ಆಸಾಮಿ ಡೆಪ್ಯೂಟಿಕಮೀಷನರು (ಪಪ್ಸೂರು. ೦೬೨).

[←ಹಿಂ. ಮರಾ. ಫಾಕಡಾ]

ಫಾಕಡಾ 'ಫಾಕಡ' ನೋ.

ಫಾಜಿಲ್ (ಗು). ೧. ಆವಶ್ಯಕತೆಗಿಂತ ಅಥವಾ ನಿರೀಕ್ಷೆಗಿಂತ ಹೆಚ್ಚಾದ; ಮಿತಿಮೀರಿದ ; (*). (ನಾ). ೨. ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿ ಬಂದ ; ಉತ್ಪನ್ನ, — ಆದಾಯ : (*).

[←ಅರ. ಹಿಂ. ಫಾಜಿಲ್ ; ಮರಾ. ಫಾಜೀಲ್]

ಫಾಜೀಲ (ಗು). ಶಿಷ್ಟವಲ್ಲದ : ಅಶ್ಲೀಲವಾದ : ಈ ಕತೆಯಲ್ಲಿಯ ಅವಳ ಫಾಜೀಲ ಆಸ್ಥೆಯನ್ನು ತಿರಸ್ಕರಿಸುತ್ತ ನುಡಿದಳು ಚಂದ್ರಭಾಗಕ್ಕ (ಮೂರುದಾ. ೩೬). 'ಫಾಜೀಲತನ' ಪರಾ.

[←ಅರ. ಹಿಂ. ಫಾಜೀರ್ ; ಮರಾ. ಫಾಜೀಲ]

ಫಾಜೀಲತನ (ನಾ). ಅಶ್ಲೀಲತೆ ; ಅಸಭ್ಯತೆ : ತುಂಗಕ್ಕ ಬದಿಯ ಹೆಂಗಸಿನತ್ತ ಒಮ್ಮೆ ನೋಡಿ ಕಣ್ಣು ಮಿಟುಕಿಸಿದ ರೀತಿಯ ಫಾಜೀಲತನ ನೋಡಿ (ಮೂರುದಾ. ೦೯೪). [ಫಾಜೀಲ + — ತನ]

ಫಾಜೆ, ಪಾಜ್ಯೆ (ನಾ). (ಉಕ) (ಆಟದಲ್ಲಿ) ಮುಟ್ಟಬೇಕಾದ ಸ್ಥಳ.

ಫಾಜೆ$_2$: (ಕಾಪಕೋ. ೦೫).

ಫಾಜೆಗಟ್ಟಿ, ಪಾಜೆಗಟ್ಟಿ, ಫಾಜೆಗಟ್ಟಿ = ಫಾಜೆ: ಮತ್ತೆ ನಾವು ಇದೇ ಮಾತಿನ ಫಾಜೆಗಟ್ಟಿಗೆ ಬಂದೆವು (ದೀಪಾ. ೭೦) ; ಅಡಗಿಕೊಂಡ ಚಿಕ್ಕಮಕ್ಕಳು ಕೂಗಾಡುತ್ತ ತಪ್ಪಿಸಿಕೊಂಡು . . . ಪಾಜೆಗಟ್ಟಿ ಮುಟ್ಟುವರು (ಕನ್ನಕಾ. ೩೬); ಮುಂಬಯಿಯ ಕೊನೆಯ ಫಾಜೆಗಟ್ಟಿಯಾದ ವ್ಹಿ. ಟಿ. ಸ್ಟೇಶನ್ನು ಬಂದಿತು (ಕಾರುಷ. ೬೨). [←ಮರಾ. ಫಾಂಜ್ = ಅಗಸೆಯ ಕಟ್ಟೆ]

ಫಾಣಾಫಾಣ, ಫಾನಾಫಾನ (ನಾ). (ಉಕ) ಅವ್ಯವಸ್ಥಿತವಾಗಿ ಚೆದುರುವುದು ; ದಿಕ್ಕಾಪಾಲು : ಎಲ್ಲರೂ ಫಾಣಾಫಾಣ ಆಗಿ, ಊರು ದಿಕ್ಕದಿವಾಳಿ ಆಗಿ ಹೋತು (ಗ್ರಾಮಾಯ. ೬೦೦). **ಫಾನಾಫಾನ** : ದುಡ್ಡು ಹೋದ ಮ್ಯಾಲ ಎಲ್ಲಾರು ಫಾನಾಫಾನಾ ಆಗೋರು (ಗಂಪಾಯಿ. ೦೦೦). [←ಮರಾ. ಫಾಣಾಫಾಣ]

ಫಾಣಿ (ನಾ). ೧. ಶುದ್ಧಗೊಳಿಸಿದೆ ಇರುವ ಬೆಲ್ಲದ ರಸ ; ಕಾಕಂಬಿ. ೨. ಮೊಸರಿನಲ್ಲಿ ಕಲಸಿದ ಹುರಿಹಿಟ್ಟು ; ಕರಂಭ. [ಸಂ.]

ಫಾಣಿತ (ನಾ). ೧. ಬೆಲ್ಲದ ಪಾಕಕ್ಕೆ ಸಂಪೂರ್ಣವಾಗಿ ಬಂದಿರದ ಕಬ್ಬಿನ ರಸ ; ಕಾಕಂಬಿ : "ಗುಡವಿಕಾರಂ ಫಾಣಿತಂ" (ವಸ್ತುಕೋ. ೯೪-೦೨) ; "ಅರ್ಧಪಾಕವಾಗಿ ಕಾಯಿಸಿದ ಕಬ್ಬಿನ ಹಾಲಿಗೆ ಫಾಣಿತವೆಂತಲೂ ಹೆಸರುಗಳು" (ಸಿದ್ಧಾಂತಿ. ೨೯೬). ೨. ಬೆಲ್ಲ : "ಮತ್ಸ್ಯಂಡಿ, ಫಾಣಿತ ಎಂದೊಡೆ ಬೆಲ್ಲದ ಪಾಕ, ಬೆಲ್ಲವೆಂದೂ ಎಂಬರು" (ಪಾಶಾ. ೬). ೩. ಹಾಲಿನಿಂದ ಮಾಡುವ ಒಂದು ಬಗೆಯ ತಿಂಡಿ. [ಸಂ.]

ಫಾನಾಫಾನ 'ಫಾಣಾಫಾಣ' ನೋ.

ಫಾಯದೆ 'ಫಾಯಿದೆ' ನೋ.

ಫಾಯದೆಶೀರ 'ಫಾಯಿದೇಶೀರ' ನೋ.

ಫಾಯಿದೆ, ಪಾಯದೆ, ಪಾಯಿದೆ, ಫಾಯದೆ (ನಾ). ಪ್ರಯೋಜನ ; ಲಾಭ ನಫೆ : ತಮ್ಮ ಮಿಲಾಖತಿನ ಫಾಯಿದೆಯಿಂದ ಸಂತೋಷ ಪಡಿಸಬೇಕು (ರಾಶೇಂದ್ರ. ೩೬) ; ಎಲ್ಲೋ ಫಾಯಿದೆ ಮಾಡಲು ಇನ್ನೊಂದೂರಿಗೆ ಹೋಗಿರಬೇಕು (ಮುಗಿಯು. ೩). **ಪಾಯದೆ**: ಇಂಜನೇರು ಕೆಪ್ಟನ್ ರನೆಲ್‌ಸಾಹೇಬ್ ಬಹಾದ್ದುರವರು ನಿಶಾನಿ ನಿಲ್ಲಿಸಿ, ದುರ್ಬೀನಿನಿಂದಾ ನೋಡಿ, ತಮ್ಮ ಸರಕಾರದ ಪಾಯದೆ ಕೆಲಸ ಮಾಡುತ್ತಿದ್ದರು (ರಾಶೇಂದ್ರ. ೨೯೯); ನಮ್ಮನ್ನ ಮೈ ಮುರೀ ದುಡಿಸಿ, ಅದರ ಪಾಯದೇಕ ತಾವು ಮಾಲಕ ರಾಗೂದು (ಬೆಂದಯ. ೯೯). **ಪಾಯಿದೆ** : ಈ ವ್ಯಾಪಾರದಲ್ಲಿ ತುಂಬಾ ಪಾಯಿದೆ ಇದೆ (ರೂಢಿ). **ಫಾಯದೆ** : ನನಗಿದೆಲ್ಲದರಿಂದ ಬಂದ ಫಾಯದೆ ಏನು ಹೇಳು (ಮೂರುದಾ. ೯೨) ; ಅವರ ಆಸ್ಥೆಯ ಫಾಯದೆ ಒಂದಿಲ್ಲೊಂದು ರೀತಿಯಲ್ಲಿ ತೆಗೆದುಕೊಳ್ಳಬಹುದಲ್ಲ (ಕ್ಷಿತಿಶ. ೬೮).

[← ಅರ. ಫಾಯಿದಾ ; ಪಾರ. ಹಿಂ. ಮರಾ. ಫಾಯದಾ]

ಫಾಯಿದೇಶೀರ, ಫಾಯದೆಶೀರ (ಅ). ಲಾಭಪ್ರದವಾಗಿ ; ಲಾಭ ಬರುವಂತೆ : ರೋಖ ರಕಮಿನಿಂದ ಖರೀದಿ ಮಾಡುವ ಆಸಾಮಿಗಳಿಗೆ ಮಜೂರಿಯ ಖರ್ಚು ಫಾಯಿದೇಶೀರ ಬೀಳುವ ಸೂಚನೆ (ಮುಂಬವ್ಯಾ. ೪೦ ಪ್ರಸ್ತಾವನೆ). **ಫಾಯದೆಶೀರ** : ಕಿರಕೋಳಕ್ಕೆ ಫಾಯದೆಶೀರ ಬೆಲೆಯು ಸಿಗಲಿಕ್ಕಿಲ್ಲ (ಮುಂಬವ್ಯಾ. ೨೩೦). [← ಮರಾ. ಫಾಯದೇಶೀರ್]

ಫಾಯಿಷ್ (ನಾ). ಪ್ರಕಟಣೆ ; ಜಾಹಿರಾತು : ಡಿಸ್ಟ್ರೀಕ್ಟ್ ಗೆಜೆಟಿನಲ್ಲಿ ಫಾಯಿಷ್ಮಾಡಬೇಕು (ಗ್ರಾಮಾಳ. ೮೦). [← ಮರಾ. ಫಾಯಶ್]

ಫಾರಂ 'ಫಾರಮ್ಮು' ನೋ.

ಫಾರಮ್ಮು, ಫಾರಂ (ನಾ). ೧. ಮಾಹಿತಿಯನ್ನು ಬರೆಯಲು ನಿಗದಿಯಾದ ರೀತಿಯಲ್ಲಿ ಸಿದ್ಧಪಡಿಸಿದ ಕಾಗದ : ಅವರು ಕೊಟ್ಟ ಫಾರಮ್ಮಿನಲ್ಲಿ ನನ್ನ ವಿವರವನ್ನೆಲ್ಲಾ ತುಂಬಿಸಿದೆ (ರೂಢಿ). ೨. ಶಾಲೆಗಳಲ್ಲಿಯ ತರಗತಿ,—ಇಯತ್ತೆ : ಮನೆಯ ತಾಪತ್ರಯದಿಂದಾಗಿ ಅವಳ ಓದು ಎಂಟನೆಯ ಫಾರಮ್ಮಿಗೇ ನಿಂತುಹೋಯಿತು (ರೂಢಿ). **ಫಾರಂ** : ೧. ನಡೆದ ಸಂಗತಿ ತಿಳಿದ ಕೂಡಲೆ ೩ ರಿಪೋರ್ಟುಫಾರಂಗಳುಳ್ಳ ಫಾರಂಗಳಲ್ಲಿ ಬರೆದು . . . ರವಾನಿಸಬೇಕು (ಗ್ರಾಮಾಳ. ೫೨). ೨. ನಿಮ್ಮ ಮಗಳು ಎಷ್ಟನೇ ಫಾರಂನಲ್ಲಿ ಓದುತ್ತಿದ್ದಾಳೆ ? (ರೂಢಿ). ೩. ಒಟ್ಟಿಗೆ ಮುಂದ್ರಿಸಲು ಚೌಕಟ್ಟಿನಲ್ಲಿ ಬಂಧಿಸಿ ಅಣಿಮಾಡಿ ಇಟ್ಟಿರುವ ಮುಂದ್ರಣದ ಮೊಳೆಗಳ ಜೋಡಣೆ ಮತ್ತು ಇಂತಹ ಜೋಡಣೆಯಿಂದ ಆದ ಪುಟಗಳ ಸಮೂಹ : ಹೀಗೆ ಚೌಕಟ್ಟಿನಲ್ಲಿ ಬಿಗಿ ಮಾಡಿದ ಪುಟಸಮೂಹಕ್ಕೆ 'ಫಾರಂ' ಎಂದು ಹೆಸರು (ಮುದ್ರಳ. ೪೦). [← ಇಂ. Form]

ಫಾರೀಕತ್ತು, ಪಾರಿಕತ್ತು, ಪಾರಿಖತ್ತು, ಪಾರೀಕತ್ತು, ಪಾರೀಖತ್ತು (ನಾ). ೧. ಪಾಲು ; ವಿಭಾಗ : ಫಾರೀಕತ್ತು ಅನಬ್ಯಾಡಪಾ. ಅವನ್ಸಂಗ್ತೀಲೆ ಫಾರಿಕತ್ತು ಮಾಡಿಕೊಂಬೋ ಹಾಂಗಿಲ್ಲಾ (ಮಿಂಚಹು. ೦೦೬). **ಪಾರಿಕತ್ತು** : ೨. (ಜಮೀನು, ಆಸ್ತಿ ಮುಂತಾದುವು) ಬೇರೆ ಬೇರೆಯಾದುದನ್ನು ತಿಳಿಸುವ ಪತ್ರ ; ವಿಭಜನೆಯ ಪತ್ರ : ಮುಂದಿನ ವಾರವೋ ಆ ಮುಂದಿನ ವಾರವೋ "ಹಿಸ್ಸೆ ಆಗಿ ಪಾರಿಕತ್ತಾಗ್ತದಂತೆ !" (ಕಾಮೂರು. ೩೦೬) ; ಎಲ್ಲಿ ಹುಡುಕಿದರೂ 'ಪಾರಿಕತ್ತು' ಏಕೆ ಸಿಗಲಿಲ್ಲವೆಂಬುದೂ . . . ಕೋರ್ಟಿನಲ್ಲಿ ದತ್ತು ಏಕೆ ಊರ್ಜಿತವಾಗಲಿಲ್ಲವೆಂಬುದೂ ಮುಂತಾದ ಸಾವಿರಾರು ವಿಚಾರಗಳು ನಮ್ಮ ಹಳ್ಳಿಯ ಶ್ಯಾನುಭೋಗನಿಗೆ ಗೊತ್ತು (ಗರುದಾ. ೯೬). **ಪಾರಿಖತ್ತು** : ೧. ಇಬ್ಬರೂ ಸ್ವಂತ ಹಿಡುವಳಿದಾರರಾಗಿದ್ದರೆ ಹಿಸ್ಸೆಯ ಪಾರಿಖತ್ತು ಪತ್ರ ಛಾಪಾಕಾಗದದ ಮೇಲಾಗಿ ಅದನ್ನು ರಿಜಿಸ್ಟರು ಮಾಡಬೇಕಿತ್ತು (ಗಂಗಾಳ. ೦೩೯). **ಪಾರೀಕತ್ತು**: ೨. ಸಣ್ಣಪ್ಪ ಸತ್ತ ಮೇಲೆ ಅವನ ಮಕ್ಕಳೆಲ್ಲ ವಿಭಾಗವಾಗಿ "ಪಾರೀಕತ್ತು" ಮಾಡಿಕೊಂಡರೂ . . . ದತ್ತು ಏಕೆ ಊರ್ಜಿತವಾಗಲಿಲ್ಲ (ಗರುದಾ. ೯೬). **ಪಾರೀಖತ್ತು**: ೧. ಮಾತೆತ್ತಿದರೆ ಪಾಲು ಪಾರೀಖತ್ತು ಎಂದು ಅಪ್ಪ ಮಕ್ಕಳು ಅಣ್ಣತಮ್ಮಂದಿರು ಹಿಸ್ಸೆ ಮಾಡಿಕೊಂಡ ಕಾರಣ ಒಂದು ಸಣ್ಣ ಮನೆ ನಾಲ್ಕಾರು . . . ಮನೆಗಳಾಗಿ ಮಾರ್ಪಟ್ಟಿದೆ (ವಮ್ಮೂರು. ೩೦೯).

[← ಪಾರ. ಫಾರಿಗಖತೀ ; ಹಿಂ. ಫಾರಖತೀ ; ಮರಾ. ಪಾರಕತ್, ಪಾರಕತೀ, ಪಾರಖತ್, ಪಾರಖತೀ]

ಫಾಲ (ನಾ). ೧. ನೇಗಿಲಿನ ಗುಳ. ೨. ಹತ್ತಿ ಬಟ್ಟೆ: "ಫಾಲಂ, ಕಾರ್ಪಾಸಂ, ಬಾದರಂ—೩ ನೂಲುಬಟ್ಟೆ" (ಸಿದ್ಧಾಂತಿ. ೨೦೨). ೩. ಗಂಟಂ ; ಮೂಟೆ. ೪. ಹಣೆ ; ನೊಸಲು : ಸಂತಸಂದಳೆದಾಳಿದನ ಪದಧೂಳಿಗೆಯು ಸಿರಫಾಲವನು ಸಾರ್ಚಿ (ಗಗತಾ. ೨೨-೦೦೪). [ಸಂ.]

ಫಾಲದಿವ್ಯ (ನಾ). ಕಾಯಿಸಿದ ಕಬ್ಬಿಣದ ಗುಳವನ್ನು ಹಿಡಿದು ತಾನು ಸತ್ಯವಂತನೆಂದು ಸಿದ್ಧಪಡಿಸುವ ಒಂದು ದಿವ್ಯ: ದಿವ್ಯಗಳಲ್ಲಿ ಬಹುಪ್ರಚಲಿತವಿದ್ದುದಂದರೆ 'ಪಾಳದಿವ್ಯ' ಅಥವಾ 'ಫಾಲದಿವ್ಯ' (ಕಶಾಲ. ೩೪೬) ; [ಸಂ.]

ಫಾಲ್ಗುಣ 'ಪಾಲುಗುಣ' ನೋ.

ಫಾಲ್ಗುನ (ನಾ). ಚಾಂದ್ರಮಾನವರ್ಷದ ಹನ್ನೆರಡನೆಯ ತಿಂಗಳು : "ಫಾಲ್ಗುನಃ, ತಪಸ್ಯಃ, ಫಾಲ್ಗುನಿಕಃ—೩ ಫಾಲ್ಗುನಮಾಸದ ಹೆಸರುಗಳು" (ಸಿದ್ಧಾಂತಿ. ೪೦) ; ವಿಶ್ವನಾಥನಾದಿಜಿನಂ ಫಾಲ್ಗುನಬಹುಲೈಕಾದಶಿಯೊಳಮನಂತಸುಖನಿಲಯನುತ್ತರಾಷಾಢದೊಳಂ ಧ್ಯಾನಮರೀಚಿಯಿಂ ಬೆದಱ (ಆರಿಪು. ೧೦-೧೬). [ಸಂ.]

ಫಾಲ್ಗುನನಂದೀಶ್ವರ (ನಾ). [ಜೈನ] ಫಾಲ್ಗುಣಮಾಸದಲ್ಲಿ ಆಚರಿಸುವ ಒಂದು ವ್ರತ ಮತ್ತು ಆ ವ್ರತ ನಡೆಯುವ ದಿನ,—ನೋಂಪಿ: ಅನ್ನೆಗಂ ಫಾಲ್ಗುನನಂದೀಶ್ವರಮಾದುದಾಗಳುಭಯಬಲಮುಮಭಯಘೋಷಣೆಯಂ ಘೋಷಿಸಿ ಕಾಳೆಗಮನುಟಿದಿರ್ಪುದುಂ (ಪಂಠಾಮಾ. ೦೪-೬೩ ವ). [ಸಂ.]

ಫಾಲ್ಗುನಿಕ (ನಾ). = ಫಾಲ್ಗುನ : "ಫಾಲ್ಗುನಃ, ತಪಸ್ಯಃ, ಫಾಲ್ಗುನಿಕಃ —೩ ಫಾಲ್ಗುನಮಾಸದ ಹೆಸರುಗಳು" (ನಿರ್ಣಯಂ. ೯೦). [ಸಂ.]

ಫಾಶಾ 'ಫಾಸೆ' ನೋ.

ಫಾಶಿ 'ಫಾಸಿ' ನೋ.

ಫಾಸಲೆ, ಪಾಸಲೆ, ಫಾಸಿಲೆ (ನಾ). ೧. ದೂರ; ಅಂತರ : ಬೆಂಗಳೂರಿನಿಂದ ಮೈಸೂರಿಗೆ ಬರುವ ದಾರಿಯಲ್ಲಿ ೨೭ ಮೈಲಿ ಫಾಸಲೆಯಲ್ಲಿರುವ ರಾಮಗಿರಿ ಎಂಬ ಊರಿಗೆ ಕ್ಲೋಸ್‌ಪೇಟೆ ಎಂಬ ಹೆಸರು ಉಂಟಾಯಿತು (ಸುಜಾಪಂ. II, ೩); ನಂಜರಾಜನ ಶರೀರವು ಬಿದ್ದಿದ್ದ ಸ್ಥಳಕ್ಕೂ ರಾಜಒಡೆಯನಿದ್ದ ಸ್ಥಳಕ್ಕೂ ಅರ್ಧಮೈಲು ಫಾಸಲೆಯಿರಬಹುದು (ಶ್ರೀರಾಹು. ೨೦೦); ನಾಲ್ಕುಮೈಲಿ ಫಾಸಲೆಯಲ್ಲಿ ಯಾವ ಊರೂ ಇರಬಾರದು (ಅಕಬು. ೬೬). **ಪಾಸಲೆ** : ೨. ಸುತ್ತ ಮುತ್ತಲ ಪ್ರದೇಶ,—ಸ್ಥಳ : ಸುಮಾರು ಹತ್ತಿಪ್ಪತ್ತು ಮೈಲು ಪಾಸಲೆಯೊಳಗೆ ಒಂದೇ ಒಂದು ಆಸ್ಪತ್ರೆ ಇಲ್ಲ (ಶಾರುಚಾ. ೦೯); ಈ ಪಾಸಲೆಗೆಲ್ಲ ಅವರೇ ಮೊದೂಲು ಗಾಡಿ ತರಿಸ್ದೋರು (ಮಲಕು. ೦೭೬). **ಫಾಸಿಲೆ**: ೧. ಎರಡು ಗ್ರಾಮಗಳ ನಾಲ್ಕು ಮೈಲಿ ಫಾಸಿಲೆಯಲ್ಲಿ ಮೊಕ್ಕಾಂ ಮಾಡಿದರು (ಪಪಚಾ II, ೬೭೨). [← ಅರ. ಹಿಂ. ಮರಾ. ಫಾಸಲಾ]

ಫಾಸಿ, ಪಾಶಿ$_2$, ಪಾಸ್ಯಿ$_3$, ಫಾಶಿ (ನಾ). ನೇಣು ಹಾಕಿ ಕೊಲ್ಲುವ ಶಿಕ್ಷೆ; ಗಲ್ಲು : ಆದರೆ ಫಾಸಿಯ ಹಗ್ಗ ಒಂದಿರಲಿಲ್ಲ (ಪಂಗಾಚ. ೨೫); ಅವನಿಗೆ ಸಿಂಗಾಪುರದಲ್ಲಿ ಫಾಸಿಯಾಯಿತು (ಗಾರತಿ. ೬೦). **ಪಾಶಿ$_2$** : 'ಪಾಶಿ ಸಜಾ' ಪರಾ. **ಪಾಸ್ಯಿ** : ದೀನಜನೋದ್ಧಾರಕನಂತೆ . . . ದೀನಜನರ ಕೊರಳಿಗೆ ಪಾಸಿ ಹಾಕುವವ (ತಳಕು. ೯೫). **ಫಾಶಿ** : ಏನು, ಯಾರಾದರೂ ಫಾಶಿಗೆ ಕೊಡಲಿರುವರೇನು ನನ್ನನ್ನ (ಪಾತ್ಯೂ. ೨೦೬); ಜಹಾಗೀರದಾರರಿಗೆ ಯಾವ ಶಿಕ್ಷೆ ಆಗುವುದೋ ಕೇಳಬೇಕೆಂದು ಎಲ್ಲರೂ ಆತುರರಾಗಿದ್ದಾರೆ. 'ಫಾಶಿ ಇಲ್ಲದಿದ್ದರೆ ಕಾಳಾಪಾಣಿ' ಎಂದು ಎಲ್ಲರೂ ಆಡುತ್ತಾರೆ (ಕವಕಿ. ೯೦); ಭೀತಿಯ ಅಪಾಯದ ಹಾಗೂ ಫಾಶಿಯ ಉರುಳಿನ ನೆರಳಲ್ಲೇ ನಾವು ದುಡಿಯಬೇಕು (ಆಕ್ಷಾರ್ಪ. ೦೩೬).

ಫಾಸಿ ಕೊಡು = ಗಲ್ಲುಗಂಬಕ್ಕೇರಿಸು ; ನೇಣು ಹಾಕು : ಕಳ್ಳರನ್ನು ಪತ್ತೆ ಮಾಡದಿದ್ದರೆ ನಿನಗೆ ಫಾಸಿ ಕೊಡುವೆನು (ಪಂಚಾಪ್ರ. ೩೬). [← ಹಿಂ. ಫಾಂಸೀ ; ಮರಾ. ಫಾಶೀ, ಫಾಂಶೀ]

ಫಾಸಿಕಂಬ (ನಾ). ನೇಣು ಹಾಕುವ ಕಂಬ : ಅವನ ದೃಷ್ಟಿಯೆದುರಿಗೆ ಜೇಲಿನ ದೊಡ್ಡ ದೊಡ್ಡ ಗೋಡೆಗಳು ಬಂದು ನಿಂತಂತಾಯಿತು. ಶಿವಿಗತ್ತಿಯ ಬಂದೂಕು ಹಿಡಿದುಕೊಂಡು ಪಹರೆ ಮಾಡುವ ಪೋಲೀಸರು, ಕಲ್ಲು ಒಡೆಯುವ ಕೈದಿಗಳು, ಫಾಸೀಕಂಬ (ಮಹ್ಮಾಹ. ೦೫). [ಫಾಸಿ + ಕಂಬ$_1$ (< ಕಂಭ)]

ಫಾಸಿಖಾನೆ (ನಾ). ಗಲ್ಲಿನ ಶಿಕ್ಷೆಯನ್ನು ಕೊಡುವ ಸ್ಥಳ : ನಿನಗೆ ಈ ಬಂದೀಖಾನೆಯಲ್ಲಿ ಫಾಸಿಖಾನೆಯಿದೆಯೆಂದೂ ಮತ್ತು ನನಗೆ ಫಾಸಿ ಶಿಕ್ಷೆಯನ್ನು ವಿಧಿಸಲು ಅಧಿಕಾರವಿದೆಯೆಂದೂ ತಿಳಿದಿರುವುದೇ ? (ಭುಜಾಶಾ. ೦೬೩). [ಫಾಸಿ + ಖಾನೆ]

ಫಾಸಿಲ್ 'ಫಾಸಲೆ' ನೋ.

ಫಾಸಿಶಿಕ್ಷೆ (ನಾ). = ಫಾಸಿ : ಮುಖಕ್ಕೆ ಫಾಸಿಶಿಕ್ಷೆ ಅನುಭವಿಸಲು ಹೋಗುವ ಖೈದಿಯ ಕಳೆ ಬರುವುದು (ಹೋರಪು. ೬೬). [ಫಾಸಿ + ಶಿಕ್ಷೆ]

ಫಾಸೆ, ಪಾಸ್ಯಿ$_4$, ಪಾಸೆ$_2$, ಫಾಶಾ (ನಾ). ೧. ಪಗಡೆ, ಲೆತ್ತ ಮೊದಲಾದುವುಗಳಲ್ಲಿ ಬಳಸುವ ದಾಳ : ಬಸಂತಿಯು . . . ಪಗಡಿಗಳನ್ನು ಇಟ್ಟು ಹಸ್ತಿದಂತ ನಿರ್ಮಿತವಾದ ಫಾಸೆಗಳನ್ನು ಕೊಟ್ಟಳು (ಮಂಕಾಳ. ೬೨). **ಪಾಸ್ಯಿ** : ೨. ಪಗಡೆಯಾಟದಲ್ಲಿ ದಾಳಗಳಿಂದ ಸೂಚಿತವಾಗುವ ಸಂಖ್ಯೆ; ಗರ : ಇಂದು ಲೆತ್ತದ ಪಾಸಿಯೇ ತಿರುವುಮುರುವಾಗಿ ಬಿಟ್ಟಿತು (ಶ್ರೀಮಾಶ್ರ. ೨೬೦). **ಪಾಸೆ$_2$** : ೨. ದೂತ್ಯವಾಡುವಲ್ಲಿ ನಿಪುಣನಾದವನು ಪಾಸೆಗಳು ಹೇಗೆ ಬಿದ್ದರೂ ಖೇದ ಪಡುವುದಿಲ್ಲ (ಮಭಾರ. ೯೦). **ಫಾಶಾ** : ೧. ಪರಮಪಾಪಿ ಶಕುನಿ ತಾನು ಫಾಶಾದೊಳಗೆ ಫಕೀರನಾಗಿ ಧರ್ಮರಾಜ ಧರುಣಿ ದ್ರೌಪತಿನ ಸೋತರ (ಪುಗೀಗ. ೯೯). [← ಮರಾ. ಫಾಸಾ]

ಫಾಳ, ಫಾಳು (ನಾ). ತುಂಡು ; ತುಕಡಿ : ಜಂಗಮೋತ್ತಮರಿಗೆಲ್ಲರಿಗು ಆ ಕನಕದ ಫಾಳವನ್ನು ತೋರಿ (ಹುಕೋರ. ೦೩೦). **ಫಾಳು** : ಆ ಚರ ಮೂರ್ತಿಗಂ ವೊಂದು ಹೇಮದು ಫಾಳನ್ನು ಕೊಟ್ಟು (ಹುಕೋರ. ೦೩೦). [← ಮರಾ. ಫಾಳ]

ಫಾಳಣಿ, ಫಳಣಿ (ನಾ). ೧. ವಿಭಾಗಿಸುವಿಕೆ; ಬೇರ್ಪಡಿಸುವಿಕೆ : ರೇಲವೇ ಫೀ, ಜಕಾತ, ಗಾಡಿಬಾಡಿಗೆ ಮುಂತಾದ ಖರ್ಚುಗಳ ಫಾಳಣಿ ಮಾಡಲಿಕ್ಕೆ ಅಡಚಣಿ ಬೀಳುವದು (ಮುಂಬಸಾ. ೯೦). **ಫಳಣಿ** : ೨. ಜಮೀನಿನ ವಿಭಾಗ,—ತುಂಡು : ಕೆಲವು ಹಳ್ಳಿಗಳಲ್ಲಿ ಫಳಣಿಯೆಂಬ ವಿಭಾಗಗಳಿದ್ದವು. ಒಂದು ಫಳಣಿಯೆಂದರೆ ಸುಮಾರು ೨ ಕೂರಿಗೆ ಆಗುತ್ತಿತ್ತು (ಕಣಾಗೆ. ೩೬೫). [← ಮರಾ. ಫಾಳಣೇ]

ಫಾಳಿ (ನಾ). ತುಂಡು; ತುಕಡಿ (?) : ಈ ಕ್ಷೇತ್ರವಂ ವಿಷ್ಕಂಭದಿನವ ಕರ್ಷಣಭಾಗಹಾರಮಾತ್ರ ಫಾಳಿಗಳಂ ಮಾಡಿಯೇಕಫಾಳಿಯಂ ತೆಗೆವುತ್ತಿರೆ ವಿಶೇಷಕ್ಷೇತ್ರಮಕ್ಕುಂ (ಕ್ಷಪಣ. ೨೦-೨೦). [← ಮರಾ. ಫಾಳೀ]

ಫಾಳು 'ಫಾಳ' ನೋ.

ಫಾಳೆ 'ಪಾಳ್ಯೆ' ನೋ.

ಫಿಕೀರು, ಪಿಕೀರು (ನಾ). ೧. ಆಸ್ಥೆ; ಆಸಕ್ತಿ : ಶಿವರಾತ್ರಿಯ ಹಬ್ಬದ ದಿವಸ ಮಹದೇವಪುರದಲ್ಲಿ ಬಹಳ ಫಿಕೀರಿನಲ್ಲಿ ಖುಷಿಯಿಂದ ಹಬ್ಬ ಮಾಡುತ್ತಾ ಇರುತ್ತಾರೆ (ರಾತೇಂದ್ರ. ೦೦೯). **ಪಿಕೀರು** : ೨. ಚಿಂತೆ; ಕಾಳಜಿ : ಕೆಂಪಿ ಕೇರೀಲಿರೋದು ಅಕ್ಕಪಕ್ಕದ ಮನೆಯೋರ್ಗೆಲ್ಲಾ ತುಂಬಾ ಪಿಕೀರಾಗಿತ್ತು (ಅನಾಮಿ. ೬೯); ಮಣಿ . . . ಏನಾಗಿ ಹೋಗಿದೆಯೋ ಅವರಿಗೆ ಎಂಬ ಪಿಕೀರಿನಿಂದ ಹೆಡ್‌ಮೇಷ್ಟರ ರೂಮಿನೊಳಕ್ಕೆ ಬಂದ (ಸ್ವಾಮಿಸ್ವೇ. ೦೬೪).

[← ಅರ. ಫಿಕ್ರ್; ಹಿಂ. ಫಿಕರ್, ಫಿಕ್ರ್; ಮರಾ. ಫಿಕೀರ್, ಫಿಕರ್]

ಫಿತೂರಿ, ಪಿತೂರಿ (ನಾ). ಕುತಂತ್ರ; "ಒಳಸಂಚು; ಸಂಚು" (ಜಾಸಕೋ. ೦೮). **ಪಿತೂರಿ** : ನಿಜಸಂಸ್ಥಾನದೊಳರ್ಪ ಕುಹಕಿನಿಯೋಗಿಗಳೊಡರ್ಚಿದ ಪಿತೂರಿ[ಪಾಶಾಂ. ಪಿತುಮೆ]ಯಿಂ ವಿಜಯಪುರವರ್ತಿಯೆನಿಸುವ ಮುಜಬರಖಾನ ತೆರಳ್ಚೆ (ಕಳಪ್ರ. ೬-೩೩); ಇದು ಬಂಡವಾಳಗಾರರ ಪಿತೂರಿ (ಅಪ್ಪಾವ. ೦೭); ರಾಜಕೀಯಜಾಗೃತಿ ಎರಡು ರೂಪಗಳನ್ನು ತಾಳಿತು; ಒಂದು ಪಿತೂರಿಯದು; ಇನ್ನೊಂದು ಸುಧಾರಣೆಯದು (ಶಾಸ್ವಶಾ. ೦೩).

ಪಿತೂರಿ ನಡೆ = ಒಳಸಂಚು ಆಗು ; ತಂತ್ರಕ್ಕೆ ಎಡೆಯಾಗಿರು: ಹೈದರನು ತಕ್ಷಣವೇ ಅನುಮಾನಶಕ್ತಿಯಿಂದ ಪಿತೂರಿ ನಡೆದಿದೆಯೆಂದು ಗ್ರಹಿಸಿದನು (ಒಚಕ. ೬೫). **ಪಿತೂರಿ ನಡೆಸು**=ಒಳಸಂಚನ್ನು ಹೂಡು ; ಸಂಚು ಮಾಡು : ಇಬ್ಬರೂ ಸೇರಿ ಪಿತೂರಿ ನಡೆಸಿದರು (ಕೂಸಬೇ. ೨೦೩); ನೀವೆಲ್ಲ ಕೂಡಿ ನನ್ನ ವಿರುದ್ಧ ಒಂದು ಪಿತೂರಿ ನಡೆಸಿದ್ದೀರಿ (ಬಡಾಸ. ೦೫೪). **ಪಿತೂರಿ ಮಾಡು** = ಪಿತೂರಿ ನಡೆಸು: ನಾನು ಎಷ್ಟೋ ಪಿತೂರಿ ಮಾಡಿದೆ. ಆದರೆ ದುಃಖ ಮತ್ತು ಲಜ್ಜೆ ಹೊರತು ಮತ್ತೇನೂ ದೊರೆಯಲಿಲ್ಲ (ಮಲಕಾ. ೦೦೨). **ಪಿತೂರಿ ಹೂಡು** = ಪಿತೂರಿ ನಡೆಸು: ಎರಡನೆಯ ಬಾಜಿರಾಯ . . . ಬ್ರಿಟೀಷರ ಮೇಲೆ ಬೀಳಲು ಪಿತೂರಿ ಹೂಡಿದನು (ಭಾರದ. ೯೨೬). **ಫಿತೂರಿಯಾಗು** = ಒಳಸಂಚಿನಲ್ಲಿ ಭಾಗಿಯಾಗು : ನೀನು ಫಿತೂರಿಯಾಗಿಲ್ಲವೆಂಬುದನ್ನು ಕಾರ್ಯ ಮಾಡಿ

ತೋರಿಸದಿದ್ದರೆ ನನ್ನ ವತನವನ್ನೇ ಖಲಾಸಾ ಮಾಡಿಸಿ ಬಿಡುವೆನು (ಹ್ಯೂಬ. ೨೮೩).

[← ಅರ. ಫುತುರ್; ಹಿಂ. ಫಿತೂರ್; ಮರಾ. ಫಿತುರೀ, ಫಿತೂರ್]

ಫಿದವಿ, ಫಿದಿವಿ, ಫಿದ್ವಿ (ನಾ). ೧. ಸೇವೆ; ಕೈಂಕರ್ಯ : ಗೌರ್ನರ್ ವದವಿ ಮೇಲೆ, ಕಾರ್ಕೂನ್ ಫಿದವಿ ಕೀಳೆ ? ಎರಡೂ ಒಂದೆ ನನಗೆ (ಕಿಂಗಾ. ೨೬-೩). ಫಿದಿವಿ : ೨. ಸೇವಕ ; ಆಳು: (ಕ). ಫಿದ್ವಿ: ೨. (ರೈತ್‌ಗೆ. II. ೩೩೯). [← ಅರ. ಹಿಂ. ಮರಾ. ಫಿದವೀ]

ಫಿದಿವಿ 'ಫಿದವಿ' ನೋ.

ಫಿದ್ವಿ 'ಫಿದವಿ' ನೋ.

ಫಿನಾಯಿಲ್ 'ಫಿನೈಲ್' ನೋ.

ಫಿನೈಲ್, ಫಿನಾಯಿಲ್ (ನಾ). ಕ್ರಿಮಿನಾಶಕವಾದ ಒಂದು ಔಷಧಿ ದ್ರವ ; ಕಾರ್ಬಾಲಿಕ್ ಆಮ್ಲ : ನೊಣಗಳ ವಿಷಯವೂ ಹೀಗೆಯೇ . . . ನಿತ್ಯವೂ ಫಿನೈಲ್ ಹಾಕಿ ನೆಲವನ್ನು ಸಾರಿಸುತಿದ್ದರೂ ಅವು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತವೆ (ಪಂಟಿಕು. ೯೯). ಫಿನಾಯಿಲ್: ಮೊನ್ನೆ ಫಿನಾಯಲ್ ಹಾಕಿದ ಬಕೆಟ್ಟಿನಲ್ಲಿ ಹುಳಿ ತಂದು ಬಡಿಸಿಬಿಟ್ಟರು ಪುಣ್ಯಾತ್ಮರು (ಅಗಸ್ತ್ಯ. ೭೩).

[← ಇಂ. Phenyl, Phenol]

ಫಿರಂಗಿ, ಪರಂಗ, ಪರಂಗಿ, ಪಿರಂಗಿ, ಫರಂಗಿ (ನಾ). ೧. ಐರೋಪ್ಯ ಜನಾಂಗಕ್ಕೆ ಸೇರಿದವನು : ಕಾವಲುದಳದ ಸಿಪಾಯಿಗಳು . . . ಫಿರಂಗಿಗಳ ಬಳಿಗೋಡಿದರು (ಸಗಕೊ. ೦೨೬); ಫಿರಂಗಿಗಳನ್ನು ಹಿಂದುಸ್ತಾನದಿಂದ ಹೊರಗೆ ಅಟ್ಟುವುದನ್ನು ನೋಡುವುದೇ ನನ್ನ ತೀವ್ರ ಇಚ್ಛೆಯಾಗಿದೆ (ಪ್ರಬಾಂರ. ೩೭). ೨. ತೋಪು ; ದೊಡ್ಡ ತುಬಾಕಿ : ಇಡಿಸಲೆ ನಿನ್ನ ಫಿರಂಗಿ ಬಾಯೊಳು (ಬಿಜ್ಜಲಾ. ೩-೭೭); ಪೆಟಲು ಬಾಣ ಫಿರಂಗಿ ಕೋವಿಯ ಭಟರು ಹರಿಗೆಯ ಬಲ್ಲಿನಲಿ ಸಂಘಟಿಸಿತಾಕ್ಷಣ (ಕರಲೀ. ೩೩೦-೦೩); ಅವರನ್ನು ಫಿರಂಗೀಬಾಯಿಗೆ ಕಟ್ಟಿ ಸಂಹರಿಸುವಂತೆ ಹೇಳು (ಮುದ್ರಾಮಂ. ೦೨೬); ಗುಂಡು ಹಾರಿಸಿದ ಫಿರಂಗಿಯಿಂದ ಹೊರಟಿದ್ದ ಕರಿನೀಲಿಯ ಹೊಗೆ ಬತೇರಿಯನ್ನು ತುಂಬಿತ್ತು (ಕೃಷ್ಣರೂ. ೨). ೩. ಮೇಹರೋಗ : 'ಫಿರಂಗಿರೋಗ' ಪರಾ. **ಪರಂಗ** : ೧. ಸಮಸ್ತವೀರಪರಿವಾರಾಸಯವಾಗಿ ಗೋವಯ ಪರಂಗದ ಕಪಿತನ ಮೇಲೆ ದಂ[ಡು] × ಟಯೆಲ್ಲೆನ × (ಕಾ. I. ೬೯-೬; ೦೩೨೨); ಪರಂಗದವರ ರಾಜಕಾರ್ಯ್ಯದಲಿ ನಂಮ ಅರಮನೆಯ ಬಾಗಿಲಲ್ಲಿ ನಿಂ[ನ ತಂಮ] ಯೆಕಪ್ಪನಾಯಕನು ಯಿಱದು ಯಿ[ಱಿಯಿಸಿಕೊಂಡು] ಬೀಳಲಾಗಿ (ಕಾ. III. ೦೩-೪; 1542). **ಪರಂಗಿ** : ೧. ಹೊಯ್ಸಳ ಕೊಂಗು ಸಿಂಧು ಪರಂಗಿ ಪಾಂಚಾಲಾದಿ ನೃಪರೇಳ್ವಂದರಳ್ತಿಯಲಿ (ಪುರೇಪು. ೪-೧೩); ಕರೆಯವನಿಗೆ ಬಾಧಕರಾಗಿರುವ ಪರಂಗಿಗಳ ಬಲವನುಡುಗಿಸಿ (ಕಳಸ. ೭-೭); ಪರಂಗಿಗಳಿಂದ ಬಂದ ಸಮ್ಮೇಳದ್ರವ್ಯಂಗಳಂ . . . ಉಳಿಯಲ್ವೇಳ್ಕು (ಮಹಾವಿ. ೧೦-೪೦). ೪. ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಪಪ್ಪಾಯಿ : 'ಪರಂಗಿಗಿಡ' ಪರಾ. ೫. (ಕರಾ) ಪೈನಾಪಲ್ ಗಿಡ ; ಅನಾನಸು : 'ಪರಂಗಿಗಿಡ' ಪರಾ. **ಪಿರಂಗಿ** : ೨. ತರಕಸ ಶಾರ್ಙ್ಗ ಪಿರಂಗಿ ಭಲ್ಲೆಯ ಬಿಟ್ಟು ಬಿಜುಗಣ್ಣು ಭೀಕರಾನನವು . . . ಒಪ್ಪಲ್ಬಪ್ಪ ತುರುಕ ವಜೀರ (ಪುರೇಪು. ೨೦-೭೦); ಪುರದ ಕೋಟೆಯ ಸುತ್ತಣ ಕೊತ್ತಳಗಳೊಳು ಮೆಱೆದುವು ಬಲು ಪಿರಂಗಿಗಳು (ಕಂಪಪ. ೬-೦೭) ; ಕೊತ್ತಲಗಳ ಮೇಲೆ ಯೆತ್ತಿ ಪಿರಂಗಿಯ ಹತ್ತು ದಿಕ್ಕಿನೊಳು ಹಾರಿಸಲು (ಸೌಗಂಕ. ೨-೦೯). **ಫರಂಗಿ** : ೧. ಯಾವ ಫರಂಗಿ ಬಂದು ಹೇಳುತ್ತಾನೋ ಹೇಳಲಿ (ಕಿಪಲ. ೪೬) ; ಇವನನ್ನು . . . ಫರಂಗಿಯವರು ಹಿಡಿದು ಗಲ್ಲಿಗೆ ಏರಿಸಿದಾಗ ತಾಲ್ಲೂಕು ತಾಲ್ಲೂಕೇ ಅತ್ತಿತಂತೆ (ಪಡಣಾ. II. ೦೫೨); ನಡುವೆ ಫಿರಂಗಿಗುಂಡು ಸುತ್ಮುತ್ ಫರಂಗಿ ದಂಡು (ಜಾಕದ. ೦೩೨).

[←ಇಂ. Frank./ ಹಿಂ. ಮರಾ. ಫಿರಂಗೀ. / ಸಂ. ಫಿರಂಗ]

ಫಿರಂಗಿಉಬ್ಬೆ (ನಾ). ಫಿರಂಗಿರೋಗದಿಂದ ಬರುವ ಹುಣ್ಣು : ಫಿರಂಗಿಉಬ್ಬೆಗೆ . . . ತಾಳಕ ೧೦ ತೂಕ, ರಸ ೨ ತೂಕ, ಕಪ್ಪಲಿಸತ್ವ ೧ ತೂಕ ನಿಂಬೇಹುಳಿಯಿಂದರೆದು ಮೂಸೆಯಲಿರಿಸಿ ಗುಳಿಗೆಯ ಮಾಡಿ ಮೂಸೆಯಲಿರಿಸಿ ಮೇಲೆ ಮರಳ ತುಂಬಿ ತುಸು ಪುಟಿಸಿಕೊಳ್ಳೆ ಹರವಹುದು (ಪಿವೈವಿ. ೦೬೨). [ಫಿರಂಗಿ + ಉಬ್ಬೆ$_1$?]

ಫಿರಂಗಿಚೆಕ್ಕೆ, ಪರಂಗಿಚೆಕ್ಕೆ (ನಾ). ಒಂದು ಬಗೆಯ ಔಷಧೀಸಸ್ಯ ಮತ್ತು ಅದರ ಬೇರು : ಫಿರಂಗಿ ಚೆಕ್ಕೆ ೧ ಸೇರು, ಇದಕ್ಕೆ ಕೊಡುವ ದ್ರವ್ಯ- ಹಿಪ್ಪಲಿ . . . ದೇವದಾರು, ಇವುಗಳು ಪತ್ರ್ಯಗ ೨ ತೂಕವ ಚೂರ್ಣವ ಮಾಡಿ ತೆಗೆದುಕೊಳ್ಳುವುದು (ಪಿವೈವಿ. ೩೯). **ಪರಂಗಿಚೆಕ್ಕೆ** : (ಸುಶ್ರುತಿ. ೬೦-೦೯೩೭); ಪರಂಗಿಚೆಕ್ಕೆಯ ಒಣಬೇರುಗಳಿಂದ ಸಾರ್ಸಪರಿಲ ಎಂಬ ವಸ್ತು ಸಿಕ್ಕುತ್ತದೆ (ಕಪಕೋ. X, ೭೯೩).

[ದೇ.೩ ತಮಿ. ಪಱಙ್ಕಿಚ್ಚೆಕ್ಕೆ; ತೆಲು. ಪರಂಗಿಚೆಕ್ಕ]

ಫಿರಂಗಿರೋಗ, ಪರಂಗಿರೋಗ (ನಾ). ಒಂದು ಬಗೆಯ ಮೇಹ ರೋಗ ; ಉಪದಂಶ ; ಪರಂಗಿ ಹುಣ್ಣಿನ ರೋಗ : ಉಪದಂಶ ಅಥವಾ ಫಿರಂಗಿರೋಗ (syphilis)ದಲ್ಲಿ ತೀವ್ರವಾದ ಮನೋರೋಗಗಳುಂಟಾಗುವುವು (ಮನೋರೋ. ೨೯). **ಪರಂಗಿರೋಗ** : ಪರಂಗಿ ರೋಗವು ನಮ್ಮ ಇಂಡಿಯಾದೇಶದ ಹಲವು ಭಾಗಗಳಲ್ಲಿರುವ ಕುರುಡು ತನಕ್ಕೆ ಕಾರಣವಾಗಿರುತ್ತೆ (ಪಮ್ಮರ್ಕ. ೦೦೩). [ಫಿರಂಗಿ + ರೋಗ]

ಫಿರಂಗಿಶೂಲೆ (ನಾ). = ಫಿರಂಗಿಉಬ್ಬೆ : ಫಿರಂಗಿಶೂಲೆಯಾಗಿದ್ದ ಠಾವಿಗೆ ದಿನ ಒಂದಕ್ಕೆ ಮೂಱು ಬಾರಿ ತೊಡೆದು ಮಾಯಲು ೫ ದಿನದ ಮೇಲೆ ಕೀವು ಬರುವುದು (ಪಿವೈವಿ. ೬೯). [ಫಿರಂಗಿ + ಶೂಲೆ$_1$]

ಫಿರಂಗಿಹುಣ್ಣು, ಪರಂಗಿಹುಣ್ಣು (ನಾ). = ಫಿರಂಗಿಉಬ್ಬೆ : ಆತೈಲವಂ ಪಾವಡೆಗೆ ತೊಡೆದು ಹುಣ್ಣಿಗೆ ಹಾಕಲು ಎಂಥ ಫಿರಂಗಿಹುಣ್ಣು ಮಾಣ್ಗುಂ (ಪಿವೈವಿ. ೬೬). **ಪರಂಗಿಹುಣ್ಣು** : ಉಪದಂಶವೆಂದರೂ . . . ಪರಂಗಿ ಹುಣ್ಣು ಎಂದರೂ ಎಲ್ಲಾ ಒಂದೇ ಜಾತಿ (ವೃಕ್ಷಶಾ. II. ೦೬೭).

[ಫಿರಂಗಿ + ಹುಣ್ಣು (<ಪುಣ್)]

ಫಿರಕ 'ಫಿರ್ಕಾ' ನೋ.

ಫಿರತಿ, ಫಿರ್ತಿ (ನಾ). ಸಂಚಾರ ; ಪರ್ಯಟನ ; ಪ್ರವಾಸ : ಈ ಸಾರೆಯ ಫಿರತಿಯಲ್ಲಿ . . . ರಾಮರಾಯನ ಜೊತೆಗೆ ಕಟ್ಟಿಗೆ ಹೋಗಬೇಕಾಗಿ ಬಂದಿತು. ಅವನ ಫಿರತಿಗಳು ಹೆಸರಾಗಿದ್ದವು (ಗಂಪಾಮಾ. ೦೬೪); ಇವರು ವರ್ಷಕ್ಕೆ ಏಳು ತಿಂಗಳು ಫಿರತೀ ಮಾಡಲೇಬೇಕು (ಕಾಶವ. ೬೩); ಇದ್ದೂರಾಗ ಹತ್ತು ರೂಪಾಯಿ ಕಡಿಮಿ ಸಂಬಳ ಸಿಕ್ಕರೂ ಅಡ್ಡಿಯಿಲ್ಲ ಈ ಫಿರತಿ ಕೆಲಸ ಸಿಗಬಾರದು (ಭೂಪಾಶ. ೯೩). **ಫಿರ್ತಿ** : ಆಗಾಗ ಫಿರ್ತಿಯ ಕೆಲಸವೂ ಬೀಳುವುದು (ಸಾವಿಉ. ೧೩೦) ; ಸಾಹೇಬರೊಂದಿಗೆ ಅವರು ಹಳ್ಳಿಯ ಮೇಲೆ ಫಿರ್ತಿಗೆ ಅದೇ ಹೋಗಿದ್ದರು (ಹೇಮಾಂಕ. ೦೭೩).

[← ಮರಾ. ಫಿರತೀ]

ಫಿರಿಕಟ್ಟು (ನಾ). ತಡೆ; ಬಂಧನ; ಬಂದೋಬಸ್ತು: ಅವನಿಗೆ ಜಾರಂದಾಯ ಭೂತ ಹಿಡಿದಿದೆ . . . ಆದಕ್ಕೆ ತಕ್ಕ ಫಿರಿಕಟ್ಟು ಮಾಡದಿದ್ದರೆ ಅದು ಎಲ್ಲರನ್ನೂ ರಕ್ತ ಕಾರಿಸಿ ಕೊಲ್ಲುವ ಮಹಾಭೂತ ! (ಶಶಾವ. ೦೬೯).

[← ತುಳು. ಪಿರಿಕಟ್ಟೆ]

ಫಿರಿಯಾದಿ 'ಫಿರ್ಯಾದು' ನೋ.

ಫಿರಿಯಾದು 'ಫಿರ್ಯಾದು' ನೋ.

ಫಿರ್ಕಾ, ಫಿರಕ, ಪಿರ್ಖಾ (ನಾ). ಶಾನುಭೋಗನ ಅಧಿಕಾರಕ್ಕೆ ಒಳಪಟ್ಟ ಹೋಬಳಿಯ ಒಂದು ವಿಭಾಗ : ಸಿಲೆದಾರಿ ಫಿರ್ಕಾದಲ್ಲಿ

೨೮,೦೦೦ ಕುದುರೆಗಳಿದ್ದವು (ಸುಜಾಸಂ. II. ೦೬); ಎರಡು ಅಥವಾ ಹೆಚ್ಚು ಗ್ರಾಮಗಳನ್ನು ಅಥವಾ ಅವುಗಳ ಭಾಗಗಳನ್ನು ಒಂದು ಫರ್ಕಾವಾಗಿ ಏರ್ಪಡಿಸಬಹುದು (ಗ್ರಾಪಾಶಾ. ೬೬); ಅವರ ಫರ್ಕಾದಲ್ಲಿ ಕಂದಾಯ ಯಾವಾಗಲೂ ಬಾಕಿಯಾದುದೇ ಇಲ್ಲ (ಸ್ವತ್ಯ. ೨೧). **ಫಿರಕ :** (ಕ). **ಫರ್ಕಾ :** ಒಂದೊಂದು ಫರ್ಕಾದಲ್ಲಿ ತಾಲ್ಲೂಕು ಅಮಲ್ದಾರರುಗಳು . . . ಗ್ರಾಮನೌಕರರಿಗೆ ರಜಾ ಮಂಜೂರ್ಮಾಡಲು ಅಧಿಕಾರ ಹೊಂದಿರುವರು (ಗ್ರಾಪಾಶಾ. ೭). [← ಅರ. ಹಿಂ. ಫಿರಕಾ]

ಫರ್ಕಾ 'ಫರ್ಕಾ' ನೋ.

ಫರ್ತಿ 'ಫರತಿ' ನೋ.

ಫರ್ಯಾದಿ 'ಫರ್ಯಾದು' ನೋ.

ಫರ್ಯಾದು, ಪಿರಿಯಾದಿ, ಫಿರಿಯಾದಿ, ಫಿರಿಯಾದು, ಫರ್ಯಾದಿ (ನಾ). ೧. ತಮಗಿರುವ ತೊಂದರೆಯನ್ನು ತಿಳಿಸಿ ಪರಿಹಾರಕ್ಕಾಗಿ ಮಾಡುವ ವಿನಂತಿ ; ನ್ಯಾಯಸಂಪಾದನೆಗಾಗಿ ಸಲ್ಲಿಸುವ ಅಹವಾಲು : ಈ ಕೋರ್ಟಿನ ಹಕೀಮರಲ್ಲಿ ಒಬ್ಬರ ತರುವಾಯ ಮತ್ತೊಬ್ಬರು ಅಧಿಕಾರ ವಹಿಸಿ ಹದಿನೈದು ದಿನ ಫರ್ಯಾದುಗಳನ್ನು ದಾಖಲ್ಮಾಡಿಕೊಂಡು ಆಮೇಲೆ ಹದಿನೈದು ದಿನ ಅವುಗಳ ವಿಚಾರಣೆ ನಡೆಸುತ್ತಿದ್ದರು (ಸುಜಾಸಂ. II. ೪೭) ; ಡೆಪ್ಯೂಟಿಕಮಿಷನರವರು . . . ತಮ್ಮಲ್ಲಿಗೆ ಫರ್ಯಾದು ಬಂದು ವಿಚಾರಣೆ ನಡೆಸಿಯಾಗಲಿ, ಫರ್ಯಾದಿಲ್ಲದೆ ತಾವಾಗಿಯೇ ಆಗಲಿ ಜುರ್ಮಾನೆ ಹಾಕಬಹುದು (ಗ್ರಾಪಾಶಾ. ೮೮). ೨. ದೂರು : ಝೂನ್ಸಿಯ ರಾಜ್ಯದ ಮೇಲೆ ಅನೇಕ ಸಾಹುಕಾರರ ಅರ್ಜಿ, ಫರ್ಯಾದುಗಳು ಹೆಚ್ಚಿದವು (ಝಾಂಸಿ. ೩) ; ಯಾವ ಕೋರ್ಟಿಗೆ ಹೋಗಿ . . . ಫರ್ಯಾದು ಮಾಡುವುದು ? (ಮೂಶಾಸ. ೦೯೦). **ಪಿರಿಯಾದಿ :** ೩. ದೂರು ಕೊಟ್ಟವನು ; ಆಪಾದನೆ ಮಾಡಿ ಅಹವಾಲು ಸಲ್ಲಿಸಿದವನು ; ವಾದಿ : ಈ ವಿವರವನ್ನು ಟೀಪುಸುಲ್ತಾನರಿಗೆ ಪಿರಿಯಾದಿಯಾಗಿ ಜಾಹೀರು ಮಾಡಿದರಿಂದ (ರಾಶೇಂಪ್ರ. ೩೯). **ಫಿರಿಯಾದಿ:** ೨. ಆಳುಗಳು ಪೋಲೀಸ್ ಸ್ಟೇಷನ್ನಿಗೆ ಫಿರಿಯಾದಿ ಕೊಟ್ಟರು (ಗಂಗಾಳ. ೩೯). **ಫಿರಿಯಾದು :** ೧. ಕುಹಕಿಗಳ್ ರಚಿಸಿದ ಫಿರಿಯಾದಿನಿಂ ನಿತ್ತರಿಸಲಮ್ಮದೆ ಸ್ಥಳದಿಂ ಮುನ್ನಮೆ ತೊಲಗಿ ಪೋಗಿ (ಕೆಪಸ. ೬-೧೩) ; ಅಮೀಲ ಶಿರಸ್ತೇದಾರರು ಹೋಗಿ ಜನರ ಫಿರಿಯಾದನ್ನು ವಿಚಾರಣೆ ಮಾಡಿ ಬಂದೋಬಸ್ತು ಮಾಡಿಸಬೇಕು (ಸುಜಾಸಂ. II. ೬೩). **ಫರ್ಯಾದಿ :** ೧. ನ್ಯಾಯಾಧೀಶರ ಸಭೆಯಲ್ಲಿ ಫರ್ಯಾದಿಯನ್ನು ಮಾಡಿದರು (ಕೃಷಿಪ್ರ. ೨೦); ಅವರು . . . ನನ್ನಿಂದ ಫರ್ಯಾದಿ ಬರೆಯಿಸಿದರು (ಎಡಹ. ೬೭) ; ನಾಳೆ ದರ್ಬಾರದಲ್ಲಿ ಫರ್ಯಾದಿಯನ್ನು ಕೊಡು (ಸುಂದಾಶಿ. ೦೪೦). ೨. ನನ್ನ ಮೇಲಿನ ಫರ್ಯಾದಿಗಳನ್ನು ಕೇಳಿ ಕೇಳಿ ಬೇಸತ್ತನು (ಮೇದಿಮು. ೩). ೩. ಫರ್ಯಾದಿಯ ವಕೀಲನಿಗೆ ಮೈ ಉರಿಯಿತು (ಕಮಳ. ೦೬೭) ; ಅದಕ್ಕೆ ನಾನೇ ಪ್ರಮುಖ ಫರ್ಯಾದಿ ಆಗಿದ್ದೆ (ಅಪಪಾ. ೨) ; ಫರ್ಯಾದಿ, ಅಪರಾಧಿಗಳಿಬ್ಬರೂ ತಮ್ಮ ತಮ್ಮ ಪರವಾಗಿ ವಾದಿಸುವವರನ್ನು ನೇಮಿಸಿಕೊಳ್ಳುವ ಅಧಿಕಾರವಿತ್ತು (ಹುಬ್ಬಹ. ೦೬).

ಫರ್ಯಾದಿ ಹೋಗು = ನ್ಯಾಯಾಲಯಕ್ಕೆ ಅಹವಾಲು ಸಲ್ಲಿಸು : ಅವನು ನ್ಯಾಯಾಧೀಶನ ಬಳಿಗೆ ಫರ್ಯಾದಿ ಹೋದನು (ಮುಂಬಹಾ. ೯೦೭).

[← ಅರ. ಪಾರ. ಫರ್ಯಾದ್, ಫರಿಯಾದ್ ; ಹಿಂ. ಫರಿಯಾದ್, ಫಿರಿಯಾದ್ ; ಮರಾ. ಫರ್ಯಾದ್]

ಫರ್ಯಾದುಕಛೇರಿ (ನಾ). ಮೈಸೂರಿನ ಅರಸರು ಏರ್ಪಡಿಸಿದ ಅಠಾರಾ ಕಚೇರಿಗಳಲ್ಲಿ ಒಂದು; ತಕರಾರುಗಳು, ಅಹವಾಲುಗಳನ್ನು ವಿಚಾರಣೆ ಮಾಡುವ ಕಚೇರಿ : ಕಚೇರಿಗಳು ೧. ದಿವಾನ್‌ಕಚೇರಿ . . . ೧೮. ಫರ್ಯಾದುಕಛೇರಿ (ಸುಜಾಸಂ. II. ೩೯).

[ಫರ್ಯಾದು + ಕಛೇರಿ (<ಕಚೇರಿ)]

ಫರ್ಯಾದುದಾರ (ನಾ). = ಫರ್ಯಾದು ೩ : ಫರ್ಯಾದುದಾರರು ಮತ್ತು ಸೆಷನ್ಸ್ ನ್ಯಾಯಾಧೀಶರೇ ನಡೆಸಬೇಕಾದ ಕೇಸುಗಳಲ್ಲಿ, ದಾವಾದ ಬಗ್ಗೆ . . . ಆರೋಪ ಹೊರಿಸಬಹುದು (ಕಸಕೋ. I. ೮೬೮).

[ಫರ್ಯಾದು + — ದಾರ್]

ಫಿಲಂ (ನಾ). ೧. ಭಾವಚಿತ್ರ ಅಥವಾ ಚಲನಚಿತ್ರಗಳನ್ನು ಮೂಡಿಸುವುದಕ್ಕಾಗಿ ಉಪಯೋಗಿಸುವ ಸೆಲ್ಯುಲೈಡಿನ ಸುರುಳಿ. ೨. ಚಲನಚಿತ್ರ ; ಸಿನಿಮಾ : ಇದನ್ನು 'ಫಿಲಂ' ತೆಗೆಯಬೇಕು (ಹಮ್ಮೀರ. ೩ ಪಸ್ಸ-೨ಸ್ಸು ಪಾತ್ರ). [← ಇಂ. Film]

ಫೀ.ಫೀಜು. ಫೀಸಂ (ನಾ). ಶುಲ್ಕ : ಆ ಬದುಕಿಗೆ ಬಿದ್ದಿರುವ ಫೀಗೆ ಬಡ್ಡಿ ತಕ್ಕೊಳ್ಳಲಾಗದು (ಮುಂಬಪ್ರಾ. ೨೨ ಪ್ರಶ್ನಾಪತ್ರ) ; ವಕೀಲರ ಫೀ ಕೊಡಬೇಕಲ್ಲ ಜನ್ನಪ್ಪ ? (ಗ್ರಾಪಾಯ. ೨೬೩). **ಫೀಜು :** ಉಳಿದ ಒಂದು ಪಾಲು ಕಕ್ಷಿಗಾರರ ಕಡೆಯ ವಕೀಲರಿಗೆ ಫೀಜಾಗಿ ಸಲ್ಲುತ್ತಿತ್ತು (ಸುಜಾಸಂ. II. ೪೫) ; ಹೈಸ್ಕೂಲಿನಲ್ಲಿ ಓದುತ್ತಿದ್ದ ಇಬ್ಬರಿಗೆ ಅರ್ಧ ಫೀಜು ಕಟ್ಟಬೇಕಾಗಿತ್ತು (ಸುಜಾಗ. ೬೩). **ಫೀಸು :** ಈಗ ನಾನು ನಿಮಗೆಷ್ಟು ಫೀಸು ಕೊಡಬೇಕಾಗಿದೆ ? (ಪುಸರು. ೨೦೩). ☞ 'ಫೀಜು', 'ಫೀಸು' ಎಂಬ ರೂಪಗಳು ಇಂಗ್ಲಿಷಿನ 'ಫೀ' ಎಂಬುದರ ಬಹುವಚನ ರೂಪಗಳು. [← ಇಂ. Fee]

ಫೀಜು 'ಫೀ' ನೋ.

ಫೀನಿಕ್ಸ್ (ನಾ). ೧. ಐದಾರು ಶತಮಾನಗಳ ಕಾಲ ಅರೇಬಿಯಾ ಮರಳುಗಾಡಿನಲ್ಲಿ ಜೀವಿಸಿದ್ದು, ಬಳಿಕ ತಾನೇ ಬೆಂಕಿಯಲ್ಲಿ ಸುಟ್ಟುಕೊಂಡು ಮತ್ತೆ ಹೊಸ ಹುರುಪಿನೊಂದಿಗೆ ಅದೇ ಬೂದಿಯಿಂದ ಹೊರಬಂದು ಬಹುಕಾಲ ಬದುಕುವುದೆಂದು ನಂಬಲಾದ ಒಂದು ಬಗೆಯ ಪಕ್ಷಿ : ಮುಕ್ಕಿ ಮೊಗೆಯುವೆ ಕಾಲ . . . ಉಗ್ರವ್ಯಾಘ್ರನ ಹರಿತಹಲ್ಲು ಕಿತ್ತೆಸೆವೆ. ಪುರಾತನ ಪಕ್ಷಿ ಫೀನಿಕ್ಸ್ ತನ್ನ ರಕ್ತದ ಬೂದಿ (ಪಂಪಾ. ೬೦-೯). ೨. ಒಂದು ನಕ್ಷತ್ರರಾಶಿ : ಚಕೋರವು ಪಾಶ್ಚಾತ್ಯರ ಫೀನಿಕ್ಸ್ (ನಕ್ಷತ್ರ. ೨೦). [← ಇಂ. Phoenix]

ಫೀಸು 'ಫೀ' ನೋ.

ಫುಕ್ಕಟೆ 'ಪುಕ್ಕಟೆ' ನೋ.

ಫುಗಡಿ, ಪುಗಡಿ, ಪುಗುಡಿ (ನಾ). ಪರಸ್ಪರ ಕೈಗಳನ್ನು ಭದ್ರವಾಗಿ ಹಿಡಿದು, ನಿಂತಲ್ಲೇ ಗಿರ್ರನೆ ತಿರುಗುವ ಒಂದು ಬಗೆಯ ಆಟ; ಅಪ್ಪಾಲೆ ತಿಪ್ಪಾಲೆ ; ಬಗಟ್ಟಬುಗುರಿ (ಉಕ) : ಇಬ್ಬರೂ ಎದ್ದು ನಿಂತು ಚಿಕ್ಕಮಕ್ಕಳು ಪುಗಡಿಯಾಡುತ್ತಾರಲ್ಲ — ಆ ಬೀದಿಯಲ್ಲಿ ಕೈಯಲ್ಲಿ ಕೈಯಿಕ್ಕಿ ರಿಂಗಣಗುಣಿತ ಹಾಕತೊಡಗಿದರು (ಗೀಕುಗೆ. ೧೩) ; ಪುಗಡಿಯಾಟ ನಡೆದಿತ್ತು (ಶಾಕರ. ೬೦). **ಪುಗಡಿ :** ನಾನೊಮ್ಮೆ ಪುಗಡಿ ಆಡುತ್ತಿದ್ದೆ — ಗೋಯ ಕೂಡ (ಕಪಕ. ೯೬) ; ನಾಳೆ ತಿಳಿಯುವುದು ಬೆಳಗಾದರೆ, ಗಂಡ ಬಂದು ಪುಗಡೀ ಆಡಿಸುವಾಗ ತಲೆ ಹೇಗೆ ತಿರಗುವದೆಂಬದು (ಕಪಕ. ೯೭). **ಪುಗುಡಿ :** "ರಾಸಕ್ರೀಡಾ — ಪುಗುಡಿ" (ಕಾಶಕ್ಷ. ೦೨೦); "ಪುಗುಡಿ — ಮಕ್ಕಳ ಆಟ, ಹೆಣ್ಣು ಮಕ್ಕಳ ದುಂಡಾಟ" (ಜಾನಕೋ. ೧೬).

ಪುಗಡಿ ಹಾಕು = ಅಪ್ಪಾಲೆ ತಿಪ್ಪಾಲೆ ಆಡು : ಪಗಡೆಕಾಯಿ ಕುಚಬಾಲೇರೇ ಪುಗಡಿ ಹಾಕೀರೆನ್ನ ಮುಂದೆ ತೆಗೆದುಕೊಡುವೆ ವಸ್ತ್ರವ ನಿಮಗೆ (ಕಪಕ. ೦೦೪-೯). [← ಮರಾ. ಪುಗಡೀ]

ಫುಟ್‌ಲಾಯರಿ 'ಫೂಟ್‌ಲಾಯರಿ' ನೋ.

ಫುಟ್‌ಲಾಯರು, ಪೂಟುಲಾಯರು (ನಾ). ಕಾನೂನಿನ ಪ್ರಶಸ್ತಿ ಪತ್ರ ಅಥವಾ ಸನದನ್ನು ಪಡೆಯದೆ ಹಳ್ಳಿಗಳಲ್ಲಿ ಒಬ್ಬ ವಕೀಲನ ಪರವಾಗಿ ವಕೀಲಿವೃತ್ತಿಯನ್ನು ನಡೆಸಿ ಲಾಯರ ಬಳಿಗೆ ಕಕ್ಷಿಗಳನ್ನು ಒದಗಿಸುವವನು : ಹೆಸರಾಂತ ಫುಟ್‌ಲಾಯರು ಚಿಂತಾಮಣಿಯವರ

ಕುವರಿ ಕೇವಲ ನಾಟಕದ ನರಸಿಂಹನ ಕೈಹಿಡಿಯುವುದುಂಟೇ ? (ಪಾಪುಸ. ೩೩). **ಪೂಟುಲಾಯರು :** ಅವನೊಬ್ಬ ಪೂಟುಲಾಯರು (ರೂಂ).
[<ಪೂಟು₁ + ಲಾಯರು]

ಪುಟಾಪುಟಿ (ನಾ). ೧. ಚೂರುಚೂರು ; ತುಂಡುತುಂಡು. ೨. ಅಸ್ತವ್ಯಸ್ತ ; ಚೆಲ್ಲಾಪಿಲ್ಲಿ : ಈ ಫರಜುಲ್ಲಾಖಾನನ ದಂಡು ಯಾವತ್ತೂ ಮುರಿದು ಪುಟಾಪುಟಿ ಆದ ವರ್ತಮಾನ ನವಾಬಹೈದರಲ್ಲಿ ಖಾನರು ಕೇಳಿ (ರಾಕೇಂಪ್ರ. ೨೦). [←ಮರಾ. ಪುಟಾಪುಟ್]

ಪುಪ್ಪುಸ, ಪುಪ್ಪುಸ (ನಾ). ಶ್ವಾಸಕೋಶ : ಈ ವಿಷವದಾರ್ಥಗಳು . . . ಶ್ವಾಸದ ಮಾರ್ಗದಿಂದ ನಮ್ಮ ಪುಪ್ಪುಸಗಳಲ್ಲಿ ಸೇರಿ ಅಪಕಾರ ಮಾಡುತ್ತವೆ (ಮುಂಬಯಿ. ೩-೦೩೦) ; ಆ ನರುಗಂಪನ್ನು ಎರಡು ವರ್ಷಗಳ ವರೆಗೆ ತನ್ನ ಪುಪ್ಪುಸಗಳಲ್ಲಿ ಕಾದಿಡಲು ಪ್ರಮಾಲೆ ಹವಣಿಸಿದಳು (ಸಪುಸೀ. ೩೩೦) ; ಹೃದಯ, ಪುಪ್ಪುಸ ತಮ್ಮ ಕಾರ್ಯವನ್ನು ರಕ್ತದ ಬೆಂಬಲದಿಂದ ಸಾಗಿಸುತ್ತಿರುವುವು (ಪದಂಬ. ೬೨). **ಪುಪ್ಪುಸ :** ಪುಪ್ಪುಸದಲ್ಲಿ ನೋವಿದೆಯೇ? (ಬೇದಾಸಂ. ೦೨೩) ; ರಮಾಬಾಯಿಗೆ . . . ಪುಪ್ಪುಸವಿಕಾರದ ಬಾಧೆಯಾಗಿತ್ತು (ಕ್ರಿರಂಗ. ೩೦); ಈ ಬಲಪುಪ್ಪುಸದ ಅಪರೇಶನ್ನು ಆದ ನಂತರ ಆತ ಸಂಕಟದಿಂದ ಪಾರಾದ (ಮುಕ್ತಿ. ೯). [<ಸಂ. ಪುಪ್ಪುಸ]

ಪುರೋಕ್ತು 'ಪುರೋಖ್ತು' ನೋ.

ಪುಲ್ಗರ (ನಾ). ಒಂದು ಬಗೆಯ ಜೋಳ : ಭಗವಂತಪುಲ್ಗರ, ಪಟ್ಟಣಸಾಳಿ, ಗೌರೀಕುಲ, ಬಸವನ ಪಾದ, ಪುಲ್ಗರ . . . ಕೊಡಮೂಕನ ಜೋಳ ಈ ಯೆಂಟು ಜಾತಿಗಳನ್ನು ಮುಖ್ಯ ಪೈರುಗಳಾಗಿ, ಇಲ್ಲವೇ ಬೇರೆ ಮುಂಗಾರೀ ಹಿಂಗಾರೀ ಜಾತಿಗಳ ಪೈರಿನಲ್ಲಿ ನಡುನಡುವೆ ಹಲಕೆಲವು ಸಾಲುಗಳಾಗಿ ಬಿತ್ತುವರು (ಕಣಾಗ. ೨೭೦). [?]

ಪುಲ್ಲ (ಗು). ೧. ಅರಳಿದ ; ವಿಕಸಿತವಾದ : "ಪುಲ್ಲಮುದ್ಗಮನಂ ವಿಜೃಂಭಿತಂ" (ಮಂಗರಾ. ೧೨೦-೩) : ತಿಳಿಗೊಳನಂ ಪುಲ್ಲಪಂಕೇಜಮಂ ನಿರ್ಮಳತಾರಾಧೀಶನಂ ಪೋಲ್ತೆಸೆಯೆ ನಗೆಮೊಗಂ ಕಾಂತೆ ಕಣ್ಗೊಟ್ಟಿ ತೋರ್ಕುಂ (ಅಪಪು. ೦-೪೦) ; ವಿಪಿನಸುಂದರಚೈತ್ರಮಾಸದ ಪುಲ್ಲಪುಷ್ಪ ಮಯ ಕಿಂಶುಕವೊ (ಕ್ರಿರಾಮಾ. ೩೦೩-೪೯). ೨. ಹೂವು ಬಿಟ್ಟರುವ ; ಹೂವುಗಳಿಂದ ತುಂಬಿದ. ೩. (ಕಣ್ಣುಗಳಂತೆ) ಅಗಲವಾಗಿ ತೆರೆದ, — ಹಿಗ್ಗಲಿಸಿದ. (ನಾ). ೪. ಹೂವು ; ಪುಷ್ಪ : 'ಪುಲ್ಲಶರ' ಪರಾ. ೫. [ನಾಟ್ಯ] ಕಪೋಲದ ಆರು ಭೇದಗಳಲ್ಲಿ ಒಂದು ; ಪ್ರ ಕೆನ್ನೆಗಳನ್ನು ಸಂತೋಷದಿಂದ ಅರಳಿಸುವುದು. ಸಂತೋಷದಲ್ಲಿ ಇದನ್ನು ವಿನಿಯೋಗಿಸಬೇಕು" (ಭಾಶೃರಂ. ಗದ್ಯಾನುವಾದ ೨೭೩): ನುತಿವಡೆದ ಕುಂಚಿತಂ ಕಂಪಿತಮೊಪ್ಪುವ ಪೂರ್ಣಮೆಸೆವ ಕ್ಷಾಮಂಪುಲ್ಲಂ ಸತಿ ಕೇಳ್ ಸಮಮಿಂತಾಱುಂ ಮತದಿಂ ರಂಜಿಪುದು ಗಲ್ಲಮಂಬುಜವದನೇ (ಭಾಶೃರಂ. ೩-೬೯). [ಸಂ.]

ಪುಲ್ಲಂಬು (ನಾ). ಹೂವಿನ ಬಾಣ : ಮಲ್ಲಿಗೆಗೋಲ್ಗಳೊ ಮರದ ಮಿಂಟೆಯೊ ಪೇಳು ಪುಲ್ಲಂಬೊ ಲೋಹದಂಬುಗಳೊ (ಭರತ. ೩೦-೩೩).
[ಪುಲ್ಲ + ಅಂಬು₂]

ಪುಲ್ಲಕ (ನಾ). ಹುಳು ; ಕ್ರಿಮಿ : "ಕೃಮಿಃ, ಕೀಟಃ, ನೀಲಂಗುಃ, ಪುಲ್ಲಕಃ— ಈ ೪ ಪು (ಹು)ಟು" (ಹಶಾಯು. ೧೦೩-೦೯) ; "ನೀಲಂಗು ಪುಲ್ಲಕಂ ಕ್ರಿಮಿ ಕೀಟಮಚ್ಚಪುಟುವಕ್ಕುಂ" (ಮಂಗರಾ. ೧೦೭-೩). [ಸಂ.]

ಪುಲ್ಲನೇತ್ರ (ನಾ). (ಕಮಲದ) ಹೂವಿನಂತೆ ಕಣ್ಣುಗಳುಳ್ಳವನು ; ವಿಷ್ಣು : ಪುಲ್ಲನೇತ್ರನೊಳರ್ಕನೊಳು ಶಶಿಯೊಳಾತ್ಮನೊಳು . . . ಸರೋಜದೋಳ್ ಪರಿವರ್ತಿಸಿರ್ಕುಂ ಹಂಸಾಭಿಧಾನಂ (ಮಂಗರಾ. ೦೪೯-೪೦). [ಸಂ.]

ಪುಲ್ಲಶರ (ನಾ). ೧. ಹೂವಿನ ಬಾಣ ; ಮನ್ಮಥಬಾಣ : ಪುಲ್ಲಶರಂ ಬಸಂತದ ಪುಗಿಲ್ ನೆಱೆದಿಂಗಳ ತಣ್ಪೆಸಿಲ್ . . . ಎಂಬಿಸಂ ಬಲ್ಲವರಂ ಮನಂಗೊಳಿಸುಗುಂ ಕೃತಿ (ಮುಗ್ಧಪು. ೦-೪೪). ೨. ಹೂವಿನ ಬಾಣಗಳುಳ್ಳವನು ; ಮನ್ಮಥ : ಪುಲ್ಲಶರಂಗಿಸುವೆಡೆಗಿವೆ ನಲ್ಲಂಬುಗಳ್ (ಅಂಪ. ೦೧-೦೦೦) ; ಪುಲ್ಲಶರನೆಸಕಮುಂ ಹೃದಯೋಲ್ಲಾಸಮುಮಿಂದ್ರಿಯಂಗಳಿಚ್ಛೆಯ ಸವಿಯುಂ ಸಲ್ಲದೊಡಂ . . . ಅಸಾರಮಿಾ ಸಂಸಾರಂ (ಲೀಲಾವ. ೯-೩೩). [ಸಂ.]

ಪುಲ್ಲಹೇತಿ (ನಾ). — ಪುಲ್ಲಶರ ೨ : ಪುಲ್ಲಹೇತಿಯ ಧಲ್ಲೆಹಕೆ ಕಡುನೊಂದೆ ನನ್ನಯ ನಲ್ಲನಾಗಿಯೆ ಮನ್ಮನೋರಥವೀಯಬೇಕು (ಶಾಕಿಂ. ೩-೦೬). [ಸಂ.]

ಪುಲ್ಲಾಬ್ಜಪುತ್ರ (ನಾ). ಅರಳಿದ ತಾವರೆಯಲ್ಲಿ ಹುಟ್ಟಿದವನು ; ಬ್ರಹ್ಮ : ಆ ತಾರಕಂ . . . ಉಗ್ರತಪವಂ ಮಾಡಲಾತಂಗೆ ಪುಲ್ಲಾಬ್ಜಪುತ್ರನಿಂ ವರವ ಕೊಡಿಸಲ್ಬಂದು ನೆಲಸಿದಂ ಸರ್ವೇಶ್ವರಂ (ಶಿಕೃಪು. ೩-೨೦-೪೨). [ಸಂ.]

ಪುಲ್ಲೈಸು (ಕ್ರಿ). ಅರಳು ; ವಿಕಾಸವಾಗು : ಪುಲ್ಲೈಪ ಸರಸಸುಮನಃ ವಲ್ಲವಸಂಗದೆ ಪೊದಟ್ಟು ಪೊಂಗುವನಿತಱೊಳ್ ಮಲ್ಲೀವಲ್ಲಿಮತಲ್ಲಿಗಿದೆಲ್ಲಿಯ ಕಡುವೆಂಕಿ ಸೋಂಕಿ ಕೊಂಕುವುದಕಟಾ (ಪಕಂ. ೬-೦೩೬).
[ಪುಲ್ಲ + < — ಇಸು₃]

ಪುಲ್ಲೋತ್ಪಲ (ನಾ). ಅರಳಿದ ಕಮಲ : ಪುಲ್ಲೋತ್ಪಲಭಾವನೆಯಿಂ ನಿಲ್ಲದೆ ಕೆಯ್ಯೊಳ್ವುದೆಂದು ಸಾಂಖ್ಯಂ ಮೂಱುಂ ಕಲ್ಲಿಂದಿಡುತುಂ ಗೌರೀವಲ್ಲಭನಂ ನಚ್ಚಿ ಮಚ್ಚಿ ಪೂಜಿಸುತಿರ್ದಂ (ಗೃಕವಿ. ೩೯-೦೨೦). [ಸಂ.]

ಪುಸಲತ್ತು 'ಪುಸಲತ್ತು' ನೋ.

ಪೂಟ್‌ಲಾಯರಿ, ಪೂಟಲಾಯರಿ, ಪುಟ್‌ಲಾಯರಿ, ಪೂಟಲಾಯರಿ (ನಾ). ೧. ಪೂಟ್‌ಲಾಯರನ ವೃತ್ತಿ,—ಕಾರ್ಯ : ಲಾ ಪಾಯಿಂಟುಗಳನ್ನೆಲ್ಲಾ ಅಚ್ಚುಕ್ಕು ತಿಳಿದಿದ್ದ ಚನ್ನ ಪೂಟ್‌ಲಾಯರಿ ಕೆಲಸ ಮಾಡಿದ (ವನ್ನೂರು. ೨೦೩). **ಪೂಟಲಾಯರಿ :** ೨. = ಪುಟ್‌ಲಾಯರು : ಹಳ್ಳಿಯಲ್ಲಿ ಹೀಗಾದರೆ ಪೂಟಲಾಯರಿಯು ಮುಂದೆ ಬಂದು (ಮುಸಮಾ. ೬೯). **ಪುಟ್‌ಲಾಯರಿ :** ೨. ಇವನು ಕೊಂಡಾಪುರದ ಶಾಂತವೀರಯ್ಯ, ಪುಟ್‌ಲಾಯರಿಯ ಹಾಗೆ ಏನಾದರೂ ಇವನ ತಲೆಯಲ್ಲಿ ಇದ್ದೇ ಇರುತ್ತೆ ವಿಚಾರಗಳು (ಮರಿ. ೫೯). **ಪೂಟಲಾಯರಿ :** ೧. ಪೂಟಲಾಯರಿಯಲ್ಲಿ ಸಂಪಾದಿಸುತ್ತಿದ್ದುದು (ಕಾಪುಕಾಂ. ೩). [<ಪುಟ್‌ಲಾಯರು]

ಪೂಟಕೂಲ್‌ಪತ್ರಕ (ನಾ). ಒಂದೇ ಸರ್ವೆನಂಬರಿನಲ್ಲಿ ಎರಡು ಅಥವಾ ಅದಕ್ಕೂ ಹೆಚ್ಚು ಸಾಗುವಳಿದಾರರನ್ನು ನಮೂದಿಸಿದಾಗ, ಪ್ರತಿಯೊಬ್ಬರ ವಶದಲ್ಲಿರುವ ಭೂಮಿಯ ಕ್ಷೇತ್ರ, ಕಂದಾಯ ಮೊದಲಾದುವುಗಳನ್ನು ತಿಳಿಸುವ ಕಾಗದ : (ಕೃಸ್‌ಗ. II, ೩೫೯).
[ಪೂಟಕೂಲ್₀ (ಪ್ರ ← ಇಂ, Protocol) + ಪತ್ರಕ]

ಪೂಟಮಾಗಣಿ (ನಾ). ಮಾಗಣಿಯ ಪೋಟುಭಾಗ,—ಹಿಸ್ಸೆ : (ಕೃಸ್‌ಗ. II, ೩೫೯). [< ಪೂಟು₁ + ಮಾಗಣಿ₁]

ಪೂಟಲಾಯರಿ 'ಪೂಟ್‌ಲಾಯರಿ' ನೋ.

ಪೂಟು₁, ಪೂಟು (ನಾ). ೧. ಪ್ರತ್ಯೇಕವಾದುದು ; ಪೃಥಕ್ಕಾದುದು : ತಾಲ್ಲೂಕ್ ಅಮಲ್ದಾರರಾಗಲಿ, ಸಬ್‌ತಾಲ್ಲೂಕ್‌ಡೆಪ್ಯುಟಿಅಮಲ್ದಾರರಾಗಲಿ ಪೂಟಾಗಿ ವಿಚಾರಣೆ ಮಾಡಿ ಫೈಸಲ್ ಕೊಡತಕ್ಕದ್ದು (ಗ್ರಾಮಾಕ. ೯೫). (ಗು). ೨. ಚಿಕ್ಕ ; ಸಣ್ಣವಿಭಾಗಕ್ಕೆ ಸೇರಿದ : 'ಪೂಟುದೊರೆ' ಪರಾ. ಪೂಟು : ೩. ಸಾರಾಂಶ ; ತಿರುಳು : 'ಪೂಟರ್ಜೆ' ಪರಾ. [← ಮರಾ. ಪೂಟ್]

ಪೂಟ್ಟು₂ (ನಾ). ಒಂದು ಅಳತೆಯ ಪ್ರಮಾಣ ; ಒಂದು ಅಡಿ ; ಹನ್ನೆರಡು ಅಂಗುಲ : ಸಹ್ಯಾದ್ರಿಯ ೧೭೦೦ ಪೂಟು ಯೆತ್ತರವಾದ

ಶಿಖರಗಳು ಸಮುದ್ರತೀರಕ್ಕೆ ಹೊಂದಿರುತ್ತವೆ (ಕಶಾಗಾ. ೪); ಮರದ ಸುತ್ತಳತೆಯು ಹೆಚ್ಚುಕಡಿಮೆ ಎರಡು ಸಾವಿರ ಪೂಟುವುಂಟು (ಮುಂಬಹು. ೨-೨೯); ಒಂಭತ್ತು ಪೂಟು ಅಂದರೆ ಒಂದು ಮಾರು ಆಗುವದು (ಕೃಷಿಪ್ರ. ೯೩).. [←ಇಂ. Foot]

ಪೂಟುತೀರ್ಮಾನ (ನಾ). (ನ್ಯಾಯಾಲಯದಲ್ಲಿ ಅನಾವಶ್ಯಕವಾದ ವಿವರಗಳನ್ನು ಗಮನಿಸದೆ) ಆಗಿಂದಾಗ್ಗೆ ಕ್ಷಿಪ್ರವಾಗಿ ಕೊಡುವ ನ್ಯಾಯನಿರ್ಣಯ : ಯಾವುದಾದರೂ ಅಪೀಲನ್ನು. . . ಆ ನ್ಯಾಯಾಲಯದವರಿಗೆ ತೋರಿದ ಸಂದರ್ಭದಲ್ಲಿ ಪೂಟುತೀರ್ಮಾನ ಮಾಡುವುದಕ್ಕೆ ಉಪಬಂಧಗಳನ್ನು ಕಲ್ಪಿಸುವ ನಿಯಮಗಳು (ಶಾರಾನ. ೭೭).
[ಪೂಟು$_1$ + ತೀರ್ಮಾನ]

ಪೂಟುದೊರೆ (ನಾ). ಚಿಕ್ಕರಾಜ್ಯದ ಅರಸು ; ಪಾಳೆಯಗಾರ; ಮಾಂಡಲಿಕ : ಕೆಲವರು. . . ದೇಶೀಯ ಮಹಾರಾಜರನ್ನೂ ಮುಸಲ್ಮಾನ್ ದೊರೆಗಳನ್ನೂ ಅನುಸರಿಸಿಕೊಂಡು ಇದ್ದರು. ಇಂಥಾ ಪೂಟುದೊರೆಗಳು ಜರುಗಿಸುತ್ತಿದ್ದ ಅಧಿಕಾರವು ಅಲ್ಲಲ್ಲಿ ವಿಶೇಷವಾಗಿ ಭಿನ್ನಿಸಿದ್ದಾಗ್ಯೂ ನಮ್ಮ ಭರತಖಂಡದಲ್ಲಿ ಇಂಥವರು ಹೆಚ್ಚಾಗಿದ್ದಂತೆ ತಿಳಿಯಬಂದಿದೆ (ಜಾಳಿಗಾ. ೦೯).
[ಪೂಟು$_1$ + ದೊರೆ$_3$]

ಪೂತ್ಕರಿಸು (ಕ್ರಿ). ೧. ಉಗಿ; ಉಗುಳು : ನಾಕನದೀವಾರಿಯನೀಂಟಿ ಪೂತ್ಕರಿಸಿ . . . ಪಾಲ್ಗಡಲೊಳುದ್ಯದ್ಬಾಲಲೀಲಾಪ್ರವರ್ತನಮಂ ತಾಳ್ದಿಧ ವಕ್ತ್ರನೀ ಕೃತಿಗಜಸ್ರಂ ಮಾಳ್ಕೆ ನಿರ್ವಿಘ್ನಮಂ (ಪಪಕಂ. ೦-೬); ಅಭ್ರ ಮಾತಂಗ ಪೂತ್ಕರಿಸಲ್ಕೆ ಚದರಿ ಪನಿಗಳ್ಗಗನತಳದಿ ಪರಕಲಿಸಿದುವೊಯೆನಲು ನಕ್ಷತ್ರತತಿಯು ಚದುರ ಬೀರಿದವು (ಪಂಶಾರಾ. ೩-೨-೩೩); ಸಗ್ಗಿಗರಾಣ್ಮನ ಘನಕರಿಘಟೆಗಳ್. . . ತುಂಬಿಕೆಯೊಳಿಂಬುಗೊಂಡ ತುಂಬುನೀರಂ ಪೂತ್ಕರಿಸಿ ದವುವೆಂಬಂತಿರೆ ಎಡೆವಿಡದೆ ಬಲ್ಸರಿ ಸುರಿಯೆ (ರಾಮಾಶ್ವ. ೩-೦೦). ೨. ಟಿಸ್ ಎಂದು ಸದ್ದು ಮಾಡು : ದೀಪ ನೊಂದುವಾಗ ತುಸು ಪೂತ್ಕರಿಸಿಯೆ ನೊಂದುತ್ತದೆ (ಇತ್ಯಕ. ೦೯೩). ೩. ಹಾವಿನಂತೆ ಬುಸುಗುಡು; ಬುಸ್ಸೆನ್ನು : ಅಗ್ನಿ . . . ಪ್ರಳಯಕಾಲದ ಮಹಾಸರ್ಪದಂತೆ ಪೂತ್ಕರಿಸಿತು (ಉಕ್ರಮ. ೦೦೯). ೪. (ಆಲಂ) ಸಿಡುಕಿನಿಂದ ಮಾತನಾಡು; ಅಬ್ಬರಿಸು : ನೀ ಏನ ಹೇಳುವಿ ಅದನ್ನ ? – ಗಂಗವ್ವ ಪೂತ್ಕರಿಸಿದಳು (ಅಕೋಕ. ೭೩). [ಪೂತ್ಕರಣ್ಯ + —ಇಸು$_3$]

ಪೂತ್ಕಾರ (ನಾ). ೧. ಸಶಬ್ದವಾಗಿ ಉಸಿರು ಬಿಡುವಿಕೆ : ಧನ್ವಿಪದಾತಿ ವ್ರಾತಟಂಕಾರದಿನುರುಕಹಳಾಜಾಲಪೂತ್ಕಾರದಿಂ . . . ವಿಷ್ಟಪಮಂ ಶಬ್ದಾತ್ಮಕಂ ಮಾಡಿದುದುಭಯಮಹೀಭೃಚ್ಚಮೂಚಕ್ರವಾಳಂ (ಪಂಪ್ರಪು. ೦೦-೬೬); ಮುಸುಂದಗಜಪೂತ್ಕಾರಂ ರಥಾಂಗರಥಚೀತ್ಕಾರಂ. . . ಬೆರಸಿ ಬಳೆದಾಗಸಮಂ ಮುಸುಂಕೆ (ಗಿಂಕ. ೬-೮ ಪ). ೨. ಹಾವಿನ ಬುಸುಗುಟ್ಟುವಿಕೆ : ಜಹಾಂಗೀರ ಕೆಣಕಿದ ನಾಗಿನಿಯನ್ನು ತಡೆದು ಪೂತ್ಕಾರವನ್ನು ಸ್ವಾಗತಿಸುವ ಅವಿವೇಕಕ್ಕೆ ಹೋಗಲಿಲ್ಲ (ಪೂರಶಾ. ೨೦). [ಸಂ.]

ಪೂತ್ಕೃತಿ (ನಾ). = ಪೂತ್ಕಾರ ೧ : ಭೃಂಗವಧೂಝಂಕೃತಿ ಶಂಖ ಪೂತ್ಕೃತಿರುತಂ. . . ಉದ್ಭಕೋಕಿಳರವಂ ಭೇರೀಘನಧ್ವಾನಮಾಗೆ ವಸಂತಂ ಋತುಸಾರ್ವಭೌಮವಿಭವಂ ಮೆಯ್ದೆತ್ತದೇಂ ಬಂದುದೋ (ಪಂಪ್ರಪು. ೭-೩೭). [ಸಂ.]

ಪೂಲ್‌ಸ್ಕೇಪು, ಪೂಲ್‌ಸ್ಕೇಪ್ (ನಾ). ಹದಿನೈದರಿಂದ ಹದಿನೇಳು ಅಂಗುಲ ಉದ್ದವೂ ಹನ್ನೆರಡರಿಂದ ಹದಿಮೂರುವರೆ ಅಂಗುಲ ಅಗಲವೂ ಇರುವ ಕಾಗದ : ಸಾಮಾನ್ಯವಾಗಿ ಬರೆಯಲು ಉಪಯೋಗಿಸುವ 'ಪೂಲ್‌ಸ್ಕೇಪು' ಕಾಗದಗಳಿಗೆ ಈ ಗುರುತುಗಳಿರುವುವು (ಶಾಂಪ್ರ. II. ೬೨೯). **ಪೂಲ್‌ಸ್ಕೇಪ್**: ಮುದ್ರಣಕ್ಕೆ ಉಪಯೋಗಿಸುವ ಕಾಗದಗಳು : ೧. ಪೂಲ್‌ಸ್ಕೇಪ್, ೨. ಕ್ರೌನ್ (ಮುದ್ರಕ. ೬೨). [←ಇಂ. Fool's-Cap]

ಪೂಲ್‌ಸ್ಕೇಪ್ 'ಪೂಲ್‌ಸ್ಕೇಪು' ನೋ.

ಪೆಳಾವುಗ (ನಾ). (?) : ಪಳೆಯಕಾಲ, ಪೆಳಾವುಗಂ, ಪೇಳಿ, ಅಪಳಿಯಂ (ಕಪುರ. ೦೩ ಪ್ರಯೋ). [?]

ಪೇಡೆ 'ಪೇಡ' ನೋ.

ಪೇಣಿ (ನಾ). ಒಂದು ಬಗೆಯ ಸಿಹಿ ಭಕ್ಷ್ಯ : ಅಱುಬೋನ ಪೇಣಿ ಗಾರಿಗೆ ಇಡ್ಡಲಿಗೆ ಅವುಗು . . . ಹೂರುಂಡೆಯನು ತೆಱಹಿಲ್ಲೆನಿಸಿ ಗಡಣಿಸುತ್ತ ಗುಡ್ಡರುಗಳಿಗೆ (ಸಿರ್ಕಾ. ೬-೬೩); ರಸವೊಸರ್ವ ಸಜ್ಜಿಗೆಯೆಣ್ಣೆವೂರಿಗೆ ಸುಪೇಣಿ ಮುಸುಕೊಡೆ ಬೆಣ್ಣೆದಱಗು (ಕೇರಕಾ. ೦೦-೨೬); ಜೇನು ಸಕ್ಕರೆ ಕ್ಷೀರ ರಸವಪ್ಪ ಪೇಣಿ ಸುಖೀನುಂಡೆ ವಡೆ ಗಾರಿಗೆಯ. . . ಬಡಿಸಿದರು (ಮೋಕತ. ೩-೩೨). [ಸಂ. ಪೇಣೀ]

ಪೇನ (ನಾ). ೧. ನೊರೆ ; ಬುರುಗು : "ಪೇನಃ, ಡಿಂಡೀರಃ—ಈ ೨ ನೊರೆ" (ಹಲಾಯು. ೧೦೦-೯೩); ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದೀಪೇನಂ (ಪಂಪಭಾ. ೦-೦೩೭); ಉತ್ಕೀರ್ಣಪೇನಂ. . . ಅಂಭೋನಿಧಾನಂ (ಜಗಪ. ೦-೨೩); ರವಿಹಯಾನನಪೇನಪುಂಜವೋ. . . ಎನೆ ತರಳತಾರಾಳಿ ಕಣ್ಗೆಸೆದುದು (ಹಕಶಾ. ೩-೭೯). ೨. ಕಡಲ ನಾಲಗೆ; ಸಮುದ್ರದ ನೊರೆ : "ಡಿಂಡೀರಃ, ಅಬ್ಧಿಕಫಃ, ಪೇನಃ — ೩ ಸಮುದ್ರದ ನೊರೆ" (ಸಿದ್ಧಾಂತಿ. ೩೦೬). [ಸಂ.]

ಪೇನಿಲ (ಗು). ೧. ನೊರೆಯುಳ್ಳ ; ಬುರುಗುಳ್ಳ. (ನಾ). ೨. ಅಂಟುವಾಳದ ಮರ ಮತ್ತು ಅದರ ಕಾಯಿ. ೩. ಒಂದು ಬಗೆಯ ಮರ ; ತಿಲಕವೃಕ್ಷ : "ತಿಲಕಂ ಕ್ಷುರಕಾಖ್ಯಂ ಪೇನಿಲಮಕ್ಕುಮರಿಷ್ಟ ಶಾಖಿ" (ವಸ್ತುಕೋ. ೩೩-೨) ; "ಕ್ಷುರಕಮೆನೆ ಪೇನಿಲಮೆನಲ್ ತಿಲಕತರು ವಕ್ಕು" (ಮಂಗರಾ. ೩೬-೦೭). [ಸಂ.]

ಪೇರಂಡ (ನಾ). ನರಿ ; ಜಂಬುಕ : "ಜಂಬುಕಃ, ಶಿವಾ, ಪೇರಂಡಃ . . . ಮೃಗಧೂರ್ತಕಃ —ಈ ೮ ನರಿ" (ಹಲಾಯು. ೩೬-೭೬). [ಸಂ.]

ಪೇರಣಿ 'ಪೈರಣಿ' ನೋ.

ಪೇರವ (ನಾ). ೧. = ಪೇರಂಡ : "ಶಿವೆ ಮೃಗಧೂರ್ತಂ ... ನರಿ ಪೇರವಂ" (ವಸ್ತುಕೋ. ೪೦-೩) ; ಕಾಕಳಿಕಳಿತಮಪ್ಪ ಕಳಕಂಠೀಜನದ ಗೇಯಮೆತ್ತಲೀ ಕಠೋರಪೇರವ ಪೆಕ್ಕಾರಾರಾವಮೆತ್ತಲ್ (ಪರ್ಣಶಾ. ೬-೪ ಪ) ; ಹರಿಶಂಖಮಹಾಭೈರವರವಮದು ಕಿವಿವುಗೆ ಪೇರವರವಮೊದವೆ ರಿವುಬಲಂ ಕೆಡೆದಿರದೇ (ಜಗಪ. ೬-೦೦೭). ೨. ನೀಚ ; ಅಧಮ. ೩. ಪಿಶಾಚಿ ; ರಾಕ್ಷಸ. [ಸಂ.]

ಪೇರಿ, ಪೇರಿ$_1$ (ನಾ). ೧. ಪ್ರದಕ್ಷಿಣೆ ; ಸುತ್ತು : ಭೂಮಿಯು ತನ್ನ ಮೈ ಸುತ್ತು ತಿರುಗುತ್ತ ಸೂರ್ಯನ ಸುತ್ತುಮುತ್ತು ವರ್ತುಲಾಕಾರವಾಗಿ ಪೇರಿಯನ್ನು ಹಾಕುತ್ತದೆ (ಮುಂಬಹು. ೬-೩೯) ; ಎಂಥಾ ಮೋಜಿನ ಕುದುರಿ ಹತ್ತಿದ ಮ್ಯಾಲ ತಿರುಗುವುದು ಹನ್ನೊಂದು ಪೇರಿ (ಶಂಕಶ. ೪೭-೨) ; ಮರಿಗುದುರೆ ಪೇರಿ ತಿರುಹುತ ಬರುತಾನೆ ಬರಿಗೊಡದಮ್ಮ ಬದಿಗಾಗೆ (ಕರ್ಣಪು. ೦೨೯). ೨. ಸುತ್ತಾಟ ; ಸಂಚಾರ ; ಓಡಾಟ : ಕುದುರೆಗಳು ಹಲ್ಲಣಿಸಿ ಪೇರಿ ಮಾಡಲಿಕೆಂದು ಸಂದಣಿಸಿ ನಿಂದಿರುವವು (ಕೃಷ್ಣಪ. ೨-೩೩) ; ಅಲ್ಲಿ ನಿಂತಿದ್ದುದೂ ಜಾತಿಯಲ್ಲಿ ಕುದುರೆಯಾಗಿದ್ದರೂ . . . ಅಜ್ಜಿಸಾಬು ಹೇರಿಗೂ ಪೇರಿಗೂ ಬಳಸುತ್ತಿದ್ದ ತಟ್ಟಿಗಿಂತ ತುಸು ಉತ್ತಮವಾಗಿತ್ತು (ಮರಿಮು. ೪೨೦). ೩. ಸುತ್ತುಗಳನ್ನುಳ್ಳದು ; ಸುಳಿ (?) : ಕಬ್ಬು ಬೆಳೆಯುವ ಸಮಯದಲ್ಲಿ ಒಂದು ಪೇರಿ ಬರುವುದನ್ನು ನೋಡಿ ಆ ಕಬ್ಬಿನ ನಾಲ್ಕೂ ಕಡೆಗೂ ಅದರ ಭಾರದ ತೂಕವನ್ನು ನೋಡಿ ಹತ್ತು ಹದಿನೈದು ಇಪ್ಪತ್ತು ಕಬ್ಬುಗಳನ್ನು ಒಂದುಗೂಡಿಸಿ . . . ಬಿಗಿದು ಕಟ್ಟಿ (ಕೃಷಿಪ್ರ. ೦೬೯). **ಪೇರಿ$_1$** : ೨. ನಾವು ತಿರುಗೋ ಮುಕ್ಕಗಳು, ಆಗಾಗ ಒಂದು ಪೇರಿ ಹೊಡೆದು ಬಂದು ಬುಡ್ತೇನಿ (ಪುಗ್ಗಿ. ೦೬೫). 'ಪ್ರಭಾತಪೇರಿ' ಪರಾ.

ಫೇರಿ ಬಿಡು = ಓಟ ಕೀಳು ; ವೇಗವಾಗಿ ಹೋಗು : ಆ ದಿವಸ ಸೈಕಲು ಹತ್ತಿ ಫೇರಿ ಬಿಟ್ಟರಾಯಿತು (ಹಹಸ. ೬೬) ; ಗಾಡಿ 'ರೋಟು' ಇದ್ದರೆ ನಾನು ಸೈಕಲ್ ಫೇರಿ ಬಿಡುತ್ತೇನೆ (ಸರಸ. ೨೬) ; ಫೇರಿ ಬಿಟ್ಟನೆಂದರೆ ಸುಬ್ಬಯ್ಯಶೆಟ್ಟರ ಜಟ್ಕ ಸುಳ್ಳು (ಶಿರಾಳು. ೭). ಫೇರಿ ಹೊಡೆ = ಸಂಚರಿಸು ; ಸುತ್ತು : ಹುಬ್ಬಳ್ಳಿ ಧಾರವಾಡ ಕಡೆ ಒಂದು ಫೇರಿ ಹೊಡದು ಬಂದರ ಬೇಕಾದ್ದಂಗ ಚೈನೀನ ಚೈನಿ (ತಿಡುಗು. ೫೩). ಫೇರೀ ಮಾಡು = ಫೇರಿ ಹೊಡೆ : ಆಕೀ ಏನು ಸಾಂಗಲೀ ಪುಣೇದ ಫೇರೀ ಮಾಡತಿರತಾಳೇನು ? (ರೀಪಕ. II, ೦೫). [←ಹಿಂ. ಮರಾ. ಫೇರೀ]

ಫೇರಿಸ್ತ್ 'ಫೇರಿಸ್ತು' ನೋ.

ಫೇರಿಸ್ತಾ 'ಫೇರಿಸ್ತು' ನೋ.

ಫೇರಿಸ್ತು, ಫೇರಿಸ್ತ್, ಫೇರಿಸ್ತಾ, ಫೇರೀಸ್ತು (ನಾ). ವಿವರಗಳನ್ನೊಳಗೊಂಡ ಸೂಚಿ ; ಯಾದಿ ; ಪಟ್ಟಿ : (ಕ). ಫೇರಿಸ್ತ್ : (ರೈಗ್ರಂ. II, ೩೧೮). ಫೇರಿಸ್ತಾ : ಮಲ್ಲಿಕ್‌ಕಾಫರನು, ದಂಡೆತ್ತಿ ಬಂದಾಗ ಬೇಲೂರು ದೇವಾಲಯವೊಂದರಿಂದಲೇ ತೊಂಭತ್ತಾರು ಸಾವಿರ ಮಣ ಭಂಗಾರವನ್ನು ಸುಲಿಗೆ ಮಾಡಿದನೆಂದು ಅಬ್ದುಲ್ ರಜಾಕನ ಫೇರಿಸ್ತಾದಿಂದ ತಿಳಿದು ಬರುತ್ತದೆ (ಕಕಬಿ. ೦೩೨). ಫೇರೀಸ್ತು : (ಕ).

[←ಅರ. ಪಾರ. ಫಿಹರಿಸ್ತ್ ; ಹಿಂ. ಫೇಹರಿಸ್ತ್ ; ಮರಾ. ಫೇರೀಸ್ತ್]

ಫೇರೀಸ್ತು 'ಫೇರಿಸ್ತು' ನೋ.

ಫೇರು (ನಾ). = ಫೇರಂಡ : "ಜಂಬುಕಃ . . . ಫೇರುಃ, ಕ್ರೋಷ್ಟಾ (ಚ) ಮೃಗಧೂರ್ತಕಃ — ಈ ರ ನರಿ" (ಹಲಾಯು. ೩೯-೩೬) ; ಶ್ವಾನ ಶಾರ್ದೂಲ ಫೇರು . . . ಮುಂತಾದ ಕ್ರೂರಜೀವಂಗಳು ಸಾಯಲು (ಸ್ಕಾಪ. ೨೯-೯೦). [ಸಂ.]

ಫೇಲ (ನಾ). ತಿಂದು ಮಿಕ್ಕುದು ; ಎಂಜಲು ; ಉಚ್ಛಿಷ್ಟ. [ಸಂ.]

ಫೇಲಿ, ಫೇಳಿ (ನಾ). = ಫೇಲ : "ಭೋಜನಕ್ಕಾಗಿ ಮಿಕ್ಕದು ವಿಘಸ ಮಕ್ಕುಂಡ ಭಾಜನದೊಳಿರೆ ಫೇಲಿ[ಪಾಠಾ. ಳಿ]ಯುಚ್ಛಿಷ್ಟಮೆನಿಸಿಕ್ಕು" (ಪಂಗರಾ. ೬೩-೭). ಫೇಳಿ : ಜಂಗುಳಿ ಪುತ್ತಳಿ ಗೋಳಿ ಫೇಳಿ ಉಬಸಂದೇಹಂ (ಕಪಾದ. ೨೩). [ಸಂ. ಫೇಲೀ]

ಫೇಲಿಕೆ, ಫೇಳಿಕೆ (ನಾ). = ಫೇಲ. ಫೇಳಿಕೆ : "ಭುಕ್ತೋಚ್ಛಿಷ್ಟಂ, ಫೇಳಿಕಾ— ಈ ೨ ಮಡಗೂಲು" (ಹಲಾಯು. ೩೯-೦೬೦) ; "ಭುಕ್ತೋಚ್ಛಿಷ್ಟಂ ಫೇಳಿಕೆ" (ಪಸ್ತುಕೋ. ೯೩-೯). [ಸಂ. ಫೇಲಿಕಾ]

ಫೇಲಿಪಾತ್ರೆ (ನಾ). ಪೀಕದಾನಿ ; ಪಡಿಗ: "ಫೇಲಿ[ಪಾಠಾಂ. ಳಿ]ಪಾತ್ರೆಯೆನೆ ಪಡಿಗಮೆನಿಸಿಕ್ಕು" (ಪಂಗರಾ. ೬೩-೨೩). [<ಸಂ. ಫೇಲೀಪಾತ್ರ]

ಫೇಲು (ನಾ). ತೇರ್ಗಡೆಯಾಗದಿರುವಿಕೆ ; ಅನುತ್ತೀರ್ಣತೆ ; ನಾಪಾಸು : ಕಳೆದ ಪರೀಕ್ಷೆಯಲ್ಲಿ ಅವನು ಫೇಲಾಗಿದ್ದುದರಿಂದ ಈಗ ಕಷ್ಟಪಟ್ಟು ಓದುತ್ತಿದ್ದಾನೆ (ರೂಢಿ). [← ಇಂ. Fail]

ಫೇಲೆ (ನಾ). = ಫೇಲ : "ಫೇಲಾ . . . ಉಂಡು ಮಿಕ್ಕ ಎಂಜಲು" (ಸಿದ್ಧಾಂತಿ. ೨೯೦). [ಸಂ. ಫೇಲಾ]

ಫೇಳಿ 'ಫೇಲಿ' ನೋ.

ಫೇಳಿಕೆ 'ಫೇಲಿಕೆ'ನೋ.

ಫೈಲು (ನಾ). ೧. ಬೇಕಾದಾಗ ನೋಡುವುದಕ್ಕೆ ಅನುಕೂಲವಾಗುವಂತೆ ಕಾಗದಪತ್ರಗಳನ್ನು ಜೋಡಿಸಿ ಇಡುವ ಸಾಧನ : ಅದಕ್ಕೆ ಸಂಬಂಧಿಸಿದ ಕಾಗದಗಳನ್ನು ಮೊದಲನೆಯ ಫೈಲಿನಲ್ಲಿ ಇಟ್ಟಿದ್ದೇನೆ (ರೂಢಿ). ೨. ಜೋಡಿಸಿಟ್ಟ ಕಾಗದಪತ್ರಗಳ ಕಟ್ಟು : ಕಾರಕೂನ . . . ಯಾವುದೋ ಫೈಲಿನಲ್ಲಿ ಮಗ್ನನಾದ (ಶಸ್ತ್ರಹಿಂ. ೦೨) ; ಎಲ್ಲ ಫೈಲುಗಳನ್ನು ತರಿಸಿ ತಾವೇ ಪರಿಶೀಲಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ (ರೂಢಿ). ೩. ನ್ಯಾಯಾಲಯದಲ್ಲಿಯ ವಿಚಾರಣೆಗಾಗಿ ಜೋಡಿಸಿ ಇಟ್ಟುಕೊಂಡಿರುವ ದಾಖಲೆಗಳ ಕಟ್ಟು : ಸದರಿ ವ್ಯಾಜ್ಯವನ್ನು ಫೈಲಿನಿಂದ ವಜಾ ಮಾಡುತ್ತಾರೆ (ಗ್ರಾಪಾಕ. ೨೯) ; ಮೊಕದ್ದಮೆಯನ್ನು ಪೊಲೀಸಿನವರು ಫೈಲಿಗೆ ತೆಗೆದುಕೊಂಡು ತನಿಖೆ ಪ್ರಾರಂಭಮಾಡಿದರು (ಪಡಿಪಾ. II, ೬೬೦). [←ಇಂ. File]

ಫೈಸಲ್ 'ಫೈಸಲು' ನೋ.

ಫೈಸಲಾತಿ (ನಾ). ತೀರ್ಮಾನ ; ನಿರ್ಣಯ : ಅವನ ಪ್ರಾಮಾಣಿಕತನವನ್ನು ಮೆಚ್ಚಿ ಸಾಲಿಗರು ಲೇವಾದೇವಿಯ ಫೈಸಲಾತಿ ಕ್ರಮಗಳಿಗೆ ಅವನನ್ನೇ ನೇಮಿಸಿದರು (ದಾಧಾಸ. ೯೦); ಕಚೇರಿಯ ಒಂದು ಕಡತವನ್ನು ಫೈಸಲಾತಿ ಬಗ್ಗೆ ತರಬೇಕೆಂದು ಹೇಳಿ ಕಳಿಸುತ್ತೇನೆ (ಸುಹಾಗ. ೦೨೩). [< ಫೈಸಲು]

ಫೈಸಲು, ಫೈಸಲ್ (ನಾ). = ಫೈಸಲಾತಿ : ಕಮ್ಮಿ ಜಾಸ್ತಿಯ ಲೆಖ್ಖವಿದ್ದ ರಹಿತರು ಸಹಿತ ಫೈಸಲಿಗೆ ಬರುವಂತೆ ಕರಣಿಕರಿಗುಸುರು ನೀನು (ಶಾಕಾರಿ. ೩೦-೩೬); ಈ ಮೊಕದ್ದಮೆಯ ಫೈಸಲನ್ನು ಮಾರನೇ ದಿನಸ ಹೇಳುವುದಾಗಿ ದಂಡನಾಧಿಕಾರಿ ಅಪ್ಪಣೇ ಮಾಡಿದ್ದೂ ಅಲ್ಲದೆ-ಯಾವ ಕೃತ್ಯವೂ ನಡೆಯಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ (ಅರೂಬೆ. ೦೧೩). ಫೈಸಲ್ : ಆಗ ಫೈಸಲ್ ಆಗುವಂತೆ ತೋರಲಿಲ್ಲ (ಪಂಯಾತ್ರೆ. ೯); ಯಾವ ಕೋರ್ಟಿನಲ್ಲಾಗಲಿ ಫೈಸಲಾಗದೆ ಬಾಕಿಯಲ್ಲಿರುವ ಇಂಥಾ ಎಲ್ಲಾ ವ್ಯಾಜ್ಯಗಳೂ ಆಯಾ ಕೋರ್ಟಿನವರಿಂದಲೇ ವಿಚಾರಿಸಲ್ಪಟ್ಟು ವ್ಯವಸ್ಥೆ ಮಾಡಲ್ಪಡಬೇಕು (ಗ್ರಾಪಾಕ. ೨೦).

ಫೈಸಲ್ ಮಾಡು = ತೀರ್ಮಾನಿಸು ; ನಿಕಾಲೆಮಾಡು : ಎಲ್ಲ ಫೈಸಲ್ ಮಾಡಿ ಬಿಡುತ್ತೇನೆ (ದೌಂಶ. ೨೬೦) ; ಆ ಕಾಗದಗಳನ್ನೆಲ್ಲ ನಾನೇ ಫೈಸಲ್ ಮಾಡತ್ತಿದ್ದೆನಲ್ಲ ? (ರಂಗಳ. ೨೦).

[← ಅರ. ಫೈಸ್ಲಾ ; ಹಿಂ. ಮರಾ. ಫೈಸಲ್]

ಫೊಟ್ಟನೆ (ಅ). 'ಫೊಟ್' ಎಂಬ ಸದ್ದಿನೊಡನೆ : ಫೊಪ್ಪನೆ, ಧಣಮ್ಮನೆ ಫೊಟ್ಟನೆ, ಫಟೆಲನೆ (ಕಪಾದ. ೦೯ ಪ್ರಯೋ). [ಫೊಟ್ + — ಅನೆ]

ಫೊಳಲಿನಾಡು (ನಾ). ಒಂದು ನಾಡಿನ ಹೆಸರು : ಚೊಟಬಾಧಿಂಗಜರಲ್ಲಿ ಪಡೆದ ಊರು ಫೊಳಲಿನಾಡುಳ್ಳೊಳೆಯೂರು ಬರಗೂರಂ ಬಿಜಆ ಮಾದೇವಿಯಾಳುತ್ತಿರೆ (ಎಕ. XII, ಶಿಗಾ. ೨೯-೩೯; ಸು. ೨೦೦). [? + ನಾಡು]

ಫೋಟೋ (ನಾ). ಚಿತ್ರಗ್ರಾಹಕಯಂತ್ರ (ಕೆಮರಾ)ದ ಸಹಾಯದಿಂದ ಮೂಡಿಸುವ ಚಿತ್ರ ; ಛಾಯಾಚಿತ್ರ : ಪತ್ರಿಕೆಯಲ್ಲಿ ೧೨ ವರ್ಷದ ಒಬ್ಬ ಹುಡುಗನ ಫೋಟೋ ಬಂದಿತ್ತು (ಜೀವಾತ್ಮ. ೨೯೨); ಅಕ್ಕನ ಫೋಟೋ ಮೊಗ್ಗಾವಿಯ ಮನೆಯಲ್ಲಿ ಉಳಿದುಬಿಟ್ಟಿದೆ (ಸಮುಜೀ. ೪೬೯).

[← ಇಂ. Photo]

ಫೋಟೋಗ್ರಫಿ (ನಾ). ಛಾಯಾಚಿತ್ರ ತೆಗೆಯುವ ವಿದ್ಯೆ : ಫೋಟೋ ತೆಗೆಯಲು ಸ್ಥೂಲಪ್ರಕಾಶ ಬೇಕು. ಸೂಕ್ಷ್ಮಶರೀರವು ಫೋಟೋಗ್ರಫಿ ತತ್ವಕ್ಕೆ ಸಂಬಂಧಪಟ್ಟುದಲ್ಲ (ಜೀವಾತ್ಮ. ೨೫೫). [←ಇಂ. Photography]

ಫೋಟೋಗ್ರಾಫರ್ (ನಾ). ಛಾಯಾಚಿತ್ರಗಳನ್ನು ತೆಗೆಯುವವನು ; ಫೋಟೋ ತೆಗೆಯುವವನು : ಫೋಟೋಗ್ರಾಫರ್‌ನು ದೊಡ್ಡ ಚಿತ್ರಗಳನ್ನು ಚಿಕ್ಕವನ್ನಾಗಿಯೂ . . . ಪರಿವರ್ತಿಸಬಲ್ಲ (ಜೀವಾತ್ಮ. ೨೨೩).

[← ಇಂ. Photographer]

ಫೋಡ್ (ನಾ). ಜಮೀನನ್ನು ವಿಭಾಗಿಸುವಿಕೆ, — ಪೋಟುಭಾಗ ಮಾಡುವಿಕೆ : (ರೈಗ್ರಂ. II, ೩೫೯). 'ಪೋಡು' ಪರಾ.

[←ಹಿಂ. ಪೋಡಾ ; ಮರಾ. ಪೋಡ್]

ಫೋತಿ 'ಪೌತಿ' ನೋ.

ಫೋನ್ 'ಫೋನು' ನೋ.

ಫೋನು, ಫೋನ್ (ನಾ). ವಿದ್ಯುಚ್ಛಕ್ತಿಯ ಸಹಾಯದಿಂದ ಧ್ವನಿಯನ್ನು (ಮುಖ್ಯವಾಗಿ ಮಾತುಗಳನ್ನು) ತಂತಿಮಾರ್ಗವಾಗಿ ಸ್ಥಳ

ದಿಂದ ಸ್ಥಳಕ್ಕೆ ಸಾಗಿಸುವ ಸಲಕರಣೆ ; ದೂರವಾಣಿ ; ಟೆಲಿಫೋನು : ನನ್ನ ಫೋನಿನ ಸಂಖ್ಯೆಯನ್ನು ಆತನಿಗೆ ಶ್ರುತಪಡಿಸಿ . . . ಹಸಿದಿದ್ದ ಹೊಟ್ಟೆಯ ಕಡೆಗೆ ಈಗ ಗಮನ ಕೊಟ್ಟೆ (ಸಂಟೆಕು. ೦೦೩). **ಫೋನ್** : ನಮ್ಮ ಮನೆಯಲ್ಲಿ ಫೋನ್ ಇದೆ (ಕೂಡಿ).

ಫೋನುಮಾಡು = ದೂರವಾಣಿಯ ಮೂಲಕ ಸಂಪರ್ಕ ಬೆಳೆಸು.—ಮಾತನಾಡು : ಅಗತ್ಯವಿದ್ದರೆ ಫೋನು ಮಾಡಿ ತಿಳಿಸಿಬಿಡು (ಕೂಡಿ).

[←ಇಂ. Phone]

ಫೋನೋಗ್ರಾಫು (ನಾ). ರಬ್ಬರ್ ತಟ್ಟೆಗಳ ಮೇಲೆ ಧ್ವನಿಸಂಗ್ರಹ ಮಾಡಿ, ಅದನ್ನು ಪುನಃ ಧ್ವನಿಯಾಗಿ ಹೊರಡಿಸುವ ಯಂತ್ರ; ಸ್ವರಲೇಖಕಯಂತ್ರ; ಗ್ರಾಮಫೋನು : ಮಹಾರಾಜರು ಅದನ್ನು ಎದಿಸನ್ನನ ಫೋನೋಗ್ರಾಫಿನಲ್ಲಿ . . . ಧ್ವನಿ ಮುದ್ರಿಸಿಕೋಡರು (ಸಂಗೀತ. ೨೦) ; ಫೋನೋಗ್ರಾಫಿನಲ್ಲಿ ನಾಟಕದ ನಟಿಯರ ಹಾಡುಗಳನ್ನು ಕೇಳಿಸಿ, ಅವನು ತನ್ನ ಮಿತ್ರವರ್ಗವನ್ನು ಸಂತೋಷಗೊಳಿಸುವ (ಇಕ್ಷ.೪೦೧).

[←ಇಂ. Phonograph]

ಫೋನೋಗ್ರಾಮ್ (ನಾ). = ಫೋನೋಗ್ರಾಫು : ಅವರ ಮನೆಯ ಹಳೆಯ ಕಾಲದ ಫೋನೋಗ್ರಾಮಿನಿಂದ ಹಾಡು ಕೇಳಿ ಬರುತ್ತಿತ್ತು (ಕೂಡಿ).

[←ಇಂ. Phonogram]

ಫೋರ್ಜರಿ (ಗು). ೧. ಕೃತಕವಾದ ; ನಕಲಿ : ನಿನ್ನ ಹತ್ತಿರ ಫೋರ್ಜರಿ ನೋಟುಗಳು ಇಲ್ಲವಲ್ಲ (ಕಾಸಕೃ. ೦೬). (ನಾ). ೨. ದಸ್ತೈವಜು ಮೊದಲಾದುವುಗಳ ಖೋಟಾ ರಚನೆ ; ಅಸಲಿನಂತೆಯೇ ಇರುವ ಸುಳ್ಳುಪತ್ರ : ಅವನು 'ಫೋರ್ಜರಿ' ತಯಾರಿಸುವುದರಲ್ಲಿ ಹೆಸರುವಾಸಿ (ಕೂಡಿ). ೩. ಕಳ್ಳರುಜು.—ಸಹಿ : ಅವನು . . . ಫೋರ್ಜರಿಯ ಆಪಾದನೆಗಾಗಿ ಬಂದಿಯಾಗಿದ್ದ ತನ್ನ ತಮ್ಮನನ್ನು ನೋಡುವ ಸಲುವಾಗಿ ಅವನಲ್ಲಿಗೆ ಬಂದಿದ್ದನು (ಪುವರು. ೦೬೯). [←ಇಂ. Forgery]

ಫೌಜದಾರ್ 'ಫೌಜುದಾರ' ನೋ.

ಫೌಜದಾರ 'ಫೌಜುದಾರ' ನೋ.

ಫೌಜದಾರಿ 'ಫೌಜುದಾರಿ' ನೋ.

ಫೌಜು, ಪವುಜು, ಪೌಜು, ಫವುಜು (ನಾ). ದಂಡು ; ಸೈನ್ಯ; ಪಡೆ : ಭಾಸ್ಕರ ಬಿಸಿಲ್ಗುದುರೆಯ ಫೌ[ಜಾಜ.ಪೌ]ಜನಟ್ಟಿದನು (ಮೋಹಕ. ೦೯-೪೩); ಪಾರವಿಲ್ಲದ ರತ್ನಕಾಂತಿಯಿಂ ಜ್ವಲಿಪ ಭಂಗಾರದಾಸನದಲ್ಲಿ ಮಂಡಿಸಲ್ಕಿಕ್ಕ ಪರಿವಾರ ನೃಪಸೇವೆಯೊಳ್ ನಿರತರಾಗಿರುತಿರಲು ಸುರುಟಿಂಗೆ ಫೌಜೊದಗಿತು (ಅಜಾಗಿ.೨೯-೩೩); ಗೌಜಿ ನೋಡಲು ಬಂದ ಜನರಿಗೂ ವಿನಾಕಾರಣ ಪೆಟ್ಟು ಸಿಕ್ಕಿ ಸರಕಾರದ ಮೇಲೂ ಪೋಲೀಸು ಫೌಜಿನ ಮೇಲೂ ಹಳ್ಳಿಯವರಿಗೆ ಸಿಟ್ಟು ಒಳಗೊಳಗೆ ಕುದಿಯುತ್ತಿತ್ತು (ಶುರುಜಾ. ೦೨೦). **ಪವುಜು** : ಭರದಿಂದಾ ಕಾಲದ ಕಾರ್ಮುಗಿಲೊಳ್ ಪಿರಿದುಂ ಮುಳಿದು ಪಳಂಚುವ ಪಾಂಗಿಂದೆರಡುಂ ಪವುಜಿನ ಪೇರಾನೆಯ ತಟ್ಟೇಱುಯಿದಿರ್ಚಿದರು (ಸಮಂಕಾ.೬-೩೬); ಕರಿಗಳೊ ಕಲ್ಪಾಂತಮೇಘದೊಬ್ಬುಳಿಗಳ ಸರಿಗಳೊ ಕಾಲಾಳ ಪವುಜೊ . . . ಎನೆ ತುರುಕರ ಬಲವೈದಿದುದು (ಶಂಪಪಿ.೦೬-೬೭). **ಪೌಜು**: "ಒಡ್ಡೆನಲ್ ಪೌಜುವೆಸರ್" (ಪಕುಪಿ. ೩೬); ತಾ ತುರಂಗದ ಮೇಲೆ ಪಶುತಮವೆಂಬ ಖಂಡೆಯವ ಪಿಡಿದು ಚಂಡಿಕಾಕಿರಣದ ಮೇಲೆ ಅಂಗೈಸಿ ಏಜಲಾಗಿ ಪೌಜು ಬೆರೆಯಿತ್ತು (ಸರ್ಗ. ೩೬-೨೯೯); ಕರಿಘಟೆಯೊಂದು ಕರಭವಾಜು ತುರಗ ಸಾವಿರ ಹತ್ತುಸಾವಿರಮುಂದಿ ಇರಲದನೊಂದು ಪೌಜೆಂದು ಪೇಳ್ವರು (ಶುರಾಸಾಂ. ೪೦-೬೩) : ಮೇಳೈಸಿ ನಿಲಿಸಿದಂ ನಿಜಬಲದ ಪೌಜುಗಳ ನರ್ಧಚಂದ್ರಾಕೃತಿಯೊಳು (ಕೃಪುಶಾ. ೨೩-೦೦). **ಫವುಜು**: ಒಡ್ಡಿದ ಫವುಜನು ದೊಕ್ಕನಂದೊಬ್ಬುಳಿ ಮಾಡಿ (ಅಪಂಪ.೨೯-೩೦); ಈಗ ನಿಮ್ಮ ಫವುಜು ಕಳುಹಿಸಿ ಕೊಟ್ಟರೆ ಈ ಕೋಟೆ ನಿಮ್ಮ ಕೈವಶ ಮಾಡಿಕೊಡುತ್ತೇವೆ (ರಾಶೇಂದ್ರ.೩).

ಫೌಜುಫೌಜು, ಪೌಜುಪೌಜು (ದ್ವಿರುಕ್ತಿ): ಪಾಜಿಪಾಜಿಗಳ ವೈಹಾಳಿಯಂ ಮಾಡುತ್ತ ಫೌಜುಫೌಜಿಗೆ ಕೂಡಿಕೂಡಿ ಖುರಪುಟರವಕ್ಕೆ ಮೂಜಗವು ತಲ್ಲಣಿಪ ತೆಱದಿಂದೆ . . . ಹೊಯ್ದಾಡುತಿರಲು (ಶ್ರೀಧರಾ.೦೪-೩೩); ಪೌಜುಪೌಜಾಗಿ ಬೊಬ್ಬಿಱಿದೇಱುವರಿಭಟರೋಡೆಯನೇನ ಬಣ್ಣಿಸುವೆ (ಶಂಪಪಿ. ೦೯-೪೭). **ಪೌಜನಿಕ್ಕು** = ಸೈನ್ಯವನ್ನು ನಿಲ್ಲಿಸು: ಕಾಳಗದಲ್ಲಿ ಪೌಜನಿಕ್ಕಿದಡೆ ಮಾಱಿದಡೆ ಅರಸೆಂಬರಲ್ಲದೆ ಬಂಟರೆಂಬುದಿಲ್ಲ (ಪೋಳಕಾ.೨-೩); ಶೋಣಿತಪುರದ ಪಶ್ಚಿಮದಿಕ್ಕಿನಲ್ಲಿ ಶೂಲಪಾಣಿಯಾ ಪೌಜನಿಕ್ಕಿದನು (ಮೋಹಕ. ೩೬-೩೦). **ಪೌಜಾಗು** = ಗುಂಪಾಗು ; ಪಡೆಯಾಗು : ಆತಿಬಲರಖಲ ಧಾತ್ರೀಶರನಿಬರು ಬೇಗ ತಂತಮ್ಮ ಬಲವೆರಸಿ ಪೌಜಾಗಿ . . . ನಿಲೆ (ಶಾಳಕಾ. ೦೬-೬೬) : ಆತನ ಯಜ್ಞಶಾಲೆಯೊಳ್ ಆಜುಸಾಸಿರಗಂಧರ್ವರೇಳುಪೌಜಾಗಿ ಮೇಳಮಂ ಕಟ್ಟಿ ನರ್ತನಮನೆಸಗುತಿರ್ಪರು (ಶಾರಶಾಂ. ೨೯-೨೦೩). [← ಅರ. ಹಿಂ. ಮರಾ. ಫೌಜ್]

ಫೌಜುದಾರ, ಪಉಜುದಾರ, ಪೌಜುದಾರ, ಫೌಜದಾರ್, ಫೌಜದಾರ, ಫೌಜ್ದಾರ (ನಾ). ೧. ಸೈನ್ಯದ ನಾಯಕ; ಸೇನಾಧಿಪತಿ : ಯುದ್ಧ ಪ್ರಸಕ್ತಿ ಬಿದ್ದ ಕಾಲದಲ್ಲಿ ಅಂಥಾ ಮುಖಂಡರಿಂದ ದಂಡಿನ ಸಹಾಯವನ್ನು ಹೊಂದುತಿದ್ದರು. ಇಂಥಾ ಮುಖಂಡರಿಗೆ ಫೌಜುದಾರರು ಎಂತಲೂ ಹೆಸರಿತ್ತು (ಶಾಳಗಾ.೦೬); ಕಾಜಿಯು ಹೆಚ್ಚು ಸಿಪಾಯಿಗಳನ್ನು ತರುವಂತೆ ಫೌಜುದಾರನಿಗೆ ಹೇಳಿ ಕಳುಹಿಸಿದನು (ಬಂಕಸು. ೩೦೨). ೨. ಪೋಲೀಸು ದಳದ ಕಿರಿಯ ಅಧಿಕಾರಿ : ಏನು ಮಾಡಬೇಕೆಂಬ ಪ್ರಶ್ನಾರ್ಥಕ ದೃಷ್ಟಿಯನ್ನು ಫೌಜುಧಾರನು ಗುಪ್ತಪೋಲೀಸನ ಕಡೆಗೆ ಬೀರಿದನು (ಮೋಜಾಗಾ. ೩೬); ಅವನು ಫೌಜುದಾರರ ಮಗ ಹುಸೇನಿ (ಶಂಗೂಕೂ. ೨೨). **ಪಉಜುದಾರ**: ೧. ಅಮೀನ ಪಉಜುದಾರ ಅಮೀರಬೇಗಸಾಹೇಬರು ಜಮೀನದಾರರು . . . ಬರಸಿ ಕೊಟ್ಟ ತಾಮ್ರಪ್ರದ ಶಾಸನ (ಎಇ. XII, ೬ರಾ. ೦೦೨-೬; 1720). **ಪೌಜುದಾರ** : (ಕ). **ಫೌಜದಾರ್** : ೨. ಹೆಡ್‌ಕ್ವಾರ್ಟರಿನ ಈ ಎಲ್ಲ ಪೋಲೀಸರ ಮೇಲೆ ಒಬ್ಬ ಫೌಜದಾರ್ (ಸಬ್‌ಇನ್‌ಸ್ಪೆಕ್ಟರ್) ಇರುತ್ತಾರೆ (ಶಾಪೋಲೀ.೩೩). **ಫೌಜದಾರ**: ೧. ಅದುವರೆಗೂ ಅಲ್ಲಿ ಫೌಜದಾರ ಮುಂತಾದ ಪ್ರಧಾನರಾದ ರಾಜಕರ್ಮಚಾರಿಗಳು ವಾಸಮಾಡುತ್ತಿದ್ದರು (ಶಜಾಶಾಂ. ೩೬). ೨. ನೆಲಕ್ಕೆ ಬಿದ್ದ ಫೌಜದಾರರನ್ನು ಉಪಚರಿಸಲು ಕೂಡ ಚಾವಡಿಯಲ್ಲಿ ಯಾರೂ ಉಳಿದಿರಲಿಲ್ಲ (ಗ್ರಾಪ್ರಾಮು. ೦೬೯); ಮಧ್ಯವಯಸ್ಸಿನ ದಷ್ಟಪುಷ್ಟ ದೇಹದ ಆ ಫೌಜದಾರರು ತಮ್ಮ ತೀಕ್ಷ್ಣದೃಷ್ಟಿಯನ್ನು ನನ್ನ ಮೇಲೆ ಹರಿದಾಡಿಸಿದರು (ಶಾಪೋಲೀ.೩೩); ಫೌಜದಾರರು ಅವರನ್ನು ಬಹುಬಬರಿನಿಂದ ಆಮಂತ್ರಿಸಿದರು (ಕಶ್ಯಕೃ. ೨೯೭). **ಫೌಜ್ದಾರ** : ೨. ಧತ್ರದಲ್ಲಿ ಪ್ರಿಯಪಟ್ಟಣದ ಫೌಜ್ದಾರರು ಬಿಡಾರ ಮಾಡಿಕೊಂಡಿದ್ದರೆ . . . ಅವರ ಒಬ್ಬಳೇ ಮಗಳು ಹತ್ತು ವರ್ಷದ ಹುಡುಗಿಯನ್ನು ಎತ್ತಿಕೊಂಡು ಹೋಗಿ ಬಿಟ್ಟಿಧಾರಂತೆ (ಸಂಗಾಳ. ೦೨೦). [ಫೌಜು + — ದಾರ್]

ಫೌಜುದಾರಿ, ಪೌಜುದಾರಿ, ಫೌಜದಾರಿ (ನಾ). ೧. ಆಡಳಿತ ಸೌಕರ್ಯಕ್ಕಾಗಿ ಪ್ರತ್ಯೇಕಿಸಿದ ಪ್ರಾಂತ,—ಜಿಲ್ಲೆ : ಅಲ್ಲಿಯ ನೆಡವಳಿಕೆಗಳನ್ನು ತಿಳಿಯಲು ಆ ಗಡಿಗಳಿಗೆ ಸಮೀಪವಾಗಿರುವಂತೆ ೬ ಫೌಜುದಾರಿ(ತುಕಡಿ)ಗಳೂ ಸ್ಥಾಪಿತವಾದುವು (ಮಹಾಸಂ. II. ೩೬). **ಫೌಜುದಾರಿ** : ೨. ಅಪರಾಧಕ್ಕೆ ತಕ್ಕ ದಂಡನೆಯನ್ನು ವಿಧಿಸುವ ಸ್ಥಳ : ತಕ್ಸೀರು ವಿಚಾರಣೆ ಮಾಡುವ ಕಚೇರಿ,—ನ್ಯಾಯಾಲಯ: (ಕ). **ಫೌಜದಾರಿ** : ೧. ಪೂರ್ವದಲ್ಲಿ ಡಿಸ್ಟ್ರಿಕ್ಟುಗಳಿಗೆ ಫೌಜದಾರಿ ಎಂದು ಹೆಸರು ಇತ್ತು (ಶಾಸುಸಂ. ೩೩೬). ೩. ದೊಂಬಿ ; ಜಗಳ : ರೂಪಚಂದನ ಅಪ್ಪಣೆಯ ಮೇರೆಗೆ ಅವನಿಂದ ಎಷ್ಟೋ ಫೌಜದಾರಿಗಳಾಗಿದ್ದುವು (ಜಮಾಖಾ. ೯೦); ಇವರು ಜೀವ ಉಳಿಸಿಕೊಂಡು ಓಡಿಬರದಿದ್ದರೆ ಫೌಜದಾರಿಯಾಗುತ್ತಿತ್ತು (ಶ್ರೀಪಾಶ್ರ.೬೩). [←ಹಿಂ. ದುರಾ. ಫೌಜದಾರೀ]

ಫೌಜ್ದಾರ 'ಫೌಜುದಾರ' ನೋ.

ಫ್ಯಾಷನ್ 'ಫ್ಯಾಷನ್ನು' ನೋ.

ಫ್ಯಾಷನ್ನು, ಫ್ಯಾಷನ್ (ನಾ). ಉಡುಗೆ, ತೊಡುಗೆ ಮೊದಲಾದುವುಗಳಲ್ಲಿ ಕಾಲಕಾಲಕ್ಕೆ ಬಳಕೆಗೆ ಬರುವ ಸಂಪ್ರದಾಯ.—ರೂಢಿ: ದಿನದಿಂದ ದಿನಕ್ಕೆ ಉಡುಗೆ ತೊಡುಗೆಗಳ ಫ್ಯಾಷನ್ನು ಬದಲಾಗುತ್ತಲೇ ಇರುತ್ತದೆ (ಕೂಡಿ). **ಫ್ಯಾಷನ್**: ಅವಳು ಈಗಿನ ಕಾಲದ ಯಾವ ಫ್ಯಾಷನ್ ಅನ್ನೂ ಮಾಡುವುದಿಲ್ಲ (ಕೂಡಿ). [← ಇಂ. Fashion]

ಪ್ರೋಕ್ತು 'ಪುರೋಖ್ತು' ನೋ.

ಬ$_1$ (ನಾ). ೧. ಕನ್ನಡವರ್ಣಮಾಲೆಯ ನಲವತ್ತುಮೂರನೆಯ ಅಕ್ಷರ; ಬಕಾರ: ಉತ್ತರಪದದ ಆದಿಯಲ್ಲಿರುವ ಕ, ತ, ಪ ಗಳಿಗೆ ಕ್ರಮವಾಗಿ ಗ, ದ, ಬ ಗಳು ಪ್ರಾಯಶಃ ಆದೇಶವಾಗಿ ಬರುವುವು (ಶಬ್ದಾ.೪೦). ೨. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ: "ಖಚಫರಮದೆರಡಕ್ಕು ಗ ಡ ಬ ಲಂ ಮೂಱಕ್ಕು" (ಕುಂಗಣಿ. ೦೦೯-೦೦). —**ಬ**$_2$ (ಪ್ರ). ಗುಣವಾಚಕದೊಂದಿಗೆ ಸೇರಿ ವ್ಯಕ್ತಿವಾಚಕಾರ್ಥವನ್ನು ಕೊಡುವ ಒಂದು ಪ್ರತ್ಯಯ: 'ಪಳಬ', 'ಪೊಸಂಬ' ಪರಾ.

ಬಂಕ$_1$ 'ಬಂಕ್ಕಿ$_1$' ನೋ.

ಬಂಕ$_2$ 'ಪಕ್ಕ' ನೋ.

ಬಂಕ$_3$ 'ಬಾಂಕು$_2$' ನೋ.

ಬಂಕಂಗಡಿ (ನಾ). ಮುಂಭಾಗದ ಎರಡೂಕಡೆಗಳಲ್ಲಿ ಜಗಲಿಗಳಿರುವ ಅಂಗಡಿ: ಅಲ್ಲಿಂದ ಹೊರಟ ಮೇನವನು, ಮೈಲಾಪುರದ ಕಾಳಾದೇವಿ ರಸ್ತೆಯಲ್ಲಿರುವ ಗೋಪಾಲನಾಯರ್ರ ಬಂಕಂಗಡಿಗೆ ಬಂದು ಮುಟ್ಟಿದನು (ಶಾಬಕೂಾ.೩೩). [ಬಂಕ$_3$ (< ಬಾಂಕು$_2$) + ಅಂಗಡಿ (< ಅಂಗಾಡಿ)]

ಬಂಕಣ 'ಬೊಕ್ಕಣ$_1$' ನೋ.

ಬಂಕದೆಱ^3 (ನಾ). ಒಂದು ಬಗೆಯ ತೆರಿಗೆ.—ಸಂಕ: ಬಂಕದೆಱ ಸಿದ್ಧಾಯ ಬಿಟ್ಟ ಕೊಟ್ಟಣವನುಪಸುಂಕ ಮಲವದಿಕೆ ಸೊಲ್ಲಗೆ ಕವಣ ಕಡ್ಡಾಯ (ಸಿಂಗಣಿ.೨೨-೨೬). [ಬಂಕ$_2$ + ತೆಱ^3]

ಬಂಕಪುರ, ಬಂಕಾಪುರ (ನಾ). ಒಂದು ಊರಿನ ಹೆಸರು; ಈಗಿನ ಧಾರವಾಡಜಿಲ್ಲೆಯ ಶಿಗ್ಗಾಂವಿತಾಲ್ಲೂಕಿನ ಒಂದು ಊರು: ಬ[ಙ್ಕ]ಪುರದ ಧೋರ ಜಿನಾಲಯದ ಚನ್ದ್ರಪ್ರಭ ಭಟಾರಾರ್ಪ್ಪ ಸುಣ್ಡಿಯನಭ್ಯನ್ತರಸಿದ್ಧಿಯಾಳುತ್ತಿರೆ (ಸೌಇಇ. XI-i, ೪೯-೬; 925); ಚಕ್ರಗೊಟ್ಟವ್ವುಚ್ಚಂಗಿ ವಿರಾಟನ ಪೊಳಲು ಬನ್ನವುರಂ ಬನವಾಸೆ (ಎಇ. XVI, ೫೪೬. ೬೨-೯; 1242). **ಬಂಕಾಪುರ**: ಬಜ್ಜಾಪುರದೊಳಜಿತಸೇನಭಟ್ಟಾರಕರ ಶ್ರೀಪಾದಸನ್ನಿಧಿಯೊಳ್ . . . ನೋನ್ತು (ಎಇ. II, ೫೯-೦೦೯; 974); ಬಂಕಾಪುರದ ಪುಚಮಠಸ್ಥಾನಮುಂ (ಎಇ. XIII, ೦೭೦-೩೦; 1055); ಬಂಕಾಪುರಕ್ಕೆ ಹೋದರೆ ಡೊಂಕು ಬಿಟ್ಟೀತೇ? (ಗಾಡಿ). [ಬಂಕ$_2$ + ಪುರ$_2$]

ಬಂಕಾಪುರ 'ಬಂಕಪುರ' ನೋ.

ಬಂಕಿ 'ವಂಕಿ' ನೋ.

ಬಂಕು$_1$ (ಕ್ರಿ). ಬಾಗು; ಡೊಂಕಾಗು; ವಕ್ರವಾಗು: "ಬಂಕು—ಕೌಟಿಲ್ಯೇ (ವಕ್ರವಾಗು)" (ಪಮಗಾ); ಸೊವಡಿಂಗಮಗ್ಗಿಸಿ ತುಂಬಿವೆರಸು ಕೂಂಕಿ ಬಂಕಿ ಬಿಟ್ಟ ಕುವಳಯಾಪೀಡನಂ ಕುವಳಯಾಪೀಡನಂ ಮಾಡಿ (ಅರ್ಥಶಾ. ೯-೬೫ ೫); ಕೊಂಕುತೆ ಬಂಕುತೆ ಹಾರೈಸುತ್ತಂ . . . ಆಡುವ ಗುಂಡಯ್ಯನ ಹೊಸನೃತ್ಯಂ ನೋಡುವ ಶಿವನಂ ಮುಟ್ಟಿತು ಸತ್ಯಂ (ಕುಂಬಾಪ. ೫-೨೫೬-೨೦). 'ಬಗ್ಗು$_1$' ಪರಾ. [ದೇ. ॥ ತಮಿ. ವಾಙ್ಬು; ಮಲ. ವಾಳ್ಗು; ತುಳು. ಬಾಂಗು; ಕೊಡ. ಬಾಂಗ್; ತೆಲು. ವಂಗು; ಕೋಲಾ. ಬಾಯ್ಕು. ಪರ್ಜಿ. ವಂಗ್]

ಬಂಕು$_2$ 'ವಂಕು' ನೋ.

ಬಂಕುಡಿ 'ವಂಕುಡಿ' ನೋ.

ಬಂಕುಡಿಗಾಲು, ಬಂಕುಳಿಕಾಲು (ನಾ). ಸೊಟ್ಟಗೆ ತಿರುಗಿಕೊಂಡಿರುವ ಕಾಲು: ಒಡನೊಡಂಬಡದ ಕೆಂಪಿಡಿದ ತಲೆನವಿರ ಬಂಕುಡಿಗಾಲ ಬೆರಳುಗಳ ದೊಡ್ಡತುಟಿಯ . . . ದೂರ್ತಿನ ಸೊಗಸದಡಿಯಿಡುವವಳೆ ಹಸ್ತಿನಿ (ಪಪಪ. ೨-೦೬). **ಬಂಕುಳಿಕಾಲು**: ಬಂಕುಳಿಕಾಲು ಜಂಘೆಗಳು ವಳ್ಳಿಹ ಉಗುರ್ಗಳು (ಸೌಗಂಂ. ೪೯೯-೩).

[ಬಂಕುಡಿ (< ವಂಕುಡಿ) + ಕಾಲು$_1$ (< ಕಾಲ್$_1$)]

ಬಂಕುರು (ನಾ). ಒಂದು ಬಗೆಯ ಮೀನು: ಹೆಲ್ಲರಂ ಬಂಕುರಂ . . . ಗಿಱಿಲುಗಳೆಂಬ ಹೊಳೆವಳಿಯ ಮೀನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು (ಪಪಕಾ. ೩-೪೩). [?]

ಬಂಕುಳಿಕಾಲು 'ಬಂಕುಡಿಗಾಲು' ನೋ.

ಬಂಕೆ$_1$, **ಬಂಕ**$_1$, **ಬೊಂಕ, ಬೊಂಕೆ** (ನಾ). ೧. ಒಂದು ಬಗೆಯ ಅಂಟು,—ಗೋಂದು; ನಿರ್ಯಾಸ: ಬಂಕೆಯಂಟಿನಂದದಿ ಸ್ನೇಹ (ಪಪಮು. ೪೯-೫೯). ೨. ಅಂಟು; ಜಿಗಿ: ತ್ರಿದೋಷದಲ್ಲಿ ಸಾವವನ ನಾಡಿ ಅತಿಶೈತ್ಯವಾಗಿ ತುಪ್ಪವ ತೊಡೆದ ಹಾಗೆ ನಯವಾಗಿ ಬಂಕೆ ಬೆವರಾಡುವದು (ಪೈದ್ಯಸಾ. I, ೩). **ಬಂಕ**$_1$: ೧. 'ಬೂರಗಬಂಕ' ಪರಾ. ೩. ಸಿಪ್ಪೆ; ತೊಗಟೆ: ದಾಳಿಂಬದ ಬಂಕವಂ ಚೂರ್ಣಿಸಿ ವಸ್ತ್ರಗಾಳಿತವಂ ಮಾಡಿ . . . ತೆಗೆದುಕೊಳ್ಳಲು ಎಂತಪ್ಪ ಬಹುಮೂತ್ರಮುಂ ಮಾಣ್ಗುಂ (ಸಕಸೂ. ೩೬೬). **ಬೊಂಕ**: ೧. "ಕೋಲಕಂ, ತಕ್ಕೋಲಕಂ, ಕೋಶಫಲಂ — ೩ ತಕ್ಕೋಲದ ಗಿಡ, ತಕ್ಕೋಲದ ಬೊಂಕ" (ಸಿಂಗಾಂಕಿ. ೨೦೬). **ಬೊಂಕೆ**: ೧. "ಪಾಯಸಃ . . . ಸರಳದ್ರವಃ — ೫ ಸರಳದೇವದಾರುವೃಕ್ಷದ ಬೊಂಕೆ" (ಸಿಗಾಂಕಿ. ೨೦೬). 'ಬೂರಗೆಬಂಕೆ' ಪರಾ.

ಬಂಕೆಬೆವರು = ಅಂಟಂಟಾದ ಬೆವರು: ಜ್ವರ ಬಿಟ್ಟು ಮಗುವಿನ ಮೈಯೆಲ್ಲಾ ಬಂಕೆಬೆವರಿನಿಂದ ತೊಯ್ದು ಹೋಗಿದೆ (ಕೂಡಿ).

[ದೇ. ॥ ತೆಲು. ಬಂಕ; ಕೋಲಾ. ಬಣ್ಕ, ಬಕ್ಕ; ನಾಯ್ಕಿ. ಬಕ್ಕ; ಪರ್ಜಿ. ಬಾಕ್; ಗೊಂಡಿ. ಬೊಕೆರ್]

ಬಂಕೆ$_2$ 'ವಂಕು' ನೋ.

ಬಂಕೆಯರಸ (ನಾ). ಒಬ್ಬಾತನ ಹೆಸರು: ಬಂಕೆಯರಸರಾಳುತ್ತಿರೆ ಬಂಕೆಯನ ಮಗಂ ಕುನ್ದಟ್ಟ (ಎಇ. VII, ೨೦೩-೯; 874); ಮಹಾಸಾಮನ್ತ ಕಱುದೇವಯ್ಯರಾನ್ವಯದೊಳ್ ಬಜ್ಜಕೆಯರಸರ ಮಗಂ ಶ್ರೀಲೊಕಟೆಯರಸರ್ (ಎಇ. VII (S), ಕಶಾಂ. ೩೬೮- ೫; 902). [ಬಂಕೆ$_2$ + ಅರಸ$_1$]

ಬಂಕೋಲು (ನಾ). ಕೊಕ್ಕೆಕೋಲು; ದೋಟಿ: ಹಣ್ಣ ಬಂಕೋಲನುರೆ ಮುಂಗೈಯ್ಯಗಳೆಡೆಯಲ್ಲಿ ಹೊಂದಿಸುತ (ಕುರಪು. ೯-೦೨).

[ಬಂಕು$_2$ (< ವಂಕು) + ಕೋಲು$_1$ (< ಕೋಲ್$_1$)]

ಬಂಗ (ನಾ). ೧. ಭಿನ್ನವಾದುದು: ಚೂರು: "ಬಂಗ (ಬಂಗಿ)—ಭಂಗ = ನಾಶ, ಭಿನ್ನ" (ಕಡ್ಕೋ. ೨೬). ೨. ಕಷ್ಟ; ದುರ್ಗತಿ; ಹೀನಸ್ಥಿತಿ: ಏನೋ ನಿನ್ನ ಅಣವು ವಣವು ಬಂಗ ಬಡತನ ಎಲ್ಲಾ ಕೇಳಿಕೊಂಡು ಬಂದಾಯ್ತು (ಹುಬ್ಬಕ-೦೩೬); ಏನೋ ಅವರ ಬಂಗ ಬಡತನಕ್ಕೆ ಒಂದಿಷ್ಟು ಕಾಯಿ ಕಸಿ ಕಿತ್ತುಕೊಂಡ್ಹೋಗಿ ಹೊಟ್ಟೆ ಹೊರಕತಾರೆ (ಪಪ್ಪೂಕು. ೦೬೪); ಬಂಗು ಬಂದವನಿಗೆ ಬಂಗ ಬರದಿರದು (ಗಾಡಿ). ೩. ಅವಮಾನ; ತೇಜೋಭಂಗ: ಅವರ ಮನೆ ಬಾಗಿಲಿಗೆ ಹೋಗಿ ಅನುಭವಿಸಿದ ಬಂಗ ಎಂದಿಗೂ ಮರೆಯಲಾರೆ (ಕೂಡಿ). ೪. (ಆಲಂ) ವೃತ್ತಿ; ಉದ್ಯೋಗ: ಆಳುಗಳೆಲ್ಲಾ . . . ವ್ಯವಸಾಯಗಳಿಗೂ ಬಂಗಗಳಿಗೂ ಸೇರಿಕೊಂಡರು (ಪಸ್ತಳ. ೪೦). [< ಸಂ. ಭಂಗ]

ಬಂಗಡ (ನಾ). ಒಂದು ಬಗೆಯ ಬಳ್ಳಿ: ಬಿಳಿತಿಗಡೆ. ಬಂಗಡಬಳ್ಳಿ (ಮೃಕೋಗಿ. ೫೯-೦೦೫೪). [?]

ಬಂಗಡೆ, ಬಗ್ಗಡೆ (ನಾ). ಒಂದು ಬಗೆಯ ಕಡಲ ಮೀನು : ಸೀಗುಡಿ ಗೆಂಡೆ ಕುಚ್ಚು ಹಣ್ಣಲು ಬಸಿಗ ಗಿಱಿಲು ಬಂಗಡೆ ಹಾವು . . . ಮೀನ್ಗಳಂ ಗುದಿಗೆಯ್ದರು (ಹಕಕಾ. ೩-೪೩) ; ಈ ಹೊತ್ತು ರಂಪಣಿ ಹಾಕಿದ್ದರೆ ಬಂಗಡೆ ರಾಶಿಗಟ್ಟಲೆ ಬೀಳಬಹುದಿತ್ತು (ಮೂರುದಾ. ೬೩) ; ಸ್ವಾರ್ಲು ಮತ್ತು ಬಂಗಡೆಮೀನಿನ ಗಬ್ಬುವಾಸನೆಯೊಡನೆ ಕುದುರೆಯ . . . ಉಚ್ಚೆಯ ಕಟುದುರ್ವಾಸನೆಯೂ ಕೂಡಿದ್ದುದನ್ನು ನೋಡಿದರೆ (ಮಲೆಮ. ೪೨೦). **ಬಗ್ಗಡೆ** : ಪಂದಿಮೀನ್ಪೆಱೆಮೀನ್ಬಗ್ಗಡೆ ಬಣ್ಣಮೀನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೩-೧೦೫).

[←ತುಳು. ಬಂಗುಡೆ, ಬೊಂಗುಡೆ. / ಮರಾ. ಬಂಗಡ್]

ಬಂಗಡ್ಡ (ನಾ). ಒಂದು ಬಗೆಯ ಹುಲ್ಲು: (ಕ). [?]

ಬಂಗರ$_1$ 'ಬಂಗಾರ' ನೋ.

ಬಂಗರ$_2$ 'ಬವರಿ' ನೋ.

ಬಂಗರಳಿ (ನಾ). ಒಂದು ಬಗೆಯ ಸಸ್ಯ : "ಬಂಗರಳಿಯೆನೆ ಹೀಲವಕ್ಕುಂ" (ಮಂಗರಾ. ೩೬-೦೭) ; ಬಂಗರಳಿಯರಳಿ . . . ಪೇರಿಪ್ಪೆ ತುಪ್ಪೆಗಳಿರ್ಪವು (ನಂದಿಮಾ. ೦೦-೨೬). [?]

ಬಂಗಲೆ, ಬಂಗ್ಲೆ (ನಾ). ದೊಡ್ಡಮನೆ ; ಮಹಲು : ಕೃಷ್ಣರಾಯರು ವಾಸಮಾಡುತ್ತಿದ್ದುದು ಆ ಬಡಾವಣೆಯಲ್ಲಿ ಸ್ವಂತ ಬಂಗಲೆಯಲ್ಲಿ (ಮಹಾಗ. ೦೨) ; ಮಧ್ಯಾಹ್ನ ಹೊಸಬರನ್ನೆಲ್ಲ ಬಂಗಲೆಗೆ ಬರಹೇಳಿ . . . ಹಾಜರು ಪಟ್ಟಿಯಲ್ಲಿ ದಾಖಲು ಮಾಡಿಕೊಂಡರು (ರಕ್ತರೂ. ೬೨). **ಬಂಗ್ಲೆ**: ಈ ಬಂಗ್ಲೆಯಲ್ಲಿ ಎಷ್ಟು ಕೋಣೆಗಳಿವೆ ? (ತಂದುಟ. ೬೬) ; ಊರ ಹೊರಗೆ ದೊಡ್ಡದೊಂದು ಬಂಗ್ಲೆ ಮಾರಾಟಕ್ಕೆ ಬಂದಿದೆ (ಹನ್ನೊಂದ. ೬೬).

[←ಇಂ. Bungalow. / ಹಿಂ. ಮರಾ. ಬಂಗಲಾ]

ಬಂಗವಾಡಿ (ನಾ). ಒಂದು ಊರಿನ ಹೆ ರು : ಬಂಗವಾಡಿಯ ಕೆಱೆಗೆ ಬಿತ್ತುಕಟ್ಟು ಬಿಟ್ಟುದು (ಎಕ. X, ಕೋಲಾರ. ೦೯೬-೦೯; ಸು. 950).

[ಬಂಗ? + ಪಾಡಿ$_2$]

ಬಂಗಳಿಚ (ನಾ). ಬಂಗಾಳದೇಶದಲ್ಲಿ ಹುಟ್ಟಿದವನು ; ಬಂಗಾಳಿ : ಪರಳಿಚಂ, ಬಂಗಳಿಚಂ (ಶಬ್ದಾನು. ೪೨೦ ವ್ಯಾಖ್ಯಾ). [ಬಂಗಳ$_0$ + — ಇಚ]

ಬಂಗಾರ, ಬಂಗರ$_1$, ಬಂಗಾಱ, ಬಿಂಗರ, ಬಿಂಗಾರ, ಬಿಂಗಾರಿ$_2$, ಭಂಗಾರ, ಬಂಗಾಱ (ನಾ). ೧. (ವಿಶೇಷವಾಗಿ ಒಡವೆಗಳನ್ನು ಮಾಡಲು ಉಪಯೋಗಿಸುವ) ಒಂದು ಬಗೆಯ ಹಳದಿಬಣ್ಣದ ಲೋಹ ; ಹೊನ್ನು ; ಚಿನ್ನ : "ಬಂಗಾರ (ಭಂಗಾರ) — ಭೃಂಗಾರ = ಚಿನ್ನ, ಚಿನ್ನದ ಹೂಜಿ" (ತದ್ಭಕೋ. ೨೬) ; ಹಳೆಯ ಬಂಗಾರದಿಂದ ಹೊಸ ಒಡವೆ ಮಾಡುವಂತೆ ಹಳೆಯ ವೈದಿಕಧರ್ಮಕ್ಕೆ ನವ್ಯಚೇತನವನ್ನು . . . ಶ್ರೀಕೃಷ್ಣನು ನೀಡಿದ್ದಾನೆ (ಭಾರದ. ೦೦೬) ; ಅತ್ತಿಮಬ್ಬೆ . . . ಲಿಪಿಗಾರರಿಗೆ ಬಂಗಾರದ ಕಂಟವನ್ನು ದಾನಮಾಡಿಬಿಡುತ್ತಿದ್ದಳು (ದಾನಸಂ. ೦೭೩). ೨. ಚಿನ್ನದಿಂದ ಮಾಡಿದ ಹೂಜಿ : ಮೇಲಿನ 'ತದ್ಭಕೋ' ಪ್ರಯೋಗವನ್ನು ನೋಡಿ. ೩. ಚಿನ್ನದ ಒಡವೆ ; ಸ್ವರ್ಣಾಭರಣ : ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ (ಆದಪ. ೨೦-೩೨) ; ಬಣ್ಣವನುಡರು ಬಂಗಾರಗಳನು ತೊಡರು (ಪೇಮಿಸಂ. ೬-೪೦) ; ಮೆಯ್ಯ ಬಂಗಾರಗಳನುಗಿದು ಮಱೆಮಾಡಿದರ್ (ಶಬಿಪು. ೨೪-೨೬). ೪. (ಆಲಂ) ಮಕ್ಕಳನ್ನು ಪ್ರೀತಿಯಿಂದ ಕರೆಯುವಾಗ ಬಳಸುವ ಶಬ್ದ: ನನ್ನ ಬಂಗಾರ ಬಾಪ್ಪಾ ಇಲ್ಲಿ (ಕೂಡಿ). **ಬಂಗರ$_1$** : ೧. ಮುತ್ತಿನ ಕಂಠಿ ಬಂಗರದ ಕೊಡೆ (ಎಕ. VI, ಶಕ್ಕಮ. ೦೦೯-೩೬; 1717) ; ಬಂಗರವು ಬೆಂಕಿಯೊಳು ಬೀಳಲು ಬಂಗರವು ತಂಡಸದಿ ಹುಡುಕಿಯೆ ಹಿಡಿದ ತೆರನಂತೆ (ಜ್ಞಾನಸಿಂ. ೦೬-೩೭). △ **ಬಂಗಾಱ** : ೫. (ಆಲಂ) ಶ್ರೇಷ್ಠನಾದವನು : ಪರಬಳಸೂಱೆಕಾಱಂ ವೈರಿಬಂಗಾಱಂ (ಮುಂಬರಾ. X, ೨೦೪-೯; 981) ; ರಿಪುರಾಯ[ಕು]ವರಬಂಗಾಱಂ (ಸೌಇಇ. XI-II, ೦೬೨-೭; 1112) ; ಬಿರುದ ಬಂಗಾಱಂ ಶಾಮಂತ ಗಸಣಿ (ಮೈಆಂ. ೦೯೩೭, ೦೭-೨೪; 1196). **ಬಿಂಗರ** : ೩. ಉಂಗುರದ ಕಾಲ ಊರುತ ಜಾರುತ ಬಿಂಗರದ ನಡುವ ಬಳುಕುತ ಲಕ್ಕವ್ವ ಬಂದಳೇ (ನಾಪದ. ೨೩). **ಬಿಂಗಾರ** : ೧. "ಬಿಂಗಾರ (ರಿ) — ಭೃಂಗಾರ" (ತದ್ಭಕೋ. ೩೦) ; ಋತ್ವಕ್ಕಿತ್ವಂ—ಋಜು—ರಿಜು . . . ಭೃಂಗಾರ—ಬಿಂಗಾರ (ಶಮದ. ೨೬೬ ಪ್ರಯೋ). ೬. ಕಾಗೆಬಂಗಾರ; ಅಭ್ರಕ : ಇದರಲ್ಲಿ ಮುಖ್ಯವಾಗಿರುವ ವಸ್ತುಗಳೆಂದರೆ ನುಣುಪಾದ ಜಿಡ್ಡಿನಂತಿರುವ ಖನಿಜದ ಪುಡಿ, ಬಿಂಗಾರ (ಟಾಲ್ಕ್) (ಕವಿಕೋ. I, ೩೩). **ಬಿಂಗಾರಿ$_2$** : ೨. (ನಂಜವ್ವೆಗೆ ಕಣ್ದೆರವಿ ಮಾಡಿ, ಹೊನ್ನ ಬಿಂಗಾರಿಯನ್ನು ತೋರಿ, ಮುಗುಳ್ದು ಕೊಳ್ವನು) (ಪಟ್ಟಿಅ. ೯೨-೨೩). ೭. ತೂಗು ಬಿಟ್ಟಿರುವ ಚಿನ್ನದ ಅಲಂಕಾರವಸ್ತು; ಗುಳೋಪು ; ರಸಗುಂಡು : ಬಿಗಿದ ಬಿಂಗಾರಿಗಳ ಹಸುರ್ವಂದರವ ಮುಸುಕಿ ನೆಗೆದ ಮೇಲ್ಕಟ್ಟುಗಳ ಸೂಯಾಣ ಪಂಚವರ್ಣದ ಚೂಳಿಕೆಗಳೊಪ್ಪಲು . . . ವಿವಾಹಗೃಹವೆಸೆಯಿತ್ತು (ಸಿದ್ಧರಾ. ೬-೩೩); ಬಿಗಿದ ಬಿಂಗಾರಿಗಳ ಮೇಲ್ಕಟ್ಟುಗಳ ಮಣಿಮಯಸೂಸಕದ. . .ಚಪ್ಪರದೆಡೆಯೆಡೆಯ ಚೌಕಿಗೆಯ ಚತುರಂಗದ ವಿಚಿತ್ರದ ರಚನೆ ಚೆಲುವಾಯ್ತು (ಕುಪ್ಯಾಸ. ೬-೨೩); ಬಿಗಿದ ಬಿಂಗಾರಿಗಳ . . . ಸುತ್ತಣ ಸಾಲಭಂಜಿಕೆಗಳ ವಿಲಾಸದಲಿ ಸೊಗಸಿತಾ ಮಂಟಪ (ತೊರರಾ. ೦-೦೩-೬). **ಭಂಗಾರ** : ೧. ವರ್ಗಚತುರ್ಥಾಕ್ಷರಂಗಳ್ಗೆ-ಘಟಿಯಂ . . . ಭಂಗಾರಂ, ಭಂಡಾರಂ (ಶಮದ. ೦೫ ಪ್ರಯೋ); ತೋರದ ತೋಳುಳ್ಳರ್ ಭಂಗಾರದ ಕಂಭದವೊಲಪ್ಪೊಡಂಬುಳ್ಳವರ್ (ಸೌನಂದ. ೦-೦೯). ೩. ಚಿನ್ನದಿಂದಾದ ಭಂಗಾರ (ಒಡವೆ) ಚಿನ್ನದ ರೂಪಲ್ಲದೆ ಮತ್ತೊಂದು ರೂಪಾಗಬಲ್ಲುದೆ ಹೇಳಾ (ಸಿದ್ಧೇಪ. ೦೯-೩೨). ೮. (ಆಲಂ) ಶ್ರೇಷ್ಠವಾದುದು; ಉತ್ತಮವಾದುದು: ಭಂಗಾರದಂಥಾ ಎತ್ತೊಂದು ಮೊನ್ನೇ ಕೈಯೊಳಗಿಂದ ಹೋಯ್ತು (ಆಶೋಕ. ೪೦). △ **ಭಂಗಾಱ** : ೫. ಮಣ್ಣಳಿಕ ಬಿರುದ ಭಂಗಾಱಂ (ಸೌಇಇ. XI-I, ೯೭-೭; 1062) ; ರಾಯಜಗದಳಮ[ನೋಜ] [ರತಿ]ಮಚ್ಚರಿಪ ಸವತಿ ಮದ ಭಂಜನೆ ರಾಯಭಂಗಾಱ (ಎಇ. XXVIII, ೩೩-೩೬; 1082); ರಾಯರಾಯ ಪುರಸೂಱೆಕಾಱ ವೈರಿಭಂಗಾಱ (ಎಕ. II, ೦೪೩-೪೦; 1131).

ಬಂಗಾರದ ನೀರು = ಚಿನ್ನದ ಬಣ್ಣ ಬರುವಂತೆ ಮೆರುಗನ್ನು ಕೊಡುವ ರಾಸಾಯನಿಕದ್ರವ : ಬೆಳ್ಳಿಒಡವೆಗೆ ಬಂಗಾರದ ನೀರು ಬಿಡಿಸಿದ್ದಾರೆ (ಕೂಡಿ). ಬಂಗಾರದ ಮುಲಾಮು = ಚಿನ್ನದ ಮುಲಾಮು,— ಗಿಲೀಟು : ಅವೆಲ್ಲಾ ಬಂಗಾರದ ಮುಲಾಮು ಹಾಕಿದ ಒಡವೆಗಳು (ಕೂಡಿ). ಬಂಗಾರದವಳು, ಭಂಗಾರದವಳು = (ರಾಜನ) ಉಪಪತ್ನಿ : ಪಟ್ಟದ ಹೆಂಡತಿಗೆ ಅಚ್ಯುತರಾಯನೆಂಬ ಮಗನಿದ್ದನು. ಬಂಗಾರದವಳಿಗೆ ಕೃಷ್ಣರಾಯನೆಂಬ ಮಗನಿದ್ದನು (ನೀತಿಸಂ. VII, ೨೦) ; ಬಂಗಾರದವಳು. ಬಂಗಾರಕ್ಕಾಗಿ ಹೆಂಡಿರಂತೆ ಬಂದವಳು. ವೇಶ್ಯೆಯಲ್ಲ. ಮದುವೆಯಾದ ಹೆಂಡಿರಲ್ಲ (ಸಮ್ಮನು. ೦೩೫) ; ದೊಡ್ಡಮ್ಮ ರಣಧೀರನ ಭಂಗಾರದವಳಾಗಿರಲು ಅಪೇಕ್ಷಿಪಟ್ಟು, ಅರಮನೆಗೆ ತೆರಳುತ್ತಾಳೆ (ಸಂಸಕ. ೦೦೨). ಭಂಗಾರದ ಸ್ತ್ರೀ = ಬಂಗಾರದವಳು : "ಭೋಗಿನ್ಯಃ, ಅನ್ಯಾಃ, ನೃಪಸ್ತ್ರೀಯಃ — ಅರಸು ಭೋಗಪಡುವದಕ್ಕೆ ಉಪಯುಕ್ತರಾಗಿ ಪಟ್ಟದ ರಾಣಿಗಿಂತಲೂ ಬೇರೆ ಸ್ತ್ರೀಯರ ಪೆಸರುಗಳು. ಇದು ಭಂಗಾರದ ಸ್ತ್ರೀಯರಿಗೂ ಹೆಸರಾಗುತ್ತೆ " (ಸಿದ್ಧಾಂತಿ. ೦೬೮).

[< ಸಂ. ಭೃಂಗಾರ, ಭೃಂಗಾರೀ. / ತಮಿ. ಪಜ್ಜಾರ, ಪಜ್ಜಾರು ; ತುಳು. ಬಂಗಾರ, ಭಂಗಾರ್, ಭಂಗಾರ; ತೆಲು. ಬಂಗರ, ಬಂಗರು, ಬಂಗಾರ, ಬಂಗಾರು]

ಬಂಗಾರಕಡ್ಡಿ (ನಾ). ಚಿನ್ನದ ಕಡ್ಡಿಯಂತೆ ತೆಳುವಾಗಿರುವ ಒಂದು

ಬಗೆಯ ಬತ್ತ: ಈಗ ಬಂಗಾರಕಡ್ಡಿ ಬೆಲೆ ಕ್ವಿಂಟಾಲಿಗೆ ನಾನೂರೈವತ್ತು ರೂಪಾಯಿ ಆಗಿದೆ (ಕೂಪ). 'ಬಂಗಾರಸಣ್ಣ' ಪರಾ.
[ಬಂಗಾರ + ಕಡ್ಡಿ]

ಬಂಗಾರಚೌಕಿ (ನಾ). ಅರಮನೆಯ ಸ್ತ್ರೀಯರಂ ವಾಸಿಸುವ ಅಂತಃಪುರದ ಒಂದು ಭಾಗ: ಕಂಗೊಳಿಸುವ ದಿವ್ಯಕಾಂತಿಯ ತೀಡುತ ಬಂಗಾರಚೌಕಿಯೊಟ್ಟಿದುದು (ಶಂಪಾ. ೬-೩೯). [ಬಂಗಾರ + ಚೌಕಿ]

ಬಂಗಾರಸಣ್ಣ (ನಾ). =ಬಂಗಾರಕಡ್ಡಿ: ಬಂಗಾರಕಡ್ಡಿಯನ್ನೇ ಬಂಗಾರಸಣ್ಣ ಎಂದೂ ಕರೆಯುತ್ತಾರೆ (ಕೂಪ). [ಬಂಗಾರ + ಸಣ್ಣ]

ಬಂಗಾರಹುಡಿ (ನಾ). ಚಿನ್ನದ ಪುಡಿ: ಬಂಗಾರಹುಡೀಲೇ ಭಂಡಾರಾನ ಬೆಳಸೇನಂದಾಂವಾ (ಸಶಂಗೀ. ೧೨-೬). [ಬಂಗಾರ + ಹುಡಿ (<ಪುಡಿ)]

ಬಂಗಾಲ, ಬಂಗಾಳ (ನಾ). ಒಂದು ದೇಶದ ಹೆಸರು; ವಂಗ: ಬಂಗಾಲದಲ್ಲಿ ಮುತ್ತೈದೆಯರು ಶಂಖದ ಬಳೆ ಹಾಕಿಕೊಳ್ಳುತ್ತಾರೆ (ಇಶ್ವಳ. ೯); ಬಂಗಾಲ: ಭಾರತಉಪಖಂಡದ ಈಶಾನ್ಯಭಾಗದಲ್ಲಿರುವ ಐತಿಹಾಸಿಕಪ್ರದೇಶ (ಕನಿಕೋ. XI, ೬೬೯). **ಬಂಗಾಳ**: ವಂಗ ಕಳಿಂಗ ಬಂಗಾಳ . . . ನೇಪಾಳರ್ ಮೊದಲಾದ ರಾಜಪುತ್ರರ ಪಂಕ್ತಿಗಳೊಳಂ (ಗಿಂಳ. ೨-೦೦೫ ಪ); ಲಾಳ ಚೋಳ ವರಾಳ ಯವ ಬಂಗಾಳ . . . ವಿದರ್ಭಧರಣೀಪಾಲತತಿ ಸಂದಣಿಸಿದುದು (ಹರಿಹರಾ. ೦-೬-೦೯); ಅಂಗಾಲಿಗೆ ತ್ರಾಣವಿದ್ದರೆ ಬಂಗಾಳಕ್ಕೆ ಹೋಗಬಹುದು (ಗಾದೆ).
[←ಹಿಂ. ಮರಾ. ಬಂಗಾಲ್. / ಸಂ. ವಂಗ]

ಬಂಗಾಲಿ, ಬಂಗಾಳಿ (ನಾ). ೧. ಬಂಗಾಳದೇಶಕ್ಕೆ ಸೇರಿದವನು. ೨. ಬಂಗಾಳದೇಶದ ಭಾಷೆ: ಈ ಬಂಗಾಲೀಚಿತ್ರಕ್ಕೆ ಈ ಗೌಡ ಬಂಗಾಲೀ ವಿಮರ್ಶೆ ಹೊಂದಿಕೆಯಾಗುತ್ತದೆ (ಕಾಸ. ೫೫). ೩. (ಆಲಂ) ಮೋಸಗಾರಿಕೆ; ಕುಯುಕ್ತಿ: 'ಗೌಡಬಂಗಾಲಿ', 'ಬಾರಾಬಂಗಾಲಿ' ಪರಾ. **ಬಂಗಾಳಿ**: ೨. ಬಂಗಾಳಿಯನ್ನು ಅಭ್ಯಾಸ ಮಾಡಲು ಈ ಭಾಷಾಂತರ ನೆರವಾಗುತ್ತದೆಯೆಂಬುದು ನನ್ನ ನಂಬಿಕೆ (ಕಿಂಬಂ. I. Xvi ಮುನ್ನುಡಿ). ೩. ಬಂಗಾಳಕ್ಕೆ ಹೋದರೂ ಗವುಡಬಂಗಾಳಿ ಬಿಡಲಿಲ್ಲ (ಗಾದೆ). ೪. ಒಂದು ಬಗೆಯ ಮರ; ಹೂವರಸಿ: ರಕ್ತವಿಪ್ಪುದು ಬಂಗಾಳಿ ರಸದಂತೆ (ಶಾಬ್ದೋತ್ರ. ೩-೨೩-೨೦); ಬಂಗಾಳಿಗಿಡದ ಬುಡಕ್ಕೆ ಕುಳಿತ ಮುದುಕಿಯ ಕಡೆಯಿಂದ ನಾಲ್ಕಾಣೆ ಪುಗ್ಗೆ ತಿಂದು ಮುಗಿಸುವಷ್ಟರಲ್ಲಿ ಶಾಲೆ ಬಿಟ್ಟಿತು (ಗಾಕಿ. ೦೭೭). ೫. [ಸಂಗೀತ] ಒಂದು ರಾಗದ ಹೆಸರು: ಸಮಸ್ತರಾಗಂಗಳೊಳಗೆ ರಾಮಕ್ರಿಯೆ . . . ಬಂಗಾಳಿ ಮಧ್ಯಮಾವತಿಯೆಂಬ ಮುವತ್ತಾಱು ರಾಗಂಗಳೇ ಮುಖ್ಯಮಾಗಿ ಬಳಕೆಯಿಂದ . . . ಇರ್ಪವು (ಪಸಂಕ. ೨೩೯); ಸಾಟ್ಕ ಸಾಳಂಗ ಬಹುಳಿ ಬಂಗಾಳಿ ಈ ನಾಲ್ಕು ರಾಗವಾದಿಯಾದ ಮೂವತ್ತೆರಡುರಾಗವನು . . . ಪಾಡುವರು (ಶೈರಸೂ. I, ೨೨). [← ಹಿಂ. ಮರಾ. ಬಂಗಾಲೀ]

ಬಂಗಾಲಿತನ (ನಾ). ಮೋಸ; ವಂಚನೆ; ಠಕ್ಕು: ಕಂಗಾಲತನವು ಹೆಚ್ಚಾದ ಕಾಲಕ್ಕೆ ಅನ್ನದ ಕೊರತೆಯನ್ನು ತತ್ವಜ್ಞಾನದ ಬಂಗಾಲಿತನದಿಂದ ಮುಚ್ಚಬೇಕಾಗುತ್ತದೆ (ಕಾಸಾಮಂ. ೩೪). [ಬಂಗಾಲಿ + — ತನ]

ಬಂಗಾಳ 'ಬಂಗಾಲ' ನೋ.

ಬಂಗಾಳಪಚ್ಚೆ (ನಾ). ಒಂದು ಬಗೆಯ ಔಷಧದ್ರವ್ಯ: ಬೋಳಾಮಸ್ತಕಿ, ಬಂಗಾಳಪಚ್ಚೆ, ಪಚ್ಚೆತುತ್ತ . . . ತಾಮ್ರದ ಚೆಂಬಿನಲ್ಲಿ ಮರ್ದಿಸಿ ಹುಳುಕಡ್ಡಿ ರಕ್ತ ಬರುವ ಹಾಗೆ ಕೆರೆದು ತೊಡೆಯ ಗುಣ (ಪಿಸ್ತಕಿ. ೧೦೪).
[← ತಮಿ. ವಙ್ಕಾಳಪ್ಪಚ್ಚೈ]

ಬಂಗಾಳವಿದ್ಯ (ನಾ). =ಬಂಗಾಲಿತನ: ಬಂಗಾಳವಿದ್ಯದಹಮ್ಮಿನಲಿ ಬಸವನಾಡಿಗೊಡೆಯನ ಗೆಲ್ವ ಹಮ್ಮೊಡಗೂಡಿ ಗೃಹಕ್ಕೆದಿದನು (ಬಸಾಪು. ೬-೦).
[ಬಂಗಾಳ (<ಬಂಗಾಲ) + ವಿದ್ಯ]

ಬಂಗಾಳಿ 'ಬಂಗಾಲಿ' ನೋ.

Δಬಂಗಾಱಿ 'ಬಂಗಾರ' ನೋ.

ಬಂಗಿ 'ಭಂಗಿ' ನೋ.

ಬಂಗಿಮುಕ್ಕ 'ಭಂಗಿಮುಕ್ಕ' ನೋ.

ಬಂಗು (ನಾ). ೧. ಚರ್ಮದ ಮೇಲೆ ಕಪ್ಪುಚುಕ್ಕೆಗಳುಂಟಾಗುವ ಒಂದು ಬಗೆಯ ಚರ್ಮರೋಗ: ಬೀರಗೆ ಸಿದ್ಧಾರ್ಥಂ ಕಾಟ್ಟೀರಗೆ ಕರಿಯೆಳ್ಳಳಿಂಬಿವಂ ಪೂಸುಗಜಕ್ಷೀರದೊಳರೆದಾನನಪಂಕೇರುಹಮಂ ಬಂಗು ಬಿಗುಗುಂ (ಕೋಕೋಸ. ೯-೫೯); ನರಪುಲಿ ಮೊಡವಿ ಬಂ[ಜಾಕಾಂ. ಭೂ. ಪಂ] ಗು ನೆರೆದಾನನದ ಚಿಟ್ಟುವೆರಸಿರ್ದ ಕಂಕುಳಿನ ನಡಿಯೊಡಲು (ಪಪಸ. ೦೦-೦೦); ಪಡವಲದ ಬೀಜವ ಪೂಸೆ ಬಂಗು ತೀರ್ಗುಂ (ಪಿಸ್ತಕಿ. ೬೯). ೨. ಬೂಷ್ಟು; ಬೂಜು: ಅವನುಪಕಾರಮನಾಂ ಪೇ[ಟ]ವೇಟ್ಟುದೆ ನಮ್ಮ ತಿರಿದು ತಂದುಣ್ಬಶನಕ್ಕವ[ರ]ಣ್ಣೆ ಸೂಜಿಮೊನೆಯೆನಿಸುವೆಣ್ಣೆಯುಂ ಬಂಗುಮಾದ ಕಟಿಯುಂ ಪೇಟ್ಟುಗಂ (ಸುಳುಪಾ. ೨-೬೬). [ದೇಶಿ ತಮಿ. ವಙ್ಕು]

ಬಂಗುರಿಸು (ಕ್ರಿ). ೧. 'ಬಂ' ಎಂದು ಶಬ್ದ ಮಾಡು: ಇಂಗಡಲ ತಾಮರಸದಿ ಬಂಗುರಿಪ ತುಂಬೆಗಳ ಗಾವರಂ ಗಾನ ಮಿಗೆ ರಂಗಿಸುತ ಕೇಳುವೆಯ ನಿಟ್ಟಿಪ ಸಮುದ್ರೋಶ (ಲಂಗಪು. ೨-೩೦). ೨. (?): ಬಾಂಬಟ್ಟೆಯೆಡೆಗೆ ಹೊಂಗಿ ಬೆಳೆದಮೃತಘಟಮಂ ಗಣನೆಯಿಲ್ಲೆನಿಸಿ ಬಂಗುರಿಪ ಖಚರಪಾನಂಗಳಿಂ ಬಿಡದೆಱೆವ ತಂಗರಗವೊ . . . ಎನಿಸಿ ಶೃಂಗಚೆಂದೆಂಗಳೆದವು (ಲಂಗಪು. ೩-೨೮). [? + — ಇಸ್ಕು]

ಬಂಗ್ಲೆ 'ಬಂಗಲೆ' ನೋ.

ಬಂಚ, ವಂಚ (ನಾ). ೧. ಬೀಳಿಗೆ; ಮನೆತನ; ಕುಲ: "ವಂಶಮಂ ಬಂಚಮೆನಲಕ್ಕುಂ" (ಕ್ಷತ್ರಿಕ. ೩೬); ಈ ಕಲ್ಲಾಡನಟ್ಟಿದೊಂ ಕೊಣ್ಣಾಳರ ಕೊಡುಗೂರರ ಬಣ್ಣಮತ್ತನ್ತೆ ಅಱಗೆ (ಎಕ.III(R). ಹಗ್ಗಡ. ೩-೦೫; ಸು. ೨೫೮ ಕಕ); ಶತ್ವಕ್ಕೆ ಚತ್ವಂ . . . ವಂಶ—ಬಂಚ (ಕಸುದ. ೨೬೩ ಪ್ರಯೋ). ೨. ಕೊಳಲು: ಎರಡುಂ ಬಂಚಂಗಳಿಂದಿಂಚರವೊಸರ್ವನೆಗಂ ಕಿನ್ನರ ದ್ವಂದ್ವವೊತ್ಪುತ್ತಿರೆ . . . ಕೇಳುತ್ತಿರ್ದ ಕಾದಂಬರಿಯನವನಿಪಂ ದೂರದೊಳ್ ಕಂಡಂ (ಕಾದಂಕಾ. ೦೬೯); ಮದನನ ಬಿಲ್ಲ ಹೇವೊಡೆ ವಿಪಂಚಿಯ ಬಂಚದ ನುಣ್ಪು ಕರ್ಣಪೂರದ ಪರಮಾಮೃತಾಂಬುವೆನೆ ನೇವುರದಿಂದುಡೆ ನೂಲ ತೊಂಗಲಿಂ ಮೃದುರವಮುಣ್ಮೆ (ಅಪಂಪು. ೯-೩೦); ಗೋವರ ಪೆಣ್ಗಳ್ ಬಂಚದ ಗಾವರಕುರಿ ಸೋಲ್ತು ಬಳಸಿ ನಿಲೆ (ಶಮಸಾ. ೯-೦೫೬). **ವಂಚ**: ೧. "ವಂಚಂ=ವಂಶಂ" (ಕಸುದ. ಪಂ. ೨). ೨. 'ವಂಚಿಗೆ' ಪರಾ. [<ಸಂ. ವಂಶ]

ಬಂಚನೆ (ನಾ). ಮೋಸ; ಕಪಟ: "ಅತಿಬಂಚನೆಯೆನೆ ಮರುಟಕ್ಕು [ಮಱಸದಕ್ಕು]" (ಕನ್ನಕಂ. ೩); "ಬಂಚನೆಯೆ ವಂಚನೆ" (ಶಕಾರಿ. ೬೦); ಪುಸಿ ನಸೆ ಬಣ್ಣನೆ (ಎಕ. VI, ೫೪ಕು. ೯೪-೦೯; ಸು. 1060 ?). [<ಸಂ. ವಂಚನ]

ಬಂಚರ (ನಾ). ೧. ಒಂದು ಬಗೆಯ ತಂತೀವಾದ್ಯ; ತಂಬೂರಿ: ಆ ಬಂಚರವನ್ನೆತ್ತಿ ಏಮಾಂಟ ಪರೀಕ್ಷಿಸಿ, ಸುತಿ ಮಾಡಿ . . . ರಾಗಮಾಲಿಕೆಯನ್ನು ಸವಿಗರೆಯುವಳು (ಮಂತ್ರಕ. ೫೭-೦೨). ೨. ವೀಣೆ (?): ಬಾಳ ಬಂಚರ ಮಿಡಿದು ನುಡಿಸು ಬಂಧುರ ಸುಂದರಾ! (ಪಪಚಾ. I, ೯೬೦). ೩. (?): ಚಂಚತ್ಪಂಚಶರನ ಬಂಚರದಂತೆ ಮುಂಚಿ ಪಂಚಮದಿಂಚರಂ ಪಂಚದೊನೆ ನೆಗಳ್ದು ಸಂಗಡಿಸಿದ ಕೆಂಗಣ್ಣಕ್ಕಿಗಳಿಂ (ರಾಜಶೇ. ೨-೬೬ ಪ); "ಭಟ್ಟಂಗಿ ಧ್ವನಿ" (ರಾಜಶೇ. ಕೋಕ). [?]

ಬಂಚರದ್ದಳಿ ? (ನಾ): ಅಳಿನೀಹ್ಯಾಮೃದುಮಂಜಶಿಂಜಿತ ಸಮಂ ಸಣ್ಣಿಂಚರಂ ಬಂಚರದ್ದಳಿಯೊಳ್ತೊಡನುಣ್ಮೆ ನುಣ್ಣರದೆ ಮಿಂಚಂ ಸೀಳ್ದ ವೋಲ್ಬೊಣ್ಮೆ ಕಾಕಳಿಯೊಳ್ಮೊಡಿದ ಸೀಯನಪ್ಪ ರಸಗೇಯಂ ಚಿತ್ತಮಂ ತಾಗೆ (ಲೀಲಾವ. ೩-೬೦). [?]

ಬಂಚಿಸು (ಕ್ರಿ) ೧. ಮೋಸ ಮಾಡು ; ವಂಚಿಸು : ಬಂಚಿಸಿ ತನ್ನನುಜೆಯ ಧನಮಂ ಚಪಲಂ ಕೊಂಡು (ಅದಿಪು. ೩-೦೮): ಧರ್ಮ ಬುದ್ಧಿಯಧರ್ಮಬುದ್ಧಿಯಾಗಿ ಧನಮಂ ಬಂಚಿಸಿ (ಪಂಪಶಂ. ೦೭೭-೨೦). ೨. ತಪ್ಪಿಸು : ಚಾಣಾಕ್ಯನ ಧೃಷ್ಟಿಯಂ ಬಂಚಿಸಿ [ಪಾಠಾಂ. ಯಿಂದಂಜಿಸಿ] . . . ತುತ್ತನರಸಂ ವಿಷಮಿಶ್ರಿತಮೆಂದಱಿಯದೆ ಕೊಟ್ಟಂ (ಪಡ್ಮಾರಾ. ೦೯೦-೨); ಅತ್ತ ಮನುಜಮನೋಜನುಂ ಮದನಪರಿತಾಪಕ್ಕಾಱದುಮ್ಮಳಿಸಿ ಮಧುಮಥನನ ಕಣ್ಣಂ ಬಂಚಿಸಿ . . . ಎಯ್ದೆವಂದು (ಪಂಪಭಾ. ೩-೦೦ ಪ); ನೆಣದ ಪಳ್ಳಂಗಳಂ ಪಾಯ್ದುಂ ನೆತ್ತರ ತೊಱೆಗಳಂ ಬಂಚಿ[ಪಾಠಾಂ. ಜಿ]ಸಿಯುಂ . . . ಪೋಗಿಪೋಗಿ (ಪಂಪಭಾ. ೦೩-೩೩ ಪ).

[ಬಂಚನೆ + —ಇಸು$_3$]

ಬಂಜ (ನಾ). ನಿರ್ವೀರ್ಯನಾದವನು ; ಷಂಡ : ನಿನ್ನೊಡನಿರ್ದ ಬೊಜಂಗರ್ ನಿನ್ನಂತಿರೆ ಬಂಜರಲ್ಲರದಟರ್ಕಳವರ್ (ಧರ್ಮಾಮೃ. ೨-೦೨೩) ; ಈ ಸಲೆ ಬಂಜನೆಂಬ ಸೊಲ್ಲಾತ್ರಿಯೊಳೆಂತು ಪೋಪುದು (ಉದ್ಯಟಿ. ೬-೩೮).

[< ಸಂ. ವಂಧ್ಯ. / ಪ್ರಾ. ವಂಝು. ಮರಾ. ವಾಂಝ್]

ಬಂಜಗ (ನಾ). = ಬಂಜ : ಬಂಜಗಂ ನೀನರಸ ಮುಟ್ಟದಿರು . . . ದೂರದಲಿ ನಿಲ್ಲು (ತರಸು. ೩-೨೮). [ಬಂಜ + — ಗ$_2$]

ಬಂಜರ 'ಬಂಜರು' ನೋ.

ಬಂಜರು, ಬಂಜರ (ನಾ). ೧. ಏನೂ ಬೆಳೆಯದ ನೆಲ ; ಬೀಳುನೆಲ ; ಪಾಳುಭೂಮಿ : "ಊಷವಾನ್, ಊಷರಃ—೨ ಚವುಳುಮಣ್ಣುಳ್ಳ ಬಂಜರುದಿಣ್ಣೆ ಪೆಸರುಗಳು" (ಸಿದ್ಧಾಂತಿ. ೯೩) ; ಅರಣ್ಯಪ್ರದೇಶವನ್ನೂ ಬಂಜರುಜಮೀನನ್ನೂ ತಾತಾ ಅವರಿಗೆ ವಶಪಡಿಸಬೇಕಾಗಿತ್ತು (ಭಾಗ್ಯಶಿ. ೭೮). ಬಂಜರ : ೩. (ಆಲಂ) ವ್ಯರ್ಥವಾದುದು; ಬರಡು; ಅಪ್ರಯೋಜಕವಾದುದು : ಕೀರಂಗಳಾಡದಿಹ ಪಂಜರಂ ಬಂಜರಂ ಸಾರಸಗಳಿಲ್ಲದಿಹ ಕಾಸಾರ ನಿಸ್ಸಾರ (ಪಂಕಾರಾ. ೦-೩-೭೦).

ಬಂಜರಾಗು = (ಆಲಂ) ಬರಿದಾಗು ; ಶೂನ್ಯವಾಗು : ಮನ ಬೀತು ಬಂಜರಾಯ್ತು (ಭಾವಸೀ. ೨-೨೬). ಬಂಜರು ಬೀಳು = ಏನೂ ಬೆಳೆಯದಿರು ; ಫಲವಿಲ್ಲದಾಗು : ಅಷ್ಟು ದೊಡ್ಡ ತೋಟ ನೋಡಿ ಕೊಳ್ಳುವವರಿಲ್ಲದೆ ಬಂಜರು ಬಿದ್ದಿದೆ (ಕೂಡಿ).

[← ಹಿಂ. ಮರಾ. ಬಂಜರ್. / ತುಳು. ಬಂಜರ = ಏನೂ ಬೆಳೆಯದ; ತೆಲು. ಬಂಜರು]

ಬಂಜರುಗಾಡು (ನಾ). = ಬಂಜರು ೧ : ಕುಜಗ್ರಹದ ಬಹುಭಾಗ ನೀರಿನಿಂದ ಬತ್ತಿ ಹೋದ ಮರುಭೂಮಿ ; ಬಂಜರುಗಾಡು (ಆಕಾಶ. ೨೦).

[ಬಂಜರು + ಕಾಡು$_2$]

ಬಂಜರುಭೂಮಿ (ನಾ). = ಬಂಜರು ೧ : ದೀಕ್ಷಾಗ್ರಹಣ ಮಾಡದ ಆಗಮಾನುಷ್ಠಾನವು ಬಂಜರುಭೂಮಿಯಲ್ಲಿ ಬಿತ್ತಿದ ಬೆಳೆಯಂತೆ (ಭಾರದ. ೭೩). [ಬಂಜರು + ಭೂಮಿ]

ಬಂಜಾರ (ನಾ). ಒಂದು ಅಲೆಮಾರಿ ಜನಾಂಗ ವಂತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ ; ಲಂಬಾಣಿ : (ಎಸಮ್ಯ. XXV. ೦).

[← ಹಿಂ. ಬಂಜಾರಾ ; ಮರಾ. ಬಂಜಾರೀ, ವಣಜಾರಾ, ವಣಜಾರೀ]

ಬಂಜಾವು (ನಾ). ಕರಂ ಹಾಕದ ಹಸು ; ಗೊಡ್ಡಾಕಳಂ : ಸತ್ಯನಿಧಿ ಕಱೆಸಿದಂ ಬಂಜಾವನು (ಲಕಿಶಂ. ೩೨-೯೦). [ಬಂಜು + ಆವು]

ಬಂಜು (ನಾ). ಬಂಜೆತನ ; ಗೊಡ್ಡುತನ : 'ಬಂಜಾವು', 'ಬಂಜುಗೆಡು' ಪರಾ. [ಬಂಜ + — ಉ$_4$]

ಬಂಜುಗೆಡು (ಕ್ರಿ.) ಬಂಜರಿಲ್ಲದಾಗು ; ಫಲವತ್ತಾಗು : ಮೊದಲ ಮೊಳಗಿಗೇ ಭಂಜುಗೆಟ್ಟಿತೋ ಭೂಮಿ ಅಣಬೆ ತಾಳಿ (ಮೇಘದೂ. ೩-೦೦).

[ಬಂಜು + ಕೆಡು$_1$]

ಬಂಜೆ (ನಾ). ೧. ಗೊಡ್ಡು ; ಫಲವಿಲ್ಲದುದು : "ಬಂಜೆ—ವಂಧ್ಯಾ(ಧ್ಯ) = ಗೊಡ್ಡು ; ವಿಫಲ" (ಶಬ್ದಕೋ. ೨೯) ; ಬಂಜೆಯ (ಮ)ರನಂ ಅವಕೇಶಿಯೆಂಬುದು (ಹಲಾಯು. ೨೯-೨೪). ೨. ವ್ಯರ್ಥ; ಹಾಳು ; ನಿರರ್ಥಕ : ಮಹಾಧ್ವರಕಾಲಂ ಬರ್ಪನ್ನೆವರಂ ದಿವಸಂಗಳಂ ಬಂಜೆಯಿಲ್ಲದುತ್ತುಂಗ ದಾನಂಗಳಂ ಮಾಡುತ್ತುದ್ಭಟಕ್ಷಿತೀಂದ್ರಚಂದ್ರಮನಿರೆಯಿರೆ (ಉದ್ಯಟಿ. ೪-೩೧ ಪ) ; ದಿನವ ಬಂಜೆಯ ಮಾಡದಿಹ ಪರವಿನಯನಹ ವರದೈವಗುರುಪೂಜನೆಯ . . . ಅನುಗೊಳಿಪನಾವನು ಮನುಜರೊಳ ಗುತ್ತಮನು (ಕುಮ್ಮಾಲಾ. ೩-೩೦). 'ಬಂಜೆವಡಿಸು' ಪರಾ. ೩. ಮಕ್ಕಳನ್ನು ಹಡೆಯದವಳು ; ಗೊಡ್ಡಿ : "ಬಂಜೆಯೆನೆ ವಂಧ್ಯಾಖ್ಯಂ" (ಕವಿಕಂ. ೦೩೮) ; ಮಗನಂ ಪಡೆವಂತಿರೆ ಬಂಜೆಗೆ ಮರ್ದಂ ಮಾಟ್ಟಿಂ (ಸಮಪ. ೦೨-೩೩) ; ಬಂಜೆ ಬೇನೆಯನಱಿಯಳು (ಮಹಾದೇ. ಬಿ. ೦೪೦-೩೧೯) ; ಹೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ? (ಗಿಳಿವಿಂ. ೦೦೦-೧). ೪. ಪ್ರಯೋಜನವನ್ನು ಹೊಂದದವಳು ; ಫಲವನ್ನು ಪಡೆಯದಿರುವವಳು : ಲಾವಣ್ಯದ ಬಂಜೆ ಭೋಗದ ವಿಯೋಗಿಯೆನಿಸಿರ್ದ ತರುಣಿಯರ ವಿರಹಾತಿಶಯಮಂ ಗಿರಿರಾಜಂ ಕರುಣಿಸಿ ನೋಡಿ (ಗಿಂಕ. ೪-೦೦೯ ಪ). ೫. ಒಂದು ಬಗೆಯ ಸಸ್ಯ : "ನಾಗಾರಿಃ—ಗರುಡ, ಬಂಜೆ, ಮಡುವಾಗಲು" (ಓಷಧಿ. ೯೩). (ಗು). ೬. ಫಲವಿಲ್ಲದ ; ಗೊಡ್ಡಾದ : ಮೊದಲಿಲ್ಲದ ಭೂಮಿರುಹಕ್ಕೆ ಶಾವೆಬಂಜೆವನಿತೆ ಗಾತ್ಮಜಂ ಮೃತಶರೀರಿಗೆ ಜೀವಕಳಾಪ್ರವೇಶಮೆಂಬಿವು ಪೆರತೇನು (ಶಕಳ. ೦೩೩-೦೭). ೭. ವ್ಯರ್ಥವಾದ ; ನಿರರ್ಥಕ ; ಹಾಳಾದ : ಈಶನಂ ನೆನೆಯದ ದಿನಂ ಬಂಜೆ ದಿನವಯ್ಯ (ವಾಗೀರ. ದೇ. ೨೭೩-೧೦).

ಬಂಜೆ ಮಾಡು = ಹಾಳು ಮಾಡು ; ನಿಷ್ಫಲಗೊಳಿಸು : ವಿಜಯ ಲಕ್ಷ್ಮಿವೊಲೀತನ ತೋಳ ತಟ್ಟಿನೊಳ್ ಪೊಸಯಿಸು ನಲ್ಮೆಯಂ ದಿವಸ ಲಕ್ಷ್ಮಿಯನೇಕೆಗೆ ಬಂಜೆ ಮಾಡುವೈ (ಪಂಠಾಮಾ. ೯-೦೬೭). ಬಂಜೆಯಾಗು = ೧. ಫಲವಿಲ್ಲದಾಗು ; ನಿಷ್ಫಲವಾಗು : ಅವಂಧ್ಯಃ, ಫಲೇಗ್ರಹಿಃ — ೨. ಬಂಜೆಯಾಗದೇ ಕ್ಲುಪ್ತವಾಗಿ ಫಲ ಬಿಡುವ ಗಿಡದ ಹೆಸರು, ಫಲವೃಕ್ಷ (ಸಿದ್ಧಾಂತಿ. ೦೦೦) ; ಭೂಮಿ ಯಾರೊಬ್ಬರ ಸ್ವಂತ ಆಸ್ತಿ ಆಗದಿರುವ ಪಕ್ಷಕ್ಕೆ ಅದೆಂದೂ ಬಂಜೆಯಾಗಿರುವುದಿಲ್ಲ (ಪುವರು. ೪೨೩). ೨. ಮಕ್ಕಳನ್ನು ಹೆರದಿರು ; ಗೊಡ್ಡಾಗು : ಕಪಿಳೆ ಎಂಬಳು ಮಕ್ಕಳಿಲ್ಲದೆ ಬಂಜೆಯಾಗಿರ್ಪುದುಂ (ಪುಷ್ಯಾಸ್ತ್ರ. ೩-೯೦ ಪ) ; ಬಮ್ಮಲದೇವಿ ಬಂಜೆಯಾಗಿಯೇ ಉಳಿದಿರಲಾರಳು (ಸಪತಿ. viii. ಪ್ರಸ್ತಾವನೆ). ೩. ವ್ಯರ್ಥವಾಗು ; ನಿರರ್ಥಕಗೊಳ್ಳು : ಭಾವರತಿ ಬಲಿದು ಬಂದಂತೆ ಬಗೆದು ಕಣ್ಣೆಱೆದು ಕಾಣದೆ ಬಯಲನಪ್ಪಿದ ತೋಳ್ ಬಂಜೆಯಾಗೆ (ಗಿಂಕ. ೨-೦೦೩ ಪ) ; ದಿನ ಬಂಜೆಯಾಗದೆ ಪರಮಾತ್ಮರತರಾದ ಮುನಿಗಳಿಗನ್ನದಾನವನು ಮನ ಮುಟ್ಟಿ ಮಾಡುವ ಭಾಗ್ಯವೆಂಬುದನಾವ ಮನುಜ ಪಡೆಯಬಹುದೆಂಬ (ಭರಸ. ೩-೪೦); ಬಂಜೆಯಾಗದು ವಿಪ್ರರಂದೆನ್ನೊಳೆಂದ ನುಡಿ (ಶೈಮಭಾ. ೨೯-೩೭).

[< ಸಂ. ವಂಧ್ಯಾ. / ಪ್ರಾ. ವಂಝಾ. / ತುಳು. ಬಂಜೆ. / ಹಿಂ. ಬಂಝಾ ; ಮರಾ. ವಾಂಝ್]

ಬಂಜೆಗೈ (ಕ್ರಿ). ವ್ಯರ್ಥಗೊಳಿಸು ; ನಿರರ್ಥಕಗೊಳಿಸು : ತನ್ನ ಬಾಣಮಂ ಬಂಜೆಗೈದಪರೆ ಪೊಱಬಿಗರು (ಶೈಮಭಾ. ೨೦-೩೯).

[ಬಂಜೆ + ಗೈ (< ಕೆಯ್$_1$)]

ಬಂಜೆತನ (ನಾ). ಫಲವಾಗದಿರುವಿಕೆ ; ಗೊಡ್ಡುತನ : ಎನಗೀ ಜನ್ಮಮಿದಿಂತೆ ಬಂಜೆತನದಿಂದಂ ಪೋಕುಮೋ (ಸುಳುಮಾ. ೯-೦೦೯) ; ತನ್ನ ಬಂಜೆತನಮಿಂದು ಪೋದುದು (ಶೈಮಭಾ. ೨೯-೩೯) ; ನಂಜುಂಡ ಜೀವದ ಬಂಜೆತನವಳಿಯಿತು (ಸಿದ್ಧಪು. ೩-೦೦). [ಬಂಜೆ + — ತನ]

ಬಂಜೆವಡಿಸು (ಕ್ರಿ). ವ್ಯರ್ಥಗೊಳಿಸು ; ನಿರರ್ಥಕಗೊಳಿಸು : ಸತ್ಪುರುಷ

ರದೇಕೆ ಬಂಜೆವಡಿಪರ್ ಗಡ ದುರ್ಲಭಕಾಲಲಬ್ಧಿಯಂ (ಪಂಪ್ರಪು. ೨-೩೭) ; ಮದಗಂಧಸಾರಸಪ್ತಚ್ಛದಂಗಳಿಂ ಪುದಿದು ಬೆಳೆದ ತಾಪಿಂಛದ ಪೆರ್ವೊದಱ ಕರಿಶಂಕೆಯಿಂ ಪಾಯ್ದುದಱೊಳ್ ಪರಿವಿತತಿ ಬಂಜೆವಡಿಪುದು ಮುಳಿಸಂ (ಪಂಪ್ರಪು. ೩-೩೦). [ಬಂಜೆ + ಪಡಿಸು]

ಬಂಜೆವಾಗಲ್, ಬಂಜೆವಾಗಲ, ಬಂಜೆಹಾಗಲ (ನಾ). ಒಂದಂ ಬಗೆಯ ಮೂಲಿಕೆ : ವಿವಿಧವ್ರಣದೊಳ್ ಸಲೆ ಬಂಜೆವಾಗಲಂ . . . ಪೂಸುಗಾ ವಿಷಂ ಪೊಱಮಡುಗುಂ (ಲೋಕೋಪ. ೦೦-೩೬). **ಬಂಜೆವಾಗಲ** : ಬಂಜೆವಾಗಲದ ಗೆಣಸ ನಾಲ್ಕುವರಹತೂಕವ ನೀರಿನಿಂದಾ ಅರದು ನಸ್ಯಂ ಕುಡಿಯ ಕೊಡಲು ಸರ್ಪಯಿಲಿ ಬೆಕ್ಕು ಚೇಳು ನಾಯಿ ನರಿ ಮೊದಲಾದ ವಿಷಗಳು ಶಮನವಹುದು (ವಿಷಶ. ೨೫-೬). **ಬಂಜೆಹಾಗಲ** : ಬಂಜೆಹಾಗಲದ ಗೆಡ್ಡೆ, ತುರುಚನ ಬೇರಿನ ತಿಗುಡು ಇವುಗಳನ್ನು ಸಮತೂಕದಲ್ಲಿ ಚೂರ್ಣಿಸಿ (ಸಕಪ್ಯ. ೮೬). [ಬಂಜೆ + ಪಾಗಲ್$_1$]

ಬಂಜೆವಾಗಲ 'ಬಂಜೆವಾಗಲ್' ನೋ.

ಬಂಜೆವಾತು (ನಾ). ವ್ಯರ್ಥವಾಗುವ ಮಾತು ; ಫಲ ಕೊಡದ ಮಾತು: ನುಡಿಯಬಹುದೇ ಬಂಜೆವಾತನು (ಕುಮ್ಮಾವಿ. ೬-೨೭). [ಬಂಜೆ + ಮಾತು$_1$]

ಬಂಜೆವೊಟ್ಟು (ನಾ). ವ್ಯರ್ಥವಾದ ಕಾಲ ; ಪ್ರಯೋಜನಕ್ಕೆ ಬಾರದಿರುವ ಸಮಯ : ಸದಮಳಪಾತ್ರಕ್ಷೇತ್ರದೊಳಿದು ಬಿತ್ತುವ ಪದದ ಪೊಟ್ಟು ಗೃಹಮೇಧಿಗದೇವುದೊ ಮಧ್ಯಾಹ್ನದ ಪೊಟ್ಟಲ್ಲದ ಪೊಟ್ಟುಂ ಬಂಜೆವೊಟ್ಟು ತಾನದು ಪೊಟ್ತೇ (ಅರ್ಥನೇ. ೧-೭೯). [ಬಂಜೆ + ಪೊಟ್ಟು]

ಬಂಜೆಹಾಗಲ 'ಬಂಜೆವಾಗಲ್' ನೋ.

ಬಂಟ$_1$, ಬಟ, ಭಂಟ (ನಾ). ೧. ವೀರ ; ಶೂರ ; ಪರಾಕ್ರಮಿ : "ಘನವೀರನಪ್ಪವಂ ತುಟಿಲಾಳು ಬಂಟಂ" (ಕಬ್ಬಿಕ್ಕ. ೪೨); ಕನ್ನೆಯ ಬಂಟನ ವೃದ್ಧಸ್ತ್ರೀಯ ಮೂವರ ಚಿತ್ರಕಥೆಗಳಂ ಪಟದೊಳ್ ತೋಱಿ (ವಡ್ಡಾರಾ. ೧೪-೦೬) ; ಮಹಾಸಾಮನ್ತಂ ಕನ್ನನ ಬಣ್ಣಂ ಕಟಕಪ್ರಾಕಾರಂ ನೆರೆಪೊಡೆ ಬಣ್ಣಂ (ಸೌಇಇ. XI-i, ೪೭-೭ ; 993). ೨. ಯೋಧ ; ಸೈನಿಕ : ಕಾಳಗದಲ್ಲಿ ಪೌಜನಿಕ್ಕಿದಡೆ ಮಾಱಿದಡೆ ಅರಸೆಂಬರಲ್ಲದೆ ಬಂಟರೆಂಬುದಿಲ್ಲ (ಪೋಳಿಮಾ. ೨-೩) ; ಬವರಕ್ಕಾಗದ ಬಂಟನೇ (ಸೋಮೇಶ. ೨೨). ೩. ದಾಸ ; ಸೇವಕ : ತೊತ್ತಿಂಗೇಕೆ ಲಕ್ಷಣ ಬಂಟಂಗೇಕೆ ಆಚಾರ (ಬಸವ. ೪೬೬) ; ಬಗೆದೆನಪರಾಧವನು ಕರುಣಾಳುಗಳ ಬಲ್ಲಹ ನೀನು ನಿನ್ನಂಘ್ರಿಗಳಿಗೀ ತಲೆಬಂಟ ನೀನಿದ ಕಾಯಬೇಕು (ಕುಮ್ಮಾವಿ. ೦೦-೧೮) ; ನೆಚ್ಚಿನ ಬಂಟಂ ಹನುಮಂತಂ ಕೆಮ್ಮನಿರ್ದನೆ? (ರಾಮಾಶ್ವ. ೩೭-೬) ; ಸಮಯಕ್ಕಾದವನೇ ನಂಟ, ಕೆಲಸಕ್ಕೆ ಒದಗಿದವನೇ ಬಂಟ (ಗಾದೆ). ೪. ದಕ್ಷಿಣಕನ್ನಡದ ಒಕ್ಕಲಿಗರ ಒಂದು ಪಂಗಡ : ವ್ಯವಸಾಯಗಾರರು . . . ಬಂಟ, ದಖ್ನಿ (ತುಳುನಾ. ೦೭೦). **ಬಟ** : ೧. "ಬಟ (ಬಂಟ, ಬಂಟು)_ಭಟ" (ತದ್ಭಕೋ. ೨೮); ಸಾಂತರಸ . . . ಬೆಸಗೆಯ್ವಲ್ಲಿ ಮರಲಿ ಬಟರಿಂಗೆ ಕೊಟಾರ್ (ಎಕ. VI, ಕೊಪ್ಪ. ೩೯-೪ ; ಸು. 700?) ; ಅಚುತರಾಯಮಹಾರಾಯರೂ . . . ವೀರಬಟರಿಗೆ ದರ್ಮವಾಗಿ ವಿಟ್ಟ (ಎಕ. X (8), ಕೋಲಾರ. ೦೦೪-೩ ; 1535). ೨. ಮತ್ತಿ ಘಡದ ಚಿಕ್ಕನಾಯಕಹಳ್ಳಿಯ ಸುತ್ತಣ ಬಟರೊಂದೆಸೆಯ ಒತ್ತರಿಸಿ . . . ಏಱಿದರು (ಕಂಪವಿ. ೦೪-೩೬). ೩. ನಿತಂಬಿನಿಯರಸಿಯ ಬಾಸೆಗಳಂ ಯಮರಾಜನ ಬ[ಪಾಠಾಂ. ಭ]ಟರೆನ್ನದೆ ಶೋಭಾಕರಮೆಂದೊಡಂ (ಧರ್ಮಾಮೃ. ೭-೦೩೩). **ಭಂಟ** : ೧. ನಾವು ವೃದ್ಧರು ಬಿರುದುಗಿರುದಿನ ಲಾವಣಿಗೆ ನಮಗೇಕೆ ಹೇಳೈ ನೀವಲೈ ಜವ್ವನದ ಭಂಟರು ರಣದ ಧುರಧರಕೆ (ಕುಮ್ಮಾಭೀ. ೯-೩೦) ; ಪಂಠಿಸಿದರಿಗಳ ತಲೆಯನರಿದು ಕಾಳಕಂಠಗೆ ವನಮಾಲೆಯಿತ್ತು ಭಂಟರಾಗಿಹೆವು (ಕಂಪವಿ. ೮-೪೨) ; ಒಂಟಿ ನೀನೊಳ ಜಗಕೆ ಭಂಟ ಹೊರಜಗಕೆ (ಮಂಕುಕ. ೭೩). ೩. ಭಂಟನಹೆ ಬಕುತರಿಗೆ (ಕುಮ್ಮಾಉ. ೩-೬) ; ಭಂಟನಲ್ಲವೆ ನಾನು ದೀನರ ನೆಂಟನಲ್ಲವೆ ನೀನು (ಹಂಸಾ. ೭೦). ೫. ಕಾವಲುಗಾರ ; ಕಾಪಿನ ಆಳು : ಸುಡುಗಾಡಿಕ್ಕೆಗೆ ಭಂಟನಾಗನೆ ಹರಿಶ್ಚಂದ್ರಂ (ಸೋಮೇಶ. ೩೨).

ಬಂಟರ ಬಾವ, ಬಂಟರ ಭಾವ = ಪರಾಕ್ರಮಿಗಳನ್ನು ಸೋಲಿಸಿ, ಅವರ ಕಡೆಯ ಹೆಣ್ಣನ್ನು ಮದುವೆಯಾಗುವವನು ; ಒಂದು ಬಿರುದು : ಪರಬಲಭಯಂಕರನುಂ ಬಣ್ಬರ ಬಾವನುಂ (ಎಕ. VI, ಕಡೂರು. ೧೩೭-೩೨ ; 1191) ; ಕೊತ್ತಗಾವುಣ್ಡನ್ ತತ್ಪುತ್ರ ಕೋರಾತ್ಯಗಾವುಣ್ಡಂ ದುಷ್ಟಸ್ವವಾಹಕ ಮಱೆವೊಕ್ಕೆ ಕಾವನ್ತೆ ಬಣ್ಬರ ಭಾವಂ (ಎಕ. III, ನಂಜನ. ೦೨೨-೦೪ ; 266 ? ಕೃಶಾ) ; ಯಾಚಕಜನನಿಧಿನಿಧಾನ[ಂ] ಬಂಟರ ಭಾವಂ ಪರನಾರೀದೂರಂ ಸರಣಾಗತಪ್ರಿಯಂ (ಕಇಅ. ೪೦-೩೯-೦೦ ; 1128) ; ಗೋವನಿಕಲಂಕಮಲ್ಲ ಬಂಟರ ಭಾವ ಪರನಾರೀಸಹೋದರ (ಇಅ. V, ೪೦-೨೬ ; 1586). [< ಸಂ. ಭಟ]

ಬಂಟ$_2$, ಬಟ್ಟ$_4$, ಭಟ$_1$ (ನಾ). ೧. ಹೊಗಳುವವನು ; ಸ್ತುತಿಪಾಠಕ : 'ಬಂಟಸಾಮಿ' ಪರಾ. **ಬಟ್ಟ$_4$** : ೧. 'ಹೊಗಳುಬಟ್ಟ' ಪರಾ. ೨. ವಿದ್ವಾಂಸ ; ಪಂಡಿತ : (?). ೩. ಪೂಜಾರಿ ; ಪುರೋಹಿತ : ಬಟ್ಟರಿಗೆ ಮಂತ್ರಕ್ಕಿಂತ ಉಗುಳೇ ಜಾಸ್ತಿ (ಗಾದೆ). ೪. ಅಡುಗೆಯವನು : ಈವತ್ತು ಬಟ್ಟರು ಬಂದಿಲ್ಲ (ರೂಢಿ). **ಭಟ$_1$** : ೧. "ಭಟಃ_ಉಗ್ಗಡಿಸುವಂ" (ಕಾಶಕ್ಯ. ೨೬೨). 'ಭಟಾಂಗ' ಪರಾ. [< ಸಂ. ಭಟ್ಟ]

ಬಂಟ$_3$ (ನಾ). ಶ್ರೇಷ್ಠಜಾತಿಯ ಕುದುರೆ : ದಾಂಟಲ್ಬಾರದ ಕುಟಿಯಂ ಗೆಂಟಱೊಳಂ ಕಂಡು ಪಿರಿದು ಪರಿತಂದು ಮುದಂ ನಾಂಟರೆ ಲಂಘಿಸಿ ಪೋದವು ಬಂಟಂಗಳೆನಿಪ್ಪ ಕುದುರೆಗಳ್ ಕೆಲವದಱೊಳ್ (ಬಾಧಪು. ೦೦-೪). [?./ಮರಾ. ಬಟ್]

ಬಂಟಂಗ (ನಾ). ಶೌರ್ಯದ ರೀತಿ ; ಪರಾಕ್ರಮದ ಬಗೆ : ಕಂಠೀರವ ರಾಜನಿದಿರಲಿ ಕರಿಗಳ ಬಂಟಂಗ ಮೆಱೆವುದೆ ಸ್ವಾಮಿ (ಕಂಪವಿ. ೦೨-೭೨). [ಬಂಟು + ಅಂಗ$_1$]

ಬಂಟತನ (ನಾ). ೧. ಪರಾಕ್ರಮ ; ಶೌರ್ಯ : ರಾವಣಗೆಂಟುಮಡಿಯಿಂದ್ರಾರಿ ರಣದಲಿ ಬಂಟತನದ ಪರಾಕ್ರಮಂಗಳ ಕಾಣದೇ ಲೋಕ (ಕೌತಿರಾ. ೩೬-೨೦) ; ಅಕ್ಕಮಹಾದೇವಿಯ ವಚನವು ಅವಳ ಧೈರ್ಯ ಸಾಹಸಗಳ ನಿದರ್ಶನವಾಗಿ ನಮ್ಮಲ್ಲಿ ಬಾಳುವೆಯ ಬಂಟತನವನ್ನು ಪ್ರೇರಿಸುತ್ತದೆ (ತವನಿ. ೩). [ಬಂಟ$_1$ + — ತನ]

ಬಂಟವಣ (ನಾ). ಪರಾಕ್ರಮಿಗಳಂ ಸಲ್ಲಿಸುವ ಹಣ: ಈನ್ತು ನೆಗರ್ತ್ತೆವೆತ್ತ ಬಂಟಸಾಸಿರ್ವ್ವರುಂ ದೇವರ್ಗ್ಗೆ ಬಂಟವಣಮನಾಚಂದ್ರಾರ್ಕ್ಕತಾರಂಬರಂ ಬಿಟ್ಟರ್ (ಸೌಇಇ. XI-ii, ೦೪೩-೬; 1008). [ಬಂಟ$_1$ + ಪಣ$_3$]

ಬಂಟಸಾಮಿ (ನಾ). ಹೊಗಳುಭಟ್ಟರಲ್ಲಿ ಮುಖ್ಯನಾದವನು : ಅಚ್ಚಿಗದಿಂ ಕಟ್ಟಿದ ಕೆಟ್ಟ ಕನ್ನಡದ ಕಾಟ್ಗಿಬ್ಬಗಳಂ ಬಂಟ[ಪಾಠಾಂ. ಬಟ್ಟ]ಸಾಮಿಗಳಂ ಕೇಳಿಸಿ ತಾಮೆ ತಮ್ಮ ಮನದೊಳ್ಸರ್ವಜ್ಞರೆಂದಿರ್ಪ ಕಬ್ಬಿಗರುಂ ಕಬ್ಬಿಗರೆಂಬಲೆಕ್ಕದೊಳಗೇಂ (ಅರ್ಥನೇ. ೧-೩೩). P ಇದು ಇತರರನ್ನು ದೂಷಣೆ ಮಾಡಿ ಒಡೆಯನನ್ನು ಹೊಗಳುವವನು ಎಂಬರ್ಥದಲ್ಲಿ ಉಪಯೋಗವಾಗಿದೆ. [ಬಂಟ$_2$ + ಸಾಮಿ$_1$]

ಬಂಟಿಕೆ (ನಾ). ವಾರ್ತೆ; ದೌತ್ಯ (?) : ಅಂಬರೀಷಾವನಿಪಸುತೆಯ ಬಂಟಿಕೆಯ ಹರಿಗಂಬರೀಷಂ ಮುಳಿಯನೆ (ಪದ್ಮರಾ. ೦೦-೬೩). [ಬಂಟ$_1$ + — ಇಕೆ]

ಬಂಟು (ನಾ). ೧. ಪರಾಕ್ರಮ; ಶೌರ್ಯ : ಸಾಸಿರ್ವ್ವರುಂ (ವ)ಆತನ ಬಣ್ಬಿಂಗೆ ಮೆಚ್ಚಿ (ಎಕ. VIII, ಸೊರಬ. ೮೬-೭; 1150); ಉಂಟಾದ ಬಲೆ ಕಾಲು ಕಣ್ಣಿ ನಾಯಕ ಕುನ್ನಿ ಬಂಟುಳ್ಳ ನಾಯಿ ಹುಲಿಗಳ ಅಂಟುಸಾಳುವ

ಸೇಣೆ ತಡಿಕೆ ಗಾಣಗಳಿಂದ ಉಂಟಾಗಿ ನಡೆಸಿಂದ ರಾಯ (ಹಂಸಾಂ. ೧-೬೦); ನಂಟುಂ ಬಂಟುಂ ನೆರಮಿರ್ಪಿನಂ ಗೆಲ್ವುದುಮೊಲ್ವುದುಂ ನಿಮಗಕ್ಕುಂ (ರಾಮಾಶ್ವ. ೯೬-೦೭). 'ಬಂಟುತನ' ಪರಾ. ೨. ಸೇವೆ; ಕೈಂಕರ್ಯ : 'ಬಂಟುಗೆಯ್' ಪರಾ. ೩. ಪರಿವಾರ; ರಕ್ಷಕದಳ: ಕಲಿ ಮಲಪ್ರಧ್ವಂ ಸಕಂ ಕೇಶಿರಾಜನ ಬಂಟಿಂ ನಯ[ಸೇ]ನಸೂರಿಪದಪದ್ಮಾರಾಧನಾರಕ್ತ ಚಿತ್ತನ್ (ಎಇ. XVI. ೫೫-೦೬; 1053). ೪. ಸೈನ್ಯ: ದಂಡು : ತುರಗಮು ಮೊಂದುಸತ್ತಿಗೆಯುಮೊಂದಿರೆ ಕಾಪಿನ ಬಂಟು ಸುತ್ತಲುಂ ಬರೆ (ಆದಿಪು. ೦೦-೪೬ ಅಧಿಕಪದ್ಯ); ಭೂರಿ ಗೋವೃಂದವನು ಗೋಪಕುಮಾರರನು ಯಾದವರ ಬಂಟಿನ ಮೇರೆಯನು ಮಿಗೆ ಕಾದನಲ್ಲದೆ ತುಱುವ ಕಾದವನೇ (ಸಾಳ್ವಭಾ. ೨೦-೬೬). ೫. ಸೇವಕ ; ಭೃತ್ಯ ; ಊಳಿಗದವನು : ನಮ್ಮ ಬಂಟಿಂಗೆ [ಪಾಠಾಂ. ಎಮ್ಮ ಭಂಟಿಂಗೆ]ನಾಮೆ ಬೆಸಕೆಯ್ವನಿತಾಯ್ತು (ಜೀವಸಂ. ೨೦೦-೦೭); ಭೂತಗಣ ಬಂಟು ನೃತ್ಯ (ಶಂಡಪು. ೩೦-೨೪). [ಬಂಟ$_1$ + — ಉ$_4$. /ತುಳು. ಬಂಟು = ವೀರೋಚಿತವಾದ ; ತೆಲು. ಬಂಟು]

ಬಂಟುಗೆಡು (ಕ್ರಿ). ಶೌರ್ಯ ಕುಂದು ; ಕೆಚ್ಚಲ್ಲದಾಗು : ಕೂರದರ್ ನೆಲನನೊಟ್ಟಜೆಯಿಂ ಕೊಳೆ ಕೊಟ್ಟು ಬಂಟು[ಪಾಠಾಂ. ಮುಂದು, ಮುಟ್ಟುಗೆ]ಗೆಟ್ಟಿನ್ನುಮರಣ್ಯದೊಳ್ ನಮೆದಪಂ ಯಮನಂದನಂ (ಪಂಪಭಾ. ೬-೫೫) ; ಕಂಠಮಂ ಕತ್ತರಿಸಲಾ ಶಿರಂ ತನ್ನೆಡೆಗೆ ಬಂಟುಗೆಡದೈದಿದೊಡೆ (ಶೈಮಿಭಾ. ೦೩-೬೨). [ಬಂಟು + ಕೆಡು$_1$]

ಬಂಟುಗೆಯ್ (ಕ್ರಿ). ಸೇವೆ ಮಾಡು ; ಊಳಿಗ ಮಾಡು : ದುಷ್ಕುಲಂಗಳೊಳ್ ಪುಟ್ಟಿ ಪೆಱರ್ಗೆ ಕೀಱುವೆಸಂಗೆಯ್ದುಂ ಬಂಟುಗೆಯ್ದುಂ ನಮೆವುತ್ತಂ. . .ದುರ್ಗತಿಗೆ ಸಲುವರ್ (ಪಸಾರ. ೩೭೩). [ಬಂಟು + ಕೆಯ್$_1$]

ಬಂಟುತನ (ನಾ). ಪರಾಕ್ರಮ ; ಕೆಚ್ಚು ; ಶೌರ್ಯ : ನೆರೆದು ಪರದಾರಮಂ ಕಲಿವುದೆ ಚತುರತ್ವಂ ಸೊಕ್ಕುವುದೆ ಬಂಟುತನಂ . . . ಎಂಬರ್ ಧೂರ್ತರ್ (ಕಾದಂಪೂ. ೫೬೬); ಗಱಿ ತೋಱಿ ಗಂಡರೆಂಬವರ ಕಾಣೆ ನಿಱಿ ಸೋಂಕಲು ಮುನಿಯಿಲ್ಲ ನೋಡಯ್ಯಾ ನಂಟುತನವೇನವನ ಬಂಟು[ಪಾಠಾಂ. ಟ]ತನವೇನವನ ಹುಲ್ಲ ಕಿಚ್ಚು ಹೊಲೆಯನ ಮೇಳಾಪ (ಬಸವ. ಕ. ೧೦೨) ; ಜಗಂ ನೋಡೆ ಮಾಡಿದನತ್ಯದ್ಭುತಮಪ್ಪ ಬಂಟುತನಮಂ ಗೋವಿನ್ದದಣ್ಡಾಧಿಪಂ (ಸೌಇಇ. XX.೬೭-೪೨; ?); ಬಂಟುತನವು ಎದೆಗಾರಿಕೆ ಧೈರ್ಯ ವೀರತ್ವವನ್ನು ತಿಳಿಯಪಡಿಸುತ್ತದೆ (ತುಳುವಾ. ೬೧). [ಬಂಟು + — ತನ./ತೆಲು. ಬಂಟುತನ]

ಬಂಟೆದೆ (ನಾ). ಪರಾಕ್ರಮವುಳ್ಳ ಮನಸ್ಸು : ಇಂದು ಬೆಳಗಿನಿಂದ 'ಹೊಯ್ಸಳ ! ಹೊಯ್ ಸಳ !' ಎಂಬ ಕಡೆಯಿಲ್ಲದ ಕೂಗು ನಿನ್ನ ಬಂಟೆದೆಯ ಮುಟ್ಟಲೆಂದು ನನ್ನ ಕಿವಿಕೊಳವಿಯಲ್ಲಿ ಹೊಕ್ಕಾಡುತಿದೆ (ವಿಜಸಾ. ೪). [ಬಂಟು + ಎದೆ (<ಎರ್ದೆ)]

ಬಂಟೇಳು 'ಬಂಡೇಳು' ನೋ.

ಬಂಡ$_1$ (ನಾ). ೧. ಪದಾರ್ಥ; ಸಾಮಾನು; ಸರಕು : ಪಲಂಬರ್ ಶಾಕಟಿಕಪರದರುಂಬೆರಸು ಬಂಡಿಗಳೊಳ್ ಪಟ್ಟಿಯಂ ಧಾನ್ಯಮಂ ತೀವಿ ಕೊಂಡು ಪೊಟಲ್ಗೆ ಮಾಱಲೆಂದು ಪೋಪನ್ನೆಗಂ . . . ಬಂಡಮುಮೆಟ್ಟುಗಳುಂ ಮೊದಲಾಗೆಲ್ಲಮಂ ಕಳ್ಳರ್ ಕೊಂಡು ಪೋದರ್ (ಪಡ್ಡಾರಾ. ೭೬-೦೪); ಬಂಡವ ತುಂಬಿದ ಹಸುಬೆ ಕೊಂಡವನ ನುಂಗಿತ್ತು (ಪೋಳಿಮಾ. ೨೪೩-೬೯೪); ಉರುತರ ಬಂಡವ ತುಂಬಿ ಹಡಗೇಱಿ ಹರದುಗೆಯ್ಯಲು (ಪೇಮಿಸಂ. ೪-೦೩). ೨. ಮಾನವಿಲ್ಲದವನು ; ನಿರ್ಲಜ್ಜ : "ಬೂತುಗಳೆನೆ ಬಂಡರ್ [ಪಾಠಾಂ. ಬಂಡುಂ]" (ಭಾಚಿ. ೨೯); ಕಬ್ಬಿಗರ ಜೋಡೆಯ ಬಂಡರ. . . ಬೀಣೆಗಾಱರಾಗರಮೆನೆ . . . ಎಸೆದಿರ್ಪುವು ಸೂಳೆಗೇರಿಗಳ್ (ಕಬ್ಬಿಕಾ. ೪೨); ಲೋಕದೊಳ್ಬೇಡುವಂ ಬಂ[ಪಾಠಾಂ. ಭಂ]ಡಂ (ಶೈಮಿಭಾ. ೨೬-೬೪) ; ಬಂಡನ ಸ್ನೇಹ ಮಾಡಿ ಇದ್ದ ಬಂಡ ಕಳಕೊಂಡ (ಗಾದೆ). ೩. ವಿದೂಷಕ ಹಾಸ್ಯಗಾರ : ಭಂಡಂ — ಬಂಡಂ (ಶಮದ. ಕಿ. ೨೫೫ ಪ್ರಯೋ). ೪. ಹೇರಳ; ಹೆಚ್ಚಳ ; ಆಧಿಕ್ಯ : ದವಸ ಬಂಡವಾಗಿದೆ (ಪಟ್ಟಿಲಿ. ೨೪೦-೨೦). (ಗು). ೫. ನಾಚಿಕೆಯಿಲ್ಲದ ; ಲಜ್ಜೆಗೇಡಿಯಾದ : ಬಂಡವೈಷ್ಣವನೆ ಕೇಳದಱಿಂದೆ ಹರಿಯಡಿಯು ಖಂಡಿಸಿದುದೆಂದು ಪದ್ಮಪುರಾಣಮೊರೆದುದು (ಸಿದ್ಧೇಪು. ೬-೫೫).

ಬಂಡಬಂಡವಾಗಿ = ಹೆಚ್ಚುಹೆಚ್ಚಾಗಿ; ಅತ್ಯಧಿಕವಾಗಿ : ತೊಲೆಗಳವರೆಗೆ ಬಂಡಬಂಡವಾಗಿ ನೇಲುಬಿದ್ದ ಇಲ್ಲಣ, ಜಾಡಗಳನ್ನು ಸವರಿದರು (ರಕ್ತರ್ಷ. ೨೬೦). [<ಸಂ. ಭಂಡ. / ತಮಿ. ವಣ್ಬ, ವಣ್ಬು; ತುಳು. ಬಂಡ್, ಬಂಡು, ಭಂಡ್, ಭಂಡ, ಭಂಡೆ ; ಕೊಡ. ಬಂಡೇ; ತೆಲು. ಬಂಡ, ಬಂಡು ; ಕೋತ. ಬಂಡ್ವಾ. / ಮರಾ. ಭಂಡ್, ಭಾಂಡ್]

ಬಂಡ$_2$ (ಗು). ೧. ಕುಂದುಗಳುಳ್ಳ ; ನ್ಯೂನ. ೨. ಸತ್ತ್ವಗುಂದಿದ ; ನಿರ್ವೀರ್ಯ. (ನಾ). ೩. ಬಾಲವಿಲ್ಲದ ಎತ್ತು : "ಬಂಡ-ಬಾಲ ಮೋಟಾದ ಎತ್ತು" (ಪಾಪರಾ. ಕಿ); ಮಾಗಧೀಭಾಷೆಯಲ್ಲಿ ಬಾಲ ಕತ್ತರಿಸಿದ ಗೂಳಿಯನ್ನು 'ಬಂಡ' ಎಂದು ಕರೆಯುತ್ತಾರೆ (ಬಾಣಲಿ. ೦೦). [ಸಂ.]

ಬಂಡ$_3$, ಬಂಡೆ$_3$ (ನಾ). ಕುರಿಯ ತುಪ್ಪಟ ; ಉಣ್ಣೆ : ಬಣ್ಡವೇಱಿಂಗೆ ಅಯ್ದು ವಿಸ (ಇಲಿ. VIII, ೨೬೬-೫೪; 732); ಕುರುಬರ ಸಂಗವ ಮಾಡಿ ಕುರಿಗಳ ಮೆಯ್ಸೋದ ಕಲಿತು ಬಂಡ ನೂಲೋದ ಕಲಿತು (ಪಾಪದ. ೦೫೦). 'ಅಡಿಬಂಡ' ಪರಾ. ಬಂಡೆ$_3$: "ಊರ್ಣಾ-ಕುರೀಬಂಡೆ ಮುಂತಾದ ಕೂದಲು" (ಸಿದ್ಧಾಂತಿ. ೩೬೭). [?]

ಬಂಡಣ, ಭಂಡಣ (ನಾ). ಕಾಳಗ; ಯುದ್ಧ : "ಬಂಡಣ = ಕಾಳೆಗಂ" (ಶಮದ. ಪರಿ. ೨); ಬಂಡಣದೊಳೆನ್ನನೋಡಿಸಿ ಕೊಂಡುಯ್ದಂ ನಿನ್ನನಾ ಸರಿತ್ಸುತಂ (ಪಂಪಭಾ. ೦-೭೬) ; ಚಂಡಕೋದಂಡನ ದಂಡು ಬಂಡಣಕ್ಕಿಸಲಂಡುಗೊಂಡು ನಿಂತು (ಹಮ್ಮೀರ. ೩-೩೩ ಪ); ಪಲಬರರಸರಂ ಬಂಡಣದೊಳ್ ಗೆಲ್ದು (ಮರಾಶ. ೨-೩೬ ಪ). ಭಂಡಣ : "ಯುದ್ಧಾಹ್ವಯಂ ಭಂಡಣಂ" (ಕರ್ಣಾಪಿ. ೨); ಭಂಡಣದೊಳಟಿದು ಪೆಂಡಿರ್ ಭಂಡಾರಂ ಪೋದೊಡದು ವಿಧಾತೃವಶಂ (ಅಪಂಪು. ೦೦-೭೦); ಭಂಡಣದೊಳ್ ಜಯಾಪ ಜಯಮೆಂಬುದು ಸಿದ್ಧಂ (ದಶಕು. ೨-೩೪) ; ಚಂಡಪರಾಕ್ರಮದಷ್ಟ ಶಶಾಂಕರ್ ಭಂಡಣಮಂ ಪೊಕ್ಕಾ ನೃಪಪಂಚಕದೊಳಗೆ ಪಳಂಚಿದರು (ಜಯಕಾ. ೬-೫೩). [<ಸಂ. ಭಂಡನ]

ಬಂಡತನ (ನಾ). ನಾಚಿಕೆಯಿಲ್ಲದಿರುವಿಕೆ; ಅವಮಾನದಿಂದ ಕೂಡಿರುವಿಕೆ; ನಿರ್ಲಜ್ಜೆ : ಆ ಯಮಂ ಬಂಡತನವೇ ಶ್ವೇತ ನಡೆ ನರಕಕುಂಡಕ್ಕೆ ನೀನೆಂದು ಗರ್ಜಿಸಲ್ಕೆ (ಶಿಪಿಪು. ೫೦-೨೬); ಪೈಶಾಚರಂತೆ ಹೇಸದೆ ರಕ್ತಪಾನಮಂ ಮಾಡಿಯೊಡಲ ಪೋಷಿಸಿದೆ ಬಂ[ಪಾಠಾಂ. ಭಂ]ಡತನವಿದು (ಶೈಮಿಭಾ. ೨-೬೦). [ಬಂಡ$_1$ + — ತನ]

ಬಂಡಬಾಳು (ನಾ). ಮಾನವಿಲ್ಲದ ಬಾಳು; ಹೀನಬದುಕು : ಬಂಡಬಾಳನ್ನು ಬಾಳಿದ ಬಾಣಭಟ್ಟ ಏಕಿಂದು ಪರಾಧೀನನಾಗಿದ್ದಾನೆ ? (ಬಾಣಲಿ. ೦೦೯). [ಬಂಡ$_1$ + ಬಾಳು$_2$ (<ಬಾಟ್ಟು$_2$)]

ಬಂಡಮಾತು (ನಾ). ನಾಚಿಕೆಯಿಲ್ಲದ ಮಾತು : ಇನ್ನೊಂದು ಸಲ ಇಂಥ ಬಂಡಮಾತು ಆಡಬೇಡ (ಕೂಡಿ). [ಬಂಡ$_1$ + ಮಾತು$_1$]

ಬಂಡಲು, ಬಂಡಲ್ಲು (ನಾ). ೧. ಗಂಟು ; ಮೂಟೆ : ತನ್ನ ಮೇಲೆ ಹೇರಿದ ಬಂಡಲನ್ನು ಹೊತ್ತುಕೊಂಡು ತಿರುಗುವ ಅಭ್ಯಾಸ ಮಾಡಿಕೊಳ್ಳಬೇಕಾಯಿತು (ಬಂಗಾಹೆ. ೩೫). ೨. ಕಟ್ಟು; ಪೊಟ್ಟಣ : ಚಹಾ ತುಂಬಿದ ಕಿಟ್ಲೆ, ಬಿಸ್ಕೀಟ ಬಂಡಲುಗಳು ಬಂದವು (ಜೀದಾಪ. ೦೭). ಬಂಡಲ್ಲು : ೧. ನನಗ ಇರಲೀ ಅಂತ ಒಂದು ದೊಡ್ಡ ಬಂಡಲ್ಲ ತಂದು ಕೊಟ್ಟಾರ ನೋಡ! (ಪಂದಯ. ೪೪). [←ಇಂ. Bundle]

ಬಂಡಲ್ಲು 'ಬಂಡಲು' ನೋ.

ಬಂಡವಲ 'ಬಂಡವಾಳ' ನೋ.

ಬಂಡವಲು 'ಬಂಡವಾಳ' ನೋ.

ಬಂಡವಳ 'ಬಂಡವಾಳ' ನೋ.

ಬಂಡವಳಗಾರ 'ಬಂಡವಾಳಗಾರ' ನೋ.

ಬಂಡವಾಲಶಾಹಿ 'ಬಂಡವಾಳಶಾಹಿ' ನೋ.

ಬಂಡವಾಳ, ಬಂಡವಲ, ಬಂಡವಲು, ಬಂಡವಳ, ಬಂಡವಾಳು, ಬಾಂಡವಲು, ಭಂಡವಲ, ಭಂಡವಲು, ಭಂಡವಾಳ, ಭಂಡವಾಳು, ಭಾಂಡವಲ, ಭಾಂಡವಲು, ಭಾಂಡವಳು (ನಾ). ೧. (ವ್ಯಾಪಾರ ಅಥವಾ ಉದ್ಯೋಗದಲ್ಲಿ ತೊಡಗಿಸುವ) ಮೂಲಧನ : ಅಸಲು : ಇಲ್ಲಿನ ಕೈಗಾರಿಕೆಗಳಿಗೇ ಬಂಡವಾಳವಿಲ್ಲದಿರುವಾಗ. . . ಇಲ್ಲಿ ಏಳಿಗೆ ಹೇಗುಂಟಾಗಬೇಕು ? (ಹಣಪ್ರ. ೧೩೧); ಅರ್ಥಶಾಸ್ತ್ರದಲ್ಲಿ ಬಂಡವಾಳವನ್ನು ಒಂದು ಉತ್ಪಾದನಕಾರಕವಾಗಿ ಪರಿಗಣಿಸುವುದು ರೂಢಿಗೆ ಬಂದಿದೆ (ಕವಿಕೋ. XI, ೭೯೩). ೨. ಬೆಲೆ ; ಮೌಲ್ಯ : ಚಮತ್ಕಾರಗಳ ಚದುರತನಮಂ. . . ಶೃಂಗಾರದ ಬಂಡವಾಳಮಂ ತಿಳಿದವಳು (ಸೌಗಂಧಿ. ೨೨೦-೩). **ಬಂಡವಲ:** ೧. ವ್ಯವಹಾರಿಸುವಂಗೆ ಬಂಡವಲಮಿ[ಬಾಕಾಂ. ಬಂಡಮೊದವಿ]ಲ್ಲದೆಂತು ಪೋದಪ್ಪೆ (ಪುಣ್ಯಾಸ್ರ. ೬-೬ ವ). ೩. (ಆಲಂ) ಸತ್ತ್ವ; ತಿರುಳು; ಸಾರ : ತಮ್ಮಲ್ಲಿದ್ದ ಬುದ್ಧಿಯ ಬಂಡವಲವನ್ನು ವ್ಯವಹಾರಕ್ಕೆ ಬಳಸಿ, ವ್ಯವಹಾರನಿಪುಣರಾಗಿದ್ದರು (ಕನಸಿ. ೦೦೯). **ಬಂಡವಲು :** ೧. ಸಂಪತ್ತಿಯನ್ನು ಹುಟ್ಟಿಸಲಿಕ್ಕೆ ಬಂಡವಲಾದರೂ ಬೇಕು (ಮುಂಬಯಿ. ೩-೨೩೦). ೩. ಆತನು ಅದೊಂದು ಕೊಡಲಿಯಿಂದ ಇಡಿಯ ಆಯುಷ್ಯದಲ್ಲಿ ಹೊಟ್ಟೆಯ ಪ್ರಶ್ನೆಯನ್ನು ಬಿಡಿಸಬಲ್ಲನು. ಅದುವೆ ಅವನ ಬಂಡವಲು (ತಕ್ಕಡಿ. ೩೯); ಸುಖ ಸಿಗಲೊಲ್ಲದೆಂದು. . . ಮಡದಿ ಮಕ್ಕಳಿಂದ ಕಾಣೆಯಾಗುವದಕ್ಕಾಗಲಿ ಬಹಳ ಬಂಡವಲು ಬೇಕಿಲ್ಲ (ಬಾಳಬ. ೩೭). **ಬಂಡವಳ:** ೧. 'ಬಂಡವಳಗಾರ' ಪರಾ. **ಬಂಡವಾಳು:** ೧. ನಿಮ್ಮ ದಯದ ಬಂಡವಾಳೊಂದಧಿಕವಾಗಿರಲಿ (ಪರಶು. ೩-೨೦). **ಬಾಂಡವಲು :** ೧. 'ಬಾಂಡವಲುಶಾಹಿ' ಪರಾ. **ಭಂಡವಲ :** ೧. ಭಂಡವಲ ಹಾಕಿ ಭಂಡವಲ ತಗಿಯೋ ಕೆಲಸ (ಗಂಪಾಯಿ. ೨೦೬); ಭಂಡವಲ ಕೂಡಾ ಆಗ ಸ್ಥಿರವಾಗಿ ನೆಲೆಯೂರಿತ್ತು (ಏಸುತ. ೦೯). **ಭಂಡವಲು:** ೧. ಗೋದಿಯ ಒಂದೇ ವ್ಯವಹಾರದಲ್ಲಿ ಭಂಡವಲಿನ ಇಮ್ಮಡಿ ಲಾಭವಾಯಿತು (ಇಯಂತ. ೩೯೬); ಕಲಕತ್ತೆಯ ಪತ್ರಿಕೆಗಳು ಪರದೇಶದ ಭಂಡವಲಿನಿಂದಲೇ ಕೂಡಿದ್ದವು (ಪತ್ರಿಕಾ. ೨೯). ೩. ಮೂಲ ಭಂಡವಲು ಮುಗಿಯಲಿಲ್ಲ, ನಿಜ, ಬೆಳೆಯಲಿಲ್ಲ ಕೂಡ ಜ್ಞಾನವೆಲ್ಲ ಅಜ್ಞಾನದಂತೆ ಮೊದಲಿದ್ದ ಹಾಗೆ ಮೂಢ (ಆರಳು. ೨೩೯-೬). **ಭಂಡವಾಳ:** ೧. 'ಭಂಡವಾಳಗಾರ' ಪರಾ. **ಭಂಡವಾಳು:** ೧. 'ಭಂಡವಾಳುಗಾರ' ಪರಾ. **ಭಾಂಡವಲ:** ೧. ಮಲ್ಲೇಶ ನೌಕರನಲ್ಲದಿದ್ದರೂ ಗೌಡನ ಭಾಂಡವಲದಲ್ಲಿಯೆ ವ್ಯಾಪಾರ ಮಾಡುವ ಪಾಲುಗಾರನಲ್ಲವೆ? (ಪ್ರಣಸ. ೪೦). **ಭಾಂಡವಲು:** ೧. ಅವನ ಭಾಂಡವಲು ಉಪಯೋಗಿಸಿಕೊಂಡು ಇತ್ತ ಬೇರೆ ವ್ಯವಹಾರ ಸಾಗಿಸಬೇಕಾಯಿತು ! (ಪ್ರಣಸ. ೩೬); ಯಾವನೊಬ್ಬ ಸಾಹಸಿಯೂ ನಾಲ್ಕಾರು ಮಂದಿಯ ಕಡೆಯಿಂದ ಭಾಂಡವಲು ಕೂಡಿಸಿಕೊಂಡು (ಪ್ರಬಂಧ. ೨೭). ೪. ವಸ್ತು ; ಸಾಧನ: ಈಗ ಹಡಗದ ಎಣ್ಣೆ–ಮುಖ್ಯ ಭಾಂಡವಲ–ತೀರಿತು (ಅಪನಾ. ೨೨೩). **ಭಾಂಡವಳು:** ೩. ಭಾಂಡವಳು ಅವನಲ್ಲಿಲ್ಲ (ಒಂಟಿದ. ೨೬.)

ಬಂಡವಾಳವಿಲ್ಲದ ಬಡಾಯಿ = ೧. ಸತ್ವವಿಲ್ಲದ ಜಂಬ; ಒಣಜಂಬ: ನಾನು ಬಂಡವಾಳವಿಲ್ಲದ ಬಡಾಯಿಯನ್ನು ಕೊಚ್ಚಿದ್ದೆ (ನಡದಾ. II, ೧೦೦೯). ೨. ಒಣಜಂಬದ ವ್ಯಕ್ತಿ: ಅವನಂಥ ಬಂಡವಾಳವಿಲ್ಲದ ಬಡಾಯಿಯನ್ನು ನಾನು ಮತ್ತೆಲ್ಲೂ ನೋಡಿಲ್ಲ (ರೂಢಿ).

[← ಮರಾ. ಭಾಂಡವಲ/. ತೆಲು. ಬಂಡವಲ, ಬಂಡಾಲ]

ಬಂಡವಾಳಗಾರ, ಬಂಡವಳಗಾರ, ಭಂಡವಾಳಗಾರ, ಭಂಡವಾಳುಗಾರ (ನಾ). ಹಣವನ್ನು ವ್ಯಾಪಾರದಲ್ಲಿ ತೊಡಗಿಸುವವನು: ಸಾಹುಕಾರ: ಜನರನ್ನು ಒಂಸಿಸುತ್ತಿದ್ದ ಬಂಡವಾಳಗಾರರನ್ನು ಓಡಿಸಿದೆವು (ಶಾಲಿಮ. ೬೯); ಬಂಡವಾಳಗಾರರಿಗೂ ಕಾರ್ಮಿಕರಿಗೂ ಉಂಟಾಗುತ್ತಿರುವ ಘರ್ಷಣೆಗಳ ಕಾರಣಗಳನ್ನೂ ಕುರಿತು ತರುಣವಿದ್ಯಾರ್ಥಿಗಳು ವಿಚಾರ ಮಾಡುವಂತೆ ಪ್ರಚೋದಿಸುವುದು ಆವಶ್ಯಕ (ಕ್ರಿಯಾಶಿ. ೦೩೦). **ಬಂಡವಳಗಾರ:** ಬಂಡವಾಳಗಾರರ ಮತ್ತು ಕಾರ್ಮಿಕರ, ಶ್ರೀಮಂತರ ಮತ್ತು ಬಡವರ ನಡುವಣ ಕಲಹಗಳಿಗೆ ಕಾರಣವೇ ಇರುವುದಿಲ್ಲ (ತತ್ಕಪ್ರಾ. ೦೩೨). **ಭಂಡವಾಳಗಾರ :** ಚಂಪಾರಣ್ಯಜಿಲ್ಲೆಯ ಒಕ್ಕಲುಜನವನ್ನು ಸಂಘಟಿಸಿ ಆಂಗ್ಲೇಯ ಭಂಡವಾಳಗಾರರ ವಿರುದ್ಧ ಸತ್ಯಾಗ್ರಹವನ್ನು ಹೂಡಬೇಕಾಯಿತು (ರಾಜವ. ೬). **ಭಂಡವಾಳುಗಾರ :** ಅಜ್ಞಾನದ ಲಾಭ ಪಡೆದು ಅವರನ್ನು ಆಳುತ್ತಿರುವ ರೀತಿ ಭಂಡವಾಳಗಾರರ ದುಡ್ಡಿನ ಸುಲಿಗೆಗಿಂತಲೂ ನೀಚತಮವಾದದ್ದು (ಒಂಟಿದ. ೦೦೦).

[ಬಂಡವಾಳ + – ಗಾರ (< – ಕಾಱ)]

ಬಂಡವಾಳಗಾರಿಕೆ (ನಾ). ಬಂಡವಾಳವನ್ನು ಹೂಡಿ ಮಾಡುವ ಉದ್ಯೋಗ : ಹೆಚ್ಚಿನ ಹಣವನ್ನು ಉತ್ಪಾದನೆ ಮಾಡುವುದು ಬಂಡವಾಳಗಾರಿಕೆಯಾದ್ದರಿಂದ ಮೂಲದಲ್ಲಿ ಹಣವು ಅವಶ್ಯ (ಮಾಪಾದ. ೦೨೩).

[ಬಂಡವಾಳಗಾರ + – ಇಕೆ]

ಬಂಡವಾಳದಾರ, ಭಾಂಡವಲದಾರ (ನಾ). = ಬಂಡವಾಳಗಾರ : ಆ ಕಂಪೆನಿಯ ಬಂಡವಾಳದಾರರಲ್ಲಿ ಭಿನ್ನಾಭಿಪ್ರಾಯವುಂಟಾಗಿ ವ್ಯಾಪಾರವೆಲ್ಲಾ ಕೆಟ್ಟು ಕಂಪನಿಯನ್ನೇ ಮುಚ್ಚಿ ಬಿಟ್ಟರು (ರೂಢಿ). **ಭಾಂಡವಲದಾರ:** ಭಾಂಡವಲದಾರ ಕೂಲಿಕಾರರ ವಿಷಯಗಳೂ . . . ಸಾಹಿತ್ಯದಲ್ಲಿ ಪ್ರತಿಬಿಂಬಿಸುವುವು (ಪ್ರಬಂಧ. ೦). [ಬಂಡವಾಳ + – ದಾರ್ಕ]

ಬಂಡವಾಳಶಾಹಿ, ಬಂಡವಾಲಶಾಹಿ, ಬಾಂಡವಲುಶಾಹಿ, ಭಂಡವಾಳಶಾಹಿ, ಭಾಂಡವಲಶಾಹಿ (ಗು). ೧. ಐಶ್ವರ್ಯದ ಮದದಿಂದ ಕೂಡಿದ: ತನ್ನ ಹಂಗಿಗೊಳಗಾಗಲಿಲ್ಲವಲ್ಲ ಎಂದು ಅವರ "ಬಂಡವಾಳಶಾಹಿ" ಬುದ್ಧಿ ಕೆರಳಿತು (ಅವತಂ. ೦೦೦). (ನಾ). ೨. = ಬಂಡವಾಳಗಾರ : ನಮ್ಮ ದೃಷ್ಟಿಯೇನೋ ಬಂಡವಾಳಶಾಹಿಯ ಕಡೆಗೆ, ಒಲವೆಲ್ಲಾ ಅವರ ಕಡೆಗೆ (ಕತ್ತಬೆ. ೧೨). **ಬಂಡವಾಲಶಾಹಿ :** ೨. ಬಂಡವಾಲಶಾಹಿಯ ಜತೆ ಸಾಮ್ರಾಜ್ಯಶಾಹಿಯ ಜತೆ–ಬಂಡುಹೂಡಿದ ಸ್ವಾತಂತ್ರ್ಯಪ್ರೇಮಿ (ಹಾಡುಹು. ೨೨). **ಬಾಂಡವಲುಶಾಹಿ:** ೨. ನಾವೇನು ಬಡವರ ರಕ್ತ ಹೀರುವ ಬಾಂಡವಲುಶಾಹಿಗಳೇ? (ಹುಸ್ಕುಹು. ೩೨). **ಭಂಡವಾಳಶಾಹಿ:** ೩. ಬಂಡವಾಳದ ಅಧಿಕಾರ; ಐಶ್ವರ್ಯದ ದೌಲತ್ತು: ಭಂಡವಾಳಶಾಹಿಯು ನಿರ್ನಾಮವಾಗಲಿ, ಕೆಲಸಮಾಡಿದ ಕೈಯ ತುತ್ತು ಕೆಲಸ ಮಾಡಿದವನ ಬಾಯಿಗೇ ಬೀಳಬೇಕು (ಕೃಲಾಕ. ೩೭). **ಭಾಂಡವಲಶಾಹಿ :** ೨. ಭಾಂಡವಲಶಾಹಿಗಳು ಹೊನ್ನ ಹಕ್ಕಿಯನ್ನು ಉಕ್ಕಿನ ಪಂಜರದಲ್ಲಿ ಬಂಧಿಸಿಟ್ಟರು (ದತ್ತವಾ. ೩೬). [ಬಂಡವಾಳ + ಶಾಹಿ./ಮರಾ. ಭಾಂಡವಲಶಾಹೀ]

ಬಂಡವಾಳಿಗ, ಭಂಡವಾಳಿಗ (ನಾ). = ಬಂಡವಾಳಗಾರ: ಅತಿರೇಕದ ಅತಿರಿಕ್ತಮೂಲ್ಯವನ್ನು ಎತ್ತಿಹಾಕುವ ನಡವಳಿಗೆ ಬಂಡವಾಳಿಗ ದಲ್ಲಾಲಿಯಾಗಿ ಮಾರ್ಪಡುವದೇ ಈ ಬೇಸಾಯದ ಬಂಡವಾಳಗಾರಿಕೆಯ ಹೆದ್ದಾಸೆಯ ಹೆದ್ದಾರಿ (ಮಾಪಾದ. ೧೪೪). **ಭಂಡವಾಳಿಗ :** ಅವರ ಆಶೆ ಆಕಾಂಕ್ಷೆಗಳೆಲ್ಲ ಭಂಡವಾಳಿಗರ ದರ್ಪದ ತುಳಿತಕ್ಕೆ ಸಿಲುಕಿ ಕಮರಿ ಹೋಗುತ್ತವೆ (ಕಾಲಯಾ. ೩೩). [ಬಂಡವಾಳ + – ಇಗ]

ಬಂಡವಾಳು 'ಬಂಡವಾಳ' ನೋ.

ಬಂಡಸಾಲೆ (ನಾ). ೧. ಮಳಿಗೆ; ಕೋಠಿ; ಉಗ್ರಾಣ: ಅವರ ಬಂಡಸಾಲೆಯಲ್ಲಿ ಹಣದ ಪುರವಠೆಯನ್ನು ಮಾತ್ರ ನಾನು ಮಾಡಿಸಿ,

ಕೊಟ್ಟೆನು (ಶಿಂಪೈ. ೦೬೬). ೨. ದೊಡ್ಡ ಕಟ್ಟಡ; ಮಹಲು; ಸೌಧ: ಸಂಪಿಗೆಯ ಊರಲ್ಲೇ ಭಟ್ಟರು ಎಬ್ಬಿಸಿದ 'ಬಂಡಸಾಲೆ' ಸಾಮಾನ್ಯವಾಗಿ 'ವಿಲಾಯತಿ'ಯಲ್ಲೇ ನೋಡ ಸಿಗಬೇಕು (ಪರಾವ. ೬).

[ಬಂಡ$_1$ + ಸಾಲೆ$_4$./ತುಳು. ಬಂಡಸಾಲೆ]

ಬಂಡಳಿಸು (ಕ್ರಿ). ಹೇಳಿದುದನ್ನೇ ಪುನಃ ಹೇಳು; ಪುನರುಕ್ತಿ ಮಾಡು : ಮುಳಿವ ತಿಳಿವ ಗಂಡರ ಪೆಂಡಿರ ನುಡಿಗಳನೆ ಬಂಡಳಿಸುವ [ಪಾಠಾಂ. ಬಂದಣಿಸುವ, ಬಂಡುಳಿಸುವ, ಬಣ್ಣಿಸುವ] ಪುರುಳಿಗಳುಮಂ . . . ಕೊಟ್ಟು (ಆದಿಪು. ೪-೩೪ ಪ); ಪೂಗೊಂಬಿನೊಳ್ ಪಾಯ್ದು ಬಂಡಳಿಸು[ಪಾಠಾಂ. ಬಂಡಣಿಸು, ಬಂಡುಳಿಸು, ಬಂದೆಳಸು, ಮಂಡಳಿಸು]ತ್ತಿರ್ಪ ಶುಕಾಳಿ (ಆದಿಪು. ೦೦-೯೬); ಅರಗಿಳಿವಿಂಡು ಬಂಡಳಿಪ ಸಾರಿಕೆ ಚಾವಳಿಪುನ್ಮದಾಳಿ ಗಾವರಿಸುವ ಸೋಗೆ ಕೇಗುವ . . . ವಿಕಾರಮಿಲ್ಲದಿರೆಯುಂ ಬನಮೊಪ್ಪಿದುದು (ಪುಷ್ಪಪು. ೦೪-೨೩).

[ಬಂಡಳ್$_0$ (ಪ್ರ←ತಮಿ. ವಣ್ಬುಱ್ಕೈ=ಅರ್ಥವಿಲ್ಲದ ಶಬ್ದ) + — ಇಸು$_3$]

ಬಂಡಾಟ (ನಾ). ಅವಮಾನ ; ಸಿಗ್ಗು : ಕೂಟಕಪಟದಿಂದ ಕುಂದ ಪೊಱಿಸಿ ಬಂಡಾಟ ಬಾಹಿರನೆಂದೆನಿಸಿ (ಶಕಸಾಂ. ೦೦-೩೪). ೨. ಕಷ್ಟಪಡುವಿಕೆ; ಹೆಣಗಾಟ; ಒದ್ದಾಟ : ಸಮುದ್ರದ ನಂಟಸ್ತನ ಉಪ್ಪಿಗೆ ಬಂಡಾಟ (ಹುಟ್ಟಿಹ. ೬೯); ಅದೇ ಬಂಡಾಟ ಸಾರ್ ಈ ಹಳ್ಳೀಲಿ (ರಂಗಳ. ೭೩); ಬಂಡಿ ಬಂಡಾಟ ಹೇರು ಹೆಟ್ಟಾಟ ತಲೆಮೊಟ್ಟೆ ಪರಮಸುಖ (ಗಾಪ).

[ಬಂಡು$_2$ + ಆಟ]

ಬಂಡಾಡು$_1$ 'ಬಂಡು$_2$' ಪರಾ.

ಬಂಡಾಡು$_2$ 'ಬಂಡು$_4$' ಪರಾ.

ಬಂಡಾಯ (ನಾ). (ಸರ್ಕಾರ ಮುಂತಾದ) ಆಡಳಿತದ ರೀತಿಗೆ ತಮ್ಮ ಅಸಮ್ಮತಿಯನ್ನು ಸೂಚಿಸಲು ಮಾಡುವ ಪ್ರತಿಭಟನೆ; ಕ್ರಾಂತಿ : ಭಾರತದಲ್ಲಿ ಬಂಡಾಯಕ್ಕಾಗಿ ವೀರ ಉತ್ಸಾಹಿಯೋಧರು ಬೇಕಾಗಿದ್ದಾರೆ (ಆತ್ಮಾರ್ಪ. ೦೩೩); ೧೮೫೭ರ ಬಂಡಾಯದಲ್ಲಿ ನಮ್ಮ ಅಜ್ಜನನ್ನು ಹಿಡಿದೊಯ್ದು ಗಲ್ಲಿಗೇರಿಸಿದರು (ಸ್ಮೃತಿಪ. ೦೩); ಪರದೇಶಿಯರನ್ನು ಬಗ್ಗು ಬಡಿಯಲು ನಮ್ಮ ಹಿರಿಯರಾದ ಸೈನಿಕರು ಬಂಡಾಯವನ್ನೇ ಹೂಡಿದರೆಂಬುದನ್ನು ಮರೆಯಬೇಡಿರಿ (ಹಬ್ಬಿಬಿ. ೦೯೯). 'ಬಂಡು$_4$' ಪರಾ.

[← ಮರಾ. ಬಂಡಾಈ, ಬಂಡಾಳ, ಬಂಡಾಳೀ./ತುಳು. ಬಂಡಾಯಿ]

ಬಂಡಾಯಗಾರ (ನಾ). ದಂಗೆ ಮಾಡುವವನು; ಕ್ರಾಂತಿಕಾರ : ಸರ್ಕಾರಕ್ಕೆ ವಿರೋಧವಾಗಿ ಹೂಡಿದ ಹೋರಾಟದಲ್ಲಿ ಆ ಬಂಡಾಯಗಾರರು ಪ್ರಯೋಗಿಸಿದ . . . ವಿಧಾನಗಳ ಬಗ್ಗೆ ಅವನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು (ಪುನರು. ೪೯೯).

[ಬಂಡಾಯ + — ಗಾರ (< — ಕಾಱ)]

ಬಂಡಾಯಸಾಹಿತಿ (ನಾ). ಸಾಮಾಜಿಕಶೋಷಣೆಗಳ ವಿರುದ್ಧವಾಗಿ ಸಾಹಿತ್ಯಸೃಷ್ಟಿ ಮಾಡುವವನು : ಬಂಡಾಯಸಾಹಿತಿ ಸಾಮಾಜಿಕ ಸಂಬಂಧಗಳ ಹಿಂದಿರುವ ಮೋಸಗಳನ್ನು ಅಮಾನವೀಯತೆಯನ್ನು ಗುರುತಿಸಿ ಸಮಾಜವ್ಯವಸ್ಥೆಯ ವಿರುದ್ಧ ಸ್ಫೋಟಿಸುತ್ತಾನೆ (ಕಏಕೋ. XI, ೭೯೬).

[ಬಂಡಾಯ + ಸಾಹಿತಿ]

ಬಂಡಾಯಸಾಹಿತ್ಯ (ನಾ). ಆಧುನಿಕ ಕನ್ನಡಸಾಹಿತ್ಯದ ಒಂದು ಪ್ರಕಾರ; ರಾಜಕೀಯ, ಸಾಮಾಜಿಕ ಘಟನೆಗಳಿಂದ ಬದುಕಿನಲ್ಲಿ ಉಂಟಾದ ಬದಲಾವಣೆಯನ್ನು ಪ್ರತಿಭಟಿಸುವ ಸಲುವಾಗಿ ಸೃಷ್ಟಿಯಾದ ಸಾಹಿತ್ಯ : ಶೋಷಣೆಯ ವಿರುದ್ಧ ಶ್ರಮಜೀವಿಗಳನ್ನು ಬಂಡಾಯಕ್ಕೆ ಅನುಗೊಳಿಸುವುದೇ ಬಂಡಾಯಸಾಹಿತ್ಯದ ಗುರಿಯಾಗಿದೆ (ಕಏಕೋ. XI, ೭೯೬).

[ಬಂಡಾಯ + ಸಾಹಿತ್ಯ]

ಬಂಡಾರ 'ಭಂಡಾರ' ನೋ.

ಬಂಡಾರಿ 'ಭಂಡಾರಿ' ನೋ.

ಬಂಡಾರಿಗ 'ಭಂಡಾರಿಗ' ನೋ.

ಬಂಡಾರಿಸು 'ಭಂಡಾರಿಸಂ' ನೋ.

ಬಂಡಾರೆ 'ಬಂದಾರಿ' ನೋ.

Δ **ಬಂಡಾಱ** 'ಭಂಡಾರ' ನೋ.

ಬಂಡಾಱಕಾಱ (ನಾ). ಖಜಾನೆಯ ಮುಖ್ಯಾಧಿಕಾರಿ; ಖಜಾಂಚಿ : ಆಳಿಕಾಱರುಂ ಬಣ್ಡಾಱಕಾಱರುಂ(ಎಕ VIII, ಸೊರಬ. ೨೬೮-೩೦; ಸು. 1245).

[ಬಂಡಾಱ (<ಭಂಡಾರ) + — ಕಾಱ]

ಬಂಡಿ$_1$, ಭಂಡಿ$_1$ (ನಾ). ೧. ಗಾಡಿ ; ಶಕಟ ; ಚಕ್ಕಡಿ : "ಮಾಡಿಯೆನಲ್ ಬಂ[ಪಾಠಾಂ. ಗಾ, ದಂ]ಡಿ" (ಕರ್ಣಾನಿ. ೩೯) ; ಶಾಕಟಿಕ ಪರದರುಂಬೆರಸು ಬಂಡಿಗಳೊಳ್ ಪಟ್ಟಿಯುಂ ಧಾನ್ಯಮಂ ತೀವಿಕೊಂಡು ಪೊಟಲ್ಗೆ ಮಾಱಲೆಂದು ಪೋಪನ್ನೆಗಂ (ವಡ್ಡಾರಾ. ೭೬-೦೦); ಅಂತು ತನ್ನ ತಂದ ಬಂಡಿಯ ಕೂಟಿಲ್ಲಮಂ ಪತ್ತೆಂಟು ತುತ್ತಿನೊಳೆ ಸಮೆಯೆ ತುತ್ತುವುದಂ ಕಂಡು (ಪಂಪಭಾ. ೩-೨೯ ಪ); ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೆ ಕಡೆಗೀಲು ಬಂಡಿಗಾಧಾರ (ದೇರಾವ. ೦-೨); ಬಾರಿಸಿದ ಬಲು ಹೊಱೆಯ ಬಂ[ಪಾಠಾಂ. ಭಂ]ಡಿಗಳೋರಣಿಸಿದವು ಪಯಣದಲಿ (ತೊರಗಾ. ೦-೬-೩). ೨. ರಥ ; ತೇರು : ಕೀಲ ಕಳೆವರು ರವಿಯ ಬಂಡಿಯ (ಸಂಭಪ. ೭-೦೮) ; ನೀನಾರ ಬಂಡಿಯಂ ಪೊಡೆದಪೈ (ಕೈಮಿಲಾ. ೨೪-೩೯). ೩. ಗಾಲಿ ; ಚಕ್ರ : (ಕಿ). ಭಂಡಿ$_1$: ೧. ಧನ್ಯನುಂ ಭದ್ರನುಮೆಂಬೊರಿರ್ವರ್ ಕುಡಿಯರರೊರ್ಮೆ ನಡೆವ ಭಂಡಿಗಳ್ ಶ್ರೀನದೀ ತೀರದಿಟ್ಟೆಡೆಯೊಳೊಂದೊಂದಂ ಸೋಂಕಿ ಮುಱಿಯೆ (ಶಾಂತಿಪು. ೯-೪೬ ಪ); ತಂಬುಲಿಗರ್ವ್ವಿಟ್ಟಾಯಂ ಭಂಡಿಗೆಲೆ ನೂಱುಹೇಱಿಂಗೆ ನೂಱು (ಎಇ. XX, ೦೨-೩೩; 1167). ೩. "ಶಕಟಂ [ರ]ಥಾಂಗ[ಮರ]ಸಂಜ್ಞಿಕಮಂತದು ಭಂಡಿ ಗಂತ್ರಿ ಕಂಬಳ ವಾಹ್ಯಂ ಪ್ರಕಟಂ ಕರ್ಣೀರಥನಾಮಕಮಕ್ಕುಂ ಪ್ರವಹಣಂ ರಥಾಂಗಂ ಚಕ್ರಂ" (ವಸ್ತುಕೋ. ೮೬-೨೮); ಭಂಡಿಗಳಂತೆ ಕಾಣುವ ಕಡಗಗಳಂ ಧರಿಸಿ (ಸೌಗಂಧಿ. ೩೪೬-೯).

ಬಂಡಿಯ ಈಚು = ಗಾಡಿಯ ಮೂಕಿಯ ಮರ : "ಈಷಾ = ಬಂಡಿಯ ಈಚು" (ಕಾಶಕ್ಕ. ೩೭) ಬಂಡಿಯ ಗಾಲಿ, ಭಂಡಿಯ ಗಾಲಿ = ೧. ಗಾಡಿಯ ಚಕ್ರ : ಪಾಂಡವಕೌರವಬಲಮಟಿದಿರ್ದ ಭೂಮಿಯೊಳ್ ಪಣಮಂ ಬಿತ್ತುವುದುಂ ಬಂ[ಪಾಠಾಂ. ಭಂ]ಡಿಯ ಗಾಲಿಯ ಪಣವಕ್ಕುಂ (ಸಮಪ. ೧೨-೧೪); ಇದೊಂದು ಭಂಡಿಯ ಗಾಲಿಯಂತುಟನೆರಡು ಕಲಹಂಸೆಗಳ್ ಕರ್ಚಿಕೊಂಡು ಪೋದಪ್ಪುವು (ಪಂಪತಂ. ೦೩೭-೨೦) ; ಅಱಿ ಸಱಿ ತೋರಗಲು ಕವಣೆಗಲು ಕಣಿ ಭಂಡಿಯ ಗಾಲಿ ಕೆಲ್ಲೆ (ಸೌಇಇ. XX, ೦೨೬-೩ ; 1186). ೨. (ಆಲಂ) ಸೊನ್ನೆ; ಶೂನ್ಯ : ನೀನು ಹೀಗೇ ಕಾಲ ಕಳೀತಿದ್ದರೆ ಪರೀಕ್ಷೇಲಿ ನಿನಗೆ ಬಂಡಿಯ ಗಾಲಿಯೇ ಬರೋದು (ರೂಢಿ). ಬಂಡಿಯ ಬೋಯಿಕೆ = ರಥವನ್ನು ನಡೆಸುವ ಊಳಿಗ, — ಸೇವೆ ; ಸಾರಥ್ಯ : ಕಮಲದಳಾಯತೇಕ್ಷಣನೊಡನೆ ಬಂಡಿಯ ಬೋಯಿಕೆಗೆ ವೀಳೆಯುವ ಹಿಡಿದೆವು (ಕುಪ್ಕಾಕ. ೩-೩೭). ಬಂಡಿಯ ಬೋವ, ಭಂಡಿಯ ಬೋವ = ರಥವನ್ನು ನಡೆಸುವವನು ; ಸಾರಥಿ : ಕಿರೀಟಿಯ ಮನೆಯ ಬಂಡಿಯ ಬೋವನಾದನು ವೀರನಾರಯಣ (ಕುಪ್ಕಾಉ. ೦-೪೩) ; ಒಬ್ಬ ಮಾವನ ಕೊಂದ ಒಬ್ಬ ಮೈದುನಗೆ ಭಂಡಿಯ ಬೋವನಾದ (ಪುರಂದ. ೦-೦೦೬-೧). ಬಂಡಿಯ ಬೋವಗುಲ = ರಥವನ್ನು ನಡೆಸುವ ಊಳಿಗದವನ ವಂಶ ; ಸಾರಥ್ಯವನ್ನು ಮಾಡುವವನ ಕುಲ : ದೇವಕೀಸುತ ನೇನು ಬಂಡಿಯ ಬೋವಗುಲದಲಿ ಜನಿಸಿದನೆ (ಕುಪ್ಕಾಕ. ೩-೩೪). ಬಂಡಿಯ ರ, ಬಂಡಿಯ ಱ = ಗಾಡಿಯ ಗಾಲಿಯ ಆಕಾರದಲ್ಲಿರುವ 'ರ' ; ಶಕಟರೇಫ (ಱ) : ಹೀಗೆ 'ಱ' ಕ್ಕೆ ರಳ ಎಂದೂ 'ಱ' ಕ್ಕೆ ಶಕಟರೇಫ

ಅಥವಾ ಬಂಡಿಯ ರ ಎಂದೂ ಹೆಸರಾಯಿತು (ಕೃಪಿಡಿ. ೯) : ರಕಾರವನ್ನು ಕೇಶಿರಾಜ ಮತ್ತು ಇತರರು ಶಕಟರೇಫ ಎಂದು ಕರೆದಿದ್ದಾರೆ. ಮತ್ತೆ ಕೆಲವರು ಇದನ್ನು ಬಂಡಿಯ ರ (ಱ) ಎಂದೂ ಉಲ್ಲೇಖಿಸಿದ್ದಾರೆ (ಪ್ರಾಪಿ. ೩೫೦). ಬಂಡಿಯ ಹುಲಿ, ಭಂಡಿಯ ಪುಲಿ = ಬೇಟೆಗಾಗಿ ಬಂಡಿಯಲ್ಲಿ ಸಾಗಿಸುವ ಸಾಕಿ ಪಳಗಿಸಿದ ಹುಲಿ : ಹಿಡಿನಾಯಿಗಳು ಹೆಗಲ ಸಾಳುವಂ ಬಂ[ಪಾಠಾಂ. ಭಂ]ಡಿಯ ಹುಲಿ . . . ಅಡವಿಗಂತಕರಂತೆ ನಡೆವ ಶಬರರ ಕಂಡನು (ಸೋಮಕ. ೩-೯) ; ಭಂಡಿಯ ಪುಲಿಯಂ ಮೆಲ್ಲನೆ ಕೊಂಡಿಳಿಪುತೆ . . . ಮೃಗಮಂಡಲಮನದರ್ಕೆ ತೋಱೆ (ಗಿರಿಕ. ೧-೯೯). ಬಂಡೀಕಪ್ಪು = (ಬೇಗನೆ ಅಳಿಸಿ ಹೋಗದ) ಗಾಡಿಯ ಚಕ್ರದ ಕೀಲೆಣ್ಣೆಯ ಮಸಿ : ಅರ್ಜಿ ಬರೆಸುತ್ತಿದ್ದವರೆಲ್ಲ ಆತುರಾತುರದಲ್ಲಿ ಬರೆಸಿ, ಬಂಡೀಕಪ್ಪಿನ ಹೆಬ್ಬೆಟ್ಟುಗಳನ್ನು ಎಣ್ಣೆ ಸಮೇತ ಒತ್ತಿ ಒಂದೊಂದಾಗಿ ತಂದು ಕೊಟ್ಟರು (ನನ್ನೂರು. ೦೬೦). [ದೇ.॥ ತಮಿ. ಪಣ್ಟೆ, ವಣ್ಟೆ; ಮಲ. ವಣ್ಟೆ; ತುಳು. ಬಂಡಿ, ಭಂಡಿ ; ತೆಲು. ಕೋಲಾ. ಬಂಡಿ ; ಕೋತ. ವಂಡೈ; ತೊದ. ಪೊಡೈ. / ಪ್ರಾ. ಭಂಡೀ, ಭಂಡಿಆ]

ಬಂಡಿ$_2$ (ನಾ). ಸೊಂಟದ ಪರೆಗೆ ಬರುವ ಒಂದು ಬಗೆಯ ಅಂಗಿ ; ಕಸೆಯಂಗಿ : ಕುಬೇರನು ತನ್ನ ಬಂಡಿಯ ಜೇಬಿನೊಳಗಿಂದ ಒಂದು ಅರಿವೆಯ ಚೀಲವನ್ನು ಹೊರಕ್ಕೆ ಎಳೆದನು (ರಕ್ತರ್ಷ. ೬). 'ಬಗಲಬಂಡಿ' ಪರಾ. [← ಮರಾ. ಬಂಡೀ]

ಬಂಡಿಕಾರ 'ಬಂಡಿಕಾಱ' ನೋ.

ಬಂಡಿಕಾಱ, ಬಂಡಿಕಾರ, ಭಂಡಿಕಾರ, ಭಂಡಿಕಾಱ (ನಾ). ೧. ಗಾಡಿ ಹೊಡೆಯುವವನು ; ಗಾಡಿಕಾರ : ಮಿಗೆ ಮಣ್ಗೆಲಸದೊಡ್ಡರು ಬಂಡಿಕಾಱರು ಕಲುಕುಟಿಗರಿದ್ದೆಡೆಯ ಸೊನ್ನಲಪುರಕೆ ಪ್ರಭು ಬಂದ (ಪ್ರಭುಲೀ. ೦೩-೯). ಬಂಡಿಕಾರ : ೧. ಬಂಡಿಕಾರಣ್ಣನ ಬಂಡಾಟ ನೋಡಿರೊ ಬಾರುಕೋಲವನ ಬಲಗೈಲಿ (ಹಳ್ಳಿಯ. ೯೮) ೨. ದೇವಾಲಯದ ರಥದ ಮೇಲ್ವಿಚಾರಕ : (ಕಿ). ಭಂಡಿಕಾರ : ೧. ಪೊರಮಟ್ಟು ಕಲ್ಲುಕುಟುಕರ ಭಂಡಿಕಾರರಂ ಕರಸಿದನು (ನವಮೋ. ೨೦-೧೩) ಭಂಡಿಕಾಱ : ೧. ಕೆಲಸಿಗಳಿಗೆ ಕಲುಕುಟಿಗರಿಗೆ ಭಾಗಿ ೨ ಭಣ್ಡಿಕಾಱಂಗೆ ೧ (ಎಕ. II, ೨೩೦-೩ ; ಸು. 1500). ೨. ಭಂಡಿಕಾಱರ ಜೀವಿತಕ್ಕೆ ವರಹ ಗ ೧ (ಎಕ. XV, ಶೇಲೂರು. ೭೦-೯೫ ; 1485). [ಬಂಡಿ$_1$ + —ಕಾಱ]

ಬಂಡಿಬಸವ (ನಾ). ೧. ಹಿಂದಿನ ಕಾಲದಲ್ಲಿ ಮಕ್ಕಳ ಆಟಕ್ಕಾಗಿ ಮಾಡುತ್ತಿದ್ದ ಮರದ ಅಥವಾ ಲೋಹದ ಗಾಲಿಗಳಿರುವ ಬಸವಣ್ಣನ ವಿಗ್ರಹ : ಮಗುವು ಬಂಡಿಬಸವನನ್ನು ಎಳೆದುಕೊಂಡು ಆಡುತ್ತಾ ಇದೆ (ರೂಢಿ). ೨. ಬಸವನ ಹುಳು : ಜಿಗಣೆ, ಜೇಡ, ಚೇಳು . . . ಬಂಡಿಬಸವ, ಜರಿ (ನಮ್ಮನು. ೨೯೦). [ಬಂಡಿ$_1$ + ಬಸವ$_1$]

ಬಂಡಿಬೋವ (ನಾ). ಗಾಡಿಯನ್ನು ನಡೆಸುವವನು ; ಗಾಡಿಕಾರ : ಕಟ್ಟಿಗೆಕಾಱರಿಂಗೆಱೆದು ಬಂಡಿಬೋವರ್ಗೆಱೆದು ನಾಯಕಮಂಡಳೀಕರ್ಗೆಱೆದು (ಬಸಪು. ೫೯-೨೭). [ಬಂಡಿ$_1$ + ಬೋವ (< ಬೋಯ)]

ಬಂಡಿಮಾಳ (ನಾ). ಗಾಡಿಗಳನ್ನು ನಿಲ್ಲಿಸುವ ಸ್ಥಳ ; ಗಾಡಿಖಾನೆ : ತೋಪು ವಿಶಾಲವಾದ ಬಂಡಿಮಾಳಕ್ಕೆ ನೆರಳನ್ನು ಕೊಡುತ್ತಿದೆ (ಸ್ವಪ್ನಹೂ. ೯೯). [ಬಂಡಿ$_1$ + ಮಾಳ$_3$ (= ಮಾಲ)]

ಬಂಡಿವರಿಯಿಸು (ಕ್ರಿ). ಗಾಡಿಯನ್ನು ಓಡಿಸು : ಗಾಲಿಯಿಲ್ಲದೆ ಬಂಡಿವರಿಯಿಸುವ (ರರ್ಮಾಮ್ಯ. ೦೨-೨೯). [ಬಂಡಿ$_1$ + ಪರಿಯಿಸು]

ಬಂಡಿಹೋಕ (ನಾ). ಗಾಡಿಯಲ್ಲಿ ಪ್ರಯಾಣ ಮಾಡುವವನು : ಪರಸ್ಥಲದ ಬಂಡಿಹೋಕರು ಕಾಯಿಪಲ್ಲೆ ಮಾರಾಟಗಾರರು ಇವರನ್ನುಳಿದವರು ಮನೆಯಲ್ಲಿಯೇ ಇದ್ದರು (ರಕ್ತರ್ಷ. ೨೦೯). [ಬಂಡಿ$_1$ + ಹೋಕ (< ಪೋಕ)]

ಬಂಡು$_1$ 'ವಂಡು' ನೋ.

ಬಂಡು$_2$ (ನಾ). ಜೇನು ; ಮಕರಂದ ; ಮಧು : "ಬಂಡು ಮಕರಂದಂ" (ಕವಿಕಂ. ೯೮) ; ಓಗರವೂಗಳ ಬಂಡನೆಯ್ದೆ ಪೀರುತ್ತೊಡವಂದುವಿಂದ್ರವನದಿಂ ಮಱೆದುಂಬಿಗಳ್ (ಪಂಪಶಾ. ೧೦-೮೦) ; ಬಂಡನುಂಡು ನನೆಗೊಂಬುಗಳಿಂ ಮೊರೆದೇಟ್ಟ ಭೃಂಗಝಂಕಾರಮೆ ಮಾಟ್ಟುದಾರ ಬಗೆಗಂವ ಬಂದನೋತ್ಸವ ಹರ್ಷಭಾರಮಂ (ಪಂಠಾಮಾ. ೦-೦೦೮) ; ಹೊಸಕಮಳಕುಟ್ಮಲದ . . . ಬಂಡೆಂಬ ಕೊಳ್ಗೆಸಱೊಳಗೆ ಸಿಲ್ಕಿ ಜಿನುಗುವ ಮಱೆಗೆ ಸೌರಭ್ಯರಸದ ಕುಟುಕಿತ್ತು ಸಾಗಿಸುವ ಬಾಣತಿಮಂಬಿ ಮೆಱೆದುವು (ಹಡಕಾ. ೩-೯೦).

ಬಂಡಾಡು$_1$ = ಜೇನು ತುಂಬಿ ಸೂಸು ; ಮಕರಂದ ಹೊರ ಹೊಮ್ಮು : ಬಂಡಾಡುವ [ಪಾಠಾಂ. ಡೋಡಿದ] ನವಕರ್ಣಿಕಾರಮತಿಮಧುರತೆಯೊಳ್ ಕೂಡಿದ ನಿಂಬಾರಾಮಂ ನಾಡೊಳಗೊಳವೆಂಬೊಡಿನ್ನದೇವರ್ಣಿಪುದೋ (ಕಾಮ್ಯಾವ. ೯೭೩) ; ಬಂಡಾಡೆ ಮೇಲೆ ಮಧುಕರಮಂಡಳಿಗಳ್ ಬಿಟ್ಟು ಮಿಳಿರ್ವ ಮಡದಿಯ ಮುಡಿ ಮಾರ್ಕೊಂಡುದು ಕಾರ್ಮುಗಿಲಡಿಯೊಳ್ ತಾಂಡವಮಂ ಮೆಱೆವ ಸೋಗೆನವಿಲ ಬೆಡಂಗು (ವರ್ಧಪು. ೩-೫೫).

ಬಂಡು$_3$ (ನಾ). ೧. ನಾಚಿಕೆಯಿಲ್ಲದಿರುವಿಕೆ ; ನಿರ್ಲಜ್ಜೆ : 'ಬಂಡು ಮಾತು', 'ಬಂಡುವೋಗು' ಪರಾ. ೨. ನಾಚಿಕೆಗೇಡಿನ ನಡುವಳಿಕೆ : ಭಂಡತನ: ಬಂಡು ಬಕ್ಕುಡಿ ಭಂಗ ಬಂಧನ ಕನಲ್ಕೆ ಕಳಕಳ ಮೆಂಬಿವು . . . ಜನದೊಳಿಲ್ಲ (ಸಿಪು. ೬-೯೨). ೩. ಹೆಣಗಾಟ ; ಕಷ್ಟ ; ಬವಣೆ : ಹೆಂಡರಿಲ್ಲದ ಮನೆವಾರ್ತೆ ಅವಗು ಬಂಡು ಕಾಣಯ್ಯ (ಸರ್ವಜ್ಞ. ೦೬೮೩). ೪. ನಾಚಿಕೆಯಿಲ್ಲದವಳು ; ಮಾನವಿಲ್ಲದವಳು : ಬಂಡು ಹೆಂಡತಿಯಾಗಿ ತುಂಡೊಬ್ಬ ಸೊಸೆಯಾಗಿ ಕಂಡಲ್ಲಿ ಹರಿವ ಮಗನಾದರಾ ಮನೆಗೆ ದಂಡ ತಪ್ಪುವದೆ (ಸರ್ವಜ್ಞ. ೦೬೫೫). (ಗು). ೫. ನಾಚಿಕೆಗೇಡಿಯಾದ ; ಲಜ್ಜಾಸ್ಪದವಾದ : ಬಂಡು ಭೂತಗಳಿಲ್ಲ ಕೊಂಡೆಯವರಿಲ್ಲ ದಂಡವಿಲ್ಲಾ ಪುರದೊಳಗೆ (ಜನರಾ. ೦-೯೩).

ಬಂಡಾಗು = ೧. ನಾಚಿಕೆಗೀಡಾಗು ; ಅವಮಾನ ಹೊಂದು : ಭೂಮಂಡಲೇಶ್ವರನು ಕೇಳಿದೊಡೆ ದಂಡವನೆಮ್ಮವರೊಳು ಕೊಂಬನದಱಿಂ ಬಂಡಾಗುವುದೆಮ್ಮ ಕಾರ್ಯ (ಪ್ರಭುಜ. ೩-೯೬); ನನ್ನಿಂದೆ ಬಂಡಾಗಿ ಹೋಗಧ ವೀರರಾರೆಲವೋ (ಮೋಹತ. ೩೮-೧೦); ಕಮಲವದನೆಯರ ಪೀನಸ್ತನಂಗಳ ನೋಡಿ . . . ತಲೆಗೆದರ್ದು ಬಂಡಾದಂತೆ ಪದ್ಮಚಯಮಲರ್ದೊಪ್ಪಿರೆ (ನವಮೋ. ೦೦-೯೫). ೨. ಹೆಣಗಾಡು ; ಕಷ್ಟಕ್ಕೀಡಾಗು: ಈ ಅಂದಗಾಱ ಅಣ್ಣಗಳ ಕಂಡು ಬಂಡಾದಿರಣ್ಣಾ (ಮೋಳಿಮಾ. ೦೭-೬೬). ಬಂಡುಮಾಡು = ಅವಮಾನ ಮಾಡು ; ನಾಚಿಕೆಗೀಡು ಮಾಡು : ದೇವೇಂದ್ರನಿದಿರಲಿ ಮುನಿಯ ಬಂಡು ಮಾಡುವೆ [ಪಾಠಾಂ. ಭಂಡನಂ ಮಾಳ್ಪೆ] (ಹಡಕಾ. ೩-೮); ಗಂಡನುಳ್ಳ ಹೆಂಡಿರ ಕೊಂಡು ಒಯ್ದು ಅವರ ಬಂ[ಪಾಠಾಂ. ಭಂ]ಡು ಮಾಡುವನೀ ಪುರಂದರವಿಠಲ (ಪುರಂದ. ೦-೧೦೯-೩); ಧನಸೇನಸೆಟ್ಟಿ . . . ಬಂಡು ಮಾಡಿ ಸತಿಯ ಕೊಲ್ಲದೆ ತನ್ನ ಧನವ ಧರ್ಮಕ್ಕಿತ್ತು ತಾನು ತಪವನಾಚರಿಸುವುದಕ್ಕೆ ಪೋದನು (ಶೃಕಸೂ. I, ೩೭೩). [ಬಂಡ$_1$ + —ಉ$_4$]

ಬಂಡು$_4$ (ನಾ). ೧. ಬಂಡಾಯ ; ದಂಗೆ : ಮುಂದೆ ತೀವ್ರವೇ ಜಂಗಮರ ಬಂಡು ಮುರಿಯಿತು (ಮುಂಬಿಯಿ. ೯-೮೧). ೨. ಅಡ್ಡಿ ; ತಡೆ : ಉದ್ದಂಡ ಶಿವಮಂತ್ರಮಂ ಸ್ಮರಿಸುತಿರೆ ಮಱೆದೊಮ್ಮೆ ಬಂಡು ಬರೆ ನಾಲಿಗೆಯ ಕೊಯ್ದಿಟ್ಟ (ಪ್ರಭುಪು. ೭-೨೨೭).

ಬಂಡಾಡು$_2$ = ಬಂಡಾಯ ಹೂಡು ; ದಂಗೆಯೇಳು : ರೂಢಿಯಲಿ ಶುಂಭಾಸುರಗೆ ಬಂಡಾಡಿದನು ಖಳ ಚಂಡನೆಂಬವ (ದೇವೀಮ. ೩-೯೦). ಬಂಡುಹೂಡು = ದಂಗೆಯೇಳು ; ಬಂಡಾಯ ಎಬ್ಬಿಸು : ಭಾರತೀಯನೆಂದು ಮರ್ಯಾದಿತವಾಗಿ ಕೆಲವರು ತಿಳಿದುಕೊಂಡ ಸಂಸ್ಕೃತಿಗೆ ಬೌದ್ಧರೂ, ಜೈನರೂ ತಂತಮ್ಮ ರೀತಿಯಲ್ಲಿ ಇದಿರುಬಿದ್ದಂತೆ ವೀರಶೈವರೂ ಸ್ವತಂತ್ರವಾಗಿ ಬಂಡು ಹೂಡಿದರು (ತಮಿ. ೧೩); ನೀವೆಲ್ಲರು ಕೂಡಿ ನನ್ನ

ಮೇಲೆ ಬಂಡುಹೂಡಿದರೂ ನಾನು ಈ ಮಾತು ಖಂಡಿತ ಸತ್ಯವೆಂದೇ ಹೇಳುತ್ತೇನೆ (ಗಾಳಿಗು. ೫೪). [←ಮರಾ. ಬಂಡ್, ಬಂದ್]

ಬಂಡುಕೋರ, ಬಂಡುಖೋರ (ನಾ). ೧. (ಸರ್ಕಾರ ಮುಂತಾದ) ಆಡಳಿತಕ್ಕೆ ವಿರೋಧವನ್ನು ವ್ಯಕ್ತಪಡಿಸುವವನು ; ದಂಗೆಯೇಳುವವನು ; ಬಂಡಾಯಂಗಾರ : ಹಲವಾರು ಬಂಡುಕೋರರು ಒಂದಾಗಿ ಆ ಜಮೀನ್ದಾರನ ಪುಂಡಾಟವನ್ನು ಅಡಗಿಸಿದರು (ಕೂಡಿ). **ಬಂಡುಖೋರ** : ೧. ನಾರಣ್ಣನು ಬಂಡುಖೋರರ ಗುಂಪನ್ನು ಸೇರಿದ್ದನ್ನು ಕಂಡು ಅವನಿಗೆ ಸಖೀದ ಆಶ್ಚರ್ಯವಾಗಿತ್ತು (ಸಮಾಜ. ೬೭೦). (ಗು). ೨. ಬಂಡಾಯಪ್ರವೃತ್ತಿಯ : ಅವರಲ್ಲಿ ನಿಮ್ಮಂತೆ ಉಂಡಾಡಿಗತನವಾಗಲೀ ಬಂಡುಖೋರ ಮನೋವೃತ್ತಿಯಾಗಲೀ ಇರುವುದಿಲ್ಲ (ಮಹ್ಮಮ. ೨೦೦). [ಬಂಡು$_4$ + — ಕೋರ$_3$./ಮರಾ. ಬಂಡ್‌ಖೋರ್]

ಬಂಡುಖೋರ 'ಬಂಡುಕೋರ' ನೋ.

ಬಂಡುಗ (ನಾ). = ಬಂಡುಕೋರ ೧ : ನೆರೆ ಮುಳ್ಳು ತುಂಟವೆಸರ ಬಂಡುಗರೆಮ್ಮ ಹೊರೆಯೊಳಗಿರಬೇಡವೆಂದು ವರವನಪುಷ್ಪಗಳ್ಪೊಱಡಿಸೆ ಬೆಳ್ದಾಳೆಯರಲೊಪ್ಪಿದುವು ವನತಟದೆ (ಕಂಪಪಿ. ೩-೯೮).
[ಬಂಡು$_4$ + — ಗ$_2$]

ಬಂಡುಗಟ್ಟು (ಕ್ರಿ). ದಂಗೆಯೇಳು : ಬಂಡಾಯ ಮಾಡು : ಕೆಲ ಬರ್ಕ್ಕೊಂಕಣಿಗರ್ಮ್ಮಾರ್ಮ್ಮಲೆವದಟಿಂ ಬಣ್ಡುಗಟ್ಟಿ (ಎಕ. VIII, ಸೊರಬ. ೦೫೨-೦೭ ; 1380). [ಬಂಡು$_4$ + ಕಟ್ಟು$_1$]

ಬಂಡುಗಾರ (ನಾ). ೧. = ಬಂಡುಕೋರ ೧ : ಪೂಗಾರಗೊಲಿದ ಬಂಡುಗಾರ ಗೊಲ್ಲ (ವಿಚಾಳ್ಯ. ೦೫೫-೫) : ಪುಂಡ ಪಾಳೆಯಗಾರಿಕೆಯ ಬಂಡುಗಾರರನ್ನು ಬೆಳೆಯಿಸಿ ಕೊಡುವದು ಯಾವ ದೃಷ್ಟಿಯಿಂದಲೂ ಹಿತವಲ್ಲ (ವಿಚಾಮಂ. ೨೦). ೨. ಬದಲಾವಣೆಯನ್ನು ಬಯಸುವವನು ; ಕ್ರಾಂತಿಕಾರ : ಇಂದಿನ ಸಾಹಿತ್ಯದ ಬಂಡುಗಾರರೇ ನಾಳಿನ ಸಮ್ಮೇಲನದ ಅಧ್ಯಕ್ಷರಾಗುವರು (ಮುಂಗಾಪು. ೦೦೭).
[ಬಂಡು$_4$ + — ಗಾರ (< — ಕಾಱ)]

ಬಂಡುಗಾರಿಕೆ (ನಾ). ದಂಗೆಯೇಳುವ ಪ್ರವೃತ್ತಿ : ಜೀವನದ ಆರಂಭದಲ್ಲಿಯೇ ಅವನು ತನ್ನ ಸ್ವಚ್ಛಂದವೃತ್ತಿಯ, ಸ್ವತಂತ್ರಬುದ್ಧಿಯ, ಉದ್ದಂಡ ಬಂಡುಗಾರಿಕೆಯ, ಮುಂಗುರುಹುಗಳನ್ನು ತೋರಿಸದೇ ಹೋಗಲಿಲ್ಲ (ಮಾಪಾದ. ೦೯). [ಬಂಡುಗಾರ + — ಇಕೆ]

ಬಂಡುಗೆಡೆ (ಕ್ರಿ). ನಾಚಿಕೆಯಿಲ್ಲದ ಮಾತನ್ನಾಡು : ತೊಂಡನಿಕ್ಕಿ ಠವಾಳತನದಲಿ ಬಂಡುಗೆಡೆ[ಪಾಶಾಂ. ಭಂಡುಗೆಲೆ]ವುತ ಮಲುಹಣಿಯ ತಾಯ್ ಮಿಂಡನಂ ಹೊಱವಡಿಸಿ (ಬಸಪು. ೪೨-೦೯) : ಕೆಂಡದ ಕೊಂಡವ ಮಂಡೆದೊನೆದು ಪೊಕ್ಕು ಬಂಡುಗೆಡೆವುತೆ ಕಳ್ಗುಡಿದು (ಕಠಸಾಂ. ೦೦-೬೯).
[ಬಂಡು$_3$ + ಕೆಡೆ$_2$]

ಬಂಡುಗೆಯ್ (ಕ್ರಿ). = ಬಂಡುಗಟ್ಟು : ನೀಂ ಕಂಡುವಂ ಕಂಡಂತೊರೆದು ಗಂಡನಲೆದು ಬಂಡುಗೆಯ್ದು ಸಬ್ಬವಂಗೊಳವೇಟ್ಟುದು (ಜಿಕಪಿ. ೬-೦೫೫ ಪ); ಅವನೆಮ್ಮ ನಾಡೊಳ್ ದಾಟಿಟ್ಟು ತುಱುಸೆಱೆಯೊಡನೆನ್ನಣುಗರಂ ಪಿಡಿದು ಬಂಡುಗೆಯ್ದು (ಜಿಕಪಂ. ೦೫-೯). [ಬಂಡು$_4$ + ಕೆಯ್$_1$]

ಬಂಡುಗೆಲೆ (ಕ್ರಿ). = ಬಂಡುಗೆಡೆ : ಕೋಡಗನಂತೆ ಕಂಡಕಂಡವರಲ್ಲಿ ಹಿಂಡಿನೊಳಗೆ ಹೊಕ್ಕು ಬಂಡುಗೆಲೆಯಲೇತಕ್ಕೋ (ಮೋಳಿಪಾ. ೦೭-೬೬) ; ಪುಂಡರೆಲ್ಲರ ಕೂಡಿಕೊಂಡು ಬಂ[ಪಾಶಾಂ. ಭಂ]ಡುಗೆಲೆವುತೆಮ್ಮ ಪವುಳಿಯ ಹೊಱಗೆ ಮುಂಕೊಂಡಾಡುತಿರ್ದನುಬ್ಬಿನೊಳು (ಕುರಾಸಾಂ. ೫೯-೫೦) ; ಮೋಟ ಮೊಂಡರಿಗೆ ಕುರುಡ ಕುಂಟರಿಗೆ ಬಂಡುಗೆಲೆವುದು ಸಹಜ (ಪೃಶಸೂ. I, ೪೬). [ಬಂಡು$_3$ + ಕೆಲೆ]

ಬಂಡುಣ್ (ಕ್ರಿ). ಜೇನನ್ನು ಕುಡಿ ; ಮಕರಂದವನ್ನು ಹೀರು : ಅಲರಂ ನೋಯಿಸದೊಯ್ಯನೊಯ್ಯನಳಿಗಳ್ ಬಂಡುಣ್ಬುವು (ಪಂಪಭಾ. ೩-೬೦) ; ಕೂಡುತಿರ್ಪ ರಥಾಂಗಂ ನಲಿದಾಡಿ ನರ್ತಿಪ ನವಿಲ್ ಬಂಡುಂಬ ಪೆಣ್ದುಂಬಿ (ಸುಳುಮಾ. ೦-೭೫) ; ಮಾಳತಿಯೊಳ್ ಬಂಡುಂಡ ಮದಾಳಿಯನಳಿಮಾಲೆ ಎಱಗಿ ಬಂಡುಣ್ಬುವೊಲ್ (ಗಿರಿಕ. ೯-೦೫೨). [ಬಂಡು$_2$ + ಉಣ್]

ಬಂಡುಣಿ (ನಾ). ಹೂವಿನ ರಸವನ್ನು ಆಹಾರವಾಗಿ ಉಳ್ಳುದು ; ದಂಂಬಿ : "ಅಲರ್ವಕ್ಕಿ, ಬಂಡುಣಿ, ಪಱಮೆ . . . ಮುಯ್ಯೆರಡಡಿ—ಈ ೭ ಭ್ರಮರಂ" (ಕಶಸಾ. ೫೫-೦೯೮) : ಬಂಡುಣಿಗಳೆಱಪ ಮೈಗಂಪು ಸೊಗಸ ಲೊರ್ವಳ್ಬಾಲೆ ಕಣ್ಗೆಸೆದಳು (ಸೌಂದಪು. ೦೬-೫೫) : ರಾರಾಜಿಪ ಲೋಚನ ಕೈರವದೊಳು . . . ನೃಪತಿಯ ಚಾರುನಯನಮತಿಲಗ್ನಂಬಡೆದುವು ಬಂಡುಣಿವಱಿಯಂತೆ (ಜಯಕಾ. ೫-೦೦) ; ಅವಳಾಡಿದ ನಾಲ್ಕಾರು ಇನಿವಾತುಗಳನ್ನು ಅವನು ಬಂಡುಣಿಯಂತೆ ಅರ್ತಿಯಿಂದ ಹೀರಿದ (ಹುಂಜಾ. ೫೭). [ಬಂಡುಣ್ + — ಇ$_3$]

ಬಂಡುಣಿಗುರುಳ್ (ನಾ). ತುಂಬಿಯಂತೆ ಕಪ್ಪಾದ ಕೂದಲು ; ಭ್ರಮರ ಕುಂತಳ : ಹರಿಣಿಗಣ್ಗಳ ಬಂಡುಣಿಗುರುಳ್ಗಳ ವರಪಿಕಾಲಾಪದ . . . ಆ ಲಲನೆಯನೀಕ್ಷಿಸಿದೆನು (ಪ್ರಭಂಜ. ೯-೦೯). [ಬಂಡುಣಿ + ಕುರುಳ್$_1$]

ಬಂಡುಣಿವೆದೆಯ (ನಾ). ತುಂಬಿಯನ್ನು ಬಿಲ್ಲಿನ ಹೆದೆಯಾಗಿ ಹೊಂದಿರುವವನು ; ಮನ್ಮಥ : "ಇಂಗೋಲ್ವಿಲ್ಲಂ, ಬಂಡುಣಿವೆದೆಯಂ . . . ಗಿಳಿದೇರಂ— ಇವು ೧೩ ಕಾಮದೇವಂಗೆ ಪೆಸರ್" (ಕಶಸಾ. ೪೭-೦೫) ; ದಿಂಡುದೊಡೆಯ ಮಿಂಡಿಯರ್ ಬಂಡುಣಿವೆದೆಯನ ದಂಡಾಳ್ಗಳೆನೆ ಪಿಂಡೆಟ್ಟಲ್ಲಿಗಲ್ಲಿಗೆ ಸಂಚರಿಸಿ (ರಾಮಾಶ್ವ. ೦೨೨-೨೬).
[ಬಂಡುಣಿ + ಪೆದೆ + — ಅ$_7$]

ಬಂಡುಣಿಸು (ನಾ). ಹೂವಿನ ಜೇನಿನ ಸೇವನೆ : ಕೆಂದಾವರೆಯ ಬಂಡುಣಿಸಿಗೆಳಸಿಯೈತಂದಿಹ ಮದಹಂಸೆಯಂತೆ (ಕಂಪಪಿ. ೯-೨೨).
[ಬಂಡು$_2$ + ಉಣಿಸು$_2$]

ಬಂಡುಬಾಳು (ನಾ). = ಬಂಡಬಾಳು : ಆತ ತನ್ನ ಬಂಡುಬಾಳನ್ನು ನೆನೆದು ದುಃಖಿಸಿದನು (ಕೂಡಿ). [ಬಂಡು$_3$ + ಬಾಳು$_2$ (< ಬಾಟ್ಸ್$_2$)]

ಬಂಡುಮಾತು (ನಾ). ನಾಚಿಕೆಯಿಲ್ಲದ ಮಾತು ; ಲಜ್ಜಾಸ್ಪದವಾದ ನುಡಿ: ಕಂಡ ನಾರಿಗಿಚ್ಛೈಸುವ ಲಂಡಗೆ ಪುರಾಣವೇಕೆ ಬಂ[ಪಾಶಾಂ. ಭಂ]ಡು ಮಾತಿನ ಕವಿಯ ಬಹುಪಾಂಡಿತ್ಯವೇತಕೆ (ಪುಕಂದ. ೦-೫೦-೫).
[ಬಂಡು$_3$ + ಮಾತು$_1$]

ಬಂಡುವೋಗು (ಕ್ರಿ). ನಾಚಿಕೆಗೆ ಈಡಾಗು ; ಲಜ್ಜೆಗೊಳಗಾಗು : ಬಿತ್ತಲ್ಲದದು ಫಲದೊಳಱಿಪಿತ್ತೆಂಬ ನಾಟ್ನುಡಿಯಂತೆ ತಪದಿಂದಂ ಗುಣದಿಂದಂ ಪುರದೊಳ್ ಪಲವುದಿವಸಂ ಮೆಚ್ಚಾಗಿರ್ದಲ್ಲಿಯೆ ಬಂಡುವೋದೈ (ರರ್ಮಾಮ್ಯ. ೬-೦೨೬). [ಬಂಡು$_3$ + ಪೋಗು$_1$ (< ಪೋ$_1$)]

ಬಂಡುಸೋನೆ (ನಾ). ಜೇನಿನ ಮಳೆ : ಕಣ್ಮಲರ್ಗಳಿಂ ಸುರಿಯುವ ಬಂಡುಸೋನೆಗೆಣೆಯೊಂದಿದ ಕಣ್ಬನಿ (ಮೈಸೂಮ. ೪-೫೫).
[ಬಂಡು$_2$ + ಸೋನೆ$_1$]

ಬಂಡುಳಿಕೆ ? (ನಾ). (?) : ಕೌರ್ವಿಲ್ಲ ಪಳಿವ ಪುರ್ಬುಳಿಯೆ ಬಂಡುಳಿಕೆಗಳ ನಿಳಿಕೆಗೈವ ಸುಕ್ಕುಗುರುಳುಗಳೆಳದಾಡೆ (ರುಕ್ಮಾಂಗ. ೫-೦೪). [?]

ಬಂಡೆ$_1$, ಭಂಡೆ$_1$ (ನಾ). ದೊಡ್ಡ ಗಾತ್ರದ ಕಲ್ಲು: ಆ ಕೆಱೆಯವೊಳಗಣ ಬಣ್ಡೆಯ × × × ಡ ಕಂಡೇಶ್ವರದೇವರ ಅಮೃತಪಡಿ (ಎಕ. XII, ಮರ್ಕಗಿ. ೦೦೬-೯; 1503) : ಪ್ರವಾಹದಲ್ಲಿ ಈಜಿ ಶಕ್ತಿಗುಂದಿ ತೇಲಿಹೋಗುತ್ತಿದ್ದೆ. ಈ ದಿನ ಬಂಡೆಯೊಂದು ಸಿಕ್ಕಿತು (ರಾಮಾಪ. ೦೦೦). **ಭಂಡೆ$_1$** : ಬಡಗಲು ಕಲ್ಲ ಭಣ್ಡೆಯ [ಬಟ್ಟೆ]ಯೇ ಮೇರೆ (ಸೌಜಾ. XI—ii, ೦೪೦-೫೦; 1097) : ಬಡಗ ಯಿಾಶಾನ್ಯ ಭಂಡೆದ ಗಡಿ (ಎಕ. VII, ಶಿವಮೊ. ೦-೦೦೨; 1513). [ದೇ. ೩ ತೆಲು. ಬಂಡ]

ಬಂಡೆ₂ (ನಾ). ಶೀಲವಿಲ್ಲದವಳು ; ಕುಲಟೆ : ರಂಡೆಗೆ ಗಂಡನಿಲ್ಲ ಬಂಡೆಗೆ ನೀತಿಯಿಲ್ಲ (ಗಾರ). 'ಭಂಡಿ₂' ಪರಾ. [ಸಂ. ಬಂಡಾ./ಪ್ರಾ. ಭಂಡೀ]

ಬಂಡೆ₂ 'ಬಂಡ₂' ನೋ.

ಬಂಡೆಕಲ್ಲು 'ಬಂಡೆಗಲ್ಲು' ನೋ.

ಬಂಡೆಗಲ್ಲು, ಬಂಡೆಕಲ್ಲು (ನಾ). = ಬಂಡೆ₁ : ಕೊಪ್ಪಳದ ಹತ್ತಿರ . . . ಬಂಡೆಗಲ್ಲುಗಳ ಮೇಲೆ ಅಶೋಕನ ಶಾಸನಗಳು ಇರುತ್ತವೆಂದು ಇತ್ತೀಚೆಗೆ ತಿಳಿಯ ಬಂದಿದೆ (ಕಸಾಗಸ. ೨) ; ಬಂಡೆಗಲ್ಲಿನ ನಿವೇಶನದಲ್ಲಿ ನೀರು ಬೇಗ ಹರಿದುಹೋಗುವುದು (ಗೃಹವಿ. ೦೫೩). **ಬಂಡೆಕಲ್ಲು** : ಅಂಗಿ ವಸ್ತ್ರಗಳನ್ನು ನೊರೆಕಾಯಿ ಹಾಕಿ ಬಂಡೆಕಲ್ಲಿನಲ್ಲಿ ಒಗೆದಾಯಿತು (ರಕ್ತರೊ. ೧೭). [ಬಂಡೆ₁ + ಕಲ್ಲು (<ಕಲ್₃)]

ಬಂಡೆಬ್ಬಿಸು (ಕ್ರಿ). = ಬಂಡುಗಟ್ಟು : ನಿಂದ್ಯವಾದ ಸಂಗತಿಗಳ ವಿರುದ್ಧ ಬಂಡೆಬ್ಬಿಸುವ ಧೈರ್ಯವು ನಮ್ಮ ಜನಕ್ಕೆ ಬರುವವರೆಗೆ ದೇಶದ ಉದ್ಧಾರ ವಾಗಲಾರದು (ಶ್ಯಾಮಸಾ. ೨೩) ; ಇಡೀ ದೇಶದ ಭಕ್ತರ ದಳವು ಬಂಡೆಬ್ಬಿಸಬಹುದು (ಸೋಕತಿ. ೬೯).

[ಬಂಡು₄ + ಎಬ್ಬಿಸು (< ಎಟ್ಟಿಸು)]

ಬಂಡೇಳು, ಬಂಟೇಳು (ಕ್ರಿ). = ಬಂಡುಗಟ್ಟು : ಬಂಡೆದ್ದು ಗಿರಿಪಟ್ಟ ನೆರೆ ಸೂರೆಹೋದಾವು (ಎಬಾಗಾ. ೦೨೩-೦). **ಬಂಟೇಳು** : ಎಂಟುಸಾವಿರ ದೈನೂಱಿಬ್ಬರೆನಗಿಲ್ಲಿ ನಾಂಟಿರುತಿಹ ಪಕ್ಷದವರು ಉಂಟು ನಿಮಗೆ ಲಕ್ಷಪಕ್ಷ ನೀವದಱಿಂದ ಬಂಟೆದ್ದಿರೆಂದನಾ ಚಕ್ರಿ (ಶರಸ. ೪೩-೨೨).

[ಬಂಡು₄ + ಏಳು₁ (< ಏಟ್₁)]

ಬಂತಿ 'ಪಂತಿ' ನೋ.

ಬಂತಿಗಟ್ಟು 'ಪಂತಿಗಟ್ಟು' ನೋ.

ಬಂತಿದಲೆಯ (ನಾ). ಸಾಲು ತಲೆಗಳುಳ್ಳವನು ; ದಶಕಂಠ ; ರಾವಣ : ಇಂತು ಬಂತಿದಲೆಯಂ ಚಲ್ಲಣಮನಿಟ್ಟು, ದಟ್ಟಿಯಂ ಬಿಗಿದು . . . ಪೊಱಮಡುವುದುಂ (ಅದ್ಭುತ. ೪೩-೦೬).

[ಬಂತಿ (< ಪಂತಿ) + ತಲೆ₁ + — ಅ₇]

ಬಂತಿದೇರ 'ಪಂತಿದೇರ' ನೋ.

ಬಂದ್ 'ಬಂದು₂' ನೋ.

ಬಂದ₁ 'ವರ್' ಪರಾ.

ಬಂದ₂ 'ಬಂದು₂' ನೋ.

ಬಂದಂಬಿಡು (ಕ್ರಿ). ಬಂಧನವನ್ನು ತೊರೆ ; ವ್ಯಾಮೋಹವನ್ನು ತ್ಯಜಿಸು : ಮನಸಂ ಸೈತಿಟ್ಟು ಬಾಟ್ವಾಸೆಯಿಂ ಬಂದಂಬಿಟ್ಟು ವಿಮೋಹಮಂ ಬಿಸುಟು ಕಣ್ಣಂ ಮುಚ್ಚಿ (ರಮಾಗಸ್ಯು. ೪-೬೨).

[ಬಂದ₂ (<ಬಂದು₂) + ಬಿಡು₁]

ಬಂದಗಾವುಂಡ (ನಾ). ಒಬ್ಬಾತನ ಹೆಸರು : ಇದಕ್ಕೆ ಸಾಕ್ಷಿ . . . ಬಿಜಯಿತಗಾವುಣ್ಡನುಂ ಬನ್ದಗಾವುಣ್ಡನುಂ (ಎಕ. XI, ಹೊಳಲ್ಕೆ. ೩೦-೦೦; 964).

[ಬಂದ₇ + ಗಾವುಂಡ (<ಗಾಮುಂಡ)]

ಬಂದಣಿಕೆ, ಬಂದಣಿಗೆ, ಬಂದನಿಕೆ, ಬಂದನಿಕ್ಕಿ, ಬಂದರಿಕೆ, ಬಂದಲಿಕೆ, ಬಂದಳಿಕೆ, ಬಣತಿಗೆ, ಬತಣಿಕೆ, ಬದಣಿಕೆ, ಬದನಿಕೆ, ಬಿಂದಣಿಕೆ (ನಾ). ೧. ಬೇರೊಂದು ಸಸ್ಯವನ್ನು ಅವಲಂಬಿಸಿ ಜೀವಿಸುವ ಸಸ್ಯ ; ಪರಾವಲಂಬಿಸಸ್ಯ : ಎಲವದ ಬಂದಣಿಕೆಯನಿಂತಲಸದೆ ಕುಡಿಸಲ್ಕೆ(ಲ್ತೆ) ನಾಯ ವಿಷಮಟಿಗುಂ (ಐಮದ. ೧೩-೩೩) ; ಅಶ್ವತ್ಥಮೂಲವನಾದರೂ ಅದಱ ಬಂದಣಿಕೆಯನಾದರೂ ಶುಭದಿನದಲ್ಲಿ ತಂದು ಹಾಲಲ್ಲರೆದು ಋತುಸ್ನಾತೆಯಾದ ಸ್ತ್ರೀಗೆ ಕುಡಿಯ ಕೊಡಲು ಗರ್ಭ ನಿಲ್ಲುವುದು (ಪೃಥ್ವಸಾ. II. ೪೪) ; ತನ್ನಂಥ ನಿಸರ್ಗವಿರೋಧಿವ್ಯಕ್ತಿಯ ಕತ್ತಿಗೆ ಆ ಬಳ್ಳಿಯೇ ಬಂದಣಿಕೆಯಾಗಲೂ ಬಹುದು (ಪಾಶ್ವಶ್ಯ. ೩೦೩). ೨. ಒಂದು ಬಗೆಯ ಪರಾವಲಂಬಿಸಸ್ಯ ; ಜೀವಂತಿಕೆ : "ಬಂದಣಿಕೆ, ಜೀವಂತಿಕೆ, ವೃಕ್ಷರುಹೆ, ವಂದೆ, ವೃಕ್ಷಾದನಿ" (ಪಾಸರಾ. ೪). ೩. ಒಂದು ಸ್ಥಳದ ಹೆಸರು : ಬನ್ದಣಿಕೆಯ ಸತ್ತಱರ ನಾಗಾರ್ಜ್ಜುನ ನಾರ್ಗ್ಗ ವುಂಣ್ಡಗೆಯೆ (ಎಕ. VIII, ಸೊರಬ. ೨೩೪-೬; 999); ಒಂದಿರುಳೊಳ್ಳಾನುವರಂ ತಂದಿಕ್ಕಿದ ಪುಷ್ಪಮಾಲೆ ನಿಮಿರ್ದುದು ಪಾದಕ್ಕೆಂದೊಡೆ ಭುವನಕ್ಕಚ್ಚರಿ ಬಂದಣಿಗೆ[ಪಾಶಾಂ. ಳಿಕೆ]ಯ ಶಾಂತಿನಾಥತೀರ್ಥಾತಿಶಯಂ (ಸಮಪ. ೨-೩೦). **ಬಂದಣಿಗೆ** : ೧. ಲೊಕ್ಕಿಯ ಬಂದಣಿಗೆಯುಮಂ ಚಕ್ಕನೆ ಪೂಸಲಿಲ್ಲ ದಿರ್ದೊಡೆರ್ಕೆಯ ಪಾಲಂ ಪೊಕ್ಕಿರಲೆಱ ನಿಬಿಡಮೆನಲ್ ಸಿಕ್ಕಿದ ಮುಳ್ಳಲಗು ಪಾದದಿಂ ಪೊಱಮಡುಗುಂ (ಐಮದ. ೨-೨೦೬). ೨. "ಪರರೋಹಿಣೀ — ಬಂದಣಿಗೆ(ಕೆ)" (ಓಷಧಿ. ೯೩). **ಬಂದನಿಕೆ** : ೩. ಬಲ್ಲೆ ಬನ್ದು ಬನ್ದನಿಕೆಯ ತೀರ್ತ್ಥದೊಳ್ತೊಱದುದಚ್ಚರಿಯಂ (ಎಕ. VII. ಶಿಕಾರಿ. ೨೦೯-೨೩; 918). **ಬಂದನಿಕ್ಕಿ** : ೩. ಬನ್ದನಿಕ್ಕಿಯ ನಟ್ಗಮುಣ್ಡರ್ ತಮ್ಮೊಳೆಱೆಯೆ (ಎಕ. VIII, ಸೊರಬ. ೩೩೦-೨; ಸು. 960 ?). **ಬಂದರಿಕೆ** : ೨. ಬಂದರೆ; ಬಂಡಾರೆ, ಹಂಗರಿಕೆ, ಬಂದರಿಕೆ (ಮೃಷಿಗಿ. ೩೨-೩೦೬). **ಬಂದಲಿಕೆ** : ೧. ಗಂಡಸು ಗಳಿಸಬೇಕು. ಪೆರಸೈಟ್ (ಬಂದಲಿಕೆ)ನ ಹಾಗೆ ಬದುಕಬಾರದು (ಐದುಪ. ೨೩೦). ೩. × × × ಮಾಸ ಸುದ್ಧ ಗುರು ಈ ದಿನದ ಹುಣ್ಣವಗೆ ಬನ್ದಲಿಕೆಯಾಗಿ ಕೊಡಕಣಿಯ ಬಡಗಿ ಸಾದೋಜನ ಕಳ್ಳರು ತಾಗಿ ತಳಿರ್ದ್ದು ಸುರಲೋಕಪ್ರಾಪ್ತನಾದ (ಎಕ. VIII, ಸೊರಬ; ೦೭-೩; 1371). **ಬಂದಳಿಕೆ** : ೧. ವಿಜಯನಗರದ ಪ್ರೌಢ ದೇವರಾಯನ ಕಾಲದ ನೂರೊಂದು ವಿರಕ್ತರ ತರುವಾಯ ಶರಣಸುರ ಭೂಜವನಕ್ಕೆ ಮತ್ತೆ ಬಂದಳಿಕೆ ಬಂದಿತು (ಶರಸ. ೬೦೭); ಮಾನವು ಗೆದ್ದಲು ಒಲವಿನ ವೃಕ್ಷಕೆ ಚಾಡಿಯ ಮಾತು ಬಂದಳಿಕೆ (ಸಂಧ್ರವೀ. ೦೧೨-೪೩). ೨. "ವಂದಾ — ಬಂದಳಿಕೆ" (ಓಷಧಿ. ೦೪೩). ೩. ತತುಸಮಯಲ್ಲಿ ಬಂದಳಿಕೆಗೆತ್ತಿ ನಡೆದಲ್ಲಿ (ಎಕ. VII. ಶಿಕಾರಿ. ೦೬೧-೩; ಸು. 1160). **ಬಣತಿಗೆ** : ೧. ಒಣಗಿದ ಮರ ಎಲೆಯಿಲ್ಲದ ಬಳ್ಳಿ ಬಣತಿಗೆ ಪುಟ್ಟಿದ ವನದಲ್ಲಿ [ಪಾಶಾಂ. ಒಣಗಿದ ಮರದಲಿ ಇಲ್ಲದ ಬಳ್ಳಿ ಬಣತಿಗೆ ಹುಟ್ಟಿದವನ ತಳ್ಳಿ] (ಪುರಂದ. ರಾ. ೪-೧೬-೩). **ಬತಣಿಕೆ** : ೨. "ವಂದಾ, ವೃಕ್ಷಾದನಿ, ವೃಕ್ಷರುಹಾ, ಜೀವಂತಿಕಾ — ಈ ೪ ಬತಣಿಕೆ" (ಪಾಸರಾ. ೦೦೯). **ಬದಣಿಕೆ** : ೧. ವೀಳೆಯ ದೆಲೆಯ ಬದಣಿಕೆಯಂ ಭರಣಿನಕ್ಷತ್ರದಲ್ಲಿ ತಂದು ಕೈಗೆ ಕಟ್ಟುವುದು (ಸಳಪ್ಯ. ೦೨೦). **ಬದನಿಕೆ** : ೧. ಇನ್ನೊಂದು ವರ್ಗದ ಗಿಡಗಳು ಬದನಿಕೆಯಂಥವು (ಪಾಲಪ್ರ. I. ೩೦೩); ಗಿಡಕ್ಕಂಟಿದ ಬದನಿಕೆಯಂತೆ ಬೆಳೆಬೆಳೆದು (ಯಕ್ಷಣ. ೩). ೨. "ಬದನಿಕೆ (ಬಂದಣಿಕೆ) — ವಂದಾಕಾ" (ಕದ್ಯಕೋ. ೨೬) ; "ಕಳುಬಳ್ಳಿ, ಅಮರಬಳ್ಳಿ, ಬದನಿಕೆ . . . ಶಾವಿಗೆಬಳ್ಳಿ" (ಸಸ್ಯವಿ. ೪೩); ೪. ಒಂದು ಬಗೆಯ ಗಿಡದ ಬೇರು : ಇಟ್ಟ ಕಣ್ಣಿನ ಬೊಟ್ಟು . . . ಪಸುರಿನ ಬಟ್ಟ ಗುಪ್ಪಸ . . . ಮೆಟ್ಟಿದೆಕ್ಕಡ ತೋಳ ಬದನಿಕೆ ತೊಟ್ಟ ಮಾಂದಳಿರೆಲೆಯ ಚಲ್ಲಣ ದಿಟ್ಟಿಗಚ್ಚರಿದೋರೆ ಬಂದರು . . . ಶಬರಕೋಟಿಗಳು (ಅನಂರಾ. ೩-೩-೩). **ಬಿಂದಣಿಕೆ** : "ಮಾರತರುಹಮ್ಮೆನಲು ಬಿಂದಣಿಕೆ [ಪಾಶಾಂ. ಮಾರತರುತರುಹವೆನೆ ಬಂದಣಿಕೆ]ಯಕ್ಕು" (ಮಂಗರಾ. ೪೩-೪೦).

[<ಸಂ. ವಂದಾಕ, ವಂದಾಕಾ, ವಂದಾಕೀ./ತುಳು. ಬಂದಣಿಗೆ, ಬಂದನಿಗೆ; ತೆಲು. ಬದನಿಕ, ವದನಿಕ]

ಬಂದಣಿಗೆ 'ಬಂದಣಿಕೆ' ನೋ.

ಬಂದನಿಕೆ 'ಬಂದಣಿಕೆ' ನೋ.

ಬಂದನಿಕ್ಕಿ 'ಬಂದಣಿಕೆ' ನೋ.

ಬಂದಮಿಣಿ (ನಾ). ಕಾಲಿಗೆ ಕಟ್ಟಿಕೊಳ್ಳುವ ಹಗ್ಗ : "ಬಂದಮಿಣಿ— ಈಳಿಗರ ಈಚಲಗಿಡ ಏರುವ ಸರಹಗ್ಗ" (ಪಾನಕೋ. ೨೦).

[ಬಂದ₂(<ಬಂದು₂) + ಮಿಣ್₂ (<ಮಿಳ್₂)]

ಬಂದರಿ 'ಬಂದಾರಿ' ನೋ.

ಬಂದರಿಕೆ 'ಬಂದಣಿಕೆ' ನೋ.

ಬಂದರು (ನಾ). ಕರಾವಳಿಯಲ್ಲಿ ಹಡಗಿನಿಂದ ವಸ್ತುಗಳನ್ನು ಇಳಿಸಂವ ಹಾಗೂ ಹಡಗಿಗೆ ತುಂಬುವ ಸ್ಥಳ; ಹಡಗುನಿಲ್ದಾಣ; ರೇವು: ಹಡಗುಗಳು ನಿಲ್ಲುವುದಕ್ಕೆ ಬೊಂಬಾಯಿ ಬಳಿಯಲ್ಲಿರುವಷ್ಟು ಅನುಕೂಲವಾದ ಮತ್ತು ವಿಸ್ತಾರವಾದ ಬಂದರು ಇಂಡಿಯಾದಲ್ಲಿ ಎಲ್ಲಿಯೂ ಇಲ್ಲ (ಕೂಗೋಳ.೭೨); ಪರವೂರುಗಳಿಂದ ಬಂದ ಮಂಜಿಗಳು ಊರ ಬಂದರಿನಲ್ಲಿ ತಂಗುವುದು ಸ್ವಾಭಾವಿಕ (ಅಾಹುತ್ತ.೩೬).

[←ಪಾರ., ಹಿಂ. ಮರಾ. ಬಂದರ್]

ಬಂದರೆ 'ಬಂದಾರಿ' ನೋ.

ಬಂದರಿಕೆ 'ಬಂದಣಿಕೆ' ನೋ.

ಬಂದಳ (ನಾ). ಅಗಲಬಾಯಿಯ ಪಾತ್ರೆ: ಬಂದಳ ಸೋರೆ ಕರಗ ಹರವಿಯು ಮೊಗೆ ಬಿಂದಿಗೆ ಗಡಿಗೆ ಗುಡಾಣ (ಅಮುಸಾಂ. ೩-೦೩೨).

[←ತೆಲು. ಬಂದಳ, ಬಂದಲ, ಬಂದಡ]

ಬಂದಳಿಕೆ 'ಬಂದಣಿಕೆ' ನೋ.

ಬಂದಾ (ನಾ). ಚಿಲ್ಲರೆಯಲ್ಲದುದು: ಈ ಚಿಲ್ಲರೆ ಕೊಟ್ಟು ಬಂದಾ ತೆಗೆದುಕೊಂಡು ಬಾ (ಕೂಗಿ). [←ಪಾರ. ಬಂದ್; ಮರಾ. ಬಂದಾ]

ಬಂದಾರಿ, ಬಂಡಾರೆ, ಬಂದರಿ, ಬಂದರೆ, ಬಂದುರೆ (ನಾ). ೧. ಒಂದು ಬಗೆಯ ಮರ: ಬೆಲ್ಲವತ ಬಂದಾರಿ ಸಾವೇರಿಯಿಂ ತಡಸು . . . ತಾಱ್ ಬೋರೆಗಳೆಸೆದವು (ಸಂದಿಮಾ. ೦೩-೦೩). **ಬಂಡಾರೆ:** ೨. ಒಂದು ಬಗೆಯ ಗಿಡ: ಬಂದರೆ, ಬಂಡಾರೆ, ಹಂಗರಿಕೆ, ಬಂದರಿಕೆ (ಮೃಜಿಗಿ. ೩೨-೬೦೬). **ಬಂದರಿ:** ೨. ಅಲ್ಲಿಂದಂ ಮೂಡಲು ಬಂದರಿಗಿಡುವಿನ ಹಿಟ್ಟುಗಲ್ಲು ಬಂಡೆ (ಸೌಇಇ. IX-ii, ೩೩೩-೨೯; 1531). **ಬಂದರೆ:** ೨. 'ಬಂದಾರೆ' ಉಲ್ಲೇಖದ 'ಮೈಔಗಿ. ೩೨-೬೦೮' ಪ್ರಯೋಗವನ್ನು ನೋಡಿ. **ಬಂದುರೆ:** ೨. (ಮೃಜಿಗಿ. ೬೦-೦೨೦೩).

[←ತೆಲು. ಬಂದಾರು, ಬಂಡಾರು. / ಮರಾ. ಬಂದಾಟೀ]

ಬಂದಿ₁ (ನಾ). ೧. ಸೆರೆ; ಬಂಧನ; ಕಟ್ಟು: ಎನಗಿಂದಿಂಗಾಱುತಿಂಗಳ್ ಸಮನಿಸಿದವುದಿಲ್ಲೆಲ್ಲಿಯುಂ ಬಂದಿಮಂಚಲ್ (ಸುಳುಮಾ. ೬-೦೮); ಅಗ್ಗಳದ ಬಾಣದ ಬಂದಿಯಲಿ ಸಿಲುಕಿತ್ತು ರಿಪುಸೇನೆ (ಕುಪ್ಯಾಸ್ತ್ರೋ. ೦೯-೩೫); ರಾಘವಂ . . . ದೇವರ್ಕಳ ಬಂದಿಯಂ ಬಿಡಿಸಿ . . . ಅರಸುಗೆಯ್ಯುತಿರ್ಪಂ (ರಾಮಾಶ್ವ. ೦೬-೦೮). ೨. ಸೆರೆಮನೆ; ಬಂದೀಖಾನೆ; ಜೈಲು: ಬಂದಿಯೊಳಗಿದ್ದವರ ಬಂಧನವ ಬಿಡಿಸುವಾ ಬಂದಿಕಾರಾ ಶ್ರಾವಣಾ (ಗಂಗಾಸ. ೩೬-೨). ೩. ಹತೋಟಿ; ಹಿಡಿತ; ಅಂಕೆ: ತಪಪ ಮಾಡಿ ವಿಕಾರಿಗಳು ಬ್ರಹ್ಮಂಗೆ ಬಂದಿಯನಿಕ್ಕಿದರು ಬಳಿಕ (ಕುಪ್ಯಾಕ. ೬-೦೩); ಮಾಯಾಗುಣವಿಕಾರದ ಬಂದಿಯಲಿ ತಲೆ ಸಿಲುಕಿ ನರಕದಲಾಳುತಿಹರು (ಪಿಧಾಗ. ೪-೪-೨೩). ೪. ಸೆರೆ ಸಿಕ್ಕಿದ ವ್ಯಕ್ತಿ; ಸೆರೆಯಾಳು: ಭೂನಾಯಕಂ ಬಿಡಿಸೆ ಬಿಟ್ಟ ಬಹು ಬಂದಿಯಿಂ ಕರಮೆ . . . ಕಣ್ಗೆಸೆದುದು ನರೇಂದ್ರಭವನಾಂಗಣಂ (ಅಜಿಪು.೪-೭ ರಗಳೆ); ಬಂದಿಯ ಹಿಡಿದಾತನ ತಂದೆಯ ತಲೆ ಹೋಹುದೆಂದು ಪಿತರಾಚಾರವೆಂದು ವೃಥಾ ಸಾವನೇ (ಸರ್ವಪ. ೦೬೩-೭೭೬); ನೀನು ಇಲ್ಲಿ ಬಂದಿ ಎಂಬುದನ್ನು ಅರಿತಿರುವಿಯಾ? (ಪೌಲಕ್. ೮೩). ೫. ಸೆರೆಹಿಡಿಯುವವನು: "ಪ್ರಗ್ರಹಃ, ಗ್ರಾಹಕಃ, ವಂದೀ - ಈ ೩ ಬಂದಿ" (ಹಲಾಯು. ೦೨೩-೬೪). ೬. ತಡೆ; ಅಡ್ಡಿ; ಪ್ರತಿಬಂಧ: (ಕಿ). ೭. ಕೊಳ್ಳೆ; ಲೂಟಿ; ಸೂರೆ: ಅಳಿಗಳ ದಳವುಳಂ ಬಸಂತನ ಬಂದಿ ಬಾಲಚೂತನ ಭಯಂ ಮಳಯಾನಿಳನ ಗಾಸಿ (ಗಿಂಕ. ೪-೦೦೮ ಪ); ಕಳವು ಹುಸಿ ಹಾದರ ವಿರೋಧ ಸ್ಖಲಿತವಾಱಡಿ ಬಂದಿ ಪಳದುಳ ಬೆಳುಗವತೆಯನ್ಯಾಯ . . . ಅಡಗಿದವೀ ಯುಧಿಷ್ಠಿರ ನೃಪನ ರಾಜ್ಯದಲಿ (ಕುಪ್ಯಾಸ. ೬-೦೦); ಕಿಸುರು ಗಾವಳಿ ಬಂದಿ ಗಳಹತನ ಮವಿವೇಕಮುಸಿರಲೇನಾ ಚಿನ್ನಬಸವನಿಹ ರಾಜ್ಯದೊಳ್ ಮಿಸುಕ ವೇವಣ್ಣಿಸುವೆನು (ಕಿಪು.೬-೪೦). ೮. ತೋಳಿಗೆ ಧರಿಸುವ ಒಂದು ಬಗೆಯ ಆಭರಣ; ವಂಕಿ: ನವರತ್ನದ ರವೆಯದ ಬಂದಿ ವಿರಾಜಿಸು ತಿರ್ಪುದಪ್ಪಿಯಗಜೆಯ ತೋಳಂ (ಗಿಂಕ. ೩-೬೩); ಕಡಗ ಕಂಕಣ ಸೂಡಗ ಹೊನ್ನ ಬಳೆ ಬಂದಿ ಖಡೆಯ (ಕುರಾಸಾಂ. ೦.೦೦೬); ಇರೋದು ನಾಗರ ಕುಚ್ಚು, ಈ ಬಂದಿ (ಮುಸಿಮಾ. ೩೮). ೯. ಕತ್ತಿನಲ್ಲಿ ಧರಿಸುವ ಒಂದು ಬಗೆಯ ಸರ: ನಾ ತೂಗಿ ಬಾಗಿ ನೀರು ಮೊಗೆದೆ ಮಾವಯ್ಯ ಕೊಂಡಿ ಸಮೆದು ಬಂದಿ ಬಿತ್ತು ಮಾವಯ್ಯ (ಹಳ್ಳಿಯ. ೦೬೪); ಕತ್ತಿನಲ್ಲಿ ಅಡ್ಡಿಕೆ, ಅಸಲಿ, ಬಂದಿ, ಜೋಮಾಲೆ (ಮಳ್ಳಿ. ೪೦). [ಸಂ. ಬಂದಿ, ಬಂದೀ]

ಬಂದಿ₂ (ನಾ). ೧. ಹೊಗಳುಭಟ್ಟ; ಸ್ತುತಿಪಾಠಕ: "ಬಂದಿ-ವಂದಿನ್ = ಸ್ತುತಿಪಾಠಕ" (ಕನ್ನಕೋ. ೨೯). ೨. ಹೊಗಳಿಕೆ; ಕೊಂಡಾಟ: ಅಗ್ಗಳಿಕೆ ಮುಳಿಸು ಮೂದಲೆ ಮೋಡಿ ಬಂದಿ ಭಾರಣೆ ಬಿಂಕ ಬೆಸೆ ಚಮತ್ಕಾರಂಗಳಿಂದೆ ಸಮಮಾಗೆ ಕೈದೋಱಿದಂ ವೃಷಕೇತು ಬಭ್ರುವಾಹನನ ಮೇಲೆ (ಸೈತಿಭಾ. ೨೩-೦೩). 'ವಂದಿ'₁ ಪರಾ.

[ಸಂ. ಬಂದಿನ್, ವಂದಿನ್]

ಬಂದಿಕಾರ 'ಬಂದಿಗಾಱ' ನೋ.

ಬಂದಿಕಾಱ 'ಬಂದಿಗಾಱ' ನೋ.

ಬಂದಿಕಾಱತನ (ನಾ). ಬಂಧನದಲ್ಲಿಡುವ ಗುಣ: ಕೊಂದು ಕುಟ್ಟಿ ದಂಡವ ತಕ್ಕೊಂಬುವಂಗೆ ಅದು ಬಂದಿಕಾಱತನವೊ ಕೃಪೆಯೋ ಇದ ಱಂದವ ತಿಳಿಯಬೇಕು (ಮೋಳಿಮಾ. ೦೩೬-೩೦೬).

[ಬಂದಿಕಾಱ (<ಬಂದಿಗಾಱ) + — ತನ]

ಬಂದಿಕೋಲು 'ಬಂದಿಗೋಲ್' ನೋ.

ಬಂದಿಖಾನ 'ಬಂದೀಖಾನೆ' ನೋ.

ಬಂದಿಖಾನೆ 'ಬಂದೀಖಾನೆ' ನೋ.

ಬಂದಿಗಟ್ಟಿಸು (ಕ್ರಿ). ತಾಳಿಯಿರುವ ಬಂದಿಯನ್ನು ಕೊರಳಿಗೆ ಕಟ್ಟುವಂತೆ ಮಾಡು; ಮದುವೆಮಾಡು: ಇಲ್ಲಿಗಾಪ್ತರನಟ್ಟಿ ಬಂದಿಗಟ್ಟಿಸನು ತನ್ನಲ್ಲಿಗೆ ಬರಲೆಂಬನಮ್ಮ ಇಲ್ಲಿ ತನ್ಮಂಗಲವೆಸಗಿದರದೆ ಸಾಕು ಸಲ್ಲೀಲೆಯೊಳಗೀವೆನೆಂದ (ಕರಕ. ೩೬-೩೮). [ಬಂದಿ₁ + ಕಟ್ಟಿಸು]

ಬಂದಿಗಟ್ಟು (ಕ್ರಿ). ೧. ತಾಳಿಯಿರುವ ಬಂದಿಯನ್ನು ಕೊರಳಿಗೆ ಕಟ್ಟು; ಮದುವೆಯಾಗು: ಕರಮೆಸೆವ ಸಾಕೇತನಗರದ ದೊರೆ ಸುರಥನಿಗೆ ವಜ್ರಲೇಖೆಗೆ ನೆಱ್ ಜನಿಸಿಯೆ ಸನತ್ಕುಮಾರಗೆ ಬಂದಿಗಟ್ಟಿರ್ದ ತರುಣಿ ತಾನು ಸುನಂದೆ (ಸನತ್ಕು. ೭-೦೩). ೨. ಮದುವೆಯನ್ನು ಮಾಡಿಸು: ಇವಳಿವನಿಗೆ ತಕ್ಕವಳಿವನಿವಳಿಗೆ ವಿವರಿಸೆ ತಕ್ಕವನೆಂದು ತವೆ ಪೊಗಳ್ದೆಲ್ಲರೊಸೆದು ನಿನಗೆನ್ನನುತ್ಸವದೊಳು ಬಂದಿಗಟ್ಟಿದರು (ಕುರಾಸಾಂ. ೨೬-೦೦೩).

[ಬಂದಿ₁ + ಕಟ್ಟು₁]

ಬಂದಿಗಾವಲು (ನಾ). ಸೆರೆಮನೆಯ ಕಾವಲು; ಜೈಲಿನ ಕಾವಲು: ಮುಂದಣ ಮೆಯ್ಗಾಹಿಗೊಂದನ್ನು ಕಯ್ದುವೀಸಿ ಹೊರನಡೆಯಿಸಿ, ಬಂದಿಗಾವಲರಿಗೆ ಕ್ಷೀಣಸ್ವರದಿಂದ ಬೆಸಗುಡುತ್ತಿರುವನು (ಮಂತ್ರಕ. ೦೨೬-೦೮).

[ಬಂದಿ₁ + ಕಾವಲು (< ಕಾವಲ್₁)]

ಬಂದಿಗಾಱ, ಬಂದಿಕಾರ, ಬಂದಿಕಾಱ (ನಾ). ೧. ಬಂಧಿಸುವವನು; ಸೆರೆಹಿಡಿಯುವವನು: ನೊಂದೆವಾ ಬೆಲೆ ದೇವ ಸುರಕುಲಬಂದಿಗಾ[ಪಾಕಾಂ. ಕಾ]ಱನ ಕೈಯಲಕಟಾ (ಕೊರರಾ. ೦-೯-೩೩); ಅದೇಂ ಬೆಲೆವಡೆದತ್ತೊ ಚಿತ್ತ ಭವನಂದದ ಬಂದಿಗಾಱನಾ (ಸಕವಿ. ೩-೭). ೨. ಸೂರೆ ಮಾಡುವವನು; ಕೊಳ್ಳೆಗಾರ: ಮುಂದುಂ ಪಿಂದುಂ ಸಂಧಿಸಿದ ಬಂದಿಗಾಱರ ಗೊಂದಣಮುನಂದಿಪ (ರಾಮಾಶ್ವ. ೪೦-೨೯). **ಬಂದಿಕಾರ:** ೩. ಜೈಲಿನ ಮೇಲಧಿಕಾರಿ: ಬಂದಿಯೊಳಗಿದ್ದವರ ಬಂಧನವ ಬಿಡಿಸುವಾ ಬಂದಿಕಾರಾ ಶ್ರಾವಣಾ

(ಗಂಗಾಶ. ೩೭-೨). **ಬಂದಿಕಾಱ:** ೧. ಬಂದಿಕಾಱನಂತೆ ತೆಱಪುವಾರ್ದು ಪಿಡಿವ ಶಾಕಿನಿಯರಿಂ . . . ರಣದೇವತೆಯರಿಂದತಿಭಯಂಕರಾಕಾರಮಪ್ಪುದು (ಕಾಸ್ಯಸಾ. ೩೨೯ ಕೂದ್ರಳ); ದುರ್ಯೋಧನಂ ಬಂದಿಕಾಱನಂತೆ ಸೆಱೆಗೆಯ್ದುಂ (ಸಂಪರಾ. ೬-೬೨ ಪ); ಬಂದು ಕಂಡರು ಮೇಲವರಾ ಕುದುರೆಯ ಬಂದಿಕಾಱನನು ಬೇಗದೊಳು (ಕುಶಾಸಾಂ. ೯-೬೯). ೨. ಸಂದ ಸುಭಟರು ಬನ್ನಿ ಸ್ವರ್ಗದ ಬಂದಿಕಾಱರು ಬನ್ನಿ (ಕುಪ್ಯಾಳ. ೮-೩೦). ೩. ಕಳ್ಳ; ತುಡುಗ: ಕುತ್ಸಿತ ಕುಮಂತ್ರದ ಬಂದಿಕಾಱನು ಚಾಟು ಚಪಳಿಗನೆಂದು ನಾ ಮುಂದಱಿಯೆ (ಪ್ರಭುದೀ. ೬-೫೩) [ಬಂದಿ$_1$ + —ಕಾಱ]

ಬಂದಿಗೃಹ (ನಾ). ಸೆರೆಮನೆ; ಕಾರಾಗೃಹ; ಜೈಲು: ನನ್ನನ್ನು ಪತ್ತೆ ಹಚ್ಚುವ ಹಂಚಿಕೆ ನಿಮಗೆ ಸಿಗುವಂತಿದ್ದರೆ, ನೀವು ಈ ಪ್ರಕಾರದ ಬಂದಿಗೃಹ ರಕ್ಷಕನ—ಜೇಲರನ ಚಾಕರಿಗೆ ನಿಲ್ಲುತ್ತಿರಲಿಲ್ಲ (ಅಂಬಿಕೆ. ೨೯). [ಸಂ.]

ಬಂದಿಗೆ (ನಾ). ೧. ಆಯುಧದ ಹಿಡಿ: ಕಾವಿಲ್ಲದೆ ಕೊಡೆವಿಡಿವೆನೆಂಬಂತೆ ಬಂದಿಗೆಯಿಲ್ಲದೆ ಸುರಿಗಿವಿಡಿವೆನೆಂಬಂತೆ . . . ದೆಸೆಗಿಡಲ್ವೇಡ (ರರ್ಮಾಮ್ಯ. ೯-೩೦). ೨. ಹಿಡಿಯುಳ್ಳ ಆಯುಧ,- ಕತ್ತಿ: ಮಡಿಸಿದ ಶೇಷನ ಬಂದಿಗೆ ಮಾರಿಯ ಮಂಡೆಯ ನಡುಘಂಟೆಯ ಮೃತ್ಯುವಿನೊಳನರವುರಿ ದೊಂಗಲ್ ಪಿಡಿದೊಣಗಲ್ಗರುಳುಳ್ಳ ಹಿಣಿಲ ಚಮರದ ಹಲಗೆಯ ಕಡುಗಲಿ ಕಣ್ಗೊಪ್ಪಿದನು (ವೀರೇಶ. ೨-೬); ಮುಗಿಲ ಹರಿಗೆಗೆ ಮಾರುತನ ಬಂದಿಗೆಯ ಹೊಯ್ಲೆನೆ ನಕುಳನೆಚ್ಚಂಬುಗಳು ಕಿಡಿ ಸೂಸಿದವು (ಕುಪ್ಯಾಳ. ೨೦-೦೯).

[?]

ಬಂದಿಗೆಕೋಲು 'ಬಂದುಗೆಗೋಲು' ನೋ.

ಬಂದಿಗೊಳ್ (ಕ್ರಿ). ಸೆರೆಹಿಡಿ; ಬಂಧಿಸು: ಇನಿಯನ ಬಗೆಯ ತಿಳಿದು ಬಂದಿಗೊಂಬ ಸುಗುಣೆಯರಿಹಪರದೊಳು ಸೂಱೆಗೊಂಬರು ಸೊಗದ ಸುಗ್ಗಿಯ (ಹದಿ. ೮-೩೦); ಹಸುವಂ ಬಂದಿಗೊಂಡ ಪೊಟಲ ತಳವಾಱ ರೊರ್ಮೆಗಂ ಕಟ್ಟೋಲಗದ ರಾಯನೆಡೆಗೆಯ್ತಂದು (ರಾಮಾಶ್ವ. ೦೯೦-೦೬).

[ಬಂದಿ$_1$ + ಕೊಳ್$_1$]

ಬಂದಿಗೊಳಿಸು (ಕ್ರಿ). ಸೆರೆಹಿಡಿ; ಬಂಧಿಸು: ಸೌಂದರ್ಯಮನೆರ್ದೆಯೊಳ್ ಬಂದಿಗೊಳಿಸಿ (ಪಕ್ಕಪೇ. ೦೯೩-೬). [ಬಂದಿಗೊಳ್ + —ಇಸು$_3$]

ಬಂದಿಗೋಲ್, ಬಂದಿಕೋಲು (ನಾ). ಅಂಗಸಾಧಕನು ಉಪಯೋಗಿಸುವ ದಂಡ: ಕಟ್ಟಿದ ದಟ್ಟಿ ಕೈದಳದ ಪೊಂಗಿಱುಗಟ್ಟಿಗೆ ರನ್ನ ಬಂದಿಗೋಲ್ . . . ಮನಂಗೊಳಲ್ (ಪಳಪ. ೯-೦೩೯). **ಬಂದಿಕೋಲು:** ಅಂದುಗೆ ಕಾಲೊಳು ಝಣಝಣರೆನುತಿರೆ ಬಂದಿಕೋಲನು ಕೈಯೊಳಾಂತು (ಶ್ಯಾವಸ. ೨-೩೨). [← ತುಳು. ಬಂದಿಕೋಲು]

ಬಂದಿಗ್ರಹಣ (ನಾ). ಕಳ್ಳನನ್ನು ಹಿಡಿಯುವುದು: ಬಂದಿಗ್ರಹಣ, ಬಲ್ವಂದಿಕಾಱ (ಕಪುದ. ೨೯೮ ಪ್ರಯೋ); ವಸುಮತಿಗೆ ಬಲ್ಬಂದಿಕಾಱ ಬಂದಿಗ್ರಹಣ (ಕಬ್ಬಕ್ಕ. ೯೬). [ಸಂ.]

ಬಂದಿನಿ (ನಾ). ಸೆರೆಯಲ್ಲಿರುವವಳು; ಬಂಧಿತಳಾದವಳು: ಅವಳೀಗ ಕೇವಲ ಬಂದಿನಿಯಾಗಿದ್ದಳು (ಅಂಬಿಕೆ. ೨೯). [ಸಂ. ಬಂದಿನೀ]

ಬಂದಿವಡು (ಕ್ರಿ). ಸೆರೆಯಾಗು; ಬಂಧನಕ್ಕೊಳಗಾಗು: ಸಿರಿಕಂಡದ ಕೋಟ್ಕೆಸಱೊಳ್ ಕಾಲ್ಕುಸಿದುಂ ಪಾಱುಗೆಯ್ತಕ್ಕೆ ಬಂದಿವಟ್ಟುಂ (ರಾಮಾಶ್ವ. ೨-೨೩). [ಬಂದಿ$_1$ + ಪಡು$_1$]

ಬಂದಿವನೆ (ನಾ). = ಬಂದಿಗೃಹ: ಮಹಿಶೂರನಾಡೊಳ್ ಬಂದಿವನೆಯೊಳಿರ್ಪವರ ಸೊಗಮಂ ಕಂಡು (ಅಪ್ರತಿ. ೦೧೬-೮). [ಬಂದಿ$_1$ + ಮನೆ]

ಬಂದಿವರ್ (ಕ್ರಿ). ಬಂಧನಕ್ಕೊಳಗಾಗು; ಸೆರೆಯಾಗು: ಕೈಬಸದೊಳೊಪ್ಪಿಸಿ ತಪ್ಪದೆ ಬಂದಿವಂದುದೋ (ಪಳಪ. ೩-೦೦೩). [ಬಂದಿ$_1$ + ಪರ್]

ಬಂದಿವಾನ 'ಬಂದೀವಾನ' ನೋ.

ಬಂದಿವಾಟ್ (ಕ್ರಿ). ಸೆರೆಯಲ್ಲಿರು; ಬಂಧನದಲ್ಲಿ ಬಾಳು: ರಕ್ಕಸನೊಳ್ ಬಂದಿವಾಟ್ದೆನ್ನನೊಪ್ಪುಗೊಂಡನೆಂಬೊಂದು ಲೋಕಾಪವಾದದ ದೂಸಱಿಂ . . . ಕಳಿಪಿದನೈ (ರಾಮಾಶ್ವ. ೯೦-೨೩).

[ಬಂದಿ$_1$ + ಬಾಟ್$_1$]

ಬಂದಿವಾಟ್ಗೆ (ನಾ). ಸೆರೆಯ ಜೀವನ; ಬಂಧನದ ಬದುಕು: ಪಂಜರನೊಂದು ಪಕ್ಕಿ . . . ತನ್ನ ಬಂದಿವಾಟ್ಗೆಯೊಳೆ ದಿನದಿನದ ಪಾಲ್ಪಣ್ಗಳ ನಿನಿದಿನಿದಾಗಿ ಸವಿಯುತುಂ ನಿಶ್ಚಿಂತಮಿರ್ಪಂತಿರೆ (ರಾಮಾಶ್ವ. ೬೯-೩೦).

[ಬಂದಿವಾಟ್ + — ಗೆ]

ಬಂದಿವಿಡಿ, ಬಂದಿಹಿಡಿ (ಕ್ರಿ). ೧. ಸೆರೆಹಿಡಿ; ಬಂಧಿಸು: ಮನದಿಂ ಸೆಱೆಗೆಯ್ಗುಂ ಲೋಚನದಿಂ ಬಂದಿವಿಡಿಗುಮೆಂದುಂ ವನಿತಾಜನಂ (ಶಾಂತಿಪು. ೩-೦೦); ಅಮರ್ದು ಬಸವಣ್ಣನಂ ಬಂದಿವಿಡಿಯಲ್ಕೆಂದು ಬಱು ಮನದ ಹೊಱವಿಭೂತಿಯನಲ್ಲಿ ತೀವಿಟ್ಟು (ಬಸರ. ೯-೯೨); ತನ್ನಬಲೆಯ ಬಗೆಯಂ ಬಂದಿವಿಡಿದು ಕೂಡಿದನಾ ಕಾದಲನು (ಪಯಕಾ. ೬-೯೬). ೨. ಕೊಳ್ಳೆಹೊಡೆ; ಸೂರೆ ಮಾಡು: ಕನ್ನಮನಿಕ್ಕುವ ಬಟ್ಟೆಗೊಳ್ವ ಸಂಚಳಿಸದೆ ಪೊಕ್ಕು ಬಂದಿವಿಡಿವಾಯಿಲವೊಡ್ಡುವ ನಿನ್ನ ಗೊಡ್ಡಮಂ ತಿಳಿದವಧಾರಿಸು (ವರ್ಧಮಾ. ೬-೩೧); ಕಳಹೋದರೆ ಕನ್ನದುಳಿಯ ಹಿಡಿವೆ ಬಂದಿವಿಡಿವರೆ ನಿಮ್ಮಿಂದ ಮುಂದೆ ನಡೆವೆ ಮನಭೀತಿ ಮನಶಂಕೆಗೊಂಡೆ ನಾದರೆ ನಿಮ್ಮಾಣೆ (ಬಸವ. ೬೯೬). **ಬಂದಿಹಿಡಿ:** ೧. ಬಂದ ಹುಳುವ ಬಂದಿಹಿಡಿದು ಕೊಂದು ತಿಂಬುದು (ಏಸೀಗೀ. ೬೪-೦೬). [ಬಂದಿ$_1$ + ಪಿಡಿ$_1$]

ಬಂದಿವಿಡಿಹ (ನಾ). ಸೆರೆಹಿಡಿಯುವಿಕೆ; ಬಂಧಿಸುವಿಕೆ: "ಗ್ರಾಹಕಂ ಪ್ರಗ್ರಹವೆನಲ್ಬಂದಿವಿಡಿಹವಕ್ಕು" (ಮಂಗರಾ. ೦೩೬-೯೦). [ಬಂದಿ$_1$ + ಪಿಡಿಹ]

ಬಂದಿಶಾಲೆ (ನಾ). ಕಾರಾಗೃಹ; ಸೆರೆಮನೆ: ಬಂದಿಶಾಲೆಯೊಳಕಟ ಶಿವಶಿವವೊಂದು ಕಡೆಯಲಿ ಖಚರ ಕಿನ್ನರರೊಂದು ಕಡೆಯಲಿ ಸಿದ್ಧ ವಿದ್ಯಾಧರ ಮಹೋರಗರು (ಕೌಶಿರಾ. ೦೦-೩೬); ಬೆಂದವಸುರನ ರಾಣಿವಾಸದ ಮಂದಿರಂಗಳು ಹಲವು ದೇವರ ಬಂದಿಶಾಲೆ ವಿಚಿತ್ರ ಕರಣಿಕ ಮಂತ್ರಿಕೇರಿಗಳು (ಕೌಶಿರಾ. ೩೨-೯). [ಸಂ. ಬಂದಿಶಾಲಾ]

ಬಂದಿಸು$_1$ (ಕ್ರಿ). ಅಡ್ಡಬೀಳು; ನಮಸ್ಕರಿಸು: ಪಿರಿದಪ್ಪ ಪೂಜೆಯಂ ಮಾಡಿಯರ್ಚಿಸಿ ಪೂಜಿಸಿ ಬಂದಿಸಿದೊಡೆ (ವಡ್ಡಾರಾ. ೭೪-೨೬); ಜಿನಚೈತ್ಯ ಬ್ರಾತಮಂ ಬಂದಿಸು ಜಿನಪದಪದ್ಮಂಗಳಂ ದಿವ್ಯಮಪ್ಪರ್ಚನೆಯಿಂದಂ ಭಕ್ತಿಯಿಂದರ್ಚಿಸು (ಅಪಿಪು. ೩-೭); ಚಂಡಮಾರಿ ಲೋಚನಗೋಚರತನುವಾಗಿ ಕುವರನಂ ಬಂದಿಸಿ (ಯಶೋಸ. ೯-೭೨). [< ವಂದಿಸು]

ಬಂದಿಸು$_2$ (ಕ್ರಿ). ಸೆರೆಹಾಕು; ಬಂಧಿಸು: ರಾಜದ್ರೋಹದೇವತೆ ಬಂದಿರುಳು ತನ್ನೆದೆಯ ಮೆಟ್ಟಿಯೆ ಬಂದಿಸುವಳದನೇನ ಪೇಳುವೆನು (ಜೀವಂಸ. ೯-೩೦). [ಬಂದಿ$_1$ + — ಇಸು$_3$]

ಬಂದಿಹಿಡಿ 'ಬಂದಿವಿಡಿ' ನೋ.

ಬಂದಿಹೊಗು (ಕ್ರಿ). ಸೆರೆಸಿಕ್ಕು; ಬಂದಿಯಾಗು: ನಿಂದೆ ಹೊದ್ದದು ನಡೆವಳಿಗಳು . . . ಬಂದಿ ಹೊಗದಾಸಱು ವಿತಾಳಿಸಿ ನಿಂದಿರದು ನೆಲೆಗೊಳ್ಳದಾ ಜನವೃಂದದಲಿ ಕಟ್ಟಾಸೆ ದಶರಥನೃಪನ ರಾಜ್ಯದಲಿ (ಕೊರಾ. ೧-೩-೨೯). [ಬಂದಿ$_1$ + ಹೊಗು (< ಪೊಗು)]

ಬಂದೀಕರಣ (ನಾ). ಸೆರೆ; ಬಂಧನ: ಬಂದೀಕರಣ ಮಾಡಿದ ಯಾವ ವ್ಯಕ್ತಿಯನ್ನೂ ಬಂದೀಕರಣದ ಕಾರಣಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ತಿಳಿಸದೆ ಅಭಿರಕ್ಷೆಯಲ್ಲಿ ಇಡತಕ್ಕುದಲ್ಲ (ಭಾಧಾನ. ೦೨). [ಸಂ.]

ಬಂದೀಕರಿಸು (ಕ್ರಿ). ತನ್ನ ವಶಕ್ಕೆ ತೆಗೆದುಕೊಳ್ಳು; ಸೆರೆಹಿಡಿ; ಬಂಧಿಸು; ಕೈದು ಮಾಡು: ಮಂದಹಾಸದ ಭಾಸಮಂ ಕೊಳಲು ಚಂದ್ರಿಕೆಯ ಬಂದೀಕರಿಸಿ ಬಾಣತತಿಯ ಕುಡಿನೋಟಂಗಳಂದಮಂ ಕಂಡು ಮುನಿವೃಂದ ಮಾನಂದಮಂ ಪೊಂದಿದರು (ವಂಕಾರಾ. ೧-೦೬-೯).

[ಬಂದೀಕರಣ + — ಇಸು$_3$]

ಬಂದೀಖಾನೆ, ಬಂದಿಖಾನ, ಬಂದಿಖಾನೆ (ನಾ). ಸೆರೆಮನೆ; ಕಾರಾಗೃಹ : "ಕಾರಾ, ಬಂಧನಾಲಯಃ — ೨ ಸೆರೆವನೆ, ಬಂದೀಖಾನೆ" (ನಿಡ್ಡಾಂತಿ. ೨೬೩); ಜಂಗಮಕ್ಕೆ ಸುಖಾಸನವನಿಕ್ಕದೆ ತಾನೆ ಗದ್ದುಗೆಯ ಮೇಲೆ ಕುಳಿತಡೆ ಬಂದೀಖಾನೆ[ಶಾಶಾಂ. ಬಂದಿಕಾನ]ಯಲ್ಲಿ ಕುಳಿತ ಸಮಾನ (ಪಸ್ವಪ. ೯-೬); ಅವನನ್ನು ಬಂದೀಖಾನೆಗೆ ಹಾಕಿದ್ದೇವೆ (ಬೀರಯೋ. ೨೬). **ಬಂದಿಖಾನ** : ಬಿಡದುಪಚರಿಸಿ ನೇಮಿಯ ಕುಂಬಳಕಾಯನೊಡೆದು ಹುಟ್ಟಿದ ರಾಯನನು ತಡೆಹನಿಕ್ಕಿಸಿದನು ಬಂದಿಖಾನದೊಳಾ ಪೊಡವೀಶ್ವರ ಸುರುತಾಳ (ಕುರಾಸಾಂ. ೦೭-೦೦೬). **ಬಂದಿಖಾನೆ** : ಮೋಹದ ಬಂದಿಖಾನೆಗೆ ಸಿಲುಕಿ ಕೆಡಬೇಡ (ಅಪಂರಾ. ೦-೩-೩೭); ಅವನ ಕಾಲಿಗೆ ಬೇಡಿ ಹಾಕಿಸಿ ಬಂದಿಖಾನೆಯಲ್ಲಿ ಮಡಗಿಸಿ (ರಾಸೇಂದ್ರ. ೦೨೦). [←ಪಾರ. ಬಂದೀಖಾನಹ್; ಹಿಂ. ಮರಾ. ಬಂದೀಖಾನಾ]

ಬಂದೀವಾನ, ಬಂದಿವಾನ (ನಾ). ಸೆರೆಯಲ್ಲಿರುವವನು ; ಕೈದಿ : "ಪ್ರಗ್ರಹಃ, ಉಪಗ್ರಹಃ, ಬಂದೀ — ೩ ಸೆರೆಮನೆಯೊಳಗಿರುವವನ ಹೆಸರುಗಳು, ಬಂದೀವಾನ" (ನಿಡ್ಡಾಂತಿ. ೨೬೩). **ಬಂದಿವಾನ** : ನೀನೀ ಸಮಯದಲ್ಲಿ ಬಾರದಿದ್ದಲ್ಲಿ ನಾನೂ ನನ್ನ ಪುತ್ರಿಯೂ ಕಳ್ಳರ ಬಂದಿವಾನರಾಗುತ್ತಿದ್ದೆವು (ಜಪ್ತೂಕೋ. ೬೮) ; ಸಂಕೋಲೆಗಳನ್ನು . . . ವಧ್ಯರಾದ ಬಂದಿವಾನರೆಲ್ಲರಿಗೂ ಹಾಕುವ ಪದ್ಧತಿಯಿದೆ (ಸೋಕ್ರಮ. ೯೯).

[← ಹಿಂ.ಮರಾ. ಬಂದೀವಾನ್]

ಬಂದೀವಾಸ (ನಾ). ಸೆರೆಮನೆ ವಾಸ ; ಜೈಲಿನ ವಾಸ : ಅವನ ಬಂದೀವಾಸದ ಸಮಯದಲ್ಲಿ ಅವನು ತನ್ನೊಬ್ಬ ಗೆಳೆಯನಿಗೆ ಚೀನಾ, ಹಿಂದೂಸ್ತಾನಗಳ ವಿಚಾರವನ್ನು ಬಣ್ಣಿಸಿದ್ದನು (ಶಾಲಪ್ರ. III.೦೨೯೪). [ಸಂ.]

ಬಂದು$_1$ 'ವರ್' ಪರಾ.

ಬಂದು$_2$, ಬಂದ್, ಬಂದ$_2$, ಬಾಂದ್$_1$, ಬಾಂದು (ನಾ). ೧. ಬಂಧನ ; ಸೆರೆ : (ಕ). ೨. ಬೇಡಿ ; ಸಂಕೋಲೆ. ೩. ಮುಚ್ಚಿದುದು ; ನಿಲ್ಲಿಸಿದುದು ; ಕೊನೆಯಾದುದು : ನಂಬಿಗೆಯು ಇಲ್ಲದಂತಾಗಿ ಖಾತೆಗಳನ್ನು ಬಂದು ಇಡುವ ಪ್ರಸಂಗಗಳು ಬರಹತ್ತಿದವು (ಮುಂಬಿಪ್ಯಾ. ೬ ಪ್ರಸ್ತಾವನೆ). ೪. ಹರತಾಳ ; ಸಂಪು ; ಮಂಷ್ಕರ : ತಮ್ಮ ಬೇಡಿಕೆಗಳ ಪೂರೈಕೆಗಾಗಿ ಸದಾಕಾಲ ಯಾವುದಾದರೊಂದು ಪಂಗಡದವರು ಪದೇ ಪದೇ ಬಂದು ಆಚರಿಸಲು ಜನತೆಗೆ ಕರೆಯಿತ್ತರೆ ದೇಶದ ಪ್ರಗತಿಯಾದರೂ ಹೇಗೆ ಸಾಧ್ಯ ? (ರೂಢಿ). **ಬಂದ್** : ೩. ಆತು ಹಂಗಾರ. ಭಜನಿ ಬಂದ್ (ಶಾಶಾಂ. ೨೯) ; ಮುಂದಿನ ಕದ ಬಂದ್—ಗಲ್ಲಿ ಕದ ಖುಲ್ಲಾ (ಬೆಂಗಡಿ. ೦೩೯). **ಬಂದ**$_2$: ೫. ಸಂಬಂಧ ; ಕಟ್ಟು ; ಬಾಂಧವ್ಯ : 'ಬಂದಂ ಬಿಡು' ಪರಾ. ೬. ಹೊಂದಿಸಿ ಕಟ್ಟಿದುದು: 'ನೆತ್ತಿವಂದ' ಪರಾ. **ಬಾಂದ್**$_1$: ೭. ಜಮೀನಿನ ಎಲ್ಲೆಕಟ್ಟನ್ನು ಖಚಿತಗೊಳಿಸಲು ಹಾಕುವ ಕಟ್ಟೆ; ಒಡ್ಡು : (ರೈಸ್‌ಗೆ. II. ೩೯೭); ಬಾಂದ್ಹಾಕೋರು ಬರುತಾರಂತೆ . . . ಬಾಂದು ಎಂಬೋದು ಬಂಧನವಾಗಿದೆ (ನಾಪದ. ೦೪೩). **ಬಾಂದು** : ೭. ಒಂದು ಹೊಲದ ಮಣ್ಣು ಮತ್ತೊಂದು ಹೊಲಕ್ಕೆ ಹೋಗದ ಹಾಗೆ ಹೊಲದ ಬಾಂದಿನ ಹದ್ದು ಹಿಡಿದು . . . ಸುತ್ತಲೂ ಒಡ್ಡು ಹಾಕಿಸುವದು ಅವಶ್ಯವಾಗಿದೆ (ಕೃಷಿಪ್ರ. ೩೨); ಬೇಕಾದರೆ ಬೇರೆ ಬಾಂದು ಹಾಕಿ (ಮುಖಮಾ. ೦೩೩). ೮. ಗಡಿ; ಮೇರೆ: ಅಂದೇ ನನ್ನ ಕಾರ್ಯಕ್ಷೇತ್ರದ ಬಾಂದುಗಳನ್ನು ಗುರುತಿಸಿಕೊಂಡೆ (ಕಾಲಕ. ೦೯). ☞ ಈ ಪರ್ಯಾಯರೂಪದ ವ್ಯುತ್ಪತ್ತಿ ವಿಚಾರಣೀಯ.

ಬಂದಾಗು = ಮುಚ್ಚು : ಈ ರಸ್ತೆ ಬಂದಾದಂತೆಯೇ (ಅಪೋಲೀ. ೬೯); ಇಂದು ಅಂಗಡಿ ಬಂದಾಗಿದೆ (ರೂಢಿ). ಬಂದು ಮಾಡು = ೧. ನಿಲ್ಲಿಸು; ತಡೆಹಾಕು : ನಿನ್ನ ಚಿತ್ರವ್ಯವಸಾಯವನ್ನು ಬಂದು ಮಾಡು ಶ್ಯಾಮಾ (ರಂಗರೋ. ೦೯೬) ; ಈ ಉಪದೇಶವನ್ನು ಬಂದು ಮಾಡಿರಿ ಸಾರ್ (ರಂಗರೋ. ೩೭). ೨. ಮುಚ್ಚು ; ಹಾಕು: ಹೋಗಿ ಬಹಳ ಬೇಗನೇ ಬಂದು ಮಾಡಿ ಬಾ (ಕೂಕಶಾ. ೩). ಬಾಂದಿನವರು = ಭೂಮಿಯನ್ನು ಅಳತೆ ಮಾಡುವವರು; ಮೋಜಣಿದಾರರು : ಬಾಂದಿನವರು ಬಂದರು ಕಾಣಣ್ಣಾ ನಾವ್ ಬಾಳೋದ್ ಹೆಂಗಣ್ಣಾ (ನಾಪದ. ೦೩೪); ಈಗ ಬಾಂದಿನವರೊಬ್ಬರು ಆ ಮನೆಯಲ್ಲಿ ಬಾಡಿಗೆದಾರರಾಗಿ . . . ಇರುತ್ತಿದ್ದರು (ಸಮಜೀ. ೦೨೩೨).

[← ಪಾರ. ಹಿಂ. ಬಂದ್ ; ಮರಾ. ಬಂದ್, ಬಾಂದೀ. / ಸಂ. ಬಂಧ]

ಬಂದುಕ, ಬೊಂದುಕ$_2$ (ನಾ). ೧. ಮೋಸಗಾರ; ವಂಚಕ; ಕಪಟಿ : "ಬಂದುಕನೆವಲ್ ಚಲ್ಲವತ್ತನುಮೆನಲ್ ನಂಬಿಸಿಯೆ ತಿಂಬಾತನಕ್ಕು" (ಶಬ್ದಮಂ. ೪೭); ಉಕ ಪ್ರತ್ಯಯಕ್ಕೆ — ಕಟ್ಟುಕಂ . . . ಬಂದುಕಂ, ದಿಂಡುಕಂ (ಶಮದ. ೨೦೩ ಪ್ರಯೋ). ೨. ಉಪಾಧ್ಯಾಯ ; ಗುರು : "ಬಂದುಕನುಪಾಧ್ಯಾಯನಕ್ಕು" (ಕಕರ. ೭೨). **ಬೊಂದುಕ**$_2$: ೧. "ಬೊಂದುಕನೆಂದುಂ ಚಿಲ್ಲವತ್ತನೆಂದುಂ ನಂಬಿಸಿ ತಿಂಬವಂ" (ಕಕಸಾ. ೬೦-೩೩೬) ; "ನಂಬಿಸಿ ತಿಂಬವನಂ ಬುಧರೆಂಬರ್ ಬೊಂದುಕನು ಚಿಲ್ಲವತ್ತನುಮೆಂದುಂ" (ಕಪಿಕಂ. ೦೩೫). [?]

ಬಂದುಕಟ್ಟು (ನಾ). ೧. ಅಚ್ಚುಕಟ್ಟು; ಓರಣ : (ಕ). ೨. ಜಾತಿ ಪದ್ಧತಿ : (ಕ). ೩. ನಿಯಮಕ್ಕೆ ಒಳಪಟ್ಟಿರುವುದು ; ಸಂಪ್ರದಾಯಬದ್ಧವಾದುದು: ಅಚ್ಚುಕಟ್ಟಾದ ಕೆಲಸ ಚೆಂದ, ಬಂದುಕಟ್ಟಾದ ಊಟ ಚೆಂದ (ಗಾದೆ). [ದೇ. ॥ತುಳು. ಬಂದುಕಟ್; ತೆಲು. ಬಂದುಕಟ್ಟು]

ಬಂದುಗೆ 'ಬಂದೂಕ$_1$' ನೋ.

ಬಂದುಗೆಗೋಲು, ಬಂದಿಗೆಕೋಲು (ನಾ). ೧. ಅಂಗಸಾಧಕನು ವ್ಯಾಯಾಮಕ್ಕಾಗಿ ಉಪಯೋಗಿಸುವ ಒಂದು ಬಗೆಯ ಸಾಧನ : ಹಡಪಿಗರೂಡುವೆಲೆಯ ಘಳಿಗೆಗಳಾ ಪಾಡಱಿದರೆಗಚ್ಚಿಕೊಳುತ ಬಂದುಗೆಗೋಲ ನೀಡುತ ತಿರುಹುತೆಯ್ದಿದರು (ಪರಸ. ೬೩-೦೭). 'ಬಂದಿಗೋಲ್' ಪರಾ. **ಬಂದಿಗೆಕೋಲು** : ೨. = ಬಂದಿಗೆ ೩ : ಹಿಡಿ ಮಾರ್ಕೋಲನೆನ್ನೊಡನೆನುತ ತಿವಿದನು ಭೀಮ ಕುರುಪತಿಯ ಮೇಳವಿಸಿ ತೆರಡಂಕ ಬಂದಿಗೆಕೋಲ ಹೊಯ್ದಾಟದಲಿ ಬಳಿಕಾ ಕೀಲುಗದೆಗಳ ಹಿಡಿದು ತಱುಬಿದರಧಿಕರೋಷದಲಿ (ಕುಪ್ಯಾಂ. ೬-೩೯).

[ಬಂದುಗೆ$_2$ + ಕೋಲ್$_1$]

ಬಂದುಗೆದುಟಿ (ನಾ). ಬಂದುಗೆಯ ಹೂವಿನಂತೆ ಕೆಂಪಗಿರುವ ತುಟಿ : ಬಂದುಗೆದುಟಿ ತೊಂಡೆವಣ್ಣುಟಿಯವರು ಮಂದಗಮನೆಯೊಳ್ಳೆದಿದರು (ಜೀವಂಪಾಂ. ೦೦-೪೭) ; ಬಂಧುಗೆದುಟಿಯ ಮಿಸುಪ ಬಡನಡುವಿನ . . . ಕುಮಾರಿಯ ರೂಪನದೇನಂ ಬಣ್ಣಿಪೆನು (ಜಯಕಾ. ೩-೬೨).

[ಬಂದುಗೆ (< ಬಂದೂಕ$_1$) + ತುಟಿ]

ಬಂದುಗೆಯರಲ್ 'ಬಂದುಗೆಯಲರ್' ನೋ.

ಬಂದುಗೆಯಲರ್, ಬಂದುಗೆಯರಲ್ (ನಾ). ಬಂದೂಕವೃಕ್ಷದ ಹೂವು : ಬಂದುಗೆಯಲರಂ ಸವಿವಪೊಲಿಂದಿಂದಿರನಾಮ್ರಫಲವನರಗಿಳಿ ನಲವಿಂ ಮಾಂದಳಿರಂ ಪಿಕನಿನಿಯಳ ಚೆಂದುಟಿಯಂ ಚುಂಬಿಸಿದನಿಳಾಧಿಪನಾಗಳ್ (ಉದ್ಯಟ. ೬-೦೧೨). **ಬಂದುಗೆಯರಲ್** : ಕೋಮಳೆಯ ಕನಕ ಕಾಂಚೀದಾಮದ ಕೆಂಬರಲ ನುಣ್ಗದಿರ್ ತಿಂಬಿರೆ ನಾಭೀಮಂಡಳಮಿಟ್ಟಿಸಿದುದಭಿರಾಮತೆಯಿಂದುಳ್ಳರಲ್ದ ಬಂದುಗೆಯರಲಂ (ಶಂದ್ರಪು. ೦೦-೦೦೯) ; ಬಂದುಗೆಯರಲ ತೊಡರ್ (ಕಬ್ಬಿ... ೦೯೨).

[ಬಂದುಗೆ (<ಬಂದೂಕ$_1$) + ಅಲರ್$_2$]

ಬಂದುಗೆವಾಯ್ (ನಾ). ಬಂದುಗೆಹೂವಿನಂತೆ ಕೆಂಪಗಿರುವ ಬಾಯಿ : ಬಲ್ಮೊಲೆಯ ನಳಿತೋಳ ಬಂದುಗೆವಾಯ ತೆಳ್ಗದಂಪಿನ . . . ಗಣಿಕೆಯ ರೆಸೆದರು (ಪದ್ಮರಾ. ೬-೯೯) ; ಬಂದುಗೆವಾಯ್ದೆಱೆದು ಬಂಧಕಿ ಇಂತೆಂದುತ್ತರಂಗೊಟ್ಟಳಾಗ (ಪ್ರಭಂಜ. ೩-೭೩). [ಬಂದುಗೆ (<ಬಂದೂಕ$_1$) + ಬಾಯ್]

ಬಂದುಗೆವಾಯ್ದೆಱ್ (ನಾ). = ಬಂದುಗೆದುಟಿ : ನಿಱಿಗುರುಳಿನ ತುಱುಗೆವೆಯ ಬಂದುಗೆವಾಯ್ದೆಱ್‌ಯ ಮಿಱುಗುವ ಕದಪಿನ ಪೆಱ್‌ನೊಸಲಿನ ಪೆರ್ಮೊಲೆಯ ಪೆಣ್ಗಳ ತಂಡ (ಕುಶಾಸಾಂ. ೩೪-೦೩).

[ಬಂದುಗೆ (<ಬಂದೂಕ್$_1$) + ಬಾಯ್ದೆಱ್$_2$]

ಬಂದುರೆ 'ಬಂದಾರೆ' ನೋ.

ಬಂದೂಕ್$_1$. ಬಂದುಗೆ (ನಾ). ಕೆಂಪುಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ : ಕಮಲ ಕೈರವ ಮೊಲ್ಲೆ ಬಂದೂಕ ಚಂಪಕಂ ಕಮನೀಯವೆಸೆವ ಮಲ್ಲಿಗೆ (ಬಕೋಪು. ೩-೨೩). ಬಂದುಗೆ : "ಬಂಧೂಕಂ, ಬಂಧುಜೀವಂ—ಈ ೨ ಬಂದುಗೆ" (ಹಲಾಯು. ೩೫-೫೫) ; ಬಂದುಗೆಯ ಕುಸುಮರಸಮಂ . . . ಪೀರ್ವ ಷಟ್ಪದಂ ನೆನೆಯಿಸಿತೆಯ್ತಂದು ನಯದಿಂದೆ ಪತಿ ಸಾರ್ತಂದರುಣಾಧರಮನೀಂಟುವುದನಂಗನೆಯಾ (ಪಾರ್ಶ್ವಪು. ೯-೬೮) : ಕಣಗಿಲೆಯ ಬಂದುಗೆಯ ಕಕ್ಕೆಯ ಸಣಬ ಸರಿಸದ ಕುಸುಮದಲಿ ರಿಪುಗಣಭಯಂಕರನರ್ಚಿಸಿದನಂಧಾಸುರಾಂತಕನ (ಕುಮಾಂ. ೬-೧೩). [< ಸಂ. ಬಂಧೂಕ]

ಬಂದೂಕ್$_2$ 'ಬಂದೂಕು' ನೋ.

ಬಂದೂಕು. ಬಂದೂಕ್$_2$, ಬಂದೂಖು (ನಾ). ಮದ್ದಿನ ಸಹಾಯದಿಂದ ಗುಂಡು ಹಾರಿಸುವ ಸಾಧನ ; ತುಪಾಕಿ ; ಕೋವಿ : ಬಂದೂಕಿನ ಮುಂದೆ ಯಾವ ಧೈರ್ಯ ನಿಂತೀತು! (ಹದ್ದಿ. ೦೮೨); ಬಂದೂಕಿನ ತೋಟವನ್ನು ಅಮುಕುತ್ತಲೇ ಗುಂಡು ಹಾರುತ್ತದೆ (ಜೀವಾತ್ಮ. ೦೧೮). ಬಂದೂಕ್$_2$: ಕಲ್ಲಿನ ಏಟಿಗೆ ಸಿಕ್ಕದವರು ಮೇಲಿಂದ ಬಿದ್ದ ಬಂದೂಕದ ಏಟಿಗೆ ಸಿಕ್ಕಿ ಸತ್ತರು (ಬಂಕಿಮು. ೨೨೪); ಈ ಅಂಬಾರಿಗಳಲ್ಲಿ ನಾಲ್ಕು ಜನ ಉದ್ದನೆಯ ಬಂದೂಕಗಳನ್ನು ಹಿಡಿದು ಕುಳಿತಿದ್ದರು (ಪ್ರಬಾಇ. II, ೦೮೬). ಬಂದೂಖು : ಅಂತಹ ಸಂದರ್ಭಗಳಲ್ಲಿ ಬಂದೂಖು ವಗೈರೆ ಆಯುಧಗಳನ್ನು ಉಪಯೋಗಿಸುವ ಸಂಭವ ಬಂದರೂ ಸಾಧ್ಯವಾದಷ್ಟು ಮಟ್ಟಿಗೂ ಉಪಯೋಗಿಸಿ (ಗ್ರಾಮಾಳ. ೩೦).

[← ಅರ. ಪಾರ. ಹಿಂ. ಮರಾ. ಬಂದೂಕ್]

ಬಂದೂಖು 'ಬಂದೂಕು' ನೋ.

ಬಂದೋಬಸ್ತ್ 'ಬಂದೋಬಸ್ತು' ನೋ.

ಬಂದೋಬಸ್ತಿ 'ಬಂದೋಬಸ್ತು' ನೋ.

ಬಂದೋಬಸ್ತು, ಬಂದೋಬಸ್ತ್, ಬಂದೋಬಸ್ತಿ (ನಾ). ೧. ಸರಿಯಾದ ವ್ಯವಸ್ಥೆ ; ಅಚ್ಚುಕಟ್ಟಾದ ಏರ್ಪಾಟು : ಬಂದೋಬಸ್ತುಗಳೆಲ್ಲವೂ ಲೀಲಾಜಾಲವಾಗಿ ನಡೆದುಕೊಂಡು ಹೋಗುವುವು (ಝಾಕಾಪ. ೦೨೨). ೨. ರಕ್ಷಣೆ ; ಭದ್ರತೆ : ಕೆಲವರನ್ನು ಮಾತ್ರ ಒಳಗಡಿಯ ಬಂದೋಬಸ್ತಿಗೋಸ್ಕರ ಅವಶ್ಯಕವಾದ ಸ್ಥಳಗಳಲ್ಲಿ ಇರಿಸಿ (ಮಹಾಸಂ. II, ೦೫); ಅಲ್ಲಲ್ಲಿ ಬೇಕಾದಷ್ಟು ಮಂದಿ ಇಟ್ಟು ಬಂದೋಬಸ್ತು ಮಾಡಿಸಿ (ರಾಸೇಂಪ್ರ. ೩); ಅವಳನ್ನು ನೀನು ಗಿಣಿಯಂತೆ ಮನೆಯೊಳಗೇ ಬಂದೋಬಸ್ತಿನಲ್ಲಿ ಇಟ್ಟಿರುವೆಯಾ ? (ಕಕ್ಕಕೂ. ೬೯). ಬಂದೋಬಸ್ತ್ : ೧. 'ಬಂದೋಬಸ್ತ್' ಈ ಪದವು ನನಗೆ ಅತ್ಯಂತಪ್ರಿಯ (ಝಾಕಾಪ. ೦೨೨). ಬಂದೋಬಸ್ತಿ : ೨. ಇದರ ಬಂದೋಬಸ್ತಿಯ ಬಗ್ಗೆ ತಮ್ಮ ಸನ್ನಿಧಿಗೆ ಬಂದಿರುವೆವು (ಕೃಷಿಪ್ರ. ೨೦).

ಬಂದೋಬಸ್ತು ಮಾಡು = ಭದ್ರಮಾಡು ; ಜೋಪಾನಗೊಳಿಸು : ಒಳಕ್ಕೆ ಬಾರದಂತೆ ಕೋಟೇ ಬಾಗಿಲಲ್ಲಿ ತನ್ನ ಕಡೇ ಜನಗಳನ್ನು ಇಟ್ಟು ಬಂದೋಬಸ್ತುಮಾಡಿ (ಹಾಸುಸಂ. ೦೬೦); ತಪ್ಪಿದ್ದವರನ್ನು ಶಿಕ್ಷಿಸಿ ಬಂದೋಬಸ್ತು ಮಾಡುವುದು (ಮೂಲಾಪ. ೮೭). [←ಪಾರ. ಬಂದುಬಸ್ತ್ ಹಿಂ. ಬಂದೋಬಸ್ತ್ ; ಮರಾ. ಬಂದೋಬಸ್ತ, ಬಂದೋಬಸ್ತೀ]

ಬಂದ್ರ (ನಾ). ಒಂದು ಬಗೆಯ ಬಟ್ಟೆ (?) : ಜರತರದ ವಸ್ತ್ರ ಪಾಗಂಗಿ ಕಿಂಖಾಪು ಮೇಲ್ ಥರಥರದ ಪೈಠಣೆಯ ಚಾದ್ರ ಬೂರಾನ್ಪುರಿಯ ಪರಿಪರಿಯ ಬಂದ್ರಗಳ ವಸ್ತ್ರದ ಖಿಲತ್ತುಗಳು (ಕೃಷ್ಣಪಿ. ೩-೩೬). [?]

ಬಂಧ (ನಾ). ೧. ಕಟ್ಟು ; ಬಂಧನ. ೨. ಹಗ್ಗ ; ಪಾಶ : "ಹಗ್ಗಮಾ ಬಂಧಂ" (ಮುಂಗಾ. ೦೦೯-೨). ೩. ಸಂಕೋಲೆ ; ಸರಪಣಿ. ೪. ಗಾಯದ ಪಟ್ಟಿ. ೫. ಅಡವು ; ಒತ್ತೆ. ೬. ಸೆರೆ ಹಿಡಿಯುವುದು ; ಬಂಧಿಸುವುದು. ೭. ಸೇರಿಸುವುದು; ಕೂಡಿಸುವುದು. ೮. ಕೂಡುವುದು ; ಸೇರುವಿಕೆ ; ಯೋಗ. ೯. ಕೂಡಿಸಿದುದು ; ಜೋಡಣೆ : ಅಂತು ಸಮುದ್ರಂ ಬಹಿತ್ರಂ ಬೆದಱುವಂದು ತಿಟ್ಟನೆ ತಿಱಿದು . . . ಕೂವಕಂಭಂ ಮುಱಿಯೆ ಬಂಧಂ ಬಿರಿಯೆ . . . ನಾವಿಕಾಜನಮೆರ್ದೆಗೆಟ್ಟು (ಬಂಹಂ. ೪-೦೪೫). ೧೦. ಅಳ್ಳಕವಲ್ಲದುದು ; ಗಟ್ಟಿ ; ಮಂದ : ತುಱುವೆಯ ಬೇರನಿಕ್ಕಿ ತಱುಪೆರ್ಮೆಯ ಪಾಲುಮಮರ್ಧಮಪ್ಪಿನಂ ವಱುಗಿಸಿ ಬಂಧಮಾಗೆ (ಲೋಕೋಪ. ೮-೦೦). ೧೧. (ಕಾವ್ಯ ಮೊದಲಾದುವುಗಳ) ರಚನೆ : ಸಮಮೆಂಬುದು ಬಂಧದೊಳವಿಷಮಂ ಮೃದುಸ್ಫುಟವಿಮಿಶ್ರವಿನ್ಯಾಸಪದಕ್ರಮದಿಂ ಮೂಱು ತೆಱಂ ಬಂಧಮುಂ ಯಥಾರ್ಥಾನುವೃತ್ತಿಯಿಂ ವರ್ತಿಸುಗುಂ (ಕಾವ್ಯಾಪ. ೩೦೦); ಬಂಧದೊಳು ಲಕ್ಷಣದೊಳು ಪದವಿಸರದೊಳು . . . ತಿದ್ದುವುದು (ಹಸಕಾ. ೦-೨೦); ಗತಿಯು ತನ್ನ ಛಂದದಲ್ಲಿ ಭಾವ ತನ್ನ ಬಂಧದಲ್ಲಿ ಹರಿವೆನಿಲ್ಲೆ ಹೊಂದದಲ್ಲಿ (ಅರಳು. ೦೬೪-೦೦). ೧೨. ಅಂಚು; ಗಡಿ. ೧೩. ದೇಹ; ಕಾಯ. ೧೪. ಒಂದು ಬಗೆಯ ಸಸ್ಯ : ಸಿಡಿಗುಲಿಗೆ, ಬಂಧ (ಪ್ರಾಸಿಗಿ. ೦೪-೨೫೫). ೧೫. [ತತ್ತ್ವಶಾ] ಇಹಲೋಕದ ಬಾಂಧವ್ಯ; ಲೌಕಿಕವ್ಯಾಮೋಹ: ಬಂಧಂ ಬಂಧಕಾರಣಂ ಮೋಕ್ಷಂ ಮೋಕ್ಷಕಾರಣಂ (ಪಡ್ಡಾರಾ. ೬-೦೬); ದಯಿತಾಸಂಬಂಧ ಬಂಧಂ ಭವಪರಿಣತಿ ತನ್ಮೂಲಮಿಾ ಬೇವಸಂ ವಿಶ್ವಯ ಮೆಂದಾತಂ ತೊಡರ್ಪಂ ಬಿಡಿಸಿ (ಶಾಂತಿಪು. ೯-೦೪); ಧೀರ ಲಾಲಿಸು ಬಂಧ ಮೋಕ್ಷಕೆ ಕಾರಣಮೆ ಮನಮಹುದು (ಗಗಶಾ. ೦೬-೨೬). ೧೬. [ಕಾವ್ಯಮಿಾ] ಚಮತ್ಕಾರಪೂರ್ಣವಾದ ಶಬ್ದವೈಚಿತ್ರ್ಯದಿಂದ ಕೂಡಿದ ವಾಕ್ಯ ; ಚಿತ್ರಕವಿತ್ವ : ಅಕ್ಷರಗಳನ್ನೂ ಪದಗಳನ್ನೂ ಕುಶಲತೆಯಿಂದ ಆರಿಸಿ ಜೋಡಿಸಿ ಕವಿಗಳು ಉಂಟುಮಾಡುವ ಇತರ ಶಬ್ದವೈಚಿತ್ರ್ಯಕ್ಕೆ ಚಿತ್ರಕವಿತ್ವವೆಂದೂ 'ಬಂಧವೆಂದೂ' ಹೆಸರು (ಕೃಷಿಪ. ೨೫೪). ೧೭. [ಜೈನ] ನವಪದಾರ್ಥಗಳಲ್ಲಿ ಒಂದು : ಜೀವಮುಂ ಕರ್ಮಮುಂ ಎಂಬೆರಡಱ ಅನ್ಯೋನ್ಯಪ್ರದೇಶಾನುಪ್ರವೇಶಾತ್ಮಕಮಪ್ಪುದು ಬಂಧಂ (ತತ್ತ್ವಪ್ರ. ೮); ಅಜೀವಕರ್ಮಪುದ್ಗಲಗಳೊಡನೆ ಜೀವನು ಏಕೀಭೂತನಾಗುವುದೆ ಬಂಧವು (ಕೈಪರ. ೩). ೧೮. ಸಪ್ತತತ್ತ್ವಗಳಲ್ಲಿ ಒಂದು: ತತ್ತ್ವಗಳು ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷ ಎಂದು ಏಳುವಿಧಗಳನ್ನುಳ್ಳುವೆಂದೂ ಹೇಳಬಹುದು (ಪಾತತ್ತ್ವ. ೨೫೭).

ಬಂಧದ ಕಾಯಿ = (ಬಿಡಿಭಾಗಗಳನ್ನು ಜೋಡಿಸಲು ಉಪಯೋಗಿಸುವ) ಅಂಟುಳ್ಳ ಒಂದು ಬಗೆಯ ಕಾಯಿ : ಮಸಿ ಮೈಬಟ್ಟೆಗಳಿಗೆ ತಗುಲದಂತೆ ಹುಡುಗರಿಂದ ಬಂಧದ ಕಾಯಿ ತರಿಸಿ, ಅದರ ಅಂಟುನೀರು ಚಿಮುಕಿಸಿ ಅರೆಯಬೇಕು (ಪಾಳಿಗಿ. ೨೭). [ಸಂ.]

ಬಂಧಕ (ಗು). ೧. ಹಿಡಿಯುವ ; ಬಂಧಿಸುವ. ೨. ತಡೆಗಟ್ಟುವ ; ಪ್ರತಿಬಂಧಿಸುವ. (ನಾ). ೩. ಹಿಡಿಯುವುದು ; ಬಂಧಿಸುವುದು : ಉಳಿದ ಕರ್ಮವೆಲ್ಲವೂ ಅವನಿಗೆ ಬಂಧಕವೂ ಮಾರಕವೂ ಆದುದು (ಕಕ್ತಿಪಿ. ೪೭). ೪. ಕಟ್ಟು ; ಬಂಧನ : ವಿಶ್ವದ ಎಲ್ಲ ಭಾಗಗಳನ್ನೂ ಒಟ್ಟಿಗೆ ಸೇರಿಸುವ ಬಂಧಕವು ಎಲ್ಲಿದೆ ? (ಪುಕ್ಕಾರ. ೨೬೬). ೫. ಸೆರೆ ಹಿಡಿಯುವವನು ; ಬಂಧಿಸುವವನು. ೬. ಏರಿ ; ಒಡ್ಡು ; ಅಡ್ಡ ಗಟ್ಟೆ. ೭. ಕೆರೆ ; ಕಟ್ಟೆ. ೮. ಒತ್ತೆ ; ಅಡವು. [ಸಂ.]

ಬಂಧಕಿ (ನಾ). ೧. ಹಾದರಗಿತ್ತಿ ; ಜಾರೆ : "ಪಾಂಸುಳಾ, ಬಂಧಕೀ . . . ಅಭಿಸಾರಿಕಾ—ಈ ೧೦ ಹಾದರಗಿತ್ತಿ" (ಹಲಾಯು. ೬೦-೩೪೨) ; ಸತ್ಯವಾದಿಯಂತೆ ಪೊಳೆಯದೆ ಬಂಧಕಿಯಂತೆ ಮಂದಿಗೇವೈಸದೆ (ಪುಷ್ಕಾಸ್ತ್ರ. ೬-೩೦ ಪ) ; ಈಕೆಗೆ ಅನೇಕ ಭರ್ತೃಗಳಿರುವುದರಿಂದ ಈಕೆ ಬಂಧಕಿ (ಹಂಕೀ. ೦೬೩). ೨. ಬಂಜೆ. ೩. ಹೆಣ್ಣಾನೆ. [ಸಂ. ಬಂಧಕೀ]

ಬಂಧಗೌರವ (ನಾ). ಕಾವ್ಯರಚನೆಯ ಹಿರಿಮೆ,—ಪ್ರೌಢಿಮೆ : ಇನಿತು ಮಿರ್ವಿಕೆ ಮತ್ಕೃತಿಯೊಳ್ . . . ಶಾಂತಿವರ್ಮನ ನಯಂ ಗುಣವರ್ಮನ ಬಂಧಗೌರವಂ (ಜಗವಿ. ೧-೦೦). [ಸಂ.]

ಬಂಧತಂತ್ರ (ನಾ). ರಥ, ಆನೆ, ಕುದುರೆ ಮತ್ತು ಪದಾತಿಗಳಿರುವ ಸೈನ್ಯಸಮೂಹ; ಸಂಪೂರ್ಣವಾದ ಸೈನ್ಯ. [ಸಂ.]

ಬಂಧನ (ಗು). ೧. ಕಟ್ಟುವ ; ಬಂಧಿಸುವ. ೨. ತಡೆಗಟ್ಟುವ ; ವಿರೋಧಿಸುವ. (ನಾ). ೩. ಕಟ್ಟುವಿಕೆ ; ಜೊತೆಗೂಡಿಸುವಿಕೆ. ೪. ಸೆರೆಮನೆ; ಕಾರಾಗೃಹ : "ಕಾರಂ ಬಂಧನಾಖ್ಯಂ" (ಮಂಗರಾ. ೦೦೬-೦); ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ (ಮಹಾದೇ. ಬ. ೦೩೯-೩೦೩); ರಾಮಪ್ಪಗೌಡ ಮತ್ತು ತಿಮ್ಮಪ್ಪಗೌಡ ಇಬ್ಬರನ್ನು ಸೆರೆಹಿಡಿದು, ಬಂಧನದಲ್ಲಿರಿಸಿದನು (ಮೊಳಂಬ. ೬೪). ೫. ಕಟ್ಟು ; ಬಂಧ : ಬಂಧನಂ ಕಚದೊಳ್ ವಿರೋಧಂ ಪಂಜರದೊಳ್ . . . ಅಲ್ಲದಿಲ್ಲಮೆಲ್ಲಿಯುಂ (ಸಂಪ್ರಪು. ೩-೯ ಪ). ೬. ಹಗ್ಗ ; ಪಾಶ. ೭. ಸರಪಳಿ ; ಸಂಕೋಲೆ : ಬಂಧನಮಂ ಪಱಿಯುತ್ತೆ . . . ಗಂಧಮಹಾಸಿಂಧುರಮೆಯಿತರ್ಪಂತಿರೆ ಸೈಂಧವನೆಟ್ಟಂದು ತಾಗಿದಂ ನರಸುತನೊಳ್ (ಬಂಹಂ. ೦೨-೨೨). ೮. ಸೆರೆ ಹಿಡಿಯುವುದು ; ಬಂಧಿಸುವುದು. ೯. ಪಟ್ಟಿ. ೧೦. ಸೆರೆ ; ವಶ ; ಅಧೀನ. ೧೧. ನಿಗ್ರಹ ; ಅಂಕೆ ; ಹಿಡಿತ. ೧೨. ರಚನೆ ; ನಿರ್ಮಾಣ. ೧೩. [ತತ್ತ್ವಶಾ] ಐಹಿಕಬಂಧ: 'ಭವಬಂಧನ' ಪರಾ.

ಬಂಧನ ಹಾಕು = ಮಂತ್ರಶಕ್ತಿಯಿಂದ ಕಟ್ಟುಹಾಕು,—ದಿಗ್ಬಂಧನ ಮಾಡು : ಪ್ರೇತವನ್ನು ಹಿಡಿದು ಮನೆಗೆ ಬಂಧನ ಹಾಕಿ ಬರಬಾರದೆ ? (ಪದ್ಮಸ. ೨೩೪). [ಸಂ.]

ಬಂಧನಕಾರಿ (ನಾ). ಕಟ್ಟಿಗೆ ಒಳಪಡಿಸುವಂತಹುದು ; ಬಂಧಿಸುವುದು : ನಾನು ಮಾಡಿದ ಹದಿನೈದು ವರ್ಗಗಳು ಅಭ್ಯಾಸಕ್ಕೆ ಅನುಕೂಲವಾಗಿವೆ. ಆದರೆ ವಿಭಾಗಗಳು ನಿರ್ದಿಷ್ಟವಾಗಿ ಹೀಗೆಯೇ ಎಂದು ಬಂಧನಕಾರಿಯಾಗಲಾರವು (ಸಾಸಮಾ. ೩೦). [ಸಂ. ಬಂಧನಕಾರಿನ್]

ಬಂಧನಗೊಳಿಸು (ಕ್ರಿ). ಬಿಗಿಮಾಡು ; ಸೇರಿಸು : ಬಗೆವೆತ್ತ ಬಾಗಿಲ ಕದ ವಜ್ರ ಲಾಳವಿಂಡಿಗೆಗಳ ಬಂಧನಗೊಳಿಸಿ ಮಿಗೆ ವಿಶ್ವಾಸಿ ಕಠೋರ ರಾಕ್ಷಸಿಯರ ತೆಗೆಯದೆ ಕಾವನಿಕ್ಕಿದಳು (ಮೋಹತ. ೩೩-೩೭).

[ಬಂಧನ + ಕೊಳ್$_1$ + — ಇಸು$_3$]

ಬಂಧನಾಗಾರ (ನಾ). ಸೆರೆಮನೆ ; ಕಾರಾಗೃಹ : ಭಿಕ್ಷುವು ತಾನು ಋಣ, ರೋಗ, ಬಂಧನಾಗಾರ, ದಾಸತ್ವ, ಕಾಂತಾರಗಳಲ್ಲಿ ಇದ್ದಂತೆ ತಿಳಿಯುವನು (ಬುದ್ಧಪ. ೦೯೩). [ಸಂ.]

ಬಂಧನ (ನಾ). ೧. ಕಟ್ಟು ; ಬಂಧನ. ೨. ಹಗ್ಗ ; ಮಿಳಿ. ೩. ಸರಪಳಿ ; ಸಂಕೋಲೆ : ಕಬ್ಬಿಣದ ಬಂಧನಿಗಳಿಂದ ಬಿಗಿದಿದ್ದ ತೇಗದ ತೊಲೆಗಳ ಬಲವಾದ ಸಾರುವೆ ಆ ಕಟ್ಟಡವನ್ನು ಸುತ್ತುವರಿದಿತ್ತು (ಪುನರು. ೩೦೬). [ಸಂ. ಬಂಧನೀ]

ಬಂಧಮೋಚನ (ನಾ). [ಜೈನ] ಬಂಧನದಿಂದ ಬಿಡುಗಡೆ ಹೊಂದುವ ಒಂದು ಬಗೆಯ ವಿದ್ಯೆ : ಅಮಿತತೇಜಂ ಶ್ರೀವಿಜಯಂಗೆ ಯುದ್ಧ ವೀರ್ಯಮುಂ ಪ್ರಹರಣವಾರಣಮುಂ ಬಂಧಮೋಚನಮುಮೆಂಬ ಮೂಱು ವಿದ್ಯೆಗಳಂ ಕೊಟ್ಟು (ಶಾಪುಂಪು. ೦೯೦). [ಸಂ.]

ಬಂಧಮೋಚನಿ (ನಾ). = ಬಂಧಮೋಚನ : ಮಹಾಜ್ವಾಳಿನಿ ಯುದ್ಧ ವೀರ್ಯೆ ಬಂಧಮೋಚನಿ ಪ್ರಹರಣಾವರಣಿ ಭ್ರಾಮರಿ ಆಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಶಾಪುಂಪು. ೦೯೬). [ಸಂ. ಬಂಧಮೋಚನೀ]

ಬಂಧವಿದ (ನಾ). (ಆಭರಣಾದಿಗಳನ್ನು) ಮಾಡುವವನು ; ರಚಿಸುವವನು : ದಿಟ್ಟಿಗೆವರೆ ಬಂಧವಿದಂ ಕಟ್ಟಿದ ಪಲತೆಱದ ಮಣಿಯ ಸೂಸಕದ ನೆಱಲ್ ಕುಟ್ಟಿಮತಲದೊಳ್ ಪೊಳೆದೆಡೆಗಟ್ಟುತ್ತಲ್ಲಲ್ಲಿ ಬಣ್ಣವುರಮಂ ತೀವಲ್ (ಸಂಪ್ರಪು. ೬-೪೬). [ಸಂ. ಬಂಧವಿದ್]

ಬಂಧವಿಮೋಚನಿ (ನಾ). = ಬಂಧಮೋಚನ : ಸೌಜನ್ಯಕಂದಾಂಕುರಂ ಶ್ರೀವಿಜಯಂಗೆ ಹೇತಿವಿದಾರಿಣಿಯುಂ ಬಂಧವಿಮೋಚನಿಯುಮೆಂಬಿ ವೆರಡುಂ ವಿದ್ಯೆಗಳಂ ಕೊಟ್ಟು (ಶಾಂತಿಪು. ೬-೩೭ ಪ).

[ಸಂ. ಬಂಧನಿಮೋಚನೀ]

ಬಂಧಸ್ತಂಭ (ನಾ). ಆನೆಯನ್ನು ಕಟ್ಟುವ ಕಂಬ ; ಆಲಾನಸ್ತಂಭ : "ಆಲಾನಂ, ಬಂಧಸ್ತಂಭಃ—೨ ಆನೆಯನ್ನು ಕಟ್ಟಿಹಾಕುವ ಕಂಭದಂಥಾ ಗೂಟದ ಪೆಸರು" (ಸಿದ್ಧಾಂತಿ. ೨೪೮). [ಸಂ.]

ಬಂಧಾಬಂಧಿ (ನಾ). ಮಲ್ಲಯುದ್ಧದ ಒಂದು ವರಸೆ ; ಕೈಕೈಗಳನ್ನು ಹಿಡಿದು ವರಸೆಗಳನ್ನು ಹೂಡಿ, ಕಾದುವ ಯುದ್ಧ : ಒಡನೆ ದಂಡೆಗಳನೊಡ್ಡುತ್ತಲ್ಲಿ ಕೈಗಳಂ ಪಿಡಿದು ಬಂಧಾಬಂಧಿಯರರೆ ಮುಷ್ಟಾ ಮುಷ್ಟಿ ಬೆಡಗಿನಿಂದೊದಗಿ . . . ತೊಡಕುಗಾಳಗವ ತೊಡಗಿದರು (ವೀಕೈಪು. ೩-೬-೩೯). [ಸಂ.]

ಬಂಧಿತ (ಗು). ೧. ಕಟ್ಟಿಗೆ ಒಳಗಾದ ; ಬಂಧನಕ್ಕೊಳಗಾದ. (ನಾ). ೨. ಕಟ್ಟಿಗೆ ಒಳಗಾದುದು : ಭವ್ಯಪರಂಪರೆಯ ನಾಡು ಪಾರತಂತ್ರ್ಯದ ಸಂಕೋಲೆಯಿಂದ ಬಂಧಿತವಾಯಿತು (ಅಶ್ಮಾರ್ಪ. ೨). ೩. ಕಟ್ಟಿಗೆ ಒಳಪಟ್ಟವನು ; ಬಂಧನಕ್ಕೆ ಒಳಗಾದವನು : ಅಜ್ಞಾನದಿಂದ ಆವರಿಸಲ್ಪಟ್ಟವನಾಗಿಯೂ ವಿಷಯಾದಿಗಳಿಂದ ಬಂಧಿತನಾಗಿಯೂ ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ ವ್ಯವಹಾರ ಮಾಡುತ್ತಿದ್ದೇನೆ (ಪುಕ್ಷಾರ. ೨೬೦). [ಸಂ.]

ಬಂಧಿಸು (ಕ್ರಿ). ೧. ಕಟ್ಟಿಹಾಕು; ಬಿಗಿ : ಪುಸಿ ಕೊಲೆ ಕಳವು ಪರಸ್ತ್ರೀವ್ಯಸನಂ ಬಹುವಿಧಪರಿಗ್ರಹಂ ನರರಂ ಬಂಧಿಸಲೀ ಭವಾಬ್ಧಿಯೊಳಗರ್ದಿಸಲಾರ್ಕುಂ ದ್ಯೂತಮದ್ಯಮಾಂಸವ್ಯಸನಂ (ಅಪಪು. ೨-೬೭); ನೊಸಲ ಸೀಸಕನುಗ್ಗುನುಸಿ ಬಂಧಿಸಿದ ಸರಪಣಿ ಹಿಳಿದವರಿಬಲದೆಸಕ ನಿಂದುದು ಪಾರ್ಥನೆಚ್ಚನು ವೈರಿಮೋಹರವ (ಕುಷ್ಠಾದ್ರೋ. ೦೦-೩) ; ನಳಿತೋಳ ಪಾಶದೊಳಗೆ ತನ್ನಿನಿಯನ ಬಿಗಿದು ಬಂಧಿಸುತ (ಕಂಪಾ. ೬-೦೭೦) . ೨. ಬೇಡಿ ಹಾಕು; ಕೋಳ ತೊಡಿಸು : ತಸ್ಕರರಂ ಬಾರಿಸಿ ಕಷ್ಟರಂ ಕೆಡಿಸಿ ದಂಡಂಗೊಂಡು ಮಿಂಡರ್ಕಳಂ ಭರದಿಂ ಬಂಧಿಸಿ (ಧರ್ಮಾಮ್ಯ. ೨-೮೪) ; ಹಾಸಿ ಹರಹಿದ ತೋಳನೊಬ್ಬುಳಿ ಮಾಡಿ ಬಂಧಿಸಿದ (ಕೌತಿರಾ. ೨೨-೦೦) ; ಈತನ ಹಿಡಿದು ಬಂಧಿಸಲಾಗಿ ಯದುಕುಲನಾಥನಾರಾಯಣ ಬಹನು (ಮೋಹತ. ೩೩-೬೦). ೩. ಕೂಡಿಸು ; ಜೋಡಿಸು : ಮಿಸುನಿಯಂತ್ರದ ಮಣಿಮಾಲೆಯ ತೋಳ್ಗೆ ಬಂಧಿಸಿದಳತ್ಯಂತಭಕ್ತಿಯಲಿ (ಮೋಹತ. ೪-೭೬). ೪. ನಿರ್ಮಿಸು; ರಚಿಸು : ಶಶಿಕಾಂತಶಿಲೆಯಿಂದೆ ಬಂಧಿಸಿದ ಸೋಪಾನದ ಸುಪಂತಿಯಿಂದ . . . ಶೋಭಿಸುತಿರೆ (ಸಪಮೋ. ೬-೨೯). ೫. ಮುಚ್ಚು : ಮುಂದಕೆ ಅಡಿಯನೊಂದನಿಡೆ ಕಕ್ಕಯ್ಯ ಬಂಧಿಸಲು ತನ್ನ ದ್ವಾರದ ಕವಾಟವನಾಗ (ಶ್ರೌಢರಾ. ೦೯-೩). [ಬಂಧನ + —ಇಸು$_3$]

ಬಂಧಿಸ್ತ (ನಾ). ಬಂದೋಬಸ್ತು ; ಜೋಪಾನ : ಅಳಿಯನ ಅಭೀಸಿನಿಂದ ತರಿಸಿದ ಗಟ್ಟಿರಟ್ಟಿನ ಫಾಯಿಲ್‌ಬೋರ್ಡಿನಲ್ಲಿ ಬಂಧಿಸ್ತ ಮಾಡಿಸಿಕೊಂಡರು (ದೀಪಹ. II. ೦೬). [← ಮರಾ. ಬಂದಿಸ್ತ, ಬಂದಿಸ್ತೀ ಬಂದೀಸ್ತ]

ಬಂಧು (ನಾ). ೧. ಸಂಬಂಧ; ನೆಂಟು. ೨. (ವಿಶೇಷವಾಗಿ ತಾಯಿಯ

ಕಡೆಯ) ಸಂಬಂಧಿಕ : ನೆಂಟ : "ಆತ್ಮೀಯಃ, ಸ್ವಜನಃ, ಬಂಧುಃ, ಆಪ್ತಃ, ಜ್ಞಾತಿಃ, ಬಾಂಧವಃ ಈ ೬ ನಂಟರ್" (ಹಲಾಯು. ೯೯-೩೫೫) : ಉಂಬಾಗಳಿಲ್ಲೆನ್ನ ಉಡುವಾಗಳಿಲ್ಲೆನ್ನ ಬಂಧುಗಳು ಬಂದಾಗಳಿಲ್ಲೆನ್ನ ಲಿಂಗಕ್ಕೆ ಇಲ್ಲೆಂಬ ಜಂಗಮಕ್ಕೆ ಇಲ್ಲೆಂಬ . . . ಸಾವಾಗ ದೇಹವ ದೇಗುಲಕ್ಕೊಯ್ಯೆಂಬ ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ (ಜಸವ. ೨೨೨) ; ಕಂಸಂ . . . ಬಂಧುಗಳಬಂಧುರವೆನೆ . . . ಕೈಕೊಳ್ಳದೆ . . . ಪಾಸಱೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೩ ಪ) ; ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ (ಗಾರ). ೩. ಗೆಳೆಯ ; ಸ್ನೇಹಿತ. ೪. ಒಂದು ಬಗೆಯ ಮರ : 'ಬಂಧುಜೀವ' ಪರಾ. ೫. [ಜ್ಯೋತಿ] ಲಗ್ನದಿಂದ ನಾಲ್ಕನೆಯ ರಾಶಿ : ವ್ಯವಹರಿಪ ಸಂಜ್ಞೆ ಚತುರಸ್ರವದೆಂದಷ್ಟಮ ಚತುರ್ಥಗೃಹಕೆ ಚತುರ್ಥಕ್ಕೆ ವಲಂ ಮತ್ತಂ ಪಾತಾಳ ವೇಶ್ಮ ಸುಖ ಹಿಬುಕ ಬಂಧುವೆಂದೈದು ಪೆಸರ್ (ಜಾತಕ. ೦-೩೯).

ಬಂಧುಚಿಂತಾಮಣಿ = ಬಂಧುಗಳು ಕೇಳಿದುದನ್ನು ಚಿಂತಾಮಣಿಯಂತೆ ಕೊಡುವವನು ; ಒಂದು ಬಿರುದು : ಬಂಧುಚಿನ್ತಾಮಣಿ ಸಮಾಶ್ರಿತಜನಕಳ್ಪವೃಕ್ಷನ್ನಾಮಾದಿ ಸಮಸ್ತಪ್ರಶಸ್ತಿಸಹಿತಂ (ಸೌಜಿಇ. XX. ೯೬-೦೮; 1072). ಬಂಧುಬಳಗ = ನೆಂಟರು ಮತ್ತು ಪರಿಜನರು : ಅನಿಮಿತ್ತಬಂಧುವೆ ತಾಯ್ತಂದೆ ಬಂಧುಬಳಗವೆ . . . ಕಾವುದು (ಜಸರ. ೨-೩೯) ; ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ (ಪುರಂದ. ೦-೯೩-೦). [ಸಂ.]

ಬಂಧುಕೃತ್ಯ (ನಾ). ಒಬ್ಬನು ತನ್ನ ಬಂಧುಗಳಿಗೆ ಮಾಡಬೇಕಾದ ಕಾರ್ಯ.— ಕರ್ತವ್ಯ : ಆಳುಗೆಲಸಕೆ ಕೆಲಬರರಸನ ಖೇಳಮೇಳಕೆ ಕೆಲರು ಕೆಲಬರು ಬಾಲೆಯರ ಕೊಳುಕೊಡೆಯ ಬಳಗದ ಬಂಧುಕೃತ್ಯದಲಿ (ಕುಪ್ಯಾಧೀ. ೩-೦೯). [ಸಂ.]

ಬಂಧುಜನ (ನಾ). ನೆಂಟರು ; ಬಳಗ : ಕಡಲ ತಡಿಯೆಯ್ದೆ ನೆಲನಂ ಪಡೆದರ್ ಭವದೀಯ ಪುತ್ರರುಳ್ಳಳಿವಿಗಳೊಳ್ ಪಡೆದುದು ಬಂಧುಜನಂ ನಿಮ್ಮಡಿಗಾವೇಂ ಪೋಷ್ಯವರ್ಗದಿಂದಂ ಪೊಱಗೇ (ಅದಿಪು. ೯-೯೯). [ಸಂ.]

ಬಂಧುಜೀವ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು : "ಬಂಧೂಕಂ, ಬಂಧುಜೀವಂ—ಈ ೨ ಬಂದುಗೆ" (ಹಲಾಯು. ೩೫-೫೫). [ಸಂ.]

ಬಂಧುಜೀವಕ (ನಾ). = ಬಂಧುಜೀವ. [ಸಂ.]

ಬಂಧುತನ (ನಾ). ನೆಂಟಸ್ತಿಕೆ ; ಬಾಂಧವ್ಯ : ಬಳ್ವಳ ಬಳೆದ ಬಂಧುತನವಿನಿತಾಯ್ತೋ (ಸುಕುಮಾ. ೪-೨೮) ; ನೀವೇಳನೆಯ ಭವದಲಿ ಬಂಧುತನದಲಿ ನಮ್ಮನೈದುವುದು (ತೊರಣಾ. ೦-೯-೨೦) ; ಉಳಿದು ಕೌರವ ಬಂಧುತ[ಜಾಕಾಂ. ಜ]ನವನು ತೀರ್ಥಯಾತ್ರೆಗೆ ವಿದುಶ ಹೊಱವಂಟ (ನಿಧಾಗ. ೩-೦ ಸೂಸನ). [ಬಂಧು + —ತನ]

ಬಂಧುತೆ (ನಾ). ೧. ಬಾಂಧವ್ಯ ; ನೆಂಟು. ೨. ನೆಂಟರ ಗುಂಪು ; ಬಳಗ "ಬಂಧುತಾ ಅಂದರೆ ನೆಂಟರ ಗುಂಪು, ನೆಂಟತನಕ್ಕೂ ಹೆಸರು" (ಸಿದ್ಧಾಂತಿ. ೦೭೭). [ಸಂ. ಬಂಧುತಾ]

ಬಂಧುತ್ವ (ನಾ). = ಬಂಧುತನ. [ಸಂ.]

ಬಂಧುರ (ಗು). ೧. ಸಮತಟ್ಟಿಲ್ಲದ; ಏರುಪೇರಾದ. ೨. ಕೊಂಕಿದ; ವಕ್ರವಾದ. ೩. ಚೆಲುವಾದ ; ಸುಂದರವಾದ. ೪. ನೋವುಂಟು ಮಾಡುವ ; ತೊಂದರೆಯನ್ನು ಕೊಡುವ. (ನಾ). ೫. ಬಾಗಿರುವುದು ; ಮಣಿದುದು : "ನತಂ, ನಮ್ರಂ, ಬಂಧುರಂ—ಈ ೩ ಎಱಗಿರ್ದುದು" (ಹಲಾಯು. ೦೨೫-೭೫). ೬. ಚೆಲುವಾದುದು ; ಸುಂದರವಾದುದು: ಅನ್ಯಯಂಗಳಸಹಾಯಂಗಳ್ ಬೆರಸಿರೆ ಕನ್ನಡದೊಳ್ ಬಂಧುರಮಾಗದು ಕಾವ್ಯರಚನೆ (ಕವಿಗಾ. ೦-೫೩) ; ಆನಂದವರ್ಧನನ ಜೀವನ ಸರ್ವಾಂಗಸುಂದರವೂ ತತ್ವಾನುಭವಬಂಧುರವೂ ಭಕ್ತಿನಿರ್ಭರವೂ ಆಗಿತ್ತು (ರೃಷ್ಯಾಲೋ. XXVII. ಬೀಂಕ). ೭. ಒಂದು ಬಗೆಯ ಪಕ್ಷಿ ; ಬಾತು. ೮. ಬಂಧುಜೀವ. ೯. ರಥದಲ್ಲಿ ಸಾರಥಿಯು ಕುಳಿತು ಕೊಳ್ಳುವ ಸ್ಥಳ. [ಸಂ.]

ಬಂಧುರತೆ (ನಾ). ಚೆಲುವು ; ಸೌಂದರ್ಯ : ತಳೋದರಿಗೆ ವೃಕೋದರನಾಗಿಪಂ ಕಚಬಂಧಬಂಧುರತೆಯುಂ (ಗದಾಯು. ೦-೭೦) ; ವಿಶ್ವಚೇತನದಾಸ್ಪಂದನವೇ ಸೌಂದರ್ಯದುದುವೆ ಜೀವನ ಮೂಲಬಂಧುರತೆ ಬೊಮ್ಮನದು (ಮಂಕುಳ. ೯೯೬). [ಸಂ.]

ಬಂಧುರವಡೆ (ಕ್ರಿ). ಚೆಲುವಾಗು ; ಸುಂದರವಾಗು : ಬಂಧುರವಡೆದ ಮೋಹನಶಾಲೆಯುಂದದೆಯುಂದಿರಾಮಂದಿರವಿಹುದು (ಕಂಪವಿ. ೭-೩೭). [ಬಂಧುರ + ಪಡೆ$_1$]

ಬಂಧುರವಿಡಿ (ಕ್ರಿ). = ಬಂಧುರವಡೆ : ಸ್ಮರಕರಿಕರದಂತೆ ರಂಜಿಸುತಿಹ ಬಂಧುರವಿಡಿದೂರುದ್ವಯದ ಗರುವನಾರುಸಿರು (ಕಂಪವಿ. ೯-೦೦೭). [ಬಂಧುರ + ಪಿಡಿ$_1$]

ಬಂಧುರಿತ (ಗು). ೧. ಬಾಗಿದ ; ಬಗ್ಗಿದ. ೨. ಕೊಂಕಿದ ; ವಕ್ರವಾದ. (ನಾ). ೩. = ಬಂಧುರಿತಕರಣ : ಮೆಲ್ಲನೆ ಮಲಗಿರ್ದವಳು ತನ್ನ ಎರಡು ಕೈಗಳಿಂ ಕೊರಳಂ ಪಿಡಿದು ರಮಿಸಲ್ಕೆ ಬಂಧುರಿತಮೆಂಬ ಕರಣಂ (ಕಾಮಶಾ. ೨೩೬). [ಸಂ.]

ಬಂಧುರಿತಕರಣ (ನಾ). [ಕಾಮಶಾ] ರತಿಕೇಳಿಯ ಒಂದು ಭಂಗಿ : ಮಗುಳ್ದೊಱಗಿ ಮೊಳಕಾಲೊಳಗೆ ಕಯ್ಯನೊಯ್ದುಬಲೆ ಬಗೆಗೊಂಡವನ ಕೊರಳನಪ್ಪಲವನು ಸೊಗಸೊಗೆಯಲವಳೂರುಯುಗಮನಮರ್ದಪ್ಪಿ ರತಿವೊಗೆಯಲದೆ ಬಂಧುರಿತಕರಣಂ (ಜಸವ. ೯-೩೩). [ಸಂ.]

ಬಂಧುರೆ (ನಾ). ಚೆಲುವೆ ; ಸುಂದರಿ : ಲಾವಣ್ಯಸಿಂಧುವೇಳಾಲೀಲಾಯಮಾನಕೇಕರಾತಿಬಂಧುರೆಯುಂ ಭರತಾಗಮಭವನವಿಹಿತಮಹನೀಯಮತಿ ಪ್ರದೀಪೆಯುಂ (ಎಕ. V. ಬೇಲೂರು. ೫೯-೬೩; 1117). [ಬಂಧುರ + —ಎ$_2$]

ಬಂಧುಲ, ಬಂಧುಳ (ಗು). ೧. ಬಾಗಿದ ; ಬಗ್ಗಿದ. ೨. ಸುಂದರವಾದ ; ಚೆಲುವಾದ. (ನಾ). ೩. ಗಂಡನಲ್ಲದವನಿಂದ ಹುಟ್ಟಿದವನು : "ಕೆಟ್ಟವಳತನುಜಂ ಬಂಧುಲ[ಜಾಕಾಂ. ಳ]ನೆನಿಕ್ಕು" (ಮಂಗರಾ. ೯೨-೦೦). ೪. ವೇಶ್ಯಾಮಂದಿರದ ಸೇವಕ. ೫. = ಬಂಧೂಕ : (ಪ್ರಾಸಿಗಿ. ೫೦-೦೦೨೧). ಬಂಧುಳ : ೨. ಬಂಧುಳಃ, ಬಂಧಕೀಪುತ್ರಃ—ಈ ೨ ಕಿಡಿಕಿಯ ಮಗಂ" (ಹಲಾಯು. ೮೨-೩೪೬). [ಸಂ.]

ಬಂಧುವರ್ಗ (ನಾ). ನೆಂಟರ ಗುಂಪು ; ಆಪ್ತರ ಸಮೂಹ : ತಿಳಿಹಿದನು ಧೃತರಾಷ್ಟ್ರ ಭೀಷ್ಮರ ಲಲಿತಮತವನು ಬಂಧುವರ್ಗಸ್ಖಲಿತವನು ಸೈರಿಸುವುದೆಂದನು ವಿನಯದಲಿ ವಿದುರ (ಕುಪ್ಯಾಅ. ೧೭-೨೬) ; ಉರಿಯಲಳಿವುದು ಕಾಯ ಮೋಹದ ತರುಣಿವುಳಿವಳು ಬಂಧುವರ್ಗವು ಸರಿಗು ಹಿಂದಕೆ (ಕೌಶಿಗಾ. ೨೩-೦೯). [ಸಂ.]

ಬಂಧುವಿಯೋಗ (ನಾ). ನೆಂಟರ ಅಗಲಿಕೆ : ಬಂಧುವಿಯೋಗದಿನೆನಗನು ಬಂಧಿಸಿದ ಮಹೋಪತಾಪಮದು ನೀಂ ಬರೆ ನಿರ್ಬಂಧದಿನಳಱಿತ್ತದಱಿಂ ಬಂಧುಗಳಿಂ ನೀನೆ ಬಂಧು ಜಗತೀಬಂಧು (ಸಂದ್ರಪು. ೫-೨೯). [ಸಂ.]

ಬಂಧುಸ್ಥಾನ (ನಾ). [ಜ್ಯೋತಿ] "ಲಗ್ನದಿಂದ ನಾಲ್ಕನೆಯ ಸ್ಥಾನ" (ಜಾತಕ. ಕೋಶ). [ಸಂ.]

ಬಂಧುಹನನ (ನಾ). ನೆಂಟರನ್ನು ಕೊಲ್ಲುವುದು ; ಆಪ್ತರ ಸಂಹಾರ : ಬಂಧುಹನನಕೆ ಮನದರಲು ಭವವಿಂಧ್ಯದಲಿ ಬೆಳ್ಳಾಗಿ ರೌರವಸಿಂಧುವಿನೊಳೋಲಾಡದಿಹನೇ ಪರಮಪಾತಕನು (ಕುಪ್ಯಾಧೀ. ೩-೩೭). [ಸಂ.]

ಬಂಧುಳ 'ಬಂಧುಲ' ನೋ.

ಬಂಧೂಕ (ನಾ). ಕೆಂಪುಹೂವುಗಳನ್ನು ಬಿಡುವ ಒಂದು ಬಗೆಯ ಗಿಡ;

ಬಂದುಗೆ : "ಬಂಧೂಕಂ, ಬಂಧುಜೀವಂ—ಈ ಎರಡು ಬಂದುಗೆ" (ಜಿಲಾಯು. ೩೫-೫೫); ಮುದಮಂ ಜಪಾಪ್ರಸವರಕ್ತಾಶೋಕಬಂಧೂಕಶೋಣ ಮಣಿಜ್ಯೋತಿಗಳೆಕ್ಕೆಯಿಂ ಕುಡೆ ಜಯಂ ಭದ್ರಂ ಶುಭಂ ಮಂಗಳಂ (ಅದಿಪು. ೦೬-೩); ಬಂದನು ಸೂರ್ಯನು . . . ಬಂದನು ಉದಯಾದ್ರಿ ಶಿಖರದ ರತ್ನನು ಬಂಧೂಕಸುಮದ ಸನ್ನಿಭನು (ಇಂಶಾಪ. ೦೩೫-೬೦) [ಸಂ.]

ಬಂಪು$_1$, ಬೊಂಪು$_1$ (ನಾ). ೧. ಸಾಬೂನಿನಂತೆ ಉಪಯೋಗಿಸುವ, ಅಂಟುಅಂಟಾಗಿರುವ ಒಂದು ಬಗೆಯ ವನಸ್ಪತಿ : (*). **ಬೊಂಪು$_1$** : ೨. ಅಂಟು : ಜಿಗಿ : ಕಣ್ಣುಗಳಲ್ಲಿ ಶ್ಲೇಷ್ಮವೆರಸಿ ನೀರು ಬೊಂಪುಬೊಂಪಾಗಿ ಸುರಿಯಲು ಮೇವು ಬಿಟ್ಟು ಜಡನಾಗಿ ನಿಂತಿರಲು (ಅಶ್ವಪೀ. ೬೨-೯); ಬಿಳಿದಾಗಿ ನೀಟಾಗಿ ಕೊಂಚ ಬೊಂಪಾಗಿ ಪಿರಿದು ಬಲ್ಲಿತಾಗಿ ಇದ್ದೊಡೆ ಮದನಜಲಮೆಂಬದು (ಕಾಮಶಾ. ೨೩೩).

[ದೇ.॥ ತಮಿ. ವಟುಮ್ಬು; ಮಲ. ವಟುಪ್ಪು; ತೆಲು. ಬಂಪು= ಹಲ್ಲಿನ ಮೇಲಿನ ಕೂಳೆ]

ಬಂಪು$_2$, ಬೊಂಪು$_2$ (ನಾ). ಒಂದು ಬಗೆಯ ಮೀನು : ಸೀಗಡಿ ಕೊರವಂ ಬಂಪು . . . ಹಂದಿಗನಾನೆಮೂಗಮದಲೆಂಬಗಣಿತಶಫರಾಳಿ ಗಳನೆ ತೆಗೆದರ್ ಬೇಡರ್ (ಕ್ರಿಪುಪಿ. ೨೬-೯೦). **ಬೊಂಪು$_2$** : ಸಿಸಿಲು ಬೊಂಪು ಸವಿವಾಯ ಗೊದಳೆ ಗಱ ಮೆಱೆವ ಕಾಗೆಂಡೆ . . . ಆನೆಮೊಗನೆಂಬ ಮೀನ್ಗಳಂ ಗುದಿಗೆಯ್ದರು (ಹಕಕಾ. ೩-೧೫). [?]

ಬಂಬಣ (ಅ). ಹೆಚ್ಚಾಗಿ, ಅಧಿಕವಾಗಿ ಎಂಬ ಅರ್ಥವನ್ನು ಕೊಡುವ ಒಂದು ಅನುಕರಣಾವ್ಯಯ. 'ಬಂಬಲ', 'ಬಂಬಳ' ಪರಾ.

ಬಂಬಣ ಬಾಡಿಸು=ಅಧಿಕವಾಗಿ ಸೊರಗಿಸು,—ಒಣಗಿಸು : ಪಗಲೊಳೊರ್ಮೆಯುಂ ತಮ್ಮನಂಡಲೆದು ಬಂಬಣ ಬಾಡಿಸಿ ಬಿಡದೆ ಕಡುಗಾಯ್ದು ಕಣ್ಣೊಳುಳ್ಕುವುಷ್ಣಕರನ ಬಿಸುಗದಿರ್ಗಳೆಯ್ದೆ ಮೆಯ್ದೆಗೆದುವೊ (ಪರ್ಶಪು. ೬-೨೩ ಪ). ಬಂಬಣಂ ಬಾಡು=ಅಧಿಕವಾಗಿ ಒಣಗು,—ಸೊರಗು : ವಿರಹಾಕುಳಿಯಲರ್ದ ಲತೆಗಳಂ ಪೊರ್ದಲಣ್ಮದೆ ತನ್ನಂತೆ ಬಂಬಣಂ ಬಾಡಿರ್ದ ಜಾದಿಯಂ ನೋಡಿ (ಪಾರ್ಶ್ವಪು. ೯-೬೯ ಪ).

ಬಂಬಲ್$_1$, ಬಂಬಲು$_1$, ಬೊಂಬಲ್ (ನಾ). ೧. ಗುಂಪು ; ಸಮೂಹ : "ಬಂಬಲ್, ತುಱುಗಲ್ . . . ಗುಮ್ಮಿ, ಗೊಂದಣಿ (ಉಂದಲ್)—ಈ ೪೦ ಸಮೂಹಂ" (ಕಸಗಾ. ೦೦-೨೨೨); ಮದಗಜಗಂಡಸ್ಥಳಂಗಳೊಳೆಱಗಿ ಮೊರೆವ ತುಂಬಿಯ ಬಂಬಲ್ಗಳೆ ವಿಮುಖೀಭೂತಂಗಳಾದುವು (ಸಂಪಶಾ. ೯-೯೯ ಪ); ಮಿಳಿರ್ದಾಡುವ ತುಂಬಿಯ ಬಂಬಲಂತೆ . . . ಸೋಲಿಸದೆ ಕಾವನ ಕಬ್ಬಂ (ಕಬ್ಬಿಗಾ. ೦೯). **ಬಂಬಲು$_1$** : ೧. "ಬಂಬಲೆನಲು ಬಳಗಮೆನಲ್ ಶ್ರೇಣಿ" (ಕಸರ. ೬೯); ಬಂಬಲು ತುಱುಗಲಾಗಿರೆವೊಳಿಸಿ ಪೊಱಮಡುವ ಕಾಲನವಣಿಗಳೊಳಮೇಂ ನವವಿಧದ ಬಿನ್ನಣಮಂ ನಿನ್ನಾಳ್ದಂಗೆ ಬಿನ್ನವಿಸು (ಅನಂಪು. ೨-೩೦ ಪ). ೨. ಒಟ್ಟಿಲು; ರಾಶಿ : ಬಸಿವ ಬಲುಜಿಗಿಯ ಕರುಳ ಬಂಬಲು (ಕುಪ್ಯಾಕ್ರೋ. ೨-೫೬). ೩. ಜೊಂಪೆ; ಗೊಂಚಲು : ತಾರಗೆಗಳ ಬಂಬಲಂತೆ ತೋರಮುಡಿಯೊಳೆಳೆಮುತ್ತಿನ ಬಲೆಯ ಶೃಂಗಾರವೊಪ್ಪಿರೆ (ಭರತ. ೪೦-೫೦). ೪. ರಭಸ; ವೇಗ: 'ಬಂಬಲ್ವರಿ' ಪರಾ. **ಬೊಂಬಲ್**: ೨. ಪಾಲ್ಗಡಲ ತೆರೆಯ ಬೊಂಬಲ್ಗಳಂ ಜೇಂಗೊಡನ ಸಾಲ್ಗಳಂ (ಪಾರ್ಶ್ವಪು. ೩-೦-೦). [ದೇ.॥ ತುಳು. ಬೊಂಬುಳಿ]

ಬಂಬಲ್$_2$ (ಅ). ಹೆಚ್ಚಾಗಿ, ಬಹುವಾಗಿ ಎಂಬ ಅರ್ಥವನ್ನು ಕೊಡುವ ಒಂದು ಅನುಕರಣಾವ್ಯಯ. 'ಬಂಬಲ', 'ಬಂಬಳ' ಪರಾ.

ಬಂಬಲ್ಮಾಡು=ಅಧಿಕವಾಗಿ ಸೊರಗು,—ಬಾಡು : ಕೂಟ್ವಡೆಯದ ನಂತೆ ಬಂಬಲ್ಬಾಡುತ್ತುಂ (ರರ್ಮಾಪ್ಯು. ೦-೦೯೯).

ಬಂಬಲ (ಅ). ಅಧಿಕವಾಗಿ, ಹೆಚ್ಚಾಗಿ ಎಂಬ ಅರ್ಥವನ್ನು ಕೊಡುವ ಒಂದು ಅನುಕರಣಾವ್ಯಯ. 'ಬಂಬಳ' ಪರಾ.

ಬಂಬಲಂ ಬಾಡು, ಬಂಬಲ ಬಾಡು=ಅಧಿಕವಾಗಿ ಸೊರಗು,—ಬಾಡು : ಪದ್ಮೋದರಂ ಪಥಶ್ರಮದಿಂ ಪರಿಶ್ರಾಂತನಾಗಿ ಪಸಿವಳುರೆ ಬಂಬಲಂ ಬಾಡಿ ಬಟಲ್ವುದುಂ (ಮಹಾಸ್ಕಂ. ೧೬-೯೫); ಪೆಂಡಿರುಂ . . . ಅಡರ್ಪಿಲ್ಲದೆ ಕಲ್ಪವೃಕ್ಷಮುಡಿದು ಕೆಡೆಯೆ ಬಂಬಲ ಬಾಡಿದ ವನಲತೆಗಳುಮಂ ಪೋಲ್ತು (ಸಂಪಶಾ. ೦೯-೯ ಪ); ಉಣಲಿಲ್ಲದೆ ಪಸಿವಿಂ ಬಂಬಲ ಬಾಡಿ (ರರ್ಮಾಪ್ಯು. ೬-೦೭೮).

ಬಂಬಲಿಸು, ಬಂಬಳಿಸು, ಬೊಂಬಾಳಿಸು (ಕ್ರಿ). ೧. ಗುಂಪಾಗು ; ಸಂದಣಿಸು : ತುಱುಗೆಮೆಯ ತೆರ್ಕೆಯೊಳ್ ಬಂಬಲಿ [ಶಾಕಾಂ. ೪]ಪ ಕಣ್ಬನಿಗಳೊಸರೆ (ಪರ್ಶಪು. ೯-೬೨ ಪ); ಹೂಗಿಡಮಲರಿಹುದೇತಕ್ಕೆ ? ತುಂಬಿಯು ಬಂಬಲಿಸಲಿ ಎಂದು (ಗಜೇಶ. ೬೩-೯). ಬಂಬಳಿಸು : ೧. ಮೇಲಿನ 'ವರ್ಧಪು' ಪ್ರಯೋಗದ ಪಾಠಾಂತರವನ್ನು ನೋಡಿ. **ಬೊಂಬಾಳಿಸು**: ೨. ಹರಡು ; ವ್ಯಾಪಿಸು : ಬಳಲಿದನು ಬೊಂಬಾಳಿಸಿದ ಭಾಸುರದ ರಕ್ತದಲಿ (ತೊರರಾ. ೩-೦೦-೨೮). [ಬಂಬಲ್$_1$ + —ಇಸು$_2$]

ಬಂಬಲು$_1$ 'ಬಂಬಲ್$_1$' ನೋ.

ಬಂಬಲು$_2$ (ನಾ). ಎಳನೀರಿನ ತೆಂಗಿನ ಕಾಯಿಯಲ್ಲಿರುವ ತೆಳುವಾದ ತಿರುಳಂ; ಗಂಜಿ: ಬಂಬಲು ಗೋರಿಕೊಡ್ಲ ಬುದ್ಧಿ! (ಸನ್ನೂರು. ೦೬೦). [?]

ಬಂಬಲುಗರುಳು 'ಬಂಬಲ್ಗರುಳ್' ನೋ.

ಬಂಬಲುಗಿಡಿ (ನಾ). ಕಿಡಿಗಳ ಗುಂಪು,—ರಾಶಿ : ಹೊಸಮಸೆಯ ಬಾಯ್ದಾರೆಗಳ ಬಂಬಲುಗಿಡಿಯ ಬಾಣಾಳಿಗಳಲೀತನ ಹೂಳಿದನು (ಕುಪ್ಯಾಕ. ೨೦-೨೩) ; ಕಡಲೊಳಿಡಲೊಡನೆ ಬಂಬಲುಗಿಡಿಯ ಗಡಣದಿಂ ಬಡಬನೊಡಗೂಡಿ (ಭಾಸ್ಕಸ. ೦-೯). [ಬಂಬಲು$_1$ (< ಬಂಬಲ್$_1$) + ಕಿಡಿ]

ಬಂಬಲುಗುರುಳ್ 'ಬಂಬಲ್ಗುರುಳ್' ನೋ.

ಬಂಬಲ್ಗಡಿ (?). (?) : ಬರಿಗಂಡಂ ಪಿಣಿಲೇಱ ರೋಮಮುಡಿ ದಿರ್ಬೆನ್ನಾಗೆ ಮುಂಗಾಲಗಲ್ತರೆ ಬಿರ್ಕುರ್ವೆ ಮೊಗಂ ಕರಂ ಪೆಗಲ ಬಿಣ್ಟಂ ಜೋಲ್ವ ಬಾಲಂ ಮುಟುಂಕಿರೆ ಬಂಬಲ್ಗಡಿವಂ ಪೊದಟ್ಟಗಸೆವೂಗೊಂಬೊಪ್ಪೆ ಕೋಟ್ಕುಟ್ಟಿ ಪೆರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೇಕರಂ ಸೂಕರಂ (ಸಂದ್ರಪು. ೫-೬೦). [?]

ಬಂಬಲ್ಗರುಳ್, ಬಂಬಲುಗರುಳು, ಬಂಬಲ್ಗರುಳು (ನಾ). ಜೊಂಪೆ ಜೊಂಪೆಯಾಗಿ ಹೆಣೆದುಕೊಂಡಿರುವ ಕರುಳು ; ದೊಂಡೆಕರುಳು : ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋಟ್ದಿಕ್ಕಿ ಬಂಬಲ್ಗರುಳ್ಗಳಿನಾನಲ್ಲೆ ವಿಳಾಸದಿಂ ಮುಡಿಯಿಪೆಂ ಪಂಕೇಜಪತ್ರೇಕ್ಷಣೇ (ಸಂಪಶಾ. ೬-೦೨). **ಬಂಬಲುಗರುಳು** : ಅರಿದ ಕೊರಳಿನ ಬಸಿವ ಬಂಬಲುಗರುಳ ಜರಿವ ಕಪಾಲದೊಗುನೆತ್ತರ ರಣಾವನಿ ಕಱೆವುತಿರ್ದುದು ರೌದ್ರಮಯರಸವ (ಕುಪ್ಯಾಕ್ರೋ. ೦೫-೬೯). **ಬಂಬಲ್ಗರುಳು** : ಒಡಲನೊಚ್ಚತಗೊಂಡವಂಬಿನ ಕುಡಿಗೆ ನೆಱೆಯದು ರಕ್ತಜಲ ಬಳಿವಿಡಿದು ಕವಿವಂಬುಗಳು ಬಂಬಲ್ಗರುಳ ಸೇದಿದವು (ಕುಪ್ಯಾಕ್ರೀ. ೧೦-೫). [ಬಂಬಲ್$_1$ + ಕರುಳ್]

ಬಂಬಲ್ಗರುಳು 'ಬಂಬಲ್ಗರುಳ್' ನೋ.

ಬಂಬಲ್ಗುರುಳ್, ಬಂಬಲುಗುರುಳ್ (ನಾ). ಒತ್ತಾದ ಕೂದಲು ; ದಟ್ಟವಾದ ಕೇಶರಾಶಿ : ಅಮರಾಂಗನೆಯರ ಬೀಸುವ ಚಾಮರದ ಗಾಳಿಯಲಂಪಿನೊಳಲ್ಲುಗುವ ಬಂಬಲ್ಗುರುಳ್ಗಳ ಬಂಬಲಿಂದಂ ತಳರ್ವ ಚಿನ್ನಪೂಗಳನವಯವದೊಳೆ ಸಯ್ತು ಮಾಡುವ ಕೆಯ್ತಮುಮಂ (ಅದಿಪು. ೯-೯ ಪ) ; ಮಿಳಿರ್ವ ಬಂಬಲ್ಗುರುಳ್ಗಳೆಂಬ ತೊಡಂಕುವಲೆ ಬಸಂತನ ಕೆಳೆಯನೆಂಬೆರಲೆಯಂ ಸಿಲ್ಕಿಸೆಯುಂ (ಕಬ್ಬಿಗಾ. ೦೨೩). **ಬಂಬಲುಗುರುಳ್** : ದೀರ್ಘನಯನದ ಬಲುಮೊಲೆಯ ಬಾಸೆಗಳ ಬಂಬಲುಗುರುಳ . . . ಪುಳಿನಜಘನಸ್ಥಳದ ದಾನವಸತಿಯರಿರ್ದರ್ (ತೊರರಾ. ೫-೨-೬೯).

[ಬಂಬಲ್$_1$ + ಕುರುಳ್$_1$]

ಬಂಬಲ್ಗೊಂಬು (ನಾ). ಎಲೆಯ ಜೊಂಪೆಗಳಿಂದ ತುಂಬಿರುವ ಕೊಂಬೆ ; ಎಲೆಗಳಿಂದ ಕೂಡಿ ದಟ್ಟವಾದ ಶಾಖೆ : ನೆಗೆದು ಲಂಬಿಸಿದ ಬಂಬಲ್ಗೊಂಬುಗಳಿನಿಂಬಾದಶೋಕಾನೋಕಹದಿಂಬಿನೊಳೊಂದಿ ಮಂದಯಿಸಿ ನೀಳ್ದು ಪರ್ವಿ ಪೆರ್ಮೆವೆತ್ತ ಕರ್ಮುಗಿಲೊಳಗೆ (ನೇಮಿಪು. ೫-೩೨ ಪ).
[ಬಂಬಲ್$_1$ + ಕೊಂಬು$_1$]

ಬಂಬಲ್ಗೊಳ್ (ಕ್ರಿ). ಗುಂಪಾಗು ; ಸಾಂದ್ರವಾಗು ; ಮಂದಯಿಸು : ಚೆಂಬಾಯ್ದೆರೆಯಂ ಬಂದುಗೆಯೆಂಬಾಸೆಯಿನೊಸೆದು ಮುಸುಱಿ ಬಂಬಲ್ಗೊಂಬಾ ತುಂಬಿಗಳೆನೆಯೆಳಮಿಸೆಯದೇಂ ಬಳೆದುದೊ ಚಂದುಮೊಗದ ಕಱೆಗೆಱೆದೊರೆವೊಲ್ (ಜಕಪ. ೪-೧೩೮). [ಬಂಬಲ್$_1$ + ಕೊಳ್$_1$]

ಬಂಬಲ್ಜಡೆ, ಬಂಬಲ್ಜೆಡೆ (ನಾ). ಹೆಣೆದುಕೊಂಡಿರುವ ಕೂದಲು ; ಜಟೆ : ನೀಳ್ದ ಬಂಬಲ್ಜಡೆ ನೆರೆ ಮೆರೆಯಲ್ ಸ್ಥಾಣುವೋಲ್ ನಿಶ್ಚಲತ್ವಂ ಬೆರಸಾದಂ ಸೂರ್ಯಬಿಂಬಕ್ಕಭಿಮುಖನೆನಿಪೀ ಮೌನಿ (ಶಾಕುಂತ. ೦೦೨-೧೬೪). **ಬಂಬಲ್ಜೆಡೆ** : ಎಳಮಿಂಚಂ ಪೋಲ್ವ ಬಂಬಲ್ಜೆಡೆ ಬಳೆದ ಘನಶ್ಮಶ್ರು . . . ಮಿಸುಗೆ ಚರಿಯಿಪರ್ ತಪ್ಪಲೊಳ್ ತಾಪಸೇಂದ್ರರ್ (ರಾಜಶೇ. ೦-೦೩೨). [ಬಂಬಲ್$_1$ + ಜಡೆ$_1$]

ಬಂಬಲ್ಜೆಡೆ 'ಬಂಬಲ್ಜಡೆ' ನೋ.

ಬಂಬಲ್ದಂಬುಲ (ನಾ). ಕಟ್ಟುವೀಳೆಯ : ಕರಂ ಮೆಯ್ವೆತ್ತು ಮುಯ್ವಾಗಮಾಗಡುಮಾರ್ಗಂ ಕುಡುತಿರ್ಪ ಕಪ್ಪುರದ ಬಂಬಲ್ದಂಬುಲಂ (ಸಂಪಶಾ. ೯-೦೦೪). [ಬಂಬಲ್$_1$ + ತಂಬುಲ]

ಬಂಬಲ್ದಗುಳ್ (ಕ್ರಿ). ದಟ್ಟಯಿಸು ; ಸಾಂದ್ರವಾಗು ; ಅಧಿಕವಾಗು : ಹೇಮಂತದೊಳ್ ಮದಮಂ ತಗು[ಳ್ದು] ಶಿಶಿರದೊಳುಱಿದು ಮತ್ತಂ ಬಸಂತದೊಳ್ ಬಂಬಲ್ದಗುಳ್ದ ಮದನಮದಾನೇಕಪಕ್ಕೆ ಪಕ್ಕಾದಳೀಕೆ (ಶಾಂತಿಪು. ೬-೬೬ ಪ). [ಬಂಬಲ್$_1$ + ತಗುಳ್$_1$]

ಬಂಬಲ್ದೆರೆ (ನಾ). ಒಂದಾದ ಮೇಲೊಂದರಂತೆ ಬರುವ ಅಲೆ ; ತರಂಗಮಾಲೆ : ಎಡೆಗುಡದೆ ನೂಂಕಿ ಮೆಲ್ಲನೆ ತಡಿಯಂ ಸಾರ್ಚಿದ ಪುದಿದಱ ಬಂಬಲ್ದೆರೆಗಳ್ (ಸಂಪಶಾ. ೫-೫೫) ; ಪಾಲ್ದುಂಬಿದ ಸಾಲ್ದೆನೆಗಳ ನೆಲ್ದಱುಗಲನೊಲ್ದು ಸೀಳೆ ಗಿಳಿ ಭಯಭರದಿಂ ಜೋಲ್ದಿಳೆಗಿಳಿವಂತಿರೆ ಬಂಬಲ್ದೆರೆಯೊಳ್ಪೊಳೆದು ಮಡಿಯ ನೀರೊಳ್ತೋರ್ಕುಂ (ರಾಜಶೇ. ೨-೦೩).
[ಬಂಬಲ್$_1$ + ತೆರೆ$_4$]

ಬಂಬಲ್ದೊಱೆ (ನಾ). ತೊರೆಗಳ ಸಮೂಹ : ಅಲರ್ವಂಡಿಂದಾದ ಬಂಬಲ್ದೊಱೆಗಳ ನಲವಿಂ ದಾಂಟಿ ಪೋಪನ್ನೆಗಂ (ಕಾಸ್ಯಸಾ. ೦೧೩).
[ಬಂಬಲ್$_1$ + ತೊಱೆ$_2$]

ಬಂಬಲ್ನಿಱಿ (ನಾ). ಒತ್ತಾದ ನೆರಿಗೆ ; ದಟ್ಟವಾಗಿರುವ ನಿರಿಗೆ : ಬಂಬಲ್ನಿಱಿ ಮದನನ ನನೆಯಂಬಿನ ಪೊದೆಯೆನಿಸೆ ಕಣೆಯಮಳವಟ್ಟಿರೆ ಮುಯ್ವಂ ಬಳಸಿದ ಮೇಲುದು ಕುಚಮಂ ಬಿಗಿದಿರೆ ಗುರುನಿತಂಬೆ ದುಗುಲಮನುಟ್ಟಳ್ (ಜಗಂ. ೦೦-೦೦೬). [ಬಂಬಲ್$_1$ + ನಿಱಿ$_2$]

ಬಂಬಲ್ಮಿದುಱ್ (ನಾ). ಒಂದರೊಡನೊಂದು ತೊಡರಿಕೊಂಡಿರುವ ಮಿದುಳಂಗಳ ರಾಶಿ : ಬಂಬಲ್ಮಿದುಱ್ ಪಾಯ್ತರೆ . . . ಕಾದಿತ್ತು ಖಡ್ಗಿಪ್ರತಾನಂ (ಜಗಂ. ೬-೫೬). [ಬಂಬಲ್$_1$ + ಮಿದುಱ್]

ಬಂಬಲ್ಮುಡಿ (ನಾ). = ಬಂಬಲ್ಗುರುಳ್ : ಜೋಲ್ದಿರ್ದ ಬಂಬಲ್ಮುಡಿ ಶಿಥಿಲತೆವೆತ್ತಿರ್ದ ನೀವೀಭರಂ ಕಣ್ಗೊಳಿಪನ್ನಂ ಲೀಲೆಯಿಂದುಪ್ಪವಡಿಸಿದಳೆ ಹೈದ್ಯಾಂಗಿ ಶಯ್ಯಾಗ್ರದಿಂದಂ (ಜಗಂ. ೨-೬೬). [ಬಂಬಲ್$_1$ + ಮುಡಿ$_3$]

ಬಂಬಲ್ವನಿ (ನಾ). ಎಡೆಬಿಡದೆ ಸಂರಿಯುವ ಹನಿ : ಪನಿತ ಮೊಲೆವಾಲ ಬಂಬಲ್ವನಿಗಳೊ ನಸುನಗೆಯೊ ಮೊಳೆಗಳೋ ಪೊಳೆದಪುವೆಂಬಿನಮೊಗದ ಪಲ್ಲಿನೊಪ್ಪುವ ತನಯನ ನಗೆಮೊಗಮನೆಂದು ಪೇಱ್ ಕಂಡಪೆನೋ (ಅರ್ಥಶೇ. ೦-೯೪) [ಬಂಬಲ್$_1$ + ಪನಿ$_2$]

ಬಂಬಲ್ವರಿ (ಕ್ರಿ.) ರಭಸವಾಗಿ ಓಡು : ಧಾವಿಸು : ನೇಲ್ವ ಪೆಣಕ್ಕೆ ಪರ್ದೆಱಗೆ ವೈರಿಯ ನಾಲ್ಕುಬಲಕ್ಕಮೊಂದೆ ಬಂಬಲ್ವರಿಯುತ್ತುಮಿರ್ದುದು ಜಯದ್ವಿರದಂ (ಕಾವ್ಯಾವ. ೬೮) ; ಬಂಬಲ್ವರಿಯುತ್ತುಂ ನೆಗೆದಂಬುದಮಂ ತೇನಮಿಱಿಯುತುಂ . . . ಅದೇಂ ಬಿನದಮನಮರಪತಿಗೆ ತೋಱಿದುದೊ ಗಜಂ (ಸಂಧ್ರಪು. ೦೨-೬೪) ; ಮಸಗಿದ ಮಿಟ್ಟುವೆ ಮದಗಜದೆಸಕಮನೊಳ ಕೊಂಡುದೆನಿಸಿ ಭೀಮನ ಬಲಮಂ ದೆಸೆಗೆಡಲಱಿಯಟ್ಟುತ್ತುರ್ವಿಸೆ ಬಂಬಲ್ವರಿದು ತೊತ್ತಱಂದುಱಿಯುತ್ತುಂ ಬಂದು (ಮಹಾಸೇ. ೦೨-೧೩೮).
[ಬಂಬಲ್$_1$ + ಪರಿ$_2$]

ಬಂಬಲ್ವರಿಗೊಳ್ (ಕ್ರಿ). ದಟ್ಟವಾಗಿ ವ್ಯಾಪಿಸು ; ಸಾಂದ್ರವಾಗು : ಕಾಲ್ವಿಡಿದಿರ್ದೊಡಾಂ ಚರಣಪಲ್ಲವದಿಂದೊದೆದೆತ್ತಿ ಸುತ್ತಿ ಬಂಬಲ್ವರಿಗೊಂಡು ನೀಳ್ದು ಕಿಸುವೇಱಿದ ಕೇಕರಕಾಮಪಾಶದಿಂ ಕೊಲ್ವವೋಲ್ (ಲೀಲಾವ. ೦೪-೬೬). [ಬಂಬಲ್$_1$ + ಪರಿಗೊಳ್]

ಬಂಬಲ್ವರಿಯಿಸು (ಕ್ರಿ). ರಭಸವಾಗಿ ಓಡಿಸು ; ವೇಗವಾಗಿ ಧಾವಿಸುವಂತೆ ಮಾಡು : ಎರಡುಂ ಭಾಗಂಗಳೊಳ್ ತನ್ನಣುಗಿನ ಸುತರುನ್ಮತ್ತ ನಾಗಂಗಳಂ ಜೀಂಕರಿಸುತ್ತಿಂಬಾಗಿ ಬಂಬಲ್ವರಿಯಿಸೆ (ಶಾಂತಿಪು. ೫-೩೯) ; ಕರಿಯಂ ಪಾಯ್ದೇಱಿ ಬಂಬಲ್ವರಿಯಿಸಿ ಗಿರಿಯೊಳ್ ಪೋರಿಸುತ್ತುಂ ಸರತ್ಕೇಸರಿ ಕಾಸಾರಕ್ಕೆ ಕೊಂಡುಯ್ದುಪುದಿದು (ಲೀಲಾವ. ೬-೨೪) ; ರಾಕ್ಷಸಧ್ವಜ ಬಲಕ್ಕೆ ತಾರ್ಕ್ಷ್ಯಧ್ವಜರ ಬಲಮುಗಿದು ಸುಗಿವುದುಂ ಬಲದೇವಂ ಕಂಡು ತನ್ನ ಗಂಧಗಜಮಂ ಬಂಬಲ್ವರಿಯಿಸಿ ವಿದ್ವಿಡ್ಬಲದ ವೀರರಂ ವಿನಾಶಕ್ಕೆ ತಪ್ಪುದುಂ (ಮಹಾಸೇ. ೬-೮೩ ಪ). [ಬಂಬಲ್$_1$ + ಪರಿಯಿಸು]

ಬಂಬಲ್ವೆಳಗು (ನಾ). ದಟ್ಟವಾದ ಬೆಳಕು ; ಸಾಂದ್ರವಾದ ಕಾಂತಿ : ಜೋಲ್ವ ಮೇಲುದನಿನಿಸು ಮುಸುಕುತಲರ್ಗಣ್ಣ ಬಂಬಲ್ವೆಳಗುಗಳ ಸೂಸುತೆ (ಸದ್ಮರಾ. ೬-೨೦). [ಬಂಬಲ್$_1$ + ಬೆಳಗು$_2$]

ಬಂಬಲ್ಸರಿ (ನಾ). ಎಡೆಬಿಡದ ಮಳೆ ; ಜಡಿಮಳೆ : ಮೆಲ್ಸರಿ ಸೂಳ್ಸರಿ ಮುಗಿಲೊಳ್ಗಲ್ಸರಿ ತೆಳ್ಸರಿ ಕರಂ ಪೊನಲ್ವರಿಯಿಪ ಬಂಬಲ್ಸರಿ ಬಲ್ಸರಿ ಕಾಲ್ಸರಿ ಸಾಲ್ಸರಿ ಸಲೆ ಸುರಿದು ಕಱಿದುವಿರುಳುಂ ಪಗಲುಂ (ರಾಜಶೇ. ೬-೦೦೨). [ಬಂಬಲ್$_1$ + ಸರಿ$_6$]

ಬಂಬಳ (ಅ). ಹೆಚ್ಚಾಗಿ, ಅಧಿಕವಾಗಿ ಎಂಬರ್ಥವನ್ನು ಕೊಡುವ ಒಂದು ಅನುಕರಣಾವ್ಯಯ : ಕಂಬನಿಯೊಳೋಲಾಡಿ ಬಂಬಳ ಮೊಗಂಬಾಡಿ ನೋವಿಂ ಕರಂ ಬಟಲಲು (ಜಗಂ. ೦೬-೦೦೬ ರಗಳೆ). 'ಬಂಬಲ 'ಪರಾ.

ಬಂಬಳಂ ಬಾಡು, ಬಂಬಳ ಬಾಡು = ಹೆಚ್ಚಾಗಿ ಒಣಗು ; ಅಧಿಕವಾಗಿ ಸೊರಗು,—ಬತ್ತು : ಪಸಿವಿಂದಂ ತೃಷೆಯಿಂದಂ ಪಥಶ್ರಮದಿಂದಾದಮಾನುಂ ಸೇದೆಗೆಟ್ಟು ಬಂಬಳಂ ಬಾಡಿರ್ಪನ್ನೆಗಂ (ವಡ್ಡಾರಾ. ೧೦೦-೨೩); ಕಾಂತೆಯರ್ . . . ನಿಜವಾಸದ ವಿಳಾಸವಿಹಗಂಗಳಂ ನೋಡಿ ಬಂಬಳಂ ಬಾಡಿ (ಶುಷ್ಪಪು. ೧೩-೯೭ ಪ) ; ಆ ಬಾಳೆ ಕಾದ ಪುಡಿಯೊಳ್ ಬಿರ್ದೆಳವಾಳೆಯಂತೆ ಬಂಬಳ ಬಾಡಿ (ಸುಳುಮಾ. ೦೨-೨೪ ಪ) ; ಬಂಬಳ ಬಾಡಿದ ದೇಹ ಕಟ್ಟಳಿದ ತುಱುಂಬು ಕಂದಿದ ಮೊಗದಿಂದ . . . ಪಲುಂಬಿದರು (ಭರತ. ೬೦-೬೯). ಬಂಬಳನೆ ಬಾಡು = ಹೆಚ್ಚಾಗಿ ಸೊರಗು,—ಬತ್ತು : ಬಂಬಳ [ಶಾಕಾಂ. ಲ]ನೆ ಬಾಡಿ ಮಂಜಿಱಿದಂಬುಜಲತೆಯಂತಿರಿರ್ದ ಜಾನಕಿಯಂ ನೀಲಾಂಬರನೀಕ್ಷಿಸಿ (ಸಂರಾಮಾ. ೦೫-೪).

ಬಂಬಳಿಸು 'ಬಂಬಲಿಸು' ನೋ.

ಬಂಬಾಳ, ಬೊಂಬಾಳ$_2$ (ನಾ). ೧. ಕಣ್ಣು ಕೋರೈಸುವಂತಹ ಬೆಳಕು ; ಅತ್ಯಂತ ಪ್ರಕಾಶಮಾನವಾದ ಪ್ರಭೆ : 'ಬಂಬಾಳದೀವಿಗೆ' ಪರಾ. **ಬೊಂಬಾಳ$_2$** : ೧. 'ಬೊಂಬಾಳದೀಪ', 'ಬೊಂಬಾಳದೀವಿಗೆ' ಪರಾ. ೨. ಕಣ್ಣು ಕೋರೈಸುವ ಪ್ರಭೆಯುಳ್ಳ ದೀಪ : ಚಂದನದ ತೈಲದಿಂದುರಿವ ಬೊಂಬಾಳಂಗಳಿಂದೆ . . . ಇರುಳ್ಕಂಗೊಳಿಸು

ತಿರೆ (ಸ್ವಯಂ. ೨೯-೨೬); ಜಾರಚೋರರತ್ತಣಿಂ ಭೀತಿಯಣಂ ನಾಡೊಳಿಲ್ಲೆನೆ ಬಾಗಿಲಂ ಪಡಿದೆಱೆದು ಬೊಂಬಾಳಂಗಳನುರಿಯಿಸಿ ತಾಂ ನಿದ್ದೆವೋದ ಸಜ್ಜನರ ಸಜ್ಜುಗೊಂಡ ಬೀಡುಗಳ ಸಾಲ್ಗಳಿಂ . . . ಕೇರಿಗಳ್ ಸೊಗಯಿಸೆ (ರಾಮಾಶ್ವ. ೨೬-೨೦); ಮುನಿಪ ಕಾಲಂಗೆಯ್ದನಿನ್ನುರಿವ ಬೊಂಬಾಳನಂದುವಂತಿವನ ಚಿತ್ತವಿಮೋಕ್ಷವಾಯ್ತು! (ಸ್ವಕಾಶ. ೯೯-೬೯೯).

[← ಮರಾ. ಬಂಬಾಳ್, ಬಂಭಾಳ್]

ಬಂಬಾಳದೀವಿಗೆ, ಬೊಂಬಾಳದೀವಿಗೆ (ನಾ). ಪ್ರಕಾಶಮಾನವಾಗಿ ಉರಿಯುತ್ತಿರುವ ದೀಪ; ಪ್ರಜ್ವಲಿಸುತ್ತಿರುವ ದೀಪ: ಬಂ [ಶಾಕಾಂ. ಬೊಂ]ಬಾಳದೀವಿಗೆ ಬೆಳಗಿತು ಬಾಲಾರ್ಕಬಿಂಬಗಳೆನೆ (ಕುರಾಸಾಂ. ೦೯-೩೯). **ಬೊಂಬಾಳದೀವಿಗೆ**: ಬೆಳಗಿದವು ಬೊಂಬಾಳದೀವಿಗೆ (ಕುಪ್ಯಾಕ್ರೋ. ೬-೯೩); ಬೆಳಗಿದವು ಬೊಂಬಾಳದೀವಿಗೆ ಲಕ್ಕಸಂಖ್ಯೆಯಲಿ (ಕೊಕಾ. ೩-೬-೩); ಹೂವಿನ ಗೊಂಚಲೆಂಬಂದದೆ ಬೊಂಬಾಳದೀವಿಗೆ ಮಱೆದುವಿಕ್ಕೆಲದೆ (ಸೋಕಪ. ೦೩-೬).

[ಬಂಬಾಳ + ದೀವಿಗೆ./ಮರಾ. ಬಂಬಾಳ್‌ದೀವಾ, ಬಂಬಾಳ್‌ದಿವಾ]

ಬಂಬಿಕನೂರ್ (ನಾ). ಒಂದು ಊರಿನ ಹೆಸರು: ಬಂಬಿಕನೂರ ಪೂರ್ವಿಗರ ಗೊಲುಕಿಗಾವುಣ್ಣನ ಮಗ (ಎಕ. IX, (S). ಹೊಸಕೋ. ೨೦೬-೩; ೦೦೦).

[? + ಊರ್]

ಬಂಬು$_1$ 'ಬೊಂಬು$_1$' ನೋ.

ಬಂಬು$_2$, ಬೊಂಬು$_2$ (ನಾ). ೧. ಕೊಳವೆ; ನಳಿಗೆ: ಬಂಬಿನ ಸಹಾಯದಿಂದ ಬಾವಿಯೊಳಗಿನ ನೀರು ಮೇಲೆ ತೆಗೆಯುತ್ತಾರೆ (ಮುಂಬಿಯಾ. ೩-೬೦). ೨. ಗಾಳಿಯ ಒತ್ತಡದಿಂದ ಕೂಗುವ ಸಾಧನ; ಸೈರನ್ನು: ಗಿರಣಿಯ ಬಂಬು ಕರೆಯುವುದು ಏಳು! (ಸೂರ್ಯಪಾ. ೩೦-೬); ಕೋಲಾಲಂಪೂರ ರೇಲ್ವೆವರ್ಕಶಾಪದ ಬಂಬು ಕೂಗಿಕೊಂಡಿತು (ಸಮಸಾ. ೦೨೬). ೩. ದೊಡ್ಡಪಾತ್ರೆ; ಹಂಡೆ: ಬಂಬಿನಲ್ಲಿಯ ನೀರು ಆರಿಲ್ಲವಷ್ಟೆ ಎಂದು . . . ಬದಿಗೆ ಇಟ್ಟ ಬಂಬಿಗೆ ಕೈಹಚ್ಚಿ ನೋಡಿದಳು (ಕ್ಷಿತಿ. ೧೬); ಮತ್ತೊಂದು ಮೂಲೆಯಲ್ಲಿ ಝುಗಝುಗಿಸುವ ಬಿಸಿನೀರಿನ ಬಂಬು (ಸಾಸಿಕಾ. ೨). **ಬೊಂಬು$_2$**: ೧. "ಬೊಂಬು = ಕೊಳವೆ" (ಶಾಸಕೋ. ೨೯).

[←ಅರಂ. ಹಿಂ. ಬಂಬಾ; ಮರಾ. ಬಂಬ್]

ಬಂಬುಚ್ಚು 'ಬಂಬೂಚು' ನೋ.

ಬಂಬೂಚು, ಬಂಬುಚ್ಚು (ನಾ). (ಕರಾ) ತೇವದಿಂದ ವಸ್ತುಗಳ ಮೇಲೆ ಬರುವ ಒಂದು ಬಗೆಯ ಕ್ರಿಮಿ: ಎಲ್ಲಕ್ಕು ಹಣ ತೆತ್ತು ಬಿತ್ತಿದರೂ ಆ ಹಂದಿ ಹರಿಣ ಮೊದಲಾದ ಕಾಡು ಪ್ರಾಣಿಗಳ ಕಾಟ ಬೇರೆ. ಬಂಬೂಚು ರೋಗವೂ ತಪ್ಪಿದ್ದಲ್ಲ (ಶಾಳಗಿ. ೦೦೯). **ಬಂಬುಚ್ಚು**: ಈ Racket ಕೃಷಿ departmentನವರಿಗೆ ಬಂಬುಚ್ಚು ಹಿಡಿಯಲಿಕ್ಕಾದೀತು (ಮುಗಿಯು. ೦೩೦).

[< ಬೂಜು$_1$?]

ಬಂಭರ (ನಾ). ತುಂಬಿ; ಭ್ರಮರ: ಗಂಡಸ್ಥಲದ ಮದಪರಿಮಳಕೆ ಬಂದೆರಗುತಿಹ ಬಂಭರವ ಪೊಡೆವ ವಿಶಾಲಕರ್ಣಾಂಚಲದ ಮಾರುತನ (ಆಪಂಠಾ. ೦-೦-೯); ಮೃದುರವದಿಂದಲೆಡಬಲದಿ ನಾದಿಸುವ ಕೋಗಿಲೆ ಶುಕಾಳಿಗಳ ಭೋರ್ಗರೆವ ಬಂಭರಗಳ . . . ನೋಡುತ್ತ (ಸಂಕಾರಾ. ೩-೯-೩೨).

[ಸಂ.]

ಬಂಭ್ರಮಿಸು (ಕ್ರಿ). ಅತಿಶಯವಾಗಿ ಸುತ್ತು,—ತಿರುಗು: ಎಂಭತ್ತು ನಾಲ್ಕುಲಕ್ಷಗುಣಗಳೆಂಬ ಗಂಭೀರದ ನೇಣ ಬಿಗಿದು ಬಂ[ಶಾಕಾಂ. ಸಂ] ಭ್ರಮಿಸದ ಧ್ಯಾನವೆನಿಪ ನೊಗವ ಮಾಡಿ ಸಂಭ್ರಮ ಮಿಗೆ ಹೂಡಿದನು (ಕ್ರಿಪುಸಾಂ. ೦೦-೦೦೮); ಕಂಗಳು ಬಂಭ್ರಮಿಸಿ, ಹಮ್ಮುಕ್ಕಿ ಜಂಗಮಿಸಿ ಎದೆ ಮೊಗ ಕೆಳಗಿಳಿಸಿ ನೋಡುತಿರೆ (ಸಜೀಗೀ. ೯೯-೯೦೯).

[ಬಂ$_0$ (ಪ್ರ ← ಸಂ. ಭ್ರಮ) + ಭ್ರಮಿಸು]

ಬಂಹಿಮ (ನಾ). ಹೆಚ್ಚಳ; ಆಧಿಕ್ಯ; ಅತಿಶಯ: ಬಂ [ಶಾಕಾಂ. ಬ್ರಂ] ಹಿಮವಚ್ಚಳಲಕ್ಷ್ಮಿಯ ಸಿಂಹಂಗಳನಂತಬಳನ ಪಾದಾಂತಿಕದೊಳ್ ಸಂಹತಿಗೊಂಡಿರ್ದಪುವೆನೆ ಸಿಂಹಾಸನಮೆಸೆದುದಮಳಮಣಿಖಚಿತಂಗಳ್ (ಲೀಲಾವ. ೬-೯೬); ಅಸುರಾರಿಯ ಪೊರ್ಕುಟಿ ಪದ್ಮಮಂ ಖರದ್ಯೋತಿಯ ಕೆಯ್ಯ ಕಂಜಮನಿದೆಯ್ದೆ ಸುರುಳ್ಚುಗುಮೆಂಬಿನಂ ಜಗತ್ಕೌತುಕಮಾಯ್ತನುಷ್ಣ ಮಹಿಮಂ (ಪುಷ್ಪಪು. ೬-೯೬).

[ಸಂ. ಬಂಹಿಮನ್]

ಬಕ (ನಾ). ೧. (ಯುಕ್ತಿ, ಮೋಸ ಹಾಗೂ ಜಾಗರೂಕತೆಗಳಿಗೆ ಹೆಸರಾದ) ಕೊಕ್ಕರೆ ಜಾತಿಯ ಒಂದು ಬಗೆಯ ಹಕ್ಕಿ: "ಬಕಃ, ಬಕೋಟಃ— ಈ ೨ ಬಕಂ" (ಹಲಾಯು. ೯೨-೯೬); ಬಕ ಕುರರಪಕ್ಷವಿಕ್ಷಿಪ್ತಕಂಜಕಿಂಜಲ್ಕ ಪುಂಜಪಿಂಜರಿತಾಚ್ಛೋದಕ ವರಿಪೂರ್ಣತಟಾಕಪ್ರಕರ ಸರೋನಿಕರರಂಜಿತಾಶಾವಲಯಂ (ಅಪಪು. ೦-೩೮); ಬೆಳುವ ಬೆಂಚಗ ಬೊಕ್ಕು ಬಕ ಮೀಂಬುಲಿಗ ಕೆಂಜರಿಗಣ್ಣ ಶಿಖಿ ಮಡಗೊಳಲೆ ಮುಖ್ಯವಿಹಂಗವಿವೆ (ಕೊಕಾ. ೩-೦-೩೩). ೨. ಕಪಟಿ; ವಂಚಕ; ಠಕ್ಕ. ೩. ಭೀಮಸೇನನಿಂದ ಹತನಾದ ಒಬ್ಬ ರಾಕ್ಷಸ: ನೇಸಱ್ ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ (ಪಾಂಪಾ. ೩-೨೬); ಬಕನಂ ಹಿಡಿಂಬನಂ . . . ಜರಾಸಂಧನನಿಕ್ಕಿ ಕೊಂದ ಬಲ್ಲಾಳ್ಮರುತ್ಸುತಂ ಕೇವಳನೇ (ಗದಾಯು. ೨-೯೬); ವಿಕಟಭುಜಬಲರೇಕಚಕ್ರದೊಳಕುಟಿಲರು ಭೂಸುರರ ರಕ್ಷಿಸಿ ಬಕನೆ ಮುಱಿದರು (ಕುಪ್ಯಾಲಿ. ೦೦ ಸೂಕನ). ೪. ಕೃಷ್ಣನಿಂದ ಹತನಾದ (ಕೊಕ್ಕರೆಯ ರೂಪದ) ಒಬ್ಬ ರಾಕ್ಷಸ: ಸಂದ ಪೂತನಿ ಬಕರೆನಿಪ್ಪವರಿಂದ ಕಿಱಿಯನುದಾರವಿಕ್ರಮನಿಂದು ಬಾಲಕರಾಟವನು ಮಾಣಿಸುವೆನು (ಶಿಪಗ. ೦೦-೦೨-೦೬). ೫. ಒಂದು ಬಗೆಯ ಗಿಡ: "ಶಿವಮಲ್ಲೀ, ಪಾಶುಪತಃ, ಏಕಾಷ್ಠೀಲಃ, ಬಕಃ, ವಸುಃ – ೫ ಬಕಪುಷ್ಪದ ಹೆಸರು, ಕೊಕ್ಕರೇ ಹುವ್ವಿನ ಗಿಡ" (ಸಿದ್ಧಾಂತಿ. ೦೩೦). ೬. ಖನಿಜಗಳನ್ನು ಸುಡುವ ಅಥವಾ ಘನಭಟ್ಟಿ ಇಳಿಸುವ ಒಂದು ಸಾಧನ: ಲಾವಾವನ್ನು ಬಟ್ಟಿ (ಬಕ)ಗಳಲ್ಲಿ ಕಾಯಿಸಿದರೆ, ಗಂಧಕವು ಕಾದು ಕರಗಿ, ಅನಿಲರೂಪವನ್ನು ತಾಳಿ, ಇನ್ನೊಂದು ಕಡೆಗೆ ಬಂದು, ಗಂಧಕವಾಗಿ ಗಟ್ಟಿಗಟ್ಟುವುದು (ಪಾಂಪ್ರ. II, ೭೩೯).

[ಸಂ.]

ಬಕಗ್ರೀವ (ನಾ). ಬರವಣಿಗೆಯಲ್ಲಿ ಉದ್ಧೃತಭಾಗಗಳನ್ನು ತೋರಿಸಲು ಬಳಸುವ ಚಿಹ್ನೆ; (" "): "ಬಕಗ್ರೀವದಲ್ಲಿ" ಎನ್ನುವುದು "in inverted commas" ಎಂಬುದಕ್ಕೆ ಕನ್ನಡ! ನಮ್ಮಲ್ಲಿ ಹಿಂದಿನಿಂದಲೂ ಇರುವ "ಹಂಸಪಾದ" ಎಂಬುದರ ಮಾದರಿಯ ಮೇಲೆ, ಈ "ಬಕಗ್ರೀವ"ವನ್ನು ಅನುವಾದ ಚಿಹ್ನೆ ಎಂಬ ಅರ್ಥದಲ್ಲಿ . . . ಬಳಕೆಗೆ ತಂದಿದ್ದರು (ಸಂಪುಕು. ೩೦).

[ಸಂ.]

ಬಕತರ (ನಾ). ಲೋಹದ ಜಾಲರಿಯಿಂದ ಕೂಡಿದ ಕವಚ: ದಂತದ ಸೂನಗೆ ಸೊಂಡಿಲೊಳಾಂತಸಿಮೈಗಮರ್ದ ಚಿಲೆಯ ಬಕತರ ಚೂಡಾಲಂತೊಳಪಾನೆಯನೇರ್ದಿದಿರಾಂತಂ ಧುರಕಾ ಬರೀದಯವನಾಧೀಶಂ (ಕೆಳಸ್ಯ. ೨-೨೬); ಭರಿಕೈಗಳೊಳಾಂತಸಿ ಬಕತರ ದಂತಂಗಳೊಳಮರ್ದ ಸೂನಗೆಯೆಸೆಯಲ್ ಕರಪದಮೊಗೆದೆಡೆಯಾಡುವ ಗಿರಿಕುಲಮೆನೆ ಕವಿದುವಾನೆವಿಂಡೆಣ್ದೆಸೆಯೊಳ್ (ಕೆಳಸ್ಯ. ೨-೨೮).

[←ಪಾರ. ಹಿಂ. ಬಕ್ತರ್, ಬಖ್ತರ್; ಮರಾ. ಬಕತರ್, ಬಕ್ತರ್, ಬಖತರ್, ಬಖ್ತರ್]

ಬಕಧ್ಯಾನ (ನಾ). ಬಕಪಕ್ಷಿಯು ತನ್ನ ಆಹಾರದ ಮೀನಿಗಾಗಿ ನಿಶ್ಚಲವಾಗಿರುವಂತೆ ಮಾಡುವ ಧ್ಯಾನ; ಕಪಟಧ್ಯಾನ: ಗೀರ್ವಾಣಭಾಷೆಯೊಳ್ ಸ್ವಸ್ತಿಯಂ ವಾಚಿಸಿದನೋಂಕಾರವೆರಸಿ, ಬಕಧ್ಯಾನಮಂ ನಿಂದಿ ಪೋಲಲ್ಲೆ ನಿಂದನು, ಬಗೆಯ ಬಾವಿಯಂ ರೆಪ್ಪೆವುಲ್ಲಿಂದಡಕಿ ಮುಚ್ಚಿ (ಶ್ರೀರಾಮಾ. ೨೯೩-೯೨೩).

[ಸಂ.]

ಬಕಬಂಧನ (ನಾ). (ಬಕಪಕ್ಷಿಯನ್ನು ಹಿಡಿಯುವ) ವಿಫಲವಾದ ಪ್ರಯತ್ನ : ಹೋದ ದಾರಿಯೆ ಹೋಕೆ ! ಬಕಬಂಧನಕೆ ವೃಥಾ ಯತ್ನಿಸದಿರೈ ಗೆಳೆಯ (ಹೆಚ್ಚಿಕ. ೦೭-೪೩). [ಸಂ.]

ಬಕಬಂಧನಕೌಶಲ (ನಾ). (ಆಲಂ)ಸರಳರೀತಿಯಿಂದ ಮಾಡಬಹುದಾದ ಕೆಲಸವನ್ನು ಕಠಿಣಮಾರ್ಗದಿಂದ ಮಾಡುವಿಕೆ ; ವೃಥಾಶ್ರಮ ಪಡುವಿಕೆ : ನಿಮ್ಮ ಮಾತು ಬಕಬಂಧನಕೌಶಲವೇ ಹೊರತು ಬೇರೆಯಲ್ಲ (ಪಕ್ಷಪೇ. ೬೦). 'ದ್ರಾವಿಡಪ್ರಾಣಾಯಾಮ' ಹೋ. [ಸಂ.]

ಬಕರ 'ಬಕರಾ' ನೋ.

ಬಕರಾ, ಬಕರ (ನಾ). ೧. ಗಂಡಾಡು ; ಹೋತ. ೨. (ಆಲಂ) ಏನೂ ತಿಳಿಯದವನು ; ದಡ್ಡ : ಈ ಕೇಶವರಾಯನಿಗೆ. ಅದೆಷ್ಟೂ ಮನಸ್ಸು ಚಲಿಸಲಿಲ್ಲವೆಂದರೆ ನಂಬುವ ಬಕರಾ ಯಾರು ? (ಬೆಂಗಬ. ೩೩) ; ಹತ್ತು ಗಂಟೆಗೆ ಒಬ್ಬ 'ಬಕರಾ'ನನ್ನು ಹಿಡಿಯಬೇಕಾಗಿದೆ. (ಎಡಹೆ. ೬೩). **ಬಕರ** : ೧. ಜೀವಣ್ಣ ಬೆದರಿದ ಬಕರನಂತೆ ಬೆಚ್ಚಿ ಹಿಮ್ಮೆಟ್ಟಿದ (ಪಾಮಸೆ. ೦೦೯). ೨. ಅಂಗಡಿಯವನಿಗೂ ಆ ಬಿದ್ದ ಬಕರನಿಗೂ ಮಾರಾಮಾರಿಯಾಯಿತು (ವೈದ್ಯವಿ. ೬೯). [←ಹಿಂ. ಬಕರಾ ; ಮರಾ. ಬಕರಾ, ಬಕರೀ, ಬಕರೇ. / ಸಂ. ಬರ್ಕರ]

ಬಕರೆ 'ಬಕ್ಕರೆ' ನೋ.

ಬಕವಿಡಂಬನ (ನಾ). ಸೋಗು ; ಕಪಟ : ವಿಕಳರಾವಿದನೆತ್ತ ಬಲ್ಲೆವು ಸಕಲಗುಣಸರ್ವಜ್ಞ ನಿನಗೀ ಬಕವಿಡಂಬನವೇ (ಕುಮಾಕ. ೨೨-೨೦). [ಸಂ.]

ಬಕವೃತ್ತಿ (ನಾ). ೧. ಮೋಸಗಾರಿಕೆ ; ಕಪಟ : ಬಕವೃತ್ತಿ ಪಿಸುಣತನ ಪರನಿಂದೆ . . . ದೋಷಾಕರಗಳು (ಜೀವಂಸ. ೩-೬೪) ; ಪರಸ್ತ್ರೀವ್ಯಸನ ವತ್ಯಾಚಾರ ಬಕವೃತ್ತಿ ಕೃತವಿನಾಶನ ಡಂಭ ಹಿಂಸಾರತಿ ನಿಜಾನ್ವಯಧರ್ಮ ಕರ್ಮಚ್ಯುತಿಗಳಿವು ದೋಷಾಂಕುರಂಗಳು (ಕುಮಾಕ. ೦೩-೦೪). ೨. ಮೋಸಗಾರ ; ವಂಚಕ. [ಸಂ.]

ಬಕವೇಸಿತನ (ನಾ). ಮೋಸದ ವ್ಯಭಿಚಾರ : ಬಕವೇಸಿತನದಿಂದೊಡಲ ಸೂಡಿಂಗಿರಲಾಱದೆ ಪುಸಿಗೂರ್ಮೆಯಿಂದೋಪಳನಪ್ಪಿಕೊಂಡು (ಧರ್ಮಾಮೃ. ೩-೩೩). [ಬಕ + ವೇಸಿ$_1$ (<ವೇಶಿ) + —ತನ]

ಬಕವೈರಿ (ನಾ). ೧. ಬಕನ ರೂಪದಲ್ಲಿದ್ದ ರಾಕ್ಷಸನನ್ನು ಕೊಂದವನು; ಕೃಷ್ಣ : (ಕಿ). ೨. ಬಕಾಸುರನನ್ನು ಕೊಂದವನು ; ಭೀಮಸೇನ : ಶುಕಮುನಿಯಂತೆ ಸ್ತುತಿಸಲಱಿಯೆ ಬಕವೈರಿಯಂತೆ ಧ್ಯಾನವ ಮಾಡಲಱಿಯೆ (ಪುರಂದ. ರಾ. ೧-೮೦-೧) ; ಆ ನೃಪಂ ಬಕವೈರಿಗಿಂತೆಂದನು (ಕೃಷ್ಣಾ. ೪-೬೦). [ಸಂ. ಬಕವೈರಿನ್]

ಬಕವ್ರತಿ (ನಾ). (ಮೋಸ ಮಾಡುವುದಕ್ಕಾಗಿ) ತಪಸ್ವಿಯಂತೆ ನಟಿಸುವವನು : ಸ್ವಾಮಿಕಾರ್ಯವಿಘಾತಕಂಗತಿಕಾಮುಕಗೆ ಮಿಥ್ಯಾಪ ವಾಡಿಗೆ ಭೂಮಿದೇವದ್ವೇಷಿಗತ್ಯಾಶಿಗೆ ಬಕವ್ರತಿಗೆ . . . ಪರಲೋಕವಿಲ್ಲ (ಕುಮಾಕ. ೪-೨೬). [ಸಂ. ಬಕವ್ರತಿನ್]

ಬಕಳು (ನಾ). ಒಂದು ಬಗೆಯ ತೆರಿಗೆ (?) : ಆ ಹಳಿಗಳ ಪೂರ್ಬ್ವಾಯ ಅಪೂರ್ಬ್ವಾಯ ಖಾಣ ಅಭೋಗ ಬಕಳು ಕತುವೆ ಬಂಡಿ ಅರವಟ್ಟಿಕೆ ಕುದಿರೆಹದಿಕೆ ಅನೆಹದಿಕೆ (ಎಕ. IX (3). ಬೆಂಗಳೂ. ೧೬೯-೨ ; 1329). [?]

ಬಕಾಟಿ (ನಾ). ಪುರುಷನ ಜನನೇಂದ್ರಿಯ : ನೀ ಅವಡ ಕಟ್ಟಿ ಹಿಡಿದರ ಕಾಡ ಕ್ವಾಣಾ ಬಕಾಟಿ ಕಚ್ಚಿ ಹೋದೀತು ! (ಹೊಸಂಗಾ. ೨೩). [← ಮರಾ. ಬಕಟೇ]

ಬಕಾರ (ನಾ). 'ಬ' ಎಂಬ ಅಕ್ಷರ : ಬಕಾರಕ್ಕೆ — ನಾಂಬಂ, ಎಂಬಂ, ತಿಂಬಂ (ಕಿಮಡ. ೨೩೨ ಪ್ರಯೋ). [ಸಂ.]

ಬಕಾರಿ (ನಾ). = ಬಕವೈರಿ ೨ : ಕುರುಕುಲಮಂ ಬಕಾರಿ . . . ತವೆ ಕೊಂದ ಮಾಟ್ಕೆಯಿಂದುರುತರ ಬಾಹುವಿಕ್ರಮದೆ ನಾಂ ತವೆ ಕೊಲ್ಲದೆ ಮಾಣೆಂ (ಪಂಪಸಂ. ೨೩೪-೦೩) ; ಧರೆಯೊಳ್ ಬೀರದ ಪೆಂಪಿಂ ನರನಿಂದಿರ್ಮಡಿ ಬಕಾರಿಯಿಂ ಮೂವಡಿ ಭಾಸ್ಕರಸುತನಿಂ ನಾಲ್ವಡಿ ಶಂಕರನಿಂದಯ್ವಡಿ ನೆಗೆಟ್ಟಿಯದಟರ ಭೀಮಂ (ಕಾವ್ಯಾವ. ೬೦) ; ಕೀಚಕನಂ ಬಕಾರಿ ಮುಱಿದಂ (ಸೋಮೇಶ. ೩೯).

ಬಕಾರಿನಂದನ = ಭೀಮನ ಮಗ ; ಘಟೋತ್ಕಚ : ಆರಿವನು ಹೈಡಿಂಬನೀಚಿಯಲಾರು ಭೀಮಜನಿತ್ತಲಾರು ಬಕಾರಿನಂದನನೆನಲು ಬಲವಿರುಳಸುರಮಯವಾಯ್ತು (ಕುಮಾಕ್ರೂ. ೦೬-೪೭). [ಸಂ.]

ಬಕಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಪ್ರಕಾರ : ಮುಖ್ಯವಾದ ಕೆಲವು ಆಸನಗಳು, ಅಷ್ಟವಿನ್ಯಾಸಗಳು—೧. ಉತ್ತಾನಾಸನ . . . ೧೨. ಬಕಾಸನ (ಭಾರದ. ೦೬೬) ; ಬಕಾಸನ . . . ಬಕ' ವೆಂದರೆ ಕೊಕ್ಕರೆ. ಈ ಭಂಗಿಯಲ್ಲಿರುವಾಗ, ದೇಹವು, ನೀರಿನಲ್ಲಿ ಹಾಯ್ದುಹೋಗುವ ಕೊಕ್ಕರೆಯ ರೂಪವನ್ನು ಹೋಲುತ್ತದಾದುದರಿಂದ ಈ ಆಸನಕ್ಕೆ ಈ ಹೆಸರು (ಯೋಗದಿ. ೨೨೯). [ಸಂ.]

ಬಕಾಳ (ನಾ). ವ್ಯಾಪಾರಿ ; ಉದ್ಯಮಿ : (ಕಿ). [←ಅರ. ಹಿಂ. ಬಕ್ಕಾಲ್ ; ಮರಾ. ಬಕಾಲ್, ಬಕ್ಕಾಲ್]

ಬಕಾಳಭಾತು (ನಾ). (ಅಂಗಡಿಯವನು ಮಾರುವ) ಮೊಸರನ್ನ : ಈವತ್ತು ಅವರ ಮನೆಯಲ್ಲಿ ಪುಳಿಯೋಗರೆ, ಬಕಾಳಭಾತು ಮಾಡಿದ್ದರು (ರೂಢಿ). [ಬಕಾಳ + ಭಾತು]

ಬಕೀಟು 'ಬಕೆಟ್ಟು' ನೋ.

ಬಕುತ, ಬಗುತ (ನಾ). ಗುರು, ಹಿರಿಯರು, ದೇವರುಗಳಲ್ಲಿ ಭಕ್ತಿಯುಳ್ಳವನು ; ಭಕ್ತ : "ಬಕುತ (ಬಗುತ)—ಭಕ್ತ" (ತದ್ಭಕೋ. ೨೬) ; ಬಡಿಸಿದರುಂಡು ತೇಗುವ ಬಕುತರಿಗೆ ನೂರ್ಮಡಿ ಸತ್ಫಲವನೆಯ್ದಿಸುವೆ (ಮೋಹತ. ೩೮-೪೬) ; ತ್ರಿಭುವನದೊಳಗಿಹ ಬಕುತರಿಗನುದಿನ ಶುಭಗಳನಿತ್ತು ರಕ್ಷಿಸುತ (ಕಂಪಪಿ. ೦-೨). **ಬಗುತ** : ಬಗುತರುಗಳು ಚಿವುಟಿದಡೆ ಹಾಲು ಗುವವೇ (ಬಸಪು. ೩೭-೭೩) ; ತದ್ದ್ರವ್ಯದೊಳಗೆನಿತು ಬಗುತರ್ ಬಂದೆರೆ ದೊಡವರ್ ಬೇಡಿದುದನಿಲ್ಲೆನ್ನದೀವಂ ಗಡ (ಪರ್ಮಾ. ೯-೭). [<ಸಂ. ಭಕ್ತ]

ಬಕುತವತ್ಸಲ (ನಾ). ಭಕ್ತರಲ್ಲಿ ಪ್ರೀತಿಯುಳ್ಳವನು ; ಭಕ್ತವತ್ಸಲ : ಬಕುತವತ್ಸಲ ಶ್ರೀರಂಗೇಶ ಸಾಹಸ್ರಮುಖನ ತಲ್ಪದೊಳೆಸೆದಿಹನು (ಕಂಪಪಿ. ೬-೯೩). [< ಸಂ. ಭಕ್ತವತ್ಸಲ]

ಬಕುತಿ, ಬಗುತಿ (ನಾ). ಭಕ್ತಿ : "ಬಕುತಿ (ಬಗುತಿ)—ಭಕ್ತಿ" (ತದ್ಭಕೋ. ೨೬); ಸಂಪ್ರೀತಿಯಹ ನವವಿಧದ ಬಕುತಿಗೆ ಸಿಲುಕ (ಕುಮಾಕ. ಓಂಇ. ೩-೦೩); ಆಲಿಗಳೆವೆಯಲುಗದೆ ಬಕುತಿಯಲಿ ತ್ರಿಶೂಲಿಯ ಮೇಲೆ ಕಣ್ಮನವ ಕೀಲಿಸಿದನು (ಮೋಹತ. ೨೦-೩೩); ಅಕಳಂಕಚರಿತ ಬೆಟ್ಟದ ಚಾಮೇಂದ್ರನ ಬಕುತಿಗೆ ಮನವೊಲಿದಿಹೆನು (ಕಂಪಪಿ. ೪-೪೦). **ಬಗುತಿ** : "ಬಕುತಿ (ಬಗುತಿ)—ಭಕ್ತಿ" (ತದ್ಭಕೋ. ೨೬). [< ಸಂ. ಭಕ್ತಿ]

ಬಕುರ (ನಾ). ಒಂದು ಬಗೆಯ ಊದುವ ವಾದ್ಯ; ಕಹಳೆ : ಆ ವಾದ್ಯಗಳ ಸಮೂಹದಲ್ಲಿ . . . ನಾಡೀ, ತುರವ, ಬಕುರ ಮುಂತಾದ, ಮರು ದ್ವಾದ್ಯಗಳೂ ಹೆಸರಿಸಲ್ಪಟ್ಟಿವೆ (ಸಂಗೀಸಂ. ೧೦೮). [ಸಂ.]

ಬಕುಶ (ನಾ). [ಜೈನ]ಮುನಿಗಳ ಐದು ಪ್ರಕಾರಗಳಲ್ಲಿ ಒಂದು ಪಂಗಡ : ಮುನಿಗಳಲ್ಲಿ ಪುಲಾಕ, ಬಕುಶ, ಕುಶೀಲ, ನಿರ್ಗ್ರಂಥ, ಸ್ನಾತಕ ಎಂದು ಅಯ್ದು ಪ್ರಕಾರಗಳು (ಸೈವರ. ೬೯). [< ಸಂ. ವಕುಶ]

ಬಕುಳ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು; ನಾಗಕೇಸರ ; ೧ ದೋಹದಕ್ರಿಯೆ ಮಾಡುವಾಗ ಸ್ತ್ರೀಯರು ಮದ್ಯಪಾನ ಮಾಡಿ ಬಕುಳವೃಕ್ಷದ ಮೇಲೆ ಉಗುಳಿದರೆ ಅದರ ಹೂವುಗಳು ಅರಳುವುವೆಂಬುದು ಕವಿಸಮಯಗಳಲ್ಲಿ ಒಂದು : "ವಕುಳದೊಳೆ

ಬಕುಳಂ" (ಕರ್ಣಾಟ. ೩೫) ; ಬಕುಳದ ಪೂವಿನಕ್ಷವಳಯಕ್ಕೆ ದುಕೂಲದ ಚೆಲ್ವನಪ್ಪ ಸಾಳಿಗೆಗೆ ಪಯೋಜಸೂತ್ರನವಮುಂಜಿಗೆ ನೇತ್ರದ ಕೋವಣಕ್ಕೆ ಮಿಕ್ಕಗುರುವ ಬೂದಿಗೊಡ್ಡೆ ತನುವಂ . . . ನಿಂದಳೊರ್ವಳಂ ಕಂಡು (ಶಾಂತಿಪು. ೯-೧೦) ; ಬೇಲ ಬೊಬ್ಬುಲಿ ಬಕುಳ ಶಮಿ ಕುದ್ದಾಳ . . . ಪಿಪ್ಪಲ ಮಾಲೆಯಿವ ನೋಡಬಲೆ (ಶೊರಕಾ. ೩-೦-೨೮).

ಬಕುಳದ ಮಡಕೆ = (?) : ಖಡುಗಿ ಹಳಚುವ ಖಳನ ಮಸ್ತಕ ವೊಡೆಯಲೊದೆದನು ತಿರುಗಿ ಬಕುಳದ ಮಡಕೆವೊಡದಂತಾಯ್ತು ಚಿಮ್ಮಿದು ದರುಣಜಲ ನಭಕೆ (ಪಿಠಾಗ. ೭-೭-೪೮) ; ಜರಿದ ಬಕುಳದ ಮಡಕೆಯಂದದಿ ಮೆರೆವ ಹನುಮನು ಸತ್ವಗೆಟ್ಟುದು ಹರಣ ತಳಕೆಳಕಾಗೆ ಧರೆಯೊಳು ಬಿದ್ದನಾ ಹನುಮ (ಮೂಲರಾ. ೫-೨೭). [ಸಂ. ಬಕುಲ]

ಬಕೆಟ್ಟು, ಬಕೀಟು (ನಾ). ನೀರು ಸೇದಲು, ತುಂಬಿಡಲು ಹಾಗೂ ಒಯ್ಯಲು ಉಪಯೋಗಿಸುವ ಮರದ ಅಥವಾ ಲೋಹದ ಹಿಡಿಯುಳ್ಳ ಪಾತ್ರೆ; ಬಾಲ್ದಿ (ಉಕ) : ಮೊನ್ನೆ ಫಿನಾಯಲ್ ಹಾಕಿದ ಬಕೆಟ್ಟಿನಲ್ಲಿ ಹುಳಿ ತಂದು ಬಡಿಸಿಬಿಟ್ಟರು ಪುಣ್ಯಾತ್ಮರು (ಅಗಸ್ಟ್. ೭೫) ; ಟ್ರ್ಯಾಕ್ಟರ್ ಮುನ್ನುಗ್ಗಿದೊಡನೆಯೇ ಬಕೆಟ್ಟು ತುಂಬಿಕೊಳ್ಳುತ್ತದೆ (ಕವಿಕೋ. I. ೦೭೩). ಬಕೀಟು : ಎರಡು ಮೂರು ಬಕೀಟು ನೀರಾದರೂ ಅವನ ಮಡಿವಂತಿಕೆಗೆ ಸಾಕಾಗುತ್ತಿರಲಿಲ್ಲ (ಪಂಸಂ. ೦೭). [← ಇಂ. Bucket]

ಬಕೋಟ (ನಾ). ಒಂದು ಬಗೆಯ ಕೊಕ್ಕರೆ : "ಬಕಃ, ಬಕೋಟಃ— ಈ ೨ ಬಕಂ" (ಪಲಾಯು. ೪೨-೧೭); ಎಳೆಮೀನ್ ಪೊಳೆದೊಡವೊಳಪುಗ ದಿರ್ದುವು ಜಲಾಶಯಪ್ರಾಂತದೊಳ್ ಬಕೋಟಕುಟುಂಬಂ (ಲೀಲಾವ. ೯-೦೪). [ಸಂ.]

ಬಕ್ಕ$_1$, ಬೊಕ್ಕ (ನಾ). ೧. ಬೋಳು ತಲೆಯವನು; ಬೋಡ : ಆ ಬಕ್ಕನನ್ನು ಮದುವೆಯಾಗುವುದಿಲ್ಲವೆಂದು ಹುಡುಗಿ ನಿರಾಕರಿಸಿದಳು (ಕೂಡಿ). ೨. ಏನೂ ಇಲ್ಲದುದು ; ಬೋಳು ; ಬರಿದು : (ಕಿ). (ಗು). ೩. ಏನೂ ಇಲ್ಲದ ; ಬೋಳಾದ ; ಬರಿದಾದ : 'ಬಕ್ಕದಲೆ' ಪರಾ. ಬೊಕ್ಕ : ೧. ಬೊಕ್ಕರ್ ಕೆಲಂಬರದಟಿಂ ಪಕ್ಕನೆ ನಡೆತಂದು ಚಕ್ರದಿಂ ಕೊಡಲಿಗಳಿಂ ಗಕ್ಕನೆ ಕಾರ್ಬೊನ್‌ದಡಿಯಿಂ ಪಿಕ್ಕುತೆ ನಿಮ್ಮಂ ಕನಲ್ದು ಬಾಧಿಸುತಿರ್ಕುಂ (ಹಾಲಾಸ್ಯ. ೪-೦೫-೨೭). ೩. 'ಬೊಕ್ಕತಲೆ' ಪರಾ.

—ಬಕ್ಕ$_2$ '— ಬಾಕ' ನೋ.

ಬಕ್ಕಂಡಿ (ನಾ). ಹಲ್ಲುಮುಡಿ.

ಬಕ್ಕಂಡಿ ಕಚ್ಚು = ಹಲ್ಲುಮುಡಿ ಕಚ್ಚು; ಅವುಡುಗಚ್ಚು : ಗೋವರ್ಧನ ರಾಯರು ಬಕ್ಕಂಡಿ ಕಚ್ಚಿಕೊಂಡು ಬಿದ್ದರು (ರೆಕ್ತಧ್ವ. ೦೯೨). [← ಮರಾ. ಬಕಂದೀ = ಮುಷ್ಟಿಯ ಹೊಡೆತ]

ಬಕ್ಕಂಬಯಲ್, ಬಕ್ಕಬಯಲ್ (ನಾ). ೧. ತೆರಪಾದ ಜಾಗ; ಬಯಲು ಸ್ಥಳ : ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋಟಕ್ಕೆ ಕಡುಸೊಂದಿ ನಾಣಲಿ ಬಕ್ಕಂಬಯಲೊಳಮದಾರುಮಂ ಬಂಚಿಸುವಳ್ (ಕಾಪ್ಯಾಪ. ೩೩೩) ; ಬಕ್ಕಂಬಯಲ್, ಕಳ್ಳಂಗಡಲೆ (ಶಮದ. ೦೭೨ ಪ್ರಯೋ). ೨. ಬರಿದು; ಶೂನ್ಯ : (ಕಿ). ಬಕ್ಕಬಯಲ್ : ೧. ಅಗ್ನಿಶಿಖಾಮುಖಕ್ಕೆ ದೂರಮಪ್ಪ ಬಕ್ಕ[ಪಾಠಾಂ. ಬಕ್ಕಟ]ಬಯಲ ತಾಣದೊಳ್ ದೊಮ್ಮಳಿಸಿ ನಿಂದು ಬಹು ಜನಂಗಳುಮ್ಮಳಿಸಿ ತಮ್ಮೊಳಿಂತೆಂದರ್ (ಪಂಠಾಮಾ. ೦೦-೦೫೫ ಪ) ; ಕುಟಿಯಿದು ತೆಮರಿದು ಬಕ್ಕಬಯಲಿದಾಶ್ರಯಮಿದು ಗೆಂಟಿದು ಸಾರೆಯೆಂಬ ನಿರ್ಣಯಮದಾದುದಿಲ್ಲೊದವಿ ಪುದಿದ ಮರ್ಬಿನೊಳಾರ್ಗಂ (ಕಾಪ್ಯಾಪ. ೭೪೯).

ಬಕ್ಕಂಬಯಲಾಗು, ಬಕ್ಕಬಯಲಾಗು = ೧. (ಆಲಂ) ಏನೂ ಇಲ್ಲದಾಗು ; ಕರಗಿ ಹೋಗು ; ಲೀನವಾಗು : ಅಕ್ಕ ನಿನ್ನಾತ್ಮಸಂಭವ ಮಗ್ಗುಲೊಳಗಿರ್ದು ಬಕ್ಕಂಬಯಲಾದ ಬಗೆಯ ಬಕ್ಕಣಿಸೆನಗೆಂದು ಸತ್ರಾಜಿತಸುತೆ ದುಕ್ಕವನಾಂತು ಕೇಳಿದಳು (ಮೋಹತ. ೪-೮೯). ೨. ನಾಶವಾಗು; ಪಾಳುಬೀಳು ; ಹಾಳಾಗು : ಎಲೆಲೆ ಪಗಲ್ಗಳ್ಳ . . . ನಿನ್ನ ನಾಡು ಬಕ್ಕಂಬಯಲಕ್ಕು (ರಾಮಾಶ್ವ. ೬೬-೨೩) ; ಆ ತೋಟ ಬಕ್ಕಬಯಲಾಯಿತು (ಕೂಡಿ). [ಬಕ್ಕ$_1$ + ಬಯಲ್ (< ವಯಲ್)]

ಬಕ್ಕಟ 'ಬಱುಕಟೆ' ನೋ

ಬಕ್ಕಟಬಯಲು 'ಬರ್ಕಟಬಯಲ್' ನೋ.

ಬಕ್ಕಡ (ನಾ). (?) : ಕರಿಗಳ ಸಂಘಟ್ಟದಿನೊಗೆವುರಿಗಳ ಬಕ್ಕಡಗಳರಿಯ ಬಕ್ಕಡಗಳ್ ಜೋದರ ಬಾಣಮಗ್ನಿಬಾಣಂ ಕರಚಕ್ರ ತಮೋರಿಚಕ್ರಮೆನಿಸಿದುದೆನಸುಂ (ಗದಾಯು. ೪-೩೭) [?]

ಬಕ್ಕಣ$_1$ 'ಬೊಕ್ಕಣ$_1$' ನೋ.

ಬಕ್ಕಣ$_2$, ಬೊಕ್ಕಣ$_2$ (ನಾ). ಆಹಾರ : ತಿನಿಸು : "ಬಕ್ಕಣ – ಭಕ್ಷಣ = ತಿನಿಸು, ತಿಂಡಿ" (ತದ್ಭಕೋ. ೨೭) ; ಮೆಯ್ಗಲಿಗಳ ಕಂಡದಿಂಡೆಗಳ ಬಕ್ಕಣಮಂ, ತವೆ ಮೆಲ್ದು . . . ಕೈಪಱಿಯೊಳಾಡುವ ರಕ್ಕಸಿಯರ್ಕಳೊಪ್ಪಿದರ್ (ಕಬ್ಬಿಕಾ. ೨೮೫) ; ತಿನೆ ತವುಗುಮೆಂದು ಚಿಂತೆಯಿನಿನಿತುಂ ತಿನಲಾರದಾನೆ ಬಕ್ಕಣಮಂ ಬಯ್ತನುವಿಂ ಪೆರರ್ಗಿಕ್ಕದೆ ದುಮ್ಮನದಿಂ ಪಸುತಿರ್ದುವರರೆ ಲೋಭಿಮರುಳ್ಗಳ್ (ಕಂದ್ರಕ್ಕು. ೩-೪೫). ಬೊಕ್ಕಣ$_2$: "ಬೊಕ್ಕಣ-ಭಕ್ಷಣ = ಬಕ್ಕಣ" (ತದ್ಭಕೋ. ೩೨). [< ಸಂ. ಭಕ್ಷಣ]

ಬಕ್ಕಣವಲ್ಕಣೆ (ನಾ). ಒಂದು ಪ್ರದೇಶದ ಹೆಸರು (?) : ಬಟ್ಟಗೆಱೆಯ ಏರಿ ಉಳಗಾಗೆ ಬನ್ದು ಕಡೆಗೊಡೆ ಕಲ್ಬುಣುಸೆಯೆ ಅನ್ತೆ ಬನ್ದು ಪೇರಲವದಾ ಬಕ್ಕಣವಲ್ಕಣೆಯೆ ಅನ್ತೆ ಬಡಗ ನೋಡಿ ಪರಿದ ಪೇರೊಱ್ಱೆಯೆ (ಎಕ. IX (8), ಸಂಗಳೂ. ೦೫೦-೪೦ ; 828). [?]

ಬಕ್ಕತಲೆ 'ಬಕ್ಕದಲೆ' ನೋ.

ಬಕ್ಕದಲೆ, ಬಕ್ಕತಲೆ, ಬೊಕ್ಕತಲೆ, ಬೊಕ್ಕದಲೆ (ನಾ). ೧. ಕೂದಲು ಉದುರಿ ಬೋಳಾದ ತಲೆ : ಬಕ್ಕದಲೆಯ ಆ ಮನುಷ್ಯನನ್ನು ಎಲ್ಲಿಯೋ ನೋಡಿದಂತಿದೆ (ಕೂಡಿ). ೨. ಟೋಪಿ, ಪೇಟ ಮೊದಲಾದುವನ್ನು ಧರಿಸದಿರುವ ತಲೆ ; ಬರಿತಲೆ : ಬಳ್ಳಾರಿಯ ವಿದ್ಯಾರ್ಥಿಯೊಬ್ಬನು ನಮ್ಮ ವರ್ಗಕ್ಕೆ ಸೇರಿದನು. ತನ್ನ ಪರಿಪಾಟಿಯಂತೆ ಬಕ್ಕದಲೆಯಿಂದಲೆ ಒಳಗೆ ಬಂದನು (ಗಾಳಿತ. ೦೩೩). ಬಕ್ಕತಲೆ : ೨. ಬಕ್ಕತಲೆಯಲಿಂತು ನೀನು ಅರಳಿದೊಂದು ಕುಸುಮದೆದುರು ನಿಂತು (ಪಂಠಸ. ೩೬-೪). ಬೊಕ್ಕತಲೆ : ೧. ಇದ್ದಕ್ಕಿದ್ದಂತೆಯೇ ಅವನ ಕಣ್ಣು ತುಂಬಿಕೊಂಡು ನಾಲ್ಕೈದು ಹನಿಗಳು ಮರಿಯಪ್ಪನವರ ಬೊಕ್ಕತಲೆಯ ಮೇಲೆ ಬಿದ್ದುವು (ಭೀಮಕಾ. ೦೧೬). ೨. ಈಗ ಏಕೆ ಕರೆಕಳಿಸಿರಬಹುದೆಂಬ ತರ್ಕದಲ್ಲಿಯೇ ಕಿಟ್ಟಿ ಜೋಡು ಮೆಟ್ಟಿಕೊಂಡು ಬೊಕ್ಕತಲೆಯಿಂದ ಹೊರಟನು (ಗಂಮಾಯಿ. ೯೪). ಬೊಕ್ಕದಲೆ : ೧. (ಮುಂಡಿಯಿ. ಕಿ. ೩-೨೯೬). ೨. ಬೊಕ್ಕದಲೆಯೊಳು ಬೊಕ್ಕರಿಸುತಂ ಮುಕ್ಕಿರಿಕಿ ನಿಲ್ಲಲು (ಪೇಸಪು. ೬-೬೦). [ಬಕ್ಕ$_1$ + ತಲೆ$_1$]

ಬಕ್ಕದಾಸ (ನಾ). ಏನೂ ಗತಿಯಿಲ್ಲದವನು ; ನಿರ್ಗತಿಕ : ದಾನಧರ್ಮವಿಲ್ಲದ ಹೀನದಾಸನು ನಾನು. . . ಬ್ಯಾನೆ ಇದ್ದಲ್ಲಿ ಬಡುವ ಬಕ್ಕದಾಸನು ನಾನು (ಮೋಕ್ಷದೀ. ೨೬-೩) ; ಬಕ್ಕದಾಸನೊ ನಾನು ವಿಜಯವಿಠಲ ನಿನ್ನ ಲೆಖ್ಖಕ್ಕೆ ಮೊದಲು ಎನಿಸುವೆನೇನಯ್ಯ (ವಿದಾಕ್ಕ. ೨೩೯-೦೫೭). [ಬಕ್ಕ + ದಾಸ$_1$]

ಬಕ್ಕನೆ (ಅ). ಇದ್ದಕ್ಕಿದ್ದಂತೆ ; ಕೂಡಲೆ : ಬೆಕ್ಕು ಹಿಂದೆ ಹೋಗುತಾ, ಶಾನೆ ಹಿಂದೆ ನಿಂತ ಒಂದು ಇಲಿಯನ್ನು ಬಕ್ಕನೆ ಬಾಯಿಗೆ ಹಾಕಿಕೊಳ್ಳುತಾ ಬಂತು (ವೀಡಿಸಂ. iv ೨೭). [ಬಕ್ಕ್ + —ಅನೆ$_1$]

ಬಕ್ಕನೆತ್ತಿ, ಬೊಕ್ಕನೆತ್ತಿ (ನಾ). — ಬಕ್ಕದಲೆ ೨: ಒಂದು ಕಾಲದಲ್ಲಿ ಟೊಪ್ಪಿಗೆ ಹಾಕುವುದು ಮಂಗಲಚಿಹ್ನವಾಗಿತ್ತು. ಇಂದು ಬಕ್ಕನೆತ್ತಿಯಿಂದ ಅಡ್ಡಾಡುವುದೇ ಐಕ್ಯದ ಕುರುಹು (ಭಾರಸಂ. ೪೬). ಬೊಕ್ಕನೆತ್ತಿ :

ತುಂಬಾ ಹಿಮ ಬೀಳುತ್ತಿದೆ. ಬೊಕ್ಕನೆತ್ತಿಯಲ್ಲಿ ಬರಬೇಡಿ (ರೂಢಿ).

[ಬಕ್ಕ$_1$ + ನೆತ್ತಿ]

ಬಕ್ಕಬಯಲ್ 'ಬಕ್ಕಂಬಯಲ್' ನೋ.

ಬಕ್ಕಬಾಗಿಲು (ನಾ). (?) : ಯಾವತ್ತು ಕಡಂಗ ಕಂಡುಕ ಮುಂತಾಗಿ ತೆಗಸಿ ಆಳ್ವೇರಿ ಬಕ್ಕಬಾಗಿಲು ಮುಂತಾಗಿ ತಯಾರು ಮಾಡಿಸಿ (ರಾಸೇಂದ್ರ.ಸ). [ಬಕ್ಕ? + ಬಾಗಿಲು (< ಬಾಗಿಲ್)]

ಬಕ್ಕಬೋರಲು. ಬೊಕ್ಕಬೋರಲು. ಬೊಕ್ಕುಬೋರಲು (ನಾ). ಬುಡಮೇಲು ; ತಲೆಕೆಳಗು : ಒಂದು ಎಲೆ ತೆಗೆದು ಬಕ್ಕಬೋರಲಾಗಿ ಮಗ್ಗುಲಿಗೆ ಮುಚ್ಚಿ ಇಟ್ಟುಕೊಂಡ (ಗಾಳಿಪ. ೨೩). **ಬೊಕ್ಕಬೋರಲು** : ತಿಂಗಳ ಕಡೆಯಾದ್ದರಿಂದ ಡಬ್ಬಗಳನ್ನೆಲ್ಲಾ ಬೊಕ್ಕಬೋರಲು ಮಾಡಿ ಅಡಿಗೆ ಮಾಡಬೇಕಾಯಿತು (ರೂಢಿ). **ಬೊಕ್ಕುಬೋರಲು** : ಅದನ್ನು ಮೆಲ್ಲಗೆ ಕಿಡಿಕಿಯ ಹೊರಗೆ ಎತ್ತಿ ಬೊಕ್ಕುಬೋರಲಾಗಿ ಹಿಡಿದಳು (ಗಂಪಾಯಿ. ೪).

ಬಕ್ಕಬೋರಲು ಬೀಳು, ಬೊಕ್ಕಬೋರಲು ಬೀಳು = ಹೊಟ್ಟೆ ಅಡಿಯಾಗಿ ಬೀಳು ; ಮಗುಚಿಕೊಳ್ಳು : ಮೆಟ್ಟಲಿನ ಮೇಲೆ ಯಾಯಾನ ಶರೀರ ಬಕ್ಕಬೋರಲು ಬಿದ್ದಿತು (ಬಾಲಿ. ೦೦೩) ; ಎತ್ತರದ ಜಗಲಿಯಿಂದ ಮಗು ಬೊಕ್ಕಬೋರಲು ಬಿದ್ದು ಅಳುತ್ತಿದೆ (ರೂಢಿ). **ಬಕ್ಕಬೋರಲು ಹಾಕು** = ೧. ಮಗುಚಿ ಇಡು : ಡಬ್ಬಗಳನ್ನೆಲ್ಲಾ ಚೆನ್ನಾಗಿ ತೊಳೆದು ಬಕ್ಕಬೋರಲು ಹಾಕು (ರೂಢಿ). ೨. (ಆಲಂ) ನಾಶಮಾಡು ; ಹಾಳುಮಾಡು : ಚಿತ್ರಕೇತುರಾಜನ ಮನೆಯನ್ನು ನಾರದನೇ ಬಕ್ಕಬೋರಲು ಹಾಕಿದನು (ಕುಳಸೀ. ೨೫) ; ಎಷ್ಟೋ ವರ್ಷಗಳಿಂದ ಮಾಡಿಕೊಂಡಿದ್ದೆಲ್ಲಾ ಒಂದು ಕ್ಷಣದಲ್ಲಿ ಬಕ್ಕಬೋರಲು ಹಾಕಿದ್ದಾಯ್ತು (ರೂಢಿ). [ಬಕ್ಕ$_1$ + ಬೋರಲು]

ಬಕ್ಕಬೋಳು (ನಾ). ಬರಿದು; ಖಾಲಿ; ಶೂನ್ಯ: ಹೂಮುಡಿದುಕೊಂಡು ಹಿಗ್ಗುವುದು ಹೆಣ್ಣಿಗಷ್ಟೆ ಇರುವ ಸೌಭಾಗ್ಯ. ಗಂಡುಗಾಡಿ ಬಕ್ಕಬೋಳು (ಗಾಳಿಪ. ೦೦೦). [ಬಕ್ಕ$_1$ + ಬೋಳು (< ಬೋಡು)]

ಬಕ್ಕರಸೆ (ನಾ). (?): ನಿಯತದ್ವಿತ್ವಕ್ಕೆ—ಪಪ್ಪುಕಂ . . . ಬಕ್ಕಸೆ, ರಕ್ಕಸಿ, ಕೆಕ್ಕೊರಸು, ಉಕ್ಕೆವಂ, ಬಕ್ಕರಸೆ, ಬಕ್ಕುಡಿದಂ (ಶಮದ. ೩೬ ಪ್ರಯೋ). 'ಬಕ್ಕಸೆ' ಪರಾ. [?]

ಬಕ್ಕರಿ 'ಭಕ್ಕರಿ' ನೋ.

ಬಕ್ಕರಿಸು (ಕ್ರಿ). ತಿನ್ನು; ಕಬಳಿಸು : ಆತನು ಬಂದ ಕೂಡಲೇ ಆ ನಮ್ಮ ಬಡಪ್ರಾಣಿಯಾದ ಗೋವನ್ನು ಅಬ್ಬರದಿಂದ ಬಕ್ಕರಿಸಿ ಬಿಟ್ಟಾನು (ಉಶಾಪ. ೬೯) ; ತಿನ್ನಲು ಬೆಳೆಯದು ತುಸು ಕಡಿಕಾಳು ಬಕ್ಕರಿಸುವುದೋ ಹೆಂಟೆಯ ಕೂಳು ? (ಗಂ. ೦೦೯-೦೯); ಒಂದು ತಪ್ಪೇಲಿ ಅನ್ನವನ್ನು ಬಕ್ಕರಿಸುತ್ತಾರೆ! (ಪೋಹಿಸೀ. ೨೬). [<ಭಕ್ಷಿಸು]

ಬಕ್ಕರೆ. ಬಕರೆ, ಬಗ್ಗರೆ (ನಾ). ೧. ಮಡಕೆಯ ಚೂರು; ಓಡು; ಬೋಕಿ : "ಪಕ್ಕರೆ ಬಗರಿಗೆ ಎಸೆವ ಬಕ್ಕರೆಯಕ್ಕು" (ಕಬ್ಬಮಂ. ೬೩); ಕೈಯೊಳ್ ಬಕ್ಕರೆಯಲ್ಲಿ ಕೆಂಡವಂ ತೆಗೆದುಕೊಂಡು ಬಂದು (ಕುಳಸ. ೧೫); ಅಕ್ಕರೆಯಿಂದ ಕಂದನ ಸಾಕಿ, ಕೈಗೆ ಬಕ್ಕರೆ ಕೊಟ್ಟಾರೆ ? (ನೀತಿಸಂ. X, ೨೬). 'ಬೋಕಿ' ಪರಾ. ೨. ಮುಚ್ಚುಳ ; ಶ್ರಾವೆ : ಫಲ ವಸ್ತ್ರ ತಾಂಬೂಲ ಕಾಣಿಕೆಯಿವಂ ಹೊಸಬಕ್ಕರೆಯಲ್ಲಿ ಇರಿಸಿ ಮಂತ್ರಸಮನ್ವಿತವಾಗಿ...ನಿವಾಳಿಸಿ (ಬಾಲಿಸಿ. ೦೩೯-೧೬). **ಬಕರೆ** : ೧. ಕಾಡುಬೆರಣಿಗಳಲ್ಲಿ ಹೊಸ ಮಣ್ಣು ಹೆಂಚು (ಬಕರೆ) ಹೊಸ ಕೆಮ್ಮಣ್ಣುಗೆಡ್ಡೆಗಳನ್ನಿಟ್ಟು ಪುಟ ಹಾಕಿ (ಸಳವ್ಯ. ಪಂ. ೪೫೫). **ಬಗ್ಗರೆ** : ೧. ಉಡಲಿಲ್ಲುಣವಿಲ್ಲದಱಿಂದುದರಾಗ್ನಿಯೊಡಲ ಸುಡಲು ಬಗ್ಗರೆಯ ಹಿಡಿದು ಪುರದ ಕೇರಿಗಳೊಳು ಭಿಕ್ಷವ ಕೊಡಿಯೆಂದು ಬೇಡುತಮಿರಲು (ಪೇಮಿಸಂ. ೬-೬೭); ಇರಿಸಿದನೊಂದು ದೊಡ್ಡ ಹೊಸ ಬಗ್ಗರೆಯಂತದು ತುಂಬುವಂತುಟಂ ಸುರಿದನು ಕೂಳ (ಪನ್ನಶಾ. ೬-೩೦೯).

ಬಕ್ಕಸೆ (ನಾ). (?) : ನಿಯತದ್ವಿತ್ವಕ್ಕೆ-ಪಪ್ಪುಕಂ...ಬಕ್ಕಸೆ, ರಕ್ಕಸಿ, ಕೆಕ್ಕೊರಸು, ಉಕ್ಕೆವಂ, ಬಕ್ಕರಸೆ (ಶಮದ. ೩೬ ಪ್ರಯೋ). 'ಬಕ್ಕರಸೆ' ಪರಾ. [?]

ಬಕ್ಕಳ (ನಾ). ಹೆಚ್ಚು; ಅಧಿಕ; ತುಂಬ : ಬಾಯಿಯಿಂದ ಲೋಕ ಸುಧಾರಣೆಯ ತತ್ವ ಹೇಳುವುದು ಬಕ್ಕಳ. ಆದರೆ ಕೈಯಿಂದ ಕಾರ್ಯ ಕೇಳಬಾರದು (ಕಾಳರಾ. ೪೭); ತಮ್ಮ ಬಕ್ಕಣದಲ್ಲಿ ಕಾಸು ಕಪರ್ದಿಯಿಲ್ಲದಿದ್ದರೂ ಬಾಯಲ್ಲಿ ಬಕ್ಕಳ ಮಾತಿದ್ದರೆ ಸಾಕೆಂಬ ಸಂತೋಷದಿಂದ ಜನರು ಕಾಲ ಕಳೆಯುತ್ತಿದ್ದರು (ಪ್ರೇಮಿ. ೭೯). [?]

ಬಕ್ಕಳೆ (ನಾ). ಕೊರಳಲ್ಲಿ ಹಾಕಿಕೊಳ್ಳುವ ಹಾರ ಅಥವಾ ಚೀಲ (?) : "ಕಂಠಕಚ್ಚರದೊಳ್ ಬಕ್ಕಳೆ" (ಕರ್ಣಾನಿ. ೬೪); ಮೆಯ್ಯ ಮಸಿ ಕೊರಲ ಬಕ್ಕಳೆ[ಪಾಠಾಂ. ಬಕ್ಕಂ, ಬಕ್ಕಳಿ] ಪೊಯ್ಯೆ ಪುಗಿಲ್ಗರೆವ ಕೆಯ್ಯ ಕಂಕರಿಕೆ ಕರಂ ರಯ್ಯಮೆನೆ ಪಾಡುತಿರ್ದಳನೊಯ್ಯನೆ ಕಡೆಗಣ್ಣೊಳಡರೆ ಚಪ್ಪರಿಸುತ್ತುಂ (ಕಾವ್ಯಾವ. ೩೦೯) ; ಜಡೆಯುಂ ಬಕ್ಕಳೆ[ಪಾಠಾಂ. ಲೆ]ಯುಮನಾಳ್ದು (ಅರ್ಧನೇ. ೩-೪೩) ; ಸತ್ತಿಗೆ ಗಗ್ಗರಂ ಕರುಳ ಬಕ್ಕಳೆ ಮೀಂಟದ ಕಣ್ಗಳೈಸರಂ ಸುತ್ತಿದ ಬಾಳದುಳ್ಳಿವಿಯ ಸೊಂಟಗೆ ಪಂದಲೆಯೊಂದು ಬಾಸಿಗಂ ನೆತ್ತರ ತಳ್ತ ಬಲ್ದಲೆಯ ಬಿಂದಿಗೆ ಪಾವುಗೆ ಪಂಚಮಸ್ವನಂ ಬೆತ್ತದ ಕೋಲಿವೊಂದಿನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೩೩೩). [?]

ಬಕ್ಕಾಯಿ (ನಾ). ಒಂದು ಕ್ಷುದ್ರದೇವತೆಯ ಹೆಸರು : ಮಾತಂಗಿ ಬಕ್ಕಾಯಿ ಎಲ್ಲ ನಾನಾಕದಾ ಕಳ್ಳದೇವತೆಗಳನಿಲ್ಲದೆ ಒಲಿಸಿದರು ಪೊಳ್ಳಲ್ಲದೆ ಗತಿ ಇಲ್ಲವೊ ಎಂದಿಗೂ (ವಿಸಾಸು. ೫೬-೨). [?]

ಬಕ್ಕಿ (ನಾ). ಕಂಕುಳು ; ಬಗಲು : ಸಿಕ್ಕಿರ್ದ ಮರಿಗಳಂ ಬಕ್ಕಿಯೊಳಗವ ಚುತ್ತ ಮಿಕ್ಕಿರ್ದ ಕುರಿಗಳಂ ಚೈಯ ಚೈಚೈಯೆಂದು ಕರೆಯುತ್ತ . . . ಬೀರಪ್ಪನಂ ನೆನೆದು ಮೆರೆದಿರ್ದನಾ ಮಾಯಿಕಂ (ದುರಪು. ೬-೦೩).

[← ಮರಾ. ಬಖ್. ತೆಲು. ಬಗಿ = ಪಕ್ಕ]

ಬಕ್ಕು (ನಾ). ಒಂದು ಬಗೆಯ ನೀರುಹಕ್ಕಿ : ಬಕ್ಕುಗಳಂಚೆ ಕೊಂಚೆ ಜಳವಾಯಸಸಂತತಿ . . . ಸಾರಸಪಕ್ಕಿಯೆಂಬ ನೀರ್ವಕ್ಕಿಗಳಿಂ ಮನಂಗೊಳಿಸುತಿರ್ದುದು ಪೂಗೊಳನಂಬುಜಾವಳಂ (ನಳಸಂ. ೧೧೯). [?]

ಬಕ್ಕುಡಿ$_1$. ಬರ್ಕುಡಿ. ಬಳ್ಕುಡಿ (ನಾ). ೧. ಬೆರಗು; ಆಶ್ಚರ್ಯ: "ಬಕ್ಕುಡಿ . . . ತಳವೆಳಗು ಮಲ್ಲಟಿಯೆನಲ್ಕೆ ಬೆಱಗಪ್ಪ ಭಾವಂ" (ಕಬ್ಬಿಳ್ಳ. ೪೧). ೨. ಭಯ; ಅಂಜಿಕೆ: ಒತ್ತುವ ಕೋಡ ಕಾಳೆ ಕುಣಿವೋಜೆಗೆ ಬಾಜಿಪ ಱುಂಜೆ ಬೇಂಟೆಯಿಂದೆತ್ತಣಿಸಪ್ಪ ಬಕ್ಕುಡಿಯ ಬಲ್ಲುಲಿ (ಸೂಕ್ತಿಸು. ೩-೨೦೦). ೩. ದೈನ್ಯ; ನಮ್ರಭಾವ: ಚುಂಬನಮಪ್ಪು ಚಪ್ಪರಣೆ ಬೇಡುವ ಬಕ್ಕುಡಿ ಕಾಯ್ದು ಕೂಡುವಟ್ಟುಂಬರಿಯೆಂಬಿವಾಗೆ (ಅರ್ಧನೇ. ೫-೭೦); ಮಕ್ಕಳಾಟಿಕೆಯಾಯ್ತಲಾ ಸೌಬಲನ ದೆಸೆಯಿಂದ ಮಿಕ್ಕು ನೀ ಸೈರಿಸುವುದೆಮ್ಮದು ಬಕ್ಕುಡಿಯ ಬೇಳಂಬ (ಕುಮ್ಮಾಸ. ೧೫-೫೯). ೪. ತಳಮಳ; ಕಾತರ: ಬಂಡು ಬಕ್ಕುಡಿ ಭಂಗ ಬಂಧನ ಕನಲ್ಕೆ ಕಳಕಳಮೆಂಬಿವು . . . ನೋಡಲಾ ನಾಡ ಹಿರಿಯೂರ ಪಟ್ಟಣದ ಪಾಳೆಯದ ಜನದೊಳಿಲ್ಲ (ಶಬಪು. ೬-೪೨). ೫. ವಿವಾದ; ಚರ್ಚೆ : "ವಿವಾದಃ = ಬಕ್ಕುಡಿಯುಂ" (ನೀತಿವಾ. ೨೨-೬). 'ಬಕ್ಕುಡಿಗುಟ್ಟು' ಪರಾ. **ಬರ್ಕುಡಿ**: ೫. ನಿಮ್ಮೊಳಿದೇಂ ಬರ್ಕುಡಿಯೆಂದಾತನಂ ನಿವಾರಿಸಿ (ಪೇಮಿಪು. ೯-೨೬ವ); ಪೊನ್ನೆನಣ್ಪೆನಿಂ ನುಟ ನುಡಿವಂತು ಬರ್ಕು[ಪಾಠಾಂ.ಳ್ಕು]ಡಿಯೆ (ಲೀಲಾವ. ೨-೦೧೩); ಮುಳಿಸೆರ್ಗು ಸೊರ್ಕು ಬರ್ಕುಡಿ ಪುರುಡು . . . ನುಸುಳ್ಗಣಿಕಾಂಗನೆಯರ್ಗೆ ಶಾಶ್ವತಂ (ವೃಷವಿ. ೨೮-೬೩). **ಬಳ್ಕುಡಿ** : ೨. "ಅಗುರ್ವು ಬಿಗುರ್ ಬೆಗರ್ ಬಳ್ಕುಡಿ ... ಅದಿರ್ಪು—ಈ ೧೦ ಭಯಂ" (ಕಶಸಾ. ೫೬-೨೨೩) ; ಎಕ್ಕೆಕ್ಕೆ ಬಾಧಿಸುತ್ತಿದ್ದ ಸಂದೆಗವನು ಬಳ್ಕುಡಿಯನು ಸಂತರಿಸಿಕೊಳ್ಳಲು ನನಗೆ ಅನುಪೊಪವಿತ್ತು (ಶಬ್ದಲಿ. ೨೦೨-೧೨).

ಬಕ್ಕುಡಿ₂ (ನಾ). ಒಂದು ಬಗೆಯ ಸಸ್ಯ: ಮಂಗರವಳ್ಳಿ: "ಮಂಗುರವಳ್ಳಿ ವಕ್ರಿ ಬಕ್ಕುಡಿಯೆನಿಕ್ಕುಂ" (ಮಂಗರಾ. ೪೩-೦೩). [?]

ಬಕ್ಕುಡಿಗುಟ್ಟು, ಬರ್ಕುಡಿಗುಟ್ಟು (ಕ್ರಿ). ಚರ್ಚಿಸು; ವಾದಮಾಡು: ತನ್ನ ಧರ್ಮದವರೊಡನೆ ಪುಸ್ತಕಾದಿಗಳೊಳು ನಿನಗಿದೆನಗಿದೆಂದು ಬಕ್ಕುಡಿಗುಟ್ಟದದುಂ (ಶಸೂಪ್ಯ. ೨೨೬); ಮತಿವಿಕಳ ಚಾರ್ವಾಕ ಬಱಿದೆ ಬಕ್ಕುಡಿಗುಟ್ಟುತತಿವಾದಿವೈ (ಆರಾಪ. ೩-೭-೫); ನಿಮ್ಮ ದೈವಂ ಸ್ವತಂತ್ರನಲ್ಲಾಗಿ ಬಂಧುರತರ ಜಗತ್ಕರ್ತನೆಂತು ಬಕ್ಕುಡಿಗುಟ್ಟಬೇಡವೆಲೆ ದುಷ್ಕೃತಯುತ (ಶಾಸೋಪು. ೯-೧೭೨). **ಬರ್ಕುಡಿಗುಟ್ಟು**: ತರ್ಕದೊಳ್ ಬಾದುಂ ಬರ್ಕುಡಿಗುಟ್ಟಿ ಪೊಟ್ಟುವಡೆದೆಂ (ಸುಕುಮಾ. ೩-೪೩). [ಬಕ್ಕುಡಿ₁ + ಕುಟ್ಟು₁]

ಬಕ್ಕುಡಿಗೆಯ್, ಬರ್ಕುಡಿಗೆಯ್, ಬಳ್ಕುಡಿಗೆಯ್ (ಕ್ರಿ). ೧. = ಬಕ್ಕುಡಿಗುಟ್ಟು: ವಟುಗಳೋದನಾಲಿಸಿ ತಪ್ಪಂ ಪಿಡಿವುವುಪನ್ಯಾಸದೆ ಬಕ್ಕುಡಿಗೆಯ್ವುವು ಮುನಿಗಳೊಡನೆ ಶುಕಶಾರಿಕೆಗಳ್ (ಜಗಿ. ೦೬-೩೦); ಕೊಱವಜ್ಜಿಯು ತಾನಾಕೆಯುಂ ಪಾಣಿಗ್ರಹಣಕ್ಕೆ ಕೆಯ್ಯನೊಡ್ಡುವಂತೆ ಕೆಯ್ಯನೊಡ್ಡಿ ಬಗೆದು ಮೊಯ್ಯನೆ ಸೋಲ್ತು ಬಕ್ಕುಡಿಗೆಯ್ದೊಯ್ವಂತೆ ಕೆಯ್ಯ ಪೊಯ್ದೊಡೆ (ಬಂಹರಿ. ೯-೬೭ ಪ). ೨. ಆಶ್ಚರ್ಯಪಡು: ಕಯ್ವಾರದಿಂದೆ ಬಕ್ಕುಡಿಗೆಯ್ವರ್ಪಿರಿದೊಂದು ಸಮಯಮಂ ಸಮತೆಯಿನಾರಯ್ವರ್ ಜೈನಮನಾವೆಡೆಗೆಯ್ವಡ ಮತ್ಯಂತಕಲುಷಹೃದಯರದೇನೋ (ಸಮಪ. ಅಮಬಂಧ. ೩೭೫-೬೦). **ಬರ್ಕುಡಿಗೆಯ್**: ೧. ಜಯಂತನಂ ಜಡಿದು ಬರ್ಕುಡಿಗೆಯ್ದು ಬಸಂತನಂ ಸಮುಜ್ವಳಕುಸುಮಾಸ್ತ್ರನಂ ಜಱಿದು (ಪ್ರಶಸ. ೦೬-೭). **ಬಳ್ಕುಡಿಗೆಯ್**: ೧. ಜಲಜನ್ಮಕೋರಕದ್ವಯ ಸೊಕ್ಕುಮಿಕ್ಕಾನೆದಲೆ ಗಾಲಿವಕ್ಕಿ ಪೊಂಜೊನ್ನಲಿಗೆಗಳ ಚೆಲ್ವನಲೆದು ಮಲೆದೆಕ್ಕತುಳಗೆಡಿಸಿ ಬಳ್ಕುಡಿಗೆಯ್ದು ನೆಲೆವನೆಯ ಮುಂದೆ ನಿಂದ ಬೆಲೆವೆಂಡಿರುಗಳ ನೆಲೆಮೊಲೆಗಳ್ . . . ಎಡ್ಡಂಬಡೆದವು (ಕಾದ್ಯರೇ. ೪-೨೦). [ಬಕ್ಕುಡಿ₁ + ಕೆಯ್₁]

ಬಕ್ಕುಡೆಯ, ಬಗ್ಗಡೆಯ (ನಾ). ವಿತಂಡವಾದ ಮಾಡುವವನು: ಕಡುದುರುಳರಂ ಧೂರ್ತರಂ ಬಕ್ಕುಡೆ [ಪಾಠಾಂ. ಬಗ್ಗಡೆ, ಬಗೆಗೆಡೆ]ಯರಂ ದುರ್ನೀತರಂ ನಾಣ್ಗೆಡಿಕರಂ . . . ಕಾಯ್ಕಾಯೆಮ್ಮುವಂ (ಬಸಪು. ೩೮-೭೦). **ಬಗ್ಗಡೆಯ**: ನುಡಿದಹನು ದುರ್ಭಾಷೆಗಳನಡಿಗಡಿಗೆ ಶಿವನಿಂದೆಯನುಸುರ್ವ ಬಗ್ಗಡೆಯನಂ ಕೊಲಲಹುದು (ಬಸಪು. ೫೭-೨೯).

ಬಗ್ಗಡೆಯತನ = ಔಚಿತ್ಯ ಮೀರಿದ ವರ್ತನೆ; ಅಧಿಕಪ್ರಸಂಗ: ಹಿಗ್ಗಿ ಹಿಂದೆಮ್ಮುವನು ಹಾವಿನ ಹಗ್ಗದಲಿ ಹೆಡಗುಡಿಯ ಕಟ್ಟಿದ ಬಗ್ಗಡೆಯತನ ಕಿದಕೊ . . . ಸಾವಿನ ಸುಗ್ಗಿ ನಿನಗೆನುತೆಚ್ಚನಿಂದ್ರಾರಿಯನು ಸೌಮಿತ್ರಿ (ತೊರರಾ. ೬-೪೪-೦೩). [<ಬಕ್ಕುಡಿ₁ + — ಅ₇]

ಬಕ್ಕೆ, ಬರ್ಕೆ (ನಾ). ೧. ಸಿಹಿಯಾದುದು; ಇನಿದು: (ಕ). ೨. ಒಂದು ಬಗೆಯ ಹಲಸು: ಪಥಿಕರ್ಬರ್ಕೆಂದು ಭೃಂಗಂಗಳಿಂದುಲಿವಂತಿರ್ದುದು ಪಣ್ತ ಬಕ್ಕೆ (ಆದಿಪು. ೦೦-೬೬); ಬೇರ್ಗ್ಗಳಿಂ ತುಱುಗಿರೆ ಕಾಯ್ತ ಬಕ್ಕೆ (ಎಕ. XI, ದಾಪಣ. ೩೫-೩೮; ಸು. 1160); ಹಲಸಿನ ಹಣ್ಣಿನ ಮಹಾ ಗಾತ್ರವನ್ನು ನೋಡಿ ಅಜ್ಜೀಸಾಬು ಕೇಳಿದನು "ಬಿಳುವನೋ ? ಬಕ್ಕೆಯೋ ?" (ಮಲೆಮ. ೪೩೦). 'ಬಕ್ಕೆವಲಸು' ಪರಾ. △ **ಬರ್ಕೆ**: ೨. ಬರ್ಕೆ[ಪಾಠಾಂ.ಕ್ಕೆ]ವಲಸುಗಳೊಳಸುರರ ತೆರ್ಕೆಯನೆಟ್ಟಿಟ್ಟಿ ಪೊಯ್ವುದುಂ ಕೋಟ್ಮಿದುಟುಂ ಬರ್ಕೆ[ಪಾಠಾಂ.ಕ್ಕೆ]ಯ ತೊಳೆಯುಂ ಸೂಸಿದುವು (ಪಂರಾಮಾ. ೦೦-೦೨೦). 'ಬರ್ಕೆವಲಸು' ಪರಾ.

[ದೇ.॥ ತಮಿ. ವರುಕ್ಕೈ. / ಮರಾ. ಬರಕಾ]

ಬಕ್ಕೆವಲಸು, ಬಕ್ಕೆಹಲಸು, ಬರ್ಕೆವಲಸು (ನಾ). = ಬಕ್ಕೆ ೨: "ಸ್ವಾದುಪನಸಕ್ಕೆ ಪೆಸರೊಂದುವುದು ಬಕ್ಕೆವಲಸೆಂದು" (ಶಬ್ದಮಂ. ೨೭); ಅರನೇಱಲ ಪೊಂಬಾಱಿಯ ಸುರಯಿಯ ಮಾವುರದ ಬಕ್ಕೆವಲಸಿನ ಪುದುವಿಂ ಪರೆದುರ್ಬಿದ ಕಟ್ಟಲೆ ದಿನಕರಾಂಶುಗಳ್ಗಂ ವಿಭೇದಿಸಲ್ಕರಿದು (ಕಾವ್ಯಾಪ. ೨೪೮); ಬೇರ್ಗಳೊಳಗೆ ಕಾತ ಬಕ್ಕೆವಲಸುಗಳ ಪಣ್ಗೂನೆಗಳಂ... ಮುಕ್ಕಣ್ಣನೆಡೆಗೆ ವನಪಾಲಕಂ ಪೊಱಿಸಿಕೊಂಡೈತಂದನು (ಕಬಿಪು. ೪೫-೨೯); ದಾಳಿಂಬಂ ಬಕ್ಕೆವಲಸು . . . ಎಡೆಯೆಡೆಯೊಳ್ ಮನೋಹರಮಾಗಿರ್ಕುಂ (ರಾಮಾಶ್ವ. ೯-೨೫). **ಬಕ್ಕೆಹಲಸು**: ಬಕ್ಕೆಹಲಸು, ಅರಬಕ್ಕೆಹಲಸು, ಕಾಪುಹಲಸು ಹೀಗೆ ಬಗೆಬಗೆಯ ಹಲಸಿನ ಮರಗಳಿದ್ದವು (ಶ್ಯಾಮಶಾ. ೦೦); ಒಂದು ಬಕ್ಕೆಹಲಸಿನ ಹಣ್ಣನ್ನು ಕತ್ತರಿಸಿ ಮಕ್ಕಳ ಮುಂದಿಟ್ಟರು (ಪಂಜಪಂ. ೦೫). △**ಬರ್ಕೆವಲಸು**: ಬರ್ಕೆ[ಪಾಠಾಂ.ಕ್ಕೆ]ವಲಸುಗಳೊಳಸುರರ ತೆರ್ಕೆಯನೆಟ್ಟಿಟ್ಟಿ ಪೊಯ್ವುದುಂ ಕೋಟ್ಮಿದುಟುಂ ಬರ್ಕೆ[ಪಾಠಾಂ.ಕ್ಕೆ]ಯ ತೊಳೆಯುಂ ಸೂಸಿದುವು (ಪಂರಾಮಾ. ೦೦-೦೨೦); ಕಾಯ್ತೆಳೆದೆಂಗು ಪಣ್ತ ಬರ್ಕೆವಲಸು (ಪರ್ಸಪು. ೨-೦೬). [ಬಕ್ಕೆ + ಪಲಸು]

ಬಕ್ಕೆಹಲಸು 'ಬಕ್ಕೆವಲಸು' ನೋ.

ಬಕ್ರಬರ್ (ಕ್ರಿ). ಅಡ್ಡಿಬರು; ತೊಡಕಾಗು: ಇ ದರ್ಮ್ಮಕ್ಕೆ ಬಕ್ರಬಪ್ಪೊಂ ಬಾರಣಾಸಿಯುಳ್ ಸಾಸಿರ್ವ್ವಪಾರ್ವ್ವರುಂ ಸಾಸಿರಂ ಕವಿಲೆಯುಂ ಕೊನ್ದ ಪಾತಕನಕ್ಕೆ (ಪ್ರಸಿಂ. ೦೯೩೬, ೫೩-೩೪; ಸು. 550).

[ಬಕ್ರ₀ (ಫಾ ←ಸಂ. ವಕ್ರ) + ಬರ್ (<ವರ್)]

ಬಕ್ಕೀಸು 'ಬಕ್ಷೀಸು' ನೋ.

ಬಕ್ಷಿ, ಭಕ್ಷಿ (ನಾ). ೧. ಅರಮನೆಯ ಮುಖ್ಯಾಧಿಕಾರಿ: ಮೋದೀಖಾನೀ ಬಕ್ಷೀ ವೀರಭದ್ರೈಯ (ಎಕ. XIV, ಜಾಮರಾ. ೨೦೭-೦; 1868); ಇಬ್ಬರು ಬಕ್ಷಿಗಳನ್ನು ಜಡ್ಜಿಗಳಾಗಿ ನೇಮಿಸಿ (ಮಹಾಪಂ. II, ೨೭); ಈ ತಳ್ಳಿಯು . . . ವಿಳಂಬವಿಲ್ಲದೆ ಅರಮನೆಯ ಬಕ್ಷಿಯ ಕೈಗೆ ಬಂತು (ಪಾಗ್ಯೇಪಿ. ೨೨೭). ೨. (ಬಕ್ಷಿಯ ಹೆಸರಿನಲ್ಲಿ ಮುದ್ರಿಸಿದ) ಒಂದು ಬಗೆಯ ನಾಣ್ಯ: 'ಗೋವಿಂದಬಕ್ಷಿ' ಪರಾ. **ಭಕ್ಷಿ**: ೧. ಮುಂದಿನ ನವರಾತ್ರಿಯಲ್ಲಿ ಅವನು ಮಹಾರಾಜರ ಮುಂದೆ ಹಾಡುವುದಕ್ಕೆ ಏರ್ಪಾಡು ಮಾಡುವುದಾಗಿ ವೀಣೆ ಭಕ್ಷಿಗಳು ಅವನಿಗೆ ವಾಗ್ದಾನ ಮಾಡಿದ್ದರು (ಸುಬ್ಬಣ್ಣ. ೬); ಭಕ್ಷಿ ಆನಂದ ರಾಯನಿಗೆ ವರ್ತಮಾನವನ್ನು ಕೂಡಲೇ ಹೇಳಿ ಕಳುಹಿಸಿದನು (ಇಬಿಮ. ೯೯).

[←ಪಾರ. ಬಖ್ಶೀ; ಹಿಂ. ಬಕೀ. ಬಕ್ಶಿ; ಮರಾ. ಬಕ್ಷೀ, ಬಕ್ಶೀ, ಬಖ್ಶಿ, ಬಖ್ಷೀ]

ಬಕ್ಷೀಸ್ 'ಬಕ್ಷೀಸು' ನೋ.

ಬಕ್ಷೀಸು, ಬಕ್ಶೀಸು, ಬಕ್ಷೀಸ್, ಭಕ್ಷೀಸ್, ಭಕ್ಷೀಸು (ನಾ). (ಮೆಚ್ಚುಗೆಯಿಂದ ಕೊಡುವ) ಬಹುಮಾನ; ಇನಾಮು: ಆಳುಗಳಿಗೆ ಹದಿನೈದು ರೂಬಲ್ ಬಕ್ಷೀಸು ಕೊಟ್ಟನು (ಪುಪರು. ೬೦); ಬಕ್ಷೀಸಿನ ಆಶೆಯಿಂದ ಎಲ್ಲಾದರೂ ಇಂಥ ಕಳವುಗಳ ಪತ್ತೆಯಾಗುವುದುಂಟೇ ? (ಕಳ್ಳಕಾ. ೬). **ಬಕ್ಶೀಸು**: ಸಂಕಣ್ಣನಾಯಕನಂ ಕರಶಿ ಆಲಿಂಗನವಂ ಮಾಡಿಕೊಂಡು ಮರೆಮಾಚಿದೆಯೆಂದು ಹೇಳಿ ಸದರಿ ಬಕ್ಶೀಸನ್ನು ಕೊಟ್ಟ (ಕಳಪಂ. ೨೦-೦೯). **ಬಕ್ಷೀಸ್**: ಅಲ್ಲಿ ಕಾಯುತ್ತಿದ್ದ ದರವಾನನಿಗೆ ಐದು ರೂಪಾಯಿಯ ನೋಟನ್ನು "ಬಕ್ಷೀಸ್" ಇತ್ತು ಬ್ರೊಹೆಯನ್ನು ಹತ್ತಿದನು (ಪಿಧಿಸ್ಕ. ೩೯). **ಭಕ್ಷೀಸ್**: ಮೇಘದೂತದ ಶ್ಲೋಕಗಳನ್ನು ಹೇಳುವುದು ಕೇಳಿ ಎಜ್ಯುಕೇಶನರ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿಗೆ ಒಂದು ಫೌಂಟನ್ ಪೆನ್ 'ಭಕ್ಷೀಸ್' ಕೊಟ್ಟಿದ್ದರು (ಶಸ್ತಿಪಂ. ೩೪). **ಭಕ್ಷೀಸು**: ನಿಮಗೆ ಇದನ್ನು ಭಕ್ಷೀಸಾಗಿ ಕೊಟ್ಟಿದ್ದೇನೆ (ಕಮಳ. ೨).

[←ಪಾರ. ಬಖ್ಶೀಸ್; ಹಿಂ. ಬಖಸೀಸ್, ಬಖ್ಶೀಸ್; ಮರಾ. ಬಕ್ಷೀಸ್, ಬಖ್ಶೀಸ್, ಬಖ್ಷೀಸ್]

ಬಖರ್ 'ಬಖರು' ನೋ.

ಬಖರು, ಬಖರ್, ಬಖೈರು (ನಾ). ದೇಶಭಾಷೆಯಲ್ಲಿ ಗದ್ಯರೂಪವಾಗಿ ಬರೆದ ಐತಿಹಾಸಿಕ ವಿವರಗಳನ್ನೊಳಗೊಂಡ ಗ್ರಂಥ: ನವಾಬರು ಸವಣೂರಿಗೆ ರಾಜಕುಟುಂಬವನ್ನೂ . . . ಕರೆದುಕೊಂಡು

ಹೋಗಿ ಮನ್ನಿಸಿದರೆಂದು ಆ ಸಂಸ್ಥಾನದ ಬಖರುಗಳಲ್ಲಿ ಬರೆದಿದೆ (ಸಮಜೀ. ೫). **ಬಖರ್** : ಇತಿಹಾಸಗ್ರಂಥಗಳು ಬಖರ್ ಎಂದು ಮಹಾರಾಷ್ಟ್ರದಲ್ಲಿ ಪ್ರಸಿದ್ಧವಾಗಿರುವುವು (ಶಶ್ರಶಿ. ೬೮). **ಬಖೈರು**: ಪುರಾತನ ಕೈಫೀಯತ್ತುಗಳನ್ನೂ ಬಖೈರುಗಳನ್ನೂ ಕಡತಗಳನ್ನೂ ಶಾಸನಗಳನ್ನೂ ತಿಳಿದವರು ಹೊರಕ್ಕೆ ತರಬೇಕು (ಬಿಖೈರು. ೦ ಮುನ್ನುಡಿ) ; ಮರಾಟಿಭಾಷೆಯಲ್ಲಿ ಶಿವಾಜಿ ಮೊದಲಾದ ವೀರರ ಕಥೆಗಳೂ ಪುನೆ ಶ್ರೀಮಂತರ ಚರಿತ್ರೆಗಳೂ ಬರೆಯಲ್ಪಟ್ಟಿವೆ. ಇವುಗಳನ್ನು ಬಖೈರು ಎನ್ನುತ್ತಾರೆ (ಮುಸುಗ. ೭).

[← ಮರಾ. ಬಖರ್, ಬಖೇರ್]

ಬಖಾರಿ (ನಾ). ಧಾನ್ಯ ಮುಂತಾದುವನ್ನು ಬಹಳ ಕಾಲ ರಕ್ಷಿಸಿಡಲು ಮಾಡಿದ ಗೂಡು ; ಪಣತ : ಬಖಾರಿಯಲ್ಲಿ ಗೋಡೆಯ ಹತ್ತರ ಇಲ್ಲವೆ ತಳಕ್ಕೆ ಇರುವ ಚೀಲಗಳೆಲ್ಲ ಹವೆಯಿಂದ ನೀರಿನಿಂದ ತೊಯಿದಂತೆ ಆಗುತ್ತದೆ (ಮುಂಬಪ್ಯಾ. ೭೫). 'ವಖಾರ' ಪರಾ.

[←ಹಿಂ. ಬಖಾರ್ ; ಮರಾ. ಬಖಾರೀ]

ಬಖೇಡಿ (ನಾ). ೧. ವಾಜ್ಯ ; ಕಲಹ ; ಜಗಳ : (ಕಿ). ೨. ತೊಂದರೆ ; ಕಿರಿಕಿರಿ : (ಕಿ). [←ಹಿಂ. ಮರಾ. ಬಖೇಡಾ]

ಬಖೈರು 'ಬಖರು' ನೋ.

ಬಗಟು (ಕ್ರಿ). ೧. ತೊಡೆಗಳನ್ನು ಅಗಲಿಸು : "ಬಗಟು—ಊರುವಿಶ್ಲೇಷೇ (ಕಾಲುಗಳನ್ನು) ಅಗಲಿಸು" (ಕಮರಾ). ೨. ಪಾಲು ಮಾಡು ; ವಿಭಾಗಿಸು : ಅರಿವುದು ಮೂಗನಿಕ್ಕುಟಿಕೊಳೆ ಕೀಟ್ವುದು ಪಲ್ಗಳನೇಟುಬಟ್ಟೆಯಾಗಿರೆ ಕಿಱಿದೆಂಟುಸೂಟ್ ಬಗಟೆ ಕೊಯ್ವುದು ಮಂಡೆಯಂ (ಸೂಕ್ತಿಸು. ೬–೩೭೬).

[ದೇ. ॥ ತಮಿ. ಮಲ. ವಕು ; ತುಳು. ಬಗಟು]

ಬಗಟೆ 'ಬಗಡೆ' ನೋ.

ಬಗಟೆಗೋಳ (ನಾ). (?) : ಮುದದೆ ವೈಯೆಂಬುದೇ ನಿಶ್ಚಯಂ ಕುಂಠವೆಂಬುದೇ ತತ್ಕ್ರಿಯಾಹಾನಿ ವೈಕುಂಠಯೆನಲಾಗಿ ಮದನಪಿತನೇ ಕಾಲು ಮುಱಿದ ಕುಂಠನೆನಿಪ್ಪ ಪೆಸರು ಲೋಕಪ್ರಸಿದ್ಧಂ ಅದಱಿಂದಲವನ ಪಾದಸ್ತಂಭವಾಗೆ ಮೆಱೆದುದು ಮೇಘದಲ್ಲಿ ನೆಲದೊಳಗೊಂದು ಕಾಲಿರಲ್ಕದು ಬಗಟೆಗೋಳ ಮಲ ಹೆಟ್ಟಿದಂತಾಗಿರ್ದನಾ ಹರಿ ನಿರೋಧದಿಂದ (ಶಿಕ್ಷಿಪು. ೩–೦೪–೨೫). [?]

ಬಗಡೆ, ಬಗಟೆ (ನಾ). ೧. ಚೆನ್ನಾಗಿ ತಳಿಸದಿರುವ ಅಕ್ಕಿ ; ತೌಡು ಮಿಶ್ರವಾದ ಅಕ್ಕಿ : (ಕಿ). ಬಗಟೆ : ೨. "ಅಕ್ಕಿಯ ಮೇಲಣ ತೌಡು (?)" : (ಪ್ರಶಣ್ಣ).

ಬಗಡೆಯಕ್ಕಿ=ಚೆನ್ನಾಗಿ ತಳಿಸದ; ತೌಡು ಮಿಶ್ರಿತವಾದ ಅಕ್ಕಿ: ಈ ಸಲದ ರೇಷನ್ ಅಕ್ಕಿ ದನಕ್ಕೆ ಹಾಕುವ ಬಗಡೆಯಕ್ಕಿಯ ಹಾಗಿದೆ (ರೂಢಿ).

[← ಮರಾ. ಬಗಡ್]

ಬಗದತ್ತಿ (ನಾ). (?) : ಕಟ್ಟಾಳ್ಮಾನುಸಗಣ್ಡ ಮನ್ನವ ಬಣ್ಣನಂ ಬೀಟುವೋಂ ಪೆಡೆಯಂ ಬೆಳಪ ಬಿರುದಪ್ಪವರ ಬಿರುದನೊಡ್ಡಟಿವೊನ್ ಬಿದ್ಧ ಬಗದತ್ತಿ ಆಣಿ ಗಣ್ಡುಕದ ಗಣಿ ಪೊಕ್ಕ ಅಬ್ಬಯ ಆಟ್ಮ (ಎಇ. XXIV, ೨೬–೦೦; ಸು. 885). [?]

ಬಗದಳ 'ಭಗದಾಳ' ನೋ.

ಬಗದಾರೆ (ನಾ). ಒಂದು ಬಗೆಯ ಹಕ್ಕಿ : ತರ್ಕಿಪ ಬಗದಾರೆಯ ಕೂಡೆ ಬಹ ಕೊಳರ್ವಕ್ಕಿಯ ಕೆಲದಾಡಿಸುತ ದಿಕ್ಕಿಗೆ ಪೆಸರಾಂತ ಸಿಪಿಲೆಗೆ ಕವಳವನಿಕ್ಕಿ ಕಾದಿಸುತಿರ್ದ ಮದನ (ಮೋಹತ. ೫–೩೫) ; ಜಾಣ ಮೆಲ್ನುಡಿ ಗೆಲವರೆ ಗಿಳಿ ಬಗದಾದಿ[ರೆ] . . . ಹೊಮ್ಮರಿ ಮಂಚದ ಸುತ್ತ ಠಾಣಯವಿರಲು ನೋಡಿದನು (ಮೋಹತ. ೩೦–೪೯). [?]

ಬಗದಾಳ 'ಭಗದಾಳ' ನೋ.

ಬಗನಿ 'ಬಯಿನೆ' ನೋ.

ಬಗನೆ 'ಬಯಿನೆ' ನೋ.

ಬಗನೆಕಳ್ಳು (ನಾ). ಬಗನೆಮರದಿಂದ ತೆಗೆದ ಹೆಂಡ. — ಮದ್ಯ: ಅವನಿಗೆ ಕುಡಿಯುವ ಚಟವಿದ್ದಿದ್ದರೆ ಬಗನೆಕಳ್ಳನ್ನು ಅಥವಾ ಅಕ್ಕಿಯ ಭೋಜವನ್ನು ಕುಡಿಸುತ್ತಿದ್ದರು (ಪಂಜಪಂ. ೧೭).

[ಬಗನೆ (<ಬಯಿನೆ) + ಕಳ್ಳು (<ಕಳ್ಳ್$_3$)]

ಬಗಬಗ (ನಾ). ಬೆಂಕಿ, ಗಾಯ ಮೊದಲಾದುವುಗಳು ಉರಿಯುವುದನ್ನು ಹೇಳುವ ಒಂದು ಅನುಕರಣ ಪದ: ಹೊತ್ತಿಸಿದ ಜೆಡೆ ಬೆಂದು ದಳ್ಳುರಿ ಹತ್ತಿ ಬಗಬಗ [ಪಾಠಾಂ. ಭಗಭಗ] ಎನುತಲುತ್ತಮನುತ್ತಮಾಂಗಂ ಬೇವುತಿರಲು (ಬಸಪು. ೧೬–೨೫); ಗಾಯ ಬಗಬಗ ಎಂದು ಉರಿಯುತ್ತಿದೆ (ರೂಢಿ).

ಬಗಬಗನೆ (ಅ). ಬಗಬಗ ಎಂದು : ಬೆಳಗುವನಲಂ ಬಗಬಗನೆ [ಪಾಠಾಂ. ಧಗಧಗನೆ] ಶಕೆ ಬೆಳೆದುರಿವುತಿಹ ಕಬ್ಬುನದ ಕಾವಲಿಯೊಳಗೆ ಕುಳ್ಳಿರ್ದು (ಬಸಪು. ೫೩–೫೩). [ಬಗಬಗ + — ಅನ್ನೆ]

ಬಗರ್, ಬಗರು$_2$ (ಅ). ಇಲ್ಲವೆ ; ಹೊರತಾಗಿ : 'ಬಗರ್ಬಡ್ಡಿ', 'ಬಗರ್ಹುಕುಂ' ಪರಾ. **ಬಗರು$_2$** : 'ಬಗರುಚಿರಾಯಿತು' ಪರಾ.

[←ಅರ. ಹಿಂ. ಬಗೈರ್; ಪಾರ. ಬಿಘೈರ್; ಮರಾ. ಬಗರ್, ಬಗೈರ್]

ಬಗರಗೆ (ನಾ). ೧. (ಒಣಗಿದ ನದಿದಂಡೆಯಲ್ಲಿ ನೀರಿಗೋಸ್ಕರ ತಾತ್ಕಾಲಿಕವಾಗಿ) ತೋಡಿದ ಕುಳಿ. — ಗುಣಿ : "ಚುರೀ, ಚುಂಡೀ, ಚೂಚುಕಃ—ಈ ೩ ಬಗರಗೆ" (ಹಲಾಯು. ೦೧೩–೬೨); ಪಥಿಕರಱಲ್ಗೊಂಡು ತೋಡಿದಱುಂಬುನೀರ ಬಗರಗೆಗಳುಮನೊಳಕೆಯ್ದು ಬತ್ತಿದ ಪಳ್ಳಂಗಳೊಳಂ (ಕಾದಂಕಾ. ೨೬೬); ಬೇಗೆ ಪರ್ವಿದ ಪರ್ವತಂಗಳ ತಾಪಮಂ ಕಳೆವೊಡವಱಿಂದುನ್ನತಂಗಳಪ್ಪ ಜಲಧರಂಗಳೆ ಕಳೆಗುಂ ಕೀಱಿದುವಪ್ಪ ತೊಱೆಯುಂ ಬಾವಿಯುಂ ಬಗರಗೆಯುಂ ಕಳೆಯಲಾಱವು (ಅರ್ಥನೇ. ೬–೨೨ ವ); ಬಗರಗೆಯೊಳ್ ಮಣಲನೆನಿತ್ತಗಟ್ಟಿರ್ ಮಾನಸರನಿತ್ತು ನೀರೊಸರ್ಗುಂ (ಪೀತಿಮಂ. II, ೨೬೬). ೨. ಹೆಂಚಿನ ಚೂರು ; ಓಡು ; ಬಕ್ಕರೆ: "ಪಕ್ಕಳೆಂದುಂ ಬಗರಗೆಯೆಂದುಂ ಬಕ್ಕರೆ" (ಕಶಸಾ. ೬೬–೪೯೦); ಕೈಯೊಳ್ ಪಿಡಿದಾ ಲಾಗುಳದ ಕೋಲೊ ಬಗರ[ಪಾಠಾಂ. ರಿ]ಗೆಯೋ (ಕಬ್ಬಿಕಾ. ೦೬೯); ಬೆಂಗಡರಿದ ಬಸುರ್ಗಳ ಕೆದರ್ದಲೆಗಳ ಕೆಂಗಣ್ಣುಗಳ ಕೋರೆದಾಡೆಯ ಸಂಗಳಿಸಿದ ಬಗರಗೆ ಬಾಳ ಕೈಯ ಭೂತಂಗಳಾ ಹುರದೊಳಿರ್ದವು ಕೇಳ (ಸೂಬಸೋ. ೯–೨೬); ಭುಗಿಭುಗಿಲ್‌ಭುಗಿಲೆಂದು ಕಬ್ಬೊಗೆ ನೆಗೆಯಲುರಿ ಹೊಡೆದಬುಜಜಾಂಡದ ಬಗರ[ಪಾಠಾಂ. ರೊ]ಗೆಯ ಭೇದಿಸಿತು (ಕುಪ್ಕಾಳ. ೯–೪೪) ೩. (?): ಕೆಣಕಿದರೆ ಭುಗಿಲೆಂದುದೀತನ ರಣಪರಾಕ್ರಮವಪ್ಪಿ ಕರಡದ ಬಣಬೆ ಸಿಕ್ಕಿತು ಕಾಳುಗಿಚ್ಚಿನ ಬಾಯ ಬಗರಗೆಗೆ [ಪಾಠಾಂ. ತುತ್ತಾಗೆ] (ಕುಪ್ಕಾಳ. ೩–೬).

ಬಗರಿ 'ಬವರಿ' ನೋ.

ಬಗರು$_1$ (ಕ್ರಿ). (ಉಗುರಿನಿಂದ) ಕೆರೆ; ಗೆಬರು ; ಗೋರು ; ತೋಡು : ಪ್ರತಿಯೊಂದನ್ನೂ ಎರಡು ಮೂರು ಬಾರಿ ಕೇಳಿ, ಕೇಳಿ, ಬಗರಿ, ಬಗರಿ ಬಡಿಸುತ್ತಿದ್ದರು (ಪಂಬಿನಾ. ೬೯) ; ಇದ್ದುದನ್ನು ಬಗರಿ ಕೂಡಿಡಬಹುದು (ಶಾಳ್ಕೆದ. ೫೬). [ದೇ. ॥ ತಮಿ. ವರುಕ; ತೆಲು. ಬರುಕು ; ಕುಇ. ಪೆರ್ಕ]

ಬಗರು$_2$ 'ಬಗರ್' ನೋ.

ಬಗರುಚಿರಾಯಿತು (ನಾ). ಸರ್ಕಾರದ ಅಪ್ಪಣೆಯಿಲ್ಲದೆ ಬೇಸಾಯ ಮಾಡುವ ನೆಲ : ಭೂಮಿ ಇಲ್ಲದ ಬಡವನಾದ ಬಗರುಚಿರಾಯಿತು ಕುಳವು ಹೆಗ್ಗಡಿಯಾಗಿ ಬಲವಾಗಿರತಕ್ಕ ಪುರುಷನ ಸಹಾಯವನ್ನು ಪಡೆಯ ಬೇಕಾಗಿತ್ತು (ಪಾಳಗಾ. ೨೧). [ಬಗರು$_2$ (<ಬಗರ್) + ಚಿರಾಯಿತು]

ಬಗರ್ಬಡ್ಡಿ (ಅ). ಬಡ್ಡಿ ಇಲ್ಲದೆ : (ಕಿ). [ಬಗರ್ + ಬಡ್ಡಿ$_3$]

ಬಗರ್ಬದಲಿ (ಅ). ಬದಲಿಯಿಲ್ಲದೆ; ವ್ಯತ್ಯಾಸವಿಲ್ಲದೆ : (ಕಿ).
[ಬಗರ್ + ಬದಲಿ$_2$]

ಬಗರ್ರಜ (ಅ). ರಜವಿಲ್ಲದೆ; ಬಿಡುವಿಲ್ಲದೆ : (ಕಿ).
[ಬಗರ್ + ರಜ$_2$ (< ರಜಾ)]

ಬಗರ್ಹುಕುಂ, ಬಗರ್ಹುಕ್ಕುಂ (ಅ). ಅಪ್ಪಣೆಯಿಲ್ಲದೆ : ರೆವಿನ್ಯೂ ಜಮೀನಿನಲ್ಲಿ ಕನ್‌ವರ್‌ಷನ್ ಆಗದೆ 'ಬಗರ್‌ಹುಕುಂ' ಮನೆ ಕಟ್ಟಿದ್ದು ಸರ್ಕಾರಕ್ಕೆ ಗೊತ್ತಾದರೆ ನಿನ್ನ ಮನೆ ಪಾಯದ ಕಲ್ಲು ಕದಲಿಸಿ ಬಿಟ್ಟಾರು ! (ಸಮ್ಮಳ್ಳಿ. ೯). **ಬಗರ್ಹುಕ್ಕುಂ**: ಸರ್ಕಾರದ ಜಮೀನನ್ನು ಅಥವಾ ನೀರನ್ನು ಬಗರ್‌ಹುಕ್ಕುಂ ಉಪಯೋಗಿಸಿದ್ದಕ್ಕೆ . . . ವಿಧಿಸುವ ಜುಲ್ಮಾನೆ (ಕೆಲಸ. ೦೫೫). [ಬಗರ್ + ಹುಕುಂ]

ಬಗರ್ಹುಕ್ಕುಂ 'ಬಗರ್ಹುಕುಂ' ನೋ.

ಬಗಲ್ (ನಾ). ತುಂಡು ; ಚೊರು.

ಬಗಬಗಲ್ಮಾಡು = ಚೊರುಚೊರು ಮಾಡು : ಯುಗಸಹಸ್ರ ಕ್ಕೊಡೆಯಬಹುದೆ ಬಲದುರ್ಗಮಂ ಬಗಬಗಲ್ಮಾಡಿ ಮುರಿವಡದು ರಿಪುಮಸ್ತಕವನೊಗದು ಬಿಸುಡಿದ ಪಾರ್ಥ ಪಾಶುಪತಬಾಣದಿಂ (ತುರಂಗ. ೫೬-೫೩). [←ಮರಾ. ಬಖಲ್]

ಬಗಲ (ನಾ). ವಿಶಿಷ್ಟ ಆಕಾರದ ಒಂದು ಬಗೆಯ ಅರಬ್ಬಿನಾವೆ : ಫತ್ತೆಮಾರಿಗಳಲ್ಲಿಯೂ ಬಗಲಗಳಲ್ಲಿಯೂ ಸರಕುಗಳನ್ನು ತುಂಬಿಕೊಂಡು . . . ಸಮುದ್ರಪ್ರಯಾಣ ಮಾಡುತ್ತಿದ್ದರು (ಮುಂಬಯಿ. ೩-೧೦೨).
[← ಮರಾ. ಬಗಲಾ./ತುಳು. ಬಗಲೆ]

ಬಗಲಂಗಿ (ನಾ). ಗಿಡ್ಡತೋಳಿನ ಒಂದು ಬಗೆಯ ಅಂಗಿ : (ಕಿ).
[ಬಗಲು + ಅಂಗಿ$_2$]

ಬಗಲಬಂಡಿ 'ಬಗಲುಬಂದು' ನೋ.

ಬಗಲಬಂಡೆ 'ಬಗಲುಬಂದು' ನೋ.

ಬಗಲಾಂಟ (ನಾ). ಸುಳ್ಳು ಆಪಾದನೆ; ಮಿಥ್ಯಾರೋಪ : ಇದೇನು ಹೊಸ 'ಬಗಲಾಂಟ'ದ ಸುದ್ದಿ ತಂದಾನೊ ಎನ್ನುವಂತೆ ಮಾಸ್ತರರನ್ನು ನೋಡಿ . . . ಕೇಳಿದರು (ಮೂರುದಾ. ೩೦).
[←ಮರಾ. ಬಂಗಲಾಟ್, ಬಂಗಲಾಠ್]

ಬಗಲಿ (ನಾ). ಕನ್ನ ; ಕಂಡಿ: 'ಬಗಲಿಪದ್ಧತಿ' ಪರಾ.
[←ಮರಾ. ಬಗಲೀ]

ಬಗಲಿಪದ್ಧತಿ (ನಾ). ಕನ್ನ ಕೊರೆದು ಕದಿಯುವ ಪದ್ಧತಿ : ಬಾಗಿಲಿನ ಹತ್ತಿರ ಗೋಡೆ ಕೊರೆದು ಒಳಸೇರುವುದಕ್ಕೆ 'ಬಗಲಿ'ಪದ್ಧತಿಯೆಂದೂ . . . ಕರೆಯುವ ರೂಢಿಯಿದೆ (ಬಂಗಾರ. ೦೫೦). [ಬಗಲಿ + ಪದ್ಧತಿ]

ಬಗಲು (ನಾ). ೧. ಕಂಕುಳು; ಕಕ್ಷ : ಗಂಡುಗಲಿ ಕ್ರತುವೀರ್ಯ ಸಂಭವಂ ಬಗಲೊಳಾಂತೊಲಪಿನಿಂ ತಿರುಗಲು (ಪರಶು. ೦೩-೩೭); ಲಲನೆಯರ ಮೈ ಕಂಪನಂಬಡೆದು ಬಗಲೊಳಗೆ ಜಲವಿಳಿದು ಬಾಯರತವು (ಮಲ್ಲಿಕ. ೬-೮); ಪಾದರಕ್ಷೆಯನ್ನು ಪಟ್ಟೆಯ ವಸ್ತ್ರದಲ್ಲಿ ಹುದುಗಿಸಿ, ಬಗಲಲ್ಲಿಟ್ಟು ಬಸವಣ್ಣನವರ ಅರಮನೆಗೊಯ್ದನು (ಶರಲೀ. ೪೩೦-೭ ವ). ೨. ಮಗ್ಗುಲು ; ಪಕ್ಕ : ಪಡುವಲಾಗಿ ತಿರಿಗಿ ಬಗಲಾಗಿ ತಿರಿಗಿದ ದುರಿದೂಬಲಾಗಿ ಕರಿಯ ಕಲ್ಲ ಮೇಲೆ ಹಾದು (ಎಕ. III, ತಿರುಮ. ೬೨-೨೦; 1622); ಹಳ್ಳಿಯ ರೈತನೊಬ್ಬ. . . ದಾರಿಯ ಬಗಲಲ್ಲಿ ಗಾಡಿ ಹೊಡೆದು ಕೊಂಡು ಹೋಗುತ್ತಿದ್ದನು (ಪುನರು. ೦೮೨). ೩. ಪಕ್ಷ; ಪಂಗಡ : ಒಬ್ಬಿಬ್ಬ ಸಂಪಾದಕರು ಬಗಲಿಗೆ ಇರಲಿ (ಅರಳು. ೩೪೭-೧೦).

ಬಗಲಿಗೆ ಬೀಳು = ಅಧೀನವಾಗು ; ಪಶವಾಗು : ಶ್ಯಾಮಣ್ಣ ಬಗಲಿಗೆ ಬಿದ್ದರೆ (ಲೋಕಕ. ೦೪) ; ಕಾಕಾ ಬಗಲಿಗೆ ಬಿದ್ದರ ಅಂತ ತಿಳೀ (ದೀಪಹ. II, ೨೦೦). [←ಪಾರ. ಬಘಲ್ ; ಹಿಂ. ಮರಾ. ಬಗಲ್]

ಬಗಲುಕಸೆ (ನಾ). ಒಂದು ಪಕ್ಕದಲ್ಲಿ ಲಾಡಿಯನ್ನು ಗಂಟುಕಟ್ಟಿ ತೊಡುವ ಅಂಗಿ : ಮೈಯಲ್ಲಿ ಕೊಡೆಯರಿವೆಯ ಬಗಲುಕಸೆಯ ಅಂಗಿಯನ್ನು ತೊಟ್ಟಿದ್ದ (ಜನಜೀ. ೨೬). [ಬಗಲು + ಕಸೆ$_2$]

ಬಗಲುಚೀಲ (ನಾ). ಹೆಗಲಿಗೆ ನೇತುಹಾಕಿಕೊಳ್ಳುವ ಚೀಲ : ಅವನು ತನ್ನ ಬಗಲುಚೀಲದಿಂದ ಪುಸ್ತಕಗಳನ್ನು ಹೊರದೆಗೆದನು (ರೂಢಿ).
[ಬಗಲು + ಚೀಲ]

ಬಗಲುಬಂಡಿ 'ಬಗಲುಬಂದು' ನೋ.

ಬಗಲುಬಂದು, ಬಗಲಬಂಡಿ, ಬಗಲಬಂಡೆ, ಬಗಲುಬಂಡಿ (ನಾ). ಒಂದು ಬಗೆಯ ಅಂಗಿ : ಜಗನ್ನಾಥದಾಸರು ಬಗಲುಬಂದನ್ನು ತೊಟ್ಟುಕೊಂಡು ಲಪ್ಪಾಟಿಯನ್ನು ಸುತ್ತಿಕೊಂಡು. . . ಮನೆಗೆ ಬಂದರು (ಕಪಿ. ೫೨೩). **ಬಗಲಬಂಡಿ** : ಶರೀಫರು. . . ಬಿಳೀ ಬಗಲಬಂಡಿಯನ್ನು ಅಚ್ಚುಕಟ್ಟಾಗಿ ತೊಡುತ್ತಿದ್ದರು (ಶರೀಫ. ೬೧ ಕವಿಕಾವ್ಯಪಂಚಯ); ಚಳಿಯ ಸಲುವಾಗಿ ಅವರು ಒಂದು ಖಾದಿಯ 'ಬಗಲಬಂಡಿ' ಯನ್ನು ಹಾಕುತ್ತಿದ್ದರು (ಎಲ್ರುವ. ೦೮೦). **ಬಗಲಬಂಡೆ** : ವೇದವ್ಯಾಸಾಚಾರ್ಯ ಉಟ್ಟಿದ್ದು ಅಂಚಿನ ದೋತರ, ತಲೆಗೆ ಸುತ್ತಿದ್ದು ಕೆಂಪುಬನಾತು, ಮೈಯಲ್ಲಿ ಶುಭ್ರವಾದ ಬಗಲಬಂಡೆ (ಉದವೈ. ೦೬). **ಬಗಲುಬಂಡಿ** : ಹಿಂದಕ್ಕೊಮ್ಮೆ ಬಗಲುಬಂಡಿಗಳನ್ನು ನಮ್ಮ ಪುರಾತನರು ಹಾಕುತ್ತಿದ್ದರು (ಮುಂಗಾಪು. ೨೪).
[←ಪಾರ. ಮರಾ. ಬಗಲ್‌ಬಂದ್ ; ಹಿಂ. ಬಗಲ್‌ಬಂದೀ]

ಬಗಲೆ, ಬಗಳೆ (ನಾ). ೧. ತಾಂತ್ರಿಕರು ಪೂಜಿಸುವ ಒಬ್ಬ ದೇವತೆಯ ಹೆಸರು : ಈ ಎಲ್ಲಾ ಕ್ರಮಗಳೂ ಸಚ್ಚಿದಾನಂದರೂಪಿಣಿಯಾಗಿರುವ ತ್ರಿಪುರಾ, ಲಲಿತಾ, ಪರಾ, ಬಗಲಾ — ಮೊದಲಾದ ಸಾವಿರಾರು ಸಂಕೇತಗಳಿಂದ ಸೂಚಿಸಲ್ಪಡುವ ಶಕ್ತಿತಾದಾತ್ಮ್ಯವನ್ನು ಉಂಟುಮಾಡುವವುಗಳಾಗಿವೆ (ಶಾರದ. ೨೨೮). **ಬಗಳೆ** : ೨. ಪಗಲಾದೇವತೆಯನ್ನು ಕುರಿತು ಹೇಳುವ ಮಹಾಮಂತ್ರಗಳಲ್ಲಿ ಒಂದು : ಬಗಳಾ . . . ಇತ್ಯಾದಿ ಮಹಾಮಂತ್ರಗಳು (ಏವೇಕ. ೬೦). [<ಸಂ. ಪಗಲಾ]

ಬಗಸಿಗೆ (ನಾ). ಬೊಗಸೆ ; ಅಂಜಲಿ : ಕುಂಚಿತಾಂಗುಲಿಗಳನ್ನುಳ್ಳ ಅಂಗೆಯ್ ಪ್ರಸೃತಿಯೆನಿಸುಗು. ಅದು ಕುಡಿತೆ; ಆ ಎರಡೂ ಕೂಡಿದರೆ ಅಂಜಲಿಯೆನಿಸುಗು. ಅದು ಬಗಸಿಗೆ (ನಾಜಿಂ. ೬). [<ಬಗಸೆ]

ಬಗಸು$_1$ 'ಬಯಸು$_1$' ನೋ.

ಬಗಸು$_2$ (ನಾ). ೧. ಆಸೆ; ಹಂಬಲ : ಅಗಸಿಯ ತೆರಿ ನನ್ನ ಬಗಸುಳ್ಳ ತಳವಾರಾ ಬೊಗಸಿ ತುಂಬಡಕಿ ಬಿಳಿಎಲಿಯ ಕೋ(ಮಲ್ಲಿಗೆ. ೩೯). ೨. (?) : ಸೊಗಸಿನಿಂ ಬಗಸಿನಿಂ ಮಿಗಿಲಾಗಿ ಲಘುವಾಗಿ (ಜನಮು. ೪೮-೫೦).
[<ಬಗಸು$_1$]

ಬಗಸೆ, ಬೊಗಸೆ$_1$ (ನಾ). ೧. ಎರಡು ಅಂಗೈಗಳನ್ನೂ ಕೂಡಿಸಿದುದು ; ಸೇರೆ; ಅಂಜಲಿ : ಕುಡುತೆ ಬಗಸೆ ಮೊಱಂ ಗೆರಸಿ . . . ಮೊದಲಾದವು ಅವಮಾನಮೆಂಬುದಕ್ಕುಂ (ಶ್ರಾವಕಾ. ೫೮-೦೬); ಒಗೆದೊಗೆದು ಕಾಲ್ದಿರುಹಿ ರಕ್ತಮಂ ಬಗಸೆಯಿಂ ಮೊಗೆಮೊಗೆದು ಕುಡಿವುತಂ (ಶತುಪು. ೩-೬-೬೮); ಹುಡುಗಿಯರು ಗಾಡಿಗಳನ್ನು ನಿಲ್ಲಿಸದೆ ಹಾಗೆಯೇ ಮೇಲೇರಿ ಬಗಸೆ ತುಂಬ ದ್ರಾಕ್ಷಿಗಳನ್ನು ಎತ್ತಿ . . . ಹಾಕುತ್ತಿದ್ದರು (ಮಲೆನಾ. ೦೫೮). ೨. ಒಂದು ಸೇರೆಯಲ್ಲಿ ತುಂಬುವಷ್ಟು : ಯಾರ್ರಾದರ್ರು ಬಂದ ಪುಂಣ್ಯಾತ್ಮರು ನಂನ್ನ ತಲೆ ಮ್ಯಾಲೆ ಮಂದು ಬಗಸೆ ನೀರ್ರು ಆಕಬೇಕೆಂದು ಬೇಡುತ್ತೇನೆ (ಮೈಆರಿ. ೧೯೨೯, ೯೭-೧೬; 1593 ?). **ಬೊಗಸೆ$_1$** : ೧. ರಕ್ತವನ್ನು ಬೊಗಸೆಗಳಿಂದ ಹಿಡಿದು ಬಾರಿಬಾರಿಗೂ ಕುಡಿಯುತ (ಕೃಪಾಕ. ೦೬೬); ಬೊಗಸೆಯೊಳಿರೆ ಹೂವು ಕೈಗಳನೆರಡನು ಪರಿಮಳಗೊಳಿಸುವುದಲ್ತೆ (ಇಂಜಾಪ. ೬೯-೩೩). ೨. ಆಕೆಯನ್ನು ಮೂರುಲೋಕ ಸುತ್ತಿಸಿ, ಮೂರು ಬೊಗಸೆ ನೀರನ್ನು ಕುಡಿಸದೆ ಬಿಡುವೆನೇ ? (ರಕ್ಷೇಪ್ರ. ೦೭೦).

ಬಗಸೆಗಣ್, ಬಗಸೆಗಣು, ಬಗಸೆಗಣ್ಣು, ಬೊಗಸೆಗಣ್, ಬೊಗಸೆಗಣ್ಣು (ನಾ). ಬೊಗಸೆಯಷ್ಟು ಅಗಲವಾದ ಕಣ್ಣು : ಬಗಸೆಗಣ್ಣುಡಿನೋಟವಮಮ ಪೊಸಗಾಡಿಯಂ ತೆಗೆಯೆ (ಪದ್ಮರಾ. ೩-೩೦); ಬಗಸೆಗಣ್ಣಳೊಳು ವಿಲಾಸವೆಸೆಯೆ ರಸವೊಗುವಂತೆ ಪಾತ್ರವಾಡಿದಳು (ಭರತ. ೦೩-೬೯); ಮೊಗಮನಿತುಮಂ ವ್ಯಾಪಿಸಲೆಳಸುವ ಬಗಸೆಗಣ್ಣಳಂ ಮೇರೆಯೊಳ್ ನಿಲಿಸುವೆಲ್ಲೆಗಟ್ಟೆಗಳಂತಿರ್ಪ ಪುರ್ಬುಗಳುಂ . . . ಮನಂಗೊಳೆ (ಚಳವಂ. ೭೬-೦೪). **ಬಗಸೆಗಣು** : ಸಸಿಯನ್ನ ಮೊಗದೊಳು ಮೊಳೆವ ಮೀಸೆಯ ಚಿನ್ನಮಾಣಿಕದುಟಿ ಬಗಸೆಗಣು [ಪಾಠಾಂ. ಣ್]ತಿಂಗಳರೆನೊಸಲು (ಸಾಳ್ವಭಾ. ೪-೬). **ಬಗಸೆಗಣ್ಣು** : ಒರ್ವಳಂ ತನ್ನ ಬಗಸೆಗಣ್ಣಿಂ ಮುರಿದು ನೋಡೆ (ಪದ್ಮರಾ. ೮-೪೬); ಬಗಸೆಗಣ್ಣ ಮಲಾಂಗಿಯರೈತಂದರು ಬಿಗಿದ ಪುರ್ಬಿನ ಪೆಣ್ಣೆನೊಡನೆ (ಪಂಪ್ರಸಾಂ. ೯-೦೪೦). **ಬೊಗಸೆಗಣ್**: ಬೊಗಸೆಗಂಗಳ ಬಾಲೆಯರ ತಂದಾತನ ಶ್ರೀಕೃಷ್ಣ ಎನ್ನಿರೊ (ಕವಕ. ೦೩೦-೩) : ಭಟ್ಟಿನಿಯ ಬೊಗಸೆಗಂಗಳಲ್ಲಿ ಕಂಬನಿ ತುಂಬಿ ಬಂದಿತು (ಬಾಣಅ. ೩೭೯). **ಬೊಗಸೆಗಣ್ಣು** : ಬೊಗಸೆಗಣ್ಣಿನ ಮುಗುದೆಯನು ನೋಳ್ಪೆ (ಶಾಕುಂತ. ೧೯ ಅಡಿಪದ್ಯ) ; ಅವಳ ಬೊಗಸೆಗಣ್ಣುಗಳಲ್ಲಿ ತುಂಬುತ್ತಿದ್ದ ನೀರನ್ನು ನೋಡಿದಾಗ ಗಲಿಬಿಲಿಗೊಂಡ (ವಾತ್ಸಲ್ಯ. ೩೭).

[ಬಗಸೆ + ಕಣ್]

ಬಗಸೆಗಣು 'ಬಗಸೆಗಣ್' ನೋ.

ಬಗಸೆಗಣ್ಣು 'ಬಗಸೆಗಣ್' ನೋ.

ಬಗಸೆಗೈ (ನಾ). ಜೋಡಿಸಿದ ಕೈ ; ಸೇರೆಗೈ : ಬಗಸೆಗೈಗಳಲಿ ನೀರ್ವಿಡಿದು ಶ್ರೀರಂಗೇಶ ಸೊಗಸುಗಾತಿಯರ ಮೇಲಿಡಲು (ಕಂಪಂ. ೨೫-೦೨೩).

[ಬಗಸೆ + ಕೈ$_2$ (< ಕೆಯ್$_2$)]

ಬಗಳಾಮುಖಿ (ನಾ). = ಬಗಲೆ ೧ : ಗಿರಿಗಳೊಳು ಸುರಗಿರಿಯು ಭೂಮಿಯ ತರುಗಳೊಳು ಮಂದಾರ ದೈವತದಿರವಿನೊಳು ಬಗಳಾಮುಖಿಯು (ಜ್ಞಾನಸಿಂ. ೧-೦೫). [< ಸಂ. ವಗಲಾಮುಖೀ]

ಬಗಳಿ 'ಬೊಗಳಿ' ನೋ.

ಬಗಳೆ 'ಬಗಲೆ' ನೋ.

ಬಗಾಟಬಗರಿ 'ಬೊಗಾಟಬುಗರಿ' ನೋ.

ಬಗಿ$_1$ (ಕ್ರಿ). ೧. (ಎರಡು ಭಾಗಗಳಾಗುವಂತೆ) ಸೀಳು ; ಹೋಳು ಮಾಡು : "ಬಗಿ—ವಿಶ್ಲೇಷೇ (ಭಾಗ ಮಾಡು)" (ಶಮಭಾ); ಅಂಬರಂಬರಂ ಬಗಿದು ನಿಮಿರ್ವ [ಪಾಠಾಂ. ಬಳೆದು ಮಿಳಿರ್ವ] ತೆರೆಗಳ್ (ಅಂಪು. ೦೨-೬೯ ಪ); ನಿಮ್ಮುದರವ ಬಗಿದಾನು ಹೊಗುವ ಭರವೆನಗೆ (ಬಸವ. ೪೬೭) : ಈಗಳೆ ನಿಮ್ಮನುಗಿದುಂ ಬಗಿದುಂ ದೆಸೆವಲಿಗುಡುತುಮೆನ್ನ ಚಿನ್ನ ತಮ್ಮನಂ ಕೊಳ್ವೆಂ (ರಾಮಾಶ್ವ. ೦೫೭-೨); ೨. ಕೆದಕು ; ಬೆದಕು : ಪಿರಿದಪ್ಪೆರೆಯಂ . . . ನಿಷ್ಠುರದಿಕ್ಕಿ ಮೆಟ್ಟಿ ಪುಟುಗಳ್ ಕರಮೆಲ್ಲೆಡೆ ಪತ್ತಿ ಬಗಿದು ತಿನೆ ಮೆಯ್ಯಡಗಂ (ಧರ್ಮಾಮೃ. ೩-೬೯). 'ಬಗಿಯೇಱು' ಪರಾ. ೩. ಎರಡು ಭಾಗಗಳಾಗುವಂತೆ ತಳ್ಳಿ, ಜಾಗ ಮಾಡಿಕೊಳ್ಳು : ಮೊನೆಯಂಬಿನ ತಂದಲೊಳರ್ಜುನನಂ ಕರ್ಣನುಮನಿನಿಸು ಕಾಣದಣಂ ಮೆಲ್ಲನೆ ಬಗಿದು ನೋಡಿ ಕುಡುಮಿಂಚಿನಂತೆ ಮೇಗೊಗೆದು ನಾರದಂ ನರ್ತಿಸಿದಂ (ಪಂಪಭಾ. ೦೨-೦೬೯) ; ಸೌಂದರಪೆರುಮಾಳೆಯಿರ್ದ ವನಕ್ಕೆ ಬಂದು ಆಲ್ಲಿ ಮುಂದೆ ನೆರೆದಿರ್ದ ನೆರವಿಯಂ ಬಗಿದು ಎನ್ನ ಭಕ್ತನ ಕೂಡಿ (ಪಂಬರ. ೬-೬೫) ; ಬಿಡುಮುಡಿಯ ಕಟ್ಟದೆ ತವಕದಲ್ಲಿ ನೋಳ್ಪೌತ್ಸುಕ್ಯದಿಂ ಮಂದಿಯ ಬಗಿದು ಚೆಲ್ಲೆಗಂಗಳೊಳೀಕ್ಷಿಸುತ್ತಿರ್ದಳೊರ್ವಳಾ ಕುವರನ ಮಹೋತ್ಸವವನು (ಶಬಪು. ೫-೦೪). ೪. ಅಗೆ ; ತೋಡು : ಬಗಿದು ಪಾತಾಳಮಂ ಮುಟ್ಟುವಗಳುದ್ದದಿಂ . . . ಎಸೆವುದಾ ಪುರವು (ಬಕಾಂರ. ಪ. ೨೮೦-೦); ಹೊಸವೊಱತೆಯಂ ಬಗಿಬಗಿದು ತೋಡಿದಡಲ್ಲದೇ ಕೈಕೊಳ್ಳನು (ಬಸಪು. ೪೭-೧೦). ೫. ಬೇರೆ ಮಾಡು ; ಬೇರ್ಪಡಿಸು ; ವಿರಳಗೊಳಿಸು (?) : ಬಗಿದಗುಟ್ಟೊಂದದಂತೆ ತೆಗೆದಾಱಿಸಿದೋಗರದೊಳ್ ಪೊದಳ್ದು ಕಮ್ಮಗೆ ಕೆನೆಗೊಂಡ ಗೆಡ್ಡೆಮೊಸರಂ ಸುರಿದು . . . ಕಲಸಿರ್ದ ತಣ್ಗಲಸುಗೂಟನಿಳಾಪತಿಗಿತ್ತಂ (ಲೀಲಾವ. ೫-೬೨) ; ನಿಡುಗೇಶವ ಬಗಿದು ಕಮ್ಮೆಣ್ಣೆಯನೊಡನೆಱೆದೊರ್ವಳವಳಿಗೆ . . . ಉಗುರ್ಗಳನಾಡಿಸಿದಳು (ಕುರಾಸಾಂ. ೨೯-೬೩). ೬. (ಆಲಂ) ನಾಶಮಾಡು ; ಇಲ್ಲವಾಗಿಸು : ಕೌರವನ ತಮ್ಮಂದಿರ ಸುಸನ್ನಾಹವ ವಿಸಂಚಿಸಿ ಬಗಿದು ಸಮಸಪ್ತಕರನೊಡೆಹಾಯ್ಸಿ (ಕುಮಾಕ. ೦೪-೨೪).

[ದೇ.॥ ತಮಿ. ವಕೈ, ವಕು ; ಮಲ. ವಕಯು, ವಕು]

ಬಗಿ$_2$ (ನಾ). ೧. ಸೀಳುವಿಕೆ ; ಕತ್ತರಿಸುವಿಕೆ : (ಕಿ). ೨. ಹೋಳು ; ಭಾಗ : 'ಇರ್ಬಗಿ' ಪರಾ. ೩. ಸೀಳು ; ಬಿರುಕು : ಕೊಯ್ಯೆ ಪೊರಳ್ಚಿ ಕುತ್ತೆ ಕೊಱೆದಿಕ್ಕಿ ತಡಂಗಡಿದೊಟ್ಟೆ ನೆತ್ತಿಯಂ ಪೊಯ್ಯೆ ಬಟಲ್ದು ವೈತರಣಿಯಂ ಪುಗೆ ಕಾಯ್ದುಱೆ ಲೋಹವಾರಿ ಚುಂಚುಯ್ಯೆನೆ ಸುಟ್ಟು ಹುಣ್ಣರಳೆ ಮೆಯ್ಯನಿತುಂ ಬಗಿಯಾಗಿ ಬಾಯ್ಗಳಿಂ ಹುಯ್ಯಲನಿಕ್ಕುವಂ ಕೊಳಱೆ ಕೊಳ್ಗುದಿಮಳ್ಗುದಿಗೊಂಡು ಮಗ್ಗುವರ್ (ಅನಂಪು. ೯-೩೨).

[< ಬಗಿ$_1$./ ತೆಲು. ಬಗಿ = ಪಕ್ಕ]

ಬಗಿ$_3$, ಬಗ್ಗಿ (ನಾ). (ಉಕ) (ನಾಲ್ಕು ಚಕ್ರಗಳುಳ್ಳ, ಒಂದು ಅಥವಾ ಎರಡು ಕುದುರೆಗಳನ್ನು ಕಟ್ಟುವ) ಒಂದು ಬಗೆಯ ಕುದುರೆಯ ಗಾಡಿ : ಸಾರೋಟು : ಜಾಗಿರದಾರರ ಮಕ್ಕಳು ವಿರಾಜಮಾನರಾಗಿ ಒಂದು ಬಗಿಯಲ್ಲಿ ಕುಳಿತುಕೊಂಡು ಆ ಶಾಲೆಗೆ ಹೋಗುತ್ತಿದ್ದರು (ಇತಿಶ್ರೀ. ೩೦) ; ಜ್ಞಾನಶಂಕರರು . . . ಬಾಡಿಗೆ ಬಗಿಯನ್ನು ಹಿಡಿದು ಮನೆಗೆ ಹೊರಟರು (ಪ್ರೇಮಾಶ್ರ. ೫೯). **ಬಗ್ಗಿ** : ಒಬ್ಬನು ಅಥವಾ ಇಬ್ಬರು ಸವಾರಿ ಮಾಡಬಹುದಾದ ಹಗುರವಾದ ಗಾಡಿ : ಬಗ್ಗಿ (Buggy. ಇಂಕಪಿ).

[←ಇಂ. Buggy. / ಆರ. ಬೋಗೀ ; ಹಿಂ. ಬಗ್ಗೀ, ಬಗ್ಘೀ ; ಮರಾ. ಬಗೀ]

ಬಗಿನಿ 'ಬಯಿನೆ' ನೋ.

ಬಗಿಯೇಱು (ನಾ). ಕೆದಕಿದುದರಿಂದ ಉಂಟಾದ ಗಾಯ : ಅರೆವೆಣನಾದೊಡಂ ಬಿಡದೆ ಮಾಡುವ ದೀವಿಗೆಯಾಸೆಯುಳ್ಳ ಬೀರರ ಬ[ಪಾಠಾಂ. ಬಿ]ಗಿಯೇಱ ಬಾಯುಗಿಲು ಸಿಂಕಿಪ ಕೆಂಡದ ಸತ್ತ ರಾಜಪುತ್ರರ ವನಿತಾಜನಂ ತೊಱೆದು ತೋ[ಕೋ]ಳ್ಗುದಿ ಬಾಳ್ಗುದಿಯಾಗಿ ಬೇವ ದಳ್ಳುರಿಗಳ ಮಾಲೆಗೊಂಡ ಬೆಳಗಿಂ ಬೆಳಗಾಯ್ತೆರಡುಂ ಬಲಂಗಳೊಳ್ (ಅನಂಪು. ೦೦-೯೭).

[ಬಗಿ$_1$ + ಏಱು$_4$ (<ಏಱು್$_4$)]

ಬಗಿಸು (ಕ್ರಿ). ೧. ಸೀಳುವಂತೆ ಮಾಡು; ಸೀಳಿಸು: ಉದ್ರೇಕದಿಂದೀಕೆಯುದರಮಂ ಬಗಿಸಿದ ಸತಿದ್ರೋಹ ನಾಲ್ಕು (ಶಬಪು. ೪-೩೧). ೨. ಅಗೆಯಿಸು; ತೋಡಿಸು: ಹೊಲದ ಮಣ್ಣನ್ನೇ ಬಗಿಸಿ ತೆಗೆದು ಸಾರಿಸಿ ದೊಡ್ಡದೊಂದು ಕಣವನ್ನು ಮಾಡಿಸುತ್ತಿದ್ದರು (ಚಳಭಾ. ೬೩). [ಬಗಿ$_1$ + —ಸು$_1$]

ಬಗೀಚಾ, ಬಗೀಚೆ (ವಾ). ಸಣ್ಣ ತೋಟ; ಕೈತೋಟ: ಇದು ಬಂದ ಹೋದವರ ದಶಿಯಿಂದ ಮಾಡಿದ ಬಗೀಚಾ ಅಂತ ತಿಳಿದಿಯೇನು ? (ಬಾಂಡಾಯ. ೦೪). ಬಗೀಚೆ: ಹಿಂದೊಮ್ಮೆ ಹೇಳಿದ ಬಗೀಚೆಯೊಳಗಿನ ಬಂಗಲೆಯಲ್ಲಿ ಇಬ್ಬರೂ ಕೂಡಿ ಸುಖವಾಗಿ ಕಾಲವನ್ನು ಕಳೆಯ ಬಹುದಾಗಿದ್ದಿತು (ಚಳಗು. ೫೬).

[← ಪಾರ. ಬಾಗಚಾ; ಹಿಂ. ಬಗೀಚಾ; ಮರಾ. ಬಗಿಚಾ, ಬಗೀಚಾ]

ಬಗೀಚೆ 'ಬಗೀಚಾ' ನೋ.

ಬಗುತ 'ಬಕುತ' ನೋ.

ಬಗುತಿ 'ಬಕುತಿ' ನೋ.

ಬಗುನಿ 'ಬಯಿನೆ' ನೋ.

ಬಗುಲಿ (ನಾ). ಒಂದು ಬಗೆಯ ಸಸ್ಯ: ಮರಸದ. ಬಗುಲಿ. ಹಂಜರಿಕೆ ಕುಚ್ಚು. ಮರಸುತ್ತುಬಳ್ಳಿ (ಸ್ಕಾಗಿ. ೦೬-೨೯೨). [?]

ಬಗುಸಾಳೆ (ನಾ). ಬೊಗಳೆ; ಬಡಾಯಿ: ಒಂದೇ ಪೆಟ್ಟಿನಲ್ಲಿ ಹೊಡೆದು ಹಾಕಿ ಬರುತ್ತೇನೆಂದು ಬಗುಸಾಳೆ ಮಾತು ಕೊಚ್ಚಿ . . . ಮನೆಯ ದೂಲದ ಮೇಲೆ ಬಂದು ಕೂತುಕೊಂಡಿತು (ಕಥಾಮಂ. IV. ೪೬). [?]

ಬಗುಳ್$_1$, ಬಗುಳು$_1$, ಬೊಗಳು, ಬೊಗುಳು$_1$ (ಕ್ರಿ). ೧. ನಾಯಿಯು ಕೂಗು,-ಧ್ವನಿ ಮಾಡು: "ಬಗುಳ್—ಕುರ್ಕುರಧ್ವನೌ, ಸಾರಣೇ ಚ (ಆಮಶಂಕೆಯಿಂದ ತೊಂದರೆಪಡು)" (ಕಮಧಾ): ಪೆರ್ಬಡಿಕೆಯ ನಾತ ಮಾನೆಗಳ ಬಲ್ವೆಣನಂ ಬಗುಳುತ್ತೆ ಮುತ್ತಿ ಕೀವುಡುತೆ ತಗುಳ್ವನಂ ತೆಗೆವ ನಾಯ್ಗಳಗುರ್ವಿಸುತಿರ್ಪ ತೋರ್ಪ ಪೇರಡವಿಯ ಬೇಡವಳ್ಳಿಗಳ ನೀಕ್ಷಿಸುತುಂ (ಅಲಾಪ. ೬-೩೫); ಬಾಟ್ಟ ಮನೆಗೊಂದು ಬಗುಳ್ವುದು ಬೇಟ್ಕುಂ (ಅಪಂಪು. ೦-೪೦). ೨. ಗಳಹು; ಅಪಲಾಪ ಮಾಡು; ಹರಟು: ನ್ಯಾಯಮಿದು ಧರೆಗೆ ದುರಭಿಪ್ರಾಯದ ದುರ್ಜನನ ಮೊಱೆಯಂ ಕಂಡೊಡೆ ಥೂ ಚೀಯೆಂಬುದುಱ್ ಬಗುಳ್ವನ ಬಾಯೊಳಗುಗುಟಿಂಬ ನಾಡ ಗಾದೆಯ ಬಲದಿಂ (ಧರ್ಮಾ. ೦-೬೪); ನಾಯೆ ಬಗುಳದೆ ಕೆಲಕೆ ಸುರು (ಕೊರಾ. ೩-೩-೬). **ಬಗುಳು$_1$**: ೧. ಮುಳಿದು ಬಗುಳುವ ನಾಯ್ಗೆ ಚಂದ್ರಮನಳುಕುವನೆ (ಕುಪ್ಯಾಲಾ. ೬೦೩. ೦೦-೦೬); ನಾಯಿಯೊಂದು . . . ಬಗುಳಿತು (ಮಹಾಲಿ. ೧೦೨). ೨. ಬಗುಳುವಿವದಿರು ಹರಿಯ ಬಡಿಹೋರಿಗಳಲಾ (ಕುಪ್ಯಾಸ. ೦೦-೯); ಬಾಯ ಬಡಿಕರು ಬಂದ ಬಣ್ಣಗೆಯೆಸಗಿ ಬಗುಳುವರು (ಕೃಷ್ಣಾಕಾ. ೦೪-೨೯). **ಬೊಗಳು**: ೧. ಆನೆ ಕಂಡು ಶ್ವಾನ ಬೊಗಳಿದ ಹಾಗೆ (ಗಾದೆ). ೨. ಶರಣ ಐಕ್ಯ ಗುರು ಚರ ಪರವೆಂದು ಬೊಗಳುವ ಕುನ್ನಿಗಳ ನೋಡಿ (ಮಹಾದೇ. ೩. ೯೭-೨೨೩); ಹುಸಿಯ ಬೊಗಳುವನೊಬ್ಬ ಹುಚ್ಚ ಹೊಲೆಯ (ಪುರಂದ. ೦-೦೬೮-೪); ಈ ಗಂಡುಹುಡುಗರು ಏನೇನೋ ಬೊಗಳುತ್ತವೆ (ರಂಗರೋ. ೯೬). **ಬೊಗುಳು$_1$**: ೩. ಒದರು; ಹೇಳು: ಯಾವ ತೋಟ ಲೂಟಿ ಹೊಡೆಯುವುದಕ್ಕೆ ಹೋಗಿದ್ದಿರಿ. ನಿಜ ಬೊಗುಳಿ (ಕಳಹು. ೩೨).

ಬಗುಳ ಸನ್ನಿ = ಬಗುಳುಸನ್ನಿ: ಏತರಿಂದಿವಗೀ ಪರಿಯ ಕಡುಮಾತು ಬಂದುದೊ . . . ತನುಜಾತಗಿಕ್ಕಿತು ಬಗುಳ ಸನ್ನಿ ವಿಕಾರವಕಟ (ಪ್ರಜ್ಞಾನ. ೦೦-೯). [ದೇ.॥ ತುಳು. ಬಗುಳು, ಬಗಳು, ಬಗುಲ್, ಬಗುಲು]

ಬಗುಳ್$_2$ (ಕ್ರಿ). ಭೇದಿಯಾಗು; ಆಮಶಂಕೆಯುಂಟಾಗು: "ಬಗುಳ್-ಕುರ್ಕುರಧ್ವನೌ, ಸಾರಣೇ ಚ (ಆಮಶಂಕೆಯಿಂದ ತೊಂದರೆ ಪಡು)" (ಕಮಧಾ). [?]

ಬಗುಳಾಟ, ಬೊಗುಳಾಟ (ನಾ). ಕೆಲಸಕ್ಕೆ ಬಾರದ ಮಾತು; ಹರಟೆ: ಬಂಡುಗಲೆ ಬಗುಳಾಟವಾಡುತ ಮಿಂಡರೊಡನೆ ತಿರುಗುವ ತುಂಡುವೇಶ್ಯೆಯ ರ್ತುಡುಕುಜಗಕತಿ ಭಂಡೆರಲ್ಲ (ಕರಲೀ. ೩೬೪-೩); ಬಗೆಯದೆ ಪುರುಷನ ಮಾತಾ ನಗೆಗೇಡಿತನದಲ್ಲಿ ಬಗುಳಾಟದೊಳಗಿಹ ವಿಗಡೆಯಾದರೆ ನಿನ್ನ ನೆನೆಯೆ (ಕಪ್ಪೋನ. ೦೬-೬೩). **ಬೊಗುಳಾಟ**: ಆವ ತೆರದ ಬೊಗುಳಾಟಮನ್ನುಲಿದರೀ ಭೂಪಾಲರು (ಜಪಮು. ೩-೦೯). [ಬಗುಳ್$_1$ + ಆಟ]

ಬಗುಳಿಸು, ಬೊಗುಳಿಸು (ಕ್ರಿ). ನಾಯಿಯು ಬಗುಳುವಂತೆ ಮಾಡು: ಆ ಹುಡುಗ ನಾಯಿಯನ್ನು ಥೂ ಬಿಟ್ಟು ಬಗುಳಿಸಿದನು (ಕೂಡಿ). **ಬೊಗುಳಿಸು**: ನೀನು ಆ ನಾಯಿಯನ್ನು ಹಿಂಸೆ ಮಾಡಿ ಬೊಗುಳಿಸಬೇಡ (ಕೂಡಿ). [ಬಗುಳು$_1$ (<ಬಗುಳ್$_1$) + — ಇಸು$_3$]

ಬಗುಳು$_1$ 'ಬಗುಳ್$_1$' ನೋ.

ಬಗುಳು$_2$, ಬಳ್ಳು$_2$, ಬೊಗುಳ್, ಬೊಗುಳು$_2$, ಬೊಳ್ಳು (ನಾ). ೧. (ನಾಯಿ,ನರಿ ಮುಂತಾದ) ಪ್ರಾಣಿಗಳು ಕೂಗುವಿಕೆ,-ಅರಚುವಿಕೆ: ರಾತ್ರಿಯೆಲ್ಲಾ ಎದುರುಮನೆಯ ನಾಯಿಯ ಬಗುಳಿನಿಂದ ನಿದ್ರೆ ಮಾಡಲಾಗಲಿಲ್ಲ (ಕೂಡಿ). ೨. ಗಳಹುವಿಕೆ; ಬಡಬಡಿಸುವಿಕೆ: 'ಬಗುಳುಸನ್ನಿ' ಪರಾ. ಬಳ್ಳು$_2$: ೧ 'ಬಳ್ಳಿಕ್ಕು'. 'ಬಳ್ಳುಗೆಡೆ' ಪರಾ. **ಬೊಗುಳ್**: ೧. "ಭಂಡನಂ, ಭಂಡನೀಯಂ, ಭಂಡ್ಯಂ, ಈ ೩ ಬೊಗುಳ್" (ಕಾಸಕ್ಯ. ೧೦೦). **ಬೊಗುಳು$_2$**: ೨. 'ಬೊಗುಳುಸನ್ನಿ' ಪರಾ. **ಬೊಳ್ಳು**: ೧. 'ಬೊಳ್ಳಿಡು', 'ಬೊಳ್ಳುಗರೆ' ಪರಾ.

[<ಬಗುಳ್$_1$. / ತುಳು. ಬಗಳು]

ಬಗುಳುಸನ್ನಿ, ಬೊಗುಳುಸನ್ನಿ (ನಾ). ಜ್ವರದ ತಾಪವು ಹೆಚ್ಚಾಗಿ, ಅಸಂಬದ್ಧವಾಗಿ ಮಾತನಾಡುವಂತಹ ಒಂದು ಬಗೆಯ ರೋಗ: "(ಟೈಫಸ್ ಜ್ವರದಲ್ಲಿಯಂತೆ) ಮಾತಾಡುವ, ಗೊಣಗುಟ್ಟುವ.-ಸನ್ನಿ; ಬಗುಳುಸನ್ನಿ" (Typhomania. ಇಂಕಿ). **ಬೊಗುಳುಸನ್ನಿ**: ಆತ ಬೊಗುಳುಸನ್ನಿಯಿಂದ ರಾತ್ರಿಯೆಲ್ಲಾ ಕೂಗಾಡಿದನು (ಕೂಡಿ). [ಬಗುಳು$_2$ + ಸನ್ನಿ$_2$]

ಬಗುಳೆ, ಬೊಗಳೆ (ನಾ). ೧. ಕೆಲಸಕ್ಕೆ ಬಾರದ ಮಾತು; ಪೊಳ್ಳು ಹರಟೆ: "ಪೊಳ್ಳುಹರಟೆ; ಬುರುಡೆ; ಬಗುಳೆ; ಅವಿವೇಕದ ಮಾತು; ಅವಿವೇಕ" (Bosh. ಇಂಕಿ). **ಬೊಗಳೆ**: ೧. ನಿಜವಾದ ವೀರನಿಗೆ ಇಂತಹ ಬೊಗಳೆಯು ಸರಿಯೆನಿಸದು (ಹಿಂಕಿರು. ೬). ೨. ಸುಳ್ಳು: ಅದೆಲ್ಲ ಬರೀ ಬೊಗಳೆಯೆಂದೇ ನನ್ನ ಅಭಿಪ್ರಾಯ (ಪಾಪೋಲೀ. ೦೬೬). ೩. ಬಡಾಯಿ: ಅವನು ಬೊಗಳೆ ಕೊಚ್ಚಿಕೊಳ್ಳುವುದರಲ್ಲಿ ಬಲು ಗಟ್ಟಿಗ (ಕೂಡಿ). ೪. ಬಡಾಯಿಕೋರ: ಈತ ಎಷ್ಟಿದ್ದರೂ ಬೊಗಳೆ (ಕಲ್ಯಾಪ. ೦೯೬).

ಬೊಗಳೆ ಬಿಡು = ಸುಳ್ಳು ಹೇಳು; ಸುಳ್ಳಾಡು: ರುದ್ರನನ್ನು ಹಿಗ್ಗಿಸಲು . . . ಸೋಮಯಾಜರು ಬೊಗಳೆ ಬಿಡುತ್ತಾರೆ (ರೇವಹಂ. ೦೪೦). ಬೊಗಳೆ ಹೊಡೆ = ಬೊಗಳೆ ಬಿಡು: ಅವನ ಹಾಗೆ ಬೊಗಳೆ ಹೊಡೆಯುವವನನ್ನು ನಾನು ಬೇರೆಲ್ಲೂ ನೋಡಿಲ್ಲ (ಕೂಡಿ). [<ಬಗುಳ್$_1$]

ಬಗೆ$_1$ (ಕ್ರಿ). ೧. ಆಲೋಚನೆ ಮಾಡು; ಯೋಚಿಸು: "ಬಗೆ-ಪರಿಭಾವೇ, ಚಿತ್ತೇ ಚ" (ಕಮಧಾ): ಸಕ್ಕದಮುಂ ಪಾಗದಮುಮಾದಕ್ಕುಂ ಬಗೆದಂತೆ ಸಮಱ ಪೇಟಲ್ ಮುನ್ನಂ (ಕವಿರಾ. ೧-೪೦); ದಿವ್ಯಾಹಾರಮನೆಲ್ಲಾ ಕಾಲಮುಣಲ್ಪೆಱಲಕ್ಕುಮೆಂದು ಬಗೆದು (ವಡ್ಡಾರಾ. ೬೯-೩); ಎಂದು ತನ್ನೊಳ್ ಬಗೆಯುತ್ತಿರ್ಪಿನಂ (ಪಂಪಭಾ. ೦೦-೦೪ ವ). ೨. ಎಣಿಸು; ಗಣಿಸು; ಲಕ್ಷಿಸು: ಅಂತು ಬಂದ ಮಱಿಗಾಲಮಂ ಬಗೆಯದೆ . . . ಬರ್ಪಿನಂ (ಕಾದಂಉ. ೩೩೩); ಎನ್ನನಣಂ ಬಗೆಯಿರೆಂಬ ಬಗೆಯನೆ ಬಗೆದೆಂ (ಸುಳುಮಾ. ೨-೬೧). ೩. ಅರಿ; ತಿಳಿ; ಭಾವಿಸು: ಬಗೆಯೆ ನಿರಹಂಕಾರ ಸುಜ್ಞಾನಿಗಳ ಮೇಳವನೊಲ್ಲದಾ ಪ್ರಭುವಗಲಿ ತಾನಿರಬಲ್ಲನೇ (ಪ್ರಕುಲೀ. ೬-೩೯); ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು (ಸರ್ವಜ್ಞ. ೬೦೩). ೪. ಬಯಸು; ಅಪೇಕ್ಷಿಸು; ಇಚ್ಛಿಸು: ಅಱಿಯಲ್ ಬಗೆವೊಂಗೆ ಬ್ರಹ್ಮತಿಯ ಪಾಪ ಮಕ್ಕುಂ (ಎಇ. VII. ೨೦೦-೨೦; 865); ಬಗೆದೆಡೆಯನೆಯ್ದು ಬಗೆದ ಬಗೆಯಂ ಬಗೆದಂತೆ ತೀರ್ಚಿ ಪೋಪ ಜೋಡೆಯರಂ ಕಂಡು (ಪಂಪಭಾ. ೪-೮೦ ವ); ಬಗೆದು ದಣಿಯರು ಯೋಗಿಗಳು (ಕುಪ್ಯಾಸ. ೯-೩೬); ಆಳಾಗಿ ಅರಸಂಗೆ ಕೇಡು ಬಗೆವವ ಹೊಲೆಯ . . . ಉಂಡ ಮನೆಗೆರಡನ್ನು ಬಗೆವಾತನೇ ಹೊಲೆಯ (ಪುರಂದ. ೦-೦೬೮-೨).

[ದೇ.॥ ತಮಿ. ವಕೈ; ತುಳು. ಬಗೆ; ತೆಲು. ವಗಚು]

ಬಗೆ$_2$ (ನಾ). ೧. ಆಲೋಚನೆ; ಯೋಚನೆ: ಬಗೆ ಪೊಸತಪ್ಪುದಾಗಿ ವ್ಯಾದುಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು (ಪಂಪಭಾ. ೦-೮); ಇದಂ ಪಿರಿದು ಮಾಡಿ ಪೇಟ್ವೆನೆಂಬ ಬಗೆ ಮನದೊಳ್ ಮಿಗೆ ಮಾಣದೆ (ಪಂಪಭಾ. ೪೩-೬). ೨. ಅಭಿಪ್ರಾಯ; ಮತ: "ಬಗೆಯೆನಲಭಿಪ್ರಾಯಮಕ್ಕು" (ಕಕರ. ೬೪); ಮಂದಗಮನೆಯ ಕಂಡಿರೇ ಏನೆಂದು ನುಡಿದಳು ಸತಿಯ ಬಗೆಯೇನೆಂದು ಕೇಳಲು ನೃಪಗೆ ಬಳಿಕಿಂತೆಂದುದಾ ಪಕ್ಷಿ (ಪಕಸ. ೨-೪೪). ೩. ಮನಸ್ಸು; ಚಿತ್ತ: "ಬಗೆ – ಪರಿಭಾವೇ.

ಚಿತ್ತೇ ಚ" (ಕಮರಾ) ; ಕುಱಿತಂತು ಪೆಱರ ಬಗೆಯಂ ತೆಱೆದಿರೆ ಪೆಱರ್ಗಱಿ ಪಲಾರ್ಪವಂ ಮಾತಱಿವಂ (ಕವಿರಾ. ೦-೦೫) ; ಅಬ್ಬಾ ಇಂದೆಮಗುಣಲ್ಕೆ ಬಗೆಯಿಲ್ಲುಪವಾಸಂಗೆಯ್ದಪ್ಪೆಂ (ಪಡ್ಮಾರಾ. ೬೦-೯) ; ಮಾಸದ ಕೀರ್ತಿ ಕಲಿ ಹುಗದ ಹೆಸರಿಂಗದೋಜೆ ಕೊರಗದ ದರ್ಪವುಗದ ಬಗೆ ಹುಸಿ ಹುಗದ ನುಡಿ (ಹಸಕಾ. ೦-೪೯). ೪. ರೀತಿ : ಮಾರ್ಗ ; ಕ್ರಮ : ಪಸರಿಸಿದಾ ಬಗೆ ಮನಮಂ ಪೊಸತಾಗೆ ನೆಗೞ್ಚಲಱಿಯನಾ ರಚನೆಯೊಳೇಂ ಬಸನಂ (ಕವಿರಾ. ೦-೦೨) ; ಎನಗನುಕೂಲಮಕ್ಕೆ ಗುಣವರ್ಮನ ಜಾಣ್ಣುಡಿ ಪಂಪನಿಂಪು ಪೊನ್ನನ ಬಗೆ (ಅನಂಪು. ೦-೩೫) ; ಮಗಳೆ ನೀನಾತನ ಕೈವಿಡಿದೆಂದಿನ ಬಗೆಯ ಸುಖಂಗಳನಾಂತು ಮಿಗೆ ಜೀವಿಸು (ಸೋಹತ. ೬-೪೬). ೫. ಆಸೆ ; ಬಯಕೆ : ಇಚ್ಛೆ : ನೀನಿದರ್ಕೇನುಮಂ ಬಗೆಯಲ್ವೇಡ ನಿನ್ನ ಬಗೆಯಂ ಬಗೆವಂತೆ ತೀರ್ಚುವೆಂ (ಪಂಪಭಾ. ೪-೬೯ ವ) ; ನುಡಿಯೊಳಗೆ ತನ್ನ ಬಗೆಯಿರೆ ಬೇಡಿದ ಪದವಿಯನೀವ ಕೂಡಲಸಂಗಮದೇವ (ಬಸವ. ೬೬೦). ೬. ಕಲ್ಪನೆ ; ಊಹೆ : ತುಂಗಭವದ್ಬೋಧದ ಬೆಳಗಿಂಗೊಳಗಪ್ಪನಿತನೆಮ್ಮ ಬಗೆ ಪುಗದು (ಆದಿಪು. ೬-೦೦). ೭. ಉಪಾಯ ; ತಂತ್ರ ; ಹಂಚಿಕೆ : ಆ ನರಿ ಬಗೆಯೊಳ್ ಪಿರಿಯನಪ್ಪುದಱಿಂ ತನ್ನ ಬುದ್ಧಿಗೆ ತಾನೇ ಮೆಚ್ಚೆ (ಪಂಪಕಂ. ೩೯-೬); ಆವಗಂ ಕಾಣಲೀಯವು ರಾಮಣೀಯರೋಮಾವಳಿಯನುದ್ಧೃತ್ತಪೀನಕುಚಯುಗಳವಿನ್ನಾವು ದಿಂತಿದಕೆ ಬಗೆಯೆಂದು ಕೂರ್ತೇಕಾಂತಮಂ ಕರ್ಣದೊಡನೆ ಮಾಳ್ಪ ಭಾವದಿಂ ಪರವೆನಾಚಿಯ ಲೋಚನಂಗಳಿಂದೀವರದಳಗಳಂತೊಪ್ಪಿದವು (ಸೌಂದಪು. ೬-೩). ೮. ಗತಿ : ದಿಕ್ಕು : ಪಿಂಡಕ್ಕೆ ಬಗೆ ಇಲ್ಲದವ ದಂಡ ಏನು ಕೊಟ್ಟಾನು ? (ಗಾಪ). ೯. ಜಾತಿ : ಬಗೆಯೈದು ತಣಿಯುತಿರೆ ಬಳಗಕೇಂ ಪಾರ್ತಂ (ಕಾಲೂರ. ೬೪-೦೩೩) ; ಬಗೆಯೆಂದರೆ ಜಾತಿ : ಬಗೆಯೆಂದರೆ ರೀತಿ (ವಿಸಾಮಂ. ೫೯).

ಬಗೆಯೊಳೊಗೆದವ = ಮನಸ್ಸಿನಲ್ಲಿ ಹುಟ್ಟಿದವನು ; ಮನ್ಮಥ ; ಮನಸಿಜ : "ಬಗೆಯೊಳೊಗೆದವನೆಂದು ಬಂಡುಣಿವೆದೆಯನೆಂದು ಮುಗುಳ್ಳಬನಾಪ್ಯೆ" (ಕಕರ. ೬೪). **ಬಗೆಯೊಳೊಗೆವ, ಬಗೆಯೊಳೊಗೆವವ** = ಮನಸ್ಸಿನಲ್ಲಿ ಹುಟ್ಟುವವನು ; ಕಾಮ : "ಇಂಗೋಲ್ವಿಲ್ಲಂ . . . ಬಗೆಯೊಳೊಗೆವಂ . . . ಗಿಳಿದೇರಂ — ಇವು ೧೩ ಕಾಮದೇವಗೆ ಪೆಸರ್" (ಕಕಸಾ. ೪೬-೦೩); "ಗಿಳಿದೇರ ಪೂಪುಣುಂಬಂ ಬಗೆಯೊಳೊಗೆವವಂ" (ಕವಿಕಂ. ೨೬).

[<ಬಗೆ$_1$./ ತುಳು. ಬಗೆ ; ತೆಲು. ವಗ. / ಮರಾ. ಬಗಾ]

ಬಗೆ$_3$ (ನಾ). ಒಂದು ಬಗೆಯ ಹೂವು ಮತ್ತು ಅದರ ಗಿಡ : ಪ್ರಕಟಮಂದಾರ ಬಗೆ ನಾಗಸಂಪಗೆಯಾದಿ ಸಕಲಕುಸುಮಂಗಳಂ ತಂದು (ಕವಿಪು. ೪೫-೪೩). [<ಸಂ. ಬಕ. / ಪ್ರಾ. ಬಗ]

ಬಗೆಕಾರ 'ಬಗೆಗಾಱ' ನೋ.

ಬಗೆಕಾರ್ತಿ 'ಬಗೆಗಾರ್ತಿ' ನೋ.

ಬಗೆಕಾಱ 'ಬಗೆಗಾಱ' ನೋ.

ಬಗೆಗ (ನಾ). ಒಬ್ಬಾತನ ಹೆಸರು : ಮಲ್ಲಿಕಾರ್ಜುನಭಟ್ಟಾರರ್ಗ್ಗೆ ಮಾವಿನೂರೊಳ್ ಬಗೆಗನು ಕೊಟ್ಟಂ ಸಾವಿರಬಳ್ಳಿಯ ತೋಣ್ಟ (ಎಇ. XXVI. ೪-೦೪ ; ೩೦೬). [?]

ಬಗೆಗಲ್ (ಕ್ರಿ). ಮನಸ್ಸನ್ನು ತಿಳಿ, -ಅರಿತುಕೊಳ್ಳು : ಅಬಲೆಯಿರ್ದಿರವಂ ಸಖಿ ನೋಡಿ ಮತ್ತಮಾ ಕಮಲದಳಾಯತೇಕ್ಷಣೆಗಿದಂ ನುಡಿದಳ್ ಬಗೆಗಲ್ವ ಬಲ್ಲೆಯಿಂ (ಜಗವಿ. ೦೦-೦೧). [ಬಗೆ$_2$ + ಕಲ್$_1$]

ಬಗೆಗಾಣ್, ಬಗೆಗಾಣು (ಕ್ರಿ). ೧. ಮನಸ್ಸನ್ನು ತಿಳಿ,-ಅರಿ: ಪುದುವಾಱ್ಕೆಯೊಳೆನ್ನ ಬಳ್ಕದಳ್ಕದ ಬಗೆಗಂಡಿರೇ (ಪಂಪಭಾ. ೦೦-೩೦). **ಬಗೆಗಾಣು** : ೨. ದಾರಿಗಾಣು; ಮಾರ್ಗವನ್ನು ಕಂಡುಕೊಳ್ಳು: ಇವನಂ ಜಯಿಸುವ ಬಗೆಗಾಣೆನು (ಶೈವಿಭಾ. ೨೩-೬) ; ಸಾಧನಕೆ ಬಗೆಗಾಣೆನೆನ್ನಬಹುದೆ ಸಾದರದಿ ಗುರುಕರುಣ ತಾ ಪಡೆದ ಬಳಿಕ (ವಿದಾಕ್ಷ. ೨೫ ಪಲ್ಲವಿ). [ಬಗೆ$_2$ + ಕಾಣ್]

ಬಗೆಗಾಣು 'ಬಗೆಗಾಣ್' ನೋ.

ಬಗೆಗಾರ 'ಬಗೆಗಾಱ' ನೋ.

ಬಗೆಗಾರ್ತಿ, ಬಗೆಕಾರ್ತಿ (ನಾ). ಬೇರೆಯವರ ಮನಸ್ಸನ್ನು ತಿಳಿಯುವವಳು ; ಇಂಗಿತಜ್ಞೆ : ಪೊಗೆಯ ಗಂಧವನುರ್ದಿಸುತೆ ಪೂವ ಪೊರೆಯಿಸುತೆ ಬಗೆಗಾರ್ತಿಯೊರ್ವಳೆಸೆದಳ್ (ಪದ್ಮರಾ. ೬-೮೯).; ಪಲ್ವೆಳಗಿನ ಒಗುಮಿಗೆಯಿಂ ಬಳಯಿಸುತ ಬೆಳ್ದಿಂಗಳ ಬಗೆಗಾರ್ತಿಯರೆಯ್ದಿದರ್ (ಕುರಾಸಾಂ. ೩೬-೧೬). **ಬಗೆಕಾರ್ತಿ** : ನಗೆಕಾರ್ತಿ, ನುಡಿಕಾರ್ತಿ, ಬಗೆಕಾರ್ತಿ (ಶಪ್ಪಾನು. ೨೦೦. ಪ್ರಯೋ). [ಬಗೆಗಾಱ + — ತಿ$_1$ (< — ಇತ್ತಿ)]

ಬಗೆಗಾಱ, ಬಗೆಕಾರ, ಬಗೆಕಾಱ, ಬಗೆಗಾರ (ನಾ). ಬೇರೆಯವರ ಮನಸ್ಸನ್ನು ತಿಳಿಯುವವನು ; ಇಂಗಿತಜ್ಞ : ಆ ಬಗೆಯ ರಸಾಬ್ಧಿಯಪ್ಪ ಬಗೆಗಾಱರ ಮೊತ್ತದಿನೊಪ್ಪಿತೋಲಗಂ (ಶಾಂತೀಶ್ವ. ೨-೬೦) ; ಬೆಳ್ನುಡಿಯಿಂದ ಬಿಗುಹುಕಾಱರ ಬಲ್ಮೆಯಿಂದ ಬಗೆಗಾಱರನೆಡೆಗೆಡಿಸುವನು (ಕುರುಸಾಂ. ೪-೧೦೫). **ಬಗೆಕಾರ** : ಭಾವುಕ, ರಸಿಕ, ಚದುರ, ಬಗೆಕಾರ, ಜಾಣ, ಆರಿಗ (ಕಂನುಹು. ೬೯). **ಬಗೆಕಾಱ** : ಪಗೆಕಾಱಂ, ಬಗೆಕಾಱಂ, ನಡೆವಳಿಕಾಱಂ (ಭಾಷಾಭೂ. ೧೭೦ ಉದಾ) : ಕಾಲುರಿಚ ಪೊಳಲಿಚ ದಡಿಗ ಬಗೆಕಾಱ ನಡೆವಣಿಗ . . . ಕಂಚುಗಾಱರ ಕೇರಿ ಮೆಱೆದಿಹವು (ಸಾಳ್ವಭಾ. ೨-೮) ; ಅಱಿಯೆಯಾ ನೀನಿದ ನಗೆಕಾಱ ಬಗೆಕಾಱ ಮಱೆಕಾಱ ಬಲುಟೌಳಿಕಾಱ (ಭರಕ. ೬-೨೫). **ಬಗೆಗಾರ** : ನಗೆಯ ಮಾರಿತಂದೆ ತೋರಿಕೆಗೆ ನಗೆಗಾರನಾಗಿದ್ದರೂ ಒಳಗೆ ಅವನೊಬ್ಬ ಬಗೆಗಾರನಾಗಿದ್ದನೆಂದು ತೋರುತ್ತದೆ (ಶರಕ. ೪೬೬) ; ಕಲಾಕುಶಲನು ... ಹಳೆಯ ಮಾತನ್ನು ಹೊಸ ಮಾದರಿಯಲ್ಲಿ ನುಡಿಯುವ ಬಗೆಗಾರನು (ಭಾಷತ್ರ. ೫).

ಬಗೆಕಾಱಮುಖದರ್ಪಣ = ಮನಸ್ಸನ್ನು ತಿಳಿಯುವವರಿಗೆ ಕನ್ನಡಿಯಂತಿರುವವನು ; ಒಂದು ಬಿರುದು : ವರಪ್ರಸಾದಮ್ಮೂಱು [ರಾ]ಯಾಸ್ಥಾನಚಮತ್ಕಾರ ಬಗೆಕಾಱಮುಖದರ್ಪಣ (ಪೊಂಕಶಾ. ೦೯೩೬, ಸಿಂದಗಿ. ೦೦-೬ : 978) ; ಮಹಾಲಕ್ಷ್ಮೀಲಬ್ಧವರಪ್ರಸಾದ [ಮ್ಮೂ] ಱು ರಾಯಾಸ್ಥಾನಚಮತ್ಕಾರ ಬಗೆಕಾಱಮುಖದರ್ಪಣ ಶರಣಾಗತವಜ್ರಪಂಜರಂ (ಸೌಇಇ. XX. ೩೬-೬; 1056). [ಬಗೆ$_2$ + — ಕಾಱ]

ಬಗೆಗಿಡಿಸು 'ಬಗೆಗೆಡಿಸು' ನೋ.

ಬಗೆಗಿಡು 'ಬಗೆಗೆಡು' ನೋ.

ಬಗೆಗುಂದು (ಕ್ರಿ). ಮನಸ್ಸು ಕುಗ್ಗು; ನಿರಾಶೆಗೊಳ್ಳು ; ಬೇಸರ ಹೊಂದು : ಬಗೆಗುಂದಿ ಚಕ್ರಮಿಥುನಂ ಮಿಗೆ ನೊಂದು (ಗಿಂಕ. ೪-೬೯); ಪಗೆಯ ಕೆಳೆಗೊಂಡ ಪದ್ಮಿನಿ ನಗೆಗುಂದಿದಳವನಡಂಗೆ ಕೋಕಾನೀಕಂ ಬಗೆಗುಂದಿದುದೆಂದಣಕದೆ ನಗುವಂತೆವೊಲಲರ್ದುದುತ್ಪಲಂ (ವೃಷವಿ. ೮-೪೪).

[ಬಗೆ$_2$ + ಕುಂದು$_1$]

ಬಗೆಗುಡು (ಕ್ರಿ). ಮನಸ್ಸು ಕೊಡು : ಚಿತ್ತವಿಡು : ಕೊಲೆಯೊಳ್ ಪೊರೆಯಿಲ್ಲದ ಪರಲಲನೆಗೆ ಬಗೆಗುಡದ ಕಳ್ಳದುಱೆ ಪುಸಿಯದ ಕಾದಲಿಸಿ ವಿಷಯಂಗಳೊಳ್ ಪಂಬಲಿಸದ ಗುಣಮೈದಣುಪ್ರತಂ ಜನಮತದೊಳ್ (ಶಾಂತಿಪು. ೦-೮೬). [ಬಗೆ$_2$ + ಕುಡು$_1$ (<ಕೊಡು$_1$)]

ಬಗೆಗುದಿ (ನಾ). ಮನಸ್ಸಿನ ಚಿಂತೆ ; ಮನೋವ್ಯಥೆ : ಮತ್ತಾರು ನೀನೆ ! ಮೂದಲಿಸಿತು ಅವನ ಬಗೆಗುದಿ (ಬಿಡ್ಡಿಉ. ೦೬೪).

[ಬಗೆ$_2$ + ಕುದಿ$_3$]

ಬಗೆಗುರುಡುತನ (ನಾ). ಮನಸ್ಸಿಲ್ಲದಿರುವುದು : ಸದರ್ಥಮಂ ಕಾಣದ ಬಗೆಗುರುಡುತನವು ಈಗಿನವರ ಪಾಲಿಗೆ ಬಂದಿರುವುದು ಇನ್ನೊಂದು ದೋಷ (ಸಾಹಿವಿ. ೭೦). [ಬಗೆ$_2$ + ಕುರುಡು + — ತನ)

ಬಗೆಗೆಡಿಸು, ಬಗೆಗಿಡಿಸು (ಕ್ರಿ). ಕ್ರಮ ತಪ್ಪಿಸಂ ; ದಾರಿ ತಪ್ಪಿಸು ; ರೀತಿಗೆಡಿಸು : ಬಗೆಗೆಡಿಸಿ ಮರವೆಯನು . . . ಬ್ರಹ್ಮವನಗಲದೆ ತಾನೆಂದು ಭಾವಿಸಿ ಧನ್ಯನಾಗು (ಗಗತಾ. ೧೬-೪೦). **ಬಗೆಗಿಡಿಸು** : ಬಗೆಗಿಡಿಸೆ ಮೋಹನೀಯಂ ನಗಧರ ಶವಧಾರಿಯಾಗೆ ಷಣ್ಮಾಸಮದೇಂ ನೆಗಟ್ಟುದೊಸಲೆ ಬಲದೇವನ ಪೆಗಲ ಪೆಣಂ ಕುಂದದೆಂಬ ನಾಟ್ನುಡಿ ಜಗದೊಳ್ (ಸಂರಾಮಾ. ೦೬-೫೩). [ಬಗೆ$_2$ + ಕೆಡಿಸು$_1$]

ಬಗೆಗೆಡು, ಬಗೆಗಿಡು (ಕ್ರಿ). ೧. ಬುದ್ಧಿಗೆಡು ; ವಿವೇಕವಿಲ್ಲದಾಗು: ಮಗನೆ ನೀಂ ಪಗೆಯಂ ತಱಿದೊಟ್ಟು ನೆಟ್ಟನೆನ್ನದೆ ಬಗೆಗೆಟ್ಟು ದಾಯಿಗರೊಳಿಂ ಮಗುಟ್ಟುಂ ಪುದುವಾಟ್ಟುದೆಂಬರೇ (ಪಂಪಭಾ. ೦೦-೫೦); ಬಗೆಗೆಟ್ಟು ಸಾವ ಬಗೆಯಂ ಮಗಳೆ ಮಹಾಶ್ವೇತೆ ಬಗೆಯದಿರ್ (ಕಾದಂಪೂ. ೯೪೦) ; ಪಗೆವನ ಮನೆಯಂ ಬಗೆಗೆಟ್ಟು ಪೊಕ್ಕಂದು ಸಾವಕ್ಕುಂ (ಪಂಪಸಂ. ೨೦೫-೦೦). ೨. ಚಿತ್ತಕ್ಷೋಭೆಯುಂಟಾಗು : ಪಾದರಿಗಂ ನಿಲ್ಲದೆ ಪೋದುದರ್ಕೆ ಬಗೆಗೆಟ್ಟಿರ್ದಾಕೆ ಕಣ್ಗೊಪ್ಪಿದಳ್ (ಕಬ್ಬಿಕಾ. ೬೯) ; ಬಗೆಗೆಟ್ಟು ಬಾಯ್ವಿಟ್ಟು ಜನನಿ ಜವದಿನೇಳ್ತಂದಲ್ಲಿಯುಮಱಸಿ ಕಾಣದೆ (ರಾಜಶೇ. ೦೩-೦೦೨ ಪ) : ಕಷ್ಟಗಳೆಷ್ಟಿದ್ದರೇನು ಸಭ್ಯರು ಬಗೆಗೆಡದೇಳ್ಗೆ ವಡೆದಪರಲ್ತೆ (ಇಂಪಾಪ. ೨೨೦-೯೩). **ಬಗೆಗಿಡು** : ೧. ಬಗೆಗಿಡೆ ಮುಪ್ಪು ಚಪ್ಪರಿಸದನ್ನೆಗಂ . . . ಪರಮದೀಕ್ಷೆಗುಪೇಕ್ಷಿಸಿದಂ ವಿವೇಕಿಯೇ (ಪುಸ್ತಪು. ೦೩-೩೯). [ಬಗೆ$_2$ + ಕೆಡು$_1$]

ಬಗೆಗೆಲ್ (ಕ್ರಿ). ಮನಸ್ಸನ್ನು ಗೆಲ್ಲು ; ಚಿತ್ತವನ್ನು ಸೆಳೆ : ಬಗೆಗೆಲಲೆಂದು ಕಾಡಿ ಪುಸಿನಿದ್ದೆಯೊಳಾನಿರೆ ಲಲ್ಲೆಗೆಯ್ದು (ಪಂಪಭಾ. ೪-೦೦೭). [ಬಗೆ$_2$ + ಗೆಲ್$_1$]

ಬಗೆಗೇಡು (ನಾ). ದಾರಿ ತಪ್ಪಿಸುವಂತಹುದು; ಮಾರ್ಗ ಕೆಡಿಸುವಂತಹುದು : 'ನಾ ಬಲ್ಲೆ' 'ಗೊತ್ತಿಲ್ಲ' ಎಂಬ ವಾದದ ಹಾದಿ ಬಗೆಗೇಡು ನಗೆಗೇಡು ಹತಮತಿಯು (ಮುಳ್ತಳಂ. ೬-೨). [ಬಗೆ$_2$ + ಕೇಡು]

ಬಗೆಗೊಳ್, ಬಗೆಗೊಳು, ಬಗೆಗೊಳ್ಳು (ಕ್ರಿ). ೧. ಮನಸ್ಸಿಗೆ ತಂದುಕೊಳ್ಳು; ಲಕ್ಷ್ಯಕ್ಕೆ ತೆಗೆದುಕೊಳ್ಳು : ಅದಱಿಂದ ಚಿತ್ತಮಳ್ಕದ ಮನಂ ಬಗೆಗೊಳ್ಳದ ಮೋಹಮೆತ್ತಿ ಕಟ್ಟಿದ ಜಡೆ (ಪಂಪಭಾ. ೬-೬೯); ಜಗಜ್ಜನ ಮಧಿಕಾನಂದಂಬೆರಸೆಯ್ದೆ ಕೀರ್ತಿಸುತ್ತಿರೆ ವಿದ್ದದ್ಬೃಂದಂ ಬಗೆಗೊಂಡಾಗ್ರಹದಿಂದಂ ಪೇಟಲ್ಕೆವೇಟ್ (ಪಂಪಸಂ. ೦೨-೭) ; ಬಗೆಗೊಂಡೋದದೆ ಕೇಳದೆಲ್ಲ ಕಳೆಯಂ ಕಾವ್ಯಜ್ಞರಿಂ ಕಲ್ಲದಚ್ಚಿಗದಿಂ ಕಟ್ಟಿದ ಕೆಟ್ಟ ಕನ್ನಡದ ಕಾಟ್ಗಬ್ಬಂಗಳಂ ಬಂಟಸಾಮಿಗಳಂ ಕೇಳಿಸಿ (ಅರ್ಧಪೇ. ೦-೩೫). ೨. ಎಣಿಸು ; ನಿಶ್ಚಯಿಸು : ಆದಡಂ ಪೋಗಿ ನೋಡುವೆನೆಂದು ಬಗೆಗೊಂಡು (ಬಸರ. ೫-೫) ; ಈತನಲಿಯೊಂದು ವಿನೋದವನು ಮಾಡುವೆನೆನುತ್ತಲ್ಲ ಮನು ಬಗೆಗೊಂಡ (ಪ್ರಭುಲೀ. ೦೧-೬). ೩. ಮನಸ್ಸನ್ನು ಸೆಳೆ,-ಆಕರ್ಷಿಸು : ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಟಲಾಱರಿನಿತುಂ (ಕಬ್ಬಿಕಾ. ೦೫). **ಬಗೆಗೊಳು** : ೧. ಈರೇಳು ದ್ವೀಪಗಳಿರಲ್ ದಾಂಟುವೆನವನು ಬಗೆಗೊಳದೆ (ತೊರರಾ. ೬-೩೬-೪೭). ೩. ಇದ್ದೊಂದು ಒಡವೆಯೆ ಇಬ್ಬಗೆ ಮೂವಗೆ ಬಗೆಬಗೆ ಒಡಮೂಡಿ ಬಗೆಗೊಳಲು (ಮುಳ್ತಳಂ. ೩-೩೬). **ಬಗೆಗೊಳ್ಳು** : ೧. ತ್ರಿಶರಣಶುದ್ಧನು . . . ಕುಲಾದಿ ಮದಂಗಳ ಬಗೆಗೊಳ್ಳ (ಮಹಾಬೇ. ಬಿ. ೦೩-೨೦೬) ; ಏತೆಱದಿಂ ಮೃಗಾಕ್ಷಿದಮಯಂತಿಯ ಸಂಗಮದಪ್ಪುದೆಂದು ನಿಶ್ಚೇತನನಾಗಿ ರಾಜ್ಯಸುಖಮಂ ಬಗೆಗೊಳ್ಳದೆ (ನಳಸಂ. ೬೩); ಸುತನಾಶವನು ಬಗೆಗೊಳ್ಳನು (ಕುಪ್ಯಾಬ್ರೋ. ೦೬-೬೬). [ಬಗೆ + ಕೊಳ್$_1$]

ಬಗೆಗೊಳಿಸು (ಕ್ರಿ). ೧. ಮನಸ್ಸನ್ನು ಆಕರ್ಷಿಸು ; ಚಿತ್ತವನ್ನು ಸೆಳೆ : ಲಲಿತಮುಖಸೌರಭಕ್ಕೆಱಗುವಲಿಮಾಲೆಯಂ ಬಗೆಗೊಳಿಸಿ ತಳರ್ದು ಗಜಗಮನೆ (ಅಂಪು. ೬-೨೬ ರಗಳೆ) ; ಸಮುಜ್ಜ್ವಳಕನಕವರ್ಣೆ ಮಿಗೆ ಬಗೆಗೊಳಿಸಿದಳುದ್ಯಾನಕೇಳಿಲೀಲಾಕ್ಷಣದೊಳ್ (ಶಾಂತಿಪು. ೮-೦೬) ; ಬಗೆಗೊಳಿಸತೊಡಗಿತ್ತು ಮಿಗೆ ರೂಪು ಲೋಚನಕೆ (ಸಂಬರ. ೩-೦೦). ೨. ಮನಸ್ಸಿಗೆ ತಂದುಕೊಳ್ಳು ; ಮೆಚ್ಚು : ರಾಯನುಮರಸಿಯರುಮಾನಂದವಡೆದು ಬಗೆಗೊಳಿಸೆ . . . ಪೇಳಿದೆನು (ಹರಿಬಿ. ೦-೫೦). [ಬಗೆಗೊಳ್ + — ಇಸು$_3$]

ಬಗೆಗೊಳು 'ಬಗೆಗೊಳ್' ನೋ.

ಬಗೆಗೊಳ್ಳು 'ಬಗೆಗೊಳ್' ನೋ.

ಬಗೆತ (ನಾ). ಅಭಿಪ್ರಾಯ ; ಮನೋಗತ : ಬರೆಹ ಮಾತ್ರಕ್ಕೆ ನಾನಲ್ಲದೆ ಬಗೆತಕ್ಕೆ ಆತನೇ (ಮೂರುಉ. ೯. ಎರಡುಮಾತು) ; ನುಡಿತದಲ್ಲಿ ಮಿಂಚೂ ಇದೆ, ಬಗೆತದಲ್ಲಿ ಜೇನೂ ಇದೆ (ಸತ್ರಸ್ಯ. ೦ ಮುಸ್ಸುಡಿ) ; ಈ ಬಗೆತವು ಇಲ್ಲಿ ಬಲು ಚೆನ್ನಾಗಿ ಸಾಧಿಸಲಾಗಿದೆ (ಕಾಲೂರ. ೭ ಹರಳೆ). [ಬಗೆ$_2$ + — ತ$_3$]

ಬಗೆತುಂಬು 'ಬಗೆದುಂಬು' ನೋ.

ಬಗೆದಟ್ಟು (ಕ್ರಿ). ಮನಸ್ಸನ್ನು ತಾಗು ; ಮನವರಿಕೆಯಾಗು : ಬಗಸೆಗಣ್ ಪೊಳೆಯೆ ನಡುವಲೆಯೆ ಕಂಠಣಮುಲಿಯೆ ಬಗೆದಟ್ಟಿ ಘಟ್ಟಿಪಳ್ತಿಯರರೆದರಾ ಯಕ್ಷಕರ್ದಮಾದಿಗಳನೊಲವಿಂ (ಪದ್ಮಶಾ. ೬-೬೯). [ಬಗೆ$_2$ + ತಟ್ಟು$_1$]

ಬಗೆದರ್ (ಕ್ರಿ). ಎಣಿಸು ; ನಿಶ್ಚಯಿಸು : ಚಿಂತಾಸಮುದ್ರಾಂತರ ಪರಿವೃತನಾಗಿ ಸೈರಿಸಲಾಱದೆ ಪೊಟಲಂ ತೊಟಲ್ದು ನೋಟ್ಟು ಬಗೆದಂದು ರಾಜಮಂದಿರದಿಂ ಪೊಱಮಟ್ಟು ಬರೆ (ಪಂಪಭಾ. ೪-೬೯ ಪ) ; ನೋಡಿಕೊಂಬೆನೆನುತ್ತ ನುಡಿದೊಡಂಬಡಿಸಿ ಮನಮಾಡಿ ತಿರುವೆಣ್ಣೆನಲ್ಲೂರ್ಗೆಂದು ಬಗೆದಂದು ವಹಿಲದಿಂ ಪೊಱಮಟ್ಟನು (ಸೌಂದಪು. ೪-೬೯) ; ಕಲ್ಯದೊಳ್ ಕುಳ್ಳಿರ್ವ ಮಂಜೊಳಗೊಂದಿದ ಮೊಲ್ಲೆವೂಪನಾರಡಿವೊಲೆ ಭೋಗಿಸಲ್ಕ ಮುಳಿಯಲ್ಕಮಣಂ ಬಗೆದರ್ಪೊಡಾರೊ ನಾಂ (ಶಾಳುಂತ. ೬೭-೦೦೯). [ಬಗೆ$_2$ + ತರ್]

ಬಗೆದೀರ್ (ಕ್ರಿ). ಮನಸ್ಸು ತೃಪ್ತಿಯಾಗು ; ತಣಿ : ದಿವ್ಯಮುನಿಪುಂಗವರಂ ಬಗೆದೀರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ (ಪಂಪಭಾ. ೦-೦೦೬). [ಬಗೆ$_2$ + ತೀರ್]

ಬಗೆದುಂಬು, ಬಗೆತುಂಬು (ಕ್ರಿ). (ಸಂತೋಷದಿಂದ) ಹೃದಯತುಂಬು,—ಉಬ್ಬು : ಆರಡಯ್ಯಕವಿ 'ಕನ್ನಡನಾಡನ್ನು' ಬಗೆದುಂಬಿ ಬಣ್ಣಿಸಿದ್ದಾನೆ (ಸಾಸಮಾ. ೨೬). **ಬಗೆತುಂಬು** : ನೀಲಾಂಬಿಕೆ ಲಿಂಗೈಕ್ಯವಾದಂದು ಸೊನ್ನಲಿಗೆಯ ಸಿದ್ಧರಾಮ ಬಗೆತುಂಬಿ ಹೇಳಿದ (ಕರ್ನಾಳ. ೦೨೪). [ಬಗೆ$_2$ + ತುಂಬು$_1$]

ಬಗೆದೆರು (ಕ್ರಿ). ಮನಸ್ಸು ಕೊಡು ; ಚಿತ್ತವಿಡು : ಕಾವನಂ ಬಗೆದೆತ್ತು ಬರೆಯುತಿದೆ ಸುಗ್ಗಿ (ಕಾಲೂರ. ೧೨೦-೨೫೨). [ಬಗೆ$_2$ + ತೆರು$_1$ (< ತೆಱು$_1$)]

ಬಗೆದೋಱು (ಕ್ರಿ). ೧. ಮನಸ್ಸಿನಲ್ಲಿದ್ದುದನ್ನು ಹೇಳು,-ಪ್ರಕಟಿಸು : ಇಂತಿದನೀವೆನೆಂದ[ನ]ಂ ಪುಸಿದೊಡಮಾಸೆದೋಱ್ ಬಗೆದೋ[ಱ] [ಪಾಕಾಂ.ಱು]ದೊಡಂ ನೆರೆದಿರ್ದೊಡಂ . . . ಮತ್ತಮಾಟಿಸುವುದೆ (ಪಂಪಭಾ. ೪-೯೨) ; ಅಂಗನೆ ನೀಂ ಗರ್ವಿಸಿದಪ್ಪೆಯೆಂದು ಬಗೆದೋಱಂ ನಲ್ಲನೇನೊಲ್ಲನೇ (ಅಪಂಪು. ೮-೪೦). ೨. ಆಸೆಯನ್ನು ಪ್ರಕಟಿಸು; ಹಂಬಲವನ್ನು ತಿಳಿಸು : ಆ ವೇಳೆಯಲ್ಲಿ ಸಿಂಗರಗೈದು ನಿನ್ನಯ ಭಾವದ ಬಗೆದೋಱಿಯವನ ಕಾವನಂಬಿಗೆ ಮೆಯ್ಯೊಡ್ಡಿಸಿ ಸೆಳೆದು ಸಂಭಾವಿಸು ಮೋಹರತಿಯೊಳು (ಕಂಪಸಂ. ೬-೫೭). [ಬಗೆ$_2$ + ತೋಱು]

ಬಗೆಪೋಗು (ಕ್ರಿ). ಮನಸ್ಸಿಗೆ ಹಿತವಾಗು ; ಮನದಟ್ಟಾಗು : ಬಗೆಪೋಯ್ತಿಂತಿದು ನಾಕಲೋಕವಿಭವಂ ಮದ್ವೃತ್ತಕಂ ತಪ್ಪದು (ಅಂಪು. ೩-೬೬) ; ಬಗೆಪೋಯ್ತಾಗಳೆಲೇ ಇದಲ್ತೆ ತುಹಿನಕ್ಷೋಣಿ ಧ್ರುದುತ್ತುಂಗಸಾನು

ಗೆಳೊಳ್ ಭೋರೆನೆ ಬಂದು ಪಾಯ್ವುದದೆ ನೋಡಾಕಾಶಗಂಗಾಜಲಂ (ಕಾಸ್ಕಾ. ೧೮). [ಬಗೆ$_2$ + ಪೋಗು$_1$ (< ಪೋ$_1$)]

ಬಗೆಬರ್ 'ಬಗೆವರ್' ನೋ.

ಬಗೆಬಿಚ್ಚು (ಕ್ರಿ). ಅಂತರಂಗವನ್ನು ವಿವರಿಸು; ಮನಸ್ಸಿನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳು: ಬಂದುದಂ ಬಗೆಬಿಚ್ಚಿ ನುಡಿವರೊಮ್ಮೊಮ್ಮೆ (ಕಾಂಪಿ. ೧೦-೦೬೮). [ಬಗೆ$_2$ + ಬಿಚ್ಚು$_1$ (< ಬಿರ್ಚು)]

ಬಗೆಮುಟ್ಟು (ಕ್ರಿ). ೧. ಮನಸ್ಸನ್ನು ತಟ್ಟು,-ತಾಗು; ಹೃದಯಸ್ಪರ್ಶಿಯಾಗು: ಬೀಣೆಯಂ ಮಿಡಿವ ಬಂಚಮನೊತ್ತುವ ಡಕ್ಕಿವಾಜಿ ಪಾಡುವ ಬಗೆಮುಟ್ಟಿ ಪಾಡುವವರಗ್ಗದ ದೇವರೆ ತದ್ಗಿರೀಂದ್ರದಾ ದಿವಿಜ ವಿಮಾನದಂತೆ ಬಳಸಿರ್ದ ವಿಶಾಳಜಿನಾಲಯಂಗಳೊಳ್ (ಸುಬ್ಬಿ. ೦೦-೦೦೨). ೨. ಮನಸ್ಸು ಒಪ್ಪು; ಸಮ್ಮತಿಸು: ನಾವು ಆ ಮಕ್ಕಳಿಗೆ ಬಗೆಮುಟ್ಟಿ ಒಪ್ಪಿಸಿಕೊಟ್ಟಿರುವ ಈ ಉಂಬಳಿಗೆಯನ್ನು . . . ಸಾರ್ಥಕಮಾಡಿಕುಡಬೇಕು (ಮಂಪ್ರಶ. ೦೬-೨೬). [ಬಗೆ$_2$ + ಮುಟ್ಟು$_1$]

ಬಗೆಯಣುಗ (ನಾ). ಮನಸ್ಸಿನಿಂದ ಹುಟ್ಟಿದವನು; ಕಾಮ: ಖಗನಾಮವಿಹುದಾವುದು ಬಗೆಯಣುಗನ ಗಜವೇಂ (ಕೃಕಪ. ೦-೨೬-೩). [ಬಗೆ$_2$ + ಅಣುಗ (< ಅಣುಂಗ)]

ಬಗೆಯಳಲು 'ಬಗೆಯಟಲ್' ನೋ.

ಬಗೆಯಱಿ (ಕ್ರಿ). ಮನಸ್ಸನ್ನು ತಿಳಿ; ಇಂಗಿತವನ್ನು ಅರಿ: ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ ಬಗೆಯಱಿದೋಲಗಿಪುದು ಮಾಲೆಗಾಱನಂ ಪೋಲ್ತುದಗ್ರಮಾಲ್ಯಮಹೀಜಂ (ಅಂಪು. ೩-೩೬); ಅರಸಾ ಜೊನ್ನಮನುಣ್ಬ ಪಕ್ಕಿಬಾಗಿಲೊಳ್ ಬಂದಿರ್ಪುದೆಂದು ಬಗೆಯಱಿದು ಬಿನ್ನಪಂಗೆಯ್ದು (ಕಬ್ಬಿಗಾ. ೦೩೦); ಮಿಕ್ಕ ಧರ್ಮದೊಳು ಬಗೆಯಱಿತೆಸಗಬಲ್ಲವರಿಗೆಂದೆಂದಿಗೂ ಮೊಗದೋಱವು ಮೋಸಗಳು (ಪಂಪ. ೨-೨೦). [ಬಗೆ$_2$ + ಅಱಿ]

ಬಗೆಯಟಲ್, ಬಗೆಯಳಲು (ನಾ). ಮನಸ್ಸಿನ ಕ್ಲೇಶ; ಮನೋವ್ಯಥೆ: ಅದರ್ಕೆ ತಕ್ಕುದಂ ನಿಮ್ಮಡಿಗಳೆ ಬಲ್ಲಿರೆಂದು ಬಗೆಯಟಲಾಱ ಜೊನ್ನವಕ್ಕಿ ಬಿನ್ನಪಂಗೆಯ್ಯಲ್ (ಕಬ್ಬಿಗಾ. ೦೩೦). ಬಗೆಯಳಲು: ಅಡಿದಳ್ ನನ್ನಿಯಂ ಬಗೆಯಳಲಿನಿಂ ಪಾಲ ನೀಡಿದಳ್ (ಕಾಂಪಿ. ೦೪೨-೩೦೬). [ಬಗೆ$_2$ + ಅಟಲ್$_2$]

ಬಗೆಯಾಣ್ಮ (ನಾ). ಮನೋವಲ್ಲಭ; ನಲ್ಲ: ಒಂದೆಡೆಯೊಳ್ ಮನೆಯಾಣ್ಮನ ಕಣ್ಣೆಮೆಯ ಕಾಂಡಪಟಮಾಗೆಯುಂ ಬಗೆಯಾಣ್ಮನ ಕಣ್ಣೆಮೆಯ ದೂದವಿಯಾಗೆಯುಂ (ಸಂಪಕಾ. ೪-೮೦ ಪ). [ಬಗೆ$_2$ + ಆಣ್ಮ (< ಆಳ್ಮ)]

ಬಗೆಯಿಡು (ಕ್ರಿ). ಮನಸ್ಸಿಡು; ಆಸಕ್ತನಾಗು: ಬಟ್ಟಮೊಲೆಯ ಬಾಲೆಯ ನೊಸಲೊಳು ಬಗೆಯಿಟ್ಟಾ ಬಲ್ಲಹನೊಲವಿಂ ಚವುಕದ ಬೊಟ್ಟಂ ಕುಂಕುವದಿಂದಿಡೆ (ಜಯಕಾ. ೦೯-೬೯). [ಬಗೆ$_2$ + ಇಡು$_1$]

ಬಗೆಯಿಸು (ಕ್ರಿ). ೧. ಮನಸ್ಸನ್ನು ಸೆಳೆ,-ಆಕರ್ಷಿಸು: ಮನಕಿಂಪನೊಗೆಯಿಸುವ ಬಗೆಯಿಸುವ ರಾಜೋಪವನಮೆಸೆದುದು (ಕೃಮಿಪಾ. ೨೯-೯೬). ೨. ತಿಳಿದಂಕೊಳ್ಳುವಂತೆ ಮಾಡು; ಭಾವಿಸುವಂತೆ ಮಾಡು: ಹಗತನವನುಳಿದು ದಯವೆಲ್ಲ ಬೆಳೆದು ತನ್ನಂತೆ ಪರರ ಬಗೆಯಿಸುವುದು ಬಡತನ (ಸೇಕಾಪ. ೬೩). [ಬಗೆ$_2$ + -ಇಸು$_3$]

ಬಗೆಯೆಣಿಕೆ (ನಾ). ಮನಸ್ಸಿನ ಅಭಿಪ್ರಾಯ,-ಆಶಯಂ: ಇದು ನಿನಗೆ ಬಗೆಯೆಣಿಕೆ, ಎನಗೆ ಎರ್ದೆಬೆಂಕೆ (ಅಸ್ಕಾಂ. ೩೮-೨೩೮). [ಬಗೆ$_2$ + ಎಣಿಕೆ]

ಬಗೆಯೊಡೆಯ (ನಾ). = ಬಗೆಯಾಣ್ಮ: ಗಡಣದೆ ಮಾದೇವಿಯ ಬಗೆಯೊಡೆಯನ ನೊಸಲೊಳ್ . . . ನಟ್ಟುವು ಕಾವನಂಬುಗಳ್ ತಾವೈದುಂ (ಕಬ್ಬಿಗಾ. ೩೦೬). [ಬಗೆ$_2$ + ಒಡೆಯ]

ಬಗೆವಡೆ (ಕ್ರಿ). ತಿಳಿ; ಅರಿತುಕೊಳ್ಳು: ಆ ತೊರೆ ಹೆದ್ದೊರೆಗಳತ್ತಲೇ ಹರಿದು ಹೋಗುವುದೆಂಬುದನ್ನು ಬಗೆವಡೆದವು (ಪಾಸೋಪ. ೩೩೩). [ಬಗೆ$_2$ + ಪಡೆ$_1$]

ಬಗೆವರ್, ಬಗೆಬರ್ (ಕ್ರಿ). ಮನಸ್ಸಿಗೆ ಬರು,-ತೋಚು: ಬಗೆವಂದ ಗೊಡ್ಡಾಟಮನಾಡಲೆಂದು ದುರ್ಜನಪರಿವೃತನಾಗಿ (ಧರ್ಮಾಸ್ಕು. ೨-೨೯). ಬಗೆಬರ್: ಸ್ವೈರಿಣಿ ಬಗೆಬಂದಾಗಳೆ ಮಾರಕ್ರೀಡೆಯನೊಡರ್ಚಲೆಂದುಪ ಪತಿಯಂ ದಾರಕನಂ ಕೊಲವೇಟ್ಟಳ್ (ಸಂಶಾಸಾ. ೮-೩೨); ಹರನ ಭಕ್ತಿಯ ಮಾಡಿದೊಡೆ ಗೋಚರಿಸಿ ತೋಱುವನಲ್ಲಮಪ್ರಭು ಕರುಣದಿಂದಲಿ ನೀನು ಬಳಿಕಾತನಲಿ ಬಗೆಬಂದ ವರಮನೋರಥಸಿದ್ಧಿಯನು ಪತಿಕರಿಸಿ ಪಡೆವುದು (ಪ್ರಭುಲಿ. ೬-೩). [ಬಗೆ$_2$ + ವರ್]

ಬಗೆವಿಡಿ (ಕ್ರಿ). ಮನಸ್ಸನ್ನು ಸೆಳೆ,-ಆಕರ್ಷಿಸು: ಬಗೆವಿಡಿದಾಹತಾದಿಗಮಕಂಗಳಿನೊಯ್ಯನೆ ಬೀಣೆ ಬಾಜಿಪನ್ನೆಗಂ (ಸಕಂ. ೯-೦೦೩). [ಬಗೆ$_2$ + ಪಿಡಿ$_1$]

ಬಗೆವುಗಿಸು (ಕ್ರಿ). = ಬಗೆವಿಡಿ: ಏಂ ಬಗೆವುಗಿಸಿದುದೋ ಹೇಮಾಂಬುಜದ ಮರಾಳಮಿಥುನಮಂ ತನ್ನಿಥುನಂ (ಅಸಂಪು. ೬-೩೩). [ಬಗೆ$_2$ + ಪುಗಿಸು (< ಪೊಗಿಸು)]

ಬಗೆವುಗು 'ಬಗೆವೊಗು' ನೋ.

ಬಗೆವೆಚ್ಚು 'ಬಗೆವೆರ್ಚು' ನೋ.

ಬಗೆವೆರಸು (ಕ್ರಿ). ಮನಸ್ಸಿಗೆ ಬರು; ಮನಮುಟ್ಟು: ಬಗೆವೆರಸಿ ಸಂದಷ್ಟವಾದಡಱಿಯೆಂ ಪರೋಕ್ತಿಗಳರ್ಥಮಂ (ಜಸಕಾ. ೦-೨೮); ಜಗದರಸ ರಾಮಂಗೆ ಕೈಗಳ ಮುಗಿಮುಗಿದು ಕೆಲಸಾರುತಿರ್ದುದಂ ಬಗೆವೆರಸಿ ಬಲ[ಪಾಶಾಂ. ಬಗೆಬಗೆಯ ಕಪಿ]ಪತಿಗಳೆಪ್ಪತ್ತೇಳು ಕೋಟಿಯೆನೆ (ಕೊರಂಗಾ. ೯-೮-೨). [ಬಗೆ$_1$ + ಬೆರಸು$_1$ (< ಬೆರೆಯಿಸು)]

ಬಗೆವೆರ್ಚು, ಬಗೆವೆಚ್ಚು (ಕ್ರಿ). ಮನಸ್ಸು ಉಬ್ಬು; ಉತ್ಸಾಹಗೊಳ್ಳು: ಬಗೆವೆರ್ಚಿ ಕೇಳುತಿರ್ದವೆ ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ (ಗಿಂಕ. ೯-೦೦೯). ಬಗೆವೆಚ್ಚು: ಪೊಗುತೆ ಸೈಗೆಡೆದೆದ್ದು ಮತ್ತೆ ಮಯ್ಯಿಕ್ಕುತುಂ ಬಗೆವೆಚ್ಚಿ ಪೊಡಮಟ್ಟು ನಲಿದೆದ್ದು ನಡೆವುತಂ (ಸಂಬಿರ. ೯-೦೨೨). [ಬಗೆ$_2$ + ಪೆರ್ಚು$_1$]

ಬಗೆವೆಱು (ಕ್ರಿ). ಮನಸ್ಸಿಗೆ ಬರು; ಮೆಚ್ಚು: ಬಗೆವೆತ್ತು ಅಭವಾದಿಗಳಿತ್ತ ಪದವಿಗೆ ಹಗೆಗೊಂಡು ಹರಿ ಕೆಡಿಸುವನು (ಮೋಪಕ. ೩೦-೦೬). [ಬಗೆ$_2$ + ಪೆಱು$_1$]

ಬಗೆವೇಳ್ 'ಬಗೆವೇಟ್' ನೋ.

ಬಗೆವೇಟ್, ಬಗೆವೇಳ್ (ಕ್ರಿ). ೧. ಮನಸ್ಸನ್ನು ತೆರೆದು ಮಾತನಾಡು; ಹೃದಯವನ್ನು ಬಿಚ್ಚಿ ಹೇಳು: ತನಯರನಿಟ್ಟು ಸಂತತಿಯೊಳಿಂತೆಮಗಂ ಬಗೆವೇಟದೇಕೆ ಪೋದನೊ (ಅಂಪು. ೯-೬೬); ಬಗೆವೇಟ್ವೊಡೆನ್ನ ಮೇಳದ ಕೆಳೆಯರ್ಕಳಿಲ್ಲ (ಸಂಪಕಾ. ೯-೬೯); ಸಮಧಿಕಚಿಂತೆಯಿಂ ನುಡಿಯಲುಂ ಬಗೆವೇಟಲುಮೊಲ್ಲದಾ ಶರತ್ಸಮಯದ ಸೋಗೆಯಿರ್ಪ ತೆಱದಿಂ ಕಡುವಿನ್ನನೆ ಮೂಗುವಟ್ಟು ಖೇದಮನೊಳಗೊಂಡು ನಿಂದಬಲೆಯಿರ್ದಿರವಂ ಸಖ ನೋಡಿ (ಜಗಂ. ೦೦-೦೦). ಬಗೆವೇಳ್: ೨. ದಾರಿ ತೋರಿಸು: ಶಿವಭಕ್ತಾಪರಾಧದಿಂ ಸಂಭವಿಸಿತಿನಿತು ಪರಿಭವವಿದಕೆ ಬಗೆವೇಳ್ಮನೋಜ ಮರ್ದನಯೆಂದು ದೈನ್ಯದಿಂ ಬಿನ್ನೈಸಿ (ಸೌಂದಪು. ೯-೦೩). [ಬಗೆ$_2$ + ಪೇಟ್]

ಬಗೆವೊಗು, ಬಗೆವುಗು (ಕ್ರಿ). ಮನಸ್ಸನ್ನು ಪ್ರವೇಶಿಸು: ನೋಟದೊಳ ಟ್ಯಜಂಬಡೆದು ಮೆಲ್ನುಡಿಯೊಳ್ ಬಗೆವೊಕ್ಕು . . . ಕೂಟಸುಖಂಗಳಂ ಪಡೆದಂ (ಸಂಪಕಾ. ೩-೮೨). ಬಗೆವುಗು: ಎಲ್ಲಮನೊಪ್ಪಿಸಿ ನಿರ್ಣಯಂ ನಯಂ ಬಗೆವುಗೆ ಮಾಡಿದರ್ಕಲುಷವೇಷಮನೊಲ್ಲದನುಪ್ರವೇಶಮಂ

(ಸುಭಾ. ೪-೦೫೦); ಶ್ರೀಕಂಠರಿಪುವಿನಸ್ತ್ರಾನೀಕಂ ಬಗೆವುಗಲದೊರ್ಮೆ ಸತ್ರಾಜಿತ್ಕನ್ಯಾಕಾರಂ ಬಗೆವೊಕ್ಕುದು ಲೋಕಜನಸ್ತುತಿಗಳಿಂ ಗರುತ್ಮದ್ವಜನಾ (ಹಗಡಿ. ೦೦-೦); ಗುಣಮಮರೆ ಶಬ್ದಮಣಿದರ್ಪಣನಾಮವನಿಟ್ಟು ನೆಱೆಯೆ ಕರ್ಣಾಟಕಲಕ್ಷಣಶಬ್ದಶಾಸ್ತ್ರಮಂ ಲಾಕ್ಷಣಿಕರ್ಪೇಱೆಂದು ಬೆಸಸೆ ಬಗೆವುಗೆ ಪೇಱ್ದೆಂ (ಶಸುದ. ೩). [ಬಗ್ಗೆ + ಪೊಗು]

ಬಗೆಹರಿ (ಕ್ರಿ). (ಮನಸ್ಸಿನ ಆಲೋಚನೆ, ಉದ್ದೇಶ ಮುಂತಾದುವು ನಿರಾತಂಕವಾಗಿ) ತೀರ್ಮಾನವಾಗು; ಇತ್ಯರ್ಥಗೊಳ್ಳು; ನಿರ್ಧಾರವಾಗು: ಕನ್ನಡಸಾಹಿತ್ಯದಲ್ಲಿ ನಾಗವರ್ಮರು ಎಷ್ಟು ಮಂದಿ ಎಂಬ ಪ್ರಶ್ನೆಯೊಂದು ಬಗೆಹರಿಯದ ಸಮಸ್ಯೆಯಾಗಿದೆ (ಸಾಹಿಸ. ೨೯); ಈ ದೇಶದ ಶೈಕ್ಷಣಿಕಸಮಸ್ಯೆಗಳು ಖಂಡಿತವಾಗಿಯೂ ಬಗೆಹರಿಯುವುದಿಲ್ಲ (ಸುಪರ್ಣ. ೦೦). [ಬಗ್ಗೆ + ಹರಿ (< ಪರಿ)]

ಬಗೆಹರಿಸು (ಕ್ರಿ). ೧. ಇತ್ಯರ್ಥಗೊಳಿಸು; ನಿರ್ಣಯಿಸು; ನಿರ್ಧರಿಸು: ತುತ್ತಿನ ಚೀಲದ ಪ್ರಶ್ನೆಯನ್ನು ಐದು ತಲೆಮಾರು ಹಿಂದೆಯೇ ಸಮಾಜ ಬಗೆಹರಿಸಿದ್ದಿತು (ಕಾಂಯಾ. ೪೬); ಅಂತಿಮವಾಗಿ ಈ ಪ್ರಶ್ನೆಯನ್ನು ಬಗೆಹರಿಸಬೇಕು (ಸಂಜಸಂ. ೦೮೦). ೨. ತೀರಿಸು; ಸಂದಾಯ ಮಾಡು: ನೆರೆದಿದ್ದ ಅಷ್ಟು ಜನ ಸಾಹುಕಾರರ ಸಾಲದಲ್ಲಿ ಒಂದನ್ನು ಸಹ ಬಗೆಹರಿಸುವ ಪರಿಸ್ಥಿತಿಯಿರಲಿಲ್ಲ (ಪಶ್ಚಿಹೊ. ೫೯). [ಬಗ್ಗೆ + ಹರಿಸು (< ಪರಿಯಿಸು)]

ಬಗ್ಗ$_1$, **ವಗ್ಗ**$_1$ (ನಾ). ಹುಲಿ; ವ್ಯಾಘ್ರ: "ಬಗ್ಗಂ ವ್ಯಾಘ್ರಾಭಿಧಾನಂ" (ಕರ್ಣಾಪಿ.೪೭); ಸುತ್ತಿದ ರೇಫೆ ದಡ್ಡಕ್ಕರಮಾದುದರ್ಕೆ – ಚಕ್ರಪಕ್ಷಿ – ಚಕ್ಕವಕ್ಕಿ . . . ವ್ಯಾಘ್ರ – ಬಗ್ಗ (ಶಸುದ. ೨೬೦ ಪ್ರಯೋ); ಗರ್ಜಿಸುತ್ತಿರ್ಪ ಬಗ್ಗದ ಬಲ್ಗಂಡಿಕೆಗಂಡು . . . ತಿವಿದಂ ತತ್ಕಾಳಮೇಘಾಹ್ವಯಂ (ರಾಜಶೇ. ೩-೯೯); ಇದೆ ಬಗ್ಗನನಿಕ್ಕು ! ಮೇಣಿದೆ ಚಿತ್ತಗನಂ ತುಡು ! (ರಾಮಾಶ್ವ. ೬೪-೦೨). **ವಗ್ಗ**$_1$: ಶ್ರೀಮದಾಹಮಲ್ಲದೇವರ ವಗ್ಗ (ಎಇ.XVI, ೬೩-೫; 1067). [< ಪ್ರಾ. ವಗ್ಘ. /ಸಂ. ವ್ಯಾಘ್ರ]

ಬಗ್ಗ$_2$, **ವಗ್ಗ**$_2$ (ನಾ). ೧. ಗುಂಪು; ನೆರವಿ; ಸಮೂಹ: "ಬಗ್ಗಂ ವರ್ಗಂ" (ಕರ್ಣಾಪಿ.೪೭); ದಿತ್ವಾಗ್ರರೇಫಲೋಪಕ್ಕೆ – ವರ್ಗ – ಬಗ್ಗ (ಶಸುದ. ೨೬೦ ಪ್ರಯೋ). **ವಗ್ಗ**$_2$: "ವಗ್ಗ (ಬಗ್ಗ) – ವರ್ಗ" (ತದ್ಭಕೋ.೩೯). ೨. ಗ್ರಂಥದ ಪರಿಚ್ಛೇದ, – ಸರ್ಗ: ಅನೇಕ ಶಾಸನಗಳ ಕೊನೆಯಲ್ಲಿ ಕಂಡುಬರುವ ಚಿಹ್ನೆಯೊಂದು ಧಮ್ಮಪದದ ಪ್ರತಿ 'ವಗ್ಗ'ದ ಕೊನೆಯಲ್ಲಿಯೂ ಇದೆ (ಭಾರತ.೦೯). [< ಪ್ರಾ. ವಗ್ಗ. /ಸಂ. ವರ್ಗ]

ಬಗ್ಗ$_3$ (ನಾ). ಶಿವ; ಈಶ್ವರ: "ಬಗ್ಗನೆನೆ ಮುಕ್ಕಣ್ಣನಕ್ಕು" (ಕಶರ.೬೩); ಬಿಳಿಯಳ್ ಸರಸತಿ, ಬಿಳಿಯಂ ಬಗ್ಗಂ (ಕಬ್ಬಾಸು.೦೦೨ ಪ್ರಾಪ್ರಾ); ವೇಗದಿಂ ಬಗ್ಗನಂಘ್ರಿಯೆಡೆಗಂ ನಡೆತಂದದನೆಲ್ಲಮಂ . . . ಪೇಳಲು (ಹಾಲಾಸ್ಯ. ೦-೬-೨೩). [< ಸಂ. ಭರ್ಗ]

ಬಗ್ಗಂದೊವಲ್, **ಬಗ್ಗದೊವಲ್**, **ಬಗ್ಗದೊವಲು** (ನಾ). ಹುಲಿಯ ಚರ್ಮ; ವ್ಯಾಘ್ರಾಜಿನ: ಬಗ್ಗಂದೊವಲ್, ಬಗ್ಗದೊವಲ್ (ಕಬ್ಬಾಸು.೩೭೯ ಪ್ರಯೋ). **ಬಗ್ಗದೊವಲ್**: ಬಗ್ಗದೊವಲಂ ಅಸವಸದೊಳುಟ್ಟನಂ ದೇವರಾದಿತ್ಯನಂ. . .ನುತಿಸಿದಂ (ಉದ್ಭರೇ.೩-೩೦); ಪಾರ್ವತಿಯಾಣ್ಮಂ . . . ಬಗ್ಗದೊವಲ ಪಾಸುಗೆಯಲ್ಲಿ ಸಲ್ಲೀಲೆಯಿಂ ಮೂರ್ತಿಗೊಂಡಿರೆಯಿರೆ (ಪ್ರಸಹಿ. ೦೪-೩೦ ಪ); ಬಗ್ಗದೊವಲಂ ಕಂಡೊಡಂ ಬೆರ್ಚುವೆರಳೆಗಣ್ ಪರಿವ ಪೆರ್ಬುಲಿನೋಟಮಂ ಸಹಿಸಲುಂಟೆ (ಶ್ರೀರಾಮ.೦೬-೫೩). **ಬಗ್ಗದೊವಲು**: 'ಬಗ್ಗದೊವಲುಡಿಗೆ' ಪರಾ. [ಬಗ್ಗ$_1$ + ತೊವಲ್$_3$ (< ತೋಲ್$_1$)]

ಬಗ್ಗಡ, **ಬೊಗ್ಗಡ** (ನಾ). ೧. ಮಣ್ಣು, ಕಸ, ಸೆಗಣಿ ಮುಂತಾದುವು ಕಲಸಿಕೊಂಡಿರುವ ನೀರು; ರಾಡಿ; ಕೊಚ್ಚೆ: ಆನೆ, ಕುದುರೆ, ರಥ, ಪದಾತಿಗಳಿಂದ ಆ ನೀರು ಕಲಕುವುದು, ಕದಡುವುದು, ಬಗ್ಗಡವಾಗುವುದು (ಬುದ್ಧಪ. ಬುಲಿಂದ. ೪೬); ನಾವು ಕೇವಲ ಕೆಸರನ್ನೂ ಸಗಣಿಯ ಬಗ್ಗಡವನ್ನೂ ಬಳಿದಿದ್ದೇವೆ (ಕಾಂಪ.II.೨೮೩). ೨. ಕೊನೆಯಲ್ಲಿ ಉಳಿದುದು; ಗಸಿ; ಗಷ್ಟು: ಮೇಲಿನ ತಿಳಿ ಖರ್ಚಾಗಿ ಬಗ್ಗಡ ಮಾತ್ರ ಉಳಿದಿದೆ (ರೂಢಿ). **ಬೊಗ್ಗಡ**: ೩. (ಆಲಂ) ಕಳವಳ; ಕ್ಷೋಭೆ: ಕಿಟ್ಟಣ್ಣನ ಮನಸ್ಸು ಕಲಕಿ ಬೊಗ್ಗಡವಾಗಿ ಹೋಗಿ ಮತ್ತೆ ತಿಳಿಯಾಗಬೇಕಾದರೆ ಎಂಟು ಹತ್ತು ದಿನಗಳು ಬೇಕಾಗುತ್ತಿತ್ತು (ಶ್ರೀಕಶ.೪). [?]

ಬಗ್ಗಡೆ 'ಬಂಗಡೆ' ನೋ.

ಬಗ್ಗಡೆಯ 'ಬಕ್ಕುಡೆಯ' ನೋ.

ಬಗ್ಗಣೆ$_1$ (ನಾ). ೧. ಗದರಿಕೆ; ಝಂಕಣೆ: ತಂದೆ ಕಡಂಗಿ ಕಲ್ಪಿಸುವ ಕಲ್ಪಿಯಮೊಲ್ಲದೆ ತಾಯ್ಮಗುಳ್ದು ನಿರ್ವಂದದಿನೆಯ್ದೆ ಬಗ್ಗಿಸುವ ಬಗ್ಗಣೆಗಳ್ಕದೆ (ಸುಕುಮಾ.೨-೬); ನಿಱಿಸು ನಿಘಾತಮಾಂಕೆ ಬಗೆ ಬಗ್ಗಣೆ ವಂಚನೆ ಬಂಧ ಮೆಂಬಿವಂ ಮೆಱೆವೊವಜರ್ಕಳೇಂ ಕಲಿಸುತಿರ್ಪರೊ ಚಟ್ಟರನಟ್ಟುವಟ್ಟರಂ (ಪುಷ್ಪಪು.೨-೬೦). ೨. ಕೂಗಾಟ; ಆರ್ಭಟ: ಹೆಗ್ಗಡಲ ತೆರೆಯಂತೆ ಮೊಳಗುವ ಲಗ್ಗೆಗಳಲೋರಂತೆ ಸುಭಟರ ಬಗ್ಗಣೆಯ ಬಲುಭುಜರ ಘನತರ ಸಿಂಹನಾದದಲಿ ತಗ್ಗಿದುದು ಧರೆ (ಪಿಧಾಗ. ೦೦-೩೨-೪೬).

ಬಗ್ಗಣೆ$_2$, **ಬಗ್ಗಳೆ** (ನಾ). ಹಕ್ಕಿಗಳ ಕೂಗು; ಕೂಜನ: ಕಳಕಂಠಿಯ ಬಗ್ಗಣೆಯೇವುವೆಂಬ . . . ಮಧುಮಾಸದ ಗೋಸಣೆಯೇವುವೆಂಬ ಬದ್ದರ ನಱೆಯಟ್ಟೆ (ಅಪಪು.೬-೨೬); ಕೋಗಿಲೆಯ ಬಗ್ಗಣೆ ತುಂಬಿಯ ಗೇಯ ಮೆಂಬಿವಂ ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ (ಸುಭಾ.೦-೪೪). **ಬಗ್ಗಳೆ**: ಪರಪುಷ್ಟಧ್ವಾನದೊಳ್ ಬಗ್ಗಳೆ ಪುರುಳಿಗೊಳಲ್ ಲಲ್ಲೆ (ಅಪಂಪು. ೦-೪೬). [ಬಗ್ಗು$_2$ + – ಅಣ್ಣೆ]

ಬಗ್ಗದೊವಲ್ 'ಬಗ್ಗಂದೊವಲ್' ನೋ.

ಬಗ್ಗದೊವಲ (ನಾ). ಹುಲಿಯ ಚರ್ಮವನ್ನು ಧರಿಸಿದವನು; ವ್ಯಾಘ್ರಚರ್ಮಾಂಬರ; ಶಿವ: ಬಗ್ಗದೊವಲಗೆ ಸೊಡರ ಹಚ್ಚಿಸುವೆ ಹಾಲೆರೆವೆ (ಹಸ್ತರ. ೩-೬೦).

[ಬಗ್ಗದೊವಲ್ (< ಬಗ್ಗಂದೊವಲ್) + – ಅ$_7$]

ಬಗ್ಗದೊವಲು 'ಬಗ್ಗಂದೊವಲ್' ನೋ.

ಬಗ್ಗದೊವಲುಡಿಗ (ನಾ). = ಬಗ್ಗದೊವಲ: ಬಗ್ಗದೊವಲುಡಿಗನೀ ರೇಳ್ಳುವನದೊಡೆಯನೆಸೆದಂ ರಾಜವಿಭವದಿಂದೆ (ಸಂಪು. ೨೯-೪೦).

[ಬಗ್ಗದೊವಲುಡೆ + – ಇಗ]

ಬಗ್ಗದೊವಲುಡಿಗೆ (ನಾ). ಹುಲಿಯ ಚರ್ಮದ ಉಡುಪು; ವ್ಯಾಘ್ರ ಚರ್ಮದ ಉಡುಗೆ: ಬೆಳುಗಾಯ ಕೆಂಜಡೆಯು ಚನ್ನಾಗಿ ಬಗ್ಗದೊವಲುಡಿಗೆ ವಿಭೂತಿ ರುದ್ರಾಕ್ಷಿಗಳು (ಪಪಸೋ. ೦೩.೦೩).

[ಬಗ್ಗದೊವಲು (< ಬಗ್ಗಂದೊವಲ್) + ಉಡಿಗೆ$_1$ (< ಉಡುಗೆ)]

ಬಗ್ಗದೊವಲುಡೆ (ನಾ). = ಬಗ್ಗದೊವಲುಡಿಗೆ: 'ಬಗ್ಗದೊವಲುಡೆಯ' ಪರಾ. [ಬಗ್ಗದೊವಲ್ (< ಬಗ್ಗಂದೊವಲ್) + ಉಡೆ$_2$]

ಬಗ್ಗದೊವಲುಡೆಯ (ನಾ). = ಬಗ್ಗದೊವಲ: "ಎಣ್ಮಯ್ಯಂ . . . ಸಬ್ಬಂ, ಬಗ್ಗದೊವಲುಡೆಯಂ, ಬಾನ್ನವಿರಂ . . . ಅಯ್ಮೊಗಂ – ಈ ೩೩ ಈಶ್ವರಂಗೆ ಪೆಸರ್" (ಕಶಾ. ೪೭-೦); ವೆಗ್ಗಳಿಪ ಶೀತಕರನೀರೆಂಟುಭಾಗದೊಳ್ ಬಗ್ಗದೊವಲುಡೆಯನೊಂದಂ ತಳೆದು ಚಂದ್ರನಂ ನೋಡಿ ಮತ್ತಿಂ ತೆಂದನು (ಸಂಪು. ೨೨-೨೩); ಬಗ್ಗದೊವಲುಡೆಯಂಗೆ ಪಟ್ಟಣಿಗೆಯನುಡಿಸಿ (ರಾಮಾಶ್ವ. ೦೩೦-೦೨). [ಬಗ್ಗದೊವಲುಡೆ + – ಅ$_7$]

ಬಗ್ಗನೆ (ಅ). ಕೂಡಲೆ; ತಕ್ಷಣ: ಬಗ್ಗನಿಲ್ಲಿಂದೈದಿ ನಾವು ನಮ್ಮಯ ಗಡಿದುರ್ಗದೊತ್ತಲಿ ನಿಲ್ವೆವು (ಕಂಪಪಿ. ೦೯-೪೯); ಸಗ್ಗದಿನಾಗಳೆ ಚರರಂ ದಿಗ್ಗಜಮಂ ಕರೆತರಲ್ಕೆ ಕಳಿಪಿದೊಡವರ್ಗಳ್ ಬಗ್ಗನೆ ಬಂದುಸಿರಲ್ಕೆ (ಹಾಲಾಸ್ಯ. ೦-೩-೨೬); ಸಗ್ಗಿಗರ ಪಿರಿಯನ್ನೈತರೆ ನೋಡಿ ಹರ್ಷದಿಂ ಬಗ್ಗನಿದಿರೆದ್ದು ಸೆಳೆದಪ್ಪಿ (ಪಂಕಾರಾ. ೨-೩೨-೩೬). [ಬಗ್ಗ + – ಅನೆ$_1$]

ಬಗ್ಗಬರಿ 'ಬಱ್ಱಿ$_2$' ಪರಾ.

ಬಗ್ಗಬಱಿ 'ಬಱ್ಱಿ$_2$' ಪರಾ.

ಬಗ್ಗಮರಿ (ನಾ). ಹುಲಿಯ ಮರಿ; ವ್ಯಾಘ್ರಶಿಶಂ : ಚಳೆಯನುರೆ ಚೆಲ್ಲುವವು ಬಗ್ಗಮರಿಗಳು (ಸಪಸೋ. ೬-೦೦). [ಬಗ್ಗ$_1$+ಮರಿ$_2$ (<ಮಱಿ)]

ಬಗ್ಗರೆ 'ಬಕ್ಕರೆ' ನೋ.

ಬಗ್ಗವಳ್ಳಿ (ನಾ). ಒಂದು ಬಗೆಯ ಬಳ್ಳಿ (?) : ಬಗ್ಗವಳ್ಳಿಯ ಬಳ್ಳಿ ಗಾವಣದೋಳಿಯಿಂ ಸೊಗಯಿಪ್ಪ ಸಮ್ಯಗ್ಗವಾಕ್ಷದ ವಂಕದಾರದ ಕೇತಕಿರ್ಗಯಿನೊಂದಿ ನಿಂದಗ್ಗಳಿಕ್ಕೆಯನೀಟ್ಟು ನೀಳ್ದ ನಿವೇಶದೊಳ್ ಮದನಂ ಮಹಕ್ಕೆಗ್ಗು ಪೊರ್ದದ ರೂಪಿನೊಳ್ ನೆಲಸಿರ್ಪವೋಲ್ ಸುಖಮಿರ್ಪಿನಂ (ಶಾಂತಿಪು. ೩-೭೯). [ಬಗ್ಗ? + ಬಳ್ಳಿ]

ಬಗ್ಗಸಮ್ಮ (ನಾ). =ಬಗ್ಗಂದೊವಲ್ : ಜಡೆಗಳ ಬಂಬಲೇ ತಲೆದಳಿರ್ ಘಣಿಸುತ್ತಿದ ಬಳ್ಳಿ . . . ಬಗ್ಗಸಮ್ಮದೊಳ್ಳುಡೆ ಪೊಸಚಲ್ಲಣಂ (ಕಪಸಂ. ೩-೩).
[ಬಗ್ಗ$_1$+ಸಮ್ಮ$_2$ (<ಚಮ್ಮ)]

ಬಗ್ಗಳೆ 'ಬಗ್ಗಣೆ$_2$' ನೋ.

ಬಗ್ಗಿ 'ಬಗ್ಗಿ$_3$' ನೋ.

ಬಗ್ಗಿಸು$_1$ (ಕ್ರಿ). ೧. ಬಗ್ಗುವಂತೆ ಮಾಡು ; ಬಾಗಿಸು : ತರಣಿಶತಕೋಟಿ ತೇಜದ ರತ್ನದೋಹರಿಯ ಪಿರಿಯ ಸೌಧೋತ್ತರಂಗಳ ಪ್ರಾಂಗಣಂಗಳೊಳು ಹರನೋಲಗದ ಸಮಯಮಂ ದ್ವಾರಪಾಲಕರ ಶಿರವ ಬಗ್ಗಿಸಿ ಕೇಳುತ ಕರಗಳಂ ಮುಗಿದು (ಗುಭಸ. ೩-೪೦) ; ನೀನು ತಲೆ ಬಗ್ಗಿಸಿಕೊಂಡೇ ಕುಳಿತಿದ್ದೀಯಲ್ಲ (ಸಂಗಾಳ್ಯ. ೨೨೨). ೨. ಚೆಲ್ಲು ; ಸಂರಿ : ಬೀರಕ್ಕ . . . ಕಡಾಯಿನ ನೀರನೆಲ್ಲಾ ಬಗ್ಗಿಸಿದ್ದಾಳೆ (ನೀತಿಸಂ. IX, ೩೨) ; ಮಗ್ಗಲುತೋಟದ ಜನಗಳೆಲ್ಲಾ ಅಲ್ಲಿಗೆ ಬಂದು ನಾನು ನೀರು ಬಗ್ಗಿಸುತ್ತಿದ್ದ ಧಾಟಿಯನ್ನೇ ನೋಡುತ್ತಿದ್ದರು (ಸಂಗಾಳ್ಯ. ೬೦೭). ೩. ಸೋಲಿಸಂ ; ಹಿಮ್ಮೆಟ್ಟಿಸು : ಜಕ್ಕವಕ್ಕಿಯಂ ಪರಿವಡೆದಿರ್ದ ತೋರಮೊಲೆ ಬಗ್ಗಿಸೆ ನೈದಿಲದಿನೆಯ್ದೆ ಕಣ್ಮಲರ್ ಕೊರಗಿಸೆ ನಾಡೆ . . . ಬನವೆಣ್ಣಿನಿಪಂದದಿನೊರ್ವಳೊಪ್ಪಿದಳ್ (ಕಬ್ಬಿಳಾ. ೦೦೨). ೪. ಗದರಿಸಂ ; ಬೆದರಿಸಂ; ಝಂಕಿಸಂ : "ಬಗ್ಗಿಸಿದನೆನಲ್ಕೆ ಝಂಕಿಸಿದನೊಳು ಹೊಟ್ಟುಂ" (ಕರ್ಣಾಟ. ೯೬) ; ಒಸೆಗೆ ಮೇಣ್ ಮುನಿಗೆ ಮೇಣವರೆಲ್ಲರುಮಂತೆ ಬಗ್ಗಿಸುಗೆ ಮತ್ತುಟಿಯಲಾಗದು ನೆಟ್ಟನೆ ಪೂಣ್ದುದಂ (ಕಪಾ. ೦-೦೩೩) ; ಕಿಱಿಯಂದು ತಂದೆ ಬಗ್ಗಿಸಲಱಿಯನೆ ತಾಯ್ ಜಡಿದು ತಿಳಿಪಲಱಿಯಳೆ (ಸುಳುಮಾ. ೨-೬೨). ೫. ಮೂದಲಿಸಂ ; ಹೀಯಾಳಿಸು ; ಹಂಗಿಸು : ನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತಂ ಬಂದೊಡೆ ನೀಮೊದಱಿಯವಂ ಬಗ್ಗಿಸಿದೊಡದೃಶ್ಯಂಗಳಾಗಿ ಪೋಕುಂ (ಸಪ್ಪಾರಾ. ೦೦೦-೮) ; ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಗಿಳಿಗಳುಮಂ (ಸಂಪಶಾ. ೦-೦೦೩ ಪ) ; ಕಟಲೆ ನುಡಿದಟಲೆ ಬಗ್ಗಿಸಿ ಘಟಿಲೆನೆ ನಡೆಯೆಂದು ಜಡಿದು ಸಾರಥಿಯಂ ಪಾಂಗಟಿದು ನಿಲಲೀಯದಲ್ಲಿಂದೆಟ್ಟೆದುಯ್ವಂತುಯ್ದ ಳಾತ್ಮವರನಂ ನರನಂ (ಕಾಪ್ಯಾಪ. ೨೬). 'ಬಾಗಿಸು$_1$' ಪರಾ.
[ಬಗ್ಗು$_1$ + — ಇಸು$_3$]

ಬಗ್ಗಿಸು$_2$ (ಕ್ರಿ). (ಕೋಗಿಲೆ ಮೊದಲಾದ ಪಕ್ಷಿಗಳು) ಕೂಗು ; ಉಲಿ : ಕಾವ್ಯಬಂಧಮೊಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (ಸಂಪಶಾ. ೦-೬) ; ಪಿರಿದುನ್ಮದಾಳಿ ಬಗ್ಗಿಸುವ ಪಿಕಾಳಿ ಪುಷ್ಪಿತ ಲತಾಳಿ (ಎಳ. VIII, ಸಾಗರ. ೦೦೬-೨೬; 1042) ; ಪಾಡುವ ತುಂಬಿ ಬಗ್ಗಿಸುವ ಕೋಗಿಲೆ ಪರ್ತಿಪ ನೀಲಕಂಠ (ಕಪುಮಾ. ೩-೧೬೪).
[ಬಗ್ಗು$_2$ + — ಇಸು$_3$]

ಬಗ್ಗು$_1$ (ಕ್ರಿ). ೧. ಕೆಳಮುಖವಾಗು ; ಬಾಗು : ಬಗ್ಗಿ ಕವಿವಂಬುಗಳ ಗಱಿಗಳ ಲಗ್ಗೆಗರಿನಾಯಕರ ಕಿವಿಗಳು ನೆಗ್ಗಿದವು ಮುಗ್ಗಿದವು ಮನ ಮಾಱಂಕದತಿರಥರ (ಕುಪ್ಯಾಕ. ೨೦-೭) ; ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ? (ಗಾಪ). ೨. ಡೊಂಕಾಗು ; ವಕ್ರವಾಗು : ಆ ಕಿಟಕಿಯ ಸರಳುಗಳೆಲ್ಲ ಹಳೆಯವಾಗಿ ಬಗ್ಗಿವೆ (ಕೂಪ). ೩. ಓರೆಯಾಗು ; ಓಲಂ : ಬಿನ್ನಣದೆ ಗೋಪುರದ ಮಂಟಪದ ಪೃಥುಮೆಗಳು ಚಿನ್ನಾಗಿ ನಿಗುರುತಂ ಬಗ್ಗುತ್ತ. . . ನೋಡಿ (ಕಸುಪು. ೨-೩-೩೬). ೪. ವಿನಯವನ್ನು ಹೊಂದು ; ವಿನೀತವಾಗು : ಭೊಗ್ಗನೊಂದೇ ದಿನದೊಳು ತೋಱ ನಾತ್ಮನು ಬಗ್ಗಿದಾಗಳೆ ಬಾಗಿಲಹುದೇ (ಭಿನಸ. ೨-೭೬) ; ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು (ಗಾಪ). ೫. ಮೆಣಿ ; ಸಗ್ಗು ; ತಗ್ಗು : ಅತಿಕಾಂಕ್ಷೆಯನಾವಂ ಮಾಳ್ಪನವಂ ಸತತಂ ಹಿಂಸೆಗೆ ಬಗ್ಗುವನಲ್ಲಂ (ಕಯಕಾ. ೦೦-೦೬) ; ಗ್ರಾಮದ ಮುಖಂಡರು ಇಷ್ಟು ಪ್ರಯತ್ನಪಟ್ಟರೂ ಬಗ್ಗದ ಹಟವಾದಿಯು . . . ಗ್ರಾಮಸ್ಥರನ್ನು ಅಪರಾಧಿಗಳನ್ನಾಗಿ ಮಾಡುತ್ತಿದ್ದನು (ಮಸ್ಕಪ. ೦೬). ೬. ಗದರು ; ಝಂಕಿಸಂ : 'ಬಗ್ಗಣೆ$_1$', 'ಬಗ್ಗಿಸು$_1$' ಪರಾ. 'ಬಾಗು$_1$' ಹೋ.
[ದೇ. ॥ ತುಳು. ಬಗ್ಗು ; ಕೊಡ. ಬಗ್ಗ್]

ಬಗ್ಗು$_2$ (ಕ್ರಿ). (ಪಕ್ಷಿಗಳು) ಕೂಗು ; ಉಲಿ : 'ಬಗ್ಗಿಸು$_2$' ಪರಾ.

ಬಗ್ಗು$_3$ (ನಾ). ಬೆದರಿಸುವಿಕೆ ; ಗದರಿಸುವಿಕೆ ; ಝಂಕಣೆ : "ಬಗ್ಗು, ಬಿಪ್ಪಂಡಂ, ಬೆಜ್ಜೆ, ಚಪ್ಪರಣೆ—ಈ ೪ ಜಂಕಣೆ" (ಕಸಾ. ೫೭-೨೫೭).
[<ಬಗ್ಗು$_1$].

ಬಗ್ಗು$_4$ (ನಾ). ಪಕ್ಷಿಗಳ ಕೂಗು ; ಹಕ್ಕಿಗಳ ಧ್ವನಿ : "ಬಗ್ಗೆನಲ್ಕದು ಪಕ್ಷಿಗಳ ದನಿಗೆ" (ಕಸಕ. ೦೨೬). [<ಬಗ್ಗು$_2$]

ಬಗ್ಗು$_5$ (ನಾ). ಐಶ್ವರ್ಯ ; ಸಂಪತ್ತು : "ಬಗ್ಗು (ಬಗ್ಗ, ಬಾಗ)—ಭಾಗ್ಯ" (ಕಪ್ಪಕೋ. ೨೬) ; ಕೃತಿಯಿದು ಚದುರಕರ್ಣಾಟಕಕಲೆಯಱಿವನ ಬಗ್ಗಿನ ಬೆಳೆ (ಸೂಪಸೋ. ೦-೨೨) ; ಮೂವೆರಲಳತೆಯ ಲಲನೆಯ ನೊಸಲದು ಬಗ್ಗಿನ ನೆಲೆವನೆ (ಹಾಲಾಸ್ಯ. ೦-೦೩-೦೭) ; ಪುಣ್ಯದ ರಾಶಿಯಂತೆ ಬಗ್ಗಿನ ನೆಲೆಯಂತೆ ಮೈಮೆವೆತ್ತು ಚೆಲ್ವಾದ ಪರ್ವತಂ ತೋಱೆವಂದುದು (ಶಾಮಾಸ್ಯ. ೬೨-೦೦). [<ಪ್ರಾ. ಬಗ್ಗ./ಸಂ. ಭಾಗ್ಯ]

ಬಗ್ಗುಬಡಿ (ಕ್ರಿ). (ಆಲಂ) ಬಾಯಿ ಮುಚ್ಚಿಸು : ಅಡಗಿಸು ; ಸಂಮ್ಮನಾಗಿಸು : ಸಂನ್ಯಾಸಿಗಳನ್ನು ಬಗ್ಗುಬಡಿದೆವೆಂದು ಹಂಸಡಿಂಭರ ಅವಿನಯವು ಮತ್ತಷ್ಟು ಉಬ್ಬಿ ಹರಿಯಿತು (ಶೀಗಟ್ಟು. ೦೯೦) ; ತಾಯಿಯನ್ನು ಬಗ್ಗುಬಡಿದಂತೆ ಈ ಬಾರಿಯೂ ಮಾಡಬೇಕೆಂದು ನೆನೆಸಿ ಇದರ ಬಗ್ಗೆ ಮನೆಯಲ್ಲಿ ಚಕಾರಶಬ್ದ ತೆಗೆಯಲಿಲ್ಲ (ಗಂಪಾಯಿ. ೩೩).
[ಬಗ್ಗು$_1$ + ಬಡಿ$_1$]

ಬಗ್ಗುರಿ$_1$ (ನಾ). ಎದೆಗೂಡಿನ ಮೂಳೆ : ಕಟಕಟಾಯಿ ಮತ್ಸ್ಯಮಿಲ್ಲಿರಲ್ ಜಗಕೆ ಸಂಕಟಮಪ್ಪುದಚ್ಚರಿಯೆ ನೋಡೆಂದು ಕೂಡೆ ಲಟಕಟಿಸಿ ಕಡಲೊಳ್ ಪೊಕ್ಕು ಗುಡಿಗುಡಿಪ ಮೀನ ಬಗ್ಗುರಿಯನೊದೆದೌಂಕಿ (ಸಂಪು. ೨೦-೬) ; ಉಡಿದರಾಂತವರ ಬಗ್ಗುರಿಗಳಂ ದಾನವರ್ ಕುಡಿದರ ರುಣಾಂಬುವಂ ಶಾಕಿನಿಯರ್ (ಸಂಪು. ೨೪ ೨೨).
[ದೇ. ॥ ಕೊಡ. ಬಗ್ಗರೆ = ಬೆನ್ನೆಲುಬು]

ಬಗ್ಗುರಿ$_2$ (ನಾ). ಜಿಂಕೆ ಮೊದಲಾದ ಪ್ರಾಣಿಗಳನ್ನು ಹಿಡಿಯುವವನು; ಬೇಡ : ಜಗದ ಪ್ರಾಣಿಗಳುಲಿದುಲಿದು ಮರಳಿ ಮತ್ತಲ್ಲಿಯೇ ಬೀಳಲು ಬಲೆಯ ನೇಣು ಬಗ್ಗುರಿಯ ಕೈಯಲಿರಲು ಬಲೆಯ ನೇಣ ಕಣ್ಣಿಯ ಕಳಚಿ ಶರಣನು ಶರಣೆನುತ್ತವೆ ನಿಂದು (ಅವಸಂ. ೬೫-೩೭೭). [< ಸಂ. ವಾಗುರಿಕ]

ಬಗ್ಗುವೆಣ್ (ನಾ). ಸಂಪತ್ತಿನ ದೇವತೆ ; ಭಾಗ್ಯಲಕ್ಷಿ : ಬಗ್ಗದೊವಲುಡೆಯೊಳುಳ್ಳುಡೆ ವಿರಾಜಿಸುತಿರಲ್ ಬಗ್ಗುವೆಣ್ಣಿನಿಯನಚ್ಚಿಯ ಚೆಲ್ವಗಾಲ ಸಲಹಗ್ಗಳದ ಭೋಗಮಲ್ಲ (ಶೇರಮ. ೭-೩೯). [ಬಗ್ಗು$_5$ + ವೆಣ್]

ಬಗ್ರಿಹಗ್ಗ (ನಾ). ಎರಡು ಕೊನೆಗಳಲ್ಲೂ ಹಿಡಿದುಕೊಳ್ಳಲು ಅನುಕೂಲವಾದ ಲೋಹದ ಬಳೆಗಳನ್ನು ಹೊಂದಿರುವ ಹಗ್ಗ ; ೯ ಇದಕ್ಕೆ 'ಡಗ್ರಿಹಗ್ಗ'ವೆಂದೂ ಹೇಳುತ್ತಾರೆ : ಅವರು ಬಲೆಗಳನ್ನೆಲ್ಲಾ ಒಂದರೊಂದಿಗೆ ಒಂದನ್ನು ಗಂಟುಹಾಕಿ ಅದರ ಎರಡೂ ತುದಿಗಳಿಗೂ 'ಆಣಿ' (ಬಿದಿರಿನ ದೊಣ್ಣೆ)ಯನ್ನು ಹಾಕಿ 'ಬಗ್ರಿ' ಹಗ್ಗವನ್ನು ಕಟ್ಟಿ ಆಚೆ ಈಚೆ ಗಿಡಗಳಿಗೆ ಬಿಗಿದರು (ಸ್ವಸರ್ಗ. ೦೦೩) ; ಬಲೆಯ ಕೆಳಗಡೆ ಅಂಚು. ಆ ಅಂಚುಗಳ ತುದಿಯಲ್ಲಿ ಕಟ್ಟಿರುವ ಬಗ್ರಿಹಗ್ಗವನ್ನು ಹತ್ತಾತ್ತು ಮಾರು ದೂರಕ್ಕೆ ಎಳೆದು ಬಂಡೆಗಳಿಗೂ ಕುರುಚಲುಗಿಡದ ಬುಡಗಳಿಗೂ ಕಟ್ಟಿದರು (ಹುಬ್ಬಹ. ೦೯). [ಬಗ್ರಿ? + ಹಗ್ಗ (< ಪಗ್ಗ)]

ಬಚಕಾನಿ 'ಬಚ್ಚಕಾನೆ' ನೋ.

ಬಚನಾಗ (ನಾ). ಒಂದು ಬಗೆಯ ವಿಷಯುಕ್ತವಾದ ಔಷಧಿ ಬೇರು : ಬಚನಾಗ (ಕಡಗೋಲಮಂಡೀ ಬೇರು), ಸುಂಬಳಕಾರ ಮೊದಲಾದ ಪ್ರಸಿದ್ಧ ವಿಷಗಳು. ಇವುಗಳಿಗೆ ಯೋಗವಾಹಿ ಎಂದೂ ಹೇಳುವರು ; ಅಂದರೆ ಬೇರೆ ಔಷಧಗಳ ಕೂಡ ಬೆರಸಿದರೂ ಇವು ತಮ್ಮ ಪರಾಕ್ರಮವನ್ನು ತೋರಿಸತಕ್ಕವೆಂಬ ಅರ್ಥವು (ಗೃಹಸ್ಥ. ೬) ; ಜೀವಸಗಳು ೧. ಅಕ್ಕಲಖಾರ . . . ೧೫. ಬಚನಾಗ (ಮುಂಬಪ್ಪಾ. ೦೨೨).

[← ಹಿಂ. ಬಛನಾಗ್ ; ಮರಾ. ಬಚನಾಗ್. / ಸಂ. ವತ್ಸನಾಭ]

ಬಚಲು 'ಬಚ್ಚಲ್' ನೋ.

ಬಚಾಯಿಸು (ಕ್ರಿ). ೧. ಉಳಿಸು ; ಪಾರುಮಾಡು; ರಕ್ಷಿಸು : ಏನು ತಪ್ಪುಮಾಡಿದ್ದರೂ ಅವರನ್ನು ಬಚಾಯಿಸುತ್ತೇನೆ (ಕಂಪ. ೨೪೩) ; ಅವಳನ್ನು ಬಚಾಯಿಸುವ ಜವಾಬ್ದಾರಿ ನಿಮ್ಮದು (ಶಾರುದಾ. ೬೨) ; ನಿಮ್ಮನ್ನು ಬಚಾಯಿಸುವ ಮನಸ್ಸಿದೆ (ದೇವಹಂ. ೦೫೦). ೨. ನಿಭಾಯಿಸು ; ನಿರ್ವಹಿಸು : ಅವನು ಯಾವ ಕೆಲಸವನ್ನಾದರೂ ಬಚಾಯಿಸುತ್ತಾನೆಂಬ ವಿಶ್ವಾಸ ನನಗಿದೆ (ರೂಪಿ).

ಬಚಾಯಿಸಿಕೊಳ್ಳು = ಉಳಿದುಕೊಳ್ಳು; ಪಾರಾಗು; ರಕ್ಷಿಸಿಕೊಳ್ಳು: ನಿಮ್ಮೈಲಿ ಬಚಾಯಿಸಿಕೊಂಡೋರು ಯಾರು ? (ರಂಗಪ. ೯೫) ; ಅವನಿಂದ ಬಚಾಯಿಸಿಕೊಂಡು ಹೋದರೆ ಸಾಕಪ್ಪ ಅಂತಿದ್ದೆ (ಪುಪರು. ೨೦೨).

[< ಬಚಾವು + — ಇಸು3]

ಬಚಾವ್ 'ಬಚಾವು' ನೋ.

ಬಚಾವು, ಬಚಾವ್ (ನಾ). ಉಳಿವು ; ಪಾರಾಗುವಿಕೆ ; ರಕ್ಷಣೆ : ಮುಂದೆ ನಡೆದ ಕೇಸಿನಲ್ಲಿ ಕಾಳೇಗೌಡನ ಬಚಾವು (ಕಂಪ. ೨೬೫) ; ಸಂಜೆಯ ಮುಂದೆ ಈ ದೃಶ್ಯದ ರಂಗತಾಲೀಮನ್ನು ಇಡುವುದರಿಂದ ಸಾರ್ವಜನಿಕರ ಕುಳ್ಳು ಕಟ್ಟಿಗೆಗಳು ಬಚಾವು ಆಗುತ್ತದೆ (ಕಂಗರೋ. ೧೨೦). ಬಚಾವ್ : "ಬಚಾವ್ ಆದೆನಪ್ಪ" ಎನ್ನುತ್ತ ಪಾಗಾರವನ್ನಿಳಿದ ಮಾಸ್ತರರ ಮನಸ್ಸು ಬಹಳ ಕದಡಿಹೋಗಿತ್ತು (ಮೂರುದಾ. ೬೪) ; ಈಗಿನ ದಿವಸದಲ್ಲಿ ಮಕ್ಕಳು ಕಲಿತು ಬುದ್ಧಿವಂತರಾಗದಿದ್ದರೆ ಬಚಾವೇ ಇಲ್ಲ (ಸ್ವತ್ಯಹೊ. ೩೬).

ಬಚಾವಾಗು = ಉಳಿದುಕೊಳ್ಳು; ರಕ್ಷಿಸಿಕೊಳ್ಳು; ಪಾರಾಗು : ನಿಮ್ಮ ಮಾತಿನಂತೆ ಇವತ್ತು ಬಚಾವಾದರೆ ಸಾಕು (ಮರಳಿ. ೦೫೨). ಬಚಾವು ಮಾಡು = ಉಳಿಸು ; ಪಾರುಮಾಡು ; ರಕ್ಷಿಸು : ನಿನ್ನನ್ನು ಹೇಗೋ ಬಚಾವು ಮಾಡಿದರಂತೆ (ಮಧುಪ. ೨೦೦). [←ಹಿಂ. ಮರಾ. ಬಚಾವ್]

ಬಚ್ಚ1, ವಚ್ಚ2 (ನಾ). ೧. ಮಗು ; ಬಾಲಕ ; ಹಸುಳೆ : "ಬಚ್ಚ—ವತ್ಸ = ಮಗು, ವೈಶ್ಯ" (ತದ್ಭಕೋ. ೨೬) ; ಬಚ್ಚರ ಬಯಲ ನುಡಿಗೆ ಬಗೆಯಿತ್ತೊಡೆ ಮೆಚ್ಚಿ ಮಿಗಿಲನೀಯದನೇಳಿಸಿದೊಡೆ . . . ಪುಚ್ಚಣಿಯಹುದು (ಜಯಕಾ. ೧೪-೫೦). ೨. ಹಸುವಿನ ಕರು : (ಕಿ). ವಚ್ಚ2 : ೨. ಪಶು . . . ವಚ್ಚ ಸಹಿತ ಬಂದಿರೆ (ಪೋಹತ. ೨೨-೩೬). [< ಪ್ರಾ. ಬಚ್ಚ, ವಚ್ಚ, ವಚ್ಛ. / ಸಂ ವತ್ಸ. / ಪಾರ. ಹಿಂ. ಮರಾ. ಬಚ್ಚಾ]

ಬಚ್ಚ2 (ನಾ). ವ್ಯಾಪಾರ ಮಾಡುವವನು ; ಹರದ ; ವೈಶ್ಯ: ಬಚ್ಚರ ದೂಸಿಗರ ನಿಯೋಗಿಗಳಗ್ಗಳಮಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು (ಪಡ್ಡಾಣಾ. ೦೨೩-೪೪) ; ಧನದಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ ಪೊದಟ್ಟ [ಕಾವ]ಣಂಗಳಿಂ . . . ಸಮಸ್ತವಸ್ತುವಿಸ್ತಾರಹಾರ ಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ (ಪಂಪಭಾ. ೦-೫೬ ಕಗಳೆ) ; ಬಚ್ಚರ್ ಕಿರ್ಚು ಮುಟ್ಟಿದ ತುಪ್ಪದಂತೆ ಬಲ್ಪುಗಿಡೆ (ಧರ್ಮಾಮೃ. ೨-೬೯).

[<ಸಂ. ವೈಶ್ಯ. / ತೆಲು. ಬಚ್ಚು]

ಬಚ್ಚ3 (ನಾ). ಮಕ್ಕಳು ಆಟಕ್ಕಾಗಿ ಬಳಸುವ ಕಲ್ಲು ಅಥವಾ ಬಕ್ಕರೆಯ ಚಪ್ಪಟೆಯಾದ ಸಣ್ಣ ಬಿಲ್ಲೆ,—ಹಲವೆ ; ಚಾಪು : ಹುಡುಗಿಯರು ಬಚ್ಚ ಇಟ್ಟುಕೊಂಡು ಕುಂಟಿಬಿಲ್ಲೆಯಾಟ ಆಡುತ್ತಿದ್ದಾರೆ (ರೂಪಿ).

[← ಮರಾ. ಬಚ್ಚಾ]

ಬಚ್ಚಕಾನೆ, ಬಚಕಾನಿ, ಬಚ್ಚಖಾನೆ, ಬಚ್ಚಗಾನಿ (ನಾ). ೧. ಹುಡುಗರ ಬಟ್ಟೆ,—ಉಡುಪು : (ಕಿ). ಬಚಕಾನಿ : ೧. ಹುಡುಗರ ಸಲುವಾಗಿ ನೆಯ್ದ ರೇಶ್ಮಿಯ ಅಂಚಿನ ಸಣ್ಣದೋತರ ಜೋಡುಗಳಿಗೆ ಬಚಕಾನಿಯೆನ್ನುತ್ತಾರೆ (ಮುಂಬಯಿ. ೩-೯೯). ೨. ಬಟ್ಟೆ; ವಸ್ತ್ರ: ಅವರ ಕಣ್ಣಿಗೆ ಅಷ್ಟೊಂದು ಜರಿಪೇಟಗಳೂ ಬಣ್ಣದ ಬಟ್ಟೆಗಳೂ ಬಚಕಾನಿಗಳೂ . . . ಸೇರಿದ ಹಾಗಿತ್ತು (ಕಾಮೂರು. ೩೩೦). ಬಚ್ಚಖಾನೆ : ೨. ಮೈತುಂಬ ಬಚ್ಚಖಾನೆಗಳನ್ನು, ಸೀರೆ, ಕಣಗಳನ್ನು ಮದುವಣಿಗರಿಗೆ ಹೊರಿಸಿದರು (ಮರಮ. ೦೦೩). ಬಚ್ಚಗಾನಿ : ೧. ಬಚ್ಚಗಾನಿ ಉಟ್ಕಂಡು ಚಿನ್ನದ ರುದ್ರಾಕ್ಷೀನ ಕೊರಳಿಗೆ ಹಾಕಿಕೊಂಡಿದ್ನಲ್ಲಾ ? (ಮರಮ. ೫೦೯). [← ಮರಾ. ಬಚಕಣೇ]

ಬಚ್ಚಖಾನೆ 'ಬಚ್ಚಕಾನೆ' ನೋ.

ಬಚ್ಚಗಾನಿ 'ಬಚ್ಚಕಾನೆ' ನೋ.

ಬಚ್ಚಣಿಸು (ಕ್ರಿ). ೧. ಬಣ್ಣವನ್ನು ಹಚ್ಚು,—ಬಳಿ ; ರಂಗನ್ನು ಲೇಪಿಸು : ಬರೆದು ಬಚ್ಚಣಿಸಿದಂತೆನ್ನೆದೆಯೊಳಗಿರು ಗುರುವೆ (ಪರಸ. ೪-೦೨೩) ; ಮಣ್ಣಿನಿಂದ ಹೊಸದಾಗಿ ಒಂದು ದೊಡ್ಡ ಕುದುರೆಯನ್ನು ಮಾಡಿ ಬಚ್ಚಣಿಸಿ ನಿಲ್ಲಿಸಿದ್ದರು (ಪಗೆಗ. ೪೫). ೨. ಬಳಿ ; ಲೇಪಿಸು : ಸುಣ್ಣವ ಮೂಗಿನಲಿ ಬಚ್ಚಣಿಸಿ ಕಳುಹುವನವರ ಮನೆಗಳಿಗೆ (ಕೃಷ್ಣಾಕಾ. ೩-೩೩).

[ಬಚ್ಚಣೆ1 + — ಇಸು3]

ಬಚ್ಚಣೆ1, ಬಚ್ಚರಣೆ, ಬರ್ಚಣೆ (ನಾ). ೧. ಬಣ್ಣವನ್ನು ಬಳಿದು ಚಿತ್ರಿಸುವಿಕೆ ; ಬಣ್ಣದ ಕೆಲಸ : ಕಣ್ಣಿಲ್ಲದವಂಗೆ ಬಣ್ಣ ಬಚ್ಚಣೆ ಯಾಕೆ (ಪೋಳಿಮಾ. ೯೨-೩೬೬) ; ತೋಳ ದರ್ಪದಲುಬ್ಬಿ ವಾಲಿಯ ಬಾಲಕನ ಬಚ್ಚಣೆಯ ತೊಟ್ಟಿಲ[ಪಾಠಾಂ. ಬಚ್ಚರಣೆದೊಟ್ಟಿಲ]ಕಾಲ ದೆಸೆಯಲಿ ಕಟ್ಟುವಡೆದವನೀತನಲ್ಲವಲೆ (ತೊರಕಾ. ೬-೦೦-೫೦). ೨. ಶೃಂಗಾರ; ಅಲಂಕಾರ: ಬಣ್ಣ ಬಚ್ಚಣೆಯ ರಂಜನೆಯ ವೇಷವನೊಂದಿದಣ್ಣಗಳು ಸಹಜಸುಜ್ಞಾನಿಗಳೆನಿಪ್ಪ ಮುಕ್ಕಣ್ಣನ ಶರಣಜನಕೆ ಸರಿಯೆ (ಸಿದ್ಧೇಶು. ೨೨-೦೬೫). ೩. ಬಣ್ಣ ಹಾಕಿದ ಆಕೃತಿ ; ಚಿತ್ರ: ಪೊಳೆವ ಬಚ್ಚಣೆಯ ಹರಿಗೆ ಬಿಚ್ಚುಗತ್ತಿಯ . . . ಬಲಗಳ ಮಧ್ಯದೆ ಸರ್ವಸಂಭ್ರಮದೊಳು ಮಲೆಯಾಳದೇಶದವನೀಶ ಬಂದ (ಕಂಪಪಿ. ೨೦-೬೫). ೪. (ಆಲಂ) ವೇಷ ; ಸೋಗು : ಬನ್ನಿರೆ ಅಕ್ಕಗಳು ಹೋಗಿರೆ ಆಲದ ಮರಕ್ಕೆ ಕಚ್ಚುವುವೆ ನಿಮ್ಮ ಚಿಪ್ಪಿನ ಹಲ್ಲುಗಳು ಬೆಚ್ಚಿಸುವುವೆ ನಿಮ್ಮ ಬಚ್ಚಣೆಯ ರೂಹುಗಳು (ಇಸಪ. ೫೬೨) ; ತೊಲಗದ ಕಂಭದ ಹುಲಿಯ ಬಚ್ಚಣೆಯ ಗಜಮುಖದ ಭುಜಬಳಗರುಡನ . . . ಹರಿಗೆಕಾಱರ ಪರಿವೀಧಿಯೊಳಂ (ಗಿರಿಕ. ೬-೫೫ ಪ). ಬಚ್ಚರಣೆ : ೩. ಅಂತು ಬರಹದ ಬಚ್ಚರಣೆಯ ಪೆಣ್ಣು ಕಣ್ಣೊಳ್ ತೊಟಲೆ ಧೈರ್ಯಂಗೆಟ್ಟು ಬಾಯ್ವಿಟ್ಟು ಕನ್ಯಾರತ್ನಂ ತನಗೆಂತು ಸಾಧ್ಯಮಪ್ಪುದೆಂದು ವಿಚಾರಿಸಿ (ಪುಷ್ಕಾಸ್ತ. ೩-೪೨ ಪ) ; ಶರಭಭೇರುಂಡರೂಪಾಂಚಿತ ವಿಚಿತ್ರದ ಬಚ್ಚರಣೆಯ ಹರಿಗೆಯ . . . ಹರಿಗೆಕಾಱರ ಮೊತ್ತದೊತ್ತಿನುಭಯಪಾರ್ಶ್ವದೊಳು (ಹುಮ್ಮಾರ.

೩-೩೩ ಪ). ೫. ಬಣ್ಣ ಬಳಿಯುವ ಕಸಬು ; ಬಣ್ಣಗಾರಿಕೆ : ಕಳಕಳಿಕೆ ಕೋಳಾಹಳಿಸೆ ಕದ್ದಳಿಗ ದೂಸಿಗ ಬೂಸ ಗಂಧಿಗ ಕೊಲಪ ಚಿಪ್ಪಿಗ ಬಚ್ಚರಣೆ ಬಳೆಗಾಱ ಬೋಗಾಱ . . . ಜಂಗುಳಿಗಗೇರಿಗಳೊಳಗೆ ಝಾಢಿಸಿದನು ಶಿಖಾಳಿಗಳ (ಶೊರರಾ. ೫-೬-೫೩). ೬. (ಆಲಂ) ಮಾಯೆ: ಬಚ್ಚರಣೆಯ ಸಂಸಾರದ ಹಚ್ಚನೆಯ ಕಂಡು ದಿಟವೆನುತಿರ್ಪೀ ಕುಚ್ಚಿತಮನದಾಮಿಸಮಂ ಬೆಚ್ಚಿಸುವಡಿದೋನ್ನಮಶಿವಾ (ಪಡಳಂ. ೨೯). ಬರ್ಚಣೆ : ೩. ಕೋಡ ಮೊನೆಯೊಳ್ ತಗುಳ್ಚಿದ ಸೂನಗಿಗತ್ತಿಯ ಕೊನೆಗೊಡಂಕೆಯೊಳ್ ತೊನೆವ ಬಿಳಿಯ ಚಾಮರದ ಬಿದುವೊಳ್ಪರೆದು ಬರ್ಚಿಸಿದ ಸಿಂಧೂರದ ಬರ್ಚಣೆಯ . . . ವಿಳಾಸಮಳವಡೆ (ರಾಜಶೇ. ೬-೦೦ ಪ).

ಬಚ್ಚಣೆಯ ಮಾತು = ಬಣ್ಣದ ನುಡಿ ; ಗಿಲೀಟಿನ ಮಾತು : ಬಣ್ಣ ಬಚ್ಚಣೆಯ ಮಾತು ಕಲಿತು ಹೊನ್ನು ಹೆಣ್ಣು ಮಣ್ಣಿಗಾಗಿ ಅನ್ನವ ನಿಕ್ಕುವರ ಪ್ರಸಂಗವ ಹಡೆಯಬಂದ ಗನ್ನಗಾಱಂಗೇಕೆ ಅಱಿವು (ಪೋಳಿಮಾ. ೬೯-೩೩೯).

[< ಪಚ್ಚು$_3$ + – ಅಣ್ಕೆ. / ತೆಲು. ಬಚ್ಚಿನ. / ಸಂ. ಪ್ರಚ್ಛನ್ನ]

ಬಚ್ಚಣೆ$_2$ 'ಬಚ್ಚಳೆ' ನೋ.

ಬಚ್ಚಣವಾತು (ನಾ). ಬಣ್ಣದ ಮಾತು : ಗಿಲೀಟಿನ ನುಡಿ : ಬಚ್ಚರ ಬಯಲ ನುಡಿಗೆ ಬಗೆಯಿತ್ತೊಡೆ ಮೆಚ್ಚಿ ಮಿಗಿಲನೀಯದನೇಳಿಸಿದೊಡೆ ಬಚ್ಚಣವಾತಿನ ಬದಗರ್ಗೊಲಿದೊಡೆ . . . ಪುಚ್ಚಣಿಯಹುದು (ಜಯಕಾ. ೦೯-೫೦) ; ಈ ನಿಮ್ಮ ಬಚ್ಚಣವಾ[ಪಾಠಾಂ. ಮಾ]ತಿಗಿರದೆ ನಾನೊಡ ಬಡುವುದಿಲ್ಲ (ಸಮ್ಮಳೌ. ೫-೬೯). [ಬಚ್ಚಣೆ$_1$ + ಮಾತು$_1$]

ಬಚ್ಚಣವೆಱು (ಕ್ರಿ). ಬಣ್ಣದ ಕೆಲಸದಿಂದ ಕೂಡಿರು ; ಚಿತ್ತಾರ ವನ್ನು ಪಡೆ : ಪರಿಗೆಗಳಲ್ಲಿ ಕೀಲಿಸಿದ ಗೆಜ್ಜೆಯ ಬಚ್ಚಣವೆತ್ತ ಬಿಲ್ಗಳ್ (ಕಬ್ಬಿಗಾ. ೨೬೩). [ಬಚ್ಚಣೆ$_1$ + ಪೆಱು$_1$]

ಬಚ್ಚನಾಲಗೆ (ನಾ.) (ಆಲಂ) ವ್ಯರ್ಥವಾದ ನಾಲಗೆ : ಅಚ್ಚ ಪಳದಿಯ ಕಾಯ ಜೋಡ ಮೇಲೊತ್ತದೊಡೆ ನಚ್ಚಿರ್ದ ಕೈಯ ಕರಿದಿನ ಹಿಂಡ ಹಿಡಿಯದೊಡೆ ಮೆಚ್ಚಿನಾಟಕೆ ಮೀಱಿ ಬಂದ ಕೆಂಪಿನ ಹಣ್ಣನಂಡ ಲೆದು ಬಿಡದಿರ್ದೊಡೆ ಬಚ್ಚನಾಲಗೆಯೆ ಬೀಳೆಂದು ಹಾಸಂಗಿಯಂ ಪಚ್ಚೆಯ ವಿದೂಷಕನುರುಳ್ಚಿದಂ ಬಾಲಿಯರ ಮಚ್ಚಿಸುವ ಕಟಕಿವಾತುಗಳ ಜಾಣ್ಮೆ ಗಳಿಂದೆ ಪಗಡೆಯಾಡುವ ನೆವದೊಳು (ಕೃಪುಭಾ. ೬-೩೦). ☞ ಇಲ್ಲಿಯ ಶ್ಲೇಷಾರ್ಥದಲ್ಲಿ ಸಂದೇಹವಿದೆ. [< ಬಚ್ಚೆ$_1$? + ನಾಲಗೆ]

ಬಚ್ಚನೆ (ಅ). ಇದ್ದಕ್ಕಿದ್ದಂತೆ : ತಟ್ಟನೆ; ಕೂಡಲೆ : ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಟ್ಟ ನಾಣ ಪೆಂಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬಚ್ಚನೆ ಬಸಿಯುತ್ತುಂ (ಕಾಪ್ಯಾಪ. ೭೬೫). [ಬಚ್$_6$ + – ಅನೆ$_1$]

ಬಚ್ಚಬಯಲ್ 'ವಯಲ್' ಪರಾ.

ಬಚ್ಚಬಯಲು 'ವಯಲ್' ಪರಾ.

ಬಚ್ಚಬರಿದು 'ಬಱಿದು' ಪರಾ.

ಬಚ್ಚಬರಿಯ 'ಬಱು'$_2$ ಪರಾ.

ಬಚ್ಚಬಱಿದಾಗು 'ಬಱಿದು' ಪರಾ.

ಬಚ್ಚಬಱಿಯ 'ಬಱು$_2$' ಪರಾ.

ಬಚ್ಚರ (ನಾ). ಒಂದು ಬಗೆಯ ರೋಗ (?) : ನೆಲದಾಳಕಲ್ಪಮಂ ಪೇಳ್ವೆ . . . ಅಕ್ಕಿಗಚ್ಚಿನಲ್ಲಿ ಕುಡಿಯೆ ಬಚ್ಚರಂ ಪೋಕು (ಪಿನ್ನಪಿ. ೫). [?]

ಬಚ್ಚರಣೆ 'ಬಚ್ಚಣೆ'$_1$ ನೋ.

ಬಚ್ಚರೆ ? (ನಾ). ದೇವತೆಗಳ ವಾಸಸ್ಥಾನ ; ಸ್ವರ್ಗ : "ಬಚ್ಚರೆ ಬರ್ದಿಲ್ ಸಗ್ಗಮೆನಲಮರಲೋಕಂ" (ಕಬ್ಬಿಕ್ಕ. ೦೦೦). [?]

ಬಚ್ಚಲ್, ಬಚಲು, ಬಚ್ಚಲು$_1$, ಬರ್ಚಲ್ (ನಾ). ೧. ಹೊಲಸು ನೀರು ಹರಿದುಹೋಗಲು ಮಾಡಿರುವ) ಚರಂಡಿ : ಗಟಾರ ; ಮೋರಿ: "ಕೆಸಱಿಗೆಯೆಂದು ಬಚ್ಚಲ್" (ಕಶಸಾ. ೭೩-೬೬೬) ; ನಿಚ್ಚಂ ನಿರ್ಮಲಜಲಮಿರೆ ಬಚ್ಚಲ ನೀರ್ಗೆಱಿವ ಕೀಟಕಂಬೊಲ್ತನ್ನಂ ನಚ್ಚಿದ ಸತಿಯಿರೆ ಬೆಲೆವೆಣ್ಗೆಚ್ಚಿಸುವುದು ನೀತಿಯೇ (ಕಾದ್ಯಟ. ೧೦-೭೬). ೨. (ವ್ಯವಸಾಯ ಮುಂತಾದುವಕ್ಕೆ ನೀರನ್ನು ಒದಗಿಸಲು ತೋಡಿದ) ನಾಲೆ: ಬಚ್ಚಲ್ಗಳಂ ತಿರ್ದಿಸಲವಿರಳಘರ್ಮಾರ್ದ್ರಕಾಂತಾಜನ ಕ್ಕಾದರದಿಂ ನೀರಾಟಮಾಡಲ್ ನೆಱಿಗುವೆನೆ ಪೊದಟ್ಟತ್ತು ಚಂದ್ರಾಂಶು ಜಾಲಂ (ಕಾದಂಕಾ. ೪೨೨); ಬೆಲಗಸೆ ತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿ ಬಚ್ಚಲನೆಲೆದೋಂಟದೊಳ್ ಪರಿಯಿಸಲ್ ಪಱು ಗೋಲ್ಗಳನಿಕ್ಕಿ ಪಾಯಿಸಲ್ . . . ಬಗೆದುದಂದು ಜನಂ ಘನಚಂದ್ರಿಕಾಂ ಬುವಂ (ಅಜಪು. ೬-೪೫) ; ವಾಪೀಕೂಪದೀರ್ಘಿಕಾಘಟೀಯಂತ್ರಪ್ರವಾಹಂ ಪುಗುವ ಬಚ್ಚಲ್ಗಳ ಪೊಱಮಡುವ ತೂಂಬುಗಳ ಬೆಡಂಗು ಕಣ್ಗೆ ನಿರವಿಸೆ (ಅಪಂಪು. ೬-೨೯ ಪ). ಬಚಲು: ೨. ಮುರಿದು ಬಂದ ಬಚಲ ಹೆಬ್ಬದುವಿನ ನಟ್ಟ ಕಲ್ಲು (ಪೊಂಕಶಾ. ೦೯೯೯, ಬಂಕಾಪುರ. ೬-೩೯ ; 1258); ನಾರಣಸೆಟ್ಟಿಯ ಬಚಲಿಂದ ತೆಂಕಲು (ಸೌಇಎ. ೦೯೩೦, ಮಂಗಳೂರು. ೫೩೯-೧೨ ; 1278) ; ಪಡುವಲು ಹರಿದ ಬಚಲಿಂದ ಮೂಡಲು (ಸೌಇಎ. ೦೯೩೨, ಕಾಡುವಿ. ೩೨೩-೦೯; 1364). ಬಚ್ಚಲು$_1$: ೧. ಬಚ್ಚಲ ನೀರು ತಿಳಿದಲ್ಲಿ ಫಲವೇನು (ಬಸವ. ೦೨೦); ಬಚ್ಚಲುದಕಂ ತಿಳಿದೊಡಾರ ಮಿಾಹಕ್ಕೆ ಯೋಗ್ಯಂ (ಹಜಕಾ., ೭-೦೯); ತನ್ನ ಕಾಲಂ ತೊಳೆದುಕೊಳಲ್ ಬಚ್ಚಲಿಗಳವಡುವುದೆಂದು ಪಿರಿದಪ್ಪಿಟ್ಟಿಗೆಯ ನೊಂದನೊಯ್ದು ನಿಚ್ಚಲುಂ ನೀರಿಂ ಕಾಲ್ಗಚ್ಚುವ ಸಮಯದಲ್ಲಿ ಮಿಸುನಿ ಯಾಗಿರ್ದುದಂ ಕಂಡು ತುಷ್ಟನಾಗಿ (ಪುಷ್ಯಾಸ್ತ್ರ. ೯-೫೨ ಪ) ; ಸಜ್ಜನರ ಸಂಗವದು ಹೆಜ್ಜೇನುಕೊಡದಂತೆ ದುರ್ಜನರ ಸಂಗದೊಡನಾಟ ಬಚ್ಚಲಿನ ರೊಜ್ಜಿನಂತಿಹುದು (ಸರ್ವಜ್ಞ. ೬೦೯). ೩. (ಮನೆಯಲ್ಲಿ) ನೀರು ಹರಿದು ಹೋಗಲು ಅನುಕೂಲವಾದ ಮೋರಿಯಿರುವ ಸ್ನಾನ ಮಾಡುವ ಕೋಣೆ; ಸ್ನಾನಗೃಹ : ನಮ್ಮ ರಾಮೂ ನಿಮ್ಮನೇ ಬಚ್ಚಲಲ್ಲೇ ಸ್ನಾನ ಮಾಡ್ತೀನಿ ಅಂತ ಹಟ ಹಿಡಿದಿದ್ದಾನೆ (ರೂಪಸಂ. ೦೩) ; ಬಚ್ಚಲಿಗೆ ಬಗೆಯಿಲ್ಲದವ ಮಾಳಿಗೆ ಕಟ್ಟ್ಯಾನೇ ? (ಗಾಡೆ). ೪. (ಮನೆಯಲ್ಲಿ) ನೀರು ಹರಿದು ಹೋಗಲು ಅನುಕೂಲವಾದ ಮೋರಿ ಮತ್ತು ಕಟ್ಟೆಗಳಿರುವ (ಸ್ನಾನ ಮಾಡುವ) ನಿರ್ದಿಷ್ಟಸ್ಥಳ: ಬಚ್ಚಲಿನ ಜಗಲಿಯ ಮೇಲೆ ತಾಮ್ರದ ಬೋಸಿ (ಬಾಳಹೂ. ೦೦೫); ಅವರು ಸ್ನಾನ ಮಾಡಲು ಬಚ್ಚಲಿಗಿಳಿದಿದ್ದಾರೆ (ರೂಢಿ). Δ ಬರ್ಚಲ್: ೨. ಮೂಡಣ ಕಂಚಿ ವಡ್ಡದಿಂ ಬಡಗಲುಂ ಕೆಱಿಯ ಬರ್ಚಲಿಂದ ಮೂಡಲುಂ (ಎಕ. VII, ಶಿಕಾರಿ. ೦೫೦-೬೦; 1047).

ಬಚ್ಚಲ ಮನೆ=ಬಚ್ಚಲು ಕೋಣೆ : ಶ್ರೀಧರನು ಆದಷ್ಟು ಬೇಗ ಬಚ್ಚಲ ಮನೆಗಾಗಿ ಹೊರಟನು (ಬಾಳಹೂ. ೦೦೯).

ಬಚ್ಚಲು$_1$ 'ಬಚ್ಚಲ್' ನೋ.

ಬಚ್ಚಲು$_2$ 'ಬಸಲೆ' ನೋ.

ಬಚ್ಚಲುಕೋಣೆ (ನಾ). ಸ್ನಾನ ಮಾಡಿದ ನೀರು ಹೊರಕ್ಕೆ ಹರಿದು ಹೋಗಲು ಅನುಕೂಲವಾದ ಬಚ್ಚಲಿರುವ ಕೊಠಡಿ; ಸ್ನಾನಗೃಹ : ಅವರ ಮನೆಯ ಬಚ್ಚಲುಕೋಣೆಯಲ್ಲಿ ದೊಡ್ಡ ಹಂಡೆಯಿದೆ (ರೂಢಿ).

[ಬಚ್ಚಲು$_1$ (<ಬಚ್ಚಲ್) + ಕೋಣೆ$_2$ (<ಕೋಣ್)]

ಬಚ್ಚಲುಮನೆ (ನಾ). = ಬಚ್ಚಲುಕೋಣೆ : ಬಚ್ಚಲುಮನೆ ಕಟ್ಟುವವನು ಅದರಲ್ಲಿ ತೂಬು, ಒಲೆ, ಗೂಡು ಇತ್ಯಾದಿಗಳನ್ನು ತನ್ನ ಅಭಿರುಚಿಗೆ ತಕ್ಕಂತೆ ನಿರ್ಮಿಸುತ್ತಾನೆ (ಜೀವಾತ್ಮ. ೦೭೨).

[ಬಚ್ಚಲು$_1$ (<ಬಚ್ಚಲ್) + ಮನೆ]

ಬಚ್ಚಲೆ$_1$ 'ಬಸಲೆ$_1$' ನೋ.

ಬಚ್ಚವಸರ (ನಾ). ವೈಶ್ಯರ ಅಂಗಡಿಗಳ ಸಾಲು : ಬಾಗಿಲ್ವಾಡದ ಮುಂದಣ ಭಾಗಂಗಳ ಬಚ್ಚವಸರಮರ್ಥಿಗೆ ಕುಡುವುದ್ಯೋಗದ ಪಸರಮೆ ವಿತ್ತಸಮಾಗಮದಿಂ ಗೆಯ್ವೊನಿಲ್ಲ ಪರದಂ ಪರದಂ (ಶಾಂತಿಪು. ೩-೦೩).
[ಬಚ್ಚ₂ + ಪಸರ]

ಬಚ್ಚಳೆ, ಬಚ್ಚಣೆ₂ (ನಾ). ೧. ಕರುವಿನ ಮೇಲೆ ಪ್ರೀತಿಯುಳ್ಳ ಹಸಂ ; ವತ್ಸಲೆ : ತಕಾರಕ್ಕೆ ಚತ್ವಂ . . . ವತ್ಸಳಾ–ಬಚ್ಚಳೆ, ಬಚ್ಚಣೆ (ಕಸುರ. ೨೬೩ ಪ್ರಯೋ) ; ಹೊಗರೊಗುವ ಬಚ್ಚಳೆಯ ನಂದಿಯ ಮೊಗದ ಮಾಳ್ಕೆಯೊಳಿಹ ಮುಖಾಡವ ನಗುತ ಶಂಕರದಾಸಿಮಯ್ಯನ ಮುಖಕೆ ಸೇರಿಸಿದ (ಶಂಕದಾ. ೬-೩). ೨. ಪ್ರೀತಿಪಾತ್ರಳಾದ ಯುವತಿ : ಎನ್ನ ಪೊನ್ನ ಪದಗದ ರನ್ನದಾರದ ಬಚ್ಚಳೆ, ನೀಱ್ ! (ರಾಮಾಶ್ವ. ೦೦೯-೦೦). **ಬಚ್ಚಣೆ₂** : ೧. ತಕಾರಕ್ಕೆ ಚತ್ವಂ . . . ವತ್ಸಳಾ–ಬಚ್ಚಳೆ, ಬಚ್ಚಣೆ (ಕಸುರ. ೨೬೨ ಪ್ರಯೋ). [< ಸಂ. ವತ್ಸಲಾ]

ಬಚ್ಚಾಳಿ, ಬಚ್ಚಾಲಿ (ನಾ). ಕೆಡುಕ ; ಕಿಡಿಗೇಡಿ : ಕೆಳಗಡೆಯ ಕೋಣೆಗಳಲ್ಲಿ ಯಾರೋ ಕೆಲವು ಬಚ್ಚಾಳೀ ತರುಣರಂಥವರು ಬಾಡಿಗೆ ಗಿದ್ದರು (ಶಿ. ೩೯). **ಬಚ್ಚಾಲಿ** : ವಾಚು ಮಾರಿಯಾಗಿತ್ತು . . . ಯಾರೋ ಒಬ್ಬ ಬಚ್ಚಾಲಿಗೆ ಹದಿನೈದು ರೂಪಾಯಿಗೆ ಅದನ್ನು ಕೊಟ್ಟಿದ್ದೆ (ಮುಂಗಾಮು. ೨೦). [?]

ಬಚ್ಚಿಸು₁ (ಕ್ರಿ). ಬಚ್ಚಿಡು ; ರಹಸ್ಯವಾಗಿಡು : ಬಿಚ್ಚಿ ಬಿಸುಡುತ ಮಾಯೆಯ ಬಚ್ಚಿಸುತಲಗದು ಹೂಳಿಸುತ ಸಂಸಾರಮಂ ಕೊಚ್ಚಿಸುತ . . . ರಂಜಿಸಿದರಚ್ಚರಿಯ ಶಿವಗಣಗಳು (ಲಿಂಗಪು. ೩೦-೦೦).
[ಬಚ್ಚು₁ (<ಬಯ್ಚು) + – ಇಸು₃]

ಬಚ್ಚಿಸು₂, ಬರ್ಚಿಸಂ (ಕ್ರಿ). ೧. ಬಣ್ಣ ಹಾಕು ; ಚಿತ್ರಿಸು ; ವರ್ಣ ವಿನ್ಯಾಸ ಮಾಡು : ಬರೆಯಲ್ಬಾರದು ಬಚ್ಚಿಸಲ್ಕರಿದು (ಅನಂಪು. ೦-೦೦೯); ಬಿತ್ತಿಯೊಳಂದಂಬಡೆವಂತು ಬಚ್ಚಿಸಿದ ಬಣ್ಣಂಗಳಂ ಬೇಱ್‌ವೇಱ್ ನೋಡಿ ಮೆಚ್ಚುತಿರ್ಪಾಗಳ್ (ಕಬ್ಬಿಕಾ. ೯೩). ೨. ಬಳಿ ; ಲೇಪಿಸು ; ಲೇಪನಮಾಡು : ಪಚ್ಚೆಗಪ್ಪುರವನೆಚ್ಚುವನು ಗಂಧವ ಮೈಗೆ ಬಚ್ಚಿಸುವನು ಚಕ್ರನಾಥ (ಪರಸ. ೦೯-೧೩೩). **Δಬರ್ಚಿಸು** : ೧. ವಿಶ್ವಕರ್ಮನೆಣೆಯಾಗಿರೆ ಕಂಡರಿಸಲ್ವಿಳಾಸದಿಂ ಕರುವನೊಡರ್ಚಿ ಬರ್ಚಿಸುವ ಬಲ್ಮೆಗೆ ಬೀಗುವ ಚೀರಘಟ್ಟಿ ತಾಂ ಸರಿಯೆನಿಪಂದದಿಂ ಕರು ವಿಡಲ್ ನೆಱ್‌ಯಂ ದ್ವಿಜರಾಜಕನ್ನೆಯಂ (ಸುಳುಮಾ. ೩-೩೬) ; ಬರೆದು ಬರ್ಚಿಸಿದಂತೆವೊಲಾಗೆ . . . ಎಸೆದುದುನ್ನಮಿತೋತ್ಸವಕೇತನಂ ಶುಭಾ ನಂದಿತಲೋಕಚೇತನಮತೀವವಿನೂತನವಾ ನಿಕೇತನಂ (ಜಗಪ. ೦೦-೯೩) ; ಪುಸೆದಸಮಾಸ್ತ್ರನುನ್ಮದನಬಾಣಶಲಾಕೆ ವಿಳಾಸದಿಂದಮೇಱಿಸಿದಲರ್ವಿಲ್ಲ ನೈಕ್ಷವ ಧನುರ್ಲತೆ ಬರ್ಚಿಸಿ ಮೀನಕೇತುವೆತ್ತಿಸಿದ ಸಮುಲ್ಲಸಜಝುಷಪತಾಕೆ ಯೆನಿಪ್ಪವೊಲಾಂತಳಾಕೆಯಾ ಪಸದನದೊಳ್ ಜಗತ್ತ್ರಿತಯಚಿತ್ತವಿಮೋಹನ ಶಕ್ತಿಯೇಱ್ಗೆಯಂ (ಸಂಪ್ರಪು. ೬-೬೬). ೨. ಪಲ್ಲವಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್ ಮಿಸುಗುವ ಕರ್ಪು ಬರ್ಚಿಸಿದವೊಲ್ ಬಗೆಗೊಳ್ವಿನೆಗಂ ಬಸಂತದೊಳ್ ಬಸದಿಯ ಬಾಗಿಲಂ ತೆಱ್‌ದ ಮಾಱ್ಕೆಯೊಳಿರ್ದುವು ಬಂದ ಮಾವುಗಳ್ (ಅದಿಪು. ೦-೬೬); ಅವಿರಳಮಾದುವಾ ಪುರದೊಳ್ . . . ತೀವುವ ಕಲಶಂಗಳರ್ಚಿಸುವ ಕನ್ನಡಿ ಬರ್ಚಿಸಿಕೊಳ್ವ ಪೆಂಡಿರಾಡುವ ರಸಲಾಸ್ಯಂ (ಅನಂಪು. ೩-೯).
[<ಬಚ್ಚಣೆ₁ + – ಇಸು₃]

ಬಚ್ಚು₁ 'ಬಯ್ಚು' ನೋ.

ಬಚ್ಚು₂, ಬರ್ಚು, ಬೊಚ್ಚು₂ (ಕ್ರಿ). ೧. ಒಣಗಂ ; ಬತ್ತು ; ಬಾಡು : ಬೂದಿಯಲ್ಲಿ ಹೊರಳುವ ಕತ್ತೆಯಂತೆ ಕಿಚ್ಚ ಹಾಯಿ [ಯು] ವವಳಂತೆ ಬಚ್ಚಿ ಹೊತ್ತಿನ ಭೋಗಕ್ಕೆ ಮಚ್ಚಿ ಹುಚ್ಚಾದಿರಲ್ಲಾ (ಸಿದ್ಧೇಪ. ೦೩೩-೯೦೦) ಬೆಚ್ಚು ಹಾಕಿದ ಗಡಗಿ ಮುಚ್ಚಿಟ್ಟು ಬನಹುಲುಸು ಬಚ್ಚಾದ ಬೆಳೆಯ ಕಣವುಕ್ಕಿ ಗುಂಡಯ್ಯ ಹೆಚ್ಚಾಯ್ತು ನಿನ್ನ ಶಿವಭಕ್ತಿ (ಕನ್ನಣಾ. ೩೦೯). ೨. ಕೃಶವಾಗು ; ಸೊರಗು : ತಿಂಗಳೊಂದಾಯಿತು ನನ್ನ ಗಂಡು ಬಚ್ಚಿ, ಒಣಗಿ, ಕಡ್ಡಿಯಾಗಿ ಕಂಗಾಲು (ಜಾರುದಾ. ೦೨೩); ಹೊತ್ತಿಗೆ ಒಂದೊಂದು ತಂಬಿಗೆ ಕೊಡುತ್ತಿದ್ದಳು ಭಾಗೀರಥಿ. ಈಗ ಬಚ್ಚಿದೆ. ಅದಾದರೂ ಏನು ಕೊಟ್ಟೀತು ! (ಜಾಳಗಿ. ೨೦). ೩. ಬರಿದಾಗು ; ಬೋಳಾಗು : 'ಬಚ್ಚು ಬಾಯಿ' ಪರಾ. **Δ ಬರ್ಚು** : ೪. ಕಡವೆಯಾಗು ; ಕುಗ್ಗು : ಪೆರ್ಚುವುದು ಪುಳ್ಳಿಯಿಂದಂ ಬರ್ಚುವುದದು ಕುಂದೆ ಕಿರ್ಚು ಮೋಹಾಗ್ನಿ ಕರಂ ಪೆರ್ಚುವುದರ್ಥಂ ಬರೆಯುಂ ಪೆರ್ಚುವುದದು ಬಾರದಿರೆಯುಂ (ಜೀವಸಂ. ೯೯-೦೯). ೫. (ಆಲಂ) ನಾಶಮಾಡು ; ನಿಸ್ಸತ್ತ್ವಗೊಳಿಸು : ಜವನ ಮುಳಿಸವನ ಮುಳಿಸೆನೆ ಜವನೇ ಬರ್ಚಿದವೊಲಿಂತು ಕುಱಿದಱಿದಱಿದಂ (ಗದಾಯು. ೩-೦೭); ಪಾಂಡವಪತಾಕಿನಿಗೆ ಜವಂ ನೆಱ್ ಬರ್ಚಿದಂತೆ ಭೋರನೆ ಬಂದು . . . ಬಾಂದೊಱ್‌ಯ ಸುತನೊಡ್ಡಿ ನಿಲೆ (ಪೇಪಿಪು. ೦೨-೯೯ ಪ). **ಬೊಚ್ಚು₂** : ೩. 'ಬೊಚ್ಚು ಬಾಯಿ' ಪರಾ.

ಬಚ್ಚಿ ಬರು = ಸೊರಗು ; ಕೃಶವಾಗು : ಹೆತ್ತವರು ಒಂದು ವರ್ಷದೊಳಗಾಗಿ ಸತ್ತುಹೋದರೆಂಬ ವ್ಯಥೆಯಿಂದ ವಾಗ್ದೇವಿಯು ಬಚ್ಚಿ ಬಂದಳು (ವಾಗ್ದೇವಿ. ೦೯೦). 'ಬತ್ತು₁' ಪರಾ. [ದೇ. ॥ ತುಳು. ಬಚ್ಚು]

ಬಚ್ಚು₃ (ನಾ). (ಮರ, ಗಿಡ ಮುಂತಾದುವು) ಬತ್ತಿ ಹೋಗಿರುವುದು ; ಒಣಗಿರುವುದು : ಒಂದು ಈಚಲು ಬಚ್ಚು ತೇಲಿಕೊಂಡು ಹೋಗುತ್ತಿತ್ತು (ಪಸ್ಮೂರು. ೦೯೦). [< ಬಚ್ಚು₂]

ಬಚ್ಚು₄ (ನಾ). ಕೋಟೆಕಾಳಗದಲ್ಲಿ ಬಳಸುವ ಒಂದು ಬಗೆಯ ಯಂತ್ರವಿಶೇಷ (?) : ವಿಚಿತ್ರವಾದ ಕೊತ್ತಲಗಳುಳ್ಳ ಕೋಟೆಗಳು ಫಿರಂಗಿಗಳು ಬಚ್ಚುಗಳು ಜವರುಜಂಗಿಗಳು . . . ಮೊದಲಾದ ಯಂತ್ರ ವಿಶೇಷಗಳು (ಕೃಪಾಲ. ೦೬೯). [?]

ಬಚ್ಚುಬಾಯಿ, ಬೊಚ್ಚುಬಾಯಿ (ನಾ). ಹಲ್ಲಿಲ್ಲದೆ ಬರಿದಾದ ಬಾಯಿ ; ಬೋಡುಬಾಯಿ : ಕುಂಟುಕಾಲು, ಬಚ್ಚುಬಾಯಿ (ಕವಿಸೋ. ೬೦-೭). **ಬೊಚ್ಚುಬಾಯಿ** : ಆಕೆಯ ಬೊಚ್ಚುಬಾಯಿ ಏನನ್ನೋ ಹೇಳಲು ವ್ಯಾಕುಲಿತವಾಗಿದ್ದಿತು (ಬಾಜಲ. ೩) : ಬೊಚ್ಚುಬಾಯಿ ಆದವನು ಕಬ್ಬು ಬಯಸಿದ ಹಾಗೆ (ಗಾರೆ). [ಬಚ್ಚು₂ + ಬಾಯಿ₁ (< ಬಾಯ್)]

ಬಚ್ಚೆ₁, ಪಚ್ಚೆ₃ (ಗು). ೧. ಬರಡಾದ ; ಗೊಡ್ಡಾದ : 'ಬಚ್ಚೆವೆಣ್' ಪರಾ. (ನಾ). ೨. ವ್ಯರ್ಥವಾದುದು ; ಹಾಳಾದುದು : "ಬಚ್ಚೆಯೆನಲ್ ಕೆಟ್ಟುದು" (ಕಸುಪಿ. ೩೨). **ಪಚ್ಚೆ₃** : ೧. 'ಪಚ್ಚೆವೆಣ್' ಪರಾ. ೩. ಮಕ್ಕಳಾಗದವಳು ; ಬಂಜೆ : "ಪಚ್ಚೆ ಬಂಜೆಯೆನೆ ವಂಧ್ಯಾಖಂ" (ಕವಿಕಂ. ೦೩೯).

ಬಚ್ಚೆಬಱುಗ = ಅಪ್ರಯೋಜಕ ; ನಿರುಪಯೋಗಿ : ಸಾಸಿರಾಬ್ಜ [ಬ್ದ] ದ ಬಚ್ಚೆಬಱುಗನೊ ಪನ್ನೆರಳ್ವರುಷದ ಸುಧೀಷಣನೊ (ಸುಧೇಪು. ೩-೬). **ಬಚ್ಚೆಯಾಗು** = ಇಲ್ಲವಾಗು ; ಹಾಳಾಗು ; ನಾಶವಾಗು : ಮನೆಯೊಳೆಲ್ಲಂ ಮನೆಯೊಳುಂ ಮಾಯವಾಗುತಿರೆ ನೆನೆದುದೆಲ್ಲಂ ನೆನಹಿನೊಳ್ ಬಚ್ಚೆಯಾಗುತಿರೆ (ಕಂಡೇರ. ಹ. ೦೩೬-೯); ಎರಡಱ ಮನೋ ಮಲಿನ ಹೋಯಿತ್ತು ಕರಿಗೊಂಡು ಹುರುಡು ಮುರುಟಿತ್ತು ಮುನಿಸನು ಗೆಟ್ಟುದುಗ್ರಮತ್ಸರ ಬಚ್ಚೆಯಾಯ್ತು (ಪಕಳಾ. ೦೯-೧೯); ಮದನವಿಕಾರ ಮೊರ್ಮೊದಲೆ ಸಾರ್ಚೆ ಶಕುಂತಳೆಗಿಚ್ಚೆ ಬಚ್ಚೆಯಾದುದು (ಸೂಕ್ತಿಸು. ೦೩-೩೩).
[< ಬಂಜೆ]

ಬಚ್ಚೆ₂ (ನಾ). ಒಂದು ನಾಡಿನ ಹೆಸರು : ಕಾವ್ಯಕ್ಕೆ ತಾನಿತ್ತಂ ಶಾಸನ ದಗ್ರಹಾರಂ ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮ ಭಂಡಾರದಂತೆ ಸಾರಮಾದುದು ಬಿಟ್ಟಗ್ರಹಾರಮಾ ಬಚ್ಚೆ [ಜಾಕಾಂ.

ಚಚ್ಚೆ, ಚರ್ಚೆ] ಸಾಸಿರದೊಳಂ ಧರ್ಮವುರಂ (ಸಂಪಣಾ. ೦೪-೩೬) ; "ಬಚ್ಚೆಸಾಸಿರದೊಳಂ – ಆ ಬಚ್ಚೆಸಾವಿರ ಎಂಬ ನಾಡಿನಲ್ಲಿಯೂ . . . ಬಚ್ಚೆಸಾಸಿರ : ಇದೊಂದು ನಾಡಿನ ಹೆಸರು. ಜಿನವಲ್ಲಭ ಗಂಗಾಧರನ ಶಾಸನದಲ್ಲಿ "ಸಬ್ಬಿನಾಡ ನಟ್ಟನಡುವಣ ಧರ್ಮಪುರ ದುತ್ತರದಿಗ್ಭಾಗದ ವೃಷಭಗಿರಿ" ಎಂಬಲ್ಲಿ ನಾಡಿನ ಹೆಸರು ಸಬ್ಬಿ ಎಂದು ಕಾಣುತ್ತದೆ. ಇದು ಸಬ್ಬಿಸಹಸ್ರನಾಡಾಗಿರಬೇಕು. ಬಚ್ಚೆ ಸಾಸಿರ ಸರಿಯಾದ ಹೆಸರಲ್ಲವೆಂದೂ "ಸಬ್ಬಿಸಾಸಿರ"ಎಂಬುದು ಸರಿ ಯಾದುದೆಂದೂ ಹೇಳಬಹುದಾಗಿದೆ" (ಸಂಪದೀ. ೩೭೬). [?]

ಬಚ್ಚೆಗ (ನಾ). ಮಕ್ಕಳನ್ನು ಪಡೆಯಲಾರದವನು ; ನಪುಂಸಕ : ಮೆಚ್ಚಿದೆನು ಮೆಚ್ಚಿದೆನಿನ್ನು ಮನ ಮೆಚ್ಚಿನರಕೆಯನುಸುರೆನಲ್ಕಂಗಿಚ್ಚನಡಿ ಗೆದ್ದೆಱಗಿ ನತಸಂತಾನ ಸಂತಾನ ಬ[ಶಾಕಾಂ. ಬಿ]ಚ್ಚೆಗನುಮಿವನೆಂಬ ನುಡಿಯಂ ಬಿಚ್ಚೆಯೆನಿಸೆನೆ (ಪುರೇಪು. ೩-೬). [ಬಚ್ಚೆ$_1$ + – ಗ$_2$]

ಬಚ್ಚೆವೆಣ್, ಪಚ್ಚೆವೆಣ್ (ನಾ). ಮಕ್ಕಳಾಗದವಳು ; ಬಂಜೆ : "ಬ[ಶಾಕಾಂ. ಪ]ಚ್ಚೆವೆಣ್ಣಂ ಬಂಜೆ" (ಕಬ್ಬಿಕ್ಕ. ೨೭.). **ಪಚ್ಚೆವೆಣ್** : "ಪಚ್ಚೆವೆಣ್ಣೆಂದು ಬಂಜೆ" (ಕಕಸಾ. ೬೨-೩೭೫) ; "ಪಚ್ಚೆವೆಣ್ ಬಂಜೆಯೆ ನಿಸುಗು" (ಕಬ್ಬಿಕುಂ. ೭೪). [ಬಚ್ಚೆ$_1$ + ವೆಣ್]

ಬಚ್ಚೆವೋಗು (ಕ್ರಿ). ವ್ಯರ್ಥವಾಗು; ಹಾಳಾಗು; ನಾಶವಾಗು : ಬಚ್ಚೆ ವೋಗದ ರಾಮಬಾಣಂಗಳಂ ನಡುವೆ ನುಚ್ಚುನೂಱಾಗೆ ಕತ್ತರಿಸಿ (ಕೈಬಿಕಾ. ೨೦-೩೪). [ಬಚ್ಚೆ$_1$ + ವೋಗು$_1$ (< ವೋ$_1$)]

ಬಚ್ಚೋಡಿಮೈ (ನಾ). (?) : ಕೆಂಪಿನ ಸೀರೆ, ಬಿಳಿಯ ಸೀರೆ, ಇವು ಕೆಡುವುದಕ್ಕೆ—ಬಿಳಿದಾಸಾಳದ ಹೂ ಕೆಂಪಿನ ದಾಸಾಳದ ಹೂ ಕರಿಹತ್ತಿಯ ಹೂ ಈ ಎಳಗಾಯಿ ಇವಂ ನೀರಲ್ಲಿ ಕುದಿಸಿ ಕೈಯಲ್ಲಿ ಕಿವಿಚಿ ನೀರ ಬಸಿದು ಕೊಂಡು ಬಿಳಿಯ ವಸ್ತ್ರವ ಸುಟ್ಟು ಕರಿಯ ಹಾಕಿ ಗೋಪಿಚಂದನ ಸಹ ಹಾಕಿ ಕದಡಿ ಬಚ್ಚೋಡಿಮೈಯವಳಿಗೆ ಒಂದು ಬಟ್ಟಲು × × × ಮೈಯೊಳಗೆ ಅರೆಬಟ್ಟಲು ಮೇರೆಯಲ್ಲಿ ಎಂಟುದಿನ ಕುಡಿಯ ಕೊಡಲು ಕೆಂಪಿನ ಸೀರೆ ಬಿಳಿಸೀರೆ ಕೆಡುವುದು ಸಹ ಮಾಣ್ಗುಂ (ಸಕಸ್ಕ. ೦೯೪).

[ಬಚ್ಚೋಡಿ$_?$ + ಮೈ (< ಮೆಯ್$_2$)]

ಬಚ್ಚಾಳಿ 'ಬಚ್ಚಾಳಿ' ನೋ.

ಬಜಂತ್ರಿ 'ಬಾಜಂತ್ರಿ' ನೋ.

ಬಜರಂಗಬಲಿ (ನಾ). ಹನುಮಂತ; ಆಂಜನೇಯ; ಮಾರುತಿ : ಬಜರಂಗಬಲಿಯ ಮೂರ್ತಿಯನ್ನೂ ಕುಸ್ತಿಮಲ್ಲರ ಚಿತ್ರಗಳನ್ನೂ ಅವನು ತನ್ನ ಗೋಡೆ ಮುಚ್ಚಲು ಮಾತ್ರ ಇಟ್ಟಿಲ್ಲ (ಕೇಕಸ್ಕ. ೭೨).

[← ಹಿಂ. ಮರಾ. ಬಜರಂಗಬಲೀ. / ಸಂ. ವಜ್ರಾಂಗಬಲಿನ್]

ಬಜಾಯಿ (ನಾ). ಒಂದು ಬಗೆಯ ಚರ್ಮವಾದ್ಯ : 'ಬಜಾಯಿಆನೆ' ಪರಾ. 'ಬಾಜಾ' ಹೋ. [← ಹಿಂ. ಮರಾ. ಬಾಜಾ]

ಬಜಾಯಿಆನೆ (ನಾ). ಬಜಾಯಿ ಮಂತಾದ ವಾದ್ಯಗಳನ್ನು ಹೊತ್ತು ಕೊಂಡು ಹೋಗುವ ಆನೆ : ೧೦೦೦ ನಿಶಾನೆಆನೆಗಳೂ ೨೦೦೦ ಬಜಾಯಿ ಆನೆಗಳೂ ಇದ್ದುವು (ಇಶ್ಕರು. ೦೩). 'ನಿಶಾನೆಆನೆ' ಪರಾ.

[ಬಜಾಯಿ + ಆನೆ$_1$]

ಬಜಾಯಿಸು (ಕ್ರಿ). ೧. ವಾದ್ಯವನ್ನು (ಜೋರಾಗಿ) ಬಾರಿಸು, – ನುಡಿಸು : ವಾದ್ಯಗಾರರು ಭಯಂಕರವಾಗಿ ವಾದ್ಯವನ್ನು ಪೂರೈಸಿ ಡೋಲು ಬಜಾಯಿಸುತ್ತಾರೆ (ಗರುಡಾ. ೬೦). ೨. ಕಟ್ಟುನಿಟ್ಟಾಗಿ ಹೇಳು ; ಅಪ್ಪಣೆ ಮಾಡು : ಮಿಟಾದೋಲೆಕಾರರ್ ಭೀಮಗೆ ದಾಟು ದಾಟು ಬಜಾಯಿಸುವರಿಲ್ಲ (ಕರ್ಣಾಕಾ. ೦೭); ಮನ್ಯಾಗ ಆ ಮೂಳಗೋಳಿಗೆ ಸಲಗೀ ಕೊಡಬ್ಯಾಡಾ ಸಲಗೀ ನಾಯಿ ತಲೀಗೇರ್ಯಾವು ಎಂದು ಬಜಾಯಿಸಿದ್ದರು (ಹೂಂಬಿರು. ೨೨). ೩. ಜಾರಿಮಾಡು ; ಚಲಾಯಿಸು : ಇನ್ನೂ ಒಂದು ಹೊಸ ಚಾಳಿಯು ಇವರಿಗೆ ಇತ್ತಿತ್ತ ಅಂಟಿತ್ತು. ಏನೂ ಕಾರಣವಿಲ್ಲದೇ ಉಳಿದವರ ಮೇಲೆ ಅಧಿಕಾರ ಚಲಾಯಿಸುವುದು (ಮೂರುಡಾ. ೭೦); ರಂಗಕ್ಕ ಯಜಮಾನರಿಗೆ ಸಕ್ತಮನಾಯಿ ಹುಕುಂ ಬಜಾಯಿಸಿದರು (ದೀಪಶ. II. ೩೦೩). [ಬಜಾವಣೆ + – ಇಸು$_3$]

ಬಜಾರ್ 'ಬಾಜಾರ' ನೋ.

ಬಜಾರ 'ಬಾಜಾರ' ನೋ.

ಬಜಾರಿ 'ಬಾಜಾರಿ' ನೋ.

ಬಜಾರು 'ಬಾಜಾರ' ನೋ.

ಬಜಾವಣೆ, ಬಾಜವಣೆ (ನಾ). ೧. ಚರ್ಮವಾದ್ಯ ಮೊದಲಾದುವು ಗಳನ್ನು ಬಾರಿಸುವಿಕೆ : ತಾಳಮಾನ ಸರಿಸವನಱಿಯೆ ಓಜೆಬಜಾವಣೆ [ಶಾಕಾಂ. ಣ]ಯ ಲೆಕ್ಕವನಱಿಯೆ (ಐಸಪ. ೪೪೪) ; ಮಾಳಿಗೆಯೊಳಗಣ ಸೊಡರ್ಗುಡಿ ಡಾಳಂಬಡೆದಂತೆ ರಂಗರಕ್ತೆಯೊಳಮರ್ದುಂ ಪಾಳಿಕೆವಡೆದು ಬಜಾವಣೆ ಮಾಳವಸಿರಿಯೆಂಬ ರಾಗಮಂ ಚಾಳಿಸಿದಂ (ಯಶೋಕ. ೨-೩೦); ಕಾಯೆ ಬಜಾವಣೆ ಗಮಕವೆಸೆಯೆ ಪಾಡಲಾಯತವಾದರು ಕೂಡೆ (ಕರಸ. ೩-೩೬). ೨. ಕಾಯದೆ ಮೊದಲಾದುವುಗಳನ್ನು ಜಾರಿ ಮಾಡು ವುದು, – ಚಲಾವಣೆ ಮಾಡುವುದು : ಅಮೃತದ ಬಟ್ಟಲಿರುವ ತಟ್ಟೆ ಯಲ್ಲಿ ಟೆಂಗಿನ ಸೂಟ್ಟೆ ಸೇರಿಸಿದಂತಾಗುವುದೆಂದು ಬಜಾಯಿಸಿದ್ದಾನೆ. ಆದರೆ ಈ ಬಜಾವಣೆ ತಿಳಿದವರಿಗೆ ಮಾತ್ರ (ಮಸಾಹಿ. ೨೩). **ಬಾಜವಣೆ** : ೧. ಚಂಡೆಮದ್ದಳೆಗಳ ಬಾಜವಣೆಯಲ್ಲಿ ಕೈ ನುರಿತ ಮೇಳಗಾರರೂ ನಮ್ಮಲ್ಲಿದ್ದರು (ಪಾರ್ತಿಸು. ೪೪).

[←ಮರಾ. ಬಜಾವಣೇ, ಬಜಾವಿಣೇ = ವಾದ್ಯವನ್ನು ಬಾರಿಸು, ಕಾಯದೆಯನ್ನು ಜಾರಿಗೆ ತರು]

ಬಜೆ (ನಾ). ಕಟುವಾದ ವಾಸನೆಯುಳ್ಳ ಒಂದು ಬಗೆಯ ಸಸ್ಯ ಮತ್ತು ಉಪಯುಕ್ತ ಔಷಧೀಯ ಗುಣವುಳ್ಳ ಅದರ ಬೇರು ; ಉಗ್ರಗಂಧಿ : "ಉಗ್ರಗಂಧಿಯೆನೆ ವಜೆ ಬಜೆಯೆ [ಶಾಕಾಂ. ವಚೆಯೆಂದೆ] ನಿಕ್ಕುಂ" (ಮಂಗರಾ. ೪೦-೩೪) ; ಬಜೆ ಸಂವರ್ಚಲ ಹಿಂಗತಿಬಜೆ ಕೊಡಸಿಗೆಯೆಂಬಿವಿನಿತುಮಂ ಕುಡಿಯಿಸಲುಷ್ಣಜಲಾನ್ವಿತಮದು ಕಿಡಿಸುಗು ಮಜಸ್ರಮೆನೆ ನಡೆವ ನುಣ್ಬುಮಂ ನೆತ್ತರುಮಂ (ಲೋಕೋಪ. ೯-೦೨೦) ; ಒಡೆಯ ಚಿತ್ತೈಸೊಂದೆ ಪೆಟ್ಟಿಗೆ ಕುಡಿದ ಬಜೆಯನು ಕಾರಿಸುವೆ (ಸಾಳ್ವಭಾ. ೨೨-೬೬); ಬಜೆ . . . ಇದು ಜವುಗುಪ್ರದೇಶದಲ್ಲಿ ಬೆಳೆಯು ತ್ತದೆ. ಇದಕ್ಕೆ ಗುಪ್ತಕಾಂಡವಿದೆ. ಮಕ್ಕಳ ಅಜೀರ್ಣಕ್ಕೂ ಅತಿಸಾರಕ್ಕೂ ಇದರ ಬೇರಿನ ಕಷಾಯವನ್ನು ಉಪಯೋಗಿಸುತ್ತಾರೆ (ಸಸ್ಯಕಾ. ೦೩೬). 'ಅತಿಬಜೆ' ಪರಾ.

ಬಜೆಬೆಣ್ಣೆ = ತೇದ ಬಜೆ ಮತ್ತು ಬೆಣ್ಣೆಗಳ ಮಿಶ್ರಣ ; ಇ ವಿಶೇಷವಾದ ಔಷಧೀಯಗುಣವುಳ್ಳ ಈ ಮಿಶ್ರಣವನ್ನು ಎಳೆಯ ಮಕ್ಕಳಿಗೆ ತಿನ್ನಿಸುವ ವಾಡಿಕೆ ಇದೆ : ತೊಟ್ಟಿಲೊಳ್ ವಿಷ್ಣುವಂ ಮಲಗಿಸಿದಳಿಕ್ಕಿ ಬಜೆಬೆಣ್ಣೆಯಂ ಸುರಕೋಟಿ ಕೈಮುಗಿವೊಲು (ಕರಸು. ೦೩-೪೩); ಸ್ವಧರ್ಮದ್ರೋಹಿಯ ಮುಖವು ಕಾಣಬರುತ್ತಲೇ ಪ್ರತಾಪನಿಗೆ ಹುಟ್ಟಿದಾಗ ಇಟ್ಟಿದ್ದ ಬಜೆಬೆಣ್ಣೆಯು ಕೂಡ ತೊಳಸಿ ಕೊಂಡು ಮೇಲಕ್ಕೆ ಬಂದದ್ದರಿಂದ ಒಡನೆ ಅವನು ತನ್ನ ಬರ್ಚಿಯನ್ನು ಗುರಿಯಿಟ್ಟೆಸೆದನು (ಕಸ್ಕೋಡಿ. ೦೪೬). [<ಸಂ. ವಚಾ./ತಮಿ. ವಚಮ್, ವಚಮ್ಬು ; ಮಲ. ವಯಮ್ಬು ; ತುಳು. ಬಜೆ; ತೆಲು. ವಚ, ವಸ]

ಬಜೆ$_2$ 'ಭಜೆ' ನೋ.

ಬಜೆಕರಕು 'ಬಜೆಕರುಕು' ನೋ.

ಬಜೆಕರುಕು, ಬಜೆಕರಕು (ನಾ). ಬಜೆಯನ್ನು ಸುಟ್ಟು ಮಾಡಿದ ಪುಡಿ (?) : ಪರ್ಪಾಟಕ, ಬಜೆಕರುಕು . . .ಕಷಾಯ ಹಾಕಿ ಕೊಡಲು. . .ಸಕಲ

ಜ್ವರಗಳೂ ನಿಲ್ಲುವುವು (ಸಳಸ್ಯ. ೦೦೦.). ಬಜೆಕರಕು : ರೇಣುಕೆ, ಗಲಜರವೇರು, ಬಜೆಕರಕು, ಜಟಾಮಾಂಸಿ . . . ಇವಂ ಕಷಾಯಂ ಕಾಯಿಸಿ ಕೊಟ್ಟರೆ ವಾತಜ್ವರಂ ಕೆಡುಗುಂ (ಸಳಸ್ಯ.೬೯).

[ಬಜೆ$_1$ + ಕರುಕು$_1$ < ಕರಿಂಕು]

ಬಜೆಟ್ 'ಬಜೆಟ್ಟು' ನೋ.

ಬಜೆಟ್ಟು, ಬಜೆಟ್ (ನಾ). ವಾರ್ಷಿಕ ಆಯವ್ಯಯದ ಅಂದಾಜುಪಟ್ಟಿ : ಅಧ್ಯಯನತಂಡಗಳು ಸಾಮಾನ್ಯವಾಗಿ ತಮ್ಮದೇ ಆದ ಬಜೆಟ್ಟು (Budgets)ಗಳನ್ನೂ . . . ಹೊಂದಿರುವ ಸ್ವತಂತ್ರ ಅಂತರಸರ್ಕಾರಿ ಸಂಸ್ಥೆಗಳಾಗಿವೆ (ಅಂಪಸಂ. ೦೯೦). ಬಜೆಟ್ : ಆಯವ್ಯಯಪತ್ರ, ಮುಂಗಡಪತ್ರ, ಬಜೆಟ್ (Budget. ಪತ್ರಿಕಿ. ೦೦). [←ಇಂ. Budget]

ಬಜ್ಜರ (ನಾ). ೧. ನವರತ್ನಗಳಲ್ಲಿ ಒಂದು; ವಜ್ರ ; ಹೀರ : "ಬಜ್ಜರಮೆಂದು ವಜ್ರಂ" (ಕಸಾ. ೩೦-೬೦); ನಿಡಿದಾದ ದಾಹುಬಳ ಮುನ್ಮದಸಿಂಧುರಕಂಧರಕ್ಕೆ ಬಜ್ಜರದಮಳ್ಗಂಬಮಾದ ತೊಡೆ . . . ಜಗದೊಳ್ಳೆಱಗುಂ ನೃಪೇಂದ್ರನಾ (ಅಸಂಪು. ೨-೨); ಎಳೆಮುತ್ತಿನಂತೆ ಮೈವಣ್ಣ ಬಜ್ಜರದಂತೆ ಸುಲಿವಲ್ಲ ಪಂಕ್ತಿ . . . ನವೀನಪ್ರವಾಳದಂತೆ ಪೊಳೆವ ಪದತಳವೊಪ್ಪೆ (ಸೌಂದಪು. ೦೨-೬); ಪಳಿಕಿನಱಿಯ ಭಿತ್ತಿಯಿಂ, ಬಜ್ಜರದ ಜಂತೆಯಿಂ . . . ಮದನಗೈಯ ಬಾಗಿಲ್ವಾಡದ ಸಿಂಗರದೊಂದು ದೇಗುಲಂ ಕಣ್ಗೆಡ್ಡಮಾಗಿ ರಂಜಿಕುಂ (ರಾಮಾಶ್ವ. ೩೯-೨೦). ೨. ಇಂದ್ರನ ಆಯುಧ : ವಜ್ರಾಯುಧ : "ಬಜ್ಜರಮೆಂದು ವಜ್ರಾಯುಧಂ" (ಕಸಾ.೯೬-೨೦); ಅಲರ್ವಿಲ್ಲಿಲ್ಲದಂಗಜನಂತೆ ಬಜ್ಜರದಲಗಿಲ್ಲದಮರೇಂದ್ರನಂತೆ ಕಲೆಯಿಲ್ಲದಿಂದುವಿನಂತಲ್ಲಿಗೆಯ್ತಂದನಲಘುವಿಕ್ರಮ ರಾಮನಾಥ (ಕುರಾಸಾಂ. ೨೦-೦೦೩). [<ಸಂ. ವಜ್ರ]

ಬಜ್ಜರಕವಾಟ(ನಾ). ವಜ್ರದ ಬಾಗಿಲು,—ದ್ವಾರ : ವಿವಿಧತರಚಿತ್ರಿತದ ಬಜ್ಜರಕವಾಟದಿಂ . . . ಶಿವನಿರ್ಪ ಲೋಕ ಜ್ಯೋತಿರ್ಲೋಕಮೆರಡನೀ ಲವಲವಿಕೆ ಧಿಕ್ಕರಿಸುತಿದೆ (ಪಂಕಾರಾ. ೩-೨-೩). [ಬಜ್ಜರ + ಕವಾಟ]

ಬಜ್ಜರಕೇರಿ (ನಾ). ವಜ್ರದ ಮಾರಾಟ ಮಾಡುವ ಬೀದಿ : ಸಾಲುಮನೆಗಳ ಕೇರಿ ಪವಳ ಬಜ್ಜರಕೇರಿ (ಸಿದ್ಧಕಾ. ೦೩-೩೩). [ಬಜ್ಜರ + ಕೇರಿ]

ಬಜ್ಜರಗಂಬ (ನಾ). ವಜ್ರದ ಕಂಬ,—ಸ್ತಂಭ : ಬಜ್ಜರಗಂಬಮಿಂದ್ರ ನೀಲದ ತೊಲೆ (ರೇಪಂ. ೦೩-೦೩); ನಿಮಿರ್ಚಿದ ಬಜ್ಜರಗಂಬ[ಹಾಕಾಂ. ಭ] ಮಿಂಬುಗೊಂಡುತ್ತಮನೀಲಪುತ್ರಿಕೆ ವಿರಜಿತಮಾಯ್ತು ವಿವಾಹ ಗೇಹದೊಳ್(ರಾಜಶೇ. ೬-೨). [ಬಜ್ಜರ + ಕಂಬ$_1$ (< ಕಂಭ)]

ಬಜ್ಜರದುಂಬಿ (ನಾ). ವಜ್ರದಷ್ಟು ಕಠಿಣವಾದ ಮೂತಿಯನ್ನು ಹೊಂದಿರುವ ತುಂಬಿ,—ಭ್ರಮರ : ಶಿವನ ನಿರ್ಮಾಲ್ಯವಜ್ಞಾನದಿಂದ ನಾಕವತಿ ಕರಿಯ ಮಸ್ತಕಕ್ಕೆ ಹಾಕಲು ಪೂವಿನಾ ಕಂಪಿಗೆಱಗೆ ಬಜ್ಜರದುಂಬಿಗಳು ತಾಳದಾ ಕುಸುಮಮಾಲೆಯನು ತೆಗೆದು ನೆಲಕಿಕ್ಕಿ ಕಾಲಿಂದೊರ ಸುತಿರಲುಮದನು (ರಾಶಿಕ. ೦೨-೯೩). [ಬಜ್ಜರ + ತುಂಬಿ$_1$]

ಬಜ್ಜರವಂಕಿ (ನಾ). ವಜ್ರದ ವಂಕಿ; ತೋಳುಬಂದಿ : ಕುಟಿಸುಟಿವೊರ್ಕುಟಿರ್ಕೊಳಿಸಿ ಸುತ್ತಿದ ಪಟ್ಟೆಯ ದಟ್ಟಿ ಪಕ್ಕಮಂ ಕೆಳೆಗೊಳೆ ಸೆಕ್ಕಿದೊತ್ತರದ ಬಜ್ಜರವಂಕಿ ತೊಡಂಕು ಸೊನ್ನೆನೂಲ್ ತಳತಳೆನಿಪ್ಪ ಸಣ್ಣಪೊಸ ಪೊನ್ನುಡೆ ಬಿಣ್ದೊಡೆ ಬಿಂಕವೆತ್ತ ಮೆಲ್ದಳಿರಡಿಕೆಂದಳಂ ತೊಳಗುಗೆನ್ನೆರ್ದೆಯೊಳ್ ಯದುಶೈಲನಾಥನಾ (ಪಕಪಿ. ೩-೯೦). [ಬಜ್ಜರ + ವಂಕಿ]

ಬಜ್ಜರವಸರ (ನಾ). ವಜ್ರಗಳನ್ನು ಮಾರುವ ಅಂಗಡಿ: ದೆಸೆಗಳ್ ನಿಜಾಂಶುವಿಂ ರಂಜಿಸುತಿರೆ ಪುಂಜಿಸಿದ ಪೊನ್ನ ಪುಂಜಿಕೆಯಿಂದಂ ಕೊಸಗಿನ ಮರದುಱುಗಲರಲ್ದೆಸವಂತೆಸೆದಿರ್ಪುದಲ್ಲಿ ಬಜ್ಜರವಸರಂ (ಜಗಪಿ. ೯-೦೦೭).

[ಬಜ್ಜರ + ಪಸರ]

ಬಜ್ಜರಿ (ನಾ). (?) : ಪದೆದೊದವೆ ವೀರಸಿರಿಯಪ್ಪದ ತೋಳ್ಸುತ್ತೆನಿಪ ರನ್ನವಟ್ಟೆಯ ರುಕ್ಪುಂಜದ ಮಂಜರಿವೊಲ್ ರಂಜಿಸಿದುದು ಪೊನ್ನಾಯುಗದ ಪೊನ್ನ ಬಜ್ಜರಿ ಕಟಿಯೊಳ್ (ಅಸಂಪು. ೬-೩೦). [?]

ಬಜ್ಜರೋದಕ (ನಾ). ವಜ್ರದ ಕಾಂತಿ : ದಂತಿಕುಂಭವ ವಿದಾರಿಸಿ ಸೂಸಿಹ ಮುತ್ತು ತತ್ತಳಿರ್ದಾವವು ಬಜ್ಜರೋದಕಮೆ ಪುಷ್ಪಸರಂ ಸುರಗಿರಿಯಗ್ರಶೃಂಗಗಳ್ ತೀವಿದ ಕೋಡಾಗೆಸೆಯೆ ಮಾಮರಮದ್ರಿಯವೊಲ್ವಿ ರಾಜಿಕುಂ (ಪ್ರಶಂಪು. ೩-೨೬). [ಬಜ್ಜರ + ಉದಕ$_2$]

ಬಜ್ಜಿ$_1$ (ನಾ). ಬದನೆಕಾಯಿ ಮೊದಲಾದ ತರಕಾರಿಗಳನ್ನು ಸುಟ್ಟು ಅಥವಾ ಬೇಯಿಸಿ, ಸೌತೆಕಾಯಿ, ಕ್ಯಾರೆಟ್, ಟೊಮ್ಯಾಟೋ ಮೊದಲಾದ ತರಕಾರಿಗಳನ್ನು ಹಸಿಯಾಗಿ ಮೊಸರಿನೊಂದಿಗೆ ಸೇರಿಸಿ, ಒಗ್ಗರಿಸಿ ಮಾಡುವ ಒಂದು ಬಗೆಯ ವ್ಯಂಜನ : ಕೆಲವಕ್ಕೆ ಬದನೆಯ ಬಜ್ಜಿ ಕೆಲವಕ್ಕೆ ಕತ್ತರಿಸಿದೆಳೆಕೀರೆ ಚಿಲುಕೆ (ಸೂಪಶಾ. ೯-೨೦); ಗೋದುವೆಯ ಸಜ್ಜಿಗೆದೆಗೆದೆಳೆವಳುಕಿನಲೊಪ್ಪುವ ಕಜ್ಜಾಯಕೆ ವೃಂತಾಕದ ಸೊಬಗಿನ ಬಜ್ಜಿಯ ಮುಖಾಖಿಳಶಾಖಾಮೃತಗಳ ನೀಡಿದರಬಲೆಯರು (ಮರೇಪು. ೦೯-೩೭); ಮರಿಚೇಲಕ್ಕೀರುಳ್ಳಿಯು ಕರಿಬೇವುಂ ಕಾರಗೆಣಸು ಕೊತ್ತಂಬರಿಯೊಪ್ಪರುತಿಹ ಕ್ಷೀರಂ ತಿಂತ್ರಿಣಿವೆರಸಿದ ವಾರ್ತಾಕ ಬಜ್ಜಿಯಮರರ್ಗುಂಟೇ (ಪೀಕಿಸಾ. ೬೫೦). [ದೇ.॥ ತುಳು. ತೆಲು. ಬಜ್ಜಿ]

ಬಜ್ಜಿ$_2$ 'ಭಜಿ' ನೋ.

ಬಜ್ಜಿಸು 'ಭಜ್ಜಿಸು' ನೋ.

ಬಜ್ಜೆಗುಂಟಣಿ (ನಾ). ಗಟ್ಟಿಗಿತ್ತಿಯಾದ ಕುಂಟಲಗಿತ್ತಿ : ಬಜ್ಜೆಗುಂಟಣಿ ಸಜ್ಜೆವನೆಯ ಬಾಗಿಲಂ ಪತ್ತಿ ಮಱೆಗೇಳುತ್ತಿರ್ದೊಳಗಂ ಪೊಕ್ಕು (ಸಂದ್ರಪು. ೬-೩೯ ಪ). [ಬಜ್ಜೆ? + ಕುಂಟಣಿ]

ಬಟ 'ಬಂಟ$_1$' ನೋ.

ಬಟಮಾನ್ಯ 'ಭಟಮಾನ್ಯ' ನೋ.

ಬಟರಿ 'ಭಟಾರಿ' ನೋ.

ಬಟವಡೆ 'ಬಟವಾಡೆ' ನೋ.

ಬಟವಾಡೆ, ಬಟವಡೆ, ಬಟ್ವಾಡೆ (ನಾ). (ಸಂಬಳ, ಕೂಲಿ, ಪತ್ರ ಮೊದಲಾದುವುಗಳನ್ನು) ಹಂಚುವುದು; ವಿತರಣೆ ಮಾಡುವುದು : ಸೇನಾಜನರುಗಳಿಗೆ ತಲಬಿನ ಬಟವಾಡೆಯಾಗುತ್ತಿತ್ತು (ಮಹಾಪಂ. II. ೦೬); ಚಿಕ್ಕನವಾಬರು ತಾವೇ ಸ್ವತಃ ಕೂಲಿಯವರಿಗೆ ದುಡ್ಡು ಬಟವಾಡೇ ಮಾಡಿ . . . ಬರುವಾಗ (ಹುಪ್ಪಹ. ೬೬); ಅತ್ತ ಬಟವಾಡೆಯಾದ ಹಣವೆಲ್ಲವೂ ಮರುದಿನ ಈ ಉಪಾಯದಿಂದ ಹೈದರನ ಬೊಕ್ಕಸಕ್ಕೆ ಬಂದು ಸೇರಿತು (ಬಸಳ. ೬೨). ಬಟವಡೆ : ಪಗಾರ ಬಟವಡೆಯ ಕೆಲಸ ಸುರುವಾಗಿ ಮೂರು ನಾಲ್ಕು ತಾಸಿನವರೆಗೂ ಹಾಗೇ ನಡೆಯಿತು (ಅಸ್ವ. ೨೦೯); ವಾರಕ್ಕೊಂದಾವರ್ತಿ ಕೊಡುವ ಬಟವಡೆಹಣ ಅರಹೊಟ್ಟೆಗೆ ಮಾತ್ರ ಆಧಾರ (ಕೂಪರೇ. ೩೨); ಅಂಚೆಯ ಹಸಿಬೆಯನ್ನು ಹೆಗಲಿಗೇರಿಸಿ ಬಟವಡೆಗೆ ಹೊರಟ (ದೀಪಹ.II. ೬೩). ಬಟ್ವಾಡೆ : ಪೂಜೆ ಮುಗಿದು ಪನಿವಾರ ಬಟ್ವಾಡೆಯ ಸಮಯ ಅವನಿಗೆ ಏಠೋಬನ ನೆನಪು (ರೇಸ್ಕೋಶಿ. ೩); ಬಟ್ವಾಡೆಯಾದ ತಾರೀಕು ಇನ್ನೂ ಎರಡು ದಿನ ಮುಂದಿನದ್ದಾಗಲಿ (ಕುರುಕಾ. ೭); ಮೊದಲು ಟಪ್ಪಾಲುಕಚೇರಿಯಲ್ಲಿ ಕಾಗದಪತ್ರಗಳ ಬಟ್ವಾಡೆ ಮಾಡುತ್ತಿದ್ದ (ಹುಸ್ಕಪು. ೨೨).

[← ಹಿಂ. ಬಟವಾರಾ . ಮರಾ. ಬಟವಾಡಾ]

ಬಟಾಟೆ (ನಾ). (ನೆಲದ ಅಡಿಯಲ್ಲಿ ಬೆಳೆಯುವ, ತರಕಾರಿಯಾಗಿ ಬಳಸಂವ) ಗೆಣಸಿನಂಥ ಒಂದು ಬಗೆಯ ಗೆಡ್ಡೆ; ಆಲೂಗೆಡ್ಡೆ : ಬಟಾಟೆ ಗಿಡದಲ್ಲಿ ಕೆಲವು ಉತ್ತಮತರದ "ಬೀಜ"ಗಳನ್ನು ಆಯ್ದು ಅವುಗಳನ್ನು ಮುಂದಿನ ಋತುವಿನಲ್ಲಿ ಬೆಳೆಸಿದನು (ಸಸ್ಯಕ. ೨೯); ನಮ್ಮ ಆಳುಮನುಷ್ಯ ಪೇಟೆಯಿಂದ ಬಟಾಟೆ ತರುವುದು ಮೂರು ಸೇರು (ಕುರಿಹಿಂ. ೯).

[←ಮರಾ. ಬಟಾಟಾ, ಬಟಾಟೇ./ತುಳು. ಬಟಾಟೆ./ಇಂ. Batata, Potato ; ಪೋರ್ಚು. ಸ್ಪ್ಯಾನಿಷ್. ಬಟಾಟಾ]

ಬಟಾಣಿ, ಬಟ್ಟಾಣಿ, ವಟಾಣಿ (ನಾ). (ಕಡಲೆಯ ಜಾತಿಗೆ ಸೇರಿದ) ಒಂದು ಬಗೆಯ ದ್ವಿದಳಧಾನ್ಯ : ಬಟಾಣಿಬೀಜಗಳನ್ನು ಹಸಿಯಾಗಿರುವಾಗ, ಒಣಗಿದಾಗ ಉಪಯೋಗಿಸಲಾಗುವುದು . . . ಬಟಾಣಿಯಲ್ಲಿ ರುಚಿಯ ಜೊತೆಗೆ ಶರೀರಪೋಷಕ ಸಾರವಸ್ತುವಿದೆ (ಕರಸ. ೪೦). 'ಬಟ್ಟಗಡಲೆ' ಹೋ. ಬಟ್ಟಾಣಿ : ಕಿತ್ತು ಕಿತ್ತತ್ತಿತ್ತ ಕೆಡೆದ ಹಾರಂಗಳೊಳ್ಳುತ್ತುಗಳ್ಕಾರಿನೊಳ್ಪೊಲದೊಳಗೆ ಬಿತ್ತಿದೊತ್ತೊತ್ತಾದ ಜೋಳ ಬಟ್ಟಾಣಿಗಳ ಬೀಜಂಗಳೆಂಬಂತೆ ಕಾಣಿಸಿದುವು (ಕೇಪಣಾ. ೯-೩). ವಟಾಣಿ : ಸ್ವಲ್ಪು ಕಪ್ಪು ಅಥವಾ ಕೇಸರಿ ನೆಲವಾದರೆ . . . ಹಿಂಗಾರಿಯ ಧಾನ್ಯ ವಟಾಣಿ ಮೊದಲಾದ ಕಟಾಣಿಜೀನಸುಗಳು ಕಡಲಿಯ ಧಾನ್ಯಗಳು ಇವುಗಳನ್ನು ಬೆಳೆಯಬಹುದು (ಕೃಷಿಪ್ರ. ೪೨). [ದೇ.ಸ ತಮಿ. ಮಲ. ಪಟ್ಟಾಣಿ ; ತುಳು. ಬಟಾಣಿ ; ತೆಲು. ಬಟಾನಿ. / ಮರಾ. ವಾಟಾಣಾ. / ಸಂ. ವಟಧಾನ್ಯ]

ಬಟಾಯಿ (ನಾ). ೧. ಬೆಳೆಗಾರನಿಂದ ಹೊಲದ ಒಡೆಯನಿಗೆ ಸಲ್ಲುವ ಧಾನ್ಯದ ಅಂಶ,—ಭಾಗ ; ವಾರಪಾಲು ; ಕೋರು : (ಕೈಸ್‌ಗ. II. ೩೪೪) : ವೆಂಕಟರಾಯನು ಗಿರಿಯಮ್ಮನೆಂಬ ಪವಾಡಗಿತ್ತಿಯು ಮಾಡುವ ಸಮಾರಾಧನೆಗೆ ಬಟಾಯಿ ಧಾನ್ಯವನ್ನು ಉಪಯೋಗಿಸಿ ರಾಜದ್ರೋಹ ಮಾಡಿದ್ದಾನೆ (ಕಪಿ. ೩೮೮). ೨. "ಸರ್ಕಾರದ ಪರವಾಗಿ ಮಾಡುವ ವ್ಯವಸಾಯ" (ಕಂಪ. ಕೋಶ) : ಇವುಗಳಲ್ಲಿ ಕೆಲವು ಬಟಾಯಿ — ಅಂದರೆ ವೃತ್ತಿದಾರರಾದ ಇನಾಂದಾರರ ಸ್ವಂತ ಅನುಭವ ಅಥವಾ ವಹಿವಾಟಿನಲ್ಲಿದ್ದವು (ಕಂಪ. ೨೫೪).

[←ಹಿಂ. ಮರಾ. ಬಟಈ., ಬಟಾಈ]

ಬಟಾಯಿಭೂಮಿ (ನಾ). ವಾರಕ್ಕೆ ಕೊಟ್ಟಿರುವ ಭೂಮಿ ; ಕೋರಿ ಜಮೀನು : ಅರಮನೇ ಚಾಕರರಲ್ಲದವರು ಅನೇಕರು ಸರ್ಕಾರದ ಬಟಾಯಿಭೂಮಿಗಳನ್ನು ವ್ಯವಸಾಯ ಮಾಡುತಾ . . . ಜೀವಿಸಿಕೊಳ್ಳುತ್ತಿದ್ದರು (ಸುಮಾಸ. ೨). [ಬಟಾಯಿ + ಭೂಮಿ]

ಬಟಾರ$_1$ 'ಭಟಾರ' ನೋ.

ಬಟಾರ$_2$ (ನಾ). ಗೋಣೀಚೀಲ : ಅದನ್ನು ಚನ್ನಾಗಿ ಬಿಸಿಲಲ್ಲಿ ಹಾಕಿ ಒಣಗಿಸಿ ಬಟಾರಗಳಲ್ಲಿ ತುಂಬಿ ಇಟ್ಟು ರಂಗು ನೋಡಿ ಮಾರಾಟ ಮಾಡುತ್ತಾರೆ (ಕೃಷಿಪ್ರ. ೯೨). [?]

ಬಟಾರಿ 'ಭಟಾರಿ' ನೋ.

ಬಟು$_1$ 'ಬಟ್ಟು' ನೋ.

ಬಟು$_2$ (ನಾ). ಬ್ರಹ್ಮಚಾರಿ ; ವಟು : "ಬಟು — ವಟು = ಹುಡುಗ, ಬ್ರಹ್ಮಚಾರಿ" (ಕದ್ಮಕೋ. ೨೬) ; ಪೊಱವಾಗಿಲೊಳ್ ಮುನಿಯೋರ್ವಂ ಬಟುವೆರಸು ಬಂದಿರ್ಕುಂ (ರಾಮಾಶ್ವ. ೦೦-೦). [<ಸಂ. ವಟು]

ಬಟುಗಲ್ಲು (ನಾ). ಗುಂಡಗಿರುವ ಕಲ್ಲು ; ದುಂಡಾದ ಶಿಲೆ : ನಿಡಿಗಲ್ಲು ನಿಶಿತ ಹಾಸಱಿಗಲ್ಲು ಚೌಕದ ಬಡಿಗಲ್ಲು ಬಟುಗಲ್ಲು ಬೀಳೆ ತುಡುಕಿದ ವಜ್ರಮಾರ್ಗಣದಿಂದ ಶ್ರೀಕೃಷ್ಣ ಹುಡಿಯೇಳಲೆಚ್ಚು ಹಾಱಿಸಿದ (ಸೋಹಕ. ೪೦-೬೩). [ಬಟು$_1$ (<ಬಟ್ಟು) + ಕಲ್ಲು (<ಕಲ್$_3$)]

ಬಟುಮೊಲೆ 'ಬಟ್ಟಮೊಲೆ' ನೋ.

ಬಟುವು 'ಬಟ್ಟು' ನೋ.

ಬಟುವುದಿಂಬು (ನಾ). ಗುಂಡಾಗಿರುವ ದಿಂಬು ; ದುಂಡನೆಯ ದಿಂಬು : ಬಿಳಿಯ ಬಟ್ಟೆಗಳಿಂದ ಕಟ್ಟಿ ಪೊಲಿದಿರುವ ಮನ್ಮಥನ ವಂದು ತೊಡೆಯ ಬಟುವುದಿಂಬುಯಿದೆಂಬಂತೆ (ಸೌಗಂಧಿ. ೦೯೬-೯).

[ಬಟುವು (<ಬಟ್ಟು) + ದಿಂಬು$_2$]

ಬಟುಹು 'ಬಟ್ಟು' ನೋ.

ಬಟ್ಟ$_1$ 'ಬಟ್ಟು' ನೋ.

ಬಟ್ಟ$_2$ (ಸಪೂರೂ). 'ಬಟ್ಟಿತು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಬಟ್ಟಗಲ್', 'ಬಟ್ಟವೆಱ' ಪರಾ. [<ಬಟ್ಟಿತು]

ಬಟ್ಟ$_3$ (ಸಪೂರೂ). 'ಬಱಿದು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಬಟ್ಟತಲೆ' ಪರಾ. [<ಬಱಿದು]

ಬಟ್ಟ$_4$ 'ಬಂಟ್ಟ$_2$' ನೋ.

ಬಟ್ಟಕೆಱ^3 (ನಾ). ಒಂದು ಊರಿನ ಹೆಸರು (?) : ಸಾದೇವಂ ಬಟ್ಟಕೆಱಿಯಂ ಅಱಿದಂ (ಎಇ. XIII. ೦೯೯-೩ ; 880). 'ಬಟ್ಟೆಕೆಱ^3' ಪರಾ. [ಬಟ್ಟ$_?$ + ಕೆಱ^3]

ಬಟ್ಟಗಡಲೆ (ನಾ). ದುಂಡಗಿರುವ ಒಂದು ಬಗೆಯ ಕಡಲೆ : "ಕಳಾಯಃ, ಖಂಡಿಕಃ, ಸಾತೀನಃ — ಈ ೩ ಬಟ್ಟಗಡಲೆ" (ಪಠಾಮು. ೯೩-೪೨೬) ; ಕರಿಹಸ್ತಚರ್ಮಮಂ ಮೇಣ್ ಕರಿದಂತವನರೆದು ಬಟ್ಟಗಡಲೆಯ ಪಟ್ಟಂ ಬೆರಸಿಕ್ಕುಗೆ ಮೊದಲೊಳ್ ತಾವರೆಯಲರಲ್ಲಾದ ಸುರಭಿಗಂಧಮನಾಳ್ಗುಂ (ಲೋಕೋಪ. ೬-೩೨). 'ಬಟಾಣಿ' ಹೋ.

[ಬಟ್ಟ$_2$ (<ಬಟ್ಟಿತು) + ಕಡಲೆ]

ಬಟ್ಟಗಡಸು (ನಾ). ಮೈ ತುಂಬಿಕೊಂಡಿರುವ ಕಡಸು : ಬಟ್ಟಗಡಸು ಕೆಂದ ಹುರಿಗ ಕಾರಿಯು ಬೆಳ್ಳ ನೆಟ್ಟ ಕೊಂಚಿನಕಾರಿ ಜಾಲೆ (ಪಾರೇಸಾಂ. ೦-೪೦). [ಬಟ್ಟ$_2$ (< ಬಟ್ಟಿತು) + ಕಡಸು$_1$]

ಬಟ್ಟಗಡ್ಡ (ನಾ). ದುಂಡನೆಯ ಗದ್ದ : ತಳತಳಿಪೊಳ್ಪೊಸಲ್ . . . ಮೊಲ್ಲೆವಲ್ ಪೊಳೆವ ಮೆಲ್ನಗೆ ಮಟ್ಟದ ಬಟ್ಟಗಡ್ಡದಿಂ ಬಳೆಯಿಪುದೊಳ್ಮೊಗಂ ಸೊಬಗಿನಿಂ ಬಗೆಗಾರ್ತಿಯರ್ಗಾಸೆಯಟ್ಟಿಯಂ (ಪಕಪ. ೩-೬).

[ಬಟ್ಟ$_2$ (< ಬಟ್ಟಿತು) + ಗಡ್ಡ$_1$]

ಬಟ್ಟಗಲ್, ಬಟ್ಟಗಲ್ಲು (ನಾ). ಗುಂಡಗಿರುವ ಕಲ್ಲು ; ದುಂಡುಗಲ್ಲು : ಬಟ್ಟಗಲ್ಲಿಂತು ವರ್ತುಳದಿಂದೆ ಚೆಲ್ವಾಗಿ ಪುಟ್ಟುವುದೆ ಪೊಸತು (ಕೈಪಿಶಾ. ೨೬-೨೩). ಬಟ್ಟಗಲ್ಲು : ಅಂತೆ ಬರೆ ಒಬ್ಬೆಯೊಳಗಣ ಬಿಳಿಯ ಬಟ್ಟಗಲ್ಲು (ಪ್ರಾಂಶಿ. ೦೯೨೦, ೦೦-೦೬೬ ; 977) ; ಬಟ್ಟಗಲ್ಲಿನ ಮ್ಯಾಲ ತುಪ್ಪ ಸುರುವಿದಂಗ ಏನಾರ ಆತ ನನ ಮಗಳ (ಲೋಕಗೀ. ೨೦೦).

[ಬಟ್ಟ$_2$ (< ಬಟ್ಟಿತು) + ಕಲ್$_3$]

ಬಟ್ಟಗಲ್ಲು 'ಬಟ್ಟಗಲ್' ನೋ.

ಬಟ್ಟಗಾಣ (ನಾ). ಗುಂಡಾಗಿ ಸುತ್ತುವ ಗಾಣ : ಅಯ್ಯಾ ಮನದ ರಜದ ಮಣ್ಣ ಕಳೆದು . . . ಅದನೊಂದೆಡೆಗೆ ತಂದು ಬಟ್ಟಗಾಣದಲಿಕ್ಕಿ ಹಿಳಿವೆನಯ್ಯಾ (ಸಿದ್ಧಪ. ೩೦೩-೦೦೨೬). [ಬಟ್ಟ$_2$ (<ಬಟ್ಟಿತು) + ಗಾಣ$_1$]

ಬಟ್ಟಗುತ್ತ (ನಾ). ೧. (ಆಲಂ) ಮೋಸ ; ವಂಚನೆ : ಬಟ್ಟಗುತ್ತದ ವಿದ್ಯವಿವರಿಗೆ ಕೊಟ್ಟರುಂಟೆಲೆ ಮಂತ್ರಿ ಕೇಳ್ ಮನಮುಟ್ಟಿ ನುಡಿಯಲಿ ಭಾವಿಸದೆ ಸದ್ಧರ್ಮಮಾರ್ಗದಲಿ (ತೊರಣಾ. ೨-೨-೩೯). ೨. ಮೋಸಗಾರ ; ವಂಚಕ : ಸೂಱಿಗಾಱನಂತೆ ಪೆಱರಂ ಕ್ಲೇಶಂಗೊಳಿಸದೆ ಬಟ್ಟೆ [ಟ್ಟ] ಗುತ್ತನಂತೆ ಉಪವಾಸಮಂ ತೋಱಿ ಕಾಡದೆ (ಧರ್ಮಾಶ್ಯು. ೩-೯೯). 'ಬಟ್ಟೆಗುತ್ತೆ' ಹೋ. [ಬಟ್ಟ$_?$ + ಗುತ್ತ$_2$ (< ಗುಪುತ)]

ಬಟ್ಟಗುತ್ತತನ (ನಾ). ಮೋಸಗಾರಿಕೆ ; ವಂಚನೆ : ಕಾಯವ ದಂಡಿಸಿ ಆತ್ಮನಿಗ್ರಹವ ಮಾಡಿ ಬಟ್ಟಗುತ್ತತನವ ಹಣ್ಣಿ ತಗಹಿನಲ್ಲಿ ಕುಳಿರ್ದು ಬೇಡಿಕೊಂಬ ತಪ ತಾನೇಕೆ (ಕನ್ನಪ. ಕ. ೩೨೩-೬೬೩) ; ಆಹಹ ಕುಡುವೆನೆಂಬ ಬುದ್ಧಿ ಚಿತ್ತದೊಳಗೆ ಬೇಗ ಹೊಳದು ಕೊಟ್ಟೆನೇಳು ತಂಗಿ ಬಟ್ಟಗುತ್ತತನವಿದೇವುದು (ಪ್ರಜರ. ಹ. ೨೬೩-೩). [ಬಟ್ಟಗುತ್ತ + —ತನ]

ಬಟ್ಟಗೆ (ಅ). ದುಂಡಗೆ : ಗುಂಡಾಗಿ : ಬಾಳಾಂತು ಬಳಸಿ ಬಟ್ಟಗೆ ಬಂದು ಸುಟ್ಟುರೆಗಾಳಿಯಂತೊದಗಿ ಸುತ್ತುವರು ಏಳೆಂಟು ಹದಿನಾಱು ಹಾರ

ಹರಿಣನಂತೆ ಸಾಲಾಗಿ ಸರಳಿಸುತಿಹರು (ಭರತ. ೬೩-೩೦).

[ಬಟ್ಟ$_2$(<ಬಟ್ಟಿತು) + — ಅಗ್ಗೆ$_3$]

ಬಟ್ಟಗೆಯ್ದು, ಬಟ್ಟಗೈದು (ನಾ). ಗುಂಡನೆಯ ಆಯುಂಧ ; ಚಕ್ರಾಯುಧ : "ಬಟ್ಟಗೆಯ್ದು[ಶಾಣಾಂ. ಗೈದು]ವೆನೆ ಚಕ್ರಂ" (ಪತುನಿ. ೬೨). 'ಬಟ್ಟುಗೆಯ್ದು' ಪರಾ. ಬಟ್ಟಗೈದು : "ಪಾಱುಂಬಳೆ, ಬಟ್ಟಗೈದು—ಈ ೨ ಚಕ್ರಂ" (ಕಶಸಾ. ೪೭-೦೦); ತನ್ನಿಂ ತಾನೆ ಚತುರ್ಭುಜನಕ್ಕುಂ ಸಂಕಿನ ಬಟ್ಟಗೈದಿನ ಗಜೆಯ ತಾವರೆಯ ಸೊಬಗಿನ ಪೊರ್ದುಗೆಯಿನೆಸೆಗುಂ (ರಾಮಾಶ್ವ. ೭೪-೦೦).

ಬಟ್ಟಗೈದುಗೈಯವ = ದುಂಡಗಿರುವ ಆಯುಧವನ್ನು ಹಿಡಿದಿರುವವನು ; ಚಕ್ರಪಾಣಿ ; ವಿಷ್ಣು : "ಬಟ್ಟಗೈದುಗೈಯವನೆನಲ್ಕಿಂದಿರಾಪತಿಯ ನಾಮಂ" (ಕಶರ. ೭೨). [ಬಟ್ಟ$_2$ (< ಬಟ್ಟಿತು) + ಕೆಯ್ದು]

ಬಟ್ಟಗೈದು 'ಬಟ್ಟಗೆಯ್ದು' ನೋ.

ಬಟ್ಟಗೊಡೆ (ನಾ). ಗುಂಡಗಿರುವ ಕೊಡೆ. — ಛತ್ರಿ : ಬಟ್ಟಗೊಡೆ ಚಂದ್ರಕಾಂತಿಯನಟ್ಟುಂಬರಿಗೊಳೆ (ಪಂಪಭಾ. ೬-೯) ; ಒಗೆಯೆ ಕವಿಲ್ತ ಕಾಸೆ ಪೊಸಜನ್ನಿವರಂ ಶಿಖಿ ಕೋವಣಂ ಕರಂಡಗೆ ಕಿಸುವೊನ್ನ ಬಟ್ಟಗೊಡೆ. . . ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮದಂ (ಅರ್ಧನೇ. ೬-೨೩) ; ಎಸೆದುದು ಬಿಳಿಯ ಬಟ್ಟಗೊಡೆ ನಾರದನಾ (ಜಗನಿ. ೦೦-೦೦). [ಬಟ್ಟ$_2$ (< ಬಟ್ಟಿತು) + ಕೊಡೆ$_2$]

ಬಟ್ಟಚಕ್ರ (ನಾ). = ಬಟ್ಟಗೆಯ್ದು : ಬಿಟ್ಟಳಾಸುರಕರ್ಮವ ಶುಕ್ರದೇವರು ಕೊಟ್ಟ ವೈಷ್ಣವಮಂತ್ರದಿಂದೆ ಬಟ್ಟಚಕ್ರವ ಬಲಗೊಂಡು ಪ್ರಾರ್ಥಿಸಲಾಗಿ ತಟ್ಟನೆ ಪಥವ ಪಾಲಿಸಿತು (ಮೋಹತ. ೨೯-೩೫).

[ಬಟ್ಟ$_2$ (< ಬಟ್ಟಿತು) + ಚಕ್ರ$_1$]

ಬಟ್ಟಚ್ಚಿ (ನಾ). ಗುಂಡಾಗಿರುವ ಕಣ್ಣು : ಕೆಮ್ಮಾಸೆಯ ಪೊದರ್ದಲೆಯ ಬಟ್ಟಚ್ಚಿಯ ಕಟ್ಟುಱದ ಡಗೆಯ ಪೇರೊಡಲ ಗೋರರೂವಿನ ದಾನವಂ (ರಾಮಾಶ್ವ. ೦೦೦-೩೦). [ಬಟ್ಟ$_2$ (<ಬಟ್ಟಿತು) +ಅಚ್ಚಿ]

ಬಟ್ಟಜವ್ವನ (ನಾ). ದುಂಡಗಿರುವ ಮೊಲೆ ; ವೃತ್ತಸ್ತನ : ಬಟ್ಟಜವ್ವನ ದೆಡೆಗಳೊಳ್ ವಿಟರ ದಿಟ್ಟಿಗಳ್ ನಟ್ಟಂತೆ ನಿಲೆ (ಪಂಪು. ೦೦-೦೬) ; ಬಟ್ಟಜವ್ವನದ ವಿಡ್ಡೋದರಿಯರಂ ಪೆಗಲೊಳ್ ಪೆಂಪಿಂ ತಳೆದು ತಳರ್ವ ವಿಪುಳ ವಿದ್ಯಾಧರರ್ಗೆ ಸಹಾಯಮಾಗಿ . . . ಕಳುಪಲ್ (ರಾಜಶೇ. ೦-೦೩೫ ನ).

[ಬಟ್ಟ$_2$ (< ಬಟ್ಟಿತು) + ಜವ್ವನ]

ಬಟ್ಟಜವ್ವನೆ (ನಾ). ದುಂಡಗಿರುವ ಮೊಲೆಗಳನ್ನು ಹೊಂದಿದವಳು ; ವೃತ್ತಸ್ತನೆ : ಉಟ್ಟುದು ತೊಟ್ಟುದೆಲ್ಲವ ಮುಕ್ತಿಯೆಂದೆಂಬ ಬಟ್ಟಜವ್ವನೆಗೆ ವತ್ತೆಯನು ಅಟ್ಟಿ ನಿಂದಂತೆ ನಿರ್ಗ್ರಂಥಮಿರದೆಯಳವಟ್ಟುದು ತನ್ಮುನಿಪತಿಗೆ (ಶ್ರಭುಸಿ. ೦-೩೫) ; ಮುಟ್ಟದೊಡಸು ನಿಲ್ಲದೆನುತೊರ್ವ ತೊಲಗಿದು ಬಟ್ಟಜವ್ವನೆಯನಪ್ಪಿದನು (ಮೋಹತ. ೦೬-೫೩); ಬಟ್ಟಜವ್ವನೆಯರಂತಿಂತಾದರೆಂದು ಬಾಯ್ಬಿಟ್ಟಿನ್ನು ನುಡಿಯಲದೇಕೆ (ಭರತ. ೦-೫೦).

[ಬಟ್ಟಜವ್ವನ + — ಎ$_2$]

ಬಟ್ಟತಲೆ(ನಾ). ಬೋಳುತಲೆ ; ಕೂದಲಿಲ್ಲದ ತಲೆ : ಬಟ್ಟತಲೆಯವನಾದರೆ ಹೆಡಿಗೆ ಹೊತ್ತಾನೇ ? (ಗಾದ). [ಬಟ್ಟ$_3$ (<ಬಱುದು) + ತಲೆ$_1$]

ಬಟ್ಟದಲೆ (ನಾ). ಗುಂಡಗಿರುವ ತಲೆ : (ಮುಂಬಯಿ. ಕಿ. ೫-೩೦).

[ಬಟ್ಟ$_2$ (<ಬಟ್ಟಿತು) + ತಲೆ$_1$]

ಬಟ್ಟದುಱುಂಬು (ನಾ). ಗುಂಡಗಿರುವ ತುರುಬು; ದುಂಡಾದ ಮುಡಿ : ಮಲ್ಲಿಗೆ ಮೊಲ್ಲೆ ಜಾಜಿ ಕೇತಕಿ ಮೊದಲಾದ ಕುಸುಮಕುಲಮನಾಂತು ಮೆಱೆವ ಬಟ್ಟದುಱುಂಬಿನ . . . ಬಸವರಾಜಂ (ಬಸರ. ೨-೦೬).

[ಬಟ್ಟ$_2$ (<ಬಟ್ಟಿತು) + ತುಱುಂಬು$_2$]

ಬಟ್ಟದೆನೆ (ನಾ). ವೃತ್ತಾಕಾರವಾದ ಕೋಟೆಯ ತೆನೆ : ಪಳಿಕಿನ ಕೋಂಟೆ ಬಟ್ಟದೆನೆ ಬೇವಿನ ದಂಡೆ ನಭಕ್ಕೆ ಮಿಱುವಟ್ಟಳೆ . . . ಮೆಱೆಗುಂ ಪುರದೊಳ್ ನಿರಂತರಂ (ಗಿರಿಕ. ೨-೭೯); ಹೊಸ ಹೊಂಗೊಂಟೆಯ ಬಟ್ಟದೆನೆಯೆ ರಂಜಿಸುವ ದಳಾಪಳಿ (ಸಯಕಾ. ೦-೫೨).

[ಬಟ್ಟ$_2$ (<ಬಟ್ಟಿತು) + ತೆನೆ$_1$]

ಬಟ್ಟದೊಡೆ (ನಾ). ದುಂಡಗಿರುವ ತೊಡೆ ; ಪುಷ್ಟವಾಗಿರುವ ತೊಡೆ : ಬಲ್ದಲೆಯಂ ತೋಳ್ನೀಳ್ದನಗಲ್ದುರದಂ ಬಟ್ಟದೊಡೆಯವಂ ಕೆಂಗಣ್ಣಂ . . . ಒಲ್ದೊಲಿಸುಗುಮೆಸೆವ ಬೀರಸಿರಿಯಂ ಧುರದೊಳ್ (ಕಾವ್ಯಾನ. ೨೫೬); ನಿನ್ನ ಬಟ್ಟದೊಡೆಗೆ ಬಾಳೆ ಬಹಿಷ್ಕಾರಂ ನಿನ್ನ ಕಿಱುದೊಡೆಗೆ ಕಾಮನ ದೊಣೆ ತೊಣೆಯಲ್ಲಂ (ಪಂಬಿರ. ೦೪-೦೬). [ಬಟ್ಟ$_2$(<ಬಟ್ಟಿತು) + ತೊಡೆ$_2$]

ಬಟ್ಟದೊಡೆಯ (ನಾ). ದುಂಡಗಿರುವ ತೊಡೆಗಳುಳ್ಳವನು : ಅತ್ವಕ್ಕೆ-ಅಲರ್ಗಣ್ಣಂ, ಬಟ್ಟದೊಡೆಯಂ (ಶಮದ. ೦೮೬ ಪ್ರಯೋ).

[ಬಟ್ಟದೊಡೆ + — ಅ$_7$]

ಬಟ್ಟನೆ (ಅ). = ಬಟ್ಟಗೆ : ಪುಟ್ಟುವ ಗಾಳಿಯ ಬಱಿಯನೆ ಬಟ್ಟನೆ ಸುಱಿಗೊಳೆ ಮರುದ್ವಿಮಾನಪ್ರಕರಂ ತಿಟ್ಟನೆ ತಿರಿಯೆ ನಿಶಾಚರನಿಟ್ಟನದೊಂದುಗ್ರಗದೆಯಿನಸುರಾಂತಕನಂ (ಜಗನಿ. ೦೨-೪೫) ; ತಿಟ್ಟನೆ ಬಟ್ಟನೆಯೆಂಬಿವ ಱೊಳ್ ಭ್ರಮಾರ್ಥಂ (ಶಮದ. ೩೦೭) ; ಅಬಲೆಯ ಬಟ್ಟನೆಸೆವ ಬಲ್ಮೊಲೆಯೆಂಬೆರಡುಂ ಬೆಟ್ಟದ ತಪ್ಪಲ ನಡುವಣಿಱುಂಬಿನೊಳಡಗಿ . . . ನೀಱನ ಬಗೆ . . . ನಡೆಯುತ್ತಿರೆ (ಸಯಕಾ. ೪-೦೦).

ಬಟ್ಟನೆ ವರ್, ಬಟ್ಟನೆ ಬರ್ = ಸುತ್ತುವರಿದು ಬರು,—ತಿರುಗು, ಚರಿಸು : ಪೋಡಶಋತ್ವಿಜರ್ಗಿತ್ತುದರ್ಕೆ ಬಾಯ್ವಿಟ್ಟಿರೆ ವಿಪ್ರಕೋಟಿ ಮಡಗಲ್ಕೆಡೆಯಿಲ್ಲದೆ ಪೊನ್ನ ರಾಶಿಯಂ ಬಟ್ಟನೆ ಬಂದು ಕಾಯೆ ಯಮನಂದನನೇಂ ತೊದಳಿಲ್ಲದಿತ್ತನೋ (ಪಂಪಭಾ. ೬-೩೯) ; ಎನಿತಂ ಬೆದವೆದ ಬೆಂದ ಪಯ್ . . . ಎನಿತಂ ಭವಗಹನದೊಳಗೆ ಬಟ್ಟನೆ ಬರ್ಪಯ್ (ಅಜಪು. ೨-೬೨); ಎರೆಯಂ ಕರ್ಚಿ ಬಲಕ್ಕೆ ಪೋಗೆ ಶುಭದಂ ಪೆಣ್ಕಾಗೆ ಮೇಣಂತದಂಬರದೊಳ್ ಬಟ್ಟನೆ ಬರ್ಪೊಡತ್ಯಧಿಕಲಾಭಂ (ಲೋಕೋಪ. ೦೨-೨೦) ; ಸುಱಿದನೆಂದು ಸಂಚಲಿಸಿದನುಂ ಬಟ್ಟನೆವಂದನುಮಕ್ಕುಂ (ಶಮದ. ನ. ೩೩ ಪೃತ್ತಿ) ;

[ಬಟ್ಟ$_2$(<ಬಟ್ಟಿತು) + — ಅನೆ$_2$ (< — ಅನೆಯ್$_2$)]

ಬಟ್ಟಬಯಲ್ 'ವಯಲ್' ಪರಾ.

ಬಟ್ಟಬಯಲು 'ವಯಲ್' ಪರಾ.

ಬಟ್ಟಬಾಣ, ಭಟ್ಟಬಾಣ (ನಾ). (?) : ಅಭವನಿಂ ಕರಜಲರುಹಂಗಳು ಬಟ್ಟಬಾಣಂಗಂಕುರಿಸಿದವೊಲು ಪೃಥುಳೋನ್ನತಕರಾಂಬುಜಯುಗಂ ಚಿಲುವಾಯಿತಯ್ಯಂಗೆ (ಬಸಪು. ೩೬-೩೯). ಭಟ್ಟಬಾಣ : ಲಲಿತ ಕರವಲ್ಲವಂಗಳ್ ಶೋಭಿಸಿದುವು . . . ಭಟ್ಟಬಾಣಂಗೀಶಪೂಜೆಯಂ ಘಳಿಲನೆಸಗಲ್ ಕರಯುಗಂ ಜನಿಸಿದಂತೆವೊಲ್ (ಆರಾಸ. ೨-೩-೦೬). [?]

ಬಟ್ಟಬೈಲು 'ವಯಲ್' ಪರಾ.

ಬಟ್ಟಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ ; ದುಂಡುಮಲ್ಲಿಗೆ : ಬಿಟ್ಟೆನಪಿಲಭೋಗವನೆಂಬ ವ್ರತಿಕರ ತೊಟ್ಟೆಸಲೆಂದಾ ಮದನ ಮಿಟ್ಟೆಯಂಬುಗಳ ಮಾಡಿಸಿದಂತುಟಹವಲ್ಲಿ ಬಟ್ಟಮಲ್ಲಿಗೆಯ ಮೊಗ್ಗೆಗಳು (ಅಂಜನ. ೨-೯೦). [ಬಟ್ಟ$_2$ (<ಬಟ್ಟಿತು) + ಮಲ್ಲಿಗೆ]

ಬಟ್ಟಮುತ್ತು (ನಾ). ಗುಂಡಗಿರುವ ಮುತ್ತು ; ದುಂಡಾದ ಮೌಕ್ತಿಕ: ಆ ದೇವಿ . . . ರಾಯನ ಮಕುಟಕಳವಟ್ಟು ಮೋದಿಸುವ ಬಟ್ಟ ಮುತ್ತಂದೊಗೆದ ಚಿಪ್ಪು ಬರಲಾದರಿಪುದೇಯೆಂಬ ಮಾಳ್ಕೆಯಿಂ ಸುಮ್ಮನಿರೆ ನೊಂದನಂತಾ ದಕ್ಷನು (ವೀಶ್ಕೃಪು. ೩-೨-೦೨); ಬಟ್ಟಮುತ್ತಿನ ಪದಕಹಾರನೆ ಬಾಹುಹಸ್ತಚತುಷ್ಟನೆ (ಪುರಂದ. ೦-೫-೨); ಬಟ್ಟಮುತ್ತುಗಳು ಕೇವಣಿಸಿರ್ದ ಪಾರಿಯ ಪಟ್ಟಾವಳಿ ಚಲ್ಲಣವ ತೊಟ್ಟು (ಮೋಹತ. ೦೨-೪೫).

[ಬಟ್ಟ$_2$ (<ಬಟ್ಟಿತು) + ಮುತ್ತು$_3$]

ಬಟ್ಟಮೊಗ (ನಾ). ದುಂಡಾದ ಮುಖ : ಕರಮೆ ತತ್ಪುರನಾರಿಯರ ಬಟ್ಟಮೊಗದ ಮಯ್ಸಿರಿಗಂಡು ಕಱುಬಿ ಕಱುಕಱುಗಂದಿದನೊಯೆನಲ್ ಹರಿಣಾಂಕನುದರದ ಕಲಂಕಮೊಪ್ಪಿದುದು (ಕಬ್ಬಿಣ. ೯-೭೩); ನಗೆಮೊಗದ ವರಾ ಸಿರಿಮೊಗದವರು . . . ಬಟ್ಟಮೊಗದವರು ನಲ್ಮಗೆವೆತ್ತು ನಡೆದರೊಗ್ಗಿ ಸಲಿ (ಕೋಚಕ. ೨೪-೦೫); ಬಟ್ಟಮೊಗಕ್ಕೆ ಕಟ್ಟಿದಿರೊಳೆಸೆವ ಬಟ್ಟವೆಱೆಯ ದಿಟ್ಟಿತಾಗದಂತೆ ಮಱೆಗೆಯ್ದು (ರಾಷಕೇ. ೪-೦೪೫).

[ಬಟ್ಟ + ಮೊಗ]

ಬಟ್ಟಮೊಲೆ, ಬಟುಮೊಲೆ (ನಾ). ದುಂಡಾಗಿರುವ ಕುಚ ; ವೃತ್ತಸ್ತನ : ಬಟ್ಟಮೊಲೆಯಂತೆ ಕೊರಲೊಳ್ ಕಟ್ಟಿಕ್ಕಲ್ ನರಕಕೂಪದೊಳ್ ಮುಟುಗಲೊಡಂ ಬಟ್ಟೊಡನೆ ಸಗ್ಗವೇಱುವ ಬೆಟ್ಟಲ್ಲವೆಯೊಲ್ಲದಿರ್ದೊಡನ್ಯಾಂಗನೆಯಂ (ಅಣಾಕ. ೦೪-೦೦೯); ಬೆಟ್ಟತಪ್ಪ ಬಟ್ಟಮೊಲೆಯಱ್ಪಿಡೆಯೊಳ್ ತೊಟ್ಟನೆ ಸಿಲ್ಕಿದ ಕಣ್ (ಕ್ಕಾಣಾ. ೭೬). **ಬಟುಮೊಲೆ :** ಚಟುಲ ಕಾಮೋದ್ದೀಪನದಿಂದೆ ಕಡುಧೂರ್ತವಟುಗಳು ರಿಸಿಕುವರಿಯರ ಬಟು ಮೊಲೆಗಳ ಕೈದುಡುಕಿದುದು (ಕೋಚಕ. ೭-೦೩).

[ಬಟ್ಟ + ಮೊಲೆ]

ಬಟ್ಟಲ್, ಬಟ್ಟಲು (ನಾ). ೧. ಗುಂಡಗಿರುವ ಸಣ್ಣ ಪಾತ್ರೆ ; ಕಟೋರ : ಪಿರಿದೊಂದು ಕಾಜಿನ ಬಟ್ಟಲೊಳ್ ಕವ್ಮಿತಪ್ಪ ನೀರಂ ತೀವಿ ಚಂದ್ರಬಿಂಬಮಂ ನೀರೊಳ್ ಕಾಣ್ಪಂತಿರೆ ಮಾಡಿ (ಕಣ್ಣಾಣಾ. ೦೪೭-೦೭); ಸೋರೆಯ ಬಟ್ಟಲಂ ನಂಬಿ ಕಂಚಿನ ಬಟ್ಟಲನೊಡೆವ ಗೊರವನುಮಂ (ರಹಾಕ್ಕು. ೯-೩೦); ವಾರುಣಿ ಕಳ್ಳನೀಂಟಿ ಮಱೆದಿಕ್ಕಿದ ಬಟ್ಟಲೊ . . . ಪೇಱಿನಲ್ಕೆ ನೀಹಾರಮಯೂಖಿಮಂಡಲಮದೇನೆಸೆದಿರ್ದುದೊ ಪಶ್ಚಿಮಾದ್ರಿಯೊಳ್ (ಅಣಾಕ. ೩-೩). **ಬಟ್ಟಲು :** ೧. ಕರಿದಂ ಬಿಳಿದಂ ಬಿಳಿದಂ ಕರಿದಾಗಿರೆ ಮಾಟ್ಟ ಪೋಪ ಬಟ್ಟಲುಗಳನಂಬರದೊಳ್ನಿಲಿಪ . . . ಇಂದ್ರಜಾಲಿಗರಕ್ಕುಂ (ಚಕುಪ. ೦೨-೦೪). ೨. ತಟ್ಟೆ ; ತಳಿಗೆ : ಉಂಬ ಬಟ್ಟಲು ಬೇಱೆ ಕಂಬಲ್ಲ ನೋಡುವ ದರ್ಪಣ ಬೇಱೆ ಕಂಬಲ್ಲ (ರಚಪ. ೩೩೦); ಹೊನ್ನ ಬಟ್ಟಲೊಳಾತಗಳಿಗೊಲಿದಿತ್ತನ್ನೆ ಕರ್ವುರದ ವೀಳೆಯವ (ಭಾಷ್ಕೋ. ೯-೦೦) ; ಜಯರಾಮು ಮನೆ ಸೇರಿದಾಗ ಅವನ ತಂದೆ ಊಟಕ್ಕೆ ಕುಳಿತುಕೊಂಡಿದ್ದರು . . . ತಾಯಿ, ಮಗನಿಗೂ ಬಟ್ಟಲಿಟ್ಟಳು (ಕಂಗಪ. ೦೩೭). ೩. ಮಂಡಿಯ ಚಿಪ್ಪು : ಬಟ್ಟಲು ಕಬ್ಬಲ ವೊಣಕಾಲ್ಗಳುಂ ಮೊಟ್ಟನೆ ಮುಱಿದ ನಿಟ್ಟೆಲುಗಳುಂ . . . ಕುಣಿದಾಡುವ ಮರುಳ್ಗಳುಂ ಮಹಾಭಯಂಕರಮಾಗೆ (ಪುಚಾಕೇ. ೦೨-೩೪ ಪ). ಬಟ್ಟಲಗಣ್ಣು, ಬಟ್ಟಲ ಕಣ್ಣು = ಬಟ್ಟಲುಗಣ್ಣು : ಮುಟ್ಟು ವೈಲಿಗೆ ಇಲ್ಲ ಬಟ್ಟಲಗಣ್ಣಿನ ದಿಟಯೋಗಿ ತಾ ಮಲಗಿಹನು (ಸಿದ್ಧಶ. ೩-೪) ; ಕಟ್ಟಾಣಿ ಕಟ್ಟಾಳ್ಗಳ ಕಟ್ಟೀ ಮ್ಯಾಲೆ ನಿಂತಾಳ ಬಟ್ಟಲ ಕಣ್ಣ ತಿರುವ್ಯಾಳ (ಪಡಕಾ. II, ೦೦೩೨). ಬಟ್ಟಲ ತಂಬುಲ = ಗೌರವಾರ್ಥವಾಗಿ ತಟ್ಟೆಯಲ್ಲಿ ಕೊಡುವ ವೀಳೆಯ : ಬಟ್ಟಲ ತಂಬುಲಂಬಡೆವ(ಂ)ನ್ತೀ ಮಯರ್ಯಾದೆಯೆಲ್ಲ(ಂ)ಮಾಯ್ತುವರ್ಮರಸರ ಮಾಡಿಸಿದೆರಡನ್ದೇಗುಲಂ (ಪೌಷ್ಣ. IX-೨, ೭೭-೩೩ : ೧೧೭).

[ಕೇ. ತ ತಮಿ. ವಟ್ಟೈ ; ಮಲ. ವಟ್ಟ ; ತುಳು. ಬಟ್ಟಲ್, ಬಟ್ಟೊಳು ; ಕೊಡ. ಬಟ್ಟ ; ಕೋಲು. ಬಟ್ಲೆ]

ಬಟ್ಟಲು ' ಬಟ್ಟಲ್ ' ನೋ.

ಬಟ್ಟಲುಗಣ್ಣು (ನಾ). ಗುಂಡಗಿರುವ ಕಣ್ಣು : ಕಟ್ಟಾಣಿ ಕಟ್ಟಾಳ್ಗಳು ಕಟ್ಟಿ ಮೇಕೆ ನಿಂತಾಳು ಬಟ್ಟಲುಗಣ್ಣು ತಿರುವ್ಯಾಳು (ಪಡಕಾ. ೦೦).

[ಬಟ್ಟಲು (< ಬಟ್ಟಲ್) + ಕಣ್ಣು (< ಕಣ್)]

ಬಟ್ಟವಂಜರ (ನಾ). ಗುಂಡಗಿರುವ ಪಂಜರ ; ದುಂಡಾದ ಪಂಜರ : ರತಿದೇವಿಯ ಕೇಳಿಗಿಟ್ಟ ಸುಣ್ಣಳತಿನ ಬಟ್ಟವಂಜರದ ಕೋಗಿಲೆಯುಂ ಗೆಲಿವಂದುದಿಂದುಮಂಡಳದ ಕಳಂಕಲೇಖೆಯುಮರೇಂದ್ರವಧೂಮುಖಪತ್ರ ವಿಭ್ರಮಂ (ಅಣಾಕ. ೨-೦೦). [ಬಟ್ಟ + ಪಂಜರ]

ಬಟ್ಟವಕ್ಕಿ (ನಾ). ಚಕ್ರವಾಕಪಕ್ಷಿ : ಬಟ್ಟವಕ್ಕಿಗಳಂಚೆ ಕೊಂಚೆ ಸಂಚರಿಸಿ ಬೊಬ್ಬಿಟ್ಟುದ ಕೇಳಿ ತಾಪಸರು ಕೆಟ್ಟರು (ಕೋಚಕ. ೬-೦೬).

[ಬಟ್ಟ + ಪಕ್ಕಿ]

ಬಟ್ಟವಟ್ಟು, ಬಟ್ಟವೊಟ್ಟು (ನಾ). ಗುಂಡಾದ ಬಟ್ಟು. — ತಿಲಕ : ಮಿಸುವ ಬಯ್ತಲೆಗಳಿಂ ಹ್ರಸ್ವಕೇಶಂಗಳಿಂ ನಿಸದಮಾ ಗುಲ್ಫಲಂಬಿತ ಚೀಲ ನಿಕರದಿಂದೆಸೆದಿರ್ದ ಬಟ್ಟವಟ್ಟುಗಳಿಂದೆ . . . ಎಸೆಯುತ್ತಿರಲ್ (ಅಣಾಕ. ೩-೬-೬). **ಬಟ್ಟವೊಟ್ಟು :** ಪುರಾಣೋಕ್ತ . . . ಅಪಸುಗಳ್ಗಂ ವೈಶ್ಯತತಿಗ ಮತಿಶಯಮಾಗಿ ಸುರುಚಿರವಿಭೂತಿಯಿಂದಂ ಬಟ್ಟವೊಟ್ಟಿಂದು ನಿರವಿಕುಂ (ಅಣಾಕ. ೦-೨-೦೩). [ಬಟ್ಟ + ಬಟ್ಟು]

ಬಟ್ಟವಡೆ (ಕ್ರಿ). ದುಂಡಾಗಿರು ; ವೃತ್ತತೆಯನ್ನು ಹೊಂದಿರು : ಬಟ್ಟವಡೆದ ರತ್ನಪವಳಮುತ್ತುಗಳ ಮೇಲ್ಕಟ್ಟು ಕಣ್ಮನಕೆ ರಂಜಿಸಿತು (ಕೋಚಕ. ೨೬-೦೪). [ಬಟ್ಟ + ಪಡೆ]

ಬಟ್ಟವನಿ (ನಾ). ಗುಂಡಗಿರುವ ಹನಿ ; ದುಂಡಾದ ತೊಟ್ಟು : ವನಜದಳಗಳಲ್ಲಿ ನಿಂದಮೃತದ ಬಟ್ಟವನಿಗಳೊ ಬಟ್ಟಮುತ್ತುಗಳೊ . . . ಎಂಬಂತೆ ಜನಪಗಕ್ಷರ ತೋಱುತಿಹುವು (ಕಚಕ. ೦೯-೦೯).

[ಬಟ್ಟ + ಪನಿ]

ಬಟ್ಟವಾಲು (ನಾ). ಕಾಸಿ ಗಟ್ಟಿಯಾದ ಹಾಲು : ಕಾದಿಳಿಯಾಱಿದ ಬಟ್ಟವಾಲಿನಂತೆ . . . ಅತಿರುಚಿಯ ಪಡೆದುದು (ಸಚಕಣಾ.೦-೬) ; ಬಟ್ಟವಾಲನು ಚಿಲುಪಾಲನು . . . ತನಿವಾಲ ಬಟ್ಟಜವ್ವನೆಯೆಡಮಾಡಿದಳರಸಗೆ ಬಟ್ಟಲು ಬಟ್ಟಲು ತುಂಬಿ (ಕಚಕ. ೦೦-೩೪) ; ಚಿಲುಪಾಲು ತಂಬಾಲು ಕೆನೆವೆರಸಿದ ಪಾಲು ಸುಲಲಿತ ಬಟ್ಟವಾಲುಗಳ . . . ಲಲನೆಯರುಣ ಬಡಿಸಿದರು (ಕಂಪಪ. ೯-೧೦). 'ಬಟ್ಟಳೆ' ಪರಾ.

[ಬಟ್ಟ + ವಾಲು (< ಪಾಲ್)]

ಬಟ್ಟವಾವುಗೆ (ನಾ). (ಮುಂಭಾಗದಲ್ಲಿ) ಗುಂಡಗಿರುವ ಹಾವುಗೆ ; ದುಂಡಾದ ಪಾದುಂಕೆ : ಶೈಲವದ್ಮದ ಬಟ್ಟವಾವುಗೆಗಳನು ಪೊಂಬಾಳೆಯ ನಿಡುಚವರಗಳಾ ಲೀಲೆಗಾತಿಯರೊಯ್ವುತಿರೆ (ಕಚಕ. ೪೭-೪೭).

[ಬಟ್ಟ + ಪಾವುಗೆ]

ಬಟ್ಟವೃತ್ತ (ನಾ). (?) : ಕವ್ಮಜನಂಬು ಕವ್ಮಜಂಗೆಂಬಂತೆ ಬಟ್ಟವೃತ್ತರ ಬಾಳಂತೆ ತನ್ನ ಕೊಂಬೆ ತನಗೆ ಘಾತಕಮಾಗೆ (ಅರ್ಜುನ. ೯-೪೩ ಪ). [?]

ಬಟ್ಟವೆಱೆ (ನಾ). ಗುಂಡಗಿರುವ ಚಂದ್ರ ; ಪೂರ್ಣಚಂದ್ರ ; ಹುಣ್ಣಿವೆಱೆಚಂದ್ರ : ಬಟ್ಟವೆಱೆಯಂತೆ ಮೊಗ . . . ಭೂಪಾಲಕನ ಪಟ್ಟದಾನೆಯ ಕುಂಭದಂತೆ ಜಘನಂ ಸೊಂಪುವೆಟ್ಟಿರ್ದ ವಾರನಾರಿಯರು ನಡತಂದರು (ಸೌಂಪು. ೬-೩೨) ; ಬಟ್ಟವೆಱೆಯ ಬೆಳ್ದಿಂಗಳ ಹೊಂದಾವರೆ ವಟ್ಟಲೊಳ್ ಸೋದಿವರಂಟೀ (ಕೋಚಕ. ೦-೨೪) ; ಬಟ್ಟವೊಗಕ್ಕೆ ಕಟ್ಟಿದಿರೊಳೆಸೆವ ಬಟ್ಟವೆಱೆಯ ದಿಟ್ಟಿ ತಾಗದಂತೆ ಮಱೆಗೆಯ್ದು (ರಾಷಕೇ. ೪-೦೪ ಪ). [ಬಟ್ಟ + ಪೆಱೆ]

ಬಟ್ಟವೊಟ್ಟು 'ಬಟ್ಟವಟ್ಟು' ನೋ.

ಬಟ್ಟಸಾಣೆ (ನಾ). ಗುಂಡಗಿರುವ ಸಾಣೆಕಲ್ಲು : ಚಂದ್ರಮಂಡಲಮೆಸೆದುದು ಕಿಸುಗಲ್ಲ ಬಟ್ಟಸಾಣೆಯ ಪಾಂಗಿಂ (ರಹುಶ್ಯ. ೩-೩೯).

[ಬಟ್ಟ + ಸಾಣೆ]

ಬಟ್ಟಳೆ (ನಾ). ಗಟ್ಟಿಮಜ್ಜಿಗೆ : ಇಟ್ಟು ನವಸವ್ಯಾರ್ಚಿಗೇಹದಗ್ರದಿ ನಿವಿರ್ದು ಬಟ್ಟಳೆಯ ಕಾಸುತಂ ಕ್ಷಾರಪ್ರಮಾಣದಿಂ ಪಿಟ್ಟನಿತ ಕೈಗೊಳಿಸಿ ಜೇರಗೆ ಮುರೀಚಮಂ ದಟ್ಟಮಾಗರವೆಱವುತ ಚಟ್ಟಿಯೊಳು ಘೃತವಿಂಗು ಪಯ ಫೇನಮಂ ನೀಡಿ (ಕಂಗಪು. ೯-೨೪). [ಬಟ್ಟ + ಅಳೆ]

ಬಟ್ಟಱ್ (ನಾ). ಹಾಸುಗಲ್ಲು ; ಚಪ್ಪಟೆಯಾದ ಕಲ್ಲು ; ಶಿಲಾಪಟ್ಟಕ : ಸಸಿಗಲ್ಲ ಬಟ್ಟಱ್‌ಗಳ ಮೇಲೆರಳೆಗಳು ನಸುನಿದ್ರೆಯಿಂದೊಱಗಿರಲು (ಕುರಾಪಾಂ. ೯-೦೬). 'ಪಟ್ಟಱ್' ಪರಾ. [ಬಟ್ಟ? (<ಪಡು$_1$)+ಅಱ್$_4$]

ಬಟ್ಟಾಡಿಸು (ಕ್ರಿ). ಹನಿಸು ; ಸುರಿಸು : ಮಗಳಂ ಮುದ್ದಾಡಿಸದ ಕಣ್ಣ ನೀರಂ ಬಟ್ಟಾ [ಪಾಕಾಂ. ಬೀಱಾ]ಡಿಸುವುದುಂ (ಲೀಲಾವ ೭-೩೯ ಪ). [ಬಟ್ಟು + ಆಡಿಸು]

ಬಟ್ಟಾಡು, ಬೊಟ್ಟಾಡು (ಕ್ರಿ). ೧. ದುಂಡಗಿರುವ ವಸ್ತುಗಳಾದ ಚೆಂಡು, ಗೋಲಿ, ಬಚ್ಚ ಮೊದಲಾದುವುಗಳಿಂದ ಆಡು ; ಚೆಂಡಾಟ, ಗೋಲಿಯಾಟ ಮೊದಲಾದುವುಗಳನ್ನು ಆಡು : ತನ್ನೋರಗೆಗಳಪ್ಪ ಪಲಂಬರ್ ಮಾಣಗಳ್ವೆರಸು ಪೊಱಪೊಱಲೊಳ್ ಬಟ್ಟಾಡುತ್ತಿರೆ (ಪಡ್ಯಾಕಾ. ೭೩-೨೨); ಪಟ್ಟಂದೆತ್ತುದು ಬೆಳ್ಳಿಯ ಬೆಟ್ಟಂ ಬಿಣ್ಪಂಗೆನಿಪ್ಪ ಕೋಟಿಕಶಿಲೆಯಂ ಬಟ್ಟಾಡಿದ ಬಾಹಾಬಳವಿಟ್ಟಳವೆಂಟನೆಯ ಕೇಶವಂಗಿದಿರುಂಟೇ (ಸಂಕಾಪಾ. ೦೨-೬೮); ಹೇಮಾಚಳಮಂ ಬಟ್ಟಾಡುವೀಶಪ್ರಮಥ ಸಮಿತಿ ಬಂದತ್ತು ಸಂರಂಭದಿಂದಂ (ಜಗನಿ. ೦೯-೦೦). ೨. (ಕಣ್ಣೀರು) ತೊಟ್ಟಿಕ್ಕು ; ಹನಿ : ಇಟ್ಟ ಮುಸುಕಿಳಿದ ಸುಯ್ ನಯನದೊಳು ಹೊಳೆಹೊಳೆದು ಬಟ್ಟಾಡುವುದಕ (ಹಸಕಾ. ಪಂ ೨೦೯) ; ಸುಟಿಗೊಂಡೇಟ್ವ ಮುದಶ್ರು ಪಕ್ಷಪುಟದೊಳ್ ಬಟ್ಟಾಡೆ (ಅಪಂಪು. ೨-೩೨) ; ಗಜಹಯಂಗಳ ಕಣ್ಣೊಳು ಬಟ್ಟಾಡಿದುವು ಕಂಬನಿಗಳು (ಸಪಪು. ೩೫-೦೯). ಬೊಟ್ಟಾಡು: ೨. ಏಣಾಂಕನಿಭವದನೆಯರು . . . ದಿಟ್ಟಿಗಳೊಳಗಶ್ರುಕಣ ಬೊಟ್ಟಾಡಲು ತೊಟ್ಟನೆ ಬಿಳ್ದಳಲಿದರು (ಶ್ರೀಪಾಂ. ೬-೩೮). [ಬಟ್ಟು+ಆಡು$_1$]

ಬಟ್ಟಾಣಿ 'ಬಟಾಣಿ' ನೋ.

ಬಟ್ಟಾನೆ (ನಾ). (?) : ಮೇಲ್ವಾಯ್ದ ಸಿಂಗಂಗಳೆಲ್ಲಮಾದಿಯ ಪಂದಿಯಂ ಪೇಱಿದ ಗ್ರಾಮಸಿಂಹಂಗಳಂತಿರ್ದುವು ಪೆಳಱಿ ಬೆಂಗುಡುವ ಬಟ್ಟಾ [ಪಾಕಾಂ. ಟ್ಟು] ನೆಗಳಂ ಮಣಿಯೇಱಿಂದಿಱಿದೆತ್ತಿದಲ್ಲಿ ಮದದ ಮಸಿಯಿಂ ಮಳೀಮಸಮಾದ ಮುಸುಂಬು ಮುಸುವಿನ ಮುಸುಂಬಿನಂತೆ ಕಡಲಂ ಕಟ್ಟಲೆಂದು ಬೆಟ್ಟಮಂ ಕಿಟ್ತೆತ್ತಿದ ಸುಗ್ರೀವನಂತಿರ್ದುದು (ಅರ್ಧನೇ. ೩-೦೦೩ ಪ). [?]

ಬಟ್ಟಿ$_1$ (ನಾ). ೧. ಹೊಟ್ಟೆ ; ಉದರ ; ಬಸಿರು : ಬಟ್ಟಿಯೊಡೆ ವಂತೊಱಲುವವರು ನಗುತಂ ನಲಿವು ಹುಟ್ಟಿಯಾನಂದಮಯರಾಗೆಲ್ಲರುಂ . . . ಹರಸುತ್ತಿರ್ದರು (ಸಿದ್ಧರಾ. ೯-೨೬) ; ಮೊಗರಸ ರಾಗವೇಱ್ ನೊಸಲಚ್ಛತರಂ ಪೊರೆಯೇಱ್ ಗಾತ್ರದಿಂದೊಗೆದು ಮುದಶ್ರು ಜಾಱ್ ತೆಳುವಟ್ಟ [ಟ್ಟಿ]ಯೊಳೊಯ್ಯನೆ ಸೂಲೆದೋಱಲ್ (ಕಾಪ್ಯಸಾ. ೩೩೯). ೨. ಒಂದು ಬಗೆಯ ಹೊಟ್ಟೆಯ ರೋಗ ; ಅಂಡವಾಯು : 'ಬಟ್ಟಿಕಟ್ಟು', 'ಬಟ್ಟಿಬೀಳು' ಪರಾ.

[ದೇ. ॥ ಮಲ. ವಟ್ಟಿ ; ತುಳು. ಕೊಡ. ಬಟ್ಟಿ]

ಬಟ್ಟಿ$_2$, ಭಟ್ಟಿ$_1$ (ನಾ). ಧಾನ್ಯಗಳನ್ನು ಅಳೆಯುವ ಒಂದು ಅಳತೆ.—ಪರಿಮಾಣ : ಅದನ್ನು ವಾರಕ್ಕೆ ಮಾಡುತ್ತಿದ್ದವರು ಎಲ್ಲಾ ಕಳೆದು ವರ್ಷಕ್ಕೆ ನಾಲ್ಕು ಬಟ್ಟಿ ಬತ್ತ ಕೊಡುತ್ತಿದ್ದರು (ಪುಸಕೂ. ೬) ; ಒಂದು ಎರಡು ಮೂರು ಎಂಬಾಗ ಸಾವಿರ ಬಟ್ಟಿ ಭೂಮಿಯನ್ನು ನಟ್ಟೂ ಆಯಿತು (ಶಾಪಗೀ. ೯೦). ಭಟ್ಟಿ$_1$: ನಮ್ಮ ಸೀಮೆಯಿಂದ ಏಳು ಸಾವಿರ ಭಟ್ಟಿ ಅಕ್ಕಿಯನ್ನು ಮೂರು ತಿಂಗಳ ಒಳಗೆ . . . ಜಮಾಯಿಸಿ ಕೊಟ್ಟೇವು (ರಾಸೇಂದ್ರ. ೦೨೮).

[ದೇ. ॥ ತಮಿ. ವಟ್ಟಿ; ಕೊಡ. ಬಟ್ಟಿ = ಎಂಬತ್ತು ಸೇರಿನ ಅಳತೆ]

ಬಟ್ಟಿ$_3$ 'ಭಟ್ಟಿ$_3$' ನೋ.

ಬಟ್ಟಿ$_4$ (ನಾ). (?) : ಬಾವಿಯ ಕೇರ(ಱ) ನಿಟ್ಟಗೆಯೆ(ಯ) ಕಟ್ಟಿಸು ಸುಣ್ಣಮನಿಕ್ಕು ಕಲ್ಲೊಳಾ ಪಾವೆಡೆಗಳೊಳ್ಳದಂತಿರಿಸು ಕಟ್ಟುಗೆ(ಗು) ಕಿಚ್ಚಿನೊಳಿಕ್ಕು ಮತ್ತಮಾ ಬಾವಿಯ ಬಟ್ಟಿ ನೀಳ್ದಗುಱ್ ಕಲ್ಗಳನೊಳ್ಳಿತನಿಕ್ಕಿ ಮತ್ತೆ ನೀಂ ಬಾವಿಯ ಸುತ್ತಲುಂ(ಮುಂ) ಮದಿಲನಿಕ್ಕಿಸು ಮಾಡಿಸು ನೀ(ಧಿ)ರ ಭಾಗ(ರ)ಕಂ (ಅಶ್ವಸು. ೦೦-೬೧). [?]

ಬಟ್ಟಿ$_5$ (ನಾ). (?) : "ಬಟ್ಟಿಯದು ಸಡ್ಡೆಯಕ್ಕುಂ [ಪಾಕಾಂ. ಪೊಟ್ಟಿಲದು ಪಟ್ಟಿಯಕ್ಕು]" (ಪುಂಗರಾ. ೧೦೨-೩). [?]

ಬಟ್ಟಿಕಟ್ಟು (ಕ್ರಿ). (ಬಾಧೆಯುಂಟು ಮಾಡುವ) ಹೊಟ್ಟೆಯೊಳಗಿನ ವಾಯುವನ್ನು ನಿಲ್ಲಿಸು ; ಅಂಡವಾಯುವನ್ನು ತಡೆ : ಬಟ್ಟಿ ಬಿದ್ದು ಬಹಳ ತೊಂದರೆಯಾಗಿದೆ, ಬಟ್ಟಿಕಟ್ಟಬೇಕು (ಕೂಡಿ). [ಬಟ್ಟ$_1$ +ಕಟ್ಟು$_1$]

ಬಟ್ಟಿಗೆ (ನಾ). ಬಣ್ಣ ಬಳಿಯುವ ಕುಂಚ : ಕೂಡ ಬಟ್ಟಿಗೆಯನ್ ತಿಟ್ಟ ಮಿಡಲ್ಕಿದೇನ್ನೆರೆದನೇ (ಎಕ. ೪. ಅಕಳ. ೯೯-೯; 1079); ಮದನನೆ ಬಟ್ಟಿಗೆಯೊಳ್ ತಿಟ್ಟವಿಟ್ಟವೊಲ್ ನೃಪನೆಸೆದಂ (ಪುಲ್ಲಪು. ೯-೦೨೬) ; ಪಳಿಕಿನ ಪಲಗೆಯುಮಂ ಬಣ್ಣವಣ್ಣಿಗೆಯ ಬಟ್ಟಿಗೆಗಳಂ ತಾನೆ ತಂದು ಕೊಟ್ಟು (ಲೀಲಾವ. ೭-೯೯ ಪ). [<ಸಂ. ವರ್ತಿಕಾ./ತಮಿ. ವಟ್ಟಿಕೈ]

ಬಟ್ಟಿಗೆವಲಗೆ (ನಾ). ಚಿತ್ರವನ್ನು ರಚಿಸುವ ಹಲಗೆ.—ಫಲಕ : ಬರೆಯಲೆಂದು ಬಟ್ಟಿಗೆವಲಗೆಯಂ ತರಿಸಿ ತಿಟ್ಟಮಿಟ್ಟು ಬರೆವನ್ನೆಗಂ (ಅಪಪು. ೯-೬೩ ಪ); ಶರತ್ಕಾಲದ ಜಳಧರಮಂ ಕಂಡದಱ ದೊರೆಯ ಚೈತ್ಯಾಲಯಮಂ ಮಾಡಿಸುವೆನೆಂದು ಬಟ್ಟಿಗೆವಲಗೆಯಂ ತರಿಸಿತದಾಕಾರಮಂ ಬರೆಯೆ (ಶಾಪುಂಪು. ೨೩); ಬಟ್ಟಿಗೆವಲಗೆಯೊಳಾಗಳೆ ದಿಟ್ಟಿಗೆ ನೇರ್ವಟ್ಟು ತೋಱ್ ನೆಟ್ಟನೆ ಭೂಪಂ ತಿಟ್ಟಮಿಡಲ್ (ಪಾರ್ಶ್ವಪು. ೯-೬೬). [ಬಟ್ಟಿಗೆ+ಪಲಗೆ]

ಬಟ್ಟಿಜಾರು (ಕ್ರಿ). = ಬಟ್ಟಿಬೀಳು: ಬಟ್ಟಿಜಾರಿ ಬಹಳ ತೊಂದರೆಯಾಗಿದೆ (ಕೂಡಿ). [ಬಟ್ಟಿ$_1$+ಜಾರು$_1$ (<ಜಾಱು$_1$)]

ಬಟ್ಟಿಡು, ಬೊಟ್ಟಿಡು (ಕ್ರಿ). ೧. ಕಸ್ತೂರಿ, ಚಂದನ, ಕುಂಕುಮ ಮೊದಲಾದುವುಗಳಿಂದ ಹಣೆಯ ಮೇಲೆ ಗುಂಡಾದ ಗುರುತನ್ನು ಇಡು.—ತಿಲಕವಿಡು : ದಿಟ್ಟಿ ಹತ್ತೀತೆಂದು ಬಟ್ಟೀಡತಿದ್ದೆ ಭಸಿತದ ಹಣೆಮೇಲೆ ಸುಟ್ಟುಹೋಗಲೆಂದು ಕೆಟ್ಟಗಣ್ಣು (ಸಿದ್ಧಪು. ೯-೯೯). ೨. (ಕಣ್ಣೀರು) ತೊಟ್ಟಿಕ್ಕು; ಹನಿ : ಬಟ್ಟಿಡುವಾನಂದಾಶ್ರುವಿನೊಳಗಂದು ತೊಟ್ಟನೆ ಸಖಿಯ ಕೇಳಿದಳು (ಕಂಪಡಿ. ೯-೦೦೦). ಬೊಟ್ಟಿಡು : ೧. ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟಿಟ್ಟು (ಪಂಪಭಾ. ೯-೬೭ ಪ) ; ಪಟ್ಟಮಂ ನೆರೆದು ಕಟ್ಟಿ ಬೊಟ್ಟಿಟ್ಟರ್ . . . ಆತನಾ ವಿನಮ್ರ ನಿಟಿಲಾಗ್ರದೊಳ್ (ಅಪಂಪು. ೯-೩೯). ೩. ಹಣೆಯ ಮೇಲೆ ತಿಲಕವಿಟ್ಟು ಕೊಳ್ಳು : ರೋಷವ ಹಿಡಿದರೀಗಳೆ ಸುಟ್ಟು ಬೊಟ್ಟಿಡುವನು ಜಗತ್ರಯವ (ಕುಪ್ಯಾಲಿ. ೦೬-೦೬); ಬೆಟ್ಟ ಕರ್ಪುರವುರಿದು ಬೊಟ್ಟಿಡಲು ಬೂದಿಲ್ಲ (ಸರ್ವಾಕ್ಷ. ೦೦೦). [ಬಟ್ಟು+ಇಡು$_1$]

ಬಟ್ಟಿತು, ಬಟ್ಟಿತ್ತು (ನಾ). ೧. ಗುಂಡಗಿರುವುದು; ದುಂಡಾದುದು; ವರ್ತುಲಾಕಾರವಾದುದು : "ಸೊನ್ನಲಿಗೆಯೆನೆ ಬಟ್ಟಿತಕ್ಕು" (ಕಣ್ಣಕ್ಕ. ೯೬); ತುಱುಗೆಮ ನೀಳ್ದ ಪುರ್ವ ನಿಡುಗಣ್ ಪೊಱ್ಯಲ್ಲದೆ ಬಟ್ಟಿತಪ್ಪ ಬಾಯ್ದೆಱ್ (ಪಂಪಭಾ. ೦-೦೦೯) ; ಅನಿಲಹತಿಯಿಂದಂಬರಕೆ ನೆಗೆದ ವನಧಿ ಮಧ್ಯದ ಬಟ್ಟಿತಪ್ಪ ಚಿಪ್ಪೊ . . . ಎನಲೆಸೆದುದಸ್ತಾದ್ರಿಯೊಳ್ ಚಂದ್ರ ಮಂಡಲಂ ಮುನ್ನೇಸಱಾಗಮದೊಳು (ಸಪಪು. ೦೦-೯೦). (ಗು). ೨. ಗುಂಡಾದ ; ವರ್ತುಲಾಕಾರವಾದ : ಬಟ್ಟಿತು ಮೊಲೆ, ಬಟ್ಟಮೊಲೆ (ಕಪ್ಪಾಪು. ೩೦೯ ಪ್ರಯೋ). ಬಟ್ಟಿತ್ತು : ೧. "ನಿಸ್ತುಲಂ, ವರ್ತುಳಂ ವೃತ್ತಂ—ಈ ೩ ಬಟ್ಟಿತ್ತು" (ಪರಾಯು. ೦೩೯-೬೯).

ಬಟ್ಟಿತಾಗಿ, ಬಟ್ಟಿತ್ತಾಗಿ=ಗುಂಡಾಗಿ ; ದುಂಡಾಗಿ ; ವರ್ತುಲಾಕಾರವಾಗಿ : ಬಟ್ಟಿತಾಗಿಯೆಂ ಹಣೆಗೆ ಸುಣ್ಣದ ಬೊಟ್ಟಿಸಗಿ . . . ದಾಸಿಯ ರಿಟ್ಟಣಿಸಿದರು ಸಂಜೆಯಲಿ ಪುರವರದ ಮಧ್ಯದಲಿ (ಜಿಪಂಪು. ೦೬-೯); ಬಟ್ಟಿತಾಗಿಯೆ ಬೊಟ್ಟನಿಟ್ಟು ಒಪ್ಪುವ ಜೈನ ನೆಟ್ಟನೆ ಸ್ವರ್ಗ ಪಡೆಯುವಡೆ

ಸಾಣೆಕಲ್ ಕೆಟ್ಟ ಕೇಡೇನು (ಸರ್ವಜ್ಞ. ೧೦೨೦); ನೀನವ್ವೊಡೆ ಬಹುಭಾಷಿ ತುಂಬಿದ ಸಿದ್ದಿಗೆಯಂತೆ ರಥದ ಗಾಲಿಯಂತೆ ಬಟ್ಟಿತ್ತಾಗಿರ್ಪೆ ನಿನ್ನನೆಂತುಯ್ಯಲ್ಪರ್ಕುಂ (ಪಂಪಕಂ. ೦೩೦-೨೦); ಕೈವಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ (ಸಮುದ.೦೭ ಸ್ವತ್ತಿ). ಬಟ್ಟಿದಂ = ದುಂಡಾದ ಶರೀರವುಳ್ಳವನು ; ಗುಂಡಗಿರುವವನು : ಸದಯಂ ಕೆಚ್ಚನೆ ಪ್ಪೆ ಬಟ್ಟಿದನತಿಚಪಳಂ ಸಖಿಪ್ರಿಯಂ ಸಸಿಯೆನಿಕುಂ (ಪಾಶಕಿ. ೨-೨೦). ಬಟ್ಟಿದುವು (ಬಹುವ) : ಮೊಲೆಗಳ್ ಬಟ್ಟಿದುವಾಗಿ ಕರ್ಗಿದ ಕುರುಳ್ ಕೊಂಕಾಗಿ ಕಣ್ಗೆಯ್ದೆ (ಪಂಪಭಾ. ೪-೬೪); ಸಿಂಹದ ಕಟಿಯಂತೆ ಬರ್ಹಿ ಮಾತ್ರಾಂತಂಗಳಾಗಿ ಬಟ್ಟಿದುವಾದ ಕಟಿತಟಂಗಳುಂ (ಭಾರಪು. ೨-೩ ಪ).

[<ಬಟ್ಟು]

ಬಟ್ಟಿತ್ತು 'ಬಟ್ಟಿತು' ನೋ.

ಬಟ್ಟಿಬೀಳು (ಕ್ರಿ). ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ನೋವಾಗು; ಅಂಡವಾಯು ಕಟ್ಟು : ಬಟ್ಟಿಬಿದ್ದು ಬಹಳ ತೊಂದರೆ ಕೊಡುತ್ತಿದೆ (ಕೂಡಿ). [ಬಟ್ಟಿ$_1$ + ಬೀಳು$_1$ (<ಬೀಟು್)]

ಬಟ್ಟಿಸುಂಕ 'ಭಟ್ಟಿಸುಂಕ' ನೋ.

ಬಟ್ಟು, ಬಟ್ಟು$_1$, ಬಟುವು, ಬಟುಹು, ಬಟ್ಟ$_1$, ಬೊಟ್ಟು$_2$ (ನಾ). ೧. ವೃತ್ತ; ಮಂಡಲ; ಬಿಂಬ : "ಬಟ್ಟೆಂದು ಮಂಡಲಂ" (ಕನಸಾ. ೪೬-೨೪); ಹುಣ್ಣಿಮೆಯ ಸಸಿಯ ಬಟ್ಟೊಸರ್ದು ಪರಿತರ್ಪ ದಿವ್ಯಾಮೃತದ ತೊಱೆಯೊ . . . ಈ ಕೃತಿಯ ರಸವೊ ಪೇಳೆಂದೆಲ್ಲ ರಸಿಕರಾನಂದಿಪಂತೆಸಗುವುದು (ಪದ್ಮರಾ. ೦-೩೦); ನೆಱೆದಿಂಗಳ ಬಟ್ಟ ಕಟ್ಟಿದಿರೊಳು ಕಂಡಱತ ಚಕೋರಿಯಂತವಳು ಉಱೆ ಪೆರ್ಚಿದಳೆದೆಯೊಳಗೆ (ಕುರಾಸಾಂ. ೩೨-೦). ೨. ಗುಂಡಾಗಿರುವ ವಸ್ತು, ಆಕೃತಿ ಮುಂತಾದುವು : ಭ್ರಮದ್ಭ್ರಮರಸಂಕುಳಂ ಬನದೊಳಟ್ಟಿಯಿಂ ದಾಡುತಿರ್ಪ. ಮನ್ಮಥನ ಪೊನ್ನ ಬಟ್ಟುಗಳ ಪೋಲ್ವೆಯಂ ಪುಟ್ಟಿಕುಂ (ಸುಳುಮಾ. ೯-೩೦); ಪಳುಕಿನ ಬಟ್ಟುಗಳ್ ಗಗನದಿಂದುದಿರ್ದಪ್ಪುವು ಚಿತ್ರಮೆಂಬಿನಂ ಫಳಫಳನಭ್ರದಿಂದ ಮಿಡುಕುಂಬನಿ ಸೂಸೆ (ಜಗವಿ. ೪-೦೮); ಕರಂ ಕಾಯ್ದ ಕರ್ಬೊನ್ನ ಬಟ್ಟು ಸೀವರದ ಪನಿಯೊಳಾಱುಗುಮೆ (ಜೀವಸಂ. ೮೦-೦೦ ಪ). ೩. ಒಂದು ಬಗೆಯ ಗುಂಡಾದ ಆಭರಣ : ಪುಳಿಯೊಳಲೆದ ಪವಳದ ಬಟ್ಟಿನಂತೆ ಸೊಗಯಿಸುವ ಸಂಸಾರಸಾರೋದಯನ ಬಿಂಬಾಧರಮನಂಗರಾಗರಸದುರುಳಿಯಂತಾದುದು (ಪಂಪಭಾ. ೨-೩೯ ಪ). 'ಬೈತಲೆಬಟ್ಟು' ಪರಾ. ೪. ಗುಂಡಾಗಿರುವ ಗುರುತು; ದುಂಡಾದ ಚಿಹ್ನೆ : ಹಣಚಿಬಟ್ಟಿನ ಕೈಯ ಒತ್ತಿ ಹಿಡಿಯಲು ಬ್ಯಾಡ ನೆತ್ತರಿಳಿದಾವು ಬೆರಳೀಗೆ (ಕನ್ನಸಾ. ೦೨೦). ೫. ಹಣೆಯಲ್ಲಿ ಇಟ್ಟುಕೊಳ್ಳುವ ಕಸ್ತೂರಿ, ಕುಂಕುಮ, ಗಂಧ, ಸಾದಂ ಮೊದಲಾದುವುಗಳ ದುಂಡನೆಯ ಗುರುತು; ತಿಲಕ : ಹಾರಮನಿಕ್ಕಿ ಪೊಚ್ಚಪೊಸಮಲ್ಲಿಗೆಯಂ ಮುದಡಿಂ ತುಱುಂಬಿ ವಿಸ್ತಾರದಿನಿಟ್ಟು ಚಂದನದ ಬಟ್ಟಂ (ರರ್ಮಾಮ್ಯ. ೬-೦೭೫) ; ಪುರಸ್ತ್ರೀಯ ಮುಖಕ್ಕಿಟ್ಟ ಬ[ಜಾಶಾಂ. ಬೊ]ಟ್ಟೋಯೆನಿಸಿ ಭೂಪಾಲಗೇಹಂ ವಿರಾಜಿಸುವುದು (ಪದ್ಮರಾ. ೩-೨೩); ಭೂರಮಣಿಯ ಪೆಱೆನೊಸಲ ರತ್ನದ ದಿವ್ಯಚಾರುತರದ ಬಟ್ಟಿನಂತೆ ಶ್ರೀರಂಗಪಟ್ಟಣವೆಸೆದಿಹುದು (ಕಂಪವಿ. ೨-೨೪). ೬. ಆಟದಲ್ಲಿ ಉಪಯೋಗಿಸುವ ದುಂಡಾದ ಬಿಲ್ಲೆ ಮತ್ತು ಅದರಿಂದ ಆಡುವ ಆಟ : ಮಾಣಿಯೊಂದು ಬಟ್ಟಿನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ (ಪದ್ಮಾರಾ. ೬೩-೨೪); ದುರ್ಯೋಧನಪ್ರಭೃತಿಗಳ್ ನೂರ್ವರುಂ ಧರ್ಮಪುತ್ರಾದಿಗಳಯ್ವರುಂ . . . ಗುಳ್ಳೆಗೊಟ್ಟಿ ಬಟ್ಟುಳಿಸೆಂಡುಂ ಪೊಡೆಸೆಂಡೆಂಬಿವನಾಡುತ್ತೊಡವಳೆದರ್ (ಪಂಪಭಾ. ೨-೩೦); ಕಮಳಮುಖಿ . . . ಮಿಱುಗುವ ನೀಲದ ಬಟ್ಟಿಂ ತಿಱಿಕಲ್ಗಳ ನಾಡುವಂತೆ ಕಣ್ಗೆಸೆದಿರ್ದಳ್ (ಕಾರಂಕಾ. ೨೬). ೭. ತೂಕ ಮಾಡಲು ಉಪಯೋಗಿಸುವ ಗುಂಡಗಿರುವ ಲೋಹದ ಬಿಲ್ಲೆ; ತೂಕದ ಬಿಲ್ಲೆ : ಒಂದೊಂದು ವಿಧವಾದ ತೂಕದ ಬಟ್ಟುಗಳೂ ಅಳತೆಯ ಸಾಧನಗಳೂ ವ್ಯವಹಾರದಲ್ಲಿದ್ದುವು (ಭಾಗ್ಯಶಿ. ೩), ವಾಣಿಜ್ಯಜೀವಿಗಳಾದ ಈ ನಗರದ ನಿವಾಸಿಗಳು ಬಟ್ಟುಗಳ ತೂಕವನ್ನು ಕರಾರುವಾಕ್ಕಾಗಿ ನಿರ್ಣಯಿಸತಕ್ಕದ್ದು ಸಹಜವೇ ಆಗಿದೆ. ಕೆಲವು ಬಟ್ಟುಗಳ ತೂಕ ಒಂದಕ್ಕಿಂತ ಒಂದು ಇಮ್ಮಡಿಯಾಗಿದೆ (ಗಜೆಸ. ೬೩). ೮. ಗುಂಡಗಿರುವ ನಾಣ್ಯ : ಆತಗೊಂದುಸಾವಿರ ಹೊನ್ನ ಪ್ರತಿಮಾಸವಿಕ್ಕುವೆವ ದೊಂದುದಿನಕರ್ಥಕಹ ಬಟ್ಟಿಲ್ಲದೆಂತಿದಱ ಕಾರಣವ ಸಾಮಭೇದದಿಂದಱಿಯದಡೆ (ಸಿಂಗರಾ ೩೦-೦೦). ೯. ಹಪ್ಪಳ, ಚಪಾತಿ ಮೊದಲಾದುವನ್ನು ಲಟ್ಟಿಸಲು ಮಾಡುವ ಕಣಿಕದ ಸಣ್ಣ ಉಂಡೆ : ಕುಟ್ಟಿ ಕಣಿಕದೊಳು ಸರಿಬೆಣ್ಣೆಯಾಱಱೊಳೊಂದು ಬಟ್ಟವಾಲೆರೆಯಿಕ್ಕಿ ಮಿದಿದು ಬಟ್ಟಂ ಮಾಡಿ ದಟ್ಟಿತೆಂದೆನಿಸಿ ಲತೆಯಿಱುದು ಹಂಚಿನೊಳಿಕ್ಕಿ ಸುಟ್ಟು ಪರಿಯಣಕೆ ತೆಗೆದು (ಸೂಪಶಾ. ೦-೦೦); ಹಪ್ಪಳದ ಹಿಟ್ಟು ಕಲಸಿ ಬಟ್ಟನ್ನು ಮಾಡುತ್ತಿದ್ದರು (ದೂರಸ. ೨೮೪). ೧೦. ನೀರು ಮುಂತಾದ ದ್ರವ ಪದಾರ್ಥಗಳ ಹನಿ; ತೊಟ್ಟು : "ಕಾಳು, ಹನಿ, ತಟಕು, ತೊಟ್ಟು, ಬಟ್ಟು, ಅಗಳು" (ಕಂಪುಹು. ೮೦). ೧೧. (?) : ಇಟ್ಟ ನಿಸಾಂತ ಹೇತುಗಳಿನಾದಮಗುರ್ಬ್ಬಿಸಿ ಬಟ್ಟು ಬೀಟುವೊಲ್ತೊಟ್ಟನೆ ನೊನ್ದು ಬೀಟ್ವೆಡೆಯೆ × × × ಗೊಣ್ಡು (ಎಕ. II. ೦೩೯-೦೭; ಸು. 940). ಬಟ್ಟು$_1$: ೨. ಆಗಸದ ಗುಣವೆ ಬಯಲು . . . ರೂಪೆ ಬಟು ಕುಱುಹೆ ಬಿಂದು ವಿನಂತಲೈ ಗರುವ ಕೇಳ್ಸದಾಶಿವನೆಯಧಿದೈವ (ವೀಶೈಪು. ೬-೩-೪೮); ಈ ಬಟುವಿನ ಭೂಮಿಯಂ ಹಗ್ಗದಿಂದ ಸುತ್ತಣ ವಳಯವನಳೆದು . . . ಬಂದುದು ಕಂಭದ ಲಬ್ಧ (ಕ್ಷೇತ್ರಗ. ೦೩-೩). ಬಟುವು : ೨. ಕೊರೆ ಕೊರೆದಾಣಿಗೈದಿಹ ಚಂದ್ರಕಾಂತದ ಶಿಲೆಯ ಬಟುವುಗಳೋ (ಪರಾಮಾ. ೦೩೧-೪೦) ; ೧೮ ಚೌಕದ ಕಮಲ ೧ ರತ್ನಕಂಬಳೀ ಬಟುವು ೧ ಕಾರ್ವೆ ಭುರಕಿ ೧ ಮಾಮುಜಾಮ ಭುರಕಿ (ಎಕ. XIV. ಪಂಜನ. ೨೯೩-ಪುಟ. ೦೪೩; 1847). 'ಬಟುವುದಿಂಬು' ಪರಾ. ಬಟುಹು : ೨. "ಅಮೃತದಲಿ ಬಟುಹಿನಲಿ ದೈತ್ಯರಲಿ . . . ದೃಢದಲ್ಲಿ ಮೇಣ್ ವೃತ್ತನಾಮಮೆನಿಕ್ಕು" (ಮಂಗರಾ. ೧೩೪-೬೫); ಬೆರಲ ದಪ್ಪದೊಳು ಬಟುಹಾಗಿ ಕಳಿಲೆಯನ್ನುತ್ತರಿಸಿಕೊಂಡು (ಸೂಪಶಾ. ೬-೩). ಬಟ್ಟ$_1$: ೧. ಇಂತಿರ್ದುದಿದು ತೊಳಪ ನೇಸಱುಾ ಬಟ್ಟಮದು ನಡುಬಾನನ್ ಅಡರ್ದು ನಿಲ್ವನ್ನೆವರಮ್ (ಅಂಶಿಗೂ. ೨೦-೪೦೩). 'ಬಟ್ಟವಡೆ' ಪರಾ. ಬೊಟ್ಟು$_2$: ೩. ಮುತ್ತಿನ ಬೊಟ್ಟು ಬುಗುಡಿಯ ಚಕ್ರ ನವರತ್ನ ಕೆತ್ತಿದ ತೋಳ ಪಡಿಕರವು (ಶಾಂತೀಸ. ೩-೬೯); ರನ್ನದೋಲೆ ಮುತ್ತಿನ ಬೊಟ್ಟು ಪೊಳೆವ ಮೂಗುತಿ ಕಂಠಮಾಲೆ . . . ಕಂಕಣಂಗಳಂ ಲಲನೆಯರ್ ಗಿರಿರಾಜಸುತೆಗೆ ಸಿಂಗರಿಸಲ್ (ಕಬಪು. ೩೭-೯); ಎಸೆವ ರತ್ನದ ಬೊಟ್ಟಿನ ಹರಳೋಲೆಯ . . . ಬಿಸಜಗಂಧಿಯರೈದಿದರು (ಕಂಪವಿ. ೨೦-೦೪). 'ತಾಳಿಬೊಟ್ಟು', 'ಬೈತಲೆಬೊಟ್ಟು' ಪರಾ. ೫. "ತಿಳಕಂ, ತಮಾಳಪತ್ರಂ . . . ಲಲಾಟಿಕಾ — ಈ ೬ ಬೊಟ್ಟು" (ಹಲಾಯು. ೮೯-೩೮೭); ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟಿಟ್ಟು (ಪಂಪಭಾ. ೪-೮೭ ಪ); ನೊಸಲೊಳಿರಿಸಿದ ವಿಭೂತಿಯ ಬೊಟ್ಟು ಬೆಳಗುತಿರೆ (ಇಹರ. ದೇ. ೩೨-೯); ಹಣೆ ತುಂಬ ಚಂದ್ರನಂತಹ ಕುಂಕುಮದ ಬೊಟ್ಟು ಇತ್ತು (ಅಪೋಲೀ. ೭೭). ೧೦. ಬೊಟ್ಟಿನನಿತು ಸುಖಕಾಗಿ ದುಃಖವನೊಂದು ಬೆಟ್ಟದನಿತ ನುಂಬರಕಟಾ (ಭರಸ. ೬೫-೩೬); ಜೈನೆಸಾಮ್ರಾಜ್ಯದಲ್ಲಿ ಧರ್ಮದ ಹೆಸರಿನಲ್ಲಿ ಒಂದು ಬೊಟ್ಟೂ ರಕ್ತಪಾತವಾಗಲಿಲ್ಲ (ಭಾರದ. ೦೭೬); ಖಂಡುಗ ಹಾಲಿಗೆ ಒಂದೇ ಬೊಟ್ಟು ಹೆಪ್ಪು (ಗಾದೆ).

ಬಟ್ಟಿನಂಬು = "ದುಂಡಾದ ಮೊನೆಯುಂಳ್ಳ ಬಾಣ" (ಶಂಶದೀ. ೫೦೩); ಅರಿಗನ ಬಟ್ಟಿನಂಬುಗಳ ಬಲ್ಸರಿ ಸೋಂಕುಗುಂ (ಶಂಶಭಾ. ೦೨-೨೦೬). ಬಟ್ಟುವಾಗಿ = (ಆಲಂ) ಪೂರ್ಣವಾಗಿ : ಆ ಹತ್ತು ಸಹಸ್ರವರಹಗಳನ್ನು . . . ಈಗಳೇ ಕಯ್ಕೊಳಿಸಿ ಕುಡಬೇಕು . . . ಒಂದೇ ಗಂಟಿನಲ್ಲಿ? ಬಟ್ಟುವಾಗಿ ? (ಚಟ್ಟಲ. ೧೪೯-೩).

[<ಸಂ. ವೃತ್ತ./ಪ್ರಾ. ವಟ್ಟ./ತಮಿ. ಮಲ. ಪೊಟ್ಟು, ವಟ್ಟ, ವಟ್ಟು; ತುಳು. ಬೊಟ್ಟ; ಕೊಡ. ಬೊಟ್ಟ್; ತೆಲು. ಬೊಟ್ಟು, ಬಟುವು]

ಬಟ್ಟುಗುರ್ (ನಾ). ಗುಂಡಗಿರುವ ಉಗುರು ; ದುಂಡಾದ ನಖ : ಚಂದ್ರನೆಸೆದತ್ತುದಯಾವನಿಭೃತ್ತಿವಿಕ್ರಮಂ ನೆಗಪಿದ ಪಾದದುಂಗುಟದ ಬಟ್ಟುಗುರೆಂಬಿನಮಂಬರಾಗ್ರದೊಳ್ (ಚಳಿ. ೬-೨೨).

[ಬಟ್ಟು + ಉಗುರ್$_1$]

ಬಟ್ಟುಗೆಯ್ (ಕ್ರಿ). ದುಂಡು ಮಾಡು; ಉಂಡೆ ಮಾಡು : ಸಿಡಿಲಂ ನೆಟ್ಟಗೆ ಬಟ್ಟುಗೆಯ್ದು ತೆಱನಪ್ಪು ದಿಟ್ಟಿಯುಂ (ಶಾಂತೀಶ್ವ. ೩-೫).

[ಬಟ್ಟು + ಕೆಯ್$_1$]

ಬಟ್ಟುಗೆಯ್ದು (ನಾ). ದುಂಡಗಿರುವ ಆಯುಧ; ಚಕ್ರ : 'ಬಟ್ಟುಗೆಯ್ದು' ಪರಾ.

ಬಟ್ಟುಗೆಯ್ದುಗಯ್ಯ = ಚಕ್ರಾಯುಧವನ್ನು ಕೈಯಲ್ಲಿ ಹಿಡಿದಿರುವವನು; ವಿಷ್ಣು : "ಸಿರಿಯರಸನಿಂಗಡಲಳಿಯ ಸೌರಿ . . . ಕಾವನಯ್ಯಂ ಬಟ್ಟುಗೆ[ಶಾಶಾಂ. ಗ]ಯ್ದುಗಯ್ಯಂ ಭಾವಿಸೆ" (ಶಬ್ದಮಂ. ೬).

[ಬಟ್ಟು + ಕೆಯ್ದು]

ಬಟ್ಟುವೆಱು (ಕ್ರಿ). ದುಂಡಾಗು; ವೃತ್ತಾಕಾರವನ್ನು ಪಡೆ : ಬಟ್ಟುವೆತ್ತ ಮೌಕ್ತಿಕದ ಛತ್ರ ಸೂರೆಪಾನ ಘಟಿಸಿ ನಿಂದಿವೆ (ಕೃಷ್ಣವಿ. ೨-೨೯).

[ಬಟ್ಟು + ಪೆಱು$_1$]

ಬಟ್ಟುವೊಱಗು (ನಾ). ಗುಂಡಗಿರುವ ದಿಂಬು.—ಲೋಡು : ಮಡಿಸಿ ಹಚ್ಚಡಿಸಿ ರತ್ನದ ಬಟ್ಟುವೊಱಗ ಸಂಗಡಿಸಿದರತಿಮುದದಿಂದ (ಕಂಪಾ. ೬-೦೩).

[ಬಟ್ಟು + ಒಱಗು$_2$]

ಬಟ್ಟೆ$_1$ (ನಾ). ಹಾದಿ; ಮಾರ್ಗ; ದಾರಿ : "ಅಧ್ವಾ, ಪಂಥಾಃ . . . ಪದ್ಯಾ, ನಿಗಮಃ—ಈ ೧೨ ಬಟ್ಟೆ" (ಹಲಾಯು. ೪೩-೦೦೫); ಬಟ್ಟೆಯೊಳೊರ್ವನಂ ಪೆಡಂಗಯ್ಯುಡಿಯೆ ಕಟ್ಟಿ ಒಂದೆವಱಿಗುಟ್ಟಿ ಪೊಟಲ ಜನಂಗಳ್ ಮುಸಱಿಕೊಂಡು ನೋಡುತ್ತಮೊಡವರೆ (ವಡ್ಡಾರಾ. ೦೩-೨೪) ; ಗದಾದಂಡಮಂ ಕೊಂಡೊರ್ವನೆ ವೈಶಂಪಾಯನಸರೋವರದ ಬಟ್ಟೆಯಂ ನಡೆಗೊಂಡು (ಶಂಶಭಾ. ೦೩-೭೦ ಪ); ಯಮನಂದನನ ಪಾರ್ಥನ ಕಾಲೊಡೆದು ಬಸಿವರುಣಜಲದಲಿ ಬಟ್ಟೆ ಕೆಸಱಾಯ್ತು (ಕುಸ್ಕಾಅ. ೯-೦).

ಬಟ್ಟೆಯಂ ಬಡಿ, ಬಟ್ಟೆಯ ಬಡಿ = (ಆಲಂ) ದಾರಿಹೋಕರನ್ನು ಹೊಡೆ; ದರೋಡೆ ಮಾಡು : ಭರದಿಂದ ಬಟ್ಟೆಯಂ ಬಡಿದು ಹರದರ ಕೆಯ್ಯ ಶರನಿಧಿಯ ಮುತ್ತುಮಂ ತಂದು (ಸಮ್ಯಕ್ಕೌ. ೦೦-೨೯); ಬಟ್ಟೆಯ ಬಡಿವ ಕಳ್ಳಂಗೆ ಬೇಹು ಸಂದು ಕಳವು ದೊರಕಿದಂತೆ (ಅಪಸಂ. ೨೦೯-೯೪೦); ಬಟ್ಟೆಯ ಬಡಿದ ಕಳ್ಳಬಂಟನ ಭೂಪಾಲರು ಬೇಹನಿಕ್ಕಿ ಹಿಡಿತರಿಸಿ ನಾಳೆ ಶೂಲಕ್ಕೆ ತೆಗೆಸುವರೆ (ಘನವ. ೭-೫). ಬಟ್ಟೆಯ ಕಣ್ = ದಾರಿಯ ಎದುರು,—ಮುಂಭಾಗ : ಬಟ್ಟೆಯ ಕಣ್ಣೊಳಡ್ಡಂ ಬಿಟ್ಟಿರ್ದ ವೃದ್ಧವಾನರನಂ ಕಂಡು (ಶಂಶಭಾ. ೬-೩೦ ಪ). ಬಟ್ಟೆಯ ಬಾಧೆ = ದಾರಿಯಲ್ಲಿ ಕಳ್ಳಕಾಕರಿಂದ ಉಂಟಾಗುವ ಹಿಂಸೆ,—ತೊಂದರೆ : ಕವಿಳಾಸಪುರದಲ್ಲಿ ಸುಂಕ ಸಾದ ತಳಸಾರಿಗೆ ಬಟ್ಟೆಯ ಬಾಧೆ ಗ್ರಾಮಬ್ರಯನಿಧಿ . . . ವಿವರ (ಎಇ. XXI, ೨-೭೨; 1260). ಬಟ್ಟೆಯ ಬೊಮ್ಮ = ಕಾಲುದಾರಿಯಲ್ಲಿರುವ ಕ್ಷುದ್ರದೇವತೆಯ ವಿಗ್ರಹ : ಬಂಜೆ ಮಕ್ಕಳ ಬಯಸಿ ಬಟ್ಟೆಯ ಬೊಮ್ಮಂಗೆ ಹರಸಿಕೊಂಡಂತಾಯಿತ್ತಯ್ಯ (ಘನವ. ೨೦-೦೭). ಬಟ್ಟೆಯರ್ = ದಾರಿಹೋಕರು : ವಿವಿಧದೇವಗೃಹದಾಟಪಾಟದಿಂ ಮಱುಗಿ ಬಟ್ಟೆಯರ ನೋಟ್ಟು ನೋಟದಿಂ . . . ನೆಱೆಯೆ ಸೊಗಯಿಪಾಯೇಕಚಕ್ರಮಂ ಮೆಚ್ಚಿದಂ ಹರಿಗನಮಿತವಿಕ್ರಮಂ (ಶಂಶಭಾ. ೩-೨೨).

[<ಪ್ರಾ. ವಟ್ಟ, ವಟ್ಟಾ./ಸಂ. ವರ್ತ್ಮನ್./ಹಿಂ. ಮರಾ. ವಾಟ./ತುಳು. ಕೊಡ. ಬಟ್ಟೆ]

ಬಟ್ಟೆ$_2$ (ನಾ). ೧. ವಸ್ತ್ರ; ಅರಿವೆ: "ಪಥದೊಳಗಱಿವೆಯೊಳು ಬಟ್ಟೆಯು" (ಶಬ್ದಮಂ. ೯೦); ಬಟ್ಟೆಯ ನೀರೊಳಗದ್ದಿ ಒಣಗಿಸಿ ಉಟ್ಟುಕೊಂಡರೆ ಅದು ಮಡಿಯಲ್ಲ (ಪುರಂದ. ೦-೦೦೯-೦); ಬದುಕಿಗೆ ಅಗತ್ಯವಾದ ಅನ್ನ ಬಟ್ಟೆಗಳನ್ನು ಒದಗಿಸುವ ವೃತ್ತಿಗಳು ಕೆಲವು (ಹಣಪ್ರ. ೯). ೨. (ಆಲಂ) ಋತುಸ್ರಾವ: 'ಬಟ್ಟೆಗುತ್ತೆ' ಪರಾ.

ಬಟ್ಟೆಬರೆ = ವಸ್ತ್ರ ಮುಂತಾದುವು : ಅರಿವೆ ಅಂಚಡಿ : ಉಳಿಕೆ ಬಟ್ಟೆಬರೆ ದವಸಧಾನ್ಯ (ರಾಸೇಂದ್ರ. ೨೫); ತನಗಾಗಿ ಬಟ್ಟೆ ಬರೆಗಳನ್ನೂ ಒಡವೆಗಳನ್ನೂ ಕೊಂಡುಕೊಂಡಳು (ಆಶ್ರಮ. ೫೭); ಕಂದಾಯಕ್ಕಾಗಿ ಕೊಟ್ಟು ಬಡ್ಡಿ, ಬಟ್ಟೆಬರೆಗೆ ಕೊಟ್ಟು ಮಿಕ್ಕರೆ ಹೊಟ್ಟೆಪಾಡಿಗಾಗುತ್ತಿತ್ತು (ಹುಸ್ವಹ. ೭೯). ಬಟ್ಟೆಬೊಂತೆ = ಬಟ್ಟೆಬರೆ : ಬಟ್ಟೆಬೊಂತೆಗಳು ಕಾಲುಮಣೆಗಳ ಮೇಲೆ ಚೆಲ್ಲಾಡಿದ್ದುವು (ಮಲೆನಾ. ೮೭). ಬಟ್ಟೆಹೋಗು = ಋತುಸ್ರಾವವಾಗು; ರಕ್ತಸ್ರಾವವಾಗು : ಈ ಸಾರಿ ವಿಪರೀತ ಬಟ್ಟೆಹೋಗಿ ಅವಳು ತುಂಬ ದುರ್ಬಲಳಾಗಿದ್ದಾಳೆ (ಕೂಡಿ).

[<ಪ್ರಾ. ಪಟ್ಟ./ತುಳು. ಕೊಡ. ಬಟ್ಟೆ; ತೆಲು. ಬಟ್ಟ./ಸಂ. ಪಟ್ಟ]

ಬಟ್ಟೆಕೆಱೆ (ನಾ). ಒಂದು ಊರಿನ ಹೆಸರು ; ಧಾರವಾಡ ಜಿಲ್ಲೆಯ ಈಗಿನ ಬೆಟಗೇರಿ : [ನಾ]ಗಧೋರನೆಂಬೋ ಬಟ್ಟೆಕೆಱೆಯ [ಧಾಱಿಗೆ] ಮುಱಿಯವಡದ ಪೊಲ (ಸೌಇ. XI-i, ೨೦-೫; 893). 'ಬಟ್ಟಕೆಱೆ' ಪರಾ. [ಬಟ್ಟೆ$_2$ + ಕೆಱೆ]

ಬಟ್ಟೆಗ (ನಾ). ಹಾದಿಯಲ್ಲಿ ನಡೆಯುವವನು ; ದಾರಿಗ; ಪ್ರಯಾಣಿಕ : ಗಾಡಿಕಾರ್ತಿಯರ ಗಾಡಿಗೆ ಸೋಲ್ತು ನಿಲ್ವ ಬಟ್ಟೆಗರ . . . ಬಿಡದೆ ಬಗ್ಗಿಪ ಕೋಗಿಲೆಗಳ ಚೆಲ್ವನೊಳಕೊಂಡಿರ್ಪುದು (ಕಬ್ಬಿಕಾ. ೦೬) ; ಬಟ್ಟೆ ಬಟ್ಟೆಯ ಕೆಲಕೆಲದೊಳು ನೀರರವಟ್ಟಿಗೆಯಿಟ್ಟಿರಲಲ್ಲಿ ಬಟ್ಟಜವ್ವನೆಯರಿರಲು ನೋಡಿ ಬಟ್ಟೆಗರಿಟ್ಟಣಿಸಿಯೆ ನಿಂದಿಹರು (ಅಂಜನ. ೨-೦೦೫) ; ತೊಲಗೆ ನೀರಾಸೆ ತೊಲಗದೆ ನೀರೆಱೆವಾ ಲಲನೆಯರಾಸೆ ಬಟ್ಟೆಗರು ಸಲೆ ನೋಡುತವರ ನೀರೀಂಟುತಿಹರು (ಕುರಾಸಾಂ. ೨-೪೦). [ಬಟ್ಟೆ$_1$ + —ಗ$_2$]

ಬಟ್ಟೆಗಟ್ಟು (ಕ್ರಿ). ದಾರಿಯನ್ನು ಕಟ್ಟು ; ಅಡ್ಡಗಟ್ಟು ; ದರೋಡೆ ಮಾಡು; ಸುಲಿ : ಅಡವಿಯೊಳ್ ಕಳ್ಳರ್ ಬಟ್ಟೆಗಟ್ಟಿ ಮೇಲ್ವಾಯ್ದಿಱಿದೊಡೆ (ವಡ್ಡಾರಾ. ೭೬-೦೩) ; ನೆತ್ತಿ ತಱಂಟಾಗೆ ಪುಳ್ಳಿಯನಡಕುವ ಬಡವರ್ಗಂ ಬಟ್ಟೆಗಟ್ಟಿ ಬಡಿವ ಬೇಡರ್ಗಂ ಸಿರಿಯೇಕಾಗದು (ರರ್ಮಾಮ್ಯ. ೬-೦೩೩). [ಬಟ್ಟೆ$_1$ + ಕಟ್ಟು$_1$]

ಬಟ್ಟೆಗಾಣ್ (ಕ್ರಿ). ಹಾದಿಯನ್ನು ಕಾಣು ; ದಾರಿಯನ್ನು ತಿಳಿ ; ಮಾರ್ಗವು ಗೋಚರವಾಗು: ನಿಮ್ನನಾಭಿಮಂಡಳಮನೊಳಪೊಕ್ಕು ಒಳಗೆ ತೀವಿದ ಪುಡಿಗತ್ತುರಿಯ ಸುಟ್ಟುರೆಯನಸಿದನೆ ಬೇಱೊಂದು ಬಾಸೆಯೆಂಬಂತೆ ನೆಗಪಿ ಮೇಗೊಗೆದು ಬಟ್ಟಮೊಲೆಯಿಟ್ಟೆಡೆಯೊಳ್ ಬಟ್ಟೆಗಾಣದೆ ಬಳಸಿ ಸುಟಿದಾಡಿಯುಂ (ಸಂದ್ರಪು. ೬-೯ ಪ); ನಭಂಬರಂ ಪೊದಟ್ಟೊದವಿದ ಕೋಂಟೆಯಂ ನುಗುಳ್ದು ಪೋಗಲಹಃಪತಿ ಬೇಱೆ ಬಟ್ಟೆಗಾಣದೆ ತಡೆದಿರ್ಪನಲ್ಲಿ ಪೊಣರ್ವಕ್ಕಿಗೆ ಸಂತಸಮಾಗೆ ಸಂತತಂ ((ಪುಸ್ವಪು. ೨-೬೯).

[ಬಟ್ಟೆ$_1$ + ಕಾಣ್]

ಬಟ್ಟೆಗಾರಕ (ನಾ). (?) : ಬಿಟ ಬಟ್ಟೆಗಾರಕದ ತೆರನು (ಎಕ. VII, ಶಿವಮೊ. ೩-೨೫ ; 1671). 'ಬಟ್ಟೆವರಿಯ' ಪರಾ. [?]

ಬಟ್ಟೆಗಾವಲ್ (ನಾ). ಪ್ರಯಾಣದ ದಾರಿಯಲ್ಲಿ ಬರಬಹುದಾದ ವಿಪತ್ತಿನ ವಿರುದ್ಧವಾದ ರಕ್ಷಣೆ,-ಕಾವಲು : ಮಹೀಶ್ವರನ ಬಟ್ಟೆಗಾವಲ್ಗೆ ಕರ್ಣಜ ಮೇಘನಾದರಂ ಕೊಟ್ಟು (ಕೈಮಿಶಾ. ೪-೬೯). [ಬಟ್ಟೆ$_1$ + ಕಾವಲ್$_1$]

ಬಟ್ಟೆಗುತ್ತೆ (ನಾ). ಋತುಸ್ರಾವಕ್ಕೆ ಸಂಬಂಧಿಸಿದ ರೋಗವನ್ನುಳ್ಳವಳು (?) : ಕೆಟ್ಟ ಜಾತಿಯನಾರನಾವಡೆ ಮುಟ್ಟಿಕೊಂಬರು ಹಣವಿನಾಸೆಗೆ ಬಟ್ಟೆ[ಶಾಕಾಂ. ಬಟ್ಟ, ಬಟ್ಟೆ, ಬಿಟ್ಟ]ಗುತ್ತೆಯರಿಂತು ವಾರಪುರಂಧ್ರಿಯರು (ಬಸಪು. ೪೦-೫೬). 'ಬಟ್ಟಗುತ್ತ'ಹೋ.

[ಬಟ್ಟೆ$_2$ + ಕುತ್ತ + — ಎ$_2$]

ಬಟ್ಟೆಗೆಡು (ಕ್ರಿ). ದಾರಿತಪ್ಪು ; ದಿಕ್ಕುಗೆಡು : ತಿಳಿಸಿದರೆ,ಕತ್ತಲಲಿ ಮಿಂಚು ಹೊಳೆದಂತಾಗಿ, ಬಟ್ಟೆಗೆಡುವುದು, ಕುರುಡು ದಟ್ಟೈಸಿ ! (ಕಂದ್ರಸ. ೨೦-೦೯) ; ಒಂದು ಕಡೆ ಸ್ವಾತಂತ್ರ್ಯ, ಒಂದು ಕಡೆ ಮಾಧುರ್ಯ ನಡುವಿಹೆನು ಬಟ್ಟೆಗೆಟ್ಟು (ಅಗ್ನಿಹಂ. ೬). [ಬಟ್ಟೆ$_1$ + ಕೆಡು$_1$]

ಬಟ್ಟೆಗೊಡು (ಕ್ರಿ). ಹಾದಿಯನ್ನು ಕೊಡು ; ದಾರಿ ಮಾಡಿಕೊಡು ; ಅವಕಾಶ ಕೊಡು : ಮೃಡನಲ್ಲದನ್ಯದೈವಕ್ಕೆ ನಮಿಸಿದಡೆನ್ನ ಹೊಡೆದು ಮುಕ್ಕುವುದು ದಾವಾಗ್ನಿ ಮೇಣಲ್ಲದಿರ್ದಡೆ ಬಟ್ಟೆಗೊಟ್ಟಪುದು (ಹಕಕಾ. ೦೦-೨೫) ; ರಘುಜರಾಮನ ಮನದ ಕೋಪದುಱುಬೆಗೆ ಬಟ್ಟೆಗೊಟ್ಟುದಂ . . . ನೆನೆನೆನೆದು ನಿಟ್ಟುಸಿರ್ವಿಟ್ಟು ಸುಯ್ವಂತುದಧಿ ತೆರೆ ಪೆರ್ಚುಗೆಯೊಳಿರ್ದುದು (ಕೈಮಿಶಾ. ೬-೨). [ಬಟ್ಟೆ$_1$ + ಕೊಡು$_1$]

ಬಟ್ಟೆಗೊಲೆ (ನಾ). (ಓಡಾಟವಿರುವ) ಹಾದಿಯಲ್ಲೇ ಕೊಲ್ಲುವುದು : ಇನಿತವಸ್ಥೆಯ ಬಟ್ಟೆಗೊಲೆಯಲ್ಲದೆಲೆಯಣ್ಣ ಇನಿತವೆಯ್ದದೆ ಮೇಲೆ ಮಾಳ್ಪ ವಧೆಗಳಿವಣ್ಣ (ಸಾಸಂಕ. ೪-೦೭೩). [ಬಟ್ಟೆ$_1$ + ಕೊಲೆ$_2$]

ಬಟ್ಟೆದಪ್ಪು (ಕ್ರಿ). ಹಾದಿ ತಪ್ಪು ; ದಾರಿ ತಪ್ಪು : ಕಲ್ಪಿಗೆಡೆಯಾವುದೊ ಪಾಱಿಯ ಬಟ್ಟೆದಪ್ಪಿ ಮುಂ ನೆಗೞ್ದೆಡೆಯಿಲ್ಲ. ಪೋಗು ಜಯಮಕ್ಕೆ ಶುಭಂ ನಿಮಗಕ್ಕೆ ಮಂಗಳಂ (ಪಂಪಭಾ. ೭-೨೦); ಮನುಜತೆವೆತ್ತದಱೊಳಮುಪಶಾಂತಿಯ ಬಟ್ಟೆದಪ್ಪಿ ಕಡೆಯೊಳ್ ಕುಯೋನಿಯೊಳ್ ಮತ್ತಾಟ್ಟುಗಂ (ಕಂದ್ರಪು. ೭-೨೦) ; ವೃತ್ರನೆನಿಸಿದನಾ ಭಯಂಕರನೇತ್ರನು . . . ಅಟ್ಟಹಾಸವ ಮಾಡಿದಡೆ ಕಂಗೆಟ್ಟರಮರರು . . . ಬಟ್ಟೆದಪ್ಪಿದರಿನ ಶಶಿಗಳು (ಪಿಶಾಗ. ೬-೯-೦೦). [ಬಟ್ಟೆ$_1$ + ತಪ್ಪು$_1$]

ಬಟ್ಟೆದೆಗೆ (ಕ್ರಿ). ಓಡಿ ಹೋಗು ; ಪಲಾಯನ ಮಾಡು : ಬಟ್ಟೆದೆಗೆದೆವು ನಿಮ್ಮ ರಕ್ಕಸಘಟ್ಟೆಯರ ಗಾಢಣೆಗೆ ಸೈರಿಸದೆ (ತೊರರಾ. ೫-೭-೩೦) ; ಬಟ್ಟೆದೆಗೆದನು ಬಳಿಕ ಕಮಲಜನಿಷ್ಟದೇವತೆಯೆನಿಪ ದನುಜಘರಟ್ಟನತಗೆ ಜಯತು ಜಯ ಜಗದೀಶ ಜಯಯೆನುತ (ಪಿಶಾಗ. ೯-೬-೭). [ಬಟ್ಟೆ$_1$ + ತೆಗೆ$_1$]

ಬಟ್ಟೆದೋಱಿಸು (ಕ್ರಿ). ದಾರಿಯನ್ನು ತೋರಿಸು ; ಮಾರ್ಗವನ್ನು ತೋರು : ಉಱಿದೊಡಮಱಿದೊಡಂ ಬಟ್ಟೆದೋಱಿಪ ರಸಭರಿತಂ ಚರಿತಮೈಸೆ (ರಾಮಾಶ್ವ. ೪-೨೦). [ಬಟ್ಟೆ$_1$ + ತೋಱಿಸು]

ಬಟ್ಟೆದೋಱು (ಕ್ರಿ). = ಬಟ್ಟೆದೋಱಿಸು : ಗುಣಾರ್ಣವಭೂಭುಜಂಗೆ ಕಟ್ಟಿದಿರೊಳೆ ಬಟ್ಟೆದೋಱುವವೊಲಂದೊಗೆದಂ ಕಮಲೈಕಬಾಂಧವಂ (ಪಂಪಭಾ. ೪-೦೦೦) ; ಪುರೂರವನೆಂಬ ಬೇಡಂ ಸಾಗರಸೇನಮುನಿವರರ್ ದಿಶಾಮೂಢರಾಗಿ ಪೊಲಗೆಟ್ಟಿರ್ದಂದು ಬಟ್ಟೆದೋಱಿ ಧರ್ಮಮಂ ಕೇಳ್ದು . . . ದೇವನಾಗಿರ್ದು (ಕಾಪುಂಪು. ೦೬೩). [ಬಟ್ಟೆ$_1$ + ತೋಱು]

ಬಟ್ಟೆನಡೆ (ಕ್ರಿ). ಹಾದಿಯಲ್ಲಿ ನಡೆ ; ಮಾರ್ಗವನ್ನು ಕ್ರಮಿಸು ; ಪ್ರಯಾಣವನ್ನು ಮುಂದುವರಿಸು : ಜಾನಪದಾಂಗನಾಜನದ ಗಾಡಿಗೆ ಸೋಲ್ತು . . . ಪಥಿಕರ್ ಮಱೆದಿಲ್ಲೆನಲ್ ಪರಿಮ್ಲಾನತೆ ಸೈತು ಬಟ್ಟೆನಡೆಯಲ್ಪಡೆಯರ್ ವಿಷಯಾಂತರಾಳದೊಳ್ (ಮಲ್ಲಿಪು. ೨-೨೬).

[ಬಟ್ಟೆ$_1$ + ನಡೆ$_1$]

ಬಟ್ಟೆಪಾಟು (ನಾ). ಹಾದಿಯಲ್ಲಿ ಹಾಡುವ ಹಾಡು : ಹಂದರದ ಬೇರೊಂದು ಮಗ್ಗುಲಿನಲ್ಲಿ ಬಟ್ಟೆಪಾಟು ಒಣಪಾಟುಗಳನ್ನು ಹಾಡಿಕೊಂಡು ಬಂದ ನಾಲ್ವರು ಕೊಡವರು ದುಡಿ ಬಡಿಯುತ್ತ . . . ಮುಹೂರ್ತಪಾಟನ್ನು ಹಾಡಲು ಪ್ರಾರಂಭಿಸಿವರು (ಹುಂಹಾ. ೨೦೨).

[← ಕೊಡ. ಬಟ್ಟೆಪಾಟ್]

ಬಟ್ಟೆಬೆಂತರ (ನಾ). ದಾರಿಯ ದೆವ್ವ ; ಮಾರ್ಗದಲ್ಲಿನ ಪಿಶಾಚಿ : ದೊರೆಯಿಂತು ಚಿತ್ತವೈಕಲ್ಯದಿಂ . . . ಕಿಳ್ತು ನವಿರಂ ಶರೀರಮಂ ವಸನಂಗಳಂ, ಚರಿಸೆ ಬಟ್ಟೆಬೆಂತರನಂತೆ (ಶ್ರೀರಾಮಾ. ೯೪-೪೪೪). [ಬಟ್ಟೆ$_1$ + ಬೆಂತರ]

ಬಟ್ಟೆಯಱಿ (ಕ್ರಿ). ದಾರಿಯನ್ನು ತಿಳಿ ; ಮಾರ್ಗವನ್ನು ಅರಿ : ಹುಟ್ಟುಗುರುಡನು ಕೆಟ್ಟ ಕಣ್ಣವನ ಕೈಹಿಡಿದು ಬಟ್ಟೆಯಱಿಯದೆ ಗುಳಿಯ ಬಿದ್ದವನ ತೆಱನಹುದು (ದೀಕ್ಷಾಶೋ. ೦೬-೦೨) ; ವರತತ್ತ್ವದ ಬಟ್ಟೆಯಱಿದವರೆಲ್ಲರ ವರಮುಕ್ತಿಕನ್ನೆ ಮೋಹಿಸುವ ಪರವಶ್ಯದ ವ್ರತಗಳನೊಂದೊಂದನು ವರವೀವುದೆಂದು ನುಡಿದರು (ಜೀವಂಸಾಂ. ೨-೦೦).

[ಬಟ್ಟೆ$_1$ + ಅಱಿ]

ಬಟ್ಟೆಯುರುಳಿ (ನಾ). ಬಟ್ಟೆಯ ಉಂಡೆ ; ಅರಿವೆಯ ದೊಂದೆ : ಶ್ರೀರಂಗರಾಯನ ಶಿರಸ್ಸನ್ನು ಮೆಲ್ಲನೆತ್ತಿ ಇಳಿಹಿ, ಆತನ ಚಾದಿಯ ಬಾಯ್ಗಟ್ಟನ್ನು ಬಿಚ್ಚಿ ಬಿಸುಟು, ಗಿಡಿವಟ್ಟ ಬಟ್ಟೆಯುರುಳಿಯನ್ನೆತ್ತಿ ಬಿಸಾಡಿ, ಕಯ್ಕಾಲ್ಗಳ ಬಿರುಗಟ್ಟುಗಳನ್ನು ಬಿದುರ್ಚುತ್ತಿರುವನು (ಮಂತ್ರಶ. ೦೦೩-೨೪). [ಬಟ್ಟೆ$_2$ + ಉರುಳಿ$_1$]

ಬಟ್ಟೆವರ್ (ಕ್ರಿ). ಹಾದಿಯಲ್ಲಿ ನಡೆ ; ಪ್ರಯಾಣ ಮಾಡು : ಭಟಾರಾನಿನ್ನೆ ಬಟ್ಟೆವಂದುಪವಾಸಂಗೆಯ್ದು ಸೇದೆವಟ್ಟೆರ್ (ವಡ್ಡಾರಾ. ೯೦-೨೫).

[ಬಟ್ಟೆ$_1$ + ಬರ್ (<ವರ್)]

ಬಟ್ಟೆವರಿಯ ? (ನಾ). (?) : ಅಱುವದಿಂಬರ್ಗ್ಗಂ ಕೊಟ್ಟ ವ್ಯವಸ್ಥೆಯಾವುದೆನ್ದೊಡುಟ್ಕಗೆರಡು ವರಿಸ ಬಟ್ಟೆವರಿಯರ ಪತ್ತುವರಿಸಂಬಱಂ ಮತ್ತರ್ವ್ವಣಂ (ಸೌಇಇ. XI-i, ೪೩-೦೮; 870). 'ಬಟ್ಟೆಗಾರಕ' ಪರಾ [?]

ಬಟ್ಟೆವಿಡಿ (ಕ್ರಿ). ದಾರಿಯನ್ನು ಹಿಡಿ ; ಮಾರ್ಗವನ್ನು ಅನುಸರಿಸು : ಬೆಳ್ದಿಂಗಳಂ ಬಿತ್ತರಿಸಿದಂತಿರ್ದ ದಶಪುರದ ಬಟ್ಟೆವಿಡಿದು ನಡೆಯುತ್ತೆ (ಕಾದಂಉ. ೪೨೬) ; ಶರನಿಧಿಯ ತೀರದ ಪಟ್ಟಣವ ಪಡಿತಳಿಸಿ ಪಾರಾವಾರದೋರಣದ ಬಟ್ಟೆವಿಡಿದೆಡಕಿಕ್ಕಿ ಮೇರುವಿನಿಟ್ಟಣಿಯ ಜನಪದದ ರಾಯರ ಕಟ್ಟಿ ಕೇಳುತ ಕಂಡ ಮೈಯಲಿ ಹರಿದುವಗಲದಲಿ (ತೊರರಾ. ೪-೯-೨೩) ; ಬಟ್ಟೆವಿಡಿದವರಿರ್ವರುಂ ಮಯೂರಧ್ವಜನ ಪಟ್ಟಣಕೆ ನಡೆತಂದರ್ (ಕೈಮಿಶಾ. ೨೬-೪). [ಬಟ್ಟೆ$_1$ + ಪಿಡಿ$_1$]

ಬಟ್ಟೆವೋಗು (ಕ್ರಿ). = ಬಟ್ಟೆವಿಡಿ : ಆರಾನುಂ ಬಟ್ಟೆವೋಪರ್ ಬೀಡಂ ಬಿಟ್ಟಿರ್ದರ್ (ವಡ್ಡಾರಾ. ೬೯-೫) ; ವಿನಯದಿನಾಮಿಾ ಭುವನೈಕನಾಥನಂ ಸಲ್ಗೆವೆರಸು ಬೇಡುತ್ತಿರೆ ಬಂದನುವಿಸುವ ನಿಮ್ಮ ಮುದುಗಣ್ತನದೊಳಿದೇನುಂತೆ ಬಟ್ಟೆವೋಪೊಡೆ ಪೋಗಂ (ಅದಿಪು. ೯-೦೦೬); ಬಟ್ಟೆವೋಪರ್ಬಟಲ್ಕೆ ಗಟ್ಟಿದುದನಱಿಪುವ ಬಾಡುಂದಳಿರ ಪಾಸಿಕೆಗಳುಮಂ (ಕಾದಂಉ. ೨೬೬).

[ಬಟ್ಟೆ$_1$ + ಪೋಗು$_1$ (<ಪೋ$_1$)]

ಬಟ್ವಾಡೆ 'ಬಟವಾಡೆ' ನೋ.

ಬಡ (ಸಪೂರೂ). 'ಬಡವು' ಎಂಬ ನಾಮವಾಚಕಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ. ೧. ಸೊರಗಿದ ; ಕ್ಷೀಣವಾದ : 'ಬಡಗುದುರೆ' ಪರಾ. ೨. ಸಣ್ಣದಾದ ; ಚಿಕ್ಕದಾದ : 'ಬಡಗಣ್$_1$' ಪರಾ. ೩. ಅಲ್ಪಶಕ್ತಿಯ ; ಅಸಮರ್ಥವಾದ : ಬಡವಿರಾಟನನಾರು ಬಲ್ಲರು ದ್ರೋಣನಿದಿರಿನಲಿ (ಕುಪ್ಯಾರ್ಪ್ರೋ. ೧೭-೪೦). ೪. ಬಡತನದಿಂದ ಕೂಡಿದ ; ದಾರಿದ್ರ್ಯದಿಂದ ಇರುವ : ಸಿರಿವಂತರನಿತ್ತ ಬನ್ನಿಮೆಂದಾದರದಿಂ ಕರೆವ ಬಡಜೈನನಾದೊಡೆ ಕರೆಯದ ದುರ್ಗರ್ವಿ ಜೈನನೆನಿಕುಮೆ ಕಷ್ಟಂ (ಸಮಶ. ೪-೫೫).

ಬಡಬಡಾಗು = ೧. ಅತಿಬಡವಾಗು ; ಸೊರಗು ; ಕೃಶವಾಗು : ಮಯ್ದುನಿರ್ವರುಮುಱ್ ನೋಂತಭಯಮನರಾಗಿಯುಂ ದುರಿತಭೀತಿಯಿಂ ನಡುಗಿ ಬಡಬಡಾದಂತಾದರ್ (ಶಾಂತಿಪು. ೭-೭೦) ; ತಳೆದನಶನಾದಿ ತಪದಿಂ ಕಳೇವರಂ ಬಡಬಡಾಗಿ ಗಿಡಿಗಿಡಿಜಂತ್ರಂ ಮಿಳಿಮಿಳಿಗಣ್ಗಳೆನಲ್ ನೋಂತಳ್ (ಸುಕುಮಾ. ೯-೬) ; ಬಡಬಡಾದುದು ನಿನ್ನಂಗವಲ್ಲರಿ (ಶ್ರೀಪಾಲ. ೦೦-೯೦). ೨. ಅತಿ ಚಿಕ್ಕದಾಗು ; ಹ್ರಸ್ವವಾಗು : ಕಾದಲರ ಪುರುಡಿ ನೆಸಕದೊಡನೆ ಇರುಳ ಬಳಗಂ ಬಡಬಡಾಗೆಯುಂ (ಕಂಪ್ರಪು. ೭-೬೨ ಪ). **ಬಡ ಮಾಡು** = ಬಡವಾಗುವಂತೆ ಮಾಡು ; ಸೊರಗಿಸು ; ಕೃಶಗೊಳಿಸು : ಆ ಕೋಡಗಂ . . . ಬ್ರತೋಪವಾಸಂಗಳಿಂ ಮೆಯ್ಯಂ ಬಡ ಮಾಡಿ [ಪಾಶಾಂ. ದಂಡಿಸುತ್ತಂ] ಸಲ್ವುದೊಂದು ದಿವಸಂ . . . ಮುನಿವರರ ಪಕ್ಕದೆ ಬಿರ್ದತ್ತು (ಪಡ್ಮಾರಾ. ೦೭೩-೨೪) ; ತನುವಂ ಬಡ ಮಾಡಿ ಕಾಡಿ ದಂಡಿಸಿದಪನಂಗಜನ್ಮನ ಕವರ್ತೆಯ ದಂಡದ ಪಾಂಗಿದೆಂತುಟೋ (ಪಂಪಭಾ. ೩-೦೩). [<ಬಡವು]

ಬಡಕ$_1$ (ನಾ). ೧. ಬಡಕಲಾಗಿರುವುದಂ; ಸಣಕಲು : ಪ್ರಹ್ಲಾದನೆಂದರೆ ಪ್ರತ್ಯಕ್ಷ ಆಹ್ಲಾದಮೂರ್ತಿ...ಅಶಕ್ತನಲ್ಲದಿದ್ದರೂ ಮೈ ಬಡಕ (ಪಿಠಾಪ. ೭೭). ೨. ಬಡಕಲಾಗಿರುವವನು ; ಸಣಕಲವ್ಯಕ್ತಿ : ಕ ಪ್ರತ್ಯಯಕ್ಕೆ— ಬಡಕಂ, ನಿಡುಕಂ (ಶಮದ. ೨೦೩ ಪ್ರಯೋ) ; ರಣಜಿತಸಿಂಗಮಹಾರಾಜನು ಗಿಡ್ಡನೂ ಬಡಕನೂ ಆಗಿದ್ದನು (ಪರಿಸಂ. ೨೦೪) ; ಗೋದೀ, ನಾನು ಬಡಕ ಹುಟ್ಟಾ ಇದ್ದೀನಿ. ಚಹದಿಂದ ಬಡಕಾಟಿ ಆಗಿಲ್ಲ (ರಕ್ತರ್ಷ. ೦೬೯).

[ಬಡ (<ಬಡವು) + — ಕ$_3$]

—ಬಡಕ$_2$ '—ಬಡಿಕ$_2$' ನೋ.

ಬಡಕಟ್ಟೆ (ನಾ). ಕೃಶವಾಗಿರುವವಳು ; ಬಡಕಲಾಗಿರುವವಳು : ನಿಮಗೇನು ಜಡಾ ಗಿಡಾ ಆಗಿತ್ತೇನ್ರೋ ? ಬಾಳ ಬಡಕಟ್ಟೆ ಆಗಿ ಕಾಣ್ತೇರಿ (ಮುಲಿಮು. ೨೨). [ಬಡ (<ಬಡವು) + ಕಟ್ಟು$_2$ + —ಎ$_2$]

ಬಡಕಬೆ (ನಾ). (?) : ಮೂಱನೆಯ ವರಿಸಕೆ ಪ ೩ ಬಡಕಬೆ ನೂಱಕೆ ಪ ೨ ಕಿನ್ಗುನಿ ನೂಱಕೆ ಪ (ಎಕ. XIV, ತಿರುಮ. ೭೨-೨೦; 1309). [?]

ಬಡಕರಿಸು (ಕ್ರಿ). ಕೃಶವಾಗು ; ಸೊರಗು ; ಒಣಗು : ಬಸಿರ್ಬತ್ತಿ ಬಾಯ್ಬತ್ತಿ ಬಡಕರಿಸಿ. ಪಲ್ದೋಱ್[ಪಾಶಾಂ. ಬಾಯ್ಬತ್ತಿ ಪಲ್ದೋಱು] ಬೆನ್ನು ಕುಸಿದು ಮೊಗವೊಣಗಿ ಕಣ್ಗಂದಿ ಕಾವುಳಂ ಕವಿದೊಡಂ (ಆದರ. ಹ. ೪೩೬-೨೭). [< ಬಡ + — ಇಸ್ಸು$_3$]

ಬಡಕಲ (ನಾ). ಕೃಶನಾಗಿರುವ ವ್ಯಕ್ತಿ : ಅವನೊಬ್ಬ ಬಡಕಲ (ರೂಢಿ).

[ಬಡಕಲು + — ಅ$_7$]

ಬಡಕಲು (ನಾ). ೧. ಸೊರಗಿದುದು ; ಕೃಶವಾದದು : ಖಾಯಿಲೆಯಿಂದ ನರಳಿ ಬಡಕಲಾಗಿದ್ದ ಅವಳ ಮೈಯನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ಸಂಕಟವಾಯಿತು (ಪ್ರತಾಪ. ೪೪). (ಗು). ೨. ಸೊರಗಿದ ; ಕೃಶವಾದ; ಒಣಗಿದ : ಒಂದು ಬಡಕಲು ಕುದುರೆಯ ಮೇಲೆ ಅವಳ ನ್ನೇರಿಸಿ . . . ನಟಿಸುತ್ತಿದ್ದನು (ಕಬಿಕ. ೩೦); ಅವಳ ತಾಯಿಯು . . . ಒರಟುಒರಟಾಡ ಬಡಕಲು ಹೆಂಗಸು (ಮಹಾತ್ಮಾ. ೬೪). ೩. (ಆಲಂ) ಸತ್ತ್ವವಿಲ್ಲದ ; ನಿಸ್ಸಾರವಾದ : ಅಕ್ಕಿ ತೀರ ಬಡಕಲು ಆಹಾರ (ಅಡುಸೌ. ೭೪).

ಬಡಬಡಕಲು (ದ್ವಿರುಕ್ತಿ) : ಅಮಾಂಸಃ, ದುರ್ಬಲಃ, ಛಾತಃ—೩ ಬಡಬಡಕಲು ಮೈಯುಳ್ಳವನು, ನರಪೇತಲವನು, ಬಲವಿಲ್ಲದವನು, ಅಶಕ್ತನು (ನಿಡ್ಡಾಂತಿ. ೦೬೦). [ಬಡಕು + —ಅಲು (<—ಅಲ್$_2$)]

ಬಡಕಾಟಿ, ಬಡಕಾಣಿ (ಗು). ೧. ಸೊರಗಿದ; ಬಡಕಲಾದ : ಕೋಟಿ ಕೋಟಿ ಬಡಕಾಟಿ ದಂಪತಿಯ ಮಾಡಿ ನಾಡ ಲೂಟಿ (ಪಲಾಪ. ೬೦-೯). (ನಾ). ೨. ಬಡಕಲು ಮನುಷ್ಯ; ಕೃಶವಾಗಿರುವವನು; ಸೊರಗಿದವನು : ಗೋದೀ, ನಾನು ಬಡಕ ಹುಟ್ಟಾ ಇದ್ದೀನಿ. ಚಹದಿಂದ ಬಡಕಾಟಿ ಆಗಿಲ್ಲ (ರಕ್ತರ್ಷ. ೦೬೯). **ಬಡಕಾಣಿ** : ಧನಪತಿ ರವಿಗಂ ನೋಡಿ ಬಡಕಾಣಿ ಸೊಡರಂ ನೀಡುವೊಲ್ನುಡಿದೆಯ್ದಿರದೆ ನಡೆನಡೆಯೆಂದರ್ (ಹಮ್ಮೀರ. ೨-೦೦೬). [ಬಡ(<ಬಡವು) + ಕಾಟ್ಟಿ]

ಬಡಕಾಣಿ 'ಬಡಕಾಟಿ' ನೋ.

ಬಡಕಾಯ್ 'ಬಡಗಾಯ್' ನೋ.

ಬಡಕಾಯಿಸು (ಕ್ರಿ). ೧. ಏಳಿಗೆ ಹೊಂದು ; ಅಭಿವೃದ್ಧಿಯನ್ನು ಹೊಂದು : ಆ ಮಾಧವ ಒಬ್ಬನನ್ನು ಬಿಟ್ಟರೆ, ತಂದೆ ಮಕ್ಕಳೆಲ್ಲ ತುಂಬ ಬಡಕಾಯಿಸಿದ್ದಾರೆ (ಜಾರುಡಾ. ೦೭೭). ೨. ಬೆಳೆಸು ; ಅಭಿವೃದ್ಧಿಪಡಿಸು: ಅವನು ಸಣ್ಣದಾಗಿ ಅಂಗಡಿ ಹಾಕಿಕೊಂಡು ವೃತ್ತಿಯನ್ನು ಆರಂಭಿಸಿ, ಅದನ್ನು ಈಗ ಬಡಕಾಯಿಸಿ ದೊಡ್ಡದ ಮಾಡಿದ್ದ (ಊರುಕ. ೭೯).

[ಬಡಕ$_0$ (೧ ← ಹಿಂ. ಬಢನಾ) + —ಇಸ್ಸು$_3$]

ಬಡಕು (ನಾ). ೧. ಕೃಶವಾದುದು : ಬಡವಾದುದು. ೨. ಬಡತನ. ೧, ೨ : ಕೊಂಕು ಬಡಕೆಂಬ ನುಡಿಯಾ ನಾಡ ಮಡದಿಯರವಯವಗಳೊಳಲ್ಲದೆ ಬಿಱುನುಡಿಯಿಲ್ಲ (ಕಂಪಪಿ. ೨-೧೪). ೩. ದರಿದ್ರ ; ಬಡವ.

ಬಡಕು ಭಗ್ಗು = ಬಡವರು ಮುಂತಾದವರು ; ಬಡಬಗ್ಗರು : ಊರೊಳಗೆ 'ಬಡಕು ಬಗ್ಗು' ಉಳಿಯಬೇಕೋ ಬೇಡವೊ? (ಪಳುಮ. ೦೦೨). **ಬಡಬಡಕನೆ** = (ಆಲಂ) ಮೆಲ್ಲನೆ ; ನಿಧಾನವಾಗಿ : ಬಡಬಡಕನೆ ಸುಳಿದುದು ಸುರಭಿಸಮೀರಂ ಬಂದ ಬಸಂತದ ಸಮಯದೊಳು (ಪಯಕಾ. ೦೦-೪). [ಬಡಕ$_1$ + —ಉ$_4$]

ಬಡಕ್ಕು 'ಬಡಗು' ನೋ

ಬಡಗ$_1$ 'ಬಡಗು' ನೋ.

ಬಡಗ$_2$ (ನಾ). ೧. ಉತ್ತರದಿಕ್ಕಿನವನು : ನಿನ್ನಂಬೆಯಂ ಕೊಲ್ಲಿಸಿದ ತವಸಿಯಂ, ಮೇಣ್ ಕೊಂದ ಆ ಬಡವು ಬಡಗನುಂ ತವಿಯದೊಳರಿನ್ನುಂ (ಶ್ರೀರಾಮಾ. ೨೦೯-೨೨೪). ೨. ನೀಲಗಿರಿಬೆಟ್ಟದ ಪ್ರದೇಶದಲ್ಲಿ ವಾಸಿಸುವ ಒಂದು ಜನಾಂಗ : ಕುಡಗರು ತುಳುವರು ತೊಡವರು ಬಡಗರು (ಅರಳು. ೩೦೪-೬); ಬಡಗರು ಆಡುವ ಭಾಷೆ ದ್ರಾವಿಡಭಾಷೆ (ದ್ರಾವಿಪಿ. ೦೯೩). ೩. ದ್ರಾವಿಡಭಾಷೆಗಳಲ್ಲಿ ಒಂದು; ನೀಲಗಿರಿಯ ಬಡಗರು ಆಡುವ ಭಾಷೆ : ಬಹಳಜನ ವಿದ್ವಾಂಸರು ಇಂದಿಗೂ ಬಡಗಭಾಷೆಯನ್ನು ಪ್ರತ್ಯೇಕವಾಗಿ ಪರಿಗಣಿಸದೆ ಕನ್ನಡಭಾಷೆಯ ಒಂದು ಉಪಭಾಷೆಯಾಗಿಯೇ ನೋಡುವರು. ಆದರೆ ಬಡಗಭಾಷೆಯನ್ನೂ ಒಂದು ಪ್ರತ್ಯೇಕ ದ್ರಾವಿಡಭಾಷೆಯೆಂಬಂತೆ ಸಮೀಕ್ಷಿಸುವುದು ಅಗತ್ಯವೆಂದು ತೋರುತ್ತದೆ (ದ್ರಾವಿಪಿ. ೦೯೩). [ಬಡಗು + —ಅ$_7$]

ಬಡಗಣ್$_1$ (ನಾ). ಸಣ್ಣ ಕಣ್ಣು : ನಿಡಿದಪ್ಪಂಗುಲಿ ಕೆಂಪುವೆತ್ತ ವಿಪುಳಶ್ರೋತ್ರ (ಸ್ರೋತಂ) ಲ(ರ)ಸತ್ಪುಷ್ಕರಂ . . . ಬಡಗಣ್ಣೊಪ್ಪುವ ದಕ್ಷಿಣೋನ್ನತರದಂ ತಾನಾಗೆ ಪುಣ್ಯಂ ಗಜಂ (ಲೋಕೋಪ. ೦೦-೬೬).

[ಬಡ(<ಬಡವು)+ಕಣ್]

ಬಡಗಣ್$_2$ 'ಬಡಗು' ಪರಾ.

ಬಡಗಣ 'ಬಡಗು' ಪರಾ.

ಬಡಗದೆಸೆ (ನಾ). ಉತ್ತರದಿಕ್ಕು ; ಬಡಗಲು : ಸೀತಾತಗನಿಯ ಬಡಟಿ ದೆಸೆಯ ವರಪುಷ್ಕರಾವತೀ ಜನಪದದೊಳ್ (ವರ್ಧಪು. ೦೦-೨೭) ; ಬಡಗದೆಸೆಯ ಬೀಡಿಳಿದಿರ್ದ ಮೊರಸರ ಪಡೆ ಹನುಮನ ನೇಮದಲಿ ತುಡುಕಿ . . . ಬೊಬ್ಬಿಱುದೇಱುದರು (ಕಂಪಪಿ. ೦೪-೩೭). 'ತೆಂಕದೆಸೆ' ಪರಾ.

[ಬಡಗ$_1$ (<ಬಡಗು) + ದೆಸೆ$_2$]

ಬಡಗದೇಶ (ನಾ). =ಬಡಗನಾಡು ೧ : ಬಡಗದೇಶದೊಳೊರ್ವ ಮಲ್ಲಯ್ಯನೆಂದೆಂಬ ಮೃಡಭಕ್ತನುಂಟು (ಸೌಂದಪು. ೯-೨೯).

[ಬಡಗ$_1$ (<ಬಡಗು) + ದೇಶ]

ಬಡಗನಾಡು (ನಾ). ೧. ಉತ್ತರದ ದೇಶ ; ಬಡಗಣ ನಾಡು : ದರ್ಶನ ಜ್ಞಾನಚಾರಿತ್ರಂಗಳಂ ಪ್ರತಿಪಾಳಿಸಿ ಬಡಗನಾಡ ಪಸವು ತಿಳಿದುದೆಂಬುದನಾ ನಾಡಿಂದಂ ಬಂದರ್ ಪೇಟ್ (ಪಡ್ಮಾರಾ. ೯೦-೦೬); ಬಡಗನಾಡ ಮಧುರಾಪುರದೊಳ್ ವೈಶ್ಯಕುಲಪ್ರಧಾನಂ ಜಿನದತ್ತನೆಂಬ ಶ್ರಾವಕಂ (ಜೀವಸಂ. ೯೦-೨೦); ಸಮಸ್ತಗೌಡಪ್ರಭುಗಳು ಬಡಗನಾಡ ತಿಳಿಸರಿ ಗಡಸುಬರ ಚಿಕವಿಠಪಂಗಳ ಮಗ ವಿಠಪಂಗಳಿಗೆ . . . ಸರ್ವಮಾನ್ಯವಾಗಿ ಧಾರೆಯನ್ನೆಱೆದುಕೊಣ್ಡ ವುಡುಗೊಱೆಗ ೨ ಎರಡು ಹೊನ್ನು (ಮೈಸಂ. ೦೯೩೦, ೬೯-೬ ; 1396). ೨. ಉತ್ತರದಿಕ್ಕಿನಿಂದ ದಕ್ಷಿಣಕ್ಕೆ ಬಂದು ನೆಲಸಿದ ಬ್ರಾಹ್ಮಣರ ಒಂದು ಪಂಗಡ : ಆಚಾರ್ಯ. . .ಅಷ್ಟ ಸಹಸ್ರಂ, ಬಡಗನಾಡು, ಬಾರದೇಶಿಕಾರ (ತುಳುನಾ. ೧೭೧).

[ಬಡಗ$_1$ (<ಬಡಗು) + ನಾಡು]

ಬಡಗನ್ನಿಕೆಱೆ (ನಾ). ಒಂದು ಊರಿನ ಹೆಸರು (?): ತನ್ನರಸಿ ಚಿಕ್ಕಬ್ಬೆಗೆ ಬಡಗನ್ನಿಕೆಱೆಯ ಬಡಗಣ ಬದರಿಯ ಪಿನ್ತಣ ಕೆಱೆಯಮ್ಬಿಟ್ಟ ದೇವರ್ಗ್ಗೆ (ಎಕ. VII, ಶಿವಮೊ. ೯೬-೧೯ ; ಸು. 915). [<ಬಡಗ$_1$? + ಕೆಱೆ]

ಬಡಗಬಾಗಿಲು 'ಬಡಗವಾಗಿಲು' ನೋ.

ಬಡಗಮುಖ (ನಾ). ೧. ಉತ್ತರದಿಕ್ಕು ; ಬಡಗು. ೨. ಉತ್ತರದಿಕ್ಕಿಗೆ ಮುಖ ಮಾಡಿದವನು : ವಸುಭೂತಿಯಂ ಬಡಗಮುಖನಾಗಿ ಕುಳ್ಳಿರಿಸಿ (ಧರ್ಮಾಮೃ. ೦-೦೯೦). 'ತೆಂಕಮುಖ' ಪರಾ.

[ಬಡಗ$_1$ (<ಬಡಗು) + ಮುಖ]

ಬಡಗಮೊಗ (ನಾ). = ಬಡಗಮುಖ ೧ : ವಿಜಯಾರ್ಧಾಚಲ ಕಟಕಾಭಿಮುಖೀಕೃತನಿಜವಿಜಯಕಟಕನಾಗಿ ಬಡಗಮೊಗದೆ ನಡೆದು (ಅಂಪು. ೦೩-೯೬ ಪ) ; ತಣ್ಡೆಯದ ಮುಕ್ಕೂಡು ಬಡಗಮೊಗದೆ ಪೋಗಿ (ಮೈಸಂ. ೦೯೩೯, ೩೯-೮ ; 11ಸಂಪು ಶತ) ; ಬಡಗಮೊಗದಿಂದೆ ಮೂಜಗದೊಡೆಯಂ ಕುಳ್ಳಿರ್ದಂ (ಪರ್ಶಪು. ೦೫-೭). [ಬಡಗ$_1$ (<ಬಡಗು) + ಮೊಗ]

ಬಡಗಲ್ 'ಬಡಗು' ಪರಾ.

ಬಡಗಲು 'ಬಡಗು' ಪರಾ.

ಬಡಗಲೆ, ಬಡಗಲೈ (ನಾ). [ವಿಶಿಷ್ಟಾ] ವಿಶಿಷ್ಟಾದ್ವೈತಿಗಳಲ್ಲಿ ಹಣೆಯ ಮೇಲೆ 'U' ಆಕಾರದ ನಾಮವನ್ನು ಹಚ್ಚುವ ಪಂಗಡ ; ರಾಮಾನುಜಾಚಾರ್ಯರ ಪಂಥೀಯರ ಒಂದು ವರ್ಗ : (ಕಿ). **ಬಡಗಲೈ**: ಶ್ರೀವೈಷ್ಣವಮತದ ಈ ತತ್ವ ಕ್ರಮೇಣ ಬಡಗಲೈ ತೆಂಕಲೈ (ಉತ್ತರ ದಕ್ಷಿಣ) ಭಾಗಗಳಾಗಿ ಒಡೆದವು (ಶಾಶದ. ೨೯೭). 'ತೆಂಗಲೆ' ಪರಾ. [←ತಮಿ. ವಟಕಲೈ]

ಬಡಗಲೈ 'ಬಡಗಲೆ' ನೋ.

ಬಡಗವಾಗಿಲು, ಬಡಗಬಾಗಿಲು (ನಾ). ಉತ್ತರದಿಕ್ಕಿನ ಬಾಗಿಲು ; ಉತ್ತರದ್ವಾರ : ಎಡೆಗೇರಿಯ ಬಡಗವಾಗಿಲ ಶ್ರೀಲಕ್ಷ್ಮೀನಾರಾಯಣ ದೇವರಂಗಭೋಗಕ್ಕಂ . . . ಬಿಟ್ಟಡಕೆ ತೋಂಟ (ಸೌಇಇ. IX-i, ೨೬೭-೬೦; 1160). **ಬಡಗಬಾಗಿಲು** : ಆ ಪುರದ ಬಡಗಬಾಗಿಲ್ಗೀ ಪವಣಂ ತಿಳಿಯಲೊಂದು ಕೂಗಳತೆಯೊಳಂ ತಾಪಂಗಳನುರ್ಚುತಂ (ಶ್ರೀಮಹಾ. ೦೦-೩). [ಬಡಗ$_1$ (<ಬಡಗು) + ಬಾಗಿಲು (<ಬಾಗಿಲ್)]

ಬಡಗಸಂಡಗೆ (ನಾ). ಒಂದು ಬಗೆಯ ಸಂಡಗೆ ; 'ಕುಂಬಳ ಸಂಡಗೆ' (ಸೂಪಶಾ. ೯-೦ ಟೀಳು) ; ℙ "ಗದ್ಯಸೂಪದಲ್ಲಿ . . . ನೆಲ್ಲಿಯ ಸಂಡಗೆ . . . ತದುಕಿನ ತಿರುಳು ಇವು ಸಂಭಾರವಸ್ತುಗಳು ಎಂದಿದೆ" (ಸೂಪಶಾ. ೯-೦ ಟೀಳು): ಹುರಿಯಕ್ಕಿಯೆಳ್ಳು . . . ಕರಿಬೇವು ಬಡಗಸಂಡಗೆಯಿಂಗು ಕಡಲೆವಿಟ್ಟರಿಸನದ ಹುಡಿ . . . ಮೆಂತೆಯದ ಚೂರ್ಣ ಹಪ್ಪಳಂ ಸಂಭಾರವಸ್ತುವಹವು (ಸೂಪಶಾ. ೯-೦). [ಬಡಗ$_1$ + ಸಂಡಗೆ]

ಬಡಗಾಯ್, ಬಡಕಾಯ್, ಬಡಗೈ, ವಡಗಯ್, ವಡಗಾಯ್ (ಗು). ೧. ಉತ್ತರದಿಕ್ಕಿನ ; ಬಡಗಣ : ಪೆರ್ಗ್ಗೊಲ್ಲಿಯುಳ್ಳೂಡಿತ್ತು ಪೆಟ್ಟೋಗೆಯ ಮೊದಲುಳ್ ಬಡಗಾಯ್ವೆರ್ಗ್ಗೊಲ್ಲಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ (ಎಕ. IV, ಎಳಂಮೂ. ೬೦-೭೬ ; ಸು. 890). **ಬಡಕಾಯ್** : (ನಾ). ೨. ಉತ್ತರದಿಕ್ಕು : ಪ್ರತಿಚಿದೆಸೆ ಪೆದ್ದಾಣ ಎ ವಾಯವ್ವಾ ದೆಸೆ ಪೆಟ್ಟಿಣ್ಬಲಿನ್ಬಡಕಾಯ್ಕೂಕು ಉದಿಚಿದೆಸೆ ಕೆಱೆಯಿನ್ನೀಗ್ಗೊರೆ ಮಟ್ಟ (ಎಕ. X (S), ಮುಳಶಾ. ೩೨೬-೩೨; ಸು. 650). **ಬಡಗೈ**: ೧. ಕೆಱೆಯಿನ್ತೆಂಕೈ ನಟ್ಟ ಕಲ್ಲೆ ಪೆರ್ಗ್ಗಟನಿಯಿನ್ ಬಡಗೈ ನಟ್ಟ ಕಲ್ಲೆ (ಎಕ. X (S), ಸಕ್ಕಪಿ. ೬೬-೦೭ ; ಸು. 850). **ವಡಗಯ್** : ೧. 'ವಡಗಯ್ಗೇರಿ' ಪರಾ. **ವಡಗಾಯ್** ೧. ಮುಚ್ಚನ್ದಿನ್ನಡಗಲ್ಲೆ ಪಡುವಯಾಲೆ ತಾಯನ್ದೆಕೆಱೆಯೆ ವಡಗಾಯ್ನಡುಗಲ್ಲೆ ಕೊತ್ತನ್ದೆ ಕೆಱೆಯೆ (ಎಕ. X (S), ಸಕ್ಕಪಿ. ೦೦೬-೬೫ ; 850); ತೆನನ್ದಾಕಕೆಱೆ ಎ ಪೆಂಮ್ಮುಗಗೆಱೆ ಎ ವಡಗಾಯ್ ಸನ್ದು ಕಿಱಿಮಾಮಿ ಪಂಳಮೆ (ಎಕ. IV, ಎಡತೊ. ೬೦-೭೯ ; ಸು. 890). 'ತೆಂಕಾಯ್' ಪರಾ.

[ಬಡಗು + —ಆಯ್ಕ್./ತುಳು. ಬಡಕಾಯಿ, ಬಡಕ್ಕಾಯಿ]

ಬಡಗಾಳಿ (ನಾ). (?) : ಒಡವೆಳೆದೆಳೆಯ ಲತೆಯ ಕೆಂದಳಿರ್ಗಳ್ ಬಡಗಾಳಿಯ ಸೋಂಕಿಂ ಪೊಸಪಲಸಿನ ನಿಡುವಣ್ಣಂ ಪೊಡೆಯುತ್ತಿರೆ (ಇಯಕಾ. ೦೦-೭).

[ℙ ಇದು 'ಪಡುಗಾಳಿ' ಎಂದಿರಬಹುದೆ ?]

ಬಡಗಿ, ಬಡಾಯಿ$_1$, ಬಡಿಗ, ಬಡಿಗೆ$_2$, ಬಡ್ಡಗಿ, ಬದ್ದಗಿ, ಬದ್ದಿ (ನಾ). ೧. ಪಂಚಕಾರುಕರಲ್ಲಿ ಒಬ್ಬ ; ಮರಗೆಲಸ ಮಾಡುವವನು ; ತಕ್ಷ : "ತ್ವಷ್ಟಾ, ಕಾಷ್ಠತಟ್, ತಕ್ಷಾ, ರಥಕಾರಃ, ವರ್ಧಕೀ—ಈ ೫ ಬಡಗಿ" (ಹಲಾಯು. ೯೬-೯೩೩) ; ನೃಪತಿ ತನ್ನ ಬಡಗಿಗಳ್ ವಿಶ್ವಕರ್ಮನುಂ ವಿಶ್ವಮತಿಯುಮೆಂಬೊರಂ ಕರೆಯಿಸಿ (ಪಡ್ಮಾರಾ. ೦೯೭-೯) ; ಬಡಗಿಯಂತೆ ಕೆತ್ತುವರ್ ಅಗಸನಂತೆ ಬೀಸಿ ಪೊಯ್ವರ್ (ಧರ್ಮಾಮೃ. ೩-೭೩). **ಬಡಾಯಿ$_1$** : ೧. ನಾಲ್ವತ್ತು ಆಳಿನಲ್ಲಿ ಹತ್ತು ಹನ್ನೆರಡು ಅಕ್ಕಸಾಲೆ ಬಡಾಯಿ ವಗೈರೆಯವರು (ರಾಶೇಂದ್ರ. ೬೫). **ಬಡಿಗ** : ೧. ಒಬ್ಬ ಬಡಿಗನಿಂದ ಆವುದಾನೊಂದು ಗಳೆಯ ಹಾಸಿಕೊಂಡೊಯಿದು ಹೋಗಿ ಭೂಮಿಯಲ್ಲಿ ಹೂಡಿ ಹೊಡೆದರೆ ನೀಟವಾಗಿ ನಡೆದರೆ ಹೂಡುವರು (ಪಶಸಂ. ೦೨೭-೦೦೭); ಹಡಗು ಗಾಳಿಗೆ ಲೇಸು ಗುಡುಗು ಮಳೆ ಬರೆ ಲೇಸು. . .ಊರಿಂಗೆ ಬಡಿಗ ಲೇಸು (ಸರ್ವಜ್ಞ. ೦೦೯೦) ; ಬಡಿಗರ ಮಾನಪ್ಪನು ನಮಗೆ ಈ ಪೆಟ್ಟಿಗೆಯನ್ನು ಮಾಡಿಕೊಟ್ಟನು (ಕಪಪು. ೯-೩). **ಬಡಿಗೆ$_2$** : ೧. ತನ್ನ ಬೇಳೆಯ ಬಳಂ ಬಡಿಗೆಯ ಹೊಲದೊಳಗೆ ರುದ್ರಶಕ್ತಿ ದೇವರ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ ಬಿಟ್ಟ ಮತ್ತರೆರಡು (ಕಇ. I, ೨೯-೯೯ ; 1148). ೨. ಬಡಗಿಯ ವೃತ್ತಿ,—ಕೆಲಸ : ಹಿರಿಯೂರ ಬಡಿಗೆ ಕಂಮಱಿಕೆ ಅಕಸಾಲಿಕೆ ಪಂಚಾಳ ಕೊಲವರ್ತನೆ (ಎಕ. IX (S), ಕಾವಕಾ. ೬೫-೦೬ ; ಸು. 1380). **ಬಡ್ಡಗಿ** : ೧. "ಬಡಗಿ (ಬಡ್ಡಗಿ, ಬಡಿಗಿ, ಬಡಿಗ)—ವರ್ಧಕಿ" (ತದ್ಭಕೋ. ೨೬); ಚಿತ್ತಾರಿ ಕೇತೋಜನ ಮಗಂ ಬಡ್ಡಗಿ ಆಯ್ಯೋಜಂ ಈ ಶಾಸನದ ಕಲ್ಲಂ ಗೆಯ್ದಂ (ಮೈಸಂ. ೦೯೩೦, ೭೯-೭೩ ; 1053) ; ವರ್ಧಕಿ—ಬಡ್ಡಗಿ, ಬಡಗಿ (ಶಮದ. ೨೬೩ ಪ್ರಯೋ). **ಬದ್ದಗಿ**: ೧. 'ಅರಬದ್ದಗಿ' ಪರಾ. **ಬದ್ದಿ** : ೧. ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲೆಬಾಗಿ ಬಿದ್ದ ಮರನ ತಂದು ಬದ್ದಿಯ ಕಾರುಕನ ಕೈಯಲ್ಲಿ ಸುಬದ್ದಿಸಿ ಬಂಧಿಸಿ ಸುದ್ದಯಿಸಿ (ಸರ್ವಪ. ೦೦೫-೫೬೭). [← ಪಾಲಿ. ವಡ್ಡಕಿ./ ಪ್ರಾ. ವಡ್ಡಇ./ಸಂ. ವರ್ಧಕಿ./ ಹಿಂ. ಬಢಈ ; ಮರಾ. ಬಢಈ, ಬಢಾಈ]

ಬಡಗಿವೆಸ (ನಾ). ಬಡಗಿಯ ಕೆಲಸ : ಏದು ದೇಗುಲಂಗಳ ಬಡಗಿವೆಸದೊಳ್ ಹಡಿಸಲಿಸುವ ಮಂಡಳಿಕ ಮಾಣಿಕಾಚಾರಿ ಹೊಂನೋಜ (ಎಕ. VIII, ಸಾಗರ. ೦೦೯-೬೯ ; 1042). [ಬಡಗಿ + ಬೆಸ$_1$]

ಬಡಗಿವೊಲ (ನಾ). ಬಡಗಿಗಾಗಿ ಬಿಟ್ಟ ಹೊಲ : ಬ[ಡ]ಗಿವೊಲದ ಸಂದಿನಲೀಶಾನ್ಯದ ಗುಡ್ಡೆ (ಸೌಇಇ. XX, ೦೮-೩೮; 980). [ಬಡಗಿ + ಪೊಲ]

ಬಡಗು, ಬಡಕ್ಕು, ಬಡಗ್ಗ, ವಡಗಂ (ನಾ). ಉತ್ತರದಿಕ್ಕು; ಬಡಗಣ ದೆಸೆ : ಅಟ್ಟುದಿಲ್ಲೆಳೆ ತೇಂಕಿರ್ದುದು ಭಾರದಿಂ ಬಡಗೆನಲ್ ಪೆಂಪಾರ್ಗ ಗಸ್ತ್ಯಂಬರಂ (ಶಂಪಭಾ. ೪-೨೦) ; ಅವರ ಆಳ್ವಿಕೆ ಬಡಗಿನಲ್ಲಿ ಕೃಷ್ಣಾನದಿಯಿಂದ ಹಿಡಿದು ತೆಂಕಲದಲ್ಲಿ ಭವಾನಿನದಿಯ ತನಕ ಪಸರಿಸಿತ್ತು (ಹಾಹುತ್ತ. ೩) ; ತೆಂಕು, ಬಡಗು, ಪಡು ದಿಕ್ಕುಗಳಲ್ಲಿಯೂ ಬೆಳಕು ಹರಡುವುದನ್ನು ಕಂಡಿದ್ದೇವೆ (ಶಿಶಿಂರ. I, ೪೯೪). ಬಡಕ್ಕು : ಪುಳಿಯಿ[ಂ] ಬಡಕ್ಕು ಪೋದ ಪೇರೊ[ಂಗೆ] (ಎಇ. X, ೬೬-೬೩; ೮೯೩). ಬಡಗ್ಗ : ಬಡಗ ಗಾವುಣ್ಡುಗಳ ಪಸುಗೆಯ ಪೊಲನ್ (ಇಅ. XVIII, ೩೯-೨೯; ೨೨೨). ವಡಗು.

ಬಡಗಣ್ಣ = ಉತ್ತರ ದಿಕ್ಕು : ಮೇರು ಪಡುವಣ್ಗೆ ಸೀತಾತೀರಂ ತೆಂಕಣ್ಗೆ ನೀಲಗಿರಿ ಬಡಗಣ್ಗಾ ತಾರಂ ದ್ರಾವಣರಣವಕ್ಷಾರಂ ಮೂಡಣ್ಗೆ ತನಗೆ ಸೀಮೆಯೆನಿಕ್ಕುಂ (ಮಂಪು. ೨-೦೨) ; ಪಡುವಣ್ಗೆ, ಬಡಗಣ್ಗೆ (ಭಾಷಾಭೂ. ೫೭ ಪ್ರಯೋ) ; ಬಡಗಣನೊಗೆದತ್ತದೊಂದು ದೀಪ್ತಿಪ್ರಸರಂ (ಪರ್ಗಪು. ೦೦-೨೨). ಬಡಗಣ, ವಡಗಣ = ಉತ್ತರದಿಕ್ಕಿನ : ಎಳ ಗೊವನೂರ ಬಡಗಣ ಸಿ(ಸೀ)ಮೆಯುಳ್ ಕು(ಕೂ)ಡಿ (ಇಅ. XVIII, ೩೬೬-೨೩ ; ೩೫೫ ಶತ) ; ಜಂಬೂದ್ವೀಪದ ಮೇರುವಿನ ಮೂಡಣ ವಿದೇಹದ ಸೀತಾನದಿಯ ಬಡಗಣ ತಡಿಯೊಳ್ (ಆದಿಪು. ೩-೬ ಪ); ತೆಙ್ಕಣ್ಣಾ ಸೀಮೆ ನೆಯ್ದಲ್ಗೆಱೆಯಾ ಏಱಿ ಮೂಡಣ್ಣಾ ಸೀಮೆ ಇಡೆವೆಟ್ಟದಾ ವಡಗಣ್ಣಾ ನೀರಿಱಗ (ಎಇ. XXI, ೨೯-೦೨ ; ಸು. ೩೫೫ ಶತ). ಬಡಗಣಂ = ಉತ್ತರ ದಿಕ್ಕಿನವನು : ಅಕಾರಕ್ಕೆ — ಮೂಡಣಂ, ತೆಂಕಣಂ, ಬಡಗಣಂ (ಕಮಾರ. ೦೦೦ ಪ್ರಯೋ) ; ಪಡುವಣಂ, ಬಡಗಣಂ (ಶಬ್ದಾಮ. ೪೨೦ ಪ್ರಯೋ). ಬಡಗಲ್, ಬಡಗಲು = ಉತ್ತರ ದಿಕ್ಕು; ಬಡಗು : ತದ್ದವಾಡಿಗೆ ತೆಂಕಲ್ ತೊಱಗಲೆಗೆ ಬಡಗಲಿರ್ದುದು ನೆಱೆಯೆ ಸುಖೋದ್ದೀಪಮೆನಿಸಿ ಬೆಳುಗಲಿದೇಶಂ (ಅಪಪು. ೦೨-೪೬) ; ನೈರಿತಿಯೊಳ್ಬರವುಲಿಗೆಱೆಯ ತೆಂಕಣ ಕೊಡಿಯಿಂ ಬಡಗಲ್ಬರೆಯೆರದ ಕೊಳನುಂ ಬೂದಿವಾಳುಂ (ಸೌಇಇ XI-i, ೩೨-೫೭; 1007); ಸುರರೆಲ್ಲಂ ಬಡಗಲು ನೆರೆದಿರೆಯಾ ದೆಸೆ ಕುಸಿದು ತೆಂಕ ನೆಗೆದೊಡೆ (ಸಮಪ. ೦೦-೦೦೪); ಬಡಗಲುತ್ತರಕುರುನರೇಂದ್ರರ ನಡುಗಿಸಿದರು (ಕುಪ್ಯಾಸ. ೦೪-೩೯).

[ದೇ.ಪ ತಮಿ. ಮಲ. ವಟಕ್ಕು; ಕೊಡ. ಬಡಕ್; ತೆಲು. ವಡಕು]

ಬಡಗುದುರೆ (ನಾ). ಸೊರಗಿದ ಕುದುರೆ; ಕೃಶವಾದ ಅಶ್ವ : ಏನನೆಂ ಬೆನು ಬಸವ ನೀನೀವಾನೆಮಱಿಗಳು ಬಡಗುದುರೆಗಳನೂನಸತಿಯರು ವರುಣ ಮೃತ್ತಿಕೆ ಕೆಂಪಿನಱುವೆಗಳು (ಬಸಪು. ೨೨-೫೫); ಲಶುನಮುಮೋವು ಮನುಪ್ಪಂ ಮೊಸರುಮನೊಡಗೂಡಿಕೊಂಡು ಬಡಗುದುರೆಗೆ ಸಂಕಿಸದೊಂದು ಪಕ್ಷಮಿಕ್ಕುಗೆ ವಿಶೇಷದಿಂ ಫಲಮನೀವುದದು ನಿಶ್ಚಯದಿಂ (ಅಶ್ವಶಾ. ೬-೫೦).

[ಬಡ (< ಬಡವು) + ಕುದುರೆ]

ಬಡಗೂಂಟು (ನಾ). = ಬಡಗುದುರೆ : ಉಡಿದೈ ಬಂಡಿಯನೇನಗುರ್ವೊ ಮಗುಟ್ಟುಂ ವಿಕ್ರಾಂತದಿಂ ಕಾಗೆಯಂ ಪಿಡಿದೈ ಸಂಕಿಸದೆರ್ದು ಕತ್ತೆ ಬಡಗೂಂಟೆಂದಿಂತಿವಂ ನೋವಿನಿಂ ಬಡಿದೈ . . . ಇದೇನಾಶ್ಚರ್ಯಮೊ ಸಾಹಸಂ (ಬಂಹಂ. ೬-೬೩). [ಬಡ (<ಬಡವು) + ಗೂಂಟು]

ಬಡಗೆಲಸ (ನಾ). ಸಣ್ಣ ಪುಟ್ಟ ಕೆಲಸ; ಚಿಲ್ಲರೆ ಕೆಲಸ: ಬಿಸಸುತಂ ತವೆ ಬಿಟ್ಟಿಯಂ ಮಾಡಿಸಿಕೊಳುತ ಬಡಗೆಲಸವಂ ಸಂತಸದಿ ಮಾಡಿಸೆ ಮಾಡಿ ಬದುಕುವೆವು (ಬಸಪು. ೨೩-೦೯). [ಬಡ (<ಬಡವು) + ಕೆಲಸ]

ಬಡಗೈ 'ಬಡಗಾಯ್' ನೋ.

ಬಡಗೊಂಡಿ (ನಾ). ಕೃಶವಾದ ಕೊಂಡಿ; ಸವೆದ ಸರಪಳಿಯ ತುದಿ : ಬಣಜಿಗನ ಬಳಕೆಯಂತೆ ಕೊತ್ತಳಂ ಬಱಿದಾಗಿ ಬಟಲ್ದ ಬಡಗೊಂಡಿಯಂತಿ ರಾಳ್ವೇರಿಯಟಿದು ಕಡುಗೊಯ್ಯಲಾದ ಕೆಯ್ಯಂತೆ ತೆನೆ ಮುಱಿದು (ಅಸಂಪು. ೦೦-೬೩ ಪ). [ಬಡ (<ಬಡವು) + ಕೊಂಡಿ]

ಬಡತನ (ನಾ). ೧. ಸೊರಗಿರುವಿಕೆ ; ಸಣ್ಣಗಾಗಿರುವಿಕೆ ; ಕೃಶತೆ : ಸರಳತೆಯುಂ ಬಡತನಮುಮಬಳಾಮಧ್ಯದೊಳ್ (ಎಳ. XIII, ೩೩೨-೪೨; ೨೨೦); ಬಡತನಮಂ ಬಡುತಿರ್ಪುದು ನಡು (ಕಾದಂಪು. ೪೦೩); ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನ ಉಂಟೆ (ಕೂಪ್ಯಸಂ. ೨೨೬-೯). ೨. ದರಿದ್ರತೆ; ದಾರಿದ್ರ್ಯ ; ನಿರ್ಗತಿಕತನ : ಜಗದ ಬಡತನಮನೊರ್ಮೆಯೆ ಬಗೆದಂತಿರೆ ಕಿಡಿಪ ಚಕ್ರಿ ತನ್ನಿರ್ದೆಡೆಯೊಳ್ ನೆಗಟ್ಟ ಬಡತನಮನದನೇಕೆ ಗಡಂ ಸೈರಿಸುವನೆನೆ ಪೊದಟ್ಟುದು ಮಧ್ಯಂ (ಆದಿಪು. ೬-೩೦); ಎಂತಾನುಂ ಪಡೆದ ಧನಮನಸದ್ವ್ಯಯಂಗೆಯ್ದೊಡೆ ಬಡತನಮಕ್ಕುಂ (ಶಂಪಶಂ. ೩೦೦-೨); ನಿನ್ನಯ ಸಿರಿಯೆ ಸಿರಿ ಬಡತನವೆ ಬಡತನ (ಕುಪ್ಯಾಸ. ೦೪-೨೦). ೩. ಕೊರತೆ; ಅಭಾವ : ಪಿರಿದಹ ನರಕಹಿಂಸೆಗಳನಡಸಿ ಸ್ವರ್ಗವನೀವ ಕರ್ಮದ ಕಡುವಿಸಂಪದದಿಂದೆ ಜ್ಞಾನದ ಬಡತನವೆ ಮಿಗೆ ಲೇಸು (ಗಗತಾ. ೦೬-೪೭); ದುಡಿಯದೆ ನಮ್ಮ ದೇಶದಲ್ಲಿ ಆಹಾರಕ್ಕೆ ಬಡತನ ಬಂದಿದೆ (ಕೂಠಿ).

[ಬಡ (<ಬಡವು) + — ತನ]

ಬಡತರ್ಫ್ 'ಬರೆತರಫು' ನೋ.

ಬಡತಾವು (ನಾ). ಏನೂ ಇಲ್ಲದ ಜಾಗ; ನಿರ್ಗತಿಕ ಸ್ಥಳ; ಕುಗ್ರಾಮಂ : ದೊಡ್ಡೊಡೆಯ ತನ್ನಯ ಮಂತ್ರಿಸಖರಾ ಬಡತಾವಿಗಟ್ಟನಟ್ಟಿದರೇನು ನಮ್ಮ ಚಿಕ್ಕೊಡೆಯನಲ್ಲಿಗೆ ಬಂದೆವು (ಭರಸ. ೪೯-೪೭).

[ಬಡ (<ಬಡವು) + ತಾವು$_2$]

ಬಡತಿ, ಬಡ್ತಿ (ನಾ). (ಸಂಬಳ, ಹುದ್ದೆ ಮೊದಲಾದುವುಗಳಲ್ಲಿ) ಏರಿಕೆ; ಹೆಚ್ಚಳ : ಸರಕಾರೀನೌಕರಿಯ ಬಗ್ಗೆ ಸಂಬಳ, ಬಡತಿ, ಭತ್ತೆ, ಪಿಂಚಣಿ, ಪದವಿ ಇವೇ ಆ ವರ್ಗದ ಪಂಚಪ್ರಾಣಗಳಾದವು (ಮಾಪಾದ. ೧೩); ಬಹು ಮಾನದ ಜೊತೆಗೆ ಕೆಲಸದಲ್ಲಿ ಬಡತಿ ದೊರೆಯುತ್ತದೆ (ಸಗಹೊ. ೦೬೨); ನಿಮ್ಮ ಉತ್ತಮಕೆಲಸದ ಸಲುವಾಗಿ ನಿಮಗೆ ಯೋಗ್ಯವಾದ ಬಡತಿ ಸಿಗುವ ವೇಳೆ ಇದೇ ಅಲ್ಲವೇ ? (ಕಳ್ಳಕಾ. ೫೨). ಬಡ್ತಿ : ಕಚೇರಿಯ ಮಾತು, ಮೇಲಿನ ಅಧಿಕಾರಿಗಳ ವಿಶ್ವಾಸಸಂಪಾದನೆ, ಮುಂದಿನ ಬಡ್ತಿ ಯಾವಾಗ ಬರುತ್ತದೆ? —ಈ ಮಾತುಗಳೆಲ್ಲ ನಡೆದುವು (ಮಹಾದ. ೦೪); ನನಗೆ ಒಟ್ಟಿಗೆ ಇಪ್ಪತ್ತು ರೂಪಾಯಿ ಬಡ್ತಿ ಸಿಕ್ಕಿದೆ (ಪರೀಕ್ಷ. ೫೦).

ಬಡ್ತಿ ನೀಡು = ಮೇಲಿನ ಹುದ್ದೆಗೆ ಏರಿಸು: ಮೇಲಿನ ಅಧಿಕಾರಿಗಳು ಅವರಿಗೆ ಮೊದಲ ದರ್ಜೆಯ ಗುಮಾಸ್ತರಾಗಿ ಬಡ್ತಿ ನೀಡಿದರು (ಕೂಠಿ). ಬಡ್ತಿ ಹೊಂದು = ಮುಂದಿನ ಹುದ್ದೆಗೆ ಏರು: ಕಾಲಕ್ರಮದಲ್ಲಿ ಬಡ್ತಿ ಹೊಂದಿ ಮೇಲಕ್ಕೆ ಬರಬಹುದು (ಆಗಸಂ. ೦೯). [←ಹಿಂ. ಮರಾ. ಬಢತೀ]

ಬಡತಿಗೆ (ನಾ). ಕೋಲು; ದೊಣ್ಣೆ; ಬಡಿಗೆ : ಆಗ ಶಂಭಯ್ಯನವರ ತಲೆಗೆ ಬಡತಿಗೆಯಿಂದ ಹೊಡೆದಂತಾಯಿತು (ಸಂಬಿನಾ. ೬); ಎಸೆದ ಬಡತಿಗೆಯಷ್ಟು ಉದ್ದವಾದ ಮಾವಿನ ಕೊಂಬೆ ಉರಿಯುತ್ತಿತ್ತು (ಪ್ರಶ್ನೆ. ೬೩). 'ಬಡಿತ' ಪರಾ. [<ಬಡಿಗೆ]

ಬಡನಡು (ನಾ). ಸಣ್ಣಗಿರುವ ನಡು; ಕೃಶವಾದ ಸೊಂಟ : ಪಾಲ್ಗಡಲೊಳಮಮರ್ದಿನೊಳಂ ಪುಟ್ಟಿದ ಕಳ್ಳಸೊರ್ಕಿನೊಳಮುಂತೆ ನಡುಗುವ ಬಡನಡುಗಳ್ಗೆ ನಡುಕಮುಮಂ . . . ಕೆಯ್ಗೆಯ್ದು (ಶಂಪಶಾ. ೬-೦೬ ಪ); ನೆಲೆಮೊಲೆಯ ಬಿಣ್ಪಿಂಗೆ ಬಡನಡು ಬಳ್ಕೆ (ಗಿರಿಕ. ೨-೦೦೩ ಪ); ಕರಿಕುಂಭ ಜಘನ ಬಡನಡು ಬಟ್ಟಬಲ್ಮೊಲೆ ಕಂಬುಕಂಧರವುಡುರಾಜಮುಖವು ಪದ್ಮಿನಿಗೆ (ಪೋಹಶ. ೦೬-೩೬). [ಬಡ (<ಬಡವು) + ನಡು$_2$]

ಬಡನುಡಿ (ನಾ). ದುರ್ಬಲವಾದ ಮಾತು ; ಸತ್ತ್ವವಿಲ್ಲದ ನುಡಿ : ಮನದೊಳಿದ್ದುದನೆಹಗೆ ಹೇಳಿದೆಯೆನುತ ಪಡೆದಾ ದೊಡ್ಡಹೊಟ್ಟೆಯನೆನುತ ಬಡನುಡಿಯಂ ನುಡಿವರೇ ಭಕ್ತರೊಳಗೆನುತ (ಬಸಪು. ೫೯-೦೪); ಜಲಬಿಂದು ಶುಕ್ತಿಕೆಯೊಳು ಬೀಳೆ ಮುತ್ತಾಗಿ ಬೆಲೆವಡೆವಂತೆನ್ನ ಬಡನುಡಿ ಬೆಲೆವಡೆಯದೆ ಮಾಣ್ಬುದೆ (ಶ್ರೀಶುತಿ. ೦-೦೯); ಬಡನುಡಿ ಬಲ್ನುಡಿ ಬಡದೈವಕಲ್ಲದೆ ಬಡಶಬ್ದ

ನಿನ್ನ ಪೊಂದುವದೆ (ಕಸಣಾಂ. ೬೨-೬೩). [ಬಡ (<ಬಡವು) + ನುಡಿ$_2$]

ಬಡಪ. ಬಡಹ (ನಾ). ಎಡಬಿಡದೆ ಸುರಿಯುತ್ತಿರುವ ಮಳೆ; ಜಡಿಮಳೆ: ಕಿತ್ತಂಬಿನ ಬಡಪಮಿದೆನಿಸಿ ಪಾಂಡ್ಯನಂಬಂ ಕಱೆದು (ಸಂಪಣಾ. ೦೨-೯೦); ತಂದಲ್ಲೋನೆ ನಟ್ಟ ಬಡಪಮೆನಲ್ಸುರಿದುವು ಬಿಡದೆ ಮಟೆಗಳಿರುಳುಂ ಪಗಲುಂ (ಜಗ. ೪-೩೨); ಬಡಪಂ ಬೆಂಬತ್ತೆ ಮೇಪಂ ಮಱೆದು ಬಿಡದೊಡಲ್ ಕೋಡೆ . . . ನಿಂದಿರ್ದುದೋರೊಂದೆಡೆಯೊಳ್ ತಾಱಲ್ಗಳೊತ್ತಂಬಿಡಿದು ಮೃಗಮೃಗೀವೃಂದಮೋರಂದದಿಂದಂ (ಸಂಪ್ರಪು. ೪-೧೭). ಬಡಹ : ಪೋದುದಾಗಳಂತೆಡವಿಡದಿರ್ದ ಶಕ್ರಧನುವಾ ಬಡಹಂ ಬರೆ ಮೇಘಕಾಲದೊಳ್ (ಕುಸುಮಾ. ೬-೩೪); ಬಡಹಂ ಕೈಕೊಂಡು ದುರ್ವೀತಳಮದು ನೆಱೆ ಜೌಗೆಟ್ಟು . . . ಕಂಪಲ್ಮಸಗೆ (ಶಾಂತೀಕ್ಷ. ೦೨-೩೬); ಮುಗಿಲೇಱೆ ಸುರಿದುದು ಬಡಹವಾ ಜೀವಂಜಸೆಯ ಕಣುನೀರೊಗುವ ತೆಱದಿ (ಪಾಳ್ಯಪಾ. ೩೦-೬). [<ಪ್ರಾ. ವಡಪ್ಪ]

ಬಡಪಟ್ಟು ' ಬಡಪೆಟ್ಟು ' ನೋ.

ಬಡಪಡು ' ಬಡವಡು ' ನೋ.

ಬಡಪತ್ತು (ನಾ). =ಬಡತನ ೨ : ನಾನೂ ಬಡವನೇ ; ಬಡಪತ್ತಿನಲ್ಲೆ ಹುಟ್ಟಿ ಬೆಳೆದವನು, ವಾರಾನ್ನದಿಂದ ಪರೀಕ್ಷೆ ಪಾಸು ಮಾಡಿದವನು (ಕಿಷ್ಕಿಂಪು. ೦೦೦). [←ತುಳು. ಬಡಪತ್ತ್]

ಬಡಪಶು (ನಾ). ಅಸಹಾಯಕಸ್ಥಿತಿಯಲ್ಲಿರುವ ಪಶು ; ದುಃಸ್ಥಿತಿಯಲ್ಲಿರುವ ಪ್ರಾಣಿ : ಕೆಸಱಲ್ಲಿ ಬಿದ್ದ ಬಡಪಶುವಿನಂತೆ ಆನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ (ಉಸವ. ೪. ೩೨). [ಬಡ (< ಬಡವು) + ಪಶು]

ಬಡಪಾಯಿ (ನಾ). ೧. ದುರ್ಬಲ ; ಅಸಮರ್ಥ ; ಅಶಕ್ತ: ನಮ್ಮಂತಹ ಬಡಪಾಯಿಗಳು ಇಂತಹ ಕೆಲಸಕ್ಕೆಳಿದರೆ ಕಾರ್ಯ ಸಫಲವಾಗಬಹುದೆನ್ನುವ ನಂಬಿಕೆ ಇಲ್ಲ (ಕುರುಕಾ. ೬೯); ಬಡಪಾಯಿಗಳು ಹೋರಾಡುತ್ತಿರುವ ಸಾಮ್ಯವಾದಿ ಸಮಾಜರಚನೆಯೇ ಇದು (ಧರ್ಮಸಾ. ೦೨) ; ಈ ನೆಲವೆಲ್ಲವು ಕಾಗದವಾದರೆ ಜಲವೆಲ್ಲವಾದರೆಶಾಯಿ ಮರ ಗಿಡವೆಲ್ಲವು ಲೆಕ್ಕಣಿಯಾದರೆ ಬಡಪಾಯಿ ಸಾಕು ಬಡಾಯಿ (ಇಂಪಾಪ. ೦೩೬-೬೦). ೨. ನಿರ್ಗತಿಕ; ದರಿದ್ರ : ಅಯ್ಯೋ ತಾನು ಬಡಪಾಯಿ ಹೇಗೆ ಅಂಥ ಸುಖ ಸಿಕ್ಕೀತು ? (ಪೇವರಂ. ೬೨); ನನ್ನಂಥ ಬಡಪಾಯಿಯನ್ನು ಯಾರೂ ಕೇಳುವುದೇ ಇಲ್ಲ (ಕೇಮೋಪ. ೩೮); ಆ ಬಡಪಾಯಿಯ ಅಂತರಂಗದಲ್ಲಿ ಏನೇನು ಅಡಗಿದೆಯೋ ದೇವರೇ ಬಲ್ಲ ! (ಎಂಕಯೋ. ೧೬). (ಗು). ೩. ಸೊರಗಿದ; ಕೃಶವಾದ; ಒಣಗಿದ : ಆ ಬಡಪಾಯಿ ಪ್ರಾಣಿ ಬಾಯಾರಿಕೆಯಿಂದ ಈ ಅಮೃತಸರೋವರಕ್ಕೆ ಬಂದಿತ್ತು (ಪಾಜಿಪ. ೩೦); ಬಡಪಾಯಿ ಶೇಟಜಿಯ ದೇಹದಲ್ಲಿ ಉಳಿದಿದ್ದ ಚಟುವಟಿಕೆಯೂ ತೀರಿ ಹೋಯಿತು (ರತ್ನಗೋ. ೩೬). [ಬಡ (<ಬಡವು) + ಪಾಯಿ$_1$]

ಬಡಪಾರ್ವ. ಬಡಹಾರುವ (ನಾ). ದರಿದ್ರನಾದ ಬ್ರಾಹ್ಮಣ; ನಿರ್ಗತಿಕನಾದ ಬ್ರಾಹ್ಮಣ : ಎಮ್ಮಂ ಬಡಪಾರ್ವರನರಸರೆ ನೀಮೀಗಳಱೆ ವಿರಱಿಯಿರೊ ಪೇಟಿಂ (ಸಂಪಣಾ. ೨-೬೩); ಈ ಕುಲಾಂಗನೆಯರೀ ಬಡಪಾರ್ವನ ನುಟರಾಗರೇ (ಅಪಪು. ೦೦-೩೨); ಬಡಪಾರ್ವರೊಳ್ ಬೆಳೆದು ಬಾಯ್ ಬಡಿವುದನ್ ಕಲ್ತೆ (ಅಶ್ವತ್ಥಾ. ೪೩-೬೪೪). ಬಡಹಾರುವ : ಈ ಪುಷಿಗಳೇ ಬಣಗುಗಳು ಬಡಹಾರುವರು (ಕುಪ್ಯಾಸ. ೬-೩೩).

[ಬಡ (<ಬಡವು) + ಪಾರ್ವ]

ಬಡಪೆಟ್ಟು, ಬಡಪಟ್ಟು (ನಾ). ಬಡಿಯ ಏಟು; ದೊಣ್ಣೆಯ ಹೊಡೆತ. ಬಡಪಟ್ಟು.

ಬಡಪೆಟ್ಟಿಗೆ, ಬಡಪಟ್ಟಿಗೆ=(ಆಲಂ) ಸುಲಭವಾಗಿ; ಸರಾಗವಾಗಿ; ತೊಡಕಿಲ್ಲದೆ : ಆಫೀಸ್ ಕೆಲಸ ಬಡಪೆಟ್ಟಿಗೆ ಆಗೋಲ್ಲ (ಕುಸುಸಂ. ೨೦೬); ಅರಮನೆಯ ಜನ,ಗುರುಜನ,ಬಡಪೆಟ್ಟಿಗೆ ಅಂಥದಕ್ಕೆ ಒಪ್ಪಿಗೆ ಕೊಡುತ್ತಿರಲಿಲ್ಲ (ಸಪಂ. ೬೩); ರಂಗಣ್ಣ ಬಡಪಟ್ಟಿಗೆ ಮನೆಯಿಂದ ಹೊರಡುತ್ತಿರಲಿಲ್ಲ(ಸಪ್ಯೂರು. ೨೩೦) ; ಆನಂದ ವಸಂತರ ನಡುವೆ ಚರ್ಚೆ ಪ್ರಾರಂಭವಾದರೆ . . . ಬಡಪಟ್ಟಿಗೆ ಮುಗಿಯುತ್ತಿರಲಿಲ್ಲ (ದೂರಸ. ೨೪). [< ಬಡಿ$_3$ + ಪೆಟ್ಟು$_2$]

ಬಡಬ (ನಾ). ೧. ಸಮುದ್ರದ ಒಳಗಿರುವ ಬೆಂಕಿ ; ವಡಬಾಗ್ನಿ; ಕಡಲ್ಗಿಚ್ಚು : ಕಡಲೊಳಿಡಲೊಡನೆ ಬಂಬಲುಗಿಡಿಯ ಗಡಣದಿಂ ಬಡಬನೊಡಗೂಡಿತು (ಅಶ್ವಸ. ೦-೯); ಕಣ್ಗೊಪ್ಪಿ ಬಂದತ್ತಿಭೇಂದ್ರಂ . . . ಬಡಬನಳುರ್ಕೆಯೊ ಭೈರವನಡರ್ಪೊ ಮಿಳ್ತುವಿನ ದರ್ಪವೋ . . . ಎಂದೆನೆ ಕಱುತ್ತು ತಾಗಿತ್ತಾಗಳ್ (ರಾಜಶೇ. ೬-೮೨). ೨. [ಕಾಮಶಾ] ಸ್ತ್ರೀಯರಲ್ಲಿ ಒಂದು ಗುಂಪು : ಬಡಬಜಾತಿ ಸ್ತ್ರೀಯಾಗಲಿ ಹರಿಣಿಜಾತಿ ಸ್ತ್ರೀಯಾಗಲಿ . . . ಕಾಮೋತ್ಸವಕ್ಕೆ ಪ್ರಿಯಳು (ಕಾಮಶಾ. ೨೧೬). [ಸಂ.]

ಬಡಬಜ್ವಾಲೆ (ನಾ). = ಬಡಬ ೧ : ಬಡಬಜ್ವಾಲೆಯ ವಿಸ್ಫುಲಿಂಗತತಿಯೆಂ ಬಂತಿರ್ಪ ಕಣ್ ಚಕ್ರದಿರ್ಕಡೆಯಂ ಬಾಯೊಳಿಱುಂಕಿದಂತೆ ಪೊಳೆಪಿಂ ಕೊಂಕಿರ್ದ ಕೂರ್ದಾಡೆ (ಕಪಸಂ. ೪-೪). [ಸಂ. ಬಡಬಜ್ವಾಲಾ]

ಬಡಬಡ$_1$ (ನಾ). ತ್ವರಿತ, ಶೀಘ್ರತೆ, ನಿರರ್ಥಕತೆ ಇತ್ಯಾದಿಗಳನ್ನು ತಿಳಿಸುವ ಒಂದು ಅನುಕರಣಶಬ್ದ : ಪರಲು ಪರಿವಾರ ಬಡಬಡೆನಲು ಮುಗುಳುನಲಿ ನಗುತ್ತ (ಎಕ. VIII. ಸಾಗರ. ೦೦೯-೦೦; 1250 ?).

ಬಡಬಡ$_2$ (ಅ). ಬೇಗನೆ, ಶೀಘ್ರವಾಗಿ ಎಂಬ ಅರ್ಥದ ಒಂದು ಅನುಕರಣಾವ್ಯಯ : ಎಷ್ಟನೆಯ ಪಾಠ ಅಂತ ಹೇಳಿಬಿಡಿರಿ. ಬಡಬಡ ಅಂದು ಬಿಡುವೆ (ಅಶ್ವಮೇ. ೯); ಹೋಗಿ ಬಡಬಡ ಬೇರ್ಮನೆ (ವರನಿರುವ ಮನೆ) ಯಿಂದ ಮದಲಿಂಗನನ್ನು ಕರೆಕೊಂಬರ್ರಿ (ಸುಪಸಂ. ೩೨).

ಬಡಬಡಕ (ನಾ). ಬಡಬಡ ಎಂದು ಮಾತನಾಡುವವನು : ಬಡಬಡಕರನು ಹೇಳದಿರು ಮನ ನಡುಗುತಿರ್ದುದು ಮದನಹರನೆದೆ ಮಿಡುಕುತಿರ್ದುದು (ಕೊರಂಗ. ೬-೪೬-೪೦). [ಬಡಬಡ$_1$ + — ಕ$_2$]

ಬಡಬಡಕನೆ ' ಬಡಕು ' ಪರಾ.

ಬಡಬಡಗುಟ್ಟು (ಕ್ರಿ). ವ್ಯರ್ಥವಾದ ಮಾತನ್ನಾಡು ; ವಟಗುಟ್ಟು ; ಗಳಹು : ಬಡಬಡಗುಟ್ಟಿ ಬಾಯಾಱೆ ಬಹಳ ಕಾಲ ಗೊಡೆಗುಟ್ಟಿ ಶಾಸ್ತ್ರಿ ಗಳಹರ ನಡೆಯ ನಗುತ ಕ್ಷಣದೊಳು ಶಾಸ್ತ್ರವಾರ್ಧಿಯ ಕಡೆಗಂಡ ಕುತಲನೆಯ್ದಿದನು (ಧರಸ. ೬೨-೬೨). [ಬಡಬಡ$_1$ + ಕುಟ್ಟು$_1$]

ಬಡಬಡನೆ (ಅ). ಜಾಗ್ರತೆಯಾಗಿ ; ತ್ವರಿತವಾಗಿ : ಹತ್ತೇ ರೂಬಲ್ ಸಾಕು ಎಂದವಳು ಬಡಬಡನೆ ನುಡಿದಳು (ಪುಸರು. ೦೯೪).

[ಬಡಬಡ$_1$ + — ಅನೆ$_1$]

ಬಡಬಡಾಗು ' ಬಡ ' ಪರಾ.

ಬಡಬಡಿಕೆ (ನಾ). ಗಳಹುವಿಕೆ ; ಹರಟುವಿಕೆ ; ವ್ಯರ್ಥಾಲಾಪ : ಬಿಡುಗಡೆಯು ಬಂದಿತೆಂಬ ಬಡಬಡಿಕೆ ನಿಲಿಸೊ ಹುಂಬ (ಹಂಗ್ಲ. ೯೯) ; ಬಾದಪಹನ ಬಡಬಡಿಕೆಗೆ ಶಿವಾಜಿಯು ಬೆದರಿ ಬೆಂಡಾಗತಕ್ಕವನಲ್ಲ (ಹಂಕಿರು. ೪೦).

[ಬಡಬಡ$_1$ + — ಇಕೆ]

ಬಡಬಡಿಸು (ಕ್ರಿ). = ಬಡಬಡಗುಟ್ಟು : ನುಡಿಯಲೇನುಳಿದವರನೆಣಿಕೆಯೊಳಿಡುವೆನೇ ಲೋಕತ್ರಯವನೆಂದೊಡನೊಡನೆ ಬಡಬಡಿಸಿ ಮೀಸೆಯ ಮುರಿದನಸುರೇಂದ್ರ (ಅಪಂಠಾ. ೧-೩-೩) ; ಮುದುಕಿ ಬನುವನನ್ನು ಮುಂದೆ ನಿಲ್ಲಿಸಿಕೊಂಡು ಅದೇನನ್ನೋ ಬಡಬಡಿಸುತ್ತಿದ್ದಳು (ಐಸಸಿ. ೩೩).

[ಬಡಬಡ$_1$ + — ಇಸು$_3$]

ಬಡಬಶಿಖಿ (ನಾ). = ಬಡಬ ೧ : ಬಡಬಶಿಖಿಯನು ಕರದಿ ನಂದಿಪ . . . ರಕ್ಕಸಪಡೆಯ ಕೂಡಿದು ರಣಕೆ ಸಿಂಗರಗೈದು ಹೊಱವಂಟ (ಕಾಶಿರಾ. ೩೫-೩) ; ಬಡಬಶಿಖಿಯಲ್ಲಿ ಪರ್ಬುವ ಪೊಡರ್ಪನೊಳಕೊಂಡು ಮೇಲೆ ಮೇಲೈತರ್ಪನ್ನೊಡಲುರಿಯನವಧರಿಸು (ರಾಜಶೇ. ೦೩-೦೪೬).

[ಸಂ. ಬಡಬಶಿಖಿನ್]

ಬಡಬಾಗ್ನಿ (ನಾ). = ಬಡಬ ೧ : "ಕಡಲ್ಗಿಚ್ಚು ಬಡಬಾಗ್ನಿಯಕ್ಕು" (ಶಾಸಾಂ. ೦೩) ; ಜಿನಭಾವನೆಯೆಂಬ ಬಡಬಾಗ್ನಿಯಿಂ ವಿಷಯಸಾಗರಮಂ ಪೀರದೆ . . . ಶಾಶ್ವತಸುಖಂ ದೊರೆಕೊಳ್ಳದು (ಧರ್ಮಾಸ್ಯು. ೬-೯೭) ; ಬಡಬಾಗ್ನಿ ನೊರಜಿನ ದಾಳಿಗಳುಕುವುದುಂಟೆ (ಕುಣ್ಯಾಪ್ರೋ. ೨-೭೯).

[ಸಂ.]

ಬಡಬಾನಲ, ಬಡಬಾನಳ (ನಾ). ೧. = ಬಡಬ ೧ : ಬಡಬಾನಲಂಗೆ ಸಡೆದಿಂಗಡಲೆ ಸರಣ್ಬೊಕ್ಕುದಮರಶೈಲಮಂ (ಸಂಶಾಮಾ. ೦-೦೦೩). ೨. ಒಂದು ಬಗೆಯ ಮಂತ್ರಾಸ್ತ್ರ ; ಆಗ್ನೇಯಾಸ್ತ್ರ : ಹರಿ ಬಡಬಾನಲವ ತೊಡೆ ದನುಜ ಕೈದುವ ಬಿಸುಟು ನಿಂದನು ತನಗೆ ಬಂದುದು ಮರಣ ವೆಂದೆನುತಾಗ ಕೈಮುಗಿದು (ಕೌತಿಶಾ. ೩೩-೬೩). ಬಡಬಾನಳ : ೧. ಅಗುರ್ವುರಿವರಿಯುತ್ತುಮಿರ್ಪಣೆ ಬೃಹದ್ಬಡಬಾನಳನಂತೆ ತೋಱ (ಸಂಪಶಾ. ೬-೯೯) ; ಬಡಬಾನಳನ ಶಿಖಾವಳಿ ಕುಡಿಯಿಟ್ಟುದು (ಶಾಂತೀಶ್ವ. ೦೩-೦೦) ; ಮಳೆಗೆ ಮೊಗದಿರುಹುವುದೆ ಬಡಬಾನಳನು (ಕುಣ್ಯಾಪ್ರೋ. ೩-೩೬). [ಸಂ.]

ಬಡಬಾನಳ 'ಬಡಬಾನಲ' ನೋ.

ಬಡಬಿಜ್ಜೆ (ನಾ). ಕಡಮೆಯಾದ ವಿದ್ಯೆ ; ಅಲ್ಪವಿದ್ಯೆ : ಮಗನೆ ಕಡು ಗುದುರೆಯುಂ ಬಡಬಿಜ್ಜೆಯುಂ ಸಮಂ ಮಗನೆ ನಾಣ್ನುಡಿ ತಪ್ಪದೆಂಬು ದಿಂತೀ ಕ್ರಮಂ (ಸಂಬರ. ೦೯-೦೦೯). [ಬಡ (< ಬಡವು) + ಬಿಜ್ಜೆ]

ಬಡಬೆ (ನಾ). ೧. ಹೆಣ್ಣುಕುದುರೆ : ಬಡಬೆಯ ಬೆನ್ನೊಳ್ ನರನಟು ದೊಡಪುಂತಾ ಬಡವೆ[ಬೆ] ಸಮರದೊಳ್ ಶರಹತಿಯಿಂ ಮಡಿವೊಡಮೆಂತುಂ ಸ್ವರ್ಗಂಬಡೆಗುಮೆ ತತ್‌ಕ್ಷಣದಿನವನಧೋಗತಿಗಿಟುವಂ (ಅಶ್ವಶಾ. ೨-೩೨). ೨. = ಬಡಬ ೨ : ಬಿಡದೆ ಮೃಗಿಯು ವೃಷನು ಬೆರಸೆ ಬಡಬೆ ಹಯನು ಬೆರಸೆ ಈ ಎರಡು ನಿಧಾನಿಸುವೊಡೆ ಉಚ್ಚತರವು (ಜಸಪ. ೯-೨೩) ; ಹರಿಣಿ ಬಡಬಾ ಕರಿಣೀ ಯಿಾ ಮೂರು ಪ್ರಕಾರ ಸ್ತ್ರೀಜಾತಿಯಿಹುದು (ಸೌಗಂಧಿ. ೯೯೩-೯). [ಸಂ. ಬಡಬಾ]

ಬಡಮತಿ (ನಾ). ಅಲ್ಪವಾದ ತಿಳಿವಳಿಕೆ : ಇನಿತು ಬಡಮತಿಯಿಂ ಬಸವ ರಾಜನ ಕೃತಿಯ ನಾನೆಂತು ರಚಿಸುವೆನು (ಬಸಪು. ೦-೦೯).

[ಬಡ (< ಬಡವು) + ಮತಿ]

ಬಡಮದುವೆ (ನಾ). ಕಡಮೆ ವೆಚ್ಚದಲ್ಲಿ ಮಾಡುವ ಮದುವೆ : ಬಡತನದ ಲಗ್ನ : ಈ ಸುತಂಗೊಂದು ಬಡಮದುವೆಯಂ ಮಾಳ್ಪೆ (ಪಸ್ಕರಾ. ೦೩-೩). [ಬಡ (< ಬಡವು) + ಮದುವೆ]

ಬಡಮನ (ನಾ). ೧. ಹುರುಳಿಲ್ಲದ ಮನಸ್ಸು; ಅಲ್ಪಮನಸ್ಸು : ಇಲ್ಲವೆಯ ಮೇಲೆ ಕಂಚೊಡೆದಂತೆ ಬಡಮನವೆನ್ನ ಕಾಡಿತ್ತಯ್ಯಾ (ಬಸವ. ೨೩೭) ; ಮಱುಗಿ ಮನದೊಳ್ ಮುನಿದು ಕೆಲದ ಕಡುನೀಱರನಡರೆ ನೋಟ್ಟ ಬಡ ಮನದ ಮಂಡಳಿಕಮಂಡಳಿ (ಪರ್ಧಪು. ೯-೪೩ ಪ); ಈ ಬಡಮನದ ವಿಪ್ರನದೇನ ಬೇಡಿದ (ಸಂಭಪ. ೦೦-೨೦). ೨. ಹೇಡಿ ; ಧೈರ್ಯಗೇಡಿ : ಡಮರುಗ ಹಸ್ತ ಭಸ್ಮಾಸುರಗಳ್ಕಿ ಬಡಮನನಾಗಿ ನಡನಡುಗಿ ಡಮರುಗವಾತವೆತ್ತನ ನೋವಿದ ಚಂಡಮಹಿಮಗಾನೆಱಗುವೆನು (ಶಶಸಾಂ. ೭೦-೩೩).

[ಬಡ (< ಬಡವು) + ಮನ]

ಬಡಮಲ್ಲ (ನಾ). ಅಸಮರ್ಥನಾದ ಮಲ್ಲ : ಬಡಮಲ್ಲರನೆಲ್ಲರುಮಂ ಪಡಲಿಟ್ಟೈ ಕಂಸನುಱದೆ ಮಱದಿರ್ದೆಡೆಯೊಳ್ ಮಡಿಪಿದೆಯದಿನ್ನು ನಡೆ ಯದು ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ (ವೇಮಿಪು. ೦೦-೯೯).

[ಬಡ (< ಬಡವು) + ಮಲ್ಲ]

ಬಡಮಾತು (ನಾ). = ಬಡನುಡಿ : ಬಡಮಾತನಾಡಿದೆ ತವ ಪಂಚಬಾಣಕ್ಕೆ ಮೃಡ ವಿಧಿ ವಿಷ್ಣು ದೇವೇಂದ್ರ ಒಡಲೊಳು ಪೆಣ್ಮುದ್ರೆವೆತ್ತರು (ಮೋಹತ. ೩-೪೦). [ಬಡ (< ಬಡವು) + ಮಾತು$_1$]

ಬಡರು (ಕ್ರಿ). ಗಾಬರಿಯಿಂದ ಬೆದರು.– ಬೆಚ್ಚು.

ಬಡರು ಬೀಳು, ಬಡರಿ ಬೀಳು = ಗಾಬರಿಯಿಂದ ಬೆದರಿ ಬೀಳು.– ಬೆಚ್ಚಿಬೀಳು : ನಿದ್ರಿಸುತ್ತಿದ್ದ ಪೀಂಚಲು ಏನೋ ದುಃಸ್ವಪ್ನದಿಂದ ಎಚ್ಚರುವಂತೆ ಬಡರು ಬಿದ್ದೆದ್ದಳು (ಮಲೆಮ. ೨೬೩) ; ತತ್ತರಿಸಿದ್ದ ಸಲಗ ಮತ್ತೆ ಬಡರಿ ಬಿದ್ದು ಎದ್ದು ಓಡಲು ಪ್ರಯತ್ನಿಸುತ್ತಿದ್ದಂತೆಯೇ . . . ಅದನ್ನು ಹೊತ್ತುಕೊಂಡು ಮನೆಯ ಕಡೆಗೆ ಇಳಿದರು (ಮಲೆಮ. ೦೨೩) ; ಕಲ್ಲು ತೆಗೆದುಕೊಳ್ಳುವಂತೆ ನೆಲಕ್ಕೆ ಕೈಯಿಟ್ಟು ಬಾಗಲು, ನಾಯಿಗಳು ಬಡರಿ ಬಿದ್ದು ಹಿಂದಕ್ಕೋಡಿದವು (ಕಾಪೂರು. ೪೬೨). [< ಬೆದಱು$_1$]

ಬಡವ (ನಾ). ೧. ಕೃಶನಾದವನು ; ಸೊರಗಿದವನು : "ಬಡವನೆನಲ್ ಕೃಶಂ" (ಕರ್ಣಾನಿ. ೬೬) ; ಕಾಮಸಂತಾಪದೆ ಬೆಂದವಂಗೆ ಬಡವಂಗದವಂಗತಿದುಃಖಿತಂಗೆ ಧಾತ್ರೀಪತಿಕೋಪದೊಳ್ಕೊಡರ್ದವಂಗೆ ಶರಣ್ಪೆಱತಿಲ್ಲ (ಸಮಪ. ೦-೦೪೨) ; ಬಡಿವೆತ್ತ [ಬಡವ]ನಂತೆ ಶಕ್ತಿ ಗೆಟ್ಟು (ಧರ್ಮಾಸ್ಯು. ೦-೦೬೮). ೨. ಯಾವ ಆಧಾರವೂ ಇಲ್ಲದವನು ; ನಿರ್ಗತಿಕ; ದರಿದ್ರ: "ಕ್ಷುದ್ರಃ, ದರಿದ್ರಃ . . . ದುರ್ಗತಃ – ಈ ೬ ಬಡವಂ" (ಹಲಾಯು. ೩೭-೦೯೩) ; ನೀಚಜಾತಿಗಳುಂ ಬಡವರುಂ ಸದ್ಧರ್ಮಮಂ ಕೈಕೊಂಡು ನೆಗೞ್ವರ್ (ಪಡ್ಡಾರಾ. ೮೭-೩) ; ಪಸಿದುಣ ವೇಡಿದಂ ಬಡವನಾನುಣಲಿತ್ತೆಂ (ಪಂಪಭಾ. ೩-೭೨) ; ದೈವದೊಲ್ಮೆ ಯಿರಲಾ ಕಾಲಾನುಕಾಲಕ್ಕೆ ತಾಂ ಬಡವಂ ಬಲ್ಲಿದನಾಗನೇ (ಸೋಮೇಶ. ೩೩); ಬಡವನ ಕೋಪ ದವಡೆಗೆ ಮೂಲ (ಗಾದೆ).

ಬಡವ ಬಗ್ಗುಗಳು = ಅತ್ಯಂತ ದರಿದ್ರರು : ಬಡವ ಬಗ್ಗುಗಳೂರ ನಾಡನು ಗ್ರಾಮಕಾರ್ಯದಲಿ ಕೆಡಿಸಿದತಿಪಾಪಿಷ್ಠ (ಪ್ರಜ್ಞಾನ. ೯-೪೭). ಬಡವರು ಬಗ್ಗರು, ಬಡಬಗ್ಗರು = ಬಡವಬಗ್ಗುಗಳು : ಬಡವರು ಬಗ್ಗರನ್ನು ಕಂಡರೆ ಕರುಣೆಯಿಂದ ವರ್ತಿಸಬೇಕು (ರೂಢಿ) ; ಚಂದ್ರಶೇಖರನು ಬಟ್ಟೆ ಬರೆ ಪಾತ್ರೆ ಪರಟಿಗಳನ್ನು ಬಡಬಗ್ಗರಿಗೆ ದಾನಮಾಡಿದನು (ಬಂಕಿಮ. ೦೯೩); ಗಾಂಧೀಜಯಂತಿಯಂದು ಅವರು ಬಡಬಗ್ಗರಿಗೆ ವಸ್ತ್ರದಾನ ಮಾಡಿದರು (ರೂಢಿ). [ಬಡವು + – ಅ$_7$]

ಬಡವಡು.- ಬಡಪಡಂ (ಕ್ರಿ) ೧. ಕೃಶವಾಗು; ಸೊರಗು; ಬಡವಾಗು: ತನ್ನೊಳಾದ ಬೇಟದೊಳ್ ಬಡವಟ್ಟುಮೇಟ್ಗೆವಾಡಿವದ ಸಸಿಯಂತೆ ಸೊಗಯಿಸುವಸಿಯಳಂ ಕಂಡು (ಪಂಪಭಾ. ೩-೦೩ ಪ); ತಪದಿಂದಂ ಬಡವ[ಪಾಕಾಂ. ಪ]ಟ್ಟ ನಿಟ್ಟೊಡಲನಂ . . . ಪಸು ಕೂರ್ಗೋಡಿಂದೆ ಕೋದೆತ್ತಿ (ಪರ್ಧಪು. ೩-೬) ; ನೋಂತ ಬಡವ[ಪಾಕಾಂ. ಪ]ಟ್ಟೊಡಲಂ ಸಲ್ಲೇಖನದಿಂದಿಟುಪದೊಡಲ್ಲದುದೇಂ ದೇವನಾಗಲೆನಗಂ ನಿನಗಂ (ಅಸಂಪು. ೯-೬). ೨. ಬಡತನವನ್ನು ಹೊಂದು ; ನಿರ್ಗತಿಕನಾಗು ; ದರಿದ್ರನಾಗು: ಬಡವಟ್ಟಂಗೆ ಮಹಾನಿಧಿದ್ವಯಮೆ ಕೈಸಾರ್ದಂತೆ . . . ಉತ್ಸಾಹವಿರ್ಮಡಿಸುತ್ತಿರ್ಪಿನಮಿರ್ಪನೀಕ್ಷಿಸುತುಮಾ ಭೂಪೋತ್ತಮಂ ಪುತ್ರರಂ (ಶಾಂತೀಶ್ವ. ೬-೭೩). ಬಡಪಡು : ೧. ನೀಮಿಂತೇಕೆ ಕರಂ ಬಡಪಟ್ಟಿರ್ದಿರಿ (ಪಡ್ಡಾರಾ. ೦೦೬-೯) : ಬಡಪಟ್ಟು ಬೆಟ್ಟದೊಳ್ ಪೋಗಿ ತೊಟಲ್ದು ನಾರ್ಗಳನುಡಲ್ ತರುತಿರ್ದೆಲೆ ಮಾಡಲಾರ್ತ ನಿಲ್ಲಾಗಳೆ ಕೋಪಮಂ ನಿನಗೆ ಸಂಚಿತಶೌರ್ಯಧನಂ ಧನಂಜಯಂ (ಪಂಪಭಾ. ೭-೪೭) ; ನಾಯ್ ಬಡಪಟ್ಟು ದುಃಖದೊದವಿಂ ಬಾಯ್ವಿಟ್ಟು ಘೋಟುಟ್ಟು . . . ಸತ್ತಿತ್ತಂತೆ ಕಾಲಾಂತದೊಳ್ (ಸುಳುಮಾ. ೩-೨೦). ೨. ಬಡಪಟ್ಟು ಬೇಡಿದವರ್ಗ್ಗೀವಡೆ ಜಂಗಮಕಲ್ಪವೃಕ್ಷಮೆಂಬುದು (ಎಇ. XVI. ೩೩-೦೮; 1102) ; ಒಂದುದಿವಸಂ ನಾಭಿರಾಜನೆಲ್ಲಾ ಪ್ರಜೆಗೂಡಿ ಬಂದು ಬಡಪ[ಪಾಕಾಂ. ಪ]ಟ್ಟರಿವರ್ಗ ಗ್ರಾಸಮಿಲ್ಲೆಂದೀಶಂಗೆ ತೋಱದೊಡೆ (ಪುಷ್ಯಾಸ್ತ್ರ. ೦೦-೧೭ ಪ).

[ಬಡ (< ಬಡವು) + ಪಡು$_1$]

ಬಡವಾನಳ (ನಾ). ... ಬಡಬಾನಲ : ಒಳಗಿರ್ದ ವೈರಿಗಳ್ ಮೊಕ್ಕಳ ಮಾಯರ್ ಪೆರ್ಚಲಧಿಕವಿಭವರ್ಕಳುಮಂ ತಳರದೊಡನಿರ್ದು ಬಡವಾ [ಶಾಕಾಂ.ಬಾ] ನಳನೆಂದುಂ ಪೆರ್ಚಲೀಯದುತಂಬುಧಿಯಃ (ಕವಿರಾ. ೩-೦೪೯).

[ಸಂ. ಬಡವಾನಲ]

ಬಡವಿ (ನಾ). ಯಾವ ಆಧಾರವೂ ಇಲ್ಲದವಳಂ; ನಿರ್ಗತಿಕಳಾದವಳಂ; ದರಿದ್ರೆ: ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು ಬಳಸಿ ಕೊಂಡೆವದನೆ ನಾವು ಅದಕು ಇದಕು ಎದಕು (ಸಾಧಲೀ. ೩೯-೦); ನನ್ನ ಹತ್ತರ ಅಷ್ಟು ರೂಪಾಯಿ ಎಲ್ಲಿಂದ ಬರಬೇಕ್ರಿ ? ನಾ ಬಡವಿ (ಸಾಪೋಲೀ. ೩೦೩).

[ಬಡವ + – ಇ$_3$]

ಬಡವು (ನಾ). ೧. ಕೃಶವಾಗಿರುವಿಕೆ ; ಸೊರಗಿರುವಿಕೆ : (ಕಿ). ೨. ಸೊರಗಿದುದಂ ; ಕೃಶವಾದುದಂ ; ತೆಳುವಾದುದಂ : ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾನನುವಿಪೆನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ (ಅಂಪು. ೦೨-೪೦). ೩. ಏನೂ ಇಲ್ಲದಿರುವಿಕೆ ; ನಿರ್ಗತಿಕತನ ; ದಾರಿದ್ರ್ಯ : (ಕಿ). ೪. ಕಿರಿದು ; ಚಿಕ್ಕದು ; ಅಲ್ಪವಾದುದಂ : ನಿರ್ಜರಪತಿ ವಿಷ್ಣು ಬಾಗಿಲ ಕಾದಿರ್ಪ ಸಜ್ಜನಸಂಪತ್ತು ಬಡವೆ (ಸೋಹಕ. ೩೦-೦೩). ೫. ಅಶಕ್ತನಾದವನು ; ಅಸಮರ್ಥನಾದವನು ; ದುರ್ಬಲ : ಬೇಡ ಒಂಸಿಸಬೇಡ, ಆ ಬಡವು ಗೋಪನನ್ (ಅಶ್ವಶ್ಯಾ. ೬-೯೬) ; ನಿನ್ನಂಬೆಯಂ ಕೊಲ್ಲಿಸಿದ ತವಸಿಯುಂ, ಮೇಣ್ ಕೊಂದ ಆ ಬಡವು ಬಡಗನುಂ ತವಿಯದೊಳರಿನ್ನುಂ (ಶ್ರೀರಾಪು. ೨೦೯-೨೨೪).

ಬಡವಾಗು = ೧. ಕೃಶವಾಗು ; ಸಣ್ಣನಾಗು ; ಸೊರಗು : ಆತನ ಮಹಾದೇವಿ ಮಂದೆಯೆಂಬೊಳಾಕೆಗೆ ಗರ್ಭಮಾಗಿ ಚಂದ್ರನಂ ನುಂಗುವ ಬಯಕೆಯಾಗಿ ಬಡವಾದೊಡೆ (ಪಡ್ಡಾರಾ. ೦೮೬-೦೦) : ಬಡವಪ್ಪೊಡೆ ಮೇಯದೆ ನೀರ್ಗುಡಿಯದೆ ಮೆಲ್ಕಿಱಿಯದಿರ್ಪೊಡೋರಂತಿರೆ ಕೊಡುವುದು ಶೇವಿನ ಕಷಾಯಮಂ (ಶೋಕೋಪ. ೯-೨೦೭). ೨. ನಿರ್ಗತಿಕನಾಗು ; ದಾರಿದ್ರ್ಯವನ್ನು ಹೊಂದು : ಧನ ಸವೆದು ಬಡವಾದರೆ ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು (ಬಸವ. ೦೩೦) ; ಬಡವಾದಿರರಸ ಕಾಲೊಳ್ ನಡೆದಪಿರೊಡನಾರುಮಿಲ್ಲ ಕಡಲೆಗಳೇ ನಿಮ್ಮುಡಿಯೊಳಗೆ ಪಡುವ ದೇಗುಲ ದೆಡೆಯಾವುದು ಕುಡದ ನಿಮಗಮಿಯೆಡಱಾಯ್ತೇ (ಕಪುದ. ೦೦೨ ಕ್ರಯೋ); ಕಾಣಿಯ ಬೀಯದಲಿ ಬಡವಹುದೆ ಕನಕಾಚಲ (ಕುಷ್ಕಾರ್ಪ್ರೋ. ೦-೦೬). ಬಡವುಗಳ್ = ಅಸಹಾಯಕವಾದ ಪ್ರಾಣಿ ಮುಂತಾದುವು : ಕರಿ ಕಳಭಂಗಳ ಶಿಶುಕೇಸರಿಗಳ ಬಱಿಯಂ ತಗುಳ್ದು ಬಡವುಗಳನದಂ ತಿರಿಪಿ ಪಿಡಿಯುತ್ತುಮರಿಗಂ ಪರಿದಾಡುವ ಸಮವಯ[ಸ್ಕರೊ]ಳ್ ಸೊಗಯಿಸಿದಂ (ಸಂಪಭಾ. ೨-೦೦); ಅಧಿಕಾರಿಗಳೆನೆ ಸೈರಿಸವಧಿಕಾರಿಗಳಾಗಿ ಬಾಟ್ಗೆ ಬಡವು ಗಳವರ್ಗಾಯುಧಭಾರಮೇಕೆ (ಗದಾಯು. ೩-೩೩). ಬಡವು ಬಗ್ಗುಗಳ್ = ಬಡಬಗ್ಗರು : ಬಡವುಬಗ್ಗುಗಳ ಕರೆಕರೆದು ಕೈಹಾರದಲಿ ಮನವೆರಸಿ ಸೂಱೆಯ ಬಿಟ್ಟು ತೆಱೆಗೆಯ ಬರಹಗಳ ನೆಱೆ ತೊಡಿಸಿ ಸಂತಸವಡಿಸಿದನು ಜನವ (ತೊರಕಾ. ೬-೪೬-೨೭).

ಬಡವೆ (ನಾ). = ಬಡವಿ : ಕುಡುವ ಬೊಜಂಗನಂ ಪಡೆದ ಕುಂಟಣೆಯಂತೆ ಸಿರಿವಂತನ ಕಯ್ಯಂ ಪಿಡಿದ ಬಡವೆಯಂತೆ (ರಸರ್ಮಸ್ಕು. ೩-೦೨೩) : ನಾನು ಬಡವೆ, ತಿರಕೊಂಡು ತಿಂಬೋಳು (ಹುಸ್ಕಹ. ೦೬೬). [ಬಡವ + – ಎ$_2$]

ಬಡವೆಣ್ (ನಾ). ಹೆಚ್ಚು ತಿಳಿಯದ ಹೆಂಗಸು ; ಮುಗ್ಧಸ್ತ್ರೀ : ಕಡು ನಾಣ್ಚೆಯಂಬೆ ಕಣ್ಮುಚ್ಚಿ ಕಂಪನಗೊಂಬ ಬಡವೆಣ್ಗಳೀ [ಶಾಕಾಂ. ಎಡವೆಣ್ಗಳೀ, ಮಡದಿಯರೀ] ಕೃತಿಗೇಳೆ ಎಡಬಲದವರೇಳಿಸದಂತೆ ಮನ ದನ್ನರೊಡವೆ ಬಾಳುವರದತೆಯೊಳು (ಹರಿಶಿ. ೦-೩೬).

[ಬಡ (< ಬಡವು) + ಪೆಣ್]

ಬಡವೆಱೆ^{3}, ಬಡಹೆಱೆ^{3} (ನಾ). ಚಿಕ್ಕದಾಗಿರುವ ಚಂದ್ರ; ಬಾಲಚಂದ್ರ: ಭಾಳದೊಳಿಕ್ಕಿದ ಬಡವೆಱೆ^{3}ವೊಟ್ಟಂ ಸ್ಥೂಲಪಯೋಧರಕಿಕ್ಕಿದ ತಾರಾ ಮಾಲೆಗಳಿಂ ಬಾಲೆಯರರೆಬರೆಸೆದರ್ (ಇಯಕಾ. ೦೨-೧೧). ಬಡೆಹೆಱೆ^{3} : ಹರನ ಜೆಡೆಯ ಬಡಹೆಱೆ^{3}ಯಂ ವಾಣೀವರನ ಬೆರಲ ಕಂಠವನಂಬುರು ಹೋದರನ ಕರದ ಕಂಬುವನು . . . ತರಿಸಿ (ಇಯಕಾ. ೦-೬೪).

[ಬಡ (< ಬಡವು) + ಪೆಱೆ^{3}]

ಬಡವೊಡಲ್, ಬಡವೊಡಲು (ನಾ). ಕೃಶವಾದ ಶರೀರ ; ಸೊರಗಿದ ಮೈ : ಬಡವೊಡಲಂತೆ ಜೋಲ್ಪು ಏರ್ವಡೆದ ಪಂದೆಯೆಂತೆ ತಲ್ಲಣಿಸಿ (ರಸರ್ಮಸ್ಕು. ೧-೦೬೬) : ನೀರಂತೆವೋಲ್, ತುಂತುರಾಗದೇವಿ ನನ್ನ ಬಡವೊಡಲ್ ? (ಶ್ರೀರಾಪು. ೩೦೩-೬೩). ಬಡವೊಡಲು : ಬಡವೊಡಲು ನಾನಿದಱ ಬಿಗುಹಂ ಸಡಿಲಿದಡೆ ನೀ ಮತ್ತೆ ಮುಂದಕ್ಕಡಿಯನಿಡಬಾರದೆ ನಿಲುವೆ (ಬಸಪು. ೪೪-೯). [ಬಡ (< ಬಡವು) + ಒಡಲ್]

ಬಡವೊಡಲು 'ಬಡವೊಡಲ್' ನೋ.

ಬಡಹ 'ಬಡಪ' ನೋ.

ಬಡಹಾರುವ 'ಬಡಪಾರ್ವ' ನೋ.

ಬಡಹುರಿ (ನಾ). ಕೃಶವಾದ ಹಗ್ಗ ; ತೆಳುವಾದ ಹುರಿ : ಹಿಡಿದು ಕಱುಗಳನೆಳೆವವೋಲವಗಡಿಸಿ ಕಟ್ಟಿದನೇಳನೊಂದೇ ಬಡಹುರಿಯ ನೇಣಿನಲಿ (ತಿಭಾಗ. ೦೦-೬೮-೩೨). [ಬಡ (< ಬಡವು) + ಹುರಿ$_3$ (< ಪುರಿ$_3$)]

ಬಡಹೆಱೆ^{3} 'ಬಡವೆಱೆ^{3}' ನೋ.

ಬಡಾ (ಗು). ೧. ದೊಡ್ಡ ; ಹಿರಿಯ : ಇಂಥಾ ದುರ್ಘಟಸಮಯದಲ್ಲಿ ಬಡಾಫಕೀರರಿಲ್ಲವೇ ಎಂಬುದು ಎಲ್ಲರಿಗೂ ಆಶಂಕೆ (ದೌಂಶ್. ೦೦). (ನಾ). ೨. ವಿಸ್ತಾರವಾದುದಂ : 'ಬಡಾಯಿಸು', 'ಬಡಾವಣೆ' ಪರಾ.

[← ಹಿಂ. ಬಡಾ]

ಬಡಾಯಿ$_1$ 'ಬಡಗಿ' ನೋ.

ಬಡಾಯಿ$_2$ (ನಾ). ದೊಡ್ಡಸ್ತಿಕೆ ; ಒಣಜಂಬ; ಹೆಮ್ಮೆ : ಅದಳ ಶಾಯಿ ತಂದೆ ಇದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದರೋ? ಸ್ವಲ್ಪವೂ ಜಂಬ, ಬಡಾಯಿ ಇಲ್ಲ (ದೂರಸ. ೦೦೩); ಒಣಸಾಹಸದ ಬಡಾಯಿಯಲ್ಲ; ಅವನು ಬಹುಶ್ರುತನಾಗಿದ್ದನು (ಬಂಕಿಸು. ೪೯೨).

[← ಹಿಂ. ಮರಾ. ಬಡಾಈ, ಬಢಾಈ. / ತುಳು. ತೆಲು. ಬಡಾಯಿ]

ಬಡಾಯಿಕೊಚ್ಚು (ಕ್ರಿ). ಜಂಬ ಹೊಡೆ : ನಾನದನ್ನು ಬಲ್ಲೆ, ಬಲ್ಲೆ ಎಂದು ಯಾರು ಬೇಕಾದರೂ ಬಡಾಯಿಕೊಚ್ಚಬಹುದು (ಪಸಂಪಾ. ೦೪೭); ಕೃಷ್ಣಭಟ್ಟರು ಬಡಾಯಿಕೊಚ್ಚಿಕೊಳ್ಳುತ್ತಿದ್ದರು (ಭ್ರಾಂತಿಸು. ೦೬).

[ಬಡಾಯಿ$_2$ + ಕೊಚ್ಚು$_1$]

ಬಡಾಯಿಗಾರ (ನಾ). ಒಣಜಂಬದವನು : ಅವನು ಚಮತ್ಕಾರಶೂನ್ಯವಾದ ಬಡಾಯಿಗಾರ ಮಾತ್ರವಲ್ಲ . . . ಆಡಂಬರವ್ಯಕ್ತಿಯೆಂದು ಆಗ ಪ್ರತಿಯೊಬ್ಬರಿಗೂ ಮನದಟ್ಟಾಯಿತು (ಪುಸರು. ೩೩೩).

[ಬಡಾಯಿ$_2$ + – ಕಾರ$_1$ (< – ಕಾಱ)]

ಬಡಾಯಿಸು (ಕ್ರಿ). ೧. ದೊಡ್ಡದಾಗು ; ಹೆಚ್ಚು ; ಅಧಿಕವಾಗು: ಮೈಸೂರವರು ಬಡಾಯಿಸಿ ಕೊಡಗಿನ ಶೀಮೆ ವಳನುಗ್ಗಿ ಬಂದರು (ರಾಶೇಂದ್ರ. ೩). ೨. ವಿಸ್ತರಿಸು: ಹೆಚ್ಚಿಸು: ಅಧಿಕಗೊಳಿಸು : ಈ ಬಾರಿನ ಸಂಖ್ಯೆಯನ್ನು ೮,೦೦೦ಕ್ಕೆ ಬಡಾಯಿಸಿದರು (ಸುಹಾಸಂ. II. ೦೯); ನಾಲೆಯನ್ನು ಮೈಸೂರವರೆಗೂ ಬಡಾಯಿಸಿ ಭಾರಿಯಾಗಿ ಕಾಲುವೆ ಮಾಡಿಸಿದರು (ಮುಸುಗ. ೬೪); ಹುಡುಗ ವ್ಯಾಪಾರ ಮಾಡಿಕೊಂಡು ಹೋಟೆಲ್ ಬಡಾಯಿಸಿದ (ಕವಿಸಂ. ೦೪೮). [ಬಡಾ + – ಇಸು$_3$/ತೆಲು. ಬಡಾಯಿಂಚು]

ಬಡಾಯಿಹೊಡೆ (ಕ್ರಿ). = ಬಡಾಯಿಕೊಚ್ಚು : ನಾನಾಸಾಹೇಬ ನಕ್ಕು "ನಾನು ಅಷ್ಟು ಹೆಡ್ಡನೇ. ಅಷ್ಟು ಯೋಚಿಸುವ ಸಾಮರ್ಥ್ಯವುಂಟು

ನನ್ನಲ್ಲಿ" ಬಡಾಯಿಹೊಡೆಯುವವನಂತೆ ನನ್ನ ಹತ್ತಿರ ಹೇಳಿದ (ಬರುಜ. ೦೭೬). [ಬಡಾಯಿ$_2$ + ಹೊಡೆ$_1$ (< ಪೊಡೆ$_1$)]

ಬಡಾವಣೆ (ನಾ). ೧. ಕಟ್ಟಡ, ನಗರ ಮೊದಲಾದುವುಗಳನ್ನು ವಿಸ್ತರಿಸುವಿಕೆ.—ವಿಶಾಲಗೊಳಿಸುವಿಕೆ: ಹತ್ತಿಪ್ಪತ್ತು ವರ್ಷಗಳ ಹಿಂದೆ ಬೆಂಗಳೂರಿನ ಸುತ್ತಲೂ ತರಕಾರಿ ತೋಟಗಳಿದ್ದವು. ಅವುಗಳನ್ನು ನಗರ ಬಡಾವಣೆಗಾಗಿ ಆಕ್ರಮಿಸಿಕೊಳ್ಳಲಾಗಿದೆ (ಶರಸ. ೭೩); ದೊಡ್ಡಿಗಳ ಕಟ್ಟಡವನ್ನು ಕಟ್ಟಿಸುವದಕ್ಕೂ ಕಟ್ಟಡವನ್ನು ರಿಪೇರಿ ಬಡಾವಣೆ ಮಾಡುವುದಕ್ಕೂ ಹೀಗೆ ಖರ್ಚಾಗಿ ಉಳಿದ ಹಣವನ್ನು . . . ಕೊಡಲ್ಪಡತಕ್ಕದ್ದು (ಗ್ರಾಮಾಳ. ೦೦೦). ೨. ಕಟ್ಟಡ, ನಗರ ಮೊದಲಾದುವುಗಳ ವಿಸ್ತರಿಸಿದ ಭಾಗ,—ವಿಸ್ತರಣ: ನಮ್ಮ ಮನೆಯಿರುವುದು ಬೆಂಗಳೂರುನಗರದ ಜನಭರಿತ ಬಡಾವಣೆಯೊಂದರಲ್ಲಿ (ಸಾಡಗೇ. ೦೬೯). [ಬಡಾ + —ಅಣ್ಣೆ$_4$]

ಬಡಿ$_1$ (ಕ್ರಿ). ೧. ಹೊಡೆ; ಏಟುಹಾಕು; ತಾಡಿಸು : "ಬಡಿ— ತಾಡನೇ, ಸ್ವಲ್ಪದಂಡೇ ಚ" (ಶಮಧಾ); ಮೊಗಮಂ ಸುಡು ಪಿಡಿ ಬಡಿ ನಿಮಿರ್ದಿಱಿ ಬಯ್ ಕಡಂಗಿ ನುಂಗೆಂದು ಮುಸುಱಿ ನಾರಕರಾಗಳ್ . . . ಕುತ್ತುವುದುಂ (ಪಡ್ಡಾರಾ. ೦೨೬-೯); ಕರಿಘಟೆಗಳನಾರ್ದುಡಿಯೆ ಬಡಿದಾನೆವೆರಸಾಗಡೆ ಕೊಂದಂ ಕ್ಷೇಮಧೂರ್ತಿಯಂ ಪವನಸುತಂ (ಪಂಪಭಾ. ೦೨-೭೮); ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ (ಬಸವ. ೦೦೭); ತಾಯೆ ಬಾರೌ ತಂಗಿ . . . ಸಾಯಲವದಿರ ಬಡಿದು ತಾ (ಕುಪ್ಯಾಲ. ೯-೦೦). ೨. (ಕಬ್ಬಿಣ ಮೊದಲಾದುವುಗಳನ್ನು ಕಾಯಿಸಿ) ಚಚ್ಚಿ ಉದ್ದ ಮಾಡು; ಸಾಗುಹಾಕು : ಕಮ್ಮಾಱನಂತೆ ಕಾಸಿ ಬಡಿವರ್ ಮೇದನಂತೆ ಸೀಳ್ವರ್ (ಧರ್ಮಾಮೃ. ೩-೭೩); ಕಾದಿರುವಾಗ ತಾನೆ ಕಬ್ಬಿಣವನ್ನು ಬಡಿಯಬೇಕಾಗುವುದು (ಶಿಕ್ಷದ. ೬೯). ೩. (ಕೈ ಮೊದಲಾದುವುಗಳನ್ನು) ತಟ್ಟು: ಬರೆದ ಬರೆಹಮಿದೆಂದು ಕಯ್ ನೊಸಲ ಬಡಿದಂ (ಕಾಲೂರ. ೦೩೩-೨೬೯); ಎರಡೂ ಕೈಗಳನ್ನು ಬಡಿದು ಧೂಳನ್ನು ಜಾಡಿಸಿ (ಕಮ್ಮಟ. ೨). ೪. (ರಭಸವಾಗಿ) ತಾಗು; ತಗಲು : ನನ್ನ ಕಾಲು ಕುರ್ಚಿಗೆ ಬಡಿದು ಬೆರಳಿನಲ್ಲಿ ರಕ್ತ ಬರುತ್ತಿದೆ (ರೂಢಿ). ೫. ಅವಯವಗಳನ್ನೇ (ಅಸಹಾಯಕವಾಗಿ) ಅಲುಗಾಡಿಸು; ಒದರು; ಚಲಿಸುವಂತೆ ಮಾಡು: ಮಸಕಂಗುಂದಿದ ಮೆಯ್ ವಲಂ ಬಡಿವ ಕಾಲ್ (ಪಂಪಭಾ. ೦೨-೦೫೦); ಬಲೆಯೊಳ್ ಕಪೋತಂಗಳಸಂಖ್ಯಾತಂ ಸಿಲ್ಕಿ ತಲೆಯುಮನೊಡಲುಮಂ ಬಡಿಬಡಿದು ಬಟಲುತಿರ್ಪುದುಂ (ಪಂಪಕಂ. ೨೬೯-೦೯); ಉಡು ಮೊಲ ನರಿ ಹುಲ್ಲೆ ಮರೆ ಸಾರಗಗಳ ಕಂಗಿಡಿಸುವ ಜಂಘಾಲಿಗಳು ನಡುವಿನ ರತ್ನಮೇಖಲೆಯಾಂತು ಬಾಲವ ಬಡಿಯುತೆ ನಡೆದುವೊಗ್ಗಿನಲಿ (ಪೋಹಕ. ೧೯-೦೨). ೬. (ಹರೆ, ನಗಾರಿ, ತಮಟೆ ಮೊದಲಾದ ಚರ್ಮವಾದ್ಯಗಳನ್ನು ಬಾರಿಸು; ನುಡಿಸು: ಕೂಟಿಲ್ಲದೆ ಮದ್ದಳೆಯಂ ಬಡಿವ (ಧರ್ಮಾಮೃ. ೦೨-೨೪); ಸಿಡಿಲ ಕಡುಹಿನಿಂದೆ ಬ್ರಹ್ಮಾಂಡಭೇರಿಯ ಬಡಿವವೊಲಾನೆಯ ಮೇಲೆ ಹೊಡೆವ ಡಮಾಮಿಗಳಬ್ಬರ ಗಗನವ ತುಡುಕಿತು (ಕಂಪಬಿ. ೦೦-೨೩); ಸುಡುವರೆ ಪಂಜಿಹುದು ಬಡಿಯೆ ಭೇರಿಯು ಇಹುದು (ಸರ್ವಜ್ಞ. ೨೪೭). ೭. (ಸಿಡಿಲು ಮೊದಲಾದುವುಗಳು) ಎರಗು; ಹೊಡೆ; ಅಪ್ಪಳಿಸು: ತೆಱಹುಗೊಟ್ಟೊಳಹೊಗಿಸಿ ತದೆದನು ಬಱಸಿಡಿಲು ಬಡಿವಂತೆ (ಪಳಸ. ೯-೩೦). ೮. ಗ್ರಹ, ದೃಷ್ಟಿ, ರೋಗ ಮೊದಲಾದುವು ತಾಗು.—ಹಿಡಿ.—ಅವರಿಸು : ಅಚ್ಚರಿಗೊಂಡುಗ್ರಬಾಹು ಕಂಡು ಬೆಚ್ಚಿಬಿದ್ದನು ತನಗೆ ಬಡಿಯಲು ರಾಹು (ಸೌಗಂಧಿ. ೯೪-೫); ದೃಷ್ಟಿ ಬಡಿದಿದೆ, ಅದಕ್ಕೆ ಮದ್ದು ಮಾಡಿ ನೋಡ್ತೀನಿ (ಮಹೋಪಂ. ೩೩೫). 'ಗರಬಡಿ' ಪರಾ. ೯. (ಕೆಟ್ಟ ವಾಸನೆ ಮುಂತಾದುವು) ಬರು.—ಉಂಟಾಗು: ಹೋತದಲ್ಲಿ ಅದರಲ್ಲೂ ಬೆದೆಹತ್ತುವ ಕಾಲದಲ್ಲಿ ತಡೆಯಲಾಗದ ಹೊಲಸುನಾತ ಬಡಿಯುವುದು (ಕವಿಕೋ. I. ೭೨೭); ಕಾಕಾ ಅವರಿಂದ ಕಾಗದ ಬಂದ ವಾಸನಿ ಅವಂಗ ಬಡಿದದ (ದೀಪಹ. 11. ೦೦೫). ೧೦. [ಗಣಿತ] ಗುಣಿಸು ; ಗುಣಾಕಾರ ಮಾಡು: ತಿವಿ ಪೊಯ್ ಚರ್ಚಿಸು . . . ಅಣೆ ಬಡಿ ಮೋದು . . . ಬೆಳಸೆಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು (ಪ್ರಸಹಾ. ೦೧).

ಬಡಿದಾಟ = ಹೊಡೆದಾಟ; ಘರ್ಷಣೆ; ಹೋರಾಟ : ಕೋಮುವಾರು ಘರ್ಷಣೆಗಳಾಗುವ ಸೂಚನೆ ಕಾಣಿಸಿತು . . . ಆದರೆ ಬಡಿದಾಟಕ್ಕೊಂದು ಕುಂಟುನೆವ ಬೇಕಲ್ಲ? (ಪಿದ್ಯಾರೆ. ೦೬೮); ಸಹಸ್ರಾರು ಜನರು ತಮ್ಮ ಉದ್ದೇಶ ಸಾಧನೆಗಳಿಗಾಗಿ ಬಡಿದಾಟ ನಡಿಸುವರು (ಮಹಾತ್ಮಾ. ೬೯). ಬಡಿದಾಡು = ಹೊಡೆದಾಡು; ಹೋರಾಡು: ಕಡಿದಾಡಿದರ್ ಕತ್ತಿ ಕೈದುವಿಂ ಗದೆಗಳಿಂ ಬಡಿದಾಡಿದರ್ (ಕಬಪು. ೨೪-೬); ಪಶುಗಳನ್ನು ಸಾಕಿದವರು . . . ಹೆಚ್ಚಿನ ಬೆಳೆಯ ಪಾಲಿಗೆ ಪಾತ್ರರೆಂದು ಬಡಿದಾಡಹತ್ತಿದರು (ಮಾಪಾದ. ೬೨). ಬಡಿದುಕೊಳ್ಳು = ೧. ಹೊಡೆದುಕೊಳ್ಳು; ತಾಟಿಸಿಕೊಳ್ಳು: ತಲೆಯಂ ಕಾಲ್ಗಳಂ ಪಾಷಾಣವೃಕ್ಷಂಗಳೊಳ್ ಶತಚೂರ್ಣಮಾಗೆ ಬಡಿದುಕೊಂಡು . . . ಪ್ರಳಾಪಂಗೆಯ್ದು (ಪಡ್ಡಾರಾ. ೪೬-೨೬). ೨. ಆವರಿಸು; ಹಿಡಿದುಕೊಳ್ಳು: ಪ್ರಾಚೀನಕಾಲದಲ್ಲಿ ದೇವತೆಗಳಿಗೆ ಅಲ್ಲದಿದ್ದರೆ ರಾಕ್ಷಸರಿಗಾದರೂ ನೆಗಡಿ ಬಡಿದುಕೊಳ್ಳುತ್ತ ಇದ್ದಿರಬೇಕು (ದೇಶಸ್ಯೆ. ೦೬); ಇವನ ಅಜ್ಜನಿಗೋ ಅಜ್ಜಿಗೋ ಇದ್ದಿತಂತೆ ಈ ದಮ್ಮಿನ ರೋಗ. ಆದರೆ ಇವನಿಗೆ ಹನ್ನೆರಡನೆಯ ವರ್ಷಕ್ಕೇ ಬಡಿದುಕೊಳ್ಳಬೇಕೇ? (ಮೂರುದಾ. ೬೩).

P ಈ ಧಾತುವು ಹಲವು ಶಬ್ದಗಳ ಜೊತೆಗೆ ಸೇರಿ ವಿಶಿಷ್ಟವಾದ ಧಾತುವಾಗಿ ವಿವಿಧವಾದ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಉದಾ: ಕಾಲ್ಬಡಿ, ಗರಬಡಿ, ಬಾಯ್ಬಡಿ, ಸಿಡಿಲ್ಬಡಿ ಇತ್ಯಾದಿ.

[ದೇ.॥ ಮಲ. ವಟಿ; ತುಳು. ಕೊಡ. ಬಡಿ]

ಬಡಿ$_2$ 'ಬಟ್$_1$' ನೋ.

ಬಡಿ$_3$ (ನಾ). ೧. ಹೊಡೆಯುವುದು: (ಕಿ). ೨. ಪೆಟ್ಟು; ಏಟು: (ಕಿ). ೩. (ಹೊಡೆಯಲು ಉಪಯೋಗಿಸುವ) ಕೋಲು; ದೊಣ್ಣೆ; ಬಡಿಗೆ : "ಸ್ವಲ್ಪದಂಡ ತಾಡನಗಳೊಳ್ ಬಡಿಯೆನಿಕ್ಕುಂ" (ಕಬ್ಬಿಮಂ. ೯೩); ಮಿಡಮಿಡಮಿಡುಕುವಿನಂ ಬಡಿಯೊಳೊಡೆಯೆ ಪೊಡೆ ಪೆಡತಲೆಯಂ (ಪಡ್ಡಾರಾ. ೦೨೭-೮); ಜೂದಿನ ಗೆಲ್ಲದೊಳಾದೀ ಮೇದಿನಿಯಂ ಕಂಡು ಕಜ್ಜಮಂ ಕಾಣದೆ ದುಜ್ಜೋದನನದೇನದೇಂ ಮರುಳಾದನೊ ಬಡಿಗಂಡನಿಲ್ಲ ಪಾಲನೆ ಕಂಡಂ (ಪಂಪಭಾ. ೭-೦೯); ಬೆಕ್ಕು ಪಾಲನಲ್ಲದೆ ಮೇಲಣ ಬಡಿಯಂ ಕಾಣದು (ಧರ್ಮಾಮೃ. ೬-೦೨೬).

[< ಬಡಿ$_1$/ತಮಿ. ಮಲ. ವಟಿ; ತುಳು. ಬಡು; ತೆಲು. ಬಡೆ; ಕೋಲಾ. ಬಡ್ಕ]

ಬಡಿಕ$_1$ (ನಾ). (ವಾದ್ಯ ಮೊದಲಾದುವುಗಳನ್ನು) ಬಡಿಯುವವನು.—ಬಾರಿಸುವವನು : ಮದ್ದಳೆಯ ಬಡಿಕರ ಬಿಂಕ ಮೇಳವಿಲ್ಲಲಾ ನಿನಗೆ (ಕುಪ್ಯಾಕ. ೩-೨೨). [ಬಡಿ$_2$ + —ಕ$_2$]

—ಬಡಿಕ$_2$, —ಬಡಕ$_2$,— ಬಡುಕ (ಪ್ರ). ಲಂಚ, ಮಾತುಗಾರಿಕೆ, ಆಹಾರಸೇವನೆ ಮುಂತಾದುವುಗಳಲ್ಲಿ ಅತಿಯಾದ ಪ್ರವೃತ್ತಿಯುಳ್ಳವನು ಎಂಬರ್ಥದಲ್ಲಿ ಬರುವ ಪ್ರತ್ಯಯ: 'ಕೂಟ್ಬಡಿಕ', 'ಬಾಯ್ಬಡಿಕ' ಪರಾ. -ಬಡಕ$_2$: 'ಬಾಯಿಬಡಕ', 'ಲಂಚಬಡಕ' ಪರಾ. — ಬಡುಕ : 'ಬಾಯಿಬಡುಕ' ಪರಾ. [< ಬಡಿ$_1$]

ಬಡಿಕೆ 'ಬಡಿಗೆ$_1$' ನೋ.

ಬಡಿಕೊಳ್ 'ಬಡಿಗೊಳ್' ನೋ.

ಬಡಿಕೋಲ್ 'ಬಡಿಗೋಲ್' ನೋ.

ಬಡಿಕೋಲು 'ಬಡಿಗೋಲ್' ನೋ.

ಬಡಿಗ 'ಬಡಗಿ' ನೋ.

ಬಡಿಗಲ್ಲು (ನಾ). ೧. ಹೊಡೆಯಲು ಉಪಯೋಗಿಸುವ ಕಲ್ಲು;

ಇಡುಗಲ್ಲು : ನಿಡಿಗಲ್ಲು ನಿಶಿತ ಹಾಸಱಿಗಲ್ಲು ಚೌಕದ ಬಡಿಗಲ್ಲು ಬಟುಗಲ್ಲು ಬೀಳೆ (ಕೋಪಕ. ೪೦-೬೩). ೨. (ಕಬ್ಬಿಣ ಮೊದಲಾದುವುಗಳನ್ನು ಬಡಿಯಲು ಆಧಾರವಾಗಿ ಇರಿಸಿಕೊಳ್ಳುವ) ಅಡಿಗಲ್ಲು; ಅಡೆಗಲ್ಲು : ಮೇಳವದಿ ನೃಪರೊಗ್ಗಿನಿಂದಾ ಸ್ಥೂಳಚಾಪವ ತುಡುಕಲಾಧನು ಮೇಲೆ ಬಡಿಗಲ್ಲುರುಳಿದಂತಿರಲು (ಜೀವಂಕ. ೧೫-೨೬); ಕುಂಭೀನಸಿಯು ಇದನ್ನೇ ಯೋಚಿಸುತ್ತ ಬಡಿಗಲ್ಲ ಮೇಲೆ ಕುಳಿತಿದ್ದಳು (ಕ್ರೀಶಾಪ. ೬೧). ೩. ಆಕರ್ಷಣೆಗಾಗಿ ಇಟ್ಟಿರುವ ತಿಂಡಿಯನ್ನು ಇಲಿಯು ಮುಟ್ಟಿದ ಕೂಡಲೆ ದಪ್ಪಕಲ್ಲು ಮೇಲೆ ಬೀಳುವಂತೆ ಆಳವಡಿಸಿರುವ, ಇಲಿ, ಹೆಗ್ಗಣಗಳನ್ನು ಹಿಡಿಯಲು ಉಪಯೋಗಿಸುವ ಒಂದು ಬಗೆಯ ಸಾಧನ; ಬೋನು : ಒಡಲ ಕಿಚ್ಚಿಗೆ ಪೋಗಿ ಬಡಿಗಲ್ಲು ಕೆಡಹಿಕೊಂಡಡಗಿದ ಮೂಷಕನಂತಾದೆ (ಪುಕಂದ. ೦-೦೦೯-೨); ಬಡಿಗಲ್ಲಿನಲಿ ಹೆಗ್ಗಣ ಮಿಡುಕುವಂದದಿ ಮದನಶರಮಾಯಾಪ್ರಬಂಧದಲಿ ತೊಡರಿ . . . ಅಡಿಯಿಡಲಾಱನವನು (ಅಮೃತ. ೨-೬೨). ೪. (ಆಲಂ) ಕಷ್ಟ; ತೊಂದರೆ ; ತಾಪತ್ರಯ : ಏನು ಮಾಡುವುದು ! ತಾನು ಹೋಗುವುದು ಒತ್ತಟ್ಟಿಗಿರಲಿ, ನಿಮಗೆ ಬಡಿಗಲ್ಲು ತಂದನು ! (ಸ್ಕೂಲಿಯಿ. ೦೬೬).

[ಬಡಿ$_1$ + ಕಲ್ಲು (<ಕಲ್$_3$)]

ಬಡಿಗುಂಡು (ನಾ). ಹೊಡೆಯಲು ಉಪಯೋಗಿಸುವ ಕಲ್ಲು; ಇಡುಗುಂಡು : ಪಿಡಿಗುಂಡು ಬಡಿಗುಂಡು ಜಡಿದು ಪೊಯಿವ ಗುಂಡು ಒಡನೆತ್ತಿ ಹಾಕುವ ಗುಂಡು ಗಡಣಿಸಿ ಕೊತ್ತಳದಪ್ಪದೆ ತೆನೆಗಳಿಂದೆಡೆಯೊಳಿರ್ದವು ಗುಂಡುಗಳು (ಅಪಂಕ. ೦೬-೪೬). [ಬಡಿ$_1$ + ಗುಂಡು$_1$]

ಬಡಿಗೆ$_1$, ಬಡಿಕೆ (ನಾ). ಬಡಿಯುವ ಸಾಧನ; ಕೋಲು; ದೊಣ್ಣೆ : ಬಡಿವ ಬಡಿಗೆಗಳ ಕೋಳೊಳ್ ತೊಡೆಯದು ಸಲೆ ಪೊಟ್ಟಗೊಡೆದು ಕಡಿವಡೆದೆತ್ತಂ (ಸುಳುಮಾ. ೩-೦೩) : ಹೊಡೆಸಿದ ಮರಳಿ ವಿಶ್ವಾಮಿತ್ರನಾಕಳ ಹಸಿಯ ಬಡಿಗೆಯಲಿ (ಸಂಪಪ. ೨೪-೬೮); ಬಡಿಗೆಯಲಿ ಹುತ್ತ ಹೊಡೆಯಲಡಗಿಹ ಸರ್ಪ ಮಡಿದಿಹುದೆ (ಸರ್ಪಜ್ಞ. ೩೮೩). ಬಡಿಕೆ : ಹಾಳುಮುಂಡೇದಕ್ಕೆ ದೊಣ್ಣೇನೆ ಸೈ ಅಂತಾ, ಒಂದು ಬಡಿಕೆ ತಗೊಂಡು ಜಪ್ಪ್‌ದೆ (ಪುರಮ. ೩೩); ನಾಲ್ವತ್ತರ ಮೇಲೆ ನಡಿಕೆ, ಎಂಭತ್ತರ ಮೇಲೆ ಬಡಿಕೆ (ಗಾಪ). [ಬಡಿ$_1$ + — ಗೆ]

ಬಡಿಗೆ$_2$ 'ಬಡಗಿ' ನೋ.

ಬಡಿಗೆಕಾಱ (ನಾ). ಕೋಲು ಹಿಡಿದಿರುವವನು; ಕೋಲುಕಾರ : ಮುಂತಣ ಮಾವಂತರ ಪಿಂತಣ ಬಡಿಗೆಕಾಱರ ನಡುವಣ ವೀರ ಜೋದರ . . . ಕೋಳಾಹಳದಬ್ಬರಮುಬ್ಬರಮಾಗೆ (ಗಿರಿಳ. ೬-೩೫ ಪ).

[ಬಡಿಗೆ$_1$ + — ಕಾಱ]

ಬಡಿಗೆಕೊಳ್ 'ಬಡಿಗೆಗೊಳ್' ನೋ.

ಬಡಿಗೆಗೊಳ್, ಬಡಿಗೆಕೊಳ್ (ಕ್ರಿ). ೧. (ಹೆದರಿಸಿ ಓಡಿಸಲು) ದೊಣ್ಣೆಯನ್ನು ಹಿಡಿ ; ಕೋಲನ್ನು ಹಿಡಿದುಕೊಳ್ಳು : ಮರ್ಕಟಂಗಳ ಪಡೆಯನಟ್ಟಿದ ಹಿಂಡು ದನವಿಗೆ ಬಡಿಗೆಗೊಂಡಂತೆ (ಕೌತಿಶಾ. ೩೫-೦೪). ಬಡಿಗೆಕೊಳ್ : ೨. ದೊಣ್ಣೆಯಿಂದ ಹೊಡೆ : ನೆಲ್ಲಿಯ ಕಾಯ್ಗಳಂ ಬಡಿಗೆಕೊಂಡವೊಲೆತ್ತಿದ ತೋರಹತ್ತದಿಂ ಜಲ್ಲನೆ ತುಂಬಿಗಳ್ ಕೆದಱಿ ಬಂದುವು ಬಿಂಕದಿನಂಕದಾನೆಗಳ್ (ಕಬ್ಬಿಗಾ. ೨೦೩). [ಬಡಿಗೆ$_1$ + ಕೊಳ್$_1$]

ಬಡಿಗೆಗೋಲು (ನಾ). = ಬಡಿಗೆ$_1$: ಕೈಗಳ ಸಕಲದನುಜರು ಹಿಡಿದು ಜೋಲಲು ನೆಗೆದು ಹಾಱುತ ಕೊಡಹಿ ಬಡಿದನು ಬಾಲದಿಂದವ ಬಡಿಗೆಗೋಲಂತೆ (ಕೌತಿಶಾ. ೦೬-೩೨). [ಬಡಿಗೆ$_1$ + ಕೋಲು$_1$ (<ಕೋಲ್$_1$)]

ಬಡಿಗೆವಲೆ (ನಾ). ಒಂದು ಬಗೆಯ ಬಲೆ : ಹಾಱುವಲೆ ಜಾಱುವಲೆ ಬಡಿಗವಲೆ . . . ಮಂದಸಿನವಲೆಯ ಹೊಱಿಗಳ ಬೇಡವಡೆ ನೆರೆದುದು (ಹನಳಾ. ೩-೬). 'ಬಡಿವಲೆ' ಪರಾ. [ಬಡಿಗೆ$_1$ + ಬಲೆ$_1$]

ಬಡಿಗೊಳ್, ಬಡಿಕೊಳ್ (ಕ್ರಿ). ೧. ದೊಣ್ಣೆಯನ್ನು ಹಿಡಿ; ಕೋಲನ್ನು ತೆಗೆದುಕೊಳ್ಳು : ಬಡಿಗೊಂಡು ಗೋಣಿಪಣ್ಣಂ ಬಡಿವಂತಿರೆ ಪವನಸೂನು . . . ಬಡಿದನನಿಬರಂ ಕೌರವರಂ (ಗದಾಯು. ೩-೦೦) ; ನರನು ಬಿಲುಗೊಂಡೊಂದುದೆಸೆಯಲಿ ಮರುತಿ ಬಡಿಗೊಂಡೊಂದುಕಡೆಯಲಿ . . . ಎರಡುಮೂಱಡಿಯಿಡುತ ನಿಂದರು (ಸಾಳ್ವಕಾ. ೩೦-೬೨). ೨. ಬಡಿಗೆಯಿಂದ ಬಡಿ.—ಹೊಡೆ : ಬಡಿಗೊಳೆ ಬಿದು ಬಿಬ್ಬರಬಿರಿದೊಡನುಗೆ ಪೊಸಮುತ್ತು (ಪಂಪಭಾ. ೦೦-೦೦೩); ಬಡಿಯಿಂ ಬಹ್ವಾಮಲಕದ ಫಳಮಂ ಬಡಿಗೊಳಲುದಿರ್ವಂದದಿ ಬೀಳ್ತಹ ಬಲ್ವಡೆ (ಜಯಕಾ. ೬-೩೨). ೩. ಬಡಿಗೆಯ ಏಟು ತಿನ್ನು,—ಪೆಟ್ಟುತಿನ್ನು : ಕೆಲರ್ . . . ಸೌಜನ್ಯಕಂದಾಂಕುರನ ಶರಕ್ಕಳ್ಕಿ ಬೆ[ಳ್ಕ] ರ್ತೋಡೆಯುಂ . . . ಬಡಿಗೊಂಡ ಮೊಲದಂತೆಯುಂ ತಲೆಕೆಟಗಾಗಿ ಬಿಟ್ಟರ್ (ಶಾಂತಿಪು. ೪-೩೦ ಪ); ಬಡಿಗೊಂಡು ಪಣ್ ಪಱಿದು ಬೀಟಿ (ತೇಮಿಪು. ೧-೬೬). ಬಡಿಕೊಳ್ : ೨. ಬಡಿಕೊಳೆ ಕಾಯುಂ ಪಣ್ಣುಂ ತೊಡಂಬೆ ಪಱಿದುದಿರ್ವ ಮಾಟ್ಕಿಯಿಂ ಕಿಱಿವಿರಿಯರ್ ಮಡಿವರನ ಕ್ರಮದಿಂ (ಪಂಶಾಮಾ. ೦-೬೩). ೩. ರಿಪುಸೇನೆ ಬಟಲ್ದು ನಿದ್ರೆಯಿಂ ಬಡಿಕೊಂಡ ನೆಲ್ಲಿಯಂತೆ ನೆಲಕ್ಕೆ ಬೀಟ್ವುದುಂ (ರರ್ಮಾಮ್ಯ. ೦೩-೧೨೯); ಬಡಿಕೊಂ [ಪಾಕಾಂ. ಗೊಂ]ಡ ನೆಲ್ಲಿಯ ಕಾಯಂತಾ ಬಲವೊಡನೆ ಚೆಲ್ಲಿತು ಕಂಡ ಕಡೆಗೆ (ಕುರಾಸಾಂ. ೪೦-೩೫). [ಬಡಿ$_3$ + ಕೊಳ್$_1$]

ಬಡಿಗೋಲ್, ಬಡಿಕೋಲ್, ಬಡಿಕೋಲು, ಬಡಿಗೋಲು (ನಾ). ಬಡಿಯಲು ಉಪಯೋಗಿಸುವ ಕೋಲು.—ಲಾಠಿ: "ಡಂಗೆಯೆ ಬಡಿಗೋಲ ಪೆಸರ್" (ಳವಿಕಂ. ೬೩); ಏಱಿನ ಮೇಲೆ ಬಡಿಗೋಲ್ ಕೊಲೆಯ ಮೇಲೆ ಕವರ್ತೆಯೆಂಬಂತೆ ಸಂತಾಪದ ಮೇಲೆ ಸಂತಾಪಮಂ ಮಾಟ್ಟ ನಿನ್ನ ನೋಂಪಿಯೆಂಬ ಗರಗಸಕ್ಕೆನ್ನಮೆಯ್ಯನೊಡ್ಡಲಾಱಿಂ (ರರ್ಮಾಮ್ಯ. ೦-೦೬೨). ಹಿಡಿವ ಮಿಗಂಗಳ ಬಿಡದಿರೆ ಬಾಯೊಳು ಬಡಿಗೋಲ್ಗಳನಿಕ್ಕಿ ಕಿವಿಯ ಒಡೆ ಮುರಹಿದೊಡೊದಱುವ ಶಬ್ದವಿಪಿನದೊಳೆಡೆಗೊಂಡುದು (ಮೋಹತ. ೦೯-೨೦). ಬಡಿಕೋಲ್: ನುಲಿ ನೇಣ್ ಬಡಿಕೋಲ್ ಬಲೆ . . . ಇದಿರೊಳ್ ಬರೆ ಕಾಣಲುಮಾಗದು (ಲೋಕೋಪ. ೦೨-೦೦); ಬಡಿಕೋಲಂ ಸಮಮಾಡಲಕ್ಕುಂ . . . ಕಡುಮೂರ್ಖಂ ಹಿತ ಕೇಳ್ವನೇ (ಸೋಮೇಶ. ೪೯); ತಿರುಗೆ ತಿರುಗುತ್ತುಂ ಸಂಗಡಿಸಿ ಪರಿದುಬುಬೆನುತ್ತುಂ ಬಡಿಕೋಲಿಂದಿಟ್ಟನಧಿಕಬಲನಾ ಮೊಲನಂ (ಗಿರಿಳ. ೦-೮೭). ಬಡಿಕೋಲು : ಚಾಳಿಸಿದ ಹದವಿಲ್ಲುಗಳ ಬಡಿಕೋಲುಗಳ ಬೇಟೆಗಾಱರು ಬಳಸಿದರು ಶಿವನ (ಕುಪ್ಯಾಲಿ. ೩-೩೩) ; ಭ್ರೂಲತೆಯ ಹದವಿಲ್ಲುಗಳ ಹೊಳೆವಾಲಿಗಳ ಹೊದೆಗೋಲುಗಳ ನಳಿತೋಳ ಬಡಿಕೋ[ಪಾಕಾಂ. ಗೋ]ಲುಗಳ . . . ಬೇಟೆಕಾತಿಯರೈದಿದರು ವನವ (ಕೊರಶಾ. ೦-೩-೩೯); ಓಡಿ, ತಡೆಗಟ್ಟಿ; ಬಡಿಕೋಲನಿಡಿ! (ಸಂದ್ರಸ. ೨೯-೩). ಬಡಿಗೋಲು : ಮನಸಿಜನ ಬಡಿಗೋ[ಪಾಕಾಂ. ಕೋ]ಲೋ ಶಿವನು ಸೂಡಿರ್ದ ಚಂದ್ರನ ಭಾಗವೋ . . . ಎನಲರ್ಧಚಂದ್ರನಂ ಬಣ್ಣಿಸುವೊಡರಿದು ಕಾವ್ಯಂಗಳೊಳಗೆ (ಹನಳಾ. ೩-೬೨); ಗುಪ್ತಿಯವರೂ, ಬಡಿಗೋಲಿನವರೂ, ಹಣೆಮಟ್ಟದ ದೊಣ್ಣೆಯವರೂ, ಸಿದ್ಧವಾಗಲಿ (ಪೇಟಿಮಾ. ೩). [ಬಡಿ$_1$ + ಕೋಲ್$_1$]

ಬಡಿಗೋಲು 'ಬಡಿಗೋಲ್' ನೋ.

ಬಡಿಣ 'ಬಡಿನ' ನೋ.

ಬಡಿತ (ನಾ). ಹೊಡೆಯುವಿಕೆ; ಏಟು; ಪೆಟ್ಟು: ಬಸಿವ ನೆತ್ತರ ಬಾಳ್ವೆಯೊಳ್ ಬಡಿತ ಕಡಿತಗಳನೆಸಗಿದವನಲ್ಲ (ಕಾಲೂರ. ೦೬೨-೩೫೯); ಅವರ ತಲೆ ತಬಲೆಯ ಬಡಿತಕ್ಕೆ ಸರಿಯಾಗಿ ತೂಗುತ್ತಿತ್ತು (ಅಪೋಲೀ. ೦೬೬). 'ಬಡಿತಂಗಾಸಂ' ಪರಾ. [ಬಡಿ$_1$ + — ತ$_3$]

ಬಡಿತಂಗಾಸು (ಕ್ರಿ). (ಲೋಹವನ್ನು) ಬಡಿಯುವುದಕ್ಕೆ ಹದವಾಗುವಂತೆ ಕಾಯಿಸು.—ಬಿಸಿಮಾಡು: ಬಾಟಿವಾಟ ತಿದಿಯುಗಿವರುಂ

ಮಿಡುಮಿಡುಕೆ ಬಡಿತಂಗಾಸುವರುಂ [ಶಾಕಾಂ. ಬಡಿತಂಗೊಂಡು ಕಾಸಿ ಸುಡುವರುಂ] ನೋಡೆನೋಡೆ ಕಣ್ಗಳಂ ಮಿಂಟುವರುಂ (ಆದಿಪು. ೩-೬೫ಪ); ಸುಱ್ಱಸುಱ್ಱನೆ ಬಡಿತಂಗಾಸುವುದುಂ ಕರ್ಕಶಕ್ಷಾರವಾರಿಯುಂ ತಂದು ಸಱ್ಱಸಱ್ಱನೆ ಪೂಸುವುದುಂ (ಸುಳುಮಾ. ೧೦-೪೭ ಪ). [ಬಡಿತ + ಕಾಸು$_1$]

ಬಡಿತಂಗೊಳ್ (ಕ್ರಿ). ಪೆಟ್ಟುಹಾಕು ; ಏಟುಹೊಡೆ: ಬಾಟ^{3}ವಾಟ^3 ತಿದಿಯುಗಿವರುಂ ಮಿಡುಮಿಡುಕೆ ಬಡಿತಂಗೊಂಡು ಕಾಸಿ ಸುಡುವರುಂ [ಶಾಕಾಂ. ಬಡಿತಂಗಾಸುವರುಂ] (ಆದಿಪು. ೩-೬೫ ಪ). [ಬಡಿತ + ಕೊಳ್$_1$]

ಬಡಿದಂಟು (ನಾ). ಕೋಲಿನಂತಿರುವ ಕಾಂಡ ; (ಗರಿಗಳಿಲ್ಲದೆ) ಬರಿದಾಗಿರುವ ಕಡ್ಡಿ : ಗೊಡ್ಡೆಮ್ಮೆಯ ಮುಂದೆ ಬಡಿದಂಟು ಒಗೆದಂತೆ ಗಿರಾಕಿಗಳ ಮುಂದೆ ಒಂದೆರಡು ಪತ್ರಿಕೆಗಳನ್ನು ಅವರು ಒಗೆದಿರುತ್ತಾರೆ (ಗಾಳಿಪ. ೫೫). [ಬಡಿ$_3$ + ದಂಟು]

ಬಡಿನ, ಬಡಿಣ (ನಾ). ಬಡಿಸಿದುದು; ಆಹಾರ; ಎಡೆ: ಬಳಾರಿಗಿತ್ತ ಬಡಿನಂ ಹಾರ್ದ್ದಿದ ಹರ್ದ್ದಿಂಗೆ ಬಿರ್ದ್ದು ವೃಕಕ್ಕೆತ್ತಿದ ಬುತ್ತಿಯೆಂದೊಡ ಹಿತರ್ ಮೆಯ್ದೋಱಿ ಮಾಱಾಂಪರೇ (ಮುಂಬಿರಾ. X, ೨೨೫-೩೦ ; 1205); ಅವಯವದಿನೆಯ್ದಿ ಬಲಮಂ ಜವಂಗೆ ಬಡ್ಡಿಸಿದ ಬಡಿನಮೆನೆ ಶರಹತಿಯಿಂ ತವೆ ತಱಿವುತ್ತಿರ್ಪುದುಮಾ ಕುವರಂ ಶತಖಂಡಮಾಯ್ತು ತನ್ನೃ ಪಸೈನ್ಯಂ (ಮಹಾವೀ. ೦೨-೦೦೬). **ಬಡಿಣ**: ಬಡಿಣಮನೊಲ್ಲದಂತಿರಿಸಿ ಭಿಕ್ಷಕಿ ಪೋಪವನಂತೆ ಕೂಡೆ ಕೂಡೊಡನಿರುತಿರ್ಪ ಮುಕ್ತಿಸುಖಭೋಗಮನೊಲ್ಲದೆ . . . ಕೋಟಲೆಗೊಳುತ್ತಿಹರಾ ಮರುಳರ್ (ಶತಕ. ೯೬).

[< ಬಡ್ಡಿಸು. / ತಮಿ. ವಟ್ಟಮ್; ತೆಲು. ವಡ್ಡನ, ವಡ್ಡೆನ]

ಬಡಿಮಣೆ (ನಾ). (ನೆಲ ಮೊದಲಾದುವುಗಳನ್ನು) ಬಡಿದು ಸಮ ಮಾಡುವ ಸಾಧನ ; ದಮ್ಮಸು : ಬಡಿಮಣೆಯಿಂದ ಬಡಿದು ಸಮ ಮಾಡಿ (ಮುಂಬಿಯಿ. ೯-೦೦೬). [ಬಡಿ$_1$ + ಮಣೆ]

ಬಡಿವಡೆ, ಬಡಿಹಡೆ (ಕ್ರಿ). ಹೊಡೆತವನ್ನು ಪಡೆ ; ಏಟು ತಿನ್ನು : ಊರ ಸೀರೆಗೆ ಅಸಗ ಬಡಿವಡೆದಂತೆ [ಶಾಕಾಂ. ತಡಬಡಗೊಂಬು, ತಡಬಡಿಹಡೆ, ಬಡಿಹಡೆದಂತೆ] ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದೆಂದು ಮರುಳಾದೆ (ಬಸವ. ೩೦೯ ; ಗಣಿಶಾ. ೪೨-೬ ನೋ); ಮನವಿಲ್ಲದವ ಮುಟ್ಟಿ ಬಡಿವಡೆದ ತೆಱನೆನಗೆ (ಕಣ್ಣಿರ. ಹ. ೪೪-೩) ; ವೀರವಾನರನ ಲಾಂಗೂಲದಿಂ ಬಡಿವಡೆದು ರಕ್ಕಸರ ನೆರವಿ ಹೇರಾಳದಿಂ ಪುಡಿವಡೆದು ಬಯಲಾಗೆ (ಕೈಮಿಶಾ. ೦೬-೪೨). **ಬಡಿಹಡೆ** : ಲೋಹಸಂಗದಿ ಕಿಚ್ಚು ಬಡಿಹಡೆದುದೆಂಬಂತೆ . . . ಬೇಹುದೊಂದಳವಟ್ಟ ಬಳಿಕ ಬಿಡಲಾಗದು (ಸಿದ್ಧರಾ. ೯-೪೦).

[ಬಡಿ$_3$ + ಪಡೆ$_1$]

ಬಡಿವರ 'ಬಡಿವಾರ' ನೋ.

ಬಡಿವಲೆ (ನಾ). ಒಂದು ಬಗೆಯ ಬಲೆ : ಪಿಡಿವಲೆ . . . ಬಡಿವಲೆ ಬಲುವಲೆಗಾಱರು ಕೂಗಿ ಬೊಬ್ಬಿಡುತಲೈದಿದರು ಮುಂಗಡೆಯ (ಮೋಹತ. ೦೯-೦೬); ಸಿಡಿವಲೆಯ ಕಾಲ್ಗಣ್ಣಿಗಂಪಿಲ ಬಡಿವಲೆಯ . . . ಕಿ[ಪಿ]ಡಿದು ಕಾರ್ಮುಗಿಲಂತೆ ಕವಿದುದು ಶಬರಸಂದೋಹ (ಅಪಂರಾ. ೩-೩-೫). 'ಬಡಿಗೆವಲೆ' ಪರಾ. [ಬಡಿ$_1$ + ಬಲೆ$_1$]

ಬಡಿವಾರ, ಬಡಿವರ (ನಾ). ಒಣಜಂಬ ; ಬಡಾಯಿ ; ಡಂಭ : ಬಿಡದಹಂಕಾರ ಬಲುಬಡಿವಾರದಲ್ಲಿ ಸುಖಬಡಿವೆನು ದುರುಳನಡತೆಗಳಾಚರಿಸಿ (ಮೋಕ್ಷದೀ. ೦೬-೦) ; ಬಿಡದೆ ಮಡಿಮಡಿಯೆಂದು ಬಡಿವಾರಮಂ ಮಾಡಿ (ಮಲ್ಲಿಪ. ೨-೨೨) ; ಅಟ್ಟಕ್ಕೆ ಹಾರದ ಬೆಕ್ಕು ಬೆಟ್ಟಕ್ಕೆ ಹಾರುವೆನೆಂದು ಬಡಿವಾರ ಕೊಚ್ಚಿಕೊಂಡಂತಾಗುತ್ತದೆ (ಶರತ. ೨೫೪). **ಬಡಿವರ** : ಎನ್ನೊಡನೆ ಬಂದೊಡೀಗಳೆ ಕನ್ನೆಗೆ ಪೊಕ್ಕವನನೊಲ್ದು ತೋಱಿದಪೆಂ ನೀವೆನ್ನಂ ಬಿಡಿ ಪರಸೇವೆಯೊಳೆನ್ನರುಮೇನಾಗರೆನ್ನ ಬಡಿವರಮೇನೋ (ದಶಕು. ೯-೪೪). [← ಹಾರ. ಮರಾ. ಬಡಿವಾರ್]

ಬಡಿವೆಱು (ಕ್ರಿ). = ಬಡಿವಡೆ : ಬಡಿವೆತ್ತ [ಬಡವ]ನಂತೆ ಶಕ್ತಿಗೆಟ್ಟು (ರರ್ಮಾಮ್ಯ. ೦-೦೬೬) ; ಊರ ಸೀರೆಗಗಸಂ ಬಡಿವೆತ್ತನೆನಿಪ್ಪ ಜನದ ನಾಟ್ಯುಡಿ ನಿನಗೆ (ಜಗವಿ. ೬-೬). [ಬಡಿ$_3$ + ಪೆಱು$_1$]

ಬಡಿವೋರಿ, ಬಡಿಹೋರಿ (ನಾ). ಹೊಡೆತ ತಿಂದು ಕೆಲಸಮಾಡುವ ಎತ್ತು : ಎಂದಿನ ಕೊಂಗರೈಸೆ ಬಡಿವೊರೀಗಳೀ ಪಟಗೂಟ ಪಂದೆಗಳ್ (ಜಕವಿ. ೩-೪೫). **ಬಡಿಹೋರಿ** : ಒಡೆಯ ಬಂಟನಿಗೆ ಬಡಿಹೋರಿಯಾದ (ವಗಮಾ. ಳ. ೪೨೬-೫೭) ; ಬಗುಳುವಿವದಿರು ಹರಿಯ ಬಡಿಹೋರಿಗಳಲಾ ಜಗವಱಿಯದೇ (ಕುಪ್ಯಾಸ. ೦೦-೯) ; ಕೊಡಗು ಕೊಂಕಣ ಕೊಂಗ ಮಲೆಯಾಳ ರಾಜ್ಯದ ಬಡಿಹೋರಿಗಳು ಮನನಡುಗಿ ಒಡನೆ ಕಾಣಿಕೆಯ ನಿತ್ತಾನೆಯ ಸಜ್ಜಾರ ನಡುಕೇರಿಯೊಳಗೊಪ್ಪುತಿಹುದು (ಕಂಪವಿ. ೬-೩೨).

[ಬಡಿ$_1$ + ಪೋರಿ$_2$]

ಬಡಿಶ (ನಾ). (ಮೀನು ಮೊದಲಾದುವುಗಳನ್ನು ಹಿಡಿಯಲು ಉಪಯೋಗಿಸುವ) ಗಾಳ ; ಕೊಕ್ಕೆ : "ಬಡಿಶವೆಂಬುದು ಮೀನ ಗಾಳಂ" (ಹಲಾಯು. ೧೨೬-೭೯) ; ಝುಷನಿಚಯಂ ಆಮಿಷಲೋಭದಿಂ ಬಡಿಶಮಾಂಸವನಾಸ್ವಾದಿಸಿ ಸಿಲ್ಕಿ ಸಾವನೆಯ್ದುಗುಂ (ಶಕ್ತ್ಯಪ್ರ. ೩೩೦) ; ಕರಮೆ ಭುಕ್ತ್ಯಾಶೆಯಿಂ ಬಡಿಶಂಗಳೊಳ್ಕೆಡೆವ ಪಿರಿಯ ಮೀನ್ಗಳ ತೆಱದೆ . . . ರಾಜಿಸುವಿಂದ್ರಿಯಂಗಳಿಂದಂ ಶಿವಧ್ಯಾನತತ್ಪರರೆಯ್ದೆ ರಂಜಿಸಿದರು (ಬಿರಾಪ. ೫-೩-೨೫) ; ಬಡಿಶಗತವಹ ಮತ್ಸ್ಯದಂದದಿ ಕೆಡೆದು . . . ಱಕ್ಕೆಯ ಕಡಿದ ಪಕ್ಷಿಯ ತೆಱದೊಳಡಿಯಿಡಲಾಱನವನು (ಅಮೃತ. ೨-೭೨).

[ಸಂ.]

ಬಡಿಸ (ನಾ). = ಬಡಿಶ : "ಬಡಿಶಂ ಮತ್ಸ್ಯಬಂಧನಂ . . . ಅದು ಕಿಱಿದಾದಡೆ ಬಡಿಸವೆಂಬುದು" (ಪಾಪರಾ. ೦೦೦) ; ಜಲದೊಳಗಣ ನಿಮಿಷಾವಳಿ ಬಲೆಗಾಱನ ಬಡಿಸದಲಿ [ಶಾಕಾಂ. ಸರಳ್ಗೆ] ಸಿಕ್ಕಿಹ ಮಾಂಸಕ್ಕೆಳಸಿ ತನುವಳಿವ ತೆಱದಿಂ ಲಲನೆಯರ್ಗಂ ಹೇಮಭೂಮಿಗೆಳಸಲ್ ಕೆಡುವರ್ (ಪಸ್ಕಾ. ೩-೬೬)$_2$ [< ಸಂ. ಬಡಿಶ]

ಬಡಿಸು$_1$ (ಕ್ರಿ). ಹೊಡೆಯಿಸು ; ಏಟು ಕೊಡಿಸು : ಸೊಕ್ಕಿರ್ದರ ಮದಮಿಂತಲ್ಲದುಡುಗದೆಂದು ಸಾಯೆ ಬಡಿಸುವಂ (ರರ್ಮಾಮ್ಯ. ೨-೬೩) ; ಹೊಟ್ಟೆಯನು ಕಟ್ಟುವುದು ಬಟ್ಟೆಯಲಿ ಬಡಿಸುವದು ಕಟ್ಟಾಳ ಭಂಗಪಡಿಸುವದು ಗೇಣುದ್ದ ಹೊಟ್ಟೆ ಕಾಣಯ್ಯ (ಸರ್ವಜ್ಞ. ೦೯೮೫). [ಬಡಿ$_1$ + — ಇಸು$_3$]

ಬಡಿಸು$_2$ 'ಬಡ್ಡಿಸು' ನೋ.

ಬಡಿಹ (ನಾ). ಹೊಡೆತ ; ಪೆಟ್ಟು ; ಪ್ರಹಾರ : ಬಡಿಹದ ಮಕ್ಕಳಂತೆ ಅಟಲ್ವೆಯೊಳಂ ನೀರ್ ಮುಟ್ಟಿದ ಕೆಂಡದಂತುಪಶಮದೊಳಂ . . . ನೆರೆದಿರ್ಪುದುಂ (ರರ್ಮಾಮ್ಯ. ೫-೦೨೫) ; ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣೆಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು (ಬಸವ. ೨೫೦) ; ಮರ್ಕಟಂಗಳ ಬಡಿಹ ಮಾಣಿಸು ದೇವ (ಳೌತಿರಾ. ೦೫-೬). [ಬಡಿ$_1$ + — ಹ$_2$ (< — ಪ$_2$)]

ಬಡಿಹಡೆ 'ಬಡಿವಡೆ' ನೋ.

ಬಡಿಹೋರಿ 'ಬಡಿವೋರಿ' ನೋ.

ಬಡು$_1$ (ನಾ). ಪ್ರಾಣಿಗಳ ಹೆಣ,—ಶವ : ಜಾಕಿ, ಓಬಯ್ಯ ಇಬ್ಬರನ್ನು ಜೊತೆಗೆ ಕರೆದುಕೊಂಡು ಕೋವಿಗಳೊಡನೆ 'ಬಡು' (ದನದ ಹೆಣ) ಬಿದ್ದಲ್ಲಿಗೆ ಹೊರಟನು (ಕಾಮೂರು. ೨೭೯) ; ದನವನ್ನು ಹುಲಿ ಹಿಡಿದು... ಬಡುವನ್ನು ಕಾಡಿಗೆ ಎಳೆದುಕೊಂಡು ಹೋಗಿ . . . ಹಳುವಿನಲ್ಲಿ ಮುಚ್ಚಿಟ್ಟಿತ್ತು (ಪುಲಿಮ. ೦೯೧). [ದೇ.॥ ತೆಲು. ಬಡುಗು]

ಬಡು$_2$ (ನಾ). (ಸಾಮಾನುಗಳನ್ನು ಇಡಲು) ಗೋಡೆಯಲ್ಲಿ ಮುಂಚಾಚಿ ಕೊಂಡಿರುವಂತೆ ಉದ್ದವಾಗಿ ಕಟ್ಟಿರುವ ಕಲ್ಲು, ಸಿಮೆಂಟು, ಮರ ಮುಂತಾದುವುಗಳ ಕಟ್ಟೆ: ಸಾಮಾನು ಇಡುವ ಮೇಜು (ಅಂತಸ್ತು

ಗಳುಳ್ಳ) ನಿಲುವು, ಬಡು, ಅಡ್ಡಣಿಗೆ (Stand. ಇಂಳಿ) ; ಅಡಿಗೆಮನೆಯ ಒಂದು ಬಡುವಿನ ಮೇಲೆ ಕಂಚಿನ ಗೌರಿಯ ಪ್ರತಿಮೆಯೊಂದಿತ್ತು (ಹೂಜಣ್ಣು. ೭೦).

—ಬಡುಕ '—ಬಡಿಕ್ಕ' ನೋ.

ಬಡುಗುಲಿ (ನಾ). (?) : ಪಾತಕಜೀವಂಗಳ್ ಎಳ್ಳಿನಂತೆ ಗಾಣಕ್ಕೆ ವಂದು . . . ಮಂಯ್ಯಿಲ್ಲದೊಕ್ಕಲಂತೆ ಬಡುಗುಲಿಗೆ ವಂದು . . . ತಿಱ್ಱನೆ ತಿರಿವುವು (ಕರ್ಮಾಮ್ಯ. ೩-೭೬). [?]

ಬಡೇಜಾವು (ನಾ). (ಉಕ) ಒಣಜಂಬ ; ಡೌಲು ; ಬಡಾಯಿ : ಆತನ ಶಾಸನ ಮಾಡುವುದು ಒತ್ತಟ್ಟಿಗೆ ಉಳಿದು, ಆತನ ಬಡೇಜಾವು ನಡೆದದೆ ! (ಭಕ್ತ. ೦೩೬) ; ಆ ಸಣ್ಣ ಹುಡುಗನ ಮುಂದೆ ಯಾಕ ನಿನ್ನ ಬಡೇಜಾವ (ಮಹಸ. ೩೦). [← ಮರಾ. ಬಡೇಜಾವ್, ಬಡೀಜಾವ್]

ಬಡೇಸೋಪು (ನಾ). ಜೀರಿಗೆ ಜಾತಿಗೆ ಸೇರಿದ ಒಂದು ಬಗೆಯ ಸಸ್ಯ ಮತ್ತು ಅದರ ಬೀಜ : ಗೊರಟೇಬೇರು, ಹಸರಾಣಿ, ಬಡೇಸೋಪು ಇವು ಯಾವಾಗಲೂ ಹಸಿಯವೇ ಉಪಯೋಗಿಸಲ್ಪಡಬೇಕು (ಗೃಹಸ್ಯ. ೨). [←ಹಿಂ. ಬಡೀಶೋಫ್ ; ಮರಾ. ಬಡೀಶೇಪ್, ಬಡೀಶೋಪ್]

ಬಡ್ಡ (ನಾ). ತಿಳಿಗೇಡಿ ; ದಡ್ಡ ; ಮಂದಮತಿ : ದುಡ್ಡು ಕೊಟ್ಟಣ್ಣನು ಬಡ್ಡನಾಗುವನಯ್ಯ ಬಡ್ಡಿಗೆ ಬಡ್ಡಿ ಗಂಟಿಕ್ಕಿದಾ ಹಣವು ದೊಡ್ಡರಾಯನ ಪಾಲು (ಶಾಲಸಂ. ೬೪-೮೦) ; ಅಡ್ಡೇಟು ತಗಲಿದರೆ ಬಡ್ಡನಾದರೂ ಗೆದ್ದಾನು (ಗಾರ). [ಬಡ್ಡು + —ಅ$_7$. / ತುಳು. ಬಡ್ಡೆ]

ಬಡ್ಡಗಿ 'ಬಡಗಿ' ನೋ.

ಬಡ್ಡಗಿವಾಳ (ನಾ). ಮರಗೆಲಸವನ್ನು ಮಾಡುವವನು ; ಬಡಗಿ : ಮಾಚಿಗಾವುಣ್ಡ ಜಕ್ಕೋಜಗೆ ಕಮ್ಮಱವಾಳ ಕೊಟ್ಟ ಕಯಿ ಮತ್ತ ೫ ಬಡ್ಡಗಿವಾಳ ಬಿಣ್ಣೋಜಗೆ ಕೊಟ್ಟ ಮತ್ತ ೫ (ಸೌಇಇ-IX-1, ೦೨೩-೨೬ ; 1059). [ಬಡ್ಡಗಿ (< ಬಡಗಿ) + —ವಾಳ$_3$ (<—ವಳು]

ಬಡ್ಡಿ$_1$ 'ಪೊಡ್ಡಿ' ನೋ.

ಬಡ್ಡಿ$_2$, ವಡ್ಡಿ, ವಿದ್ದಿ (ನಾ). ೧. ಹೆಚ್ಚಳ; ಆಧಿಕ್ಯ: ವಿಘಾತಿಯ ಬಡ್ಡಿಗಿನ್ನಕ ಬದುಕಿದೆನು (ಕುಸ್ಯಾಸ. ೦೨-೪೩). 'ಬಡ್ಡಿವಡೆ' ಪರಾ. ೨. ಸಾಲವಾಗಿ ಕೊಡುವ ಅಥವಾ ಪಡೆಯುವ ಹಣದ ಮೇಲೆ, ಪಡೆಯುವ ಅಥವಾ ತೆರುವ ಹೆಚ್ಚಿನ ಹಣ ; ವೃದ್ಧಿ : ಕಡನುಂ ಬಡ್ಡಿಯುಮೆಂದವಳೊಡಮೆಯನವಳೀಯೆ ಕೊಳ್ಗೆ ಪುಸಿಸಾಲಕ್ಕಂ (ಮಹಸ. ೦೦-೬೫) ; ಕಾಸಿಗೆ ವೀಸವ ಬಡ್ಡಿ ಗಳಿಸಿಕೊಂಡು ಶೇಷಗಿರಿಯ ಮೇಲೆ ವಾಸವಾಗಿದ್ದೇನೆ (ಪುಕಂದ. ೨-೩೨-೦) ; ಇವೊತ್ತು ನಿನ್ನ ಸಾಲವನ್ನೆಲ್ಲಾ ಬಡ್ಡಿಸಹಿತವಾಗಿ ತೀರಿಸಿಬಿಡುತ್ತೇನೆ (ಪಸಹಾ. ೨೯೬). ವಡ್ಡಿ : ೨. ನೀನೂ ತೆಱುವ ಸಿದ್ಧಾಯ ಎರಡು ಹಣ ಯಿಾ ಪುಣ್ಯಗಳ ಬೆಮ್ಬಳಿಯ ವಡ್ಡಿ × × × ಗವುಡ ಸುಂಕ ಮಗ್ಗ...ಸರ್ವಮಾನ್ಯವಾಗಿ (ಎಕ. X. ಮುಳಪಾ. ೨೦-೨ ; 1468) ವಿದ್ದಿ : ೧. "ವಿದ್ದಿ (ವದ್ದಿ), ವೃದ್ಧಿ=ಏಳಿಗೆ ; ಹೆಚ್ಚಳ" (ಕನ್ನಕೋ. ೪೦); ಋತ್ವಕ್ಕಿತ್ವಂ—ಋಜು—ರಿಜು...ವೃದ್ಧಿ—ವಿದ್ದಿ, ಶೃಂಗಾರ—ಸಿಂಗಾರ (ಕಪುದ. ೨೬೮ ಪ್ರಯೋ).

[< ಪ್ರಾ. ವುಡ್ಡಿ. /ಸಂ. ವೃದ್ಧಿ. /ತಮಿ. ಮಲ. ವಟ್ಟಿ ; ತುಳು. ಬಡ್ಡಿ ; ತೆಲು. ವಡ್ಡಿ]

ಬಡ್ಡಿಕಾಱ (ನಾ). ಬಡ್ಡಿ ವ್ಯವಹಾರವನ್ನು ಮಾಡುವವನು : ಬಡ್ಡಿಕಾಱನಂತೆ ಒಂದು ಕೊಟ್ಟು ಎರಡು ಪಡೆವ ಜಡಜೀವಿಗಳ ಭಕ್ತರೆನ ಬಹುದೇನಯ್ಯ (ಅಪಂಡೇ. ೬೫-೬೪). [ಬಡ್ಡಿ$_2$ + — ಕಾಱ]

ಬಡ್ಡಿಗುಡು 'ಬಡ್ಡಿಗೊಡು' ನೋ.

ಬಡ್ಡಿಗೊಡು, ಬಡ್ಡಿಗುಡು (ಕ್ರಿ). ೧. ವೃದ್ಧಿಯಾಗು ; ಬೆಳೆ : ಒಡ್ಡಿದನು ಕರತಳವನಗಲಕೆ ಬಡ್ಡಿಗೊಡುವ ವಿಷಾನಲಾಗ್ರವನಡ್ಡವಿಸಿ ಫಡ ಹೋಗದಿರು ಹೋಗದಿರು ನಿಲ್ಲೆನುತ ಖಡ್ಡಿಸುತ (ಪಿಶಾಗ. ೮-೭-೪೪). ೨. ಬಡ್ಡಿಯನ್ನು ಸಲ್ಲಿಸಬೇಕೆಂಬ ಕರಾರಿನಿಂದ ಸಾಲ ಕೊಡು; ಬಡ್ಡಿವ್ಯವಹಾರ ಮಾಡು : ತನ್ದೆ ನಡಯಿಸಿದ ಬಳಿಕಿನ್ತಿಂದುವರ ಬಡ್ಡಿಗೊಟ್ಟು ಪೆಱ್ಚಿಸಿ ಪೊನ್ನಂ . . . ಶ್ರೀಸಾನ್ತಿಸೆಟ್ಟಿ ಪರಿರಕ್ಷಿಸಿದಂ (ಸೌಇಇ. XX, ೨೨-೩೨ ; 1082); ಹರದನ ಬಡ್ಡಿಗೊಟ್ಟೊಡವೆ ರಾಜಕುಮಾರನ ತೇಜದೇಱ್ಗೆ ನಾಣ್ಬಿರುದಿನ ಚಿತ್ರವಿದ್ಯೆ (ಅಪಂಪು. ೮-೪೯) ; ಆ ಕುಸೀದಕನು . . . ವೃದ್ಧ್ಯಾಜೀವನೆನೆ ಬಡ್ಡಿಗೊಡುವನಕ್ಕುಂ (ಮುಂಗರಾ. ೦೦೨-೦). ೩. ತೆಗೆದುಕೊಂಡ ಸಾಲದ ಹಣಕ್ಕೆ ಬಡ್ಡಿಯನ್ನು ತೆರು. ಬಡ್ಡಿಗುಡು : ೨. ದ್ವೈಗುಣಿಕಃ . . . ಕುಸೀದಕಃ — ಈ ೪ ಬಡ್ಡಿಗುಡುವವಂ (ಹಲಾಯು. ೯೩-೪೦೬) ; ಹತ್ತೆಂಟು ಪಣಮಂ ಕಡಂಗೊಟ್ಟು ಬಡ್ಡಿಗುಡುಗುಂ (ಶಾಸ್ತ್ರಪೀ. ೯೪-೬). [ಬಡ್ಡಿ$_2$ + ಕೊಡು$_1$]

ಬಡ್ಡಿಗೊಳ್ (ಕ್ರಿ). ಬಡ್ಡಿಯ ಹಣವನ್ನು ಪಡೆ : ಸಾಲವಿಾಯದೆ ಬಡ್ಡಿಗೊಳ್ವೆನೆಂಬ [ಶಾಕಾಂ. ಸಾಲಿಸದೆ ಬಡ್ಡಿವೇಱ್ಕೆಂಬ]. . . ಮರುಳನಂತೆ (ರರ್ಮಾಮ್ಯ. ೦೨-೨೪) ; ಕಡಗೊಂಡನೊ ಬಡ್ಡಿಗೊಂಡನೊ (ಕಪುದ. ೦೬೬ ಪ್ರಯೋ). [ಬಡ್ಡಿ$_2$ + ಕೊಳ್$_1$]

ಬಡ್ಡಿಮಗ 'ಪೊಡ್ಡಿ' ಪರಾ.

ಬಡ್ಡಿಯಿಕ್ಕು (ಕ್ರಿ). ಬಡ್ಡಿಯನ್ನು ಕೊಡು : ಬಡ್ಡಿಯಿಕ್ಕುವಂ ಮೊದಲಂ ಕೊಟ್ಟು ಪತ್ರಮಂ ಸೀಳಿಸುವಂತೆ (ರರ್ಮಾಮ್ಯ. ೦೪-೦೦೪). [ಬಡ್ಡಿ$_2$+ಇಕ್ಕು]

ಬಡ್ಡಿಯುಣ್ (ಕ್ರಿ). ಬಡ್ಡಿವ್ಯವಹಾರದಿಂದ ಜೀವಿಸು : ಕುಸೀದನೆನೆ ಬಡ್ಡಿಯುಂಬಂ (ಮುಂಗರಾ. ೦೦೨-೦). [ಬಡ್ಡಿ$_2$ + ಉಣ್]

ಬಡ್ಡಿವಡೆ (ಕ್ರಿ). ಹೆಚ್ಚಾಗು; ಅಧಿಕಗೊಳ್ಳು: ಆ ಧಾತುವಿನ ಮೂಲಾರ್ಥವೇನೆಂಬುದನ್ನರಿತರೆ, ಬಡ್ಡಿವಡೆಯುತ್ತಾ ಬಂದ ಮತ್ತಿನ ಪದಗಳ ಹೊಲಬು ತಾನಾಗಿ ಕಂಗೊಳಿಸಬಹುದು (ಪಾರೋಪ. ೩೩೮). [ಬಡ್ಡಿ$_2$+ಪಡೆ$_1$]

ಬಡ್ಡಿವೇಡು (ಕ್ರಿ). ಬಡ್ಡಿಯನ್ನು ಅಪೇಕ್ಷಿಸು.—ಬಯಸು : ತನ್ನಂ ತಪದಿಂ ನೋಯಿಸದುನ್ನತಿಯಂ ದಿವ್ಯಭೋಗಮಂ ಬಯಸುವ ಗಾಂಪಂ ನೆಱ್ ಪೋಲ್ಕುಂ ಸಾಲಿಸದಿನ್ನಳಿಪಿಂ ಬಡ್ಡಿವೇಡಿ ಮಱುಗುವ ಮರುಳಂ (ರರ್ಮಾಮ್ಯ. ೬-೦೫೬). [ಬಡ್ಡಿ$_2$ + ಬೇಡು$_1$]

ಬಡ್ಡಿಸು, ಬಡಿಸು$_2$ (ಕ್ರಿ). ಊಟಕ್ಕೆ ನೀಡು.—ಹಾಕು; ಉಣಬಡಿಸಂ: ಈತಂಗೆ ನೀಂ ಬಸಿಱ್ ತೀವೆ ಬಡ್ಡಿಸದಿರ್ (ಪಡ್ಡಾರಾ. ೭೭-೬); ಮಾಳತಿಕೆಯಂ ಬಡ್ಡಿಸಲುಮುತ್ಪಳಿಕೆಯಂ ಕೈಘಟ್ಟಿ ನೀಡಲುಂ . . . ಪೇಟ್ದಾಗಳ್ (ಅದಿಪು. ೭-೨೦ ಪ) ; ಬಡ್ಡಿಸಿದಿಡ್ಡಲಿಗೆಯ ಮುಂದೆ ಕುಳ್ಳಿರ್ದು . . . ಉಂಬುವ ಕಾರ್ಯವ ಬಿಟ್ಟು ದೊಡ್ಡಕಾರ್ಯವನೆಣಿಸಿದಿರಿ (ವೇಮಸಂ. ೨೩-೨೭೫). ಬಡಿಸು$_2$: "ಬಡಿಸು – ಓಲಗಕ್ರಿಯಾಯಾಂ (ಊಟಕ್ಕೆ ಬಡಿಸು)" (ಕಪುದಾ) ; ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮನಟ್ಟು ಬಡಿಸು ನಾಮಱಿಯದೆನಸುಂ ಸವಿಯಂ (ಕಪಿರಾ. ೨-೦೪೭); ಅನಂತಕಾಲ ಮಾಡುವ ಲಿಂಗಪೂಜೆಯು ಒಂದು ದಿನ ಬಡಿಸಿದ ಜಂಗಮತೃಪ್ತಿಗೆ ಸರಿಯಲ್ಲ (ಪಸ್ವಪ. ಕ. ೫೩೦-೦೦೪೨) ; ಫಡ ತೊಲಗು ಪವಮಾನಸುತ ನಿನ್ನೊಡಲನೀ ಶಾಕಿನಿಯ ಬಳಗಕೆ ಬಡಿಸುವೆನು (ಕುಸ್ಯಾಪ್ರೋ. ೦೩-೩೨).

[ದೇ.॥ ತಮಿ. ವಟ್ಟಿ ; ತುಳು. ಬಳಸು ; ತೆಲು. ವಡ್ಡಿಂಚು]

ಬಡ್ಡು, ಬೊಡ್ಡು (ನಾ). ೧. ಮೊಂಡು ; ಹರಿತವಿಲ್ಲದುದು ; ತೀಕ್ಷ್ಣತೆಯನ್ನು ಕಳೆದುಕೊಂಡಿರುವುದು : 'ಬಡ್ಡುಗಟ್ಟು' ಪರಾ. ೨. ಮಸಂಕಾಗಿರುವಿಕೆ ; ಕಾಂತಿಹೀನತೆ : 'ಬಡ್ಡುಹಿಡಿ' ಪರಾ. ೩. ತಿಳಿಗೇಡಿ ; ಬುದ್ಧಿಯಿಲ್ಲದ ವ್ಯಕ್ತಿ : ಮಱೆಯೊಳಗೆ ಮೈಗರೆದ ವೀರರಂ ಸಂಹರಿಸುತೆ ಬಡ್ಡು ಬಣಗುಗಳನೋಡಿಸಿ . . . ಪುರವನೊಳ ಪೊಗುತ್ತಿದ್ದರು (ಪಪಪು. ೪೨-೨೮) ; ಕಲಿಯಲಿಕ್ಕೆ ಸ್ವಲ್ಪ ಬಡ್ಡು. ಅವಳು ಶಾಲೆ ಬಿಟ್ಟು ಎರಡು ವರ್ಷವಾಯಿತು (ಗೋಪಾಳು. ೬೯.) (ಗಂ). ೪.

ಮೊಂಡಾದ; ಹರಿತವಿಲ್ಲದ: 'ಬಡ್ಡುಗತ್ತಿ' ಪರಾ. ೫. ಮಸುಕಾದ; ಮಂಕಾದ ; ಕಾಂತಿಹೀನವಾದ : ಮೊಳಕಾಲಿನವರೆಗಿನ ಕೊಳಕುಪಂಚೆ. ತಲೆಗೆ ಸುತ್ತಿದ್ದ ಬಡ್ಡು ಕೆಂಬರು ವಸ್ತ್ರ (ಸುಲೆಸು. ೯೮). ೬. ತಿಳಿಗೇಡಿಯಾದ ; ದಡ್ಡತನದಿಂದ ಕೂಡಿದ : ಅವನೊಬ್ಬ ಬಡ್ಡು ಮನುಷ್ಯ. ಅವನಿಗೆ ಯಾರ ಮಾತೂ ಪಥ್ಯವಾಗುವುದಿಲ್ಲ (ಕೂಡಿ). ಬೊಡ್ಡು : ೧. ಚಕ್ರವು ತೀರ ಬೊಡ್ಡಾದುದರಿಂದ ನೀರಿನ ಶಕ್ತಿಯು ಎಷ್ಟೋ ವ್ಯರ್ಥವಾಗುತ್ತಿತ್ತು (ಪಾಲಪ್ರ. I. ೪೦) ; ಬಾಕಿ ಯಾವುದರಲ್ಲಿ ಬೊಡ್ಡಾದರೇನು. ಇಂತಹ ವಿಷಯಗಳಲ್ಲಿ ಮಾತ್ರ ನಮ್ಮ ಜನರ ಕಲ್ಪನಾಶಕ್ತಿ ಹರಿತ ಅಲ್ಲವೆ ! (ಸೂಕುದಾ. ೦೯೦) ; ಹಾರೆ ಮೋಟು, ಗುದ್ದಲಿ ಬೊಡ್ಡು, ಗೈಯುವವನಿಗೆ ಒಕ್ಕೈ (ಗಾಪೆ). ೭. ಒರಟು ; ನಾಜೂಕಿಲ್ಲದುದು : ಅವರ ಕೆಲಸಗಳೆಲ್ಲ ಬೊಡ್ಡು (ಪಾಲಪ್ರ. II. ೬೦೦). ೮. ಒರಟಾದ ; ನಾಜೂಕಿಲ್ಲದ : ಉಳುವುದನ್ನಾಗಲಿ, ನೇಯುವುದನ್ನಾಗಲಿ, ಬಲು ದೊಡ್ಡ ಉಪಕರಣಗಳಿಂದ ಪೂರೈಸುವರು (ಪಾಲಪ್ರ. II. ೬೦೦).

[ದೇ. ॥ ತುಳು. ಬಡ್ಡ್]

ಬಡ್ಡುಕುದುರೆ (ನಾ). ಚುರುಕಿಲ್ಲದ ಕುದುರೆ : ಬಡ್ಡುಕುದುರೆಗೆ ಬಡಿತವೇ ಮದ್ದು (ಗಾಪೆ). [ಬಡ್ಡು + ಕುದುರೆ]

ಬಡ್ಡುಗಟ್ಟು (ಕ್ರಿ). ಮೊಂಡಾಗು ; ತೀಕ್ಷ್ಣತೆಯನ್ನು ಕಳೆದುಕೊಳ್ಳು: ತನ್ನ ರಾಜನೀತಿಯ ಭೇದೋಪಾಯದ ಕನ್ನದ ಮೊನೆ, ಬಡ್ಡುಗಟ್ಟುತ್ತಾ ಬರುವುದು ಅವನಿಗೆ ಗೊತ್ತಾಗದಿರಲಿಲ್ಲ (ಪಾರ್ತಿಸು. ೦೦೨).

[ಬಡ್ಡು + ಕಟ್ಟು$_1$]

ಬಡ್ಡುಗತ್ತಿ, ಬೊಡ್ಡುಕತ್ತಿ (ನಾ). ಮೊಂಡುಕತ್ತಿ ; ಹರಿತವಿಲ್ಲದ ಕತ್ತಿ : ಬಡ್ಡುಗತ್ತಿಯಲಿ ಹುಡುಗರ ತಲೆಯ ನೀನಡ್ಡಾದಿಡ್ಡಿಯಲಿ ಕೆರೆವೆ (ಸ್ಥಾನಸ. ೦೩-೦೩). ಬೊಡ್ಡುಕತ್ತಿ : ಎಳಚಿತ್ತಾಯರು . . . ತುರಿಸುತ್ತಿದ್ದ ಕಾಲಿನ ಮೀನಕಾಂಡಗಳನ್ನು ಕೈಯ ಬೊಡ್ಡುಕತ್ತಿಯಿಂದ ಹೆರೆದುಕೊಂಡರು (ಪಗುಳ. ೬೩). [ಬಡ್ಡು +ಕತ್ತಿ]

ಬಡ್ಡುಹಿಡಿ (ಕ್ರಿ). ನಯವಿಲ್ಲದೆ ಕಾಂತಿಯನ್ನು ಕಳೆದುಕೊಳ್ಳು.— ಮಂಕಾಗು : ಬಡ್ಡುಹಿಡಿದು ಕೆದರಿದ್ದ ಕೂದಲನ್ನು ಮೀಯಿಸಿ ಎಣ್ಣೆ ಕಾಣಿಸಿ ಬಾಚಿ ಸರಿಮಾಡಿದ್ದಳು (ಸುಲೆಸು. ೬೦).

[ಬಡ್ಡು + ಹಿಡಿ$_1$ (< ಪಿಡಿ$_1$)]

ಬಡ್ತಿ 'ಬಡತಿ' ನೋ.

ಬಣ$_1$ (ನಾ). ಶೂನ್ಯತೆಯನ್ನು ಕುರಿತಂತೆ ಬಳಸುವ ಅನುಕರಣಶಬ್ದ : 'ಬಣಗುಟ್ಟು' ಪರಾ.

ಬಣಬಣ (ದ್ವಿರುಕ್ತಿ) : ಮದುವೆಗೆ ಬಂದ ನೆಂಟರೆಲ್ಲಾ ಹೊರಟು ಹೋದಮೇಲೆ ಮನೆ ಬಣಬಣ ಎನಿಸುತ್ತಿದೆ (ಕೂಡಿ).

ಬಣ$_2$ 'ಬಣ್ಣ' ನೋ.

ಬಣ$_3$ (ನಾ). ಒಂದು ದೇಶದ ಹೆಸರು : ಸೇನ್ದ್ರ ಕಬಣೋಭಯದೇಶದಾ ವೀರಾಪುರುಷ ಸಮಕ್ಷದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜಅರಸನ್ಗೆ . . . ಕೊಟ್ಟಾರ್ (ಮೈಆರಿ. ೦೯೩೬. ೨೬-೦೦; ಸು. 450). [?]

ಬಣಂಜ 'ಬಣಜ' ನೋ.

ಬಣಂಜಿಗ 'ಬಣಜಿಗ' ನೋ.

ಬಣಂಜಿಸು 'ಬಣಜಿಸು' ನೋ.

ಬಣಂಜು 'ಬಣಜು' ನೋ.

ಬಣಂಜುಧರ್ಮ (ನಾ). ೧. ವರ್ತಕರ ಧರ್ಮ : ಬಣಂಜುಧರ್ಮಮನೆ ಪಾಳಿಸಿ ಭೀತರನೆಯ್ದೆ ಕಾದು ನಿರ್ಮ್ಮಳತರಕೀರ್ತ್ತಿಯಂ ಪಡೆದಳಾರ್ಪ್ಪಡಿ ವೆಂಣ್ಣಲ ಸೆಟ್ಟಿಕವ್ವೆಯೊಳ್ (ಕಇ. IV. ೦-೩೪ ; 1204). ೨. ವರ್ತಕರ ಧರ್ಮವನ್ನು ಪಾಲಿಸುವವನು : ಉದಗ್ರಪುಣ್ಯರಾದರಿತವಿಶಿಷ್ಟರೆಂಬುದಿದು ಸಂಸ್ತುತಿಯಲ್ತು ಬಣಂಜುಧರ್ಮ್ಮರ (ಎಕ. VII. ಶಿಕಾಂ. ೦೦೯-೬೫ ; 1181). [ಬಣಂಜು (<ಬಣಜು) + ಧರ್ಮ]

ಬಣಂಜುವಟ್ಟಣ (ನಾ). ವ್ಯಾಪಾರ ನಡೆಯುವ ನಗರ ; ವ್ಯಾಪಾರ ಕೇಂದ್ರ : ಮಲ್ಲಿಸೆಟ್ಟಿಯರು ಮುಂನಂ ಶ್ರೀಮದನಾದಿಯ ಬಣಂಜುವಟ್ಟಣಂ ಕುಱುಮ್ಬೆಟ್ಟದಲು . . . ಸಮಸ್ತಶಾಸನಿಗರ ಮುಂದಿಟ್ಟುಕೊಂಡು (ಎಇ. XIX. ೨೫-೪೬ ; 1245) ; ಕರಮೆಸೆದಿಪ್ಪ ತದ್ದವಡಿ ಸಾಸಿರದಾ [ಬ]ಣಂಜುವಟ್ಟಣಂ ಸಿರಿಗೆ ನಿವಾಸ ದೇಸಿಯ ತವರ್ಮನೆ (ಕೊಲ್ಲಾಕಾ. ೨೦-೫ ; 1265). [ಬಣಂಜು (<ಬಣಜು) + ಪಟ್ಟಣ]

ಬಣಂಜುಸಮೆಯ (ನಾ). = ಬಣಂಜುಧರ್ಮ ೧ : ಧರೆಗೆಸೆ[ವೀ] ಬಣಂಜುಸಮೆಯಪ್ರತಿಪಾಳನವರ್ತ್ತಿಯಿಂದೆ ದುರ್ದ್ಧರತರಮಪ್ಪ ಚಂಡಿಕೆಯೆ ವೆಂಣ್ಣಲೆ ನಾರಿಯೆನಿಪ್ಪ ನಾಮಮಂ ಧರಿಯ್ಸಿ(ಯಿಸಿ) (ಕಇ. IV. ೦-೫೫ ; 1204). [ಬಣಂಜು (<ಬಣಜು) + ಸಮೆಯ]

ಬಣಂಬೆ, ಪಣಂಬೆ, ಬಣಬೆ, ಬಣವೆ, ಬಣೆವೆ, ಬಳಂಬೆ (ನಾ). ೧. (ಹುಲ್ಲು, ಮೇವು ಮುಂತಾದುವುಗಳ) ಮೆದೆ.—ರಾಶಿ.— ಒಟ್ಟಿಲು: "ಕುತ್ತಱಿ ಬಣಂಬೆ" (ಸುಂಗಲಾ. ೦೦೯-೨) ; ಕರುಳ ಮೆದೆಯಂ ಪಿಕ್ಕಿ ಪರಪಿ ನೋಡಿಯುಂ ಪಲ್ಗಳ ಬಣಂಬೆಗಳೊಳ್ ಪರವಸಂಗೊಂಡು ಮೆಟ್ಟಿಯುಂ . . . ಎಲ್ಲಿಯುಂ ದುರ್ಯೋಧನನನಱಿಸಿ ಕಾಣದೆ (ಗದಾಯು. ೬-೨೯ ಪ) ; ಪೆಣದ ಬಣಂಬೆಗಳುಂ ಕೋಟ್ಮಿದುಟ ಕೋಟ್ಕೆ ಸೆಱುಮಗುರ್ವುವಡೆಯೆ (ಸಂರಾಮಾ. ೦೩-೩೪ ಪ) ; ಪೆಣನ ಬಣಂಬೆಯನಡರ್ದು ಬಿಸುನೆತ್ತರ ಕಾಲನಿಱಿದು . . . ನಲಿವ ಕಾಗೆಗೂಗೆಗಳುಂ (ರಾಮಾಶ್ವ. ೯೭-೦೫). ೨. ಹುಲ್ಲು, ಮೆದೆ ಮೊದಲಾದುವನ್ನು ಒಟ್ಟುವ ಸ್ಥಳ : ಮಂನೆಯಗೇರಿಯುಮಂ ಬಣಂಬೆಯುಮನೊಂದು ತೋಂಟಮುಮಂ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟರು (ಕಇ. II. ೦೯-೬೫ ; 1123) ; ಪನ್ನೆರಡು ಕೆಯ್ಯ ಬಣಂಬೆ (ಬೊಂಕಶಾ. ೦೯೪೩, ಹುಕ್ಕೇರಿ. ೯-೦೦ ; 1195). Δ ಪಣಂಬೆ : ೧. ಒಡಲಿದಱಂದಮಂ ಬಗೆದು ನೋಟ್ಟೊಡೆ ಪೇಲ ಪಣಂಬೆ ಕುತ್ತಮಿರ್ಪೆಡೆ (ರರ್ಮಾಸ್ಕು. ೩-೬೭). ಬಣಬೆ : ೧. ನೆಣನ ಬಣ[ಶಾಕಾಂ. ಣಂ]ಬೆ [ಶಾಕಾಂ. ಪಳ್ಳಂ]ಗಳೊಳ್ ಕೈದುಗುತ್ತಿ ನೋಡಿಯುಂ (ಗದಾಯು. ೬-೨೯ ಪ) ; ಮಡಿದು ಕೆಡೆವ ವೀರರ ಪೆಣದ ಬಣ [ಶಾಕಾಂ. ಣಂ] ಬೆಯಂ ಮೆಟ್ಟಿ . . . ಪೊಱಮಡುವಾಗಳ್ (ಜಗಂ. ೭-೪೬ ಪ) ; ದ್ರುಪದನಂದನೆಯಳಲ ಶಿಖಿಗಿಂಧನವಲೇ ಕುರುಕುಲದ ಕರಡದ ಬಣಬೆ ಕಾದುಱುಹುವುದು (ಕುಸ್ಯಾಲಿ. ೨-೩೨). ಬಣವೆ : ೧. ಕೊಟ್ಟದ್ದು ಬರಲಿಲ್ಲ ತಂದದ್ದು ಬಿಡಲಿಲ್ಲವೊಟ್ಟಿರ್ದ ಬಣವೆಗಳುಮೊಂದಿಲ್ಲ (ಸುಲ್ಲಿಸ. ೭-೪) ; ಯಂತ್ರದ ಮುನ್ನಡೆಗೋಸ್ಕರ ಯುದ್ಧ ಬೇಕೆನ್ನುವುದು ಅರಳಿಗಾಗಿ ಭತ್ತದ ಬಣವೆಯನ್ನು ಸುಟ್ಟ ಹಾಗೆ (ಕಲ್ಪಶಾ. ೦೭೫). ಬಣೆವೆ : ೧. ಬಣೆವೆಗಳ ದಹನವು ಎಲ್ಲರಿಗಿಂತ ಅರ್ಧ ತಾಸು ಮುಂಚಿತವಾಗಿ ರಾಘಪ್ಪನಿಗೆ ಗೊತ್ತಿರುತ್ತಿತ್ತು (ಗಂಪೂಯಿ. ೫೫). ಬಳಂಬೆ : ೧. ಬಳಂಬೆಯ ತೆಱ ತಳಸಾರಿಗೆ ಕಾಣಿಕೆ ಕವಣಾಯ ದಣ್ಡದಾಯವಿನ್ತಿ ನಿತುಮಂ . . . ಕೊಟ್ಟರ್ (ಸೌಇಇ. IX-1, ೦೭೨-೦೯; 1106) ; ಪಳ್ಳದೊಳಗಣ ಬಳಂಬೆಯಂತೆ ದ್ರೋಹನ ನಿತ್ತರಣೆಯಂತೆ . . . ಲೇಸಲ್ಲದ ಸುಖಕ್ಕೆ ಪಾಯಿಸಿ ನೋಯಿಸುವಿಂದ್ರಿಯಂಗಳುಮಂ (ರರ್ಮಾಸ್ಕು. ೯-೨೩) ; ಪೆರ್ಬೆಣದ ಬಳಂಬೆ ಪೆರ್ಗ್ಗರುಳ ತಿಂತಿಣಿ ನೆತ್ತರ ಪೆರ್ಬೊನಲು (ಎಕ. VIII. ಸೊರಬ. ೦೨-೭; 1155 ?). ೨. ಬಳಂಬೆ ನಿವೇಸಣಂ ಮೂಡಣ ಬೆಳದೊಳಾಗಳೆಯೊಳಗಲಂ (ಇಆ. XIX. ೨೭೩-೩೯ ; 1054); ಒನ್ದು ಮನೆಯೊನ್ದು ಬಳಂಬೆ (ಎಇ. XIII. ೩೨೦-೨೩ ; 1126). [ದೇ. ॥ ತುಳು. ಬಣದೆ]

ಬಣಕಮೆಂಡಿಗವುಂಡ (ನಾ). ಒಬ್ಬಾತನ ಹೆಸರು (?) : ಕೆಸಂಬಳದ ಬಣಕಮೆಣ್ಡಿಗವುಣ್ಡ ತಱುಗಳ್ಗೆಳ್ಗಿ ವಂದು ವಿನಿಳಿವುಟ್ಟಿ ಕದಿ ಸತ್ತು ಸ್ವರ್ಗ್ಗಿ

ಯದಂ (ಕ್ಯಾಕ. ೧೧೪೦. ೨೯-೦೦; ೪೬೧). [?+ಗವುಂಡ (<ಗಾವುಂಡ)]

ಬಣ್ಣಕಾರ 'ಬಣ್ಣಗಾಱ' ನೋ.

ಬಣಗ$_1$ 'ಬಳಗ್ಗ' ನೋ.

ಬಣಗ$_2$ (ನಾ). ಅಲ್ಪವ್ಯಕ್ತಿ; ಕ್ಷುದ್ರ; ಹೀನ: ಬಣಗರಂದದಲೆನ್ನನೆಂದರೆ ಹಣೆಯ ಕಣ್ಣಿನ ಕಿಡಿಯ ಕೆದಱುವೆನು (ಕ್ರಕುರೇ. ೦೩-೨೯); ಬಣಗರ ತೊಲಗ ಹೇಳೆನುತೆ ಮುಮ್ಮಡಿರಾವಣನಂತೆ ನಿಂದು ಗರ್ಜಿಸಿದ (ಪೋಷಡ. ೦೩-೨೪). [ಬಣಗು$_2$ + — ಅ$_7$]

ಬಣಗಾರ 'ಬಣ್ಣಗಾಱ' ನೋ.

ಬಣಗು$_1$ (ಕ್ರಿ). ಹರಟು; ಗಳಹು (?): ಕಲ್ಲುಗೊಳ್ಳುವ ಕೆಲರು ಹಲ್ಲು ತಿಸಿಯುವ ಕೆಲರು ಬಲ್ಲವರು ಬಲ್ಲಂತೆ ಬಣಗುತಿಹರು (ಪಪ್ಪ. ೬-೪). [<ಬಣಗು$_2$?]

ಬಣಗು$_2$ (ನಾ). ೧. ಅಲ್ಪವ್ಯಕ್ತಿ; ಕ್ಷುದ್ರ; ಹೀನ: ಬಣಗಿನಂತೆ ನೇರಿತಲ್ಲದು ಬಗೆವಂದೀ ಶರೀರಂ ಕಷ್ಟಂ (ರಕ್ಷಾಪ್ರ. ೪-೦೬೩); ನಿಮ್ಮ ತಂದೆ ಕೀರ್ತಿಧರಮಹಾರಾಜಮುನೀಂದ್ರನಂ ನಿಮ್ಮ ತಾಯಿ ಬಣಗೆಂದು ಪೊಜಮಡಿಸಿದುದಕ್ಕೆ ಎನಗತಿದುಃಖಮಾದುದು (ಕ್ಷತ್ರಾಶ್ರ. ೬-೬೦ ಪ); ಬಣಗುಗಳು ಭೀಮಾರ್ಜುನರು ಕಾರಣಕ ನೀ ನಡುವಾಯಿ (ಭಾಷ್ಯಗ. ೬-೬೯). ೨. ತಿಳಿಗೇಡಿ; ಮಂದಮತಿ: ಬಣಗು ನೀನಟಕಟ ಭೀಮನ ಕೆಣಕಿ ಬದುಕಿದೆ (ಭಾಷ್ಯಪ. ೨-೨೦); ಬಣಗೆ ಬೆಲಿತಿರದೇಳು . . . ಮಣೆದು ಬದುಕುವುದುಚಿತ (ಕೌಶಾ. ೯-೬); ಉಣ ಬಂದ ಜಂಗಮಕೆ ಉಣಬಡಿಸ ಲೊಲ್ಲದಲೆ ಉಣದಿಪ್ಪ ಲಿಂಗಋಣಬಡಿಸಿ. ಕೈಮುಗಿವ ಬಣಗುಗಳ ನೋಡ (ಸಪಗಾ. ೨೦೦). ೩. ಬಡವ; ದೀನ; ದರಿದ್ರ: ಬಱದ ನಾಡಿಂದ ಬಂದ ಬಣಗುಗಳಂತೆ ಮತ್ತಿಕ್ಕುವರೋ ಇಕ್ಕರೋ ಎಂದು ಒಟ್ಟಿಸಿಕೊಂಡು ತಿಂದು ಮಿಕ್ಕುದ ಬಿಸುಡುವ ಕುನ್ನಿಗಳ ಮೆಚ್ಚುವನೆ ನಮ್ಮ ಕೂಡಲಚೆನ್ನ ಸಂಗಮದೇವ (ಪಪ್ರಶ. ೪. ೪೫೯-೬೯೯); ಪಣಮಿಲ್ಲದೆಯಟಮಟಿಸುವ ಬಣಗುಗಳಂ ನೆವವನಿಟ್ಟು ಬಿಟ್ಟು . . . ಪಣಮಂ ಸಾಧಿಸುವಳಾವಳವಳೇ ಪೆಲೆಮೆಳ್ (ಅಜ್ಜಬಿ. ೦೦-೬೬). ೪. ಪಿಶಾಚಿ; ಭೂತ: ಬಣಗುಗಳೊರ್ವ ಋಷಿಯ ಪೊಟ್ಟೆಯಂ ವಿದಾರಿಸಿ ಬಸುಱಿಗೊಳಗಿರ್ದಶನಮಂ ತೋಡಿ ತಿನುತಿರ್ಪುದುಂ (ಕ್ಷತ್ರಾಶ್ರ. ೯-೦೯ ಪ). (ಗು). ೫. ಕೀಳಾದ; ನಿಕೃಷ್ಟವಾದ: ಬಲವ ಬಲವೇ ನಿನ್ನ ಬಲವಲ್ಲದೆ ಮಿಕ್ಕ ಬಲಗಳುಂಟೆ ಬಣಗು ಗ್ರಹಗಳಿಂದ (ಕುಕೊಂಪ. ೨-೬ ಪದ್ಯ ೦); ಗುಣವೆ ಭೂಷಣವಭಿಮಾನವೆ ವಸ್ತ್ರವೆಂದೆಣಿಸಿ ಕೈವಿಡಿದಿಹವೆಮಗೆ ಬಣಗುದೊಡಿಗೆಯಾಸೆದೋಜಬೇಡ (ಪಪ್ರ. ೦೪-೬೦). ೬. ಕೆಲಸಕ್ಕೆ ಬಾರದ; ಅಪ್ರಯೋಜಕನಾದ: ಧನು ತನಗೆ ನೆಗಹಲ್ಕೆ ಕೃಷ್ಣಾಜಿನವೊ . . . ಬಣಗುವಿಪ್ರನ ಸೆಹ ನೋಡಿರೆ (ಭಾಷ್ಯಉ. ೦೬-೦೬); ಭೂಂಭುವನದ ಬಹಳ ಭುಜಬಲಭಾರಕರು ನಾವೀ ನೆಲೆಗೆ ನಮಗಾರು ಸರಿ ನಾವಂಜಲೇಕೀ ಬಣಗುಭೂಪತಿಗೆ (ಕೊರಣಾ. ೬-೦-೬೦). 'ಬಿನಂಗ್ಗು' ಪರಾ. [ದೇ.ತ. / ಮರಾ. ಭಣಗ, ಭಣಂಗ]

ಬಣಗುಕವಿ 'ಬಣಗುಗವಿ' ನೋ.

ಬಣಗುಗವಿ, ಬಣಗುಕವಿ (ನಾ). ಅಸಮರ್ಥನಾದ ಕವಿ; ಕುಕವಿ: ಭಂಡುಗವಿ ಬಣಗುಗವಿಗಳ ಕೊಂಡುಂ ಕೊನೆದೂಳುತಿರ್ಪ ಕುಕವಿಗಳಂ ತಾಂ ತೊಂಡರನೆ ಸರಿಯೆನಿಪ್ಪನೆ ಚಂಡಾಲರ ನೋಡಿ ನಗುವ ಕವೀಂದ್ರಂ (ಕುಮೋಣಾ. ೦-೨೪ ೦೦೮). **ಬಣಗುಕವಿ** : ಬಣಗುಕವಿಗಳ ಲೆಕ್ಕಿಪನೆ . . . ಕವಿ ಕುಮಾರವ್ಯಾಸ (ಭಾಷ್ಯಉ. ೦-೦೭) [ಬಣಗು+ಕವಿ$_1$]

ಬಣಗುಟ್ಟು (ಕ್ರಿ). ಬರಿದಾಗಿ ಕಾಣು; ಶೂನ್ಯವಾಗಿ ತೋರು: ಒಂದಾನೊಂದು ದಿನ ತಿರುಗಾಟವನ್ನು ನಿಲ್ಲಿಸಿದರೆ, ಆ ದಿನವೆಲ್ಲ ಹಕ್ಕಿಯು ಸ್ಮಸ್ಮ ಕರೆದಂತಾಗಿ ಮನವ ಬಣಗುಟ್ಟುತ್ತಿತ್ತು (ಕಂಬಾ. ೬೦). [ಬಣ್$_1$ + ಕುಟ್ಟು$_{11}$]

ಬಣಜ, ಬಣಂಜ, ಬಳಂಜ (ನಾ). ೧. ವರ್ತಕ; ಹರದ; ವ್ಯಾಪಾರಿ: 'ಬಣಜು' ಪರಾ. ೨. ವರ್ತಕರ ಗುಂಪು.–ಸಮೂಹ: ಬಣಜಮುಂ ನಾನಾದೇಸಿಯರುಂ ಬಿಟ್ಟಯ × × × (ಪ್ಯಕ. ೦೯೩೩. ೩-೦೬ ; ೧೧೦೦). ೩. (ವ್ಯಾಪಾರಿಯ) ಸರಕು; ಸಾಮಗ್ರಿ: ಜಾತ್ರೆಗರೂ, ಕಡುಬೆಬ್ಬಳದ ಆತುರತೆಯಿಂದ ತಂತಮ್ಮ ಬಣಜಗಳನ್ನು ಸಂವರಿಸಿಕೊಂಡ ಬೇಹಾರಿಗರೂ ಇತರರೂ . . . ಗುಡಿಯೊಳಗೆ ಸೇರಿಕೊಳ್ವರು (ಕಥಗಂ. ೦೨-೦೬). **ಬಣಂಜ** : ೩. ದೇಗುಲದುವಕರಣಂಗಳೊಳಂ ಪರದರ ಬಣಂಜದೊಳಂ ಮತ್ತಮೆಂ ದಂಡದೊಳಂ ಕವರ್ತೆಯೊಳಂ ತೀರದೆ ದಂದುಗಂಗೊಂಬುದೆನಿತಾನುಮುಂಟು (ಪಪಪಂ. ೪೫-೦೮). **ಬಳಂಜ**: ೨. ಗುಗವಾಡಿ ತೊಮ್ಮತ್ತಱುಸ್ಸಾಸಿರವುಂ ಡಾಣರವಾಡಿ ಪನ್ನಿರ್ವ್ವಾಶಿರದ ಬಳಂಜಮೆಲ್ಲ ನೆರದು (ಎಕ್ಷ. x (೬). ಮುಳಡಾ ೩೦೬-೩ ; ಸು. ೦೦೦). [< ಸಂ. ವಣಿಜ]

ಬಣಜಿಗ, ಬಣಂಜಿಗ, ಬಳಂಜಿಗ (ನಾ). ೧. ವ್ಯಾಪಾರಿ; ವರ್ತಕ: ತಳೆದ ಬಣಜಿಗರೊಳಗಾಗಿ ಭತ್ತಮುಂ . . . ಕೊಟ್ಟರು (ಸೌಇ. XVII, ೨೯೩-೯೬; 1162); ಬಣಜಿಗನ ಬಟಕೆಯಂತೆ ಕೊತ್ತಳಂ ಬಲಿದಾಗಿ ಬಲಲ್ದ ಬಡಗೊಂಡಿಯಂತಿರಾಳ್ವೀರಿಯುಟಿದು (ಅವಂಪ್ರ. ೧೦-೬೩ ಪ) ; ಬಳ್ಳಮಾನದ ಬಣಜಿಗರ ಪುತ್ರಿಯರೆ ನಾವೆಲ್ಲ ಶೂದ್ರತಿಯ ಸುತೆಯರೆ ಸಲ್ಲದೆಂಬೆವೆ ಪಟ್ಟ (ಪಪ್ರ. ೩೭-೦೨೦). ೩. [ವೀಶೈ] ವೀರಶೈವರಲ್ಲಿ ಒಂದು ಒಳಪಂಗಡ: ಬಣಜಿಗನೇಸು ಭಕ್ತನಾದರೆಯೂ ಒಟ್ಟಿಲ ಬೆನಕನ ಹಂಗ ಬಿಡ (ಪಪ್ರ. ೪೫೦): ಹಗಲು ಹಾರುವನಾಗಿ ಇರುಳು ಬಣಜಿಗನಾಗಿ ಅರಸಾರ ಮಗನಾಗಿ ತಿರುಗಿ ನಿದ್ದೆಗಡಬಿಡ (ಹಶ್ರಾ. ೬೪). **ಬಣಂಜಿಗ** : ೧. ಇಂತೀ ಧರ್ಮ್ಮಮಂ ನಗರಮಹಾಜನಂ ಪಂಚಮಂತ್ರಮಲ್ಲಿಯ ತಳೆದ ಬಣಂಜಿಗರುವೆರಸುಂ ಪ್ರತಿಪಾಳಿಸುವರು (ಸೌಇ. XX, ೬೩-೨೬; 1123); [ನೆರೆದು ಬ]ಣಂಜಿಗಮ್ಮೊದದೆ ಕಟ್ಟದೊಡ[ಂತರ] ಪಟ್ಟವರ್ತ್ತಿಯಿಂದವರ ಬ[ಬಾ]ವ್ಪೆವೆಂದನೆ (ಸೌಇ. XV. ೨೩೩-೩೦; 1216); ಬೇರದವಸರದಿಂ ಮೆಯ್ದೊಗೆದು ಬಣಂಜಿಗರ ನೆರವಿ ತಮತಮಗೆ ಪೊಸವರದಿನೆಣಕೆಯೊಳಿರೆಯುಂ (ಕಾಮಾಕ್ಷ. ೨೨-೦೯). ೨. ಸಂಗರರಂಗದೊಳ್ ವೆಲಮ ಕಮ್ಮೆ ತೆಲುಂಗ ಬಣಂಜಿಗರ್ ಕರಂ ಭಂಗದೆ ಬೆಂಗುಡರ್ (ಪಪ್ರ. ೩-೩೦). **ಬಳಂಜಿಗ** : ೧. ಕರಮುದ್ದ ವೃತ್ತತೆಯಿಂ ಬಳಂಜಿಗರ ಪೊಂಗಂ ಮಯ್ಮಿಗಂ (ಕೊಂಪಣಾ. ೦೯೩೩. ಕಾಪೋ. ೦೨೯-೨೨; 941); ಇ ಧರ್ಮ್ಮಮಂ ದಯಸಿಂಗಸೆಟ್ಟಿಯು ವಲ್ಲಿಯ ತಳೆದ ಬಳಂಜಿಗರು ನಡೆಯಿಸುವರ್ (ಸೌಇ. XX, ೩೦-೨೬ ; 1088) ; ಸೊಂಟಿಗೆಯಕ್ಕಿ ಮತ್ತಂ ತಳೆವ ಬಳಂಜಿಗರುಂ ನಾನಾವೇಷಿಗಳು ವಿಂಟ್ಟು ಕೊಟ್ಟರ್ (ಸೌಇ. IX-i, ೦೭೨-೦ ; 1106).

[ಬಣಜು + — ಇಗ / ಸಂ. ವಣಿಜಕ]

ಬಣಜಿಗವಾಗ (ನಾ). ವರ್ತಕರಿಗೆ ಸೇರಿದ ಭಾಗ (?): ಅಂತಾ ಮತ್ತರಾಜಿಕ್ಯಂ ಸೀಮಾಸಂವು[ಬ]ಂಧವಾಪುದೆಂದಡೆ . . . ಪುಲಸ್ಥಾನ ದೇವರ ಕಯಿಂ ತೆಂಕಲು ಬಣಜಿಗವಾಗದಿಂ ಮಾಡಲು ಬಾಚಗಾವುಂಡನ ಹಾಗದಿಂ ಪಡುವಲು (ಕೊಂಶಾ. ೦೪-೭೭ ; 1106). [ಬಣಜಿಗ+ಬಾಗ]

ಬಣಜಿಗಿತಿ 'ಬಣಜಿಗಿತ್ತಿ' ನೋ.

ಬಣಜಿಗಿತ್ತಿ, ಬಣಜಿಗಿತಿ (ನಾ). ವರ್ತಕರ ಹೆಂಗಸು: ಸೋಜೊಮ್ಮೆ ಬಣಜಿಗಿತ್ತಿಯು ಕಾಲು ಕೀಲನೆನ್ನಿಡಿ ಕೆಡಿಸಲದೇಕೆ (ಸಮ್ಮಶಾ. ೪-೭೬). **ಬಣಜಿಗಿತಿ** : ನಮ್ಮ ಗೆಣೆಕಾತಿ ಹೊನ್ನೂರ ಬಣಜಿಗಿತಿ . . . ನಮ್ಮ ಹಂಬಲವ ಮಾರತಳೆ (ಪಾಡಕ. ೭೯). [ಬಣಜಿಗ+ — ಇತ್ತಿ]

ಬಣಜಿಸು, ಬಣಂಜಿಸು (ಕ್ರಿ). ವ್ಯಾಪಾರ ಮಾಡು; ಕ್ರಯವಿಕ್ರಯ ಮಾಡು: ಆಂ ತೆಂಕಣಾಡತ್ತ ಬಣಜಿಸಿ ಧನಾಜಿತೆದು ಬಂದವೆನಂದು ಪೆತ್ತತಾಪ್ತರ್ಗಳಿಗೆ . . . ಬಿನ್ನೈಸಲು (ಸೋಡಿ:೨. ೦-೮೬); ಭಕ್ತಸೋರ್ವ

ನೂರೂರ್ಗಳೊಳ್ ಬಣಜಿಸಿರುಳಾಗೆಯಾತಂ ಬಂದಾ ಪುರವ ಪೊಕ್ಕು ನೋಡಲೆಲ್ಲಿಯ ಜಿನನ ಮಂದಿರವೆ ಘನವಾಗಿ (ಸಿದ್ಧೇಪು. ೭-೬೪). ಬಣಂಜಿಸು : ಬಣಂಜಿಸುವವಂ ವಿಪಣಿಕಂ ನೈಗಮಂ ಪಣಿಜನಕ್ಕು (ಮಂಗರಾ. ೦೦೨-೦). [ಬಣಜು + — ಇಸ್ಸು]

ಬಣಜು, ಬಣಂಜು, ಬಳಂಜು, ಬಟಿಂಜು (ನಾ). ವ್ಯಾಪಾರ; ಮಾರಾಟ; ಕ್ರಯ ವಿಕ್ರಯ : ಬಣಂಜು - ಬಣಜು (ಶಬ್ದಾಸು. ೮೦ ಪ್ರಯೋ); ಬಣಜೆತಮಗೆ ಸಾಜಮಪ್ಪ ಕಜ್ಜಮೆಂದೆಣಿಸಿ . . . ಮಾರಾಟದ ಬೇಹಾರಮಂ ನಡೆಯಿಸುವ ಕಡುಜಾಣೆಯರ್ (ಪುರಾಶ. ೦೯೭-೦೬). ಬಣಂಜು: ಬೇಹಾರಂಗೆಯ್ವ ಪಡಂಗುಪರದರ ಕಲಕಲದಿಂ ತೀವಿದ ಬಣಂಜಿನ ಘಟ್ಟಮುಮಂ ನಿಟ್ಟಿಸಿ (ಪುರಾಶ. ೦೯೭-೨೬). 'ಬಣಂಜುಧರ್ಮ' ಪರಾ. ಬಳಂಜು : 'ವೀರಬಳಂಜು' ಪರಾ. △ ಬಟಿಂಜು : 'ವೀರಬಟಿಂಜು' ಪರಾ. [ಬಣಜ + — ಉ$_4$]

ಬಣತ 'ಪಣತ' ನೋ.

ಬಣತಿಗೆ 'ಬಂದಣಿಕೆ' ನೋ.

ಬಣದುರ್ಗಿ (ನಾ). ಒಂದು ಬಗೆಯ ಮರ : ಬಣದುರ್ಗಿ —ಧಾರವಾಡ ಜಿಲ್ಲೆಯಲ್ಲಿ ಅತಿ ಸಾಧಾರಣವಾದದ್ದು. ಇದರ ಎಲೆಯ ಮೇಲೆ ಹಳದೀಬಣ್ಣದ ಅಂಟು ಮೆತ್ತಗಿರುತ್ತದೆ (ಕಭಾಗ. ೪೪). [?]

ಬಣಬಣ 'ಬಣ್ಣ$_1$' ಪರಾ.

ಬಣಬೆ 'ಬಣಂಬೆ' ನೋ.

ಬಣವೆ 'ಬಣಂಬೆ' ನೋ.

ಬಣಿತೆ (ನಾ). ೧. ಮಾತು; ಉಕ್ತಿ; ವಚನ : "ಬಣಿತೆ—ಭಣಿತ (ತಿ) = ಮಾತು" (ತದ್ಭಕೋ. ೨೮); ಆನು ಪೇಳಿದ ಕಾರ್ಯದ ಬಣಿತೆಗಿನ್ನಾವುದುತ್ತರ (ಸೌಂದಪು. ೪-೭೬); ನೆನಹು ಮಾತ್ರದಿಂದೆ ಜಗವ ಸೃಷ್ಟಿಸಿದೆನೆಂಬ ಭಾವ ಬಣಿತೆಯವನಲ್ಲ (ಸಿದ್ಧೇಪ. ೮-೨೫). ೨. ಚಾತುರ್ಯದಿಂದ ಕೂಡಿದ ಮಾತು; ಜಾಣ್ಣುಡಿ; ಚತುರೋಕ್ತಿ : ಬಾಣದೊಳ್ಬಣಿತೆಯೊಳ್ . . . ಪರಾಕ್ರಮದ ಪುಥದೊಳ್ಕಾಣಿಸವರಿರ್ವರ್ಗೆ ಸಮರಾದ ಕಲಿಗಳಂ (ಜೈಮಿಭಾ. ೨೨-೦೨). ೩. ಹೇಳಿದುದು; ಉಕ್ತವಾದುದು : ಎಣಿಸಲಿವು ತತ್ಸಮವೆನಿಪ್ಪ ಶಬ್ದಂಗಳಿವನಣಿಯರಂ ಲಾಕ್ಷಣಿಕ ಕವಿಮಾರ್ಗದೊಳೆ ತಂದು ಬಣಿತೆಯಾಗಿರ್ಪುದಾಹರಣಂಗಳಿಂ ತಿಳಿದುಕೊಳ್ವುದು (ಶಬ್ದಮಂ. ೭೮); ಕರಣಿಕೆಯನಿತ್ತು ಸಿಸ್ತಿನ ಬರಹಗಳಿಂದಾಯಬೀಯಮಂ ಬಣಿತೆಗೆ ತಂದುರುದುರ್ವ್ರಯಂಗಳಂ ತಾಂ ವಿರಚಿಸದಾರ್ಜಿಸಿದನೊಪ್ಪುವಗಣಿತಧನಮಂ (ಕಳಸ್ಕ. ೬-೩೩). ೪. ಮೂದಲಿಕೆ: ಶಬರನಸುಗೊಂಡು ಪೋಪೆಯೊ ನಿಲ್ಲುನಿಲ್ಲೆನುತ ಕರುಚಿಟ್ಟೆಯಂ ಬಣಿತೆಯಿಂ ಬಾಯೊಳಿಡೆ ತಲೆಯೊಳದು ಛಟ್ಟುಗಿಯೆ (ಶಶುಪು. ೨-೦-೨೭); ಪೊಣರಿ ಚೇಳೇಳೆಂದು ಮುಡುಹ ತಟ್ಟುತ ತೊಡೆಯ ಬಣಿತೆಯಿಂ ಚಪ್ಪರಿಸಿ ಪುರ್ಬುಗಳ ಗಂಟಿಕ್ಕುತೆಣಿಕೆಗೊಳ್ಳುತ ಮೀಸೆಯಂ ತಿರ್ದಿ ಕಣ್ಣ ಕೆಂಚಲೆ ಮಾಡಿ ಕುಬುಬಿರಿಯಲು (ಶಶುಪು. ೩-೭-೩೪). ೫. ಚತುರತೆ; ಜಾಣ್ಮೆ : ಗುಣದೊಳಗೆ ಶೀಲದಲಿ ಮಾತಿನ ಬ[ಪಾಠಾಂ. ಭ] ಣಿತೆಯಲಿ . . . ಶರ್ವಾಣಿ ರತಿಯರಿಗೆಣೆಯೆನಿಪ ಸುಂದರಿಗೆ ಮಿಕ್ಕಿನ ಬಣಗುಸತಿಯರು ಸರಿಯೆ (ಪಳಸ. ೧-೩೪); ಬಣಿತೆಯಿಂ ರುದ್ರಾಕ್ಷೆ ಪವಳ ಮೌಕ್ತಿಕದೆ ಕೇಪಣಿಸಿರ್ದ ಕಂತೆ (ಸಿದ್ಧೇಪು. ೧೬-೪೮). ೬. (ಆಲಂ) ಆಕರ್ಷಣೆ; ಅಂದ; ಚೆಲುವು (?) : ಕುಣಿಸುವತಿಸದ್ಗುರುನಿತಂಬದ ಮಣಿಯ ಶ್ರುತಿ ಕುಂಡಲದ ಕಾಂತಿಯ ಬಣಿತೆಯೊಳು ಜಗಜಗಿಸಿ ರಂಜಿಸಿತಾ ಮಹಾಶಕ್ತಿ (ಅಂಬಿಕಾ. ೦೯-೬೦); ಸತ್ಪದ್ಮಪೀಠಮದು ಬಣಿತೆಯಾಗಿರ್ದುದಾ ಸಿಂಹಾಸನಾಗ್ರದುರುಮಧ್ಯದೊಳನಂತಸೊಬಗಿಂ (ಕುಮಾಪು. ೦-೫೭). ೭. [ಸಂಗೀತ] ಹಾಡಿನ ಸೊಗಸು (?) : ಒಂದು ಪೊಸ ಕೊಳಲಂ ಕೊಳುತ್ತಂದು. . ಬಣಿತೆ ಗಮಕಮನುಗುಳೆ ಗಮಕವರಿದಂತೊಡರೆ ಅಣಕ ನಯದೊಳ್ಮೊಳೆಯೆ . . . ಪಂಚಮುಖದೊಳಗೆಲ್ಲ ಕೊಳಲ ದನಿ ತೊಳಗುತಿರೆ (ಆನಾರ. ಹ. ೦೩೦-೨೩); ಇಂಪು ಸೊಂಪು ಬಣಿತೆ ಬೆಡಂಗು. . .ಕಾಲಮಾನ ಸ್ಥಾನವಿಧಿಯೊದವೆ ಬಾಲೆಯರ್ ಕೇಳಿಸಿದರಾರ್ಯನಂ ರಸಮೊಸರ್ವ ವೋಲ್ ಬೆರಲೆರಡಱಂ (ಪದ್ಮರಾ. ೬-೬೦); ಧಾತು ನಯ ನೇವಣ^3 ಬಜಾವಣ^{3}ಯ ಬಣಿತೆಯಿಂ . . . ಭೂತೇಶನಂ ಮೆಚ್ಚಿಸಿದನಮಲ ತುಂಬುರಂ (ಲಂಗಪು. ೩-೪೭). [<ಸಂ. ಭಣಿತ]

ಬಣಿತೆಗಾಱಿಕೆ (ನಾ). ಮಾತಿನ ಚಾತುರ್ಯ : ಬಣಿತೆಗಾಱಿಕೆಯೊಳುಂ ಮರುಳ ವೇಷವ ತೊಟ್ಟು . . . ಪ್ರಭುದೇವ ಬರಲು (ಪ್ರಶುಪು. ೯-೩೪). [ಬಣಿತೆ + — ಕಾಱ + — ಇಕೆ]

ಬಣೆವೆ 'ಬಣಂಬೆ' ನೋ.

ಬಣ್ಣ, ಪಣ್ಣ$_2$, ಫಣ್ಣ$_2$, ಬಣ್ಣ$_2$, ವಣ್ಣ (ನಾ). ೧. ರಂಗು; ವರ್ಣ : "ಸಲೆ ಬಣ್ಣಂ ವರ್ಣದೊಳೆ" (ಕರ್ಣಾನಿ. ೪೪); ಶುಭಲಕ್ಷಣಾಂಕಿತಮಾಗಿ ಕೆಂದಾವರೆಯ ಬಣ್ಣದಂತಪ್ಪ ತಳಮುಮಂ ಕಂಡು (ಪಡ್ಡಾರಾ. ೦೪೮-೦೮); ಬಣ್ಣಂ ಪೊನ್ನ ಬಣ್ಣಕ್ಕೆಣೆಯೆನೆ ಗರುಡಂ ವಾಹಮಾಗಿರ್ಪ ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳನಲೆದಾಟಿಕ್ಕೆ ವಿಕ್ರಾಂತದಿಂದಂ (ಆದಿಪು. ೦-೭); ಸುಣ್ಣದ ತುಯ್ಯಲ ಬಣ್ಣವೊಂದೆ ಎಂದರೆ ನಂಟತನಕ್ಕೆ ಉಣ್ಣಬಹುದೆ (ಬಸವ. ೦೨೦). ೨. ಕೆಂಪುಬಣ್ಣ; ಕೆಂಬಣ್ಣ 'ಬಣ್ಣದುಟಿ' ಪರಾ. ೩. ಚಿತ್ರ, ಗೋಡೆ ಮುಂತಾದುವಕ್ಕೆ ಹಚ್ಚಲು ಬಳಸುವ, ಬೇರೆ ಬೇರೆ ವರ್ಣಗಳಲ್ಲಿರುವ ದ್ರವಪದಾರ್ಥ : ವಸ್ತುಗಳ ಮೇಲ್ಮೈಗೆ ಸಾಪೇಕ್ಷವಾಗಿ ತೆಳುಪೊರೆಯಲ್ಲಿ ಹಚ್ಚಬಹುದಾದ . . . ಆರ್ದ್ರ ದ್ರವಪದಾರ್ಥವೇ ಬಣ್ಣ (ಪೇಂಟ್) (ಕವಿಕೋ. IX. ೬೨೦). ೪. ಬೇರೆ ಬೇರೆ ಬಣ್ಣಗಳಿಂದ ಕೂಡಿದ ಚಿತ್ರ; ವರ್ಣಚಿತ್ರ : ಬಿತ್ತಿಯೊಳಂದಂಬಡೆವಂತು ಬಚ್ಚಿಸಿದ ಬಣ್ಣಂಗಳಂ ಬೇಱೆವೇಱೆ ನೋಡಿ ಮೆಚ್ಚುತಿರ್ಪಾಗಳ್ (ಕದ್ಮಿಕಾ. ೬೩); ಬಣ್ಣವನು ಬರೆವ ಸತಿ ಹೊಲ್ಲ (ಸರ್ವಜ್ಞ. ೦೬೪೦). ೫. ರಂಗುರಂಗಾದ ವಸ್ತ್ರ, ಸೀರೆ ಮುಂತಾದುವು : ಕಕ್ಕರವಟಿಯಿಗೆಯ ಚಿತ್ರಾವಟಿಯ ಪಟಿವೆಡೆಯ ತುಟಿವೆಡೆಯ ನೆಟಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್ (ಆದಿಪು ೪-೩೪ ವ); ಬಣ್ಣವನುಡರು ಬಂಗಾರಗಳನು ತೊಡರುಣ್ಣರಂಗವನೋಸರಿಸರು ಕಣ್ಣ ಸವಿಗೆಯಾತನ ರೂಪ ನೋಡಿದ ಹೆಣ್ಣೆಲ್ಲರಾ ಪುರದೊಳಗೆ (ಪೇಮಿಸಂ. ೬-೪೦); ಬಣ್ಣವಿಲ್ಲದ ಮದುವೆ ಹೆಣ್ಣೆಲ್ಲದವನ ಸಂಸಾರ ಮಳಲೊಳಗೆ ಎಣ್ಣೆ ಹೊಯಿದಂತೆ (ಸರ್ವಜ್ಞ. ೦೬೮೪). ೬. ರಂಗುರಂಗಾದ ಹೂವು, —ಪುಷ್ಪ : 'ಬಣ್ಣಗೋಲ್', 'ಬಣ್ಣಗೋಲ' ಪರಾ. ೭. ಬಗೆ; ವಿಧ; ಪ್ರಕಾರ : ಇಂಬಾಗಿರೆ ಮುದದಿಂ ಪಲವುಂ ಬಣ್ಣದ ಭಕ್ಷ್ಯರಾಶಿವೆರಸಾಕಂಠೋಷ್ಠಂಬರಮುಂಡು (ಪಂಪಶಂ. ೦೮೫ ೨೫). ೮. ಸ್ವರೂಪ; ನಿಜರೂಪ : ಪಾಪಪುಣ್ಯಮೆಂಬೆರಡಱ ಬಣ್ಣವಾವುದು ಅವಂ ಬಲ್ಲವರಾರ್ (ಧರ್ಮಪ. ೩-೧೫ ವ); ಆಕೆಯ ಬಣ್ಣ ಬೆಳಗಲು ತಾಯಿಮಹಿಮೆಯನು ನೋಡಿರೆಂದೆಲ್ಲಾ ಬಣ್ಣಿಸಲು (ಬಿಜ್ಜಪು. ೬-೦೮); ದುರಾಸೆಗೆ ಬಿದ್ದವರ ಬಣ್ಣ ಅವರು ಗುರುತಿಸಿದ್ದು ಈಗಲೇ (ಹೊಸಕ್ಷಿ. ೨೬). ೯. ಅಂದ; ಚೆಂದ; ಚೆಲುವು : ಕಿಸುಗಾಡ ನೆಲಗಳೆಳದಳಿರ ಬಣ್ಣಮಂ ಕೆಯ್ಕೊಂಡು ವಿರಹಿಗಳ ಮನಮನೊನಲಿಸುವಂತೆ ಜಲಜಲನೆ ಪರಿವ ಜರಿವೊನಲ್ಗಳುಮಂ ಕಂಡು (ಪಂಪಭಾ. ೭-೨೫ ವ); ಬಾಲೆಯರ ಬಣ್ಣಕ್ಕೆ ಸೋಲದೆ ಕಾಳುಶರೀರವೆಂಬ ಒತ್ತರಂಗೊಳ್ಳದೆ. . .ಮಲ್ಲಿಕಾರ್ಜುನನಲ್ಲಿ ಸರ್ವಾಂಗದಲ್ಲಿ ನಿರ್ಲೇಪವಾದುದೇ ಶರಣಸ್ಥಲ (ಪೋಳಿಮಾ. ೦೦೦-೩೯೭). ೧೦. ಹೊಳಪು; ಕಾಂತಿ: ಪೊನ್ನಂ ಬೆಳಗುವವೋಲ್ ಕರ್ಬೊನ್ನಂ ಬೆಳಗಿದೊಡೆ ಬಣ್ಣಮೇನೆಸೆಗುಮೆ (ಸಮಪ. ೦೪-೩೨); ದ್ವಿಗುಣಿಸೆ ಬಣ್ಣವಿಂದುಮಣಿಮಂಡಪಕಾಂತಿಗಳಿಂ

ಮುಗುಳ್ತ ಮಲ್ಲಿಗೆಗೆ (ಪುಷ್ಕಪು. ೨-೭೦). 'ಬಣ್ಣಂಗೆಡು' ಪರಾ. ೧೧. ತೋರಿಕೆ; ಸೋಗು; ನಟನೆ: 'ಬಣ್ಣಗಾಱ', 'ಬಣ್ಣಗಾಱಿಕೆ' ಪರಾ. ೧೨. ತೋರಿಕೆಯ ಮಾತು; ಬೂಟಾಟಿಕೆಯ ನುಡಿ; ಬಣ್ಣಾಚಾರ : ಚಕ್ರಿ ಕಳುಹೆ ಬಂದು ಬಣ್ಣವ ನುಡಿಯುವೈ ವಕ್ರವನಱಿದೆ ಹೋಗು (ಶರಸ. ೪೯-೩೦). ೧೩. ಗುಣಗಾನ; ಸ್ತುತಿರೂಪವಾದ ಹಾಡು; ಬಣ್ಣವಾಡು : ಕಿನ್ನರಿಯರ್ ಪಾಡುಗೆ ನಿನ್ನದೊಂದು ಪಲವುಂ ಬಣ್ಣಂಗಳಂ (ಪಂಪಭಾ. ೦೪-೩೬). ೧೪. ಯೋಗ್ಯತೆ; ಸತ್ತ್ವ : ನಾನು ಚೌಡಿಯ ಮಂತ್ರವನ್ನು ಜಪಿಸದಿದ್ದರೆ ಆಗ ಕಾಣುತ್ತಿತ್ತು ನಿಮ್ಮ ಧೈರ್ಯಸಾಹಸದ ಬಣ್ಣವೆಷ್ಟೆಂಬುದು (ಅಂಬಿಕೆ. ೬). 'ಬಣ್ಣಗಾಣ್' ಪರಾ. ೧೫. ಮೇಲು ಮಟ್ಟಕ್ಕೆ ಸೇರಿದವನು; ಮಿಗಿಲಾದ ವ್ಯಕ್ತಿ : ಬಿಗಿಪುಗಿಡದಮರ್ದು ಬಗೆಗೆಸೆವ ಗದ್ಯವಿರಚನೆಗೆ ಬಾಣನಿ[ಂ]ದಂ ಬಣ್ಣಂ...ನಾಗವರ್ಮಕವೀಂದ್ರಂ (ವರ್ಧಮಾ. ೦-೨೬). ೧೬. ಚಿನ್ನ, ವಜ್ರ ಮುಂತಾದುವುಗಳಲ್ಲಿರುವ ಶುದ್ಧತೆಯ ಪರಿಮಾಣ; ಕ್ಯಾರೆಟ್ಟು : ಕಟ್ಟಣೆಯೊಳಗಣ ಕಾಂಸ್ಯದಂತೆ . . . ಚಿನ್ನದೊಳಗಣ ಬಣ್ಣದಂತೆ . . . ಎನ್ನಲ್ಲಿ ಭಿನ್ನವಿಲ್ಲದೆ ಇರ್ದೆಯಲ್ಲಾ ಸೌರಾಷ್ಟ್ರಸೋಮೇಶ್ವರಾ (ಅದವ. ೨-೬); ಪದಿನೇಱು ತೂಕದ ಗಟ್ಟಿ ಹತ್ತುವರೆ ಬಣ್ಣಂ ಹತ್ತು ಗದ್ಯಾಣ ತೂಕದೆಂಟುಂ ನೆಱೆ ಹಾಗ ಬಣ್ಣದ ಪತ್ತೊಂಭತ್ತುಂ ಪೊನ್ನು ತೂಕ ಮತ್ತದು ಮತ್ತಂ ಪದಿಮೂಱು ಬಣ್ಣವನೆ ತಾನಾಗಿರ್ದುದು ಪೊನ್ನೆಲ್ಲಮಂ ಪದುಳಂಗೂಡಿ ಸಮಂತದಂ ತರಂ ಸಲು ಬಣ್ಣಮಂ ಪೇಱಿದಂ (ವ್ಯವಹಾ. ೬೨-೨೪); ಒರೆಗೆ ಬಣ್ಣಕ್ಕೆ ಬೆರಸಿ ವೇದೋಚ್ಚರಿತ ಧರ್ಮವನಱಿಹಿದನು ಭೂಸುರಗೆ ಧರ್ಮವ್ಯಾಧನೆಂಬನ ಕಥೆಯ ಕೇಳು (ಕುಮ್ಮಾಲಿ. ೦೪-೪೮). ೧೭. ಯೋಗ್ಯವಾದುದು; ಉಚಿತವಾದುದು ; ತಕ್ಕುದು : ನೀನೇಕೆ ಮರುಳಪ್ಪುದಣ್ಣ ಈಗ ಜಾನಕಿಯನು ಬಿಟ್ಟುಕೊಡುವುದೇ ಬಣ್ಣ ((ಪಾರ್ತಿಸು. ೮೬). ೧೮. ಜಾತಿ ; ವರ್ಣ : ಮಿಕ್ಕಾದ ಮೂಱುಂ ಬಣ್ಣದವರಂ ಚೆನ್ನಾಗಿ ದಂಡನೆಗೆಯ್ದು ರಾಜ್ಯಮಂ ಪರಿಪಾಲನೆಯನೆಸಗಬೇಕು (ಧಾರಶಾಂ. ೬೫-೦೪); ನಾವು ಅಕಸಾಲೆಗಳು ಕೋಮಟಿಗರು ಮುನ್ತಾದ ಹದಿನೆಣ್ಟುಬಣ್ಣದಲ್ಲೂ ಯಲು ವಾಲಗ ಮಾಡಿದಾಗ (ಎಕ. XIV, ಶ್ರೀರಂಗ. ೦೮೦-೧೫; 1801). ೧೯. [ಸಂಗೀತ] ಇಂಪು : ಭಣಿತೆ ಬೆಡಂಗು . . . ನೇವಣೆ ಕಣಿ ಬಣ್ಣದೊಡ್ಡವಣಿ . . . ಕಳೆಯೆಂಬವಂ ಮೆಱೆದು ಬಾಜಿಸಿದಂ ಮುರವೈರಿ ವಾಸಮಂ (ಜಗದಿ. ೫-೩). ಪಣ್ಣ: ೧೮. ತಿರುಮಲರಸರಾದ ಮದ್ದ ಹೆಗ್ಗಡೆಯವರು ಅವರ ನಾಳಿನವರು ಗಣ ಪಣ ಸಾವನ್ತರು ಕಾಪಿನ ರಾಜ್ಯವನು ಪ್ರತಿಪಾಳಿಸುತ್ತಿರ್ದ್ದ ಕಾಲದಲು (ಎಇ. XX. ೬-೨೬; 1556) ; ನಮ್ಮ ದೇಶದಲ್ಲಿರುವ ಪಣಗಳು – ಹದಿನೆಂಟುಪಣ, ಒಂಬತ್ತು ಪಣಗಳು —ತಮ್ಮಲ್ಲಿ ದೇಶದ ಪ್ರಜೆಯ ಬಹುಭಾಗವನ್ನು ಒಳಕೊಂಡಿವೆ . . . ಇವುಗಳನ್ನು ಬಟ್ಟು ಮಿಕ್ಕವೆಲ್ಲ ಈ ಪಣದ ವ್ಯವಸ್ಥೆಗೆ ಒಳಪಟ್ಟಿವೆ (ಕರ್ಣಾಸಂ. ೯). 'ಪಣಕಟ್ಟು' ಪರಾ. ಫಣ್ಣ : ೧೮. 'ಫಣಕಟ್ಟು', 'ಫಣಸ್ತ' ಪರಾ. ಬಣ್ಣ : ೧೮. ಬ್ರಾಹ್ಮಣ ಬ್ರಾಹ್ಮಣೇತರ . . . ಎಂದು ಮುಂತಾದ ಬಣ ಬಣಗಳೊಳಿಗಿನ ಸಂಘರ್ಷಣೆಗಳು ಬ್ರಿಟಿಶರ ಪ್ರೇರಣೆಯಿಂದ ಮೆಲ್ಲಗೆ ತಲೆಯೆತ್ತಿದುವು (ಯುಕ್ಷಪ್ರ. ೨೦). ೨೦. ಪಕ್ಷ; ಪಂಗಡ; ತಂಡ : ಸ್ವಾರ್ಥಪರಾಯಣರ್ ಬಣಗಳಂ ಮಾಡಿ ಬಿಡದೆ ಕೆಡಿಸುವರೂರನು (ಮಹಾಂತೇ. ೦೦-೬); ಹಗೆಗಳ ಬಣದವರು ಕೈಯೊಳಗೆ ಸಿಕ್ಕರೆ ಅವರನ್ನು ಸಂರಕ್ಷಿಸಬೇಕು (ಮುಂಬಯಿ. ೫-೦೨೨); ಇಕ್ಕಡಿಯ ಬಣದವರೂ . . . ಜೀವದ ಪರಿವೆಯಿಲ್ಲದೆ ಕಾದಿದೆವು (ಕಮಂ. ೪). ವಣ್ಣ : ೧. ಪ್ರಿಯಸೇನೆಯುಂ ಕೆಂದಾವರೆಯ ವಣ್ಣದೊಳೋರಂತಪ್ಪ ಮೆಯ್ಯನೊಡೆಯ ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದಳ್ (ಪಡ್ಡಾರಾ. ೩೬-೬); ಮಿಸುನಿಯ ವಣ್ಣಕೆ ನಾನಾಬಗೆ ಪಟಕ ಸುಭೈಷಜ್ಯಕೆ ನರರ ರಸನೆಯ ಸವಿಗೆ ನಾವೆಂದಾಗ ಫಲ ಸಹಿತೆಸೆವ ಜಂಬೀರಗಳಿಹುವು (ಕಂನವಿ. ೫-೮೪).

ಬಣ್ಣವಣ್ಣ, ಬಣ್ಣಬಣ್ಣ (ದ್ವಿರುಕ್ತಿ) : ಸ್ತ್ರೀಕುಚಕುಂಭಕುಂಕುಮ ರಜಃಕಲ್ಲೋಲದಿಂ ಬಣ್ಣವಣ್ಣದ ಚೆಲ್ವಂ ಗೆಡೆಗೊಂಡು ಚಿತ್ರಿತ ಪತಾಕಾಲೀಲೆಯಂ ತಾಳ್ದಿ ನಿಂದುದು ಗಂಗಾನದಿ (ಆದಿಪು. ೦೦-೦೫೦) ; ಬಣ್ಣಬಣ್ಣದ ಪೂಗೊಯ್ದು ಹೊಂಬಾಳೆಯ ವರ್ಣದೆ ಪೊಟ್ಟಣಗಟ್ಟಿ . . . ಕಾಂತೆಯರೊಡತಿಗೆ ಬಿನ್ನಣಗೆಯ್ದು ತೋಱಿದರು (ಮೋಹತ. ೨೪-೬೮); ಬಣ್ಣಬಣ್ಣದ ಬಟ್ಟೆಯ ಚೂರುಗಳನ್ನು ನೇರವಾಗಿ ಕತ್ತರಿಸಿ ಸೇರಿಸಿ ಹೊಲಿದ ದಟ್ಟಗಳನ್ನು ನೆಲದ ಮೇಲೆ ಎಲ್ಲೆಲ್ಲೂ ಹಾಸಿದಂತೆ ಕಾಣಿಸುವ ಹೊಲಗದ್ದೆಗಳು (ಪಂಟಿರು. ೦೩೦). ಬಣ್ಣದ ಕೋಲು = (ಕೋಲಾಟವಾಡಲು ಬಳಸುವ) ಬಣ್ಣ ಬಳಿದ ಕೋಲು : ನಾಯಿ ಬಡೀಲಿಕ್ಕೆ ಬಣ್ಣದ ಕೋಲೇ ? (ಗಾದೆ). ಬಣ್ಣದ ಬೀಸಣಿಗೆ = ೧. ರಂಗು ಹಚ್ಚಿದ ಬೀಸಣಿಗೆ : ಆ ಅಂಗಡಿಯಲ್ಲಿದ್ದ ಬಣ್ಣದ ಬೀಸಣಿಗೆಗಳೆಲ್ಲಾ ಒಂದೇ ದಿನದಲ್ಲಿ ಮಾರಾಟವಾಗಿ ಹೋದವು (ರೂಢಿ). ೨. (ಆಲಂ) ಒಯ್ಯಾರಿ; ಒನಪುಗಾತಿ : ಬಣ್ಣದ ಬೀಸಣಿಗ್ಯಂತೆ ಹೆಣ್ಣು ತಿರುಗೋದು ಕಂಡು ಕಣ್ಣುಸನ್ನೆಯ ಮಾಡಿ ಕಣ್ಣಲಿ ಕೆಂಡವಾ ಚೆಲಿಕೊಂಬೆ ಮನವೆ (ಪುರಂದ. ೪-೫೨-೦). ಬಣ್ಣದ ಮಾತು = ತೋರಿಕೆಯ ನುಡಿ ; ಬೂಟಾಟಿಕೆಯ ಮಾತು : ಕಣ್ಣು ಕಾಣದ ಹಕ್ಕಿ ಹಣ್ಣ ಮೆಲಬಂದಡೆ ಹಣ್ಣು ಹಕ್ಕಿಯನುಂಗಿ ಉಗುಳದಿನ್ನೆಂತೋ ಸಣ್ಣ ಬಣ್ಣದ ಮಾತಿನ ಅಣ್ಣಗಳೆತ್ತ ಬಲ್ಲರು (ಸರ್ವವ. ೨೬-೦೩೦): ಪತಿಗೆ ಬಣ್ಣದ ಮಾತನಾಡ್ಯಾಳೊ ಅವಳು ಮಿತಿಯಿಲ್ಲದೆ ಪೆಚ್ಚ ಮಾಡ್ಯಾಳೊ (ಪುರಂದ. ೦-೦೬೨-೦). ಬಣ್ಣದ ಸೀರೆ = ಚಿತ್ರ ಬರೆಯಲು ಉಪಯೋಗಿಸುವ ವಸ್ತ್ರ : ಬಣ್ಣದ ಸೀರೆ ಮೇಘವಣ್ಣಗೆಯ ಝಳಂಬಮೆಂಬಿವಳಪಟ್ಟಿರೆ ಭೂಭುಜನಿರ್ದ ಚಿತ್ರಶಾಲೆಗೆ ನಡೆತಂದನಂದು ನವಯೌವನನೊರ್ವನಪೂರ್ವಚಿತ್ರಿಕಂ (ಮಲ್ಲಪು. ೫-೯೯). ಬಣ್ಣಬಚ್ಚಣಿಯ ಮಾತು – ತೋರಿಕೆಯ ಮಾತು ; ಸೋಗಿನ ನುಡಿ : ಬಣ್ಣಬಚ್ಚಣಿಯ ಮಾತು ಕಲಿತು ಹೊನ್ನು ಹೆಣ್ಣು ಮಣ್ಣಿಗಾಗಿ ಅನ್ನವನಿಕ್ಕುವರ ಪ್ರಸಂಗವ ಹಡೆಯಬಂದ ಗನ್ನಗಾಱಂಗೇಕೆ ಅಱಿವು (ಮೋಳಿಮಾ. ೬೪-೩೩೪). ಬಣ್ಣ ಬದಲಾಯಿಸು = ೧. ರಂಗನ್ನು ಬೇರೆ ಮಾಡು ; ವರ್ಣವನ್ನು ವ್ಯತ್ಯಾಸಗೊಳಿಸು : ಗೋಸುಂಬೆಯು ತನಗೆ ಬೇಕಾದಾಗ ತನ್ನ ಬಣ್ಣ ಬದಲಾಯಿಸಿಕೊಳ್ಳುತ್ತದೆ (ರೂಢಿ). ೨. (ಆಲಂ) (ಸ್ವಾರ್ಥದಿಂದ ವ್ಯವಹಾರ, ನಡವಳಿಕೆಗಳಲ್ಲಿ ಇದ್ದಕ್ಕಿದ್ದಂತೆ) ನೇರಮಾರ್ಗವನ್ನು ಬಿಡು ; ಧೋರಣೆಯನ್ನು ವ್ಯತ್ಯಾಸ ಮಾಡಿಕೊಳ್ಳು : ಸಂಬಾರದ ವಸ್ತುಗಳನ್ನು ತುಂಬಿಕೊಂಡನಂತರ ಗಾಮಾ ತನ್ನ ಬಣ್ಣ ಬದಲಾಯಿಸಿದ (ಶ್ರವಾಇ. II. ೨೩೩). ಬಣ್ಣ ಬಯಲಾಗು = ನಿಜಸ್ವರೂಪವು ಪ್ರಕಟವಾಗು; ಮೋಸ ಹೊರಬೀಳು : ಅವನು ಮಾಡಿದ ಉಪಾಯದಿಂದ ಆ ಮೋಸಗಾರನ ಬಣ್ಣ ಬಯಲಾಯಿತು (ರೂಢಿ). ಬಣ್ಣ ಬಿಡು = ಬಣ್ಣವನ್ನು ಬಿಟ್ಟು ಕೊಡು ; ರಂಗನ್ನು ಕಳೆದುಕೊಳ್ಳು ; ಮಾಸಲಾಗು : ರೆಯಾನ್, ಉಣ್ಣೆ ಬಟ್ಟೆಗಳು ಬಣ್ಣ ಬಿಡುವುದಾದರೆ, ಕಡೇ ಸಲ ಜಾಲಾಡುವ ನೀರಿಗೆ ಸ್ವಲ್ಪ ವಿನೆಗರ್ ಹಾಕುತ್ತಾರೆ (ಗೃಹವಿ. ೯೪). ಬಣ್ಣಮಾಗು, ಬಣ್ಣವಾಗು – ೧. ರಂಗನ್ನು ಹೊಂದು : ಬಣ್ಣವನ್ನು ತಳೆ : ಪಚ್ಚೋತಿಯಂತೆ ಪಲವುಂ ಬಣ್ಣಮಾಗಿ...ತೇಱಿನಂತೆಲ್ಲಾ ಪಱಿಗಮೊಳಗಾದೈ (ಧರ್ಮಾಮೃ. ೨-೦೦೫). ೨. ಕೆಂಪಾಗು : ಹಣ್ಣು ಬಲಿದು ಬಣ್ಣವಹುದಕ್ಕೆ ಮೊದಲೆ ಕೊಂಬು ಮುಱಿಯಿತ್ತು (ಮೋಳಿಮಾ. ೪. ೬೦೪-೨೧೪೦). ಬಣ್ಣ ಹಚ್ಚಿ ಹೇಳು = (ಆಲಂ) ಇರುವ ಸ್ವಲ್ಪ ವಿಚಾರವನ್ನು ಅತಿಶಯವಾಗಿ ವರ್ಣಿಸಿ ಹೇಳು :

ಉತ್ಪ್ರೇಕ್ಷೆ ಮಾಡಿ ಹೇಳು : ಬಹಳ ಮಟ್ಟಿಗೆ ಅದನ್ನು ಕಾಣದಿದ್ದವರು ಬಣ್ಣ ಹಚ್ಚಿ ಹೇಳುವ ಮಾತುಗಳಿಂದಲೇ ನಮ್ಮಲ್ಲಿ ಭಯ ಹುಟ್ಟುವುದು (ಸುಖಕ್ಷ. ೬೩). ಬಣ್ಣ ಹಾಕು = ಚಿತ್ರ. ಬಟ್ಟೆ ಮುಂತಾದುವಕ್ಕೆ ಬಣ್ಣವನ್ನು ತುಂಬು.– ರಂಗನ್ನು ಕೊಡು : ಬಣ್ಣಗಾರರು ನೂಲಿಗೆ ಬಣ್ಣ ಹಾಕುವ ಕಾಯಕ ನಡೆಯಿಸುತ್ತಾರೆ (ಕಪಪು. ೬–೧೨); ದಾರಕ್ಕೆ ಬಣ್ಣ ಹಾಕುವವರು. ಕೊಂಡ ದಾರದಿಂದ ಬಟ್ಟೆ ನೇಯುವವರು ಎಲ್ಲರೂ ಶ್ರಮಪಡಬೇಕು (ಹಂಪ್ರ. ೯). [<ಸಂ. ವರ್ಣ]

ಬಣ್ಣಂಗುಂದು, ಬಣ್ಣಗುಂದು (ಕ್ರಿ). ೧. ಕಾಂತಿಹೀನವಾಗು ; ಕಳೆಗುಂದು ; ಮಂಕಾಗು : ಏಂ ಕೇಳ್ದಱಿಯೆವೆ ದಾನವರುಪಟಳಕೆ ಬಣ್ಣಂಗುಂದಿ ಬಾರ್ತೆಗೆಟ್ಟು ದೂಱಿದ ಬರ್ದಿಲರ್ಗೆ ನಾರಾಯಣಂ . . . ಸೈತಿಟ್ಟು ಮರಲ್ಚಿದ ತೆಱನಂ? (ರಾಮಾಶ್ವ. ೦೯–೬). **ಬಣ್ಣಗುಂದು** : ೧. ಬಣ್ಣಗುಂದಿದ ದೇಹದೊಳಗೆಳವೆಣ್ಣುಗಳ ಸೌಖ್ಯವನು ತೊಱೆದಳು ಮದನನೆಸುಗೆಯಲಿ (ವಳಸ. ೧–೩೮); ಜೀವಿತೇಶ್ವರನ ವಿರಹದೊಳು ಸೆಜ್ಜೆಯ ಭಾವಿಸಿ ಬಣ್ಣಗುಂದುವಳು (ಹರಿಶ. ೭–೬). ೨. ಕಳೆಗೆಡು ; ತೇಜೋವಧೆಯಾಗು : ಕಣ್ಣು ಕೆಟ್ಟಾಮೇಲೆ ಕಡುರೂಪ ಚಲ್ವಿಕೆಯೆ ಬಣ್ಣಗುಂದಿದ ಮೇಲೆ ಬಹುಮಾನವೆ (ಕವಕ. ೩೬–೧). [ಬಣ್ಣ + ಕುಂದು$_1$]

ಬಣ್ಣಂಗೆಡು, ಬಣ್ಣಗೆಡು (ಕ್ರಿ). ೧. = ಬಣ್ಣಂಗುಂದು ೧ : ಬಂದು ನಿಂದುದು ಮುಂದೆ . . . ಮಹಾಬೃಹನ್ ಮೇಷಿ! ಮಿಂಚುತಿರೆ ಪೊನ್ನುಣ್ಣೆ ಸುತ್ತಣದಗ್ನಿ ಬಣ್ಣಂಗೆಡಲ್. ಯೋಜನದೀರ್ಘ ಕಾಲಾಯಸದ ಖಡುಗದಿನದಂ ತುಂಡರಿಸಿದನು (ಶ್ರೀರಾಮಾ. ೭೦೬–೨೦೭). **ಬಣ್ಣಗೆಡು** : ೧. ಕಾಯೊ ಕರುಣಾಕರನೆ ಕಡುಪಾಪಿ ನಾನು . . . ಬಣ್ಣಗೆಟ್ಟಡವಿಯಲಿ ತಪಸು ಮಾಡಿದವನಲ್ಲ (ಕವಕ. ೦೩೫–೦); ತಿಣ್ಣವಡೆದ ಖಾನನ ಸುದ್ದಿ ಜಪವಾಗಿ ಬಣ್ಣಗೆಟ್ಟುದು ಲೋಕವೆಲ್ಲ (ಕಂವಪ. ೦೦–೫೪); ಬೆಟ್ಟದ ಅರಸು:– (ಬಣ್ಣಗೆಟ್ಟು. ಅಧೋಮುಖನಾಗುವನು) (ಸಿಟ್ಟಿಂ. ೩೩–೦೨). ೨. ರಂಗು ಹಾಳಾಗು ; ವರ್ಣವಿಲ್ಲದಾಗು : ಎಂದೆಂದಿಗೂ ಬಣ್ಣಗೆಡದ ಕೃತಕ ಪುಷ್ಪಹಾರವೊಂದು ನೇತಾಡುತ್ತಿತ್ತು (ಪುನರು. ೦೪೦). ೩. ದಾರಿ ತಪ್ಪು : ಕಣ್ಣಳಿದ ಕಾಪಥನವೊಲು ಮನ ಬಣ್ಣಗೆ[ಪಾಠಾಂ. ಬಿ]ಡುತಿದೆ (ಕೊರಿಶಾ. ೩೯–೧೩). [ಬಣ್ಣ + ಕೆಡು$_1$]

ಬಣ್ಣಂಬಡಿಸು (ಕ್ರಿ). ಬಣ್ಣವನ್ನು ಲೇಪಿಸು ; ರಂಗನ್ನು ಹಚ್ಚು : ತಿಳಿನೀರ್ಸರಿಯೊಳ್ಳಿಂದ ಸೀತಾದೇವಿಯ ಸಿರಿಯೊಡಲ ಕುಂಕುಮದಿಂ ಪೊಂಬಣ್ಣಮಾದ ಧನುಷ್ಕೋಟಿತೀರ್ಥೋದಕದಿಂ ಸಿರಿರಾಣಿಗರಿಸಿನದಣ್ಪಂ ಬಣ್ಣಂಬಡಿಪುದೆಂದುಂ (ಪಕಪಂ. ೦೦೯–೯). [<ಬಣ್ಣಂಬಡೆ + –ಇಸು$_3$]

ಬಣ್ಣಂಬಡೆ, ಬಣ್ಣವಡೆ (ಕ್ರಿ). ೧. (ಆಕರ್ಷಕವಾದ) ಬಣ್ಣವನ್ನು ಹೊಂದು : ಪಡೆದೊಡೆ ಕಂಪಂ ಬಣ್ಣಂಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ಪಡೆಯವುಟಿದಲರ್ಗಳೆರಡುಮನೊಡೆವೆಳೆದೀ ಚಂಪಕಕ್ಕೆ ಪೂಗಳ್ ದೊರೆಯೇ (ಅರಿಪು. ೦೦–೦೦೪); ಅರನೇಱಿಲ್ವಣ್ಣ ಬಣ್ಣಂಬಡೆದ ತನು ಪೃಥುಶ್ರೋಣಿ ನೀಲಾಳಕಂ . . . ಕೊಂಕಾಂತ ಪುರ್ಬೊಂದಿರೆ ನಾನಾಶಕ್ತಿಯರ್ ಬೇಡಿತಿಯರೆಸಕಮಂ ತಾಳ್ಪು ಕಣ್ಗೆಡ್ಡಮಾದರ್ (ಶಂಕಂ. ೩–೭). ೨. ಶೋಭಿಸು; ಮೆರೆ : ತಿರುಮಲೆಯಾರ್ಯನುಮವನ ಪಡಿನೆಟಲಂತೆ ಎಲ್ಲಾ ವಿದ್ಯೆಗಳೊಳಂ ಬಱಿಸಂದು ಬಣ್ಣಂಬಡೆದಂ (ಪಕಪಂ. ೦೬೬–೨೦); ಮೊದಲೊಳ್ ಹರಿಹರ ಬುಕ್ಕರ್ ಮೊದಲೆನಿಸಿದರರಸುಗೆಯ್ದು ಪಸರಿಸಿ ಜಸಮಂ ಪದಪಿಂ ಕುಱುಂಬರಾಯರ್ ಪದಿಮೂವರ್ ಬರ್ದಿಲವೇಱಿ ಬಣ್ಣಂಬಡೆದರ್ (ಪಕಪಂ. ೨–೦೩). **ಬಣ್ಣವಡೆ** : ೨. ಅಣ್ಣನಿರ್ದನು . . . ಬಣ್ಣವಡೆದ ಗದ್ದುಗೆಯೊಳು (ಪರಿಶ. ೩೯–೦೦). ೩. ಅರ್ಹವಾಗು ; ಯೋಗ್ಯವಾಗು : ಬಿಳುವಕ್ಕಿಯ ಬೀಳಗೆಡಹಿದ ಬಿಂಕವೀ ಬಳಿಯೊಳು ಬಣ್ಣವಡೆಯದು (ಹರಿಶ. ೨–೪೨). [ಬಣ್ಣ + ಪಡೆ$_1$]

ಬಣ್ಣಕ (ನಾ). ತೋರಿಕೆಯ ಮಾತನ್ನಾಡುವವನು : ಬೂಟಾಟಿಕೆಯ ವ್ಯಕ್ತಿ : ಅನ್ಯಸಂಗಂಗಳಿಗೆ ಎಳಸಿ ಬಳಸಿ ಬಣ್ಣಕರಪ್ಪರೆ ಶರಣರು (ಉರಿಪ. ೦೪೪–೨೦೬); ಬಣ್ಣಕರು ಬಣ್ಣದೊಳಗಾಳುವದನೆ ಕಂಡು ಅಣ್ಣ ನಗುತಿರ್ದನಯ್ಯಾ ಯೋಗಿನಾಥಾ (ಲಿಂಗಲೀ. ೬೨–೦೦).

[ಬಣ್ಣ + –ಕ$_3$. / ಸಂ. ವರ್ಣಕ]

ಬಣ್ಣಕಟ್ಟು 'ಬಣ್ಣಗಟ್ಟು' ನೋ.

ಬಣ್ಣಗಂಬಿ (ನಾ). (ಬಣ್ಣ ಬಳಿದ) ಬರೆಯುವ ಕಡ್ಡಿ : ಲೆಕ್ಕಣಿಕೆ : ಚೌಪದಿಗವಿತೆ ಬಣ್ಣಗಂಬಿಯ ಪುಸ್ತಕಲಿಖಿತಜ್ಞರು ಕನ್ನಡಕವ ತಾಳ್ದಿಹರು (ಪೋಹಶ. ೩–೪೦). [ಬಣ್ಣ + ಕಂಬಿ$_1$]

ಬಣ್ಣಗಟ್ಟು, ಬಣ್ಣಕಟ್ಟು (ಕ್ರಿ). ೧. ಕಾಂತಿಗೂಡು ; ನಳನಳಿಸು : 'ಸಾದಾ' ಮೇವು ತಿಂದು, ಜೊತೆಗೆ ಬಿಟ್ಟಿ ದೊರೆಯುವ ಸರಾಯಿ ಕುಡಿದರೆ ಸಾಕು. ಹೋರಿ ಬಣ್ಣಗಟ್ಟುತ್ತವೆ (ಸಿಳುಮ. ೦೬೬). **ಬಣ್ಣಕಟ್ಟು** : ೨. ರಂಗುಹಾಕು : ಆ ಹುಡುಗಿ . . . ನೇಯ್ಗೆಯವನು . . . ಬಟ್ಟೆ ನೇಯ್ದು. ಬಣ್ಣಕಟ್ಟಿ ಹಿಗ್ಗುವಂತೆ, ತನ್ನ ಮುಂದಿನ ರಾಜ್ಯವನ್ನು ಕಲ್ಪಿಸಿಕೊಂಡು ಹಿಗ್ಗುತ್ತಿದ್ದಳು (ಬಾಗಿನ. ೩). ೩. ಸುಗಂಧದ್ರವ್ಯಗಳನ್ನು ಸೇರಿಸು; ವಾಸನೆ ಕಟ್ಟು.

ಬಣ್ಣಕಟ್ಟಿದ ಅಡಕೆ = ಏಲಕ್ಕಿ, ಲವಂಗ, ಸಕ್ಕರೆ, ಕೊಬ್ಬರಿ ಮುಂತಾದುವುಗಳೊಂದಿಗೆ ಮಿಶ್ರಮಾಡಿದ ಪುಡಿಅಡಕೆ : ಬಣ್ಣಕಟ್ಟಿದ ಅಡಕೆ. ಮೈಸೂರು ವೀಳ್ಯದೆಲೆ ಇದ್ದರೆ ತಾಂಬೂಲ ಹಾಕಿಕೊಳ್ಳಲು ಚೆನ್ನ (ರೂಢಿ). ಬಣ್ಣಕಟ್ಟಿ ಹೇಳು = ಅತಿಶಯವಾಗಿ ಹೇಳು ; ಉತ್ಪ್ರೇಕ್ಷೆ ಮಾಡಿ ವರ್ಣಿಸು : ನೀನು ಈ ಕನಸನ್ನು ಸತ್ಯಾ ಅಂತ ಬಣ್ಣಕಟ್ಟಿ ಹೇಳೋದೂ ಅಲ್ಲ; ನಾನು ನಿಜಾ ಅಂತ ನಂಬಿ ಕೇಳೋದೂ ಅಲ್ಲ! (ಹೇಮಕೂ. ೩). [ಬಣ್ಣ + ಕಟ್ಟು$_1$]

ಬಣ್ಣಗತೆ (ನಾ). ಸ್ವಾರಸ್ಯವಾದ ವರ್ಣನೆಯಿಂದ ತುಂಬಿದ ಕತೆ : ಶ್ರೀರಾಜಒಡೆಯ ಮಹಾಸ್ವಾಮಿಯವರಿಗೆ ಸವನಿಸಿದ ಆ ಪ್ರಕರಣದ ವಿಷಯವಾಗಿ . . . ನೂರಾರು ಬಣ್ಣಗತೆಗಳು ಮಸಗುತ್ತಿರುವುವು (ಮಂತ್ರಕ. ೦೬೭–೦೯). [ಬಣ್ಣ + ಕತೆ]

ಬಣ್ಣಗನಸು (ನಾ). ಸುಂದರವಾದ ಸ್ವಪ್ನ; ಸವಿಗನಸು : ನಿನ್ನ ಪ್ರತಿಮೆಯನೊಂದು ನನ್ನ ಹೇವನದಿಂದ ರೂಪುಗೊಳಿಸೆ. ನನ್ನ ಮಣ್ಣನು. ಮನೋರಥಗಳನು ಮತ್ತೆಲ್ಲ ಬಣ್ಣಗನಸನು ಭ್ರಾಂತಿಗಳನು ತಂದೆ (ಸಂಮು. ೯೦–೪). [ಬಣ್ಣ + ಕನಸು]

ಬಣ್ಣಗಬ್ಬ (ನಾ). ವರ್ಣನೆಗಳಿಂದ ಕೂಡಿದ ಕಾವ್ಯ: ನವರಸದ ತನಿರಸ ಮೊರೆವ ಬಣ್ಣಗಬ್ಬಮಂ ಪೊಳ್ಳೆಂದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನಾ ಜಾಣ್ಮೆಯೊಳ್ (ರಾಮಾಶ್ವ. ೦೬೪–೭). 'ಬಣ್ಣಗಬ್ಬಿಗ', 'ಬಣ್ಣವಾಡು' ಪರಾ. [ಬಣ್ಣ + ಕಬ್ಬ$_1$]

ಬಣ್ಣಗಬ್ಬಿಗ (ನಾ). (ವಿಸ್ತಾರವಾಗಿ) ವರ್ಣಿಸುವ ಕವಿ : ನೀನೋರ್ವನಪೂರ್ವಂ ಬಣ್ಣಗಬ್ಬಿಗರ ಬಲ್ಲಹಂ ಗಡ (ರಾಮಾಶ್ವ. ೭೦–೨೪).

[ಬಣ್ಣಗಬ್ಬ + – ಇಗ]

ಬಣ್ಣಗರಡಿಗೆ (ನಾ). ಕೆಂಬಣ್ಣದ ಭರಣಿ. – ಸಂಪುಟ : ಬಿರಿದ ಪೆರ್ಗಾಯಿವಡೆದಿರ್ಪುದಱಿಂ ಶೌರಿಗಲಂಕರಿಸಲ್ಕೆ ಬಣ್ಣಗರಡಿಗೆಯಂ ಮುಚ್ಚುಳ್ದೆಗೆದು ರನ್ನಸರಮಂ ನೆಗಟ್ಟುವ ಭಂಡಾರಿಗರಂತೆ ಬಗೆವಡೆದ ದಾಡಿಮಂಗಳುಂ . . . ಮನಂಗೊಳೆ (ಪಕಪಂ. ೦೦೨–೨೦).

[ಬಣ್ಣ + ಕರಡಿಗೆ (<ಕರಂಡಿಗೆ)]

ಬಣ್ಣಗಲ್ಲು (ನಾ). ಬಣ್ಣದ ಹರಳು ; ರತ್ನ : ಸಂತತ ಬಣ್ಣಗಲ್ಲುಗಳ ಕೇವಣಿಸಿರ್ದ ಚಿಂತಾಕ ಬಲುಹನಿಕ್ಕಿದರು (ಪೋಹಶ. ೨೩–೩೯).

[ಬಣ್ಣ + ಕಲ್ಲು (<ಕಲ್$_3$)]

ಬಣ್ಣಗಳ (ನಾ). ಚೆಲುವಾದ ಕುತ್ತಿಗೆ ; ಅಂದವಾದ ಕೊರಳು : ಸಣ್ಣಗಳ ನುಣ್ಗೊರಳು ಸವಿಗಳ ಬಣ್ಣಗಳವೋ ಕಂಬುಕಂಠವೊ ಬೆಣ್ಣೆಗಳವೋ (ಜಿರಾಮಾ. ೦೬೨-೫೦). [ಬಣ್ಣ+ಗಳ್ಳ (= ಗಲ)]

ಬಣ್ಣಗಾಣ್ (ಕ್ರಿ). ಸತ್ತ್ವವನ್ನು ತಿಳಿ ; ಯೋಗ್ಯತೆಯನ್ನು ಅರಿ : ಅರೆವನಯ್ಯಾ ಸಣ್ಣವಹನ್ನಕ್ಕ ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ (ಬಸವ. ೬೮೬). [ಬಣ್ಣ + ಕಾಣ್]

ಬಣ್ಣಗಾರ 'ಬಣ್ಣಗಾಱ' ನೋ.

ಬಣ್ಣಗಾರಿಕೆ 'ಬಣ್ಣಗಾಱಿಕೆ' ನೋ.

ಬಣ್ಣಗಾಱ, ಬಣಕಾರ, ಬಣಗಾರ, ಬಣ್ಣಗಾರ (ನಾ). ೧. ಬೂಟಾಟಿಕೆ ಮಾಡುವವನು ; ಸೋಗುಗಾರ : 'ಬಣ್ಣಗಾಱಿಕೆ' ಪರಾ. ಬಣಕಾರ : ೨. (ಮರದ ಸಾಮಾನು, ಬಟ್ಟೆ ಮುಂತಾದುವಕ್ಕೆ) ರಂಗು ಹಚ್ಚುವ ಜನಾಂಗಕ್ಕೆ ಸೇರಿದವನು ; ರಂಗಾರಿ : ಬಣಕಾರ ಫಕೀರಪ್ಪನಲ್ಲಿ . . . ವಿವರಗಳನ್ನು ಚರ್ಚಿಸಿ ಆಯಿತು (ಗಂಪೂಯಿ. ೨೦೭) ; ಬಣಕಾರರು . . . ಕೊಟ್ಟವನ್ನೂ ತಂಬಾಕಿನ ಕಡ್ಡಿಪುಡಿಯನ್ನೂ ಅಣಿ ಮಾಡಿದರು (ಸುಪಸಂ. ೫೦). ಬಣಗಾರ : ೩. (ಚಿತ್ರ ಬರೆದು) ಬಣ್ಣ ಹಚ್ಚುವವನು : ಆನಿ ಮ್ಯಾಗಿರುವ ಶಿವದಾರ ಮೊಗ್ಗೆಯ ಯಾವ ಬಣಗಾರ ಬರೆದಾನ (ಲೋಕಗೀ. ೬೨). ಬಣ್ಣಗಾರ : ೨. ಹೊಸಮನೆಯ ಗೋಡೆಗಳಿಗೆ ಬಣ್ಣ ಹಚ್ಚಲು ಅವರು ನಾಲ್ಕು ಜನ ಬಣ್ಣಗಾರರನ್ನು ಕರೆಸಿದ್ದರು (ಕೂಡಿ). [ಬಣ್ಣ + — ಗಾಱ (< — ಕಾಱ)]

ಬಣ್ಣಗಾಱಿಕೆ, ಬಣ್ಣಗಾರಿಕೆ (ನಾ). ೧. ಬೂಟಾಟಿಕೆಯ ನಡವಳಿಕೆ ; ಬಣ್ಣಾಚಾರ ; ತೋರಿಕೆಯ ವರ್ತನೆ : ನಾ ತಪ್ಪಿ ನುಡಿದಡೆ ಒಪ್ಪ ವಿಟ್ಟುಕೊಳ್ಳಿರಣ್ಣಾ ಕಣ್ಣಿನಲ್ಲಿ ಕಸ ಹೊಕ್ಕರೆ ಕೈ ಹಗೆಯ ಅಯ್ಯಾ ಇದು ಬಣ್ಣಗಾಱಿಕೆಯಲ್ಲ ಸನ್ನದ್ಧರಿರವು (ಮೋಳಿಪಾ. ೩೫-೦೪೬) ; ಜಡಪಾತ್ರವೆಂದು ನಮ್ಮತ್ತ ನೋಡದೆ ತನ್ನ ಹಡಪವೆಂಗಳ ನೋಡುತಿದ್ದ ಕಡೆಗೀಗ ಬಣ್ಣಗಾಱಿಕೆಗೆ ಕರೆಸಲಾತನೆಡೆಗೆ ನಾವೆಂತೆಯ್ದುಬಹುದು (ಶರಶ. ೦೪-೩೬). ಬಣ್ಣಗಾರಿಕೆ : ೧. ಕಣ್ಣಿಗೆ ಇಚ್ಛೆಯಾಗದ ನಮ್ಮನ್ನು ಈಗ ಬರಿಯ ಬಣ್ಣಗಾರಿಕೆಗೆ ಕರೆವುದು ಏಕೆ ? (ಮಾಮಲ್ಲಿ. ೦೦೨). ೩. ಬಣ್ಣ ಹಚ್ಚುವಿಕೆ ; ರಂಗು ಬಳಿಯುವಿಕೆ : ವರ್ಣಕ್ರಿಯಾವಿಸ್ತಾರಗುಣವಚನೇಷು, ಬಣ್ಣಗಾರಿಕೆಯೊಳಂ, ಬಿತ್ತರದೊಳಂ, ಕೊಂಡಾಟದೊಳಂ (ಕಾಶಕ್ಕ. ೨೯೦). [ಬಣ್ಣಗಾಱ + — ಇಕೆ]

ಬಣ್ಣಗುಂದು 'ಬಣ್ಣಂಗುಂದು' ನೋ.

ಬಣ್ಣಗುದುರೆ (ನಾ). ಮುಖವೂ ಕಾಲೂ ಬೆಳ್ಳಗಿದ್ದು, ಮಿಕ್ಕ ಭಾಗವು ಬೇರೆ ರಂಗುಗಳಿಂದ ಕೂಡಿದ ಕುದುರೆ ; ಪಂಚಕಲ್ಯಾಣಿ : ಇಂತು ಮುಂಚಿ ಬಂದ ಶರತ್ಕಾಲದೊಳ್ ಶಾಘವನ ಜನ್ನದ ಬಣ್ಣಗುದುರೆ ತೆಂಕಲ್ಗೆ ಮೊಗಮಿಕ್ಕಿ ನಡೆಯುತುಮಿರ್ಪುದುಂ (ರಾಮಾಶ್ವ. ೬೩-೦೮) ; ಏವೂರ ನಿಗಳದೊಂದು ಬಣ್ಣಗುದುರೆ (ರಾಮಾಶ್ವ. ೬೪-೨೫). [ಬಣ್ಣ+ಕುದುರೆ]

ಬಣ್ಣಗುರುಡ (ನಾ). ಬೇರೆ ಬೇರೆ ಬಣ್ಣಗಳನ್ನು ಕಂಡುಹಿಡಿಯಲಾಗದ ದೃಷ್ಟಿದೋಷವುಳ್ಳವನು : ಬಣ್ಣಗುರುಡರಲ್ಲಿ ಕೆಲಮಟ್ಟಿಗಾದರೂ ಕೆಲವು ಬಣ್ಣಗಳನ್ನು ಗುರುತಿಸುವಷ್ಟು ಸಾಮರ್ಥ್ಯ ಇದ್ದೇ ಇರುತ್ತದೆ (ಕನಿಕೋ. XI, ೮೩೩). [ಬಣ್ಣಗುರುಡು + — ಅ$_7$]

ಬಣ್ಣಗುರುಡು (ನಾ). ಬೇರೆ ಬೇರೆ ಬಣ್ಣಗಳನ್ನು ಕಂಡು ಹಿಡಿಯಲಾಗದಿರುವ ಒಂದು ಬಗೆಯ ಕಣ್ಣಿನ ದೋಷ : ತಂಬಾಕು ಮತ್ತು ರಾಸಾಯನಿಕವಸ್ತುಗಳ ಸೇವನೆಯಿಂದ ದೃಷ್ಟಿಪಟಲದ ನರಕಣಗಳು ಶಿಥಿಲಗೊಂಡು ಬಣ್ಣಗುರುಡನ್ನುಂಟುಮಾಡಬಲ್ಲವು (ಕನಿಕೋ. XI, ೮೩೩). [ಬಣ್ಣ + ಕುರುಡು]

ಬಣ್ಣಗುರುಡುತನ (ನಾ). = ಬಣ್ಣಗುರುಡು: ಬಣ್ಣಗುರುಡುತನದಲ್ಲಿ ಎರಡುಬಗೆಯುಂಟು (ಕನಿಕೋ. XI, ೮೩೩). [ಬಣ್ಣ + ಕುರುಡುತನ]

ಬಣ್ಣಗೂಡು (ಕ್ರಿ). ರಂಗೇರು ; ಹೊಳಪುಂಟಾಗು : ಆ ಬೆಳವಲ ಗಿಡಕ್ಕೆ ಹೊಸ ಚಿಗುರೆಲೆ ಮೂಡಿ ಬಣ್ಣಗೂಡಿ ಮಿರಿಮಿರಿ ಮಿಂಚಹತ್ತಿದ ದಿನ ತಿಳಿಯುತ್ತಿದ್ದೆ . . . ವಸಂತಾಗಮನ ಆಗಿದೆ ಎಂದು (ಇಷ್ಟಕ. ೪೩೬). [ಬಣ್ಣ+ಕೂಡು$_1$]

ಬಣ್ಣಗೂಳ್, ಬಣ್ಣಗೂಳು (ನಾ). (ದೃಷ್ಟಿದೋಷ ಮುಂತಾದುವುಗಳ ನಿವಾರಣೆಗಾಗಿ ಚೆಲ್ಲುವ) ಅರಿಸಿನ, ಕುಂಕುಮ ಮುಂತಾದುವುಗಳನ್ನು ಬೆರಸಿದ ಅನ್ನ ; ಬಣ್ಣದ ಅನ್ನ : ಭೂತಸಂತುಷ್ಟಿಯಪ್ಪಂತೆ ಕುಱಿಕೋಣಂಗಳಂ ಪೊಯ್ಸಿ ಬಣ್ಣಗೂಳಂ ಪಸರಿಸಿ (ಸೈಮಿಶಾ. ೫-೬೨) ; ಚರಿಗೆ ಚರಿಗೆಯಲಿ ಚರುಬೆಟ್ಟವಿಳ್ದುದು ಬಣ್ಣಗೂಳ್ (ಶ್ರೀರಾಮಾ. ೬೬೬-೨೦೦). ಬಣ್ಣಗೂಳು : ಬಹುವರ್ಣದಲ್ಲಿ ರಂಜಿಪ ಬಣ್ಣಗೂಳು ಬೆಳ್ಳಿ ಪೊಂಬರಿವಾಣಗಳ ತುಂಬಿ ಸುಳಿಹೆತ್ತಿ ಚೆಲ್ಲಿಸಿದಳು ದೆಸೆದೆಸೆಗೆ (ಮೋಹಶ. ೩೦-೩೬) ; ಧರ್ಮರಾಯ . . . ಭೂತಸಂತುಷ್ಟಿ ಆಗುವ ಹಾಗೆ ಕುರಿ — ಕೋಣಗಳನ್ನು ಹೊಯ್ಸಿ ಬಣ್ಣಗೂಳನ್ನು ಚೆಲ್ಲಿಸಿದ (ಐದುರೆ. ೨೩). [ಬಣ್ಣ + ಕೂಳ್ (<ಕೂಟು$_1$)]

ಬಣ್ಣಗೂಳು 'ಬಣ್ಣಗೂಳ್' ನೋ.

ಬಣ್ಣಗೆಡಿಸು (ಕ್ರಿ). (ಭಯದಿಂದ) ಸತ್ತ್ವಹೀನವಾಗುವಂತೆ ಮಾಡು; ದುರ್ಬಲಗೊಳಿಸು : ಪೆರ್ವುಲಿ . . . ಕೊಳ್ಳಿವಣ್ಣನ ಬಣ್ಣಗೆಡಿಸಿದುದು (ಸಾಳ್ವಕಾ. ೫-೩೫). [ಬಣ್ಣಗೆಡು (<ಬಣ್ಣಂಗೆಡು) + — ಇಸು$_3$]

ಬಣ್ಣಗೆಡು 'ಬಣ್ಣಂಗೆಡು' ನೋ.

ಬಣ್ಣಗೇಡು (ನಾ). ಮಾನಗೇಡು ; ಮಾನಹಾನಿ : ಬಾಯಿ ಬಿಟ್ಟರೆ ಬಣ್ಣಗೇಡು (ಗಾರ). [ಬಣ್ಣ + ಕೇಡು]

ಬಣ್ಣಗೊರಲ್ (ನಾ). ಸೊಗಸಾದ ಕಂಠ; ಇಂಪಾದ ಧ್ವನಿ : ಬಣ್ಣಗೊರಲ್ಲೈದೆಯರ್ ಸೋಬನವಾಡಂ ಪಾಡುಗೆ (ಜಿಕಪಂ. ೦೪೮-೮). [ಬಣ್ಣ + ಕೊರಲ್]

ಬಣ್ಣಗೊಳ್ (ಕ್ರಿ). ಸ್ವಾರಸ್ಯದಿಂದ ಕೂಡಿರು ; ರಸವತ್ತಾಗಿರು : ಬಾಲ್ಯ, ಮದುವೆ, ವನವಾಸವು, ವಿರಹ, ಚಿಂತೆ, ವಿಧಿ, ರೋಷವು ಬಣ್ಣಗೊಂಡು ನಲಿದಿವೆ (ಸ್ವಪ್ನಿ. ೩೪). [ಬಣ್ಣ + ಕೊಳ್$_1$]

ಬಣ್ಣಗೊಳಿಸು (ಕ್ರಿ). ರಂಗಾಗುವಂತೆ ಮಾಡು; ವರ್ಣಮಯವಾಗಿಸು : ಕೆರೆ ಕೆರೆಯ ಹರಹಿನೊಳು ಜಲಹಾಸವನು ಮೆರಸಿ ತಿರೆ ಬಣ್ಣಗೊಳಿಸುವೀ ಬಿಸಿಲ ನಲವು (ಮರೆರೇ. ೦೬-೪). [ಬಣ್ಣಗೊಳ್ + — ಇಸು$_3$]

ಬಣ್ಣಗೋಗಿಲೆ (ನಾ). ಚೆಲುವಾದ ಕೋಗಿಲೆ : ಅರಸಂಚೆ ಸೋಗೆನವಿಲು ಬಣ್ಣಗೋಗಿಲೆ ಹರಿರಥಾಂಗದ ಪ್ರತಿಮೆಗಳು ಮೆಱೆದುವು ಚೌದೆಸೆಯುಪ್ಪರಿಗೆಗಳೊಳು (ಕಂಪನಿ. ೭-೨೮). [ಬಣ್ಣ + ಕೋಗಿಲೆ]

ಬಣ್ಣಗೋರಟೆ (ನಾ). ಒಂದು ಬಗೆಯ ಸ್ಫಟಿಕದ ಗಿಡ ಮತ್ತು ಅದರ ಹೂವು : "ರಾಜಶರ್ಯಕಃ — ಬಣ್ಣಗೋರಟೆ" (ಓಷಧಿ. ೧೩೮). [ಬಣ್ಣ + ಗೋರಟೆ (< ಗೋರಂಟೆ)]

ಬಣ್ಣಗೋಲ್ (ನಾ). ೧. (ಕೋಲಾಟವಾಡುವಾಗ ಬಳಸುವ) ಬಣ್ಣ ಬಳಿದ ಕೋಲು : ಜಡೆಕೋಲಾಟದ ಸುನ್ದರಿಯನ್ನು ಒಡ್ಡಿಸಿ . . . ಗೆಜ್ಜೆಯ ಬಣ್ಣಗೋಲ್ಗಳನ್ನು ಹಂಚಿಸುತ್ತಿರುವಳು (ಪಟ್ಟಣ. ೦೬೯-೦೯). ೨. ರಂಗುರಂಗಿನ ಹೂವುಗಳಿಂದಾದ ಬಾಣ : 'ಬಣ್ಣಗೋಲ' ಪರಾ. [ಬಣ್ಣ + ಕೋಲ್$_1$]

ಬಣ್ಣಗೋಲ (ನಾ). ರಂಗುರಂಗಿನ ಹೂವುಗಳಿಂದಾದ ಬಾಣವನ್ನುಳ್ಳವನು; ಮನ್ಮಥ : ಬಣ್ಣಗೋಲನ ತೋಳ ಸಾಮಿನ ನುಣ್ಣಗಂಭವೊ

ಗಾನಕಾಯತ ಸಣ್ಣ ಕೋಮಲ ಸೀತೆಗಳವಹುದೆಂದಳಿಂದುಮುಖಿ (ಜಾಪಾ. ೦೩೨-೫೦). [ಬಣ್ಣಗೋಲ್ + – ಅ$_7$]

ಬಣ್ಣಟೆ ? (ನಾ). (?) : ಮೂಡಣ ಹೆಗ್ಗದ್ದೆ ಅದಱ ಮೇಗಣ ಕೊಡಂಗೆ ಎರಡಱಲ್ಲಿಯೂ ಮೂಡೆ ೨ ಬಂಣಟೆ ಮೂಡೆ ೨ (ಎಇ. XXVII. ೦೬೨-೪೯;1256) [?]

ಬಣ್ಣದಳೆ (ಕ್ರಿ). ರಂಗನ್ನು ಪಡೆ; ರಂಗೇರು : ಬಣ್ಣದಳೆದ ರನ್ನವಾವುಗೆ ಎಡಿದೆಸಳ್ಗಣ್ಣವಳಿರ್ದಳೊತ್ತಿನಲಿ (ಪೋಪತ. ೪-೦೩). [ಬಣ್ಣ + ತಳೆ$_1$]

ಬಣ್ಣದುಟಿ (ನಾ). ಕೆಂಪಾದ ತುಟಿ; ಚೆಂದುಟಿ : ಆ ರಸಭರಿತ ವಿಚಿತ್ರದೆ ಚಿತ್ರದ ನಾರಿಯ ಬಣ್ಣದುಟಿಯ ಬಂದುಗೆಯೊಳು . . . ನೃಪತಿಯ ಚಾರುನಯನಮತಿಲಗ್ನಂಬಡೆದುವು ಬಂಡುಣಿವಱಿಯಂತೆ (ಜಯಕಾ. ೩-೦೦) ಎಣ್ಣೆಗಂಟುಗಳ ತಡಹುತ ಬಣ್ಣದುಟಿಯ ಭಾವವ ಬೀಱುತ ಮುದ್ದು ವೆಣ್ಣುಗಳೈತಂದರಾಗ (ಕಂಪಿ. ೨೦-೬೪). [ಬಣ್ಣ + ತುಟಿ]

ಬಣ್ಣದೋರು ' ಬಣ್ಣದೋಱು ' ನೋ.

ಬಣ್ಣದೋಱು, ಬಣ್ಣದೋರು (ಕ್ರಿ). ೧. ಬೆಡಗು ಮಾಡು; ಥಳಕು ತೋರಿಸು : ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋಱುವ ಪರಿಯ ನೋಡಾ ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದ ಅಜಗಣ್ಣನ ಯೋಗಕ್ಕೆ ಬೆಱಗಾದೆನು (ಕೂಪ್ಯಸಂ. ೨೬-೦೪). **ಬಣ್ಣದೋರು** : ೨. ಯೋಗ್ಯತೆಯನ್ನು ವ್ಯಕ್ತಪಡಿಸು : ಇನ್ನುಳಿದುದು ಸಹೃದಯಹೃದಯನಿಕಷದಲ್ಲಿ ಬಣ್ಣದೋರಬೇಕು (ಪೂರ್ತಿಕಾ. ೩-೧೯). [ಬಣ್ಣ + ತೋಱು]

ಬಣ್ಣನಿದಿಗೆ? (ನಾ). (?) : ಕುದುರೆಯ ಕೊಟ್ಟಲ್ಲಿ ಪಣ ೧ ಕೊಂಡಲಿ ಪಣ ಬಂಣ್ಣನಿದಿಗೆಗೆ ಸೊ ೨ ಕಂಚಿಗನ ನಾಯಕೆಱೆಯಲಿ ಗದೆ ಖ ೩ ಕೆಯಿ ಖ (ಎಕ. IX (8). ರೂಢಬ. ೩೦-೩೯ ; ಸು. 1250). [?]

ಬಣ್ಣನೆ, ಬನ್ನಣೆ (ನಾ). ೧. ವರ್ಣಿಸುವುದು ; ವರ್ಣನೆ : " ಬಣ್ಣನೆ—ವರ್ಣನಾ (ಕದ್ಯಕೋ. ೨೬); ಅಣ್ಣಕೇ ಳೀತಗಳ ಮಾತಿನ ಬಣ್ಣನೆಗಳಂತಿರಲಿ ಭೂಮಿಯ ತಿಣ್ಣವನು ತಿದ್ದಲಿಕೆ ಹರಿ ನರನಾಗಿ ರೂಹಿಸಿದ (ಕೊರಕಾ. ೬ ೨-೨೦); ಬಣ್ಣನೆಯ ನುಡಿಜಾಣ್ಮೆಗವಸರಮಲ್ತು (ಶಾಪೂಶ್ವ. ೨೯-೬). ೨. ಸ್ತುತಿ; ಹೊಗಳಿಕೆ : ' ಬಣ್ಣಿಸು ' ಪರಾ. ೩. ತೋರಿಕೆ; ಸೋಗು ; ನಟನೆ : ಬಣ್ಣಣೆ [ನೆ]ಯ ಕುಸುರಿ ವಾತುಗಳಣ್ಣಂದಿರ ತೆಱದೆ [ದಿ]ನನ್ನದಿನ್ನದೆನುತ್ತಾಂ ಬಣ್ಣಿಸಲಱಿಯೆಂ (ರರ್ಮಿಪಾ. ೦-೭೦). **ಬನ್ನಣೆ** : ೧. ರಾಯನೊಡವೆಯ ಸವಿಸವಿದು ವುಂಬಾಯತಿಕೆ ನಿನಗಹುದು ಸಭೆಯಲಿ ಬಾಯ ಬನ್ನಣೆಯಧಿಕ ವೀರಾಳಾಪ ನಿನಗಹುದು (ಕುಪ್ಯಾಪ್ರೋ. ಹಂ. ೨೯೯); ವೀರಾಳಾಪದ ವಿಪುಳ ಪ್ರತಾಪದ ಬನ್ನಣೆಯ ಬಿನ್ನಣದ . . . ಹರಿಗೆಕಾಱರ ಮೊತ್ತದೊತ್ತಿನು ಭಯಪಾರ್ಶ್ವದೊಳಿಂಬುಗೊಂಡು (ಪಂಪಾರ. ೩-೩೩ ಪ). 'ಬನ್ನಣೆಗಾಱ' ಪರಾ. ೩. ಪುರುಷರನು ಬೆಗಡುಗೊಳಿಸುವ ಬನ್ನಣೆಯ ನುಡಿಯ ಭಾವೆಯರು ಬರುತಿದ್ದರು (ಪಪಪೋ. ೨೯-೦೩). ೪. ಚೆಲುವು; ಸೌಂದರ್ಯ : ' ಬನ್ನಣೆಗಾರ್ತಿ ' ಪರಾ. ೫. ವರ್ಣಲೇಪನ : ತನ್ನ ಚಿಂತೆಯದೊಂದು ದೈವದ ಗನ್ನಗತಕವದೆರಡು ಭಾವದ ಬನ್ನಣೆಯ ಬಗೆ ಮೂಱು ದೈವದ ಭಿನ್ನೆಮುಖ ನಾಲ್ಕು (ಕುಪ್ಯಾಕಾ. ೩-೩); ಬಯಲ ಬನ್ನಣೆ ಸಂಸಾರಾಯಿದ ಭಾವಿಸಿ ನೋಡಲು ಘೋರ (ಪತ್ಯಪ. ೩೬-೨). ೬. ಅಲಂಕಾರ; ಶೋಭೆ : ನನ್ನಿಯಿಂ ಭೂಕಾಂತೆಯೆನುತ ಲೋಷಧಿಯರಸ ಮನ್ನಿಸುತ ಪಸುರುಡಿಗೆಗೊಟ್ಟನೋಯೆನೆ ಕಳಮ ಬನ್ನಣೆಯೊಳಾ ಪುರವ ಬಳಸಿರ್ದುದೇನೆಂಬೆ ಸಂಭ್ರಮ ವಿಜೃಂಭಣೆಯನು (ಪಂಕಾರಾ. ೦-೩-೩೯). [<ಸಂ. ವರ್ಣನ]

ಬಣ್ಣನೆಗಾರ, ಬನ್ನಣೆಗಾಱ (ನಾ). ವರ್ಣಿಸುವವನು; ಬಣ್ಣನೆ ಮಾಡುವನು : ' ಬಣ್ಣನೆಗಾರ್ತಿ ' ಪರಾ. **ಬನ್ನಣೆಗಾಱ** : ಬನ್ನಣೆಗಾಱರೊಳ್ಳುರಿಚರಕ್ಕರಿಗರ್ ಕೆಳೆಪಾರ್ವ ಮಕ್ಕಳುಂ ತನ್ನೊಡನಾಡೆ ನಾಡೆ ನಲಿಗುಂ ಚಿಕದೇವನೃಪಂ (ಪಕಪಿ. ೩-೦೦೦).

[ಬಣ್ಣನೆ + – ಗಾರ (< – ಕಾಱ)]

ಬಣ್ಣನೆಗಾರ್ತಿ, ಬನ್ನಣೆಗಾರ್ತಿ (ನಾ). ೧. ಬಣ್ಣಿಸುವವಳು: "ವರ್ಣನೆ ಮಾಡುವವಳು" (ಪ್ರಪಣ್ಯ). **ಬನ್ನಣೆಗಾರ್ತಿ** : ೨. ಚೆಲುವೆ; ಸುಂದರಿ : ಚೆನ್ನಾಗಿ ಲಾಲಿಸು ಚೆಲ್ವಡರಿದ ನಿನ್ನ ಕರ್ಣಾಂತರದಲಿ ಮೆಱೆವ ಹೊನ್ನ ಹೂವಿಗೆ ಪರಿಮಳ ಬರೆ ವೇಳುವೆ ಬನ್ನಣೆಗಾರ್ತಿ ಚಿತ್ತೈಸು (ಪೋಪತ. ೨೯-೨). [ಬಣ್ಣನೆಗಾರ + – ತಿ$_1$ (< – ಇತ್ತಿ)]

ಬಣ್ಣನೆನುಡಿ, ಬನ್ನಣೆನುಡಿ (ನಾ). ಹೊಗಳಿಕೆಯ ಮಾತು; " ವರ್ಣನೋಕ್ತಿ, ಸ್ತುತಿವಚನ " (ಪ್ರಪಣ್ಯ). **ಬನ್ನಣೆನುಡಿ** : ಅಲ್ಲಿ ನೆರೆದಿರ್ದ ಪಾರ್ಥಿವರೆದೆ ತಳವೆಳಗಾಗೆ ರಾಯನ ಕುವರಿ ಬಳಿಸಲ್ವ ದಾದಿಯ ಬನ್ನಣೆನುಡಿಗೆ ಪೆರ್ಕಳಿಸುತೈದಿದಳಾ ಸಭೆಗೆ (ಕರ್ಣಪ್ಯ. ೩-೦೨); ಪ್ರೌಢನಳಸಿಂಗರಾರ್ಯಂ ರೂಢಿಗೆ ಬರ್ಪಂತುಟುಸಿರ್ದ ಬನ್ನಣೆನುಡಿಯೊಳ್ ಪ್ರೌಢಿಗೆ ಪಿಟ್ಗುತ್ತರಸಂ ಗಾಢೋತ್ಸುಕನಾದನಾತ್ಮಜಾಲೋಕನದೊಳ್ (ಪಕಪಿ. ೪-೫೯). [ಬಣ್ಣನೆ + ನುಡಿ$_2$]

ಬಣ್ಣನೆವಾತು, ಬನ್ನಣೆವಾತು (ನಾ). ಹೊಗಳಿಕೆಯ ಮಾತು ; ಕೊಂಡಾಟದ ನುಡಿ : [ಬಣ್ಣನೆ] [ಪಾಠಾಂ. ಬನ್ನಣೆ]ವಾತಾಡುವ ಪರಿಹಾಸಗೈವ ಗಾಡಿಕಾತಿಯರು ಗಣನೆಯಿಲ್ಲದೆ ಜೋಡುಗೂಡಿರುವರು ಕೂರ್ಮೆಯೊಳು (ಪದಿಪ. ೦-೦೭). **ಬನ್ನಣೆವಾತು** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಬಣ್ಣನೆ + ಮಾತು$_1$]

ಬಣ್ಣನೆವೆಱು (ಕ್ರಿ). ಕೊಂಡಾಟವನ್ನು ಪಡೆ ; ಹೊಗಳಿಸಿಕೊಳ್ಳು : ಪತಿಪಾದಭಕ್ತೆಯರೆನಿಸಿ [ಬಣ್ಣನೆ]ವೆತ್ತ ಸತಿಯರೊಲಿದು ಸಮನಿಸುವ ಪತಿಶುಶ್ರೂಷೆಯ ಬಗೆಯನಱಿತು ಸಂಗತಿಗೈದದನು ಬಣ್ಣಿಪೆನು (ಪದಿಪ. ೩-೩). [ಬಣ್ಣನೆ + ಪೆಱು$_1$]

ಬಣ್ಣಬಂಟ ? (ನಾ). (?) : ಅತ್ತಿಗೆಯೊಬ್ಬಳ ಕೂಡ್ಯಾಡಿ ಬಾಹೋದು ಕಂಡೆ ಸತ್ಯವ ಮಾಡುವೆ ಸಾರನೆಂಟ ಬಣ್ಣಬಂಟ ನೂಱೆಂಟ ಬಿಡು ಎನ್ನ ಗಂಟ (ಕಪಕಿ. ೩೩-೨). [?]

ಬಣ್ಣಬಣ್ಣಿಗೆ 'ಬಣ್ಣವಣ್ಣಿಗೆ' ನೋ.

ಬಣ್ಣಬಾಸಿಗ 'ಬಣ್ಣವಾಸಿಗ' ನೋ.

ಬಣ್ಣಮಿಾನ್ (ನಾ). ಒಂದು ಬಗೆಯ ಬಣ್ಣದ ಮಿಾನು : ಗೋರಿವಲೆ ಖಂಡವಲೆಗಳೆಂಬಿವಂ ಬೀಸರಂಬುಗದೆ ಬಿರ್ಚಿ ಬೀಸಿದಾಗಳ್ . . . ಪಂದಿಮಿಾನ್ ಪೆಱೆಮಿಾನ್ ಬಗ್ಗಡೆ ಬಣ್ಣಮಿಾನೆನಿಪಿವೆಲ್ಲಂ ಬೀಳ್ದುವಾತಾಣದೊಳ್ (ರಾಜಕೇ. ೩-೦೦೩). [ಬಣ್ಣ + ಮಿಾನ್$_2$]

ಬಣ್ಣವಟ್ಟಿಗೆ (ನಾ). (ಕದಕ್ಕೆ ಹಾಕುವ) ಕೆತ್ತನೆ ಕೆಲಸ ಮಾಡಿದ ಅಡ್ಡಪಟ್ಟಿ : ಮಣಿಸತ್ತಿಗೆಯ ಮೊಗಮಂಟಪದ ಬಣ್ಣವಟ್ಟಿಗೆಯ ಅಮಳಗುಟಿಯ . . . ಸಿಂಗರದೊಂದು ದೇಗುಲಂ ಕಣ್ಗೆಡ್ಡಮಾಗಿ ರಂಜಿಕುಂ (ಶಾಪೂಶ್ವ. ೩೯-೨೯). [ದೇ. ॥ ತುಳು. ಬಣ್ಣಟಿಗೆ, ಬಣ್ಣಾಟಿಗೆ]

ಬಣ್ಣವಡೆ 'ಬಣ್ಣಂಬಡೆ' ನೋ.

ಬಣ್ಣವಣ್ಣಿಗೆ, ಬಣ್ಣಬಣ್ಣಿಗೆ, ಬಣ್ಣಾಬಣ್ಣಿಕೆ, ಬಣ್ಣಾವಣ್ಣಿಗೆ (ನಾ). ೧. ಬಣ್ಣ ಬಣ್ಣಗಳಿಂದ ಕೂಡಿದುದು; ನಾನಾವರ್ಣಗಳಿಂದ ಕೂಡಿದುದು : ಸೂಟಸೂಟದೇಂ ಸವಿದುವೊ ಬಣ್ಣವಣ್ಣಿಗೆಯ ಪೂಗಳ ಸೌರಭಮಂ ಮದಾಳಿಗಳ್ (ಅದಿಪು. ೦೦-೦೨೬); ಬಣ್ಣವುರಂ ತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯ ನೀರ್ವೂಗಳ ರಜಂಗಳುಮನೊಳದೊಂಡಿನ ಪಾಲ್ಗಳುಮಂ ಪೀರ್ದು (ಕಾದಂಬಾ. ೩೨೬); ಗಗನತಳಂಗಳೊಳ್ ಖಚಿತರತ್ನಕದಂಬದ ಕಾಂತಿ ಬಣ್ಣವಣ್ಣಿಗೆಯ ಮುಗಿಲ್ಗಳಂ ಕೆದಱೆ (ಅಪಂಪು. ೯-೬೩). ೨. ಬಣ್ಣ ಬಳಿಯುವುದು; ಚಿತ್ರಣಕಾರ್ಯ: ಪಳಿಕಿನ

ಪಲಗೆಯುಮಂ ಬಣ್ಣವಣ್ಣಿಗೆಯ ಬಟ್ಟೆಗೆಗಳಂ ತಾನೆ ತಂದು ಕೊಟ್ಟು (ಲೀಲಾವ. ೭-೮೯ ಪ); ಅವನ ಬಣ್ಣವಣ್ಣಿಗೆಯ ಸ್ಪರ್ಶ ಸ್ಪರ್ಶಕ್ಕೂ ಚಿತ್ರದ ರೂಪು ಕಣ್ಣೆರೆಯುವಂತಿತ್ತು (ಪಿಂಗಳ. ೨೯). ೩. ಅನೇಕ ವಿಧವಾದುದು ; ಬಗೆಬಗೆಯಾದುದು : ಬೆಣ್ಣೆಗಳ್ಳನ ನಚ್ಚಿ ಹಣ್ಣಿ ಶಿವವಿರಹಿತಂ ಬಣ್ಣವಣ್ಣಿಗೆಯ ದೈವವೆ ನೆರಪಲು (ಸಾಪಂಚ. ೨-೬೭). ೪. ಹೊಗಳಿಕೆ ; ಸ್ತುತಿ : ಕೊಂಡಾಟ : ಪರಿಪರಿಯ ಬಣ್ಣವಣ್ಣಿಗೆಗಳಂ ಜಪಿಸುತುತ್ತರದಿಙ್ಮುಖಿಕೆ ನಡೆವುತೆ (ಪಡ್ಯಾಂ. ೬-೫೯). ೫. ಸೊಗಸು ; ಅಂದ : ಬಣ್ಣಸರವ ಪಸರವನಿಕ್ಕಿದಂತೆಲ್ಲ ಬಣ್ಣವಣ್ಣಿಗೆಯಲ್ಲಿ ಕುಳಿತು ಸಣ್ಣದನಿಯೆಸೆಯೆ ಬಸದಿ ತುಂಬಿರೆ ಕೂರ್ತು ಬಣ್ಣಿಸಿದರು ಪುರುಜಿನನ (ಭರತ. ೦೮-೬೨). ೬. ಬೆಡಗಿನ ವರ್ತನೆ ; ಬಣ್ಣಾಚಾರ ; ಬಿನ್ನಾಣದ ನಡವಳಿಕೆ : ಹೆಚ್ಚಿದುದು ನಿನ್ನ ರಾಣುವೆಯದಱಿನವರೊಳಗೆ ಮಚ್ಚರವ ಮಾಡಬೇಡೆಂಬುದನೆ ಬಿಟ್ಟು ನಿನ್ನಿಚ್ಚೆಗತನದಿ ಬಣ್ಣವಣ್ಣಿಗೆಯ ಮಾತನಾಡುವುದು ನನಗಾದುದಿಲ್ಲ (ಸಪ್ಕುಳಾ ೦-೪೫). ಬಣ್ಣಬಣ್ಣಿಗೆ : ೧. ಕಣ್ಣಪ್ಪನಂ ತಂದು ಗಣಪದವಿಯಂ ಕೊಟ್ಟು ಬಣ್ಣಬಣ್ಣಿಗೆಯ ಪೊಸಬೀಳುಡೆಗಳಂ ಕೊಟ್ಟು (ಕಣ್ಣಪ. ಪೇ. ೦೫೦-೦೯). ಬಣ್ಣಾಬಣ್ಣಿಕೆ : ೩. ಹಕ್ಕಿ ಪುಕ್ಕಗಳಿಂದ ನಿರ್ಮಿತವಾದ ಬಣ್ಣಾಬಣ್ಣಿಕೆಯಾದ ಅವರ ವೇಷ . . . ಅವರ ಆನಂದವನ್ನು ಸೂಚಿಸುತ್ತವೆ (ಭಾರದ. ೫೬೪). ಬಣ್ಣಾವಣ್ಣಿಗೆ : ೧. ಬಣ್ಣಾವಣ್ಣಿಗೆಯ ದುಃಖವನೆಯ್ದೆ ಕುದಿದಂದು . . . ಭವರೋಗಶರಧಿಯಂ ದಾಂಟಿ ನೀಗುವೆವೆಂದು ನೆನೆವುತಿರಲು (ಸಾಪಂಚ. ೪-೭೨ ರಗಳೆ). [ಬಣ್ಣ + ಬಣ್ಣಿಗೆ$_1$]

ಬಣ್ಣವಳಿ (ಕ್ರಿ). ಸೊಗಸಂ ಕೆಡು ; ಅಂದಗೆಡು : ಪಣ್ಣ ಬಾಯಿನಮಂ ಬಣ್ಣವಳಿಯದೆ ಕೊಟ್ಟು ಚೂತವಲ್ಲಭನೆಂಬ ಪೆಸರಿಟ್ಟು (ಗಿರಿಕ. ೨-೭೦ ಪ).

[ಬಣ್ಣ + ಅಳಿ$_1$ (< ಅಳ್ಳಿ$_1$)]

ಬಣ್ಣವಳ್ಗು (ಕ್ರಿ). ಕಾಂತಿಗುಂದು ; ಕಳಾಹೀನವಾಗು : ಮುದ್ದಾಜಮ್ಮಣ್ಣಿ :— (ಬಣ್ಣವಳ್ಗಿ, ತುಟಿಗಚ್ಚಿ . . . ಕೀಲ್ಗದವನ್ನೆಳೆದು ಕಿರುಗಂಡಿಗೆ ನಿಲಿಸಿಕೊಳ್ಳುವಳು). (ಪಟ್ಟಿಕ. ೬೭-೦೦).

[ಬಣ್ಣ + ಅಳ್ಗು (<ಅಳ್ಗು)]

ಬಣ್ಣವಾಡು (ನಾ). ವರ್ಣನೆಯಿಂದ ಕೂಡಿದ ಸ್ತುತಿರೂಪವಾದ ಹಾಡು : ವೀಣೆದಳೆದು ಬಣ್ಣವಾಡುಗಳಂ ಬಾಜಿಪೋಜೆಯೊಳೊರ್ಮೆ ನುಣ್ಣರವೆತ್ತಿ ಪಾಡುವ ಬಿಡಯದೊಳೊರ್ಮೆ . . . ಬರ್ದಿಲನಾಡೊಳ್ ಬಾಟ್ಟಂ (ಪಕಪಂ. ೫೫-೨೦) ; ದೊಡ್ಡಮ್ಮ . . . ಬಣ್ಣವಾಡಿನ ರಸಗೇಯದ ರಾಗಮಾಲಿಕೆಯನ್ನು ಸವಿಗರೆಯುವಳು (ಮಂತ್ರಕ. ೫೭-೧೯). 'ಬಣ್ಣಗಬ್ಬ' ಪರಾ. [ಬಣ್ಣ + ಪಾಡು$_2$]

ಬಣ್ಣವಾಡುಗೆಯ್ (ಕ್ರಿ.) ವರ್ಣನೆಯಿಂದ ಕೂಡಿದ ಸ್ತುತಿರೂಪವಾದ ಹಾಡನ್ನು ರಚಿಸು : ಆ ವಾದ್ಯವಿದ್ಯಾಧಿಕರ್ . . . ಕಾಮತಂತ್ರದ ವೈಶಿಕಪ್ರಕರಣಮಂ ಬಣ್ಣವಾಡುಗೆಯ್ದು ಪಾಡಿದರ್ (ಪಕಪಂ. ೬-೦೫೯ ಪ).

[ಬಣ್ಣವಾಡು + ಕೆಯ್$_1$]

ಬಣ್ಣವಾತು (ನಾ). ತೋರಿಕೆಯ ನುಡಿ ; ಬಣ್ಣಾಚಾರ ; ಸೋಗಿನ ಮಾತು : ಕಣ್ಣೊಳು ನೋಡಿ ಮನದೊಳು ಮಚ್ಚರವನು ಹಣ್ಣುವ ರಾಯರ ಗಂಡ ಬಣ್ಣವಾತಲ್ಲ ನಿನ್ನಾಣೆ ಮೂಲೋಕದ ಕಣ್ಣುದಯಿಸಿದೆ ನೋಡೇಳು (ಕುರಾಸಾಂ. ೨೯-೩೩) ; ನಿನ್ನಾ ಬಣ್ಣವಾತಿಗೆ ಮಾಱುವೋದೆಂ (ರಾಮಾಶ್ವ. ೦೬೫-೨). [ಬಣ್ಣ + ಮಾತು$_1$]

ಬಣ್ಣವಾವುಗೆ (ನಾ). ಬಣ್ಣದ ಹಾವುಗೆ ; ವರ್ಣಮಯವಾದ ಪಾದರಕ್ಷೆ :— ಆ ವೇಳೆಯೊಳ್ ಮೆಟ್ಟಿದ ಬಣ್ಣವಾವುಗೆಯ . . . ಬೆಡಂಗಿನ ಬಾಲೆಯೊರ್ವಳ್ . . . ಪೊಂಬಟ್ಟಲನೆತ್ತಿ ಬರುತುಮಿರ್ದಳ್ (ರಾಮಾಶ್ವ. ೪೮-೦೬). [ಬಣ್ಣ + ಪಾವುಗೆ]

ಬಣ್ಣವಾಸಿಗ, ಬಣ್ಣಬಾಸಿಗ (ನಾ). ೧. ಬಣ್ಣಬಣ್ಣದ ಹೂವುಗಳ ದಂಡೆ.—ಮಾಲೆ : ನಮೇರು ಮಂದಾರ ಪಾರಿಜಾತದ ಬಣ್ಣವಾಸಿಗಂಗಳುಂ . . . ಬಿಡುಮುತ್ತಿನ ಸೇಸೆಗಳುಂ ಬೆರಸು ಮಹತ್ತರದೇವಿಯರ್ ಬಂದು ಪೊಡೆವಟ್ಟು (ಆದಿಪು. ೨-೬೭ ಪ) ; ಅದಿರ್ಮುತ್ತೆಯ ವಕುಲದ . . . ಕುಂದದ ಬಣ್ಣವಾಸಿಗಂಗಳನುದಾತ್ತಮಾಲ್ಯಾಂಗಮಹಿರುಹಂ ಕುಡುತಿರ್ಕುಂ (ಶಾಂತಿಪು. ೬-೦೦೨); ಸುರಚಾಪಂಗಳನಿಂದ್ರಂ ಮುರಿದಿಟ್ಟಂತಭ್ರಪಥದೊಳಿಗಳ ಬಳಗಂ ಬೆರಸೆಸೆದ ಬಣ್ಣವಾಸಿಗವೆರಡಂ ಚಲದಮಲಕಮಳಲೋಚನೆ ಕಂಡಳ್ (ಸೂಕ್ತಿಸು. ೭-೩೯). ಬಣ್ಣಬಾಸಿಗ : ೨. ಮದುಮಕ್ಕಳ ಹಣೆಗೆ ಕಟ್ಟುವ (ಬಣ್ಣದ ಕಾಗದ, ಬೆಂಡು ಮುಂತಾದುವುಗಳಿಂದ ಮಾಡಿದ) ಒಂದು ಬಗೆಯ ಅಲಂಕಾರ + ಕರುಳ ತೊಂಡಲು ಖಂಡದ ಬಣ್ಣಬಾಸಿಗ ನರದ ಹಂಜರ ಚಪ್ಪರದಲಿ ನೆರೆದು ಶಾಕಿನಿಯರು ಮದುವೆಯ ಮಾಡುತ ಮೆಱೆದರು. (ಕಂನಪಿ. ೦೫-೭೩). [ಬಣ್ಣ + ಬಾಸಿಗ]

ಬಣ್ಣವಿಕ್ಕು (ಕ್ರಿ). ಬೂಟಾಟಿಕೆಯ ಮಾತನ್ನಾಡು : ಅಣ್ಣನಲ್ಲೆ ಮಗಾತನೊಡೆಯನ್ನೆ ನೀನಿಂತು ಬಣ್ಣವಿಕ್ಕದಿರು ಸಾಕು (ಭರತ. ೪೮-೨೩).

[ಬಣ್ಣ + ಇಕ್ಕು]

ಬಣ್ಣವಿಡು (ಕ್ರಿ). ೧. ಬಣ್ಣವನ್ನು ಲೇಪಿಸು ; ರಂಗು ಹಚ್ಚು : ಕರುವಿಟ್ಟಂ ಕಾಮದೇವಂ ರತಿಯತಿಶಯದಿಂ ಬಣ್ಣವಿಟ್ಟಳ್ . . . ಎನಲ್ಕಾಂತೆ ಕಣ್ಗೆಡ್ಡಮಾದಳ್ (ಲೀಲಾವ. ೩-೪೬) ; ತದ್ವಸಂತಂ ಪದೆಪಿಂದಂ ಬಣ್ಣವಿಟ್ಟಂಗಜನೃಪತಿಯ ಗೂಡಾರವೋ ಶಾನಿದೆಂಬಂದದೆ . . . ಇರ್ದತ್ತು ಚೂತಂ (ಕುಸುಮಾ. ೯-೪೫). ೨. ಚಿತ್ರವನ್ನು ರಚಿಸು : ದೊಡ್ಡಮ್ಮ :—(ಬಣ್ಣವಿಡುತ್ತ ಮೆಲ್ಲಮೆಲ್ಲಗೆ ಹಾಡಿಕೊಳ್ಳಲಾರಂಭಿಸುವಳು) (ಮಂತ್ರಕ. ೩೦-೦೫). ೩. ಹೊಗಳು ; ಪ್ರಶಂಸಿಸು : ಮರುಳೆ ನೀ ಬಲು ಬಣ್ಣವಿಡೆ ಖದ್ಯೋತ ರವಿಯಹುದೆ (ಕೌತಿಂಗ. ೨೦-೨೦). ೪. ಮೆರುಗು ಕೊಡು ; ಒಪ್ಪವಿಡು ; ಅಂದಗೊಳಿಸು : ಭಾವದ ಬಯಲಿಂಗೆ ಬಣ್ಣವಿಟ್ಟನೆಮ್ಮ ಬಸವಯ್ಯನು (ಪೀಲವ. ಕ. ೪-೪) ; ಕೌರವನು. . . ನೆನೆದ ಮತವನು . . . ಅನುಜಮತದಲಿ ವಿಸ್ತರಿಸಿ ಮೈದುನನ ನುಡಿಯಲಿ ಬಣ್ಣವಿಟ್ಟನು ಜನಪನಪಕೀರ್ತ್ಯಂಗನೆಗೆ ತೊಡಿಸಿದನು ಭೂಷಣವ (ಕುಪ್ಯಾಂಗ. ೨-೨೨); ಅಗಣಿತಮತಿಗಳಾದವರೀ ಕೃತಿಯನು ಮಿಗೆ ತಿರ್ದಿ ಬಣ್ಣವಿಡುವುದು (ಅಂಜನ. ೦-೦೦೬). [ಬಣ್ಣ + ಇಡು$_1$]

ಬಣ್ಣವಿಳಿ (ಕ್ರಿ). ಕಾಂತಿಹೀನವಾಗು; ಕಳೆಗುಂದು : ಕರುವಿಯನ್ :— (ಬಣ್ಣವಿಳಿದು, ತುಟಿಗಚ್ಚಿಕೊಂಡು, ಹೊರಡುವನು) (ಮಂತ್ರಕ. ೨೮-೦೬).

[ಬಣ್ಣ + ಇಳಿ$_1$ (< ಇಳ್ಳಿ)]

ಬಣ್ಣವುರ (ನಾ). ೧. ವಿಧವಿಧವಾದ ಬಣ್ಣಗಳಿಂದ ಕೂಡಿದ ವಸ್ತು, ಚಿತ್ರ ಮುಂತಾದುವು : "ಬಣ್ಣವುರಮೆಂದು ವರ್ಣಪೂರಂ" (ಕಶಸಾ. ೬೩-೪೦೩); ಬಣ್ಣವುರಂ ತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯ ನೀರ್ವೂಗಳ ರಜಂಗಳುಮನೊಳದೊಂ [ದಿಂ] ಡಿನ ಪಾಲ್ಗಳುಮಂ ಪೀರ್ದು (ಕಾದಂಬಾ. ೫೨೬); ಅಲಂಕೃತವಾದ ಬಣ್ಣವುರದ ಗೋಡೆಗಳನ್ನೂ . . . ತುಂಗರಾಯನು ಪರೀಕ್ಷಿಸುತ್ತಿರುವನು (ಪಟ್ಟಿಕ. ೪೮-೩). ೨. ಸಿಂಧೂರ, ಬುಕ್ಕಿಹಿಟ್ಟು ಮುಂತಾದ ಬಣ್ಣದ ಹಾಗೂ ಸುಗಂಧದ ಪುಡಿ : ಸಿರಿಗನ್ನಡಿ ಬಣ್ಣವುರಂ ಕರಿ[ಯೆ]ಳ್ ಬಿಳಿಯರಳೆ [ಮ]ಧು ಮೊಸರ್ ನೆ[ಲ್ಲಾ]ಜೋತ್ಕರಮೆಂದಶೇಷಮಂಗಳಪರಿಕರಮೆಸೆದುದು ವಿವಾಹವೇದಿಯ ಕೆಲದೊಳ್ (ವರ್ಧಮಾ. ೩-೮೫); ಗೋರೋಚನಂ ಲಾಜೆ ಬಣ್ಣವುರಂ . . . ಕಾಶ್ಮೀರಮೆಂಬಿವಱಿಂ ತೆಕ್ಕನೆ ತೀವಿ ಪೊಂಬರಿಯಣಂ ಚೆಲ್ವಾದುವು (ಜಗಪಿ. ೧೦-೯೮); ಲಾಜೆಯಂ ಸಮೆವ ಬಣ್ಣವುರಂಗಳನೊಪ್ಪೆ ಮಾಟ್ಟು ನಾನಾವಿಧಮಂಗಳಾಚರಣವಕ್ಷೆಯರಿಂ . . . ತೀವಿ (ವರ್ಧಪು. ೭-೩). ೩. ಬಣ್ಣವನ್ನು ತುಂಬುವುದು ; ರಂಗು ಹಾಕುವುದು : ಕವಿ

ಸುಟ್ಟುಂಬೆಯಿಂದೆ ಸತ್ಯಂ ತೋರ್ಪನಾ ಅವಸರಕೆ ಸೌನ್ದರ್ಯತತ್ತ್ವಮವ ತರಿಸಿಕೊಳ್ವವನೊಲ್ವಾರ್ಪ ರೂಪಾರಂ ಮೆಯ್ಸಿರಿ ಬಣ್ಣವುರಂ ಬಾಳ್ಕೆಗಳಿ ನೊಪ್ಪಿಸಿಯದಂ ಕಾಣ್ಕೆ ಮಾಳ್ಕುಂ (ಸಂಸಪ. ೧೦-೬೯). ೪. ರಂಗವಲ್ಲಿ; ಹಸೆ : ಭವಲಾಲಾಟವಿಲೋಚನಾಗ್ನಿಶಿಖೆಯಿಂ ಬೆಂದಳ್ಕಿ ಮತ್ತಂ ಮನೋ ಭವನೆಟ್ಟತ್ತೊಡೆ ಕಾಮಕಾಂತೆ ಬಟಿಯಂ ತನ್ನಿಚ್ಛೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟ್ಕೆಯಾಯ್ತು ನವಿಲಿಂ ಕುಂದಂಗಳಿಂದಿಂದ್ರಗೋಪವಿಳಾಸಂಗಳಿ ನಾಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ (ಶಂಪಣಾ. ೬-೨೪); ಣ "ಬಣ್ಣವುರಂ ತೀವಿದ = ವರ್ಣಪೂರ ಎಂಬ ವಸ್ತ್ರದಿಂದ ಮುಚ್ಚಿದ . . . ಬಣ್ಣವುರ < (ಸಂ) ವರ್ಣಪೂರ ಎನ್ನುತ್ತಾನೆ ಕೇಶಿರಾಜ; ಅರ್ಥ ಅನಿರ್ದಿಷ್ಟ; ಬಣ್ಣಬಣ್ಣದ ಜಮಖಾನೆ, ನೆಲಕ್ಕೆ ಹಾಸುವ ಬಟ್ಟೆ ಎಂಬರ್ಥವಿರಬಹುದು" (ಶಂಪದೀ. ೨೪೬); ಬಳಭಿಚ್ಚಾಪಲತಾವಳಿ ಬಳಸಿದ ಬೆಳ್ಮುಗಿಲ ಮುಱಿಯಿದೆನೆ ಬಣ್ಣವುರಂ ಬಳಸಿರ್ದೊಡೆ ಸೊಗಯಿಸಿದುದು ಪಳಿಕಿನ ಪಟ್ಟವಣೆ ವೇದಿಕಾಧಿತ್ಯಕದೊಳ್ (ಕಂದ್ರಪು. ೬-೩೨); ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ಶೋಭಿಸಿತು (ಜಯಣಾ. ೨-೩೯).

[< ಸಂ. ವರ್ಣಪೂರ]

ಬಣ್ಣವೆರು (ಕ್ರಿ). (ನಾಚಿಕೆಯಿಂದ) ಕೆಂಪಾಗು : ತಿಮ್ಮಾಜಮ್ಮಣ್ಣಿ:— (ಬಣ್ಣವೆತ್ತು, ಹಿಂದಣ್ಗೆ ಹುದುಗುವಳು) (ಶಿಪ್ರಿಅ. ೦೦೦-೦೦).

[ಬಣ್ಣ+ಪೆರು$_1$ (< ಪೆಱು$_1$)]

ಬಣ್ಣವೆರ್ಚು (ಕ್ರಿ). ಕಾಂತಿಯು ಹೆಚ್ಚಾಗು; ಥಳಥಳಿಸು : ಪಾಂಡ್ಯನಾರಿಯರ ಮೆಯ್ಯ ಪಚ್ಚದ ಪೊಸವೊಗರಿಂ ಬಣ್ಣವೆರ್ಚಿ ಮಿಱುಗುವ ಸೌಧಂಗಳಿಂ ರಂಜಿಸಿ . . . ತೋರ್ಪ ಕಾಂಚೀಪುರಮುಂಟು (ರಾಮಾಶ್ವ. ೬೪-೦೮). [ಬಣ್ಣ + ಪೆರ್ಚು$_1$]

ಬಣ್ಣವೇರು 'ಬಣ್ಣವೇಱು' ನೋ.

ಬಣ್ಣವೇಱಿಸು (ಕ್ರಿ). ಶೋಭಿಸುವಂತೆ ಮಾಡು; ಕಳೆಯೇರುವಂತೆ ಮಾಡು : ಬಣ್ಣವೇಱಿಪುಕ್ಕೆವದ ಪೆರ್ಕಳಮಂ ನಿಟ್ಟಿಸಾ (ಪುಶ್ರಗೋ. ೮-೨೦).

[ಬಣ್ಣವೇಱು + – ಇಸು$_3$]

ಬಣ್ಣವೇಱು, ಬಣ್ಣವೇರು (ಕ್ರಿ). ೧. ರಂಗೇರು; ಬಣ್ಣಬರು. ೨. ಶೋಭಿಸು; ಸೊಗಸಾಗು : ಭಸಿತಕ್ಕೆ ಬಣ್ಣವೇಱುವಂತೆ ರುದ್ರಾಕ್ಷಿಗೆ ಸೌಂದರ್ಯಂ ಸಾರುವಂತೆ . . . ಬಾಲ್ಯವಿಮೋಚನವಾಗಿ ಯೌವನವಾಲಿಂಗಿಸೆ (ಜಸರ. ೨-೦೦); ಮಿಗೆ ಬಾಸೆ ಬಣ್ಣವೇಱಿತು ಸೊಗಯಿಸಿದುದು ಮೊಗರಸಂ . . . ಮೇನಕೆಯಾ (ಗಿಂಕ. ೩-೩೯). ೩. (ಆಲಂ) ಸಡಗರದಿಂದ ಕೂಡಿರು; ಸಂಭ್ರಮಿಸು : ಕೆಲದೊಳಿರ್ಪಳು ಗೆಲ್ಲಗೊಂಬಳು ನೇಹವ ಬಲಿವಳು ಬಣ್ಣವೇಱುವಳು (ಹರಿಪ. ೬-೧೬). ೪. ಹೆಚ್ಚಾಗು; ಅಧಿಕಗೊಳ್ಳು : ಸತಿಯರೀ ಕೃತಿಯನಾಲಿಸಿದೊಡಂದಂದಿಗೆ ಪತಿಭಕ್ತಿ ಬಣ್ಣವೇಱುವುದು (ಹರಿಪ. ೦-೩೨). ಬಣ್ಣವೇರು : ೧. ಆ ಮಾತನ್ನು ಕೇಳಿದ ಕೂಡಲೆ ಅವನ ಮುಖ ಬಣ್ಣವೇರಿತು (ಕೂಡಿ).

[ಬಣ್ಣ + ಏಱು$_1$ (< ಏಱ್$_1$)]

ಬಣ್ಣವೋಡು (ಕ್ರಿ). ಕಳೆಗುಂದು; ಕಾಂತಿಯನ್ನು ಕಳೆದುಕೊಳ್ಳು : ನೇಸಱುರಿವುರಿಯಿಂದೆ ಸುಟ್ಟು ಕರಿಮುರಿಯೋಗಿ ಚೆನ್ನಮೆಯ್ದೊಗಲ್ ನಿನತು ಬಣ್ಣವೋಡುವುದು (ಶಿಶ್ರ. ೨-೨೬). [ಬಣ್ಣ+ಓಡು$_1$]

ಬಣ್ಣಸರ$_1$ (ನಾ). ೧. ಬಣ್ಣಬಣ್ಣದ ಮಣಿ, ಹೂವು ಮುಂತಾದುವುಗಳ ಮಾಲೆ, – ಹಾರ : "ಬಣ್ಣಸರ—ವರ್ಣಸರ = ಬಣ್ಣದ ಮಾಲೆ" (ಶಿಪ್ರಕೋ. ೨೬); ಅಂದುಗೆ ಕಂಕಣಂ ಸರಿಗೆ ಬಣ್ಣಸರಂ ಕಟಿಸೂತ್ರಮೆಂದಿವೊಂದೊಂದಱೊಳೊಂದ[ವಿಂ]ದೆಯೆನೆ ತೊಟ್ಟು (ಪರ್ಶಪು. ೩-೬೮); ಸುಗಮಬಂಧದ ಬಣ್ಣಸರದೋಳಿಗಳ ಕಂಬದ ವಜ್ರಮಯಧಾರೆಗಳಲೆಸೆದುದು ಭದ್ರಮಂಟಪವಮಲಮಣಿಮಯದ (ಕುಣ್ಯಾಲಿ. ೦೨-೦೨); ಸಣ್ಣ ಪವಳ ಕೈಕಟ್ಟಿನ ಪವಳಗಳ್ ಬಣ್ಣಸರದ ಜಾತಿಪವಳ ತಿಣ್ಣವಡೆದ ಪವಳದ ಪಸರಗಳಾಗ ಕಣ್ಣ ಕೊಕ್ಕರಿಸುತೊಪ್ಪಿದುವು (ಕಂಪದಿ. ೬-೬೬). ೨. ರಂಗಿನ ಬಾಣ, — ಸರಳು : ವರ್ಣಶರ—ಬಣ್ಣಸರ (ಶಮರ. ೨೮೯ ಶ್ರಯೋ). ಣ ಸಂಸ್ಕೃತದ 'ಶರ' ಮತ್ತು 'ಸರ' ಎಂಬ ಎರಡು ಶಬ್ದಗಳಿಗೂ 'ಬಾಣ' ಎಂಬರ್ಥವಿದೆ.

[< ಸಂ. ವರ್ಣಸರ. / ತೆಲು. ಬಣ್ಣಸರ, ಬನ್ನಸರ, ಬನ್ನಸರಿ]

ಬಣ್ಣಸರ$_2$ (ನಾ). ೧. [ಸಂಗೀತ] ರಂಜನೆಯಿಂದ ಕೂಡಿದ ಹಾಡು; ಸುಶ್ರಾವ್ಯವಾದ ಗೀತ : ಬಾಯ್ದೆಱೆಯದೆ ಬಣ್ಣಸರಮನುಚ್ಚರಿಸುವ ನೆಱೆವೆಱೆಮೊಗದಬಳೆಯ ನುಣ್ಗೊರಲತಿರಂಜನೆವಡೆಯಿತ್ತು (ಜಯಣಾ. ೬-೩೦); ದೇಗುಲಗಳೊಳಗೆ ಮೊಳಗುವ ಸಮಸ್ತವಾದ್ಯಧ್ವನಿಯಕಾರಮಂಗಳುವ ಸಂಗೀತಕಾಱರ ಬಣ್ಣಸರಗಳಾ ಪೊಳಲೊಳೆಡೆವಿಡದೆ ಘೂರ್ಣಿಸಿದುವು (ಸಮ್ಮಳಾ. ೦೨-೨). ೨. [ನಾಟ್ಯ] ವರ್ಣದ ಸ್ವರಗಳ ಲಯಕ್ಕನುಗುಣವಾದ ನರ್ತನ (?) : ಪೆಸರಱಿಯದಮರತೂರ್ಯಪ್ರಸರಂಗಳ ಜತಿಗೆ ತೊಡರದಿನಿಸೆಟಲದೆ ಬಣ್ಣಸರಂಗೊಂಡಂತಿರೆ ಬಣ್ಣಸರಂ ಸೊಗಯಿಸಿದುದೇನವಳ ಪರಿಣತೆಯೋ (ಅರಿಪು. ೯-೩೦); ಎಸಟ ಮೊನೆ ಕೂರಿತಡಿಗೆಂಬ ಸಂಕೆಯಿಂ ಮೆಟ್ಟದಂತೆ ಮುಟ್ಟದೆ ಕುಣಿದಾಗಸಮೆಂಬ ರಂಗದೊಳ್ ಬಣ್ಣಸರಮನಾಡಿದರನೇಕರಮರಾಂಗನೆಯರ್ (ಕಾಂತಿಪು. ೦೦-೦೬); ಮೈ ಪೊಳೆವ ಮಿಂಚಂ ಪೋಲೆ ಚೆಲ್ವಾಗಿ ಬಣ್ಣಸರಂ ಕಾಟ್ಪುರಮೇಱೆ ಕಾಕಳಿ ನಭೋರಂಗಾಗ್ರದೊಳ್ ನಿಚ್ಚಲಾಡಿಸುವಂ ಪಾಡಿಸುವಂ ವಿಯಚ್ಚರಿಯರಂ ವಾಗ್ಗೇಯವಿದ್ಯಾಧರಂ (ಅರ್ಥಪೇ. ೨-೯೬). 'ಜತಿಸ್ವರ' ಪರಾ.

[<ಸಂ. ವರ್ಣಸ್ವರ]

ಬಣ್ಣಸರಂಗೊಳ್ (ಕ್ರಿ). ಬಣ್ಣದ ಮಣಿಸರವನ್ನು ತೆಗೆದುಕೊಳ್ಳು : ಪೆಸರಱಿಯದಮರತೂರ್ಯಪ್ರಸರಂಗಳ ಜತಿಗೆ ತೊಡರದಿನಿಸೆಟಲದೆ ಬಣ್ಣಸರಂಗೊಂಡಂತಿರೆ ಬಣ್ಣಸರಂ ಸೊಗಯಿಸಿದುದೇನವಳ ಪರಿಣತೆಯೋ (ಅರಿಪು. ೯-೩೦). [ಬಣ್ಣಸರ$_1$+ಕೊಳ್$_1$]

ಬಣ್ಣಾಂತರ (ನಾ). [ಗಣಿತ] ಹದಿನೆಂಟು ಬಗೆಯ ಗುಣಿಸುವ ಲೆಕ್ಕಗಳಲ್ಲಿ ಒಂದು : ಅಡಿಕೆ ಸೂತ್ರಾ ಬಣ್ಣಾಂತರಾ ಇವು ಮೊದಲಾದ ಲೆಕ್ಕಾಚಾರಗಳು ಗುಣಿಸಿ ಭಾಗಿಸುವ ವಿವರ (ಶಾಸ್ತ್ರ. ೦-೪); ಮಗ್ಗಿಗಣಿತ . . . ಕ್ಷೇತ್ರಗಣಿತಮಂಗುಳಿಅಳತೆ ರಾಜನೀತಿ ಬಣ್ಣಾಂತರ ಪದ್ಮನಾಭ . . . ಉತ್ಕಳಿತಗುಣಿತವುಂ ಅಷ್ಟಾದಶಗುಣಿತಂಗಳು (ಕ್ಷೇತ್ರಗ. ೨-೪).

[?. / ತಮಿ.ವಣ್ಣಮ್ = ಗುಣಿಸುವ ಸಂಖ್ಯೆ]

ಬಣ್ಣಾಚಾರ (ನಾ). ಸೋಗಿನ ನಡೆವಳಿಕೆ; ತೋರಿಕೆಯ ವ್ಯವಹಾರ : ಪರಿಚಿತರು ಯಾರೂ ಅವನ ಬಣ್ಣಾಚಾರಕ್ಕೆ ಮರುಳಾಗುವುದಿಲ್ಲ (ಕೂಡಿ).

[ಬಣ್ಣ+ಆಚಾರ]

ಬಣ್ಣಾಬಣ್ಣಿಕೆ 'ಬಣ್ಣವಣ್ಣಿಗೆ' ನೋ.

ಬಣ್ಣಾವಣ್ಣಿಗೆ 'ಬಣ್ಣವಣ್ಣಿಗೆ' ನೋ.

ಬಣ್ಣಿಕೆ 'ಬಣ್ಣಿಗೆ$_1$' ನೋ.

ಬಣ್ಣಿಗ (ನಾ). ಕಾಂತಿಯುಳ್ಳವನು; ಶೋಭಾಯಮಾನನಾದವನು : ನಳನಳಿಪ ಲಾವಣ್ಯದಿಂದೆಸೆವ ಬಣ್ಣಿಗಂ . . . ತಾನಾಗಿ ಬಾಲಲೀಲೆಯ ಬಸವನೊಪ್ಪಿದಂ ಬಳೆದೋಳ ಭಾಗ್ಯನಿಧಿ ಹುಲಿಯುಗುರ ಸುಲಭಿಗಂ (ಜಸರ. ೦-೧೩೨). [ಬಣ್ಣ+—ಇಗ]

ಬಣ್ಣಿಗೆ$_1$, ಬಣ್ಣಿಕೆ (ನಾ). ೧. ರಂಗು; ವರ್ಣ; ಬಣ್ಣ : ಐದುಪಿಡಿ ಅಕ್ಕಿಯಂ ಐದು ಬಣ್ಣಿ[ಪಾಠಾಂ. ಣಿ]ಗೆಯ ಪುಷ್ಪಂಗಳಿಂದೈದುಪರಿಯಾಣದೊಳೈದುಪರಿಯ ಭಕ್ಷ್ಯಂಗಳಂ ಚರುವಿಟ್ಟು (ಪುಷ್ಯಾಶ್ರ. ೮-೩೦ ಪ); ಎಸೆವಪರಂಜಿಯ ತಗಡ ಬಣ್ಣಿಗೆಯನು . . . ಅಸಿಯಳಂಗಕೆ ಹೋಲಿಸುವೆನು (ಶೇಖಸಂ. ೨೩-೨೦೬); ರತ್ನಮಯಪೀಠಗಳ ನಾನಾಬಣ್ಣಿಗೆಯ ಲೋಡುಗಳು

ರಂಜಿಪವು (ಅಸಂರಾ. ೦-೩-೨೯). ೨. ಕೆಂಪುಬಣ್ಣ; ಅರುಣವರ್ಣ : 'ಬಣ್ಣಿಗೆದುಟಿ' ಪರಾ. ೩. ಬಗೆಬಗೆಯ ಬಣ್ಣಗಳಿಂದ ಕೂಡಿದುದು; ವರ್ಣಮಯವಾದುದು : ನೆಱೆ ಮಣ್ಣ ಮೆದ್ದುದರದಿ ಜಗಂಗಳ ಬಣ್ಣಿಗೆಯ ಚಿತ್ರವನು ತಾಯಿಗೆ ಬಾಯೊಳಗೆ ತೋರ್ಪ (ಕಿಷ್ಣಗ. ೦೦-೩೨-೨೬); ಬಣ್ಣಿಗೆಯ ಚಿತ್ರಾನ್ನ ಪಾಯಸಂಗಳಂ (ಪರಸು. ೨೨-೦೬). ೪. ಬಣ್ಣ ಬಳಿಯುವಿಕೆ; ಲೇಪನ : 'ಬಣ್ಣಿಗೆವಡೆ' ಪರಾ. ೫. (ಚಿತ್ರಕ್ಕೆ ಬಣ್ಣ ತುಂಬಲು ಬಳಸುವ) ಕುಂಚ : ವಿನೋದಾಸ್ಪದವಾದ ಈ ಚಿತ್ರವು ಅರ್ಧ ಬರೆಯಲ್ಪಟ್ಟಿದೆ...ಬಣ್ಣಿಗೆಯನ್ನು ತೆಗೆದುಕೊಂಡು ಬಾ (ಕಾಳುಂತ. ೬೯-೬). ೬. ಚಿತ್ರ ಮುಂತಾದುವನ್ನು ಬರೆಯಲು ಬಳಸುವ ಬಣ್ಣ; "ಮಸಿ" (ಪ್ರಭಣ್ಯ). ೭. ವಿವರಣೆ; ವರ್ಣನೆ : ಬಾಂಧವನೆಂದು ಮುರಹರನ ಕಣ್ಣು ಕಂಡಱಿಯದಡೆ ಹಿರಿಯರ ಬಣ್ಣಿಗೆಯ ಲಱಿತೆವೆ (ಕಿಷ್ಣಗ. ೦-೦೦-೩೦). ೮. ಹೊಗಳಿಕೆ; ಸ್ತುತಿ; ಸ್ತೋತ್ರ : ಯದುಕುಲಪರಂಪರೆಯಿಂ ಪೂಜೆಗೊಂಡ ಶ್ರೀಮನ್ನಾರಾಯಣನಂ ಪೂಜಿಸುವ ವಸುದೇವನೋ. . . ಎಂದಿಂತು ಪೊಣ್ಮುವ ಬಣ್ಣಿಗೆಗಳಿಂದಳವಟಿವ ಹೃದಯಮಂ ಪದುಳಂಗೊಳಿಸಿ (ಸಕಸಂ. ೬೦-೦೨). ೯. ಸೋಗು; ತೋರಿಕೆ : ಗೊಹೇಶ್ವರಲಿಂಗದಲ್ಲಿ ಈ ಬಣ್ಣಿಗೆಯ ಮಾತು ಸಲ್ಲದು ಕೇಳಾ (ಅಸಸಂ. ೨೨೩-೦೦೦೯); ಪಾಂಡುಪುತ್ರರು ದಾಯಿಗರು ನಗುವಂದವಾದುದು ಬಾಯ ಬಡಿಕರು ಬಂದ ಬಣ್ಣಿಗೆಯೆಸಗಿ ಬಗುಳುವರು (ಶೃಷ್ಟಾಕಾ. ೦೪-೨೯). ೧೦. ರೂಪ; ಆಕಾರ; ಸ್ವರೂಪ : ಬಣ್ಣಿಗೆಯ ನೋಡಿದರೆ ಮಾದಲ ಹಣ್ಣಿನಾಕೃತಿ ಛಾಯವಿಡಿದಿಹುದು (ಶೃಷ್ಟಾಕಾ. ೯-೩೭). ೧೧. ಸೊಗಸು; ಅಂದ : ಬಿಣ್ಣಿತೇನೆಮಗೆ ನಿಮಗೆ ಬಂಧುತನದೊಂದು ಬಣ್ಣಿಗೆಯಿರಲಿ (ಭರಸ. ೩೩-೪೬). ೧೨. ಅಲಂಕಾರ; ಶೃಂಗಾರ : ಆವ ಪರಿಯ ದೇಸಿಯಾಣ್ಮಗೆ ಬಗೆವರ್ಪುದಾ ವಿಧಗಳನಾರೈದು ಭಾವಿಸಿ ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ ಭಾವವ ಬಂದಿಗೊಳುವುದು (ಹಂಪಿ. ೩-೦೬). ೧೩. ಬಣ್ಣಬಣ್ಣದ ಗೌಸಿನ ಬಟ್ಟೆ (?) : ಭತ್ತವಂ ತವನಿಧಿಗೆ ಕವಿಲೆಯಂ ಕಱೆವೆಡೆಗೆ ಎತ್ತುಗಳ ಬಣ್ಣಿಗೆಯ ಹಿಂಡಿಗೆಂದುಳಿ ನೃಪರೋಲೈಸೆ (ಸಿಸ್ಕಂಡಾ. ೯-೯೩). ಬಣ್ಣಿಕೆ : ೧೧. ವೃಷವಾಹನಂ. . . ಈಶ್ವರನ ರೂಪಂ ವಿಗುರ್ವಿಸಿ ಬಂದಿರ್ಪುದುಂ ಪುರದವರೆಲ್ಲಂ. . . ಬಣ್ಣಿಕೆಯ ಪೂಜೆಗಳಂ ಮಾಡಿ ಪೊಡೆಮಡುತಿರ್ಪನ್ನೆಗಂ (ಕರ್ಮಾಸ್ಯ. ೩-೨೨೭). [<ಸಂ. ವರ್ಣಿಕಾ]

ಬಣ್ಣಿಗೆ₂ (ನಾ). ಒಂದು ಬಗೆಯ ತೆರಿಗೆ : ಊರಲೊಕ್ಕಲಲೊನ್ದು ಪೊಱಿಯುಂ ಪತ್ತುಕೊಳಗಭತ್ತಮುಂ ಒನ್ದು ಕಂತೆಯು ಬಣ್ಣಿಗೆ ಮೂಗುಳಮಂ ಕಪ್ಪಡಕ್ಕೆ ಪಟ್ಟಿಯುಂ ಬ್ರಹ್ಮಲಿಂಗಿಬಟರ್ಗೆ ಕೊಟ್ಟುದು (ಸ್ಕುಅಂ. ೦೯೪೬, ೨೬-೨೮; 1032); ದೇವರ ಗಾಣಕ್ಕೆ [ತೆ]ಱೆ ಬಣ್ಣಿಗೆ ಡೊಂಕಿ ಬೀರವಣ ಸರ್ವ್ವಬಾಧಪರಿಹಾರವಾಗಿ ಬಿಟ್ಟರು (ಸೌಇಇ. XI-ii, ೦೩೬-೨೬; 1109); ನಿಧಿನಿಕ್ಷೇಪ ಜಳ ಪಾಶಾಣ ತರುಮಾಳಾಸಮನ್ವಿತ [ಸುಂ] ಕ ಸಾದ ಬಣ್ಣಿಗೆ (ಸೌಇಇ. XV, ೦೩೩-೩೬; 1206). [?]

ಬಣ್ಣಿಗೆಗಯ್ದು (ನಾ). ಬೇರೆ ಬೇರೆ ಆಕಾರದ ಆಯುಧ : ಓರ್ವರೋರ್ವರಂ ಬಣ್ಣಿಗೆಗಯ್ದುವಂ ಪಿಡಿದು ನಾಠಕರೋವದೆ ಕುತ್ತಿಕೊಯ್ದೊಡಂ . . . ತನು ಮುನ್ನಿನ ಮಾಟ್ಕೆಯಕ್ಕುಂ (ಶಾರ್ಕ್ಯಪು. ೬-೯೩).
[ಬಣ್ಣಿಗೆ + ಕಯ್ದು (<ಕೆಯ್ದು)]

ಬಣ್ಣಿಗೆಗಾಲು (ನಾ). ಬಣ್ಣ (ಅಲಕ್ತಕ) ಬಳಿದ ಕಾಲು : ಬಾಳೆದೊಡೆಯ ಬಣ್ಣಿಗೆಗಾಲಾ...ಮನೋಹರರೂಪದ ನೀಱೆಯ ನವಲಾವಣ್ಯದ ಸಿರಿಯನ ದೇನಂ ಬಣ್ಣಿಪೆನು (ಸಯಕಾ. ೩-೬೩); ಬಡನಡುವಿನ ಬಣ್ಣದೊಡೆಯ ಬಣ್ಣಿಗೆಗಾ[ಪಾಶಾಂ. ಕಾ]ಲ ನಿಡಿದೋಳಿನರೆವೆಱೆನೊಸಲ . . . ಬೆಡಗಿನ ಪೆಣ್ಗಳಲ್ಲಿಹರು (ಸಂಪ್ರಪಾಂ. ೦-೨೦೦). [ಬಣ್ಣಿಗೆ₂ + ಕಾಲು₁ (<ಕಾಲ್₁)]

ಬಣ್ಣಿಗೆಗೊಳ್, ಬಣ್ಣಿಗೆಗೊಳು (ಕ್ರಿ). ಹೊಳೆ; ಶೋಭಿಸು : 'ಬಣ್ಣಿಗೆಗೊಳಿಸಂ' ಪರಾ. ಬಣ್ಣಿಗೆಗೊಳು : ಬಣ್ಣಿಗೆಗೊಳುವ ಬಗೆಯ ಪೊಸವರೆಯದ ಪೆಣ್ಣಿನೊಲುಮೆಯ ಪೆರ್ಚಿವುದು (ಪರಿಷ. ೬-೨೦).
[ಬಣ್ಣಿಗೆ₁ + ಕೊಳ್₁]

ಬಣ್ಣಿಗೆಗೊಳಿಸು (ಕ್ರಿ). ಶೋಭಿಸುವಂತೆ ಮಾಡು; ಹೊಳಪುಂಟು ಮಾಡು: ಜೊನ್ನದೊಳ್ತಣ್ಪುಗೊಳಿಸಿ ಚೆಂಬೊನ್ನ ಕರ್ವಣಿಯ ಪೊಗರ್ಗಳಿಂ ಬಣ್ಣಿಗೆಗೊಳಿ ಸಿರಿವಚ್ಚದ ಪಚ್ಚವಣಿಗಳ ಬೆಳಗಿನೊಳ್ಬೆರಸಿ (ಸಕಸಂ. ೦೨೩-೦೬).
[ಬಣ್ಣಿಗೆಗೊಳ್ + -ಇಸು₃]

ಬಣ್ಣಿಗೆಗೊಳು 'ಬಣ್ಣಿಗೆಗೊಳ್' ನೋ.

ಬಣ್ಣಿಗೆದಪ್ಪು (ಕ್ರಿ). (ಆಲಂ) ಗೌರವಕ್ಕೆ ಕೆಡುಕುಂಟುಮಾಡು : ಹಿರಿಮೆಗೆ ಹಾನಿತರು : ಹೆಣ್ಣು ಬೇಕಾದರೆ ಬರಬೇಕು ನಾವೆಮ್ಮ ಬಣ್ಣಿಗೆದಪ್ಪಿ ಕೊಡುವೆವೆ (ಭರಸ. ೩೭-೪೮). [ಬಣ್ಣಿಗೆ₁ + ತಪ್ಪು₁]

ಬಣ್ಣಿಗೆದುಟಿ (ನಾ). ಕೆಂಪಾದ ತುಟಿ; ಚೆಂದುಟಿ : ಬಾಲಪಲ್ಲವವನೇಳಿಪ ಬಣ್ಣಿಗೆದುಟಿಯ (ಪ್ರಭಂಸ. ೪-೦೯); ಬಡನಡುವಿನಬಲೆ ಬಣ್ಣಿಗೆದುಟಿಯ ಚೆನ್ನೆ (ಸಮ್ಮಕೌ. ೩-೩). [ಬಣ್ಣಿಗೆ₁ + ತುಟಿ]

ಬಣ್ಣಿಗೆಬವಣ್ (ನಾ). ೧. ಅಲಂಕಾರದ ಪ್ರಮಾಣ. ೨. ವರ್ಣನೆಯ ಪ್ರಮಾಣ. ೧, ೨: ಕೊನಬುಗಾರ್ತಿಯ ಸೊಗಸಂ ಪಡೆಗುಂ ಕೃತಿಯುಂ ಪದಪಿಂದೆಡೆಯೆಡೆಯೊಳ್ತಕ್ಕತಕ್ಕ ಬಣ್ಣಿಗೆಬವಣಂ (ಸಕಪಿ. ೦-೦೬).
[ಬಣ್ಣಿಗೆ₁ + ಪವಣ್]

ಬಣ್ಣಿಗೆವಡಿಸು (ಕ್ರಿ). ಬಣ್ಣ ಬಳಿ ; ಒಳ್ಳೆಯದಾಗಿರುವಂತೆ ಚಿತ್ರಿಸು : ಬನ್ನಣಿಗೆಯ್ದು ಬಱಿದೆ ಬಣ್ಣಿಗೆವಡಿಸದಿರು (ಗೀತಗೋ. ೨೩-೪೪).
[ಬಣ್ಣಿಗೆ₁ + ಪಡಿಸು]

ಬಣ್ಣಿಗೆವಡೆ (ಕ್ರಿ). ೧. ಬಣ್ಣ ಹೊಂದು ; ರಂಗೇರು : ಬಾಲಾತಪದಿಂದ ಬಣ್ಣಿಗೆವಡೆದಿಂದ್ರನೀಲಾದ್ರಿಯನಿಳಿಗೆಯ್ವ ನೀಲನೀರದ ನಿಭಕಾಯಗೆ . . . ಆನೆಱಗುವೆನು (ಕರ್ಣಸ್ಯ. ೦-೨೬); ಬಳ್ಳಿಮಿಂಚುಗೆಯಿಂದ ಬಣ್ಣಿಗೆವಡೆದಿರ್ದ ಕಾರ್ಮುಗಿಲ ಮೋಹರದಂತೆ (ಶಾರಶಾಂ. ೩೪೯-೩೦). ೨. ಕೊಂಡಾಟಕ್ಕೆ ಒಳಗಾಗು ; ಹೊಗಳಿಸಿಕೊಳ್ಳು : ಪೊಡವಿಯ ಬಲ್ಪೊಱೆಯನಿಟ್ಟಿಪಿ ಬಣ್ಣಿಗೆವಡೆವರ್ (ಅಪ್ರತಿ. ೨-೦೬). [ಬಣ್ಣಿಗೆ₁ + ಪಡೆ₁]

ಬಣ್ಣಿಗೆವೆಳಗು (ನಾ). ಥಳಥಳಿಸುವ ಕಾಂತಿ ; ಸೊಗಸಾದ ಹೊಳಪು : ಪೊಗರೇಱುವ ಮೊಗಸಿರಿಯುಂ ಬಗೆಗೊಳಿಸುವ ಬಗಸೆಗಣ್ಣ ಬಣ್ಣಿಗೆವೆಳಗುಂ ಮಿಗೆಯೊಸಗೆವೇಟಲೀಪರಿ ನೆಗಟ್ಟೆಯ್ದಿದ ತನ್ನ ಭಾಗ್ಯದೇವತೆಗೆತ್ತಂ (ಸಕಪಿ. ೪-೩೯). [ಬಣ್ಣಿಗೆ₁ + ಬೆಳಗು₂]

ಬಣ್ಣಿಗೆವೆಱು (ಕ್ರಿ). ೧. ವರ್ಣನೆಯನ್ನು ಹೊಂದು,-ಪಡೆ : ಭೇದಿಸಿ ಕಾಣ್ಬ ತತ್ತ್ವದಿರವುಣ್ಮಿಪ ಬಣ್ಣಿಗೆವೆತ್ತ ಬಿನ್ನಣಂ (ಸಕಪಿ. ೩-೦೦೨). ೨. =ಬಣ್ಣಿಗೆವಡೆ ೧: ಸುಳಿವ ಮಿಂಚಿನ ಬಣ್ಣಿಗೆವೆತ್ತ ಕಣ್ಮಲರ್ ಮಾರ್ಮಲೆದಾರ್ಪಿನಂ (ಕಮಮಾ. ೨-೦೪೩). [ಬಣ್ಣಿಗೆ₁ + ಪೆಱು₁]

ಬಣ್ಣಿಸು, ವಣ್ಣಿಸು (ಕ್ರಿ). ೧. ಬಣ್ಣ ಹಾಕು : ರಂಗೇರುವಂತೆ ಮಾಡು : ಬಣ್ಣ ಕಟ್ಟು : ಅರಿಸಿನವ ಬೆರಸಿ . . . ಎಣ್ಣೆಯೊಳು ಮೊದಲು ಕಲಸಿದ ಬೋನದೊಳಗಿಕ್ಕಿ ಬಣ್ಣಿಸಿಯದಂ ಕಲಸಿ ಬಿಳಿಯುಪ್ಪ ನಿಕ್ಕಲದು ಸಾಸುವೆಯ ಕಟ್ಟೋಗರ (ಸೂಪಶಾ. ೩-೨೦). ೨. ಹೊಳೆಯುವಂತೆ ಮಾಡು ; ಮೆರುಗು ಕೊಡು : ಪೊಸವಿಸಲ ಪೊಳಪಿನಿಂ ನುಣ್ಣ ನುಜ್ಜಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ ಸುರಶರಾಸನಂಗಳ ನೆಟಲಿಕ್ಕಿದಂತೆ ನಿಮಿರ್ಪ ನಿರ್ಝರಂಗಳುಮಂ (ಕಾದಂಕಾ. ೩೨೬); ಬಣ್ಣಿಸಿ ನುಣ್ಣಿಸಿದ ಕರ್ಮಣಿಗಲ್ಲ ಕೈಗನ್ನಡಿಯಂತಂತು ತಳತಳಿಪ ಗಂಡ ಮಂಡಲಂ (ರಾಮಾಕ್ಯ. ೧೪೬-೨೯). ೩. ಅಲಂಕರಿಸು ; ಶೃಂಗಾರ ಮಾಡು : ಕಣ್ಣಿಗೆ ಕಜ್ಜಳವೆಚ್ಚು ಬಣ್ಣಿಸಿ ಸೊಡರ್ವೆಟ್ಟನಿಟ್ಟು

ಪಾಲೆಱ್ದೋವಿ ಚಿಣ್ಣನ ಪಕ್ಕೆಗೈದಿದಳು (ಸೋಹಕ. ೪-೭೪). ೪. ವಿಸ್ತಾರವಾಗಿ ಹೇಳು ; ವಿವರಿಸು ; ವರ್ಣಿಸು : ಸೌಧರ್ಮೇಂದ್ರಂ ನಿಮ್ಮ ರೂಪನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆಂ (ಪಡ್ಡಾರಾ. ೬೭-೬) ; ಎಸಟಂ ಮುಟ್ಟಲೊಡಂ ತನ್ನ ಸೌರಭಂಗೆಟ್ಟು ನೆಗಟ್ಟ ಕತ್ತುರಿ ಮಣ್ಗಂ ಮಸಿಗಮೆಣೆಯಪ್ಪುದೆನೆ ಬಣ್ಣಿಸುವಂ ಕೇದಗೆಯ ಕಂಪನೇವಣ್ಣಿಸುವಂ (ಅದಿಪು. ೦೦-೦೦೭) ; ಅರಸ ಬಣ್ಣಿಸಲಳವೆ ನರನ ಮಹಾಸ್ತ್ರನಾಟಕವ (ಕುಪ್ಪಾಅ. ೦೩-೬). ೫. ಹೊಗಳು ; ಕೊಂಡಾಡು ; ಸ್ತುತಿಸು : ದೇವರ್ಕಳೆಲ್ಲಮಾತನ ಶೀಲ ಪ್ರಭಾವಮಂ ಬಣ್ಣಿಸೆ (ಶಾಪುಂಪು. ೭೦) ; ಬಣ್ಣಿಪುದಿಳಾವಳೆಯಂ ಸಲೆ ಕಂಚಿಕಬ್ಬೆಯಂ (ಸೌಇಇ. XI—1, ೬೫-೪೦ ; 1028) ; ಭೀಷ್ಮಂಗೆ ಸಮರ ಸಮಾನಭಟನಿನ್ನಾವನೆಂದು . . . ಕೌರವರಾಯ ಬಣ್ಣಿಸಿದ (ಕುಪ್ಪಾಭೀ. ೦-೩೩). ವಣ್ಣಿಸು: ೧. ಗಳ್ಳಿಕ್ಕುತ ಮುಸುಕಿ ಮುಂಬರಿವ ಶುನಿಗಳು ಎಸೆದುವಾ ದಂಡಿನೆಚ್ಚಱಿಕೆಯ ಕಾವಲೊಂದೆಸಕವಸೇನ ವಣ್ಣಿಸುವೆ (ಕಂಪಂ. ೦೯-೨೪). ೫. ಪಿರಿದನೀವ ನೆಗಟ್ತೆಯ ದಾನಿಯೆನ್ದು ನಾನಾ ವಿಧದಿನ್ದೆ ವಣ್ಣಿಪುದಿಳಾವಳಯಂ ಜಗದೇಕದಾನಿಯಂ (ಎಕ. VII, ಶಿಕಾಂ. ೦೫೦-೨೫ ; 1047). [ಬಣ್ಣನೆ + — ಇಸು$_3$]

ಬತ್ತ$_1$ 'ಬ್ರತ' ನೋ.

ಬತ್ತ$_2$ (ನಾ). [ಗಣಿತ] ಸಂಕಲನ ಮಾಡುವಿಕೆ ; ಕೂಡುವಿಕೆ : " ಯುತಂ, ಯುಕ್ತಂ . . . ಕೂಡು, ಬತಂ ಇಂತಿನಿತುಂ ಕೂಡೂದಕ್ಕೆ ಹೆಸರು " (ವೃಪಹಾ. ೦೦-೨೦). [?]

ಬತಗೆಡಿಸು (ಕ್ರಿ.) ವ್ರತದಿಂದ ಭ್ರಷ್ಟನಾಗುವಂತೆ ಮಾಡು ; ವ್ರತ ಗೆಡಿಸು : ವ್ರತವುಳ್ಳವರ ಬತಗೆಡಿಸಿತ್ತು ನೋಡಾ ಮನವು (ಅಖಂಡೇ. ೨೫೭-೦೦೯). [ಬತಗೆಡು + — ಇಸು$_3$]

ಬತಗೆಡು (ಕ್ರಿ). ವ್ರತಭ್ರಷ್ಟನಾಗು : ಗುಡಿ ತನಕ ಹೋಗಿ ಬರ್ತೇನೆ ಅಂದಿತ್ತಂತೆ ಒಂದು ಬತಗೆಟ್ಟ ಮುಕ್ಕ! (ಬೆಳುಮ. ೪೫); ಹೆಣ್ಣು ಕಾಣದೆ ಬತಗೆಟ್ಟಿರುವನೇನು ? (ಕಾಗೆಕ. ೭೬). [ಬತ್ತ$_1$ (<ಬ್ರತ) + ಕೆಡು$_1$]

ಬತಗೇಡಿ 'ಬ್ರತಗೇಡಿ' ನೋ.

ಬತಣಿಕೆ 'ಬಂದಣಿಕೆ' ನೋ.

ಬತಾರೀಕು (ನಾ). ಆ ದಿನಾಂಕ ; ಆ ತೇದಿ : ಪೂಜೆ ಪಡಿತರ ದೀಪಾರಾಧನೆ ವಗೈರೇ ಬಗ್ಗೆ ಬತಾರೀಕು ಯಿನಾಮು . . . ನಡಸಿಕೊಣ್ಡು ಬರುವದು (ಎಕ. VI, ಕೊಪ್ಪ. ೪೬-೩೬; 1811). [←ಪಾರ. ಮರಾ. ಬತಾರೀಖ್]

ಬತಾಸು 'ಬತ್ತಾಸು' ನೋ.

ಬತೇರಿ, ಬತ್ತೇರಿ (ನಾ). ಕೋಟೆಯ ಗೋಡೆಗಳನ್ನು ಎತ್ತರಿಸಿ ತುಪಾಕಿಗಳನ್ನಿಟ್ಟು ಶತ್ರು ಸೈನ್ಯಗಳಿಗೆ ಸಾವು ನೋವುಗಳನ್ನುಂಟು ಮಾಡುವಂತೆ ಏರ್ಪಡಿಸಿರುವ ದುಂಡನೆಯ ಪ್ರದೇಶ ; ಕೋಟೆಯ ಮೇಲಿನ ತೋಫ್‌ಖಾನೆ : ಹೆಡವಳಿ ಮಾರ್ಗದಿಂದ ಆ ಬೆಟ್ಟ ಕೋಟೆ ನುಗ್ಗಿ, ಮೂರು ನಾಲ್ಕು ಬತೇರಿಯನ್ನು ಆಕ್ರಮಿಸಿಕೊಂಡು (ರಾಶೇಂದ್ರ. ೫೦) ; ಬಲವಾದ ಬತೇರಿಗಳನ್ನು ಬಹು ಚಮತ್ಕಾರವಾಗಿ ಸುತ್ತಲೂ ಕಟ್ಟಿದಾರೆ (ಪಾಳಗಾ. ೪೬) ; ಅವರ ಸ್ಥೂಲಕಾಯ . . . ದಪ ನಾದ ಕೋಲು—ಒಂದೊಂದೂ ಬೆಟ್ಟದ ಮೇಲೆ ನಿಂತ ಬುರುಜು, ಬತೇರಿಗಳಂತೆ ಚಿತ್ರದುರ್ಗದ ಜನಕ್ಕೆ ಪ್ರೀತಿಪಾತ್ರವಾಗಿವೆ (ಹಂಗೀತೆ. ೫). ಬತ್ತೇರಿ : ಪಟ್ಟಣದ ಕೋಟೆ ಮುಂದೆ ಯೆರಡು ಹೊಳೆ ಮಧ್ಯ ಬತ್ತೇರಿಗಳ ತಯಾರು ಮಾಡಿಸಿ ಆ ಬತ್ತೇರಿಗಳ ವಳಗೆ ತಮ್ಮ ಫೌಜನ್ನು ನಿಲ್ಲಿಸಿ (ರಾಶೇಂದ್ರ. ೨೬) ; ಕುತ್ತರಿಗೆ ಬೆಂಕಿ ಹತ್ತಲು ಬತ್ತೇರಿಗೆ ಓಡಿದರೆ ನಂದೀತೆ ? (ಗಾಬೆ). 'ಬುರುಜು', 'ಬ್ಯಾಟರಿ' ಹೋ.

[←ಇಂ. Battery]

ಬತ್ತ, ಭತ್ತ$_1$, ವತ್ತ (ನಾ). ಒಂದು ಬಗೆಯ ಧಾನ್ಯ ; ನೆಲ್ಲು : ಜಗದ್ಗೃಹನೆಂಬೊಂ ತನ್ನ ಬತ್ತಮಂ ಚಂಪಾನಗರಕ್ಕೆ ಮಾಱಲೆಂದು ಕೊಂಡು ಪೋಗಿ ಬತ್ತದುನಳೆವಲ್ಲಿಯಾ ಮೂವರ ದೋಷಂಗಳುಂ ಪ್ರಕಟ ಮಾಗಿ (ಪಡ್ಡಾರಾ. ೨೦-೦೬) ; ಅಗ್ಗಳದ ಬತ್ತದ ಪೆರ್ವೆಳಸಿಂದೆ . . . ದೊರೆವೆತ್ತುದು ವೆಂಗಿಮಂಡಲಂ (ಅಜಪು. ೦-೨೨) ; ಗಂಧಶಾಲಿಯ ಬತ್ತದೊಳಗಿರ್ದ ಕಳೆಯ ಕೀಳ್ವಂದದೆ ಖಳರ ತೀರ್ಕಣಿಸಿ (ಸೋಹಕ. ೪೨-೭೩). ಭತ್ತ : ಭತ್ತಮುಮ್ ಕವಿಲೆಯ ಪಾಲು ಎಟ್ಟುಂ (ಎಕ. VI, ಕೊಪ್ಪ. ೩೭-೨; ಸು. 675 ?) ; ಮಿಕ್ಕ ದೇವರ ಮನೆಯ ಭತ್ತಮಂ ಕೊಟ್ಟಣಕ್ಕಿಕ್ಕ ಬರುತಿರೆ (ಸಿದ್ಧರಾ. ೭-೦೨) ; ಕನಸಿನ ಭತ್ತಕ್ಕೆ ಗೋಣೆ ಯಾಂಪೈ ನೃಪತೀ (ಕಾಪ್ಯಸಾ. ೫೮೦) ; ಒಂದು ಪಡಿ ಭತ್ತಕೆ ಬಾಯ ಬಿಡಿಸ್ಯಾಳಣ್ಣ (ಪುರಂದ. ೦-೦೬೨-೨). ವತ್ತ$_1$: ಇರ್ಪ್ಪತ್ತಯ್ಗಣ್ಡುಗಂ ವತ್ತ ತೆಱುವೊದು (ಎಕ. XIV, ತಿರುಮ. ೨೫೩-೬ ; ಸು. 800).

ಭತ್ತದರಳು=ನೆಲ್ಲನ್ನು ಹುರಿದು ಮಾಡಿದ ಅರಳು ; ಲಾಜೆ : ಕನ್ನೈದಿಲೆಗೆಡ್ಡೆ, ಖರ್ಜೂರ ಇವುಗಳನ್ನೆಲ್ಲಾ ಕಷಾಯವಿಟ್ಟು . . . ಭತ್ತದರಳಿನ ಚೂರ್ಣವನ್ನು ಹಾಕಿ ತೆಗೆದುಕೊಳ್ಳಲು . . . ಕಾಮಾಲೆ ಸಹ ಗುಣವಾಗುವುವು (ಸಕಪ್ಯ. ೯೩).

[<ಪ್ರಾ. ಭತ್ತ=ಅನ್ನ./ಸಂ. ಭಕ್ತ=ಅನ್ನ./ತಮಿ. ವತ್ತ=ಅನ್ನ ; ಮಲ. ವತ್ತ; ತುಳು. ಬತ್ತ್=ಅನ್ನ]

ಬತ್ತಂಗುಟ್ಟು, ಬತ್ತಕುಟ್ಟು, ಬತ್ತಗುಟ್ಟು (ಕ್ರಿ). ೧. ಅಕ್ಕಿ, ಅವಲಕ್ಕಿ ಮುಂತಾದುವನ್ನು ಮಾಡಲು ಒರಳಿನಲ್ಲಿ ನೆಲ್ಲನ್ನು ಹಾಕಿ ಕುಟ್ಟು,—ಕೊಟ್ಟಣಕ್ಕೆ ಹಾಕು : ಬತ್ತಂಗುಟ್ಟುವರಂತೆ . . . ದರ್ಶನಮುಂ ನಿಶ್ಶಂಕೆಯುಮೆಂಬೆರಡುಮಂ ಲೇಸು ಮಾಡುವುದು (ಧರ್ಮಾಮ್ಯ. ೨-೪). ಬತ್ತಕುಟ್ಟು : ೧. ಹಿಂದಿನ ಕಾಲದಲ್ಲಿ ಮನೆಯಲ್ಲೇ ಬತ್ತ ಕುಟ್ಟಿ ಅಕ್ಕಿ ಮಾಡಿ ಬಳಸುತ್ತಿದ್ದರು (ರೂಢಿ). ೨. (ಆಲಂ) (ಭಯ, ಆತಂಕ ಮೊದಲಾದುವುಗಳಿಂದ ಹೊಟ್ಟೆಯಲ್ಲಿ) ತಳಮಳವಾಗು : ಪರೀಕ್ಷೆ ಹತ್ತಿರ ಬಂದಂತೆಲ್ಲಾ ನನ್ನ ಹೊಟ್ಟೆಯಲ್ಲಿ ಬತ್ತ ಕುಟ್ಟಲು ಮೊದಲಾಯಿತು (ರೂಢಿ). ಬತ್ತಗುಟ್ಟು : ೧. ಮೃತ್ಯು ಮಾರಿಯರೆನ್ನ ಮನೆಯಲಿ ಬತ್ತಗುಟ್ಟುವರು (ಕೌತಿರಾ. ೧೦-೭೦). [ಬತ್ತ + ಕುಟ್ಟು$_1$]

ಬತ್ತಕುಟ್ಟು 'ಬತ್ತಂಗುಟ್ಟು' ನೋ.

ಬತ್ತಗುಟ್ಟು 'ಬತ್ತಂಗುಟ್ಟು' ನೋ.

ಬತ್ತಲಿಕೆ 'ಪತ್ತಳಿಕೆ$_1$' ನೋ.

ಬತ್ತಲಿಗ, ಬೆತ್ತಲಿಗ (ನಾ). ೧. ಬಟ್ಟೆಯನ್ನು ಧರಿಸದಿರುವವನು; ನಗ್ನ; ದಿಗಂಬರ : ಆ ನಿರ್ಲಜ್ಜಂ ಬತ್ತಲಿಗನಪ್ಪ ಸವಣನಲ್ಲಿಗೆ ಪೋಗಿ ಕಂಡು ನುಡಿದು ಕಾಡಿ ಬರ್ಪಂ ಬಾ ಮಗಳೆ (ಪಡ್ಡಾರಾ. ೨೨-೨೨). ೨. ಜೈನಸಂನ್ಯಾಸಿ : ಬತ್ತಲಿಗರ ಮಾತಂ ಕೇಳ್ದುತ್ತಮಮೆನಿಸಿರ್ದ ಕುಲ ಮನಟಿದೈ (ಧರ್ಮಾಮ್ಯ. ೬-೯೩). ಬೆತ್ತಲಿಗ : ೨. ಬೆತ್ತಲಿಗರ ನುಡಿಗೇಳಿ ರಾಜ್ಯಸಂಪತ್ತ ತೋರದೀಡಾಡೆ (ಅದಿಪ. ೦೦-೫). [ಬತ್ತಲೆ$_1$ + — ಇಗ]

ಬತ್ತಲಿರ್, ಬತ್ತಲಿರು, ಬತ್ತಲೆಯಿರ್ (ಕ್ರಿ). ಮೈಮೇಲೆ ಬಟ್ಟೆಯಿಲ್ಲದಿರು; ನಗ್ನವಾಗಿರು ; ವಿವಸ್ತ್ರವಾಗಿರು : ಕೃತ್ತಿವುಡೆಯನ್ನಿತ್ತಪೆಂ ನೀಂ ಬತ್ತಲಿರಲೇಕೆ (ದಿಸಪು. ೦೬-೦೪). ಬತ್ತಲಿರು : ಬತ್ತಲಿದ್ದವಗೆ ಭಯವಿಲ್ಲ (ಸರ್ವಜ್ಞ. ೫೫೦). ಬತ್ತಲೆಯಿರ್ : ಬತ್ತಲೆಯಿರ್ಪುದರಿದೋ ಸೀರೆಯುಟ್ಟಿರ್ಪುದರಿದೋ (ಧರ್ಮಾಮ್ಯ. ೭-೬೦); ಬತ್ತಲೆ ಪೂಜ್ಯಮಲ್ಲದೊಡೆ ಬತ್ತಲೆಯಪ್ಪ ದಿನೇಶಬಿಂಬಮಂ ಬತ್ತಲೆಯಿರ್ಪ ಮಕ್ಕಳುಗಳಂ . . . ಕಂಡು ಮಾನಿಸರ್‌ಸತ್ತವರಾರೊ (ಧರ್ಮಾಮ್ಯ. ೯-೭೬).

[ಬತ್ತಲೆ$_1$ + ಇರು$_1$ (<ಇರ್$_1$)]

ಬತ್ತಲಿರು 'ಬತ್ತಲಿರ್' ನೋ.

ಬತ್ತಲಿಸು (ಕ್ರಿ). ಬರಿದಾಗಿರು ; ಬೋಳಾಗಿರು : ಎಲೆಗಳೆದು ಬತ್ತಲಿಸಿ ನಿಂದ ತರುಕುಲದಂತೆ (ಪಾಗೀರ. ದೇ. ೨೫೪–೦೬); ಅಜ್ಞಾನವೇ ಸುತ್ತ ಬತ್ತಲಿಸಿದೆ (ಗಂಗಾತ. ೫೨–೦೬).

[ಬತ್ತಲು$_2$ (<ಬತ್ತಲೆ$_1$) + – ಇಸು$_3$]

ಬತ್ತಲು$_1$ (ನಾ). ಒಣಗಿದ ತರಕಾರಿ, ಹಣ್ಣು ಮುಂತಾದುವು ; ತಳಲು : ಮಾವಿನ ಬತ್ತಲು ಹುಣಸೆಯ ಹಣ್ಣು . . . ತದುಕಿನ ತಿರುಳು ಇವು ಸಂಭಾರವಸ್ತುಗಳು (ಸೂಪಶಾ. ೪–೦ ಅಡಿಟಿ).

[ಬತ್ತು$_1$ + –ಅಲು (< –ಅಲ್$_2$) ./ ತಮಿ.ವಱ್ಱಲ್]

ಬತ್ತಲು$_2$ 'ಬತ್ತಲೆ$_1$' ನೋ.

ಬತ್ತಲೆ$_1$, ಬತ್ತಲು$_2$, ಬೆತ್ತಲೆ$_1$ (ನಾ). ೧. ಮೈಮೇಲೆ ಬಟ್ಟೆ ಮೊದಲಾದುವುಗಳ ಹೊದಿಕೆಯಿಲ್ಲದಿರುವುದು; ನಗ್ನತೆ : ಬತ್ತಲೆ ಪೂಜ್ಯಮಲ್ಲದೊಡೆ . . . ಬತ್ತಲೆಯಿರ್ಪ ಮಕ್ಕಳುಗಳಂ . . . ಕಂಡು ಮಾನಿಸರ್ ಸತ್ತವರಾರೊ (ಧರ್ಮಾಮೃ. ೯–೭೬); ಬತ್ತಲೆಯ ಬಾಳ್ವೆಣಂಗಳು ಸುತ್ತ ಮುತ್ತಿರಲು (ಪಾಗೀರ. ದೇ. ೨೫೫–೦); ಎಲೆ ಮಗಳೆ ನಿಮ್ಮ ಸವಣರ್ ಸತ್ತು ದೇವಲೋಕದೊಳು ಬತ್ತಲೆಯ ಸವಣರಾಗಿ ಪುಟ್ಟುವರ್ (ಪುಣ್ಯಾಸ್ರ. ೩–೧೬ ಪ). ೨. ಬರಿದಾದುದು; ಶೂನ್ಯವಾದುದು; ರಿಕ್ತವಾದುದು : ಹೊತ್ತು ಮುಣುಗುತ ಬಂತು ಬತ್ತಲೆಯ ಜಗಕೆಲ್ಲ (ಕನ್ನಶಾ. ೨೪೯). ೩. ದಿಗಂಬರಸಂನ್ಯಾಸಿ; ಜೈನಭಿಕ್ಷು : ಪುತ್ತುಂ ಬತ್ತಲೆಯುಂ ಬಱಿದಿಲ್ಲೆಂಬೀ ನಾಬ್ನುಡಿಯುಂಟಪ್ಪುದು (ಧರ್ಮಾಮೃ. ೮–೬೦); ಎಲೆ ದೇವರೆ ಪುತ್ತುಂ ಬತ್ತಲೆಯುಂ ಬಱಿದಿಲ್ಲದೆಂಬರ್ (ಯಶೋಸ. ೪–೦೫). (ಗು). ೪. ನಗ್ನವಾದ ; ಬರಿಮೈಯಿಂದಿರುವ : ತದಾಮ್ರವನ ದೊಳೊರ್ವಂ . . . ಬ[ಪಾಠಾಂ. ಬೆ]ತ್ತಲೆ ಮರುಳಂತೆ ತನ್ನೊಳೆ ಮಿನು ಕುತ್ತುಂ ಮೋನದೊಳಿರ್ಪಂ (ಧರ್ಮಾಮೃ. ೮–೨೬); ಎತ್ತಿದ ಕಯ್ಯ ಕತ್ತಿಗೆ ಭಯಂಗೊಳ್ . . . ಬಪ್ಪ ಬತ್ತಲೆ ಮರುಳ್ಗಳ್ ತಂಡದಿನೇಂ ಮಹೋ ಗ್ರಮೋ (ಬಂಹು. ೨–೦೭). **ಬತ್ತಲು$_2$** : ೨. 'ಬತ್ತಲಿಸು' ಪರಾ. **ಬೆತ್ತಲೆ$_1$** : ೫. ಮುಚ್ಚುಮರೆಯಿಲ್ಲದುದು; ನಿಚ್ಚಳವಾದುದು : ಇದೂ ನಾಟಕವಲ್ಲ . . . ಕೇವಲ ನಿಜ. ಬೆತ್ತಲೆಯ ಸತ್ಯ (ರಂಗಪಾ. ೦೭೨). ೬. ಮುಚ್ಚುಮರೆಯಿಲ್ಲದ; ನಿಚ್ಚಳವಾದ : ಬೆತ್ತಲೆ ಬದುಕ ಸುತ್ತಿ ತೋರಿಸುತ್ತಿದೆ ಡೌಲು (ಪಂಮು. ೩೦–೦).

ಬತ್ತಲೆಗುದುರೆ=ಜೀನು ಹಾಕಿರದ ಕುದುರೆ: ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ ಹತ್ತಿದ ಬತ್ತಲೆಗುದುರಿ ಹೊಂಟಾನತ್ತೆಯ ಮನೆಗೆ (ಕನ್ನಶಾ. ೮೨–೦೪).

[ದೇ.೩ ತುಳು. ಬತ್ತಲೆ, ಬೇತಲ್, ಬೇತಾಳ್; ತೆಲು. ಬಿತ್ತಲ]

ಬತ್ತಲೆ$_2$, ಬೆತ್ತಲೆ$_2$ (ಅ). ಮೈಮೇಲೆ ಬಟ್ಟೆಯಿಲ್ಲದೆ ; ನಗ್ನವಾಗಿ ; ವಿವಸ್ತ್ರವಾಗಿ : ಬೇಡಿದ ಭೂಷಣಂಗಳಂ ಬತ್ತಲೆ [ಪಾಠಾಂ. ಳೆ] ಬಾಂಗಿ ತಾಂಗುವಳೆ (ಮಲ್ಲಿಪು. ೭–೮೦); ಒರ್ವಳ್ ನೀಱ್ ಮೈಯೊಡ್ಡಿ ಬತ್ತಲೆ ನಿಂದಿರ್ದಳೆರಲ್ಗೆ ತೀರ್ದ ರತಖೇದಶ್ರಾಂತಿಯಿಂ ಬಿಚ್ಚತಂ (ಸೂಕ್ತಿಸು. ೦೪–೭೪); ಬತ್ತಲೆ ತಿರುಗುವ ಜನರಿರುವೆಡೆಯೊಳು ಅಗಸನು ಮಾಡುವು ದೇನು (ಇಂಪಾಪ. ೦೫೮–೭೮). **ಬೆತ್ತಲೆ$_2$** : ಎಲೆ ಯತಿ ಮುಕ್ತಭಾವ ನೀನೇಕೆ ಬೆತ್ತಲೆ ಬಂದೆ (ಪೇಮಿಸಂ. ೦೪–೦೫) ; ಹುತ್ತವನೇಱಿದವರು ಹುಲ್ಲುಗಳ ಕಚ್ಚಿ ಬೆತ್ತಲೆ ನೀರ ಹೊಕ್ಕವರು ಕತ್ತಿ ಕಠಾರಿಯ ಬಿಸುಟ ಕಾಲಾಳಿನ ಮೊತ್ತವನೇನ ಬಣ್ಣಿಸುವೆ (ಕಂಪಪಿ. ೦೫–೯೭). [<ಬತ್ತಲೆ$_1$]

ಬತ್ತಲೆಗ, ಬೆತ್ತಲೆಗ (ನಾ). ೧. ದಿಗಂಬರಸಂನ್ಯಾಸಿ ; ಜೈನಭಿಕ್ಷು: ಈ ನಿನ್ನರ್ಧಗಪ್ಪಡದ ಯತಿಯರ ಧರ್ಮಮೊಳ್ಳಿತಲ್ತಿವರುಟ್ಟರು ಮಲ್ಲರ್ ಬತ್ತ[ಪಾಠಾಂ. ಬೆ]ಲೆಗರುಮಲ್ಲರ್ (ವಡ್ಡಾರಾ. ೯೩–೦೨) ; ತಲೆವಱಿದುಟ್ಟುದಿಕ್ಕಿ ಸುರಲೋಕಸುಖಂಗಳನುಣ್ಬೆವೆಂಬ ಬತ್ತಲೆಗರ ಮಾತುಗೇಳದಿರು (ಅಡಿಪು. ೨–೯) ; ಸತ್ತು ಸಗ್ಗದ ಸತಿಯರನು ಕೂಡುವೆ ನೆಂಬ ಬತ್ತಲೆಗರ ಮಾತು ಕೇಳಿ ಉತ್ತಮ ರೂಪವತಿಯರ ಭೋಗುಗಳ ನೊತ್ತರಿಸುವೆನೆನಬಹುದೆ (ಪೇಮಿಸಂ. ೩೪–೩೪). **ಬೆತ್ತಲೆಗ** : ೨. ಬೆತ್ತಲೆ ಯಾಗಿರುವವನು ; ನಗ್ನ : ಉಡಿಗೆ ತೊಡಿಗೆ ಇಟ್ಟವರು ವೇಸಿಯಂ ಸೋಂಕಲೊಡನೆ ಬೆತ್ತಲೆ[ಪಾಠಾಂ. ಲಿ]ಗರಾಗಿಹರು (ಗೊಮ್ಮಟ. ೨–೦೦೦).

[ಬತ್ತಲೆ$_1$ + – ಗ$_2$]

ಬತ್ತಲೆಗಣ್ಣು, ಬೆತ್ತಲೆಗಣ್ಣು (ನಾ). ೧. (ಆಲಂ) ಜ್ಞಾನದ ಪ್ರಭಾವ ವಿರದ ಕಣ್ಣು : ಕತ್ತಲೆಯ ಗವಿಯಯ್ಯ ಕವಿಹೃದಯದಾ ಗುಹ್ಯ; ಬಯಲು ಬತ್ತಲೆಗಣ್ಣಿಗದು ಅಸಹ್ಯ (ಅವಿಕೇ. ೨–೦೨). **ಬೆತ್ತಲೆಗಣ್ಣು** : ೨. ಕನ್ನಡಕದ ಸಹಾಯವನ್ನು ಹೊಂದದ ಕಣ್ಣು ; ಬರಿಗಣ್ಣು : ಆ ಮಹಾರತ್ನದ ಪ್ರಭೆ ಅವನ ಬೆತ್ತಲೆಗಣ್ಣಿನ ಮೇಲೆ ಬಿದ್ದೊಡನೆಯೇ ಅವನು ಕುರುಡನಾದನು. (ಯೋಧಪು. ೬೮). [ಬತ್ತಲೆ$_1$+ಕಣ್ಣು(<ಕಣ್)]

ಬತ್ತಲೆಯಿರ್ 'ಬತ್ತಲಿರು' ನೋ.

ಬತ್ತಳಿಕೆ 'ಪತ್ತಳಿಕೆ$_1$' ನೋ.

ಬತ್ತಳಿಗೆ 'ಪತ್ತಳಿಕೆ$_1$' ನೋ.

ಬತ್ತಾಯ, ಭತ್ತ$_2$, ಭತ್ತಾಯ, ಭತ್ತೆ, ಭತ್ಯ (ನಾ). ೧. ಬತ್ತದ ಬೆಳೆಯಿಂದ ಬರುವ ಉತ್ಪನ್ನ,–ವರಮಾನ : ಕಾಡರಂಬ ನೀರಾರಂಬಕೆ ಸಲುವ ಕೆಱ್ ಕುಂಟೆ ಕೊಣನು ಅಬೆ ಅಚುಕಟುದರೆ ನೆಡಳೆ ಸಕಳಾ ಬತ್ತಾಯ (ಎಕ. X (S), ಕೋಲಾರ. ೩೦೪–೦೫ ; 17ವೆಯ ಶತ). ೨. ಜೀವನ ನಿರ್ವಹಣೆಗಾಗಿ ಕೊಡುವ ಹಣ ; ಜೀವನಾಂಶ : "ಬತ್ತಾಯ–ಭೃತ್ಯಾ=ಅಶನಾರ್ಥ" (ತದ್ಕಕೋ. ೨೬) ; ಆಂ ಬಂದ ದಿನಮೊದಲಿಂದು ತನಕೆನ್ನ ಹಿಂದುಳಿದ ಬತ್ತಾಯ ಬಂದುದು (ಹಶಕಾ. ೦೦–೬). **ಭತ್ತ$_2$** : ೩. "ಸರ್ಕಾರಿ ನೌಕರರಿಗೆ ನೀಡುವ ಹೆಚ್ಚುವರಿ ಸಂಬಳ ; ನ್ಯಾಯಾ ಲಯವು ಸಮನ್ನುಗಳನ್ನು ಜಾರಿ ಮಾಡುವಾಗ ತಾತ್ಕಾಲಿಕ ನೌಕರರಿಗೆ ಕೊಡುವ ಹಣ, ಕಚೇರಿ ಕೆಲಸದ ಮೇಲೆ ಮಾಡುವ ಪ್ರಯಾಣದ ಖರ್ಚಿಗಾಗಿ ಸಿಬ್ಬಂದಿಗೆ ಕೊಡುವ ಹಣ ಮುಂತಾದುವು" (ರೈಸ್‌ಗ. ೫೪೪). **ಭತ್ತಾಯ** : ೧. ಆ ದೇವರ್ಗ್ಗೆ ಬಯ್ಗಿನ ನಿವೇದ್ಯಕೆ ಭತ್ತಾಯ ಹೇರ್ಗೆ (ಎಕ. VII, ಶಿಕಾರಿ. ೨೬೭–೩ ; 1147); ಅರಸರ ಸಿದ್ಧಾಯ ಭತ್ತಾಯದೊಳ × × ವದಲು . . . ನಿ[ವೇ] ದ್ಯದ ತುಪ್ಪಕ್ಕೆ ಕೊಟ್ಟರು (ಸೌಇಇ. XI — ii, ೨೦೬–೦೨ ; ?). **ಭತ್ತೆ** : ೩. ಸಂಬಳ, ಬಡತಿ, ಭತ್ತೆ ಪಿಂಚಣಿ, ಪದವಿ ಇವೇ ಈ ವರ್ಗದ ಪಂಚಪ್ರಾಣಗಳಾದವು (ಮಾವಾದ. ೯೫) ; ಮಾರಾಟದ ಉತ್ಪನ್ನದ ಮೇಲೆ ಭತ್ತೆ . . . ಪ್ರವಾಸದ ಸೌಕರ್ಯ ಇವೆಲ್ಲ ಇದ್ದುವು (ವಾತ್ಸಲ್ಯ. ೩೫). **ಭತ್ಯ** : ೩. ಇಲಾಖೆಯಲ್ಲಿದ್ದಾಗ ನೂರೆಪ್ಪತ್ತೈದು ರೂಪಾಯಿಗಳ ಸಂಬಳ ಬರುತ್ತಿತ್ತು. ಮೇಲೆ ಭತ್ಯೆ ಬರುತ್ತಿತ್ತು (ರಂಗಳ. ೩) ; ಸುಲ್ತಾನನ ರಾಜ್ಯದಲ್ಲಿ ಹೋದ ಕಡೆಯಲ್ಲೆಲ್ಲಾ ನಮಗೆ ಬೇಕಾದ ಭತ್ಯವನ್ನೂ ಒದಗಿಸಿ ಕೊಡಬೇಕೆಂದು ಅಪ್ಪಣೆಯಾಗಿತ್ತು (ಪ್ರವಾಇ. II, ೬೭). 'ಭತ್ತಾದಾಯ' ಪರಾ. [ಬತ್ತ$_1$ +ಆಯ್$_7$ ./ ಹಿಂ. ಭಾತ್; ಮರಾ. ಭತ್ತಾ. / ಸಂ. ಭೃತ್ಯಾ. / ಲ್ಯಾಟಿನ್ . ಬಸ್ತುವರ್. / ಇಂ. Batta]

ಬತ್ತಾಸ 'ಬತ್ತಾಸು' ನೋ.

ಬತ್ತಾಸು, ಬತಾಸು, ಬತ್ತಾಸ (ನಾ). ಸಕ್ಕರೆಯ ಪಾಕದಿಂದ ಮಾಡುವ ಬಗೆಬಗೆಯಾಕಾರದ ಬಗೆಬಗೆಯ ಬಣ್ಣದ ಒಂದು ಸಿಹಿ ತಿಂಡಿ : ಆ ರೊಕ್ಕ ಕೊಟ್ಟು ಬೆಂಡು, ಬತ್ತಾಸು ತಕ್ಕೊಂಡು ತಿನ್ನುವ (ಮುಂಬಯಿ. ೪–೪೪) ; ಅವರು ಮಂಡಕ್ಕಿ, ಹುರಿಕಡಲೆ, ಬೆಂಡು, ಬತ್ತಾಸು ಕೊಂಡುಕೊಂಡರು (ಕಪಪು. ೩–೨೫). **ಬತಾಸು** : ಗೋದುವೆ ತಂಡುಲಾದಿ ಬಹುಚೂರ್ನಂಗಳೊಡೆವೆರಸಿ ಸಕ್ಕರೆಯ ಪರಿಪಾಕದಡಿಗೆಯಿಂ ಘೃತದೊಡನೆ

ಗೈದ ಲಡ್ಡಿಗೆ ಬತಾಸಂ . . . ಕೊಡುತ (ಪಪಪೋ. ೦೬-೬೦); ಗಂಡು ಹೆಣ್ಣಿನ ಮೇಲೆ . . . ಕಾಳು, ಬತಾಸು ಮುಂತಾದ ಸಿಹಿತಿಂಡಿಗಳನ್ನು ಎಸೆಯುತ್ತಾರೆ (ಸ್ವಪಾಇ. II, ೪೯೭). ಬತ್ತಾಸ : ಸಕ್ಕರೆಯ ಬೆಂಡು ಬತ್ತಾಸಗಳ ಪರ್ವತವೇ ಬಿದ್ದಿತು (ಹಪ್ಪಿ. ೬೦) ; ಬಂದ ಮುತ್ತೈದೆಯರಿಗೆ, ಕುಮಾರಿಯರಿಗೆ . . . ಪೇಢೆ, ಬತ್ತಾಸಗಳನ್ನು ಹಂಚುತ್ತಾರೆ (ಶಾಹಸ್ಯ. ೬೨). [←ಹಿಂ. ಬತಾಸಾ, ಬತಾಶಾ; ಮರಾ. ಬತ್ತಾಸಾ, ಬತಾಸಾ]

ಬತ್ತಿ (ನಾ). ೧. (ದೀಪಕ್ಕೆ ಹಾಕುವ) ಹುರಿ ಮಾಡಿದ ಹತ್ತಿಯ ಎಳೆ, —ತಿರಿ; ವರ್ತಿ : ಸೊಡರೊಳ್ ಬತ್ತಿಯುಮೆಣ್ಣೆಯುಮೊಡನಟಿದ ಪೊಲಾಯುವುಂ ಶರೀರಮು[ಮ]ಮಳಂತೊಡದವೆ ನೋಂತಂ ಮುನಿ ಮುನ್ನೊಡವುಟ್ಟಿದುವೊಡನೆ ತವುವುದೌಚಿತ್ಯಮೆನಲ್ (ಶಾಂತಿಪು. ೯-೦೦೮); ಪಣಿತೆಯೂ ಇದೆ ಬತ್ತಿಯೂ ಇದೆ ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ (ಅಪಸಂ. ೦೯-೭೮) ; ಬತ್ತಿ ಹೆತ್ತುಪ್ಪವನ್ನು ಹೊತ್ತಿಸಿದ ಫಲವೇನು ಮತ್ತೊಂದು ದೈವಕೆಱಗುವನ ಶಿವಪೂಜೆ ಹತ್ತಿಗೇಡು (ಸರ್ವಜ್ಞ. ೦೬೨). ೨. ಸಿಡಿಮದ್ದನ್ನು ಹತ್ತಿಸಲು ಬಳಸುವ ಒಂದು ಬಗೆಯ ಸಾಧನ : ದಾದಲ್ಯಾ. . .ಖಿಂಡಿಯ ಬಾಯಿಗೆ ಮದ್ದು ಜಡಿದು, ಬತ್ತಿ ಸೇರಿಸುವ ಸನ್ನಾಹ ಮಾಡತೊಡಗಿದ (ದೀಪಹ. II, ೦೬೭); ಬತ್ತಿ ನೂಕಲಾರದ ಬಂಟ ದಳ ನಡಿಸ್ಯಾನೇ ? (ಗಾಪ). 'ಜಾವಿಗೆಬತ್ತಿ' ಪರಾ. ೩. ಕಂದೀಲು; ಮೋಂಬತ್ತಿ: (ಕ). ೪. ವಿರೇಚನಚಿಕಿತ್ಸೆಗಾಗಿ ಔಷಧದಲ್ಲಿ ಅದ್ದಿ ಗುದದಲ್ಲಿ ಇಡುವ ವೈದ್ಯಕೀಯ ಸಾಧನ ; ಔಷಧಿಯಲ್ಲಿ ಅದ್ದಿ ತೆಗೆದ ಹತ್ತಿಯ ತಿರಿ : ಸುರದಾರು ಸೊರೆಯ ಬೀಜಂ ಸುರವಾರುಣಿ ಬೆಲ್ಲಮೆಂಬಿವಿನಿತುಮನೊಂದಾಗಿರೆ ಮಿದಿದು ಮಾಡಿ ಬತ್ತಿಯನಿರಿಸುಗೆ ಗುದದೊಳಗೆ ಕಳೆಗುಮರಿಸೆಯ ಮೊಳೆಗಳ್ (ಶೋಕೋಪ. ೯-೦೪೪); ಪುಣಿಸೆಯ ಪಣ್ಣ ಬತ್ತಿಯೊಳ್ ಸೈಂಧವಮಂ ಬೆರಸಿ ಗುದಮುಖದೊಳಿಡೆ ಬಾಹಿರಮಕ್ಕುಂ ಕಠಿನಮಾಗಿ ಬಿಗಿದಿದ್ದ ಮಲಂ (ಅಶ್ವಶಾ. ೦೦-೨೭). ೫. ಸಂಗಂಧವನ್ನು ಲೇಪಿಸಿರುವ ಕಡ್ಡಿ : 'ಅಗರಂ ಬತ್ತಿ', 'ಊದುಬತ್ತಿ' ಪರಾ. ೬. ಹೊಗೆಸೊಪ್ಪು ಸೇದಲು ಎಲೆಯನ್ನು ಸುತ್ತಿ ಮಾಡಿದ ಸುರುಳಿ ; ಬೀಡಿ, ಚುಟ್ಟಾ ಮುಂತಾದುವು : ಬದುವಿನ ಮೇಲೆ ನಾಗಣ್ಣ ಬತ್ತೀ ಸೇದುತ್ತ ಕುಳಿತಿದ್ದ (ಮೇಂಪು. ೩) ; ಮಂದೀ ನಗಿಯೊಳಗ ಬತ್ತೀ ಕಮರಿನ ಹೊಗೀ ಎತ್ತ್ಯು. ಇದೇನು ಖಾಟ ನಮ್ಮವ್ವಾ ! (ಹೊಸಂಸಾ. ೮೪). ೭. (ಆಲಂ) ಎಳೆಯ ಮಗು ; ಹಸುಳೆ ; ಹಸಂಗೂಸಂ : "ಕುಡ —ಬಾಲ್ಯೇ, ಹಸುಳೆತನದೊಳ್ . . . ಕುಡು=ಬತ್ತಿ" (ಕಾಶಕ್ಯ. ೨೨೯) ; ತನ್ನ ತೊಡೆಯ ಮೇಲೆ ಮಗನನ್ನು ಕೂಡಿಸಿಕೊಂಡು ಹತ್ತು ತಿಂಗಳ ಬತ್ತಿಗೆ ಉಣ್ಣಿಸುವಂತೆ ಉಣ್ಣಿಸುವಳು (ಪ್ರಪ. ೦೮೦). ೮. (ಹತ್ತಿಯ) ಚೂರು ; ತುಂಡು : ದೇವಾರ್ಚನೆಗಳಾದಿ ವಿಧಾನದೊಳು[ಳ] ಗಾಚರಿತರಾಗಿಹರಲ್ಲದುಣುವಾಗ ಪೀನಘಂಟೆಗಳುಳಿದು ಬತ್ತಿಗಳಾನಿಸುತ ಕರ್ನದಲಿ (ಪಜ್ಞಪು. ೯-೨೪) ; ಕಿವಿಯ ಕುಳಿಗಳಲ್ಲಿ ಪಚ್ಚೆಕಪ್ಪುರದ ಬತ್ತಿಗಳನಿತ್ತು (ಸೌಗಂರಿ. ೩೦೬-೦).

ಬತ್ತಿಕೊಡು = (ಆಲಂ) ಮೋಸ ಮಾಡು ; ದಗಾ ಹಾಕು : ಈ ಹಾಳು ಸುಕಾಲಿ ಇವೊತ್ತು ಬತ್ತಿ ಕೊಟ್ಟ (ಬೆಳುಮ. ೦೬೬) ; ನನ್ನ ದೋಸ್ತಿಗಳೇ ನನ್ನ ಬಾಡಕ್ಕೆ ಬತ್ತಿ ಕೊಟ್ಟರು (ಸಂಗೂಲ. ೬೩). ಬತ್ತಿಯಿಡು =ಕೆಡಕು ಮಾಡುವುದಕ್ಕಾಗಿ ಚಾಡಿಹೇಳು: ಹೊಟ್ಟೆಕಿಚ್ಚಿನಿಂದ ಕೆಲವರು ಬತ್ತಿಯಿಟ್ಟು ಅವರ ಸಂಸಾರವನ್ನೇ ಹಾಳು ಮಾಡಿದರು (ಕೂಡಿ). ಬತ್ತಿ ಹಚ್ಚು = ಆಸ್ಫೋಟನೆಯನ್ನುಂಟುಮಾಡು : ನಾಲ್ಕಾರು ಜನರ ಮಧ್ಯೆ ಓಡಾಡಿ ಬತ್ತಿ ಹಚ್ಚುವುದೇ ಅವನ ಸ್ವಭಾವ (ಕೂಡಿ).

[← ಹಿಂ. ಬತ್ತೀ. / ಸಂ. ವರ್ತಿ]

ಬತ್ತಿಕೋವಿ (ನಾ). ಹತ್ತಿಯಿಂದ ಬೆಂಕಿ ಹಚ್ಚುವ ಸಿಡಿಮದ್ದಿನ ಬಂದೂಕ : ಬತ್ತಿಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಬಿಲ್ಲುಬಾಣಗಳ ಸಾಹಸಿಗಳೂ ಅಲ್ಪ ಸ್ವಲ್ಪ ಇರುತ್ತಿದ್ದರು (ಮಲಸು. ೬೩).

[ಬತ್ತಿ + ಕೋವಿ$_1$]

ಬತ್ತಿಗೆ (ನಾ). ನೀರು ಮುಂತಾದ ದ್ರವಪದಾರ್ಥಗಳನ್ನು ತುಂಬಿಡಲು ಹಾಗೂ ಸಾಗಿಸಲು ಬಳಸುವ ಚರ್ಮದ ಚೀಲ; ತಿತ್ತಿ: ನಾನಾವಿಧ ಪಾನಕದ ತುಂತುರುಗಳಿಂದ ಕೆಂಪಾಗಿರುವ ಗೋಚರ್ಮದ ಬತ್ತಿಗೆಯಂ ಪಿಡಿದು (ಕೃಪಾಪಿ. ೩). [< ಸಂ. ಭಸ್ತ್ರಿಕಾ]

ಬತ್ತಿಸು (ಕ್ರಿ). ೧. ನೀರಿಲ್ಲದಂತೆ ಮಾಡು ; ಒಣಗಿಸು ; ಇಂಗಿಸು : ಬತ್ತಿಸಿದನಂದಹಿತಸುಭಟರ ವೀರಶರನಿಧಿಯ (ಕುಪ್ಯಾಪ್ರೋ. ೨-೨೮) ; ಉಗ್ರನೇಱುವ ಮಹಾವಾಹನದ . . . ನಾಲ್ಕುಪಾದಾಗ್ರಹತಿಗೇಳ್ವ ಕೆಂಧೂಳ್ ಬತ್ತಿಸಿತು ಗಗನಗಂಗಾನದೀಜಲವನು (ಸಂಪು. ೪೪-೦೦) ; ಈ ಖಳಬಲಸಾಗರವನು ಕುಂಭಜನ ಆಗಮದಂದದೆ ಬತ್ತಿಪೆ (ಕಂಪಪಿ. ೦೨-೬೬). ೨. (ಬೆಂಕಿ, ದೀಪ ಮುಂತಾದುವನ್ನು) ಆರಿಸು ; ನಂದಿಸು : ಬಡಬಾಗ್ನಿಯ ಬಾಯನೆಯ್ದೆ ಬತ್ತಿಸುವುದು ತೇಜಂ (ಎಕ. VII, ೩ಪಪೂ. ೪-೬೩ ; 1122) ; ಬತ್ತಿಯ ಬತ್ತಿಸಗೊಡದಲೆ, ಸುಡುತಿರಲು ಬೆಳಕಿನ ಕುಡಿಯಾಗಿ ಮೆರೆಯುವದು (ಸಂಗೀ. ೩೯-೯೮೭). ೩. ದ್ರವಪದಾರ್ಥವನ್ನು ಕುದಿಸಿ ಇಂಗಿಸು ; ಅಟ್ಟಿಸು : ಕಷಾಯವನ್ನು ಬತ್ತಿಸುವುದರಲ್ಲಿ ತುಸು ಹೆಚ್ಚು ಕಡಿಮೆಯಾದರೆ ಗಾಬರಿಯಿಲ್ಲ (ಮಪಸು. ೨). ೪. ಅಡಗಿಸು; ಇಲ್ಲವಾಗಿಸು ; ನಾಶಮಾಡು : ಬತ್ತಿಸಿ ನೃಪಾಲರಾಟೋಪಮಂ ಕೋಪದಿಂ (ಸಪ್ರಾಂಗ. ೬೨-೦೯೬೮). [ಬತ್ತು$_1$ + — ಇಸು$_3$]

ಬತ್ತೀಸ (ನಾ). ಒಂದು ಸಂಖ್ಯೆ ; ಮೂವತ್ತೆರಡು : ಕಂಬಳಿಯ ಹಱಕಿನಲ್ಲಿ ಬತ್ತೀಸಕೋಟಿ ದೇವರ್ಕಳೆಲ್ಲರು ಸಿಕ್ಕಿ ಅಳಲುತ್ತ ಬಳಲುತ್ತಲೈದಾರೆ (ಮೋಳಿಮಾ. ೯-೨೯) : ಮಾದಿರಾಜಂ ಮತ್ತೆ ಬತ್ತೀಸಾದಿ ರಾಗಂಗಳಿಗನಿತು ದಂಡಿಗೆಗಳಂ ರಚಿಸಿ ವೇದಿಸಲು (ಬಸಪು. ೦೯-೬) ; ಈ ವಚನಗಳು . . . ಅಂದು ಬಳಕೆಯಲ್ಲಿದ್ದ 'ಬತ್ತೀಸ' ಎಂದರೆ ೩೨ ರಾಗಗಳಲ್ಲಿ ಹಾಡಲ್ಪಡುತ್ತಿದ್ದವು (ಸಂಗೀಸಂ. ೬೯).

[< ಪ್ರಾ. ಬತ್ತೀಸ. / ಹಿಂ. ಮರಾ. ಬತ್ತೀಸ್. / ಸಂ. ದ್ವಾತ್ರಿಂಶತ್]

ಬತ್ತೀಸಕಡಿ (ನಾ). (?) : ಬತ್ತೀಸಕಡಿಯ ಬಾಹರಪುಟದ ಗುಳವದ ಕಣಂಗಳ ಕುಳಿಶದಳಂ (ಅಪಂಪು. ೦೪-೬ ಪ). 'ಬತ್ತೀಸಾಯುಧ' ಪರಾ.

[ಬತ್ತೀಸ + ಕಡಿ$_7$]

ಬತ್ತೀಸಕಲೆ (ನಾ). [ವೀಶೈ] ಮೂವತ್ತೆರಡು ಕಲೆಗಳು ; ೯ "ಮೂವತ್ತೆರಡು (ಬತ್ತೀಸ) ಕಳೆಗಳು : ಸದಾಚಾರ, ಸದ್ಭಕ್ತಿ, ಸಮ್ಯಕ್‌ಜ್ಞಾನ, ಸತ್ಕ್ರಿಯೆ, ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ, ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಿಭಕ್ತಭೇದ, ಸತ್ಪಾತ್ರದ್ರವ್ಯಾರ್ಪಣ, ಗೌರವಬುದ್ಧಿ, ಲಿಂಗಲೀಯ, ಜಂಗಮಾನುಭಾವ, ದಶವಿಧಪಾದೋದಕ, ಏಕಾದಶಪ್ರಸಾದ, ಷೋಡಶಭಕ್ತಿನಿರ್ವಾಹ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಚನೆ, ತ್ರಿವಿಧ ಷಡ್ವಿಧ ನವವಿಧ ಜಪ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಿತ, ಚಿದ್ಭೂತಿ ಸ್ನಾನ ಧೂಳನಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಧಾರಣ, ತಾ ಮಾಡುವ ಸತ್ಯಶುದ್ಧ ಕಾಯಕ, ತಾ ಬೇಡುವ ಸದ್ಭಕ್ತಿ ಭಿಕ್ಷೆ, ತಾ ಕೊಟ್ಟು ಕೊಂಬುವ ಭೇದ, ತಾನಾಚರಿಸುವ ಸತ್ಯ ನಡೆನುಡಿ, ತಾ ನಿಂದ ನಿರ್ವಾಣಪದ —ಇಂತಿವು ೩೨ ಕಲೆಗಳು" (ಸಪ್ರಪ. ಕ. ಕೋಪ) : ಷೋಡಶಭಕ್ತಿಯ ಮಾರ್ಗವ ತಿಳುಹಿ ಬತ್ತೀಸಕಲೆಯ ನೆಲೆಯನಱುಹಿ . . . ನಿರೂಪವ ಕೊಡಲು (ಸಪ್ರಪ. ಕ. ೩೩೬-೬೩೮). [ಬತ್ತೀಸ + ಕಲೆ$_3$]

ಬತ್ತೀಸಪುತ್ಥಳಿ (ನಾ). ಮೂವತ್ತೆರಡು ಗೊಂಬೆಗಳು,—ವಿಗ್ರಹಗಳು.

ಬತ್ತೀಸಪುತ್ಥಳಿಕಥೆ, ಬತ್ತೀಸಪುತ್ಥಲಿಕತೆ = ವಿಕ್ರಮಾದಿತ್ಯರಾಜನ ಸಿಂಹಾಸನದ ಎರಡು ಬದಿಗಳಲ್ಲೂ ಅಳವಡಿಸಿದ್ದ ಮೂವತ್ತೆರಡು ಗೊಂಬೆಗಳು ಸಜೀವವಾಗಿ, ಭೋಜರಾಜನಿಗೆ ಹೇಳಿದುವೆಂದು ಭಾವಿಸಲಾದ ಮೂವತ್ತೆರಡು ಕಥೆಗಳು : ವಿಚಿತ್ರವಸ್ತುಗಳನ್ನು ಕೇಳುವುದೆಂದರೆ ಮಕ್ಕಳಿಗೆ ಆನಂದ . . . ಬತ್ತೀಸಪುತ್ಥಳಿಕಥೆಗಳು ಈ ಮಾದರಿಯವು (ಶಾಂಪ್ರ. I, ೨೦೯) ; ಓದುವಾಗ . . . ಅದು ಬತ್ತೀಸ ಪುತ್ಥಲಿಕತೆಯಾದರೂ ಸರಿಯೆ ; ಯವನಯಾಮಿನಿಕಥೆಗಳಾದರೂ ಸರಿಯೆ ಮನಸ್ಸಿಗೆ ಸಂತೋಷವಾಗುತ್ತದೆ (ಮೂಕಜ್ಜಿ. ೩). [ಬತ್ತೀಸ + ಪುತ್ತಳಿ]

ಬತ್ತೀಸರಾಗ (ನಾ). [ಸಂಗೀತ] ಪ್ರಸಿದ್ಧವಾದ ಮೂವತ್ತೆರಡು ಬಗೆಯ ರಾಗಗಳು ; ೯ "ರಾಗಗಳು — ೮ ಪುರುಷರಾಗಗಳು : ಭೈರವಿ, ಭೂಪತಿ (ಭೂಪಾಲ), ಶ್ರೀರಾಗ, ರಾಗಪಂಜರ, ವಸಂತ, ಮಾಲವ, ಬಂಗಾಲ, ನಾಟಕ (ನಟ್ಟ) ; ೨೪ ಸ್ತ್ರೀರಾಗಗಳು : ಭೈರವಿಗೆ : ದೇವಕ್ರಿಯಾ, ಮೇಘರಂಜೀ, ಕುರಂಜೀ; ಭೂಪಾಲಕ್ಕೆ : ಬೀಲಾವುಲೀ, ಮಲಹರಿ, ಭೌಲೀ ; ಶ್ರೀರಾಗಕ್ಕೆ : ಅಂಧಾಲೀ, ಭಲಾತೀ, ಮಾಹುರೀ; ರಾಗಪಂಜರಕ್ಕೆ: ದೇಶೀ, ಲಲಿತಾ, ತೋಡೀ; ವಸಂತಕ್ಕೆ : ರಾಮಕ್ರಿಯಾ, ವರಾಲೀ, ಕೌಶೀ ; ಮಾಲವಕ್ಕೆ : ಗುಂಡಕ್ರಿಯಾ, ಘೂರ್ಜರೀ, ಗೌಲೀ ; ಬಂಗಾಲಕ್ಕೆ : ಕರ್ಣಾಟ ಗೌಲಿಕಾ, ಧನ್ಯಾಸಿಕಾ, ಕಾಂಭೋಜೀ ; ನಟ್ಟವಿಗೆ : ದೇಶಾಕ್ಷೀ, ಆಹರೀ, ನಾರಾಯಣೀ (ಅಭಸಂ. ೧೦೧೪-೧೦೨೪)" (ಶ್ರೀವತ್ಸ. ೩೭೩) : ಎನ್ನ ಕಾಯವ ದಂಡಿಗೆಯ ಮಾಡಯ್ಯಾ . . . ಬತ್ತೀ[ಪಾಠಾಂ-ಕ್ತಿ]ಸರಾಗವ ಹಾಡಯ್ಯಾ (ಬಸವ. ೩೦೦) ; ಶಿವನ ಮೂರ್ತಿಯನೊಲಿದು ಪಾಡುತಂ ಬತ್ತೀಸರಾಗಂಗಳಿಂದೆ (ರಾಘವ. ೨-೦೯). [ಬತ್ತೀಸ + ರಾಗ]

ಬತ್ತೀಸಲಕ್ಷಣ (ನಾ). ಮೂವತ್ತೆರಡು ಬಗೆಯ ಗುರುತುಗಳು,—ಚಿಹ್ನೆಗಳು ; ೯ "(ಅ) ಲಕ್ಷಣ — ೩೨ (ಆ) ಮಹಾಪುರುಷಲಕ್ಷಣ (ಬತ್ತೀಸಶುಭಲಕ್ಷಣ) — ೩೨ : ಪಂಚಸೂಕ್ಷ್ಮಗಳು : ತ್ವಕ್, ಕೇಶ, ಅಂಗುಲಿ, ದಂತ, ಅಂಗುಲಿಪರ್ವ ; ಪಂಚದೀರ್ಘಗಳು : ಭುಜ, ನೇತ್ರ, ಹನು, ಜಂಘೆ, ನಾಸಿಕ ; ಸಪ್ತರಕ್ತಗಳು—ಹಸ್ತ ತಲ, ಪಾದತಲ, ಅಧರೋಷ್ಠ, ನೇತ್ರ, ತಾಲು, ನಾಲಗೆ, ಉಗುರು ; ಷಡುನ್ನತಗಳು—ವಕ್ಷಃಸ್ಥಲ, ಕುಕ್ಷಿ, ಕೇಶ, ಸ್ಕಂದ, ಹಸ್ತ, ಬಾಯಿ ; ಪೃಥುತ್ರಯಗಳು—ವಕ್ಷಸ್ಥಲ, ಕಟಿ, ಲಲಾಟ ; ಲಘುತ್ರಯಗಳು—ಗ್ರೀವಾ, ಜಂಘಾ, ಶಿಶ್ನ ; ಗಂಭೀರತ್ರಯಗಳು —ಸ್ವರ, ಕರ್ಣ, ನಾಭಿ (ಬೌದ್ಧಧರ್ಮಾನುಸಾರಸಂಗ್ರಹ — ಸಂ. ೨೨೪-೫). (ಆ) ಸಾಮುದ್ರಿಕಲಕ್ಷಣ — ೩೨ : ಛತ್ರ, ಕಮಲ, ಮನುಷ್ಯ, ರಥ, ವಜ್ರ, ಕಚ್ಛಪ, ಅಂಕುಶ, ವಾಪಿ, ಸ್ವಸ್ತಿಕ, ತೋರಣ, ಚಾಮರ, ಸಿಂಹ, ವೃಕ್ಷ, ಚಕ್ರ, ಶಂಖ, ಹಸ್ತಿ, ಸಮುದ್ರ, ಕಲಶ, ಪ್ರಾಸಾದ, ಮತ್ಸ್ಯ, ಯವ, ಸ್ತಂಭ, ಸೂರ್ಯ, ಕಮಂಡಲ, ಪರ್ವತ, ಚವರೀ, ದರ್ಪಣ, ವೃಷ, ಪತಾಕಾ, ಲಕ್ಷ್ಮೀ, ಪುಷ್ಪಮಾಲಾ, ಮಯೂರ (ಹಸ್ತಸಾಮುದ್ರಿಕ ಶಾಸ್ತ್ರ — ಸಂ. ೨೨೫-೨೨೬). ಸ್ವಶರೀರ, ಕುಲಿಶ, ದ್ವೀಪ, ಸಮುದ್ರ, ಭವನ, ವಿಮಾನ, ಬಾಣ, ಗೋಪುರ, ಇಂದ್ರಕೇತು, ಶಂಕ, ಪತಾಕ, ಮುಸಲ, ಹಯ, ರವಿ, ಶಶಿ, ಸ್ವಸ್ತಿಕ, ದಾರು, ಕೂರ್ಮ, ಅಂಕುಶ, ಸಿಂಹ, ಗಜ, ವೃಷಭ, ಮತ್ಸ್ಯ, ಛತ್ರ, ಶಯ್ಯಾ, ಆಸನ, ವರ್ಧಮಾನ, ಶ್ರೀವತ್ಸ, ಚಕ್ರ, ಅನಲ, ಕುಂಭ (?) (ಶಾಸ್ತ್ರಸಾರಸಮುಚ್ಚಯ)" (ಶ್ರೀವತ್ಸ. ೩೯೦). [ಬತ್ತೀಸ+ಲಕ್ಷಣ]

ಬತ್ತೀಸಶಸ್ತ್ರ (ನಾ). = ಬತ್ತೀಸಾಯುಧ : ಕಲಿಗೆ ಮುಖದರ್ಪ್ಪಣ ಬತ್ತೀಸಶಸ್ತ್ರಶಾಸ್ತ್ರಪ್ರವೀಣ (ಕೊಲ್ಹಾಶಾ. ೯-೩೭ ; 1171) ; ಬತ್ತೀಸಶಸ್ತ್ರ ಗಳಲಿಟ್ಟು ಬೊಬ್ಬೆಯನಿಟ್ಟು . . . ಬಿತ್ತರದ ಪರಿಘಂ ಪೊಡೆಯೆ (ವೆಂಕಾರಾ. ೩-೦೩-೭). [ಬತ್ತೀಸ + ಶಸ್ತ್ರ]

ಬತ್ತೀಸಾಯುಧ (ನಾ). ಮೂವತ್ತೆರಡು ಬಗೆಯ ಅಸ್ತ್ರಗಳು ; ೯ ಈ ಆಯುಧಗಳ ವಿವರದ ಬಗ್ಗೆ ಬೇರೆ ಬೇರೆ ಗ್ರಂಥಗಳಲ್ಲಿ ವ್ಯತ್ಯಾಸ ಗಳಿವೆ. "ಆಯುಧ—೩೨ (ಬತ್ತೀಸಾಯುಧ) : ಚಕ್ರ, ಭಿಂಡಿ ವಾಳ, ಭೃಶುಂಡಿ, ದೃಘಣ, ದಂಶಕಂಟಕ, ಇಳಾಹಸ್ತ, ಇಷು, ಮುಸಲ, ಮೌಷ್ಟಿಕ, ಮಯೂಖ, ಲಗುಡ, ಲವಿತ್ರ, ಪರಿಘ, ಪ್ರಾಸ, ಪಾಶ, ಶಕ್ತಿ, ಶತಘ್ನಿ, ಸೀರ, ಸ್ಥೂಣ, ತೋಮರ, ಗದಾ, ಗೋಶೀರ್ಷ, ಅಮುಕ್ತವಜ್ರ, ಆಸ್ತರ, ಅಸಿಧೇನುಕ, ಪಟ್ಟಸ, ಮುದ್ಗರ, ಪಿನಾಕ, ಕುಂತ, ಕಾಳರಾತ್ರಿ, ಯಾಪನ, ನಳಿಕಾ (ನೀತಿ ಪ್ರಕಾಶಿಕಾಸಂಖ್ಯಾರತ್ನಮಾಲಾ. ಪು. ೨೯೦); ಖಡ್ಗ, ಕರಾಚೂರಿ, ಕಕ್ಕಡ, ಕಡುಗತ್ತಿ, ಸಣೆಗತ್ತಿ, ಸಬಳ, ಈಟಿ, ಇದುರುಗತ್ತಿ, ಉಬ್ಬಣ, ಕಬ್ಬಿ(ಣ)ಕೋಲು, ಚಕ್ರ, ಚಂಡು, ವೋತಿ, ಚಲ್ಲೆಹ, ಬಲ್ಲಿಹ, ಬಂಕು, ಬಾಣ, ನೆದೆ, ನರಾದಿ, ಶೂಲ, ಶಿರಾದಿ, ಚೂರಿ, ಚಿಕ್ಕಠಾರಿ, ಕಿರಸೆ, ಪರಶು, ಪಾಶ, ಪಟ್ಟೆಯ, ಮಟ್ಟ, ಅಂಕುಶ, ವಂಕಿ, ಲೌಡಿ, ಜವದಾಡೆ (?) (ವಿಚಿಂ. ೧೬೩-೨೬೩. ೬-೪೩೪) : ಬಾಣ, ಖಡ್ಗ, ತೋಮರ, ಸ್ತೋಮ, ಸೃಗ, ಚೇರಿ, ಶಕ್ತಿ, ಯಷ್ಟಿ, ಭಿಂಡಿವಾಲ, ಪರಿಘ, ಪರಶು, ಗದೆ, ಪ್ರಾಸ, ಮುದ್ಗರ, ಮುಸಲ, ಶೂಲ, ಪಾಶ, ಚಕ್ರ, ಮುಸುಂಡಿ, ವಜ್ರ, ದಂಡ, ಹಲ, ಅಶನಿ, ಕುಂತ, ಅರಿಷ್ಟ, ಕ್ರಕಚ, ಪರಶು, ಶಂಕು, ತೋತ್ರ, ವೇಣು, ತ್ರಿಶೂಲ, ಕುಸೂಲ (ವಿದ್ಯಾಕ. ೧೩)" (ಶ್ರೀವತ್ಸ. ೩೩) : ಬತ್ತೀಸಾಯುಧದಲ್ಲಿ ಅಭ್ಯಾಸವ ಮಾಡಿದರೇನು ಹಗೆಯ ಕೊಲುವರೆ ಒಂದಲಗು ಸಾಲದೆ (ಬಸವ. ೭೩೯) ; ಬತ್ತೀಸಾಯುಧಂಗಳು ಮೆಱೆವ ಕರಗಳಲಿ ತೊನೆವ ಶ್ರೀಮೂರ್ತಿಯನು ನರಹರಿ ದನುಜಗಾಗಳ ತೋಱುತಿರಲು (ಸಂಭವ. ೬-೯೯) ; ಜಡಿವ ಬತ್ತೀಸಾಯುಧಂಗಳ ಸುಭಟರ ಬೆಡಗಿನ ನಿಕರವೊಪ್ಪಿಹುವು (ಕಂಪಪ. ೬-೩೯). [ಬತ್ತೀಸ + ಆಯುಧ]

ಬತ್ತು1 (ಕ್ರಿ). ೧. ಒಣಗು ; ಆರು ; ಇಂಗು : "ಬತ್ತು—ನಿರ್ದ್ರವೇ" (ಕಮರಾ) ; ಕೆಮ್ಮುಂ . . . ಬಾಯ್ ಬತ್ತುವುದುಂ (ಪಡ್ಡಾರಾ. ೩೩-೩); ಒಡಲುರಿಗುಂ ಮನಂ ಮಱುಗುಗುಂ . . . ಬಾಯ್ಬಿಡದೆ ಬತ್ತುಗುಂ (ಅದಿಪು. ೦೨-೪೦) ; ಕುರುಪತಿ ನಿನ್ನ ಪೊಕ್ಕ ತೊಱೆಗಳ್ಮೊದಲಾಗಿರೆ ಬತ್ತಿ ದಪ್ಪುವು (ಗದಾಯು. ೬-೦೨) ; ಸಾಗರ ಬತ್ತಲೆಡೆಯಲಿ ನಿಂದ ನೀರ ವೊಲಾಯ್ತು ಕುರುಸೇನೆ (ಕುಪ್ಕಾಶ. ೨-೭). ೨. ಬರಿದಾಗು ; ಶೂನ್ಯವಾಗು ; ಖಾಲಿಯಾಗು : (ಕ). ೩. ಗೊಡ್ಡಾಗು ; ಬರಡಾಗು : ಹತ್ತುಮತ್ತರದ ಭೂಮಿ ಬತ್ತುವ ಹಯನು ನಂದಾದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು (ಬಸವ. ೨೨೩). ೪. ಸೊರಗು; ಜೋಲು; ಕುಗ್ಗು : ತಾಪತ್ರಯದೊಳೆ ಕುದಿದೆಂ ಬತ್ತಿದೆಂ ಬಾಡಿದೆಂ ಯಾತನೆಗೊಂಡೆಂ (ಕಕ್ಷಾಪ. ೪-೨೨); ತೊಗಲು ಸಡಿಲಿದ ಗಲ್ಲ ಬತ್ತಿದ ಹೆಗಲು ನಱುಕಿದ ನರೆತ ಮೀಸೆಯು. . . ಮುಪ್ಪಿನ ಮುಗುದನೀತನ ಕಾದ ಹೇಳಿದು ನಗೆಯ ಸುರಿದೈ (ಕುಪ್ಕಾಭೀ. ೦-೩೩); ಬತ್ತಿರ್ದ ಮೊಲೆಯ ಕುಪ್ಪುಸದೊಳಱುವೆಯ ಚೆಂಡನೊತ್ತಿ ಬಿಗಿದುಂ . . . ಹಣ್ಣುಮುದುಕಿಸೂಳೆಯರೆಸೆದರು (ಸಬಪು. ೦೦-೭೬). ೫. ಮಂಕಾಗು; ಕಂದು; ಕಾಂತಿಯಿಲ್ಲದಿರು : ಬತ್ತಿರ್ದ ವಕ್ತ್ರಾಂಬುರುಹಂ ಮಿಂಚಾ ಗಲಿರ್ಪಂ ತೊಡೆದು (ದಶಕು. ೬-೦೯೭); ಬಾಗಿದೊಡಲಿನ ಬತ್ತಿದಾನನದ. . . ಶಬರಿಯ ಸುಪ್ರಸಿದ್ಧೆಯ ಸಾರ್ದರೊಲವಿನಲಿ (ತೊರರಾ. ೩-೦೨-೨೯). ೬. (ಧ್ವನಿಯು) ಕುಗ್ಗು: ಕಡಮೆಯಾಗು : ಚೀಱದೆ ಬತ್ತದೆ ಜತಿ

ಜಾತಿ ಕಟ್ಟಣೆ ಜಾಱದೆ . . . ಸವಿದೋಱಿ ಹಾಡಿದರು ಗಾಯಕರು (ಶಕ. ೦-೬೨). ೭. ದ್ರವಪದಾರ್ಥವು ಕುದಿದು ದ್ರವಾಂಶವು ಕಡವೆಯಾಗಿ ಗಟ್ಟಿಯಾಗು : ಅಟ್ಟು : ಕಾಯೆ ಬತ್ತಿದ ಹಾಲು ಚಿಲುಪಾಲೆನಿಕ್ಕು (ಸುಗರಾ. ೬೯-೨); ಎಳೆಯ ಹಲಸಿನ ಕಾಯ ಕುದಿಸಿ ಮತ್ತೊಮ್ಮೆ ಹಾಲೊಳಗುಪ್ಪನಿಕ್ಕಿಯದ ಬತ್ತುವಂದದಿಯಟ್ಟು (ಸೂಪಾ. ೯-೫೬). ೮. ಇಲ್ಲವಾಗು ; ಮಾಯವಾಗು : ಕುಮುದಂಗಳ ನಗೆ ಬತ್ತಿದುವು ಪಾಯ್ವ ನೇಸಱಿನಾಗಳ್ (ಲೀಲಾವ. ೩-೫). 'ಬಚ್ಚು$_2$' ಪರಾ.

[ದೇ. ॥ ತಮಿ. ಮಲ. ವಱ್ಱ; ತುಳು. ಬತ್ತು; ಕೊಡ. ಬತ್ತ್; ತೆಲು. ವತ್ತು, ವರುಟು; ಕೋಲಾ. ವತ್ ; ಪರ್ಜಿ. ವೆತ್ತ್, ವೆಟ್ಟ್; ಗಡಬ. ವಟ್; ಗೊಂಡಿ. ವತ್ತಾನಾ; ಕುರುಖ್. ಬತ್ತಾನಾ]

ಬತ್ತು$_2$ (ನಾ). ಒಣಗಿದುದು; ಒಣಕಲು; ಶುಷ್ಕವಾದುದು.

ಬತ್ತಾಗು = ಒಣಕಲಾಗು ; ಬಾಡು : ಬಿತ್ತು ಮರ ಪಲ್ಲವಿಸಿ ಫಲವಾಯ್ತು ತಳಿತ ಮರ ಬತ್ತಾಯ್ತು. . . ಬತ್ತಿದುವು ಕೆರೆ ಭಾವಿ ಹರಿ ಚಕ್ರವಂ ತುಡುಕಲು (ಕುಕಂಗ. ೨೨-೪೦). [< ಬತ್ತು$_1$]

ಬತ್ತುಂಬಯ 'ಬತ್ತುಂಬಯನ್' ನೋ.

ಬತ್ತುಂಬಯನ್, ಬತ್ತುಂಬಯಂ (ನಾ). ಹಾಲು ಕೊಡುವುದನ್ನು ನಿಲ್ಲಿಸಿದ ಹಸು; ಗೊಡ್ಡಾಕಳು: ಬತ್ತುವುದು ಪಯನ್, ಬತ್ತುಂಬಯನ್ (ಕಪ್ಪಾನು. ೩೩೩). ಬತ್ತುಂಬಯ : ಬಕಾರಕ್ಕೆ_ಬತ್ತುಂಬಯಂ, ಬತ್ತುಂಬಟಿ (ಕಪುದ. ೦೭೦ ಪ್ರಯೋ). [ಬತ್ತು$_1$ + ಪಯನ್]

ಬತ್ತುಂಬಟಿ (ನಾ). ಒಣಗಿದ ಬಟ್ಟೆ; ಆರಿದ ಆರಿವೆ : ಬಕಾರಕ್ಕೆ – ಬತ್ತುಂಬಯಂ, ಬತ್ತುಂಬಟಿ, ಅಟ್ಟುಂಬರಿ (ಕಪುದ. ೦೭೦ ಪ್ರಯೋ).

[ಬತ್ತು$_1$ + ಪಟ್ಟಿ$_5$]

ಬತ್ತುಗೆ (ನಾ). ತೇವವನ್ನು ಕಳೆದುಕೊಳ್ಳುವಿಕೆ; ಒಣಗುವಿಕೆ : ಸುರಿವ ಬಾಷ್ಪಜಳಂ ಕರುಣಾರ್ದ್ರಹಾರವಂ ಬಳೆಯಿಸೆ ಬಾಯ ಬತ್ತುಗೆಯ ನಿಂತೆರ್ದೆಗೆಟ್ಟಱುತುಂ . . . ಬಿಟ್ಟಳಂದಜಿತಸೇನೆ (ಸಂಪ್ರಪು. ೩-೦೦).

[ಬತ್ತು$_1$ + – ಗೆ]

ಬತ್ತುವಸುರು (ನಾ). ತೆಳ್ಳಗಿರುವ ಹೊಟ್ಟೆ; ಒಳಸೇರಿದ ಹೊಟ್ಟೆ : ಲೀನಾಖ್ಯೆ ಲೀನವೆಂಬ ಪೆಸರ್ವಡೆದ ಗರ್ಭದಲ್ಲಿ–ಬತ್ತುವಸುರಿನಲ್ಲಿ (ಶಾಶಕೀ. ೨-೨-೨೦ ಪ). [ಬತ್ತು$_1$ + ಬಸುರು (<ಬಸಿಱು)]

ಬತ್ತುವಾಲ್ (ನಾ). ಕುದಿಸಿ ಇಂಗಿಸಿದ ಗಟ್ಟಿಯಾದ ಹಾಲು; ಕೆನೆಹಾಲು : ನವರಕ್ಕಿಯೋಗರಂ ಕೂಡಿದ ಬತ್ತುವಾಲ್ ಮಿಸುವ ಗಲ್ಲೆಮೊಸರ್ ಮೊದಲಾದವೆಲ್ಲಮುಂ ಜೋಡಿಸಿ (ಹಾಲಾಸ್ಯ. ೦-೬-೫).

[ಬತ್ತು$_1$ + ಪಾಲ್$_1$]

ಬತ್ತೆ (ನಾ). (ಔಷಧಿ, ಅಡಕೆ ಮುಂತಾದುವನ್ನು) ಅರೆಯಲು ಅಥವಾ ಕುಟ್ಟಲು ಬಳಸುವ ಕಲ್ಲಿನ ಅಥವಾ ಲೋಹದ ಒರಳಂ ಮತ್ತು ಗುಂಡು : ಕಬ್ಬಿಣದ ತರತರದ ಜೀನಸಗಳು–೧. ಅಡಕೊತ ಗಳು . . . ೫೭. ಬತ್ತೆಗಳು (ಖಲಬತ್ತೆ) (ಸುಂಬಿಪ್ಯಾ. ೧೦೨). 'ಕಲಬತ್ತು' ಪರಾ. [← ಹಾರ. ಬತ್ತಾ; ಮರಾ. ಬತ್ತಾ, ಬತ್ತಾ$_5$]

ಬತ್ತೆಮ್ಮೆ (ನಾ). ಹಾಲು ಕೊಡದಿರುವ ಎಮ್ಮೆ; ಗೊಡ್ಡೆಮ್ಮೆ : ತಂದ ಬತ್ತೆಮ್ಮೆಗಳು ಕರು ಹಾಕಿದುವು. ಹಾಲು ಮಾರಿದನು (ಅಗುಬ. ೯೬). [ಬತ್ತು$_1$ + ಎಮ್ಮೆ (<ಎರ್ಮೆ)]

ಬತ್ತೇರಿ 'ಬತೇರಿ' ನೋ.

ಬತ್ವ (ನಾ). 'ಬ' ಎಂಬ ಅಕ್ಷರ; ಬಕಾರ : ಸವನಿಸುಗುಂ ಬತ್ವ ಕೊರ್ಮೆ ವತ್ವಮುಂ ವತ್ವದೆಡೆಗೆ ಬತ್ವಂ ಬಹುಳಂ (ಕಪುದ. ೨೫೯).

[ಸಂ.]

ಬದಂಗ 'ಬದಗ' ನೋ.

ಬದಗ, ಬದಂಗ, ಬದೆಗ (ನಾ). ೧. ವಿಟ ; ಜಾರ; ವ್ಯಭಿಚಾರಿ : ಜಾತಿಸೂಳೆಗೆ ರಣಭೀತನ ಪುಸಿನುಡಿವಾತನ ಖಳನ ಕೆಳೆಯನ ಬದಗನ ಬೂತಿನ ಮಾತು ದಿಟಮಲ್ತು (ಲೀಲಾವ. ೨-೩೯) ; ಬಚ್ಚಣವಾತಿನ ಬದಗ ರ್ಗೊಲಿದೊಡೆ. . . ಪುಚ್ಚಣಿಯಹುದೆನುತೊರ್ವಳ್ ಮುಗ್ಧೆಗೆಯುಸುರಿ ದಳು ವಿದಗ್ಧೆ (ಜಯಾಕಾ. ೦೯-೫೦); ಒದವಿಸಿಯಿಾ ವಿಷಯಂಗಳ ಜೀವರ ಬದಗರ ಮಾಡುವಹಳೀ ಮಾಯೆ (ಕಕ್ಕಪ. ೦೩೦-೯). ೨. ಕೆಳದರ್ಜೆಯ ಸೇವಕ ; ಕೀಳಾಳಂ ; ಊಳಿಗದವನು : "ಬದಗನೆಂದು ಕೀಟಾಳ್" (ಕಕಾ. ೬೦-೩೫೫); ಬಡಿಕೋಲಂ ಪಿಡಿದು ಪರಿವ ಬದಗರುಮಂ ಬಿಟ್ಟರ ನಾಂತು ಪರಿವೊಟ್ಟಜೆಕಾಱರುಮಂ . . . ಕಂಡು (ಲೀಲಾವ. ೫-೦೦೯ ಪ) ; ಬಿದ್ದಿನರ ವೀಳಯದ ಬದಗರು ಭಟರ ಮೋಡಿಯಲಿ ಹೊದ್ದಿದೊಡೆ ಹುರುಳಹರೆ (ಕುಸ್ಕಾಲ. ೦೯-೨೫); ದನವ ಕಾಯ್ವುತ್ತಿರ್ಪ ಬದಗನೇಂ ಕಱಿದಂ ಕುಡಿದನೊ (ಸಿದ್ಧೇಪು. ೯-೩೭). ೩. ದಡ್ಡ; ಮೂರ್ಖ; ತಿಳಿಗೇಡಿ : ಜಾಣ ಜಾಣೆಯರಾಟವೆಂಬುದು ಚದುರಂಗದಾಟದಂತಿಹುದು ಬದಗರ ಲೀಲೆಯಹುದು ಟೊಳ್ಳೆಗವಡೆಯ ಕೆದರ್ವ ಸೋಗಳೆಯಾಟದಂತೆ (ಕರಸ. ೦೦-೦೯). ಬದಂಗ : ೧. ಜಡಿದೊಡೆ ಪೊಂಗಿ ಪಂದೊವಲ ಪೊಲ್ಪೊಱಿಯೇಱುವ . . . ಮೊಕ್ಕಳಂಬಡುವ ಬದಂಗನಂ ಬೆಸ[ಹಾಶಾಂ. ಬದಂಗಿ ದುರ್ಬೆಸ]ನಿಯಲ್ಲದಳಾತನನೊಟ್ಟಿ ಸುಟ್ಟಪಳ್ (ಲೀಲಾವ. ೨-೬೬). ಬದೆಗ : ೩. ಬದೆಗರಂದದಿ ಹೋರಲೇತಕೆ ಗೆಲವು ನಿನ್ನದು ಸೋಲವೆನಗೆ ಹೋಗು (ಕರಸ. ೫೦-೮೩). ೪. ಅಲ್ಪವ್ಯಕ್ತಿ; ಕ್ಷುಂದ್ರ; ನೀಚ : ಇದು ತನಗೆ ಪರಿಣಾಮವಾಯ್ತಲೆ ಬದೆಗ ಹುಸಿವವರರಸ (ತಿಪಾಗ. ೩-೭-೦೫); ಬದೆಗ ದಶಮುಖನೊರಜು ಬಾಡಬನುದರವರಿವುದೆ (ಕಾಕ್ತಳ. ೨೩-೦೯).

[ಬದಗು + – ಅ$_7$. / ತಮಿ. ಪತಕ. / ಸಂ. ಪಾತಕ = ಪಾಪ]

ಬದಗಿ (ನಾ). ೧. ಊಳಿಗದವಳು ; ಸೇವಕಿ ; ದಾಸಿ : ಏಕೆ ಕೆಣಕಿದೆ ಕರ್ಣ ಬೂತಿನ ಬೀಕಲಿನ ಬದಗಿಯನು (ಕುಸ್ಕಾಸ. ೦೫-೦೯); ಕರ್ಣ. ಈ ಬದಗಿಯನ್ನೇಕೆ ಕೆಣಕಿದೆ ? ಯುದ್ಧದಲ್ಲಿ ಈಕೆಯ ಭೀಮನು ನನ್ನನ್ನು ಮುರಿಯುತ್ತಾನಲ್ಲವೆ? (ರಾಜಸೂ. ೦೦೩). ೨. ಏನೂ ತಿಳಿಯದವಳು; ಮುಗ್ಧೆ : ನೋಡುವುದೆನ್ನೆರ್ದೆಯೋ ಕಣ್ಣೋ . . . ತಾ ಸೊಕಗಳಿ ಗೀಡಹುದಾತ್ಮನೊ ಪರಮನೊಯೆಂದಳ್ ಬದಗಿಯವೊಲ್ ಚದುರೆ (ಕಾದ್ಯದೇ. ೯-೨೬). [ಬದಗ + – ಇ$_3$./ತಮಿ. ಪತಕಿ]

ಬದಗಿಗ (ನಾ). ನೀಚ ; ಕೀಳುಮನಷ್ಯ : ಈಕೆಗೆ ಭೂತಚೇಷ್ಟೆಯೊ . . . ಬದಗಿಗರು ಸೈರಿಸದೆ ಶೂನ್ಯಗಳನೆಸಗಿದರೊ (ಪ್ರಶುಪು. ೫-೪೦); ಮುಟ್ಟದಿರು . . . ಪೆಣ್ಗೊಲೆಗೊಡಂಬಡುವ ಬದಗಿಗು[ಗ]ಯೆಂದು ಯೆದೆಯೊಳಿನಿತುಂ ದಯಂಗೊಡದೆ ಕಳಕಳಿಸುವಳ ನೋಡುತಿರಲು (ಪ್ರಶುಪು. ೯-೦೩೯). [ಬದಗು + – ಇಗ]

ಬದಗು (ನಾ). ೧. ಹಾದರ; ವ್ಯಭಿಚಾರ : ಎತ್ತಿದ ಬರ್ದೊ ಮೇಣ್ ಬದಗೊ[ಹಾಶಾಂ. ಬೆಱಗೊ] ಪೇಱಿಮಿದೀಕೆಯ ಕೂರ್ಪೊ ಮೆಲ್ಪೊ (ಲೀಲಾವ. ೨-೭೮); ಎನ್ನ ಮಾಟ್ಟ ಬದಗೇಂ ಪೆಱತಾದುದೆ ಬೇಡ ಕೆಮ್ಮಗಂ ಮನೆಗುಸುಟೇಕೆ ತನ್ನ ಸುಖಕಲ್ಲದೆ ಕೇಳಿಕೆ ಯಾರ ಬಿಟ್ಟಿಯೋ (ಲೀಲಾವ. ೨-೦೦೯). ೨. ತೊತ್ತುಗೆಲಸ; ಊಳಿಗ; ಸೇವೆ : 'ಬದಗುಗೆಯ್' ಪರಾ. ೩. ಮೋಸ; ವಂಚನೆ; ಠಕ್ಕು : "ಬದಸು, ಬದಗು– ಕೌಟಿಲ್ಯಂ" (ಕಪುದ. ಕಂ. ೨). ೪. ದಡ್ಡತನ; ಮೂರ್ಖತನ : ಲಿಂಗಾಂಗದ ಪುರುಳಱಿಯದ ಮರುಳೇ ತಿಳಿವಿನಿಸಿಲ್ಲದ ಬದಗಿನ ತಿರುಳೇ ಕೇಳು (ಕಾದ್ಯದೇ. ೩-೬೯). ೫. ವ್ಯಭಿಚಾರಿ ಎಂಬರ್ಥದ ಒಂದು ಬಯ್ಗುಳು: ಬೆದರುಪುಲ್ಲೆಯ ತೆರದೊಳವಳು ಕೆಟ್ಟೋಡಿ ನಡಗುತ್ತ

ಗುಡಿಯ ಕದಗಳಂ ಗಳಗಳನೆ ಮುಚ್ಚಿಯಗುಳಿಯ ಜಡಿಯೆ ಎದೆಗುಂದಿ ಭೂತಂಗಳೋಡೆ ಸಿದ್ಧರ್ ನೋಡೆ ಬದಗು ಹೊಲೆಮಾಲೆ ನೀನೊಳ ಪೋಗಲ್ಬಿಡುವೆನೆ ಭಲರೆ ಎಂದಾರ್ದನೊಲಿದು (ಕನುಪು. ೩-೦-೨೨).

ಬದಗುಗೆಯ್ (ಕ್ರಿ). ತೊತ್ತುಗೆಲಸ ಮಾಡು; ಊಳಿಗ ಮಾಡು : ಅರಸರ ದೆಸೆಯಿಂ ಮನೆಯುಂ ಕವರ್ತೆವೋಪುದುಂ ಪೆಱರ್ ಕೀಟಿಲೊಳೆಮ್ಮಬ್ಬೆಯುಂ ಮುತ್ತಬ್ಬೆಯುಂ ಸಾರ್ದು ಬದಗುಗೆಯ್ದುಣೆ (ಅಂಪು. ೩-೩೪ ಪ); ಪೆಱರ ಕೀಟಿಲಂ ಸಾರ್ದೆಮ್ಮಬ್ಬೆಯುಂ ಮುತ್ತಬ್ಬೆಯುಂ ಬದಗುಗೆಯ್ದುಣುತಿರ್ಪಿನಂ (ಕಾಪುಂಪು. ೦೮). [ಬದಗು + ಕೆಯ್$_1$]

ಬದಗುಳಿಗ (ನಾ). ಊಳಿಗ ಮಾಡಿ ಜೀವಿಸುವವನು ; ತೊತ್ತು : ಬದಗುಳಿಗನ ತೋಳ್ಮುಟ್ಟಿದ ಸುದತಿಯೊಳಿಂಬಾಗದಂತೆ ಕೆಟ್ಟುದು ಪುಟಿ ಮುಟ್ಟಿದ ದುಗ್ಧದಂತೆ . . . ಪತಿಗೆ ಶಯ್ಯಾತಳದೊಳ್ (ಯಕೋಸ. ೨-೩೯).

[ಬದಗು + — ಉಳಿಗ$_2$]

ಬದಜಾತ (ನಾ). ಕ್ಷುದ್ರವ್ಯಕ್ತಿ; ಅಲ್ಪ; ನೀಚ : ಈ ಬದಜಾತನನ್ನು ಹೊಡೆದು ಓಡಿಸೋ! (ಬಂಕಿಮ. ೪೬೯). [← ಪಾರ. ಹಿಂ. ಬದ್‌ಜಾತ್]

ಬದಣಿ 'ಬದನೆ' ನೋ.

ಬದಣಿಕೆ 'ಬಂದಣಿಕೆ' ನೋ.

ಬದಣೆ 'ಬದನೆ' ನೋ.

ಬದಣೆಗಾಯಿ 'ಬದನೆಕಾಯ್' ನೋ.

ಬದಣೆಗುಪ್ಪೆ, ವದಣೆಗುಪ್ಪೆ (ನಾ). ಒಂದು ಸ್ಥಳದ ಹೆಸರು : ಬದಣೆಗುಪ್ಪೆ ನಾಮ ಅವಿನೀತಮಹಾಧಿರಾಜೇನ ದತ್ತೇನ ಪಡಿಯೇಟಱೊಳಂ ಊರೊಳ್ಪನ್ನಿರ್ಕ್ಕಣ್ಡುಗಜ್ಗೆಯ್ದು (ಎಳ. I. ೦-೦೯; 466). **ವದಣೆಗುಪ್ಪೆ** : ಪುನ್ನಾಡುಎಡೆನಾಡುವಿಷಯೆ ವದಣೆಗುಪ್ಪೆ ನಾಮ ಗ್ರಾಮಃ (ಎಳ. III (B), ನಂಜನ. ೨೬೯-೩೩; 808). [ಬದಣೆ (< ಬದನೆ) + ಕುಪ್ಪೆ$_1$]

ಬದನಾಮಿ 'ಬದ್ನಾಮಿ' ನೋ.

ಬದನಿಕೆ 'ಬಂದಣಿಕೆ' ನೋ.

ಬದನಿದಿ (ನಾ). ಒಂದು ಸ್ಥಳದ ಹೆಸರು : ಮೂಡನ ಸೀಮೆ ಕಳ್ಳಿವೆಟ್ಟನ ಮೂಡಣ ಪೊರೆಯೆ ಮೂಱುಬೆಟ್ಟು ಒಳಗು ಮೂಡಣ ಬಡಗಣ ಕೊನ್ನೆಡು ಬಿದನಿದಿಯ ಬಡಗಣ ಒಳ್ವೆ (ಮೈಲಿ. ೦೯೨೭. ೦೨೨-೬೩; 800).

[?]

ಬದನೆ, ಬದಣಿ, ಬದಣೆ (ನಾ). ೧. ಒಂದು ಬಗೆಯ ತರಕಾರಿ ಗಿಡ ಮತ್ತು ಅದರ ಕಾಯಿ : ಬದನೆಯ ಪೊಸ ಬಿತ್ತಂ ತೋಡಿ ಬಯ್ತುಟ್ಟು ಕೂಷ್ಮಾಂಡದ ಫಲದೊಳದಂ ಮಧ್ವಾಜ್ಯದಿಂ ಮುಚ್ಚಿಸಲ್ ಪಣ್ತೊದವಿದಱೊಳೆ ಬಿತ್ತಂ ಕೊಂಡು ಬಿತ್ತಲ್ ವಿಚಿತ್ರಂ ಬದನೆಯ ಫಲಮಕ್ಕುಂ ಬಳ್ಳಿ ಕೂಷ್ಮಾಂಡಮಕ್ಕುಂ (ಶೋಕೋಶ. ೬-೩೩); ಕೂಷ್ಮಾಂಡವವರೆ ಬದನೆಗಳಿಂ ಲೇಸಾಗಿರೆ ಮಾಡಿದ ಸವಿಮೇಲೋಗರಮಂ ತಂದು ಬಡಿಸಿದರ್ ಕಾಂತೆಯರ್ (ರರ್ಮಶ. ೨-೩೩). ೨. (ಆಲಂ) ಹುರುಳಿಲ್ಲದುದು; ಪ್ರಯೋಜನಕ್ಕೆ ಬಾರದುದು: ಪಂಪ ಹುಟ್ಟಿ ಭಾರತವ ಕಟ್ಟಿ ಹಿರಿ ಸಿದ್ಧಪದವ ಮುಟ್ಟಿ ನಿರ್ಜರೆಯ ಪಡೆದ . . . ತೀಡಿದರು ಅದನೆ ಅದನೆ ಯಾರಾರೊ ಎಂದು ರಸವಾರಿ ಹೋಗಿ ಪುಸ್ತಕವೆ ಆಯ್ತು ಬದನೆ (ಮುಳ್ಳಳಂ. ೨೯-೦೨). **ಬದಣಿ** : ೧. "ಬದಣಿ—ವಾರ್ತಾಕಿ, ಭಂಡಾಕಿ, ಹಿಂಗುಲಿ, ಸಿಂಹಿ, ದುಷ್ಟಧರ್ಷಣಿ"(ನಾಜರಾ. ೪); ಆ ಕ್ಷೇತ್ರದವೊಳಗಾದ ಅಡಕೆ . . . ಬದಣಿ ಕಬ್ಬು ಕಾರೆಗೆಣಸುಯೇನುಂಟಾದುದನು ಆ ಕ್ಷೇತ್ರಕ್ಕೆ ಸಲುವ ನಿವೇಸನ ೧೫ ಅರೆ X (ಎಳ. III (B), ನಂಜನ. ೨೯೨-೦೩; 1527). **ಬದಣೆ** : ೧. "ವಾರ್ತಾಕಮೆಂಬುದು ಬದಣೆ" (ಹಲಾಯು. ೨೬-೮೦); ಇಂತು ಬದಣೆಯ ಕಾಯಿ ಲಿಂಗವಾಗುತ್ತಮಿರೆ (ಬಸರ. ೯-೬೯); ಸತಿ ಕದ್ದಳೊಂದು ಬದಣೆಯ ಕಾಯನು (ಸಿದ್ಧೇಪು. ೦೯-೭).

[ದೇ:ಪ ತಮಿ. ವಟುತುಣ್ಯೆ, ವಟುತಲ್ಯೆ; ಮಲ. ವಟುತಿನ, ವಟುತಿನಿ; ತುಳು. ಬದನೆ; ತೆಲು. ವಂಗ; ಕೋಲಾ. ವಂಗೆ; ಮಲ್ತೊ. ಬಟಂಗೊ. / ಹಿಂ. ಬೈಂಗನ್, ಬೈಂಗನೀ; ಮರಾ. ಬೈಂಗಣ್, ಬೈಂಗನ್. / ಸಂ. ವೃಂತಾಕ].

ಬದನೆಕಾಯ್, ಬದಣೆಗಾಯಿ, ಬದನೆಕಾಯಿ (ನಾ). ಒಂದು ಬಗೆಯ ಕಾಯಿಪಲ್ಲೆ; ವೃಂತಾಕ : 'ತುಳುವಬದನೆಕಾಯ್' ಪರಾ. **ಬದಣೆಗಾಯಿ** : ಬದಣೆಗಾಯಂ ಸಹಜಲಿಂಗಮಂ ಮಾಡಿದಂ ಬಸವಂ (ಕನಪು. ೩೭-೮೦). **ಬದನೆಕಾಯಿ** : ಬದನೆಕಾಯಿ ಬೀಜವನ್ನು ಡಿಸೆಂಬರ್ ನಿಂದ . . . ಮೇ ತಿಂಗಳವರೆವಿಗೂ ಸಸಿ ಮಾಡಿ ನೆಡಬಹುದಾಗಿದೆ (ಕರಪ. ೨೦); ಪುರಾಣ ಹೇಳೋದು, ಬದನೆಕಾಯಿ ತಿನ್ನೋದು (ಗಾಪ).

[ಬದನೆ + ಕಾಯ್$_4$]

ಬದನೆಕಾಯಿ 'ಬದನೆಕಾಯ್' ನೋ.

ಬದನೆಕುತ್ತಿ (ನಾ). ಬದನೆಗಿಡದಲ್ಲಿ ಮೊದಲ ಸಲ ಬೆಳೆ ತೆಗೆದ ಮೇಲೆ ಉಳಿಯುವ ಬುಡ; ಗುತ್ತಿ: ಬೆಳಗಿನ ಜಾವ ಎದ್ದೊಡನೆ, ಹೊಗೆಸೊಪ್ಪಿನ ಹಿತ್ತಲಿನಲ್ಲಿ ಉಳಿದ ಹರಿವೆ, ಬದನೆಕುತ್ತಿಗಳಿಗೆ ನೀರೆರೆಯುವ ಸಂಭ್ರಮವಾಯಿತು (ಮರಮ. ೩೬೯). [ಬದನೆ + ಕುತ್ತಿ$_1$]

ಬದಮಾಷ್ 'ಬದ್ಮಾಶ್' ನೋ.

ಬದರ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು; ಬೋರೆ; ಎಲಚಿ : ತ್ರಿದ್ವೈಕದಿನಾಂತರಿತ ಬದರಾಕ್ಷಾಮಲಕಪ್ರಮಾಣಾಹಾರಂಗಳುಮಪ್ಪ ಮಿಥುನಂಗಳ್ಗೆ ಸಂಭೋಗ್ಯಮಾಗಿ ಸಲೆ ಜಘನ್ಯಭೋಗಭೂಮಿಯ ಕಡೆಯ ಪಲಿತೋಪಮದೊಟನೆಯ ಭಾಗಮುಟಿದುದು (ಅಂಪು. ೬-೯೮ ಪ); ಆತತಪರಿಖಾವಳಯಂ ಸುತ್ತಲುಮನುಪಮ ಬದರಾಶೋಕಮಹೀಜಂ (ಸುಳುಮಾ. ೦೦-೩೬ ರಗಳೆ); ವಂಗುವಿನ ಮೊಳೆವಲ್ಗಳೂರಿದ ಬದರವನಿನಿಯನಿಗೀವಳು ಕಾಂತೆ (ಗಾಥಾಸ. ೩೦-೦೦೦). [ಸಂ.]

ಬದರಿ (ನಾ). ೧. = ಬದರ: "ಬದರೀ, ಕುವಲೀ, ಕರ್ಕಂಧೂಃ— ಈ ಮೂಱುಂ ಬೋರೆಗಿಡದ ಪೆಸರ್" (ಹಲಾಯು. ೩೨-೯೦); ಬದರಿಯ ವೃಕ್ಷದ ಮೂಲದೊಳುದಕಂ ಮಧು ಮಧುಕವೆಳ್ಗಳೇಬಿವನರೆದಿಕ್ಕಿದೊಡದು . . . ಮಧುರಫಲನೆಱಗುಗುಮಧಿಕಂ (ಶೋಕೋಶ. ೬-೩೭); ತೆಂಗು ತಾಟ್ ಬದರಿ ದಾಡಿಮ (ಪರ್ಶಪು. ೨-೩). ೨. ಹತ್ತಿಗಿಡ. ೩. ಹಿಮಾಲಯದ ಉತ್ತರದಲ್ಲಿ ಅಲಕನಂದಾ ನದಿಯ ದಡದಲ್ಲಿರುವ ಒಂದು ಪುಣ್ಯಕ್ಷೇತ್ರ: ಧರೆಯೊಳಗೆ ಶ್ರೀಪುರಂದರವಿಠಲರೇಯನ ಪರಮಭಾಗವತರ ಉದರ ಬದರಿ (ಪುರಂದ. ೨-೨೬-೩); ಅರ್ಭಕತನದೊಳ್ಳೆದಿ ಬದರಿಯಲಿ ಮಧ್ವಮುನಿ ನಿರ್ಭಯದಿ ಸಕಲಶಾಸ್ತ್ರವ ಪಠಿಸಿದ (ಕಥಪಿ. ೩೯).

[ಸಂ. ಬದರೀ]

ಬದರಿಕಾಶ್ರಮ (ನಾ). = ಬದರಿ ೩: ಮುನ್ನೆ ಬದರಿಕಾಶ್ರಮದೊಳ್ ಆ ಯತಿಯಿಂದಂ ನರ ನಾರಾಯಣರೆನೆ ನೆಗಟ್ದೆವರಿಗ ನಾವಿರ್ವರುಂ(ಪಂಪಭಾ. ೩೯-೯೪ ಪ); ಬದರಿಕಾಶ್ರಮದಿ . . . ಮಹಾನುಭಾವರ ಪಿತನು ನಡೆತಂದ (ಸಂಭವ. ೩-೦); ಬದರಿಕಾಶ್ರಮಕೆ ಪುನರಪಿಯೈದಿ ವ್ಯಾಸಮುನಿಪದಕೆರಗಿ . . . ಬ್ರಹ್ಮತ್ವವೈದಿದ ಮಧ್ವಮುನಿರಾಯಗಭಿವಂದಿಪೆ (ಕಥಪಿ. ೩೩).

[ಸಂ.]

ಬದರಿಕೆ (ನಾ). ೧. ರಕ್ಷಕ; ಕಾವಲುಗಾರ; ಪಹರೆಯವನು : (ಕಿ). ೨. ರಕ್ಷಣೆ; ಕಾಪಾಡುವಿಕೆ: ಗ್ರಾಮನೌಕರಿಗಳನ್ನು ನೋಡುವವರು ಇಡುವ ಲೆಕ್ಕಗಳ ಮತ್ತು ಇತರ ಕಾಗದಪತ್ರಗಳ ಬದರಿಕೆ, ಅವುಗಳನ್ನು ಹಾಜರ್ ಮಾಡೋಣ ಮತ್ತು ವರ್ಗಾಯಿಸೋಣ (ಗ್ರಾಮಾಕ. ೧೦೦).

[← ಪಾರ. ಮರಾ. ಬದರಕಾ, ಬದ್ರಕಾ]

ಬದಲಾಯಿಸು 'ಬದಲಿಸು' ನೋ.

ಬದಲಾವಣೆ (ನಾ). ಮಾರ್ಪಾಡು; ವ್ಯತ್ಯಾಸ: ಚಿಕ್ಕಪ್ಪನ ಮುಖದಲ್ಲಾದ ಗಮನಾರ್ಹ ಬದಲಾವಣೆಯನ್ನು ಗುರುತಿಸಿ ಯಶೋದೆ ಹೇಳಿದಳು (ಪಾಕ್ಯಲ್ಯ. ೩೭); ಸರಿಯಾದ ಲೆಕ್ಕವಿದ್ದರೆ ನಿಮ್ಮ ಅವಶ್ಯಕತೆಗಳಿಗೆ ಸರಿಯಾಗಿ ಅಂದಾಜು ಪತ್ರದಲ್ಲಿ ತಕ್ಕ ಬದಲಾವಣೆಗಳನ್ನು ಮಾಡಲು ಸುಲಭವಾಗುವುದು (ಅಡುಸೌ. ೦೨೩).

[ಬದಲಾಯಿಸು (<ಬದಲಿಸು) + — ಅಣ್ಕೆ]

ಬದಲಿ$_1$ (ಗು). ೧. ಬದಲಾದ; ಬೇರೆಯಾದ: ನಾನು ಕಾಲಕಾಲಕ್ಕೆ ಕೊಂಡ ಹಲವಾರು ಕೊಡೆಗಳು ಹೀಗೆ ಒಂದೊಂದು "ಬದಲಿ ಇಸಮು" ಇಟ್ಟು ಓಡಿಹೋದುದರಿಂದ ನನಗೀಗ ಒಂದು ಹಳೆ ಕೊಡೆಗಳ ಅಂಗಡಿ ಇಟ್ಟರೆ ಹೇಗೆ ಎಂಬ ವಿಚಾರ ಬರತೊಡಗಿದೆ (ದೇಶಸ್ಥ. ೬೨). (ನಾ). ೨. ಒಂದು ವಸ್ತುವಿಗೆ ಪ್ರತಿಯಾಗಿ ಬರುವ ಮತ್ತೊಂದು ವಸ್ತು ಅಥವಾ ಒಬ್ಬ ವ್ಯಕ್ತಿಗೆ ಪ್ರತಿಯಾಗಿ ಬರುವ ಮತ್ತೊಬ್ಬ ವ್ಯಕ್ತಿ: ನೀನು ಕೊಟ್ಟ ಪುಸ್ತಕಕ್ಕೆ ಬದಲಿಯಾಗಿ ಈ ಪುಸ್ತಕವನ್ನು ಇಟ್ಟುಕೊಂಡಿರು (ಕೂಡಿ). [← ಹಿಂ. ಮರಾ. ಬದಲೀ]

ಬದಲಿ$_2$ (ಅ). ಪ್ರತಿಯಾಗಿ ; ಬದಲಾಗಿ : ರಶೀದಿಗಳನ್ನು ಕೊಡದೆ ಇದ್ದರೆ ಆ ಶೇಕದಾರ ಶ್ಯಾನುಭಾಗರಿಗೆ ನಶಿಹತ್ತು ಮಾಡಿ ಅವರಿಗೆ ಬದಲಿಯಿತಬಾರಿ ಶೇಕದಾರ ಶ್ಯಾನಭಾಗರನ್ನ ಮೊಕರರ್ಮಾಡಿಟ್ಟು . . . ನಡೆದುಕೊಳ್ಳುವದು (ಸುಹಾಸಂ. II, ೬೬). [< ಬದಲ್$_1$]

ಬದಲಿನೇಮಕ (ನಾ). ಒಬ್ಬ ವ್ಯಕ್ತಿಗೆ ಬದಲಾಗಿ ಮತ್ತೊಬ್ಬ ವ್ಯಕ್ತಿಯನ್ನು ಗೊತ್ತುಮಾಡುವಿಕೆ.—ನಿಯಮಿಸುವಿಕೆ : ಕಾರ್ಯನಿರ್ವಾಹಕನೇಮಕ, ಬದಲಿನೇಮಕ (Acting appointment. ಪತ್ರಿಕಿ. ೨).

[ಬದಲಿ$_2$ + ನೇಮಕ]

ಬದಲಿಭತ್ಯ (ನಾ). (ಬದಲಿ ಕೆಲಸಕ್ಕಾಗಿ ಕೊಡುವ) ಹೆಚ್ಚಿನ ಹಣ : ಬದಲಿಭತ್ಯ, ಕಾರ್ಯನಿರ್ವಾಹಕ ಸಂಭಾವನೆ (Acting allowance. ಪತ್ರಿಕಿ. ೨). [ಬದಲಿ$_2$ + ಭತ್ಯ (<ಬತ್ತಾಯ)]

ಬದಲಿರಜೆ (ನಾ). ರಜಾದಿನವೊಂದರಲ್ಲಿ ಕೆಲಸ ಮಾಡಿದ ಪ್ರಯುಕ್ತ ಅದರ ಬದಲಿಗೆ ಬೇರೊಂದು ದಿನ ಸಿಗುವ ರಜೆ : ನಿನ್ನೆ ಬದಲಿರಜೆ ಹಾಕಿದ್ದೆ (ಕೂಡಿ). [ಬದಲಿ$_2$+ರಜೆ (<ರಜಾ)]

ಬದಲಿಸು, ಬದಲಾಯಿಸು (ಕ್ರಿ). ೧. ವ್ಯತ್ಯಾಸಗೊಳ್ಳು ; ಮಾರ್ಪಾಡು ಹೊಂದು ; ಬದಲಾಗು : ಈ ತಾರೆಗಳ ಸ್ಥಾನಗಳು ಯಾವಾಗಲೂ ಬದಲಿಸುತ್ತವೆಂದು ಅವನಿಗೆ ತಿಳಿಯಿತು (ಮುಂಬಯಿ. ೩–೦೬೯) ; ಸುಂದರಿಯ ಮನಸ್ಸಿನ ಸ್ಥಿತಿಯೇ ಬದಲಿಸಿತು (ಹಳ್ಳಹಾ. ೦೦೯). ೨. ವ್ಯತ್ಯಾಸಗೊಳಿಸು ; ಬದಲಾಗುವಂತೆ ಮಾಡು; ಮಾರ್ಪಡಿಸು: ಕೇವಲ ಪ್ರೇಮ ಹಾಗೂ ಮರಣಗಳು ಮಾತ್ರ ಸಕಲವನ್ನೂ ಬದಲಿಸಬಲ್ಲವು (ಪ್ರಪಾಶೋ. ೩೯); ತನ್ನಭಿಮತವನು ಬದಲಿಸದಾತನು ಹೊಂಡದ ನೀರಿನಂತ ಹನು (ಇಂಜಾಪ. ೦೪೬–೨೦). **ಬದಲಾಯಿಸು** : ೧. ಆ ಹತ್ತು ವರ್ಷಗಳು ಹರವಲ್ಲಭನ ಸಂಸಾರವು ಬದಲಾಯಿಸಿ ಬಹಳ ಹೀನಸ್ಥಿತಿಗೆ ಬಂದಿದ್ದಿತು (ಡೇಕೀಸೌ. ೭೦); ಹುಡುಗರು ಎಷ್ಟು ಬೇಗ ಬದಲಾಯಿಸುತ್ತಾರೆ ಅನ್ನುವುದೇ ವಿಚಿತ್ರ (ಶಾಲೆಮ. ೦೦೦). ೨. ಶ್ರೀಪುರಂದರದಾಸರು . . . ಪ್ರಚಾರದಲ್ಲಿದ್ದ ಪಾಠಪದ್ಧತಿಯನ್ನು ಬದಲಾಯಿಸಿ . . . ಪಿಳ್ಳಾರಿಗೀತವನ್ನು ಸೃಷ್ಟಿಸಿದರು (ಜಗದಾ. ೬೩); ಮಾತು ಬದಲಾಯಿಸಲು ಸಂಗಾಯಿ ನುಡಿದಳು (ಪಸಪಾ. II, ೯೭೬). ೩. ಒಂದು ವಸ್ತುವಿಗೆ ಪ್ರತಿಯಾಗಿ ಬೇರೊಂದು ವಸ್ತುವನ್ನು ಕೊಡು ; ವಿನಿಮಯ ಮಾಡು : ಎಣ್ಣೆಯು ಸೋರ ಹತ್ತಲು . . . ವ್ಯಾಪಾರಿ ಜನರು ಬದಲಾಯಿಸಿ ಕೊಡುವದಿಲ್ಲ (ಮುಂಬಯಾ. ೩೯ ಪ್ರಸ್ತಾಪನೆ). [ಬದಲು$_2$ + — ಇಸು$_3$]

ಬದಲು$_1$ (ಕ್ರಿ). ವ್ಯತ್ಯಾಸಗೊಳ್ಳು; ಬದಲಾಯಿಸು ; ಬೇರೆಯಾಗು : ಬೋಳನ ಆಲೋಚನೆಯ ಆಕಾಶದ ಬಣ್ಣವು ಬದಲುತ್ತಾ ಇದ್ದಂತೆ ನೋಯುತ್ತಾ ತನ್ನ ಮನೆಗೆ ಹೋದನು (ಕಾಲೂರ. ೦೨ ಕತಾಸಾರ).

[←ಅರ.ಪಾರ. ಹಿಂ. ಮರಾ. ಬದಲ್]

ಬದಲು$_2$ (ನಾ). ೧. ಬದಲಾವಣೆ ; ಮಾರ್ಪಾಡು ; ಪರಿವರ್ತನೆ. ೨. ಪ್ರತಿಯಾದುದು; ಒಂದಕ್ಕೆ ಬದಲಾಗಿ ಮತ್ತೊಂದು ಇರುವುದು : ಗ ೩ನೂ ಅರಮನೆಗೆ ವಪಿಸಿಕೊಂಡು ಆ ಬದಲಿಗೆ ಗ ೩ . . . ತೆಗೆದುಕೊಂಡು (ಎಳ. VII, ಕಿಪಮೊ. ೨೯–೨೬ ; 1712) ; ಕ್ರತುವೀರ್ಯ ಸಂಭವನ ಕೀರ್ತಿಯುಳಿದಿನ್ನೊಂದು ಬದಲಿಲ್ಲವೆಲೆ ಮಗಳೆ (ಪರಶು. ೭–೨೨) ; ಈ ರೂಪಿಗೆ ಬದಲಿಲ್ಲ (ಪಸಕಾ.೩೬). ೩. ಪ್ರತಿಯಾಗಿ ಹೇಳುವ ಮಾತು; ಮಾರ್ನುಡಿ ; ಪ್ರತ್ಯುತ್ತರ : ನಿನ್ನರ್ಭಕಂ . . . ವಿದಿತೋಪಚಾರದಿಂದುರೆ ತೃಪ್ತಿಗೊಳಿಸಿಹಂ ಬದಲುಂಟೆ ಸಾಕೆನುತ ಪರಸೆ (ಪರಶು. ೯–೯೩) ; ಸುವೇಳೆಯೈ ಧರ್ಮಜನೆ ಬದಲನು ಪೇಳಬೇಡ (ಜಪಪಾ. ೦೯–೯೫) ; ಈ ಬದಲನ್ನು ಧೈರ್ಯವಾಗಿಯೆ ಹೇಳಿಬಿಟ್ಟರಾದರೂ ಒಳಗೊಳಗೆ ಹೆದರಿಕೆ (ಹಸುಹೊ. ೭೩). ೪. ವಿನಿಮಯ; ಅದಲುಬದಲು: ಪಟ್ಟಣಗಳಲ್ಲಿಯೂ ಅನೇಕ ಸಣ್ಣಸಣ್ಣ ಪದಾರ್ಥಗಳನ್ನು ಪದಾರ್ಥದ ಬದಲಿಗೆ (Barter) ಬೆಲೆಕೊಳ್ಳುವ ವಾಡಿಕೆಯುಂಟು (ಹಜಪ್ರ. ೦೯). ೫. (ಕೆಲಸ ಮುಂತಾದುವಕ್ಕೆ) ಒಬ್ಬನಿಗೆ ಪ್ರತಿಯಾಗಿ ಬರುವ ಮತ್ತೊಬ್ಬ ವ್ಯಕ್ತಿ : ಎಬ್ಬಿಸಲು ಕೋಪಮಂ ಧರಿಸುವನೊ . . . ಏಳಿಸಲ್ಕೊಬ್ಬರಂ ನಾ ಕಾಣೆ ಬದಲನೆಂದಳಲಿದಳು (ಕುರಂಗ. ೩–೩೩). 'ಬದಲಿ$_1$' ಪರಾ.

ಬದಬದಲು (ದ್ವಿರುಕ್ತಿ) : ಬೆಚ್ಚು ಬಿಲ್ಗೆಡದೆ ಬದಬದಲು ಧನುವಿಡಿಯಲದನೊಡನೊಡನೆ ಪಿಡಿಗೊಡದಲೆ (ಜಪಮು. ೨೬–೩೩). ಬದಲಾಗಿ = ಪ್ರತಿಯಾಗಿ : ಒಂದು ಬಗೇ ಜಿನುಸು ಕೊಟ್ಟು ಅದಕ್ಕೆ ಬದಲಾಗಿ ಮತ್ತೊಂದು ಬಗೇ ತೆಗೆದುಕೊಳ್ಳುವಿಕೆ (ಸಿದ್ಧಾಂಶಿ. ೨೯೭); ಗೋಚರ ಮಾಯ್ತು ಸಮರವೀವ ಸುಭಟರ ಮೋಹರಕೆ ಬದಲಾಗಿ . . . ಮದುವೆ ದಿಬ್ಬಣದೊಸಗೆ ಮೆರವಣಿಗೆ ! (ಜಪ್ರಾಂಗ. ೭೭–೨೦೦೬). ಬದಲಾಗು = ವ್ಯತ್ಯಾಸಗೊಳ್ಳು ; ಪರಿವರ್ತನೆಯಾಗು : ಬನಸಿರಿ ತೊಟ್ಟ ಪೊಂದೊಡವಿಂಗೆ ಬದಲಾಯ್ತೆ (ಶ್ರೀರಾಪ. ೯೦ ಪೀಠಿಕೆ); ನನ್ನಿಂದಲೆ ಲೋಕ ಉಳಿಯುವುದು ; ನನ್ನಿಂದಲೆ ಯುಗ ಬದಲಾಗುವುದು (ಅಶ್ವಮೇ. ೩೯). ಬದಲು ಹೇಳು = ಉತ್ತರಕೊಡು ; ಪ್ರತ್ಯುತ್ತರ ಹೇಳು : ನಾನು ಏನು ಹೇಳಿದರೂ ಏನು ಮಾಡಿದರೂ ಬದಲು ಹೇಳೊಲ್ಲ (ದೂಪಟ್ಟಿ. ೦೨೦).

[<ಬದಲು$_1$]

ಬದಲು$_3$ (ಅ). ಪ್ರತಿಯಾಗಿ ; ಬದಲಾಗಿ : ನಾನು ನಿನ್ನನ್ನು ಪ್ರೀತಿಸುವುದನ್ನು ನಿಲ್ಲಿಸಿಬಿಟ್ಟಿದ್ದೇನೆ. ಅದರ ಬದಲು ಇದೀಗ ನಾನು ನಿನ್ನನ್ನು ತಿರಸ್ಕರಿಸುತ್ತೇನೆ (ಅಪ್ರಮ. ೨೯); ದಿನ ದಾಟಿ ದಿನ ಬಂದರೂ ಬರಬೇಕಾದ ದಿವಸಗಳು ಬರಲೊಲ್ಲವು. ಬದಲು ನದಿ . . . ಬಾವಿಗಳ ನೀರು ಅದೆಲ್ಲಿ ಮಾಯವಾಗುತ್ತಿದೆಯೋ ತಿಳಿಯದು (ಪರಾಪ. ೦). [<ಬದಲು$_1$]

ಬದಲುಗೈ (ಕ್ರಿ). ಅದಲುಬದಲು ಮಾಡು ; ಬದಲಾಯಿಸು : ವನವಾಸಮೆನಗೆ ನಿಯಮಿತಮಾದುದುರೆ ಧರ್ಮದಿಂದಿಳೆಯ ನೀಂ ಪೊರೆಯ ವೇಳ್ಕುಮಂತಿರಲೀರ್ವರದ ಬದಲುಗೈದೊಡಾ ತಂದೆ ಬಾನೆಡೆಯಿಂದೆ ಬೀಳ್ವನಲ್ತೆ (ಭರಪ. ೫–೨೭). [ಬದಲು$_2$ + ಗೈ (<ಕೆಯ್$_1$)]

ಬದಲುಜವಾಬು (ನಾ). ಎದುರುತ್ತರ; ಮಾರ್ನುಡಿ: ಅವರೇನಾದರೂ ಕೋಪಿಸಿಕೊಂಡರೆ ಬದಲುಜವಾಬು ಕೊಡಬೇಡ (ಮಹಾಸ. ೦೨೬).

[ಬದಲು$_2$ + ಜವಾಬು]

ಬದಲುತ್ತರ (ನಾ). = ಬದಲುಜವಾಬು: ರಾಜಸತಿಗಾನಂದ ಮಿಗೆ . . . ಸಾರ್ಥಕಕೆ ಮನದಂದನಧಿಪತಿಯೆನಲು ಬದಲುತ್ತರವನುಸುರಿದಳು (ಅಪಂಠಾ. ೨–೦–೨೦). [ಬದಲು$_2$ + ಉತ್ತರ]

ಬದಲುಮಾತು (ನಾ). = ಬದಲುಜವಾಬು : ಬದಲುಮಾತದು ಮಾಣು ! (ವಡದಾ. I, ೪೦೬); ಬದಲುಮಾತಾಡುವವನು ಬೆದರಿಸಿದರೆ ಬಿಟ್ಟಾನೆ ? (ಗಾದೆ). [ಬದಲು$_2$ + ಮಾತು$_1$]

ಬದವು 'ಬದುವು' ನೋ.

ಬದಸಾಟ (ನಾ). ಮೋಸ; ವಂಚನೆ; ಕುಯುಕ್ತಿ: ಆಃ ಪತಱೊಂದು ಬಿದಿಯ ಬದಸಾ[ಪಾಠಾಂ. ಗಾ]ಟಮೊ ! ತನಗಯ್ಯನೆಂದಱಿದನಪ್ಪೊಡೆ ಕುಶಂ ವಿಶಿಖಮನಿಸುವನೆ ? (ರಾಮಾಶ್ವ. ೦೬೦-೦೫). [ಬದಸು + ಆಟ]

ಬದಸು (ನಾ). ಮೋಸ; ಕುಟಿಲತೆ: "ಬದಸು, ಬದಗು – ಕೌಟಿಲ್ಯಂ" (ಕಮದ. ಪಂ. ೨). 'ಬದಗು', 'ಬದಸಾಟ ಪರಾ. [?]

ಬದಸ್ತೂರ್ 'ಬದಸ್ತೂರು' ನೋ.

ಬದಸ್ತೂರು, ಬದಸ್ತೂರ್ (ಅ). ಹೇಗೆ ಇದೆಯೋ ಹಾಗೆ; ಯಥಾವತ್ತಾಗಿ : ಆನೆಗೆ ಅಲಂಕಾರಕ್ಕೆ . . . ೩ ಆನೆಗೆ ಹಳದೀ ಬನಾತಿನ ಬಬ್ರೀ ಜೂಲು ರೇಶ್ಮೆ ಜಾಲರು ಸಹ ೧ ಬದಸ್ತೂರು ಲೋಕಶಿದಿ ೧ ಕತ್ತಿಗೆ ಕಟ್ಟುವ ಪಟ್ಟಿ ಬದಸ್ತೂರು ೧ ಸಹ (ಎಳ. XIV, ಪಂಜಪ. ೨೯೨-ಪುಟ ೧೪೨ ; 1847); ತಾವೂ ಕೋಟೆ ವಳಗೆ ಹೋಗಿ ಬದಸ್ತೂರು ಆನೆಕಲ್ಲನು ಬಲ ಕಾಯಿಸಿ (ಹೈದರ. ೪೭); ಬದಸ್ತೂರು ಒಂದೊಂದು ಹೋಬಳಿ ಶೇಕದಾರನು . . . ಶ್ಯಾನುಭಾಗನ ರುಜು ಸಹ ಮಾಡಿ ರಶೀದಿ ಕೊಡುತ್ತಾ ಬರುವದು (ಮಹಾಪಂ. II, ೬೬). **ಬದಸ್ತೂರ್**: ಡಿಕ್ರಿಯ ಅಮಲ್ಜಾರಿಯ ಬಗ್ಗೆ ನಡೆಯುವ ಹರಾಜಿನೊಳಗೆ . . . ಕ್ರಯದಾರನಿಂದ ತರಲ್ಪಡುವ ಬದಸ್ತೂರ್ ದಾವೆ (ಗ್ರಾಮಾಳ. ೦೭೨). [←ಪಾರಂ. ಹಿಂ. ಬದಸ್ತೂರ್]

ಬದಹು 'ಬದುವು' ನೋ.

ಬದಾಮಿ 'ಬಾದಾಮಿ' ನೋ.

ಬದಾಮು 'ಬಾದಾಮಿ' ನೋ.

ಬದಿ$_1$ (ನಾ). ೧. ಪಕ್ಕ; ಮಗ್ಗಲು; ಪಾರ್ಶ್ವ: "ಬದಿಯೆನೆ ಪಾರ್ಶ್ವ" (ಕಕರ. ೭೫); ಕಾಳ್ದಿವಿಗಳೆರಡು ಬದಿ ಗಗನಭುವನವೇ ಗೃಹವು (ಶಿಪಗೀ. ೦೬೦-೦೯೭) ; ಬಲದ ಬದಿ ವೇದಾಂತಿಗಳ ಭಾಗ ಎಡದ ಬದಿ ಪಂಡಿತರ ಭಾಗು (ಬಸಪು. ೫೫-೦೬); ಬಲದ ಬದಿಯಲ್ಲಿ ಭವಹರನೆಂಬ ಗಣೇಶ್ವರನೆನಿಸಿರ್ಪಿರಿ ಅಯ್ಯ (ಸಿದ್ಧೇಪ. ೬೪-೦೬೬). ೨. ಪಕ್ಕೆ; ಅಳ್ಳೆ; ಬರಿ: "ಬದಿಯೆ ಪಕ್ಕೆಯೆನಿಕ್ಕು" (ಕಬ್ಬಿಕ್ಕ. ೩೦); ಹೆಡೆ ಬೇವ ಸರ್ಪ ಬದಿ[ಪಾಠಾಂ.ರಿ] ಬೇವ ಸಾರಂಗ . . . ದೆಸೆಗೆಟ್ಟು ಕವಿದವು ಹರಿಶ್ಚಂದ್ರಭೂಪತಿಯ ಮೇಲೆ (ಹಕಸಾ. ೦೦-೯); ಕುಣಿದವಿಬ್ಬರ ಮುಷ್ಟಿಯಿಬ್ಬರ ಹಣೆಯಲಿ . . . ಕಂದದಲಿ ಶಿರದಲಿ ಬದಿಯಲುದರದಲಿ (ಕುಮಾಸ. ೨-೦೦೭); ತುಱಿಸಿಕೊಳುತಿದ್ದೆಸೆಯ ಬಗಿಗಳ ಹೊಱಗನಾಲಿಸುತ . . . ಹರಿಬದಾಜಿಯ ಹೊಱಿಗೆ ವಾಳರ ಬರವ ಬಯಸುತ್ತಿರ್ದನಾ ಹನುಮ (ತೊರರಾ. ೫-೫-೨). ೩. ಹತ್ತಿರ ; ಸನಿಹ; ಸಾಮೀಪ್ಯ: ಇದನು ಪಠಿಸೆ ಸದಾ ಭಾಗ್ಯವಕ್ಕು . . . ಬದರನಿವಾಸ ವಿಜಯವಿಠ್ಠಲ ಬದಿಯಲ್ಲೆ ಬಂದೊದಗುವ (ಏಡಾಳ್ಯ. ೪೩-೯); ಇದೆ ರಾಮನೆನುತ ಬಯಲನ್ನಪ್ಪಲೊರ್ಮೆ . . . ಬದಿಯೊಳಿಹನೆಂದರಸಿ ತಕ್ಕೈಸಲೊರ್ಮೆ . . . ವಿಶ್ವರೂಪಾಂತು ಸುದತಿಯರ ಕಂಗಳಿಗೆ ತೋರಲೆಡೆಯಾಡಿದರು (ವಂಶಾರಾ. ೨-೨೦-೦೦); ಮಾದಯ್ಯನು . . . ಅವಳ ತಲೆಯ ಬದಿಯಲ್ಲಿ ನಿರ್ವಿಣ್ಣನಾಗಿ ಕುಳಿತಿದ್ದನು (ಶ್ರೀಗಾಯ. ೦೦೦).

ಬದಿಬದಿ (ದ್ವಿರುಕ್ತಿ): ಬೀದಿಯ ಬದಿಬದಿಗೆ ಚದುರಂಗವುದುರ್ಯಾವು (ಹೂಹಾರಿ. ೪೯-೦). **ಬದಿಗಾಗು**=ಪಕ್ಕಕ್ಕೆ ಜರುಗು; ಅರುಗಾಗು; ಕೆಲಸಾರು: ನೀರಾಗೆ ನಿಂತಿರುವ ನೀಲೀಪಾವುಡದಣ್ಣ ನೀರು ಕೆಟ್ಟಾವು; ಬದಿಗಾಗೊ (ಹಸುಪ. ೨೦). **ಬದಿಗಿಡು** = ೧. ಪಕ್ಕಕ್ಕೆ ಸರಿಸು; ಪಕ್ಕದಲ್ಲಿ ಇಡು: ಈ ಪಾತ್ರೆಯನ್ನು ಆ ಬದಿಗಿಡು (ರೂಢಿ). ೨. (ಆಲಂ) ಗಮನಿಸದಿರು ; ಗಣನೆಗೆ ತೆಗೆದುಕೊಳ್ಳದಿರು ; ಅಲಕ್ಷಿಸು : ಅವಳ ಮನಸ್ಸನ್ನು ನೋಯಿಸಬಾರದೆಂದು ತಮ್ಮ ಎಲ್ಲ ಅನಾನುಕೂಲತೆಗಳನ್ನೂ ಬದಿಗಿಟ್ಟು . . . ಶಿಕ್ಷಣ ಕೊಡಿಸಿದ್ದರು (ಕುಂಕುಮ. ೫೯) ; ಪಾದ್ರಿಯೂ ಮೊದಲಿನ ಸಂಕೋಚ ಬದಿಗಿಟ್ಟು ಬಹುಗಂಭೀರರೀತಿಯಲ್ಲಿ ಹೇಳಿದರು (ಆಮೋಲೀ. ೨೭). **ಬದಿಗಿರಿಸು** = ೧. ಪಕ್ಕದಲ್ಲಿಡು : ಅದನ್ನು ಅವನ ತಟ್ಟೆಯ ಬದಿಗಿರಿಸಿ ತಾನು ಅವನ ಎದುರು ಕುಳಿತುಕೊಂಡಳು (ಮಹಾತ್ಮಾ. ೧೭). ೨. = ಬದಿಗಿಡು ೨ : ತಮ್ಮ ವೈಯಕ್ತಿಕ ಆಶೋತ್ತರಗಳನ್ನೂ ಮನೋಧರ್ಮವನ್ನೂ ಬದಿಗಿರಿಸಿ, ಮಕ್ಕಳ ಬೆಳವಣಿಗೆಗೆ ಸೂಕ್ತವೆನಿಸುವಂತೆ ವರ್ತಿಸುವರು (ಶಿಕ್ಷದ. ೪೯೪) ; ನಿನ್ನ ಸಮಾಧಾನಕ್ಕಾಗಿ ನನ್ನ ದುಃಖವನ್ನು ಬದಿಗಿರಿಸಿ ಬರೆಯಲು ಕುಳಿತಿದ್ದೇನೆ (ಕುಂಕುಮ. ೬೨). **ಬದಿಗೊತ್ತು** = ಬದಿಗಿಡು ೨ : ಬಪ್ಪ ಕರ್ಮಗಳ ಬದಿಗೊತ್ತಿ ಬೊಮ್ಮನೊಳಗಿಪ್ಪವನೆ ಯೋಗಿ (ಸರ್ವಜ್ಞ. ೫೦೨); ಈ ಗ್ರಂಥಗಳಲ್ಲಿ . . . ಜಾತಿ ಕುಲ ಗೋತ್ರಗಳನ್ನು ಬದಿಗೊತ್ತಿ ಭಕ್ತಿಗೆ ಕೊಟ್ಟ ಪಾರಮ್ಯ, ಅತಿಶಯ ಬೆಲೆಯುಳ್ಳದ್ದು (ಶಾರದ. ೩೯೬). 'ಬರಿ'$_1$ ಪರಾ.

[ದೇ. ॥ ತುಳು. ಬದಿ]

ಬದಿ$_2$ (ನಾ). ಕೆಸರು ; ಪಂಕ ; ರಾಡಿ : "ಪಕ್ಕೆ ಕೆಸಱುಗಳೊಳಂ ಬದಿ" (ಶಬ್ದಮಂ. ೯೯) ; ಬದಿಗಳೊಳಗೆ ಬಿದ್ದು ಹೊರಳಿದವರು ನೆಱೆ ಕೆದಱಿದ ತಲೆಯಿಂದಲಾಗ ಗದಗಾಪುಗೊಳುತ ಹೋಗಲು ದೆಸೆ ಕಾಣದೆ ಸದೆಯಿಸಿಕೊಂಡರೇನೆಂಬೆ (ಕಂಪಪಿ. ೧೬-೮೩) ; ಗದ್ದೇ ಬದೀಲಿ ಬಿದ್ದು ಮಂಡೀಯು ನೊಂದವು ಮುಂಗೈ ಕಿತ್ತೂ (ಹುಟ್ಟಹ. ೪೨) ; ನದೀ ದಾಟಿ ಬದೀಲಿ ಬಿದ್ದ ಹಾಗೆ (ಗಾದೆ). [ದೇ. ॥ ತಮಿ. ವತಿ ; ತೆಲು. ಬಾಡಿ, ಬಾಡೆ]

ಬದಿಕೆಱೆ (ನಾ). ಒಂದು ಕೆರೆಯ ಹೆಸರು : ಬದಿಕೆಱೆಯ ಕೀಟೇರಿಯ ಬೇರುಂಗಾಲುಂ ಒಕ್ಕಲೊಳೊನ್ದು ಪೊಱೆಯುಂ . . . ಬಳಿವತ್ತಮುಂ ಸಲ್ವದು (ಎಳ. III (II), ಪಂಜಪ. ೨೯೪-೦೦ ; 977). [ಬದಿ$_2$ + ಕೆಱೆ]

ಬದಿಪಾರು (ಕ್ರಿ). ಅಕ್ಕಪಕ್ಕ ನೋಡು : ಪೊಸಗವಲಿದೆತ್ತಣದಿದೆಂದು ಬದಿಪಾರಲು (ಇಂದ್ರಕೀ. ೫೦). [ಬದಿ$_1$ + ಪಾರು$_1$ (< ಪಾರ್$_1$)]

ಬದಿಯೆಲು (ನಾ). ಪಕ್ಕೆಯ ಮೂಳೆ : ತಿವಿದನು ತಿರುಗಿ ಬದಿಯೆಲು ನುಗ್ಗು ನುಸಿಯಾಗೆ (ಕುಮಾಸ. ೧೦-೩೬); ನಿಳಿನಿಳಿಲುನಿಟಿಲೆಂದು ಬದಿಯೆಲು ಕಳಚೆ (ತೊರರಾ. ೫-೦-೨೦). [ಬದಿ$_1$+ಎಲು(<ಎಲ್ವು)]

ಬದಿರಿ (ನಾ). ಒಂದು ವಂಶದ ಹೆಸರು (?) : ಸಾಕ್ಷಿ ಕೂಡಲೂರ್ ಪೊಜ್ಗುಲರು ಎಳ್ಮಡಿಯರು ಬದಿರಿಯರುಮ್ ಮದುಗರುಮ್ (ಮೈಆರಿ. ೦೯೧೬, ೦೩-೯ ; 726). [?]

ಬದಿಶೂಲೆ (ನಾ). ಪಕ್ಕೆನೋವು ; ಅಳ್ಳೆನೋವು : ತಲೆನೋವು ನಾಯ್ಗೆಮ್ಮು, ಬದಿಶೂಲೆ, ಕಾಲೊಡಕ, ವಾತಪಿತ್ತಗಳೆಲ್ಲ ಭೈರವನ ಸೆರೆಗೈದು ಪೀಡಿಸುಗೆ! (ಬಿಗಾಳಿ. ೪೭-೬). [ಬದಿ$_1$ + ಶೂಲೆ$_1$]

ಬದಿಹುಲ್ಲು, ಬದೆಹುಲ್ಲು (ನಾ). ಒಂದು ಬಗೆಯ ಹುಲ್ಲು : ಬದಿಹುಲ್ಲು, ಕಂಡಬತ್ತದ ಹುಲ್ಲು, ಪರಿಹುಲ್ಲು (ಮೈಶಿಗಿ. ೩೦-೫೦೦); **ಬದೆಹುಲ್ಲು** : ಬದೆಹುಲ್ಲು . . . ಕರಡ, ಅಂಜಿಹುಲ್ಲು (ಮೈಶಿಗಿ. ೨೭-೫೦೪).

[ಬದಿ$_1$ + ಹುಲ್ಲು (<ಪುಲ್)]

ಬದು 'ಬದುವು' ನೋ.

ಬದುಂಕು 'ಬರ್ದುಂಕು' ನೋ.

ಬದುಕಿಸು 'ಬರ್ದುಂಕಿಸು' ನೋ.

ಬದುಕು$_1$ 'ಬರ್ದುಂಕು' ನೋ.

ಬದುಕು$_2$ 'ಬರ್ದುಕು$_2$' ನೋ.

ಬದುಕುವಂತ (ನಾ). ಕೆಲಸವಂತ ; ಕಷ್ಟಜೀವಿ : ಸಣ್ಣಸಾವ್ಕಾರ್ರು ಒಳ್ಳೆ ಬದುಕುವಂತರು (ಬೆಳುಮ. ೦೩೬).

[ಬದುಕು$_2$ (<ಬರ್ದುಕು$_2$) + – ವಂತ]

ಬದುಬೆ 'ಬಾದುಬ್ಬೆ' ನೋ.

ಬದುವು, ಬದವು, ಬದಹು, ಬದು, ಬದುಹು (ನಾ). ೧. ಎಲ್ಲೆ ; ಮೇರೆ ; ಗಡಿ ; ಸೀಮೆ : ಪಡುವಂ ಶಂಖದ ಬಸದಿಯ ಪೊಲದ ಮೇರೆ ವಾಯಬ್ಯದಲು ಪಳ್ಳದ ಪಡುವಣ [ಬ]ದುವಿನ ಕೊತ್ತುರೊಳಗಣ ಉಳಿಮುಖದ ಕಿಂನರಿಗಲ್ಲು (ಸೌಇಇ. XX. ೬೯-೩೫ ; 1112). ೨. (ಹೊಲ, ಗದ್ದೆಗಳಲ್ಲಿ ನೀರು ನಿಲ್ಲುವುದಕ್ಕಾಗಿ ಹಾಕುವ) ಮಣ್ಣಿನ ಎತ್ತರವಾದ ಕಟ್ಟೆ,—ದಂಡೆ ; (ಹೊಲ, ಗದ್ದೆಗಳ ಅಂಚಿನಲ್ಲಿ ರಚಿಸಿದ) ಮಣ್ಣಿನ ಒಡ್ಡು : ಹೊಲಗಳ ಗುಂಟ ಬೈಲುದಾರಿ ಹಿಡಿದು ಗದ್ದೆಯ ಬದುವುಗಳ ಮೇಲೆ ಹಾಯ್ದು . . . ಒಕ್ಕಲ ಮಕ್ಕಳು ಗ್ರಾಮಗ್ರಾಮಾಂತರಗಳಿಗೆ ಹೊರಟಿದ್ದಾರೆ (ಇಕ್ಕಳ. ೩೫೨) ; ರೈತರ ಹೆಂಗಸರು ಕೆರೆಯಿಂದ ನೀರ ತಂದು ಸಗಣಿಯನ್ನು ಕಲಸಿ ಹೊಲಗಳ ಬದುವಿನಲ್ಲಿ ಬೆರಣಿ ತಟ್ಟುತ್ತಿದ್ದರು (ಬೈಸರ್ಪ. ೦೩) ; ಒಂದು ಹೋರಿಯು . . . ಬದುವಿನಲ್ಲಿ ಮೇಯುತ್ತ ನಿಂತಿದ್ದ ಆಕಳನ್ನು ನಿಟ್ಟಿಸುತ್ತಿತ್ತು (ಪಾಬಂ. ೩೯). **ಬದವು** : ೩. (?) : ಪಾರಿಸ್ಸಸೆಟ್ಟಿಯರಿಂಗೆ ಕೊಟ್ಟ ಸಿಲಾಸಾಸನದ ಕ್ರಮವೆಂತೆಂದಡೆ ಪಟ್ಟಣದ ಬೇಹಾರಿಗಳಿಂಗೆ ಮನೆವಣವು × ಯಕ್ಕೆ ಪ ೫ ಯದಿಮಕ್ಕೆ ಪ ೫ ಬದವಿಂಗೆ ಪ ೩ (ಎಕ. XI (8), ಕಾತಕಾ. ೬೯-೦೩ ; 1319). **ಬದಹು** : ೪. (ಕೆರೆ, ಕುಂಟೆ ಮುಂತಾದಂವುಗಳ) ಏರಿ : ಚಿಕ್ಕ ಕುಂಟೆಯ ಒತ್ತಿರಿಣ ಬದಹು (ಎಕ. VII, ಶಿಪಪೊ. ೨೬-೨೫೨; 1524). **ಬದು** : ೧. ಬೆಟ್ಟದ ತಪ್ಪಲುಗಳೂ, ಗೋಮಾಳಗಳೂ, ಹೊಲದ ಬದುಗಳೂ ಹೇರಳವಾಗಿದ್ದವು (ಹುಬ್ಬಹ. ೬೯); ತಾಕುಗಳ ಸುತ್ತಲೂ ಬದುಗಳನ್ನು ಹಾಕಬೇಕು (ಪ್ರಪಮ. ೬೦). ೩. ಈ ಹಿತ್ತಿಲನೂ ಅ ೪ ಮುಡಿ ಗದೆಯನೂ ಬದು ೧೨ ಮುಡಿ ಅಕ್ಕಿಯನೂ ೧ ನಂದಾದೀವಿಗೆಯನೂ ನಡಸಿ . . . ಬಾಳುವರು (ಸೌಇಇ. IX-ii, ೪೪೪-೨೫; 1433). ೪. ಉದ್ದಕ್ಕೂ ನಾಲೆ ಏರಿಯ (ಬದು) ಮೇಲೆಯೇ ಗಾಡಿಯ ರಸ್ತೆ (ಗಸುದಾ. ೨೨). **ಬದುಹು** : ೧. ಶ್ರೀರಾಮನಾಥದೇವರ ತೋಟದ ಮೂಡಣ ಬದುಹಿನ ಬಡಗಣ ಕಲ್ಲು (ಎಕ. VI, ಕಂಗಳೆ. ೬೩-೩೦; 1230 ?); ಅರಳಿಯ ಕೊಳದ ಮೂಡಣ ಬದುಹು ಅಲ್ಲಿಂ ಬಡಗಲು ಹಾದಿಯ ದಾರಿ (ಎಕ. XII, ಶಿಪಟೊ. ೪೦-೩೬; 1286). ೨. "ಬದುಹು ಪಾಳಿ" (ಮಂಗಣಾ. ೦೦೯-೨); ಮೂಡಲು ಎರೆಯ ಕೆಯ್ಯ ದೊಡ ಬದುಹು (ಎಕ. XI, ಹೊಳಲ್ಕೆ. ೫೬-೬೫; 1220). ೪. ಚಿಂಚಗಟ್ಟ ನಾಯಕರ ಗುಯ್ಯಲ ಹಳುಗಿನ ಹಳ್ಳದ ಮೂಡಣ ಬದುಹಿನ ನಟ್ಟ ಕಲು ಮೇರೆ (ಸೌಇಇ. IX-i, ೩೪೩-೫೬; 1226). 'ಬರುಹು' ಪರಾ.

ಬದುಹು 'ಬದುವು' ನೋ.

ಬದೆಗ 'ಬದಗ' ನೋ.

ಬದೆಹುಲ್ಲು 'ಬದಿಹುಲ್ಲು' ನೋ.

ಬದ್ದ (ನಾ). ೧. ಗಾಢವಾದುದು; ದೃಢವಾದುದು: "ಬದ್ದಂ=ಗಾಢಂ" (ಶಪುದ. ಪಂ. ೨). ೨. ಸತ್ಯ; ದಿಟ; ನಿಜ : "ಕೆಸರೊಳಿಡಿದ ಹೆಜ್ಜೆಯೊಳು ನಿಶ್ಚಯದೊಳುಂ ಬದ್ದಮೆನಿಕುಂ" (ಕಕಾ. ೬೩); ಕದ್ದ ಕಳ್ಳನ ಮಾತು ಬದ್ದವಾದರೆಯೇನು (ಪಾಪಗೀ. ೩೯); ನನ್ನ ಹತ್ರ ಸುಳ್ಳು ಹೇಳ್ತಿಯಲ್ಲಾ ! ಸುಳ್ಳೋ ಬದ್ದೋ ? ಹೇಳು ! (ಮಲೆಮ. ೨೦). [<ಸಂ. ಬದ್ದ]

ಬದ್ದಗಿ 'ಬಡಗಿ' ನೋ.

ಬದ್ದಣ 'ಬದ್ದವಣ$_1$' ನೋ.

ಬದ್ದನೆ (ನಾ). ನಿಯಮಿತವಾಗಿ ಒಂದು ಕಾರ್ಯವನ್ನು ನಡೆಸಿಕೊಂಡು ಹೋಗುವುದು; ವರ್ತನೆ : ಯಾ ಹುಳಿಯಾರ ಸುಂಕದಲ್ಲಿ ನಾನಾದಿನಶಿನ ನಡೆಗಳಿಗೆ ಬದ್ದನೆ ಪ್ರಕಾರಾ ಲೆಕ್ಕಾ ಹಕಿಕೊಳುತ್ತಯಿದ್ದಾರೊ ಅದೆ ಪ್ರಕಾರಕ್ಕೆ ಬದ್ದನೆ ನಿಂತ್ತ ನಡೆ ೧ಕ್ಕೆ ಕಣ್ಬೆರಾಯಿ ೮೦೦೦೦ (ಎಕ. XVI, ಸಕ್ಕಾ. ೯೦-೦೬; 1802). [<ಸಂ. ವರ್ತನ]

ಬದ್ದಬದಸು (ನಾ). ಆತಿಶಯವಾದ ಮೋಸ; ಅಧಿಕವಾದ ವಂಚನೆ : ಅಂತು ಮಱೆವೊಕ್ಕು ಬಂದ ರಾಯನಂ . . . ಅಡಿಗಡಿಗೆ ಬದ್ದಬದಸಿಂ ಪಗೆದು (ರಾಮಾಕ್ಯ. ೬೨-೦೦). [ಬದ್ದ + ಬದಸು]

ಬದ್ದರ, ಬದ್ಧರ (ನಾ). ೧. ಶುಭವಾದುದು; ಮಂಗಳಕರವಾದುದು. ೨. ಗಟ್ಟಿಯಾದುದು; ಬಿಗಿಯಾದುದು; ಭದ್ರವಾದುದು : ಬಿಗಿದ ದಡ್ಡಿಯ ಬದ್ದರದ ಬೀಯಗದ ರಾಣೀವಾಸದಂದಣ ತೆಗೆದು ನಡೆದುದು ಮುಂದೆ ಸಂತೋಷದಲಿ ಯದುಸೇನೆ (ಕುಪ್ಯಾಪಿ. ೦೦-೬೩). ೩. ಒಂದು ಬಗೆಯ ಆನೆ,—ಗಜ : (?). ೪. ಎತ್ತು; ವೃಷಭ. ೫. (ಕೋಟೆ ಕಾಳಗದಲ್ಲಿ) ಆತ್ಮರಕ್ಷಣಾರ್ಥವಾಗಿ ಬಳುಸಂತ್ತಿದ್ದ ಒಂದು ಬಗೆಯ ಸಾಧನ,—ಉಪಕರಣ : ಪಾಯ್ವ ಕೂರ್ಗಣೆಗೆ ಬದ್ದರವೊಡ್ಡಿವ ಕೋಂಟೆ ಗಾವಗಂ ಕೆಡವುವ ಗಗ್ಗೆ ವಂಕದರದಿಂ ಪೊಱಮಟ್ಟಿಱಿವಾಳ್ಗಮಾಂಕೆಯಾಳ್ ಗಡಣಿಸೆ ಕಾದುತಿರ್ದುದು ಮಹೇಂದ್ರವದಾತಿನಿ ಮುತ್ತಿ ಸುತ್ತಲುಂ (ಸಂಧ್ರಪು. ೫-೦೦೬); ದುರ್ಗಕ್ಕೆ ನಿಚ್ಚಣಿ ಸಾರ್ಚುಂದೊಲೆ ವೀರಸೇತು ನಡೆಸಾರಂ ಬದ್ದರಂ . . . ಪಡಿಗೋಂಟೆಯೆಂಬ ಬಹುಕೋಟಾಯಂತ್ರ ಸಾಮಗ್ರಿ ತಿಂತಿಣಿಗೊಂಡಾಂತಿರೆ ಲಗ್ಗೆಗಾರ್ದು ವಸುಷೇಣಂ ಸಾರ್ದು ಸೂಳೈಸಿದಂ (ಅತಂಪು. ೦೦-೬೩); ಬಲದ ಬದ್ದರದೊಟ್ಟಿದಂಬಿನ ಹೊಳೆವ ಹೊದೆಗಳ ಸೂತರುರವಣೆಗಳ ಸುರೇಖೆಯ ಗತಿಯ ವಾಜಿಯ ರಥವ ನೋಡಿದರು (ಕುಪ್ಯಾಕಾ. ೦೦-೦೭). **ಬದ್ಧರ** : ೧. ಒಸಗೆ ಬದ್ಧರವಾಗೆ ಶಿಶುವೇಷದಿಂದ ರಂಜಿಸಿದ ಕಾರಣಿಕನು (ಶ್ರೀಕೂ. ೦೬೩). ೫. ಜೋಡನೊಡೆ ಹಾಯ್ದಂಬು ಧರಣಿಯೊಳಾಡಿದವು . . . ಬದ್ದರಂಗಳ ಬಾದಣವ ಕೊಱೆದು ಈಡಿಱಿದವು (ಕುಪ್ಯಾಪೀ. ೬-೪೭); ಉರುಶತಘ್ನಿಯ ರಾಯ ಚಿಮ್ಮುವ ಭರದ ಭೈರವ ಬದ್ದರದ ನಡೆಸರದ ಡಬ್ಬುಕ ಡೆಂಕಣಿಗಳನು ತೂಱಿದರು ನಭಕೆ (ತೊರಕಾ. ೬-೦೦-೦೯).

ಬದ್ದರದ ಬಂಡಿ, ಬದ್ಧರದ ಬಂಡಿ = ಬದ್ದರವೆಂಬ ಸಾಧನವನ್ನು ಹೊಂದಿರುವ ರಥ : ತವಕದಲಿ ಬದ್ದರದ ಬಂಡಿಗಳವುಚಿದವು (ಕುಪ್ಯಾಪ್ರೋ. ೨-೨೫); ಒಗ್ಗಿನಿಂ ಬದ್ದರದ ಬಂಡಿವಿಂಡೈದಿದುವು (ಪಾಪು. ೪೨-೨೪); ಕೋಲ ಕೋಳಾಹಳಕೆ ಸೈರಿಸದಾಳ ನಾಯಕವಾಡಿ ಹರಿಗೆಯ ಚಾಚಿದರು ಬಲು ಬದ್ದರದ ಬಂಡಿಗಳ (ಕುಪ್ಯಾಪೀ. ೬-೪೪). [<ಸಂ. ಭದ್ರ]

ಬದ್ದವಣ$_1$, ಬದ್ದಣ (ನಾ). ೧. ಶುಭಸಮಾರಂಭದಲ್ಲಿ ಬಾರಿಸುವ ವಾದ್ಯ; ಮಂಗಳವಾದ್ಯ : "ಬದ್ದವಣಮೆಂದೊಸಗೆವಱೆ" (ಕಕಾ. ೬೩-೪೦೫); ವಸಂತಕನದೇಂ ಗುಡಿತೋರಣ ಶೋಭೆ ಪೊಯ್ವ ಬದ್ದವಣ ಮಳುಂಬಮಾದುದೊ ನಿಕೇತನದಲ್ಲಿ ಮನೋಜರಾಜನಾ (ಅಧಿಪು. ೦೦-೦೦೪); ಆ ಪುರದೊಳ್ ಗುಡಿಗಳಂ ಕಟ್ಟಿ ಬದ್ದವಣಂಗಳಂ ಬಾಜಿಸಿ ಪಿರಿದಾಗಿರ್ದೊಸಗೆಯಂ ಕೊಂಡಾಡುತ್ತುಮಿರಲ್ (ಪಾಪಪು. ೪-೩೬ ಪ); ಕೊಂಬು, ಕಾಳೆ, ಜೇಗಟೆ, ಮದ್ದಳೆ ಮುಂತಪ್ಪ ಬದ್ದವಣಂಗಳ ಬಿರುಸರಂ ಎಲ್ಲೆಡೆಯೊಳಂ . . . ಮಾರ್ದನಿಗುಟ್ಟಿದುದು (ಅಧ್ಯುತ. ೩೨-೦೦). ೨. (?) : ಅತ್ತಿಗೆ ಕೇಳ್ ಪೇಟರೆ ನೈಮಿತ್ತಕರೆನವೇಡ ಪೇಟ್ವೆಮಿಾ ಬದ್ದವಣಕ್ಕೆತ್ತಿದ ಕೆಯ್ಯನೆ ಬಸಿಱಿಂಗೆತ್ತುವೆಯಿದು ಕೂಡದಂದು ಕಾಡೆಲೆ ಕುಲಟೇ (ಅರ್ಧಪೇ. ೬-೬). **ಬದ್ದಣ** : ೧. "ಬದ್ದಣಮೆನಲೊಸಗೆಯ ಪಱೆ" (ಸಕುಪಿ. ೪೬); ಎತ್ತಲುಂ ಬದ್ದಣದ ದನಿ (ಶ್ರೀಕಾತ. ೪೦-೩೬); ಬದ್ದಣಂ ಮೊಳಗಿತ್ತಾಗಳ್ ಬಾನೊಳ್ ಸುರರ ಕೇಳಿವೊಲ್ (ಸೌಸಂದ. ೨-೫೪).

ಬದ್ದವಣರ್=ಶುಭಸಮಾರಂಭದಲ್ಲಿ ಮಂಗಳವಾದ್ಯವನ್ನು ಬಾರಿಸುವವರು : ಬಾಜಿಸಲಿರ್ದ ಬದ್ದವಣರಿಂ ಘಳಿಗೆವಟ್ಟಲಂ ಪರಿವೇಷ್ಟಿಸಿರ್ದ ನಕ್ಷತ್ರಪಾಠಕರಿಂ ಕಿಕ್ಕಿಱಿಗಿಱಿದ ವಿವಾಹಮಂಟಪಮಂ . . . ನೋಡುತುಂ (ಪಂಬರ. ೬-೩೬).

[< ಸಂ. ಭದ್ರಪಣವ]

ಬದ್ದವಣ್ಣ (ನಾ). ೧. ಬೆಳೆಯುವಿಕೆ; ಉತ್ಕರ್ಷ : ವರ್ಧಮಾನ—ಬದ್ದವಣ (ಕಪುದ. ೨೬೬ ಪ್ರಯೋ). ೨. ಒಂದು ಬಗೆಯ ಗಿಡ ಮತ್ತು ಅದರ ಕಾಯಿ; ಹರಳು; ಔಡಲ: "ಬದ್ದವಣ (ಬದ್ದಣ)—ವರ್ಧಮಾನ—ಮಂಗಳವಾದ್ಯ, ಒಂದು ಗಿಡ" (ಶಿಷ್ಟಕೋ. ೨೬). ೩. (?) : ಇಡಿದಿರೆ ಪೂತ ಮರದ್ರುಮದಿಡುವುಗಳೊಳ್ ಬದ್ದವಣದ ಪುಡಿವೊಲ್ ಬೆನ್ನೊಳ್ ಬಿಡದಲುಗೆ ಕುಸುಮಕುಲರಜಮಡರ್ದುದು ಸುರಗಿರಿಯನಿಂದ್ರರುಂದ್ರ ಗಜೇಂದ್ರಂ (ಅಂಪು. ೭-೭೩). [<ಸಂ. ವರ್ಧಮಾನ]

ಬದ್ದವಣಂಬೊಯ್ (ಕ್ರಿ). ಮಂಗಳವಾದ್ಯವನ್ನು ಬಾರಿಸು: ಮುನೀಶನಾದೇಶಂಗೆಯ್ದು ಪೋಗೆಂದು ಕಳುಪಿದೊಸಗೆಗೆ ಮನದೊಳೆ ಗುಡಿಗಟ್ಟಿ ಬಗೆಯೊಳ್ ಬದ್ದವಣಂಬೊಯ್ದು . . . ಬನಮಂ ಪೊಕ್ಕು (ಶಗವಿ. ೦೦-೨೯ ಪ). [ಬದ್ದವಣ್ಣ + ಪೊಯ್ಯ್]

ಬದ್ದವಣಂಬೊಯಿಸು (ಕ್ರಿ). ಮಂಗಳವಾದ್ಯವನ್ನು ಬಾರಿಸುವಂತೆ ಮಾಡು : ಅಂತಸ್ತಮಯಮಾಗೆ ಸೈಂಧವನುಂ . . . ಪೊಚ್ಚ ಬದ್ದವಣಂ ಬೊಯಿಸಿದಂ (ಸೇಮಿಪು. ೧೨-೩೨ ಪ). [ಬದ್ದವಣ್ಣ + ಪೊಯಿಸು]

ಬದ್ದಿ 'ಬಡಗಿ' ನೋ.

ಬದ್ದಿಗೆ 'ಬದ್ದುಗೆ' ನೋ.

ಬದ್ದು$_1$ 'ಬಾಟ್ಟ್$_1$' ಪರಾ.

ಬದ್ದು$_2$ 'ಬರ್ದ್$_4$' ನೋ.

ಬದ್ದು$_3$ (ನಾ). ೧. ಹಳ್ಳ; ಗುಣಿ : ಕಿಕ್ಕಿರಿವ ಬಾಣಗಳು ತೆನೆತೆನೆಗಿಕ್ಕಿ ಕಟ್ಟಿದ ತೊಲೆಗಳಗಣಿತ ಕಕ್ಕುದರಿ ಬದ್ದುಗಳಲೊಪ್ಪುವ ತಳ್ಳುವಲಗೆಗಳು ಮಿಕ್ಕಿರುವ ಕೈದುಗಳು . . . ದಿಕ್ಕುದಿಕ್ಕಿಲಿ ತಿಂತಿಣಿಸೆ ರಚಿಸಿದನು ಪಟ್ಟಣವ (ಪ್ರಜ್ಞಾನ. ೪-೩೮). ೨. ಚಿಣ್ಣಿಕೋಲು, ಗೋಲಿ ಮುಂತಾದ ಆಟಗಳನ್ನಾಡುವಾಗ ನೆಲದಲ್ಲಿ ತೋಡುವ ಗುಳಿ, -ಕುಣಿ : ಗೋಲಿಯನ್ನು ಬದ್ದಿಗೆ ಸರಿಯಾಗಿ ಬೀಳುವಂತೆ ತೀಕು (ಕೂಡಿ). [?]

ಬದ್ದುಗೆ, ಬದ್ದಿಗೆ (ನಾ). ೧. (ಸೀರೆ, ಪಂಚೆ ಮೊದಲಾದುವುಗಳ) ಸೆರಗಿನ ತುದಿಯಲ್ಲಿ ನೇಯದೆ ಬಿಟ್ಟ ವಸ್ತ್ರದ ಎಳೆ; ಕರೆ; "ಸೀರೆಯ ಸೆರಗಿನ ದಡಿ" (ಶಾಶಕೋ. ೨೦). ೨. ಸೊಂಟಕ್ಕೆ ಕಟ್ಟಿಕೊಳ್ಳುವ ಪಟ್ಟಿ; ನಡುಕಟ್ಟು : ಉಡಿಯ ಬದ್ದುಗೆಯ ಕಠಾರ ಹಿಡಿದ ಹರಿಗೆಯೆಕ್ಕ ತುಳದ ತುಳುವರೊಗ್ಗು ನಡೆತಂದುದರಸನೋಲೈಸಿ (ಕ್ರೀಪಾಂ. ೦೩-೭೪); ಕಡೆಯ ಪೆಂಡೆಯ ಗೆಜ್ಜೆ ಕಣಕಾಲ ಬಾಸಿಂಗಮಡೆಯ ಬದ್ದುಗೆಯ ಕಿಗ್ಗಟ್ಟು ಬಿಡೆಯವಿಲ್ಲದೆ ಪೋಲಗಟ್ಟಿನ ಬಿಲ್ಲಾಳ ಪಡೆ ನಡೆಯಿತು ಬಾಣನೊಡನೆ (ಪೋಷಕ. ೪೦-೦೪). ಬದ್ದಿಗೆ : ೧. ಜವಳಿಯೆಳೆಗಳ ಬದ್ದಿಗೆಯ ಸೇಲೆಯಾ ಸೆಱಗು ಸುವಿರಾಜಿಸುತ್ತಿರ್ದುದು (ಗುಕುಣಾ. ೧೪-೩೩). ೨. ಕಟ್ಟಿದ ಕಠಾರದ ಬದ್ದಿಗೆಯ ತೊಂಗಲ್ದೆಗೆದು ಬಿಗಿದೆಟಲ್ವ ಬಾಲಗಚ್ಚೆಯ ವಿಳಸದ ಸೆಱಗಂ ಸೆಳೆದಳ್ಳಿಱಿಯೆಯುಂ (ಅಕಂಪು. ೦೦-೮೫ ಪ). 'ಬದುವು' ಹೋ.

[ದೇ.॥ ತೆಲು. ಬದ್ದೆ]

ಬದ್ದುಗೆದಾರ (ನಾ). ನಡುಪಟ್ಟಿಯ ದಾರ: ಉಟ್ಟ ಪಟ್ಟಾವಳಿಯ ಮೇಲಳವಟ್ಟ ಬದ್ದುಗೆದಾರದೊಂಗಲ ಕಟ್ಟಿ ಮೆಱೆವ ಕಠಾರಿಗಳ ಹೊಂಗಟ್ಟುಗಳು (ಇಸಪು. ೬೦-೨೬); ವೈರಿಬಾಹುದ್ವಯವ ಬದ್ದುಗೆದಾರದಲಿ ಕಟ್ಟಿದನು (ಕುಪ್ಯಾಲ. ೨೨-೩೬); ಅಳವಡಿಕೆಯಲಿ ಪೀತಪಟ ಸಮ್ಮಿಳಿತ ಬದ್ದುಗೆದಾರವನು ಬಲಿದಲೆವ ಜಡೆಗಳನೊಬ್ಬುಳಿಸಿ ಬಿಗುಹಿಕ್ಕಿ (ಕೊರಾ. ೬-೨೯-೦೬). [ಬದ್ದುಗೆ + ದಾರ್$_1$]

ಬದ್ದೆ$_1$ 'ಬರ್ದೆ' ನೋ.

ಬದ್ದೆ$_2$ (ನಾ). ಕೆಳಹೊಟ್ಟೆ; ಕಿಬ್ಬೊಟ್ಟೆ : ತುಸುವೆ ಉಬ್ಬಿದಂತಿದ್ದ ತನ್ನ ಬದ್ದೆಯ ಭಾಗವನ್ನು ನೋಡಿಕೊಂಡು ಮುಗುಳುನಗುತ್ತಾ ಏನನ್ನೊ ಸವಿಯುವಂತೆ ಕ್ಷಣಕಾಲ ನಿಂತಳು (ಮುಲಿಮ. ೩೬೬). [?]

ಬದ್ದೆಗ 'ಬರ್ದೆಗ' ನೋ.

ಬದ್ದೆದಲ್ಲಟ (ನಾ). ಪ್ರೌಢೆಯರನ್ನು ತನ್ನ ಸೌಂದರ್ಯಾದಿಗಳಿಂದೆ ಸೋಲಿಸುವವನು ; ಪ್ರೌಢಸ್ತ್ರೀಯರಿಗೆ ತವಕವನ್ನುಂಟುಮಾಡುವವನು : ನೋಟದೊಳಟ್ಟಜಂಬಡೆದು . . . ಕೂಟದೊಳುಣ್ಮಿದ ಬೆಚ್ಚ ತಟ್ಟೆಯೊಳ್ ಕೂಟಸುಖಂಗಳಂ ಪಡೆದನೇಂ ಚದುರಂ ಗಳ ಬದ್ದೆದಲ್ಲಟಂ (ಸಂಪಶಾ. ೩-೮೨). [ಬದ್ದೆ$_1$ (< ಬರ್ದೆ) + ತಲ್ಲಟ]

ಬದ್ದೆವಜ್ಜೆ (ನಾ). "ಪ್ರೌಢಿಮೆಯನ್ನುಳ್ಳ ಹೆಜ್ಜೆ ಗುರುತು" (ಸಂಪದೀ. ೦೯೬) : ಪದಮುಮನಿಂಬುಮನಣಮಱಿಯದದೇವುದು ಬದ್ದೆ ಬೆಳ್ಮಿಗಂ ಪಜ್ಜೆ ದಲೆಂಬುದನೆರಡುಮನಱಿವಾತನೆ ಚದುರಂ ಚದುರಂಗೆ ಬದ್ದೆವಜ್ಜೆಗಳೊಳವೇ (ಸಂಪಶಾ. ೫-೪೩). ಇದು 'ಬದ್ದೆ' ಮತ್ತು 'ಪಜ್ಜೆ'ಗಳೆಂಬ ಭಿನ್ನಶಬ್ದಗಳಿರಬಹುದು.

[ಬದ್ದೆ$_1$ (< ಬರ್ದೆ) + ಪಜ್ಜೆ]

ಬದ್ದೆವೆಣ್ (ನಾ). ಚತುರೆ ; ಪ್ರೌಢಸ್ತ್ರೀ : ನುಡಿಯೊಳು ನಗಿಸುವ ಸರಸಕಾತಿಯರು ಮೇಲುಡಿಸಿ ತೊಡಿಸುವ ನೀಱೆಯರು ಮಿಡಿದು ವೀಣೆಗಳ ಬಾಜಿಪ ಬದ್ದೆವೆಂಡಿರು ಕಡುಹಗೆಯಾದರವಳಿಗೆ (ಪರ್ಶಪ. ೩-೦೨).

[ಬದ್ದೆ$_1$ (<ಬರ್ದೆ) + ಪೆಣ್]

ಬದ್ಧ (ಗು). ೧. ಕಟ್ಟಿದ ; ಬಿಗಿದ. ೨. ಬಂಧನಕ್ಕೊಳಗಾದ; ಅಧೀನವಾದ. ೩. ಕ್ರಮಕ್ಕೆ ಅನುಗುಣವಾದ; ವಿಧಿವತ್ತಾದ; ನಿಯಮಾನುಸಾರವಾದ. ೪. ಹೆಣೆದ : ಕೂಡಿಕೊಂಡ ; ಸೇರಿದ : 'ಬದ್ಧಭ್ರುಕುಟಿ', 'ಬದ್ಧಾಂಜಲಿ' ಪರಾ. ೫. ಆವರಿಸಿದ ; ಸುತ್ತುವರಿದ : ಸಕಲ ಬದ್ಧಾಶ್ರವನಿರೋಧದಿನಯೋಗಿಕೇವಲಿಗುಣಸ್ಥಾನಮಂ ಪೊರ್ದಿ ಸಮುಚ್ಛಿನ್ನಪ್ರಾಣಾಪಾನಪ್ರಚಾರಂ ಸಮುಚ್ಛಿನ್ನಕ್ರಿಯಾವೃತ್ತಿಧ್ಯಾನಪ್ರವರ್ತನಾಪರನಾಗಿ (ಸಂರಾಮಾ. ೦೬ – ೬೯ ಪ) ; ಬದ್ಧಾಷ್ಟಕರ್ಮಮಂ ನಿಜಬುದ್ಧಿಯ ಬಲದಿಂದನಂತಚಾತುಷ್ಟಯದಿಂದುದ ತರಿಪುಗಳನುರಿಸಿದ ಸಿದ್ಧರ್ ಲೋಕಪ್ರಸಿದ್ಧರೀಗೆಮಗೊಳ್ಪಂ (ಅಟ್ಟಮ. ೦-೨). ೬. ತಡೆದ ; ಹೊರಬರದ ; ಕಟ್ಟಿಕೊಂಡ : 'ಬದ್ಧಮಲ' ಪರಾ. ೭. ಹತ್ತಿಕ್ಕಿದ ; ಹತೋಟಿಯಲ್ಲಿಟ್ಟುಕೊಂಡ : 'ಬದ್ಧೇಂದ್ರಿಯ' ಪರಾ. ೮. ಗಾಢವಾದ ; ದೃಢವಾದ ; ತೀವ್ರವಾದ : 'ಬದ್ಧದ್ವೇಷ', 'ಬದ್ಧವೈರ' ಪರಾ. ೯. ಕುಂದಣಿಸಿದ ; ಕೆಚ್ಚಿದ. ೧೦. ರಚಿಸಿದ ; ಕಟ್ಟಿದ. ೧೧. ತೊಟ್ಟ ; ಧರಿಸಿದ : ಇನ್ನೆನ್ನುಮನೊಲ್ಗುಮೊಲ್ಲಳಿವಳೆಂಬಾಶಂಕೆ ಪುಟ್ಟಿತ್ತು ಚಿತ್ತದೊಳಾಬೇಗ ದೊಳುರ್ವರಾಸ್ಯತಿಲಕಂಗತ್ಯುನ್ನತಂ ದಕ್ಷಿಣಾಂಸದ ಬದ್ಧ ಶ್ಲಥಬಾಹುಕೀರ್ತಿ ಕಳೆದತ್ತಂದಾದ ಸಂದೇಹಮಂ (ಶಾಂತಿಪು. ೩-೦೪೬). ೧೨. (ನಾ). ಕಟ್ಟು ; ಪಾಶ ; ಬಂಧನ : ಮುಕ್ತಿ ಬದ್ಧಗಳೆರಡು ತಾವತಿಪ್ರಕಟವಾಗಿಯೆ ಸತ್ಯವೆಂಬರ ಮುಕುತಿಯಲ್ಲೊಬ್ಬಾತಗೆರಡಱ ಸಂಗ ದೊರಕುವದೆ (ವಿಶಾಗ. ೦೦-೦೬-೭) ; ಬದ್ಧವೆಂಬುದು ಮುಕ್ತವೆಂಬುದು ಬುದ್ಧಿಗೇ ಸರಿಯಾತ್ಮಕಿಲ್ಲೆಲೆ (ಅಮೃತ. ೩-೦೪೦). ೧೩. ಕಟ್ಟಿ ಹಾಕಿದುದು ; ಬಂಧಿಸಿದುದು : "ಬದ್ಧಂ, ಪಿನದ್ಧಂ, ಅಮುಕ್ತಂ, ಅಪಿನದ್ಧಂ—ಈ ೪ ಕಟ್ಟಲ್ಪಟ್ಟುದು" (ಹಲಾಯು. ೦೨೩-೬೨). ೧೪. ಹಿಡಿತ ; ಹತೋಟಿ; ನಿಯಂತ್ರಣ : 'ಬದ್ಧಗೊಳಿಸು' ಪರಾ. ೧೫. ಸತ್ಯ ; ದಿಟ; ನಿಜ : ನೀನು ಹೇಳುವಂಥಾದ್ದು ಸಟೆಯೋ ? ದಿಟವೋ ?. . . ಬದ್ಧವೇ ಸರಿ. ಪರೀಕ್ಷೆ ಮಾಡಬೇಕು (ರಾಶೇಂದ್ರ. ೧೦೬). ೧೬. ಕಟ್ಟಳೆ ; ನಿಯಮ : 'ಬದ್ಧಭೋಜನ' ಪರಾ. ೧೭. ಯಾವುದಾದರೊಂದು ಕಟ್ಟಿಗೆ ಒಳಪಟ್ಟವನು : "ಬದ್ಧಃ, ನದ್ಧಃ, ಸಂಯತಃ — ಈ ೩ ಕಟ್ಟುಪಟ್ಟವಂ" (ಹಲಾಯು. ೩೬-೦೬೩) ; ಬದ್ಧನಲ್ಲ ಮುಕ್ತನಲ್ಲ ಎರಡಿಲ್ಲವಾಗಿ ಸಹಜಭರಿತನಯ್ಯಾ (ಆದಪ. ಕ. ೦೪೭-೨೭೭). ೧೮. [ವಿಶಿಷ್ಟಾ]

ನಿತ್ಯ, ಮುಕ್ತ, ಬದ್ಧರೆಂಬ ಮೂರಂ ಬಗೆಯಂ ಜೀವಾತ್ಮರಲ್ಲಿ ಒಂದು ಬಗೆ ; ಸಂಸಾರಿ : ಈ ಜೀವಾತ್ಮತತ್ತ್ವವು ನಿತ್ಯ, ಮುಕ್ತ, ಬದ್ಧ ಎಂದು ಮೂರು ವಿಧ . . . ಈಗ ಪ್ರಕೃತಿಸಂಬಂಧದಲ್ಲಿರುವವರು ಬದ್ಧರು (ಹಂದಿಕಾ. ೨೪೭). ೧೯. [ಸಂಗೀತ] ತಾನದಲ್ಲಿ ಒಂದು ಪ್ರಕಾರ : ಪ್ರಾಚೀನಸಂಗೀತದಲ್ಲಿ ತಾನ, 'ಬದ್ಧ' ವೆಂದೂ 'ಅಬದ್ಧ' ವೆಂದೂ ಎರಡು ರೀತಿಯಲ್ಲಿತ್ತು (ಸಂಗೀಶಂ. ೬೬). 'ಬದ್ಧತಾನ' ಪರಾ. ೨೦. [ನಾಟ್ಯ] ನರ್ತನದಲ್ಲಿ ಒಂದು ಪ್ರಕಾರ ; ನೃತ್ಯದಲ್ಲಿ ಹೆಜ್ಜೆ ಹಾಕುತ್ತ ಮುಂದಕ್ಕೆ ಚಲಿಸುವ ಒಂದು ಬಗೆಯಂ ಗತಿ : ಒದವಿದಪ ಸ್ಕಂದಿತವುಗ್ಗದ ಬದ್ಧಂ ಜನಿತಪ್ರುಮೆಸೆವೂರೂದ್ವೃತ್ತಂ ಸುದತಿ ಪದಿನಾಱು ಭೂಮಂ ಪುದಿದಸೆವೀ ಚಾರಿಯೆಂಬ ಪೆಸರಸೆದಿರ್ಕುಂ (ಕಾಸ್ಕರಂ. ೬-೪). [ಸಂ.]

ಬದ್ಧಕ (ನಾ). ಬಂಧನಕ್ಕೆ ಸಿಲುಕಿದವನು : ಆ ಜಂಗಮ ಹೆಣ್ಣು ಬೇಡಿದರೆ ಸಂಸಾರಿ ಎಂದು ಹೊನ್ನ ಬೇಡಿದರೆ ಆಶಕನೆಂದು ಮಣ್ಣು ಬೇಡಿದರೆ ಬದ್ಧಕನೆಂದು ಇಷ್ಟಕ್ಕೆ ನೊಂದ ಮತ್ತೆ ಭಕ್ತಿವಾಸಿಗೆ ಹೋರಲೇಕೆ (ಷೋಳಪಾ. ೩೩-೨೦೯). [ಸಂ.]

ಬದ್ಧಕಂಕಣ (ನಾ). ತನ್ನ ಗುರಿಯನ್ನು ನೆರವೇರಿಸಲು ಸಂಕಲ್ಪ ಮಾಡಿದವನು ; ಕಂಕಣಬದ್ಧ : ಬಲದೇವನು . . . ವರ್ಣಚಿತ್ರಕಲೆ (oil Painting) ಯನ್ನು ಮುಂದಕ್ಕೆ ತರಬೇಕೆಂದು ಬದ್ಧಕಂಕಣನಾಪನು (ಶಶಾಸಾ. ೩೩). [ಸಂ.]

ಬದ್ಧಕತನ (ನಾ). ಬಂಧನಕ್ಕೊಳಗಾಗಿರುವಿಕೆ : ಕಾಯದೊಳಗುಂಟಿಂದರೆ ಕರ್ಮಕಾಂಡಿಯಲ್ಲ ಜೀವದೊಳಗುಂಟಿಂದರೆ ನಾನಾಯೋನಿಯವನಲ್ಲ . . . ಅದು ಇದ್ದಿಲು ಶುಭ್ರವಾದ ತೆಱನಂತೆ ಹೊದ್ದಾಗಿ ಬದ್ಧಕತನವಿಲ್ಲವೇದೆ ನಃಕಳಂಕಮಲ್ಲಿಕಾರ್ಜುನಾ (ಷೋಳಮಾ. ೩-೬).

[ಬದ್ಧಕ + — ತನ]

ಬದ್ಧಕೋಣಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಬಗೆ ; ಪ "ಬದ್ಧವೆಂದರೆ ಕಟ್ಟಲ್ಪಟ್ಟ, ತಡೆಯನ್ನು ಹೊಂದಿದ ಎಂದರ್ಥ. 'ಕೋಣ' ವೆಂದರೆ ಮೂಲೆ. ಈ ಭಂಗಿಯಲ್ಲಿ, ನೆಲದ ಮೇಲೆ ಕುಳಿತು, ಹಿಮ್ಮಡಿಗಳನ್ನು ಗುದ ಗುಹ್ಯಸ್ಥಾನಗಳ ನಡುತಾಣಕ್ಕೆ (perineum) ಅಳವಡಿಸಿ ಪಾದಗಳನ್ನು ಹಿಡಿದು, ಮಂಡಿಯ ಭಾಗಗಳು ಎರಡು ಕಡೆಗಳಲ್ಲಿಯೂ ನೆಲ ಮುಟ್ಟುವವರೆಗೂ ತೊಡೆಗಳನ್ನಗಲಿಸಬೇಕಾಗಿದೆ" (ಷೋಗೋ. ೦೦೨) : ಅಷ್ಟವಿನ್ಯಾಸಗಳು ೧. ಉತ್ತಾನಾಸನ ೨. ಚತುರಂಗದಂಡಾಸನ . . . ೩೨. ಟಿಟ್ಟಿಭಾಸನ ೩೩. ಬದ್ಧಕೋಣಾಸನ (ಕಾರದ. ೦೬೬). [ಸಂ.]

ಬದ್ಧಗೊಳಿಸು (ಕ್ರಿ). ಹಿಡಿತಕ್ಕೆ ತರು ; ಹತೋಟಿಯಲ್ಲಿಡು ; ನಿಯಂತ್ರಣಗೊಳಿಸು : ಹಾದಿಯಿಲ್ಲದೆ ಹರಿವ ಮರುಳು ಮನವನು ನಿನ್ನ ಬುದ್ಧಿಬಲದಿಂದಲೇ ಬದ್ಧಗೊಳಿಸಿ (ಪಪ್ಪಿ. ೬೬-೪).

[ಬದ್ಧ + ಕೊಳ್[1] + — ಇಸು[3]]

ಬದ್ಧತಾನ (ನಾ). = ಬದ್ಧ ೧೯ : ಬದ್ಧತಾನ ತಾಳಗತಿಯನ್ನು ಅನುಸರಿಸಿ, ಅಬದ್ಧತಾನ, ತಾಳಗತಿಯನ್ನನುಸರಿಸದೆ ಹಾಡಲ್ಪಡುತ್ತವೆ. ಬದ್ಧತಾನ ಈಗ ಬಳಕೆಯಲ್ಲಿಲ್ಲ (ಸಂಗೀಶಂ. ೬೬). [ಸಂ.]

ಬದ್ಧತೆ (ನಾ). ೧. ಕಟ್ಟಳೆ ; ನಿಯಮ : ಯಾವನೊಬ್ಬ ನಾಗರಿಕನೂ . . .ಸರ್ವಜನರು ಸೇರುವ ಸ್ಥಾನಗಳನ್ನು ಉಪಯೋಗಿಸುವ ಸಂಬಂಧದಲ್ಲಿ ಯಾವುದೊಂದು ನಿರ್ಯೋಗ್ಯತೆ, ಬದ್ಧತೆ, ನಿರ್ಬಂಧ ಅಥವಾ ಷರತ್ತಿಗೆ ಒಳಪಟ್ಟಿರತಕ್ಕುದಲ್ಲ (ಕಾರಾಸ. ೬). ೨. (ಮಲವು) ಹೊರಬರದೆ ಕಟ್ಟಿಕೊಳ್ಳುವಿಕೆ : 'ವಂಲಬದ್ಧತೆ' ಪರಾ. [ಸಂ. ಬದ್ಧತಾ]

ಬದ್ಧದ್ವೇಷ (ನಾ). ಕಡು ಹಗೆ ; ಗಾಢ ವೈರ : ಅರಸ ಕೇಳಾಯುಷ್ಮ ಭಾಗ್ಯಗಳೆರಡು ಕಡುವವು ತಪ್ಪದವನೀಸುರರ ಬದ್ಧದ್ವೇಷ ಲೇಸಲ್ಲೆಂದನಾ ವಿದುರ (ಕುವ್ಯಾಕಾ. ೩-೦೬) ; ವೀರೇಂದ್ರಸಿಂಪನಿಗೂ ಮಾನಸಿಂಪನಿಗೂ ಬದ್ಧದ್ವೇಷ (ಪಂಕಮು. ೦೪೬). [ಸಂ.]

ಬದ್ಧಪದ್ಮಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಬಗೆ : ಪ "ಬದ್ಧಪದ್ಮಾಸನ . . . 'ಬದ್ಧ' ವೆಂದರೆ ಕಟ್ಟಲ್ಪಟ್ಟ ಅಥವಾ ಬಿಗಿತಕ್ಕೆ ಒಳಗಾದ. ಈ ಭಂಗಿಯಲ್ಲಿ ಕೈಗಳನ್ನು ಬೆನ್ನ ಹಿಂದೆ ಎದುರುಬದುರು ದಿಕ್ಕಿನಲ್ಲಿ ಅಡ್ಡಗಿಸಿ, ಅವುಗಳಿಂದ ಕಾಲಿನುಂಗುಟ (ಹೆಬ್ಬೆರಳು)ಗಳನ್ನು ಹಿಂಗಡೆಯಿಂದ ಬಿಗಿಹಿಡಿಯುವುದು. ಮುಂಗಡೆ ಅಡ್ಡಗಿಸಿದ ಕಾಲುಗಳೂ ಮುಂಗಡೆಯಲ್ಲಿ ಅದೇ ಬಗೆಯಲ್ಲಿ ಕೈಗಳೂ ಈ ಮಧ್ಯೆ ದೇಹವು ಇವುಗಳ ಹಿಡಿತಕ್ಕೆ ಒಳಪಟ್ಟಿರುವುದರಿಂದ, ಈ ಭಂಗಿಗೆ ಈ ಹೆಸರು" (ಷೋಗೋ. ೦೦೭): ಮುಖ್ಯವಾದ ಕೆಲವು ಆಸನಗಳು . . . ೧೪. ಬದ್ಧಪದ್ಮಾಸನ ೧೫. ಯೋಗಮುದ್ರಾಸನ (ಕಾರದ. ೦೬೭) ; ಮುಕ್ತಪದ್ಮಾಸನ, ಬದ್ಧಪದ್ಮಾಸನ ಇವು ಧ್ಯಾನಕ್ಕೆ ಅನುಕೂಲವೆಂದೂ . . . ಹೇಳಲ್ಪಟ್ಟಿದೆ (ಪುಪೋಪಂ. ೩೦೩). [ಸಂ.]

ಬದ್ಧಭೂಮಿಕ (ನಾ). ಸಮಮಾಡಿ ಸಿದ್ಧಗೊಳಿಸಿದ ವೇದಿಕೆ. — ನೆಲಗಟ್ಟು : "ಕುಟ್ಟಿಮಂ, ಬದ್ಧಭೂಮಿಕಂ — ಈ ೨ ನೆಲಗಟ್ಟು" (ಪರಾಪು. ೪೯-೦೩೯). [ಸಂ.]

ಬದ್ಧಭೋಜನ (ನಾ). (ದೇವಸ್ಥಾನದಲ್ಲಿ) ಕಟ್ಟಳೆಯ ಪ್ರಕಾರ ಹಾಕುವ ಊಟ,—ಭೋಜನ : ದನಿಯರು ತಮ್ಮ ಬದ್ಧಭೋಜನ ನಡವಂತಾಗಿ ಯಿಕ್ಕಿಕೊಂಡು (ಶಾಇಶಾ. IX-ii. ೪೦೯-೨೬ : 1365). [ಸಂ.]

ಬದ್ಧಭ್ರುಕುಟಿ (ನಾ). ೧. ಗಂಟಿಕ್ಕಿದ ಹುಬ್ಬು ; ಹುಬ್ಬುಗಂಟು : ಕಾಱಿದವು ಕುಡಿವಿಸೆ ಕಾದುದು ಮೋಱಿ ಬದ್ಧಭ್ರುಕುಟಿಯಲಿ ಹುರಿಯೇಱುತಧಿಕ ಕ್ರೋಧತಾಮಸ ನಿಮ್ಮ ದಳಪತಿಯ (ಕುವ್ಯಾಳ. ೨೩-೩) : ದಾಶರಥಿ . . . ಸಿಗ್ಗಿಂದೆ ಬದ್ಧಭ್ರುಕುಟಿಯಿಂದೆ ನೋಡುತಿರ್ದನ್ ಬಲ್ಲುಬಿರಗಾಗಿ (ಶ್ರೀರಾಮಾ. ೩೦೩-೦೨). ೨. ಹುಬ್ಬುಗಂಟಿಕ್ಕಿದವನು : ಭೀಮಸೇನನುದ್ದಾಮಕೋಪಾಟೋಪಚಿತ್ತದಿಂ ಬದ್ಧಭ್ರುಕುಟಿಯಾಗಿ (ಗದಾಪು. ೬-೯ ವ) ; ಬದ್ಧಭ್ರುಕುಟಿ ಸೆರೆ ಬಿಗಿಯುವೋಲ್ಕೊಡುಗಚ್ಚಿ, ನಿದ್ದೆಯನೊದ್ದು, ಸೀಳ್ದು ದುಃಸ್ವಪ್ನಮಂ, ಕುಳಿತೆದ್ದನಬ್ಬರಿಸಿ (ಶ್ರೀರಾಮಾ. ೨೬೩-೨೬೮). [ಸಂ.]

ಬದ್ಧಮಲ (ನಾ). ಕಟ್ಟಿಕೊಂಡಿರುವ ಮಲ ; ಹೊರಬರದಿರುವ ಮಲ: ಸಂವತ್ಸರಲವಣ, ಇಂಗು, ಶುಂಠಿ ಎಂಬೀ ೩ಷಧಿಗಳನ್ನು ಶುಂಠಿಯ ಕಷಾಯದ ಬಿಸಿನೀರಿಂ ಕುಡಿಯೆ . . . ಬದ್ಧಮಲ ಬಿಡುವುದು (ಪಥ್ಯಿ. ೨೦). [ಸಂ.]

ಬದ್ಧಮೂಲ (ನಾ). ೧. ಬಲವಾಗಿ ಬೇರೂರಿದುದು ; ಗಾಢವಾಗಿ ನೆಲಸಿದುದು : ಒಂದು ಸಾರಿ ಪ್ರಣಯವು ಹುಟ್ಟಿ ಬದ್ಧಮೂಲವಾದರೆ—ಆಮೇಲೆ ರೂಪವಿರಲಿ ಹೋಗಲಿ ಪ್ರಣಯವು ನಡೆದುಕೊಂಡು ಹೋಗುವುದು (ಪಂಕಮು. ೬೦). ೨. ಗಟ್ಟಿಯಾಗಿ ನೆಲಸಿದವನು ; ಸ್ಥಿರವಾಗಿ ನಿಂತವನು : ಆ ಸುಖದಲ್ಲಿ ನಾವೆಲ್ಲರೂ ಇಹಸಂಸಾರದಲ್ಲಿ ಬದ್ಧಮೂಲರಾಗಿ, ಎಂದರೆ, ಬಲವಾದ ಬೇರನ್ನು ಬಿಟ್ಟುಕೊಂಡವರಾಗಿದ್ದೇವೆ (ಳಕಾಳುಂ. ೦೨೩). [ಸಂ.]

ಬದ್ಧರ 'ಬದ್ದರ' ನೋ.

ಬದ್ಧರಸ (ನಾ). ೧. ಸ್ನೇಹಭಾವದಿಂದ ಕೂಡಿದವನು. ೨. ಪಾರಜವನ್ನು ಲೋಹದಲ್ಲಿ ಬೆರಸಿದವನು. ೧, ೨ : ಬಿನ್ನವಂಗೆಯ್ಕಲೊಡಂ ಬದ್ಧರಸನುಂ ಸಿದ್ಧರಸವೇದನುಮಾದ ರಸವಾದಿಯಂತೆ ಜ್ವಳನಜಟರಾಗಿಸಿ (ಕಾಂತಿಪು. ೩-೩೭ ವ). [ಸಂ.]

ಬದ್ಧರೂಪ (ನಾ). [ಭಾಷಾಶಾ] ಬೇರೊಂದಕ್ಕೆ ಹೊಂದಿಕೊಂಡಿರು ಪಂಥ ಶಬ್ದರೂಪ : ಪ್ರತ್ಯಯಗಳು ಯಾವಾಗಲೂ ಪ್ರಕೃತಿಗಳೊಡನೆ ಕೂಡಿಕೊಂಡೇ ತೋರಿ ಬರುವುದರಿಂದ . . . ಪ್ರತ್ಯಯಗಳನ್ನು ಬದ್ಧರೂಪಗಳೆಂದೂ (ಬಾಂಡ್‌ಫಾರಂ) ಕರೆಯುವುದುಂಟು (ಕನಿಕೋ. 1, ೬೮೩). [ಸಂ.]

ಬದ್ಧವಿಘಾತಿ (ನಾ), ಕೆಡುಕಿಗೆ ಸಂಬಂಧಿಸಿದುದು ; (ಖಂಡಿತವಾಗಿ) ಕೇಡನ್ನುಂಟು ಮಾಡುವುದು : ದೇವಿ ನೇಮಿಸಲಱಿಯೆನೆಂದೊಡಿದಾವ ಧರ್ಮವು ಶಿವಶಿವೀ ಹದ ಸಾವನವರಿಗೆ ತಹುದು ಬದ್ಧವಿಘಾತಿಯಿದು ಬಲುಹು (ಕುಸ್ಮಾಪಿ. ೩-೪). [ಸಂ.]

ಬದ್ಧವಿರೋಧ (ನಾ). ತೀವ್ರವಾದ ದ್ವೇಷ ; ಕಡುಹಗೆ : ಮೊದಲೊಳ್ ಬದ್ಧವಿರೋಧದಿಂ ನೆಗೞ್ದ ಕುಂತೀಪುತ್ರರೊಳ್ ಭೀಮನಂಕದ ಗಾಂಧಾರಿಯ ಪುತ್ರರೊಳ್ಮೊದಲಿಗಂ ದುರ್ಯೋಧನಂ ಧರ್ಮಯುದ್ಧದೊಳಂತಾತನನಿಕ್ಕಿಕೊಂದಂ (ಗದಾಯು. ೦-೩೩). [ಸಂ.]

ಬದ್ಧವೈರ (ನಾ). ಅತಿಯಾದ ದ್ವೇಷ ; ಕಡುಹಗೆ ; ಬದ್ಧವಿರೋಧ : ಆ ಬದ್ಧವೈರದಿನಿನಿತು ಕಱುಪ್ಪುಂ ಕಾಯ್ದುಂ ನಿನಗಾದುದು (ಶಾಂತಿಪು. ೯-೯೦ ಪ) ; ಆ ಮರ್ಕಟಂಗಳೆರಡರ್ಕಂ ಏಕದ್ರವ್ಯಾಭಿಲಾಷೆಯಿಂ ಬದ್ಧವೈರಂ ಬಳೆದು (ಪಂಚತಂ. ೨೭೭-೬) ; ಓರೊರ್ವರ ನೆಱಂಗಳುಮನನ್ಯೋನ್ಯಬದ್ಧವೈರಕಾರಣಂಗಳುಮಂ ಮೂದಲಿಸುತ್ತುಂ (ಸುಕುಮಾ. ೦೦-೪೨ ಪ). [ಸಂ.]

ಬದ್ಧಾಂಜಲಿ (ನಾ). (ನಮಸ್ಕಾರ ಮಾಡಲು) ಜೋಡಿಸಿದ ಕೈ ; ಮುಗಿದ ಕೈ : ನೀಂ ಪೋಗಿ ಕಾದಂಬರೀದೇವಿಗೆ ಬದ್ಧಾಂಜಲಿಯಾಗಿ ಪ್ರಣಾಮಪುರಸ್ಸರಮಪ್ಪೆನ್ನ ಬಿನ್ನಪಮಂ ಪೇೞ್ವುದು (ಕಾದಂಉ. ೩೯೯) ; ಉದ್ಧರಿಸಿದನಶ್ರಮದಿಂ ಸಿದ್ಧಶಿಲೋಚ್ಚಯಮನೊಂದೆ ಕರತಲದಿಂ ದರ್ಘ್ಯೋದ್ಧರಣಸಹಿತಮಮರರ್ ಬದ್ಧಾಂಜಲಿಯಪ್ಪಿನಂ ಸುಮಿತ್ರಾಪುತ್ರಂ(ಪಂಡಾಮಾ. ೦೦-೩೦) ; ಆ ನೀತಿಭೂಷಣಮಂತ್ರಿಪಂ . . . ರಾಜಶೇಖರ ರಾಜೇಂದ್ರಂಗೆ ಮಣಿಮಕುಟಮಂ ಮಣಿದು ಬದ್ಧಾಂಜಲಿಯಾಗಿ ನಿಂದಿರ್ಪುದುಂ (ರಾಜಶೇ. ೬-೦೩೨ ಪ). [ಸಂ.]

ಬದ್ಧಿಸು (ಕ್ರಿ). ನಿಯಮಿಸು ; ನಿಶ್ಚಯಿಸು : ಉದ್ಯೋಗಿಸಿದರಾಗಮನದಲ್ಲಿ ಹವನವ ತಿದ್ದುತೆ ದಾನದಕ್ಷಿಣೆಯ ಶುದ್ಧಿಯ ಮಾಡಿದು ಮನೆಯ ಸುಲಗ್ನದಿ ಬದ್ಧಿಸಿದರು ಮೌಹೂರ್ತಿಕರು (ಮೋಹತ. ೦೭-೪೨). [ಬದ್ಧ + — ಇಸ್ಸು$_2$]

ಬದ್ಧೇಂದ್ರಿಯ (ನಾ). ಇಂದ್ರಿಯಗಳನ್ನು ನಿಗ್ರಹಿಸಿದವನು,-ಹತೋಟಿಯಲ್ಲಿಟ್ಟುಕೊಂಡಿರುವವನಂ ; ಜಿತೇಂದ್ರಿಯ : ಶುದ್ಧವಾಗಿರ್ದಧ್ದದೋಳ್ ಶಿವಂಪತಿಯಾಗಿ ಬದ್ಧೇಂದ್ರಿಯಂ ತಾನನಂತೇಶ್ವರಂ (ವೀಶೈಪು. ೬-೨-೪೨). [ಸಂ.]

ಬದ್ನಾಮಿ, ಬದನಾಮಿ (ನಾ). ಕೆಟ್ಟ ಹೆಸರು ; ಅಪಯಶಸ್ಸು ; ಅಪಖ್ಯಾತಿ : ಹಾಗೆ ಮಾಡಿದ್ದೇ ಆದರೆ ನಮ್ಮೂರಿಗೇ ಪುಂಡುಕೊಂಪೆಯೆಂಬ ಬದ್ನಾಮಿ ಬರುತ್ತೆ (ಕಲಿಪ. ೨೦೦). ಬದನಾಮಿ : ಅದ ಕಾಣದಾದಭವ ಮದನನಂ ಕೊಂಡು ತಾಂ ಮೊದಲೆ ಮನಮಂ ಕೊಲ್ಲದೆಮಗೆ ತಂದ ಬದನಾಮಿ ಸಾಕು (ಮನೋವಿ. ೦-೨೦) ; "ಕೋಟಲೆ" (ಮನೋವಿ. ಪೀಕೆ). [←ಪಾರ. ಹಿಂ. ಮರಾ. ಬದನಾಮಿ]

ಬದ್ಮಾಶ್, ಬದಮಾಷ್, ಬದ್ಮಾಷ್ (ಗು). ೧. ಕೀಳಾದ; ಕೀಳುಮಟ್ಟದ. (ನಾ). ೨. ನೀಚ ; ಕೀಳುಮನುಷ್ಯ: ಬದ್‌ಮಾಶ್ ನನ್ನ ಕೈ ಹಿಡಿಯಲು ಪ್ರಯತ್ನಿಸುತ್ತಿದ್ದ (ಕಲಿಕ. ೦೦೦). ಬದಮಾಷ್ : ೨. ಬ್ಲಾಟೋ ದುಂದುಕುಡುಕ, ಲಫಂಗ, ಬದಮಾಷ್ (ಕುಂಹಿಂ. ೦೨೦) ; ಬಂಗಾರದಂಥ ಕಾಯಿಗಳನ್ನು ಹಾಳುಮಾಡಿದಿ ಬದಮಾಷ್ (ರಂಗರೋ. ೪೦). ಬದ್ಮಾಷ್ : ೧. ಅವಳು . . . ಯಾರೋ ಬದ್ಮಾಷ್ ಜನರ ಗುಂಪಿನವರೊಳಗಿನವಳಿರುವಂತೆ ತೋರುತ್ತದೆ (ಕ್ಷಕ್ಷ. ೩೦). ೨. ಬದ್ಮಾಷ್, ನಿನ್ನ ಬಾಪ್ತಿಸ್ಮಾ ಹೇಗಾಗುವದೋ ನೋಡುತ್ತೇನೆ (ಸ್ಮೃತಿಪ. ೩೩೩) ; ಕೆಲಸ ಮಾಡಾಕ ಬಂದಿದ್ದಿಯೋ, ತುಡುಗು ಮಾಡಾಕ ಬಂದಿದ್ದಿಯೋ ಬದ್ಮಾಷ್ (ಪಾಪೋಲೀ. ೦೨೦). [← ಅರ. ಪಾರ. ಹಿಂ. ಮರಾ. ಬದಮಾಶ್]

ಬದ್ಮಾಷ್ 'ಬದ್ಮಾಶ್' ನೋ.

ಬಧಿರ (ನಾ). ಕಿವಿ ಕೇಳಿಸದವನಂ ; ಕಿವುಡ ; ಕೆಪ್ಪ: "ಬಧಿರನೇಡಂ ಕಿವುಡನೆನಿಸಿಕ್ಕು" (ಮಂಗರಾ. ೦೦೪-೩); ಕುಬ್ಜ ವಾಮನ ಬಧಿರ ಮೂಕ ಕಿರಾತೋನ್ಮತ್ತ ಜಡಜನಂಗಳುಮಂ . . . ಕೊಟ್ಟು (ಆದಿಪು. ೪-೩೪ ಪ); ಕರುಣವಿಲ್ಲದನ ಕಾಪುರುಷನ ವಿಕಾರಿಯ ಬಧಿರನ ಪೆಂಡಿರು ಪರರ ಪೆಂಡಿರಲ್ತೆ (ಜಿನವ. ೦೨-೪೯) ; ನಮೆವ ದೀನಾಂಧಬಧಿರರಂ ದಾನಧರ್ಮಂಗಳಿಂ ಪಾಲಿಸುತ್ತುಂ (ರಾಮಾಶ್ವ. ೧೩-೦೯). [ಸಂ.]

ಬಧಿರತೆ (ನಾ). ಕಿವಿ ಕೇಳಿಸದಿರುವಿಕೆ ; ಕಿವುಡು : ಘೋಷಘಂಟಾರವಂ ದಿಗ್ರದನೀಶ್ರೋತ್ರಕ್ಕೆ ಸಂಪಾದಿಸೆ ಬಧಿರತೆಯಂ . . . ಬಂದುದಂದನ್ಯಚಕ್ರಕ್ಕಿದು ಕಳ್ಪಾಂತಾಭ್ರಮೆಂಬಂತುದಿತರಿಪು ಮನೋದೈನ್ಯಮುಗ್ರೇಭಸೈನ್ಯಂ (ಪುಷ್ಪಪು. ೫-೯) ; ಕಟಿತಟಕಾಂಚಿ ಪದನೂಪುರಾಳಿಸ್ವನಂ ದಿಗ್ಗಜಂಗಳ್ಗೆ ಬಧಿರತೆಯನೋಲೈಸೆ ಬರುತಿರ್ದುದಾ ಭವಾನಿಯ ಸಖೀನಿವಹಂ (ಸಪಿಪು. ೩೭-೩೩). [ಸಂ. ಬಧಿರತಾ]

ಬಧಿರತ್ವ (ನಾ). = ಬಧಿರತೆ : ಪರರ ಪಟುತನವಾದದಲಿ ಮೂಗರವೊಲಿಹ ಪರವಚನದುತ್ಕಟವೊರೆಗೆ ಬಧಿರತ್ವವನು ವರಗುಣದೋಷದರುಶನವು ದೊರಕಿದೊಡೆ ಜಾತ್ಯಂಧನೆನಿಸುವ ಪುರುಷನಾವವನವನು ಸಾಕ್ಷಾತ್ಪರಮ ಪುರುಷೋತ್ತಮನಲೇ (ಕುಸ್ಮಾಉ. ೪-೭೦). [ಸಂ.]

ಬಧಿರಿತ (ಗು). ಕೇಳಿಸದಂತೆ ಮಾಡಿದ ; ಕಿವುಡುಗೊಳಿಸಿದ : ಅನ್ನೆಗಂ ಗಂಭೀರತರತುರಗಹೇಷಾರವಬಧಿರಿತಸಕಲಭುವನವಿವರನುಂ . . . ಆಗಿ (ಆದಿಪು. ೩-೯೦ ಪ); ಚಂಚಚ್ಚಾಪಮೌರ್ವೀರವಬಧಿರಿತದಿಕ್ಚಕ್ರಮಂ . . . ನಿರ್ಜನವನಮನಿದಂ ಬಂದು ನೀನೆಂತು ಪೊಕ್ಕೈ (ಪಂಚತಂ. ೩೭-೨). [ಸಂ.]

ಬನ$_1$, ಬನವು (ನಾ). ೧. ಕಾಡು: ಅಡವಿ; ಅರಣ್ಯ: "ಬನಮೆಂದು ವನಂ" (ಕಶಸಾ. ೩೪-೦೭೦); ಮುನಿ ವೀತರಾಗನೆಂದುಂ ಬ[ಪಾಠಾಂ. ಜ]ನಮಂ ಸಾರ್ತಕ್ಕುಂ (ಕವಿರಾ. ೦-೭೯); ಬನಕಂ ಪೊಲಕಂ ನಡೆಯಲ್ಕಿನಿಸಾಱದೆ ಮಱುಗುವಾರ್ಯರಂ ಕಂಡು ಮನೋಜನಿತದಯಂ ಕರಿ ಹರಿ ವಾಹನಂಗಳಂ ಪಡೆದು ವಿಮಲವಾಹನನಾದಂ (ಆದಿಪು. ೬-೩೮); ನವಿಲ್ ಕಾರ್ಗಾಲಮಂ ಹಂಸೆ ಸರೋವರಮಂ ಮಧದಾನೆ ಬನಮಂ . . . ನೆನೆವಂತು ಜಿನಪಾದಾಂಭೋಜಂಗಳಂ ನೆನೆಯುತ್ತುಂ (ಧರ್ಮಾಮ್ಕ. ೩-೦೯೦). ೨. ತೋಟ ; ಉದ್ಯಾನ : ನಂದನ : "ಬನಮೆಂದೆನಲ್ಕುದ್ಯಾನಮಕ್ಕು" (ಕಶರ. ೭೨); ಬನದ ತಳಿರ್ ಕಳಿಕೆ ಮುಗುಳ್ ನನೆ ಬಿರಿಮುಗುಳಲರ ಗೊಂಚಲೆಂಬಿವು ವನಜಾನನೆಯರ ಪೂದುಡುಗೆಗೆ ಮಟ್ಟನಾದುವೇಂ ಪೆಂಪೊ ಭರತನಂತಃಪುರದಾ (ಆದಿಪು. ೧೦-೦೨೩) ; ಚಂಪಕ ಮಾಲತಿ ಮುಡಿವಾಳಗಳಿಂ ಬನವೆಸೆದುದು (ತ್ರಿಭುತಿ. ೨-೨೦) ; ಮಲ್ಲಿಗೆಯ ವನಸಂಪಿಗೆಯ ಬನವೆಲ್ಲ . . . ವೃಥಾ ನೆಲನಿಲ್ಲ ನಳನ ರಾಜ್ಯದಲಿ (ವಳಸ. ೪-೦೩). ೩. ಮರಗಳ ಗುಂಪು,-ಸಮೂಹ ; ತೋಪು : "ತೋಪು-ಬನಂ" (ಕಾಶಕ್ಕ. ೨೯) ; ಅಲರ್ದ ಪೊಂದಾವರೆಯ ಹಂತಿಯೊ ತಳಿತ ಮಾವಿನ ಬನವೊ (ಕುಸ್ಮಾಅ. ೬-೦೨). ಬನವು : ೧. ತೆರಳಿದರು ಶೃಂಗಾರನಿಧಿಗಳು . . . ಕಳಾವಿದೆಯರುಗಳಾ ಮುನಿಯಿಪ್ಪ ಬನವಿಗೆ (ಕೌಶಿರಾ. ೦-೪೩).

ಬನದ ಊಟ, ಬನದೂಟ = ಹುಣ್ಣಿಮೆದಿನಗಳಲ್ಲಿ ವಿಹಾರಾರ್ಥವಾಗಿ ತೋಟದಲ್ಲಿ ಮಾಡುವ ಊಟ ; ವನಭೋಜನ : ಚಿಕ್ಕದೊಡ್ಡ ಹೆಣ್ಣುಮಕ್ಕಳು ಬನದ ಊಟಮಾಡುವರು (ಕನ್ನಪಾ. ೧೪೨) ಹೆಣ್ಣು

ಮಕ್ಕಳು ಬನದೂಟವನ್ನು ಸೌರಿಸುವರು (ಶಪ್ತಾ. ೦೬೭). ಬನದಂಬಿಕೆ = ಪಾರ್ವತಿಯಂ ಒಂದು ಅವತಾರ : ಬನಶಂಕರಿ : ವನದೇವಿ : ಭಕ್ತಜನಪ್ರಸನ್ನೆ ವಿಸ್ತಾರವಿಚಿತ್ರಮೂರ್ತಿ ಬನದಂಬಿಕೆ ಮಾಚ್ಕಿಮಗಿಷ್ಟ ಸಿದ್ಧಿಯಂ (ಪಳಶಂ. ೪). ಬನದಬ್ಬೆ = ಬನದಂಬಿಕೆ : ನೆಲನೆಲ್ಲಂ ಕೊಂಡಾಡುವೆಕ್ಕಲವಿರಿಯುಂ ಬನದಬ್ಬೆಯುಂ ಮಹಾಲಕ್ಷ್ಮಿಯುಂ . . . ಪೊಲೆಯರ ದನಿಯುಪ್ಪೊಡಂ ಕೇಳದಂತು ಕಂಚುವಱೆವೆರಸು ಲೇಸುನುಡಿ ಲೇಸುನುಡಿಯೆಂಬ ಮಹಿಮೆಯಿಂದುಣ್ಬರ್ (ಧರ್ಮಾಮೃ. ೯-೧೦೦); ಬನದಬ್ಬೆ ಬಳರಿ ಬಾದು...ಮನೆದೈವಮೆಂಬಿವೆಲ್ಲಂ ಜಿನಭಕ್ತಂಗೆಡದ ಕಾಲ ಕಪ್ಪಿಂ ಕಷ್ಟಂ (ಸಸಾರ. ೪೬೯). ಬನದ ಶಂಕರಿ = ಬನದಂಬಿಕೆ : ದಿನಪಸುತನ ದೂತರು ಬಂದು ಎಳೆವಾಗ ಬನದ ಶಂಕರಿ ಎತ್ತ ಹೋದಳೆ ಮೂಳಿ (ಪುರಂದ. ಧಾ. ೩-೦೨೬-೭). ಬನದ ಹುಣ್ಣಿವೆ = ಪುಷ್ಯಮಾಸದ ಹುಣ್ಣಿಮೆ : ಬನದ ಹುಣ್ಣಿವೆ ದಿನ ಬಾಗಿಲ ತೋರಣವನು ಕಟ್ಟಿ ಬಱಿದೆ ಪಲ್ಲೆಯುವ ಬೀಱಿ (ಪುರಂದ. ಧಾ. ೩-೦೨೬-೭) : ಪೌಷ್ಯಮಾಸದ ೧೫ನೆಯ ತಿಥಿ ಬನದ ಹುಣ್ಣಿವೆ . . . ಬನಶಂಕರಿಯೇ ಈ ಹಬ್ಬದ ಅಧಿದೇವತೆ (ಧಾಹಬ್ಬ. ೦೬೯).

[<ಸಂ. ವನ]

ಬನ$_3$ (ನಾ). ಒಂದು ಬಗೆಯ ಬೆಲೆ ಬಾಳುವ ಬಟ್ಟೆ.—ಉತ್ತಮವಾದ ವಸ್ತ್ರ : ಮಣಿಕನಕಭಾಜನಂಗಳೊಳ್ ಪಟ್ಟಸೂತ್ರದ ನೇತ್ರದ ಬನದ ಮಹಾ ಚೀನದ ದೇವಾಂಗದ ಮಂಗಳಜವಳಿಗಳನಾಂತು ಬರ್ಪ ಕಾಂತೆಯರ್ ಚಿತ್ರ ಪಟಚಿಹ್ನಾವಳಂಬಿತ ವಿಜಯಕೇತನಂಗಳಾಗೆಯುಂ (ವರ್ಧಪು. ೭-೨ ವ).

[?]

ಬನಂಬಿಡಿ (ಕ್ರಿ). ವನವನ್ನು ಆಶ್ರಯಿಸು : ಒಳ್ದಳಿರ ಕೈಪೊಡೆ ಕರ್ಬಿನ ಬಿಲ್ ತವಗ್ರದೊಳ್ ಮಿಳಿರ್ವ ತಮಾಳಪಲ್ಲವದ ಚಾಮರದುಪ್ಪರವಟ್ಟ ಮೊಪ್ಪೆ ಬಂದಲೆದಿಸುವೊಂ ಬನಂಬಿಡಿದು ಪಾಂಥರನಾ ಪರಿಪಂಥಿಮನ್ಮಥಂ (ಪಂದ್ರಪು. ೦-೧೦೦). [ಬನ$_1$ + ಪಿಡಿ$_1$]

ಬನಕಾಱ (ನಾ). (ಮರದ ಸಾಮಾನು. ಬಟ್ಟೆ ಮುಂತಾದಂವಕ್ಕೆ) ಬಣ್ಣ ಹಚ್ಚುವವನು : ಬಣ್ಣಗಾರ : ಪಲವುಂ ಮರನನಿಟ್ಟು ಲೇಸಾಗಿ ಮಾಳ್ಪನ್ತಾಗಿ ಬನಕಾಱ ಚವುಂಡೆಯಂಗೆ ಸರ್ವ್ವನಮಶ್ಯವಾಗಿ ಬಿಟ್ಟ ಮಾಣಿಕೇಶ್ವರದ ಕೋಲ ಮತ್ತರು ಪನ್ನೆರಡು ಪಂನಿಕಯ್ಯ ನಿವೇಶನ . . . ಬನಕಾಱ ನನ್ನಯಂಗೆ ಮತ್ತಱು ಆಱುಗೆಯ್ಯ ನಿವೇಶನ (ಸೌಇಇ. XX. ೦೬೩-೩೭ ; 1190).

[ಪ್ರ ಇದು 'ಬಣ್ಣಗಾಱ' ಎಂಬುದರ ಅಪಲಿಖಿತವಿರಬಹುದು]

ಬನಗತ್ತಲೆ 'ಬನಗಳ್ತಲೆ' ನೋ.

ಬನಗಳ್ತಲೆ. ಬನಗತ್ತಲೆ (ನಾ). ದಟ್ಟವಾದ ಕತ್ತಲೆ : ಕಗ್ಗತ್ತಲೆ : ಗಾಢಾಂಧಕಾರ : ಪಸುರೆಲೆದುಱುಗಿದ ಬನಗಳ್ತಲೆಯೊಳಗೆಸವ ವಸಂತಂ ... ಆ ಕಿಂಗಣ್ವಕ್ಕಿಯ ಸರಮೆಂಬ ಪೊಸ ಗಂಟೆಯನಲುಗಿಸೆ (ಜಯಕಾ. ೦-೩೦): ಬನಗಳ್ತಲೆಯುಂ ಕಮಳಾಪ್ತನ ಕದಿರುಂ ಕಾದಿ ಮಡಿವುತಳಿಯುಂ ಚಾಂಪೇಯ ನಿಕಾಯಮಾದುವಲ್ಲದೊಡೆನುಸುಂ ತದ್ವಯಕೆ ಪಗೆತನಂ ಸಮನಿಪುದೇ (ರಾಜಕೇ. ೨-೩೪). **ಬನಗತ್ತಲೆ :** ನಿಬಿಡನೀರವಕಾನನಾಂತರಂ ನಡುವಗಲ ಮಾರ್ತಾಂಡನುರವಣಿಯನಡಗಿಸುತೆ ತಂಪು ಬನಗತ್ತಲೆಯ ಭೀಷ್ಮಸಮ್ಮೋಹನದ ಮೆರೆದತ್ತು ಚಿತ್ರಗತವಾದಂತೆವೋಲ್ ನಿಶ್ಚಲಂ (ಸಿತ್ರಾಂಗ. ೩-೩೭).

[ಬನ$_1$ + ಕಳ್ತಲೆ (<ಕಟ್ಟಲೆ)]

ಬನಗಾಹು (ನಾ). ತೋಟದ ಕಾವಲು, -ರಕ್ಷಣೆ.

ಬನಗಾಹಿನವರು = ತೋಟವನ್ನು ಕಾಯುವವರು : ತೋಟದ ಕಾವಲುಗಾರರು : ಪನಿತೆ ಸತ್ಯೆಯ ಮೋಹದಾ ನಂದನವು ಹೊಗದಿರಿ ಮೆಂದು ಬನಗಾಹಿನವರಾಡಲು (ಸಾಳ್ವರಾ. ೩೦-೩೦).

[ಬನ$_1$ + ಕಾಹು$_1$ (< ಕಾಪು)]

ಬನಗಾಳಿ (ನಾ). ಕಾಡಿನಲ್ಲಿ ಬೀಸುವ ಗಾಳಿ : ಓ! ಓ! ಬನಗಾಳಿ ಇದೇನೀ ತೆಱದೂಱಿಗಂ! (ರಾಮಾಶ್ವ. ೯-೪). [ಬನ$_1$ + ಗಾಳಿ$_1$]

ಬನಗುತ್ತಿಗೆ (ನಾ). ತೋಟದ ಗುತ್ತಿಗೆದಾರನಿಂದ ಬರುವ ಹಣ.—ವರಮಾನ : ಆ ಪೂಜಾರಿ ಡಾವಣ್ಣ ಚಿಕ್ಕಜಂನ್ವಕಲ್ಪಿಗಳಿಗೆ ಕೊಟ್ಟ ಶಿಲಾಶಾಸನದ ಕ್ರಮವೆಂತೆಂದಡೆ ಮಣಲಿಗೆ ನಾಡೊಳಗಣ . . .ತೋಟ ಮನೆ ಕಡಿಗುತ್ತಿಗೆ ಆಱುವಣವನೂ ಬನಗುತ್ತಿಗೆ . . . ಆಗುಮಾಡಿಕೊಂಬದು (ಮೃಆರಿ. ೧೯೪೨. ೩೭-೩೯ ; 1360). [ಬನ$_1$+ಗುತ್ತಿಗೆ (<ಗುತ್ತಗೆ)]

ಬನದುರ್ಗ (ನಾ). (ಶತ್ರುಗಳು ಪ್ರವೇಶಿಸಲು ಸಾಧ್ಯವಾಗದಂತೆ) ದಟ್ಟವಾದ ಕಾಡಿನ ನಡುವೆ ಕಟ್ಟಿದ ಕೋಟೆ; ವನದುರ್ಗ : ಗುಡಿಯ ಗುಂಟಗಳಿಗೆ ಬನದುರ್ಗ ಮೇಲವರಡಿಗೆಯ ಗುಂಡಿಗೆ ದುರ್ಗ ಕುಡಿವ ನೀರಿಗೆ ಜಲದುರ್ಗ ಪಾಳಾದುವಾ ಪಡೆಗೆ ಪಗೆಗಳಿದಿರುಂಟೆ (ವರ್ಧಪ. ೬-೩೪). 'ಜಲದುರ್ಗ' ಪರಾ. [ಬನ$_1$ + ದುರ್ಗ]

ಬನಪಶ್ಯ (ನಾ). ಔಷಧಿಯಾಗಿ ಉಪಯೋಗಿಸುವ ಒಂದು ಬಗೆಯ ವನಸ್ಪತಿ : ೩೨೨ ಬಾದಾಮಹಲವ, ೩೨೩ ಬನಪಶ್ಯ (ಮುಂಬಪ್ಯಾ. ೦೬೬).

[← ಪಾರ್. ಬನಫ್‌ಶಹ್ : ಹಿಂ. ಬನಫ್‌ಶಾ, ಬನಫಶಾ]

ಬನಪು (ನಾ). ಒಂದು ಬಗೆಯ ದೊಡ್ಡ ಜಾತಿಯ ತೇಗದ ಮರ: (ಕ).

[←ತುಳು. ಬನಂಪು. ಬರಾಂಪು. ಬಣುಪು, ಬಣ್ಪು]

ಬನವಂದಿ (ನಾ). ಕಾಡುಹಂದಿ : ಇಭಂ ಬನವಂ [ಪಾಣಾಂ.ಪಂ]ದಿ ತರಕ್ಷು ಖಡ್ಗಿ. . . ಮರವಾವುಗಳಿಂಬಿವಾಗಳುಂ ಕರಮೆಸೆದಿಪಿರ್ನಂ ಮೆಱೆದುದಾ ವಿಪಿನಂ (ಶಪಶಂ. ೩-೩೪). [ಬನ$_1$ + ಪಂದಿ]

ಬನವಕ್ಕಿ (ನಾ). ಕಾಡಿನಲ್ಲಿರುವ ಪಕ್ಷಿ : ಕಾಡುಹಕ್ಕಿ : ಎಚ್ಚಱಿಸಿ ಪೋಯ್ತನಿತಱೊಳು ಕೊಳರ್ವಕ್ಕಿ ಬನವಕ್ಕಿಗಳು ಸರಗೆಯ್ಯೆ (ಸಾಳ್ವರಾ. ೦೬-೩೯). [ಬನ$_1$ + ಪಕ್ಕಿ]

ಬನವಟ್ಟೆ (ನಾ). ಕಾಡುದಾರಿ : ಅರಣ್ಯಮಾರ್ಗ : ನಾಡೊಳಗಣ ಚೋರರ ಪರಿಯಲ್ತಾ ಬೀಡಿನ ಬನವಟ್ಟೆಯ ಪೊಯ್ವಂ (ಉದ್ಯರೇ. ೨-೨೭); ಅರಣ್ಯ ಗೋಚರರೊರೆಯೆ ಪಣ್ಡಲಂ ಪೂಗಳ್ಗೆ ತಾಂ ದಿನದಿನಂ ನಡೆದು ಸಮೆದ ಬನವಟ್ಟೆಯಂ (ಶ್ರೀರಾಮಾ. ೦೬೯-೯೨). [ಬನ$_1$ + ಬಟ್ಟೆ$_1$]

ಬನವತಿ (ನಾ). ಒಂದು ಕ್ಷುದ್ರದೇವತೆಯ ಹೆಸರು : ಬನವತಿ ಮಾರೆಮ್ಮನ ನಂಬಿದ ಹಾಗೆ (ಗಾಡೆ). [?]

ಬನವಸೆ 'ಬನವಾಸಿ' ನೋ.

ಬನವಳಿಗ (ನಾ). ತೋಟದ ಕಾವಲುಗಾರ ; ವನಪಾಲಕ : ಮದನ ಮಂತ್ರಿ ಬನಮಂ ಮುತ್ತಿದಂ . . . ತರಹರಿಸಲರಿದು ದರಹಸಿತಾಸ್ಯ ಗಾಳಿಧಾಳಿಯ ಬಂದವೆಂದು ಬನವಳಿಗನರಸಗೆ ದೂಱಿದಂ (ಶೇರಮ. ೭-೪).

[ಬನ$_1$ + — ವಳಿಗ$_2$]

ಬನವಾಶಿ 'ಬನವಾಸಿ' ನೋ.

ಬನವಾಸಿ. ಬನವಸೆ. ಬನವಾಶಿ. ಬನವಾಸೆ (ನಾ). ೧. ಒಂದು ದೇಶದ ಹೆಸರು : ನಲ್ಲರೊಳ್ಮೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಚ್ಚೊಡಾವ ಬೆಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ಶಂಶಶಾ. ೪-೨೯); ಶ್ರೀವಿಷ್ಣುಪದಸೇಕರಂ ಬನವಾಸಿವಿಷಯಾಧೀಶ್ವರಂ ಮಹೇಶ್ವರಭಕ್ತಂ (ಎಳ. III (B). ಹಗ್ಗಡ. ೦೨೩-೦೨; 1079); ಬನವಾಸಿಗೆ ಹೋದರೂ ಬರಗಾಲ ತಪ್ಪಲಿಲ್ಲ (ಗಾಡೆ). ೨. ಒಂದು ನಾಡು ಅಥವಾ ಎಟ್ಟಣದ ಹೆಸರು. ೩. ಒಂದು ಬಗೆಯ ನಾಣ್ಯ: ಬ್ರಿಟಿಶ ಸರಕಾರದ ಅಮಲಿನ ಆರಂಭದಲ್ಲಿ . . . ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು . . . ೧೦. ನವಲಗುಂದೀ, ೧೧. ಬನವಾಸೀ, ೧೨. ಶಮಶೇರಿ (ಕಳಾಗೆ. ೨೮೦). **ಬನವಸೆ :** ೨. ಬನವಸೆ ಹಾನುಂಗಲುಗೊಂಡ ಭುಜಬಳವೀರಗಂಗ

ಪ್ರತಾಪಹೊಯ್ಸಳಬಲ್ಲಾಳದೇವರು . . . ರಾಜ್ಯಂಗೆಯುತ್ತಿರೆ (ಎಕ. II (R). ೩೬೩-೨೬ ; 1173) ; ಸಕಲಸೌರಂಭದಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು (ಪ್ರಶುಶೀ. ೩೨). ಬನವಾಶಿ. ಬನವಾಸೆ : ೨. ರಾಜಧಾನಿ ಬನವಾಸೆಪುರದ ಜಯಂತೀ ಮಧುಕೇಶ್ವರದ ಮೊಗಸಾಲೆಯುಮಂ . . . ಮಾಡಿಸಿ (ಸೌಇಇ. XI-i, ೧೦೩-೨೪; 1068 ?); ಬಂಕಪುರಂ ಬನವಾಸೆ ಕೊಯತುರ್ತುಂಗವರಾಕ್ರಮಂ ವಿಜಯವರ್ಧನನೀ ಕಲಿ (ವಿ)ವಿಷ್ಣುವರ್ಧನಂ (ಎಕ. XVI, ಸಕ್ಕಾ. ೬೨-೯; 1242).

ಬನವಸೆ ಪನ್ನಿರ್ಚ್ಛಾಸಿರ, ಬನವಾಶಿ ಪನ್ನಿರ್ಚ್ಛಾಸಿರ, ಬನವಾಸಿ ಪನ್ನಿರ್ಚ್ಛಾಸಿರ = ಹನ್ನೆರಡುಸಾವಿರ ಗ್ರಾಮಗಳಿಂದ ಕೂಡಿದ ಬನವಸೆಯೆಂಬ ನಾಡು : ಬನವಸೆ ಪನ್ನಿರ್ಚ್ಛಾಸಿರಮುಂ ಬೆಳ್ವೊಲ ಮೂನೂಱುಂ . . . ಬಾಗಿನಾಡೆಱ್ಪತ್ತುವಂ ಬೂತುಗಂಗೆ ಕನ್ನರದೇವಂ ಮೆಚ್ಚುಗೊಟ್ಟಂ (ಎಕ. III, ಮಂಡ್ಯ. ೪೦-೨೦; 950); ಶ್ರೀಕನ್ನರದೇವಂ ಪೃಥ್ವೀರಾಜ್ಯಂಗೆಯ್ಯೆ ಬಪ್ಪವ್ವಂ ಬನವಾಶಿ ಪನ್ನಿರ್ಚ್ಛಾಸಿರದ ಪಟ್ಟಮನಾಳೆ (ಮೈಆರಿ. ೧೯೨೯, ೬೯-೪; 964); ಚಾ[ವು]ಣ್ಡರಾಯರಸರ್ ಬನವಾಸಿ ಪನ್ನಿಚ್ಛಾಸಿರಮನಾಳುತ್ತ ಮಿರಲ್ (ಇಆ. IV, ೦೬೯-೧೦; 1048). [< ಸಂ. ವನವಾಸೀ]

ಬನವಾಸೆ 'ಬನವಾಸಿ' ನೋ.

ಬನವು 'ಬನ$_1$' ನೋ.

ಬನವೆಂಕಿ 'ಬನವೆಂಕೆ' ನೋ.

ಬನವೆಂಕೆ, ಬನವೆಂಕಿ (ನಾ). ಕಾಳ್ಗಿಚ್ಚು; ಕಾಡಿನ ಬೆಂಕಿ; ದಾವಾನಲ: "ಬನವೆಂಕೆಯೆಂದು ದಾವಾಗ್ನಿ" (ಕಶಸಾ. ೩೦-೬೨). ಬನವೆಂಕಿ : "ಬನವೆಂಕಿಯೆ ದಾವಾನಲಂ" (ಕವಿಕಂ. ೩೬). [ಬನ$_1$ + ಬೆಂಕೆ]

ಬನವೆಣ್ಣು (ನಾ). ಕಾಡಿನಲ್ಲಿ ವಾಸಿಸುವಳು ; ಕಾಡಿನ ಹೆಣ್ಣು ; ಅನಾಗರಿಕಸ್ತ್ರೀ : ನಿಷ್ಕರುಣೆ ಎನ್ನದಿರ್, ಬನವೆಣ್ಣೆ (ಪತ್ರಾಂಗ. ೨೪-೬೬೨). [ಬನ$_1$ + ಪೆಣ್ಣು (< ಪೆಣ್)]

ಬನಶಂಕರಿ (ನಾ). ಕಾಡಿನ ಅಧಿದೇವತೆ; ಪಾರ್ವತಿಯ ಹೆಸರುಗಳಲ್ಲಿ ಒಂದು : ಬನಶಂಕರಿಯೇ ಈ ಹಬ್ಬದ ಅಧಿದೇವತೆ. ಈ ದೇವತೆ ಪಾರ್ವತೀದೇವಿಯ ಒಂಬತ್ತು ಅವತಾರಗಳಲ್ಲಿ ಆರನೆಯವಳು . . . ಈಕೆ ವನಶಂಕರಿ, ವನದೇವತೆ ಎಂದು ಸ್ಪಷ್ಟವಾಗುವಂತಿದೆ (ಶಾಹಬ್ಯ. ೦೬೯); ಕಾಡಿನ ಕವಿಗಳೆ ಓ ಕಲೆಗಾರರೆ . . . ಬನಶಂಕರಿಯನು ಕೀರ್ತಿಸಿರಿ ! (ಕಶುತ್ರಾ. ೬೪-೪). [ಬನ$_1$ + ಶಂಕರಿ]

ಬನಶಿ 'ಬನಸಿ' ನೋ.

ಬನಶಿಗೋದಿ 'ಬನಸಿಗೋದಿ' ನೋ.

ಬನಸಂಪಗೆ (ನಾ). ಕಾಡುಸಂಪಗೆ ಮರ ಮತ್ತು ಅದರ ಹೂವು : ಪಚ್ಚೆಯ ಬೆಟ್ಟುಗಳೊಳ್ ಮೆಯ್ವೆಚ್ಚಿದ ವೈಡೂರ್ಯಮಣಿಕದಂಬಮೊ ತಾನೆನೆ ಬಿಚ್ಚಳಿಸಿದ ಬನಸಂಪಗೆಯಚ್ಚಳಿಯದ ಮಲರ್ಗಳಿಂದ ಸೊಗಯಿಕು ಮನಿಶಂ (ಹಾಲಾಸ್ಯ. ೦-೪-೬೬). [ಬನ$_1$ + ಸಂಪಗೆ]

ಬನಸಿ, ಬನಶಿ, ಬನ್ಸಿ (ನಾ). ದಪ್ಪವಾಗಿಯೂ ನಸುಹಳದಿಬಣ್ಣದಿಂದ ಕೂಡಿಯೂ ಇರುವ ಒಂದು ಬಗೆಯ ಗೋದಿ : 'ಬನಸಿಗೋದಿ' ಪರಾ. ಬನಶಿ : 'ಬನಶಿಗೋದಿ' ಪರಾ. ಬನ್ಸಿ : 'ಬನ್ಸಿರವೆ' ಪರಾ. [← ಮರಾ. ಬನಸೀ, ಬನಶೀ, ಬನ್ಶೀ]

ಬನಸಿಗೋದಿ, ಬನಶಿಗೋದಿ, ಬನ್ಸಿಗೋಧಿ (ನಾ). = ಬನಸಿ : ತೊಗರಿ, ಕಡ್ಲಿ, ಬನಸೀಗೋದಿ, ಸಾಸವಿ (ಮುಂಬವ್ಯಾ. ೨೮). ಬನಶಿಗೋದಿ : ಬನಶೀಗೋದಿಯು ಕಾಳು ದೊಡ್ಡದಿದ್ದು ಮತ್ತು ಬಣ್ಣದಿಂದ ದಪ್ಪ ಅರುಷಣವಂತೆ ಇರಬೇಕು (ಮುಂಬವ್ಯಾ. ೩೧). ಬನ್ಸಿಗೋಧಿ : ಬನ್ಸಿಗೋಧಿಯಿಂದ ತಯಾರಿಸಿದ ರವೆಯು ತುಂಬ ಚೆನ್ನಾಗಿರುತ್ತದೆ (ಕೂಡಿ). [ಬನಸಿ + ಗೋದಿ$_1$ (< ಗೋದುವೆ)]

ಬನಸಿರಿ (ನಾ). ೧. ಕಾಡಿನ ಸಿರಿ ; ಅರಣ್ಯಸಂಪತ್ತು : ಕಾಡಿನಲ್ಲಿ ಮರ ಕಡಿಯಬೇಕಾದರೆ, ಬನಸಿರಿಯನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಸರ್ಕಾರದ ಸನ್ನದು ಅವಶ್ಯಕ (ಹಸುಹೂ. ೨೩೦). ೨. ವನದೇವತೆ ; ವನಲಕ್ಷ್ಮಿ : ಬನಸಿರಿ ಸುರವರಲೋಕದ ಬನಸಿರಿಗುಱ್ ತೋಱಲೆಂದು ನಿಜವಿಭವಮನಂದನುನಯದಿಂ ಕಟ್ಟಿದ ಕಾಂಚನತೋರಣಮೆನಿಸಿ ಕರ್ಣಿಕಾರಂ ಮೆಱ್ಗುಂ (ಶಾಇಶೇ. ೯-೬೬). [ಬನ$_1$+ಸಿರಿ]

ಬನಹಿಪ್ಪಲಿ (ನಾ). ಹಿಪ್ಪಲಿಯಲ್ಲಿ ಒಂದು ಬಗೆ ; ಕಾಡುಹಿಪ್ಪಲಿ : ತಗರ ಕೋಡು, ಬನಹಿಪ್ಪಲಿ, ತಲೆನವಿರು, ಕಾಲುಗುರು, ಬಜೆಯಿವಂ ಧೂಪವಿಕ್ಕುವುದು (ಬಾಲಸ. ೦೨೬-೨೦). [ಬನ$_1$+ಹಿಪ್ಪಲಿ]

ಬನಾತ 'ಬನಾತು' ನೋ.

ಬನಾತು, ಬನಾತ (ನಾ). ಬಣ್ಣಬಣ್ಣದ ಉಣ್ಣೆಯ ಬಟ್ಟೆ ; ಸಕಲಾತಿ : ದಮಾಸಿನ ವೃಷಭಧ್ವಜಗಳೂ × × × ಬನಾತಿನ ತೆರೆಗಳೂ (ಎಕ. XIV, ಸಂಜನ. ೨೯೨-೦೪೨ ಪುಟ; 1847) ; ಒಂದು ಬಾರಿ ರೋಮನ್ ಚಕ್ರವರ್ತಿಯು ಬಹಳ ಹಸನಾದ ಬನಾತಿನ ಅಂಗಿಯನ್ನು . . . ಕಳುಹಿಸಿದನು (ಸೈಗಂಬ. ೦೨೩) ; ಅಂಗಳದ ಮಧ್ಯದಲ್ಲಿ ಬನಾತಿನ ನಡೆಮುಡಿಯು ಹಾಸಲ್ಪಟ್ಟಿದ್ದಿತು (ಶ್ರೀರಾಹು. ೪೪). ಬನಾತ : ವಾರಿನ ಮೇಲೆ ಕಿಮ್ಮತ್ತು ಆಗತಕ್ಕ ಕಪಡಾ ಜೀನಸಗಳು. ೧. ಬನಾತ, ೨. ಕಾಸ್ಮೀರಿ (ಮುಂಬವ್ಯಾ. ೦೪೦). [← ಹಿಂ. ಮರಾ. ಬನಾತ್]

ಬನಾವಟ್ 'ಬನಾವಟಿ' ನೋ.

ಬನಾವಟ 'ಬನಾವಟಿ' ನೋ.

ಬನಾವಟಿ, ಬನಾವಟ್, ಬನಾವಟ (ಗಂ). ೧. ಕೃತ್ರಿಮವಾದ ; ನಿಜವಲ್ಲದ : ಬನಾವಟಿ ಪತ್ರಗಳನ್ನು ಕಳುಹಿಸಿ ನಿಮಗೆ ಮೋಸಗೊಳಿಸಿರುವ ಆರೋಪದ ಮೇಲೆ ನನ್ನನ್ನು ಈಗಲಾದರೂ 'ಮಾವನ ಮನೆ'ಗೆ ಕಳುಹಿಸಬೇಕೆಂಬ ನಿಮ್ಮ ಬಯಕೆಯು ಈಡೇರುವಂತಿಲ್ಲ (ಕಿಂಸಾ. ೪೩). (ನಾ). ೨. ಕೃತ್ರಿಮವಾದುದು ; ನಕಲಿಯಾದುದು : ಇಲ್ಲೆ ಬನಾವಟಿಯ ಮಾಲವನ್ನು ತಯಾರ ಮಾಡುತ್ತಾರೆ. ಅದಕ್ಕೆ ಇಲ್ಲೆ ಸುಮಾರ ಮಾಲೆಂದೆನ್ನುತ್ತಾರೆ (ಮುಂಬವ್ಯಾ. ೬೯). ಬನಾವಟ್ : ೧. ಹಾಗೆ ಕಲಾಸೃಷ್ಟಿಯಾಗುವಂತಿದ್ದರೆ ಅದು ಕೃತಕವಸ್ತು. ಅಂಥವು ಅನುಕರಣೆಗಳು, ಬನಾವಟ್ ಮ್ಹಾಲುಗಳು ! (ಕರೆದ. ೦೦೬). ಬನಾವಟ : ೧. ಈ ಬನಾವಟ ಮುತ್ತಿನ ಹಾರ ಅಲ್ಲಿರಿಸಿ ಅದನ್ನು ತಂದುಕೊಡಿರಿ (ಗರ್ಭಗು. ೪೬). ೨. ಅಚ್ಚಖರೆ, ಖರೆ ಮತ್ತು ಸುಳ್ಳ ಇವುಗಳ ಮಿಶ್ರಣದಿಂದ ತಯಾರಾಗಿದ್ದದ್ದು ಹಾಂಗು ಕೃತ್ರಿಮ ಅಂದರೆ ಬನಾವಟ ಈ ಪ್ರಕಾರ ಮೂರು ತರದು ಇರುತ್ತವೆ (ಮುಂಬವ್ಯಾ. ೩೨ ಪ್ರಸ್ತಾವನೆ). [←ಹಿಂ. ಬನಾವಟ್, ಬನಾವಟೀ; ಮರಾ. ಬನಾವಟ್, ಬನೋಟ್]

ಬನಾವಣೆ (ನಾ). ೧. ಕೃತಕವಾಗಿ ತಯಾರುಮಾಡುವುದು ; ಅನಧಿಕೃತವಾಗಿ ಸಿದ್ಧಪಡಿಸುವುದು : ನಾಣ್ಯವನ್ನು ಬನಾವಣೆ ಮಾಡೋಣ ೭ ಸಂವತ್ಸರಗಳು (ಗ್ರಾಮಾಕ. ೦೬೩). ೨. ಪರಸ್ಪರ ಹೊಂದಾಣಿಕೆ,—ಸಾಮರಸ್ಯ : ದೇಹಕ್ಕೂ ಮನಸ್ಸಿಗೂ ಬನಾವಣೆಯಿಲ್ಲ ಎನ್ನಿಸಿತು (ಎಬಂಧ. II, ೦೬೪). ೩. ಕಲ್ಪನೆ; ಊಹೆ : ಅವರ ಕಕ್ಷಿಗಾರರ ಬಚಾವು ಈ ಕೇಸು ಕೇವಲ ಪೋಲೀಸಿನವರ ಬನಾವಣೆಯೆಂದು (ಕಲನ. ೩೭೨). ೪. ಕೃತಕವಾದುದು ; ಕೃತ್ರಿಮವಾದುದು ; ಖೋಟಾ : ಬನಾವಣೆಯಾದದ್ದು ಎಂದು ತಿಳಿದು ಮತ್ತೊಬ್ಬನಿಗೆ ಕೊಟ್ಟರೂ ಇಟ್ಟುಕ್ಕೊಂಡರೂ ೫ ಸಂವತ್ಸರಗಳ ಪರ್ಯಂತ (ಗ್ರಾಮಾಕ. ೦೮೬). 'ಬನಾವಟಿ' ಪರಾ. [←ಮರಾ. ಬನಾವಣೀ]

ಬನಿ$_1$ (ನಾ). ೧. ಸಾರ ; ಸತ್ತ್ವ ; ತಿರುಳು : ಇವುಗಳಲ್ಲಿ ಜನಪದ ಸಾಹಿತ್ಯದ ಬನಿ ಅಷ್ಟಾಗಿ ಕಂಡುಬರುವುದಿಲ್ಲ (ಕಜಕಾ. ೨೮ ಪ್ರಸ್ತಾವನೆ).

೨. (ಹಾಲು, ಮೊಸರು, ಕಲಸಿದ ಹಿಟ್ಟು ಮುಂತಾದುವುಗಳಲ್ಲಿರುವ) ಜಿಗುಟು ; ಅಂಟು : ಸೊಗಡು : ಅವರು ಪರೀಕ್ಷಿಸಿದ ಯಾವ ಹಸುವೂ ಅವರಿಗೆ ತೃಪ್ತಿಯನ್ನುಂಟುಮಾಡಲಿಲ್ಲ. . . ಐದನೆಯದರ ಹಾಲು ನೀರು, ಅದರಲ್ಲಿ ಬನಿಯಿಲ್ಲ (ಶಿಪಾ. ೧೫); ಹಸುವಿನ ಬೆಣ್ಣೆಯಲ್ಲಿ ನಶ್ಯವನ್ನು ಮಿದಿಯುತ್ತಿದ್ದರು. ಹಾಗೆ ಮಿದ್ದರೆ ಅದಕ್ಕೆ 'ಬನಿ' ಬರುತ್ತದೆ (ಪಪ್ಪೂರು. ೦೬೨). ೩. ಕಳೆ ; ತೇಜಸ್ಸು ; ಹೆಣ್ಣುಡುಗೆಯುಟ್ಟು ಹರೆಯದ ಹೆಣ್ಣು ಚಾಮಲೆ ಹೆಣ್ಣುತನದ ಆ ಬನಿಯನ್ನು, ಚೆಲುವನ್ನು ತಳೆಯತ್ತಿದ್ದಳು (ಸಪಶಿ. ೫೬).

ಬನ್ನಿ, ಬನ್ನಿ (ನಾ). ೧. ಒಂದು ಬಗೆಯ : ತೆರಿಗೆ ಶ್ರೀಮತ್ತು ರಗವೆಡೆಂಗಂ ಕಾಳೆಗಕೆ ನಡವುತ್ತು ರೋಣದ ಮಹಾಜನಕೆ ಬನಿಯಂ ಬಿಟ್ಟಾರ್ (ಎಇ. XIII, ೦೬೭-೩; ಸ್ವ. 875) ; ಸೋಮೇಶ್ವರಪಂಡಿತ ದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಬನಿಯಂ ಬಿಟ್ಟನು (ಸೌಇಇ. XX, ೦೫೬-೬ ; 1174). ಬನ್ನಿ : ೧. 'ಹುಲ್ಲುಬನ್ನಿ' ಪರಾ. ೨. (ಹೊಲ, ಗದ್ದೆಗಳಲ್ಲಿ) ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಕೂಲಿಯಾಳಿಗೆ ಕೊಡುವ ಬೆಳೆದ ಧಾನ್ಯದ ಒಂದು ಭಾಗ : (ಕ).

[ದೇ. ಕ. ತುಳು. ಬಣಿ./ಹಿಂ. ಬನಿ, ಬನ್ನೀ]

ಬನಿಗೊಳ್ಳು (ಕ್ರಿ). ಸತ್ತ್ವಯುತವಾಗು ; ಸಾರವತ್ತಾಗು : ಜೀವಂತವಾದ, ದಿನದಿನವೂ ಬೆಳೆಯುತ್ತಿರುವ, ಬನಿಗೊಳ್ಳುತ್ತಿರುವ, —ಬನಿಗೊಳ್ಳಬೇಕಾಗಿರುವ—ಈಗಿನ ಭಾಷೆಯ ಗತಿಗೆ ತಡೆಯಾಗಿ ತಂದೊಡ್ಡದೆ ಕವಿತೆಯಲ್ಲಿ ಕೇವಲ ಸಂಪ್ರದಾಯಬದ್ಧವಾದ ಶಬ್ದರೂಪಕ್ಕೂ, ಸಂಧಿನಿಯಮಗಳಿಗೂ, ಕಡೆಗೆ ನಿರ್ದುಷ್ಟತೆಗೂ ಮೀರಿದ ಗುಣವೊಂದಿದೆ (ಎಸೀಗೀ. V ಮುಪ್ಪುಡಿ). [ಬನ್ನಿ + ಕೊಳ್ಳು (<ಕೊಳ್ಳ್)]

ಬನಿಯ, ಬನಿಯಾ (ನಾ). ವ್ಯಾಪಾರ ಮಾಡುವವನು ; ವರ್ತಕ ; ವೈಶ್ಯ : ವ್ಯಾಪಾರಸ್ಥರು . . . ಬಣಜಿಗ, ಬನಿಯ (ಕುಳುವಾ. ೦೬೨) ; ಬನಿಯಾ: ಚಂದ್ರಗುಪ್ತ ದಾಸೀಪುತ್ರ; ಗಾಂಧೀಜಿ ಬನಿಯಾ (ಯಕ್ಷಶ್ರ. ೦೩೮).

[←ಹಿಂ. ಮರಾ. ಗುಜ. ಬನಿಯಾ. ಪ್ರಾ. ವಣಿಅ. / ಸಂ. ವಣಿಜ]

ಬನಿಯನ್ನು ' ಬನೀನು' ನೋ.

ಬನಿಯಾ 'ಬನಿಯ ' ನೋ.

ಬನೀನು, ಬನಿಯನ್ನು (ನಾ). ಅರ್ಧತೋಳಿನ ಒಳಅಂಗಿ ; ಇಂಡಿಯಾದೇಶಕ್ಕೆ ಬಂದ ಆಂಗ್ಲರು ಗುಜರಾತಿನಲ್ಲಿ ವರ್ತಕರು ಉಪಯೋಗಿಸುತ್ತಿದ್ದ ಅರ್ಧತೋಳಿನ ಅಂಗಿಯನ್ನು ಮೆಚ್ಚಿಕೊಂಡರು. ಆದುದರಿಂದ ಗುಜರಾತಿನ 'ವಾನಿಯ=ಬನಿಯ' ಎಬುದು ಇಂಗ್ಲಿಷಿನಲ್ಲಿ ಗುಣವಾಚಕವಾಗಿ ಬನಿಯನ್ ಎಂದಾಯಿತು. ಆ ಬಳಿಕ ಇದು ನಾಮಪದದ ಅರ್ಥವನ್ನು ಪಡೆಯಿತು. ಸಂಸ್ಕೃತದ 'ವಣಿಜ' ಎಂಬುದು ಇದರ ಮೂಲವೆಂಬುದು ಸ್ವಾರಸ್ಯಕರವಾಗಿದೆ : ರಾಯರು ಒಳ್ಳೆಯ ಒಂದು ಬಿಳೀಪಂಚೆಯನ್ನುಟ್ಟು, ಉದ್ದವಾದ ಬನೀನನ್ನು ತೊಟ್ಟು . . . ನಿಂತಿದ್ದರು (ರಾಯಳ. ೬೦); ಈ ಹುಡುಗನ ಮೈ ಮೇಲಿದ್ದ ಬಟ್ಟೆಯೆಂದರೆ ತುಂಡು ಬನೀನೊಂದು (ಪುಪರು. ೦೪೦). ಬನಿಯನ್ನು: ಪಾಯಿಜಾಮದ ಮೇಲೆ ಬನಿಯನ್ನು ಹಾಕಿದ್ದಾನೆ (ಪಡದಾ I. ೩೬೫); ಹೊಲಸು ವಸ್ತ್ರವನ್ನು ಬದಲಿಸಿ ಚೊಕ್ಕವಾದ ಚಡ್ಡಿ, ಬನಿಯನ್ನು ತೊಟ್ಟುಕೊಂಡ (ದೇವಹಂ. ೬೩).

[← ಇಂ. Banian. ಹಿಂ. ಬನಿಯಾಇನ್ : ಮರಾ. ಬನಿಯನ್, ಬನ್ಯಾನ್ : ಗುಜ. ಬನಿಯಾ=ವೈಶ್ಯ./ಸಂ. ವಣಿಜ=ವೈಶ್ಯ]

ಬನೂರ್ 'ಬನ್ನೂರ್' ನೋ.

ಬನ್ನ (ನಾ). ೧. ಅವಮಾನ; ಅಪಮಾನ: ಭಂಗ : "ಬನ್ನಮೆಂದು ಭಂಗಂ" (ಕರಸಾ. ೬೫-೪೬೨) ; ಪೆಜರಾ[ನಾ]ವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ ನೆಱೆ ಯಾರೆಣೆಯೆಂಬನ್ನಂ ಕುಱಿತಬ್ಧಿಗೆ ಬನ್ನಮಂ (ಕವಿರಾ. ೨-೦೨೬); ನಿನ್ನ ಪೆಡಗೆಯ್ಗ[ಟ್ಟಂ] ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವೆಂಬುವುಮೊಳವೇ (ಪಂಪಭಾ. ೬-೫೩); ಅನುಜನ ನೆತ್ತರವೀಂಟಿದವನ ನೆತ್ತರ ಜೀವಸಹಿತಮೀಂಟದೆ ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂಪೆನೆ ದುಶ್ಶಾಸನನ ಬನ್ನಮಂ ನೀಗುವೆನೇ (ಗದಾಯು. ೫-೮). ೨. ಸೋಲು; ಪರಾಜಯ; ಪರಾಭವ : ತನ್ನೊಳಗಣ ಪನ್ನಗನಂ ಮುನ್ನೀಂ ಪಿಡಿದೊಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪೆಸೆದುದು ತೊಱೆಗಿನ್ನುಂ ಹರಗಳ ತಮಾಳನೀಳಚ್ಛವಿಯಿಂ (ಪಂಪಭಾ. ೫-೫೪); ಬನ್ನದಿಂದಂ ಮಹಾನಾಥ ನುಱುಬೆಗೆ ಮುರಿದು ಬೆನ್ನ ಹಿಂದಡಗಿದ ಸಮಸ್ತದಿಕ್ಪಾಲರಂ . . . ಕಂಡೊಡನೆ ಪನ್ನೆರಳ್ನಯನದಿಂ ಕಿಡಿ ಸುರಿಯೆ ಕಲ್ಪಾಂತಹರನಂತೆ ಗುಹನೆಸೆದನು (ಸಂಪು. ೩೯-೦೫); ಏಸು ಸಲ ತಪವಗೈದೇಸು ಬನ್ನವನಾಂತು ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್ ? (ಮಂಕುಕ. ೬೯೯). ೩. ನಾಶ; ಅಳಿವು : ಉನ್ನತಬಲಗೂಡಿ ಬಂದಾಗ ತುರುಕರ ಬನ್ನಕ್ಕೆ ತುದುದೇನೆಂಬೆ (ಕಂಪಂ. ೦೪-೫೪). ೪. ಕಷ್ಟ; ಬಾಧೆ ; ಸಂಕಟ ; ತೊಂದರೆ : ಪರಿಭವದೊಂದು ತುತ್ತತುದಿ ಕೃಷ್ಣೆಯ ಬನ್ನದೊಳಾಗೆ ಜೂದಿನೊಳ್ ಪೊರಸಟಿವಂತೆ ತಮ್ಮರಸುಗೆಟ್ಟು ಕಟಲ್ದೆರ್ದೆಗೆಟ್ಟರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಿಂ ಮಗುಟ್ಟುಂ . . . ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೇ (ಪಂಪಭಾ. ೬-೫೫); ವರ್ಣಧರ್ಮದ ರಕ್ಷಿಗವನಿಯ ಬನ್ನವನು ಬಿಡಿಸಲಿಕೆ ತಾನುತ್ಪನ್ನನಾದೆನು ಯದುಕುಲದಲೆಲೆ ಭೂಪ (ವಿಭಾಗ. ೦೦-೫೨-೦೮) ; ಎನಗೇತಕೆಯೋ ಮದುವೆಯ ಬನ್ನ ! (ಗಣೇಶ. ೫-೦೦೮). ೫. ದುಃಖ; ಅಳಲು : ನಿನ್ನೆ ಮೊದಲು ನಿನ್ನಾಣೆ ನಿನ್ನನು ಕಾಣದನ್ನಪಾನಂಗಳಿಳಿಯದೆ ಬನ್ನದೊಳಾಳಿದೆ ನಾನು (ಕಂಪಂ. ೨-೦೦೪). ೬. ಕೊರತೆ ; ಚ್ಯುತಿ ; ಕುಂದು : ಮುಂ ಪೂಣ್ದಂ ನನ್ನಿಗೆ ಬನ್ನಂ ಬರಲೀಯದಾರ್ತಸಗಿದೀ ವಿಖ್ಯಾತಿಯುಂ ಕೀರ್ತಿಯುಂ ಮುಗಿಲಂ ಮುಟ್ಟಿದುದಲ್ತೆ (ಪಂಪಭಾ. ೦-೬೦). ೭. ಅಡ್ಡಿ; ತಡೆ; ವಿಘ್ನ : ಕನ್ನೈದಿಲಡ್ಡಮೋಱೆಯೊಳಿರುವುದಱಿಂದ ಬನ್ನವುಂಟೆ ಪ್ರಭಾಕರಗೆ (ಭರಸ. ೨೦-೦೦೭); ಬಱಿದೆನ್ನ ತಪಸಿಗೆ ಬನ್ನಮೆಸಗದೆ ಎಹಗೆ ಬಂದೈ ಅಹಗೆ ಪಿಂದಿರುಗೈ (ಅಧ್ಯುತ. ೬-೦೦) ; ಗಣಪತಿಯೆಂದರೆ ಬನ್ನಗಳನ್ನು ಪರಿಹರಿಸುವ ದೇವನು (ಧೂಪುಸು. ೬೬). ೮. ಮುರಿಯುವಿಕೆ; ಸೀಳುವಿಕೆ : (ಕ).

ಬನ್ನದ ಕೂಟ್=ಕಷ್ಟದಿಂದ ಪಡೆದ ಆಹಾರ; ಭಂಗದ ಕೂಳು : ಪನ್ನೆರಡುಬರಿಸಮಲಸದೆ ಬನ್ನದ ಕೂಟುಂಡು ಬರ್ದಟಲ್ಪಿಂಗಲೊಡಂ ತನ್ನಿಂ ಕಾಳಿಕೆ ಪಿಂಗಿದ ಪೊನ್ನಿನ ತೆಱನಂತೆ ಕಾಂತೆ ಕರಮೆಸೆದಿರ್ದಳ್ (ಗದಾಯು. ೬-೬೦); ನೀಂ ನಿನ್ನ ನನ್ನಿಯನೆ ಕಾದು ನಿನ್ನನುಜರ್ ಬನ್ನದ ಕೂಟನುಂಡರ್ (ಪಂಪತಂ. ೨೦೬-೦೩). [<ಸಂ. ಭಗ್ನ./ಇ 'ಬನ್ನ' ಶಬ್ದಕ್ಕೆ ಇರುವ ಅರ್ಥಗಳು ಸಂಸ್ಕೃತದ 'ಭಂಗ' ಶಬ್ದಕ್ಕೂ ಇದ್ದು ಈ ಶಬ್ದದ ಉಪಯೋಗದಲ್ಲಿ ಸಂಸ್ಕೃತದ 'ಭಂಗ', 'ಭಗ್ನ' ಎಂದೆರಡೂ ಶಬ್ದಗಳ ಪ್ರಭಾವವು ಇರಬಹುದೆಂದು ಕಾಣುತ್ತದೆ]

ಬನ್ನಂಗ (ನಾ). ಕಷ್ಟ; ಬವಣೆ ; ಸಂಕಟ : ಮುಂಗಾಗುಮಳೆ ಆರಂಭವಾಯಿತು . . . ಕಾರಿಗೆ ಮುಂಚೆ ಹೊರಟ ಪಡೆ ದಾರಿಯಲ್ಲಿ ನೀರಿಗಾಗಿ ಬನ್ನಂಗ ಪಡಬಾರದು ಎಂದು ಅವನ ಇಷ್ಟ (ಸಪಶಿ. ೦೪೫). [< ಬನ್ನ./ಇ 'ಬನ್ನ' ಮತ್ತು 'ಬಂಗ' ಎಂಬ ಎರಡು ಪದಗಳ ನಡುವಣ ಉಚ್ಚಾರಣಾಸಂಬಂಧದಿಂದ ಈ ಶಬ್ದದ ಉಪಯೋಗವಾಗಿರಬಹುದು]

ಬನ್ನಂಗಾಯಿ (ನಾ). (ಕರಾ) ಅರ್ಧ ಬಲಿತ ತೆಂಗಿನಕಾಯಿ : ಒಂದು ಅರ್ಧ ಮುಡಿ ಅವಲಕ್ಕಿ, ಇಪ್ಪತ್ತು ಬನ್ನಂಗಾಯಿ, ನೂರು ಬಾಳೇಹಣ್ಣು ಇವಿಷ್ಟು ತಯಾರಾಗಲಿ ! (ಪೂಪುಗು. ೦೦).

[←ತುಳು. ಬನ್ನಂಗಾಯಿ, ಬಣಂಗಾಯಿ, ಬಣ್ಣಂಗಾಯಿ]

ಬನ್ನಂಬಡಿಸು, ಬನ್ನಪಡಿಸು, ಬನ್ನಬಡಿಸು, ಬನ್ನವಡಿಸು (ಕ್ರಿ). ೧. ಅವಮಾನಗೊಳಿಸು; ತೇಜೋವಧೆ ಮಾಡು ; ಭಂಗಪಡಿಸು : ಅಂತು ಮುನ್ನಂ ತನ್ನಂ ಬನ್ನಂಬಡಿಸಿದುನ್ನತತೇಜನಂ ವಿಶ್ವನಂದಿಯುವ ರಾಜನಂ . . . ಮೂದಲಿಸಿದಂ (ಪರ್ಯಪು. ೩-೦೯ ಪ) : ನಿನ್ನ ಪದಭೃತ್ಯ ಶಿಸಿರ್ದೆನ್ನಂ ಗೆಲ್ದಂ ಕಿರಾತನೀತನನೀಗಳ್ ಬನ್ನಂಬಡಿ[ಪಾಕಾಂ. ಬಿಡಿ]ಸುತೆ ಸೋಲಿಪ ಪನ್ನತಿಕೆಯನಿತ್ತು ಪೊರೆ ಕೃಪಾಳುಗಳರಸಾ (ಸಂಸಂ. ೯-೦೦೯). ೨. ಹಿಂಸೆಪಡಿಸು ; ಬಾಧೆಗೊಳಗುಮಾಡು ; ಸಂಕಟವನ್ನುಂಟು ಮಾಡು : ಪಿಶಾಚಂ ತೊಡರ್ದುದು ಭೂತಂ ಬನ್ನಂಬಡಿಸಿದುದೆನೆ ಸಿರಿಯೊಳರಸುಗಳ್ ಮೆಯ್ಯಱಿಯರ್ (ಕಾದಂಪು. ೩೬೩). **ಬನ್ನಪಡಿಸು** : ೨. ದೇವರು ಅನೇಕಾನೇಕವಿಧದಲ್ಲಿ ಭಕ್ತರನ್ನು ಬನ್ನಪಡಿಸಿ ದೃಢತೆಯನ್ನು ಪರೀಕ್ಷಿಸಿ ಒಲಿಯುವಂತೆ ನನಗೀಗ ನೀವೊಲಿದಿರಿ (ಕುಕುಕಾ. ೦೦೩). **ಬನ್ನಬಡಿಸು**: ೧. ಮಗನೆ ಹೋಗದಿರು ಮಱೆದು ವಿಶ್ವಾಮಿತ್ರನಾಶ್ರಮಕ್ಕೆ . . . ಮುನಿ ಬನ್ನಬಡಿಸಿಯೆ ಕಾಡಿದವನಱಿದಿರು (ಹಕಗಾ. ೩-೬೩) ; ಅಂಜನಾಸುತನು ಮುದದಿ ಪನ್ನಗಾರಿಧ್ವಜನ ಪವನಶಿಖಿರುತಿಗಳ ಬನ್ನಬಡಿಸಿದ ಬಿರುದನುಪ್ಪಡಿಸಿ ಬಾಲರಂ ಚಿನ್ನಾಗಿ ಶಿಕ್ಷಿಸುವ ಮಾಗಧರ ಕೇರಿಯಂ ಕಂಡು ವಿಸ್ಮಿತನಾದನು (ಪಂಕಾರಾ. ೩-೩-೨೩) ; ನನ್ನ ಜನ ನಿಮ್ಮ ಬನ್ನಬಡಿಸಿದೊಡೆ, ಆಗ ಇಂತೆ ಮೊರೆದು ಹೇಳುವೆನು (ಕಂಪು. ೨೪-೦). ೨. ನಿರಪರಾಧಿಯನು ಬನ್ನಬಡಿಸುವುದುಚಿತವೇ (ಬಸಪು. ೩೬-೩೦) ; ಮಾಯೆ ಬನ್ನಬಡಿಸಿದಳಿಂತು ಜಗವನು (ಪಿಭಾಗ. ೨-೦-೦೦) ; ಕಣ್ಣು ಕಾಣದೆ ಅರಣ್ಯದಲಿ ಬಿದ್ದಂತಿಹೆ ಬನ್ನಬಡಿಸುವುದು ನಿನ್ನ ಧರ್ಮವಲ್ಲ (ಪಿದಾಕ್ಕ. ೩-೬). **ಬನ್ನವಡಿಸು** : ೨. ಎನ್ನ ರಾಘವ ಸತ್ಯನಾದೊಡೆ ಬನ್ನವಡಿಸಿದ ನಾಯ ಹರಣವ ತಿನ್ನು ತಿನ್ನೆನುತಾರಿ ಬಾಣವ ಬಿಟ್ಟ ಸೌಮಿತ್ರಿ (ಕೌತಿರಾ. ೩೬-೭೩).

[ಬನ್ನಂಬಡು + — ಇಸು$_3$]

ಬನ್ನಂಬಡು, ಬನ್ನಪಡು, ಬನ್ನಬಡು, ಬನ್ನವಡು (ಕ್ರಿ). ೧. ಅಗೌರವಕ್ಕೆ ಈಡಾಗು ; ಅವಮಾನಕ್ಕೊಳಗಾಗು ; ಭಂಗಹೊಂದು : ನಿನ್ನ ಗುರು ವರ್ಧಮಾನಂ ಬನ್ನಂಬಡುವಂತೆ ಮಾಡುವೆಂ ನಡೆ ಪೋಪಂ (ಪರ್ಯಪು. ೦೬-೦೯). ೨. ಕಷ್ಟಕ್ಕೆ ಗುರಿಯಾಗು ; ತೊಂದರೆಗೆ ಈಡಾಗು ; ಬಾಧೆಗೊಳಗಾಗು : ಮುನ್ನಿನ ಭವದೊಳ್ ಗೊರವನಾಗಿ ಕಾಂಚೀಪುರದೊಳ್ ತಿಱಿದು ಪಲವುಕಾಲಂ ಬನ್ನಂಬಟ್ಟು ಪೊನ್ನಂ ಪಡೆದು (ಪಂಕಸಂ. ೩೦೦-೨೦) ; ಎನ್ನೊಡೆಯನ ಬಲ್ಪಂ ನೀವಿನ್ನುಂ ಕಂಡಱಿದುದಿಲ್ಲ ಬಿದಿಯೆಂಬಣ್ಣಂ ಬನ್ನಂಬಟ್ಟುದನಱಿಯನೆ (ಕಬ್ಬಿಕಾ. ೦೬೬). ೩. ಸೋಲು ; ಪರಾಭವ ಹೊಂದು; ಹಿಮ್ಮೆಟ್ಟು: ಬನ್ನಂಬಟ್ಟೆನ್ನ ಮುನ್ನಿನ ಬನ್ನಮುಂ ಪಿರಿದದೆ ನೆವಂಗೊಂಡಾನಿಂದಿಲ್ಲಿ ನೀಗದೆ ಮಾಣ್ಬೆನೇ (ಪಂಪಕಾ. ೦೨-೦೯); ತನ್ನೊಳ್ ತಾನೆ ಪೆರ್ಚಿ ಮಹಿಶೂರಾಣ್ಮಂ ಪೊಣರ್ವನ್ನೆಗಂ ಬನ್ನಂಬಟ್ಟೆವು ಬಣ್ಣಗೆಟ್ಟೆವು (ಸಕಪಿ. ೨-೩೬). ೪. ದುಃಖಪಡು ; ಖೇದಗೊಳ್ಳು ; ಸಂಕಟಪಡು : ಕ್ಲೇಶನ್, ಕ್ಲೇಶಕಃ, ಈ ೨ ಬನ್ನಂಬಡುವಂ (ಕಾಶಕ್ಕ. ೨೯೯). **ಬನ್ನಪಡು** : ೨. ಆಸ್ತಿ ಉಳಿಯುವಂತಾದರೆ ನಿನ್ನ ಮಗಳೂ ಮೊಮ್ಮಕ್ಕಳೂ ಹೊಟ್ಟೆಗಿಲ್ಲದೆ ಮುಂದೆ ಬನ್ನಪಡುವುದನ್ನು ತಡೆದಂತಾಗುವುದು (ಶ್ಯಾಗಸು. ೬೯). **ಬನ್ನಬಡು** : ೨. ಎನ್ನದಾನೆಂಬೆರಡಱಿಂದವೆ ಬನ್ನಬಡುವನು ಜೀವನು (ಕುಪ್ಯಾಸ್ತ್ರೋ. ೭-೨೬) ; ಮುನ್ನ ಭೂಸುರ ಶಾಪದಿಂದೆ ಪಲರಳಿದುಳಿದು ಬನ್ನಬಟ್ಟವರುಂಟು (ಸ್ಕಪುಭಾ. ೩-೪೦) ; ಅಧಿಕಾರಿಗಳ ಒಟ್ಟಳೆ ಕಾನೂನುಗಳಿಂದ ಪ್ರಜೆಗಳು ಬನ್ನಬಡುತಿದ್ದರು (ಪಾಷುತ್ತ. ೯೯). ೪. ಚಿನ್ನ ಕರುವಿಗೆ ಬನ್ನ ಬಡುವೆನು, ಕಣ್ಣ ನೀರನು ಮಿಡಿವೆನು (ಕಪು. ೦೮-೬). ೫. ನಾಶವಾಗು ; ಅಳಿದು ಹೋಗು : ತನ್ನ ಸಹಾಯದಿಂದಸುರಾಧೀಶ್ವರನೆನ್ನ ಮೊಮ್ಮನನು ಬಂಧಿಸಿದ ಮುನ್ನ ಹಿರಣ್ಯಕ ಮೊದಲಾದ ದೈತ್ಯರು ಬನ್ನಬಟ್ಟುದ ಬಲ್ಲರೆಲ್ಲ (ಪೋಷತ. ೩೬-೦೩).

ಬನ್ನವಡು : ೨. ನಿನ್ನ ಕೊಂದವ ನಾನು ಮಾತಿನ ಭಿನ್ನಭಾವ ವನಱಿಯದಕಟಾ ಬನ್ನವಟ್ಟೈ ತಂದೆ (ಕೌತಿರಾ. ೩೬-೩೦) ; ಕನಕಲತೆಯೆಂಬವಳ್ . . . ವಿರಹದಿಂದೆನಸುಂ ಬನ್ನವಡುವ ಭೂಮೀಶ್ವರ ತನುಜೆಯ ನೋವಂ ಪಿಂಗಿಸಿ (ಸಂಕಾಗಾ. ೯-೯೩). ೫. ಬನ್ನವಟ್ಟಿಹ ಕಪಿಕುಲಂಗಳ ಮುನ್ನ ಸತ್ರಾಣಿಸುವೆ . . . ಎನುತ ಸಂತೈಸಿದನು ನೊಂದವರ (ಕೌತಿರಾ. ೨೩-೨೬). [ಬನ್ನ + ಪಡು$_1$]

ಬನ್ನಂಬಡೆ (ಕ್ರಿ). ೧. ಅವಮಾನ ಹೊಂದು ; ಭಂಗಕ್ಕೊಳಗಾಗು : ಈಶ್ವರಂ . . . ಆನಿಟ್ಟ ಪುಲ್ಲನೆತ್ತಿದನೆ ದನುಜರ ಗೆಲ್ದವಂ ಎನುತೊಂದು ಪುಲ್ಲನಿಡೆ . . . ಉಳಿದ ಸುರರುಂ ಆ ಪ್ರಕಾರದಿನಾತ್ಮಶಕ್ತಿಗಳಿನೆತ್ತಿ ಮೇಣ್ ಕ್ಷಿಪ್ರದಿಂ ಬನ್ನಂಬಡೆದರ್ (ಪದ್ಮಗಾ. ೦೦-೨೩೦) ; ಎನ್ನಂ ಸೆಱೆಯಂ ಬಿಡಿಸಿದೆ ಬನ್ನಂಬಡೆದುಳಿದೆನೆಂದು . . . ಶ್ರುತಿಕನ್ನಿಕೆ ಮಾಧವನ ಹರ್ಷದಿಂ ನುತಿಯಿಸಿದಳ್ (ದಶಾವ. ೨-೨೯). ೨. ಸೋಲು ; ಪರಾಭವಗೊಳ್ಳು : ಪೆಱನಾಡೆಱೆಯಂ ನಿನ್ನ ಕೈಯೊಳ್ ಬನ್ನಂಬಡೆದು ಕಿನ್ನನಾಗೆ (ಕಬ್ಬಿಕಾ. ೬೯).

[ಬನ್ನ + ಪಡೆ$_1$]

ಬನ್ನಂಬೆಱು (ಕ್ರಿ). ೧. = ಬನ್ನಂಬಡೆ ೧: ಹೆರಿಯಿಂದಂ ಮಂದರಂ ಮಂದರಮಥನದಿನಂಭೋಧಿಯಂಭೋಧಿಯಿಂದಂ ಧರೆ ಬನ್ನಂಬೆತ್ತುವು (ಎಕ. VII, ತಿಕಾಂ. ೦೦೯-೨೨; 1069); ಮುನ್ನುಱೆ ಬನ್ನಂಬೆತ್ತನಂ ಪುಷ್ಕಲಪುರದ ಹಯಗ್ರೀವನಂ ಕರ್ಮದಿಂದಂ ಮಱೆದಾಂ ಮೆಯ್ವಿಟ್ಟು ನಿದ್ರಾಸುಖದಿನಟಲೆ ಬಂದು . . . ಎನ್ನೋಪಳಂ ಕೊಂಡು ಪೋದಂ (ಪುಸ್ವಪು. ೬-೩). ೨. ದುಃಖವನ್ನು ಹೊಂದು ; ಕಳವಳಪಡು : ಬನ್ನಂಬೆತ್ತೆನ್ನಯ ಬಿನ್ನಪಮಂ ಮನ್ನಿಸು (ಉದ್ಯರೇ. ೩-೨೯). [ಬನ್ನ + ಪೆಱು$_1$]

ಬನ್ನಂಬೊಂದು (ಕ್ರಿ). = ಬನ್ನಂಬಡೆ ೧: ನಿಲ್ಲೆಲೆಗೇ ಎನುತ್ತೆ ಗುರು ಶಿಷ್ಯಂ ಕೋಪದಿಂ ಗರ್ಜಿಸಲ್ ಬನ್ನಂಬೊಂದುತೆ (ಶಾಕುಂತ. ೬೩-೦೯೦).

[ಬನ್ನ + ಪೊಂದು$_1$ (< ಪೊರ್ದು)]

ಬನ್ನಗೆಡು (ಕ್ರಿ). ಕಷ್ಟಪಡು; ತೊಂದರೆಗೀಡಾಗು : ತನ್ನ ಗಾತ್ರದೊಳು ಮೇಣನ್ಯರಂಗದೊಳಕಟ ಬನ್ನಗೆಟ್ಟಾ ಚಕ್ರದಿಂದೆ ಸುಡಲು ನನ್ನಿ ನರಕಕ್ಕಿಳಿವನೆನ್ನನಾದೊಡಮೆಂದ ಧನ್ಯವಪ್ಪಾ ಸೂತಸಂಹಿತೆಯವಂ (ಸಾನಂತ. ೨-೦೩೨).

[ಬನ್ನ + ಕೆಡು$_1$]

ಬನ್ನಣೆ 'ಬಣ್ಣನೆ' ನೋ.

ಬನ್ನಣೆಗಾರ್ತಿ 'ಬಣ್ಣನೆಗಾರ್ತಿ' ನೋ.

ಬನ್ನಣೆಗಾಱ 'ಬಣ್ಣನೆಗಾರ' ನೋ.

ಬನ್ನಣೆಗೆಯ್, ಬನ್ನಣೆಗೈ (ಕ್ರಿ). ೧. ವರ್ಣಿಸು: ವಿವರಿಸು : ಬನ್ನಣೆಗೆಯ್ದು ಬಱಿದೆ ಬಣ್ಣೆಗೆವಡಿಸದಿರು (ಗೀತಗೋ. ೨೩-೨). **ಬನ್ನಣೆಗೈ** : ೨. ಅಲಂಕರಿಸು : ಶೃಂಗಾರಮಾಡು : ಪನ್ನೀರೆರೆದಂಗಿಯನಿಕ್ಕಿ ಕಸ್ತೂರಿಯಿಟ್ಟು ರನ್ನದ ತೊಡವನು ತೊಡಿಸಿ ಬನ್ನಣೆಗೈದಳು ಪರನಂದಿನಿಯು (ಕಪಾಗಾ. ೨೨೦). [ಬನ್ನಣೆ (< ಬಣ್ಣನೆ) + ಕೆಯ್$_1$]

ಬನ್ನಣೆಗೈ 'ಬನ್ನಣೆಗೆಯ್' ನೋ.

ಬನ್ನಣೆನುಡಿ 'ಬಣ್ಣನೆನುಡಿ' ನೋ.

ಬನ್ನಣೆವಾತು 'ಬಣ್ಣನೆವಾತು' ನೋ.

ಬನ್ನಪಡಿಸು 'ಬನ್ನಂಬಡಿಸು' ನೋ.

ಬನ್ನಪಡು 'ಬನ್ನಂಬಡು' ನೋ.

ಬನ್ನಬಡಿಸು 'ಬನ್ನಂಬಡಿಸು' ನೋ.

ಬನ್ನಬಡು 'ಬನ್ನಂಬಡು' ನೋ.

ಬನ್ನವಂತ (ನಾ). (ರೋಗದ) ಬಾಧೆಯನ್ನು ಹೊಂದಿರುವವನು ; ರೋಗಿ ; ವ್ಯಾಧಿಗ್ರಸ್ತ : "ರೋಜನ್, ರೋಜಕಃ, ರುಷ್ಟಃ, ರುಷ್ಟವಾನ್, ರೋಗೀ, ಈ ೫ ಬನ್ನವಂತಂ" (ಕಾಶಕ್ಕ. ೨೨೨). [ಬನ್ನ + — ವಂತ]

ಬನ್ನವಡಿಸು 'ಬನ್ನಂಬಡಿಸು' ನೋ.

ಬನ್ನವಡು 'ಬನ್ನೆಂಬಡು' ನೋ.

ಬನ್ನಿ₁ (ನಾ). ಸಣ್ಣ ಸಣ್ಣ ಎಲೆಗಳು ಹಾಗೂ ಮುಳ್ಳುಗಳಿಂದ ಕೂಡಿದ ಒಂದು ಬಗೆಯ ಮರ; ಶಮೀವೃಕ್ಷ ; P ಹಿಂದೂಗಳು ಈ ಮರವನ್ನು ಪೂಜ್ಯವೆಂದು ಭಾವಿಸಿದ್ದಾರೆ. ನವರಾತ್ರಿಯಲ್ಲಿ ವಿಜಯದಶಮಿಯಂದು ಬನ್ನಿಯ ಮರವನ್ನು ಪೂಜಿಸಿ, ಅದರ ಎಲೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಶುಭಾಶಯಗಳನ್ನು ನುಡಿಯುತ್ತಾರೆ : "ಶಮಿಯೆನೆ ಬನ್ನಿಯಕ್ಕು" (ಮಂಗರಾ. ೩೫-೦೩) : ಮುಳ್ಳಿಲ್ಲದ ಬನ್ನಿಯ ಮರನುಳ್ಳೆಡೆಯೊಳಂ . . . ಒಂದು ಪುರುಷದೊಳ್ ನೀರಕ್ಕುಂ (ಶೋಕೋಪ. ೩-೦೦); ಅನಿಬರು . . . ಅಖಿಳಕ್ಕೈದುವನೊಂದು ಹೆಣನಾಕಾರದಲಿ ಬಿಗಿದೊಂದು ಬನ್ನಿಯ ಮರನ ತುದಿಯಲಿ ಕಟ್ಟಲೇಱಿದರು (ಕುಪ್ಪಾಪ. ೦-೦೨); ಆಲ ಮುಳ್ಳುತ್ತುಗ ಕೊಡಸಿಗೆ ಬನ್ನಿಗಳ್ಳೇಲಕಡರಿ ಮುಸುಕಿಹುವು (ಕಂಪಪ. ೦೬-೩೬).

ಬನ್ನಿಮಂಟಪ = ಶಮೀವೃಕ್ಷದ ಸುತ್ತಲೂ ಕಟ್ಟೆಹಾಕಿ, ಕಟ್ಟಿರುವ ಮಂಟಪ : ಹಿಂದೆ ವಿಜಯದಶಮಿಯಂದು ಮೈಸೂರು ಮಹಾರಾಜರು ಮೆರವಣಿಗೆಯಲ್ಲಿ ಬನ್ನಿಮಂಟಪಕ್ಕೆ ಹೋಗಿ ಪೂಜೆ ಸಲ್ಲಿಸುತ್ತಿದ್ದರು (ರೂಢಿ). **ಬನ್ನಿಮಹಾಕಾಳಿ** = ಬನ್ನಿಯ ಮರದ ಬಳಿಯ ದುರ್ಗೆ : ವಂಶಾವಳಿಯ ಕರಣಿಕನು ಬನ್ನಿಮಹಾಕಾಳಿಯ ಆಶೀರ್ವಾದದ ಪಟ್ಟೆಯನ್ನೋದಿ ಒಪ್ಪಿಸಲು . . . ವಸ್ತ್ರಾಭರಣಗಳಂ ಕೊಡಿಸಿ (ಮಹಾಪಂ. I, ೩೯). **ಬನ್ನಿಯ ಕಟ್ಟೆ** = ಬನ್ನಿಮಂಟಪ : ಬನ್ನಿಯ ಕಟ್ಟೆಯ ಸಾರ್ದನಾ ರಾಯ (ಕರಸ. ೨೨-೬); **ಬನ್ನಿಯ ಬೆನಕ** = ಬನ್ನಿಯ ಕಟ್ಟೆಯ ಮೇಲೆ ಪ್ರತಿಷ್ಠೆ ಮಾಡಿರುವ ಗಣಪನ ವಿಗ್ರಹ : ಗುಂಡದೇವಪೆದ್ದಿ ಬನ್ನಿಯ ಬೆನಕನಲ್ಲಿ ಶ್ರೀಧರದೇವರ ಕೆಯ್ಯಂ ಬಡಗ ನಾಕಱ ಹಸುಗೆಯಲು ಕೊಟ್ಟ ಮತ್ತರು ನಾಲ್ಕು (ಶಾಇಇ. IX — i, ೩೩೩-೪೯; 1215); ಇನ್ತೀ ಚತುಸ್ಸೀಮೆಯಲು ನಾಡು ನಟ್ಟು ಕೊಟ್ಟ ಕಲ್ಲುಗಳಿಂದೊಳಗಣ ಕ್ಷೇತ್ರವನೂ ಹೊನ್ನ ಹುಣಿಸೆಯಿಂದವೂ ಬಡಗಲು ಬನ್ನಿಯ ಬೆನಕನಿಂದಲೂ (ಎಕ. IX, ಚಿತ್ರದು. ೦೨-೨೦ ; 1286). **ಬನ್ನಿಯ ಮರದ ಮಂಟಪ** = ಬನ್ನಿಮಂಟಪ : ಇನ್ನು ಕೆಲವು ಆಯುಧಗಳನ್ನೂ ಸಂಗಡ ಇರಿಸಿ ಉತ್ತರದಿಕ್ಕಿನ ಬನ್ನಿಯ ಮರದ ಮಂಟಪಕ್ಕೆ ಪಟ್ಟದಾನೆ ಕುದುರೆಗಳ ಸಹಿತವಾಗಿ . . . ಕಳುಹಿಸಿ ಕೊಟ್ಟರು (ಮಹಾಪಂ. I, ೩೯). [ದೇ॥. ತಮಿ. ಮಲ. ವನ್ನಿ]

ಬನ್ನಿ₂ 'ಬನ್ನಿ₂' ನೋ.

ಬನ್ನು (ನಾ). ಮೃದುವಾದ ಒಂದು ಬಗೆಯ ರೊಟ್ಟಿ : ಆ ಮೂಲೆಯಂಗಡಿಯಲ್ಲಿ ಬ್ರೆಡ್ಡು, ಬನ್ನು ಸಿಕ್ಕುತ್ತವೆ (ರೂಢಿ). [←ಇಂ. Bun]

ಬನ್ನೂರ್, ಬನೂರ್ (ನಾ). ಒಂದು ಸ್ಥಳದ ಹೆಸರು : ಬನ್ನೂರ್ಚಾವರಿಯ ಮಗ ಪಾಲ ಬಲ್ಲದ ತುಱುಗೊಳೊ ಕಾದಿ ತುಱುವನಿಕ್ಕಿಸಿ ಸ್ವರ್ಗ್ಗಿಯಾದ (ಎಕ. X, ಮುಳಬಾ. ೯೪-೪ ; ಸು. 970). **ಬನೂರ್** : ತೈಲಪದೇವಂ ರಾಜ್ಯಂಗೆಯೆ ಬನವಾಸಿ ಅರಸುಗೆಯೆ ಬನೂರಯ್ಯ ಮಾಡಿಸಿದ ಕಂಭ (ಎಕ. VIII, ಸೊರಬ. ೩೨೯-೬ ; 985). [ಬನ್ನಿ₁ + ಊರ್]

ಬನ್ಸಿ 'ಬನಸಿ' ನೋ.

ಬನ್ಸಿಗೋಧಿ 'ಬನಸಿಗೋದಿ' ನೋ.

ಬನ್ಸಿರವೆ (ನಾ). ಬನಸಿಗೋದಿಯಿಂದ ಮಾಡಿದ ರವೆ : ಬನ್ಸಿರವೆಯಿಂದ ಉಪ್ಪಿಟ್ಟು, ಸಜ್ಜಿಗೆ ಮಾಡಿದರೆ ಉದುರುದುರಾಗಿಯೂ ಮೃದುವಾಗಿಯೂ ಇರುತ್ತದೆ (ರೂಢಿ). [ಬನ್ಸಿ(<ಬನಸಿ) + ರವೆ]

ಬಪ್ಪ₁ 'ವರ್' ಪರಾ.

ಬಪ್ಪ₂, ಬೊಪ್ಪ (ನಾ). ೧. ತಂದೆ : ನ್ಯಾಯಂ ಮಂತ್ರಿಗಳುಕ್ತಿ ಬಪ್ಪನ ಮತಂ ಕಾಲೋಚಿತಂ ನಿಮ್ಮಭಿಪ್ರಾಯಂ ನೆಟ್ಟನಲಂಘ್ಯಂ (ಅನಂಪು. ೦೩-೬೨) : ಎಲೆ ಮಗನೆ ಬಪ್ಪನನ್ನೊಡಗೊಂಡು ಬಪ್ಪೆ ನಾಂ ಪರಿಣಯಕೆ (ಪರಮ. ೬-೦೬). **ಬೊಪ್ಪ** : ೧. ಅಂತು ತನೂಭವಂ ಜನಿಸಿಯಾಕ್ಷಣದೊಳ್ಪರಿದೆಯ್ದೆ ಬೊಪ್ಪ ನಾನೆಂತು ಬರ್ದುಂಕುವೆಂ ಬೆಸಸಿಮೆಂದೊಡೆ (ರರ್ಮಪ. ೬-೨೯) ; ಆ ಶಿಶುತ್ವದಲೆಮ್ಮ ಬೊಪ್ಪನು ವಾಸವನ ಪುರಕೈದಿದನು (ಕುಪ್ಪಾಪ್ರೂ. ೯-೪೯) ; ಬೊಪ್ಪ ಕಳುಪಿದ ವಸ್ತುಗಳನೆಲ್ಲವ ರಾಮನೊಪ್ಪಿಸಿಕೊಂಡು ದುರ್ಗವನು ವೊಪ್ಪವಿಟ್ಟನು ಸವುರಣೆಯಿಂದ (ಕುರಾಸಾಂ. ೪೨-೩೪). ೨. ತಾತ ; ಪಿತಾಮಹ : "ಬೊಪ್ಪಂ ತಾತನೊಳಂ" (ಕರ್ಣಾಪ.೩) ; ಅಪ್ಪನು ನಮ್ಮ ಮಾದರ ಚೆನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ (ಬಸಪ. ೩೪೬). ೩. ಮಕ್ಕಳನ್ನು ಪ್ರೀತಿಯಿಂದ ಸಂಬೋಧಿಸುವಾಗ ಹೇಳುವ ಮಾತು : ಕವಡಿಕೆ ಭಾಳದಂಡದೊಳೊಡಂಬಡೆ ದಾದಿಯರಿಕ್ಕೆಲಂಗಳೊಳ್ ಸವಡಿಸಿ ಸಾರ್ಚಿ ದಟ್ಟಡಿಯೊಳೆಟ್ಟಿರುತಿರ್ದನನಾರ ಬೊಪ್ಪನೀ ಕವಡೆಯ ಬೊಪ್ಪನೆಂದು ನಡೆ ನೋಡಿದರ್ (ಸೂಕ್ತಿಸು. ೬-೬೬); ಬಾರೆನ್ನ ಬೊಪ್ಪಯೆಂದಡಿಗಡಿಗೆ ಮುದ್ದಿಸುತ್ತ ಕೇರಳನ ಹರುಷದಿಂ ಲಾಲಿಸುತ್ತ (ಶೇರಮ. ೦೦-೬೮) ; ಬಾರಣ್ಣ ಬಾರೋ ಕಾರುಣ್ಯಮೂರ್ತಿ ಬೊಪ್ಪ ಬಾರೊ (ಶಲುಪು. ೨೫). ೪. ಒಬ್ಬಾತನ ಹೆಸರು : ಕಲಿಗಂಗನಗ್ರತನಯಂ ಶ್ರೀಬೊಪ್ಪದಂಡಾಧಿಪಂ (ಎಕ. II, ೩೮೪-೩೩ ; 1135). ೫. (ಆಲಂ) ಪ್ರಪಂಚಕ್ಕೇ ತಂದೆಯಾದವನು ; ಪರಮಾತ್ಮ ; ಕೃಷ್ಣ : ಈ ಬೊಪ್ಪಂ ದೇವಕಿಗಾದಾ ಬೊಪ್ಪಂ ತಪ್ಪದಪ್ಪನಱಿದೆಂ (ಶಾಪಮಂ. ೦೮೫-೯೩೭ ; 1181).

ಬಪ್ಪನಂಕಕಾಱ = ಒಂದು ಬಿರುದು : ರಿಪುರಾಯಕುವರಬಂಗಾರಂ ಬಪ್ಪನಂಕಕಾಱಂ [ಕುಮರ]ಂಕಭೀಮಂ (ಶಾಇಇ. XX, ೭೦-೯ ; 1109). **ಬಪ್ಪನ ಗಂಧವಾರಣ, ಬೊಪ್ಪನ ಗಂಧವಾರಣ** = ಒಂದು ಬಿರುದು : ಈ ನರಸಿಂಹಭೂಭುಜಂ ಪರಿಚಿತಭದ್ರಲಕ್ಷಣದಿನೊಪ್ಪುವ ಬಪ್ಪನ ಗಂಧವಾರಣಂ (ಎಕ. V, ಶೇರೂರು. ೦೯೩-; 1161 ; ಶಾಪಮಂ. ೬೩೬ ನೋ); ಗಡಿಯಂಕಮಲ್ಲ ಬೊಪ್ಪನ ಗಂಧವಾರಣ ಕಲಿದೇವ ಗೋಪಾಳದೇವರ ದಿಬ್ಯಶ್ರೀಪಾದಪದ್ಮಾರಾಧಕರುಂ (ಎಕ. VIII, ತೀರ್ಥಹ. ೨೫-೪ ; 1250).

[<ಪ್ರಾ. ಬಪ್ಪ./ಸಂ. ವಪ್ತೃ. ಹಿಂ./ಬಪ್ಪಾ, ಬಾಪ್ ; ಮರಾ. ಬಾಪ್]

ಬಪ್ಪ₃ (ನಾ). ೧. ಬೆಟ್ಟದ ಮಗ್ಗುಲು ; ಸಾನು ; ತಪ್ಪಲು. ೨. ದಡ ; ತೀರ ; ತಟ : "ಬಪ್ಪ—ವಪ್ರ = ತಪ್ಪಲು, ದಡ" (ಕರ್ಕಳೋ.೨೯); ವಪ್ರ, ಬಪ್ಪ (ಶಪ್ಪಾಸು. ೧೩೪ ಪ್ರಯೋ) ; ಪತ್ರಿಕೆ — ಹತ್ತಿಗೆ, ವಪ್ರ — ಬಪ್ಪ (ಹೊಪಸಗ. ೦೦೬). ೩. "ಅಗುಸೇ ಬಾಗಿಲು" (ಪ್ರಶ್ನಾ).

[<ಪ್ರಾ. ವಪ್ಪ./ಸಂ. ವಪ್ರ]

ಬಪ್ಪಣ (ನಾ). ಮಕ್ಕಳನ್ನು ತೊಟ್ಟಿಲಲ್ಲಿ ಮಲಗಿಸಿ ಆಡಿಸುವ ಒಂದು ರೀತಿ, — ಬಗೆ : ರೂಢಿಯ ಕೈಯಾಗ ಆರೂಢ ಸಿಕ್ಕಿಹನು ಜೋಡಾಗಿ ಬಪ್ಪಣ ಆಡಿಸುತ ಕಂದನ ಸಡಗರದಿ ತೂಗಿರೆ (ಸಿದ್ಧಪು. ೩-೩೩). [?]

ಬಪ್ಪವ್ವ (ನಾ). ಒಬ್ಬಾಕೆಯ ಹೆಸರು : ಬಪ್ಪವ್ವಂ ಬನವಾಶಿ ಪನ್ನಿರ್ಚ್ಚಾಸಿರದ ಪಟ್ಟಮನಾಳೆ (ಮೈಅರಿ. ೦೯೨೯, ೭೯-೪ ; 964).

[ಬಪ್ಪ₂ + ಅವ್ವ₁ (< ಅವ್ವೆ)]

ಬಪ್ಪಸೆಟ್ಟಿ (ನಾ). ಒಬ್ಬಾತನ ಹೆಸರು : ಬಪ್ಪಸೆಟ್ಟಿಯ ಮಗಂ × × ಮಂ ಅಮ್ಮಣಸೆಟ್ಟಿ (ಎಕ. III (R), ಗುಂಡ್ಲುಪೇ. ೩೭-೦ ; ೨೫ಯ ಶತ).

[ಬಪ್ಪ₂ + ಸೆಟ್ಟಿ]

ಬಬಿಯಮ್ಮ (ನಾ). ಒಬ್ಬಾತನ ಹೆಸರು : ನೀತಿಮಾರ್ಗ್ಗ ಪೆರ್ಮ್ಮನಡಿಗಳ್ ಸ್ವರ್ಗ್ಗಮೇಱಿದನ್ದು ಮಱವೂರ ಬಬಿಯಮ್ಮಂ ಕಿಚ್ಚುವೊಕ್ಕಂ (ಎಕ. V, ಅರಕ. ೨೬-೧೨ ; ಸು. 915). [? + ಅಮ್ಮ₁]

ಬಬ್ಬರ, ಬೊಬ್ಬರ (ನಾ). ಸುಸಂಸ್ಕೃತನಲ್ಲದವನು ; ಅನಾಗರಿಕ : "ಬಬ್ಬರಂ ಬರ್ಬರಾರ್ಥಂ" (ಕರ್ಣಾಪ. ೫೨). ೨. ಒಂದು ದೇಶದ

ಹೆಸರು; ಬರ್ಬರ : "ಬಬ್ಬರ—ಬರ್ಬರ—ಪಾಮರ, ದೇಶಭೇದ" (ಶಿದ್ಧಕೋ. ೨೯). **ಬೊಬ್ಬರ :** ೨. ಮಲಯ ಬೊಬ್ಬರ ಮತ್ಸೆ ಮಗಧ ಬಂಗಾಳವು (ರೇಶಾಂಪು. ೩-೪೦). [< ಸಂ. ಬರ್ಬರ]

ಬಬ್ಬರಿ (ನಾ). ಒಂದು ಬಗೆಯ ಮದ್ಯ, — ಹೆಂಡ : ಸಿರಿಸಿಂಬಿ ತಂಪುಗಂ ಬಬ್ಬರಿ ಗಂಗಾಸಾಗರಂ ಸುರಾಳಂ ಸೋಮಂ . . . ಎಂಬ ಕೆಲವು ಪೆಸರಿನ ಕಳ್ಳಂ ತುಂಬಿರ್ದನೇಕಘಟನಿಕುರುಂಬಮನನುರಾಗದಿಂದೆ ತಂದಿ ಟಿಪಿದೊಡೆ (ಬಾಧಪು. ೦೦-೦೨೬). [?]

ಬಬ್ಬರಿಗ (ನಾ). ಒಂದು ದೇಶದ ಹೆಸರು : ಪಾಂಡ್ಯ ಲಾಳ ನೇಪಾಳ ತುರಃಕ ಬಬ್ಬರಿಗ ಕೇರಳ ಪಲ್ಲವಮಂಗ ವೆಂಗಿ ಪಾಂಚಾಳ ಕಳಿಂಗ ಸಿಂಧು ವಿಷಯಾಧಿಪರಾಳ್ವೆಸಗೆಯ್ಯೆ (ಕಇ. I. ೩೦-೦೭; 1222). [< ಬಬ್ಬರ]

ಬಬ್ಬಾಗಿಲ್ (ನಾ). ಒಂದು ಸ್ಥಳದ ಹೆಸರು (?) : ಮುರಿದು ಕಿಡಿವ ಗುಣ್ಡಿಯೆ ಬಬ್ಬಾಗಿಲ ದ್ವಿಸನ್ಧಿಯೆ (ಎಕ. III (R). ಸಂಜಿಸ. ೨೬೨-೨೯; 969). [?]

ಬಬ್ಬಾಟ 'ಬೊಬ್ಬಾಟ' ನೋ.

ಬಬ್ಬುಲಿ, ಬಬ್ಬುಳಿ, ಬೊಬ್ಬುಲಿ, ಬೊಬ್ಬುಳಿ$_1$ (ನಾ). ಒಂದು ಬಗೆಯ ಮುಳ್ಳುಗಿಡ; ಜಾಲಿ; ಗೊಬ್ಬುಳಿ : ಪಲಸಾಲಂ ತಡಸಾಸು ತೇಗು ತದುಕಿಂಚಿಲ್ಪೊನ್ನೆ ಚಿನ್ನಂಗಿ ಬ[ಪಾಠಾಂ. ಬೊ]ಬ್ಬುಲಿ . . . ಎಂಬೀ ಮರದುಱುಗಲಿಱುಂಬಿನಿಂದತಿಗಹನವೆನಿಪ ಗಹನಾಂತರದೊಳಗೆ (ಪಾರ್ಶ್ವಪು. ೦೨-೩೬); ವನಜವನದಲಿ ತುಱುಚಿ ಕಬ್ಬಿನ ಬನದಿ ಕಡಸಿಗೆ ಚೂತಮಯ ಕಾನನದಿ ಬ[ಪಾಠಾಂ. ಬೊ]ಬ್ಬುಲಿ ಭೀಮಸೇನನಯಿರವು ತಮ್ಮೊಳಗೆ (ಕುಪ್ಪಾಲಿ. ೬-೩); ಈಗ ಊರು ಇದ್ದ ಸ್ಥಳದಲ್ಲಿ ಮೊದಲು ಬಬ್ಬುಲಿ (ಜಾಲಿ)ಯ ಬನವಿದ್ದು ತುಡುಗರಿಗೆ ಆಶ್ರಯವಾಗಿತ್ತು (ವಿಜಾಪ. ೦೨). **ಬಬ್ಬುಳಿ :** ಬಬ್ಬುಳಿಯ ಮುಳ್ಳ ಮೆಳೆಯಲಿ ನಿಲ್ಲೆ (ಗಿಳಿಸಂ. ೭೩-೪). **ಬೊಬ್ಬುಲಿ :** ಬೊಬ್ಬುಲಿಯ ವನಕ್ಕೆನಿಸು ಕೂರ್ಮೆಯಿಂ . . . ನೀರ ನೆಱೆದೊಡಂ ಮಾವಿನ ವನದಂತೆ ಫಲಮಾಗಲಾರ್ಕುಮೆ (ಧರ್ಮಾಮೃ. ೭-೭೭); ಚಂದನದ ಸನ್ನಿಧಿಯಲಿ ಪರಿಮಳ ತಾಗಿ ಬೇವು ಬೊಬ್ಬುಲಿ[ಪಾಠಾಂ. ಬಬ್ಬುಲಿ, ಬೊಬ್ಬುಳಿ] ತಱೆಯ ಗಂಧಂಗಳಾಗವೆ (ಬಸವ. ೦೪೦) ; ಹಿರಿಯ ಬೊಬ್ಬುಲಿಮರದ ನೆಳಲಿದು (ಬಸಪು. ೨೦-೦೦). **ಬೊಬ್ಬುಳಿ$_1$:** ವನಜದಲರನುಳಿದಾಱಡಿಗೆ ಬೊಬ್ಬುಳಿಯ ಪೂವಿನೊಳ್ಮಧುವುಂಟೆ (ಕೈಮಿಶಾ. ೦೯-೦೨) ; ಹಾವಸೆ, ಬೊಬ್ಬುಳಿಮರದ ತಿಗುಡು ಇವೆರಡನು ಕುಟ್ಟಿ . . . ಸಕ್ಕರೆವೆರಸಿ ತೆಗೆದುಕೊಳ್ಳೆ ದಾಹಂ ಮಾಣ್ಗುಂ (ಸಕಸ್ವ. ೨೬೨). [< ಸಂ. ಬಬ್ಬುಲ, ಬಬ್ಬೂಲ]

ಬಬ್ಬುಳಿ 'ಬಬ್ಬುಲಿ' ನೋ.

ಬಬ್ರಿ (ಗು). (?) : ಆನೆಗೆ ಹಳದೀ ಬನಾತಿನ ಬಬ್ರೀಜೂಲು ರೇಶ್ಮೆ ಜಾಲರು ಸಹ ೧ (ಎಕ. XIV, ಸಂಜಿಸ. ೨೯೨-೦೯೨ ಪುಟ; 1847). [?]

ಬಭ್ರು (ಗು). ೦. ಕಂದುಬಣ್ಣದಿಂದ ಕೂಡಿದ. (ನಾ). ೨. ಕಂದು ಬಣ್ಣ; ಪಿಂಗಳವರ್ಣ : "ಪಿಂಗಂ ಕಪಿಳಂ ಬಭ್ರು ಪಿಶಂಗಂ . . . ಹರಿತಂ" (ಪಸ್ತುಕೋ. ೦೦೯-೬೩); ಭ್ರುಕುಟಿಕುಟಿಲಭ್ರೂಲತಾಬಭ್ರುರೋಚಿಯಿಂ ರುಚಿರತಾಂಬೂಲಾರುಣಾಧರಮರೀಚಿಯಿಂ . . . ರೌದ್ರಭಾವಂ ನೆಲಸಿ ನಿಲೆ (ಕಾದಂಕಾ. ೨೭೦) ; ಅರಣ್ಯಂ . . . ಮದವತ್ಕುಂಜರಗಾತ್ರದಂತೆ ವಿಳಸದ್ಬಭ್ರೂಪ್ರಭಾವಿಭ್ರಮಂ (ಪುಷ್ಪಪು. ೩-೬೮). ೩. ಮುಂಗುಸಿ; ಮುಂಗುಲಿ : "ಮುಂಗುರಿಯಲ್ಲಿಯುಂ ಬಭ್ರುವೆಂಬುದು" (ಹಲಾಯು. ೦೩೬-೩೦); ಹರಿ ಕರಿಗಳೊಂದಾಗಿ ಬೆರೆದು ಬಭ್ರೂರಗವನೆರಳೆ ಪುಲಿಯೊಂದೆನಿಸಿ ಮರೆದು ನಿಜವೈರಗಳ ವರಮುನಿಯ ದಿವ್ಯಪ್ರಭಾವದಿಂದೊಪ್ಪಿರ್ಪುವಾ ತಪೋಧನನೆಡೆಯೊಳು (ಪಂಕಾರಾ. ೦-೬-೮). ೪. ಅಗ್ನಿ : ಬಭ್ರುಸದ್ದೃಷ್ಟ ಚಿತ್ತಭ್ರಾಂತಿಕೃಲ್ಲುಠತ್ ಪ್ರಭ್ರಾಜಿತೋವ್ಯತ್ ಕಕುಭ್‌ಭ್ರಮಿತ ಘೃಣಿಚಯಾದಭ್ರಸ್ಫುಲಿಂಗವಮಿವಿಭ್ರಮವಿಭೃತ್ ಖಡ್ಗ ಶುಭ್ರದಕ್ಷಕರಕ್ಷತಾ (ಪದ್ಮರಾ. ೦-೭). ೫. ವಿಷ್ಣು : "ವಿಷ್ಣುಃ, ಕೃಷ್ಣಃ . . . ಬಭ್ರುಃ, ಹರಿಃ . . . ವನಮಾಲೀ, ಗದಾಧರಃ — ಈ ೪೫ ನಾರಾಯಣನ ಪೆಸರ್" (ಹಲಾಯು. ೩-೨೯). ೬. ಶಿವ. ೭. ಕುದುರೆಯ ಹುಬ್ಬು : ಅಕ್ಷಿಕೂಟದಿಂ ಪೊಱಗಣ ಪುರ್ಬುಗಳ್ಗೆ ಬಭ್ರುವೆಂಬ ಪೆಸರಕ್ಕುಂ (ಅಶ್ವಶಾ. ೮೭-೨೩). [ಸಂ.]

ಬಮರ 'ಬವರ$_2$' ನೋ.

ಬಮರಿ 'ಬವರಿ' ನೋ.

ಬಮೆಗೊಳ್ 'ಬೆಮೆಗೊಳ್' ನೋ.

ಬಮೋಜೀಬ್ (ಅ). ಅದಕ್ಕನುಗುಣವಾಗಿ ; ಅದಕ್ಕನುಸಾರವಾಗಿ : ಅದರ ತರುವಾಯ ನಡೆಯುವ ಆಪಾದನೆಗೆ ಅಯಿವತ್ತುರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು ಬಮೋಜೀಬ್ ಹುಕ್ಕುಂ (ಗ್ರಾಮಾಕ. ೪ ಬೀಕಿ). [← ಪಾರ. ಬಮೂಜಬ್ ; ಹಿಂ. ಬಮೂಜಬ್, ಬಮೂಜಿಬ್ ; ಮರಾ. ಬಮುಜಿಬ್, ಬಮೂಜಿಬ್, ಬಮೊಜಿಬ್, ಬಮೋಜೀಬ್]

ಬಮ್ಮ 'ಬೊಮ್ಮ' ನೋ.

ಬಮ್ಮಡಿ 'ಬೊಮ್ಮಡಿ' ನೋ.

ಬಮ್ಮಯ್ಯ 'ಬೊಮ್ಮಯ' ನೋ.

ಬಮ್ಮೇತಿ 'ಬೊಮ್ಮಹತಿ' ನೋ.

ಬಯ್$_1$, ಬೈ (ಕ್ರಿ). ಬಯ್ತು, ಬೈತ (ಭೂತಕೃ). ಬಯ್ತು, ಬೈತು (ಭೂತನ್ಯೂ). ೧. ಅಡಗಿಸು ; ನಿಕ್ಷೇಪಿಸು ; ಮುಚ್ಚಿಡು ; ಬಚ್ಚಿಡು : "ಬಯ್-ನಿಕ್ಷೇಪೇ (ಬಚ್ಚಿಡು)" (ಕಮಧಾ) ; ದಂಡಕನೃಪಂ ಲೋಭಾಭಿಭೂತಂ ವಿಷಾವಿಲದಂಷ್ಟ್ರಂ ಶ್ವಯುವಾಗಿ ಪುಟ್ಟಿ ಸುಟಿಗುಂಮುಂ ಬಯ್ತ ಭಂಡಾರದೊಳ್ (ಅಧಿಪು. ೨-೦೨) ; ಕಮಲಜನಿಲ್ಲಿ ಬಯ್ತನೊಲವಿಂ ಕುಮುದೇಕ್ಷಣ ವಜ್ರದಂತವಿದ್ರುಮರದನಚ್ಛದಂಗಳಿನಮರ್ಚಿದ ಜಂಗಮನೀಲಪುತ್ರಿಕಾಸಮಿತಿಯನೆಂಬಿನಂ . . .ಪುಳಿಂದಿಯರಿರ್ದರದೊಂದು ತಾಣದೊಳ್ (ಜಗವಿ. ೦೬-೦೭) ; ಬರೆದಂತೆ ಪೋಲ್ತಂತೆ ಬಯ್ತಂತೆ ಬೆಚ್ಚಂತೆ ಇರಿಸಿದಂ ಶಿವಮೂರ್ತಿಯಂ ಚಿತ್ತದೊಳಗಿಂತೆ (ಸೇದಿರ. ದೇ. ೬೬-೨೩). **ಬೈ$_1$:** ೧. ಎರ್ದೆಯೊಳ್ ಬೈತಿಚ್ಚೆಯೊಳ್ ಕೂರ್ಮೆ ತಳ್ತಿರವಿಂ ಮಚ್ಚುಗೆವೆತ್ತ ಪತ್ತುಗೆಯಿನಂತಾ ನಾಲ್ವರಂದಿರ್ವರಿರ್ವರೆ ಯುಗ್ಮದ್ವಯ ಮಾದರೇಂ ಸಫಲಮೋ ಸತ್ಪಾತ್ರದಾನೋದಯಂ (ಶಾಂತಿಪು. ೬-೦೨೩) ; ಓವಿ ಫಳತರುಗೆ ನೀರ್ಗಳನೀವುದುಮಂ ಬೈತು ಬಿತ್ತನೊಲವಿಂ ಬೆಳೆಗೈಗೀವುದುಮಂ ಸತ್ಪಾತ್ರಕ್ಕೀವುದುಮಂ ದಾನಮೆಂಬ ನಾಣ್ಚೆಕೆಯುಂಟೇ (ಅರ್ಧನೇ. ೪-೪೬) ; ಆಭರಣಗಳೆಲ್ಲಮಂ ಬೈತು ತಾಂ ಬೇಗದಿಂ ವರಸಖಂ ಬೆರಸು ಖೇಚರಚಕ್ರವರ್ತಿ ಬೇಡರ ರೂಪನಾಂತು (ಧರ್ಮಪ. ೩-೨). ೨. ಪ್ರತಿಷ್ಠೆಮಾಡು : ಬರೆದರೊ ಬೈತರೊ ಪೊಲ್ದರೊ ಪೊರೆದರೊ . . . ಕಡೆದರೋ ಎನೆ ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ (ಗಿಂಕ. ೩-೦೦೨). ೩. ಸೇರಿಕೊಳ್ಳು : ಹಂಸತೂಲಸ್ಥಲದೊಳ್ ತಾಂ ಬೈತೊಡಂ ಮುಳ್ಗಳ ಹೊಸ ಹಸೆಯೊಳ್ ಬೈ[ಪಾಠಾಂ. ಸೈ]ತೊಡಂ ಸ್ನೇಹದಿಂದಂ ನಲವಿಂದಂ ಸ್ತೋತ್ರಮಂ ಮಾಡಿದೊಡೆ ಪಳಿದೊಡಂ ಸರ್ವಮೊಂದಂದ ಮೆಂದಾಂ ಸಲೆ ಕಾಣ್ಬಂತಿತ್ತು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೭೩). ೪. ಬಂಧಿಸಿ ಇಡು ; ಅಲುಗಾಡದಂತೆ ಇರಿಸು : ಬೇಸಗೆಕಾಲಮೆಂಬಬಳೆ ಬೆಟ್ಟುಗಳೆಂಬೊಲೆಗಲ್ಗಳಲ್ಲಿ ಬೈತೀ ಸಕಳೋರ್ವಿಯೆಂಬ ಪೊಸಗಾವಲಿಯಂ ರವಿವಹ್ನಿಯಿಂದೆ ತೋಯಾಶಯಮೆಂಬ ಸಂಪಣ ಮನರ್ಪಿಸಿ ತಳ್ತುರಿಯಲ್ಕೆ ಕಾಷ್ಠೆಗಳ್ ದೋಸೆಯನಟ್ಟವೊಲ್ ಮಳಲ ರಾಶಿಗಳೊಪ್ಪಮನಾಳ್ದುವಾಕ್ಷಣಂ (ಬಾಧಪು. ೪-೭೮).

[ದೇ.॥ ತಮಿ. ವೈ; ಮಲ. ವೆಕ್ಕ; ಕೊಡ. ಬೆಯ್; ತೆಲು. ವೇಯು; ಕೋತ. ವಯ್; ತೊದ. ಪೊಯ್]

ಬಯ್ಯ್₂, ಬಯ್ಯು, ಬೈ₂, ಬೈಯು (ಕ್ರಿ). ೧. ಕೆಟ್ಟ ಮಾತನ್ನಾಡು; ಕಠಿಣವಾಗಿ ನುಡಿ: ಅದನಾತಂ ಬಯ್ದೊನಲ್ಲ ನಾಂ ಬಯ್ದೆಂ (ಪಡ್ಡಾರಾ. ೬-೩); ಕಿಱಿಯವನಱಿಯದೆ ಕೆಡೆನುಡಿದನ ಪ್ಪೊಡಂ ನೂಱುವರಂ ನೆಱ² ಸಲಿಸುವುದೆಂದುದನಾಂ ಮಱ²ವೆನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ (ಪಂಪಭಾ. ೬-೬೦); ಪಡುವಲಿಳಿಯದ ರವಿಯ ಬಯ್ಯುತ ನಡೆದನಾ ಕುರುರಾಯನು (ಕುಸ್ಕಾಪ್ರೋ. ೦೯-೯೫). ೨. ಮೂದಲಿಸು; ಹೀಗಳೆ: ಪೊಯ್ವ ನಿಸ್ಸಾಳ ತಮ್ಮಟದ ಭೇರಿಗಳಲ್ಲಿ ಬಯ್ವ ಬಿರುದಿನ ಕಹಳೆ ಶಿತ್ತಿರಿಗಳಲ್ಲಲ್ಲಿ (ಇಷರ. ಪೇ. ೩೭-೨೨); ಪೊಱವೊಱಲ ಬನದ ಕಟ್ಟಲೆ ಮಱಿದುಂಬಿಗಳಿಂದೆ ಬಯ್ದು ಪಾಡಿಸಿ ಸಾರ್ತಂದುಱದೊಡ್ಡಿ ದರ್ಕಬಿಂಬದ ತುಱುಗಲದೆನಿಸುವುದು ಕಾಂಚನಪ್ರಾಕಾರಂ (ಪುಷ್ಪಪು. ೨-೬೩); ಕೆದಱಿದವು ನಿಸ್ಸಾಳ ಬಱಸಿಡಿಲದುಭುತಧ್ವನಿಯಲಿ ನಿರಂತರವೊದಱಿ ಬಯ್ದವು ಕಹಳೆ ಬಿರುದಾವಳಿಯಲತಿರಥರ (ಕುಸ್ಕಾಪ್ರೋ. ೪-೦೩). ಬಯ್ಯು: ೧. ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ ಒಡೆಯ ನಿಮ್ಮ ಬಯ್ಯದಂತೆ ಮಾಡು (ಇಸಪ. ೫೩); ಬಯ್ಯಲಱಿವೆ ದುರುಕ್ತಿ ಶರದಲಿ ಮೆಯ್ಯನೆಸುವೆಯೊ ಮೇಣು ಮಾರ್ಗಣೆ ಕಯ್ಯಲುಂಟೇ ನಿನಗೆ ಸಂಬಳವೇನು ಸಮರದಲಿ (ಕುಸ್ಕಾಪ್ರೋ. ೦೫-೫೬). ಬೈ₂: ೧. ಜಯಾವತಿ . . . ಸಿದ್ಧಾರ್ಥರಿಷಿಯರ ಮೇಗೆ ಕ್ರೋಧಮಂ ಭಾವಿಸಿ . . . ದಯೆಯಿಲ್ಲದೊಂ ನಿಷ್ಕರುಣೆ ಎಂದು ಬೈದ[ಪಾಠಾಂ. ಬಯ್ದು]ಳ್ (ಪಡ್ಡಾರಾ. ೯೫-೦೨); ನನೆಯಂಬಂ ತೆಗೆದೆಚ್ಚನಂಗಜನ ತಪ್ಪೇನಾನುಮಂ ತೋಱ² ಕಾಣ್ಬನಿತಂ ಮಾಡದೆ ಪದ್ಮಜಂ ಮದನನಂ ಬೈದಂತುಟೇ ಬೇಡಮಿಾ ಬಿನದಂ (ಪಂಪಭಾ. ೯-೬೯); ಕನಲಿ ವಿಧಿಯನು ಬೈವಳೋ ಕಂಬನಿಯ ಸುರಿವಳೊ ಶೋಕದಲಿ ನಿಜತನುವ ಬಿಡುವಳೊ ಕಾಂತೆಯೆಂತಿಹಳೆನುಶ ನಡೆತಂದ (ಪಳಪ. ೬-೨). ೨. ಬೈದವು ಬಹುಮೊಗದೊಳು ಕಹಳೆಗಳೀರೈದುಮೊಗದನ ಸೈನ್ಯದೊಳು (ಅಂಜನ. ೦೨-೬೦). ಬೈಯು: ೧. ಚಾಪಳೆಯರಾಲೋಚಿಸುತ ಕಡುಪಾಪಿಯಂಗಜನೆಂದು ಬೈಯು [ಪಾಠಾಂ. ಬಯ್ಯು]ತ ತೋಪಿನೆಡೆಗಿರದೈದಿ ತಂದರು ಸತಿಯ ಸಂತೈಸಿ (ಪಳಪ. ೦-೯೦); ಯಾರೂ ಹುಡುಗರನ್ನು ಹೊಡೆಯಲಿಲ್ಲ ಬೈಯಲಿಲ್ಲ (ಳಳಡು. ೫೫).

ಬೈಬೈ (ದ್ವಿರುಕ್ತಿ): ಅಗಿದು ಮೈದೆಗೆದು ಸಿಗ್ಗಾಗಿ ತಮ್ಮಿಂ ತಾವೆ ತೆಗಳಿ ಬೈಬೈದು ಬಾಯಳಿದು ಶೋಕಿಸಿ ತಾವೆ (ಪಾಪಂಪ. ೯-೨೫೬); ಸಾಲ ಹೆಗ್ಗಹಳೆಗಳು ರಿಪುಭೂಪಾಲಕರ ಬೈಬೈದು ಗಜಱಿದವಾಳುತನದಾಳಾವ ಬೀಱಿತು ಬೆಱಗನಹಿತರಿಗೆ (ಕುಸ್ಕಾಪ್ರೋ. ೪-೫೨). ಬೈದಾಟ = ಒಬ್ಬರನ್ನೊಬ್ಬರು ಬಯ್ಯುವಿಕೆ.—ತೆಗಳುವಿಕೆ: ನುಡಿ ನೋಟ ಬಾಯೂಟ ಬೈದಾಟ ಕಲಹ ಕಾಲ್ವಿಡಿತವಿಲ್ಲದ ಕಾಂತೆಯರಿಗೆ ಕಡುರಸಿಕರು ಲೇಸು ಮಾಡರೆಂದೊರ್ವಳು ನುಡಿದಳೆಳೆಯಳಿಗೊರ್ವಳಿಗೆ (ಕುರಾಸಾಂ. ೨೬-೯೨); ಪಾರಿವಗಳ ದನಿ ಕೊಳರ್ವಕ್ಕಿಯ ಲಲ್ಲೆ ಕೀರವಱಿಗಳ ಬೈದಾಟ (ಕಂಪಪ. ೦೦-೯೩). ಬೈದಾಡು = ಮೂದಲಿಸು; ಹೀಗಳೆ: ಸೆಣಸು ಮಿಗಲೊಳಗೊಳಗೆ ಖತಿಯಲಿ ಕೆಣಕಿ ಬೈದಾಡಿದರು ಸಮರಾಂಗಣಭಯಂಕರ ಶಲ್ಯ ಭಾಸ್ಕರಸುತರು ರಥದೊಳಗೆ (ಕುಸ್ಕಾಳ. ೯ ಸೂಪಪ).

[ದೇ.॥ ತಮಿ. ವೈ; ಕೊಡ. ಬಯ್ಯ್]

ಬಯ್ಯ್₃, ಬೈ₃, ಬೈಯ (ನಾ). ಸಂಜೆ; ಬೈಗು: (ಕಿ). ಬೈ₃: ಉಪಾಯವಿಲ್ಲದೆ ಹೊತ್ತು ಬೈಯಾಗುವಾಗ . . . ಹೊರಟೆ (ಮುಗಿಯು. ೯). ಬೈಯ: ಕೈಯಡಿಗಳ್ ಕಂಗಳ್ಕಡೆಯೊಯ್ಯನೆಯುಗುರ್ದಾಡೆ ಜಿಹ್ವೆ ಕೀಳ್ದುಟಿ ವೇಳುಂ ಬೈಯದ ಕೆಂಪುಗಳಾಗಿರಲಯ್ಯಂ ತಾನೀವನತುಳಸುಖಸಂಪದಮಂ (ಪಾಠಾಸ್ಯ. ೦-೦೨-೩೯). 'ಬಯ್ಯು' ಪರಾ.

ಬಯ್ಯುನಕ = ಸಂಜೆಯವರೆಗೂ; ಸಾಯಂಕಾಲದ ತನಕ: (ಕಿ).

[ದೇ.॥ ತುಳು. ಬಯ್ಯ, ಬೈಯ, ಬೈಯ್ಯ]

ಬಯ (ನಾ). ಹೆದರಿಕೆ; ಭಯ; ದಿಗಿಲು: "ಬಯಮೆನಲು ಭಯದೊಳಗಕ್ಕು" (ಕಸಿ. ೭೫); ಭೋಗಿ, ಬೋಗಿ, ಭಯ, ಬಯ (ಕಪ್ಪಾಸು. ೦೯೩ ಪ್ರಯೋ). 'ಬಯಂಗೊಳ್', 'ಬಯಂಬಡಿಸು' ಪರಾ. [< ಸಂ. ಭಯ]

ಬಯಂಗೊಳ್ (ಕ್ರಿ). ಹೆದರು; ಭಯಪಡು; ದಿಗಿಲುಗೊಳ್ಳು: ಇಂದ್ರಿಯಂಗಳ ದೆಸೆಗೆ ನಾಡೆಯುಂ ಬಯಂಗೊಂಡು (ಧರ್ಮಾಸ್ಯು. ೫-೨೬).

[ಬಯ + ಕೊಳ್₁]

ಬಯಂಬಡಿಸು (ಕ್ರಿ). ಹೆದರುವಂತೆ ಮಾಡು; ಭಯಪಡಿಸು; ದಿಗಿಲುಗೊಳಿಸು: ತಿಬ್ಬವೊಗಂ ಬಯಂಬಡಿಪ ತೇಜಮನುಳ್ಳ ದೃಢಾಂಗ ಮಾಯತಂ ಗಬ್ಬಿಗರಿಂ ನಿರೀಕ್ಷಿಸಲಗಮ್ಯಮದಾದುದದೊಂದುಮಾಯುಧಂ ನಿಬ್ಬರಮಾದ ಚಂಡಮೆನಿಕುಂ ಧರೆಯೊಳ್ (ಪಾಠಾಸ್ಯ. ೦-೦೩-೯೭).

[ಬಯ + ಪಡಿಸು]

ಬಯಕಾಱ (ನಾ). ೧. ಸಂಗೀತಗಾರ: ಮಧ್ಯಮಪಾಂಣ್ಡವರಾಯ ಶಸ್ತ್ರಶಾಸ್ತ್ರಪ್ರವೀಣ ಬಯಕಾಱಪಿತಾಮಹ . . . ಶ್ರೀ ವೀರ ಅರಗದ ಹರಿಯಪ್ಪಒಡೆಯರು ಸುಖಸಂಕಥಾವಿನೋದದಲು ರಾಜ್ಯಂಗೇ ಉತಿರ್ವ್ವಲ್ಲಿ (ಎಳ. VI, ಸುಖಪಗ. ೫೯-೦೩; ಸು. 13807); ಅಚ್ಯುತದೇವರಾಯ ಮಹಾರಾಯರ ಮನೆಯ ಬಯಕಾಱ ರಾಮಪ್ಪಯ್ಯನವರು ಬೂದಿಹಾಳ ಸೀಮೆಯ ಮದುವೆಯ ಸುಂಕವನು ಬಿಟ್ಟು ಕೊಟ್ಟ ಧರ್ಮ್ಮಶಾಸನದ ಕ್ರಮವೆಂನ್ತೆನ್ದರೆ (ಎಳ. XII, ಸಿಕ್ಕಿಶಾ. ೫-೬; 1535); ವರವೈಣಿಕ ಬಯಕಾಱರು ಹರುಷದೆ ಕೊರಳ ಬೆರಳನೊಂದುಗೂಡಿ . . . ಪಿರಿದಾಗಿ ಪಾಡು ತೊಪ್ಪಿದರು (ಕಂಪಪ. ೬-೩೯). ೨. ವೈಣಿಕ: ತುಱುಗಿ ನಡೆವಾಗಳ್ ಸೋಲೆವಡೆದವುದೆಂಬ ಭೀತಿಯಿಂ ಪೆಗಲಿಂ ತೆಗೆದು ಬೀಣೆಯಂ ದೃಢಮುಷ್ಟಿಯಿಂ ನೆಗಪಿ ಪಿಡಿದಡಿಗೊಳ್ವ ಬಯಕಾಱರ ತೆರಳ್ಕೆಯಿಂ (ರಾಜಕೇ. ೦೨-೦೦೬ ಪ); ಹರಿಸಂ ಮಿಗೆ ಚಿಕದೇವಂ ಸರಸಾಗ್ರಣಿ ವೀಣೆ ಬಾಜಿ ಪೋಜೆಗಳಂ ಮುಂಬರಿದು ಕುಡೆ ದೇವರಾಯನ ಚರಣಕೆ ಬಯಕಾಱರಂದು ಬಣ್ಣಿಸೆ ನೆಗಬ್ದರ್ (ಪಳಪ. ೪-೦೦೦). [← ತೆಲು. ಬಯಕಾಂಡು, ಬಯಕಾರಿ]

ಬಯಕೆ₁ 'ಬಯ್ಕೆ₁' ನೋ.

ಬಯಕೆ₂, ಬಯಕ್ಕೆ, ಬಯ್ಕೆ₂, ಬವಕೆ (ನಾ). ೧. ಇಚ್ಛೆ; ಆಸೆ; ಅಪೇಕ್ಷೆ: "ಇಚ್ಛೆ ಕಾಂಕ್ಷೆ ಸ್ಪೃಹೆಯು ಆಶಂಸಾ ರುಚಿ ಕಾಮ ವಾಂಛೆ ಈಷ್ಟಿತಮೆನಲು ಬಯಕೆ" (ಸುಂಗರಾ. ೦೨೯-೦೦); ನಿಯಮಿತಾಕ್ಷರದಿಂದುಪಮಾಪ್ರತಿಜ್ಞೆಯನೆ ತಿರ್ದುವುದಟ್ಟಿಯಿನಿರ್ದುಮಾ ಬಯಕೆ ತೀರದ ಕಾರಣದಿಂ ವಿಪರ್ಯಯ ಮಿದಭ್ಯುಪಮೋಕ್ತ್ಯುಪದೂಷಣಂ (ಕವಿರಾ. ೦-೦೯೫); ಆತನಂ ಸಾಮದಿಂದಮಳವಡಿಸಿ ನೋಡುವೆಂ ಸಾಮದೊಳಂ ಪದವಡದೊಡೆ ಬಟಿಕಿರ್ದಪ್ಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ (ಅಪಿಪು. ೦೪-೯೩); ಅಂತೆ ನಾನಾದೊಡಂ ಜಾತಿಜೋಗಿನಿಯಲ್ತು: ಬಗೆಯೊಂದು ಬಯಕೆಯಂ ಪಡೆಯೆ ನೋಂತಿಹೆನಿಂತು (ಪತ್ರಾಂಗ. ೩೬-೯೭೫). ೨. ಬಸಿರಿಯರಿಗೆ ಉಂಟಾಗುವ ಆಸೆ.—ಹಂಬಲ: ನೀನುಂ ಮನೆಯಿಂದಂ ಪೊಱಮಟ್ಟು ಪೋಗಿ . . . ಕೆಲವುದಿವಸದಿಂ ಸತ್ತು ಶ್ರೀಮತಿಯ ಗರ್ಭದೊಳ್ ನೆಲಸಿರೆಯಾಕೆಗೆಲ್ಲಾ ಜೀವಂಗಳಂ ದಯೆಗೆಯ್ವ ಬಯಕೆಯಾದುದು (ಪಡ್ಡಾರಾ. ೦೫೦-೦೫); ಗರ್ಭಿಣಿಗಳಪ್ಪ ಕಾಮಿನಿಯರ್ ಬಯಸುವ ಬಯಕೆ ದೋಹಲಂ ದೌಹೃದಮುಂ (ಪಸ್ತುಕೋ. ೫೯-೦೯); ಬಳಿಕ ಬಯಕೆ ಪೆರ್ಚಿದುದು . . . ನಳಿನದಳಾಕ್ಷ ನರಸಿಂಹನ ಮೂರುತಿ ಬಳೆಯಲಂಗನೆಯ ಗರ್ಭದಲಿ (ಕಂಪಪ. ೯-೬೦). ೩. (ಅಲಂ) ಸ್ತ್ರೀಯರಿಗೆ ಸೀಮಂತ, ಬಾಣಂತನ ಮುಂತಾದ ಸಂದರ್ಭಗಳಲ್ಲಿ ವಿಶೇಷವಾಗಿ ಕಣ್ಣಿಗೆ ಹಚ್ಚುವ ಕಾಡಿಗೆ.—ಕಪ್ಪು: "ಅಂಜನಮೆ ಬಯಕೆ" (ಪಸುಪ. ೦೫೫).

ಬಯಕ್ಕೆ : ೧. ನಿನ್ನ ಕೊಟ್ಟುದನೆ ಪಸಾದಮೆಂದು ಪೊಡೆವಟ್ಟು ಮನೋಮುದದಿಂದೆ ಕೊಂಡು ಬಾಳ್ವುದುವೆ ಬಯಕ್ಕೆ ಮುಂ ನಿನಗದಂ ಕಿಡಿಪಂದೆಲೆ ಕರ್ಣ ಕೇತುವಾದುದು ನಿನಗಾ ವೃಕೋದರನ ಕಾಯ್ಪನೆ ಪೊತ್ತಿಸಿದೆನ್ನ ಕಾಳೆಗಂ (ಸಂಪಕಾ. ೦೩-೬); ಭವವಾರ್ಧಿ ಪ್ರತಿಮಗ್ನ ಜೀವನಿವಹಂ . . . ಭವಸಂತಾನಂಗಳೊಳ್ ಕೂರ್ಪ ಕೂಡುವ ತಟ್ಟುರ್ಪ ಬಯಕ್ಕೆಯಂ ಬಯಸುಗುಂ (ಶಾಂತಿಪು. ೯-೭). ೨. ಜಿನಮಜ್ಜನಂಗಳಂ ಮಾಟ್ಟ ಜಿನೇಂದ್ರಪೂಜೆಯನೆ ಮಾಟ್ಟ . . . ಚತುರ್ವಿಧಮಪ್ಪ ದಾನಮಂ ಮಾಟ್ಟ ಬಯಕ್ಕೆ[ಶಾಕಾಂ. ಯಂಕೆ]ಯಾಯ್ತು ಜಿನದತ್ತೆಗೆ ಭವ್ಯನ ಮೇರು ಗರ್ಭದೊಳ್ (ಅರ್ಥಸೇ. ೨-೨೫); ℙ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪವಿರಬಹುದು. **ಬಯ್ಕೆ₂** : ೧. ಚದುರರ ಮೆಚ್ಚು ಭಾವುಕರ ಕೈಪಿಡಿ ಜಾಣರ ಬಯ್ಕೆ ಸತ್ಕಲಾವಿದರ ವಿಲಾಸಮಕ್ಕರಿಗರಾಭರಣ . . . ತಾನೆನಿಪ್ಪ ಸಮ್ಮುದದೊಳೆ ಬಣ್ಣಿಕುಂ ಧರಣಿ ಸತ್ಕವಿಮಲ್ಲನ ಕಾವ್ಯ ಸಾರಮಂ (ಸೂಕ್ತಿಸು. ೦-೨೫) ; ಕೇಳದಿರು ; ತಿಳಿಯವೇಟ್ಕೆಂಬ ಬಯ್ಕೆಯುಂ ಬೇಡ (ಬದ್ಧಪ್ರ. ೨೬-೩೫೮). ೨. ಕಯ್ಕೋಳರ ಹಾದಿ ಗಳೊಂದೆಸೆಯೊಳು ಬಯ್ಕೆಯ ಸತಿಯರ ಸಾಲೊಂದೆಸೆಯೊಳು (ತಿರುಪಾ. ಪೇ. ೨೨೨-೨೦). **ಬವಕೆ** : ೨. ಒಡಲೊಳ್ ಶಿಶುವುದಯಿಸಿ ಬಳೆಯುತ್ತಿರಲೊಡನಾಮ್ರದ ಪಣ್ಣುಣ್ಣ ಬವಕೆ[ಶಾಕಾಂ. ಸೆ] ತನಗಡಸಿತು (ಇಯಕಾ. ೨-೩೦).

ಬಯಕೆ ಮಾಡು = (ಚೊಚ್ಚಿಲುಬಸಿರಿಗೆ) ಸೀಮಂತವನ್ನು ಮಾಡು; ಬಯಕೆಯನ್ನು ಪೂರೈಸು : ನಿನಗೆ ಮದುವೆ ಮಾಡಿದೆವು, ಅವಳಿಗೆ ಬಯಕೆ (ಸೀಮಂತ) ಮಾಡಿದೆವು (ಸೋಯಿ. ೦೦). ಬೈಕೆಗಪ್ಪು = ಸ್ತ್ರೀಯರಿಗೆ ಸೀಮಂತ, ಬಾಣಂತನ ಮುಂತಾದ ಸಂದರ್ಭಗಳಲ್ಲಿ ವಿಶೇಷವಾಗಿ ಕಣ್ಣಿಗೆ ಹಚ್ಚುವ ಕಾಡಿಗೆ.—ಕಪ್ಪು : "ಅಂಜನಮೆನೆ ಬೈಕೆಗಪ್ಪು" (ಕಕುಪಿ. ೬೩).

[< ಬಯಸ್ಸು₁ + — ಕೆ. / ತಮಿ. ವಯಮ್, ವಯಾವು ; ತುಳು. ಬಯಕೆ, ಬೈಕೆ; ತೆಲು. ಬಯಂಕ, ಬಯ್ಯಂಕ]

ಬಯಕೆಗವಿ (ನಾ). ಮಹತ್ತ್ವಾಕಾಂಕ್ಷೆಯನ್ನು ಹೊಂದಿರುವ ಕವಿ : ಅಹಂಕಾರದೊಳ್ ಬಾತು ಬಲ್ಮೆಗೆ ಹಾರೈಸುವರೇಕೆ ಬಯಕೆಗವಿಗಳ್ ಕೆಲಬರ್ (ಲೀಲಾವ. ೦-೨೪). [ಬಯಕೆ₂ + ಕವಿ₂]

ಬಯಕೆವಟ್ಟಲ್ (ನಾ). ಬಯಸಿದುದನ್ನು ಕೊಡುವ ಬಟ್ಟಲು ; ಅಕ್ಷಯಪಾತ್ರೆ : ಪೊಡವಿ ಬಯಕೆವಟ್ಟಲ್ ; ಮಾರಿಯ ಕೋಱವಲ್ಲಂ ಮುಱುವ, ಭೈರವನ ನಿಡುಜಡೆಯಂ ಪಿಡಿವ, ಕಾಳರಕ್ಕಸಿಯ ಕೂರ್ವಾಳಂ ಸೆಳೆವ ಪಡೆವಳರೊಳರ್ . . . ಮೇಣೇತಱ ಚಿಂತೆ (ರಾಮಾಶ್ವ. ೦೨-೩). [ಬಯಕೆ₂ + ಬಟ್ಟಲ್]

ಬಯಕೆವೆಣ್ (ನಾ). ಬಯಕೆಯುಂಟಾದ ಗರ್ಭಿಣಿಹೆಂಗಸು : ಕಂಡಕಂಡರೆಲ್ಲಂ . . . ಬಯಕೆವೆಂಡಿರಂತುಗುಟುತ್ತುಂ . . . ಪಗರಣಮಂ ನೋಡುವರಂತೆ ನಗುತ್ತುಮಿಂತೆಂದರ್ (ಧರ್ಮಾಮೃ. ೪-೬೬).

[ಬಯಕೆ₂ + ಪೆಣ್]

ಬಯಕ್ಕೆ 'ಬಯಕೆ₂' ನೋ.

ಬಯಗು (ಕ್ರಿ). = ಬಯಸು (?) : ಶ್ರೀಕೇಸಿಗ × × × ತಲೆನೆಱಯಲು ಕಟ್ಟನ್ ಕಟ್ಟುವುದರ್ಕ್ಕೆ ಕೊಟ್ಟ ಸ್ತಿತಿಕ್ರಮವೆನ್ತುವೆನ್ದೊಡೆ ಒನ್ದರಣಿಯ ನೀರ ಬಯಗಿದ ವರಿಸ ಪೆತ್ತೊನ್ದಿ ಎರಡನೆಯ ವರಿಷಮೆಟಳವಿ ಮೂಱನೆಯ ವರಿಷದನ್ದಗೆ ಅಯ್ದಳವಿ ಎಲ್ಲಾ ಕಾಲಕ್ಕಂ ಎಲ್ಲಿಟ್ಟುಟಲು ಸಲ್ಗುಂ (ಎಳ. III. ಶ್ರೀರಂಗ. ೦೪೯-೦೬ ; 904 ?).

[ℙ ಇದು 'ಬಯಸು' ಎಂಬುದರ ಅಪಲಿಖಿತವೆ ? ./ ತುಳು. ಬಯಕು]

ಬಯನಿ 'ಬಯಿನೆ' ನೋ.

ಬಯಲ್ 'ವಯಲ್' ನೋ.

ಬಯಲಾಟ. ಬೈಲಾಟ (ನಾ). ಮೈದಾನದಲ್ಲಿ ಅಟ್ಟಣೆ ಹಾಕಿ ಆಡುವ, ಯಕ್ಷಗಾನದ ಒಂದು ಪ್ರಕಾರ ; ಜಾನಪದ ನಾಟಕ ಪ್ರಕಾರಗಳಲ್ಲಿ ಒಂದು ಬಗೆ : ಈ ನಾಟಕದಲ್ಲಿ ಅಂಕಗಳ ವಿಭಾಗವಿಲ್ಲ . . . ಆಕಾಶದ ಕೆಳಗೆ ಬಯಲಾಟ (ಕಟಿಸಾ. ೦೬೪) ; ಬಯಲಾಟದ ವೇಷ ಕುಣಿದು ಬೆಳಗು ಬರಲು ದಣಿದೆವು (ಸಂಮು. ೨೪-೨೩). **ಬೈಲಾಟ** : ಹಾವಭಾವ ತುಂಬಿದ ನಮ್ಮ ಹಳ್ಳಿಗರ ಕುಣಿತಗಳು ಭರತಮುನಿಯ ನೃತ್ಯಗಳನ್ನು ಅನೇಕ ಸಂದರ್ಭಗಳಲ್ಲಿ ಹೋಲಬಹುದು . . . ಉತ್ತರ ಕರ್ನಾಟಕದಲ್ಲಿ 'ಮೂಡಲಪಾಯ' ಬೈಲಾಟಗಳಲ್ಲಿಯ ಕುಣಿತಗಳೇ ಇದಕ್ಕೆ ಬಲವಾದ ಸಾಕ್ಷಿ (ಕನ್ನಾ. ೩೪) ; ಬೈಲಾಟದಾಗಿನ ಸೋಗು ಮಾತಾಡಿ ದಾಂಗ ಮಾತಾಡತೀಯಲ್ಲೋ ಮಾವಾ ! (ಮುಖ್ಯಾಜೆ. ೯೩).

[ಬಯಲು (<ವಯಲ್) + ಆಟ]

ಬಯಲಿಗ (ನಾ). ಶೂನ್ಯದಲ್ಲಿ ಒಂದಾಗುವವನು. — ಐಕ್ಯ ಹೊಂದುವವನು : ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲಲಿಂಗವು ಧ್ಯಾನಪೂಜೆಗಳಿಲ್ಲದೆ ನಿರವಯದಲ್ಲಿ ಬಯಲಿಗನಾಗಿ (ಕೂಪ್ಯಸಂ. ೦-೨೨) ; ಬನ್ನಬಡದನ ಬಯಲಿಗನನೆ ಮೀರ್ವರ್ಗೆಯುಂ ಕೆನ್ನಮಿಕ್ಕದನ ಸತತಂ . . . ನೋಡಿಯಾಡಿಸುತವಗೆ ಚಿನ್ನ ನವರನ್ನದೊಡಿಗೆಯನಿಕ್ಕಿ ಕಣ್ದುಂಬಿ ನೋಡ ಬೇಕೆಲೆ ಪ್ರಿಯನೆ (ಪ್ರಭುಪು. ೩-೦೨೬).

[ಬಯಲ್ (<ವಯಲ್) + — ಇಗ]

ಬಯಲು 'ವಯಲ್' ನೋ.

ಬಯಲುಗ (ನಾ). [ಬೌದ್ಧ] ಶೂನ್ಯವಾದಿ : ತಮ್ಮ ಯೋಗಗ್ರಂಥಾರಂಭದ ಗುರುವಱಿಯದ ಮೂಢಂ ಬಯಲುಗನಪ್ಪ ಸನತ್ಕುಮಾರಂ ಶೂನ್ಯಹೈದ ಯಾಂಧಂ (ಸಾಸಂಪ. ೨೩ ಪ, ಕಥಾಗರ್ಭ ಸಂ.); ಕೀಱದಿರು ಚಾರ್ವಾಕ . . . ಮೀಱದಿರು ಪ್ರಭಾಕರಿಗ ಮುಖದೋಱದಿರು ವೇದಾಂತಿ ಬಯಲುಗ ಹೋರದಿರು (ಸಾಸಂಪ. ೯-೦೦೯).

[ಬಯಲು(<ವಯಲ್) + — ಗ₂]

ಬಯಲುಗೈ (ಕ್ರಿ). ಪ್ರಕಟಗೊಳಿಸು; ಹೊರಗೆಡಹು : ಸಿಡಿಲ ಪಳಗಿಸುವರಿವು ರವಿಯ ಸೆರೆಹಿಡಿವರಿವು . . . ಬಾನ ಜಾಲಾಡುತ್ತ ತಾರೆಗಳನಳವರಿವು ಸೂಕ್ಷ್ಮಾತಿಸೂಕ್ಷ್ಮವನು ಬಯಲುಗೈವರಿವು (ಮಲೆಡೇ. ೪೮-೪).

[ಬಯಲು (<ವಯಲ್) + ಗೈ (<ಕೆಯ್₁)]

ಬಯಲುಗೊಳಿಸು 'ಬಯಲ್ಗೊಳಿಸು' ನೋ.

ಬಯಲುದೊರೆ 'ಬಯಲ್ದೊಱೆ' ನೋ.

ಬಯಲುದೊಱೆ 'ಬಯಲ್ದೊಱೆ' ನೋ.

ಬಯಲುನಾಡು 'ಬಯಲ್ನಾಡು' ನೋ.

ಬಯಲುಬಂಡಿ (ನಾ). ಕಮಾನಿಲ್ಲದ ಬಂಡಿ; ಕೊಲ್ಲಾರಿಯಿಲ್ಲದ ಚಕ್ಕಡಿ: ಏಳುಹರದಾರಿ ದೂರ ದಿಬ್ಬಣವೆಲ್ಲ ಎತ್ತಿನ ಬಂಡಿಯಲ್ಲೇ ಹೊರಟಿತ್ತು. ಕೆಲವು ಸವಾರಿ ಬಂಡಿಗಳು, ಇನ್ನು ಕೆಲವು ಬಯಲುಬಂಡಿಗಳು (ಸ್ಮೃತಿಪ. ೨೨೬). [ಬಯಲು (<ವಯಲ್) + ಬಂಡಿ₁]

ಬಯಲುರಂಗಭೂಮಿ (ನಾ). ಮೈದಾನದ ಆವರಣದಲ್ಲಿ ಚಾವಣಿಯಿಲ್ಲದ, ರಂಗವು ಮಧ್ಯದಲ್ಲಿಯೂ ಪೀಠಪಂಕ್ತಿಗಳು ಸುತ್ತಲೂ ಇರುವಂಥ ರಂಗಭೂಮಿ; ℙ "ಇಂತಹ ವೃತ್ತಾಕಾರವಾದ ರಂಗಭೂಮಿಗಳು ಗ್ರೀಸ್ ಮತ್ತು ಇಟಲಿ ದೇಶಗಳಲ್ಲಿ ಅನೇಕ ಕಡೆಗಳಲ್ಲಿ ಇದ್ದುವು. ಈಗ ನಮ್ಮ ದೇಶದಲ್ಲಿ ಪಂದ್ಯಪ್ರದರ್ಶನಗಳನ್ನು ನಡೆಸಲು ಕಟ್ಟಿಸುವ ಸ್ಟೇಡಿಯಂಗಳನ್ನು ಇದೇ ಮಾದರಿಯಲ್ಲಿ ಕಟ್ಟಿಸುತ್ತಾರೆ" : ಊರಿನ ಒಂದು ಮೂಲೆಯಲ್ಲಿ ಬಯಲುರಂಗಭೂಮಿ ಇತ್ತು (ಕಪಪು. ೩-೦೪೪). [ಬಯಲು (<ವಯಲ್) + ರಂಗಭೂಮಿ]

ಬಯಲುಸೀಮೆ (ನಾ). ಮೈದಾನದಿಂದ ಕೂಡಿದ ಪ್ರದೇಶ: ಬಯಲು ಪ್ರದೇಶ : ಕಳಸಾಪುರದ ಮಲೆನಾಡು ಬಯಲುಸೀಮೆ ಸಂಧಿಸುವ ಜಾಗದಲ್ಲಿದೆ (ಕಳಹು. ೯೨); ಬಯಲುಸೀಮೆಯವರಾದ ನಮಗೆ ರೊಟ್ಟಿಯಿಲ್ಲದಿದ್ದರೆ ಹೊಟ್ಟೆಯೇ ತುಂಬದು (ಬಂಗಾರ. ೮೦). 'ಗಿಡಸೀಮೆ' ಪರಾ.

[ಬಯಲು (<ವಯಲ್)+ಸೀಮೆ]

ಬಯಲೊಲ್ಮೆ (ನಾ). ಕಪಟಪ್ರೇಮ; ಸೋಗಿನ ಪ್ರೀತಿ : ಕೊಱಚಾಟ ಹೋರಟೆ ಕಲಹ ಬಱುಗುತ್ತ ಬಯಲೊಲ್ಮೆಗಳ ಮಾಡೆ ಬೆಲೆವೆಣ್ಗೆ ತೆಱುವರೆ ಧನವ ಬಲ್ಲವರು (ಕುರಾಸಾಂ. ೨೯-೬೯). [ಬಯಲ್ (<ವಯಲ್) + ಒಲ್ಮೆ]

ಬಯಲ್ಕಡೆ, ಬೈಲುಕಡೆ (ನಾ). (ಆಲಂ) ಶೌಚ ಮುಂತಾದ ಪ್ರಾತರ್ವಿಧಿ; ಮಲವಿಸರ್ಜನೆ; ಬಹಿರ್ದೇಶ: ಮೊಲ ಬರುವಾಗ ನಾಯಿ ಬಯಲ್ಕಡೆಗೆ ಕೂತುಕೊಂಡಿತು (ಗಾರೆ). **ಬೈಲುಕಡೆ** : ಬೈಲುಕಡೆ ಹೋಗೋದು ಹಿಡಕೊಂಡು ಹೆಂಡರು ಮಕ್ಕಳು ಮನೀಮಾರು ಎಲ್ಲಾ ಆ ಕನಕದಾಸರು ಹೇಳಿ ಧಾಂಗ ಒಂದು ಗೇಣು ಹೊಟ್ಟೆ ದಶಿಂದ ನೋಡಪಾ (ಶಿಡುಗು. ೯೦).

[ಬಯಲ್ (< ವಯಲ್) + ಕಡೆ$_3$]

ಬಯಲ್ಗಾಳಿ (ನಾ). (ಮೈದಾನದ ಕಡೆಯಿಂದ) ತಡೆಯಿಲ್ಲದೆ ಬೀಸುವ ಗಾಳಿ : ಇಂದವನ್, ನಾಳೆ ನಾನ್ ಏನ್ ಪಾಡೊ ಅಳ ಬಾಬ್; ಬೀಸುವ ಬಯಲ್‌ಗಾಳಿ, ಪರಿದಡಂಗುವ ನೆಬಲ್ (ಅಶ್ವತ್ಥಾ. ೬-೦೧೦).

[ಬಯಲ್ (<ವಯಲ್) + ಗಾಳಿ$_1$]

ಬಯಲ್ಗೆಡೆ (ಕ್ರಿ). (ಆಲಂ) ವ್ಯರ್ಥವಾದುದೆಂದು ಹೀನಾಯವಾಗಿ ನುಡಿ,– ಅವಮಾನಿಸು : ಪರತತ್ತ್ವವೆಂದೇಕ ವರರುದ್ರನೆಂದೊರೆದ ವೊರೆದಥರ್ವದ ಶಿರದ ಸತ್ಯಾರ್ಥವಂ ಬಱಿ ಬಯಲ್ಗೆಡೆದು ನೆಱಿ ಉಱಿ ವೂಳ್ವ ಬೌದ್ಧವ್ಯಾಧರದೆತ್ತಲಱಿಗು ಶೂನ್ಯಾತ್ಮರಯ್ಯೋ (ಸಾಪಂಚ. ೨-೧೭೮). [ಬಯಲ್ (<ವಯಲ್) + ಕೆಡೆ$_2$]

ಬಯಲ್ಗೊಳಿಸು, ಬಯಲುಗೊಳಿಸು (ಕ್ರಿ). ಸಾವಿಗೆ ಒಳಗು ಮಾಡು,– ಗುರಿಮಾಡು; ಸಾವಿಗೀಡುಮಾಡು : ದಕ್ಷಯಾಗದಿ ವಪುವ ಬಯಲ್ಗೊಳಿಸಿ ಮೇನಕಿಯ ಕುಕ್ಷಿಯಿಂ ಸುಜನಿಸಿ ಬೆಳೆಯೆ (ನವಮೋ. ೬-೦೮). **ಬಯಲುಗೊಳಿಸು** : ತ್ರಿಜಗದಾಂಬೆ ಗೌರಾಂಬಿಕೆಯು ದಕ್ಷಯಾಗದಿ ತನುವಂ ಬಯಲುಗೊಳಿಸಲು (ನವಮೋ. ೬-೦೭).

[ಬಯಲ್ (<ವಯಲ್) + ಕೊಳ್$_1$ + ...ಇಸು$_3$]

ಬಯಲ್ಚು (ಕ್ರಿ). ಪ್ರಕಟಮಾಡು : ತೋರಿಸು : ಹೊರಗೆಡಹು : ರಾಘವಾಸ್ತ್ರಜ್ಯೋತಿ ತನ್ನ ಪಕ್ಷಕೆ ತಾನೆ ವಿದ್ರೋಹಿಯಾದುದೆನೆ ವಾನರವ್ಯೂಹಸ್ಥಿತಿಯನಂತೆ ದಶರಥನ ಸುತನಿರ್ಕೆದಾಣಮಂ ತೋರ್ದುದು ಬಯಲ್ಚಿ ಆ ತಾರಾಕ್ಷಿವಲ್ಲಭಗೆ (ಶ್ರೀರಾಮಾ. ೬೩೬-೦೮೮).

[ಬಯಲ್ (<ವಯಲ್) + ...ಚು$_1$]

ಬಯಲ್ದಾವರೆ (ನಾ). ನೀರಿನ ಆಶ್ರಯವಿಲ್ಲದೆ ಬೆಳೆಯುವ ತಾವರೆ; ನೆಲದಾವರೆ : ಕಿರಣಂಗಳೆ ಕಾವುಗಳೆನೆ ಹರಿದಶ್ವಂಗಳೆ ಪಸುರ್ತ ಪಸುರೆಲೆಯೆನೆ ತೋರ್ಪರುಣದಿನಮಣಿ ಬಯಲ್ದಾವರೆಯನೆ ಪೋಲ್ತಿರ್ದನಪರಗಿರಿವರಶಿರದೊಳ್ (ಕಾವ್ಯಸಾ. ೮೮೦ ಶೂದ್ರಕ); ಅರೆದುಱುಗಿರ್ದ ಬಯಲ್ದಾವರೆಯೆಲೆಗೊಡೆಯಿಡುವಿನಲ್ಲಿ ಸುಖದಿಂ ಕಣ್ಗೆಯ್ದಿರೆ ಹಂಸಮಿಥುನಮಂ ನಿಜಚರಣಾಬ್ಜದೆ ನೂಂಕಿ ನೃಪಸುತಂ ಕುಳ್ಳಿರ್ದಂ (ಕಾದಂಕಾ. ೨೮೨); ಅರಮನೆಯೊಳತ್ತಲಿತ್ತಂ ಚರಿಯಿಪ ದೇವಿಯರ ಪದತಳಾಂಶು ಬಯಲ್ದಾವರೆಯೆಸಬನೆಸಗಿದುವು ನೂಪುರತತಿ ಬೀಱಿದುವು ಮದನಮೌರ್ವೀರುಹಿಯಂ (ಪುಷ್ಪಪು. ೯-೬೨).

[ಬಯಲ್ (<ವಯಲ್) + ತಾವರೆ (<ತಾಮರೆ)]

ಬಯಲ್ದೊರೆ 'ಬಯಲ್ದೊಱೆ' ನೋ.

ಬಯಲ್ದೊಱೆ, ಬಯಲುದೊರೆ, ಬಯಲುದೊಱೆ, ಬಯಲ್ದೊರೆ (ನಾ). ೧. ಮೈದಾನದಲ್ಲಿ ಹರಿಯುವ ನದಿ.–ಹೊಳೆ : ಕಣ್ಣ ನೀರ್ಗಳ ಪೊನಲ್ ಕರೆಗಣ್ಮೆ ಕಪೋಲದೊಳ್ ಬಯಲ್ದೊಱೆಯನೊಡರ್ಚಿ ಚಂದ್ರನಖಿ ಶೋಕರಸಾಕುಳಚಿತ್ತೆಯಾಗಿ ಮೆಯ್ಯಱಿಯಳೆ ಚಿತ್ರಮಲ್ತು (ಪಂಚಾಮಾ. ೯-೩೦); ವಸುದೇವನೆಂತಾನುಮಾ ರಾಕ್ಷಸರಕ್ಷಿತಪ್ರಸೂತಿಕಾನಿಳಯದಿಂ ತಳರ್ದು ... ಮಧುರಾಪುರಮಂ ಪೊಱಮಟ್ಟು ಬಯಲ್ದೊಱೆವರಿವ ಬಟ್ಟೆಯೊಳುದ್ದೇಶಕ್ಕೆ ಬರ್ಪಲ್ಲಿ (ಜಗವಿ. ೩-೬೪); ಮಿಱುಮಿಱನಾದ ಮೈ ಹೊಳಹಿಂದ ತೆರೆಗಟ್ಟಿ ನಿಱಿದೇಳ್ವ ಹೊಂಗಾಸೆಯಿಂದ ಕುಱುಕುಱಮೆಟ್ಟಿ ರಂಗದೊಳು ತಂಪಿನ ಬಯಲ್ದೊಱೆ ಹೊಳೆವಂತೆ ಹೊಳೆವರು (ಕುರಿ. ೦೩-೦೦೦). ೨. ಬಿಸಿಲಿನಲ್ಲಿ, ನೀರಿಲ್ಲದಿದ್ದರೂ ನೀರಿರುವಂತೆ ಕಾಣುವ ಭ್ರಮೆಯ ನೋಟ ; ಬಿಸಿಲುಗಂದುರೆ ; ಮರೀಚಿಕಾಜಲ : "ಬಯಲ್ದೊಱೆ ಬಿಸಿಲ್ಗುದುರೆಯೆನಲುಂ ಗಡ ಮರೀಚಿಕಾಜಳ" (ಕಬ್ಬಿಳ್ಳ. ೦೦) ; ಸಿರಿ ಸುರಚಾಪದಂತೆ ಪೊಸಜವ್ವನಮಿದ್ದಿಲ ಬೂದಿಯಂತೆ ... ಪೆಂಡಿರ ಸುಖಮುಣ್ಮಿ ಪೊಣ್ಮುವ ಬಯಲ್ದೊಱೆಯಂತೆ ... ಕಿಡಲಲ್ಲದೆ ತಾಂ ಸ್ಥಿರಮಾಗಲಾರ್ಕುಮೇ (ರರ್ಮಾಮ್ಯ. ೫-೦೮); ದೇವಾ ಬಯಲ್ದೊಱೆಯ ನೀಸುತಿರ್ದೆಂ ಗುರುವೆ ದೇವಾ ಕನಿಷ್ಠರೊಡನೊದಱುತಿರ್ದೆಂ ಪ್ರಭುವೆ (ಪಾಗೀರ. ದೇ. ೨೬೦-೨೦) : ವನಜಂತುಗಳ್ ಬಯಲ್ದೊಱೆಗೆ ಮರುಳ್ಗೊಂಡುವು (ರಾಮಾಶ್ವ. ೫೨-೫). **ಬಯಲುದೊರೆ** : ೨. ಪ್ರೇಮಸಾಗರದಮೃತ ಬಯಲುದೊರೆಯಾಯ್ತೆ ? (ಇಂಗೀತ. ೬೩-೨೦). **ಬಯಲುದೊಱೆ** : ೨. ಕಯ್ಯ ನೀರಂ ಚೆಲ್ಲಿ ಬಯಲುದೊಱೆಗೆ ಸಲೆ ಪರಿವನೆಂತಂತೆ ಹುಲುಮೃಗದ ಸತ್ತ್ವದಿಂ ಬಲುಸಿಂಹದೊಳ್ ಕದನಮಂ ಮಾಡಿಕೊಂಡವನ ನೆಲೆ ನಿನ್ನೊಳಾದುದು (ಲಕಿಪಂ. ೦೮-೭). **ಬಯಲ್ದೊರೆ**: "ಬಯಲ್ದೊರೆಯೆನಲ್ ಮರು ಮರೀಚಿಕೆಯನಾಮಂ" (ಕಳಿ. ೬೩).

[ಬಯಲ್ (< ವಯಲ್) + ತೊಱೆ$_2$]

ಬಯಲ್ನಾಡು, ಬಯಲುನಾಡು (ನಾ). ಗುಡ್ಡ, ಬೆಟ್ಟ ಮುಂತಾದುವು ಗಳಿಲ್ಲದೆ, ಮೈದಾನಗಳಿಂದ ಕೂಡಿದ ನಾಡು ; ಬಯಲುಸೀಮೆ : ಬಯಲ್ನಾಡಿನೊಳ್ವಿಗ್ರಹಮಾದ ದಿವಸಂ ಬಯಲ್ನಾಡಂ ಬನ್ದು ಕೊತ್ತ ಮಙ್ಗಲಮನಿಱಿದು ತುಱುವಂ ಕೊಣ್ಡು ಪೋಗುತ್ತಿರೆ (ಎಳ. IV. ಹೆಗ್ಗಡ. ೦೦೩-೬ ; ಸು. 910). **ಬಯಲುನಾಡು** : ನೀಳಗಿರಿ ಹಡಿಯ ಘಟ್ಟಂ ಯೇಳುಂ ಮಲೆ ಕಂಚಿ ತುಳುವ ರಾಜೇಂದ್ರಪುರಂ ಕೋಳಾಲ ಬಯಲುನಾಡುಮನಾಳಾಪದೆ ಕೊಂಡ ವಿಷ್ಣುವರ್ದ್ಧನದೇವಂ (ಎಕ. VII. ಶಿವಮೊ. ೯೦-೫೨ ; 1181). [ಬಯಲ್ (<ವಯಲ್) + ನಾಡು]

ಬಯಲ್ನುಡಿ (ನಾ). ಸಂಳ್ಳುನುಡಿ ; ವ್ಯರ್ಥಾಲಾಪ : ಆದೊಡೆ ಬಯಲ್ನುಡಿಯೆಂದಾನಿದನಿನ್ನೊರೆಯೆಂ (ಅಮೃತ. ೯೦-೦೨).

[ಬಯಲ್ (<ವಯಲ್) + ನುಡಿ$_2$]

ಬಯಲ್ಪಡಿಸು (ಕ್ರಿ). ಪ್ರಕಟಗೊಳಿಸು, ಹೊರಗೆಡಹು : ಅಷ್ಟು ಅಪಕಾರವನ್ನು ಮಾಡಿದರೂ ಅದನ್ನು ಬಯಲ್ಪಡಿಸಿದರೆ ಕೆಟ್ಟ ಹೆಸರು ಬಾರದಿರದೆಂದೆಣಿಸಿ ಬಚ್ಚಿಟ್ಟೆನು (ಲಕ್ಷ್ಮೀಶ್ರ. ೦೦೭).

[ಬಯಲ್ (< ವಯಲ್) + ಪಡಿಸು]

ಬಯಲ್ಬೀಟ್ (ಕ್ರಿ). ನೆಲವು ಗೋಚರಿಸು ; ತಳ ಕಾಣು : ಆ ಕುಮಾರಂ ಬಿಟ್ಟ ಭರದಿಂದೆ ವಾರಿಯೆರಟ್ಟಿಸೆಗಂ ಪಚ್ಚು ಸೂಸೆ ಕೊಳದೊಳಗೆ ಬಯಲ್ಬಿಟ್ಟುದು ತದ್ರಭಸಕುರ್ಚಿಟ್ಟು ಕಡಂಗಿದುವು ಜಳಚರಪ್ರಕರಂಗಳ್ (ಪಂಪ್ರಪು. ೫-೯೩). [ಬಯಲ್ (< ವಯಲ್) + ಬೀಟ್]

ಬಯಲ್ವುಗು (ಕ್ರಿ) ಕಾಣದಾಗು ; ಇಲ್ಲವಾಗು : ಇಂತಾಕೆವಾಳರ ಬೀರಮಟ್ಟಾಡೆ, ಸೋರ್ಕು ಸೋರೆ, ಅಳವೊಳವಾಱೆ, ಚಲಂ ನೆಲೆಗಿಡೆ, ಬಲಂ ಬಯಲ್ವುಗೆ, ಕೊಂಚೆಗೋಂಟೆ ದೂಳಿಗೋಂಟೆಯಪ್ಪುದುಂ (ರಾಮಾಶ್ವ. ೯೭-೨೦). [ಬಯಲ್ (< ವಯಲ್) + ಪುಗು (< ಪೊಗು)]

ಬಯಲೊನಲ್ (ನಾ). = ಬಯಲೊಡಿ ೨ : ಬಯಲೊನಲಂತೆ ಕಡುವಂತಪ್ಪ ಪರಿವಂಬಿನಂತೆ ಕಡಿವಪ್ಪ . . . ಸಂಸಾರಮಂ ನಂಬಿ ದರ್ಶನಮುಮಂ ವ್ರತಮುಮಂ ಕೆಡಿಸುವುದಿಗ್ಗಿಕೆಯೆಂದು ವ್ರತ ಪರಿರಕ್ಷಣೋಪಾಯಮುಂ ಚಿಂತಿಸುತ್ತಿರ್ದಳ್ (ಕಡೂಚ್ಚು. ೩-೦೪೬).
[ಬಯಲ್ (< ವಯಲ್) + ಪೊನಲ್]

ಬಯಸಿಕೆ (ನಾ). ಇಚ್ಛೆ ಸಂವಿಕೆ ; ಬಯಂಸುವಿಕೆ : ಬಯಕೆಯೊಳೇ ಬಾಳ್ ಕಳೆವುದು ಬಯಕೆಯು ದೊರೆತ ಚಣ ಬಯಸಿಕೆಯನೆ ಬಯಸುವ ತೆರವೇಕಹುದೆನ್ನ ಮನ (ಗೋಚುಂ. ೨೪-೩). [ಬಯಸು$_1$ + — ಇಕೆ]

ಬಯಸು$_1$ (ಕ್ರಿ). ೧. ಹಂಬಲಿಸು ; ಇಚ್ಛಿಸು ; ಅಪೇಕ್ಷಿಸು : ಕದಪಿನ ಕಣ್ಣ ಸಾರ್ದೆಯನಳಂಕೃತಮಪ್ಪ ಗಲಪ್ರದೇಶಮಂ . . . ಮೃದುರಶನಾಗ್ರಮಂ ಬಯಸಿ ಚುಂಬಿಸಿದರ್ (ಕಾಬೃಹಾ. ೬೭೩ ಕೂದ್ರಕ); ನಿನ್ನ ಪ್ರಾಣವಲ್ಲಭೆ ನಿನ್ನನೆಯಱಿ ಬಯಸುತಿರ್ದಳ್ (ಕಣ್ಣಾಕಾ. ೪೦-೨) ; ರಾಜಹಂಸಿ ಮಾನಸಸರೋವರಮನಲ್ಲದೆ ಪೆಱತನೇಕೆ ಬಯಸುಗುಂ (ಪಂಚತಂ. ೪-೬೯ ಪ) ; ಪ್ರೇಮಲತೆ ಬಾಯಾರಿ ಕಾತರಿಸಿತಾವುದನೊ ತಾನರಿಯದುದ ಬಯಸಿ (ಕಶ್ರಾಂಗ. ೬-೦೬೬). ೨. ಕೋರು; ಹಾರೈಸಂ : ಪರರ ಕೇಡು ಬಯಸಿ ಗುರುಹಿರಿಯರನ್ನು ನಿಂದಿಸುತ್ತ . . . ಪರಮನಿಷ್ಠಮೌನಿಯಂತೆ ಧರೆಯ ಮೇಲೆ ಡಂಭ ತೋಱಿ ಹರಿವ ನೀರಿನ ತೀರದಿ ಕುಳಿತರೇನು ಬಕಧ್ಯಾನದಿ (ಕುಕೊಡ. ೦-೦೬೦-೨) ; ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ (ಗಾಡ). [ದೇ. ॥ ತುಳು. ಬಯಸು, ಬಯಕು]

ಬಯಸು$_2$ 'ಬಯಿಸಂ' ನೋ.

ಬಯಸುಹ (ನಾ). = ಬಯಸಿಕೆ : ತನ್ನೊಳು ಮೋಕ್ಷವಂ ಬಯಸುಹವದೇ ಕೇಳ್ ಪಾರಮಾರ್ಥಿಕ ಜೀವನನುಮತವು (ಕಬ್ಬಕು. ೪-೦೬).
[ಬಯಸು$_1$ + — ಹ$_3$ (< — ವ$_3$)]

ಬಯಸ್ಕೋಪು, ಬಯಾಸ್ಕೋಪು (ನಾ). ಚಲನಚಿತ್ರ; ಸಿನಿಮಾ : ಇಂಗ್ಲಿಷ್‌ಚರಿತ್ರೆಕ್ಕೆ ಸಂಬಂಧಿಸಿದ ಕೆಲವು ಕತೆಗಳು ಸ್ಟೆಂಡರ್ಡ್ ಬಯಸ್ಕೋಪುಮಂದಿರಕ್ಕೆ ಬರಲಿವೆಯೆಂದು ಗೊತ್ತಾಯಿತು (ಸ್ವತ್ಕತೆ. ೦೬೪). **ಬಯಾಸ್ಕೋಪು** : ಬಯಾಸ್ಕೋಪಿಗೆ ಹೋಗಿದ್ದವರೆಲ್ಲರು ಬಂದರು (ಕುಗಾಯ. ೧೦೬). [← ಇಂ. Bioscope]

ಬಯಾನು (ನಾ). ತಿಳಿಯಪಡಿಸುವುದು ; ವಿವರಣೆ : ಅವರ ವರ್ಗದ ಅರ್ಜಿಯಲ್ಲಿ ನನಗೆ ಅವರ ಮೇಲೆ ಕ್ರೋಧವಿರುವುದಾಗಿಯೂ . . . ನನ್ನ ಕೋರ್ಟಿನಲ್ಲಿ ಅವರಿಗೆ ನ್ಯಾಯ ದೊರೆಯುವುದಿಲ್ಲವೆಂತಲೂ ಬಯಾನು ಮಾಡಿದ್ದರು (ಕಾಆ. ೨೨೨). [← ಪಾರ. ಹಿಂ. ಬಯಾನ್ ; ಅರ. ಬೈಆನಾ; ದುರಾ. ಬಯಾಣ, ಬಯಾಣಾ]

ಬಯಾಸ್ಕೋಪು 'ಬಯಸ್ಕೋಪು' ನೋ.

ಬಯಿನೆ, ಬೈನೆ, ಬಗನಿ, ಬಗನೆ, ಬಗಿನಿ, ಬಗುನಿ, ಬಯನಿ, ಬೈನಿ, ಬೈನೆ (ನಾ). ೧. ತಾಳೆಜಾತಿಗೆ ಸೇರಿದ ಒಂದು ಬಗೆಯ ಮರ : ಊರ ಶರಾಣನೊಬ್ಬ . . . ತೆಂಗಿನ ನಾರಿನ ಹಗ್ಗ, ಬೆತ್ತದ ತೋಳುಕಟ್ಟು, ಬಯಿನೆಹಲಗೆ—ಇವನ್ನು ಜೋಡಿಸಿ ಮನೆಯ ಸಾವಿರ ಬಟ್ಟ ಹೊಲವನ್ನು ಸೇರುತ್ತಾನೆ (ಚಾಶಗೀ. ೪೦). **ಬೈನೆ** : ೧. ಬಗನಿ, ಬೈನೆ, ಬೈನೆ, ಬೈರಿ (ಕುತಿಗಿ. ೦೬-೩೭). **ಬಗನಿ** : ೧. ಹೆಂಗಸರು ಗೆಣಸು ಹರಡುವುದೂ, ಗಂಡಸರು ಬಗನಿಹೆಂಡವನ್ನು ಇಳಿಸುವುದೂ, ಹಸಿವಾದಾಗ ಬಗನಿಯ ಕಬ್ಬನ್ನೇ ಆಹಾರವನ್ನಾಗಿ ಸಿಗಿದು ಅಯಾಸ ಪರಿಹಾರ ಮಾಡಿಕೊಳ್ಳುವುದೂ ಈ ಜನರ ಅಭ್ಯಾಸ (ಅಚಾ. ೧೬); ಎತ್ತರವಾಗಿ ಬೆಳೆದಿದ್ದ ಆ ಬಗನಿಯ ಮರದ ನೆತ್ತಿಯಲ್ಲಿ ಅದರ ಹೂವಿಗೆ ಕಟ್ಟಿದ್ದ ಕಳ್ಳಿನ ಮಡಕೆಯ ಕರಿಯ ಗೋಳವು ನೇತಾಡುತ್ತಿತ್ತು (ಕಾಕೂಳು. ೧೬). **ಬಗನೆ** : ೧. ಅವನು ಕೈಯಲ್ಲಿ ಕರಿಯ ಬಣ್ಣದ ಬಗನೆಯ ಕೋಲನ್ನು ಹಿಡಿದಿದ್ದನು (ಕಂಚಿಕಂ. ೨೬). **ಬಗಿನಿ** : ೧. ಸುರೆ ಬಗಿನಿಯಾಚಲೋಲೆಯ ಮುರಗಳಾದಿ ಮುಕ್ತಿರದೆಸೆವ ಗಂಗಸಾಗರ ಮುಖ್ಯ ರಕ್ಕಸರ ಪರಿವರಿಯ ಭೋಜನದ್ರವ್ಯಂಗಳಿಡಿದ ಭಂಡಿಗಳ್ಕೈದೆ ಬರುತಿರ್ದುವು (ಕಬಕ್ಕ. ೪೭-೪೫). ೨. ಒಂದಂ ಬಗೆಯ ಬಳ್ಳಿ : ಸೌದೆಯ ಹೊರೆಯನ್ನು ಕಟ್ಟಲು ಬಗಿನಿಯ ಬಳ್ಳಿ ಬಿಗಿಯಾಗಿರುತ್ತದೆ (ಕೂಪ). **ಬಗುನಿ** : ೧. ಬೇಲ ಬಗುನಿಯುಂ ತದುಳು ತವಸಿ ಕವಳೆಯುಂ . . . ಕಿಕ್ಕಿರಿಪ ಕಾನನದೊಳು (ಕಪಪೋ. ೯-೯); ಸೊಗಸು ಚಂದನ ಸೊಂಪು ಚಂಪಕ ಆಗರು ಅಂಬಟೆ ಅತ್ತಿ ಮುಕ್ತಿಯು ಬಗುನಿ ಬೆಳದಿಹ ತೆಂಗು ದಾಡಿಮ ಬಾಳೆ ರಸ ಬಾಳೆ (ಕಭೀ. ೦೬-೩). **ಬಯನಿ** : ೧. ಪ್ರಳಯಗಾಳಿಯ ತೆಱದಿ ತೆಂಗಿನ ಹಲಸು ಖದಿರವು ಬಯನಿ ಮರಗಳನೆಲೆಯ ನೇಱುಳು ನುಗ್ಗೆ ಮಾವನು ಕೋಪದಿಂದುಡಿದ (ಕಾಕಾ. ೦೦.೦೬); ಆತ ಆ ಬಯನಿವರದ ಎತ್ತರದಿಂದ ನಾಲ್ಕು ಸುತ್ತಲೂ ನೋಡಿ . . . ಅಲ್ಲಿಂದ ಕೆಳಕ್ಕೆ ಇಳಿದ (ಕೂಳತ್ತಿ. ೩೪). **ಬೈನಿ** : ೧. ಬೈನಿ (ಬೆರ್ಲಿ). —ಕಟ್ಟಿಗೆ ನಾರುಳ್ಳದ್ದು, ಬರುಸು, ಗಳೆಯ ಕೆಲಸಕ್ಕೆ ಬರುತ್ತದೆ . . . ರಸದಿಂದ ಅರ್ಕ ತೆಗೆದು ಸರಾಯ ಮಾಡುವರು (ಕಣಾಗ. ೪೬); ಪ್ರಿಯದಿಂ ನಿಮ್ಮಂಘ್ರಿಯಂ ಪೂಜಿಸದ ನರನ ಕೈ ಭಾವಿಸಲ್ ಭಾವುರೆ ಬೈನಿಯ ಕೈ (ಪಂಳಿ. ೦೬೫೪. XVII). **ಬೈನೆ** : ೧. ಬಗನಿ, ಬೈನೆ, ಬೈನೆ, ಬೈರಿ (ಕುತಿಗಿ. ೦೬-೩೭).
[ದೇ. ॥ ತಮಿ. ಪಯಿನಿ ತುಳು. ಬಯಿನೆ, ಬೈನ, ಬೈನಿ]

ಬಯಿಲ 'ಬೈಲ' ನೋ.

ಬಯಿಸಣಿಗೆ, ಬೈಶಣಿಗೆ, ಬೈಸಣಿಗೆ, ಬೈಸನಿಗೆ, ಭಸಣ್ಣಿಗೆ, ವೈಸಣಿಗೆ (ನಾ). ೧. (ವೃತ್ತಿಸಂಘದವರು ಒಟ್ಟಾಗಿ ಕುಳಿತು ನಡೆಸುವ) ಸಭೆ : ಸಮಸ್ತ ನಖರಂಗಳುಂ ಹಿರಿಸಿಂಗಿಯಲು ಶ್ರೀಮತು ಹಬ್ಬೇಶ್ವರ ದೇವರ ದೇವಾಯತದೊಳಶೇಶಂ ಬಯಿಸಣಿಗೆಯಾಗಿರ್ದ್ದ ಯಾ ಹಬ್ಬೇಶ್ವರ ದೇವರ ದೇವಕಾರ್ಯ್ಯಾರ್ತ್ಥವಾಗಿ . . . ಬಿಟ್ಟು ಎತ್ತಱುವತ್ತಯ್ದು (ಕೂಕಾ.ಶಾ. ೦೬-೬೬ ; 1188). ೧. **ಬೈಶಣಿಗೆ** : ನಾಗರಸರ ಮಗ ಬೊಂವ ರಸ × × × ಗಳು ಸಮಸ್ತ [ವಾ]ತ್ರಿಗಳು ನೆರೆದ ಬೈಶಣಿಗೆಯ ಲಾ × × × (ಸಿಇಇ. XV. ೦೫೬-೦೪ ; 1207). **ಬೈಸಣಿಗೆ** : ೨. ಖಡ್ಗಯುದ್ಧದಲ್ಲಿ ಕುಳಿತುಕೊಳ್ಳುವ ಒಂದು ವರಸೆ.—ಪಟ್ಟು : ಸಮವಾದದಿಂದ ನೀತಿ ಹಾರಿ ಮುಂದುಗಡೆಯಲ್ಲಿ ಕುಳ್ಳಿರುವದು ಯಾವದುಂಟು ಅದು ಬೈಸಣಿಗೆಯೆಂದು ಖಡ್ಗಶಾಸ್ತ್ರವ ಬಲ್ಲವರಿಂದ ನುಡಿಯಲ್ಪಡುವದು (ಖಡ್ಗಚಿ. ೪-೩೨). **ಬೈಸನಿಗೆ** : ಸಿ. ಪೀಠ: ಆಸನ: 'ವಜ್ರಬೈಸನಿಗೆ' ಪರಾ. **ಭಸಣಿಗೆ** : ಸಿ. 'ವಜ್ರಭಸಣಿಗೆ' ಪರಾ. **ವೈಸಣಿಗೆ** : ಸಿ. 'ವಜ್ರವೈಸಣಿಗೆ' ಪರಾ.

ಬೈಸಣಿಗೆಯಿಕ್ಕು = ಸಭೆ ಸೇರು : ಸಾದರಿಯ ನಾಡ ರಾಮೇಶ್ವರದ ಗ್ರಾಮದಲು ಯಿಕ್ಕಿಸಿದ ಸನ್ಮೆ . . . ಆ ಬೈಸೆಟ್ಟಿವೊಳಗಾದ ಸಾಲು ಮೂಲೆಯ ಸಮಸ್ತ ಹಲರುಗಳು ಬೈಸಣಿಗೆಯಿಕ್ಕಿ ಮಾಡಿದನ್ಮಾ ಸನ್ಮೆಯ ಹೊಕನ್ಮ ಭಣ್ಣಿಕ್ಕೆ ವರುಷ ಪರಿಯಂತರ ಸರ್ಬ್ಬಮಾನ್ಯ (ಎಇ. X. ೬೬೨. ೦೦೨-೪೪ ;1378). [←ಮರಾ. ಬೈಸಣಾ = ಕುಳಿತುಕೊಳ್ಳುವಿಕೆ, ಬೈಸಣೇ = ಕುಳಿತುಕೊಳ್ಳುವ ಪೀಠ ; ಹಿಂ. ಬೈಸನಾ=ಕುಳಿತುಕೊಳ್ಳು]

ಬಯಿಸಿಕೆ, ಬಯಿಸಿಗೆ (ನಾ). (?): ಪಟಲಿರಟಿ ಕಿನ್ನರಂ ಕಿಂಪುರುಷ ಮಹೋರಗ ಗಂಧರ್ವ ಯಕ್ಷರಾಕ್ಷಸ ಭೂತ ಪಿಶಾಚರೆಂಬ ಅಷ್ಟವಿಧವ್ಯಂತರ ಪರಿಶೋಭಿತಂಗಳಪ್ಪ ಎಂಟು ಬಯಿಸಿಕೆವಡಲಿಗೆಗಳುಮಂ (ಕ್ರಕಡಿ. ೨೦-೬). **ಬಯಿಸಿಗೆ** : ಅಸುರನಾಗ ವಿದ್ಯುತ್ಸುವರ್ಣ ಅಗ್ನಿವಾತ ಸನ್ನಿತೋದಧಿ ದ್ವಿಪದ್ದಿಕ್ಕುಮಾರರೆಂಬ ದಶವಿಧಭವನವಾಸಿಗವಿರಾಜಿತಂಗಳಪ್ಪ ಪ್ರಂ ಬಯಿಸಿಗೆಯ ಶ್ರಾವೆಗಳುಮಂ (ಕ್ರಕಡಿ. ೨೦-೬). [?]

ಬಯಿಸಿಗೆ 'ಬಯಿಸಿಕೆ' ನೋ.

ಬಯಿಸು, ಬಯಸು$_2$ (ಕ್ರಿ). ೧. ಮುಚ್ಚಿಡು ; ಅಡಗಿಸು; ಬಚ್ಚಿಡು: ಕೂಡಲಸಂಗಮದೇವಾ ಆನು ಮಾಡಿದುದಲ್ಲದೆ ಬಯಿಸಿದ ಬಯಕೆ ಸಲುವುದೆ ಅಯ್ಯಾ (ಬಸವ. ೬೨೨). **ಬಯಸು$_2$** : ೨. ಅದ್ದು ; ಹುದುಗಿಸು ; ಮುಳುಗಿಸು : ನೇಱಿಲ ಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗಾರ್ಪು ಪೆರ್ಮೊಲೆ ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀವಲ್ಲಭಂ (ಕಾವ್ಯಾವ. ೨೦೬). 'ಬಯ್ಚು' ಪರಾ. [ಬಯ್$_1$ + — ಇಸು$_3$]-

ಬಯ್ಕನೆ (ಅ). ಬೇಗನೆ, ಶೀಘ್ರವಾಗಿ ಎಂಬರ್ಥದ ಒಂದು ಅನುಕರಣಾವ್ಯಯ : ಭೋಂಕನೆ, ಚಿಕ್ಕನೆ, ಭೋರನೆ, ಪಯ್ಕನೆ, ಬಯ್ಕನೆ (ಕಪ್ಪಾಸು. ೨೦ ಪ್ರಯೋ). [? + — ಅನೆ$_1$]

ಬಯ್ಕೆ$_1$, ಬಯಕೆ$_1$, ಬೈಕೆ (ನಾ). ೧. ಬಚ್ಚಿಟ್ಟುದು ; ನಿಧಿ ; ನಿಕ್ಷೇಪ : "ಕಡವರಮೆ ಬಯ್ಕೆಯೆಂಬರ್ ಕವಿಗಳ್" (ಕಬಕಂ. ೨೩೩) ; ತನ್ನ ಮುನ್ನಿನ ಬಯ್ಕೆಯ ಕೆಲದೊಳ್ಪುಲಿಯಾಗಿ ಪುಟ್ಟಿದಂ (ಶಾಪುಂಪು. ೨೫) ; ಬುದ್ಧಿವಂತನಪ್ಪ ಮಗಂಗೆ ಬಯ್ಕೆಯಂ ತೋಱುವಂತೆ (ಧರ್ಮಾಮ್ಯ. ೦೦-೫). ೨. ಗುಟ್ಟು ; ರಹಸ್ಯ : ಬಗೆಯ ಬಯ್ಕೆಯ ನೊಪ್ಪಿಸುವಾಗಳ್ ನೀನೆ ವಲಂ ದೊರೆ ಪೇಟ್ಟಪೆಂ ಬಗೆದು ಕೇಳ್ (ಅದಿಪು. ೩-೩೩); ಬಗೆಯ ಬಯ್ಕೆ[ಪಾಠಾಂ. ಬೈಕೆ]ಗೆ ನಾಲಗೆ ಪಿಸುಣನೆಂಬಂತೆ (ಲೀಲಾವ. ೯-೬೩ ಪ) ; ಭಾವಕರ ಬಗೆಯ ಬಯ್ಕೆಯನಗೆಯೆತ್ತಿ ಸೂಱಿಗೊಳ್ವ ಕಳಕಳಾಪ್ರೌಢಿಯೊಳಂ (ಅಪಂಪು. ೦೦-೨೭ಪ). **ಬಯಕೆ$_1$** : ೧. ಕವರಲ್ಬಂದಂಗೆ ಬಯಕೆಯಂ ತೋಱಿದರೆಂಬಂತೆ ಕಳಲ್ಬಂದಂಗೆ ಕೈಯೆಡೆಗೊಟ್ಟರೆಂಬಂತೆ (ಧರ್ಮಾಮ್ಯ. ೨-೦೪೯) ; ಸತ್ತ ಹೆಣ ಕೂಗಿದುದುಂಟು ಬೈಚಿಟ್ಟ ಬಯಕೆ ಕರೆದುದುಂಟು (ಪುಹಾರೇ. ಬ. ೦೦೨-೨೯೯). **ಬೈಕೆ** : ೧. ಮದನನ ಬೈಕೆಯಿಂದು ಪೊಱಪೊಣ್ಮೆತೊ ಕಾಮನ ಬಾಣ ಸಂಕುಳಂ ಸುದತಿಯರಾಗಿ ಪುಟ್ಟಿದುದೊ . . . ತಿಳಿಯಲ್ಕಗೋಚರ ಮೆನಲ್ ನಡೆದತ್ತಬಳಾಕದಂಬಕಂ (ಸಳಸಂ. ೦೨೮) ; ಬಾಯ ಭಂಡಾರದಲಿ ಸರ್ವವ ಕಾಯದೇ ಭಂಜಿಸುಗು ಬೈಕೆಯ ಬೀಯವನು ಸಂಗ್ರಹವ ಮಾಡದು . . . ರಾಯ ಕೇಳಗ್ನಿಯ ಗುಣಂಗಳಿಂದಿವರಲಱಿದುದನು (ಪಣಾಗ. ೦೦-೧೩ ೦೩೯). [ಬಯ್$_1$ + — ಕೆ]

ಬಯ್ಕೆ$_2$ 'ಬಯಕೆ$_2$' ನೋ.

ಬಯ್ಗಳು 'ಬಯ್ಗುಳ್' ನೋ.

ಬಯ್ಗಿರುಳ್ (ನಾ). ರಾತ್ರಿಯ ಕೊನೆಯ ಸಮಯ ; ಬೆಳಗಿನ ಜಾವ: ಬಯ್ಗಿರುಳಿನ ಮನೋಹರಿಯೆಂಬ ಜಾವದಾಗಳ್ ಬಿಳಿದಪ್ಪ ಕಾಡಾನೆಯಂ ಕಾಣ್ಬುದುಂ (ಪಡ್ಡಾರಾ. ೦೫೭-೦೫) ; ಇಂದಿನ ಬಯ್ಗಿರುಳಿನ [ಪಾಠಾಂ. ಬೆಳಗಪ್ಪ] ಜಾವದೊಳ್ ಪದಿನಾಱು ಕನಸುಗಳಂ ಕಂಡೆಂ (ಅದಿಪು. ೦೫-೨೫ಪ); ಬಟ್ಟೆವಿಡಿದು ಮುನ್ನಿನಂತೊರ್ವನೆ ನಡೆದು ನೇಸಱ್ ಪಟ್ಟಲ್ಲಿಯೆ ವಿಶ್ರಮಿಸಿ ಬಯ್ಗಿರುಳೆಟ್ಟು ಪಯಣಂಬೋಪಾತಂ (ಜೀವಸಂ. ೫೭-೩೮ಪ).

[ಬಯ್ಗು + ಇರುಳ್]

ಬಯ್ಗು, ಬಯ್ಗೆ, ಬೈಗು, ಬೈಗೆ$_1$ (ನಾ). ೧. ಇಳಿಹೊತ್ತು ; ಸಾಯಂಕಾಲ ; ಸಂಜೆ : ಇಲ್ಲಿರಿಸಿ ಪೋಗು ಕಳ್ಳಂ ಮೆಲ್ಲನೆ ಬಯ್ಗಿಂಗೆ ಕುಡಿವಂ (ಧರ್ಮಾಮ್ಯ. ೦೩-೦೯೫) ; ಬಯ್ಗಾದ ಪೊತ್ತು ನಾಲ್ಕಾನೆಯಂ ತಂದು ಸೂಳೆಗೇರಿಯ ಬೀದಿಯ ಕಡೆಯೊಳಾರುಮಂ ಪೋಗಲೀಯದಂತಡ್ಡಂ ನಿಲಿಸಿ (ಬಂಹಂ. ೩-೬೯ ಪ); ಹೊತ್ತಾಱಿ ಬಯ್ಗಿಂಗೆ ಮತ್ತೆ ಬಾ ಎಂದೆನುತ ಹೊತ್ತನೆ ಕೊಂದು ಹುಸಿಯುವನಿಗಿಂದಲು ಸತ್ತಾತ ಲೇಸು (ಸರ್ವಜ್ಞ. ೬೬೨). ೨. ಬೆಳಗು ; ನಸುಕು ; ಅರುಣೋದಯ : 'ಬಯ್ಗಿರುಳ್' ಪರಾ. **ಬಯ್ಗೆ** : ೧. ಪೇಟೀಗಳೊ ಬಯ್ಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ (ಅದಿಪು. ೩-೬೩) ; ಮಗಮಗಿಪ ಪುಷ್ಪವಾಟಾಳಿಗಳಳಿಗಳ್ವೆರಸು ಪೀಠದೊಳ್ ನಿಲೆ ಪೊಗಸುಂ ಪಗಲುಂ ಬಯ್ಗೆಯುಮರಲಲ್ಲುಗೆ ಸೊಗಯಿಪನಲ್ಪ ಕಲ್ಪತರುಗೆಣೆಯಾದಂ (ಶಾಂತಿಪು. ೦೦-೦೦೦) ; ನಿಯತಂ ಬೇಸಗೆಯೊಳ್ ಬಯ್ಗೆಯುಮಾ ಪಗಲುಮೊಂದು ದೆವಸಮಂತರಿಸದೆ ಮಾಗಿಯೊಳಬ್ದಕಾಲದೊಳ್ ಭೂಮಿಯೊಳಂ ಪದನಱಿತು ನೀರನೆತ್ತುಗೆ ಬಲ್ಲರ್ (ಲೋಕೋಪ. ೬-೮). **ಬೈಗು**: ೧. ಇಂದು ಬೈಗಿಂದೊಳಗೆ ರಾಸಿ ಹೊನ್ನಂ ಕೊಡುವೆನೆಂದು ಭುಷೆಯನಿತ್ತೆನು (ಹಶಕಾ. ೦೦-೭) ; ಶಿರವನರಿವೆಸು ನಾಳೆ ಬೈಗಿಂದೊಳಗೆ ಸೈಂಧವನ (ಕುಪ್ಯಾದ್ರೋ. ೮-೩೬) ; ನಸುಕು ಬೈಗು ಬೆಳಕು ಮಬ್ಬು ಕಲೆತು ಬೆರೆತು ಆಡುತ ಎತ್ತೊ ಹೊತ್ತಿನತ್ತ ನುಗ್ಗುತಿಹವು ಯುಗವ ದೂಡುತ (ಅರಳು. ೪೯-೧೩). ೨. ಬೈಗಿನ ಪೊಟ್ಟಱೊಳ್ ದೇವರ್ಕಳ್ ಬಂದು ಸುಕುಮಾರಸ್ವಾಮಿಯಂ...ಪೊಗಟ್ವ ಕಳಕಳಧ್ವನಿಯುಮಂ ದೇವದುಂದುಭಿಯ ರವಮುಮಂ ಯಶೋಭದ್ರೆ ನೋಡಿ (ಪಡ್ಡಾರಾ. ೨೯-೨೦) ; ಬೈಗಿನ ನೈವೇದ್ಯಕ್ಕಂ ಬೈಗಿನ ಪೂಜೆಗಂ . . . ಚತುಸ್ಸೀಮೆಸಹಿತಂ ಧಾರಾಪೂರ್ವಕ ಮಾಡಿ ಬಿಟ್ಟರು (ಸೌಇಇ. IX-11, ೨೦೨-೦೭; 1126). **ಬೈಗೆ$_1$** : ೧. ಹೊತ್ತಾಱಿ ಪೂಜಿಸಲು ಬೇಡ ಕಂಡಾ ಬೈಗೆ ಪೂಜಿಸಲು ಬೇಡ ಕಂಡಾ (ಅಪಸಂ. ೪೯-೨೦೩); ಶಿವಲಿಂಗಪೂಜೆಯಂ ಮಾಡಿ ಹರುಷಂ ಮಿಕ್ಕು ಆಡಿ ಹಾಡುತ್ತಲ್ಲಿ ಬೈಗೆಪರಮಿರುತಿರ್ದು (ಸನ್ನರ. ೮೨-೦೪). 'ಬಯ್ಗ್$_3$' ಪರಾ.

ಬೈಗಾಗು = ಸಂಜೆಯಾಗಂ ಸಾಯಂಕಾಲವಾಗು; ಹೊತ್ತು ಮುಳುಗಂ : ಬೈಗಾಗಿ ಗೋವೆಲ್ಲವಂ ಕೂಡಿ ಹೊಡೆತಂದು (ಅಪಾಶ. ದೇ. ೦೮೩-೦೦); ತರುಣಿಭಿಕ್ಷಾಂದೇಹಿ ನಾವೀ ಬರುತ ಬೈಗಾಯ್ತಲ್ಲಿ ಬಂದೆವು ತಾಯಿ ನೀಡು (ಕೌತಿರಾ. ೬-೩೦).

[ದೇ.ಪ ತಮಿ. ವೈಕಲ್]

ಬಯ್ಗುಂಬೊಳ್ತು 'ಬಯ್ಗುಂಬೊಟ್ತು' ನೋ.

ಬಯ್ಗುಂಬೊಟ್ತು, ಬಯ್ಗುಂಬೊಳ್ತು, ಬಯ್ಗುವೊಟ್ತು, ಬೈಗುಂಬೊಟ್ತು, ಬೈಗುವೊಳ್ತು (ನಾ). ಸೂರ್ಯನು ಮುಳುಗುವ ಹೊತ್ತು; ಸಂಜೆಯ ಸಮಯ; ಸಾಯಂಕಾಲ : ಅಂತು ನೇಸಱ್ ಪಡಲೊಡಂ ಬಯ್ಗುಂಬೊಟ್ತರಸಂ ನೀರ್ಜೊಂಪದಿಂ ಪೊಱಮಟ್ಟು (ಕಾದಂಕಾ. ೪೬೨). **ಬಯ್ಗುಂಬೊಳ್ತು** : ಪೋದ ಬಯ್ಗುಂಬೊಳ್ತು ಕೆಡೆದ ಉಳ್ಕೆಯ ಅಶುಭಮಂ ಪರಿಹರಿಸಲೆಂದು ಪರಮೇಶನಂ ಪ್ರಾರ್ಥಿಸಲ್ ಬಂದೆನಯ್ (ಶ್ರೀರಾಮಾ. ೪೬೭-೬೦೩). **ಬಯ್ಗುವೊಟ್ತು** : ರವಿ ಬಯ್ಗು [ಪಾಠಾಂ. ಯ್ಗೆ] ವೊಟ್ತಲಂಪಿಕ್ಕುವ ಕುಂಕುಮರಜದ ಪೊಟ್ಟಳಕೊತ್ತಿದನೆಂಬ ಪೊಲರಗಿನ ಮುದ್ರೆಯನೆಸೆದುವು ಮಧುಯಂತಮುಕುಳಿತಾಂಬುಜಂಗಳೊಳಳಿಗಳ್ (ಸರ್ವಪು. ೯-೨೫). **ಬೈಗುಂಬೊಟ್ತು** : ನಿಜಜನನೀಗೃಹದೊಳ್ ಮಜ್ಜನ ಭೋಜನಾದಿಗಳಂ ಮನವಲ್ಲದ ಮನದೊಳಗೆ ಮಾಡಿ ಬೈಗುಂಬೊಟ್ತಪ್ಪುದುಂ ನಿಜಭವನಕ್ಕೆ ಬಂದು (ಕಾದಂಕಾ. ೨೬೫); ಸಂಪ್ರಾಪ್ತಮಾದ ವರ್ಷಾಕಾಲದೊಳೊಂದುದೆವಸಂ ಬೈಗುಂಬೊಟ್ತಿನೊಳೆಂದಿನಂತಿರೋಲಗಂ ಪರಿಯ (ರಾಮಾಶ್ವ. ೯-೬). **ಬೈಗುವೊಳ್ತು** : ಸೂಚಿತಪಥಂಬಿಡಿದು . . . ಬೈಗುವೊಳ್ತಿನ ಕಡೆಗೆ ಸಾರ್ತಂದರಾಶ್ರಮಕೆ ಶರಭಂಗನಾ (ಶ್ರೀರಾಮಾ. ೦೮೩-೦೮೮).

[ಬಯ್ಗು + ಪೊಟ್ತು]

ಬಯ್ಗುಕೆಂಪು, ಬೈಗುಗೆಂಪು (ನಾ). ಸೂರ್ಯನು ಮುಳುಗುವ ಹೊತ್ತಿನಲ್ಲಿ ಅಥವಾ ಸಾಯಂಕಾಲದ ಸಮಯದಲ್ಲಿ ಆಕಾಶದಲ್ಲಿ ಉಂಟಾಗುವ ಕೆಂಪು ಬಣ್ಣ ; ಸಾಯಂಕಾಲದ ಕೆಂಪುಕಾಂತಿ ; ಸಂಜೆಗೆಂಪು : ಅಂಜನೇಭದ ಸಿಂದುರವೊ . . . ಸಂಜೆವೆಣ್ಣುಟ್ಟ ರಕ್ತಾಂಬರವೊ ಪೇಳೆನಲ್ಕಾ ಬಯ್ಗುಕೆಂಪೆ[ಪಾಠಾಂ. ಬೈಗುಗೆಂಪೆ]ಸೆದುದು (ಶೃಮಿಣಾ. ೮-೯೬). **ಬೈಗುಗೆಂಪು** : ಆಗ ತಾನೆ ಸೂರ್ಯನು

ಬೈಗುಗೆಂಪನ್ನು ಚಿಲ್ಲಿ ಪಡುಗಡಲ ತೆರೆಯಲ್ಲಿ ಇಳಿದಿಳಿದು ಮಾಯವಾದನು (ಸಳಸ್ಯ. VIII. ಪ್ರಸ್ತಾವನ) : ಬೈಗುಗೆಂಪುರಿಯಲ್ಲಿ ಸುಡಲಿ ಸಂಶಯವಲ್ಲಿ ! ಹುಣ್ಣಿಮೆಯ ರಾತ್ರಿಯಲಿ ಹೊರಗೆ ಬಾ ನೋಡು ! (ಪಾಂಪಣ. ೫೦-೭). [ಬಯ್ಗು + ಕೆಂಪು$_1$]

ಬಯ್ಗುವೊಟ್ಟು 'ಬಯ್ಗುಂಬೊಟ್ಟು' ನೋ.

ಬಯ್ಗುಳ್, ಬಯ್ಗುಳು, ಬಯ್ಗುಳ, ಬಯ್ಗುಳು, ಬೈಗಳು, ಬೈಗುಳ್, ಬೈಗುಳ, ಬೈಗುಳು (ನಾ). ೧. ಜರಿಯಂವಿಕೆ : ತೆಗಳಿಕೆ : "ಶಾಪಃ, ಆಕ್ರೋಶಃ, ಆಕ್ಷೇಪಃ, ಕ್ಷಾರಣಾ, ವಿರೂಕ್ಷಣಾ — ಈ ಸ ಬಯ್ಗುಳ್" (ಪಲಾಯಂ. ೨೯-೦೯೬); ನಿನ್ನ ತಮ್ಮನಪ್ಪ ವಾಯುಭೂತಿಯ ಜೀವಂ ಅಭಿಮಾನಂ ಕಾರಣ ಮಾಗೆಮ್ಮನುಜದೆ ಪರಿಭವಿಸಿ ಬಾಯ್ಗೆ ವಂದುದನೆ ಪೊಲ್ಲಮೆಯ ಬಯ್ಗುಳಂ ಬಯ್ದುಂ (ಪಡ್ಮಾರಾ. ೧೩-೨); ಪರಮಾರ್ಥಂ ನಿಜಜನಕರ್ ಪರಸಿದ ಪರಕೆಗಳು ಬಯ್ದ ಬಯ್ಗುಳ್ ಮಕ್ಕಳ್ಗಿರದೆಯ್ದುಗುಂ (ಕಾದಂಉ. ೯೬೭) ; ಸತ್ಪೂಜಾಭಂಗಮೆಂಬ ಬಯ್ಗುಳಿಂ ಸದ್ದರ್ಶನಾಲಸ್ಯಮೆಂಬ ಕೊಂತಂಗಳಿಂ . . . ಬೀಟ್ ಮೋದುತ್ತುಂ ದಂಡಣೆಯಂ ಮಾಡುತ್ತುಂ (ಧರ್ಮಾಮೃ. ೦೦-೬೭ ಅಧಿಪಾಠ). ಬಯ್ಗುಳು : ೧. ಕೊತವಾಲನ ಬಾಯಿಂದ ಹೊರಟ ಬಯ್ಗುಳನ್ನು ನಿಚ್ಚಳವಾಗಿ ಕೇಳಿದರು (ಕೊತಕಾ. ೬೮). ಬಯ್ಗುಳ : ೧. ದಾಂಡಿಗ ಬಂಡಿಗಾರ ಯಜಮಾನನ ಅನ್ಯಾಯದ ಬಯ್ಗುಳಕ್ಕಾಗಿ ಕೋಪದಿಂದ ಹುಬ್ಬುಗಂಟಿಕ್ಕಿದನು (ಪುಸರು. ೯೯೦). ಬಯ್ಗುಳು: ೧. ಹರಿಯ ಬಯ್ಗುಳು ಬೆದಱಿಸಲು . . . ತರತರದ ಕೈದುಗಳ ಸುಭಟರ ಕಂಡುದಮಳಾಸ್ತ್ರ (ಕುಪ್ಯಾಧ್ರೋ. ೦೯-೪೦). ಬೈಗಳು : ೧. "ಬೈಗಳೆನೆ ಪರಿಕಿಸಲ್ ನಿಂದೆಯಮು" (ಕಪರ. ೦೨೯); ಕೊಟ್ಟವರು ಬಂದೆನ್ನ ನಿಷ್ಠುರಂಗಳನಾಡ ಕೆಟ್ಟ ಬೈಗಳ ಬೈದು ಮನದಣಿಯಲು ದಿಟ್ಟತನವನು ಬಿಟ್ಟು ಕಳೆಗುಂದಿದೆನಯ್ಯ (ಪುರಂದ. ೦-೦೨೬-೦) ; ನಾ ಹುಟ್ಟಿ ಆಯ್ತರಡು ಮಾಸಂ ಬಯಸೆ ಬೈಗಳು ಬಾರವೆನ್ನೊಳೇಂ ದೋಷಂ? (ಕಾಪು. ೦೩-೬). ಬೈಗುಳ್ : ೧. "ಶಾಪಮಾಕ್ರೋಶಂ ವಿರೂಕ್ಷಣಂ ಕ್ಷಾರಣಾಕ್ಷೇಪಮೆನೆ ಬೈಗುಳೆನಿಸಿಕ್ಕು" (ಮಂಗರಾ. ೨೬-೫); ಆ ವೈಶಂಪಾಯನಂ ತಂದೆಯ ಮುನಿಸಿನ ಬೈಗುಳ್ಗಳಿಂದಂ . . . ಗಿಳಿಯ ಬಸುಱೊಳೀಯಂದದಿಂ ಬಂದನಲ್ತೆ (ಕಾದಂಉ. ೬೯೯) ; ಪೆಱರ ಬೈಗುಳಂ ಸೈರಿಸುವುದರಿದೋ ಪೆಱರೊಡನೆ ಬಾಯಂ ಬಡಿವುದರಿದೋ (ಧರ್ಮಾಮೃ. ೭-೯೦). ಬೈಗುಳ : ೧. ಕೆಲವರು ಇತರ ಮಕ್ಕಳೊಡನೆ ಕಿತ್ತಾಟ, ಜಗಳ, ಹೊಡೆದಾಟ, ಬೈಗುಳ, ಇತ್ಯಾದಿಗಳಲ್ಲಿ ಮನಃತೃಪ್ತಿ ಪಡೆಯುವರು (ಶಿಕ್ಷದ. ೯೯೯) ; ಯಾವುದಾದರೂ ಉಪಾಯದಿಂದ ಬೈಗುಳ ತಪ್ಪಿಸಿಕೊಳ್ಳುತ್ತಿದ್ದ (ಶಾಲಿಮ. ೫೦), ಬೈಗುಳು : ೧. ನಾಯಕರ ಕೆಡೆನುಡಿವ ಬೈಗುಳ ಬಾಯ ಬೊಬ್ಬೆಯ ಕೈಯ ಹೊಯ್ಗುಳ ದಾಯಿಗರಲೇ ಎನುತ ಮೂದಲಿಸಿದನು ತಮ್ಮೊಳಗೆ (ಕುಪ್ಯಾಕ. ೨-೦೩). ೨. ಮೂದಲಿಕೆ; ಹೀಗಳೆಯುವುದು : ನಡೆದುದುರು ಸನ್ನಾಹದಲಿ ಸೂಳಡಸಿ ಮೊಱೆವ ಗಭೀರಭೇರಿಯ ಕಡುರವದ ರಿಪುಭಟರ ಬೈಗುಳ ಗೌರುಗಹಳೆಗಳ . . . ಕಳಕಳವಾಯ್ತು ರಣದೊಳಗೆ (ಕುಪ್ಯಾಧ್ರೋ. ೯-೦೨). [ಬಯ್$_2$+_ಗುಳ್$_2$. /ಕೊಡ. ಬಯ್ಗುಳ]

ಬಯ್ಗುಳ 'ಬಯ್ಗುಳ್' ನೋ.

ಬಯ್ಗುಳು 'ಬಯ್ಗುಳ್' ನೋ.

ಬಯ್ಗೆ 'ಬಯ್ಗು' ನೋ.

ಬಯ್ಚು, ಬಚ್ಚು$_1$ (ಕ್ರಿ). ಮುಚ್ಚಿಡು ; ನಿಧಿಯಾಗಿರಿಸು ; ನಿಕ್ಷೇಪಮಾಡು : "ಮುಚ್ಚು, ಮುತ್ತು, ಬಯ್ಚು (ಬಚ್ಚು) . . . ಹುದುಗಿಸು, ಅಡಗಿಸು" (ಕಂಪುಮ. ೯೦) ಬಚ್ಚು$_1$: ಕಿಚ್ಚಿನಂತುಜ್ವಲಿಸೆ ತೇರಿನೊಳ್ಳನು ಶರವ ಬಚ್ಚಿದಂ ಮಿಕ್ಕಿದಂ ಧಾರುಣಿಗೆ ಪಿಡಿದಸಿಯ ಕೊಚ್ಚಿದಂ ಸವರಿದಂ ಪರಿಪರಿದು ಕುರುಬಲಂ ನಡುನಡುಗಿ ತಲ್ಲಣಿಸಲು (ತುರಂಗ. ೬೩-೦೨) ; ದೌಲತ್ತಳನ್ನು ಬಚ್ಚಿ—ಬಂಧನದಲ್ಲಿಟ್ಟು ಬೇಡದ ನಗರವನ್ನು ಬಿಟ್ಟುಕೊಟ್ಟಿದ್ದಾನೆ (ದೌಲತ್. ೮೨).

ಬಯ್ಚಿಡು, ಬಚ್ಚಿಡು, ಬೈಚಿಡು = ೧. ಅಡಗಿಸಿ ಇಡು ; ನಿಧಿಯಾಗಿರಿಸು ; ನಿಕ್ಷೇಪಿಸು : ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು (ಬಸವ. ೦); ಬೇವು ಫಲವಾಗಲದು ಸೇವಿಸಲು ಯೋಗ್ಯವೇ ಧನವು ಘನವಾಗಿ ಬಯ್ಚಿಟ್ಟ ಠಾವಿಲೇ ಪೋಕು (ಸರ್ವಜ್ಞ. ೬೯೯) ; ಅಯ್ಯ ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಕಂಡು ಒಳಗೆ ಬಚ್ಚಿಟ್ಟುಕೊಂಡೆನಯ್ಯ (ಕೂಪ್ಯಸಂ. ೨೨೦-೫೨) ; ಕೊಳ್ಳೆ ಹೊಡೆದುಕೊಂಡು ಬಂದ ಸ್ವತ್ತುಗಳನ್ನು ಅಲ್ಲೇ ಒಂದು ಮೂಲೆಯಲ್ಲಿ ಇಟ್ಟುಬಿಟ್ಟು ಮತ್ತೊಂದು ಕಡೆ ಅವರು ಬಚ್ಚಿಟ್ಟುಕೊಂಡರು (ವ್ಯಾಸಕಿ. ೩೭) ; ಜಾಲಗಾಱನ ಡೋಣಿಯಂತೆ ಬಳಸುವ ಹುಟ್ಟಿನಂತೆ ಬೈಚಿಟ್ಟ ನೆಲೆಯಂತೆ ಇದ್ದಡೇನು ಭೋಗಿಸಲರಿಯೆವಾಗಿ (ಪೋಳಿಮಾ. ೩೦-೧೨೯) ; ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಂಗೆ ಕೊಟ್ಟದ್ದು ಕೆಟ್ಟಿತೆನಬೇಡ ಮುಂದಕ್ಕೆ ಕಟ್ಟಿಹುದು ಬುತ್ತಿ (ಸರ್ವಜ್ಞ. ೬೦೭). ೨. ಗುಟ್ಟಾಗಿಡು ; ರಹಸ್ಯವಾಗಿರಿಸು : ಸುಳ್ಳನ್ನು ಬಚ್ಚಿಟ್ಟುಕೊಳ್ಳುವುದು ಮಹಾ ಅಪರಾಧ (ರಂಗರೋ. ೯) ; ಸಾವಿತ್ರಮ್ಮ . . . ಯಾವ ವಿಚಾರವನ್ನೂ ಬಚ್ಚಿಡಲಿಲ್ಲ (ಕೊವಪೇ. ೨೦೬) ; ಲಲಿತಸುಖೆ . . . ವಿಟನೊಲಿದೊಡೊಲಿಯಳು ಬೆರಸಿ ಬೆರಸದೆ ಮನವ ಬೈಚಿಡುತೆ ನಳಿನಮುಖಿ ಬೇಟದೊಳು ಬೇಗೆಯ ಬಳೆಯಿಪಳು (ಕುಪ್ಯಾಕಾ. ೬೦೩. ೬-೫೭).

[ಬಯ್$_1$ + _ ಚು$_1$. / ತೆಲು. ವಯಿಚು, ವೈಚು]

ಬಯ್ತು 'ಬಯ್$_1$' ಪರಾ.

ಬಯ್ತಲೆ, ಬೈತಲೆ (ನಾ). ತಲೆಯ ಮೇಲ್ಭಾಗದಲ್ಲಿ ಕೂದಲನ್ನು ಎರಡುಕಡೆಗೂ ಬಾಚಿದಾಗ ಮಧ್ಯೆ ಗೆರೆಯಂತೆ ಕಾಣುವ ನೇರವಾದ ಸ್ಥಳ.—ಜಾಗ : "ಸೀಮಂತಮೆಂಬುದು ಬಯ್ತಲೆ" (ಪಠಾಯು. ೬೭-೩೭೫) ; ಮೊದಲೊಳ್ ಕಟ್ಟಿದ ಮಂಡೆಯುಟ್ಟುಡಿಗೆ . . . ತಿರ್ದಿದ ನುಣ್ಬಯ್ತಲೆ ಲೀಲೆಯಿಂ ಸವಿದ ತಾಂಬೂಲಂ ಜಲಂ ಮಿಂದುದಲ್ಲದೆ ಮತ್ತೇನುವನೊಲ್ಲದಿರ್ದಬಲೆ ಚಿತ್ರಾಕಾರದಿಂ ತೋಱದಳ್ (ವಳಸಂ. ೭೩೯); ಗಗನಮಣಿ ಪಶ್ಚಿಮಾಂಗನೆಯ ಬಯ್ತಲೆ[ಪಾಠಾಂ. ಬೈತಲೆ]ಯ ರಂಗು ಮಾಣಿಕದಂತೆ ಕಣ್ಗೆ ಕಾಣಿಸುತಿರ್ದುದಸ್ತಗಿರಿಮಸ್ತಕದೊಳು (ಕೈಮಿಧಾ. ೬-೪೫). ಬೈತಲೆ : "ನೀಳ್ದ ಬೈತಲೆ ಸೀಮಂತ ಸಮಾಹ್ವಯಂ" (ವಸ್ತುಕೋ. ೭೦-೨೦); ಕರಮಿಂಬಾಗಿರೆ ತಿರ್ದಿ ಬೈತಲೆಯಂ ... ಬರ್ಬರಮೆಂ ಪೂಸಿ ತೊಟಲ್ವರ್ (ಸಮಪ. ೬-೩೬) ; ನಿಮಿರ್ದ ವೇಣಿ ಬೈತಲೆಗಳವಟ್ಟ ಸಿಂದುರಮಳಂಕೆಯೊಳೆಚ್ಚಿದ ಕಜ್ಜಳಂ . . . ಚಲನಯನಂಗಳೊಪ್ಪೆ ನಟನಗೆಯೆ ಪಿಂದನೆ ಬಂದನಾಕ್ಷಣಂ (ದಶಕು. ೬-೧೦೦); ಹರಿಗೆ ಕೆಂಪಿನ ರುಗೆ ಸುರಾಂಗನೆಯರಿಗೆ ಸುಭಟವ್ರಜಕೆ ಕುಂಟಣಿ ವರದಿಗಂಗನೆಯರಿಗೆ ಬೈತಲೆಗೆಸೆವ ಸಿಂಧೂರ . . . ಎನಲುರವಣಿಸಿ ಕೆಂದೂಳಿ ನಭಂಬಪ್ಪರಿಸೆ ಹೊಯ್ದಾಡಿದರುಭಯಚತುರಂಗಬಲ ಹಳಚಿ (ಕುಪ್ಯಾಭೀ. ೯-೭).

ಬಯ್ತಲೆಯ ಸೌಭಾಗ್ಯ = ಮುತ್ತೈದೆತನ : ಮಱೆಯ ಮಾಯಾಶಿರವಿದೀಗಿದು ಮಱುಗಬೇಡೆಲೆ ತಾಯೆ ನಿನ್ನಯ ನೊಸಲಲಿಹ ಬಯ್ತಲೆ [ಪಾಠಾಂ. ಬೈತಲೆ] ಯ ಸೌಭಾಗ್ಯಕಳಿವುಂಟೆ (ತೊರರಾ. ೬-೦೨-೩೮).

[ದೇನಿ. ತುಳು. ಬಕ್ತಲೆ, ಬಗುತಲೆ, ಬಗ್ತಲೆ; ಕೊಡ. ಬವ್ತಲೆ]

ಬಯ್ತಲೆದೆಗೆ, ಬೈತಲೆದೆಗೆ (ಕ್ರಿ). ಕೂದಲನ್ನು ಬಾಚಿ ಇಬ್ಭಾಗ ಮಾಡು : ಇಂಬಾದಿದಱಿರ್ತಡಿಯ ಬನಂ ಬಯ್ತಲೆದೆಗೆದ ಕೇಶವನಮೆನಿಸೆ ಪರಾಗಂಬೊರೆದ ಸಿಂಧು ಸೀಮಂತಂಬೊಲಿಳಾಕಾಂತೆಗಧಿಪ ಮಿಗೆ ಸೊಗಯಿಸುಗುಂ (ಪಾರ್ಶ್ವಪು. ೯-೬). ಬೈತಲೆದೆಗೆ : ಕಿಱುವೆರಲುಗುರಿಂದೆ ಬೈತಲೆ

ದೆಗೆದಾಗ ಮಱೆದುಂಬಿಗುರುಳ ಮಾನಿನಿಗೆ ತುಱುಬನಿಕ್ಕಿದರು (ಮೋಡಕ. ೨೩-೨೯). [ಬಯ್ತಲೆ + ತೆಗೆ]

ಬಯ್ತಲೆವಣಿ, ಬೈತಲೆವಣಿ (ನಾ). ೧. ಬೈತಲೆಯಲ್ಲಿ ಧರಿಸುವ ಆಭರಣ : (ಕಯ್ಪರೆಗುಟ್ಟುತಿದ್ದು, ದೆರಲ್ವೆಣೆದುಕೊಂಡು, ಬಯ್ತಲೆವಣಿಗೆತ್ತಿ ಊರ್ಧ್ವಮುಖಿಯಾಗಿ ಗದ್ಗದಸ್ವರದಿಂದ) . . . (ಘೊಳ್ಳೆಂದು ನಕ್ಕು ಲಲಿತಾಟ್ಟಹಾಸವನ್ನಾಲಾಪಿಸುತ್ತಿರುವಳು (ಮಂಕ್ರಸ. ೨೯-೨೨). **ಬೈತಲೆವಣಿ** : ೧. ಮುತ್ತಿನ ಭುಜಕೀರ್ತಿ ಹರಳೋಲೆ ಮೂಗುತಿ . . . ಉತ್ತಮವಜ್ರದ ಬೈತಲೆವಣಿಗಳನಿತ್ತನವಳಿಗಸುರೇಂದ್ರ (ಕುರಾಸಾಂ. ೪೦-೩೯); ಕಲಿಗಂಟು ಕೆಲವರಿಗೆ ಜೆಡೆ ಕೆಲವರಿಗೆ ಮತ್ತೆ ಕೆಲರಲ್ಲಿ ತುಱುಬನಿಕ್ಕಿದರು ಅವರು ಚವಲಿ ಬೈತಲೆವಣಿ ಮುತ್ತಿನ ಬಲೆಯಿಲ್ಲ ಬಂದರೊಪ್ಪದೊಳು (ಭರಸ. ೦೬-೨೫). ೨. (ಆಲಂ) ಆಭರಣಪ್ರಾಯವಾದ ವ್ಯಕ್ತಿ ; ಶ್ರೇಷ್ಠವ್ಯಕ್ತಿ : ದ್ಯೂತಕೇಳಿಯೊಳಜ್ಞಾತವಾಸದೊಳಂದು ಧಾತುಗುಂದದೆ ಪಾಂಚಾಲಿ ಓತು ಪಾಂಡವರನೊಲಿಸಿ ಹದಿಬದೆಯರ ಬೈತಲೆವಣಿಯೆನಿಸಿದಳು (ಹದಿಬ. ೩-೪೮). [ಬಯ್ತಲೆ + ಮಣಿ$_2$]

ಬಯ್ತು 'ಬಯ್$_1$' ಪರಾ.

ಬಯ್ತುಗ (ನಾ). (?) : ಲಲನಾಮುಖೇಂದು ಲಾವಣ್ಯಲೀಲೆಯಂ ಪಡೆವ ಬಣ್ಣದಿಂ ಕಂಪಿಂದೇನಲೆದುದೊ ಬಯ್ತುಗ [ಹಾಕಾಂ. ಪೈತಿಕ, ಪೈತಿಗ, ಬೈತುಗ] ದಂತಿರೆ ತಲೆಗೇಱುವ ಕುಸುಮನಿಚಯಮಂ ಕಾಶ್ಮೀರಂ (ಅರಿಪು. ೦-೦೨೪). [?]

ಬಯ್ದಕೂರ್ (ನಾ). ಒಂದು ಊರಿನ ಹೆಸರು : ಮದಿರೆಗೊಣ್ಣ ಕೊಪ್ಪರಗೇಶರಿವರ್ಮ್ಮಂಗೆ ವರಿಷಮಿರ್ಪ್ಪತ್ತೊಮ್ಮತ್ತಱೊಳ್ಬಯ್ದಕೂರ ರಾವಿನಾಡ ಮಾರ್ಯಮ್ಮ ಮಮ್ಮ ಗಣಿಪ ರಾಮ ತುಱುವನಿಕ್ಕಿಸಿ ಅಟ್ಕು ಸತ್ತನ್ (ಎಳ. X. ಮುಳಪಾ. ೨೦೩—೨೨ ; 934). [? + ಊರ್]

ಬಯ್ದುಂಬು (ನಾ). ಒಂದು ಊರಿನ ಹೆಸರು (?) : ಸ್ವಸ್ತ್ಯನೇಕ ಸಮರಾಸಂಘಟ್ಟಣೋಪಲಬ್ಧ ಜಯಲಕ್ಷ್ಮೀಸಮಾಲಿಂಗಿತವಕ್ಷಸ್ಥಲ ಗಂಡ ತ್ರಿಣೇತ್ರ ಶ್ರೀ ಬಯ್ದುಂಬ ಮಹಾರಾಜರ್ ಪೃಥಿವೀರಾಜ್ಯಂಗೆಯೆ (ಎಇ. XXIV. ೨೬-೩ ; ಸು. 885). [? + ತುಂಬು$_3$ (<ತೂಂಬು)]

ಬಯ್ಯ (ನಾ). ಒಂದು ಜಾತಿಯ ಹೆಸರು (?) : ಅನ್ತಿಯ ಸುಗ್ಗಯ್ಯನು ಬಿಡಿ ಪೊನ್ನಯ್ಯನುಂ ಅಲ್ಲಮ್ಮನುಂ ಬಯ್ಯರ ಜೋಗನುಂ ಇನ್ತಿನಿಬರುಂ ಸಾಕ್ಷಿಯಾಗೆ ಕೊಟ್ಟರ್ (ಎಳ. XI. ಜೊಳಲ್ಕೆ. ೩೦-೦೩ ; 964). [?]

ಬಯ್ಯಿ (ನಾ). (?) : ಕೈಯಣ ಗಿಂಡಿಯು ಕೊಂಕುಳ ಪೆಟ್ಟಿಗೆ ಕಲ್ಲಿಯಿಹದು ತಲಕಟ್ಟು ಬಯ್ಯಿಗಳೆಂಬವು ಪರಿಪರಿ ನೋಡಲು ಕೋಕಿ ಹಾರಿಕೆ ಅಳವಟ್ಟು (ಸಿರಾಕೋ. ೪೨-೩). [?]

ಬಯ್ಯಿಸು, ಬಯ್ಸು, ಬೈಸು$_1$ (ಕ್ರಿ). ಬಯ್ಯುವಂತೆ ಮಾಡು : ಜರೆಯುವಂತೆ ಮಾಡು ; ದೂಷಣೆಗೊಳಗಾಗಿಸು : ನೀನು ಒಪ್ಪುವುದಾದರೆ ನಾನು ನಿಮ್ಮ ಮನೆಗೆ ಬರುತ್ತೇನೆ. ನೀನೂ ಬಯ್ಯಿಸಿಕೊಳ್ಳುವ ಹಾಗಿಲ್ಲ (ಶಾಲಿಮ. ೩೫); ನಾನು ಯಾರಿಂದಲೂ ಹಾಗೆ ಬಯ್ಯಿಸಿಕೊಂಡವನಲ್ಲ (ಬಂಗಾರ. ೨೪೫). **ಬಯ್ಸು** : ಭಟ್ಟಾರಾ ನಿಮ್ಮಂ ಪಂಚಮಹಾಪಾತಕನ ಮನೆಗೊಡಗೊಂಡು ಪೋಗಿ ಬಯ್ಸಿದೆಂ (ವಡ್ಡಾರಾ. ೬-೩). **ಬೈಸು$_1$** : ಅಪ್ಪನ ಕಡೆ ಬೈಸಿಕೊಳ್ಳೋದು ತಪ್ಪಿತು (ಅಶನಾ. ೬೯); ಬಯಕೆ ಕೊಟ್ಟರೂ ಬೈಸಿಕೊಂಬುದು ತಪ್ಪಲಿಲ್ಲ (ಗಾಸ). [< ಬಯ್$_2$ + — ಇಸು$_3$]

ಬಯ್ಯು 'ಬಯ್$_2$' ನೋ.

ಬಯ್ರಿಬತ್ತ (ನಾ). ಕೆಳತರಗತಿಯ ಒಂದು ಬಗೆಯ ಬತ್ತ : (ಕಿ). [ದೇ.॥ ತುಳು. ಬೈತರಿ, ಬಯಿತ್ತರಿ]

ಬಯ್ಸಿಕೆ 'ಬೈಸಿಕೆ' ನೋ.

ಬಯ್ಸು 'ಬಯ್ಯಿಸು' ನೋ.

ಬರ್ 'ವರ್' ನೋ.

ಬರ$_1$ 'ಬಱ' ನೋ.

ಬರ$_2$ 'ವರ$_1$' ನೋ.

ಬರ$_3$ (ನಾ). ಅನುಗ್ರಹ ; ವರ : "ಬರ—ವರ = ಅನುಗ್ರಹ" (ಕನ್ನಕೋ. ೨೯); ನಾಲ್ಕು ಲಾವಗೆಗಳಗ್ನಿಸೂಕ್ತಂಗಳನೋದುತ್ತುಮದಿರದಿದಿರಂ ಬರೆ ಮೆಚ್ಚಿ ಬರವನಗ್ನಿದೇವಂ ಬೇಡಿಕೊಳ್ಳಿಮೆಂದೊಡೆಮ್ಮನ್ವಯಕ್ಕೆ ನೀನೆ ತಣ್ಣದೆಯಾಗೆಂದು ಬೇಡುವುದುಂ (ಪಂಪಭಾ. ೫-೦೦೦ ಪ) ; ಮೃಡನಿಂ ಬರಂಗಳಂ ಪಡೆದನೆಂಬರ್ ಕಣಾ! (ಶ್ರೀಪಾಪು. ೩೦-೫೦). [< ಸಂ. ವರ]

—ಬರ$_4$ '—ವರಂ' ನೋ.

—ಬರಂ '—ವರಂ' ನೋ.

ಬರಂಗಿ (ನಾ). (?) : ಅಂತು ಖಂ ೭೪ ರೊಕ್ಕ ಗ ೧೧ಕೆ ಭೂಮಿ ಬರಂಗಿ ಖಂ ೨೮ ಮಾರ × × × ರುಹ ಗ ೬ ಅಡಕೇ ಸುಂಕ ಗ ೧ ಉಪಾಧಿಗೆ ಮಾವಿನ ಕೊಡಗಿ ಖಂ ೨೬ ಮೊರಹ × × × (ಎಳ. VIII, ತೀರ್ಥಹ. ೦೯-೯೨ ; 1578). [?]

ಬರಂಪಿಡಿ (ಕ್ರಿ). ವರವನ್ನು ಸ್ವೀಕರಿಸು, —ಹೊಂದು : ವಿರೋಧಿಗೆಂಟರ್ದೆಯೆ ಮೀಱುವ ವೈರಿಗೆ ಮೂರುಕಂಣೆ ಮಾರ್ನ್ನುಡಿವವನೇಂ ಚತುರ್ಬ್ಬುಜನೆ ಮಚ್ಚರಿಪಂಣಲೆಬರ್ಮ್ಮನೊಳ್ ಬರಂಪಿಡಿದನೆ ಮೀಱಿ ಬಾಳ್ವಡವನೇಂ ಜವನೇ ಕಡಿಕೆಯಿದು ಕಾದಲೆಂದೊಡರಿಸುವಾತನೇಂ ಭುಜಗಮರ್ದ್ದನನೇ ಕಲಿಗೋನಭೂಪನೊಳ್ (ಎಳ. VIII, ಸಾಗರ. ೦೦೯-೩೬ ; 1042). [ಬರ$_3$ + ಪಿಡಿ$_1$]

ಬರಂಬಡೆ (ಕ್ರಿ). ವರವನ್ನು ಹೊಂದು ; ಅನುಗ್ರಹವನ್ನು ಪಡೆ : ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ ಮಕ್ಕಳಂ ಪಡೆವಂತು ಪರಾಶರಮುನೀಂದ್ರನೊಳ್ ಬರಂಬಡೆದಳ್ (ಪಂಪಭಾ. ೦-೦೦೬ ಪ) ; ನಡು ನಡಪಿತ್ತು ತನ್ನನೆನೆ ಮೆಯ್ ಬಡವಾದುದು . . . ತೋಳ್ಗಳೊಳ್ ಬರಂಬಡೆದವೊಲೆಯ್ದೆ ಸುಯ್ ಸರಳವಾದುದು (ಸಂಪ್ರಪು. ೫-೦೨೪) ; ಬರಂಬಡೆವನ್ನಮಾರಾಧಿಸಿದಂ (ಕಪುರ.ಪ. ೨೫೮ ಪ್ರಯೋ). [ಬರ$_3$ + ಪಡೆ$_1$]

ಬರಕ$_1$ 'ಬರ್ಕ' ನೋ.

ಬರಕ$_2$ (ನಾ). ಹೊರೆ (?) : ಪೆಜ್ಜುಂಕಕ್ಕೆ ದ್ರಮ್ಮ ೧ ಆ ಬಳಿಯ ಅಡಕೆ ೨೫ ಕತ್ತೆಯ ಬರಿಕಕ್ಕೆ ಪೊಂಗೆ ಅಡಕೆ ೨೦ ಸೀರೆಯ ಸುಂಕ ಪೊದಕೆಗೆ ಪಾಗ ೨ ಸೀರೆಗೆ ಪಾಗ ೧ . . . ಅನ್ತಿಲ್ಲಿಯ ಎಣ್ಣರಾಯಿಗರುಂ ನಾಗೇಶ್ವರ ದೇವರ್ಗ್ಗೆ ೫೦ ಮತ್ತರಲು ತಂತಮ್ಮಾಯಮಂ ಬಿಟ್ಟರು (ಶಾಂಪೇಶ್. ೩-೨೨ಪ; 1047) ; ಅರಮನಸ್ಸಿನಿಂದಲೇ ಅಪ್ಪಯ್ಯನ ಹಿತ್ತಲಿಗೆ ಹೋದಳು. ಅಪ್ಪಯ್ಯ ಆ ವೇಳೆಗೆ ಹುಲ್ಲು ಕಿತ್ತಾಗಿತ್ತು, 'ಬರಕ'ದಲ್ಲಿ ಕಟ್ಟುತ್ತಿದ್ದ (ಕಳಿರು. ೭೯). [ದೇ.॥ ತೆಲು. ಬರಕ=ಹತ್ತಿಯ ಹೇರು]

ಬರಕಂದಾಜ (ನಾ). ಬಂದೂಕು ಅಥವಾ ತುಪಾಕಿಯನ್ನು ಹಿಡಿದಿರುವ ಸೈನಿಕ.—ಸಿಪಾಯಿ: ಇಂಗ್ಲಿಷ್ ಸೇನೆ ಅಂದು ದೇವಿಯ ಹಡಗಿಗೆ ಮುತ್ತಿಗೆ ಹಾಕುವ ಸಂಗತಿ ಅವರಿಗೆ ತಿಳಿದು ಅವರಿಬ್ಬರೂ ಬರಕಂದಾಜ ಸೇನೆಯನ್ನು ತೆಗೆದುಕೊಂಡು ಬಂದಿದ್ದರು (ಬಂಕಿಮ. ೨೭೯). [←ಪಾರ. ಹಿಂ. ಬರಕಂದಾಜ್, ಬರ್ಕಂದಾಜ್ ; ಮರಾ. ಬರಕಂದಾಜ್, ಬರ್ಕಂದಾಜ್]

ಬರಕತ್ತು, ಬರಖತ್ತು, ಬರ್ಕತ್ತು, ಭರಕತ್ತು (ನಾ). ಏಳಿಗೆ; ಅಭಿವೃದ್ಧಿ : ಆ ಮೂರುಮುಕ್ಕಾಲಿನ ಮಾಸ್ತರುಗಳು ಕ್ಲಬ್ಬಿನಲ್ಲಿ ತುಂಬಿರುವಷ್ಟು ದಿವಸ ಕ್ಲಬ್ಬು ಬರಕತ್ತಿಗೆ ಬರಲಾರದಯ್ಯ (ಮುಗಿಯು. ೨೦೭); ಯಾವ ಯಾವ ಒಕ್ಕಲುಗಳನ್ನು ತಂದು ಹಾಕಿ ನೋಡಿದೆ; ಬರಕತ್ತಿಗೆ ಬರಲಿಲ್ಲ (ಪಿಸ್ಕೇ. ೦೮). **ಬರಖತ್ತು** : ನೀಯತ್ತಿದ್ದವರಿಗೇ ಬರಖತ್ತು ಎಂದು ತುರುಕರು ಹೇಳುವುದು ನಿಜ (ಕನಿಸಂ. ೦೪೯). **ಬರ್ಕತ್ತು** : ಬಡವರಿಗೆ ಯಾವಾಗಲೂ

ಬರ್ಕತ್ತಿಲ್ಲ (ಬಾಳಿಗಿ. ೦೩); ಆಕೆಗೆ ಈ ಮದುವೆಯಿಂದ ಬರ್ಕತ್ತಿಲ್ಲ ಎಂದು ಅನಿಸಿತ್ತಂತೆ (ಕೃಷ್ಣಾಂಸ. ೬). **ಭರಕತ್ತು** : ಹಿರಿಯರಾದವರು "ಇದು ಹಿಂದುಗಳ ಜಾಗ, ಇಲ್ಲಿ ನಮಗೆ ಭರಕತ್ತು ಇಲ್ಲ" ಎನ್ನುತ್ತಾರೆ (ಗರುಡಾ. ೦೬೩). [←ಅರ. ಬರಕತ್; ಹಿಂ. ಬರಕತ್, ಬರ್ಕತ್; ಮರಾ. ಬರಕತ್, ಬರಖತ್, ಬರ್ಕತ್]

ಬರಕಾಸ್ತು 'ಬರಖಾಸ್ತು' ನೋ.

ಬರಖತ್ತು 'ಬರಕತ್ತು' ನೋ.

ಬರಖಾಸ್ತ 'ಬರಖಾಸ್ತು' ನೋ.

ಬರಖಾಸ್ತು, ಬರಕಾಸ್ತು, ಬರಖಾಸ್ತ, ಭರಕಾಸ್ತು, ಭರಖಾಸ್ತು (ನಾ). ೧. ಕೊನೆ ; ಮುಕ್ತಾಯ : ಸಾವಿರ ಬಗೆಯ ಭಯದ ಕಲ್ಪನೆಯ ಮೂಲಕ ಬುದ್ಧಿಯನ್ನು ಆರಂಭದಲ್ಲಿಯೇ ಬರಖಾಸ್ತು ಮಾಡಿ ಕುಳಿತಿದ್ದೇವೆ (ಪಿಂಡ. I, ೪೬೬). ೨. ಓಲಗ, ಸಭೆ ಮುಂತಾದುವುಗಳನ್ನು ಸಮಾಪ್ತಿಗೊಳಿಸುವುದು: ವೆಂಕಣ್ಣ ಸಭೆಯನ್ನು ಬರಖಾಸ್ತು ಮಾಡಿದ (ಸಾವಿಕಾ. ೪೦). ೩. ಕಚೇರಿ ಮುಂತಾದುವುಗಳನ್ನು ಮುಚ್ಚುವುದು : ನ್ಯಾಯಾಧಿಕಾರಿಯು ಕೋರ್ಟು ಬರಖಾಸ್ತೆಂದು ಹುಕುಂ ಮಾಡಿದನು (ಕಥಾಮಂ. IV, ೮೫). **ಬರಕಾಸ್ತು** : ೨. ಸಭೆ ಬರಕಾಸ್ತಾಯಿತು (ಅಪ್ಪಾಪ. ೨೯) ; ದರಬಾರ ಬರಕಾಸ್ತು ಮಾಡಿ ಹುಕುಂ ಆದ್ದು ಬೆಳಿಗ್ಗೆ ದರಬಾರು ಆಗುತ್ತೆ (ಮುಡಸ. ೩-೪). **ಬರಖಾಸ್ತ** : ೨. ಪಾನ-ಸುಪಾರಿಯ ಪೇಶ್ವಾಯಿ ದರಬಾರ ನಡೆದು ಬರಖಾಸ್ತ ಆಯಿತು (ದೀಪಹ. II, ೩೩೫). **ಭರಕಾಸ್ತು** : ೨. ಸಭೆ ಭರಕಾಸ್ತಾಯಿತು (ಮಾಮುಸ. ೬೬); ಸಭೆ ಚರುಪು ಖಾಲಿ ಎಂದು ತಿಳಿದಾಗಲೇ ಭರಕಾಸ್ತಾಗಿ ಬರಿದಾಗಿತ್ತು (ಸ್ವೈದ್ಯವಿ. ೦೦೦). **ಭರಖಾಸ್ತು** : ೨. ಸಭೆಯು ಭರಖಾಸ್ತಾಯಿತು (ಶ್ರೀರಾಯ. ೨೫೯) ; ಈ ದರಬಾರು ಭರಖಾಸ್ತಾಗಲಿ (ಬೌಂಕ್. ೩೪೫). [← ಪಾರ. ಬರಖಾಸ್ತ್, ಬರಖವಾಸ್ತ್ ; ಹಿಂ. ಮರಾ. ಬರಖಾಸ್ತ್, ಬರ್ಖಾಸ್ತ್]

ಬರಗ 'ಬರಗು' ನೋ.

ಬರಗರಗ 'ಬರಗರುಗ' ನೋ.

ಬರಗರುಗ, ಬರಗರಗ (ನಾ). ಒಂದು ಬಗೆಯ ಸಸ್ಯ; ಗರುಗದಲ್ಲಿ ಒಂದು ಬಗೆ : ಅಳಿಲೆಕಾಯಿ ತಾರೆಕಾಯಿ . . . ಅಮರದ ವಳ್ಳಿ, ಬರಗರುಗ ಇವಂ ಕಷಾಯವಿಟ್ಟು ಸೇವಿಸೆ ಶ್ಲೇಷ್ಮಜ್ವರಂ ತೀರ್ಗುಂ (ಸಳಸ್ಯ. ೬೯). **ಬರಗರಗ**: ಹಿತ್ತಾಳೆ ಶುದ್ಧಿ: ಹೊನ್ನುಗೊನ್ನೆ ಸೊಪ್ಪು ಬರಗರ [ಬರಗರಗ] ಸೊಪ್ಪು ತುಂಬೆ ಯಾ ೩ ರಸಗಳನ್ನು ಸಮ ಮಾಡಿ ೭ ದಿನ ಇದರಲ್ಲಿ ಉನೇ ಹಾಕಿ ತೊಳದು . . . ಸ್ವಲ್ಪ ರಸ ಹಾಕಿ ಕರಗಿಸಲು ಬಣ್ಣ ಬರುವುದು (ಗಂರಪ್ರ. ೦೬-೩). [ಬರ$_1$(<ಬಱ) + ಗರುಗ]

ಬರಗಲೆ (ನಾ). ಒಂದು ಬಗೆಯ ಆಭರಣ : ಸರಿಗೆಗಿವು ಲಂಬಣಕ್ಕಿವು ಬರಗಲೆಗಿವು [ಶಾಕಾಂ. ಬರಗಲ್ಗಿವು] ಮುಗುಳ್ಗಳೆಮ್ಮ ಮೇಖಲೆಗಿವು ನೂಪುರ ರಚನೆಗಿವೆಂದವನಾದರದಿಂದಂ ಕೊಯ್ದರಾಯ್ದು ದಿವಿಜಾಂಗನೆಯರ್ (ಅದಿಪು. ೬-೬೯) ; ಬರಗಲೆಯುಂ ಕೊಪ್ಪುಂ ನೂಪುರಮುಂ ಲಂಬಳಮುಮಲ್ಲಿ ಮಲ್ಲಿಗೆಯ ಮುಗುಳ್ ಬಿರಿಮುಗುಳೆಂಬಿವು ತನಗಾಗಿರೆ ದೇಸೆಯ ಮಾಸರಿಕೈಯಂ ಪೊಸಯಿಸಿದಳ್ (ಶಾಂತಿಪು. ೬-೨೨). [?]

ಬರಗಾಡು (ನಾ). ನಿಸ್ಸಾರವಾದ ಕಾಡು,-ಅಡವಿ : ಬಂಜರುಭೂಮಿ: ಭೂಮಿ ಬರಗಾಡು ನಿಸ್ಸಾರ (ಭೂವಿವ. ೪೦೯). [ಬರ$_1$ (<ಬಱ)+ಕಾಡು$_2$]

ಬರಗಾಲ 'ಬಱಗಾಲ' ನೋ.

ಬರಗಿ 'ಪರಗಿ' ನೋ.

ಬರಗಿನಹುಲ್ಲು (ನಾ). ಒಂದು ಬಗೆಯ ಹುಲ್ಲು; ಬರಗು: "ಕೋದ್ರಹರಿ-ಬರಗಿನ ಹುಲ್ಲು" (ಕಿಷ್ಕಿ. ೪೦). [<ಬರಗು$_2$+ಹುಲ್ಲು (<ಪುಲ್)]

ಬರಗು$_1$ (ಕ್ರಿ). ಬಾಚು ; ಗೋರು : ಬಯಲಿಂಗೆ ಕೈ ಬಿಚ್ಚಿ ಬರಗುತ ಭೀಮ ಬಾ ಸಹಸ ಬಳಲಿದೆಯಲಾಯಂದು ಮೋಹದಿಂದ ಕಿಚ್ಚುಗೆದರುತ ಮನದಿ ಕರೆಯಲ್ಬಕಾರಿಯಂ ಅಚ್ಯುತನು ಹಿಂದಿರಿಸಿ . . . ಉಕ್ಕಿನೋಳ್ಮಾಡ್ದ ಭೀಮನಂ ನಿಲಿಸಿದರು ತಂದು ಮುಂದೆ (ಕುರುಂಗ. ೬೭-೨೨); ಕಾವ್ಯವೆಂದರೆ ನಮ್ಮಂಥ ಜೀವಿಯೇ ಅಲ್ಲದಿರುವಲ್ಲಿ ಅದರೊಳಗೆ ಆತ್ಮವನ್ನು ತುಂಬಿಸುವುದೆಂದರೆ . . . ಬಾನನ್ನು ಬರಗುವಂತೆಯೇ ಸರಿ (ಪಾಶೋಕ. ೩೩೯).

ಬರಗು$_2$, ಬರಗ (ನಾ). ೧. ಒಂದು ಬಗೆಯ ಧಾನ್ಯ ; ಹಾರಕ : "ಸ್ಯಾಮಕಾಹ್ವ ಬರಗುವದಕ್ಕುವಂತಾ ಪ್ರಿಯಂಗು ಕಂಗು ಸಮಾಖ್ಯಂ" (ಪಸ್ತುಕೋ. ೪೯-೦೬); ನೀವಿಕ್ಕುವ ಕೀರೆಗಂ ಬರಗಿನೋಗರಕ್ಕುಂ ಪುಟ್ಟಿದವನಲ್ಲ (ಪಂಪಪ. ೨-೬೩); ಆದರದೆ ಜ್ಯೇಷ್ಠದಪರದ ಬೂದಿಯ ಮೃಗಶಿರದೆ (ರಾದಿ) ಕೊಂಡ ಮಟಿಯಿಂ ಬೆಳೆಗುಂ ಮೇದಿನಿ ಪೊಱಗಣ(ವರ) ನಾಲ್ಕ ಱೊಳಾದಡೆ ಪಾರಕ್ಕು ಬರ(ಱ)ಗು ಬೆಳೆಗುಂ ಸ್ವಲ್ಪಂ (ಅಟ್ಟಿಮ. ೬-೦೩೬). ೨. ಬೆಟ್ಟಗಳಲ್ಲಿ ಬೆಳೆಯುವ, ಬರೆಯುವ ಲೇಖನಿಯನ್ನು ತಯಾರಿಸಲು ಉಪಯೋಗಿಸುವ ಒಂದು ಬಗೆಯ ಕಡ್ಡಿಯಾಗುವ ಹುಲ್ಲು : 'ಬರಗುಕಡ್ಡಿ' ಪರಾ. **ಬರಗ** : ೧. ಬರಗದ ಅನ್ನ ತಿನ್ನುವವ ಹೂರಿಗೆ ಬಯಸಿದ ಹಾಗೆ (ಗಾಪ).

[ದೇ.॥ ತಮಿ. ವರಕು; ಮಲ. ವರಗು; ತೆಲು. ವರಗ, ವರಿಗೆ. / ಸಂ. ವರಕ, ವರುಕ./ಮರಾ. ಬರಗ]

ಬರಗುಕಡ್ಡಿ (ನಾ). ೧.=ಬರಗು$_2$ ೨ : ಕತ್ತೃಣಂ, ಪೌರಂ, ಸೌಗಂಧಿಕಂ, ಧ್ಯಾಮಂ . . . ರೌಹಿಷಂ — ೬ ಕಾಚೀಹುಲ್ಲು, ಕಾಚೀಕಡ್ಡಿ, ಹಂಚೀಕಡ್ಡಿ, ಬರಗುಕಡ್ಡಿ ಇವುಗಳೆಲ್ಲಕ್ಕೂ ಪೆಸರುಗಳು (ಸಿದ್ಧಾಂತಿ. ೧೫೦). ೨. ಬರಗಿನ ಹುಲ್ಲಿನ ಕಡ್ಡಿಯಿಂದ ಮಾಡಿದ ಲೇಖನಿ : (ಕಿ).

[ಬರಗು$_2$ + ಕಡ್ಡಿ]

ಬರಗೂರ್ (ನಾ). ಒಂದು ಊರಿನ ಹೆಸರು; ೫ ಬಳ್ಳಾರಿ ಜಿಲ್ಲೆಯ ಈಗಿನ ಬರಗೂರು : ಶ್ರೀ ಮಹೇನ್ದ್ರಾಧಿರಾಜನಾತಂ ಚೋರಮ್ಮೊದಲಾದ ಶೇಷಾದಾಯಿಗರ ನಿರ್ಮೂಲಂ ಕಿಡಿಸಿ ಪೃಥ್ವೀರಾಜ್ಯಂಗೆಯ್ಯುತ್ತ ಬರಗೂರೊಳ್ಬೀಡಂ ಬಿಟ್ಟು (ಎಳ. XII, ಕಿರಾ. ೨೪-೨; ಸು. ೨೦೦); ಶ್ರೀ ಪ್ರಿತುವೀವಲ್ಲವ ಪಲ್ಲವಕೊಲತಿಲಕ ಶ್ರೀಮನ್ಮಯ್ದಮ್ಮರಸಪ್ಪಿ [ಗ]ತುವೀರಾಜ್ಯಂಬ್ಗೆಯ್ದು ಬರಗೂರೊಳಿರೆ (ಪೌಷಾ. IX-i, ೪೦-೬; ೪೯೯).

[ಬರಗು$_2$ + ಊರ್]

ಬರಗೆಡು (ಕ್ರಿ). ಏನೂ ಇಲ್ಲದಂತೆ ಆಗಿ ಕಂಗೆಡು; ಗತಿಗೆಡು : ಆ ಬರಗೆಟ್ಟ ಬಡ ಹುಡುಗರು ಉಣ್ಣುವ ಸಂಭ್ರಮ ನೋಡಿ ಆ ಧಾರ್ಮಿಕ ವೈದ್ಯನಿಗೆ ಪರಮಸಂತೋಷವಾಯಿತು (ಮುಂಬಯಿ. ೪-೬೬); ಈ ನಂಜೇ ಲಿಂಗಭಟ್ಟನು ಬರಗೆಟ್ಟು ಅಲ್ಲಿದ್ದ ತಿಂಡಿಗಳನ್ನು ತಿಂದನು (ತೀತಿಸಂ. II, ೬).

[ಬರ$_1$ (< ಬಱ) + ಕೆಡು$_1$]

ಬರಟು (ನಾ). (ಉಕ) ಹೂವು, ಕಾಯಿಗಳು ಆಗದಂಥ ತೊಗರಿಯ ಹಸಿಯ ಗಿಡ : ಬರಟಿನಿಂದ ಕಣದ ಕಸ ಹೊಡೆದು ತೆಗೆ (ಕೂಡಿ). 'ಬಱಲು' ಪರಾ. [?]

ಬರಡಕೆಱೆ 'ಬರಡಗೆಱೆ' ನೋ.

ಬರಡಗೆಱೆ, ಬರಡಕೆಱೆ (ನಾ). ಒಂದು ಕೆರೆಯ ಹೆಸರು (?) : ಅನ್ತೆ ಬನ್ದು . . . ಇಶನೈದಿಶಿ ಒಳಿಗೆಱೆಯ ಬರಡಗೆಱೆಯೊಳ್ಳುಡಿತ್ತು (ಎಳ. XVI, ತಿಪಟೂ. ೦೪೦-೬೬; ಸು. ೨೦೦). **ಬರಡಕೆಱೆ** : ಕೆಡಸೂರ್ ಪೂರ್ಬ್ಬಸ್ಯಾನ್‌ದಿಶಿ ಬರಡಕೆಱೆಯ ಮೂಡ ಕಡೆ ಗೋಡೆಬಳ್ಳವಗೆಱೆಯ (ಮೃಅರಿ. ೦೯೦೯, ೦೦-೬೯; ೨೦೦). [ಬರಡ ? + ಕೆಱೆ]

ಬರಡಾ, ಬರಡೀ, ಭರಡಾ (ನಾ). ಒಂದು ಬಗೆಯ ಅಡಕೆ ; ಹಣ್ಣು ಅಡಕೆ : ಬರಡಾಅಡಕೆ—ಬಹಳ ದೊಡ್ಡದಾಗಿ ಹಾಂಗೂ ಸಣ್ಣದಾಗಿರ

ಬಾರದು, ಮಧ್ಯಮ ಇರತಕ್ಕದ್ದು . . . ಇಂಥಾ ಮಾಲವೂ ಒಂದನೇ ನಂಬರದ ಬರಡಾಅಡಿಕೆ ಎಂದೆನಿಸಲ್ಪಡುತ್ತದೆ (ಮುಂಬಿವ್ಯಾ. ೯೯). **ಬರಡೀ:** ಅಡಿಕೇಕಾಯಿ ಹಣ್ಣಾಗುವವರೆಗೆ ಬಿಟ್ಟರೆ ಅದರೊಳಗೆ ಮೇಲಾದ ಬರಡೀ ಅಡಿಕೆ ಹೊರಡುತ್ತದೆ; ಯೆಳಕಿನ ಕಾಯಿಯಲ್ಲಿ ಚಿಕಣೀಅಡಿಕೆ ಹೊರಡುತ್ತದೆ (ಕಣಾಗ. ೨೬೪). **ಭರಡಾ:** ಅವಳು . . . ಭರಡಾಅಡಿಕೆಯನ್ನು . . . ಮುಂದೆ ಹಿಡಿದಳು (ರಕ್ತರ್ಯ. ೨೧೬). [← ಮರಾ. ಬರಡಾ, ಬರಡೀ]

ಬರಡಿ 'ಬಱಡಿ' ನೋ.

ಬರಡೀ 'ಬರಡಾ' ನೋ.

ಬರಡು 'ಬಱಡು' ನೋ.

ಬರಡುಗಾಲ (ನಾ). ಕ್ಷಾಮದ ಕಾಲ: ವಚನಸಾಹಿತ್ಯದ ದೃಷ್ಟಿಯಿಂದ ಹದಿಮೂರು ಹದಿನಾಲ್ಕನೇ ಶತಮಾನಗಳು ಬರಡುಗಾಲವೆಂದೇ ಹೇಳಬೇಕು (ಕೂಸ್ಕಳು. ೦೪). [ಬರಡು (<ಬಱಡು) + ಕಾಲ]

ಬರಡುಗೊಳಿಸು (ಕ್ರಿ). ವ್ಯರ್ಥಗೊಳಿಸಂ : ನಿಷ್ಪ್ರಯೋಜಕವನ್ನಾಗಿ ಮಾಡು : ಕಣ್ಣು ಗುಡ್ಡಿಯೆ ಆಗಿ ಕುರುಡುಗೊಳಿಸುವೆಯಾ ? ನೆರಳು ನೀಡುತ ಸಸಿಯ ಬರಡುಗೊಳಿಸುವೆಯಾ? (ಪವ್ಯರ್ಯ. ೭-೦೩).
[ಬರಡು (<ಬಱಡು) + ಕೊಳ್$_1$ + — ಇಸ್ಸು$_3$]

ಬರಡುತನ (ನಾ). ಮಕ್ಕಳಾಗದಿರುವಿಕೆ; ಬಂಜೆತನ : ಕೆಲವೊಮ್ಮೆ 'ಇ' ಜೀವಾತಿನ ಅಭಾವದಿಂದ ಹೆಣ್ಣುಮಕ್ಕಳಲ್ಲಿ ಮತ್ತು ಗಂಡಸರಲ್ಲಿ ಕೂಡ, ಬರಡುತನ ಬರಬಹುದು (ಅಡುಸೌ. ೬೬). [ಬರಡು (<ಬಱಡು)+— ತನ]

ಬರಡುಭೂಮಿ (ನಾ). ಬಂಜೆನೆಲ ; ಪಾಳುಭೂಮಿ ; ಬಂಜರು : ಬರಡುಭೂಮಿ ಬಂಗಾರದ ಭೂಮಿಯಾಗುತ್ತದೆ (ಪವರಿ. ೩೦).
[ಬರಡು (<ಬಱಡು) + ಭೂಮಿ]

ಬರಡುಮರ (ನಾ). ಫಲ ಬಿಡದ ಮರ : ಎಲ್ಲಿಂದಲೋ ಸುಳಿಗಾಳಿ ಶಾಕಿ ಬರಡುಮರದ ಒಂದೆರಡು ಎಲೆಗಳೂ ಉಲಿಯುವಂತೆ, ಅವಳ ತಲೆಯಲ್ಲಿ ಒಂದೆರಡು ವಿಚಾರಗಳು ಗುಜುಗುಜು ಮಾಡಹತ್ತಿದ್ದವು ((ಪಿರಾಶ. ೩೦).
[ಬರಡು(<ಬಱಡು) + ಮರ$_1$]

ಬರಡುಮಾತು (ನಾ). ವ್ಯರ್ಥವಾದ ಮಾತು : ಸುಮ್ಮನೆ ಬರಡು ಮಾತಿನಿಂದೇನು ಲಾಭ ? (ರೂಢಿ). [ಬರಡು (<ಬಱಡು) + ಮಾತು$_1$]

ಬರಡೆ 'ಬಱಡೆ' ನೋ.

ಬರಣ (ನಾ). (?) : ಕೇಶವ ದೇವರಿಗೆ ಒನ್ದು ವರಹ ಕುಳದ ದಾಸರಿ ಬರಣ ತಿಮ್ಬ ಒನ್ದು ಬರಣ ತೋಟವನೂ ದೇವಸ್ವವಾಗಿ ಧಾರೆಯನೆಱದು ಕೊಟ್ಟೆವಾಗಿ (ಎಕ. VIII, ಸೊರಬ. ೩೨೬-೦೦ ; 1515). [?]

ಬರಣಿ (ನಾ). ಕರಡಿಗೆ ; ಕರಂಡಕ : ಏಂ ಬಱಿದೆ ಪರಪುವೈ ಪಲವುಂ ಬರಣಿಯನಿರಿಸು ಕೆಲಕೆ ನೆಲೆವೆಲೆ ಪೇಟಾ ಪೊಂಬರಣಿಗಳೆರಡರ್ಕಂ ಚೆಂಬರಣಿ ಗಮಿನಿತಱಿಂದೆ ತಣಿದಪೆವೀಗಳ್ (ಪಕಪಿ. ೬-೩೦) ; ಅರಣಿ ಕಡಿದರೆ ಬರಣೀ ಮದ್ದು ಸಾಲದು (ಗಾರ).
[<ಸಂ. ಭರಣೀ./ತಮಿ. ಮಲ. ಪರಣಿ ; ತುಳು. ಬರಣಿ, ಬರಣೆ ; ಕೊಡ. ಬರಣಿ ; ತೆಲು. ಬರಣಿ, ಬರಿಣೆ]

ಬರತ$_1$ 'ಭರತಿ' ನೋ.

ಬರತ$_2$ (ನಾ). ಒಂದು ಬಗೆಯ ವ್ಯಂಜನಪದಾರ್ಥ ; ಬಜ್ಜಿ : ತೆಳ್ಳನ್ನ ಎಂಟುಹತ್ತು ರೊಟ್ಟಿಯ ಮಾಡಿ ಬದನೀಕಾಯಿಯ ಸುಟ್ಟು ಬರತವ ಮಾಡಿ ಅಲ ಮಾಗಣಬೇರು ಹಣ್ಣಾಗಂಚಿಯ ಕಾಯಿ ಸಲಸಂದರೊಂದ್ತುತ್ತು ಸಲಸಿದೆನೊ ಶಿವನೆ (ಲೋಕಗೀ. ೯೩). [?].

ಬರತರಪು 'ಬರತರಪು' ನೋ.

ಬರತರಫ್ 'ಬರತರಪು' ನೋ.

ಬರತರಪು, ಬಡತರ್ಫ್, ಬರತರಪು, ಬರತರಫ್, ಬರತರ್ಫು, ಬರತರ್ಫು, ಬರ್ತರಫ್, ಬರ್ತರ್ಫ್, ಬರ್ತರ್ಫ್, ಭರತರ್ಫು (ನಾ). ಉಚ್ಚಾಟನೆ ; ರದ್ದತಿ; ವಜಾ; ಕೆಲಸದಿಂದ ತೆಗೆದುಹಾಕುವಿಕೆ : ಪಾರ್ಲಿಮೆಂಟಿನವರು ಅರಸನಿಗೆ ಹಣ ಕೊಟ್ಟು ಬಕಿಂಗ್‌ಹಮನನ್ನು ಬರತರಪು ಮಾಡಬೇಕೆಂದು ಮತ್ತೆ ಹೇಳಿದರು (ಇಂಗ್ಲಂಡ. ೦೯೦); ೪೦೦೦ ಕುದುರೆ ಬರತರಪು ಮಾಡಿಸಿ (ಹೈದರ. ೩೯). **ಬಡತರ್ಫ್** : ಕೆಲವು ದಿವಸಗಳ ಕೆಳಗೆ ನಾನು ನಮ್ಮ ಬಡತರ್ಫ್ (dismiss) ಮಾಡಿದ ಆಳುಮಗನಿಗೂ ಒಂದು ತುಣುಕು ಮಾನಪತ್ರವನ್ನು ಕೊಟ್ಟೆನು (ಪಿರಾಶ. ೦೪೭). **ಬರತರಪು** : ಅವನು ಆ ಮಣೆಗಾರನನ್ನು ಬರತರಪು ಮಾಡಿಸಿದನು (ಕಥಾಮಂ. IV, ೩೦). **ಬರತರಫ್** : ಮೊದಲು ಹೈದರನು ನಾಲ್ಕು ಸಾವಿರ ಕುದುರೆಯವರನ್ನು ಈ ರೀತಿ ತೊಲಗಿಸಿ ಅವರ ಸೈನ್ಯವನ್ನು ಬರತರಫ್ ಮಾಡಿಸಿದನು (ಒಡೆಕ. ೭೨) ; ಇನ್ಸ್‌ಪೆಕ್ಟರು . . . ನನ್ನನ್ನು ಬರತರಫ್ ಮಾಡಿಬಿಟ್ಟರು (ಶ್ರೀಕಥೆ. ೭೬). **ಬರತರ್ಫು** : ಸಸ್ಪೆಂಟು, ಬರತರ್ಫು ಎಂದ ಕೂಡಲೆ 'ದಮ್ಮಯ್ಯ ಮಾಫಿ ಮಾಡಿ' ಎಂದು ವಿಧೇಯತೆಯನ್ನು ತೋರಿಸುವುದು (ಗರುಡಾ. ೯೩): **ಬರತರ್ಫು** : ಅಂಥಾ ನೌಕರನನ್ನು ಸಸ್ಪೆಂಡ್ ಮಾಡಬಹುದು, ಬರತರ್ಫು ಮಾಡಬಹುದು (ಗ್ರಾಮಾಕ. ೬೬). **ಬರ್ತರಫ್** : (ಕೃಸ್‌ಗ. II, ೫೯೩). **ಬರ್ತರ್ಫ್** : ಜ್ವರ ನಿಂತರೆ ಬರ್ತರ್ಫ್ ಮಾಡುತ್ತಾರಲ್ಲಾ ಜ್ವರಾನೂ ಉಳಿಸಿಕೊಂಡು ಬಿದ್ದು ಕೊಂಡೇ ಇರೋಣ, ಅಂತ ಅನ್ನಿಸುತ್ತದೆ (ಸಂಗೂಲ. ೦೦೦) ; ಸೋಮು ಪ್ಯಾಸ್ ಆಗಲಿಲ್ಲ. ಆದುದರಿಂದ ತಂಡದಿಂದ ಅವನಿಗೆ ಬರ್ತರ್ಫ್ ಆಯಿತು (ಸ್ವಾಮಿಸ್ನೇ. ೦೨೯). **ಭರತರ್ಫು** : ಷರಾರತ್ತು ಮಾಡಿದವರು ಭರತರ್ಫಾಗಿ ಹೋಗುವಲ್ಲಿ ಮಾರ್ಗದಲ್ಲಿ ಅವರನ್ನೆಲ್ಲಾ ಲೂಟೀ ಮಾಡಿ (ಹೈದರ. ೩೯).
[←ಹಿಂ. ಬರತರಫ್ ; ಮರಾ. ಬರತರಫ್, ಬರತರ್ಫ್, ಬರ್ತರ್ಫ್]

ಬರತರ್ಫು 'ಬರತರಪು' ನೋ.

ಬರತರ್ಫು 'ಬರತರಪು' ನೋ.

ಬರದೆ (ನಾ). ಒಂದು ನದಿಯ ಹೆಸರು ; ವರದಾನದಿ : ಮೂಡಲು ತಮ್ಮುಗೆಯ ಕಳ್ಳವೊಳೆ ಮೊದಲಾಗಿ ಬರದೆಯಿಂ ತೆಂಕ ಪೋಪ ಭಣ್ಡಕ್ಕೆ (ಎಇ. XIX, ೦೬೫-೦೬ ; 1075). [<ಸಂ. ವರದಾ]

ಬರನು 'ಬಱ' ನೋ.

ಬರಪ 'ಬರೆಪ' ನೋ.

ಬರಬತ್ತ (ನಾ). ಖುಷ್ಕಿ ನೆಲದಲ್ಲಿ ಬೆಳೆಯುವ ಬತ್ತ ; ಪುಣಜಿ ಬತ್ತ : ನೀರಾವರಿ ಇಲ್ಲದ ಕಡೆ ಹೊಲಗಳಲ್ಲೇ ಬರಬತ್ತ ಬೆಳೆಯುತ್ತಾರೆ (ರೂಢಿ).
[ಬರ$_1$ (<ಬಱ) + ಬತ್ತ]

ಬರಬಿಸಿಲು (ನಾ). (ಹಸಿಯನ್ನು) ಒಣಗಿಸುವಂತಹ ಬಿಸಿಲು ; ಅತಿ ತಾಪದ ಬಿಸಿಲು : ಬರಬಿಸಿಲಿಂದ, ಹೊದೆಯದ ಅವನ ಮೈ ಬಾಡಿ ಬೆಂಡಾಗಿತ್ತು (ಹೇಮಕೂ. ೫೯). [ಬರ$_1$ (<ಬಱ)+ಬಿಸಿಲು (<ಬಿಸಿಲ್)]

ಬರಬು 'ಬರುಹು' ನೋ.

ಬರಮ 'ಬೊಮ್ಮ' ನೋ.

ಬರಮಪ್ಪ (ನಾ). ಬೊಮ್ಮ ; ಬ್ರಹ್ಮ : ಡೋಳಿನ ಮ್ಯಾಲ್ ಕೈ ಬರಮಪ್ಪ ಹಾಕ್ಯಾನು ತಾಳವ ಶಿವನಪ್ಪ ತಟ್ಟಾನ್ಮ್ಯಾ ಒಳ್ಳೊಳ್ಳೆ ಪದಗಳು ಹನುಮಪ್ಪ ಹಾಡ್ಯಾನು ಚೆಲುವ ಕನಕಪ್ಪ ಕುಣಿದಾನ್ಮ್ಯಾ (ಕಪಕ. ೦೨೦-೦೨). [ಬರಮ (<ಬೊಮ್ಮ) + ಅಪ್ಪ$_1$]

ಬರಮೋಡ (ನಾ). ಅಕಾಲದ ಮೋಡ ; ನೀರಿಲ್ಲದ ಮೋಡ : ವಸಂತಪೂರ್ಣಮಿಯ ಭೃಗುವಾರದಾ ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳುವಿಲ್ಲ ; ನೋಡೊಂದೆ ಬರಮೋಡ ಬಾನಗಲ ಚಾಚಿ ನೋಹನ ಕಾಲದಾ ಪ್ರಲಯಮೇಘವೆನೆ ಮುಚ್ಚಿಹುದು (ಗೂಲ್ಕೂಠಾ. ೦೦-೨೬೩). [ಬರ$_1$ (<ಬಱ)+ ಮೋಡ]

ಬರಲು 'ಬಱಲು' ನೋ.

ಬರಲುಕಡ್ಡಿ (ನಾ). ಪೊರಕೆಯನ್ನು ಕಟ್ಟಲು ಉಪಯೋಗವಾಗುವ ಗಿಡಗಳ ಒಣಗಿದ ಕಡ್ಡಿ : (ಪ್ರೃಜಿಗಿ. ೦-೪).
[ಬರಲು (<ಬಱಲು) + ಕಡ್ಡಿ]

ಬರಲುಕೊಂಬೆ (ನಾ). ಎಲೆಗಳು ಉದುರಿ ಬೋಳಾದ ಕೊಂಬೆ : ಕಿಟಕಿಗೆದುರುಬದುರಾಗಿ ಉದ್ದವಾದೊಂದು ಮರದ ನೆರಳು ಬಿದ್ದಿತ್ತು. ಅದರ ಬರಲುಕೊಂಬೆಗಳ ಜಟಿಲಪ್ರತಿರೂಪ . . . ನುಜ್ಜುಗಲ್ಲು ನೆಲದ ಮೇಲೆ ಸ್ಪಷ್ಟವಾಗಿ ಮೂಡಿತ್ತು (ಪುಸರು. ೦೩೩).
[ಬರಲು (< ಬಱಲು) + ಕೊಂಬೆ$_1$]

ಬರಲುಗಿಡ (ನಾ). ಎಲೆಗಳು ಉದುರಿ ಒಣಗಿದ ಗಿಡ : ಒಂದು ಕವಲ ತುದಿಗೆ ಒಂದು ಗಿಡವು ಶೋಭಾಯಮಾನವಾಗಿ ಬೆಳೆದಿದ್ದು ... ಇನ್ನೊಂದು ಕವಲಿನ ಮೇಲೆ ಒಂದು ಬರಲು ಗಿಡವು ಬೆಳೆದಿತ್ತು (ರಕ್ತರ್ಷ. ೦೬೨). [ಬರಲು (<ಬಱಲು) + ಗಿಡ (<ಗಿಡು)]

ಬರಲುವೋಗು (ಕ್ರಿ). ಎಲೆಗಳು ಉದುರಿ ಬೋಳಾಗಿರು : ಮಾಗಿಗೆ ಬರಲುವೋದ ಬೂರುಗಮರಂ ಕೋಡುಕೋಡಿನ ಕವಲ್ಗಣೆಗಳಿಂ ಮಲೆ ತಲೆಗೆ ಕೋಡು ಮೂಡಿದ ತೆರನ ತೋರ್ಪಂತೆ (ಶ್ರೀರಾಮಾ. ೨೩೦-೮೯).
[ಬರಲು (< ಬಱಲು) + ವೋಗು$_1$ (<ವೋ$_1$)]

ಬರವಣ (ನಾ). "ಬರವಣಿಗೆ" (ಗಿಳಿಮಿ. ಕೋಕ) : ಹಸುರು ಮಸಿಯಿಂ ಬರೆದುದಿದರ ಬಿನ್ನಣಮೇಂ ? ನಿನ್ನ ಕವನಕೆ ಕಾಲನಿಟ್ಟ ಟಿಪ್ಪಣಮೇಂ ? ಮುನ್ನನಿಂದಿಗೆ ಸಾಲವಿತ್ತ ಬರವಣವೊ ? ನಿಚ್ಚತೆಗೆ ನಮ್ಮನೋಲಯಿಸುವವುತಣವೊ ? (ಗಿಳಿಮಿ. ೨೬-೨೩).
[ಬರೆ$_1$ + — ಅಣ]

ಬರವಣಿಗ (ನಾ). ಬರೆಯುವವನು; ಲಿಪಿಕಾರ : ಬಿರುದರು ಬರವಣಿಗರುಂ ಗವಱಿಗಳುಂ ಗಾತ್ರಿಗರುಮಯ್ವತ್ತೊಕ್ಕಲುಂ ಸಮಸ್ತ ನಖರಂಗಳುಂ . . . ಪಾಮಶಕ್ತಿದೇವರಿಗೆ ಧಾರಾಪೂರ್ಬ್ಬಕಂ ಮಾಡಿ (ಕೂಲ್ಡಾಶಾ. ೦೩-೬೬; 1186). [ಬರೆ$_1$ + — ವಣಿಗ$_2$ (< — ವಳಿಗ$_2$)]

ಬರವಣಿಗೆ, ಬರೆವಣಿಗೆ(ನಾ). ೧. (ಬರೆದ) ಅಕ್ಷರ ; ಲಿಪಿ : "ಲಿಪಿಃ, ಲಿಬಿಃ — ೨ ... ಬರೆಯಲ್ಪಟ್ಟ ಅಕ್ಷರಗಳ ಆಕಾರಸ್ಥಿತಿಗೆ ಹೆಸರು ಶಾಸನದ ಲಿಪಿ ಮುಂತಾದ್ದು, ಬರವಣಿಗೆಗೂ ಹೆಸರುಗಳು" (ಸಿದ್ಧಾಂತಿ. ೨೩೯). ೨. ಬರೆಯುವಿಕೆ : ಇಗೊರ್ ಅಲೆಕ್ಸಾಂಡ್ರೊವಿಚೆ ಬರವಣಿಗೆ ಮುಗಿಸಿ ಕನ್ನಡಕವನ್ನು ತೆಗೆದಿಟ್ಟು "ಕುಳಿತುಕೊಳ್ಳಿ, ಕುಳಿತುಕೊಳ್ಳಿ" ಎಂದರು (ಶಾಲೆಮು. ೦೬೩). **ಬರೆವಣಿಗೆ** : ೩. ಬರೆದುದು ; ಬರಹ ; ಲೇಖನ : ಪಂಡಿತರ ಬರೆವಣಿಗೆಗಳಲ್ಲಿ ಸಂಸ್ಕೃತಪ್ರಚುರವಾದ ಭಾಷೆಯಿತ್ತು (ಕಸಾಪ. ೦೦).
[ಬರೆ$_1$ + — ವಣಿಗೆ]

ಬರವಸ 'ಭರವಸ' ನೋ.

ಬರವಸಿಗ 'ಭರವಸಿಗ' ನೋ.

ಬರವಿಗ (ನಾ). ಬರುವವನು ; ಆಗಮಿಸುವವನು : ಅನತಿ ದೂರದೊಳೊರ್ವಳ್ ಕೂರಿಸಿದ ಬರವಿಗನ ಬರವಿಂಗೆ ಶಯ್ಯಾಸನಮಂ ರಯ್ಯಂ ಮಾಡಿರಿಸೆ ಪೀಠಮರ್ದಕಂ ಸಾರ್ದು ನೋಡಿ (ಸಂಪ್ರಪು. ೬೩-೬೦೫). [ಬರವು (<ವರ$_1$) + — ಇಗ)]

ಬರವು 'ವರ$_1$' ನೋ.

ಬರವುಲಿಕ (ನಾ). ಒಂದು ಸ್ಥಳದ ಹೆಸರು : ಪೂರ್ವ್ವಸ್ಯಾಂ ದಿಶಿ ಬರವುಲಿಕ ಸೀಮೆ (ಇಕ. VII, ೨೧೯-೪೪; ಸು. 10ವೆಯ ಶತ). [?]

ಬರಷಣ 'ಭರಷಣ' ನೋ.

ಬರಸಿಡಿಲು 'ಬಱಸಿಡಿಲ್' ನೋ.

ಬರಸು$_1$ 'ವರಿಸು$_1$' ನೋ.

ಬರಸು$_2$ 'ಬರೆಯಿಸು' ನೋ.

ಬರಸು$_3$ (ನಾ). ಬರೆಯುವಂತೆ ಮಾಡುವಿಕೆ ; ಬರೆಸುವಿಕೆ : ಮನೆಯೆ ಸಾಲೆಯಾಗಬೇಕಾದರೆ ಈ ಬರಸುಗಳ ಅಗತ್ಯವೇನು ? (ರಂಗರೋ. ೦೨೮).
[ಬರೆ$_1$ + — ಸು$_3$]

ಬರಹ 'ಬರೆಪ' ನೋ

ಬರಹಗಾತಿ (ನಾ). ಬರೆಯುವವಳು ; ಲೇಖಕಿ : ಬರಹಗಾತಿಯರ ಲೆಕ್ಕಣಿಕೆಗೆ ಇರುವ ಬಂಧನ ಇದೀಗ ಇಲ್ಲದಾಗಿದೆ (ಶಪ್ತಸು. ೦೯೩೮-೩೯ ; ೦-೬೦). [ಬರಹ (<ಬರೆಪ) + — ಕಾತಿ$_5$]

ಬರಹಗಾರ 'ಬರೆಪಕಾಱ' ನೋ.

ಬರಹಗಾರ್ತಿ (ನಾ). = ಬರಹಗಾತಿ : ಮಹಿಳಾಬರಹಗಾರರು ; ಅರ್ಥಾತ್ 'ಬರಹಗಾರ್ತಿ'ಯರು (ರೂಪಸಂ. ೯೩).
[ಬರಹಗಾರ (< ಬರೆಪಕಾಱ) + — ತಿ$_1$ (<—ಇತ್ತಿ)]

ಬರಹು$_1$ 'ಬರೆಪು' ನೋ.

ಬರಹು$_2$ 'ಬರುಹು' ನೋ.

ಬರಾಕು (ನಾ). ತ್ವರೆ ; ಜೋರು; ರಭಸ : ರಾಮನ ಕಾಲುಗಳು ತಿರುಗಿ ಆಲಸ್ಯ ಗೊಳ್ಳಲಿಲ್ಲ. ಅವು 'ಬರಾಕಿ'ನಿಂದ ಮನೆಯ ಕಡೆಗೆ ಸರಿದುವು (ಮರಸು. ೪೬೨) ; ವೆಂಕಮ್ಮ . . . ಬರಾಕಿನಿಂದ ಗುಡಿಯತ್ತ ನಡೆದರು (ಪದ್ಮಸ. ೨೨೮). [←ಮರಾ. ಭರಾಕಾ]

ಬರಾತ$_1$ 'ಪರಾತ' ನೋ.

ಬರಾತ$_2$ 'ವರಾತ$_1$' ನೋ.

ಬರಾಬರಿ$_1$, ಬರಾಬ್ಬರಿ, ಬರೋಬರಿ$_1$, ಬರೋಬ್ಬರ, ಬರೋಬ್ಬರಿ, ಭರಾಭರಿ (ನಾ). ೧. ಸಮನಾದುದು; ಸರಿಯಾದುದು; ಉಚಿತವಾದುದು: ಈಗ ಬರಾಬರಿ ಆಯ್ತು ನೋಡು (ಶಂದುಪ ೩೨), ನೀನನ್ನೋದೂ ಒಂದು ರೀತಿಯಿಂದ ಬರಾಬರಿ (ಧರ್ಮರಿ. ೬೮). ೨. ಸುವ್ಯವಸ್ಥೆ; ಓರಣ; ಅಚ್ಚುಕಟ್ಟು : ಬಿಡಿಸುತಲಾಗ ಬರಾಬರಿಯನು ಸರ್ವರೊಡಗೂಡಿ ನಿಂದು ಕೊಂಡಿರಲು (ಪ್ಯಾಸಕ. ೪೦-೩೪); ರಕ್ಕಸೇಶ್ವರ ಬರಲ್ಕೆಲಬಲದಿ ಕರಕ ಕರದೀಪಿಕೆಗಳು . . . ಆಭರಣಂಗಳಾರವಂಗಳು ಬರಾಬರಿಯ ಬಿಡಿಸುತ ಮುಂದೆ ಧೋರಣೆಯೊಳ್ಳೆತರುತಮಿರ್ದುದು (ಪಂಕಾರಾ. ೩-೮-೨೬). **ಬರಾಬ್ಬರಿ** : ೧. ಬರಾಬ್ಬರಿ ಏನೇ ಆದರೂ ಮದವಿ ಇದೇ ಊರಾಗ ಮಾಡೂದು (ತಿಡುಗು. ೩೪). **ಬರೋಬರಿ$_1$** : ೧. "ಬರೋಬರಿ" ಮೈಲುದ್ದ ಹೆಸರಿನ ಸೋಮಯಾಜಿಗಳು ಉತ್ತರಿಸಿದರು (ಪಡೆದಾ. II ೯೦೦); ಅಂತೂ ನನ್ನ ಮಾತು ನಿನಗೆ ಬರೋಬರಿ ಅನಿಸಿತಲ್ಲ (ಕಾಗೆಳ. ೬೯). **ಬರೋಬ್ಬರ** : ೧. ಬರೋಬ್ಬರ ಆತು (ಫಲಸಂ. ೬೦). **ಬರೋಬ್ಬರಿ** : ೧. ನಮ್ಮ ಡಾಕ್ಟರ ಹುಣಸೀಕಟ್ಟಿಯವರಲ್ಲಿ ಹೋದರ ಎಲ್ಲಾ ಬರೋಬ್ಬರಿ ಆಗತದ (ಅಪಪಾ. ೦೨೯); ನಿಮ್ಮ ಪ್ರೊಸೀಜರ ಬರೋಬ್ಬರಿ ಇರಬೇಕು (ಗಂಮಾಡು. ೪೨). **ಭರಾಭರಿ** : ೨. ತತ್ಸಭೆಯೊಳಾನಂದಿಯುಮ್ಮಹಾಕಾಳರ್ ಭರಾಭರಿಗಳಂ ಮಾಡುತಿರ್ದರತಿಭಕ್ತಿಯಿಂದೆ (ಶಿಪು. ೨-೨೬). 'ಭರಾಭರಿಗೊಡು' ಪರಾ.
[←ಹಿಂ. ಬರಾಬರ್, ಬರಾಬರೀ, ಬರೋಬರ್ ; ಮರಾ. ಬರಾಬರ್, ಬರಾಬರೀ, ಬರೋಬರ್, ಬರೋಬರೀ]

ಬರಾಬರಿ$_2$, ಬರೋಬರಿ$_2$, ಬರೋಬ್ಬರ್ (ಅ). ಸರಿಯಾಗಿ ; ಸಮನಾಗಿ; ತಕ್ಕುದಾಗಿ : ಈಗ ನನ್ನ ಮನಸ್ಸು ಬರಾಬರಿ ಇಲ್ಲ (ಸಮಜೀ. ೦೨೬); ನನ್ನ ಖೋಲಿ ಕಸ ಉಡಗಿ ಟೇಬಲ್ಲೊರಸಿ ಎಲ್ಲಾ ಸಾಮಾನು ಬರಾಬರಿ ಇಟ್ಟು ಬಾ (ಧನಂಜ. ೩). **ಬರೋಬರಿ$_2$** : ಹಾಗಾದರೆ ಉತ್ತರ ಹೇಗೆ ಬರೋಬರಿ ಬಂತು? (ಸಿಂಧ. ೬೮) : ದಾದಲ್ಯಾ ಬರೋಬರಿ ಹೇಳಿದ ನೋಡ ಶಕೀ (ದೀಪಹ. II, ೨೦). **ಬರೋಬ್ಬರ್** : ನೀವು

ಬರೋಬ್ಬರ್ ಕುಲಕರ್ಣಿ ಅನ್ರಪ್ಪ ಸಾಕು (ಸ್ವದ್ಯಪಿ. ೪೦). [< ಬರಾಬರಿ$_1$]

ಬರಾಬರಿಗೆಯ್, ಬರಾಬರಿಗೈ (ಕ್ರಿ). ೧. ವ್ಯವಸ್ಥೆಗೊಳಿಸು ; ಸರಿಗೊಳಿಸು : ಗಲಭೆ ಬೇಡ . . . ಮಿಸುಕದಿರಿ ಎಂದು ಸಲೆ ವೇತ್ರಕರ್ ಬರಾಬರಿಗೆಯ್ಯುತ್ತಿರ್ದರಾ ಭಾಳನೇತ್ರನ ಸಭೆಯೊಳು (ಸಂದಿಮಾ. ೭-೩೬). ಬರಾಬರಿಗೈ : ೨. (ಆಲಂ) ಇಲ್ಲವಾಗಿಸು : ಮೇರು ಮಂದರಗಳೆನೆ ಬರುವ ಪೆರ್ದೆರೆಗಳನ್ನೂರುವೇಗದಿ ಬರಾಬರಿಗೈದು ನೀರಧಿಯ ಪೀರುವವೊಲೈತಪ್ಪ ಮಾರುತಿಯ ನಿಟ್ಟಿಸುತ (ಸಂಕಾರಾ. ೫-೦-೨೬).
[ಬರಾಬರಿ$_1$+ಗೈ (<ಕೆಯ್$_1$)]

ಬರಾಬರಿಗೈ 'ಬರಾಬರಿಗೆಯ್' ನೋ.

ಬರಾಬರಿಗೊಳಿಸು (ಕ್ರಿ). ಸರಿಮಾಡು ; ನೇರಗೊಳಿಸು ; ವ್ಯವಸ್ಥೆಗೊಳಿಸು : ದನುಜವನಚರರ ನೆರವಿಯ ಬರಾಬರಿಗೊಳಿಸಿ ರುಜುಪಥಂಗೈದರಾಗ (ಸಂಕಾರಾ. ೬-೬೩-೦೯). [ಬರಾಬರಿ$_1$+ಕೊಳ್$_1$+ — ಇಸು$_3$]

ಬರಾಬ್ಬರಿ 'ಬರಾಬರಿ' ನೋ.

ಬರಾಯಿಸು 'ಭರಾಯಿಸು' ನೋ.

ಬರಾರ (ನಾ). ಒಂದು ಬಗೆಯ ತೆರಿಗೆ : ಚಾಂದಬೀಬಿಯು ಬಹು ಶೌರ್ಯದಿಂದ ಅದನ್ನು ರಕ್ಷಿಸಿದಳು ; ಬರಾರವನ್ನು ಕೊಟ್ಟು ಅಕಬರನ ಕೂಡ ಒಪ್ಪಂದ ಮಾಡಿಕೊಂಡಳು (ಹಿಂದುಇ. ೦೬೪).
[← ಪಾರ. ಹಿಂ. ಬರಾರ್]

ಬರಾವರ್ದು(ನಾ). ೧. ಗಣನೆ; ಲೆಕ್ಕಾಚಾರ. ೨. ವಂಶಪಾರಂಪರ್ಯವಾದ ಹಕ್ಕನ್ನು ನಮೂದಿಸುವ ಸರ್ಕಾರಿ ಲೆಕ್ಕ : ಆಗ ಗೌಡರ ಬರಾವರ್ದು ಉಳಿಸಲಿಕ್ಕೆ ಮತ್ತು 'ಸಸ್ಮಿಸಿ' ಡಿಸ್ಮಿಸಿ ತಪ್ಪಿಸುವುದಕ್ಕೆ ಗೌಡರ ರುಜುವನ್ನು ಶಾನುಭೋಗರು ಫೋರ್ಜರಿ ಮಾಡಿದ್ದುಂಟು (ಸನ್ನೂರು. ೦೫೪); ಛತ್ರ, ದೇವಸ್ಥಾನ, ಮಠ . . . ಇವು ಮೊದಲಾದ ಮುಜರಾಯಿ ಬಾಬುಗಳನ್ನು ಖಾವಂದರವರು ವಿಚಾರಿಸಿ ಅಭಿವೃದ್ಧಿಪಡಿಸಿ ಇದರ ಸಂಬಂಧವಾದ ಬರಾವರ್ದುಗಳನ್ನೆಲ್ಲ ಆಯಾ ಫೌಜುದಾರರು ತರಿಸಿಕೊಂಡು ತನಿಖೆ ಮಾಡಿ . . . ನೋಡಿಕೊಳ್ಳಬೇಕೆಂತಲೂ ಸನ್ ೧೮೨೬ರಲ್ಲಿ ಹುಕುಂನಾಮ ಸಾದರ್ಮಾಡಿದರು (ಸುಹಾಸಂ. II, ೩೬).
[←ಹಿಂ. ಬರಾವರ್ದ್; ಮರಾ. ಬರಾವರ್ದ್, ಬರಾವರ್ದೀ]

ಬರಾವರ್ದುದಾರ (ನಾ). ಬರಾವರ್ದಿನ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ವ್ಯಕ್ತಿ : ಆಖೈರ್ ಬರಾವರ್ದುದಾರರ ಅಥವಾ ಅವರ ಕುಟುಂಬದವರ ಪೈಕಿ ಯಾರಿಗೆ ಹೆಚ್ಚು ಯೋಗ್ಯತೆಯುಂಟೆಂದು ಡೆಪ್ಯುಟಿ ಕಮೀಷನರವರಿಗೆ . . . ತೋರುತ್ತದೆಯೋ ಅಂಥಾವರನ್ನು . . . ಚುನಾಯಿಸತಕ್ಕದ್ದು (ಗ್ರಾಮಾಳ. ೬೩); ಬರಾವರ್ದುದಾರ ಶ್ಯಾನುಭೋಗ ವಸೂಲಾದ ಕಂದಾಯದ ಹಣವನ್ನು ದಸು, (ದುರುಪಯೋಗ) ಮಾಡಿದ್ದಾನೆಂದು, ಅವನನ್ನು ಸಸ್ಪೆಂಡ್ ಮಾಡಿ ನಂಜಪ್ಪನೆಂಬುವನನ್ನು. . . ನೇಮಿಸಿದ್ದರು (ಕಂಪ. ೦೬೩). [ಬರಾವರ್ದು + — ದಾರ್$_4$]

ಬರಿ$_1$ (ನಾ). ೧. ಪಕ್ಕ; ಬದಿ; ವಂಗ್ಗುಲು : 'ಕುನ್' (ಗುಡ್ಡ)+ಬರಿ (ಪಕ್ಕ) ಎಂದರೆ 'ಗುಡ್ಡದ ತಪ್ಪಲು' ಎಂಬುದಾಗಿ ಸಾರ್ಥಕತೆಯೊಡನೆ ಆ 'ಕುಮ್ಮರಿ' ಪದವು ರೂಪುಗೊಂಡಿರಬೇಕು (ಸಾಹೋಸಿ. ೨೨೬). ೨. ಪಕ್ಕೆ; ಅಳ್ಳೆ : "ಬರಿ ಪಕ್ಕಮದಕ್ಕು" (ಕವಿಕಂ. ೦೪೦); ಪಱಿದವು ಬರಿ ಮುಱಿದ × × ನಿಟ್ಟೆಲ್ವೆರಡು ತೆಱೆದವು (ಎಕ. IV, ಹಗ್ಗಡ. ೦೦೬-೦೯; ಸು. ೩೩೦); ಅಂತು ಚಾತುರ್ದಂತವೊಂದೊಂದಱೊಳ್ ತಾಗಿ ತಳ್ತಿಱುವಲ್ಲಿ ತಲೆಗಳ್ ಪಱಿಯೆ ಬರಿಗಳ್ ಮುಱಿಯೆ ತೊಡೆಗಳುಡಿಯೆ (ಸಂಪಣ. ೦೮-೩೬ ವ); ಧರಣಿಪಾಲನ ತೆಗೆದು ಭೀಮನ ಬರಿಯನೆಚ್ಚನು. . . ಜವಗೆಡಿಸಿದನು ನಿನ್ನಾತನನಿಲಜನ (ಕುಸ್ಯಾಳ. ೦೪-೨). 'ಬದಿ'$_2$ ಪರಾ.
[ದೇ. ॥ ತುಳು. ಕೊಡ. ತೆಲು. ಬರಿ]

ಬರಿ$_2$ 'ಬಱು$_2$' ನೋ.

ಬರಿಕೆಯ್ 'ಭರಿಕೆಯ್' ನೋ.

ಬರಿಕೈ$_1$ 'ಬಱುಗೆಯ್$_2$' ನೋ.

ಬರಿಕೈ$_2$ 'ಭರಿಕೆಯ್' ನೋ.

ಬರಿಕೋಲು (ನಾ). ರಸ ಹೀರಿದ ಕಬ್ಬು; ರಸವಿಲ್ಲದ ಕಬ್ಬು : ಆಲೆಗಮ್ಮಿಕ್ಷುದಂಡವನಿಕ್ಕಿ ತಿರುಹಿ ಮರುಕೋಲುಗಳನಿಕ್ಕಿ ಬರಿಕೋಲುಗಳ ಬಿಸುಟವೋಲ್ತಳುವಿನೋಳ್ಬೆಳದ ಫಲಜಾಲವನ್ನಿಳುಪಿದಂ (ಕುರಂಗ. ೬೦-೬).
[ಬರಿ$_2$ (<ಬಱಿದು)+ಕೋಲು$_1$ (<ಕೋಲ್$_1$)]

ಬರಿಗಂಡ (ನಾ). ಪಕ್ಕೆಯ ಮಾಂಸಖಂಡ : ಬರಿಗಂಡಂ ಪಿಣಿಲೇಱೆ ರೋಮಮುಡಿದಿರ್ಬೆನ್ನಾಗೆ ಮುಂಗಾಲಗಲ್ತರೆ ಬಿರ್ಕುರ್ವೆ . . . ಕೋಟ್ಯುಟ್ಟೆ ಪೆರ್ನೊರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೇಕರಂ ಸೂಕರಂ (ಸಂದ್ರಪು. ೫-೬೦). [ಬರಿ$_1$ + ಕಂಡ$_1$]

ಬರಿಗಡಗ (ನಾ). ಕುದುರೆಯ ಪಕ್ಕೆಗಳ ಸುತ್ತ ಹಾಕುವ ತಂಗು.— ಚರ್ಮದ ಸುತ್ತುಪಟ್ಟಿ : ಬರಿಗಡಗ ಕೀಳ್ಕಂಬಿ ದುಕ್ಕುಡಿಯುರುಗು ಗಡಿಯಣ ಮೊಗವಡಂಗಳು ತುರಗವದನದಲೊಪ್ಪಿರಲು ತಾ ಪಣೆಯನಳವಡಿಸಿ. . . ಪರಿಪರಿಯ ಹಕ್ಕರಿಕೆಯಲಿ ಬೀಸಿದರು ಚೌರಿಗಳ (ಕುಸ್ಯಾಳ. ೪-೪೮) [ಬರಿ$_1$ + ಕಡಗ$_1$]

ಬರಿಗಾಲು 'ಬಱಿಗಾಲು' ನೋ.

ಬರಿಗೆರೆ 'ಬಱುಗೆಱೆ' ನೋ.

ಬರಿಗೈ$_1$ 'ಬಱುಗೆಯ್$_1$' ನೋ.

ಬರಿಗೈ$_2$ 'ಬಱುಗೆಯ್$_2$' ನೋ.

ಬರಿಚು (ನಾ). ಬರ್ಚಿ; ಬರ್ಜಿ; ಈಟಿ : ಮುರಿದಿಟ್ಟ ಬರಿಚಿನಿಂ ಮೃತ್ಯುವಿನ ಸುರುಚಿಯಿಂ ರಚಿಸಿದೊಲು ರಂಜಿಸಿತು ರಣಮಂಡಲ (ಸರಸು. ೨೬-೨೮). [< ಬರ್ಚಿ]

ಬರಿದಲೆ 'ಬಱುದಲೆ' ನೋ.

ಬರಿದು 'ಬಱಿದು' ನೋ.

ಬರಿದೆ 'ಬಱಿದೆ' ನೋ.

ಬರಿಮನ 'ಬಱುಮನ' ನೋ.

ಬರಿಮಾತು 'ಬಱುವಾತು' ನೋ.

ಬರಿಮೈ 'ಬಱಿಮೆಯ್' ನೋ.

ಬರಿಯ$_1$ (ನಾ). ದೇವಸ್ಥಾನದ ಸೇವಕ : ದೇವಸ್ಥಾನದ ಸೇವಕರು (Temple Servants) ಅಂಬಲವಾಸಿ, ಬರಿಯ, ದೇವಡಿಗ, ದೇವಾಳಿ . . . ಸ್ಥಾನಿಕ, ವಾರಿಯನ್ (ತುಳುಸಾ. ೦೬೨). [?]

ಬರಿಯ$_2$ 'ಬಱಿದು' ಪರಾ.

ಬರಿಯಾಟ 'ಬಱಿಯಾಟ' ನೋ.

ಬರಿಯಿಸು 'ವರಿಸು$_1$' ನೋ.

ಬರಿಯೂರ್ (ನಾ). ಒಂದು ಊರಿನ ಹೆಸರು : ಮಾದೆಯೂರ ಸಾನ್ತಿವರ್ಮ್ಮಂ ಬರಿಯೂರನಿಱಿಯೆ ಬಳಗಾಱರ ಕೋಕರಂ ಪುನುವಲವಳ್ಳಿಯಳಿಟ್ಟು ಪುಯ್ಯಲಂ ಪರಿದು ಮಾರ್ಬ್ಬಲಮಂ ತಳ್ತಿಱಿದು ಸ್ವರ್ಗಾಲಯಕ್ಕೆ ಸನ್ದಂ (ಎಕ. VIII, ಸೊರಬ. ೩೩-೩; ೨೨೨). [ಬರಿ$_2$ + ಊರ್]

ಬರಿಯೆಲ್ 'ಬರಿಯೆಲ್ವು' ನೋ.

ಬರಿಯೆಲುವು 'ಬರಿಯೆಲ್ವು' ನೋ.

ಬರಿಯೆಲ್ವು, ಬರಿಯೆಲ್, ಬರಿಯೆಲುವು (ನಾ). ಪಕ್ಕೆಯ ಎಲುಬು ; ಪಕ್ಕೆಯ ಮೂಳೆ : ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾಗನೆ ಭಗದತ್ತನಾನೆ ಬರಿಯೆಲ್ವುಡಿವನ್ನೆಗಮೊತ್ತೆ ಗಂಡನಾಗನೆ (ಗದಾಯು. ೩-೨೬) ; ಮುನಿಪತಿಯ ತೋರ್ಪ ಬರಿಯೆಲ್ವಿನ

ವುದುವಿಂ ಬೂದಿವಾಱುತಿರ್ಪಿರಪಂ ಕಾವುಸ ಸುಟ್ಟು ಕಾಡಿವೆನೆ ಕರ್ಗನೆ ಕನತುದು ಮುಲದ ಮುಸಿಯ ಮುಸಕದನಂಗಂ (ಅರ್ಜುನ. ೦ ೬೬). **ಬರಿಯೆಲ್** : ಮೂಗಿಯ ಕಂಭಮಿಲ್ಲ ಸಿಡುಯೆಲ್ಲಿನ ಬೆಮ್ಮರನಂಕ ಪತ್ತಿ ಕೊಂತೋಳಿಯೆ ಸೀಳ್ದು ಸಂದ ಬರಿಯೆಲ್ . . . ಅಮೇಧ್ಯಪೂರ್ಣ ದೇಹಾಳಯಮಿಂತಶುದ್ಧಂ (ಚಿಪಸಂ. ೦೩೦–೨೨). **ಬರಿಯೆಲುವು** : ಉರದ ಬರಿಯಲುವನೆಗೆಪ್ಪಂತಿರೆಲುರಿಂ ನಡುಗುತಂ ತಪಸ್ವಿಯ ಕೊರಲೊಳ್ ಕರವೆಸೆದು ತೋಱಿದುದು ತಾವರೆದಂಟಿನ ಮಿಸುಪ ನೂಲ ಪೊಸ ಜನಿವಾರಂ (ಆದಂಪು. ೨೦೭); ಏತ ನಕರನಿಕರದಿಂ ಬರಿಯೆಲುವ ನುಗ್ಗೊಶ್ರಿ ಕರುಳ ಮಾಲೆಯು ಸೀಳಿ ತೆಗೆವ ವುರಿಯುಂ (ತ್ರಿಪಪು. ೯-೭೪).

[ಬರಿ$_1$+ಎಲ್ಲು]

ಬರಿವದಣೆ ‘ಬರಿವದನೆ’ ನೋ.

ಬರಿವದನೆ, ಬರಿವದಣೆ, ಬರುವದಣೆ, ಬಲಿವದನೆ (ನಾ). ಒಂದು ಬಗೆಯ ಔಷಧೀಸಸ್ಯ,—ವಂಶಲೋಚನೆ ; “ನೆಲಗುಳ್ಳ” (ಕೋಕೋಚ. ೯-೨೦ ಟೀ) : ಬರಿವದನೆಯುಷ್ಣತಲತೆ ನಾಗರಮೆಂಬವಿನಿತಱ ಕಷಾಯಮಂ . . . ಕುಡಿಯಿಸುಗೆ (ಕೋಕೋಚ. ೯-೨೦); ಸುಂಟಿಯುಮ ವರ್ದುಪಳ್ಳಿಯುಂ ಪುಷ್ಕರಮೂಲಮುಂ ಬರಿವದನೆಯುಂ ಜ್ವರದ ಕೇಡು (ರರ್ಜಾಕ್ಕು. ೯-೦೦೬). **ಬರಿವದಣೆ** : ಒದವಿದರೆ ಬಿಳದೆನಿಪ ಬರಿವದಣೆಯ ಕಿಱುದೆಂಗು ನೆಲ್ಲಿಯೆಂಬಿನಿತಱ ಮೂಲದಿನಿರ್ಕೆಯ್ಮಡೆಯೊಳ್ ತೆಂಕದೆಸೆಯೊಳಱಿ . . . ನೀರಕ್ಕುಂ (ಕೋಕೋಚ. ೩-೦೭); ಬರಿವದಣೆ ಲೊಕ್ಕಿ . . . ವಿಷನಾಗರ ಲಶುನಂಗಳೊಳ್ಳುವ್ಪಂ ಬೆರಸುಗೆ ವವಣಱಿಗೆ ಪಿಂಡ ಮಾರೋಗ್ಯಕರಂ (ಅಶ್ವಹಾ. ೬-೨೩). **ಬರುವದಣೆ** : ಬರುವದಣೆ ತುಱುಚಿಯಾಸಡಿಯೆರನ ಫಲಂ . . . ಕಣ್ಗೆಸಲ್ ವಿಷಮಟ್ಟಿಗುಂ (ಪಮುರ. ೬-೨೩). **ಬಲಿವದನೆ** : ನೆಗ್ಗಿಲು, ಬಲಿವದನೆ, ಪುಷ್ಕರಮೂಲ-ಇವು ಪ್ರತ್ಯೇಕ . . . ನಾಗಳ ನೀರಿನಲ್ಲಿ ಹಾಕಿ . . . ಕಾಸಿ (ಸಳ್ಳಕ. ೨೩೮).

[?+ಬದನೆ]

ಬರಿವೊನಲ್, ಬರಿವೊನಲು (ನಾ). ದಡ ಸೂಸಿ ಹರಿಯುವ ಪ್ರವಾಹ; ದಡವನ್ನು ಮೀರಿ ಹರಿಯುವ ಪ್ರವಾಹ : ಕಿಱುಮಟಲ ದಿಣ್ಣೆಯೊಳ್ ಪರಿವ ಬರಿವೊನಲೆಸೆದುವೋರೊಂದು ತಾಣದೊಳ್ (ಆದಂಪು. ೯-೦೬ ರಗಳೆ). **ಬರಿವೊನಲು** : ಕಲ್ಪವೇಳ್ದ ತಡೆಯ ಬಿಟ್ಟಂತೆ ಬರಿವೊನಲು ಪರಿವು ತೆಯ್ದುದು (ಸೌಂದಪು. ೨-೭೫). ‘ಪರಿವೊನಲ್’ ಪರಾ.

[ಬರಿ$_1$ + ಪೊನಲ್]

ಬರಿವೊನಲು ‘ಬರಿವೊನಲ್’ ನೋ.

ಬರಿವೊಯ್ಲು (ನಾ). ಪಕ್ಕೆಯು ಮಿಡಿಯುವಿಕೆ; ಪಕ್ಕೆಯ ಮಿಡಿತ : ಪೆತ್ತ ಜೇರ್ಕೂಳವಿವೋಲ್ ಮೂಗೊತ್ತೆ ರಕ್ತಾಂಬುವಂ ಬರಿವೊಯ್ಲುರ್ವೆ ನಿಮಿರ್ಚಿ ಬಿಕ್ಕುಳಿಕೆ (ಧಸಂ. ೯-೦೯೦).

[ಬರಿ$_1$ +ಪೊಯ್ಲು(<ಪೊಯಲ್)]

ಬರಿಸ, ಬರಿಶ, ವರಿಷ, ವರಿಸ, ವರುಶ, ವರಿಷ, ವಾರಿಷ (ನಾ). ೧. ಸಂವತ್ಸರ ; ವರ್ಷ : “ಬರಿಸಮೆಂದು ವರ್ಷಂ” (ಕಚಾ. ೩೭-೨೪೭); ಸ್ಮರಿಯಿಪನರ್ಷತ್ರಿಚ್ಚಾರ್ಯಸಿರಬರಿಸ [ಶಾಶಾಂ. ವರ್ಷ]ಕೊರ್ವೆ ಮನದೊಳುಣಿಸಂ (ಅಜಿ.೬–೦೬); ಬರಿಸ ಪನ್ನೆರಡಾದ ಬಳಿಕಾರೊಳವೊಂದುವೆರಸದೆ ವೆಱಿದೆಗೆದಿಹುದು (ಹರಿ. ೪-೪೪); ತಱಗೆಲೆಯುಂಡು ಮೂಱುಂ ಬರಿಸಂ . . . ಗಾಳಿಯನುಂಡು ಮೂಱುಂ ಬರಿಸಂ, ನಿರಾಹಾರಂ ಮೂಱುಂ ಬರಿಸಂ. ಕಟ್ಟುಗ್ರಂ ತಪಂಗೈವಂ (ರಾಪಾಕ್ಕ. ೩೩-೦೪). ೨. ಮಳೆ ; ವೃಷ್ಟಿ : “ಬರಿಸಮೆನೆ ವೃಷ್ಟಿಯೊಳ್ ವರ್ಷದೊಳ್ ಸಲೆ ಬರ್ಕು” (ಕಪಪ. ೬೦). **ವರಿಶ**: ೧. ಸ್ವಸ್ತಿ ಸತ್ಯವಾಕ್ಯನ ಪೆರ್ಮನಡಿಗಳ ಪಟ್ಟಂಗಟ್ಟಿದ ಪದಿನಯ್ದುನೆ ವರಿಶದನ್ದು ಮಱಿಯರ ಬೂವಯ್ಯನ ಮಗಂ ಬಿದಿಯೂಯ್ದು ತುಱುವಸಿಕ್ಕೆಸಿ ಕಾವು ಸತ್ತು (ಎಕ. II, ೪೮ ಎ ; ೫೫೩ ಗ). **ವರಿಷ** : ೧. ಮರ್ಮ್ಯಾತಿ ಎನ್ನು ಮುಷಂ ಪ್ರವರ್ತಿಸೆ (ಶಾಂಕಾಂ. ೦೯೩೪, ೨೦೫೩೫೫. ೦೬ ಕ;೫೭೫); ಶಕ ನೃಪತಾಲಾತೀತ ಸಂವತ್ಸರಜ್ಞಿಟ್ಟೂಳಿ ಪಿಣ್ಬತ್ತಒನ್ನು ಮಿವದನ್ನು ಸಿಂಘರಗಣದ ನಾಗನಾಣ್ಯಚಾರ್ಯರ್ಪ್ಪಡಿದೋರತ್ತಿಗೇರಿಯ ಬಟ್ಟಿ ಇವಕ್ಕೆ ಸಾಕ್ಷಿ (ಕಶ. II, ೩-೦೦; ೮೫೫). **ವರಿಸ** : ೧. ಸ್ವಸ್ತಿ ಸಕ ನಿಪಕಾಲವೆಣ್ಬನೂಱಿ ಪನ್ನೊನ್ದನೆಯ ವರಿಸಮಾಗೆ (ಎಕ. VI, ೪೦೮. ೬೬–೩ ; ೫೫೫) ; ಸಿಜಾಯುರವಧಿ ಪದಿನಾಲ್ಕು ವರಿಸಮು ಮೇಲುತಿಂಗಳುಮಯ್ದು ದಿವಸಮುಂಟಿನಲ್ (ಸುಳುಪಪ. ೯-೦೦ ಪ); ಒಂದಿರಡು ವರಿಸಂ ನಳನಳಿಸಿ ಬೆಳವುತಿಪ್ಪ ಅರಳೆಲೆಯರಸಂ (ಬಸಪ. ೦೦–೦೦೪). **ವರುಶ** : ೧. ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಶ ೧೪೦೪ ಸಂದು ವರ್ತಮಾನ ಶುಭಕ್ರುತು ಸಂವತ್ಸರದ ಕಾರ್ತಿಕ ಶು ೧೨ಲು . . . ಕೊಟ ಮುತ್ತಗಾನೆಯ ಗ್ರಾಮ (ಮ್ಯಕಾ. ೦೯೩೪, ೯-೩; 1482). **ವರುಷ**: ೧. ಈ ನಾಡೊಳ್ ಪನ್ನೆರಡುವರುಷಂಬರೆಗಮನಾವೃಷ್ಟಿಯಾಗಿ ದುರ್ಭಿಕ್ಷವಾದಪ್ಪುದು (ಪಪ್ಪಾ. ೧೩–೨೦); ಇಂತು ತೊಂಬತ್ತೈದು ವರುಷದೊಳು ಹರನಾಣೆಯಂ ತಾಳ್ದಿ ಬಾಳ್ದಿಪ್ಪ ಸಮಯದೊಳು (ಪಪುಚ. ೬೬. ೦೦–೩); ಪುರವ ವಿರಚಿಸಿ ದಿವ್ಯ ಸಾಸಿರ ವರುಷ ಕೈಗೂಡಿದರೆ ಒಂದೇ ಸರಳಲಾವವನೆಚ್ಚಡಾಗಳೆ ನಿಮಗೆ ಕಡೆಗಾಲ (ಕುಪಾಕ್ಕ. ೬–೬). ೨. ಸರಳ ಮಳೆಯಲಿ ನನೆದು ಕಂಘಟಿಯುರುಳಿದವು ಕಲ್ಪಾಂತವರುಷದೊಳುರುಳು ವದ್ರಿಗಳಂತೆಯೆಸೆದವು ವೈರಿದಂತಿಗಳು (ಕುಪಾಕ್ಕ. ೨–೨೦); ತುರುಕಾಣ್ಮ ದೊಳಗನಾವೃಷ್ಟಿದೋಷು ಬಂದು ವಸರಿಸೆ ವವಾಡದಿಂದೆ ವರುಷಮುಂ ಸುರಿಸಿ . . . ಮಳೆಯ ಮಲ್ಲೇಶನೆಂದೆಂಬ ನಾಮವನಾಂತನು (ಕಲಪ್ಪ. ೦–೦೯). **ವಾರಿಷ** : ೧. ವಿಟ್ಟೊಬವತನೆ ವಾರಿಷಂ ಪ್ರವಾರ್ತ್ತಿಸುತಿರೆ (ಎಕ. XVI, ೨೦೨. ೦೨೩–೪; 788). [<ಸಂ. ವರ್ಷ]

ಬರಿಸದೆಱಿ (ನಾ). ವಾರ್ಷಿಕ ತೆರಿಗೆ,— ಸುಂಕ: ಬೇಱಿವೇಱಿ ಬರಿಸದೆಱಿ ಹಿರಿಯ ಹಾಗವೊಂದು (ಎಇ. XIII, ೫೦–೫೩: 1294). [ಬರಿಸ+ತೆಱಿ$_3$]

ಬರಿಸವಳ (ಅ). ಪ್ರತಿವರುಷ; ವರುಷಂಪ್ರತಿ : ಅನ್ತನಿಬರು ಸುಂಕಿಗರು ವಿಟ್ಟು ಇ(ಈ) ಕೆಂಗೆಱಿಗೆ ಬರಿಸವಳ ಆಱು ವೇಱ ಸುಂಕಮಂ ಬಿಡುವರು (ಎಇ. XVI, ೭೯–೪೦; 1037). [ಬರಿಸ+ ?]

ಬರಿಸು ‘ವರಿಸಂ$_1$’ ನೋ.

ಬರಿಹಿ ‘ಬರುಹ$_1$’ ನೋ.

ಬರು ‘ವರ್’ ನೋ.

ಬರು$_2$ ‘ಬಱ್ಪು$_2$’ ನೋ.

ಬರು$_3$ (ನಾ). ಒಂದು ಬಗೆಯ ಹುಲ್ಲು : ಚಿನಾಯಿ ಜೀನಸು, ಕಾಗದ ಬಿಳ್ಪ ವ ಭಂಗಾರ ವರ್ಣದ್ದು, ಕಾಚ, ಕೊಳಾಂಜನ, ಛತ್ರಿ, ಪಚ್ಚಕರ್ಪೂರ ಬರು, ಮೇಣ, ಸಕ್ಕರಿ (ಮುಂಕಾಖ್ಯಾ. ೦೩೭).

[←ಮರಾ. ಬರೂ, ಬೆರೂ,/ಪ್ರಾ. ಬರುಅ]

ಬರುಕ್ಕೆ (ನಾ). “ಪದವಿಲ್ಲದಿವ್ದರೂ ಒಣಗಿದ ಭೂಮಿಯನ್ನು ಗಿಡ ಗಂಟಿ ಪೋಗುವುದಕ್ಕಾಗಿ ಉಳುವ ಉಕ್ಕೆ” (ಪಪ್ಪೂರು. ಕೋಶ) : “ಹಳೀ ತೋಟಕ್ಕೆ ಬರುಕ್ಕೆಗೆ ಆರು ಕಟ್ಟಬೇಕು” ಎಂದು ಕೊಟ್ಟಿಗೆಗೆ ಹೋದ (ಪಪ್ಪೂರು. ೩೦೨). [ಬರ$_1$ (<ಬಜಿ) +ಉಕ್ಕೆ (<ಉಬ್ಕೆ)]

ಬರುಗನಸು (ನಾ). ವ್ಯರ್ಥವಾದ ಕನಸು; ನಿಷ್ಪ್ರಯೋಜಕವಾದ ಕನಸು : ಕಲ್ಪನೆ ಮಾತ್ರವಿದ್ದರೆ ಲಘುವಾಗುತ್ತದೆ; ಭಾವ ಮಾತ್ರವಿದ್ದರೆ ಬರುಗನಸಾಗುತ್ತದೆ (ಶಾಪಗೀ. ೩೦); ಸಂಬಿ ಬರುಗನಸೊಂದನಾ ಮೇಲೆ ಕೋಳು ಹೋಗದಿರು (ಚಿಕ್ಕಾಂಗ. ೩೬–೯೩).

[ಬರ್ಮು (< ಬಜ್ಜದು) + ಕನಸು]

ಬರುಗಯ್ ‘ಬಱುಗೆಯ್’ ನೋ.

ಬರುಗಲ್ಲು 'ಬಱುಗಲ್ಲು' ನೋ.

ಬರುಗಾಲು 'ಬಱುಗಾಲು' ನೋ.

ಬರುಗೆ (ನಾ). ಕೆನ್ನೆ ಮತ್ತು ಕಿವಿ ಸೇರುವ ಭಾಗ; ಕೆಪರು: ಇನ್ನೊಂದು ಕಲ್ಲಿನಿಂದ ಅದರ ಎಡದ ಕಿವಿಯ ಬರುಗೆಗೆ ಗುರಿಯಿಟ್ಟು ಹೊಡೆದೆ (ಸಂಗಾಳ್ಯ. ೩೬೪). [?]

ಬರುದಲೆ 'ಬಱುದಲೆ' ನೋ.

ಬರುಬು 'ಬರುಹು' ನೋ.

ಬರುಮ 'ಬೊಮ್ಮ' ನೋ.

ಬರುಮರುಕ (ನಾ). ತೋರಿಕೆಯ ಕನಿಕರ; ಸೋಗಿನ ದಯೆ: ಈ ಮೇಳದ ಮಸಕವು ಸರ್ವನಾಶದ ಬರುಮರುಕವಾಗಿ, ಕಣ್ಗಳಿಂದ ನೆತ್ತರನ್ನು ಹಿಂಡುತ್ತ ಬಾಯಳಿಯಿಸುವ ಆಗ-ನನ್ನ ಮಾತಿನ ಬೆಲೆಯು ನಿಮಗೆ ಅರ್ಥವಾಗುವುದು! (ಮಂತ್ರಕ. ೭೪-೦೪).

[ಬರ್ರು$_2$ (<ಬಱುದು) + ಮರುಕ (<ಮಱುಕ)]

ಬರುವದಣೆ 'ಬರಿವದನೆ' ನೋ.

ಬರುವಳಿ (ನಾ). ನಿಷ್ಪತ್ತಿ; ಮೂಲ: ಕನ್ನಡಮಾತುಗಳ ಬರುವಳಿ (ಕನ್ನಸು. I, ೨೩೬; ೦೯ ೩೬). 'ಹುಟ್ಟುವಳಿ' ಹೋ.

[ಬರ್ರು$_1$ (<ವರ್) + – ವಳಿ$_3$]

ಬರುವೆ (ನಾ). ಒಂದು ಬಗೆಯ ಪಕ್ಷಿ: ಶುಕ ಮಯೂರ ಮರಾಳ ವಾಯಸಂ ಬಕಪಕ್ಷಿ . . . ವೃಕ ಬರುವೆ ಸಾಳುವಂ ಮರಗೊರಲೆ ಕಾಬುರಲೆ ಮಿಕನು ಗವುಜಗ ಗುಬ್ಬಿ ಚಿಲಿಮಿಲಿಗ ಕೆಂಬೂತ ತಿಚುಕ ಮರಕುಟಕ ಕಬ್ಬಕ್ಕಿಗಳು ಮುಂತಾದ ಪ್ರಾಣಿಗಳನುರಿದಗ್ನಿ ದಹಿಸಿತು (ತುರಂಗ. ೦೬-೩೭).

ಬರುಹ$_1$ (ನಾ). ಬರುವಿಕೆ: ನಾಯ ಬಾಲಮಂ ಕಾಸಿ ತಿರ್ದುಹವುಂ ಸೌಳುಮಣ್ಣಿನಲ್ಲಿ ಮಱಿಬರುಹವುಂ . . . ಮೂರ್ಖನಂ ಬುದ್ಧಿವಂತ ನೋಲೈಸುಹವುಂ ಇವಱೋಪಾದಿ (ಪಂಚತಂ. ೦೩೬-೦೦); ಕಿವಿಗಳನೊತ್ತಲ್ ರಕ್ತಂ ಬರುಹ ಕಣ್ಗಳ್ ಚೆನ್ನಾಗಿ ತೋಱುಹ . . . ಸಸಿನಮಾಗಿ ಹಿಂಭಾಗ ಮುಂಭಾಗಂಗಳ್ ಅಗಲಮಾಗಿರುಹ ಈ ಲಕ್ಷಣಂಗಳನುಳ್ಳ ಕುದಿರೆ ಸಂಪೂರ್ಣ ಮಪ್ಪಾಯುಷ್ಯಮನುಳ್ಳುದೆಂದು ಪೇಱಿಸಿಕೊಳ್ವುದು (ಲೋಕೋಪ. ೦೦-೭೫ ಪೀಳ್). [ಬರ್ರು$_1$ (< ವರ್) + – ಹ$_2$ (< –ಪ$_2$)]

ಬರುಹ$_2$ (ನಾ). ನವಿಲಿನ ಪುಕ್ಕ,—ಗರಿ; ಬರ್ಹ: ಅರ್ಹಂ, ಅರುಹಂ; ಬರ್ಹಂ, ಬರುಹಂ; ಗಾರ್ಹಪತ್ಯಂ, ಗಾರುಹಪತ್ಯಂ (ಭಾಷಾಭೂ. ೦೨೫ ಪ್ರಯೋ). [<ಸಂ. ಬರ್ಹ]

ಬರುಹಿ$_1$, ಬರಿಹಿ (ನಾ). ನವಿಲು; ಮಯೂರ: ಸೂಕರನ ತುಂಬಿಯ ಮರಾಳನ ಭೇಕವೈರಿಯ ಕಾರುರಗ ಕಪಿ ಕೋಕಿಲನ ಬರುಹಿ [ಪಾಶಾಂ. ಬರ್ಹಿ] ಯ ಸುಧಾಕಿರಣನ ದಿನಾಧಿಪನ . . . ರತ್ನಾಕರನಲೊಂದೊಂ[illegible]ಣ ವಿರಬೇಕು (ಕುಮ್ಯಾಸ. ೦-೬೪); ಕಂಗೊಳಿಸುವ ಗವಾಕ್ಷಾವಳಿಯಲಾಡುವ ಬರುಹಿ ಪಾರಾವತ ಮೃದುಸ್ವನದ . . . ಮರಗಳ ತಿಂಥಿಣಿಯ ಶೀತಳತರುಚ್ಛಾಯೆಯಲಿ ಮೆಱೆವಾ ಪುರವರವ ಕಂಡ (ಪಿಭಾಗ. ೦೦-೩೬-೩೦); ಬರುಹಿ ಕಂಕ ಶಶಾದ . . . ಭರದ್ವಾಜಾದಿ ಖಗವಿರೆ ಕಂಡನಸುರೇಂದ್ರ (ಕಾರರಾ. ೯-೪). **ಬರಿಹಿ**: ಹರನಂತೆ ಗಂಗಾಧರತ್ವದಿಂದಂ ಮತ್ತೆ ಹರಿಯ ಧೈರ್ಯತೆಯಂತೆ ಕರಿಯ ರೇಖೆಗಳಿಂ . . . ಇಂದ್ರನಂದದೆ ಪಾಱುವ ಬರಿಹಿಗಳ ಪಿಂಛಾಂಗದಿಂ . . . ಆ ಮಹಾಗಿರಿ ಮೆಱದುದೈ (ಪೀಕೈಪು. ೩-೯-೬).

[< ಸಂ. ಬರ್ಹಿನ್]

ಬರುಹಿ$_2$ (ನಾ). ೧. ಒಂದು ಬಗೆಯ ಹುಲ್ಲು; ಕುಶ: ಚರು ತಿಲದ ರಾಶಿಗಳ ಸ್ರುಕ್ ಸ್ರುವ ಬರುಹಿಗಳ ಬಲುಹೊಱೆಗಳಾಜ್ಯೋತ್ಕರದ ಪತ್ರಾವಳಿಯ ನಿರ್ಮಳಸಾರ ಸಮಿಧೆಗಳ . . . ವಿವಿಧದ್ರವ್ಯಮಯ ಬಂಧುರದಲೆಸೆದಂದು ಯಜ್ಞವಾಟಿಕೆ ರಾಜಸೂಯದಲಿ (ಕುಮ್ಯಾಸ. ೭-೩೦); ಬರುಹಿಯಿಧ್ಮಸಮಿತ್ಪ್ರಣೀತಾವರಣಿ ಘೃತಪಾತ್ರಾದಿ ಮುಖಪರಿಕರವ ಮೇಳೈಸಿದರು ತತ್ಕ್ರತುಕುಂಡವಳಯದಲಿ (ತೊರರಾ. ೦-೭-೩೪). ೨. ಬೆಂಕಿ; ಅಗ್ನಿ: ಧರಣಿ ರೇಣುವದಾಗೆ . . . ಸಾಗರಗಳೇ ತುಂತುರ್ವನಿಗಳಾಗಲು ಮಹಾಪ್ರಳಯಬರುಹಿ ಕಿಱಿಗಿಡಿಯಾಗಲಚ್ಚುತ ಸರಸಿಜೋದ್ಭವರಣುವೆನಿಸಿ ಭಾಸ್ಪುರಣಜ್ಯೋತಿರ್ಲಿಂಗಮಾದೀಶಂಗೆ ವಂದಿಸುವೆ (ಶಂಕಣಾ. ೩-೦). [< ಸಂ. ಬರ್ಹಿ]

ಬರುಹು, ಬರಬು, ಬರಹು$_2$, ಬರಬು (ನಾ). ೧. (ಹೊಲ, ಗದ್ದೆಗಳಲ್ಲಿ ನೀರು ನಿಲ್ಲುವುದಕ್ಕಾಗಿ) ಅಂಚಿನಲ್ಲಿ ಹಾಕುವ ಮಣ್ಣಿನ ದಂಡೆ; ಕಟ್ಟೆ; ಬದುವು: ನಾಲ್ಕುಸೀಮೆಯೆಂತೆಂದಡೆ ಮೂಡಣಸೀಮೆ ಹುಪ್ಪವಳ್ಳಿಯ ಸೀಮೆ . . . ತೆಂಕಣ ಸೀಮೆ ಅರಳಿಯ ಗದ್ದೆಯ ಬಡಗಣ ಬರುಹು ಮೇರೆ (ಸೌಇಇ. XV, ೨೩೩-೭೦; 1216). ೨. ಎತ್ತರವಾದ ಪ್ರದೇಶ; ದಿಬ್ಬ; ದಿಣ್ಣೆ: ಪಡುವಣ ಸೀಮೆ ಕರಿಯ ರಾಮಣನ ಹಕ್ಕಲ ಬರುಹು ಬಡಗಲು ಮಲ್ಲನಹಳ್ಳಿಯ ಹೊಲನ ಸೀಮೆ ಮೇರೆ (ಕಇ. V, ೩೨-೭೬; 1215). **ಬರಬು**: ೨. ಆ ಯಲಚಿಯ ಕುಣ್ಟೆಯ ಮೂಡಣಕೋಡಿಯ ಅರಳಿಯ ಮರ ಮೇರೆಯಾಗಿ ಹೊಲದ ಬರಬಿನ ಮೇಲೆ ದರ ಹುಣಿಸೆಯ ಸರಿತದಲು (ಎಕ. X, ಮುಳಬಾ. ೭-೬; 1416); ತೆಂಕಣ ಕೋಡಿ ಸ್ಥಳದಲೂ ಮೂಡಲಿಗೆ ಕಂಭದ ಮಾನ್ಯದ ಹೊಲ ಮೇರೆ ತೆಂಕಲಿಗೆ ದಶಕಸ್ಥಳದ ದೊಡ್ಡ ಬರಬು ಮೇರೆ (ಎಕ. IX (S), ಬೆಂಗಳೂ. ೩೦-೬; 1532); ಬರಬುಗಳನ್ನು ನೆಲಮಟ್ಟದಿಂದ ಸ್ವಲ್ಪ ಎತ್ತರವಾಗಿರುವಂತೆ ಕಟ್ಟಿ, ಗಟ್ಟಿಯಾಗಲು ಚೆನ್ನಾಗಿ ತೊಯಿಸಿ ತುಳಿಯಬೇಕು (ತರಬೆ. ೬೬). **ಬರಹು$_2$**: ೨. ತೊಪ್ಪೇನ ಘಟ್ಟದ ಬಲ್ಲವತ್ತದ ಕಟ್ಟೆಯ ಬಿತ್ತಿರಿಣ ಹಕ್ಕಲ ಬರಹು (ಎಕ. VII, ಶಿವಮೊ. ೨೬-೨೫೪; 1524). **ಬರುಬು**: ೩. ಕೆರೆ, ಕುಂಟೆ ಮುಂತಾದುವುಗಳ ಏರಿ: ಕಾಲುವೆಗಳ ಮೇಲೂ ಬರುಬುಗಳ ಮೇಲೂ ತಿರುತಿರುಗಿ (ಕಥಾಮಂ. IV, ೦೩೦). 'ಬದುವು' ಪರಾ.

[ದೇ.॥ ತಮಿ. ವರಪ್ಪು, ವರಮ್ಬು, ವರೈಪ್ಪು; ಮಲ. ವರಮ್ಬು; ತುಳು. ಬರಬು; ತೆಲು. ವರುಜು]

ಬರೆ$_1$, ವರೆ$_1$ (ಕ್ರಿ). ೧. ಲೇಖಿಸು; ಅಕ್ಷರದಲ್ಲಿರಿಸು: ಕೈಲಾಸಪಣ್ಡಿತರ್ಬ್ಬರೆದ ಈ ಮಣ್ಣನಳಿದೋಂ (ಎಕ. IX, ಬೆಂಗಳೂ. ೪೦-೦೩; ಸು. 820); ಗುಣ ಸೌಂದರಿಯೊಂಬೊಳ್ . . . ಒಂದೋಲೆಯನಿಂತೆಂದು ಬರೆದಳ್ (ವಡ್ಡಾರಾ. ೦೬೩-೬); ವಿಷಯೆ ಮೋಹಿಸುವಂತೆ ಕೊಡುವುದೆಂಬೀ ಲೇಖವಿಷಯವಿದು ವಿಧಿಕೃತವೊ ತನ್ನ ಮೋಸವೊ ಬರೆದವನ ಮಱೆಹೊ (ಕೈಪುಭಾ. ೩೧-೩೬). ೨. (ಬರೆದುದರ ಮೇಲೆ ಅಭ್ಯಾಸಕ್ಕಾಗಿ) ತಿದ್ದು; ತೀಡು: ಬರೆಯದೆ ಬಂದ ಸುದ್ದಗೆಯ ಸೂತ್ರಮನೊಂದೆ ಮುಹೂರ್ತಮಾತ್ರದಿಂ ಬರಿಸಿದುದು (ಪಂಪಭಾ. ೭-೩೪). ೩. ಕಾವ್ಯರಚನೆ ಮಾಡು: ತರಲಾಪಾಂಗ ವಿಲಾಸಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ಬರೆದತನುಚರಿತಮಿಾಗಳ್ ಬರೆದಂತಿರ್ದಪುದು ಮನ್ಮನಃಪುಸ್ತಕದೊಳ್ (ಆದಿಪು. ೪-೦೪); ವಿಪರೀತಂ ಬರೆಯುತ್ತುಮೊಂದನಲೆವುತ್ತುಂ ಗದ್ಯಮಂ ಮಾಡೆ (ಛಂದೋಂಬು. ೦-೩೦ ಅಡಿಪದ್ಯ); ಬರೆದಾಹ ಬರೆದೆ ಭಾಪುರೆ ಬರೆದಕ್ಕಟ ಬರೆದೆ ಲೇಸು ಬರೆದೆಯೆನುತ್ತುಂ ಬಱಿದೆ ತಲೆತೂಗುವುದಱಿಂ ಬಱಿದಪ್ಪುದು ಕಾವ್ಯಮಱಿಯದರ ಜಾಣೆಂದಂ (ಗಿರಿಕ. ೧-೨೬). ೪. ಚಿತ್ರಿಸು; ರೇಖಿಸು: ಇಂತು ಬರೆಯಲ್ ಬ್ರಹ್ಮಂಗಮೇಂ ಬರ್ಕುಮೇ ಎಂದು ಮುನ್ನಂ ವಿಚಿತ್ರಚಿತ್ರ ವಿದ್ಯಾಕೌಶಲಮನತಿಕುತೂಹಲೋತ್ತಾರಿತಲೋಚನನಾಗಿ ನೀಡುಂ ಭಾವಿಸಿ ನೋಡಿ (ಆದಿಪು. ೪-೪); ಬರೆದ ಬನಮಿರ್ಕೆ ನೋಡೀ ಕರುಮಾಡದ ಕೆಲದೆ ಬೆಳೆದ ಪೂದೋಂಟಮಂ (ಕಬ್ಬಿಕಾ. ೬೪); ನೆನೆದು ಬರೆದಳು ನಳನ ರೂಪವನನುನಯದಿ ಚಿತ್ರದಲಿ (ನಳಚ. ೦-೩೬). ೫. ಗೆರೆಯನ್ನು ಎಳೆ; ಗೀಟು ಹಾಕು; ಗೀರು: ಗಿಳಿಯಂ ಸಾಕ್ಷಿಮಾಡಿ ಇರ್ವರುಂ ಚದುರಂಗ

ಮಾಡುತ್ತಿರೆ ಅರಸಿಯರಸನಂ ಗೆಲ್ದೊಡೆ ಗಿಳಿ ನೆಲದೊಳೆರಡು ಬರೆಯಂ ಬರೆಗುಮರಸನರಸಿಯಂ ಗೆಲ್ದೊಡೆ ಒಂದೆ ಬರೆಯಂ ಬರೆಗುಂ (ಪಡ್ಡಾರಾ. ೦೦೮-೨೬); ತನ್ನ ಮುನ್ನಿನ ಜನ್ಮಂಗಳನಿಂತೆಂದು ಬರೆದು ತೋರ್ಪಂತೆ ನೆಲನಂ ಬರೆಯುತ್ತಮಪಗತಮುಖಮುದ್ರೆಯಾಗಿ (ಆದಿಪು. ೩-೩೨ ಪ); ಸುರನರನಾಗಲೋಕದಿಂ ನರ್ತಿಸುವ ಸೌಂದರವೆಣ್ಣು ಬಾಣನಂದನೆಯ ಸರಿಯಿಲ್ಲವೆಂದು ಮೂವೆರಲಿಂದೆ ರತಿರಾಜ ಬರೆದಂತೆ ತಿವಳಿ ರಾಜಿಸಿತು (ಸೋಹತ. ೨೩-೨೦). ೬. ಕಾದ ಲೋಹದಿಂದ ದೇಹದ ಮೇಲೆ ಗೆರೆಯನ್ನು ಎಳೆ; ಬರೆಹಾಕು; ಬರೆಎಳೆ: ಮೃದುನಾಭಿಯ ನಿಟ್ಟೆಲುವಿನ ಹೃದಯದ ಮೇಲಡಸಿ ಬರೆಯಲಾಗದು ವಿದ್ಯಾವಿದರೆತ್ತಾನುಂ ಬರೆದಂದದು ಮಾಟ್ಕುಮಪಾಯಮಂ ಮನಸ್ತಾಪಮುಮಂ (ಅಶ್ವಶಾ. ೦೦-೨೬); ಏತರವೊ ದಂಡೆಗಳು ಕೊರಳಲಿ ಭೂತಬರೆಗಳಿದೇನು ಮೆಯ್ಯಲಿ ವಾತರೋಗಕೆ ಬರೆದ ಬರೆಯೇನೆರಡುಮುಡುಹಿನಲಿ . . . ಎಂದು ದಾನವನಾಥ ಜರೆದೀಡಾಡುತಿರಲು (ಪ್ರಹ್ಮಾಸ. ೦೩-೪೪). ೭. ದಾಖಲೆಯಾಗು: ಮಲ್ಲ, ನಿನ್ನ ಶೌರ್ಯ ಸಾಹಸಗಳು ಬರೆದು ಹೋಗಿವೆ. ನಿನಗೆ ಗೌರವ ಸಿಗುವುದು ನಿಶ್ಚಯ (ಮೇದಿಮ. ೦೯೭). ವರೆ$_1$: ೧. ಕುಮ್ಬಿ ಊರನ್ ವರೆದನ್ (ಎಳ. X, ಸಂತಾಮ. ೦೨೬ ಪ-೭; ಸು. 800); ಮರಮ್ಮ ವರೆದ ಲಿಕಿತಂ (ಎಳ. VIII, ಸೊರಬ. ೨೨-೦೦; ಸು. 800); ಬೋನರಿ ವರದೋಮ್ (ಮೈಎಂ. ೦೯೩೭, ೯೨-೦೩; ?).

ಬರೆದ ಬರೆಹ = (ಹಣೆಯ) ಬರೆಹ; (ಅದೃಷ್ಟದ) ಲಿಖಿತ: ಕೊರಗನರಿದಂ ತನ್ನ ಮನೆಗೆ ಮರಬಿದ್ದಂತೆ ಬರೆದ ಬರೆಹಮಿದೆಂದು ಕಯ್ ನೊಸಲ ಬಡಿದಂ (ಕಾಲೂರ. ೦೩೩-೨೮೯). ಬರೆದಿಟ್ಟುಕೊಳ್ಳು = ೧. ಗುರುತು ಹಾಕು; ಗುರುತಿಸು: ನಿಮ್ಮ ಹಣದ ಪೆಟ್ಟಿಗೆಯಲಿ ಎಷ್ಟು ಹಣವಿದೆಯೆಂದು ಬರೆದಿಟ್ಟುಕೊಳ್ಳಿ (ಅಡುಸೌ. ೦೨೫); ನಾನು ಓದಿದ ಭಾಗದಲ್ಲಿ ಅಗತ್ಯವೆಂದು ತೋರಿದ ಮುಖ್ಯವಿಷಯಗಳನ್ನು ಸೂಕ್ಷ್ಮವಾಗಿ ಬರೆದಿಡುತ್ತಿದ್ದೆ (ಮುಂಗಾಮು. ೦೯). ೨. (ಆಲಂ) ನಿರ್ಧಾರವಾಗಿ ತಿಳಿ: ನೀನು ಪಾರಾಗಲಾರೆ. ಇದನ್ನು ಬರೆದಿಟ್ಟುಕೊ (ರೂಢಿ). ಬರೆದುಂಡಿಗೆ = ಬರೆದು ಮುದ್ರಿಸಿದುದು; ಗೊತ್ತುಮಾಡಿದುದು: ಬರೆದುಂಡಿಗೆಯ ಚೆಲ್ವೆ ಹೂವೀಡಿನಿಂ ಕರೆಯೆ ತೆರೆದೆಗೆಯಲಲರಿಂದಂ ಬೇಡೆಂಬ ಬಗೆಗೆ (ಕಾಲೂರ. ೦೬೬-೪೨೬). ಬರೆದು ಕೊಡು = ೧. (ಆಸ್ತಿ ಮೊದಲಾದುವುಗಳನ್ನು) ದಾಖಲೆಯ ಸಹಿತ ಕೊಡು; ದಾಖಲೆ ಮಾಡಿ ಕೊಡು: ಅರರೆ! ಬಿರುಮನೆ! ಮರೆಯದಿರು ಮನೆ, ಮರಿಯ ಮಕ್ಕಳ ಮಡದಿಯಾ . . . ಬರೆದುಕೊಡುವೆನು ಸ್ಥಿರ ಚರಾಸ್ತಿಯ ಉಂಬಳಿ (ಕಎಪು. ೨೦-೪೦). ೨. (ಆಲಂ) ನಿರ್ಧಾರವಾಗಿ ತಿಳಿಸು: ಸುಡುಗಟ್ಟು ಚಿಟಿಚಿಟಿಸುತೆಡೆಯೆಡೆಯನೊಡಗೊಂಡು ಬಿಡುನಾಲಗೆಯೊಳೇನೊ ತಿಳಿಯಹುದ ಬರೆದುಕೊಡುವ ನೆಲದೆಡೆಗೆ ಬಾನ್ ಬಿಡದೆ ಬೀಸುವ ಗಾಳಿ (ಕಾಲೂರ. ೦೬೯-೪೦೭). ಬರೆದುಕೊಳ್ = ೧. ಬರೆದಿಟ್ಟುಕೊಂಡಿರು: ಪೊಲದೆ ಸೀಮೆಯೆಲ್ಲಮಂ ಓಲೆಯೊಳ್ ಬರೆನ್ದು × × ಕಲ್ಲುಸಾಸನಮಾಗೆ ಬರೆದುಕೊಣ್ಡೆಮು (ಎಳ. III, ಪಂಜನ. ೦೩೯-೩೦; 915 ?). ೨. (ನಾಮದ) ಗೆರೆಯನ್ನು ಎಳೆ. ೩. ಕಾದ ಲೋಹದಿಂದ ದೇಹದ ಮೇಲೆ ಬರೆಯನ್ನು ಎಳೆದುಕೊಳ್ಳು,— ಹಾಕಿಕೊಳ್ಳು. ೨, ೩. ನೆಚ್ಚನಯ್ಯ ಹರಿ ಮೆಚ್ಚನಯ್ಯ . . . ತೊಗಲಿನ ದೇಹಕೆ ಗೋಪಿ ಗಂಧ ತೇದುಕೊಂಡು ರೋಗ ಬಂದೆಮ್ಮೆಯ ಹಾಗೆ ಬರೆದುಕೊಂಬ ಮನುಜನಿಗೆ (ಪುರಂದ. ೨-೬೪-೨)

[ದೇ.॥ ತಮಿ. ವರಿ, ವರೈ; ಮಲ. ವರಿ, ವರೆ; ತುಳು. ಬರಿ, ಬರೆ; ತೆಲು. ವ್ರಾಯು, ರಾಯು]

ಬರೆ$_2$ (ನಾ). ೧. ಗೆರೆ; ಎಳೆ; ರೇಖೆ: ಗಿಳಿಯಂ ಸಾಕ್ಷಿ ಮಾಡಿ ಇರ್ವರುಂ ಚದುರಂಗಮಾಡುತ್ತಿರೆ ಅರಸಿಯರಸನಂ ಗೆಲ್ದೊಡೆ ಗಿಳಿ ನೆಲದೊಳೆರಡು ಬರೆಯಂ ಬರೆಗುಂ (ಪಡ್ಡಾರಾ. ೦೦೬-೨೬); ಕಿಱುಕುಣಿಕೆಯ ಬೆರಲಿಂದೆಡೆವಱಿಯದೆ ಸುಟ್ಟುಂಬೆವರೆಗಮೆಯ್ದಿದ ಬರೆಯಿಂ ನೆಱೆ ನೂಱು ವರ್ಷಂ (ಲೋಕೋಪ. ೦೦-೦೬). ೨. ಎಲ್ಲೆಯ ಗುರುತು; ಸೀಮಾರೇಖೆ: ಕೋಟದಧಿವಾಸದಿಯಿಕ್ಕಿದ ಕಲ್ಲಿಂದಂ ಎತ್ತಿದ ಬರೆಯಿಂದ ತೆಂಕಲಿಯಿಂತೀ ಚತುಸ್ಸೀಮೆಯವೊಳಗುಳ್ಳ ಬಾಳು ಬೆಟ್ಟು . . . ಯಿಂತಿಷ್ಟನೂ ಮೂಲಕ್ರಯಕೆ ಸಲುವ ಅರ್ಥವನು ಕೊಂಡು (ಸೌಇಇ. IX — ii, ೪೩೦-೨೬; 1406). ೩. ಕಾದ ಕುಳದಿಂದ ಮೈಮೇಲೆ ಎಳೆದ ರೇಖೆ,— ಗೆರೆ: ತುಪ್ಪಮನಾ ಬರೆಯೊಳ್ ಪೂಸುವುದು ಬರೆದ (ಯ) ಪುಣ್ ತೀವುವಿನಂ (ಅಶ್ವಶಾ. ೦೦-೨೬); ಅಭಕ್ಷಣೆ ವತ್ಸರಹಿತೆ ರುಜೆ ಸಲೆ ಶಕ್ತಿಹೀನೆ ವಿಕಟಾಂಗಿ ಬಹುಭಕ್ಷೆ ಬರೆಗೊಳಗಾದುದತ್ಯಂಗಹೀನೆ ನಿರ್ವೀರ್ಯೆ ಮಧ್ಯಾದ್ಯ ಲಕ್ಷಣಪಶುಗಳಂ ಕಳೆದು (ಸಂಪು. ೬೦-೯); ನಾನು ಮರೆತರೂ ಹೊಟ್ಟೆಯ ಮೇಲಿನ ಬರೆಯಂತೂ ನೆನಪು ಕೊಡಲು ಇದ್ದೇ ಇದೆಯಲ್ಲ (ಹುಸ್ಕುಹು. ೪೮) ೪. (?): ಕುವರಿಯ ಪರಮಸೌಂದರಸಿಂಧುವಾ ಬರೆಹವಣಲ್ಲ ನರಗಿರರಿಂಗೆ (ಮೋಹತ. ೨೪-೨೬).

ಬರೆ ಕೊಡು = ಕಾದ ಕುಳದಿಂದ ಮೈಮೇಲೆ ಗೆರೆ ಎಳೆ,— ಸುಡು: ಅವರಲ್ಲೊಬ್ಬನು ರೊಚ್ಚಿನಿಂದ ಬರೆ ಕೊಟ್ಟು ಈತನ ಎರಡೂ ಕಣ್ಣುಗಳನ್ನು ಕಳೆದನು (ಮಂದಾಕಿ. ೦೫೬); ಅವನ ಒಂದೊಂದು ಮಾತೂ ಒಳಗೆಲ್ಲೋ ಬರೆ ಕೊಡುತ್ತಿದ್ದಂತೆನಿಸಿ ಕುಳಿತಲ್ಲೇ ಚಡಪಡಿಸಿದ (ಮೂರುದಾ. ೦೬೦). ಬರೆ ಹಾಕು = ಬರೆ ಕೊಡು: ಸರಕಾರವು ಬರೆಖಾತೆಯನ್ನು ಕೂಡಲೇ ನೇಮಿಸಿ ವ್ಯಾಕ್ಸಿನೇಶನ್ ಮೈಲಿಗಳನ್ನು ಹಾಕಿಸಿದಂತೆ ಎಲ್ಲರಿಗೂ ಮನೆ ಮನೆಗೆ ಬಂದು ಬರೆ ಹಾಕುವ ಏರ್ಪಾಟು ಮಾಡಲೇಬೇಕು (ಹುಸ್ಕುಹು. ೫೦); ಗುಳ ಕಾಸಿ ಬೇಗ ಬರೆ ಹಾಕಿದರೆ ಬದುಕುತ್ತಾನೆ (ಕಥಾಮಂ. IV, ೦೦); ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ (ಗಾರೆ). [<ಬರೆ$_1$]

ಬರೆ$_3$ (ನಾ). ಕಡಿದಾದ ಬೆಟ್ಟ,— ಗುಡ್ಡ: ಎಲ್ಲಿ ನೋಡಲು ಸರಿ ಜರಿಹಳ್ಳ ಬರೆಗಳು . . . ಮುಳ್ಳುಮರದ ಬೇರೆಡಹುಗಲ್ಲುಗಳಿಂದ ನಿಲ್ಲದೊಪ್ಪಿದುದು ಕಾಂತಾರ (ಕಂವಪಿ. ೦೮-೪೩); ಆ ದಾರಿಯಿಂದಲೇ ಬರೆಯನ್ನು ಹತ್ತಿ ಕಾಳೂರಿಗೆ ಹೋಗಬೇಕು (ಪದ್ಮಸ. ೨೩). [ದೇ.॥ ತುಳು. ಬರೆ]

ಬರೆಕೋಲು 'ಬರೆಗೋಲು' ನೋ.

ಬರೆಗುಡುಹು (ನಾ). = ಬರೆಗುಳ: ಕುಱುಬನುಱೆ ಮುಳುಗತ್ತಿಯಿಂ ತಿರೆಯಱವೆಗಳು ಬರೆಗುಡುಹುಮಡಗಿದ ಕುಱಿದೊವಲ ತಿದಿಯೆಸೆಯೆ . . . ಕೆಲವಾಡುಗಳನಾ ಬೊಬ್ಬುಲಿಯ ಮರನಿಪ್ಪ ನೆಪ್ಪಿಗಾತನು ಹೊಡೆದು (ಜಸಪು. ೨೦-೧೨). [ಬರೆ$_1$ + ಕುಡುಹು (<ಕುಡುಪು)]

ಬರೆಗುಳ (ನಾ). (ದನಕರುಗಳ ರೋಗನಿವಾರಣೆಗಾಗಿ) ಬರೆಯನ್ನು ಹಾಕುವ ಕಬ್ಬಿಣದ ಸಲಾಕೆ: ಬರೆಗುಳವನ್ನು ಚೆನ್ನಾಗಿ ಕಾಯಿಸಿ ಎತ್ತಿಗೆ ಬರೆಹಾಕಿದರು (ರೂಢಿ). [ಬರೆ$_1$+ಕುಳ$_1$ (<ಕುಱು)]

ಬರೆಗೊಳ್ (ಕ್ರಿ). ೧. ಬರೆಯನ್ನು ಹೊಂದು; ಸುಡಿಸಿಕೊಳ್ಳು. ೨. (ಆಲಂ) ಏಟುತಿನ್ನು; ಘಾಸಿಹೊಂದು; ಕಷ್ಟವನ್ನು ಅನುಭವಿಸು: ಏಱಿ ಬರೆಗೊಂಡ ಜೂದುಂಗಾಱನವೊಲ್ ಲಗ್ಗೆ ಮಾಡಲೊಲ್ಲದೆ ಪಡೆಯಂ ಸಾಱಿಸಿ ಮುಂದಂ ಪಿಂಗುವ ನೀಱೆಯವೊಲ್ ತೆಗೆಯವೇಟ್ಟನಾ ವಸುಷೇಣಂ (ಅನಂಪು. ೦೨-೨೬). [ಬರೆ$_2$+ಕೊಳ್$_1$]

ಬರೆಗೋಲು, ಬರೆಕೋಲು (ನಾ). = ಬರೆಗುಳ: (ಕಿ). ಬರೆಕೋಲು: ಲೆಕ್ಕಣಿಕೆ ಕೋಲಹುದು, ಕಾಗದವು ಹಗೆಗಳೆದೆ, ಬರಹದೇ ಬರೆಕೋಲಗಾಯಗಳಾಗುವುವು (ಪಡೆದಾ. I, ೪೩೫); ನನ್ನ ತಾಯಿ ಆರಿದ ಬರೆಕೋಲನ್ನು ಹಿಡಿದುಕೊಂಡು ಪ್ರವೇಶಿಸಿ ಅದನ್ನು ಕೆಂಡದಲ್ಲಿಟ್ಟಳು (ಮುಂಗಾಮು. ೬೬).

[ಬರೆ$_1$+ಕೋಲು$_1$ (<ಕೋಲ್$_1$)]

ಬರೆಪ, ಬರಪ, ಬರಹ, ಬರೆಹ (ನಾ). ೧. ಬರೆದುದು; ಬರವಣಿಗೆ; ಲೇಖನ: ಶ್ರೀಮತ್ ಜಕ್ಕಿಮಯ್ಯನ ಮರ್ಮಂ ಮಹಾದೇವಯ್ಯನ ಬರೆಪಂ (ಸೌಇಇ. IX-i. ೬೪-೪೦; 1049); ಹೊಸವುರ ಮೊರಕೇಸ್ವರ ದೇವರ ಓಜನ ಮಗ ಸಿಂಗೋಜನ ಪುತ್ರ ಗಣದೋಜನ ಬರೆಪಂ (ಸೌಇಇ. XI-i. ೫೦-೩೯; 1138); ಕೊರಲೊಳೆಸೆವ ಕೂಜಿತದ ಸುಮಂತ್ರದಿ ಬೆರಲ ಕೊನೆಯ ಬರೆಪದ ಬಾಸುಳ ಬಂಧುರಯಂತ್ರದಿ . . . ತರುಣಿಯ ಮೆಯ್ಯಾಲಸ್ಯದ ರುಜೆಯಂ ಪಿರಿದುಂ ಪಿಂಗಿಸಿದಂ (ಇಯಾಗಾ. ೮-೫೬). ೨. ಚಿತ್ರಣ; ಚಿತ್ರ: ಬರೆಪದ ಕನ್ನೆ ಭವಾಂತರಪರಿಚಯದಿಂ ಮೋಹ-ಮೂರ್ಛೆಯಂ ಪುಟ್ಟಿಸಿದಳ್ (ಪಂರಾಮಾ. ೪-೯೩); ಬರೆಪದ ಪೆಣ್ಣಂ ಭೂಪ ಕುಸುಮಕಾಂಡಂ ಕಂಡಂ (ಕುಸುಮಾ. ೯-೬೪); ಬರೆಪದೆ ಬಣ್ಣವು ಪರೆಯೆ ಕಪೋಲದಿಂದುರುಳಿದ ಕಂಬನಿ ಗುರುತಿದೊ (ಶಾಕುಂತ. ೮೯ ಅಡಿ). ೩. ಕಾವ್ಯಾದಿಗಳ ರಚನೆ: ಬರೆಪದ ಬಲ್ಮೆ ಬಾಜನಿಯ ಬಿನ್ನಣಂ (ಎಕ. VII. ಕಿಕಾಂ. ೦೨೪-೨೯; 1077); ಬರೆಪಂ ಬಾಜನೆ ಗಂಡಯುಕ್ತಿ ಗಣಿತಂ . . . ಎಂಬಿನಿತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಷ್ಕಪು. ೪-೫೯). **ಬರಪ:** ೧. ವಾಸ್ತುವಿಧ್ಯಾ(ದ್ಯಾ)ಧರಂ ಕಾವೋಜನ ಬರಪ (ಇಲ. XIII, ೯೩-೪೦; 1084); ಜಕ್ಕಣನ ಬರಪ ಮರುಳೋಜ ಮಾದೋಜನ ಕಂಡರಣೆ (ಕಇ. IV, ೦೦-೭೦; 1121). **ಬರಹ:** ೧. ಶ್ರೀಮತು ಕನಕನಂದಿತ್ರೈವಿದ್ಯದೇವರ ಗುಡ್ಡಂ ಸೇನಬೋವ ಭೋಗದೇವನ ಬರಹ (ಎಕ. VII. ಕಿಪಮೊ. ೬೯-೩೪; 1111); ಎರಡರಸನಾನದು ಧರಣಿಯೊಬ್ಬನ ಶಿರದ ಬರಹವ ತೊಡೆವೆನಿದೆಯೆಂದೆನುತ ತೆಗೆದೆಚ್ಚ (ಕುಪ್ಕಾಳ. ೦೩-೪೨); ಅದರ ಮೇಲಿದ್ದ ಬರಹ ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ (ಹಾಹುತ್ತ. ೦೦೩). ೨. ಅಂತು ಬರಹದ ಬಚ್ಚರಣೆಯ ಪೆಣ್ಣು ಕಣ್ಣೊಳ್ ತೊಟಲೆ . . . ಮನದೊಳ್ ಚಿಂತಿಸುತ್ತಮಿರಲ್ (ಪುಷ್ಕಾಸ್ತ್ರ. ೩-೪೨ ಪ); ಎಸೆವ ಬೊಂಬೆಯ ಬರಹದ ಪಟ್ಟೆಪೀತಾಂಬರ ಪೊಸ ಚಂದ್ರಗಾವಿ ಪೊಪ್ಪುಳಿಯ . . . ದಿವ್ಯದುಗುಲದ ನಿಱಿಗಳ . . . ಶಶಿಮುಖಿಯರು ರಂಜಿಸಿದರು (ಕಂಪಪಿ. ೨೪-೪೪). **ಬರೆಹ:** ೧. ಮಱುಗಲಿನ್ನೇಕರಸ ಬಿಡು ವಿಧಿ ಬರೆದ ಬರೆಹವ ತಪ್ಪಿಸಲು ಹರಿಹರವಿರಿಂಚಾದಿಗಳಿಗಳವೇ ನಮ್ಮ ಪಾಡೇನು (ನಳಕ. ೩-೩); ಈ ಶಾಸನಗಳು ದೊಡ್ಡವಲ್ಲ, ಎಲ್ಲ ಪುಟ್ಟ ಪುಟ್ಟ ಕಲ್ಲಿನ ಬರೆಹಗಳು (ದ್ರಾಪಿಪಿ. ೫೬). [ಬರೆ$_1$ + — ಪ$_2$]

ಬರೆಪಂಬೊಗು (ಕ್ರಿ). ಬರಹಕ್ಕೆ ಸಾಧ್ಯವಾಗು; ಬರವಣಿಗೆಗೆ ಶಕ್ಯವಾಗು: ಅಕ್ಕರಮುಂ ವರ್ಣಮುಮೆಂದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪಂಬೊಕ್ಕುಚ್ಚರಿಸಲ್ ಬಾರದುವಕ್ಕರಮಲ್ತು (ಕಮಿದ. ೨). [ಬರೆಪ + ಪೊಗು]

ಬರೆಪಕಾಱ, ಬರಹಗಾರ (ನಾ). ಬರೆಯುವವನು; ಲೇಖಕ: ಲಲಿತಪದಂ ಪ್ರಸನ್ನಕವಿತಾಗುಣಮಿಲ್ಲದೆ ಪೂಣ್ದು ಪೇಟ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೈಗಳ ಕೇಡು (ಪಂಪಪಾ. ೦-೦೨). **ಬರಹಗಾರ:** ತನ್ನ ಲೇಖಗಳನ್ನು ಪ್ರಕಟಿಸಿ ಪ್ರಭಾವಿ ಬರಹಗಾರ ಎಂದು ಎನಿಸಿಕೊಂಡಿದ್ದು ರಂಗಣ್ಣನವರಿಗೆ ಧೈರ್ಯ ತಂದುಕೊಟ್ಟಿತು (ಅಪಪಾ. ೦೦); ಮುಂದಕ್ಕೆ ಬರುವಷ್ಟರಲ್ಲಿ ಆ ನನ್ನ ಬರಹಗಾರ ಗೆಳೆಯನೇ ಆವನು ಆಗಿದ್ದ! (ಗಾಳಿಗು. ೦೬). [ಬರೆಪ + — ಕಾಱ]

ಬರೆಪು, ಬರಹು$_1$ (ನಾ). ಬರವಣಿಗೆ; ಬರಹ: ಕೃಷ್ಣ — ವಿಲೇಖನೇ, ಉಳ್ಕೆಯೊಳ್; ಕರ್ಷತಿ = ಉಳ್ತಪುದು . . . ಕಾರ್ಷ್ಯಂ—ಬರೆಪು (ಕಾಶಕ್ಯ. ೫೮). **ಬರಹು$_1$:** ಅಂದವ ಆತಪಂನುಹಕೆ ಬರಕೊಟ್ಟ ಬರಹು (ಎಕ. VII, ಕಿಪಮೊ. ೦೦೮-೪೨ : 1558 ?); ಸೇನಭವರಮಪ ಬರದ ಬರಹು (ಎಕ. VII, ಕಿಪಮೊ. ೯೩-೩೯; ?). [ಬರೆ$_1$ + — ಪ್ಯು$_2$]

ಬರೆಯಿಡು (ಕ್ರಿ). ಕಾದ ಲೋಹದಿಂದ ಮೈಮೇಲೆ ಗೆರೆಯನ್ನು ಎಳೆ; ಬರೆಯೆಳೆ; ಬರೆಹಾಕು: ಬರೆಯಿಡುವೊಡೆ ಪೆಱವೆಡೆಯೊಳ್ ಖರಕಿರಣನ ಸಚ್ಛಶಾಂಕರೇಖಾಕೃತಿಯಿಂ ಬರೆಯಿಡುವುದು (ಅಶ್ವಶಾ. ೦೦-೨೬); ಅತ್ತೆ ಬರೆಯಿಟ್ಟಾಗಲೂ ಗೋಳಿಡಲಿ (ಮೊಸ್ಸ. ೨೨). [ಬರೆ$_2$ + ಇಡು$_1$]

ಬರೆಯಿಸು, ಬರಸ್ಸು$_2$, ಬರೆಸು (ಕ್ರಿ). ೧. ಬರೆಯುವಂತೆ ಮಾಡು; ಲಿಖಿತಗೊಳಿಸು: ಗರ್ವದೆ ಬರೆಯಿಸಿದಂ ಪೆಸರನಖಳದಿಗ್ಭಿತ್ತಿಗಳೊಳ್ (ಪಂಪಪಾ. ೦-೨೦); ತನಗೆ ಪರಮವಿಶ್ವಾಸಮುಳ್ಳ ಲೇಖಕನಿಂ ಸೂರ್ಯಮಿತ್ರಂಗೆ ವಿನಯಪತ್ರಮಂ ಬರೆಯಿಸಿ (ಸುಳುಮಾ. ೨-೪೩ ಪ); ಏನೋ ಕಾಗದ ಬರೆಯಿಸಿ ಕೊಟ್ಟರು ಎಂದೂ ಹೇಳಿದ (ಸಂಗಾಳ್ಯ. ೪೬೦). ೨. ಕಾವ್ಯ ರಚನೆ ಮಾಡಿಸು; ಕೃತಿಯನ್ನು ರಚಿಸುವಂತೆ ಮಾಡು: ಶಾಂತಿ ಪುರಾಣಮನಿದನೋರಂತಿರೆ ಬರೆಯಿಸುವ ಕೂಡೆ ಪರೆಯಿಸುವ ಜನಕ್ಕಿಂತಾರ್ ನೋಂತರ್ (ಶಾಂತಿಪು. ೦-೩೯); ಪೊನ್ನಿಗನಿಂ ಬರೆಯಿಸಿದರ್ ಸಕಳೋರ್ವಿಗೆ ಪರೆಯಿಸಿದರ್ ಸಲೆ ಪುರಾಣಚೂಡಾಮಣಿಯಂ (ಅಪಪು. ೦-೩೪); ಕಾವ್ಯಗಳನ್ನು ಬರೆಯಿಸುವ ಮನೋಧರ್ಮ ಅತ್ತಿಮಬ್ಬೆಗೆ ತಂದೆಯ ಮನೆಯಿಂದಲೇ ಬಂದಿತೇನೋ (ಸಮಾಲೋ. ೦೫೬). ೩. (ಅಧಿಕಾರಕ್ಕೆ) ನೇಮಿಸು; ನೇಮಕಮಾಡು: ಎನ್ನ ಭಂಡಾರಕ್ಕೆ ಬರೆಯಿಸುವೆನೀತನಂ (ಇಸರ. ೩-೦೦೧). **ಬರಸ್ಸು$_2$:** ೧. ಆಚಂದ್ರಾರ್ಕ್ಕತಾರಂಬರಂ ಬರಸಿ × × × ಕೊಟ್ಟ ಧರ್ಮ್ಮ (ಎಕ. VII. ಕಿಪಮೊ. ೭೨-೦೯; 1292); ಬರಸಿದವು ಬಳಿಕೋಲೆ ಮಣಿಹಾಱರಿಗೆ ಹೇಳಿಕೆಯಾಯ್ತು ಶಿಷ್ಟರ ಪರುಟವಿಸಿ ಕಳುಹಿದನು ಪುರಗಳಿಗೆ (ತೊರಣಾ. ೦-೭-೯). ೪. ಹೇಳಿಕೊಡು; ಬೋಧಿಸು: ದ್ರೋಣ ಬರಸಿದ ಭಾಷೆಯೆಂದೇ ಕ್ಷೋಣಿಪತಿ ಬಗೆಯದಿರು (ಕುಪ್ಕಾಳ. ೦೩-೩೬). **ಬರೆಸು:** ೧. ಓಲಗಕೆ ನಡೆತಂದು ಬರೆ[ಪಾಣಾಂ. ರ]ಸಿದನೋಲೆಗಳ ಕಳುಹಿದನು ಧರಣೀಪಾಲಕರ ಬರಹೇಳೆನುತ ಹೊಯಿಸಿದನು ಡಂಗುರವ (ನಳಕ. ೩-೪). ೨. ಒಳ್ಳೆಯ ಸರಸರೂಪಕಗಳನ್ನು ಬರೆದು, ಬರೆಸಿ, ಆಡಿ, ಆಡಿಸಿ, ಪ್ರಚುರಪಡಿಸಬೇಕು (ಸಾಹಿಷೇ. ೬೮). [ಬರೆ$_1$ + — ಇಸ್ಸು$_3$]

ಬರೆಯೆಳೆ (ಕ್ರಿ). = ಬರೆಯಿಡು: ನಾಗಣ್ಣನ ಕರುಳಿಗೆ ಒಮ್ಮೆಲೆ ಬರೆಯೆಳೆದಂತಾಯಿತು (ಇಪಪೇ. ೪೮); ಭುಸುಗುಡುತ್ತ ಆಕಾಶಕ್ಕೆ ಬೆಂಕಿಯ ಬರೆಯೆಳೆದು ಕಣ್ಮರೆಯಾಗುವ 'ಸುರುಸುರ್' ಬಾಣ (ಮೂಕುದಾ. ೨೦೬). [ಬರೆ$_2$ + ಎಳೆ$_1$ (< ಎಟ$^2_1$)]

ಬರೆವಣಿಗೆ 'ಬರವಣಿಗೆ' ನೋ.

ಬರೆಸು 'ಬರೆಯಿಸು' ನೋ.

ಬರೆಹ 'ಬರೆಪ' ನೋ.

ಬರೋಬರಿ$_1$ 'ಬರಾಬರಿ$_1$' ನೋ.

ಬರೋಬರಿ$_2$ 'ಬರಾಬರಿ$_2$' ನೋ.

ಬರೋಬ್ಬರ್ 'ಬರಾಬರಿ$_2$' ನೋ.

ಬರೋಬ್ಬರ 'ಬರಾಬರಿ$_1$' ನೋ.

ಬರೋಬ್ಬರಿ 'ಬರಾಬರಿ$_1$' ನೋ.

ಬರ್ಕ, ಬರಕ$_1$ (ನಾ). (ಕರಾ) ಒಂದು ಬಗೆಯ ಕಾಡುಪ್ರಾಣಿ: ಹಿಂದೆ ಬರ್ಕ, ಕೆಮ್ಮ, ಕಡವೆ ಯಾವಾಗಲೂ ಕಾಣಲಿಕ್ಕೆ ಸಿಗುತ್ತಿತ್ತು (ಮೂಕಜ್ಞ. ೫೦): ದನ, ಎತ್ತು . . . ಕುರ್ಕ, ಬರ್ಕ, ಮೊಲ, ಮುಂಗುಸಿ, ನವಿಲು, ಹೊರಸಲು, ಕಾಜಾಣ ಪಿಕಳಾರ, ಕಾಡುಕೋಳಿ, ಕಣೆಹಂದಿ ಮೊದಲಾದ ಜಂತುಗಳಂತೆ ಸ್ಥಳೀಯವಾಗಿರಲಿಲ್ಲ (ಮಲೆಮ. ೪೨೦). **ಬರಕ$_1$:** ಕಾಡುಕುರಿ, ಕಾಡುಹಂದಿ . . . ಬರಕ, ಮೊಲ, ಮುಸಿಯ, ಹುಲಿ, ಕರಡಿ, ಕುರ್ಕ ಮುಂತಾದ ಇತರ ಪ್ರಾಣಿವರ್ಗಕ್ಕೆ ಕಾಡಿನಲ್ಲಿ ಮಿತಿಯೇ ಇರಲಿಲ್ಲ (ಪಂಜಪಂ. ೨). [?./ ತುಳು. ಬರಿಂಕ = ಒಂದು ಬಗೆಯ ಸಣ್ಣಗಾತ್ರದ ಜಿಂಕೆ]

ಬರ್ಕಟ 'ಬಱುಕಟೆ ನೋ.

ಬರ್ಕಟಬಯಲ್, ಬಕ್ಕಟಬಯಲು (ನಾ). ೧. ಏನೂ ಇಲ್ಲದುದು ; ಶೂನ್ಯ ; ಬರಿದಾದುದು: ತಮಮಾಗಳ್ ಬರ್ಕಟಬಯಲಾದುದರ್ಕನು ದಯಿಸುವಾಗಳ್ (ಗಿಂಕ. ೩-೩). ಬಕ್ಕಟಬಯಲು : ೧. ನೀನೆತ್ತ ನಾನೆತ್ತ ಲೆಂದು ಬೊಮ್ಮ ಬಕ್ಕಟಬಯಲು (ಅಪನಂ. ೩೮೦-೧೦೪೦) ; ಬಯಲ ಪುರುಷ ಬಯಲಾಕಾರ ಬಕ್ಕಟಬಯಲರೂಪನೆ (ಭರತ. ೬೭-೦). ೨. (ಆಲಂ) ಹಾಳು ; ನಾಶ : ಅಕ್ಕಟಕ್ಕಟ ದೊರಕಿದ ನಿಧಿಯಿಂದಿನೊಳ್ ಬಕ್ಕಟಬಯಲಾಯಿತಿಂತು (ಅಂಜನ. ೩-೧೮೪).

[ಬರ್ಕಟ (< ಬಱುಕಟೆ) + ಬಯಲ್ (< ವಯಲ್)]

ಬರ್ಕತ್ತು 'ಬರಕತ್ತು' ನೋ.

ಬರ್ಕರ (ನಾ). ಪ್ರಾಣಿಗಳ ಮರಿ : "ಎಲ್ಲಾ ಪಶುಗಳ ಮಱಿ ಬರ್ಕರ ಮೆಂಬುದು" (ಪರಾಯು. ೪೬-೧೨೩). [ಸಂ.]

ಬರ್ಕುಡಿ 'ಬಕ್ಕುಡಿ$_1$' ನೋ.

ಬರ್ಕುಡಿಗುಟ್ಟು 'ಬಕ್ಕುಡಿಗುಟ್ಟು' ನೋ.

ಬರ್ಕುಡಿಗೆಯ್ 'ಬಕ್ಕುಡಿಗೆಯ್' ನೋ.

ಬರ್ಕೆ$_1$ (ನಾ). (ಕರಾ) ಕಡಮೆ ಅಂತಸ್ತಿನ ಮನೆತನ : ಗುತ್ತು ಬರ್ಕೆಗಳ ಯಜಮಾನರನ್ನೂ ಆಮಂತ್ರಿಸಿ ಚೆನ್ನಾಗಿ ಸತ್ಕರಿಸಿದ್ದರು (ಬಡ್ಡಿಕು. ೩೦). 'ಗುತ್ತು$_4$' ಪರಾ.

[← ತುಳು. ಬರ್ಕೆ = ಬಂಟರ ಒಂದು ಬಿರುದು]

Δ **ಬರ್ಕೆ$_2$** 'ಬಕ್ಕೆ' ನೋ.

Δ **ಬರ್ಕೆವಲಸು** 'ಬಕ್ಕೆವಲಸು' ನೋ.

Δ **ಬರ್ಚಣೆ** 'ಬಚ್ಚಣೆ$_1$' ನೋ.

Δ **ಬರ್ಚಲ್** 'ಬಚ್ಚಲ್' ನೋ.

ಬರ್ಚಿ, ಬರ್ಜಿ, ಭರ್ಚಿ, ಭರ್ಜಿ (ನಾ). ಒಂದು ಬಗೆಯ ಆಯುಧ ; ಈಟಿ ; ಸಬಳ : ಕೊಳುಗುಳದಿ ಮದವೇರಿ ರೋಷದಿಂದುಭಯಬಲ ಹಳಚಿದುದು ಬರ್ಚಿಯಿಂ ಶೂಲದಿಂ ಶಕ್ತಿಯಿಂದಲೆ ಕೃಪಾಣಂಗಳಿಂದೆರ ಡೊಡ್ಡಿನೋಳ್ಕಾದಿತುಭಯತರ ಬಲ ಮಡಿದುದು (ತುರಂಗ. ೩೮-೬) ; ತನ್ನ ಶಕ್ತಿಯಲಿ ನಿನ್ನ ಸುತ್ತಿರುವುದಾವ ಬೆಂಕಿಉರಿಯು? ಪಾಲಿಸುತ್ತಿರೆಯು ಬರ್ಚಿನಾಲಗೆಯ ಚಾಚಿ ಕಾಯುತಿರೆಯು (ಅರಳು. ೦೬೭-೦೦) ; ಡೊಣ್ಣೆ, ಕೋಲು, ಬರ್ಚಿ ಮುಂತಾದ ಸಮಯಕ್ಕೆ ಸಿಕ್ಕ ಆಯುಧಗಳನ್ನು ತೆಗೆದು ಕೊಂಡು, ಮುಸಲ್ಮಾನರು ಹಿಂದೂಜನರ ಮನೆಗಳನ್ನು ಸುಗ್ಗಿದರು (ಮಂಡಾಕಿ. ೭೯). ಬರ್ಜಿ : ಬರ್ಜಿಯಿಂದ ಸಂದಿಯಲ್ಲಿ ತಿವಿದಾಗ ಹಾವು ಹೊರಬಂತು (ಕೂಡಿ). ಭರ್ಚಿ : ಕೆಲವು ಸಮಾಜಗಳಲ್ಲಿ ಭರ್ಚಿಯನ್ನು ಗುರಿಯಿಟ್ಟು ದೂರದಿಂದ ಎಸೆದು ಪ್ರಾಣಿಗಳನ್ನು ಕೊಲ್ಲುತ್ತಿದ್ದರು (ಕಿಲ್ಕಾಸಾ. ೨೦). ಭರ್ಜಿ : ಗಂಡುಕೊಡಲಿ. ಭರ್ಜಿ, ಗುರಾಣಿ ಎಲ್ಲವನ್ನೂ ಧರಿಸಿದ್ದೆ (ಅರ್ಯಕ. ೩೨) ; ಕಾಸಕ್ ಸಿಪಾಯಿಯೊಬ್ಬನು ತನ್ನ ಬಂದೂಕ ವನ್ನೂ ಭರ್ಜಿಯನ್ನೂ ಕೈಯಲಿ ಹಿಡಿದುಕೊಂಡು ಕೆಲವು ಸಮಯದಲ್ಲಿ ಆ ಬಾಗಿಲನ್ನು ಕಾಯುತ್ತಾ ನಿಂತಿರುತ್ತಾನೆ (ಮಲೆಪಾ. ೨೩).

[← ಹಿಂ. ಬರಛಾ, ಬರಛೀ ; ಮರಾ. ಬರಚೀ, ಬರಛೀ, ಬರಶೀ]

ಬರ್ಚಿಗಾರ (ನಾ). ಈಟಿಯನ್ನು ಹಿಡಿದಿರುವವನು ; ಬರ್ಜಿಯಿಂದ ಹೋರಾಟ ನಡೆಸುವ ಸೈನಿಕ : ಬರ್ಚಿಗಾರರ ಬಲವೆ ಬೀಡಾರ ಬಿಟ್ಟಂತೆ ಒಟ್ಟಿಲದಲಿ ಜೋಳದ ನೆಲುವು (ಸಖೀಗೀ. ೨೨-೩).

[ಬರ್ಚಿ + — ಗಾರ (< — ಕಾಱ)]

Δ **ಬರ್ಚಿಸು** 'ಬಚ್ಚಿಸು$_2$' ನೋ.

Δ **ಬರ್ಚು** 'ಬಚ್ಚು$_2$' ನೋ.

ಬರ್ಜಿ 'ಬರ್ಚಿ' ನೋ.

ಬರ್ತರಫ್ 'ಬರತರಫು' ನೋ.

ಬರ್ತರ್ಫ್ 'ಬರತರಫು' ನೋ.

ಬರ್ದ (ನಾ). ಜಾಣ್ಮೆಯುಳ್ಳವನು ; ಬುದ್ಧಿವಂತ : ರತಿಪತಿಯ ರಾಜಧಾನಿಯ ಚತುರೆಯರೊಳ್ ಸುಖಿಪ ಬರ್ದನೀ ಗ್ರಾಮ್ಯೆಯನೇಂ ಕ್ಷಿತಿಪಾಲ ನೆನೆಗುಮೇ ಮಾಳತಿಗೆರಗಿದ ತುಂಬಿ ನೆನೆಗುಮೇ ಮಿಕ್ಕಲರಂ (ಪಟ್ಟಿಕ. ೦೦-೦೯). [ಬರ್ದು$_4$ + — ಅ$_7$]

ಬರ್ದಂಡು 'ಭರದಂಡು' ನೋ.

ಬರ್ದಿಲ (ನಾ). ೧. ಸಾವಿಲ್ಲದವನು; ಅಮರ ; ದೇವತೆ : "ಆಗಸ ವಟ್ಟಿಗರು ಸಗ್ಗಿಗರು ಬರ್ದಿಲ [ಪಾಠಾಂ. ರ್ದುಗ]ರೈದೆ ಯಿಾ ಪೆಸರು ಸಲ್ವುದು ಸುರರ್ಗೆ " (ಶಬ್ದಮಂ. ೦೦) ; ಸಗ್ಗಮಂ ಸಾರ್ದು ಮುಗಿಲ್ದೇರ ನನಟ್ಟಿ ಬರ್ದಿಲರಂ ಸೋಲಿಸಿ, ಕನ್ನವೆಣ್ಗಳಂ ಸೆಱೆವಿಡಿವಂ (ಅದ್ಭುತ. ೨೯-೦೯) ; ಬಲುಗಬ್ಬಿಗನೊಬ್ಬನೆ ಬಾಳ್ವ ಬರ್ದಿಲಂ (ಗಿಳಿಪಿಂ. ೦೦೬-೬). ೨. ದೇವತೆಗಳ ಲೋಕ ; ಸುರಲೋಕ ; ಸ್ವರ್ಗ : "ಬರ್ದಿಲಂ, ಸಗ್ಗಂ —ಈ ೨ ಸ್ವರ್ಗದ ಪೆಸರ್" (ಕಶಸಾ. ೪೬-೦೭) ; ಬರ್ದಿಲಂ ಸಗ್ಗಕ್ಕೆ ಪೆಸರ್ (ಶಮದ. ೪೩) ; ಶ್ರೀರಂಗರಾಜಂ ಅಪುತ್ರನಾಗಿ ಬರ್ದಿಲಮನೈದ ಲೊಡಂ (ಪಕವಂ. ೨-೦೩).

ಬರ್ದಿಲರ ಬಡಗಿ = ದೇವತೆಗಳ ಬಡಗಿ ; ವಿಶ್ವಕರ್ಮ : ಪೆಸರ್ ನಳಂ. ಬರ್ದಿಲರ ಬಡಗಿಗೆನಗೆ ಪುಟ್ಟಿದಾತಂ (ಶ್ರೀ ರಾಮಾ. ೩೮೭-೯೩).

[ಬರ್ದು$_3$ + — ಇಲ]

ಬರ್ದಿಲನಾಡು (ನಾ). = ಬರ್ದಿಲ ೨: ಪಗೆದೊರೆಗಳುಮೊಂದಿದರಾ ಬರ್ದಿಲನಾಡ ಬಾಟ್ತಿಯ ಸಿರಿಯಂ (ಅಪ್ರತಿ. ೦೭-೪೪) ; ಕರ್ವೆಟ್ಟುಗಳೀಗಳ್ ಪೂರ್ವವೈರಮಂ ಬಗೆದು ಬರ್ದಿಲನಾಡಿಂಗೆ ದಾಟಿಡಲ್ಕೆ ದಂಡೆತ್ತಿ ಪೋಪು ವಕ್ಕುಂ (ರಾಮಾಶ್ವ. ೩-೩). [ಬರ್ದಿಲ + ನಾಡು]

ಬರ್ದಿಲವಟ್ಟೆ (ನಾ). ಸ್ವರ್ಗದ ದಾರಿ ; ದೇವಲೋಕದ ಮಾರ್ಗ ; ಆಕಾಶ : ಬರ್ದಿಲವಟ್ಟೆಯೊಳೈತರುತಲಿರ್ದ ಹನುಮನಂ . . . ತಿಳಿದಳಾ ಸಿಂಹಿಕೆ (ಶ್ರೀರಾಮಾ. ೪೦೦-೨೦೪). [ಬರ್ದಿಲ + ಬಟ್ಟೆ$_1$]

ಬರ್ದಿಲಾಣ್ಮ 'ಬರ್ದಿಲಾಳ್ಮ' ನೋ.

ಬರ್ದಿಲಾಳ್ಮ, ಬರ್ದಿಲಾಣ್ಮ (ನಾ). ದೇವಲೋಕದ ಒಡೆಯ ; ಸ್ವರ್ಗದ ರಾಜ : "ಬರ್ದಿಲಾಳ್ಮ[ಪಾಠಾಂ. ಣ್ಮ] ಸಗ್ಗಿಗರೆಱೆಯ . . . ಸುರಪತಿಯ ನಾಮಮಕ್ಕುಂ" (ಶಬ್ದಮಂ. ೦೦). ಬರ್ದಿಲಾಣ್ಮ : ಬರ್ದಿಲಾಣ್ಮನಾಗಿರ್ದೊಡಲ್ಲದೆಯೆ ಓರೊರ್ವನುಂ ಬೇಗುದಿಯಳೊಂದೆ ಬಗೆ ತೊಟಲ್ದಪನ್ (ಬಿರ್ಕಪ್ರ. ೩-೩೬). [ಬರ್ದಿಲ+ಆಳ್ಮ]

ಬರ್ದಿಸು (ಕ್ರಿ). ತಾಳಿಸಂ ; ಬಾಡಿಸು ; ಹುರಿ : ತತ್ತಟಗುದಿದು ಕಾಯ್ದು ಕಾಯ್ಗೊಂಡದೆಣ್ಣೆಯೊಳರ್ದಿ ಬರ್ದಿಸುತ್ತುಮಾಪಾದಮಸ್ತಕಂ ಬರಂ ಮೃತ್ತಿಸಿ ಪತ್ತಿ ತಿದಿಯುಗಿಯುತ್ತೆ (ಅಪಪು. ೧೦-೦೦ ವ).

[ಬರ್ದು$_1$ + — ಇಸು$_3$]

ಬರ್ದು$_1$ (ಕ್ರಿ). ೧. ಸಾಯು ; ಮರಣವನ್ನು ಹೊಂದು : "ಬರ್ದು—ಮರಣೇ" (ಶಮರಾ) ; ಶೂದ್ರಕನ ಪೊಳೆವ ಸುರಿಗೆಯ ಮೊನೆಯೊಳ್ ಪೊಂಗಿ ಸೊಡರ್ಗುಡಿಯ ಮೇಲೆ ಪತಂಗಂ ಪಾಯ್ವಂತೆ ಪಾಯ್ದು ಬರ್ದುದು ಸಿಂಗಂ (ಕಾಪ್ಯಸಾ. ೦೦೦೪ ಶೂದ್ರಕ) ; ಅತಿ ಶೋಕಾಗ್ನಿಯೊಳರ್ದು ಬರ್ದು [ಪಾಠಾಂ. ಟ್ದು] ಪುದಿದಾತ್ಮಧ್ಯಾನದಿಂ . . . ದುರಂತದುಃಖಮನುಣಲ್ಬೇಡ (ಅಪಪು. ೩-೩೬). ೨. ನವೆ ; ಬಾಡು ; ಸೊರಗು : ಪರಮಮಿತ್ರಾ ಇಂತೇಕೆ ಬರ್ದಿ[ಪಾಠಾಂ. ಬಿಟ್ದು] ಬಂಬಳಂ ಬಾಡಿ ಪಾಡಟಿದುಬ್ಬೆಗಂಬಟ್ಟಿರ್ದೆ (ಪಡ್ಡಾರಾ. ೩೯-೩).

[ದೇ. ॥ ತಮಿ. ವರುನ್ತು]

ಬರ್ದು$_2$ 'ಬಾಟು$_1$' ಪರಾ.

ಬರ್ದು₃ (ನಾ). ೧. ಸಾವು ; ಮರಣ : "ಬರ್ದೆನಲ್ ಸಾವು" (ಕಬ್ಬಮಂ. ೧೫) ; ಎನ್ನೊಳ್ ಕೂರ್ತಿರಪ್ಪೊಡೆ ಬರ್ದಿನ ಪೊರ್ದಿನ ಮುನ್ನಮೆ ಶ್ರೀರಘನಾಯಕಂ ಕಣ್ಣಾರೆ ಕಂಡು ಧನ್ಯನಪ್ಪಂತು ವರಮಂ ಕರುಣಿಪುದು (ರಾಮಾಶ್ವ. ೧೪೦-೦೦). ೨. ಸಾವು ಇಲ್ಲದ ಸ್ಥಳ ; ಸ್ವರ್ಗ : "ಬರ್ದೆನೆ ಸ್ವರ್ಗಮೆಂದೆನಿಪುದುಂ" (ಕನರ. ೬೨). [<ಬರ್ದು₁]

ಬರ್ದು₄, ಬದ್ದು₂ (ನಾ). ಜಾಣ್ಮೆ ; ಪ್ರೌಢಿಮೆ ; ಕೌಶಲ : "ಬರ್ದೆನೆ ಪ್ರೌಢಿಯೊಳಕ್ಕುಂ" (ಕರ್ಣಾನಿ. ೧೬) ; ಉಪರಿಚರಮಹಾರಾಜನಿಂದಗ್ಗಳಂ ಪೆಱರಾರುಮಿಲ್ಲಮಿಾ ಸಂಸಾರದೊಳ್ ಬರ್ದ ಬಾಟನೀತನೆ ಬರ್ದನೆಂದು ಪೊಗಟ್ಟೊಡೆ (ಪಡ್ಮಾರಾ. ೦೩೬-೨೦) ; ಮಸೆದ ಮದನನ ಪೊಳೆವಲರ್ಗಣೆಗಳಂತೆ ಕಣ್ಣೊಳ್ ಬೆಳೆದೆಳಸಿ ಬಂದಿರ್ದ ಪಾಟದಾಟದ ಮುದ್ದಿನ ಬರ್ದಿನ ಪರಿವಾರದೇವಿಯರುಮಂ . . . ಕಂಡು (ಆದಿಪು. ೨-೬೫ ಪ) ; ಆ ಸರಸತಿ ಕೂರ್ಮೆಯಿಂದೊಸೆದು ಮಾಡುಗೆ ಕಬ್ಬದ ಬರ್ದಿನೇಟ್ಗೆಯಂ (ಕಬ್ಬಿಳಾ. ೩) ; ಅಧರಾಮೃತಮಂ ನಿಚ್ಚಂ ತಣ್ಣನೆ ಸವಿವ ಬರ್ದುಳ್ಳರ್ಗೆ ಬರ್ದಿಲರೇಂ ಪಾಸಟಿಯೆ ? (ರಾಮಾಶ್ವ. ೬೦-೦೮). 'ಬರ್ದುಗ' ಪರಾ. ಬದ್ದು₂ : ಆತನಂ ಕಾಣಲೊಡಂ ಕರಂ ಬಯಸಿ ತಾಮೆಱೆದಟ್ಟುವರಟ್ಟಿ ಕೂಡೆಯುಂ ನಾ[ಣಿ]ಲಿವನ್ನರಾದರೆನುತೊಂದು ವಿದಗ್ಧತೆಯಿಲ್ಲ ಬದ್ದಿನೊಳ್ ಪೂಣಿಕೆಯಿಲ್ಲ ಬಾಲಕಿಯೆಯೆಂತುಗೆ ಕೂಡುತೆ ಗೆಲ್ದೆಯಾತನಂ (ಬಂಹರಿ. ೩-೬೦). [?]

ಬರ್ದುಂಕಿಸು, ಬದುಕಿಸು, ಬರ್ದುಕಿಸು (ಕ್ರಿ). ೧. ಕಾಪಾಡು ; ರಕ್ಷಿಸು : ನಿನ್ನೊಳಗೀಕೆ ತಾನೆಯೊಲವೆತ್ತಾ ಪಾಂಗುಮಂ ಪೆಂಡಿರೊಳ್ ಸರಿಗಂಡೀಕೆಯ ನೀಂ ಬರ್ದುಂಕಿಪುದು (ಶಾಕುಂತ. ೫೬-೧೫). ೨. ಮುಕ್ತಗೊಳಿಸು ; ಬಿಡುಗಡೆ ಮಾಡು : ವಿಜಯನೆಂಬ ಕುಮಾರನುಂ ಪಿರಿದು ತಂತ್ರಂಬೆರಸು ಪೋಗಿ ಏನಾನುಮೊಂದುಪಾಯದಿಂದೊದ್ದಾಯನನ ಸೆಱೆಯಂ[ಯಿಂ] ಬರ್ದುಂಕಿಸಿ ರಾಜಗೃಹಕ್ಕೊಡಗೊಂಡು ಪೋದೊಡೆ (ಪಡ್ಮಾರಾ. ೦೬೫-೦೭). ಬದುಕಿಸು : ೧. ಸದ್ಭಾವನೆಯೆ ಪ್ರಸನ್ನವಾಗಿ ಚಿದ್ಬಿಂದುವಿನೊಳು ಪ್ರತಿಬಿಂಬಿಸುತ್ತಿಪ್ಪ ಚಿದ್ಬ್ರಹ್ಮವನೊಳಕೊಂಡ ಮಹಾಶರಣರ ತೋಱೆ ಬದುಕಿಸಾ ಎನ್ನ (ಆದಪ. ೦೬-೧೨) ; ಶಿವಾಚಾರ ಶಿವಭಕ್ತಿ . . . ಶಿವಶರಣರ ಸಂಗ ಇವನೆ ಕರುಣಿಸಿ ಬದುಕಿಸಯ್ಯ ಎನ್ನ (ಅಪಂಡೇ. ೦೪೮-೦೪೩) ; ಬದುಕಿಸು ನನ್ನೊಡೆಯನ ದಮ್ಮಯ್ಯ (ಕೋಗಿಲೆ. ೫೦-೫). ೩. ಬದುಕುವಂತೆ ಮಾಡು ; ಜೀವವುಳಿಸು : ಅಂದು ಮೃತಸಂಜೀವಿಯೌಷಧಿಯಿಂದ ಬದುಕಿಸಿ ಮನೆಗೆ ತಂದನು (ಸಂಭವ. ಪರಿ. ೨-೦೫) ; ಅಮ್ಮೈಯ್ಯನಿಗೆ ಮರಣಸಂಭವವಾದರೆ ಮಾರ್ಕಂಡೇಯನಂತೆ ಈಶ್ವರನನ್ನು ಮೆಚ್ಚಿಸಿ ಬದುಕಿಸಿಕೊಳ್ಳುವೆನೆಂಬ ಭರವಸೆ (ತೆಂಗಾಳ್ವ. ೩೨). ಬರ್ದುಕಿಸು : ೧. ಅವರೆನ್ನಂಘ್ರದ್ವಯದೊಳೆಱಗಿ ಬರ್ದುಕಿಪುದೆಂದರ್ (ಪಶಕು. ೬-೦೧೫). [ಬರ್ದುಂಕು + — ಇಸು₃]

ಬರ್ದುಂಕು, ಬದುಂಕು, ಬದುಕು₁, ಬರ್ದುಕು₁, ಬಟ್ಟುಂಕು (ಕ್ರಿ). ೧. ಜೀವಧಾರಣೆ ಮಾಡು; ಪ್ರಾಣವನ್ನುಳಿಸಿಕೊಳ್ಳು; ಜೀವಿಸು : ಕರ್ಮಕ್ಕೋಡಿ ಬರ್ದುಂಕಲ್ಕಮಱೆವರಾರ್ ಭೂತಳದೊಳ್ (ಕದಿರಾ. ೦-೬೨); ಪಗೆವರೊಕ್ಕಲೊಳೋವೆನಲೊರ್ವರಿಲ್ಲದಂತಿರೆ ತವೆ ಕೊಲ್ಗುಮಂತುಮರಿ ಕೇಸರಿಗಾಂತು ಬರ್ದುಂಕಲಕ್ಕುಮೇ (ಪಂಪಭಾ. ೯-೫೬); ನಲ್ಲರ ಕೂಡುವಾಸೆಯೆ ಬರ್ದುಂಕುವುದರ್ಕೆ ನಿಮಿತ್ತಮಾಗದೇ (ಕಾದಂಉ. ೩೨೬). ೨. ಜೀವನವನ್ನು ನಡೆಸು; ಬಾಳನ್ನು ಸಾಗಿಸು ; ಹೊಟ್ಟೆಹೊರೆ : ಸೇವಕಂ ಮೊದಲೊಳರಸಂಗಂ ತದನಂತರಂ ಪ್ರಧಾನರ್ಗಂ . . . ಭೀತನಾಗಿರಲ್ವೇಟ್ಕುಂ. . . ಇಂತು ಲಘುತರಮಪ್ಪ ಸೇವೆಯಿಂ ತನ್ನಿಚ್ಛೆಯೊಳ್ ಬರ್ದುಂಕುವ ಶುನಕಂ ಲೇಸು (ಪಂಪಕಂ. ೫೨-೨೦); ಹರಹರ ಕರ್ಮದೊಳ್ ಬಳಲದಿಂತು ಬರ್ದುಂಕಿದೆನ್ನೆ ಸದಾಶಿವಾ ನರಪರ ಸೇವೆಯೊಳ್ ಕುಧಿಯದಿಂತು ಬರ್ದುಂಕಿದೆನ್ನೆ (ಪಂಪಾಶ. ೨೩). ೩. ಬಿಡುಗಡೆಯನ್ನು ಹೊಂದು; ಮುಕ್ತವಾಗು : ಆಕೆ ಮದನನ ಕೆಯ್ಯಿಂ ಬರ್ದುಂಕಿದರಲಂಬು ಬರ್ಪಂತೆ ಬಂದು (ಪಂಪಭಾ. ೩-೦೪ ಪ); ಬಂದುದು ಮದನನ ತಿರುಮಿ ಬರ್ದುಂಕಿದ ಲರಂಬಿನವೋಲ್ (ಸುಕುಮಾ. ೯-೦೦೬); ಸೆಱೆಯಿಂ ಬರ್ದುಂಕಿದಂ (ಭಾಷಾಭೂ. ೯೦ ಉದಾ). ೪. ಸಾರ್ಥಕತೆಯನ್ನು ಹೊಂದು ; ಕೃತಾರ್ಥವಾಗು ; ಧನ್ಯತೆಯನ್ನು ಪಡೆ : ಬಂದ ಭವಂಗತಿಸುಖಮುಖದಿಂದಂ ಮೆಯ್ಯಿಕ್ಕಿ ಹರ ಬರ್ದುಂಕಿದೆವೆನುತುಂ (ಗಿರಿಕ. ೦೦-೧೯). ೫. ಜಾರು ; ನಂಸಂಳು; ತಪ್ಪಿಸಿಕೊಳ್ಳು : ಆದಂ ತರ್ಪರಗಿಳಿಯನೊಂದು ಗಿಡುಗನೆಡೆಗೊಂಡು ಜಗುನೆಯಂ ಪಾಯ್ವಾಗಳುಗಿಬಗಿಮಾಡಿದಾಗಳದಱ ಕೈಯಿಂ ಬರ್ದುಂಕಿ ತೊಱೆಯೊಳಗೆ ಬಿಟ್ಟೊಡೆ (ಪಂಪಭಾ. ೦-೬೬ ಪ) ; ತತ್ಫಲಂಗಳ ನಮೃತೋಪಮಂಗಳನಾರೋಗಿಸುತ್ತುಂ ಸುಖದಿನಿರ್ದೊಂದುದಿವಸಂ ತನ್ನ ಕೈಯಿಂದಂ ಬರ್ದುಂಕಿದ [ಶಾಕಾಂ. ಬಿದಿರ್ದ] ಪಣ್ಣಂಬೋಧಿಮಧ್ಯದೊಳ್ ಬೀಟ್ಟುದುಂ (ಪಂಪಕಂ. ೨೭೭-೦೭). ಬದುಂಕು : ೧. ಈ ನೈಪನಂ ಕಾವವನಾವ ಆಚನೈಪನಮೆನಿಯಿಸೆ ಬದುಂಕುವನ್ನರುಮೊಳರೇ (ಸೌಇಇ. XI-1, ೬೯-೦೦; 1033); ನಿನ್ನೊಳಂ ತೊಡರ್ದು ಕಾದಿ ಬದುಂಕುವನೇಂ ತ್ರಿಣೇತ್ರನೋ (ಎಕ. VI, ಕಡೂರು. ೦೪೯-೪೭; 1205). ೪. ರುದ್ರರಿರ ನಾನಾವ ಕಾಲದೊಳದ್ರಿಜೇಶನ ಪದಯುಗವನುದ್ಯದ್ಧೃತಿಯೊಳರ್ಚಿಸಿ ಬದುಂಕುವ ಪುಣ್ಯವಾದಪುದೊ (ಬಸಪು. ೪೫-೪೬). ಬದುಕು₁ : ೧. ತಳವಱ ಕಳ್ಳರ ಬಾರಿಯೊಳೊಳಗಾಗದೆ ನಿನ್ನ ಬದು[ಶಾಕಾಂ. ರ್ದು]ಕಿ ಬಂದಂದ ಮಿದಾರಳವೀಗಳುಂಬಂ (ಸುಕುಮಾ. ೭-೨೪); ಸೂನು ಬದುಕಿದೊಡಿಂದು ನಿನ್ನಂ ನೋನುವೆವು (ಬಸಪು. ೪೮-೦೯); ವಿಷದ ಹುಟ್ಟಿಯೊಳೆಱಗಿ ನೊಣ ಜೀವಿಸುವುದೇ ಶಿವಶಿವ ಕುಮಾರನ ಮುಸುಡ ಮುಂದಕೆ ಬಿದ್ದು ಬದುಕುವುದುಂಟೆ ಭಟನಿಕರ (ಕುಮ್ಮಾಪ್ರೋ. ೬-೪೦). ೨. ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಸುರಕ್ಷಿತವ ಮಾಡುವ ಭರವ ನೋಡಾ . . . ಸಂಗಮದೇವನ ಪೂಜಿಸಿ ಬದುಕುವೋ ಕಾಯವ ನಿಶ್ಚಯಿಸದೆ (ಬಸಪ. ೧೬೨); ತೊತ್ತಿರೊಳೀ ತಳೋದರಿ ಬೆರೆಸಿ ಬದುಕಲಿ ಕರ್ಣ ಕಳುಹಿವಳ (ಕುಮ್ಮಾಸ. ೦೫-೮). ೪. ನೀನೊಲಿದ ವಿಭೂತಿಯ ನಾನು ಧರಿಸಿ ಬದುಕಿದೆನು ಕಾಣಾ (ಆದಪ. ೦೮-೪೪); ನೀವೆನ್ನ ಮಂದಿರದೊಳಾರೋಗಿಸಿ ದೊಡಾನಿಂದು ಬದುಕುವೆನು (ಬಸಪು. ೬೦-೨) ; ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು (ಕಪಕ. ೫೩-೯೭ ಪಣ್ಣಿ). ಬರ್ದುಕು₁ : ೧. ನೀನ್ನುಡಿದು ಬರ್ದುಕಿದ್ಯೆ ಪೆಱರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೇ (ಪಂಪಭಾ. ೦೩-೨೭); ಪಿರಿದಪ್ಪಾಪತ್ತೆಲ್ಲಮಂ . . . ಬಿದಿರ ಗಂಟಂ ಕಡಿವಂತಿರೆ ಕಡಿದು ಬರ್ದುಕಿ ಬಂದ್ಯೆ (ಧರ್ಮಾಮ್ಯ. ೩-೨೪೭ ; ಈಯಲರ್ವಿಜ್ಜಣಿಗೆಯನಿನಿತಾಯಾಸದೆ ಬೀಸಲೇಕೆ . . . ಈಯೆಲರಿಂ ಬರ್ದುಕಲೆಂತುಮಾನಾರ್ತವೆನೇ (ಕಂದ್ರಪು. ೮-೯೦). ೨. ಜನಪತಿಗಳ್ ನುಡಿಯಲ್ ಮಾರ್ದನಿಯಂತನುದದಿಸಿ ಬರ್ದುಕಲೊಲ್ಲದೆ ಮಾರ್ಕೊಂಡನುಚಿತಮಿದೆಂದು ಮಾಣಿಪ ಮನುಜೋತ್ತಮರೆಲ್ಲಿಯಾನುಮಿರ್ಪರ್ ಜಗದೊಳ್ (ಕಾಪಂಪು. ೫೪೨) ; ಖಳನಂ ಗುಣಗಣದಾವಾನಳನಂ . . . ಸಮಗ್ರದೋಷಾವಿಳನಂ ಪೆಸರ್ಗೊಂಡು ಬರ್ದುಕುವನ್ನನದಾವಂ (ಪುಷ್ಕಪು. ೦-೫೨). ೩. ನೀಲಾಂಜನೆ ಕರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿತ್ತೆನಿಸುತ್ತೊಳ ಪೊಕ್ಕಳ್ (ಆದಿಪು. ೯-೦೯); ಸಲ್ಲಲಿತಗಾತ್ರೆಯೊರ್ವಳ್ . . . ಮನೋಜನ ಬಿಲ್ಲಿಂ ಬರ್ದುಕಿದ ಶರಾಳಿಯಂತಿರೆ ಬಂದಳ್ (ಧರ್ಮಾಮ್ಯ. ೭-೧೮೯). ೪. ನೆಳಲಾದುದು ಧಮ್ಮಿಲ್ಲಂ . . . ಶೀತಳತರ ಜಳಮಾದುದು ಕೋಮಳೆಯಧರಮರೀಚಿ ಪಾಂಥನೇಂ ಬರ್ದುಕಿದನೋ (ಗಿರಿಕ. ೨-೨೦); ಪರಮಗುರುವವನಡಿವಿಡಿದು ಬರ್ದುಕಿಂ (ಪದ್ಮರಾ. ೮-೬೩); ಅಧಿಕಪರವಸ್ತುವಂ ಕಂಡವರಡಿವಿಡಿದು ಬರ್ದುಕು (ಭಾಪಪಂ. ೩-೨೮). ೫. ಬೀಸುವ ಚಾಮರಾಳಿ

ಸುಂದರಿಯರ ಕೆಯ್ಗಳಿಂ ಬರ್ದುಕಿ ಬಿಟ್ಟುವು (ಶಂಪಭಾ ೬-೨೯). ೬. ಸಂರಕ್ಷಿತವಾಗಿರು; ನೆಮ್ಮದಿಯಿಂದಿರು : ಪ್ರಿಯವನಿತಾಘನಸ್ತನದಿಱುಂಬಿನೊಳು . . . ಮಿಸುಪಾ ಗಭೀರನಾಭಿಯೊಳೊಳವೊಕ್ಕು ಕಾಮುಕಜನಂ ಬರ್ದುಕಿರ್ದುದು ಬಂದ ಮಾಗೆಯೊಳ್ (ಕುಸುಮಾ. ೬-೨೨); ವಾರಿಜಭವ ಶಕ್ರಾದಿ ದೇವತೆಗಳು ನಾರಿಯ ಕುಚಮಂಡಲವ ಸೇರಿ ಬರ್ದುಕಲೆಂದು ಮದನನ ಮುಂಗಡೆ ಮೋರ ಹೆಗ್ಗಾಳೆ ಸಾಱುದುದು (ಸೋಕಶ. ೬-೦೬). Δ ಬಟ್ಟುಂಕು : ೧. "ಬಟ್ಟುಂಕಿದಂ = ಜೀವಿಸಿದಂ; ಬಿಡಲ್ಪಟ್ಟಂ" (ಕಸುದ. ಪರಿ. ೦).

[ದೇ.॥ ತುಳು. ಬದ್ಕ್, ಬದುಕು; ಕೊಡ. ಬದೀಕ್; ತೆಲು. ಬತುಕು, ಬದುಕು, ಬ್ರತುಕು, ಬ್ರದುಕು; ಕೋತ. ವದ್ಕ್; ಕುವಿ. ಬತ್ಕ್; ಕೋಲಾ.ಪರ್ಜಿ. ಬದ್ಕ್]

ಬರ್ದುಕಾಡು (ಕ್ರಿ). ತಪ್ಪಿಸಿಕೊಳ್ಳು; ಪಾರಾಗು : ನಲ್ಲಳ ಮುಖಾಂಬುಜಮಂ ನಡೆ ನೋಡಿ ನೋಡಿ ಸಾಯದೆ ಬರ್ದುಕಾಡಿದಂ ಜವನ ಬಾರಿಯೊಳಂ ಬರ್ದುಕಾಡದಿರ್ಕುಮೇ (ಅಧಿಪು. ೦೨-೨೫); ಅಟ್ಟಿದ ನಿಮ್ಮ ಪೆರ್ಗಡೆ ಬರ್ದುಂಕಿದನೆಂಬುದನಿಂದ್ರಜಾಲಮಂ ತೊಟ್ಟನೆ ತೋಱು ಬಂದು ಬರ್ದುಕಾಡಿದಂ (ಶಂಪಭಾ. ೯-೯೯).

[ಬರ್ದುಕು$_1$ (< ಬರ್ದುಂಕು) + ಆಡು$_1$]

ಬರ್ದುಕಿಸು 'ಬರ್ದುಂಕಿಸು' ನೋ.

ಬರ್ದುಕು$_1$ 'ಬರ್ದುಂಕು' ನೋ.

ಬರ್ದುಕು$_2$, ಬದುಕು$_2$ (ನಾ). ೧. ಬಾಳು; ಜೀವನ : ಕಟುದವರ್ಗಟ್ಟುದ ಟ್ಟೊಡವರೇಟ್ಟೊಡಮಂತವರಿಂ ಬಟುಕ್ಕೆ ತಾಮುಟುವೊಡಮೇಟರಂತವರಣಂ ತಮಗಂ ಬರ್ದುಕಿಲ್ಲ (ಶಂಪಭಾ. ೨-೨೬); ಕಡೆಗಿವನ ಬರ್ದುಕು ನೀರೊಳ್ ನೆರೆಯದಿರದೆಂದು ಪೊಡವಿಯಾಡುವ ಮಾತಿಗೆಡೆಯಾಗಿರವಿ ಪಡುವಕಡಲೊಳಾಹಾ ಬಿಳ್ದನು (ಭಾಪಸಂ. ೩-೪೭). ೨. ಆಸ್ತಿ; ಸಂಪತ್ತು : ಗುರು ಸುಂದರನಂ ಸಲೆ ಕೀರ್ತಿಪರ್ಗೆ ಬಂಧುರತರ ವಸ್ತು ರಾಜಿಗಳನೀವುತೆ . . . ಬರ್ದುಕದೆಲ್ಲಮುಮಂತೆ ಸಮಾಪ್ತಿಯಾಗಲ್ (ಜಾಲಾಸ್ಥ. ೩-೦೦-೩). ಬದುಕು$_2$: ೧. ಗಣಿಸುವೊಡೆ ಎಮ್ಮಿರವು ಬದುಕು ಹರಣವು ನಿಮ್ಮ ಕರುಣವಲಾ (ಬಸಪು. ೩೦-೨೯); ಹಸನಾಗಿ ಇದೆ ಬದುಕು ಸಾಯಲಾಱೆನು ಎನಲು ಕುಸುರಿದಱಿಯದೆ ಬಿಡರು ಯಮನವರು ಆಗ (ಪುಕಂದ. ೨-೬೦-೩); ಹಳೆಯ ಭಾವನೆಗಳನ್ನು ಬೆರು ಸಹಿತ ಕಿತ್ತೆಸೆದು ಬದುಕನ್ನು ಹೊಸದೃಷ್ಟಿಯಿಂದ ನೋಡುವುದನ್ನು ಕಲಿ (ಸೂಪಸ್ಥ. ೦೭೪). ೨. ಆತನು ಹಿರಿಯ ಮಗನಿಗೆ ತನ್ನ ಬದುಕು ಎಲ್ಲ ಕೊಟ್ಟು ಚಿಕ್ಕವನಿಗೆ ಚನ್ನಾಗಿ ವಿದ್ಯೆ ಕಲಿಸಿದನು. (ಹಿರಿಯ ಮಗನು) ಕೆಲವು ದಿವಸಗಳಲ್ಲಿ ಆ ಬದುಕೆಲ್ಲ ಹಾಳುಮಾಡಿ, ಬಡವನಾದನು (ಮುಂಬಯಿ. ೦-೬); ಗಳಿಸಿದ ಬದುಕು ಧರ್ಮಕಾರ್ಯದಲ್ಲಿ ವ್ಯಯಗೊಳಿಸದಿದ್ದರೆ, ಅದು ಬೆಂಕಿಯಿಂದಾಗಲಿ, ಕಳ್ಳರಿಂದಾಗಲಿ, ರಾಜನಿಂದಾಗಲಿ ಅಪಹರಿಸಲ್ಪಡುತ್ತದಂತೆ ! (ಪಟ್ಟಹೊ. ೫೩). ೩. ಸರಕು; ಸಾಮಗ್ರಿ; ವಸ್ತು : ಅವರ ಅರಮನೆಯಲ್ಲಿ ಇರುವಂಥಾ ಬದುಕು ಸರ್ವಸ್ವವನ್ನು ಲೂಟಿ ಮಾಡಿಕೊಂಡು ಬಾ (ರಾಸೇಂದ್ರ. ೪೯); ಕೆಲವರು ಕಳ್ಳರು ಕೂಡಿ ಒಂದು ರಾತ್ರಿ ಒಬ್ಬ ಸಾವುಕಾರನ ಮನೆಯ ಕನ್ನ ಕೊರೆದು ಸಿಕ್ಕ ಬದುಕು ತಕ್ಕೊಂಡು ಹೋಗಿ (ಮುಂಬಯಿ. ೩-೪೧). ೪. ಕೆಲಸ; ಕಾರ್ಯ : ರಮಾವಲ್ಲಭನ ದರ್ಶನಕೆ ಮಾತೆಯಂ ಕರೆಯಲವಳೊಲ್ಲೆ ನಾನಿಲ್ಲಿರದೊಡೀ ಬದುಕ ಸಾಗಿಸುವರಾರೆಂದು ಚಂಡಿಗೊಳಲು (ಸ್ವಪಾಸ. ೪-೬೯); ಎರಡು ಆಳಿನ ಬದುಕನ್ನು ಒಬ್ಬನೆ ಮಾಡಿ ಸ್ವಲ್ಪಮಟ್ಟಿಗೆ ಸಣ್ಣಿಸಿದ್ದಾನೆ (ಪಕುಮ. ೪೦); ಈ ಹೊಲದ ಬದುಕು ಹದಗೊಳಿಸೋಣ ರಂಟಿಕಾಂಟೆಯ ಹಿಡಿದು ಬೆವರು ಹರಿಸಿ (ಪಂಪಮು. ೦೯-೨೦). ೫. ಕಸಬು; ಉದ್ಯೋಗ; ವೃತ್ತಿ : ಇದುವೆ ಜೀವನವೀ ಕುಟುಂಬಕ್ಕಿದು ಉಪಾರ್ಜನೆ ಬದುಕಿದೆಂದೆನ್ನದೆ ಮೃಡನ ಕಲ್ಪಿತದಿನಹ ಬಡಕಾಯಕದೊಳಿಂತು ಒದಗಿ ಪಡಿಯಂ ಕೊಡುತಿರಲು (ಬಸಪು. ೪೭-೫).

[<ಬರ್ದುಂಕು./ತಮಿ. ವತುಕ್ಕು; ತುಳು. ಬದ್ಕ್; ತೆಲು. ಬ್ರತುಕು; ಕೊಡ. ಬದೀಕೀ; ಕೋತ. ವದ್ಕ್]

ಬರ್ದುಕುಗೆಯ್ (ಕ್ರಿ). ಜೀವನವನ್ನು ಸಾಗಿಸು : ಬಾಳು: ಆಮಿನ್ನಟ್ಟುಂಡು ಬರ್ದುಕುಗೆಯ್ವದು ದಿಟಮೇ (ಕಬ್ಬಾಸು. ೨೦೫ ಸ್ವಾಸ್ಥ).

[ಬರ್ದುಕು$_2$ + ಕೆಯರ್$_1$]

ಬರ್ದುಗ (ನಾ). ಜಾಣ; ನಿಪುಣ; ಪ್ರೌಢ : "ಬಿತ್ತೆಗನೆಂದುಂ, ಬರ್ದುಗನೆಂದುಂ ಪ್ರೌಢಂ" (ಕಶಸಾ. ೬೦-೩೩೬); ಪಗೆ ಕೆಳೆಯೊಳ್ ಕೆಳೆ ಪಗೆಯೊಳ್ . . . ನಂಬುಗೆ ಚಲ್ಲವತ್ತರೊಳ್ ಬರ್ದುಗರೊಳ್ ಜರ್ಬಾರ್ಗಮುಂಟು ಮಾಡವೆ ಕೇಡಂ (ಪಿಕಿಮಂ. I, ೦೦೫). [ಬರ್ದು$_4$ + — ಗ$_2$]

ಬರ್ದುಗಾರ್ತಿ (ನಾ). ಜಾಣೆ; ನಿಪುಣೆ; ಪ್ರೌಢೆ : ಬರ್ದುಗಾರ್ತಿಯರ ಬಹಿರಂಗಣಂಗಳೊಳ್ ಆಳವಟ್ಟ ಕಂಭಂಗಳಲ್ಲಿ ನೆಗಟ್ತೆಗೆತ್ತಿ ತೆತ್ತಿಸಿದ ಸೌಭಾಗ್ಯಘಂಟೆಗಳೊಳಂ (ಪುಸ್ವಪು. ೨-೬೬ ಪ).

[ಬರ್ದು$_4$ + < — ಕಾಱ + — ತಿ$_1$ (< — ಇತ್ತಿ)]

ಬರ್ದುಗೆ (ನಾ). ಸಾವು; ಮರಣ : "ಬರ್ದುಗೆಯನೆ ಸಾವು" (ಕಸಾಗಿ. ೦೭); ಎಳಮಾವೇ ತಳಿರುಯ್ಯಲೇ ಕೊಳೆ ತಗುಳ್ದಿಂದೋಳಮೇ . . . ಕರಂ ಬರ್ದಿದೆಂ ಗಳ ನಿ.ಮೆಲ್ಲರುಮೆನ್ನ ಬರ್ದುಗೆಯನಾ ನಲ್ಲಂಗೆ ಪೇಟುಂ (ಕಾಪ್ಯಾವ. ೦೨೯); ಜನಪಂಗೆ ತತ್‌ಬೌದ್ಧಮುನಿಯ ಬರ್ದುಗೆ ಸುದ್ದಿವೇಳೆ (ಅರಾಸ. ೪-೨-೨) ; ಆತನ ಬರ್ದುಗೆಯ ಶಾಂತಿಗೆಂಪಾತಗೆ ಮಾಳಯಮೆನೆ ನೀಂ ಮಾಟ್ಟ ಜನ್ನದ ಹಸುವಂ ಪಿಡಿದೊಡೆ ನಿಮಗೆ ಮುನಿಸಾಯ್ತೆ ! (ಕಾಮಾಸ್ಥ. ೦೧೩-೬). [ಬರ್ದು$_3$+ — ಗೆ]

ಬರ್ದುಗೆಡು (ಕ್ರಿ). ಪ್ರೌಢಿಮೆಯಿಲ್ಲದಿರು : ಮನದಳಿಪಿಂ ತಮಾಳಲತಿ ಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂಚನಲತಿಕಾಂಗಿಯರ್ ಬಯಸೆ. . . ಸಂದ ನಿನ್ನ ಮುನ್ನಿನ ಚರಿತಂಗಳಂ ನೆನೆಯದಿರ್ (ಅಧಿಪು. ೨-೪೬).

[ಬರ್ದು$_4$ + ಕೆಡು$_1$]

ಬರ್ದುನುಡಿ (ನಾ). ಜಾಣ್ಮೆಯಿಂದ ಕೂಡಿದ ಮಾತು; ಪ್ರೌಢೋಕ್ತಿ : ಒಪ್ಪಂಬೆತ್ತಿನಿದಾದ ಬರ್ದುನುಡಿಯುಂ ತಳ್ತೋಜೆಯುಂ ನಿಲ್ವಿನಂ. . . ಪಲರೆಲ್ಲರ್ ತಿರ್ದಿದೀ ಕಬ್ಬಮೆಂತಪ್ಪಂಗಂ ಪೊಸಮುತ್ತಿನೆಕ್ಕಸರದಂತೆಂದುಂ ಕೊರಲ್ಗೊಳ್ಳದೇ (ಕಬ್ಬಕಾ. ೫). [ಬರ್ದು$_4$ + ನುಡಿ$_2$]

ಬರ್ದುವೆಣ್ (ನಾ). = ಬರ್ದುಗಾರ್ತಿ : ಅಲರ್ಗಳನಾಂತ ಪಾದರಿಗಳೊಳ್ ತರದಿಂದೆಱಗಿರ್ದ ತುಂಬಿಗಳ್ ಪಲವು ಬಸಂತನೊಲ್ದೊಲಿಸಿ ಕಾಡುವರೂಡಿಯ ಬರ್ದುವೆಂಡಿರಂ ನಿಲೆ ಸಱೆಗೆಯ್ವೆನೆಂದು ಪಲವಾಗಿರೆ ಮಾಡಿದ ತನ್ನ ಬಳ್ಳಿಸಂಕಲೆಗಳಿವೆಂಬಿನಂ ಬಗೆಯನಿರ್ಕುಳಿಗೊಂಡುವು (ಕಬ್ಬಕಾ. ೫೬).

[ಬರ್ದು$_4$ + ಪೆಣ್]

ಬರ್ದೆ, ಬದ್ದೆ$_1$ (ನಾ). ೧. ಪ್ರೌಢೆ; ಜಾಣೆ ; ನಿಪುಣೆ : ವ್ಯಾಳಗಜಂಗಳು ಮನಂಕದ ಬರ್ದೆಯರುಮನುಗಿಬಗಿಮಾಡಿದ ಸಂತೋಷದೊಳ್ ಬಳ್ವಳಬಳೆದ ವಿಕ್ರಾಂತತುಂಗನ ನಿಡುದೋಳ್ಗಳ್ ಗಣಿಕಾಜನಕ್ಕೆ ಕಾಮಪಾಶಂಗಳುಮರಾತಿಜನಕ್ಕೆ ಯಮಪಾಶಂಗಳುಮಾದುವು (ಶಂಪಭಾ. ೨-೩೯ ಪ) ; ಬಯಸಲ್ ತಕ್ಕಂದದ ಬರ್ದೆಯರೊಲವಿಂ ಬಯಸಿ ಬಂದೊಡಂ ಬಗೆಯದ ಬಲ್ಮೆಯನುಳ್ಳ ಸುಭಗನೈ (ಅಲಾಸ. ೪-೩೯) ; ಸಸಿಯಂ ಮೆಯ್ವೆಳಗಿಂದೆ. . . ಮೆಯ್ಗಣ್ಣನಂ ಪೊಸತಪ್ಪಗ್ಗದ ಗಾಡಿಯಿಂದೆ ಪಿರಿದುಂ ಬೆಳ್ಮಾಡಿ ಬೇಟ್ಟಂತುಟುಬ್ಬಸಮಂ ಮಾಡುವ ಬರ್ದೆಯರ್ ಪಲಬರುಂ ಕಣ್ಗೇಂ ಬೆಡಂಗಾದರೋ (ಕಬ್ಬಕಾ. ೦೩೪); ದಾದಿಯರುಂ ಬರ್ದೆಯರುಂ ಬೀದಿಯ ಮನೆಯೊಳ್ ಪೊಗಟ್ತೆವೆತ್ತೊಪ್ಪುವ ಮುತ್ತೈದೆಯರುಮಂತವುರದೊಳ್

. . . ಸಂದಣಿಸಿರ್ದರ್ (ಕಪಂ. ೪-೨೩). ೨. ಮಧ್ಯವಯಸ್ಸಿನವಳು; ನಡುಪ್ರಾಯದವಳು; ಪ್ರಬುದ್ಧೆ : ಕಿಳದಿಯರಂದು ಪಿಂದೆಗದು ಮೋನದೊಳೊಂದಿರೆ ಬಟ್ಟ ಬರ್ದಿಯರ್ಕಳನುವಿನಿಂದೊಡಂಬಡಿಸಿಯುಂ ಬಗೆಗೊಳ್ಳದೆ. . . . ದೇವಸಂಗೊಳುತಿರೆ (ಕಾಂ. ೩-೨೮). ೩. ವಯಸ್ಸಾದವಳು; ವೃದ್ಧೆ; ಮುದುಕಿ : ರಸಭಾವಂ ಪಿಂಗೆ ಶೈಥಿಲ್ಯಮದವಯವದೊಳ್ಕೀವೆ . . . ಶಯ್ಯಗಿಂದಾಗಿ ರಾರಾಜಿಸದಾದಂ ಬರ್ದಿಯುಂ ಪೋಲ್ತ ಧಮಕೃತಿ ರಸಜ್ಞರ್ಗನಾದೇಯಮಲ್ರೇ (ವೃಕಂ. ೦-೧೬); ತಡಿಗಳೊಡೆಯರ್ಕಳಾಗಳ ಬಿಡದೊಡನೆಯ್ತಂದು ಬರ್ದಿಯುಂ ಪೀಡಿಸೆ . . . ಸುಂದರೇಶನ ಗುಡಿಗೆಯ್ದುತೆ ಶೋದಿಂದ ಪೊಡೆಗೆಡದುಸಿರ್ದಳ್ (ಪಾಣಾಸ್ಥ. ೪-೦೩-೨೨). ೪. ಸೂಳೆ; ಗಣಿಕಾಸ್ತ್ರೀ; ವೇಶ್ಯೆ : ಅಡರ್ದ ಕುಟಿದ್ಧಯುಂ ದಯಿತೆ ಬಿರ್ದುವಿದೇಕನೆ ಬರ್ದಿಯೆಂದಳಿಂತಡಿಗಡಿಗೋಪ ನೀಂ ಸರಸಕಾವು ನಿವಾಸದೊಳಿಟ್ಟ ಕಯ್ಗಳಿಂ ಪಿಡಿದಿರೆ ತವ್ಮೊಳಿಟ್ಟು ಸವಿದೋಱಿದ ದೂಸಱಿ ನೊಂದಹರ್ನಿಶಂ ಕೆಡೆದಪುವು (ಅಂಗಾಸ. ೨-೦೦೯). ೫. ತಲೆಹಿಡುಕಿ; ಕುಂಟಣಗಿತ್ತಿ : ಪೊಸನಾರಂ ಕಲ್ಪೊಳೆತ್ತಲ್ ತ್ರಿಜಗಮೆಲರಲನಾಕಾಶದೊಳ್ ಗಾಳಿಯಂ ಖಂಡಿಸಲ್ . . . ಆ ಬರ್ದಿಬಲ್ಲಳ್ (ವೃಕಂ. ೨೯-೯). ಬದ್ದೆ1 : ೧. ಬೇಟಕಾರ್ತಿಯರಿವರೀಕಗಳ್ ಬಸನಿಗಳ್ ಕಡುಬದ್ದೆಯರೆಂದುಮಾಲತಾಂಗಿಯರೆನಿಸಿರ್ದರಂ.ನಯದೆ ನೋಡಿದನವ್ಪ್ರತಿವೇಶ್ಮಸಂಭವಂ (ಶಂಪಂ. ೪-೪೧); ಬದ್ದೆಯರುಡಿಸಿದೊಡುಡಕಲ್ತು ಕೊವರನಭಿನವಮದನಂ (ಅಪಂಪ. ೦-೩೬). ೪. ಕೋಳ್ಗಗ್ಗಳವಾದ ಮನೆಗಂ ತೋಳ್ಗಗ್ಗಳವಾದ ಬದ್ದೆಗಂ ಬೇಸತ್ತು (ಶಾಂಕಪು. ೯-೭೬ ಪ); ಮತ್ತಿನ ಗಂಡರ್ಮೊಱೆಯಿಲ್ಲರೆಂದು ಮನದೋಗೆ ಬಟಾನೀರ್ಗುರ್ದಿದ ಬದ್ದೆಯರೀ ಭವವಿಂತೆ ಪೋದುದು ಮಱುಭವದೊಳಾದೊಡವಿಂತನೊಳೆ ಬೇಟಮಕ್ಕೆಂದು ಪಠಿಸಿ ಪರಿಚ್ಛೇದಿಸಿ ಕಾಮಾಗ್ನಿಯಂ ಪುಗೆಯುಂ (ಅರ್ಥಪ್ರ. ೩-೨ ಪ).

ಬದ್ದೆಮನೋಹರ = ಚತುರೆಯರನ್ನು ಆಕರ್ಷಿಸಂವನು : ℙ ರಾಷ್ಟ್ರಕೂಟಚಕ್ರವರ್ತಿ ನೃಪತುಂಗನ ಒಂದು ಬಿರುದು : ವೈರಿಭಯಂಕರಂ ಬದ್ದೆ(ಡ್ದೆ?)ಮನೋಹರಂ ಅಭಿಮಾನಮನ್ದಿರಂ (ಇಇ. XII. ೨೦೯-೦೨; ೩೭೫); ಅವೋಘರಾಮಂ ಬದ್ದೆಮನೋಹರಂ (ಎಇ. VII. ೨೦೬-೦೨; ೩೦೮). [ಬರ್ದು + —ಎ]

ಬರ್ದಿಗ, ಬದ್ದಿಗ (ನಾ). ಒಬ್ಬಾತನ ಹೆಸರು : ಬರ್ದಿಗಂ ಕದಂಬಳಿಗೆ ಸಾಯಿರವುಮಾನಾಳುತ್ತಿರೆ (ಎಳ. XI. ಕಾಇಕಿ. ೦೦೯-೩;೦೩೦). ಬದ್ದಿಗ : ಶ್ರೀವಾಸ್ತವಿಭ್ಯರ್ದ್ದಿಗ ಭೂವಿಭರ್ತ್ಯಸ್ತಂನ್ತ್ರಾಧಿ ಪಾಲೋಜನಿ ನಾಗವಾರ್ಯ್ಯಃ (ಕಇ. ೨೩-೮-೯೬; ೩೩೫ ೪೪); ಅವಾರ್ಯವೀರ್ಯಂಗೆ ಬದ್ದೆಗಂ ಪರಿಯು ಮಗಂ (ಕಂಪಾ. ೦-೨೩). [< ಭದ್ರ + —ಗ್ಕ]

ಬರ್ದಿಗೆಯ್ತ (ನಾ). ಪ್ರೌಢಿಮೆಯುಳ್ಳವಳು ಮಾಡುವ ಕೆಲಸ : ಬರುದರ ಬಿಂಕಮುಂ ಪೊಗಟ್ಟ ಕೂಟಣಿತೋಳ್ಗಳಿರ್ಪ ಸೂಳೆವೆಂದಿರ ಸೊಬಗಿಂಗೆ ಮೈವಾಜಿಸಿದು ಮೆಚ್ಚುವ ಬಿಂಕದ ಬರ್ದಿಗೆಯ್ತುದೊಳ್ ಬೆರಸಿದೊಡಂದೆ ಬರ್ದಿನೆನುತಿರ್ಪ ಭುಜಂಗನೆ ತೋಳೊಳಿರ್ಕೆ (ಅಂಗಾಸ. ೨-೬೨).

[ಬರ್ದ + ಕೆಯ್ತ]

ಬರ್ನರು (ನಾ). ಉರಿಯುವ ಎಣ್ಣೆಯ ಅಥವಾ ಸೀಮೆಯೆಣ್ಣೆಯ ದೀಪಗಳಲ್ಲಿ ದೀಪದ ಜ್ವಾಲೆಗೆ ಆಕಾರವನ್ನು ಕೊಡುವಂಥ ಭಾಗ; ಜ್ವಾಲಕ : ಒಮ್ಮೆ ಹೊಗೆಗಟ್ಟುವುದೊಮ್ಮೆ ಭುಗ್ಗೆನುವುದು ಬರ್ನರು ಕೆಟ್ಟ ಲಾಟೀನು (ಇಂಗಾಸ. ೨೦೩-೬೩). [←ಇಂ. Burner]

ಬರ್ಪೆ 'ಬರ್ಪಿ' ನೋ.

ಬರ್ಪ್ಪ 'ಬರ್ಪ್ಪು' ನೋ.

ಬರ್ಪಿ, ಬರ್ಪೆ, ಬರ್ಪೆ (ನಾ). ಒಂದು ಬಗೆಯ ಸಿಹಿತಿಂಡಿ : ಮಿಠಾಯಿ : ಬರ್ಪಿ : ಪದಾರ್ಥಗಳು : ಒಂದು ರಾತಲು ಹಾಲಿನ ಹುಡಿ : ೧/೪ ರಾತಲು ಸಕ್ಕರೆ . . . ಗೇರುಬೀಜದ ಚೂರುಗಳು (ಆಚಾಶಾ. ೦೦೦). ಬರ್ಪೆ : ವೇಡೇ ಬರ್ಪೆ ತಕೊಂಂಡು (ಕುಂಬಾಮ. ೬-೧೪); ಚೊಕ್ಕಟವಾದಂತ ಬೆಂಡುಬೆನಕ ಬರ್ಪೆ ತುಕ್ಕಡಿ ಕಲ್ಯಾಣಶಾವಿಗಳು (ಆಚಗೀ. ೪೬). ಬರ್ಫಿ : ಮಸಾಲೆ ವಿಶ್ರಿತ ಕೇಶರಬರ್ಫಿ ಪೇಡೆ ಮೊದಲಾದ ಪಾದ್ಯಪದಾರ್ಥಗಳನ್ನು ಇಟ್ಟಿದ್ದರು (ಕುಂಬಳೆ. ೨೦).

[←ಪಾರ. ಬರ್ಫೀ. ಬರಫ್ ; ಹಿಂ. ಮರಾ. ಬರ್ಫೀ. ಬರಫೀ]

ಬರ್ಫ್ಫ, ಬರ್ಫ (ನಾ). ಮಂಜಿನ ಗಡ್ಡೆ ; ಹಿಮ : ನಗುವಾಗ್ಗೆ ಆಕೆಯ ತುಟಿಗಳೆರಡೂ ತೆರೆದು ಹಲ್ಲುಗಳು ಚಮಕಿಸಿದವು. ಅವು ಬರ್ಫಿನ ತುಂಡುಗಳಂತೆ ಶುಭ್ರವಾಗಿದ್ದವು (ಕಂಕುಬ. ೪೪) ; ಈ ಭಾಗದಲ್ಲಿ ಯಾವಾಗಲೂ ಬರ್ಫ್ ಇದ್ದು ಚಳಿಯು ಬಹಳಿದ್ದುದರಿಂದ ಬಿತ್ತಿ ಬೆಳೆಯಲನುಕೂಲವಿಲ್ಲ (ಕೃಕಾಸ. ೨೦). ಬರ್ಫ್ : ಉಗಿಯು ಪುಡಿಪಾಗಿ ಮಳೆ, ಬರ್ಫ್‌ಗಳ ರೂಪದಿಂದ ಕೆಳಗೆ ಬೀಳುತ್ತದೆ (ಕುಂಬಾಮ. ೬-೦೬೯) ; ನಿಂತಲ್ಲಿಯೇ ಅವರ ಕೈಕಾಲು ನೀರಿನಲ್ಲಿ ಬರ್ಫ್‌ಕ್ಕಿಂತ ತಣ್ಣಗಾದವು (ಸಚಾಜೀ. ೧೧೬).

[←ಪಾರ. ಬರ್ಫ್ ; ಹಿಂ. ಮರಾ. ಬರಫ್, ಬರ್ಫ್]

ಬರ್ಫೆ 'ಬರ್ಫಿ' ನೋ.

ಬರ್ಬರ (ನಾ). ೧. ಸುಸಂಸ್ಕೃತನಲ್ಲದವನು ; ಅನಾಗರಿಕ : "ಪಾವುರಂ ಪ್ರಾಕೃತಂ ಬರ್ಬರಂ" (ಕಾಂಗಡಾ. ೬೯-೬) ; ಒಂದಾನೊಂದು ಕಾಲದಲ್ಲಿ ಸಂಯಮಹೀನ ಬರ್ಬರರಾಗಿದ್ದವರು ಇಂದು ಮಾನವರಾಗಿದ್ದಾರೆ (ಕಇಕಥ. II. ೨೬೩) ; ಸೌಂದರ್ಯಪುರ ಪ್ರಳಯಕ್ಕೆ ದೂರ ಬರ್ಬರನು ಕೈಯ ಚಪ್ಪಿ ಮಣ್ಣಾಗಿ ಹೋದ ; ಸಂಹಾರಕಾಲ ಕಲ್ಲಾಗಿ ನಿಂತಿಲ್ಲಿ (ಸೂರ್ಯಕಾ. ೩೬-೩). ೨. ಸುಸಂಸ್ಕೃತವಲ್ಲದುದು : ಯಾರೂ ಬಂಗಾಳಿಯನ್ನು ಸಡ್ಡೆ ಮಾಡುತ್ತಿರಲಿಲ್ಲ. ಸಂಸ್ಕೃತಪಂಡಿತರಿಗೆ ಅದು ಗ್ರಾಮ್ಯ, ಇಂಗ್ಲಿಷ್ ತಿಳಿದವರಿಗೆ ಬರ್ಬರ (ಬಂಕಮು. ೩, ಮುಕ್ಕು೬). ೩. ನೇರವಾಗಿ ಅರ್ಥವಾಗದುದು ; ಅಸ್ಪಷ್ಟವಾದುದು : ಸಪ್ತ ಪಬ್ಲಿಪೀಠದೊಳ್ ಕುಳ್ತಿರಲ್ ಕೇಳ್ದೆ ನಾನ್ ಪಕ್ಕಿಗಳ್ ಕರಳ್ಚುಱುವಿ ಪುರ್ಚಿಂದೆ ಬೀಱುವ ಬರ್ಬರದ ಮಱಿನುಡಿಯನ್ (ಅಂಚಿಗೂ. ೪೭-೩೨). ೪. ಹಳದಿಬಣ್ಣದ ಶ್ರೀಗಂಧ : "ಹರಿಚಂದನಂ ಮತ್ತೆ ಬರ್ಬರ ಮಕ್ಕುಂ" (ಕುಂಗಡಾ. ೯೯-೩೨). ೫. ಒಂದು ಬಗೆಯ ಗಂಧಕದ್ರವ್ಯ ; ಗೋರೋಚನ : "ಪೂತಿಗಂಧಃ — ಗಂಧಕ, ಬರ್ಬರ" (ಟಿಪ್ಪ. ೦೦೮). ೬. ಒಂದು ಬಗೆಯ ಗಿಡ ; ಅಜಗಂಧಿಕೆ ; ನಾರುಂಡೇಳೆ : "ಬರ್ಬರಾ . . . ಅಜಗಂಧಿಕಾ — ಇ ನಾರಂಡ್ಯಾಳೇಗಿಡದ ಹೆಸರುಗಳು" (ಶಿಕ್ಷಾಪ್ರ. ೦೧೪). ೭. ಮುಳ್ಳಿನಿಂದ ಕೂಡಿದ ಒಂದು ಬಗೆಯ ವೃಕ್ಷ ; ಬೊಬ್ಬುಲಿ ; ಜಾಲಿ : ಬರ್ಬರಂ = ಬಬ್ಬರಂ, ಬಬ್ಬರಮೆಂದು ನಾಮುವ ಬೇಳೆಯುಂ, ಬೊಬ್ಬುಲಿಯುಮೊಂದು ದೇಶಮುಮಮ್ಮುಂ (ಕಇಪ್ರ. ೪. ೨೬೦ ಕೃತ್ತಿ). ೮. ಆರ್ಯರಲ್ಲದವರಿಗೆ ಸೇರಿದ ಒಂದು ದೇಶ ಮತ್ತು ಅಲ್ಲಿಯ ಜನಾಂಗ : ಬರ್ಬರ ಪಾರಸೀಕ ಪಾರಿಯಾತ್ರ ಹಮ್ಮೀರ ಡೊಕ್ಕಾರ ತುರುಷ್ಕ ಮುರುಪ್ರಭೃತಿಭೂಪಾಲಕರಿಂ ಭಯಾವಹ ರಸಮುಂ . . . ನೆಗಟ್ಟುತ್ತುವಿರೆ (ಜಗಕ. ೨-೪೯ ಪ) ; ತುರುಕ ಬರ್ಬರ ಪಾರಸೀಕರ ತುರಗವೈಸಾವಿರ ಸಹಿತ ಮೋಹರಿಸಿ ನಿಂದನು ಶಬುವಿ (ಶಾಬ್ಯಾಗ. ೦-೪) ; ನಡೆದುದು ಬರಿಬಲ . . . ಬರ್ಬರದ ದೂಪಾರಿ ಹೋನಗ ವಿಂಧ್ಯ ಬೋಟಕ ಪಾರಶಿಕ ಸಾಂಬ್ಯಾಣಿ ಹುರುವಂಜಿಗಳ ಬಳವಿಡಿದು (ಕೂಪಕಾ. ೯-೯-೪). ೯. ನೀಚ ; ಪಾವುರ. ೧೦. ದಡ್ಡ ; ತಿಳಿಗೇಡಿ. [ಸಂ.]

ಬರ್ಬರತೆ (ನಾ). ಒರಟುತನ ; ಕ್ರೌರ್ಯ : ಮರದ ಪಟ್ಟಿಗಳಂಥ ಸ್ವಲ್ಪವೂ ಪಾತಿಲ್ಲದ ಅಚಲವಸ್ತುಗಳನ್ನು ಬಿಟ್ಟು ಮತ್ತಾವುದರ ಮೇಲೂ

ಆ ಬರ್ಬರತೆಗಳನ್ನೆಲ್ಲಾ ಪ್ರಯೋಗಿಸುವ ಅವಕಾಶ ಆ ದುರ್ಬಲ ವಯಸ್ಸಿನಲ್ಲಿ ನನ್ನ ಸ್ವಾಧೀನದಲ್ಲಿರಲಿಲ್ಲ (ಶಿಶಿಂಧ. II. ೩೦). [ಸಂ. ಬರ್ಬರತಾ]

ಬರ್ಬುರ (ನಾ). ಒಂದು ಬಗೆಯ ಮುಳ್ಳಿನ ಮರ ; ಜಾಲಿ ; ಬೊಬ್ಬುಳಿ : ಮಾಕಂದಶಾಲಿ ಶುಕಶಿಶುವೀ ಕಂದಿದ ಬರ್ಬುರವನು ಸೇರ್ವುದೆ (ಪಂಪಶ. ೬-೨೮). [ಸಂ.]

ಬರ್ಬೂರ (ನಾ). ಜಾಲಿಮರ ; ಬೊಬ್ಬುಳಿ : ದೀರ್ಘಕ್ಕೆ ಹ್ರಸ್ವಂ — . . . ಬರ್ಬೂರ, ಬರ್ಬೂಲ — ಬೊಬ್ಬುಲಿ, ಬಬ್ಬುಲಿ (ಕಮಾದ. ೨೬೩ ಪ್ರಯೋ) ; ಗುರುವೆ ನಿಮ್ಮಂಘ್ರಿಯಂ ಬಿಡಲಾಱೆನೆಂದೊಱಲುತಿರೆಯಂತೆ ಗೆಯ್ಯೆಂದು ತಂದೊಂದು ಬರ್ಬೂರಧರಣೀಜದಡಿಯೊಳಗಿರಿಸಿ (ಪದ್ಮರಾ. ೨-೨೩). [< ಸಂ. ಬರ್ಬುರ]

ಬರ್ಮ 'ಬೊಮ್ಮ' ನೋ.

ಬರ್ಲು 'ಬಱಲು' ನೋ.

ಬರ್ಷಣ 'ಭರಷಣ' ನೋ.

ಬರ್ಹ (ನಾ). ೧. ನವಿಲು ಮುಂತಾದ ಪಕ್ಷಿಗಳ ಗರಿ,—ಸೋಗೆ : "ಕಳಾಪಃ, ಬರ್ಹಃ —ಈ ೨ ಸೋಗೆ" (ಹಲಾಯು. ೪೦-೯೯); ಮದನನ ಪಂಚರತ್ನಮಯಖೇಟಕದಂತಿರೆ ಬಿರ್ಚಿ ಬರ್ಹಮಂ ಪದೆದು ನವಿಲ್ಗಳಾಡೆ (ಸಗಪ. ೪-೩೦). ೨. ಎಲೆ ; ಪರ್ಣ; ಪತ್ರ: "ಬರ್ಹಂ, ಪರ್ಣಂ, ದಳಂ, ಪತ್ರಂ,ಪಲಾಶಂ, ಛದನಂ, ಛದಃ— ಈ ೭ ಮರದ ಎಲೆ" (ಹಲಾಯು. ೩೦-೩೦); ಬರ್ಹಂಗಳಿಂದಂ ಪೊರೆದಾಶಾಭಿತ್ತಿಯಂ ತನ್ನಯ ಪಸುರ್ವೆಳಗಿಂ ಪೂಸುತಿರ್ಪಂತೆ ಚೆಲ್ವಾಗಿರೆ ಮುಂದೊಂದಂ ಲತಾಮಂಟಪ ವನವನಿವೃಂದಾರಕಂ ಕಂಡಂ (ಕಾದಂಬ.೪೪೦). ೩. ಪರಿಜನ ; ಪರಿವಾರ. ೪. ಒಂದು ಬಗೆಯ ಸುಗಂಧದ್ರವ್ಯ : "ಗ್ರಂಥಪರ್ಣಂ, ಶುಕಂ, ಬರ್ಹಂ . . . ಕುಕ್ಕುರಂ— ೬ ಸ್ಥಾಣೇಯಕವೆಂಬ ಗ್ರಂಥದ್ರವ್ಯದ ಹೆಸರುಗಳು" (ಸಿದ್ಧಾಂತಿ. ೦೪೨). [ಸಂ.]

ಬರ್ಹಿ$_1$ (ನಾ). ೧. ಬೆಂಕಿ : ಅಗ್ನಿ. ೨. ಯಜ್ಞ, ಯಾಗಾದಿಗಳಲ್ಲಿ ಬಳಸುವ ಒಂದು ಬಗೆಯ ಮೊನಚಾದ ಹುಲ್ಲು ; ಕುಶ : "ಬರ್ಹಿಃ ಕುಶಂ . . . ದರ್ಭೆಯದು" (ಮುಂಗರಾ. ೩೪-೯); ಬರ್ಹಿಗಳ ಹೊಱೆಗಳಿಂ ಸ್ರುಕ್ಸ್ರುವಾದಿಗಳ ಸಂದೋಹದಿಂದೆ . . . ದಕ್ಷನಧ್ವರಶಾಲೆ ಕಣ್ಗೆಸೆದುದು (ಸಂಪು. ೩೦-೨೪). [ಸಂ. ಬರ್ಹಿಸ್]

ಬರ್ಹಿ$_2$ (ನಾ). ನವಿಲು ; ಮಯೂರ : ಗಿರಿಯ ತೊಱೆದು ಬರ್ಹಿ ಪುಲ್ಲ ಮೊರಡಿಗಳಸಬಹುದೆ (ಮಹಾಬೇ. ೩. ೦೩೨-೩೪೦); ಕಾರುರಗ ಕಪಿ ಕೋಕಿಲನ ಬರ್ಹಿಯ ಸುಧಾಕಿರಣನ . . . ರತ್ನಾಕರನಲೊಂದೊಂದು ಗುಣವಿರಬೇಕು ನೃಪರಿಗೆ (ಕಸ್ತಾಸ. ೦-೩೪). [ಸಂ. ಬರ್ಹಿನ್]

ಬರ್ಹಿಣ (ನಾ). = ಬರ್ಹಿ$_2$: "ಕೇಕೀ, ಶಿಖೀ . . . ಬರ್ಹಿಣಃ, ಕಳಾಪೀ, ಸರ್ಪಾಶನಃ, ಮಯೂರಃ, ಶಿಖಾವಳಃ, ಶ್ಯಾಮಕಂಠಃ —ಈ ೧೦ ನವಿಲ್" (ಹಲಾಯು. ೪೦-೯೯); ಜಗತ್ಪ್ರಣೂತ ಭೂತಳಾಧಿನಾಥನರ್ಥಿಸಂಘಾತನವ ಬರ್ಹಿಣಾನಂದಕರಣಪ್ರತ್ಯಗ್ರಜಲಧರಾಗಮಂ (ಸುಳುಮಾ. ೦-೬೯ ಪ) ; ಎಳಸುತಿರ್ಕುಂ . . . ಉದ್ಯಾನಂಗಳೊಳ್ ಬರ್ಹಿಣಕಚಭರೆಯರ್ಕೇಳಿ ಮೇಳಕ್ಕೆ ನಿಚ್ಚಂ (ಆರ್ಧಸೇ. ೦-೬೩). [ಸಂ.]

ಬರ್ಹಿಣವಾಹನ (ನಾ). ನವಿಲನ್ನು ವಾಹನವಾಗಿ ಉಳ್ಳವನು ; ಷಣ್ಮುಖ : "ಗೌರೀಪುತ್ರಃ, ಷಣ್ಮುಖಃ . . . ಬರ್ಹಿಣವಾಹನಃ, ಮಹಾಸೇನಃ, ಮಹಾತೇಜಾಃ, ಶರಜನ್ಮಾ (ಚ ಕಥ್ಯತೇ)—ಈ ೨೦ ಕಾರ್ತಿಕೇಯನ ಪೆಸರ್" (ಹಲಾಯು. ೩-೨೦). [ಸಂ.]

ಬರ್ಹಿಣಿ (ನಾ). ಹೆಣ್ಣುನವಿಲು : ತಾನಾ ಪುರುಷಕೇಕಿ ಬರ್ಹಿಣಿಯ ಸಮ್ಮುಖದಿ ಬಿರ್ಚುತೆ ಕಲಾಪಮೇಚಕಸಹಸ್ರಂಗಳಂ (ಸತ್ರಾಂಗ. ೩೪-೦೪೬೬). [ಬರ್ಹಿಣ + — ಇ$_2$]

ಬರ್ಹಿಧ್ವಜ (ನಾ). ೧. ನವಿಲನ್ನು ಪತಾಕೆಯಲ್ಲಿ ಉಳ್ಳವನು; ಷಣ್ಮುಖ. ೨. ಒಬ್ಬ ರಾಜನ ಹೆಸರು; ಮಯೂರಧ್ವಜ : ಇವಂ ಬರ್ಹಿಧ್ವಜನ ತನುಜನನಸೂಯಕಂ ಧೀರನು (ಸ್ವಯಂಭು. ೨೩-೦೩). [ಸಂ.]

ಬರ್ಹಿರ್ಮುಖ (ನಾ). ಅಗ್ನಿಯ ಮೂಲಕ ಹವಿಸ್ಸನ್ನು ಸೇವಿಸುವವನು : ದೇವತೆ : ಹವಿರ್ಭೋಜನದ ಬರ್ಹಿರ್ಮುಖರು ನೆರದುದು ನೀರದಾಧ್ವದಲಿ (ತೊರಣಾ. ೦-೬-೪೦). [ಸಂ.]

ಬರ್ಹಿಷ್ಕೇಶ (ನಾ). ಬೆಂಕಿಯ ಅಧಿದೇವತೆ ; ಅಗ್ನಿ [ಸಂ.]

ಬರ್ಹಿಷ್ಠ (ಗು). ೧. ದೊಡ್ಡದಾದ; ಬೃಹತ್ತಾದ. ೨. ದೃಢವಾದ; ಬಲವಾದ. (ನಾ). ೩. ಒಂದು ಬಗೆಯ ಸುಗಂಧದ್ರವ್ಯ ; ಮುಡಿವಾಳ: "ಬಾಲಂ, ಹ್ರೀಬೇರಂ, ಬರ್ಹಿಷ್ಠಂ, ಉದೀಚ್ಯಂ, ಕೇಶಾಂಬುನಾಮ —೫ ಮುಡುವಾಳದ ಹೆಸರುಗಳು" (ಸಿದ್ಧಾಂತಿ. ೦೪೦). ೪. ಒಂದು ಬಗೆಯ ಸಸ್ಯ ; ಶೈಲಪರ್ಣಿ; "ಉಶೀರಾವೀರಣ" (ಪಂಡಿತ. ೨೩೦). [ಸಂ.]

ಬಲ್$_1$, ಬಲಿ$_1$ (ಕ್ರಿ). ಬಲ್ತ, ಬಲಿತ, ಬಲಿದ (ಭೂತಕೃ). ಬಲ್ತು, ಬಲಿತು, ಬಲಿದು (ಭೂತನ್ಯೂ). ೧. ದೈಹಿಕವಾಗಿ ಸಾಮರ್ಥ್ಯವನ್ನು ಪಡೆದಿರು; ಸಮರ್ಥವಾಗಿರು ; ಬಲಿಷ್ಠವಾಗು : ಗೋಮೂತ್ರಮಂಡಲ ಮುಮಾಕಾಶಂ ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲೆಂ (ಶಾಂತಿಪು. ೩-೨೩ ಪ); ಕೊಳನ ತಡಿಯಲ್ಲೊಂದು ಹೊಱಸು ಕುಳ್ಳಿರ್ದರೇನು ಕಳಹಂಸಿಯಾಗಬಲ್ಲುದೆ (ಬಸವ. ೯೮); ಡೊಂಬನ ಬಿನುಗುನುಡಿಯಂತಿರಲಿ ಬಲ್ಲಡೆ ಮೊನೆಗಣೆಯಲೇ ಮಾತನಾಡು (ಕುಪ್ಯಾಸ್ತ್ರೋ. ೬-೦೩). ೨. ತಿಳಿ ; ಅರಿ : ಬವರದೊಳೇಂ ಬಲ್ಲಂ ಕರಮೊಪಜುಗೆಯಲ್ (ಪಂಪಶಾ. ೦೨-೩) ; ಸಾವ ಪೊತ್ತನಾವಂ ಬಲ್ಲಂ (ಧರ್ಮಾಮೃ. ೦-೨೦೯); ಬ್ರಹ್ಮ ವಿಷ್ಣು ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು ಇವರೆತ್ತ ಬಲ್ಲರು ಲಿಂಗದ ನಿಜವ (ಅದಪ. ೨-೪). ೩. ವೃದ್ಧಿಯಾಗು; ಹೆಚ್ಚಾಗು; ಅಧಿಕಗೊಳ್ಳು: ಚದುರಿಲ್ಲಿಂದಮೆ ಪರ್ವಿತೆಲ್ಲ ಜಗತಂ ಜಾಣ್ಬೊಂಗಿದತ್ತಿತ್ತಣಿಂ ಪದುರೀ ತಾಣದೆ ಬಲ್ತುದು (ಪಕಪ. ೬-೬೩). ಬಲಿ$_1$: ೧. ನೀಮುಮಿಾಗಳ್ ವನಸಿಂಹನ್ಯಾಯದಿಂ ದುರ್ಗದೊಳೆ ಬಲಿದು ನಿಂದಲ್ಲಿ ಬಂದೊತ್ತಿ ಚಕ್ರೇಶನ ತಂತ್ರಂ ನಿಲ್ಕುಂ (ಅಧಿಪು. ೦೩-೫೯) ; ಗಱ್ ಪಾಱಲ್ಕಿಲ್ಲ ಕಾಲುಂ ಬಲಿಯವು (ಕಾದಂಪೂ. ೦೯೦); ಬೀದಿವೀದಿಗಳೊಳಾರುಮಂ ಸುಟಿಯಲೀಯದೆ ಬಗ್ಗಿಸುತ್ತೆ ಬಲಿದು ಕಾಪುಗೊಂಡು ಬಳಸಿದ ತಳಾಱನಾಯಕರುಮಂ . . . ಈಕ್ಷಿಸುತ್ತುಂ (ಪರ್ಧಪು.೯-೫೬ ಪ) : ಕುಲಗಿರಿಗಳೆಲ್ಲವನೊಂದುನಿಮಿಷದಿ ಹೊಳಕಿಹೊಳಕಿ ಬಿಡುವೆನ್ನ ಕುಲಿಶದಂಡವ ಪಿಡಿದೀ ಸಗ್ಗಿಗರ ಜಂಗುಳಿ ಸಹಿತವೆ ಬಲಿದೊತ್ತೆ (ಶ್ರೀಪಾಲ. ೭-೫). ೩. ಬಲದ ಬಲಿದ ಕಳಕಳಮಂ ಕೇಳ್ದು (ಶಾಂತಿಪು. ೦೦-೭೩) ; ಭವಪೂಜೆ ಬಲಿದು ಪುರುಷಾಕಾರವಾದಂತೆ (ಬಸರ. ೩-೦೫೨) ; ಬಲಿದ ತೂಕಡಿಕೆಗಳ . . . ರ್ಝೊಮ್ಮಿನ ಬಲೆಗೆ ಸಿಲುಕಿದ ಬಲವನರ್ಜುನದೇವನೀಕ್ಷಿಸಿದ (ಕುಪ್ಯಾಸ್ತ್ರೋ. ೦೭-೪). ೪. ಹಣ್ಣು, ಸಸ್ಯ ಮುಂತಾದಂವು ಪೂರ್ಣವಾಗಿ ಬೆಳೆ : ಒಂದು ವೃಕ್ಷದಲ್ಲಿ ಹುಟ್ಟಿದ ಫಲ ಮೊದಲೇ ಎಳೆಯದಾಗಿ ತದನಂತರದಿಂ ಮಿಾಱೆ ಬಲಿದಲ್ಲದೆ ಬೀಜಕಂಕುರವಿಲ್ಲ (ಸರ್ವಪ. ೦೦೩-೫೬೦) ; ಮೊಳೆಯಲೇ ಮುರುಡಿಸಲು ಬೇಹುದು ಬಲಿದ ಬಳಿಕದು ನಿನ್ನ ಹವಣೇ (ಕುಪ್ಯಾಲ. ೮-೦೩) ; ಹತ್ತಿಯ ಕಾಯಿಗಳು ಬಲಿತು ಹಣ್ಣಾಗಲಿಕ್ಕೆ ಹೆಚ್ಚು ಕಡಿಮೆ ಎರಡುತಿಂಗಳು ಬೇಕಾಗುತ್ತವೆ (ಮುಂಬಯಿ. ೪-೨೭). ೫. ದಪ್ಪವಾಗು ; ದೊಡ್ಡದಾಗು : ಲತಾಂಗಿಯ ಜಠರವದು ದಿನದಿನಕೆ ನುಣ್ಪುಂ ಪೆಂಪುಮಿಂಪುಂ ಕೊನರ್ದು ಬಲಿದೊಂಬತ್ತುತಿಂಗಳು ತುಂಬಿ ನಂದೀಶ . . . ಬೆಳೆದನು (ಬಸಪು. ೩-೪). ೬. ಹೆಪ್ಪುಗಟ್ಟು ; ಘನರೂಪವನ್ನು ಪಡೆ : ನೀರು ತಾ ಅನಿಲನಿಂದಲಿ ಬಲಿದು ವಾರಿಕಲ್ಲೆಂದೆನಿಸಿತು (ಶಿಪಗೀ. ೩೨-೦೪೪) ; ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು (ಅವಸಂ.

೦೬೩-೭೪೬) ; ಒಂದೊಂದು ರಜ್ಜುವಿಂ ಕೆಟಗೊಂದೊಂದಿರ್ದಪುವು ನಾರಕರ ಪಾಪರಜಂ ಮಂದಯ್ಸಿ ಬಲಿದು ನೆಲನಾದಂದದೆ ದುಸ್ಪರ್ಶವಿಷಮನರಕಾವನಿಗಳ್ (ಸರ್ಗಪು.೦೦-೨). ೭. ಒರಟಾಗು; ಬಿರುಸಾಗು : ಮೆಲ್ಪುಗೆಟ್ಟು ಬಲಿದಿರೆ ಮೆಯ್ ಕಣ್ ಪತ್ತೆ ಕರಿದಾಗೆ ನಾಲಗೆ ಸತ್ತಪುದಾ ವಾಜಿ (ಅಕ್ಕಶಾ. ೬-೪೦) ; ಕರ ನಡುಗೆ ಮೈ ಬಲಿಯೆ ಹಂಬ್ಬುಗಳುಱ್ ಬಿಗಿಯೆ . . . ವೀರಾವೇಶದಲಿ ಮಸಗಿದನು ಕಲಿಭೀಮ (ಕುಪ್ಯಾಕ. ೦೨-೦೦). ೮. ಮಲೆ ; ಸೊಕ್ಕು ; ಗರ್ವಿಸು : ಮದೋದಯದೊಳ್ ದೇವ ಬಾಹುಬಲಿ ಬಲಿದಿರ್ದಂ (ಆದಿಪು. ೧೯-೧೯) ; ಆಳ್ವಲಮುಳ್ಳಡಶ್ವಬಲಮಿಲ್ಲ ಭಟಾಶ್ವಬಲಂಗಳುಳ್ಳಡಂ ತೋಳ್ವಲಮಿಲ್ಲ ಭೃತ್ಯಹಯದೋರ್ಬ್ಬಲಮುಳ್ಳಡ ಮೇರ್ವ್ವಲಗಳಿಲ್ಲಾಳ್ವೆಸಗೆಯ್ಯದೇಕೆ ಬಲಿವರ್ಮ್ಮಲೆಪರ್ (ಎಕ. VII, ತಿಕಾಂ. ೦೩೬-೨೬ ; 1068). ೯. ನಿಲ್ಲು ; ಸ್ಥಿರವಾಗು ; ನೆಲೆಗೊಳ್ಳು : [ನಿಡು] ಜಾಗರದೊಳ್ ತೊಡರ್ದೇಕಪಾದದೊಳ್ ಬಲಿದುಪವಾಸದೊಳ್ ನಮೆದು ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರಂತು ನೋನದೆ ಗುಣಾರ್ಣವನಂ ಪಡೆಯಲ್ಕೆ ತೀರ್ಗುಮೇ (ಸಂಸಭಾ. ೦-೦೩೬) ; ಇದು ಕಲಿಭೀತಿಯಿಂ ಕೃತಯುಗಂ ಬಲಿದಿರ್ದಪುದೆಂಬ ಸಚ್ಚರಿತ್ರದಿನೆಸೆದು . . . ಪೆರ್ಮೆಯಿಂ ವಿದಸೆಯೆಂಬುದು ನಚ್ಚಿನ ರಾಜಧಾನಿಯಾದುದು (ಕಾದಂಪು. ೦೩); ಗುರುಕರುಣದಿಂದೊದಗಿದ ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದಲ್ಲಿ (ಶೂಸ್ಯಸಂ. ೦೭-೩೬). ೧೦. ದೃಢಮನಸ್ಕನಾಗು ; ಹಟ ಹಿಡಿ : ಆರು ನುಡಿಯಲು ಸರ್ವಥಾ ಖಳನಾರಿಯನು ಕೈಕೊಳ್ಳನೆಂದೇ ವೀರ ಬಲಿದನು (ಕುಪ್ಯಾಕ. ೯-೨೩). ೧೧. ರಚಿತವಾಗು ; ನಿರ್ಮಾಣವಾಗು : ಬಲಿದುದನಿತಕೆ ಕೋಟೆ ಪರಿಖಾವಳಯರಚನೆಯಲಾಳುವೇರಿಯ ಹುಲಿಮುಖದ ಮುಗಿಲಟ್ಟಳೆಯ ಸಾಲುಗಳ ಸೊಗಸಿನಲಿ (ತೊರರಾ. ೦-೦೩-೨). ೧೨. ಪ್ರಕಟಗೊಳ್ಳು ; ವ್ಯಕ್ತವಾಗು : ಪಂಚಮುದ್ರಾನ್ವಿತಂ ಪಂಚಾಕ್ಷರೀಪ್ರಿಯಂಪಂಚವರ್ಣಂ ಬಗೆವೊಡೀ ಬಸಿಱ ಶಿಶುವೆಂದು ಪಂಚಿಸದೆ ಪೇಳ್ವಂತೆಯಯ್ದುತಿಂಗಳಲಿ ನವಮಾಸಚಿಹ್ನಂ ಬಲಿದುದು (ಸಿದ್ಧರಾ. ೦-೩೦) . ೧೩. ಆಕಾರವನ್ನು ಹೊಂದು ; ರೂಪವನ್ನು ತಾಳು : ನೀತಿ ಬಲಿದುದೊ ಶಾಂತಿ ರೂಪಾಯ್ತೊ ಸದ್ಗುಣವ್ರಾತವೇ ಮುನಿಯಾಯ್ತೊ (ಹಸಕಾ. ೩-೬೬) ; ಇಂದುರುಚಿ ಬಲಿದುದೋ ಹರಸ್ಮೇರ ದಿವಿಯೊಳಾಕಾರವಾಯ್ತೊ . . . ಏನೆ ರಜತಾದ್ರಿ ರಂಜಿಪುದು (ಬಸಪು. ೦-೩೯). ೧೪. ತುಂಬು ; ಹರಡು ; ವ್ಯಾಪಿಸು : ಹಸನದೀಧಿತಿ ಮಿಗೆ ರಜತಗಿರಿ ವಸುಗಳಭಿನವವಾಯಿ ತೆನಲಾಗಸದೊಳೆಲ್ಲೆಡೆಯೊಳು ಬಲಿದು ಬೆಳೆದಿಂಗಳಗ್ಗಳಿಸೆ (ಬಸಪು. ೦೨-೩೭) ; ಅಂಬರದೊಳೊಮ್ಮೊಮ್ಮೆ ಕಾದುವರ್ ಧರೆಗಿಳಿವುತುಂ ಬಿಡದೆ ಸೆಣಸುವರ್ ಧರೆಯೊಳೊರ್ವರ್ ಗಗನಮಂ ಬಲಿವರೊರ್ವರಿರದೆಚ್ಚಾಡುವರ್ (ಸಬಪು. ೨೩-೨೨) ; ಹೊಲೆ ಬಲಿದ ತನುವಿನೊಳಗಿರ್ದುಮದಱೊಳಗೆ ಕುಲವನಱಸುವರೆ (ಸರ್ಗಪ್ಯ. ೨೦). ೧೫. ನಿಯಮಕ್ಕೆ ಒಳಪಡು.— ಒಳಗಾಗು : ದೇಗುಲಕೆ ಸಾರದೆ ಹೆಗಲ ಕಂಬಿಯನಿಳುಹದೆಲ್ಲಿಯುನಿಲ್ಲದಡಿಯಿಡಬಾರದಿಂತಪ್ಪ ಬಲಿದವಸ್ಥೆಯೊಳೆಯ್ದೆ ಸಂಕಟಗೊಳಲದೇತಕೆ (ಬಸಪು. ೪-೦೩). ೧೬. ಕ್ಲಿಷ್ಟವಾಗು ; ದುಸ್ಸಾಧ್ಯವಾಗು : ಬಲಿದು ದಾಹವ ಮತ್ತೆ ಚಾತುರ್ಬಲ ಛಡಾಳಿಸಿ ಕಾದುತಿರ್ದುದು ಮುಳಿದು ಶಲ್ಯನ ಕೂಡೆ ಪಂಚದ್ರೌಪದೀಸುತರು (ಕುಪ್ಯಾಕ. ೩-೩೦). ೧೭. ಮುಚ್ಚು ; ಬಂಧಿಸು : ಕೆಟ್ಟೆನಕಟಾ ಎಂದು ಮನದೊಳಗೆ ಮಱುಗುತ್ತ . . . ಎದ್ದು ತಾ ಕವಾಟವ ಬಲಿಯೆ (ಪ್ರೌಢರಾ. ೨-೩೪). ೧೮. ಚುಚ್ಚು ; ನಾಟು : ಆ ಕರಸ್ಥಲವೆಂಬ ರಥಕ್ಕೆ . . . ದಶವಾಯುಗಳೆಂಬ ಪಾಶಮಂ ಬಂಧಿಸಿ ಷಡಂಗಗಳೆಂಬ ಮೊಳೆಗಳಂ ಬಲಿದು (ಅಪಸಂ. ೨೬೦-೦೦೬೬) ; ಲಲನೆಯರುಪಚಾರದ ನುಡಿ ಕಿವಿಯೊಳು ಬಲಿದ ಬಲ್ಲೆಹವಾಯಿತಾಗ (ಕಂಪಸಂ. ೯-೧೩೩). ೧೯. ಹೆಚ್ಚಿಸು ; ವೃದ್ಧಿಗೊಳಿಸು : ರಕ್ಕೆಯಾಳ್ಗಳಂ ಲೆಕ್ಕಿಸಿ ನೋಡಿ ಕೆಲಂಬರೆಂಬುದನಱಿದು ನಾಡೆಯುಂ ನೆಲಿದು ಮೆಲ್ಲ ಮೆಲ್ಲನೆ ತನ್ನ ಬಲಮಂ ಬಲಿದು (ಸರ್ಗಪು. ೨-೩೯ ಪ) ; ಪೊಳಲ ಪೆರ್ಬಾಗಿಲ್ಗಳಿಕ್ಕಿದವು ಕೋಟೆಕೊತ್ತಳದ ಕಾವಲ್ಗಳಂ ಬಲಿದರಲ್ಲಲ್ಲಿ ಗಜಬಜವಾಯ್ತು ನಗರದೊಳಗೆ (ಕೈಪುಭಾ. ೯-೦೬) ; ಬಳಸಿಹ ರಿಪುನೃಪಮನ್ನೆಯರಿವರಗ್ಗಳಿಕೆಗೆ ಕಂಗೆಟ್ಟಾಗ ಇಳೆಯಾಳ್ಮ ತಿರುಮಲರಾಜನ ಮಱೆ ಹೊಕ್ಕು ಮುಳಿಸ ಬಲಿದರಾತನಿಗೆ (ಕಂಪಸಂ. ೩-೦೯). ೨೦. ಬಿಗಿಗೊಳಿಸು ; ಬಿಗಿಯಾಗಿ ಜೋಡಿಸು : ತನ್ನ ಕಯ್ಯ ಕಳಶಮಂ ಬಳ್ಳಿಯೊಳ್ ಕಟ್ಟಿ ನೀರಂ ತೆಗೆವಾಗಳದಂ ಪುಲಿ ಪಿಡಿದು ನೇಲ್ವುದುಮದು ಕಯ್ಗೆ ಬಿಣ್ಣತ್ತಾದೊಡದಂ ನೋಟ್ಟೆನೆಂದು ಬಲಿದು ಪಿಡಿದು ಮೆಲ್ಲನೆ ತೆಗೆಯೆ (ಸಂಸಕಂ. ೦೦೯-೩) ; ಸೂತ್ರದ ಕೀಲ್ಗಳಂ ಬಲಿದು ಕ್ರಮದಿನಾಡಿಪ ಬಡಗಿ ತಾನೇ (ಬಸಪು. ೨೦-೨೯); ತಡಿಯ ಬಲಿಸುವ ಗುಳನ ಱಂಚಿಯ ಗಡಣಿಸುವ ಹಕ್ಕರಿಕೆಗಳನಾಯ್ದಡಸಿ ಹೊಲಿಸುವ ಕಬ್ಬಿಗಳ ಕೊಂಡಿಗಳ ಮಿಗೆ ಬಲಿವ. . . ಬೆಟ್ಟದ ಗಾಲಿಗಚ್ಚನು ತೊಡಿಸುತಿರಲು (ಕುಪ್ಯಾಧೀ. ೩-೩೬) ; ಬಲಿದು ಮಕುಟಾವಳಿಯ ಶೋಣಿತಪಳಿಯ ರಕ್ಕಸದೇಶಿಯಲಿ ಬಿಗಿದೆಳೆವ ಹಾಹೆಯನೋಜೆಗೊಳಿಸಿಕ್ಕಲಿಸಿ ಪದಯುಗವ (ತೊರರಾ. ೧-೦೩-೦೯). ೨೧. ಗಟ್ಟಿಗೊಳಿಸು : ತನ್ನ ಕೆಳದಿಗೆ ಪೇಟ್ದು ಮನಮಂ ಬಲಿದು ತನ್ನಂ ತಾನೆ ಸಂತಯಿಸಿದಳ್ (ಶಾಂತಿಪು. ೯-೦೦೬ ಪ) ; ಧನುವನೊದಱಿಸಿ ಸಕಲಸುಭಟರು ಮನವ ಬಲಿದೊಗ್ಗಾಗಿ ಸರಳಿನ ಜಿನುಗುವಳೆಯಲಿ ನಾದಿದರು ನಾರಾಯಣಾರ್ಜುನರ (ಕುಪ್ಯಾದ್ರೋ. ೦೯-೩೦). ೨೨. ಭದ್ರಪಡಿಸು ; ಸುರಕ್ಷಿತಗೊಳಿಸು : ಉಗ್ರಸೇನನೆಂಬ ದಂಡಾಧಿಪಂ ಕೋಂಟೆಯಂ ಬಲಿದು ಕಾದುವ ಸಮಕಟ್ಟಿಂದಿರ್ಪುದುಂ (ಧರ್ಮಾನ್ಯು. ೯-೨೪೦) ; ಅಂದು ಚಕ್ರವ್ಯೂಹವನು ನಲವಿಂದ ಬಲಿದನು (ಕುಪ್ಯಾದ್ರೋ. ೯-೦೯) ; ಜಲಧಿ ಮೇರೆಯ ಮೀಱೆ ಕಟ್ಟೆಯ ಬಲಿದು ತಡವವರಾರು (ಉತ್ತರಾ. ೬-೩೯). ೨೩. ನೆಲೆಗೊಳಿಸು; ಸ್ಥಾಪಿಸು : ಪಶ್ಚಿಮಪದ್ಮಾಸನದಲ್ಲಿ ಕುಳ್ಳಿರ್ದು ನಿಟ್ಟೆಲುವ ನೆಟ್ಟನೆ ಮಾಡಿ ಅಧೋಮುಖಕಮಲವ ಬಲಿದು ಊರ್ಧ್ವಮುಖವ ಮಾಡಿ (ಸನ್ಮಸ. ೪. ೪೨೩-೯೯೯) ; ಮನಕಲಿತ ಪ್ರಾಣಮಂ ಹೃದ್ದೇಶದೊಳು ಬಲಿದು ವನಜಬಾಂಧವ ಪ್ರತೀಕಾಶವದನದೆ ವೀರವನು ತುಳುಕಿ ತನುವನೊನೆದಡೆ ಶೈಲಸೆಳೆಮಂಚದಂತಾದುದು (ಪಂಕಾರಾ. ೩-೧-೦೦). ೨೪. ನಿಗ್ರಹಿಸು ; ಸಂಯಮಿಸು ; ತಡೆ : ಬಿಂದುವನು ಬಲಿದಾತ ವಂದ್ಯನಹ ಜಗಕೆಲ್ಲ (ಸರ್ಗಪ್ಯ. ೪೦೨). ೨೫. ಪ್ರವೇಶವಿಲ್ಲದಂತಾಗು ; ಮುಚ್ಚಿಹೋಗಿರು : ಆ ಕಡೆಗೆ ಹೋಗುತಿರೆ ಗೋಪುರದಾ ಕದವು ಕಡುಬಲಿದಿರಲು ನಿರ್ವ್ಯಾಕುಲರಿಗಾಕುಲತೆ ತೋಱಿದುದು (ಸಾಕ್ಷಿಕಾ. ೨೦-೦೦). ೨೬. ನೆರವೇರಿಸು ; ಪೂರ್ಣಗೊಳಿಸು : ಕಳಿದುದೊಂದಪಮೃತ್ಯುವೆನೆ ನೃಪತಿಲಕ ನುಡಿದನು ನಿನ್ನ ಭಾಷೆಯ ಬಲಿದೆ ನಿನ್ನಯ ಬಿರುದ ಸಲಿಸಿದೆ ನಮಗಿದೇನೆಂದ (ಕುಪ್ಯಾದ್ರೋ. ೧೩-೩). ೨೭. ಪ್ರಚೋದಿಸು ; ಉತ್ತೇಜಿಸು : ಏಳು ತಾಯೆ ಸರೋಜಮುಖಿ . . . ನಿನ್ನವರಾಳಿಗೊಂಡಂದವನು ಬಲ್ಲೆನು ನಿನ್ನ ಹರಿಬದಲಿ ಕಾಳೆಗವನೇ ಬಲಿದು ತಹೆನು (ಕುಪ್ಯಾಕಾ. ೬-೦೨).

ಬಲ್ಲ$_1$ = ತಿಳಿದವನು ; ಚತುರ ; ಜಾಣ : ತಡೆಯದೆ ಮಹಾಧ್ವಕೃತಿಗಳನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ (ಕಪಿಂ. ೦-೦೬) ; ಬಲ್ಲರಿಂದಾನು ಕೇಳಿದುದಕೆ ಪೆರ್ಚು ಕುಂದಿಲ್ಲದಂತೆಚ್ಚಱುಗೂಡಿ . . . ಸೊಲ್ಲಿಸುವೆನು (ಪದಿಪ. ೦-೪೯). ಬಲ್ಲಂತಿಕೆ = ತಿಳಿವಳಿಕೆ ; ಅರಿವು : ಬೇಡಿದಿಷ್ಟವ ಕೊಟ್ಟಾತನು ಭೂತವೋ ಆತ್ಮನೋ ಬಲ್ಲರೆ ನೀವು ಹೇಳಿರಣ್ಣಾ ನಿಮ್ಮ ಜ್ಞಾನದ ಮುಸುಕ ತೆಱದು ನಿಮ್ಮ ಬಲ್ಲಂತಿಕೆಯ ಕಾಣಬಹುದು (ಸರ್ಗಪ. ೯೪-೪೬೪). ಬಲ್ಲತನ = ೧. ಶಕ್ತಿ ; ಸಾಮರ್ಥ್ಯ : ತನ್ನ ಮುನ್ನಿನ ನಲ್ಲರೂಪನೆ ತಾಳ್ದು ನಿನ್ನೊಳು ಬಲ್ಲತನಮಂ ನೋಡಲೆಂದಿಂತಾದೆನಾನು (ಬಸಪು. ೨೦-೩). ೨. ತಿಳಿವಳಿಕೆ ; ಜ್ಞಾನ : ಕಲ್ಲು ಮಣ್ಣು

ಮರದಲ್ಲಿ ದೇವನಿದ್ದಹನೆಂದು ಎಲ್ಲಿಯೂ ತೊಳಲುತಿಪ್ಪ ಅಣ್ಣಗಳು ಕೇಳಿರೊ ಅದನಲ್ಲಲ್ಲಿಟ್ಟು ಬಲ್ಲತನದ ಕುಜುಹಲ್ಲದೆ ಸೊಲ್ಲಿಂಗತೀತನಱಿಯ (ಸೋಲಸಿಯ. ೨೬-೯೨) ; ಇದೇಂ ಬಲ್ಲತನವೇ ಪೆಂಪೆ ಗರುವಿಕೆಯ ಗಂಭೀರ ವೃತ್ತಿಯೋ (ಪಜ್ಜುನಾ. ೩-೩೦). ಬಲ್ಲರ ಬಲ್ಲಹ = ಶೂರರಲ್ಲಿ ಶೂರನಾದವನು : ಅಂಗಡಿವೀಧಿಯೊಳಿಸೆದೆಯ್ತಂದಂ ತನ್ನೊಡನೆಯ್ತರೆ ಪರಿವಿತಮಿತ್ರಾವಳಿ ಬಲ್ಲರ ಬಲ್ಲಹನು (ಜಯಂಕಾ. ೦೯-೨೦). ಬಲ್ಲರಿಕೆ = ತಿಳಿದಿರುವ ವಿಷಯ : ಶಿರವನಿತ್ತದ ರೀತಿಯೊಳು ಪೇರುರಕೆ ತಿವಿತಿವಿದೌಂಕುವದು ಬಲ್ಲರಿಕೆ ಪ್ರಾಜ್ಞರಿಗರಿಯದೀಗವರಲ್ಲಿ ಕದನವನು ನೆರೆವೆನೆಂಬುದ ಮಾರೆ (ಪಪಶಾ. ೫೬-೪೫). ಬಲ್ಲರೊಳ್ ಬಲ್ಲಹ = ಬಲ್ಲರ ಬಲ್ಲಹ : ಬಿರುದೆಂತೆಂಬರ ಗಂಡನಪ್ರತಿಮವೀರಂ ಬಲ್ಲರೊಳ್ಬಲ್ಲಹಂ (ಅಪ್ಪಶಾ. ೦೫-೯). ಬಲ್ಲವ₁ = ತಿಳಿದವನು; ಜಾಣ: "ಚತುರಃ, ಕ್ಷೇತ್ರಜ್ಞಃ . . . ಪ್ರವೀಣಃ - ಈ ೧೧ ಬಲ್ಲವಂ "(ಶಬಾಯು. ೫೫-೧೫೦); ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ . . . ಸರ್ವಜ್ಞನಪ್ಪಂ ನರಂ (ಸೋಮೇಶ. ೦); ಬಲ್ಲವನೇ ಬಲ್ಲ ಬೆಲ್ಲದ ಸವಿಯ (ಗಾಥೆ). ಬಲ್ಲವಿಕೆ = ಬಲ್ಲತನ : ನೀವೆಮಗೆ ಹಿರಿದು ಬಲ್ಲವಿಕೆಯಲಿ ವಾಕ್ಚಾತುರಿಯವನು ರಚಿಸಿದೊಡೆ ನಂಬುಗೆ ದೊರಕುವುದೆ ನಮಗೆ (ಪ್ರಭುಲಿಂ ೦೨-೦೬); ಭಾವಾಜಿ ನಿನ್ನ ಚಿತ್ತವ ನಾವು ನೋಯಿಪುದಾವ ಬಲ್ಲವಿಕೆ (ಭಕ್ತಿ. ೫೫-೯೬). ಬಲ್ಲವಿಕೆತನ = ಬುದ್ಧಿವಂತಿಕೆ : ಜಾಣ್ಮೆ : ಇವಳ್ಬಲ್ಲ ಗರ್ವವ ಮುಱಿಯದಿರ್ದಡೆ ಸಲ್ಲದೆನಗೀ ಪೆಸರೆನುತ್ತಲಿ ನಿಲ್ಲಿಸಲು ಗಜವ ಬಲ್ಲವಿಕೆತನವಲ್ಲವರಸಿನವುಲ್ಲಸದ ವನಕೇಳಿಗೆಡರಹುದಲ್ಲ ನಮಗಿದು ನೀತಿಯಂದಳದೊರ್ವ ನೆಱೆ ಜಾಣೆ (ನಾಗಚ. ೯-೨೨).

[ದೇ.॥ ತಮಿ. ವಲಿ, ವಲ್ಲು ; ಮಲ. ವಲ್ಲುಕ; ತುಳು. ಬಲಾಪಿನಿ; ತೆಲು. ಬಲಿಯು]

ಬಲ್ಲ₂. ಬಲು (ಸಪೂರೂ). 'ಬಲ್ಲಿತು' ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ. ೧. ಬಲಯುಕ್ತ; ಶಕ್ತಿಯುತ: 'ಬಲ್ಗೆಯ್' ಪರಾ. ೨. ದೊಡ್ಡ; ದಪ್ಪ : 'ಬಲ್ದಲೆಯ' ಪರಾ. ೩. ಬಹಳ; ಅಧಿಕ; ಅತಿಶಯ: 'ಬಲ್ಕಣ್ಣಿ', 'ಬಲಿರ್ಬುದು' ಪರಾ. ೪. ವಿಶಾಲವಾದ: ವಿಸ್ತಾರವಾದ: 'ಬಲ್ದೊಱೆ' ಪರಾ. ೫. ಗಾಢವಾದ; ದಟ್ಟವಾದ; 'ಬಲ್ಗತ್ತಲೆ', 'ಬಲ್ಲಡವಿ' ಪರಾ. ೬. ಜೋರಾದ; ಅಬ್ಬರದ: 'ಬಲ್ದನಿ', 'ಬಲ್ಸರ' ಪರಾ. ೭. ಒತ್ತಾಯದಿಂದ ಕೂಡಿದ ; ಬಲಾತ್ಕಾರದ: 'ಬಲ್ಮೆ' ಪರಾ. ೮. ಬಿರುಸಾದ : ಒರಟಾದ : 'ಬಲ್ನುಡಿ' ಪರಾ. ೯. ಬಿಗಿಯಾದ; ದೃಢವಾದ : 'ಬಲ್ಗಣ್ಣಿ' ಪರಾ. ೧೦. ಕೊಬ್ಬಿದ; ಬಲಿಷ್ಠವಾದ: 'ಬಲ್ಗುಱೆ', 'ಬಲ್ಗೂಳಿ' ಪರಾ. ೧೧. ಸಮರ್ಥನಾದ; ದಕ್ಷನಾದ : 'ಬಲ್ಮಂತ್ರಿ', 'ಬಲ್ಮಾವಂತ' ಪರಾ. ೧೨. ಗಡುಸಾದ; ಗಂಭೀರವಾದ : 'ಬಲ್ಮೊಗ' ಪರಾ. ೧೩. ಗಟ್ಟಿಯಾದ; ಸಾಂದ್ರವಾದ : 'ಬಲ್ಮೊಸರ್' ಪರಾ. ೧೪. ಶ್ರೇಷ್ಠವಾದ; ಉತ್ತಮವಾದ : 'ಬಲ್ಲಡಗು' ಪರಾ. ಬಲು : ೧. 'ಬಲುಗಣ್ಣ' ಪರಾ. ೨. 'ಬಲುಗುಂಡು' ಪರಾ. ೩. ಹಣ ಮುಳ್ಳಂ ಹೆಣನಾದೊಡಂ ಮಮತೆಯಿಂ ತಾನಾವಗಂ ಬಿಟ್ಟಿರಳ್ ಕ್ಷಣಮಾತ್ರಂ ಬಲುಬೂಟಕಂ ಗಟಪಿ (ಸೋಮೇಶ. ೬೨); ಹುಲಿಮುಖ ಬಲು ಭಯಂಕಾರವ ಬೀಱುವುವು (ಶಂಪಪ. ೨-೬೯). ೪. 'ಬಲುಗಡಲು' ಪರಾ. ೫. 'ಬಲುಗತ್ತಲೆ', 'ಬಲುಗೊಪು' ಪರಾ. ೮. 'ಬಲುಬಿದಿರು' ಪರಾ. ೧೪. ಪರದೇವತೆಯೆಂದು ಭಕ್ತಿಗೈವುದು ಬಲುದೊರೆಯೆಂದುಪಚರಿಸುವುದು (ಹಂಪ. ೩-೯೦). ೧೫. ಉಗ್ರವಾದ : 'ಬಲುಬೇಸಗೆ' ಪರಾ. [< ಬಲ್ಲಿತು₁]

ಬಲ₁ (ನಾ). ಎಡಭಾಗವಲ್ಲದುದು; ದಕ್ಷಿಣ ಪಾರ್ಶ್ವ: "ಅಪಸವ್ಯಂ, ದಕ್ಷಿಣಂ – ಈ ೨ ಬಲಂ" (ಶಬಾಯು. ೦೨೯-೭೧); ಬಲದ ಕಯ್ಯೊಳ್ ಭೈಕ್ಷದ ಭಾಜನಮಂ ಪಿಡಿದು ತೊಟಲ್ದು ಭೈಕ್ಷಮಂ ಬೇಡಿ ಮಡಗಿಟ್ಟು ಪಗಲುಣ್ಣಂ (ಪಣ್ಯಾಕಾ. ೯೨-೦೬); ಬೇಡಿದೊಡೆ ಬಲದ ಬರಿಯುವು ನೀಡಾಡುಗುಮುಗಿದು ಕರ್ಣಂ (ಶಂಪಶಾ. ೦-೦೦೦); ಇದಿರೊಳಾನಿಹೆ ಶಲ್ಯನೆಡವಂಕದಲಿ ಬಲದಲಿ ಕೃಪನವರಭಾಗದಲಿ ನೀ ಬಂದೆಸು ಕುಮಾರನ ಕರದ ಕಾರ್ಮುಕವ (ಕುಮಾರವ್ಯಾ. ೬-೨೬); ಅಳುವವನ ಎಡಕ್ಕಿರಬೇಡ, ಹೊಲಿಯುವವನ ಬಲಕ್ಕಿರಬೇಡ (ಗಾಥೆ).

ಬಲಗೊಡತಿ = (ಮದುವೆಯಲ್ಲಿ) ಹೆಣ್ಣಿನ ಬಲಭಾಗದಲ್ಲಿ ಜೊತೆಯಾಗಿರುವವಳು. ಬಲಗೊಡೆಯ = (ಮದುವೆಯಲ್ಲಿ) ಗಂಡಿನ ಬಲಭಾಗದಲ್ಲಿ ಜೊತೆಯಾಗಿರುವವನು : ಹಾಳುನಾಯಿ . . . ಇದೊಂದು ಯಾವಾಗಲೂ ನನ್ನ ಬಲಗೊಡೆಯ, ಬಸವನ ಹಿಂದೆ ಬಾಲ ಬಂದ್ದಂಗೆ (ಸುಕಸು. ೫೫೨). ಬಲದಂ = ದಕ್ಷಿಣ ಪಾರ್ಶ್ವದಲ್ಲಿರುವವನು : ಬಲಮಗ್ಗಲಲ್ಲಿರುವ ವ್ಯಕ್ತಿ : ದಕಾರಕ್ಕೆ ಕೆಲದಂ, ಬಲದಂ, ಅಲ್ಲಿದಂ, ಇಲ್ಲಿದಂ, ಎಲ್ಲಿದಂ (ಕಬಸ. ೦೦೦) ಪ್ರಯೋ. ಬಲದ ಕಯ್ = ಬಲಗಡೆ; ಬಲಭಾಗ; ಬಲಪಕ್ಕ : ಎರಡುಂ ಬಲದ ವೀರಭಟರ್ಕಳೊಟ್ಟು ಪೊಱಮಟ್ಟು ಬಿಲ್‌ವಿಲ್ಲಳ್ ಕುದುರೆ ಕುದುರೆಯೊಳ್ ಕಿಟ್ಟಿ ಅತಿತುಮುಲಕಾಳಗ ಪೆಱ್ಚಿ ಬಲದ ಕಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ನು ಕಾದಿಸೆ ಕಣ್ಣು ಕುಲಮುದ್ದ ನೀನೀ ಕಯ್ಯ ಪೊಕ್ಕು ಕಾದೆನ್ದು ಬೆಸಸೆ (ಎಕೆ. VIII, ಸೊರಬ. ೦೦-೬; ಸು. ೫೦೦). ಬಲದ ಕಯ್ಯ ಭಂಡಾರ = ಬಲಗೈ ನೀಡಿದೊಡನೆಯೇ ಹಸ್ತಗತವಾಗುವ ಐಶ್ವರ್ಯ ; ಒಂದು ಬಿರುದು : ಬಸವಯ್ಯ ದಂಡಾಯ್ಕರು ರಾಜ್ಯವ ಪ್ರತಿಪಾಲಿಸುವ ಕಾಲದಲು ಅವರ ಬಲದ ಕಯ್ಯ ಭಂಡಾರವೆನಿಪ ಗಣಪತಿಯ ವಿಷ್ಣುವರ್ದ್ಧನಪ್ರತಾಪಹೊಯಸಳ ಭುಜಬಳ ದೇಶದೊಳಗೆ ಕಾವೇರಿಯ ದಕ್ಷಿಣಭಾಗದ ಅಧಿಕಾರವ ಮಾಡುವ ಕಾಲದೊಳು (ಎಕೆ. IV(R), ಕಾಮರಾ. ೨೬೦-೬ ; 1368) ; ಶ್ರೀಮನ್ಮಹಾಪ್ರಧಾನಂ ಮಗಪ್ಪದಣ್ಣಾಯಕರ ಬಲದ ಕಯ್ಯ ಭಂಡಾರವೆನಿಪ ಅಚಂಣ ಪೊಡೆಯರು ಹೊಸಳದೇಶವನಾಳುತಿದ್ದಲ್ಲಿ (ಎಕೆ. IV(R), ಕಾಮರಾ. ೨೬೧-೯; 1397). ಬಲವಾಗು = ಬಲಭಾಗಕ್ಕೆ ಬರ್ಪು; ಬಲಕ್ಕೆ ತಿರುಗು : (ಕ); [ದೇ.॥ ತಮಿ. ಮಲ. ವಲಮ್ ; ತುಳು. ಬಲಕ್ ; ತೆಲು. ವಲ, ವಲನು ; ಕೋತ. ವಲ್ ; ಪರ್ಜಿ. ವೆಲ]

ಬಲ₂ 'ಮಲ₁' ನೋ.

ಬಲ₃. ಬಳ₂ (ನಾ). ೧. ಪರಾಕ್ರಮ; ಕಸುವು ; ಶಕ್ತಿ ; ಸಾಮರ್ಥ್ಯ ; "ಪ್ರಾಣಃ, ಸ್ಥಾಮ, ಬಲಂ . . . ತರಃ, ಸಹಃ– ಈ ೮ ಬಲ್ಲು (ಬಲುಹು)" (ಶಬಾಯು. ೦೨೦-೩೮) ; ತ್ರಿದಶ ನರಾಸುರೋರಗಾಗ್ರ ಪ್ರಭು ನಿಶ್ಚಿತ ತತ್ತ್ವಯೋಗಿ ಯೋಗದ ಬಲಮುಣ್ಮೆ ಪೊಣ್ಮೆ ನಿಲೆ (ಶಂಪಶಾ. ೦-೬೫) ; ಬಲದಿ ಕುತ್ಸಿತದಾನದ ಫಲದಿಂದೆತ್ತಾನುಮೊರ್ವೆ ಸಿರಿ ಸವನಿಸುಗುಂ (ಧರ್ಮಾಮೃ. ೦೦-೬೦). ೨. ಸೈನ್ಯ ; ದಳ ; ಪಡೆ : "ಸೇನೆ ಧ್ವಜಿನಿ ವರಪತಾಕಿನಿ . . . ಬಲಂ ಚಮುವೆನಲು ಪಡೆಗೆ ನಾಮಂ" (ಪಂಗಣಾ. ೬೬-೨೯) ; ಅಗ್ಗಳಾಅರಸರಾ ಬೆಸಸಿದೊಡೆ ಬೆಸನ ಪೆತ್ತುರ್ಬೆ ಬಲಮಾನ್ತಾಳ್ದ ಎಱೆದು ಬಿಟ್ಟುರ್ (ಎಕೆ. X (R), ಶೌಂಗಾ. ೬೬-೬ ; ಸು. ೫೨೦) ; ಆಜುಂಬಲಂಗಳ್ದರಸೊದವಿದ ಸಂಗ್ರಾಮಸಂರಂಭದಿಂದಂ ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯ ಧನವ್ರಾತದೊಳ್ ಮಾಡದಾರ್ತಾಜಿಗೆ ಬಂದೊಡ್ಡಲ್ಕೆ (ಪಂಪಭಾ. ೦೪-೬೨) ; ಆ ಮೋಹರದ ಜೋಕೆಯಂ ಹಿಂದೆ ಲಕ್ಷಕಳಂಗಘಟೆಗಳು ಸಂದಣಿಸಿದವು ದ್ರೋಣ ನಿಂದನು ಬಲದ ಕಾಹಿನಲಿ (ಕುಮಾರವ್ಯಾ. ೨-೨೨). ೩. ಪ್ರಭಾವ ; ವರ್ಚಸ್ಸು : ನಿನ್ನ ದಯೆಯಿಂದಮಾರಿನೃಪರನ್ನೆಱೆ ಕೊಂದೆಮಗೆ ಸಕಳರಾಜ್ಯಶ್ರೀಯುಂ ನಿನ್ನ ಬಲದಿಂದೆ ಸಾರ್ದುದು (ಶಂಪಶಾ. ೦೯-೩೬) ; ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯಾನ

ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ (ಬಸವ. ೮೧೦). ೪. ನೆರವು ; ಸಹಾಯ : ಕೋಪದಲು ರೇಣುಕೆಯು ಭೂಪನ ಕೋಪವನು ನೆಱೆ ಕಂಡು ಬೇಗದಿ ಪಾಪತಿಗೆ ಬಲವಾಗಿ ಬಂದಳು ರಾಮನಿದ್ದೆಡೆಗೆ (ಸಂಪತ. ೨೬-೨೮). 'ಜನಬಲ' ಪರಾ. ೫. ಕೃಷ್ಣನ ಅಣ್ಣನಾದ ಬಲರಾಮಂ ; ಬಲಭದ್ರ : "ಬಲನೇಕಕುಂಡಲಂ . . . ಕಾಮಪಾಳಂ ರಾಮಂ" (ಪಸ್ತುಕೋ. ೩-೨೩) ; ಪಲವುಂ ಪ್ರಕಾರದಿಂದಂ ಪ್ರಲಾಪಿಸುತ್ತುಂ ಗುಣಂಗಳಂ ಗಣಿಯಿಸುತು ; ಬಲನನುಜಸ್ನೇಹದೆ ವಿಹ್ವಲತೆಯನೆಯ್ದಿರ್ದ ನವನಿಯೊಳ್ ಬಿಟ್ಟಾಗಳ್ (ಶಾಂತೀಶ್ವ. ೯-೩೬) ; ದಾಡೆಗಳಿಂದ ಕಂಠೀರವ ಮದದಂತಿ ಕೋಡುಗಳಿಂದಲೆಂತಂತೆ ಕೂಡಿದ ಬಲ ನಾರಾಯಣರಿಂದಲಿ ನಾಡೊಡೆಯನು ರಂಜಿಸಿದನು (ಪರ್ಶ. ೯-೩೦). ೬. ಆಕಾರ ; ಆಕೃತಿ ; ರೂಪು. ೭. ಇಂದ್ರಿಯ ; ವೀರ್ಯ ; ರೇತಸ್ಸು : "ಶುಕ್ಲಂ, ವೀರ್ಯಂ, ಬಲಂ, ಬೀಜಂ, ಇಂದ್ರಿಯಂ, ರೇತಃ – ಈ ೬ ಇಂದ್ರಿಯಂ" (ಹಲಾಯು. ೦೦೫-೦೬). ೮. ಕಾಗೆ : "ಕಾಗೆಯಲ್ಲಿಯುಂ ಬಲನೆಂಬುದು" (ಹಲಾಯು. ೦೩೫-೨೩). ೯. ಇಂದ್ರನಿಂದ ಹತನಾದ ಒಬ್ಬ ರಾಕ್ಷಸನ ಹೆಸರು : 'ಬಲದಲನ' ಪರಾ. ೧೦. ಭದ್ರ ; ಬಿಗಿ ; ಗಟ್ಟಿ : ಅವನು ಓಡಿಹೋಗದಂತೆ ಬಲವಾಗಿ ಹಿಡಿದುಕೊಂಡರು (ರೂಪ). ೧೧. ಒಬ್ಬ ನಿಘಂಟುಕಾರನ ಹೆಸರು : ನಿಜಗೋಪಾಲ ಧನಂಜಯ . . . ಅಮರ ಶಬ್ದಮಂಜರಿ ಬಲಾದ್ಯುಕ್ತಾಭಿಧಾನಾರ್ಥಮಂ ದ್ವಿಜವಂಶಾರ್ಣವಪೂರ್ಣಚಂದ್ರನೆನಿಪೀ ದೇವೋತ್ತಮಂ ಪೇಳೆ ಸೂರಿಜನಂ ಮೆಚ್ಚಲು ಸೇವ್ಯಮಾಯ್ತು ಜಗದೊಳ್ನಾನಾರ್ಥರತ್ನಾಕರಂ (ಪಾಪಾರ. ೩). ೧೨. ಬಲಿಷ್ಠವಾದಂದು ; ಬಲಶಾಲಿಯಾದುದು : ಶೇಷನಿಂ ಬಲವಿಲ್ಲ ಮೋಸದಿಂ ಕಳವಿಲ್ಲ ನೇಸಱಿಂ ಜಗಕೆ ಹಿತರಿಲ್ಲ ಪರದೈವ ಈಶನಿಂದಿಲ್ಲ (ಸರ್ವಜ್ಞ. ೨೨೮) ; ಸರಕಾರ ಬಹಳ ಬಲ ಅಲ್ಲವೇ ? (ಮುನಿಮಾ. ೨೪). ೧೩. ಯುದ್ಧ. ೧೪. ಆಹುತಿ ; ಬಲಿ : "ರಕ್ಕಸನೊಳಾಹುತಿಯೊಳಿಂದ್ರಿಯದೊಳಾಜಿಯೊಳು ನೀರ್ಕಾಗೆಯೊಳು ಶಕ್ತಿಯೊಳು ಮುಸಲಿಯೊಳು ಬಲವೆನಿಕ್ಕು" (ಮಂಗರಾ. ೦೪೬-೩೯). ೧೫. ಆಕಾಶ, ಗಗನ. ೧೬. ನೀರು. ೧೭. ಕಪ್ಪು : "ಅಸಿತ ಸಹಾಯಮಿಂದ್ರಿಯ ರಣಾಹುತಿ ದಕ್ಷಿಣ ಸೈನ್ಯ ಶಕ್ತಿವಾಯಸಮಸಿತಾಂಬರಂ ದನುಜ ರೂಪು ವಿಹಾಯಸ ವಾರಿ ದೊಡ್ಡಿತೆಂಬಿವರೋಳ್ ಬಲಾಖ್ಯ" (ಪಾಪಾರ. ೦೫). ೧೮. [ಜ್ಯೋತಿ] ಗ್ರಹಗಳು ಜಾತಕನಿಗೆ ನೀಡುವ ಬೆಂಬಲ.– ಸಹಾಯ : 'ಕಂಕಣಬಲ' ಪರಾ. ೧೯. [ವಿಶಿಷ್ಟಾ] ಪರಮಾತ್ಮನ ಆರು ಗುಣಗಳಲ್ಲಿ ಒಂದು : ಶುದ್ಧಸತ್ತ್ವವೆಂಬುದು... ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸೆಂಬ ಭಗವಂತನ ಆರುಗುಣಗಳಿಗೂ ಪ್ರಕಾಶಕವಾಗಿರುವುದರಿಂದ ಷಾಡ್ಗುಣ್ಯಮಯವು (ಹಂದಸಾ. ೨೩೮). ೨೦. [ದ್ವೈತ] ನಲುವತ್ತು ವಿಧವಾದ ಗುಣಗಳಲ್ಲಿ ಒಂದು : ರೂಪ, ರಸ, ಗಂಧ, ಸ್ಪರ್ಶ . . . ಭಯ, ಬಲ, ಲಜ್ಜೆ . . . ಶೌರ್ಯ, ಸೌಭಾಗ್ಯವೆಂದು, ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಂದಸಾ. ೨೬೬). ಬಳ್$_2$: ೧. ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳದೆಸಕಮದೋರಂತೆ ಜನ[ಂಗಳ] ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ (ಶಂಪಶಾ. ೦-೯೮) ; ಸಕಷಾಯಕುಜಂಗಳ ದಂತಕಾಷ್ಠದೊಳ್ ಬೋಟ ಕೌಂಗುವಾದ್ಯ(ಚ್ಯ) ಲವಂಗೋದಕ ಚೂರ್ಣಮೆಂಬಿವಂ ತೊಯ್ದುಕೊಂಡು ಪಲ್ಸುಲಿಯೆ ದಂತ ಬಳಮಂ ಪಡೆಗುಂ (ಕೋಕೋಪ. ೬-೩) ; ಭರತಂ ಷಟ್ಖಂಡವಸುಂಧರೆಯುಮನೊರ್ವೊದಲೆ ಬಿಟ್ಟು ಜಿನಸದ್ರೂಪಂ ಧರಿಯಿಸಿದನೆಂದೊಡುಱಿದರ ಸಿರಿಯುಂ ಸಂಪತ್ತುಮಳವು ಬಳವುಂ ಪಿರಿದೇ (ರಮಾಮ್ಯ. ೬-೦೩೩). ೨. "ಬಳಮೆನೆ ಸೈನ್ಯಮಕ್ಕು" (ಕಕರ. ೬೪) ; ಬಳ ಮೆರಡುಂ ತನ್ನನೆ ಮಿಳಮಿಳ ನೋಡೆ ನರೇಂದ್ರನೊಂದೆ ರಥದಿಂದ ಸುಹೃದ್ಬಳಮನಿರದೆಯ್ದಿ ಭೀಷ್ಮರ ಚರಣಯುಗಕ್ಕೆಱಗಿ ನಿನಗೆ ಜಯಮಕ್ಕೆಂದಂ (ಶಂಪಶಾ. ೦೦-೬೦) ; ಬಳೆದುದೊ ಭೂತಳಂ ಸುರಿದುದೋ ನಭಮಿಾಂದುದೊ ದಿಕ್ತಟಂ ಬಳಂಗಳನೆನೆ ಪರ್ವಿದಾ ಪಡೆಯ ತೊಟ್ಟುಟಿಯಿಂ ಗಿಡುಬಳ್ಳಿ ಭೂರುಹಾವಳಿ ಪೊದಱುಳ್ಳ ಬಲ್ಲಡವಿ ಪೆರ್ವಯಲಾಯ್ತು (ಪುಷ್ಪಪು. ೩-೪೬) ; ತೊಳದ ಬೆಳ್ಮುಗಿಲ ಮೊಗ್ಗರದಂತೆ ಸಾಲುಗೊಂಡಳವಟ್ಟು ಪುರದಿಂದಲೈದಿ ಸಲಿಲವನೀಂಟಿ ಮರಳಿ ಪೋಪ ತೇಜಿಯ ಬಳವೊಪ್ಪಿದುವು (ಕಂಪಸಾ. ೨-೩೩). ೩. ಮಳೆಗಱೆವುದು ಬೆಳೆ ಪೆರ್ಚುವುದಿಳೆ ತಳಕಿಳಿದು ಪೋಗದೆ ತಡೆದಿಹುದು ಪಳಿವಿಲ್ಲದ ಪತಿವ್ರತೆಯರ ನಡತೆಯ ಬಳದೊಳೆಂಬರು ಬಲ್ಲವರು (ಹದಿಬ. ೨-೯). ೫. ಬಳನಂ ನಚ್ಚುವೊಡೀ ಕೃಷೀವಳನುಮಿಾ ಜೂದಾಳಿಯುಂ ಗಾಳಿಗಾದಱಿಯಾಳೀ ಬಳೆದೊಟ್ಟ ನಟ್ಟುವನುಮಿಾ ಗೋಪಾಳರಪ್ಪೀ ಯಮಳ್ಗಳೆ ದಲ್ ಚಂಡಭುಜರ್ (ಸೇಮಿಪು. ೦೦-೦೦೦) ; ಎನಿತೊಂದು ಪದೆಪು ಮೋಹಂ ವನಜಾಕ್ಷನೊಳನಿತು ಪದೆಪು ಮೋಹಂ ಬಳನೊಳ್ ತನಗಾಗೆ ನಂದವಧು ತತ್ತನಯದ್ವಯಕೀಳಿಯಿಂದೆ ಸುಖಮಂ ಪಡೆದಳ್ (ಜಗಪಿ. ೩-೪೮). [ಸಂ./ ತಮಿ. ವಲಮ್, ವಲ್ಲಮ್, ವಲ್ಲಮೈ, ವಲ್ಲೈ ; ಮಲ. ವಲಮ್ ; ತುಳು ಬಲ ; ತೆಲು. ವಲಮ, ವಲಮು ; ಕೋತ. ವಲ್]

ಬಲಋದ್ಧಿ, ಬಳಋದ್ಧಿ (ನಾ). [ಜೈನ] ಎಂಟು ಬಗೆಯ ಋದ್ಧಿಗಳಲ್ಲಿ ಒಂದು; ೫ "ತಪಃಶಕ್ತಿಯಿಂದ ಅಪರಿಮಿತವಾದ ಮನೋವಾಕ್ ಕಾಯ ಬಲಗಳುಂಟಾಗುವುದು" (ಕೈವಕೋ. ೦೮೪) : ಭಾವನೆಯೊಳಾದ ಬುದ್ಧಿ ತಪೋವಿಕ್ರಿಯೌಷಧಿರಸಬಲಾಕ್ಷೀಣಾಭಿಧಾನಸಪ್ತರ್ಧಿಗಳೊಳಂ ನೆಱೆದು (ಅಧಿಪು. ೬-೩ ಪ) ; ಬುದ್ಧಿಕ್ರಿಯಾವಿಕ್ರಿಯತಪೋಬಲೌಷಧರಸಕ್ಷೇತ್ರ ಭೇದದಿಂ ಋದ್ಧಿಪ್ರಾಪ್ತಾರ್ಯರಷ್ಟವಿಧಂ (ತತ್ತ್ವಪ್ರ. ೦೭೩) ; ಮನ ವಚನ ಕಾಯ ಭೇದದಿಂ ಬಲಋದ್ಧಿ ಮೂಱು ತೆಱಂ (ಪಸಾರ. ೩೮೯). ಬಳಋದ್ಧಿ : ಮನೋಬಳಂ ವಾಗ್ಬಳಂ ಕಾಯಬಳಮೆಂದು ಮೂಱುಂ ತೆಱನಾದ ಬಳಋದ್ಧಿಯೊಳಂ . . . ನೆಱೆದು (ಸಂಪ್ರಪು. ೦೪-೩೦ ಪ). 'ಬುದ್ಧಿಋದ್ಧಿ' ಪರಾ. [ಸಂ.]

ಬಲಂಗೆಡು (ಕ್ರಿ). ಶಕ್ತಿಗುಂದು ; ಬಲಹೀನವಾಗು : ಅರಣ್ಯದಾ ಭೀಳತೆಗಂ ಕೋಡದೆ ಕೊಂಕದೆ . . . ಬೆಚ್ಚದೆ ಬೆದಱದೆ ಬಲಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಾಯಮಂ ಪಾಱದೆ ಮಹಾವಟವೃಕ್ಷದ ಕೆಳಗೆ ವಿಪುಳತಪದಿಂದಪರ್ಣೆಯೊಪ್ಪುತ್ತುಮಿರೆಯಿರೆ (ಗಿಂಳ. ೯-೩೮ ಪ).

[ಬಲ$_3$ + ಕೆಡು$_1$]

ಬಲಂಗೊಳ್, ಬಲಗೊಳ್, ಬಲಗೊಳ್ಳು (ಕ್ರಿ). ಬಲಭಾಗದಿಂದ ಸುತ್ತು ಹಾಕು ; ಪ್ರದಕ್ಷಿಣೆ ಮಾಡು : ತನ್ನ ನಾಲ್ವರ್ ತಮ್ಮಂದಿರೊಡನೆ ಮಂಗಳವಸದನಂಗೊಂಡು ಮಂಗಳಪ್ರಧಾನೋಚಿತವಿಜಯಗಜಮನೇಱಿ ವಿದ್ಯೋತಮಾಗಿ ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಂಡು (ಪಂಪಶಾ. ೯-೯೩ ಪ) ; ಶಬಳಂ ರತ್ನದ ತೇಜಮುನ್ನುಮಧಿದೆಯ್ವಂ ಶಂಕಿಡೀಯೂರ್ಗ್ಗೆ ಚಂದ್ರಬಳಂ ಬ್ರಹ್ಮಜಿನೇಂದ್ರಗೇಹಮೆನುತಂ ಬಂದರ್ತ್ತಿಯಿಂ ಸೇಸೆಗೊಣ್ಡು ಬಲಂಗೊಣ್ಡು ಸಮನ್ತು ಪೋದನೆಸವೀ ಗ್ರಾಮಾಧಿಪಂ... ಮೂಱು ಪವ್ವಂಗಳೊಳ್ (ಸೌಇಇ. XI-1, ೫೨-೬೫ ; 1007) ; ತ್ರಿಳೋಕ ಸ್ವಾಮಿಯಿರ್ದ ಗಂಧಕುಟಿಯಂ ವಾಸುದೇವರ್ಮೊದಲಾದ ಯಾದವರೆಲ್ಲರುಂ ಮೂಮೆ ಬಲಂಗೊಂಡು ರೋಮಾಂಚಕಂಚುಕಿತಶರೀರರಾಗಿ ನಿರ್ವಾಣ ಸೀಮಂತಿನೀಪ್ರಿಯಂಗೆ ಸರ್ವಾಂಗಪ್ರಣತರಾಗಿ (ಸೇಮಿಪು. ೦೩-೯೯ ಪ). ಬಲಗೊಳ್ : ಭಟ್ಟಾರರ್ ಬಸದಿಯಂ ಬಲಗೊಂಡು ಕಾಲಂ ಕರ್ಚೊಳಗಂ ಪೊಕ್ಕು (ಪಡ್ಡಾಕಾ. ೬೯-೦); ಶ್ರೀಮಜ್ಜಿನಭವನಮನಖಿಲಾಮರನರಖಚರಣಕ್ರ

ವರ್ತಿಸ್ತುತಮಂ ಮೂಮೆ ಬಲಗೊಂಡು ಭವ್ಯಶಿಖಾಮಣಿಯೆನಿಸಿದ ಸರಸ್ವತೀ ಮಣಿಹಾರಂ (ಆದಿಪು. ೯-೧) ; ಉದ್ಭಟಯ್ಯನ ಮಯೂರನ ಕಾಳಿದಾಸನ . . . ಭಲ್ಲಟನ ಭಾರವಿಯ ಪದವ ನೆನೆದು ಬಲಗೊಂಡು ತೊವಗಿದೆನೀ ಮಹಾಕೃತಿಯಂ (ಪಡಕಾ. ೦-೦೯): ಚಕ್ರಿ . . . ಬಲಗೊಂಡನುಱ್ ಮೂಱು ಬಾರಿ ತನ್ನೊಳು ತಾನು ಗೆಲವೇಱ್ ಮುನಿಗಳಿರ್ವರಿಗೆ (ಭರತ. ೩-೬೦). ಬಲಗೊಳ್ಳು : ಹಾಡಿನಲ್ಲಿ ಅಕ್ಕಮಹಾದೇವಿ, ಕೆರೂರ ರಾಚಯ್ಯ, ದ್ರೌಪದಿ, ಸುಭದ್ರೆ, ದೇವಕಿ ಇವರನ್ನೆಲ್ಲ ಕವಯಿತ್ರಿ ಬಲಗೊಳ್ಳುತ್ತಾಳೆ (ಕರ್ನಾಕ. ೩೯೩); ತುತ್ತು ಮುತ್ತನು ನೀಡು ಸರಸತಿ ಲಕುಮಿ ಕಾಳಿಕೆ ಅಂಬೆ ಪಾದಪದ್ಮಂಗಳಿಗೆ ಜೀವದ ಹಂಸನಾ ಬಲಗೊಂಬೆ (ಅರಳು. ೧೩-೧೨). [ಬಲ$_1$ + ಕೊಳ್$_1$]

ಬಲಂಬೆರಸು (ಅ). ಸೈನ್ಯವನ್ನು ಕೂಡಿಕೊಂಡು; ಸೇನಾಸಮೇತವಾಗಿ: ದ್ರೌಪದಿಯ ಕೊಟ್ಟ ನಣ್ಪುಮಂ ದ್ರೋಣನೊಳಾದ ಪರಿಭವಮುಮಂ ನೆನೆದೊಂದಕ್ಷೋಹಿಣೀಬಲಂಬೆರಸು ದ್ರುಪದಂ . . . ನೆಲಂ ಮೂರಿ ವಿಟ್ಟಂತೆ ಬಲವಕ್ಕದೊಳ್ ನಡೆಯೆ (ಪಂಪಭಾ. ೯-೯೫ ಪ); ಕೆಲವು ದಿವಸದ ಮೇಲೆ ವಿಶ್ವಾನುಲೋಮನುಂ ತಾನುಂ ತಂತಮ್ಮ ಬಲಂಬೆರಸು ಪರದೇಶಕ್ಕೆ ಪೋಗಿ ಕಳ್ದು ಬಹುದ್ರವ್ಯಂ ಬಸಮಾದುದಱಿಂ ಪೆರ್ಚಿ (ಧರ್ಮಾಮೃ. ೨-೦೮೩). [ಬಲ$_3$ + ಬೆರಸ್ಸು$_3$]

ಬಲಂಬೆಱು (ಕ್ರಿ). ಶಕ್ತಿಯನ್ನು ಪಡೆ; ಸಾಮರ್ಥ್ಯವನ್ನು ಹೊಂದು; ಬಲಿಷ್ಠವಾಗು : ಮದೀಯವಾಗ್ವಿಭವವಿನ್ಯಾಸಂ ಬಲಂಬೆತ್ತುದಿನ್ನಿರು ಬಲ್ಲಿತ್ತಱ ಕೋಡು ಕೂರಿತವನಂತಿಂತುಂತೆನಲ್ಬರ್ಕುಮೇ (ಆದಿಪು. ೦-೨೫); ಬಲಂಬೆತ್ತೊಡಾ ದಿವಿಜೇಜ್ಯಂ ಸ್ವಗೃಹಂಗಳೊಳ್ ನಿಲೆ ಸುವರ್ಣಂ ಪೂರ್ಣಮಾ ಗೇಹದೊಳ್ (ಜಾತಕ. ೪-೦೫). [ಬಲ$_3$ + ಪೆಱು$_1$]

ಬಲಂಬೊಯ್ (ಕ್ರಿ). ಶಕ್ತಿಯನ್ನು ಕೊಡು; ಸಾಮರ್ಥ್ಯವನ್ನು ಎರೆ,—ನೀಡು : ಲೋಕಜ್ಞರು ಸೇವಾವಿಚಕ್ಷಣರುಮಪ್ಪುದಱಿಂದಮಿಾ ಕುಕ್ಕುಟಯುದ್ಧನಿರೀಕ್ಷಣರಸಕ್ಕೆ ಭಂಗಂಮಾಡದೆ ವಿದ್ಯಾಸಾಮರ್ಥ್ಯದಿನಿರ್ಕೆ ಬಲಂಬೊಯ್ದು ತಾಮುಮಿಾ ನೆರವಿಯೊಳದೃಶ್ಯರಾಗಿ ನೋಡುತ್ತು ಮಿರ್ದರ್ (ಶಾಂತಿಪು. ೯-೫೫ ಪ). [ಬಲ$_3$ + ಪೊಯ್$_2$]

ಬಲಕನಾಡು (ನಾ). ಒಂದು ಪ್ರದೇಶದ ಹೆಸರು : ಶ್ರೀಸಾಮಿಯಬ್ಬೆ . . . ಬಲಕನಾಡ ಸುಳ್ಳಿಗೋಡಮ್ ದೇವಾರಕ್ಕೆ × × ಭಟಾರರ್ಗ್ಗೆ ಬಟಿಯಂ ನಟ್ಟಿ ಬಸದಿಗಂ ದೇವಾರ ಕೊಟ್ಟಳ್ (ಎಕ. VIII, ಸಗರ. ೪೫-೦೦; ಸು. 950). [ಬಲಕ$_0$ + ನಾಡು]

ಬಲಕಾಯಿಸು (ಕ್ರಿ). ೧. ಶಕ್ತಿಯನ್ನು ಪಡೆ; ಬಲವಾಗು: ವೆಲೂರಿಗೆ ಪೋಡಿ ಹೋಗಿ ಕಿಲ್ಲೆ ಬಲಕಾಯಿಶಿಕೊಂಡದ್ದರಿಂದ ಆರ್ಕಾಡ ದವಲತ್ತು ಅನಾಯಕವಾದ ವರ್ತಮಾನ . . . ತಿಳಿದು (ಹೃದರ. ೨೯). ೨. ಬಲಪಡಿಸು; ಸುಭದ್ರಗೊಳಿಸು : ಆ ಕೋಟೆಯನ್ನು ಮೈಸೂರವರು ತೆಗೆದುಕೊಂಡು ತಮ್ಮ ಮಂದಿ ಠಾಣ್ಯಯಿಟ್ಟು ಬಲಕಾಯಿಸಿಕೊಂಡರು (ರಾಸೇಂದ್ರ. ೯). ೩. ಏರು ; ತೀವ್ರವಾಗು : ಒಳಗೊಳಗೆ ಮಾತು ಬಲಕಾಯಿಸಿತು (ಮೂರುಪಾ. ೦೨೪). ೪. ಕಳೆಗಟ್ಟು ; ವಿಜೃಂಭಿಸು : ಇದರಲ್ಲಿ ಸಾಧಾರಣವಾಗಿ ಒಕ್ಕಲಿಗರೇ ಗೆಲ್ಲುವವರಾದುದರಿಂದ ಈ ಉತ್ಸವ ಬಹಳ ಬಲಕಾಯಿಸುತ್ತದೆ (ಗರುದಾ. ೦೬೦).

[ಬಲಕ್ಕಾ (ಪ್ರ ← ಹಿಂ. ಬಲಕನಾ, ಬಲಕಾನಾ) + — ಇಸ್ಸು$_3$./ತುಳು. ಬಲಕಾಯಿಸ್, ಬಲಕಾಯಿಸು]

ಬಲಕುಟಿಕೆ 'ಬಲುಗುಣಿಕೆ' ನೋ.

ಬಲಕೆಯ್ 'ಬಲಗೆಯ್' ನೋ.

ಬಲಖರ್ವೀಕೃತ (ನಾ). (ದೈವಬಲದ) ಶಕ್ತಿಗುಂದಿದವನು; ಬಲಹೀನ: ಶ್ರೀಕೃಷ್ಣಂ ಕಂಸಪುರಾಲೋಕನಕೌತುಕರಸೋದಯಂ ವೀರರಸೋದ್ರೇಕ ಕ್ಕೆಡೆಗುಡೆ ಬಲಖರ್ವೀಕೃತನಾ ದೈತ್ಯ ಖಳನ ಪೊಱಲ್ಗೆಯ್ತುಂದಂ (ಜಗವಿ. ೬-೧). [ಸಂ.]

ಬಲಗಟ್ಟು (ಕ್ರಿ). ಎಡಗಡೆಯಿಂದ ಬಲಗಡೆಗೆ ಅಡ್ಡಲಾಗಿ ಹೋಗು : (ಕಿ). [ಬಲ$_1$ + ಕಟ್ಟು$_1$]

ಬಲಗಡೆ (ನಾ). ಎಡಭಾಗವಲ್ಲದ ಕಡೆ; ಬಲಪಕ್ಕ; ದಕ್ಷಿಣಪಾರ್ಶ್ವ : ಬಲಗಡೆಯಲ್ಲಿ ಬಸಂತನೊಲವಿನಿಂ ಕುಳ್ಳಿರೆ ತನ್ನೆಡದೆಸೆಯೊಳ್ ಸೊಬಗಿಯರಿರೆ ಕಡುಚೆಲ್ವಂ ಪಡೆದನಾವಗಂ ನನೆಗಣೆಯಂ (ಕಬ್ಬಿಕಾ. ೧೩೬); ಬಲಗಡೆಗಾಗಿ ಬಾಗಿ ಬಿಗಿವಟ್ಟುಱ್ ಬಟ್ಟಿತೆಂಬಿನಂ ಮಲರ ಸರಂಗಳೊತ್ತರಿಸೆ (ಜಕವಿ. ೫-೬). [ಬಲ$_1$ + ಕಡೆ$_3$]

ಬಲಗಯ್ 'ಬಲಗೆಯ್' ನೋ.

ಬಲಗರ್ವ (ನಾ). ಸಾಮರ್ಥ್ಯದ ಬಗೆಗಿರುವ ಸೊಕ್ಕು,—ಮದ : ಆ ಶಿಶುಪಾಲನಳವದೆಂತೆಂದೊಡೆ ಬಲದ ಬಲಗರ್ವದಿಂ ತೋಳ್ವಲದ ಕರಂ ಚಲದಳುರ್ಕೆ[ಯಿಂ] ಸುರರೊಳ್ ಮಾರ್ಮಲೆವಂ (ಬಂಹರಿ. ೭-೫೪); ಬಲರಿಪು ತನ್ನದೊಂದು ಬಲಗರ್ವದಗುರ್ವಿನೊಳೆಮ್ಮೆಱಂಕೆಯಂ ಕುಲಿಶದಿನೊರ್ಮೆ ಖಂಡಿಸಿದಂ (ಕಾವ್ಯಸಾ. ೪೬೯). [ಸಂ.]

ಬಲಗರ್ವಿತ (ಗಂ). ಸಾಮರ್ಥ್ಯದ ದರ್ಪವುಳ್ಳವನು : ಬಲಗರ್ವಿತ ಪ್ರತಾಪಿಗಳಲಂಘ್ಯರಪ್ರತಿಮರಖಿಳಭೂಭೃತ್ಪ್ರಭುಗಳ್ ಬಲದೇವ ವಾಸುದೇವರ್ ನೆಲೆಗೆಟ್ಟೇಕಾಕಿಯಾದರುಱಿದವರಳವೇ (ಬಂಹರಿ. ೦೯-೨೯); ದುರುಳನವ ಭಗದತ್ತ ಬಾಹ್ಲಿಕ ನರಕ ವೃದ್ಧಕ್ಷತ್ರ ಮೊದಲಾದರಸುಗಳು ಬಲಗರ್ವಿತರಸಂಖ್ಯಾತರಹರು (ಕುಮ್ಮಾಸ. ೨-೨೦). [ಸಂ.]

ಬಲಗಾಲ್, ಬಲಗಾಲು (ನಾ). ಬಲಗಡೆಯ ಕಾಲು; ದಕ್ಷಿಣ ಪಾದ : ಬಲಗಾಲ್ ಸೈತೊಪ್ಪೆ ವಾಮಂ ಕೆಲಕೆ ತೊಲಗೆ. . . ಲೀಲಾಲಲಿತಾಸ್ಯ ಕ್ರಾಂತದಿಂ ನಿಂದಮರನರಸಭಾಚಿತ್ತದೊಳ್ ಕಾಂತೆ ನಿಂದಳ್ (ಲೀಲಾವ. ೯-೦೩೩); ಬಲಗಾಲ್ಪಿಂದೆಸೆಗಾಗೆ ವಾಮಪದಮಂ ಮುಂದಿಟ್ಟು. . . ಕೋಮಲೆ ನಿಂದು (ರಾಜಶೇ. ೫-೯೮). ಬಲಗಾಲು : ಆವ ಬಿಂಕವೊ ಎಡಗಾಲ ಗದ್ದುಗೆಯ ಮೇಲೋವಿ ಮಡಿದು ಮತ್ತೆ ಕೆಳಗೆ ಹಾವುಗೆಯೊಳು ಪೆಂಡೆಯದ ಬಲಗಾಲೂಱಿ ಠೀವಿಯೊಳೆಸೆದನಾ ರಾಯ (ಭರತ. ೦-೩೦).

ಬಲಗಾಲು ಮುಂತಾಗಿ ಹೊಗು = (ಶುಭಲಕ್ಷಣವಾಗಿ) ಬಲಗಾಲನ್ನು ಮುಂದಿಟ್ಟು ಪ್ರವೇಶಿಸು : ನಾನವನ ಮನೆಯುಮಂ ಬಲಗಾಲು ಮುಂತಾಗಿ ಹೊಕ್ಕ ದಿನದಿಂದ ಬಲುಗೆಲಸವಲ್ಲದೆ ಯಿನಿಸು ತಲೆಯ ತುಱಿಸುವೊಡೆ ಹೊತ್ತಂ ಕನಸಿನಲ್ಲಿ ಕಾಣೆ (ಸಮ್ಯಕ್ತಾ. ೫-೦೯). [ಬಲ$_1$ + ಕಾಲ್$_1$]

ಬಲಗಾಲು 'ಬಲಗಾಲ್' ನೋ.

ಬಲಗಿ 'ಬಲಿಗೆ' ನೋ.

ಬಲಗುಂದು (ಕ್ರಿ). ೧. ಶಕ್ತಿಯು ಕಡಮೆಯಾಗು; ಸಾಮರ್ಥ್ಯವು ಕುಗ್ಗು. ೨. ಶಕ್ತಿಯನ್ನು ಕಳೆದುಕೊಳ್ಳು; ಬಲಹೀನವಾಗು : ಅವನು ವಯೋಧರ್ಮದಿಂದ ಬಲಗುಂದಿದ್ದಾನೆ (ರೂಢಿ). [ಬಲ$_3$ + ಕುಂದು$_1$]

ಬಲಗುಡು (ಕ್ರಿ). (ಪೂಜಾವಿಧಿಯಲ್ಲಿ) ಬಲಭಾಗದಿಂದ ಸುತ್ತು; ಪ್ರದಕ್ಷಿಣೆ ಹಾಕು : ಸಡಗರದಲಿ ಕಂತುಸುತನುಷಾವಧು ಬಲಗುಡುತೆ ಕುಂಭಾಂಡಜೆ ಸಹಿತ ಪೊಡಪಟ್ಟರು ರುಕ್ಮಿಣಿ ಸತ್ಯಭಾಮೆ ಪೆಣ್ಗಡಣಕ್ಕೆ ರತಿದೇವಿಯರಿಗೆ (ಮೋಹತ. ೯೨-೬೩). [ಬಲ$_1$ + ಕುಡು$_1$ (<ಕೊಡು$_1$)]

ಬಲಗುಣಿಕೆ 'ಬಲುಗುಣಿಕೆ' ನೋ.

ಬಲಗೂಡು (ಕ್ರಿ). ಸೈನ್ಯದೊಂದಿಗೆ ಇರು; ಸೇನಾಸಮೇತವಾಗಿರು : ತೋರಿಯ ಮಣಿಪೀಠದಲಿ ಮಂಡಿಸಿ ರಾಯಭಾರಿಗಳ್ಕೈಯಿಂದೆ ಕರೆಸಿ ವಾರಿಜದಳನೇತ್ರ ಬಲಗೂಡಿ ಪ್ರಸ್ಥಾನಭೇರಿಯ ದನಿಮಾಡಿಸಿದ (ಮೋಹತ.

೩೬-೨೬); ಶಿವಭಕ್ತಜನವ್ರಜಂ ವಿಜೃಂಭಿಸಿ ನೆಲಸಿರ್ದ ಪಟ್ಟಣಮಿದಿಂತಿ ದಱೊಳ್ ಬಲ [ಪಾಠಾಂ. ೪]ಗೂಡಿ ಗಾಡಿ ರಂಜಿಸೆ ಪೊಸವಾಜಿಯೇಱಿ ವಿಹರಿಪ್ಪುದು ಬಲ್ಲತನಕ್ಕೆ ತಕ್ಕುದೇ. (ರಾಜಶೇ. ೦೩-೪). [ಬಲ$_3$ + ಕೂಡು$_1$]

ಬಲಗೆಯ್, ಬಲಕೆಯ್, ಬಲಗಯ್, ಬಲಗೈ (ನಾ). ೧. ಬಲಭಾಗದ ಕೈ; ದಕ್ಷಿಣ ಹಸ್ತ : ಬಲದ ಸುಱಿವೆರಸಿದರ್ಚಿಯ ವಿಳಾಸದಿಂದಗ್ನಿರಾಜಿ ನೀರಾಜನದೊಳ್ ಬಲಗೆಯ್ಯೊಳ್ ಚಕ್ರಿಗೆ ದೋರ್ವಲವಿಜಯಮನೀವ ತೆಱದಿನೇಂ ಸೊಗಯಿಸಿತೋ (ಶಾಂತಿಪು. ೦೦-೪೨); ಇನಿರಸವಾಂತ ಕರ್ವಿಲ್ಲಿಗೆ ಭ್ರಮರ ಸಿಂಜಿನಿಗೈದೆಡದ ಹಸ್ತದಲಿ ದನಿಗೆಯ್ಯುತಿರೆ ಬಲಗೆಯ್ಯ ಪೂಸರ ದೊರ್ವ ವನಿತೆ ನಿಂದಿರ್ದಳುತ್ಸವದಿ (ಮೋಹತ. ೩-೩೭). ೨. ಬಲವಾದ ಸಹಾಯ,-ನೆರವು : ಪಡಲಿಟ್ಟಂತೆಪೊಲಾಯ್ತು ಕೀಚಕಬಲಂ. . . ಪೆಱ ವೆಣ್ಗೊಲ್ದಂಗಮೇನಾಗದಿಂದುಡಿದತ್ತಾಗದೆ ಮತ್ಸ್ಯನೊಂದು ಬಲಗೆಯ್ಯೆಂದ ಕ್ಕಟಾ ಎಂಬುದಂ ನುಡಿಯಲ್ಕಾರ್ತರುಮಿಲ್ಲ ಪಾರದರದೊಳ್ ಸತ್ತಂಗ ಟಲ್ವನ್ನರಾರ್ (ಪಂಪಭಾ. ೬-೬೦). **ಬಲಕೆಯ್** : (ಕಿ). **ಬಲಗಯ್** : ೧. ಅಕ್ಕರಮಂ ಬಲಗಯ್ಯೊಳು[ಪಾಠಾಂ. ಗೈಯೊಳ್] ಲೆಕ್ಕಮನೆಡ ಗಯ್ಯೊಳಭವನನುಲೋಮವಿಲೋಮಕ್ಕೆ ನೆಲೆಯಾಗಿ ಮಾಡಿ ಜಗಕ್ಕಱಿಪಿದ ನೋಜೆಯಿಂದಮಾದಿಬ್ರಹ್ಮಂ (ಸಮಪ. ೨-೦೪). ಬಲಗೈ : ೧. ವಿವಿಧವಿಧ ನವನಾಟಕಮಹೋತ್ಸವಸಮುಚ್ಚಯವೆಸೆಯೆ ಏಕಾಂತವಿಭು ಬಲಗೈಯಲ ಗೆಡದ ಕರದಲಿ ಶಿರಂ ಮೆಱೆಯೆ (ಬಸಪು. ೩೨-೪೦); ಬಲಗೈ ಬೆರಳನೊರ್ವ ನಿಗಿತ್ತೆ ಮೊಣ್ಣೆಯೊಂದುಲಿದು ಭಂಗಿಸರೆ ಕಂಡವರು (ಕಂಪವಿ. ೬-೦೮೪). ೨. ಭಕ್ತಿಯ ಬಲಗೈಯತುಳವಿರಕ್ತಿಯ ಮನೆ . . . ಎನಲಾ ಪರಶಕ್ತಿಯ ಮಣಿಭವನಮೆಸೆದುದು (ಉದ್ಯಟಿ. ೬-೬೫); ರಾಯರ ಬಲಗೈ ನಾನು . . . ಅವರು ಯಾವ ಕೆಲಸಕ್ಕೆಂದರೂ ಅದಕ್ಕೆ ತಯಾರಾಗಿರುತ್ತಿದ್ದೆ (ರಾಯಕ. ೬); ಆಚಾರ್ಯರು ಮಾಲವೀಯರ ಬಲಗೈಯಾಗಿದ್ದರು (ನನ್ನಜೊ. ೪೨).

ಬಲಗೈಯವನು=ಹೊಲೆಯರಲ್ಲಿ ಉತ್ತಮಜಾತಿಯವನು : ಊರ ಹೊರಗೆ ಬಲಗೈಯವನಳಿದರೆ ಹಾರುವನಿಂಗೂರೊಳಗಿಹಗೇತಕೆ ಮೀರಿದ ಸೂತಕ (ಶಕ್ತಿಸ. IV, ೦೦-೩). 'ಎಡಗೆಯ್' ಪರಾ. [ಬಲ$_1$ + ಕೆಯ್$_2$]

ಬಲಗೆಲ (ನಾ). = ಬಲಗಡೆ : ಬಲಗೆಲದೆಡೆಯೊಳು ಗರ್ಭಂ ನಿಲೆ ಪುರುಷಂ ವಾಮಭಾಗದಿಂ ಸ್ತ್ರೀಯೆರಡುಂ ಕೆಲದೊಳಮಳ್ಗಳು ನಡುವಣ ನೆಲೆಯಿಂದು ಷಂಡರಾಗಿ ಪುಟ್ಟುವರೆಂದುಂ (ಮಧತಿ. ೦-೬೪) ; ಆ ಶಚಿ ಮಾಯಾನಿದ್ರೆಯನಾ ಶಶಧರವದನೆಗಿತ್ತು ಬಲಗೆಲದೊಳ್ ಮಾಯಾಶಿಶುವ ನಿರಿಸಿ ಪಾಣಿಕುಶೇಶಯಯುಗದಿಂದೆ ನೆಗಪಿದಳ್ ಜಿನಶಿಶುವಂ (ವರ್ಧಪು. ೦೩-೯೫). [ಬಲ$_1$ + ಕೆಲ$_1$]

ಬಲಗೈ 'ಬಲಗೆಯ್' ನೋ.

ಬಲಗೈಬಂಟ (ನಾ). ತುಂಬ ಸಹಾಯವನ್ನು ನೀಡುವವನು ; ಅತ್ಯಂತ ಆಪ್ತನಾದವನು : ತಾನು ಚಕ್ರವರ್ತಿಯ ಬಲಗೈಬಂಟ ನೆಂದು ಸುಖಾರುವಿಗೆ ಹೆಮ್ಮೆ (ಮಣಿಸ. ೩೨) ; ವಿಲಿಂಗ್ಡನ್ನರು . . . ಕಾಂಗ್ರೆಸ್ಸಿನೊಡನೆ ಒಪ್ಪಂದಮಾಡಿ ಜನತೆಯ ಕೇಳಿಕೆಯನ್ನು ಮನ್ನಿಸಿ ದುದು ಬಲಗೈಬಂಟರಾದ ಹಲವಾರು ಸರಕಾರಿ ನೌಕರರಿಗೆ ಒಳಗಿಂದೊಳಗೆ ಚೇಳು ಕುಟುಕಿದಂತಾಗಿತ್ತು (ಕುರುಣಾ. ೦೩೨).

[ಬಲಗೈ (<ಬಲಗೆಯ್) + ಬಂಟ$_1$]

ಬಲಗೊಳ್ 'ಬಲಂಗೊಳ್' ನೋ.

ಬಲಗೊಳಿಸು$_1$ (ಕ್ರಿ). ಬಲಗಡೆಯಿಂದ ಸುತ್ತು ಬರುವಂತೆ ಮಾಡು ; ಪ್ರದಕ್ಷಿಣೆ ಹಾಕಿಸು : ಪೂಜೆ ಪೂರಿತವಾಗೆ ವಾದ್ಯಾಳಿ ನಿಂದುದಾ ರಾಜ ನಂಬಿಕೆಯ ಮುಂದಿಟ್ಟು ಓಜೆಯಿಂದರುಹನ ಬಲಗೊಳಿಸಿದನು ತನೂಜರ ತಾನೊಡನೆಯ್ದಿ (ಶರಶ. ೩೯-೨೫).

[ಬಲಗೊಳ್ (<ಬಲಂಗೊಳ್) + — ಇಸು$_3$]

ಬಲಗೊಳಿಸು$_2$ (ಕ್ರಿ). ಶಕ್ತಿಶಾಲಿಯಾಗುವಂತೆ ಮಾಡು : ಪುಷ್ಟಿ ಗೊಳಿಸು : ವ್ಯಾಯಾಮವು ದೇಹವನ್ನು ಬಲಗೊಳಿಸುತ್ತದೆ (ರೂಢಿ).

[ಬಲ$_3$ + ಕೊಳ್$_1$ + — ಇಸು$_3$]

ಬಲಗೊಳ್ಳು 'ಬಲಂಗೊಳ್' ನೋ.

ಬಲಗೋಲು, ಬಲಗೋಳು (ನಾ). ೧. (ನೊಗ ಅಥವಾ ಗಾಡಿಯ) ಬಲಭಾಗ ; ದಕ್ಷಿಣಪಾರ್ಶ್ವ : ಜ್ಞಾನಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ ಎಡಗೋಲಿನಲ್ಲಿ ಕಾರಿಯ ಹೂಡಿ ಬಲಗೋಲಿನಲ್ಲಿ ಬೆಳ್ಳಿಯ ಹೂಡಿ ಅಡಿ ಕೆತ್ತುವಂತೆ ಧಾಯೆಂದು ಹೊಡೆಯಲಾಗಿ (ಸಕವ. III, ೪೬-೯೬); ಇನ್ನೊಂದು ಗಳಿಗೆ ಇನ್ಯಾರ ನೆನೆಯಾಲಿ ಬಲಗೋಲಲ್ಲಿರುವ ಬಸವಣ್ಣನ ನೆನೆದಾರೆ ಬಂದಷ್ಟು ಪಾಪ ಪರಿಯಾರ (ಕಜಕಾ. ೩). ೨. (ನೊಗ ಅಥವಾ ಗಾಡಿಯ) ಬಲಭಾಗಕ್ಕೆ ಹೂಡುವ ಎತ್ತು : ಈ ಎತ್ತು ಬಲಗೋಲು (ರೂಢಿ). 'ಎಡಗೋಲು' ಪರಾ. **ಬಲಗೋಳು**: ೧. ಒಮ್ಮನದೊಳದ್ದಿದುವು ಹುಟ್ಟುಗಳು, ಉಪ್ಪುನೀರ್ ತುಳ್ಕಿ ತಳ್ಪೊಯ್ಯೆ, ಬಲಗೋಳು ಮುಂದಾಗಿ ನೂಂಕಿದುದು ನಾವೆ ಬಲಮೆಲ್ಲ, ಒಗ್ಗಿನಲಿ (ಪಾರಸಿ. ೦೬-೩೫೯). [ಬಲ$_1$ + ಕೋಲು$_1$ (<ಕೋಲ್$_1$)]

ಬಲಗೋಳು 'ಬಲಗೋಲು' ನೋ.

ಬಲಘಟ್ಟನ (ನಾ). ಸೇನೆಯ ತುಳಿತ,-ಪದಾಘಾತ : ಬಲಘಟ್ಟನದಿಂ ಪುಟ್ಟಿದ ಖಳಧೂಳಿಯಿನಾಗಸಂ ಮಲೀಮಸಮಾಗಲ್ ಸಲೆ ರಜನೀ ಶಂಕೆಯಿನುಜ್ಜ್ವಳಕರಮಂ ಕೆದಱಿತಿಲ್ಲ ರವಿ ದಿಕ್ಕುಳದೊಳ್ (ಬಾರಪು. ೦೦-೩೦).

[ಸಂ.]

ಬಲಚೋರಿ (ನಾ). ಬಲಭಾಗದ ಎತ್ತು: ನೊಗದ ಬಲಗಡೆಗೆ ಕಟ್ಟುವ ಎತ್ತನ್ನು ಬಲಚೋರಿ ಎಂದೂ ಹೇಳುತ್ತಾರೆ (ರೂಢಿ). 'ಎಡಚೋರಿ' ಪರಾ. [ಬಲ$_1$ + ಚೋರಿ ?]

ಬಲಜ, ಬಳಜ (ನಾ). ೧. ಪಟ್ಟಣದ ಬಾಗಿಲು ; ಪುರದ್ವಾರ. ೨. ಹೊಲ ; ಕ್ಷೇತ್ರ. ೩. ಸುಂದರವಾದ ಆಕೃತಿ. **ಬಳಜ** : ೪. ಬಾಗಿಲು ; ದ್ವಾರ : ತಿವುರಿ ಗುಡಿ ಗೂಡಾರಂ ಝುಂಪಾಳಿ ಚೌಕಿಗೆ ಜಂಪೆ ಮಂಡವಿಗೆ ಬಳಜಂ ಬಾಗಿಲ್ವಾಡಂ ಬನಂ ಮೊಗಸಾಲೆಯೆಂಬಿವಱ ಪಸುರಿಂ ಕರ್ಪಿಂ ಕೆಂಪಿಂ ಬಸಂತನ ಬೀಡಿನಿಂತವಱ ಪೊಱವೀಡೆತ್ತಾಂ ಮಾಡಿತ್ತು ಕಣ್ಗನುರಾಗಮಂ (ಅನಂಪು. ೦೩-೭೩). [ಸಂ.]

ಬಲಜೆ (ನಾ). ೧. ಚೆಲುವೆ ; ಸುಂದರಿ. ೨. ಭೂಮಿ. ೩. ಒಂದು ಜಾತಿಯ ಮಲ್ಲಿಗೆ. [ಸಂ. ಬಲಜಾ]

ಬಲಜ್ಯಾಯ (ನಾ). ೧. ಬಲಶಾಲಿಯಾದವನು ; ಬಲಿಷ್ಠ. ೨. ಬಲರಾಮನನ್ನು ಅಣ್ಣನನ್ನಾಗಿ ಉಳ್ಳವನು ; ಕೃಷ್ಣ. ೧, ೨ : ಶ್ರೀಯ ಮನಃಪ್ರಿಯಂ ಜನಿತಕಾಮನಿಳಾಪ್ರಿಯನಬ್ಜಶಂಖ ಲಕ್ಷ್ಮಾಯತಹಸ್ತನಾತ್ತವಿಜಯಂ ದ್ವಿಜರಾಜಸುಸೇವಿತಂ ಬಲಜ್ಯಾಯನ ಭೇದ್ಯಮನ್ತ್ರಕುಶಲಂ ಬಲಿಬನ್ಧನನನ್ತೆ ರಾಯನಾರಾಯಣನೆಮ್ಬುದುರ್ವ್ವಿ ನರಸಿಂಹ ನರೇನ್ದ್ರನ ಮನ್ತ್ರಿ ಬೂಚನ (ಎಕ. V, ಅರಸೀ. ೦೭೨-೨೬; 1163).

[ಸಂ. ಬಲಜ್ಯಾಯಸ್]

ಬಲತಂಗಿ 'ಮಲತಂಗಿ' ನೋ.

ಬಲತಮ್ಮ 'ಮಲತಮ್ಮ' ನೋ.

ಬಲತಾಯಿ 'ಮಲದಾಯ್' ನೋ.

ಬಲದಲನ (ನಾ). ೧. ಸಾಮರ್ಥ್ಯವನ್ನು ನಾಶಮಾಡಿದವನು. ೨. ಬಲನೆಂಬ ರಾಕ್ಷಸನನ್ನು ಕೊಂದವನು ; ಬಲಧ್ವಂಸಿ ; ಇಂದ್ರ. ೧, ೨ : ಕುಲಗೋತ್ರವೈರಿಯುಂ ಬಲದಲನನುಮೆಂದಮರಪತಿಯನೊಲ್ಲದೆ ಪೋದರ್ ಕುಲಗೋತ್ರವೀರಭಟರುಂ ಬಲನಾಥರುಮುಂತುಮಮರರೇ ನೋಡುವರೇ (ಜಗವಿ. ೦೩-೭೯). [ಸಂ.]

ಬಲದಾಯಿ 'ಮಲದಾಯ್' ನೋ.

ಬಲದೃಪ್ತ (ನಾ). ಶೌರ್ಯದಿಂದ ಸೊಕ್ಕಿದವನು ; ಪರಾಕ್ರಮದಿಂದ ಅಹಂಕಾರವನ್ನು ಹೊಂದಿದವನು : ಬಲದೃಪ್ತರಾದ ಕ್ಷತ್ರಿಯರು ಒಬ್ಬೊಬ್ಬರಾಗಿ ಹತೋದ್ಯಮರೂ ಹತಾಶರೂ ಆದ ಬಳಿಕ . . . ಅರ್ಜುನನು . . . ಹೋಗುತ್ತಿರುವುದನ್ನು ನೋಡಿ ಎಲ್ಲರೂ ಗುಲ್ಲೆಬ್ಬಿಸಿದರು (ಭೀಷ್ಮಪ. ೮೦). [ಸಂ.]

ಬಲದೇವ, ಬಳದೇವ (ನಾ). ೧. ಕೃಷ್ಣನ ಅಣ್ಣ ; ಬಲರಾಮ : "ಬಲದೇವಃ, ಬಲಭದ್ರಃ . . . ಕಾಮಪಾಲಃ, ಹಲಾಯುಧಃ — ಈ ೧೮ ಬಲದೇವನ ಪೆಸರ್" (ಹಲಾಯು. ೬-೨೯). ೨. ಒಬ್ಬಾತನ ಹೆಸರು : ಬಲದೇವಾಚಾರ್ಯರ ಪಾಉಗ್ಗಮಣ (ಎಕ. II (R), ೯೨; ೪ಪಯ ಕತ) ; ಚಲದಿಂ ತೇಜದಿನೊಳ್ಪಿನಿಂ . . . ಗಾಂಭೀರ್ಯ್ಯದಿಂ ಸೌರ್ಯ್ಯದಿಂ ಬಲದೇವಂಗೆ ಸಮಾನಮಪ್ಪರೊಳರೇ ಮತ್ತನ್ಯದಂಡಾಧಿಪರು (ಎಕ. II (R), ೦೬೪-೨೬ ; 1139). ೩. [ಜೈನ] ಅರುವತ್ತುಮೂವರು ಶಲಾಕಾಪುರುಷರಲ್ಲಿ ಒಂದು ಗುಂಪು ; ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಂದಿ, ನಂದಿಮಿತ್ರ, ರಾಮ ಮತ್ತು ಪದ್ಮ ಎಂದು ಒಂಬತ್ತು ಮಂದಿ ಬಲದೇವರು : ಬಲದೇವನಂತೆ ಪೆಣನಂ ಪೊತ್ತು ತೊಟಲ್ವ ಕ್ಷೇತ್ರಪಾಲರಿಂ . . . ಸೋಂಬನಂ ಮೆಚ್ಚಿ ಬೇಱೂರ್ಗೆ ಪೋದ ಸೂಳೆಯಂತುಯ್ಯಲಾಡುವ ರಣದೇವತೆಯರಿಂ ದತಿಭಯಂಕರಾಕಾರಮಪ್ಪುದು (ಕಾವ್ಯಸಾ. ೩೨೯ ಕೂರ್ಪಳ) ; ಶ್ರೀವರ್ಮನುಂ ವಿಭೀಷಣನುಮೆಂಬ ಪೆಸರೊಳ್ ಬಲದೇವ ವಾಸುದೇವರೆನಿಸಿ ಬಳೆಯೆ (ಆದಿಪು. ೩-೩೦ ವ) ; ಬಲದೇವಂ ದುಃಖಾಗ್ರಜ್ವಲನಾಹತನಾಗಿ ಪೊತ್ತು ತಮ್ಮನ ಪೆಣನಂ ಪಲವಾಡುತ್ತ ತೊಟಲ್ದಪೊನಲಂಘ್ಯತರಗಹನದಲ್ಲಿ ಯೆಂಬುದನಱಿದಂ (ಬಂಹರಿ. ೦೪-೪೮). **ಬಳದೇವ** : ೨. ಬಳ [ಪಾಠಾಂ. ಲ] ದೇವಂ ಭೀಮನ ಭುಜಬಳದೇವಂ ಮನಮನಲೆಯೆ ಕುರುಪತಿಯಂ ಮಾರ್ಕೊಳೆ ಪರಿಭವಿಸಿದನೆಂದೆಂ[illegible]ಲ್ಲದೆ ಮುಳಿದು ಕೆಳರ್ದು ಕಿರ್ಚೆರ್ದಾಗಳ್ (ಗದಾಯು. ೮-೪೩). ೩. ಬಳದೇವವಾಸುದೇವರನಿಟಿಪುದು ಗುಣದೊಳ್ಪು ರಾಮಲಕ್ಷ್ಮಣರಂ ಪೆಂಪಿಟಿಪುದು ಭೀಮಾರ್ಜುನರುಮನಿಟಿಪುದು ಮಲ್ಲಪನ ಪೊನ್ನಮಯ್ಯನ ಚರಿತಂ (ಅಪಪು. ೦-೩೩). [ಸಂ.]

ಬಲದೊಡ್ಡಿ, ಬಲಲೊಡ್ಡಿ (ನಾ). ಒಂದು ಬಗೆಯ ಸಸ್ಯ : (ಸಸ್ಯವಿ. ೦೨೪). **ಬಲಲೊಡ್ಡಿ** : ಬಲಲೊಡ್ಡಿ, ಬುಡಿಗಾನೆ, ಲೊಡ್ಡುಗಿನ ಮರ (ಮೈಸಿಗಿ. ೭೩-೦೪೯೦). [?]

ಬಲದೋಳ್ದಲೆ (ನಾ). ಬಲಭುಜ ; ಬಲಹೆಗಲು : ನನೆಯಂಬನೆಯ್ದೆ ನೆಲನಂ ಬಲದೋಳ್ದಲೆಯಲ್ಲಿ ತಾಳ್ದಿದಂ (ಕಬ್ಬಿಕಾ. ೪೬).

ಬಲದೋಳ್ದಲೆಯಾಳ್ =ಬಲಭುಜದಂತಿರುವವನು ; ಆಪ್ತನಾದ ಬಂಟ : ಒಡನವನೊಡೆಯಂ ಬಲದೋಳ್ದಲೆಯಾಳಟಿದುದರ್ಕೆ ಸುರ್ಕಿ ಚಾಮನೃಪಾಲನೊಳೊಡೆವೆರೆದಾಮುಟಿಯಲ್ವೇಟ್ಟುದೆಂದು ನಿರವಿಸಿ ಮುದಿಯಂ ಸೀಮೆಯಟಿಯೆ ತಂದಿತ್ತಂ ರಾಮಯ ಲಿಂಗಾಖ್ಯಗಜ ಮನಶ್ವವ್ರಜಮಂ (ಜಕವಿ. ೨-೮೨). [ಬಲ$_1$ + ತೋಳ್ + ತಲೆ$_1$]

ಬಲಧ್ವಂಸಿ (ನಾ). ಬಲನೆಂಬ ರಾಕ್ಷಸನನ್ನು ಸಂಹಾರಮಾಡಿದವನು ; ಇಂದ್ರ : ಸುರಸತಿಯ ಸಂತೈಸಿ . . . ಅರಮನೆಗೆ ಬಂದನು ಬಲಧ್ವಂಸಿ (ಕುಪ್ಯಾಅ. ೮-೪೯). [ಸಂ. ಬಲಧ್ವಂಸಿನ್]

ಬಲಪಕ್ಕ 'ಬಲವಕ್ಕ' ನೋ.

ಬಲಪಡಿಸು (ಕ್ರಿ). ಹೆಚ್ಚುಮಾಡು ; ವೃದ್ಧಿಗೊಳಿಸು : 'ಬಿಲ್ಲಾನ್' ಎಂಬ ಪೂರ್ವದ ಹಳಗನ್ನಡದ ಛಾಯೆಯುಳ್ಳ ರೂಪವೂ . . . ಕುತೂಹಲವನ್ನು ಬಲಪಡಿಸುತ್ತವೆ (ಸಮಾಲೋ. ೦೩೯) ; ಅಪಥ್ಯವು ರೋಗವನ್ನು ಬಲಪಡಿಸುತ್ತದೆ (ರೂಢಿ). [ಬಲ$_2$ + ಪಡಿಸು]

ಬಲಪ್ರದರ್ಶನ (ನಾ). ಶಕ್ತಿಯನ್ನು ತೋರ್ಪಡಿಸುವಿಕೆ : ಸಾಮರ್ಥ್ಯವನ್ನು ಪ್ರದರ್ಶಿಸುವಿಕೆ : ಇಂದು ಅವರ ಸಂಘದಲ್ಲಿ ಬಲಪ್ರದರ್ಶನದ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ (ರೂಢಿ). [ಸಂ.]

ಬಲಪ್ರಯೋಗ (ನಾ). ೧. ಒತ್ತಾಯ ; ನಿರ್ಬಂಧ : ಒಂಟಿಕೋಣೆಗೆ ಹೋಗುವುದಿಲ್ಲವೆಂದು ವಾಸಿಲ್ಯೇವ್ ಹಠಮಾಡಿದನು. ಕಾವಲುಗಾರರು ಬಲಪ್ರಯೋಗ ಮಾಡಬೇಕಾಯಿತು (ಪುಪರು. ೨೦೬). ೨. ಒತ್ತಡ ; ಒತ್ತರ : ವಿದ್ಯುತ್ಪ್ರವಾಹವು ಕಾಂತದ ಮೇಲೆ ಬಲಪ್ರಯೋಗ ಮಾಡುವುದನ್ನು ನೋಡಿದರೆ ಆ ಪ್ರವಾಹಕ್ಕೆ ಸಂಬಂಧಿಸಿದ ಕಾಂತಕ್ಷೇತ್ರವಿದೆಯೆಂದು ಕಂಡು ಬರುವುದು (ಭೌತವಿ. ೩೩೦). [ಸಂ.]

ಬಲಬವರಿ (ನಾ). ಬಲಭಾಗಕ್ಕೆ ತಿರುಗುವ ಒಂದು ಪಟ್ಟು : ತಿವಿದನಣಸಿನಲೂಱಿ ಮೊನೆಯಲಿ ಸವಡಿಯಾನೆಯನೆತ್ತಿದನು ಬಲಬವರಿಯೆಡಬವರಿಯಲಿ ತಡೆಗಾಲ್ವೊಯ್ದನಾ ಭೀಮ (ಕುಪ್ಯಾಗ. ೦-೩೬). [ಬಲ$_1$+ಬವರಿ]

ಬಲಭಂಜನ (ನಾ). =ಬಲಧ್ವಂಸಿ : 'ಬಲಭಂಜನಾರಿ' ಪರಾ. [ಸಂ.]

ಬಲಭಂಜನಾರಿ (ನಾ). ಇಂದ್ರನ ವೈರಿ ; ಇಂದ್ರಜಿತು : ಬಲಭಂಜನಾರಿ [ಪಾಠಾಂ. ಜಂಬಾರಿಜಿತು, ಜಂಭನಾರಿ] ಮಹೀಲತಾಂಗಿಯ ಮಗಳ ರೂಪಿನ ಕಪಟಕಾಮಿನಿಯ ಬಾಳಿನಲಿ ಬಱಿಕೈದು ಬವರಕೆ ತಾಳಲಾಱದೆ ಹನುಮನಲಿ ಸೇನಾಳಿ ಸಹಿತೋಸರಿಸಿ ನಿಂದನು ಪುರದ ಬಾಹೆಯಲಿ (ತೊರರಾ. ೬-೪೨-೦). [ಸಂ.]

ಬಲಭದ್ರಿಕೆ (ನಾ). ಒಂದು ಬಗೆಯ ಔಷಧೀಸಸ್ಯ : "ವಾರ್ಷಿಕಂ, ತ್ರಾಯಮಾಣಾ, ತಾಯಂತ್ರೀ, ಬಲಭದ್ರಿಕಾ — ಳ ನೀರಾಮೆಬಳ್ಳಿ" (ಸಿದ್ಧಾಂತಿ. ೦೪೬). [ಸಂ. ಬಲಭದ್ರಿಕಾ]

ಬಲಭರ (ನಾ). ೧. ಸೈನ್ಯದ ಹೆಚ್ಚಳ ; ಸೇನೆಯ ಆಧಿಕ್ಯ : ಬಲಭರ ಸಂಕ್ಷೋಭಭಯಂದಳೆದಂಬರಕೊಗೆದ ನದಿಗಳೆನೆ ನಿಖಿಲದಿಶಾಕುಲಮಂ ಬಾಸಣಿಸುಗುಮುತ್ಪಲಬಾಂಧವಧವಳಮೆನಿಸಿದೀ ಧ್ವಜಪಟಲಂ (ಕಾದಂಪೂ. ೬೦೦). ೨. ಸೈನ್ಯದ ಭಾರ : ಬಲಭರದಿಂ ನೆಲಂ ಕುಸಿಯೆ ಶೇಷನ ಪೆರ್ವೆಡೆ ತರ್ಗಿ ಕಂಠಕಂಧರದೊಳಗಟ್ಟಡಂಗಿದುದು (ಪುಷ್ಪಪು. ೩-೩೬). [ಸಂ.]

ಬಲಭೇದಿ (ಗು). ೧. ನಿಶ್ಶಕ್ತಿಗೆ ಕಾರಣವಾದ. (ನಾ). ೨. =ಬಲಧ್ವಂಸಿ. ೧, ೨ : ಉಳಿ[illegible]ಗಳೆ ವಿಷಾದವನುಸಿರ ವೇಗವನಂತೆ, ಮೇಲೆ ಮುಂಬರಿವುದದು ಬೇಡವಿನ್ನು ಗುರುಕಂಪ ನಿನಗೇಕೆ ; ಬಲಭೇದಿ ಜೃಂಭಿತವು ? ಇಲ್ಲಿ ಬಾರೌ ವತ್ಸೆ ! ನನ್ನ ಜತೆಗೆ (ರ್ಯಾಸ್ಕಾಲೋ. ೯೯). [ಸಂ. ಬಲಭೇದಿನ್]

ಬಲಮತ್ತ (ಗು). ೧. ಪರಾಕ್ರಮದಿಂದ ಕೊಬ್ಬಿದ ; ಸಾಮರ್ಥ್ಯದಿಂದ ಸೊಕ್ಕಿದ : ಬಲಮತ್ತ ವ್ಯಕ್ತಿ ಏನು ಮಾಡಲೂ ಹೇಸುವುದಿಲ್ಲ (ರೂಢಿ). (ನಾ). ೨. ಪರಾಕ್ರಮದಿಂದ ಕೊಬ್ಬಿದ ವ್ಯಕ್ತಿ ; ಸಾಮರ್ಥ್ಯದಿಂದ ಸೊಕ್ಕಿದ ವ್ಯಕ್ತಿ : ಅವನು ಕಾಮರೂಪಿಯಾಗಿ ಆಕಾಶದಲ್ಲಿ ಸಂಚರಿಸುತ್ತ ಬಲಮತ್ತನಾಗಿ ದೈತ್ಯರನ್ನೂ ದೇವತೆಗಳನ್ನೂ ಮುತ್ತಿ ಅವರ ರತ್ನಾದಿ ಐಶ್ವರ್ಯಗಳನ್ನು ಹೊತ್ತು ತರುತ್ತಿದ್ದನು (ವಡಭಾ. ೪೦೪). [ಸಂ.]

ಬಲಮಥನ (ನಾ). = ಬಲಧ್ವಂಸಿ : ಬಲಮಥನ ಹೊಗಳಲು ಹರುಷದುಬ್ಬಿನಲನುಜನೊಡಗೂಡಿ ಪೃಥುಳಬಲ ತೊರವೆಯ ಹಿರಣ್ಯಕ ಮಥನ ತಿರುಗಿದನಿತ್ತಲಧಿಕಪ್ರಥಿತ ವಿಜಯಾಭ್ಯುದಯದೇಳಿಗೆಯಿಂದ ಪಾಳಯಕೆ (ತೊರರಾ. ೬-೩೪-೮೦). [ಸಂ.]

ಬಲಮರ್ದು, ಬಳಮದ್ದು, ಬಳಮರ್ದು (ನಾ). ೧. ಶ್ರೇಷ್ಠವಾದ ಮದ್ದು ; ಉತ್ತಮವಾದ ಔಷಧ : "ಬಲಮರ್ದೆನಲಂಕದೌಷಧಂ [ಪಾಠಾಂ. ಬಲಮದಮರ್ದೆನಲಂಕದೌಷಧಂ] ತಾನಕ್ಕುಂ" (ರನ್ನಕಂ. ೪) ;

"ಬಳಮರ್ದು, ಬಲಮರ್ದು — ಅಂಕದೌಷಧಂ" (ಶಮದ. ಪಂ. ೨). **ಬಳಮದ್ದು** : ೧. "ಬಳಮದ್ದೆನಲ್ಕಂಕ[ಪಾಠಾಂ. ಅಮರ್ದೆನಲಂಕ, ಬಳಮರ್ದೆನಲಂಕ, ಬಳವರ್ದೆನಲಂಕ] ದೌಷಧಂ" (ಕಬ್ಬಿಕ್ಕ. ೮೩). **ಬಳಮರ್ದು** : ೧. "ಬಳಮರ್ದೆನಲ್ಕಂಕದೌಷಧಮೆಂದೆನಿಕು ಸಂತತಂ" (ಶಬ್ದಮಂ. ೪೦). ೨. ಅತಿಯಾದ ಮತ್ತನ್ನು ಬರಿಸುವಂಥ ದ್ರವ್ಯ; ಉಗ್ರವಾದ ಮಾದಕದ್ರವ್ಯ : ಪರಿಮಳಲೋಭದಿಂ ಮುಸುಱಿ ಮುತ್ತುವ ತುಂಬಿಗಳೊಳ್ಗುರುಳ್ಗಳೊಳ್ ಬೆರಸುವಿನಂ ಮಗುಳ್ಚುವ ದಳಂಗಳೊಳಂ ನಱುಸುಯ್ಯ ಕೆಂಪುಗಳ್ ಬೆರಸುವಿನಂ ಕದಕ್ಕದಿಸಿ ಪೆರ್ಮೊಲೆಗಳ್ ಬಳಮರ್ದನಂಗಜಂಗರೆವವೊಲೀಳೆ ಸಾಂದರೆವರಿಂಬಳವಟ್ಟಿರೆ ಘಟ್ಟಿವಳ್ತಿಯರ್ (ಮಲ್ಲಿಪು. ೨-೬೦) ; ಕಡೆಗಣ್ಕೊಂಟಣಿವಾತು ದೂದವಿ . . . ತನ್ನ ಬರ್ದುಬಳಮರ್ದೊಪ್ಪಾಯಿಲಂ ಕೂರ್ಮೆ (ಲೀಲಾವ. ೨-೯೬). 'ಬಳಮರ್ದಿಕ್ಕು', 'ಬಳಮರ್ದುಕಾಱ' ಪರಾ. [ಬಲ$_3$ + ಮರ್ದು]

ಬಲಮಾಪಕ (ನಾ). [ಭೌತವಿ] (ಪ್ರಾಣಿ, ಯಂತ್ರ, ಯಾಂತ್ರಿಕಬಲ ಮೊದಲಾದುವುಗಳಿಂದ ವೆಚ್ಚವಾದ) ಶಕ್ತಿಯನ್ನು ಅಳೆಯುವ ಒಂದು ಸಲಕರಣೆ ; ಶಕ್ತಿಮಾಪಕ : (D··· -meter· ಪಾರಿಪಿ. ೫೫). [ಸಂ.]

ಬಲಮುರಿ (ನಾ). ೧. ಬಲಭಾಗಕ್ಕೆ ತಿರುಗಿದುದು ; ಬಲಕ್ಕೆ ಹೊರಳಿದುದು ; ಬಲಸುತ್ತು : ಗರುವರ ಚಿತ್ತವನೊಲಿಸಿಕೊಂಬ ಬಲೆಯ ವರಗೃಹವಾ ಬಲಮುರಿಯ ಸುರುಚಿರಶಂಖವ ಹೂಳಿದ ಭೂಮಿಯ ಸರಿ ಕೇಳು (ವೇಮಿಸಂ. ೦೦-೬೦) ; ಒಬ್ಬರೊಬ್ಬರು ಬಲಮುರಿಯೆಡಮುರಿಯಾಗಿ ಸಬ್ಬವದೊಳು ಚಾರಿವರಿದು ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆವೊಬ್ಬಳಾಡಿದಳು ರಂಗದೊಳು (ಭರತ. ೧೨-೬೪). ೨. ಬಲಗಡೆಗೆ ಬರುವಂತೆ ಬಿಟ್ಟ (ಸೊಂಟಪಟ್ಟಿಯ) ಚುಂಗು : ವರನಿಭಾರಿಯ ಬಳವಿನಲಿ ಬಲಮುರಿಯ ಬಿಗಿದನು ಪದಮುಖಕೆ ಮುಂಜೆಱಗ ಬಿಟ್ಟನು ಬಿಗಿದ ಬದ್ದುಗೆದಾರಗೊಂಡೆಯವ (ಕುಪ್ಯಾಕ. ೮-೦೭). ೩. ನದಿಯ ಬಲಗಡೆಗೆ ಬಾಗಿರುವ ಸ್ಥಳ ; ℘ ಕೊಡಗಿನ ವಿರಾಜಪೇಟೆತಾಲ್ಲೂಕಿನಲ್ಲಿರುವ ಒಂದು ಪವಿತ್ರಕ್ಷೇತ್ರ : ಕಾವೇರಿ . . . ಕನಕೆಯೆಂಬಾ ನದಿಯಿದಿರಾಗಿಯೆ ಬಂದು ವಿನಯದೆ ಭಾಗಮಂಡಲದೆ ಘನಸಂತೋಷದೆ ಸಂಗತೆಯಾಗೆ ಕಾನನದೆ ಬಂದಳು ಬಲಮುರಿಗೆ (ಕಂಪಪಿ. ೩-೪೦). ೪. ಒಂದು ಬಗೆಯ ಸಸ್ಯ ಮತ್ತು ಬಲಕ್ಕೆ ತಿರುಗಿಕೊಂಡಿರುವಂತೆ ಬಿಡುವ ಅದರ ಕಾಯಿ : "ಪಾನೀಯವಲ್ಲೀ — ಬಲಮುರಿ, ಚಿತ್ರಮೂಲ" (ಓಷಧಿ. ೯೬) ; ಕಾಡರಿಸಿನ, ಮುಸುಕುಜೋಳದ ಬೇರು, ಬಲಮುರಿಯ ಕಾಯಿ . . . ಹುಳಿ, ಎಣ್ಣೆ ಕೂಡಿ ಭರಣಿಯೊಳಗೆ ಹಾಕಿಸಿ ಎಲಚಿಸೌದೆಯಿಂದ ಅಡುವುದು (ಪಿಸ್ಕಪಿ. ೯೬) ; ಕಾಯಿ ಐದುಮುರಿಯಾಗಿ ಬಲಕ್ಕೆ ಸುತ್ತಿರುತ್ತದೆ, ಇದರಿಂದಲೇ ಬಲಮುರಿ ಎಂಬ ಹೆಸರು . . . ಸಂಸ್ಕೃತದಲ್ಲಿ ಮೃಗಶೃಂಗ ಎನ್ನುತ್ತಾರೆ (ಹಸುಹೊ. ೩೯).

ಬಲಮುರಿಯ ಶಂಖ = ಬಲಮುರಿಶಂಖ : ಬಲಮುರಿಯ ಶಂಖಗಳ ಗಂಧದ ಬಲುಹೊಱೆಯ . . . ಹೇಮಘಟಸಂತತಿಯನೊಟ್ಟಿದರು (ಕುಪ್ಯಾಸ. ೩-೪೭). [ಬಲ$_1$ + ಮುರಿ$_3$ (<ಮುರಿವು)]

ಬಲಮುರಿವೊಕ್ಕುಟ್ (ನಾ). ಬಲಸುಳಿಯಿರುವ ಹೊಕ್ಕುಳು,—ನಾಭಿ: ಈ ಬಲಮುರಿವೊಕ್ಕುಟ್ಗೊಳನೈಸೆ ತನ್ನೊಳ್ಬೆಳೆದ ತಾವರೆಯಿಂ ನಾಲ್ಮೊಗನಂ ನಿರ್ಮಿಸಿ ಜಗತ್ಕಾರಣತ್ವಮಂ ನೆಲೆಗೆಯ್ದುದು (ಚಳವಂ. ೦೨೭-೦). [ಬಲಮುರಿ + ಪೊಕ್ಕುಟ್]

ಬಲಮುರಿಶಂಖ (ನಾ). ಬಲಭಾಗಕ್ಕೆ ತಿರುಗಿದಂತಿರುವ ಸುಳಿಗಳುಳ್ಳ ಶಂಖ; ℘ ಅಪೂರ್ವವಾಗಿ ದೊರೆಯುವ ಇಂಥ ಶಂಖದಿಂದ ಅದೃಷ್ಟ ಉಂಟಾಗುವುದೆಂಬ ನಂಬಿಕೆಯಿದೆ : ಬಲಮುರಿಶಂಖ [ಪಾಠಾಂ. ಮುರಿಯ ಶಂಖ] ಧಿಗಿಲುಭುಗಿಲೆಂದು ಝಂಕರಿಸಿತೆಂದು ಕೆಱೆಯೊಳಗಣಗುಳ್ಳೆ ಕೀಚುಕೀಚೆಂದಂತೆ (ಘನವ. ೩೩-೨೩). [ಬಲಮುರಿ + ಶಂಖ]

ಬಲಮುರಿಸಂಕು (ನಾ). = ಬಲಮುರಿಶಂಖ: ಬೆಳ್ದಿಂಗಳಂತೆ ಪಸರಿಪ ನಗೆಯುಂ ಬಲಮುರಿಸಂಕಿನಂತೆ ಗುಜ್ಜುಗೊಂಡು ರಂಜಿಪ ಕೊರಲುಂ . . . ಅಟ್ಟಜಮಂ ಪುಟ್ಟಿಪವು (ಅಧ್ಯುತ. ೬-೦೬). [ಬಲಮುರಿ + ಸಂಕು$_1$ (<ಸಂಕ$_1$)]

ಬಲಮೆಂಡಿಗಮುಂಡ (ನಾ). ಒಬ್ಬಾತನ ಹೆಸರು: ಬಲಮೆಣ್ಡಿಗಮುಣ್ಡನ್ ಅಱಿಗೊಳೆ (ಮೈಆಂ. ೧೯೨೬. ೯೯-೬ ; 10 ವೆಯ ಶತ). [ಬಲಮೆಂಡಿ ? + ಗಮುಂಡ$_3$ (<ಗಾಮುಂಡ)]

ಬಲಯುತ, ಬಳಯುತ (ಗು). ೧. ಶಕ್ತಿಶಾಲಿಯಾದ; ಸಮರ್ಥನಾದ: ಅತಿರಥನಾತಂ ಗಡ ಬಲಯುತ ಸಮರಥನೆನ್ನೊಳಧಿಕಬಲವಂತಂ ಮಾರುತಿ ಗಡ ಮಹಾರಥಂ ಮಾರುತಿಯುಂ ತದ್ರಥದ ಗಾಲಿಗಳ್ದೊಡ್ಡಿದುವೇ (ಗದಾಯು. ೩-೩೩); ಬಲಯುತ ಶ್ರೀಕಾಂತನಾಜ್ಞೆಯು ನಿಲೆ ನಿಖಿಲಭೂಪರ ಮುಕುಟದಲಿ . . . ತನ್ನೊಂದು ಚೆಲುವಿಕೆ ನಿಲೆ ವಧೂಹೃದಯದೊಳು ನಿಂದನು ಚಕ್ರಿ ರಾಜ್ಯದಲಿ (ಸಾಳ್ವಭಾ. ೩೭-೩೨). (ನಾ). ೨. ಶಕ್ತಿಶಾಲಿಯಾದವನು; ಸಮರ್ಥ : ಬಲಯುತನಾದಂ ಪಗೆವಂ ಕೊಲಶಾಱಂ ಕಾಳಿಯಂ ಗಡಿನ್ನಾರ್ಪವರಾರ್ ಸಲೆ ಕೊಲಬಾರದ ಪಗೆಯಂ ಗೆಲಬಾರದದೆಂದು ಮೆಂತುಮೆಂಬದು ಪದನೇ (ಅರ್ಧವೇ. ೮-೩೨). ೩. ಬಲರಾಮನನ್ನು ಕೂಡಿಕೊಂಡಿರುವವನು ; ಬಲಭದ್ರಸಹಿತನಾದವನು. ೨, ೩: ಹರಿಯಂತೆ ಬಲಯುತಂ ಶಿವನಂತೆ ರಾಜಶೇಖರಂ ... ಅಮೃತಾರ್ಚಿಯಂತೆ ವಿಸ್ತರಿತಕುವಲಯನೆಂದು ಧರ್ಮಜನ ಧರೆ ಪೊಗಳುತಿರೆ (ಕೈಪಿಭಾ. ೨-೦೩). **ಬಳಯುತ** : ೨. ಚಟ್ಟಸಾಮಂತಮಲ್ಲಂಗನುಜಂ ತಾಂ ಗೋವಿದೇವನಧಿಕ ಬಳಯುತಂ ವಿಷ್ಣುಲೋಕೈಕನಾಥಂ ತನಯಂ ತಾನಾಗೆ ಚಲುವಂ ಪಡದುದು ವಿಭವಂ ಮಂಗಳ ಶ್ರೀವಿಳಾಸಂ (ಎಕ. XVI. ಚಕ್ಕಪಾ. ೬೨-೩೩; 1242); ಬಳಯುತನಪ್ಪ ಚೇರಮನೃಪಾಳನ ನಿರ್ಮಳಕೀರ್ತಿ ಲೋಕಮಂ ಬಳಸಿ ದಿಶಾಗಜಂಗಳನಿತುಂ ಬಿಳಿದಾಗಿರೆ ಕಂಡು (ತ್ರಿಪುವಿ. ೩-೬) [ಸಂ.]

ಬಲರಕ್ಕಸಿ 'ಬಲರಾಕ್ಷಸಿ' ನೋ.

ಬಲರಾಕ್ಷಸ 'ಬಲರಾಕ್ಷಸಿ' ನೋ.

ಬಲರಾಕ್ಷಸಿ, ಬಲರಕ್ಕಸಿ, ಬಲರಾಕ್ಷಸ, ಬಲರಾಕ್ಷಿ, ಬಲಾರಾಕ್ಷಸಿ, ಬಲಾರಾಕ್ಷಿ, ಬಲ್ಲರಕ್ಕಸಿ, ಬಾಲರಾಕ್ಷಸ, ಬಾಲರಾಕ್ಷಸಿ, ಬಾಳರಾಕ್ಷ (ನಾ). ಒಂದು ಬಗೆಯ ಸುವಾಸನೆಯ ಗಡ್ಡೆಗಳನ್ನು ಬಿಡುವ ಕುರುಚಲು ಗಿಡ : "ರಾಕ್ಷಸೀ . . . ಗಣಹಾಸಕಃ— ೬ ಕರೀಕಚೋರ, ರಾಕ್ಷಸೀ ಗಡ್ಡೆ" (ಸಿದ್ಧಾಂತಿ. / ೦೪೦). **ಬಲರಕ್ಕಸಿ** : ಬಲರಕ್ಕಸಿ ಪರಮುಟಿಬೇರು (ಮೈಶಿಗಿ. ೬೦-೦೨೦೪). **ಬಲರಾಕ್ಷಸ**: ಬಲರಾಕ್ಷಸಗಡ್ಡೆ, ಕಳ್ಳಂಗಡಲೆ . . . ನಾವಲಗಡ್ಡೆ ಇವಿಷ್ಟು ಪ್ರತ್ಯೇಕವಾಗಿ ಹತ್ತು ಪಲಂಗಳು . . . ತೂಕ ಸೇರಿಸಿ (ಸಕವೈ. ೭೨). **ಬಲರಾಕ್ಷಿ** : (ಸಸ್ಯವಿ. ೯). **ಬಲಾರಾಕ್ಷಸಿ** : (ಕಿ). **ಬಲಾರಾಕ್ಷಿ** : (ಮೈಶಿಗಿ. ೩-೭೯). **ಬಲ್ಲರಕ್ಕಸಿ** : ತಿಲವಿಷ್ಠೆ . . . ಕರಿಬೇವು, ಬಲ್ಲರಕ್ಕಸಿಗಡ್ಡೆ, ರಾಸ್ಮೆ . . . ಇವೆಲ್ಲವಂ ಚೂರ್ಣವಂ ಮಾಡಿ (ಸಕವೈ. ೨೩೩). **ಬಾಲರಾಕ್ಷಸ** : ಅಂಟುತೊಗರಿ, ಬಾಲರಾಕ್ಷಸ (ಸಸ್ಯವಿ. ೦೦೨). **ಬಾಲರಾಕ್ಷಸಿ**: ಬಲರಕ್ಕಸಿ . . . ಬಾಲರಾಕ್ಷಸಿ (ಸಸ್ಯವಿ. ೦೦೨). **ಬಾಳರಾಕ್ಷ**: ಮಾನಕ, ಕರೆಮಣಸಂಗಿ, ಬಲರಕ್ಕಸಿ, ಬಾಳರಾಕ್ಷ (ಸಸ್ಯವಿ. ೪). [?. / ತೆಲು. ಬಲುರಕ್ಕಸಿ, ಬಲುರಕ್ಕಿಸ. ℘ ಇದು 'ಬಾಳ = ಲಾಮಂಜ' ಎಂಬುದಕ್ಕೆ ಸಂಬಂಧಪಟ್ಟಿರಬಹುದು]

ಬಲರಾಕ್ಷಿ 'ಬಲರಾಕ್ಷಸಿ' ನೋ.

ಬಲರಾಸಿ (ನಾ). ಸೇನಾಸಮೂಹ; ಸೇನೆಯ ಗುಂಪು: ಜಱದುದೀ

ಬಲರಾಸಿ ಗಾಳಿಯ ಹೊರಳಿಗೊಡ್ಡಿದ ಹೊಟ್ಟು ಹಾಱುವುದರಿದೆ (ಕುಪ್ಯಾಕ್ರೋ. ೧೯-೨೭). [<ಸಂ. ಬಲರಾಶಿ]

ಬಲರಿಪು (ನಾ). ಬಲನೆಂಬ ರಾಕ್ಷಸನಿಗೆ ಶತ್ರುವಾದವನು; ಇಂದ್ರ: ಬಲರಿಪು ಪೊಗಳುತ್ತಿರೆ ಚಿಱುಪುಲಿಯಾಂಡಂಗಮರವಿನುತ ಗಣಪದಮಂ ಕೊಟ್ಟು (ಕ್ರಿಶುಪಿ. ೫೩-೦) ; ಬಲರಿಪು ತನ್ನದೊಂದು ಬಲಗರ್ವದಗುರ್ವಿ ನೊಳೆಮ್ಮೆಱಂಕೆಯಂ ಕುಲಿಶದಿನೊರ್ವೆ ಖಂಡಿಸಿದಂ (ಕಾವ್ಯಸಾ. ೯೬೪). [ಸಂ.]

ಬಲರೇಖೆ (ನಾ). [ಭೌತವಿ] "ಬಲಪ್ರಯೋಗದ ದಿಕ್ಕನ್ನು ತೋರಿಸುವ ರೇಖೆ" (Line of force. ಇಂಕಪಿ): ಒಂದು ಏಕಧ್ರುವವನ್ನು ಕಾಂತದ ಉತ್ತರಧ್ರುವದ ಬಳಿ ಬಿಟ್ಟರೆ ಅದು ಕಾಂತದ ಬಲವನ್ನನುಸರಿಸಿ ಚಲಿಸುತ್ತಾ ದಕ್ಷಿಣಧ್ರುವವನ್ನು ಬಂದು ಸೇರುವುದು. ಹಾಗೆ ಬರುವಾಗ ಅದು ಅನುಸರಿಸುವ ಮಾರ್ಗಕ್ಕೆ ಬಲರೇಖೆ (Line of force) ಎಂದು ಹೆಸರು (ಕೌಕಪಿ. ೩೦೩). [ಸಂ. ಬಲರೇಖಾ]

ಬಲಲೊಡ್ಡಿ 'ಬಲದೊಡ್ಡಿ' ನೋ.

ಬಲವಂಕ 'ಬಲವಕ್ಕ' ನೋ.

ಬಲವಂತ, ಬಳವಂತ (ಗಂ). ೧. ಶಕ್ತಿಶಾಲಿಯಾದ; ಬಲಿಷ್ಠ: ಬಲವಂತ ಪುತ್ತನಂದಿಯ ತಲೆಯಂ ರಿಪುಬಲಮನೆಯ್ದೆ ತಱಿದಿಕ್ಕಿ ಮಹೀವಳಯ ಮನುಱಿ ಬೆಳಗುತೆ ಶಿವನಿಳಯದೊಳಂ ಪೊಕ್ಕು ಚಕ್ರವಡಗಿತ್ತಾಗಳ್ (ಕ್ರಿಶುಪಿ. ೩೨-೭೯); ಘಳಿಲನಲಗಂ ಕಿತ್ತು ಪುಟನೆಗೆದು ಲಾಗಿಸುತ ಪುಲಿಯ ಬೆಂಗಡೆಗೆಯ್ದಿ ಇಱಿದು ಕೆಡಪಿದನೋರ್ವ ಬಲವಂತ ಬೇಡನಾಗಳು (ರಾಘಶ. ೦೭-೭೩). (ನಾ). ೨. ಶಕ್ತಿಶಾಲಿಯಾದವನು ; ಸಮರ್ಥನಾದವನು : " ಬಲ್ಲಿದಂ ಬಲವಂತನಂ ಸಳನೆನಿಕ್ಕು " (ಮಂಗರಾ. ೭೦-೦೯); ಅತಿರಥನಾತಂ ಗಡ ಬಲಯುತ ಸಮರಥನೆನ್ನೊಳಧಿಕಬಲವಂತಂ ಮಾರುತಿ ಗಡ ಮಹಾರಥಂ ಮಾರುತಿಯುಂ ತದ್ರಥದ ಗಾಲಿಗಳ್ದೊಡ್ಡಿದುವೇ (ಗಪಾಯು. ೩-೫೫); ಬಲವಂತನ ಪಗೆವಂ ಮೇಲೆತ್ತಿ ಬರೆ ವಸ್ತುವಾಹನಂ ಗಳನಿತ್ತಾತನಂ ಸಂತೈಸುವುದು ಸಂಧಾನಮೆಂಬುದಕ್ಕುಂ (ಪಂಚತಂ. ೨೦೯-೦೨); ಎಂಥಾ ಬಲವಂತನೋ ಕುಂತಿಯ ಸಂಜಾತನೋ (ಪುರಂದ. ೦-೨೦೩ ಪಲ್ಲವಿ). ೩. ಐಶ್ವರ್ಯವಂತ ; ಶ್ರೀಮಂತ : ನೆಲ ಬಲವಂತನಿಗೆ, ಕುಲ ನೇಮವಂತನಿಗೆ (ಗಾದೆ). ೪. ಶಕ್ತಿಶಾಲಿಯಾದುದು; ಬಲಿಷ್ಠವಾದುದು : ಶಾಂತಿಕಗುರು ಪಾದಾಂಬುರುಹಾಂತಿಕದೊಳ್ ಜಾತರೂಪ ಧರರಾಗಿ ಶಮಸ್ವಾಂತಕ್ಕೆ ಘಾತಿಗಳ್ ಬಲವಂತಗಳ್ ಕಿಡೆ ಜಿನತ್ವಮೆಮ ಗಾಯ್ತಿಗಳ್ (ಶಾಂತಿಪು. ೯-೭೦) ; ಬಲವಂತನಪ್ಪುದೊಂದು ಸಿಂಹಮಂ ಮೊಲಂ ಕೊಂದುದು (ಪಂಚತಂ. ೬೭-೬). ೫. ಬಲಾತ್ಕಾರ ; ಒತ್ತಾಯ ; ನಿರ್ಬಂಧ : ನೀನು . . . ಸಕಲಕಲೆಗಳು ಒಂದೇ ಬಳಿಯಲ್ಲಿ ಸೇರಿದೆಯೆಂಬುದನು ತಿಳಿದಿರಬೇಕೆಂದು ಬಲವಂತದಿಂದ ಕರತಂದೆನು (ವಚಕಾ. ೫೬) ; ಭೂಮಿಪ ಸೈಂಧವನು ಬಾಗಿಲೊಳ್ನಿಂದಿರ್ದಾ ಭಾಮೆಯನೀಕ್ಷಿಸಿ . . . ಬಲವಂತದಿಂದೆ ಪಿಡಿದಾ ಲಲನೆಯ ರಥಮೇರಿಸುತ್ತೆ ನಡೆದಂ ಜವದಿಂ (ಪಾಲಭಾ. ೯-೯೦). ಬಳವಂತ : ೨. "ಬಳವಂತ— ಬಲವತ್=ಬಲಿಷ್ಠ" (ಕದ್ಯಕೋ. ೨೯) ; ಬಳವಂತನಾದೊಡಂ ತಾನಿಱಿಕೆಯ್ಯಲ್ವೇಡ ರಿಪುವನಾತನಭೀಷ್ಟಂಗಳನೀವುದು ನಯಮಂ ನೆಱಿ ಬಳೆಯಿಸುವುದು ಬಗೆಯೊಳಿಂತು ಗೆಲ್ವುದು ಪಗೆಯಂ (ಶಾಂತೀಶ್ವ. ೬-೧೩೦).

ಬಲವಂತಮಾಘಸ್ನಾನ=(ಆಲಂ) ಇಷ್ಟವಿಲ್ಲದಿದ್ದರೂ ಬಲಾತ್ಕಾರದಿಂದ ಮಾಡಿಸುವ ಕೆಲಸ ; ನಿರ್ಬಂಧದಿಂದ ಮಾಡಿಸುವ ಕಾರ್ಯ : ಅಂಥವರಿಗೆ ಪಾಠ ಓದಿ ಜ್ಞಾನಾರ್ಜನೆ ಮಾಡಿರೆಂದು ಮೂಲೆಯಲ್ಲಿ ಕೂರಿಸುವುದು ಬಲವಂತಮಾಘಸ್ನಾನದಂತಾಗುತ್ತದೆ (ಶಿಕ್ಷದ. ೦೩೦). [ಸಂ. ಬಲವತ್]

ಬಲವಂತತನ (ನಾ). ೧. ಶೌರ್ಯ ; ಸಾಮರ್ಥ್ಯ ; ಪರಾಕ್ರಮ : ನೆಲೆಯಾವದು ನಿನ್ನ ಬಲವಂತತನಕ್ಕೆ ಕುಲದೇವ ಕಮಲೇಶ ವಿಜಯ ವಿಠ್ಠಲರೇಯ (ಮೋಕ್ಷದೀ. ೩೩-೭). ೨. ಬಲಾತ್ಕಾರ ; ಒತ್ತಾಯ : ಹುಲಿ ಹುತ್ತ ಕಳ್ಳರ ಹಾದಿ ಬಲುಗೈಯರ ತೆಕ್ಕೆ ಇದು ಬಲವಂತತನದಿಂದ ಆಗದು ಅವರವರ ಒಲವರದಿಂದಲ್ಲದೆ (ಸುಂಕಬಂ. ಕ. ೬೫೦-೦೬೯೮). [ಬಲವಂತ + —ತನ]

ಬಲವಕ್ಕ, ಬಲಪಕ್ಕ, ಬಲವಂಕ (ನಾ). ಬಲಬದಿ ; ದಕ್ಷಿಣಪಾರ್ಶ್ವ : ಒಂದಕ್ಷೋಹಿಣೀ ಬಲಂಬೆರಸು ದ್ರುಪದಂ ಧೃಷ್ಟದ್ಯುಮ್ನ . . . ವಿಚಿತ್ರಾದಿಗಳಪ್ಪ ತನ್ನ ಮಕ್ಕಳ್ವೆರಸು ನೆಲಂ ಮೂರಿವಿಟ್ಟಂತೆ ಬಲವಕ್ಕದೊಳ್ ನಡೆಯೆ (ಪಂಪಭಾ. ೯-೯೫ ಪ); ಓಳಿಗೊಂಡು ಮಂದಯ್ಸಿ ನಿಂದ ಬಲವಕ್ಕ ದೆಡವಕ್ಕದಂಗರಕ್ಕರ ನೆರವಿಯುಮನೀಕ್ಷಿಸುತ್ತುಂ (ವರ್ಧಪು. ೯-೫೬ ಪ): ಬಂದು ನೆಟ್ಟಗೆ ಬಲವಕ್ಕದೊಳ್ ನೆಲಸಿ ಕಣ್ಗೆಸೆದಂ ಬಿದಿ ನಿಂದು ನೋಟ್ಟರಾ (ಕಬ್ಬಿಕಾ. ೦೬೪). 'ಎಡವಕ್ಕ' ಪರಾ. ಬಲಪಕ್ಕ : ಹೊಲಿಯುವವರ ಬಲಪಕ್ಕದಲ್ಲಿರಬಾರದು, ಅಳುವವರ ಎಡಪಕ್ಕದಲ್ಲಿರಬಾರದು (ಗಾದೆ). ಬಲವಂಕ : ಎಡವಂಕಂ ಬಲವಂಕ [ಪಾಕಾಂ. ವಕ್ಕ] ಮೆಂಬೆಡೆಗಳೊಳ್ ನಾಕಿ ವ್ರಜಂ ಬರ್ಪುದೆಂದೊಡನೇಕಾದಶರುದ್ರರಷ್ಟವಸುಗಳ್ ಪನ್ನಿರ್ವರಾದಿತ್ಯರುಂ ನಡೆವರ್ ಸಂಗರಕೇಳಿಗೆಂಬೆಸಕದಿಂದುದ್ವೃತ್ತನಾ ವೃತ್ರಹಂ (ಜಗವಿ. ೦೩-೨೬); ಧರಣಿಪನ ಬಲವಂಕದಲಿ ಮೋಹರಿಸಿ ಪಾಂಚಾಲಕರು ಚೂಣಿಯೊಳುರವಣಿಸಿದರು ನಕುಲ ಸಾತ್ಯಕಿ ಭೀಮನಂದನರು (ಕುಪ್ಯಾಕ್ರೋ. ೯-೩೦); ಕಾಲಿನ ಮೇಲೆ ಕಾಲಿಕ್ಕಿ ಗೌತಮಂ ಸಿಂಹಶಯ್ಯೆಯಲಿ ಬಲವಂಕದಲಿ ಮಲಗಲು (ವೈಶಾಖ. ೭೫-೨೮೮). 'ಎಡವಂಕ', 'ತೆಂಕವಂಕ' ಪರಾ. [ಬಲ$_1$ + ಪಕ್ಕ]

ಬಲವತ್ತಿಕೆ (ನಾ). ಶಕ್ತಿ; ಸಾಮರ್ಥ್ಯ : ಕಾಲಮೃತ್ಯುವಂ ಕೆಣಕಿದನೆ ಸೈಂಧವನು ತನ್ನ ಬಲವತ್ತಿಕೆಯ ನಮ್ಮೊಡನೆ ತೋರಿದನೆ ಫಡಫಡ (ತುರಂಗ. ೫೩-೯೦). [<ಬಲವಂತ + —ಇಕೆ]

ಬಲವತ್ಸೈನ್ಯ, ಬಳವತ್ಸೈನ್ಯ (ನಾ). ಬಲಿಷ್ಠವಾದ ಸೇನೆ ; ಸಮರ್ಥವಾದ ದಂಡು,—ಸೈನ್ಯ: ಬಲ[ಪಾಕಾಂ.ಳ]ವತ್ಸೈನ್ಯಪದೋತ್ಥಪಾಂಸುಚಯದಿಂ ಸೇನಾಮಹಾಭಾರದಿಂ ಬಳಕೋಳಾಹಳದಿಂ ವಿಯಚ್ಚರಗಣಂ ಶೇಷಂ ದಿಶಾಪಾಲಕರ್ ಪೊಲಗೆಟ್ಟೋಡೆ (ಜಗವಿ. ೭-೯೦). ಬಳವತ್ಸೈನ್ಯ : ಬಳವತ್ಸೈನ್ಯಮನವನೀತಳಪತಿ ಬಿಸುಟಂ (ಶಾಂತಿಪು. ೧೦-೦೯). [ಸಂ.]

ಬಲವದ್ವಿರೋಧ (ನಾ). ಶಕ್ತಿವಂತರಾದವರ ವೈರ,— ಹಗೆ ; ಸಮರ್ಥರಾದವರ ಶತ್ರುತ್ವ : ಎಮಗೆ ಬಲವದ್ವಿರೋಧದ ತೊಳಸು ಬಿದ್ದುದು ತೋಟಗಾಱದೆ ಜಲಧಿಮಧ್ಯದಲೂರ ಕಟ್ಟಿದೆವು (ಕುಪ್ಯಾಸ. ೨-೦೯). [ಸಂ.]

ಬಲವದ್ವೈರಿ, ಬಳವದ್ವೈರಿ (ನಾ). ಪ್ರಬಲವಾದ ಶತ್ರು . ಶಕ್ತಿಶಾಲಿಯಾದ ಹಗೆ : ಬಲವದ್ವೈರಿತಮೋಹರಾತಿಪಟುಗಳ್ ಪದ್ಮಾಸನಸ್ಪರ್ಶ ಸಲ್ಲಲಿತಂಗಳ್. . .ಆನತಜನಕ್ಕಾನಂದಮಂ ಮಾಱಕ್ಕೆ ಮಂಗಳಮುಚ್ಚಂಡ ಕರಂ ಮಹೀವಳಯದೊಳ್ಚಾಳುಕ್ಯಮಾರ್ತಂಡನಾ (ಗದಾಯು. ೦-೪). ಬಳವದ್ವೈರಿ : ಬಳವದ್ವೈರಿಕ್ಷಮಾಪಾಲರನಧಿಕಭುಜಾಗರ್ವದಿಂ ಗೆಲ್ದ ಲಕ್ಷ್ಮೀನಿಳಯಂ . . . ಮಂಗಳಗೀತಂ ಪೊಣ್ಮೆ ಪೊಕ್ಕಂ ನಿಜಶಿಬಿರಮಂ (ಪಂಚತಂ. ೨೬೬-೦೩). [ಸಂ. ಬಲವದ್ವೈರಿನ್]

ಬಲವರ್, ಬಲವರು (ಕ್ರಿ). ಬಲಗಡೆಯಿಂದ ಸುತ್ತು,—ತಿರುಗು : ಪ್ರದಕ್ಷಿಣೆ ಹಾಕು : ನಿಜರಥಮಂ ರಥಾಂಗಧರನಂ ಮುನ್ನಮೇಱಲ್ವೇಟ್ದು ಮೂಱುಸೂಱ್ ಬಲವಂದು ಪೊಡೆಮಟ್ಟು ರಥಮನೇಱಿ . . . ಗಾಂಡೀವಮನೇಱಿಸಿ ನೀವಿ ಜೇವೊಡೆದಾಗಳ್ (ಪಂಪಭಾ. ೦೦-೦೩೨ ಪ) ; ಕಾಂಭೋಜಾವಳಿಗಳ ತುರುಷ್ಕತುರಂಗಮಂಗಳಡಿಯೊಳಡಂಗಿದನೆ ಗೆತ್ತು

ಕೈಗುತ್ತಿ ನೋಡಿಯುಂ ಬಲವಂದು ನೋಡಿಯುಂ (ಗದಾಯು. ೬-೨೬ಪ) ; ಇದೇನಾನುಮೊಂದು ಕೃತ್ರಿಮಮಾಗಲವೇಟ್ಕುಮೆಂದಾ ಮರನಂ ಬಲವಂದು ನೋಡಿ (ಸಂಸಕಂ. ೦೭೭-೬) ; ಶರಣರಂ ಬಲವಂದನುಜ್ಞೆಯಂ ಕೈಕೊಂಡು ಕರುಣಮಂ ತೋಱುತೆ ಕುಮಾರನಂ ಬೀಳ್ಕೊಂಡು (ಜಸರ. ೦-೯೦).

ಬಲವರು : ಬಲವರುತ್ತಿಪ್ಪುದಲ್ಲದೆ ಬೇಱೆ ನಡೆಯಿಲ್ಲ ನಲಿದು ತುತಿಯಿಸುವುದಲ್ಲದೆ ಬೇಱೆ ನುಡಿಯಿಲ್ಲ (ಮುಱ್ಕರ. ದೇ. ೭೦-೩) ; ಹರಿಯ ಬಲವಂದಣ್ಣ ನಂಘ್ರಿಗೆ ಶಿರವ ಚಾಚಿ ನಿಜಾಯುಧವ ವಿಸ್ತರಿಸಿ ಪವನಜಪಾರ್ಥಮಾದ್ರೀಸುತರು ರಥವೇಱೆ ಧುರಕೆ ನಡೆದರು (ಕುಮಾಸಂ. ೧-೬೩) ; ಪರಮ ಪತಿವ್ರತೆಯರ ಪಾದದರ್ಶನ ದೊರೆಕೊಂಡುದೆ ಪುಣ್ಯದಿವಸ ಪರಿದಿವರನು ಬಲವರೆ ಭೂಪ್ರದಕ್ಷಿಣದಿರವನಿನ್ನೇವಣ್ಣಿಪೆನು (ಹರಿ. ೨-೦೦).

[ಬಲ$_1$ + ವರ್]

ಬಲವರು 'ಬಲವರ್' ನೋ.

ಬಲವರ್ಧಕ (ನಾ). ಶಕ್ತಿಯನ್ನು ಹೆಚ್ಚಿಸುವ ಔಷಧ ಮುಂತಾದಂವು : ನಿಶ್ಶಕ್ತವಾಗಿದ್ದ ನಿನ್ನ ದೇಹಕ್ಕೋಸ್ಕರ ಸೀಸೆಗಟ್ಟಲೆ ಬಲವರ್ಧಕಗಳನ್ನು ತಂದು ಕುಡಿಸಿ ಮೈಗೂಡಿಸಿದೆ (ಶಿಕಣಾ. ೨೫೭). [ಸಂ.]

ಬಲವರ್ಧನ (ನಾ). ಶಕ್ತಿಯ ಹೆಚ್ಚಳ ; ಪುಷ್ಟಿ : ಬಲವರ್ಧನಕ್ಕೆ :— ನೆಗ್ಗಿಲ ಬೇರು, ನೆಲ್ಲಿಯ ಚಟ್ಟು, ಅಮರದಬಳ್ಳಿ — ಇವಂ ಚೂರ್ಣಂ ಮಾಡಿ ತುಪ್ಪ, ಜೇನುತುಪ್ಪವಂ ಸಮಾನಂಗೊಂಡು ಲೇಹ್ಯಂ ಮಾಡುಗೆ (ಶಿಕ್ಷಾ. ೨೦೩). [ಸಂ.]

ಬಲವಿನ್ಯಾಸ (ನಾ). (ಯುದ್ಧದಲ್ಲಿ) ಸೈನ್ಯವನ್ನು ನಿಲ್ಲಿಸುವ ಕ್ರಮ : "ವ್ಯೂಹಃ, ಬಲವಿನ್ಯಾಸಃ — ೨ ಕಾಳಗಕ್ಕೆ ಚತುರಂಗದಳವನ್ನೂ ಸ್ಥಲದ ಸಂದುಕಟ್ಟಿಗೆ ಶಕ್ಕ ಹಾಗೆಯೇರ್ಪಡಿಸಿ ಗುಂಪುಗುಂಪುಗಳಾಗಿಯೂ ಸಾಲಾಗಿಯೂ ಯುದ್ಧಶಾಸ್ತ್ರರೀತ್ಯಾ ನಾನಾಕಾರಗಳಾಗಿ ನಿಲ್ಲಿಸುವಿಕೆ" (ಸಿದ್ಧಾಂತಿ. ೨೬೦). [ಸಂ.]

ಬಲವಿರೋಧಿ (ನಾ). = ಬಲರಿಪು : ಸವಣಂ ಬಳಪಂಗೊಳೆ ಗಾಂಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ . . . ಪೊಣರ್ಕೆಗಾವಂ ನಿಲ್ವಂ (ಕಮಂ. ೦೬೬ ಪ್ರಯೋ) ; ದೂಱಾಯ್ತವಳ ದೆಸೆಯಿಂದ ಬಲವಿರೋಧಿಗೆ ಕೇಳಿದೈ (ಕೊಕರಾ. ೦-೦೦-೦೦) ; ಆ ಮರುತ್ತನೈತಂದ ಬಲವಿರೋಧಿಗೆ ನಮಿಸಿ . . . ಎನ್ನೊಳು ಬಲಿದು ಬಲುಮುನಿಸನೆಲ್ಲದ ಕಳೆದು ಸಲಹೆಂದೆನುತ ಸಂಪ್ರಾರ್ಥನೆಯ ಮಾಡಿದನು (ತಿಮ್ಮಾಂ. ೦-೦೦೯).

[ಸಂ. ಬಲವಿರೋಧಿನ್]

ಬಲವಿಹೀನ (ನಾ). ಶಕ್ತಿಯಿಲ್ಲದ ವ್ಯಕ್ತಿ ; ದುರ್ಬಲವ್ಯಕ್ತಿ : ಸಭೆಯಲಿ ಬಲವಿಹೀನರಿಗಾಪ್ತರಿಲ್ಲೆಂದಬಲೆಯೊಱಲಿದಳು (ಕುಮಾಸಂ. ೩-೯೦).

[ಸಂ.]

ಬಲವು (ನಾ). ಶಕ್ತಿ ; ಸಾಮರ್ಥ್ಯ ; ಪರಾಕ್ರಮ : ವ್ಯಂಜನದ ಮೇಲಣತ್ವಕ್ಕೆ — ನಿಲವು, ಒಲವು, ಬಲವು (ಕಮಂ. ೨೦೦ ಪ್ರಯೋ). ☞ ಈ ಶಬ್ದದ ಪ್ರಯೋಗ ಅಪರೂಪ. [< ಬಲ್$_1$ + — ವು]

ಬಲವೈರಿ, ಬಳವೈರಿ (ನಾ). = ಬಲರಿಪು : "ಪಲಗಣ್ಣನುಂ ಮುಗಿಲ್ದೇರ ನಿಂದಿರನೆನಲ್ ಬಲವೈರಿ" (ಕಬ್ಬಿಕ್ಕ. ೦೦) ; ಬಲವೈರಿಸ್ಪಾರವಜ್ರಾಧಿಕ ಭಯಚಕಿತೋದ್ಧೂತ ಮೈನಾಕ ಗೋತ್ರಾಚಲಪಕ್ಷತ್ರಾಯಿಯಿಂದುಪ್ರಯತಮಂ . . . ಸಮುದ್ರಂ (ಸಂಸಕಂ. ೦೫೦-೩) ; ಜಲನಿಧಿವೊಲ್ ಗಂಭೀರಂ ಬಲವೈರಿಯವೊಲ್ ಸಮಗ್ರವಿಭವಸನಾಥಂ (ಕಾಪ್ಯಾವ. ೬೬೭). ಬಳವೈರಿ : ಬಳವೈರಿಯೆಂಬ ಸಾಧಕನಿಳೆಯಂ ಪೊಸಮೂಸೆಮಾಡಿ ಶಶಿಮಂಡಲಮಂ ಗುಳಿಗೆಯಿಡೆ ತಿಮಿರಕಾಳಿಕೆ ತಿಳಿದಂತೆ ಜಲಕ್ಕನಾಯ್ತು ಪೊಸವೆಳ್ದಿಂಗಳ್ (ಅಸಂಪು. ೬-೯೩). [ಸಂ. ಬಲವೈರಿನ್]

ಬಲಶಾಲಿ (ನಾ). ಶಕ್ತಿಶಾಲಿ ; ಪರಾಕ್ರಮವುಳ್ಳವನು : ಆ ಹುಡುಗರಿಗೆಲ್ಲ ಸೀತಾರಾಮು ಎಂಬ ಹುಡುಗನು ಮುಖಂಡ . . . ಬಲಶಾಲಿ ಪುತ್ತು ತುಂಟ (ಕಳಹು. ೭) ; ತನ್ನ ಆಳು ಬಹಳ ಉಣ್ಣಬೇಕು ಮತ್ತು ಅವರು ಬಲಶಾಲಿಗಳಾಗಿರಬೇಕೆಂದು ಅವನ ಇಚ್ಛೆ ಇತ್ತು (ಬಂಗಾಹ. ೦೩).

[ಸಂ. ಬಲಶಾಲಿನ್]

ಬಲಸಂಕು (ನಾ). = ಬಲಮುರಿಶಂಖ : ಏಕಮುಖದ ರುದ್ರಾಕ್ಷೆ ಪನ್ನಗ ವೇತ್ರ ಕಾಕಮೃತ್ತಿಕೆ ಬಲಸಂಕು ಬೇಕಾದ ದಿವ್ಯೌಷಧಗಳ ಮುನಿವರರಾ ಕುವರನಿಗೆ ನೀಡಿದರು (ಮೋಹಕ್ಕ. ೦೯-೯೦).

[ಬಲ$_1$ + ಸಂಕು$_1$ (< ಸಂಕ$_1$)]

ಬಲಸಂಘಟ್ಟನ (ನಾ). ಸೈನ್ಯದ ತುಳಿತ : ಬಲಸಂಘಟ್ಟನದಿಂ ಮಹೀವನ ವಶೇಷಂ ಪೋಗೆ . . . ಬೀಡುವಿಡುತ್ತೆ ನಿಚ್ಚವಯಣಂಬಂದಂ ಮುರಧ್ವಂಸಕಂ (ಅಗಂ. ೦೬-೬೯). [ಸಂ.]

ಬಲಸನ್ನೆ (ನಾ). ಖಡ್ಗಯುದ್ಧದಲ್ಲಿ ಒಂದು ವರಸೆ ; ಬಲಭಾಗದಿಂದ ಕತ್ತಿಯನ್ನು ಬೀಸುವ ಒಂದು ಕ್ರಮ : ತಳಸಂಚು ಮೇಲ್ಸಂಚು ಹಿಂಕೋರೆ ಮುಂಕೋರೆ ಬಲಸನ್ನೆಯೆಡದ ಸನ್ನೆಯೊಳು ಅಲಗ ನೀಡಿದರಲಗಿನೊಳಾಂತು ನೆಗೆದು ಮೈಹೊಳೆದು ತಪ್ಪಿಸಿದನೆಲ್ಲವನು (ಕರಸ. ೬೩-೨೬). [ಬಲ$_1$ + ಸನ್ನೆ$_1$]

ಬಲಸು (ನಾ). ಒಂದು ಬಗೆಯ ಮರ : ಎಣ್ಣೆ ಎರಡೂವರೆ ಸೇರು . . . ಬಲಸುಬೇರಿನ ಚಿಕ್ಕೆ . . . ಭಂಗೀಸೊಪ್ಪಿನ ಪುಡಿ ಎಲ್ಲವನ್ನೂ ಚೂರ್ಣ ಮಾಡಿ (ಸಳಸ್ಯ. ಹಂ. ೯೭೦) ; ಕಾರೆ, ಗಂಡುಕಕೋರ್ಲ್, ಬಲಸು (ಸ್ವಾಸಿಗಿ. ೭೦-೩೦೨). [← ತೆಲು. ಬಲುಸು]

ಬಲುಸುತ್ತು (ನಾ). ಬಲಭಾಗಕ್ಕೆ ಸುತ್ತಿಕೊಂಡಿರುವುದು ; ಬಲಪಕ್ಕಕ್ಕೆ ತಿರುಗಿಕೊಂಡಿರುವುದು : ಎದುರುಬದುರು ಸುತ್ತುಗಳುಳ್ಳ ಕೊಳವೆಗಳನ್ನಾಗಲಿ ದಂಡಗಳನ್ನಾಗಲಿ ಒಟ್ಟಿಗೆ ಸೇರಿಸಲು ಎಳೆಯುವ, ಒಂದು ಕೊನೆಯಲ್ಲಿ ಎಡಸುತ್ತುಗಳೂ ಮತ್ತೊಂದು ಕೊನೆಯಲ್ಲಿ ಬಲಸುತ್ತುಗಳೂ ಒಂದರಲ್ಲೇ ಇರುವ ಉದ್ದತಿರುಪುಗಟ್ಟಿ (sleeve - nut. ಇಂಕಾ). 'ಎಡಸುತ್ತು' ಪರಾ. [ಬಲ$_1$ + ಸುತ್ತು$_2$]

ಬಲಸೂದನ (ನಾ). = ಬಲಧ್ವಂಸಿ : "ಇಂದ್ರಃ, ದುಶ್ಚ್ಯವನಃ . . . ಬಲಸೂದನಃ, ಶತಮುಖಃ . . . ಮೇಘವಾಹನಃ — ಈ ೩೯ ದೇವೇಂದ್ರನ ಪೆಸರ್" (ಹಲಾಯು. ೦೦-೩೨) ; ಬಲಸೂದನ ಗೌತಮಮುನಿಲಲನೆಗೆ ಮನ ಮಿಕ್ಕಲಾತನುರುಶಾಪದೆ ನೀಂ ಸಲೆ ಯಾವವಸ್ಥೆವಡೆದೆಯೊಯೆಲೆ ಸುರಪತಿ (ಯಾದಸಂ. ೦೪-೯೯). [ಸಂ.]

ಬಲಸ್ಥ (ನಾ). ಬಲಿಷ್ಠನಾದವನು ; ಶಕ್ತಿಶಾಲಿ ; ಸಮರ್ಥ : ಕುಲದ ಚಲದಾಯುದಳವಿನ ಕಲಿತನದುನ್ನತಿಯನಲಸದೀ ಸುರಸಭೆಯೊಳ್ ಪಲವಾಡುವೆನ್ನ ನಾಲಗೆ ಬಲಸ್ಥನೊರ್ವಂಗೆ ಜೀಯ ದೇವೆಂದಪುದೇ (ಅಧಿಪು. ೦೨-೦೦೦) ; ಶುಂಭದ್ವಿಪುಲಾಲಾನಸ್ತಂಭಂ ಲಕ್ಷ್ಮೀಕರೇಣುಗೆನಿಸಿದುದು ಭುಜಸ್ತಂಭಂ ಲಕ್ಷ್ಮೀಪ್ರಾಕಾರಂ ಭುವನಕ್ಕೇಂ ಬಲಸ್ಥನೋ ಬಲದೇವಂ (ಶಾಂತಿಪು. ೨-೯). [ಸಂ.]

ಬಲಹಂಸ (ನಾ). [ಸಂಗೀತ] ಒಂದು ರಾಗದ ಹೆಸರು : ಬಲಹಂಸವೆಂಬ ರಾಗವು (೧) ಆರೋಹದಲ್ಲಿ ನಿ-ಯನ್ನು ಬಿಟ್ಟಿದೆ (ಪಕುಪ್ರ. ೦೩೯) ; ಬಲಹಂಸ - ೨ರನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ (ಸಂಗೀಸಂ. ೦೩೪). [ಸಂ.]

ಬಲಹರ (ನಾ). = ಬಲಧ್ವಂಸಿ : ಬಲುಹುಮಾಡಿಕೊಳಲ್ಕೆ ಹರಿಯಜ ಬಲಹರರ ಪವಣಲ್ಲ (ಜಸಪು. ೩೯-೩೬). [ಸಂ.]

ಬಲಹೀನ (ಗು). ೧. ಶಕ್ತಿಯಿಲ್ಲದ ; ನಿಶ್ಶಕ್ತವಾದ ; ನಿರ್ಬಲವಾದ : 'ಬಲಹೀನಜಾನು' ಪರಾ. (ನಾ). ೨. ಶಕ್ತಿಯಿಲ್ಲದವನು; ಅಶಕ್ತ : ಅಸಮರ್ಥ : ಬಲಹೀನ ನೀನಾ ಖಳನ ಕೊಲುವುದೆಂತು

(ಶಿಸಂಗಾಂ. ೦೭–೪೭); ವೈಜಯಂತಿಯಲ್ಲಿ ಆಳುತ್ತಿದ್ದ ಕದಂಬರು ೬ನೆಯ ಶತಮಾನದಲ್ಲಿ ಬಲಹೀನರಾಗಿದ್ದರೆಂದು ತಿಳಿಸಿದ್ದೇವೆ (ಕರ್ಣಾಲಿ. ೪೩.) [ಸಂ.]

ಬಲಹೀನಜಾನು (ನಾ). ೧. ದುರ್ಬಲವಾದ ಮೊಳಕಾಲು; ನಿಶ್ಶಕ್ತವಾದ ಜಾನು. ೨. ದುರ್ಬಲವಾದ ಮೊಳಕಾಲುಗಳನ್ನುಳ್ಳವನು: ಚಲವಿತ್ತಂ ಬಲಹೀನಜಾನು ಚಪಲಂ ಕಾಂತಾಪ್ರಿಯಂ . . . ಭ್ರಮಣಾರ್ಥಿ ಬೇಗಮೊಸೆವಂ ಮಾನಾನ್ವಿತಂ ಮೇಷಜಂ (ಜಾತಕ. ೦೬–೦). [ಸಂ.]

ಬಲಹೀನತೆ (ನಾ). ಶಕ್ತಿಯಿಲ್ಲದಿರುವಿಕೆ; ದುರ್ಬಲತೆ: ಅವರಿಗೆ ವಯೋಧರ್ಮದಿಂದ ಬಲಹೀನತೆಯುಂಟಾಗಿದೆ (ಕೂಡಿ).

[ಸಂ. ಬಲಹೀನತಾ]

ಬಲಾಂತಕ (ನಾ). = ಬಲಧ್ವಂಸಿ: ಅನೇಕವೃಂದಾರಕಾನಂದದುಂದುಭಿಗಭೀರಸ್ವರಂಗಳುಮಶೇಷಾನಿಮಿಷಜಯಜಯವಿಶೇಷಘೋಷಂಗಳುಂ ನೆಗಟ್ತಿ ತಳರ್ವಘಬಲಾಂತಕಂಗೆ ಬಲಾಂತಕಂ ಕೆಯ್ಗೊಟ್ಟೊಳಯಿಂಕೆ ಬಿಜಯಂಗೆಯ್ಯಿಸಿ (ಪುಷ್ಪಪು. ೦೩–೦೦೪ ಪ). [ಸಂ.]

ಬಲಾಕ, ಬಳಾಕ (ನಾ). ಒಂದು ಬಗೆಯ ಜಲಚರಪಕ್ಷಿ; ಬೆಳ್ಳಕ್ಕಿ: ಬಕಕಲಹಂಸಬಲಾಕಪ್ರಕರ ಮೃದುಕ್ವಣಿತರಮ್ಯಮಿದಿರೊಳ್ ತೋಱಿತ್ತುಕೊಳಂ (ಪಂಪಭಾ. ೮–೩೮); ಕೋಕನದಕುಮುದಕಲ್ಹಾರಬಕಬಲಾಕಮರಾಳಾನೀಕದಿಂ ಚೆಲ್ವುವೆತ್ತ . . . ಸರೋವರಕೆ ಬಂದು (ಪುಷ್ಪಾಸ್ತ್ರ. ೦–೪೪ ಪ); ಮೈದೋಱಿದುದು ಮುಂಗಾರು . . . ಹರುಷಿಸಿದವು ಬಲಾಕ ಚಾತಕಿ (ಕೂರರಾ. ೪–೬–೨). **ಬಳಾಕ**: "ಬಿಸಕಂಠಂ ಬಳಾಕಮೆನೆ ಬೆಳ್ಳಕ್ಕಿ" (ಮಂಗರಾ. ೩೦–೬); ಕಾಕೋಳೂಕಸೃಗಾಳಬಳಾಕೋಷ್ಟ್ರಚಮೂರುಖರ ಮುಖಂಗಳವೊಲ್ ನಾನಾಕುತ್ಸಿತಬೀಭತ್ಸುತರಾಕಾರದಲಿರ್ಪುವಲ್ಲಿ ಯೋನಿಮುಖಂಗಳ್ (ಮಲ್ಲಿಪು. ೦೩–೦೩೩); ಇದುವೆಳೆವೆಣ್ಗಳ ಕಣ್ಣೆಳೆಮೀನ್ಗಳ ಬೆದಱಿಸ ಬಂದ ಬಳಾಕ (ನಾಗಕು. ೩–೦೮). [ಸಂ.]

ಬಲಾಕೆ, ಬಳಾಕೆ (ನಾ). = ಬಲಾಕ: "ಬಲಾಕಾ, ಬಿಸಕಂಠಿಕಾ – ಈ ೨ ಬೆಳ್ಳಕ್ಕಿ" (ಹಲಾಯು. ೪೨–೪೭); ಅಲ್ಲಲ್ಲಿಗೆ ಪಳುಕಿನ ಬಲಾಕೆಗಳೊಳಂ ಬರೆದ ಸುರಶರಾಸನಂಗಳೊಳಂ . . . ಪೆಱವಂ ಪಲತೆಱದ ಶಿಶಿರೋಪಚಾರಂಗಳಂ ಮಾಟ್ಟ ಪರಿಜನಂಗಳುಮಂ ನೋಡುತ್ತಂ ಪೋಗೆವೋಗೆ (ಕಾದಂಉ. ೨೦೬). **ಬಳಾಕೆ**: ಕಾಚಮೇಚಕಚಯಚ್ಛಾಯಾಂಬುವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕಬಳಾಕಾನೀಕರಾವಾಕುಳಂ (ಪಂಪಭಾ. ೦೩–೬೨); ಘಟಿಲನೆ ಬಳಾಕೆಯಾಕೃತಿ ಮಟ್ಟಿಗಾಲದೊಳಿರದದೃಶ್ಯಮಪ್ಪಂದದಿನಿತ್ತುಟಿಯದೆ ಕಡೆಗಾಲದೊಳಳವಟಿಯೆ ಸುರಂ ಮಾಯಮಾಯ್ತು ದಿವಿಜನ ದೇಹಂ (ಪಂಪ್ರಪು. ೪–೭೯). [ಸಂ. ಬಲಾಕಾ]

ಬಲಾಚಾರ (ನಾ). ಒಳ್ಳೆಯ ಗ್ರಹಗತಿ; ಸುಯೋಗ; ಅದೃಷ್ಟ; ಆ ದಿನ ಗಣೇಶನನ್ನು ಬಾವಿಗೆ ಕಳಿಸಿ, ಅವನ ಸ್ಥಾನದಲ್ಲಿ ಈ ಗ್ರಂಥವನ್ನಿರಿಸಿದ್ದೆ. ಆದರೆ ಆ ವಿದ್ಯಾಪತಿಯಿಂದ ನನ್ನ ಗ್ರಂಥಕ್ಕೇನೂ ಬಲಾಚಾರ ಒದಗಿ ಬರಲಿಲ್ಲ (ಮುಂಗಾಪು. ೦೩). [ಇದು 'ಗ್ರಹಚಾರ' ಎಂಬ ಶಬ್ದ ಸಾಮ್ಯದಿಂದ ಮಾಡಿಕೊಂಡ ರೂಪ]

ಬಲಾಢ್ಯ, ಬಳಾಢ್ಯ (ಗು). ೧. ಬಲಶಾಲಿಯಾದ; ಶಕ್ತಿಯುತವಾದ; ಸಮರ್ಥವಾದ: ಭಾರತವನ್ನು ನಿಯಂತ್ರಿಸಲು ಬೇಕಾಗುವ ಬಲಾಢ್ಯ ಸೈನ್ಯವನ್ನು ಹೊಂದಲು ಬ್ರಿಟನ್ನಿಗೆ ಸಾಮರ್ಥ್ಯವಿಲ್ಲ ಎಂಬುದನ್ನು ಆಳುವವರು ಮನಗಂಡರು (ಆತ್ಮಾರ್ಪ. ೦೯೦). (ನಾ). ೨. ಬಲಶಾಲಿಯಾದವನು; ಶಕ್ತಿಶಾಲಿ; ಸಮರ್ಥ: ಗಿರಿಯಂತೆ ಬಿಣ್ಣದು ಸುರಕರಿಯಂತೆ ಬಲಾಢ್ಯನಬ್ಧಿಯಂತೆ ಗಭೀರಂ (ಶಮದ. ೨೦೪ ಪ್ರಯೋ); ಸಹಸ್ರಕಂಠಂ ಜಗದೇಕವೀರಂ ರಾಕ್ಷಸಾಧಿಪಂ ಇನ್ನೆನಿತು ಪರಾಕ್ರಮಿಯೊ, ಎನಿತು ಬಲಾಢ್ಯನೊ, ಮೇಣೆನಿತು ಕ್ರೂರನೊ, ಆರಱಿವರ್! (ಅದ್ಭುತ. ೪೦–೧೬). **ಬಳಾಢ್ಯ**: ೨. ಜನ್ಮಸ್ವಾಮಿ ಬಳಾಢ್ಯನಾಗಿ ನಿಲೆ ಸೌಮ್ಯರ್ ನೋಡೆ ಕೂಸಂ ಸುಧಾಜನ್ಮಂ ರಕ್ಷಿಸುವಂ ಸ್ವಕೀಯಶಿಶುವಂ ತಾಯ್ ರಕ್ಷಿಪೊಂದಂದದಿಂ (ಜಾತಕ. ೬–೩). [ಸಂ.]

ಬಲಾತೈಲ (ನಾ). ಒಂದು ಬಗೆಯ ಔಷಧೀಸಸ್ಯದಿಂದ ತಯಾರಿಸಿದ ಎಣ್ಣೆ: ಎದೆನೋವುಳ್ಳಾತನು ಬಲಾತೈಲವನ್ನಾದರೂ ಸುಕುಮಾರತೈಲವನ್ನಾದರೂ ತೆಗೆದುಕೊಂಬುದು (ಪೃಸ್ಥಸಾ. I, ೦೮೪). [ಸಂ.]

ಬಲಾತ್ಕರಿಸು (ಕ್ರಿ). ೧. ಒತ್ತಾಯಮಾಡು; ಬಲವಂತಮಾಡು; ನಿರ್ಬಂಧಪಡಿಸು: ಆತನು ಬಲಾತ್ಕರಿಸಿದರೂ ಕೂಡ ಮನುವು ನಾನಾವನ್ನು ತನ್ನ ಕುದುರೆಯ ಮೇಲೆಯೇ ಕುಳ್ಳಿರಿಸಿಕೊಂಡು ಕರೆತಂದಳು (ಝಾರಾಪ. ೦೪); ನಾಲ್ಕಾರುದಿನ ಅಲ್ಲಿಯೇ ಇದ್ದು ಬರಬೇಕೆಂದು ಎಲ್ಲರೂ ಬಲಾತ್ಕರಿಸಿದರು (ಪ್ರತಾಪ. ೦೦೩). ೨. ಬಲಪ್ರಯೋಗಮಾಡು; ಶಕ್ತಿಯನ್ನು ಪ್ರಯೋಗಿಸು: ಮಡುವಿನೊಳು ಮಡವಿಡಿದ ನೆಗಳಂ ಬಲಾತ್ಕರಿಸಿ ಬಿಡಿಸಿಕೊಂಡೊಡಮುರಿದು ತಡಿಗಡರಿ (ಪೃಖಭಾ. ೧೩–೩೨).

[< ಬಲಾತ್ಕಾರ + – ಇಸ್ಸು]

ಬಲಾತ್ಕಾರ (ನಾ). ೧. ಒತ್ತಾಯ; ಬಲವಂತ: "ಪ್ರಸಭಂ, ಬಲಾತ್ಕಾರಃ ಹಠಃ – ೩ ಬಲಾತ್ಕಾರದ ಪೆಸರು, ಬಲವಂತಮಾಡುವಿಕೆ, ನಿರ್ಬಂಧಗೊಳಿಸುವಿಕೆ" (ನಿಧ್ಯಾಂತಿ. ೨೭೦); ಬೆದರಿಕೆ ಹಾಕುವುದರಿಂದಲೂ ಬಲಾತ್ಕಾರದಿಂದಲೂ ಬಹಳ ಹಾನಿಯಾಗುವುದು (ಮುಂಬಯಿ. ೪–೭೩); ನನ್ನ ಆಭರಣಗಳನ್ನು ಈ ಪಾಪಿಗಳು ಬಲಾತ್ಕಾರವಾಗಿ ಕಿತ್ತುಕೊಂಡರು (ಪ್ರತಾಪ. ೬೦). ೨. [ಜೈನ] ಮುನಿಗಳ ಒಂದು ಗುಂಪು: ಬಲಾತ್ಕಾರದ ಗಣದ ನೇಮಿಚಂದ್ರದೇವರ ಶಿಷ್ಯರು ಪಾರಿಶ್ವದೇವರು ತಂಮ ಹೆಸರ ಹಾಲ ಧಾರಗೆ ಬಿಟ್ಟ ಬಾಳು (ಕಾ. III–i, ೦೦–೯; 1542); ಗಣಗಳು: ದೇವ, ಸೇನ, ಬಲಾತ್ಕಾರ, ಬಳಗಾಱ (ಕಶಾಲಿ. ೬೬). [ಸಂ.]

ಬಲಾಧಿಕ (ನಾ). ಅತಿಶಯವಾದ ಬಲವುಳ್ಳವನು: ಬಲಾಧಿಕರಸಮಸೈನಿಕರ್ . . . ಲಂಕೆಯಂ ಪುಗುತಂದರ್ (ಪಂರಾಮಾ. ೦೪–೬೮). [ಸಂ.]

ಬಲಾಧಿಕೃತ (ನಾ). ಸೇನಾಧಿಪತಿ; ದಳಪತಿ: ನಿಜನಂದನನಪ್ಪ ಚಂದ್ರಾಪೀಡನಂ ತಾರಾಪೀಡನರೇಂದ್ರಂ ಬರಿಸಲೆಂದು ಬಲಾಧಿಕೃತನಪ್ಪ ಬಲಾಹಕನೆಂಬನಂ ಬೆಸಸೆ (ಕಾದಂಪೂ. ೪೪೬). [ಸಂ.]

ಬಲಾಧಿಪ (ನಾ). = ಬಲಾಧಿಕೃತ: ಇವರಂ ಸ್ವದೇಶಕನಂತವೈಭವದಿಂದೆ ನೀಂ ತತಸುವಾಕ್ಯಮನಾಡಿ ಬೀಳ್ಕೊಡೆನಲ್ ಬಲಾಧಿಪನಾಗಳೇ ನುತಬಲಂಗಳನೆಯ್ದಿಸಲ್ ಬಯಲಾದವದ್ಭುತಮೆಂಬಿನಂ (ಹಾಲಾಸ್ಯ. ೨–೦೪–೩೨). [ಸಂ.]

ಬಲಾಧ್ಯಕ್ಷ, ಬಳಾಧ್ಯಕ್ಷ (ನಾ). = ಬಲಾಧಿಕೃತ: ಪುಂಡರೀಕಿಣಿಗೆ ಪಯಣಂ ಬೋಗಲ್ ನಿಶ್ಚೈಸಿದಂ ಧರಣೀಶ್ವರಂ ಅಂತತಿತ್ವರಿತಗಮನನಿಶ್ಚಿತಮನನಾಗಿ ಬಲಾಧ್ಯಕ್ಷನಂ ಬರಿಸಿ (ಆರಿಪು. ೪–೯೦ ಪ). **ಬಳಾಧ್ಯಕ್ಷ**: ಭೂಪತಿ ಮೆಚ್ಚಿ . . . ಪಡೆಯಂ ಪಣ್ಣಿ ಬರವೇಱಿಂದು ಬಳಾಧ್ಯಕ್ಷಂಗೆ ಬೆಸಸುವುದುಂ (ಮಲ್ಲಿಪು. ೮–೧೩೦). [ಸಂ.]

ಬಲಾನ್ವಿತ (ಗು). ೧. ಶಕ್ತಿಶಾಲಿಯಾದ; ಬಲಿಷ್ಠವಾದ. (ನಾ). ೨. ಶಕ್ತಿಶಾಲಿಯಾದವನು; ಬಲಾಢ್ಯ. [ಸಂ.]

ಬಲಾರಾಕ್ಷಸಿ 'ಬಲರಾಕ್ಷಸಿ' ನೋ.

ಬಲಾರಾಕ್ಷಿ 'ಬಲರಾಕ್ಷಸಿ' ನೋ.

ಬಲಾರಾತಿ (ನಾ). = ಬಲರಿಪು: "ಇಂದ್ರಃ, ಪುರುತ್ವಾನ್ . . . ಸುರಪತಿಃ, ಬಲಾರಾತಿಃ, ಶಚೀಪತಿಃ . . . ಸಹಸ್ರಾಕ್ಷಃ, ಋಭುಕ್ಷಾ– ೩೫ ದೇವೇಂದ್ರನ ಹೆಸರುಗಳು" (ನಿಧ್ಯಾಂತಿ. ೨೦). [ಸಂ.]

ಬಲಾರಿ₁ 'ಭಟಾರಿ' ನೋ.

ಬಲಾರಿ₂ (ನಾ). = ಬಲರಿಪು: ಮೊಱೆಯಿಡೆ ಕೇಳ್ದು ಚಕ್ರಧರನುಂ ಜಳಜೋದ್ಭವನುಂ ಬಲಾರಿಯುಂ ಮಱುಗಿ . . . ಇದಾವನಿಂದಲರ್ದು

ದಾವನಿನೊತ್ತರಿಸಿತ್ತು ಕೌತುಕಂ ಎಂದೆಂದು ನುಡಿಯುತಿರ್ದಿನಂ (ಗಿರಿಕ. ೬-೭); ಇತ್ತನೋಲಗವನು ಬಲಾರಿಗೆ ಹತ್ತುಮಡಿ ತೇಜದಲಿ ಏಳನೆಂಬತ್ತು ಕೋಟಿಕೀರ್ತಿವರ್ಧನರುಗಳ ಗಡಣದಲಿ (ಕೂಡಲ. ೬-೪-೦). 'ಬಲಾರಿಚಾಪ' ಪರಾ. [ಸಂ.]

ಬಲಾರಿಚಾಪ (ನಾ). ಕಾಮನ ಬಿಲ್ಲು; ಇಂದ್ರಚಾಪ : ಮೇರುವಿನ ತಪ್ಪಲಲಿ ಬೆಳೆದ ಬಲಾರಿಚಾಪವೊ . . . ಜಂಭಾರಿಭವನವನಳ್ಳಿಱಿಯೆ ಶ್ರೀಪುರಾರಿಯೊಡ್ಡಿನ ಹೊಳಹಿನಲಿ ಹೊಳೆಹೊಳೆದನಾ ಹನುಮ (ಶುಚ್ಚಾ. ೦೦-೬೭). [ಸಂ.]

ಬಲಾವಲೇಪ (ನಾ). ಶಕ್ತಿಯಿಂದ ಉಂಟಾದ ದರ್ಪ. —ಅಹಂಕಾರ : ಸಹಜಾತ ಬಂಹಿಮದ್ಬಲಾವಲೇಪಕ್ಕಂ ಸಮುಚಿತಶಾಸ್ತ್ರವೃತ್ತವರ್ತನಕ್ಕಂ . . . ತಾನೊರ್ವನೆ ನಿರುಪಮಜನ್ಮಭೂವಿಯಾಗಿ . . . ಒಡ್ಡೋಲಗಂ ಗೊಟ್ಟರ್ದ ದಮಿತಾರಿಯ ಮುಂದೆ ಕೃತಕಗಾಯಕಿಯರ್ ನಿಲೆ (ಶಾಂಶಪು. ೬-೪೯ ೪); ಅದನಾಳ್ವಂ . . . ನಿಜಭುಜಬಲಾವಲೇಪ ಪ್ರತಾಪಾಟೋಪನಿರ್ಜಿತಾನೇಕಶತ್ರುವಂಬರಸಂ (ಅಚಪು. ೨-೨೬ ೪). [ಸಂ.]

ಬಲಾಸ (ನಾ). ವಾತ, ಶ್ಲೇಷ್ಮಗಳಿಂದ ಕೊರಳಲ್ಲಿ ಉಂಟಾಗುವ ಒಂದು ಬಗೆಯ ಗಡ್ಡೆ. —ಗಂಟು : ವಾತಶ್ಲೇಷ್ಮಗಳು ಕೊರಳಲ್ಲಿ ಗಾತ್ರವಾಗಿ ಉನ್ನತವಾಗಿ ಇದ್ದ ಗ್ರಂಥಿಯನು ಉಂಟುಮಾಡುವವು. ಆ ಗ್ರಂಥಿ ಬಲಾಸವೆನಿಸಿಕೊಂಬುದು (ಕೃಡ್ಡಣಾ. II, ೦೦೪). [ಸಂ.]

ಬಲಾಹ (ನಾ). ಒಂದು ಬಗೆಯ ವಿಷ : ಪಂಚವಿಂಶತಿಸ್ಥಾವರ ವಿಷ ನಾಮಂಗಳ್ ಸಲೆ ಮುಸ್ತ ವತ್ಸನಾಭಂ ಬಲಾಹ[ಪಾಣಾ. ಬಲುಹುಂ] . . . ವಿಕವೀರಂ (ಪಕುಪ. ೨-೩) ; ಬಲಾಹವೆಂದು, ವತ್ಸನಾಭವೆಂದು, ಮುಸ್ತಕವೆಂದು . . . ರೋಹಿಣವೆಂದು, ಮುದ್ಗರವೆಂದು, ಹೀಗೆ ಸ್ಥಾವರವಿಷ ಇಪ್ಪತ್ತೈದುಭೇದಂಗಳಿಂದ ಭಿನ್ನವಾಗಿ ಇಹುದು (ಕೃಡ್ಡಣಾ. II, ೦೬೭). [ಸಂ. ?]

ಬಲಾಹಕ, ಬಳಾಹಕ (ನಾ). ೧. ಮೋಡ ; ಮುಂಗಿಲು ; ಮೇಘ : "ಅಭ್ರಂ, ಅಬ್ದಃ, ಘನಃ . . . ಜೀಮೂತಃ, ಬಲಾಹಕಃ — ಈ ೧೦ ಮುಗಿಲ ಪೆಸರ್" (ಪಣಾಉ. ೦೦-೫೬); ಬಲಾಹಕಪುಂಡಕಾಂತಿಯ ಪಿಂಗತರ ಮುಖ ಕೇಶದುನ್ನತಿಯ ಕಂಜನಾಭನ ಮೂರ್ತಿ ಶೋಭಾರಂಜಿತನು (ಶುಚ್ಚಾ. ೬-೪). ೨. ಅತಿಶಯವಾಗಿ ಮಳೆ ಸುರಿಸುವುದೆಂದು ಭಾವಿಸಲಾದ ಪ್ರಳಯಕಾಲದ ಏಳುಮೇಘಗಳಲ್ಲಿ ಒಂದಂ : ಅಮರಸಮಿತಿಯ ತಂದ ಪಾಲ್ಗಡಲ ಪಾಲಂ ವುಷ್ಕಲಾವರ್ತ ಬಲಾಹ ಕಾಂಬುದಂಗಳ್ ಕನಕಾಚಳಚೂಳಿಕೆಯೊಳ್ ಸುಂವೃತಿರ್ಪಂತಿಂದ್ರರುಂ ಭಗವದುಷ್ಣೀಷದೊಳ್ ಸು[ರ]ಯೆ (ಶಾಂಶಪು. ೦೦-೪೫ ೪); ಕರಿಯ ಬಲಾಹಕ ದೊಳು ಹರಿದಾಡುವ ಕರ ಸೊಗಯಿಪ ವಿಂಚಿನಂತೆ (ಕ್ಯಾಪ್ರ. ೬೬-೦೯). ೩. ಒಂದು ಬಗೆಯ ಪಕ್ಷಿ; ಬೆಳ್ಳಕ್ಕಿ : ಶಂಕಟಕಬಕಬಲಾಹಕಚಟ್ಟಿಭಕಾದಿ ಪಕ್ಷಿಗಳ್ ಕೋಲಾಹಲಕಲಕಲಧ್ವನಿಗಳಿಂದಲೂ . . . ಪ್ರಕಾಶಿಸುತ್ತಿದ್ದವು (ಕೃಣಾ. ೪೬). ೪. ವಿಷ್ಣುವಿನ ನಾಲ್ಕು ಕುದುರೆಗಳಲ್ಲಿ ಒಂದು. ೫. ಒಂದು ಬಗೆಯ ಹಾವು. ಬಳಾಹಕ : ೧. ವರಯುವತಿ ಬಂದಳು . . . ನವಬಳಾ [ಕಾಣಾ. ವಲಾ] ಹಕದೊಳಗೆ ವಿಂಚಿನ ಗವಿಸಹಿತ ಮಜುಮೇಘವಾವಿರ್ಭವಿಸಿತೆನೆ ದಂಡಿಗೆಯನಿಳಿದಳು ಹೊಕ್ಕಳೋಲಗವ (ಶುಚ್ಚಾಉ. ೬-೦೬). [ಸಂ.]

ಬಲಿ₁ 'ಬಲ್'₁ ನೋ.

ಬಲಿ₂ (ಗು). ೧. ಶಕ್ತಿಶಾಲಿಯಾದ : ಬಲಿಸೌಮಿತ್ರಿಸಮೇತರಾಮನ ನಿಳಾಸಂಜಾತೆಯಂ ಮತ್ತೆ ದೋರ್ಬಲಶತ್ರುಘ್ನಪುರಸ್ಥನಾದ ಭರತ ಕ್ಷ್ಮಾಪಾಲನಂ ಕಂಡು . . . ನಮಸ್ಕಾರಂಗಳಂ ಮಾಡಿದಂ (ಹಾರಪು. ೦೦-೪೬). (ನಾ). ೨. ಗಟ್ಟಿ; ದೃಢ: 'ಬಲಿಕೆಯರ್', 'ಬಲಿವಿಡಿ' ಪರಾ. ೩. ಬಲಿಷ್ಠನಾದವನು ; ಶಕ್ತಿಶಾಲಿ : ಶ್ರೀಯುವತೀಪ್ರಿಯಂ ಬಲಯುತಂ ಬಲಿದರ್ಪಹರಂ . . . ಆದಿಪುರುಷಂ ಪುರುಷೋತ್ತಮನೀ ಚಳುಕ್ಯನಾರಾಯಣದೇವನೀಗೆಮಗೆ ಮಂಗಳಕಾರಣಮುತ್ಸವಂಗಳಂ (ಗಣಾಉ. ೦-೦) ; ಶ್ರೀಯು ಮನಃಪ್ರಿಯಂ . . . ಬಲಜ್ಯಾಯನಭೇದ್ಯ ಮನ್ಯಕುಶಲಂ ಬಲಿಬನ್ಧನನಸ್ತೆ ರಾಯವಾರಾಯಣನೆಮ್ಬುದುರ್ವ್ವಿ ನರಸಿಂಹಪರೇನ್ದ್ರನ ಮನ್ತ್ರಿ ಬೂಚನ (ಎಳ. V, ೪೫೬: ೬೬೨-೨೯; ೧೧೬೨); ಆ ಬಲಿಯುಂ ದೈತ್ಯಕದಂಬ್ಯಕಬಲಿಯುಂ ಯತ್ನೀಕೃತಶ್ಮಶ್ರುಭೃದ್ಬಲಿಯುಂ ಮೆಟ್ಟಿ ರಸಾತಳಕ್ಕಿಟ್ಟಿಪಿದ್ಯೆ ನೀಂ ವಾಮನಾಕಾರದಿಂ (ಜಗಂ. ೦-೫೯). ℘ ಈ ಮೂರು ಪ್ರಯೋಗಗಳಲ್ಲಿ ಬಳಸಿರುವ 'ಬಲಿ' ಶಬ್ದಕ್ಕೆ 'ಬಲಿಚಕ್ರವರ್ತಿ' ಎಂಬುದಾಗಿ ಶ್ರೇಷ್ಠಾರ್ಥವನ್ನೂ ಕೊಡಬಹುದು. ೪. ಯೋಧ ; ಸೈನಿಕ. ೫. ಬಲರಾಮ. ೬. ಒಂದಂ ಬಗೆಯ ಗಿಡ. ೭. ಹಂದಿ. ೮. ಎಮ್ಮೆ. ೯. ಒಂಟೆ. [ಸಂ. ಬಲಿನ್]

ಬಲಿ₃, **ಬಳಿ** (ನಾ). ೧. (ಹಿಂದೆ ರಾಜರಿಗೆ ಸಲ್ಲಿಸಲ್ಪಡುತ್ತಿದ್ದ) ತೆರಿಗೆ : ಸುಂಕ ; ಕಂದಾಯ : "ಬಲಿ ಕರಾಹ್ವಯಂ ಸಿದ್ಧಾಯಂ" (ಪಸ್ತ್ರಕೋ. ೬೨-೬೦); "ಭಾಗಧೇಯಃ, ಕರಃ, ಬಲಿಃ — ಈ ಪೆರಸಿಗೆ ಕೊಡತಕ್ಕ ಕಾಣಿಕೆ, ಕಪ್ಪ, ಕಂದಾಯ, ಕವಳಿಗೆ, ತೆರಿಗೆ, ಮುಂತಾದುವುಗಳ ಪೆಸರುಗಳು" (ಏಕಾ೦ಕಿ. ೨೪೩). ೨. ಕಾಣಿಕೆ ; ಕೊಡುಗೆ : 'ಬಲಿಗೊಳ್' ಪರಾ. ೩. ಪೂಜೆ ; ಆರಾಧನೆ : "ಅರ್ಚಾ, ಪೂಜಾ, ಸಪರ್ಯಾ, ಉಪಹಾರಃ, ಬಲಿಃ — ಈ ೫ ಪೂಜೆ" (ಪಣಾಉ. ೨೦-೦೨೬) ; ಉತ್ಸವ, ಸ್ನಪನ, ಬಲಿಗಾಗಿ ಬೇಕಾದ ಮೂರ್ತಿಗಳು ಮಾತ್ರ ಲೋಹದಿಂದ ನಿರ್ಮಿತವಾಗುವುವು (ಕಾಶಿ. ೩೦೬). ೪. ದೇವತೆಗಳ ಪ್ರೀತ್ಯರ್ಥವಾಗಿ ಗೃಹಸ್ಥನಂ ಪ್ರತಿದಿನವೂ ನಡೆಸಬೇಕಾದ ಪಂಚಯಜ್ಞಗಳಲ್ಲಿ ಒಂದು ; ತನ್ನ ದಿನದ ಆಹಾರದಲ್ಲಿ ಒಂದಂ ಭಾಗವನ್ನು ಪ್ರಾಣಿ, ಪಕ್ಷಿ ಮುಂತಾದುವುಗಳಿಗೆ ಕೊಡುವ ಧಾರ್ಮಿಕ ಕ್ರಿಯೆ ; ಭೂತಯಜ್ಞ. ೫. ಆಹುತಿಯಾಗಿ ಅರ್ಪಿಸುವ ಅನ್ನ, ದ್ರವ್ಯ, ಪ್ರಾಣಿ, ಮನುಷ್ಯ ಮುಂತಾದುವು : ಬಲಿಭುಗ್ವ್ರಜಕ್ಕೆ ಬಲಿಯಂ ತಾನಿಕ್ಕುವಳ್ (ಕಾದಂಪು. ೩೬೬); ಪಜ್ಜಿದ ಪೂಮಾಲೆಗಳ ಬಣ್ಣಗೂಳ್ಗಳ ಬಲಿಯ ಮೊಜದ ಪಳಿಗೊಳ್ಗಿಗಳ . . . ಸುಡುಗಾಡೊಳಾ ಮಂತ್ರಿ ಚಂಡಿಕಾಲಯದೆಡೆಗೆ ನಡೆತಂದನು (ಕೃಬಾಣಾ. ೩೦-೩೩); ದೇವತೆಯ ಬಲಿಪೀಠಗಳನ್ನು ಗುಡಿಸುವವರಿಲ್ಲದೆ ಒಪ್ಪಿಸಿದ ಹಿಂದಿನ ಬಲಿಗಳು ಕೊಳೆತು ನಾರುತ್ತಿದ್ದುವು (ಕಥಾಗ. ೦೬). 'ನರಬಲಿ', 'ಬಲಿಪಶು' ಪರಾ. ೬. ಆಹಾರವನ್ನು ಸೇವಿಸಿದ ಮೇಲೆ ಉಳಿಯುವ ಭಾಗ ; ಎಂಜಲು ; ಉಚ್ಛಿಷ್ಟ. ೭. ಆಹಾರ ; ಅನ್ನ : "ಕೂರವುನ್ನಂ ಭಕ್ತಮೋದನಂ ಭಿಸ್ಸಮಾಹಾರಮಶನಂ ಬಲಿಯೆನಲ್ಕೆವೋಗರವುಕ್ಕುಂ" (ಕಂಂಗಣಾ. ೬೬-೨). ೮. ಹಬ್ಬ ; ಉತ್ಸವ : ಬಲಿ ಬಾಯನಂಗಳುಂ ಮಂಗಲತೂರ್ಯಮುಮೆಸೆಯೆ ಗೇಯರವಮುಂ ಪೊಂದೊಟ್ಟಲ ಪೊಳಪುಂ ರಂಜಿಸುತಿರೆ ಕಲನಾದದ ಗೋಪಕಾಂತೆಯರ್ ನೆರದು (ಜಗಂ. ೩-೨೬). 'ಬಲಿಮೂರ್ತಿ' ಪರಾ. ೯. ಒಬ್ಬ ಪುರಾಣ ಪ್ರಸಿದ್ಧನಾದ ದೈತ್ಯಚಕ್ರವರ್ತಿಯ ಹೆಸರು ; ಪ್ರಹ್ಲಾದನ ಮಗನಾದ ವಿರೋಚನನ ಮಗ ; ಬಾಣಾಸುರನ ತಂದೆ ; ℘ ಈತನನ್ನು ವಿಷ್ಣುವು ವಾಮನಾವತಾರದಲ್ಲಿ ಮೂರಡಿಯಷ್ಟು ಭೂಮಿಯನ್ನು ಬೇಡಿ ತ್ರಿವಿಕ್ರಮನಾಗಿ ಬೆಳೆದು ಪಾತಾಳಕ್ಕೆ ವೆಟ್ಟಿದನೆಂಬ ನಂಬಿಕೆಯಿದೆ : ಬಲಿಯಂ ವಾಮನರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿಭೂತಲಮಂ (ಕಂಕಾ. ೯-೨೦); ಸಿರಿಯೊಳಾ ಬಲಿ ಭೋಗದೆಡೆಯಲಿ ಸುರಪ ರೂಪದಿ ಮದನ ಹಗೆಗಳ ಹರಣವಲಿ ಕಾಲಾಗ್ನಿ

ರುದ್ರನು ಭೂಪ ದಶರಥನು (ಕೌಶಿಂಶ. ೦-೨೪): ಬಲಿಯು ದಾನವ ಗೈದ ಚರಿತೆಯನು ಪಿಂತೆ ಕಲಿಯಲಿಲ್ಲವೆ ನೀವು? (ಕಬಪು. ೧೬-೧). ಬಲಿಂದಮ ' ಪರಾ. ೧೦. ಚಾಮರದ ಹಿಡಿ, – ಹಿಡಿಕೆ. ೧೧. ನೆರಿಗೆ; ಮಡಿಕೆ; ಸುಕ್ಕು: 'ಬಲಿಮುಖ' ಪರಾ. ೧೨. [ಜೈನ] ಒಂಬತ್ತುಮಂದಿ ಪ್ರತಿನಾರಾಯಣರಲ್ಲಿ ಒಬ್ಬ: 'ಬಲಿಸ್ತವನ, 'ಬಲಿಸ್ನಪನ' ಪರಾ. ೧೩. ಕಾಗೆ; ವಾಯಸ: "ಕಾಗೆಯಲ್ಲಿ ಬಲಿಯೆಂಬುದಕ್ಕು" (ಮಂಗರಾ. ೦೪೦-೦೨). ೧೪. ಗಂಧಕ. ೧೫. ಸ್ವಭಾವ; ಪ್ರಕೃತಿ: "ಸುಜನೋತ್ಸಹ ದೃಢದಳಪತಿ ರಜಕ ಬಲೀಂದ್ರಂ ಸುಕೀರ್ತಿಸಾಂದ್ರಂ ಕಾಕವ್ರಜ ಪ್ರಕೃತಿ ಬಲಿಕೊಡುವದು ನಿಜದಿಂ ಪನ್ನೊಂದುನಾಮ ಬಲಿಶಬ್ದಂಗಳ್" (ಸಾಸಾಕಂ. ೪೬); "ಸುಜನ ಬಲೋತ್ಸವಂ ಪ್ರಕೃತಿ ಗಂಧಕ ಕೀರ್ತಿಚಮೂಪ ವಾಯಸಂ ರಜಕ ಬಲೀಂದ್ರಪರ್ವತಗಳುಂ ಬಲಿಯಕ್ಕು" (ಸಾಸಾಕಂ. ೦೭). ಬಳ್ಳಿ: ೧. ಬಳಿಯನೆಲ್ಲವ ತೆತ್ತು ಹೇಱನೆತ್ತಿ ಹೊಳೆಯ ಹೊನ್ನೂರು ತಾವರೆಗೆಱೆಯ ಲಿಂಗದಲಿ ತಿಳಿಯೆ ಕ್ರೀಭಾಂಡ ವಿಕ್ರಯ ಸುಜ್ಞಾನ (ಶಿಪಗೀ. ೧೯೦-೯೧೬); ಅಳಿವ ಅನ್ಯಾಯ ಕಿಱುಕುಳ ತಪ್ಪು ತೌಡಿವೊಳಗಾದ ಸಮಸ್ತ ಬಳಿಸಹಿತ ಆಗಿ . . . ಪುತ್ರಪೌತ್ರಾದಿಗಳ್ಗೆ ಸಲ್ವುದು (ಎಕ. XVI, ಸಕ್ಕಪಾ. ೬೮-೨೯; 1318); ಆ ಗ್ರಾಮದ ಚತುಸೀಮೆಯ ಒಳಗುಳ ನಿಧಿ ನಿಕ್ಷೇಪ . . . ಸರ್ವ್ವಪ್ರಾಪ್ತಿ ಸರ್ವಸ್ವ ಬಳಿಸಹಿತವಾಗಿ ಆಚಂದ್ರಾರ್ಕ್ಕಸ್ತಾಯಿ ಆಗಿ ಸುಖದಿಂ ಭೋಗಿಸೂದ ಎಂದು . . . ಕೊಟ ಗ್ರಾಮ (ಮೈಅಂ. ೦೯೪೫. ೧೮-೨೬; 1488). ೯. ಶ್ರೀಕಾನ್ತಾಪತಿ ವಿಕ್ರಮೋರ್ಜ್ಜಿತ ಬಳಿಕ್ಷೋಣೀತಳಂ ವಿಶ್ವಲೋಕೈಕಸ್ತುತ್ಯದಶಾವತಾರಯುತನುದ್ಯಚ್ಛಂಖಚಕ್ರಾಬ್ಜಲಕ್ಷ್ಮಾಕೀರ್ಣ್ಣಾತ್ಮಕರಾಗ್ರನೆನ್ನವೊಲಿವಂ ತಾನೆನ್ದು ಸಾನನ್ದದಿಂದಾ ಕಲ್ಪಾಯುವನೀಗೆ ಕೇಶವಚಮೂಪಂಗಾಗಳುಂ ಕೇಶವಂ (ಎಕ. VII. ಶಿಕಾಂ. ೧೨೬-೨; 1159). ೯ ಇಲ್ಲಿರುವ 'ಬಳಿ' ಶಬ್ದಕ್ಕೆ (ಶಕ್ತಿಶಾಲಿ. ಬಲಿ ಚಕ್ರವರ್ತಿ ಎಂಬ) ಶ್ಲೇಷಾರ್ಥಯುತವಾದ ಚಮತ್ಕಾರವಿದೆ.

ಬಲಿ ಬೀಳು = ತುತ್ತಾಗು: ಈಡಾಗು: ರಾಯರು ದುರಾಶೆಗೆ ಬಲಿಬಿದ್ದು ಸೊಸೈಟಿಯ ಹಣದ ಋಣ ಬೆಳೆಸುತ್ತಾ ಬರುತ್ತಿದ್ದುದರಿಂದ ಮುಂದೆ ಏನಾಗಬಹುದೆಂದು ಊಹಿಸುವುದು ಕಷ್ಟವಾಗಿತ್ತು (ಮರಳಿ. ೦೬೩). ಬಲಿಯಾಗು = ೧. ಆಹುತಿಯಾಗು; ಮರಣವನ್ನು ಹೊಂದು: ಮೂವರು ಬಾಲಕರು ಬಂದು, ಕಟುಕರಿಗೆ ಹಣವಿತ್ತು, ಕುಮಾರರಾಮನನ್ನು ಬಿಡಿಸಿಕೊಳ್ಳುತ್ತಾರೆ. ಚೆನ್ನಿಗರಾಮ ಬಲಿಯಾಗುತ್ತಾನೆ (ಕುಮಾಸಾಂ. ೨೨೯); ಖಾಸಗಿ ಸಾಹುಕಾರರ ಲಾಭಕ್ಕಾಗಿ ಸರ್ವಸಾಧಾರಣರ ಬದುಕು ಬಲಿಯಾಗದಂತೆ ಏರ್ಪಡಿಸಬೇಕು (ಹಣಪ್ರ. ೦೯೧). ೨. ಈಡಾಗು; ಗುರಿಯಾಗು: ಕಾಲಚಕ್ರದ ಸುಖದುಃಖಗಳಿಗೆ ಸಾಮಾನ್ಯಜೀವಿ ಬಲಿಯಾದಷ್ಟು ಈತ ಬಲಿಯಾಗುವುದಿಲ್ಲ (ರಮಾಸಾ. ೯೯). ಬಲಿಹಾಕು = ೧. ದುಷ್ಟಶಕ್ತಿಗೆ ಪ್ರಾಣಿ ಅಥವಾ ಆಹಾರವನ್ನು ಬಲಿಯಾಗಿ ಅರ್ಪಿಸಂ; ಆಹುತಿಕೊಡು: (†). ೨. ಬಲಿಯನ್ನು ಅರ್ಪಿಸಿ ಮಂತ್ರ ಹಾಕುವುದರ ಮೂಲಕ ದುಷ್ಟಶಕ್ತಿಯನ್ನು ಓಡಿಸು: (†). ೩. ಆಹುತಿಯಾಗಿ ತೆಗೆದುಕೊಳ್ಳು: ರಾಜಸೂಯ ಯಾಗಕ್ಕೆ ಮುಂಚೆ ಭೀಮನು ಜರಾಸಂಧನನ್ನು ಹೇಗೆ ಬಲಿ ಹಾಕಿಬಿಟ್ಟ ನೋಡು! (ಪಸಭಾ. ೦೦೩). ೪. (ಆಲಂ) ಶಾಸ್ತಿಮಾಡು; ಶಿಕ್ಷಿಸು: ಡಾಕ್ಟರರನ್ನು ಕರೆಯಲು ಹೋದರೆ ನಿನ್ನನ್ನೇ ಬಲಿಹಾಕಿಯೇನು (ಪಾತ್ಸಶ್ಯ. ೨೮೩). [ಸಂ.]

ಬಲಿಂದಮ (ನಾ). ಬಲಿಯನ್ನು ದಮನಮಾಡಿದವನು; ವಾಮನ; ವಿಷ್ಣು: ಮುಂದಣ ಮಿಗಮಂ ಕಟಿಪದೆ ಸಂದಿಸಿ ಬಟಿಗೊಳ್ವ ಮಿಗಮುಮಂ ಕಟಿಪದೆ ತಾನೊಂದಳವಿದಪ್ಪದೆಚ್ಚು ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗಟಿಸಿದಂ (ಪಂಪಭಾ. ೩-೪೮). [ಸಂ.]

ಬಲಿಕರ್ಮ (ನಾ). ಪೂಜಾಕಾರ್ಯ; ಅರ್ಚನೆ; ಆರಾಧನೆ: "ಉಪಹಾರಂ ಬಲಿಕರ್ಮಂ ಸಪರ್ಯೆ ಪೂಜಾಭಿಧಾನಮರ್ಚನೆಯಕ್ಕುಂ" (ಪಸ್ತುಕೋ. ೨೦-೧೯); ಸೌಮಿತ್ರಿ . . . ನದಿಗೆ ನಡೆದೊಡನೆ ಮಜ್ಜನಗೈದು ಕಮಲಕುಮುದಂಗಳಂ ಪಿಡಿದು ಬಂದೆಲೆವನೆಗೆ ಬಲಿಕರ್ಮಗಳ ರಚಿಸಿ ಬಿನ್ನಪಂಗೈದನೊಲಿದು (ಪಂಕಾರಾ. ೩-೬-೧೪). [ಸಂ. ಬಲಿಕರ್ಮನ್]

ಬಲಿಕಲ್ಲು 'ಬಲಿಗಲ್ಲು' ನೋ.

ಬಲಿಕಾರ್ಯ (ನಾ). (ಪಿತೃಗಳಿಗೆ) ಬಲಿಯನ್ನು ಅರ್ಪಿಸುವ ಕ್ರಿಯೆ; ಪಿಂಡಪ್ರದಾನ: ಅಂದು ಕೊಲೆಯಿಂ ಸತ್ತ ಹರಿಗೆ ಬಲಿಕಾರ್ಯಕೆ ಧನಂ ದೊರಕದಿರೆ ಫಲ್ಗುನಂ ಕಂದಮೂಲಫಲವೃಂದದಿಂದ ಬಲಿಗೊಟ್ಟು ಸಗ್ಗಕೆಯ್ದಿದಂ (ಪಸ್ಮರಾ. ೦೦-೦೩೪). [ಸಂ.]

ಬಲಿಕೆ 'ಬಲ್ಕೆ' ನೋ.

ಬಲಿಕೆಅನ್ನ (ನಾ). (ಕರಾ) ಸರಿಯಾಗಿ ಬೇಯದೆ ಇರುವ ಅನ್ನ: ಬಿರುಸಾದ ಅನ್ನ. [ಬಲಿಕೆ (<ಬಲ್ಕೆ) + ಅನ್ನ$_3$]

ಬಲಿಕೆಯ್ (ಕ್ರಿ). ದೃಢಗೊಳಿಸು; ಗಟ್ಟಿಗೊಳಿಸು: ಮನಮಂ ಬಲಿಕೆಯ್ದು ಶುಕನಾಸನನಿಂತೆಂದಂ (ಕಾದಂಉ. ೪೯೩). [ಬಲಿ$_2$ + ಕೆಯ್$_1$]

ಬಲಿಕೆವಂತ (ನಾ). ತಿಳಿದವನು; ವಿಚಾರಜ್ಞ: ಲಿಂಗಕ್ಕೊಂದು ತನಗೊಂದೆಂಬಾಗ ಆ ಅಂಗ ಲಿಂಗವಿರೋಧಿಯೇ ಆ ಇಷ್ಟಲಿಂಗವ ಆತ್ಮನ ನೆಲೆಯಲ್ಲಿ ಅಱಿದಿಹೆನೆಂಬುದು ಇಂಬಲ್ಲವೆ ಕುಲ ಛಲ ವಾಗ್ವಾದದ ಮಾತಲ್ಲದೆ ಬಲಿಕೆವಂತರ ನೀತಿಯಲ್ಲ (ಮೋಳಿಸಾ. ೦೨೬-೪೬೨). [ಬಲಿಕೆ (<ಬಲ್ಕೆ) + – ವಂತ]

ಬಲಿಕೊಡು 'ಬಲಿಗೊಡು' ನೋ.

ಬಲಿಗಂಬ (ನಾ). ಆಹುತಿಯಾಗಿ ಕೊಡುವ ಪ್ರಾಣಿಗಳನ್ನು ಕಟ್ಟುವ ಕಂಬ: ಬಲಿಗಂಬಕ್ಕೆ ಬಚ್ಚಪ್ಪನ ಮಗ ದೇವಿಗೆ ಬಲಿಯಾಗಲು ಕೊಡಲ್ಪಟ್ಟಿದ್ದ ಕೋಣವನ್ನು ಕಟ್ಟಿದ್ದ (ಊರುಳ. ೬). [ಬಲಿ$_3$ + ಕಂಬ$_1$ (<ಕಂಭ)]

ಬಲಿಗಟ್ಟು (ಕ್ರಿ). ಬಲಿಯಾಗಿ ಕೊಡು; ಆಹುತಿಯಾಗಿ ಅರ್ಪಿಸಂ: ಎಲೆ ಸುಕುಮಾರ ನಿನ್ನ ಸುಕುಮಾರಶರೀರಮನಯ್ಯೊ ಪೆತ್ತರಿಂದಲಸದೆ ಬಂದ ರಾಕ್ಷಸತಪಸ್ವಿಗೆ ಕೇಳ್ಬಲಿಗಟ್ಟಿ ಮಾಂಸಮಂ ಸುಲಿದುಣಲಿಕ್ಕಲಿರ್ದಪರ್ (ಪ್ರಸಪ. ೦೯-೩೬). [ಬಲಿ$_3$ + ಕಟ್ಟು$_1$]

ಬಲಿಗಲ್ಲು, ಬಲಿಕಲ್ಲು (ನಾ). ಬಲಿಯನ್ನು ಇಡುವ ಕಲ್ಲು: ಎಷ್ಟೋ ಸಲ ಹಸಿವೆ ತಡೆಯಲಾಗದೆ . . . ಬಲಿಗಲ್ಲಿನ ಮೇಲೆ ಸುರಿದಿದ್ದ ಅಗಳುಗಳನ್ನು ಹೆಕ್ಕಿ ತಿಂದಿದ್ದೇನೆ (ರೂಮಮ. ೩೩). ಬಲಿಕಲ್ಲು: ಗುಡಿಯ ಸುತ್ತಲೂ ಪೌಳಿ–ಸಂತ್ತಿನ ನಡುವಿನಲ್ಲಿ ಅಲ್ಲಲ್ಲಿ ಬಲಿಕಲ್ಲುಗಳು–ನಾಲ್ಕು ದಿಕ್ಕಿನ್ನೂ ಭಕ್ತರು ಕುಳಿತುಕೊಳ್ಳಲು ಅನುಕೂಲವಾಗುವಂತೆ ಚಾವಡಿಗಳು (ದೇವಹಂ. ೩೦). [ಬಲಿ$_3$ + ಕಲ್ಲು (<ಕಲ್$_3$)]

ಬಲಿಗಿ 'ಬಲಿಗೆ' ನೋ.

ಬಲಿಗುಡು 'ಬಲಿಗೊಡು' ನೋ.

ಬಲಿಗೂಟ್ (ನಾ). ಬಲಿಯಾಗಿ ಅರ್ಪಿಸುವ ಆಹಾರ; ಆಹುತಿಯಾಗಿ ಕೊಡುವ ಅನ್ನ: ಅಗ್ಗಿಗೊಂಡದೊಳ್ ಪೊತ್ತುವ ನಱನೆಯ್ಯ ನೆಲ್ಲರಳ ಬಲಿಗೂಟ, ಸಿರಿಕಂಡಸೆಕ್ಕೆಯ ಸವುದೆಯ ಕಮಱಿಂ ಪೊರೆದೆಲ್ಲೆಡೆಯೊಳೆತ್ತಂ ಪಳಂಚಲೆವೆಲರಿಂ . . . ತಪೋವನಮೊಂದು ಕಣ್ಗೊಳಿಸಲೊಡಂ (ರಾಮಾಕ್ಯ. ೬೪-೯). [ಬಲಿ$_3$ + ಕೂಟ್$_1$]

ಬಲಿಗೆ, ಬಲಗಿ, ಬಲಿಗಿ, ಬಲ್ಲಗ, ಬಲ್ಲಗಿ, ಬಿಲಿಗಿ (ನಾ). ಒಂದಂ ಬಗೆಯ ಮರ: ಕೆಲವು ಕಡೆಗಳಲ್ಲಿ ತೇಗ, ನಂದಿ, ಹೆಬ್ಬಲಸು, ಬಲಿಗೆ . . . ಮುಂತಾದ ಗಗನಚುಂಬಿತವೃಕ್ಷಗಳಿದ್ದರೆ ಕೆಲವು ಕಡೆಗಳಲ್ಲಿ . . . ಗಿಡಬಳ್ಳಿ ಪೊದೆಗಳಿದ್ದವು (ಪಂಜಪಂ. ೨). ಬಲಗಿ: ಸಹ್ಯದಾಗುಂಬೆಯಂಟ

ಯೊಳ್ ಬಲಗಿಯ ಬೃಹತ್ತರುಶ್ರೇಣಿ ಕಿಕ್ಕಿರಿದವೋಲ್ ಪಂಕ್ತಿಪಂಕ್ತಿ ಸ್ತಂಭಗಳ್ . . . ಇರ್ದುವಗಣಿತಂ (ಕ್ರೀಡಾಭಾ. ೧೩೪-೨೩೫); ಬಲಗಿಯ ಮರದಂತೆ ತಲೆಯೆತ್ತಿ ನೇರಾಗಿ ನೋಡು ನೀಲಾಕಾಶದತ್ತ (ಇಂಪಾಶ. ೦೩೬-೬೯). ಬಲಿಗಿ: ಬಲ್ಲಗಿ, ಬಲಿಗಿ, ಕಿರ್ಬಲ್ಲಿ (ಪ್ರಾಶಿಗಿ. ೬೩-೦೨೬೯). ಬಲ್ಲಗ : "ಬಲಿಗೆ, ಬಲಿಗಿ, ಕಿಬ್ಬಲ್ಲಿ, ಬಲ್ಲಗಿ, ಬಲ್ಲಗ" (ಸಸ್ಕೃಪ. ೦೦೬). ಬಲ್ಲಗಿ : ನಾಗಸಂಪಿಗೆ, ಬಲ್ಲಗಿ, ಬಂದಿಗೆ . . . ಜಂಡು, ಬದಿರು (ಪಪ್ಪುಸು. ೨೩೮). ಬಲಿಗಿ : "ಬಲಿಗೆ, ಬಲಿಗಿ . . . ಬಲ್ಲಗ" (ಸಸ್ಕೃಪ. ೦೦೬). [ದೇ. ॥ ತುಳು. ಬಲಿಗೆ]

ಬಲಿಗೆದಱ್, ಬಲಿಗೆದಱು (ಕ್ರಿ). ಆಹುತಿಗಾಗಿ ಬಣ್ಣದ ಅನ್ನಮಾಂತಾದುವನ್ನು ಎರಚು: ನಿನ್ನನ್ನೈನೂರ್ತುಂಡುಗೆಯ್ದು ಬಲಿಗೆದರ್ಪೆಂ (ಕಂಪಭಾ. ೧೯-೧೦); ಅಂತೈತುಂದು ಮಣಿಮಕುಟಕಿರಣಮರುಣಕುಸುಮಮಂ ಪದಪೀಠದೊಳ್ ಬಲಿಗೆದರ್ದಂತಾಗೆ ಬಾಗಿ ಪೊಡವೊಟ್ಟು (ರಾಶಕೇ. ೦೯-೩ ಪ). ಬಲಿಗೆದಱು: ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್ ಪಚ್ಚೆಯ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ ಪಸುರ್ಪೆಸೆವ ನೆಲದೊಳು ಉಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುಮಂ ಕಿಸುಗಾಡ ನೆಲಂಗಳೆಳದಳಿರ ಬಣ್ಣಮಂ ಕೆಯ್ಕೊಂಡು (ಪಂಪಭಾ. ೭-೨೩ ಪ); ಒಡನೆ ಗಜುಱುವ ವಾದ್ಯದಲಿ ಕೆಂಪಡರಿದೋಗರಸಹಿತ ಭೂತಕೆ ಬಡಿಸಿದರು ಮಾಂತ್ರಿಕರು ಬಲಿಗೆದಱಿದರು ದೆಸೆದೆಸೆಗೆ (ಕುಪ್ಪಾಟ್ರೋ. ೯-೩). [ಬಲಿ$_3$+ಕೆದಱ್$_1$]

ಬಲಿಗೆದಱು 'ಬಲಿಗೆದಱ್' ನೋ.

ಬಲಿಗೆಯ್ (ಕ್ರಿ). ಆಹುತಿಯಾಗಿ ಅರ್ಪಿಸು; ಬಲಿಕೊಡು: ದುಶ್ಶಾಸನ ರಕ್ತಪಾನದೊಳೆ ಸೊರ್ಕಿದ ಪಾತಕನಂ ಪೊರಳ್ಚಿ ಕೊಂದೀ ಸಮರಾವನೀತಳದೊಳು ಬಲಿಗೆಯ್ವಿನವೊಲ್ಲೆನಲ್ತೆ (ಪಂಪಭಾ. ೦೩-೦೯); ಕುತ್ತು ಕುತ್ತು ಬಲಿಗೆಯ್ ಬಲಿಗೆಯ್ ಪೆಜವೆಣ್ಗೆ ಸೋಲ್ವ . . . ಕಳ್ವ ಕಳ್ಳರೊಳ್ ನುಡಿವಱಿಯಾದನೆಂದು ನವನಾರಕರಂ ಪಱಿದೆಯ್ದು ನಾರಕರ್ (ಅಪಪು. ೧೦-೧೦). [ಬಲಿ$_3$ + ಕೆಯ್$_1$]

ಬಲಿಗೊಡು, ಬಲಿಕೊಡು, ಬಲಿಗುಡು (ಕ್ರಿ). ೧. =ಬಲಿಗೆಯ್: ಅಂದು ಕೊಲೆಯಿಂ ಸತ್ತ ಹರಿಗೆ ಬಲಿಕಾರ್ಯಕೆ ಧನಂ ದೊರಕದಿರೆ ಫಲ್ಗುನಂ ಕಂದಮೂಲಫಲವೃಂದದಿಂ ಬಲಿಗೊಟ್ಟು ಸಗ್ಗಕೆಯ್ದಿದಂ (ಪದ್ಮಚಾ. ೦೦-೦೩೪ ; ಆ ದೈತ್ಯನನು ತನ್ನಾಯುಧಕೆ ಬಲಿಗೊಟ್ಟು ಬಳಿಕ ಸ್ಥಾಯಿಧರ್ಮವ ಬಲಿದು ಕೊಟ್ಟನು ದುಂದುಮಾರನೃಪ (ಕುಪ್ಪಾಶಿ. ೦೯-೩೯); ಅಷ್ಟದಿಕ್ಪಾಲರ್ಗೆ ಪೂಜೆಯಂ ಮಾಡಿ ಚೌಷಷ್ಟಿಯೋಗಿನಿಯರ್ಗೆ ಬಲಿಗೊಟ್ಟು (ಶೃಂಬಣಾ. ೩-೬೨). ಬಲಿಕೊಡು : ೧. ಒಂದು ದ್ವೀಪದಲ್ಲಿ ಹಿಂದೂಸ್ತ್ರೀಯರು ಗಂಗಾನದಿಗೆ ಪ್ರೀತಿಯಾಗಿ ತಮ್ಮ ಚಿಕ್ಕ ಮಕ್ಕಳನ್ನು ಬಲಿಕೊಡುತ್ತಿದ್ದರು (ಭೂಗೋಳ. ೬೬). ೨. (ಆಲಂ) ಕಪ್ಪಕ್ಕೆ ಸಿಕ್ಕಿಸಂ ; ತೊಂದರೆಗೊಳಗುಮಾಡು : ಸಾಲ ಏರಿದ ಹೊತ್ತಿನಲ್ಲಿ ಆಶ್ರಯವಿತ್ತು ಸಾಕಿದ ಆನಂದನನ್ನೇ ಬಲಿಕೊಡಲೂ ಅವರು ಹೇಸಲಿಲ್ಲ (ಮಸಗ. ೦೬೩) ; ಇದಕ್ಕಾಗಿ ಪ್ರಸಂಗ ಬಂದರೆ ಕರ್ತವ್ಯ ದಕ್ಷರಾದ ನಿಮ್ಮನ್ನು ಬಲಿಕೊಡಬೇಕಾಗುವದು (ಕುಂಳುಮ. ೯೯). ಬಲಿಗುಡು : ೧. ಇಱುವ ಬಲಿಗುಡುವ ಪೈರಂದಱುವುದಂ ಸೀಳ್ವ ಪೋಟ್ವ ಪರಪುವ ಗೊಟ್ಟಂಗೊಱೆವಗುಟ್ಟು ನಟ್ಟು ಪರಿಪುವ ಪೆಱವುಮಂ ಗರ್ವಪ್ಪ ಚಿತ್ರವಿಧವಧಯಿಂದಂ . . . ಪುಟ್ಟುಗುಂ ವಿಭಂಗಜ್ಞಾನಂ (ಶಾಂಪಭಾ. ೭-೯೦). [ಬಲಿ$_3$+ಕೊಡು$_1$]

ಬಲಿಗೊರಡು (ನಾ). ಬಲಿಯನ್ನು ಕೊಡಲು ಉಪಯೋಗಿಸುವ ಕೊರಡು,—ಮರದ ದಿಮ್ಮಿ : ತೋಂಡಾಂಗುಟ್ಟಿ . . . ಕೆಂಗಲ್ವಣ್ಣದ ಬಲಿಗೊರಡನ್ನೆಳೆದುಯ್ದು ನರಶರಭನ ದೃಷ್ಟಿಗನ್ವಯಿಸಿ ಎತ್ತಿ ನಿಲ್ಲಿಸಿ (ಮಂತ್ರಶ. ೦೦೯-೦೩). [ಬಲಿ$_3$ + ಕೊರಡು$_1$ (<ಕೊಱಂಡು)]

ಬಲಿಗೊಲಿಸು (ಕ್ರಿ). ಬಲಿಯಾಗಿ ಕೊಲ್ಲಿಸು ; ಆಹುತಿ ಕೊಡು : ಸಾಯಿಸು : ಈ ತನ್ನಯ ಮೂರ್ಖತೆಯ ದುರ್ಣಯದಿಂದ ಆವಿರ್ಭವಿಸಿ ವಿಜೃಂಭಿಸುತ್ತಿರುವ ವಿಷಮಸೃಷ್ಟಿಯ ಕಣ್ವಕರನ್ನಳ್ಳಾಡಿಸುವುದಕ್ಕೆಂದು ಲೆಕ್ಕವಿಲ್ಲದ ಮಹಾಸೃಸ್ತಗಳನ್ನೆತ್ತಿಯೆತ್ತಿ ಬಲಿಗೊಲಿಸುತ್ತ. . . ಕೋಳ್ದೆರುತ್ತಿರುವನು (ಪಂತ್ರಕ. ೬೯-೩). [ಬಲಿ$_3$ + ಕೊಲಿಸು]

ಬಲಿಗೊಳ್, ಬಲಿಗೊಳ್ಳು (ಕ್ರಿ). ೧. ಆಹುತಿಯಾಗಿ ತೆಗೆದುಕೊಳ್ಳು; ನಾಶಮಾಡು : ಎಲೆ ಎಲೆ ಪಂದಿಪಂದಿ ಮಿಗೆ ಬಂದುದು ಬಂದುದು ಭಿಲ್ಲರೆಲ್ಲರಂ ಬಲಿಗೊಳಲೆಂದು ಮೃತ್ಯು ಕಿಟರೂಪಮನಾಳ್ದವೊಲ್ (ಕಪಶಂ. ೯-೩). ೨. ಕಾಣಿಕೆಯಾಗಿ ತೆಗೆದುಕೊಳ್ಳು ; ದಾನವಾಗಿ ಪಡೆ : ಆಱಡಿಗೊಂಡು ಮೂಱಡಿಯನಾ ಬಲಿಯಂ ಬಲಿಗೊಂಡು ಭೂಮಿಯಂ ಮೂಱಡಿಯಾಂತು ಮೊಱೆ ಬಳೆದಿತ್ತ ನನಿಕ್ಕಿ ರಸಾತಳಕ್ಕೆ ನಿಂದಾಱಡಿವಣ್ಣದಾಗಸಕೆ ಕಾಲಿಡೆ (ರಾಶಕೇ. ೩-೦೦೦). ಬಲಿಗೊಳ್ಳು : ೧. ಅರಸನೆಲ್ಲಿ ತನ್ನ ಹೆಂಡತಿಯನ್ನು ಬಲಿಗೊಳ್ಳುವನೋ ಎಂದು ಅವನು ಹೆದರಿ ಹಿಪ್ಪೆಕಾಯಿ ಆಗಿಹೋಗಿದ್ದನು (ಪಂಪಾಮ್ಯ. ೬೯). [ಬಲಿ$_3$ + ಕೊಳ್$_1$]

ಬಲಿಗೊಳ್ಳು 'ಬಲಿಗೊಳ್' ನೋ.

ಬಲಿದಾನ (ನಾ). ೧. ಬಲಿಯಾಗಿ ಅರ್ಪಿಸುವಿಕೆ; ಆಹುತಿ : ತ್ಯಾಗ, ಬಲಿದಾನಗಳಿಂದ ಕೂಡಿದ ಧರ್ಮವೇ ನಿಜವಾದ ಧರ್ಮ (ರರ್ಮಸಾ. ೭); ಮೇ ತಿಂಗಳಲ್ಲಿ ಮತ್ತೊಂದು ತಿಕ್ಕಾಟ ನಡೆದು ನಾಲ್ಕು ಮಂದಿಯ ಬಲಿದಾನವಾಯಿತು (ಆತ್ಮಾರ್ಪ. ೦೯೩). [ಸಂ.]

ಬಲಿಧ್ವಂಸಿ (ನಾ). ಬಲಿಚಕ್ರವರ್ತಿಯನ್ನು ನಾಶಮಾಡಿದವನು ; ತ್ರಿವಿಕ್ರಮ ; ವಿಷ್ಣು : "ವಿಷ್ಣುಃ, ನಾರಾಯಣಃ, ಕೃಷ್ಣಃ . . . ವನಮಾಲೀ, ಬಲಿಧ್ವಂಸೀ . . . ಶ್ರೀವತ್ಸಲಾಂಛನಃ ೩೯ ವಿಷ್ಣುದೇವರ ಹೆಸರುಗಳು" (ಸಿದ್ಧಾಂತಿ. ೦೭). [ಸಂ. ಬಲಿಧ್ವಂಸಿನ್]

ಬಲಿನಿಕೇತನ (ನಾ). ಬಲಿಚಕ್ರವರ್ತಿಯ ವಾಸಸ್ಥಾನ ; ಪಾತಾಳ: "ಪಾತಾಳಮೆನಲು ವಡಬಾಮುಖಮೆನಲು ಬಲಿನಿಕೇತನಮೆನಲು . . . ಅಧೋಭುವನಮೆಂದೆನಲು ಪಾತಾಳಲೋಕಕ್ಕೆ ನಾಮಂ" (ಪಂಗರಾ. ೦೦೬-೦). [ಸಂ.]

ಬಲಿಪ 'ಬಲಿಪ್ಪ' ನೋ.

ಬಲಿಪಶು (ನಾ). ಆಹುತಿಯಾಗಿ ಅರ್ಪಿಸುವ ಪ್ರಾಣಿ : ಹೆಸಾಯ್ದನ ನಿರೂಪಣೆಯಲ್ಲಿ ಬರುವ ಯಜ್ಞದಲ್ಲಿ ಬಲಿಪಶುವಿನ ಪಾಲು ಹಂಚಿಕೆಯ ಕ್ಷುದ್ರವಿರಸಸಂದರ್ಭವನ್ನು . . . ಈಸ್ಕಿಲಸ್ ಕೈಬಿಟ್ಟಿದ್ದಾನೆ (ಪ್ರಮೆತ್ರ. VI, ಪೀಠಿಕೆ). [ಸಂ.]

ಬಲಿಪಾಡ್ಯ (ನಾ). ಕಾರ್ತಿಕಮಾಸದ ಮೊದಲನೆಯ ದಿನ ; ಕಾರ್ತಿಕ ಶುದ್ಧಪ್ರತಿಪದೆ ಮತ್ತು ಅಂದು ಆಚರಿಸುವ ಹಬ್ಬ; ಈ ದಿವಸ ವಿಷ್ಣುವು ವಾಮನಾವತಾರದಿಂದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿದನೆಂಬ ಪೌರಾಣಿಕಕಥೆ ಸುಪ್ರಸಿದ್ಧವಾಗಿದೆ : ಬಲಿಪಾಡ್ಯದಾ ದಿನವು ಬಂದಿಹುದು ನೋಡಿ. ಬಲಿದಿತ್ತ ನಿಮ್ಮ — ಬಾಲಕರ ಕಾಪಾಡಿ. (ಕಪಶಂ. ೦೬-೩); ದಕ್ಷಿಣಭಾರತದವರು . . . ಅಮಾವಾಸ್ಯೆ, ಬಲಿಪಾಡ್ಯಗಳ ದಿವಸ ತಾತ್ಪೂರ್ತಿಕವಾಗಿ, ಆದರೂ ಬೆಡಗಿನಿಂದ ಅಂಗಡಿಪೂಜೆ ಮಾಡುವುದುಂಟು (ಶಾಹಬ್ಯ. ೦೯೩). [ಬಲಿ$_3$ + ಪಾಡ್ಯ (< ಪಾಡಿವ)]

ಬಲಿಪಾಡ್ಯಮಿ (ನಾ). = ಬಲಿಪಾಡ್ಯ : ಕಾರ್ತಿಕಶುದ್ಧಪ್ರತಿಪದೆಯನ್ನು 'ಬಲಿಪಾಡ್ಯಮಿ' ಎಂದು ಕರೆದು, ಹಬ್ಬವನ್ನು ಆಚರಿಸುತ್ತೇವೆ (ಕೂಅ). [ಬಲಿ$_3$ + ಪಾಡ್ಯಮಿ]

ಬಲಿಪೀಠ (ನಾ). (ದೇವಾಲಯಗಳ ಬಳಿಯಿರುವ, ಸಾಮಾನ್ಯ

ವಾಗಿ ಕಲ್ಲಿನಿಂದ ನಿರ್ಮಿಸಿದ ; ಬಲಿಯನ್ನು ಅರ್ಪಿಸುವ ಜಗಲಿ ; ಆಹುತಿಯಾಗಿ ಕೊಡುವ ದ್ರವ್ಯಗಳನ್ನು ಇಡುವ ಸ್ಥಾನ : ಬಲಿ ಪೀಠದಶನವಂ ಕೊಳೆ ನೆಲನಂ ಸೋಂಕುತ್ತ ಬರಲು ಪದ್ದಿನ ಪಕ್ಕದಿ ನೆಲಸಿರ್ದ ಗಾಳಿಯಿಂದಂ ಚಲಿಸಿತು ರಜವದುವೆ ಪಕ್ಷಿಗಧಿಪತಿಯಾದುದು (ಪಸ್ನಾಂ. ೬-೬೬); ದೇವತೆಯ ಬಲಿಪೀಠಗಳನ್ನು ಗುಡಿಸುವವರಿಲ್ಲದೆ ಒಪ್ಪಿಸಿದ ಹಿಂದಿನ ಬಲಿಗಳು ಕೊಳೆತು ನಾರುತ್ತಿದ್ದುವು (ಕಲ್ಲಿಕಾ. ೦೮). [ಸಂ.]

ಬಲಿಪುಷ್ಪ (ನಾ). ಬಲಿಯಾಗಿ ಅರ್ಪಿಸಿದ ಆಹಾರಪದಾರ್ಥಗಳಿಂದ ಪುಷ್ಪವಾದುದು ; ಕಾಗೆ : "ಅರಿಷ್ಟಃ, ಕರಟಃ, ಕಾಕಃ, ಬಲಿಪುಷ್ಪಃ, . . . ವಾಯಸಃ —ಈ ೧೦ ಕಾಗೆ" (ಹಲಾಯು. ೪೦-೯೨). [ಸಂ.]

ಬಲಿಪೂಜೆ (ನಾ). ೧. ಆಹುತಿಯನ್ನು ಅರ್ಪಿಸಿ ಮಾಡುವ ಪೂಜೆ : ಬಲಿಪೂಜೆ ಆಗುವಾಗ ಅವರ ಕೈ ಏಕೋ ನಡುಗುತ್ತಿತ್ತು (ದೇವಹಂ. ೨೪). ೨. ಕಾರ್ತೀಕಶುದ್ಧ ಪ್ರತಿಪದೆಯಂದಂ ಆಚರಿಸುವ ಬಲಿಚಕ್ರವರ್ತಿಯ ಹಬ್ಬ : ಬಲಿಪೂಜೆಯಂದು ವಿಜೃಂಭಣೆಯಿಂದ ಲಕ್ಷ್ಮಿಯನ್ನು ಪೂಜಿಸುತ್ತಾರೆ (ರೂಢಿ). [ಸಂ. ಬಲಿಪೂಜಾ]

ಬಲಿಪ್ಪ, ಬಲಿಪ (ನಾ). ಒಂದು ಬಗೆಯ ಶ್ರೇಷ್ಠಜಾತಿಯ ಹುಲಿ : 'ಅಡ್ಡಬಲಿಪ್ಪ' ಪರಾ. ಬಲಿಪ : ಅದು ಬಹುಶಃ ಬಲಿಪ ಇರಬೇಕು. ನಿಮ್ಮ ಈ ಚಿಲ್ಲರೆ ಆಯುಧಗಳಿಂದ ಅದರ ಪ್ರಾಣ ತೆಗೆಯಲಿಕ್ಕೆ ಹೋದರೆ ನಾಳೆ ಊರಿಗೆ ಊರನ್ನೇ ಅದು ತಿಂದು ಪಡ್ಡ ಮಾಡೀತು (ಪರಾಪ. ೫೨). [←ತುಳು. ಬಲಿಪ್ಪೆ, ಬಲಿಪೆ]

ಬಲಿಪ್ರತಿಪದೆ (ನಾ). = ಬಲಿಪಾಡ್ಯ : ಕಾರ್ತೀಕಶುದ್ಧ ೧ ನೆಯ ತಿಥಿ ಬಲಿಪ್ರತಿಪದೆ (ಶಾಹಬ್ಬ. ೦೪೬) ; ದೀಪಾವಳಿಯಲ್ಲಿ ಬಲಿಪ್ರತಿಪದೆಯಿದೆ (ಶಾಹಾಶಾ. ೭೫). [ಸಂ. ಬಲಿಪ್ರತಿಪದಾ]

ಬಲಿಬಂಧಕ (ನಾ). = ಬಲಿಧ್ವಂಸಿ : ವಿಕಳಬಲನಿವನೇನು ಬಾಳಾಂಬಕನೊ ಬಲಿಬಂಧಕನೋ ಸುರಪಾಲಕನೋ ಫಡಫಡ (ಕುಪ್ಯಾಕ. ೦೨-೫). [ಸಂ.]

ಬಲಿಬಂಧನ (ನಾ). = ಬಲಿಧ್ವಂಸಿ : ದುರ್ಯೋಧನನುಮಾಗಳೆ ಬಂದು ಬಲಿಬಂಧನನ ತಲೆದೆಸೆಯೊಳ್ ಕುಳ್ಳಿರೆ (ಪಂಪಭಾ. ೯-೦೦ ಪ); ನಾರಾಯಣ ತೇ ನಮೋ ನಮೋ . . . ಬಲಿಬಂಧನ ಗೋವರ್ಧನೋದ್ಧಾರ ನಳಿನೋದರ ತೇ ನಮೋ ನಮೋ (ಪುರಂದ. ೩-೪೦-೨). [ಸಂ.]

ಬಲಿಬಂಧಾಕ್ಷಿ (ನಾ). ಒಂದು ಬಗೆಯ ಸಸ್ಯ ; ಹಾವುಮೆಕ್ಕೆ : "ವಾರುಳಿ ಬಲಿಬಂಧಾಕ್ಷಿ [ಶಾಶಾಂ. ಬಲಿಬದ್ಧಾಕ್ಷಿ, ಬಲಿರ್ಬುಧ್ನಾಕ್ಷಿ] ಹಾವುಮೆಕ್ಕೆ ಹಿಡಿಹಿಡಿಕೆ ತ್ರಿಪತ್ರಿಣಿಯೆಂದೆನಿಕ್ಕುಂ" (ಮಂಗರಾ. ೪೪-೪೪). [?]

ಬಲಿಭುಕ್ಕು, ಬಳಿಭುಕ್ಕು (ನಾ). = ಬಲಿಪುಷ್ಪ : "ಕಾಕಂ ಚಿರಾಯು ಬಲಿಭುಗ್ವಾಯಸಂ . . . ಕರಟಮೆನೆ ಕಾಗೆ" (ಮಂಗರಾ. ೫೦-೪); ಬಲಿಬುಗ್ವ್ರಜಕ್ಕೆ ಬಲಿಯಂ ತಾನಿಕ್ಕುವಳ್ (ಕಾದಂಪು. ೩೬೭); ಆ ಮಹಾ ಕಾಳಿಯೆನಿಪ್ಪ ದೇವಿ ಬಲಿಭುಕ್ಪಗರೂಪಿನೊಳೆಯ್ದುವಂದು ತದ್ಬಾಲನ ಕಣ್ಗಳಂ ನಿಶ್ಚಿತಚಂಚುವಿನಿಂದಿಱಿಯಲ್ಕೆ ಸಾರ್ವುದುಂ (ಮಹಾಪೇ. ೬-೦೨). ಬಳಿಭುಕ್ಕು: "ಅರಿಷ್ಟಃ, ಕರಟಃ . . . ಬಳಿಭುಕ್, ಧ್ವಾಂಕ್ಷಃ, ಚಿರಜೀವೀ, ವಾಯಸಃ —ಈ ೧೦ ಕಾಗೆ" (ಹಲಾಯು. ೪೦-೯೨) ; ಬಳಿಭುಗ್ಗೃಧ್ರ ಕದಂಬಮಂಬರದೊಳುಗ್ರಶ್ವಾಪದಶ್ರೇಣಿ ಭೂತಳದೊಳ್ ನರ್ತಿಸೆ . . . ಪಿಂಗಳಕಂ ಗವಾಧಿಪತಿಯಂ ಕೊಂದಂ ಭುಜಾದಂಡದಿಂ (ಪಂಪಕಂ. ೦೬೬-೦೬). [ಸಂ. ಬಲಿಭುಜ್]

ಬಲಿಭೋಜನ (ನಾ). = ಬಲಿಪುಷ್ಪ : ತೀವಿದ ತಾರಗೆದುತ್ತುಗಳ್ಗೆ ಮೇಲುರವಣಿಸುತ್ತೆ ಬರ್ಪ ಬಲಿಭೋಜನಜಾಲವೊ ಮರ್ಬಿನೇಳ್ಗೆಯೋ (ರಾಪಕೇ. ೦೦-೨೧). [ಸಂ.]

ಬಲಿಭೋಜಿ (ನಾ). = ಬಲಿಪುಷ್ಪ : ಪೋದರಂದನಿಬರುಮೊಂದೆ ಬಿಲ್ಗಗಿದು ತತ್ಪಚರರ್ ಬಲಿಭೋಜಿರಾಜಿವೋಲ್ (ಪೇಮಿಪು. ೦೦-೬೭). [ಸಂ. ಬಲಿಭೋಜಿನ್]

ಬಲಿಮಥನ (ನಾ). = ಬಲಿಧ್ವಂಸಿ : ಬಲಿಮಥನ ಫಲುಗುಣರು ಸಹಿತಗ್ಗಳೆಯನೇಕಾಂತದಲಿ . . . ಸೀಳಿದು ಬಿಸುಟನಾ ಭೀಮ (ಕುಪ್ಯಾಸ. ೨ ಸೂಪಪ). [ಸಂ.]

ಬಲಿಮಿಂಡ (ನಾ). ಬಲಿಷ್ಠನಾದ ವೀರ ; ಅತಿಪರಾಕ್ರಮಿ : ಸ್ವಸ್ತಿ ಶ್ರೀನೊಳಂಬಾದಿಯರಸ ಪೃಥುವೀರಾಜ್ಯಂಗೆಯೆ ಪುತ್ತೂರ ತೊಱು ಕೊಳುಳ್ ಪೆತ್ತೋಂ ಬಲಿಮಿಣ್ಡನಾ ಶೆಟ್ಟಿಯರ ಮಗನರಪಟ್ಟಂಗಟ್ಟಿ (ಎಕ. X, ಕೋಲಾರ. ೨೫೫-೪ ; ಸು. 815). [ಬಲ್ಲಿ+ಮಿಂಡ]

ಬಲಿಮುಖ, ಬಳಿಮುಖ (ನಾ). ಮುಖದ ಮೇಲೆ ನೆರಿಗೆಗಳುಳ್ಳ ಪ್ರಾಣಿ ; ಕಪಿ ; ಕೋತಿ : "ಪ್ಲವಗಂ ಕಪಿ ಮರ್ಕಟಕಂ ಪ್ಲವಂಗಮಂ ಬಲಿಮುಖಾಹ್ವಯಂ ವಾನರಂ" (ಪಸ್ತುಕೋ. ೪೦-೬) ; ಸಕಲಕಪಿಸಮಿತಿವೆರಸಹಿತಕುಲಾಚಲಚಕ್ರ ಜಾರದಂಭೋಳಿ ಜಗತ್ಪ್ರಕಟೋದ್ಯನ್ಮಹಿಮನೆನಿಸುವ ಕಕುದ್ಬಲಿಯೆನಿಪ ಪೆಸರ ಬಲಿಮುಖನಿರ್ಪಂ (ಪಂಪಕಂ. ೨೭೭-೭) ; ಬಹುಕಾನನಂ ಗಳಲಿ ಬಲಿಮುಖರ ರೂಪುಗಳನವರುಱ್ ತಳೆದರಾಳ್ದನ ನೇಮದಲಿ (ಕೊಕರಾ. ೦-೬-೭೦). ಬಳಿಮುಖ : ಬಳಿಮುಖಧರ್ಮಬಹಿರ್ಮುಖ ಚಳಮತಿ ನೀಂ ರೌದ್ರಭಾವಮಂ ತಳೆದಿಂತೇಕೊಳಪುಗುವೆ ಘೋರ ದುರ್ಗತಿಗಳೊಳ್ (ಪೇಮಿಪು. ೩-೭೫). [ಸಂ.]

ಬಲಿಮುಖಕೇತನ (ನಾ). ೧. ಕಪಿಧ್ವಜ. ೨. ಕಪಿಗಳಲ್ಲಿ ಶ್ರೇಷ್ಠನಾದವನು ; ಸುಗ್ರೀವ : ಬ[ಶಾಶಾಂ. ವ]ಲಿಮುಖಕೇತನನಂ ಚಕಿತಲೋಚನಂ ರತ್ನಜಟಿ ನಿಜಪ್ರಾಣಭಯಾಕುಲಚಿತ್ತಂ ಪೌಲಸ್ತ್ಯಂ ಕೊಲಲಟ್ಟಿದ ತೀಕ್ಷ್ಣಪುರುಷನೆಂದೀಕ್ಷಿಸಿದಂ (ಪಂರಾಮಾ. ೦೦-೫೦). ೩. ಕಪಿಧ್ವಜವುಳ್ಳವನು ; ಅರ್ಜುನ. [ಸಂ.]

ಬಲಿಮುದ್ರೆ (ನಾ). ಬಲಿ ಕೊಡುವ ಪ್ರಾಣಿಯ ಮೈಮೇಲೆ ಹಾಕುವ ಮುದ್ರೆ.—ಗುರುತು : ಬಲಿಮುದ್ರೆ ಕೊಟ್ಟರೂ ಸುಲಿಗೆ ತಪ್ಪಲಿಲ್ಲ (ಗಾದೆ). [ಸಂ. ಬಲಿಮುದ್ರಾ]

ಬಲಿಮೂರ್ತಿ (ನಾ). (ಕರಾ) ಉತ್ಸವಮೂರ್ತಿ; ಉತ್ಸವದೇವರು. [ಸಂ.]

ಬಲಿಯ (ನಾ). ಬಲಿಷ್ಠನಾದವನು ; ಶಕ್ತಿಶಾಲಿಯಾದವನು.

ಬಲಿಯರ ಭೀಮ = ಬಲಿಷ್ಠರಿಗೆ ಭಯಂಕರನಾದವನು ; ಅತಿಪರಾಕ್ರಮಿ ; ಒಂದು ಬಿರುದು : ಶ್ರೀಮನುಮಹಾಮಣ್ಡಳೇಸ್ವರ ತ್ರಿಪುರಾಧೀಸ್ವರ . . . ವೈರಿಗಜಕೇಸರಿ ಬಲಿಯರ ಭೀಮ ಸಂಗ್ರಾಮರಾಮ ಮಲೆಪರ ನಂದನವನಂ (ಎಕ. I, ೬೨-೦೦; 1095). ℙ ಇಲ್ಲಿ 'ಬಲಿಯರ' ಎಂಬುದಕ್ಕಿಂತ 'ಬಲಿವರ' (=ಎದುರುಬೀಳುವವರ) ಎಂಬುದು ಸೂಕ್ತವಾದುದೇ ? [ಬಲ್ಲಿ$_1$ (<ಬಲ್$_1$)+—ಅ$_7$]

ಬಲಿಯಿಕ್ಕು (ಕ್ರಿ). = ಬಲಿಗೆಯ್ : ದಳಪತಿಯಾ ಕಾರ್ಯದಿರವ ನಿನ್ನಯ ಪಾದನಳಿನಕ್ಕೆ ಬಿನ್ನೈಸೆಂದು ಬಳಿಕೆನ್ನ ಕಳುಪಿದ ಚಿತ್ತೈಸಿ ರಿಪುಪಾಯದಳವ ಭೂತಕೆ ಬಲಿಯಿಕ್ಕು (ಕಂಪಪಿ. ೦೦-೦೨೨). [ಬಲ್ಲಿ+ಇಕ್ಕು]

ಬಲಿಯಿಸು, ಬಲಿಸಂ (ಕ್ರಿ). ೧. ಬಲಪಡಿಸಂ ; ಬಿಗಿಗೊಳಿಸಂ ; ಭದ್ರಪಡಿಸಂ : ಕುಮ್ಮಟವನು ಬಲಿಯಿಸು ಹೊಸಮಲೆಗದು ನೆಮ್ಮುಗೆ ನೇಮಿಯ ಗೆಲ್ದ ಹಮ್ಮ ಬಿಡಿನ್ನು ತುರುಕರು ಬಂದರೆ ನಿನಗುಮ್ಮಳವನು ಮಾಡದಿಹರೆ (ಕುರಾಸಾಂ. ೩೦-೩೦). ೨. ಸ್ಥಿರಪಡಿಸಂ ; ಸ್ಥಾಪಿಸಂ ; ನೆಲೆಗೊಳಿಸಂ : ಮಲೆತಿದಿರಾಂತು ನಿಲ್ವ ಚಿಕದೇವನ ಚಿಲ್ವಿಕೆಗೊಂಡ ತಾಣಕಂ ಕಲೆದಳೆದೊಳ್ಮೊಗಂ ಕದುಬದೆಬ್ಬಱೊಳೊಚ್ಚತಮಿರ್ಪ ದಿಟ್ಟಿ

ಪೊಂಬಲಗೆಯ ಸಾರ್ದೀತಿಪೊಲಿದಿರ್ದ ಪೇರೆರ್ದೆಯಂ ನಿರೂಪಕರ್ ಬಲಿಯಿಸಿ ಚಿತ್ರದೊಳ್ ನೆನೆವರಾ ಮಧುರಾಪುರಮಲ್ಲಲೀಲೆಯಂ (ಕಾವ. ೪೯–೦೬). ೩. ದ್ರವಪದಾರ್ಥವನ್ನು ಚೆನ್ನಾಗಿ ಕಾಯಿಸಿ ಗಟ್ಟಿಯಾಗುವಂತೆ ಮಾಡು; ಅಟ್ಟಿಸು : ಹಿರಿದಾಗಿ ಬಲಿದ ಬಾಳೆಯ ಕಾಯ ಸುಟ್ಟದಱ ತಿರುಳುಮಂ ತೆಗೆದು ಚಿಕ್ಕದಕೆಯಂದದೊಳು ಕತ್ತರಿಸಿ ಬಲಿಯಿಸಿದ ಹಾಲು ಮತ್ತದಱ ತೆಱದಿ ಕುಯ್ದು ಬಾಳೆಯ ಕಾಯನು ಬೆರಸಿ (ಸೂಕಥಾ. ೪-೬೪); ನೀರ ಬಲಿಯಿಸ ಬಲ್ಲ, ಪಿಮರುಱಿಯ ಉರಿಸ ಬಲ್ಲ, ಉರಿಯ ಕೋಡಿಸ ಬಲ್ಲ ಸಾಮರ್ಥ್ಯವುಳ್ಳ ಕುಟಣಿತನದ ವಿದ್ಯಾಪರಿಣತೆ ಸಂಗಾಯಿ (ಪಂಚಾಂ. ೬೭). ೪. ವೃದ್ಧಿಗೊಳಿಸು ; ಬೆಳೆಸು ; ಹೆಚ್ಚಿಸು : ರಸದಿಂದ ಪುಟ್ಟಿಸಿ ಧಾವದಿಂ ಬಲಿಯಿಸಿ ಪೊಸಬಗೆವೆತ್ತಲಂಕೃತಿಯ ಎಸಕದಿಂ ಬಳೆಯಿಸಿ ಕೃತಿಯೆನಿಸುವೆನಿದ ರಸಿಕರು ಮೆಚ್ಚುವಂದದಲಿ (ಭುಜಬಾಂ. ೦–೧೦) ; ಸಂಸಾರಕ್ಕೆ ಸಂತಾನವೇ ಸೂರ್ಯ, ಅವರಿಂದಲೇ ಎಲ್ಲ ಆನಂದಕ್ಕೂ ಜೀವ ಎಂಬುದು ಅರಿವಾಗಿ, ಆ ಅರಿವು ಆಕೆಯ ಕೊರಗನ್ನು ಮತ್ತಷ್ಟು ಬಲಿಯಿಸಿತು (ಕರಂಜಾ. ೦೩). ೫. ಹಾಳಾದುದನ್ನು ಸರಿಮಾಡಿಸು,—ದುರಸ್ತುಗೊಳಿಸು : ಆ ಜೀರ್ಣವಾದ ಮರವೆಸಸನು ಬಲಿಯಿಸೆಂದು ಹೇಳಿದಲ್ಲಿ ಅವರ ಬೆಸದಿಂದ ಅಧಿಕಾರಿ ರಂಗಂಣನವರು ಆ ಸುಖಿರದ ಮರ ಮೆಸನಂ ಜೀರ್ಣವಾಯಿತೆಲ್ಲವನೂ ಬಲಿಯಿಸಿ ಬಿದ್ದ ಇಟ್ಟಿಗೆ ಎಲ್ಲವನೂ ಹೊಡಿಸಿದರು (ಎಕ್.ವಿ. ಕಂಬಿಕರು. ೨೪ ಸ; 1298). **ಬಲಿಸು** : ೧. ಒಳಗೆ ನೀ ಕಾದುವೊಡೆ ದುರ್ಗವ ಬಲಿಸು ಬವರಕೆ ಹಿಂದುಗಳೆಯದೆ ನಿಲುವ ಮನ ನನಗಿಗಲುಂಟೇ (ಭಾಷ್ಯ. ೩-೦೨) ; ಬಲಿಸು [ಹಾಣಾಂ. ಬಲಿಯಿಸು] ದುರ್ಗವ ಬೇಗ ಬರಿಸು ಸಂವರಣೆಯ ಸಲಿಸು ಸುಖಿರ ಸಲುಗೆಯನು (ಭಾರಾಸಾ. ೩೦–೩೩). ೨. ದಡಿಯು ಬಲಿಸುವ ಗುಳವ ಱಿಂಚಿಯು ಗದಡಿಸುವ ಬಲುಗಿಲ ಗಾಲಿಯ ತೊಡಿಸುವುತ್ಸಹವಾಯ್ತವರ ಪಾಂಡವರ ಬೀಡಿನಲಿ (ಭಾಷ್ಯ. ೦೦–೦೨). ೪. ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ ತುಂಟತನಗಳ ಬಲಿಸೋದು ರೊಕ್ಕ (ಕುರಂದ. ೨-೪೬–೨); ತಾಟಿ ಗಂಟಿಕ್ಕಿ ಸಂಧಿಗಳನೆಸಗುವ ಮುಳಿಯೆ ವೇಟಗೊರ್ವನನಱಿಸಿ ಸೊಗಸು ಬಲಿಸುವ ಚಾರುಚೇಟಿಯರ್ಚಲಿಸುವರನಂಗಶಬರನ ಬೇಂಟೆದೋಹಿನ ಮೃಗಂಗಳಂತೆ (ಕೃಪಾಪಾ. ೬-೩೭); ವೈರವ ಬಲಿಸದ ಬಱಿದೆ ಪಳಿಯದ ಕೊಲೆ ಬೈಗಳಿಂದ ಕೋಟಲೆಗೊಳಿಸದ ಸತ್ಕುಲಕೀವುದು ಕುವರಿಯನು (ಹರಾ. ೩-೧೩).

[ಬಲಿ$_1$ (<ಬಲ್$_1$)+–ಇಸು$_3$]

ಬಲಿರಿಪು, ಬಳಿರಿವು (ನಾ). ಬಲಿಚಕ್ರವರ್ತಿಯ ವೈರಿ ; ಕೃಷ್ಣ : ಬಲಿರಿವು ಬಾಣಾವಳಿಯಂ ಬಲವೈರಿಯ ಬಲದ ಮೇಲೆ ಕಱಿದಂ (ಪಗಪ. ೦೩–೬೬). **ಬಳಿರಿವು** : ಬಳಿರಿವುವಿನ್ನೀಕೆಯ ಮದಕಳಸಂಗದ ಸುಖಮನವಳ ಮುಖಿಸಂಗದೊಳೇಂ ತಳೆಗುಮೆ ಎಕ್ಕಿಣಿಯುಂಗುಟದೊಳುಳ್ಳ ಸೊಬಗುಂಟೆ ಸತ್ಯಭಾಮೆಯ ನೊಸಲೊಳ್ (ಪಗಪ. ೦೨–೬೨). [ಸಂ.]

ಬಲಿಮಡಿ (ಕ್ರಿ). (ಆಲಂ) ಶಕ್ತಿಗೊಳಗಾಗು; ಹೊಡೆತ ತಿನ್ನು : ವನಜವದನೆಯ ಬಯಸಿದೊಡೆ ಬಿಲ್ಲಿನಲಿ ಬಲಿವಡೆದುದನು ಕೌರವಜನಪ ಮಱಿದಿರಲಾಗದು (ಭಾಷ್ಯ. ೩-೯). [ಬಲಿ$_3$+ಪಡೆ$_1$]

ಬಲಿವದನೆ 'ಬರಿವದನೆ' ನೋ.

ಬಲಿವಿಡಿ (ಕ್ರಿ). ದೃಢಗೊಳಿಸು ; ಹಿಡಿತಕ್ಕೆ ತಂದುಕೊಳ್ಳು : ಇಂತು ನುಡಿದ ರಾಣೆಯ ನುಡಿಗೇಳಿಯೋರಂತೆ ಚಿತ್ರವ ಬಲಿವಿಡಿದು ಸಂತಸ ಮಿಗೆ ಸಭೆಯೊಳು ರಾಯಗೆ ಮಾಱುತ್ತಂ ಬಿನ್ನವಿಸಿದೆನಿಂತು (ಹರಾ. ೦-೩೦).

[ಬಲಿ$_3$+ಪಿಡಿ$_1$]

ಬಲಿಷ್ಠ (ಗು). ೧. ಅತ್ಯಂತ ಶಕ್ತಿಶಾಲಿಯಾದ: ಅವನ ಬಲಿಷ್ಠ ಬಾಹುಗಳು ಯಾವ ಕಾರ್ಯಕ್ಕೂ ಜಗ್ಗುವುದಿಲ್ಲ (ಕಸಾ). (ನಾ). ೨. ತುಂಬ ಬಲವಾದುದು : ಘೋರಕಾಂತಾರಕ್ಕೆ ಹೋಗಿ ಕುಠಾರದಿಂ ಕಟ್ಟಿಗಗಳಂ ಕೈಯಾರೆ ಕಡಿಸಡಿದೊಟ್ಟಿ ಕಟ್ಟಿ ಬಲಿಷ್ಠವಾಗಿರ್ದ ಕೋರ ಹೊಱಿ ಮುಂ ಹೊತ್ತುಕೊಂಡು (ಪಗಪ್ರ. ೩೦–೨). ೩. ಬಲಶಾಲಿ ; ಶಕ್ತಿವಂತ : ಆ ಸಮಯದೊಳರಿಬಲಸಂತ್ರಾಸಿ ಬಲಿಷ್ಠಂ ತ್ರಿಪೃಷ್ಠನಶ್ವಗ್ರೀವೋದ್ಭಾಸಿ ಪ್ರದೀಪವುಂ ಕಿಡೆ ಬೀಸುವವೋಲನುವರಕ್ಕೆ ಕೆಯ್ಮಾಸುವುದುಂ (ಜಾಂಬವ. ೩-೩೨) ; ಈ ಕೀಚಕನು ವಿಶೇಷ ಬಲಿಷ್ಠನಾಗಿಯೂ ಪರಾಕ್ರಮಶಾಲಿಯಾಗಿಯೂ ಇದ್ದ ಕಾರಣ ಈ ರಾಜ್ಯದ ಮೇಲೆ ಬರುವುದಕ್ಕೆ ಪರರಾಜರು ಹೆದರುತ್ತಿದ್ದರು (ಪಾಪಾಂ. IX, ೬). [ಸಂ.]

ಬಲಿಷ್ಠಗೊಳಿಸು (ಕ್ರಿ). ಪ್ರಬಲಗೊಳಿಸು ; ಶಕ್ತಿಯುತವಾಗುವಂತೆ ಮಾಡು : ಅನುಭವ ಅವರ ಸ್ವಭಾವಧರ್ಮವನ್ನು ಸಾಂದ್ರಗೊಳಿತು, ಬಲಿಷ್ಠಗೊಳಿಸಿತು (ಕಾಗಾ. ೬೬). [ಬಲಿಷ್ಠ + ಕೊಳ್$_1$ + ಇಸು$_3$]

ಬಲಿಸದ್ಮ (ನಾ). = ಬಲಿನಿಕೇತನ : "ಅಧೋಭುವನಂ, ಪಾತಾಳಂ, ಬಲಿಸದ್ಮಂ, ರಸಾತಲಂ, ನಾಗಲೋಕಃ — ಈ ಪಾತಾಳಲೋಕದ ಹೆಸರುಗಳು" (ಕಿಡಾ.೦೩. ೭೦). [ಸಂ. ಬಲಿಸದ್ಮನ್]

ಬಲಿಸು 'ಬಲಿಯಿಸು' ನೋ.

ಬಲಿಸುತ (ನಾ). ಬಲಿಚಕ್ರವರ್ತಿಯ ಮಗ; ಬಾಣಾಸುರ : ಉಡಿವಂತೆ ವಿಜಯವಲ್ಲರಿಯಡರ್ವು ತದ್ಧ್ವನಿ ಪಳಂಚಿ ಕೇಕಿಧ್ವಜವಂದುಡಿದುದು ಸಹಸ್ರಭುಜವನದುಡಿಪಕ್ಕಿದು ಸಂಚಕರವೆನಲ್ ಬಲಿಸುತನಾ (ಪಗಪ. ೦೬-೪); ಇನಿತೆಲ್ಲ ವಾರ್ತೆಯನು ಖಿಳನೋರ್ವನುಳಿದೋಡಿ ಪೋಗಿ ಬಲಿಸುತಗೆ ಪೇಳೆ (ಪ್ರಾಹಾ. ೦೦-೩೯). [ಸಂ.]

ಬಲಿಸೂರ್ಯ (ನಾ). ಗೋಸುಂಬೆ; ಊಸರವಳ್ಳಿ : "ಶಯಾನಕಂ ಬಲಿ[ಹಾಣಾಂ. ಳಿ]ಸೂರ್ಯಮೆನಲು ಗೋಸುಂಬೆ" (ಪುಂಗಡಾ. ೪೯–೦೨). ' ಪ್ರತಿಸೂರ್ಯ' ಪರಾ.

[ಪ್ರಾಸಕ್ಕಾಗಿ ಮಾಡಿಕೊಂಡ ಈ ರೂಪ ಸ್ಪಷ್ಟವಾಗಿಲ್ಲ]

ಬಲಿಸ್ತವನ (ನಾ). [ಜೈನ] ತ್ರಿಸಂಧ್ಯೆಯಲ್ಲಿ ಮಾಡುವ ಜಿನಪೂಜೆ : ಜಗತ್ಪ್ರಯಸ್ವಾಮಿಗೆ ಸಂಧ್ಯಾತ್ರಯದೊಳ್ಪೂಜಾಭಿಷೇಕಂಗಳಂ ವಿಧಿ ಸಮೇತದಿಂ ಮಾಡುವ ಪೂಜೆ ಬಲಿಸ್ತವನಂ (ಕ್ರಿಕರ್ಣಾ. ೦೬೦–೦೦). [ಸಂ.]

ಬಲಿಸ್ನಪನ (ನಾ). [ಜೈನ] ಜಿನನಿಗೆ ಮಾಡುವ ಅಭಿಷೇಕ : ಬಲಿ ಸ್ನಪನಮೆಂಬುದು ಮೂಱುಂ ಸಂಜೆಯೊಳ್ ಮಾಬ್ಪ ಜಿನಾಭಿಷೇಕಂ (ಅಪು. ೦೨–೦ ಪ). [ಸಂ.]

ಬಲಿಹರ, ಬಳಿಹರ (ನಾ). =ಬಲಿಧ್ವಂಸಿ : ಬಲಿಹರನ ಚರಣದಂಡದ ತಲೆಯೊಳ್ ಕಱಿಗೊಂಡಬ್ಜ ಬಾಂದೊಱಿಯೆಲರಿಂದೊಲೆದುದು ವಿಷ್ಣು ಕುವಾರನ ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೋಲ್ (ಅಧಗೀ. ೬–೪೪). **ಬಳಿಹರ** : ಎಳೆ ರಸೆಯೊಳಬ್ದುದಂ ಭುಜಬಳದಿಂ ಮುನ್ನೆತ್ತಿ ದಂತೆ ವಿಷಯಾಂಬುಧಿಯೊಳ್ ಮುಟ್ಟುಗಿರ್ದೆಮ್ಮಯ್ದುರುಮಂ ಬಳಿಹರ ಪಿಡಿದೆತ್ತಲೆಂದು ಬಂದ್ಯೆ ಬರವಂ (ಪಂಚಕಾ. ೯-೦೩). [ಸಂ.]

ಬಲಿಹರಣ (ನಾ.) ೧. ಭೂತಪ್ರೇತಗಳಿಗಾಗಿ ಅರ್ಪಿಸುವ ಬಲಿ; ಆಹುತಿ : ಹರಿಯ ಬಾಣವು . . . ಖರನ ತಲೆಗಳ ಬೇಳಿದುದು ಬಲಿಹರಣ ವಿಕ್ಕಿತು ಕನಕಮೃಗವನು (ಲಾಶಾ. ೦೬–೪೩). ೨. ಪೂಜೆಯ ಕಡೆಯಲ್ಲಿ ದೇವತೆಗಳಿಗೆ ಅಥವಾ ಪಿತೃಗಳಿಗೆ ಅರ್ಪಿಸುವ ನೈವೇದ್ಯದ ಭಾಗ : ವೈಶ್ವದೇವ, ಬಲಿಹರಣರೂಪವಾದ ಎರಡು ಅನ್ನಗಳು ದೇವತೆಗಳಿಗೆ, ಉಪಲಕ್ಷಣ ಯಾ ಪಿತೃಗಳಿಗೂ ಸೇರುವುದು. ಸಪ್ತಾನ್ನಗಳಲ್ಲಿ ವೈಶ್ವದೇವ, ಬಲಿಹರಣರೂಪವಾದ ಎರಡು ಅನ್ನಗಳಿಗೆ ದೇವತೆಗಳನ್ನೂ ಪಿತೃಗಳನ್ನೂ ಭಾಗಿಗಳನ್ನಾಗಿ ಮಾಡಿದರೆಂದರ್ಥ (ಹರಾಶ. ೦೪–೦೪ ಶಾಕ್ಕಡೂ).

ಬಲಿಹರಣ ದಾನು = ಆಹುತಿ ಕೊಡು; ಕೊಲ್ಲು : ನಲಿದು ದೈತ್ಯರ ಪಡೆಯನೆಲ್ಲವ ಬಲಿಹರಣ ಮಾಡುತಲು (ಕಶಪ. ೯-೦೦೦). [ಸಂ.]

ಬಲಿಹರಣಂಗೆಯ್ (ಕ್ರಿ). ಭೂತ ಪ್ರೇತಗಳಿಗಾಗಿ ಬಲಿಯನ್ನು

ಅರ್ಪಿಸು : ಒರ್ವ ಶಬರಂ ಕಂಡುವಾ ವಿಹಂಗಚಯಮಾಡುವೆಡೆ ಯೊಳೆಲ್ಲಿಯುಂ ಬಲೆಯಂ ಪಾಸಿ ಬಲಿಹರಣಂಗೆಯ್ದಂತೆ ಕೂಟಂ ಸೂಸಿ ಪೋಪುದುಂ (ಪಂಚತಂ. ೨೫೯-೦೯). [ಬಲಿಹರಣ + ಕೆಯ್$_1$]

ಬಲೀಂದ್ರಪೂಜೆ (ನಾ). ಬಲಿಪಾಡ್ಯಮಿಯ ದಿನ (ಕಾರ್ತಿಕ ಶುದ್ಧ ಪ್ರತಿಪದೆ)ದಂದು ಮಾಡುವ ಬಲಿಚಕ್ರವರ್ತಿಯ ಪೂಜೆ : ಬಲೀಂದ್ರ ಪೂಜೆಯಂದು ಮನೆಯವರೆಲ್ಲಾ ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು (ರೂಢಿ). [ಸಂ. ಬಲೀಂದ್ರಪೂಜಾ]

ಬಲೀಮುಖ (ನಾ). = ಬಲಿಮುಖ : "ಬಲೀಮುಖಃ, ಮರ್ಕಟಕಃ . . . ಶಾಖಾಮೃಗಃ, ವಾನರಃ — ಈ ೧೧ ಕೋಡಗಂ" (ಹಲಾಯು. ೩೯-೬೮); ಆ ಬಲೀಮುಖಂ ಕಾಲಮುಖಮನೆಯ್ದಿತ್ತು (ಪಂಚತಂ. ೩೦-೯); ಬರಿಯ ಬೆಱಂಟುತೇಡಿಸಿ ನಗಿಸಿತು ಭೂವರನ ಬಲೀಮುಖನೊಂದು (ಶ್ರೀಪಾಲ. ೬-೨೮). [ಸಂ.]

ಬಲೀಮುಖಿ (ನಾ). ಹೆಣ್ಣುಕೋತಿ: ಬಿರಿಕಿನೊಳೊಯ್ಯನೊಯ್ಯನರೆ ದೋಱುವ ಬಿತ್ತುಗಳಿಂ ವಿಳಾಸಮಾವರಿಸಿದ ದಾಡಿಮಿಾಫಳಮನೊಯ್ಯನೆ ಚುಂಬಿಸಿ ಬರ್ಪ ಕಾಂತನಂತರುಚರಕಾಂತೆ ಕಂಡು ಪುರುಡಿಂ ಬಡಿಯಲ್ ಪಡಿ ಗೊಂಡು ದೀಟ್ದು ಬಲ್ಪರಿದು ಬಲೀಮುಖೀಮುಖಮನಿಂಬೆನೆ ಚುಂಬಿಸೆ ತೇಂಕಿ ಕೋಪಮಂ (ಪುಷ್ಪಪು. ೩-೯೭).

[ಸಂ. ಬಲೀಮುಖೀ (ಬಲಿ + ಮುಖ + _)]

ಬಲೀವರ್ದ (ನಾ). ಎತ್ತು; ವೃಷಭ : "ವೃಷ ಸೌರಭೇಯ ಗೋಪತಿ ಋಷಭ ಬಲೀವರ್ದ ಶಾಕ್ವರೋಕ್ಷ ಕಕುದ್ಮದ್ವೃಷಭಾಖ್ಯಮನಡ್ವಾಹಂ" (ಪಸ್ತುಕೋ. ೯೯-೦); ಶೃಂಗಾರದಿಂ ಭಂಗಿವಡೆದು ವೃಷಬಲೀವರ್ದಧ್ವಾನ ಮುಂ ಗೋವತ್ಸಕದಂಬಹಂಭಾರವಮುಂ ವಿಜೃಂಭಿಸೆ (ಜಗಪ. ೯-೮೦ ಪ); ವೃಷಭನ ಅನಿಮಿತ್ತರೋಷಾವೇಶವಿಷಮತೆಗಮಾ ಜರಾದುರ್ಬಲ ಬಲೀವರ್ದದುರ್ದರ್ಶಮರಣಾಯಾಸಪರಿಣತಿಗಂ ವಿಸ್ಮಯಂಬಟ್ಟು (ಸಂದ್ರಪು. ೨-೩೦). [ಸಂ.]

ಬಲು 'ಬಲ್$_2$' ನೋ.

ಬಲುಕಜ್ಜ 'ಬಲ್ಗಜ್ಜ' ನೋ.

ಬಲುಕಣಿ 'ಬಲ್ಕಣ್ಣಿ' ನೋ.

ಬಲುಕರಿಸು (ಕ್ರಿ). ಬಲವಂತ ಮಾಡು; ಒತ್ತಾಯಂಪಡಿಸು : ಬಲುಕರಿಸಿ ಕೊಲುವುದು ನೇಮವೇ ತತ್‌ತರುಣಿಗೀ ಕುಱಿಯಲ್ಲದಿಳಿಯದೆ ಗಂಟಲಲಿ (ಬಸಪು. ೨೮-೦೨); ಬಲುಕರಿಸಿ ಭೂಮಿಯೊಳಗೊಂದಂಗುಲವನೊತ್ತಿದವಂಗೆ . . . ನರಕದೊಳಿಳಿವುದಲ್ಲದೆ ಬೇಱೆ ಗತಿಯಿಲ್ಲ (ಕುಣ್ಯಾಲು. ೯-೦೦೪); ಎಲೆ ವಸಂತನೆ ಚಂದ್ರಮನೆ . . . ಕಲುಷರಹಿತೆಯ ಖಳಕುಲಾಧಮ ಬಲು ಕರಿಸಿ ಕೊಂಡೊಯ್ದನೆಂದುಸುರುವುದು ರಾಮಂಗೆ (ಕೊರಣಾ. ೩-೦೦-೬). 'ಬಲಾತ್ಕರಿಸು' ಪರಾ. ☞ 'ನಿರಾಕರಿಸು', 'ಪತಿಕರಿಸು' ಮೊದಲಾದ ಶಬ್ದಸಾಮ್ಯದಿಂದ ಮಾಡಿಕೊಂಡ ರೂಪ.

[< ಬಲಾಕರಣ$_0$ + — ಇಸು$_3$]

ಬಲುಕುಣಿಕೆ 'ಬಲುಗುಣಿಕೆ' ನೋ.

ಬಲುಕುಣಿಯ (ನಾ). ಒಂದು ಬಗೆಯ ಮರ : ಬಲುಕುಣಿಯ ಹುಡುವೆ ವಕುಳಂ ಸಿಂಧುವಾರ . . . ಒಪ್ಪಿದುದು (ಕುಕ್ಕಾಂಗ. ೦೦-೨). 'ಬಲುಗುಣಿಕೆ' ಪರಾ. [?]

ಬಲುಗಂಡ 'ಬಲ್ಗಂಡ' ನೋ.

ಬಲುಗಜ್ಜ 'ಬಲ್ಗಜ್ಜ' ನೋ.

ಬಲುಗಡಲು 'ಬಲ್ಗಡಲ್' ನೋ.

ಬಲುಗಡಿ$_1$ (ನಾ). ಅತಿಶಯವಾದ ಸಾಮರ್ಥ್ಯ. — ಪರಾಕ್ರಮ : ಎಲವೊ ಕೀಚಕ ಹೋಗದಿರು ನಿಲ್ಲೆಲವೊ ಹುಲುಮಂಡಳಿಕ ನಿನ್ನಯ ಬಲುಗಡಿಯ ತೋಱುವುದು ನಿನ್ನಂತರದ ರಾಯರಲಿ (ಕುಣ್ಯಾಲು. ೬೦೩.೨೫-೯); ನಮ್ಮ ಹಗೆ . . . ಬಲುಗಡಿಯ ರಕ್ಕಸರನೊಬ್ಬರನುಳಿಯಲೀಯದೆ ಕೊಂದ ನಾವಿನ್ನುಳಿವುಪಾಯವದೆಂತು (ಅಕ್ರೂಸ. ೨-೯). 'ಬಲಗಡಿಯ' ಪರಾ.

[ಬಲು (< ಬಲ್ಲಿತು$_1$) + ಕಡಿ$_4$ (< ಕಡಿದು)]

ಬಲುಗಡಿ$_2$ (ನಾ). ಬಲವಾದ ಕೋಟೆ. — ದುರ್ಗ : ಇಂತೆಂದು ಬಿನ್ನವಿಸಿ ದನಾ ನೇಮಿ ಪೊಡವಿಪತಿಗೆ ದಾನವಗೆ ಬಿಡಬಾರದು ಪೌಜುಮಾಡಬಾರದು ಬಲುಗಡಿ[ಪಾಠಾಂ. ಗಡಿಯ]ಕುಮ್ಮಟದುರ್ಗವಿಳೆಗೆ (ಕುರಾಸಾಂ. ೨೦-೯೫).

[ಬಲು (< ಬಲ್ಲಿತು$_1$) + ಗಡಿ$_3$]

ಬಲುಗಡಿಯ (ನಾ). ಅತ್ಯಂತ ಸಮರ್ಥನಾದವನು; ಮಹಾಪರಾಕ್ರಮಿ: ಎಲೆಲೆ ಪಾತಕಿ ಹೆಣನ ಹೊಯ್ದರೆ ಬಲುಗಡಿಯ ನೀನೆಂಬರೆ (ಕುಣ್ಯಾಲ್ರೋ. ೦೯-೩); ಕಡೆಗಾಲದ ರುದ್ರನಿಟ್ಟಾಭರಣದ ಕೆಡಿಕನಪ್ಪಾ ವಿಪೋರಗನು ಕಡುಮುನಿಸಿಂ ಬರ್ಪವೊಲು ಬಂದಾ ಬಲುಗಡಿಯನ ಮೇಲ್ವಾಯ್ದುದಾಗ (ಪೇಮಿಸಂ. ೦೯-೦೨೦). 'ಬಲುಗಡಿಯತನ' ಪರಾ.

[ಬಲುಗಡಿ$_1$ + — ಅ$_7$]

ಬಲುಗಡಿಯತನ (ನಾ). = ಬಲುಗಡಿ$_1$: ಫಡ ಜಯದ್ರಥ ಹೋಗು . . . ತುಡುಕಿದರೆ ಕೈ ಬೇವುದೀ ಬಲುಗಡಿಯತನ ಬಯಲಹುದು (ಕುಣ್ಯಾಲ್ರೋ. ೯-೬೦). [ಬಲುಗಡಿಯ + — ತನ]

ಬಲುಗಣೆ 'ಬಲ್ಗಣೆ' ನೋ.

ಬಲುಗತ್ತಲೆ 'ಬಲ್ಗತ್ತಲೆ' ನೋ.

ಬಲುಗತ್ತಿ 'ಬಲ್ಗತ್ತಿ' ನೋ.

ಬಲುಗಯ್ 'ಬಲ್ಗೆಯ್' ನೋ.

ಬಲುಗಯ್ಯ 'ಬಲ್ಗೆಯ್ಯ' ನೋ.

ಬಲುಗರ$_1$ (ನಾ). ಅನೇಕ ಕೈಗಳು : ಜ್ವಲನವೇಂ ಶಿಷಭಕ್ತರಿಂದಗ್ಗಳಮೆ ಯಾತನ ನಾಲಗೆಗಳಂ ಬಲುಗರಂಗಳನರಿದು ಕಳೆಯನೆ ವೀರಗಣನೊಬ್ಬ (ಬಸಪು. ೯೯-೪೫); ಎಲವೊ ಪಾವಕ . . . ವೀರಗಣೇಶ್ವರನು ನಿನ್ನ ಬಲುಗರಂಗಳನೇಳುನಾಲಗೆಗಳನರಿದು ಹಾಯ್ಕಿದನಲಾ (ಬಸಪು ೩೦-೨೯).

[ಬಲು (< ಬಲ್ಲಿತು$_1$) + ಕರ$_3$]

ಬಲುಗರ$_2$ 'ಬಲ್ಗರ' ನೋ.

ಬಲುಗರುಳು 'ಬಲ್ಗರುಳ್' ನೋ.

ಬಲುಗವಣೆ 'ಬಲ್ಗವಣೆ' ನೋ.

ಬಲುಗಳವು (ನಾ). ೧. ಅತಿಯಾದ ಕಳವು ; ಹೆಚ್ಚಿನ ಕಳ್ಳತನ. ೨. ದಪ್ಪವಾದ ಕೊರಳು. ೧, ೨ : ಅಳಿಯಾಸೆ ಪೂವಿನ ಜೊಂಪದೊಳಗೆ ಬಲುಗಳವು ತುರಂಗಸಂಕುಳದಿ ಎಳೆ ಕಣ್ಣು ದಿಸೆಸುತ್ತು ವಾಚಕ ಮೊದಲೊಳು ತಿಳಿಯಲಾ ದೇಶಕಿವಿಲ್ಲ (ಪರ್ಗಸ. ೦-೩೦).

[ಬಲು (<ಬಲ್ಲಿತು$_1$) + ಕಳವು ; ಬಲು(<ಬಲ್ಲಿತು$_1$) + ಗಳವು$_3$ (☞←ಸಂ. ಗಲ)]

ಬಲುಗಾಹು$_1$ 'ಬಲ್ಗಾಪು' ನೋ.

ಬಲುಗಾಹು$_2$ (ನಾ). ಬಲವಾದ ಮೋಸ ; ಅತಿಯಾದ ಠಕ್ಕು. — ವಂಚನೆ : ಆಹತಾಂದೋಳಿತ ಮೊದಲಾದ ಗಮಕಸಮೂಹಗಳಿಂದ ಕೇಳ್ವರನು ಆಹಾಯೆನಿಸಿದಳಂತರಂಗದ ಬಲುಗಾಹು ಬೇಱಾಗಿರಲವಳು (ಕುರಾಸಾಂ. ೨೫-೦೭). [ಬಲು (<ಬಲ್ಲಿತು$_1$) +ಗಾಹು$_2$]

ಬಲುಗಾಳೆಗ 'ಬಲ್ಗಾಳೆಗ' ನೋ.

ಬಲುಗಿಚ್ಚು 'ಬಲ್ಗಿಚ್ಚು' ನೋ.

ಬಲುಗುಂಡು 'ಬಲ್ಗುಂಡು' ನೋ.

ಬಲುಗುಣಿಕೆ, ಬಲಕುಟಿಕೆ, ಬಲಗುಣಿಕೆ, ಬಲುಕುಣಿಕೆ (ನಾ). ೧. ಒಂದು ಬಗೆಯ ಸಸ್ಯ : "ತಲವೋಟಃ — ಚೊಕ್ಕಣಿಕೆ, ಅವರೆ, ಬಲುಗುಣಿಕೆ,

ಎಲಚಿ, ನೆಲದಾಳು" (ಓಸಂ. ೬೫). ಬಲಕುಟಿಕೆ : ೧. "ತಲಪೋಟಿಕಾ—ಬಲಕುಟಿಕೆ" (ಓಸಂ. ೬೬). ಬಲಗುಣಿಕೆ : ೧. "ಪೊಟತಲಃ—ಬಲಗುಣಿಕೆ" (ಓಸಧಿ. ೦೦೩). ಬಲುಕುಣಿಕೆ : ೧. "ಶಾಟಿಕಾ—ಬಲುಕುಣಿಕೆ" (ಓಸಂ. ೧೬೩). ೨. ಒಂದು ಬಗೆಯ ಮರ : ಬಲುಕುಣಿಕೆ ಪಾದರಿ ಹಾಲೆ ತೇಗುಗಳ ವಿಸರ ನಾನಾವೃಕ್ಷಜಾತಿಯಿಂದೆಸೆವ ಘೋರಾರಣ್ಯ ಕಣ್ಗೆಸೆದುದು (ನಿಂಗಿರಾ. ೩೦-೯). [ಬಲು$_2$ + ಕುಣಿಕೆ$_3$]

ಬಲುಗುದಿ (ನಾ). ಅತಿಯಾದ ಕುದಿತ : ಕದಡಿ ಹರಿವರುಣಾಂಬುವಿನ ಬಲುಗುದಿಯೊಳಗೆ ನಾದಿದವು ಬಲವನು ಕದನದಲಿ ಗಣನಿಕರ ಕೊಂದವು ಕೋಟಿದಾನವರಾ (ದೇವೀಪು. ೩-೫೮). [ಬಲು(<ಬಲ್ಲಿತು$_1$)+ಕುದಿ$_3$]

ಬಲುಗುದುರೆ 'ಬಲ್ಗುದುರೆ' ನೋ.

ಬಲುಗುಮ್ಮ (ನಾ). ಭಾರಿಯಾದ ಭೂತ ; ದೊಡ್ಡ ದೆವ್ವ : ತಮ್ಮ ಬಾ ಬಲ ಬೆದಱುತದೆ ಬಲುಗುಮ್ಮನಿವನನು ಕಂಡು (ತೊರಾ. ೬-೨೯-೦೪). [ಬಲು (<ಬಲ್ಲಿತು$_1$) + ಗುಮ್ಮ$_1$]

ಬಲುಗೂಳಿ 'ಬಲ್ಗೂಳಿ' ನೋ.

ಬಲುಗೆಂಪು (ನಾ). ದಟ್ಟವಾದ ಕೆಂಪು ; ಕಡುಗೆಂಪು : ಸುಳಿದಾಡುವಬ್ಜ ನೇತ್ರೆಯರ ಪಾದಾಂಗುಳಿಗಳವಟ್ಟ ನಖದಲತಗೆಯ ಬಲುಗೆಂಪು ನೆಲದೊಳೊಪ್ಪಿತು ಭೂದೇವತೆ ತಳೆದ ಕುಂಕುಮಗಂಧದಂತೆ (ಕಂಪಪಿ. ೨೪-೦೨). [ಬಲು (<ಬಲ್ಲಿತು$_1$) + ಕೆಂಪು$_1$]

ಬಲುಗೆಯ್ 'ಬಲ್ಗೆಯ್' ನೋ.

ಬಲುಗೆಯ್ಯ 'ಬಲ್ಗೆಯ್ಯ' ನೋ.

ಬಲುಗೆಲಸ (ನಾ). ಅತಿಶಯವಾದ ಕೆಲಸ ; ದೊಡ್ಡಕಾರ್ಯ : ಹಲವು ಮಾತೇನಖಿಳಭುವನಾವಳಿಯ ಸೃಷ್ಟಿವಿಧಾನದಿಂ ಬಲುಗೆಲಸ ಬೆನಗಾಯಿತು (ಸಿಕಾಗ. ೨-೨-೪೦). [ಬಲು (<ಬಲ್ಲಿತು$_1$) + ಕೆಲಸ]

ಬಲುಗೆಲಸಿ (ನಾ). ಬಹಳ ಕೆಲಸ ಮಾಡುವ ವ್ಯಕ್ತಿ ; ಒಳ್ಳೆಯ ಕೆಲಸಗಾರ : "ಕರ್ಮಠಂ ಕರ್ಮಶೂರನೆನೆ ಬಲುಗೆಲಸಿಯಕ್ಕು" (ಪುಂಗಶಾ. ೭೦-೦೫). [ಬಲಗೆಲಸ +— ಇ$_3$]

ಬಲುಗೆಸಱು (ನಾ). ಹೆಚ್ಚಾದ ಕೆಸರು ; ಅತಿಯಾದ ರಾಡಿ : ರುಧಿರದ ಬಿಱುವೊನಲ ಬಲುಗೆಸಱ ನೆಣವಸೆಯಱಿಲ ನೆಲದಲಿ ಧೂಳಿಯೆದ್ದುದು ದಳದ ಪದಹತಿಗೆ (ಕುಣ್ಯಾಕ. ೦೨-೬).
[ಬಲು (<ಬಲ್ಲಿತು$_1$) + ಕೆಸಱು (<ಕೆಸಱು^{2})]

ಬಲುಗೆಱೆ 'ಬಲ್ಗೆಱೆ' ನೋ.

ಬಲುಗೈ 'ಬಲ್ಗೆಯ್' ನೋ.

ಬಲುಗೈತನ (ನಾ). ಶೌರ್ಯ ; ಪರಾಕ್ರಮ : ನರನ ಬಲುಗೈತನವನೀ ದೋಹರಧ ಹೆಂಗುಸುತನವ ನೀವವಧರಿಸಿದಿರೆ ಜಗಭಂಡರಿವರಿಗೆ ಮತ್ತೆ ಬಿರುದುಗಳ (ಕುಣ್ಯಾಪ್ರೋ. ೦೦-೪೩) ; ಕಂಡನವರ ಬಲುಗೈತನವನು ಮೇಲೆ ಕೊಂಡೆಚ್ಚು ವಜ್ರಶರದಲಿ ಖಂಡಿಸಿ ಬಿಟ್ಟ ಸರಳ ಮೂದಲಿಸಲುದ್ದಂಡ ತ್ರಿಪಿಷ್ಟಕುಮಾರ (ಪರ್ಧಶ. ೭-೦೮).
[ಬಲುಗೈ (<ಬಲ್ಗೆಯ್) +—ತನ]

ಬಲುಗೈದು 'ಬಲೆಯಂದ್ದ' ನೋ.

ಬಲುಗೈಬಂಟ (ನಾ). ಪರಾಕ್ರಮಿಯಾದ ಸೈನಿಕ,—ಯೋಧ : ಈತ ಬಲುಗೈಬಂಟನು (ಕುಣ್ಯಾಸ. ೨-೭೭). [ಬಲುಗೈ (<ಬಲ್ಗೆಯ್)+ಬಂಟ$_1$]

ಬಲುಗೈಯ 'ಬಲ್ಗೆಯ್ಯ' ನೋ.

ಬಲುಗೊಱತೆ (ನಾ). ದೊಡ್ಡ ನಷ್ಟ,—ಕೊರತೆ : ಸಾಯಬೇಕವನಲ್ಲ ದೊಡಾನು ಬಿಡಬೇಕು ಕಾಯವನಿರ್ವರುಳಿವುದು ನ್ಯಾಯವಲ್ಲಿದು ಬಲುಗೊಱತೆ ನಿನಗೆ ಕಂಪರಾಯ (ಕುರಾಸಾಂ. ೩೪-೦೫೦).
[ಬಲು (< ಬಲ್ಲಿತು$_1$) + ಕೊಱತೆ (< ಕೊಱಂತೆ)]

ಬಲುಗೋಲು 'ಬಲ್ಗೋಲ್' ನೋ.

ಬಲುಚರ 'ಬಲ್ಸರ' ನೋ.

ಬಲುತವಕ 'ಬಲುದವಕ' ನೋ.

ಬಲುತೆರೆ 'ಬಲ್ದೆರೆ' ನೋ.

ಬಲುದಂಡಿ (ನಾ). ಹೆಚ್ಚಿನ ಶಕ್ತಿ ; ಅಧಿಕವಾದ ಪರಾಕ್ರಮ : ಕಂಡು ಕಾಟಣ್ಣನ ರಾವುತಿಕೆಯ ಬಲುದಂಡಿಯನಾ ರಾಮನಾಥ ಕೊಂಡಾಡಿದನು (ಕುರಾಸಾಂ. ೪೨-೭೯). [ಬಲು (<ಬಲ್ಲಿತು$_1$)+ದಂಡಿ$_1$]

ಬಲುದಗಹು (ನಾ). ಅಧಿಕವಾದ ನಿರ್ಬಂಧ,—ಅಡ್ಡಿ : ಬೆಗಡು ಬೀತುದು ಬೇಸಱಿನ ಬಲುದಗಹು ಸೋತುದು (ಕುಣ್ಯಾಕ. ೬-೩೨).
[ಬಲು (<ಬಲ್ಲಿತು$_1$) + ತಗಹು$_2$ (<ತಗೆಪು)]

ಬಲುದಡಿ (ನಾ). ಬಲವಾದ ಕೋಲು,—ದಂಡ : ಬಿಲ್ಲು ಬಲುದಡಿ ಪಿಡಿಚಕ್ರದಲಿ ಕಳಬಂಟ ಕಂಠವಿಚ್ಛೇದ ವಿನೋದದ ತಳವಱರೂರ ಕಾದಿಹರು (ಮೋಹತ. ೦೯-೦೦೩). [ಬಲು (<ಬಲ್ಲಿತು$_1$) + ದಡಿ$_1$]

ಬಲುದಡಿಗ 'ಬಲ್ದಡಿಗ' ನೋ.

ಬಲುದವಕ, ಬಲುತವಕ (ನಾ). ೧. ಬಹಳವಾದ ಆತುರ : 'ಬಲುದವಕಿ' ಪರಾ. ಬಲುತವಕ : ೨. ಅತಿಯಾದ ಉತ್ಕಂಠತೆ,—ಕಳವಳ : ಇಂತೊಪ್ಪುತಿರೆ ಶಶಿ ಮದನಮೋಹಿನಿಗಾಗ ಚಿಂತೆ ಮೊಳೆತು ಬಲುತವಕ ಮುಂತೆಲೆದೋಱೆ ಕಾತುರ ಪರ್ಬಿ ವಿರಹಾಗ್ನಿ ಸಂತತ ಫಲದೋಱಿದುದು (ಕಂಪಪಿ. ೯-೦೭೦). [ಬಲು (<ಬಲ್ಲಿತು$_1$) + ತವಕ$_1$]

ಬಲುದವಕಿ (ನಾ). ಬಹಳ ಆತುರವುಳ್ಳವನು : ಅವೆರಡಬಲದೊಳು ರಾವುತರನು ಮತ್ತವರ ಹಿಂಗಡೆಯೊಳಾನಗೆಳ ಅವರ ಮುಂಗಡೆಯೊಳೊಲಿದು ಚೂಣಿಯ ಬಲುದವಕಿಗಳನು ನಿಲಿಸಿದನು (ಕುರಾಸಾಂ. ೨೦-೪).
[ಬಲುದವಕ + — ಇ$_3$]

ಬಲುದವಕಿಗ (ನಾ). = ಬಲುದವಕಿ : ಇವರು ಕಳುಹಿದರುಚಿತದಲಿ ನಿನ್ನವರು ಮಸಗಿದ ಕಡಲವೊಲು ಬಲುದವಕಿಗರು ಕೋಲಳವಿಗೊಂಡರು ಕೋಡಕೈಗಳಲಿ (ಕುಣ್ಯಾಕ. ೦೫-೦೬). [ಬಲುದವಕ + — ಇಗ]

ಬಲುದಸಿ 'ಬಲ್ದಸಿ' ನೋ.

ಬಲುದುಗುಡ (ನಾ). ಅತಿಯಾದ ದುಃಖ ; ಬಹಳವಾದ ವ್ಯಸನ : ಬಲುದುಗುಡ ಸಹದೇವನಲಿ ನಂಗಳಿಸಿತೇ ದ್ರೌಪದಿ ಸುಭದ್ರಾಲಲನೆಯರಿಗನುಚಿತವು ಘಟಿಸಿತೆ (ಕುಣ್ಯಾಪ್ರೋ. ೭-೨೨). [ಬಲು (<ಬಲ್ಲಿತು$_1$)+ದುಗುಡ]

ಬಲುದುತ್ತು (ನಾ). ದೊಡ್ಡ ತುತ್ತು : ಎರಡು ಕೈಯನು ಬಲಿದು ಮುಷ್ಟಿಯೊಳೆಱಗಿದನು ಖಳ ಬೆನ್ನನೇನಂದಱಿಯನಿತ್ತಲು ಭೀಮ ಬಲುದುತ್ತುಗಳ ತೋಟಿಯಲಿ (ಕುಣ್ಯಾಅ. ೦೦-೫೫) ; ಎಲವೊ ನಿನ್ನಯ ಬಾಯ ಹವಣಿಂಗಳವಡದ ಬಲುದುತ್ತನಂಗೈಗಳಲಿ ಧರಿಸಿದೆ (ತೊರಾ. ೩-೮-೬).
[ಬಲು (<ಬಲ್ಲಿತು$_1$) + ತುತ್ತು$_2$]

ಬಲುದೆಪ್ಪ (ನಾ). ದೊಡ್ಡ ತೆಪ್ಪ,—ದೋಣಿ : ಹೆದ್ದೊಱೆಯನುಱೆ ತಡಿಗೆ ದಾಂಟಿಸುವ ತೋರವಹ ಬಲುದೆಪ್ಪವಿರೆ ಮನ ಹಾಱಿ ಸೋರೆಯೋಡಂ ಹಿಡಿದು ತಾಂ ಪಾರವೆಯ್ದುವೆನೆಂಬವನವೊಲು . . . ಕೆಟ್ಟುಹೋದೆಯೆಲಾ (ಬಸಪು. ೭೦-೪೬). [ಬಲು (<ಬಲ್ಲಿತು$_1$) + ತೆಪ್ಪ]

ಬಲುದೋಂಟಿ (ನಾ). ದೊಡ್ಡ ಕದನ ; ಮಹಾಯುದ್ಧ : ಬಲುದೋಂಟಿಯೆಂದರೆಡೆಯೊಳು ನಲಿವ ಸುಭಟರಿಹರು (ಕುರಾಸಾಂ. ೫-೪೦).
[ಬಲು (<ಬಲ್ಲಿತು$_1$) + ತೋಂಟಿ$_1$ (<ತೋಟಿ$_1$)]

ಬಲುಪು 'ಬಲ್ಪು' ನೋ.

ಬಲುಬಿದಿರು (ನಾ). ಬಿರುಸಾದ ಬಿದಿರು : ಬಲುಬಿದಿರನುಚ್ಚಳಿಸುವಳಿ ಮುಖಕೆಳಯ ಕಟ್ಟಾನುವುದೆ (ಕುಣ್ಯಾಕ. ೫-೨೮).
[ಬಲು (<ಬಲ್ಲಿತು$_1$) + ಬಿದಿರು$_2$ (<ಬಿದಿರ್$_2$)]

ಬಲುಬಿಲ್ಲು (ನಾ). ದೊಡ್ಡ ಧನುಸ್ಸು ; ಮಹಾಧನುಸ್ಸು : ಸಿಲ್ಲು ನಿಲ್ಲಾದರೆಯೆನುತ ಬಲುಬಿಲ್ಲನುಗುಳಿಸಿದನು ಶರೌಘವನೆಲ್ಲಿ ನಭ ವೆಸೆಯೆತ್ತಲೆನೆ ಘಾಡಿಸಿದವಂಬುಗಳು (ಕುಪ್ಯಾರ್ಪ್ರೋ. ೩-೪೬) ; ಸಿಂಜಿನಿಗೆಯ್ದು ಬಲುಬಿಲ್ಲ ಕರದೊಳಗಾಂತು ಜೇವೊಡೆದ (ಮೋಹತ. ೧೯-೩೨).

[ಬಲು (<ಬಲ್ಲಿತು$_1$) + ಬಿಲ್ಲು$_1$ (<ಬಿಲ್$_2$)]

ಬಲುಬಿಸಿಲು 'ಬಲ್ವಿಸಿಲ್' ನೋ.

ಬಲುಬೆಟ್ಟ 'ಬಲ್ಬೆಟ್ಟ' ನೋ.

ಬಲುಬೆಡಗು 'ಬಲ್ಬೆಡಗು' ನೋ.

ಬಲುಬೆಳಸು (ನಾ). ಅಧಿಕವಾದ ಏಳಿಗೆ ; ಹೆಚ್ಚಾದ ಅಭಿವೃದ್ಧಿ : ಪೊನ್ನ ನಿಳಯಗಳತಿಸೊಬಗಿನಲಿ ತೊಳಗಿಹುವರಸನ ಸೌಭಾಗ್ಯದ ಬಲುಬೆಳಸನದೇನ ಬಣ್ಣಿಸುವೆ (ಕಂನಪಿ. ೬-೪೬).

[ಬಲು (<ಬಲ್ಲಿತು$_1$) + ಬೆಳಸು$_2$]

ಬಲುಬೇಗೆ (ನಾ). ಬಹಳವಾದ ತಾಪ : ಬಲುಬೇಗೆಯೊಳಗೊಳಗೆ ಬಲುಹು ಹೊಱಗೆ ಪರಾಭವದ ಕಂದೊಳಗೆ ಕಡುಹಿನ ಕಲಿತನದ ಹಳಹಳಿಕೆ ಹೊಱಗೆ ಮಹೀಶ ಹದನಿದು ನಿನ್ನ ನಂದನನ (ಕುಪ್ಯಾಶ. ೨-೦).

[ಬಲು (<ಬಲ್ಲಿತು$_1$) + ಬೇಗೆ]

ಬಲುಬೇನೆ (ನಾ). ಅತಿಯಾದ ನೋವು ; ಅಧಿಕವಾದ ವೇದನೆ : ಬಸಿಱಿಳಿವ ಸಂಕಟದ ಬಲುಬೇನೆ ಭ್ರಾಂತಿನಿಂ ಮೈಮಱೆದು ಕಂಡ ಕನಸೈಸೆ (ಸಿದ್ಧರಾ. ೨-೭). [ಬಲು (<ಬಲ್ಲಿತು$_1$) +ಬೇನೆ$_1$]

ಬಲುಬೇಸಗೆ (ನಾ). ಉಗ್ರವಾದ ಸೆಕೆಗಾಲ : ಮಂಜಿನ ಮೇಲುಗಾಳಿಗವುಂಟೆ ಬಲುಬೇಸಗೆಯ ಬಿಸಿಲೊಳಗೆ (ಕುಪ್ಯಾರ್ಪ್ರೋ. ೪-೪೧).

[ಬಲು (<ಬಲ್ಲಿತು$_1$)+ಬೇಸಗೆ$_1$]

ಬಲುಬೊಬ್ಬೆ 'ಬಲ್ಬೊಬ್ಬೆ' ನೋ.

ಬಲುಭಟ (ನಾ). ಸಮರ್ಥನಾದ ಸೈನಿಕ : ಒಳಗೊಳಗೆ ಹೊಯಿದಾಡಿ ಹೊರಳುವ ಬಲುಭಟರನಗಿದೊಗುವ ಬಲುಗತ್ತಲೆಯ ಕೋಳಾಹಳವನು . . . ಅರ್ಜುನದೇವನೀಕ್ಷಿಸಿದ (ಕುಪ್ಯಾರ್ಪ್ರೋ. ೦೭-೪); ಹೊಳೆವ ಖಡ್ಗ ಕಠಾರಿ ಮೊದಲಾದಖಿಳಕೈದುಗಳ ಬಲುಭಟರು . . . ಸಂದಣಿಸಿ ಮೆಱೆದುದು ಪುರದ ಬಾಹೆಯಲಿ (ಪಳಪ. ೨-೦೦). [ಬಲು (<ಬಲ್ಲಿತು$_1$)+ಭಟ$_2$]

ಬಲುಭಾರ 'ಬಲ್ಬಾರ' ನೋ.

ಬಲುಮಟ್ಟು (ನಾ). ಅಧಿಕ ಪ್ರಮಾಣ : ಆ ನಂಬಿಕೆಗೆ ಬಲುಮಟ್ಟಿನ ಸಮರ್ಥನೆ 'ಇಂಗ್ಲಿಷ್‌ಗೀತಗಳ'ಲ್ಲಿ ದೊರೆಯುತ್ತದೆ (ಸಮಾರೋ. ೦೬).

[ಬಲು (<ಬಲ್ಲಿತು$_1$)+ಮಟ್ಟು$_2$ (<ಮಟ್ಟು$_1$)]

ಬಲುಮನುಷ್ಯ (ನಾ). ಪರಾಕ್ರಮಿಯಾದ ಸೇವಕ : ಶ್ರೀವೀರಬಲ್ಲಾಳ ದೇವರಸರ ಮನೆಯ ಪ್ರಧಾನ ಬೀರೆಯ ದಂಣಾಯಕರ ಬಲುಮನುಷ್ಯ ಚಿಣ್ಣೆಯನಾಯಕನು (ಪ್ಯುಆಂ. ೧೯೪೩,೬-೩;1292). 'ಬಲುವಾನಿಸ' ಪರಾ.

[ಬಲು (<ಬಲ್ಲಿತು$_1$)+ಮನುಷ್ಯ]

ಬಲುಮನುಸ್ಯ 'ಬಲ್ಮನುಶ್ಯ' ನೋ.

ಬಲುಮರ 'ಬಲ್ಮರ' ನೋ.

ಬಲುಮಳೆ 'ಬಲ್ಮಳೆ' ನೋ.

ಬಲುಮಿಣಿ 'ಬಲ್ಮಿಳಿ' ನೋ.

ಬಲುಮುಗಿಲು (ನಾ). ದಟ್ಟವಾದ ಮೋಡ : ಸುಗ್ಗಿಯ ಸಿರಿಯ ಹೊಸ ಬೆಳುದಿಂಗಳನು ಬಲುಮುಗಿಲು ಕವಿವಂತೆ ಚರನ ಬಿನ್ನಹಕರಸಿ ಮೊದಲಾಗಿರೆ ಸಮಸ್ತಸಖೀಜನದ ಮುಖಸರಸಿರುಹ ಬಾಡಿದವು (ಕುಪ್ಯಾಸ. ೧೪-೩೦). [ಬಲು (<ಬಲ್ಲಿತು$_1$)+ಮುಗಿಲು (<ಮುಗಿಲ್)]

ಬಲುಮುಡಿ 'ಬಲ್ಮುಡಿ' ನೋ.

ಬಲುಮುನಿಸು 'ಬಲ್ಮುನಿಸು' ನೋ.

ಬಲುಮೆ 'ಬಲ್ಮೆ' ನೋ.

ಬಲುಮೆಕಾಱ 'ಬಲ್ಮೆಗಾಱ' ನೋ.

ಬಲುಮೆಗಾಱ 'ಬಲ್ಮೆಗಾಱ' ನೋ.

ಬಲುಮೆವಿಡಿ (ಕ್ರಿ). ಬೆಂಬಲವನ್ನು ಪಡೆ; ಒತ್ತಾಸೆಯನ್ನು ಹೊಂದು : ಆ ನರಸಿಂಹಪುರವನಾಳುವ ಭೂಪೋತ್ತಮ ಕಪ್ಪವ ಕೊಡದೆ ಮತ್ತಾಗ ತುರುಕರ ಬಲುಮೆವಿಡಿದು ಚಲವೆತ್ತಿರ್ದನು (ಕಂನಪಿ. ೦೯-೨).

[ಬಲುಮೆ (< ಬಲ್ಮೆ) + ಪಿಡಿ$_1$]

ಬಲುಮೆಳೆ 'ಬಲ್ಮೆಳೆ' ನೋ.

ಬಲುಮೊಲೆ 'ಬಲ್ಮೊಲೆ' ನೋ.

ಬಲುವಗೆ 'ಬಲ್ವಗೆ$_1$' ನೋ.

ಬಲುವರದ (ನಾ). ದೊಡ್ಡ ವ್ಯಾಪಾರಿ,-ವರ್ತಕ : ತುರಗಬಹಿತ್ರವನಡರಿ ತುರುಕಬಲಶರಧಿಯ ಪೊಕ್ಕು ಬಡಗಣ ವರವಾಜಿಗಳ ತಂದೊಪ್ಪಿಸಿಹನು ಬಲುವರದನಂತಾ ಕಾಟಣ್ಣ (ಕುರಾಸಾಂ. ೪೨-೮೦).

[ಬಲು (<ಬಲ್ಲಿತು$_1$)+ಪರದ$_1$]

ಬಲುವಲಗೆ (ನಾ). ದೊಡ್ಡ ಹಲಗೆ,-ಗುರಾಣಿ : ಮಲೆತ ಹಗೆವನ ಪಡಿ ಮುಖದ ಬಲುವಲಗೆಯಲಿ ಗದೆಯಿಂದ ರಾಯನ ಬಲುಹ ಬಿರುದಾವಳಿಯ ಬರೆವೆನು ಕೃಷ್ಣ (ಕುಪ್ಯಾಗ. ೩-೩೨). [ಬಲು (<ಬಲ್ಲಿತು$_1$)+ಪಲಗೆ]

ಬಲುವಸರ (ನಾ). ದೊಡ್ಡ ಅಂಗಡಿ : ಒಂದೊಂದು ಸರಳಿನ ಸಸಿನದಲಿ ಶತಸಾವಿರದ ಲಕ್ಷೋಪಲಕ್ಷಗಳ ವಿಷಮವಾನರಭಟರ ಕೊರಳಿನ ಬೆಸುಗೆ ಬಿಟ್ಟವು ಬಿಡುದಲೆಯ ಬಲುವಸರವಾದವು ಲಯಕೃತಾಂತನ ಸಂತೆಯಂದದಲಿ (ತೊರರಾ. ೬-೨೦-೨೯). [ಬಲು (<ಬಲ್ಲಿತು$_1$)+ಪಸರ]

ಬಲುವಾತು (ನಾ). ಅತಿಯಾದ ಮಾತು : ಮಡದಿ ಮೋಹದ ಬಲುವಾತಲಿ ಚದುರಂಗದಡಿಯ ಮೇಲ್ದಾಯ ಪೇಳಿದಳು (ಕಂನಪಿ. ೬-೦೦೯). [ಬಲು (<ಬಲ್ಲಿತು$_1$)+ಮಾತು$_1$]

ಬಲುವಾನಿಸ (ನಾ).=ಬಲುಮನುಷ್ಯ : ಸ್ವಸ್ತಿ ಶ್ರೀಮತು ಕೆಳಲಾದಿರಾಯ ಜಗದೊಬ್ಬಗಂಡ ಹೊಯ್ಸದೇವನ ಬಲುವಾನಿಸ ಸ್ವಸ್ತಿ ಶ್ರೀಮತು ಸಿತಗರ ಗಂಡ ಸ್ವಾಮಿದ್ರೋಹರ ಗಂಡ ಜಗದೊಬ್ಬ ಗಂಡ (ಎಕ. IX (8), ಕನ್ನಪ. ೨೮೬-೩; 1272)); ಬದ್ಧರದ ಬಲುವಾನಿಸರು [ಪಾಠಾಂ. ಮಾನಿಸರು, ವಾನಿಸದ] ಬಂಡಿಗಳನೊಡ್ಡಿದರಾ ನಿರಂತರ ಶರವ ತಡೆದರು ತೆಕ್ಕೆವರಿಗೆಯಲಿ (ಕುಪ್ಯಾಶ. ೦೦-೩೦). [ಬಲು (<ಬಲ್ಲಿತು$_1$)+ಮಾನಿಸ$_1$(<ಮಾನುಸ$_1$)]

ಬಲುವಾಸಿ (ನಾ). ಅಪಾರವಾದ ಕೀರ್ತಿ : ಮಿಸೆ ಸೀದವು ಭಟರ ಸುಯ್ಲಿನಲಾಸೆ ಬೀತುದು ದೇಹದಲಿ ಬಲುವಾಸಿಯಲಿ ಮನ ಮುಳುಗಿತನಿ ಬರಿಗೇಕಮುಖವಾಗಿ (ಕುಪ್ಯಾಶ. ೦೩-೬). [ಬಲು (<ಬಲ್ಲಿತು$_1$)+ವಾಸಿ$_1$]

ಬಲುವಿಡಿ$_1$ 'ಬಲ್ವಿಡಿ' ನೋ.

ಬಲುವಿಡಿ$_2$ 'ಬಲ್ವಿಡಿ$_2$'ನೋ.

ಬಲುವೆಸ (ನಾ). ಶ್ರೇಷ್ಠವಾದ ಕೆಲಸ ; ಉತ್ತಮವಾದ ಕೆಲಸಗಾರಿಕೆ : ಎಸೆವ ಸಭಾಮಂಟಪಮ್ ವಸುಧೆಗೆ ಕಡುಚೋದ್ಯವೆನೆ ಜಗಂ ಬಣ್ಣಿಸೆ ಚಿಲ್ವೆಸೆದಿರೆ ಕರಮೊಪ್ಪುವ ಬಲುವೆಸದಿಂ ಮಾಡಿಸಿದನೆಸೆವಿನಂ ಮಾರ್ತ್ತ(ಂ)ಣ್ಡಂ (ಸೌಇಇ. IX-i, ೦೯೬-೩೯ ; 1113).

[ಬಲು (<ಬಲ್ಲಿತು$_1$) +ಬೆಸ$_1$]

ಬಲುವೊನಲು 'ಬಲ್ವೊನಲ್'ನೋ.

ಬಲುವೊರಜೆ (ನಾ). (ಆನೆಗೆ ಬಿಗಿಯುವ) ದಪ್ಪವಾದ ಹಗ್ಗ : ತುಳುಕಿ ನುಗ್ಗಡಣೆಗಳ ಹಿಣಿಲಿನ ಬಲುವೊರಜೆಗಳ ಬಾರ ಸಂಕಲೆಗಳನು ಬಿಗಿದರು ಜೋಡಿಸಿದರುಬ್ಬರದ ಮದಗಜವ (ಕುಪ್ಯಾರ್ಪ್ರೋ. ೩-೨).

[ಬಲು$_1$(<ಬಲ್ಲಿತು$_1$) + ಪೊರಜೆ]

ಬಲುಸನ್ನೆ (ನಾ). ಬಲವಾದ ಸನ್ನೆಕೋಲು ; ಬಲಿಷ್ಠವಾದ ಎತ್ತುವ

ಸಾಧನ : ಸರಿಗ ರಕ್ಕಸ ಕಿಂಕರರು ಬೊಬ್ಬಿಱಿದು ಬಲುಸನ್ನೆಗಳಲುಕ್ಕಿನ ತುಱುಬುಗಳಲೆತ್ತಿದರು ತೇರಿಗೆ ತಗ್ಗಲವನಿತಳ (ತೊರರಾ. ೩-೭-೬).

[ಬಲು (<ಬಲ್ಲಿತ್ತು$_1$) + ಸನ್ನೆ$_1$]

ಬಲುಸರಳು (ನಾ). ಅಧಿಕಸಂಖ್ಯೆಯ ಬಾಣ : ಮಳೆಗೆ ತೆರಳದೆ ಕೋಡ ಬಾಗಿಸಿ ಕಲಿವೃಷಭ ಹೊಗುವಂತೆ ದ್ರೋಣನ ಬಲುಸರಳ ಸರಿವಳೆಗೆ ದಂಡೆಯನೊಡ್ಡಿ ದಳವುಳಿಸಿ . . . ಕಟ್ಟಳವಿಯಲಿ ಹೊಕ್ಕನು ಭೀಮ ಬೊಬ್ಬಿಱಿದು (ಕುಸ್ಯಾಕ್ರೋ. ೦೩-೦೨).

[ಬಲು (<ಬಲ್ಲಿತ್ತು$_1$) + ಸರಳು$_1$ (<ಸರಲ್$_1$)]

ಬಲುಸರಿ 'ಬಲ್ಸರಿ' ನೋ.

ಬಲುಸಾಸಿಗ (ನಾ). ಬಹಳ ಶೂರ ; ಮಹಾಸಾಹಸಿ : ಹೊಯ್ಸಿದನು ಡಂಗುರವ . . . ಈಶದತ್ತ ಮಹೋಗ್ರತರ ಬಾಣಾಸನವ ತೆಗೆದೇಱಿಸುವ ಬಲುಸಾಸಿಗರು[ಪಾಪಾಂ. ಳು]ಬಹುದೆಂದು ಸೂರ್ಯಾಸ್ತಮಯ ಸಮಯದಲಿ (ತೊರರಾ. ೦-೦೩-೦೨). [ಬಲು$_1$ (<ಬಲ್ಲಿತ್ತು$_1$) + ಸಾಸಿಗ]

ಬಲುಸೂಱಿ 'ಬಲ್ಸೂಱಿ'ನೋ.

ಬಲುಸೆಱಿ 'ಬಲ್ಸೆಱಿ' ನೋ.

ಬಲುಹಳಿ 'ಬಲ್ಪಳಿ'ನೋ.

ಬಲುಹು 'ಬಲ್ಪು'ನೋ.

ಬಲುಹುಗುಂದು (ಕ್ರಿ). ಬಲಗುಂದು ; ಶಕ್ತಿಗುಂದು : ನಲಿದು ದೈತ್ಯರ ಪಡೆಯನೆಲ್ಲವ ಬಲಿಹರಣ ಮಾಡುತಲು ನೋಡುತ ಬಲಹುಗುಂದದ ರಿಪು ಹಿರಣ್ಯಕಶಿಪುವ ನರಹರಿಯು . . . ನೋಡಾಯೆನುತಲಗಲಕೆ ಚರಣಹತಿ ಮಾಡೆ (ಸಂಭವ. ೬-೦೦೦). [ಬಲುಹು (<ಬಲ್ಪು) + ಕುಂದು$_1$]

ಬಲುಹುರಿ (ನಾ). ಬಹಳವಾಗಿ ಹುರಿಗೊಳಿಸಿದುದು ; ಬಹಳ ಬಿಗಿಯಾದುದು : ಹರುಷ ಮಿಗೆ ಹರಿತಂದು ಬಂಡಿಯ ಶಿರದ ಹಲಗೆಯ ನಡರಿದನು ಬಲುಹುರಿಯ ಹಗ್ಗವ ಹಿಡಿದು ಜಡಿದನು ಹೂಡಿದೆತ್ತುಗಳ (ಕುಸ್ಯಾಲಿ. ೦೦-೨೬). [ಬಲು (<ಬಲ್ಲಿತ್ತು$_1$) + ಹುರಿ$_3$ <ಪುರಿ$_3$)]

ಬಲುಹೊಱಿ 'ಬಲ್ಪೊಱಿ' ನೋ.

ಬಲೂತಿ (ನಾ). ವಂಶಪಾರಂಪರ್ಯವಾಗಿ ಗ್ರಾಮಕ್ಕೆ ಸೇವೆ ಸಲ್ಲಿಸುವ ಕಸುಬು : ಹಳ್ಳಿಗಳ ಬಲೂತಿದಾರರಲ್ಲಿ ಒಬ್ಬ ಕುಂಬಾರನಿಗೆ ಬಲೂತಿ ಇರುತ್ತದೆ (ಕಪಾಗೆ. ೦೧೮). 'ಬಾರಾಬಲೂತಿ'ಪರಾ.

[← ಮರಾ. ಬಲುತೇ, ಬಲೋಂತೇ]

ಬಲೂತಿದಾರ (ನಾ). ಹಳ್ಳಿಯಲ್ಲಿ ವಂಶಪಾರಂಪರ್ಯವಾಗಿ ಬಂದ ಕಸುಬನ್ನು ನಡೆಸಿ ದವಸ ಇತ್ಯಾದಿ ವರಮಾನಗಳನ್ನು ಪಡೆಯುವ ಹಕ್ಕನ್ನು ಹೊಂದಿರುವವನು ; ಇವರಲ್ಲಿ ಹನ್ನೆರಡು ಬಗೆ. 'ಬಾರಾಬಲೂತಿ' ಪರಾ : ಹಳ್ಳಿಗಳ ಬಲೂತಿದಾರರಲ್ಲಿ ಒಬ್ಬ ಕುಂಬಾರನಿಗೆ ಬಲೂತಿ ಇರುತ್ತದೆ (ಕಪಾಗೆ. ೦೧೮) ; ಜೋಯಿಸ, ಸೊನ್ನೆಗಾರ, ನಾದಿಗ, ಅಗಸ, ಮುಂತಾದ ಬಲೂತಿದಾರರು ಊರತನದ ಕೆಲಸಕ್ಕೆ ಪೂರ್ವದಲ್ಲಿ ಸಹಾಯ ಮಾಡುತ್ತಿದ್ದರು (ವಿಜಾಪೂ. ೫೫).

[ಬಲೂತಿ + — ದಾರ್$_4$./ಮರಾ. ಬಲುತೇದಾರ, ಬಲೋತೇದಾರ]

ಬಲೂನು, ಬೆಲೂನು (ನಾ). ೧. "ಸರಿಸುಮಾರು ಗುಂಡಾಗಿರುವ, ಗಾಳಿತೂರದ ಪಟ್ಟೆಯ ಚೀಲದಲ್ಲಿ ವಾಯುವಿಗಿಂತಲೂ ಹಗುರವಾದ ಅನಿಲವನ್ನು ತುಂಬಿ, ತಾನಾಗಿ ಮೇಲಕ್ಕೇರುವಂತೆ ಮಾಡಿರುವ ಸಾಧನ : ಆಕಾಶಬುಟ್ಟಿ" (Balloon. ಇಂಕಪಿ). ೨. ಮಕ್ಕಳು ಬಾಯಿಂದ ಊದಿ, ಗಾಳಿಯನ್ನು ತುಂಬಿ ಆಡಲು ಬಳಸುವ ಬಣ್ಣಬಣ್ಣದ ತೆಳುವಾದ ರಬ್ಬರಿನ ಚೀಲ : ಉಸುರುಬುರುಡೆ : ಮಗು ಬಲೂನು ಊದಲು ಬಾರದೆ ಅಳುತ್ತಿದೆ (ಕೂಡಿ). ಬೆಲೂನು : ೨. ನಾವು ಸೂರ್ಯನಷ್ಟು ಗಾತ್ರದಬೆಲೂನನ್ನು ಮಾಡಿದರೆ ಅದರಲ್ಲಿ ಒಂದು ಮಿಲಿಯ ಭೂಮಿಗಳನ್ನು ಹಿಡಿಸಬಹುದು (ಅಕಾಶ. ೯).

[← ಇಂ. Balloon]

ಬಲೆ$_1$ (ನಾ). ೧. ಪ್ರಾಣಿ, ಪಕ್ಷಿ ಮೊದಲಾದುವನ್ನು ಹಿಡಿಯಲು ಬಳಸುವ, ನೂಲು ಅಥವಾ ಹುರಿಯಿಂದ ಮಾಡಿದ ಸಣ್ಣಸಣ್ಣ ಕಂಡಿಗಳುಳ್ಳ ಹೆಣಿಕೆಯ ಸಾಧನ ; ಜಾಲ : "ಅನಾಯಃ, ಜಾಳಃ, ಕುವೇಣೀ, ಮತ್ಸ್ಯಬಂಧಿನೀ — ಈ ೪ ಬಲೆ" (ಹಲಾಯು. ೯೬-೯೯೦) ; ಎಮ್ಮ ಪಾಸಿದ ಚಿತ್ರಪಟಮೆಂಬ ಬಲೆಯೊಳ್ ನಿಮ್ಮಂತಪ್ಪ ಬೆಳ್ಮಿಗಂಗಳಾಗಳೆ ತೊಡರ್ಗುಂ (ಅದಿಪು. ೩-೯೯ವ) ; ಜಗದಗಲದ ಬಲೆಯನಗಲ ಬಲ್ಲವರ ಕಾಣೆ ಮುಗಿಲುದ್ದಂಬರವನುಗಿಯ ಬಲ್ಲವರ ಕಾಣೆ (ಅದಪ. ೦೯-೩೦); ಬಿಡು ನಾಯಂ ಪೊಸಪುಲ್ಲೆಗೊಡ್ಡು ಬಲೆಯಂ. . . ಎಂದು ಬೊಬ್ಬೆಗುಡುತುಂ ಬಂದರ್ ಪಲರ್ ಧೀವರರ್ (ಕಾದ್ಯಟ. ೨-೩೦). ೨. ಕೇಶಾಲಂಕಾರಕ್ಕಾಗಿ ಉಪಯೋಗಿಸುವ ಬಲೆಯಂತಹ ಒಂದು ಅಲಂಕಾರಸಾಧನ : ಮುಡಿಯ ಮುತ್ತಿನ ಬಲೆ ಮುಂಗುರುಳೊಳು ಬಿಗಿವಡೆದಿಹ ಮಣಿಯ ಕುಚ್ಚುಗಳ . . . ಕಡುಚೆಲುವೆಯರೆಸೆದಿಹರು (ಕಂಪಪಿ. ೬-೦೦೯). ೩. (ಆಲಂ) ಮೋಸ; ವಂಚನೆ; ಕಪಟ : ಈ ಪುಲಿಯುಮತ್ಯಾಚಾರಮಾಗಿರ್ದುದು ಇದಱ ಬಲೆಯೊಳ್ ಸಿಲ್ಕವೇಡ (ಸಂಸತಂ. ೨೩೩-೬); ಈಗಳೀ ದಾನವನ ಬಲೆಯಲಿ ತಾಗಿ ಸಿಲುಕಿತು ನಮ್ಮ ಮೋಹರ (ಕುಸ್ಯಾಕ್ರೋ. ೦೬-೨೯); ನೆರೆದಿಳಾಮಂಡಲದ ರಾಯರು ಬೈದು ಭಂಗಿಸುತಾ ವಿದೇಹಜನ ಬಲೆಯನೊಡ್ಡಿದನಿವನು ಲುಬ್ಧಕತಿಲಕನೋ ನೃಪರುಷಿಯೊ ಸಾಕಿವನೊಳಗೆ ಮಾತೇಕೆನುತ ಮಿಗೆ ಮೊಱೆದೆದ್ದರಲ್ಲಲ್ಲಿ (ತೊರರಾ. ೦-೦೩-೨೯).

ಬಲೆಗೆ ಬೀಳು = ೧. ಬೇಟೆಗಾಗಿ ಹರಡಿದ ಬಲೆಯಲ್ಲಿ ಸಿಕ್ಕಿಕೊಳ್ಳು: ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾದೆನ್ನೆ (ಕುಸ್ಯಾಸ. ೦೯-೦೨೨); ಹೊಲಬುದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾಗೆ ನಳನೃಪತಿಲಕನೆಂದನು ಮನದ ದುಗುಡದಿ ತನ್ನ ನಿಜಸತಿಗೆ (ಪಳಸ. ೯-೩೬). ೨. ಪ್ರಭಾವಕ್ಕೆ ಒಳಗಾಗು : ದ್ರೋಹಿಗಳ ರಹಸ್ಯವನ್ನೆಲ್ಲ ತಿಳಿದ ಮೊನೆಗಾರ, ಗುಂಡಪ್ಪನಿಗೆ ನಂಬಿಕೆಯುಂಟಾಗುವಂತೆ . . . ಮಾತನಾಡಿದಾಗ, ಗುಂಡಪ್ಪನು ಆ ಬಲೆಗೆ ಬಿದ್ದು, ತನ್ನ ಪಕ್ಷದವರ ಮಂತ್ರತಂತ್ರಗಳನ್ನೆಲ್ಲ ಮೊನೆಗಾರನ ಕಿವಿಗಳಿಗೆ ಪ್ರಕಟಮಾಡುವನು (ಸಂಸಳ. ೦೦೦); ನಿಪುಣಿಕೆ ಈ ಜನಗಳ ಬಲೆಗೆ ಬಿದ್ದಿರಬಹುದೆಂದು ನನಗೆ ಸಂದೇಹವಾಗಿತ್ತು (ಪಾಜಲ. ೦೩೨). ಬಲೆಯ ಬೀಸು = ವಶಪಡಿಸಿಕೊಳ್ಳಲು ಪ್ರಯತ್ನಿಸು; ಸ್ವಾಧೀನಕ್ಕೆ ತಂದುಕೊಳ್ಳಲು ಹಂಚಿಕೆ ಹೂಡು : ನುಡಿದವಧಿ ಹದಿ ಮೂಱು ವರುಷದ ಹೆಡತಲೆಯನೊದೆದೆದ್ದು ನಮ್ಮೀ ಪೊಡವಿಯರ್ಧಕೆ ಬಲೆಯ ಬೀಸದೆ ಬಿಡುವರೇ ಬಳಿಕ (ಕುಸ್ಯಾಲಿ. ೨೦-೨೩). ಬಲೆಯಲ್ಲಿ ಬೀಳು = ೧. ಬೇಟೆಗಾಗಿ ಹರಡಿದ ಬಲೆಯಲ್ಲಿ ಸಿಕ್ಕಿಕೊಳ್ಳು : ಬಹಳ ಮೀನುಗಳು ಬಲೆಯಲ್ಲಿ ಬಿದ್ದಿವೆ (ಕೂಡಿ). ೨. ಜಾಲದಲ್ಲಿ ಸಿಕ್ಕಿಕೊಳ್ಳು : ಮುಗ್ಧನಾದ ಬಾಲಕ ವಂಚಕರ ಬಲೆಯಲ್ಲಿ ಬಿದ್ದನು (ಕೂಡಿ).

[ದೇ.॥ ತಮಿ. ವಲೈ; ಮಲ. ತೆಲು. ವಲ; ಕೋತ. ವಲ್; ತೊದ. ಪಲ್ ; ಕೊಡ. ತುಳು. ಬಲೆ ; ಗದಬ. ವಲ್ಲ ; ಗೊಂಡಿ. ಒಲ್ಲ]

ಬಲೆ$_2$, ಬಳೆ$_3$ (ನಾ). ಒಂದು ಬಗೆಯ ಸಸ್ಯ; ಕಳ್ಳಂಗಡಲೆ: "ವಾರಾಹೀ-ಬಲೆ" (ಓಷಧಿ. ೦೧೯); "ಹೆತ್ತುತ್ತಿ, ಹೆತ್ತುಟ್ಟಿ, ಕಿಸಂಗಿ, ವಿಷಗುಂಬಳ, ಬಲೆ, ಬಿಟ್ಟರಳು, ಬೆಣ್ಣೆಗರಗ, ಭೇದ" (ಸಸ್ಯಪಿ. ೦೨೦). ಬಳೆ$_3$: ಬಳೆಯಂ ಬಜೆಯುಮನೊಂದಿರೆ ತಿಳತೈಲದೊಳಟ್ಟು ಪೂಸಿ ತಿಮಿರ್ಪುದು ಬಜೆಯಂ ಬಟಿಯಂ ಮಿಸಿಸುವುದಂತಾ ಬಳೆಯ ಕಷಾಯಮನೆ ಬಾಲಕಂಗೆಣೆ ಮಾಣ್ಗುಂ (ಲೋಕೋಪ. ೯-೦೬೬). [ಸಂ. ಬಲಾ]

ಬಲೆಗಣ್ (ನಾ). ಬಲೆಯಲ್ಲಿರುವ ಕಣ್ಣು; ಜಾಲದ ರಂಧ್ರ : ಪಲ

ವಾಳಾಪದೊಳೇನೊ ಚೆಲ್ವಣುಗನಂ ಕಟ್ಟಳ್ಕಱಿಂದೆತ್ತಿ ಪೆಂಪಲರ್ವನ್ನಂ ಬಿಗಿದಪ್ಪದಿರ್ದ ನಳಿತೋಳ್ತಾಂ ಬಂಡೆದೋಳ್ಕೋಡದಿರ್ಪಲರ್ಗಣ್ತಾಂ ಬಲೆಗಣ್ (ಪ್ರಸಂ. ೨-೩೨). [ಬಲೆ$_1$ + ಕಣ್]

ಬಲೆಗಾರ 'ಬಲೆಗಾಱ' ನೋ.

ಬಲೆಗಾಱ, ಬಲೆಗಾರ (ನಾ). ೧. ಜಾಲವನ್ನು ಬಳಸುವವನು; ಬೆಸ್ತ: "ಜಾಲಿಕ, ವಾಗುರಿಕ_ಬಲೆಗಾಱ" (ನಾಶರಾ. ೬); ವರ ಕಮಠ ಮತ್ಸ್ಯಂಗಳಂ ನಿಜಕರದಿನೇಕೋದಕದೊಳೊಡರಿಚಿ ಪಿರಿಯ ಗಾಳವನಿಕ್ಕುವಾ ಬಲೆಗಾಱನುಂ ತಾನೆ (ಬಸಪು. ೨೦-೨೬); ಸಮ್ಮಗಾಱರ ಬಲೆಗಾಱರ ಪರದರ ಕ್ಷತ್ರಿಯರ ಪಾರ್ವರ ನಾಡಿಗರೊಂದು ಜಂಗುಳಿ (ರಾಮಾಶ್ವ. ೭೯-೧೯). **ಬಲೆಗಾರ** : ೧. "ಕೈವರ್ತಃ, ದಾಶಃ, ಧೀವರಃ__ಮೀನುಗಳನ್ನು ಹಿಡಿಯುವ ಬೆಸ್ತರವರ ಹೆಸರು, ಮೀನಿನ ಬಲೆಗಾರರು ಅಂದರೆ ಪಾಶವಾರ" (ಸಿದ್ಧಾಂತಿ. ೯೧). ೨. ಬಲೆಯಿಂದ ಮೃಗ, ಪಕ್ಷಿಗಳನ್ನು ಬೇಟೆಯಾಡುವವನು ; ಬೇಡ : "ವಾಗುರಿಕಃ, ಜಾಲಿಕಃ . . . ೨ ಮೃಗದ ಬಲೆಗಾರನ ಪೆಸರು" (ಸಿದ್ಧಾಂತಿ. ೩೦೨). [ಬಲೆ$_1$ + _ಕಾಱ]

ಬಲೆಗ್ರಾಮ (ನಾ). ಒಂದು ಊರಿನ ಹೆಸರು : ಗೋಪರಾಷ್ಟ್ರ ವಿಷಯಾನ್ತ[ಃ] ಪಾತಿ ಬಲೆಗ್ರಾಮಃ ಸೋದ್ರಙ್ಗಃ (ಇಆ. IX, ೦೨೪-೦೯; ೧ನೆಯ ಶಕ). [ಬಲೆ$_2$ + ಗ್ರಾಮ]

ಬಲೆದೊಡಕು (ನಾ). ಜಾಲದಿಂದ ಸಿಕ್ಕಿ ಬೀಳಿಸುವ ಬಂಧನ : ಸಂಯೋಗದ ಸುಖ ಮೈಯುಂಡವಂಗೆ ಲೋಕದ ನಚ್ಚುಮಚ್ಚಿನ ಬಲೆದೊಡಕು ತಪ್ಪದು (ಮದೇವ. ೨೯೭-೬೯). [ಬಲೆ$_1$+ತೊಡಕು$_3$(<ತೊಡಂಕು$_3$)]

ಬಲೆಬೆತ್ತ (ನಾ). ಒಂದು ಬಗೆಯ ಬೆತ್ತ : "ನಾಯಿಬೆತ್ತ, ಬಲೆಬೆತ್ತ" (ಸಸ್ಕಾ. ೨೬); ಬಲೆಬೆತ್ತ, ನಾಯಿಬೆತ್ತ (ಮೈಸಿಗಿ. ೦೫-೨೯೦). [ಬಲೆ$_3$ + ಬೆತ್ತ]

ಬಲೆವಣಿ (ನಾ). ತುರುಬಿನ ಬಲೆಯಲ್ಲಿ ಪೋಣಿಸಿರುವ ಅಲಂಕಾರದ ಮಣಿ : ವೀರಮುದ್ರಿಕೆ ನೂಪುರ ಕಾಂಚಿಯ ದಾಮ ಹಾರ ಪದಕ ಹತ್ತ ಕಟ್ಟು ತೋರಮುತ್ತಿನ ಬೊಟ್ಟು ತುಱುಬಿನ ಬಲೆವಣಿ ಸೇರಿ ಕಣ್ಗೆಸೆದುವವರಿಗೆ (ಕುರುಸಾಂ. ೩೬-೦೫೭). [ಬಲೆ$_1$ + ಮಣಿ$_2$]

ಬಲೆವಱಿ (ಕ್ರಿ). ಬಲೆಯನ್ನು ಕತ್ತರಿಸು; ಜಾಲವನ್ನು ಹರಿದು ಹಾಕು: ದ್ರವ್ಯಲಿಂಗಿಯಾಗಿರ್ದ ಪುಷ್ಪದಾಡನೆಡೆವೆತ್ತು ರಾಗಿಸಿ ಬಲೆವಱಿದ ಕೊಂಕನಂತೆ ಮನೆಯೆ ಗುಱಿಯಾಗಿರ್ಪುದುಂ (ಧರ್ಮಾಮೃ. ೭-೧೬೯). [ಬಲೆ$_1$ + ಪಱಿ$_1$]

ಬಲೆವೀಸು (ಕ್ರಿ). (ಮೀನು, ಪ್ರಾಣಿ, ಪಕ್ಷಿ ಮೊದಲಾದುವನ್ನು ಹಿಡಿಯಲು) ಬಲೆಯನ್ನು ಹರಡು ; ಜಾಲವನ್ನು ಒಡ್ಡು : ಬಲೆವೀಸಿ ಪುಲ್ಲೆಯಂ ಕೆಡಪು ಕಡಂಗಿ ಪೊಯ್ ಪುಲಿಯಂ . . . ಎಂಬ ರವಂ ಪಿರಿದಾಯ್ತರಣ್ಯದೊಳ್ (ರಾಜಶೇ. ೩-೮೯); ಸಂಜೆವರೆಗಂ ನೀರುಳ್ಳ ತಾಣಂಗಳೊಳ್ ಬಲೆವೀಸುತ್ತೆ ನವೀನಮೀನಮನದೆಂತುಂ ಕಾಣದೆ . . . ಪುರಪೂರ್ವಾಶಾನದೀವಾರಿಯೊಳ್ ಜಾಲಮನಿಕ್ಕುತುಂ ಸೆಳೆಯೆ (ಪ್ರಸಂ. ೧೬-೯೨). [ಬಲೆ$_1$+ ಬಿಸು$_1$]

ಬಲೆಹುಲ್ಲು (ನಾ). ಒಂದು ಬಗೆಯ ಹುಲ್ಲು : "ಬಲೆಹುಲ್ಲು, ಮರ ಹಾಸ್ತಿ" (ಸಸ್ಕಾ. ೦೨೬). [ಬಲೆ$_3$+ ಹುಲ್ಲು (<ಪುಲ್)]

ಬಲೋದ್ಧತೆ (ನಾ). ಬಲದಿಂದ ಉಂಟಾದ ಗರ್ವ: ಪರಾಕ್ರಮದಿಂದ ಉಂಟಾದ ಸೊಕ್ಕು : ತಾಯೆ ನೀನವಧರಿಸು ಪೇಳ್ದ ನುಡಿ ಪುಸಿಯಲ್ಲ ಮಾಯೆ ಎನ್ನಾಧೀನ ಮದ್ಬಲೋದ್ಧತೆಯಿಂದೆ ಪ್ರೀಯಮಪ್ಪಂತೆಸಗಿ ಮೋಹಿಸುವುದಿದು ಪಥ್ಯ ಮತ್ಪೇರಣೆಯ ಮೀರದೆ (ವಂಗಾರಾ. ೨-೩೯-೩೯). [ಸಂ. ಬಲೋದ್ಧತಾ]

ಬಲೋದ್ಬಂದಿ (ನಾ). ಹಿಂಸೆ : ತೊಂದರೆ : ಮಹಾಕೋಪೋದ್ರೇಕದಿಂದ ಬಲೋದ್ಬಂದಿ ಜುಲುಂ ಮಾಡೋಣ ೩ ತಿಂಗಳ ಪರ್ಯಂತರ ಅಥವಾ ೫೦೦ ರೂಪಾಯಿ ಜುರ್ಮಾನೆ (ಗ್ರಾಮಾಳ. ೧೯೩). [←ಮರಾ. ?]

ಬಲೋನ್ಮತ್ತ, ಬಳೋನ್ಮತ್ತ (ನಾ). ಪರಾಕ್ರಮದಿಂದ ಗರ್ವಿಷ್ಠನಾದವನು ; ಸಾಮರ್ಥ್ಯದಿಂದ ಸೊಕ್ಕಿದವನು : 'ಬಲೋನ್ಮತ್ತತೆ' ಪರಾ. ಬಳೋನ್ಮತ್ತ : ಚಿಳಾವರ್ತರ್ . . . ತಿಳಿನೀರಂತಪರಜರ್ ಬಳಾವಷ್ಟಂಭಂಗೆಟ್ಟಡಿಗೆಱಗಿ ಕಂಡರ್ ಪಿರಿಯನೊಳ್ ಬಳೋನ್ಮತ್ತಂ ದಲ್ ದುರ್ಬಳಮಿಭಹಯಾನೂನರಬಳಂ (ಶಾಂತಿಪು. ೦೧-೫೫). [ಸಂ.]

ಬಲೋನ್ಮತ್ತತೆ (ನಾ). =ಬಲೋದ್ಧತೆ : ಭೀಮನ ಈ ಬಲೋನ್ಮತ್ತತೆಯನ್ನೂ ಬಾಹುಗರ್ವವನ್ನೂ ನೋಡಿ ಹನುಮಂತನು ಮನಸ್ಸಿನಲ್ಲಿಯೇ ನಕ್ಕು . . . ಎಂದನು (ಪಸಭಾ. ೦೫೨). [ಸಂ. ಬಲೋನ್ಮತ್ತತಾ]

ಬಲೌಘ (ನಾ). ಸೈನ್ಯದ ಗುಂಪು ; ಸೇನೆಯ ಸಮೂಹ : ಕಾಲಾಗ್ನಿಯಂತೆ ಇಟ್ಟಣಿಸುತ್ತೈದುವ ಸುವೇಗನ ಬಲೌಘಕಿದಿರಿಟ್ಟು ನಿಂದಂ ಭೀಮನುತ್ಸಾಹದಿಂದೆ (ಶೈಪುಭಾ. ೯-೨೯); ಕುಶಂ ಬಳಿಕ ನಿಜ ಹಸ್ತಲಾಘವದೊಳಲ್ಲಿರ್ದರಂ ಸದೆದು ಲವನಂ ಬಲೌಘಮೊತ್ತಾಯದಿಂ ಮುತ್ತಿ ಕೊಂಡಿರ್ದ ಕೋಲಾಹಲವನಾಱಿಸಿದನು (ಶೈಪುಭಾ. ೨೦-೬೮). [ಬಲ್$_3$+ ಓಘ]

ಬಲ್ಕಣಿ$_1$, ಬಲುಕಣಿ (ನಾ). ೧. ಬಹಳ ಶೂರನಾದವನು ; ಮಹಾಪರಾಕ್ರಮಿ: ಬಲಿಷ್ಠ: ಸಮರ್ಥ : ಕಣಿಯಂ ಶೌರ್ಯಾಭಿಮಾನಕ್ಕೆಡಱಿದ ರಿಪುಸೈನ್ಯಕ್ಕೆ ಸಂಗ್ರಾಮದೊಳ್ ಬಲ್ಕಣಿಯಂ . . . ಸಾಮಂತಚೂಡಾಮಣಿಯನಣಿಯರಂ ಬಂದು ಕಂಡಂ ಸುರೇಂದ್ರಂ (ಪಂಪಭಾ. ೬-೯೫); ಗುಣನಿಧಿ ನಂದಿವರ್ಧನನ ನಾಡುವನಾಳ್ವೆಸಕೆಯ್ಸಿ ವಿಶ್ವಧಾರಿಣಿಯವಜ್ಞೆಗೆಯ್ಯದೆ ನಗಂ ಬೆಸಕೆಯ್ವೊಡೆ ಪಾಳಿಸಾಂತ ಬಲ್ಕಣಿಯನಘಾರಿಯಂ ತವಿಪ ಕಾಲಮದಿನ್ನೆನಗೆ (ಶಾಂತಿಪು. ೯-೧೦೯); ಫಣಿರಾಜಂ ಬಾರಿಯಿಟ್ಟಟ್ಟಿದೊಡನುದಿನದಿಂ ಬರ್ಪ ಸರ್ಪಂಗಳಂ ಬಲ್ಕಣಿ ತಾರ್ಕ್ಷ್ಯಂ ಭಕ್ಷಿಸುತ್ತುಂ ಮಳಯಗಿರಿಯೊಳಿರ್ಪಂ (ಕಾವ್ಯಾವ. ೯೦೦). ೨. ನಿಪುಣ ; ನಿಷ್ಣಾತ ; ಪರಿಣತ : ನಾಲ್ಕುಮುಪಾಯದ ನುಡಿಗಳ ಸಿಲ್ಕಾಸಿಲ್ಕಿಗಳನೆಯ್ದೆ ನುಡಿದೈ ಕ್ರಮದಿಂ ಬಲ್ಕಣಿಯೈ ನಯದೊಳ್ನುಡಿಯಲ್ಕೊಂಕಂ ಕಲ್ವುದಲ್ತೆ ನಿನ್ನೊಂದಿಗರೊಳ್ (ಶಾಂತಿಪು. ೩-೯೦); ನಾಲ್ಕೆಂಬ ವೀಥಿಯೆಡೆಯೊಳ್ ನಾಲ್ಕಱ ಮಾಱಱೊಳೆ ಮಾಱಱಿಂದಂ ಕೊಳ್ ನೀಂ ಸಿಲ್ಕಿಲ್ಲದೆ ಕೂಡಯ್ದಂ ಬಲ್ಕಣಿ ನೀನಯ್ದುಗೆಯ್ದು ಕಳೆ ಪಡೆದನಿತಂ (ಅಟ್ಟಸು. ೦೨-೫೦). ೩. ಬಲಿಷ್ಠವಾದುದು; ಸಮರ್ಥವಾದುದು; ಪ್ರಬಲವಾದುದು : ಗುಣವಂತಂ ಸತ್ವಗುಣಾಗಣಿತಂ ನಿರ್ಮಳಿನದಶನನಾಯುಷ್ಯಂ ಬಲ್ಕಣಿಯರ್ಪತ್ತಯ್ದುಬ್ದದೆ ಕ್ಷಣಮಾತ್ರಕ್ಕಟಿಪುವು (ಅಕ್ಕಶಾ. ೬-೨೫). ೪. ಪವಿತ್ರವಾದ ಸ್ಥಳ: ಅಣವಿಣಿಗೆಯ್ದಾ ಧರ್ಮ್ಮಮನಣಿಯರಮಳಿದೊಂಗೆ ಪೆಱತು ಗತಿಯಿಲ್ಲಾ ಬಲ್ಕಣಿ ವಾರಣಾಶಿಯೊಳ್ಪಸುವುಂ ಬ್ರಾಹ್ಮಣರನಳಿದನಜಿಗುಜಿಗಿಳಿದ (ಸೌಇಇ. XX, ೦೯-೫೬; 1015); ಪೆರತು ಗತಿಯಿಲ್ಲಾ ಬಲ್ಕಣಿ ವಾರಣಾಸಿಯಲ್ ಬ್ರಾಹ್ಮಣರುಂ ಪಸುಗಳ್ಮನಳಿದನಜಗುಜಿಗಿಳಿದಂ (ಎಳ. VII, ಶಿಳಾರಿ. ೧೫೩-೩೫; 1039). ೫. ಪರಾಕ್ರಮ; ಸಾಮರ್ಥ್ಯ : ನೀನಿನಿಸಾನುಂ ಬಲ್ಕಣಿಯ ಗಂಡನೆ (ಬಂಡರಿ. ೬-೫೦ ಪ). ೬. (?) : ನಿನ್ನಂ ಕೊಟ್ಟಿದ ದಕ್ಕ ಬಲ್ಕಣಿಯನೊತ್ತಿದಂತೆ ನುರ್ಗು ಮಾಡಮೆಂ ಬಾಯೆನೆ (ಬಂಡರಿ. ೬-೫೦ ಪ). ಬಲುಕಣಿ : ೨. ಬಲುಕಣಿಗಳಿವದಿರನು ಕರಿ ಮುಂಕೊಳಿಸಿ ಕೆಡಹಿತು (ಕುವ್ಯಾದ್ರೋ. ೩-೨೯); ಫಣಿವಿಭೂಷಾಂಧಾಸುರರ ಬಲುಕ[ಣಾಶಾಂ. ಗ]ಣಿಯ ಬವರವನಸುರಕುಲಭೀಷಣ ಹಿರಣ್ಯಕರದಟು ಮಿಕ್ಕುದು (ಶೊರರಾ. ೬-೦೭-೩೯). ೭. ಆಶ್ರಯವಾಗಿರುವವನು ; ನೆಲೆಯಾದವನು: ಗುಣಜಳನಿಧಿ ತೇಜದ ಬಲುಕಣಿ . . . ಸಾಮಾಸಿಗವಂಶಾಗ್ರಣಿಯೆನೆ ವಿಭುಮಲ್ಲಿಕಾರ್ಜ್ಜನಂ ರಂಜಿಸುವಂ (ಸೌಇಇ.

XX, ೨೪೬-೨೬; 1228).

[ಬಲ್ಕ್ಣಿ(<ಬಲ್ಲಿತು$_1$)+ಕಣ್ಣಿ./ತುಳು. ಬಲ್ಕಡಿ. ಬಲ್ಗಡಿ]

ಬಲ್ಕಣ್ಣಿ (ನಾ). ಒಂದು ಬಗೆಯ ಮರ (?): ಪುನದಕ್ಷಿಣಸ್ಯ ದಿಸಿ ಬಹುಶ್ನುಹಿಯೆ ಬಲ್ಕಣಿ ವೃಕ್ಷಮೆ ಪುನಪಶ್ಚಿಮ ಮುಖದೆ ಸನ್ದ ಬಹು ಮೂಲಿಕಪೆನ್ತಿಯ . . . ಕೂಡಿತ್ತು ಸೀಮಾನ್ತರಂ (ಎಕ. I, ೦-೨೪; 466). [?]

ಬಲ್ಕಣಿತನ (ನಾ). ೧. ಶೌರ್ಯ; ಪರಾಕ್ರಮ: ಅಣೆದಾರ್ದು ತೋಱಿಬಿಡೆ ಬಲ್ಕಣಿತನದಿಂದಭಿನಿಷಾದಿಗಳ್ ಜವದಿಂದಂ ಮಣಿಗಳೆಱಂಕೆಗಳಾಗಿರೆ ರಣಾಗ್ರದೊಳ್ ಪಿಡಿದು ಮನ್ಮನದ್ವಿರದಂಗಳ್ (ಪರ್ಮಾ. ೪-೬೨). ೨. ರಭಸ; ಜೋರು: ಕಣಿಕಮನಾಜ್ಯದಿಂ ತೊಡೆದು ಮೋದಿಸಿ ದಿದ್ದಮುಮಾಗೆ ಪೊಯ್ದು ಬಲ್ಕಣಿತನದಿಂದಮೊತ್ತಿ ಮಿದಿದು (ಲೋಕೋಪ. ೬-೦೫). ೩. ಧೈರ್ಯ: ತತ್ಕುಮಾರತಾಪಸರ್ ತಾವುಮೊಳಗಱಿಯದೆ ತಱಿಸಂದು ನಿಂದು ನಿರವಧಿಧೈರ್ಯನಿಧಿಯಪ್ಪ ನಾಭಿನಂದನನ ನಿಯಮದವಸಾನಮಂ ಬಲ್ಕಣಿತನದಿಂ ಕೆಲವು ದೆವಸಂಬರಂ ಪಾರ್ದು ತೀರ್ವುದುಂ (ಪರ್ಮಾ. ೦೦-೪೦ ಪ). [ಬಲ್ಕಣ್ಣಿ + — ತನ]

ಬಲ್ಕೆ, ಬಲಿಕೆ (ನಾ). ೧. ಜೋರು; ರಭಸ: ಭೂರಮಣ . . . ಹತ್ತಿರಕೆ ಬಂದು ತಾಗಿದ ಸರಳ ಬಲ್ಕೆಯಿಂ ಕಿತ್ತು ಸಗ್ಗಳೆಯುದಕದಿಂದ ಜೋರಿಡುತಿರ್ದ ನೆತ್ತರಂ ತೊಳದೊರಸಿ ಮೃಗವಪರೆ ಮಾನಿಸರು ಕ್ರೀಡೆಯಿಂ ನೊಂದಿರೆಂದಂ (ತುರಂಗ. ೦೦-೦೯). ೨. ದೊಡ್ಡದಾದುದು; ಹಿರಿದಾದುದು: 'ಬಲ್ಕೆವೆಱು' ಪರಾ. ಬಲಿಕೆ: ೩. ಹೆಚ್ಚಳ; ಆಧಿಕ್ಯ: "ಬೃಂಹಸ್, ಬೃಂಹಿಃ, ಬೃಂಹುಃ, ಬೃಂಹಣಂ, ಬೃಂಹಿತಂ, ಈ ೫ ಬಲಿಕೆ" (ಕಾಶಕ್ಯ. ೬೭); ಮಲಂ ಪಿಂಗಿದಂಗದೊಳು ಸಲೆ ಮೂಲಮಲಮಿಹುದು ಮೇಣ್ಮಲ ತೊಲಗಲಾ ದೇಹದ ಹಂಗು ಮತ್ತೇಕೆ ಮಲಬಲಿಕೆಯಿಂ ರಾಜಿಸಿರ್ಪಂಗಕ್ಕೆ ಲಿಂಗಸಮವಾದ ರುದ್ರಾಕ್ಷಿ ಭಸಿತಂಗಳಂ ಧರಿಸಿಯಾ ದೇಹ ಸಹ ನೀವು ತಲ್ಲಿಂಗವ ಪಿಡಿಯಲಕ್ಕುಮೆ (ಬಕೋಪು. ೭-೬೬). ೪. ಬೆಳವಣಿಗೆ; ಅಭಿವೃದ್ಧಿ; ಏಳಿಗೆ: ಇಕ್ಷುದಂಡ ಬಲಿವುದಕ್ಕೆ ಮೊದಲೆ ತನಿರಸ ಬಹುದೇ ನಾನು ನೀನೆಂಬುದಕ್ಕೆ ಸ್ಥಾಣುಪಹುವಕ್ಕೆ ಭಾವದ ಬಲಿಕೆ ಇನ್ನಾವುದೋ (ಮೋಳಿಮಾ. ೫೨-೨೦೫); ಶಿಲೆಯ ಪ್ರತಿಷ್ಠೆಯ ಮಾಡಿ ತನ್ನ ಒಲವರ ವಿಶ್ವಾಸದಿಂದ ಬಲಿಕೆಯನಱಿವುದು ಶಿಲೆಯೊ ಮನವೊ (ಅಂಬಿಪ. ೪೦೦-೦೫೧೫); ಬೆಳೆದೆ ನೀನಾ ಸೂತಕವ ಹೊತ್ತು ಉದರದೊಳು ಬಳಿಕ ಹೊಲೆ ಮಾದುದಾಕೆಗೆ ನಿನ್ನ ಬಲಿಕೆಯೊಳು (ದೀಕ್ಷಾಪೋ. ೪೨-೨೦). ೫. ಬಲಿತಿರುವಿಕೆ; ಗಟ್ಟಿಯಾಗಿರುವಿಕೆ; ಬಿರಂಸಾಗಿರುವಿಕೆ: ಬಲಿಕೆಗೆ ಮೊದಲು ಅಡಕೆ ಮೆದುವಾಗಿರುತ್ತದೆ (ರೂಢಿ). 'ಬಲಿಕೆಅನ್ನ' ಪರಾ. ೬. ಪರಿಣತಿ; ಪ್ರೌಢಿಮೆ: ನಲಿದಾಡುತೆಯ್ತಂದು ಸಖರಾಜನೆಂಬುದೊಂದೆ ಳೆಗೂಸು ಕೈಯೊಳು ಪಿಡಿದು ಗಿಲಿಕೆಯ ಕೋಲನಿತ್ತಯ್ಯಗೆಱಗಿತಿದು ಬಲಿಕೆಯ ಮೆಚ್ಚಲೈಯೆಂದ (ಭರತ. ೪೬-೦೨೬); ಪರರಂ ಜಯಿಸಬೇಕೆಂದೇ ಕಲಿತಿರಲ್ಲದೆ ನೀವು ಮುಕ್ತಿಗೆ ಕಲಿತುದಿಲ್ಲಂ ನಿಮಗೆ ಶಾಸ್ತ್ರದ ಬಲಿಕೆಯುಳ್ಳವರೆನಿಸಿಕೊಂಬುದೆ ಮುಕ್ತಿಯೆಂದಿಹಿರಿ (ಶಂಕದಾ. ೦೨-೬). 'ಬಲಿಕೆವಂತ' ಪರಾ. ೨. ರಚನೆ; ಮಾಟ; ನಿರ್ಮಾಣ: ಅದು ತೃಣದ ಲೆಪ್ಪದ ಬಲಿಕೆಯೊ ತನ್ನ ಚಿತ್ತದ ಬಲಿಕೆಯೊ (ಬಲೇಶ್ವ. ೦೭೬); ದಳವಾಡಸಹಿತ ಬೈಚಪ್ಪ ದುರ್ಗವ ಹೊಕ್ಕು ತಳುವದದಱ ಬಲಿಕೆಯನು [ಪಾಠಾಂ. ಬಳಿಕಿನ್ನು] ಬಳಸಿ ಬಳಸಿ ನೋಡಿ ದುರ್ಗಸೌರಣೆಯನಂದಲಸದೆ ಮಿಗೆ ಮಾಡಿಸಿದನು (ಕುರಾಸಾಂ. ೫೭-೫೦).

ಬಲಿಕೆಯಾಗು = ೧. ಗಟ್ಟಿಯಾಗು; ಬಲಿ; ಬಿರುಸಾಗು: ಬಲಿಕೆಯಾಗದ ಅಡಕೆ ಬಣ್ಣ ಕಟ್ಟಲು ಚೆನ್ನಾಗಿರುತ್ತದೆ (ರೂಢಿ). ೨. ಬಿಗಿಯಾಗು; ಬಲವಾಗು; ಭದ್ರವಾಗು: ಕ್ಷಣದೊಳಗೆ ಪಾವೊಂದ ನರರೆ ತೆಗೆದಲ್ಲಿ ನೆಱೆ ಬಿರಿದ ಕುಕ್ಷಿಯುಂ ಸಸಿನೆ ಮಾಡುತ ಕಟ್ಟಿದಂ ಬಲಿಕೆಯಪ್ಪಂದದೆ (ವೀಕೃಪು. ೩-೪-೨೬).

[ಬಲ್ಕ್ಣಿ (<ಬಲ್ಲಿತು$_1$)+ — ಕೆ./ ತುಳು. ಬಲಿಕೆ]

ಬಲ್ಕೆಲೆ (ಕ್ರಿ). ಬಹಳ ಮಾತನಾಡು: ಲೋಚನಯುಗ್ಮದಿಂದೆಡಬಲಂಗಳ ನೀಕ್ಷಿಸಿ ತನ್ನ ನಲ್ಲನಂ ಸೂಚನೆಗೈದು ಕೂಡೆ ಕರೆದೊಯ್ಯನೆ ಬಲ್ಕೆಲೆಯುತ್ತು ಮಾತನೊಳ್ (ಉಶ್ಯಪ. ೨-೬೦). [ಬಲ್ಕ್ಣಿ (<ಬಲ್ಲಿತು$_1$) + ಕೆಲೆ]

ಬಲ್ಕೆವೆಱು (ಕ್ರಿ). ಹಿರಿದಾಗು; ದೊಡ್ಡದಾಗು: ನಿಲ್ಕಡೆವೆತ್ತಂದಿ ನಾಯುಷ್ಯವೆಂಭತ್ತನಾಲ್ಕು ಲಕ್ಷಾಂಕಪೂರ್ವೆಗಳು ಬಲ್ಕೆವೆತ್ತಾ ಪೂರ್ವೆಯೆಂದರೆಷ್ಟೆಂಬುದ ಸಿಲ್ಕಾಗದಂತೆ ಪೇಳುವೆನು (ಭರತ. ೭೬-೭).

[ಬಲ್ಕೆ + ಪೆಱು$_1$]

ಬಲ್ಕೇಡಿಗ (ನಾ). ಬಹಳ ಕೇಡಾಳಿಯಾದವನು; ಅತಿ ದುಷ್ಟಸ್ವಭಾವದವನು: ಕೇಡಿಗರೊಳವನೋರ್ವನೇ ಬಲ್ಕೇಡಿಗನು (ಪರಾಮಾ. ೨೫೦-೪೩).

[ಬಲ್ಕ್ಣಿ (<ಬಲ್ಲಿತು$_1$) + ಕೇಡಿಗ]

ಬಲ್ಗಂಡ, ಬಲುಗಂಡ (ನಾ). ಬಹಳ ಶೂರನಾದವನು; ಅತ್ಯಂತ ಪರಾಕ್ರಮಿಯಾದವನು: ಪರಾಂಗನಾಪುತ್ರಂ ಮಲೆಗೆ ಮಾರ್ತ್ತಾಂಡಂ ಗಜಕೆ ಬಲ್ಗಂಡಂ ಹಯವತ್ಸರಾಜಂ (ಎಕ. VII, ಶಿಕಾರಿ. ೫೩-೦೦; 1027); ಚೋಳಕುಳಕಾಳದಣ್ಡಂ ಸಬರೆ ಬಲ್ಗಂಣ್ಡಂ ಕಲಿಗಳಾರಾಧ್ಯನಾರ್ಗ್ಗಮಸಾಧ್ಯಂ (ಸೌಇಇ. XI-i, ೯೭-೬; 1062); ಉದಾರಮಹೇಶ್ವರಂ ಚಲಕೆ ಬಲ್ಗಣ್ಡಂ ಶೌರ್ಯ್ಯಮಾರ್ತ್ತಣ್ಡಂ . . . ಶ್ರೀಮನ್ಮಹಾಮಣ್ಡಳೇಶ್ವರಂ ಲಕ್ಷ್ಮರಸರ್ (ಸೌಇಇ. XX, ೪೭-೭; 1074) ಬಲುಗಂಡ: ಯಾದವ ಕುಳಾಮ್ಬರದ್ಯುಮಣಿ ಸಮ್ಯಕ್ತಚೂಡಾಮಣಿ ಮಲಪರೊಳ್ಗಣ್ಡ ಚಲಕೆ ಬಲುಗಣ್ಡ . . . ತಳಕಾಡುಗೊಣ್ಡ (ಎಕ. II, ೦೪೩-೨೦; 1131).

[ಬಲ್ಕ್ಣಿ (<ಬಲ್ಲಿತು$_1$) + ಗಂಡ$_1$]

ಬಲ್ಗಂಡಿಕೆ (ನಾ). ಬಹಳ ಶೂರತನ; ಅತ್ಯಂತ ಪರಾಕ್ರಮ: ಒಳಕೆಯ್ಯೊಳಿರ್ದು ಪಲ್ಗಿರಿದೊಳವಾಲಂಗೊಂಡು ಮೊರೆವ ಭಷಕನ ತೆಱದಿಂದೊಳ ಪೊಕ್ಕು ದುರ್ಗಮಂ ಸಂಚಳಚಿತ್ತಂ ನುಡಿಗುಮೆಮಗೆ ಬಲ್ಗಂಡಿಕೆಯಂ (ಕಾಪ್ಯಾವ. ೨೪೪); ಈತನಲ್ತೆ ಮುಳಿದೆನ್ನನಿಲ್ಲಿ ಪೊದಱೊಳ್ ಬಲ್ಗಂಡಿಕೆಯಿನಾಳೆಮೆಟ್ಟಿದೊನೆಂದೊಡರ್ಜುನನಾ ಬಂದಾತನನಿಂತೆಂದಂ (ಬಂಹಂ. ೦೦-೫೦ ಪ). [ಬಲ್ಕ್ಣಿ (< ಬಲ್ಲಿತು$_1$) + ಗಂಡಿಕೆ$_1$]

ಬಲ್ಗಂಡಿಕೆಗಾಣ್ (ಕ್ರಿ). ಅತಿಶಯವಾದ ಶೌರ್ಯವನ್ನು ಕಾಣು; ಅತ್ಯಂತ ಪರಾಕ್ರಮವನ್ನು ತಿಳಿ: ಪೊದಱಿಂದಂ ಪೊಱಮಟ್ಟು ಕಟ್ಟಿದಿರೊಳಾರ್ಪಿಂ ಗರ್ಜಿಸುತ್ತಿರ್ಪ ಬಗ್ಗದ ಬಲ್ಗಂಡಿಕೆಗಂಡು ಗಂಡುಗಲಿ ಬೇಡಂ ಖಡ್ಗದೆ ಬೆನ್ನೊಳ್ ಮೊನೆದೋಱೆಮಿಱಿ ತಿವಿದಂ ತತ್ಕಾಳ ಮೇಘಾಹ್ವಯಂ (ರಾಜಶೇ. ೩ ೯೯). 'ಗಂಡಿಕೆಗಾಣ್' ಪರಾ.

[ಬಲ್ಗಂಡಿಕೆ + ಕಾಣ್]

ಬಲ್ಗಂಡು (ನಾ). = ಬಲ್ಗಂಡಿಕೆ: ಗಂಡುಡೆಯುಟ್ಟು ಕೈದುವಿಡಿದುಮ್ಮಳಮಂ ನಿನಗುಂಟುಮಾಟ್ಟ ಬಲ್ಗಂಡಿನ ದೇವ ಮಾನವ ವಿಯಚ್ಚರ ರೊರ್ವರುಮಿಲ್ಲ (ಪಂಠಾಮಾ. ೯-೦೫೮). [ಬಲ್ಕ್ಣಿ (< ಬಲ್ಲಿತು$_1$) + ಗಂಡು]

ಬಲ್ಗಂದ (ನಾ). ಬಹಳವಾದ ಪರಿಮಳ; ಅತಿಶಯವಾದ ಸುವಾಸನೆ: ಹಯತತಿಗೆ ಮೊಗರಂಬ ಕಡಿಯಣಂಗಳನಿಟ್ಟು ಪಲ್ಲಣದ ಬಿಗುಹುಗಳ ತಾಪಣೆಯ ಲೇವೆಗಳನಳವಡಿಸಿ ಬಲ್ಗಂದವಿಡಿದು ನಮಿಸಿ ನೆಗೆದಡರಿ. . . ಕಾದುತ್ತಲಿರ್ದರಿರ್ಬಲದ ಘೋಟಾರೂಢರಾಹವದೊಳು (ಕಬಿಪು. ೪೬-೫೦).

[ಬಲ್ಕ್ಣಿ (< ಬಲ್ಲಿತು$_1$) + ಗಂದ]

ಬಲ್ಗಂಬ (ನಾ). ಬಲವಾದ ಕಂಬ; ಬಲಿಷ್ಠವಾದ ಸ್ತಂಭ: ರಾಜಾಂಗಣದ ಬಯಲ ಬಲ್ಗಂ[ಪಾಠಾಂ. ಬಾಳ್ಗಂ]ಬಂಗಳೊಳ್ ಸಱೆಗೆಯ್ದಿರ್ದ ಜಾವದಾನೆಗಳ ಮೇಲೆಡೆಗೆಡೆದು ಮೂವಳಸಾಗಿ ಮುಸುಂಕಿ

ತದ್ಗಜಂಗಳ್ಗೆ ಪಾಲ್ಗಡಲ ನಡುವಣ್ಗೆರಾವತದ ಲೀಲೆಯನೋಲಗಿಸಿಯುಂ (ಸಂಕ್ರಪು. ೬-೧೪ ಪ) ; ಸಪ್ತಪುದಾವಸ್ಥೆಯಿಂ ಮುಂದುಗಾಣದೆ ಬಲ್ಗಂಬ [ಶಾಂಗಂ. ಭ]ಮಂ ಮುಱಿದು ನಿಗಳಮಂ ಪಱಿದು ನಿಟ್ಟೋಟದಿಂ ಬೀದಿವರಿದು (ರಾಜಶೇ. ೬-೦೦ ಪ).

[ಬಲ್ಗ್ (< ಬಲ್ಲಿತು$_1$) + ಕಂಬು$_1$ (< ಕಂಭ)]

ಬಲ್ಗಜ್ಜ, ಬಲುಕಜ್ಜ, ಬಲುಗಜ್ಜ (ನಾ). ಬಹಳವಾದ ಕಾರ್ಯ ; ವಿಶೇಷವಾದ ಕೆಲಸ: ಮತ್ಪ್ರಾಣಾಧೀಶಂ ತಾಮ್ಮೊದಲುಜ್ಜುಗಿಸಿದ ಬಲ್ಗಜ್ಜಮೆ ನೇಮುವೆ ತನಗೆನುತವೆ ತನುವಿನೊಂದಾಸೆಗೆ ಬಗೆಗುಡದೆ ಸಾಮಜಗಮನೆ ಸುಲೋಚನೆಯಾವುದ್ದಾಮ ನದಿಯ ಹೆಮ್ಮಡುವಂ ಪೊಕ್ಕಳ್ (ಪಯಶಾ. ೯-೨೯). **ಬಲುಕಜ್ಜ** : ಉಲುವೆಯೇನಧಿಕವೈ ವರತನು ಮುಂದಿನ್ನು ಬಲುಕಜ್ಜವುಂಟದಱಿಂದ ತೊಲಗದೆಮ್ಮೊತ್ತಿನೊಳಿರು (ಧರಪ. ೨೭-೨). **ಬಲುಗಜ್ಜ** : ಹಲವು ಕೋಶಕೆ ಕಡಿಮೆಯಿಲ್ಲಮಿಾ ಚತುರಂಗಬಲದೊಳೆರಡಿಲ್ಲಮಿಂದೆನ್ನೆಡೆಗೆ ನೀಂ ಬರ್ಪ ಬಲುಗಜ್ಜಮಾವುದುಂಟೆನೆ (ಪಂಪಪು. ೪-೨೦).

[ಬಲ್ಗ್$_2$ (< ಬಲ್ಲಿತು$_1$) + ಕಜ್ಜ]

ಬಲ್ಗಟ್ಟೆ (ನಾ). ದೊಡ್ಡ ಅಣೆಕಟ್ಟು : ಬುಳ್ಳರಾಜಂ ಹರಿದ್ರಾನದಿಯಂ ಬಲ್ಗಟ್ಟೆಯಂ ಕಟ್ಟಿಸಿ . . . ಅಖಿಲಜನಕೆ ಸಜ್ಜೀವನೋಪಾಯಮಂ ಮಾಡಿದಂ (ಎಕ. XI. ಧಾವಣ. ೨೯-೬ . 1424)

[ಬಲ್ಗ$_2$ (< ಬಲ್ಲಿತು$_1$) + ಕಟ್ಟೆ$_1$]

ಬಲ್ಗಡಣೆ (ನಾ). ದೊಡ್ಡ ಸಮೂಹ, – ರಾಶಿ : ಕಡಲ ಮುನ್ನಱಿಯದ ಪೆಂಗಳ್ಚಟ್ಟರವಟ್ಟು ನಿಡುಬೆರಳಟ್ಟು ನಾಸಿಕಕೆ ಮುಡಿಯೊಲೆದೊಲೆದು ನೋಡಿದರದಱೊಂದು ಬಲ್ಗಡಣೆಗೆ ಬಗೆಯೊಳು ಮೆಚ್ಚಿ (ಧರಪ. ೨೩-೯೩).

[ಬಲ್ (< ಬಲ್ಲಿತು$_1$) + ಗಡಣೆ$_1$ (< ಗಡಣ)]

ಬಲ್ಗಡಲ್, ಬಲುಗಡಲು (ನಾ). ದೊಡ್ಡ ಸಮುದ್ರ ; ವಿಶಾಲವಾದ ಸಾಗರ: ಅಡಿಗಡಿಗಾನಂದವೆಂಬ ಸಾಗರವನೊಕ್ಕುಡಿತೆಯ ಮಾಡಿ ಸೇವಿಪನು ಒಡನೊಡನೀಂಟದಪ್ಪಕೆ ಹೆಚ್ಚಿ ಕಡಲು ಬಲ್ಗಡಶಾಗುತಿಹುದು (ಧರಪ. ೦೯-೬೦). **ಬಲುಗಡಲು** : ಬಗೆವುದೇ ಬಲುಗಡಲು ಮಂಜಿನ ಮುಗಿಲವಳೆಯನು (ಕುಮಾಸಂ. ೦೦-೧೦). [ಬಲ್$_2$ (< ಬಲ್ಲಿತು$_1$) + ಕಡಲ್$_2$]

ಬಲ್ಗಣೆ, ಬಲುಗಣೆ (ನಾ). ಬಲವಾದ ಬಾಣ ; ಶಕ್ತಿಯುತವಾದ ಬಾಣ : ಕೋಲ್ಗಾರೊಳ್ ಸುರಿವಾಲಿವರಲ್ಗಳವೊಲ್ ನೆತ್ತಿಯೆಡೆಯ ಮುತ್ತುಗಳೆತ್ತಂ ಗಲ್ಗಲನೆ ಸುರಿಯೆ ಜೋದರ್ ಬಲ್ಗಣೆಯಿಂದೆಚ್ಚರದಟ ನಿಂದಾನೆಗಳಂ (ಕಬ್ಬಿಗಾ. ೨೮೨) ; ಬಲ್ಗಿಚ್ಚ ಪಳಿವ ಲಿಂಗಂ ಮೂಡೆ ಕಣ್ಗೆಟ್ಟು ಕಾಲ್ಗಾಣದಾವನಾ ಕಾಳ್ಗೆಯ್ತಕಳ್ಕುತೆ ತುಳಿಲ್ಗುಂದಿ ನಾಲ್ಮೊಗಂ ತಲೆಗಂಡನೇ ಶಿವನ ಬಲ್ಗಣೆಯ ಪೋಲ್ಗಾವನು (ಭಾವಸಂ. ೩-೨೬). **ಬಲುಗಣೆ** : ಅಣದಣದು ಹೋಹವನ ಗಗನಾಂಗಣದ ಮಾರ್ಗಿಯ ಮಾಡದಿರೆ ಬಲುಗ[ಶಾಂಗಂ. ಕ]ಣೆಯ ಭಟನೇ ತಾನೆನುತ ಹೊಱವಂಟ ನಾಹವಕೆ (ತೊರಗಂ. ೯-೩-೯). [ಬಲ್$_2$ (< ಬಲ್ಲಿತು$_1$) + ಕಣೆ$_1$]

ಬಲ್ಗಣ್ಣ (ನಾ). ಬಿಗಿಯಾದ ಹಗ್ಗ : ಮರೆಗಿಂತೊಡ್ಡೊಡ್ಡು ಬಲ್ಗಣ್ಣಿಯ ಬಲೆಗಳನಂತೊತ್ತುಗೊಳ್ಳೊತ್ತುಗೊಳ್ಳೀ ಸರದಿಂ. . . ಎಂದೆನುತ್ತಾತುರದಿಂದೋರೊರ್ಬರೊಳ್ ಸಾಱುವ ಶಬರರ ತೀವ್ರಸ್ವನಂ ಪರ್ಬಿತಾಗಳ್ (ಶುಸಾಪು. ೦೯-೨೬) ; ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬಲ್ಗಣ್ಣಿಯೊಳ್ಕಟ್ಟುವಡೆದಲ್ಲೆನಲಱಿಯದೆ ನಿರ್ವಿಣ್ಣಭಾವದೊಳಂದು ಲಕ್ಷ್ಮಣಂ. . . ಇಂತೆಂದನು (ಶ್ರೀಪಾಶಾ. ೦೮-೬೦). [ಬಲ್$_2$ (< ಬಲ್ಲಿತು$_1$) + ಕಣ್ಣಿ]

ಬಲ್ಗತ್ತಲೆ, ಬಲುಗತ್ತಲೆ (ನಾ). ದಟ್ಟವಾದ ಕತ್ತಲೆ ; ಕಗ್ಗತ್ತಲೆ : ಕಾದಿ ಕಾದಿ ಶತಮಾಯನುಱೆ ಬೇಸತ್ತಡರ್ದಂಬರಾಂಗಣದೊಳಿರ್ದು ಬಲ್ಗತ್ತಲೆಯನೊತ್ತಿ ಕವಿಸಿ ಮೋಸದೊಳ್ ಬಿಲ್ಲಂಬುಗಳ ಸದ್ದು ಪುಟ್ಟದಂತೋಸರಿಸದೆಸುತಿರ್ದಂ (ಶಪು. ೪೯-೩೯) ; ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ ಪೊತ್ತುವೆಳಗಂ ಬೀಱೆ ತೋರ್ಪರಾರ್ (ಶ್ರೀಪಾಶಾ. ೨-೦೬). **ಬಲುಗತ್ತಲೆ**: ಲೇಸೆನಿಪ ಕೈದೀವಿಗೆಗಳ ವಿಭಾಸದಿಂ ಮಿಗೆ ಪಿಡಿದುಕೊಂಡು ಲ್ಲಾಸವೆತ್ತಾಳ್ವರಿಯ ಮೇಲಿಂತಿರುಳು ತಿರುಗುತಿರೆ ಆ ಸರವಿಗಳು ಸವೆಯೆ ಪರಿತಂದಾಸುರದಿ ಬಲುಗತ್ತಲೆಯ ಮಱೆಯಾಸೆಯಲಿ ಹಗೆಯಂತು ಹೊಗುವರೋ: (ಪಸಪು. ೦೬-೨೩); ಬಿಲಮುಖದೊಳುತ್ತರಿಸಿ ಬಲುಗತ್ತಲೆಯೊಳಡವಿಯ ಮಾರ್ಗದಲಿ ಕಲುಮುಳುಗಳೊಳು ಕಾಪಥಕೆ ಕೋಮಳ ಚರಣಗಳ ಕೊಡುತ ತೊಳಲಿದರು (ಶುಸಾಶ. ೯-೯೩).

[ಬಲ್$_2$ (< ಬಲ್ಲಿತು$_1$) + ಕತ್ತಲೆ$_1$ (< ಕಟ್ಟಲೆ)]

ಬಲ್ಗತ್ತಿ, ಬಲುಗತ್ತಿ (ನಾ). ಬಲವಾದ ಕತ್ತಿ; ಬಲಿಷ್ಠವಾದ ಖಡ್ಗ: ಎತ್ತಿ ಬಹ ಸತ್ತಿಗೆಯ ಮೊತ್ತಂಗಳೆತ್ತಲುಂ ಕತ್ತಲಿಸೆ ಪೊತ್ತ ಮಸೆವೆತ್ತ ಬಲ್ಗತ್ತಿಗಳ ಕತ್ತು ಭಟರೆತ್ತಿ ಜಡಿಯುತ್ತಿರಲ್ಕೆ (ಶ್ರೀಪಾಶಾ. ೪-೦೯). **ಬಲುಗತ್ತಿ** : ತತ್ತನೂಜನ ಗಂಟಲಲಿ ಬಲುಗತ್ತಿಯಂ ಪಿತನೊತ್ತುವಾಗಳೆ ಕೃತ್ತಿವಾಸಂ ಜಾಣನಾದಡೆ ಮೆಚ್ಚಿ ಕೊಡಬೇಡಾ (ಪಸಪು. ೨೫-೨೫).

[ಬಲ್$_2$ (< ಬಲ್ಲಿತು$_1$) + ಕತ್ತಿ]

ಬಲ್ಗನ್ನ (ನಾ). ಬಹಳವಾದ ಮೋಸ; ಅತಿಯಾದ ವಂಚನೆ : ಸಾಂಬನಂ ಜಾಂಬವತಿಯಣಾಗನಂ ಸ್ತ್ರೀವೋಲ್ ತೆಱಂಬೊಳೆಯೆ ಸಿಂಗರಿಸಿ ತನ್ಮುನಿಗಳೆಡೆಗೆ ತಾದೇಂ ಬಣ್ಣಿವೆಂ ನಮಿಸಿ ಭಾವಿಕಾರ್ಯಂಗೇಳ್ವೆವೆನುತೆ ಬಲ್ಗನ್ನದಿಂದೆ ಡಂಬಕರ್ ಕೇಳ್ದರೀ ಪುತ್ರಕಾಮಿಯ ಬಭ್ರುವೆಂಬವನ ಪೆಂಡಿರಿವಳೇಸಂ ಪೆಱುವಳೆಂಬುದಂ (ಪರ್ಶಾ. ೧೦-೦೪೬).

[ಬಲ್$_2$ (< ಬಲ್ಲಿತು$_1$) + ಗನ್ನ$_1$]

ಬಲ್ಗಯ್ ‘ಬಲ್ಗೆಯ್’ ನೋ.

ಬಲ್ಗಯ್ಯ ‘ಬಲ್ಗೆಯ್ಯ’ ನೋ.

ಬಲ್ಗರ, ಬಲುಗರ$_2$ (ನಾ). ೧. ಬಲವಾದ ಗ್ರಹ: ಅರಸುಮಕ್ಕಳೆಲ್ಲಮಾಬಿಲ್ಲಂ ಕಂಡು ಬಲ್ಗರಂ ಪೊಡೆವಂತೆ ಪೆಡಂ ಮಗುಳೆ (ಪಂಚಾಪು. ೩-೬೨ ಪ); ನುಡಿದಪೆಯಿಲ್ಲ ನೀಂ ಮಗಳೆ ನಿನ್ನನಿದೇಂ ಪೊಡೆದತ್ತೊ ಬಲ್ಗರಂ ಪಿಡಿದುದೊ (ಲೀಲಾವ. ೨-೦೦೬); ಬಯಲುಗನಪ್ಪ ಸನತ್ಕುಮಾರಂ ಶೂನ್ಯ ಹೃದಯಾಂಧಂ ಕಣ್ಮುಚ್ಚಿ ಗೋಣಂ ನಿಮಿರ್ಚಿ ಬಲ್ಗರಂ ಪೊಡೆದಂತೆ ಬೆಬ್ಬನೆ ಬೆಱತಿರೆ (ಸಾಂಪಂ. ಕಥಾಗರ್ಭಸಂಧಿ. ೨೩ ಪ). **ಬಲುಗರ$_2$** : ೧. ಪಾರ್ಥ ಬಲುಗರವವಚಿದಂತಿರೆ ಮೂಕನಾದನು ಬೆರಳ ಮೂಗಿನಲಿ (ಕುಮಾಪುರಿ. ೬-೩೬). ೨. ಗ್ರಹಚಾರ: ಬಲುಗರಮಿದೆತ್ತಣದೊ ಕಾರುಣ್ಯನಿಧಿಗೆನುತೆ ನಡನಡುಗಿ (ಶ್ರೀಪಾಶಾ. ೦೬-೫೦). [ಬಲ್$_2$ (< ಬಲ್ಲಿತು$_1$) + ಗರ$_2$]

ಬಲ್ಗರು (ನಾ). ಎರಕದ ದೊಡ್ಡ ಬೊಂಬೆ : ತಿಳಿಹೊನ್ನದೆಱಕದ ಪುರುಷರೊ ಬೆಳ್ಳಿಯ ಥಳಥಳಿಸುವ ಬಲ್ಗರುಗಳ ಪೊಳಪೊಯೆಂದೆನೆ ಧವಳಾಂಬರದಿಂ ಪಾನರೆಳಸಿದರೇನ ಬಣ್ಣಿಪೆನು (ಕುರಾಸಾಂ. ೦೯-೩೫).

[ಬಲ್$_2$ (< ಬಲ್ಲಿತು$_1$) + ಕರು$_2$]

ಬಲ್ಗರುಳ್, ಬಲುಗರುಳು (ನಾ). ದೊಡ್ಡದಾದ ಕರುಳು,– ಅಂತ್ರ: ದಂತದಂಡಹತಿಯಿಂ ಬಿಸುನೆತ್ತರ ಧಾರೆಗಳ್ ಭುಗಿಲ್ಬುಗಿಲೆನೆ ಪಾಯ್ದು ಪೊಣ್ಮಿದುವು ಕೋಱ್ಮೈದುಳೊಕ್ಕುವು ಬಲ್ಗರುಳ್ಗಳ್ (ಪಂಚಾಪು. ೦೩-೯೦). **ಬಲುಗರುಳು** : ಅವನ ನೂಱುಬುಗಳ ಕಡಿದವನವಯವವ ಕೀಲಿಸಿದಾಕ್ಷಣವವನಿಯಲಿ ಬಲುಗರುಳು ಬಿದ್ದವು ಭಟನ ಕಿಬ್ಬರಿಯ (ಕುಮಾರಪ್ರೀ. ೩-೨೬). [ಬಲ್$_2$ (< ಬಲ್ಲಿತು$_1$) + ಕರುಳ್]

ಬಲ್ಗಲಿ (ನಾ). ಮಹಾಶೂರ; ಪರಾಕ್ರಮಿ : ಅಳವನಱಿದು ಬೇಗಿಱೆವ ಬಲ್ಗಲಿಗಳುಮಂ . . . ಮತ್ತಮಣ್ಮೆ ನಡೆದಿಱೆವ ನಡೆಗಲಿಗಳುಮಂ ನೋಡಿ ರುದ್ರಾವತಾರಂ . . . ಹಿಮವತ್ಪರ್ವತಕ್ಕೆ ಪೋಪುದುಂ (ಗರಾಯು. ೯-೩೯ ಪ). [ಬಲ್$_2$ (< ಬಲ್ಲಿತು$_1$) + ಕಲಿ$_2$]

ಬಲ್ಗವಣೆ, ಬಲುಗವಣೆ (ನಾ). ಕಲ್ಲನ್ನು ಬೀಸಿ ಎಸೆಯಲು ಮಾಡಿರುವ

ದೊಡ್ಡದಾದ ಜಾಳಿಗೆಯ ಸಾಧನ ; ದೊಡ್ಡ ಕವಣೆ : ಸೂಸಿದರ್ ಕೆಂಡಮಂ ಬಲ್ಗವಣೆಕಲ್ಗಳಂ ಬೀಸಿದರ್ (ಶಶಿಪ. ೨೨-೩೬). ಬಲುಗವಣೆ : ಶ್ರವಣ ಮನನದ ಬೀಸುವಲೆ ಶಾಂಭವ ಸುವೇದಾದೀಕ್ಷೆಗಳ ಬಲುಗವಣೆಗಳ . . . ನವವಿಧಾಮಲ ಭಕ್ತಿಗಳ ರಣತವಕ ದೀಹದ ಹುಲ್ಲೆಗಳ ಮೃಗ ಭವವಿದಾರಣ ಸುಭಟರೈದಿತು ಶಿವನ ನೇಮವಲಿ (ಕುಮಾ. ೩-೩೫).

[ಬಲ್$_2$ (< ಬಲ್ಲಿತು$_1$) + ಕವಣೆ$_1$]

ಬಲ್ಗಱ (ನಾ). ೧. ದೊಡ್ಡ ರೆಕ್ಕೆ : ಮುಂಚುವೆಱಂಕೆಯಾಗೆ ನಿಡಿದೋಳ್ಗಳ್ . . . ನಖರಾವಳಿ ಬಲ್ಗಱಯಾಗೆ ನಾಸಿಕಂ ಚುಂಚುವ ದಾಗಲಾಗೆಗೆ ಸರಾಕೃತಿ ಗಕ್ಕನೆ ಪೋಗಿ ರಾಜಕೀರಾಂಚಿತಜನ್ಮವೆನ್ನಮರ್ದಪ್ಪಿದುದು (ಶಾಪ್ಯಪ. ೩ ೦೦೩). ೨. ದೊಡ್ಡದಾದ ಬಾಣದ ಗರಿ,– ಪುಕ್ಕ: ಒದೆದೆಡೆಗೊಂಡ ಬಿಲ್ಲ ತಿರುವಂ ಮೊಱೆದೆಳ್ತರದಿಂ ಪಳಂಚಿ ವೇಗದೊಳಿದಿರಾಂತು ಬಲ್ಗಱಯ ಗಾಢಮೊಡಂಬಡೆ . . . ಪಿಂಗದೆ ಪೊಗರಾಂತ ಕೂರ್ಗಣೆಗಳೇಂ ಪರಿತಂದುವೊ ಪಾಂಡುಪುತ್ರನಾ (ಶಶಿಶಂ. ೪-೪೨).

[ಬಲ್$_2$ (< ಬಲ್ಲಿತು$_1$) + ಗಱ]

ಬಲ್ಗಾಡಿ (ನಾ). ವಿಶೇಷವಾದ ಸೊಗಸು ; ಅತಿಶಯವಾದ ಸೌಂದರ್ಯ : ತಾವರೆಗೊಳಂ ತಣ್ಣೊಳಂ ಮೆಱೆದುವೆಂತೆನಲ್ ಭೂಮಿವನದ ಬಲ್ಗಾಡಿಯಂ ನೋಡಲೆಂದೆಳಸಿ ಪಲಗಣ್ ಮರಲ್ಗಳಂ ಪಡದೀಕ್ಷಿಪನುವೊ ಬಳಿಕೆ ಕಮ್ಮರಲ್ಗಯ್ದುಗಾಱನೆಂದೆಂಬ ಪಟುಭಟನ ಕಣೆಗಳ ಡೊಣೆಗಳೋಯೆಂಬಿನಂ (ಕಮ್ಮಠಾ. ೬ ೩೬).

[ಬಲ್$_2$ (< ಬಲ್ಲಿತು$_1$) + ಗಾಡಿ$_1$]

ಬಲ್ಗಾಡು (ನಾ). ದೊಡ್ಡದಾದ ಕಾಡು : ದಟ್ಟವಾದ ಅರಣ್ಯ : ಶಶಿಯಂತೆ ಶಶಪಟ ವಲ್ಮೀಕಾಶ್ರಯ ವಸುಧಾಧಿಪಬಲದಂತೆ ಮುಸುಗಿದ ಖಡ್ಗ ಕರೀಂದ್ರಗಳಿಂ ಕಣ್ಗೆಸೆದಿಹುದಾ ಬಲ್ಗಾಡು (ಕ್ರೀಶಾಂ. ೭-೦೨).

[ಬಲ್$_2$ (< ಬಲ್ಲಿತು$_1$) + ಕಾಡು$_2$]

ಬಲ್ಗಾಪು, ಬಲುಗಾಹು$_1$ (ನ). ಬಲವಾದ ಕಾವಲು ; ಭದ್ರವಾದ ಪಹರೆ: ಅಂತನರ್ಘ್ಯಮಪ್ಪ ದರ್ಶನರತ್ನಮಂ ಸಂಶಯಚೋರರ್ ಪುಗದಂತು ನುಂಗುಗೆಯೆಂಬ ಬಲ್ಗಾಪನಿಕ್ಕಿ ಮನಮೆಂಬ ವಜ್ರದೋಪರಿಯೊಳಿರಿಸಿ (ಧರ್ಮಾಮೃ. ೨-೨). ಬಲುಗಾಹು$_1$: ಅಕ್ಕಱಿಂದಲ್ಲ ನೀನೋಡಿ ಹೋದಹೆಯೆಂಬ ಕಕ್ಕುಲಿತೆಗೇಱಿಂದೆನ್ನೈಸೆಯೆನೆ ಬಲುಗಾಹನಿಕ್ಕಯ್ಯ ಎನೆ . . . ನಡೆದಂ (ಪಕಕಾ. ೬-೬೬). [ಬಲ್$_2$ (<ಬಲ್ಲಿತು$_1$)+ಕಾಪು]

ಬಲ್ಗಾರ (ನಾ). ೧. ಆರ್ಭಟ ; ಗರ್ಜನೆ : ಕೇಸರಿಯ ಬಲ್ಗಾರ ಕಂಜಿ ವಿಶೇಷಗಜವೈತಂದು ಶಬರರ ವಾಸವನು ಕಂಡಲ್ಲಿ ಮರೆಗೊಂಡಿರಲು (ಪಪಶಾ. ೪೦-೩೦). ೨. ಉದ್ಘೋಷ ; ಬಲವಾದ ಧ್ವನಿ : 'ಬಲ್ಗಾರಿಕೆ' ಪರಾ. 'ಉದ್ಗಾರ' ಹೋ. [ಬಲ್$_2$ (<ಬಲ್ಲಿತು$_1$)+ ?]

ಬಲ್ಗಾರಿಕೆ (ನಾ). = ಬಲ್ಗಾರ ೨: ಆಱು ಖಂಡದ ಪ್ರಜೆಗಳಿಗೆ ನಿನ್ನಯ ರೂಪ ತೋಱೆ ಕೃತಾರ್ಥರ ಮಾಡಿ ಮೂಱು ಚೋಟೆಂದಾಱು ಖಂಡವ ಕಂಡು ಬಲ್ಗಾರಿಕೆಯೊಳು ಬಹವೇಳು (ಶರತ. ೨೦-೦೩) ; ಆಱು ಖಂಡವ ತನ್ನ ವಶಮಾಡಿಕೊಂಡೊಡನಾರಂಗಸೇನೆಯೋಲೈಸೆ ಮೂಱು ಲೋಕವ ದಾಂಟಿ ಕೀರ್ತಿಯನಟ್ಟಿ ಬಲ್ಗಾರಿಕೆಯೊಳು ಬರುತಿರ್ದ (ಶರತ. ೪೪-೩೬).

[ಬಲ್ಗಾರ + – ಇಕೆ]

ಬಲ್ಗಾಳೆಗ, ಬಲುಗಾಳೆಗ (ನಾ). ಬಲವಾದ ಕದನ : ಅಂತು ಬಲ್ಗಾಳೆಗಮೆನಿಪ ಬಿಲ್ಗಾಳೆಗಮುಂ ನೀಡುಂ ಕಾದುವನ್ನೆಗಂ (ಶಾಂತಿಪು. ೪-೩೩ ಪ). ಬಲುಗಾಳೆಗ : ಬಲುಗಾಳೆಗವ ಭೀಮಂಗೆ ಸೇರಿಸಿ ಪಾಳಯಕೆ ತಿರುಗಿದರು ಕೃಷ್ಣಾರ್ಜುನರು ದುಗುಡದಲಿ (ಕುಮಾ. ೦೬-೦).

[ಬಲ್$_2$ (<ಬಲ್ಲಿತು$_1$) + ಕಾಳೆಗ]

ಬಲ್ಗಿಚ್ಚು, ಬಲುಗಿಚ್ಚು, ಬಲ್ಗಿರ್ಚು (ನಾ). ದೊಡ್ಡ ಉರಿ; ಅಧಿಕವಾದ ಬೆಂಕಿ : ಮಿಱುಪ ಮಿಂಚುಗಳ ಬಂಬಲ್ಗಳಗ್ಗಳ ಮೊಗಳಮರ್ದುಗೈಯವರ ನೇಸಱ ಪಲವ ಜಗಜಗಿಸುವ ಬಲ್ಗಿಚ್ಚ ಪಳಿವ ಲಿಂಗಂ ಮೂಡೆ (ಭಾವಕಂ. ೩-೨೬) ; ಪೆರ್ಚಿದ ಕಂಬನಿಯು ಕಡಲೊಳಗೆ ಡಾವರಿಪ ಬಡಬಶಿಖಿಯೆಂಬಿನಂ ಕಾಣಿಸುವ ಬ[ಹಾಕಾಂ. ೪]ಲ್ಗಿಚ್ಚಿಗದನೊಡಲ ನಿಂಬುಗೊಟ್ಟಂ (ಕೈವಾಶಾ. ೦೩-೩೯). ಬಲುಗಿಚ್ಚು : ಉತ್ತಮದ ತಱುಪಿನೆಮ್ಮೆಯ ಹಾಲನೊಲೆಯ ಮೇಲೆತ್ತಿ ಸೋದಿಸಿಕೊಂಡು ಬಲುಗಿಚ್ಚ ನೆಳಿಸದೆ ಹೊತ್ತದಂದದೊಳು . . . ಕಾಸಿ (ಸೂಪಶಾ. ೨-೦) ; ಸುರಂಗಗಳೊಳಗೆ ಕರಿಯಮದ್ದನು ತುಂಬಿ ಹತ್ತಿಸೆ ಬಲುಗಿಚ್ಚು ತರಣಿಮಂಡಲವ ಮುಟ್ಟಿದುದು (ಕಂಪಾ. ೧೦-೦೩೫). ಬಲ್ಗಿರ್ಚು : ಹಿಂದಣ ಹಿತತನದಿಂದೀ ವಿರಹದೊಳೊಂದಿದ ಬಲ್ಗಿರ್ಚಿಗೆ ವೇದನೆಯಂ ತಂದೆನ್ನಂ ಭಸ್ಮೀಕರಿಸದೆ ತಾಂ ನಿರ್ನೆರವಿಹುದಲ್ಲ ಎಂದಾವೊಡುಲೊಳಗಣವಾಯುವನಲ್ಲಿಂದವೆ ಪೊಱಮಡಿಸಿದ ಮಾಳ್ಕೆಯೊಳರವಿಂದವಿಶಾಲವಿಲೋಚನೆಯಾ ನಿಡುಸುಯ್ಕರವೊಪ್ಪಿದುದು (ಪಚಾಕಾ. ೪-೩೦). [ಬಲ್$_2$ (<ಬಲ್ಲಿತು$_1$) + ಕಿಚ್ಚು]

ಬಲ್ಗಿರ್ಚು 'ಬಲ್ಗಿಚ್ಚು' ನೋ.

ಬಲ್ಗುಂಡು, ಬಲುಗುಂಡು (ನಾ). ೧. ದೊಡ್ಡ ಗುಂಡು ; ಭಾರಿಯಾದ ಕಲ್ಲು,–ಬಂಡೆ : ಎತ್ತುಗಲ್ ಪಿರಿಯ ಡೆಂಕಣಿ . . . ಬಲ್ಗುಂಡು ಪೆರ್ದೋಲೆ . . . ಇಡುಗಲ್ಲ ಮೊತ್ತವಾಪುರದೊಳಿಲ್ಲ (ಪಪ್ರಣಾ. ೩-೨೦). ಬಲುಗುಂಡು : ೧. ಬಿಲ್ಲಂಬ ಬಿಸುಟನು ಸುಗತಿದಾಣಮನಿಂಬಱಿದು ತಾನೇಱುವಂತೇಱಿದನು ಬಲುಗುಂಡ (ಶಾಳ್ಳಾ. ೩-೪೦). ೨. ತುಪಾಕಿಯಲ್ಲಿ ಹಾರಿಸುವ ದೊಡ್ಡದಾದ ಗುಂಡು ; ಫಿರಂಗಿಗೆ ಹಾಕುವ ದೊಡ್ಡ ಗೋಲಿ : ನಡೆಡೆಂಕಣಿ ಸೂಸುಡೆಂಕಣಿ ಬಲುಗುಂಡನಿಡುವ ಡೆಂಕಣಿ ತೋಱೆದೆಡೆಗೆ ಸಿಡಿವ ಡೆಂಕಣಿ ರಾಯಡೆಂಕಣಿಗಳ ಸಾಲು ಬಿಡದೊಪ್ಪಿದವು ದುರ್ಗದೊಳು (ಕುರಾಸಾಂ. ೪೨-೩೯).

[ಬಲ್$_2$ (<ಬಲ್ಲಿತು$_1$) + ಗುಂಡು]

ಬಲ್ಗುದುರೆ, ಬಲುಗುದುರೆ (ನಾ). ಶಕ್ತಿಯುತವಾದ ಕುದುರೆ ; ಬಲಿಷ್ಠವಾದ ಕುದುರೆ : ಬಲ್ಗುದುರೆಯೊಳ್ ಕೂಡಿ ವಂಱುಗೋಡಿಂದು ಕವಣೆಯಿಂ ಬಲದಿಂದಶ್ವಾಧಾರಿಯೊಪ್ಪುವಂತೆ . . . ಸುವ್ರತಂಗಳಿಂ ಭವ್ಯರುಮೊಪ್ಪುವೆರಸಿರ್ಪುದು (ಧರ್ಮಾಮೃ. ೦೨-೩). ಬಲುಗುದುರೆ : ಅಳಿದುದೈನೂಱರಸುಗಳು ಮುಮ್ಮುಳಿತವಾಯ್ತೈವತ್ತುಸಾವಿರ ಬಲುಗುದುರೆ ನುಗ್ಗಾದುದೊಂಬೈನೂಱು ಭದ್ರಗಜ (ಕುಪ್ಪಾರ್ಕ್ರೀ. ೦೦-೨೦) ; ಮುಸುಕಿ ದೆಸೆಯ ಖುರಪುಟಧೂಳಿ ಬಿಡದೆ ಮಾಮಸಕಿ ವಾಹಕರೇಱಲಂದು ಬಿಸಿಲ ಕುದುರೆಯಂತುಭಯಬಲದೊಳು ಕಣ್ಗೆಸೆದವು ಬಲುಗುದುರೆಗಳು (ಕುರಾಸಾಂ. ೧೨-೪೦). [ಬಲ್$_1$ (<ಬಲ್ಲಿತು$_1$) + ಕುದುರೆ]

ಬಲ್ಗುರುಜು (ನಾ). ದೊಡ್ಡದಾದ ಮಂಟಪ,—ಅಟ್ಟಳೆ : ನಿಳಯ ನಿಳಯದ ಮುಂದೆ ಬಲ್ಗುರುಜುಗಳ್ ನಡುವೆ ತೊಳಪ ಮಣಿಗುಡಿ ತೋರಣಂಗಳಿಂ ಪನ್ನೀರ ಚಳೆಯದಿಂದಗರುಧೂಪದ ಹೊಗೆಗಳಿಂ ಬೀದಿ ಬೀದಿಗಳ್ ಚೆಲ್ವಾದುವು (ಶಪಪು. ೩-೨).

[ಬಲ್$_2$ (<ಬಲ್ಲಿತು$_1$) + ಕುರುಜು]

ಬಲ್ಗೂಱೆ (ನಾ). ಬಲಿಷ್ಠವಾದ ಕುರಿ ; ಕೊಬ್ಬಿದ ಮೇಷ : ದೈವಮಾ ಕಱೆಯಿರ್ದೊಂದೆಡೆಗಯ್ದೆ ಒಂದೆರಡು ಮೂಱುಂ ನಾಲ್ಕುಮಯ್ದಾಱು ಬಲ್ಗೂಱೆಯುಂ ತಿಂದೊಡೆ ಕಾಪಿನಾಳ್ಬಡಿಗುಮೋ ನಾಯ್ತಿಂಗುಮೋ (ಪಪಾರ. ೪೬೬). [ಬಲ್$_2$ (<ಬಲ್ಲಿತು$_1$) + ಕುಱೆ$_3$]

ಬಲ್ಗೂದಲ್ (ನಾ). ಹೇರಳವಾದ ಕೂದಲು ; ಕೇಶರಾಶಿ : ಕಿನ್ನವಿರ್ ಮುಡಿ ಕೆದರಿತಾ ರಾಕ್ಷಸಗೆ, ದೆಸೆದೆಸೆಗೆ ಜಡೆಜಡೆಯ ಬಲ್ಗೂದಲಂ ಕೊಡಹಿ (ಕ್ರೀರಾಪಾ. ೬೮೭-೨೩೯).

[ಬಲ್$_2$(<ಬಲ್ಲಿತು$_1$) + ಕೂದಲ್ (< ಕೂಂದಲ್)]

ಬಲ್ಗೂಳಿ, ಬಲುಗೂಳಿ (ನಾ). ಬಲಿಷ್ಠವಾದ ಎತ್ತು ; ಕೊಬ್ಬಿದ ವೃಷಭ : ಅಡೆಯುಂ ಕೋಡೆತ್ತುತುಂ ಮಾರ್ದನಿಗೆ ಮಸಗುತುಂ . . . ಪಾಯ್ದು ಪಿಂಡಂ ಕಲಕಿ ಕೆಲೆಯುತುಂ ಬೆರ್ಚಿ ಬಲ್ಗೂಳಿಗಳ್ಬೆಂಗುಡೆ ಗಂಡಂ ಸೂಳುತುಂ ಬಂದುದು ಮದವಿದಳತ್ತಿಂಗಳಾಕ್ಷಂ ಮಹೋಕ್ಷಂ (ಲೀಲಾವ. ೩-೬೭). **ಬಲುಗೂಳಿ** : ರಕ್ಕಸರೇಳಿಗೆಗೆ ಕಡುಭಂಗಮೊದವಿತು ಕೀಳುತರದಾ ಹುಲುನರರು ಬಲುಗೂಳಿಯಾದರಲಾ (ರಾಮಾಸಂ. ೩-೩-೨೬).

[ಬಲ್$_2$ (< ಬಲ್ಲಿತ್ತು$_1$) + ಗೂಳಿ$_1$]

ಬಲ್ಗೆಂಡ (ನಾ). ದೊಡ್ಡದಾದ ಕೆಂಡ ; ಪ್ರಖರವಾದ ಇಂಗಳ : ಬಲ್ಗೆಂಡಂಗಳನಾಯ್ದು ತಂದು ಪುಟವಪ್ಪಂತೂದಿ . . . ಧೂಪಮಂ ನಲ್ಗಂಪುಣ್ಮೆರಲಾಗಳರ್ಚಿಸಿದನಾ ಗಂಗಾಧರಂಗಟ್ಟಿಂಬಿಂ (ಶಾಸ್ತ್ರಪ. ೦೦-೭೯).

[ಬಲ್$_2$ (< ಬಲ್ಲಿತ್ತು$_1$) + ಕೆಂಡ]

ಬಲ್ಗೆಯ್, ಬಲುಗಯ್, ಬಲುಗೆಯ್, ಬಲುಗೈ, ಬಲ್ಗಯ್, ಬಲ್ಗೈ (ನಾ). ೧. ಶಕ್ತಿ ; ಬಲ ; ಪರಾಕ್ರಮಂ : 'ಬಲ್ಗೆಯ್ಯ' ಪರಾ. **ಬಲುಗಯ್** : ೧. ವೀರ ವಿದ್ಯುನ್ಮಾಲಿಯೊಡನೆ ಬರ್ಪ ಕಲಿಮಹಾನಾಥ . . . ಜಂಭ ಮುಂತಾದ ಬಲುಗಯ್ಯ ರಕ್ಕಸರ್ ಕೋಂಟೆಯಂ ಪತ್ತಿರ್ದ ದಿವಿಜರಂ ಸದೆಬಡಿದರು (ಪಂಪ. ೧೩-೨) **ಬಲುಗೆಯ್** : ೨. ಬಲಿಷ್ಠವಾದ ಕೈಗಳನ್ನುಳ್ಳವನು ; ಶೂರ ; ಪರಾಕ್ರಮಿ : ಆಭಿಮನ್ಯುವರ್ಜುನನ ಕುವರನಿವ ಮಗುವಲ್ಲ ಬಲುಗೆಯ್ಯವನ ಮೋಹರದೊತ್ತಿನಲಿ ನಿಂದವರು ಸಾತ್ಯಕಿ ಚೇಕಿತಾನ ಪ್ರಮುಖ ನಾಯಕರು (ಕುಮಾಭೀ. ೨-೧೯). **ಬಲುಗೈ** : ೨. ಎಲೆ ಧನಂಜಯ ನೀನೆ ಬಲಗೈಯುಳಿದವರು ರಣಚೇಡರೇ (ಕುಮಾಕ. ೧೯-೯೦). ೩. ಶಕ್ತಿಯುತವಾಹ ಹಸ್ತ : ಜಗವ ಹೂಡುವ ಹೊರೆವ ಬಲುಗೈಯಗಧರಂಗೀ ನೃಪರ ಕುಱಿವಿಂಡುಗಳ ಕುಮ್ಮರಿಗಡಿತಕಾವುದು ಬೇಕು ಭುಜಸತ್ವ (ಕುಮಾಸ. ೦೦-೦೦). ೪. (ಆಲಂ) ಬೆಂಬಲನಾದವನು : ಸರ್ವರಿಗೆ ಬಲುಗೈ ಸಮೃದ್ಧಚತುರ್ವಲಾನ್ವಿತನುರು ಕೃಪಾನಿಧಿ ಶರ್ವನನು ಭಜಿಸಿದನು ಕಾಮಿಸಿ ಯಾದವರ ಜಯವ (ಏಕಾಗ. ೦೦-೬೦-೦೬). **ಬಲ್ಗಯ್** : ೧. ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ ಸೊಲ್ಗೋಳಿ ನಮಿಸಲಿಳೆಯೊಳ್ಬರಿಸುತಧ್ವರದ ನಲ್ಗುದುರೆ ಬಂದು . . . ಪೊಕ್ಕೊಡೆ (ಕೃಷ್ಣಾ. ೨೦-೩). **ಬಲ್ಗೈ** : ೧. 'ಬಲ್ಗೈಗಲಿ' ಪರಾ.

ಬಲುಗಯ್ಯತನ = ಶೌರ್ಯ : ಪರಾಕ್ರಮ : ಬಲುರಾವುತರ ಮೈಯೊಳಗೆ ಬಲ್ಲೆಹವನು ಬಲಿದನು ಸೆಲದ ರಾವುತರ ಸೆಲವನಿಕ್ಕಿದನಂತಕನ ಮೇಲೆ ರಾಮನ ಬಲುಗಯ್ಯತನವನೇನೆಂಬೆ (ಕುರಾಸಾಂ. ೦೬-೯೨).

[ಬಲ್$_2$ (<ಬಲ್ಲಿತ್ತು$_1$) + ಕೆಯ್$_2$]

ಬಲ್ಗೆಯ್ತ (ನಾ). ೧. ಬಹಳ ಕಾರ್ಯ ; ಅನೇಕ ಕೆಲಸ : ಮನಮಂ ಬಿಟ್ಟಿತು ಮಾಡಲೆಂದೆ ಬಿಡುವಳ್ ಬಲ್ದೋಂಟಿಯಿಂ ಬೇಂಟದೊಳ್ ಮನಮಂ ಬೇಂಟಮನಾಗಳಂತೆ ಬಳೆವಳ್ ಬಲ್ಗೆಯ್ತದಿಂದೊತ್ತೆಯಾಣ್ಮನೊಳಂ ಮೆಯ್ಯನೆ ಮಾಱುವಾಕೆ ಭವಮಂ ಪೇಟ್ಮಾಱೇ (ಲೀಲಾವ. ೨-೧೦೩). ೨. ಒಳ್ಳೆಯ ಕೆಲಸ : ಕಾಲ್ಗಾಪಿನ ಬಲ್ಲಣೆಯೊಳ್ಬಲ್ಗೆಯ್ತದಿ ನಿಱಿದು ಮಡಿಯೆ ನೆತ್ತರ ತೊಱೆಗಳ್ಗಲ್ಲಲನೆ ಪರಿಯೆ ಕರುಳ ಪಿಣಿಲ್ಗಳೆ ತೆಪ್ಪಂಗಳಾಗೆ ತೇಂಕಿದರರೆಬರ್ (ಕಂಠಾಪಾ. ೦೩-೭೯).

[ಬಲ್$_2$ (< ಬಲ್ಲಿತ್ತು$_1$) + ಕೆಯ್ತು$_1$]

ಬಲ್ಗೆಯ್ದು, ಬಲುಗೈದು, ಬಲ್ಗೈದು (ನಾ). ಬಲವಾದ ಆಯುಧ ; ಬಲಿಷ್ಠವಾದ ಶಸ್ತ್ರ : ಪುಸಿವಾತಿಗೆ ಬಾಯ್ದೆಗೆಯದ ವೈರಿಗಳಿಱತದ ಬಲ್ಗೆಯ್ದಿಗೆ ಸುಗಿಯದ ಯತಿಕುಲತಿಲಕನನವನೀಪತಿ ಕಂಡಂ (ಪಂಚಾ. ೯-೧೩). **ಬಲುಗೈದು** : ಕೈದುವೇಕೆ ಪುಳಿಂದ ನಮ್ಮೊಡನೈದಿಸಾ ಭುಜಯುದ್ಧದಲಿ ಬಲುಗೈದುವಿದೆಲಾ ಮುಷ್ಟಿ (ಕುಮಾಅ. ೬-೨೩) : ತೋರ್ಪೆರೈದು ತಲೆಗಳ ಬೈತಿರಿಸಿ ಬಲುಗೈದುಗಳ ಬಿಸುಟಡಗಿಸೀ ರಾಕ್ಷಸಕಳೇವರವ ಐದು ತಾವಸವೇಷವನು (ಕೊರಚಾ. ೩-೬-೦೩). **ಬಲ್ಗೈದು** : ಬಱಿಸಲ್ವ ಕರ್ಮರಿಪುವಂ ಗೆಲ್ವೊಂದು ಬಲ್ಗೈದುವಾವುದೊ ಸದ್ದರ್ಶನದೀಕ್ಷೆ (ಕಪಂಪು. ೯-೪೪) : ಬಲ್ಗೈದುಗಳ್ಮಲಚರಂಗಳಂತಿರೆ ಭಟರ ಬೊಬ್ಬೆಯಬ್ಬರವಾಗೆ ಪಡಗುಗಳ ಪರಿಜನಾಂತಿರೆ ಪತಾಕಾನ್ವಿತ ರಥಂಗಳಾಪತೆ ನೋಡೆ ಕಡಲೆನಿಸಿತು (ಕೇಸರಾ. ೦೦-೦೨).

[ಬಲ್$_2$ (< ಬಲ್ಲಿತ್ತು$_1$) + ಕೆಯ್ದು]

ಬಲ್ಗೆಯ್ಯ, ಬಲುಗಯ್ಯ, ಬಲುಗೆಯ್ಯ, ಬಲುಗೈಯ, ಬಲ್ಗಯ್ಯ (ನಾ). ೧. ವಿಶೇಷವಾದ ತೋಳ್ಬಲವನ್ನುಳ್ಳವನು : ಮಹಾ ಪರಾಕ್ರಮಿ ; ಸಮರ್ಥ : "ಪರಾಕ್ರಮಂ ಪ್ರಥಿತಂ ಬಲ್ಗೆ[ಪಾಠಾಂ. ಲ್ಗೆ]ಯ್ಯಂ" (ಕಸುನಿ. ೧೦೫-೩೦) ; ಮೆಯ್ಯ ದಂಡಿಸಿದನೆ ಭಿಕ್ಷೆಗೆಂದೊರ್ವರ್ಗೆ ಕೆಯ್ಕೊಡ್ಡಿದನೆ ಚಕ್ರಧರನು ಉಯ್ಯಲ ತೂಗಿದಂತಮ್ಯತಕೆ ಸಂದ ಬಲ್ಗೆಯ್ಯನಲ್ಲವೆ (ಧರಪ. ೬೯-೩೪). **ಬಲುಗಯ್ಯ** : ೧. ಎಲಗೆ ನಾ ಬೇಡಲೀಯದೆ ನಿನ್ನ ನಿಮ್ಮಣ್ಣ ತಲೆಗೊಟ್ಟನಿನ್ನು ನಿನ್ನವ ಕಾವ ಬಲುಗಯ್ಯ [ಪಾಠಾಂ. ಗೈಯ] ನಾರು ಹೇಳು (ಸೊಪಸೋ. ೭-೩೭) ; ಚಲದಂಕ ಕಾಟ ಕಬ್ಬಿಲ ನಾಗ ಬುಕ್ಕಣ್ಣ ಬಲುಗಯ್ಯ ತಿಮ್ಮಣ್ಣ ವರದ ಕೊಲೆಗೇಡಿ ಮಾದಿಗ ಹಂಪನೆಂದೊಬೀ ಬಲುತರದವರೆಯ್ದಿದರು (ಕುರಾಸಾಂ. ೧೯-೯೦). ೨. ಶ್ರೇಷ್ಠನಾದವನು ; ಜ್ಞಾನಿ : ಬಲ್ಲೆನೆಂಬ ಬಲುಗಯ್ಯ [ಪಾಠಾಂ. ಗೈಯ]ರ ನುಂಗಿತ್ತು ಮಾಯೆ ಅಱಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ (ಮಹಾದೇ. ಬ. ೦೭-೨೫) ; (ವಚನಂ. ೫೯-೨೦ ನೋ). **ಬಲುಗೆಯ್ಯ** : ೧. ಮೆಯ್ಯ ದಂಡಿಸದೆ ಚಿತ್ತವನೆ ದಂಡಿಸಿ ತನ್ನೊಳೊಯ್ಯನೆ ನಿಂದು ಕರ್ಮಗಳಾ ಉಯ್ಯ ನುಗ್ಗೊತ್ತಾ ವಂತೊತ್ತಿಬಿಟ್ಟಾ ಬಲುಗೆಯ್ಯನೆದ್ದನು ತನ್ನ ಪುರಕೆ (ಧರಪ. ೬೨-೭೦). **ಬಲುಗೈಯ** : ೧. ಬಲುಗೈಯ[ಪಾಠಾಂ. ಗಯ್ಯ]ನೊಡನೆ ಹಗೆವಡೆದು ಕೊಲೆಗಂಜಲೇಕೆ (ಪೋಸಮಾ. ೪೦-೦೬೭) ; ಜರೆಯೆನಿಪುದಭಧಾನವೆನ್ನದುವರ ಜರಾಸಂಧಕನಿವನು ಸುರನರರೊಳಗೆ ಬಲುಗೈಯ [ಪಾಠಾಂ. ಯ್ಯ] ನಹಸೆಂದಿತ್ತಳರ್ಭಕನ (ಕುಮಾಸ. ೨-೪೯). **ಬಲ್ಗಯ್ಯ** : ೧. ಬಲ್ಗಯ್ಯಂ, ಮೆಲ್ಗಯ್ಯಂ (ಶಬ್ದಮ. ೩೩೦ ಪ್ರಯೋ). [ಬಲ್ಗೆಯ್ + — ಅ$_7$]

ಬಲ್ಗೆರ್ಚು (ನಾ). (ಮರವ) ವಿಶೇಷವಾದ ಕೆಚ್ಚು,—ಸತ್ತ್ವ ; ಹೇರಳವಾದ ಸಾರ: ಮಂದರದೊಳಂದಂಬಡೆದು ನಿಂದ ಬಲ್ಗೆರ್ಚಿ[ಪಾಠಾಂ. ಚ್ಚಿ]ನ ಮುಂಡಿಗೆಯಂ ಮುಱಿದು ಪಿಂಗಾಲ್ಗೆ ತೊಡರ್ಚಿದಗ್ಗದಗ್ಗರಣೆಯಂ ಛಟಛಟನೆ ಕೀಳ್ತು (ರಾಜಶೇ. ೬-೧೦ ವ). [ಬಲ್$_2$ (< ಬಲ್ಲಿತ್ತು$_1$) + ಕೆರ್ಚು]

ಬಲ್ಗೆಱೆ, ಬಲುಗೆಱೆ (ನಾ). ದೊಡ್ಡದಾದ ಕೆರೆ : ಕಡಲುಗಳಾ ನಾಡ ಸಿರಿಯ ಮೊಗವ ನೋಡೆ ಬಿಡದೆಯ್ತಂದುವೆಂಬಂತೆ ಕಡೆಗೋಡಿಗಳಿಂದ ಮೆಱೆವ ಬಲ್ಗೆಱೆಗಳಾ ಪೊಡವಿಯೊಳೆಸೆದಿರುತಿಹವು (ಕುರಾಸಾಂ. ೨-೩೯). **ಬಲುಗೆಱೆ** : ಬಲುಗೆಱೆಗಳು ಬಱತವು ಪೊಕ್ಕ ತೊಱೆಗಳು ತೊಲಗಿಸಿದವು ಜೀವನವನು ಶಿಲೆಗಳೊಟ್ಟಿಲು ಪುಡಿಪುಡಿವೊದವೆನಲಾ ಬಲದ ಬಹಳವನೇನೆಂಬೆ (ಕುರಾಸಾಂ. ೧೦-೭೬). [ಬಲ್$_2$ (< ಬಲ್ಲಿತ್ತು$_1$) + ಕೆಱೆ]

ಬಲ್ಗೇಣ್ (ನಾ). ಬಲಿಷ್ಠವಾದ ಸಣ್ಣ ಕತ್ತಿ : ಬಾಣ ಸವೆಯೆ ಬಾಣಾಸನ ಮುಱಿಯೆ ಬಲ್ಗೇಣಿಂದ ಪೊಕ್ಕಿಱಿದಾಡಿ ಪ್ರಾಣವನುಳಿವು ಬಿಲ್ವಡೆ ಸಗ್ಗದೊಳು ಪೋಗಿ ಕಾಣಿಸಿಕೊಂಡರೆಂದೊಸೆದು (ಕುರಾಸಾಂ. ೧೨-೬೦).

[ಬಲ್$_2$ (< ಬಲ್ಲಿತ್ತು$_1$) + ಗೇಣ್]

ಬಲ್ಗೈ 'ಬಲ್ಗೆಯ್' ನೋ.

ಬಲ್ಗೈಗಲಿ (ನಾ). ಕರಕೌಶಲವುಳ್ಳ ವೀರ ; ಬಹಳ ಪರಾಕ್ರಮಿ : ಬಿಲ್ಗಾಱಿಕೆಯೊಳ್ ಬಲ್ಗೈಗಲಿಗಳನೆಸಗಿ. ಪಾಟವಮಾಟಮಪ್ಪಂತು ಕಲಿಸಲೊಡಂ . . . ಕಳೆಳೆಂ ಬೆಳಗಿದರ್ ಯಮಳರ್ (ರಾಮಾಶ್ವ. ೦೩೦-೧೬).

[ಬಲ್ಗೈ (< ಬಲ್ಗೆಯ್) + ಕಲಿ$_3$]

ಬಲ್ಗೈದು 'ಬಲ್ಗೆಯ್ದು' ನೋ.

ಬಲ್ಗೊಲೆ (ನಾ). ಭೀಕರವಾದ ಕೊಲೆ,—ಹತ್ಯೆ : ಸೂಸಿದರ್ ಕೆಂಡಮಂ . . . ಮಾಸಿದರ್ ಕಾರ್ಬೊಗೆಯ ಪರ್ಬಿನಿಂ ಬಲ್ಗೊಲೆಗೆ ಹೇಸಿದರ್ (ಸಂಪು. ೪೨-೬೬) ; ನೆಗೆದತ್ತು ಕಯ್ಗೆ ಬಾಳ್ ಬಲ್ಗೊಲೆಗಳ್, ಬಾಳ್ಗಳೆಡೆವೊಕ್ಕು ಸಂತೈಸದಿರೆ ಕೃಷ್ಣನ್ ಎಲ್ಲಿ ಅತ್ಯತ್ಯಾಮನ್ ? ಒರೆವು ದೊಂದಿರ್ಕುಂ (ಅತ್ಯತ್ಯಾ. ೩೦-೩೮೦). [ಬಲ್$_2$ (<ಬಲ್ಲಿತು$_1$)+ಕೊಲೆ$_2$]

ಬಲ್ಗೋಂಟೆ (ನಾ). ಬಲವಾದ ಕೋಟೆ ; ಭದ್ರವಾದ ದುರ್ಗ : ತಂತ್ರ ಪಾಲನಂತೆ ಗುಣಪಾಲನುಂ ಬಲ್ಗೋಂಟೆಯಂತೆ ಮಿಥ್ಯಾತ್ವಕ್ಕಭೇದ್ಯನುಂ ಮುತ್ತಿನ ಸತ್ತಿಗೆಯಂತೆಲ್ಲಾ ದೆಸೆಯೊಳ್ ಸೇವ್ಯನುಂ . . . ರಾಜಸೇವಕ ನಂತಡಕವಂತನುಮಪ್ಪುದು (ಧರ್ಮಾಮೃ. ೩-೯೯) ; ಆವ ಪೆರ್ಗಡಲ್ ಅಗಳು, ಆವ ಮಲೆ ಬಲ್ಗೋಂಟೆ, ಅದರ ಮುಂಬಾಯ್ವರಿವು ಮೊಗಗೆಟ್ಟು ನಿಲಲು ? (ಪಾರಸಿ. ೬-೦೨೬). [ಬಲ್$_2$ (< ಬಲ್ಲಿತು$_1$) + ಕೋಂಟೆ]

ಬಲ್ಗೋಲ್, ಬಲುಗೋಲು (ನಾ). ಶಕ್ತಿಯುತವಾದ ಬಾಣ : ಕೋತಿ ವಡೆಯುಮಾಳ್ಬಲಮುಂ . . . ಬಿಬೀಚಣಂ ಮುಂತಪ್ಪ ಬೀರರ ಕೂಟಮುಂ, ಬಲ್ಗೋಲ ರಭಸಮಂ ತಡೆಯಲಾಱದೆ . . . ಮುನ್ನಂ ಪೊಱಮಟ್ಟ ತಂತಮ್ಮೆಡೆಯಂ ಸಾರ್ದುದು (ಅದ್ಭುತ. ೪೮-೦೩). **ಬಲುಗೋಲು** : ಬೀಳಲವನೀಪತಿಗಳತಿಹೀಹಾಳಿಯಲಿ ಸಾತ್ಯಕಿ ಮುಳಿದು ಬಲುಗೋಲಿನಲಿ ಗಂಗಾಕುಮಾರನ ಸಾರಥಿಯನೆಸಲು (ಕುಮ್ಯಾಭೀ. ೬-೭).

[ಬಲ್$_2$ (< ಬಲ್ಲಿತು$_1$) + ಕೋಲ್$_1$]

ಬಲ್ಚರ 'ಬಲ್ಸರ' ನೋ.

ಬಲ್ದಗರ್ (ನಾ). ಬಲಿಷ್ಠವಾದ ಟಗರು ; ಕೊಬ್ಬಿದ ಟಗರು : ಆತನ ಕೆಲದೊಳ್ ಚಂಡವ್ರಾತಂ ಸಿಡಿಲೇಳ್ಗೆಯೇಳ್ವ ಬಲ್ದಗ[ಪಾಠಾಂ. ಬಲುದಗ] ರೇಱಿರ್ದಾತಂ ಸಕಳಜಗದ್ವಿಖ್ಯಾತಂ ಹುತವಹನೆನಿಪ್ಪನು (ಗಿರಿಕ. ೬-೩೮).

[ಬಲ್$_2$ (< ಬಲ್ಲಿತು$_1$) + ತಗರ್$_2$]

ಬಲ್ದಡಿಗ, ಬಲುದಡಿಗ (ನಾ). ೧. ಅತಿಬಲಿಷ್ಠನಾದವನು; ಮಹಾಬಲ ಶಾಲಿ; ಪತ್ತೆಂಟುಸಾಸಿರಮಾನೆಯುಂ ಪಡಲ್ವಡಿಸಿಯುಂ ಸೈರಿಸಲಾಱದೆ . . . ಬಲ್ದಡಿಗಂ ಬೀಸಿಯುಮೊಂದುಕೋಟಿವರೆಗಂ ಕೊಂದಂ ಮದೇಭಗಳಂ (ಪಂಪಭಾ. -೮೮-೦೦೪). ೨. ಬಹಳಗಾತ್ರವಾದ ಶರೀರವುಳ್ಳವನು : ನಿಡಿಯರ್ ಬಲ್ಲಾಯದ ಬಲ್ದಡಿಗರ್ ವಂದಿರ್ದರಯ್ವರಾಲದ ಕೆಟಗಿಂ ತೊಡರ್ದರ್ ನಮ್ಮಯ ಭಕ್ಷದೊಳಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ (ಪಂಪಭಾ. ೩-೦೨) ; ತಡೆಯದೆ ಮೇಲೆತ್ತಲ್ ಬಲ್ದಡಿಗರ್ ಬಲದಿಂದೆ ಕೆಡೆಯೆ ನೂಂಕಲುಮೆಂತುಂ ಗಡ ಬಾರದೆನಿಪ ಬೆಟ್ಟಿಂಗಡಹಡಿಸದೆ ನೋಡಿ (ಧರ್ಮಾಮೃ. ೦೪-೨೪). (ಗು). ೩. ಅತಿಬಲಿಷ್ಠವಾದ ; ಅತ್ಯಂತ ಬಲವುಳ್ಳ : ಮನಂಗೆಡಿಪ ಪುಲಿಯಿಂ ರೌದ್ರಾಕಾರಂಗಳಿಂ ಬಿಡೆ ಪಾಯ್ವ ಬಲ್ದಡಿಗ ಮರುಳಿಂ . . . ಇವು ಮೊದಲಾವನೇಕೋಪಸರ್ಗಂಗಳು ಮಾಡಿಯುಂ (ಧರ್ಮಾಮೃ. ೨-೨೨೯). ೪. ತುಂಬದಪ್ಪವಾದ : ಪೆರ್ಮರದ ದಿಮ್ಮಿಗಳ್, ಬಲ್ದಡಿಗ ನೇಣುಗಳ್ . . . ನುಣ್ಮಳಲ್ವೆಟ್ಟುಗಳ್ ಮೆರೆದಿರ್ದುವಲ್ಲಲ್ಲಿ (ಕ್ರಿರಾಮಾ. ೪೩೫-೨೬೪). **ಬಲುದಡಿಗ** : ೨. ತಲೆಯುಂ ಬಲುದಡಿಗರ್ಕಿಟ್ ನಿಲಲಾಱದೆ ಸುಂಟಿದಿಂದ ಕೋಡಗದಂತುಮ್ಮಳಿಸಿ ಕಳವಳಿಸಿ . . . ಕರಮೆ ಮಱುಗಿ ತಳವೆಳಗಾದಂ (ಧರ್ಮಾಮೃ. ೦-೧೪೦).

[ಬಲ್$_2$ (< ಬಲ್ಲಿತು$_1$) + ದಡಿಗ]

ಬಲ್ದನಿ (ನಾ). ಜೋರಾದ ಸ್ವರ ; ಗಟ್ಟಿಯಾದ ಧ್ವನಿ : ಪಾಮರಿ ಚರಿಸುತಾ ವನಕೆ ನಾಲ್ದೆಸೆಯಿನೊಸೆದು ಬಂದೆಱಪ ಗಿಳಿವಳಗಂ ಕಯ್ಯೆತ್ತಿ ರಯ್ಯಮಾಗಿ ಬಲ್ದನಿವೆರಸು ಸೋವೆ (ಪದ್ಮರಾ. ೬-೦೬) ; ಬಲ್ದನಿಯ ಚಪ್ಪಳೆಗಳುಣ್ಮುವೋಲಪ್ಪಳಿಸಿ ತೋಳ್‌ಗಳಂ (ಕ್ರೀರಾಮಾ. ೫೯೨-೨೨೭).

[ಬಲ್$_2$ (<ಬಲ್ಲಿತು$_1$) + ದನಿ$_1$]

ಬಲ್ದಲೆ (ನಾ). ದೊಡ್ಡ ತಲೆ ; ದಪ್ಪ ತಲೆ : ಸತ್ತಿಗೆ ಗಗ್ಗರಂ ಕರುಳ ಬಕ್ಕಳೆ . . . ನೆತ್ತರ ತಳ್ತ ಬಲ್ದಲೆಯ ಬಿಂದಿಗೆ ಪಾವುಗೆ ಪಂಚಮಸ್ವನಂ ಬೆತ್ತದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೩೩೩). 'ಬಲ್ದಲೆಯ' ಪರಾ. [ಬಲ್$_2$ (< ಬಲ್ಲಿತು) + ತಲೆ$_1$]

ಬಲ್ದಲೆಯ (ನಾ). ೧. ದೊಡ್ಡ ತಲೆಯನ್ನುಳ್ಳವನು : ಬಲ್ದಲೆಯಂ ತೋಳ್ನೀಳ್ದನಗಲ್ದುರದಂ ಬಟ್ಟದೊಡೆಯವಂ ಕೆಂಗಣ್ಣಂ ನೇಲ್ದ ಕಿವಿಯಾತ ನೆನಿಸುವನೊಲ್ದೊಲಿಸುಗುಮೆಸೆವ ಬೀರಸಿರಿಯಂ ಧುರದೊಳ್ (ಕಾವ್ಯಾವ. ೨೫೬) ; ಅತ್ವಕ್ಕೆ—ಅಲರ್ಗಣ್ಣಂ ... ಬಲ್ದಲೆಯಂ, ಅಗಲ್ದುರದಂ (ಕಮದ. ೦೮೬ ಪ್ರಯೋ). ೨. ಸಮರ್ಥನಾದವನು; ಬಲಿಷ್ಠನಾದವನು; ಪರಾಕ್ರಮಿ : ಗೆಲ್ದಾರೆ ಜನಕಸೇನೆ ಸಡಿಲ್ದಗಿಯೆ ಕಿರಾತಸೇನೆ ದಶರಥ ರಾಮಂ ಬಿಲ್ದೆಗೆದಿಸೆ ಮಾರ್ಪಡೆಯೊಳ್ ಬಲ್ದಲೆಯರ್ ಶಬರನಾಯಕರ್ ಪಡಲಿಟ್ಟರ್ (ಪಂಠಾಮಾ. ೪-೬೪). [ಬಲ್ದಲೆ + — ಅ$_7$]

ಬಲ್ದಸಿ, ಬಲುದಸಿ (ನಾ). ಮರ ಅಥವಾ ಲೋಹದ ಚೂಪಾದ ದೊಡ್ಡ ಗೂಟ,— ಶೂಲ : ಬಿಡುವುರಿಯೆಣ್ಣೆ ಸೂಸುವ ಕನಲ್ಗಿಡಿ. . . ಕಡೆಸಿರಗೆಯ್ದ ನೂಂಕುದಳಿಯಿಕ್ಕುವ ಬಲ್ದಸಿ ಭೀತಿಯಂ ಮನಕ್ಕೊಡರಿಸೆ (ಪಂದ್ರಪು. ೩-೧೦೩) ; ಹುರಿವ ಮಳಲಿನ ಕಾಸುವಂಬಲಿಯ . . . ಮರುಳ ಕೈಗಳ ನೆಟ್ಟ ಬಲ್ದಸಿಗಳ ಪರಿಪರಿಯ ಗುಂಡುಗೋವಿಯ. . . ಪಂದಿದಲೆಯ ಮೊತ್ತಂಗಳಾಳ್ವೇರಿಯೊಳ್ ಪಸರಿಸಿದುವು (ಪಂಪಭಾ. ೪೨-೧೧). **ಬಲುದಸಿ** : ಎಸೆವ ಕೋಂಟೆಯ ತೆನೆಗಳಲಿ ಕಟ್ಟಿಸಿ ಪತಾಕೆಗಳಂ ಬಸಿದ ಬಲುದಸಿಗಳಂ ಮಲಗಿಸಿ ಮರಂಗಳನಿರಿಸಿ ಎಡೆಗೆಡೆಗೆ ... ಪೊಸದುರ್ಗವಂ ಪಾಟಿಸಿ ಪಿರಿಯ ನಡಬಾವಿಗಳನಗುಳಿಸಿದನದಱೊಳಗೆ (ಬಸಪು. ೧೬-೧೦); ಬಲೆ ಕಾಲ್ಕಣ್ಣಿಗುನ್ನಲುಗೂಡಿಡಿಸಲು ಬಲುದಸಿಯುರುಳುಳಿಯಿಂದ ನೆಲಗಪ್ಪುಗಳಿಂದ ಮೃಗಗಳ ಹರಣವ ತೊಲಗಿಸುವರು ಬೇಡರಲ್ಲಿ (ರಾಮವಿ. ೧೩-೬೪).

[ಬಲ್$_2$ (<ಬಲ್ಲಿತು$_1$) + ದಸಿ]

ಬಲ್ದೆರೆ, ಬಲುತೆರೆ (ನಾ). ದೊಡ್ಡದಾದ ಅಲೆ,—ತರಂಗ : ಕುದುರೆಯ ತಟ್ಟುಗಳ್ ನೆರೆದ ಬಲ್ದೆರೆಯಂ ಪಿಡಿದಿರ್ದ ಬಾಳ್ಗಳುಣ್ಮಿದ ನಿಡುವಾಳೆಯಂ ... ಪೊಸತೇರ್ ಪಡಗಂ ನೆಗಟ್ಟಿ ಪೆರ್ಚಿದ ಕಡಲಂಬಿನಂ ಮಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ (ಕಬ್ಬಿಕಾ. ೨೦೭); ತುಂಬಿದ ಸಂಗೀತ ರಸದ ಬಲ್ದೆರೆಯೊಂದು ತುಂಬನುಚ್ಚಿದರೋ ಎಂಬಂತೆ ತುಂಬುರುವೀಣೆಯೊಳೊಲ್ದು ಪಾಡಿದರಂದು ತುಂಬುಜವ್ವನೆಯರು (ಭರಕ. ೩-೭೨); ವಾರ್ಧಿಗಳ ಬಲ್ದೆರೆಗಳೊಂದೊಂದನಣಿವಂತೆ ದುರ್ಧರದ ರಾವ್ತರಿಱಿದಾಡಿದರ್ (ಪಂಪಭಾ. ೨೪-೯). **ಬಲುತೆರೆ** : ಜಲಪಾನಕ್ಕೆದುವ ಕುದುರೆಯ ಸಾಲುಗಳ್ ಬಲುತೆರೆ ಬೆಳುಗೊಡೆ ನೊರೆಯು ಕೊಳಿಪ ಚಾಮರ ಶಫರಿಗಳಾಗಲಾ ಪುರ ಜಲರಾಶಿಯಂತೆ ರಾಜಿಸಿತು (ಕಂನವಿ. ೬-೩೩).

[ಬಲ್$_2$ (<ಬಲ್ಲಿತು$_1$) + ತೆರೆ$_4$]

ಬಲ್ದೊಱೆ (ನಾ). ವಿಶಾಲವಾದ ತೊರೆ : ನಿತ್ತರಿಸದೆ ಬಲ್ದೊಱೆಯೊಳ್ ಮತ್ತೆನಿಸದೆ ಬಿರ್ದೊಡಣ್ಣ ಸಹವಾಸಿಯೆ ಬಂದೆತ್ತುವುದುಳಿದವ ರಱಸಿಯುಮೆತ್ತಲ್ ಕೇಳಾಗದೆಂಬ ನಿಯಮಮುಮುಂಟೇ (ಧರ್ಮಾಮೃ. ೦-೧೨೫); ಉತ್ತುಂಗಶಿಲೆಗಳಿಂ ಭರದಿಂ ಬಿಳ್ದು ಪರಿವ ಬಲ್ದೊಱೆಯತಿ ಬಂಧುರವಡೆಯಿತ್ತು (ಜಯಕಾ. ೯-೦೧).

[ಬಲ್$_2$ (<ಬಲ್ಲಿತು$_1$) + ತೊಱೆ$_2$]

ಬಲ್ನಗೆ (ನಾ). ಅತಿಯಾದ ನಗು; ದೊಡ್ಡನಗೆ : ಆ ಸಮಯದೆ ದೇವಿಯಪಗೆ ಮೋಹದ ರತಿಯಾಸೆಯ ಪುಟ್ಟಿಸಲಾಗ ಸೂಸುತ ರೂಪ ಜಯಂತ ಬಲ್ನಗೆಯ ವಿಲಾಸದೆ ಸಖರೊಳಿಂತೆಂದ (ಕಂನವಿ. ೦೦-೯).

[ಬಲ್$_2$ (<ಬಲ್ಲಿತು$_1$) + ನಗೆ]

ಬಲ್ನನೆ (ನಾ). ದಪ್ಪವಾಗಿರುವ ಮೊಗ್ಗು : ನನೆಯಂ ಮುಂಡಾಡುತೆ

ಬಲ್‌ನನೆಯಂ ಬಲವಂದು ಮುಗುಳನಾಲಿಂಗಿಸಿ ಕಂಪಿನ ಬಿರಿಮುಗುಳಂ ಚುಂಬಿಸಿಯನುನಯದಿಂದಲರನಲೆದು ತೀವಿದುವಳಿಗಳ್ (ಗಿಂಕ. ೨-೬೬); ಮಿಳಿರ್ದಾಡುವ ನುಣ್ದಳಿರೆಲ್ಲಿಯಲ್ಲಿ ಬಲ್ನನೆಗಳವೆಲ್ಲಿಯಲ್ಲಿ ... ಪಣ್ಗೊನೆಗಳವೆಲ್ಲಿಯಲ್ಲಿಯೆನೆ ಸೋಲಿಸುಗುಂ ಬಿಡದಾವನಂ ಬನಂ (ಕಬ್ಬಿಕಾ. ೩೨).

[ಬಲ್$_2$ (<ಬಲ್ಲಿತು$_1$) + ನನ್ನೆ$_3$]

ಬಲ್ನಿಡಿದು (ನಾ). ಬಹಳ ದೊಡ್ಡದಾದುದು; ಅತಿ ವಿಶಾಲವಾದುದು.

ಬಲ್ನಿಡಿಯವು (ಬಹುವ) : = ವೈಡೂರ್ಯಮಯಮುಂ ಕಾಂಚನಮಯಮುಂ ಸ್ವರ್ಣರತ್ನಮಯಮುಮಾಗಿ ಯಥಾಕ್ರಮದಿನೆಂಟುಂ ನಾಲ್ಕುಂ ನಾಲ್ಕುಂ ಬಲ್ನಿಡಿಯವಪ್ಪ ಮೂಱುಂ ಪೀಠಂಗಳ ಮೇಗೆ ... ನೆರೆದು (ಅಜಿಪು. ೬-೦೨೦ ಪ). [ಬಲ್$_2$ (<ಬಲ್ಲಿತು$_1$) + ನಿಡಿದು$_1$]

ಬಲ್ನಿಱಿ (ನಾ). ಹೆಚ್ಚಿನ ನೆರಿಗೆ ; ತುಂಬ ನಿರಿ : ಎಲೆ ಸುಕುಮಾರ ... ಗೆಜ್ಜೆ ಮೆಲ್ಲುಲಿಗುಡೆ ಬಂದು ಬಲ್ನಿಱಿಯನಪ್ಪದೆ ತಳ್ವಿದೆಯ್ಯೆ ತನೂಭವಾ (ರಾಜಶೇ. ೦೩-೦೦೨) ; ತಮಾಲದೊಳ್ದಳಿರುಡೆ ತಳ್ತ ಪೀಲಿಯ ತರಂಗದ ಬಲ್ನಿಱಿಗಟ್ಟು ... ಪಸಿರ್ಪುವೆತ್ತ ಪಟ್ಟಳಿಯ ನಿಚೋಳಮೊಪ್ಪಿರೆ ಪುಳಿಂದಿಯರಾದರಮರ್ತ್ಯಕಾಂತೆಯರ್ (ಕಬಿಶಂ. ೩-೯).

[ಬಲ್$_2$ (<ಬಲ್ಲಿತು$_1$) + ನಿಱಿ$_2$]

ಬಲ್ನುಡಿ (ನಾ). ಬಿರಂಸಾದ ನುಡಿ; ಒರಟಾದ ಮಾತು : ಬಡಿಹೋರಿ ಬಲ್ಬಂಟನೆಂಬ ಬಡನುಡಿ ಬಲ್ನುಡಿ ಬಡಧೈವರಲ್ಲದೆ ಬಡಶಬ್ದ ನಿನ್ನ ಪೊಂದುವದೆ (ಶತಸಾಂ. ೬೨-೬೩); ಕೊಡೆದಳೆಯಂ ಮಾನವನುಂ ಪಿಡಿವಂ ಮಳೆ ಬಿಸಿಲ ದೆಸೆಗೆಯದಱಂತೀಗಳ್ ಬಡದೊರೆಗಳ್ ಚಂಡನ ಬಲ್ನುಡಿಗೊಳಗಾಗಿಂತು ಕೆಟ್ಟತನಮಂ ನೆಗಳ್ದರ್ (ಹಮ್ಮೀರ. ೩-೨೨).

[ಬಲ್$_2$ (<ಬಲ್ಲಿತು$_1$) + ನುಡಿ$_2$]

ಬಲ್ನೆಣ (ನಾ). ಹೆಚ್ಚಾದ ಕೊಬ್ಬು; ಅತಿಯಾದ ಮೇದಸ್ಸು : ಕಾದ ಪಂದಿಗಳ ಬಲ್ನೆಣದಿಂ ಪೊಲಸಟ್ಟಿ ನಾರ್ವ ಜೇವಡೆಗಳ ಪುಣ್ಗಳಿಂ ತೊರೆವ ನೆತ್ತರ ಕೆಯ್ ನಡುಗಲ್ಕೆ ನೀಡಿ ಕೀಟಿಡೆಯಿಡೆ ಗಂಟಲಂ ಮುಱಿದ ನೊರ್ಮೆಯೆ ನಿರ್ಘೃಣನೆನ್ನ ತಂದೆಯಂ (ಕಾದಂಪೂ. ೦೮೯).

[ಬಲ್$_2$ (<ಬಲ್ಲಿತು$_1$) + ನೆಣ]

ಬಲ್ನೆಲೆ (ನಾ). ಬಲವಾದ ನೆಲೆ ; ಸ್ಥಿರವಾದ ಆಶ್ರಯ : ನಿತ್ಯಯೋಗ ನಿಷ್ಕಂಪಮವಂಗೆ ಶಾಂತಮನುತಾಪಮನಾಱಿಸಿ ತಂ[ದುದಂ]ದು ಬರ್ದೊಂ ಪರೆದಿರ್ದವೋಲ್ ಮುನಿಗೆ ಕಲ್ನೆಲೆ ಬಲ್ನೆಲೆಯಂ ನಿದಾಘದೊಳ್ (ಶಾಂತಿಪು. ೯-೦೦೬). [ಬಲ್$_2$ (<ಬಲ್ಲಿತು$_1$)+ನೆಲೆ$_1$]

ಬಲ್ಪಂಥ (ನಾ). ಅತಿಶಯವಾದ ಹಟ ; ಬಹಳವಾದ ಛಲ : ಸ್ವಲ್ಪ ದಿನವುಳಿಯಿತು ಒಂದು ಸಾಧನ ಕಾಣೆ ಕಲ್ಪಾಯು ನಿನಗಿಲ್ಲವಲ್ಲೊ ಬಲ್ಪಂಥಗಳ ಮಾಡಿ ಭೋಗಪಡದಿರು (ವಿದಾಳ್ಯ. ೯೬-೯).

[ಬಲ್$_2$ (<ಬಲ್ಲಿತು$_1$) +ಪಂಥ$_1$ (<ಪಂತ$_1$)]

ಬಲ್ಪಳಿ, ಬಲುಹಳಿ (ಕ್ರಿ). ಬಲಗುಂದು ; ಶಕ್ತಿಹೀನವಾಗು : ಬಿಕ್ಕುತುಂ ಬೀಗುತುಂ ಬಲ್ಪಳಿದು ಬಾಡುತುಂ ತಕ್ಕಳಿದು ತಡವಾಗಿ ಹೊರೆಯೇಱಿ ನೋಡುತುಂ (ಪಂಬರ. ೬-೦೨೯) ; ದೆಸೆದೆಸೆಗೆ ಕರೆಕರೆದು ಬಾಯಾಱಿ ಬಲ್ಪಳಿದು ನಿಂದಿರ ಲಾಱದೆ ಕಾಲ್ ಕುಪ್ಪಳಿಸಿ ಭೋಂಕನೆ ಕುಳ್ಳಿರ್ದು (ಗಿಂಕ. ೯-೬೬೫); ನೋಡಿ ಮರೀಚಿಕಾಜಲಮನಂಬುವಿದೆಂದೆಳಸುತ್ತೆ ಬಂದು ಕೈನೀಡಿ ಕಲಂಕಿ ಪೊಕ್ಕು ತೆಗೆದಿಕ್ಕುತೆ ಪುಷ್ಕರಮಂ ನಿಜಾಸ್ಯದೊಳ್ ಬಾಡಿ ಬಳಲ್ದು ಬಲ್ಪಳಿದು . . . ಬೀಳ್ದುದರ್ಕಕರಕಲ್ಪಿತಸಂಜ್ವರನೊಂದು ಕುಂಜರಂ (ರಾಜಶೇ. ೫-೩೯). ಬಲುಹಳಿ : ಮಂಗಳ ಮಂಗಳ . . . ಕೆಲವಳಿದು ಛಲವಳಿದು ಬಲುಹಳಿದು ನಿಲಲು ಸೂತ್ರದ ಜಂತ್ರದವಳಿಯೊಲು ಫಲಸಿದ್ಧಿ ಎನಿಸಿ ನಿಷ್ಫಲಸಿದ್ಧಿಯನೆ ಬಿಟ್ಟು ಭಕ್ತ್ಯಂಗನೆಯ ಮರ್ತ್ಯಕ್ಕೆ ತಂದಿತ್ತವಂಗೆ (ಅವಸಂ. ೨೮೯-೦೩೦೦) ; ಎನ್ನನ್ನೇಕೆ ಕಾಡುವಿರಿ ಎಲೆ ತಂದೆಗಳಿರಾ ಬಲುಹಳಿದು ಭವಗೆಟ್ಟು ಛಲವಳಿದಂ ಭಕ್ತೆಯಾಗಿ ಚಿನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ (ಮಹಾದೇ ಬಿ. ೦೩೦-೨೯೯).

[ಬಲ್ಪು+ಅಳಿ$_1$ (<ಅಟ್ಟಿ$_1$)]

ಬಲ್ಪಾವು (ನಾ). ದೊಡ್ಡಹಾವು : ಅವನಮರಪದವಿಯಂತ್ಯದೊಳವನಿಗೆ ಬಲ್ಪಾವದಾಗಿ ಬೀಳ್ವಿನಂ (ಜಾಲಾಸ್ಯ. ೦-೨-೫೯).

[ಬಲ್$_2$ (< ಬಲ್ಲಿತು$_1$) + ಪಾವು$_1$]

ಬಲ್ಪಿಡಿ$_1$ 'ಬಲ್ವಿಡಿ$_1$' ನೋ.

ಬಲ್ಪಿಡಿ$_2$ 'ಬಲ್ವಿಡಿ$_2$' ನೋ.

ಬಲ್ಪಿಲಿ (ನಾ). ಬಲವಿಲ್ಲದುದು ; ನಿರ್ಬಲವಾದುದು : ಒಡಲಿದು ಬಲ್ಪಿಲಿಯಕ್ಕುಂ (ಸೌಪಂದ. ೯-೦೦). [ಬಲ್ಪು + —ಇಲಿ$_3$]

ಬಲ್ಪು, ಬಲುಪು, ಬಲುಹು (ನಾ). ೧. ಬಲ; ಶಕ್ತಿ; ಸಾಮರ್ಥ್ಯ; ಪರಾಕ್ರಮ : "ಪ್ರಾಣಃ ... ತರಃ ಸಹಃ—ಈ ರ ಬಲ್ಪು (ಬಲುಹು)" (ಹಲಾಯು. ೦೨೦-೩೬) ; ಬಲ್ಪುಂ ಕೂರ್ಪುಮಾರ್ಪುಂ ನಿರಂತರಮೊಪ್ಪಲ್ (ಎಇ. XIII. ೩೨೯-೩; 929) ; ಮಾಣಿಕಂ ಸೂಸೆ ಬಲ್ಪಿಂದೊದೆದಂ ಸಾರ್ತಂದು ದುರ್ಯೋಧನನ ಮಕುಟಮಂ ಕೋಪದಿಂ ಭೀಮಸೇನಂ (ಪಂಪಭಾ. ೦೩-೯೮); ಕೆಡೆದಿರ್ದ ಶಬರಂ ಕಕ್ಕಡವಂದಿಯನೀಕ್ಷಿಸುತ್ತೆ ಶಬರ ಸಮೂಹಂ ಬಿಡೆ ಕೊಂಡುಕೊನೆದು ಬಲ್ಪಂ ನುಡಿಯುತ್ತಿರ್ಪನ್ನಂ (ಗಿಂಕ. ೦-೦೦೦). ೨. ಬೆಳೆಯುವಿಕೆ; ಬಲಿಯುವಿಕೆ : ಎಳವಾಳೆ ಬಲ್ಪಿಗೆ ಬಂದರೆ ಸೀಗೆಯ ಮೆಳೆಯೊಳು ಮಥನವೆ (ಮೋಹತ. ೩೯-೨೯). ೩. ದೃಢತೆ; ಸ್ಥಿರತೆ : ಪಿಡಿದೀ ವ್ರತಮಂ ನಾಂ ಸಾವೊಡೆ ಸಾವೆಂ ಬಿಡುವೆವಲ್ಲವೆಂದೊಡೆ ಮೂರ್ಖಂ ಮಡಿಪದೆ ಮಾಣಂ ಬಲ್ಪಿಂ ಪಿಡಿವೆಂ ಜಿನಪದಮನಿದುವೆ ಕಜ್ಜಂ ಪೆಱತೇಂ (ಧರ್ಮಾಮ್ಯ. ೩-೦೦೦): ಪಿಂಗಿದ ನೀಱರ ಬಲ್ಪು ಪಾಱೆ ಪಾದರಿಗರ ನಾಣ್ಗಳುರ್ಕುಗಿಡೆ . . . ಜೇವೊಡೆಯ ಬಲ್ಲುಲಿ ನೀಳ್ದುದು ಕರ್ವುವಿಲ್ಲನಾ (ಕಬ್ಬಿಕಾ. ೩೦೦) ; ವಿರಚಿಸಿದಂ . . . ಲಕ್ಷ್ಮೀಶನೆಂಬೊರ್ವನು ಹೃದ್ವನಜದೊಳ್ದೇವಪುರದ ಲಕ್ಷ್ಮೀಶನ ಪದದ್ವಯವನಾವಗಂ ಧ್ಯಾನಿಸುವರಡಿಗಳಂ ಸದ್ವಿನಯದಿಂ ಭಜಿಪ ಬಲ್ಪಿಂದೆ ವಿಮಲ ಜೈಮಿನಿಭಾರತದ ಕಥೆಯನು (ಜೈಮಿಭಾ. ೦-೦೦). ೪. ಗಾಢತೆ; ಬಿಗುಹು; ಬಿಗಿ: ಕಲ್ಪಲತೆಗಳೆಡಬಲದಲ್ಲಿ ಹಬ್ಬಿದ ಕಲ್ಪವೃಕ್ಷವೊಯೆಂಬ ಸೊಬಗ ಕಲ್ಪಿಸುತ್ತಿದ್ದನಾ ರಾಯನಾ ಪೆಣ್ಗಳ ಬಲ್ಪಿನೊಳಮರ್ದಪ್ಪಿದಾಗ (ಭರತ. ೬-೩೩). ೫. ಬಲಾತ್ಕಾರ; ಬಲವಂತ ; ಒತ್ತಾಯ : ಸಮಸುಖದುಃಖಮಂ ತಳೆವ ರೋಹಿಣಿ . . . ಎನ್ನಯ ಮೋಹದೆ ಮರ್ತ್ಯರೂಪದಿಂದಮೆ ಬಱಿಸಂದಳೊಲ್ದು ಮಗುಟ್ಟುಂ ಬರೆ ಪಿಂತೆಯೆ ಮತ್ತೆ ಬಲ್ಪಿನಿಂಗಮೆ ನಿಲಿಸಿಟ್ಟೆನೆಯ್ದೆ ನಿಜಲೋಕದೊಳಾಕೆಯನಲ್ಲಿ ಕಂಡವೈ (ಕಾದಂಉ. ೬೦೯) ; ಕೆಲಬರ್ ಸಿಂಗಮನೊತ್ತಿ ಪಲ್ಲಣಿಸಿ ಬಲ್ಪಿಂದೇಱುತುಂ ಬೇಗದಿಂ . . . ನಡೆವರೆತ್ತಂ ಬೀರರಾ ಪಾಡಿಯೊಳ್ (ಕಬ್ಬಿಕಾ. ೨೫೩) ; ಕಂತೆ ಕಟ್ಟಿಗೆ ಕಪ್ಪರಂಗಳನಿಭಾಸುರನ ವಿಷ್ಣುವಿಧಿಗಳ ಸದೆದು ಬಲ್ಪಿನಿಂ ಸೆಳೆದುಕೊಂಡೈ (ಭಾಪತಂ. ೯-೦). ಬಲುಪು : ೧. ಬಲುಪಿನೊಳಂ ತೇಜದೊಳಂ . . . ರೂಪಿನೊಳಂ ಸಲ್ಲಲಿತವಪ್ಪಱಿತದೊಳಂ ಗೆಲುವವನ್ನರ್ಗ್ಗಾಣೆ ರೇವಗೌಂಡಂಗೆಳೆಯೊಲ್ (ಸೌಇಇ. IX-i. ೨೯೯-೫೭; 1147); ಕಲಿತನದ ಬಲುಪಿನಾರ್ಪ್ಪಿಂ ಕೂರ್ಪ್ಪಿಂ ಧರೆಗೆಸೆವ ಪಂಚಲಿಂಗನ ಚರಣಾಬ್ಜಪರಪ್ರಸಾದ ತೋಟಿಗುರುತ್ತರ್ವರ್ಷಂಪ್ರತಿ ಕಂಡಗೆಯಂ . . . ರಂಗಭೋಗಕ್ಕೆಂದುಂ (ಕಇ. I. ೩೦-೩೫; 1222); ಮೆಲುಪು ಬಲುಪಿನ ಶಕುತಿಗಳುಡುಗಲಿ ನೆನಪು ಮರಳದೆ ತೊಡೆದು ಹೋಗಲಿ (ಏಸೀಗೀ. ೦೦೯-೯). ೫. ಹೆಡಗುಡಿಯ ಕಟ್ಟಿಮುಭಯವ ನಡೆಯಲಿ ಹಱುಗೋಲೆನಲ್ಕೆಯಂಬಿಗನಾಗಂ ಪಿಡಿದು ಕೋಡಗವ ದ್ವಿಜನಂ ಕಡು ಬಲುಪಿಂ ಪಿಂತೆ ತೆಗೆದು ಕಟ್ಟಿದ ಕರಮುಂ (ವನ್ನಜಾ. ೨-೦೪೯). ಬಲುಹು : ೧. "ಪ್ರಾಣಃ, ಸ್ಥಾಮನ್, ಬಲಂ . . . ಸಹಃ—ಈ ರ ಬಲ್ಪು (ಬಲುಹು")

(ಹಲಾಯು. ೦೨೦-೩೮); ಜನನಮರಣಕ್ಕೊಳಗಾಗದನ ಬಲುಹನೇನ ಬಣ್ಣಿಪೆನವ್ವ (ಸುಹಾದೇ. ಬ. ೦೦-೬); ಕುಬೇರನ ಗರ್ವಭೂರುಹವ ಬೇರುಳಿಯದೆ ಕಿತ್ತು ಬಿಸಾಡುವೆನೀಶನ ಭಾರಿಯ ಬಲುಹ ಮುಱಿವೆನು (ಶ್ರೀಪುಸಾಂ. ೦೦-೧೨೬); ಎಲೆ ಕುಮಾರಕ ಹರಕುಮಾರಂಗಳವಿಯಲಿ ನಿಲಲರಿದು ಕೊರಳಿನ ಬಲುಹನಱಿಯದೆ ಗಿರಿಯ ಹೊಱಲಂಘೈಸುವರೆ ಭಟರು (ಕುಪ್ಯಾಕ್ರೋ. ೪-೫೪). ೩. ಬೇಂಟೆಗೆಯ್ತಂದ ಭೂಪಾಲಕನನೆಳೆತಟಂ ಮಾಡಿ ತೆಗೆದೆನ್ನಾಶ್ರಮಕ್ಕೊಯ್ದು ಬಳಿಕ ನೋಡುವೆನವನ ಸತ್ಯಗಿತ್ಯದ ಬಲುಹನೆಂದ ವಿಶ್ವಾಮಿತ್ರನು (ಹತಕಾ. ೩-೧೦); ಅನಘನಪ್ಪಾ ಮಾದಿರಾಜನ ಮನದ ಬಲುಹಂ ನೋಡಿದವೆ ನಾನು (ಬಸಪು. ೦೯-೬೫). ೪. ಪಸ್ತ್ರವ ಬಹಳವಾಗಿ ಧರಿಸು ಸೆಜ್ಜೆಯ ಬಲುಹಾಗಿ ಕಟ್ಟು ಶಿವದಾರವ ಬಲುಹಿನಲಿ ಸುತ್ತೆಂದು ಹೇಳುವುದು ಉಪದೇಶವೇ ಬೇಱೆ ಕಟ್ಟುವ ಠಾವುಂಟಾಗಿ (ಪನ್ನಪ. ಕ. ೩೨೮-೦೦೩೩); ಆಗಳತಿಸಾಕಾರರೂಪವದಾಗೆ ನಡನಡುಗುತ್ತ ಹತ್ತಿರೆಗಾಗ ಕೈಸನ್ನೆಯಲಿ ಕರೆವುತ್ತೊಡೆಯ ನಂಬಿಯನು ಆಗ ತನ್ನುಡೆಗಚ್ಚೆಯನು ಬಲುಹಾಗಿ ಪಿಡಿಸುತ್ತಾತನಂ ತಲೆವಾಗಿಸುತ್ತಂ ಭಯದ ಬಿತ್ತಂ ಬಿತ್ತಿ ಚಿತ್ತದಲಿ (ಬಸಪು. ೨೬-೨೫). ೫. "ಹಠಃ, ಪ್ರಸಭಃ — ಈ ೨ ಬಲುಹು (ಬಲ್ಪು)" (ಹಲಾಯು. ೦೨೫-೬೪); ಕಂಗಳಲಿ ಕಟ್ಟಿದ್ದ ಮುಸುಕ ನಭಂಗನಾಗ ತೆಗೆದು ಬಿಸುಟು ನಯನಂಗಳಂ ಬಲುಹಿಂದ ತೆಱೆದುಱೆ ನೋಡಲು (ಬಸಪು. ೫೦-೬೦); ಕುಂತೀದೇವಿ . . . ಬಲುಹಿನಲಿ ಭೂಸುರನ ಚಿತ್ತವ ತಿಳುಹಿ ಬಂದಳು ಮನೆಗೆ (ಕುಪ್ಯಾಆ. ೦೦-೨೦); ಆನೆಯನುಣಿಸುವಂತಾ ಕಾಂತೆ ಬಲುಹಿಂದ ತಾನುಣಿಸಿದಳಾತ್ಮಪತಿಯ (ಭರತ. ೧೦-೫೭). ೬. ಬಲವುಳ್ಳದು; ಬಲಿಷ್ಠವಾದುದು; ಸಮರ್ಥವಾದುದು: ತಲೆ ಇಲ್ಲದ ಕಾಗೆ ನೆಲದಲ್ಲಿ ನಡೆಯಿತ್ತು . . . ಬಲುಹೆನಿಸಿದ ಕರಡಿ ಹಾಡಿ ಹರಸಿ ಬೆಳೆಯಿತ್ತು (ಅದಪ. ೩೯-೦೦೩); ದೇವಿ ನೇಮಿಸಲಱಿಯೆನೆಂದೊಡಿದಾವ ಧರ್ಮವು ಶಿವಶಿವೀ ಹದ ಸಾವನವರಿಗೆ ತಹುದು ಬದ್ಧವಿಘಾತಿಯಿದು ಬಲುಹು (ಕುಪ್ಯಾಪಿ. ೩-೪). ೭. ಬಲವುಳ್ಳವನು; ಬಲಿಷ್ಠನಾದವನು; ಸಮರ್ಥ: ಒಲಿವನಿತನಾರೋಗಿಸಿದಪೆಂ ನಿಲಿಸಲಾಪೈ ಎನ್ನನೆನುತಂ ಬಲುಹಲಾ ನೀನಿದಕೆ ನಾನೇನಱಿಯೆನೇ ಎನುತ (ಬಸಪು. ೫೯-೦೩); ಈತ ಧವನುವಿನಲೀತ ಖಡ್ಗದಲೀತ ಪರಿಘದಲೀತ ಕುಂತದಲೀತ ಬಲುಹೆಂದಂಧ ಭೂಪತಿಗಱುಹಿದನು ವಿದುರ (ಕುಪ್ಯಾಆ. ೭-೨೪). ೮. ಅಧಿಕನಾದವನು; ಮಿಗಿಲಾದವನು; ಉತ್ತಮ: ಬಲುಹದಾರೈ ತಾಟಕಿಗೆ ವೆಗ್ಗಳರದಾರು ಸುಬಾಹುವಿಗೆ (ತೊರರಾ. ೩-೭-೪೨). ೯. ಹೆಚ್ಚಾದುದು; ಅಧಿಕವಾದುದು: ಭಟನುಱುಬೆ ಬಲುಹೋದಿಟ್ಟನಿವ ಕೌರವರ ಥಟ್ಟಿನಲಿ (ಕುಪ್ಯಾಕ. ೨೦-೦೭); ನೆಲಹುಗಳಾ ಮೊಸರ ನುಂಡನು ನಿನ್ನ ಕಂದನ ಗಸಣಿ ಬಲುಹು ಯಶೋದೆ (ಸಾಳ್ವಶಾ. ೨೦-೪೯). ೧೦. ಬೆಂಬಲ; ಒತ್ತಾಸೆ: ನರನ ನುಡಿ ಹೊಳ್ಳಾಗದಾ ಮಾರಹರನ ಬಲುಹುಳ್ಳನ್ನಬರ (ಕುಪ್ಯಾಕ್ರೋ. ೬-೬೩); ಜನರ ಪರಿಪರಿ ದೂಷ್ಯ ಭೂಷ್ಯವ ನೆನೆವೆನೇ ತಮ್ಮಡಿಯ ಸಂಭಾವನದ ಬಲುಹಿರಲಾವ ಭಯ ಮೇಕೆಂದು ಕೈಮುಗಿದ (ಗಗಶಾ. ೦೭-೬೪). ೧೧. ಕಟ್ಟು; ಆನಿಕೆ: ಕಾಂತಾಂಚಭಾರದಿಂದೆ ನುಣ್ಗೊರಲು ಮುಂದೆಂತಹುದೆಂದು ಸಂದೆಗದೆ ಸಂತತ ಬಣ್ಣಗಲ್ಲುಗಳ ಕೇವಣಿಸಿರ್ದ ಚಿಂತಾಕ ಬಲುಹನಿಕ್ಕಿದರು (ಮೋಹತ. ೨೩-೩೮). ೧೨. ಕಠಿಣವಾದುದು; ಕಷ್ಟಕರವಾದುದು: ದೇವ ಕಾಳೆಗ ಬಲುಹು ಬಿಸಿಲಿನ ಡಾಪರಕೆ ರಥತುರಗಪತಿನಿರ್ಜೀವಿಯಾದವು (ಕುಪ್ಯಾಕ್ರೋ. ೦೦-೨೭); ಬಲಹೀನ ನೀನಾ ಖಳನ ಕೊಲುವುದೆಂತೆನೆ ಕೋಪಿತನಾಗಿ ತನಗಿದು ಬಲುಹೆಯೆಂದವನುಸುರಿದನು (ಜೀವಂಸಾಂ. ೦೫-೪೭); ವರಕಾಮವೃಷ್ಟಿಯೆನಿಪ ಗೃಹಪತಿರತ್ನ ಪರಿಪರಿ ಗೃಹವಸ್ತುಗಳನು ನೆರಪುವುದನೊಂದು ವಿಭವವ ಮಾಳ್ಪನೆಂದರೆ ತಡಬಡವುಂಟೆ ಬಲುಹೆ (ಭರತ. ೦೬-೦೦೩). ೧೩. ಮಹಿಮೆ; ಪ್ರಭಾವ: ಎನಲು ತಾ ನರವರವಸಿಷ್ಠಂಗಿನಿತು ಸತ್ವವಿದೇನದೆಂದರೆ ಘನವನಱಿಯಲು ಪಾರ್ಥ ರುಷಿಗಳ ತಪದ ಬಲುಹುಗಳ ತನತನಗೆ ಮುನಿವರರು ದೇವರ ಜನವ ಶಾಪಿಸಲೊಬ್ಬರೊಬ್ಬರಿಗನುಸರಿಸಿ ಗಜಱಿಸಿತು ತತ್‌ಕ್ಷಣ ಪಾರ್ಥ ಕೇಳೆಂದ (ಸಂಭಪ. ೨೪-೫೭). ೧೪. ಹಿರಿಮೆ; ಘನತೆ; ಪ್ರೌಢಿಮೆ: ವಿದ್ಯದ ಬಲುಹನೆ ತೋಱಿ ಬುದ್ಧಿಯ ಮೆಱೆವವನಲ್ಲ ನಿರ್ಧೂಳಿ ಜನ್ಮ ನಿಜಗುಣಯೋಗಿ ಕಂಡಯ್ಯ (ಶಿವಗೀ. ೧೨೯-೬೪೨). ೧೫. ಬಿರುಸು ಮಾತು: ಕೆಲಸ ಮಾಡಲು ನಿಮ್ಮ ಭವನದ ನಳಿನಮುಖಿಯರ ಕಳುಹು ಸುರಪತಿ ಬಲುಹ ನುಡಿದರೆ ನಿನ್ನ ಕತನದಿ ಕೆಡುವುದಾ ಲೋಕ (ಸಂಭಪ. ೨೦-೫೫). (ಗು). ೧೬. (ಆಲಂ) ಹೊರಗೆ ಮಾತ್ರ ಬಲವಾಗಿರುವಂತೆ ಕಾಣುವ; ಅಶಾಶ್ವತವಾದ: ನಂಬದಿರು ಈ ದೇಹ ನಿತ್ಯವಲ್ಲ . . . ಒಳಗೆ ಮಲ ಮೂತ್ರಾದಿ ಕ್ರಿಮಿಗಳಿರವು ಹಲವು ವ್ಯಾಧಿಯ ಬೀಡು ಪಂಚಭೂತದ ನಾಡು ಬಲುಹು ದೇಹವ ನೆಚ್ಚಿ ಕೆಡಬೇಡ ಮನುಜ (ಪುರಂದ. ೦-೨೬-೦).

ಬಲುಹು ಮಾಡು = ೧. ಬಲಪ್ರಯೋಗ ಮಾಡು; ಶಕ್ತಿಯನ್ನು ಉಪಯೋಗಿಸು: ಬಲುಹು ಮಾಡಿಕೊಳಲ್ಕೆ ಹರಿಯಜ ಬಲಹರರ ಪವಣಲ್ಲ ಎಂದಡೆ ಅಳವಿಯೇ ನಿಮಗೆವ್ಮೊಡನೆ ಮಾಱಾಂತು ಕೆಡಬೇಡ (ಬಸಪು. ೫೮-೩೭). ೨. ಒತ್ತಾಯ ಮಾಡು; ಬಲಾತ್ಕಾರ ಮಾಡು: ಮನೆವೆಂಡಿತಿಯೊ ನಾನೊತ್ತೆಸೂಳೆಯೊ ನಿನಗೆ ಸೋದರದತ್ತಿಗೆಯೊ . . . ನಿನ್ನವರ ಒತ್ತಿ ನೀನೆನ್ನಂ ಬಲುಹು ಮಾಡುತ್ತ ಕಾಡಲದೆಂತು ಬಹುದು (ಬಸಪು. ೪೦-೪೬). ಬಲ್ಪಾಗು, ಬಲುಹಾಗು, ಬಲುಹಾಗು = ೧. ಹೆಚ್ಚಾಗು; ಅಧಿಕವಾಗು; ಬಹಳವಾಗು: ಮುಪ್ಪು ಬಲ್ಪಾಗೆ ಶಿಥಿಲನಕ್ಕುಂ (ಮುಗರಾ. ೯೦-೦೦); ಭಕ್ತರುರವಣೆ ಪಿರಿದಾಯಿತ್ತು ಭಕ್ತರ ತೇಜಂ ಬಲುಹಾಯಿತ್ತು (ಬಸರ. ೬-೯೦); ಖೇಡತನ ಬಲುಹಾಯ್ತು ನಿಮ್ಮನು ಕಾಡುವವರಾರು (ಸಂಭಪ. ೭-೩೦); ಅಱಿವು ತಲೆಕೆಳಗಾಯ್ತು . . . ಮಱವೆ ಗಱಿಗಟ್ಟಿತು ಮನೋಭವ ನಿಱಿಗೆಲಸ ಬಲುಹಾಯ್ತು (ಕುಪ್ಯಾಪಿ. ೨-೦೨). ೨. ಬಲ ಬರು; ಸಾಮರ್ಥ್ಯವುಂಟಾಗು: ಬಡವಂಗೆ ಹಣ ದೊರಕಿದಂತೆ ಕತ್ತಲೆಗೆ ಬಲುಪಾದಂತೆ ಗಿರಿಗೆ ನಡೆ ದೊರಕಿದಂತೆ ಬಣಗುರಕ್ಕಸರಿಗೀಶ್ವರನಿರೂಪಿತದಿಂ ದ್ರುಹಿಣ ಕೊಟ್ಟ ವರದ ಬಲದಿಂ ಲೋಕಗಳನೆಲ್ಲ ಹಣೆದವಾಡಲ್ಕಮರರೆರ್ದೆಗುಂದಿತು (ಲಕಿಪಂ. ೦೭-೯). ೩. ಬಲವುಳ್ಳುದಾಗು; ಬಲಿಷ್ಠವಾಗು: ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ ಕೊಳೆವುದಲ್ಲದೆ ಬಲುಹಾಗ ಬಲ್ಲುದೇ (ಬಸಪ. ೯೨). ೪. ಬಲಿಷ್ಠನಾಗು; ಸಮರ್ಥನಾಗು: ಆದಡಿದ ಕೊಳ್ಳೆನುತ ಸಾತ್ಯಕಿ ಕೋದನಭ್ರವನಂಬಿನಲಿ ಬಲುಹಾದನೈ ಮಝು ಎನುತ ಕಡಿದನು ಸೋಮದತ್ತಸುತ (ಕುಪ್ಯಾಕ್ರೋ. ೦೪-೪). ೫. ಉಗ್ರವಾಗು; ಪ್ರಚಂಡವಾಗು: ನಡುಹಗಲು ಪರಿಯಂತ ಕಾಳೆಗ ಬಿಡದೆ ಬಲುಹಾಯ್ತುಖಳವೇಗದ ಕಡುಗುದುರೆ ಬಳಲಿದವು (ಕುಪ್ಯಾಕ್ರೋ. ೦೦-೨೨).

[ಬಲ್$_2$ (< ಬಲ್ಲಿತು$_1$) + — ಪು$_2$]

ಬಲ್ಪುಗಿಡು 'ಬಲ್ಪುಗೆಡು' ನೋ.

ಬಲ್ಪುಗುಳ್ (ನಾ). ದಪ್ಪವಾದ ಗುಳ್ಳೆ; ಭಾರಿಯಾದ ಬೊಬ್ಬೆ: ಪುಷ್ಪ ಕೋಮಲಲಿಂಗಾಂಗದೊಳಾಯ್ತು ಬಲ್ಪುಗುಳಿದನ್ನಿಂ ಮುನ್ನಮೇಗೈವೆನೆಂದು ಲಸತ್‌ಖಡ್ಗದೆ ತನ್ನ ಗೋಣ್ಕೊಱೆಯೆ (ಪ್ರಶಪ. ೯-೬೩).

[ಬಲ್$_2$ (< ಬಲ್ಲಿತು$_1$) + ಪುಗುಳ್$_2$]

ಬಲ್ಪುಗೆಡು, ಬಲ್ಪುಗಿಡು (ಕ್ರಿ). ಬಲವನ್ನು ಕಳೆದುಕೊಳ್ಳು; ಸಾಮರ್ಥ್ಯವನ್ನು ಕಳೆದುಕೊಳ್ಳು; ಶಕ್ತಿಗುಂದು: ಕಡವಗಲೊಳ್ ನಿಜಾಂಗಮತಿರಕ್ತದೊಳೊಪ್ಪಿರೆ ಬಲ್ಪುಗೆಟ್ಟು ತೇರ್ ಪೊಡೆಗೆಡೆಯಲ್ . . .

ಇನನೆಯ್ದಿದನಸ್ತಶೈಲಮಂ (ಧಶಕು. ೨-೩೯). **ಬಲ್ಪುಗಿಡು :** ಎಂತು ಪೆಱಗಿಕ್ಕಿ ನಳನಂ ನೀಂ ತಱಿಸಂದಂತೆ ಬಲ್ಪುಗಿಡದಣ್ಮಣ್ಮೆಂದಂತಕನೆ ಮಸಗಿ ಮೇಲೆಬ್ದಂತೆವೊಲಿರ್ದಂ ಪ್ರಹಸ್ತನಪ್ರತಿಮಬಲಂ (ಪಂಠಾಮಾ. ೦೩-೬೬); ದೂರ್ತರ್ ಮಾರ್ತಾಂಡನಂ ಕಂಡ ಮಂಜಿನಂತೆ ಪರಿಯೆ ಬಚ್ಚರ್ ಕಿರ್ಚು ಮುಟ್ಟಿದ ತುಪ್ಪದಂತೆ ಬಲ್ಪುಗಿಡೆ (ಧರ್ಮಾಮೃ. ೨-೬೯).

[ಬಲ್ಪು + ಕೆಡು$_1$]

ಬಲ್ಪುಚ್ಚು (ನಾ). ಬಲವಾದ ಹುಚ್ಚು; ಅತಿಯಾದ ಬುದ್ಧಿಭ್ರಮಣೆ : ಬಲ್ಪುಚ್ಚಾದಂ ಪೆರ್ಚಿದವೊಲ್ಪೊಳೆಯಿಸುತಂದು ರಾತ್ರಿ ದರ್ಪಕಶಿಖಿ ಪೊಂಗಲ್ಪದ್ಮಾವತಿ ಜುಣುಗಿರೆ ನಲ್ಪೊಂಬಾಗಿಲ್ಗೆ ಬಂದನಾ ಕವಿರಾಜಂ (ಉದ್ಯಟ. ೦೨-೩೩). [ಬಲ್$_2$ (< ಬಲ್ಲಿತು$_1$) + ಪುಚ್ಚು$_1$ (< ಪುರ್ಚು)]

ಬಲ್ಪುದೋಱು 'ಬಲ್ಪುದೋಱು' ನೋ.

ಬಲ್ಪುದೋಱಿಸು (ಕ್ರಿ). ಶಕ್ತಿಯನ್ನು ತೋರಿಸು; ಸಾಮರ್ಥ್ಯವನ್ನು ಪ್ರದರ್ಶಿಸು : ಮತ್ತಂ ಮಲೆತು ನೀದು ಅಖ್ಖಡದೊಳ್ ಪೊಕ್ಕು ಬಾಹಪ್ಪಳಿಸಿ ಬಲ್ಪುದೋಱಿಸಿದ ಮಲ್ಲನನುರ್ಬುತ್ತೊಯ್ಯನೊಳಪೊಕ್ಕು ಮಿಕ್ಕು ಪಱಿದಿಕ್ಕಿ ಮುರಿವ . . . ಮಲ್ಲರ ನೆರವಿಗಳೊಳಂ (ಗಿಂಕ. ೨-೦೦೩ ಪ). [ಬಲ್ಪುದೋಱು + — ಇಸು$_3$]

ಬಲ್ಪುದೋಱು, ಬಲ್ಪುದೋಱ್ (ಕ್ರಿ). = ಬಲ್ಪುದೋಱಿಸು: ಏಱನೆ ಸೂಱೆಗೊಂಡು ನುಡಿವೀ ನುಡಿಯಲ್ಲದೆ ಮತ್ತಮಾಸನಂದೋಱುವ ಬಲ್ಪುದೋಱುವೆರ್ದೆದೋಱುವ ಕಯ್ಪೆಸರುಗಳೆಮ್ಮನುಂತೇಱವು (ಪಂಪಭಾ. ೬-೨೦). **ಬಲ್ಪುದೋಱ್ :** ಪಗಲಿರುಳೆನ್ನದೆನ್ನೊಳೆ ಕಡಂಗುವನೆನ್ನೊಳೆ ಬಲ್ಪುದೋರ್ಪಂ . . . ಕರಂ ಮುಳಿಸಿಲ್ಲ ಕಾಯ್ದು ಕೆಮ್ಮಗೆ ಬಳಿಸಂದು ಕೊಂದಪನಕಾರಣದಿಂ ಮೊಱೆಯೋ ಮನೋಭವಾ (ಆದಿಪು. ೧೨-೩೪).

[ಬಲ್ಪು + ತೋಱು]

ಬಲ್ಪೊಂಬಳೆ (ನಾ). ಅಡಕೆ, ತೆಂಗು ಮುಂತಾದ ಮರಗಳಲ್ಲಿ ಬಿಡುವ ದೊಡ್ಡ ಹೊಂಬಾಳೆ,—ಹೂಗೊಂಚಲು: ಬಲ್ಪೊಂಬಳೆಯಿಂ ಬಳ್ಕಿತ್ತು ಕಾಂಗು . . . ಕಂಜಕಿಂಜಲ್ಕದಿಂ ಕಣ್ಗೊಳಿಸಿತ್ತಬ್ಜಾಕರಂ ತಂಪಲೆವ ಮಲಯಮಂದಾನಿಲಾಂದೋಳದಿಂದಂ (ಕಾದಂಉ. ೭೭೬).

[ಬಲ್$_2$ (< ಬಲ್ಲಿತು$_1$) + ಪೊಂಬಳೆ (< ಪೊಂಬಾಳೆ$_1$)]

ಬಲ್ಪೊಱೆ, ಬಲುಹೊಱೆ (ನಾ). ಬಹಳವಾದ ಹೊರೆ ; ಅಧಿಕವಾದ ಭಾರ: ಪೊಡವಿಯ ಪೊತ್ತ ಬಲ್ಪೊಱೆಯನೊಲ್ದಿಟಿಪಲ್ ಸಬಲಂ ಖಳರ್ಕಳಂ ಕಡಿಕಡಿದೊಟ್ಟಿ ಮೆಟ್ಟಿ ಜಿಂಹಗನಂ ವಿಜಯಾಂಶುವೃದ್ಧಿ ದಾಂಗುಡಿಯಿಡೆ (ಜಕವಿ. ೨-೦೦); ಬಡಗಣ ಗಡಿಗಾಪಿನವರ್ ಗುಡುಗಾಡಿಸಿ ಗೋಲಕೊಂಡ ವಿಜಯಾಪುರಮಂ ಕಡಿದು ಮರಾಟರ ಪಡೆಯಂ ಪೊಡವಿಯ ಬಲ್ಪೊಱೆಯನಿಟಿಪಿ ಬಣ್ಣಗೆವಡೆವರ್ (ಅಪ್ರತಿ. ೨-೦೬). **ಬಲುಹೊಱೆ:** ತೋಳ ಬಲುಹೊಱೆಗಲಸಿ ಕೆಲಬರು ಮೇಲೆ ನಮ್ಮಯ ಹಗೆಗೆ ಕೆಲಬರು ಕಾಳಗದ ಕಾರ್ಮುಕನೃಪಾಲರ ನೆರವಿಯದೆಯೆಂದ (ಕುಪ್ಯಾಭೀ. ೩-೦೪); ಬಾರಿಸಿದ ಬಲುಹೊಱೆಯ ಬಂಡಿಗಳೋರಣಿಸಿದವು ಪಯಣದಲಿ ಕರ್ಪೂರ ಕಸ್ತುರಿ ಕುಂಕುಮೆದ ಪೆಟ್ಟಿಗೆಯ ಸಾಲಿನಲಿ (ತೊರಣಾ. ೦-೬-೩).

[ಬಲ್$_2$ (< ಬಲ್ಲಿತು$_1$) + ಪೊಱೆ]

ಬಲ್ಪೊಟ್ಟು (ನಾ). ಬಹಳ ಕಾಲ; ಹೆಚ್ಚು ಸಮಯ : ಒಂದು ಮಾತಾಡದೆಯೆ ಕುಳ್ತನ್ ಬಲ್ಪೊಟ್ಟು (ಅಶ್ವತ್ಥಾ. ೧೩-೨೬೬).

[ಬಲ್$_2$ (< ಬಲ್ಲಿತು$_1$) + ಪೊಟ್ಟು]

ಬಲ್ಬಂಟ (ನಾ). ಮಹಾ ಪರಾಕ್ರಮಿ,—ಯೋಧ: "ಉರ್ಕಾಳ್, ಕೂರಾಳ್, ತುಟಿಲಾಳ್, ಬಲ್ಲಾಳ್, ಬಲ್ಬಂಟಂ—ಈ ೫ ಪರಾಕ್ರಮಮುಳ್ಳಂ" (ಕಶಸಾ. ೩೬-೨೬೪) ; ಪುಣ್ಯದಿಂ ದೊರೆಕೊಂಡ ಜೈನಧರ್ಮಮನೊಲ್ಲದೆ ಬಿಟ್ಟೊಡೆ . . . ಪುಲ್ಬಂಟನಂ ನಂಬಿ ಬಲ್ಬಂಟನಂ ಬಿಡುವ ಪಗೆಗಾಱನುಮಂ . . . ಪೋಲ್ವೆನೆಂದು ಪರಿಚ್ಛೇದಿಸಿ (ಧರ್ಮಾಮೃ. ೬-೩೦); ಬಡಿಹೋರಿ ಬಲ್ಬಂಟನೆಂಬ ಬಡನುಡಿ ಬಲ್ನುಡಿ ಬಡದೈವಕಲ್ಲದೆ ಬಡಶಬ್ದ ನಿನ್ನ ಪೊಂದುವದೆ (ಶತಸಾಂ. ೭೨-೬೩); ಬೂತುಗ ಮತ್ತು ಅವನ ಮಗ ಮಾರಸಿಂಹರಂತಹ ನಚ್ಚಿನವರಾದ ಬಲ್ಬಂಟರು ಆ ಸಾಮ್ರಾಜ್ಯವನ್ನು ಎತ್ತಿ ಹಿಡಿಯಲು ಪ್ರಯತ್ನ ಮಾಡಿದುದರಿಂದ ರಾಷ್ಟ್ರಕೂಟರ ಪಟ್ಟವು ಮುಂದೆ ಕೆಲವು ವರುಷ ಜೀವ ಹಿಡಿದುಕೊಂಡಿತು (ಕವೀರ. ೩೯). [ಬಲ್$_2$ (< ಬಲ್ಲಿತು$_1$) + ಬಂಟ$_1$]

ಬಲ್ಬಂಡಿ (ನಾ). ದೊಡ್ಡ ಗಾಡಿ : ಬಡಿಕೋಲ್ ಕಿಗ್ಗಟ್ಟು . . . ಸಾಳುವಂ ಕೂಳೆ ಗಾಳಂ ಗಿಡುಗಂ ಬಲ್ಬಂ [ಪಾಂಠಾ. ಲ್ವಿಂ]ಡಿಯೊಳ್ ದೀಹದ ಪುಲಿ ನಿಶಿತಾಸ್ತ್ರಂಗಳುಗ್ರತ್ವಮಂ ಸಂಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡೆದು ದುದ್ಯತ್ಕಿರಾತಪ್ರಜಾತಂ (ಗಿಂಕ. ೦-೬೯).

[ಬಲ್$_2$ (< ಬಲ್ಲಿತು$_1$) + ಬಂಡಿ$_1$]

ಬಲ್ಬಂದಿ 'ಬಲ್ವಂದಿ$_2$' ನೋ.

ಬಲ್ಬಂದಿಕಾಱ 'ಬಲ್ವಂದಿಕಾಱ' ನೋ.

ಬಲ್ಬಗೆ 'ಬಲ್ವಗೆ$_2$' ನೋ.

ಬಲ್ಬಜ (ನಾ). ೧. ದನಗಳಂ ತಿನ್ನದ ಒಂದು ಬಗೆಯ ಒರಟುಹುಲ್ಲು : "ಹೆಚ್ಚುಲಿಹುಲ್ಲು, ಬಲ್ಬಜ, ಗಂಜಳದ ಹೂ" (ಸಸ್ಕವಿ. ೫೪); ನೊದೆ ನಾಣಲ್ಬೆತ್ತ ಬಲ್ಬುಜ ಧನ್ವಂಗಳುಂ ಮಿಗಿಲಾಗಿ ಸಂಗ್ರಹಂಗೆಯ್ಯಬೇಕು (ಭಾರಶಾಂ. ೩೭೬-೬೬). ೨. (ಆಲಂ) ಕೆಲಸಕ್ಕೆ ಬಾರದುದು : ನಿರುಪಯುಕ್ತವಾದುದು : ಈ ಬಲ್ಬಜಕ್ಕೆ ಮನಸ್ಸಿನ ಶಾಂತಿ ಕಳೆದು ಕೊಳ್ಳಬಾರದು (ರೂಢಿ). [ಸಂ.]

ಬಲ್ಬಜೆ (ನಾ). (?) : ಕುಜನಸಂಗದಿ ಕೇಡು ಸುಜನರ್ಗೆಂಬಾ ನೀತಿ ತ್ರಿಜಗವಱಿಯೆ ಕಾಣಲಾಯ್ತು ಮಝು ಪ್ರಾಣಿಘ್ರಾಣದೊಳ್ನಿಜವಿದೆ ಇದಕೆ ಬಲ್ಬಜೆಯೇಕೆ (ಭೈರವೇ. ೦-೨೨೪); ಹೊರಳಿ ಬಲ್ಬಜೆಯಿಂದ ತನ್ನಯ ಬಿರಿದ ಬಿಡಿಸುವೆನೆನುತ ಭೋಂಕನೆ ಪರಿದು ಬಂದರು ಭಾಳನೇತ್ರರ ಮಹಿಮನಿದ್ದೆಡೆಗೆ (ಶಂಕದಾ. ೦೪-೩). [?]

ಬಲ್ಬಯಕೆ (ನಾ). ಅತಿಯಾದ ಅಪೇಕ್ಷೆ; ಬಹಳವಾದ ಆಸೆ; ಹೆಬ್ಬಯಕೆ : ದಣಾಯಕರೆ, (ಬಲ್ಬಯಕೆಯಿಂದ) ಮತ್ತೆ ನನ್ನ ಶ್ರೀವಿರೂಪಾಕ್ಷನ ಪಂಪಾಪುರಕ್ಕೆ ಹೋಗಬೇಕೆಂಬ ತುಡಿತ ದಿನದಿನಕ್ಕೂ ಬಲಿಯುತ್ತಿದೆ (ತುಂಗಭ. ೦೩); ಬಹುದಿನದ ಬಲ್ಬಯಕೆ ಈಡೇರಿತು (ಬೆಳುಮ. ೨೨೦).

[ಬಲ್$_2$ (<ಬಲ್ಲಿತು$_1$) + ಬಯಕೆ$_2$]

ಬಲ್ಬಱ (ನಾ). ಭೀಕರವಾದ ಬರಗಾಲ ; ಬಹಳವಾದ ಕ್ಷಾಮ ; ದುರ್ಭಿಕ್ಷ : ಬಹುಧನಧಾನ್ಯಾವಳಿಯನೊಪ್ಪಿಸನೆ ಬಲ್ಬಱದೊಳ್ ಘನಶರಣತತಿಗೆ (ವೃಷವಿ. ೬-೩೬). [ಬಲ್$_2$(<ಬಲ್ಲಿತು$_1$) + ಬಱ]

ಬಲ್ಬಟಲ್ (ಕ್ರಿ). ಅತಿಯಾದ ಆಯಾಸವನ್ನು ಹೊಂದು ; ಬಹಳ ದಣಿ: ಸಪ್ತಾಶ್ವಂ ನಿಚ್ಚವಯಣದೊಳ್ ಬಲ್ಬಟಲ್ದಶ್ವಸಪ್ತಕಮಂ ಕಡಲೊಳ್ ಮಯ್ಗರ್ಚಿ ನೀರ್ಗುಡಿಸಲ್ಕೆಂದು ಸಾರಥಿಯ ನೇರ್ಪಡಿಸಿ ತಾಂ ತೇರಿನಿಟಿ ದನೆನೆ ಪಡುವೆಟ್ಟಿನೆಡೆಯೊಳ್ ಮೆಲ್ಲನೆ ಮೆಯ್ಗರೆಯಲೊಡಂ (ರಾಮಾಶ್ವ. ೨೨-೩). [ಬಲ್$_2$ (<ಬಲ್ಲಿತು$_1$) + ಬಟಲ್$_1$]

ಬಲ್ಬಿಗುರ್ (ನಾ). ಅತಿಯಾದ ಭಯ ; ಬಹಳವಾದ ಅಂಜಿಕೆ : ಬಲ್ಬಿಗುರೊ ಎನ್ನೆರ್ದೆಯನಿಱಿಗುಂ (ಬದ್ಯಪ್ರ. ೦೦-೨೨೨); ಬಲ್ಬಿಗುರಿಂದಂ ಮತಿಗೆಟ್ಟವಳನ್ ಕಾಡಿಪುದು ? (ಬದ್ಯಪ್ರ. ೩೦-೬೩೩).

[ಬಲ್$_2$(<ಬಲ್ಲಿತು$_1$) + ಬಿಗುರ್$_2$]

ಬಲ್ಬಿರುದು (ನಾ). ದೊಡ್ಡ ಬಿರುದು ; ಪ್ರಸಿದ್ಧವಾದ ಹೆಸರು : ಸುರರ ಸೂಳೆಯರನೆಲ್ಲರಂ ಸೆಱೆವಿಡಿದು ತನಗೆ ಸರಿಯಿಲ್ಲೆಂದು ಬಲ್ಬಿರುದಿನ ಕಾಳೆಯಂ ಪಿಡಿಸಿ ಬಲದಿಂ ಚತುಸ್ಸಾಗರದ ವೇಳೆಯ ಧರಾಮಂಡಲಂಗಳಂ ಸಂತಸದೊಳಾಳೆಯಂಧಾಸುರಂ (ಪಬಪು. ೪೭-೦೨); ಪುರದ ಲಗ್ಗೆಗೆ ಬಿಟ್ಟ

ತುರುಕರನಿಱಿದು ಬಲ್ಬಿರುದ ಮೆಱೆದ ನರಸೇಂದ್ರ (ಕಂಪಂ. ೦೯ ಸೂಪಪ).

[ಬಲ್$_2$(<ಬಲ್ಲಿತು$_1$)+ಬಿರುದು]

ಬಲ್ಬಿಸಿಲ್ 'ಬಲ್ವಿಸಿಲ್' ನೋ.

ಬಲ್ಬಿಸಿಲು ' ಬಲ್ವಿಸಿಲ್ ' ನೋ.

ಬಲ್ಬು (ನಾ). ವಿದ್ಯುತ್ತನ್ನು ಬೆಳಕನ್ನಾಗಿ ಮಾರ್ಪಡಿಸಿ ಹೊರಚೆಲ್ಲುವ ಗಾಜಿನ ಬುರುಡೆ ; ವಿದ್ಯುದ್ದೀಪದ ಬುರುಡೆ : ಈ ತಾಮ್ರದ ತಂತಿಗಳ ತುದಿಗಳು ಬಲ್ಬಿನ ಹೊರಗೆ ಇರುವ ಎರಡು ಸೀಸದ ಬೊಟ್ಟುಗಳಿಗೆ ಸಂಬಂಧಿಸಿವೆ (ಶಾಕಪಾ. ೩೯೫); ಬೆಳಕು ಬೆಳಕನು ಕೂಡಿ ಆಡುತಿರೆ ಬಲ್ಬು ಹೊರೆ ; ಈಗ ಬಲ್ಬಿಗೆ ಬಲ್ಬು ಕಾತರಿಸಿತು (ಪಡಪಂ. ೧೨-೦೫).

[←ಇಂ. Bulb]

ಬಲ್ಬೆಟ್ಟ, ಬಲುಬೆಟ್ಟ (ನಾ). ದೊಡ್ಡ ಬೆಟ್ಟ ; ಅಗಾಧವಾದ ಪರ್ವತ : ಮರಳಿ ಕವಿದುದು ಸೇನೆ ಮಂಜು ಬಲ್ಬೆಟ್ಟಮಂ ಪರಿವೇಷ್ಟಿ ಪಂದದಿಂ (ಕಬಪು. ೨೯-೨೫). **ಬಲುಬೆಟ್ಟ** : ಮತ್ತಿದೇನಂಬುಧಿಯೊಳಗೆ ತಲೆಯೆತ್ತುತಿದೆ ಬಲುಬೆಟ್ಟವಿದು ತಾ ಕೃತ್ರಿಮವೊ ಸಹಜವೊ (ತೊಕರಾ. ೩-೦-೯); ಬಡನೆ ಕಪಿ ಬಲುಬೆಟ್ಟವನು ಸಿಡಿಲೆಱಗುವವೊಲೆಱಗಿದನು ರಕ್ಕಸನ (ತೊಕರಾ. ೬-೨೨-೦೬). [ಬಲ್$_2$(<ಬಲ್ಲಿತು$_1$)+ಬೆಟ್ಟ$_1$]

ಬಲ್ಬೆಡಗು, ಬಲುಬೆಡಗು (ನಾ). ವಿಶೇಷವಾದ ಅಂದ ; ಅತಿಯಾದ ಸೊಗಸು : ಮೌಕ್ತಿಕಗಳ ಮುಡಿವಲೆ ಮೆಱೆವ ಬಾವುಲಿಯ ನಿಡುಗುರುಳಿನ ಮುತ್ತಿನ ಕುಚ್ಚಿನಿಂದ ಬಲ್ಬೆಡಗಾಗಿ ಮೆಱೆದರರ್ತಿಯಲಿ (ಕಂಪಂ. ೨೯-೯೨). **ಬಲುಬೆಡಗು** : ನಾನಾ ಬಗೆ ಷಡುರಸಾನ್ನಗಳ ಪಾಕಗಳ ಕಡುಚೆಲ್ವ ಗೃಹಗಳುಂದರಮನೆಯೊಳು ಬಲುಬೆಡಗ ಬೀಱಿದುವರ್ತಿಯಲಿ (ಕಂಪಂ. ೭-೯೭). [ಬಲ್$_2$(<ಬಲ್ಲಿತು$_1$) +ಬೆಡಗು$_1$ (<ಬೆಡಂಗು)]

ಬಲ್ಬೆದೆ (ನಾ). ಅತಿಯಾದ ಕಾಮಾತುರ ; ಬಹಳವಾದ ಕಾಮೇಚ್ಛೆ : ಇತ್ತ ಸೆಳೆದೊಯ್ಯುವುದು, ಹತ್ತಿರಕೆ ' ಬಾ ' ಎಂದು ಚಿತ್ತವನು ಬಲ್ಬೆದೆಯ ತೆರೆ ಅದೊಂದು (ಶಾಕರೀ. ೦೨-೬). [ಬಲ್$_2$ (<ಬಲ್ಲಿತು$_1$)+ಬೆದೆ]

ಬಲ್ಬೆಱಗು (ನಾ). ಬಹಳವಾದ ಆಶ್ಚರ್ಯ ; ಅತಿಶಯವಾದ ಸೋಜಿಗ : ದಿಟವೊರೆವೆ ಬಲ್ಬೆಱಗನೊಂದನ್ (ಅಂತಿಗೂ. ೦೦-೨೨೯).

[ಬಲ್$_2$ (<ಬಲ್ಲಿತು$_1$) + ಬೆಱಗು$_1$]

ಬಲ್ಬೊಬ್ಬೆ, ಬಲುಬೊಬ್ಬೆ (ನಾ). ಬಹಳವಾದ ಗದ್ದಲ ; ಅತಿಯಾದ ಚೀರಾಟ,—ಕೋಲಾಹಲ : ನಿಬ್ಬರದೆ ಬರ್ಪ ಹಯಬಲದಬ್ಬರಣೆಗೆ ಕೊರ್ಬುಗಳೆದುದಿರ್ಕೇರಿಗೆ ಬಲ್ಬೊಬ್ಬೆಗೆ ಸೀರೆಯ ಮುಂ ತವೆ ತಬ್ಬಿಬ್ಬಂ ತಾಳ್ದಿ ತೂಱ್ದಿತಾಳ್ದನ ಸಿರಿಯಂ (ಪಸಪಾ. ೨-೯೭). **ಬಲುಬೊಬ್ಬೆ** : ಬಲುಬೊಬ್ಬೆಯಲಿ ನೆಲನದಿರೆ ನಡೆದುದು ಸೇನೆ ಕಲಶೋದ್ಭವನ ನೇಮದಲಿ (ಕುಪ್ಪಾಕ್ರೋ. ೯-೦೩) ; ಬಲುಬೊಬ್ಬೆ ಸಿಡಿಲು ಖಡ್ಗಗಳ ತೊಳಪು ಮಿಂಚು ಸಲೆ ತುರಗದ ದನಿ ಗುಡುಗು (ಕಂಪಂ. ೦೬-೦೦೦).

[ಬಲ್$_2$ (<ಬಲ್ಲಿತು$_1$) + ಬೊಬ್ಬೆ$_2$]

ಬಲ್ಭಾರ, ಬಲುಭಾರ (ನಾ.) ಹೆಚ್ಚಾದ ಭಾರ ; ಅತಿಯಾದ ತೂಕ : ಹೆಮ್ಮರನರ್ದೇನದಱಿಂದಲೆತ್ತಬಹುದೇ ಬಲ್ಭಾರಮಂ ಸನ್ನೆ ಸಾವಿರ ಕಾಲಾಳಿನ ಸತ್ವವೈ (ಸೋಮೇಶ. ೭೬). **ಬಲುಭಾರ** : "ಭಾರಣೆಯೆನೆ ಬಲುಭಾರಂ" (ಭಾರಿ. ೩೯). [ಬಲ್$_2$ (<ಬಲ್ಲಿತು$_1$) + ಭಾರ]

ಬಲ್ಭುಜ (ನಾ). (ಆಲಂ) ಹಿರಿಮೆ; ಔನ್ನತ್ಯ: ಭುಜಬಲಿಯೋಗೀಂದ್ರನಂತಿರ್ದನೆಂದನು ರಜತಗಿರಿಯ ಬಿಟ್ಟು ಬೇಱೆ ಗಜವಿಪಿನದೊಳಿರ್ದನಾತನ ತಪದ ಬಲ್ಭುಜವ ಚಿತ್ತೈಸೆಂದರವರು (ಭರತ. ೩೯-೯).

[ಬಲ್$_2$ (<ಬಲ್ಲಿತು$_1$) + ಭುಜ]

ಬಲ್ಮಂತ್ರಿ (ನಾ). ಸಮರ್ಥನಾದ ಮಂತ್ರಿ : ದೂರದರ್ಶಿಯಂತೆ ಮೇಲನಱಿವನುಂ ಬಲ್ಮಂತ್ರಿಯಂತೆ ಪ್ರಮಾದರಹಿತನುಂ . . . ರಾಜಸೇವಕನಂತಡಕವಂತನುಮಪ್ಪುದು (ಧರ್ಮಾಮೃ. ೩-೯೯).

[ಬಲ್$_2$ (<ಬಲ್ಲಿತು$_1$) + ಮಂತ್ರಿ]

ಬಲ್ಮತ್ತಿ (ನಾ). ಒಂದು ಬಗೆಯ ಮತ್ತಿಮರ : ಪಾದರಿ ತಾಱೆ ತಂಡಸು ಚಿಳಿಲ್ ಬಲ್ಮತ್ತಿ [ಪಾಶಾಂ. ಬಿಳಿಲ್ಬಿಲ್ಮತ್ತಿ] ಬೇವತ್ತಿ . . . ಕಕ್ಕಿಮ್ಮರಂ ಎಂಬೀ ಮರದುಱುಗಲಿಱುಂಬಿನಿಂದತಿಗಹನಮೆನಿಪ ಗಹನಾಂತರದೊಳಗೆ (ಪಾರ್ಶ್ವಪು. ೦೨-೩೮). 'ಬಿಳಿಮತ್ತಿ' ಪರಾ.

[? + ಮತ್ತಿ$_1$ (<ಮಱ್ತು)]

ಬಲ್ಮನುಶ್ಯ, ಬಲುಮನುಷ್ಯ (ನಾ). = ಬಲುವಾನಿಸ : ಬೆ(ಂ)ಣ್ಣೆಯೂರ್ಪ(ಂ)ನ್ನೆರಡಱ ಬಳಿಯ ಬಾಡಂ ಹಱುಹೆಯಿಂ ಬಡಗಲು ಪಾಂಡ್ಯದೇವನ ಬಲ್ಮನುಶ್ಯರು ಬೆ(ಂ)ಣ್ಣೆಯೂರ ಚಂದುಗಿದೇವನುಂ ಕಾಳಗೌಡನುಂ (ಸಾಇಇ. IX-i, ೩೩೭-೯ ; 1220). **ಬಲುಮನುಷ್ಯ** : ಆ ರಾಯನ ಮನೆಯ ಸಂಧಿವಿಗ್ರಹಿ ಲಖಂಣ್ಣನವರ ಬಲುಮನುಷ್ಯ ದೇವಪ್ಪ ಹರಿಯಪ್ಪನವರು ಹಡವಳಿಕೆ ನಾಡಿಂಗೆ ಸರ್ವಾಧಿಕಾರಿಗಳಾಗಿದಲ್ಲಿ (ಎಕ. VII, ೨೫೮. ೦೯-೬ ; 1309). [ಬಲ್$_2$ (<ಬಲ್ಲಿತು$_1$) + <ಮನುಷ್ಯ]

ಬಲ್ಮನೆ (ನಾ). ದೊಡ್ಡದಾದ ಮನೆ ; ಮಹಾಸೌಧ : ಚೆಂದಳಿರಾಂತಶೋಕೆ ಮಣಿಮಂಟಪಂ . . . ಎಳೆಮೊಗ್ಗೆಗಳೊಪ್ಪುವ ಮಲ್ಲಿಕಾ ತಾವೃಂದಮೆ ಮುತ್ತು ತೆತ್ತಿಸಿದ ಬಲ್ಮನೆ ಕೇತಕಿ ಸುತ್ತುವೇಲಿ ಕಕ್ಕುಂದರಿಯಾಂತ ಕೋಟೆ ಮದನಂಗೆನೆ ಕಂಗೊಳಿಸಿರ್ದುದಾ ವನಂ (ನೃಪಂ. ೯-೩೯).

[ಬಲ್$_2$ (<ಬಲ್ಲಿತು$_1$) + ಮನೆ]

ಬಲ್ಮನ್ನೆಯ (ನಾ). ಹೆಚ್ಚು ಮನ್ನಣೆಯನ್ನು ಪಡೆದ ವ್ಯಕ್ತಿ ; ದೊಡ್ಡ ಮುಖಂಡ : ಸಲೆ ಪೋಪ ಬರ್ಪ ಬಲ್ಮನ್ನೆಯರ ಕನ್ನೆಯರ ಸುಳಿಸುಳಿದು ಕಣ್ಗೊಪ್ಪುವಂದಣದ ಗೊಂದಣದ ಕಳಕಳದ ವಾದ್ಯರವದಬ್ಬರದ ನಿಬ್ಬರದಲಾ ಪುರಂ ರಂಜಿಸಿದುದು (ಕಬಪು. ೦೦-೩೫).

[ಬಲ್$_2$ (<ಬಲ್ಲಿತು$_1$) + ಮನ್ನೆಯ]

ಬಲ್ಮರ, ಬಲುಮರ (ನಾ). ದೊಡ್ಡದಾದ ಮರ ; ಮಹಾವೃಕ್ಷ : ದಾಡೆಯಂ ಮಸೆದು . . . ಮಿಂಟುತ್ತೆ ಕಂದಂಗಳಂ ಕೆಡಪುತ್ತಂಗದೊಳುರ್ದಿ ಬಲ್ಮರಗಳಂ ಬಂದತ್ತದೊಂದೆಕ್ಕಲಂ (ರಾಶಕೇ. ೩-೬೯). **ಬಲುಮರ** : ಸಿಡಿದು ಹಾಱಿದ ಹಸ್ತದುಱುಬೆಗೆ ಬುಡಸಹಿತ ಬಲುಮರ ಧರಾತಳಕುಡಿದು ಬಿದ್ದವು (ತೊಕರಾ. ೦-೦೦-೦೯).

[ಬಲ್$_2$ (<ಬಲ್ಲಿತು$_1$) + ಮರ$_1$]

ಬಲ್ಮಳೆ, ಬಲುಮಳೆ (ನಾ). ದೊಡ್ಡಮಳೆ ; ಭಾರಿ ಮಳೆ : ಎಱಂಕೆವನಿ ಬಲ್ಮಳೆಯವೊಲೊಪ್ಪುವುದು (ಎಇ. XIII, ೩೩೦-೩೦ ; 929) ; ಮಹಾರಥ ತುರುಗ ಕಾಲಾಳಿಂದ ಶಸ್ತ್ರಾಸ್ತ್ರಗಳ ಬಲ್ಮಳೆಯ ಸುರುಯಿತಿದೆ (ದೇಶಿಕಾ. ೩-೦೩). **ಬಲುಮಳೆ** : ಕೋಲ ಬಲುಮ[ಪಾಶಾಂ. ವ]ಳೆಗೊಡ್ಡಿ ಹರಿಗೆಯ ಮೇಳೆಯವ ಮಱೆಗೊಂಡು ಬೇಚರರಾಳು ನಿಂದೆಚ್ಚಿತು ನಿಹಾರದಲರ್ಜುನನ ರಥವ (ಕುಪ್ಪಾಕ. ೨೦-೨೩) ; ಬಲುಬೊಬ್ಬೆ ಸಿಡಿಲು . . . ಸಲೆ ತುರಗದ ದನಿ ಗುಡುಗು ಖಳರವಯವ ಕಾಲಮೇಘವಂಬಿನ ಬಲುಮಳೆಗಳ ಕರೆದುವು (ಕಂಪಂ. ೦೯-೧೦೦).

[ಬಲ್$_2$ (<ಬಲ್ಲಿತು$_1$) + ಮಳೆ (<ಮಱೆ)]

ಬಲ್ಮಾವಂತ (ನಾ). ದಕ್ಷನಾದ ಮಾವುತ : ತೊಟ್ಟನೆ ಪೊಂದಿದ ಕುದುರೆಯ ತಟ್ಟಂ ಕಂಡಣೆದು ನೂಂಕಿ ಬಲ್ಮಾವಂತರ್ ಬಿಟ್ಟಿಕ್ಕಿದರಾನೆಗಳಂ (ಕಬ್ಬಿಗಾ. ೨೮೧). [ಬಲ್$_2$ (<ಬಲ್ಲಿತು$_1$) + ಮಾವಂತ]

ಬಲ್ಮಿಂಚು (ನಾ). ೧. ಹೆಚ್ಚಿನ ಪ್ರಕಾಶ. ೨. (ಆಲಂ) ತುಂಬ ಕಾಂತಿಯಿಂದ ಕೂಡಿದ ವ್ಯಕ್ತಿ : ವಂಚಿಸಿ ಬಲೆಯೊಳ್ ಪ್ರಪಂಚವೆಲ್ಲ ಸೆಳೆದು ಕಂಚಿಪಟ್ಟಣದಿ ಬಲ್ಮಿಂಚಾಗಿದ್ದನೆ (ಪುರಂದ. ೨-೩೨-೨).

[ಬಲ್$_2$ (<ಬಲ್ಲಿತು$_1$) + ಮಿಂಚು$_2$]

ಬಲ್ಮಿಡಿ (ನಾ). ದೊಡ್ಡದಾದ ಮಿಡಿ : ತುಱುಗಿರ್ದ ಬಲ್ಮಿಡಿಯ ತೂಗುಂ ಗೊಂಬಿನೊಳ್ ಪಾಯ್ದು ಬಂಡಳಿಸುತ್ತಿರ್ಪ ಶುಕಾಳಿ ತಮ್ಮ ಬೆಸದೊಳ್ ತಂತಮ್ಮ ಠಾಣಾಂತರಂಗಳೊಳಿರ್ದಂಗಜತಂತ್ರದಂತೆಸೆವಿನಂ ಚೆಲ್ವಾದು ವಿಮ್ಮಾವುಗಳ್ (ಆದಿಪು. ೦೦-೧೯) ; ಆಲರೆಸೆವೆಳದಳಿರೆಲೆಯರಲೆಲೆ ಬಲ್ಮಿಡಿ ಮಿಸುವ ಪಚ್ಚೆಗೊಂಡಲವಳಿ ಕಜ್ಜಲತಿಲಕಮೊಗೆ ತೋರ್ಪುದು ಸಲೆ ಸೊಗಯಿಸಿ ಬಾಲನಂದದಿಂ ಮಾಕಂದಂ (ಕುಸುಮಾ. ೫-೩೬).

[ಬಲ್$_2$ (<ಬಲ್ಲಿತು$_1$) + ಮಿಡಿ$_4$]

ಬಲ್ಮಿಣಿ 'ಬಲ್ಮಳಿ' ನೋ.

ಬಲ್ಮಿಳಿ, ಬಲುಮಿಣಿ, ಬಲ್ಮಿಣಿ (ನಾ). ದೊಡ್ಡದಾದ ಮಿಣಿ ; ಬಲವಾದ ಹಗ್ಗ : ಅಳವಟಿಯದೆ ಕೋಟೆಯ ತೆನೆಗಳೊಳೆತ್ತಂ ಸುತ್ತಿ ನೇಲ್ವ ಬಿರುದರ ಕರುಳಂ ತಳದಿಂ ಪಿಡಿದಡರ್ದರ್ ಬಲ್ಮಿಳಿ [ಶಾಕಾಂ. ಲ್ಮೆಳೆ]ಯಂ ಪಿಡಿದಡರ್ವ ಮಾಟ್ಕೆಯಿಂ ಮೆಯ್ಗಲಿಗಳ್ (ಶಾರ್ಶ್ವಪು. ೩-೦೩೦). **ಬಲುಮಿಣಿ** : ಈಸ ಬಲಿ ಬಲುಮಿಣಿಯ ಬಿಗಿಯೆನುತ ಮೇಲೆ ಮೇಲಬ್ಬರದ ಘೋಳಾಘೋಳಿ ಘಲ್ಲಿಸೆ ದೆಸೆಯಲತಿರಥಜಾಲ ಕವಿದುದು ಕದನಕೌತೂಹಲರ ಕೇರಿಯಲಿ (ಕುಪ್ಯಾಳ. ೬-೦೨); ಎತ್ತದಿರಿ ಬಲುಮಿಣಿ[ಶಾಕಾಂ. ಳಿ]ಯಲಿವನನು ಸುತ್ತಿ ಸಿಂಧುರಘಟೆಗಳಿಂದೆಳೆಸುತ್ತ ಕೊಂಡೊಯ್ಯೆನಲು ಹಮ್ಮಿದರಾನೆಯಲಿ ಕಪಿಯ (ಕೂರಣಾ. ೫-೬-೩). **ಬಲ್ಮಿಣಿ** : ಬಹಳ ಪಾಶಂಗಳಂ ಬೀಸಿ ತೊಡಗಿ ಕೆಡಪಲ್ವೇಳ್ಕುಮೆಂದು ಬಲ್ಮಿಣಿಗಳಂ ತಮತಮಗೆ ಕೆಯ್ಯೊಳಾಂತು . . . ಕೋಳಾಹಳದೊಳುಱು ಬಿದರ್ ವೃಷಪತಿಯನು (ಸಂಪು. ೪೪-೦೩).

[ಬಲ್$_2$ (<ಬಲ್ಲಿತು$_1$) + ಮಿಳಿ$_2$]

ಬಲ್ಮುಗುಳ್ (ನಾ). ದೊಡ್ಡದಾದ ಮೊಗ್ಗು ; ದಪ್ಪವಾದ ಕುಟ್ಮಲ: ನೆಗಟ್ಟುದು ದೇವಮಂದುಭಿರವಂ ಸುರನಂದನದಿಂ ಪೊದಟ್ಟ ಬಲ್ಮುಗುಳ್ಗಳ ತಂದಲಂದು ಕವಿತಂದುದು (ಸಂಪಭಾ. ೦೪-೦೯); ಅಸುಗೆಯ ನಾಗಕೇಸರದ ಬಲ್ಮುಗುಳಂ ಬಿಱಿಯೊತ್ತಿ ತುಂಬಿ ಚುಂಬಿಸೆ (ಶಾಂತಿಪು. ೬-೫೩); ನೆಗೆದುಡು ಜಾಲದಂತೆ ಪೊಸಮಲ್ಲೆಯ ಬಲ್ಮುಗುಳೊಪ್ಪೆ . . . ವಾರ್ಧಿ ಪೆರ್ಚುಗೆಯ ನವಚರ್ಚೆ ತಾಳ್ದನುದಿತೋದಯಮಂ ಹಿಮಕಾಲಚಂದ್ರಮಂ(ರಾಜಶೇ.೯-೪).

[ಬಲ್$_2$ (<ಬಲ್ಲಿತು$_1$) + ಮುಗುಳ್$_2$]

ಬಲ್ಮುಡಿ, ಬಲುಮುಡಿ (ನಾ). ೧. ಕೂದಲಿನ ದೊಡ್ಡ ಗಂಟು ; ದೊಡ್ಡ ತುರುಬು : ಸಾರ್ದೆಳಸಿ ಪಗಿಲ್ತ ಕೇಕಿಯೆನೆ ಬಲ್ಮುಡಿ ತೋಱೆ (ಕಬಸಂ. ೩-೧೫); ಬಳಲುಮುಡಿ ಬಲ್ಮುಡಿಯು ಸೋಲ್ಮುಡಿಯು (ಸಪಸೂ. ೨೪-೦೬). ೨. ದೊಡ್ಡದಾದ ಜಟೆ : ದಟ್ಟವಾದ ಕೂದಲು : ಬಾಂಬೊಳೆ ತಳ್ತ ಕೆಂಜಡೆಯ ಬಲ್ಮುಡಿ ತಾಳ್ದ ಶಶಾಂಕಲೇಖೆ . . . ಬಗೆಗೊಳ್ವ ನುಣ್ಗರೆ ವರಾಭಯಶೂಲಮೃಗಾಂಕಪಾಣಿಯಂಕಂ ಬಿಡದೊಪ್ಪುವದ್ರಿಜೆ ವಿರಾಜಿಸೆ ರಂಜಿಸಿದಂ ಮಹೇಶ್ವರಂ (ಕಬಸಂ. ೧-೬೪). **ಬಲುಮುಡಿ** : ೧. ನಿಱಿಗುರುಳ್ ನಿಮಿರ್ದ ಕಣ್ಬಲುಮುಡಿ . . . ನಳಿ ತೋಳಸಿಯ ನಡು ಮೆಱೆಯ ಮೆಱೆವಳಾ ನೀಱೆ (ಕುಣಾಸಾಂ. ೨೯-೦೦೭).

[ಬಲ್$_2$ (<ಬಲ್ಲಿತು$_1$) + ಮುಡಿ$_3$]

ಬಲ್ಮುತ್ತು (ನಾ). ದೊಡ್ಡದಾದ ಮುತ್ತು: ದಪ್ಪವಾದ ಮೌಕ್ತಿಕ : ಬಲ್ಮುತ್ತಿನ ಬಳಗಮಣಂ ಮೆಲ್ಮುಗುಳಾದಂತೆ ಪೊಳೆವ ಬೆಳ್ಪಿಸೆವಲರ್ಗೊಂ ಚಲ್ಮುಸುಕಿ ಪರಿಮಳದ ಗೊಂಚಲ್ಮುಸುಕಿದುದಲ್ತೆ ಮಾಧವಿಯ ಪಾದಪದೊಳ್ (ಶಾಂತೀಶ್ವ. ೫-೦೦೦). [ಬಲ್$_2$ (<ಬಲ್ಲಿತು$_1$) + ಮುತ್ತು$_3$]

ಬಲ್ಮುನಿಸು, ಬಲುಮುನಿಸು (ನಾ). ಅತಿಯಾದ ಕೋಪ; ಬಹಳವಾದ ಸಿಟ್ಟು : ಮತ್ತಿನ ಮಾನ್ಯರೊರೆದ ಕೃತಿಯಾ ಸಲ್ಲಲಿತಮನೇನೆನ್ನದೆ ತಮ್ಮಯ ಬಲ್ಲತನವನೇ ಮೆಱೆವಣ್ಣಂಗಳ ಬಲ್ಲತನದ ಬಾಯೊಳು ಬಳಹರಿ ಬಲ್ಮುನಿಸುದಳೆದು ಹೊಗಲಿ (ಜಯಕಾ. ೦-೦೬). **ಬಲುಮುನಿಸು** : ಹಲವು ಪರಿಯಿಂದಿಂತು ನಮಿಸುವನಲಸುವಂ ಪ್ರಾರ್ಥಿಸುವಂ . . . ಬಲುಮುನಿಸು ನಿಮ್ಮಿಂದವಲ್ಲದೆ ತಿಳಿಯದೆನುತಂ ಬಾಲಲಿಂಗನವಸ್ಥೆಗೊಳುತಿರಲು (ಬಸಪು. ೪೭-೪೭); ಎನ್ನೊಳು ಬಲಿದ ಬಲುಮುನಿಸನೆಲ್ಲವ ಕಳೆದು ಸಲಹೆಂದೆನುತ ಸಂಪ್ರಾರ್ಥನೆಯ ಮಾಡಿದನು (ತಿಮ್ಮಾಲಿ. ೦-೦೦೯). 'ಬಲ್ಮುಳಿಸು' ಪರಾ. [ಬಲ್$_2$ (<ಬಲ್ಲಿತು$_1$) + ಮುನಿಸು$_2$]

ಬಲ್ಮುಸು (ನಾ). ಒಂದು ಬಗೆಯ ದೊಡ್ಡ ಆಕಾರದ ಕಪಿ,-ಮುಸಂ : ತಳಿರ್ವತ್ತೆಗೆ ಕಪಲ್ಗೊಂಬು ಠವಣಿಕೋಲಳಿ ಶುಕ ವಟುತತಿಯಾಗಿ ಬಳಸಿರಲೊಂದು ಬಲ್ಮುಸು ನರೆಗಡ್ಡವ ತಳೆದ ದೀಕ್ಷಿತನಂತಾಯ್ತು (ಶ್ರೀಪಾಂ. ೬-೨೪). [ಬಲ್$_2$ (<ಬಲ್ಲಿತು$_1$) + ಮುಸು$_2$]

ಬಲ್ಮುಸುಡು (ನಾ). ದೊಡ್ಡದಾದ ಮೂತಿ ; ಹಿರಿದಾದ ಮುಖ : ಕುಸಿದ ಸಿರಂ ಕೆಲಕ್ಕೊಲೆದ ಬಲ್ಮುಸುಡುರ್ಬಿದ ಮೆಯ್ಯ ರೋಮಂ . . . ತಳ್ತಗುರ್ವಿಸೆ ಮಲೆದುರ್ಕಿ ಗರ್ಜಿಸಿ ಕರಂ ಪರಿತಂದುದು ಪಂದಿ ಕಾಯ್ವಿನಿಂ (ಕಬಸಂ. ೪-೯). [ಬಲ್$_2$ (<ಬಲ್ಲಿತು$_1$) + ಮುಸುಡು]

ಬಲ್ಮುಳಿಸು (ನಾ). = ಬಲ್ಮುನಿಸು : ಪಗೆ ಕೆಯ್ಗೆವಂದು ಬರ್ದುಕಾಡಿದ ಬಲ್ಮುಳಿಸಿಂ ವೃಕೋದರಂ ಅಂತು ಕಳಿಂಗರಾಜ ಮತ್ತಮಾತಂಗಘಟೆಗಳ ಮೇಲೆ ಮುಳಿಸಂ ಕಳೆವೆನೆಂದು ಸಿಂಹನಾದದಿನಾರ್ದು . . . ದಿಗ್ಗಜಮಂ ಪೋಲ್ವ ಗಜಂಗಳಂ ಪಲವುಮಂ ಕೊಂದಂ ಮರುನ್ನಂದನಂ (ಸಂಪಭಾ. ೧೦-೦೦೦); ಇನ್ನೆಮಗಗಮ್ಯನಲಕ್ಷ್ಯನದೃಶ್ಯನಾಗಿ ನಿ ನೆನಸುಮಗಲ್ದ ಬಲ್ಮುಳಿಸುನಲ್ಲನೆ ಕಾಲ್ವಿಡಿಯಲ್ಕೆ ಮಾಣ್ಗುಮೇ (ಜಗಪಿ. ೬-೦೦೩); ಬಿರಯಿಗಳಂಜೆ ಕೂಡದರ ಕಲ್ಲೆರ್ದೆ ಪವ್ವನೆ ಸೀಟೆ . . . ಬಲ್ಮುಳಿಸಿಂದಮಗಲ್ಕೆವೆತ್ತನಲ್ಲರ ಬಗೆ ಬಳ್ಕೆ ಜೇವೊಡೆಯ ಬಲ್ಲುಲಿ ನೀಳ್ದುದು ಕರ್ಪುವಿಲ್ಲನಾ (ಕಬ್ಬಿಗಾ. ೩೦೦). [ಬಲ್$_2$ (<ಬಲ್ಲಿತು$_1$) + ಮುಳಿಸು$_2$]

ಬಲ್ಮುಱೆ (ನಾ). ಬಹಳ ಚೂರು ; ಅನೇಕ ಚೂರು : ಬಾಳ ಬಲ್ಮುಱೆಯುಂ ನೆತ್ತರ ಪೂರಮುಂ ನೆಗೆದು ಕಣ್ಗೆಂಬಾಯ್ತು ಬಾನೆಂಬ ಕೆಂಗೆಱೆ ಬೆಂಡೆರ್ದು ಕಲಂಕೆ ಮಿನ್ನಿಡುಕುವಂತತ್ಯುಗ್ರಸಂಗ್ರಾಮದೊಳ್ (ಅಸಂಪು. ೦೪-೪). [ಬಲ್$_2$ (<ಬಲ್ಲಿತು$_1$) + ಮುಱೆ$_2$]

ಬಲ್ಮೆ, ಬಲುಮೆ (ನಾ). ೧. ಬಲ; ಶಕ್ತಿ; ಸಾಮರ್ಥ್ಯ; ಪರಾಕ್ರಮ : ಇನಿತೊಂದು ನುಡಿದ ಬಲ್ಮೆಯೆ ನಿನಗಿಲ್ಲದೊಡೆ ಕೆ ನಿನ್ನನಾಳ್ದಂ ನಿನ್ನಂ ಮನಮೊಲ್ದು ನಚ್ಚಿಯಟ್ಟಿದನನಾಕ್ಕಳಂ ದೂತನಿಂತು ನುಡಿಯಲ್ವೇಟ್ಕುಂ (ಆದಿಪು. ೦೪-೬೫); ಜೀವಮದೊಂದೆ ದೇಹವೆರಡಿಂತಿವರ್ಗೆಂಬಭಿಶಂಕೆಯಂ ಧರಿತ್ರೀವಳಯಕ್ಕೆ ಮಾಡುವುದು ತಮ್ಮೊಳಿವಂದಿರ ನಲ್ಮೆ ಬಲ್ಮೆ ಶೋಭಾವಹ ಮೂರ್ತಿ ಕೀರ್ತಿ . . . ಸದೃಶಸ್ವರೂಪದಿಂ (ಪರ್ಧಪು. ೩-೩೫) ; ಮೊಱೆಗೇಳಿ ಮಥನನು ಸಂಗ್ರಾಮದೊಳಿಂದು ತಱೆದು ಬೇಡರ ಬಲ್ಮೆಯನು ಮುಱೆವೆ ವೀಳೆಯವ ತಾರೆಂದವನರಸನ ನೆಱೆ ಧೀರನಾಗಿ ಬೇಡಿದನು (ಜೀವಂಸಾಂ. ೬-೨೫). ೨. ಪರಿಣತಿ ; ನೈಪುಣ್ಯ : ಪ್ರಗಲ್ಭತೆ : ಈ ಬರೆದ ಶ್ಲೋಕಮಂ ಚಾಣಾಕ್ಯನೊಂದು ದಿವಸಂ ಕಂಡಿದು ನೀತಿಶಾಸ್ತ್ರದ ಬಲ್ಮೆಯಲ್ತೆಂದವಂ ಸೀಂಟೆ ತಾನಿಂತೆಂದು ಬರೆದಂ (ಪಡ್ಡಾಣಾ. ೦೬೪-೦೩); ತಪ್ಪದೀ ಲಲನೆ ತತ್ಸ್ವಯಂಪ್ರಭೆಯೆ ನೋಟ್ಪೊಡೀ ಚಿತ್ರಮಿಂತಿದಾಕೆಯದೆ ಬಲ್ಮೆ ಪೇಟ್ಟೆ ಪೆಱರ್ಗಮಿಂತುಟೊಂದಕ್ಕುಮೇ (ಆದಿಪು. ೪-೬) ; ಕವಿಮಾರ್ಗದೊಳಂ ಪೊಸ ದೇಸೆಯ ನುಡಿಗಳೊಳಂ ಪೊಸೆಯಿವ ಬಲ್ಮೆಗೆ ಚತುರ್ಮುಖಂ ಕವಿರನ್ನಂ (ಗದಾಯು. ೦-೩೯). ೩. ಶ್ರೇಷ್ಠತೆ ; ಉತ್ತಮಿಕೆ: ಪೊಸದೇಸೆಯೊಳೊಂದಿದ ಮಾರ್ಗಮೊಳ್ಪುವೆತ್ತೆಸೆದಿರೆ ಪೇಟ್ಟು ರಂಜಿಸದೆ ಕೆಮ್ಮನೆ ಬಲ್ಮೆ [ಶಾಕಾಂ. ಲ್ಕೆ]ಗೆ ಮುಯ್ಯನಾಂಪುದೇ (ಸುಳುಮಾ. ೦-೧೪). ೪. ಹಿರಿಮೆ; ಮಹಿಮೆ: ಪತಿತರ ಪಾವನವೆನಿಸುವ ಬಲ್ಮೆಯೊಳತಿಶಯವಡೆದ ತೀರ್ಥಗಳು ಸತಿಯರ ಪಾದಸಂಸ್ಪರ್ಶದಿಂ ತಮ್ಮ ದುಷ್ಕೃತವ ಕಳೆಯಲೆಳಸುವುವು (ಪದಿಶಿ. ೨-೬). ೫. ಏಳಿಗೆ; ಉನ್ನತಿ ;

ಅಭಿವೃದ್ಧಿ : ಅನುದಿನವು ತನ್ನ ದೇಶದ ಬಲ್ಮೆಗಾಗಿ ತನು ಮನ ಧನಗಳನು ಅರ್ಪಿಸುತ ಭಕ್ತಿಯಿಂದ (ಕುಪು. ೦೫-೩). ೬. ಶ್ರೇಷ್ಠವಾದುದು; ಉತ್ತಮವಾದುದು; ಮೇಲಾದುದು : ಕವಿಯೇ ಸರ್ವರೊಳುತ್ತಮಂ . . . ರಸಗಳೊಳ್ ಶೃಂಗಾರವೇ ಬಲ್ಮೆ (ಸೋಮೇಶ. ೪). ೭. ಬಲಾತ್ಕಾರ; ಒತ್ತಾಯ ; ಜುಲುಮೆ : ಸುಖಾಸನಾರೂಢೆ ತನ್ನಿನಿಯನ ಬಲ್ಮೆಯಲ್ಲದ ನಲ್ಮೆಯ ಪರಮಪದಮನೋರೊರ್ವರೊಳ್ ನುಡಿವ ಕೆಳದಿಯರ ನುಡಿಯ ನಾಲಿಸುತ್ತುಂ ನಿಜನಿವಾಸಕ್ಕೆ ಬಿಜಯಂಗೆಯ್ದು (ಮುಲ್ಲಿಪು. ೪-೯೭); ನಿಷ್ಠುರ ಕೋಪಂ ಪಿಡಿದೊತ್ತಿ ಸೂಳೆಯರೊಳುಗ್ರಾಟೋಪದಿಂ ಬಲ್ಮೆಯಿಂ ನೆರೆವಂ ಭೂಭುಜನಂದನಂ (ಧರ್ಮಾಮೃ. ೨-೩೬). ೮. ಬೆಂಬಲ : ಒತ್ತಾಸೆ : ಗಂಡನ ಬಲ್ಮೆಯೊಳತ್ತಮಾವಂದಿರ ಗಂಡನನವರ ಬಲ್ಮೆಯೊಳು ಅಂಡಲೆಯದೆಯನಿಬರನನುಸರಿಸುವ ಪೆಂಡಿರ ಜಸ ಪೆರ್ಚುವುದು (ಹರಿಬ. ೪-೩). ೯. (ಆಲಂ) ಔಚಿತ್ಯ ; ಯೋಗ್ಯವಾಗಿರುವಿಕೆ : ಕನ್ನೈದಿಲಲರ್ಗೆ ಯಾಱಡಿಗೆ ಶಶಿಬಿಂಬಕ್ಕೆ ರನ್ನಕ್ಕೆ ಪೊನ್ನ ಕಳಸಕ್ಕೆ ತಿಳಿಗೊಳಕೆ ಮಿಗೆ ಚೆನ್ನೆಸೆವ ಬಗಸೆಗಣ್ಣಳಕಮಾನನಮಧರಕುಚಯುಗ್ಮಮೆಸೆವ ನಾಭಿ ಮುನ್ನಮೇ ಸರಿಯೆಂಬ ಬಲ್ಮೆ ಪೊಱವಾಱಧಿಕವೆನ್ನಲುಚಿತಂ ತಥ್ಯವೆನಲೆಸೆದಳಾ ಚೆಲ್ವ ಕನ್ನೆ (ಭಾಪಸಂ. ೩-೪೬). ಬಲುಮೆ : ೧. ಬಲುಮೆ ಮಿಗೆ ಜಿನಬಸದಿಗಳ ಮೇಲಳವಡಿಪ ಶಿಖರಂಗಳಂ ಭೂತಳಕಿಳಿಯ ನೂಕಿಸುತಿವೆಲ್ಲಂ ನುಚ್ಚುನುಱಿ ಮಾಡಿ (ಬಸಪು. ೫೦-೭೨) ; ಬಲುಮೆಯಿಂ ನೂಂಕಿ ದಟ್ಟಿಪೆವೆಂದೊಡೆಮ್ಮಿಂದ ಬಲವಂತರಿಲ್ಲ (ಸೌಂದಪು. ೪-೭೦) ; ಬಲುಮೆಯುಳ್ಳಡೆ ಕಾದು ನಿನ್ನಂ ಕೊಲದೆ ಬಿಡೆನು (ಅಪಂರಾ. ೦-೪-೨೩). ೨. ರಾಯ ನಿನಗಾವಿಂದು ದಿಟ ಸಿದ್ಧಾಯವನು ನಾವ್ತೆತ್ತೆವಲ್ಲದೆ ವಾಯುಜನ ಫಲುಗುಣನ ಬಿಲ್ಲಿನ ಬಲುಮೆ ಗಂಜಿದೆವೆ (ಕುಪ್ಯಾಸ. ೬-೩೦) ; ತಿಳುಹು ಧರ್ಮಜ ಸಕಲಧರ್ಮಾವಳಿಯ ಸಾರವನೆನಲು ಯಕ್ಷನ ಬಲುಮೆಗವನೀಪಾಲನತಿಪರಿತೋಷದಲಿ ನುಡಿದ (ಕುಪ್ಯಾಶಿ. ೨೩-೩೬). ೩. ಜಲಮಣಿಯ ಬೆಡಗನಿಕ್ಕಬಹುದೆ ಬಯಲ ಬಂಧಿಸಬಹುದೇ ಒಲುಮೆಯ ರಸಿಕಕ್ಕೆ ಸಲೆ ನಿಲಯ ಉಂಟೇ ಇದು ಸಲ್ಲಲಿತ ಇದಱ ಬಲುಮೆಯ ಹೇಳಾ (ಪೋಳಿಮಾ. ೦೬-೪೬೪) ; ಗಿರಿಜೆಯರ ಸಂಗಱಿಯಬಾರದ ಪರಮಮಾಹೇಶ್ವರರ ವಿಸ್ಮಯಚರಿತವಂ ವರ್ಣಿಸುವ ದಾನೇತಱವನಂತಾಗಿ ಸರಸದಿಂ ಕೀರ್ತಿಸಿದೆನಾ ಭಕ್ತರನೆ ಮತ್ತನ್ಯತವನಱಿಯೆನು ನಿರುತದಿಂದೀವೊಂದು ಬಲುಮೆಯೊಳಾದ ಪೆಂಪಿಂದ (ಬಸಪು. ೬೦-೭೭). ೭. ಜಲದೊಳಾಡುತ್ತಿರಲು ಕಂಡನು ನಳಿನವದನೆಯನಾ ಗುಹಾಸುರ ಬಲುಮೆಯಲಿ ರಮಿಸಿದನು (ಸಂಭವ. ೨೬-೦೦೩) ; ಎಲ್ಲವನು ಅಱಿದಿಹರೆ ಬಲ್ಲೆನೆಂದೆನಬೇಕು ಅಲ್ಲಲ್ಲಿಗೊಂದನಱಿದುಲಿಯೆ ಬಲುಮೆಗೆ ಕಲ್ಲು ಹೊತ್ತಂತೆ (ಸರ್ವಜ್ಞ. ೪೩೨). ೮. ಎನ್ನ ದೇಹದಲಿ ಒಲಿದು ನೀನಿರೆ ನಿನ್ನ ಸಲುಗೆಯ ಬಲುಮೆಯಲಿ ಬರಸೆಳೆವೆ ಮುಕ್ತಿಯ ಲಲನೆಯನು ತಳುವಿಲ್ಲ (ಹರಿಸಾ. ೫೯). 'ಬಲುಮೆವಿಡಿ' ಪರಾ.

ಬಲ್ಮೆ ಮಾಡು, ಬಲುಮೆ ಮಾಡು = ೧. ಭದ್ರಗೊಳಿಸು ; ಬಿಗಿಗೊಳಿಸು ; ಬಲಪಡಿಸು : ಪುರದುರ್ಗಂಗಳ ಬಲ್ಮೆ ಮಾಡದೆ ಪ್ರಜಾಕ್ಷೋಭಂಗಳಂ ನೋಡದೆ . . . ಮದನಂಗಾಳಾಗಿಹಂ ಲೋಕದೊಳ್ ದೊರೆಯೇ ಸೊಕ್ಕಿದ ಕೋಣನೈ (ಸೋಮೇಶ. ೫೫). ೨. ಬಲಾತ್ಕಾರ ಮಾಡು ; ಒತ್ತಾಯ ಮಾಡು : ನಮ್ಮ ಮೇಲೆಯೇ ಇಷ್ಟು ಬಲುಮೆ ಮಾಡಲಿಕ್ಕೆ ನಾವೇನು ಅಂಥಾದ್ದು ಆತನಿಗೆ ಮಾಡಿದ್ದೇವು (ಮುಂಜಿಯಾ. ಕಿ. ೨-೪೫). [ಬಲ್$_2$ (<ಬಲ್ಲಿತು$_1$) + — ಮೆ$_1$]

ಬಲ್ಮೆಕಾಱ 'ಬಲ್ಮೆಗಾಱ' ನೋ.

ಬಲ್ಮೆಗಾರ 'ಬಲ್ಮೆಗಾಱ' ನೋ.

ಬಲ್ಮೆಗಾಱ, ಬಲುಮೆಕಾಱ, ಬಲುಮೆಗಾಱ, ಬಲ್ಮೆಕಾಱ, ಬಲ್ಮೆಗಾರ (ನಾ). ೧. ಬಲವುಳ್ಳವನು ; ಪರಾಕ್ರಮಿ : ಇರ್ಮಡಿ ಬಲ್ಮೆಗಾಱರುಂ ಕಱಿದು ಕೀಟ್ಗೆಯ್ದುದಱಿಂ ಹೊಂತಕಾಱಿಗಳನಿಬರುಂ ಪಿಂದೆಗೆಯೆ (ಸಕಪಂ. ೦೬೪-೭). ಬಲುಮೆಕಾಱ : ೧. ಅಳುಕಿದರು ಮನುಮಥನ ಗರುಡಿಯ ಬಲುಮೆಕಾ[ಪಾಠಾಂ. ವೆಗಾ]ಱರು ಬಂದಳಗ್ಗದ ನಳಿನಮುಖಿ ಬಹುಜನದ ಮನಕಚ್ಚರಿಯನೊದವಿಸುತ (ಕುಪ್ಯಾಪಿ. ೦-೨೬); ತೊಲೆಗಳೊಳಗೆ ದಸಿಗಳ ಪೆಟ್ಟಿ ಲಂಘಿಪ ಬಲುಮೆಕಾಱರ ಮೇಲೆ ನೂಕೆ ತಲೆ ಮೈ ಕೈ ಕಾಲೊಳು ಗೂಟಗಳು ಮೂಡಿ ಸಲೆ ತೊಱೆದರು ಜೀವಗಳನು (ಕಂಪಪಿ. ೧೪-೭೦). ಬಲುಮೆಗಾಱ : ೧. ಎಲೆ ಧರ್ಮಸುತ ಕೇಳಿಂತೊರ್ವನೆ ರಾಜಬಲವನೆಲ್ಲವ ಬಱಿಕೆಯ್ಯೆ ಬಲುಮೆಗಾಱರ ಬಲ್ಲಹನು ಜರಾಸಂಧನೊಲಿದು ಕರ್ಣನ ಕರೆಸಿದನು (ಕರ್ಣಪ್ಯ. ೬-೧). ಬಲ್ಮೆಕಾಱ : ೨. ಶ್ರೇಷ್ಠನಾದವನು ; ಮಹಿಮಾವಂತ : ತೋಱಿದ ಚಿಂತೆಯ ನಿಮಿಷಮಾತ್ರದಿ ಕಡೆಜಾಱಿಸುವತಿಶಯರೂಪಾ ಜಾಱದೆ ನನ್ನಂತರಂಗದೊಳಿರು ಬಲ್ಮೆಕಾಱಾ ಚಿದಂಬರಪುರುಷಾ (ಭರತ. ೫೬-೦೦೭). ೩. ಚತುರನಾದವನು ; ಚಾಣಾಕ್ಷ: ತಾಂಬೂಲವಸ್ತ್ರಭೂಷಣವಿತ್ತು ನಮಿರಾಜ ತುಂಬಿದ್ದ ಜನವ ಬೀಳ್ಕೊಟ್ಟಾ ಮುಂಬಾಗಿಲೆಡೆ ಮುಟ್ಟ ಹೋಗಿ ತಿರುಗಿ ಬಂದನೇಂ ಬಲ್ಮೆಕಾಱನೊ ಮಂತ್ರಿ (ಭರತ. ೩೬-೬೬). ಬಲ್ಮೆಗಾರ : ೩. ನಿನಗಿನ್ನೂ ಸಿದ್ಧಿಸದಿರುವುದು — ಬಲ್ಲ ಬಲ್ಮೆಗಾರನ ಉತ್ಕಟೋಪಭೋಗದ ಪ್ರಥಮಸಮಾಗಮ (ಮುಂತ್ರಶ. ೨೯-೦೦). [ಬಲ್ಮೆ + — ಗಾಱ (< — ಕಾಱ)]

ಬಲ್ಮೆಗೈ (ಕ್ರಿ). ಒತ್ತಾಯ ಮಾಡು; ಬಲವಂತ ಮಾಡು : ಅಂಜಲೇತ ಕೆಲೆ ಬಸವಣ್ಣ ನೀಂ ಕೊಟ್ಟ ಘನಲಿಂಗವಂ ಕೊಂಡಡಂಗಿದನಿಮಿಷನಂದ ಮೆನಗಿಲ್ಲ ಬಲ್ಮೆಗೈವವನಲ್ಲವಿಾ ಲಿಂಗಲಕ್ಷಣಂಗಳನಾದೊಡೆ ಎನಗೆ ತಿಳಿಪು (ಶಿಪು. ೬-೭). [ಬಲ್ಮೆ + ಗೈ (< ಕೆಯ್$_1$)]

ಬಲ್ಮೆದೆ (ನಾ). ದೊಡ್ಡ ಮೆದೆ : ನೆಲ್ಲ ರಾಶಿಗಳಷ್ಟು ಹೊನ್ನ ರಾಶಿಗಳುಂಟು ಹುಲ್ಲ ಹೆಬ್ಬೆಣಬೆಗಳಷ್ಟು ಜಲ್ಲಿಪಟ್ಟೆಗಳ ಬಲ್ಮೆದೆಯಿದ್ದುವವನೊಂದು ಹುಲ್ಲಿಗೆ ಕಡೆಗಂಡು ಬಿಟ್ಟ (ಭರತ. ೮೦-೦೨).
[ಬಲ್$_2$ (< ಬಲ್ಲಿತು$_1$) + ಮೆದೆ$_1$]

ಬಲ್ಮೆಯ್ (ನಾ). ದೊಡ್ಡ ದೇಹ ; ನಿಡಿದಾದ ಶರೀರ : ಬಱಿದೋಱದೈಯ ಬಳ್ವಳಬಳೆದಾ ಬಲ್ಮೆಯ್ಯ ಕೂಡೆ ಪೆರ್ಚಿದ ಕೈಯಂ ಒಳವುಗಿಸಲೆನ್ನ ಕುತ್ತೆರ್ದೆಗೊಳಗಕ್ಕೆಮ ಖರ್ವತನುವ ಕರುಣಾಹಸ್ತಂ (ಪಸ್ತಪಂ. ೩೦). [ಬಲ್$_2$ (<ಬಲ್ಲಿತು$_1$) + ಮೆಯ್$_2$]

ಬಲ್ಮೆವಂತ (ನಾ). ೧. ಶಕ್ತಿವಂತ; ಬಲಶಾಲಿ; ಸಮರ್ಥ : "ಶಕನ್, ಶಕಾನಃ, ಶಕ್ತಃ, ಶಕ್ತವಾನ್, ಈ ೪ ಬಲ್ಮೆವಂತಂ" (ಕಾಶಕ್ಯ. ೨೦೯). ೨. ಚತುರ; ನಿಷ್ಣಾತ; ಜಾಣ : ಬಲ್ಮೆವನ್ತನ ಮುದ್ದುನುಡಿಗಳ ಕಟ್ಟಳಸಿನ ತುಮುಲಕೋಲಾಹಲದ ವಿಕಾರಾಭಾಸವನ್ನು ಸೂಳಿಕ್ಕುತ್ತಿದು (ಮುಂತ್ರಶ. ೦೪೦-೪). [ಬಲ್ಮೆ + — ವಂತ]

ಬಲ್ಮೆಳೆ, ಬಲುಮೆಳೆ (ನಾ). ಗಿಡಬಳ್ಳಿಗಳ ದಟ್ಟವಾದ ಪೊದೆ; ಒತ್ತಾಗಿ ಬೆಳೆದ ಗಿಡ ಮರಗಳ ಗುಂಪು.—ಪೊದರು : ನೆವವಿಟ್ಟು ಮೊಲೆವಣಿಗಳಂ ತವಕದಿನಂದಱಸುವಂತೆ ಬಲ್ಮೆಳೆಗೊಲ್ದುತ್ಸವದಿಂ ಮೆಲ್ಲನೆ ಪೋದಂ ಯುವತಿಯನೊಡಗೊಂಡು ಶಬರಕಾಮುಕನೊರ್ವಂ (ಉದ್ಯಟಿ. ೨-೭೬). ಬಲುಮೆಳೆ : ಸುಮಹಾರಥರ ಹೊದಱಲಿ ಹೊಕ್ಕನುರಿ ಬಲುಮೆಳೆಯ ಹೊಕ್ಕಂತೆ (ಕುಪ್ಯಾಮ್ರೋ. ೨-೩೦). [ಬಲ್$_2$ (<ಬಲ್ಲಿತು$_1$) + ಮೆಳೆ]

ಬಲ್ಮೊಗ (ನಾ). ಗಡುಸಾದ ಮುಖ; ಗಂಭೀರವಾದ ಮುಖ : ಅತಿಬಳಮಹಾರಾಜಂ . . . ಪೆಱರ ಮಾರ್ಗದೊಳಿರ್ದಡಲ್ಲದೆ ತಱಿಸಂದು ನೆಗಱರೆಂದು ಮೇಲ್ಮೆಗೆಯ್ಯದೆ ಬಲ್ಮೊಗಂ[ಪಾಠಾಂ. ಬಲುಮೊಗಂ] ಮಾಡಿ ತನ್ನಳಿಯಂದಿರ ಮೊಗಮಂ ನೋಡಿ . . . ಎಂಬುದುಂ (ಹುಳುಮಾ. ೨-೫೨ ಪ). [ಬಲ್$_2$ (< ಬಲ್ಲಿತು$_1$) + ಮೊಗ]

ಬಲ್ಮೊರಡಿ (ನಾ). ದೊಡ್ಡ ಪರ್ವತ; ಭಾರಿ ಬೆಟ್ಟ.

ಬಲ್ಮೊರತಿಯ ಕನ್ನೆ = ಪರ್ವತರಾಜನ ಮಗಳು ; ಗಿರಿಜೆ; ಪಾರ್ವತಿ : ಮುನ್ನೀರಣಂಗಿ ಮುರಾರಿ ಬಲ್ಮೊರಡಿಯ ಕನ್ನೆ ಕವರ್ದಿ ವಾಗ್ದೇವಿಸ ನ್ನುತಬವಿಗಳೊಪ್ಪಿದವೋಲೊಪ್ಪಿದರತ್ಯುನ್ನತಿಕೆಯೊಳಾ ಪ್ರಿಯರು (ಶ್ರೀಕಾಂ. ೧೦-೩೭). [ಬಲ್ + (<ಬಲ್ಲಿತ್ತು) + ಮೊರಡಿ]

ಬಲ್ಮೊರೆ (ಕ್ರಿ). ಜೋರಾದ ಝೇಂಕಾರವನ್ನು ಮಾಡು : ವಿಸು ಪಲರಂಬುಗಳುರ್ಕಿಂ ಬೆಸಕೆಯ್ಯುಡೆ ಮಾಲೆವ ಬೀರರಂ ಪರಿದೆಂಟುಂದೆಸೆ ಗಳೊಳಂ ಕಾಣೆವೆನಿಪ್ಪ ಸರದ ಬಲ್ಮೊರೆವುವೀಗಳಾಜಿಡಿ ನೆವದಿಂ (ಕಬ್ಬಿಗ. ೦೭೩). [ಬಲ್ + (< ಬಲ್ಲಿತ್ತು) + ಮೊರೆ]

ಬಲ್ಮೊಲೆ. ಬಲುಮೊಲೆ (ನಾ). ತುಂಬಿದ ಸ್ತನ ; ತೋರವಾದ ಕುಚ : ನೆಟ್ಟನೆ ಮೊಗ ನೋಡಿ ಮುದ್ದಿಪ ತರಳನ ಪುಟ್ಟ ಕೈಗಳ ತಂದು ತನ್ನ ಬಟ್ಟ ಬಲ್ಮೊಲೆಗಡರ್ಚುವಳು (ಕೋಚಕ. ೦೦-೩೭); ಅಡರ್ದ ಬಾಸೆಯ ಬಲ್ಮೊಲೆ ಗಳ ಥಳಥಳಿಪ ನುಣ್ಗೊರಲ . . . ತುಂಬಿಗಳ ಪೋಲ್ವ ಸುಳಿಗುರುಳ್ಗಳ ಪೆಣ್ಗಳಿರ್ದರಂದರಸಿನೊಡ್ಡೋಲಗದೊಳು (ಕಣಪು. ೬-೦೨). **ಬಲುಮೊಲೆ** : ಬಲುಮೊಲೆಯ ಸೋಂಕಿಸಲಿ ಶಾಂತರ ತಲೆಕೆಳಕ ಮಾಡುವೆವು ಕಡೆಗಣ್ಣಲ ಗಿನಲಿ ಕೊಯ್ದೆತ್ತುವೆವು ವಿಜಿತೇಂದ್ರಿಯರ ಮನವ (ಭುಜ್ಞಾ. ೦೬-೦೧); ಬಲುಮೊಲೆಯಬಾಸೆಗಳ . . . ಪುಳಿನ ಜಘನಸ್ಥಳದ ದಾನವಸತಿಯಂರ್ದರ ದೊಂದು ತಾಣದಲಿ (ಕೂರಣಾ. ೩-೨-೬೯); ನಳಿತೋಳ ಸೆಳೆನಡು ಬಲು ಮೊಲೆಯ . . . ಮುತ್ತುದೊಡವಿನ ಚೆಲುವೆ ವಾಗುಂ ಮಡದಿಯಾ ವಿಂಧ್ಯಕಗೆ (ಶಾಳ್ವಾ. ೩-೦೦). [ಬಲ್ + (< ಬಲ್ಲಿತ್ತು) + ಮೊಲೆ]

ಬಲ್ಮೊಸರ್ (ನಾ). ಗಟ್ಟಿಯಾದ ಮೊಸರು : ಅಜ್ಯಯುತಮಪ್ಪುವಂ ಮೆಲ್ಲು ತೊಜೆಯೊಳ್ ಪೋಪವಂಗೆ ತೆಪ್ಪವನಿಕ್ಕಿದಂತಿಕ್ಕಿದ ಗಟ್ಟಿಗೊಂಡ ಬಲ್ಮೊಸರಂ ಕೊಂಡು ವುದುಳಿಸಿ ನಿಂದ ಬಟಿಕ್ಕಂ (ರಡುಗಬ್ಬ. ೦-೦೪೬). [ಬಲ್ + (< ಬಲ್ಲಿತ್ತು) + ಮೊಸರ್]

ಬಲ್ಮೊಳಗು (ನಾ). ಜೋರಾದ ಗುಡುಗು : ಪೊಳೆವ ವಿಂಚುಗಳೈಸೆ ತೇಜಗಳಿವಲ್ಲ ಬಲ್ಮೊಳಗುಗಳಿವೈಸೆ ರಥಚಕ್ರಧ್ವನಿಗಳಲ್ಲ . . . ಕಂಗೊಳಿವ ಕಾವರ್ಮಗಿಲೈಸೆ ಕೃಷ್ಣನಲ್ಲಿಂಬವೋಲ್ಮೊಳುಗುಳಕೆ ಮೈದೋಜಿ ಕಂಡು ಕಲಿಸಿಂಹದಂತಿದಿರಾದನನುಶಾಲ್ವನು (ಕೈಬಶಾ. ೬-೩೦). [ಬಲ್ + (< ಬಲ್ಲಿತ್ತು) + ಮೊಳಗು (< ಮೊಟಗು)]

ಬಲ್ಯುಪಹಾರ (ನಾ). ಬಲಿಯಾಗಿ ಅರ್ಪಿಸಂಪ ನೈವೇದ್ಯ : ಈ ಚತು ಸ್ಸೀಮೆಯೊಳಗಾಗೆ ಒಡೆಯ ದೊಡ್ಡವಾಡಿಯ ಕಿಬ್ಬ ಬಾಳಿಜಿತ್ತಿ ಭಟಾರಿಗೆ ಬಲ್ಯುಪಹಾರಕ್ಕೆ ದೇವಭೋಗವಾಗೆ ಕೊಟ್ಟುದು (ಎಇ. IX (೪). ಕಂಗಳೂ. ೦೩೦-೩೧; ೩೭೬). [ಸಂ.]

ಬಲ್ಲ$_1$ 'ಬಲ್'$_1$ ಪರಾ.

ಬಲ್ಲ$_2$ 'ಬಲ್ಲೆಯ' ನೋ.

ಬಲ್ಲ$_3$ (ನಾ). ಒಂದು ಊರಿನ ಹೆಸರು ; ಈಗಿನ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿದೆ : ಸ್ವಸ್ತಿಶ್ರೀ ಇಜಿವ ನೊಳಂಬ ವೃಥಿವೀರಾಜ್ಯಂಗೆಯ್ಯುತ್ತಿರೆ ಬಲ್ಲದ ತುಜುಗೊಣ್ಡೋಡೆ ಕೊಬ್ಬೆಯಯ್ಯಂದುಂ ಬಲಿಪಯುಂ ತುಜುವನಿಕ್ಕಿ (ಎಇ X, ಕುಗಳಶಾ: ೩೨-೨ : ಸು. ೨೬೦); ಬಲ್ಲದ ಲೆನ್ನ ಮನೆಮುದ್ದಮಲ್ಲಯಂ . . . ತುಜುವಂ ಕಟ್ಟ ಕಾದು ಸತ್ತು ಸಗ್ಗಿಯಾದಂ (ಕ್ರಿಪ. ೦೯೨೬, ೯೬-೩; ೧೦೩ಯ ೫೫). [?]

ಬಲ್ಲಂಕ (ನಾ). ದೊಡ್ಡ ಯಂದ್ದ : ತಳಿಯಾಗಲೆ ಹೂಡಿ ಬಲ್ಲಂಕವಾದುದು ಬಲುಹಾದುದು ಪಿಳ್ಳೆಗೋಂಟೆ ಎಲುವಿನ ಕಟ್ಟಿನ ಸೊಡರು ತಿಂಥಿಣಿಯಾಗಿ ತಳಿತವು ತೆನೆತೆನೆಗಳಲಿ (ಪಾಗಳ. ೦೬-೩). [ಬಲ್ + (<ಬಲ್ಲಿತ್ತು) + ಅಂಕ]

ಬಲ್ಲಂಗಿ (ನಾ). ಒಂದು ಬಗೆಯ ಸಸ್ಯ : (ಕ್ರಿಪಿಗ. ೬೩-೦೨೬೮); (ಸಸ್ಯಶ. ೦೦೬). 'ಬಲ್ಲಗಿ' ಪರಾ. [?]

ಬಲ್ಲಂತಿಕೆ 'ಬಲ್'$_1$ ಪರಾ.

ಬಲ್ಲಕುಂದ. ಬಲ್ಲಕುಂದೆ (ನಾ). ಒಂದು ನಾಡಿನ ಹೆಸರು : ಶ್ರೀಮತ್ಕೃ ಲೋಕ್ಯಮಲ್ಲ ನನ್ನಿನೊಳಂಬ ಪಲ್ಲವಪರ್ಮ್ಮಾನಡಿದೇವರು ಕೊಂಗಳಿಯ ಯ್ನೂಱುಂ ಕದಂಬಳಿಗೆಸಾಸಿರಮುಂ ಬಲ್ಲಕುಂದ್ದ ಮೂನೂಱುಂ . . . ಸುಖಿಸಂಕಥಾವಿನೋದದಿನಾಳುತ್ತುಮಿರೆ (ಎಇ. XI. ಡಾಕಡಾ. ೫೦-೪; 1046). **ಬಲ್ಲಕುಂದೆ** : ಶ್ರೀಮದಜಿತ ನೊಳಂಬಾಧಿರಾಜಂ ನೊಳಂಬವಾಡಿ ಮೂವತ್ತಿಚ್ಚಾಸಿರಮುಂ ಕಿಂಗಟಿಯೈನೂಱುಂ ಬಲ್ಲಕುಂದ್ದೆಮೂನೂಱುಂ . . . ಸುಖದಿನಾಳುತ್ತುಮಿರೆ (ಎಇ. XVI. ೫೯-೦೨; 1010). [? + ಕುಂದ]

ಬಲ್ಲಕುಂದೆ 'ಬಲ್ಲಕಂದ' ನೋ.

ಬಲ್ಲಗ 'ಬಲಿಗೆ' ನೋ.

ಬಲ್ಲಗಿ 'ಬಲಿಗೆ' ನೋ.

ಬಲ್ಲಡಗು (ನಾ). ಉತ್ತಮವಾದ ಅಡಗು ; ಶ್ರೇಷ್ಠವಾದ ಮಾಂಸ : ಬಲ್ಲಡಗಿಲ್ಲದೊಡುಣಿಸಣಮಿಲ್ಲೀ ಪ್ರಭುಗೆನುತುಮುವನ ತೊಡೆಯಡಗನೆ ತಳ್ವಿಲ್ಲದವಂಗಿಕ್ಕುವರೇಂ ಪೊಲ್ಲದುದೋ ಮಾಂಸಸೇವನಪ್ರಶಿಪಾಪಂ (ಶಾಂಶಿ. ೬-೧೬). [ಬಲ್ + (<ಬಲ್ಲಿತ್ತು) + ಅಡಗು]

ಬಲ್ಲಡವಿ (ನಾ). ಗಹನವಾದ ಅರಣ್ಯ; ದಟ್ಟಡವಿ: ಬೀಡಿಂಗೆ ಬೀಡುವಿಡಲ್ ನೆಲನುಮೊಲೆಗಲ್ಗಳ್ಗೆ ಬೆಟ್ಟುಗಳುಂ ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ . . . ಆ ಪಡೆಗೆ ನೆಜಿಯಮೆನಿಸಿ . . . ಬಂದು (ಪಂಪಭಾ. ೯-೦೦೪ ಪ); ತಾಂಗಿಮುದು ಗಾಳಿಯುಂ ದೆಸೆಯುಂ ಗವಸಣೆಳದ ದು ಮೇಗೆ ಮೊಗೆದಾ ಗಸಮಂ ನುಂಗಿದುದೆನೆ ಕಪ್ಪಲಿಸಿ ಕಜಂಗಿದ ಬಲ್ಲಡವಿ ಕಣ್ಗೆ ಪಡೆದು ದಗುರ್ವಂ (ಪಂಂಚಮಾ. ೬-೦೦೪). [ಬಲ್ + (<ಬಲ್ಲಿತ್ತು) + ಅಡವಿ]

ಬಲ್ಲಣೆ (ನಾ). ದೊಡ್ಡ ಸೈನ್ಯ; ಭಾರಿ ದಂಡು : ತುರಗದಟಬಂಗಳ ನೊಡ್ಡಿದ ಕರಿಘಟೆಯಂ ಪಿರಿಯ ನರ[ವಿ]ಯಂ ಬಲ್ಲಣೆಯಂ ಧುರದೆಡೆಯೊ [ಳ್]ಜ್ದು ಗೆಲ್ಗುಂ (ಎಇ. X. ೧೩೦-೧೦ ; 916); ಪಸರಿಸಿ ಪೊಕ್ಕು ಕೂಕಿಜ್ದು ಕಾದುವ ಬಲ್ಲಣೆಗಳ್ ಪಳಂಚಿ ಪಾಯಿಸುವ ದಟಕ್ಕಗುರ್ವೆಸೆಯೆ ನೂಂಕಿವ ಬಲ್ಲಣೆಗೆತ್ತಮೆಯ್ದೆ . . . ತುಜುಗಾಜಿರಂದಿನಿಸು ಬಲ್ವಲನಾ ದುದದೊಂದು ಕಾಳಗಂ (ಪಂಪಭಾ. ೯-೧೩); ಕಾಲ್ಗುಪಿನ ಬಲ್ಲಣೆಯೊಳ್ ಬಲ್ಸಿಪ್ಪುದಿನಿಜಿದು ಮಾಡಿಯೆ ನೆತ್ತರ ತೊಜಿಗಳ್ ಗಲ್ಗುಲನೆ ಪರಿಯೆ (ಪಂಂಚಮ. ೧೩-೭೯). [ಬಲ್ + (<ಬಲ್ಲಿತ್ತು) + ಅಣೆ]

ಬಲ್ಲತನ 'ಬಲ್'$_1$ ಪರಾ.

ಬಲ್ಲಪ (ನಾ). ಒಬ್ಬಾತನ ಹೆಸರು : ಶ್ರಧರಯ್ಯ ಬರೆದ ಪೇನಿಗಳಂ . . . ಮೋನಿಗಳಂ ಪೋಗಿ ಪೊಗಟಜೆಲ್ಲಂಗೆಜಿಯೊಳ್ ತಾಜ್ಞಾಡಕೊಳ್ಳೊನೆನ್ದಾ ಬಲಗರ್ವ್ವದೆ ಬಲ್ಲಪನಲ್ಲಿಗೋಗಿ ಕಾಯ್ವೊಜ್ಞೆಡೆಯಾಗದನ್ತು ನುಡಿದಾಪ್ಪನ ಮೆಟಿಸಿಕೊಣ್ಡಾರ್ (ಎಇ. V. ಕೀಂಂಗಳೂ. ೦೫೩-೩೦; 95೫); ಸ್ವಸ್ತಿಶ್ರೀ ಸಕ ನೃಪ ಕಾಲಾತೀತ ಸಂವತ್ಸರಂಗ ೯೦೮ ನೆಯ ವರ್ಷದ ವ್ಯಯಸಂವತ್ಸರ ಪ್ರವರ್ತ್ತಿಸೆ ಬಲ್ಲಪಂ ಗಂಗವಾಡಿಗೆ ಬನ್ದ ಕಾಲದೊಳಗೆಯುರಿಂ ರಾಜ್ಯಂಗೆಯೆ (ಎಇ. III. ಶುಳಕ. ೫೫-೩; 986). [? + ಅಪ (<ಅಪ್ಪ)]

ಬಲ್ಲಭ 'ಬಲ್ಲಹ' ನೋ.

ಬಲ್ಲಯ್ಯ (ನಾ). ಒಬ್ಬಾತನ ಹೆಸರು : ಸುಜ್ಜುದ ಬಲ್ಲಯ್ಯಂ ದೇಗುಲಕ್ಕೆ ಕೊಟ್ಟ ಪನ್ನೆರಡು ಮತ್ತರು ಕೆಯ್ಯುವ . . . ಕೊಟ್ಟು ಬಿಡಿಸಿದೋಂ (ಶಾಇಶಾ. XI-i, ೯೨-೨೦; 971); ಬಲ್ಲಯ ಅಮ್ಮಯ್ಯ ರಾ ಯ್ಯ ಕೇಸವ ಸಾಹಣಿಯ ಸಿರಿಯಣ್ಣ (ಎಇ. VII, ಕನ್ನಗ. ೩೨-೫೫; ಸು. 1050?). [? + ಅಯ್ಯ]

ಬಲ್ಲರಕ್ಕಸಿ 'ಬಲರಾಕ್ಷಸಿ' ನೋ.

ಬಲ್ಲರಿಕೆ 'ಬಲ್'$_1$ ಪರಾ.

ಬಲ್ಲಲಮರ (ನಾ). ಒಂದು ಬಗೆಯ ಮರ : ಕಿಂಮಂಣುವೋಣೆಯೆ

ವೊಳಗೆ ಬಲ್ಲಲಮರನ ಅಡಿಯಲು (ಎಕ. VIII. ತೀರ್ಥಹ. ೨೦೬-೨೭. 1415).
[? + ಮರ$_1$]

ಬಲ್ಲವ$_1$ 'ಬಲ್$_1$' ಪರಾ.

ಬಲ್ಲವ$_2$ (ನಾ). ೧. ಅಡಿಗೆಯವನು. ೨. ಅಜ್ಞಾತವಾಸದ ಕಾಲದಲ್ಲಿ ಭೀಮನು ವಿರಾಟನಗರದಲ್ಲಿ ಅಡುಗೆಯವನಾಗಿದ್ದಾಗ ಹೊಂದಿದ್ದ ಹೆಸರು : ಭೀಮನು ನಾನು 'ಬಲ್ಲವ' ನೆಂಬ ಹೆಸರಿಟ್ಟುಕೊಂಡು ವಿರಾಟನ ಹತ್ತಿರವಿರೋಣವೆಂದಿದ್ದೇನೆ . . . ಎಂದನು (ಪಶಭಾ. ೦೮೪). [ಸಂ.]

ಬಲ್ಲವತಿ (ನಾ). ಒಂದು ಊರಿನ ಹೆಸರು (?) : ತೈಲಪನ ಪ × × × ನ ಕಳೆಗದಲ್ ಬಲ್ಲವತಿಯ ಬ್ರಹ್ಮನೊಡನೆ ಕ × × × ಪಂಚಲ ದೇವನ್ ಸಾಲ್ಲಿ ಬ್ರಹ್ಮನಂ ಕಟುಪಿ (ಮೈಅಂ. ೦೯೪೨; ೨-೪; 973). [?]

ಬಲ್ಲವರಸ (ನಾ). ಒಬ್ಬಾತನ ಹೆಸರು : ಸ್ವಸ್ತಿ ಶ್ರೀಪುರುಷಮಹಾರಾಜರ್ ಪೃಥುವೀರಾಜ್ಯಂಕೆಯೆ ಬಲ್ಲವರಸರ ಬಾಳದುಳ್ ಸೀಯ × × × ರಣಾಧ್ವರ × ಸಳಿನಾಡಾ ಬಾಗೆಯವೆಱದು ವಿಟ್ಟೊನ್ (ಎಕ. XVI. ತುಮಕೂ. ೯೩-೩; ಸು. 780) ; ಬಲ್ಲವರಸರ್ ರೋಣದ ಮಹಾಜನಕೆ (ಎಇ. XIII. ೦೬೩-೭; 874). 'ವಲ್ಲವರಸ' ಪರಾ. [<ವಲ್ಲಭ + ಅರಸ$_1$]

ಬಲ್ಲವಿಕೆ 'ಬಲ್$_1$' ಪರಾ.

ಬಲ್ಲವಿಕೆತನ 'ಬಲ್$_1$' ಪರಾ.

ಬಲ್ಲಸಿ (ನಾ). ಬಲವಾದ ಕತ್ತಿ : ಪಾರವುರಂ ಮೂಱೂರ ಮುಕ್ಕೂಡಲಲ್ಲಿ ಪೊಲಸೀಮೆ ಕೂಡಿತ್ತುಂ ಕಡೆಕೊಳಂದ ಮಣ್ಣಿಗಪ್ಪೊಂಬ್ಬುಲಂ ಕೊಡಲಿಯುಂ ಬಲ್ಲಸಿಯ ಕಮ್ಮಱಂ ಮುಟ್ಟಗೆರಿಯೊಡೆಯೊಂ ಓದಲ ಪೋಲೆಯುಂ ಮಬ್ಬಳಂ (ಮೈಅಂ. ೦೯೩೪. ೩೮-೨೨; 11ನೆಯ ಶತ).
[ಬಲ್$_2$ (<ಬಲ್ಲಿತು$_1$)+ ಅಸಿ$_3$]

ಬಲ್ಲಹ$_1$, ಬಲ್ಲಭ, ವಲ್ಲಹ (ನಾ). ೧. ಒಡೆಯ ; ಯಜಮಾನ : "ಆಣ್ಮಂ, ಎಱೆಯಂ, ಬಲ್ಲಹಂ— ಈ ೩ ಅಧಿಪತಿಗೆ ಪೆಸರ್" (ಕಶಸಾ. ೬೦-೩೨೦) ; ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ ಬಲ್ಲಹನಱಿಯೆ ಗುಣಾರ್ಣವಂ ಕವಿತಾಗುಣಾರ್ಣವನಂ (ಪಂಪಭಾ.೦೯-೩೩) ; ತೊತ್ತಿಂಗೆ ಬಲ್ಲಹನೊಲಿದರೆ ಪದವಿಯ ಮಾಡದೆ ಮಾಣ್ಬನೆ (ಐಸಪ. ೪೭೪). ೨. ರಾಜ ; ದೊರೆ : ಬಲ್ಲಹನ ಬೆಸದೊಳೊಱಟರ ಮಲ್ಲಂ ದಲ್ಲನ ತನೂಭವಂ ಕರಹಟದಿಂ ಮಲ್ಲಮನು ಬೆನ್ನಟ್ಟಿದ ಬಲ್ಲಾಳ್ತನದಿಂ ನಿಜೇಶನಂ ಮೆಚ್ಚಿಸಿದಂ (ಅಪಪು. ೦-೪೩) ; ಬಲ್ಲಹನುಂ ಸಾಮಂತರುಮೆಲ್ಲಾ ಪ್ರಜೆಯುಂ ಶಿವಂಗೆ ಭಕ್ತರೆ ಜೈನಂ ಪೊಲ್ಲವ್ವ ಕತದೆ ಕೈಕೊಳಲೊಲ್ಲ ರ್ನಾಡವರ್ಗಳದಱಿನೆಂಬರ್ಮೂರ್ಖರ್ (ಸಮಪ. ೦೩-೦೩) ; ಹಲಸಿಗೆ ನಾಡು ನಾಡುಗಳು ಬಲ್ಲಹನುತ್ತಮವಸ್ತುವಿಸ್ತೃತಂ (ಎಇ. XIII. ೩೦೭-೬೩; 1125). ೩. ಪರಾಕ್ರಮಿ ; ಸಾಹಸಿ ; ವೀರ ; ಶೂರ : ಪರಮ ಸುಖಾರ್ದ್ರಲೋಚನದಿನೀಕ್ಷಿಸಿ ನಂದನನಂ . . . ಇದಾರರಸನಿದಾರ ಬಲ್ಲಹ ನಿದಾರ ಕರೀಂದ್ರನಿದಾರ ಸಿಂಹವೆಂದಿರದಮರ್ದಪ್ಪಿದಳ್ (ಪಗಪ. ೩-೩೯). ೪. ಗಂಡ ; ಪತಿ : ಬರುತಾ ಬಲ್ಲಹನೇಱಿದ ಗಾಲಿಯ ಸರದ ಶಕುನಿಮಂಚದ ಮೇಲೆ . . . ಒಪ್ಪಂಬಡೆದಿರ್ಪ ಅರಸಂಚಿಯ ಕಿಱುದುಪ್ಪುಳುವಾಸಂ ಹರಿಸದಿನೇಱಿದಳಂಗೋದ್ಭವನಡರ್ದರಗಿಳಿ ಹೂಡಿದ ಹೂದೇರೇಱುವ ರತಿಯೆಂಬಂದದೊಳು (ಜಯಕಾ. ೨-೩೨) ; ಜಲನಿಧಿಯೆಂದು ಸಂದ ಪೊಟ್ಟೆವೆಣ್ಗಳ ಬಲ್ಲಹನೆಂದುಮೇಟ್ಗೆಯಂ ತಳೆದಿರೆ (ಇಕಎ. ೦-೩೭). ೫. ಒಬ್ಬಾತನ ಹೆಸರು : ಸ್ವಸ್ತಿಶ್ರೀ ಬಲ್ಲಹಂ ಪ್ರಿಥುವಿರಾಜ್ಯಜ್ಗೆಯ್ಯೆ (ಎಇ. VI. ೦೬೬-೦ ; 793) ; ಸ್ವಸ್ತಿಶ್ರಿ ಕನ್ನರ ಬಲ್ಲಹ ದಳಿಗವಟುಗೆಯನಾನೆ (ಎಕ. X (S). ಮುಳಬಾ. ೦೬೭-೨ ; ಸು. 850) ; ನೆಲದ ನೇಷಱ ಉಳ್ಳನೆಗ ಬಿಟ್ಟ ಇದು ಬಲ್ಲಹನ ದತ್ತಿ (ಸೌಇಇ. IX-I. ೩೪-೭ ; ಸು. 9ನೆಯ ಶತ). ಬಲ್ಲಭ : ೫. ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದಂ ಪದಡಕ್ಕೆ ದಳಿಧ್ವಜ ಸಾಮ್ಯಾ × × × ಮಹಾಮಹಾ ಸಾಮನ್ತಾಧಿಪತಿ ಶ್ರೀ ಬಲ್ಲಭ × × × ಹಾ ರಾಜಾಧಿರಾಜ (ಎಕ. II. ೩೩-೨ ; ಸು. 800). ವಲ್ಲಹ : ೫. ಸ್ವಸ್ತಿಶ್ರೀ ಶ್ರೀಪುರುಷ ರಾಜಂ ಕೆಯೆ ಸಿಯಗೆಲ್ಲರಾ ಮನೆಮಗತ್ತಿನ್ ಬಲ್ಲಹನಾ ಬೆಸಸಿ ಗಂಗರ ವಲ್ಲಹ × × ಮಾನಿಱಿದು ಸತ್ತ (ಎಕ. XVI. ತುಮಕೂ. ೬೬-೬ ; ಸು. 775) ; ಶ್ರೀ ಶಿವಮಾರ ಸೀಯಗೆಲ್ಲರ್ಕ್ಕಾಗಿಮೊಗೆ ಊರೊಳ್ ವಲ್ಲಹನಂ ಬಾಳದುಳ್ ತಮ್ಮುತುರ್ವರುಂ × × ಎಱಿದು ವಿಟ್ಟೊನ್ (ಎಕ. XVI. ತುಮಕೂ. ೮೯-೨; ಸು. 780). ಬಲ್ಲಹರ ಬಲ್ಲಹ=ಒಡೆಯರಿಗೆ ಒಡೆಯನಾದವನು ; ಮಹಾಪ್ರಭು : ಬಲ್ಲಹರ ಬಲ್ಲಹನವಿರ ತೋತ್ಪುಲ್ಲಮುಖಕಮಳಂ (ಐಸಪು. ೬-೧) ; ಬಲ್ಲಹರ ಬಲ್ಲಹನೆ ನೀನೇ ಬಲ್ಲೆ ಕರುಣಿಪುದೆವಗೆ ಲಕ್ಷ್ಮೀವಲ್ಲಭನ ಲೀಲಾವತಾರಕಥಾಪ್ರಸಂಗವನು (ಪಿಶಾಗ. ೦೦-೦೯). [<ಪ್ರಾ. ವಲ್ಲಹ. / ಸಂ. ವಲ್ಲಭ]

ಬಲ್ಲಹ$_2$ (ನಾ). (?) : ಒಂದು ಕಲ್ಲಿನ ಗವಿಯಿಂದ ಬಲ್ಲಹವಾದೀತು ದಿಮ್ಮಿಸಾಲೆ ಪಟ್ಟದ ಬಿದುನೂರು ಹೊಟ್ಟಾಗಿ ಹೋದೀತು ದಿಮ್ಮಿಸಾಲೆ ಮುಂದೆ ಪಟ್ಟಕ್ಕೆ ವೀರವಸಂತನು ಬರುತಾನೆ ದಿಮ್ಮಿಸಾಲೆ (ಕಾಲಸಂ. ೬೦-೨೦). [?]

ಬಲ್ಲಳತಟ್ಟಿ 'ಬಲ್ಲಾಳದಟ್ಟಿ' ನೋ.

ಬಲ್ಲಳದಟ್ಟಿ (ನಾ.) ಒಂದು ಬಗೆಯ ಬಟ್ಟೆ : ಕಟ್ಟುವಣ್ಣದ ಪಟ್ಟೆ ಬಲ್ಲಳದಟ್ಟಿ [ಶಾಕಾಂ. ವಟ್ಟೆ] ಭೂಸಲೆ ಮೇಘವಣ್ಣದ ಪಟ್ಟೆ . . . ಇವು ಮೊದಲು ಥರಥರದೊಳಂದೆಮ್ಮವರುಗಳು ಪಡೆದೊದವಿಸಿದಯಿ ವಿವಿಧ ಪಟ್ಟಾವಳಿಗಳುಂಟು (ಐಸಪು. ೦೦-೨೬). [ಬಲ್ಲಳ ? + ದಟ್ಟಿ$_1$]

ಬಲ್ಲಾಣಿಕಾಱ (ನಾ). ಶ್ರೇಷ್ಠನಾದ ರತ್ನಪರೀಕ್ಷಕ : ವಾಣಿ ವಹಿಯಂ ಬರೆವಳ್ . . . ಕ್ಷೋಣಿ ವಿಶ್ವಾಸಿಯಾಗಿಹಳ್ ವ್ಯೋಮದೊಳಗೆ ಬಲ್ಲಾಣಿಕಾಱ ಧನಂಜಯ ಜಯಕ್ಕೀಶಾನ್ಯ ಹೂಣಿಗನೆನಲ್ಕದುಕ್ತ್ಯಾತನ ಗೃಹಾಂತರದಿ ನಡೆವರ್ನುಡಿವರುನ್ನತ (ಸಿಂಗಿರಾ. ೪-೦೬).
[ಬಲ್$_2$ (< ಬಲ್ಲಿತು$_1$) + ಅಣಿಕಾಱ]

ಬಲ್ಲಾಣೆಪೊಟಲ್ (ನಾ). ಒಂದು ಊರಿನ ಹೆಸರು : ಬಲ್ಲಾಣೆಪೊಟಲ ಪೊಲ ನಡದ ಪುರುಷರ್ ಕೆಱೆಗೋಡ ರಣವಿಕ್ರಮಗಾಮುಣ್ಡರುಂ . . . ಬಿರದರುಂ ಇ ಪೊಲನಂ ನಡಯಿಸಿದೋರ್ (ಎಕ. XVI. ಗುಬ್ಬಿ. ೭೩-೩೪; 733). [ಬಲ್ಲಾಣೆ ? +ಪೊಟಲ್$_2$]

ಬಲ್ಲಾತ (ನಾ). ಒಂದು ಬಗೆಯ ಮರ ; ಗೇರುಮರ : ನೀ ಬಲ್ಲಾತ ನಾದೊಡರಣ್ಯದೊಳಗೆ ಕುಜಾತನಾಗಿರದಿಲ್ಲಿಗೇತಕೆ ಬಂದೆ ಪೇಳೆನಲು (ಶಂಕದಾ. ೦೦-೨೦). ☞ ಇಲ್ಲಿ 'ಬಲ್ಲ + ಆತ' ಎಂಬರ್ಥದ ಶ್ಲೇಷೆಯಿದೆ. [<ಸಂ. ಭಲ್ಲಾತ]

ಬಲ್ಲಾನೆ (ನಾ). ಬಲಿಷ್ಠವಾದ ಆನೆ; ಭಾರಿ ಆನೆ : ಬಲ್ಲಾನೆಯ ಮೆಟ್ಟಿನಡಿಯ ತೆಂಗಿನಕಾಯಂತೆ ರಥಂಗಳ್ ಜಜ್ಜರಿವೋದುವು ಪಡಿದಟ ದೊಳ್ (ರಾಮಾಶ್ವ. ೦೩೦-೦೭). [ಬಲ್$_2$ (<ಬಲ್ಲಿತು$_1$) + ಆನೆ$_1$]

ಬಲ್ಲಾಯ (ನಾ). ಮಿಗಿಲಾದ ಪರಾಕ್ರಮ ; ಹೆಚ್ಚಾದ ಸಾಮರ್ಥ್ಯ : ನಿಡಿಯರ್ ಬಲ್ಲಾಯದ ಬಲ್ಲಡಿಗರ್ ವಂದಿರ್ದರಯ್ವರಾಲದ ಕೆಟಗಿಂತೊಡರ್ದರ್ ನಮ್ಮಯ ಭಕ್ಷದೊಳಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ (ಪಂಪಭಾ. ೩-೦೨). [ಬಲ್$_2$(<ಬಲ್ಲಿತು$_1$) + ಆಯ್ಯ$_3$]

ಬಲ್ಲಾಳ್ (ನಾ). ಬಲಿಷ್ಠನಾದವನು ; ಶೂರ ; ಪರಾಕ್ರಮಿ : "ಉರ್ಕಾಳ್ . . . ಬಲ್ಲಾಳ್, ಬಲ್ಬಂಟಂ — ಈ ೫ ಪರಾಕ್ರಮ ಮುಳ್ಳಂ" (ಕಶಸಾ. ೩೮-೨೬೪); ಈ ಗಿರಿದುರ್ಗಮಂ ದಾಂಟಿ ಬಂದ ಬಲ್ಲಾಳ್ದಿವ್ಯನಕ್ಕೆ ದಿವ್ಯಪ್ರಭಾವನಕ್ಕುಮಮೋಘನಕ್ಕುಮದಱಿನೀತನೊಳ

ದಿರ್ಚ್ ಕಾದುವ ಮರುಳ್ತನಂ ಬೇಡ (ಇದಿಪು. ೦೩-೩೬ ಪ); ಚಾವಡಿಯಂ ಬಾವುಲಿಯ ಬಲ್ಲಾಳ್ಗಳ ಮುಂದೆತ್ತಿದ ಪರಿಪರಿಯ ಪತಾಕಾವಳಿಯು ಸೂಳಂಬುದು . . . ಭೂಮಿ ಬೆಸಲಾದಂತೆ ಭೂಚಕ್ರಮಂ ತೆಕ್ಕನೆ ತೀವಿದ ಪದಾತಿಬಲದೊಳಂ (ಗಿಂಪ. ೬-೩೫ ಪ); ಊರಾಳ ಬಲ್ಲಾಳ ಪೆರ್ಗಡೆ ಮಾಸಾವಂತ ಮನ್ನೆಯ ರಾಯರ್ ಮುಂತಪ್ಪ ನಾಡೊಡೆಯರ್ . . . ತಾಮುಂ ಪಡೆವರಸಿ ಕುದುರೆಯ ಕಾವಲ್ಗೊದವಿ ಪೋದರ್ (ರಾಪಾಕ್ಷ. ೫೦-೦೩). [ಬಲ್₂ (<ಬಲ್ಲಿತು₁) + ಆಳ್₂]

ಬಲ್ಲಾಳ (ನಾ). ಅರಸನ ಕೈ ಕೆಳಗಿನ ಒಬ್ಬ ಅಧಿಕಾರಿ : ಈಗ ಹಳ್ಳಿ ಹಳ್ಳಿಗಳಲ್ಲಿ ಪಟೇಲರು ಇರುವ ಹಾಗೆ ಆ ಕಾಲದಲ್ಲಿ ಗ್ರಾಮಕ್ಕೊಬ್ಬ ಗುರಿಕಾರನಿದ್ದನು. ಇಂಥ ನಾಲ್ಕಾರು ಮಂದಿ ಗ್ರಾಮ ಗುರಿಕಾರರ ಮೇಲೆ ಮತ್ತೊಬ್ಬ ಅಧಿಕಾರಿ ಇದ್ದನು, ಇವನಿಗೆ ಬಲ್ಲಾಳ ಎಂದು ಹೆಸರು (ಕೋಟಿಶ. ೦); ಪಂಜುರ್ಲಿಭೂತ . . . ಒಂದು ದಿನ ಸಂಜೆಯಾಗುವ ತನಕ ಕಾದು ಕುಳಿತಿತು. ಆ ಊರಿನ ಬಲ್ಲಾಳರ (ಜೈನ ಶ್ರೀಮಂತರು) ಮನೆಗೆ ಸಂಜೆಯ ವೇಳೆ ದನ ಕರುಗಳನ್ನು ಅಟ್ಟಿಕೊಂಡು ಹೋಗುವ ಸಮಯವನ್ನು ಹೊಂಚುಹಾಕಿತು (ಕಾಪಗೀ. ೬೨). [< ಬಲ್ಲಾಳ್]

ಬಲ್ಲಾಳಗಿತ್ತಿ (ನಾ). ಗಟ್ಟಿಗಿತ್ತಿ ; ಗಡುಸುಗಾರ್ತಿ : ಗಂಡನಿಕ್ಕಿದ ಪಡಿಯನೊಲ್ಲದೆ ಬೆಲ್ಲಗೂಳಿಗಾಸೆ ಮಾಡಿ ನೆರೆಮನೆಗೆ ಹೋಗುವ ಬಲ್ಲಾಳಗಿತ್ತಿಗೆ ಪತಿಭಕ್ತಿ ಅಳವಡುವುದೆ ಅಯ್ಯ (ಶಪಪ. ೨೦-೦೩). [<ಬಲ್ಲಾಳ್ + — ಗಿತ್ತಿ]

ಬಲ್ಲಾಳದಟ್ಟಿ, ಬಲ್ಲಳತಟ್ಟಿ, ಬಲ್ಲಾಳದಡ್ಡಿ, ಬಲ್ಲಾಳ್ದಟ್ಟಿ (ನಾ). ೧. ಒಂದು ಬಗೆಯ ತೆರೆ,—ಪರದೆ ; ☞ ಹೊಯ್ಸಳಸಂತತಿಯ ಬಲ್ಲಾಳರಾಜರ ಕಾಲದಲ್ಲಿ ಪ್ರಸಿದ್ಧವಾಗಿದ್ದ ಒಂದು ಬಗೆಯ ತೆರೆಯಿರಬಹುದು: ಅಂತು ಬಂದು ಈರ್ವರುಂ ಬಲ್ಲಾಳದ[ಶಾಣಾಂ. ತ]ಟ್ಟಿಯ ದ್ವಾರವಟ್ಟದೊಳ್ ನಿಂದಿರ್ದು ದೌವಾರಿಕಂಗೆ ದಾರನುಂ ಶಿವನುಂ ಎಂಬ ಬೇಡರ್ ಬಂದಿರ್ದಪರೆಂದರಸಂಗಱಿವೆನಲ್ (ಪುಣ್ಯಾಸ್ರ. ೬-೬೪ಪ); ಲಾಮಂಚ ಬಲ್ಲಾಳದಟ್ಟಿಯಿಂ ವಿರಚಿಸಿದ ಪಾನೀಯಶಾಲೆ (ಕೇಪಶಾ. ೨-೦೨). ಬಲ್ಲಳತಟ್ಟಿ : ಸೌಂದರಗೆ ಕೈಗೊಟ್ಟು ತುಂಬುರ ಮಹಾಮಂತ್ರಿ ಸಂದಣಿಯ ತೊಲಗಿಸುತ ತದ್ಗೃಹದ ಮಾಂದಳಿರ ಪಂದಲಂ ಪೊಕ್ಕು ಲಾಮಚದ ಬಲ್ಲಳತಟ್ಟಿ[ಟ್ಟಿ]ಯಾ ಮಱೆಯೊಳುಱೆ ಬೆವರುತ ನಿಂದಿರ್ದ ಪರವೆಯಂ ಕಾಣಿಸಲು (ಸೌಂದಪು. ೬-೬೮). ಬಲ್ಲಾಳದಡ್ಡಿ : ಮೇಲುಕಟ್ಟಿನ ದಿವ್ಯಚಿತ್ರದುಕೂಲನಿಚಯದ ಲಾಮಚದ ಬಲ್ಲಾಳದಡ್ಡಿಗಳೆಡೆಗೆಡೆಗೆ ರಂಜಿಸುವ ಪಟ್ಟೆಗಳ ಮೇಲುಪೊದಕೆಯ ಕರ್ಪೂರದ ಹೊಂಬಾಳೆಗಳ ಮಲಯಜದ ಕಂಬದ ಸಾಲುಗಳಲೊಪ್ಪಿದುದು ಚಪ್ಪರವೆರಡು ಯೋಜನದ (ಶಾಣ್ಯಾ.೦೨-೦೦); ಮಂಟಪದ ಚಾಮೂಲೆಯಗಲದ ಲಾಮಚದ ಬಲ್ಲಾಳದಡ್ಡಿಯ ಬಹಳರತ್ನವಿತಾನದುಬ್ಬರದ ಮೇಲುಕಟ್ಟಿನ ಮಲಯಜ ಸ್ತಂಬಾಳಿಗಳ ಮಣಿಪುತ್ರಿಕೆಯ ಸಮಪಾಳಿಯಲಿ ಸೊಗಸಿದುದು ಚಪ್ಪರವೆರಡುಯೋಜನದ (ಶಿಂಪಶಾ. ೦೩-೦೬). ಬಲ್ಲಾಳ್ದಟ್ಟಿ : ಚಿಲ್ಮಿಂಗಡರ್ವಾದ ಪಾದರಿಯೊಳ್ ಕೋದು ಬಳೆದ ಪೊಂಗೇದಗೆಯ ಬಲ್ಲಾಳ್ದಟ್ಟಿಯಿಂದೊಳಗೆ . . . ಅಶೋಕಭೂಜರಾಜಿಯಂ ರಾಜವಿದ್ಯಾಧರನಳಂಕರಿಸುವುದುಂ (ಜಾಕ್ಯಪು. ೯-೨೯ ಪ). ☞ ತಟ್ಟಿ ಮತ್ತು ದಡ್ಡಿ ಎಂಬ ಶಬ್ದಗಳು ಒಟ್ಟಾಗಿಯೇ ಬರಬೇಕಾಗಿದ್ದರೂ ಬೇರೆ ಬೇರೆಯಾಗಿ ಉಲ್ಲೇಖಿತವಾಗಿವೆ. ಅವುಗಳ ಜ್ಞಾತಿಶಬ್ದಗಳು ಒಂದೇ ಆಗಿರುವುದರಿಂದ ಇಲ್ಲಿ ಈ ಶಬ್ದಗಳನ್ನು ಒಟ್ಟಾಗಿಯೇ ಕೊಡಲಾಗಿದೆ. [ಬಲ್ಲಾಳ್₂+ತಟ್ಟಿ₁]

ಬಲ್ಲಾಳದಡ್ಡಿ 'ಬಲ್ಲಾಳದಟ್ಟಿ' ನೋ.

ಬಲ್ಲಾಳಿಕೆ, ಬಲ್ಲಾಳ್ಕೆ (ನಾ). ೧. ಶೌರ್ಯ ; ಸಾಮರ್ಥ್ಯ; ಪರಾಕ್ರಮ: ಕೆಡುವಂತಿದ್ದೀತೇ ಕೌರವನ ರಾಜ್ಯ ಮುಡಿವಂತಿದ್ದೀತೆ ರಾವಣನ ಬಲ್ಲಾಳಿಕೆ ಪರಸ್ತ್ರೀ ಲಕ್ಷ್ಮೀದೇವಿಗೊಲಿದು ಒಂದು ನಿಮಿಷದಲ್ಲಿ ಮಡಿದ (ಸಪಾಪ. ೯-೦೩); ಕಲಿತನದಿಂ ಕಡೆದಂತೆ ಗರುವಿಕೆಯಿಂ ಕರುವಿಟ್ಟಂತೆ ಗಂಡಗರ್ವದಿಂ ಕಂಡರಿಸಿದಂತೆ ಬಲ್ಲಾಳಿಕೆಯಿಂ ಬಣ್ಣವಿಟ್ಟಂತೆ ತಿಣ್ಣಮಾದೊಡ್ಡುಂ (ಅಪಂಪು. ೨-೨೬ಪ). ೨. ಬಲವಂತ; ಒತ್ತಾಯ : ಬಲಾತ್ಕೃತಂ—ಬಲ್ಲಾಳ್ಕೆ (ಳಿಕೆ) ಯಿಂ ಮಾಡಲ್ಪಟ್ಟುದುಂ (ಕೇಕಿಶಾ. ೨೬-೦೦); ಕೊಲುವುದಾ ವಿಷವುಂಡವರನೇ ಕೊಲುವುದಿದು ನಿರನುಜ್ಞೆಯಲಿ . . . ಬಲುಹು ಬಲ್ಲಾಳಿಕೆಯಲುಂಡಡೆ ಕೊಲುವುದಿಪ್ಪತ್ತೊಂದು ಕುಲವನು (ಕಿಪಾಗ. ೦೦-೯೩-೪೬). ಬಲ್ಲಾಳ್ಕೆ : ೨. ಬಲಾತ್ಕಾರಸ್ವಭಾವ: — ಬಲ್ಲಾಳ್ಕೆಯಂ ಮಾಳ್ಪ ಸ್ವಭಾವಂ (ಕೇಕಿಶಾ. ೬-೩೯). [ಬಲ್ಲಾಳ್ + — ಇಕೆ]

ಬಲ್ಲಾಳ್ಕೆ 'ಬಲ್ಲಾಳಿಕೆ' ನೋ.

ಬಲ್ಲಾಳ್ತನ (ನಾ). ೧. ಶೌರ್ಯ ; ಪರಾಕ್ರಮ ; ಸಾಮರ್ಥ್ಯ : ಮೇಗಿಲ್ಲದ ಬಲ್ಲಾಳ್ತನದಾಗರಮೆನೆ ನೆಗೞ್ದ ತತ್ಪೃಥಾನಂದನರುದ್ಯೋಗದ ಚಾಗದ ಯಾಗದ ಭೋಗದ ಮೈಮೆಗೆ ಸುಯೋಧನಂ ಬೆಱಗಾದಂ (ಪಂಪಭಾ. ೬-೬೬); ಮಲ್ಲಾಮಲ್ಲಿಯೊಳಾನ್ತರಿಮಲ್ಲರನಾಹವದೊಳ್ತಿ ಗೋಳ್ಮುರಿಗೊಳ್ವೀ ಬಲ್ಲಾಳ್ತನದಿನ್ದಾಹವಮಲ್ಲನ ಭುಜಾದಣ್ಣಮೆನಿಸಿ ಧ(ಂ)ಲ್ಲಂ ನೆಗೞ್ದಂ (ಪೌಪಾ. XI—i, ೩೨-೮; 1007); ಕಾಣೆರೆ ತನ್ನ ಬಲ್ಲಾಳ್ತನಮಂ (ರಾಮಾಕ್ಷ. ೩೬-೯). ೨. ಬಲಾತ್ಕಾರ; ಬಲಪ್ರಯೋಗ; ಒತ್ತಾಯ: ಸುದಾಹುವೆಂಬ ತನ್ನ ಪಿರಿಯ ಮಗಂ ತನ್ನೊಡನೆ ತೊಱೆಯಲ್ ಬಗೆದಿರ್ದೊನಂ ಬಾರಿಸಿ ಬಲ್ಲಾಳ್ತನದಿಂ ರಾಜ್ಯಪಟ್ಟಂಗಟ್ಟಿ (ಪಡ್ಡಾರಾ. ೦೪೯-೨೨); ಬಲ್ಲಾಳ್ತನದೊಳೆನ್ನನನುಭವಿಸಲ್ ಬಂದೊಂ ನೀನುಂ ವರ್ಣಾಶ್ರಮಗುರುವಯ್ ಎನ್ನಂ ಕಾವುದೆಂದೆನಲೊಡಂ (ಶಾಂತಿಪು. ೬-೬೫ಪ); ನಿಷ್ಕರುಣೆಯಾಗಿ ಪೋಪೆನೆಂಬ ಬಗೆಯುಳ್ಳೊಡನಿಬರುಮಂ ಕೊಂದು ಪೋಗೆಂದು ಮರದಾನೆಯಂ ಕಂಬಕ್ಕೆ ತರ್ಪಂತೆ ಲಲ್ಲೆಗೆಯ್ದು ಬಲ್ಲಾಳ್ತನದಿಂ ಪಟ್ಟಮಂ ಕಟ್ಟಿ (ಧರ್ಮಾಕ್ಷ. ೦೦-೦೩ಪ). [ಬಲ್ಲಾಳ್+ — ತನ]

ಬಲ್ಲಾಳ್ತನಂಗೆಯ್ (ಕ್ರಿ). ಬಲಾತ್ಕಾರ ಮಾಡು ; ಒತ್ತಾಯಮಾಡು : ಎನಗಾರ್ಬಲ್ಲಿದರೆಂದು ಗಂಡುಗೆಡದೊರ್ವಂ ದೇವ ಠಕ್ಕಿಕ್ಕಿ ಸಾಧನಸಮ್ಮೋಹನದಿಂದಮೆನ್ನ ಮಗಳಂ ಬಲ್ಲಾಳ್ತನಂಗೆಯ್ದು ನಿನ್ನ ನರಾಧೀಶ್ವರನಕ್ಕೆ ಬರ್ಕೆ ಕುಡೆನೆಂದೊಟ್ಟೈಸಿ ಕೈಕೊಂಡು ನಿಂದಂ (ಸುಕುಮಾ. ೬-೨೨). [ಬಲ್ಲಾಳ್ತನ + ಕೆಯ್₂]

ಬಲ್ಲಾಳ್ದಟ್ಟಿ 'ಬಲ್ಲಾಳದಟ್ಟಿ' ನೋ.

ಬಲ್ಲಿಗೆ (ನಾ). ಸಂಕೋಲೆ (?) : ತೊಡರೆಡಗಾಲೊಳೊಪ್ಪುವುದು ಬಲ್ಲಿಗೆಯಂ ಮದಧನ್ವಿಗಿಕ್ಕೆ ಬಲ್ಪೊಡರಿಸುವೊಂದು ಭಂಗಿಯೊಳೆ ಪೊದೊಡರೊಳ್ ತೊಡರ್ದಿರ್ದ ಪಾಪಿಗಳ್ ತೊಡರ ತೊಡರ್ಪನೊಳ್ ತೊಡರಲಣ್ಮದ ಭಾಷೆಯಮಾತ್ಮರಂಜಿ ಕಾಲ್ವಿಡಿದವೊಲಿಪ್ಪುವೇಂ ಕುವರಲಕ್ಷ್ಮಣಮೂಪತಿ ಗಿಂತಿದೊಪ್ಪದೇ (ಎಳ. V, ಕಂಬಾರು. ೦೦೨-೬೦ ; ಸು. 1220 ?); ಮೇಲೆ ಸಾಱುವ ಡೌಡೆಯ ದನಿಗಂ ಕೆಳಗೆಸೆಯೆ ತೆಮಳ್ದು ಕುಪ್ಪಳಿಸುವಂದುಗೆಯ ತೊಡರ ಬಲ್ಲಿಗೆ ಬಲ್ಲುಲಿಗಂ . . . ರಾಜಾಂಗಣದೊಳ್ ಪಣ್ಣಿ ಬಂದು, ನಿಂದ ಯಾಮಸಾಮಜಸ್ತೋಮಮನಿತುಂ ಬಾಯ್ಮಿಟ್ಟು ಬೆದಱಿ ಬೆಸಗೆಟ್ಟೋಡೆಯುಂ (ಅಪಂಪು. ೨-೨೯ ಪ).

[?. /ತಮಿ. ವಲ್ಲಿಕೈ = ೧. ಒಂದು ಬಗೆಯ ಕಿವಿಯ ಆಭರಣ. ೨. ಕುದುರೆಯನ್ನು ಕಟ್ಟುವ ಹಗ್ಗ]

ಬಲ್ಲಿತು₁, ಬಲ್ಲಿತ್ತು₁ (ನಾ). ೧. ಗಟ್ಟಿಮುಟ್ಟಾದುದು ; ಬಲಿಷ್ಠವಾದುದು : ಪ್ರಬಲವಾದುದು : ಕಲಹಂಸಗಳ್ ಬಲ್ಲಿತಪ್ಪುದೊಂದು

ದಕ್ಕಂ ತಂದದಱೆರಡು ಕಡೆಯುಮಂ ತಾವಡಸಿ ಕರ್ಚಿ . . . ಬರುತ್ತುಂ (ಸಂಸಕಂ. ೦೫೭-೦೫) ; ತಲೆ ಬಲ್ಲಿತೆಂದು ಕಲ್ಲನೆ ಹಾಯ ಬೇಡ ಹೋಗೆಲೊ ಪಾಪಿ ಮನ್ಮಥ ಮನೆಗೆ(ಸೋಹಕ. ೭-೨೩); ತಲೆ ಬಲ್ಲಿತೆಂದು ಕಲ್ಲಂ ಪಾಯ್ವೆಲಾ ಕಲಿಯಾಗಿ ಸಮರದೊಳ್ಳಾದಿದೊಡೆ ನಿನಗಿಲ್ಲಿ ಗೆಲವಹುದೆ (ಶ್ರೀಪುರಾ. ೪-೦೯) ; ೨.ದೃಢವಾದುದು ; ಸ್ಥಿರವಾದುದು : ಅದೃಢಂ ಮಾರ್ತಂಡನಿಂ ನಿಪ್ಪೊಸತು ಹಿಮಗುವಿಂ . . . ಬೆಂದುದಂಗಾರನಿಂ ಚಿತ್ರದ ಮಾಟಂ ಸೌಮ್ಯನಿಂ ಬಲ್ಲಿತು ಸುರಗುರುವಿಂ ಸುಂದರಂ ಶುಕ್ರನಿಂ ತಟ್ಗಿದುದಕ್ಕುಂ ಮಂದನಿಂ (ಶಾಸಕಿ. ೪-೦೨). ೩. ಶ್ರೇಷ್ಠವಾದುದು ; ಉತ್ತಮವಾದುದು ; ಒಳ್ಳೆಯದು : ಪಿರಿಯರ ನುಡಿಯಂ ಬಲ್ಲಿತೆನೆ ನಂಬಿ ಬೇಂಟೆಯನೊಲ್ಲದೆ ಬಿಟ್ಟರ್ದ ಬಿಯದರೊಪ್ಪಿದರ್ (ಕಬ್ಬಿಕಾ. ೨೨೩). ೪. ಸಾಂದ್ರವಾದುದು ; ದಟ್ಟವಾದುದು ; ನಿಬಿಡವಾದುದು : ಬಲ್ಲಿತಪ್ಪಡವಿಯೊಳು ಸೀಳ್ನಾಯಿ ಕೊಲ್ಲಲಾರ್ಯಸ್ಮರಣಿಯಿಂದಿರೆ ಮಲ್ಲಿಕಾರ್ಜುನ ಕಾಯ್ದೊಯ್ದನು ಮಹಾಕೂಟಪುರವರಕೆ (ಮರೇಪು. ೭-೮). ೫. ಕಠಿಣವಾದುದು ; ಕಷ್ಟಕರವಾದುದು : ಕೆರಳಿ ಕರಿ ಕೈಕೊಂಡುದರೆಯಟ್ಟಿತು ಮಹಾರಥರ ಜಿಲ್ಲಿತಿದು ದೆಸೆದೆಸೆಗೆ ಚೌಪಟಮಲ್ಲಗಿಲ್ಲರ ಪಾಡೆ ನಮ್ಮದು ಬಲ್ಲಿತಹುದುಸುರಿಲ್ಲದೊಡಲಿನ ಚೆಲುವು ಫಲವೇನು (ಕುಸ್ಯಾಸ್ತ್ರೋ. ೩-೨೩). ಬಲ್ಲಿತ್ತು$_1$: ೧. ಪಡೆದಂ ಬ್ರಹ್ಮೇಂದ್ರತೆಯಂ ಗಡಮಾತಂ ಬಗೆದು ನೋಡೆ ನಾರಕನೆತ್ತಲ್ ಗಡ ದೇವನೆತ್ತ ಕರ್ಮಮೆ ಕಡು ಬಲ್ಲಿತ್ತದಱ ತಿರಿವದೇಂ ಬಹು ವಿಧವೋ (ಅಂಪು. ೩-೯೭); ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ (ಬಸವ. ೦೬೩); ಜಳಸಂಭೂತದೊಳೆಂತು ಹಸ್ತಿಮಕರಂ ಬಲ್ಲಿತ್ತಿಳಾಭಾಗದೊಳು ಸ್ಥಳ ಸಂಭೂತದೊಳಂತೆ ಕೋಟಿಭಟಸತ್ತೋದುಭಾಸಿ ಭೇರುಂಡನಿಂದಿಳೆ ಭೇರುಂಡನಿನಗ್ಗಿಕುಂ (ಕಾ. I. ೨೫-೪೩; 1186). (ಗು). ೬. ಬಲಿಷ್ಠವಾದ ; ಶಕ್ತಿಶಾಲಿಯಾದ ; ಬಲವುಳ್ಳ : ತುಕಾರ ದುಕಾರಂಗಳೆ ಕಡೆಯಾಗಿ ಪಲವು ಗುಣವಚನಂಗಳೊಳವು ಅವಱೊಳ್ ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು . . . ದೊಡ್ಡಿತ್ತು ; ಬಲ್ಲಿತ್ತು — ಎಂಬಂತೆ ನೋಡಿಕೊಳ್ಳುದು (ಕಪುದ. ೭೭ ಪ್ರಯೋ) ; ಒಳ್ಳಿತ್ತ ಕೆಯ್ವೊರಾರ್ಪ್ಪೊಲ್ಲದುಮದಱನ್ತೆ ಬಲ್ಲಿತ್ತು ಕಲಿಗೆ [ವ] ವಿಪರೀತಾ ಪುರಾಕೃತ ಮಿಲ್ಲಿ ಸನ್ಧಿಕ್ಕುಮದು ಬನ್ದು (ಇಆ. X. ೬೦-೭ ; ಸು. ೧ಕಯ ಕತ).

ಬಲ್ಲಿತಾಗಿ = ಚೆನ್ನಾಗಿ; ಉತ್ತಮವಾಗಿ ; ಶ್ರೇಷ್ಠವಾಗಿ : ವಿಪುಲ ವಿದ್ಯಮಂ ಬಲ್ಲಿತಾಗಿಯೆ ಶಿಕ್ಷಿಪಾತ ಬಂದುಕನೆನಲ್ (ಕಬ್ಬಿಸುಂ. ೪೭) . ಬಲ್ಲಿತ್ತಱ ಕೋಡು ಕೂರಿತು, ಬಲ್ಲಿತ್ತಱ ಕೋಡುಂ ಕೂರಿತು = (ಎತ್ತು) ಬಲಿಷ್ಠವಾದುದರ ಕೊಂಬು ಚೂಪಾಗಿರುವುದು,—ಮೊನಚಾಗಿರುವುದು; ೨ ಬಲಿಷ್ಠರಾದವರು ಹೇಗೆ ನಡೆದುಕೊಂಡರೂ ಅದನ್ನು ಪ್ರಶ್ನಿಸುವಂತಿಲ್ಲ ಎಂಬ ಭಾವ : ಗುರು ದೇವೇಂದ್ರಮುನೀಂದ್ರ ನಿಂದ್ರನಮಿತಂ ದೇವಂ ಕಥಾನಾಯಕಂ ಪುರುದೇವಂ ಕಥೆಯುಂ ತದಾದಿ ಪುರುಷಪ್ರಸ್ತುತ್ಯ ಜನ್ಮಾಳಿ ಬಂಧುರಮೆಂದಂದೆ ಮದೀಯ ವಾಗ್ವಿಭವವಿನ್ಯಾಸಂ ಬಲಂಬೆತ್ತುದಿನ್ನಿರು ಬಲ್ಲಿತ್ತಱ ಕೋಡು ಕೂರಿತದನಂತಿಂತುಂತೆನಲ್ಬ ರ್ಕುಮೇ (ಅಂಪು. ೦-೨೫) ; ತಱಿಸಂದು ಚಕ್ರವರ್ತಿಗೆ ನೆಱೆದಾಂತಂ ವಾಸುದೇವನುಱದಿರು ಬಲ್ಲಿತ್ತಱ ಕೋಡು ಕೂರಿತಾರಿದಱಿಯದರಾರಳ ವನಂತವೀರ್ಯನ ಶೌರ್ಯಂ (ಶಾಂತಿಪು. ೪-೪೫) ; ಉಱದಿವರನಾಂತು ತಱಿಸಂದಿಱುವರುಮಿಲ್ಲಿವರು ಪೊಯ್ವ ವಸ್ತುವುಮದು ತಾಂ ಪೆಱರದಣ ಮಲ್ಲ ಬಲಿತ್ತಱ ಕೋಡುಂ ಕೂರಿತದಱನದನಾರ್ ಪಿಡಿವರ್ (ಸೇಮಿಪು. ೦೦-೦೦೫). ಬಲ್ಲಿತ್ತು ಮಾಡು = ೧. ಬಲಪಡಿಸು; ಬಲಿಷ್ಠಗೊಳಿಸು; ಶಕ್ತಿಶಾಲಿಯಾಗಿ ಮಾಡು : ಬಡಕಪ್ಪಡಿ ತನ್ನಿಪ್ಪಾ ಗುಡಿಸಂ ಬಲ್ಲಿತ್ತು ಮಾಟ್ಟನೆಲ್ಲಂದದಿನೆಂದೊಡೆ ದೇವನಗಲದಿಪ್ಪಾ ಪಶುವಂ ಕೆಡೆಯಲ್ಕಣ ಮಿಾಯದಂತು ರಕ್ಷಿಸವೇಡಾ (ಸಮಪ. ೯-೬೨). ೨. ದೃಢಗೊಳಿಸು; ಸ್ಥಿರಪಡಿಸಿಕೊಳ್ಳು; ಗಟ್ಟಿಮಾಡಿಕೊಳ್ಳು: ಬಳಸಂಪನ್ನರನಾಸೆಗೆಯ್ಗೆ ಚತುರಂಗಾನೀಕಮಂ ಕೂಡಿ ಕೊಳ್ಗುಳಮಂ ಗಂಡುಮನಪ್ಪುಕೆಯ್ಗೆ ಮನಮಂ ಬಲ್ಲಿತ್ತು ಮಾಟ್ಕೆಂದುಮಾನೆಳೆಯಂ ಕಾದಿದೊಡಲ್ಲದೀಯೆನಱಿದರ್ಕೆ (ಪಂಪಭಾ. ೯-೯೦). ಬಲ್ಲಿದ = ೧. ಬಲಿಷ್ಠನಾದವನು; ಪರಾಕ್ರಮಿ : "ಬಲವಾನ್" ಅಂಸಳಃ —ಈ ೨ ಬಲ್ಲಿದಂ" (ಹಲಾಯು. ೬೩-೨೨೬) ; ನಿಮ್ಮಂ ಕರಂ ನಚ್ಚಿ ಸಂಗರಮಂ ಬಲ್ಲಿದರೊಳ್ ಪೊಣರ್ಚಿದೆಂ (ಪಂಪಭಾ. ೦೦-೯); ಬಲ್ಲಿದರೊಡನೆ ಬವರವಾದರೆ ಗೆಲಲುಂಟು ಸೋಲಲುಂಟು (ಬಸವ. ೦೫೦); ಹೇಳಲಱಿಯೆನು ನಿನ್ನವನ ಕಟ್ಟಾಳುತನವನು ದೇವ ದೈತ್ಯರ ಕಾಳೆಗದಲಿವನಂತೆ ಬಲ್ಲಿದರಿಲ್ಲ ಬಿಲ್ಲಿನಲಿ (ಕುಸ್ಯಾಕ. ೦೩-೦೪೦). ೨. ಧನವುಳ್ಳವನು; ಶ್ರೀಮಂತ; ಧನಿಕ : ಸ್ವಾಮಿ ಭೃತ್ಯಸಂಬಂಧದ ದೆಸೆಯುಂ ಬಡವರ್ ಬಲ್ಲಿದರೆಂಬ ದೇಶಭಾಷೆಯುಂ . . . ಅಪಮೃತ್ಯುವಿನ ಸತ್ವಭಾಧೆಯ ಗಂಧಾಗಂಧಮು ಮಿಲ್ಲ (ಶಾಂತಿಪು. ೬-೧೦೨ ವ): ಬಲ್ಲಿದನ ಹಗೆಹ ತೆಗೆವನ್ನಬರ ಬಡವನ ಹರಣ ಹೋದ ತೆಱನಂತಾಯಿತ್ತು (ಮಹಾದೇ. ಬ. ೩೩-೭೦) ; ದೈವದೊಲ್ಮೆ ಯಿರಲಾ ಕಾಲಾನುಕಾಲಕ್ಕೆ ತಾಂ ಬಡವಂ ಬಲ್ಲಿದನಾಗನೇ (ಸೋಮೇಶ. ೩೫) ೩. ತಿಳಿದವನು; ಜ್ಞಾನಿ : ವರಾಂಗರಸನಾ ವೃಷಣೇಕ್ಷಣ ಶುಕ್ಲಸತ್ವ ಮಾಭ್ಯಂತರಮಾವ ಲಕ್ಷಣಮುಮಿಂತಿವೆ ಬಲ್ಲಿದನೋದಿನಿಷ್ಟದೊಳ್ (ಶೋಕೋಪ. ೦೦-೬೩); ಬಲ್ಲಿದರೆಂಬ ಅಱುಹಿರಿಯರೆಲ್ಲ ತಾಮಸಕ್ಕೊಳಗಾಗಿ ಮಿಾನಕೇತನನ ಬಲೆಗೆ ಸಿಲುಕಿ ಮಾಯೆಯ ಬಾಯ ತುತ್ತಾದರಲ್ಲಾ (ಅಪಸಂ. ೦೬೫-೭೪೬); ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ ಬಲ್ಲಿದರು ಇದ್ದು ಬಲವಿಲ್ಲ (ಸರ್ವಜ್ಞ. ೨೯). ೪. ಶ್ರೇಷ್ಠನಾದವನು; ಉತ್ತಮನಾದವನು; ಮಹಾತ್ಮ : "ಅಗ್ಗಳೆಯನೆನಲ್ ಬಲ್ಲಿದಂ" (ಭಾಕವಿ. ೦೭) ; ಪೊಲ್ಲದುಗೆಯ್ದೆನೆಂದು ನಹುಷಾಜಗರಂ ಪಿರಿದಪ್ಪ ದೈನ್ಯದಿಂ ಬಲ್ಲಿದನಪ್ಪಗಸ್ತ್ಯ ಮುನಿಯೊಳ್ ದಯೆಯಂ ಪಡೆಯಲ್ಕೆ ಬಂದವೋಲ್ . . . ಎಲ್ಲರ ಚಿತ್ತದೊಳ್ ಪಿರಿದುಮೊಂದಭಿಶಂಕೆಯನುಂಟುಮಾಡುಗುಂ (ಕಾದಂಪು. ೦೦೩) : ನೀನು ಜಗಕ್ಕೆ ಬಲ್ಲಿದನು ಆನು ನಿನಗೆ ಬಲ್ಲಿದನು ಕಂಡಯ್ಯಾ (ಬಸವ. ೯೦೩); ಅಲ್ಲಿಗಧಿಪತಿ ಭೀಮನೃಪ ಗುಣದಲ್ಲಿ ನಯದಲಿ ವೀರ್ಯ ವಿತರಣದಲ್ಲಿ ಚಾತುರ್ಯದಲಿ ಸೌಭಾಗ್ಯದಲಿ ಧೈರ್ಯದಲಿ ಬಲ್ಲಿದನು ತಾನಾಗಿ (ಪಳಸ. ೦-೨೯). (ಗು). ೫. ಬಲಿಷ್ಠವಾದ; ಶಕ್ತಿಶಾಲಿಯಾದ : ಭಲ್ಲರ ರಭಸಕೆ ನಿಲ್ಲದೆ ಬಲ್ಲಿದ ಕಲಿಪಂದಿಯೆಂದು ಕಟ್ಟುಬಟ್ಟೆಯಿಂ ಮೆಲ್ಲನೆ ಪೊಱಡುತ್ತಿರೆ (ಹಸ್ತಿಕ. ೪-೪೪). ೬. ಉತ್ತಮವಾದ; ಶ್ರೇಷ್ಠವಾದ; ಒಳ್ಳೆಯದಾದ : ಬಲ್ಲಿದಾಹಾರ ಭಯ ಶಾಸ್ತ್ರಿನ್ನಲ್ಲಿ ಭೇಷಜವೆಂಬವಿವು ಎಲ್ಲಕಾದಿಯ ದಾನಮಾರ್ಗ (ಬಸ್ಯಾಪು. ೮೭-೫೩). ೭. ಉತ್ತಮನಾದ; ಶ್ರೇಷ್ಠನಾದ : ನಲಿದು ಮುಂದೆ ಬಂದತಿರಥನಪ್ಪ ನಂಬಿಯಣ್ಣನಂ ನಡುವೆ ಕುಳ್ಳಿರಿಸಿ ನೀನರಸು ನಾವೆಲ್ಲಂ ಪರಿವಾರವೆಂದಲ್ಲಿಯ ಬಲ್ಲಿದ ಬೆವಹಾರಿಗಳ ಮಕ್ಕಳೆಲ್ಲಂ ನೆರೆದು . . . ಪುರದ ತಿರುವೀಥಿಯೊಳು ನಡೆತಪ್ಪಾಗಳು (ಪಂಬರ. ೨-೧೮). ಬಲ್ಲಿದೆ = ತಿಳಿದವಳು; ಪಂಡಿತೆ; ಜ್ಞಾನಿ : ಘಟಿಕಾಶತ (ಒಂದು ಗಂಟೆಗೆ ನೂರು) ಶ್ಲೋಕಗಳನ್ನು ರಚಿಸುವಲ್ಲಿಯೂ ಅವರು ಬಲ್ಲಿದೆಯರಾಗಿದ್ದರು (ಕರ್ಣಾಳ. ೪-೦).

[< ಬಲ್$_1$]

ಬಲ್ಲಿತ್ತು$_2$, ಬಲ್ಲಿತ್ತು$_2$ (ಅ). ೧. ಬಲವಾಗಿ; ಹೆಚ್ಚಾಗಿ; ಅತಿಶಯವಾಗಿ : ಒಲ್ಲೆವೆಂದರು ಬೇಡವೆಂದರವರು ನೀನು ಬಲ್ಲಿತು ಮಿಗೆ ಬರೆವಾಗ ವಲ್ಲಭಗಿದಿರುತ್ತರವ ಕೊಡಲಾಗದೆಂದೆಲ್ಲರೆಱಗಿದರು ನೃಪತಿ (ಪರಸ. ೮-೨೩). ಬಲ್ಲಿತ್ತು$_2$: ೨. ಬಿಗಿಯಾಗಿ; ಭದ್ರವಾಗಿ : ಆ ಮಹಾತ್ಮಂ . . . ವಿಚಿತ್ರವಸ್ತ್ರಂಗಳಂ ತೆಗೆದುಕೊಂಡು . . . ಕಂಬದೊಳೆ ಬಲ್ಲಿತ್ತುಗಟ್ಟಿ

ಬಟ್ಟೆಯುಮವನಾ ಮಾಡವ ಪೆಱಗ್ಗೆಟ್ಟೆಯಲಿಕ್ಕಿ (ಸುಕುಮಾ. ೧೦-೬೩ ವ).
[< ಬಲ್ಲಿತು$_1$]

ಬಲ್ಲಿತುದೋಱು (ಕ್ರಿ). ಶೌರ್ಯವನ್ನು ತೋರು : ಸಾಮರ್ಥ್ಯವನ್ನು ಪ್ರದರ್ಶಿಸು : ಎಲ್ಲರು ತಪಸಿಗೆಯ್ದುದರು ನೀನೊಬ್ಬ ನಮ್ಮೆಲ್ಲರರ್ತಿಯ ಸಲಿಸಣ್ಣಾ ಬಲ್ಲಿತುದೋಱದಿರಣ್ಣನಿಗಱಿಗೆಂದು ಗಲ್ಲವ ಪಿಡಿದಲುಗಿದಳು (ಭರತ. ೩೦-೦೬). [ಬಲ್ಲಿತು$_1$ + ತೋಱು]

ಬಲ್ಲಿತ್ತು$_1$ 'ಬಲ್ಲಿತು$_1$' ನೋ.

ಬಲ್ಲಿತ್ತು$_2$ 'ಬಲ್ಲಿತು$_2$' ನೋ.

ಬಲ್ಲಿದ 'ಬಲ್ಲಿತು$_1$' ಪರಾ.

ಬಲ್ಲಿದೆ 'ಬಲ್ಲಿತು$_1$' ಪರಾ.

ಬಲ್ಲುಗ (ನಾ). ೧. ಒಬ್ಬಾತನ ಹೆಸರು : ಸಾಹಸಮೇನನೂನವೋ ಬಸದಿಯೋಜರ್ ಹೆಲಯಾಮ್ಮೋಜರಾ ಮಗಂ ಬಲ್ಲುಗಂ ಮಾಡಿದಂ (ಎಕ. V, ಕೇರೂರು. ೦೨೩-೯೯; 952); ಕಾಮಲೆನಾರಿ ಸಕಳಕಳಾಮಹಿತೆಗೆ ನೆಗಳ್ದ × ರಗಂ ಬಲ್ಲುಗನೆಂಬೀ × × × ಧೈರ್ಯರಖಿಳದಿಶಾಮಂಚಳದತ್ತ ಕೀರ್ತ್ತಿಗಳ್ ನುತರಾದರ್ (ಎಕ. VII, ಶಿವಮೊ. ೩೫-೬೭; 1167). ೨. ಒಂದು ಸ್ಥಳದ ಹೆಸರು (?) : ಸಾಸ್ತಳಿಗೆಯ ಬೀರ ಸಾಸ್ತರನ ಮೇಲೆ ನಡೆವಯ್ವತ್ತು ನಾಡೊಳಗಣ ಬಲ್ಲುಗದೊಳ್ಬಿಟ್ಟಿಟ್ಟನ್ದು ಗೆದೆಯ ಪನ್ನೆರಡಱ ನಾಟ್ಯಾಗ್ರಪುಣ್ಡ ಸೀಬಳ್ಳಿಯೆಱ್ಹಯ್ಯನ ಜೇಷ್ಠಪುತ್ರ ನಂಗಮ್ಮನ ಮಗ ಜೋಗಯ್ಯಂಗೆ ದಯಗೆಯ್ದು ಕೊಟ್ಟ ಸ್ಥಿತಿ ಯಾವುದೆನ್ದಡೆ (ಎಕ. VIII, ಸೊರಬ. ೯೭೭-೦೬; 991). [<ಬಲ್$_1$]

ಬಲ್ಲುಜ್ಜುಗ (ನಾ). "ಮಹೋದ್ಯೋಗ, ದೊಡ್ಡ ಕಾರ್ಯ"(ಕ್ರಿಪಾಠ). 'ಬಲ್ಲುಜ್ಜುಗಿ' ಪರಾ. [ಬಲ್$_2$(<ಬಲ್ಲಿತು$_1$)+ಉಜ್ಜುಗ]

ಬಲ್ಲುಜ್ಜುಗಿ (ನಾ). ದೊಡ್ಡ ಕಾರ್ಯವನ್ನು ಮಾಡುವವನು ; ದೊಡ್ಡ ಕೆಲಸವನ್ನು ಮಾಡುವವನು : ಕಡುಚಾಗಿ, ಕಡುಗೆಲಸಿ, ಪುಸಿಬಾದಿ, ಬಲ್ಲುಜ್ಜುಗಿ (ಶಬ್ದಸಂ. ೩೨೯ ಕ್ರಿಯೋ). [ಬಲ್ಲುಜ್ಜುಗ+ —ಇ$_3$]

ಬಲ್ಲುಲಿ (ನಾ). ೧. ಬಲವಾದ ಧ್ವನಿ; ಜೋರಾದ ಶಬ್ದ : ಕೋಗಿಲೆಗಳ್ ಪೊಸಮಾಮರಂಗಳೊಳ್ ಬಲ್ಲುಲಿಯಿಂದೆ ಬಗ್ಗಿಸುತುಮಿಂತಿದೆ ಬಂದುದು ಸುಗ್ಗಿ(ಕಬ್ಬಿಗಾ. ೬೩); ಬಱಸಿಡಿಲ ಬಲ್ಲುಲಿಯವೊಲು ಬೊಬ್ಬಿಱಿದು ಬಿಡುಬಿಡು . . . ಆಯುಧವಿಲ್ಲದೆನ್ನೊಡನೊಱಗಿದನ ಕದ್ದೊಯ್ದುದಘಟೇಯೆಂದು ತಾಗಿದಳು (ಸಾಳ್ವಭಾ. ೦೬-೩೫); ಭುಭೂಭೂ ಎಂದು ಪೂರಯಿಪ ಶಂಖದ ಧಟಂ ಧಟಂ ಧಟಮೆಂದು ಮೊಟಗುವ ಭೇರಿಯ ತುತ್ತುತ್ತುರೆಂದು ಸೂಳಯಿಪ ಪೆರ್ಗಾಳೆಯ ಬಲ್ಲುಲಿಯೊಳ್ ಮಾಪುಜೆ ಸಮಸಂದುದು (ರಾಮಾಶ್ವ. ೭೭-೬). ೨. ಪ್ರಸಿದ್ಧವಾದ ಮಾತು : ಹೊಗಳಿಕೆಯ ಮಾತು : ಪಲವುಂ ನಾಲಗೆಯುಳ್ಳವಂ ಬಗೆಪೊಡೆಂದುಂ ಬಣ್ಣಿಸಲ್ಕಾಱನಾ ನೆಲನಂ ಮತ್ತಿನ ಮಾನಿಸರ್ ಪೊಗಟಲೇನಂ ಬಲ್ಲರೆಂಬೊಂದು ಬಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು (ಕಬ್ಬಿಗಾ. ೦೯). [ಬಲ್$_2$(<ಬಲ್ಲಿತು$_1$)+ಉಲ್ಲಿ$_2$]

ಬಲ್ಲೆ$_1$ (ನಾ). ದಟ್ಟವಾದ ಮೆಳೆ,—ಪೊದೆ : ಬಿಗಿದು ಪುಗಲ್ಕರಿದೆಲ್ಲಿಯುಮೊಗೆದ ಮರಂ ಪೊದಱು ಬಳ್ಳಿ ಗಿಡುಮೆಂಬಿವಱಂ ಮಿಗಿಲೆನಿಪ ಬಲ್ಲೆ ನಗ ಸಾನುಗಳೊಳದಂತಾವ ಮೆಯ್ಯೊಳಂ ಪುದಿದಿರ್ಪಂ (ಕಾಪ್ಯಾವ. ೯೭); ಆ ಮರಗಳನ್ನು ಸುತ್ತಿ, ತಾವೂ ಗಗನಕ್ಕೇರಿ, ಎಲೆಗಳನ್ನು ಬಿಡಿಸಲು ಯತ್ನಿಸುತ್ತಿರುವ ಬೀಳಲುಗಳಿಂದ, ಕಾಡು ಒಂದು ದೊಡ್ಡ ಬಲ್ಲೆಯಾಗಿ ಕಾಣುವುದು (ಶಾಂಪ್ರ. I, ೬೦); ಒಂದೆಡೆ ಎದುರಿಗೆ ಬಲೆಯಂತಹ ಸೀಗೆಯ ಬಲ್ಲೆ, ಇನ್ನೊಂದೆಡೆ ಕೊಡೆ ಆಕಾರದ ಬಳ್ಳಿಗಳು (ಶಾಇಗಿ. ೬೩).
[ದೇ.ಸ ತಮಿ. ವಲ್ಲೆ; ತುಳು. ಬಲ್ಲೆ]

ಬಲ್ಲೆ$_2$ 'ಬಲ್ಲೆಯ' ನೋ.

ಬಲ್ಲೆ$_3$ (ಅ). ಬಳಿಕ; ಮತ್ತೆ; ಅನಂತರ : ಮತ್ತೆಂಬರ್ಥದೊಳುಸಿರ್ವರ್ ಬಿತ್ತಿಗರಾ ಬಲ್ಲೆ ಬಟ್ಟೆಗಳಂ (ಶಪಾರ. ೩೦೯). [?]

ಬಲ್ಲೆತ್ತು(ನಾ). ಬಲಿಷ್ಠವಾದ ಎತ್ತು; ಬಲವಾದ ವೃಷಭ: "ಮಹೋಕ್ಷಃ, ಉಕ್ಷತರಃ—ಈ ೨ ಬಲ್ಲೆತ್ತು" (ಹಲಾಯು. ೪೯-೧೦); ಎಲ್ಲರ ಸುಂಕ ಯೆತ್ತು ತೊತ್ತು ಭಂಡಿ ಬಲ್ಲೆತ್ತು ಎನ್ನ ಸುಂಕ ಎಲ್ಲರ ಪರಿಯಲ್ಲ (ಸುಂಕಪಂ. ಕ. ೬೯೯-೦೬೪೩) ; ಬಲವದುಕ್ಷೇಶ್ವರನ ರೂಪಗ್ಗಳಿಪ ಬಲ್ಲೆತ್ತುಗಳನೇ ಹೆಗಲ್ಗೊಳಿಸಿ ಬಂಡಿಯೊಳಗ್ರದಲಿ ಕೇಳಿಕೆಗಳೊಡಗೂಡಿ (ಬಸಪು. ೩೬-೬).
[ಬಲ್$_2$(<ಬಲ್ಲಿತು$_1$) +ಎತ್ತು$_2$ (<ಎಱ್ತು$_1$)]

ಬಲ್ಲೆಯ$_1$, ಬಲ್ಲ$_2$, ಬಲ್ಲೆ$_2$, ಬಲ್ಲೆಹ, ಭಲ್ಲೆಯ, ಭಲ್ಲೆಹ(ನಾ). ಒಂದು ಬಗೆಯ ಆಯುಧ ; ಈಟಿ ; ಭಲ್ಲೆ : ಮೂದಲಿಸಿ ಬಂದ ಮನ್ನೆಯ ರಾವುತರಂ ಬಲ್ಲೆಯ ಪಟ್ಟಸದೊಳುಂಡಿಗೆಯೊತ್ತಿಬಿಟ್ಟು ನಿಚ್ಚಟದ ರಾವುತರು ಲಚ್ಚಣಂದೆಗೆದು ಮುಂಗುಡಿಯ ರಾವುತರಂ ಭಂಗಿಸಿ ತಿವಿದು (ಪುಳಿರ.ಹ ೨೨೭-೦೯); ತೂಗುತ್ತಿಹ ತೋಮರಂ ಜಡಿವ ಕಕ್ಕಡೆ ಸಲ್ಲೆಹ ಬಲ್ಲೆಯಂ[ಪಾಶಾಂ. ಸಲ್ಲಿಪ ಬಲ್ಲೆಹಂ]ಗಳತ್ಯುತ್ಕಟಮಾಗೆ ಬಂದು ಸಮರಾಂಗಣದೊಳ್ ತಲೆ ಮಟ್ಟುದಂದು ಮೂವತ್ತೆರಡಾಯುಧಂಬೆರಸು ವಾರಣವಾಹನ ವೀರ ಸಾಧನಂ (ಪುಣ್ಯಾಸ್ರ. ೨-೩೬); ಕರದ ಬಲ್ಲೆಯ [ಪಾಶಾಂ. ಹ]ದಿಂದ ವಾಲಿಯ ವರಕುಮಾರನ ತಿವಿಯೆ ಹಲಕಿನ ಸರಿಸದಲ್ಲಿ ಮೊನೆದೋಱುತುಗುಳುವ ರಕುತ ಧಾರೆಯಲಿ (ತೊರರಾ. ೬-೩೦-೩೦). **ಬಲ್ಲ$_2$** : ಇವನಿನ್ನುಂ ನೆರೆದಪ್ಪನೆನ್ನಿದಿರೊಳಾತ್ಮಶ್ರೀಯನೆಂದಾರ್ಪಿನಿಂದವೆರಬ್ಬಲ್ಲದಿನಬ್ಬನಾಭನಿಸೆ (ಪಗಪ. ೦೬-೦೦೦). **ಬಲ್ಲೆ$_2$** : ಹೂಡಿದ ತೇರು ಕೂಡಿದ ಆನೆ ಕುದುರೆಯ ಗಾಢದ ರಾಯ ರಾವುತರು ನೀಡಿದ ಹರಿಗೆ ಕರದ ಬಿಲ್ಲು ಈಟಿಯ ಜೋಡಿಸಿ ತೊಟ್ಟ ಬಲ್ಲೆಗಳು (ಹರಿಶಾಂ. ೦-೬೩). **ಬಲ್ಲೆಹ** : ಒಡ ಕುದುರೆಯ ಮೇಲೆ . . . ದೆಸೆವರಿವ ಅಸುರಾವುತ ಚೊಲ್ಲೆಹದ ಬಲ್ಲೆಹವ ಹಿಡಿದು ಮುಗುಳುನಗೆಯವಳಲ್ಲಿ ಏಱಿ ತಿವಿಯೆ ಚೊಲ್ಲೆಹದ ಬಲ್ಲೆಹ ಮುಱಿದು . . . ಅವಳ ಕಿಸಲಯರಸಕ್ಕೊಳಗಾದ (ಕೋಲಶಾಂ. ೨೯-೦೦); ನಿಲ್ಲೆಲೆಗೆ ಸೈರಂಧ್ರಿ ಕಾಮನ ಬಲ್ಲೆಹದ ಬಲುಗಾಯ ತಾಗಿತು ಬಲ್ಲೆ ನೀನೌಷಧಿಯ ರಕ್ಷಿಸಿಕೊಂಬುದೆನ್ನೊಡಲ (ಕುಪ್ಪಾಂ. ೨-೦೯), ಲಲನೆಯರುಪಚಾರದ ನುಡಿ ಕಿವಿಯೊಳು ಬಲಿದ ಬಲ್ಲೆಹವಾಯಿತಾಗ (ಕಂಪಂ. ೯-೦೬೩). **ಭಲ್ಲೆಯ** : ವರ್ಗ ಚತುರ್ಥಾಕ್ಷರಂಗಳ್ಗೆ ಘಟಿಯಂ . . . ಭಲ್ಲೆಯಂ, ಭಾವಂ (ಶಪಾದ. ೦೩ ಕ್ರಿಯೋ); ಅಲಗಿನೊರಸೊರಸಿಲ್ಲ ಕೈಮೈಗಳಲ್ಲಿ ಮುಳುಗಿದ ಬಾಣವಿಲ್ಲಗ್ಗಳಿಸಿ ನೊಸಲಲಿ ಮುಱಿದ ಭಲ್ಲೆಯುವಿಲ್ಲ . . . ನೀ ಮುನ್ನಳುಕಿ ಕೈದುವ ಹಾಯ್ಕುದೈ ಸರಿಯಲ್ಲ ನಿನಗೆಂದ (ಕುಪ್ಪಾಶೀ. ೩-೩೩); ಬಲ್ಲವರ್ ಹರಿಗೆ ಪಟ್ಟೆಯ ಶೂಲ ಶಲ್ಲೆಹ ಭಲ್ಲೆಯ ಬಲವಂತೆಯರ ಎಲ್ಲರ ತಱುಬಿ ಹರ್ಷ್ಯವ ಹತ್ತಿ ಹೇಳ್ದಳು ಪುಲ್ಲಶರಾತ್ಮಸಂಭವಗೆ (ಪೋಹತ. ೩೩-೩೯). **ಭಲ್ಲೆಹ** : ಅಂತರಾಂತರದ ಬಾಗಿಲ ಚಾವಡಿಯೊಳು ತಿಂತಿಣಿಸುವ ಪಟುಭಟರು ಕುಂತ ಕಠಾರಿ ಭಲ್ಲೆಹ ಖಡುಗವನಾಂತು ಸಂತಸದಲಿ ಕಾದಿಹರು (ಕಂಪಂ. ೨-೬೬) ; ಕುಂತ ತೋಮರ ಖಡ್ಗ ಸುರಗಿ ಭಲ್ಲೆಹಗಳ ಕಾಂತಿ ಮುಸುಕಿ ಚೌದೆಸೆಯ ಹೊಂತಕಾಱುಗಳಾಗ ರಾಯ ಮೋಹರದಲ್ಲಿ ಪಂತದೊಳೆಸೆದರುಬ್ಬಿನಲಿ (ಕಂಪಂ. ೦೩-೨೦).
[<ಸಂ. ಭಲ್ಲ./ ತಮಿ. ವಲಯ, ವಲ್ಲೈಯ್ಯ ; ತೆಲು. ತುಳು. ಬಲ್ಲೆ]

ಬಲ್ಲೆಹ 'ಬಲ್ಲೆಯ' ನೋ.

ಬಲ್ಲೆಹಕಾಱ (ನಾ). ಮಾತಿನ ಯುದ್ಧ ಹೂಡುವವನು ; ವಿತಂಡವಾದಿ : ಸೊಲ್ಲಿನ ಮಾತಿಗೆ ಬಲ್ಲೆನೆಂದು ಹೋರುವ ಬಲ್ಲೆಹಕಾಱರಿಗೆಲ್ಲಿಯದೋ ಮುಕ್ತಿ (ಪೋಳವಾ. ೦೦೩-೪೦೨).
[ಬಲ್ಲೆಹ (< ಬಲ್ಲೆಯ) + — ಕಾಱ]

ಬಲ್ಲೆಳೆ (ನಾ). ಗಟ್ಟಿಯಾದ ಎಳೆ ; ಬಿಗಿಯಾದ ದಾರ : ಮಾತೆಸಹಿತಂ

ಬೆಚ್ಚುನೀರೆಱೆದೋತು ಲಿಂಗವ ಧರಿಸಿ ಶಿಶುವಿಗೆ ಮಾತೆಯುಂ ಬಳ್ಳಿಯನು ಪಿಡಿಯಿಸಿ ಸೂತಕೃತೆಯದನು ಬಲ್ಲೆಳೆಯೊಳೆಳೆಯದೊಲು ಬಂಧಿಸಿ . . . ಚೂರ್ಣವ ಕಲಸಿ ಕುಡಿಸಿದಳು (ಪುರೇಪು. ೦೬-೦೯).

[ಬಲ್$_2$ (<ಬಲ್ಲಿತು$_1$) + ಎಳೆ$_2$ (<ಎಱೆ$_2$)]

ಬಲ್ಲೇರಿ (ನಾ). ಕೆರೆಗೆ ಆಡ್ಡವಾಗಿ ಕಟ್ಟಿರುವ ದೊಡ್ಡದಾದ ಏರಿ,—ಕಟ್ಟೆ : ನೂರ್ಮ್ಮಡಿ ಅಯ್ಯಹರಸಂ ಬರ್ಮ್ಮಿಸೆಟ್ಟಿಗೆಗೊಟ್ಟ ಶಾಸನದ ಪೊಲದ ಸೀಮೆ . . . ಅನ್ತೆ ಬರೆ ಒಡಿಲ ಗೆಱೆಗೆ ಬನ್ದಬಾಗೆ ಆ ಕೆಱೆಯೊಳ ಗಣ ಬಲ್ಲೇರಿಯೆ ಆ ಕೆಱೆಯ ತೆಂಕಣ ಕೋಡಿಯೆ (ಎಳ. XI. ದಾಪಶಾ. ೦೯-೦೬ ; 1043). [ಬಲ್$_2$ (<ಬಲ್ಲಿತು$_1$) + ಏರಿ$_1$]

ಬಲ್ಲೇಱು (ನಾ). ಬಲವಾದ ಪೆಟ್ಟು ; ಜೋರಾದ ಹೊಡೆತ : ಅಸಮಾಸ್ತ್ರಂ ತೆಗೆದೆಚ್ಚ ಕೂರ್ಗಣೆಯ ಬಲ್ಲೇಱಿಂಗೆ ಸಕ್ಷಾರನೇಕಸಮಾನಂ ಕಡುಕೆಯ್ದ ಕಾದಲರ ಮಾತು (ಅಪಂಪು. ೬-೪೫).

[ಬಲ್$_2$ (<ಬಲ್ಲಿತು$_1$) + ಏಱು$_4$]

ಬಲ್ವಂದಿ$_1$ (ನಾ). ಬಲಿಷ್ಠವಾದ ಹಂದಿ ; ಬಲಶಾಲಿಯಾದ ವರಾಹ : ಮುನಿಸಿಂ ಬೊಬ್ಬಿಱಿದುಬ್ಬಿಯಬ್ಬರಿಸಿ . . . ಬಲ್ವಂದಿ ಬಲ್ವಂದಿಕಾಱನ ವೋಲ್ ಪಿಂಡೊಡೆದೊಂದೆ ಪೋಯ್ತು ಮಲೆದಂತಿಂತಿಕ್ಕೆಲಕ್ಕೆಕ್ಕಲಂ (ಸೂಕ್ತಿಸು. ೩-೦೩೩). [ಬಲ್$_2$ (<ಬಲ್ಲಿತು$_1$)+ಪಂದಿ]

ಬಲ್ವಂದಿ$_2$, ಬಲ್ಬಂದಿ (ನಾ). ಬಲವಾದ ಸೆರೆ ; ಬಲಿಷ್ಠವಾದ ಬಂಧನ : 'ಬಲ್ವಂದಿಗೊಳ್' ಪರಾ. ಬಲ್ಬಂದಿ : 'ಬಲ್ಬಂದಿಕಾಱ' ಪರಾ.

[ಬಲ್$_2$ (<ಬಲ್ಲಿತು$_1$)+ಬಂದಿ$_1$]

ಬಲ್ವಂದಿಕಾಱ, ಬಲ್ಬಂದಿಕಾಱ (ನಾ). ಕೈತಪ್ಪಿ ಹೋಗದಂತೆ ಸೆರೆ ಹಿಡಿಯುವವನು; ಪರಾಕ್ರಮಿ: ಮುನಿಸಿಂ ಬೊಬ್ಬಿಱಿದುಬ್ಬಿಯಬ್ಬರಿಸಿ... ಬಲ್ವಂದಿ ಬಲ್ವಂದಿಕಾಱನ ವೋಲ್ ಪಿಂಡೊಡೆದೊಂದೆ ಪೋಯ್ತು ಮಲೆದಂ ತಿಂತಿಕ್ಕೆಲಕ್ಕೆಕ್ಕಲಂ (ಸೂಕ್ತಿಸು. ೩-೦೩೩); ಬಂದಿಗೆ-ಬಂದಿಗ್ರಹಣ,ಬಲ್ವಂದಿಕಾಱ (ಕಪುರ. ೨೯೬ ಪ್ರಯೋ). ಬಲ್ಬಂದಿಕಾಱ: ೧. "ವಸುಮತಿಗೆ ಬಲ್ವಂ [ಶಾಕಾಂ. ಲ್ವಂ]ದಿಕಾಱ ಬಂದಿಗ್ರಹಣ" (ಕಂಕೃ. ೯೮).

[ಬಲ್$_2$ (<ಬಲ್ಲಿತು$_1$) + ಬಂದಿಕಾಱ (<ಬಂದಿಗಾಱ)]

ಬಲ್ವಂದಿಗೊಳ್ (ಕ್ರಿ). ಬಲವಾದ ಸೆರೆಯನ್ನು ಹಿಡಿ ; ಬಲಿಷ್ಠನಾದವನನ್ನು ಬಂಧಿಸು : ಯುದ್ಧಮಲಿನರಾಗಿರುವ — ಲಿಂಗರಾಜನ, ಕರುವಿಯನ್ ಚೋಳವೇಂಕಯ್ಯಂದಿರನ್ನು ಬಲ್ವಂದಿಗೊಂಡೆಳೆತರುವ ಸೈನಿಕರ, ಪ್ರವೇಶ (ಪುಂಕ್ರಿಪ್ರ. ೨೦-೨೨). [ಬಲ್ವಂದಿ$_2$+ಕೊಳ್$_1$]

ಬಲ್ವಗೆ$_1$, ಬಲುವಗೆ (ನಾ). ೧. ಬಲಿಷ್ಠನಾದ ಹಗೆ ; ಬಲಶಾಲಿಯಾದ ಶತ್ರು : ದಾಳಿಯಂ ಕಂಡರಂತೆ ಪಗುಟ್ಟೋಡುತ್ತುಂ ಬಲ್ವಗೆಯಂ ಕಂಡಂತೆ ಮೊಗಂದಿರಿಪುತ್ತುಂ (ರರ್ಮಾಮ್ಯ. ೯-೭೭). ೨. ಅಧಿಕವಾದ ಅಸೂಯೆ ; ಬಲವಾದ ದ್ವೇಷ : ನಿಗಡಂ ಸೊಕ್ಕಾನೆಯೊಳ್ . . . ಕಂಟಕಂ ಹರ್ಷದೊಳ್ ಬಲ್ವ[ಶಾಕಾಂ. ಲ್ಬ]ಗೆ ಕಾವ್ಯಪ್ರೌಢರೊಳ್ ತಳ್ತಱಿಪುದೆವೆಯೊಳುಂಟಲ್ಲಿ ಬೇಱಿಲ್ಲ ನಾಡೊಳ್ (ಅಪಂಪು. ೦-೬೩). ಬಲುವಗೆ : ೧. ಹಗೆಗಳೇ ಕೌರವರು ತೆಗೆ ಬಲುವಗೆ ಕಣಾ ಕಾಮಾದಿರಿಪುಗಳು (ಕಾವ್ಯಾಕ. ೦೩-೩೭). ೨. ಅದೇಕೆ ಬಲುವಗೆ ಬರಲು ಶಂಕಿಸೆ (ಕಿಷ್ಕಿಂಕಾಂ. ೬-೪೮). [ಬಲ್$_2$ (<ಬಲ್ಲಿತು$_1$)+ಪಗೆ$_2$]

ಬಲ್ವಗೆ$_2$, ಬಲ್ಬಗೆ (ನಾ). ಅನೇಕ ರೀತಿ ; ಬಹಳ ವಿಧ : ಇಂತು ಬಲ್ವಗೆಯಿಂ ಪೊಗೞ್ವ ರಾಮನಂ ನೋಡುತೆ ಸೀತೆಯಿಂತೆಂದಳ್ ! (ಉತ್ತರ. ೩೯-೦೨). ಬಲ್ಬಗೆ : ಇಂತು ಕೆಯ್ಯೋಡಿಸುತೆ ಬಲ್ಬಗೆಯಿಂ ಬೇಡಿಕೊಳ್ವ ಮುನಿಯ ಕಿಬ್ಬಗೆಗೆ ನಕ್ಕು, ದೇವ . . . ಮನ್ನಿಸಿ ಕಳುಪಿದಂ (ಉತ್ತರ. ೦೦-೦). [ಬಲ್$_2$ (<ಬಲ್ಲಿತು$_1$) +ಬಗೆ$_2$]

ಬಲ್ವಜ (ನಾ). ಒಂದು ಬಗೆಯ ಹುಲ್ಲು : ಗಂಜಳದ ಹುಲ್ಲು :"ಉಲಪಃ, ಬಲ್ವಜಃ— ಈ ೨ ಗಂಜಳದ ಪುಲ್" (ಪಶಾಯು. ೩೨-೩೬). [ಸಂ.]

ಬಲ್ವಡಿ (ನಾ). ಬಲವಾದ ಕದ : ಭದ್ರವಾದ ಬಾಗಿಲು : ನಡೆನಡೆ ಕೇರ್ಗಳಂ ಕೆಡವು ಬಲ್ವಡಿ [ಶಾಕಾಂ. ಡೆ]ಯಂ ಮುಱಿಪೊಕ್ಕು ಗೇಹದೊಳ್ಪುಡುಕು . . . ಎನುತುರ್ಬಿ ಬೊಬ್ಬಿಱಿದು ಮುತ್ತಿದರಾ ಗೃಹಮಂ ದ್ವಿಜಾಧಮರ್ (ಪ್ರಸಂ. ೩೯-೬). [ಬಲ್$_2$ (<ಬಲ್ಲಿತು$_1$)+ಪಡಿ$_2$]

ಬಲ್ವಡೆ (ನಾ). ಬಲವಾದ ಸೈನ್ಯ ; ದೊಡ್ಡ ದಂಡು : ಕಳಕಾಳಮಾಗೆ ಪಂಚಲನ ಬಲ್ವ[ಶಾಕಾಂ. ಲ್ಬ]ಡೆ ಪಂಚಲನಶ್ವಸಂಕುಲಂ ಕಳಕಾಳಮಾಗೆ (ಅಪಪು. ೦-೯೯) ; ಬಡಿಯಿಂ ಬಹ್ವಾಮಲಕದ ಫಳಮಂ ಬಡಿಗೊಳಲು ದಿರ್ವಂದದಿ ಬೀಳ್ತಹ ಬಲ್ವಡೆಯಂ ಕಾಣುತ್ತುಂ (ಇಯಶಾ. ೬-೩೨) ; ನಾಲ್ವತ್ತು ಸಾಸಿರಂ ಕಡುಗಾಲ್ವೆತ್ತೊಳ್ವಾರುವಂಗಳಾಳ್ಮೊಲಕ್ಕಂ ಸಲ್ವಾನೆ ಸಾಸಿರಂ ಬರೆ ಬಲ್ವಡೆಯುಂ ತಂದನಮುಮ ಕೆಂಗೆಯ ಹನುಮಂ (ಪಪಂ. ೨-೯೩).

ಬಲ್ವಡೆ ಸುದ್ರಕನ್ = ಬಲವಾದ ಸೈನ್ಯವನ್ನು ಎದುರಿಸುವುದರಲ್ಲಿ ಶೂದ್ರಕನಂತಿರುವವನು ; ಬಹಳ ಪರಾಕ್ರಮಿ : ಒಂದು ಬಿರುದು : ಉರ್ಬ್ಬಿಯೊಳ್ಸಕಲದೊಳೊರ್ಬ್ಬನೆ ಗಣ್ಡ ಶ್ರೀಚನ್ದ್ರಮನೆನ ಮೊಳ್ಪಿಡೆಯನ್ ಗೊನ್ತಿಸುತರಿಂ ಪರಾಕ್ರಮನ್ ಬಲ್ವಡೆ ಸುದ್ರಕನ್ ಪ್ರಳಯಧನಿ ಮುತ್ತಿ ಆಣೆಯಂ ಅಱ್ಱುವಂಗಂ ಕುಡಲಪೊಂಗಂ ಒರ್ಬ್ಬನೊ ಆಚಾರ್ಯ್ಯಂ (ಎಇ. XXIV. ೨೬-೬; ಸು. 885).

[ಬಲ್$_2$ (<ಬಲ್ಲಿತು$_1$) + ಪಡೆ$_2$]

ಬಲ್ವನಿ (ನಾ). ದೊಡ್ಡದಾದ ಹನಿ ; ದಪ್ಪವಾದ ಬಿಂದು : ಸ್ವಾತಿ ಬಲ್ವನಿ ಬಿಂದು ಶುಕ್ತಿಗರ್ಭದಿ ಬಿದ್ದ ಮಾತ್ರದೊಳ್ತನ್ನ ಪೂರ್ವದ ಗುಣವನುಳಿದಮಳಜ್ಯೋತಿ ಮುತ್ತಾದಂತೆ (ಪಪೋ. ೬-೯).

[ಬಲ್$_2$ (<ಬಲ್ಲಿತು$_1$) + ಪನಿ$_2$]

ಬಲ್ವರವಿ (ನಾ). ದೊಡ್ಡದಾದ ಹರವಿ; ದಪ್ಪದಾದ ಗಡಿಗೆ,—ಮಡಕೆ : ಕೆಲಕೊಱಗಿರ್ದ ಬಲ್ವರವಿಯಂ ಬಲಗೈ ಜಡಿದೊಪ್ಪಿ ತೂಗೆ. . . ಒಪ್ಪಿದರ್ ಕೆಲಬಲದೂರ್ಗೆ ಪೋಗಿಯಳೆ ಮಾಱಿ ಮಗುಟ್ಟರುತಿರ್ಪ ಗೋಪಿಯರ್ (ಲೀಲಾವ. ೩-೦೦೦). [ಬಲ್$_2$ (<ಬಲ್ಲಿತು$_1$)+ ಪರವಿ]

ಬಲ್ವರಿಕೆ (ನಾ). ದೊಡ್ಡ ಧಾಳಿ : ಬಲ್ವರಿಕೆಯೊಳರಿನೃಪರ ಪಡಲ್ವಡೆ ತಳ್ತಱಿಪುದು ರಣದೊಳಾ ವಿಕ್ರಮಮಂ ಸೊಲ್ದಿನಮಾವರ್ಜಿಸಿದಂ ನಾಲ್ವತ್ತೆರಡಱಿಕೆಗಾಳಿಗಂಗಳೊಳೀತಂ (ಪಂಪಶಾ. ೦-೨೩).

[ಬಲ್$_2$ (<ಬಲ್ಲಿತು$_1$) + ಪರಿಕೆ$_1$]

ಬಲ್ವಲ (ನಾ). ೧. ಬಲಿಷ್ಠವಾದ ಸೈನ್ಯ; ಗೆಲ್ಲಲು ಅಸಾಧ್ಯವಾದ ಸೈನ್ಯ : ಪಸರಿಸಿ ಪೊಕ್ಕು ಕೂಕಿಱಿದು ಕಾದುವ ಬಲ್ಲಣಿಗಳ್ ಪಳಂಚಿ. . . ಚೋದಿಸುವ ರಥಕ್ಕೆ ಪೆಪ್ಪಳಿಸದೊರ್ವರಿನೊರ್ವರೆ ಮಿಕ್ಕು ಪಾರ್ದು ಸಾರ್ದಿಸೆ ತುಱುಗಾಱರಂದಿನಿಸು ಬಲ್ವಲನಾದುದದೊಂದು ಕಾಳೆಗಂ (ಪಂಪಶಾ. ೬-೯೩); ಗೆಲಲೆನಗೆ ರಿಪುಬಲಂ ಬಲ್ವಲಮಾದೊಡೆ ಸಿಂಹನಾದಮಂ ಮಾಟ್ಟಿಂ ಬೆಂಬಲವಾಗಿ ಬರ್ಪುದೆಂದೀ ಬಲದೇವಂಗಱಿಪಿ ವಾಸುದೇವಂ ಪೋದಂ (ಪಂರಾಮಾ. ೯-೯೬). ೨. ಅತಿಶಯವಾದುದು; ಶ್ರೇಷ್ಠವಾದುದು : ಬಿಲ್ವಿಡಿದವನಂ ಧರೆಯೊಳ್ ಗೆಲ್ದನ್ನರ್ ಚಾಪಕುಶಲರಿಲ್ಲನೆ ಕಂಸಂ ಬಲ್ವಲ[ಶಾಕಾಂ. ಬಲುವಲ]ನಾದಭ್ಯಾಸದೆ ಸಲ್ವಿನಂ (ಶೇಷಭಾ. ೩-೭೬). ೩. ಬಹಳ ರಭಸದಿಂದ ಕೂಡಿದುದು; ಅತಿ ವೇಗವನ್ನುಳ್ಳುದು; ಮಹಾಬಲಶಾಲಿಯಾದುದು: ಬಲ್ವಲನಲ್ಲದೀಯಲೆಯುತಿರ್ದುದು ತೆಂಕಣ ಗಾಳಿ ಕಾಮನೀ ಕೊಲ್ವನೆ ಚಂದ್ರನೀ ಕೊಱಿಯ ತಿಂಬನೆ ನಿನ್ನೊಡ ಗೂಡ ವೇಟ್ಟೂ ನೀನೊಲ್ವುದು ಮೊಗ್ಗೆ ಕಾಡುವುದು ಕಾವುದನಾಥೆಯನೆನ್ನಂ (ಲೀಲಾವ. ೦೦-೩೮).

ಬಲ್ವಲಾಗು = ಅಧಿಕವಾಗು : ಜಾಗದ ಬಲ್ವಲಾದ ಪೊಸಲಿಂ

ಬಳೆದೊಪ್ಪುವ. ನಾಳಿಕೇರದಿಂ ಪೂಗವನಂಗಳಿಂದೆಲೆಯಂ ಬಳ್ಳಿಗಳಿಂ... ನಿರಂತರಂ ಸೊಗಯಿಸಿರ್ಪುವು ಪೆರ್ಗಱಱಿಗಳ್ನಿರಂತರಂ (ಪುಗ್ಗಳಿ. ೨-೪೫); ಪಾವುಗೆತ್ತು ಪತ್ತುವ ಮುಂಗುಲಿಗಳಂತ ಬಾಲಮಂ ಬಿದಿರುತ್ತೆ ಮಣಿಕು ವರೆದಡರ್ವ ತುದಿಗೊಂಬುಗಳ ಕೊನೆಯೊಳ್ ಕವಲ್ತು ಪಾಲ್ವಱಿಯೆ ಬಲ್ವಲಾದ ಕಱಿಗೊಂಬುಗಳೊಳಂ (ಅಂಗಾಸ. ೬-೪೦ ಪ).

[ಬಲ್$_3$ (<ಬಲ್ಲಿತು$_1$) + ಬಲ$_3$]

ಬಲ್ವಲಿಕೆ (ನಾ). ಬಹಳವಾದ ಸಾಮರ್ಥ್ಯ; ಅತ್ಯಂತ ಪರಾಕ್ರಮ : ಬಲ್ವಲಿಕೆಯಿಂದಿರ್ದಿರ್ದ ಬಲ್ವಡೆ ತನ್ನೆಚ್ಚ ನಿಶಿತಶರಸಂಹತಿಯಿಂದೆಲ್ವಡ ಗಾಯ್ತು (ಶಾಸ್ತ್ರಾವ. ೬೯). [ಬಲ್$_3$ (<ಬಲ್ಲಿತು$_1$) + ಬಲಿಕೆ (<ಬಲ್ಕೆ)]

ಬಲ್ವಿಡಿ$_1$, ಬಲುವಿಡಿ$_1$, ಬಲ್ಪಿಡಿ$_1$ (ಕ್ರಿ). ಬಲವಾಗಿ ಹಿಡಿ; ದೃಢವಾಗಿ ತಿಳಿದುಕೊಳ್ಳು : ಬಲ್ವಿಡಿದಾಳಿಯುಂ ಸಖಿಯರೆಂದುದುಗೇಳದೆ ಗೆಂಟು ಮಾಱ್ಪುದುಂ (ಪುಗ್ಗಳಿ. ೭-೭೬); ಕರ್ಮೇಂಧನಂಗಳಂ ಸುಡಲುಂ ಜಿನ ಚರಣಮುಂ ಬಲ್ವಿಡಿಯಲುಂ ಸನ್ಮಾರ್ಗಮಂ ಪೊರ್ದಲುಂ ಮನಂದಂದು (ರತ್ನಾಕ. ೭-೨೩೬); ಏಳೇಳಲಿಬ್ಬರ ಕೈವಿಡಿದಳು ಕಾಳಿತೇಳದೆ ಕೈಗಳ ನೀಡೆ ಚಾಳಿಸಿ ಪೋಪೆವೆಂದತ್ತಿತ್ತಲೊಲೆದರು ಬಾಲೆ ಬಲ್ವಿಡಿದು ತೆಗೆದಳು (ಕರ. ೧೦-೬೯). **ಬಲುವಿಡಿ$_1$** : ಕೋಟಲೆಗಳೇಯೆರಡರೊಳಗವ ಬೇಟವನೆ ಬಲುವಿಡಿದು ಹೂಡಿದ ಘೋಟಕದ ಹೊಂದೇರಿನಲಿ ಹೊಱವಂಟನರ ಮನೆಯ (ಕೂರಗಾ. ೩-೭-೨೨); ವಸುದೇವನಂದನನಂಘ್ರಿಯನು ದೃಢಭಾವದಲಿ ಬಲು[ಪಾಠಾಂ. ಲ]ವಿಡಿದು ದಾಂಟು ಭವಾಂಬುಧಿಯ (ಸಿಭಾಗ. ೯-೦೫-೨೯). **ಬಲ್ಪಿಡಿ$_1$** : ಈ ಕವನೀಯಕಾವ್ಯಮಂ...ಬಲ್ದುಸಿರ್ದೆಂ ಬುಧರ್ಕ ಲಾವಲ್ಲಭರೈದೆ ಕೇಳ್ದು ಗುಣಮೊಂದನೆ ಬಲ್ವಿಡಿದಿರ್ಪುದಾವಗಂ (ಕಾದಂಬ. ೦೨-೦೦೪); ಪವನವೇಗವ ಕೀಟ್ಟಡಿಸಿ ದುವಾಳಿಪ ಜವಗಾತಿಯ ಬೆನ್ನೊಳಿರ್ದು ಕುವರ ಕಂಗೆಟ್ಟು ಬಿದ್ದಪೆನೆಂದು ತಕ್ಕೆಗೊಂಡವಳ ನುಣ್ಮೊಲೆಯ ಬಲ್ಪಿಡಿದ (ಪೋಪಕ. ೩೦-೨೬). [ಬಲ್$_2$ (<ಬಲ್ಲಿತು$_1$) + ಪಿಡಿ$_1$]

ಬಲ್ವಿಡಿ$_2$, ಬಲುವಿಡಿ, ಬಲ್ಪಿಡಿ$_2$ (ನಾ). ೧. ಬಲವಾದ ಹಿಡಿತ; ದೃಢ ವಾದ ಹಿಡಿತ : ಬಲ್ವಿಡಿವಿಡಿದು ಶರಣ್ಬುಗು ಜಿನೇಂದ್ರಪದಸರಸಿಜಮಂ (ಅಂಪು. ೨-೫೯); ಒಡಲುಂ ಪ್ರಾಣಮುಮೆಂಬಿವು ಕಿಡಲಾದುವು ಜಸ ಮದೊಂದೆ ಕಿಡದದನಾಂ ಬಲ್ವಿಡಿವಿಡಿದು ನೆಗೞ್ದಿಂ (ಪಂಪಭಾ. ೦೨-೦೫೦). **ಬಲುವಿಡಿ$_2$** : ೧. ಬಲುವಿಡಿಯ ಬಿಲು ವಾಮದಲಿ ಬೆರಳೊಳಗೆ ಸವಡಿಸಿ ಸವಡಿಸಿ ತೆಗೆವ ತಿರುವಿನ ಹಿಳುಕು ನಿಮಿರಿದ ತೋಳ ತೋಱುಕೆ ಬಲದ ಭಾಗದಲಿ (ಕಾಸ್ಕಾಳ ೫೭-೫೩). **ಬಲ್ಪಿಡಿ$_2$** : ೧. ಬಲ್ಪಿಡಿಪಿಡಿದಿರ್ದುದಂಗ ಜನ ಕಯ್ಪಿಡಿಯಂ ಪಿಡಿಯಂ ಮತಂಗಜಂ (ಪುಷ್ಪಕ. ೩-೮೦). ೨. ಬಲಿಷ್ಠ ವಾದ ಮುಷ್ಟಿ; ಬಿಗಿಮುಷ್ಟಿ : ಕಡೆಯೊಳ್ ಪ್ರತಾಪಾಗ್ರ್ಯಂ ದಮನನ ಬಲ್ವಿಡಿ ಗುರ್ದಿಂಗೆ ನಿದ್ದೆವೋದಂ (ರಾಮಾಶ್ವ. ೯೨-೯).

[ಬಲ್$_3$ (<ಬಲ್ಲಿತು$_1$) + ಪಿಡಿ$_2$]

ಬಲ್ವಿಣಲ್$_1$ (ನಾ). ಹೇರಳವಾಗಿದ್ದು ತೆಕ್ಕೆಗೊಂಡ ಕೇಶರಾಶಿ : ಗುಡಜಲಮನಕ್ಕೆ ಮೇಣ್ ಮಾರುಡಫಲದೊಳ್ ತಿರುಳನಕ್ಕೆ ತಲೆವಾಸಲೊಡಂ ಜಡಗೊಂಡ ತಲೆಯ ಬಲ್ವಿಣಲೊಡೆದು ಮೃದುಸ್ನಿಗ್ಧಸರಳತರಮಾಗಿರ್ಕುಂ (ಕೋಕಶಾಕ. ೯-೫೩). [ಬಲ್$_3$ (<ಬಲ್ಲಿತು$_1$) + ಪಿಣಲ್$_2$]

ಬಲ್ವಿಣಲ್$_2$ (ನಾ). (ಕೆಲವು ಪ್ರಾಣಿಗಳ ಬೆನ್ನಿನ ಮೇಲಿರುವ) ದೊಡ್ಡ ದಾದ ಡುಬ್ಬ.—ಎತ್ತರವಾದ ಭಾಗ : ಮಾನವಲೋಕಾಧೀಶ್ವರನಾ ಹೇರಾನೆಯ ಬಲ್ವಿಣಲೇಱಿ ಸಾನುರಾಗದಿ ಬಂದನಾ ಪುಂಡರೀಕಿಣಿಗಾ ನರಪತಿಬಲಸಹಿತ (ಕ್ರಿಪಾಂ. ೧೫-೨೯). [ಬಲ್$_2$ (<ಬಲ್ಲಿತು$_1$) + ಪಿಣಲ್$_2$]

ಬಲ್ವಿವೇಕ (ನಾ). ಉತ್ತಮವಾದ ತಿಳಿವಳಿಕೆ.— ಯುಕ್ತಾಯುಕ್ತ ವಿಜ್ಞಾನ : ಗೆಲ್ವೆವೆಂಬುದು ಬಲ್ವೆವಂಕಸನ್ನದ್ಧದಿ ನಿಲ್ಲುದುತ್ತಮವೆಂದೆ ಪೊಡೆಯ ಬಲ್ವಿವೇಕಕೆ ಗುರು ನೀನೇನ ಕಂಡುದ ಚೆಲ್ವೆಂದು ಪೊಗಳುತೆ ಯಿದ್ದರು (ಕರ. ೩೦-೩೦). [ಬಲ್$_2$ (<ಬಲ್ಲಿತು$_1$) + ವಿವೇಕ]

ಬಲ್ವಿಸಿಲ್, ಬಲುಬಿಸಿಲು, ಬಲ್ಪಿಸಿಲ್, ಬಲ್ಬಿಸಿಲು (ನಾ). ಬಹಳವಾದ ಬಿಸಿಲು : ಅತಿಯಾದ ಸೂರ್ಯನ ತಾಪ : ಬಂದ ಬಸಂತ ಬನಕೆ ಬಲ್ವಿಸಿಲೊಳ್ (ಜಯಾಶಾ. ೦೦-೩೯). **ಬಲುಬಿಸಿಲು** : ಬಲುಬಿಸಿಲು ಬಾಯ್ಗಾಂತ ಚಂದ್ರಿಕೆವೆಳಗೆನಲು ಘನರೋಷವಹ್ನಿಯ ಬೆಳಗು ಬೀತುದು ಚಕಿತ ಚಂದ್ರಮನಾದ ದೂರ್ವಾಸ (ಶಾಸ್ತ್ರಾಕ. ೦೬-೨೮) : ಗಾಳಿ ಘರ್ಮಾಂಬು ಪೊತ್ತುದು ಭೂಮಿ ಬಿಕ್ಕನೆ ಸೀಳಿತು ಕೂರ್ಮನ ಬೆನ್ನು ಹೋಳಗೆವಡದುದು ಬಲುಬಿಸಿಲೊಂದು ಚಡಾಳಿಕೆ ಜಗದ ಭಂಗಿಸಿತು (ಪೋಪಕ. ೦೯-೯೬). **ಬಲ್ಪಿಸಿಲ್** : ಇದು ಮಱೆಯಿದು ಚಳಿ ಬಲ್ಪಿಸಿಲಿದು ಕಟ್ಟಲೆಯೊಂದು ನೋಡದೋಹಿಲನಗರಂ ಮುದದಿಂ ತಂದಾ ಸೌರಾಷ್ಟ್ರದ ಸೋಮೇಶಂಗೆ ನಿಚ್ಚಮರ್ಚಿಸುತಿರ್ದಂ (ಶಾದ್ಯಟ. ೦೦-೯೩). **ಬಲ್ಪಿಸಿಲು** : ಕ್ಷೋಣಿಯೊಳೀ ಬಲ್ಪಿಸಿಲಿಂದೆ ಕಡುಗಾದ ಬಾಣಲಿಯೆಣ್ಣೆಯೊಳಬುದಿ ಹೂಣಸಿ ಕುದಿಗೊಂಡು ಮರಳ್ದುದು ವನಚರಶ್ರೇಣಿ ಬೆಂಡೆದ್ದು ತೇಲಿದುವು (ಪೋಪಕ. ೦೯-೯೫).

[ಬಲ್$_2$ (< ಬಲ್ಲಿತು$_1$) + ಬಿಸಿಲ್]

ಬಲ್ವಿಸುಪು (ನಾ). ಬಹಳವಾದ ಶಾಖ ; ಅತಿಯಾದ ತಾಪ.—ಉಷ್ಣ : ಒಡಲಾಂತ ತನುವೀತನ ನೆವದಿಂದೆಂದು ಕಡುಗಳಲ್ದಾಕಾಶಮೆಂಬ ಮೃಡ ನುರಿಗಣ್ಣ ತೆಱೆದವೊಲು ನಡುನೇಸಱಡಸಿದಂದು ಬಲ್ವಿ[ಪಾಠಾಂ. ಲ್ಪಿ]ಸುಪ (ಕ್ರಿಪಾಂ. ೯-೫೯). [ಬಲ್$_2$ (< ಬಲ್ಲಿತು$_1$) +ಬಿಸುಪು (<ಬಿಸುರ್ಪು)]

ಬಲ್ವೆಣ (ನಾ). ದೊಡ್ಡದಾದ ಹೆಣ ; ಭಾರಿ ಶವ : ಪೆಣದಿನಿಗಳ ತಂಡಂ ಬಲ್ವೆಣಗಳನಱಸುತ್ತುಮಲ್ಲಿ ಬರೆವರೆ (ಗದಾಯು. ೯-೦೫) ; ಬಲ್ವೆಣನುರ್ಚಿ ಕೋಡೊಳಿರೆ ನೆತ್ತರುರೋಮಣಿಯಂ ನೆಲಕ್ಕೆ ಬಾನಲ್ವರಿವನ್ನೆಗಂ ಪ್ರಹತ ದಿಂದಿಱೆದೆತ್ತಿದೊಡೆ (ಶಾಸ್ತ್ರಾಕ. ೩೬) ; ಆನೆಯೊಂದನ್ ತಱ್ಪಿ, ಭೀಮ ಸೇನಂಗೆತ್ತು . . . ಎಲ್ಲಿ ತೋಱೆಂದದರ ಕಾಲ್ಮುಱಿದು, ಬಲ್ವೆಣನನೊದೆ ದೊದೆದು, ಬಿಸುಟನ್ (ಅಶ್ವತ್ಥಾ. ೯-೫೩).

[ಬಲ್$_2$ (< ಬಲ್ಲಿತು$_1$) + ಪೆಣ]

ಬಲ್ವೆಣಸು (ನಾ). ಅಧಿಕವಾದ ಪ್ರಯತ್ನ: ತಾಂ ಮೊಗಂಗುಡೆ ಪದವೆತ್ತು ಚುಂಬಿಸಿ ಭಯಂಗೆಯ ಬಲ್ವಿ[ಪಾಠಾಂ. ಲ್ಪೆ]ಣಸಂ ಪೊದಱ್ಪು ನಾಣ್ಗೆಡೆ ನೆರೆದೂಢೆಯ ಪೃಥಮಸಂಗಮದೊಳ್ ಕುವರಂ ಮರುಳ್ಚಿದಂ (ಸಂಪ್ರತಿ. ೬-೮೨). [ಬಲ್$_2$ (< ಬಲ್ಲಿತು$_1$) + ಪೆಣಸು$_2$]

ಬಲ್ವೆಱಿ^{3} (ನಾ). ಪೂರ್ಣಚಂದ್ರ : ಬರುತಿದೆ ಬಲ್ವೆಱಿ ಬಂಡುಣಿ ವಸುಳೆಯ ತಿರುವಿಲ್ಗಾಱನ ಪಳವಿಗೆಯೆಳಮೊನೆರಡಂ ಕೊಂಡೆಲೆ ಸಖಿಯೆನ ಗುಳ್ಳವವ ಹೂಡೆನೂಂಕೆನುತ ತರುಣವಿಕಲವಚನಮನಾಡಿದಳ್ ವಿರಹ ವೇದನೆಯೊಳ್ (ಜಯಾಶಾ. ೪-೩೯). [ಬಲ್$_2$ (< ಬಲ್ಲಿತು$_1$) + ಪೆಱೆ^{3}]

ಬಲ್ವೇಟ (ನಾ). ಅತಿಯಾದ ಶೃಂಗಾರ ; ಬಹಳವಾದ ಪ್ರಣಯ : ಒಡನುಟ್ಟ ಪಟ್ಟೆಯ ಚಲ್ಲಣ ಮೋಹನವಡೆದ ಪದಕ ವೈಣಿಯ ಕಡು ಸೊಬಗಿನ ಬಲ್ವೇಟದ ಸುಕುಮಾರ ನಡೆದನು ಸುಖರ ಮೇಳದಲಿ (ಪಂಪಪಿ. ೦೦-೩೦). [ಬಲ್$_2$ (< ಬಲ್ಲಿತು$_1$) + ಬೇಟ$_1$ (<ಬೇಂಟ)]

ಬಲ್ವೊನಲ್, ಬಲುವೊನಲು (ನಾ). ಹೆಚ್ಚಾದ ಹೊನಲು ; ಅತಿ ಶಯವಾದ ಪ್ರವಾಹ : ಪುರಮಂ ಪೊಕ್ಕು ಪುರಂಧ್ರಿನಿಕಾಯದ ತರಳ ಕಟಾಕ್ಷರುಚಿಯ ಬಲ್ವೊನಲೊಳಗುರುಮುದದಿಂ ತೇಂಕಾಡಿ ನಡೆದು ರಾಜಾಗಾರಮನೆಯ್ದಿ (ಜಯಾಶಾ. ೯-೦೯). **ಬಲುವೊನಲು** : ಪ್ರಣದ ಬಲುವೊನಲೊಳಗೆ ತಲೆಗಳು ಕುಣಿದವರ್ಜುನಸಂಬಿನುಱುಬೆಗೆ ಹೊನ ದಾವಣಿ ಹಾಸಿದವು ಸೂಸಿದವು ದೊಂಡೆಗಳು (ಶಾಸ್ತ್ರಾಕ್ರೀ. ೦೦-೩).

[ಬಲ್$_2$ (<ಬಲ್ಲಿತು$_1$) + ಪೊನಲ್]

ಬಲ್ವೊಯಿಲ್ (ನಾ). ಬಲವಾದ ಹೊಡೆತ ; ಜೋರಾದ ಏಟು : ಬಲ್ಸುರಿಗಳ ಸಂಭ್ರಮಕ್ಕಂ ಬಿಱುವಳೆಯ ಬಲ್ವೊಯಿಲ್ಗಂ ಪೆರ್ಮಳೆಯ

ಧಾರೆಗಂ . . . ಬೆಚ್ಚದೆ ಬೆದಱದೆ ಬಲಂಗೆಡದೆ . . . ಮಹಾಪಟಪೃಕ್ಷದ ಕೆಳಗೆ ವಿಪುಳತಪದಿಂದಪರ್ಣಂಯೊಪ್ಪುತ್ತುಮಿರೆಯಿರೆ (ಗಿಂಳ. ೯–೩೪ ಪ).
[ಬಲ್$_2$ (< ಬಲ್ಲಿತು$_1$) + ಪೊಯಿಲ್]

ಬಲ್ಸರ, ಬಲುಚರ, ಬಲ್ಚರ (ನಾ). ಗಟ್ಟಿಯಾದ ಸ್ವರ; ಜೋರಾದ ಧ್ವನಿ: ಕಡೆಯಬೇಡಿನ್ನೆನ್ನನೆಂದು ಬೊಮ್ಮಗೆ ಮೊಱೆಯಿಡುವ ಬಲ್ಸರ ವಿದೇಬಂತೆ ಕಡು ಸೊಗಯಿಪ ಘುಳುಘುಳುರವದಿಂದಾ ಕಡಲು ಕಣ್ಗೆಸೆದಿರುತಿಹುದು (ಕುಂಪಾಸಂಂ. ೨–೩). **ಬಲುಚರ** : ಆಗಸದ ಬಲುಚರಂ ಮೃತ್ಸಿರವ ಪತ್ರಿಸೆನಲಂತುಗೆಯ್ಯಲು ಬಂದುದಸುವು (ಶಾಶಕ. ೩–೨೦). **ಬಲ್ಚರ** : ಬಲ್ಚರದಿನವಳ ಸದ್ಗುಣಗಳಂ ಕೊಂಡಾಡಿ . . . ಶೋಕಂ ದಳೆದರಾ ಸಖಿಯರು (ಶಾಶಕ. ೬–೦೦೬). [ಬಲ್$_2$ (< ಬಲ್ಲಿತು$_1$) + ಸರ$_2$]

ಬಲ್ಸರಿ, ಬಲುಸರಿ (ನಾ). ಭಾರಿಯಾದ ಮಳೆ; ಅತಿಯಾದ ವೃಷ್ಟಿ: ಅತ್ತ ಕಱೆಂವಿನ ಬಲ್ಸರಿಯಿಂದಮಾ ದಿಶಾವಳಿ ಮಸುಳ್ದಿಂತು ನೀಳ್ದಪುದು (ಪಂಪಭಾ. ೦೦–೦೦); ಅಮರ್ದಿನ ಬಲ್ಸರಿ ಸುರಿದಪುದೆನಲವ ನೀಶ್ವರಂಗಿರುಳ್ ತನ್ನ ಕಂಡ ಕನಸಂ ಪೇಳ್ದಿಳ್ (ಪಂಂಪಾಪು. ೩–೧೦); ತುಂಬೆಯೊಳಿಂಬುಗೊಂಡ ತುಂಬುನೀರಂ ಪೂತ್ಕರಿಸಿದಪುವೆಂಬಂತಿರೆ ಎಡೆವಿಡದೆ ಬಲ್ಸರಿ ಸುರಿಯೆ ಮಱೆಗಾಲಂ ಚೆಲ್ವಾಯ್ತು (ಶಾಪಾಶ್ವ. ೩–೦೨). **ಬಲುಸರಿ** : ಮಿಗೆ ಹೊಳೆಹೊಳೆವ ಮಹಿಪರ ಮಕುಟರತ್ನದ ಬಳ್ಳಿ ಮಿಂಚುಗಳ ಬಲುಸರಿಯ ನಾರಾಚಜಾಳದ ಮಳೆಯ ನೆತ್ತರ ಹೊನಲುಗಳ ರೌಕುಳದ ಮಳೆಗಾಲದಲಿ ಹೆಚ್ಚಿತು ಭಟರ ಶೌರ್ಯಶಿಖಿ (ಕುಪ್ಪಾಕ್ರೋ. ೦೭–೨೯). [ಬಲ್$_2$ (< ಬಲ್ಲಿತು$_1$) + ಸರಿ$_1$]

ಬಲ್ಸಾಸಿ (ನಾ). ಮಹಾ ಸಾಹಸಿ; ಅತ್ಯಂತ ಶೌರ್ಯಶಾಲಿ: ಇವರ್ಗೆ ಬಾಲಮೊಂದಿರ್ಕುಂ ಪೆರ್ವಡೆವೆರಸು ಬಂದಿರ್ಪರ್ ಬಲ್ಸಾಸಿಗಳ್ ಕಣಾ! (ಅದ್ಭುತ. ೪೨–೨೩). [ಬಲ್$_2$ (< ಬಲ್ಲಿತು$_1$) + ಸಾಸಿ]

ಬಲ್ಸಿಡಿಲ್ (ನಾ). ಬಲವಾದ ಸಿಡಿಲು : ಬಲ್ಸಿಡಿಲೆಂತಂತಿರೆ ಗರ್ಜಿಸುತ್ತಡರ್ದದ ತತ್ಕುಂಭಮಂ ಸೀಳ್ದು (ಕಪಕಾ. ೩–೬೦).
[ಬಲ್$_2$ (< ಬಲ್ಲಿತು$_1$) + ಸಿಡಿಲ್$_2$]

ಬಲ್ಸಿರ (ನಾ). ದೊಡ್ಡದಾದ ತಲೆ : ತುರಗಗಳನು ಬೀಳಲಿಱಿದು ರಾವುತರ ಬಲ್ಸಿರಗಳ ಮೆಟ್ಟಿ ಮೂಗರಿದ ದ ರಗಲಿಗಳ ಕಂಡು ಭಾವು ಶಾಬಾಸೆಂದು ತುರುಕರು ಕೊಂಡಾಡಿದರು (ಕಂಪಪಾ. ೦೬–೦೦೩)
[ಬಲ್$_2$ (< ಬಲ್ಲಿತು$_1$) + ಸಿರ$_2$]

ಬಲ್ಸುಕ (ನಾ). ಬಹಳವಾದ ಸುಖ ; ಅತಿಶಯವಾದ ನೆಮ್ಮದಿ : ಸಕಲ ವಜೀರರು ಸಹಿತ ಚಕಿತ ಪರಾಕ್ರಮಿ ರಣಧೂಳಿಪಾನ ಬಲ್ಸುಕದೊಳಿರ್ದನು (ಕಂಪಪಾ. ೦೬–೩೩). [ಬಲ್$_2$(<ಬಲ್ಲಿತು$_1$) + ಸುಕ$_1$ (<ಸೊಗ)]

ಬಲ್ಸೂಱೆ, ಬಲುಸೂಱೆ (ನಾ). ಬಹಳವಾದ ಸೂರೆ ; ಅಧಿಕವಾದ ಕೊಳ್ಳೆ, – ಲೂಟಿ : "ದಟದುಟಂ (ದಟವುಟಂ) – ಬಲ್ಸೂಱೆ" (ಕಪುಪ. ಪರಿ. ೦) ; ನೆರೆದ ಮಹಾನರನಾಯಕಸಭೆಯೊಳಗರೆಬರ ಬುದ್ಧಿಯನೆಳಕುಳಿಯಾಡುತ್ತರೆಬರಹಂಕಾರಮನೋವದೆ ಬಲ್ಸೂಱೆಗೊಳುತ (ಪಯಕಾ. ೩–೩೦). **ಬಲುಸೂಱೆ** : ಮೇರೆಯಿಲ್ಲದ ತೈಲ ಘೃತ ಬಳಿಕೂರ ಹರದರ ಹಾರುವರ ಬೇಹಾರಿಗಳ ಬಲುಸೂಱೆಯಾದುದು ಕೇರಿಕೇರಿಯಲಿ (ಕೊಂರಾಂ. ೩–೬–೯).
[ಬಲ್$_2$ (<ಬಲ್ಲಿತು$_1$) + ಸೂಱೆ]

ಬಲ್ಸೆರೆ (ನಾ). ದೊಡ್ಡದಾದ ನರ, – ರಕ್ತನಾಳ : ಬತ್ತಿದ ಬಡ ಪೊಜವಾಱ ಬಲ್ಸೆರೆ ಸುತ್ತಿ ಹತ್ತಿದ ಹಿಳ್ಳೆಗಾಲುಗಳ ಕೊತ್ತಿಗಣ್ಗಳ ಕೋತಿ ಮುಸುಡಿನ . . . ನಳ್ಳಿಮೂಗಿನ ಭೂತವೆ ನಡೆತಪ್ಪಂತೆ ಮನೆಗೆ ಬರಲು (ಪೇಂಪಾಸಂ. ೭–೦೦೪). [ಬಲ್$_2$ (<ಬಲ್ಲಿತು$_1$) + ಸೆರ್ಪ$_1$]

ಬಲ್ಸೆಱೆ, ಬಲುಸೆಱೆ (ನಾ). ಬಲವಾದ ಸೆರೆ ; ಬಿಗಿಯಾದ ಬಂಧನ : ಆಂ ಮೆಯ್ಮಱೆದಿರ್ದನಪ್ಪೊಡಿವಮಂ ತಮ್ಮಯ್ಯನಂ ಪೋಲ್ತು ಬಲ್ಸೆಱೆಯಿಂ ಪಿಂಗಿದುದೊಂದು ಗಂಧಗಜದಂತಾದಾಗಳೇಗೆಯ್ದೆನೋ (ಸುಕುಪಾ. ೦೦–೪೨). **ಬಲುಸೆಱೆ** : ಕಡುಹುವಗ್ಗದ ಕಾಲಕೇಯರ ಗಡಣವಡಗಿತು ಸುರರ ಬಲುಸೆಱೆ ಬಿಡಿಸಿದೆವು ಬಳಿಕಾಯ್ತು ಕಡುಸುಮ್ಮಾನ ಸುರಕುಲಕೆ (ಕುಪ್ಪಾಕ್ರೋ. ೦೨–೩೩). [ಬಲ್$_2$ (<ಬಲ್ಲಿತು$_1$) + ಸೆಱೆ$_2$]

ಬಲ್ಸೆಱೆಗೆಯ್ (ಕ್ರಿ). ೧. ಬಲವಾಗಿ ಬಂಧಿಸು, – ಸೆರೆಹಿಡಿ. ೨. (ಆಲಂ) ಬಲವಾಗಿ ಸೆಳೆ ; ಆಕರ್ಷಿಸು : ನಗೆಗಣ್ ಸೂಸೆ ವಿಳಾಸಮಂ . . . ಸ್ಮರಮಂತ್ರದೇವತೆಯವೋಲ್ ಬಾಹಾಲತಾಂದೋಳನಂ ಬಗೆಯಂ ಬಲ್ಸೆಱೆಗೆಯ್ಯೆ ಬಾಲೆ ಮೆಱೆದಳ್ ಲೀಲಾಪದನ್ಯಾಸಮಂ (ಪಂಂಪಾಮಾ. ೩–೧೨); ನಗವಾಯಿಂ . . . ಘಣ್ಟೆಯಿಂ ಬಗೆಯಂ ಬಲ್ಸೆಱೆಗೆಯ್ವ ಪುತ್ತಳಿಗಳಿಂ ರಂಗಸ್ಥಳೀಸ್ತಬ್ಧಮಾವಗಮೊಪ್ಪುತ್ತಿರೆ ರಂಜಿಕು ಹರಿಹರಶ್ರೀ ದೇವತಾಮಂದಿರದ (ಎಳ. XI, ಶಾಪಶಾ. ೨೩–೭೭ ; 1224). [ಬಲ್ಸೆಱೆ + ಕೆಯ್$_1$]

ಬಲ್ಸೆಱೆವಿಡಿ (ಕ್ರಿ). (ಆಲಂ) ಆಕರ್ಷಿಸು : ಎಳನೀರಿಂ ನಾಳಿಕೇರಂ ಬಳಯಿಸೆ ಕದಳೀಷಂಡಮಂ ತುಂಬಿಯಂ ಪೂಗೊಳದಿಂ ಪೂಗದ್ರುಮಂ ಬಲ್ಸೆಱೆವಿಡಿಯೆ . . . ಸೊಗಯಿಕುಂ ತತ್ಪುರೋದ್ಯಾನಷಂಡಂ (ಮುಗ್ಧಿಪು. ೨–೩೪) ; ಕಾಲ್ಸವನಿಸೆ ಪೊಸ ಬಂಡಿನ ಮೆಲ್ಸರಿಯಂ ಸುರಿಯುವಿರ್ಪ ಸಂಪಗೆವೂಗಳ್ ಬಲ್ಸೆಱೆವಿಡಿವಂತಿರ್ದುವು ಮೆಲ್ಸರದಿಂ ಪಾಡುತಿರ್ಪ ಪೆಣ್ದುಂಬಿಗಳಂ (ಕಬ್ಬಿಗಾ. ೬೦). [ಬಲ್ಸೆಱೆ + ಪಿಡಿ$_1$]

ಬವ$_1$ (ನಾ). ಹುಟ್ಟು ; ಜನ್ಮ : 'ಬವಿಸಿರಂ' ಪರಾ. [<ಸಂ. ಭವ]

ಬವ$_2$ (ನಾ). [ಜ್ಯೋತಿ] ಪ್ರಸಿದ್ಧವಾದ ಏಳು ಬಗೆಯ ಚರಕರಣಗಳಲ್ಲಿ ಮೊದಲನೆಯದು ; ಪ "ಚರ ಮತ್ತು ಸ್ಥಿರ ಎಂದು ಕರಣ ಎರಡು ವಿಧ. ಬವ ಬಾಲವ ಕೌಲವ ತೈತುಲೆ ಗರಜೆ ವಣಜೆ ಭದ್ರೆ ಈ ಏಳು ಚರಕರಣಗಳು. ಶುಕ್ಲಪಕ್ಷದ ಪ್ರಥಮಾತಿಥಿಯ ಉತ್ತರಾರ್ಧದಿಂದ ಕೃಷ್ಣಪಕ್ಷದ ಚತುರ್ದಶಿತಿಥಿಯ ಪೂರ್ವಾರ್ಧ ಪೂರ್ತಿ ಈ ಚರಕರಣಗಳು ಕ್ರಮವಾಗಿ ಒಂದು ತಿಂಗಳಿನಲ್ಲಿ ಎಂಟು ಸಲ ಬರುತ್ತವೆ" (ಜಾತಕಿ. ಪಂ. ೦. ೩೬೯ ಅಡಿ): ಬವ ಬಾಲವ ಕೌಲವ ತೈತುಲ ಗರಜ ವಣಜೆ ಭದ್ರಗಳೆಂಬವೇಳು ಚರಕರಣಂಗಳುಂ (ಪಿವೇಳ. ೨೬೨). [ಸಂ.]

ಬವಕರಣ (ನಾ). = ಬವ$_2$: ಭ[ಬ]ವಕರಣಕ್ಕೆ ತಿರಂ ೨೬ಗಳಿಗೆ ಮೇಲೆ ತ್ಯಾಜ್ಯ (ಭಾಸ್ಕರ. ೭೦–೪). [ಸಂ.]

ಬವಕೆ 'ಬಯಕೆ$_2$' ನೋ.

ಬವಣೆ 'ಬವಣೆ' ನೋ.

ಬವಣಿಗ (ನಾ). (ಸಂಸಾರದ) ಬವಣೆಗೆ ಒಳಗಾದವನು ; ಕಷ್ಟಕ್ಕೆ ಸಿಲುಕಿದವನು ; ತೊಂದರೆಗೆ ಗುರಿಯಾದವನು : ಮಾನಸರೆಂತಂತು ಬಸಿಱೊಳ್ ಪುಟ್ಟಿಯುಂ, ಬವಣಿಗರೆಂತಂತು ಕಾಡಂ ತೊಱಲ್ದುಂ . . . ಬಾಟ್ಟ ರಾಮಂ ದೇವನೆ ! (ರಾಪಾಶ್ವ. ೦೦೦೧೨). [ಬವಣೆ +—ಇಗ]

ಬವಣೆಗೆ, ಬವಳಿಕೆ (ನಾ). ೧. ಸಂತ್ಯಾಟ ; ಸಂಚಾರ : ಇಂತಪ್ಪ ನೆಗೞ್ತೆಯ ಪೊಗೞ್ತೆಯುಮಂ ಪ್ರತ್ಯಕ್ಷಂ ಮಾಡುವೆನೆಂದೊಂದು ದಿವಸಂ . . . ವಂದಿಮಾಗಧರ್ಕಳ್ ಪೊಗೞ್ ಪೊಱಲ ಜೇಂಕಾರದ ವಾದ್ಯಂಗಳ್ ನೆಗೞ್ ಬವಣೆಗೆ ಪೊಱಮಟ್ಟು (ಪಂಪಾರಿ. ೦–೩೯ ಪ) ; ಬ[ಪಾಣಂ ಭ]ವಣೆಗೆಯ ಬಂದಡವಿಯಲಿ ಪಾಂಡವರು ನವೆದರು (ಕುಪ್ಪಾಪ. ೧೦–೪೦). ೨. ಸುತ್ತುವುದು ; ಪ್ರದಕ್ಷಿಣೆ : ಬವಣೆಗೆ ಜಿನೇಂದ್ರಪೂಜೋತ್ಸವದೊಳ ಮೊಡ್ಡೋಲಗಂ ಜಿನಾಸ್ಥಾನದೊಳಾ ದಿವಿಜೇಂದ್ರಂಗಾದುದು ಗೀತಿ ವಾದ್ಯ ನೃತ್ಯಪ್ರಸಂಗಮಜಿತನ ಕೆಲದೊಳ್ (ಅಜಪು. ೩–೬೩). ೩. ಕಷ್ಟ ; ತೊಂದರೆ ; ಪರಿಶ್ರಮ : ಬವಣೆಗೆಯ ಕಳೆಯಲಾಱದೆಯಾಯಾಸಂ ಬಟ್ಟವಂ ದೈವಮೆಂತಪ್ಪನು (ಶಾಸೋಪು. ೯–೦೦೨); ಈಸು ಪರಿಯಲಿ ಪಟ್ಟ ಬವಣೆಗೆಯನು ನೀ ಮರದು ಮೈಸಿರಿಗೆ ಬೆರತೆಯಲ್ಲೋ ಆತ್ಮ (ಕಕೃಪ. ೨೯–೩). ೪. ತೊಳಲಾಟ ; ಹೊಯ್ದಾಟ : ಅವನಿಪತಿ ದುಗುಡದಲಿ

ಮೋಱೆಯಲವುಚಿದನು ಕರತಳವ ಚಿತ್ತದ ಬವಣೆಗೆಯ ಭಾರಣೆಯ ಕಡು ಶೋಕದಲಿ ಮೈಮಱೆದ (ಕುಸ್ಮಾಪ್ರೋ. ೦-೪). ಬವಳಿಕೆ : ೫. ತಲೆ ತಿರುಗುವಿಕೆ ; ತಲೆಸುತ್ತು ; ಬವಳಿ ಬರುವುದು : ಆ ಜನರ ಹೆಸರಿಲ್ಲದ ಮುಖ . . . ಶಾಂತರೀತಿಯಿಂದ ಕೆಲಸ ತೆಗೆದುಕೊಳ್ಳುತ್ತಿರುವ ಆ ಹಳ್ಳಿಯ ಗೌಡನ ಧೈರ್ಯಪೂರ್ವಕವಾದ ಓಡಾಟ, ಇಷ್ಟು ನೋಡಿದ ಕಣ್ಣುಗಳು ಬವಳಿಕೆಯ ಬೇನೆಗೀಡಾಗಬೇಕು ! (ಮರುನ. ೧೯) ; ಕಾರಗತ್ತಲೆಯೊ ಬವಳಿಕೆಯೋ ಮನ ತುಂಬಿ ತೋರದಲೆ ಹೋಯ್ತು ಕಣ್ಮುಂದೆ (ಕಪ್ಪಣಾ. ೨೬೬). [< ಸಂ. ಭ್ರಮಣಿಕಾ]

ಬವಣೆಗೊಳ್ 'ಬವಣೆಗೊಳು' ನೋ.

ಬವಣೆಗೊಳಿಸು (ಕ್ರಿ). ಸುತ್ತಿಸು ; ತಿರುಗಿಸು : ಬಱಿವಿಡಿದು ತಱುಬಿ ದೊಡಮವಳ ಕೈಗೆ ಸಿಲ್ಕದಂಗಳದೊಳ್ ಬಳಬಳಸಿ ಬವಣೆಗೊಳಿಸಿ ಬಳಲಿಸುವ ಬಲ್ಪಂ . . . ನಿರವಿಸಿ ರಾಯಂ (ಜಕಪಿ. ೪-೬೯).

[ಬವಣೆಗೊಳ್ (< ಬವಣೆಗೊಳು) + — ಇಸ್ಸು$_3$]

ಬವಣೆಗೊಳು 'ಬವಣೆಗೊಳು' ನೋ.

ಬವಣೆಗೊಳ್ಳು 'ಬವಣೆಗೊಳು' ನೋ.

ಬವಣೆಬಡು 'ಬವಣೆಬಡು' ನೋ.

ಬವಣೆಯೇಱು (ಕ್ರಿ). ತಲೆಸುತ್ತು ಉಂಟಾಗು ; ತಲೆತಿರುಗು ; ಕಣ್ಣು ಕತ್ತಲಿಡು : ಖಂಡಪರಶುಗಳವಿಲ್ಲದ ತಾಂಡವದಿಂ ಬವಣೆಯೆಱೆಯೊಡನ ದನಿಟಿಪಲ್ ಪಿಂಡುವ ನಿಂಬೆಯ ಪಣ್ ವಿಧುಮಂಡಲಮೆಳಜೊನ್ನಮೆಱೆವ ನೀರ್ವೊನಲೆನಿಕುಂ (ಜಕಪಿ. ೬-೨೩).

[ಬವಣೆ (< ಬವಣೆ) + ಏಱು$_1$ (< ಏಱ್$_1$)]

ಬವಣೆ, ಬವಣಿ, ಬವಳಿ (ನಾ). ೧. ಸುತ್ತಾಟ ; ಸಂಚಾರ ; ಅಲೆತ : ಗವಿಯೊಳೆಳೆಯೆಲರುಂಬ ಭುಜಗಸಂದೋಹಕಂದವಿರಳದ ನಿಶ್ವಾಸ ಮರುತನ ಬಲಾಹಾರ ಬವಣೆಯಿಂದಮಜೀರ್ಣಮಾಗಿ ವಮನಂಗೆಯ್ಯೆ (ವೆಂಕಾರಾ. ೫-೦-೧೨) ; ಪ್ರಚಂಡಮಾರುತನ ಬವಣೆಗೆ ಸಮೀಪದ ಊರಿನ ಮನೆ ಹೆಂಚುಗಳು ಗಾಳಿಗೆದ್ದು ಹಾರಾಡಿದವು (ಸಿಡಿಲು. ೬೩). ೨. ಕೋಟಲೆ ; ಕಷ್ಟ ; ತೊಂದರೆ : ಸ್ವಸ್ತಿ ಶ್ರೀಮನ್ಮಹಾ ಪ್ರಚಂಡದಂಡನಾಯಕ ಬಾಹತ್ತರನಿಯೋಗಾಧಿಪತಿ ಪರಮವಿಶ್ವಾಸಿ ಬಿಲವೊಳಡಣ್ಣಾಯಕರ ಬವಣೆಯಲು ಕೊಮಾರನ ಬೀಡಿನ ಕೊಟ್ಟಿಗೆಯ ಮಾರೆಯನಾಯಕನ ಮಗ ದೇಪಮಯನಾಯಕನು ಬಯನಾಡ ಬವರದಲು ಕಾದಿ ಹಲರಂ ಕೊಂದು ಸುರಲೋಕಕ್ಕೆ ಸಂದ (ಮೈಆರಿ. ೦೯೩೬. ೪೦-೬; 1223); ಒರ್ವ ಪಾರ್ವಂ . . . ಭಿಕ್ಷಾನ್ನಕ್ಕೆ ಪಡಿಯಾಗಿ ಕೈಯೋಗರಮಂ ತಾನೆ ತಂದೀವಂ ಇಂತಾಗೆ ಬಡಪಾರ್ವನ ಕೌಶಿಕನ ಬವಣೆ ನಿಲ್ತುದು (ಅಮೃತ. ೦೬-೨೨); ಅವಳು ಸೀತೆ ಅನುಭವಿಸಿದ ಬವಣೆಗಳನ್ನು ತನ್ನವೆಂದು ಭಾವಿಸಿ ಕಣ್ಣೀರು ಸುರಿಸಿದಳು (ಹಾಹುತ್ತ. ೬೩). ಬವಣೆ : ೧. "ಬವಣೆ(ಳಿ)—ಭ್ರಮಣೆ = ಸುತ್ತಾಟ ; ತಲೆತಿರುಕ" (ತದ್ಭಕೋ. ೨೯); ನಳಿನಭವ ನಳಿನಾಕ್ಷರಿರ್ವರುಂ ಕೈಗಳಂ ಸಲೆ ತೋಱು ತೋಱುತೆ ಕುಲಾಲಚಕ್ರದ ಬವಣೆಯೊಲುಮೊಂದುಯಾಮಮಾತ್ರಂ ತಿರುಗಿದರೆ ದಿಶಾಮಂಡಲ ತಿರುಗುತಿರಲು (ಪಂಪು. ೦೬-೩೬); ಬೇಸಱದೆ ಬಾಂದಳದೊಳಾವಗಂ ನಡೆವ ಬ[ಪಾಶಾಂ. ಭ]ವಣೆ ಸಾಕೆಂದು ನಿದ್ರೆಗೈದನೊ ಸೋಮನೆನೆ . . . ಮಲಗಿಹ ಚಂದ್ರಹಾಸನಂ ಕಂಡು ವಿಸ್ಮಿತೆಯಾದಳು (ಸೈಮಿಭಾ. ೩೦-೨೦) ; ಅಂಬರದ ಬವಣೆ ಪ್ರತಿದಿನ ಬಿಡದು . . . ಎಂದು ರವಿ ವೇಗದಿಂ ಸಂಭ್ರಮದೊಳ್ಳೆದಿ ಪಶ್ಚಿಮಗಿರಿಯ ಸಾರುವನ ದೆಂಬಂತೆ ತವಕದಿಂ ಮೆಲ್ಲಮೆಲ್ಲನೆ ನಭವನಿಳಿದನಾ ಗಿರಿಯ ತಟಕೆ (ವೆಂಕಾರಾ. ೫-೨-೦೬). ೨. ಏನು ಮತ್ಸ್ಯಕುಮಾರ ಬ[ಪಾಶಾಂ. ಭ]ವಣೆಯಿದೇನು ನಿನಗೆ (ಕುಸ್ಮಾಪಿ. ೬-೬೫); ಕಂಡುದಿಲ್ಲವೆ ನಿನ್ನ ಗಂಡನಾಟವ ನಮ್ಮ ಭಂಡು ಮಾಡುವ ಬವಣೆಯನು (ಭರತ. ೯. ೬೫) ; ಸಾಕಿದಱ ಬವಣೆಯೇತಕೆ ನಮಗೆ ಕಾದುವೆಯೊ ತುರಗಮಂ ಬಿಟ್ಟಪೆಯೊ ಪೇಳೆಂದನು (ಸೈಮಿಭಾ. ೨೩-೩೨); ಈ ಎಂಟು ವರ್ಷ ಗಂಗವ್ವ ಸೋಸಿದ ಬವಣೆ ಅವಳಿಗೇ ಗೊತ್ತು (ಗಂಪೂಯಿ. ೦). ೩. ತಲೆ ಸುತ್ತುವಿಕೆ ; ಕಣ್ಣು ಕತ್ತಲಿಡುವಿಕೆ ; ತಲೆ ತಿರುಗುವಿಕೆ : ಬವಣೆ ತಲೆಬೇನೆಗಳ್ ಸ್ವೇದವೃದ್ಧಿ ಮುಖರೋಗಮಕ್ಷಿರೋಗಂ ಕಫವಾತ ವಿಕಾರಂ ಪಿಂಗುಗುವಾದವೆ ನಸ್ಯಂಗೆಯ್ಯೆ ಶುಂಠಿಯಂ ಬೆಲ್ಲಮುಮಂ (ಶೋಕೋಪ. ೯-೦೫); ಅವನಿಪನ . . . ತಲೆಯ ಪಿತ್ತದ ಬವಣೆ [ಪಾಶಾಂ. ಭವಳಿ, ಬವಳಿ] ಬಲಿದುದು (ತೊರರಾ. ೨-೩-೧೨). ಬವಳಿ : ೩. ಮನಂ ಮಿಗುವತಿಸಾರಂ ಬವಳಿಯುಮೊಗೆದಿರ್ಕುಂ ವಾತಪಿತ್ತಜನಿತಜ್ವರದೊಳ್ (ಕಲ್ಯಾಕಾ. III. ೦೦) ; ಬೇನೆಯಿಂದ ಕ್ಷೀಣಕಾಯನಾಗಿದ್ದ ಅವನಿಗೆ ಆ ದುಃಖಾವೇಗವು ಸಹನವಾಗದೆ, ಸ್ವಲ್ಪ ವೇಳೆ ಬವಳಿಯೂ ಬಂತು (ಸ್ಕೂಲಿಮಿ. ೦೫೫).

ಬವಣೆ ಬರು, ಬವಳಿ ಬರು = ೧. ತಿರುಗು ; ಸುತ್ತು ; ಅಲೆ : ಭವವೆಂಬ ಬಲುಬಿಂಜದೊಳು ಬಹುದಿನದಿಂ ಬವಣೆ ಬಪ್ಪ ಬೇಸಱನು ತವಿಸುವೆನೆಂದು (ಪ್ರಭಂಜ. ೧-೦೭); ಇರುಳು ಹಗಲುಮೆನ್ನದೆಯಳ್ತಿಕಾಱರು ವೆರಸಿ ಬವಣೆ ಬರುತಿರಲು ಪುರವನಿತೆಯರೆಲ್ಲ ಕೈಗೆಲಸವ ಬಿಟ್ಟು ಪರಿದು ಬಂದವನ ನೋಡುವರು (ವೇಮಿಸಂ. ೬-೬೦). ೨. ಕಣ್ಣು ಕತ್ತಲಿಡು ; ಮೂರ್ಛೆಯುಂಟಾಗು : ಧೃತರಾಷ್ಟ್ರನು . . . ಎರಡು ಮಾತನಾಡಿದ್ದರಿಂದಲೇ ಆಯಾಸವಾಗಿ ಬವಳಿ ಬಂದಿತು (ವಸಭಾ. ೩೬೯) ; ನಾಲ್ಕು ಹೆಜ್ಜೆ ನಡೆದು ಹೋಗುವುದರೊಳಗೆ ಬವಳಿ ಬಂದಂತಾಗಿ ಕುಳಿತುಬಿಟ್ಟನಂತೆ (ಅಶೋಲೀ. ೬೮). [<ಸಂ. ಭ್ರಮಣ, ಭ್ರಮಣೀ]

ಬವಣೆಗೊಳು, ಬವಣೆಗೊಳ್, ಬವಣೆಗೊಳು, ಬವಣೆಗೊಳ್ಳು, ಬವಣೆಗೊಳ್ಳು, ಬವಳಿಗೊಳ್ಳು (ಕ್ರಿ). ೧. ಕಷ್ಟಪಡು; ತೊಂದರೆಗೊಳಗಾಗು : ಅವಳು ಆ ಕಟ್ಟುಗ್ರಶಿಕ್ಷೆಯಲಿ ಬವಣೆಗೊಳುತಿಹಳಯ್ಯೊ ಗೋಳಿಟ್ಟು! (ವಡಿಪಾ. I. ೪೫೪); ನಿಂತಿಹೆನು ನಾ ನಿನ್ನ ಬಾಗಿಲೆಡೆ ನಮ್ರನಾಗಿ ನುಡಿ ತುಯ್ದು ಬವಣೆಗೊಳೆ ಭಾವಗಳ ಭಾರದಿಂ ತಲೆಯ ಬಾಗಿ (ಮಲೆರೇ. ೯-೦೦). ಬವಣೆಗೊಳ್ : ೧. ಧರ್ಮರಾಯಾ ಏನು ಕಾರಣಮಾಗಿ ನೀನೀ ರೀತಿಯಲ್ಲಿ ವೇದಮನೋದಿ ವೇದಾರ್ಥಮಂ ತಿಳಿಯದಿರ್ಪ ಜಡಮತಿಯಾದ ಪಾರ್ವನಂತೆ ಬಱಿದೆ ಬವಣೆಗೊಂಡು ಪಂಬಲಿಸುತಿರ್ಪೆ (ಶಾರಶಾಂ. ೦೦-೪೪); ಗಾಂಪನಿಗೆ ಬಡತನದೊಳು ಬಲು ಬವಣೆಗೊಂಬವನಿಗೆ ಕೊಡಲಾಗದು ಕುವರಿಯನು (ಹದಿಬ. ೫-೦೮). ೩. ಸುತ್ತುತಿರುಗು ; ಚಲಿಸು : ಕಡುಗಿ ಖಾತಿಯೊಳೀತನೊಂದು ಸರಳಂ ಪೂಡಿ ಬಿಡಲೂರ್ಮಿಳುವಲ್ಲಭನ ತೇರೆರಡು ಗಳಿಗೆ ಬಿಡದೆ ತಿರುಗಿತು ಬವಣೆಗೊಂಡು ರಥವಾಜಿಗಳ್ಪೊಡೆ ಗೆಡೆದುವು (ಸೈಮಿಭಾ. ೨೦-೫೩); ನೇಸರ್ವೆಱೆಗಳಿರಾ ನೀಮೀಸು ದಿನಂ ಬವಣೆಗೊಂಡಿರಿಂ ಪದುಳಮಿರಿಂ (ಅಪ್ರತಿ. ೪೦-೦೭). ಬವಣೆಗೊಳು : ೨. ತವಕವಾಡುವ ತತ್ತರಿಪ ತಲ್ಲಣಿಸುವ ಬವಣೆಗೊಳುವ ಬಂಬಲಿಡುವ ಕವಿವ ಕಾತರಿಪ ಕರಗುವ ಕಾಲೂಱುವ ಸವಿನೋಟಗಳ ಸಮನಿಪುದು (ಜಕಪಿ. ೬-೦೫೭ ಸಾಂಗತ್ಯ). ಬವಣೆಗೊಳ್ಳು : ೨. ರುದ್ರಂಗೇಳ್ದಂದುಪದ್ರವ ಪರಿಹರಿಸೆ ಕಾಮೋದ್ರೇಕದಿಂ ಹಾಸ್ಯವೆತ್ತು ತದ್ರತಿಯಂ ಬವಣೆಗೊಳ್ಳುತ್ತಿರೆ ಕಾಯಿದದ್ರಿಧರನೆ ರಂಗ ಶರಣು (ಶತಸಾಂ. ೬-೩೪). ಬವಣೆಗೊಳ್ಳು : ೧. ಹಗಲಿನಂದಿನ ರೂಪು ತಂದಿತು ಬಗೆಗೆ ಸಾವಿನ ಚಿಂತೆಗಳನು ನಗೆಯನಣಕಿಸಿ ಸೊಗವ ಜರೆಯುತ ಬವಣೆಗೊಳ್ಳುವ ಭಾವವ (ಮಾಂದಳಿ. ೨೪-೨೦). ಬವಳಿಗೊಳ್ಳು : ೧. ದಿಕ್ಕುಗೇಡಿಯ ಹಾಗೆ ಏನೊಂದು ತೋಚದೆ ಬವಳಿಗೊಂಡಳು ನಲ್ಲೆ ಬರಿದೆ (ಇಂಪಾಪ. ೫೨-೪೭). ೩. ಮೈಮೇಲಿನ ಎಚ್ಚರ ತಪ್ಪು ; ಅರಿವು ತಪ್ಪು; ಮೂರ್ಛೆಹೋಗು : ಆ ವೇಳೆಗೆ ತಲೆಯ ಮೇಲೆ ಬಿದ್ದ ಪೆಟ್ಟಿನಿಂದ

ಬವಳಿಗೊಂಡಿದ್ದ ಇನ್ನೊಬ್ಬ ರಾಜಪುತ್ರನು ಮೆಲ್ಲಗೆ ಚೇತರಿಸಿಕೊಂಡು . . . ಕೆಳಗೆ ಬಿದ್ದಿದ್ದ ತನ್ನ ಜೊತೆಗಾರನಿಗೆ ಸಹಾಯ ಮಾಡಲು ಹೋದನು (ಶಾಸಂ. ೦). [ಬವಣೆ + ಕೊಳು (< ಕೊಳ್$_1$)]

ಬವಣೆಗೊಳ್ಳು 'ಬವಣೆಗೊಳು' ನೋ.

ಬವಣೆಪಡು 'ಬವಣೆಬಡು' ನೋ.

ಬವಣೆಬಡು, ಬವಣೆಬಡು, ಬವಣೆಪಡು (ಕ್ರಿ). ಕಷ್ಟಪಡು ; ತೊಂದರೆಪಡು : ದನುಜಮನುಜರಿಗೆ ಭವಜಲಧಿಯೊಳಗಾಳುತೇಳುತ ಬವಣೆ [ಪಾಠಾಂ. ಣೆ]ಬಡುತಿಹರೀಶ್ವರನ ಕೃಪೆ ಸವನಿಸುವ ಪರಿಯಂತ ಗತಿಯನು ಕಾಣರವರೆಂದ (ಅಮ್ಮಕ. ೨-೪೭). **ಬವಣೆಬಡು** : ನಾವೆಲ್ಲರೂ ಇಷ್ಟೆಲ್ಲ ಬವಣೆಬಡುವುದು ಏತಕ್ಕಾಗಿ ? ನಮ್ಮ ದಿವ್ಯಧ್ಯೇಯವಾದ ಪ್ರೇಮವು ಮಾಗಲೆಂದು (ಸಮಸ್ಯೇ. ೩೬೬). **ಬವಣೆಪಡು** : ಆ ಸ್ತಂಭವು, ಬವಣೆಪಡುತ್ತಿರುವ ಇವರ ಕಡೆಗೆ ಬೆನ್ನುಮಾಡಿ ರಾಕ್ಷಸನಂತೆ ನಿಂತಿತ್ತು (ಮಹಾಶ್ಯಾ. ೦೪೪); ಮುಖ್ಯೋಪಾಧ್ಯಾಯರಾದ ಮಾಧವರಾಯರು ಜೀವನದಲ್ಲಿ ಸಾಕಷ್ಟು ಬವಣೆಪಟ್ಟವರಾದುದರಿಂದ ಅವರ ಒಲವು ಬಡಪಾಯಿಗಳ ಮೇಲೆ ವಿಶೇಷವಾಗಿತ್ತು (ಕುಸುಗಾ. ೭೩). [ಬವಣೆ + ಪಡು$_1$]

ಬವನ (ನಾ). ವಾಂತಿ; ವಮನ : ಸುತ್ತುಂ ಪಿಶುನಂ ಪೆಱರ್ಗಾಪತ್ತಂ ಮಾಡದಿರನೆಂದು ಮಱುಗಿದಪುದು ಮಚ್ಚಿತ್ತಂ ಮೃತಮಾಷಮುಖಂ ಮತ್ತೆನಿಸದೆ ಬವನಮೆಯ್ದಿಪವೊಲುಂಬವನಂ (ಲೀಲಾವ. ೦-೩೭). [< ಸಂ. ವಮನ]

ಬವನಾಶಿ, ಬವನಾಸಿ, ಬೋನಾಶಿ, ಬೋನಾಸಿ, ಭವನಾಸಿ (ನಾ). (ಸಾಮಾನ್ಯವಾಗಿ ದಾಸರು ಉಪಯೋಗಿಸುವ) ಒಂದು ಬಗೆಯ ಭಿಕ್ಷಾಪಾತ್ರೆ : ಮಗ್ಗುಲಲ್ಲಿ ಅವಳಿಂದ ಹೊರಲಾರದಷ್ಟು ದೊಡ್ಡದಾದ ಜೋಳಿಗೆ ಬಿದ್ದಿದೆ . . . ಹಿತ್ತಾಳಿಯ ಒಂದು ಬವನಾಶಿಯಿದೆ (ಆಳಿ. ೬೫). **ಬವನಾಸಿ** : ಬ್ರಾಹ್ಮಣನು ಬವನಾಸಿಯನ್ನು ಹಿಡಿದು ಜೀವಿಸುವವನು (ಭೀಷ್ಮಕ. ೦೬೦); ದಾಸಯ್ಯನು ಒಂದು ತುತ್ತೂರಿ ಊದಿ, ಬವನಾಸಿ ತುಂಬಾ ಭತ್ತ ತುಂಬಿಕೊಂಡು ಹೋಗುತ್ತಿದ್ದನು (ಹುಸ್ಸಿಹ. ೬೩). **ಬೋನಾಶಿ** : "ಬವನಾಸಿ (ಬೋನಾಶಿ) ಭಿಕ್ಷಾಪಾತ್ರೆ, ಸಾರು ಬಡಿಸುವ ಮೂತಿಯುಳ್ಳ ಪಾತ್ರೆ" (ಸಿರಿಕೋ. ೩೭೨). **ಬೋನಾಸಿ** : ಹಿಂದೆ ದಾಸರಿಗೆ ಬೋನಾಸಿ ತುಂಬಾ ಭಿಕ್ಷೆ ಹಾಕುತ್ತಿದ್ದರು (ರೂಢಿ). **ಭವನಾಶಿ** : ತಂಬೂರಿ, ಭವನಾಶಿಗಳು ವಂಶೀಕರ ಪೂಜ್ಯ ಪದಾರ್ಥಗಳಾಗಿವೆ (ಕಪಿ. ೩೬೦); ದಾಸಯ್ಯನ ಜಾಗಟೆ, ಭವನಾಶಿ . . . ಅವರು ನಡೆಸುವ ಆಚರಣೆಯ ಸಾಧನ ಸಲಕರಣೆಗಳು (ಕಪಿಕೋ. I. ೦೯.) [<ಬೋನ + ?]

ಬವನಾಸಿ 'ಬವನಾಶಿ' ನೋ.

ಬವರ$_1$ (ನಾ). ೧. ಯುದ್ಧ ; ಕಾಳಗ ; ಸಂಗ್ರಾಮ : "ಬವರಮೆನಲ್ ಸಂಗ್ರಾಮಂ" (ಸತುಪಿ. ೧೭೦); ಕಾವೆನೀ ಬವರದೊಳೀಗಳಾನಿವನನೆಂದು ನೃಪಂ ದಯೆಯಿಂದಮ್ಮಾ ಯುಯುತ್ಸುವನೊಡಗೊಂಡು ಬಂದಂ (ಪಂಪಭಾ. ೦೦-೬೩); ಬವರ ಮುಱಿದುದು ವಿಜಯಲಕ್ಷ್ಮಿಯ ಸವತಿ ಸೇರಿತು ಸುಭಟರಿಗೆ ಬಳಿಕವನಿಪತಿಯೇ ತಱುಬಿ ನಿಂದನು ಭಾನುನಂದನನ (ಕುವ್ಯಾಳ. ೦೦-೪೦); ಕಕ್ಕಸದಿಂದೊಂದು ಬವರ ಬಂದಡಸಿತು ಒಕ್ಕಣಿಸಲು ಬಂದೆ ನಿನಗೆ (ಮೋಹತ. ೦೦-೭). ೨. ಜಗಳ; ಕಲಹ; ವಾದ : ಧರ್ಮಾಧಿಕರಣರ್ ನಡೆಯಿಂ ನಿಮ್ಮಿರ್ವರ ಬವರಮಂ ತಿರ್ದುವಮೆಂದು ವಟವೃಕ್ಷದ ಸಮೀಪಕ್ಕೆ ವಂದು (ಪಂಕತಂ. ೦೭೬-೨); ಬಲ್ಲಿದರೊಡನೆ ಬವರವಾದರೆ ಗೆಲಲುಂಟು ಸೋಲಲುಂಟು (ಬಸಪ. ೦೩೦); ಆ ನಾರಿ ಅವಿರಳಕೋಪವ ತಾಳಿ ಮರ್ಮವ ಪೇಳಿ ಬವರವನೆಸಗಿದಳಾಗ (ಕಂಪಪಿ. ೬-೦೬೯). ೩. ಸ್ಪರ್ಧೆ; ಹುರುಡು; ಪೈಪೋಟಿ: ಅಂತೂ ನಾಗೋಲಿಯ ದಿವಸದ ಹಾಡಿನ ಬವರಕ್ಕೆ ಅನ್ನಪೂರ್ಣೆ ಹಾಜರಾದಳು (ಸಾವಿಸ. ೩೩). ೪. ಕಷ್ಟ ; ತೊಂದರೆ ; ಸಂಕಟ : ಎನಗೆ ಬಂದ ಬವರಕೇಕೆ ನಿಮಗೆ ಬಂಧನ (ಮಹಾದೇ. ೨. ೦೩೩-೩೪೨); ಬವರದಲಿ ಸಿಲುಕಿದುದ ಹವಣರಿದು ತೋಳ ನೆವನವರಿಯುತ ಹೇಳ್ದ ನಿಲ್ಲೆಲವೊ ! ಖೂಳ ! ಅವಸರದಿ ನಿನ್ನಪ್ಪನೆಂಬುದನೆ ಮರೆದೆ (ಕಪಿ. ೦೩-೭).

ಬವರದಲ್ಲಣ—ಯುದ್ಧದಲ್ಲಿ ಶತ್ರುವಿಗೆ ತಲ್ಲಣವನ್ನುಂಟುಮಾಡುವವನು ; ಒಂದು ಬಿರುದು : ಬಾವನ್ನವೀರ ಬವರದಲ್ಲಣ ಮಾಯಿದೇವ ರಾವುತನೆಯ್ದಿದನು (ಕುರಾಸಾಂ. ೦೦-೬೨). [ದೇ.ಪ ತೆಲು. ಬವರ]

ಬವರ$_2$, ಬಮರ (ನಾ). ಕಪ್ಪುಬಣ್ಣದ ದೊಡ್ಡ ದುಂಬಿ ; ಭ್ರಮರ : "ಅಲರ್ವಕ್ಕಿ, ಬಂಡುಣಿ, ಪಱಮೆ, ಮಲ್ಲಱ, ಮೆಳಂಬಂ, ಬವರಂ, ಮುಯ್ಯೆರಡಡಿ—ಈ ೭ ಭ್ರಮರಂ" (ಕಕಸಾ. ೫೫-೦೯೬) ; ಪರಿವೃತರೇಫಲೋಪಕ್ಕೆ — ಕ್ರೇಣಿ — ಕೇಣಿ . . . . ಭ್ರಮರ — ಬವರ (ಕಮಪ. ೨೬೦ ಪ್ರಯೋ) ; ಸುರವರದುಂದುಭಿಧ್ವನಿ ವಿರಾಜಿಸೆ ಬಾಂದಳದೊಳ್ ಮರಲ್ ಸರಿ ಪ್ರರುಚಿರಮಾಗಿ ಸೂಸೆ ಬವರಂಗಳ ಝೇಂಕೃತಿಯತ್ತಲುಣ್ಮೆರಲ್ . . . ಪರತರ ಸುಂದರೇಶ ಘನತೇಜದೊಳೊಂದಿದನೂರ್ಜಿತಪ್ರಭಂ (ಹಾಲಾಸ್ಯ. ೩-೭-೪೫). **ಬಮರ** : "ಬಮರಂ ಭ್ರಮರ ಮಕ್ಕುಂ" (ಕಕರ. ೭೩). [<ಸಂ. ಭ್ರಮರ]

ಬವರಂಗೆಯ್ (ಕ್ರಿ). ಯುದ್ಧ ಮಾಡು ; ಕಾಳಗ ಮಾಡು ; ಹೋರಾಡು : ಬವರಂಗೆಯ್ವಮ[ಪಾಠಾಂ. ಯ್ವುದ]ಮೋಘಮೆಂಬ ಬಗೆಯಿಂ ನೀಮೆಲ್ಲಮಾದಂ ರಣೋತ್ಸವದಿಂ ನಿನ್ನೆಯೆ ಪೋದ ಗೋಗ್ರಹಣದಂದೇನಾದಿರ್ (ಪಂಪಭಾ. ೯-೫೬) ; ನೀವಿರ್ವರುಮಿಲ್ಲಿರ್ದು ಬವರಂಗೆಯಲ್ವೇಡ ತಕ್ಕರ ಸಮೀಪಕ್ಕೆ ಪೋಗಿ ವಿಚಾರಂಗೆಯ್ದು ಅವರ್ ಪೇಟ್ದಂತೆ ಕೇಳಿಮೆನೆ (ಪಂಕತಂ. ೨೨೬-೬) ; ಮಾಹಿಷ್ಮತೀವಲ್ಲಭಂ ಬವರಂಗೆಯ್ದು ದಶಾನನಂಗೆ ರಣದೊಳ್ ಸೋಲ್ತೇವದಿಂ . . . ಜಿನದೀಕ್ಷೆಗೊಂಡು (ಪಂರಾಮಾ. ೨-೭೩). [ಬವರ$_1$ + ಕೆಯ್$_1$]

ಬವರಂಗೊಳ್ (ಕ್ರಿ). = ಬವರಂಗೆಯ್ : ರಾಯಮನ್ನೆಯರ್ ವಿಧವಱಿಯಲ್ಕೆ ಸಾಲದವರುಂ ಬವರಂಗೊಳಲಿರ್ದಪರ್ (ಪಕಪಿ. ೩-೪೦). [ಬವರ$_1$ + ಕೊಳ್$_1$]

ಬವರಗಂಡ (ನಾ). ಕಾಳಗದ ಕಲಿ ; ರಣವೀರ : ಚಿಕ್ಕಕಾಟಯ್ಯ ಸರ್ಗ್ಗತನಾಗೆ ಬಳನೆತಲಾಗ ಜಯಿಸಿ ಸತ್ತ ಮುನವೆಳೆ ಕಳಿಹಿ ಬವರಗಣ್ಡ ತಟಱ ಮಕಯ್ಯ ಕಲ್ಲ ನಿಲ್ಲಿಸಿದ ಮಯ್ದುನ ಪಲ್ಲಯ್ಯ (ಎಳ. V, ಮುಂಜಾ. ೩೦-೩ ; 1034). [ಬವರ$_1$ + ಗಂಡ$_1$]

ಬವರಗಲಿ (ನಾ). ರಣವೀರ ; ಶೂರ : ಬವರಗಲಿ ನಾಟ್ಯಮಹಿತಂಡಿ ವೆರಸು ದಿವ್ಯಾನಕಂಗಳುಲಿವುತ್ತಿರೆ ದಿವ್ಯವಿಮಾನಂ ಬೆಳಗುತ್ತುತ್ಸವದಿಂದಂ ರಜತಗಿರಿಗೆ ಬಂಡತ್ತಾಗಳ್ (ತ್ರಿಪುವಿ. ೩೦-೦೪) ; ಬವರಗಲಿ ಬಂದೆಯ ಸಮೀರನ ಕುವರ ಮುಖ್ಯಪ್ರಾಣ ಬಾರೈ ಭುವನಪಾವನಚರಿತ ಬಾರೆಂದಪ್ಪಿದನು ರಾಮ (ಕಾಲಸೇ. ೩೨). [ಬವರ$_1$ + ಕಲಿ$_2$]

ಬವರಗಾರ (ನಾ). ಯುದ್ಧ ಮಾಡುವವನು ; ಸೈನಿಕ; ಯೋಧ : ಬವರಗಾರರ ದೇವನೆನಬಹುದು . . . ಎಂದು ನೃಪ ಪೊಗಳೆ (ಕಪಾಗಾ. ೦೯). [ಬವರ$_1$ + — ಗಾರ (< _ಕಾಱ)]

ಬವರಮುಖ (ನಾ). ಯುದ್ಧರಂಗ ; ರಣಮುಖ : ಅಂಬುಜಾನನೆ ದನುಜೆ ಕಾಡಿದೆಡೆ ನೋಡಿತ್ತಲಂಬಿಂ ಸಹೋದರಂ ಮಾನಗಳೆದಿರ್ಪ ತಾಣಂ ಬವರಮುಖದಿ ಖಳರಟ್ಟಿದ ನೆಲೆ (ತ್ರೀರಾಮ. ೩-೪೦). [ಬವರ$_1$ + ಮುಖ]

ಬವರಿ, ಬಂಗರ$_2$, ಬಗರಿ, ಬಮರಿ, ಬುಗರಿ, ಬುಗುರಿ, ಬೊಗರಿ, ಬೊಗರೆ, ಬೊಹರಿ, ಭಗರಿ (ನಾ). ೧. ಕಪ್ಪು ಬಣ್ಣದ ದುಂಬಿ : "ಬವರಿಯೆನಲ್ ಭ್ರಮರಿ" (ಭಾರಪಿ. ೪೨) ; ತಣ್ಣೀರೊಳಟ್ಟಿದ ತನಿ

ಗೆಂಡಕ್ಕೆ ದೊರೆವರ್ಪ ಬವರಿಗಳ ಗಾವರಕ್ಕೆಟ್ಟತ್ತು ಗೂಡನುಟಿದು . . . ನಲಿವ ಪಕ್ಕಿಗಳ್ಗೆ (ರಾಮಾಶ್ವ. ೦೦೦-೦೩). ೨. ತಿರುಗುವಿಕೆ ; ಸುತ್ತುವಿಕೆ ; ಭ್ರಮಣ : 'ಬವರಿಗೊಳು' ಪರಾ. ೩. (ಯುದ್ಧದಲ್ಲಿ) ಹೊಡೆತವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವರ್ತುಲಾಕಾರವಾಗಿ ತಿರುಗುವ ಒಂದು ಬಗೆಯ ಪಟ್ಟು,—ವರಸೆ : "ಬವರಿ ಕರ್ತರಿಯಕ್ಕು" (ಮಂಗರಾ. ೬೩-೨೬) ; ಅಡಸಿ ಹೊಯ್ದೊಡೆ ಬವರಿಯಲಿ ಟೊಣದೌಕಿದೊಡೆ ಮಡಮುಱಿಯದೊಳಹೊಕ್ಕು ಸವಡಿಮಂದರದಂತೆ ಕೀಚಕ ಪವನಸುತರೊಪ್ಪಿದರು (ಕುಸ್ಕಾಪ. ೩-೬೯) ; ಚಾರಿಯನುಚಾರಿಗಳ ಪಯಗತಿಯೋರೆಪೋರೆಯ ಬವರಿಗಳ ಸಂಚಾರಣೆಯಲಬ್ಬರಿಸಿ ತಿವಿದನು ರಾಘವೇಶ್ವರನ (ಕೂರಂಗ. ೬-೨೫-೪೮). ೪. ದಾರವನ್ನು ಸುತ್ತಿ ಆಡಿಸುವ ಗುಂಡನೆಯ ಆಟಿಕೆ ; ಭ್ರಮರಕ : ಕುಂಭಾಜನ ಚಕ್ರದಂತೆ ಮಕ್ಕಳಿಟ್ಟ ಬವರಿಯಂತೆ[ಪಾಠಾಂ. ಹರಿಯಟ್ಟಿಯ ನೂಲಿನಂತೆ]ಱಾಟಣದ ಮೊಗವೆಯಂತೆ . . . ಅಳಿಪುವಂತಕ್ಕುಮೆಂದು ಕಳಕಳಿಸಿ ನಕ್ಕು (ಕರ್ಮಾಮ್ಯ. ೯-೨೩). ೫. ವರ್ತುಲಾಕಾರವಾದ ಒಂದು ಬಗೆಯ ಕರ್ಣಾಭರಣ : ಉಡಿಸುತ್ತಿನ ದಿವ್ಯಾಂಬರ ಶಿರದೊಳು ಕಡಗ ಕುಂಡಲ ಯಜ್ಞಸೂತ್ರ ಎಡನರೆ ಬವರಿ ಮುತ್ತಿನ ಚಿಂತಿ ಕುಲ್ಲಾವಿ ಬೆಡಗುಗಾಣಿಸುತಿರಲು (ಹಾಗಳು. ೨೯-೫). ೬. ಕೆನ್ನೆಯ ಮೇಲಿನ ಗುಂಗುರುಕೂದಲು; ಪನ್ನೆ: ವಿಟವೇಷದಿಂ ಬಂದಂ . . . ಮೊಳೆವ ತುಪ್ಪುಳುಮೀಸೆ ತೊಳಪ ಬ[ಪಾಠಾಂ. ಭ]ವರಿಗಳಿಂದ ಬೆಳಗುತೆಣ್ಣೆಸೆಗಳಿಗೆ ಪರಿವ ಕಣ್ಬೆಳಗಿಂದೆ (ಶಿವಸಂ. ೦೬೯-೪೩) ; ಮುಗುಳ್ನಗೆ ಮೇಳವಿಸುವ ಮುಖಪ್ರಸನ್ನತೆ ನೀಳ ಬವರಿಯ ಗಡ್ಡವೊಪ್ಪುತ್ತಿರೆ ಜಗತ್ತ್ರಯವ ಪಾಲಿಸುವ ಮುನಿವಲ್ಲಭಂ . . . ಇಂತೆಂದಂ (ಬಸಪು. ೩-೨೬) ; ಉಬ್ಬಿ ಬೆಳೆದು ಬಾಗಿತಿಲ್ಲ ರೇಖೆಗೆ ಬಂದು ಹುಬ್ಬಿನಂತೆಸೆವೆಳೆ ಮೀಸೆ ಹುಬ್ಬು ಮೀಸೆಯ ನೋಡಿ ನಲಿವ ಬವರಿ ಕಣ್ಣ ಹಬ ವ ಮಾಳ್ಪ ನೆಲ್ಲರಿಗೆ (ಕರಸ. ೧-೪೦) ; ಕೆಲವಾತಗಳ ಮುಖಗಳಿಗೆ ಗಡ್ಡ ಬವರಿ ಮೀಸೆ ಜುಲ್ಪಿ ಹಣೆಯ ಉಂಗುರುಗುರುಳು — ಇವುಗಳಲ್ಲಿ ಒಂದೋ ಕೆಲವೋ ಅನಿತುವೋ ಇದ್ದರೆಯೇ ಸಲಕ್ಷಣಸೌನ್ದರ್ಯ (ಮಂಕ್ರಶ. ೯೦-೨). ೭. ಕುದುರೆಯ ನಡಗೆಯ ಗತಿಗಳಲ್ಲಿ ಒಂದು ಬಗೆ ; ಮಂಡಲಾಕಾರವಾದ ನಡಗೆ : ಭ[ಬ]ವರಿ ಭಂಜನೆ ಅಳಿಲುಳಿತ ವರ ತರಹಮೆಂಬ ನವೀನಗತಿಗಳೊಳು ತನ್ನ ಮನಮೆ ಹಯದ ತನುಗತಿಗಳಾದಂತೆ ವಾಹಕವಿನ್ನಾಣಂಗಳಂ ತೋಱುತ (ಪುಷ್ಯಾಸ್ತ್ರ. ೬-೫೦ ಪ). ೮. (?) : × × × ಬಾಣಗಾವುಣ್ಡನ ಕೆಱೆಯ ಬವರಿಯಂ ಬಾಳುವಲಿ(?)ರಾಜಂ ಅರುವತ್ತೈದು ಊರ್ಗಂ (ಮ್ಯಾಅಂ. ೦೯೨೫.೯೨-೪; ?). ಬಂಗರ್ಯ : ೪. ಇಷ್ಟೆಲ್ಲ ಮಾತು ನಡೆಯುತ್ತಿರುವಲ್ಲಿ ಚೋಮನ ಬುದ್ಧಿ ಬಂಗರದಂತೆ 'ಓಡುತ್ತಿತ್ತು (ಸಳಂಗ. ೩೪೮). ಬಗರಿ : ೪. ನಾ ಬಗರಿ ಆಡಿ ಬಂದು ತಿಂತೇನಿ (ಮೇಲಿಮ. ೨೯). ಬಮರಿ : ೧. ಕುಳಿರ್ವೆಟ್ಟಿಱೆಯನ ಕುವರಿಯನೈಮೊಗನೊಲವೆನಿಪಂಬುಜಕೆಱಗುವ ಬಮರಿಯಂ (ಕಪ. II. ೦೦೯ ಕಾಮಾಸ್ತೋತ್ರಪಟ್ಟಿಕೆ). ಬುಗರಿ : ೪. ನಿನ್ನ ಎದಿ ಮ್ಯಾಲ ಕುಚಾಗಳು ಬುಗರಿ ನಿಂತವು ನಿಗರಿ (ಮುಡ್ಡುಹ. ೪೩). ೯. ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಎಲಚಿ : ಬುಗರಿ ಈಯ ಶಬರಿ ಕಾಯ ರಾಮನಿಲ್ಲಿ ಬಂದನೆ? (ಗಿಳಿಮಿ. ೮೦-೦೩). ೧೦. ಭ್ರಮರಕದ ಆಕಾರದ ಕಾಯಿಗಳನ್ನು ಬಿಡುವ ಒಂದು ಬಗೆಯ ಮರ : ಲಾಲ್‌ಬಾಗಿನಲ್ಲಿ ಬುಗರಿ ಮರಗಳು ಬೇಕಾದಷ್ಟಿವೆ (ಕೂಲಿ). ೧೧. ಒಂದು ಬಗೆಯ ಗಿಡ: "ಆಸ್ಕಂಧಮನಲಾ ಬುಗ[ಪಾಠಾಂ. ಗು]ರಿ" (ಮಂಗರಾ. ೩೫-೦೫). ಬುಗುರಿ : ೪. ತಿಗುರಿಯುಂ ಬುಗುರಿಯುಂ ಜಾತಿಯುಂ ಭೀತಿಯುಂ ಆಗೆ ಪರಿವಾಗಳ್ (ಕರ್ಮಾಮ್ಯ. ೬-೦೦೪); ಯಾದವ ನೀ ಬಾ . . . ಚೆಂಡು ಬುಗುರಿಯನಾಡುತ ಸಣ್ಣ ಸಣ್ಣ ಗೋವಳರೊಡಗೂಡಿ (ಪುರಂದ. ೦-೦೩-೨); ಸೂರ್ಯನಿಗೆ ಒಂದು ಬಾರಿ ಬುಗುರಿಯಂತೆ ಒಂದು ಸುತ್ತು ಸುತ್ತುವುದಕ್ಕೆ ೨೫ ದಿವಸಗಳು ಬೇಕಾಗುವುದು (ಅಕಾಶ. ೦೦). ೧೦. ಹೂವರಿಸಿ, ಜೋಗಿಯರಳೆ, ಬುಗುರಿ (ಮ್ಯಾಜಿಗಿ. ೬೯-೦೫೨೦). ೧೧. ಮೇಲಿನ 'ಬುಗರಿ' ಉಲ್ಲೇಖದ 'ಮಂಗರಾ. ೩೫-೧೫' ಪ್ರಯೋಗದ ಪಾಠಾಂತರವನ್ನು ನೋಡಿ. ಬೊಗರಿ : ೪. ಮದನನ ಕೈಯೊಳಗಾಡುವ ಪೊಸ ಚಿನ್ನದ ಬೊಗರಿಯನಿನಿವಿರಿದುಂ ನಗುವಂದದೆ ಹೊಗರೆಸೆವ ಮುಗುಳ್ಮೊಲೆಯೊಪ್ಪಿದುವಾ ನೃಪನಂದನೆಗೆ (ಜಯಕಾ. ೦೩-೦೨); ಕೇತಕಿಯೆಸಳ ಜಱೆವ ಬೆಳ್ಳುಗುರಿಂದ ಶಾತಕುಂಭದ ಬೊಗರಿಗಳ ರೀತಿಯ ಬಲ್ಮೊಲೆಗಳ ಮೇಲೆ ನಿನ್ನಯ ನೂತನನಖರೇಖೆ ದೋಱೊ (ಕಂಪಿ. ೯-೦೯೩); ಕಲ್ಪನೆಯ ಬೊಗರಿ ತುದಿಬೆರಳ ತಿಗರಿ ಓ ಆಡುತ್ತಿತ್ತು ನಿದ್ದೆ (ಅರಳು. ೪೦೦-೪). ೯. ಶಬರಿ ಇತ್ತೆಳಚಿಯಂ ರಾಮನಿದೊ ಮೆಲ್ಲಲಿಲ್ಲಾ ? ನಮ್ಮ ತಿನಿಸೊ ಶಬರಿಯ ಬೊಗರಿ ! (ಹೆಪ್ಪರ. ೩೯-೨೨೫). ಬೊಗರೆ : ೪. ಗಂಡುಮಕ್ಕಳು ಚೆಂಡು, ಗುಂಡು, ಬೊಗರೆ ಮೊದಲಾದ ಗುರಿ ಕಲಿಸುವ ಆಟಗಳನ್ನು ಆಡುತ್ತಾರೆ (ಕನ್ನಾ. ೪೬); ಅತ್ತ ಚೆಂಡಿದು ಇತ್ತ ಬೊಗರೆಯು (ಗಂ. ೪೯-೨); ಭೂಮಿಯು ಒಂದೇ ನಿಟ್ಟಿಗೆ ಒರಗಿದ ಬೊಗರೆಯಂತೆ ಡೊಂಕಾಗಿ ನಿಂತು ತಿರುಗುತ್ತದೆ (ಮ್ಯೋತಿಶ್ಯಾ. ೫೬). ಬೊಹರಿ: ೪. ಸೆಂಡು ಜಿಗಿಹಲ್ಲೆ ಬೊಹರಿಗಳಾಟದಲ್ಲಿ ಮನಗೊಂಡಾಡಿ ಬೆಳೆದು ಜವ್ವನನಾಗಿ ಬಾಳ್ತೆಯಿಲ್ಲದೆ ಕೆಟ್ಟು ಹೋದೆಯಲ್ಲಾ (ಸಮ್ಯಾಳಿ. ೦೦-೯). ಭಗರಿ : ೪. ಕುಣಿಯೋಣು ಬಾರ . . . ಚಿಗರ್ಯಾಗಿ ತಿಗರ್ಯಾಗಿ ನಿದ್ದಿಯ ಭಗರ್ಯಾಗಿ ಗಾಳೀಗು ಹಗುರಾಗಿ (ಗಂ. ೦೨೪-೬). ೧೨. (ಆಲಂ) ವೃಷಣ : ಪುಣ್ಯಕ್ಕೆ ಹೆಣ್ಣುಮಕ್ಕಳಿಗೆ ಗೋವಿಂದಭಟ್ಟನ ಭಗರಿಯ ಅರ್ಥವಾಗಲಿಲ್ಲ (ದೀಪಹ. II. ೩೬೬). 'ಭ್ರಮರಿ' ಪರಾ.

ಬೊಗರೆಜಲ=ಸುಳಿಯಿರುವ ನೀರು ; ಜಲಾವರ್ತ : ಒಗರುಫಲ ತಿನಹೊಲ್ಲ ಬೊಗರೆಜಲ ಹೊಗಹೊಲ್ಲ ಬೊಗಳುವ ನಾಯ ನೆರೆ ಹೊಲ್ಲ ಮನೆಯಲಿ ಜಗಳವೇ ಹೊಲ್ಲ (ಸರ್ವಜ್ಞ. ೦೦೬೦).

[<ಸಂ. ಭ್ರಮರಿ./ತಮಿ. ಪವುರಿ; ತುಳು. ಬುಗುರಿ, ಬೊಗರಿ, ಬೊಗೊರಿ; ತೆಲು. ಬವರಿ, ಬವಿರಿ, ಬವಿರೆ, ಬೊಂಗರ, ಬೊಮ್ಮರ./ಮರಾ. ಭೋವರಾ, ಭೋಂವರಾ]

ಬವರಿಗ (ನಾ). ಭಟ; ಸೈನಿಕ ; ಯೋಧ : ಬವರಿಗರು ನೀವೆ ವಿಪ್ರವೇಷದ ಜವನಿಕೆಯ ಜಾಣಾಯ್ಲತನದಿಂದವೆಗಡಿಸಿ ಹೊಕ್ಕಿರಿಯಪದ್ವಾರದಲಿ ನೃಪ ಸಭೆಯ (ಕುಸ್ಕಾಸ. ೨-೬೯); ಗಱಿಯ ಗಾಳಿಯ ಬೊಬ್ಬೆ ಬವರಿಗರ ಬಲುರಭಸ . . . ಕಿವಿ ಕಿವುಡುಗೊಂಡುದಜಾಂಡಮಂಡಲದ (ಕೂರಂಗ. ೬-೪೦-೩೪); ಜವದಾಡೆ ಜಲ್ಲಿಯ ಬಿಲ್ಲು ಕೈಗತ್ತಿಯ ಬವರಿಗರತಿ ಹರುಷದಲಿ. . . ಒಪ್ಪಿಹರು (ಕಂಪಿ. ೦೦-೦೦೬); ಬವರಿಗರಾದ ನೀವು ಬಹಳ ಜಾಣತನದಿಂದ ವಿಪ್ರವೇಷವನ್ನು ಧರಿಸಿದ್ದೀರಿ (ರಾಜಸೂ. ೦೯).

[ಬವರ್ಯ + ಇಗ]

ಬವರಿಗಡ್ಡ, ಬೊಗರಿಗಡ್ಡ (ನಾ). ಮುಖಕ್ಕೆ ಶೋಭಿಸುವಂತೆ ಕತ್ತರಿಸಿರುವ ಗಡ್ಡ : ರಂಜಿಸಿತು ಯವ್ವನದಿರವು ನಿಮ್ಮಯ್ಯಂದಿರಿಗೆ ಕುಡಿವರಿವ ಮೀಸೆಯ ಕಪ್ಪುದೋಱುವ ಬವರಿಗಡ್ಡಗಳ. . . ಹೊಗರಿನಲೆ ಸದರಿಂದುದಿನೇಶರಂದದಲಿ (ಕೂರಂಗ. ೪-೦-೦); ಭಂಡಿಯಲಿ ಕುಳಿತಿರುವ ಕಪಿಯನುಗೊಂಡ ರೂಪಿಗು ಬವರಿಗಡ್ಡದ ಚಂಡಿಕೆಗು ವಾಲ್ಕುಚ್ಚಿನಿಂದಲಿ ಬೀಸಿಕೊಳುತಿರಲು (ಜಯಕಾ. ೩೬೯-೦೪) ; ಗುಜ್ಜುರೂಪನು ಬೊಜ್ಜೆ ಹೊಟ್ಟೆಯು ತನಿಗೆ ಮೋಟಾದ ಕೈಗಳು ಮೀಟದ ಮೀಸೆ ಬವರಿಗಡ್ಡವು ತನಿಗೆ (ಯುಪಳ. ೦೩೦). ಬೊಗರಿಗಡ್ಡ : ದ್ರೋಣನದ ದಿಟ್ಟಿಸುತ ಬೊಗರಿಗಡ್ಡವನೆಳೆದು ಭಟರಿಗಂ ನೇಮಿಸಿದ (ಕುರಂಗ. ೫೬-೪).

[ಬವರಿ+ಗಡ್ಡ₁./ತೆಲು. ಬವರಿಗಡ್ಡ, ಬವಿರಿಗಡ್ಡ]

ಬವರಿಗೊಡು (ಕ್ರಿ). (ಬುಗುರಿಯಂತೆ) ವೇಗವಾಗಿ ಸುತ್ತು,—ತಿರುಗು :

ಲೋಲಭ್ರಮರಂ ಭ್ರಮರೀಮಾಲೆ ತೆಱಂದಿಱಿಯೆ ತಾಂ ತೆಱಂದಿಱಿವ ಪೊಲುನ್ಮೀಲಿತಮನನಮರೀಸಮಲೀಲಂ ಹರಿ ಬವರಿಗೊಟ್ಟನಾಟ್ಟು ಬೆಡಂಗಿಂ (ಶಾಂತಿಪು. ೦೦-೬೩); ಒಬ್ಬರ ನೋಡುವಾಗ ಅಱುವತ್ತು ಮನುಷ್ಯರ ನೋಡುವ ಹಾಗೆ ಆಗುತ್ತಿದೆ ಶೂನ್ಯಸಿಂಹಾಸನ ಬವರಿಗೊಡುತ್ತಿದೆ ಪ್ರಾಣ ಹೆಡತಲೆಯಲ್ಲಿ ಹೋಗುತ್ತಿದೆ (ಅಸಕಂ. ೨೪೭-೦೦೨೬). [ಬವರಿ+ಕೊಡು$_1$]

ಬವರಿಗೊಳು (ಕ್ರಿ). ಸುತ್ತಿಸು; ತಿರುಗುವಂತೆ ಮಾಡು : ವೃಕೌಘಮಂ ಬಡಿದು . . . ಪುಲ್ಲೆಯಂ ಬವರಿಗೊಳುತ್ತೆ ಬೇಡವಡೆಯಾಡಿದುದಗ್ಗದ ಬೇಂಟೆಯಂ (ರಾಜಕೇ. ೩-೦೦೭). [ಬವರಿ+ಕೊಳು (<ಕೊಳ್$_1$)]

ಬವರಿದಿರುಗು, ಬೊಗರಿದಿರುಗು (ಕ್ರಿ). ಗುಂಡಗೆ ಸುತ್ತು; ತಿರುಗು : ನಾಯ್ಗಳುವೆರಸಿ ಮುಕ್ಕುಱಿಕ್ಕಲು ಮೆಲ್ಲನೊಲೆದುಬ್ಬಿ ಪುಟನೆಗೆದು ಗಜಱಿ ಗರ್ಜಿಸಿ ಪುಳಿಂದರ ಮೇಲೆ ಬವರಿದಿರುಗಿ . . . ಎಲ್ಲರೊಡಲ ಕಳವಳಿಗೆಯ್ದು ಬೀದಿವರಿದೊಕ್ಕಲಿಕ್ಕಿತ್ತು ರಕ್ಕಸಮಿಗಂ ಕಾಡೊದಱಲು (ಹನಕಾ. ೬-೭); ಬವರಿದಿರುಗುವ ತಿರುಗಿ ನಡೆವ ನಡೆದೊಡಲುಬ್ಬಿ ಢವರಿಸುವ . . . ಕರಿನಿವಹ ವತ್ಯಾಡಂಬರಂ ಮಿಕ್ಕು ಹಣ್ಣಿ ನಿಂದವು ಬಲದ ನಟ್ಟನಡುವೆ (ಸೋಮನ. ೩-೨೯). **ಬೊಗರಿದಿರುಗು** : ಬಿರುದಿನಂಕದ ಭಟರು ಭೋರೆಂದು ಬೊಬ್ಬೆಗೈದು . . . ಬೊಗರಿದಿರುಗಿ ಮುತ್ತಿ ಕಾದುವಲ್ಲಿ (ಪಸಿಕ. ೩-೦೪೬ ಪ).

[ಬವರಿ + ತಿರುಗು$_1$]

ಬವರಿರೇಖೆ (ನಾ). ವರ್ತುಲಾಕಾರದ ಅಲಂಕಾರದ ರೇಖೆ : ಇಂದುವಿನ ಪರಿವೇಶದಂದಕೆ ಕುಂದನೆಣಿಸುವ ಬವರಿರೇಖೆಯ ಹೊಂದಿಕೆಯ ಶಿಂಗಾಡಿಯೆನೆ ಹುರಿಕೊಂಡ ಮೀಸೆಗಳ ಚಂದದಿಂ ಲಾವಣ್ಯಮೂರ್ತಿಗಳೆಂದೆನಿಸಿ ಚಾಪಾಸ್ತ್ರಹಸ್ತಗಳಿಂದ ರಾಜಸದೊಡನೆ ಕುಳ್ಳಿರ್ದರು ಸತೇಜದಲಿ (ಅಸಂರಾ. ೩-೬-೩೬). [ಬವರಿ + ರೇಖೆ]

ಬವರಿವರಿ (ಕ್ರಿ). ವೇಗವಾಗಿ ಸುತ್ತು,—ತಿರುಗು : ತಿವಿವ ತಿರುಗುವ ಲಾಗಿಸುವ ಚಿಮ್ಮುವ ನಿಬಂಧದಲಡರಿ ಮಂಡಿಸಿ . . . ಬವರಿವರಿದುಪ್ಪರಿಸಿ ಲಂಘಿಸಿ ನಿವಡಿಸಾರದಲೆಱಗಿ ಜಾಱುವ ಜವಳಿಬಿನ್ನಾಣದಲಿ ಕಾದಿದರೊಬ್ಬರೊಬ್ಬರಲಿ (ಅಕ್ರೂಪ. ೭-೬೫); ದುಂಡಿಪ ದಿಂಡುವಾಯ್ವ ಬವರಿವರಿವ ಚಮ್ಮಟಿಗೆಗೆ ಚಳಿಯದ ಕಡಿಯಾಣಮಂ ಕೈಕೊಳದ ಬಗೆಯಂ ಬಗೆಯದಂತೆ ಕಂಡು (ರಾಜಕೇ. ೬-೦೦೫); ಆಗಳೆಚ್ಚಂಬಂ ಬಗೆಗೊಳದೆ ಕನಲ್ಕೆಯಿಂ ಬಳಿಸಂದು ಬವರಿವರಿದು ತುಱುಗಿ ತುಡುಂಕುವ ಜಾಯಿಲಂಗಳಂ ಲೆಕ್ಕಿಸದೆ (ಶಾಕಂ. ೪-೦೭೫). [ಬವರಿ + ಪರಿ$_2$]

ಬವರಿವಿಂಡು (ನಾ). ತುಂಬಿಗಳ ಸಮೂಹ,—ಗುಂಪು: ತಂಡತಂಡದಿಂ ತೆಂಕುತೈತಂದು ಮಂದೈಸಿದಲರ್ಜೊಂಪಮಂ ಕಂಡು ಪಿಂಡೆಱಗಿ ಪೊಸ ಜೇನನುಂಡು ಱಕ್ಕೆಯಂ ಬಿದಿರ್ಚಿ ಮೊರೆದೆಟ್ಟು ಮೇಣುಂ ಮುಂಬರಿವ ಬವರಿವಿಂಡಿಂ . . . ಬನಂ ಮನಂಗೊಂಡುದು (ರಾಮಾಶ್ವ. ೫೪-೫).

[ಬವರಿ+ಪಿಂಡು$_2$]

ಬವರಿಸು$_1$ (ಕ್ರಿ). ೧. ಯುದ್ಧಮಾಡು; ಹೋರಾಡು : ಚಿಮ್ಮಿದು ದರುಣಜಲ ನಭಕೆ ಒಡಲು ಬಾಂದಣಗೊರದು ನೆತ್ತರ ಕಡಲು ಕರುಳುಗಳೊಗಲು ಬಗೆಯದೆ ಬಿಡನೆ ಬವರಿಸಿದನು ಬಲಾಧಿಕನಾ ನೃಸಿಂಹನಲಿ (ಶಿಭಾಗ. ೭-೭-೪೬). ೨. ಸ್ಪರ್ಧಿಸು; ಹುರುಡಿಸು : ಅಂಗರುಹ ಕೇಶ ವಾಲಚಯಂಗಳೆ ನಿಡಿಯವು ಕಪಾಯವರ್ಣಂಗಳ್ ದಂತಂಗಳ್ಗೆ ಬವರಿಸುವ ದಂತಂಗಳೆ ಮಲಿನಂಗಳಾಗೆ ವರ್ಷದ್ವಿತಯಂ (ಅಶ್ವಶಾ. ೩-೦೩).

[ಬವರ$_1$ + — ಇಸು$_3$]

ಬವರಿಸು$_2$ (ಕ್ರಿ). ಅಲೆದಾಡು ; ತಿರುಗು : ಇವು ಪಱಿದೀಡಾಡಲ್ತಕ್ಕುವೆ ತುಂಬಿಯ ಬಂಬಲೆಂಬ ಪಂಬಲನಾರ್ಗಂ ಬವರಿಸುವ ನೃಪನ ಕುಂತಳ ನಿವಹಂಗಳೆ ಬಹಳ ಮೃಗಮದಾಮೋದಂಗಳ್ (ಸುಲ್ಲಪು. ೦೦-೩೪).

[ಬವರಿ + — ಸು$_1$]

ಬವರಿಸು$_3$ (ಕ್ರಿ). ೧. ಸವರಿ ತೆಗೆ : ನವವಧುವ ಶಂಕೆಯಂ ಕಳೆವ ವಿದಗ್ಧ ವಿಟಂಬೊಲಲೆವ ತೆರೆಗಳ್ ಮೆಲ್ಪಂ ಬ[ಪಾಕಾಂ.ಬೆ]ವರಿಸಿ ಸೋಂಕುತ್ತುಂ ಕಳೆದುವು ಘನಕುಚಕಳಶಕುಂಕುಮಸ್ಮಾಸಕಮಂ (ಅಂಪು.೦೦-೦೪೦) : "ಸುತ್ತುಗಟ್ಟು" (ಅಂಪು. ಕೋಶ) ; ಪವನ ಪ್ರಕ್ಷೋಭಾಂಬುಧಿರವಮೆನೆ ಪಟುಪಟಹಶಂಖಭೇರೀರವದೊಳ್ ಬವರಿಸಿ ಗಗನಮನಂತಾ ರವಮಾವರಿಸಿತ್ತು ದಶದಿಶಾವಧಿವರೆಗಂ (ಸುಹಾಸೇ. ೦೩-೦೦೬); "ಸುತ್ತುವಂತೆ ಮಾಡು; ತಿರುಗಿಸು" (ಸುಹಾಸೇ. ಕೋಶ). [ಬವರು + — ಇಸು$_3$]

ಬವರಿಸು$_4$ (ಕ್ರಿ). ಉಂಟಾಗು; ಪ್ರವರ್ತಿಸು : ಮತ್ತವಱ ವಿಪರ್ಯಯ ವೃತ್ತಿಯೆ ಬವರಿಸುಗುಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ (ಕಾಸ್ಯಾಪ. ೩೨೦); ವೀರರಸ ಬವರಿಸುಗುಮುದಾರೋತ್ಸಾಹಪ್ರವೃತ್ತಿಕಾರಣಕಾರ್ಯಂ ದಾರುಣರೋಪಾವೇಶವಿಕಾರಭವಂ ರೌದ್ರಮೆಂಬ ರಸಮದು ನೆಗೞ್ಗುಂ (ಕಾಸ್ಯಾಪ. ೬೦೬); ಭುವನನುತಶ್ರುತದೇವಿಯನವಯವದಿಂದೊಲಿಸಿ ಮತ್ತೆ ಮೊಱೆಗಿಡರಿವರೆಂಬ ವಿಶುದ್ಧಕೀರ್ತಿ ಬವರಿಪ ಕವಿಪರಮೇಷ್ಠಿಗಳ ಕರುಣ ಮೆಮಗಾಭರಣಂ (ರರ್ಮಾಣ.೦-೨೪) ; ವಿವಿಧ ಬುದ್ಬುದನಿಕರವೇಕಾರ್ನವದ ಕಡೆಯಲಿ ತೋಱಿ ತಮ್ಮೊಳು ಬವರಿಸಿದಡಳಿದಡೆ ಮಹಾರ್ಣವವಳಿಯ ದಂತಂತೆ . . . ಇರ್ದನವಧೂತ (ಶಿಭಾಗ. ೩-೪-೦೭). [? + — ಇಸು$_3$]

ಬವರು (ಕ್ರಿ). ಸವರಿ ತೆಗೆ : ಮುತ್ತೀನ ಗುದ್ಲೀಲಿ ಅಗೆಸ್ಯಾರು ಅರಸಣವ ಬೆಳ್ಳಿ ಮಂಕ್ರೀಗೇ ಬವರ್ಯಾರು ಅರಸಣವ ತುಂಡು ತುಂಡಾಗಿ ಕಡಿಸ್ಯಾರು (ಹುಸ್ವಹ. ೦೬೩).

ಬವಸ 'ಬೆವಸಾಯ' ನೋ.

ಬವಸಿಗ (ನಾ). ವ್ಯವಸಾಯ ಮಾಡುವವನು; ಬೇಸಾಯಗಾರ : ಆ ಗದ್ದೆಗೆ ಹಿರಿಯ ದೇವಧರ ಘೈಸಾಸರು ಕೊಟ್ಟ ಗದ್ಯಾಣ ೧ ... ಬವಸಿಗ ಕಲ್ಲಿಸೆಟ್ಟಿ ಕೊಟ್ಟ ಗದ್ಯಾಣ ೧ ಸೇನಬೋವ ಬಲದೇವಂ ಕೊಟ್ಟ ಗದ್ಯಾಣ ೧ (ಸೌಇಇ. XX,೬೨—೨೩; 1122). [ಬವಸು (<ಬೆವಸಾಯ) + — ಇಗ]

ಬವಸು 'ಬೆವಸಾಯ' ನೋ.

ಬವಸೆ$_1$ 'ಬೆವಸಾಯ' ನೋ.

ಬವಸೆ$_2$ (ನಾ). ಬಯಕೆ ; ಅಪೇಕ್ಷೆ ; ಇಚ್ಛೆ ; ಆಸಕ್ತಿ : ಜಿನದತ್ತಾದೇವಿ ದಾನಂಗುಡುವ ಬ[ಪಾಕಾಂ. ಬೆ]ವಸೆಯೊಳ್ಗಾಲಮಿಾ ಕಾಲಮಾರುಂ ಮನೆಯೊಳ್ ಸೂನಂಗಳಂ ಸಂಧಿಸದಿರಿಮಿರಿಮಾಚಾರದಿಂದೆಂದು ಪೃಥ್ವೀಜನಕೆಲ್ಲಂ ಸಾಱುವಂತೇನೊಗೆದುದೋ ಮಿಗೆ ಮಧ್ಯಾಹ್ನ ಶಂಖಪ್ರಣಾದಂ (ಅರ್ಧನೇ. ೦-೭೬); ಭಾರತೀದೇವಿ ತನ್ನಾದರದಿಂದಂ ಪ್ರೀತಿಯಂ ಪುಟ್ಟಿಸುವ ಬೆ[ಬ]ವಸೆಯಿಂದೆಯ್ದೆ ಮಾತಾಡಿದಳ್ (ಪಾರಪು. ೬-೬೦). [<ಬಯಸು$_1$]

ಬವಸೆಗಾಣ್ (ಕ್ರಿ). ಇಷ್ಟಪಡು ; ಇಚ್ಛಿಸು ; ಬಯಸು : ಎನ್ನಯ ಚಿತ್ತದೊಳಿನ್ನು ಮಾಕೆಯಲ್ಲದೆ ಪೆಱತಾವುದುಂ ಪುಗದು ಮಾಣ್ದೆರ್ದೆಯಂ ಗುಱಿಮಾಡಿ ಲೇಸನಲ್ಲದೆ ಪೆಱತಾವುದಂ ಬವಸೆಗಾಣವು ಕಾಮನ ಹಸ್ತಶಾಖೆಗಳ್ (ಅಲಾಪ. ೩-೬೬). [ಬವಸೆ$_2$ + ಕಾಣ್]

ಬವಸೆಗೆಯ್ 'ಬೆವಸಾಯಂಗೆಯ್' ನೋ.

ಬವಳಿ 'ಬವಣೆ' ನೋ.

ಬವಳಿಕೆ 'ಬವಣಿಗೆ' ನೋ.

ಬವಳಿಗೊಳ್ಳು 'ಬವಣೆಗೊಳು' ನೋ.

ಬವಳಿವರಿ (ಕ್ರಿ). ವರ್ತುಲಾಕಾರವಾಗಿ ಸುತ್ತು ; ತಿರುಗು : ತಾನುಂ ಹಿಡಿಂಬೆಯುಮವನ ಬರಿಯ ನರವಿನಡಗಿನಿಡುವಿನೆಡೆಯ ಕೆನ್ನೆತ್ತರೊಳೊರ್ವರೊರ್ವರಂ ತಳ್ಳಿಱಿದುಂ ಬೊಬ್ಬಿಱಿದುಂ ಬವಳಿವರಿದುಂ ಬಾನಂ ಗುಱಿಗೆವಱಿದುಂ ಸೂಟ್ವರಿದುಮಾಡುವಾಗಳುಭಯಬಲಂಗಳ್ ಬೆಕ್ಕಸಂ ಬಟ್ಟು ನೋಡಿ (ಶಂಪಶಾ. ೦೨-೧೫೬ ಪ). [ಬವಳಿ (<ಬವಣೆ)+ ಪರಿ$_2$]

ಬವಿ (ನಾ). ಹಂಟ್ಟು ಸಾವುಗಳಲ್ಲಿ ತೊಳಲುವವನು ; ಭವಿ :

"ಬವಿ – ಭವಿ = ನರಕಜೀವಿ" (ಕರ್ಕೋ. ೨೯) ; ಭಕಾರಕ್ಕೆ ಬಕಾರಂ – ಆರಂಭ – ಆರಂಬ, ಭವಿ – ಬವಿ, ಭಂಡ – ಬಂಡ (ಕಪುರ. ೨೫೫ ಪ್ರಯೋ). [<ಸಂ. ಭವಿನ್]

ಬವಿಸು (ಕ್ರಿ). ಹುಟ್ಟು ; ಜನ್ಮತಾಳು : ಶಿವನೆ ಬಳಿಕಿಂತಿದಕ್ಕೆಂತೆನು ತಲನಸೂಯೆ ವಿವರಿಸಲು ದೇವಪೂಜೆಗೆ ತಂದ ದೂರ್ವೆಯೊಳು ಬವಿಸು ವೆನೆನುತ್ತೊಡಂಬಟ್ಟು ದೂರ್ವಾಸನಾದನು ಪದ್ಮಸಂಜಾತನು (ಸೌಂದಪು. ೪-೫೦). [ಬವ$_1$ + – ಇಸು$_3$]

ಬವ್ವ, ಬವ್ವು, ಬವ್ವುತ (ನಾ). (ಮಕ್ಕಳ ಮಾತಿನಲ್ಲಿ) ಗುಮ್ಮ ; ಗೊಗ ಯ್ಯ (?) : ಯೌವನವೊದಗಿದಾಗ ಏನೆಂದರು ಅಪ್ಪ ಅವ್ವಣ್ಣ ನೆಂದು ನಸುನಗುತ ಗವ್ವಳಿಕೆ ವೃದ್ಧಾಪ್ಯ ಬಂದೊದಗಲು ಇವನ ಬವ್ವನ ತೆರದಲಾಡಿಪರೋ ಪ್ರಾಣಿ (ವಿರಾಕ್ಯ. ೪೮-೩). **ಬವ್ವು** : ಬವ್ವು ಬಂದಿತ್ತಲ್ಲ ರಂಗಯ್ಯ ಬವ್ವು ಬಂದಿತಲ್ಲ (ಪುರಂದ. ೪-೦೫೫ ಪಲ್ಲವಿ). **ಬವ್ವುತ**: ಹಾವು ಕೊರಳಲಿಟ್ಟು ಹುಲಿಯ ಚರ್ಮವ ಹೊದ್ದು ಸುತ್ತಲಿ ಬರು ಬರುತಿದೆ ಬವ್ವುತನ ದಂಡು (ಪುರಂದ. ೪-೧೫೫-೨). [?]

ಬವ್ವು 'ಬವ್ವ' ನೋ.

ಬವ್ವುತ 'ಬವ್ವ' ನೋ.

ಬಷ್ಕಯಣಿ (ನಾ). ಬಹುಕಾಲದ ಮೇಲೆ ಕರು ಹಾಕಿದ ಹಸು : "ಬಷ್ಕಯಣೀ, ಪ್ರೌಢವತ್ಸಾ – ಈ ೨ ಕಡೆಗಂದಿ" (ಹಲಾಯು. ೪೫-೦೦೪); "ಚಿರಸೂತಾ – ಬಷ್ಕಯಣೀ – ೨ ಬಹುಕಾಲಕ್ಕೆ ಈಯಲಾದ ಆಕಳಿಗೂ ಈಯಲಾದರೂ ಬಹುಕಾಲ ಹೆರಿಗೆ ಇಲ್ಲದೇ ನಿಂತ ಆಕಳಿಗೂ, ಬಹುಕಾಲಕ್ಕೆ ೧ ಸಾರಿ ಯಿಯ್ಯುವ ಆಕಳಿಗೂ ಹೆಸರುಗಳು, ಕಡೆಗಂದಿನ ಆಕಳು" (ಸಿದ್ಧಾಂತಿ. ೨೯೫). [ಸಂ. ಬಷ್ಕಯಣೀ]

ಬಷ್ಟಿಗೆ 'ಭಾಷ್ಟಿಗೆ' ನೋ.

ಬಸ$_1$ (ನಾ). ೧. ವಶ ; ಅಂಕೆ ; ಸ್ವಾಧೀನ : "ಬಸಂ ವಶದೊಳಂ" (ಕರ್ಣಾಟ. ೯೨) ; ಆನೆಯಂ ಸೇದೆಗೆಡಿಸಿ ತನ್ನ ಬಸಕ್ಕೆ ಮಾಡಿ ಯೇಱಿಯಂಕುಸಮಂ ಪೊಳೆಯಿಸುತ್ತಮರಸಿಯಲ್ಲಿಗೆ ವಂದು (ಪಡ್ಡಾರಾ. ೩೪-೦೬) ; ಆಂ ನಡೆ ನೋಡೆ ನೋಡೆ ನೀಂ ಕರಗಿದೆಯೆಂತುಮೆನ್ನ ಸುಶರೀರದೊಳಿರ್ದುದು ಜೀವಮಿಯೊಡಲ್ ಕರಗಿದುದಿಲ್ಲದೆನ್ನ ಬಸಮ ಲ್ತೊಡಲಿಂದೆಮ ಶೋಕದೊಳ್ ಮನಂ ಕರಗಿದುದೆಯ್ದೆ ವಾರದಿರೆಯಿರ್ದೆ ಡೆಯಿಂ ಲಲಿತಾಂಗವಲ್ಲಭಾ (ಆದಿಪು. ೩-೦೪) ; ತನು ಬಸಮಲ್ತು ಮತ್ಸಖಿಗೆ ಮನ್ಮಥನನ್ನನೆನಿಪ್ಪ ತನ್ನುಮಂ ನೆನೆದಪಳೊರ್ಮೆ (ಕಾದಂಉ. ೦೯೩). ೨. ಸಾಧ್ಯತೆ ; ಶಕ್ಯತೆ : ನೋಟ್ಟೊಡಿಂತೀ ಪೊಚ್ಚಮುರಿಗುದು ರೆಯನೊಳಕೊಂಡ ಕಡಲ ಗುಣ್ಪೆಂದೆಸೆಗುಂ, ಪುಗಲೆಮಗಂ ಬಸಮಲ್ತು (ರಾಮಾಶ್ವ. ೦೨೧-೨). ೩. ತಲ್ಲೀನವಾಗಿರುವಿಕೆ ; ಪರವಶತೆ : ಮಿಸುಗುವ ಪೊಸವಸೆಯೊಳಸದಳಮೆಸೆಯೆ ಬಯಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳ್ ಬ[ಪಾಠಾಂ. ಪ]ಸದಾಗಿಯುಮಸಿ ಯಳೆನಗಸವಸದೊಳೆ ಬೆಸೆದು ಪೋಗಿ (ಆದಿಪು. ೪-೦೨ ಪ). ೪. ಪ್ರಭಾವ ; ಶಕ್ತಿ ; ಬಲ : ಕೊಳದ ತಡಿವಿಡಿದು ಬೆಳೆದೆಳದಳಿರ್ಗಳಶೋಕೆಗಳ ಲತೆಯ ಮನೆಗಳೊಳೆ ತೆಱಂಬೊಳೆವಲರ ಬಸದೆ ಸುಟಿಪಳಿಗಳ ಬಳಗದ ದನಿಗೆ ಕಿನಿಸಿ ಕಿಂಕಿಱಿವೋದಳ್ (ಪಂಪಭಾ. ೩-೪) ; ಕುಸುಮಾಸ್ತ್ರಗಜಂ ಬೆಂಕೊಳೆ ಬಿಸುಟಂ ಕಡಿಕೆಯ್ಯೆ ತಪಮನೊಳಕೊಂಡಿರ್ದಿರ್ದೆಸೆಯೊಳಡಂಗದೆ ಬಸನದ ಬಸದಿಂ ತಲೆದೋಱೆ ತೋಱದಿರ್ಕುಮೆ ಕೊಲೆಯಂ (ಅಜಪು. ೨-೮೬) ; ಸಸಿಯಿರ್ದಪನಮವಾಸೆಯ ಬಸದಿಂ ಕಾಣಲ್ಕೆ ಬಾರದಂತಿರೆ ಜಿನೆರಂ ವಸುಧೆಯೊಳಿರ್ದಪರಿರ್ದುಂ ಮಿಸುಕುವ ಕಲಿಗಾಲ ದೆಸಕದಿಂ ತಲೆದೋಱರ್ (ರಮಾಮ್ಯ. ೩-೦೯೪). ೫. ಅಧೀನದಲ್ಲಿರುವವನು (?) : ಶ್ರೀಮನೆನಗಂ ಕ್ರಿಯದ ದೇವ ಬಸದ (ಎಕ. II, ೪೭೦-೩ ; ಸಂ. 1000).

ಬಸಂ ಮಾಡು = ವಶ ಮಾಡಿಕೊಳ್ಳು : ಅಧೀನದಲ್ಲಿಟ್ಟುಕೊಳ್ಳು : ಮನಮಂ ನುಡಿಯಂ ಮೆಯ್ಯಂ ತನಗೆ ಬಸಂ[ಪಾಠಾಂ. ವಶಂ] ಮಾಡಿ ಗುಪ್ತಿಗುಪ್ತಂ ಮುನಿಯೆಂಬಿನೆಗಂ ನೆಗಟ್ಟಂ (ಆದಿಪು. ೬-೨೯); ಎಲ್ಲೆಡೆಗಳುಮಂ ತನ್ನಟ್ಟಿದೋಲಗಮಿಟ್ಟುಂಡಿಗೆಗಂ ಬಸಂ ಮಾಡಿದ ನನೆವಿಲ್ಲ ಬಲ್ಲಹಂ ನಿಮ್ಮಡಿ ಗಳ ಪೆಸರಂ ಪಲಂಬರಿಂ ಕೇಳ್ದು ಕೆಳೆತನಮಂ ಬಳೆಯಿಸುವಿಚ್ಛೆಯಿಂದೆನ್ನಂ ಕಳಿಪಿದಂ (ಕಬ್ಬಿಕಾ. ೧೬೯). 'ಬಶ' ಪರಾ. [<ಸಂ. ವಶ]

ಬಸ$_2$ (ನಾ). ವೃಷಭ; ಎತ್ತು : "ಬಸ–ವೃಷ=ಎತ್ತು" (ಕರ್ಕೋ. ೨೯); ವಸುಧೆಗೆ ಯುಗಭಾರವಾಂಪರೆ ಪೆಱತಿಲ್ಲ ಬಸುಱ ಮಗನೆ ದಿಟವೆಂದು ಉಸುರುವಂದದಿ ಕೆಲವುತಲಿರ್ದ ಬೆಳ್ಳಿನ ಬಸದ ಕನಸುಗಂಡಳಬಲೆ (ವರ್ಧಪ. ೦೦-೪೬). [<ಸಂ. ವೃಷ]

ಬಸಂಗೆಡು, ಬಸಗಿಡು, ಬಸಗೆಡು (ಕ್ರಿ). ೧. ಶಕ್ತಿಗುಂದು : ಬಲಹೀನ ವಾಗು : ಬೇಟದ ಸೂಡಿಂ ಬಾಡಿ ಬಸಂಗೆಟ್ಟುದನಿಂದು ನಿಂದು ಕಾಂತಂ ಗಱಿಪಿ ಬಟಿಯಟ್ಟುವೆವನಿತೊಂದು ಪೊಟ್ಟು ಸೈತಿರ್ಪುದೆಂದು ಸಂತಯಿಸಿ ದೂದುಪೋಪವೆನೆ ಮುಯ್ಯಾರಡಿಗಳೋಡೆ (ರಾಮಾಶ್ವ. ೨೨-೦೦). **ಬಸಗಿಡು** : ೧. 'ಬಸಗಿಡಿಸು' ಪರಾ. **ಬಸಗೆಡು** : ೨. ಚಿಂತೆಗೆ ಒಳಗಾಗು : ತನ್ನ ಜೊತೆಗೆ ಇರಬೇಕೆಂಬಾಸೆಗೆ ಧರ್ಮದ ಹೆಸರಿಟ್ಟು ಸತಿ ಪಡುತಿಹ ಹಿರಿಯಾಯಸ ನೋಡಿದ ರಾಘವ ಬಸಗೆಟ್ಟು (ರಾಮಪ. ೬-೦೨). [ಬಸ$_1$+ಕೆಡು$_1$]

ಬಸಂಗೆಯ್ (ಕ್ರಿ). ವಶಪಡಿಸಿಕೊಳ್ಳು ; ಸ್ವಾಧೀನಪಡಿಸಿಕೊಳ್ಳು : ಕೈಯ ಕೈದುಗಳ ನೀಟ್ದಾನೆ ಕುದುರೆಗಳಂ ಬಸಂಗೆಯ್ದು ಅವರೊಳ್ಕಟ್ಟರಸು ಗಳಂ ಕೈಸೆಱೆಗೊಳಲು (ಪಕವಂ. ೪೦). [ಬಸ$_1$+ಕೆಯ್$_1$]

ಬಸಂಗೊಳಿಸು (ಕ್ರಿ). = ಬಸಂಗೆಯ್ : ಪಾಳೆಯಗಾರರಂ ಕಾಳಗ ದೊಳ್ಗೆಲ್ದು ನರಸಿಂಹಪುರಂ ಮೊದಲಪ್ಪವರವರ ರಾಜ್ಯಂಗಳಂ ಬಸಂ ಗೊಳಿಸಿ ಪಲವುಂ ಬಿರುದುಗಳಂ ಪಡೆದು (ಮರಾಪ. ೨-೪ ಪ). [ಬಸ$_1$+ಕೊಳ್$_1$+ —ಇಸು$_3$]

ಬಸಂತ, ಬಸವಂತ, ವಸವಂತ (ನಾ). ೧. ಚೈತ್ರ ಮತ್ತು ವೈಶಾಖ ಮಾಸಗಳಲ್ಲಿ ಅಂದರೆ ಮಾರ್ಚಿ ತಿಂಗಳ ಮಧ್ಯದಿಂದ ಮೇ ತಿಂಗಳವರೆಗೆ ಬರುವ ಒಂದು ಋತುವಿನ ಹೆಸರು : ವಸಂತಮಾಸ : "ಬಸಂತಂ, ಸುಗ್ಗಿ, ಹೂವಿನ ಹಬ್ಬಂ_ಈ ೩ ವಸಂತಂ" (ಕಶಸಾ. ೫೪-೦೬೨) ; ಪೊಸತಲರ್ದ ಕೊಸಗು . . . ತಳಿರಿಂ ಮುಸುಕಿದ ನನೆಯಂಪೇಱಿದ ಪೊಸಮಾವುಗಳಿಂ ಬಸಂತಮೆಸೆದಪುದಿದ ಱೊಳ್ (ಆದಿಪು. ೦೦-೮೩) ; ವಿಯೋಗಿಜನಮಾರಣಯಜ್ಞಮನೊಲ್ದೊಡ ರ್ಚಿದಾ ಮದನನ ವಿಪ್ರನಂತೆಸೆದುದಿಂತು ಬಸಂತದ ಬಂದ ಮಾಮರಂ (ಕುಸುಮಾ. ೩-೩೭). ೨.(ಆಲಂ) ಸಂತೋಷಭರಿತವಾದುದು : ಆನಂದ ದಾಯಕವಾದುದು: ಥರೆ ನಿರ್ದಾಯಾದ್ಯಮೆಂದಾ ಸುಯೋಧನನಾಳುತ್ತಿರೆ ಸಂದ ಹಸ್ತಿನಪುರಂ ಸಂತಂ ಬಸಂತಂ ಕರಂ (ಪಂಪಭಾ. ೩-೩೨); ಕೆಲ್ಲಂ ಗೆಱೆಯಂದಮಿಂದು ನಮರಾವತಿಯನ್ತೆ ಬಸನ್ತವಾಗಳುಂ (ಎಕ. V, ಅರಸೀ. ೦೧೬-೩೦ ; 1161); ಸನ್ದ ಮಾಧವಪುರಂ ಸನ್ತಂ ಬಸನ್ತಂ ಕರಂ (ಎಕ. VI, ಕಡೂರು. ೦೨೬-೪೪ ; 1218). **ಬಸವಂತ** : ೩. ಓಕುಳಿ : 'ಬಸವಂತ ಗೊಳಿಸು' ಪರಾ. **ವಸವಂತ** : ೧. ವಸವಂತನೈತರಲು ವನಗೊರಡು ಜೆಗುರ್ದಪವು (ಪವಮೋ. ೬-೩೪). ೩. ಕಸವನ ಕಣುಮೆಯಲ್ಲಿ . . . ನೆತ್ತರದ ವಸವಂತನಾಡ್ಯಾರು (ಕಾಲಸಂ. ೦೪೦-೩೬). ೪. [ಸಂಗೀತ] ಒಂದು ರಾಗದ ಹೆಸರು : ರಾಗ. ವಸವಂತ–ಉದಾ: ಭಯ ಭಕ್ತಿ ಕರುಣ ಕಿಂಕುರ್ವಾಣ ದಾಸೋಹ ನಯ ಭೃತ್ಯಭಾವ ಸಜ್ಜನ ಸತ್ಯ ಸಮತೆ ಸದ್ವಿನೆಯ ಗುಣನಿಷ್ಠೆ ಸಾಹಿತ್ಯ (ಪದಗೋ. ೧೫-೬೨). [<ಸಂ. ವಸಂತ]

ಬಸಂತಕುಮರ (ನಾ). ಒಬ್ಬಾತನ ಹೆಸರು : ಬನವಾಸಿಯ

ಅನೆಸೆಟ್ಟಿಯ ಅಳಿಯ ಬಸನ್ತಕುಮರ ಎಡೆವೊಟಲ್ನಾಡ ಸಲವುಗೆಯ ಕೊಟ್ಟ ಶಾಸನವು ಪಡೆದು (ಎಳ. VIII, ಸೂರಣ. ೩೭೦-೨೬; 692).

[ಬಸಂತ+ಕುಮರ$_1$ (<ಕುವರ$_2$)]

ಬಸಂತಮಾಸ (ನಾ). ವಸಂತಋತುವಿನ ಕಾಲ; ಮಧುಮಾಸ; ಚೈತ್ರ : ಕುಕಿಲ್ವ ಕೋಗಿಲೆ ನನೆದೋಱಿ ನುಣ್ಪೆಸೆವ ಮಾಮರನೊರ್ವೊದಲಲ್ಲ ದುಣ್ಮುವುಯ್ಯಲ ಪೊಸಗಾವರಂ ಪುಗಿಲೊಳೇನೆಸೆದತ್ತೊ ಬಸಂತಮಾಸದೊಳ್ (ಶಂಪಕಾ. ೨-೦೨). [ಬಸಂತ+ಮಾಸ$_3$]

ಬಸಂತಸಮಯ (ನಾ).= ಬಸಂತಮಾಸ: ವನಸಾಯಂತನ ಮಲ್ಲಿಕಾಮುಕುಳಕೋಟ್ಯಗ್ರಂಗಳೊಳ್ ಕೂಡೆ ನೂತನ ಸದ್ಗಂಧಿಗಳೊಳ್ ಮದಾಂಧ ಮಧುಪಂ ಪ್ರತ್ಯೇಕಮಳ್ವಾಱುವಾಱಿ ನವಾರ್ದ್ರಧ್ವನಿ ಪಾಯ್ದು ಪಾಯ್ದೆಣಿಸುವಂತಾಯ್ತಾತ್ಮಸೌರಭ್ಯಭಾಜನಸರ್ವಸ್ವಮನೇಂ ಬಸಂತಸಮಯಂ ಸೌಖ್ಯೈಕಸರ್ವಸ್ವಮೋ (ಶಾಂತಿಪು. ೬-೦೨೬).

[ಬಸಂತ+ಸಮಯ$_1$]

ಬಸಕ್ಕನೆ (ಅ). ತಕ್ಷಣ ; ಕೂಡಲೆ : ನರ್ಸಿ ಬಸಕ್ಕನೆ ಅತ್ತುಬಿಟ್ಟಳು (ಬ್ಯಾಕಾ. ೩೦). [ಬಸಕ್$_0$ + — ಅನೆ$_1$]

ಬಸಗಡಿ (ಕ್ರಿ). ಅಂಕೆ ತಪ್ಪಿಸು ; ಹತೋಟಿ ತಪ್ಪಿಸಂ : ಬೇವಸಕೆ ಮರುಳ್ತನಕ್ಕೆ ಕಳವಿಂಗೆ ಕನಲ್ಕೆಗೆ ಠಕ್ಕು ಠೌಳಿಗಂ ಬಸಗಡಿದೀಟ್ಟ ಕಾಟ್ಟಿಸನದಟ್ಟುಳಿಗಂ ಪುಗದಂತಿರೆಲ್ಲರಂ ಪೊಸಯಿಸಿ ಕಾರ್ತವೀರ್ಯನೆಸಕಬಡದಂ ದೊಡದೇವಭೂಪರಂ (ಪಾಂಪ. ೩-೦೩). [ಬಸ$_1$ + ಕಡಿ$_2$]

ಬಸಗಿಡಿಸು (ಕ್ರಿ). ಶಕ್ತಿಗುಂದಿಸು ; ಬಲಹೀನವಾಗಿ ಮಾಡು : ಗುಡುಗೆಸೆದು ಕಿವಿಯೊಡೆವ ಗುಡುಗಾಟದಾರ್ಭಟಂ, ಕಣ್‌ಗೆಡಿಸಿ ಎರ್ದೆಗಿಡಿಸಿ ಬಸಗಿಡಿಪ ಮುನ್ನಂ, ಈಗಳಿನ್ನಿರದೆ ನೀವ್ ಅಡಿಯೆತ್ತಿಮೇಟಿಂ (ಪರ್ಶ್ರ. ೩೬-೦೨೩೦). [ಬಸಗಿಡು (< ಬಸಂಗೆಡು) + — ಇಸು$_3$]

ಬಸಗಿಡು 'ಬಸಂಗೆಡು' ನೋ.

ಬಸಗೆಡು 'ಬಸಂಗೆಡು' ನೋ.

ಬಸಗೈ (ಕ್ರಿ). ವಶಮಾಡಿಕೊಳ್ಳು ; ಸ್ವಾಧೀನಪಡಿಸಿಕೊಳ್ಳು : ಮುನಿದಿನಿಯನ ಕಡುಮೊನೆವಾತಿಗೆ ನೊಂದು ಕನಲದೆ ಗಾರುವಡೆಯದೆ ತನುಮನಗಳ ತನ್ನ ಬಸಗೈದು ದೈನ್ಯವ ಕೊನರಿಸಿ ತಂಪುಗೊಳಿಪುದು (ಹರಿಪಿ. ೩-೨೩) ; ಉಸುರ್ಗಂಪಿಗೆರಗುವ ದುಂಬಿಯ ಗಾನವು ಪೊಸವೇದ ಪಾರಾಯಣವು ಹುಸಿದು ನೀನಾಡುವ ಸವಿಯೊಗುವಿನಿವಾತು ಬಸಗೈವ ಬೀಜಾಕ್ಷರವು (ಕರ್ಣಾಳ. ೨೨೦). [ಬಸ$_1$ + ಗೈ (< ಕೆಯ್$_1$)]

ಬಸತಿ 'ಬಸದಿ' ನೋ.

ಬಸದನ (ನಾ). (?) : ಸುರಯಿಯ ಮುಗುಳ್ಗಳೊಳುರುವಳಿದಳಿಪತಿ ಬರಯಿಸೆ ಬೆರಸುವ ಬಸದನ ಬೆಸನಿರೆ ಸುರತ ಸುರಭಿರಸ ಪರಿಮಳಮಿಟಿತರೆ ಬೆರಸಿದನರಮಗನರಸಿಯೊಳೆಸೆದಿರೆ (ಅರ್ಥಪ. ೬-೯). [?]

ಬಸದಿ, ಬಸತಿ, ಬಸ್ತಿ$_1$, ವಸದಿ, ವಸ್ತಿ$_2$ (ನಾ). [ಜೈನ] ಜೈನದೇವಾಲಯ ; ಜಿನಗೃಹ ; ಚೈತ್ಯಾಲಯ : "ವಸತಿಃ, ಜಿನಾಶ್ರಯಃ—ಈ ೨ ಬಸದಿಯ ಹೆಸರು" (ಶಾಸರಾ. ೦೦೩) ; ಸಿವಮಾರನ ಬಸದಿ (ಎಳ. II, ೪೦೩-೨ ; ಸು. 810) ; ಅರಸನುಮಂ ಮಹಾದೇವಿಯುಮಂ ಕರ್ಮಕ್ಷಯಮುಮಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ (ಪಜ್ಜಾರಾ. ೬೯-೨೬) ; ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯಂ ಪೇಟ್ನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇಟ್ವುದೇಂ ? (ರಾಮಾಶ್ವ. ೬-೨). ಬಸತಿ : ದೇಗುಲಂ ಬಸತಿಯೆ ಜಿನನೆ ತಾಂ ಮೇಗೆ ದೈವವು (ಜಸಪು. ೪೯-೦೨) ; ಶಾರದೆ ನಿನ್ನೊಳು ವಿದ್ಯಾಕಲೆಗಳಿಂ ಹೋರಿ ಸೋತಂಜಿ ಬಸತಿ [ಪಾಂಪಾ. ದಿ]ಯ ಸಾರಿದಳೆನೆ ನಿನ್ನ ಜಾಣ್ಮೆಗೆ ಸೋಲದರಾರವನಿಯೊಳು (ಕುಮಾಸಾ. ೨೯-೬೬).

ಬಸ್ತಿ$_1$: ತೆಂಕಲೂ ಹರಿದ ಅವಳೆ ಗಡಿ ಪಡು ಬಸ್ತಿ ಗಡಿ . . . ಯಿಂತೀ ನಾಲ್ಕುಗಡಿಯಿಂದ ಒಳಗುಳ್ಳ ಮೂವತ್ತು ಹಾನೆ ಗದ್ದೆಯನೂ ಪಾರ್ಶ್ವದೇವರ ಪಡಿಗೆ . . . ಬಿಟ್ಟದು (ಕಇ. I, ೪೦-೩೦: 1417) ; ಬಸ್ತಿಗಳ ನೊಡೆದು ಲಿಂಗಾಗಾರಮೆನಿಸಿ ನತಮಸ್ತಕರ ಬೌದ್ಧರಂ ಭಕ್ತರಂ ಮಾಳ್ದವರ ಮಸ್ತಕದೊಳಭಯವಿತ್ತೆಸೆದನೇಕಾಂತರಾಮಯ್ಯ (ಮರೇಪು. ೨೬-೩) ; ಮೇಲಣ ಬಸ್ತಿಯೊಂದು ನೋಡಲು ಉಳಿದುದರಿಂದ ಎಲ್ಲರು ಅಲ್ಲಿಗೆ ನಡೆದೆವು (ಕಪಪು. ೬-೩೨). ವಸದಿ : ಇವರ್ಗಳ್ ಜೀವಸಸನಮಾಗೆ ನಾಗೂಳ ವಸದಿಗೆ ಕೊಟ್ಟ ಮ [ಣ್ಣು] (ಕಇ. II, ೩-೦೯ ; 859). ವಸ್ತಿ$_2$: ನರಸಿಂಹಸರಸ್ವತಿಗಳ ಜನ್ಮಸ್ಥಳವಾದ ಕಾರಂಜಾದಲ್ಲಿಯೂ ಜೈನರ ವಸ್ತಿ ಇದೆ (ಮಸಾಹಿ. ೨೨).

ಬಸದಿಯಣುಗಿ = (?) : ಅಸಮಾಸ್ತ್ರಸನಾ ಶುಭದಿನದೊಳಗಾ ಬಸದಿಯಣುಗಿಯೊಲವಿಂ ಪಡೆವಂದದಿ ಶಿಶುವಂ ಶಶಿಮಂಡಲಲಲಿತಾನನೆಯರು ಮುದದಿಂ ಪೆತ್ತ ಒಸಗೆಗಳಾ ಪುರದೊಳಗೆಳ್ದುವು ಪಲ ಪಸುರ್ದೋರಣ ಪಳಿಗುಡಿ ಸಂತಸವಱ್ ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ಶೋಭಿಸಿತು (ಪಡುಕಾ. ೨-೩೯). [< ಸಂ. ವಸತಿ./ಪ್ರಾ. ವಸಇ]

ಬಸದು (ನಾ). ವಶ; ಅಂಕೆ ; ಸ್ವಾಧೀನ : ಪೊಸಸ.ಸಿಲ ಮಸಕದ ಬಸದೊಳ್ ಬಸದಾಗಿಯುಮಸಿಯಳೆನಗಸವಸದೊಳೆ ಬೆಸೆದು ಪೋಗಿ (ಆದಿಪು. ೪-೦೨ ಪ) ; ನಸುಸೋಂಕಿಂ ಬಾಲೆಯೆರಂ ಬಸದಾಗಿಸಿ ನೆನೆದು ಸೀತೆಯಂ ರಾಮಂ ದೂರಿಸಿದಂ ಚಂದ್ರಿಕೆಯಂ ಸೇವಿಸಿದ ಚಕೋರಕ್ಕೆ ಬಾಟ್ತಿಯೇ ತುಹಿನಕಣಂ (ಶಂರಾಮಾ. ೧೦-೪೦) ; ಅಂತು ಸಹಸ್ರಲೋಚನನುಮಂ ಬಸದಾಗಿಪ ರಂಭೆಯಾಟಮುಂ . . . ಕುಮಾರನ ಮನಂಬುಗಲಾಱವೆ (ಲೀಲಾವ. ೪-೦೩೭). [<ಬಸ$_1$]

ಬಸನ 'ಬೆಸನ$_2$' ನೋ.

ಬಸನಗಾಱ (ನಾ). ದುಶ್ಚಟಗಳಿಗೆ ಒಳಗಾದವನು : ಜೂಜುಗಾಱಗೆ ಠೌಳಿಗಾಱಗೆ ಬಸನಗಾಱಗೆ ಮೋಹಿಸಿದ ಅಸಿಯಳಿಗಿನ್ನು ಬೇಱುಂಟೆ ಸಾವು (ಸಂಪ್ರಸಾಂ. ೦೬-೦೩೯).

[ಬಸನ (< ಬೆಸನ$_2$) + — ಗಾಱ (< — ಕಾಱ)]

ಬಸನಿ 'ಬೆಸನಿ' ನೋ.

ಬಸನಿಗ 'ಬೆಸನಿಗ' ನೋ.

ಬಸನಿಗತನ (ನಾ). ದುಶ್ಚಟದ ಸ್ವಭಾವವನ್ನು ಹೊಂದಿರುವಿಕೆ; ಕೆಟ್ಟ ನಡವಳಿಕೆಯನ್ನು ಹೊಂದಿರುವಿಕೆ : 'ನಾಯ್ಬಸನಿಗತನ' ಪರಾ.

[ಬಸನಿಗ (< ಬೆಸನಿಗ) + — ತನ]

ಬಸನಿಗೆ (ನಾ). ಇನಿಯನನ್ನು ಕಾಣಲು ಅತುರವುಳ್ಳವಳು; ವಿರಹಾತುರೆ : ಬಸನಿಗೆಯರೊಸಗೆ ಮುತ್ತಿನ ಹಸಿತಂ ಬೆಳ್ವಳಗಿನುರುಳಿ ಬೆಳ್ದಿಂಗಳ ಬೆಳ್ವಸದನಮೆನಲೇಂ ಬಿರಿದುದೊ ಪೊಸಮಲ್ಲಿಗೆ ಜಸದ ಬಿಟ್ತು ಕುಸುಮಾಯುಧನಾ (ಲೀಲಾವ. ೯-೦೯೯). [ಬಸನಿಗ (<ಬೆಸನಿಗ) + —ಎ$_2$]

ಬಸಬಸ (ನಾ). ಒದು ಅನುಕರಣ ಶಬ್ದ: 'ಬಸಬಸನೆ' ಪರಾ.

ಬಸಬಸನೆ (ಅ). ಬಸಬಸ ಎಂಬ ಶಬ್ದದೊಡನೆ : ಸೋಮ ಮಾತಾಡಲಾರದೆ ಅಡ್ಡ ಬಿದ್ದು ಹೂವಯ್ಯನ ಕಾಲು ಹಿಡಿದುಕೊಂಡು ಬಸಬಸ ಬಸನೆ ಅಳತೊಡಗಿದನು (ಕಾಪೂರು. ೩೩೦). [ಬಸಬಸ + — ಅನೆ$_1$]

ಬಸಬಸಾವಣೆ (ನಾ). ಬಸಬಸ ಎಂಬ ಶಬ್ದ : ಆ ಗಾಳಿಯ ಬಸಬಸಾವಣೆ ಮಾತ್ರ ಆ ಶಾಂತತೆಗೆ ಅಷ್ಟಿಷ್ಟು ಭಂಗ ಮಾಡುತ್ತಿತ್ತು (ಹಗಲ. ೩೯).

[< ಬಸಬಸ]

ಬಸಮಟಿ, ಬಸವಳಿ, ಬಸವಟಿ (ಕ್ರಿ). ೧. ಶಕ್ತಿಗುಂದಂ; ಬಲಹೀನವಾಗು : ಒರ್ವರ್ ಋಷಿಯರ್ ನೀರಟ್ಕಿಯಿಂದಂ ಕರಂ ಸೇದೆಗೆಟ್ಟು ಬಸಮಟಿದಿರ್ದೋರಂ ಕಂಡು (ಪಡ್ಡರಾ. ೦೦೪-೪); ಅಂತೆರಡುಂ ಬಲದ

ದಟಂಗಳ್ . . . ಕಾದಿ ಬಸಮಟಿದು ಪೆಱಬಿಂಗಿ ನಿಂದಾಗಳ್ (ಪಂಪಭಾ. ೦೦-೩೦ ಪ). ೨. ಎಚ್ಚರ ತಪ್ಪು : ಮೂರ್ಛೆಹೋಗು ಇಱಿದು ಬಸಮಟಿ[ಯದೆ] ಬೀಟ್ಪೊರನ್ ತೆಱ(ಱ)[ನ] ವೆಚ್ಚದೊಂ (ಪಕ್ಷ. XXIV. ೦೪೬-೦೪; ಸು. ೫೫೬); ಬಸಮಟಿವಿನೆಗಂ ಮುನಸಿಜನಿಸೆ ನಿನ್ನ ಕೆಲಕ್ಕೆ ವಂದೊಡೆನ್ನಂ ಬಿಡೆ ಬಗ್ಗಿಸೆ ಮಧುವಿಕಾರಿ ಕೋಗಿಲೆ ಕಿಸುಗಣ್ಣಿವೆ ನೀಂ (ಪ್ರಭೃತಿ. ೬-೪೯). ಬಸವಳಿ : ೧. ಪೊಜವಡುವ ಭೂಪಾಲನಂ ಕಂಡು ಕಂಗೆಟ್ಟು ಮುಱಿಗಿ ಬಸುಱಿಂ ಹೊಸೆದು ಬಸವಳಿದು . . . ವಿಡುವಿಡದೆ ವಿಡುಕಿತ್ತು ಪೌರಜನವು (ಪಚಕಾ. ೯-೩): ಬಸವಳಿದಾಳುಗಳ ದೇವನು ಮಹಾಪ್ರದೊಳಗೆ ಪವಡಿಸಿದ (ಭಾಷಾಕ್ರೋ. ೬-೬೦). ೨. ತಲೆ ತಿರುಗಿ ತುಟಿಯೊಣಗಿ ಕಂಗಳ ಬಳೆ ಮರಳಿ ಬಸವಳಿಯೆ ಸಾರಥಿ ತೊಲಗಿಸಿದನಾ ರಥವನು (ಭಾಷಾಕ್ರೋ. ೩-೪೬): ಅಸವಸದಿ ಈಡ್ದಱಿದು ರಮಣನನ್ನೆಲ್ಲಿ ಪೋದನೊಯನುತ ಬಸವಳಿದಳು (ಸೌಂದಪು. ೯-೨೯). ೩. ಕುಗ್ಗು; ಕುಸಿ : ಕುಸುಮಕುಲಕ್ಕೆ ಬಸವಳಿದು ಮಂದಾನಿಳಂಗೆ ಮದವುಡುಗಿ ಕಾಮನ ಕಾರಾಗಾರದೊಳಿರ್ಪಂತೆ ಕೇೞ್ವನದೊಳಿರ್ಪ ಬಾಲಕಿಗೆ ಚಂದ್ರನ ದಾಳಿ . . . ಅಱಿಂತಿತಮಾಗೆ (ಗಿಱಿ. ೪-೦೦೪ ಪ); ಪರಶಿವಪದಧ್ಯಾನದನುಸಂಧಾನವೆಡೆವರಿದ ಶಿವಯೋಗಿಯಂತೆ ಸೌಂದರನ ಕಾಣದೆ ಪರವೆ ಬಸವಳಿದಳು (ಸೌಂದಪು. ೦೬-೭೯). ೪. ಕಷ್ಟಪಡು; ಶ್ರಮವಡಂ; ಆಯಾಸಪಡು : ಮುಪ್ಪಿನ ತಂದೆಯ ಬಸವಳಿದ ಬಾಳಿಗೆ ಮತ್ತೊಂದು ಉಪಸರ್ಗ ಬಂದು ಸೇರಿಕೊಂಡಿತು (ಪಾಪಕ. ೦೪) : ಬಲು ಬಳಲಿ ಬಸವಳಿದು ಬಂದೆ, ಬಾ ! (ಕಟ್ಟೀ. ೦೦-೦೬). ೫. ಸಾಯು; ಮರಣ ಹೊಂದಂ : ಜವನುಂಡು ಕಾಱುದಂದದಿನ ವಂದಿರಂ ಕೊಂದು ಬಿನವ ತಾಂ ಬಸವಳಿಯಲುಕವನಂ ವಿಮಾನದಲು ವಾಸವನ ಪುರಕಿವೊಯಿದರವರಗಣಿಯರೊಲವಿಂ (ಪಪ. VIII. ಕೂಕಟ. ೨೨೪-೦೫: 1818). ಬಸವಟಿ : ೧. ಕಾದಿ ಬಸವಟಿದ ಸಾತ್ಯಕಿಯಂ ಭೂರಿಶ್ರವಸ್ಸಮದೊಳ್ ನೆಲಕಿಕ್ಕೆ ಗಂಟಲಂ ಪೆಟ್ಟಿ ತಲೆಯನರಿವಾಗಳ್ (ಪಂಪಭಾ. ೦೦-೦೪೦ ಪ); ಸಗ್ಗಿಗರಾಣ್ಮನ ಘನಕರಿಘಟೆಗಳ್ ಬೇಸಗೆಯ ಬಿಸರಕ್ಕೆ ಬಸವಟಿದು. ಬಾಯಾಱಿ, ಮುನ್ನೀರ ನೀರಂ ಕಂಡು, ಪಿಂಡುಗೊಂಡು ಬಂದು (ಪಾಪಕ್ಕ. ೬-೬), ಬಸವಟಿದನೇ ಮರುಳ್ದು ನಮ್ಮ ಕಲಿ ! (ಪಕ್ಕಾ. ೦೪-೨೫೬). ೨. ಇದಿರಾಂತು ಕಾದಿ ಸತ್ಯ ವಾಯಸವೀರನಿಕಾಯ ಮುಮನಲ್ಲಿಯೆ ಸೊಂದು ಬಸವಟಿದಿರ್ದ ಬಲಿಭುಗ್ಬಲಪ್ರಧಾನರಂ ಕಂಡು (ಪಂಪಭಾ. ೨೦೬-೦೪); ಅಂತು ಬಸವಟಿದು ಬೀಟಿ ಪೊಯ್ದುದುಂ ಮೂರ್ಧಪೋದನಂ ಗತಪ್ರಾಣನೆ ಗೆತ್ತು ಮಾಯಾವಿ ಮಗುಟಿ ಪೋವುದುಂ (ಪಂಪಾಪಪು. ೦೦-೨೬ ಪ). ೪. ಬಱಿಯ ವಿಷಯದ ಸವಿಗೆ ಬಸವಟಿದು ಸೊರ್ಕಿ ಮಯ್ಮಱಿತು ಬಿಟ್ಟನೆ ಬೞಿತು ಮತಿಗಿಡುವೆನೊಮ್ಮೆ (ಗಿಱಿಕೃಪೋ. ೬೨-೨). [ಬಸ್ + ಅಟಿ1]

ಬಸಮುಱು (ಕ್ರಿ). ಸ್ವಾಧೀನ ತಪ್ಪು : ಕಾಲಡಿಯಿಂ ಕೊರಲ್ವರೆಗಮಿಂದಿಗಿಯೆಟ್ಟ ಫಣೀಂದ್ರಸಾಯಕಂ ಕೀಲಿಸಿದಂತೆವೋಲ್ ಬಗಿಯ ಸುತ್ತುವುದುಂ ಬಸಮುತ್ತು ಮುಟ್ಟಿ ಕಣ್ಣಾಲಿಗಳಟ್ಟಿಗೆಟ್ಟು ಕಟುಕೇತನನಾಗಳೆ ಮುಟ್ಟಿ ಪೋಗೆ (ಪಂಚಾಪು. ೦೬-೦೪೪). [ಬಸ್1 + ಉಱು]

ಬಸಯಿಸು (ಕ್ರಿ). ವಶಪಡಿಸಿಕೊಳ್ಳು; ಹಿಡಿತದಲ್ಲಿಟ್ಟುಕೊಳ್ಳು : ಬಸಯಿಸಲಿಂಬುಗೆಯೆಲೊಳಪೊಯ್ದಲೊಡಯಿಡಿಸಲ್ ಪ್ರ ಮೋ ದ ಮ ಂ ಪೊಳೆಯಿಸಲಾಱಿಸಲ್ ನೆರೆದುಮೊಲ್ಲದೆ ಚಿತ್ತಮುದಾತ್ತಚಿತ್ತಯಾ (ಪಾಂಪಪ್ರ. ೯-೦೦೬). [ಬಸ್1 + — ಇಸು3]

ಬಸರಾಯಿ (ನಾ). ಒಂದಂ ಬಗೆಯ ಬಾಳೆ : ಉತ್ತಮಜಾತಿಯ ಈ ಹಣ್ಣುಗಳಲ್ಲಿ 'ಬಸರಾಯಿ' ಎಂಬುದನ್ನು ಹಾವು ಮರೆಯಲುಂಟೆ ? (ಹೊಸ್ತಿಪು. ೦೦). [← ಮರಾ. ಬಸರಾಳ]

ಬಸರಿ. ಬಸಿರಿ1. ಬಸುರಿ2 (ನಾ). ೧. ಒಂದು ಬಗೆಯ ಮರೆ : "ಬಸರಿ ವರ್ಕಟೀ ಪ್ಲಕ್ಷಾಹ್ವಂ" . . . (ಪಸ್ತ್ರಕೋ. ೩೩-೨); ಅತ್ತಿಯ ಬಸರಿಯ ಗೋಳಿಯ ಮತ್ತರಳಿಯ ವಟದ ವರ್ಣನಡಗಂ ಜೇನಂ ಬತ್ತರ ಮದ್ಮಮನಾಗೆಂಬುತ್ತಮ ಸಂಸೇವ್ಯ ಮೂಲಗುಣಮಾಯೆಂಟುಂ (ರಕಾಗತ್ಕೃ. ೩-೦೩೨) ; ಬಸರಿಯಿನಶ್ವತ್ಥಕೋಟಿಕದೀೞ್ದುಮದಿಂ ಕುಱಿ ಹಸ್ರ ಕರ್ಣ ದಿಂದೆಸಗುವ ದಂತಿ (ಪಟ್ಟಿಪು. ೪-೦೫). ಬಸಿರಿ1: ೧. ಸಂಪಗೆ ಬಸಿರಿ ನೇಱಿಲೆ ಲವಂ ಕೌಂಗು ಸುರಹೊನ್ನೆ ಹೊನ್ನೆಯಿಂದಾ ಬನಂ ಕಣ್ಗೆಸೆದುದು (ಪಂಪಪು. ೩-೦೪). ಬಸುರಿ2 : ೧. "ಪರ್ವತಕನಲು ಬಸುರಿಯಕ್ಕುಂ" (ಪುಂಗಣಾ. ೩೩-೨೦): ಇನವಾರದಂದು ಬಸುರಿಯು ಕೊನೆಯಂ ಕೊಂಡಿಡದೆ ಬಬಿದು(ಳಿ) ಕೆಸಱಿನಿಳದಂ ಪೂಬ್ದನಿತಱಿಂಳಾ ನರವ್ಮಲಿಯೆನ್ನನಿತುಂ ಮವಿರ್ದೆಡೆಯನಱಿಯದಂತಿರೆ ಪೋಕುಂ (ಕೋಕೋಪ. ೯-೦೩೦) ; ಅರಳಿ: ಬಸುರಿಯು ಪ್ರಾಲೇಱಿದ ಕೊಂಬನುಡಿದು ಮಧುವಿಮಿಶ್ರಿತದಿಂದಾಳೋಚಿಸ ದಿರ್ಮ್ಮವುದಾ(ದೀ)ರೇಟು ದಿನಂಬರ ಹಯಂಕೆ ಪ್ರಾಸವಿನಾಶಂ (ಅಕ್ಷಣಾ. ೧೦-೩೨). 'ಕಬ್ಬಸಂರಿ' ಪರಾ. ೨. ಜಟೆ ಎಂಬ ವೃಕ್ಷಗಳು ಬೆಳೆದಿರುವ ಭೂಮಿ : ತನ್ನಾಳ್ವ ಮುಳ್ಳಿನಾಡ ಕೋಡೂರಲ್ಲಿ ಊರ ಮೂಡಣ ಬಸುರಿಯಂ ರಾಜಗೋವಿಂದನು ಧಾರಾಪೂರ್ವ್ವಕಂ ಮಾಡಿ ಕೊಟ್ಟುರು (ಪೌಶಾ. IX-1. ೫೭೨-೦೬; 1182); ಸೆಟ್ಟಿಯ ಕೆಱಿಯ ಮೊದಲೇರಿಯಂ ಮೂಡಲು ಬಸುರಿಯ ನಟ್ಟ ಕಲ್ಲು ಗಡಿಯಾಗಿಯೂ ಗಡಿ ಬಡಲು ಗದ್ದೆ ಕಂಬ ೧೫೦ (ಎಪ. XI. ಕೂಳಕ್ಕೆ. ೦೨೪-೬೦ : 1208 ?).

ಬಸಲೆ1. ಬಚ್ಚಲು2. ಬಚ್ಚಲಿ, ಬಸಳೆ (ನಾ). ೧. (ತರಕಾರಿಯಾಗಿ ಬಳಸುವ) ಒಂದು ಬಗೆಯ ಸಸ್ಯ : "ಕಂಬಿ, ಮಹೋದಕಾ ಇದು ಬಸಲೆ" (ಪಾಪಕಾ. ೦೦೨); ಓಡ ಕುದುರೆಯ ಮೇಲೆ ಮಸಿಯ ಹಲ್ಲಣವ ಹಾಕಿ ಬಸಲೆಯ ಹಂಬ ಬಾಯಿಗೆ ಕಟ್ಟಿ (ಕೂಲಂಪಾಂ. ೨೪-೦೦); ಕುಪ್ಪಿ ಸೋರೆ ಬಸಲೆ ನುಗ್ಗೆ ಕಯಿಕೇರೆ ನಱುವಲು ಹಱುಹೆ ಮೊದಲಾದ ಹಸುರು ಸೊಪ್ಪ . . . ಬೇಱಿಬೇಱಿ ಕಡುವಿರಿದು ಹುಸಾಗಿ ಕೊಣಬಂ ಕಾಸಿ ತಾಳಿಸಿ ಬದನೆಗಾಯಿಗಳನಿಡುವುದು (ಸೂಪಕಾ. ೪-೪೬). ೨. ಬಾಯಿಯಲ್ಲಿ ವಿಳಂವ ಬೊಕ್ಕೆ,-ಗುಳ್ಳೆ; ಬಾಯಿಹುಣ್ಣು : ಶ್ರಮಿಕುಲಮುರ್ಬುಗೂ ಮೇಱಿನೊಳಮೋಳ್[ವನೆ] ಬಾಯ ಬಸಲೆಯುಂ ಸಂಭವಿಸಂ (ಪಪಪ. ೦೬-೪೬): ಹೊಮ್ಮುಗಳು :—ಇದಂ ನಿಂಬೇಹುಳಿಯಲ್ಲಿ ತೇದು ತೊಡೆಯಲು ಬಾಯ ಬಸಲೆ(?) ಮಾಣ್ಗುಂ (ಪಕ್ಕಿ. ೬). ಬಚ್ಚಲು2 : ೧. 'ಕಾವುಬಚ್ಚಲಂ' ಪರಾ. ಬಚ್ಚಲಿ : ೧. 'ಕಾವುಬಚ್ಚಲಿ' ಪರಾ. ಬಸಳೆ : ೧. ಉಪೋದಿಕೆ (ಬಸಳೆ)ಯು ವಂದನಾಶಕವು (ಔಷ್ಯಗು. ೦೪೬-೬೨); ಬಸಳೆಸಪ್ಪು ಮೆಣಸುಗೆಸಪ್ಪು ತೊಗರಿಬೇಳೆ ಕಡಲೆಬೇಳೆ . . . ಇವಿಷ್ಟು ಶೋಣಿತವಾತಕ್ಕೆ ಶಮನ (ಧ್ಯಾಶ್ಲೋ. ೬-೩); ಬಸಳೆಯ ಚಪ್ಪರ ನಿಜವಾಗಿಯೂ ದೊಡ್ಡದಿತ್ತು, ಅತ್ತಿತ್ತ ಬಸಳೆಯ ಕಂಡಿಗಳು ನೇತಾಡಿಕೊಂಡಿದ್ದುವು (ಪಪಚ. ೦೧೪). ೨. ಬಿದ್ದು ನಾಲಗೆ ಬಾಯ ಬಸಳೆಗಳೆದ್ದು ನಡೆನುಡಿಯಡಗಿ . . . ಹುಲುಗಡಿದೆದ್ದು ಕಣ್ಣುಗಳುಸುರು ಭೋರಿಟ್ಟುದ ಕೇಳುತಲಿಹನು ನರನೀ ಪರಿಯ ಮರಣದಲಿ (ಕ್ರಪ್ರಾ. ೯-೬೬).

ಬಸಲೆಯ ಬಾಡು = ಬಸಲೆಯ ಸೊಪ್ಪಿನಿಂದ ತಯಾರಿಸಿದ ವ್ಯಂಜನ ಪದಾರ್ಥ : ಮಸಣದ ಬೂದಿಯಂ ತಳಿದರೋ ತಲೆಸೇಸಗೆ ಮಿಂಡರೊತ್ತೆಯೇಂ ಬಸಲೆಯ ಬಾಡೊ (ಸೂಕ್ಷ್ಮಸು. ೯-೧೩೦).

[ದೇ.ಪ ತಮಿ. ಪಚಳೈ, ಪಚಿರಿ, ಪಯಿರಿ, ವಚಳೈ, ವಚಳ್ಳೈ, ವಯಲ್ಚೈ; ದುಲ. ಪಚಳ, ಪಸಳ, ವಸಳ, ವಯಲ; ತುಳು. ಬಸಲೆ, ಬಚ್ಚಲೆ, ಬಚ್ಚಳೆ; ತಲು. ಬಚ್ಚಲಿ]

ಬಸಲೆ2 (ನಾ). (?) : ಕೊಂಡಗಿತ್ತಿಯರು ಎಕ್ಕಸೆಕ್ಕೆಯರವರವರುಗಳ

ನಕ್ಕು ಬಸಲೆಯರುಗಿದು ತಿಂಬಾ ರಕ್ಕಸಿಯರಾಶಾಪಿಶಾಚಿಯರಿಚ್ಛೆಗಾತಿಯರು (ಬಸವು. ೪೦-೫೨). [?]

ಬಸವ (ನಾ). ೧. ಗೂಳಿ; ಹೋರಿ : "ಉಕ್ಷಾ, ಭದ್ರಃ . . . ಸೌರಭೇಯಃ, ಗೌಃ—೯ ಎತ್ತುಗಳ ಹೆಸರು, ಬಸವನಿಗೂ ಹೆಸರು, ವೃಷಭ" (ಸಿದ್ಧಾಂತಿ. ೨೯೨); ಬಸವಂ ಸತ್ತಿರ್ದಡೆ ಸಂತಸದಿಂದಂ ಮೀಸಿ ಪೂಜಿಸುತೆ ಭಂಡಿಯೊಳೇಱಿಸಿ ಸುತ್ತಿ ಪೂಗಳಂ ಪಾಡಿಸುತೆ ಕೊಂಡೊಯ್ದು ಪೂಟ್ದುಮೀವರ್ಮೂಢರ್ (ಸಮಪ. ಅಮಬಂಧ ೩೬೦); ಕೊಳನಂ ತಾವರೆಯಂ ತಳರ್ತ ವನಮಂ . . . ಬಸವನಂ ಬೆಳ್ಳಕ್ಕಿಯಂ . . . ದೇವರ್ಕಳಂ ತುಂಬಿಯಂ ತಿಳಿಯಲ್ ಸ್ವಪ್ನದಿ ಲೇಸು (ಸೋಮೇಶ. ೬೯); ಬಸವನ ಹಿಂದೆ ಬಾಲ (ಗಾಡ). ೨. ಶಿವನ ವಾಹನವಾದ ನಂದಿ; ವೃಷಭ : "ಬಸವನೆನೆ ಗೊಂದೆಯೆನೆ ಚಾರುತರ ವೃಷಭನೊಳ್ವೆಸರಕ್ಕು" (ಶಬ್ದಮಂ. ೬). ೩. ದೇವತೆಗಳ ಪ್ರೀತ್ಯರ್ಥವಾಗಿ ದೇವಸ್ಥಾನಗಳಿಗೆ ಮೀಸಲು ಬಿಟ್ಟ ಗೂಳಿ,—ಹೋರಿ : ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ ಕಱು ಹೋರಿಗಳು ಬಸವಗಳಪ್ಪುವೆ ಲಿಂಗಮುದ್ರೆಯನೊತ್ತ ದನ್ನಕ್ಕರ (ಶನ್ನಪ. ಕ. ೦೯೨-೪೨೪); ದೇವರ ಹೆಸರಿನ ಮೇಲೆ ಬಿಟ್ಟ ಬಸವ, ಬಸವಿಗಳು ಕಾಲಗತಿಯನ್ನು ಹೊಂದಿದರೆ ಅವುಗಳನ್ನು ಕೊಂಬು ತಮಟೆ ವಾದ್ಯ ಸಮೇತ ತೆಗೆದುಕೊಂಡು ಹೋಗಿ ಸಮಾಧಿ ಮಾಡಿ ಅದರ ಮೇಲೆ ಗಿಡವನ್ನು ನೆಡುತ್ತಿದ್ದರು (ಹುಟ್ಟಿಹ. ೭೦). ೪. ಶಿವನ ಪ್ರಮಥಗಣದಲ್ಲಿ ಒಬ್ಬ : ಆ ಪ್ರಣವಸ್ವರೂಪರಾದ ಬಸವಾದಿ ಅಸಂಖ್ಯಾತ ಪ್ರಮಥಗಣಂಗಳು . . . ನಮಸ್ಕಾರವ ಮಾಡೆ (ಶಿಪಪ. ೫೨-೪೫). ೫. ವೀರಶೈವಧರ್ಮಪ್ರವರ್ತಕ ಮತ್ತು ಪ್ರಸಿದ್ಧ ವಚನಕಾರನಾದ ಒಬ್ಬಾತನ ಹೆಸರು ; ಬಸವಣ್ಣ: ಬಸವನಿರವ ನಿಱಿದು . . . ಬಸವನ ಬಯಲ ವಿಚಾರವ ತಿಳಿದು ಭ್ರಮೆಯನಳಿದು ಅನು ಬದುಕಿದೆನಯ್ಯಾ (ವೀರಪ. ಕ. ೨೩-೬೯); ದೇವ ಮಮಗುರು ಲಿಂಗ ಜಂಗಮದೇವಯೆನುತಂ ಬಸವನಾ ಪ್ರಭುದೇವರ ಶ್ರೀಪಾದಪದ್ಮಕ್ಕರ್ಚನೆಯ ಮಾಡಿ (ಬಸವು. ೯-೦೩). ೬. (ಅಲಂ) ಗೂಳಿಯಂತೆ ತಿರುಗುವವನು; ಗುರಿಯಿಲ್ಲದೆ ಸಂತ್ತುವವನು : (ಕ).

ಬಸವತೃಣ = ದೂರ್ವೆ ; ದರ್ಭೆ (?) : ಹಸುಮಕ್ಕಳಾಗಿ ಕುಳ್ಳಿರ್ದ ಹರ ಹರಿಯಜರಿಗೆ . . . ಮೂವರೆನ್ನ ಸುತರಾಗಿಯೆನೆ ಶಶಿಧರಂ ಯಜ್ಞಕರ ದೂರ್ವಿಜಂ ದೂರ್ವಾಸವೆಸರಾದವೊಲು ಬಸವತೃಣಕೆ ಪೆಸರಿಟ್ಟವನ ಚರಣಾಂಬುಜಕ್ಕೆ ಶರಣು (ರಿಶಿಸಂ. ೩೩-೩೩). ಬಸವನ ಕಣ್ಣು = ಕಣ್ಣಿನ ಅಂತರ್ದ್ರವವನ್ನು ಶೋಧಿಸುವ ಜರಡೆಯಲ್ಲಿ ಉಂಟಾಗುವ ದೋಷ; ಕಣ್ಣಿನ ಒಂದು ಬಗೆಯ ರೋಗ : ಬಸವನ ಕಣ್ಣುಗಳು ಈಗಲೂ ಒಂದು ಕಠಿನ ಸಮಸ್ಯೆಯಾಗಿಯೇ ಉಳಿದಿದೆ (ಎಮ್ಮುದ್ಯ. ೭೫). ಬಸವನ ಕೊಂಬಿನ ಹುಳ=ತಲೆಯ ಮೇಲೆ ಕೊಂಬಿನ ಆಕಾರದ ರಚನೆಯಿರುವ ಒಂದು ಬಗೆಯ ಹುಳು; ಶಂಬುಕ : (ಕ). ಬಸವನ ಕೋಡಿನ ಹುಳ=ಬಸವನ ಕೊಂಬಿನ ಹುಳ : (ಕ). ಬಸವನ ನೋಂಪಿ = ನಂದಿಯನ್ನು ಕುರಿತು ಆಚರಿಸುವ ವ್ರತ,—ನೇಮ : ಬಸವನ ನೋಂಪಿಯನ್ನೋಂತು ಧೈರ್ಯದಿಂದೆ ಚಿತ್ತಜಾರಿಯನೊಲಿಸಿ ಗಂಡನಸುವಂ ಪಡೆದು (ಶಿಪಪು. ೫೫-೪೫). ಬಸವನ ಪೂಜೆ = ಬಸವನ ನೋಂಪಿ : ಹಸುಮಗಳು ಚನ್ನವ್ವ ಬಸವನ ಪೂಜೆಯ ಮಾಡಿ ಬಸವಂತಿ ಎಂಬ ಮನೆ ಮಾಡಿ . . . ನಿನ್ನಯ ಪ್ರಾಣ ಪಡೆದವಳು (ಜಗೀತೆ. ೦೨೦). ಬಸವನ ಬಿಡು, ಬಸವ ಬಿಡು = ದೇವರ ಹೆಸರಿನಲ್ಲಿ ಹೋರಿ, ಕುದುರೆ, ಕುರಿ ಮೊದಲಾದುವುಗಳನ್ನು ಮೀಸಲಾಗಿ ಬಿಡು : ಆ ಕುದುರೆಯನ್ನು ಗೊಂಡೇನಹಳ್ಳಿಯ ಶನಿ ಮಹಾತ್ಮನ ದೇವಸ್ಥಾನಕ್ಕೆ ಬಸವನ ಬಿಟ್ಟಿದ್ದರು (ಪಸ್ನೂರು. ೩೦೨); ನಮ್ಮ ದೇಶದಲ್ಲಿ ದೇವಸ್ಥಾನಗಳಿಗೆ ಗಂಡೆತ್ತನ್ನು 'ಬಸವ' ಬಿಡುತ್ತಾರೆ (ಬಾಂಪ್ರ. II, ೭೭೪). ಬಸವನ ಮುದ್ರೆ = ದೇವಸ್ಥಾನಗಳಿಗೆ ಮೀಸಲು ಬಿಡುವ ಮೊದಲು ಹಾಕುವ ಮುದ್ರೆ,-ಠಸ್ಸೆ : ಹೊದ್ದಿ ಮೆಲ್ಲನೆ ಸನ್ನೆ ಮಾಡಿ ಕರೆವ ಈ ಬುದ್ಧಿಯು ಒಳ್ಳೇದೇನೆ ಗೋಪಿ ಮುದ್ದು ಮಾಡಿ ಸಾಕಿ ಮಗನಿಗೆ ಬಸವನ ಮುದ್ರೆಯ ಒತ್ತಿದ್ಯೇನೆ (ಪುರಂದ. ೩-೨೦೬-೩). ಬಸವನ ಮುದ್ರೆ ವರಹ = (ಬಸವನ ಮುದ್ರೆಯನ್ನು ಹೊಂದಿರುವ) ಐದು ರೂಪಾಯಿ ಬೆಲೆ ಬಾಳುವ ಒಂದು ಚಿನ್ನದ ನಾಣ್ಯ : (ಕ). ಬಸವನ ಹುಳು = ಬಸವನ ಕೊಂಬಿನ ಹುಳು : ಎವರ್‌ಗ್ಲೈಡ್ ಹದ್ದುಗಳು ಬಸವನ ಹುಳುಗಳನ್ನು ಮಾತ್ರ ತಿನ್ನುತ್ತವೆ (ಪಕ್ಷಿ. ೩೨); ಅವಳು ಹೋದ ಜನ್ಮದಲ್ಲಿ ಬಸವನ ಹುಳು ಆಗಿದ್ದಿರಬೇಕು ! (ಶಾಂತಲಾ. ೨೪೪). [< ಸಂ. ವೃಷಭ. / ತೆಲು. ಬಸವ]

ಬಸವಂತ 'ಬಸಂತ' ನೋ.

ಬಸವಂತಕಲ್ಲು (ನಾ). ಬಸವನ ಗುರುತಿರುವ ಕಲ್ಲು (?) : ಅಲ್ಲಿ ಬಹ ವರ್ತ್ತನೆಯನು ತುಳುವೇಶ್ವರದೇವರಿಗೆ ನಡೆಸಿ ಬಹುದು ದೇವರ ಬಸವಂತ ಕಲ್ಲ ಮುಂದೆ ನಾಲ್ವರು ನಾಲ್ವಾಡರು . . . ನಡಸು ವಂಥಾ ಸೀಮೆ ಸ್ವಾಮ್ಯಉ (ಸೌಇಇ. IX-ii, ೪೫೭-೦೪; 1456). [ಬಸವಂತ, (< ಬಸವ)+ ಕಲ್ಲು (<ಕಲ್$_3$)]

ಬಸವಂತಗೊಳಿಸು (ಕ್ರಿ). ಓಕುಳಿ ಎರಚು : ಜೋಡು ಜರಿದು ಬಿತ್ತರಿಸಿದುವಂಬುಗಳು ಮೆಯ್ಯೊಳು ಬಿಸಿನೆತ್ತರ ಬಸವಂತಗೊಳಿಸಿ (ಮೋಹತ. ೩೬-೫೨). [ಬಸವಂತ (<ಬಸಂತ) + ಕೊಳ್$_1$+ —ಇಸು$_3$]

ಬಸವಂತಿ (ನಾ). ೧. ಬಸವಿ ; ಸೂಳೆ : ನೀನು ಬಸವಂತಿ ಇರುವೆ. ಯಾರಿಂದ ಆಯಿತು ಹೇಳು . . .ಎಂದು ಬೆದರಿಕೆ ಹಾಕಿದರು (ಹೊಲಮ. ೭೦). ೨. (?) : ಹಸುಮಗಳು ಚನ್ನವ್ವ ಬಸವನ ಪೂಜೆಯ ಮಾಡಿ ಬಸವಂತಿ ಎಂಬ ಮನೆ ಮಾಡಿ . . . ಚನ್ನವ್ವ ನಿನ್ನಯ ಪ್ರಾಣ ಪಡೆದವಳು (ಜಗೀತೆ. ೦೨೦). [< ಬಸವಿ ?]

ಬಸವಡು (ಕ್ರಿ). ವಶವಾಗು ; ಅಧೀನವಾಗು : ಬಸವಟ್ಟುದು ಚಿನ್ನ ಪಟ್ಟಣಂ ಪೊಸತಾಂಧ್ರಂಗೆ ಪೊದಟ್ಟುದಿಟ್ಟಣಂ ಅಸಿದಾದುದವಂಗೆ ಮಂಗಲಂ ಬೆಸದಿಂ ಪಿಂಗಿತು ನಾಗಮಂಗಲಂ (ಜಕವಿ. ೨-೭೭). [ಬಸ$_1$+ಪಡು$_1$]

ಬಸವಡೆ (ಕ್ರಿ). = ಬಸವಡು : ತುರುಕರ ಬಸವಡೆದಾ ದುರ್ಗವಿಟ್ಟೊಡೆ ಪಿರಿದಾಯಸ ಮುಂದಕಹುದು (ಕಂಪಿ. ೦೬-೩೩). [ಬಸ$_1$+ಪಡೆ$_1$]

ಬಸವಣ 'ಬಸವಣ್ಣ' ನೋ.

ಬಸವಣ್ಣ, ಬಸವಣ (ನಾ). ೧. ಎತ್ತು; ಹೋರಿ: ಬಸವಣ್ಣ ಭೂಮಿ ಉಳುತ್ತಾನೆ, ಭೂಮಿತಾಯಿ ಬೆಳೆ ಕೊಡುತ್ತಾಳೆ (ಕಪಪು. ೨-೬೨); ನಮ್ಮೂರಿನ ರೈತರ ಮೇಲೆ ಬೀಳುವುದಕ್ಕಿದ್ದ ಅನೇಕ ವಿಧವಾದ ಕತ್ತಿಯ ಪೆಟ್ಟುಗಳಿಗೆ ಕಾಲುನಡೆಯು ಬಲವಾದ ಗುರಾಣಿಯಾಗಿದ್ದಿತು. ಆದ್ದರಿಂದಲೇ ಕೆಟ್ಟರೂ ಬಸವಣ್ಣನಿಂದ, ಬದುಕಿದರೂ ಬಸವಣ್ಣನಿಂದ ಎಂದು ಅನ್ನುತ್ತಿದ್ದರು (ಹುಟ್ಟಿಹ. ೭೦). ೨. ಶಿವನ ವಾಹನ ; ನಂದಿ : ನಮ್ಮ ಮನೆಯ ಹತ್ತಿರ ಬಸವಣ್ಣನ ದೊಡ್ಡ ಗುಡಿ ಇದೆ (ಕೂಡಿ). ೩. ವೀರಶೈವಧರ್ಮಪ್ರವರ್ತಕನೂ ಪ್ರಸಿದ್ಧ ವಚನಕಾರನೂ ಆದ ಒಬ್ಬಾತನ ಹೆಸರು : ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ ತನ್ನ ಕರುಣಭಕ್ತಿ ಪ್ರಸಾದವ ಕೊಟ್ಟನು (ಪುಹಾದೇ. ಬ. ೬೯-೦೯೯); ಎನ್ನುವಂ ಪದುಳದೊಳಿರಿಸಿ ಪೊರೆ . . . ಕಲಿಯುಗದೆರಡನೆಯ ಮುಕ್ಕಣ್ಣ ಬಸವಣ್ಣ (ಬಸವು. ೦-೯). ಬಸವಣ : ೩. ಸೊಕ್ಕಿ ಬಸವಣನೆನ್ನ ಮೂರಿಗೆ[ಭಾಕಾಂ. ಮಾತಿಗೆ] ಸಿಕ್ಕಿದನಲಾ ಎನುತ (ಬಸವು. ೩೦-೦೩). [ಬಸವ+ಅಣ್ಣ$_1$]

ಬಸವನ ಗಿಡ (ನಾ). ಒಂದು ಬಗೆಯ ಮರ ; ನಂದಿ : "ತುನ್ನಃ

. . . ನಂದಿವೃಕ್ಷಃ— ೬ ನಂದಿ ಎಂಬುವ ಮರದ ಹೆಸರು, ಬಸವನ ಗಿಡ" (ಸಿದ್ಧಾಂತಿ. ೧೪೦). [< ಬಸವ+ಗಿಡ (< ಗಿಡು)]

ಬಸವನ ಪತ್ರೆ (ನಾ). ಗರಿಕೆ. ಬಿಲ್ವ ಮುಂತಾದ ಎಲೆ; ಎಸಳು: ಕಣದಲ್ಲಿ 'ಶಂಕರಗಂಡ'ನ ರಾಸಿಯ ಸತ್ತಲೂ . . . ಬಸವನ ಪತ್ರೆಯ ಬಣವೆಗಳ ಕೋಟೆಕಾವಲು (ಪಳಸಾ. ೨೩೬). [< ಬಸವ + ಪತ್ರೆ]

ಬಸವನ ಪಾದ (ನಾ). ೧. ಒಂದು ಬಗೆಯ ಸಸ್ಯ ಮತ್ತು ಅದರ ಹೂವು: ಬಸವನ ಪಾದ, ಕುಳಿಆಚಲು (ಸ್ಯಾ ಕಿಗ. ೦೨-೨೦೯); ಬಸವನ ಪಾದ ಗಂಟೆಹೂ, ತುಂಬೆ ಮತ್ತು ಚೆಂಡುಹೂಗಳನ್ನು ಅಂದವಾಗಿ ಜೋಡಿಸಿದ್ದರು (ಕಪಪ್ರ. IV, ೩೬). ೨. ಒಂದು ಬಗೆಯ ಮರ: ಬಸವನ ಪಾದ, ವಿಸ್ತಾರವಾಗಿ ಬೆಳೆಯುತ್ತದೆ. ಕಟ್ಟಿಗೆಯು ಕೆಲಸಕ್ಕೆ ಬರುವುದಿಲ್ಲ (ಕಶಾಗ. ೯೪). ೩. ಒಂದು ಬಗೆಯ ಜೋಳ: ಬಸವನ ಪಾದ, ಪುಲ್ಗರ . . . ಕೊಡಮೂಕನ ಜೋಳ ಈ ಯೆಂಟು ಜಾತಿ (ಜೋಳ)ಗಳನ್ನು . . . ಬಿತ್ತುವರು (ಕಶಾಗ. ೨೬೦). [< ಬಸವ+ಪಾದ]

ಬಸವನ ಸುಳಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು: ಇರುವಂತಿಗೆ ಬಸವನ ಸುಳಿ ಪರಿಮಳಿಸುವ ಪಚ್ಚದವನ . . . ಬಂದುಗೆ ಪರಿಪರಿಯ ಸುಗಂಧಕುಸುಮದಳಕುಳಮಿರ್ಕುಂ (ಜಪಾಸ್ತ್ರ. ೬-೪೬). [< ಬಸವ + ಸುಳಿ$_2$ (< ಸುಟ್ಟಿ$_2$)]

ಬಸವನ ಹಳ್ಳಿ (ನಾ). ಒಂದು ಊರಿನ ಹೆಸರು: ಮಣ್ಣಂ ಬಳಸಿದ ಪ್ರಭುಗಳ್ ಪೆರ್ಮ್ಮಾಡಿಗಾಮುಣ್ಣ ಮುಗುಳಿಯ ನಾಗಯ್ಯ ಬಸವನ ಹಳ್ಳಿಯ ಬಸವಯ್ಯ (ಎಕ.XV. ಕೇರೂರು. ೩೦೮-೦೧; 971). ಇದು 'ಬಸವನ ಪಳ್ಳಿ' ಎಂಬುದರ ಅಪಲಿಖಿತವಿರಬಹುದೆ? [< ಬಸವ+ಹಳ್ಳಿ (< ಪಳ್ಳಿ$_1$)]

ಬಸವಯ್ಯ (ನಾ). ಒಬ್ಬಾತನ ಹೆಸರು: ಪೊಣ್ಮುನ್ದದ ಬಾರಾನ್ದರವಯ್ಯ ತಗಡೂರ ಕೆಳೆಯ ಕಾಳಗದೊಳೆ ಬಸವಯ್ಯನ ಮುನ್ದೆ ಕಾದಿ ಸತ್ತು ಸಗ್ಗೆಯದ (ಎಕ. X, ಬೌಂಗ್. ೪೪-೬; ಸು. 950); ಮಣ್ಣಂ ಬಳಸಿದ ಪ್ರಭುಗಳ್ ಪೆರ್ಮ್ಮಾಡಿಗಾಮುಣ್ಣ ಮುಗುಳಿಯ ನಾಗಯ್ಯ ಬಸವನ ಹಳ್ಳಿಯ ಬಸವಯ್ಯ (ಎಕ. XV. ಕೇರೂರು. ೩೦೮-೦೦ ; 971). [ಬಸವ + ಅಯ್ಯ$_{61}$]

ಬಸವಸೆಟ್ಟಿ (ನಾ). ಒಬ್ಬಾತನ ಹೆಸರು: ಬಸವಸೆಟ್ಟಿಯ ಮಗಂ ಚಬ್ಬಿಸೆಟ್ಟಿ (ಎಕ. IX, ಬೊಕ್ಕಬ. ೯-೬; 918); ನಲ್ಲಮುರುಗಸೆಟ್ಟಿಯ ದೊಗ್ಗಬ್ಬೆಯ ಮಗಂ ಸುಪುತ್ರಂ ಪುಟ್ಟಿದ ಬಸವಸೆಟ್ಟಿ (ಎಕ. III (R), ಹೆಗ್ಗಡ. ೫೮-೯; 1020). [ಬಸವ + ಸೆಟ್ಟಿ]

ಬಸವಳಿ 'ಬಸಮಟಿ' ನೋ.

ಬಸವಳಿಸು (ಕ್ರಿ). ಆಯಾಸಗೊಳ್ಳುವಂತೆ ಮಾಡು; ಬಳಲಿಸು; ದಣಿಸು: ಬಸವಳಿಸದೆ . . . ಹಸಗೆಡಿಸದೆ ಹುದುಗಿಸದೆ ಬಸಿಱೊಳು ಬಂದ ಪೆಣ್ಣಕ್ಕಳ ಮಱುಕವ ಸೊಸೆಯರೆಡೆಯೊಳೆಸಗುವುದು (ಪಂಪಭಾ. ೪-೨೫); ವಿಚಾರ ತರಂಗಗಳು ಮುತ್ತಿ ಬಸವಳಿಸಿದವು (ಪಂಚತಂ. ೫೬).

[ಬಸವಳಿ (< ಬಸಮಟಿ) + — ಸು$_1$]

ಬಸವಟಿ 'ಬಸಮಟಿ' ನೋ.

ಬಸವಿ (ನಾ). ೧. ದೇವರ ಹೆಸರಿನಲ್ಲಿ ದೇವಾಲಯದ ಸೇವೆಗಾಗಿ ಮೀಸಲು ಬಿಟ್ಟ ಹುಡುಗಿ; ತಂದೆತಾಯಿಗಳಂ ತಮಗೆ ಒದಗಿದ ಯಾವುದೋ ದುರ್ಭರಸಂದರ್ಭದಲ್ಲಿ ತಮ್ಮ ಮಗಳನ್ನು ದೇವರಿಗೆ ಅರ್ಪಿಸುವುದಾಗಿ ಹರಕೆ ಹೊತ್ತು ಚಿಕ್ಕಂದಿನಲ್ಲಿಯೇ ಮೀಸಲು ಬಿಡುತ್ತಾರೆ. ಈ ದೇವದಾಸಿ ಸಂಪ್ರದಾಯವು ಪ್ರಾಚೀನವಾದುದು. ಕೆಲವು ಕಡೆ ಇಂತಹವರನ್ನು 'ದೇವದಾಸಿ'ಯರೆಂದೂ 'ಜೋಗಿತಿ'ಯರೆಂದೂ ಕರೆಯುತ್ತಾರೆ. ಇಂದು ಈ ಪದ್ಧತಿಯು ಶಿಥಿಲಗೊಂಡು ತನ್ನ ಗೌರವವನ್ನು ಕಳೆದುಕೊಂಡು ಹೀನಾಯದ ಸ್ಥಿತಿಗೆ ಇಳಿದಿರುವುದನ್ನು ಕಾಣಬಹುದು: ಹಾಡುವ ಮಹಾದೇವಿ ತಾಳದ ಮಾಕಜ್ಜಿ ದೇವರ ಬಸವಿಯರು (ಎಕ. XII, ಗುಬ್ಬಿ. ೨೯-೪೬; 1470); ಬಸವಿಯರೊಳು ಪಾತಕಿನಿಯರೊಳು ಮತ್ತಸತಿಯರೊಳು ಕೆಳಿಗೊಳದೆ ಪೊಸತಿಲ ಪೊಱಗಡಿಯಿಡದೊಳ್ಕೊಂಡಿರ ಜಸವಳ್ಳಿ ಜಗವ ಪರ್ಬುವುದು (ಜಪಾಸ. ೯-೪೩). ೨. ಸೂಳೆ; ವೇಶ್ಯೆ: ಇದ್ದೊಬ್ಬ ಮಗಳು ಊರ ಬಸವಿಯಾದಳು (ಪಕಥಾ. II, ೯೩೬); ನಾಕೇ ನಾಕು ದಿವಸದಾಗೆ ಈ ಕಾಸಿಂಬೀನು ಬಸವಿ ಆಗಿ, ಬಿಕಾರಿ ಆಗಿ ರೋಗದಿಂದ ಸಾಯ್ತಾಳಲ್ಲ ಅಂತ ಎದೆ ಮಿಡುಕಿತು (ಪಂಗಾ. ೦೬೯). 'ಊರುಬಸವಿ', 'ಬೀದಿಬಸವಿ' ಪರಾ. ೩. ದೇವರ ಹೆಸರಿನಲ್ಲಿ ಮೀಸಲು ಬಿಟ್ಟ ಹಸು: ಬಸವಿ ಬಸವನ ಕೊಂದ ಪಾಪಕೆ ಹೋಹರು ಯಂದು ಬರದ ಸಾಸನ (ಎಕ. IX. ಶಪ್ರಕ. ೬೮-೨೫; 1661); ದೇವರ ಹೆಸರಿನ ಮೇಲೆ ಬಿಟ್ಟ ಬಸವ, ಬಸವಿಗಳು ಕಾಲಗತಿಯನ್ನು ಹೊಂದಿದರೆ ಅವುಗಳನ್ನು ಕೊಂಬು ತಮಟೆ ವಾದ್ಯಸಮೇತ ತೆಗೆದುಕೊಂಡು ಹೋಗಿ ಸಮಾಧಿ ಮಾಡಿ ಅದರ ಮೇಲೆ ಗಿಡವನ್ನು ನೆಡುತ್ತಿದ್ದರು (ಹುಚ್ಚಿಕ. ೬೦).

ಬಸವಿ ಬಿಡು = ಅವಿವಾಹಿತತರುಣಿಯನ್ನು ದೇವರ ಸೇವೆಗಾಗಿ ಮೀಸಲಾಗಿಡು; ದೇವದಾಸಿಯನ್ನಾಗಿ ಮಾಡು: ನಿನ್ನನ್ನು ಬಸವಿ ಬಿಡುವುದಾಗಿ ಹೇಳಿದ್ದೇನೆ (ಕೇಚಹಂ. ೦೦೭).

[ಬಸವ + — ಇ$_2$./ ತಮಿ. ವಚವಿ; ತೆಲು. ಬಸಿವಿ]

ಬಸವಿತ್ತಿ (ನಾ). = ಬಸವಿ ೧: ಆ ಮಠವ ಬೋಹರಿಸುವ ಬಸವಿತ್ತಿಯ ಜನ ಒಂದಕ್ಕಂ ವರಿಸ ಒ[ಂದ]ಕ್ಕಂ ಅಕ್ಕಿ ಮೂಡೆ ಎರಡೂ ಹಾನೆ ಹತ್ತು (ಸೌಇಇ. IX-ii, ೯೦೭-೩೮; 1378). [ಬಸವ + — ಇತ್ತಿ]

ಬಸವೆ (ನಾ). = ಬಸವಿ ೧: ಇವಳು ಬೈತಲೆ ಕಲಕದಂತೆ ತಿದ್ದಿಕೊಳುತ್ತ ಮಿವಳು ಹಗಲೆಲ್ಲ ತೊಳೆವುತ ತೀಡಿಕೊಳ್ಳುವಳು ಸೂಳೆ ಬಸವೆಯ ತೆರದೆ (ಪಾಲ್ಕುರಿ. ೨-೨೦); ಈ ಹನುಮಂತದೇವರಿಗೂ ಅನೇಕ ಕಸಬೆಯರೂ, ಬಸವೆಯರೂ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ (ಕಪ್ಪಜಾ. ೯೦); ಬೀದಿಬೀದಿಗೆ ಬಸವೇರಲ್ಲ ಕಸಬೇರೋ! ಅವರು ನಾಯಿಪಾಡಿನ ನರಕದ ಕಿಂಡಿ ಅವರ ತವರೂರು (ಅರಳಿ. ೨೭೬-೧೯). [ಬಸವ + — ಎ$_2$]

ಬಸವೇಱು (ಕ್ರಿ). ಪರವಶತೆಯು ಅಧಿಕವಾಗು: ಎಟ್ಟು ನಿಂದೆಣೆಗೊಂಡು ಪೊರ್ದಿ ಕೈಲಾಗಿತ್ತು ತೋಳ್ಗೋಳ್ಗಳ ತೊಡಕಿನೊಳಂ ಬಾಟ್ಟ ಸೊಗಕೆ ಮೆಯ್ಯಬಸವೇಱುದಂತೆ ಪೊದಟ್ಟು ಕದುಬುದಾಳ್ಳುವುದು (ಪಳಿ. ೬-೧೩೬ ಸಾಂಗತ್ಯ). [ಬಸ$_1$ + ಏಱು$_1$ (< ಏಱ್ಱ$_1$)]

ಬಸಳೆ 'ಬಸಲೆ$_1$' ನೋ.

ಬಸಿ$_1$ (ಕ್ರಿ). ಬಸಿದು$_1$ (ಭೂತಕೃ). ೧. ಒಸರು; ಸ್ರವಿಸು; ಜಿನುಗು: ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಟ್ಟ ನಾಣ ಪೆಂಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆಚ್ಚನೆ ಬಸಿವಿಂದುಕಾಂತಕರಸಂಕುಳಿಮೊಯ್ಯನವುಂಕಿ ಸೋಂಕೆ (ಅಪಪು. ೯-೧೯). ಬಸಿಯೆ ಜಳಬಿಂದು ಕೇಶಪ್ರಸರಮನೆಡಗೆಯೊಳಡಸಿ ಪಿಡಿದೆಸೆದುದು ಕಾಱಿಸುವವೊಲಂಗಜನಸಿಯುಬ್ಬಸಮಾಗಿರೆ ಪೀರ್ದ ವಿರಹಿಜನಜೀವನಮಂ (ಲೀಲಾವ. ೧೪-೬); ಆ ಘರ್ಮದಿಂ ಬಸಿವಂಗಂ ಪಣೆಗೊಂಡು ಪತ್ತಿದಳಕಾನೀಕಂ . . . ಚೆಲ್ವಂ ಬೀಱ್ (ಶಾಸುವಾ. ೧೧-೧೩೦); ೨. ಪಾತ್ರೆಯನ್ನು ನಿಧಾನವಾಗಿ ಬಗ್ಗಿಸಿ ಅದರಲ್ಲಿರುವ ಬೆಂದ ಅನ್ನ, ತೊಳೆದ ಅಕ್ಕಿ ಹಾಗೂ ತರಕಾರಿ ಮುಂತಾದುವುಗಳು ತಳದಲ್ಲೇ ನಿಂತು ಮೇಲಿನ ಗಂಜಿ, ನೀರು ಮುಂತಾದುವನ್ನು ಸೋರಿ ಹೋಗುವಂತೆ ಮಾಡು: "ಬಸಿ--ಗಲನೇ (ಬಸಿಯುವ), ಶಾತ, (ಹರಿತ ಮಾಡು), ದಂಡಮಧ್ಯಯೋಃ (ದಂಡಿಗೆಯ ಮಧ್ಯಭಾಗ)" (ಶಮಾಶಾ); ಚಳಸಿ ರಾಜಾನ್ನದಕ್ಕಿಯನು . . . ಅಕ್ಕಿಗಚ್ಚಂ ಬಸಿದು (ಸೂಪಶಾ. ೩-೨) ;

ಪಾತ್ರೆ ತುಂಬ ನೀರಿಟ್ಟು ಅಕ್ಕಿ ಹಾಕಿ ಬೆಂದ ಅನಂತರ ನೀರನ್ನೆಲ್ಲ ಬಸಿದು ತೆಗೆಯುವುದು ಸಾಮಾನ್ಯವಾಗಿ ಅನ್ನ ತಯಾರಿಸುವ ವಿಧಾನವಾಗಿದೆ (ಅಡುಗೌ. ೬೪). ೩. ಧಾರೆಯಾಗಿ ಬೀಳು ; ಸುರಿ : ಪೆರ್ಗೆಸಱಾಗಿರ್ಪುದು ಬಟ್ಟೆ ಪೋದವಿದಱೊಳ್ ಪೆರ್ಬಂದಿಗಳ್ ನೆತ್ತರುಂ ಬಸಿವುತ್ತಿರ್ಪುದು ಪೋದ ವಿಕ್ಕಿ ಮಱಯಂ ಪುಲ್ಲಟ್ಟೆಯಾಳ್ ಪುಲ್ಲೆಗಳ್ (ಕಾದಂಪು. ೦೩೬); ಬಸಿವ ಸೊರ್ಕಿಂದಾನೆಗಳ ವಾಜಿವದನದಿಂದೊಸರ್ವ ಲಾಲಾಜಲದಿಂದ ಬೆಸಮಕ್ಕಳೊಗುವ ಮೈಬೆಮರಿಂದಾ ಬೀದಿ ಕೆಸರ್ವಡೆದಿಹುದನವರತ (ಕುರಾಸಾಂ. ೪-೦೦೭). ೪. ಬೆವರು ಸುರಿ : ರಿಪುಬಂದಿಕಾಱನೊಳೇಱ ಸೂಱೆಗೆ ಬಂದು ಬಸಿವುತ ಹೋದರನಿಬರು ಬೈದು ರವಿಸುತನ (ಕುಮ್ಯಾದ್ರೋ. ೬-೩೦); ಭೂಸುರರು ಮಧ್ಯಾಹ್ನಕಾಲದಲಿ ಹಸಿದು ಬಸಿದು ಬಂದರೆ ಮನೆಗೆ ಬೇಸತ್ತು ನಮಗೆ ಗತಿಯಿಲ್ಲ ಹೋಗೆಂದು ಹಸನಾಗಿ ಉಂಬುವುದು ಅದು ಮಡಿಯೊ (ಪುರಂದ.ರಾ. ೩-೭೨-೪). ೫. ಸುರಿಸು : ಈ ಬಾಳ ಮೇಲ್ ಬಿಟ್ಟು ನೆತ್ತರನ್ ಬಸಿವನನ್, ಬಂದು ಮೊದಲೆತ್ತಲ್ ಏಕಲವ್ಯಂಗಱಿಪೆ ಅಟ್ಟು ಆರಾನುಮನ್ (ಅಶ್ವತ್ಥಾ. ೩೩-೬೪೬). ೬. ತೊಡೆ ; ಒರೆಸು: ಎಮೆದುಱುಗಲಿನಿಱಿವ ತೋರ ಕಣ್ಬನಿಗಳಂ ಬಸಿಯುತ್ತಮನ್ನನಿಂತೆಂದಂ (ಕಾದಂಪು. ೬೪೬). ೭. (ಆಲಂ) ಕುಗ್ಗು; ಕಡಮೆಯಾಗು : ವೈರಾಗ್ಯದೇಟ್ಗೆಯಂತೆಯುಂ ಶ್ರೀವೈಷ್ಣವರ ಭಾಗ್ಯದಂತೆಯುಂ ತೋರ್ಪ ಶ್ರೀರಾಮಾನುಜರಡಿಗೆಱಗಿ ನೇಸಱ ತೇಜದೊಳ್ಬಸಿಯದ ತಣ್ಪಂ ಬೆರಸಿದಂತಿರ್ಪ ಮೆಯ್ವೊಗರುಂ . . . ಆಗಿ (ಶಕಸಂ. ೦೦೯-೦೦). ೮. ಇಲ್ಲದಂತೆ ಮಾಡು; ನಾಶವಾಗಿಸು : ಅದಱಿಂದೆ ಎಂದಿಂಗಮೆಡೆವಱಿಯದೀ ನೋವು ಎರ್ದೆಗೊಱೆದು ಬಸಿದಪುದು ಬಲ್ಮೆಯನ್ (ಬದ್ಧಪ್ರ. ೨-೩೨).

ಬಸಿದುಕೊಳ್ಳು = ೧. ಪಾತ್ರೆಯ ಬಂಡದಲ್ಲಿರುವ ಗಟ್ಟಿಯಾದ ಪದಾರ್ಥಗಳ ಮೇಲೆ ನಿಂತ ನೀರು, ಎಣ್ಣೆ ಮೊದಲಾದ ದ್ರವ ಪದಾರ್ಥಗಳನ್ನು, ನಿಧಾನವಾಗಿ ಪಾತ್ರೆಯನ್ನು ಓರೆ ಮಾಡಿ ಸುರಿ: ಬೇವಾಗ ಗಂಜಿಯ ಬಸಿದುಕೊಂಡು . . . ಮೃದುವಾಗಿ ಮಾಡಿದುದು ತಾ ಶುದ್ಧಮಪ್ಪೋದನಂ (ಸೂಪಶಾ. ೩-೨) ; ಪುತ್ರಜೀವಿತಿರುಳನ್ನು ಚೆನ್ನಾಗಿ ಕುಟ್ಟಿ . . . ಇದರೆಂಟು ಮಡಿ ನೀರು ಹುಯ್ದು . . . ಹದವ ನೋಡಿ ಬಸಿದುಕೊಂಡು (ಸಕಪ್ಯ. ೭೦). ೨. ದ್ರವಪದಾರ್ಥವನ್ನು ಕುಡಿ : ಹಣಮಂತ . . . ಹೊಟ್ಟೆಗೆ ಏನೂ ಬಸಿದುಕೊಳ್ಳಲಿಲ್ಲ (ಪಂಸಂ.೦೯); ಬಂದ ತಪ್ಪಿಗೆ ಒಂದಿಷ್ಟು ಕಾಫಿಯನ್ನಾದರೂ ಬಸಿದುಕೊಂಡು ಹೋಗೋಣವೆಂದು ಕೊಂಡು ಕುಳಿತುಕೊಳ್ಳಲು ಸ್ಥಳ ಹುಡುಕಿದೆ (ಆಂಹೂ. ೨೯). ಬಸಿದು ಬೀಟ್, ಬಸಿದು ಬೀಳು = ೧. (ರಕ್ತ ಸುರಿದು) ನಿಶ್ಶಕ್ತಿಯಿಂದ ಕುಸಿದು ಬೀಳು : ಪರಾಂಗನೆಯೆಂದೊಡೆ ಸಾಮ್ಯಮಲ್ಲವೆಂದೊಡೆ ತಲೆ ಹೋಗಿಯುಂ ಬಸಿದು ಬೀಟದೆ ಸೈರಿಸರಲ್ತೆ ಕಾಮುಕರ್ (ಅಪಂಪು. ೦೦-೩೩); ಬಸಿದು ಬೀಳ್ವ ಕಬಂಧದಲಿ ಹೆಣವಸರಾದುದು ನೆಲನಿದೆಲ್ಲಿಯ ವಿಷಮ ವೀರರೂ ಮರ್ಝಯೆನುತ ಮಾರೀಚ ಬೆಱಗಾದ (ತೊರರಾ. ೦-೦೧-೧೯). ೨. ಉಕ್ಕಿ ಹರಿ : ಒಸೆದು ನಿನ್ನವರೆಂದು ಬಗೆವರೆ ಬಸಿದು ಬೀಳುವ ಕೃಪೆಯ ನೀ ತೋಱಿಸೆಯಿದೇನೈ ಕೃಷ್ಣಯೆಂದೊಱಲಿದಳು ನಳಿನಾಕ್ಷಿ (ಕುಮ್ಯಾಸ. ೧೯-೧೨೭). ೩. ಕಳಚಿ ಬೀಳು : ಒಡಲು ಬೀಳಲಿ ಮೇಣು ತಮ್ಮದಿರಡವಿಯಲಿ ಹಾಯಿಕ್ಕಿ ಹೋಗಲಿ ಮಡದಿ ಮುನಿಯಲಿ ಬಸಿದು ಬೀಳಲಿ ಧರಣಿ ಕುರುಪತಿಗೆ (ಕುಮ್ಯಾಅ. ೪-೦೨). ಬಸ್ತ ಎಸರು = ಬೇಳೆ ಅಥವಾ ಕಾಳಿನೊಂದಿಗೆ ತರಕಾರಿ, ಸೊಪ್ಪು ಮುಂತಾದುವನ್ನು ಬೇಯಿಸಿ, ಅದರ ಸಾರವನ್ನು ಬಸಿದುಕೊಂಡು ಮಾಡುವ ಸಾರು : ಹಸಿ ಅವರೆಕಾಳು, ಸೊಪ್ಪು ಸೇರಿಸಿ ಮಾಡಿದ್ದ ಬಸ್ತ ಎಸರು ಮುದ್ದೆಗೆ ಬಹಳ ರುಚಿಯಾಗಿತ್ತು (ರೂಢಿ). ಬಸ್ತ ಸಾರು = ಬಸ್ತ ಎಸರು : ರಾಗಿ ಮುದ್ದೆ, ಅವರೆಕಾಳು ಬಸ್ತಸಾರು ಮಾಡಿದ್ದೀನಿ (ರೂಢಿ).

[ದೇ.॥ ತಮಿ. ವಚಿ, ವಟಿ, ವಟಿ; ತುಳು. ಬಸಿ, ಬಚ್ಚು; ತೆಲು. ವಡಿಯು]

ಬಸಿ$_2$ (ಕ್ರಿ). ೧. ಹರಿತಗೊಳಿಸು; ಚೂಪು ಮಾಡು ; ಮಸೆ : "ಬಸಿ-ಗಲನೇ (ಬಸಿಯು) ಶಾತ, (ಹರಿತ ಮಾಡು) ದಂಡಮಧ್ಯಯೋಃ (ದಂಡಿಗೆಯ ಮಧ್ಯಭಾಗ)" (ಶಮರಾ); ಆತನಂ ಶ್ಮಶಾನಕ್ಕೆಟ್ಟಿದುಕೊಂಡು ಪೋಗಿ ದರ್ಕಂ ಬಸಿದು ಸೂಲದೊಳಿಕ್ಕುವಾಗಳ್ (ಪಡ್ಡಾರಾ. ೦೨೪-೨೯); ಬೆತ್ತಗಣ್ಣವಲೆಯಂ ಸಮಕಟ್ಟುವ ಬೆಟ್ಟುಗೂಂಟಮಂ ಬಸಿವ ಪುಳಿಂದಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ (ಪಂಪ್ರಪು. ೩-೩೪). ೨. ಚೂಪಾಗಿರು; ಹರಿತವಾಗಿರು : ಒಡಲುರಿವನ್ನೆಗಂ ಬಸಿದ ಶೂಲದೊಳಿಕ್ಕಿ (ರರ್ಮಾಮ್ಯ. ೦೨-೨೩೬); ಬಸಿದಸಿಯದಸಿಯನನುಕರಿಪ ಸೂಜಿಗೊಂಬುರ್ಚಿ ಸೀಳ್ದ ಬಸುಱಿಂ ನಿಸದಂ ಬಿಸುನೆತ್ತರ ಪೊನಲುಂ ಕರುಳ ಸೋಗೆಯುಂ ಕವಿದುವವನಿಗಾ ಯತಿಪತಿಯಾ (ಪರ್ಧಪು. ೩-೬); ಬಸಿದ ಕೋಡಿನ ಸಲಗನೆಸೆವ ಕೋಣಂಗಳಿಂ ಮಸಗಿ ವಿಸಟಂಬರಿದು ಕರ್ಚುವುಷ್ಟಂಗಳಿಂ (ಸಾಪಂಪ. ೪-೦೩೯ ರಗಳೆ).

ಬಸಿ$_3$ (ನಾ). ೧. (ಮರ, ಲೋಹ ಮೊದಲಾದುವುಗಳಿಂದಾದ) ಗೂಟ, ಶೂಲ ಮುಂತಾದ ಹರಿತವಾದ ಸಾಧನ : ಪೊಱಿಸಿದ ಗಾಲಿಯೊಳಂ ನಿಱಿಸಿದ ಬಸಿಯೊಳಂ ಪೂಸಿದ ಡೆಂಕಣೆಯೊಳಂ . . . ಕೈಗೆಯ್ದು (ಅಪಂಪು. ೦೦-೬೨ ಪ). ೨. ಮುಳ್ಳು; ಕಂಟಕ : ಪರಮಂಗೆ ಗುಗ್ಗುಳದ ಕಂಬಿಯುಂ ತರುತಿರಲು ಚರಣಮಂ ಬಸಿ ತಾಗಲು ಹರ ಶಬರವೇಷದಿಂ ಬಂದು ಬಸಿಯುಂ ಕೀಳೆ (ರಾಪಶ. ೯-೩೪ ಪ). ೩. ತಕ್ಕಡಿಯಲ್ಲಿರುವ ದಂಡಿಗೆಯ ಮಧ್ಯಭಾಗ : "ಬಸಿ-ಗಲನೇ (ಬಸಿಯು) ಶಾತ, (ಹರಿತ ಮಾಡು) ದಂಡಮಧ್ಯಯೋಃ (ದಂಡಿಗೆಯ ಮಧ್ಯಭಾಗ)" (ಶಮರಾ). [<ಬಸಿ$_2$./ತಮಿ. ವಚಿ, ವಯ್ ; ತೆಲು. ವಸಿ ; ಕೊತ. ವಚ್; ಗೊಂಡಿ. ವಾಯು]

ಬಸಿ$_4$ (ನಾ). ಬಟ್ಟಲಿನಲ್ಲಿರುವ ದ್ರವವು ಕೆಳಗೆ ಚೆಲ್ಲದಂತೆ ಬಟ್ಟಲಿನ ಅಡಿಯಲ್ಲಿ ಇಡುವ ಸಣ್ಣ ತಟ್ಟೆ ; ಸಾಸರು : ವಿಠು ಬರಿದಾದ ಕಪ್ಪು ಬಸಿಗಳನ್ನು ತಕ್ಕೊಂಡು ಒಳಗೆ ಹೋದನು (ಕಂದುಪಿ. ೯೬); ಅಮೇರಿಕದಲ್ಲಿ . . . ಮಕ್ಕಳು ಹೋಟೇಲಿನಲ್ಲಿ ಕಪ್ಪು, ಬಸಿ ತೊಳೆದು ಹಣ ಸಂಪಾದಿಸಿ, ಅದರಿಂದ ಓದುತ್ತಾರಂತೆ (ಸ್ವಪ್ನಹೂ. ೦೭೪).

[← ಮರಾ. ಬಸೀ, ಬಶೀ./ಪೋರ್ಚು. ಬಸಿಯಾ]

ಬಸಿಗಲ್ಲು (ನಾ). ಚಂದ್ರನ ಪ್ರಕಾಶದಿಂದ ಕರಗಿ ನೀರು ಬಿಡುವುದೆಂದು ನಂಬಲಾದ ಕಲ್ಲು; ಚಂದ್ರಕಾಂತಶಿಲೆ : ಬೆಳುದಿಂಗಳಲ್ಲಿ ಬಸಿಗಲ್ಲ ನೀಡಿ ತಿಂಗಳನು ತಣಿಸಬಹುದೆ ? (ಮುಕ್ತಕಂ. ೦೬-೦೯).

[ಬಸಿ$_1$ + ಕಲ್ಲು (< ಕಲ್$_3$)]

ಬಸಿಗಳ್ (ನಾ). ಒಂದು ಬಗೆಯ ಮದ್ಯ ; ತಿಳಿಹೆಂಡ : ರಸವಣಿಯ ನುಂಡ ಗೊರವಿತಿ ಪೊಸತಾಶೀರ್ವಾದವುಳ್ಳದೊಂದೆಂದಾಗಳ್ ಬಸಿಗಳ್ಳಿಂಗೆ ಮಹೀಶರ ಪಸಾದ ಸುರುಕವಡೆ ಕವಡೆ ಹರಿವೋ ಎಂದಳ್ (ಸೂಕ್ತಿಸು. ೦೩-೨೦). [ಬಸಿ$_1$ + ಕಳ್$_3$]

ಬಸಿಗೆ 'ಬೈಸಿಕೆ' ನೋ.

ಬಸಿತ (ನಾ). (ರಕ್ತವು) ಧಾರೆಯಾಗಿ ಇಳಿಯುವಿಕೆ : ಕಂದ ನೆತ್ತರ ಬಸಿತ ಹಿಂಚಿಹುದೆ ? ಉಸಿರೆ ಏತಕೊ ? (ಹಬ್ಬರ. ೪೦-೦೩೩).

[ಬಸಿ$_1$ + — ತ$_3$]

ಬಸಿದಲೆ (ನಾ). ನೆತ್ತರು ಸುರಿಯುತ್ತಿರುವ ತಲೆ : ಅಲ್ಲೊಬ್ಬ ತರುಣಿ ವಕ್ಕೈಯ್ಯ ಕತ್ತಿ ಬಸಿದಲೆಯೊಂದು ಕರದಿಂ ಬೀಳೆ ಬತ್ತಲಿರಲು (ಕೋರಣ. ೬-೨೯). [ಬಸಿ$_1$ + ತಲೆ$_1$]

ಬಸಿದು$_1$ 'ಬಸಿ$_1$' ಪರಾ.

ಬಸಿದು$_2$ (ನಾ). ೧. ಹರಿತವಾದುದು ; ತೀಕ್ಷ್ಣವಾದುದು : "ಬಸಿದೆಂದು ಕೂರಿತಕ್ಕುಂ" (ಶಬ್ದಮಂ. ೩೦). ೨. (ಆಲಂ) ತೀಕ್ಷ್ಣವಾದ

ನಡೆವಳಿಕೆ : ಬ[ಜಾಣಾ. ದಿ]ಸಿದುಮಸಿದುಮಂ ತೋಱಿ ನುಡಿದೊಡಂ ಬಡಸಿದಳ್ (ಅಂಗಾಪ. ೨-೦೦೯ ಕ).

ಬಸಿಯಂ = ಉಗ್ರನಾದ ವ್ಯಕ್ತಿ ; ಕ್ರೂರಿ: ಅಸಿಯಂ, ಬಸಿಯಂ, ಕರಿಯಂ (ಕಸಮ. ೦೩೨ ಕ್ರಿಯೋ). [<ಬಸಿ$_2$]

ಬಸಿಮೂಗ (ನಾ). ಯಾವಾಗಲೂ ನೀರು ಸೋರುತ್ತಿರುವ ಮೂಗುಳ್ಳವನು : ಬಸಿ[ಜಾಣಾ. ಸೆ]ಮೂಗಂ ಪಿತೃವಿತ್ತಭೋಗಿ ಕುನಖಂ ಮೆಲ್ಪಿಂದೆ ಬಲ್ಪಿಂದೆ ಸಾಧಿಸೆ ಸಾಧ್ಯಂ ನಿಪುಣಂ ಮಹೋದ್ಯಮಿ ನಿಗೂಢಾಂಸಂ ಧನುರ್ಗ್ರೇಹಜಂ (ಜಾಕಥ. ೦೬-೯).

[ಬಸಿ$_1$+ಮೂಗು + — ಅ$_7$]

ಬಸಿರಾನು 'ಬಸಿಱಾನ್' ನೋ.

ಬಸಿರಿ$_1$ 'ಬಸಿಱ್' ನೋ.

ಬಸಿರಿ$_2$ 'ಬಸರಿ' ನೋ.

ಬಸಿರು 'ಬಸಿಱ್' ನೋ.

ಬಸಿರ್ತ್ತ, ಬಸುರುತ್ತ (ನಾ). ಅತಿಯಾಗಿ ಭೇದಿಯಾಗುವ ಒಂದು ಬಗೆಯ ರೋಗ ; ಅತಿಸಾರ : "ಬಸಿರ್ತ್ತ[ಜಾಣಾ. ಬಸುರ್ತ್ತ]ತ್ತ ಮತಿಸಾರವಕ್ಕುಂ" (ಮಂಗಣಾ. ೦೦೯-೩) ; ಅತಿಸಾರಕಿಯಂ(ಬವನುಂ) ಬುದು ಬಸಿರ್ತ್ತವುಳ್ಳವಂ (ಕಥಾಯು. ೯೯-೯೩೨). ಬಸುಗುತ್ತ : ಕೋಣನ ಹೇಱಿಂಗೆ ಕುನ್ನಿ ಬಸುಗುತ್ತಬಡವಂತೆ ತಾವು ನಂಬರು ನಂಬುವವರ ನಂಬಲೀಯರು (ಜಸಾ. ೬೬೩) ; ನಿನ್ನೆ ಕಮ್ಮಾರ ಚಾಂದನ ಮನೆಯೊಳ್ಬು ಸೂಕರಮದ್ದವನುಂಡ ಬಳಿಕ ಬಸುಗುತ್ತದಿಂದಣಿಯರಂ ಬಳಲುತಿಹೆ. ಬಸಿರು ನೋನೋಯುತಿದೆ (ಶ್ರೀಣಾ. ೬೭-೭). [ಬಸಿಱ್ + ಕುತ್ತ]

ಬಸಿರ್ಪೂಸು (ಕ್ರಿ). ಮಗಂವು ಗರ್ಭದಲ್ಲಿರುವಾಗಲೇ ಹೊಟ್ಟೆಯನ್ನು ಸವರುತ್ತ ಇಂತಹವರಿಗೇ ಮದುವೆ ಮಾಡಿಕೊಡುವುದಾಗಿ ಮಾತು ಕೊಡು : ಏನಂಗೋದ್ಭೂತ ಮಾತಾಪಿತೃಗಳೆ ನಿನಗೆನ್ನಂ ಬಸಿರ್ಪೂಸಿ ಪೆತ್ತರ್ (ಶಂಬುಪು. ೦೯-೩೯) ; ಆಕೆಯಂ ನಿನಗೆ ಬಸಿರ್ಪೂಸಿ ಪೆತ್ತು ನಿನ್ನಂ ಕಾಣದೀಗಳ್ ನಿಮ್ಮಮ್ಮನ ಪಿರಿಯರುಸ ಸತ್ಯಭಾಮೆಯೆಂಬಳಾಕೆಯ ಮಗಂ ಭಾನುಕುಮಾರಂಗೆ ಕಂಡಲೆಂದು ಮಹಾವಿಭೂತಿಯಿಂದೊಯ್ದಪ್ಪೊರ್ (ಶಂಕರ. ೯-೩ ಕ) ; ಓವೋವೆನ್ನಂ ಕುರುನೃಪದೇವಿ ಬಸಿರ್ಪೂಸಿ ಪೆತ್ತೊಡಾ ತಂಗೇನುದ್ಭಾವೋಗ್ರದುರಿತಫಲದಿಂದಾ ವಿಭು ಗೆಂಟಾದೊಪಾಗೆ ಮಱುಗುತ್ತಿರ್ದೆಂ (ಶಂಕರ. ೯-೯) ; ಎಡೆಯೊಳ್ ಕೂಡಿದ ನಣ್ಪೆ ಮುನ್ನಮೆ ಬಸಿಱ್ಪೂಸಿರ್ದು ಕಾ[ಪಿಂದವಿ]ತ್ತೊಡೆ (ಶಂಕರ. ೦೯-೬).

[ಬಸಿಱ್ + ಪೂಸು$_1$]

ಬಸಿರ್ಪೊಂಡತಿ (ನಾ). ಗರ್ಭಿಣಿಯಾದ ಹೆಂಗಸು ; ಬಸಿರಿ : ಒರ್ವಳ್ ಪೊಸತ್ತಾವಕಿ ಬಸಿರ್ಪೊಂಡತಿ ವೇಳಸ್ವಾಮಿನಿಯೆಂಬೊಳ್ ಕರ್ದಿಂಗಳಿರುಳೊಳ್ ಕಟ್ಟಲೆಯೊಳ್ ನಿರ್ಗ್ರಂಥಮುಪ್ಪ ರೂಪಂ ಕಂಡು ಬೆಱ್ಗೆದೊಡಾಕೆಗೆ ಬಸಿಱ್ಬೆಟ್ಟಿದತ್ತು (ಪಾಂಡಾ. ೧೨-೩೦).

ಬಸಿರ್ಪೊಂದಿರ್ (ಬಹುವ) : ಇದನಱಿದೊಂ . . . ಸಾಸಿರ್ವರ್ಬಸಿರ್ಪ್ಪೆಣ್ಡಿರುಮ ಸಾಯಿರಕೆಱೆಯುವುಮನಱಿದೊಸ ಲೋಕಕ್ಕೆ ಸಲ್ಗು (ಸೌಇ. IX-1, ೨೦-೦೯ ; 977). [ಬಸಿಱ್ + ಪೊಂಡತಿ (< ಪೊಂದಿತಿ)]

ಬಸಿವನಿ (ನಾ). ಸೋರುವ ಹನಿ, – ತೊಟ್ಟು : ಬಟ್ಟ ಜಡೇಶದಿಂ ತೊಟ್ಟಿಡುವ ಬಸಿವನಿಯ ನಟ್ಟನೆ ಸ್ವಾತಿ ನೀಲ್ಮೇಘದಿಂ ಸುರಿವುತಿಹ ಬಟ್ಟವ ಸೊಕ್ತಿಕಗಳ ಬಲ್ಪಿಂದುಗಳೊಯೆನಲುಯಿಳಿವುತಿರಲ್ಪೆತರುತ್ತೆ (ಪಸಪೂ. ೦೩-೯೯). [ಬಸಿ$_1$ + ಪನಿ$_2$]

ಬಸಿವಾಯ್ (ನಾ). (ರಕ್ತ, ಜೊಲ್ಲು ಇತ್ಯಾದಿ) ದ್ರವ ಒಸರುತ್ತಿರುವ ಬಾಯಿ : ಹಾಯಿದವು ನರಿ ಹಾಯಿಗಳು ಕಟವಾಯಲೆಳಲುವ ಕರುಳಿನಲಿ ಬಸಿವಾಯ ರಕುತದಲೋಡಿದವು ರಣಭೂತ ದೆಸೆದೆಸೆಗೆ (ಕುಮಾರಪ್ರ. ೦-೨೦). 'ಬಸಿವಾಯ' ಪರಾ. [ಬಸಿ$_1$ + ಬಾಯ್]

ಬಸಿವಾಯ (ನಾ). ಯಾವಾಗಲೂ ಜೊಲ್ಲು ಸುರಿಯುತ್ತಿರುವ ಬಾಯುಳ್ಳವನು : ಬಸಿ[ಜಾಣಾ. ಸೆ]ವಾಯಂ ಕವಿ ವಾಗ್ಮಿ ದೀರ್ಘ ಮುಖಕಂಠಂ ಧಾರ್ಮಿಕಂ . . . ಧನುರ್ಗ್ರೇಹಜಂ (ಜಾಕಥ. ೦೬-೯).

[ಬಸಿವಾಯ್ + — ಅ$_7$]

ಬಸಿಱ್, ಬಸಿರು, ಬಸಿಱು, ಬಸುರು, ಬಸುಱ್, ಬಸುಱು (ನಾ). ೧. ಹೊಟ್ಟೆ ; ಉದರ : ಜಠರ : "ಬಸಿಱುದರಂ ಜಠರಂ ಕುಕ್ಷಿ ಸಮಾಹ್ವಯಂ" (ಪಸುಕೋ. ೬೯-೬) ; ಈತಂಗೆ ನೀಂ ಬಸಿಱ್ ತೀವೆ ಬಡ್ಡಿಸದಿರ್ (ಪಜಾಣಾ. ೬೬-೩) ; ಬಸಿಱ ತೆಳ್ಪಳಿದತ್ತೆ ಮೊಗಂ ಬೆಳ್ಪೇಱುದುದೇ ಕುಚಚೂಚುಕಂ ಮಸುಳ್ದುವೇ (ಅಂಪು. ೬-೩೦) ; ದುಷ್ಟಬುದ್ಧಿ . . . ಕೆಟ್ಟೆನೆಂದು ಬಾಯಂ ಬಸಿಱಂ ಪೊಯ್ದುಕೊಂಡು . . . ನುಡಿಯೆ (ಸಂಕಥಾ. ೦೬೦-೬). ೨. ಭ್ರೂಣವನ್ನು ಒಳಗೊಳ್ಳುವ ಕೋಶ ; ಗರ್ಭ : ಖಳನಲ್ಲೀ ಮಸುಮತಿಯೊಳ್ಗಾಂಧಾರಿಯ ಬಸಿಱಂ ಮೇಣ್ಮಗುಟ್ಟ ಪೋಗಿ ಪೊಕ್ಕಿರ್ದವನೋ (ಗದಾಯು. ೬-೨೦) ; ಆ ತಪಸ್ವಿ ಕಂಡು ಮುಳಿದೆನಗೆ ಪಶುವಿನ ಬಸಿಱೊಳ್ ಬರ್ಪುದೆಂದು ಶಾಪಮನೀಯೆ (ಪಂಕಥಾ. ೬೦-೦೬) ; ಬಸಿರ್ವೊಕ್ಕು ಬಣ್ಣವೇಱುವ ಬಿಸಜಾಕ್ಷನಿನಮೃತಮಾಂಬೆ ಪೊಂಪಿಡದೆಸೆದಳ್ (ಕಥಾ. ೯-೩). ೩. ಗರ್ಭವನ್ನು ಧರಿಸಿರುವ ಸ್ಥಿತಿ; ಗರ್ಭಿಣಿಯಾಗಿರುವಿಕೆ : ಪಾಯದಿರೊತ್ತಿ ಮೂಱುತಿಂಗಳ ಬಸಿಱ್ಕೆಕೆ ಪಾಯ್ವೆಯೆನಗರ್ಪಣ ವೋಡಿದುದಿಂದು ನೋಡ ಬಾಯಱಿದುದು ಹಾರದಿರ್ ಮೊಗಮನಿತ್ತ ನುತುಂ ಬೆಱಗಾಗೆ ಕೂಡಿದಳ್ (ಶಾಪ್ರಜಾ. ೯೯೯ ಕ್ರಿಯ); ಇನಿತುಂ ಪೊಱ್ತುಂ ಬಸಿಱೊಳಿಪ್ಪ ಬಯಕೆಗಳ್ಗೆವೆ ಕಾರಣಂಗಳೆನಿಸಲ್ಕಕ್ಕ ಬಯಕೆಗಳಂ ಬಯಸುತಿರ್ದಳ್ (ಪುಸ್ತಪು.೩-೦೯ ಕ). ೪. ಅಂತರ್ಯ ; ಅಂತರಂಗ ; ಒಳಗು: ಬಸಿಱೊಳ್ ಜಗತೀತ್ರಯಮುಮುಮನೊಸೆದಿಟ್ಟೋರಂತೆ ಕಾದ ಪೊಂಪಿನ ನಿಮ್ಮೂ ಬಸಿಱಂ ಪೊಕ್ಕೆಮ್ಮಯ್ಯರನಸುರಕುಳಾಂತಕ ಕಡಂಗಿ ಕಾವುದು ಪಿರಿದೇ (ಪಂಪಭಾ. ೯-೦೬). ಬಸಿರು : ೨. ಕೊಲೆಗೀಡುಮಾಡಬೇಕಾದ ಮಕ್ಕಳನ್ನು ಹೆರುವ ಬಸಿರು ಬೇಡ (ಪಾಣಾಕ್ಷ. ೩೯). ೪. ನಿರಾಶೆಯ ಬಸಿರಿನಲ್ಲಿಯೇ ಆಶೆಯ ಬೀಜವಿದೆ – ಬಿತ್ತಿ ನೋಡು ! (ಕಟ್ಟೋ. ೦೦-೯೨-೬); ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಡಿಗೆದರಿ ಮುಂಗಾರುಸುರಿಯು ರಕ್ಕಸವಚ್ಚೆಗಳಿಕ್ಕುತ ಬಂದಳು ಬಲುಗದರಿ ! (ಪಕ್ಷಿಣಾ. ೫೯-೦). ಬಸಿಱು : ೨. ದಾಕ್ಷಾಯಣಿ ತನ್ನ ಬಸಿಱೊಳ್ ಬರ್ಪವರಮಂ ಬಯಸಿ ಮೇನೆ ತಪದೊಳಿರಲ್ (ಗಿಂಗ. ೦ ಈಶಾಗರ್ಭ) ; ಬಸಿಱೊಳಗೆ ಶಿಶುವನು ಅದಾರು ಸಲಹಿದವರು (ಪುಕಂದ. ೨-೨೬ ೬). ೪. ಸಿಸುವಾಗಿ ಕಾನಾಲದೆಲೆಯೊಳೊಱಗಿ ತನ್ನ ಬಸಿಱೊಳೀರೇಳುಲೋಕಗಳ ಪಸರವ ತೋಱಿ ಬಲ್ಲರ ಬಗೆಗೊಳಿಸುವ ಪೊಸಬಿಜ್ಜೆವಳಗೆಱುವೆನು (ಕಣಾಕ್ಷ. ೦-೦೦). ೫. ವಂಶ; ಮನೆತನ : ಧರೆಯ ಕುಡಿಯರ ಕುಲ ಶಿರೋಮಣಿಗಳೆನಿಪ ಗೌಡರ ಬಸಿಱೊಳೊಗೆ[ದ] ಸುಮುಹೂರ್ತದೊಳಂ (ಸಿದ್ಧಾಂ. ೦-೩೨). ಬಸುರು : ೨. ಬಸುರಿನಿಂ ಪಡೆಯಲಾರದೆ ವ್ಯಥೆಯೊಳಿಪ್ಪ ವಧುಗೆಸೆವ ಸುತನಂ ನಿಜಪದೋದಕದಿಮಿಾವುತಂ (ಪುಜಾಕ. ೬-೦ ಸೂಕಪ). ೩. ಬಸುರು ಬಂದಾಕ್ಷಣ ಹಸುರುಶಾಲೆ ಸಿಕ್ಕೀತೇ? (ಗಾಪ). ೬. ಭ್ರೂಣ ; ಪಿಂಡ : "ಗರ್ಭ ೬, ಭ್ರೂಣ ೬ – ೨ ಗರ್ಭದ ಪೆಸರು, ಬಸುರು" (ಸಿದ್ಧಾಂಶಿ. ೦೩೬). 'ಬಸುರಿಳಿ' ಪರಾ. ಬಸುಱ್ : ೧. ಮನುಷ್ಯರ ಪಿಡಿದು ಪೀಡಿಸಿ ತಮ್ಮ ಬಸುರ್ಗೆ ಕಾಣದೆ ಈಡಾಡಿದ ಕೂಳಂಬಲಿಯನಾಯ್ದು ಕುಱುಕುವ ಹೇಸಿದೈವಂಗಳ ಬೆಡಿಬೇಡಿ ನಿರರ್ಥ ಕೆಡಬೇಡ (ಜಸಪ. ೩೩೬). ೨. ಪುಟ್ಟಿದ ತಾಣಕ್ಕಱಂ ಪುಟ್ಟಿಸಲೊಡರಿಸುವ ಕಿಚ್ಚು ತೇಱ್ಪ ಕ್ರಿಮಿ ಕುತ್ತಂ ಪುಟ್ಟುವವೊಲ್ ದುಷ್ಕೃತದಿಂ ಪುಟ್ಟಿದನೀ ಪಾಪಕರ್ಮನೆನ್ನಯ ಬಸುಱುಂ (ಕಾಂಡಾಂಗಾ. ೧೩೨). ಬಸುಱು :

೧. ಬಸುಱ ಬಗಿ ಕರುಳನುಗಿ . . . ಮೂಳೆಯಂ ಮುಱಿಯೆನುತ್ತ ಹೆಗ್ಗುನ್ನಿಗಳ ತಲೆದಡವಿ ಹಾಸಮಂ ತಿವಿದು ಕವಿದರು ಬೇಡರೆಣ್ಡೆಸೆಯೊಳು (ಪಸಕಾ. ೬-೨೯) ; ಉಗುಳುಗುಳು ದುಶ್ಶಾಸನನ ನೀನುಗುಳು ಮಗುಳಿನ್ನಾರ ಬಸುಱನು ಹೊಗುವೆ (ಕುಸ್ಕಾಳ. ೨೦-೨೩); ಅಸುರರುರು ಬಲ್ಲೆಹದ ತಿವಿಗುಳ ಬಸುಱ ಬಾದಣದುರ್ಚುಗರುಳಿನ . . . ಕೋಡಗವ ಸರಗಳ ಸಂದಣಿಯ ಸಂಭ್ರಮವೆಸೆದುದೈ (ಕೊರಿರಾ. ೬-೩೦-೦೬). ೪. ಬಸು [ಪಾಠಾಂ. ಸಿ]ಱೊಳಗೆ ಬ್ರಹ್ಮಾಂಡಕೋಟಿಯ ಪಸರಿಸಿದ ಪರಮಾತ್ಮ ನೀನೆಂದುಸುರುತಿವೆ ವೇದಗಳು (ಪುಸಾ. ೨೩).

ಬಸಿರಿರು = ಗರ್ಭವನ್ನು ತಾಳು : ವಿದ್ಯಾನಂದನನ್ನು ಆಗ ಬಸಿರಿದ್ದೆ. ಆಗ ನನಗೆ ಏಳನೆಯ ತಿಂಗಳು (ಸ್ಕೃತಿಕ. ೬೯). ಬಸಿಱಂ ಪೊಸೆ, ಬಸುಱಂ ಹೊಸೆ = (ಹೊಟ್ಟೆಕಿಚ್ಚು, ಸಂಕಟ, ತಿರಸ್ಕಾರ ಮೊದಲಾದ ಭಾವಗಳಿಂದ) ಹೊಟ್ಟೆಯನ್ನು ಕಿವಿಚಿಕೊಳ್ಳು : ಸಂತತಿಗೆ ಪಿರಿಯ ಮಕ್ಕಳ ನಾಂ ತಡೆಯದೆ ಪಡೆವೆನೆಂದೊಡೆನ್ನಿಂ ಮುನ್ನಂ ಕುಂತಿಯೆ ಪಡೆದಳ್ ಗರ್ಭದ ಚಿಂತೆಯದಿನ್ನೇವುದೆಂದು ಬಸಿಱಂ ಪೊಸೆದಳ್ (ಪಂಪಭಾ. ೦-೦೨೯); ಅಜ್ಞಾನಿಗಳಪ್ಪರ ತಪದೊಳ್ ಫಲಮಿಲ್ಲೆಂದು ಬಸಿಱಂ ಪೊಸೆದು ನಕ್ಕು (ಧರ್ಮಾಮೃ. ೨-೨೨೬); ಧಗಿಲು ಭುಗಿಲೆನುತೆ ಮಾಮಸಕದಿಂ ಮಸಗಿ ತೊನೆದು ಬಸುಱಂ ಹೊಸೆದು ಹೊಯ್ದು ನೆಲನಂ ತಿರುಗಿ (ತಿರುರ. ದೇ. ೦೬-೯). ಬಸಿಱ ಕುತ್ತ = ಅತಿಯಾಗಿ ಭೇದಿಯಾಗುವ ಒಂದು ಬಗೆಯ ರೋಗ ; ಅತಿಸಾರ : ಗ್ರಹದಂತೆ ಪೀಡೆಯಂ ಮಾಟ್ಟುದು ಬಸಿಱ ಕುತ್ತದಂತೆ ನಮೆಯಿಸುವುದು (ಧರ್ಮಾಮೃ. ೯-೦೬೩). ಬಸಿಱಾರೆ = ಹೊಟ್ಟೆ ತುಂಬುವಂತೆ : ಪಾಯ್ವರಾತಿಯ ಮೆಯ್ಯ ನೆತ್ತರಂ ಕಂಡು ಸೂಟೀಸಿನೊಳಿವನ ನೆತ್ತರೊಕ್ಕೊಡಂ ತನಗೆ ಬಸಿಱಾರೆ ಕುಡಿಯಲುಂ ದ್ರೌಪದಿಯ ಕೇಶಪಾಶಮಂ ತೊಯ್ದು ಮುಡಿಯಲುಂ ನೆಱೆಯದು (ಪುಪಭಾ. ೦೨-೦೯೬ ಪ). ಬಸಿಱೊಡೆ, ಬಸುಱೊಡೆ = ೧. ಮೈಯಿಳಿ ; ಗರ್ಭಪಾತವಾಗು : [ಎಲೆಯಡಿಕೆ ಸುಣ್ಣದಿಂ ಪಲ್ ಕಱೆಯಪ್ಪುದು] ಅಣಿಲೆ ತಿಗಡೆಯಿಂ ಬಸಿಱೊಡೆವುದು (ಧರ್ಮಾಮೃ. ೯-೦೦೬). ೨. ಹೊಟ್ಟೆಯನ್ನು ಸೀಳು,—ಭೇದಿಸು : ವಿಷ್ಣುವ ಅಕ್ಷಿಯಲ್ಲಿ ಧರಿಸಿದೆ ಬ್ರಹ್ಮನ ಬಾಯಲ್ಲಿ ಧರಿಸಿದೆ . . . ಬಾಯಲ್ಲಿದ್ದವನ ಬಸುಱೊಡೆಯ ಹೊಯ್ದೆ (ಸೋಳಿಪಾ. ೦೯೬-೬೨೯). ಬಸುರು ನಿಲ್ಲು = ಗರ್ಭವು ಉಳಿ ; ಮೈಯಿಳಿಯದಿರು : ಮದುವೆಯಾಗಿ ಹತ್ತಾರು ವರ್ಷಗಳ ನಂತರ ಅವಳಿಗೆ ಮೊದಲ ಸಲ ಬಸುರು ನಿಂತಿತು (ರೂಢಿ). ಬಸುಱ ಕಿಚ್ಚು = ಹೊಟ್ಟೆಕಿಚ್ಚು ; ಅಸೂಯೆ : ಬಸುಱ ಕಿಚ್ಚ [ಪಾಠಾಂ. ಬಸುಱಿಕಿಚ್ಚ]ನು ಬೆಳೆಯಿಸುವ ನುಡಿಯುಸುರಲೇಕವರು (ಪಾಳ್ಯಕಾ. ೨೦-೦೩). ಬಸುಱ ಹೊಯ್ಲು = ಹೊಟ್ಟೆಯನ್ನು ಬಡಿದುಕೊಳ್ಳುವಿಕೆ : ಕಂಡ ರೆಡೆಯಲಿ ಖರನ ನಗರದ ಹೆಂಡಿರುಗಳಕ್ಕೆಗಳ ತಳುಕಿನ ಮಂಡೆಗಳ ತೋಳುಗಳ ಬಾಯ್ಗಳ ಬಸುಱ ಹೊಯ್ಲುಗಳ (ಕೊರಿರಾ. ೩-೬-೨). ಬಸುಱಾಗು, ಬಸುರಾಗು = ಗರ್ಭ ನಿಲ್ಲು; ಗರ್ಭವನ್ನು ಧರಿಸು : ಚೇಳಿಂಗೆ ಬಸುಱಾಯಿತ್ತೆ ಕಡೆ ಬಾಳೆಗೆ ಫಲವಾಯಿತ್ತೆ ಕಡೆ (ಬಸವ. ೬೬೯); ಆ ಕಾಂತೆಗೆ ಬಸುಱಾಗಿ ತೀವಿ ನವಮಾಸಂ ನಿಶ್ಚಿಂತಂ ಬೆಸಲಾಗಲ್ ಶ್ರೀಕಾಂತಂ ತನ್ನಾಲಯಕ್ಕೆ ಕರಸಿದನಾಗಳ್ (ಧರ್ಮಾಪ. ೬-೦೩); ಬಸುಱಾಗ ದವಳ ಬಾಳುವೆಯು ಬೇಸಿಗೆಯ ಬಿಸಿಲು ಕಾವಂತೆ (ಸರ್ವಜ್ಞ. ೦೬೮೮); ದಾಕ್ಷಿಣ್ಯಕ್ಕೆ ಬಸುರಾಗಿ ಹೆರುವುದಕ್ಕೆ ಠಾವಿಲ್ಲ (ಗಾದೆ). ಬಸುಱು ಉರಿ = ಹೊಟ್ಟೆ ಉರಿ : ಪಿಸುಣತ್ವದಲಿ ನಿಂದೆಗೈದ ಪಾತಕದಿಂದ ಬಸುಱು ಉರಿಯಿತ್ತೊ ಶಿವನೆ (ಅಬ್ಬಲೂ. ೨-೦೯). ಬಸುಱು ಮಾಡು = ಗರ್ಭ ಧರಿಸುವಂತೆ ಮಾಡು : ಹಸನಾದ ಹೆಣ್ಣ ಮೇಲೆ ಕುಸುಮವ ತಂದಿಕ್ಕಿ ಶಶಿಮುಖಿಯರಿಗೆಲ್ಲ ಬಸು[ಪಾಠಾಂ. ಸಿ]ಱು ಮಾಡಿದನೀತ (ಪುರಂದ. ೦-೯೦-೨).

[ದೇ.॥ ತಮಿ. ಮಲ. ವಯಿಱು; ತುಳು. ಬಸುರಿ, ಬಸುರು]

ಬಸಿಱಾನ್, ಬಸಿರಾನು (ಕ್ರಿ). ಗರ್ಭವನ್ನು ಧರಿಸು ; ಬಸುರಾಗು; ಗರ್ಭಧಾರಣೆ ಮಾಡು : ರತಿದೇವಿ ಬಸಿಱಾಂತು ಪಡೆದ ದುಕ್ಕವ ಸುತವತಿಯಾಗಿ ನೋಳ್ಪ ಸಂತಸವ ಮಿತಿಗೆಯ್ದುವೆನು (ಸೋಪತ. ೦೬-೫೯). ಬಸಿರಾನು : ಅಮಮ ಬಸಿರಾಂತ ಮತ್ಕುಲಸಮೃದ್ಧಿಕಾರಣೆಯ ಧರ್ಮಪತ್ನಿಯನುಳಿದೆಂ (ಶಾಳುಂತ. ೯೯-೦೫೫). [ಬಸಿಱು (<ಬಸಿಱ್) + ಆನ್$_1$]

ಬಸಿಱಿ, ಬಸಿರಿ$_1$, ಬಸುರಿ$_1$, ಬಸುಱಿ (ನಾ). ಗರ್ಭಿಣಿ; ಗರ್ಭವತಿ : ಬಸಿಱಿ ಹೆಂಡತಿ ಮಗನ ಮದುವೆ ನಾಳೆ . . . ಸಾಯಲಾಱೆನು (ಪುರಂದ. ೨-೬೦-೩); ಈ ಬಸಿಱಿಯರೊಳ್ಪಿನಿಂ ಬಯಸುವರ್ ಬಸಿಱೊಳ್ ನೆಲೆಗೊಂಡ ಬಾಲನೊಂದೆಸಕದ ಪಾಂಗಿನಿಂದಿಳೆಯೊಳೆಂಬರ ನಾಟ್ನುಡಿಯಕ್ಕೆ ನಿಕ್ಕುವಂ (ಪಳಪಿ. ೯-೯). ಬಸಿರಿ$_1$: ಸರೋಜ ಮನಗೆ ಬಂದು ಎರಡು ವರ್ಷವಾದ ಮೇಲೆ ಬಸಿರಿಯಾದಳು (ಮಹಾಗ. ೯); ಬಸಿರೀ ಆಗದಿದ್ದರೆ ಹೆಣ್ಣಿಗೆ ಉಮ್ಮತ್ತಿಕಾಯಿನ ರಸವನ್ನು ಕುಡಿಸುತ್ತಿದ್ದರು (ಹುಸ್ವಹ. ೦೩). ಬಸುರಿ$_1$: ಕಾಯ್ದಾ ಬಸುರಿ ರೋಷದುಃಖದ್ವಂದ್ವದಲಿ ಬೆಂದು ಮಣಿಪುರಕೆ ಪಿಂತಿರುಗಿ ಬಂದಳತಿಭೀಷಣಮನಃಸ್ಥಿತಿಯಲಿ! (ಪಾಸ್ತಾಂಗ. ೬೯-೦೬೫೫); ಗೌರಿಯು . . . ಈಗ ಐದನೆಯ ಬಾರಿ ಬಸುರಿಯಾಗಿದ್ದಳು (ಮುಂಗಾಮು. ೨೫). ಬಸುಱಿ : ಹಸುಗೂಸು ಬಸುಱಿ ಬಾಣತಿ ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ ತಿರಿದುಂಬ ಮಾರಯ್ಯ . . . ಕೇತಯ್ಯಗಳೆಂಬ ನೂಱುಮಡಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ (ಬಸವ. ೫೫೬); ಎಲ್ಲಿಯುಂ ಕೇಳ್ದಱಿಯೆವಿಂತಹ ದುರ್ಲಭದ ಬಸುಱಿಯರನು (ಬಸಪು. ೫-೦೬).

[ಬಸಿಱ್ + — ಇ$_2$ / ಮಲ. ವಯಱಿ; ತುಳು. ಬಸುರಿ]

ಬಸಿಱಿಳಿ 'ಬಸಿಱಿಟಿ' ನೋ.

ಬಸಿಱಿಟಿ, ಬಸಿಱಿಳಿ, ಬಸುರಿಳಿ (ಕ್ರಿ). ಮೈಯಿಳಿ; ಗರ್ಭಪಾತವಾಗು : ಒರ್ವಳ್ ಪೊಸಶ್ರಾವಕಿ ಬಸಿರ್ಪೆಂಡತಿ ವೇಳಾಸ್ವಾಮಿನಿಯೆಂಬೊಳ್ ಕರ್ದಿಂಗಳಿರುಳೊಳ್ ಕಟ್ಟಲೆಯೊಳ್ ನಿರ್ಗ್ರಂಥಮಪ್ಪ ರೂಪಂ ಕಂಡು ಬೆರ್ಚಿದೊಡಾಕೆಗೆ ಬಸಿಱಿಟಿದತ್ತು (ಪಡ್ಡಾರಾ. ೯೨-೦೩); ಮತ್ತೊಂದು ಶಿಶುವೆಂಬುದಂ ಬಸಿಱಿಟಿದುದೆಂಬಂತೆ ಗರ್ಭದಿಂ ತೆಗೆದುಯ್ದು ರೋಹಿಣಿಯ ಗರ್ಭದೊಳ್ ನಿಲಿಸಿದೆಂ (ಪಗಪಿ. ೩-೫ ಪ). ಬಸಿಱಿಳಿ : ಬಸಿಱಿಳಿವ ಸಂಕಟದ ಬಲುಬೇನೆಯ ಭ್ರಾಂತಿನಿಂ ಮೈಮಱೆದು ಕಂಡ ಕನಸ್ಯೆಸೆ (ಸಿದ್ಧರಾ. ೨-೭) ; ಬಸಿಱಿಳಿದು ತದ್ದುಃಖಮಂ ನೀಗಿ ಜೀವಿಸಿದರಸು ರಾರಿಮುಖ್ಯಸುರರದಱಿನಜರಾಮರರೆನಿಸಿದರ್ (ಪದ್ಮರಾ. ೦೦-೨೨೬). ಬಸುರುಳಿ : ನಾಲ್ಕುದಿನಗಳ ಹಿಂದೆ ಬಸುರಿಳಿದು ಹೋದದ್ದರಿಂದ ಅವಳಿಗೆ ವಿಶ್ರಾಂತಿ ಬೇಕಾಗಿದೆ (ರೂಢಿ). [ಬಸಿಱ್ + ಇಟಿ]

ಬಸಿಱು 'ಬಸಿಱ್' ನೋ.

ಬಸಿಱುಬೇನೆ (ನಾ). ಹೊಟ್ಟೆಯ ನೋವು; ಉದರಶೂಲೆ : ಸುಗಂಧಿಯ ಬೇರು, ಗುರುಗುಂಜಿಯ ಬೇರು, ಅಳಲೇಕಾಯ ಚೂರ್ಣ ಇವು ಎಲ್ಲವನ್ನೂ ಸಮಾನಂಗೊಂಡು ಬೆಲ್ಲದಲ್ಲಿ ಇಕ್ಕಿ ಮೆಲ್ಲಲು ಗರ್ಭಿಣಿಯ ಬಸಿಱುಬೇನೆ ಮಾಣ್ಗುಂ (ವಿಷ್ಣಪಿ. ೦೦೬).

[ಬಸಿಱು (<ಬಸಿಱ್) + ಬೇನೆ$_1$]

ಬಸು (ನಾ). ಆಪ, ಧ್ರುವ, ಸೋಮ, ಧರ್ಮ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ ಎಂಬ ಎಂಟು ಮಂದಿ ವಸುಗಳಲ್ಲಿ ಒಬ್ಬ ವಸು ; ೫ ಈ ಹೆಸರುಗಳು ಕಲ್ಪಭೇದದಿಂದ ವ್ಯತ್ಯಾಸ ಹೊಂದಂತ್ತವೆ : "ಬಸುಗಳ್ದೇವರೊಳ್" (ಕರ್ಣಾಪಿ. ೯೧).

[<ಸಂ. ವಸು]

ಬಸುಗುತ್ತ 'ಬಸಿರ್ಕುತ್ತ' ನೋ.

ಬಸುದೇವ (ನಾ). ಒಬ್ಬಾತನ ಹೆಸರು : ಶ್ರೀ ಚಿಕುರಾಪರವಿಯ ಗುರುವರ ಸಿಷ್ಯರ್ ಸರ್ಬಣನ್ದಿ ಅವನ್ ಶ್ರೀಬಸುದೇವನ್ (ಎಕ. II,೩೬; ಸು. 750). [ಬಸು + ದೇವ]

ಬಸುಮ (ನಾ). ಬೂದಿ ; ಭಸ್ಮ: "ಬಸುಮ — ಭಸ್ಮ(ನ್)" (ತದ್ಭಕೋ. ೨೯) ; ಬಸುಮದ ಸಿರಿಯೊಡಲ ಪೆರೆಯುಗಿದ ಪಾವಿನ ತೊಡರ ಸಿಂಗರದ . . . ಪರಮಶಿವನಿರುತಿರ್ದನನುಪಮರತ್ನಪೀಠದಲಿ (ಅನಂರಾ. ೦-೨-೦೩) ; ಗಳರವದ ಮಂತ್ರಗಳ ಬಗೆಬಗೆಯೊಳುಚ್ಚರಿಸು ತಡಿಗಡಿಗೆ ನಸುನಗೆಯ ಬಸುಮಮಂ ತೂಪಿರುವುತೆ ಮಿಗೆ ಹಸ್ತತಾಡನಗಳಿತ್ತು ಸ್ಮರಭೂತಮಂ ನಗಿಸಿ ನುಡಿಸುತ (ಪಂಕಾರಾ. ೩-೬-೫೫). [<ಸಂ. ಭಸ್ಮನ್]

ಬಸುರಿ₁ 'ಬಸಿಱಿ' ನೋ.

ಬಸುರಿ₂ 'ಬಸರಿ' ನೋ.

ಬಸುರಿಕೋಡು (ನಾ). ಒಂದಂ ಊರಿನ ಹೆಸರು : ದಕ್ಷಿಣತಃ ಬಸುರಿಕೋಡುನಾಮಗ್ರಾಮಃ (ಮೈಅಂ. ೦೯೩೫, ೪೦-೬೯; 951). [ಬಸುರಿ₂ (<ಬಸರಿ) + ಕೋಡು₅]

ಬಸುರಿಳಿ 'ಬಸಿಱಿಱಿ' ನೋ.

ಬಸುರು 'ಬಸಿಱ್' ನೋ.

ಬಸುಱ್ 'ಬಸಿಱ್' ನೋ.

ಬಸುಱಿ 'ಬಸಿಱಿ' ನೋ.

ಬಸುಱಿಱಿಸು (ಕ್ರಿ). ಮೈಯಿಳಿಸು; ಗರ್ಭಪಾತವಾಗುವಂತೆ ಮಾಡು : ಬಸುಱಿಱಿಪ ಪುತ್ರವಧೆಗೆಯ್ದು ಸತಿಗೆ ದುರ್ಗತಿಗೆ ಕರ್ಮಚಾಂಡಾಳಿಗೆ ರಕ್ಕಸಿಗೆ ನೆಲೆಯಕ್ಕುಮುಚ್ಚಿಸುವಸಿಪತ್ರವನಪ್ರವೇಶದುರ್ಗತಿದುಃಖಂ (ಪಸಾರ. ೩೦೦). [ಬಸುಱ್ (<ಬಸಿಱ್) + ಇಱಿಸು]

ಬಸುಱು 'ಬಸಿಱ್' ನೋ.

ಬಸುಱುಚ್ಚು (ನಾ). ಹೊಟ್ಟೆಯಿಂದ ಜಾರಿ ಬಿದ್ದ ಮಾಂಸಖಂಡ ಮುಂತಾದುವು : ಇಕ್ಕಡಿಯ ಬಸುಱುಚ್ಚುಗಳ ನರಸೊಕ್ಕು ಡೊಳ್ಳಾಸದ ಮಹಾಭಯವೆಕ್ಕಸರದಲಿ ಕಾಣಲಾದುದು ವೈರಿಬಲದೊಳಗೆ (ಕುಪ್ಯಾದ್ರೋ. ೦೭-೨೬) ; ಇಕ್ಕಡಿಯ ಬಸುಱುಚ್ಚುಗಳ ನರಸುಕ್ಕುಗಳ ನಾಟಕದವೊಲು ಕೈಯಿಕ್ಕಿದಾನೆಯ ಹಿಂಡು ಮುಱಿದುದು ನಿಮಿಷಮಾತ್ರದಲಿ (ಕುಪ್ಯಾಗ. ೨-೨೯). P 'ಉರ್ಚು' ಎಂಬಂದಕ್ಕೆ ನಾಮಾರ್ಥದಲ್ಲಿ ಪ್ರಯೋಗಗಳಂ ದೊರೆತಿಲ್ಲ. [ಬಸುಱು (< ಬಸಿಱ್) + ಉಚ್ಚು₁ (< ಉರ್ಚು)]

ಬಸುಱುದುಂಬು (ಕ್ರಿ). ಹೊಟ್ಟೆ ತುಂಬು ; ತೃಪ್ತಿಗೊಳ್ಳು ; ತಣಿ : ಬಸುಱುದುಂ[ಪಾಠಾಂ. ತುಂ]ಬದಿರಲ್ಕೆ ನಂಬಿಯ ಬೆಸನದಿಂದೆಡೆಯಾಡಿ ಯಾತನ ದೆಸೆಯೊಳುಣಲಿಲ್ಲದೆ . . . ಹಸಿದು ಬಂದಾ ಚೇರಮಂ (ಬಸಪು. ೦೫-೨೩). [ಬಸುಱು (< ಬಸಿಱ್) + ತುಂಬು₁]

ಬಸುಱುಶೂಲೆ (ನಾ). = ಬಸಿಱುಬೇನೆ : ಯಷ್ಟಿಮಧುಕ, ದ್ರಾಕ್ಷೆ ಹಣ್ಣು, ಇವಂ ಹಸುವಿನ ಹಾಲು ಬಿಟ್ಟು ಅರೆದು ಹಾಲಲ್ಲಿ ಕಾಸಿ ಹಸುವಿನ ತುಪ್ಪದಲ್ಲಿ ಕುಡಿಯೆ ಹೃದಯಶೂಲೆ, ಯೋನಿಶೂಲೆ, ಬಸುಱುಶೂಲೆ, ಜ್ವರ, ವಾತಗುಲ್ಮ, ಬಾಣಂತಿಯರ ಎಲ್ಲಾ ರೋಗಗಳೂ ಮಾಣುವುವು (ನಿವೃಪಿ. ೦೦೭). [ಬಸುಱು (< ಬಸಿಱ್) + ಶೂಲೆ₁]

ಬಸೆ₁, ವಶಿ (ನಾ). ೧. ಹೆಣ್ಣಾನೆ; ಪಿಡಿ: "ಬಸೆ ಪೆಣ್ಣಾನೆಯು" (ಕರ್ಣಾನಿ. ೨); ಕಾಲೊಳ್ ತೊಡರ್ದುತ್ಪಲದಳಮಾಲೆಗಳುಲಿ ಗೆಜ್ಜೆಯೆನಿಸೆ ಮಾಂಗಾಯೆನೆ ಕರ್ಣಾಲಂಬಿ ಕಮಳಮುಕುಳಂ ಬಾಲೇಭಂ ಬಸೆ[ಪಾಠಾಂ. ಸೆಳೆ]ಯ ಪೆಱಗೆ ಬಂದುದು ಕೊಳದಿಂ (ಲೀಲಾವ. ೮-೦೮) ; ಓಪನ ಪಡಿಮೊಗದೊಳ್ ತುಂತುಱಂ ತೂಱಿ . . . ಬಾಷ್ಪಪ್ಲುತಾಲೋಕೆ ಶೋಕಾತುರೆ ದುಃಖೋದ್ರೇಕದಿಂದಂ ಬಸೆ ಪರವಸೆ ಬೀಸಿತ್ತು ಕರ್ಣಾಗ್ರದಿಂದಂ (ಲೀಲಾವ. ೯-೨೦ ; ಸೂಕ್ತಿಸು. ೩-೫೮ ನೋ). ೨. ಗೊಡ್ಡಾಕಳು ; ಬರಡುದನ : ಬಸೆ = ನೆಣ, ಹೆಣ್ಣಾನೆ, ಗೊಡ್ಡಾಕಳು (ಶಮದ. ೨೫೮ ಅಡಿಟಿ). ವಶಿ : ೧. ಕಾಡಿನ ಕರಿಯು ವಶಿಗಳ ಕೂಡ ನೀರೊಳು ಮೀಯುವಂದದಲಿ (ರಘುವಂ. ೦೬-೬೮). [< ಸಂ. ವಶಾ]

ಬಸೆ₂ (ನಾ). ಕೊಬ್ಬು ; ನೆಣ : "ಬಸೆ — ವಸಾ = ಕೊಬ್ಬು" (ತದ್ಭಕೋ. ೨೯) ; ಅಲ್ಲಿ . . . ಬಸೆಯೆ ತುಪ್ಪಂ ನಾಯ್ಗಳೆ ಪರಿವಾರಂ ಮದ್ಯಮೆ ಪುರುಷಾರ್ಥಂ (ಕಾದಂಕಾ. ೭೫೫); ನೆಣನ ಬಸೆಸಹಿತಡಗು ಸುರಿದವು ಕದಡಿ ಹರಿದುದು ರಕುತದರೆವೊನಲು (ಕುಪ್ಯಾಗ. ೮-೩); ಬೇಡರ್ ಸವಿಯಡಗಂ ಬಸೆಯಂ ನೆತ್ತರಂ . . . ಮತ್ತಂ ಚವುರಿಯಂ ಪೊತ್ತು ನಗರಿಗೆ ಮರಲ್ದುವರ್ಪಾ ನಡುವಟ್ಟೆಯೊಳ್ (ರಾಮಾಶ್ವ. ೮೯-೨೦). [< ಸಂ. ವಸಾ]

ಬಸೆಗ (ನಾ). ಒಂದು ಬಗೆಯ ಮೀನು : ಹಣ್ಣಲಂ ಬಸೆ [ಪಾಠಾಂ. ಸಿ]ಗ ಗಿಱಿಲಾ ಬಂಗಡೆ . . . ಆನೆಮೊಗನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಹನಕಾ. ೫-೪೫). [?. / ಹಿಂ. ಬಸಾ]

ಬಸೆನಡೆ (ನಾ). ಹೆಣ್ಣಾನೆಯ ನಡಗೆ : ಬಲಮುರಿಸಂಕುಗೊರಲ ಬಸೆ ನಡೆಯ ಬೆಳ್ದಳಿರ್ಗೈಯ . . . ಬಾಲೆಯೊರ್ವಳ್ . . . ಪೊಂಬಟ್ಟಲನೆತ್ತಿ ಬರುತುಮಿರ್ದಳ್ (ರಾಮಾಶ್ವ. ೯೮-೨೯). [ಬಸೆ₁ + ನಡೆ₂]

ಬಸ್ಕಿ 'ಬೈಸಿಕೆ' ನೋ.

ಬಸ್ಕಿಹೊಡೆ 'ಬೈಸ್ಕೆಹೊಡೆ' ನೋ.

ಬಸ್ತ (ನಾ). ಗಂಡಾಡು; ಹೋತ: "ಅಜಃ, ಸ್ತಬಃ, ಬಸ್ತಃ, ಛಾಗಃ, ಛಗಳಕಃ, ಛಗಃ — ಈ ೬ ಹೋತು" (ಹಲಾಯು. ೯೬-೦೨೨) ; ದುಸ್ತರಮೆಂದೇವೈಸದೆ ಹಸ್ತಗತಂ ಮಾಡಿ ಮೌಲ್ಯಮಂ ಕೊಂಡರವರ್ ವಿಸ್ತರಕಾಯದವೇಱುಂ ಬಸ್ತಂಗಳನಲ್ಲಿ ಬಸ್ತಪಾಲನ ಕೆಯ್ಯೊಳ್ (ಮಹಾವೇ. ೪-೦೨೮); ದಕ್ಷನ ಬೆಂದ ಮುಖ ಬಸ್ತಾಸ್ಯವಾಗಲಿ (ನಿರಾಗ. ೯-೩-೫೫). [ಸಂ.]

ಬಸ್ತಕ (ನಾ). ೧.= ಬಸ್ತ : ಬೆದೆಯಾದ ತಾಯನೇಱಿದುದದು ಸೊರ್ಕಿದಗೂಳಿ ತಾಯನೇಱಿತ್ತೆಂಬಂದದೆ ಮತ್ತಮೊಂದು ಬಸ್ತಕಮದನಿಱಿಯಲ್ ಸತ್ತು ಪೊಕ್ಕುದಜೆಯೊಳ್ಜೀವಂ (ಯಶೋಪ. ೩-೫೯). ೨. ಒಂದು ಬಗೆಯ ಉಪ್ಪು : "ರೌಮಕ, ಬಸ್ತಕಂ — ೨ ಸೌಭರಿ ದೇಶದಲ್ಲಿ (ರುಮ)ಎಂಬ ಗಣಿಯೊಳಗೆ ಹುಟ್ಟುವ ಉಪ್ಪು, ಚೌಳುಪ್ಪಿಗೆ ಹೆಸರುಗಳೆಂದು ಕೆಲವರನ್ನುವರು" (ನಿದ್ಧಾಂತಿ. ೨೮೫). [ಸಂ.]

ಬಸ್ತಪಾಲ (ನಾ). ಆಡುಗಳನ್ನು ಕಾಯುವವನು, — ಮೇಯಿಸುವವನು : ದುಸ್ತರಮೆಂದೇವೈಸದೆ ಹಸ್ತಗತಂ ಮಾಡಿ ಮೌಲ್ಯಮಂ ಕೊಂಡರವರ್ ವಿಸ್ತರಕಾಯದವೇಱುಂ ಬಸ್ತಂಗಳನಲ್ಲಿ ಬಸ್ತಪಾಲನ ಕೆಯ್ಯೊಳ್ (ಮಹಾವೇ. ೯-೦೨೮). [ಸಂ.]

ಬಸ್ತಾನ (ನಾ). ಠಿಕಾಣಿ ಹೂಡುವುದು ; ಜೀವನವ್ಯವಸ್ಥೆಯನ್ನು ಮಾಡುವುದು : ಮುಂದೆ ಏಳೆಂಟು ವರ್ಷಗಳಲ್ಲಿ ನಮ್ಮ ಬಸ್ತಾನ ಸರಿಯಾಗಿ ಕುಳಿತು ಅವ್ವನ ಕಣ್ಣ ಮುಂದೆಯೆ ನಮ್ಮ ಸ್ವಂತದ ಮನೆಯಾಯಿತು (ಸ್ಮೃತಿಪ. ೯೮೯); ಅಂತೂ ನಮ್ಮ ಬಸ್ತಾನ ಕೂತಂಗ್ಹಾಯಿತು (ಪತಿತೋ. ೦೫).

[← ಪಾರ. ಬಸ್ತನ್ = ಕಟ್ಟು ; ಮರಾ. ಬಸ್ತಾನ್, ಬಸ್ತನ್]

ಬಸ್ತಿ₁ 'ಬಸದಿ' ನೋ.

ಬಸ್ತಿ₂ (ನಾ). ೧. ಪಿಚಕಾರಿ. ೨. ಪಿಚಕಾರಿಯ ಸಹಾಯದಿಂದ ದ್ರವ ಅಥವಾ ಅನಿಲವನ್ನು ಮಲನಾಳದ ಒಳಹೊಗಿಸಿ ಮಲವಿಸರ್ಜನೆ ಮಾಡಿಸುವುದು ; ಎನೀಮಾ ಕೊಡುವುದು : ಕೋಷ್ಠ ಶುದ್ಧಿಯ ಸಲುವಾಗಿ ಬಸ್ತಿಯನ್ನು ಕೊಡಬೇಕೆಂದು ಮಾಡಿದರು . . . ಅರ್ಥಾತ್ ಈ ಪ್ರಯೋಗವು ನೀರಿನಲ್ಲಿ ಸಬಕಾರ ಮತ್ತು ಉಪ್ಪು ಹಾಕಿ ಕೊಡುವದರಲ್ಲಿ ಬಂದಿತು (ಪ್ರಹ್ಮಜೀ. ೦೯೫). ೩. ಹೊಕ್ಕುಳಿನ ಕೆಳಭಾಗ.

[ಸಂ. / ಹಿಂ. ವಸ್ತಿ ; ಮರಾ. ಬಸ್ತಿ, ಬಸ್ತೀ]

ಬಸ್ತಿಕ (ನಾ). [ಯೋಗ]ಹಠಯೋಗದ ಆರು ಬಗೆಯ ಅಂಗಗಳಲ್ಲಿ ಒಂದು : ಆಧಾರಕುಂಚನದಿಂದಾದಂ ಪೊಡೆಪೊಕ್ಕ ನೀರನೆ ಕುಲಕಿಯನುವಿಂ ಶ್ರೀದಂ ನೌಳಿಕದಿಂದಂ ಬಾಧವಡೆಯದಂತೊಡರಿಪನಾ ಬಸ್ತಿಕವಾಂ (ಪ್ರಸೂಪು. ೩-೦೪೩).

[ಸಂ. ಬಸ್ತಿಕ = (ಹೊರಕ್ಕೆ ಜಗ್ಗಿದಾಗ ಮೊನೆಯು ದೇಹದಲ್ಲೇ ಉಳಿಯುವ) ಒಂದು ಬಗೆಯ ಬಾಣ]

ಬಸ್ತಿಗೆ (ನಾ). = ಬಸ್ತಿಕ : ಧೌತಿಯುಮಾ ಬಸ್ತಿಗೆಯುಂ ನೇತಿ ತ್ರಾಟಕ ಕಪಾಲಭಾತಿಯುಮಿಳೆಯೊಳ್ ನೂತನನೌಲಿಕಮೆಂಬಾ ಪೂತಮುನಿ ಗಳೊರೆದಱುವಗೆ ಕಮ್ಮಂ ಪೊಳೆಗುಂ (ಪ್ರಸೂಪು. ೩-೦೪೦).

[<ಬಸ್ತಿಕ]

ಬಸ್ತು (ನಾ). ೧. ಸಾಮಾನುಗಳ ಗಂಟು. — ಮೂಟೆ : (ಕ). ೨. (ವ್ಯವಸ್ಥಿತವಾದ) ಕಾಗದ ಪತ್ರಗಳ ಕಟ್ಟು ; ದಫ್ತರು : (ಪ್ರಗತ. IV, ೭೬೪).

ಬಸ್ತು ಕಟ್ಟು = ಬೇರೆ ಕಡೆಗೆ ರವಾನಿಸಲು ಅನುಕೂಲವಾಗುವಂತೆ ವಸ್ತುಗಳನ್ನು ಜೋಡಿಸಿ ಕಟ್ಟು : ರೇಷ್ಮೆಯನ್ನು . . . ವ್ಯಾಪಾರಸ್ಥಳಗಳಿಗೆ ಕಳುಹಿಸುವುದಕ್ಕೆ ಯೋಗ್ಯವಾದ ರೀತಿಯಲ್ಲಿ ಬಸ್ತು ಕಟ್ಟುವುದು ಮುಂತಾದ ವಿಚಾರಗಳಲ್ಲಿ ಇಂಡಿಯಾದೇಶದವರಿಗೆ ಶಿಕ್ಷಣ ಕೊಡಲು ಒಂದು ಪ್ರಯೋಗಕ್ಷೇತ್ರವನ್ನು . . . ಸ್ಥಾಪಿಸಿದರು (ಭಾಗ್ಯಕಿ. ೩೯).

[← ಪಾರ. ಹಿಂ. ಮರಾ. ಬಸ್ತಾ]

ಬಸ್ಸು (ನಾ). ನಿಗದಿಯಾದ ವೇಳೆ ಹಾಗೂ ಸ್ಥಳಗಳಲ್ಲಿ ಸಂಚರಿಸುವ, ಅನೇಕಜನರು ಕೂಡಬಹುದಾದ, ಪೆಟ್ರೋಲ್ ಮುಂತಾದ ಇಂಧನಗಳಿಂದ ಚಲಿಸುವ ವಾಹನ ; ಮೋಟಾರುಬಂಡಿ : ಉಃಪ್ಪೆಂದು ಹೊಗೆ ಸೂಸಿ ಇನ್ನು ಬಸ್ಸೋ ಕಾರೊ ಏನಾದರೂ ಸರಿಯೆ, ಓಡಿತಲ್ಲಿಯೆ ಬುದ್ಧಿ (ಅರಳು. ೦೪೭-೩) ; ನೋಡು, ಮೋಡದ ಬಸ್ಸು ಭರಭರ ತುಂಬಿಕೊಂಡೇ ಸಾಗಿವೆ ಯಾವ ಗಿರಿಶಿಖರದಲಿ ಜಾತ್ರೆಯೋ (ಪಂಪು. ೧೧-೯).

[←ಇಂ. Bus]

ಬಸ್ಸುನಿಲ್ದಾಣ (ನಾ). ಪ್ರಯಾಣಿಕರು ಹತ್ತಲು, ಇಳಿಯಲು ಅನುಕೂಲವಾಗುವಂತೆ ಸಾರಿಗೆ ಬಸ್ಸುಗಳು ನಿಲ್ಲಲು ಗೊತ್ತು ಪಡಿಸಿರುವ ಸ್ಥಳ : ಮನೆಯಿಂದ ಹೊರಟ ಗಣಪತಿ ಸೀದಾಬಸ್ಸು ನಿಲ್ದಾಣಕ್ಕೆ ಬಂದ (ಪರ್ಕಸ. ೨೦೬). [ಬಸ್ಸು + ನಿಲ್ದಾಣ]

ಬಹ 'ವರ್' ಪರಾ.

ಬಹತ್ತರನಿಯೋಗ 'ಬಾಹತ್ತರನಿಯೋಗ' ಪರಾ.

ಬಹದರ್ 'ಬಹಾದುರ್' ನೋ.

ಬಹದರ 'ಬಹಾದುರ್' ನೋ.

ಬಹದರಿ 'ಬಹಾದುರೀ' ನೋ.

ಬಹದರಿವರಹ 'ಬಹಾದ್ದುರಿವರಹ' ನೋ.

ಬಹದರು 'ಬಹಾದುರ್' ನೋ.

ಬಹದ್ದರ 'ಬಹಾದುರ್' ನೋ.

ಬಹದ್ದುರಿ 'ಬಹಾದುರೀ' ನೋ.

ಬಹದ್ದೂರ್ 'ಬಹಾದುರ್' ನೋ.

ಬಹದ್ದೂರ 'ಬಹಾದುರ್' ನೋ.

ಬಹದ್ದೂರಿ 'ಬಹಾದುರೀ' ನೋ.

ಬಹರಿ (ನಾ). ದಂಡನಾಯಕ (?) : ಮಸಣಿತಮ್ಮ ನಮಗ ವೀರ ಮಸಣನು ಹೊಯಿದು ಹೊಯಿಕುಟ್ಟಾಡಿ ಉಭಯ ಬಿಲ್ಲಣಿ ಬಹರಿಯ ಯೇಱಿದ ಕುದುರೆಯನುಮಿಱಿದ ಕಾಲಾಳನು ತಿವಿದು ಸುರಲೋಕ ಪ್ರಾಪ್ತನಾದನು (ಎಕ. VI. ಸಕ್ಕಪು. ೩೬-೦೦ ; 1292). [?]

ಬಹರಿಚ (ನಾ). = ಬಹರಿ (?) : ರಾಜಾಧಿರಾಜ ರಾಜಪರಮೇಶ್ವರ ಕ್ರುಷ್ಣರಾಯ ಮಹಾರಾಯನ ಮನೆಯ ಕುದುರೆ ಬಹರಿಚನ ಮಲಿಸಟರ ಮಗ ಚಂನಣಸಟರು (ಎಕ. IX(8). ಪಂಪುಂ. ೭೪೦೭ ; 1528).

[< ಬಹರಿ ?]

ಬಹಲ, ಬಹಳ (ಗು). ೧. ಅಧಿಕವಾದ ; ಅಪಾರವಾದ ; ಹೇರಳವಾದ. ೨. ದಟ್ಟವಾದ ; ಸಾಂದ್ರವಾದ. ೩. ಗಟ್ಟಿಯಾದ ; ದೃಢವಾದ. ೪. ವಿಸ್ತಾರವಾದ ; ಅಗಲವಾದ. ೫. (ಬಣ್ಣದಂತೆ) ಕಡುಪಾದ ; ಗಾಢವಾದ. ೬. (ಧ್ವನಿಯಂತೆ) ಕಠೋರವಾದ ; ಬಿರುಸಾದ. ೭. (ಬಾಲದಂತೆ) ಪೊದೆಯಾಗಿರುವ. **ಬಹಳ** : ೧. ಅತಿಬಹಳದಹ್ಯಮಾನಕಾಳಾಗುರುಧೂಪ ಧೂಮಯಷ್ಟಿಘಟಿತಘನಶ್ಯಾಮಲವ್ಯೋಮತಲಧೂಪಂಗಳಿಂದಂ . . . ಅರ್ಚಿಸಿ (ಅದಿಪು. ೨-೩೨ ಪ); ತುಂಬುರಂ . . . ಕೋಟಿಮಕುಟವರ್ಧನರಿಂ ಬಹಳ ಗೊಂದಣಾಸ್ಥಾನನಾಗಿರ್ದ ನರಸಿಂಗಮೊನೆಯರ್ಗೆ ಸಾದರದಿಂ ಮಯ್ಯಿಕ್ಕಿ ಕಯ್ಯಂ ಮುಗಿದು (ಪಂಪರ. ೪-೭೬) ; ಹೇಳಲೇನದ ಬಹಳ ದುಗುಡದ ಪಾಳೆಯವೊ ನಿನ್ನಾತನೋಲಗಶಾಲೆಯೋ ನಾವಱಿಯೆವು (ಕುಪ್ಯಾಕ. ೦-೦೯). ೨. ಕೇಸರಿಯ ಲೀಲಾಳಾಪವಿಲ್ಲದ ಬಹಳ ಕಾನನವೋ . . . ಪಾಳಯವೆನುತ ಬರುತಿರ್ದ (ಕುಪ್ಯಾಪ್ರೋ. ೬-೬). (ನಾ). ೮. ಹೆಚ್ಚು ; ಅಧಿಕ : ಮನೆಯಲ್ಲಿ ಮಂದಿ ಬಹಳ ಹೊನ್ನಿನ ಪೆಚ್ಚೆ ಘನವು (ಕಂಪಪಿ. ೬-೦೪೬) ; ಬಂಗಾಲ, ಮಲಯಾಳ, ಮೈಸೂರು ಮುಂತಾದ ಪ್ರಾಂತಗಳಲ್ಲಿ ಹುಲಿಗಳು ಬಹಳ (ಮುಂಬಯಿ. ೪-೩೫). ೯. ಒಂದು ಬಗೆಯ ಕಬ್ಬು.

ಬಹಳ ಮಾಡಿ = ೧. ಹೆಚ್ಚಾಗಿ ; ಬಹುಮಟ್ಟಿಗೆ : ಸೋಲಾಪುರದಲ್ಲಿ . . . ನಾವು ಯಾವಾಗಲು ಬಹಳ ಮಾಡಿ ಇರುವ ಸ್ಥಳವು ಇದೆ (ಮುಂಬಪ್ಯಾ. ೨೬). ೨. ಬಹುಶಃ ; ಬಹುತೇಕ : ಆಗ ಬಹಳ ಮಾಡಿ ಬೆಳಗಿನ ಎಂಟು ಗಂಟೆಯಾಗಿರಬೇಕು (ಇಪ್ಪಕ. ೩೭). ೩. ವಿಶೇಷವಾಗಿ ; ಮುಖ್ಯವಾಗಿ : ಇದು ಬಹಳ ಮಾಡಿ ಪ್ರಾಣಿಗಳ ಮನೋಧರ್ಮವೇ (ಉರಾಪ. ೦೩೬). **ಬಹಳಷ್ಟು** = ಬಹುಮಟ್ಟಿಗೆ ; ಆದಷ್ಟು : ಹೀಗೆ ಅನಿಸುವುದರಿಂದಲೇ ಸಂಸಾರದೊಳಗೆ ಬಹಳಷ್ಟು ಪ್ರಚ್ಛನ್ನವಾದ ನಿರಾಶೆಯು ಹತ್ತಿಕ್ಕಿದಂತಾಗಿ ಹದುಗಿಕೊಂಡಿದೆ (ಪ್ರಬಂಧ. ೩೪) ; ಮಾಸ್ತರರ ಮನಸ್ಸು ಈಗ ಬಹಳಷ್ಟು ಹಗುರವಾಗಿತ್ತು (ಮೂರುದಾ. ೭೨). [ಸಂ.]

ಬಹಲಿ 'ಬಹಾಲ್' ನೋ.

ಬಹಲಿಕೆ, ಬಹಳಿಕೆ (ನಾ). ಅತಿಶಯತೆ ; ಆಧಿಕ್ಯ : ಮೆಳಸಿನನಿಲಿರಿದು ಗಿರಿಗೆಯನಳೆದೊರ್ಗ್ಗಣ್ಕೋಲೊಳೊಳಗೆ ಪೊಱಗಣೆ ಮೆಱೆವೊಳ್ಪಳವಡೆ ಚಾರಿಪ ಬಹಲಿಕೆಯಳವಿದು ಕೇವಳಮೆ ಕೀರ್ತ್ತಿನಾರಾಯಣನ (ಎಕ. II. ೦೩೩-೯೬ ; 982). **ಬಹಳಿಕೆ** : ವಿಹಗಕುಳಂಗಳಂ ನೆರಪಿ ಕೂಜನದೇಟ್ಗೆ ಮನೋಜರಾಜ್ಯಮಂ ಬಹಳಿಕೆಯಿಂದೆ ಮೂವಡಿಸಿ . . . ಆತ್ಮಮನ್ಮಥಗ್ರಹಮನದೇಂ ಕಟಲ್ಚುವರೊ ಯವ್ವನಮತ್ತೆಯರಲ್ಲಿ ನಲ್ಲರೊಳ್ (ಪುಷ್ಕಪು. ೨-೪೨) ; ಗಜದಳದ ಬೃಂಹಿತದ ಬಹಳಿಕೆ . . . ಛಡಾಳಿಸಲೊಡ್ಡಿದರು ಮಂಡಳಿಸಿ ಮೋಹರವ (ಕುಪ್ಯಾಪ್ರೋ. ೬-೦೪). [ಬಹಲ + — ಇಕೆ]

ಬಹಲು 'ಬಹಾಲ್' ನೋ.

ಬಹಳ 'ಬಹಲ' ನೋ.

ಬಹಳಿಕೆ 'ಬಹಲಿಕೆ' ನೋ.

ಬಹಳಿತ (ಗು). ೧. ವಿಶೇಷವಾದ ; ಅತಿಶಯವಾದ : ನಿಜವರೂಥದಲಂದು ಕೌರವವಿಜಯಮಾರುತಿ ಹೊಕ್ಕು ರಿಪುಭೂಭುಜರನರೆಯಟ್ಟಿದನು ಬಹಳಿತ ಸಿಂಹನಾದದಲಿ (ಕುಪ್ಯಾಪ್ರೋ. ೦೩-೦೭) ; ರಘುಪ್ರಭವ . . . ಸೂತಮಾಗಧವಂದಿಸಂದೋಹ ಬಿರುದನುಚ್ಚಾರಿಸಲು ಮಾರುತಿ ಧಿರುರೆ

ಪಾಯಪಧಾರೆನಲು ಬಂಧುರದ ಬಹಳಿತ ಸೇತುವಿದ್ದೆಡೆಗಾಗಿ ನಡೆತಂದ (ಕೊರಿಂ. ೬-೬-೩). ೨. ದಟ್ಟವಾದ ; ಸಾಂದ್ರವಾದ. ೩. ಪ್ರಬಲವಾದ ; ಬಿರುಸಾದ. [ಸಂ. ಬಹಲಿತ]

ಬಹಳಿಸು (ಕ್ರಿ). ಹೆಚ್ಚಾಗು ; ಅಧಿಕವಾಗು : ಸಿಹಿ ಪಿರಿದಾದಲ್ಲಿ ಹುಳಿಗೊಡುವಳು ಹುಳಿ ಬಹಳಿಸಲುಪ್ಪುದೋಱುವಳು (ಭರತ. ೦೦-೩೦).
[ಬಹಳ (= ಬಹಲ) + — ಇಸ್ಸು]

ಬಹಾದರ್ 'ಬಹಾದುರ್' ನೋ.

ಬಹಾದರಿ 'ಬಹಾದುರೀ' ನೋ.

ಬಹಾದರೀವರಹ 'ಬಹಾದ್ದುರಿವರಹ' ನೋ.

ಬಹಾದುರ್, ಬಹದರ್, ಬಹದರ, ಬಹದರು, ಬಹದ್ದರ, ಬಹದ್ದೂರ್, ಬಹದ್ದೂರ, ಬಹಾದರ್, ಬಹಾದ್ದರ್, ಬಹಾದ್ದರ, ಬಹಾದ್ದುರ, ಬಹಾದ್ದೂರ್, ಬಹಾದ್ದೂರ, ಬಾದರ್, ಬಾದುರ, ಬಾಧುರ, ಭಾಹದರು (ನಾ). ೧. ವೀರ ; ಶೂರ ; ಸಾಹಸಿ : (ಕ). ೨. ಯೋಧ ; ಸೈನಿಕ : (ಕ). ೩. ಮೊಗಲ್‌ರಾಜರು ಗಣ್ಯವ್ಯಕ್ತಿಗಳಿಗೆ ಕೊಡುತ್ತಿದ್ದ ಒಂದು ಬಿರುದು : ಶ್ರೀಮನ್‌ಮಹಾರಾಜರಾಜಾ ಸಾಹೇಬ್ಬಹಾದುರವರು, ಇದರಡಿ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ (ಗ್ರಾಮಾಳ. ೦೪). **ಬಹದರ್** : ೩. ಹೈದರಲ್ಲಿಖಾನ್‌ಬಹದರವರು ಕೊಟ್ಟ ದರ್ಮಕ್ಕೆ ಮಾಗನೂರ ಗ್ರಾಮಶಾಸನ (ಎಕ. XI, ಹನ್ನಪ. ೦೬೬-೬ ; 1761) ; ಮುದ್ದುಕೃಷ್ಣಾಜಮ್ಮಣ್ಣೀಯವರು ನಂಜರಾಜಬಹದರವರು (ಎಕ. X ೯, ಚಕಮರಾ. ೨೪೦-೬ ; ಸು. 1828). **ಬಹದರ** : ೩. ಹೈದರಲ್ಲಿ ಬಹದರನು (ಸೌಇಎ. ೦೯೩೪, ಸೇಲಂ. ೦೩೩-೦೯ ; 1759). **ಬಹದರು** : ೩. ಯಾ ಹೈದರಲ್ಲಿಖಾನರ ಹಿರೇರು ಪೂರ್ವದಲ್ಲಿ ಅರಬ್ಬದೇಶದಿಂದ . . . ಬಿಜಾಪುರದ ಸಂಸ್ಥಾನಕ್ಕೆ ಬಂದು ಅಲ್ಲಿನ ಬಹದರಲ್ಲಿ ನೌಕರೀ ನಿಂತು (ಹೈದರ. ೨೦). **ಬಹದ್ದರ** : ೧. ಕಲ್ಲ್ಯಾನ ಬಿಡಿಸಿಗೊಂಡು ಹೋಗೂ ಬಹದ್ದರ ಅವರ ಹಿಂಡಿನ್ಯಾಗ ಯಾವನೂ ಇಲ್ಲ (ಗ್ರಾಮಾಯ. ೨೯೪) ; ಭಾರಿ ಜಮೀನುದಾರರು ಕೂಡ ಈಗ ಅನ್ನಾನ್ನಗತಿಯಾಗಿ ಕೇವಲ ಅಡ್ಡ ಹೆಸರಿನ ಬಹದ್ದರರಾಗಿ ಆತ್ಮವಂಚನೆಯನ್ನೇ ಮಾಡಿಕೊಳ್ಳುತ್ತಿರುವರು (ಕಪಂ. ೦೪೭). **ಬಹದ್ದೂರ್** : ೧. ನೀವು ದೊಡ್ಡ ಬಹದ್ದೂರರು ಅಕ್ಷಯಬಾಬು ! (ಕೇಪ್ರಶ್ನೆ. ೨೦೩). ೩. ಶ್ರೀಮುಮ್ಮಡಿಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿಯಎಸ್ಸಿಐಯವರ ಪಿತೃಗಳಾದ ಮಹಾರಾಜರು ಖಾಸ ಚಾಮರಾಜಒಡೆಯರವರ ಜ್ಞಾಪಕಾರ್ಥ ಇದು ಸ್ಥಾಪಿತವಾಗಿದೆ (ಎಕ. VI (E), ಶ್ರೀರಂಗ. ೩೭-೦ ; 1868 ?) ; ಟೀಪು ಸುಲ್ತಾನ ಬಹದ್ದೂರ್‌ರವರು ತಮ್ಮ ಕಡೆಯಿಂದ ಒಂದು ಕಾಗದ, ಮೀರಸಾದಕನ ಕಡೆಯಿಂದ ಒಂದು ಕಾಗದ . . . ದೋಸ್ತಿ ಮಾಡುವ ಬಗ್ಗೆ ನಂಬಿಗೆ ಭಾಷೆ ಹಾಕಿ ಬರಿಸಿ (ರಾಸೇಂದ್ರ. ೭೪). **ಬಹದ್ದೂರ** : ೧. ಕಂಚಿನ ತಂಬಿಗೆ, ಮಸಿಬುಡ್ಡಿ . . . ಪುಸ್ತಕ ಇತ್ಯಾದಿ, ಇತ್ಯಾದಿ—ಹೆಂಡತಿಯ ಮೈ ಮುಖಕ್ಕೆ ಗುರಿಯಿಟ್ಟು ಬೀಸಿ ಎಸೆಯುವ ಬಹದ್ದೂರರೂ ಇದ್ದಾರೆ (ಹುಚ್ಚುಹು. ೦೨). (ಗು). ೪. ಸಮರ್ಥವಾದ; ಪ್ರಬಲವಾದ : ಮಹಾದೇವನು ನಮಗೆ ಕೊಟ್ಟು ಇರುವಂಥಾ ಒಂದು ನಾಲಿಗೆಯನ್ನು ಇಂಗ್ರೇಜಿ ಬಹದ್ದೂರ ಸರಕಾರದ ಸ್ನೇಹ ಮಾಡುವಾಗ್ಯೆ, ಅವರಿಗೆ ಕೊಟ್ಟು ಇದ್ದೇವೆ (ರಾಸೇಂದ್ರ. ೭೬). **ಬಹಾದರ್** : (ಕ). **ಬಹಾದ್ದರ್** : ೩. ಜನರಲ್ ಮೆಂಡೂಸ್‌ಸಾಹೇಬ್‌ಬಹಾದ್ದರವರು . . . ಬಂಗಾಳದ ಲಾರ್ಡ್‌ಕಾರನ್ವಾಲೀಸ್‌ಸಾಹೇಬ್‌ಬಹಾದ್ದರವರ ಫೌಜಿನ ಸಂಗಡ ಕೂಡಿ, ಒಟ್ಟಾಗಿ ಗಟ್ಟ ಹತ್ತಿ ಬಂದು, ಬೆಂಗಳೂರ ಮೊಕ್ಕಾಮಿನಲ್ಲಿ ಇಳುಕೊಂಡರು (ರಾಸೇಂದ್ರ. ೭೦). **ಬಹಾದ್ದರ** : ೧. ಹೆಸರಿಗೆ ತಕ್ಕಂತೆ, ಅವನು ಬಹಾದ್ದರನೇ ಆಗಿರುವನು (ಕಳ್ಳಾ. ೩). ೪. ಮೊದಲು ಕೊಡಗಿನ ಮಹಾರಾಜರ ಕಡೆಯಿಂದ ಮಿತ್ರತ್ವವಾಂಛಲ್ಯವಿಟ್ಟು ಶಾಶ್ವತವಾಗಿ ನಡದು ಬರಬೇಕು ಎಂಬುದಾಗಿ, ಭಾಷಾಪತ್ರಿಕೆ ಬರೆಸಿ, ಇಂಗ್ರೇಜಬಹಾದ್ದರಕಂಪನಿ ಸರಕಾರದಲ್ಲಿ ಮಡಗಿ ಇದೆ (ರಾಸೇಂದ್ರ. ೬೪). **ಬಹಾದ್ದುರ** : ೪. ಹತ್ತು ಪಾಲು ಹೆಚ್ಚಾಗಿ ಇನ್ನೂ ಇಂಗ್ರೇಜಬಹಾದ್ದುರಕುಂಪನಿ ಸರಕಾರಕ್ಕೆ ಸಹಾಯ ಮಾಡಬೇಕು ಎಂಬುದಾಗಿ, ನಾವು ನಿಶ್ಚೈಸಿ ಇದ್ದೇವೆ (ರಾಸೇಂದ್ರ. ೦೨೭). **ಬಹಾದ್ದೂರ್** : ೧. "ಬಹಾದ್ದೂರ್ = ಶೂರ" (ಜಾನಕೋ. ೨೦). **ಬಹಾದ್ದೂರ** : ೪. ಈ ಪೂರ್ವೋತ್ತರವೆಲ್ಲಾ ಇಂಗ್ರೇಜಬಹಾದ್ದೂರ ಸರಕಾರಕ್ಕೆ ಬರದು ಕಳುಹುತ್ತೇವೆ (ರಾಸೇಂದ್ರ. ೯೩). **ಬಾದರ್** : ೩. ನವಾಬುಹೈದರಲಿಖಾನ್‌ಬಾದರವರು ಪೃತ್ವೀಸಾಮ್ರಾಜ್ಯಂಗೆಯುತ್ತಿರಲು (ಎಕ. IX, ಹನ್ನಪ. ೦೬-೬; 1767). **ಬಾದುರ** : ೩. ವುಭಯದಳ ಪೂಜ್ಯಲಿಂಗವೊಡೆದಳವಿಭಾಡ ಬಾದುರಮಲುಕ ಸಪ್ತಾಂಗಹರಣಯೇನು ಮುಲಮಂದ ಪಾರ್ಥಿಕಮಲ್ಲ . . . ಮುಂಮ್ಮಡಿಹೊಟ್ಟಂಣನಾಯಕರೈಯನವರು ಮಾಡಿಸಿದಂತಾ ಶಾಸನಾ (ಮೈಆರಿ. ೦೯೩೮, ೯೪-೦೮; 1700). **ಬಾಧುರ** : ೨. ಹಸ್ತಿಗಳ ಸಾಲಿಂದ ಸಾಲ್ಗಳನೆತ್ತಿಸಿದ ಬಾಧುರರ ರಣದೊಳು ವಿಸ್ತರಿಸಲಸದಳಗಳಾದವು ರಾಯಬಲವೆಲ್ಲ (ಮುಲ್ಹಾಕಾ. ೭-೨೪). **ಭಾಹದರು** : ೩. ಮಹಾರಾಜರಾಜಕೃಷ್ಣರಾಜವೊಡೇರಭಾಹದರು . . . ಬರಸಿ ಕಳುಹಿಸ್ತ ನಿರೂಪ (ಎಕ. VI, ಕೊಪ್ಪ. ೪೮-೦೯; 1811).

[←ಪಾರ. ಬಹಾದುರ್; ಹಿಂ. ಬಹಾದುರ್, ಬಹಾದರ್; ಮರಾ. ಬಹಾದೂರ್, ಬಹಾದರ್, ಬಹಾದ್ದರ್]

ಬಹಾದುರೀ, ಬಹದರಿ, ಬಹದ್ದುರಿ, ಬಹದ್ದೂರಿ, ಬಹಾದರಿ, ಬಹಾದ್ದರಿ, ಬಹಾದ್ದೂರಿ (ನಾ). ೧. ಬಹದ್ದೂರ್ ಹೈದರನ ಕಾಲದಲ್ಲಿ ಟಂಕಿಸುತ್ತಿದ್ದ ಒಂದು ಬಗೆಯ ಚಿನ್ನದ ನಾಣ್ಯ : ಬ್ರಿಟಿಶಸರಕಾರದ ಅಮಲಿನ ಆರಂಭದಲ್ಲಿ . . . ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ—೧ ಗಜಪತಿ (ವಿಜಯನಗರದ ಅರಸರದು)... ೨ ಬಹಾದುರೀ (ಹೈದರನದು) ರೂ. ೪, ಆ. ೮ (ಕಪಾಗೆ. ೨೮೦). **ಬಹದರಿ** : (ಗು). ೨. ಬಹದ್ದೂರನಿಗೆ ಸಂಬಂಧಿಸಿದ; ಮೊಗಲ್‌ದೊರೆಗೆ ಸೇರಿದ : 'ಬಹದರಿವರಹ' ಪರಾ. **ಬಹದ್ದುರಿ** : ೩. ಭಾರಿಯಾದ; ಮಹತ್ತ್ವದ : ಅದು ಬೇವಾರಸು ಬಹದ್ದುರೀ ಸುದ್ದಿಯಾದದ್ದರಿಂದ ತಾವು ಅದನ್ನು ವಹಿಸಿಕ್ಕೊಂಡು ವರ್ಧಮಾನಕ್ಕೆ ತಂದರೆಂದು, ನನ್ನ ಊಹೆ (ಕಲಿಪ. ೩೬೪). **ಬಹದ್ದೂರಿ** : ೪. ಯೋಗ್ಯವಾದ; ಸಮರ್ಥವಾದ : ಅವನ ಎತ್ತೂ ಹಾಗೆಯೇ ಬಹದ್ದೂರಿ (ಹಳ್ಳಿಣಾ. ೪೦). **ಬಹಾದರಿ** : ೨. 'ಬಹಾದರೀವರಹ' ಪರಾ. **ಬಹಾದ್ದರಿ** : ೪. 'ಬಹಾದ್ದರಿತನ' ಪರಾ. **ಬಹಾದ್ದೂರಿ** : ೫. ಅಧಿಕಾರ : ಮನಸ್ಸು ಋತುವ್ಯತ್ಯಾಸವನ್ನು ಗೆದ್ದು ಅದನ್ನು ನಿಶ್ಚೇತನವಾಗಿ ಮಾಡಿ ಒಂದು ಬಹಾದ್ದೂರಿ ನಡಸುವಂತಿದೆ (ಪಿಬಂಧ. II, ೪೦೬).

[←ಪಾರ. ಹಿಂ. ಬಹಾದುರೀ ; ಮರಾ. ಬಹಾದರೀ, ಬಹಾದಾರೀ, ಬಹಾದೂರೀ]

ಬಹಾದ್ದರ್ 'ಬಹಾದುರ್' ನೋ.

ಬಹಾದ್ದರ 'ಬಹಾದುರ್' ನೋ.

ಬಹಾದ್ದರಿ 'ಬಹಾದುರೀ' ನೋ.

ಬಹಾದ್ದರಿತನ (ನಾ). ದಕ್ಷತೆ ; ಸಾಮರ್ಥ್ಯ : ಬೆಳ್ಳಾರೆಕೋಟೆ, ಮೂಡ ಕೊಡೆಯಾಲದ ಕೋಟೆ ಸಮಾಚಾರ ಬರಸಿದ್ದು ಕೇಳಲಿಲ್ಲ. ಬಲುಚಾತುರ್ಯ, ಧೈರ್ಯ, ಬಹಾದ್ದರಿತನ ಸಹಾ ತೋರಪಟ್ಟಿತು (ರಾಸೇಂದ್ರ. ೦೮೦). [ಬಹಾದ್ದರಿ (<ಬಹಾದುರೀ) + — ತನ]

ಬಹಾದ್ದುರ 'ಬಹಾದುರ್' ನೋ.

ಬಹಾದ್ದುರಿವರಹ, ಬಹದರಿವರಹ, ಬಹಾದರೀವರಹ (ನಾ). ಬಹದ್ದೂರ್ ಹೈದರನ ಕಾಲದಲ್ಲಿ ಟಂಕಿಸಲಾಗುತ್ತಿದ್ದ, ಅಂದಿನ ನಾಲ್ಕು ಅಥವಾ ಐದು ರೂಪಾಯಿಗಳಿಗೆ ಸಮಾನವಾದ ಒಂದು ಬಗೆಯ ಚಿನ್ನದ ನಾಣ್ಯ : ಮರುಕ್ಷಣದಲ್ಲಿ ಐದನೂರುಬಹಾದ್ದುರಿ ವರಹಗಳ ಥೈಲಿ ಝಣ್ಣೆಂದು ಬಿತ್ತು ಜೋಯಿಸರ ಬೊಗಸೆಗೆ (ಕೃಷ್ಣಕೂ. ೩೬). **ಬಹದರಿವರಹ** : ಇಂಗ್ಲಿಷ್ ಸರ್ಕಾರಕ್ಕೆ ಸಲ್ಲಬೇಕಾದ ಪಗದಿಯ ವಿಷಯದಲ್ಲಿ ಈ ರಾಜ್ಯವು ತತ್ಕಾಲಕ್ಕೆ ಕ್ಷೀಣದಶೆಯಲ್ಲಿದ್ದ ಕಾರಣ ಮೊದಲನೆಯ ವರ್ಷದಲ್ಲಿ ೭ ಲಕ್ಷ ಬಹದರಿವರಹಕ್ಕೆ ಬದಲಾಗಿ ೭ ಲಕ್ಷ ಕಂಠೀರಾಯಿವರಹವನ್ನು ಅಂಗೀಕರಿಸಲಾಗುವುದು (ಮಹಾಪಂ. II, ೦೦). **ಬಹಾದರೀವರಹ** : (ಕ). [ಬಹಾದ್ದುರಿ (<ಬಹಾದುರೀ) + ವರಹ]

ಬಹಾದ್ದೂರ್ 'ಬಹಾದುರ್' ನೋ.

ಬಹಾದ್ದೂರ 'ಬಹಾದುರ್' ನೋ.

ಬಹಾದ್ದೂರಗಡಿ (ನಾ). ಸಮರ್ಥನಾದ ವ್ಯಕ್ತಿ; ದಕ್ಷ: ವಕೀಲರು ಬಹಾದ್ದೂರಗಡಿ ; ಸರದಾರ ಮನಸ್ಯಾ (ರಕ್ತರ್ಯ. ೧೯೬).
[ಬಹಾದ್ದೂರ (<ಬಹಾದುರ್)+ಗಡಿ(ಪ←ಮರಾ. ಗಡಿ=ಮನುಷ್ಯ)]

ಬಹಾದ್ದೂರಿ 'ಬಹಾದುರೀ' ನೋ.

ಬಹಾರ್ (ನಾ). ೧. ಮೋಜು; ತಮಾಷೆ; ಗಮ್ಮತ್ತು : ಚದುರಂಗದ ಆಟವು ಎಂಥಾ ಬಹಾರ್ ನಡೆದಿರುತ್ತದೆ ! (ಮೋಹಿಶೀ. ೭೦). ೨. [ಸಂಗೀತ] ಒಂದು ರಾಗದ ಹೆಸರು: ಬಹಾರ್, ದಾಗೇಶ್ವರಿ, ಪೂರಿಯಾ, ದರ್ಬಾರಿ, ಕಮಾಚ್‌ರಾಗಗಳು ಉನ್ಮಾದವನ್ನೂ . . . ಗುಣಪಡಿಸುವುದೆಂಬ ಭಾವನೆ ಉತ್ತರಭಾರತದಲ್ಲಿದೆ (ಭಾರದ. ೩೪೪).
[← ಪಾರ. ಹಿಂ. ಬಹಾರ್ ; ಮರಾ. ಬಹಾರ್, ಬಹರ್]

ಬಹಾಲ್, ಬಹಲಿ, ಬಹಲು (ನಾ). ೧. ಪೂರ್ವಸ್ಥಿತಿಗೆ ತರುವಿಕೆ ; ಯಥಾಸ್ಥಿತಿಗೆ ತರುವಿಕೆ : ಇನಾಂಜಮೀನಗಳು ಬಹಾಲ್ ಆಗುವಾಗ್ಗೆ ಸರಕಾರದಲ್ಲಿ ಈಗ್ಯೂ ಮೂಲಸನದುಗಳು ಫೈಲಿನಲ್ಲಿ ಅವೆ (ಎಜಯ. ೨೩೯). **ಬಹಲಿ** : ೨. ಸಂಸ್ಥೆ, ಸ್ಥಾನ, ಕಚೇರಿ ಮೊದಲಾದುವುಗಳಲ್ಲಿನ ವ್ಯವಸ್ಥೆ : (ಕ). **ಬಹಲು**: ೩. ಇನಾಮು ; ಭಕ್ಷೀಸು.

ಬಹಲ್ ಮಾಡು, ಬಹಲು ಮಾಡು=೧. ಪೂರ್ವಸ್ಥಿತಿಗೆ ತರು; ಯಥಾಸ್ಥಿತಿಗೆ ತರು : ಹಿಂದೆ ಸರ್ಕಾರಕ್ಕೆ ದಾಖಲಾಗಿದ್ದ ಅನೇಕ ದೇವಾದಾಯ ಬ್ರಹ್ಮಾದಾಯ ಭಟಮಾನ್ಯಗಳನ್ನು ಬಹಲ್ ಮಾಡಿ ಪ್ರಯಾಣಕರ ಆನು ಕೂಲ್ಯಕ್ಕೋಸ್ಕರ ಅಲ್ಲಲ್ಲಿ ಕೆಲವೆಡೆ ಅನ್ನಸತ್ರಗಳನ್ನು ಏರ್ಪಡಿಸಿದರು (ಮಹಾಪಂ. II. ೩೩). ೨. ಭಕ್ಷೀಸು ಕೊಡು : ಇನಾಮು ಕೊಡು : ನಮ್ಮ ದೌಲತ್ತನ್ನು ಬಹಲು ಮಾಡುವುದಕ್ಕೆ ಅದನ್ನು ನಮಗೆ ಯಾರೂ ಕೊಟ್ಟಿಲ್ಲ. ಅದನ್ನು ನಮಗೆ ಕೊಟ್ಟ ಈಶ್ವರ ದೊಡ್ಡವನು (ಪತ್ರಪಾ. ೬೯). **ಬಹಲಿಯಿಡು**=ಬಹಲ್‌ಮಾಡು ೧ : ಅನಂತರ ಆಳಿದ ಅವರ ಪುತ್ರರು ಕಂಠೀರವಮಹಾರಾಜರು ಪಟೇಲರ ಇನಾಮನ್ನು ಜಪ್ತಿ ಮಾಡಿ ಇತರ ಗ್ರಾಮನೌಕರರ ಇನಾಮನ್ನು ಬಹಲಿಯಿಟ್ಟರು (ಮಹಾಪಂ. II. ೨೯).
[←ಪಾರ. ಮರಾ. ಬಹಾಲ್; ಹಿಂ. ಬಹಾಲ್, ಬಹಾಲೀ]

ಬಹಿ (ನಾ). ಹೊರಗು : ಕಾಯದಲ್ಪಸುಖಕ್ಕೆ ಘನನಿಶ್ರೇಯಸಕೆ ಬಹಿ ಯಾಗಬೇಡ (ಜೀವಂಸ. ೦೨-೩೩). [<ಸಂ. ಬಹಿರ್]

ಬಹಿಃಕರಣ (ನಾ). ಪ್ರಕಟವಾಗುವುದು; ಅಭಿವ್ಯಕ್ತಿ: ನಾವು ಕಲಾ ಕೃತಿ ಎಂದು ಯಾವುದನ್ನು ಕರೆಯುತ್ತೇವೆಯೋ, ಆ ಚಿತ್ರವೋ, ಗೀತವೋ, ಶಿಲ್ಪವೋ—ಅದು ಏನಿದ್ದರೂ ಪ್ರತಿಭಾನದ ಬಹಿಃಕರಣದ ರೂಪವಾದುದು (ಸೌಂದಸ. ೭೯). [ಸಂ.]

ಬಹಿಃಕರಿಸು (ಕ್ರಿ). ೧. ಅಭಿವ್ಯಕ್ತಪಡಿಸು; ತೋರ್ಪಡಿಸು: ತರುಣಿ ಕಳಂಕಮನಂತಃಕರಣದೊಳಾಂತಮಳವೃತ್ತಿಯಂ ಕೂಡೆ ಬಹಿಃಕರಿಪಂತೆ ಮಹಾರಜನಾಂಬರಮಂ ಕಳೆದೇಕೆ ಧವಳಪಟಮಂ ಪೊದೆದೌ (ಜಗಿ. ೦೨-೯೦). ೨. ಹೊರಹಾಕು ; ಹೊರದೂಡು : ಇರಿಸಿ ತಮೋಗುಣಮಂ ಮಿಕ್ಕ ರಜಸ್ಸತ್ವಂಗಳಂ ಬಹಿಃಕರಿಸುವವೊಲ್ ಅರುಣಾಧರಪಾಂಡುರದಶನರುಚಿ ಗಳಾನನದಿನೊಗೆಯೆ ಲಾಂಗಲಿ ನುಡಿದಂ (ಜಗಿ. ೦೫-೬೦).
[ಬಹಿಃಕರಣ + — ಇಸು$_3$]

ಬಹಿಃಕ್ಷೇತ್ರ (ನಾ). ಹೊರಭಾಗ; ಹೊರವಲಯಂ : ಆ ಯಜ್ಞದ ಸೂತ್ರಪ್ರಕಾರದಿಂ ಮುಖಶಾಲೆಯಂ ಬಹಿಃಕ್ಷೇತ್ರದೊಳ್ಸಲೆ ರಚಿಸಿ (ಶೈಮಿಶಾ. ೯-೭). [ಸಂ.]

ಬಹಿಃಪುರ (ನಾ). ಊರಿನ ಹೊರಭಾಗ ; ಹೊರವಲಯ: ವನಜ ವನರಾಜಿಕೂಜದ್ವನವಿಹಗವಿರಾಜ ಪುರಬಹಿಃಪುರಕೇಳೀವನದೊಡವು ರತಿಯ ಪೊಸಜೌವನದೊಡವೆನೆ ನೆಱೆಯೆ ಪೊಗಟಲಾವಂ ನೆಱೆವಂ (ಪಂಠಾಪಾ. ೦-೦೦೦). [ಸಂ.]

ಬಹಿಃಪುಷ್ಕರ (ನಾ). ಹೊರಭಾಗಕ್ಕೆ ಚಾಚಿಕೊಂಡಿರುವ ಸೊಂಡಿಲು ಳ್ಳುದು : ಅಗಾಧಸ್ರವಂತೀಹ್ರದಾಂತರ್ಜಲದೊಳ್ ನಿಷ್ಕಂಪಿತಾಂಗಂ ಮುಚುಗಿದುದು ಬಹಿಃಪುಷ್ಕರಂ ಹಸ್ತಿಯೂಧಂ (ಪಂಠ್ರಪು. ೯-೬೯).
[ಸಂ.]

ಬಹಿಕರಿಸು (ಕ್ರಿ). ದೂರಮಾಡು; ಬಹಿಷ್ಕರಿಸು: ಯಶೋರಮೆ ನಾಚಿ ತಲೆಗೊಡಹಿ ಬಹಿಕರಿಸದಿಹಳೇ . . . ವಿಚಾರವ ವಹಿಸದಳಿವರೆ ಸತಿಯನು (ಶೊರಾ. ೩-೩-೩೯). [<ಬಹಿಷ್ಕರಿಸು]

ಬಹಿತ್ರ, ಬಾಹಿತ್ರ, ಬೈತ್ರ, ಭೈತ್ರ(ನಾ). ತೆಪ್ಪ; ಹರಿಗೋಲು: "ತರಣಿ ಬಹಿತ್ರಮುಂ" (ಪಸ್ತುಕೋ. ೦೨೦-೧೭) ; ಗಗನತಲಜಲಧಿಯೊಳ್ ಬಹಿತ್ರದಂತೆ ಪರಿವ ಸೂರ್ಯಪ್ರಭನೆಂಬ ದೇವನ ವಿಮಾನಮಂ ನೋಡಿ (ಅಂಪು. ೩-೯೩ ಪ) ; ಏನೊಪ್ಪಿರ್ಪುವೊ ಪೋಲ್ತು ದಿವ್ಯಜಿನಚೈತ್ಯಂಗಳ್ ಬಹಿತ್ರಂಗಳಂ (ಪುಷ್ಪಪು. ೨-೭೯). **ಬಾಹಿತ್ರ** : ಪುತ್ರರೇ ದುಃಖಾರ್ಣವಕೆ ಬಾಹಿತ್ರ ಸತ್ಕುಲನಂದನಕ್ಕಂ ಚೈತ್ರಮಾಸಂ (ಕಂಕಣಾ. ೦೬-೦೭). ಪ ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. **ಬೈತ್ರ**: ಬಡಿಗೊಂಡು ಮಸಗಿ ಬೈತ್ರಮನೊಡೆವ ಮಹಾಮಕರದಂತೆ ಕರಿಘಟೆಗಳನಾರ್ದುಡಿಯೆ ಬಡಿದಾನೆವೆರಸಾಗಡೆ ಕೊಂದಂ ಕ್ಷೇಮಧೂರ್ತಿಯಂ ಪವನಸುತಂ (ಪಂಪಾ. ೦೨-೭೬); ಜ್ವಲಿಪ ಪೊಂದೇರ್ಗಳೇ ಬೈತ್ರಂಗಳ್. . . ಎಸೆವ ಮದದಂತಿಗಳೆ ಶೈಲಜಾಲವೆನೆ ಜಲನಿಧಿಯೊಲೊಪ್ಪಿದುದು ರಣರಂಗ (ಸೌಂದಪು. ೦೬-೨೦); ಗುಂಡುಗಳು ಭಾರ ಬೈತ್ರಕ್ಕೆ ಲೋಕಕ್ಕೆ ಕೊಂಡೆಯನೆ ಭಾರ (ಸರ್ವಜ್ಞ. ೦೯೫೦). **ಭೈತ್ರ**: "ಪೋತಃ, ಪ್ರವಹಣಃ—ಈ ೨ ಭೈತ್ರಂ" (ಪಲಾಯು. ೦೦೬-೩೩); ಆ ಭುವನತ್ರಯವಿಜಯಿಯಪ್ಪ ರೂಪಾತಿಶಯದೊಡನಮಳ್ಳಳೆ ದಂತೆ ಬಳೆದ ನಿಸರ್ಗಶೌಚಾದಿಗುಣಂಗಳಿಂ ಬಿಣ್ಗುಂಡಿಕ್ಕಿದ ಭೈತ್ರಮುಮಂ . . . ಪೋಲ್ತು (ಕಾಂಶಿಪು. ೦೦-೯೨ ಪ); ತಲ್ಲಿಂಗಕೋರಂತೆ ನಮಿಸಿ ಬೀಳ್ಕೊಂಡು ಭೈತ್ರವನೇಱಿ . . . ಆ ನಾವಿಕಂ ಪಡಂಗಂ ತಡಿಯನುಱೆ ಸೇರಿಸಿ (ಪದ್ಮರಾ. ೦೦-೦೮೧). [< ಸಂ. ವಹಿತ್ರ]

ಬಹಿರ, ಬಹಿರು (ನಾ). ೧. ಹೊರಗು; ಬಹಿರಂಗ : ಹೆಜ್ಜಿಹೆಜ್ಜಿಗೆ ಕೃಷ್ಣ ಕೃಷ್ಣ ಅಬ್ಜನಾಭ ನಾರಾಯಣ ಮೂಜಗತ್ಪತಿಯೆಂದು ಸ್ತೋತ್ರ ನಿರ್ಲಜ್ಜವಾಗಿ ಪಠಿಸುತ ರಜ್ಜುಪಾಣಿಯ ಬಹಿರದಿಂದ ನಿರ್ವ್ಯಾಜಭಕುತಿಲಿ ನೋಡಿದೆ (ಶೀರ್ಥಮ. ೩೨); ಅನ್ಯರ ಕಣ್ಣಿಗೆ ಬಲುರಮ್ಯ ವಾಗಿ ಪಾವನನೆನಿಸಿಕೊಂಡೆ ಬಹಿರದಲ್ಲಿ ಬಣ್ಣವಲ್ಲದೆ ಲೇಶ ಅಂತರಶುಚಿ ಇಲ್ಲಾ (ಏಷಾಸು. ೬೬-೩). **ಬಹಿರು** : ೨. ಬಯಲು ಪ್ರದೇಶ : ಹೇಹದೊಳಗಿರ್ದರಿಗೆ ತದ್ವಿಧಿಗ್ರಾಹಗೊಳಿಸೈತರಲು ಬಹಿರಿಗೆ ಮೋಹರಿಸೆ ಬತ್ತೀಶ ಅಕ್ಷೋಹಿಣಿಯು ನಿಜಸೇನೆ (ಜಪರಾ. ೯೩೨-೯೬); ಪುರದ ವರಬಹಿರಿನೊಳು ದೂಸನು ವಿರಚಿಸಲು (ಜಪರಾ. ೬೪-೬೦). [<ಸಂ. ಬಹಿಸ್

ಬಹಿರಂಗ (ನಾ). ೧. ಹೊರಗಿನ ಅವಯವ.–ಅಂಗ : ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ . . . ಇದೆ ಅಂತರಂಗಶುದ್ಧಿ ಇದೆ ಬಹಿರಂಗಶುದ್ಧಿ (ಬಸವ. ೨೩೫). ೨. ಹೊರಗಿನದು ; ಹೊರ ಭಾಗಕ್ಕೆ ಸೇರಿದುದು : ಆ ವಿಭುಗಾದುದಂದು ವಿಶದಂ ಬಹಿರಂಗಮುಮಂತರಂಗಮುಂ (ಶಾಂತಿಪು. ೯-೩೩). ೩. ಹೊರಗಡೆ ; ಹೊರಭಾಗ : ಅಂತರಂಗದಲ್ಲಿ ಜ್ಞಾನ ಬಹಿರಂಗದಲ್ಲಿ ಕ್ರಿಯೋಪಚಾರ ಇರುತಿರಲಿಕ್ಕಾಗಿ ಏಕ ಭಾವವೆನಿಸಿಕೊಂಬುದಯ್ಯಾ (ಸಿದ್ಧೇಶ. ೮೨-೩೯); ಎನ್ನೂರ್ವುಗದೆ ಬಹಿರಂಗದಿಂ ತೆರಳ್ವುದು ನೀತಿಯಲ್ಲ(ಶೈಮಿಂಗ. ೯-೬೫). ೪. ಹೊರಗಿನ ಪ್ರದೇಶ.–ಎಡೆ : ಅಯ್ಯೋ ಆ ಬಟ್ಟಬಯಲಿನ ಹಾಳು ಬಹಿರಂಗದಲ್ಲಿ, ಕೋಗಿಲೆಯ ದೊಂದು ಕರ್ರಗೆ ಹದುಗಿ ಕೂತಿತ್ತು(ಕೋಗಿಲೆ. ೩-೬೯). ೫. ಇಂದ್ರಿಯ ಗೋಚರವಾದುದು : ಪ್ರತ್ಯಕ್ಷ : ಬಹಿರಂಗದಲ್ಲಾದರೋ ಕೋಟಿ ಸೂರ್ಯಪ್ರಕಾಶಮಾನವಾದ ಪಾಂಡುರಂಗನ ಪ್ರತ್ಯಕ್ಷದರ್ಶನವಾಯಿತು (ಕಲಿ. ೯೯೯). ೬. ಮುಚ್ಚುಮರೆಯಿಲ್ಲದ ಸ್ಥಿತಿ ; ಎಲ್ಲರಿಗೂ ತಿಳಿದಿರುವಂತಹುದು ; ಸರ್ವವಿದಿತ : ಬಹಿರಂಗವಾಗಿ ಕೆಣಕುವಷ್ಟು ಧೈರ್ಯಗೊಂಡ ಕಡುಮೂರ್ಖರನ್ನು ತಾಮಸವಿಲ್ಲದೆ ಶಿಕ್ಷಿಸಿದನಕ ಭಿಕ್ಷೆ ತಕ್ಕೊಳ್ಳಲಾರೆನೆಂದು ಚಂಚಲನೇತ್ರರು ಹಟಹಿಡಿದರು (ಪಾಗೇಶ್ವಿ. ೫೯); ಈ ವಿಷಯ ಬಹಿರಂಗಕ್ಕೆ ಬರಲು ಹೆಚ್ಚು ಸಮಯವೇನೂ ಬೇಕಾಗಿಲ್ಲ (ರೂಢಿ).

ಬಹಿರಂಗಭಕ್ತಿ=(ಅಂತರಂಗದಲ್ಲಿ ಇಲ್ಲದೆ) ಹೊರಗಡೆಯಲ್ಲಿ ಮಾತ್ರ ತೋರಿಸುವ ಭಕ್ತಿ; ಬೂಟಾಟಿಕೆಯ ಭಕ್ತಿ : ತೋರಿದನು ಬಹಿರಂಗಭಕ್ತಿಯ ಕ್ರೂರಕಪಟಿಯು (ಬಿಲ್ಹಪು. ೯೦-೬೩). ಬಹಿರಂಗ ಮಾಡು =ಹೊರಗಡಹು ; ಪ್ರಕಟಿಸು : ಯಾವುದೇ ಗುಟ್ಟಿನ ವಿಷಯವನ್ನು ಬಹಿರಂಗ ಮಾಡಬಾರದು (ರೂಢಿ). ಬಹಿರಂಗವಾಗು=ಎಲ್ಲರಿಗೂ ತಿಳಿಯುವಂತಾಗು : ಪ್ರಚಾರಗೊಳ್ಳು : ಗುಟ್ಟು ಬಹಿರಂಗವಾದ ಮೇಲೆ ಬಹಿಷ್ಕಾರವಾದರೇನು ? ಪ್ರಾಯಶ್ಚಿತ್ತವಾದರೇನು ? (ಗಾದೆ). ಬಹಿರಂಗ ವಿಚಾರಣೆ=ಎಲ್ಲರ ಸಮಕ್ಷಮದಲ್ಲಿ ನಡೆಸುವ ವಿಚಾರಣೆ ; ಸಾರ್ವಜನಿಕವಿಚಾರಣೆ : ಹಲವಾರು ಮಂದಿ ಸೇರಿ ನಡೆಸಿದ ಬಹಿರಂಗ ವಿಚಾರಣೆಯಲ್ಲಿ ಆತನ ಮೇಲಿನ ಆಪಾದನೆಯು ಸಾಕ್ಷ್ಯಾಧಾರಗಳಿಲ್ಲದೆ ಬಿದ್ದು ಹೋಯಿತು (ರೂಢಿ). [ಸಂ.]

ಬಹಿರಂಗಪಡಿಸು (ಕ್ರಿ). ಪ್ರಕಟಿಪಡಿಸು : ಹೊರಗೆಡಹು : ಆ ಗಂಡ ಹೆಂಡಿರು ತಮ್ಮ ಬಡತನಕ್ಕೋಸುಗ ಸರ್ವಾಭರಣಸಹಿತವಾಗಿ ದೊರೆತ ಮಗುವಿನ ವಿಷಯವನ್ನು ಬಹಿರಂಗಪಡಿಸಲಾರದಿದ್ದರು (ಕಪಿಕ. ೯). ಮದ್ರಾಸಿನ ಸಭೆಯೊಂದರಲ್ಲಿ ಸ್ವಾಮಿಗಳು ತಾವು ಚಿಕ್ಕಾಗೋದ ಸರ್ವ ಧರ್ಮಸಮ್ಮೇಳನಕ್ಕೆ ಹೋಗುವುದಾಗಿ ಬಹಿರಂಗಪಡಿಸಿದರು(ಧರ್ಮಸಾ. ೯೮).

[ಬಹಿರಂಗ+ಪಡಿಸು]

ಬಹಿರಕರ್ಮ (ನಾ). ಪ್ರಾಕೃತಿಕವಾದ ಮಲಮೂತ್ರ ವಿಸರ್ಜನೆ ಮುಂತಾದ ಕ್ರಿಯೆ ; ಪ್ರಾತರ್ವಿಧಿ : ತ್ವರಿತದಿಂ ಬಹಿರಕರ್ಮವ ತೀರ್ಚಿ (ಸಪಸೋ. ೦೭-೫); ಬಹಿರಕರ್ಮವ ತೀರ್ಚಿ ತವಕದಿಂ ಲೀಲೆಯಿಂದಂಗ ಮಜ್ಜನಗೈದು (ಸಪಸೋ. ೨೫-೭೧). [ಬಹಿರ+ಕರ್ಮ]

ಬಹಿರರ್ಥಸಿದ್ಧಿ (ನಾ). ಹೊರಗಿನ ಉದ್ದೇಶದ ಸಾಧನೆ : ವಿಜ್ಞಾನಂ ವಿಜ್ಞಾನಾಂತರಗ್ರಾಹಕಮಕ್ಕುಮಪ್ಪೊಡಾವ ಮಾಟ್ಕೆಯೊಳ್ ವಿಜ್ಞಾನಾಂತರ ಮಪ್ಪುದಾ ಮಾಟ್ಕೆಯೊಳೆ ಬಹಿರರ್ಥಸಿದ್ಧಿಯಾಗಿ ಸರ್ವಪ್ರತ್ಯಯನಿರಾಲಂಬನವಾದಂ ಕಿಡುಗುಂ(ಆದಿಪು. ೨-೦೦ ಪ). [ಸಂ.]

ಬಹಿರಾತ್ಮ (ನಾ). ೧. ಹೊರಗಿನ ಆತ್ಮ.—ಜೀವ; ಶರೀರ : ತತ್ತ್ರಯಾಯತ್ತಂ ಬಹಿರಾತ್ಮಂ ಕಾಯಂ ಪ್ರತ್ಯುಪ್ತಸಪ್ತಧಾತುನಿಬದ್ಧಂ (ಪಸ್ತುಕೋ. ೭೧-೨೬). ೨. [ಜೈನ] ಅಂತರಾತ್ಮ, ಬಹಿರಾತ್ಮ ಮತ್ತು ಪರಮಾತ್ಮ ಎಂಬ ಮೂರು ಬಗೆಯ ಆತ್ಮಭೇದಗಳಲ್ಲಿ ಒಂದು : "ಇಂದ್ರಿಯ ಸುಖದಲ್ಲೇ ಆಸಕ್ತ ಮತ್ತು ಶರೀರಾದಿಗಳೇ ತಾನು ಎಂದು ತಿಳಿಯುವವ" (ಶೈಪಕೋ. ೦೮೯) : "ಕೋಮಲವಾದ ಮೈಯು, ಮಕ್ಕಳು ಮೊದಲಾದ ಕ್ಷಣಿಕವಿಷಯಗಳಲ್ಲಿಯೇ ಆತುರಗೊಂಡು ಮಗ್ನನಾಗಿರುವ ಜೀವವು, ತನ್ನದು ಪರರದು ಎಂಬ ಭೇದಭಾವವನ್ನು ಕಲ್ಪಿಸುತ್ತ ಹೋಗುವುದು" ಇದು ಬಹಿರಾತ್ಮನ ಲಕ್ಷಣವು (ಶೈಪಕ. ೩೮೭).

[ಸಂ. ಬಹಿರಾತ್ಮನ್]

ಬಹಿರಾವರಣ (ನಾ). ಹೊರಗಿನ ಆವರಣ.—ಆಚ್ಛಾದನೆ.–ಮುಸುಕು : ಆತ ನಿರ್ಬೋಧನೂ ವಿಚಿತ್ರನೂ ಆದ ವ್ಯಕ್ತಿ, ಆತನ ಬಹಿರಾವರಣ ಕಳಚಿ ಹೋದಂತಿತ್ತು (ಶಿಬಿರ II, ೮೯); ಈ ಪ್ರೇಮಕ್ಕೆ ಬಹಿರಾವರಣಗಳ ಆಣೆಯಿಲ್ಲ (ರಾಮಾನ. ೦೦೨). [ಸಂ.]

ಬಹಿರಿಂದ್ರಿಯ (ನಾ). ಕಿವಿ, ಕಣ್ಣು, ಚರ್ಮ, ನಾಲಗೆ ಮತ್ತು ಮೂಗು ಎಂಬ ಐದು ಹೊರಗಿನ ಇಂದ್ರಿಯಗಳು; ಬಾಹ್ಯೇಂದ್ರಿಯ : ತರಣಿ ಮಂಡಲದಲ್ಲಿ ದೃಷ್ಟಿಯನಿರಿಸಿ ಬಹಿರಿಂದ್ರಿಯದ ಬಳಕೆಯ ಮುರಿದು ವೇದಾಂತದ ರಹಸ್ಯದ ವಸ್ತು ತಾನಾಗಿ ಇರಲು (ಕುಪ್ಯಾಸ್ತ್ರೋ. ೦೪-೨೨).

[ಸಂ.]

ಬಹಿರಿಗೆ (ನಾ). ಊರಿನ ಹೊರಗಿನ ಪ್ರದೇಶ.—ಬಯಲುಪ್ರದೇಶ : ತನ್ನ ಭಂಡಾರಸಹಿತಂ ಸ್ತ್ರೀಯರ್ಕಳುವೆರಸು ಗಾಂಧರ್ವದತ್ತೆಯು ಮುಂತಾ[ನುಮಿಾ] ವಿಮಾನಂಗಳನೇಱಿ . . . ಪಯಣಂಬಂದು ಚಂಪಾಪುರ ಮನೆಯ್ದಿ ಪುರಬಹಿರಿಗೆಯೊಳ್ ಬೀಡಂ ಬಿಟ್ಟರ್ದು (ಬಂಹರಿ. ೯-೯೦) ; ಪುರ ಬಹಿರಿಗೆಯೊಳ್ ಬಿಟ್ಟರ್ದ ಪಿರಿಯ ಬೀಡಂ ಕಂಡು (ಬಂಹರಿ. ೯-೫ ಪ)

[ಈ ಶಬ್ದವನ್ನು ಸಂಸ್ಕೃತ ವ್ಯಾಕರಣಸೂತ್ರದ ಮೂಲಕ ಸಾಧಿಸುವುದು ಕಷ್ಟ]

ಬಹಿರು 'ಬಹಿರ'ನೋ.

ಬಹಿರುದ್ಯಾನ (ನಾ). ಊರ ಹೊರಗಿನ ಉದ್ಯಾನ : ಬಹಿರುದ್ಯಾನಾಂತರದೊಳ್ ಸಹಸೋದಿತಮತ್ತಕೋಕಿಲೋಚ್ಚೈರ್ಧ್ವಾನಂ ಮುಹುರಾರ್ಣಿಸೆ ಪಡೆದತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ (ಕಪಿಕಾ. ೦-೫೬); ಬಹಿರುದ್ಯಾನದ ಕೆಲದೊಳ್ . . . ಮಾಡಿಸಿದಂ ಗೃಹಮಹತ್ತರಂ ನಿಮಿಷದಿಂ ಸ್ವಯಂವರ ಗೃಹಮಂ (ಪಂಠಾಪು. ೯-೩೯). [ಸಂ.]

ಬಹಿರ್ಗತ (ಗು). ೧. ಹೊರಹೊಮ್ಮಿದ ; ಪ್ರಕಟಗೊಂಡ. (ನಾ). ೨. [ನಾಟ್ಯ] ಆವರ್ತಿತ, ನತ, ಉತ್ಕ್ಷಿಪ್ತ, ಉದ್ವಾಹಿತ, ಪರಿವರ್ತಿತ, ನಿಸ್ಸೃತ, ಪರಾವೃತ್ತ, ತಿರಶ್ಚೀನ, ಬಹಿರ್ಗತ ಮತ್ತು ಕಂಪಿತ ಎಂಬ ಕಣಕಾಲುಗಳ ಹತ್ತು ಬಗೆಯ ಚಲನೆಗಳಲ್ಲಿ ಒಂದು : "ಜಂಘೆಯನ್ನು ಪಕ್ಕಕ್ಕೆ ನೀಡುವುದು" (ಶಾಸ್ತ್ರರಂ. ಗದ್ಯಾಪುವಾಹ. ೨೬೯) ; ಮಿಗೆ ಪಾರ್ಶ್ವಕ್ಕಂ ನೀಡುತ್ತೊಗೆದತಿ ಪಸರಿಸೆ ಬಹಿರ್ಗತಾಖ್ಯಂ (ಶಾಸ್ತ್ರರಂ. ೨-೦೯೮). ೩. ಹಿಮ್ಮಡಿಗಳ ಎಂಟು ವಿಧವಾದ ಚಲನೆಗಳಲ್ಲಿ ಒಂದು : ಉತ್ಕ್ಷಿಪ್ತ, ಪತಿತ, ಉತ್ಕ್ಷಿಪ್ತಪತಿತ, ಅಂತರ್ಗತ, ಬಹಿರ್ಗತ, ಮಿಥೋಯುಕ್ತ, ವಿಯುಕ್ತ, ಅಂಗುಲಿಸಂಗತ—ಈ ಎಂಟು ಪಾರ್ಷ್ಣಿಯ ಭೇದಂಗಳ್ (ಶಾಸ್ತ್ರರಂ. ೩-೦೦೦ ಪ). ೪. ಐದು ವಿಧವಾದ ಹರಡಿನ ನ್ಯಾಸಗಳಲ್ಲಿ ಒಂದು ವಿಧ : ಅಂಗುಷ್ಠಸಂಶ್ಲಿಷ್ಟ, ಅಂತರ್ಯಾತ, ಬಹಿರ್ಗತ, ಮಿಥೋಯುಕ್ತ, ವಿಯುತ—ಈ ಐದು ಹರಡಿನ ಭೇದಂಗಳ್ (ಶಾಸ್ತ್ರರಂ. ೩-೦೦೦ ಪ). [ಸಂ.]

ಬಹಿರ್ದಾಹಿನಿ (ನಾ). (ಹೊರಮೈಯನ್ನು ಸುಡುವ) ಒಂದು ಬಗೆಯ ಆಯುಧ : ಬಿಲ್ಲು ತೀರು ಹೆದೆ . . . ಅಂತರ್ದಾಹಿನಿ ಬಹಿರ್ದಾಹಿನಿ ಆಕಾಶಗಾಮಿನಿ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾಧಿಸಾಧನ ವಿಶೇಷಂಗಳಿಂದಲುಂ (ಎವೇಕ. ೨೬೩). [ಸಂ. ಬಹಿರ್ದಾಹಿನೀ]

ಬಹಿರ್ದೃಷ್ಟಿ (ನಾ). ೧. ಹೊರನೋಟ.–ದೃಷ್ಟಿ. ೨. ಹೊರಗಿನದನ್ನು

ಪರೀಕ್ಷಿಸಿ ನೋಡುವ ದೃಷ್ಟಿಯುಳ್ಳವನು ; ಹೊರನೋಟವುಳ್ಳವನು : ಅಂತರ್ದೃಷ್ಟಿಗಳು, ಬಹಿರ್ದೃಷ್ಟಿಗಳು, ಅವತಾರದೃಷ್ಟಿಗಳು, ಸರ್ವದೃಷ್ಟಿಗಳು ಎಂದು ಭಗವದ್ರೂಪದರ್ಶನವಿಭಾಗದಿಂದ ಮನುಷ್ಯರು ಬಹಿರ್ದೃಷ್ಟಿಗಳು (ಹಿಂದಸಾ. ೨೯೦). [ಸಂ.]

ಬಹಿರ್ದೆಸೆ (ನಾ). ಶೌಚಕ್ರಿಯೆ : ಬಹಿರ್ದೆಸೆಗೆ ಹೋಗಿರುವೆವರು ಇನ್ನೂ ಬಂದಿಲ್ಲ (ಕೂಡಿ). [< ಸಂ. ಬಹಿರ್ದಿಶಾ]

ಬಹಿರ್ದೇಶ (ನಾ). ೧. ಹೊರಭಾಗ ; ಹೊರವಲಯ : ರಾಜಶೇಖರ ರಾಜೇಂದ್ರಂ ರಾಜವೀಥಿಯಂ ದಾಂಟಿ ಪುರಬಹಿರ್ದೇಶದ ವೈಹಾಳಿಯ ಬಯಲ್ಗೆ ಸಸಂಭ್ರಮಂ ಬರೆ (ರಾಜಶೇ. ೦೩-೮೨ ಪ). ೨. ಬೇರೆಯ ದೇಶ : ಹೊರನಾಡು. ೩. ಹಳ್ಳಿ. ಊರುಗಳಿಲ್ಲದ ಸ್ಥಳ. ೪. ಮಲಮೂತ್ರವಿಸರ್ಜನೆ ; ಶೌಚಕ್ರಿಯೆ : ಪೀರಾಲಿಯು . . . ಬಹಿರ್ದೇಶಕ್ಕೆ ಹೋಗಿ ಬಂದ ನಂತರ ಹಾಜರಾಗುವೆನು ಎಂದು ಹೇಳಿದನು (ಕುಂಡಾಪ. ೩೯೬) ; ಅವಳ ಮಾತನ್ನು ಅಲ್ಲೆ ಬಹಿರ್ದೇಶಕ್ಕೆಂದು ಹೋಗಿದ್ದ ಪ್ರಫುಲ್ಲಚಂದ್ರನ ತಂದೆ ಕೇಳಿಕೊಂಡು ಮನೆಗೆ ಬಂದು ಹೆಂಡತಿಗೆ ಹೇಳಿದರು (ಕಾಗಿನ. ೭೩). [ಸಂ.]

ಬಹಿರ್ದ್ವಾರ (ನಾ). ೧. ಹೊರಬಾಗಿಲು ; ಮುಂದಿನ ಬಾಗಿಲು. ೨. ಬಾಗಿಲಿನ ಹೊರಗಿರುವ ಪ್ರದೇಶ ; ಹೊರಅಂಗಳ. [ಸಂ.]

ಬಹಿರ್ಭಾಗ (ನಾ). ಹೊರಭಾಗ ; ಹೊರಗಡೆ : ಎಯ್ದಿ ಬಹಿರ್ಭಾಗದೊಳ್ ನಿಂದು ವಿಶ್ವಸೇನಮಹಾರಾಜಂಗೆ ಪೊಟಲಂ ಬೇಗವಷ್ಟಶೋಭೆಯಂ ಗೆಯ್ಯಲ್ವೇಟ್ಟುವುದುಂ (ಶಾಂತಿಪು. ೦೦-೬೭ ಪ) ; ಆ ಹಯಂ ಬಳಿಕ ದಕ್ಷಿಣದಿಶಾಮುಖವಾಗಿ ಮಾಹಿಷ್ಮತೀಪಟ್ಟಣದ ಬಹಿರ್ಭಾಗದುಪವನದೆಡೆಗೆ ನಡೆತಂದುದು (ಕೃಷ್ಣಾ. ೮-೦೪). [ಸಂ.]

ಬಹಿರ್ಮಂಡಲ (ನಾ). ಒಬ್ಬ ರಾಜನ ಸ್ವಂತ ಅಧಿಕಾರಕ್ಕೆ ಹೊರತಾದ ರಾಜ್ಯ ; ಶತ್ರುರಾಜ್ಯ : ನಿನಗರಸ ಬಹಿರ್ಮಂಡಲ [ಶಾಶಾಂ. ೪] ಮನೆ ಸಮಱಲ್ಕಿನಿತು ಬರಿಸಮುಂ ಪೋದವು ಕೇಳಿನಿಸಂತರ್ಮಂಡಲಸಾಧನ ಮುಂಟೆಂದಱಿಪಿದುದುಮಾ ನಿನ್ನಱಿಪುವೆವೇ (ಆದಿಪು. ೦೪-೦೩). [ಸಂ.]

ಬಹಿರ್ಮುಖ (ಗು). ೧. ಮನಸ್ಸು ಹೊರಮುಖವಾಗಿರುವ ; ಬಾಹ್ಯ ವಿಚಾರದಲ್ಲಿ ಆಸಕ್ತಿಯಿಂದ ಕೂಡಿದ. ೨. ಮುಖವನ್ನು ಬೇರೆಡೆಗೆ ತಿರುಗಿಸಿ ಕೊಂಡಿರುವ; ವಿಮುಖವಾದ. (ನಾ). ೩. ಬಾಹ್ಯ ವಿಷಯಗಳಲ್ಲಿ ಅನುರಕ್ತವಾದ ಸ್ಥಿತಿ : ಅಜ್ಞಾನದಿಂದ ಆವರಿಸಲ್ಪಟ್ಟವನಾಗಿಯೂ ವಿಷಯಾದಿಗಳಿಂದ ಬಂಧಿತನಾಗಿಯೂ ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ ವ್ಯವಹಾರ ಮಾಡುತ್ತಿದ್ದೇನೆ (ಪುಣ್ಯಾಕ. ೨೬೦). ೪. ವಿಮುಖನಾದವನು : ತಾಂ ಪಿತೃವಿತ್ತಮದೋನ್ಮತ್ತನಾಗಿ ಧರ್ಮದೊಳ್ ಬಹಿರ್ಮುಖನುಂ ಅರ್ಥದೊಳನ್ಯಾಯೋಪಾರ್ಜಿತಾರ್ಥನುಂ . . . ಆಗಿ (ಶಂಸಕಂ. ೨೬-೬). [ಸಂ.]

ಬಹಿರ್ಯಾನ (ನಾ). ೧. ಹೊರಹೋಗುವುದು. ೨. [ಜೈನ] ಐವತ್ತು ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಎಂಟನೆಯ ಕ್ರಿಯೆ ; ℘ ಮಗು ಹುಟ್ಟಿದ ಎರಡು, ಮೂರು ಅಥವಾ ನಾಲ್ಕನೆಯ ತಿಂಗಳಲ್ಲಿ ಅನುಕೂಲವಾದ ಶುಭದಿವಸದಂದು ಮಗುವನ್ನು ಪ್ರಸೂತಿಗೃಹದಿಂದ ಹೊರಕ್ಕೆ ಕರೆದುಕೊಂಡು ಹೋಗುವುದು ; ಉಪನಿಷ್ಕ್ರಮಣ : ದ್ವಾದಶಾಂಗದೊಳ್ ಪೇಟ್ದಾದಾನ ಪ್ರೀತಿ ಸುಪ್ರೀತಿ ಧೃತಿ ಮೋದಪ್ರಿಯೋದ್ಭವ ನಾಮಕರ್ಮ ಬಹಿರ್ಯಾನ . . . ತ್ಯಾಗ ನಿವೃತ್ತಿಯೆಂಬಯ್ವತ್ತು ಮೂಱು ಗರ್ಭಾದಿನಿರ್ವಾಣಪರ್ಯಂತಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೦೩-೦೩ಪ) ; ಆದಾನಮುಂ . . . ಬಹಿರ್ಯಾನಮುಂ ನಿಷದ್ಯೆಯುಂ . . . ಅಗ್ರನಿವೃತ್ತಿಯುಮೆಂದಾದಾನಾದಿ ನಿರ್ವಾಣಪರ್ಯಂತಮಪ್ಪಯ್ವತ್ತುಮೂಱುಗರ್ಭಾನ್ವಯಕ್ರಿಯೆಯೊಳ್ (ಶಾಪುಂಪು. ೨೦೨). [ಸಂ.]

ಬಹಿರ್ಲಾಪಿ (ನಾ). ಒಂದು ಬಗೆಯ ಪದ್ಯಬಂಧ : ಪ್ರಶ್ನೆ ಅಥವಾ ಶ್ಲೋಕಗಳಲ್ಲಿರುವ ಶಬ್ದಗಳಿಂದ ಬೇರೆಯಾದ ಕಡೆ ಉತ್ತರವನ್ನು ಹುಡುಕಿ ಹೇಳುವುದು ; ℘ ಇದು ಅಂತರ್ಲಾಪಿಗೆ ವಿರುದ್ಧವಾದುದು : ಒಂದು ಸಜ್ಜೆವನೆಯೊಳೊರ್ವಕ್ಕರಿಗಬೊಜಂಗಂ ಸೊರ್ಕಜವ್ವನೆಗೆ ಸಕ್ಕದದ ಬಹಿರ್ಲಾಪಿಯಂ ಪೇಳ್ದಂ (ರಾಜಶೇ. ೦೧-೦೬೦ ಪ). [ಸಂ. ಬಹಿರ್ಲಾಪಿನ್]

ಬಹಿರ್ಲೇಪ (ನಾ). ಹೊರಗಿನ ವಿಷಯದಲ್ಲಿ ಮನಸ್ಸು ಆಸಕ್ತವಾಗಿರುವುದು : ಅನುರಾಗಮಂ ವಿರಾಗಮನುಳ್ಳ ವಿಷಯಿಗಳು ಯೆನಿಪ ವಿಷಯಂಗಳಂ ಪಿಡಿವಲ್ಲಿ ಬಿಡುವಲ್ಲಿ ಮನದೊಳನಿಶಂ ಬಹಿರ್ಲೇಪವಂತರ್ಲೇಪವೆಂಬುಭಯಸಮಭಾವದಿಂದನವರತ ಪರಶಿವಾದ್ವೈತನಿಷ್ಠೆಯೊಳು ನಿಂದ (ಲಕಿಸಾ. ೩೪-೪೨). [ಸಂ.]

ಬಹಿರ್ವಣ (ನಾ). ಊರ ಹೊರಗಿನ ಉದ್ಯಾನ-ತೋಟ : ಅಣಿಯ ರಮಲರ್ದೆಸೆವಂತರ್ವಣದ ಬಹಿರ್ವಣದ ಕಂಪು ಪೊಂಪುಱಿವಡೆ ಪಟ್ಟಣ ವಿಪ್ರುದು ಮದಿಲೊಳ್ತಿಂತಿಣಿಯೆನೆ ಪರಿಮಳದ ಬಳೆತಮಂ ಕಟ್ಟಿದವೊಲ್ (ಅಸಂಪು. ೦-೯೭). ℘ ಇದು ಪ್ರಾಸಕ್ಕಾಗಿ ಮಾಡಿಕೊಂಡ ರೂಪ. [<ಸಂ. ಬಹಿರ್ವನ]

ಬಹಿರ್ವನ (ನಾ). = ಬಹಿರ್ವಣ : ಗಿರಿರಾಜಂ . . . ಬಹಿರ್ವನದೊಳಗಣ ಬಾಲಚೂತಾಂಕುರಮಂ ಬಲವಂದು (ಗಿರಿಕ. ೩-೧೦೩ ಪ). [ಸಂ.]

ಬಹಿರ್ವರ್ತನೆ (ನಾ). ಹೊರಗಿನ ನಡವಳಿಕೆ ; ಬಾಹ್ಯ ವ್ಯವಹಾರ : ಬಹಿರ್ವರ್ತನೆಯಲ್ಲಿ ಕಾಣುವ ಅಂಶಗಳನ್ನೇ ತೆಗೆದುಕೊಂಡು ತನ್ನ ನೂತನವಾದವನ್ನು ರೂಪಿಸಿದನು (ಶಿಕ್ಷದ. ೪೨೯). [ಸಂ. ಬಹಿರ್ವರ್ತನ]

ಬಹಿರ್ವಳಿಯ (ನಾ). ಮೂಲವ್ಯಾಧಿಯಲ್ಲಿ ಒಂದು ಬಗೆ ; ಗೂದೆ ಹೊರಬರುವ ರೋಗ : ವಿಷಮಾಸನದಿಂದ . . . ಮೇಲೆ ಮೇಲೆ ಭೋಜನವ ಮಾಡುವುದರಿಂದ ಮೂಲವ್ಯಾಧಿಯಕ್ಕುಂ. ಅದರ ಪ್ರಕಾರ— ಇರುದೆಸೆ, ಬಿಸಿಯ ರಕ್ತ ಅಪಾನಕ್ಕಿಳಿದು ಬಂಧವಾಗಿ ಸಂಗ್ರಹಿಸಿ ಅಂತರ್ವಳಿಯ, ಬಹಿರ್ವಳಿಯಂ ಎಂದು ಒಂದೆರಡು ಪ್ರಕಾರಮಕ್ಕು. ಅದು ರಕ್ತ ಒಡೆಯದೆ ಗುದದೊಳು, ಗಂಟಾಗಿಯಿಕ್ಕುಂ, ಅಂತರ್ವಳಿಯ ಉಪವಾಸದಿಂದಂ, ಕಠಿನಾಸನದಿಂದಂ ಮಲ ಶುಷ್ಕವಾಗಿ ಪೊಕ್ಕು ರಕ್ತ ಒಡೆಯದೇ ಮೊಳೆಗಳು ತೋರ್ಕು. ಗೂದೆ ಹೊಱಪಟ್ಟು ಬಹಿರ್ವಳಿಯಮಕ್ಕು (ಪಿಸೃಪಿ. ೦೪೦). [?]

ಬಹಿರ್ವಾಸ (ನಾ). (ಹೆಗಲ) ಮೇಲೆ ಹಾಕಿಕೊಳ್ಳುವ ವಸ್ತ್ರ : ಕಂಗೊಳಿಸುವ ಧವಳಬಹಿರ್ವಾಸಮಂ ತೊಟ್ಟು ಕಣ್ಗಳೊಳು ಕರುಣಾಮೃತರಸವ ತುಂಬಿ ಸರ್ವರಂ ಸಲಹುವ ಯತೀಶನಾರೆ (ಸಿದ್ಧೇಶು. ೦೩-೩೩) ; ದಂಡಂ ಭಸಿತಾಧಾರಂ ಬಹಿರ್ವಾಸಮುಮಮರ್ದಿರೆ ಲಿಂಗಾಂಗಸಂಯುಕ್ತಯೋಗಿಪ್ರಸರಂ ಬಂದಿರ್ದುದು (ಪೃಷಪಿ. ೩-೪೪). [ಸಂ. ಬಹಿರ್ವಾಸಸ್]

ಬಹಿರ್ವೇದಿ (ನಾ). ಯಜ್ಞಶಾಲೆಯ ಹೊರ ಜಗಲಿ : ನೆರೆದುದವನೀಪಾಲಜನಸಾಗರ ಬಹಿರ್ವೇದಿಯ ಮಹಾಚಪ್ಪರದೊಳಗೆ ತಂತಮ್ಮ ಸಿಂಹಾಸನಸಗಾಢದಲಿ (ಕುಮ್ಯಾಸ. ೬-೨೯) ; ಬರ್ಹಿ ಸಮಿಧಾಜ್ಯ ತಿಲ ವ್ರೀಹಿ ಚರುವಾದಿಯಾದ ಯಜ್ಞಸಂಭಾರಮನಿರಿಸಿ ಅಂತರ್ವೇದಿ ಬಹಿರ್ವೇದಿ ಆಹವನೀಯಗಾರ್ಹಪತ್ಯದಕ್ಷಿಣಾಗ್ನಿಯ ರಚಿಸಿ (ದಶಾವ. ೮-೩೪ ಪ). [ಸಂ.]

ಬಹಿರ್ಸಂಕೆ (ನಾ). = ಬಹಿರ್ದೇಶ ೪ : ಒಬ್ಬ ಹೆಡ್ಡನು ಅಡಕೆಯ ಬಾಯೊಳಿಟ್ಟು ಎಲೆಯ ಕೈಯೊಳ್ಪಿಡಿದು . . . ಬಹಿರ್ಸಂಕೆಗೆ ಪೋಪಲ್ಲಿ ಎಡಹಿ ಬಿದ್ದು ಎಲೆ ಅಶುಚಿಯೊಳು ಬೀಳೆ ತಾನು ಬಿದ್ದು ಆ ಪಟ್ಟಣವ ಬೈವುತ್ತಿರಲು (ಶೈರಸೂ. I, ೨೬೨). [<ಸಂ. ಬಹಿರ್ಶಂಕಾ]

ಬಹಿಷ್ಕರಿಸು (ಕ್ರಿ). ೧. ಬಹಿರಂಗಪಡಿಸು ; ಪ್ರಕಟಿಸು : ಮೆಲ್ಲ

ಮೆಲ್ಲನೆ ಮಾತುದೆಗೆದನಂತಃಕರಣದಲ್ಲಿರ್ದುದಂ ಬಹಿಷ್ಕರಿಸಬೇಕೆಂದೆನುತೆ ಬಲ್ಲರಿಗೆ ಬಲ್ಲಹಂ ಚೆನ್ನಬಸವೇಶ್ವರಂ ವಿನಯಸಂಪ್ರೀತಿವೆರೆದ ಸೊಲ್ಲಿನಿಂದ . . . ಇಂತೆಂದನು (ಕಬಿಪ್ರ. ೭-೨೬). ೨. ಪ್ರಕಟಿಸಿ ಕೊಳ್ಳು : ಗೋಚರಿಸು : ಅಖಂಡಪರಿಪೂರ್ಣಜ್ಯೋತಿಯೇ ಮೈದಾಳಿ ನಿಃಕಳಂಕ ಮಲ್ಲೇಶ್ವರನಾಗಿ ಬಹಿಷ್ಕರಿಸಿ ರುದ್ರಪ್ರಮಥಗಣಂಗಳೊಡಗೂಡಿ ಪ್ರಕಟವಾದ ಮಾರಯ್ಯನ ಪರಮಾನಂದ ಮೇರೆಗಳೆದ ಮಹಾಸಾಗರದಂತೆ ಹರಿಯಿತು (ಮೋಳಿಮಾ. ೭೯ ಪ್ರಸ್ತಾವನೆ). ೩. (ಯಾವುದಾದರೂ ಧಾರ್ಮಿಕದೃಷ್ಟಿಯಿಂದ ತಪ್ಪುಮಾಡಿದ ವ್ಯಕ್ತಿಯನ್ನು ಜಾತಿ, ದೇಶ ಮೊದಲಾದುವುಗಳಿಂದ) ಹೊರಹಾಕು : ಧಾರ್ಮಿಕವಾಗಿ ಸಮಾಜದಿಂದ ದೂರಮಾಡು : ಇವಳ ಮನೆಗೆ ಹೋಗಬಾರದು. ತಾವು ಮೀರಿ ಹೋಗುವಿರಾದರೆ ಜನರು ತಮ್ಮನ್ನೂ ಬಹಿಷ್ಕರಿಸುವರು (ಕಥಾ. ೪೦೪). ೪. ಹೊರದೂಡು ; ತಿರಸ್ಕರಿಸು : ಪಶುಪಕ್ಷಿಗಳನ್ನು ಸಂರಕ್ಷಿಸುವ ನೀವು ಮಾನವಪ್ರಾಣಿಗಳನ್ನು ಬಹಿಷ್ಕರಿಸುತ್ತೀರಿ (ರರ್ಮಾನಾ. ೫೩). [<ಬಹಿಷ್ಕಾರ + — ಇಸು$_3$]

ಬಹಿಷ್ಕಾರ (ನಾ). ೧. ಹೊರದೂಡುವಿಕೆ : ಹೊರಹಾಕುವಿಕೆ . ೨. (ಯಾವುದಾದರೂ ಧಾರ್ಮಿಕದೃಷ್ಟಿಯಿಂದ ತಪ್ಪು ಮಾಡಿದ ವ್ಯಕ್ತಿಯನ್ನು ಜಾತಿ, ದೇಶ ಮುಂತಾದುವುಗಳಿಂದ) ಬಹಿಷ್ಕರಿಸುವಿಕೆ: ಊರಿನವರು . . . ದಾಸರಿಗೆ ಬಹಿಷ್ಕಾರಪತ್ರವನ್ನು ತರಿಸಿ ಶುಭಸ್ವೀಕಾರದ ದಿವಸ ಅದನ್ನು ಓದಿಸಿದರು (ಕಥಾ. ೪೦೫) ; ವಿಠಲಪಂತ್ ಸಂಸಾರಿಯಾದದ್ದು ಎಂದರೆ ಸಮಾಜದ ಬಹಿಷ್ಕಾರಕ್ಕೆ ತುತ್ತಾದದ್ದು ಎಂದು (ಭಾರದ. ೨೯೨).

ಬಹಿಷ್ಕಾರ ಕೊಡು = ಸಮಾಜದಿಂದ ಹೊರಗೆ ಹಾಕು : ಮುಸಲ್ಮಾನನಾದನೆಂದು ಆತ್ಮೀಯರೆಲ್ಲರೂ ಅವನಿಗೆ ಬಹಿಷ್ಕಾರ ಕೊಟ್ಟು ಶುದ್ಧವಾಗಿ ತ್ಯಜಿಸಿಬಿಟ್ಟರು (ಕಪಾಕುಂ. ೩೯). ಬಹಿಷ್ಕಾರ ಹಾಕು = ಬಹಿಷ್ಕಾರ ಕೊಡು : ನನ್ನ ದಾಸನಿಗೆ ಬಹಿಷ್ಕಾರ ಹಾಕಿದರೆ ನಿನ್ನ ಬಳಿ ನಾನಿರುವೆನೆ ? (ಕಥಾ. ೪೦೫) ; ಶೃಂಗೇರಿಯ ಗುರುಗಳಿಗೆ ಈ ಸುದ್ದಿ ತಲುಪಿ ಇಡಿಯ ಅಗ್ರಹಾರಕ್ಕೇ ಬಹಿಷ್ಕಾರ ಹಾಕಿದರೆಂದೂ ಪ್ರತೀತಿ (ಸಂಸ್ಕಾರ. ೦೫). [ಸಂ.]

ಬಹಿಷ್ಕಾರಿ (ನಾ). ಹೊರಹಾಕಲ್ಪಟ್ಟವನು ; ಬಹಿಷ್ಕೃತನಾದವನು : ಚೋರನನು . . . ಸಮಯವಿಕಾರಭೇದಿಯನಿಂತಜುವರನು ಕಂಡು ಮನ್ನಿಸದೆ ದೂರದಲಿ ವರ್ಜಿಸುವುದು ಬಹಿಷ್ಕಾರಿಗಳು ಸರ್ವಕ್ಕಿವರುಗಳು (ಕಾಪ್ಯಾಲಾ. ೯-೪೭). P ಸಂಸ್ಕೃತದಲ್ಲಿ ಇದಕ್ಕೆ ಕರ್ತೃ ಅರ್ಥ ಮಾತ್ರ ಇದೆ. [ಸಂ. ಬಹಿಷ್ಕಾರಿನ್]

ಬಹಿಷ್ಕೃತ (ಗು). ೧. ಬಹಿಷ್ಕಾರಕ್ಕೊಳಗಾದ; ಹೊರದೂಡಲ್ಪಟ್ಟ: ನುತವಶೀಕೃತ ಭರ್ಗ ನಿತ್ಯಾಶ್ರಿತ ಮಹೇಶ್ವರ ಭಕ್ತವರ್ಗ ಸುಹಿತ ಘನಪ್ರತಿ ವೀರಮಾರ್ಗ ಬಹಿಷ್ಕೃತ ಸ್ವರ್ಗ (ಬಸಪು. ೩೬-೩೮). (ನಾ). ೨. ಸಮಾಜದಿಂದ ಹೊರಹಾಕಲ್ಪಟ್ಟವನು ; ಬಹಿಷ್ಕಾರಕ್ಕೆ ಒಳಗಾದವನು. [ಸಂ.]

ಬಹಿಷ್ಕೃತೆ (ನಾ). ಹೊರಕ್ಕೆ ದೂಡಲ್ಪಟ್ಟವಳು: ಬಹಿಷ್ಕಾರಕ್ಕೊಳಗಾದವಳು : ತನ್ನದೆಂದು ಕರೆಯಬೇಕಾಗಿದ್ದ ಮನೆಯಲ್ಲೇ ಬಹಿಷ್ಕೃತೆಯಾಗಿ (ಪಾಕ್ಷಲ್ಯ. ೨೦೯). [ಸಂ. ಬಹಿಷ್ಕೃತಾ]

ಬಹಿಷ್ಠೆ (ನಾ). ಹೊರಗಾದವಳು ; ಮುಟ್ಟಾದವಳು : ರಜಸ್ವಲೆ : ನಾನು ಬಹಿಷ್ಠೆಯಾಗಿದ್ದೇನೆ. ಒಂದೇ ಬಟ್ಟೆಯಲ್ಲಿದ್ದೇನೆ (ವಸಭಾ. ೯೬) : ಬಹಿಷ್ಠೆಯಾಗಿದ್ದ ದ್ರೌಪದಿಯನ್ನು . . . ಸೆಳೆದುಕೊಂಡು ಬಂದು ಸಭಿಕರ ಮುಂದೆ ನಿಲ್ಲಿಸಿದನು (ಭೀತ್ಮಶ. ೦೦೬). [ಸಂ. ಬಹಿಷ್ಠಾ]

ಬಹಿಷ್ಪ್ರಜ್ಞ (ನಾ). ಹೊರಪ್ರಪಂಚದ ಅರಿವುಳ್ಳವನು; ಬಾಹ್ಯಜ್ಞಾನವುಳ್ಳವನು : ಜಾಗೃತಾವಸ್ಥೆಯೇ ಮೊದಲನೆಯದು. ಇದಕ್ಕೆ ಸಂಬಂಧಪಟ್ಟಂತೆ ಐದುವಿಷಯಗಳನ್ನು ಹೇಳಿದೆ: —೧. ಬಹಿಷ್ಪ್ರಜ್ಞ—ಬಾಹ್ಯಜ್ಞಾನವುಳ್ಳವನು (ಜೀವಾಕ್ಯ. ೦೨೭). [ಸಂ.]

ಬಹಿಸ್ತಟ (ನಾ). ಹೊರಗಡೆಯ ದಡ : ಹೊರದಂಡೆ : ಪೂಗವನಂ ಗಳಿಂದೆಲೆಯ ಬಳ್ಳಿಗಳಿಂ ತೆಱಪಿಲ್ಲೆನಲ್ಬೆಡಂಗಾಗೆ ಬಹಿಸ್ತಟಂ ಪುದಿದ ತಾವರೆವಳ್ಳಿಯ ತಳ್ಪಿನಿಂ ಪಸುರ್ಪಾಗೆ (ಮಲ್ಲಿಪು. ೨-೪೫). [ಸಂ.]

ಬಹಿಸ್ಥ (ನಾ). [ಜ್ಯೋತಿ] (ರಾಹುಚಕ್ರದ) ಹೊರಭಾಗ : ಉರಗನಿಂದೆ ತಾರೆ ಮುಖದೊಳ್ ನಿಲೆ ಮೂಜುಸಿರಕ್ಕೆ . . . ಬಹಿಸ್ಥವಾಜು ತಳ್ತಿರೆ ತೆನೆ ನಂಜು ಕಾಡಿಗೆ ವಿಶೇಷಫಲಂ ಕಡುಸಣ್ಣಮಕ್ಕುಂ (ಅಬ್ಬಿಮ. ೯-೨). [ಸಂ.]

ಬಹು (ಗು). ೧. ಹೆಚ್ಚು ; ಅಧಿಕ ; ಬಹಳ. ೨. ದೊಡ್ಡದಾದ ; ಹಿರಿಯ. (ನಾ). ೩. ಅಧಿಕವಾದುದು : "ಪ್ರಭೂತಂ . . . ಬಹುಳಂ, ಬಹು . . . ಭೂರಿ— ೧೨ ಅಧಿಕವಾದದ್ದರ ಹೆಸರುಗಳು" (ಸಿದ್ಧಾಂತಿ. ೩೪೦).

ಬಹುಮಟ್ಟಿಗೆ=ಬಹಳವಾಗಿ ; ಬಹುತೇಕ : ಹೀಗೆ ಬಹುಮಟ್ಟಿಗೆ ಎಲ್ಲ ಸಾರಜನಕವೂ ಸೂರ್ಯನ ಸುತ್ತಲಿನ ಮೇಘದಲ್ಲೇ ಉಳಿಯಿತು (ಭೂಹುಟ್ಟು. ೬೦) ; ಅವರ ಅನುಭವ ಪಾಂಡಿತ್ಯಗಳನ್ನು ಒಳಗೊಂಡ ಈ ಗ್ರಂಥ ಬಹುಮಟ್ಟಿಗೆ ನಿರ್ದುಷ್ಟವಾಗಿದೆ (ಗೃಹವಿ. IV ಮುನ್ನುಡಿ). ಬಹುಮಟ್ಟು=ಬಹುಮಟ್ಟಿಗೆ : ಇಬ್ಬರಲ್ಲೂ ಬಹುಮಟ್ಟಿನ ಸಾಮ್ಯವೂ ಇದೆ (ಜಗದಾ. ೦೦೬). [ಸಂ.]

ಬಹುಕಳಿ (ನಾ). ಮಲ್ಲಯುದ್ಧದ ಒಂದು ಪಟ್ಟು,—ವರಸೆ: ರಂಗಮಂ ಪೊಕ್ಕು ಭುಜಾಸ್ಫಾಳನಂ ಗೆಯ್ದೆಯ್ದುದೊಡೆ . . . ಪೂಕ್ಕಮರ್ದು ಸಮಲತಾ ಬಹುಕಳಿ ಕತ್ತರಿಗಳಿಂ ಗಾಯಮಜ್ಜಿದೊತ್ತಿ ನೋಡಿ (ಬಂಹಂ. ೬-೫೦ ವ). [?]

ಬಹುಕುಟುಂಬಿ (ನಾ). ದೊಡ್ಡಸಂಸಾರವುಳ್ಳವನು : ಮನೆ ತುಂಬ ಮಕ್ಕಳು ಮೊಮ್ಮಕ್ಕಳನ್ನು ಪಡೆದ ಬಹುಕುಟುಂಬಿಯವನು (ಪಂಚಾಂಡ. ೬೨). [ಸಂ. ಬಹುಕುಟುಂಬಿನ್]

ಬಹುಕುಳ (ಗು). ಅನೇಕ : ಅಧಿಕವಾದ : ಅಳವಜ್ಜಿಯದ ಭಾಷೆ ಬಹುಕುಳವಾದ ನುಡಿ ಇಂತೆರಡಜ ನುಡಿ ಹುಸಿಯಯ್ಯ (ಅವಸಂ. ೩೦-೦೩೦). [ಬಹು + ಕುಳ್?]

ಬಹುಗ್ರಾಹಿ (ನಾ). [ವೈದ್ಯಶಾ] ಅನೇಕ ರೋಗಗಳನ್ನು ವಾಸಿ ಮಾಡುವಂತಹುದು : ಬಹುರೋಗನಾಶಕ : ಮದನಕಾಮೇಶ್ವರೀ ಗುಳಿಗೆ . . . ಹಸುವಿನ ತುಪ್ಪದಲ್ಲಿ ವಾತಹರ. ಕಬ್ಬಿನ ಹಾಲಲ್ಲಿ ತ್ರಿದೋಷಹರ. ಲವಂಗದ ಹುಡಿಯಲ್ಲಿ ಬಹುಗ್ರಾಹಿ (ಪಸ್ಕಿ. ೪೦). [ಸಂ. ಬಹುಗ್ರಾಹಿನ್]

ಬಹುಚಾರಿ (ನಾ). ಅತಿಶಯವಾಗಿ ಚಲಿಸುವಿಕೆ. — ತಿರುಗುವಿಕೆ : ಕ್ರೂರನೆನಿಸಿ ಶಾಂತನೆನಿಸಿ ಮತ್ತೊಮ್ಮೆ ವೀರನೆನಿಸಿ ಹೇಡಿಯೆನಿಸಿ ನಾರಿಯೆನಿಸಿ ನಲ್ಲನೆನಿಸಿ ಹಂಸನ ಬಹುಚಾರಿಯಾಡುವುವು ಕರ್ಮಗಳು (ಭರಸ. ೬೮-೦೦೦). [ಸಂ. ಬಹುಚಾರಿನ್]

ಬಹುಚಾಳಿ (ನಾ). [ನಾಟ್ಯ] ನೃತ್ಯದ ಒಂದು ಪ್ರಕಾರ : ಮೆಜ್ಜಿವಂಗ ಪ್ರತ್ಯಂಗೋಪಾಂಗ ಬಹುಚಾಳಿ ಪರದೇಶಿಕೋಲಚಾರಿಗಳ ಹಿರಿದಂಗಹಾರ ಮಂಡಲ ಕರಕ್ಷೇತ್ರ ಬಿರುದಿನ ನಾಟ್ಯವಾಡಿದರು (ಕಂನವಿ. ೮-೬೩). [ಬಹು + <ಚಾಲಿ$_1$]

ಬಹುತೆ (ನಾ). ೧. ಒಂದಕ್ಕಿಂತ ಹೆಚ್ಚು ಸಂಖ್ಯೆಯಿಂದ ಕೂಡಿದುದು : ಮುನ್ನಿನ ಎಲ್ಲ ಕಬ್ಬ ಎಂದು ಬಹುತೆಯನ್ನು ಸೂಚಿಸುವಾಗ ಪಂಪನು 'ಕವಿರಾಜಮಾರ್ಗ'ಕ್ಕಿಂತ ಹಿಂದಿನ ಕಾವ್ಯಗ್ರಂಥಗಳನ್ನೂ

ಮನದಲ್ಲಿ ಇಟ್ಟಿರಬಹುದು (ಕಾಶಾ. ೨೬). ೨. [ವ್ಯಾಕ] ಬಹುವಚನ : ಏಕತೆಯೆ ತನಗೆ ಬಹುತೆಯನಾಕರಿಸದು ಜಾತಿ ತಾಂ (ಕಸುರ. ೦೩೮). [ಸಂ. ಬಹುತಾ]

ಬಹುತೇಕ (ಅ). ೧. ಅನೇಕ: ಹೆಚ್ಚಾದ : ಭಾರತದ ಬಹುತೇಕ ಜನರು ಗ್ರಾಮಾಂತರಪ್ರದೇಶದಲ್ಲಿ ವಾಸಿಸುತ್ತಾರೆ (ಶಿಕ್ಷಣ. ೬೦೭) ; ಬಹುತೇಕ ನದಿಗಳು ಅನಂತಕಾಲದಿಂದ ಹರಿಯುತ್ತಿವೆ (ಪಪಶಾ. ೨). ೨. ಪ್ರಾಯಶಃ ; ಬಹುಶಃ : ಮಧ್ಯಾಹ್ನ ಬಹುತೇಕ ನಿಮ್ಮನ್ನು ಹೆದರಿಸಿ ಬಂದದ್ದೇ . . . ಇವರ ಮುಂದೆ 'ಶಿಪ್ಪಾರಸು' ಹೊಡೆಯುತ್ತಿದ್ದ (ಸೂಳಿಯಾ . ೬೪); ಕನ್ನಡದಲ್ಲಿ ಇಂದು ಬಹುತೇಕ ಎರಡನೆಯ ಹಾದಿಯ ಮೇಲೆ ಪ್ರಯತ್ನಗಳು ನಡೆದಿವೆ (ಪಪಶಾ. ೨೧).

[←ಮರಾ. ಬಹುತೇಕ್]

ಬಹುತ್ವ (ನಾ). [ವ್ಯಾಕ] ಬಹುವಚನ : ಜಾತಿವಿಭಾಗಮಂ ಬಗೆದು ವೇಱ್ ಬಹುತ್ವಮನೇಕವಾಕ್ಯಸಂಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ (ಕಶಾಸಾ. ೦-೦೦೬) ; ಅವಱೊಳ್ ದ್ವಿತ್ವಬಹುತ್ವಂ ಬವರಿಸೆ ತರ್ತ್ಕಿಮಲ್ಲಿ ಗಳ್ ಶಬ್ದಂ (ಶಾಬ್ದಾಶ. ೬೭) ; ಏಕ ದ್ವಿತ್ವ ಬಹುತ್ವಮನೇಕ ದ್ವಿಬಹುತ್ವಮಸ್ತುಗಳೊಳಾಚರಿಪರ್ (ಕಸುರ. ೧೪). [ಸಂ.]

ಬಹುದು 'ವರ್' ಪರಾ.

ಬಹುದುಃಖ (ನಾ). ೧. ಅತಿಶಯವಾದ ಅಳಲು.– ಸಂಕಟ: ಅವರು ಬಹುದುಃಖದಿಂದ ಆ ಮಾತನ್ನು ಹೇಳಿದರು(ರೂಢಿ). ೨. ಒಂದು ನರಕದ ಹೆಸರು: ಬಹುದುಃಖ . . . ಮಹಾದುಃಖವೆಂಬೈದು ಮಂತ್ರಿನರಕಂಗಳಿಂ (ಪಪಸಿ. ೦೩೦). [ಸಂ.]

ಬಹುದ್ವಿಷ (ನಾ). ಅನೇಕ ಶತ್ರುಗಳನ್ನುಳ್ಳವನು ; ಬಹುಜನದ್ವೇಷಿ: ಸುರಗುರುದ್ವಿಜವೈರಿ ಬಹುದ್ವಿಷಂ ಭಯೋಪೇತನಧಾರ್ಮಿಕಂ ವಿಕಳ ತಂತ್ರನನಿಶ್ಚಿತಮಂತ್ರನಾಗಳುಂ ಭೀತಪರಿಗ್ರಹಂ (ಶಂಶಕಂ. ೩೨೦-೬). [ಸಂ.]

ಬಹುಧಾನ್ಯ (ನಾ). ೧. ಸಮೃದ್ಧವಾದ ಧಾನ್ಯ.–ಕಾಳು: ಹಂಬಿನೊಳಗಳ ಬಹುಧಾನ್ಯದ ತೆನೆ (ಪುಸುಗುಂ. ಕ. ೨೬೯-೧೫). ೨. ಅರುವತ್ತು ಸಂವತ್ಸರಗಳಲ್ಲಿ ಹನ್ನೆರಡನೆಯದು : ಅಭಿನವ ನಿಘಂಟನಭಿನವಮುಂಗ ನಿರ್ಮಿಸಿದನಂಬರಾಂಬಕವಹ್ನಿಯೇಕೈಕಶಕದ ಬಹುಧಾನ್ಯದಲ್ಲಿ (ಪಂಗಣಾ. ೦೩೭-೨೬) ; ಆ ವರ್ಷವೇ ಪ್ರಭವ . . . ಬಹುಧಾನ್ಯ . . . ಅಕ್ಷಯ ವೆಂದಱುವತ್ತು ತೆಱನಾಗಿಹುದು (ಪಪಕಿ. ೩೨೦). [ಸಂ.]

ಬಹುನಾಯಕತ್ವ (ನಾ). ಹಲವರಿಂದ ನಡೆಸುವ ಆಧಿಪತ್ಯ : ಇದೆಲ್ಲ ಬಹುನಾಯಕತ್ವದ ಫಲ. ಆದ್ದರಿಂದ ನಿಮ್ಮಲ್ಲಿ ಒಬ್ಬನನ್ನು ನಾಯಕನನ್ನಾಗಿ ಮಾಡಿಕೊಳ್ಳಿರಿ (ಕಪಪ. ೬೨೬). [ಸಂ.]

ಬಹುನೂತ್ನ (ಗು). ಹೆಚ್ಚು ನವೀನವಾದ ; ಅತ್ಯಂತ ಹೊಸದಾದ.– ನೂತನವಾದ : ಬಹುನೂತ್ನಕೇತನಚ್ಛಾಯನಿವಾರಿತೋಷ್ಣಮನನಿಂದಿತ ಸುಂಪರರಾಜಮಾರ್ಗಮಂ . . . ಪುಗೆ ನೃಪೇಶ್ವರಕನ್ಯಕೆಯುಂ ಕುಮಾರನುಂ (ಶಾಂತಿಪು. ೬-೯). [ಬಹು + ನೂತ್ನ]

ಬಹುಪತಿತ್ವ (ನಾ). ಒಬ್ಬನಿಗಿಂತ ಹೆಚ್ಚು ಗಂಡಂದಿರನ್ನು ಹೊಂದಿರುವಿಕೆ : ವಿವಾಹವಿಚ್ಛೇದ, ವಿಧವಾವಿವಾಹ, ವಿಧುರವಿವಾಹ ಬಹುಪತ್ನೀತ್ವ ಮತ್ತು ಬಹುಪತಿತ್ವಗಳಲ್ಲಿ ಕೆಲವಕ್ಕಾದರೂ ಅವಕಾಶ ಕೊಡಬೇಕು (ಪಪಶಾ. ೨೬೮). [ಸಂ.]

ಬಹುಪತ್ನೀತ್ವ (ನಾ). ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುವಿಕೆ : ಬಹುಪತ್ನೀತ್ವವು ಅಂದಿನ ರಾಜತ್ವಕ್ಕೆ ಸಾಮಾನ್ಯ ರೂಢಿ ಮಾತ್ರವಲ್ಲ, ಅದೊಂದು ಹಿರಿಮೆ (ಶಾಕರ. ೧೯೦). [ಸಂ.]

ಬಹುಪಾದಿ (ನಾ). ಅನೇಕ ಕಾಲುಗಳನ್ನುಳ್ಳ ಪ್ರಾಣಿ : ಬಹುಪಾದಿಗಳು (MynaPada) ಈ ವರ್ಗದ ಪ್ರಾಣಿಗಳಲ್ಲಿ ೯–೧೫೦ ಜೊತೆ ಉಪಾಂಗಗಳಿರುತ್ತವೆ (ಪ್ರಾಪಶಾ. ೨೨೦); ಪಾಲಿಪೊಡ (ಬಹುಪಾದಿ) . . . ಹೊಟ್ಟೆಯ ಹುಸಿಕಾಲುಗಳಿವೆ (ಕೀಪಶ. ೦೨೮). [ಸಂ. ಬಹುಪಾದಿನ್]

ಬಹುಪುಷ್ಪ (ನಾ). ೧. ಪಾರಿಜಾತದ ಗಿಡ. ೨. ಹವಳದ ಗಿಡ. [ಸಂ.]

ಬಹುಪುಷ್ಪಿ (ನಾ). ಒಂದು ಬಗೆಯ ಸಸ್ಯ ; ಆವರಿಕೆಯ ಗಿಡ : "ಬಹು [ಪಾಶಾಂ. ರಜ]ಪುಷ್ಪಿ ಆವರವೆನಲ್ಕಾವರೆಯೆನಿಕ್ಕು" (ಪಂಗಣಾ. ೪೦-೩೦). [ಸಂ. ಬಹುಪುಷ್ಪೀ]

ಬಹುಪ್ರಜ (ನಾ). ೧. ಅನೇಕ ಮಕ್ಕಳಿರುವವನು: ಇರೆ ಲಗ್ನಕ್ಕೆ ಚತುರ್ಥದೊಳ್ ಹಿಮಕರಂ ಸತ್ಪುತ್ರವಿತ್ತಾಢ್ಯಮೊಂದಿರೆ ತತ್ಪಂಚಮದೊಳ್ ಬಹುಪ್ರಜನರಾತಿಸ್ಥಾನದೊಳ್ ಕೂಡೆ ನಿಷ್ಕುರಂ (ಜಾಕಶಿ. ೧೯-೭). ೨. ಹಂದಿ. ೩. ಮುಂಜಹುಲ್ಲು. [ಸಂ.]

ಬಹುಭಾರ್ಯ (ನಾ). ಅನೇಕ ಹೆಂಡತಿಯರನ್ನು ಪಡೆದವನು : ಇನಜ . . . ವೃಷರಾಶಿಯೊಳ್ ನೆಲಸೆ ವರ್ಜ್ಯಂ ಸ್ವಲ್ಪವಿತ್ತಂ ವಧೂಜನವಿತ್ರಂ ಬಹುಭಾರ್ಯಂ (ಜಾಕಶಿ. ೧೭-೩೨). [ಸಂ.]

ಬಹುಭಾರ್ಯಾಯೋಗ (ನಾ). [ಜ್ಯೋತಿ] ಹಲವು ನಕ್ಷತ್ರಗಳ ನಿರ್ದಿಷ್ಟ ಸ್ಥಾನಬಲದಿಂದ ಜಾತಕನಿಗೆ ಉಂಟಾಗುವ ಬಹುಪತ್ನೀತ್ವ : ಜೋಯಿಸರು ಮಗುವಿನ ಜಾತಕವನ್ನು ನೋಡಿ ಈ ಮಗುವಿಗೆ ಬಹುಭಾರ್ಯಾಯೋಗವಿದೆಯೆಂದು ಹೇಳಿದರು (ರೂಢಿ). [ಸಂ.]

ಬಹುಭಾಷಣ (ನಾ). ಅತಿಯಾಗಿ ಮಾತನಾಡುವಿಕೆ ; ವಾಚಾಳತನ : ಶೇಷವಾಸುಗಿ ಬಹಳನುತಬಹುಭಾಷಣಂಗಳನತಿಗಳೆದೆಸೆದಶೇಷಮಹಿಮಾ ಮೂರ್ತಿ ಕಂಡೆನು ನಿಮ್ಮ ಪದಯುಗವ (ಬಸಪು. ೩೦-೭೦). [ಸಂ.]

ಬಹುಭಾಷಿ (ನಾ). ಹೆಚ್ಚು ಮಾತನಾಡುವವನು ; ವಾಚಾಳಿ : ನೀನ ಪ್ಪೊಡೆ ಬಹುಭಾಷಿ (ಪಂಶಕಂ. ೦೩೦-೦೯); ಸಭೆಯೊಳು ಮೇಲೆದ್ದು ಕುಣಿವನು ಬಹುಭಾಷಿ ಹಿಂದುಳಿವನು ಮಿತಭಾಷಿ (ಇಂಶಾಪ. ೨೦೩-೬೩).

[ಸಂ. ಬಹುಭಾಷಿನ್]

ಬಹುಭೂಮಿಕ (ನಾ). ೧. ಅನೇಕ ಅಂತಸ್ತುಗಳನ್ನು ಪಡೆದಿರುವುದು; ಹಲವು ಮಹಡಿಗಳನ್ನುಳ್ಳದು. ೨. ಹೆಚ್ಚು ಭೂಮಿಯನ್ನು ಹೊಂದಿರುವವನು; ದೊಡ್ಡ ಜಮೀನುದಾರ. ೧, ೨ : ಬಗೆಯ ಬಹುಭೂಮಿಕಂ ಮಾನಗುಣೋನ್ನತಿಸಂಯುತಂ ಮಹಾಭೋಗಂ ತನ್ನಗರಜನಾವಳಿಯುಂ ಹರ್ಮ್ಯಗೃಹಾಳಿಯುಮೆಂದೊಡೊಪ್ಪನೇವಣ್ಣಿಪುದೋ (ಶಂದ್ರಪ್ರ. ೩-೦೯). [ಸಂ.]

ಬಹುಮಂಜರಿ (ನಾ). ಒಂದು ಬಗೆಯ ಸಸ್ಯ; ಕೃಷ್ಣತುಳಸಿ : "ತುಳಸಿಯುದು ಸುರಸಿ ಬಹುಮಂಜರಿಯೆನಿಕ್ಕು ಕಪ್ಪಾಗಿರಲು" (ಪಂಗಣಾ. ೩೯-೨೮). [ಸಂ. ಬಹುಮಂಜರೀ]

ಬಹುಮತ (ಗು). ೧. ಗೌರವಕ್ಕೆ ಪಾತ್ರವಾದ. ೨. ಅನೇಕ ಬಗೆಯ ಅಭಿಪ್ರಾಯಗಳನ್ನು ಹೊಂದಿರುವ. (ನಾ). ೩. ಅಧಿಕಸಂಖ್ಯೆಯ ವ್ಯಕ್ತಿಗಳ ಅಭಿಪ್ರಾಯ : ಅವರ ಪಕ್ಷದ ಬಹುಮತವು ಕಡಿಮೆಯಾಗುತ್ತ ಬಂದಿತ್ತು (ಪಕೃಶಾ. ೧೨); ಒಟ್ಟು ಸದಸ್ಯರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಜನಗಳ ಬಹುಮತದಿಂದ ಆ ಸಂಕಲ್ಪವು ತೀರ್ಣವಾಗಿಲ್ಲದ ಪಕ್ಷದಲ್ಲಿ (ಶಾಧಾಶ. ೩೦). [ಸಂ.]

ಬಹುಮತಿ (ನಾ). ಅತಿಶಯವಾದ ಗೌರವ: ಮನೆಯಾತ ಅವನಿಗೆ ನಾಲ್ಕು ಸಾವಿರ ಹೊನ್ನು ಕೊಟ್ಟು ಹಲವಾರುರಥಗಳನ್ನೂ ಬಹುಮತಿಯಾಗಿ ಕೊಟ್ಟನು (ಹಕ್ಕುಸು. ೦೦೬) ; ಪ್ರಪಂಚದಲ್ಲೆಲ್ಲ ಸಾಹಿತ್ಯದಲ್ಲಿ ಪ್ರಮುಖರಾದ ಒಬ್ಬೊಬ್ಬರಿಗೆ ದೊರೆಯುವ 'Nobel Prize' ಎಂಬ ಬಹುಮತಿಯ ಶುಲ್ಕ ದೊರೆಯಿತು (ಕರ್ಮಾಶಾ. ೮೨). [ಸಂ.]

ಬಹುಮತಿಸು (ಕ್ರಿ). ಗೌರವಿಸು: ಮನ್ನಿಸು : ನೀಂ ಮುಟ್ಟಿದ ನಂದನೆಯಂ ಬಹುಮತಿಸುತೆ ನಿನ್ನನೆ ಪಾತ್ರೀಕರಿಸಿ ಬಿಟ್ಟ ಮುನಿಯೆ ವಿಮಾನ್ಯಂ (ಶಾಕುಂತ. ೬೬-೧೨೦) [ಬಹುಮತ + — ಇಸ್ಸು]

ಬಹುಮತೆ (ನಾ). ಗೌರವಾರ್ಹಳಾದ ಹೆಂಗಸು ; ಮಾನ್ಯೆ : ಎಲೆ ಮಗಳೆ, ಪತಿಗೆ ಬಹುಮತೆಯಾಗಿ ಬಾಳು (ಶಾಕುಂತ. ೦೦೨-೨೭). [ಸಂ. ಬಹುಮತಾ]

ಬಹುಮಾನ (ನಾ). ೧. ಅತಿಶಯವಾದ ಗೌರವ ; ವಿಶೇಷವಾದ ಮರ್ಯಾದೆ : ಕಣ್ಣು ಕೆಟ್ಟಾ ಮೇಲೆ ಕಡುರೂಪ ಚಲ್ವಿಕೆಯೆ ಬಣ್ಣಗುಂದಿದ ಮೇಲೆ ಬಹುಮಾನವೆ (ಕನಕ. ೫೬-೧) ; ಮಗಳೇ, ಪತಿಯ ಬಹುಮಾನಸೂಚಕವಾದ ಮಹಾದೇವೀಶಬ್ದವನ್ನು ಹೊಂದು! (ಶಾಕುಂತ. ೫೦-೧೦). ೨. ಪಾರಿತೋಷಕ ; ಇನಾಮು ; ಉಡುಗೊರೆ : ದೊಡ್ಡವರು ಬಡವರಿಗೆ ಉಚಿತವಾಗಿ ಕೊಡುವುದನ್ನು ಬಹುಮಾನ ಎನ್ನುತ್ತಾರೆ, ಬಡವರು ದೊಡ್ಡವರಿಗೆ ಉಚಿತವಾಗಿ ಕೊಡುವುದನ್ನು ಮರ್ಯಾದೆ ಎನ್ನುತ್ತಾರೆ (ಪಂಜಪಂ. ೧೦); ತಮ್ಮ ರತ್ನಹಾರವನ್ನು ಬಹುಮಾನವಾಗಿ ಕೊಡುವೆವೆಂದು ಮಹಾರಾಜರು ಘೋಷಿಸಿದ್ದಾರೆ (ಶಾಣಿಅ. ೩೭). [ಸಂ.]

ಬಹುಮುಖ (ನಾ). ೧. ಏಕಮುಖವಾಗಿಲ್ಲದಿರುವುದು; ಚಂಚಲವಾಗಿರುವುದು : ಹೀನಮುಖ ಬಹುಮುಖ ಪರಾಙ್ಮುಖ ದೀನಮುಖ ವಾಚಾಲಮುಖವಜ್ಞಾನಮುಖವಂತರ್ಮುಖ ಬಹಿರ್ಮುಖದ ಕಾರ್ಯದಲಿ ಆ ನರೇಂದ್ರನ ವರ್ತನಕೆ ದುಸ್ಥಾನವಾಗದೆ ಬಿಡದು (ಕುಮಾಅ. ೬-೩೭). ೨. ಅನೇಕ ಬಗೆ ; ರೀತಿ : ಅವನ ಬಹುಮುಖವಾದ ಜ್ಞಾನದಾಹವನ್ನೂ ತೀಕ್ಷ್ಣವಾದ ಗ್ರಹಣಶಕ್ತಿಯನ್ನೂ ನೋಡಿ ಅವಳು ದಿಗ್ಭ್ರಮೆಗೊಂಡಿದ್ದಳು (ಪುನರು. ೩೨೬). [ಸಂ.]

ಬಹುಮುಖಿ (ನಾ). ಏಕಚಿತ್ತವಿಲ್ಲದವನು; ಚಂಚಲಮನಸ್ಸಿನವನು : ಗುಹೇಶ್ವರನೆಂಬ ಲಿಂಗಸಾರಾಯ ಬಹುಮುಖಿಗಳಿಗೆ ತೋಱದು (ಅವಸಂ. ೫೯-೨೩೦) ; ಮಾನ್ಯರ ಮನದ ಮನ್ನಣೆಯನಱಿದಿಪ್ಪುದೇ ವ್ರತ . . . ಇಂತಲ್ಲದೆ ಜಗವ ಸಿಕ್ಕಿಸುವ ಬಹುಮುಖಿಗಳಿಗೆಲ್ಲಿಯದೋ ಮುಕ್ತಿ (ಮೋಳಿಮಾ. ೩೩-೦೩೬). [ಸಂ. ಬಹುಮುಖೀ]

ಬಹುಮೂತ್ರ (ನಾ). ಅತಿಯಾಗಿ ಮೂತ್ರವಿಸರ್ಜನೆಯಾಗುವ ಒಂದು ಬಗೆಯ ರೋಗ : ಆವರಿಕೆ :—ಈ ಚಿಗುರು ಅರೆದು . . . ಎಮ್ಮೆ ಮೊಸರಲ್ಲಿ ತೆಗೆದುಕೊಳ್ಳೆ, ಬಹುಮೂತ್ರ ಗುಣ(ವಿವೃತಿ. ೨); ಬಹಳವಾದ ಆಯಾಸಪಡುವುದರಿಂದಲೂ . . . ಮಲಮೂತ್ರಾದಿಗಳ ವೇಗವ ತಡೆಯುವುದರಿಂದಲೂ ಈ ರ ಪ್ರಕಾರದಿಂದ ಬಹುಮೂತ್ರರೋಗಮುಂಟಾಗುತ್ತಿಹುದು (ಸಕವೃ. ೩೬೯). [ಸಂ.]

ಬಹುರೂಪ (ಗು). ೧. ಅನೇಕ ರೂಪಗಳುಳ್ಳ. (ನಾ). ೨. ಅನೇಕರೂಪ : ಹಲವು ಆಕಾರ : ಇಂದ್ರಜಾಲಿಗನಂತೆ ವಿಯದವನೀ ದಿಗ್ಭಾ[ಗ]ದೊಳ್ ತನ್ನ ರೂಪೆ ರೂಪಾಗಿ ಬಹುರೂಪದಿಂ ಕಾದುತ್ತಿರ್ದಸುರಂ . . . ಪೆಱತೆಗೆದು ಪೋಗಿ (ಶಾಂತಿಪು. ೬-೩೬ ಪ) ; ಉಪಮಾನಕಥನವೊಂದಱಿನುಪಮೇಯಮನಱಿವುದದು ಸಮಾಸೋಕ್ತಿ ನಿಷೇಧಪರಂ ತಾನೆಂಬಂತಾಗೆ ಪೇಳ್ವುದಾಪೇಕ್ಷಮಕ್ಕುಮದು ಬಹುರೂಪಂ (ಕಾವ್ಯಾವ. ೬೯೭). ೩. ಅನೇಕ ವೇಷಗಳನ್ನು ಧರಿಸಿ ಆಡುವ ಒಂದು ಬಗೆಯ ನಾಟಕ ಪ್ರದರ್ಶನ : ಅಪ್ಪಾ ಬೊಪ್ಪಾ ಚಿಕ್ಕ ಚೋಹವುಂ ತೊಟ್ಟು . . . ತಪ್ಪಿ ಹಜ್ಜೆಯನಿಕ್ಕಿ ಆಡುತ್ತಿದ್ದ ರೇಕಣ್ಣಪ್ರಿಯನಾಗಿನಾಥನಲ್ಲಿ ಹೊತ್ತು ಹೋಗದ ಬಹುರೂಪವ (ಸಕವ. II; ೩೩೫-೩) ; ಈತ, ಚಿತ್ರವಿಚಿತ್ರವಾದ ಬಹುರೂಪಗಳನ್ನಾಡಿ ಭಕ್ತರನ್ನು ತಣಿಸುವ . . . ಕಾಯಕವನ್ನು ಕೈಗೊಂಡ (ಕವಿಕೋ. XI, ೯೪೨). ೪. ಅನೇಕ ರೂಪಗಳನ್ನು ಧರಿಸುವವನು ; ಬಹುವೇಷಧಾರಿ : ಕಂದರ್ಪನ ಕೊಂದು ನಿಂದು ನಾಟ್ಯವನಾಡಿದಂದಂದಿನ ಬಹುರೂಪನಾಹೋ (ಶಿವಗೀ. ೦೭೯-೯೬೩). ೫. ಓತಿಕೇತ ; ಗೋಸುಂಬೆ. ೬. ಸೂರ್ಯ. ೭. ಒಂದು ಬಗೆಯ ಮರದ ಅಂಟು ; ಸಜ್ಜರಸ : "ಯಕ್ಷಧೂಪಃ . . . ಬಹುರೂಪಃ—ಇ ಸಜ್ಜರಸದ ಹೆಸರುಗಳು" (ಸಿದ್ಧಾಂತಿ. ೨೦೭). ೮. ಶಿವ. ೯. ಬ್ರಹ್ಮ. ೧೦. ವಿಷ್ಣು. ೧೧. ಮನ್ಮಥ. ೧೨. ಕೂದಲು. [ಸಂ.]

ಬಹುರೂಪಿ (ನಾ). ೧. ಹಲವು ರೂಪಗಳಿಂದ ಕೂಡಿದುದು : ದೇಹ ಬಹುರೂಪಿ— ಶೈವಲದಂತೆ (ಜಸುಹೂ. ೦೫೯). ೨. ಹಲವು ರೂಪಗಳಿಂದ ಕೂಡಿದವನು ; ಬಗೆಬಗೆಯ ಸೋಗು ಹಾಕುವವನು : ಕುಣಿಯಲಾಱದೆ ಸೋತಾಕ್ಷಣದೊಳು ಬಹುರೂಪಿ ಕಱುಗಾಯಿಸಿದನು (ಶೈರಸೂ. I. ೨೨೨). [ಸಂ. ಬಹುರೂಪಿನ್]

ಬಹುರೂಪಿಣಿ (ನಾ). ೧. ವಿಧವಿಧವಾದ ವೇಷವನ್ನು ಧರಿಸುವವಳು; ನಟಿ. ೨. ದೊಂಬರವಳು : "ಬಹುರೂಪಿಣಿ ಕೊಲ್ಲಟಗಿತ್ತಿಯೆ" (ಕಸುವಿ. ೯೩). ೩. [ಜೈನ] ಒಂದು ಬಗೆಯ ಮಾಯಾವಿದ್ಯೆ ; ತಾನು ಬಯಸಿದ ರೂಪವನ್ನು ಧರಿಸಬಹುದಾದ ವಿದ್ಯೆ : ಸುತಾರಾ ರೂಪಧಾರಿಣಿಯಾಗಿ . . . ಪಟ್ಟಿರ್ದ ಬಹುರೂಪಿಣಿಯೊಂಬ ಅಶನಿ ಘೋಷನ ಘೋಷಣವಿದ್ಯೆಯುಮನದಂ ಸುತಾರೆಗೆತ್ತು (ಶಾಂತಿಪು. ೬-೩೯ ಪ); ಸಾಧಿಸಿ ಬಹುರೂಪಿಣಿಯಂ ಸಾಧಿಸುವೆಂ ಪಗೆಯಂ (ಪಂರಾಮಾ. ೦೯-೬೨). [< ಸಂ. ಬಹುರೂಪಿನೀ]

ಬಹುರೂಪೆ (ನಾ). ಅಗ್ನಿಯ ಏಳು ನಾಲಗೆಗಳಲ್ಲಿ ಒಂದು ; ೯ "ಯಾಗಕರ್ಮದಲ್ಲಿ (ಸಾತ್ತ್ವಿಕ): ಹಿರಣ್ಯ, ಕನಕಾ, ರಕ್ತಾ, ಕೃಷ್ಣಾ ಸುಪ್ರಭಾ, ಬಹುರೂಪಾ, ಅತಿರಕ್ತಾ (ತಂತ್ರಸಾರ ಶಕದ್ರು, VI, ೨೬೦-೨೬೧ ; ಅಭಿರ. ೧೩-೬೮)" (ಶ್ರೀವತ್ಸ. ೦೬೬) : "ಬಹುರೂಪಮತಿರಕ್ತಮಸಿತರಕ್ತಂ ಸದಂಶುಹಿರಣ್ಯಮಾ ಕನಕವರ್ಚಿಯೆನಲಗ್ನಿಯಲ್ಲಿಹವೇಳುನಾಲಗೆಗಳಕ್ಕು" (ಮಂಗರಾ. ೦೯-೬). [ಸಂ. ಬಹುರೂಪಾ]

ಬಹುಲ, ಬಹುಳ (ಗು). ೧. ಅನೇಕ ; ಯಥೇಷ್ಟ : ಬಹುಲರೋಗಂಗಳಿಂ ನವವವಂ ಭೃತ್ಯರಂ ನೋಯಿಸುತ ಹಿಡಿದ ಚಲವಂ ಬಿಡದವಂ (ವೀಕೃಪು. ೯-೨೨-೩೬) ; ಕವಚ ಶೀರ್ಷಕ ಠಣಾರವಂ, ಬಹುಲನಾನಾರವಂ ಕೀಲಿಸಿತು ಕಿವಿಗತಿಕಠೋರವಂ ! (ಸತ್ರಾಂಗ. ೬೨-೨೨೫೬). ೨. ಹೆಚ್ಚಾದ ; ಅಧಿಕವಾದ : ಬಹುಲಕರುಣಾಸಮುದ್ರ ಹಲಗೆಯ ಗುರುವೆ (ವೀಕೃಪು. ೨-೦೦-೩). ೩. ದಟ್ಟವಾದ ; ನಿಬಿಡವಾದ ; ಸಾಂದ್ರ. ೪. ದಪ್ಪವಾದ ; ಸ್ಥೂಲವಾದ : (ಕ). ೫. ಕರಿಯ ಬಣ್ಣದ ; ಕಪ್ಪಾದ. (ನಾ). ೬. ಚಾಂದ್ರಮಾನ ತಿಂಗಳಿನ ಎರಡನೆಯ ಅರ್ಧ ಭಾಗ ; ಕೃಷ್ಣ ಪಕ್ಷ : ವಿತತಾಪಾಢದ ಬಹುಲ[ಪಾಶಾಂ.೪] ಪ್ರತಿಪದ್ದಿನದಂದು ಕೀರ್ತಿ ನೆಗೞ್ದಿರೆ (ಆದಿಪು. ೬-೬೬). ೭. ದಪ್ಪಗಿರುವವನು : "ಪೀವರನೆನಲ್ ಸ್ಥೂಲನೆನೆ ಬಹುಲನೆನೆ (ಪೀನನೆನೆ) ದೊಡ್ಡಿತಪ್ಪವನೆನಿಕ್ಕುಂ" (ಮಂಗರಾ. ೬೯-೦೧). ೮. [ಜ್ಯೋತಿ] ಇಪ್ಪತ್ತೇಳು ನಕ್ಷತ್ರರಾಶಿಗಳಲ್ಲಿ ಮೂರನೆಯದು; ಕೃತ್ತಿಕೆ. ಬಹುಳ: ೧. ಅಗಱ್ ವಾರ್ಧಿಯಂ ಕಿಟ್ಟಡಿಕುಂ ನಾನಾಮರಾಳೀಬಹುಳಕಳಕಳ ಧ್ವಾನಸಂತಾನದಿಂದಂ (ಜಗವಿ. ೨-೦೬). ೬. ದಿವಸನಾಥಾದಿ ಗ್ರಹಶ್ರೇಣಿ ಸೌಮ್ಯಗಣಂ ಜೊನ್ನದೊಳನ್ಯರುಂ ಬಹುಳದೊಳ್ ನಿರ್ವ್ಯಾಜದಿಂ ಬಲ್ಲಿದರ್ (ಜಾಪತಿ. ೨-೦೦). ೮. "ಕೃತ್ತಿಕೆ ಬಹುಳಮೆನಿಕು" (ಮಂಗರಾ. ೦೨-೭). ೯. ಅಧಿಕ್ಯ; ವಿಪುಲವಾಗಿರುವುದು : "ಪ್ರಭೂತಂ. . . ಬಹುಳಂ, ಬಹು. . . ಭೂರಿ—೧೨ ಅಧಿಕವಾದದ್ದರ ಹೆಸರುಗಳು" (ಸಿದ್ಧಾಂತಿ. ೩೪೦) ; ಹೀಗೆ ಪಾಮರ ಬಹುಳವಾದ 'ಸಕಲಾವನೀತಳಜನವೇ' ಅರಿಕೇಸರಿಯನ್ನು ಕುರಿತು ಪ್ರಾರ್ಥಿಸಿಕೊಂಡಿತು (ನಾಡೋಜ. ೦೯೩). [ಸಂ.]

ಬಹುಲತೆ, ಬಹುಳತೆ (ನಾ). ೧. ವಿಪುಲವಾಗಿರುವಿಕೆ; ಅಧಿಕ್ಯ ;

ಹೆಚ್ಚಳ. ಬಹುಳತೆ: ೨. ವಿಶೇಷತೆ ; ಅತಿಶಯತೆ: ಮುತ್ತಿನ ಮಕುಟ ಮಿದೆನಿಸಲಾರ್ತುದತಿಬಹುಳತೆಯುಂ (ಆಪಶ. ೪-೫೬). ೩. [ವ್ಯಾಕ] ಎರಡು ರೀತಿಗಳಲ್ಲಿ ವಿಶೇಷವಾದ ಅರ್ಥವುಳ್ಳದು : ಬಹುಳತೆ ಯತ್ವ ವತ್ವ ದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ (ಕವಿದ. ೩೩). [ಸಂ. ಬಹುಲತಾ]

ಬಹುಲತ್ವ, ಬಹುಳತ್ವ (ನಾ). ೧. =ಬಹುಲತೆ ೧. ಬಹುಳತ್ವ : ೨. = ಬಹುಲತೆ ೩ : ಸಂಸ್ಕೃತದೊಳ್ ಯತ್ವ ವತ್ವಂಗಳ್ಗೆ ಬಹುಳತ್ವ ಮಿಲ್ಲ, ನಿತ್ಯಂ (ಕವಿದ. ೩೩ ವೃತ್ತಿ). [ಸಂ.]

ಬಹುಲವೆಳ್ಳಂಗ (ನಾ). ಒಬ್ಬಾತನ ಹೆಸರು : ಶ್ರೀಇಮ್ಮಡಿಪೆರ್ಮ್ಮಾಡಿ ಯಾಚಾರಿ ಬಹುಲವೆಳ್ಳಂಗನ ಶೀಘ್ರಲಿಖಿತಂ (ಎಕ. III, ಸಂಖ್ಯೆ. ೦೫೩-೧೩; 977). [?]

ಬಹುಲಾಯಿ (ನಾ). [ಸಂಗೀತ] ಶಾರೀರಕ್ಕೆಂದು ವರ್ಣಿಸಲಾಗುವ, ವಿಶಿಷ್ಟರೀತಿಯ ಪಲುಕನ್ನು ಹೊಂದಿರುವ ಠಾಯ (?) : ಗೀತ ಜತಿ ಜೋಕೆ ನಯಂ ಬಹುಲಾಯಿ ದೇಸಿ ಪೆಲ್ಲಣಿ ಕಳೆಯೊಬಿವಂ ಮೆಱೆದು ಬಾಜಿಸಿದುಂ ಮುರವೈರಿ ವಾಸವಂ (ಪಗಪ. ೩-೩). [?]

ಬಹುಲಿಮ (ಗು). ಹೇರಳವಾದ ; ಸಮೃದ್ಧವಾದ : ಚಿತ್ತಕ್ಕೆ ಮಾಡಿ ತ್ಪೊಲವಂ ತಾರುಣ್ಯಮಾಸಾಧಿತಬಹುಲಿ[ಪಾಕಾಂ. ಹಳಿ]ಮಲಾವಣ್ಯಶೋಭಾ ವರೇಣ್ಯಂ (ಕಂದ್ರಪ್ರ. ೪-೬). [ಸಂ.]

ಬಹುಲೆ, ಬಹುಳೆ (ನಾ). ೧. ಹಸು; ಗೋವು. ೨. ದೊಡ್ಡ ಏಲಕ್ಕಿ ಗಿಡ : "ಪೃಥ್ವೀಕಾ, ಚಂದ್ರಬಾಲಾ, ಏಲಾ, ನಿಷ್ಕುಟಿಃ, ಬಹುಲಾ— ೫ ದೊಡ್ಡ ಯಾಲಕ್ಕೀ ಹೆಸರುಗಳು" (ನಿಘಂಟು. ೦೪೦). ೩. ನೀಲಿಗಿಡ. ೪. ಆರು ತಾರೆಗಳುಳ್ಳ ಒಂದು ನಕ್ಷತ್ರಪುಂಜ; ಕೃತ್ತಿಕಾನಕ್ಷತ್ರ : "ಕೃತ್ತಿಕಾಃ, ಬಹುಲಾಃ—ಈ ೨ ಕೃತ್ತಿಕೆ" (ಹಲಾಯು. ೯-೫೦) ಬಹುಳೆ : ೪. "ಬಹುಳಾಃ—ಕೃತ್ತಿಕಾನಕ್ಷತ್ರ, ಗೋವುಗಳು" (ನಿಘಂಟು. ೪೦೯).

[ಸಂ. ಬಹುಲಾ]

ಬಹುವಚ (ನಾ). ಅತಿಯಾಗಿ ಮಾತನಾಡುವವನು ; ವಾಚಾಳಿ : "ಬಹುವಚಂ ಗಟಬಹುವವನಕ್ಕು" (ಮಂಗರಾ. ೬೨-೨೦). [ಸಂ.]

ಬಹುವಚನ (ನಾ). ೧. ಒಂದಕ್ಕಿಂತ ಹೆಚ್ಚು ಸಂಖ್ಯೆಯುಳ್ಳದು. ೨. [ವ್ಯಾಕ] ಒಂದಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಸೂಚಿಸುವ ಪದ: ಏಕವಚನಕ್ಕೆ—ಲವನೇನ್, ಅಲೀನ್, ಆದೇನ್, ಬಹುವಚನಾರ್ಥಕ್ಕೆ— ತತ್ಪರಿಜನಾಲಾವಂಗಳೇನ್ (ಕವಿದ. ೬೯ ಪ್ರಯೋ); ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಹೇಳುವುದು ಬಹುವಚನ (ಕೃಕಿಪ. ೩೩). [ಸಂ.]

ಬಹುವಾರಕ (ನಾ). ಒಂದು ಬಗೆಯ ಸಸ್ಯ ; ಚಳ್ಳೆ : "ಶೇಲುಃ ... ಬಹುವಾರಕಃ—೫ ಚಳ್ಳೆಮರ" (ನಿಘಂಟು. ೦೦೬); ಬಹುವಾರಕ ಗಾಯತ್ರಿಯ ವಿಹಿತಾರಿಷ್ಟಾಮೃತಾಗ್ನಿಮುಖಿಗಳ್ಕೆಱಗುಂ (ಹಸ್ಮೂರ. ೪-೭೦). [ಸಂ.]

ಬಹುವಾರ್ಷಿಕ (ನಾ). ಅನೇಕ ವರ್ಷಗಳು ಇರುವಂತಹುದು : ಅಕ್ಕಿಲೇ ಜಿಯ; ಆಕರ್ಷಣೀಯವಾದ ಹೂ ಬಿಡುವ ಅಲಂಕಾರಸಸ್ಯ. . . ಇವು ಬಹುವಾರ್ಷಿಕಗಳಾದ್ದರಿಂದ ಫಲವತ್ತಾದ ಮಣ್ಣು ಅಗತ್ಯ (ಕಸಿಕೋ. I, ೦೬೦). [ಸಂ.]

ಬಹುವಿಕೆ (ನಾ). ಹೆಚ್ಚಳ; ಅತಿಶಯತೆ : ಬಿಂಕಂ ಲುಳಿವಡೆಯೆ ಲುಳಿ ನವಣೆವಡೆಯೆ ನವಣೆ ಬಹುವಿಕೆವಡೆಯೆ (ಅಪಂಪು. ೨-೨೮೫).

[ಬಹು + —ಇಕೆ]

ಬಹುವಿತ್ತ (ನಾ). ೧. ಅಧಿಕವಾದ ಸಂಪತ್ತು. ೨. ಧನಿಕ; ಶ್ರೀಮಂತ : ಬಹುತನಯಂ ಬಹುವಿತ್ತಂ. . . ಮಹಿತನಯಂ ನೆಲಸಿರೆ ಮೃಗಗೃಹ ದೊಳ್ ತನ್ನನುಜನೆನಿಸುಗುಂ (ಜಾತಕ. ೦೬-೨). [ಸಂ.]

ಬಹುವ್ರೀಹಿ (ನಾ). ೧. ಹೆಚ್ಚು ಬತ್ತವನ್ನು ಹೊಂದಿರುವುದು. ೨. [ವ್ಯಾಕ]ಸಮಾಸಗಳಲ್ಲಿ ಒಂದು; ಸಮಾಸದಲ್ಲಿ ಸೇರಿರುವ ಎರಡು ಪದಗಳ ಅರ್ಥವೂ ಮುಖ್ಯವಾಗದೆ ಬೇರೊಂದು ವಸ್ತುವನ್ನು ಹೇಳು ವುದೇ ಸಮಾಸದ ಅರ್ಥವಾದಾಗ ಆಗುವ ಸಮಾಸ : ದ್ವಿಪದಂ ಮೇಣ್ ಬಹುಪದಮನ್ಯಪದಾರ್ಥದೊಳೊಂದಿ ನಿಲೆ ಬಹುವ್ರೀಹಿ (ಕಾವ್ಯಾವ. ೨೦೬); ಎರಡುಂ ಪದಂ ಮೇಣ್ ಪಲವುಂ ಪದಂ ಅನ್ಯಪದಾರ್ಥಮುಂ ಬಯಸುತ್ತಿರೆ ಬಹುವ್ರೀಹಿಯಕ್ಕುಂ (ಶಪಾದ. ೦೬೫ ವೃತ್ತಿ); ಅನ್ಯಪದವು ವಿಶೇಷ್ಯವಾಗಿ ಅನೇಕ ಪದಗಳಿಗೆ ಆಗುವ ಸಮಾಸವು ಬಹುವ್ರೀಹಿ (ಕೃಕಿಪ. ೨೨). [ಸಂ.]

ಬಹುಶಃ (ಅ). ಬಹಳ ಮಾಡಿ; ಬಹುಮಟ್ಟಿಗೆ : ದ್ವಾರದ ಮೇಲಿರುವ ಶಾಸನಗಳಿಂದ ಬಹುಶಃ ಕ್ರಿ.ಶ. ೯೫೦ರಲ್ಲಿ ಕಟ್ಟಿರಬಹುದೆಂದು ಹೇಳಬಹುದು (ಹೊಯ್ಸಾಸಾಂಸ್ಕೃ). ಬಹುಶಃ ದೇವದಾಸಿಯರ ವೃತ್ತಿಯು ಒಂದು ರೀತಿಯಲ್ಲಿ ತಲೆಯಿಂದ ತಲೆಗೆ ಹರಿದುಕೊಂಡು ಬರುತ್ತದೆ (ಕಶಾಅ. ೦೬೫).

[ಸಂ. ಬಹುಶಸ್]

ಬಹುಶಿಲ್ಪಿ (ನಾ). ಅನೇಕಕಲೆಗಳನ್ನು ಬಲ್ಲವನು : ಧಾರ್ಮಿಕಂ ತ್ಯಾಗಿ ವೀರ್ಯಸಮೇತಂ ಬಹುಶಿಲ್ಪಿ. . . ಧನುರ್ಗ್ರಹಜಂ (ಜಾತಕ. ೦೭-೯).

[ಸಂ. ಬಹುಶಿಲ್ಪಿನ್]

ಬಹುಶ್ರುತ (ನಾ). ೧. ಅನೇಕ ಶಾಸ್ತ್ರಗಳನ್ನು ಕೇಳಿ ಅರಿತವನು; ವಿದ್ವಾಂಸ ; ಪಂಡಿತ : ಅತಿಗಂಭೀರಮೃದೂಕ್ತಿ ವಕ್ತೃದೊಳೊಡಂ ಬಟ್ಟೊಪ್ಪೆ ಕೇಳ್ದಂ ಬಹುಶ್ರುತನಲ್ಪಶ್ರುತನೆನ್ನದಾರ ಕಿವಿಗಂ ನುಗ್ಗೆಂಪಿ ನೊಳ್ ಕೂಡೆ ಪೇಟಲ್ (ಶಾಂತಿಪು. ೦-೬); ಪರಿಮೃತನಾದನೆ ವಿಶ್ರುತ ಬಹುಶ್ರುತೋದಾತ್ತಯಶಂ (ಸುಕುಮಾ. ೨-೧೨). ೨. ವೇದಗಳನ್ನು ಚೆನ್ನಾಗಿ ಬಲ್ಲವನು; ವೇದಪಾರಂಗತ. [ಸಂ.]

ಬಹುಸುತ (ನಾ). ಅನೇಕ ಮಕ್ಕಳುಳ್ಳವನು: ಬಹುಸುತನುಪಚಿತತನು ಸಂಗ್ರಹಶೀಲಂ ಮಜ್ಜೆಸಾರನಕ್ಕುಂ (ಲೋಕೋಪ. ೧೦-೩೭). [ಸಂ.]

ಬಹುಸೂತಿ (ನಾ). ೧. ಹಲವು ಮಕ್ಕಳನ್ನು ಪಡೆದ ಹೆಂಗಸು. ೨. ಹಲವು ಬಾರಿ ಕರು ಹಾಕಿದ ಹಸು: "ಬಹುಸೂತಿ, ಪರೇಷ್ಟುಕಾ—೨ ಅನೇಕ ಹೆರಿಗೆಗಳನ್ನು ಈದ ಆಕಳು" (ನಿಘಂಟು. ೨೯೫). [ಸಂ.]

ಬಹುಳ 'ಬಹುಲ' ನೋ.

ಬಹುಳಗ್ರಹಣ (ನಾ). ವಿಸ್ತಾರವಾದ ಅರ್ಥವನ್ನು ತಿಳಿದು ಕೊಳ್ಳುವುದು : ಆದಮೊಂಬ ಬಹುಳಗ್ರಹಣದಿಂದಾಕಾರಾಂತಮಲ್ಲದ ಕಾರಾಂತಮುಂ ಹ್ರಸ್ವಮುಮ್ಪೇತ್ವಮುಂ ಪಡೆದೊಡಂ ಲಿಂಗಮಕ್ಕುಂ (ಕಪಾದ. ೩೯ ವೃತ್ತಿ). [ಸಂ. ಬಹುಲಗ್ರಹಣ]

ಬಹುಳತೆ 'ಬಹುಲತೆ' ನೋ.

ಬಹುಳತ್ವ 'ಬಹುಲತ್ವ' ನೋ.

ಬಹುಳಪಕ್ಷ (ನಾ). ಕೃಷ್ಣಪಕ್ಷ: ಸೌಮ್ಯವತ್ಸರದ ಶ್ರಾವಣಬಹುಪಕ್ಷದಶಮಿ ಜೀವವಾರದೊಳಾದಿವೃಷಭೇಂದ್ರಾವತಾರದ ಬಸವಚರಿತೆ ಸಮಾಪ್ತ ವಾಯಿತ್ತು (ಬಸಪು. ೬೦-೧೨). [ಸಂ. ಬಹುಲಪಕ್ಷ]

ಬಹುಳವೃತ್ತಿ (ನಾ). = ಬಹುಲತೆ ೩ : ವಿದಿತಸ್ವರದಿನನಾದೇಶದ ಸಹಜ ವ್ಯಂಜನಂಗಳಿಂ ಪರದ ಪವರ್ಗದ ನೆಲೆಗಕ್ಕುಂ ವತ್ವಂ ಪದವಿಧಿಯೊಳ್ ಬಹುಳವೃತ್ತಿಯುಂ ವಾಕ್ಯದೊಳಂ (ಕವಿದ. ೬೬). [ಸಂ. ಬಹುಲವೃತ್ತಿ]

ಬಹುಳಸ್ಥಿತಿ (ನಾ). = ಬಹುಲತೆ ೩: ಇರೆ ವರ್ಗಪ್ರಥಮಂಗಳ್ ಪರದೊಳ್ ಚಟವರ್ಗಮುಟಿಯೆ ತಮ್ಮ ತೃತೀಯಾಕ್ಷರಮಕ್ಕುಂ ಪದವಿಧಿಯೊಳ್ ಪರಿಹರಿಸಲ್ಪಾರದಲ್ಲಿ ಬಹುಳಸ್ಥಿತಿಯುಂ (ಕವಿದ. ೬೩).

[ಸಂ. ಬಹುಲಸ್ಥಿತಿ]

ಬಹುಳೆ 'ಬಹುಲೆ' ನೋ.

ಬಹೂಕ್ತಿ (ನಾ). = ಬಹುವಚನ ೨ : ಸೊಗಯಿಪುವುಗೆಕೆಗಳನ್ನೋಕ್ತಿಗೆ ವಿಧ್ಯರ್ಥಕ್ಕೆ ಮಧ್ಯಮೋತ್ತಮಪುರುಷಪ್ರಗತಬಹೂಕ್ತಿಯೊಳಿಮಮೆಂದೊಗೆ ತರ್ಕುಂ ಯುಗಪದುಕ್ತಿಯೊಳ್ ಕ್ರಮದಿಂದಂ (ಕವಿದ. ೨೨೯). [ಸಂ.]

ಬಹೂದಕ (ನಾ). ಹಂಸ, ಪರಮಹಂಸ, ಕುಟೀಚಕ ಮತ್ತು ಬಹೂದಕ ಎಂಬ ಸಂನ್ಯಾಸಿಗಳ ನಾಲ್ಕು ಗುಂಪುಗಳಲ್ಲಿ ಒಂದು ಗುಂಪಿಗೆ ಸೇರಿದವನಂ; ತೀರ್ಥಯಾತ್ರಾಕ್ಷೇತ್ರಗಳಿಗೆ ಪ್ರವಾಸ ಮಾಡುವ ಸಂನ್ಯಾಸಿ; ಪರಿವ್ರಾಜಕ: ಈಶ್ವರಧ್ಯಾನತತ್ಪರನಾಗಿ ಏಕಾನ್ನವನೊಲ್ಲದೆ ಬಂಧುಪುತ್ರಾದಿ ಗೃಹಮಂ ಪುಗದೆ ಬೇಱೆ ಏಳುಮನೆಯಲ್ಲಿಯ ಭಿಕ್ಷಾನ್ನಮಂ ತಂದನು ಭವಿಸುತ್ತೆ ಸಹಜಮಯನಾಗಿರ್ಪಾತನೇ ಬಹೂದಕನಪ್ಪಂ (ಪಿಸೇಳ. ೦೨೬).

[ಸಂ.]

ಬಹೂಪಮಾನ (ನಾ). [ಕಾವ್ಯಮೀ] ಒಂದಕ್ಕಿಂತ ಹೆಚ್ಚು ಉಪಮಾನಗಳನ್ನು ಕೊಡುವ ಒಂದು ಅಲಂಕಾರ: ಮಲಯರುಹ ಶಿಶಿರಕರ ಶೀತಲಿಕಾಕರಕೇಂದುಕಾಂತಜಲಶೀತಳಮೀ ಲಲನಾಲಿಂಗನಸುಖಕರವಿಲಾಸ ಮೆಂಬುದು ಬಹೂಪಮಾನವಿಕಲ್ಪಂ (ಕವಿಕಾ. ೩-೪೦). [ಸಂ.]

ಬಹೂಪಮೆ (ನಾ). = ಬಹೂಪಮಾನ: ಬಹೂಪಮೆಗೆ—ಶರದಂಬುದಮಂ ಗಂಗಾತರಂಗಮಂ ಸಿಂಧುವಾರಕುಸುಮಶ್ರೀಯಂ ಹರಹಾಸವಿಳಾಸ ಮನನುಕರಿಸುವುದತಿವಿಶದಕೀರ್ತಿ ತೋಳ್ಗೊಪ್ಪುವನಾ (ಕಾಪ್ಯಾಪ. ೬೬೩).

[ಸಂ. ಬಹೂಪಮಾ]

ಬಹ್ವಾರಂಭಪರಿಗ್ರಹ (ನಾ). [ಜೈನ] ಪಂಚಮಹಾಪಾತಕಗಳಲ್ಲಿ ಒಂದು; ಬಹಳ ಪ್ರಯತ್ನದಿಂದ ಧನವನ್ನು ಸಂಗ್ರಹಿಸುವುದು: ಬಹ್ವಾರಂಭಪರಿಗ್ರಹವಿಹ್ವಲನಿಂದ್ರಿಯಸುಖಾರ್ಥಿ ಸಂಸಾರಗುಹಾಗಹ್ವರದೊಳಗಿರುಳಿನ ಚಕ್ರಾಹ್ವದವೊಲ್ ಮಱುಗದೇಂ ಸುಖಂಬಡೆದಪನೇ (ಅಪಿಪು. ೩-೬೮).

[ಸಂ.]

ಬಹ್ವಾರಂಭಪಾರಿಗ್ರಹ (ನಾ). = ಬಹ್ವಾರಂಭಪರಿಗ್ರಹ: ಆ ಜೀವಘಾತಾನೃತವಚನ ಪರಾರ್ಥಾ ಪಹಾರಾನ್ಯನಾರೀಗಮಬಹ್ವಾರಂಭಪಾರಿಗ್ರಹ ಮೆನಿಸುವವಯ್ದುಂ ಮಹಾಪಾತಕಂಗಳ್ಗೆ ಮನಂದಂದೊಂಗೆ ಸಂಸೃತ್ಯುದಧಿತಟಮಧಾಸನ್ನಂ (ಸುಳುಮಾ. ೫-೪೩). [ಸಂ.]

ಬಹ್ವಾಶಿ (ನಾ). ೧. ಅತಿಯಾಗಿ ತಿನ್ನುವವನು; ಹೊಟ್ಟೆಬಾಕ: (ಕ.) ೨. ಅತಿಯಾಗಿ ತಿನ್ನುವಂತಹುದು: ಬಹ್ವಾಶಿಯಪ್ಪ ತುರಗಂ ವಿಹ್ವಲನಾಗಿರ್ದು ಮೇಯದಿರ್ದೊಡಂ . . . ಮರಣಭಯಂ (ಅಶ್ವಶಾ. ೬-೪೨). [ಸಂ. ಬಹ್ವಾಶಿನ್]

ಬಳ$_1$ 'ಬಳ್ಳ' ನೋ.

ಬಳ$_2$ 'ಬಲ'$_3$ ನೋ.

ಬಳ$_3$ (ನಾ). ಒಂದು ಬಗೆಯ ಕೊಡುಗೆಯ ಭೂಮಿ (?): ಬಮ್ಮಗಾವುಣ್ಣನ ಬಳದಿಂ ಬಡಗ (ಸೌಇಇ. XI–ii, ೦೦೯-೫೦; 948); ಮೂನೂಱಯ್ವತ್ತು ಮತ್ತರ್ಕ್ಕಿಸುಕಾಡುಮನ್ನು ಬಳಕ್ಕೆ ಸಾಯಿರದ ನೂಱುಮತ್ತರಾಗಿ (ಸೌಇಇ. IX–i, ೭೬-೧೮; 992); ಅದಱ ಹತ್ತಸಿನ ತನ್ನ ಬಳದೊಳಗೆ ಬಮ್ಮರ್ಯ್ಯಂ ವಿದ್ಯಾದಾನಕ್ಕೆ ಕೊಟ್ಟ ಮತ್ತರ್ಪ್ಪನ್ನೆರಡು (ಸೌಇಇ. IX–i, ೦೦೯-೦೯; 1046); ಗುರುಗಳ ಮನೆಯ ಸ್ತಳ ಬಿಯಾಳ ಕೇತಿಸೆಟ್ಟಿಯ ಬಳದಲು ಮನೆ ಎಡು ಮುದ್ದಯ್ಯನ ಬಳ್ಳದಲು ಮನೆ (ಎಳ. XI, ಹೊಳಲ್ಕೆ. ೫೬-೬೮; 1220). [?]

ಬಳಖುದ್ದಿ 'ಬಲಖುದ್ದಿ' ನೋ.

ಬಳಂಜ 'ಬಣಜ' ನೋ.

ಬಳಂಜಿಗ 'ಬಣಜಿಗ' ನೋ.

ಬಳಂಜು 'ಬಣಜು' ನೋ.

ಬಳಂಬೆ 'ಬಣಂಬೆ' ನೋ.

ಬಳಕೆ 'ಬಟಕೆ' ನೋ.

ಬಳಕೆಗಾರ 'ಬಳಕೆಗಾಱ' ನೋ.

ಬಳಕೆಗಾಱ, ಬಳಕೆಗಾರ (ನಾ). ೧. ಹೆಚ್ಚು ವ್ಯವಹಾರದಲ್ಲಿರುವವನು; ನಾಡಾಡಿ; ಸಾಮಾನ್ಯಮನುಷ್ಯ: ಆ ಕ್ಷತ್ರಿಯಕುಲರತ್ನಗಾಹಾರವುಂಟು ಮಲವಿಲ್ಲ ಮೂತ್ರವಿಲ್ಲೆಂದರೀ ಲೋಕದ ಬಳಕೆಗಾಱರ ಪೇಳ್ವ ತೆಱನೆ (ಪರಸ. ೧-೨೩); ಅವನ ನೆಲೆ ಮೋಕ್ಷಗಾಮಿಗೆ ಗಮ್ಯವಲ್ಲದೆ ನಾಡ ಬಳಕೆಗಾಱರಿಗೆ ಗೋಚರವೆ (ಪರಸ. ೪೦-೦೬). ಬಳಕೆಗಾರ: ೨. ಪದಾರ್ಥಗಳನ್ನು ಕೊಂಡುಕೊಳ್ಳುವವನ್ನು; ಗ್ರಾಹಕ: ಬಳಕೆಗಾರರ ಅನುಕೂಲಕ್ಕಾಗಿ ರಜಾದಿನಗಳಲ್ಲೂ ಆ ಅಂಗಡಿಯನ್ನು ತೆರೆದಿರುತ್ತಾರೆ (ರೂಢಿ).

[ಬಳಕೆ (< ಬಟಕೆ) + – ಕಾಱ]

ಬಳಕೆಮಾತು 'ಬಳಕೆವಾತು' ನೋ.

ಬಳಕೆವಾತು, ಬಳಕೆಮಾತು (ನಾ). ೧. ಆಡುಮಾತು; ರೂಢಿಯ ಮಾತು: ಆಂಡಯ್ಯನ ಭಾಷೆ ಕನ್ನಡಜಿಲ್ಲೆಗಳ ಬಳಕೆವಾತಿಗೆ ಸಂಬಂಧಪಟ್ಟುದು (ತಮಿ. ೦೨೯); ಈ ರೀತಿ ಬಳಕೆವಾತಿನಲ್ಲಿ ತಿಳಿವಿನ ತುತ್ತತುದಿಯನ್ನು ಮುಟ್ಟಿದ ಈ ವಚನಕಾರರ ವಾಗ್ವಿಲಾಸ ಕನ್ನಡಕ್ಕೆ ವಿಶಿಷ್ಟವಾದ ಕಾಣಿಕೆಯೇ ಸರಿ (ಸುವರ್ಣ. ೧೦೫). ೨. ಪರಿಚಯದ ಮಾತು,-ನುಡಿ; ಸಲುಗೆಯ ಮಾತು: ನಂಟಿನ ಬಳಕೆವಾತಿನ [ಪಾಠಾಂ. ನಂಜಿನ ಬಳಗವೀತನ]ಬಂಧುಕೃತ್ಯದ ಬಳವಿಗೆಯೊಳೀ ನಿನ್ನ ಮಗನನು ಬೇಡಿಕೊಳಲೇಕೆ (ಕುಪ್ಯಾಲಾ. ೬೦೩. ೦೦-೦೬). ಬಳಕೆಮಾತು: ೧. ಬಳಕೆಮಾತಿನಲ್ಲಿರುವ ಎಷ್ಟೋ ಶಬ್ದಗಳು ನಿಘಂಟಿನಲ್ಲಿ ಸೇರಿಸಲಾಗದೆ ಕಾಲಕ್ರಮೇಣ ಅವುಗಳು ಮರೆಯಾಗಿ ಬಿಡುತ್ತವೆ (ರೂಢಿ).

[ಬಳಕೆ (<ಬಟಕೆ) + ಮಾತು$_1$]

ಬಳಕೆವೆರು (ಕ್ರಿ). ರೂಢಿಯಾಗು; ಅಭ್ಯಾಸವಾಗು: ನೋಡೆ ರಹಸ್ಯದೊಳ್ ಬಳಕೆವೆತ್ತೀ ಚಿತ್ತದಭ್ಯಾಸದಿಂ ದಹನಾಕ್ರಾಂತಮೆನಿಪ್ಪ ಮಂದಿರದ ವೋಲ್ ಕಾಣ್ಬೆಂ ಜನಾಕೀರ್ಣಮಂ (ಶಾಕುಂತ. ೬೯-೦೦೦).

[ಬಳಕೆ (<ಬಟಕೆ) + ವೆರು$_1$ (<ವೆಱು$_1$)]

ಬಳಗ$_1$, ಬಣಗ$_1$ (ನಾ). ೧. ಗುಂಪು; ಸಮೂಹ: " ಬಂಬಲ್. . . ಬಳಗಂ . . . ಗೊಂದಣಿ (ಉಂದಲ್) ಈ ೧೪ ಸಮೂಹಂ " (ಕಶಾ. ೫೬-೨೨೨); ಆಟಿದಟ್ಗಿದ ಕರಿಘಟೆಗಳ ಬಳಗದಿನುಚ್ಚಳಿಸಿ ಮೊರೆವ ನೆತ್ತರ ತೆರೆಗಳ್ (ಪಂಪಭಾ. ೧೧-೩೬); ಕರುಳನಣಲೊಳಗಡಸಿ ನಲಿದುದು ಮರುಳ ಬಳಗ (ಕುಪ್ಯಾಭೀ. ೫-೩೨). ೨. ರಾಶಿ; ಒಟ್ಟಿಲು: ಎಳದಳಿರ ಬಳಗದೊಳ್ ಪೊರಳ್ದು ಪೊರಳ್ದು (ಗಿಂಕ. ೩-೦೦೩ ಪ). ೩. ಒಂದು ಮನೆ ಅಥವಾ ಒಂದು ವಂಶಕ್ಕೆ ಸೇರಿದವರು; ನೆಂಟರಿಷ್ಟರು; ಪರಿಜನ: ದೇವದೇವ ಅನಾಥನಾಥ ಅನಿಮಿತ್ತಬಂಧುವೆ ತಾಯ್ತಂದೆ ಬಂಧು ಬಳಗವೆ (ಬಸರ. ೨-೫೪); ಜ್ವಳನಕೊಂಡವನಿಕ್ಕಿಕೊಂಡೀ ಬಳಗವೆಲ್ಲಂ ಒಂದು ಪೇರುರಿಯೊಳಗೆ ಬೀಳುವೆವು (ಬಸಪು. ೫೮-೨೮); ಕಾಗೆಯಗುಳನು ಕಂಡು ಕೂಗುವದು ಬಳಗವನು (ಸರ್ವಜ್ಞ. ೬೬೬೬); ಮದುವೆಗೆಂದು ಪರಊರಿನ ನಮ್ಮ ಸಮೀಪದ ಬಳಗದವರೆಲ್ಲ ಬರಹತ್ತಿದರು (ಅಪೋರೀ. ೪೦). ೪. ದಟ್ಟಣೆ; ಸಾಂದ್ರತೆ: ಕಾದಲರ ಪುರುಡಿನೆಸಕದೊಡನೆ ಇರುಳ ಬಳಗು ಬಡಬಡಾಗೆಯುಂ (ಸಂಪ್ರಶು. ೬-೬೨ ಪ). ಬಣಗ$_1$: ೧. ಮಿಗೆ ಮನೋಹರ ಮಾದ ಬೆಳ್ಳಕ್ಕಿಗಳ ಬಣಗಮೋಯೆನಲು ತೋರಿತ್ತಗಣಿತಾಮಲತಾರಕಾ ಸಂದೋಹವಂಬರದಿ (ಕೃಕರ್ಣಾ. ೯-೫೩). [ದೇ.॥ ತಮಿ. ವಲಙ್ಕ=ದೊಡ್ಡ ಕುಟುಂಬ; ತುಳು. ಬಳಗ; ತೆಲು. ಬಲಗ]

ಬಳಗ$_2$ (ನಾ). ನೊಗದಿಂದ ಎತ್ತು ನುಣುಚಿಕೊಳ್ಳುವಿಕೆ; ತಪ್ಪಿಸಿಕೊಳ್ಳುವಿಕೆ: ' ಬಳಗಮಿಕ್ಕು ' ಪರಾ.

ಬಳಗ ಹಾಕು=ನೊಗದಿಂದ ಎತ್ತು ತಪ್ಪಿಸಿಕೊಳ್ಳು: ಎತ್ತು ಬಳಗ ಹಾಕಿ ನಿಂತು ಬಿಟ್ಟಿತು (ರೂಢಿ). ಬಳಗಾ ತೆಗೆ=ಬಳಗ ಹಾಕು: " ಹೆಗಲು ಕೊಡದಿರು " (ಪಾಪಕೋ. ೨೧).

[ದೇ.॥ ತಮಿ. ವಟುಕ್ಕು]

ಬಳಗಜವಳಿ (ನಾ). ನಂಟರಿಷ್ಟರಿಗೆ ಕೊಡುವ ಬಟ್ಟೆಯ ಉಡುಗೊರೆ: ಬಳಗಜವಳಿಗೆಂದು ಬಂದ ಚೀನದುಕೂಲದ ಹಾರಾವಳಿಯ ಪಲವು ದಿಂಡುಗಳುಮಂ (ರರ್ಮಾಮ್ಯ. ೩-೨೫೨). [ಬಳಗ$_1$+ಜವಳಿ$_1$]

ಬಳಗದೊತ್ತು (ನಾ). [ವೀಶೈ] ಶರಣಸಮೂಹಕ್ಕೆ ದಾಸನಾದವನು: ಬಳಿದೊತ್ತು ಬಳಗದೊತ್ತು ವಂಶದೊತ್ತು ನಾನಯ್ಯಾ (ಬಸವ. ೩೫೩). [ಬಳಗ$_1$+ತೊತ್ತು (<ತೊಟ್ಟು)]

ಬಳಗಧಾರೆ (ನಾ). ಒಂದು ಬಗೆಯ ವಿವಾಹವಿಧಿ ; ಮದುವೆಯಲ್ಲಿ ಕನ್ಯಾದಾನ ಮಾಡುವಾಗ ನಂಟರಿಷ್ಟರೆಲ್ಲ ಸೇರಿ ಎರೆಯುವ ನೀರಿನ ಧಾರೆ : ಒಕ್ಕಲಿಗರಲ್ಲಿ ಬಳಗಧಾರೆಯ ಪದ್ಧತಿಯುಂಟು (ರೂಢಿ). [ಬಳಗ$_1$+ಧಾರೆ]

ಬಳಗಮಿಕ್ಕು, ಬಳಗವಿಕ್ಕು (ಕ್ರಿ). ನೊಗದಿಂದ ಎತ್ತು ತಪ್ಪಿಸಿಕೊಳ್ಳು : ಆ ಧೂರ್ತನೆಟ್ಟಿನಂದಮನೆ ಮಾಡಿ ಮರ್ಯಾದೆಯೊಳೊರ್ವೆಯೊಡಂಬಟ್ಟುಂ ಒಮ್ಮೆಯೊಡಂಬಡದೆಯುಂ ಬಳಗಮಿಕ್ಕಿ ಕಾಡಿದೊಡೆ (ಪಂಚತಂ. ೩೫-೦೨). **ಬಳಗವಿಕ್ಕು** : ನಡವೆಟ್ಟುಗಳ್ ಬಳಗವಿಕ್ಕಿರೆ ಕಳ್ಳರಿ ನಕ್ಕುಮಚ್ಚಿಗಂ (ಅಟ್ಟಿಮ. ೯-೩೦). [ಬಳಗ$_2$ + ಇಕ್ಕು]

ಬಳಗವಿಕ್ಕು ' ಬಳಗಮಿಕ್ಕು ' ನೋ.

ಬಳಗಾರ ' ಬಳೆಗಾಱ ' ನೋ.

ಬಳಗಾಱ ' ಬಳೆಗಾಱ ' ನೋ.

ಬಳಗಾಱಗಣ (ನಾ). [ಜೈನ]ಶ್ರವಣರ ಪಂಗಡಗಳಲ್ಲಿ ಒಂದು : ಬಳಗಾಱಗಣದ ಮೇಷನನ್ದಿಭಟ್ಟಾರಕರ ಶಿಷ್ಯರಪ್ಪ ಕೇಶವನನ್ದಿ ಅಷ್ಟೋಪವಾಸಿ ಭಳಾರರ ಬಸದಿಗೆ . . . ಕೊಟ್ಟ ಗಟ್ಟಿ ಮತ್ತರಯ್ದು (ಇಅ. IV, ೦೬೦-೦೩; 1048). [ಬಳಗಾಱ (<ಬಳೆಗಾಱ)+ಗಣ]

ಬಳಚು 'ಬಟ್ಟು' ನೋ.

ಬಳಜ 'ಬಲಜ' ನೋ.

ಬಳತ 'ಪಣತ' ನೋ.

ಬಳದಡಿ (ನಾ). ಒಂದಂ ಬಗೆಯ ಆಯುಧ ; ದೊಡ್ಡಬಡಿಗೆ : ಹೇಱುವ ಬಿಱುಗಲ್ಲು ಬಳದಡಿ ವರಶಕ್ತಿ ಪಾಱುಂಬಳೆ ಶೂಲದಿಂದೆ ಏಱುಗಾಣಿಸಿ . . . ಗಾಱುಮಾಡಿದರು ರಕ್ಕಸರು (ಶೋಷತ. ೩೪-೨೩); ಬಿಲ್ಲಂಬು ಬಾಕು ಬಳದಡಿ ಕೊಡಲಿ ಮರಗತ್ತಿ (ಗುರುಕಾ. ೩-೫೦). [ಬಳ$_2$(=ಬಲ$_3$)+ದಡಿ$_1$]

ಬಳದೇವ ' ಬಲದೇವ ' ನೋ.

ಬಳಪ, ಬಳಹ (ನಾ). ೧. ವಿಗ್ರಹ ಪಾತ್ರೆ ಮುಂತಾದುವುಗಳನ್ನು ಮಾಡಲು ಬಳಸುವ ಒಂದು ಬಗೆಯ ಮೃದುವಾದ ಬಿಳಿ ಕಲ್ಲು: " ಬಳಪಮದು ಶುಭ್ರೋಪಲಂ " (ಮಂಗರಾ. ೦೦೬-೦೫) ; ತಂಬುಲದ ಸೊರ್ಕೆ ದೊರೆಕೊಳೆ ತಿಂಬುದು ಬಳಪಮಂ (ಲೋಕೋಪ. ೦೦-೪೪) ; ಬೆಳ್ನವಿರ್ ತುಱುಗಿ ನಿರಂತರಂ ಬಳಪಮಂ ತೊಡೆದಂತಿರೆ (ಸೂಕ್ತಿಸು. ೩-೩೭). ೨. ಕಪ್ಪುಹಲಗೆಯ ಮೇಲೆ ಬರೆಯಲು ಮೃದುವಾದ ಬಿಳಿಯ ಕಲ್ಲಿನಿಂದ ತಯಾರಿಸುವ ಲೇಖನಸಾಧನ : ಪಡೆದ ಧನಕ್ಕೆ ಲೆಕ್ಕಮಿಡಲಿಂದ್ರನಗಂ ಬಳಪಂ ಧರಾತಳಂ ಕಡಿತಮಹೀಶ್ವರಂ ತಗುಳೆ ಬಾಚಿಸುವೊಂ (ಶಾಂತಿಪು. ೯-೦೪೭) ; ನಿರ್ಮಳಫಳಕಂ ನೇರಿರ್ದೊಡಂತದು ತೆಗೆದದಱೊಳ್ ಬಳಪದಿನಾಗಳ್ ಬರೆದೆಂ ಲಳನೆಯ ರೂಪಾತಿಶಯಮಂ (ದಶಕು. ೬-೩೦೦); ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ (ಕುಮ್ಮಾಅ. ೦-೦೫). **ಬಳಹ** : ೧. "ಶ್ವೇತಧಾತುಃ—ಬಳಹ" (ಓಷಧಿ. ೦೬೦) ; ಕಾಕಿಣೀ ಹಿರಣ್ಯಯೋರ್ವಾ = ಬಳಹಮುಂ ಪೊನ್ನುಮೆಂಬವಱ ಮುಟ್ಟುಹಂ ಸೂರುಳ್ (ಶಿಶಿವಾ. ೨೬-೩೨). ೨. ಸ್ಮರತಾಪದಿಂ ಬೆದಱ . . . ಧಾತ್ರಿಯೊಳ್ಬಳಹದಿಂ ಬರೆದಂ ಸತಿರೂಪನೊಪ್ಪುವಂತಿರೆ (ರರ್ಮಪ. ೬-೨೨).

ಬಳಪದ ಕಲ್ಲು = ಬರೆಯುವ ಸಾಧನ, ಒಡವೆ, ಮರಿಗೆ ಮುಂತಾದುವುಗಳನ್ನು ಮಾಡಲು ಉಪಯೋಗಿಸುವ ಮೃದುವಾದ ಬಿಳಿಕಲ್ಲು : ನೀಲಗಿರಿಯಿಂದ ತರಿಸಿದ ಹಸರುಕಲ್ಲು, ಅಮೃತಶಿಲೆ, ಬಳಪದ ಕಲ್ಲು . . . ಬ್ರೆಕ್ಕಿಯ ಇತ್ಯಾದಿ ಶಿಲೆಗಳಿಂದ ಆಭರಣಗಳನ್ನು ತಯಾರಿಸುತ್ತಿದ್ದರು (ಭಾರದ. ೦೪) ; ಈ ಬಳಪದ ಕಲ್ಲಿನ ಮುಚ್ಚಳದ ಮೇಲಿನ . . . ಲಿಪಿಯಿಂದ ಹೊರಡುವ ಅರ್ಥದ ವಿಚಾರದಲ್ಲೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ (ಡ್ರಾವಿ. ೫೦). ಬಳಪದೋಲೆ, ಬಳಹದ ಓಲೆ, ಬಳಹದೋಲೆ = ಬಳಪದ ಕಲ್ಲಿನಿಂದ ಮಾಡಿದ ಕರ್ಣಾಭರಣ : ಜಾದಿಯಂ ಮುಡಿದು ಮುತ್ತಂ ತೊಟ್ಟು ಬೆಳ್ಮಡಿಯನುಟ್ಟು ಬಳಪದೋಲೆಯನಿಟ್ಟು . . . ಕೈಗೈಯೆ (ಲೀಶಾವ. ೭-೫೩ ವ); ಬೆತ್ತದ ಕಂಕಣಂ ಬಳಪದೋಲೆ ಕುರುಳ್ಗಳವಟ್ಟ ಕಾಡ ಹೂ. . .ಮನಂಗೊಳೆ ಪುಳಿಂದಿಯರೊಪ್ಪುವರಾ ಮಹಾದ್ರಿಯೊಳ್ (ದಶಕು. ೪-೨೭) ; ಹಳದಿಯ ಸೀರೆಯನುಟ್ಟು ಬಳಹದ ಓಲೆ ಕಿವಿಯಲ್ಲಿ ಇಕ್ಕಿ (ಸರ್ವವ. ೬೭-೪೬೪); ಕಿವಿಯಲಿಕ್ಕಿದ ಬಳಹದೋಲೆ ಹಳದಿಯ ಉಡುಗೆ (ಬಸರ. ೯-೧೦೦).

[ದೇ.॥ ತಮಿ. ಪಲಪ್ಪಮ್, ವಲಪ್ಪಮ್; ಮಲ. ವಲಪ್ಪಮ್ ; ತುಳು. ಬಳಪು, ಬಲವು; ತೆಲು. ಬಲಪ, ಬಲ್ಪ]

ಬಳಪಂಗೊಳ್ (ಕ್ರಿ). ಲೇಖನದ ಸಾಧನವನ್ನು ಹಿಡಿದು ಕಾವ್ಯ ಮುಂತಾದುವನ್ನು ರಚಿಸು : ಸವಣಂ ಬಳಪಂಗೊಳೆ ಗಾಂಡಿವಿ ಬಿಲ್ಗೊಳೆ . . . ಕೌರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ (ಶಮದ. ೦೬೭ ಪ್ರಯೋ). [ಬಳಪ + ಕೊಳ್$_1$]

ಬಳಪಂದೊಡೆ (ಕ್ರಿ). ಬಳಪದ ಕಲ್ಲಿನಿಂದ ಬಿಳಿಯ ಬಣ್ಣವನ್ನು ಲೇಪಿಸು : ಕತ್ತರಿಸಿದ ಗಡ್ಡಮಿಟ್ಟ ತಿಲಕಂ ಬಳಪಂದೊಡೆದೋಲೆ ದೇಸೆಯಂತಿರೆ ಸುಲಿಪಲ್ ತಳತ್ತಳಿಸಿ ತಂಬುಲಮಂ ಪೊಳಕುತ್ತೆ (ಅರ್ಧಪೇ. ೫-೩೦). [ಬಳಪ + ತೊಡೆ$_1$]

ಬಳಬಳ$_1$ (ನಾ). (ದ್ರವಪದಾರ್ಥವು ಮೇಲಿನಿಂದ ಕೆಳಕ್ಕೆ ಬೀಳುವುದನ್ನು ಸೂಚಿಸುವ) ಒಂದಂ ಅನುಕರಣಶಬ್ದ : 'ಬಳಬಳನೆ' ಪರಾ.

ಬಳಬಳ$_2$ (ಅ). ಅಧಿಕವಾಗಿ; ಅತಿಶಯವಾಗಿ : ಪರಿಪಕ್ವಫಳಪ್ರಚಾರದಿಂ ಬಳಬಳ ಬಳ್ಕುವಾಂಬ್ರವನದಿನ್ದೆ . . . ಈಕ್ಷಿಪರ್ಗ್ಗತಿಮನೋಹರವಲ್ತೆ (ಸೌಇಇ. IX-i, ೨೯೭-೦೫; 1177).

ಬಳಬಳನೆ (ಅ). ಒಂದು ಅನುಕರಣಾವ್ಯಯ: ಸಂದುಕಳಾಸಂಗಳು ತಪ್ಪಿ ಅಸ್ಥಿಗಳು ಬಳಬಳನುದುರಲು (ಕನ್ನಪ. ಕ. ೬೯-೦೯೦); ನೃಪನರಮನೆಗೆ ಬಳಬಳನಾಗಳೆ ಸ್ವರ್ಗಲೋಕದ ಹೂಮಳೆಗಱೆದುದು ಚೆಲ್ಲಿದಂತೆ (ಭರತ. ೩-೦೦೬). [ಬಳಬಳ$_1$ + — ಅನೆ$_1$]

ಬಳಬಳಿಕೆ, ಬಳಬಳಿಕ್ಕೆ (ನಾ). [ನಾಟ್ಯ] ಒಂದು ಬಗೆಯ ನೃತ್ಯಭಂಗಿ : ಆ ನಿಲವಿನ ನಿರ್ವಾಹಮಂ ಗತಿಯ ಗೌರವಮಂ ಚಾರಿಗಳ ಚೆಂದಮಂ . . . ಬಳಬಳಿಕೆಯ ಚಂಚುರತೆಯಂ . . . ತೋಱುತ್ತುಮಿರೆ (ಕುಸುಮಾ. ೭-೬೩ ವ). **ಬಳಬಳಿಕ್ಕೆ** : ಚಾಳೆಯದೋಜೆಗಳ್ ಬಳಬಳಿಕ್ಕೆಗಳಾಂತಿರೆ. . . ಸಂದುದು ರಂಭೆಯ ಲಾಸ್ಯವಿಭ್ರಮಂ (ಅನಂಪು. ೪-೯೦). [?]

ಬಳಬಳಿಕ್ಕೆ 'ಬಳಬಳಿಕೆ' ನೋ.

ಬಳಮದ್ದು 'ಬಲಮರ್ದು' ನೋ.

ಬಳಮರ್ದಿಕ್ಕು (ಕ್ರಿ). ಉಗ್ರವಾದ ಮಾದಕದ್ರವ್ಯವನ್ನು ಕುಡಿಸು : ತದ್ದಮಿತಾರಿಯ ಬಲದ ತೋಳ್ಪಱಿದು ಬೀ[ಟ್ವಂ]ತಾತಂ ಬೀ[ಟ್ವು]ದುಮಂಬರಚರಶ್ರೀಕಾಂತೆಗೆ ಬಳಮರ್ದಿಕ್ಕುವಂತಾತನಿಕ್ಕುವುದಂ ಕಂಡು (ಶಾಂತಿಪು. ೪-೨೩ ವ). [ಬಳಮರ್ದು (< ಬಲಮರ್ದು) + ಇಕ್ಕು]

ಬಳಮರ್ದು 'ಬಲಮರ್ದು' ನೋ.

ಬಳಮರ್ದುಕಾಱ (ನಾ). ಉಗ್ರವಾದ ಮಾದಕದ್ರವ್ಯವನ್ನು ತಯಾರಿಸುವವನು : ಕಾಮದೇವನೆಂಬ ಬಳಮರ್ದುಕಾಱನ ಮಾಡಿದ ಮರ್ದಿನಂತೆ ಬಳೆದು ದಳಂಬಡೆದು (ಪಂಪಭಾ. ೯-೬೭ ಪ).
[ಬಳಮರ್ದು (< ಬಲಮರ್ದು) + — ಕಾಱ]

ಬಳಯಿಸು 'ಬಳೆಯಿಸು' ನೋ.

ಬಳಯುತ 'ಬಲಯಂತ' ನೋ.

ಬಳರಿ 'ಭಟಾರಿ' ನೋ.

ಬಳಲ್ 'ಬಟಿಲ್' ನೋ.

ಬಳಲಕೊಪ್ಪ (ನಾ). ಒಂದು ಊರಿನ ಹೆಸರು : ಸಂನಕೊಪ್ಪದ ಬಸ್ತಿಯಿನ್ದಾ ಬಡಗಲು ಬಳಲಕೊಪ್ಪದ ಕೆಱೆ × × ಕಲು ಸರುಹ ಸಹ ಬಿಟ್ಟರು (ಎಇ. VII, ಶಿಪಮೂ. ೦೦೯-೩೦; 950 ?). [? + ಕೊಪ್ಪ]

ಬಳಲಿಕೆ 'ಬಟಿಲ್ಕೆ' ನೋ.

ಬಳಲಿಸು 'ಬಟಿಲಿಸು' ನೋ.

ಬಳಲು 'ಬಟಿಲ್' ನೋ.

ಬಳಲುಗಚ್ಚೆ (ನಾ). ಜೋತಾಡುವಂತೆ ಕಟ್ಟಿದ ಕಚ್ಚೆ : ಉಟ್ಟ ಬಾಸರ ಬಳಲುಗಚ್ಚೆಯನಟ್ಟಹಾಸದ ಜನದ ನಗೆಗಳ ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ (ಶಾಬ್ಮಾಅ. ೦೩-೦೩); ಉಟ್ಟ ಧೋತ್ರದ ಬಳಲುಗಚ್ಚೆಯ [ಶಾಕಾಂ. ತಳರುಗಾಸೆಯ] ಸೃಷ್ಟಿಗಚ್ಚರಿರೂಪಿನಲಿ . . . ಬಂದನಾ ಋತುವರ್ಣನೋಲಗಕೆ (ಪಶಕ. ೯-೨೯). [ಬಳಲು (< ಬಟಿಲ್) + ಕಚ್ಚೆ]

ಬಳಲುಗೈ (ನಾ). ತೂಗಾಡುವ ಕೈ : ಮಣಿಮಯಭದ್ರಭವನಾವಳಿಗಳ ನಿಲಜನ ಬಳಲುಗೈಸೋಂಕಿನಲಿ ನೆಲಕಪ್ಪಳಿಸಿ ಬಿದ್ದವು (ಹರಿಹಾ. ೩-೬-೦೭).
[ಬಳಲು (<ಬಟಿಲ್) + ಕೈ$_2$ (< ಕೆಯ್$_2$)]

ಬಳಲುಗೊರಳು (ನಾ). ಜೋತುಬಿದ್ದ ಕೊರಳು,— ಕುತ್ತಿಗೆ : ಬಳಲುಗೊರಳಲಿ ಬೀಳುತಿರ್ದವು ಬೆಳುವ ಗಿಳಿ ಕಬ್ಬಕ್ಕಿ . . . ಕೊಂಚೆಗಳವನಿಯಗಲದಲಿ (ಹರಿಹಾ. ೩-೩-೦೬).
[ಬಳಲು (<ಬಟಿಲ್) + ಕೊರಳು (< ಕೊರಲ್)]

ಬಳಲುಡಿಗೆ (ನಾ). ಜೋಲುವ ಉಡಿಗೆ; ನೇತಾಡುವ ಬಟ್ಟೆ : ಆ ಸಮಯದಲಿ ಬಂದನೊಬ್ಬನು ಭೂಸುರನು . . . ಬಾಸರದ ಬಳಲುಡಿಗೆ ಮಟ್ಟೆಯ ಧೂಸರದ ಮೈದೊಡಿಗೆ ಮೆಱೆಯೆ (ಶಾಬ್ಮಾಅ. ೨೦-೦೩).
[ಬಳಲು (< ಬಟಿಲ್) + ಉಡಿಗೆ (< ಉಡುಗೆ)]

ಬಳಲುನೋಟ (ನಾ). ದಣಿದ ದೃಷ್ಟಿ; ಆಯಾಸಗೊಂಡ ನೋಟ : ಬಳಲುನೋಟಗಳೋರೆನೋಟವಾಗವೆಂದೊಳುನೋಟವರಸಿ ಪಾಡಿದಳು (ಪರಕ. ೦೦-೩೦). [ಬಳಲು (<ಬಟಿಲ್) + ನೋಟ]

ಬಳಲುಮುಡಿ 'ಬಟಿಲ್ಮುಡಿ' ನೋ.

ಬಳಲುಹೆಜ್ಜೆ (ನಾ). ದಣಿದ ಹೆಜ್ಜೆ; ಸೋತ ಹೆಜ್ಜೆ : ನೀಲಿಕನ್ನಡಕದ ಮುದುಕ ಬಳಲುಹೆಜ್ಜೆ ಹಾಕುತ್ತ ಹೊರಗೆ ನಡೆದನು (ಪುಸರು. ೨೨೯).
[ಬಳಲು (< ಬಟಿಲ್) + ಹೆಜ್ಜೆ$_1$ (< ಪಜ್ಜೆ)]

ಬಳಲೊಡಲ್ (ನಾ). ತೆಳ್ಳಗಿರುವ ಶರೀರ; ಕೃಶೋದರ : ಬಳಲೊಡಲ ಬೆಡಂಗಿನ ಬಾಲೆಯೊರ್ವಳ್ . . . ಬರುತುಮಿರ್ದಳ್ (ಶಾಕುಸ್ತ. ೯೬-೨೯).
[ಬಳಲ್ (< ಬಟಿಲ್) + ಒಡಲ್]

ಬಳಲ್ಕೆ 'ಬಟಿಲ್ಕೆ' ನೋ.

ಬಳಲ್ಕೆಗಳೆ 'ಬಟಿಲ್ಕೆಗಳೆ' ನೋ.

ಬಳಲ್ಗಾಮಿಲೆ (ನಾ). ಹೆಚ್ಚು ಆಯಾಸವನ್ನುಂಟುಮಾಡುವ ಒಂದು ಬಗೆಯ ಕಾಮಾಲೆರೋಗ : ಮೂಕತ್ವ, ಕಾಮಾಲೆ, ಊದುಗಾಮಿಲೆ, ಬಳಲ್ಗಾಮಿಲೆ, ಕುಂಭಕಾಮಿಲೆ (ಕುಳಸ. ೩೨೭).
[ಬಳಲ್ (<ಬಟಿಲ್) + ಕಾಮಿಲೆ (< ಕಾಮಾಲೆ)]

ಬಳಲ್ಗಿವಿ (ನಾ). ಜೋತು ಬಿದ್ದ ಕಿವಿ : ಪಡೆ ಗೋಳಿಟ್ಟುದಾನೆಕುದುರೆಗಳೊರೆವ ಕಂಬನಿ ಬಳಲ್ಗಿವಿಗಳಿಂ ಜೋಲ್ದವು (ಕೃಷ್ಣಾಬಾ. ೦೩-೩೦).
[ಬಳಲ್ (< ಬಟಿಲ್) + ಕಿವಿ$_2$]

ಬಳಲ್ಚು (ಕ್ರಿ). (ದ್ರವ ಮುಂತಾದುವನ್ನು) ಬಳಿದುಕೊಳ್ಳು; ಬಳಿದು ಕೂಡಿಸು; ಬಾಚು: ಮಿಸುಪ ಮಿಂಚಿನೊಳಗೆ ಸುಳಿವ ಬಣ್ಣಮಂ ಬಳಲ್ಚಿ ಕೊಂಡು ಚಿತ್ರಕಾಶರಾಶಿಯೆನಿಪ . . . ವಿಭೂತಿ (ಹರಿಹ. ೯-೩); ಎಳವಳಿಕೆ ಬೆಳ್ಳಿಗಂ ಬಳಲ್ಚಿ ಶಶಿರುಚಿಯೊಳೆರಕವಿಟ್ಟಂದದಿನೇಂ ತೊಳಗಿದುದೊ . . . ಸದ್ಯೋಜಾತವದನಂ (ಪಪಕಂ. ೩-೩). [ಬಳಲ್ ? + — ಚ್ಚು$_1$]

ಬಳಲ್ದುಱುಬು (ನಾ). ಜೋತಾಡುವ ಮುಡಿ : ಪೂಗಳಂ ಮುಡಿಯದ ಬಳಲ್ದುಱುಬು . . . ಸಿಂಗರಕೆ ಮಿಗಿಲಾಯ್ತವನಿಸುತೆಗೆ ಋತುಮತಿಯಾಗಲು (ಕೃಷ್ಣಾಬಾ. ೦೮-೨೫).
[ಬಳಲ್ (< ಬಟಿಲ್) + ತುಱುಬ್ಬು$_2$ (< ತುಱುಂಬ್ಬು$_2$)]

ಬಳಲ್ನಡು (ನಾ). ಸಣ್ಣ ಸೊಂಟ; ಬಡನಡು : ಬಿಣ್ದೊಡೆಯ ಬಡವಾಸೆಯ ಬಳಲ್ನಡುವಿನ . . . ಬೆಡಂಗಿನ ಬಾಲೆಯೊರ್ವಳ್ . . . ಬರುತುಮಿರ್ದಳ್ (ರಾಮಾಕ್ಷ. ೯೬-೨೫). [ಬಳಲ್ (< ಬಟಿಲ್) + ನಡು$_2$]

ಬಳಲ್ನುಡಿ (ನಾ). (ಆಲಂ) ನೋವಿನಿಂದ ಕೂಡಿದ ಮಾತು : ಕೊಟ್ಟ ಬಳಿಕಲ್ಲದೆ ಮಾತಾಡೆನೆಂಬ ಬಳಲ್ನು [ಶಾಕಾಂ. ಬಳಲುನು, ಅಳಲ್ನು, ನಳಲನು]ಡಿಯಂ ಕೇಳ್ದು ಶಿವಂ ಕೌತುಕಂಬಟ್ಟು (ಪಂಬಿರ. ೦೨-೬೮).
[ಬಳಲ್ (< ಬಟಿಲ್) + ನುಡಿ$_2$]

ಬಳಲ್ಮಿಡಿ (ನಾ). ತೂಗಾಡುವ ಹೀಚು ಕಾಯಿ : ಬಳಲ್ಮಿಡಿಗಳಲ್ಲಿ ಬಲ್ಮಿಡಿಕಾಯ್ಗಳ್ . . . ತನಿವಣ್ಣೊಳಮ್ಮಾವೆಸದುದು (ಪಂಕೃಪು. ೨-೩-೦೫).
[ಬಳಲ್ (< ಬಟಿಲ್) + ಮಿಡಿ$_4$]

ಬಳಲ್ಮುಡಿ 'ಬಟಿಲ್ಮುಡಿ' ನೋ.

ಬಳಲ್ಮೊಗ (ನಾ). ಆಯಾಸಗೊಂಡಂತಿರುವ ಮುಖ : ಎಸವ ಬಳಲ್ಮೊಗಮುಷ್ಣಮನುಸಿರ್ವುಸಿರನುರಾಗವೇಱುವಕ್ಷಿದ್ವಿತಯಂ . . . ತನುಮನೋಹರಂ ಮಾನಿನಿಯಾ (ಗಿರಿಕ. ೨-೨೦).
[ಬಳಲ್ (< ಬಟಿಲ್) + ಮೊಗ]

ಬಳವಂತ 'ಬಲವಂತ' ನೋ.

ಬಳವಡಿಕೆ (ನಾ). ಒಂದು ಬಗೆಯ ಸಸ್ಯ : ಅಡಕುಪುಟ್ಟನ ಗಿಡ, ಬಳವಡಿಕೆ . . . ರಕ್ತಪುನರ್ನವ (ಪ್ರಾಕಿಗಿ. ೦೩-೨೩೦). [?]

ಬಳವತ್ಸೈನ್ಯ 'ಬಲವತ್ಸೈನ್ಯ' ನೋ.

ಬಳವದ್ವೈರಿ 'ಬಲವದ್ವೈರಿ' ನೋ.

ಬಳವಳಿಸು (ಕ್ರಿ). (?) : ಜಳಲವಮಿರ್ದ ಬೆಂಚೆಗೆ ತುಷಾತುರದಿಂ ಪರಿತಂದು ತೀರದೊಳ್ ಪಳಿಲನೆ ಕಾಲನೂಱೆ ಮೊಗಮಂ ನೆಱೆ ನೀಡಿ ತದೀಯ ಪಂಕವಾಷ್ಪಾಳದ ಮಹೋಷ್ಣಮೋಷ್ಮಪುಟಮಂ ಸುಡೆ ಸಾರ್ದು ಬಿದರ್ಚಿ ಮೋಱೆಯಂ ಬಳವಳಿಸುತ್ತುಮಿರ್ದುದು ಸಮಂತು ಮೃಗೌಘಮದಾ ನಿದಾಘದೊಳ್ (ಶುಸುಮಾ. ೬-೨೩೬ ; ಶಾಂತೀಕ್ಷ. ೦೨-೨೩ ನೋ.). 'ಅಳವಟಿಸಂ' ಹೋ. [ಪ ಇದು 'ಕಳವಳಿಸು' ಎಂಬುದರ ಅಪಲಿಖಿತವಿರಬಹುದೆ ?]

ಬಳವಿ (ನಾ). ೧. ಬೆಳವಣಿಗೆ ; ವೃದ್ಧಿ : ತಿಂಗಳ ಬಳವಿಯನುಚ್ಚತರಂಗಾಂಬುಧಿ ಬಳೆವ ತೆಱದಿನನುದಿನದಿಂದಂ ತಿಂಗಳ ಬಳವಿಯನಂತಾ ಶೃಂಗಾರಾಂಬುಧಿಗೆ ಗರ್ಭವೆಂಂ ಬಳೆದತ್ತೊ (ಸುಳುಮಾ. ೦೦-೦೩) ; ತನುಜನ ಬಳವಿಯನೆ ನೋಡಿ ಜನಕಂ ನಲಿದಂ (ಶಪುರ. ೨೦೬ ಪ್ರಯೋ) ; ಮಾಡಿದುದು ಚಿಂತಾಕ್ರಾಂತತತ್ತಯನೆಮಗೀ ಮಗಳ ಬಳವಿ (ಪರ್ವಪು. ೯-೩೯). ೨. ವ್ಯಾಪ್ತಿ; ಹರಪು : ಕಮ್ಮನೂರ ಬಳವಿಯೊಳು ಅಯ್ಗಣ್ಡುಗಂ ಬೆಟ್ಟಲೆ (ಎಇ. XIV, ಎಡಕೊ. ೯೬-೦೦ ; 1079) ; ಬೆಳತಿಗೆಗಣ್ಣ ಬಳವಿಗಿದುವೆ ಗುಱು

ಯೆಂದು ಕುಱುಪನಿಕ್ಕುವಂತೆ ಕೊನೆಗೊಡಂಕೆಯೊಳ್ ತೋರಮುತ್ತಿನ ಮುಗುಳಂ ತೆಗಳ್ಚಿಯುಂ (ಸಂಪ್ರಕ್ರ. ೬-೬೩ ಪ). ೩. ಆಕ್ರಮಣ ; ಮುತ್ತಿಗೆ : ಜಾನ್‌ಕಸ್ತೂರಿಯು ಕೊಡಗುಜನರ ಬಳವಿಗೆ ಸಿಕ್ಕಿ ಜಗಳವಾಡಿ ಬಹಳ ಜನಕ್ಕೆ ಜಾಯ ಜಖಮಿ ಆದ್ದರಿಂದ ಲಾಚಾರಾಗಿ (ರಾಜೇಂದ್ರ. ೯೦).

[ಬಳ್ಳ$_1$ + — ವಿ$_1$]

ಬಳವಿಗೆ (ನಾ). ೧. ಬೆಳವಣಿಗೆ ; ವೃದ್ಧಿ : "ಸಚರ ನರರಲ್ಲಿ ಬಳೆದಂ ಬಳವಿ ಬಳವಿಗೆಯೆ ರುಚಿರಮಕ್ಕುಂ" (ಸಂಜೀವ. ೨೬) ; ಮಕ್ಕಳಂ ಹಡೆದವರ ಕೂಸಾಟಮವರ ಬಳವಿಗೆಯವರ ಹರೆಯದ ವಿಳಾಸಮುಂ ನೋಡಲಿವು ಮೂಱು ಮುನ್ನಂ ನೋನದವರ್ಗೆಂತು ಸಂಭವಿಪುದು (ಸಮ್ಯಕ್ತ. ೩-೦೦). ೨. ಅಭಿವೃದ್ಧಿ ; ಏಳಿಗೆ ; ಶ್ರೇಯಸ್ಸು : ಭಕ್ತನ ಬ[ಶಾಕಾಂ. ಬೆ]ಳವಿಗೆಯ ಮಾಡಿದನುಘೇಯೆಂದುದು ಸುರಸ್ತೋಮ (ಕುಸ್ಯಾಂ. ೬-೦೯). ೩. ಅತಿಶಯ ; ಅಧಿಕ್ಯ ; ಹೆಚ್ಚಳ : ಇಳೆಯ ಸುಧರ್ಮಮಾರ್ಗದಲ್ಲಿ ನಲವಿಂದ ಪಾಲಿಸುತಿರ್ದರು ಹರಿಭಕ್ತಿ ಬಳವಿಗೆಯೊಳು ನಲಿದಾಗ (ಕಂಪಂ. ೩-೦೩). [ಬಳವಿ + — ಗೆ]

ಬಳವಿವಡೆ (ಕ್ರಿ). ಹೆಚ್ಚಳವನ್ನು ಹೊಂದು ; ಅಧಿಕವಾಗು : ಕೆಚ್ಚು ವಿರ್ದ ಮಚ್ಚುಮನುರ್ಚಿಪೋದ ಮೇಳಮುಮನಳವಿಗಱಿದಲಂಪುಮಂ ಬಳವಿವಡೆದಟ್ಕಱುಮನೋರೋರ್ವರೊಳ್ ನೆಱೆದು (ಅಂಪು. ೪-೩೨ ಪ).

[ಬಳವಿ + ಪಡೆ$_1$]

ಬಳವೈರಿ 'ಬಲವೈರಿ' ನೋ.

ಬಳಸಿಗ (ನಾ). ಕವಚವನ್ನು ತೊಟ್ಟವನು : "ಬಳಸಿಗಂ — ಕುಪ್ಪಸಿಗಂ" (ಕಮದ. ಪ. ೩೬ ಅಡಿ) ; ಬಳಸಿಗಂ ಮೊಳೆ ತಾಳಂ . . . ಯಿಱುಕುಳಿ ಯಿವಾದಿಯಾಗಱಿ ಕುಳನಂ (ಕಮದ. ೨೬). [ಬಳಸು$_3$ + — ಇಗ]

ಬಳಸು$_1$ (ಕ್ರಿ). ೧. ಸುತ್ತುವರಿ ; ಸುತ್ತುಗಟ್ಟು : ಶ್ರೀ ತಳ್ಳುರದೊಳ್ ಕೌಸ್ತುಭಜಾತದ್ಯುತಿ ಬಳಸಿ ಕಾಂಡಪಟದಂತಿರೆ (ಕಪಿಲಾ. ೦-೦) ; ಪಲವು ವಿಮಾನಂಗಳಂ ವಿಗುರ್ವಿಸಿ ಕ್ಷಪಣಕನ ವಿಮಾನದ ಮುಂದೆ ಬಳಸಿಯುಂ ಪೋಪಂತು ಮಾಡಿಯಾಕಾಶಮೆಲ್ಲಮಂ ವಿಮಾನಮಯಮಾಗೆ ವಿಗುರ್ವಿಸಿ (ವಡ್ಡಾರಾ. ೯೯-೬) ; ನೆರೆದರಸುಮಕ್ಕಳ ನಿಡುಗಣ್ಗಳ ಬಳಗಮೆಱಗೆ ತನ್ನಯ ಮೆಯ್ಯೊಳ್ ನಡೆ ಬಳಸಿ ಪಲರುಮಂಬಂ ತುಡೆ ನಡುವಿರ್ದೊಂದು ಪುಲ್ಲೆಯಿರ್ಪಂತಿರ್ದಳ್ (ಪಂಪಭಾ. ೩-೩೦) ; ಆಗಳಾ ಕೊಳನ ಬಳಸಿ ಬಂದು ನಿರ್ಭರಮಾಗಿ ಬೊಬ್ಬಿಱಿದಬ್ಬರಂಗೆಯ್ದು (ಗದಾಯು. ೬-೦ ಪ). ೨. ಸುತ್ತುಹಾಕು ; ಅಲೆ : "ಬಳಸು — ಭ್ರಮಣ, ಕಂಚುಕಾಂಗಯೋಃ (ಯುದ್ಧಕವಚ)" (ಕಮಧಾ) ; ಅವರೋದುವ ಕ್ಷೇತ್ರದೆ ಬಳಸಿಯುಂ ನೋಡಿಸುವುದೆಂದು ಪೇಱ್ದೊಡೆ (ವಡ್ಡಾರಾ. ೦೭೬-೨೨). ೩. ತಿರುಗು ; ಹೊರಳು : ಹೊಳೆಯ ಸುಳಿಯಲ್ಲಿ ಸಿಕ್ಕಿದ ಹುಲ್ಲು ಬಳಸುವದಲ್ಲದೆ ಅಳಿವುದಿಲ್ಲ ಮುಳುಗುವುದಿಲ್ಲ (ಮೋಳಿಮಾ. ೦೩೦-೩೦೬). ೪. ಸುತ್ತಿ ಹೇಳು : ಮುನ್ನಮೆ ಮುಟ್ಟಿ ನುಡಿಯದೆ. ಪೊಱಪೊಱಗನೆ ಬಳಸಿ ಕನ್ನೆಯ ಶಂಕೆಯಂ ಕಿಡಿಸಿ ಮತ್ತಮಿಂತೆಂದಳ್ (ಪಂಪಭಾ. ೯-೬೩ ಪ).

ಬಳಸುಬಳಸು, ಬಳಬಳಸು (ದ್ವಿರುಕ್ತಿ) : ಹಲವು ಸೂಳ್ ಕೈ ಮುಟ್ಟಿ ನಮಿಸುತ ಬಳಸಿಬಳಸಿ ಬಳಿಕೆ ಹೊಡವಡುತ (ಬಸಪು. ೩೮-೨೩) ; ಅನಿರೀಕ್ಷಿತವಾಗಿ ಅನೇಕಾನೇಕ ವಿಷಯಗಳು ಅವನ ಮನಸ್ಸನ್ನು ಬಳಬಳಸಿ ಹಾದು ಹೋದುವು (ಪಕಿಶಾ. ೦೩೦). ಬಳಸಿ ಹೇಳು = ಸುತ್ತಿ ಹೇಳು; ನೇರವಾಗಿ ಹೇಳದಿರು : ಹಾಗ್ಯಾಕೆ ಬಳಸಿ ಹೇಳ್ತೀಯೋ ಮುನಿಯ ? (ವಡದಾ. II. ೧೦೩). [ಬಳ್ಳೆ$_2$ + — ಸು$_1$./ತುಳು. ಬಲೆಪು. ಬಳೆಪು]

ಬಳಸು$_2$ 'ಬಱಸು$_1$' ನೋ.

ಬಳಸು$_3$ (ನಾ). ೧. ಆವರಿಸುವಿಕೆ ; ಮುತ್ತುವುದು ; ಸುತ್ತುವರಿಯುವಿಕೆ : ಅಶ್ವತ್ಥಾಮಂ ಭೀಮೋದ್ದಾಮಶ್ಯಾಮಜಳಧರವಿಮುಕ್ತ ಶರಾವಳಿಯ ಬಳಸಂ ಕಂಡು ಮುಗುಳ್ನಗೆ ನಕ್ಕು (ಪಂಪಭಾ. ೦೨-೬೬ ಪ) ; ಬೆಳಗುಗಳ ಬಳೆದ ಬಳಗದ ಬಳಸುಗಳೊಳಗೊಳಗೆ ತೊಳಗಿ ಪೊಳೆ ಪೊಳೆದೊಳಗುಚ್ಚಳಿಸಿ ...ತಳರ್ದತ್ತಾಗಳ್ (ಕಾಪ್ಯಾಪ. ೨೩). ೨. ಸುತ್ತುವಿಕೆ ; ಭ್ರಮಣ : ಚಾಪಂ ಕುಟಿಲತೆಗೆಟ್ಟು ಚಕ್ರವಳಯದ ಬಳಸಂ ಮಾಂಕರಿಸಿ ಬಿಲ್ಲ ಕೊಪ್ಪು ಕೊಡಂಕೆಯ ಕೊಪ್ಪಿನವೊಲಮರೆ (ಶಾಂತಿಪು. ೯-೮೩). ೩. ಸುತ್ತುಗಟ್ಟುವಿಕೆ: ಎಳವಳ್ಳಿಯ ಬಳಸಿಂಗೊಳಗಾದಸುಗೆಯ ಚೊಂಪಂಗಳೊಳ್ (ಕಬ್ಬಿಕಾ. ೦೨೫) ; ದಂತಪಂಕ್ತಿಯ ನಡುವೆ ಎಂತಿಪ್ಪುದದು ಜಿಹ್ವೆ ಅಂತು ದುರ್ಜನರ ಬಳಸಿನಲಿ ಸಜ್ಜನನು ನಿಂತಿಹನು (ಸರ್ವಜ್ಞ. ೬೨೦). ೪. ಸುತ್ತಿ ಕಟ್ಟುವ ಸಾಧನ : ಎಂಟುಂ ದೆಸೆಯ ದೇವತೆಗಳೆ ಗೊಳಸಾಗಿಯು ವಾಸುಗೆಯೆ ಬಳಸಾಗೆಯುಂ (ಕಇ. IV. ೩೦-೦೦ ; 1000 ?) ; ಲೋಕಪಾಳಕರೇ ಗೊಂಟಾಗೆ ವಾಸುಗಿಯೇ ಬಳಸಾಗೆ ಫಣಿಕುಳಂಗಳೇ ದಾರವಾಗಿ (ಎಕ. VII. ಶಿಕಾರಿ. ೦೦೬-೩೦ ; 1054). ೫. ಸುತ್ತುಮುತ್ತು ; ಆಸುಪಾಸಂ : ಮಾಧವಿಯ ಮಂಡಪದ ಬಳಸಿನೊಳಗೆ ಪಳುಕಿನ ಕುಂಭದೊಳಂ . . . ಕಪ್ಪುರದ ಬೀಯದ ಬಾಯಿನದ ವಿಲಾಸಮಚ್ಚರಿಯಾಗೆ (ಅಪಂಪು. ೬-೩ ಪ) ; ಸಡಗರದಿ ಮಹಿಳಾನಿಕರ ಬಂದುದು ಸತಿಯ ಬಳಸಿನಲಿ (ಜೀವಂಪ. ೬-೩೦). ೬. ಆವರ್ತ ; ಸುತ್ತು : 'ಮೂವಳಸು' ಪರಾ. ೭. ನೇರವಾಗಿ ಹೇಳದಿರುವಿಕೆ ; ಸಂತ್ತು ಮಾತು : ನೇರವಲ್ಲದ ಮಾತು : ಬಳಸಿನೊಳೇಂ ತಿಂಬುದು ಮಾತುಳುಂಗಪತ್ರಪ್ರಯುಕ್ತಮಧುವಂ ಬೇಗಂ ಕಳೆಗುಂ ಮಸಗಿದಪಾನಾನಿಳನಂ (ಲೋಕೋಪ. ೯-೦೯೬) ; ಎತ್ತುವುದೆ ಮಂತ್ರಮಿನ್ನಾ ಸುತ್ತುಂಬಳಸುಗಳ ನುಡಿಯವು (ಮಹಾವೀ. ೦೦-೬೬) ; ಸುತ್ತೇಕೆ ಬಳಸೇಕೆ ನೆಟ್ಟನೆ ಮಾತಾಡು (ಇಂಜಾಪ. ೨೩೯-೭೬). 'ಸುತ್ತುವಳಸು' ಪರಾ. ೮. (ಊಟ ಮೊದಲಾದ ವಿಷಯಗಳಲ್ಲಿ) ಸರದಿ ; ಸಲ ; ಬಾರಿ : ಅವರ ಮನೆಯ ಔತಣದಲ್ಲಿ ನಾಲ್ಕು ಬಳಸು ಬಡಿಸಿದರು (ರೂಢಿ). ೯. ಕವಚ ; ಚಿಲಖಿತ್ತು : "ಬಳಸು ಭ್ರಮಣ, ಕಂಚುಕಾಂಗಯೋಃ (ಯುದ್ಧಕವಚ)" (ಕಮಧಾ).

[< ಬಳಸು$_1$]

ಬಳಸು$_4$ 'ಬಱಸು$_2$' ನೋ.

ಬಳಸುಗ (ನಾ). ಸಂತ್ತಾಡುವವನು ; ತಿರಂಗುವವನಂ : "ವ್ರೀಣ, ಪ್ರಯಾಣಃ—ಈ ೨ ಬಳಸುಗಂ" (ಕಾಶಕ್ಯ. ೦೯೬). [ಬಳಸು$_1$ + — ಗ$_2$]

ಬಳಸುಗೆಯ್ಮೆ (ನಾ). ಸುತ್ತಿ, ಬಳಸಿ ಮಾಡುವ ಕೆಲಸ ; ನೇರವಾಗಿ ಮಾಡದ ಕಾರ್ಯ : ನಿನ್ನ ಸೇನೆಯನೆನಗೆ ತೋರ್ದು, ನಾನದಂ ದೊರೆಗೊರೆವ ಬಳಸುಗೆಯ್ಮೆಗೆ ಬರಿದೆ ದಣಿಯದಿರ್ (ಕ್ರೀಶಾಪಮಾ. ೬೦೭-೦೭೭).

[ಬಳಸು$_1$ + ಗೆಯ್ಮೆ (< ಕೈಮೆ$_1$)]

ಬಳಸುದಾರಿ (ನಾ). ಸುತ್ತಾದ ಹಾದಿ ; ಹತ್ತಿರವಲ್ಲದ ಮಾರ್ಗ ; ನೇರವಲ್ಲದ ದಾರಿ : ಬಳಸುದಾರಿಯಲಿ . . . ಮುಂಬರಿಯುತಿದೆ ರಾಯನ ಸವಾರಿ ! (ಪಿಜಿದ. ೯-೯) ; ದಿಮ್ಮಿಗಳನ್ನು ಅಲ್ಲಿಂದ ಸಾಗಿಸುವ . . . ಉದ್ದೇಶದಿಂದ ಬಳಸುದಾರಿಯನ್ನು ತುಳಿದಿದ್ದ (ಬಳಜೀ. ೯೯).

[ಬಳಸು$_1$ + ದಾರಿ]

ಬಳಸುದೊಂಗಲ್ (ನಾ). ಸುತ್ತಿರುವ ಕುಚ್ಚು, — ಗೊಂಡೆ : ದೇವಿಯರ್ಗೇಂ ಕೊಱತೆ ಪಾಂಡ್ಯಸತಿಯರ ತೊಂಡಲ್ದೀವಿದ ಘನರತ್ನಂಗಳ್ ಪಾವುಗೆಗಳ ಬಳಸುದೊಂಗಲೆಡೆಯೊಳ್ ತೋರ್ಕುಂ (ಜಿಕಪಿ. ೩-೩೬).

[ಬಳಸು$_1$ + ತೊಂಗಲ್]

ಬಳಹ 'ಬಳಪ' ನೋ.

ಬಳಹರಿ 'ಭಟಾರಿ' ನೋ.

ಬಳಾಕ 'ಬಲಾಕ' ನೋ.

ಬಳಾಕೆ 'ಬಲಾಕೆ' ನೋ.

ಬಳಾಢ್ಯ 'ಬಲಾಢ್ಯ' ನೋ.

ಬಳಾಧ್ಯಕ್ಷ 'ಬಲಾಧ್ಯಕ್ಷ' ನೋ.

ಬಳಾರ 'ಭಟಾರ' ನೋ.

ಬಳಾರಿ 'ಭಟಾರಿ' ನೋ.

ಬಳಾಹಕ 'ಬಲಾಹಕ' ನೋ.

ಬಳಾಹಿತ (ನಾ). ಇಂದ್ರ; ದೇವೇಂದ್ರ: ಬಳಾಹಿತಮುಖಾಮರನತೇ ಗಳಾನ್ವಿತಹಲಾಹಲಭಿಲೇಶಯ ಕಳೇವರವಿಳಾಸದೆ ಕಳಂಕರಹಿತೇ (ರಾಜಶೇ. ೧೦-೦೧೦). [ಸಂ. ಬಲಾಹಿತ]

ಬಳಿ$_1$ 'ಬಟ್ಟಿ$_1$' ನೋ.

ಬಳಿ$_2$ 'ಬಟ್ಟಿ$_3$' ನೋ.

ಬಳಿ$_3$ 'ಬಲಿ$_3$' ನೋ.

ಬಳಿಕ 'ಬಟ್ಟಿಕು' ನೋ.

ಬಳಿಕೆಜೆ (ನಾ). ಒಂದು ಊರಿನ ಹೆಸರು: ಚಿಕ್ಕೇಶ್ವರಕ್ಕೆ ಈಶಾನ್ಯದ ಪೊಳಿಯುಂ ಬಳಿಕೆಜೆಯ ಕೀಟೇರಿಯ ಬೇರುಂಗಾಲಂ ಒಕ್ಕಲೊಳೊನ್ದು ಪೊಜೆಯುಂ ಸಲ್ವದು (ಎಕ. III, ಸಂಖಸ. ೦೮೩-೦೦; 977).

[ಬಳಿ$_1$ + ಕೆಜೆ]

ಬಳಿಕೋಲು (ನಾ). ಬಿಲದೊಳಗೆ ಹೊಕ್ಕ ಪ್ರಾಣಿಗಳನ್ನು ಈಚೆಗೆ ಬರುವಂತೆ ಮಾಡಲು ಆ ಪ್ರಾಣಿಗಳು ಹೋದ ಕಡೆ ಹಾಕಿ ತಿವಿಯುವ ಕೋಲು: ಬಳಿಕೋಲು ಹಾಕಿ ನೋಡಿದಾಗ ಒಣೇಲಿ ಗೊತ್ತಾತು! (ಮಲಸು. ೭೬).

[ಬಳಿ$_2$ (<ಬಟ್ಟಿ$_3$) + ಕೋಲು$_1$ (< ಕೋಲ್$_1$)]

ಬಳಿಕ್ಕ 'ಬಟ್ಟಿಕಂ' ನೋ.

ಬಳಿಕ್ಕಂ 'ಬಟ್ಟಿಕಂ' ನೋ.

ಬಳಿಗಳುಹಿಸು (ಕ್ರಿ). ಊರಿಗೆ ಬಂದ ಆಪ್ತೇಷ್ಟರನ್ನು (ಊರಿನ ಹೊರಗಿನ ಜಲಾಶಯದ ವರೆಗೆ ಜೊತೆಯಲ್ಲಿ ಕರೆದುಕೊಂಡು ಹೋಗಿ) ಬೀಳ್ಕೊಡು: ಲಲಿತಲಶಾಂಗಿ ಶಶಿಪ್ರಭೆಯನು ಬಳಿಗಳುಹಿಸಿ ಜಯವರ್ಮನೃಪತಿ ಲಲನೆ ಜಯಶ್ರೀದೇವಿ ಸಹಿತ ತನ್ನ ಪೊಳಲ ಪೊಕ್ಕನು (ಸಂಪ್ರಸಾಂ. ೦೩-೬೫). [ಬಳಿ$_2$ (< ಬಟ್ಟಿ$_3$) + ಕಳುಹಿಸು]

ಬಳಿಗೆಲಸ (ನಾ). ಹತ್ತಿರವಿದ್ದು ಮಾಡುವ ಸೇವಾಕಾರ್ಯ; ಉಳಿಗ: "ಸೇವನಂ, ಸೇವನೀಯಂ, ಸೇವಿಃ, ಸೇವ್ಯಂ, ಸೈವ್ಯಂ — ಈ ೫ ಬಳಿಗೆಲಸಂ" (ಶಾಕಶ್ಯ. ೧೦೫); ಹಲವು ಸೂಳೋರಂತೆ ನುಬಿಯ ಬಳಿಗೆಲಸವ ಮಾಡಲಾಱದೆ (ಬಸಪು. ೦೬-೦೨); ಬಾರೈ ಬಳಿಗೆಲಸ ಕಿನ್ನಾರು ನೀನೆಮಗಲ್ಲದಾಪ್ತರಲಿ (ತೊರಾ. ೫-೩-೬).

[ಬಳಿ$_2$ (< ಬಟ್ಟಿ$_3$) + ಕೆಲಸ]

ಬಳಿಗೆಲಸಿ (ನಾ). ಹತ್ತಿರವಿದ್ದು ಸೇವೆ ಮಾಡುವ ವ್ಯಕ್ತಿ: ನಂಬಿಯ ಸಂಗಡಿಗನೋ . . . ಬಳಿಗೆಲಸಿಯೋ ಮಲ್ಲಿಕಾರ್ಜುನಪಂಡಿತರ ಮನೆಯ (ಬಸಪು. ೪೬-೩೬). [ಬಳಿಗೆಲಸ + — ಇ$_3$]

ಬಳಿಗೆಲಸಿಗ (ನಾ). = ಬಳಿಗೆಲಸಿ: "ವಾಸಯನ್ = ಬಳಿಗೆಲಸಿಗಂ" (ಶಾಕಶ್ಯ. ೨೫೫). [ಬಳಿಗೆಲಸ + — ಇಗ]

ಬಳಿಗೊಳ್ 'ಬಟ್ಟಿಗೊಳ್' ನೋ.

ಬಳಿಚಿಸು 'ಬಟ್ಟಿಚಿಸು' ನೋ.

ಬಳಿಚು 'ಬಟ್ಟು' ನೋ.

ಬಳಿಜಸ (ನಾ). ವಂಶದ ಕೀರ್ತಿ: ಪಗೆ ಪಳಿಗೆಳೆರಡಂ ತೀರ್ಚಿ ಬಳಿಜಸವನೆನ್ನ ಪೌರುಷತೇಜಮಂ ಬಿಡದೆ ಸಾಧಿಸಿರ್ಪೆನ್ (ಶ್ರೀರಾಮಾ. ೬೯೨-೯೦೫).

[ಬಳಿ$_2$ (< ಬಟ್ಟಿ$_3$) + ಜಸ$_1$]

ಬಳಿತ (ನಾ). ಬಳಿಯುವಿಕೆ; ಲೇಪಿಸುವಿಕೆ: "ಲೇಪನಂ, ಲೇಪನೀಯಂ . . . ಲಿಪ್ತಃ — ಈ ೫ ಬಳಿತಂ" (ಶಾಕಶ್ಯ. ೨೦೯).

[ಬಳಿ$_1$ (< ಬಟ್ಟಿ$_1$) + — ತ$_2$]

ಬಳಿದಪ್ಪು 'ಬಟ್ಟಿದಪ್ಪು' ನೋ.

ಬಳಿದೊತ್ತು 'ಬಟ್ಟಿದೊಟ್ಟು' ನೋ.

ಬಳಿದೊಳ್ತು 'ಬಟ್ಟಿದೊಟ್ಟು' ನೋ.

ಬಳಿನಕಲು (ನಾ). ಮೂಲಪ್ರತಿಗೆ ಹತ್ತಿರವಾದ ಪ್ರತಿ: ಬಹು ಸಂಖ್ಯೆಯ ಸ್ವಹಸ್ತ ಪ್ರತಿಗಳು ಇಲ್ಲವೆ ಅವುಗಳ ಬಳಿನಕಲುಗಳು ಅಥವಾ ಪ್ರಾಚೀನಪ್ರತಿಗಳು ನಾಶವಾಗಿ ಬಿಟ್ಟದ್ದು (ಧಾರಕ. ೩೯).

[ಬಳಿ$_2$ (< ಬಟ್ಟಿ$_3$) + ನಕಲು]

ಬಳಿನಡೆ (ನಾ). ವಂಶಪಾರಂಪರ್ಯವಾದ ನಡವಳಿಕೆ.— ಆಚರಣೆ: ಆಚಣ್ಣದೇವಣ್ಣಗಳು ಬಳಿನಡೆಗೆ ಕೊಟ್ಟ ಗ ೩ ಪು × × ಯಮ್ಮೆ ಬಳಿನಡೆಗೆ ಕೊಟ್ಟ ಗ ೬ (ಎಕ. VI, ಕಡೂರು. ೫೫-೦೦; 1217).

[ಬಳಿ$_2$ (<ಬಟ್ಟಿ$_3$) + ನಡೆ$_2$]

ಬಳಿನೀರ್ 'ಬಟ್ಟಿನೀರ್' ನೋ.

ಬಳಿನೀರು 'ಬಟ್ಟಿನೀರ್' ನೋ.

ಬಳಿನೀರ್ಗುಡಿ 'ಬಟ್ಟಿನೀರ್ಗುಡಿ' ನೋ.

ಬಳಿನೀರ್ಗೊಳ್ (ಕ್ರಿ). = ಬಟ್ಟಿನೀರ್ಗುಡಿ: ಮೊಲೆಯುಂಬ ಲಿಂಗಮುಂ ಮುಟ್ಟಿಯುಧರಾಮೃತವನೊಲಿದು ಬಳಿನೀರ್ಗೊಂಡ ತಪ್ಪಿಂದಲರೆ ಮೆಯ್ಯನಾದ (ಪೇರುಮ. ೬-೦). [ಬಳಿನೀರ್ (< ಬಟ್ಟಿನೀರ್) +ಕೊಳ್$_1$]

ಬಳಿಬರು 'ಬಟ್ಟಿವರ್' ನೋ.

ಬಳಿಭುಕ್ಕು 'ಬಲಿಭುಕ್ಕು' ನೋ.

ಬಳಿಮಾರಿ (ನಾ). ವಂಶಕ್ಕೆ ಮಾರಕವಾದ ವ್ಯಕ್ತಿ: ಉಳಿದರ್ಗೀಯದೆ ತಾನೇ ಕಾಲಯಮನಂತತ್ಯುಗ್ರಮಂ ತಾಳ್ದಿದಾ ದಳವಾಯೇ ಬಳಿಮಾರಿಯೈ (ಸೋಮೇಶ. ೬೪). [ಬಳಿ$_2$ (<ಬಟ್ಟಿ$_3$) + ಮಾರಿ$_2$]

ಬಳಿಮುಖ 'ಬಲಿಮುಖ' ನೋ.

ಬಳಿಯ 'ಬಟ್ಟಿಯ' ನೋ.

ಬಳಿಯಂ 'ಬಟ್ಟಿಕಂ' ನೋ.

ಬಳಿಯಟ್ಟು 'ಬಟ್ಟಿಯಟ್ಟು' ನೋ.

ಬಳಿಯಣ 'ಬಟ್ಟಿ$_3$' ಪರಾ.

ಬಳಿಯಿಸು, ಬಳಿಸು (ಕ್ರಿ). ೧. ಕಸವನ್ನು ಗುಡಿಸುವಂತೆ ಮಾಡು; ನೆಲವನ್ನು ಸ್ವಚ್ಛ ಮಾಡಿಸು. ೨. (ಬಣ್ಣ ಮೊದಲಾದುವನ್ನು) ಹಚ್ಚುವಂತೆ ಮಾಡು; ಹಚ್ಚಿಸು: ಏಳು ರೇಣ್ಮೆ ಬಟ್ಟೆಯ ತುಂಡುಗಳ ಮೇಲೆಯೂ ಸಪ್ತರಂಜನದ ಏಳು ಬಣ್ಣಗಳನ್ನು . . . ಬಳಿಯಿಸಿ (ಕ್ಷೇತ್ರಕೀರ್ತ. ೨೪೫). **ಬಳಿಸು**: ೧. ಹರಿಯ ದಾಸರಿಗನ್ನು ಸರಿಯುಂಟೆ . . . ಮಸಣಿಯಾ ಕೈಯ ಕಸ ಬಳಿಸುವರು (ಪುರಂದ. ೦-೦೪೫-೦).

[ಬಳಿ$_1$ (<ಬಟ್ಟಿ$_1$) + — ಇಸು$_3$]

ಬಳಿರಿಪು 'ಬಲಿರಿಪು' ನೋ.

ಬಳಿವಟ, ಬಳಿವತ್ತ (ನಾ). ಒಂದು ಬಗೆಯ ತೆರಿಗೆ (?): ಆ ಶಾಂತಿಗ್ರಾಮದ ಸಿದ್ಧಾಯದ ಮೊದಲ ಹೊಂನೊಳಗೆ ಆಯ್ದು ಹೊಂನನು ಆವಳ ಸಮಸ್ತ ಬಳಿವಟ ನೋಡಿ (ಮೈಆರ. ೧೯೪೦.೩-೨೯; 1216). **ಬಳಿವತ್ತ**: ಒಕ್ಕಲೊಳೊನ್ದು ಪೊಜೆಯುಂ ಕೆಯುಂ ಪದಿರ್ಕ್ಕೊಳಂ ಭತ್ತಮುಂ ವಿಾಸಲಂ ಬಳಿವತ್ತಮುಂ ಸಲ್ವದು (ಎಕ. III, ಸಂಖಸ. ೦೮೩-೦೦; 977). 'ಬಳಿ$_3$' ಪರಾ. [?]

ಬಳಿವತ್ತ 'ಬಳಿವಟ' ನೋ.

ಬಳಿವರ್ 'ಬಟ್ಟಿವರ್' ನೋ.

ಬಳವರಿ (ಕ್ರಿ.) ಸಮೀಪಕ್ಕೆ ನುಗ್ಗು; ಹತ್ತಿರಕ್ಕೆ ಧಾವಿಸು : ಚಿಲ್ಲಿದರೆ ಬಳವರಿದು ಬೌಟಮಲ್ಲ ಹೊಕ್ಕನು ಹೊಯ್ದು ಗದೆಯಲಿ ಫಲ್ಲಿಸಿದನು (ಭಾಣ್ಯಕ್ರೋ. ೦೬-೩೦). [ಬಳ್ಳಿ (<ಬಟ್ಟಿ) + ಪರಿ1]

ಬಳವರು 'ಬಟ್ಟಿವರ್' ನೋ.

ಬಳವಿ (ನಾ). (?) : ವಿವಿಧಮಣಿಕಿರಣಚಯದಿಂದವನಿಪನಂ ಬಳದು ಕೊಟ್ಟ ನರ್ಘಜನಕ್ಕಾ ದಿವಿಜೇಂದ್ರಂ ಬಳವಿಯ ಮಂತ್ರವಾದಿಯೆನೆ ನೆರೆದ. ಮಕುಟ ಬದ್ಧಸಮಾಜಂ (ಶಾಂತಿಪು. ೦೦-೦೦).

[ಗ ಇದು 'ಜಳವೆ = ದಂಡ' ಎಂಬುದರ ಅಪಲಿಖಿತವಿರಬಹುದು]

ಬಳವಿಡಿ 'ಬಟ್ಟಿವಿಡಿ' ನೋ.

ಬಳವೆಳಗು (ನಾ.) ಹತ್ತಿರದ ಬೆಳಕು : ಬಳವೆಳಗಿನ. . .ಬೆಳ್ಳೆಳಗಿನ ಬೆಳಸಿನ ಸಿರಿಯೆನೆ ತೊಳತೊಳಗಿದುದು ಮೂರ್ತಿ ಚಂದ್ರಪ್ರಭನಾ (ಕಣ್ಣಾಸು. ೦೯೦ ೨೩೨೨). [ಬಳ್ಳಿ (<ಬಟ್ಟಿ) + ಬೆಳಗು2]

ಬಳವೊರ್ದು (ಪ್ರಿ). ಸಮೀಪಿಸು : ಜೊತೆಗೂಡು : ರಾಹು ತೊರೆ ದೊಡನೆ ಶಶಿಯಂ ರೋಹಿಣಿ ಬಳವೊರ್ದಿದಂತೆ . . . ಸೇರ್ದೆಯೆನ್ನಯ ಬಳಿಯಂ (ಶಾಳುಂತ. ೦೦೯-೦೬೩). [ಬಳ್ಳಿ (<ಬಟ್ಟಿ) + ಪೊರ್ದು1]

ಬಳಿಶರ (ನಾ). ಒಂದರ ಹಿಂದೆ ಒಂದು ಬರುವ ಬಾಣ : ನೂಱುಶರದಲಿ ಬಳಿನಿಶಿಖಿ ನಾನೂಱುಱಲಿ ಬಳಿಶರಕೆ ಬಳಿಶರವಾಱುಸಾವಿರದಿಂದ ತಱುದನು ಪಾರ್ಥನಂಬಲವ (ಭಾಣ್ಯಗ. ೨-೦೯).

[ಬಳ್ಳಿ (<ಬಟ್ಟಿ) + ಶರ]

ಬಳಿಸರಳು (ನಾ). = ಬಳಿಶರ : ಸರಳನೆಚ್ಚನು ಸರಳನಾ ಬಳಿಸರಳು ಮುಂಚಿದುದಾ ಸರಳ ಬಳಿಸರಳು ಮುಂಚಿದುದು (ಭಾಣ್ಯಳ. ೩-೦೯); ಬಳಿಸರಳ ಸಂದಾನದಲಿ ಬಳಿಕುಳಿಕಲಿನ ರಕ್ಕಸರ ಜವಪುರದೊಳಗೆ ಹೊಗಿಸಿದನು (ಕೊಡಗ. ೦-೦೦-೩೨).

[ಬಳ್ಳಿ (<ಬಟ್ಟಿ) + ಸರಳು1 (<ಸರಲ್1)]

ಬಳಿಸಲ್ 'ಬಟ್ಟಿಸಲ್' ನೋ.

ಬಳಿಸಲಿಸು (ಕ್ರಿ). ಹಿಂದೆ ಬರು; ಅನುಸರಿಸು : ರಿಪುಜಾಲವನು ನೀ ಖಂಡಿಗೆ ಬಹವಾವು ಬಳಿಸಲಿಸಿ (ಭಾಣ್ಯಕ್ರೋ. ೩-೨೭).

[ಬಳ್ಳಿ (<ಬಟ್ಟಿ) + ಸಲಿಸು]

ಬಳಿಸಾರ್, ಬಳಿಸಾರು (ಕ್ರಿ). ಹತ್ತಿರ ಬರು; ಸಮೀಪಿಸು : ತುಂಬಿ ಕವಿವಾವ್ರಮನಭ್ರಮೆ ಗೆತ್ತು ಕೇತಮಂದಳಿ ಬಳಿಸಾರ್ದು ನರ್ತಿಸುಗುಂ (ಕಣಂ. ೨-೨೭); ಅಕ್ಕಟಾ ! ಎಂದೊಬ್ಬನಳಿ ಬಳಿಸಾರ್ದು . . . ಕರೆದಂ (ಶಾಕೂಶ. ೧೩-೦೧). **ಬಳಿಸಾರು :** ಏನನೊ ನುಡಿಯುತಲಿರುವಳದೇನೆಂದು ಬಳಿಸಾರಿ ಮೆಲ್ಲನೆ ಕೇಳು (ಶಂಶಾಚ. ೧೩೭-೨೯).

[ಬಳ್ಳಿ (<ಬಟ್ಟಿ) + ಸಾರ್1]

ಬಳಿಸಾರು 'ಬಳಿಸಾರ್' ನೋ.

ಬಳಿಸಾಲು (ನಾ). ಅಕ್ಕಪಕ್ಕದ ಪಂಕ್ತಿ ; ಸಮಾನಾಂತರದ ಸಾಲು : ಹರಗಬಲ್ಲೆನು ಬಿತ್ತಬಲ್ಲೆನು ಅರಿದು ಬಳಿಸಾಲುಗಳ ಹೊಡೆವೆನು (ರಗಣ. ೦-೦೯). [ಬಳ್ಳಿ (<ಬಟ್ಟಿ) + ಸಾಲು2 (<ಸಾಲ್2)]

ಬಳಿಸು 'ಬಳಿಯಿಸು' ನೋ.

ಬಳಿಸೇರು (ಕ್ರಿ). = ಬಳಿವೊರ್ದು : ಆ ವ್ರತಕ್ಕೆ ದಿರ್ಘಾಯುವಾದ ನೀವು ಬಳಿಸೇರಿ ತಮ್ಮನ್ನು ಆದರಿಸಬೇಕೆಂದು ದೇವಿಯರು ಆಜ್ಞಾಪಿಸುವರು (ಶಾಳುಂತ. ೨೯-೩). [ಬಳ್ಳಿ (<ಬಟ್ಟಿ) + ಸೇರು1 (<ಸೇರ್)]

ಬಳಿಸೇವೆ (ನಾ). = ಬಳಿಗೆಲಸ : ರಾಜಂಗೆ ಬಳಿಸೇವೆಗೆಯ್ವರೊಳು ನಚ್ಚಿನವರಾರು (ಶಾಕಶ. ೦೬-೬೯೯). [ಬಳ್ಳಿ (<ಬಟ್ಟಿ) + ಸೇವೆ1]

ಬಳಿಹರ 'ಬಲಿಹರ' ನೋ.

ಬಳು (ನಾ). ಒಂದು ಅಳತೆ (?) : ಮೂಡಣ ಹೆಗ್ಗಡ್ಡೆ ಅದಱ ಮೇಗಣ ಕೊಡಂಗೆ ಎರಡಱಲ್ಲಿಯುಂ ಮೂಡೆ ೨ ಬಂಣಟೆ ಮೂಡೆ ೨ ಮುಂಡಿನ ಮಾಡುವ ಬಳು ಮೂಡೆ ೧ ಚಿಕ್ಕಬಿಟ್ಟುವ ಕೊಡಂಗೆ ಮೂಡೆ ೧ (ಎಇ. XXVII. ೦೬೨-೯೯; 1966). [?]

ಬಳುಂಕು 'ಬೆಳ್ಕು1' ನೋ.

ಬಳುಕಿಸು 'ಬಳ್ಕಿಸು' ನೋ.

ಬಳುಕು1 'ಬೆಳ್ಕು1' ನೋ.

ಬಳುಕು2 'ಬೆಳ್ಕು2' ನೋ.

ಬಳುಕುನಡೆ (ನಾ). ತೊನೆಯುತ್ತಾ ನಡೆಯುವುದು : ವಿಲಸಿತದ ವಿಭುವಿಂಗೆ ದಟ್ಟಡಿ ಬಳುಕುನಡೆ ಮೆಲ್ನಡಿಗಳೆಂಬವು ತಿಳಿವವರ ಮನಸಿಂಗೆ ಮುಜಿ ತಾನಲ್ಲವೇ (ಕೊಡಗ. ೦-೯೭). [ಬಳುಕು1 (<ಬೆಳ್ಕು1) + ನಡೆ1]

ಬಳುಕುನೀರು (ನಾ). ಒಂದು ಬಗೆಯ ತೆರಿಗೆ : ಕಳುವಡೆ ನಾರಡೆ ಬಳುಕುನೀರು ಊರಸಂತೆ ಮೊದಲಾದ ಹಲ ಉವಾಧಿಗಳು ಸಹ . . . ಅನುಭವಿಸಿಕೊಂಡು (ಶಾಶಾಸ. IX–ii, ೧೬೬–೬; ಸು. 1471). [?]

ಬಳುಕುಮೈ (ನಾ). (ಒಯ್ಯಾರದಿಂದ) ತೊನೆಯುವ ಶರೀರ : ಕೈವಮುಗಿವ ಪ್ರಮದೆಯರ ಕಾರಣಗಳಲುಗುತ್ತ ಕುಂಬಿಡುವ ಬಳುಕು ಮೈಗೆಚ್ಚರಿಕೆಯುಲಿಯೆ (ಕುಬಡೇ. ೩೦-೪).

[ಬಳುಕು1 (<ಬೆಳ್ಕು1) + ಮೈ (<ಮೆಯ್3)]

ಬಳುವಟ್ಟಿ (ನಾ). ಕಾಡುದಾರಿ : ನಾಯಿಗಳ ಹಾಗೆ ಬಳುವಟ್ಟಿ ತಿರುಗಾಡಿಕೊಂಡು ಇರುವುದು (ಕೂಳಕ್ಕ. ೨೬). [< ಪಳುವಟ್ಟಿ]

ಬಳುವಳ 'ಬಳ್ವಳಂ' ನೋ.

ಬಳುವಳಿ 'ಬಟ್ಟಿವಟ್ಟಿ1' ನೋ.

ಬಳುವಳಿಕೊಡು 'ಬಟ್ಟಿವಟ್ಟಿಗೊಡು' ನೋ.

ಬಳುವಳಿಗೊಡು 'ಬಟ್ಟಿವಟ್ಟಿಗೊಡು' ನೋ.

ಬಳೆವೆ (ನಾ). (?) : ಸುಳಿದವಾತಿ ಕರ್ವುರದ ಪ್ರದ್ಮಲಿಪ ಮಾಣಿಕ ದೀಪ್ತಿಗಳ ಪಸ್ರ[ಕಾಣಂ. ಬಲು]ಗಳವೆಗೊಳಿಸ ಬಳುವೆಗಳಲುಪ್ಪುಗಳ [ಕಾಣಂ. ಬಳುವೆಯುಪ್ಪಾರತಿಯ] ಸೂಸುಕೆಯ ಕಳಕಳದೊಳೊಪ್ಪಿದುದು ಪಾರ್ಥಿವನಿಳಯವ್ (ಕೊಡಗ. ೬-೩೩-೦೬); "ಭೀತರ ಸೋದಕು ತೆಗೆಯಂವ ಒಂದು ವಿಧಿ" (ಕೊಡಗ. ಕೋಡ). [?]

ಬಳ್ಳೆ1, ವಳ್ಳೆ1 (ಕ್ರಿ). ೧. (ಮಾನಪ, ಪ್ರಾಣಿ, ಪಕ್ಷಿ ಮೊದಲಾದುವು ಶಾರೀರಿಕವಾಗಿ ಅಥವಾ ವಯಸ್ಸಿನಲ್ಲಿ ಅಥವಾ ಮಾನಸಿಕವಾಗಿ) ವೃದ್ಧಿಯಾಗು; ವರ್ಧಿಸು : ಕೂಸಿಂಗೆ . . . ಎರಟ್ಟೂಱುತಿಂಗಳಿಂಗೆ ಕಾಯ್ ಕಟ್ಟಿದೊಡೆ ಬಂದ ನಂಟರೆ ನಡವೆ ಬಳೆದೊಡೆ (ಕಣ್ಣಾಕಾ. ೭೭-೦೬); ಆ ಕಾಲದೊಳ್ ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು (ಕುಂಕಣಾ. ೦-೦೦೬ ಕ); ಆ ಕಪಿ ತಾಂ ತಾಪಸರ ಸಮೀಪದೊಳೆ ಬಳೆವ ಕಾರಣದಿಂ ತತ್ತ್ವವೇದಿಯಪ್ಪುದಱಿಂ (ಕುಂಕಣಂ. ೦೧೩-೦೯); ಫಳರಸದಿ ಬೆಳೆವ ನವಶಾಲೀವನಂಗಳಿಂ ತನಿವಾಲನುಂಡು ಬಳೆವರಗಿಳಿಗಳುರ್ಕಿನಿಂ (ಕಟಾಶ. ೫೫. ೨-೦೦); ಶಶಿ ಮೂಡಿ ಬಳೆದನಾಗಸದೊಳು (ಕಂಕಣ. ೯-೦೬೯). ೨. ಗಿಡ, ಮರಗಳು ವೃದ್ಧಿಯಾಗು; ಸಸ್ಯಗಳು ಬೆಳೆ : ದೆಸೆಗಳಂ ತಡವರಿಸಿಕೊಳ್ವಂತೆ ಬಳ್ವಳಿ ಬಳೆದು ಸೊಗಯಿಸುವ ವೆರ್ಮರಂಗಳಿಂದಂ . . . ಅತಿಭಯಂಕರಾಕಾರಮಪ್ಪ ದೈತವನಕ್ಕೆ ಬಂದು (ಕುಂಕಣ. ೬-೨೯ ಕ) ; ಬಾನುದ್ದಂ ಬಳೆದಿರ್ದ ವೆರ್ಮರದ ಕುಟ್ಟಿ ತುದಿಯ ಕೊಂಬನೆತ್ತಿ ಟಬ್ಬಿಯಾಸದಿಂದಂ (ಕಾಕಣಂ. ೧೬-೦೦). ೩. ಹುಟ್ಟು ; ಮೊಳೆ ; ಅಂಕುರಿಸು : ವಿರೋಧಿವುದೇಭಮಸ್ತಕ ಸ್ಥಳಜಲರಾಶಿಯೊಳ್ ಬಳೆದ ನಿರ್ಮಳನಿರ್ಮಿಣವೃತ್ತವೌಕ್ತಿಕಾವಳಿಯನೆ ತರ್ವುದು (ಕುಂಕಣಾ. ೦೦-೯೭); ಎಳವೆಲಿ ಬಳೆಯುವ ಗಗನಸ್ಥಳಿ (ಕುಬೃಚಿ. ೩-೦೦೦). ೪. (ಭಯಂ, ಕೋಪ, ಆಶ್ಚರ್ಯ, ಅನುರಾಗ ಇತ್ಯಾದಿ

ಭಾವನೆಗಳಂ) ಉಂಟಾಗುಂ; ಮೂಡು : ಬಗೆಯೊಳಗೆ ಬಳೆದ ಭೀತಿಯ ಎಮಗೆ ಭವದಾಸ್ಥಾನಭೂಮಿಯಂ ಪುಗುಗೆ (ಅಪ್ಪು. ೦೪-೨೨); ಆದ ಮುಳಿಸಿಂದವಾಗಳ್ ಮೋದುವ ಬಗೆ ಬಳೆಯೆ (ಕಂಕಣಾ. ೨-೭೨) ; ಬಳೆದ ಹೃದಯಾನುರಾಗದಿನೀಕ್ಷಣಾಗಳ್ ನಿಜಪ್ರಧಾನಂ ಪ್ರಜ್ಞಾ ಬಳನ ತನಯಂಗೆ ಮೇಧಾವಿಳನೆಂಬುಚಿಕಾಭಿಧಾನಮಂ ತಾನಿತ್ತಂ (ಶಾಮಕಾ. ೬-೦೦೬); ಆ ಮುಕುಂದನ ದಿವ್ಯನಾಮಪ್ರೇಮರಸಕಿದು ಸಿದ್ಧಿಯೆಂದೆನಲಾ ಮಹಾಸ್ಥಾನದಲಿ ಬ[ಣಾಣಂ. ಬೆಳೆದುದು ಬೆಱಗು ಬಿಂಕದಲಿ (ಶಾಬ್ಕಾ.ಕ. ೧೫-೩). ೫. (ಗಾತ್ರದಲ್ಲಿ) ಬೆಳವಣಿಗೆಯನ್ನು ಹೊಂದಂ; ದೊಡ್ಡದಾಗಂ ತೋರವಾಗಂ : ನಿನ್ನನಾ ತನ್ನಿಯೆತ್ತಂ ಬಳೆದುತ್ತುಂಗಸ್ತನಂ ವಮ್ಮೆರದೆ ಬಳಸಲ್ (೦೦೫ಪ್ಪು. ೪-೨೦); ಎನಿತ್ತೆನಿತ್ತಂಬುಜಪತ್ರನೇತ್ರೆಯಾ ಘನಸ್ತನಂಗಳ್ ಬಳೆಗುಂ ಕಿರಾತೆಯಾ (ಶಾಬ್ಕಾ.ಕ. ೪೫೯) ; ಚೂಚುಗಂ ತರ್ಗಿದವು ನಾಭಿ ಪೊಜವೊಣ್ಮೆತಸಿಯ ನಡುವುಂ ಬಳೆದುದು (೬೦೫ಪ್ಪು. ೪-೦೦). ೬. ವೈರಿನಿಂದ ತುಂಬುಂ : ಬಹುಪೋಷದಿವಮ್ಮಿವ ಸಹಕಾರದ ಸೊನೆಯು ಸೋನೆ ಬಳೆಯಿಸೆ ಬಳೆಗುಂ ಮಹಿ (೫೦೦೬ಪ್ಪು. ೦-೬೦) ; ಪಸಿದೆಮ್ಮೆ ಬಳೆದ ಕೆಯ್ಮಂ ಪೊಕ್ಕಂತೆ (ಕರ್ಣಾಪ್ಕ್ಯೂ. ೬-೮೩). ೭. ಎತ್ತರವಾಗು; ನೀಳವಾಗು; ದೀರ್ಘತ್ವವನ್ನು ಹೊಂದು: ಬಳೆಯಲ್ಕಣ್ಮಿದುದಿಲ್ಲ ವಿಂಧ್ಯಗಿರಿಯುಂ ತನ್ನಾಜ್ಞೆಯಿಂದೊರ್ವೆ ಮುಕ್ಕುಳಿಸಲ್ಕುಂಬುಧಿ ಸಾಲ್ದುದಿಲ್ಲ (ಕಂಕಣಾ. ೪-೨೦) ; ಆವ ನಗಂ ಮತ್ಸಮಮಂದೆಂದು ದೀಗಿ ಬಳೆದಂತಿರ್ಕುಂ ಜಿನಸ್ನಾನವಾವನವಾ ನಿರ್ಜರನಿರ್ಜರೋಜ್ವಲಮಣಿ ಶ್ರೀಕಂದರಂ ಮಂದರಂ (೦೯೫ಪ್ಪೀ. ೦-೫೬) ; ಮಾಯುಕಾಂತನ ಮೂಲಳಕ್ತಿಯ ತೋಜಿನೆ ಬಳೆದು ತೋಱಿಸಿದ (ಕೋಚಪ. ೦೦-೭೭) ; ಅಗಲಕಿ ಭೂಮಂಡಲ ಕಿಱಿದುಬ್ಬಲಾ ಎಮಗೆ ತಾಳದಪ್ಪದಿಕ್ಕಿಂದು ನಗುತಾಗ ಮೇಲಕ್ಕೆ ಬಳೆದೋಲು ಹೊಂಗೋಂಟಿ ಗಗನಮಂಡಲವ ಮುಟ್ಟಿಹುದು (ಶಂಪಂ. ೬-೪). ೮. ಉದ್ದವಾಗು; ಲಂಬವಾಗು; ಚಾಚು : ಬಳೆದ ಜಡೆ ನಿಮಿರ್ದ ಬಳ್ಳಿಗಳೊಳೆ ಪೆಣೆದು ವಿಷೋರಗಾಸಳಾರ್ಚಿಗಳಿಂದಂ ವಿಳಿರ್ದುವು (೦೦೫ಪ್ಪು. ೦೪-೦೪); ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ್ಕೃಗಾಕ್ಷಿಯಾ (ಶಾಕಂಪ್ರ. ೬೬೪) ; ಬೋಳಾದ ತಲೆಯ ರೋಮಂ ಮೇಲೆಸಸಿದ ಬೆರಲ ಮುಱಿದ ಸೆಳ್ಳುಗುರುಂ ಸಲ್ಲೀಲೆಯೊಳೆ ಬಳೆವ ತೞಿದಿಂ (ಕರ್ಣಾಪ್ಕ್ಯೂ. ೪-೪೦); ಬಳೆದೆಸದಿರ್ಪ ಸೆಳ್ಳುಗುರ ಮೆಯ್ವೊಳೆಪಿಂ ಎಗೆ ಪೆರ್ಮೆದೞ್ ಕಣೊಳ್ಗಿಳಿಸಲಾಕೆ (೪೦೬ಶಾ. ೬೯). ೯. ಹೆಚ್ಚಾಗು; ಅಧಿಕವಾಗು : ಬಳೆದ ತಮುಮೆಂಬ ಕರಡವು(?) ನಳವಲ್ಲದೆ ಸುಟ್ಟು ಕಿಡಿಸಲೆಂದು . . . ಅರ್ಕನುದಯಂಗೆಯ್ದಂ (ಶಾಕ್ಕಶಾ. ೪೭೦ ಕೂಕ್ಷ ೪); ಅನಲಂ . . . ನೀಳ್ದು ಬಳೆದರ್ವಿಸೆ ಪರ್ವಿದನಾ ವಸಾಂತಮಂ (ಕಂಕಣಾ. ೩-೮೩) ; ದಿವದಿಮಸಂಗಳಿಂ ಕುಂದುವವಲ್ಲದೆ ಬಳೆಯವಾಯುವುಂ ವವುವುಂ (೦೩೫ಪ್ಪು. ೨-೭೯); ಬೇಸಗೆಯಿಂದ ಬಳೆದ ಬಿಸಿಲಿನೊಳು ಬೆಂದು . . .ನಿಂದನು ಮರದ ನೆಳಲೊಳು (ಹರಿಪು. ೨-೪೨). ೧೦. ಹೆಚ್ಚಿಸಂ; ಅಧಿಕಗೊಳಿಸು; ದೇವಮಾತೃಕವೆನಿಪ್ಪ ಪೊಲಂ ನವಗಂಧಶಾಳಿಯುಂ ಬೆಳೆವುದು ರಮ್ಯನಂದನ ವನಾಳಿ ವಿಯೋಗಿಜನಕ್ಕೆ ಬೇಟಮುಂ ಬಳೆವುದು ನಾಡ ಕಾಡ ಬೆಳಸಿಂ ಬೆಳಸಾ ವಿಷಯಾಂತರಾಳದೊಳ್ (ಕಂಕಣಾ. ೦-೩೪). ೧೧. ಹಬ್ಬು ; ವ್ಯಾಪಿಸಂ ; ಹರಡು : ಕೆಯ್ವತ್ತಿ ನಿಂದಿರೆ ಪತ್ತಿತ್ತು ಸಮಸ್ತಧಾತ್ರಿ ವಳಯಕ್ಕೆಂದುಂ ದಿಶಾದಂತಿಗಳ್ಬರೆಗಂ ತಂದೆಯ ಕೀರ್ತಿಯೇ ಬಳೆದುದೋ (ಗದಾಹು. ೦-೦೨) ; ಸಕಲಲೋಕಂಗಳೊಳ್ ಶಿವಭಕ್ತಿ ಬಳವುತಿರ್ಪುದು ದಿನದಿನಕ್ಕೆ (೩೬ಪ್ಪು. ೩-೬). ೧೨. ಅಭಿವೃದ್ಧಿಯಾಗಂ; ಏಳಿಗೆಯನ್ನು ಹೊಂದು ; ಪ್ರಗತಿ ಹೊಂದು : "ಬಳೆ-ಪ್ರವೃದ್ಧೌ. ಕಾಚಭೂಷಣೇ ಚ" (ಶಬ್ದಾ) ; ಇಂಚೆಯ ಪಸವಿನ ಬಱಿದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು

ವಿರಂಚಿಯ ಕೆಯ್ಪಡಿಯವೊಲಾದುವಾ ನಾಡೂರ್ಗಳ್ (ಕಂಕಣಾ. ೬-೩೦) ; ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ ಪೆಣ್ಣ ಪೆತ್ತವರು ಪೆರ್ಚುವರು (ಪೂಂ. ೫-೪). ೧೩. ನೆರವೇರು ; ಆನಡೆ : ಬೆಳೆದುದು ಹಿಮವರ್ಷದೆ ರಾತ್ರಿಳತೆಯೆನಲ್ ಬಳೆದುವಿರುಳ್ಗಳೊಳ್ ಸುರತಂಗಳ್ ಬಳೆದುವು ದಂಪತಿ ಶತದೊಳ್ ಬಳೆವಿನೆಗಂ ಮದನನಾಜ್ಞೆಯುಂ ಭುಜಬಲವುಂ (೫ಗೂ. ೦೪-೦೬) ; ಎಲೆ ಸಖಿ, ನಿನಗೆ ಸುಖಮಜ್ಜನ ಬಳೆಯುತ್ತೆ ? (ಶಾಕುಂತ. ೫೦-೦೫). ೧೪. ಸಂಪಾದಿಸಂ ; ಪಡೆ ; ಹೊಂದು : ಇಳೆಯೊಳಿದ ಹೇಳುವರ ಕೇಳ್ವರ ಬಳಗವಾಕ್ಷಣ ಪುಣ್ಯರಾಶಿಯು ಬಳೆವುದೆಂಬುದನಱಿದು ಭಾರತಕೃತಿಯ ಹೇಳುವೆನು (ಸಂಭಕ. ೦-೨೪). ಬಳ್ಕೆ₁ : ೨. ಎಬ್ಬದಿನ್ನರು ನರಮೊಕರಮನೊಡೆದೊಡೆಪ್ಪಡೆತ್ತದು ಪೂಸೂಪ್ಪೊಲ ನೆಲ್ಲುಪಾಣ್ಮೆಯು ಪಳೆವದು (ಪ್ರಾಂ.ಶಾ.೦೯೭೦. ೩೬-೬; ೩೪ಹು ೫೪).

ಬಳೆವಳೆ (ದ್ವಿರುಕ್ತಿ) : ತನ್ಮಹಾತಿಶಯವಿಶುದ್ಧಗರ್ಭಾವಾಸದೊಳಾ ಸಮಸ್ತಗುಣನಿವಾಸಂ ನೆಲಸಿ ಬಳೆವಳೆಯೆ (ಕರ್ಣಪ್ಪ. ೦೩-೬೫ ಪ).

ℙ 'ಬಳೆ' ಮತ್ತು 'ಬೆಳೆ' ಎಂಬ ಎರಡು ಧಾತುಗಳ ಬಗ್ಗೆ ಕನ್ನಡದಲ್ಲಿ ಪೂರ್ವಕವಿಗಳು, ವಿದ್ವಾಂಸರು ಅನುಸರಿಸುತ್ತಿದ್ದ ಒಂದು ಪದ್ಧತಿಯಿದ್ದಂತೆ ಕಾಣುತ್ತದೆ. ಕೇಶಿರಾಜನಂ–"ಬೆಳೆಯೆಂಬ ಧಾತು ಸಸ್ಯಾವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂಗಳಿಕುಂ" ಎಂದು ಹೇಳಿದ್ದಾನೆ. ಅದೇ ಅಭಿಪ್ರಾಯವನ್ನು 'ಕರ್ನಾಟಕ ಸಂಜೀವನಂ' ಎಂಬ ನಿಘಂಟಿನ ಕರ್ತೃವಾದ ಶೃಂಗಾರ ಕವಿಯುಂ "ಆಚರಂಗಳಲ್ಲಿ ಬೆಳೆದುದು ಬೆಳಸೆನಿಕ್ಕುಮಾ ಸಚರನರರಲ್ಲಿ ಬಳೆದಂ ಬಳವಿ ಬಳವಿಗೆ ರುಚಿರಮಕ್ಕುಂ" ಎಂದುಂ ವಿವರಿಸಿರುತ್ತಾನೆ. ಶೃಂಗಾರಕವಿಯ 'ರುಚಿರಮಕ್ಕುಂ' ಎನ್ನುವ ಶಬ್ದ ಗಮನಾರ್ಹ. ಆದರೆ ಈ ಎರಡು ಶಬ್ದಗಳ ನಡುವೆ ಇದ್ದಿರಬಹುದಾದ ವ್ಯತ್ಯಾಸವು ಒಹುಕಾಲದ ಹಿಂದೆಯೇ. ಅಂದರೆ ವಡ್ಡಾರಾಧನೆ ಮತ್ತು ಪಂಪಭಾರತಗಳ ಕಾಲದಿಂದಲೂ ಪೂರೆಯಾಗಿರಬೇಕು. ಆದರೆ ಕೇಶಿರಾಜನ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು 'ಬಳೆ' ಮತ್ತು 'ಬೆಳೆ' ಉಲ್ಲೇಖಗಳನ್ನು ಬೇರೆಬೇರೆಯಾಗಿ ಕೊಟ್ಟಿದೆ. 'ಬೆಳ್ಕೆ₂' ಪರಾ. [ದೇ.ಪ್ರ ತುಳು. ಬಳಂವುನಿ]

ಬಳ್ಕೆ₁, ವಳ್ಕೆ (ನಾ). ೧. ವರ್ತುಲ ; ಮಂಡಲ; ವೃತ್ತ : 'ಅಗ್ನಿವಳೆದೆಣ್ಣೆ', 'ಬಳಸು₂', 'ಬಳಿಗಣ್' ಪರಾ. ೨. ಕೈಗೆ ತೊಡುವ (ಗಾಜು, ಚಿನ್ನ ಇತ್ಯಾದಿಗಳ) ವರ್ತುಲಾಕಾರದ ಆಭರಣ ; ಕಂಕಣ : "ಬಳೆ-ಪ್ರವೃದ್ಧೌ. ಕಾಚಭೂಷಣೇ ಚ" (ಶಬ್ದಾ) ; ಬಳೆಯು ಪೇಱನಾನೆ ಮೆಟ್ಟಿದಂತೆ ನುರ್ಬನೂಱಿಪ್ಪು ನವುರ್ಮಂಕೆ (ಕಂಕಣಾ. ೬-೭೬ ಪ) ; ಬಳೆಯೆ ಸರ್ವವಿಭೂಷಣಕ್ಕೆ ಮೊದಲ್ಕೆ (ಸೋಬುಗೇ. ೦೪) ; ಕಿಣಿಕಿಣಿಕಿಣಿರೆಂಬ ಕರದ ಕಂಕಣ ಬಳೆ (ಪ್ರಕಂಡ. ೨-೭೨-೨). ೩. ಕಾಲಿನಲ್ಲಿ ಧರಿಸುವ ಕಡಗ : 'ಕಾಲ್ಬಳೆ' ಪರಾ. ೪. ತೋಳಿಗೆ ಧರಿಸುವ ಆಭರಣ ; ತೋಳು ಬಂದಿ ; ವಂಕಿ : ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳ್ (ಶಾಬ್ಕಾ.ಕ. ೩೭೨) ; ಖಡ ಖಡಿಸುವ ತೋಳ ಬಳೆಯ ಕಾವಲಯನೇತ್ರೆಯರೆಸೆದರು (ಸಂಭವ. ೨೯-೪೩). 'ತೋಳ್ಬಳೆ' ಪರಾ. ೫. ಗಂಟಿಲ ಮಾಳ,–ಎಲುವು: ಪಗೆವರ ಗಂಟಿಲ ಬಳೆಯನೊಡೆದು ಕಳೆವುದನನುಕರಿಸುವಂತೆ ತೀವಿ ತೊಟ್ಟ ಮುಂಗೈಯ ಬಳೆಗಳನೊಡೆದು (ಕಂಕಣಾ. ೬-೦೦೦ ಪ). ೬. ಕತ್ತಿನ ಸುತ್ತಲೂ ಇರುವ ವಳಯಾಕಾರದ ಮೂಳೆ : ಕರಿಗಳ ಗಡಣ ಕೆಡೆದವು ಮಸ್ತಕದ ಬಳೆ ಹಱಿದು ಕಳಚಿದವು (ಕುಪ್ಕಾಕ್ಯೂ. ೬೦೩. ಕಂ. ೨೪೨-೩) ; ಮತ್ತೆ ಕೊರಳಾ ಬಳೆಯೊಳು ಬಳೆಯಂತೆ ತಿರಿಗಿಸಿ ರಾಯನ ತಲೆದೂಗಿಸಿದರು ಗಾಯಕರು (ಕಬಿಕ. ೦೨-೪೬). ೭. ಪರಿಧಿ ; ವಲಯಂ; ಸುತ್ತು:

ತಲೆ ತಿರುಗಿ ತುಟಿಯೊಣಗಿ ಕಂಗಳ ಬಳೆ ಮರಳಿ ಬಸವಳಿಯೆ ಸಾರಥಿ ತೊಲಗಿಸಿದನಾ ರಥವನು (ಶಾಸ್ತ್ರಕ್ರೀ. ೭-೩೩). ೮. ವರ್ತುಲಾಕಾರದ ಒಂದು ಬಗೆಯ ಆಯುಧ : ಚಕ್ರ : 'ಪಾಱುಂಬಳೆ' ಪರಾ. ೯. ರಥ. ಬಂಡಿ ಮೊದಲಾದುವುಗಳ ಚಕ್ರದ ಹೊರಭಾಗಕ್ಕೆ ತೊಡಿಸುವ ಕಬ್ಬಿಣದ ವರ್ತುಲಾಕಾರದ ಸಾಧನ. – ಕಬ್ಬಿಣದ ಪಟ್ಟಿ : ಜೋಲ್ವ ಬಳ್ಳಿಗೊಂಬಿನ ಬಳೆ ತೋರಗೊಂಬಿನ ನೊಗಂ ನಿಡುಗೊಂಬಿನ ಮೂಂಕು ಕಣ್ಗೆ ಚಿಲ್ವೆನೆ ನಡೆತಂದುವಂದಸುಗೆಯೆಂಬ ನೆಗಟ್ತೆಯ ತೇರ್ಗಳಿತ್ತಲುಂ (ಶಬ್ದಶಾ. ೨೦೩) ; ಕೀಲಚ್ಚು ಬಳೆ ಮೊಳೆಯನಾರ್ಪೆದು ಸಿಂಧಮಂ ನೆಗಪಿ ... ಸೂತನಿದಿರಾಗಿ ತಂದಿರಿಸಿದ ತೇರ ತೇಜಿಗೆ ನಮಿಸುತ (ಕಂಪು. ೧೯-೩೩); ಮೊಳೆ, ಕೊಂಡಿ, ಬಳೆ ಮುಂತಾದ ಸಾಮಾನು ಕಮ್ಮಾರರು ಮಾಡುತ್ತಾರೆ (ಮುಂಗಯು. ೧-೦೦೬). 'ನೇಮಿ$_3$' ಪರಾ. ೧೦. ಆನೆಯ ಕೋರೆಗಳಿಗೆ ಅಥವಾ ಎತ್ತು ಮುಂತಾದ ಪ್ರಾಣಿಗಳ ಕೊಂಬುಗಳಿಗೆ ತುದಿಯಲ್ಲಿ ತೊಡಿಸುವ ಅಲಂಕಾರದ ಸಾಧನ ; ಅಣಸು : ಇದಿರಾದರಿಭೂಪಾಲರ ಮದದಾನೆಯ ಕೊಂಬಿನೆಸೆವ ದಂತದ ಬಳೆಯಂ ಬಿದುವಿನ ಮುತ್ತಿನ ಹಾರಮನೊದವಿಸಿ ಜಯಸಿರಿಗೆ ತುಡಿಸುವಂ ನರಸಿಂಗಂ (ಸೂಕ್ತಿಸು. ೦-೦೬). 'ಬಳೆವೋಗು' ಪರಾ. ವಳ್ಳೆ : ೧೧. (ಕುದುರೆಯ ತುಂಟುತನವನ್ನು ತಡೆಹಿಡಿಯಲು ಕಟ್ಟುವ) ಸೊಂಟಪಟ್ಟಿ ; ತಂಗುಪಟ್ಟಿ : "ವಳೆಯೆನಲ್ ಕುದುರೆವಳೆಯುಂ" (ಶಬ್ದಮಂ. ೧೨).

ಬಳೆಯಾಕೆ = (ಬಂಗಾರದ) ಕಂಕಣ ಇತ್ಯಾದಿ ಆಭರಣಗಳನ್ನಿಟ್ಟು ಒಲಿಸಿಕೊಂಡವಳು ; ಬಂಗಾರದವಳು : ತೊಲಾಪುರುಷ ಸಾನ್ತರನ ಬಳೆಯಾಕೆ ತಮ್ಮಬ್ಬೆಯ ಸನ್ಯಾ × × ಳುತ್ತಂ ಈ ಕಲ್ಲ ಬಸದಿಯುಂ ಒನ್ದು ದೇವಾರಮುಮಂ ಮಾಡಿಸಿದಳ್ (ಎಕ. VIII, ಸಗರ. ೧೫-೬; ಸು. 950). [ದೇ.ಕ ತಮಿ. ವಳ್ಳೆ, ವಳ್ಳೆಯಲ್ ; ಮಲ. ವಳ; ತೊದ. ವಳ್; ಕೊಡ. ತುಳು. ಬಳೆ]

ಬಳ್ಳೆ$_3$ 'ಬಲ್ಲೆ' ನೋ.

ಬಳೆಕಣ್ 'ಬಳೆಗಣ್' ನೋ.

ಬಳೆಗ (ನಾ). (?) : ಪುತ್ತೂರುಡೆ ಶಿವಮಾರಮ್ಮಂ ದುಣ್ಡಗೆಗ್ಗಂ ನಲ್ಲತ್ತೂರೊಡೆ ಒಗ್ಗಮನೆ ಬಳೆಗಮುಂ ಅಯ್ದೂಮ್ಬು ಮೆದಕಟನಿಯು ಎಟ್ಟೂಮ್ಬು ಬಾಳೆ ತೊಟ್ಟಪಟ್ಟು ಬ್ರಹ್ಮದೇಯಂ ಕೊಟ್ಟೋದು (ಎಕ. X, ಕೋಲಾರ. ೨೩೧-೯ ; ಸು. 800 ?). [?]

ಬಳೆಗಣ್, ಬಳೆಕಣ್ (ನಾ). ೧. ಒಳಭಾಗದಲ್ಲಿ ವೃತ್ತಾಕಾರವಾದ ಬಿಳಿಯ ರೇಖೆಯುಳ್ಳ ಕುದುರೆಯ ಕಣ್ಣು : ಬಳೆಗಣ್ಣೆಂಬರ್ ಪಾಱುಂಬಳೆಯಂದದ ಬಳೆಯ ರೇಖೆ ಕಣ್ದೊಳ್ ತೋಱಲ್ ಬಳಸಿರೆ ಲೋಚನಯುಗಳಂ ಬಳೆಗಣ್ಣಾದಂದು ಶುಭದಮೊಂದಱೊಳಶುಭಂ (ಶಕ್ತಶಾ. ೨-೩೬). **ಬಳೆಕಣ್** : ೨. ಸುತ್ತಲೂ ಹಳ್ಳ ಬಿದ್ದಿರುವ ಕಣ್ಣು ; ಗುಳಿಗಣ್ಣು (?) : ಬಳೆಕಣ್ಬೆರ್ದುವು ಕಣ್ಪಾಯ್ಬಳೆಯಾಯ್ತ್ ಬರ್ದೆಯಳಿಪುವೆತ್ತುದ [ಪ್ರ]ವೋಪಿನೆಗಂ ಬಳಸಿ ಬಲವಂದು ನೋಡುವಯೆಳವೆಂಡಿರನವರೊಳಜ್ಜ ನಿನಗೇಕಜ್ಜಂ (ಅಪಪು. ೨-೧೩). [ಬಳೆ$_2$ + ಕಣ್]

ಬಳೆಗಳೆ (ಕ್ರಿ). ಗಂಟಲ ಮೂಳೆಯನ್ನು ನೆಗ್ಗು : ಕುಳಿಯೊಳಿಕ್ಕುವ ಮುದುಡಿ ಮುಚ್ಚಿ ಮುಗ್ಗುವ ಮುಳಿವ ಬಳೆಗಳವ ಹೋಳ್ವ ಸೀಳ್ವಾಱಿಸುವ . . . ಕೋಳಾಹಳದೊಳಾ ರೌರವಂ ಭಯಂಕರವಾದುದು (ಸಿದ್ಧರಾ. ೬-೨೯). [ಬಳೆ$_2$ + ಕಳೆ$_1$]

ಬಳೆಗಾತಿ (ನಾ). ಬಳೆಯನ್ನು ಮಾರುವವಳು : ಬಳೆಗಳ ಕುಱುಹು ಕಂಡುದು ಚಿತ್ರ ನೀವೇನು ಬಳೆಗಾತಿಯರೊಯೆಂದಳೊಲೆದು (ಭರತ. ೧೨-೨೦). [ಬಳೆ$_2$ + – ಕಾತಿ$_5$]

ಬಳೆಗಾರ 'ಬಳೆಗಾಱ' ನೋ.

ಬಳೆಗಾರ್ತಿ (ನಾ). = ಬಳೆಗಾತಿ : ಮಾಲೆಗಾರ್ತಿ, ಬಳೆಗಾರ್ತಿ, ಗೆಲ್ಲಗಾರ್ತಿ (ಶಾಶಾಭೂ. ೦೬೯ ಉಪಾ) ; ಮಾಲೆಗಾರ್ತಿ . . . ಹಾಲಗಾರ್ತಿ, ಬಳೆಗಾರ್ತಿ (ಕಮರ. ೨೦೯ ಪ್ರಯೋ). [ಬಳೆಗಾಱ + – ತಿ$_1$(< – ಇತ್ತಿ)]

ಬಳೆಗಾಱ. ಬಳಗಾರ, ಬಳಗಾಱ, ಬಳೆಗಾರ (ನಾ). ೧. ಬಳೆಯನ್ನು ಮಾರುವವನು : ಹರಿಬಲರಲ್ಲಿಂ ತಳರ್ದಾದರದಿಂ . . . ಬಳೆಗಾಱರ ತಂಬುಲಿಗರ ಮಣಿಗಾಱರ ಗುಂದಿಗರಾಪಣಂಗಳೊಳ್ ನಡೆತಂದರ್ (ಇಗಪ. ೬-೧೯) ; ಎಳೆವೆರಲ್ಗಳ ಚಿಟುಕೊತ್ತಿ ಕೈದೊಡಿಸುವ ಬಳೆಗಾಱರ್ದರ್ಕೈಲದಿ (ಸೋಕತ. ೩-೨೩). ೨. [ಜೈನ] ಒಂದು ವಂಶದ ಹೆಸರು ; P ಶ್ರವಣರ ಪಂಗಡಗಳಲ್ಲಿ ಒಂದಾದ ಬಳಗಾರಗಣದ ಗುರುಗಳನ್ನು ಹೊಂದಿದ ಒಂದು ವಂಶವೆಂದು ಒಂದು ಅಭಿಪ್ರಾಯವಿದೆ : ಬೆಳುಗರನಾಡೊಳ್ ಪುಟ್ಟಿದ ಬಳೆಗಾಱರ ಕುಲದೊಳೆಱೆದಜಿತಶಾಸನಮಂ ಬೆಳಗುವ ಚಕ್ರೇಶ್ವರಮಂಡಳೇಶ್ವರಂ ಬೆಸಸೆ (ಅಪಪು. ೦೨-೯೪). **ಬಳಗಾರ** : ೨. ಶ್ರೀಮತ್ವಶ್ಮಕುಲತಿಲಕಂ ಬಳಗಾರಮಹೋದಧಿ ಕುರುಳಕಾಮಸೆಟ್ಟಿ (ಸೌಇಇ. IX – i, ೬೦-೬; 931) ; ಬಡಗಲು ಬಳಗಾರ ಬಳಿಯವರ ಗಡಿಯಂದಂ (ಸೌಇಇ. IX – ii, ೨೨೯-೦೩; 1401). **ಬಳಗಾಱ** : ೩. ಒಂದು ವಂಶದ ಹೆಸರು ; ಬಳಗಾರರ ಮನೆತನ : ಬಳಗಾಱರ ಕೋಕರಂ ಪುನುವಲವಳ್ಳಿಯಲಿಟ್ಟು ಪುಯ್ಕಲಂ ಪರಿದು ಮಾರ್ಬ್ಬಲಮಂ ತಳ್ತಱಿದು ಸ್ವರ್ಗಾಲಯಕೆ ಸನ್ದಂ (ಎಕ. VIII ಸೊರಬ. ೩೩೦-೩; 979). **ಬಳಗಾರ** : ೧. ಬಳಗಾರ ಮಣಿಗಾರ ಬಿಚ್ಚೋಲೆಯನ್ನು ಮಾರುವರು (ಸಪಸೂ. ೨-೧೭); ಬಳಗಾರಸೆಟ್ಟಿ ಹೋಗಯ್ಯ ನನ್ನ ತವರಿಗೆ (ಶಾಕರ. ೬೯);ಬಳಗಾರನ ಅಂಗಡೀಲಿ ಬಾಳೇಹಣ್ಣು ಸಿಕ್ಕೀತೇ? (ಗಾದೆ). [ಬಳೆ$_2$+–ಕಾಱ]

ಬಳೆಗಾಱಿಕೆ (ನಾ). ಬಳೆಯನ್ನು ಮಾರುವ ಉದ್ಯೋಗ : ಓಲೆಕಾಱಿಕೆ, ಕಂಚಗಾಱಿಕೆ, ಬಳೆಗಾಱಿಕೆ (ಕಬ್ಬಾಸು. ೯೩೦ ವ್ಯಾಖ್ಯಾ). [ಬಳೆಗಾಱ +–ಇಕೆ]

ಬಳೆಗೈ (ನಾ). ಬಳೆಗಳನ್ನು ಧರಿಸಿದ ಕೈ : ಬಳೆಗೈಯೆತ್ತಿ ಬಗಸೆಗಣ್ಣಳ ಕೋಮಲೆಯುರ್ಮಾಱಿಸುತೀಕ್ಷಿಪ ಕಡೆಗಣ್ಣ್ವಿಳಗೆಸೆದುವು (ಇಯಶಾ. ೦-೯೦). [ಬಳೆ$_2$+ಕೈ$_2$ (<ಕೆಯ್$_2$)]

ಬಳೆಗೊಯ್ (ಕ್ರಿ). ಕೊರಳ ಸುತ್ತಲೂ ಇರುವ ಮೃದ್ವಸ್ಥಿಯನ್ನು ಕತ್ತರಿಸು : ಊರುರ ಮೂಳೆಯಂ ತಿಂಬಗುರು ಪಯಗರಿಯ ತನಿಗೊಂಬಂ ಬಳೆಗೊಯ್ಯಲ್ ಪೂಣ್ದು ತುದಿಯೊಳೋಡಿ ಪೋಪ ಭೀರುವಪ್ಪ ಪಣಿದ ಕಾಜನಂತೆ (ಶಾಂತಿಪು. ೮-೯೯ ಪ). [ಬಳೆ$_2$+ಕೊಯರ್]

ಬಳೆಗೋ (ಕ್ರಿ). ೧. ಬಳೆಯನ್ನು ತೊಡಿಸು. – ಹೊಂದಿಸು. ೨. (ಆಲಂ) ಸೋತು ಹೋಗು; ಸೋಲೊಪ್ಪು : ತಗಯಲ್ ಜೈವಿನಿ ತಿಪ್ಪಿಕೊಣ್ಡು ಪರಿಯಲ್ ವೈಶೇಷಿಕಂ ಪೋಗದುಣ್ಡಗೆಯೊತ್ತಲ್ ಸುಗತಂ ಕಡಂಗಿ ಬಳೆಗೋಯಲ್ ಕಕ್ಷಪಾದಂ . . . ತೂಳ್ದಿತು ಗೋಪಣನ್ನಿ ದಿಗಿಭ ಪ್ರೋದ್ಭಾಸಿ ಗಂಧದ್ವಿಪಂ (ಎಕ. II, ೬೯-೯೯; ಸು. 1100). ೩. ವಶಪಡಿಸಿಕೊಳ್ಳು ; ಹತೋಟಿಗೆ ತರು: ಬಳೆಗೋದುದು ಕೀರ್ತಿದಿಶಾಕಳಭಂಗಳ ನಿಗ್ಗವಂಗಳೊಳ್ ರಿಪುಕಾಂತಾಪಳಿಯೊಳ್ ಭವತ್ಪ್ರತಾಪಂ ಬಳೆಗಳಿಯಿಸೆ ತಾನದಕ್ಕೆ ಮಚ್ಚರಿಸುವವೋಲ್ (ಯಶೋಧ. ೩-೯). [ಬಳೆ$_2$+ಕೋ$_1$]

ಬಳೆತೊಡಿಸು 'ಬಳೆದೊಡಿಸು' ನೋ.

ಬಳೆತೊಡು 'ಬಳೆದೊಡು' ನೋ.

ಬಳೆದೊಡಿಸು, ಬಳೆತೊಡಿಸು (ಕ್ರಿ). ೧. ಕೈಗೆ ಬಳೆಗಳನ್ನು ತೊಡಿಸು. ೨. ವೇಶ್ಯೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳುವ ಮೊದಲು ಕೈಗೆ ಬಳೆತೊಡಿಸುವ ವಿಧಿಯನ್ನು ಆಚರಿಸು : ಪೆಱರ ಪೆಂಡರ್ಗೆ ಬಳೆದೊಡಿಸುವ ಪೆಂಡರಂ ಕೊಟ್ಟು ಮಾನ್ಯಂಬಡೆವ . . . ಕಟ್ಟಿಗ್ಗರಂತೆ (ಧರ್ಮಾಮೃ. ೯-೦೬೨); ಬಳೆದೊಡಿಸಲೆಂದು ಸುದತಿಯ ಕೆಳೆಯನದೊರ್ವಂ ಕರಕ್ಕೆ ಕೆಯ್ನೂಡೆ (ಗಿರಿಕ. ೨-೦೩೬). **ಬಳೆತೊಡಿಸು** : ೩. ಚೊಚ್ಚಿಲುಗರ್ಭಿಣಿಯಾದವಳಿಗೆ

ಬಳೆನೆಯ ತಿಂಗಳಲ್ಲಿ ನಡೆಸುವ ಸೀಮಂತಸಮಾರಂಭವನ್ನು ಆಚರಿಸು: ಆಗ ನಾನು ಚೊಚ್ಚಿಲ ಬಸಿರು . . . ಬಳೆತೊಡಿಸುವ ಶಾಸ್ತ್ರವಾಡಿ ನಮ್ಮ ತಾಯಿ ನನ್ನನ್ನು ಕಳಿಸಿದರು (ಶಾಂಳಚ. ೪೬). [ಬಳ್ಳೆ+ತೊಡಿಸು]

ಬಳೆದೊಡು, ಬಳೆತೊಡು (ಕ್ರಿ). ೧. ಕೈಗೆ ಬಳೆಗಳನ್ನು ಹಾಕಿಕೊಳ್ಳು: ಎಳೆಯಂ ಕೋಳ್ಪಟ್ಟುಂ ಮುಂ ಬಳೆದೊಟ್ಟುಂ ಮುಟ್ಟುಗೆಟ್ಟುವಿರ್ದಿಂಗಳ್ ಒಬ್ಬಳನೆ ನುಡಿದವುದೆ (ಪಂಚಭಾ. ೦೨-೦೬೬); ಗಂಡುಗೆಟ್ಟು ಬಳೆದೊಟ್ಟು ಬೃಹನ್ನಳೆಯಾಗಿ ಪಾರ್ಥನಿರ್ದಿರವುವೆನಲ್ಕೆ ಪಾರ್ಥನದು ರಂಭೆಯು ಶಾಪಮೊ ತನ್ನ ಪಾಪವೋ (ಗದಾಪ. ೩-೩೦) ; ಕ್ರಿಯಾಸಮಾಸಕ್ಕೆ – ಬಳೆದೊಟ್ಟಂ ; ಕೆಳೆಗೊಂಡಂ (ಕಮರ. ೦೬೬ ಪ್ರಹೋ) ; ಹಲವು ಬಳೆಗಳ ಕೈಯೆ ಫಲಫಲಿರನುವುದು ಒಂಟಿ ಬಳೆದೊಟ್ಟ ತೈ ಪಾಪೆ (ಪಂಚಾಚ. ೨೦೦-೯೦). **ಬಳೆತೊಡು** : ೧. ನಿನ್ನಯ್ಯನೇಂ ಬಳೆತೊಟ್ಟ ನಟ್ಟುವನೊ ? ದಿಟ್ಟನಿಂದೆಂದಾದೊಡಂ ಪಂದೆ ವುಟ್ಟುವುದೆ ? (ಪಜ್ಞಾಗ. ೯೦-೨೦೯೬). ೨. (ಆಲಂ) ಸೋಲನ್ನು ಒಪ್ಪಿಕೊಳ್ಳು : ನಾನೇನು ಬಳೆತೊಟ್ಟು ಕೂತಿಲ್ಲ (ಚೂಡಾ). [ಬಳ್ಳೆ+ತೊಡು$_1$]

ಬಳೆದೋಳ್ (ನಾ). ಬಳೆಯು ಆಕಾರದ ಆಭರಣವನ್ನು ಧರಿಸಿದ ತೋಳು : ವನಲಕ್ಷ್ಮಿಗೆ ಸಕಲವಿಲಾಸಿನಿಯರ್ ಬಳೆದೋಳ್ಗಳಿಂದೆ ಜಾಯರಮಿಕ್ಕಲ್ (ಗಿರಿ. ೨-೨೬); ನವನರ್ತನದ ಹಸನಿಗಂ ಬಳೆದೋಳ ಭಾಗ್ಯನಿಧಿ ಹುಲಿಯುಗುರೆ ಸುಲಭಗಂ (ಪಸಪ. ೦-೧೩೦). [ಬಳ್ಳೆ+ತೋಳ್]

ಬಳೆಮುರಿ (ನಾ). ಒಂದು ಬಗೆಯ ಸಕ್ಕರೆ : ಪೊಟ್ಟಿ ಸಕ್ಕರೆ ಬೆಲ್ಲ ಬಳೆಮುರಿ ತವರಾಜ . . . ದ್ರಾಕ್ಷಿವಣ್ಗಳ ಹೊಜೆ ಸಾಲಿಟ್ಟವು ಕೊಟ್ಟಿಗೆ ಯೊಳಗೆ (ಶಾಂಪಾ. ೪೦-೪೩); ಬಳೆಮುರಿ ಸಕ್ಕರೆಯನು ಬಟ್ಟವಾಲೊಳು ಕಲಸಿ ಹೊಂಬಟ್ಟಲನೆತ್ತಿ ಲಲನೆ ನಲ್ಲನ ಕೈಗೆ ನೀಡುವಳು (ಪಭಪ. ೦೦-೩೦). [?]

ಬಳೆಯವಾಡ (ನಾ). ಒಂದು ಪ್ರದೇಶದ ಹೆಸರು : ಒನ್ನವಾಡ ಗುಂಗವಾಡ ಬಳೆಯವಾಡರೆನ್ನಾಡಾಳ ಸಿಯಳಾಜಿಸಾವಿ ಸರ್ಬರಸ ಕೊಟೋರ್ (ಪ್ಯಾಂ. ೦೧೫, ೦೦೬-೦; ಸು. ೪೭೦). [? + ಬಾಡ$_1$]

ಬಳೆಯಿಸು, ಬಳಯಿಸು, ಬಳೆಸು (ಕ್ರಿ). ೧. ಗಿಡ, ಮರಗಳು ವೃದ್ಧಿಯಾಗುವಂತೆ ಮಾಡು; ಬೆಳೆಸು : ಬಹುಪೋಷಣದಿಮ್ಮಾವಿನ ಸಹಕಾರದ ಸೊನೆಯ ಸೋನೆ ಬಳೆಯಿಸೆ ಬಳೆಗುಂ ಮಹಿಯೆನೆ ಬಣ್ಣಿಸುವ ಪಿತಾವಹಂ ಗವುರಿದೆಗ್ಗ ಮೊಗ್ಗೆ ನಿನಗಮುದೆನಗಂ (ಶಾಂಶಕ್ರ. ೦-೬೦); ಆ ಕಳಮಧಾತ್ರಿ ಕಣಿಶಖಾಚಾಕಲಿತವಯಃಪ್ರತಾನದಿಂ ಬಳೆಯಿಸೆ ನಿರ್ವ್ಯಾಕುಳವೆನೆ ರಾಜಶುಕಾನೀಕಶಿಶುಪ್ರತತಿ ಬಳೆವುದುಚಿತಸ್ಥಿತಿಯಿಂ (ಪಂಕ್ರಪ್ರ. ೦-೧೩). ೨. ಅಭಿವೃದ್ಧಿಗೊಳಿಸು; ಏಳಿಗೆ ಹೊಂದುವಂತೆ ಮಾಡು : ಪಲವು ಧರ್ಮಂಗಳ ಬಳೆಯಿಪುದಾಯಾಸಫಲವ ಭೋಗಿಪುದಾನಂದ (ಪಪಂ. ೨-೩೬). ೩. ಹೆಚ್ಚಿಸು; ಅಧಿಕಗೊಳಿಸು : ಕಳೆದುದು ಪತ್ರಭಂಗದ ದೆಡಂಗುಗಳಂ ಕುಟಿಲಾಲಕಂಗಳಂ ಬಳೆಯಿಸಿದತ್ತು . . . ಮೆಯ್ಗೆ ಪೊಳಕೋದಯವುಂ ಪಡೆದತ್ತು (ಆಂಪ್ರ. ೦೦-೦೪೬) ಇಲ್ಲದ ತಪ್ಪಂ ಕಲ್ಪಿಸಿ ಮೆಲ್ಲನೆ ಮುಳಿದೊಲ್ದು ಕೂರ್ಮೆಯಂ ಬಳೆಯಿಸುತುಂ ಪಲ್ಲವಕರ್ವೆರಸಿಸೆ ದರ್ಸಲ್ಲೀಲೆಯನಾಂತು ಲೋಲೆಯರ್ ಮುದದಿಂದಂ (ಕಾಕ್ಕ. ೦೦-೬೦) ; ದೇವಪೂಜೆಯು ದೇವರಿಗೆಱಗುವುದು . . . ತನ್ನ ಭಾವಶುದ್ಧಿಯ ಬಳೆಯಿವುದು (ಪಂಪ. ೪-೯). ೪. ಉಂಟುಮಾಡು; ಹುಟ್ಟಿಸು : ಚಕ್ರೇಶ್ವರಂ ವಾರ್ಧಿಭೂತಲನಾಥಂಗನುರಾಗಮಂ ಬಳೆಯಿಸಲ್ಕರ್ಘ್ಯ ಕ್ರಿಯಾತಂಡುಲಂಗಳಿವೆಂದಾದರದಿಂದೆ ಕೊಂಡನವಜೊಳ್ ಪತ್ತೆಂಟು ರತ್ನಂಗಳಂ (ಆಂಪ್ರ. ೦೨-೦೨೦). ೫. ಚಾಚು; ನೀಡು : ಆ ಕೇಶಿಯಂ ಮುಂಜಕೇಶಿ ಮಾರ್ಕೊಂಡು ಕರಮಂ ತೊಂತಿ ತದಾಸ್ಯದೊಳ್ ಬಳೆಯಿಸಲ್ ತದ್ವರ್ಧನೋದ್ರೇಕದಿಂ ಸೆರೆಗಳ್ ಬೀಗಿ ನೆಲಲ್ನೆಲಲ್ಗರೆಯೆ (ಪಪಂ. ೩-೪೬). ೬. ನಡೆಸು; ನೆರವೇರಿಸು: ಜರೆಂಗಿಸು : ಉತ್ಪಾತಶಾಂತಿಪೌಷ್ಟಿಕಕ್ರಿಯೆಗಳಂ ಮಹಾಬ್ರಾಹ್ಮಣರಿಂದಂ ಬಳೆಯಿಸಿ, (ಪಂಪಾ. ೦-೧೩೩ ಪ). ೭. [ಗಣಿತ] ಗುಣಿಸು; ಗುಣಾಕಾರ ಮಾಡು : ಕೊಳಗವೆನಿತಾದೊಡಂ ನೀಂ ಬಳೆಯಿಸು ನಿಧಿಯುಗ್ಮದಿಂದೆ ಖಂಡುಗ ವಕ್ಕುಂ ಬಳೆಯಿಸು ನಿಧಿಯಿಂದರ್ಧಿಸುಯಿಳೆಯೊಳು ವರುಷಕ್ಕೆ ಬಳ್ಳ ಖಂಡುಗವುಕ್ಕುಂ (ಪ್ರಸಾಸಾ. ೩೫೨ ಕೈಪ್ರ). **ಬಳೆಯಿಸು** : ೧. ಎಳನೀರಿಂ ನಾಳಿಕೇರಂ ಬಳೆಯಿಸೆ ಕದಳೀಷಂಡವುಂ . . . ಸೊಗಯಿಸುಂ ತತ್ಪುರೋದ್ಯಾನಷಂಡಂ (ಪಜ್ಞಕ್ಷ. ೨-೩೪), ಅಂಗಜಂ ಪರ್ವಿಸಿದ ಲತೆ ಸುಧಾಸೂತಿ ಪೀಯೂಷಧಾರಾಂಬುವೆ ಪೊಯ್ನೀರಾಗೆ ಮುದ್ದಿಂ ಬಳೆ [ಪಾಣಾಂ.ಳೆ]ಯಿಸಿ ದೆಳದೆಂಗೆಯ್ದೆ ಮಂದಾನಿಲಂ ತೋಂಟವೆಸಂಗೆಯ್ದುಟ್ಟಿಱಿಂ ಪೆರ್ಚಿಸಿದ ವಿಚಕಿಳಾ ರಯ್ಯಂ (ಕಂಕ್ರಪ್ರ. ೦-೬೭); ಕೆಲೆಯು ಪಗೆಯೊಡನೆ ಪಗೆಯುಂ ಬಳ [ಪಾಣಾಂ.ಳೆ]ಯಿವುದಂ ಬಿಟ್ಟು ಕೂಸುಗೊಟ್ಟನುನಯಮುಂ ಬಳ [ಪಾಣಾಂ.ಳೆ]ಯಿಸುವುದು (ಪಂಚಾಪ್ರ. ೦೩-೩೬): ಉಗುರ್ಗಳ ಚೆಲ್ವಿಕೆ ಯಿಂದುಡುರಾಜಿಯು ಮೊಗಗಡಿಸುತ ಪಲ್ಪೆಳಗಿನ ಒಗುವಿಗೆಯುಂ ಬಳಯಿಸುತ ಬೆಳ್ದಿಂಗಳ್ ಬಗೆಗಾರ್ತಿಯರೆಯ್ದಿದರು (ಕುಚಾಸಾಂ. ೫೬-೦೮೬). ೪. ಕುಸುಮಾವಳಿಯುಂ ತಳೆಯದ ನಿನ್ನ ಬಟಲ್ಕಾಡಿ ಬಳೆಯಿಸಿದವುದೆನ್ನ ವನಕಿ ಖೇದವನಿಃಗಳ್ (ಕಾರಂಭಾ. ೫೬೮); ದಳಿತಲಸತ್ಕುಂದದ್ಯುತಿಯಳಂಕೃತಾಶೇಷಭುವನಮಾ ನೃಪನ ಯಶಂ ಬಳೆಯಿಪುದರಿನೃಪವನಿತೋದ್ಯದ್ವಳಮುಖಚಂದ್ರಂಗೆ ಮಳಿನತೆಯನಿದು ಚಿತ್ರಂ (ಪರ್ಣಪ್ರ. ೦-೬೯). ೬. ಪೊಡೆ . . . ಬಳೆಯಿಸು ಏಕೆಂದೊಡರಿಪ ವಾಕ್ಯಂಗಳ್ ತಾ ಪೊಡವಿಯ ಸರರ್ಗೆಲ್ಲ ಗುಣಿಯಿಸೆಂಬುವು ನಿರತಂ (ಪ್ರಕಪಾ. ೦೦-೦೦). **ಬಳೆಸು** : ೩. ವಿಲಾಸವನಿಲರ್ಚಿಸುತುಂ ಮುಳಿಸಂ ನೆಗಟ್ಟುತುಂ ವಿಕಸಿತ ವೋದವುಂ ಬಳೆಸುತುಂ ಸಲೆ ಕಾಂತೆಯರಾದವೊಪ್ಪಿದರ್ (ಕಾಕ್ಕ. ೦೦-೬೯). [ಬಳೆ$_1$+–ಇಸು$_3$]

ಬಳೆವೋಗು (ಕ್ರಿ). ಆನೆಯ ದಂತದ ತುದಿಗೆ ಅಳವಡಿಸಿದ ಅಣಸು ಕಳಚಿ ಬೀಳು : ಕಟ್ಟಿದಿರೊಳೆ ನೂಂಕಿದಾನೆಗಳ ಕೋಡುಗಳಂ ಬಳೆವೋಗೆ ಪೊಯ್ದುಂ (ಪಂಕಥಾ. ೦೦-೪೦). [ಬಳ್ಳೆ+ಪೋಗು$_1$ (<ಪೋ$_1$)]

ಬಳಿಸು 'ಬಳೆಯಿಸು' ನೋ.

ಬಳೋನ್ಮತ್ತ 'ಬಲೋನ್ಮತ್ತ' ನೋ.

ಬಳ್ಕಿಸು, ಬಳುಕಿಸು (ಕ್ರಿ). ಬಾಗುವಂತೆ ಮಾಡು; ಬಾಗಿಸು : ಫಲಭರದಿಂದೆಱಗುವ ಚೂತಲತಿಕೆಯುಂತಿರೆ ಕುಚದ್ವಯಂ ಬಳ್ಕಿಸೆ . . . ಲಲನೆ ಭೂಪತಿಗೆ ಪೊಡಮಟ್ಟಳ್ (ಕುಸುಪ್ರ. ೬-೧೬); ಕ್ಷೋಣಿಯಂ ಪಬ್ಬದೇಟ್ಗಿ ಬಳ್ವಳಿ ಬಳ್ಕಿಸುತ್ತಿರೆ . . . ನೃತ್ಯಮನಾಡಿದಂ ಸುರನಾಯಕಂ (ಅಪಂಪ್ರ. ೦೪-೬೦); ಕೈಯಂ ಮುಂಗಿದು ಬಳ್ಕಿಸಿ ನಡುವನೊಯ್ಯನೆ ನೆಗಟ್ಟಿ ಮುನ್ನಿನ ತನ್ನ ಭಾವದಲಿ ಸೇರಿ (ಪಗಪ್ರ. ೪-೦೨). **ಬಳುಕಿಸು**: ಪಾಸುಗಿದು ಬಳುಕಿಸುವ ತಾರೆಗಳ ತಱುದಗಿವ ಗರ್ವಿತ ಗೌರವರನರ್ಬುದವಸಂಗದವೀರ ತೋಱಿಸಿ ಮೆಟ್ಟಿಸಿದನು (ಕೂಕಥಾ. ೪-೬-೩೦).

[ಬಳ್ಕು$_1$ (<ಬಳ್ಳು$_1$) + – ಇಸು$_3$]

ಬಳ್ಕು$_1$ 'ಬೆಳ್ಕು$_1$' ನೋ.

ಬಳ್ಕು$_2$ 'ಬೆಳ್ಕು$_2$' ನೋ.

ಬಳ್ಕುಡಿ 'ಬಕ್ಕುಡಿ$_1$' ನೋ.

ಬಳ್ಕುಡಿಗೆಯ್ 'ಬಕ್ಕುಡಿಗೆಯ್' ನೋ.

ಬಳ್ಳುವೋಗು (ಕ್ರಿ). ನಡುಕವನ್ನು ಹೊಂದು ; ನಡುಗು : ನಯಹೀನರ್ಬಿಡಿದಿರೊತ್ತಿ . . . ನಿರ್ದಯದಿಂ ಪೀಡಿಸಿ ಬಳ್ಳುವೋಪಿನೆಗೆ ಮೆಲ್ವಂ ತಾಪನಂ ಮೇಗೆ ಮೂಗಿಯು ಮೂಗಂ ತಲೆವಾರ ಕೊಯ್ದು (ಸುಳುವಾ. ೬-೨೯). [ಬಳ್ಕು$_2$(<ಬಿಳ್ಕು$_2$)+ಪೋಗು$_1$(<ಪೋ$_1$)]

ಬಳ್ಕುಱು 'ಬೆಳ್ಕುಱು$_1$' ನೋ.

ಬಳ್ದು 'ಬಾಟ್$_1$' ಪರಾ.

ಬಳ್ವಳ$_1$ (ನಾ). ೧. ಹೆಚ್ಚಳ; ಅತಿಶಯ; 'ಬಳ್ವಳಿಕೆ' ಪರಾ. ೨. ಹಿರಿದಾದುದು: "ಬಳ್ವಳಮೆಂದು ಪಿರಿದಾಗಿ ಬೆಳೆದುದು" (ಕಶಾ. ೭೦-೬೦೨). ೩. ವಿಸ್ತಾರವಾದುದು; ವಿಶಾಲವಾದುದು: ಆತನ ಪಡೆಗೆ ನಡೆಯಲೆಡೆ ಮಾಡಿದಂತೆ ಬಳ್ವಳಾದ ದೆಸೆಗಳುಮಾತನ ವಿಜಯಸೈನ್ಯಕ್ಕೆ ತಡೆಯದೆ ಪಾಯಲ್ವೇಟ್ಟು ಮೆಂಬಂತೆ ನೆಲೆಯಾದ ಮಹಾನದಿಗಳುಂ . . . ತನ್ನ ಬರವಂ ಪ್ರಕಟಂಮಾಡೆ (ಆದಿಪು. ೦೧-೬ ವ).

ಬಳ್ವಳ$_2$ 'ಬಳ್ವಳಂ' ನೋ.

ಬಳ್ವಳಂ. ಬಳುವಳ, ಬಳ್ವಳ$_2$ (ಅ). ಹೆಚ್ಚಾಗಿ : ಅಧಿಕವಾಗಿ : ಅತಿಶಯವಾಗಿ : ಪರಿಕಿಪೊಡಗ್ನಿಗಮಾಕೆಯ ವಿರಹಾಗ್ನಿಗಮಿಲ್ಲ ಭೇದ ಮಲ್ಲದೊಡೇಂ ಕಪ್ಪುರದ ರಜಕ್ಕಂ ವೀಜನದೆರಲ್ಗಮದು ಕಿಡದೆ ಬಳ್ವಳಂ ಬೆಳೆದಪುದೇ (ಸಂಪ್ರಪು. ೫-೧೨೯); ಬಲ್ಸೇದೆ ಬಳ್ವಳಮುಣ್ಮಲ್ಕೆರ್ದೆಯೊಳ್ದಡಂ ಬಡಿದು ನೇತ್ರಂ ಕೆಂಡದಂತಾಗೆ ಗಲ್ಗಲನಾಗಳ್ವೊರಮಟ್ಟನಂದಿಳಿದು ತೇರಂ ಮಂತ್ರಿಯುಬ್ಬೆಗದಿಂ (ಸಂಪ್ರಶ್ನು. ೦೬-೦೫). ಬಳುವಳ : ಕಿಡೆ ವಳಿಗಳು ಬಳುವಳ ಬಳೆಯೆ ತೆಳುವಸಿಕ್ಕೋಮಳಾಂಗಮುಂ ಜವಜವಾಗೆ ಬೆಳೆದುದೆ(ದು) ಗರ್ಭಂ (ಕಇ. 1. ೨೫-೫೦ ; 1186) : ನಳನಳಿಸಿ ಬಳು [ಪಾಠಾಂ. ಳ]ವಳ ಬೆಳೆದೆಳಲತೆಯ ತಾಂಬೂಲಲತೆಯ . . . ಚಂದಕಲತೆಯ ತಿಂತಿಣಿಯಿಂ ಸಲ್ಲಲಿತಮಾದ ವಲ್ಲೀವನಪ್ರದೇಶದೊಳ್ (ಧರ್ಮಶ. ೦-೫೨ ವ). ಬಳ್ವಳ$_2$: ಪದ್ಮಬಾಂಧವಂ ಬಳ್ವಳ ನೀಡಿದಂ ಕರಸಹಸ್ರಮಂ (ಆಪಪು. ೬-೬೯) : ಅಳ್ವೆ ರಿಪುವಂಶರಧಮಂ ಬಳ್ವಳ ಬಗೆದೊಗೆದ ತನ್ನ ವಿಕ್ರಮದಹನಂ ತೋಳ್ವಲಮಂ ಸರ್ವಾರ್ಥನಂದನಂ ಸಿದ್ಧಾರ್ಥಂ (ವರ್ಧಮಾ. ೧೦-೨೨); ಬಳ್ವಳ ಬೆಳೆದ ಬಾಳಚೂತದ ಬಾಟ್ಟೊಂಪಂಗಳುಮಂ (ಆರ್ಧನೇ. ೩-೦೦ ವ). [< ಬಳ್ವಳ$_1$]

ಬಳ್ವಳನೆ (ಅ). ಅಧಿಕವಾಗಿ : ಹೆಚ್ಚಾಗಿ: ತುಂಬ: ಏಳೆಯುಂ ಕೋಳ್ವಟ್ಟುಂ ಮುಂ ಬಳೆದೊಟ್ಟುಂ ಮುಟ್ಟುಗೆಟ್ಟುಮಿರ್ದೀಗಳ್ ಬಳ್ವಳನೆ ನುಡಿದಪುದೆ (ಸಂಪಭಾ. ೦೨-೦೭೭) : ಬಳ್ವಳನೆ ಬಳೆದ ನಿಜರುಚಿಗಳ್ವೆರಸುಜ್ಜ್ವಲಶಿಲಾತಳಂ ಮನಮಂ ಬೆಂಕೊಳ್ವಘಮನರ್ಧಚಂದ್ರಂಗೊಳ್ವಂತೆಸೆದಿರ್ದುವರ್ಧಚಂದ್ರಾಕೃತಿಯಿಂ (ಅಪಪು. ೪-೩೫) : ಅಂಬುದನಿನದಾಡಂಬರ ಮಂಬರದೊಳಳುಂಬಮಾಗಳೆಸೆದಪುದೆನೆ ಬೇಗಂ ಬಳ್ವಳನೆಸೆದುದು ಭೋರೆಂಬಿನಮಾ ಮುನಿಮುಖಾಭ್ರವಿಭ್ರಮನಿನದಂ (ಸುಕುಮಾ. ೦೧-೩೯).

[ಬಳ್ವಳ$_2$ (< ಬಳ್ವಳಂ) + — ಅನೆ$_1$]

ಬಳ್ವಳಿಕೆ (ನಾ). ೧. ಅಧಿಕವಾದ ತೂಗಾಟ ; ಅತಿಶಯವಾದ ಬೀಸಾಟ : ತನ್ನ ಬಾಯ್ದೆಱೆಯೊಳಾಲದ ಪಣ್ಣನೆ ಮೈಯ ಬಣ್ಣದೊಳ್ ಕೊಸಗನೆ ತನ್ನ ಬಳ್ವಳಿಕೆಯೊಳ್ ಸೆಳಗೊಂಬನೆ ಪೋಲ್ತು (ಆದಿಪು. ೦೨-೩೯) ; ತಳರ್ದುದು ಕರ್ಣತಾಳಪವನಾಹತಿಯಿಂ ಜಳರಾಶಿ ಕೆಯ್ಯ ಬಳ್ವಳಿಕೆಗೆ ದಿಗ್ಗಜಂ ದೆಸೆಯಿನತ್ತ ತೆರೆಳ್ದುವು (ಸಂಪಭಾ. ೦೦-೬೦). ೨. ಅಧಿಕವಾದ ಚಲನವಲನ : ಕಿಡುತಂದುದು ಮನದಱಿಯಮೆ ನುಡಿಯ ತೊದಳ್ ಪಿಂಗಿ ಪೋಯ್ತು ತಳರ್ವಡಿಯೊಳ್ ಬಲ್ಪಡರ್ದುದು ಬಳ್ವಳಿಕೆಗೆ ತನುವೆಡೆ ಗೊಟ್ಟುದು ನಾಡೆ ಶೈತವಾತಿಕ್ರಮದೊಳ್ (ಸಂಪ್ರಪು. ೪-೨). ೩. ವಿಸ್ತಾರವಾದುದು ; ವ್ಯಾಪ್ತವಾದುದು : ಬಳ್ವ ಪುಳಿಕ . . . ವೈವರ್ಣತ್ವ ಬನು ತಾಳ್ವ ಪೊಗಂ ತವಕಿಪ ತನು ತೂಳಂಗೊಳ್ವಂಗಂ ಹರ್ಷಜಲಂ ತೀವಿದ ಬಳ್ವಳಿಕೆಯ ನೋಟಂ ಕಣ್ಗೊಪ್ಪಿದುವಾ ನೃಪಮಿಥುನದೊಳು (ಪಡುಕಾ. ೬-೩೦). [ಬಳ್ವಳ$_1$ + — ಇಕೆ]

ಬಳ್ವಳಿಕೆವಡೆ (ಕ್ರಿ). ವಿಸ್ತಾರವಾಗು; ಪೃಥುಲವಾಗು : ನಡೆ ನೋಟ್ಟರ ಕಡೆಗಣ್ಣುಂ ಕಡುನಲ್ಲರ ಮನಮುಮೊಡನೆ ಪೊತ್ತುವು ಪುರದೊಳ್ ಮಡದಿಯರ ಮೊಲೆಯನಲ್ಲದೊಡುಡಿಯದೆ ಬಳ್ವಳಿಕೆ [ಪಾಠಾಂ. ಬಳನಳಿಕೆ, ಬಳುವಳಿಕೆ]ವಡೆದ ಬಡನಡು ಭರದಿಂ (ಲೀಲಾವ. ೬-೦೦; ಆರ್ಧನೇ. ೪-೨೨ ನೋ).

[ಬಳ್ವಳಿಕೆ + ಪಡೆ$_1$]

ಬಳ್ವಳಿಸು (ಕ್ರಿ). ದೊಡ್ಡದಾಗಿ ಬೆಳೆ; ಹಿರಿವಾಗು: ಶಬರನ ಬೀಸುಂಬಲೆಯ ಪಾಸಮೆನಿಸಿ ಬಳ್ವಳಿಪ . . . ಲಾಂಗೂಲಲತೆಯೊಳಂ (ವರ್ಧಪು. ೦೦-೩ ವ); ಗುಲ್ಮಕಂಟಕ ವಿಕೀರ್ಣಮಾಗಿ ಬಳಸಿ ಬಳ್ವಳಿಪ ಬಾಟ್ವೇಲಿಗನತಿದೂರದೊಳ್ (ಪುಷ್ಪಪು. ೨-೬೦ ವ).

[ಬಳ್ವಳ$_1$ + — ಇಸು$_3$]

ಬಳ್ಳ, ಬಳ$_1$ (ನಾ). ೧. ಒಂದು ಅಳತೆಯ ಪ್ರಮಾಣ; ನಾಲ್ಕು ಸೇರಿನ ಅಳತೆ: ℘ ಎರಡು, ನಾಲ್ಕು, ಹತ್ತು ಅಥವಾ ಹನ್ನೆರಡು ಸೇರಿನ ಅಳತೆಗಳು ಬಳ್ಳವೆಂಬ ಹೆಸರಿನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಪ್ರಚಾರದಲ್ಲಿದೆ : " ನಾಲ್ಕು ಸೊಲ್ಲಗೆಗೆ ಮಾನಮವು ನಾಲ್ಕಾಗೆ ಬಳ್ಳಮವು ನಾಲ್ಕೆನಲು ಕೊಳಗ" (ಮಂಗಶಾ. ೦೦೯-೦೦); ಧಾನ್ಯಂಗಳೊಳೆಲ್ಲಂ ಪೊಂಗೆರಡು ಬಳ್ಳವಂ ಕೊಳ್ವಂತಾಗಿ (ಸೌಇಇ. IX-i, ೬೯-೦೯; 1035); ಕಂಡುಗ ಕೊಳಗ ಬಳ್ಳ ಮಾನ ಸೊಲ್ಲಗೆಯಿನಿತು ಮೊದಲಾಗಿ (ಸಿದ್ಧರಾ. ೬-೭೦). ೨. ಧಾನ್ಯವನ್ನು ಅಳೆಯುವ ಸಾಧನ: ನಾಲ್ಕು ಸೇರು ಹಿಡಿಸುವ ಒಂದು ಸಣ್ಣ ಕೊಳಗದಾಕಾರದ ಸಾಧನ : ಸೆಟ್ಟಿಯ ಬಳ್ಳಂ ಕಿಱುದು (ಪಂಪಭಾ. ೦೨-೦೭೫): ಬಳ್ಳದ ಬಾಯಂತೆ ಒಂದೇ ಮನದ ಮಾಡಿ (ಬಸವ. ೭೩೫); ನಮ್ಮ ಸೆಟ್ಟಿಯ ಮಾತೊಳ್ಳಿದುವು ಬಳ್ಳಂ ಕಿಱುದು (ಧರ್ಮಾಮ್ಯ. ೬-೨೩೨). ೩. ತಟ್ಟೆ; ತಳಿಗೆ : ಊಟಕ್ಕೆ ಬಳ್ಳ ಹಾಕಿದ್ದಾರೆ (ಕೂಡಿ). ಬಳ್$_1$: ೧. ಸೆಱಗಿನೊಳಂದೊರ್ಬಳ ನೆಲ್ಲಂ ಕಟ್ಟಿಕೊಂಡವಂ ಪೊಱಮಟ್ಟಂ (ದಶಕು. ೦೨-೦೦೬); ಸಲಿಕೆಯ ಹಾಗೆಯಲಿ ಭತ್ತ ಬಳ ೩೦ ಲೆಕ್ಕದ ಮೂಡೆ (ಶೌಇಎ. ಮಂಗಳೂರು. ೪೬೫-೨೪; 1312).

[ದೇ.೫ ತಮಿ. ಮಲ. ವಳ್ಳಮ್; ತುಳು. ತೆಲು. ಬಳ್ಳ]

ಬಳ್ಳಂಗೆಱೆ, ಬಳ್ಳಗೆಱೆ, ಬಳ್ಳವಗೆಱೆ (ನಾ). ಒಂದು ಕೆರೆಯ ಹೆಸರು : ಬಳ್ಳಂಗೆಱೆಕ್ಷೇತ್ರೇ ಸಹಸ್ರವಲ್ಲೀಮಾತ್ರ ಕ್ಷೇತ್ರಂ ದತ್ತಂ (ಎಇ. XIII. ೦೯೩-೦೦ : 902). ಬಳ್ಳಗೆಱೆ : ಉತ್ತರತ; ಬಳ್ಳಗೆಱೆಯ ಪಡುವ (ಇಅ. XII. ೦೬-೪೬; 813). ಬಳ್ಳವಗೆಱೆ : ಬರಡ ಕೆಱೆಯ ಮೂಡ ಕಡೆಗೋಡೆ ಬಳ್ಳವಗೆಱೆಯ ಮೂಡಣ ಕಡೆಗೋಡೆ (ಮೈಆರಿ. ೦೯೦೯. ೦೦-೬೭; 900). [ಬಳ್ಳ ? + ಕೆಱೆ]

ಬಳ್ಳಂಗೊಱೆ (ಕ್ರಿ). (ಬಳ್ಳದಷ್ಟು) ದೊಡ್ಡದಾಗಿ ಕೊರೆದು ರಂಧ್ರ ಮಾಡು : ಪಲ್ಗಳಂ ನುರ್ಗುಗುಟ್ಟುವುದುಂ ಕೈಗಳಂ ಗೊಟ್ಟಂಗೊಱೆವುದುಂ ಬಾಯುಂ ಬಳ್ಳಂಗೊಱೆವುದುಂ (ಸುಕುಮಾ. ೦೧-೪೭ ವ).

[ಬಳ್ಳ + ಕೊಱೆ$_1$]

ಬಳ್ಳಗೆಱೆ 'ಬಳ್ಳಂಗೆಱೆ' ನೋ.

ಬಳ್ಳಜ್ಜ (ನಾ). ಒಬ್ಬಾತನ ಹೆಸರು : ಕೊವುಜಗೆಱೆಯ ಗವುಣ್ಡ ಬಳ್ಳಜ್ಜನ್ತನ್ನು[ಮ]ಡಿಸಿದ ದೇಗುಲಕೆ ಬಿಟ್ಟ ಕೆಯುಂ . . . ಕಱೆದು [ಕೊ]ಣ್ಡರಪ್ಪಡೆ ಕವಿಲೆಯುವ ಕಱುನಱೆದರ ಲೋಕಕೆ ಸಲ್ಗು (ಸೌಇಇ. XI — i. ೩೫-೩; 933). [? + ಅಜ್ಜ$_2$]

ಬಳ್ಳವ (ನಾ). ಒಂದು ವಂಶದ ಹೆಸರು ಮತ್ತು ಆ ವಂಶಕ್ಕೆ ಸೇರಿದವನು (?) : ಗಣೇಗೂರಾ ನರೆವೆವರಂ ಬೆಳ್ಳೆಮಣಿಯರುಂ ಸನ್ದಿಗಾಲಾ ಪುಟ್ಟರುಂ ಬಳ್ಳವರುಂ ಪಸುನ್ಗಾಯ ಕಟ್ಟಾತರು ಬಿರದರುಂ ಇ ಪೊಖನಂ ನಡಯಿಸಿದೋರ್ (ಎಕ. XVI ಗುಬ್ಬಿ. ೬೫-೫೯; 738). [?]

ಬಳ್ಳವಗೆಱೆ 'ಬಳ್ಳಂಗೆಱೆ' ನೋ.

ಬಳ್ಳವಳ್ಳಿ 'ಬಱಿವಱಿ$_1$' ನೋ.

ಬಳ್ಳವಾಡಿ (ನಾ). ಒಂದು ಊರಿನ ಹೆಸರು : ಬಟ್ಟುದು ಬಳ್ಳವಾಡಿ

ನೆಱ್ ನಂಬಿರ್ದುದಾರುಹತಂ ಜಿನೇಂದ್ರನಂತಿರ್ದ ಮಹಾನುಭಾವರ್ ×××(ಕಮದ. ೨೯ ಪ್ರಯೋ). [ಬಳ್ಳ? + ಪಾಡಿ2]

ಬಳ್ಳವಿನಾಡು (ನಾ). ಒಂದು ಸ್ಥಳದ ಹೆಸರು : ಇದರ್ಕ್ಕಾ ಸನ್ದಿನಾಡಯ್ಯೂಱುಂ ಮಯ್ಯೂರ್ನಾಡೆಟ್ಟತ್ತು ಬಳ್ಳವಿನಾಡು ಸಾಕ್ಷಿ (ಎಕ. IV, ಕಡೂರು. ೯-೨೩; ಸು. 990 ?); ಬಳ್ಳವಿನಾಡ ಹಡಿಯವೊಳಲು (ಎಕ. V ಶಿಂಗಟೂರು. ೩೯-೮೨; 1117). [ಬಳ್ಳವಿ? + ನಾಡು]

ಬಳ್ಳಿ (ನಾ). ೧. ಹಬ್ಬಿ ಬೆಳೆಯುವ ಸಸ್ಯ; ಹಂಬು; ಲತೆ : "ಲತಾ, ಪ್ರತಾನಿನೀ . . . ಪ್ರತತಿಃ—ಈ ಐದು ಬಳ್ಳಿ (ಹಲಾಯು. ೩೦-೨೬); ಬಳ್ಳಿಯುಂ ಕೊರಲೊಳ್ ತಗುಳ್ಚಿಯೆಬಲೆ ಪಿಡಿದುಕೊಂಡು (ಪಡ್ಮಾಣ. ೦೨೦-೦೫); ತವರಾಜದ ಸಸಿಯ ಮೇಲೆ ಸವಿಯ ಬಳ್ಳಿಯನಡರಿಸುವಂತೆ (ಪಂಚಿಕ. ೦೯-೩೯); ಪಡೆಯ ಕಾಲ್ದುಳಿಗಾಗ ಗಿಡು ಬಳ್ಳಿ ಪೆಮ್ಮರ ಪುಡಿಯಾಗೆ (ಶಂಪಾ. ೦೨-೬). ೨. ವೀಳೆಯದೆಲೆಯ ಬಳ್ಳಿ; ನಾಗವಲ್ಲಿ: ಚನ್ದ್ರತೇಜಭಟ್ಟಾರರ್ಗ್ಗೆ ಮಾವಿನೂರೊಳ್ ಬಗೆಗ[ನು] ಕೊಟ್ಟಂ ಸಾವಿರಂ ಬಳ್ಳಿಯ ತೋಣ್ಬದ ಸಾಮ್ಯಮು ಮುಗಿನ ಕಾಡಮ್ಮನುಂ ಎಱ್ನಾಗನುಂ ಕುಪ್ಪನುಂ ಮಾದನುಂ ಒಕ್ಕಲ್ತನಂಗೆಯ್ದೆ (ಎಇ. XXVI, ೬೨-೦೩; ೨೦೬); ಪನ್ನಿರ್ಮತ್ತರು ಸಾಯಿರ ಬಳ್ಳಿಯ ಏಳಕ್ಕಿಯ ತೋಣ್ಬಮುಮ್ ಕೊಟ್ಟರ್ (ಎಕ. XI, ಶಕ್ರದು. ೨೬-೦೬; 947 ?); ಸಾಯಿರ ಬಳ್ಳಿಯ ತೋಂಟಮಂ ದೇವರ್ಗ್ಗೆ ಕೊಟ್ಟರ್ (ಇಇ. XII, ೨೩೬-೬; 950). ೩. ಹಗ್ಗ; ಕಣ್ಣಿ : ಎಳೆತಂದು ಕಡೆಗೋಲ್ವಳ್ಳಿಯಲಿ ಕೈಗಟ್ಟಿ ಕಂಬದಲಿ ಬಂಧಿಸಿದಳು (ಶಾಳ್ಕಣಾ. ೨೦-೦೩); ಮೇವಿಗೆ ಬಿಟ್ಟಿದ್ದ ಹಸು ಕತ್ತಲಾದರೂ ಮನೆಗೆ ಬರಲಿಲ್ಲವಂತೆ. ಕೈಯಲ್ಲಿ ಬಳ್ಳಿ ಹಿಡಿದು ಮಂಜರೇ ಹಕ್ಕಲ ತುಂಬ ಹುಡುಕಾಡಿದರು (ಸೀಪಪು. ೫೬). ೪. ಸುತ್ತು; ಕೊಂಕಾದ ಭಾಗ : ಒಂದು ಬಳ್ಳಿ ಚಕ್ಲಿ ಕೊಡು, ಚಹಾದ ಜೋಡಿ (ಗಂಸಾಯಿ. ೮೦). ೫. ದೀರ್ಘದ ಗುರುತು ಮುಂತಾದ ಕಾಗುಣಿತ : ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಟ ಚೆಲ್ವು . . ಬಳ್ಳಿಯೊಳೊಡಂಬಡುತಿರ್ಪ ನಯಂ (ಕುಸ್ವಕ. ೦೯-೫೯); ನಂತರ ಅವರು ಕಾಕ ಬಳ್ಳಿ ಕಲಿಸಿದರು (ಕೃಷ್ಣಕಿ. ೦೨೦). ೬. ಸಂಬಂಧ; ನಂಟು : ತಮ್ಮಂ ಸಯ ಬಳ್ಳಿಯುಂ ನಿಗಳಮುಂ ತ[ಳ್ತ]ಂದುವುಂ ಬಳ್ಳಿ ಸಂಕಲೆಯುಂ ಪೋದ ಗಜಂ ಬನಕ್ಕೆ ತಳರ್ವಂತುದ್ವೇಗದಿಂ ಮೋಹನಶೃಂಖಲೆ ಪಾಱೇಱ್ ತಪೋವನಕ್ಕೆ ತಳರ್ದು (ಶಾಂತಿಪು. ೯-೦೦೬). ೭. ವಂಶದ ಕುಡಿ; ಸಂತಾನ : ನಿನ್ನ ಬಳ್ಳಿ ಹಬ್ಬುತ್ತದೆ. ಧಾರ್ಮಿಕವಾಗಿ ಬಾಳು (ಪಟ್ಟಣ. ೯); ಹಾಲುಂಡ ತವರೀಗೆ ಏನೆಂದು ಹಾಡಲೆ ಹೊಳೆದಂಡೆಲಿರುವ ಕರಕೀಯ ಕುಡಿಯಂಗ ಹಬ್ಬಲೆ ಅವರ ರಸಬಳ್ಳಿ (ಪಪಗೀ. ೫೫). ೮. (?): ಶ್ರೀಲೋಕಪಾಲೇಶ್ವರಕಂ ಪಾಱೆ ಬಳ್ಳಿ (ಇಇ. X, ೧೬೯-೬; 733).

ಬಳ್ಳಿವಳ್ಳಿ (ದ್ವಿರುಕ್ತಿ) = ೧. ಹಬ್ಬಿಕೊಂಡಿರುವಿಕೆ; ವ್ಯಾಪಿಸಿರುವಿಕೆ; ಹಬ್ಬುಗೆ : ಬಳಸಿದ ಮಾಧವೀಲತೆಯ ಬಳ್ಳಿವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳ ಬಳೆದೆಳೆದಳಿಸುವ ಪೊಸ ಕೆಂದಳಿರ್ಗ ಗೊಂದಳದೊಳ್ (ಅಪಿಪು. ೦೦-೭೦ ಪ). ೨. ಆಧಿಕ್ಯ; ಅತಿಶಯ; ಹೆಚ್ಚಳ: ರತ್ನಭೂಷಣದ ಚೆಲ್ವನುರಾಗದ ಬಳ್ಳಿವಳ್ಳಿಯಂ ಹೃದಯದೊಳಂದು ಪರ್ವಿಸುವುದುಂ (ಶುಭಚಂ. ೯-೬೯). ೩. ಸಮೂಹ ; ಗುಂಪು : ಓಳವಟ್ಟು ಬರ್ಪ ಶುಭದ ಬಳ್ಳಿ[ಪಾಣಾಂ. ಳ್ಳ]ವಳ್ಳಿಗಳುದುಂ (ಅಪಿಪು. ೦೨-೬೯ ಪ). ೪. ಪರಂಪರೆ : ಅದಿರದೆ ಮೋಹವಿರೋಧಿಯು ಪುದಿದೊಡವಿದ ಬಳ್ಳಿವಳ್ಳಿಯಂ ಪಱಿದು (ಶಾಂತಿಪು. ೬-೨೬) ; ಪಿತೃಗಳುಪಾರ್ಜಿಸಿಟ್ಟ ಸಿರಿ ಪ್ರವ್ವನದೇಟ್ಟಿಗೆ ಪೆಱಂಗಿದಿಲ್ಲೆನಿಪ್ಪತಿಶಯರೂಪಶಕ್ತಿಗಳವಲ್ಲವೆ ಹಾನಿಯ ಬಳ್ಳಿವಳ್ಳಿ ನಿಶ್ಚಿತಂ (ಶಾಕಂಪು. ೫೬೯). ಬಳ್ಳಿಗುರುಡ = ಒಬ್ಬನ ಕೈಯನ್ನು ಹಿಡಿದ ಇನ್ನೊಬ್ಬನಂತೆ ಸಾಲಾಗಿ ನಿಂತ ಕುರುಡರಲ್ಲಿ ಒಬ್ಬ : ಮೂಢಮತಿಯಿಂದ ಕಾಡ ಲಿಂಗವ . . . ಪೂಜಿಸುವ ಶಿಷ್ಯನು ಬಳ್ಳಿಗುರುಡನ ಕಯ್ಯ ಬಳ್ಳಿಗುರುಡವಿಡಿದು ಕಾಣದೆ ಡೊಂಗುರವ ಬಿದ್ದಂತೆ ಗುರುಶಿಷ್ಯರೆಂಬುಭಯರು ಯಮಗುಂಡದಲ್ಲಿ ಬೀಳುವರು (ಪಸಕಾ. I. ೧೬); ಜನಾಂಗವು ಬಳ್ಳಿಗುರುಡರಂತೆ ಮುನ್ನುಗ್ಗದೆ ಅದರ ಸಿದ್ಧಾಂತಗಳ ಸಾಧಕ ಬಾಧಕ ಪ್ರಮಾಣಗಳಿಂದ ಒರೆಹಚ್ಚಿ ವಿಚಾರಮಾಡಿ (ಕೂಗಾದ. ೦ ಎರಡು ಮಾತುಗಳು). [< ಸಂ. ವಲ್ಲೀ. / ತಮಿ. ಮಲ. ವಳ್ಳಿ; ತುಳು. ಕೊಡ. ಬಳ್ಳಿ; ತೆಲು. ವುಲ್ಲಿ]

ಬಳ್ಳಿಕೌಂಗು 'ಬಳ್ಳಿಗವುಂಗು' ನೋ.

ಬಳ್ಳಿಕ್ಕು (ಕ್ರಿ). ನಾಯಿ, ನರಿ ಮೊದಲಾದುವು ಅರಚು,—ಬಗುಳು,— ಊಳಿಡು : ಬೀದಿಯನಲೆವ ಶುನಕಸಮುದಯಂ ಬಳ್ಳಿಕ್ಕಿದುವು ಕೂಡೆ (ಕ್ರೀಣಾಮಾ. ೪೭೦-೦) ; ಬಳ್ಳಿಕ್ಕುತಿದೆ ಪೊಳ್ಳು ಜಂಬುಕಂ ಸಿಗದಿದಿರಿನಲಿ ! (ಪಜ್ರಾಂಗ. ೬೯-೨೦೯೦). 'ಬಳ್ಳಿಡು' ಪರಾ. [ಬಳ್ಳು2 (<ಬಗುಳ್ಳು2) + ಇಕ್ಕು]

ಬಳ್ಳಿಗಂಟಕ (ನಾ). (ಮುಳ್ಳಿನ) ಬಳ್ಳಿಯಲ್ಲಿರುವ ಮುಳ್ಳು : ಒಳ್ಳುಣಿಸೊಳ್ಪಿಂಡಿರ ಭೋಗಿಪೆನೆಂಬೊಳ್ಳಿತಪ್ಪೆನ್ನೀ ತನುಗೆ ಬಳ್ಳಿಗಂಟಕ ಮಾದುದೀ ಮುಪ್ಪೆಂದಾಗ ತಳ್ಳಂಕವಡೆದನಾ ನೃಪತಿ (ಕ್ರೀಣಾಂ. ೦೯-೩೨). [ಬಳ್ಳಿ + ಕಂಟಕ]

ಬಳ್ಳಿಗತ್ತಿ (ನಾ). ಬಳ್ಳಿಯಂ ಹಾಗೆ ಬಳುಕುವ ತೆಳುವಾದ ಕತ್ತಿ: ಆ ಬಳ್ಳಿಗತ್ತಿಯೇನಾದರೂ ಅವನ ಕಯ್ಯಲ್ಲಿದ್ದುಬಿಟ್ಟರೆ (ಪುಂಶ್ರಕ. ೪೦-೨೨). [ಬಳ್ಳಿ + ಕತ್ತಿ]

ಬಳ್ಳಿಗರುಳು (ನಾ). ಬಳ್ಳಿಯ ಹಾಗೆ ಸುತ್ತಿಕೊಂಡಿರುವ ಕರುಳು : ಬುಳ್ಳನಂ ಹೊಳ್ಳಿಸಿತು . . . ಬಳ್ಳಿಗರುಳುಚ್ಚಿದುದು (ಶಾಳ್ಕಣಾ. ೩-೩೫). [ಬಳ್ಳಿ + ಕರುಳು (< ಕರುಳ್)]

ಬಳ್ಳಿಗವರ್ತೆ (ನಾ). ವೀಳೆಯದೆಲೆಯ ಮೇಲೆ ಹಾಕುತ್ತಿದ್ದ ತೆರಿಗೆ : ಈ ವಿಷಯದ ವಿನ್ನಾಣಿಗಳಾ ಬಳ್ಳಿಗವರ್ತ್ತೆಯನುಬಿಟ್ಟಿದ ಆಚಾರಿಯ (ಇಇ. X, ೦೬೯-೬; 7ನೆಯ ಶತ). [ಬಳ್ಳಿ + ಕವರ್ತೆ2]

ಬಳ್ಳಿಗವುಂಗು, ಬಳ್ಳಿಕೌಂಗು, ಬಳ್ಳಿಗೌಂಗು (ನಾ). ಬಳ್ಳಿಗಳು ಹಬ್ಬಿಕೊಂಡಿರುವ ಅಡಕೆಮರ : ಬಳ್ಳಿಗವುಂಗಂ ತಳ್ತಲೆವಳ್ಳಿಯ ಕಟ್ಟಲೆಯನಲೆವ ಸೊಡರ್ಗುಡಿಗಳಂ (ಅಪಿಪು. ೦೦-೬೫); ರಾಜಪುವು ಬಳ್ಳಿಗವುಂಗಿನ ತಟ್ಟಿ ಬಳ್ಳಿಮಾವಿನ ಮನೆ (ಶಾಂತಿಪು. ೬-೦೩೦). **ಬಳ್ಳಿಕೌಂಗು:** ಕಾಯ್ತು ಬಳ್ಳಿಕೌಂ[ಪಾಣಾಂ. ಗೌಂ]ಗಿನ ಪಸುರ್ವಂದರುಮಂ ಪಣ್ತು ಮಾಧುರದ್ರಾಕ್ಷೆಯ ಬಾಟ್ಟಂದರುಮನಿರ್ಕ್ಕಲದೊಳಿಕ್ಕಿ (ಅರ್ಧನೇ ೬-೦೦ ಪ). **ಬಳ್ಳಿಗೌಂಗು :** ಎಳಲತೆ ತಳ್ತ ಚಂದನದ ಸಾಲೆಳ ವಳ್ಳಿಗಳಂಡುಗೊಂಡು ಗೊಂದಳಿಸಿದ ಬಳ್ಳಿಗೌಂಗು . . . ಮೆಱೆವುದು (ಸೂತ್ರಸು. ೯-೩೨). [ಬಳ್ಳಿ + ಕವುಂಗು]

ಬಳ್ಳಿಗಱುಕೆ (ನಾ). ಬಹಳ ಉದ್ದವಾಗಿ ಹಬ್ಬಿ ಬೆಳೆಯುವ ಹುಲ್ಲು : "ಗಂಡೋರಿಃ, ಶಕುಲಾಕ್ಷಕಃ — ಈ ೨ ಬಳ್ಳಿಗಱುಕೆ" (ಪಾಕಾಂ. ೦೦೨). [ಬಳ್ಳಿ + ಕಱುಕೆ (<ಕಱುಂಕೆ)]

ಬಳ್ಳಿಗಾಮೆ 'ವಳ್ಳಿಗಾಮೆ' ನೋ.

ಬಳ್ಳಿಗಾವಣ (ನಾ). ಬಳ್ಳಿಗಳಿಂದ ರಚಿತವಾದ ಮಂಟಪ; ಲತಾಗೃಹ : ಬೀಡುದಾಣಂಗಳೊಳಿಕ್ಕಿದ ಬಳ್ಳಿಗಾವಣಂಗಳೊಳಂ ನನೆಯ ಜೊಂಪಂಗಳೊಳಂ ವಿಶ್ರಮಿಸುತ್ತುಂ (ಪಂಪಭಾ. ೨-೯೬ ಪ); ಬಗ್ಗವಳ್ಳಿಯ ಬಳ್ಳಿಗಾವಣದೋಳಿಯಿಂ ಸೊಗಯಿಪ್ಪ ಸಮ್ಮಗ್ಗವಾಕ್ಷದ ವಂಕದಾರದ ಕೇತಕಿರ್ಗಯನೊಂದಿ ನಿಂದು (ಶಾಂತಿಪು. ೩-೬೯). [ಬಳ್ಳಿ + ಕಾವಣ1]

ಬಳ್ಳಿಗಾವೆ 'ವಳ್ಳಿಗಾವೆ' ನೋ.

ಬಳ್ಳಿಗುರುಳ್ (ನಾ). ಬಳ್ಳಿಯಂತೆ ಕೊಂಕಾಗಿರುವ ಕೂದಲು;

ಗುಂಗುರುಕೂದಲು ; ಅವಳ ಪೆಱ್ಱೆನೊಸಲನಲೆವ ಬಳ್ಳಿಗುರುಳೊಳ್ ತೊಡಂಕಿದ ಕಣ್ ಕಣ್ಣೆವಲೆಯೊಳ್ ಕೆಡೆದೆರಲೆಯಂತಡಿಯಿಡಲಾರ್ತುವಿಲ್ಲ (ಕಬ್ಬಿಗಾ. ೬೮). [ಬಳ್ಳಿ + ಕುರುಳ್$_1$]

ಬಳ್ಳಿಗೊಳಿಸು (ಕ್ರಿ). ಸಂಬಂಧವನ್ನುಂಟು ಮಾಡು ; ಹೊಂದಿಸು : ಮತ್ತಮಾ ರಾಗಂಗಳಂ ಪಾಡುವಲ್ಲಿ ಗ್ರಾಮವರ್ಜಂಗಳಂ ತೊಱೆದು ಜನ್ಯ ಜನಕಂಗಳಂ ಬಳ್ಳಿಗೊಳಿಸಿ (ಪಿಸಲಿ. ೨೩೬). [ಬಳ್ಳಿ + ಕೊಳಿಸು]

ಬಳ್ಳಿಗೌಂಗು 'ಬಳ್ಳಿಗವುಂಗು' ನೋ.

ಬಳ್ಳಿಗ್ಗಮ (ನಾ). ಒಂದು ಊರಿನ ಹೆಸರು : ನಿಮ್ಮನೂರ ಕಿಳ್ಳಮ್ಮನ್ ಆಣ್ಡುಗಿಯ ರಟ್ಟಿಗನ್ ಬೆದೆಮೆಟ್ಟಿಯಾಲಮ್ಮನ್ ಬಳ್ಳಿಗ್ಗಮಯ ಗಾಮುಣ್ಡನ್ (ಎಕ. VIII, ಸೊರಬ. ೦೦-೦೩; ಸು. ೮೦೦).

[ಇದು 'ಬಳ್ಳಿಗಾಮೆ' ಎಂಬುದರ ಅಪಲಿಖಿತ]

ಬಳ್ಳಿಡು, ಬೊಳ್ಳಿಡು (ಕ್ರಿ). ೧. = ಬಳ್ಳಿಕ್ಕು : ಲಿಂಗನಿಷ್ಠಾಹೀನರು ಓದಿ ಹಾಡಿದರೆ ನಳ್ಳಿಗುಳ್ಳೆಯ ತಿಂದ ನರಿ ಹಳ್ಳದ ತಡಿಯಲ್ಲಿ ಬಳ್ಳಿಟ್ಟು ಬಗುಳಿದಂತೆ (ಸಿದ್ಧೇಶ. ೭೫-೨೦೯). ೨. (ನಾಯಿ, ನರಿಗಳ ಹಾಗೆ) ಅರಚು; ಕೂಗಾಡು; ಬೊಬ್ಬಿಡು : ಕೊಟ್ಟರೆ ಹರಸುವೆನು ಕೊಡದಿದ್ದರೆ ಬಳ್ಳಿಟ್ಟು ಬಗುಳುವಂಥ ಭ್ರಷ್ಟದಾಸನು ನಾನು (ಮೋಕ್ಷದೀ. ೭೫-೨೬); ಹರಿಹರನ ಹರಣಕ್ಕೆಂದು ಬಳ್ಳಿಟ್ಟು ಬೊಗಳುತ್ತೆ ಬಂದು ಪ್ರಾಂತದೊಳು ಹದುಳಮಿಹನು (ರಾಘಶ. ೦೯-೬೭). ಬೊಳ್ಳಿಡು : ೨. ಒಳ್ಳೆಯ ಮಾತಿಂಗೆಯುಳ್ಳೊಡವೆ ಕೊಡೆನೆಂದು ಬೊಳ್ಳಿಟ್ಟು ಬೊಗಳಿ ಹುಸಿದು ಸಾಲವನುಂಗಿ ಇಲ್ಲೆನುತಲಿಹನು (ಸರ್ವಜ್ಞ. ೦೩೯೯).

[ಬಳ್ಳು$_2$ (<ಬಗುಳ್ಳು$_2$) + ಇಡು$_1$]

ಬಳ್ಳಿತುಱುಚಿ 'ಬಳ್ಳಿದುಱುಚೆ' ನೋ.

ಬಳ್ಳಿದಲೆಯ (ನಾ). (ಬಳ್ಳಿಯಂ ಹಾಗೆ ಹಬ್ಬಿರುವ) ಅನೇಕ ತಲೆಗಳನ್ನುಳ್ಳವನು; ರಾವಣ : ಬಳ್ಳಿದಲೆಯನ ತರಳನಾಗಲೆ ಬಂದನಿಂದ್ರಾರಿ (ಕೌಶಿರಾ. ೦೯-೩). [ಬಳ್ಳಿ + ತಲೆ$_1$ + — ಅ$_7$]

ಬಳ್ಳಿದುಱುಚಿ, ಬಳ್ಳಿತುಱುಚಿ (ನಾ). ಒಂದು ಬಗೆಯ ಔಷಧೀ ಸಸ್ಯ; ಹಬ್ಬಿ ಬೆಳೆಯುವ ತುರಚಿಗಿಡ : "ಯಾಸಃ, ಯವಾಸಃ, ದುಃಸ್ಪರ್ಶಃ, ಧನ್ವಯಾಸಃ . . . ದುರಾಲಭಾ—ಈ ೧೦ ಬಳ್ಳಿದುಱುಚೆ" (ಪಾಸರಾ. ೦೦೯) ; ಬಳ್ಳಿದುಱುಚೆಯ ಬೇರು . . . ಅರೆದು ಪೂಸಲು ನಸುಗುನ್ನಿಯ ವಿಷ ಶಮನವಹುದು (ಪ್ರಧ್ಯಶಾ. II, ೨೩೯) ; ಬಳ್ಳಿದುಱುಚೆ ನೆಲಬೇವು ಮುಸ್ತೆ (ಕಲ್ಯಾಕಾ. ೩-೩೨) ; ಬಳ್ಳಿದುಱುಚೆ ನೆಱೆ ಮುಳ್ಳುನೆಗ್ಗಿಲು ಕಾಡಕಳ್ಳಿ . . . ಬೆಳೆದು (ಕಂಶಪಿ. ೦೬-೩೯). ಬಳ್ಳಿತುಱುಚಿ : ಬಳ್ಳಿತುಱುಚಿಯ ಬೇರ ಒಳ್ಳಿತಾಗಿಯೆ ಹಣಿದು ಬೆಳ್ಳಿಯ ರಸದಿ ಬೆರೆಯಲ್ಕೆ ಹೇಮ ತಾ ಬಳ್ಳದಲಿ ಬಕ್ಕು (ಸರ್ವಜ್ಞ. ೦೯೬೯). 'ತುರಚಿಬಳ್ಳಿ' ಪರಾ. [ಬಳ್ಳಿ + ತುಱುಚೆ]

ಬಳ್ಳಿಬರೆ (ಕ್ರಿ). (ದೀರ್ಘ ಮುಂತಾದ) ಕಾಗುಣಿತವನ್ನು ಬರೆ : ವಾಡಿಕೇ ಮೇರೆ ಕಾಗದ ಪುಸ್ತಕ ಓದುವ ಹುಡುಗರು ತಲೆಗೆ ಒಂದು ದುಡ್ಡನ್ನೂ, ಹಲಗೇ ಬರೆಯುವವರು ಮೂರು ಕಾಸನ್ನೂ, ನೆಲದ ಮೇಲೆ ಬಳ್ಳಿಬರೆಯುವವರು ಎರಡು ಕಾಸನ್ನೂ ತಂದು ಪಂತರಿಗೆ ಆ ದಿವಸ ಕೊಟ್ಟು ಶಾರದಾಪೂಜೆಯನ್ನು ಮಾಡಿದರು (ಮಾಸುರಾ. ೩೯). [ಬಳ್ಳಿ + ಬರೆ$_1$]

ಬಳ್ಳಿಬೆಳಗು 'ಬಳ್ಳಿವೆಳಗು' ನೋ.

ಬಳ್ಳಿಮಾಡ, ಬಳ್ಳಿವಾಡ (ನಾ). ಬಳ್ಳಿಗಳಿಂದ ರಚಿತವಾದ ಮನೆ; ಲತಾ ಕುಂಜ : ಮೂಪತ್ತೆರಬ್ಬಳ್ಳಿಮಾಡಂಗಳುಮಂ ಮಾಡಿಸಿ(ಪಡ್ಡಾರಾ. ೯೫-೨೦); ಸುರತಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದನೀಡದಿಂ (ಪಂಪಭಾ. ೧-೫೮ ರಗಳೆ) ; ನಲವಿಂದಂ ಬಳ್ಳಿಮಾಡಂಗಳೊಳ್ ಗುಡಿಯಂ ಬೇಗನೆ ಕಟ್ಟಿಂ (ಕಬ್ಬಿಗಾ. ೩೨೨). ಬಳ್ಳಿವಾಡ : ರತ್ನದೀಧಿತಿಯೊಳೊಂದಿ ಪಳಂಚುವ ಬಳ್ಳಿವಾಡದಿಂ ಕಳಸದ ಮತ್ತವಾರಣದ ಶೋಭೆಗಳಿಂ (ಪರ್ಶಾಪ್ಯ. ೫-೯೫) ; ಬಿರಿಮುಗುಳಿನೊಪ್ಪುವ ಕಾಡುಮಲ್ಲಿಗೆಯ ಬಳ್ಳಿವಾಡಮುಂ (ರಾಮಾಶ್ವ. ೩೦-೦೬) ; ನಂದನವನಂ ದ್ರಾಕ್ಷಾರಸಾಲಂಗಳಿಂ ಮಿಂಚುಂದೀವಿಗೆ ಬಳ್ಳಿವಾಡಮೆಸೆಯೆ (ಪ್ರಸೂಪು. ೩-೬೬). [ಬಳ್ಳಿ+ಮಾಡ$_1$]

ಬಳ್ಳಿಮಾವು (ನಾ). ಬಳ್ಳಿಗಳು ಹಬ್ಬಿರುವ ಮಾವಿನ ಮರ : ರಾಜೆಪುವು ಬಳ್ಳಿಗವುಂಗಿನ ತಟ್ಟಿ ಬಳ್ಳಿಮಾವಿನ ಮನೆ ಬಳ್ಳಿಮಲ್ಲಿಗೆಯ ಮಂಡಪಂ (ಶಾಂತಿಪು. ೬-೧೩೦) ; ಇಮ್ಮಾವಿನ ಬಳ್ಳಿಮಾವಿನೆಳಮಾವಿನ ಸೊಂಪೆಸೆಗುಂ ವನಾಂತದೊಳ್ (ಪಗಪಿ. ೦೯-೨೬) ; ಮೆಲ್ಲನೆ ನಡೆವಂಚೆಗಳಂ ತಳೆದಿರ್ಪ ಬಳ್ಳಿಮಾವಿನ ಸಾಲ್ಗಳ್ (ಕಬ್ಬಿಗಾ. ೦೦೬). [ಬಳ್ಳಿ + ಮಾವು]

ಬಳ್ಳಿಮಿಂಚು (ನಾ). ಬಳ್ಳಿಯ ಹಾಗೆ ಕವಲಾಗಿ ಕೋರೈಸುವ ಮಿಂಚು ; ಕೋಲುಮಿಂಚು : ನೆಗೆದುದು ಬಾಳ್ವೊಗೆ ಕಾರಮುಗಿಲ್ ಬಳ್ಳಿಮಿಂ[ಚಿನಿಂದು]ಳ್ಕುವವೋಲ್ (ಪಂಪಭಾ. ೦೦-೬೯); ಅಡರ್ದತ್ತೆತ್ತಲುಂ ಬಳ್ಳಿಮಿಂಚಂ ತಳೆದಾಶಾಮಂಡಲಂ ಕಟ್ಟನೆ ಕುನಿಯೆ ಜಳಸ್ಪೀತ ಜೀಮೂತಜಾತಂ (ಪಗಪಿ. ೯-೦೪) ; ಬಂದಳೂರ್ವಶಿ ಬಳ್ಳಿಮಿಂಚಿನ ಮಂದಿಯಲಿ (ಕುಪ್ಯಾಲ. ೯-೦೩). [ಬಳ್ಳಿ + ಮಿಂಚು$_2$]

ಬಳ್ಳಿವರಿ (ಕ್ರಿ). ಬಳ್ಳಿಯ ಹಾಗೆ ಹಬ್ಬು,—ವಿಸ್ತಾರವಾಗು,—ಹರಡು : ಬೆಟ್ಟದ ಮೇಲೊಂದು ದಳ್ಳುರಿ ನಿಮುರಿ ಬಳ್ಳಿವರಿದು ಆಕಾಶಕ್ಕಡರಿ ಜಗದೋಳ್ಪಸರಿಸಿ ಸಪ್ತಸಮುದ್ರಂಗಳ ನುಂಗಿತ್ತು (ಅದಪ. ೩೩-೯೬) ; ಮೂಡಿದುದು ನೆಯ್ದಿಲ ಬೆಳ್ಪು ಮಡಲ್ತುದಚ್ಚವೆಳ್ದಂಗಳ ಬಳ್ಳಿವರಿದತ್ತೆಳವೆಂಡಿರ ಕಣ್ಣ ಬೆಳ್ಪು (ಲೀಲಾವ. ೨-೨೦) ; ಸೆಜ್ಜೆವನೆಯ ಸಿರಿಮಂಚದೊಳ್ ಕುಳ್ಳಿರ್ದು ಬಳ್ಳಿವರಿವ ನೇಹಂ ಕುಡಿ ನಿಮಿರೆ(ಗಿರಿಕ. ೨-೦೦೩ ಪ). [ಬಳ್ಳಿ + ಪರಿ$_2$]

ಬಳ್ಳಿವಲೆ (ನಾ). ಬಳ್ಳಿಯಂ ಹಾಗೆ ಇರುವ ಬಲೆ : ತಳ್ಳಿವಲೆ ಬಳ್ಳಿವಲೆ ತೊಡಕುವಲೆ . . . ಮಂದಸಿನ ವಲೆಯ ಹೊಱೆಗಳ ಬೇಡವಡೆ ನೆರೆದುದು (ಹಸಕಾ. ೩-೬); ಬಿರ್ಚುವಲೆ ಬಳ್ಳಿವಲೆ ಗೋರಿವಲೆ ಖಂಡವಲೆಗಳೆಂಬಿವಂ ಬೀಸರಂಬುಗದೆ ಬಿರ್ಚಿ ಬೀಸಿದಾಗಳ್ (ರಾಪಶೇ. ೩-೦೦೪ ಪ). [ಬಳ್ಳಿ + ಬಲೆ$_1$]

ಬಳ್ಳಿವಾಡ 'ಬಳ್ಳಿಮಾಡ' ನೋ.

ಬಳ್ಳಿವಾಯ್ (ಕ್ರಿ). ಬಳ್ಳಿಯು ಹಬ್ಬುವಂತೆ ಸಾಲುಗಟ್ಟಿ ನುಗ್ಗು,—ಸಾಲಾಗಿ ನುಗ್ಗು : ಸಪ್ತಚ್ಛದ ಗಂಧದ ಸೊವಡು ಮುಟ್ಟೆ ಮದಕರಿ ಕುಳಮೋವದೆ ಬಳ್ಳಿವಾಯ್ದು ಗರಿ ತುಳ್ಕಿದ ಗಿರಿ ಪರಿವಂತೆ ಪರಿದು ಮರವಾಯ್ದಿರ್ಕುಂ (ಶಾಂತಿಪು. ೯-೦೯೦). [ಬಳ್ಳಿ + ಪಾಯ್$_1$]

ಬಳ್ಳಿವಿಡಿ (ಕ್ರಿ). ಬಳ್ಳಿಯನ್ನು ಆಧಾರವಾಗಿ ಹಿಡಿ : ದುರಾರೋಹ ಮುಮಾದೊಡಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇಱಿ (ಕಾಪಂಪು. ೦೬೬).

[ಬಳ್ಳಿ + ಪಿಡಿ$_1$]

ಬಳ್ಳಿವೆರ್ಚು (ಕ್ರಿ). ಬಳ್ಳಿಯು ಹಬ್ಬುವಂತೆ ವ್ಯಾಪಿಸಂ; ಹರಡು : ಆಕಾಶಗಂಗಾ ಪ್ರವಾಹಮನಾಧಾರತೆಯಿಂದವನಿಗಲ್ಲೊಕ್ಕಿತೆಂಬಂತೆ ಓರೊಂದೆಡೆಯ ಬಯಲೊಳ್ ಬೆಳ್ಳಂಗೆಡೆದು ಬಳ್ಳಿವೆರ್ಚಿಯುಂ (ಶಂಪ್ರಪು. ೯-೪೯ ಪ).

[ಬಳ್ಳಿ + ಪೆರ್ಚು$_1$]

ಬಳ್ಳಿವೆಳಗು, ಬಳ್ಳಿಬೆಳಗು (ನಾ). ಬಳ್ಳಿಯಂ ಹಬ್ಬಿದಂತೆ ಹರಡಿರುವ ಕಾಂತಿ : ನನೆಗೆಱಪ ತುಂಬಿ ಗಱಿಯೆನೆ ಕೊನೆವೆಳಗಿಂ [ವೆರಲಿಂ] ನಿಮಿರ್ವ ಬಳ್ಳಿವೆಳಗುರ್ದಿದ ಕಾಲೆನೆ ಗಱಿಗಟ್ಟುವುದತನುಗೆ ನನೆಗಟ್ಟುವ ನೆವದೆ ಪುಷ್ಪಲಾವೀನಿವಹಂ (ಪರ್ಶಪು. ೦-೬೩) ; ನುಣ್ಬೆಳಗನೀವ ಪೊಂಬಟ್ಟೆಯ ಬಳ್ಳಿವೆಳಗಂ ಕಱೆವ ಬೆಳ್ವಟ್ಟೆಯ . . . ಮೇಲ್ಕಟ್ಟಿನ ಬೆರಕೆವೆಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವೆ (ಗಿರಿಕ. ೦೦-೨೬ ಪ) ; ಹರಿದು ಹಬ್ಬುವ ಬಳ್ಳಿವೆಳಗಿನ ಮುರಿವು ಮಂಡಳಿಸಿದುದು (ಕುಪ್ಯಾಭೀ. ೬-೩೩). ಬಳ್ಳಿಬೆಳಗು : ಓರೆನೋಟದ ಬಳ್ಳಿಬೆಳಗುಗಳ. . . ಗರುವೆಯರಡಸಿದರು ದ್ರುಪದಾತ್ಮಜೆಯ ದಂಡಿಗೆಯ ಬಳಸಿನಲಿ (ಕುಪ್ಯಾಸ. ೦೨-೦೦೦).

[ಬಳ್ಳಿ + ಬೆಳಗು$_2$]

ಬಳ್ಳಿವೆಳ್ಪು (ನಾ) ಬಳ್ಳಿಪೆಳಗು : ಗುಗೆ ಬಟಲ್ಪವೋಲ್ನೆಲಕೆ ಬೆಳ್ಳಿಯ ಬೆಟ್ಟದ ಬಳ್ಳಿವೆಳ್ಪು ಬೆಳ್ಳಂಗೆಡೆದೊಪ್ಪೆ (ಅರ್ಜನೇ. ೨-೭೦); ಕಡುನೆಗೆದಬ್ಬರಂ ಮೊಟಗಿಸಂತಿರೆ ಬಿಲ್ಲೊಳಪರ್ಕೆವೆತ್ತ ಕನ್ನಡಿಗಳ ಬಳ್ಳಿವೆಳ್ಪು ಕುಡುಮಿಂಚಿನ ಪೋಲಿರೆ ... ಪುಟಿಯಂ ಕಱಿದರ್ ಮಿಗೆ ಬಿಲ್ಲ ಬಲ್ಲಹರ್ (ಕಬ್ಬಿಗಾ. ೨೬೬).

[ಬಳ್ಳಿ + ಬೆಳ್ಪು$_2$]

ಬಳ್ಳಿಸುಂಡೆ, ಬಳ್ಳಿಸೊಂಡೆ (ನಾ). (ಬೇಲಿಗಳ ಮೇಲೆ ಹಬ್ಬುವ, ಕೆಂಪಾದ ಹಣ್ಣು ಬಿಡುವ) ಒಂದು ಬಗೆಯ ಸಸ್ಯ : "ಕರ್ಣಕಾ—ಬಳ್ಳಿಸುಂಡೆ" (ಓಷಧಿ. ೨೦); ಬಳ್ಳಿಸುಂಡೆಯ ಸಹಮೂಲವು ಮಂಗರವಳ್ಳಿ ರಸಂಗಳು ಸಹಿತ (ಸಾಳ್ವಸಾಂ. ೦೬); ಗರುಗದ ಸೊಪ್ಪು ಕುರುಟಿಗೆ ಸೊಪ್ಪು ಹೊನಗನ್ನೆ ಬಳ್ಳಿಸುಂಡೆ ಇದರ ರಸವನು . . . ಅಭ್ಯಂಗವ ಮಾಡಿಸಲು ಪಕ್ಷಿಗ್ರಹ ದೋಷ ಶಮನವಹುದು (ವೈದ್ಯಸಾ. II. ೦೯). **ಬಳ್ಳಿಸೊಂಡೆ :** ಹೀರೆಕಾಯಿ, ಬಳ್ಳಿಸೊಂಡೆ . . . ಜ್ವರದವರಿಗೆ ಪಥ್ಯ ದ್ರವ್ಯಗಳೆಂದು ಮತಾಂತರದಲ್ಲಿ ಹೇಳಲ್ಪಟ್ಟಿದೆ (ಸಕವ್ಯ. ೦೦೨); ಬಳ್ಳಿ ಸೊಂಡೆ ಬೇರು ನರುಪಲಬೇರು ಕಡವದ ಬೇರು (ದ್ರಾಕ್ಷಾಸೂ. ೨-೨).

[ಬಳ್ಳಿ + ಸುಂಡೆ$_1$]

ಬಳ್ಳಿಸೊಂಡೆ 'ಬಳ್ಳಿಸುಂಡೆ' ನೋ.

ಬಳ್ಳಿಹಾಲೆ (ನಾ). ಬಳ್ಳಿಯಾಗಿ ಹಬ್ಬುವ ಹಾಲೆ ಸಸ್ಯ : "ಮಧು ಪರ್ಣಿಕಾ—ಬಳ್ಳಿಹಾಲೆ" (ಶಾಹಪೀ. ೨-೨-೬೦ ವ).

[ಬಳ್ಳಿ + ಹಾಲೆ$_2$ (< ಪಾಲೆ$_2$)]

ಬಳ್ಳಿಹುಸಿಕ (ನಾ). (ಬಳ್ಳಿ ಹಬ್ಬುವ ರೀತಿಯಲ್ಲಿ) ಅನೇಕ ಸುಳ್ಳು ಹೇಳುವವನು; ಬಹಳ ಸುಳ್ಳುಗಾರ : ಬಳ್ಳನೆಂದೆಂಗೆ ಕಡುಪಾಪಿಯಿವ ನೆಂದೆಂಗೆ ಬಳ್ಳಿಹುಸಿಕಂ ಬಱಿಯ ಕೋಪಿಯಿವನೆಂದೆಂಗೆ ಶಿವಭಕ್ತಿಡಂಬ ನೆಂದೆನಿಸಲಾಱಿಂ (ತಿರುರ. ದೇ. ೨೦-೦೩). [ಬಳ್ಳಿ + ಹುಸಿಕ (< ಪುಸಿಕ)]

ಬಳ್ಳು$_1$ (ನಾ). ನರಿ; ಜಂಬುಕ : "ಜಂಬುಕಂ ಸೃಗಾಲಂ ನರಿ ಫೇರವಮಱಿಗೆ ಬಳ್ಳು" (ವಸ್ತುಕೋ. ೪೦-೩); ಇಂದ್ರಜಾಲಿಗನಂತುರಿಯನುಗುಟ್ಟಿ ಬಳ್ಳುಗಳಂ (ಕಾವ್ಯಸಾ. ೩೨೯ ಕೂದ್ರಕ); ಆಕಾಶಕ್ಕೆ ಬಾಯಂ ತೆಱೆದೊಳ್ವ ಬಳ್ಳುಗಳುಮಂ (ಪಂಪಭಾ. ೦೩-೪೬ ವ); ಬಳ್ಳೊರಲ್ದುದು ಮುಂದೆ ಮಾರ್ಗವಂ ದಾಂಟಿದುದು ಕುಳ್ಳಿರ್ದ ಮೃಗಮೆದ್ದು (ಕೈಮಿಭಾ. ೦೯-೩).

[ದೇ. ॥ ಮಲ. ವವ್ವಾಯಿ, ವವ್ವಾಲಿ]

ಬಳ್ಳು$_2$ 'ಬಗುಳ್ಳು$_2$' ನೋ.

ಬಳ್ಳುಗರೆ, ಬೊಳ್ಳುಗರೆ, ಬೋಳುಗರೆ (ಕ್ರಿ). ೧. (ನಾಯಿ, ನರಿಗಳ ಹಾಗೆ) ಅರಚು ; ಬೊಬ್ಬಿಡು : ಮುತ್ತ ಮುದು ನರಿಯಂತೆ ಬಳ್ಳುಗರೆವರ್ಕೆಲರು ಕತ್ತೆಯಂತರಚಿ ಕಾಳ್ಗೆಡವುತಿರ್ಪರ್ಕೆಲರು (ಬಿಕಾಂರ. ಹ. ೨೬೭-೦೦); ಕೊರೆವಳ್ ಪಲ್ಲಿಂ ಬಲ್ಲೈಗರೆವಳ್ ಕನಪರಿಸಿ ಬಳ್ಳುಗರೆವಳ್ (ಸೂಕ್ತಿಸಾ. ೬-೨೧೯); ನೀ ಬಳ್ಳುಗರೆಯಲು ದಡಿಗ ಹಾಲಿನ ಸವಿಯ ನೋಡುವೆ (ಕೌಶಿರಾ. ೦೬-೪೯). **ಬೊಳ್ಳುಗರೆ :** ೧. ಹುಚ್ಚುನಾಯಿ ಕಚ್ಚಿದುದರಿಂದ ಅವನು ನಾಯಿಯಂತೆಯೇ ಬೊಳ್ಳುಗರೆಯುತ್ತಿದ್ದನು (ರೂಢಿ). **ಬೋಳುಗರೆ :** ೨. = ಬಳ್ಳಿಕ್ಕು : ಸೂರನ ಬೊಳ್ಳುನಾಯಿ ಬೋಳುಗರೆಯಿತು (ಮರಮ. ೩೩). [ಬಳ್ಳು$_2$ (< ಬಗುಳ್ಳು$_2$) +ಕರೆ$_1$]

ಬಳ್ಳುಗೆಡೆ (ಕ್ರಿ). = ಬಳ್ಳುಗರೆ ೧ : ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದೆ[ಪಾಕಾಂ. ಬಳುಗೆಡೆದಿ, ಬಳ್ಳುಗೆಡೆ]ಕ್ಕೆವಾಱು ವಾಱಿ (ಪಂಪಭಾ. ೦೦-೬೦ವ); ಕೊಳ್ಳಿಗಳಂ ಬಿಡದೋವದೆ ಬೀಸುವ ಬಳ್ಳುಗೆಡೆದು ಬಿಸುವುಡಿಯಂ ಸೂಸುವ . . . ಮರುಳ ನೆರವಿಗಿನಿಸಪ್ಪಡವುಗಿಯದೆ (ವರ್ಧಮಾ. ೦೩-೨೦ ರಗಳ); ಎಲವೊ ರಕ್ಕಸ ಬಳ್ಳುಗೆಡೆಯದಿರುಳಿದು ಹೋದರೆ ನೀನು ವೀರನು (ಕೌಶಿರಾ. ೨೨-೨೯).

[ಬಳ್ಳು$_2$ (<ಬಗುಳ್ಳು$_2$) + ಕೆಡೆ$_2$]

ಬಳ್ಳುಪಿಳ್ಳೆ (ನಾ). ನರಿಯ ಮರಿ : ರಣದೆ ಮೈಸೋಲದ ಸಾಲದ ಬಾಲ ನೊರ್ವನಂ ಬಳ್ಳುಪಿಳ್ಳೆಯನೆಂತಂತು ಕೊಂಡುಯ್ವುದಿದಾವ ನಾಯಂ ? (ರಾಮಾಶ್ವ. ೦೩೬-೦೦). [ಬಳ್ಳು$_1$ + ಪಿಳ್ಳೆ]

ಬಳ್ಳೆ$_1$ (ನಾ). ಒಂದು ಬಗೆಯ (ಮಾದಕತೆಯನ್ನುಂಟು ಮಾಡುವ) ಸೊಪ್ಪಿನ ಬಳ್ಳಿ: "ಕುಶಲತೆಯೆನಲ್ ಬಳ್ಳೆ" (ಮಂಗರಾ. ೪೫-೪೭); ಬಳ್ಳೆ ಭಂಗಿ ನುಗ್ಗೆ ಉಳ್ಳಿ ಮೊದಲಾದ ಇವನೆಲ್ಲವ ಬಿಡಬೇಕು (ಬಲೇಶ್ವ. ೬೪); ಬಳ್ಳೆ ಬೆಲ್ಲವತ್ತದ ಕಾಯಿ ಸೋರೆಯ ಕಾಯಿ ಅತ್ತಿ ಅರಳಿ ಆಲ ಬಸುರಿ ಗೋಣಿ . . . ಕಳವಿಗೆಯ ಹಣ್ಣುಮಂ ತೊಱೆವುದುಂ (ಪಸಾರ. ೪೪).

[<ಬಳ್ಳಿ./ತಮಿ. ವಳ್ಳೈ = ಬಿಳಿಹಂಬು]

ಬಳ್ಳೆ$_2$ 'ಬಾಟಿಲೆ' ನೋ.

ಬಳ್ಳೊಳ್ಳಿ 'ಬಟಿವಟಿ$_1$' ನೋ.

ಬಱ, ಬರ$_1$, ಬರನು, ಬಱನ್, ಬಱನು (ನಾ). ೧. ಕ್ಷಾಮ; ದುರ್ಭಿಕ್ಷ: ಇಂಚೆಯ ಪಸವಿನ ಬಱದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್ . . . ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್ (ಪಂಪಭಾ. ೬-೩೦); ಎಲೆ ಮುನೀಶ್ವರ ಬಱಗಳಾದುವು ಮಳೆಗಳಿಲ್ಲದೆ ವರುಷ ಹನ್ನೆರಡಾಯ್ತು (ಕೌಶಿರಾ. ೦-೩೬). ೨. ಒಣಗಿರುವುದು; ಶುಷ್ಕವಾಗಿರುವುದು; ಬತ್ತಿದುದು : ಕಟ್ಟುಱದ ಬಱದ ಬಾಯಾಯ್ತರಿಯಂ ಗೆಲಲಾರ್ಪೊಡೆ ಪೋರ್ಪೊಡೆ . . . ಅಂತು ಸಂಕಿಪರೊಳರೇ (ರಾಮಾಶ್ವ. ೦೩೬-೦೬). ೩. ತಾಪ ಹೆಚ್ಚಾದುದು : ವಿರಹಾನಳನಿಂ ನೆಱೆ ಬಱವಾಗಿರೆ ಪಡುನೇಸ ಱೊಳಳುರ್ದುವಗಲ್ದು ಚಕ್ರವಾಕದ್ವಂದ್ವಂ (ಸೂಕ್ತಿಸು. ೬-೩೦). ೪. ಅತ್ಯಾಸೆ ; ಅತ್ಯಪೇಕ್ಷೆ : ದಿವ್ಯಸ್ವರೂಪನಂ . . . ಕಂಡೆನ್ನ ಕಂಗಳ ಬಱ ಹಿಂಗಿತ್ತಿಂದು (ಮಹಾದೇ. ಬಿ. ೩೨-೬೬); ಧರಾಜನದ ಕಣ್ಣ ಬಱ ತಿಳಿದವು (ಸಿದ್ಧರಾ. ೬-೪೩); ಇರ್ವರ ಬಾಳ ಬಾಯ್ಗಳ ಬಱಂ ಪಿಂಗಲ್ಕೆವೇಡಂ (ಅಪಂಪು. ೦೩-೩೦). **ಬರ$_1$:** ೧. ಮಳೆ ಬಂದರೆ ಬೆಳೆ, ಇಲ್ಲವಾದರೆ ಬರ (ನನದಿ. ೩); ಈ ಬರದೊಡನೆ ಅನೇಕ ಪಿಡುಗುಗಳೂ ಪ್ರಾರಂಭವಾದವು (ಕಳಹು. ೦೦೦). ೫. ಅಭಾವ ; ಕೊರತೆ : ಸಕ್ಕರೆ ಬರ ಬಿದ್ದಾಗ ಕಾಫಿಗೆ ಉಪ್ಪು ಸೇರಿಸಿ ಕುಡಿಯುವಿರಾ (ಹುಚ್ಚುಹು. ೩೬). **ಬರನು:** ೫. ಭಕ್ತಿ ಬರನಾದೀತು ಸತ್ಯಾವ ತಪ್ಪಾರು (ಎಬಕಾ. ೦೨೦-೦೨). **ಬಱನ್ :** ೧. ಮರನೊಳ್ ದೇವೇಂದ್ರಚಾಪಂ ನೆಗೆದಿರೆ ಬೆಳೆಗುಂ ಧಾತ್ರಿಯೊಳ್ ಮುಂದೆ ಸಸ್ಯೋತ್ಕರನಾಶಂ ವಾರಿಯೊಳ್ ಪುಟ್ಟಿರೆ ಬಱನೊಗೆಗುಂ (ಲೋಕೋಪ. ೪-೨೬); ಅಂತು ಬಱನಱೆಯಟ್ಟೆ ಕಂದಮೂಲಫಲಂಗಳಂ ಮೆಲ್ದು ಜೀವಿಪೆವೆಂದು ಕೆಲಂಬರ್ . . . ಅರಣ್ಯಕ್ಕೆ ಬಂದು (ದಶಕು. ೩-೦೨ ವ). ೨. ನಾಲ್ವೆರಲುದ್ದದೊಳಗೆ ಕತ್ತರಿಸಿಕೊಂಡೀರ ಪಲಸಿನಕಾಯ ಹುಳಿಯುಪ್ಪವೆಱೆದು ಮೊಸರಂ ಕಲಸಿ ಬಱನಾಗುವಂತಟ್ಟು (ಸೂಪಶಾ. ೩-೭೦). ೪. ಎನ್ನ ಗುರುವಿನ್ನೆಂದು ಬಿಜಯಂಗೈದು ಕರುಣದಲಿ ಕಣ್ಣ ಬಱನನು ತಿಳುಹಿ . . . ಮನ್ನಿಸುವನೋ ಎನುತಲಾ ಬಸವಣ್ಣ ಚಿಂತಿಸಿದ (ಪ್ರಭುಲೀ. ೨೨-೩). ೫. ಬಯಕೆಯೊಳು ಬಱನುಮಂ ಮೌನದೊಳು ನುಡಿಯುಮಂ . . . ಬಯ್ತಿಡುತೆ (ತಿರುರ.ದೇ. ೭-೯). ೬. (ಆಲಂ) ಇಲ್ಲವಾದುದು; ಹಾಳಾದುದು; ನಾಶವಾದುದು : ಬಱೆತುದು ಧೈರ್ಯವಾರ್ಧಿ ಬಱನಾದುದು ಪೆರ್ಚಿದ ಶಕ್ತಿ ಬಿಂಕಮಂ ತೊಱೆದುದು ಚಿತ್ತಪೃತ್ತಿ (ಶಬಿಶಂ. ೪-೬೯). **ಬಱನು :** ೪. ಕಿಱುನಗೆವೆರಸಿ ರಾಯನ ನೋಡುವಳು ಕಣ್ಣ ಬಱನೆಲ್ಲ ಬಱತು ಹೋಹಂತೆ (ಭರಸ. ೩-೬೬).

ಬಱಬಱ, ಬಱಬಱಗು, ಬಱಬಱನು (ದ್ವಿರುಕ್ತಿ) : ಬಱಬಱಾಗಿ ಬಾಯ್ ಬತ್ತುವೊಡಂ. . . ಸಾಯ್ಗುಂ ತುರಗಂ (ಅಶ್ವಕಾ. ೬-೩೭); ಬಱತು ಬಸಿವ ಕಂಬನಿಯಿಂದ ನಾಂದಿರ್ದ ಗಱಿಗಳು ವಿರಹಾಗ್ನಿಯಿಂದ ಬಱಬಱಗಾದವು (ಸಂಪ್ರಸಾಂ. ೦೬-೦೪) ; ಬಱಬಱನಾಗೆ ತಾಳಿಸಿದನುರ್ವರೆಯಂ ರವಿ

(ಅಸಂಪು. ೯-೦೩); ಬೇಗೆಯ ಬೆಂಕಿಯಿಂ ಕರಂ ಬಱಬಱನಾಗಿ ತಾಳಿಸಿದವೊಲ್ ಕರಿವೋದುವು ಬೆಂದು ಬೆಟ್ಟುಗಳ್ (ಪಾರಪು. ೯-೬೯). ಬಱಬಱಂ ಬತ್ತು, ಬಱಬಱ ಬತ್ತು = ಪೂರ್ತಿ ಒಣಗು; ಸಂಪೂರ್ಣವಾಗಿ ಶುಷ್ಕವಾಗು : ಬೆಂದು ಬೆಂಡೆಳ್ದು ಬಱಬಱಂ ಬತ್ತಿ . . . ಕೋಟಲೆಗೊಳುತಿರ್ಪ ಪಾಶೀನಕುಲದಿಂ (ಗಿರಿಕ. ೯-೨೬ ಪ); ಕೆಱ್ ಬತ್ತಿ ಬೀಡೇಳೆ ಬಱಬ [ಪಾಶಾಂ. ವ]ಱಂ ಬತ್ತೆ ಪಥಿಕರ ಬಾಯ್ಗಳು . . . ಬೇಸಗೆ ಬಂದುದು (ಕುಮುರಾ. ೬-೬೩); ಅಱಿಯೆಂ-ಪಾಱಲ್ ಬಾಯುಂ ಬಱಬಱ ಬತ್ತಿತ್ತು (ಕಾದಂಪೂ. ೦೯೦); ಬಱಬಱ ಬತ್ತೆ ಜಾಯ್ . . . ಚಂದ್ರನಖಿ ಶೋಕರಸಾ ಕುಳಚಿತ್ತೆಯಾಗಿ (ಸಂರಾಮಾ ೯-೩೦).

[ದೇ.॥ ತಮಿ. ಮಲ. ವಱಮ್; ತುಳು. ಬರ ; ತೆಲು. ವರವು]

ಬಱಂ (ಪ್ರ). 'ವರೆಗೆ', ಎಂಬರ್ಥದಲ್ಲಿ ಬಳಕೆಯಾದ ಪ್ರತ್ಯಯ : ಉಟ್ಟಗೆರಡುವರಿಸಬಟ್ಟೆವರಿಯರ ಪತ್ತುವರಿಸಂಬಱಂ ಮತ್ತರ್ವಣಂ ಉಟ್ಟಗೂರ್ವಱ್ನ್ದು ಮಾಣಲಾಗ ತಮ್ಮ ಸ್ವೇಚ್ಛೆಯೊ[ಳಂ] ನೆಗಟ್ಟುದು (ಸೌಇಇ. XI-i, ೪೩-೦೯; 970). [ಈ ಇದು 'ಬರಂ' ಎಂಬುದರ ಅಪಲಿಖಿತ]

ಬಱಗಾಲ, ಬರಗಾಲ (ನಾ). ದುರ್ಭಿಕ್ಷಕಾಲ ; ಕ್ಷಾಮ : ಬಱಗಾಲದ ಕೆಱ್ಯಂತೆ ನೆಱ್ ಬತ್ತಿದ ಬಾಯುಂ . . . ಬೆನ್ನಂ ಪತ್ತಿದ ಬಸಿಱುಂಬೆರಸು ಬರ್ಪ ವೃದ್ಧ ತಾಪಸನಂ ಕಂಡು (ಪಂಪಕಂ. ೬೩-೬) ; ಬಱಗಾಲದ ಬೆಳಸಿನಂತೆ ಮಟ್ಟಿಗಾಲದ ಬಿಸಿಲಂತೆ . . . ಸಂಶಯಕ್ಕೆಡೆಯಾದರ್ಥಮುಮಂ (ರರ್ಮಾಮ್ಯ. ೯-೨೩). ಬರಗಾಲ : ಅವರು ಬರಗಾಲ ಮತ್ತು ಕಷ್ಟಕಾಲ ಸಮಯಗಳಲ್ಲಿ ದೀನದರಿದ್ರರನ್ನೂ ಸಾಮಾನ್ಯಜನರನ್ನೂ ಸಂತೈಸುವುದರಲ್ಲಿ . . . ಹಿಂದೆ ಮುಂದೆ ನೋಡಿದವರಲ್ಲ (ಸಸ್ಕಳ. ೯೩) ; ಬರಗಾಲವಿಲ್ಲದ ದಕ್ಷಿಣದೇಶಕ್ಕೆ ಅವರು ಹೊರಟರು (ಕಪಪು. ೯-೦೦೦) ; ಬರಗಾಲವು ಬಂದು ರೈತರು ದಣಿದಿದ್ದಾರೆ (ಶ್ರೀರಾಯ. ೦೦೮). [ಬಱ + ಕಾಲ]

ಬಱಗೇಡು (ನಾ). ಕ್ಷಾಮದಿಂದ ಉಂಟಾಗುವ ಕೇಡು.– ಹಾನಿ : ಆ ಮಂಡಚನೂ ಬಾನಗೇಡು ಬಱಗೇಡು ಎಂನದೆ (ಸೌಇಎ. ೦೯೩೨, ಶಾಡುವಿ. ೩೦೩-೨೨ ; 1293) ; ಬಾನಗೇಡು ಬಱಗೇಡು ಯೆಂನದೆ ೧೨ ಮುಡಿ ಅಕ್ಕಿಯನೂ . . . ನಡಸಿ ಬಹರು (ಸೌಇಇ. IX-ii, ೪೪೪-೩೫ ; 1433). 'ಬಾನಗೇಡು' ಪರಾ. [ಬಱ + ಕೇಡು]

ಬಱಗೋಡಿ (ನಾ). ನೀರು ಬತ್ತಿಹೋದ ಕೋಡಿ : ಮಿಗೆ ಬಸಿಲ ಬೇಗೆಯನು ಬಱಗೋಡಿಗಳ ಮೀನ್ಗಳು ದಿನದಿನಕೆ ಮೈದೆಗೆಯದನುಭವಿಸುತ್ತ ಕುದಿಕುದಿಕುದಿದು ಮಗ್ಗಿದವು (ಪಾಗಾ. ೦೦-೦೯-೦೭). [ಬಱ್ + ಕೋಡಿ]

ಬಱಟಿ, ಬೆರಣಿ, ಬೆಱಟಿ, ಬೆಱಣಿ, ಬೆಱಣೆ, ಬೆಱಳಿ (ನಾ). ೧. (ಇಂಧನವಾಗಿ ಉಪಯೋಗಿಸುವ) ತಟ್ಟಿ ಒಣಗಿಸಿದ ಸಗಣಿ ; ಕುರುಳು : ತರ್ದುಗಳಟ್ಟಿಗುಂ ಬ[ಪಾಶಾಂ. ಬೆ]ಱಟಿಯೊಳುರ್ದಿ ನೆಲಾವರೆಯ ಬೇರ ನಾಮಳಕಮುಮಂ . . . ಪೂಸೆ ದಿನಪಂಚಕದೊಳ್ (ಕಪುದ. ೨೬೦ ಪ್ರಯೋ). ಬೆರಣಿ : ೧. "ಕರೀಷಂ-ಸಗಣಿ, ಬೆರಣಿ" (ಓಷಧಿ. ೨೦); ಆವರಿಕೆಸೊಪ್ಪು . . . ಸಹ ಇದರಲ್ಲಿ ರಸವ ಹಿಂಡಿ ಬೆರಣಿ ಬೂದಿಯ ಕಲಸಿ ನೆತ್ತಿಬಾಯಿಗೆ ಒತ್ತಿ ದಾಕ್ಷಣವೇ ರಕ್ತವಾಂತಿ ನಿಲ್ವುದು (ಸಕಪ್ಕ. ೦೯೯) ; ಬೆರಣಿಯನ್ನು ಪುಡಿ ಮಾಡಿ ಚಕಮಕಿಯನ್ನು ಹೊಡೆದು ಬೆಂಕಿಯನ್ನು ಮಾಡಿದಳು (ಪೇಪೀಸೌ. ೩೭) ; ಬಿದ್ದ ಬಳೀಲಿ ಬೆರಣಿ ಆಯಬೇಕು ಇದ್ದ ಬಳೀಲಿ ಇರಬೇಕು (ಗಾದೆ). ಬೆಱಟಿ : ೧. ಅಂದು ಗೋವರ್ಧನಗಿರಿಯನಿಳೆಗೊಂದು ಬೆಱಟಿಯನಿಳುಹುವಂತಿಳುಹಿದನು ಮುರವೈರಿ (ಪಾಳ್ಕಥಾ. ೨೦-೬೭). ಬೆಱಣಿ : ೧. ಬೆಱಣಿಯ ನಾಯಲಲ್ಲದೆ ಅಟ್ಟುಣ್ಣ ತೆಱಹಿಲ್ಲವೆನಗೆ (ಬಸವ. ೨೬೦) ; ತನಯನುಂ ತನ್ನೊಡನೆ ಬರುತಿರೆ ಜನನಿ ಬೆಱಣಿಯನಾಯ್ದುಕೊಂಡಾ ಮನೆಗೆ ಬರುತಿರೆ (ಅಸಪು. ೯೮-೯). ೨. ಸಗಣಿ ; ಗೋಮಯ : ಪುಳ್ಳಿ ಬೆಱಣಿ [ಪಾಶಾಂ. ಬೆರಟಿ]ಯೊಳಗಣ ಪುಟುವಂ ಸಾರೈಸುವಲ್ಲಿ ದಯೆಯಿಂದಾರೈವುದೆನಿಪ್ಪ ಮನೆಗಳಲ್ಲದೆ ತೀರ್ಥಂ (ಸಪುಪ. ೬-೯೯); ಉದಧಿಯೊಳ್ ಬೆಱಣಿಯಂ ಹಾಕಿದಂತಾಯ್ತು ಜಿತಶತ್ರುಭೂಪನ ವಾಹಿನಿ (ಸಮ್ಯಕೌ. ೯-೩೨). ಬೆಱಣೆ : ೧. ಆ ಶಂಕರಾನಂದಂಗಂ ಪಂಚಪಾಯಸವ ಲೇಸಪ್ಪ ಭಕ್ಷ್ಯಗಳ ಬೆಱಣೆ ಮುಳ್ಳುಂ ದಸಿಯು ಪಾಷಾಣದೊಡಕುಗಳನೊಡಗೂಡಿ ಗಡಣಿಸಲು (ಗುರುಪಾ. ೬-೪೨). ಬೆಱಳಿ : ೩. (ಆಲಂ) (ಸಗಣಿಯ ಬಿಲ್ಲೆಯಂತೆ) ಅಗಲವಾಗಿರುವುದು : ದೊಡ್ಡದು : 'ಬೆಱಳಿವಲ್' ಪರಾ.

[ದೇ.॥ ತಮಿ. ವರಟ್ಟಿ, ವರಾಟ್ಟಿ, ವಱಳಿ; ಮಲ. ವರಡಿ, ವರಳಿ, ವಱಟಿ; ತುಳು. ಬೆಜಂಟ್; ತೆಲು. ವರಟ]

ಬಱಡ (ನಾ). ೧. ನಿರುಪಯೋಗಿಯಾದ ವ್ಯಕ್ತಿ; ಕೆಲಸಕ್ಕೆ ಬಾರದವನು : ಬಱಡನಿವನೀ ದೈವದೊಡನಬ್ಬರಿಸಿದೊಡೆಯೊ ಇಬ್ಬರಭ್ಯಂತರವನಿವರಱಿಯರೆ ಮುನೀಂದ್ರರು (ಕುಪ್ಯಾಸ. ೯-೩೧). ೨. ಬುದ್ಧಿಯಿಲ್ಲದಿರುವವನು; ದಡ್ಡ; ಅವಿವೇಕಿ : ವಶಗ್ರೀವಪುರದ ಹನನವು ಪುರದ ಹನನಿಂ ದೊರಕುವುದಲಾಯೆಂಬ ಬುದ್ಧಿಗೆ ಬಱಡನಾಗಿ ಬಳಿಕ್ಕ ರಕ್ಕಸರಾಯನಿಂತೆಂದ (ಕೊರಾ. ೩-೯-೬). ೩. ಜಿಪುಣ : ತ್ಯಾಗಿಯಂ ಬಱಡಂ ಬಾಲರ ಮುದ್ದ ಬಂಜೆ . . . ಜಱ್ಯಲ್ (ಸೋಮೇಶ. ೯೩). ೪. ಪುಂಸತ್ವವಿಲ್ಲದವನು; ಷಂಡ : ಬಱಡರು ಬಾಳರೆನ್ನದೆ ಪೋಪವರ ಕೈವಿಡಿದು ಕೊಂಡೊಯ್ದು ತೋಳ ತೆಕ್ಕೆಯೊಳಿರಿಕಿ ನಿಮಿಷಕೆ ಮೇಳವಿಸಿ ಹಣಗೊಂಡು ಹೋರುವ ಖೂಳರೆಂಬಾಕೆಯರ ಕಂಡಸುರಾರಿ ನಗುತಿರ್ದ (ಅಕ್ಷೂಪ. ೬-೬೩). [ಬಱಡು + — ಅ.ಪ./ ತಮಿ. ವಱಟನ್]

ಬಱಡಾವು (ನಾ). ಗೊಡ್ಡು ಹಸು : ಬಂಜೆಯಾದ ಆಕಳು : ಸುರಧೇನು ಚಿಂತಾಮಣಿ ಕಲ್ಪವೃಕ್ಷವ ಬಱಡ[ಡಾ]ವು ಕಲ್ಮರವೆನಿಸಿ ಮುರಹರ ತ್ಯಾಗವ ಕುಡುತಿರ್ದ ಲಕ್ಷ್ಮೀವರನಾದ ಕಾರಣದಿಂದ (ಸೋಹಕ. ೦೭-೩೬). 'ಗೊಡ್ಡಾವು' ಪರಾ. [ಬಱಡು + ಆವು]

ಬಱಡಿ, ಬರಡಿ (ನಾ). ೧. ಹೆಣ್ಣಿನ ಸತ್ವವಿಲ್ಲದವಳು; ಸ್ತ್ರೀತ್ವವಿಲ್ಲದವಳು ; ಗೊಡ್ಡಿ : ಬರಡ[ಬಱಡಿ]ಗೆ [ಪಾಶಾಂ. ಬರಗಡೆ]ಯೇಱಿದಂ ದಸಿಯ ಸೂಲಮನೇಱಿದನೊತ್ತೆಗೊಟ್ಟವಂ ಕರೆದಭಿಮಾನಮಂ ಪೆಱರ್ಗೆ ಕೊಟ್ಟನಟ್ಟಱದುಯ್ದು ರಾಗದಿಂ (ಲೀರಾಪ. ೨-೦೦೦). ೨. ಮಕ್ಕಳಾಗದೆ ಇರುವವಳು; ಬಂಜೆ : ಬಱಡಿಯ ಕೈಯಲ್ಲಿ ಮಕ್ಕಳಿದ್ದಡೆ ತೊರೆವುದೆ ಮೊಲೆ (ಪೋಳಪು. ೨೫-೦೦೦). ಬರಡಿ: ೧. ಬಸುರಿ ಬಾಣತಿಯರು ಶಿಶುವ ಮುದ್ದಾಡುವ ಶಶಿಮುಖಿಯರು ಒಪ್ಪಿಯಿಹರು ಅಸಿಯಳು ಬಂಜೆ ಬರಡಿಯೆಂಬ ನುಡಿಗಳ ಘಸಣಿಯಿಲ್ಲವು ಸೀಮೆಯಲಿ (ಪುರೇಸಾಂ. ೦-೩೮).

[ಬಱಡ + — ಇ./ತಮಿ. ವಱಟಿ]

ಬಱಡು, ಬರಡು (ನಾ). ೧. ನಿಸ್ಸಾರವಾದುದು; ವ್ಯರ್ಥವಾದುದು; ಪೊಳ್ಳು : ಮನೋಮುದಂ ಬಱಡೆನಿಸಿತ್ತು ಮತ್ತುಸಿರ್ವುದೇನೊ ವಿಧಿ ಪ್ರತಿಬಂಧಕಾರ್ಯಮಂ (ದಶಕು. ೩-೩೭); ದೇವಯಾನಿಯ ಬಯಕೆ ಬಱಡಾಯ್ತು (ಸಂಭಪ. ಪಂ. ೩೨೪); ನರರ ತುತಿಸಿ ನಾಲಿಗೆ ಬಱಡಾಯಿತಲ್ಲ (ಪುರಂದ. ೦-೨೯-೦). ೨. ನಿಸ್ಸಾರನಾದವನು : ನಿರ್ವೀರ್ಯ ; ದುರ್ಬಲ : ಬ[ಪಾಶಾಂ. ಜ]ಱಡುಗಳು ನೀವೀ ಜನಾರ್ದನನೂರೆಗೆ ಬಹಿರೇ . . . ಹೋಗಿಯೆಂದನು ಭೂಪರಿಗೆ ಭೀಷ್ಮ (ಕುಪ್ಯಾಸ. ಓಂಇ. ೦೦-೩೩). ೩. ಗೊಡ್ಡು ಹಸು; ಬಂಜೆದನ : ನೀನೊಲಿದರೆ ಬಱಡು ಹಯನಹುದಯ್ಯಾ (ಬಸವ. ೬೬) ; ಸುರಧೇನು ಬಱಡಾದೊಡಿನ್ನೆಂತು ಮಾಡುವೆಂ (ಪಾಗೀರ. ದೇ. ೨೬೦-೦) ; ಕಱ್ಯದ ಬಱಡುಗಳು ಹಯನಾದುವು (ಪ್ರಭುಲೀ. ೬-೨೫). (ಗು). ೪. ನಿಸ್ಸಾರವಾದ; ಪೊಳ್ಳಾದ : 'ಬಱಡುಮನ' ಪರಾ. ೫. ಗೊಡ್ಡಾದ; ಬಂಜೆಯಾದ; ಮುಂದೆ ಕಟ್ಟಿರ್ದೀ ಬಱಡುಪಶುವಿಂದೆ ಹಾಲಂ ಮಿಗೆ ಪಡೆವೆ (ಬಸವ. ೯-೨೬). ಬರಡು : ೧. ನನ್ನ ಜೀವನ ಬರಡು (ಹಲ್ಯಾ. ೮೭); ಇಂದ್ರಿಯಾನು

ಭವದ ಎಲ್ಲೆಯನು ಮೀರಿದ ಭಾವನೆಗಳು . . . ಬರೀ ಜಳ್ಳು, ಬರಡು (ಕುಕೋ. I, ೬೬೬) ; ಕೃತಿಯಾಗಿ ನಿಲ್ಲದ ಜ್ಞಾನ ಬರಡು (ಮಾಪಾದ. ೩೩). ೩. ಕೊರಡು ಕೊನರುವುದು ಬಲು ಬರಡು ಹಯನಹುದು (ಸ್ಮೃಲಾರ. ೪೦-೨೬) ; ಬರಡು ಹಯನಾಗಿ ಕರುವ ಪಡೆದೀತು ಆವು (ಸೂರ್ಯಪಾ. ೪೯-೩). [ದೇ. ॥ ತಮಿ. ವಱಟು ; ಮಲ. ವಱಡು ; ತುಳು. ಬರಡು]

ಬಱಡುಗಱ್ (ಕ್ರಿ). (ಗೊಡ್ಡು ಹಸುವಿನ ಹಾಲು ಕರೆಯುವಂತೆ) ನಿಷ್ಪ್ರಯೋಜಕವಾದ ಕೆಲಸವನ್ನು ಮಾಡು : ಮೃತ್ಯುವಿನ ಬಾಯ ತುತ್ತಾಗುತಿರ್ದೆಂ ದೇವ ಕತ್ತಲೆಯೊಳಗೆ ಬಱಡುಗಱ್‌ವುತಿರ್ದೆಂ ದೇವ (ನಾಗೀರ. ದೇ. ೨೬೦-೦೪). [ಬಱಡು + ಕಱ್$_1$]

ಬಱಡುಮನ (ನಾ). ಭಕ್ತಿ, ಶ್ರದ್ಧೆ, ಪ್ರೀತಿಗಳಿಲ್ಲದ ಅಂತರಂಗ : ಪರರ ಸತಿಯನನಂಗರತಿಯಲಿ ಬೆರಸಿತಿಲ್ಲ . . . ದೈವದ್ವಿಜರ ಪೂಜೆಯಲಿ ಬಱಡುಮನವನು ಮಾಡಿತಿಲ್ಲ (ಕೊರಂಗ. ೧-೩-೦೯). [ಬಱಡು + ಮನ]

ಬಱಡೆ, ಬರಡೆ (ನಾ). = ಬಱಡಿ ೨ : ಬಱಡೆಯಲ್ಲಾಕೆ ಮರೀಚಿರಾಜನ ನೊಬ್ಬ ಪಿರಿಯ ಪುತ್ರನ ಪೆತ್ತಳಹುದು (ಭರತ. ೩೯-೬೦). **ಬರಡೆ** : ಗಂಡಂಗೆ ಮಮಕಾರವಿರಲು ಬರಡೆಯಾದರು ಭಾಗ್ಯಲಕ್ಷ್ಮಿಯಂತಿಹಳು (ಕಂಳ. ೧೦೪-೬). [ಬಱಡ + — ಎ$_2$]

ಬಱನ್ 'ಬಱ' ನೋ.

ಬಱನು 'ಬಱ' ನೋ.

ಬಱಪ (ನಾ). ಅತ್ಯಪೇಕ್ಷೆ ; ಅತ್ಯಾಸೆ : ಸಾಱ್ ಬಟಲ್ದ ಮೆಯ್ಗೆ ಚೇತರಣೆಯಲರ್ಚೆ ಬಾಯ್ಗೆ ಬಱಪಂ ಬರಿಸುತ್ತಿರೆ ಪೋದ ಕೂಟಮಂ ಪರಿವಿಡಿಗೆಯ್ಯೆ ಚಿತ್ತಮೆಳಸಿತ್ತು ರತಾಂತಸುಖಾಂತಮೋಪರಾ (ಸಂದ್ರಪ್ರ. ೯-೬೦). [< ಬಱ]

ಬಱಲು, ಬರಲು, ಬರ್ಲು (ನಾ). ೧. (ಎಲೆ, ಹೂವು, ಮೊದಲಾದುವುಗಳು ಇಲ್ಲದೆ) ಒಣಗಿ ಕಡ್ಡಿಯಾದುದು ; ಬೋಳಾದುದು : 'ಬಱಲುಗೊಳ್' ಪರಾ. ೨. ಒಣಗಿದ ಕಡ್ಡಿ : ಕಲ್ಲಿಂದಿಟ್ಟು ಕರಂ ಬಡಿಯಿಂದವೆ ನಿಲ್ಲದೆ ಬಡಿದು ಬಱಲ ಬಲ್ವೊಯ್ಲಿಂದೆಲ್ಲೆಡೆ ಬಾಸುಳನೇಳಿಸಿ (ಜಯಕಾ. ೦೩-೪೦) ; ಲಂಡೆಯನು ಹಿಡಿತರಿಸಿ ನುಡಿದಾ ಬಾಯೊಳು ಮಣ್ಣುತುಂಬಿಸಿ ಬಱಲ ತರಿಸಿ . . . ಮೆಯ್ಯರಂ ಹುಣ್ಣು ಹುಣ್ಣಾಗುವಂತೆ ನೆಱ್ ಕೊಲಿಸಬೇಕು (ಸಮ್ಯಕ್ಕೌ. ೬-೩೯). **ಬರಲು**: ೨. ಬಂಬಲೀ ಮರದ ಬರಲಿನಿಂದ ಕೈಗೆ ಬಂದಂತೆ ಹೊಡೆದನಂತೆ (ಮೂಸಕ್ಷ. ೦೬೬) ; ಅವನನ್ನು ಅಲ್ಲಿಯೇ ಒಂದು ಮರಕ್ಕೆ ಬಿಗಿದು ಹುಣಸೆಯ ಬರಲುಗಳಿಂದ ಮನ ಬಂದಂತೆ ಬಡಿಯಹತ್ತಿದನು (ಕಗಪ್ರ. ೩೬); ಒಂದು ಬುಟ್ಟಿ ಕುಳ್ಳು, ಒಂದು ಕಟ್ಟು ಬರಲು ಕೊಟ್ಟು ಕಳಿಸಿದನು (ಪಟ್ಟಹೊ. ೪೪). ೩. ಒಣಗಿದ ಕಡ್ಡಿಗಳ ಕಟ್ಟು ; ಕಸಬರಿಗೆ : ಪೊರಕೆ, ಬರಲು (Broom. ೩೦೪೩). **ಬರ್ಲು** : ೨. ಒಣಗಿದ ಮುಳ್ಳುಗಳು, ಬರ್ಲುಗಳು, ಟೊಂಗೆಗಳು ಸಾಮ್ರಾಜ್ಯದ ಸೀಮೆಯನ್ನು ಭದ್ರಪಡಿಸಿದ್ದವು (ಮೇದಿಮ. ೪೨). [ಬಱ + — ಅಲು(< — ಅಲ್$_2$)]

ಬಱಲುಗೊಳ್ (ಕ್ರಿ). (ಎಲೆ, ಹೂವು ಮೊದಲಾದುವುಗಳಿಲ್ಲದೆ ಗಿಡವು) ಬೋಳಾಗು : ಅಱಲುಗೊಂಡ ಕೆಱ್‌ಗೆ ತೊಱ್ ಬಂದು ಹಾಯ್ದಂತೆ ಬಱಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು (ಮತಾರೇ. ಬ. ೨೪-೪೩). [ಬಱಲು + ಕೊಳ್$_1$]

ಬಱಸಿಡಿಲ್, ಬರಸಿಡಿಲು, ಬಱಸಿಡಿಲು (ನಾ). ೧. ಮಳೆಯಿಲ್ಲದೆಯೇ ಹೊಡೆಯುವ ಸಿಡಿಲು ; ಅಕಾಲದಲ್ಲಿ ಬೀಳುವ ಸಿಡಿಲು : ಬಱಸಿಡಿಲ್ ಪೊಡೆದು ಪ್ರಿಯಸೇನೆ ಸತ್ತಳ್ (ವಡ್ಡಾರಾ. ೩೬-೨೪) ; ಬಱಸಿಡಿಲ್ ಪೊಡೆಯೆ ಕೆಡೆದ ಶಾಲತರುಗಳಿರ್ಪಂತಿರ್ದ ನಾಲ್ವರ್ ತಮ್ಮಂದಿರುಮಾ ಕಂಡು ಬೆಕ್ಕಸಂಬಟ್ಟು (ಪಂಪಶಾ. ೯-೪೩ ಪ) ; ಕಲ್ಪಾಂತರ ಬಱಸಿಡಿಲೆಯ್ತಂದು ಪೊಯ್ಯಲ್ಲೆಲಂ ಕಂಪಿಸುವಂತೆ (ಕಾದಂಪೂ. ೬೦೦). **ಬರಸಿಡಿಲು** : ೧. ಮರುತಾತ್ಮಜನ ಬೆದರಿಸಿದಳೇನೆಂಬೆ ಕಾರ್ಮುಗಿಲ ಬರಸಿಡಿಲ ಪೋಲ್ವ ಬಿರುನುಡಿಗಳಿಂದ (ಪಂಕಾರಾ. ೩-೩-೩) ; ಪ್ರಳಯಕಾಲದಲ್ಲಿ ನಡೆಯುವಂತೆ ಬರಸಿಡಿಲು ರಾಜರ ಸಮೀಪದಲ್ಲಿಯೇ ಬಿತ್ತು (ಬಸಳ. ೬). ೨. (ಅಲಂ) ಅನಿರೀಕ್ಷಿತವಾದ ಹೊಡೆತ, — ಆಘಾತ : ಇಲ್ಲದೆ ಹೋದರು ತಂದೆ ಬರಸಿಡಿಲೆರಗಿದ ಹಾಗಾದೆ ನಾನಾಗ (ಜಾಪಾಸ. ೨೨-೯೬). **ಬಱಸಿಡಿಲು**: ೧. ಕಾಲವಲ್ಲದ ಕಾಲ ಬಱಸಿಡಿಲೇಳಿಗೆಯಲುಬ್ಬೆದ್ದು ಮಲ್ಲರ ಪಾಳಯವ ನೆಱಗುವುದ ನಾನದ ಕಂಡೆ ಸ್ವಪ್ನದಲಿ (ಕುಪ್ಯಾಶಿ. ಒಂಬಾ. ೪-೨೨) ; ಹೊಡೆಸಿದ ಪಟಹ ನಿಸ್ಸಾಳ ಭೇರಿ ಪಱ್ ಬಱಸಿಡಿಲೆನಂತಾಯ್ತು (ಕೌಶಿರಾ. ೦೯-೦೦); ಬಱಸಿಡಿಲಂತೆ ಭಾರಿಯ ಭೇರಿ ಸೂಳೈಸೆ (ಭರತ. ೨೩-೩೦). [ಬಱ + ಸಿಡಿಲ್$_2$]

ಬಱಸಿಡಿಲು 'ಬಱಸಿಡಿಲ್' ನೋ.

ಬಱಹಾಳೆ (ನಾ). ಒಣಗಿ ತರಗಾದ ಅಡಕೆಯ ಹಾಳೆ : ವಿಜಯಾರ್ಧ ಶೈಲದೊಳಿಕ್ಕಿದ ಪಡಿಯ ನಾಳೆ ಹೋಳ್ಮಾಡಿ ಬಿಡುವೆನೊಣಗಿದ ಬಱಹಾಳೆಯನೊಡೆಯ ಹೊಯ್ದಂತೆ (ಭರತ. ೨೯-೩). [< ಬಱ್ + ಹಾಳೆ$_1$ (< ಪಾಳೆ$_1$)]

ಬಱಹು (ನಾ). ಕ್ಷಾಮ ; ದುರ್ಭಿಕ್ಷ: ವ್ಯಾಧಿಯಲ್ಲಿ ಕ್ಲೇಶದಲ್ಲಿ ಬಱಹಿನಲ್ಲಿ ಹಗೆಗಳ್ ಕೊಲಬಂದಲ್ಲಿ ಅರಮನೆಯ ದ್ವಾರದಲ್ಲಿ ಶ್ಮಶಾನದಲ್ಲಿ ತನಗಾದ ವರೇ ಬಂಧುಗಳ್ (ಪಂಪಕಂ. ೬೨-೦೬) ; ಮಱ್‌ಯ ಬಱಹಿನಲ್ಲಿ ಅವಗ್ರಾಹ, ಅವಗ್ರಹ ಎನಿಸುಗು (ನಾನಾರಾ. ೪). [ಬಱ + — ಹು$_2$ (< ಪು$_2$)]

ಬಱಿ 'ಬಱು' ನೋ.

ಬಱಿಕಯ್ 'ಬಱಿಗೆಯ್$_2$' ನೋ.

ಬಱಿಕೆಯ್ 'ಬಱುಗೆಯ್$_1$' ನೋ.

ಬಱಿಕೈ 'ಬಱುಗೆಯ್$_1$' ನೋ.

ಬಱಿಗಂಟು (ನಾ). ೧. ಒಳಗೆ ಏನೂ ಇಲ್ಲದ ಗಂಟು ; ಬೆಲೆಯಿಲ್ಲದ ಗಂಟು. ೨. ಪೊಳ್ಳಾದ ಸಂಬಂಧ ; ಸುಳ್ಳು ಸಂಬಂಧ,—ನಂಟು : ಬಱಿಗಂಟು ಬಱಿಮಾತು ಸುಳ್ಳುಸುದ್ದಿಯ ಹೇಳಿ ಹಿರಿಯಮಗ ನಂತೊಡಲ ಹೊರಕೊಂಬೆ ಮನವೆ (ಪುರಂದ. ರಾ. ೨-೦೦-೪). [ಬಱಿ (<ಬಱಿದು) + ಗಂಟು]

ಬಱಿಗಲ್ಲು, ಬರುಗಲ್ಲು (ನಾ). (ಮಣ್ಣಿಲ್ಲದಿರುವ) ಕಲ್ಲಿನಿಂದ ಕೂಡಿದ ನೆಲ; ಹರಳುಹರಳಾಗಿರುವ ಕಲ್ಲಿನ ನೆಲ : ನಿಱಿಗುರುಳಬಲೆ ನಿನ್ನಯ ದಿವ್ಯದೇಹವ ಬಱಿನೆಲದೆಡೆಯಲ್ಲಿ ಹರಹಿ ಬಱಿಗಲ್ಲ ಗಾಯದಿ ಮಿಡುಕುವ ನಾಗರಮಱಿಯಂತೆ ಹೊರಳಬೇಡ (ಮೋಹಕ. ೩೩-೪೯). **ಬರುಗಲ್ಲು** : ಬರುಗಲ್ಲ ಗಾಯದ ಮರಿನಾಗರದ (ಕಂಳ. ೦೨೩-೦೦). [ಬಱಿ (<ಬಱಿದು) + ಕಲ್ಲು (<ಕಲ್$_3$)]

ಬಱಿಗಾಲು 'ಬಱುಗಾಲು' ನೋ.

ಬಱಿಗುಟ್ಟು (ಕ್ರಿ). ಬರಿದು ಮಾಡು : ಇಲ್ಲವಾಗಿಸು : ಮಕ್ಕಳು ಹುಟ್ಟಿ ಕಡೆಯಲಿ ವಂಶವನು ಬಱಿಗುಟ್ಟಿದಲ್ಲದೆ ಮಾಣರು (ಶಿಶಾಗ. ೩-೦-೨೦). [ಬಱಿ (<ಬಱಿದು) + ಕುಟ್ಟು$_1$]

ಬಱಿಗೂಟ್ 'ಬಱುಗೂಟ್' ನೋ.

ಬಱಿಗೆಂಡ 'ಬಱುಗೆಂಡ' ನೋ.

ಬಱಿಗೆಯ್ 'ಬಱುಗೆಯ್$_1$' ನೋ.

ಬಱಿಗೆಱ್ 'ಬಱುಗೆಱ್' ನೋ.

ಬಱಿಗೈ$_1$ 'ಬಱುಗೆಯ್$_1$' ನೋ.

ಬಱಿಗೈ$_2$ 'ಬಱುಗೆಯ್$_2$' ನೋ.

ಬಱಿಗೋಪ (ನಾ). ವ್ಯರ್ಥವಾದ ಕೋಪ : ಗನ್ನದಿಂ ಬಱಿಗೋಪಮಂ

ತಾಳ್ದು ರ್ಘುಂಕಿಸುತೆ (ತಿರುರ. ದೇ. ೦೩-೦೨). [ಬಱಿ (<ಬಱಿದು) + ಕೋಪ]

ಬಱಿತನ (ನಾ). ಬರಿದಾದುದು ; ಹುರುಳಿಲ್ಲದುದು : ಶರಣರೆಂತಿಹರೆಂಬುದನೊಲ್ದು ನೋಡದೀ ಬಱಿತನವುಕ್ತಿಚಾಪಲದ ಗೌರವದಿಂ ಫಲಮೇಂ (ಕತಕ. ೦-೭೨). [ಬಱಿ (<ಬಱಿದು) + — ತನ]

ಬಱಿದಲೆ 'ಬಱುದಲೆ' ನೋ.

ಬಱಿದು, ಬರಿದು(ನಾ). ೧. ಏನೂ ಇಲ್ಲದಿರುವುದು ; ಶೂನ್ಯವಾದುದು : ಖೇಚರಮಹೀಚರಕೋಟಿಗೆ ಬಾಯಿನಂಗಳಂ ತೀವಿದಶೇಷ ಕೋಶಗೃಹಮುಂ ಬಱಿದಾಗಿರೆ ಕೊಟ್ಟು (ಶಾಂತಿಪು. ೬-೦೯) ; ಎನಿತು ಕುರುಕ್ಷೇತ್ರದೊಳೆಡೆಯನಿತುಂ ಬಱಿದಿಲ್ಲದಂತು ಶವಶತದಿಂ ತೆಕ್ಕನೆ ತೀವೆ (ಗದಾಯು. ೭-೬೩) ; ದಿವಸಗತಿಯಿಂ ಕಿಱುಗಪ್ಪೆಗಳೆಲ್ಲಮುಮಂ ಬಱಿದಾಗೆ ಮಾಡಿ (ಪಂಚತಂ. ೨೬೪-೦೦). ೨. ವ್ಯರ್ಥವಾದುದು ; ನಿರರ್ಥಕವಾದುದು ; ಪೊಳ್ಳು : ಬಱಿದಲ್ತು ಮೆಚ್ಚು ಶೌಚಂ ಕಿಱಿದಲ್ತು (ಸೌಇಇ. XI-i. ೪೦-೨೩ ; 969). ಬರಿದು : ೨. ಜಗಕ್ಕೆಸೆಯೆ ಶಿವಾಲಯಮಂ ಮಾಡಿಸುವಂಗೆ ನೊಳಂಬವಟ್ಟಮೆಂಬುದು ಬರಿದೇ (ಸೌಇಇ. IX-i. ೪೯-೬೩ ; 1076 ?).

ಬಗ್ಗಬಱಿ, ಬಗ್ಗಬರಿ, ಬಚ್ಚಬಱಿ (ದ್ವಿರುಕ್ತಿ) : ಭರ್ಗನಂ ಕಾಣುತ್ತೆ ಬಗ್ಗಬಱಿಯಾದಳು (ಶಿಪಿಪು. ೦೯-೨೭) : ಪುಡಿಪುಡಿಯಾಗಿ ಹಾಱುವವು ರಥೆಂಗಳು ಒಡಲು ಬಗ್ಗಬಱಿಯಾಗಿ ಕೆಡೆವುವು ಹಯ (ಜೈಪಸ. ೩೦-೦೮) ; ಗಡಿವೊಯ್ಯಿಲಿನಿಂದ ತಾಂ ಬಗ್ಗಬರಿಯಂ ತೂ[ಮಾ]ಡಿ ಕೌರವಾನುಜರ ಸದೆದಗ್ಗಳೆಯರಂ ಪೊಯ್ಯೆ ದುಶ್ಶಾಸನಂ ರಥವ ಪರಿಸಿದಂ ಪಟುತರದೊಳು (ಲಕ್ಷ್ಮಭಾ. ೮-೪-೭); ಕಳಕಳವಿದೇನೆಂದು ನೆರೆಯಂಗಡಿಯ ಮುಂದಣಂಗಡಿಯ ಪರದರಂ ಕಂಡು ಬೆಸಗೊಳ್ವ ಬಚ್ಚಬಱಿ[ಪಾಠಾಂ. ಪಚ್ಚುಪಸಿ]ಯೆಗ್ಗರುಮಂ . . . ನೋಡಿ (ಗದಾಯು. ೯-೩೪). ಬಚ್ಚಬಱಿದಾಗು, ಬಚ್ಚಬರಿದಾಗು = ಏನೂ ಇಲ್ಲದಂತಾಗು ; ಶೂನ್ಯವಾಗು : ಹೊಱಗೆಲ್ಲವ ತೊಱೆದೊಳಗೆ ನಿರ್ಮಲವಾಗಿ ಮೆಱೆವವರುಂಟು ಲೋಕದೊಳು ಹೊಱಗೆಲ್ಲವಿದ್ದೊಳಗೇನುವಿಲ್ಲೆನೆ ಬಚ್ಚಬಱಿದಾದರಾರು ನಿನ್ನಂತೆ (ಭರತ. ೨-೩೯) ; ದೇಶಕೋಶಗಳೆಲ್ಲಾ ಬಚ್ಚ ಬರಿದಾಗಿ, ಅವರೂ ಅವನಂತೆಯೇ ನಾಡಾಡಿಗಳಾಗುವದುರವಸ್ಥೆಗುರುಳ್ದಿರುವುದು ಪ್ರತ್ಯಕ್ಷಪ್ರಮಾಣವಾಗಿದೆ (ಮಂತ್ರಶ. ೦೯-೨೩). ಬಚ್ಚಬಱಿಯ, ಬಚ್ಚಬರಿಯ = ಕೇವಲವಾದ; ಅಷ್ಟುಮಾತ್ರದ : ಕೂಡಲಸಂಗಮದೇವಾ ನಿಮ್ಮ ಶರಣರು ಸ್ವತಂತ್ರರು ಎನ್ನ ಬಚ್ಚಬಱಿಯ ಬಸವನೆನಿಸಯ್ಯಾ (ಬಸವ. ೬೦೬) ; ಮಾಡಿಸಿ ಸಂಗವನು ನೋಡಿಸು ನಿನ್ನವರ ಕೊಡಿಸು ಬಚ್ಚಬರಿಯ ಭಕ್ತಿ ನನಗಿನ್ನು ನೀಡು ಪಾದೋದಕ ಪ್ರಸಾದವ (ಸಿದ್ಧಪು. ೩೪-೩೦). ಬಱಿದು ಮಾಡು = ಖಾಲಿ ಮಾಡು; ಇಲ್ಲದಂತೆ ಮಾಡು : ಕುಡಿವೆನೂ ಲಪಸಾಬ್ದಿಯನೀಗಡೆ ತೋಳೊಳ್ ತುಳ್ಕಿ ಬಱಿದು ಮಾಟ್ಟೆನೊ ಪೇಟ್ (ಅಡಿಪು. ೧೨-೬೬). ಬಱಿಯ, ಬರಿಯ$_2$ = ೧. ಕೆಲಸಕ್ಕೆ ಬಾರದವನು ; ನಿರುಪಯುಕ್ತ : ವರಧರ್ಮಮನುತ್ಸವದಿಂ ಸ್ಥಿರಮನದಿಂ ಕೇಳಲೊಲ್ಲದಾತನೆ ಕಿಱಿಯಂ ವರಧರ್ಮಮನಱಿವಿಂದಂ ಸ್ಥಿರಮನನಾಗಱಿಯಲೊಲ್ಲದಾತನೆ ಬಱಿಯಂ (ಧರ್ಮಾಮೃ. ೨-೧೭೫). ೨. ಖಾಲಿಯಾದ ; ಬೋಳಾಗಿರುವ : ಬಱಿಯ ಗೋಡೆಯ ಮೇಲೆ ಬರೆದ ಚಿತ್ರವ ಕಂಡು ಮಱುಗಿ ಮಾಡುವುದೇನು (ಮೋಹತ. ೯-೦೭). ೩. ವ್ಯರ್ಥವಾದ : ಬಱಿಯ ಕಾರ್ಪಣ್ಯದಲಿ ಮೇಘದ ಮಱೆಯ ಹೊಕ್ಕರೆ. ರಾಹು ಬಿಡುವನೆ (ಕುಮ್ಯಾಪ್ರೋ. ೨-೪೪) ; ಬರಿಯ ಮಾತಿನಲ್ಲಿ ಕಾಲ ಕಳೆಯಬೇಡ (ರೂಢಿ). ೪. ಅಷ್ಟು ಮಾತ್ರದ ; ಕೇವಲ : ನವಮಾಸಂ ತೀವಿ ಬಱಿಯ ಮುಂಡಮಂ ಬೆಸಲೆಯಾಗಿ (ಧರ್ಮಪ. ೯-೩೨ ವ) ; ಬಱಿಯ ಬಾಯಿಯಲಿ ನಿನ್ನ ಹೊಗಳುವ ಭಟ್ಟರಾರು (ಸಂಭಪ. ೪-೨೦). [ದೇ.॥ ತಮಿ. ವಱಿತು]

ಬಱಿದೂಱು 'ಬಱುದೂಱು' ನೋ.

ಬಱಿದೆ, ಬರಿದೆ (ಅ). ವ್ಯರ್ಥವಾಗಿ ; ಸುಮ್ಮನೆ : ಆತನೊತ್ತಂಬದಿನಾಂ ತೊಡಾಂ ಬಱಿದೆ ತಪ್ಪಿದೆನೆಂದು ಕಿರೀಟಿ ತನ್ನ ಬಿಲ್ಲಂ ಬಿಸುಟಿರ್ದೊಡೆ (ಪಂಪಭಾ. ೦೦-೭೯); ಅಮರಾಪಗೆ ಕೆಟಗೆ ನಿಂದ ಜಿನಬಿಂಬದ ಮೇಲಮರ್ದಿರೆ ಪರಿತಂದುದಱಿಂದಮೆ ಪಾವನಮಾಯ್ತು ಬಱಿದೆ ಪಾವನಮಾಯ್ತೇ (ಸಮಪ. ೨-೩೩); ನಂಬರು ನೆಚ್ಚರು ಬಱಿದೆ ಕರೆವರು (ಬಸವ. ೦೦೬). ಬರಿದೆ : ಕೌತುಕಕೆ ಬೆಚ್ಚದಿರ್ ಬರಿದೆ (ಶಿಪ್ರಾಂಗ. ೨೩-೬೯೨). [<ಬಱಿದು]

ಬಱಿದೇರು (ನಾ). ಯಾವ ಅಲಂಕಾರವಿಲ್ಲದ ಮತ್ತು ಯಾರೂ ಕುಳಿತಿಲ್ಲದ ಬರಿಯ ರಥ; ಬರಿದಾದ ತೇರು : ನಿನ್ನೊಳಿರ್ದಪುದು ಬಱಿದೇರೆನ್ನ ಕೈಯೊಳಿದೆ ಪನ್ನಗಾರಿಧ್ವಜ ಕಿರೀಟಿಗಳ್ವೆರಸಿರ್ದ ಸನ್ನುತ ಸ್ಯಂದನಂ ನೋಡು (ಶೈಪಿಭಾ. ೨೭-೪೫).

[ಬಱಿ (<ಬಱಿದು) + ತೇರು$_2$ (<ತೇರ್$_2$)]

ಬಱಿದೊಱೆ 'ಬಱುದೊಱೆ' ನೋ.

ಬಱಿನುಡಿ 'ಬಱುನುಡಿ' ನೋ.

ಬಱಿಮಾತು 'ಬಱುವಾತು' ನೋ.

ಬಱಿಮಾಯೆ (ನಾ). ಕೇವಲ ಕಣ್ಕಟ್ಟು,–ತಂತ್ರ : ಎಲವೊ ಬಱಿಮಾಯೆಗಳನೆಸಗಿ ಮೋಸದೊಳ್ತುರಗಮಂ ಕೊಂಡು ಬಾಂದಳಕಡರ್ದೊಡೆ ನಿನ್ನನು ಉಳುಹುವರೆ (ಶೈಪಿಭಾ. ೪-೧೫). [ಬಱಿ(<ಬಱಿದು)+ಮಾಯೆ]

ಬಱಿಮುಳಿಸು (ನಾ). ಹುಸಿ ಕೋಪ : ಮುರುಹು ಮುದ್ದು ವಿನೋದ ಠಕ್ಕುಪಚಾರ ಬಱಿಮುಳಿ[ಪಾಠಾಂ. ನಿ]ಸು . . . ಎಂಬೀ ಪರಿಪರಿಯ ಮಾಯೆಗಳ ಮಹಿಳಾಜನ ವಿರಾಜಿಸಿತು (ತೊರರಾ. ೦-೫-೩೨).

[ಬಱಿ (<ಬಱಿದು) + ಮುಳಿಸು$_2$]

ಬಱಿಮೆಯ್, ಬರಿಮೈ, ಬಱಿಮೈ (ನಾ). ೧. ಬತ್ತಲೆ ದೇಹ ; ನಗ್ನ ಶರೀರ: ಎಲೆಗೇ ನೀನೆಲ್ಲರೊಂದಂದದಿನಿರೆ ಬಱಿಮೆಯ್ಯಿಂದಮಿರ್ಪಂ ತುಟಕ್ಕುಂ (ಶಂದ್ರಪು. ೮-೬೩). ಬರಿಮೈ : ೧. ಬರಿಮೈ ತಣ್ಣಗೆ, ಮನದಲಿ ಬಿಸಿ ಹಗೆ (ಪಂಚಿವೆ. ೧೫೨) ; ಕಿಡಿಗೇಡಿ ಮಗು ! ಬರಿಮೈಯಿಂದ ಮಂಜಿನಲ್ಲಿ ತಿರುಗುತ್ತಿದೆ ! (ಎರಸೆ. ೦೭). ಬಱಿಮೈ: ೨. ಅಲಂಕಾರರಹಿತವಾದ ಮೈ,—ಶರೀರ : ಕೃಷ್ಣನಾಮಸ್ಮರಣೆ ಮಾಡುತ ಮರುತಸುತನಾ ಕರವಿಡಿದು ಬಱಿಗಾಲು ಬಱಿಮೈಯಿಂದ ಬರುತಿರಲು (ಸಂಭಪ. ೨೦-೦೦೩).

[ಬಱಿ (<ಬಱಿದು) + ಮೆಯ್$_2$]

ಬಱಿಮೈ 'ಬಱಿಮೆಯ್' ನೋ.

ಬಱಿಯಾಟ, ಬರಿಯಾಟ (ನಾ). ಕೇವಲ ಆಟ,–ಕ್ರೀಡೆ : ಮುನ್ನ ಬಱಿಯಾಟಂಗಳಿಂ ಬೆಳಗನ್ನ ಕಾಡಿದಡೆನ್ನ ಜಠರವದಿನ್ನು ತುಂಬದು (ಬಸಪು. ೦೫-೨೪). ಬರಿಯಾಟ : ಯುವಕರ್ಗೆ ಪಯಣವೆಂದರೆ ಏನು ? ಬರಿಯಾಟವೈಸೆ ! (ಶಂದ್ರಸ. ೬೭). [ಬಱಿ (<ಬಱಿದು) + ಆಟ]

ಬಱಿವಾತು 'ಬಱುವಾತು' ನೋ.

ಬಱಿವಾತುಗಾಱ (ನಾ). ವ್ಯರ್ಥವಾದ ಮಾತಂಗಳನ್ನಾಡುವವನು : ಪೊಱಮಿಂಚುಗೈವನಂ ಬಱಿವಾತುಗಾಱನಂ. . . ತೊಱೆಯದುದೆಗ್ಗತನವಲ್ತೇ (ರಾಜಶೇ. ೦೦-೯೨). [ಬಱಿವಾತು (<ಬಱುವಾತು) + —ಕಾಱ]

ಬಱಿವಾಯ್ 'ಬಱುವಾಯ್' ನೋ.

ಬಱಿಸೂಱೆ 'ಬಱುಸೂಱೆ' ನೋ.

ಬಱಿಸೂಱೆಗೈ (ಕ್ರಿ). ವ್ಯರ್ಥವಾಗಿ ಸೂರೆಮಾಡು; ಅನ್ಯಾಯವಾಗಿ ಹಾಳುಮಾಡು : ಇಟ್ಟ ಮರಂಗಳಂ ಒಟ್ಟಿದ ಕಲ್ಗಳಂ ದೈವಮೆಂದು ಪೆಸರಿಟ್ಟು ಕೊಂಡಾಡಿ ವರಮಿಗುಮೆಂಬಾಸೆಯಿಂ ತಮ್ಮೊಳರ್ಥಮಂ ಬಱಿಸೂಱೆಗೈವರ್ (ಪದ್ಮಸಾ. II, ೮೨೦ ವ).

[ಬಱಿಸೂಱೆ (< ಬಱುಸೂಱೆ) + ಗೈ (< ಕೆಯ್$_1$)]

ಬಱಿಸೆಜ್ಜೆ (ನಾ). ಖಾಲಿಯಿರುವ ಕರಡಿಗೆ : ಗಳದ ಬಱಿಸೆಜ್ಜೆಯಲಿ ಲಿಂಗವು ನೆಲಸಿದುದು (ಐಸಪು. ೩೬ ಸೂಕನ). [ಬಱಿ (<ಬಱಿದು) + ಸೆಜ್ಜೆ$_2$]

ಬಱಿಹುಂಡ (ನಾ). ನಿರುಪಯುಕ್ತನಾದವನು; ನಿಷ್ಪ್ರಯೋಜಕ : ಬಱಿಹುಂಡನ ಗಡಿವಾಡದಲ್ಲಿರಿಸಿದಂತೆ ಒಡೆಯರಿಲ್ಲದ ಮನೆಯ ತುಡುಗುಣಿ ಹೊಕ್ಕು ಗಡಬಡಿಯ ಮಾಡಿದಂತೆ (ಸಳವ. I, ೨೦೫-೭೯೦).

[ಬಱಿ(<ಬಱಿದು) + ಹುಂಡ]

ಬಱು, ಬರಿ$_2$, ಬರು$_2$, ಬಱಿ (ಸಪೂರೂ) 'ಬಱಿದು' ಎಂಬ ನಾಮವಾಚಕಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಬಱುಗಾಲು', 'ಬಱುಗಿವಿ' ಪರಾ. ಬರಿ$_2$: 'ಬರಿಗಾಲು', 'ಬರಿಮನ' ಪರಾ. ಬರು$_2$: 'ಬರುಗನಸು', 'ಬರುಮರುಕ' ಪರಾ. ಬಱಿ : 'ಬಱಿಗಾಲು', 'ಬಱಿದಲೆ' ಪರಾ. [<ಬಱಿದು]

ಬಱುಂಟು, ಬೆರಟು, ಬೆಱಂಟು, ಬೆಱಟು$_1$ (ಕ್ರಿ). ೧. (ಕಾಲ್ಬೆರಳು ಅಥವಾ ಕೈಬೆರಳಿನಿಂದ) ಕೆರೆ ; ಗೆಬರು; ಗೀರು : ಮತ್ತಮಾಹಸ್ತಿ . . . ಭೂಮಂಡಳಮನುಂಡಿಗೆ ಸಾಧ್ಯಂ ಮಾಡಿ ಕುಡುವೆಂದಱಿಪುವಂದದಿಂ ದಕ್ಷಿಣಪಾದದಿಂ ಮೇದಿನಿಯಂ ಬಱುಂಟುತ್ತುಂ (ಪಾರ್ಶ್ವಪು. ೬-೩೪ ಪ). ೨. ಕೆದಕು ; ಬೆದಕು : ಪೇಟಲ್ಬಾರದ ಮನದೊಳ್ ಪೂಟಲ್ಬಾರದ ಬಱುಂಟಿ[ಪಾಠಾಂ. ಟಿ] ಕೇಳ್ದವರಾರುಂ ಬಾಟಲ್ಬಾರದ ಕನಸಂ . . . ಕಂಸಂ ಕಂಡಂ (ಅರ್ಧನೇ. ೭-೬೬); ಪೊಗೆಯಡಂಗೆಗವಿದ ದೂವೆಯಂತಿರೆ ಬಱುಂಟಿದೊಡೆ ಬಸಿಯನುಗುಟ್ಟ ಕಪ್ಪುರದ ನುಣ್ಮಳಲ ಜಗುಲಿಯುಂ (ವರ್ಧಪು. ೩-೬೩ ಪ). ೩. ಚಿವುಟು ; ಜಿಗುಟು : ತಂದೆಯ ಮಱಲುಂದಿದಲ್ಲಿಗೆವೋಗಿ ಬಱುಂಟಿ[ಪಾಠಾಂ. ಬೆಱಂಟಿ] ಎಟ್ಟಿ ಪೊಟ್ಟಳಿಗೆಯಂ ತಂದೆಗೆ ಕೊಟ್ಟಳ್ (ಪಡ್ಡಾರಾ. ೦೭-೨೩). ೪. ಕೆಣಕು ; ಕೆರಳಿಸು : ಕಾಮನ ತೋಳೊಳಿರ್ದ ರತಿ ಶಂಭುಕುಮಾರನುಮಂ ಬಱುಂಟಳೇ (ಅಪಂಪು. ೦೦-೩೫). ಬೆರಟು : ೧. ಬೆರಟಿದೊಡಂಗುಟದಿಂ ಪೊನ್ನೊರೆದೋರ್ಪುರ್ವರೆ ಕಡಲ್ಗೆ ಪಡಿಯೆಂಬಿನೆಗಂ ಪರಿಕಾಲೆತ್ತಂ ಪರ್ವಿರೆ (ರಮನ್ನ. ೦-೪); ಐದು ಕುದುರೆಗಳು . . . ನೆಲವನ್ನು ಮುಂಗಾಲಿನಿಂದ ಬೆರಟುತ್ತಿದ್ದುವು (ಪೀರಣಂ. ೨೦). ಬೆಱಂಟು : ೧. ಭೂಭಾಗ ಮನತ್ಯುತ್ಸಾಹದಿಂ ದಕ್ಷಿಣ ಖುರದೆ ಬೆಱಂಟಿತ್ತು ದಿವ್ಯಾಶ್ವಮಾಗಳ್ (ಕಾಪಂಪು. ೪೬೩); ಉಗುರಿನಿಂದಂಟಿ ಬೆಱಂಟೆಯಂಜನಮದಕ್ಕುಂ . . . ತಾನಿದೆಂಬಂತಿರೀ ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆಱೆ ದಟ್ಟಯ್ಸಿತ್ತನಿತ್ತಂ ತಮಂ (ಗಿರಿಕ. ೪-೭೬); ಅಂಗದಿಬ್ಬದಿಗಳನುಱುಂಗಿ ಬೆಱಂಟಿ . . . ಪಲ್ಗಿರಿದು ಗೋಲಾಂಗೂಲಂ ಪುರ್ಬಿಕ್ಕಿ ನಗಿಸುವವಲ್ಲಿ ವಟುಕಾಳವ (ಮಪೇಪು. ೩-೦೭). ಬೆಱಟು$_1$: ೧. ನೆಲನ ತಟ್ಟಿ ಬೆಱಟುವ ಪದಂ ನೆಗೆದಳ್ಳೆ ಬೆಂಗಡರ್ದ ಬಾಲದಿಂ . . . ಱೌಂಕಿಟ್ಟು ಹರಿಯಿತ್ತು (ಹಸಕಾ. ೩-೪೦); ಕಾಲಲ್ಲಿ ನೆಲನಂ ಬೆಱಟುತಂ . . . ಬಾಲವನೆತ್ತಿ ಬೀಸುತ್ತ (ಐಸಪು. ೩೨-೨೫); ಕಯ್ನಿಡಿಯನೊಳ್ಳುಗುರಿಂ ಬೆಱಟುತ್ತೆ ಬೆಳ್ಮೊಗಂ ಸಮನಿಸೆ ಕಾಲ್ವೆರಲ್ ಬರೆಯೆ ಭೂಮಿಯನಿರ್ದಳದೊಂದು ಚೆಲ್ವಿನಿಂ (ರಸರ. ೪-೦೬೫). ೩. ಕೇರಿಯೊಳ್ತಮಸಮಗೆ ಬೆಱಟುತಂ ಕೆರಟುತಂ ಸನ್ನೆಯಿಂ ಮುಗುಳ್ನಗುವರು (ಪತಿಜ. ೩-೬೬). ೪. ತಿರುಗಿ ನೋಡಿದ ಬೇತಾಳನ ಬೆಱಟಿ ಪಲ್ಮೊರೆದೌಡುಗರ್ಚಿಯಂಜಿಸುತ ತರಹರದಿಂದ ನಿಟ್ಟಿಸುತಿರ್ದನಾ ಭೂವರನು (ಶ್ರೀಪಾಲ. ೬-೪೬). ೫. ಕೀಳು ; ಎಬ್ಬು : ಬೆರಲೊಂದು ಬೊಗ್ಗಿಸುತ್ತವನ ಭಾಳಾಕ್ಷಿಯಂ ಬೆಱಟಿ ತೆಗೆವುತ ಬಾಯ್ಗೆ ಹಾಕಿಕೊಳಲು (ಪೀಶ್ಯಪು. ೬-೨-೩೪) ; ತನ್ನ ಮುಂದೆ ಮಸಣಿಯೆಯೆನುತೆ ಪಣೆಗಣ್ಣ ತೆಗೆಯೆ ಬೆರಳಿಂದದಂ ಬೆಱಟಿ ನುಂಗಲ್ಕಹಂಕರಿಸಿರ್ದೆನೆಂದು ಪೊಗಳಲ್ ಮಸಣಿಯಿಂದೆ ಬಳಿಕಾತಂಗೆ ಪಣೆಗಣ್ಣನುಗುಳಿಸಿದನು (ಸಂಪು. ೫೬-೨೮). 'ಪರಡು$_1$' ಪರಾ.

[ದೇ.॥ ತಮಿ. ವಱಣ್ಣು, ವಱುಕು ; ತೆಲು. ಬಱಟು, ಬರಟು, ಬರಕು]

ಬಱುಕಟೆ, ಬಕ್ಕಟ, ಬರ್ಕಟ (ನಾ). ನಿಷ್ಪ್ರಯೋಜಕವಾಡುದು ; ನಿರರ್ಥಕವಾದುದು : ತ್ರಿವಿಧದ ಹುಱಿಯಲ್ಲಿ ಅಡಿಯನಿಕ್ಕಿ ಅಡೆಗೊಡ್ಡಿದಂತೆ ಬಿದ್ದಿರುತ್ತ ಮತ್ತಱಿಕೆಯ ಮಾತನಾಡಿದಡೆ ಅದು ಬಱುಕಟೆ [ಪಾಠಾಂ. ಟಿ]ಯೆಂಬರು (ಪಾಸೂಪ್ಯು. ಳ. ೫೫೬-೦೬); ಇಂತೀ ಬಱುಬರ ಅರ್ಚನೆ ಹುರಿಯ ಬೊಂಬೆಯಂತೆ ಇಂತಿ: ಅಱಿಗುಱಿಗಳ ಪೂಜೆ ಬಱುಕಟೆಯಂತೆ (ಗುಪ್ತಪುಂ. ಳ. ೨೨೨-೫೫); ಬೆಳಗದ ಕಂಚು ತೊಳೆಯದ ಕುಂಭ ಪಕ್ವ ಕಳಿಯದ ಫಲ ನೆಱೆಯರಿಯದವನ ಸತ್ಕ್ರಿಯೆ ಮಾಟ ಬಱುಕಟೆ ಹೋಯಿತ್ತು (ಸರ್ವಪ. ೦೨೬-೬೫೨). ಬಕ್ಕಟ : ಆತ್ಮಜರಾಶೆ ಬಕ್ಕಟವಕ್ಕು ದೆಂಬಳವಳಿಗೆಗೊಳಲಾಗವನಿನಾಯಕನು (ಕಾಪಾ. ೨೬-೩೬). ಬರ್ಕಟ : 'ಬರ್ಕಟಬಯಲ್' ಪರಾ. [ಬಱು (<ಬಱಿದು) + ?]

ಬಱುಕಾಯ (ನಾ). [ವೀಶೈ] ಇಷ್ಟಲಿಂಗವನ್ನು ಧರಿಸಿದವನು : ಹಲವು ಕೊಂಬಿಂಗೆ ಹಾಯಬೇಡ ಬಱುಕಾಯಕ್ಕೆ ನೀಡಬೇಡ (ಐಸಪ. ೬೨೨); ಅಂಗದ ಮೇಲೆ ಲಿಂಗವುಳ್ಳವರ ಮನೆಯ ಹೊಗಿಸಲಾಗದು ಬಱು[ಪಾಠಾಂ. ಬಱಿಯ]ಕಾಯರಿಗೆ ನೀಡಲಾಗದು (ಸನ್ನಪ. ಳ. ೬೩೬-೦೪೩೦) ; ಹುಸಿ ಡಂಭಕ ದುರ್ಮತಿ ಬಱುಕಾಯನಿಗೆ ಅಖಂಡೇಶ್ವರ ಎಂತು ಮಚ್ಚುವನು (ಅಖಂಡೇ. ೯೬-೦೫). [ಬಱು (< ಬಱಿದು) + ಕಾಯ]

ಬಱುಗ (ನಾ). ಹಣ ಇಲ್ಲದವನು ; ಬಡವ ; ದರಿದ್ರ : ಮತ್ತವನ ವಿತ್ತದೊಳಗಿನಿತುಳಿಯದಂತೆಲ್ಲವಂ ಕವರ್ದುಕೊಂಡು ಬಱುಗನಂ ಮಾಡಿ (ಶೇರಮ. ೬-೩೪). [ಬಱು (< ಬಱಿದು) + — ಗ$_2$]

ಬುಱುಗಯ್ 'ಬಱುಗೆಯ್' ನೋ.

ಬಱುಗಾಲು, ಬರಿಗಾಲು, ಬರುಗಾಲು, ಬಱಿಗಾಲು (ನಾ). ಪಾದರಕ್ಷೆಗಳನ್ನು ಧರಿಸದ ಕಾಲು ; ಜೋಡು ಮೆಟ್ಟದಿರುವ ಕಾಲು ; ಬರಿಯ ಕಾಲು : ದಂತಿಯಿಂದಿಳಿದು ನಡೆದಱಿಯದವ ಬಱುಗಾಲೊಳೆಂ ತಡಿಯನಿಡುವೆ (ಹಸಕಾ. ೯-೬). ಬರಿಗಾಲು : ಕಾಲೇಜಿಗೆ ಬರಲು ಬರಿಗಾಲಿನಲ್ಲಿ ಮೈಲುಮೈಲಿಗಳ ದೂರ ನಡಿಗೆ (ರಂಗವ. ೦೨೫); ಎಂಟು ವರುಷದ ಮಗ ಹೊಂಟಾನ ಬರಿಗಾಲ ಬಂಟರಂಗ ಗಿರಿಯ ಏರೂತ (ಸಿದ್ಧಪು. ೫-೫೨); ಈ ಮುಳ್ಳುನೆಲದ ಮೇಲೆ ಬರಿಗಾಲಿನಲ್ಲಿ ಏಕೆ ನಡೆಯುತ್ತೀಯೆ (ಪುರ್ಯಪು. ೬೬). ಬರುಗಾಲು : ಕೊಳಗದಪ್ಪಲೆಯನ್ನು ಹೊತ್ತ ಬರುಗಾಲಿನ ಹೆಂಗಸರಿಬ್ಬರು . . . ಹೊರಗೆ ಬಂದರು (ಪುಪರು. ೬೪). ಬಱಿಗಾಲು : ಕೃಷ್ಣನಾಮಸ್ಮರಣೆಮಾಡುತ ಮರುತಸುತನಾ ಕರವಿಡಿದು ಬಱಿಗಾಲು ಬಱಿಮೈಯಿಂದ ಬರುತಿರಲು (ಸಂಭವ. ೨೦-೦೦೩); ಕರೆಯದಲೆ ಬರುವವನ ಬರೆಯದಲೆ ಓದುವನ ಬಱಿಗಾಲಿನಿಂದ ನಡೆವವನ ಕರೆತಂದು ಕೆರದಿ ಹೊಡೆಯೆಂದ (ಸರ್ವಜ್ಞ. ೦೫೦೦).

[ಬಱು (<ಬಱಿದು) + ಕಾಲು$_1$ (<ಕಾಲ್$_1$)]

ಬಱುಗಿವಿ (ನಾ). (ಒಡವೆಯನ್ನು ಧರಿಸದಿರುವ) ಕಿವಿ : ಬರಿದಾದ ಕಿವಿ: ಬೋಳಾದ ಕಿವಿ : ಹಾರಪದಕವಿದ್ದು ಬಱುಗಿವಿಯಾದ ಶೃಂಗಾರ ರಮ್ಯವೆ ಹೇಳಿರೆಂದ (ಭರತ. ೫೭-೩೦). [ಬಱು (<ಬಱಿದು) + ಕಿವಿ$_3$]

ಬಱುಗುತ್ತ (ನಾ). ಬರಿಯ ರೋಗ ; ಸದಾ ಇರುವ ರೋಗ : ಕಟಕಿ ಹುರುಡು ಮೂದಲೆ . . . ಕಲಹ ಸಟೆ ಬಱುಗುತ್ತಗಳನು ಮಾಡೆ ಬೆಲೆವೆಣ್ಗೆ ವಿಟರು ಸೋಲುವರೆ ಧನವನು (ಗುರುಪಾ. ೦-೦೦೬); ಕೊಱಚಾಟ ಹೋರಟೆ ಕಲಹ ಬಱುಗುತ್ತ ಬಯಲೊಲ್ಮೆಗಳ ಮಾಡೆ[ಪಾಠಾಂ. ಬಱುಗುತ್ತು ಬಯಲ್ಮೊಱೆಗಳ ಮಾಡಿ] ಬೆಲೆವೆಣ್ಗೆ ತೆಱುವರೆ ಧನವ ಬಲ್ಲವರು (ಕುರಾಸಾಂ. ೨೬-೬೯). [ಬಱು (<ಬಱಿದು) + ಕುತ್ತ]

ಬಱುಗೂಟ್, ಬಱಿಗೂಟ್ (ನಾ). (ಸಾರು ಅಥವಾ ಮಜ್ಜಿಗೆ ಬೆರಸದ) ಅನ್ನ ; ಬರಿಯ ಅನ್ನ : ಬಱು[ಪಾಠಾಂ. ಱಿ] ಗೂಟನುಂಬ

ನಿಬ್ಬಗಡಿಯುಂ ಕಳಿಯುಂ ಕೂಟನುಂಬ ಆಯಂಬಿಲಮುಮೆಂದಿವಂ ತನ್ನ ಶಕ್ತಿಯಿಂ ಮಱಸದಾವುದಂ ಮಾಡಿದೊಡಂ ಪ್ರೋಷಧೋಪವಾಸಮೆಂ ಬೆರಡನೆಯ ಶಿಕ್ಷಾವ್ರತಮಕ್ಕುಂ (ಪಸಾರ. ೩೦೬). **ಬಱಿಗೂಟ್** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಬಱು (<ಬಱಿದು) + ಕೂಟ್$_1$]

ಬಱುಗೆಂಡ, ಬಱಿಗೆಂಡ (ನಾ). ಉರಿಯಿಲ್ಲದ ಕೆಂಡ; ಬರಿಯ ಕೆಂಡ : ಬಱು[ಪಾಠಾಂ.ಱು]ಗೆಂಡದೊಳು ಸುಟ್ಟಡಗು ಬೂಲಿಕೆಯೆನಿಕ್ಕು (ಮುಂಗರಾ. ೬೯-೯). **ಬಱಿಗೆಂಡ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಬಱು (<ಬಱಿದು) + ಕೆಂಡ]

ಬಱುಗೆಯ್$_1$, ಬರಿಗೈ$_1$, ಬಱಿಕೆಯ್, ಬಱಿಕೈ, ಬಱಿಗೆಯ್, ಬಱಿಗೈ$_1$ ಬಱುಗೈ (ಕ್ರಿ). ೧. ಇಲ್ಲದಂತೆ ಮಾಡು; ನಾಶಮಾಡು; ಸಂಹರಿಸು: ಅಲಘುಸಾಹಸಿ ಹೊಡೆದ ಗಾಯಕೆ ಖಳರ ಮುಂಡಗಳಾಡುತಿರ್ದವು ಬಲವ ಬಱಿಗೆಯ್ದು (ಕೌಶಿರಾ. ೨೦-೯೨). **ಬರಿಗೈ$_1$** : ೨. ಬರಿದುಗೊಳಿಸು ; ನಿಷ್ಫಲಗೊಳಿಸು : ಬರಿಗೈಯೆ ನಾ ನಿನ್ನ ಬಯಕೆಯನು (ಮೂರುನಾ. ೧೨೯). **ಬಱಿಕೆಯ್** : ೧. ಮಱಿದೊಱಗಿರ್ದ ಕಾಕಬಲಮೆಲ್ಲಮಂ ಬಱಿಕೆಯ್ದು (ಪಂಪತಂ. ೨೦೨-೨೦) ; ಅದಟರನಾನ್ತು ಕೊಲ್ವದಟನಣ್ಮೆದರಂ ಬಱಿಕೆಯ್ದು . . . ನಿತ್ತರಿಪ ಕಾದುವ ಮೆಯ್ಗಲಿ ಯಾರ್ದ್ದರಿತ್ರಿಯೊಳ್ (ಸೌಇಇ. XX, ೬೯-೨೯ ; 1112). ೨. ಬಾಯ್ಸವಿಯ ಮಾತುಗಳಂ ಬಱಿಕೆಯ್ದು ಚರ್ಚೆಯಲ್ಲ (ಅಪಂಪು. ೦-೩೬). **ಬಱಿಕೈ** : ೧. ಒಂದೆರಡೆಂದು ಸಲುಗೆಗೆ ಸಲಿಸಿ ಬಂದೈನೂಱ ಬಱಿಕೈದು (ಕುಮ್ಮಾಟ್ರೋ. ೩-೬೯); ಹರಿಬಲವ ಬಱಿಕೈವುತಿರ್ದುದು ಹರಿಬದತಿಬಲ ಖಳಕದಂಬಕ ಮಸಮಸಮರದಲಿ (ತೊರರಾ. ೬-೩೦-೭). ೨. ಮಾರುತಾಸುರನ ಭಾರಣೆಯ ಬಱಿಕೈವ ವೀರರದಾರು (ಪಿಭಾಗ. ೨-೩-೦೬). **ಬಱಿಗೆಯ್** : ೧. ತಲೆ ನಡುಗುತಿರ್ದುವೆನ್ನದೆ ತರದಿಂ ಬಱಿಗೆಯ್ದುತಿರ್ದ ಮಾಯ್ದಱಗುಲಿ ಕರ್ವೇಡನಲ್ಲಿ ಮುದುಗಿಳಿಗಳುಮಂ (ಕಾದಂಪೂ. ೦೭೯) ; ಪೊಯ್ದು ಪೊಯ್ದು ಭರದಿಂ ಬಱಿಗೆಯ್ದನಭೇದ್ಯವಿಕ್ರಮಂ (ಗೀತಗೋ. ೬೩-೦೬). **ಬಱಿಗೈ$_1$** : ೧. ಎಲವೊ ನಿನ್ನಯ ಬಲವನೆಲ್ಲವ ತುಳಿದು ಬಱಿಗೈವನ್ನಬರ ನೀನುಳಿದು ನೋಡಾ (ಸಂಪಪ. ೯-೦೦೦) ; ಚಾರಿವರಿದನು . . . ಪಡೆಯ ಬಱಿಗೈದು (ಕೌಶಿರಾ. ೨೨-೭). **ಬಱುಗೈ** : ೧. ಥಟ್ಟುಗೆಡಹಿದನೇನನೆಂಬೆನು ಪಡೆಯ ಬಱುಗೈದ (ಕೌಶಿರಾ. ೩೫-೦೬). [ಬಱು (<ಬಱಿದು) + ಕೆಯ್$_1$]

ಬಱುಗೆಯ್$_2$, ಬರಿಕೈ$_1$, ಬರಿಗೈ$_2$, ಬರುಗಯ್, ಬಱಿಕಯ್, ಬಱಿಗೈ$_2$, ಬಱುಗಯ್ (ನಾ). ಆಹಾರ, ಹಣ, ಹಣ್ಣು ಹಂಪಲು ಆಯುಧ ಇತ್ಯಾದಿಗಳನ್ನು ಹೊಂದಿರದ ಕೈ ; ಖಾಲಿಕೈ ; ಬರಿದಾದ ಹಸ್ತ; ರಿಕ್ತಹಸ್ತ . ಮಿಱುಗುತ್ತಿರೆ ಸರ್ವಾಂಗಂ ಬಱುಗೆಯ್ಯಿಂ ಬಯಲ ನೀಗುತ್ತಿರೆ (ಕಬ್ಬಾಕಾ. ೨-೦). **ಬರಿಕೈ$_1$** : ತೊಳಲಿ ಶೋಧಿಸಿ ಬಳಲಿ ಬಂದು ಬರಿಕೈಯಾದುದೆನುತ ಚಿಂತಿಸಿ (ಪಂಕಾರಾ. ೫-೫-೦). **ಬರಿಗೈ$_2$**: ಇದಕ್ಕೆ ಬಲಿಬಿದ್ದು ಅನೇಕರು ಬರಿಗೈಯಾಗಿದ್ದಾರೆ (ಮಿತಪ್ಯ. ೨೨); ಹೀಗೆ ಬರಿಗೈಲಿ ಮರಳುವದು ನನಗೆ ಎಳ್ಳಷ್ಟೂ ಸರಿ ಕಾಣುವುದಿಲ್ಲ (ಪಂಗಾಹ. ೫೯) : ಆನಂದ ಇತ್ತೀಚೆಗೆ ಬರಿಗೈಯಿಂದ ಮನೆಗೆ ಹೋಗಲಾರದೆ ಬಾರಿಬಾರಿಗೂ ನೊಂದುಕೊಳ್ಳುತ್ತಾನೆ (ತೇಮೋಡ. ೨). **ಬರುಗಯ್** : 'ದೇಹಿ' ಎಂದು ಸೇರೆಗಯ್ಯನ್ನೆತ್ತಿದ ಆರೂ . . . ಬರುಗಯ್ಯಿಂದ ಹಿಂದಿರುಗಿದರಿಲ್ಲ (ಪಟ್ಟಿಲಿ. ೯೨-೨). **ಬಱಿಕಯ್** : ಮನಸಿಜನಾತ್ಮಜ ಬಱಿಕಯ್ಯೊಳ್ಳುದು ಸನುಮತವಲ್ಲ (ಮೋಹತ. ೩೩-೬೦). **ಬಱಿಗೈ$_2$** : ಸಂಬಂಧಿಗಳಪ್ಪರಲ್ಲಿಗೆ ಬಱಿಗೈಯಿಂ ಪೋಗಲಾಗದೆಂಬರ್ (ಪಂಪತಂ. ೨೯೦-೨); ತೆಱನಂ ಕಾಣದ ಬಾಟ್ಕೆ . . . ದುರ್ಮಾರ್ಗರೊಳ್ ಸ್ನೇಹಮುಂ ಬಱಿಗೈಯಂ ಸುಱಿದಂತೆಲ್ಲೆ (ಸೋಮೇಶ. ೦೭); ಬರುತೇನು ತಂದೆ ಬಱಿಗೈಲಿ ಬಂದೆ (ಪುರಂದ. ೨-೫೩-೧). **ಬಱುಗಯ್** : ಬಱುಗಯ್ಯೊಳೆ ಗುರ್ದೆಯುಂ ಪುಡುಕುನೀರೊಳರ್ದೆಯುಂ (ಅಪಪು. ೦೦-೦೦ ಪ).

ಬರಿಕೈಯಲ್ಲಿ ಮೊಳಹಾಕು, ಬರಿಗೈಯಲ್ಲಿ ಮೊಳಹಾಕು=ಹಣವಿಲ್ಲದೆ ಖರ್ಚಿಗೆ ಯೋಜನೆ ಹಾಕು : ಬರಿಕೈಯಲ್ಲಿ ಮೊಳಹಾಕಿದರೆ ಪುರುಷಾರ್ಥವೇನಿದೆ (ಪಾಗ್ಯೇಪಿ. ೦೦೫) ; ಅವುಗಳನ್ನೆಲ್ಲ ಕಂಡುಹಿಡಿದು ಕನ್ನಡಿಗರಿಗೊಪ್ಪಿಸುವ ಶಕ್ತಿಯಾಗಲಿ, ಬರಿಗೈಯಲ್ಲಿ ಮೊಳಹಾಕುವ ನಮ್ಮಂಥ ವ್ಯಕ್ತಿಗಳಿಗೆಲ್ಲಿಂದ ಬರಬೇಕು (ಪಾಡೋಪ. ೧೯೬). **ಬರಿಗೈಲಿ ಬರು** = ಕೆಲಸವಾಗದೆ ಹಿಂತಿರುಗು : ನಿಷ್ಫಲನಾಗಿ ಹಿಂದಿರುಗು : ಹೋಗಿ ಬಂದವರು ಬರಿಗೈಲಿ ಬಂದರು (ಪುಟ್ಟರ. ೬೯). **ಬಱಿಗೈಯವರು**=ಹಣವಿಲ್ಲದವರು; ದರಿದ್ರರು : ನಾವು ಬಱಿಗೈಯವರು ಬರಲೆಮಗಾವುದಲ್ಲಿಯ ಕೆಲಸ (ಕುಮ್ಮಾಕಾ. ೦-೯೩). [ಬಱು (<ಬಱಿದು) + ಕೆಯ್$_2$]

ಬಱುಗೆಱ^3, ಬರಿಗೆರೆ, ಬಱಿಗೆಱ^3 (ನಾ). ನೀರಿಲ್ಲದೆ ಖಾಲಿಯಾಗಿರುವ ಕೆರೆ : ಕೆಱ^{3}ಯು ಬಱುಗೆಱ^{3}ಯಾಗಲೀಕ್ಷಿಸಿ (ಸಾಳ್ವಭಾ. ೩೦-೩೬). **ಬರಿಗೆರೆ** : ಬರಿಗೆರೆಯೊಳಗೊಂದು ಬಕಪಕ್ಷಿ ಕುಳಿತಂತೆ (ಸೌಂದಕಾ. ೭-೦೩೯). **ಬಱಿಗೆಱ^3**: ಕೆಱ^3 ನೆಱ^3 ನೀರ್ ತವುತರೆ ಬಱಿ[ಪಾಠಾಂ. ಱು]ಗೆಱ^{3}ಯಾದುವು . . . ಕಾಲವಶಮದೇನಾಗಿಸದೋ (ಜಗವಿ. ೦೭-೬೯). [ಬಱು (< ಬಱಿದು)+ಕೆಱ^3]

ಬಱುಗೈ 'ಬಱುಗೆಯ್$_1$' ನೋ.

ಬಱುಗೊಂದೆ (ನಾ). ಕ್ಷುಲ್ಲಕವಾದ ಪಶು; ಹೀನಜಂತು : ಇನ್ನೆಬರಂ ತಮಗೆ ಜಗಂ ತೋಡಾಗದೆಂದು ಸೊರ್ಕಿನುರ್ಕಿಂ ಬಱುಗೊಂದೆ ಪಂದೆರಾಯರಂ ಕಾಡಿ ಬೇಡಿ ಕೂಡಿದ ಜಾಳಿಗೆವೊನ್ನಂ ಕೋಳುಗೊಂಬೆಂ (ರಾಮಾಶ್ವ. ೦೨೬-೨೯). [ಬಱು (<ಬಱಿದು) + ಗೊಂದೆ$_1$]

ಬಱುಜಗಳ (ನಾ). ವ್ಯರ್ಥವಾದ ಕಲಹ; ಒಣಗುದ್ದಾಟ: ಅಕಟಕಟ ಬಱುಜಗಳಗೊಳಿಪ ಜಾಣೆಂತಿವಳಾ (ಪಕವಿ. ೬-೨೯೦).

[ಬಱು (< ಬಱಿದು) + ಜಗಳ (< ಜಗಟ)]

ಬಱುಜೋಗಿ (ನಾ). ನಿಷ್ಪ್ರಯೋಜಕನಾದ ಜೋಗಿ : ಪೋ ಪೋಗಿರೆ ! ಬೂದಿಯ ಬಱುಜೋಗಿಯನುಬಿದತ್ತಂ (ರಾಮಾಶ್ವ. ೬೧ ೨೬).

[ಬಱು (< ಬಱಿದು) + ಜೋಗಿ$_1$]

ಬಱುದಲೆ, ಬರಿದಲೆ, ಬರುದಲೆ, ಬಱಿದಲೆ (ನಾ). ೧. ಬೋಳುದಲೆಯುಳ್ಳವನು ; ಲೋಚುಮಾಡಿಕೊಂಡ ತಲೆಯುಳ್ಳವನು ಜೈನ ಸಂನ್ಯಾಸಿ : ಪೆಱರಂ ದೂಱುವರೊಳ್ ತೆಱನಱಿಯದೆ ನುಡಿವವರೊಳ್ . . . ಪುರುಡಿಗರೊಳ್ ಬಱುದಲೆಯೆಂದೆಳಸಿ ಕೇಳಲಾಗದು ಪುರುಷಂ (ಧರ್ಮಾಮ್ಯ. ೬-೨೦೩). **ಬರಿದಲೆ**: ೨. ಏನನ್ನೂ ಧರಿಸದೆ ಇರುವ ತಲೆ; ಬೋಳುತಲೆ: ಹಿಂದೆ ಟೋಪಿ ಅಥವಾ ಮುಂಡಾಸಿಲ್ಲದೆ ಬರಿದಲೆಯಲ್ಲಿ ಯಾರೂ ಓಡಾಡುತ್ತಿರಲಿಲ್ಲ (ಕೂಡಿ). **ಬರುದಲೆ**: ೩. ಕೂದಲು ಬೆಳೆಯದಿರುವ ಅಥವಾ ಮುಂಡನ ಮಾಡಿಸಿಕೊಂಡ ತಲೆ ; ಬೊಕ್ಕತಲೆ : ಆ ಬೋಳ ಚಾಮರಾಜನ ಬರುದಲೆಯನ್ನು (ಸುಗುಗಂ. ೬೨-೦೩). **ಬಱಿದಲೆ**: ೨. ತೆಂಕಲಲಿ ಬಱಿದಲೆಯಲಿಹರು (ಸರ್ವಜ್ಞ. ೦೬೦೬).

[ಬಱು (< ಬಱಿದು) + ತಲೆ$_1$]

ಬಱುದೂಱು, ಬಱಿದೂಱು (ನಾ). ವಿಂಥ್ಯಾಪವಾದ : ಅಱುಹಿನವರು ಬಂದು ಕುಱಿಯ ಕೊಂಡೊಯ್ದರೆ ಬಱುದೂಱ್ತೇತಕೋ (ಅಪಪಂ. ೩೦೦-೦೩೦೭). **ಬಱಿದೂಱು** : ಆರಱಿಯದಂತದಱೊಳಗೆ ಹೃದಯಾರವಿಂದದಿ ನೀನಿರಲು ಬಱಿದೂಱು ಜೀವನಿಗುಂಟೆ (ಹಂಸಾ. ೯೯).

[ಬಱು (<ಬಱಿದು) + ದೂಱು$_2$]

ಬಱುದೊಡಂಬೆ (ನಾ). ಹೂವಿರದ ಬರಿಯ ತೊಟ್ಟು : ಮಾವಿನ ಪೊಸಗೊಂಚಲೊಳ್ ಬಱುದೊಡಂಬೆಗಳಿರ್ಪುವೆ ಕಿಟ್ಟು ಸೂಸೆಯುಂ (ಲೀಲಾವ. ೦೦-೯). [ಬಱು (<ಬಱಿದು) + ತೊಡಂಬೆ$_2$]

ಬಱುದೊಱೆ. ಬಱೆದೊಱೆ (ನಾ). ೧. ನೀರಿಲ್ಲದೆ ಬರಿದಾಗಿರುವ ತೊರೆ.—ಹೊಳೆ. ೨. (ಆಲಂ) ಮಂರೀಚಿಕೆ: ನೀನೆನ್ನ ಪರಿ ಬಱು[ಱಾಣಾಂ. ಱೆ]ದೊಱೆಯಲೋಲಾಡಿಸಿದೆ ನೀ ಹಸಿದಿರಿಸಿ ಹಾರುವನ (ವಿಭಾಗ. ೯-೩-೩೯). ೩. ವ್ಯರ್ಥವಾದುದು; ನಿಷ್ಪ್ರಯೋಜಕವಾದುದು: ಕಾಮೇಷ್ಟಿಯಲಿ ಪಡೆದ ಹೊಟ್ಟೆ ಬಱುದೊಱೆಯಾಯಿತೇ . . . ಹಾಯೆಂದೊಟ್ಟೆವೊಱಲಿ ದಳಬಲೆ (ಶೂಕರಾ. ೨-೩-೩೭). ೪. ನಾಶ; ಅಳಿವು: ಕುದುರೆ ಬಱುದೊಱೆಯಾಯ್ತು ಕರಿಯ ಹಿಂಡಡಗಿದುದು (ಪಂಪಭಾ. ೨೯-೩೦). **ಬಱೆದೊಱೆ**: ೧. ಅಱೆವು ತಲೆಕೆಳಗಾಯ್ತು ಧೈರ್ಯದ ನಿಱೆಗೆ ನಗೆಗೆಡೆಯಾಯ್ತು ಲಜ್ಜೆಯ ಹೊಱೆಗೆ ಬಱೆದೊಱೆಯಾಯ್ತು (ಕುಟ್ಟಿನಿ. ೨-೦೨). ೨. ನಿಮ್ಮೆ ತಾತ ಶಂಕರ ಕೊಟ್ಟ ನಿರುತದ ಮಾತು ಬಱೆದೊಱೆಯಾಗದು (ಸಂಗಪ. ೩೦-೩೭). [ಬಱು (<ಬಱೆದು) + ತೊಱೆ$_3$]

ಬಱುದೊಱೆವೊಗು (ಕ್ರಿ). ೧. ನೀರು ಬತ್ತಿದ ತೊರೆಗೆ ಇಳಿ. ೨. (ಆಲಂ) ಫಲ ದೊರಕದ ಕೆಲಸಮಾಡು; ವ್ಯರ್ಥವಾದ ಶ್ರಮವನ್ನು ಹೊಂದು: ಮಾಯದ ಸಂಸಾರದ ನಟ್ಟಿ ವಾಯಕ್ಕಿ ಕೆಟ್ಟು ಬಱುದೊಱೆವೊಗಬೇಡ (ಬಸವ. ೬೨೯). [ಬಱುದೊಱೆ + ಪೊಗು]

ಬಱುದೊಱೆವೋಗು, ಬಱುದೊಱೆಹೋಗು (ಕ್ರಿ). (ನೀರು ಬತ್ತಿದ ಹೊಳೆಯಂತೆ) ವ್ಯರ್ಥವಾಗು: ನಿಷ್ಪ್ರಯೋಜಕವಾಗು: ಕರಣ ದಿಚ್ಛೆಗೆ ಹರಿದು ನರಕದಲ್ಲಿ ನೆರೆದು ಬಱುದೊಱೆವೋಗದೆ ಮಱೆಯದೆ ಪೂಜಿಸು (ವೇದಾಸ. ೩೩-೬೯); ಬಱುದೊಱೆವೋದುದು ಕೆಱೆಗಂ ದೇಗುಲಕ ಮಾಗದುಱೆದವರರ್ಥಂ (ಎಳೆ. V. ಬೇಲೂರು. ೧೯೩-೯೬; 1161); ಬಱುದೊಱೆವೋದುದೆನ್ನಯ ವಿವೇಕಂ (ಪ್ರಸಿದ. ೩೦-೩೩). **ಬಱುದೊಱೆಹೋಗು**: ಮೋಹನ ಮೊಲೆ ಮುದ್ದುಮೊಗದ ಭಾವಕಿಯರ ಲಲ್ಲೆನುಡಿಯೆಂಬ ನಯಗತ್ತಿ ಎಲ್ಲರ ಹೃದಯವ ಕೊಱೆವುತ್ತಿದೆ ನೋಡಾ . . . ಬಲ್ಲತನ ಬಱುದೊಱೆಹೋಯಿತ್ತು (ಸಿದ್ಧೇಶ. ೪೦-೦೦೬).

[ಬಱುದೊಱೆ + ಪೋಗು$_1$ (<ಪೋ$_1$)]

ಬಱುದೊಱೆಹೋಗು 'ಬಱುದೊಱೆವೋಗು' ನೋ.

ಬಱುನುಡಿ, ಬಱೆನುಡಿ (ನಾ). ಬರಿಯ ಮಾತು; ಒಣಮಾತು: ಒಡವುಟ್ಟಿದರೆಂಬೀ ಬಱುನುಡಿವಡೆವರ್ಪಱದಿರ್ಕೆ ಮಱುಮೆಯ್ಯೊಳದಾರೊಡವುಟ್ಟುವರ್ (ಶಾಂತೀಶ್ವ. ೦೩-೦೨೦); ನಂಬದೊಡೆ ಬಱುನುಡಿಯೊಳಾದ ಫಲವೇನು (ಲಿಕಾಂ. ೬-೯). **ಬಱೆನುಡಿ**: ದಿಟವೀರನೇ ಕೂರಲಗಿನಲಿ ಮಾತಾಡು ಬಱೆನುಡಿ ಭಂಡತನ (ಕುಮಾರವ್ಯಾ. ೦೯-೩).

[ಬಱು (<ಬಱೆದು) + ನುಡಿ$_3$]

ಬಱುನೆನಹು (ನಾ). ಬರಿಯ ನೆನಪು: ಬಱುನೆನಹು ಸ್ವಪ್ನಂ (ಪಾಂಗರಾ. ೯೯-೩). [ಬಱು (< ಬಱೆದು) + ನೆನಹು (<ನೆನಪು)]

ಬಱುನೋಟ (ನಾ). ಬರಿಯ ದೃಷ್ಟಿ.—ನೋಟ: ಬಱುನೋಟವನೆ ಪಸರಿಸುವಾ ಮೋಹವಿಂತೇಕಿವರೊಳೆನಗೆಂಬಾ ಹದನನಱಿವಡೆ (ಶಾಳ್ವಕಾ. ೪-೩೦). [ಬಱು (< ಬಱೆದು) + ನೋಟ]

ಬಱುಬ 'ಬಱುವ' ನೋ.

ಬಱುಬೆಸನಿಗ (ನಾ). ಬರಿಯ ದುರಭ್ಯಾಸಗಳುಳ್ಳವನು; ದುಶ್ಚಟಗಳುಳ್ಳವನು: ಪಸಗೆಟ್ಟುರವಣಿಸುವ ಬಱುಬೆಸನಿಗನೊಳ್ಪಸೆಗೆ ಸಂದು (ಕಳಿ. ೬-೦೧೬). [ಬಱು (< ಬಱೆದು) + ಬೆಸನಿಗ]

ಬಱುಮಂಡೆ (ನಾ). ಏನನ್ನೂ ಧರಿಸದಿರುವ ತಲೆ; ಬೋಳುತಲೆ: ಬಱುಮಂಡೆ ಬಳಿದ ಬಾವನ್ನ ಸುಲಿದ ಪಲ್ಲು ವಿಱುಪ ಸಬಳಕೈಕತಿ ಮೆಱೆಯ ಸಬಳಗೆರೆಯ್ತಂದರು (ಶುಂಗಾಂ. ೦೯-೨೦).

[ಬಱು (<ಬಱೆದು) + ಮಂಡೆ]

ಬಱುಮನ, ಬರಿಮನ (ನಾ). ಭಕ್ತಿ, ಶ್ರದ್ಧೆ, ಪ್ರೀತಿಗಳಿಲ್ಲದ ಅಂತರಂಗ: ಅಮರ್ದು ಬಸವಣ್ಣನಂ ಬಂದಿವಿಡಿಯಲ್ಕೆಂದು ಬಱುಮನದ ಹೊಱ ವಿಭೂತಿಯನಲ್ಲಿ ಕೀವಿಟ್ಟು (ಬಸವ. ೯-೯೩). **ಬರಿಮನ**: ಬರಿಮನ ಸಲ್ಲದಣ್ಣಾ! ಬಲ್ಲವರೊಳೆಲ್ಲಗೈವನೆ ಮನುಜನಣ್ಣಾ (ಶಿಪಿ. ೩೭-೭).

[ಬಱು (<ಬಱೆದು) + ಮನ]

ಬಱುಮಾಟ (ನಾ). ಶ್ರದ್ಧೆಯಿಲ್ಲದ ಕೆಲಸ: ಮನಸ್ಸಿಲ್ಲದ ಕಾರ್ಯ: ಶ್ರೀ ಗುರುವಿನುಪದೇಶವಿಲ್ಲದೆ ಹೋಗಿ ದೇವಾರ್ಚನೆಯ ಮಾಡಿದೊಡೇಗುವುದು ಬಱುಮಾಟ ನಿಷ್ಫಲವೆಂದಳಾ ವಿಮಳೆ (ಪ್ರಭುಲಿಂ. ೭-೬).

[ಬಱು (<ಬಱೆದು) + ಮಾಟ$_1$]

ಬಱುಮಾತು 'ಬಱುವಾತು' ನೋ.

ಬಱುವ, ಬಱುಬ (ನಾ). ೧. ಬರಿಯ ಕೈಯಲ್ಲಿರುವವನು; ನಿರಾಯುಧ; ಅಸಹಾಯಕ: ಬಱುವಂ ಸಾರಥಿಯಿಲ್ಲ ಮೆಯ್ಗೆ ಮಱೆಯುಂ ತಾನಿಲ್ಲದೆಂತೀಗಳಾನಿಱೆವೆಂ (ಪಂಪಭಾ. ೦೨-೨೦೬); ಬಱುವನನಾಜಿ ಶ್ರಾಂತನಂ ಯಶೋಧನನಿಱೆಯಂ (ಶಾಂತಿಪು. ೯-೩೦). ೨. ದರಿದ್ರ; ಬಡವ; ನಿರ್ಗತಿಕ: ಕಿಱೆಯಂ ಮುತ್ತಂ ಧನದಂ ಬಱುವಂ [ಱಾಣಾಂ. ಱೆಯಂ]ತೊಱೆದಂ ಗೃಹಸ್ಥನೆನ್ನದೆ ಮುಂ ಬಿಟ್ಟಱಸಿ ಕೊಲುತಿರ್ಪ ಜವನೆಂಬಱೆಕೆಯ ಪಗೆವಂಗದೆಂತು ಪಂಗಿಗನನಪ್ಪೆಂ (ಪಂಪಭಾ. ೯-೬೬); ಅಱೆವಿಲ್ಲದೆ ಮತ್ತೆಲ್ಲಂ ನೆಱೆದಿರ್ದೊಡಮೇನೊ ಬಱುವನಾತಂ ದಿಟದಿಂ (ಕೇತಿಮಂ. ೨-೩೦೦); ಜರೆಯ ನರೆಯ ಮಡಲ್ತ ಸೆರೆದುಱುಗಲ ಸುರ್ಕುಂದೊವಲ ಅಸಿದೊಡಲ ಬಱುವಂ ಜೋಗಿಯಂ ಮಾಲಿಸುತ್ತುಂ (ರಾಮಾಶ್ವ. ೩೯-೦೬). **ಬಱುಬ**: ೧. ಬಱುಬಂ ಪೊಯಿಲ್ದೆತ್ತಂತೇನುಮಾನಱೆಯದೆ . . . ನಡನಡಂಗಿ (ಪಂಪಭಾ. ೯-೬೦ ಪ); ಬ[ಱುಬ]ನನೇಳಿದನಂ ಮೆಯ್ಯಱೆಯದೊನಂ ಬೆರಲನಳಿಪಿ ಕರ್ಚಿದೊನಂ ಕಾಲ್ಗೆಱಗಿದನನಿಱೆಯಲಾಗದು (ಪಂಪಂ. ೦೦-೦೯). ೨. ಅದು ಒಡೆಯರೊಡವೆಯಲ್ಲದೆ ಬಱುಬಂಗೆ ಅರಗದು [ಱಾಣಾಂ. ಬಱುಬರಿಗರಗದು] (ಕೋಲಶಾಂ. ೩೭); ಬಱುಬನು ನಿಧಿಗಂಡ ತೆಱನಂತೆ ಸಂತಸದೊಱೆಯೊಳಾಳುತಲೇಳುತಿರ್ದು (ಪರ್ಗಸ. ೦೦-೯೩). ೩. ತಿಳಿವಳಿಕೆಯಿಲ್ಲದವನು; ಅಜ್ಞಾನಿ: ಬಱುಬರನುಱೆ ಬಲ್ಲರೆಂಬ . . .ನೆಱೆ ಜಾಣರು (ಶುಂಗಾಂ. ೩೩-೦೬); ಬಲ್ಲವನೀತ ಬಱುಬ [ಱಾಣಾಂ. ಡವ]ನೀತ ಚಪಳೀಕನೆಲ್ಲಶಾಸ್ತ್ರಂಗಳಱಿವನು ಬಲ್ಲಿದನೀತ ಬಡವನೆಂದು ಪೂಜೆಪಗೆಲ್ಲಿಯ ಶೀಲ(ಶುಮಾಂ. ೯-೦೦೬).

[ಬಱು (< ಬಱೆದು) + — ಅ$_7$]

ಬಱುವಣ್ಣನೆ (ನಾ). ಅರ್ಥವಿಲ್ಲದ ವರ್ಣನೆ; ಬರಿಯ ವಿವರಣೆ: ಪುರುಳಿಲ್ಲದ . . . ಬಱುವಣ್ಣನೆಯ ಬೇಸಱೆಕೆಯ ಪಾಟ್ಗಬ್ಬವಂ ಪೊಳ್ಪೆಂದೆ ನುಡಿದೆಂ (ರಾಮಾಶ್ವ. ೦೬೯-೯)

[ಬಱು (< ಬಱೆದು) + ಬಣ್ಣನೆ]

ಬಱುವನೆ (ನಾ). ಹಾಳುಮನೆ: ಗೃಹಿಣಿಯೊಳ್ ಸುಗುಣವಿಲ್ಲದೊಡೆ ಗೃಹಮುದು ಬಱುವನೆಯೆಂ (ಕೇತಿಮಂ. ೩-೨೨).

[ಬಱು (<ಬಱೆದು) + ಮನೆ]

ಬಱುವಾತು, ಬರಿಮಾತು, ಬಱೆಮಾತು, ಬಱೆವಾತು, ಬಱುಮಾತು (ನಾ). ಕೆಲಸಕ್ಕೆ ಬಾರದ ಮಾತು; ವ್ಯರ್ಥವಾದ ಮಾತು: ಮಾತಱೆಯವ ಮಾತು ತಮ್ಮ ಬಱುವಾತುಗಳೊಳ್ ಪುದಿದು (ಪಂಪಭಾ. ೪-೯೫); ವಾಕ್ಕಿನೊಳಿಲ್ಲ ಮೇಣ್ ಪರಿಚಯಂ ಬಗೆ ಮೊಕ್ಕಳಮಂತುಟಲ್ತೆ ಗಂಟಿಕ್ಕುಪರೆಂಜಲಾದ ಬ[ಱಾಣಾಂ. ಬಿ]ಱುವಾತುಗಳು (ಸೂಕ್ತಿಸು. ೦-೩೬). **ಬರಿಮಾತು**: ಬರಿಮಾತಿನಿಂದ ಏನು ಪ್ರಯೋಜನ? (ಕೂಡ). **ಬಱೆಮಾತು**: ಈ ಸಮಿಾರಜನೀಗ ಹೃದಯನಿವಾಸಮಾರುತನಜ ಹರೀಶ್ವರ ರೋಸರದ ಬಱೆಮಾತದಲ್ಲಿದು ವೇದಮತವೆಂದ (ಶೂಕರಾ. ೯-೦೨-೦೩). **ಬಱೆವಾತು**: ಬಱೆವಾತನಿನಿಸು ಪೊಟ್ಟುಂ ಮೆಱೆವಿನೆಗಂ ಗಟಪಲೇಕೆ

(ಕ್ಷಾಗಾ. ೦೬೯). ಬಱುಮಾತು : ಏನೆಂದಱಿಯರು ಎಂತೆಂದಱಿಯರು ಬಱುಮಾತಿನ ಬೊಮ್ಮವನಾಡುತಿಪ್ಪರು (ಅಪಸಂ. ೦೦೬-೨೮೫).

[ಬಱು (< ಬಱಿದು) + ಮಾತು$_1$]

ಬಱುವಾತುಂಗುಟ್ಟು, ಬಱುವಾತುಗುಟ್ಟು (ಕ್ರಿ). ಕೆಲಸಕ್ಕೆ ಬಾರದ ಮಾತನ್ನಾಡು ; ವ್ಯರ್ಥವಾದ ಮಾತನ್ನಾಡು : ಸಂಗರಕೆ ಬಂದು ಬಱುವಾತುಂಗುಟ್ಟದಿರು (ಪಾರಿ. ೦೦-೦೩). ಬಱುವಾತುಗುಟ್ಟು : ಬಱುವಾತುಗುಟ್ಟ ಪೋಪರೇ ಗಂಡರುಂ (ಕಸುದ. ೦೬೬ ಪ್ರಯೋ).

[ಬಱುವಾತು + ಕುಟ್ಟು$_1$]

ಬಱುವಾತುಗುಟ್ಟು 'ಬಱುವಾತುಂಗುಟ್ಟು' ನೋ.

ಬಱುವಾನಿಸ (ನಾ). ನಿಷ್ಪ್ರಯೋಜಕನಾದ ಮನುಷ್ಯ : ತಾಮಸರ್ ಲೋಕಕಂಟಕರಾಗೆ ರಕ್ಕಸರೆನಿಸಿ . . . ಬಡವು ಬಱುವಾನಿಸರಂ ಕೊಂದು ತಿಂದು ಬಿರ್ಕಳಿಸಿ ಪೆರ್ಕಳಿಸಿ ತಿರೆಗೆ ಪೊಱಿಯಾದರ್ (ರಾಮಾಶ್ವ. ೦೦೯-೨೩).

[ಬಱು (<ಬಱಿದು) + ಮಾನಿಸ$_1$ (< ಮಾನುಸ)]

ಬಱುವಾಯ್, ಬಱಿವಾಯ್ (ನಾ). ೧. ಬರಿಯ ಬಾಯಿ ; ಖಾಲಿ ಬಾಯಿ. ೨. (ಆಲಂ) ವ್ಯರ್ಥವಾಗಿ ಗಳಹುವ ಬಾಯಿ ; ನಿಷ್ಪ್ರಯೋಜಕವಾದ ಮಾತನ್ನು ಆಡುವ ಬಾಯಿ : ಉಂಡೆ ದಲೆಯೋತಿಗಳು ಬಱುವಾಯ ಬಳ್ಳುಗಳು . . . ಅಗ್ಗದ ಚರಿಗೆಗಳ ನರಿಗಳು (ಸೋಮಶ. ೯-೪೦). ಬಱಿವಾಯ್ : ೨. ಬಾಲೆಯರ ಮುಂದೆ ತಿರುಗುತ್ತಿಪ್ಪ ಬಱಿವಾಯ ಭಂಜಕರುಗಳು ತಾವು ಅಱಿವುಳ್ಳವರೆಂದು ಬೀಗಿ ಬೆಱಿಯುತ್ತಿಪ್ಪರು (ಪೋಕೂ. ೦೬೬-೭೦೯).

[ಬಱು (< ಬಱಿದು) + ಬಾಯ್]

ಬಱುವಾಟ್ಕೆ (ನಾ). ನಿರರ್ಥಕವಾದ ಬದುಕು : ವ್ಯರ್ಥವಾದ ಜೀವನ : ಪುರುಳೇಂ ಬಱುವಾಟ್ಕೆಯ ಬರ್ದುಂಕಿನೊಳ್ (ರಾಮಾಶ್ವ. ೬೩-೦೦). [ಬಱು (<ಬಱಿದು) + ಬಾಟ್ಕೆ]

ಬಱುವೆ (ನಾ). ನೆರವಿಲ್ಲದವಳು ; ಅಸಹಾಯಕಳು : ಆನೊರ್ವಳೆ ಬಡವೆ ಬಱುವೆಯಾದೆಂ (ರಾಮಾಶ್ವ. ೯೦-೩). [ಬಱುವ + — ಎ$_3$]

ಬಱುಸೂಱಿ, ಬಱಿಸೂಱಿ (ನಾ). ವ್ಯರ್ಥವಾದ ಸೂರೆ,—ಲೂಟಿ : 'ಬಱುಸೂಱಿವೋಗು' ಪರಾ. ಬಱಿಸೂಱಿ : 'ಬಱಿಸೂಱಿಗೈ' ಪರಾ. [ಬಱು (< ಬಱಿದು) + ಸೂಱಿ]

ಬಱುಸೂಱಿವೋಗು (ಕ್ರಿ). ವ್ಯರ್ಥವಾಗಿ ಸೂರೆಹೋಗು ; ಹಾಳಾಗು : ಮೂಱುಲೋಕವೆಯ್ದೆ ಬಱುಸೂಱಿವೋಯುತ್ತು (ಅಪಕಂ. ೦೦೯-೯೯೬).

[ಬಱುಸೂಱಿ + ಪೋಗು$_1$ (<ಪೋ$_1$)]

ಬಱ್ಱಿ$_1$ (ಕ್ರಿ). ಬಱಿತ (ಭೂತಕೃ). ೧. ಒಣಗು : ಆರು : ಬತ್ತು : ನಱ್ಚಿನ ಮುಗ್ಧಾಲಾಪವಿಂದಂ ಬಱ್ದು ಬಱ್ತುದೆಂಬನ್ನೆಗಂ ಬತ್ತಿರಲ್ಪಾಯ್ (ಶಾರಂಉ. ೩೨೩); ಬಾಡಿದ ಮೊಗಂ ಬಱತ ಬಾಯ್ . . . ಮಾಸಿದ ಮುದಂ ಕೂಡೆ . . . ಪುರಜನಂಗಳಂ ನೋಡಿ ತೋಱಿಸಿ ಬೇಱೆ ವೇಱೊಪ್ಪುಗೊಡುತಿರ್ದನಾ ಧೈರ್ಯನಿಧಿ ಭೂಪನು (ಹಸಕಾ. ೯-೦) ; ಕೆಱೆ ತೊಱೆಗಳೊಱತೆ ಬಱ್ತುವು (ಶೃಪುಶಾ. ೦೩-೨). ೨. ಒರಟಾಗು; ಬಿರುಸಾಗು ; ಕಠಿಣವಾಗು : ಇನ್ನೆಗಂ ನೆಲಸಿ ನೀರ್ ಸೆಱೆಗೊಂಡ ಪೊಲಿರ್ದುದರ್ಕೆ ಮೈ ಬಱತವೊಲಾಗಿ (ಸಂಧ್ರಪು. ೯-೦೩). ೩. (ಜ್ವರ, ಬಿಸಿಲು. ಕಾವು ಮೊದಲಾದುವುಗಳಿಂದ) ಬಾಡು; ಕುಗ್ಗು ; ಸೊರಗು: ಸುರಿತಂದಶ್ರುಪ್ರವಾಹಂ ಬಱುತೊಣಗಿದ ಬಾಸುಱಿಮ್ಮೊಗಂ . . . ವ್ಯಸ್ತಾಳಕಂಗಳ್ವೆರಸಲರ್ವಸೆಯೊಳ್ ಕಾಂತೆಯಿಂತಿರ್ದಳಾಗಳ್ (ಶಾಸುಪು. ೦೩-೬೯).

[ದೇ.॥ ತಮಿ. ವಱು, ವಱ್ಱು ; ಮಲ. ವಱ್ಱು, ವಱ್ಱು; ತೆಲು. ವರುಟು; ಕೋತ. ವರ್ವ]

ಬಱೆಂಜು 'ಬಣಜು' ನೋ.

ಬಱಿಕೆ, ಬಳಕೆ (ನಾ). ೧. ಉಪಯೋಗಿಸುವಿಕೆ ; ಬಳಸುವಿಕೆ : ಏಕವಚನಮೊರ್ವನ ಬಱಕೆಗೆ ಬಹುವಚನಮೆಲ್ಲರಂ ಪೇಱ್ತೆಡೆಯೊಳ್ (ಕಸುದ. ೨೨೯). ೨. ವಿಶೇಷವಾದ ಪರಿಚಯ,-ಗುರುತು ; ನಿಕಟವಾದ ಸಲುಗೆ : ತನ್ನಳವಂ ಕಲಿತನವುಂ ನಂಬಿ ಬಲಂ ತಳರದೆ ಸಾಧಿಸುವೆನೆಂಬ ಬಱಕೆಯಿನಾತಂ . . . ರಾತ್ರಿಯೊಳ್ ಗಂಧವತಿಯ ತಡಿವಿಡಿದು ಬಂದು (ಧರ್ಮಾಮೃ. ೦೨-೦೯). **ಬಳಕೆ** : ೧. ನಿಶ್ಚಲದ ನೋಟದ ಲಿಂಗಭಾವದ ಬಳಕೆಯನೆ ಬಲಿದಿರುತಲಿರ್ದನು ನಿಜನಿವಾಸದಲಿ (ಪ್ರಭುಲಿಂ. ೦೦-೩೬); ಕಲಿತನವೆ ಹೃದಯದಲಿ ಕಾರ್ಯದ ಬಳಕೆ ಕೈಯಲಿ ನಡುವೆ ನಾಲಗೆಯುಲಿದಡೇನಗ್ಗಳಿಕೆಯಹುದೋ (ಶಾಸ್ತ್ರಿ. ೦೦-೯೩). ೨. ಸುಳಿದಳೂರ್ವಶಿ ಸುರಪತಿತ್ವದ ಬಳಕೆಯವರಿಗಸಾಧ್ಯವೆಂಬುಜ್ವಲತೆಯಲಿ (ಹೊರಗಾ. ೦-೩-೦೨); ಸಕಲಸೀಮೆಯ ಬಳಕೆಗೆಳೆದಳು ಸಕಲಕುಶಲವ ನೊರೆದಳು (ಹೊಂಗಳು. ೩-೦೦). ೩. ರೂಢಿ ; ಅಭ್ಯಾಸ : ಮುಂದಕೆ ಪೋಪುದು ತನುವಿದು ಬಿಂದೆಸಿಗೋಡುವುದು ಬಳಕೆಗೈದದ ಮನವೇನೆಂದಪೆನೊ (ಶಾಕುಂತ. ೦೬-೩೯). ೪. ರೀತಿ; ಕ್ರಮ : ಮುಕುಹದ ಜಲಜಭವರಂತಲ್ಲ ಪಾರ್ಥನ ಬಳಕೆ (ಕೋಗಳು. ೦೦-೩೬).

[ದೇ.॥ ತಮಿ. ವಱಕ್ಕಮ್, ವಱಕ್ಕು ; ತುಳು. ಬಳಕೆ, ಬಳಿಕೆ ; ತೆಲು. ವಡುಗು]

ಬಱಿಪ 'ಪಱಿಹ' ನೋ.

ಬಱಿಲ್, ಬಳಲ್, ಬಳಲು, ಬಱಿಲು$_1$ (ಕ್ರಿ). ೧. ಬಾಡು ; ಒಣಗು : ಅರಸಿಯರ ತೊಟ್ಟ ಪೂದುಡಿಗೆಗಳೆಲ್ಲಂ ಬಱಲ್ದು ಕಱಲ್ದು (ಶಾಂತಿಪು. ೬-೩೦ ಪ) ; ಪುಷ್ಪವೊಂದು ಬಱಲಲ್ ಭೃಂಗಕ್ಕೆ ಪೂವಿಲ್ಲವೇ (ಸೋಮೇಶ. ೨೬). ೨. ದಣಿ ; ಆಯಾಸಗೊಳ್ಳು : "ಬಱಲ್—ಶ್ರಾಂತಾ" (ಕಸುರಾ) ; ಅರಿಭೂಪಾನೀಕಭಯಂಕರನುಂ ಗಡವೇಕೆಂದಱಿಯೆಂ ಬಱಲ್ದು ಜೋಲ್ದುಂ ಧರೆಯೊಳ್ (ಹಂಪಪು. ೬-೯೦) ; ಮುಱುವಾತುಗುಡದೆ ರವಿಸುತ ಮಱವಿಂದಿರ್ದಪೆಯೊ ಮೋಗ್ಬಱಲ್ದಿರ್ದಪೆಯೋ (ಗದಾಯು. ೩-೦೩) ; ರುಧಿರಮುಂ ನೆಱೆ ಕಾಱೆ ಬಱಲ್ದು ಬಿಟ್ಟಂ (ದಕಳು. ೯-೦೦೯). ೩. ಜೋಲು ; ನೇತಾಡು : ನನೆಯನೆ ಪೇಱೆ ಕೆಂದಳಿರೊಳೆಯ್ದು ಬಱಲ್ದೆಳಮಾವು ಬಂದ ಮಾವನೆ ಮಱೆಗೊಂಡು ಬಗ್ಗಿಸುವ ಕೋಗಿಲೆ (ಅಪಪು. ೦-೬೩) ; ಮುಗುಳಂ ಪೇಱೆ ಬಱಲ್ದ ಗೊಂಚಲೆಡೆಯೊಳ್ ಪುಷ್ಪಾಸ್ರಪತ್ರಂಗಳಂ ತೆಗೆದು (ಅಪಂಪು. ೭-೦೦). ೪. ಜಾರು ; ಸರಿ : ಬಱಲೆ ಪೆಗಲಿಂ ಚಂಚದ್ವಲ್ಕಾಂಚಲಂ ಪೆಗಲಿಂಗೆ ಬಂದೆಱಲೆ ಜಡೆಗಳ್ . . . ಪರಿಪಟ್ಟೋರಂತೆ ಆಕಾಶಮಾರ್ಗದೆ ಬಂದ ಪಾಡಱದ ಸಖನಂ ಮುಂದಾಂ ಕಂಡಂ (ಶಾರಂಕಾ. ೭೦೩). ೫. (?) : ಕಡಿದ ಶರನಿಕರದುಡಿ ನಭದೆಡೆವರೆಗಂ ಬಱಲೆ (ಶಿಪುಪು. ೦೨-೦೬೯). **ಬಳಲ್** : ೨. ಪೇಚರರ್ ಬಿಸಿಲ್ಗಂಜುತ್ತುಂ ಭರದೊಳ್ ಬಳಲ್ದು ಬಂದಾ ಗಿರಿಶಿಖರದ ಮರದ ತುದಿಯ ನೆಳಲಂ ಸಾರ್ವರ್ (ಗಿಳಿ. ೦-೩೩) ; ಮಳಲೊಟ್ಟಿಲನೇಱೆ ಪಾಱುಗುಪ್ಪೆಯನಾಡಿ ಬಳಲ್ದವಯವ ಬೆಮರಾಂತು (ಸೋಪಕ. ೯-೩೬) ; ಚರಿಸಿ ನೆಱೆ ಬಳಲ್ದ ಪಥಿಕರಕ್ಷಿಗಳಿಗೆ ಕಲಶಕುಚದ ಲಾವಣ್ಯಾಂಬುವೆಱೆಯುತೆ (ಹಂಪಪ. ೬-೦೦) ; ಬರಿದೆ ಬಲು ಬಳಲ್ದೆ (ಪಿಸೀಗೀ. ೬೯-೬). **ಬಳಲು** : ೨. ನೆಳಲನುಡಿಸುವೆನೆಂದು ಬಳಲುವನಂತೆ (ಅಪಪ. ೨-೬) ; ಸತ್ಯವಱಿಯದತ್ತಲಿತ್ತ ಸುತ್ತಿ ಬಳಲುತಿರ್ದೆನಯ್ಯ (ಹಂಪರ. ಹ. ೩೦೦-೦೦) ; ಭಟರು ಬಳಲಿದರಿಂದಮ ರಣವುತ್ಕಟವು (ಶಾಸ್ತ್ರಾಮೃ. ೦೫-೯೨). **ಬಱಿಲು$_1$** : ೨. ಗಾಯಂಬಡೆದೆನಸು ಬಱಲುತಿರ್ದಂ ಪಡುನೇಸಱ ತೆಱದೆ ರಾಜಹಂಸ ನರೇಂದ್ರಂ (ದಕಳು. ೨-೩೬).

[ದೇ.॥ ತಮಿ. ಮಲ. ವಯಿಕ್ಕು ; ತೆಲು. ಬಡಲು]

ಬಱಿಲಿಕೆ 'ಬಱಿಲ್ಕೆ' ನೋ.

ಬಟಲಿಸು. ಬಳಲಿಸು (ಕ್ರಿ). ಆಯಾಸಪಡಿಸಂ ; ದಣಿಸು ; ಶ್ರಮಪಡಿಸು : ಎಮ್ಮಂ ನಿಮ್ಮಡಿ ಕೆಮ್ಮನೆ ಬಟಲಿಸಲ್ವೆಡ (ಪಂಪಭಾ. ೯-೨೯ ಪ); ಬಿಸಿಲ್ ಬಟ್ಟೆಗನಂ ಬಟಲಿಸಿತ್ತು (ಕಪ್ಪಾಯ. ೩೩೬ ಪ್ರಾಪ್ತಾ). ಬಳಲಿಸು : ಬಾರದೆ ತೋಱುತ್ತಳಲಿಸುವನೆ ಜಯ ಸಾರದೆ ಸಾರುತ ಬಳಲಿಸುವನೆ ಜಯ (ಪಜುಗ. ೯-೨೦) ; ಮಾತಾಪಿತರನು ಬಳಲಿಸುವ ಮಗ ಯಾತ್ರೆಯ ಮಾಡಿದರೇನು ಫಲ (ಪುರಂದ. ೦-೬೦-೩) ; ತಂಗಿಯ ಬಳಲಿಸಿದ ಬಲುವೀರನೆನ್ನ ತುರಿಗೊಳುವ ಕಡುಗೋಪದಲಿ ಕಿಡಿಕಿಡಿಯೋದನಸುರೇಂದ್ರ (ಕೊರಂಗ. ೩-೬-೦೪). [ಬಟಲ್ + ಇಸು₃]

ಬಟಲು₁ 'ಬಟಲ್' ನೋ.

ಬಟಲು₂ (ನಾ). ೧. ಸಡಿಲವಾದುದಂ ; ಬಿಗಿಯಲ್ಲದುದು : "ಜಂಗಳ ಬಟಲು ಸೋರ್ಸಡಿಲ್ದುದಕ್ಕುಂ" (ಕಪ್ಪಾಯಂ. ೩೦). ೨. ದಣಿವು ; ಆಯಾಸ : "ಸೇದೆಯೊಳು ಜೋಲ್ದುದಱೊಳಂ ಬಟಲು" (ಕಪ್ಪಾಯಂ. ೦೦೬). [< ಬಟಲ್]

ಬಟಲ್ಕೆ, ಬಳಲಿಕೆ, ಬಳಲ್ಕೆ, ಬಟಲಿಕೆ (ನಾ). ೧. ಆಯಾಸ ; ದಣಿವು : "ಬಟಲ್ಕೆಯೊಳ್ ಸೇದೆಯಕ್ಕುಂ" (ಕಪಿಂ. ೦೬೬) ; ಆ ನೀರ್ದಾಣಮಂ ಮೋಡಿ ಮೆಲ್ಲನೆ ಸಾರ್ದಲ್ಲಿ ಬಟಲ್ಕೆಯಂ ಕಳೆದು ಪೋಪೆಂ (ಕಾದಂಪು. ೬೨೯) ; ಬಟ್ಟೆಯ ಬಟಲ್ಕೆಯಂ ಕಳೆದು (ಧರ್ಮಾಮೃ. ೦೨-೦೩೩) ; ತನುವಿಂ ಬಟಲ್ಕೆ ಪೆಱಱಿಂಗೆ (ಕುಸುಮಾ. ೦೦-೯). ಬಳಲಿಕೆ : ೧. ಕಂಡುದ ಹಿಡಿಯಲ್ಲೊಲ್ಲದೆ ಕಾಣದುದನಱಸಿ ಹಿಡಿದಹೆನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ (ಅಪಸಂ ೦೬-೩) ; ಸುರವಥದಲಿ ತಿರುಗಿದ ಬಳಲಿಕೆಯನು ಭರದಿಂ ನೀರೊಳು ಮುಳುಗಿ ಪರಿಹರಿಸುವೆನು (ಪಂಚಾಂಗಾಂ. ೯-೩೦). ಬಳಲ್ಕೆ : ೧. "ಆಯಾಸಕೆ ಬಳಲ್ಕೆಯೆನಿಕುಂ" (ಕಪಿ. ೦೨೬) ; ತೊಳಲ್ಕೆಯುಂ ಬಳಲ್ಕೆಯುಂ ಕಾಳೆಗದೊಳಿಗಮುಂ ಕೆನಸಿನೊಳಮಿಲ್ಲೆನಿಸಿ (ಎಳ. XI. ಪೂಳಾ. ೨೦-೮೨ ; 1x78 ?). ೨. (ಆಲಂ) ಬಾಯಾರಿಕೆ ; ದಾಹ : ನಡೆ ನುಡಿ ಬಳಲ್ಕೆ ಮುನ್ನಂ ಕಡಬಲ್ಕೆಯ ರೂಪುಗಂಡ ಬಳಿಕಂ ನಡೆಯರ್ ನುಡಿಯರ್ ನೀರಂ ಕುಡಿಯರ್ (ಗಿಂಳ. ೨-೨೩). ಬಟಲಿಕೆ : ೧. "ದವಥುಃ, ಪರಿತಾಪಃ—೨ ಬಟಲಿಕೆ" (ಪಥಾಯು. ೯೯-೯೪೬). [ಬಟಲ್+—ಕೆ./ ತಮಿ. ವಟಲಿಕ್ಕೈ ; ತುಳು. ಬಳಲಿಕೆ ; ತೆಲು. ಬಡಲಿಕೆ]

ಬಟಲ್ಕೆಗಳೆ, ಬಳಲ್ಕೆಗಳೆ (ಕ್ರಿ). ದಣಿವಾರಿಸು ; ಆಯಾಸವನ್ನು ಪರಿಹರಿಸು : ಪೀಲಿ ಬಿಜ್ಜಣಿಗೆಯನೊಯ್ಯನೆ ಬೀಸುತ್ತಿರೆ ನೃಪನಂದನನಿನಿಸಿನಿಸಂ ಬಟಲ್ಕೆಗಳೆಯುತ್ತಿರ್ದಂ (ಕಾದಂಕಾ. ೯೩೩). ಬಳಲ್ಕೆಗಳೆ: ಶ್ರೀಪುರವೆನಿಪ್ಪುದ ಸೇರಿದೊಂದಂಗಡಿಯೊಳಗೆ ಮೈಯ್ಯಾರೆ ತನ್ನ ಬಳಲ್ಕೆಗಳೆಯಲಿಕ್ಕಿರ್ದಂ [ಲ್ಕಿರ್ದಂ] (ಶಾಂತಿಪು. ೦೬-೬೮). [ಬಟಲ್ಕೆ + ಕಳೆ₁]

ಬಟಲ್ಕೆವೋಗು (ಕ್ರಿ). ಆಯಾಸಗೊಳ್ಳು ; ದಣಿವುಹೊಂದು : ದಿವ್ಯಾಹಾರಮಂ ಕೈಯೊಳಿಕ್ಕುವುದುಮಾಕಂಠಂ ಉಂಡು ಬಟಲ್ಕೆವೋಗಿರ್ಪುದುಂ (ಧರ್ಮಾಮೃ. ೦-೦೩೦). [ಬಟಲ್ಕೆ+ಪೋಗು₁ (<ಪೋ₁)]

ಬಟಲ್ಚು (ಕ್ರಿ). ೧. ಬಳಲಿಸಂ ; ಆಯಾಸಗೊಳಿಸು ; ದಣಿಸಂ. ೨. ಕೆಳಕ್ಕೆ ಬೀಳಿಸು : "ಬಟಲ್ಚು—ಅಧಃಸ್ರಂಸನೇ (ಕೆಳಕ್ಕೆ ಬೀಳು, ಬೀಳಿಸು), ನಿಶ್ಚೇಷ್ಟಾಯಾಂ (ಅಲಸಿಕೆ ಮಾಡು)" (ಕಸುಧಾ).

[ಬಟಲ್ + ಚು₁]

ಬಟಲ್ಮುಡಿ, ಬಳಲುಮುಡಿ, ಬಳಲ್ಮುಡಿ (ನಾ). ಸಡಿಲವಾಗಿ ಜೋತಾಡುವ ಮುಂಡಿ ; ಇಳಿಬಿದ್ದಿರುವ ಕೂದಲು ; ಜೋಲುದುರುಬು : ಆಕೆಯ ಮುದ್ದುವೆರಸಿದ ತೊದಳ್ನುಡಿಗಂ ಪೂಮಾಲೆ ವೆರಸಿದ ಬಟಲ್ಮುಡಿಗಂ... ಒಲ್ದುವೊಱಲ್ದುವಿರೆಯಿರೆ(ಪಂಪಭಾ. ೩-೦೬ ಪ); ಕುಸುಮಾವಳಿಯಂ ತಳೆಯದ ನಿನ್ನ ಬಟಲ್ಮುಡಿ ಬಳಯಿಸಿದವುದೆನ್ನ ಮನಕೆ ಖೇದಮನೀಗಳ್ (ಕಾದಂಪು. ೩೩೬); ಬಟಲ್ಮುಡಿ ಜೋಲ್ದು . . . ವಿಳಿರ್ದು ನರ್ತಿಸೆ (ಸುಳುಪಾ. ೦೦-೦೦). ಬಳಲುಮುಡಿ : ಬಳಲುಮುಡಿ ಬಟ್ಟಮೊಲೆಗಳ್ ಬೆದರುಗಂಗಳ . . . ಕಾಮಿನಿ (ಪಂಶಾಭಾ. ೩-೬-೩೯) ; ಬಳಲುಮುಡಿ ಬಲ್ಮುಡಿಯುಂ ಸೋರ್ಮುಡಿಯುಂ (ಪಪಪೋ. ೨೯-೦೬). ಬಳಲ್ಮುಡಿ: ಕುಡಿತೆಗಣ್ ಬಳಲ ಕಲ್ತುವು ಕವಲ್ತುವು ಬಳಲ್ಮುಡಿಯುನಮಿಲ್ (ಪಕೃಶಾ. ೯-೨೯) ; ಸೂಸೆ ಬಳಲ್ಮುಡಿ ಪುಷ್ಪವೃಂದಮಂ (ಕಾಪೋ. ೬-೦೬). [ಬಟಲ್ + ಮುಡಿ₃]

ಬಟಲ್ವಂದರ್ (ನಾ). ತೂಗುವ ಬಳ್ಳಿಗಳಿಂದಾದ ಚಪ್ಪರ : ಮಡಲಿಱಿದ ಬಟಲ್ವಂದರ್ ಪೊದೆಯ ಕಾಂಚನಲತೆಯಂ ತುಱುಗಿ ಜಂಬೂವೃಕ್ಷದಿನೆಸೆವ ಪೊಂಬೆಟ್ಟದಟ್ಟದ ದಟ್ಟದಟ್ಟಲಂ ಗೆಲೆವಂದಂ(ಶಾಸ್ತ್ರ. ೬೩-೨೦).

[ಬಟಲ್ + ಪಂದರ್]

ಬಟಸು₁, ಬಳಸು₂ (ಕ್ರಿ). ೧. ಉಪಯೋಗ ಮಾಡು; ಉಪಯೋಗಿಸು : ಬಟಸಿದ ಪಾತ್ರೆಯಂ ಬರುತೆ ಕೆಟ್ಟಿನ ಕಾಲೊಳೆ ನೂಂಕಿ (ಸಪಾಪ. ೦೦-೬೦). ೨. ಭೋಗಿಸು ; ಅನುಭವಿಸು : ಕೂಡದನ್ನೆಗಂ ಕೂಡದಂ ತಿರಲಕ್ಕುಂ ಬಸಮಾಗದನ್ನೆಗಂ ಬಟಸಲಕ್ಕುಂ (ಸುಳುಪಾ. ೬-೦೩). ಬಳಸು₂: ೧. ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದೊಡೆ ಆತನು ತ್ರಿವಿಧಕ್ಕೆ ದ್ರೋಹಿ (ಮಹಾಲಿಂ. ೩. ೩೬-೦೪೦) ; ಸುಣ್ಣದ ಕೊಱತೆಗೆ ಬೆಳ್ದಿಂಗಳಂ ಬಳಸುವಂತೆ (ಅದಪ. ೯೩೩-೦೨) ; ನಯ ಪ್ರಪಂಚವ ಬಳಸಿದೆನು ಕೆಲ ಕೆಲವನಿನ್ನುಱ ಬಳಸುವೆನು (ಕುಶ್ಯಾಸ. ೦-೩೯). ೨. ನಿಮ್ಮ ಶರಣರು ಉಂಡು ಉಪವಾಸಿಗಳು ಬಳಸಿ ಬ್ರಹ್ಮಚಾರಿಗಳು (ಅದಪ. ೯೬-೦೩೩) ; ತನ್ನಾಯತನ್ನ ಭೂತಳವ ತಂದು ನಿರಾಯಸದಲೆ ಬಳಸುತ್ತಿರ್ದನು (ಕುಶ್ಯಾಕ. ೦೪-೩೯) ; ನಳ ಹರಿಶ್ಚಂದ್ರಾದಿ ರಾಘವನೃಪರು ಹಳುವದಲಿ ಲಲನೆಯರ ತಾವಗಲಿ ಕಷ್ಟವ ಬಳಸಿದಂತೆ (ಪಳಪ. ೦-೦೩). [ದೇ. ೩ ತುಳು. ಬಳಸು]

ಬಟಸು₃, ಬಳಸು₄ (ನಾ). ೧. ಭೋಗ ; ಉಪಭೋಗ: ಪೆಂಡಿರ ವಶಮಾಗಿ ಮಹೀಮಂಡಲದೊಳ್ ಪಲರುಮೆಯ್ದಿದರ್ ದುರ್ಗತಿಯಂ ಪಂಡಿತರಪ್ಪ ವರದಱಿಂ ಪೆಂಡಿರ ಬಟಸಿಂಗೆ ಬೇಗಮೆಳಸುವರಲ್ಲಂ (ಧರ್ಮಾಮೃ. ೦೦-೨೪). ಬಳಸು₄: ೨. ಉಪಯೋಗ ; ಬಳಕೆ : ಮಹಾವಿಕ್ರಮನ ಚಳಕವನೇನ ಹೇಳುವೆ ರಥದ ಬಳಸಿನಲಿ (ಕುಶ್ಯಾಸ್ತ್ರೋ. ೦೬-೯೩). [<ಬಟಸು₁]

ಬಟಸುವಿಡು (ಕ್ರಿ). ಸುತ್ತುವರಿ ; ಆವರಿಸು : ಆ ಎರಮ್ಮನುಂ ಅಯ್ವದಿಮ್ಮರುಂ ನಕರಮುಂ ಸೇಣಿಯಂ ಬಟಸುವಿಟ್ಟು ಗೆಲ್ದಲ್ಲಿ (ಎಳ. VI. ಕಡೂರು. ೦೧೩-೬ ; ಸು. 750). [ಪ್ರ ಇದು 'ಬಳಸುವಿಡು' ಎಂಬುದರ ಅಪಲಿಖಿತ]

ಬಟ್ಟೆ₁, ಬಡ್ಡೆ, ಬಳ್ಳೆ₁ (ಕ್ರಿ). ೧. ಗುಡಿಸು ; ಉಡುಗು : ಸ್ವಚ್ಛಮಾಡು : "ಬಟ್ಟೆ—ಸಮ್ಮಾರ್ಜನ, ಮಾರ್ಗ, ವಂಶೇಷು, ಆಹ್ವಾನಪುರುಷೇ ಚ" (ಕಸುಧಾ). ೨. ತೊಡೆ ; ಒರೆಸು : ನಿಟಿಲಾಗ್ರಘರ್ಮಜಲಮಂ ಬೆರಲಿಂ ಬಟ್ಟೆಯುತ್ತುಂ (ಕುಸುಮಾ. ೦೦-೯). ೩. ಗೋರು ; ಬಾಚು; ದೋಚು : ಬಿದಿರ ಸೀಳಿಕೆಯಲ್ಲಿ ಕಾಲ ಕೆಸಱಿಲ್ಲವಂ ಬಟ್ಟೆದು ಕಳೆದು (ಪುಣ್ಯಾಸ್ರ. ೩-೦೬ ಪ). ೪. ಲೇಪಿಸು ; ಹಚ್ಚು ; ಸವರು : "ಕರವಲ್ಲಿ ಲೇಪನಂ ಗೆಯ್ವಲ್ಲಿ . . . ಬಟ್ಟೆಯೆನಿಸುಗುಂ" (ಪಂಚಾಪ. ೦೬). ೫. ಅಲಂಕರಿಸು; ಶೃಂಗರಿಸು : ತನ್ನ ತಂದನರ್ಘ್ಯರತ್ನದಿಂ ವಿವಿಧಮಣಿಕಿರಣಚಯದಿಂದವನಿಪನಂ ಬಟ್ಟೆದು ಕೊಟ್ಟನರ್ಥಿಜನಕ್ಕಾ ದಿವಿಜೇಂದ್ರಂ (ಶಾಂತಿಪು. ೦೦-೦೦). ೬. ನಿವಾಳಿಸಂ ; ಸುತ್ತಿಸು : ಇನವಾರದಂದು ಬಸರಿಯ ಕೊನೆಯಂ ಕೊಂಡೆಡದೆ ಬಟ್ಟೆದು(ಳಸಿ) [ಶಾಶಾಂ. ಡಿರದೆ ಬಳಸಿ ?] ಕೆಸಱೊಳದಂ ಪುಟ್ಟನಿತಱೊಳ್ (ಲೋಕೋಪ. ೯-೦೩೦). ಪ್ರ ಈ ಪ್ರಯೋಗಕ್ಕೆ ಇರುವ ಅರ್ಥಕ್ಕೆ ದುಂಡುಕಂಸದಲ್ಲಿ ಕೊಟ್ಟಿರುವ ಕುಳಸಹಿತವಾದ ಶಬ್ದರೂಪವೇ ಸರಿಯಿರಬಹುದು. ಬಡ್ಡೆ₃ : ೪. ಹೊಗೆ ಮಟ್ಟಿಯ ಬಡಿದು ದರ್ಭೆಯ ಹಣೆದು (ಕುಶ್ಯಾಸ. ೬-೦೨) ; ಪಗಲೊಳೆಸೆವ ಸುಟೀಪ ಕಾಂತಿಯೊ ಹೊಗೆ ಬಡಿದ [ಪಾಶಾಂ. ಹೊಗೆಯೊಳೆಸಗಿದ] ಚಿತ್ತರದ

ಬೊಂಬೆಯೊ ಎಂಬ ತೆಱದಿಂದ (ಪಳಸ. ೬-೨೪) ; ಬೇಡುವಾತನ ಮೋಱೆ ಕಾಡಿಗೆಯು ಬಡಿದಿಕ್ಕು ಬೇಡಲೀಯದನ ಮೋಱೆ ಉರಿಕೆಂಡವನು ನೋಡಿದಂತಕ್ಕು (ಸರ್ವಜ್ಞ. ೬೦೩). ಬಳ್ಳಿ : ೧. ಜವಾನನು ಕೋಣೆಯ ಕಸ ಬಳಿಯುತ್ತಿದ್ದಾನೆ (ರೂಢಿ). ೨. ಮೋಱೆಯಲಿಳಿವ ಬೆಮರನು ಬೆರಳ ಕೊನೆಯಲಿ ಬಳಿದು (ಕುಪ್ಯಾಪ್ರೋ. ೦೩-೫೦); ಮಹೋಗ್ರಚಾಪದ ಗುಣವ ಸಡಿಲಿಸಿ . . . ರಕ್ಕಸರಣಭಯಂ ಕರನೈದಿದನು ಬಸಿವ ಮೈವಸೆಗಳನು ಬಳಿದಿಕ್ಕಿ (ಕೊರಣಾ. ೩-೬-೩೭). ೩. ಹೇರೊಡಲಿನ ಗರುಡನ ಪಕ್ಷಪ್ರಳಯಸಮೀರಣನುಬ್ಬಟೆಯಿಂದೆ ವಾರಾಶಿ ಬಳಿದುವು ನೆಗಳಾನೆಗಳು ಕೂಡಿ ನೀರ ಚೆಲ್ಲಿದರೆಂಬ ತೆಱದಿ (ಪೋಜಸ. ೩೬-೫೦); ಏನಾದರೂ ಇದ್ದರೆ ಬಳಿದುಕೊಂಡು ಹೋಗಲು ಬಂದಿದ್ದರು (ಗಂಗಾಸಾ. ೪೦). ೪. ಕಾಡಿಗೆಯೊಳಗೆ ಕಾರಿರುಳ ತಿರುಳ ರಸಮಂ ಕಲಸಿ ಮೊಗೆದು ಬಳಿದಂತೆ ಬಳವೆತ್ತ ಕತ್ತಲೆ ಸಿದ್ಧರಾಮಂಗೆ ಬೆಳಗಾದುದು (ಸಿದ್ಧರಾ. ೩-೩೦); ಕಳೇವರಕೆ ಬಳಿದು ಚಂದನವಂ (ಪದ್ಮರಾ. ೬-೧೨) ; ಬೆಂದ ಹುಣ್ಣಲಿ ಸಾಸಿವೆಯ ಬಳಿಯದಿರು ಸಂಜಯ (ಕುಪ್ಯಾಪ್ರೋ. ೦-೬). ೭. (ನೆಲವನ್ನು) ಸಾರಿಸು : ರೋಗಿಗಳು ಮಲಗಿದ ನೆಲವನ್ನು ಕ್ರಿಮಿನಾಶಕವನ್ನು ಬೆರಸಿದ ನೀರಿಂದ ಬಳಿಯಬೇಕು (ರೂಢಿ).

ಬಳಿಬಚ್ಚಿ=ಅನ್ನವನ್ನು ಕಲಸಿ ಕೈತಂತ್ತು ಹಾಕುವಾಗ ಕೊನೆಯಲ್ಲಿ ಬಳಿದು ತೆಗೆದಂದು : ಹಂಚಿದವರಿಗೆ ಬಳಿಬಚ್ಚಿಯೇ ಗತಿ (ರೂಢಿ).

[ದೇ.॥ ತಮಿ. ವಟಿ ; ಮಲ. ವಟಿ ; ತೆಲು. ಬಡಿಯು]

ಬಟ್ಟೆ$_2$ (ನಾ). ಸಾರಿಸುವಿಕೆ ; ಸ್ವಚ್ಛಗೊಳಿಸುವಿಕೆ : "ಸನಿಹ ಪಥ ವಂಶ ಸಮ್ಮಾರ್ಜನಗಳೊಳ್ ಬಟ್ಟೆ" (ಕಲ್ಮಮಂ. ೦೦೬) 'ಕಾಲ್ವಟ್ಟೆ' ಪರಾ. [<ಬಟ್ಟ್$_1$]

ಬಟ್ಟೆ$_3$, ಬಳ್ಳಿ$_2$ (ನಾ). ೧. ದಾರಿ ; ಮಾರ್ಗ : ಅನಿತು ಬಟ್ಟೆ ಬಲ್ಲೊನವನೆ, ಜಾಣನೆ (ಅಂತಿಗೂ. ೦೬-೩೪೦) ; ಬಯಕೆ ಬಟ್ಟೆ ಕವಲೊಡೆಗುಂ (ಪಸ್ತಪಂ. ೦೫-೦೦೨). ೨. ಎಡೆ ; ಸ್ಥಳ ; ತಾಣ ; ಪ್ರದೇಶ : "ಬಟ್ಟೆ- ಎಡೆ, ಠಾವು" (ಪಾಪಾರ. ಕಿ. ೦೨೮) ; ಸುಟ್ಟೆವೆಳವೆಂಡಿರ ಕಡೆಗಣ್ ಬಟ್ಟೆಯಂ ಪಸರಿಸುವ ಬೆಳಗು ಬೆಳದಿಂಗಳ ಪೊಂಪುಟ್ಟೆಯೆಂದು (ಸಂದ್ರಪು. ೬-೪೭) ; ಬಾಸುಟ್ಟೆ-ಪೊಯ್ದ ಬಟ್ಟೆ (ಶಮದ. ಪಂ. ೦). ೩. ಸಮೀಪ ; ಹತ್ತಿರ : ಕುಱುತು ಸಮುಚ್ಚಯದಾ ಬಟ್ಟೆವಿಕಲ್ಪದಾ ತೆಱದೊಳೆ ದೋಷಮುಮನಂತೆ ಗುಣಮುಮಂ ಕಿಱಿದಱೊಳ್ ನೆಱೆಯೆ ಪೇಟ್ದೆಂ (ಕಪಿರಾ ೦-೦೩೬) ; ಚಂದ್ರಗುಪ್ತಮುನಿಯ ಬಟ್ಟೆಯಂ ಋಷಿಸಮುದಾಯಮೆಲ್ಲಂ ತಗುಳ್ದು (ಪಡ್ಮಾರಾ. ೯೦-೪) ; ಕರಿಕಳಭಂಗಳ ಶಿಶು ಕೇಸರಿಗಳ ಬಟ್ಟೆಯಂ ತಗುಳ್ದು (ಪಂಪಭಾ. ೨-೦೦) ; ಗಟ್ಟೆಯ ಬಟ್ಟೆಯ ಪಾವಿನಂತೆ ಬೆಂಬಟ್ಟೆಯಂ ತಗುಳ್ದು (ಸುಳುಮಾ. ೬-೫೩ ಪ). ೪. ಹಿಂಭಾಗ ; ಹಿಂದಂಗಡೆ : ಅಂತು ಪೊಱಲಂ ಪೊಱಮಡೆ ಬಟ್ಟೆಯನೆ ತಗುಳ್ದು ಬರ್ಪ ತಮ್ಮೊಡನಾಡಿಗಳಪ್ಪ ಮೇಳದ ಸಬ್ಬವದ ನಗೆಯ ತೆಗಟೆನವರೆಮ್ಮ ಬಟ್ಟೆಯಟ್ಟಿದಂದು ಬನ್ನಿ ಮೆಂದು ಪ್ರಿಯಂ ನುಡಿದಿರಿಸಿ (ಪಂಪಭಾ. ೨-೯೫ ಪ) ; ಮಿಂಚಿನ ಬಟ್ಟೆಯ ಮೊಱಗುವೋಲ್ ಬೆನ್ನನೆ ಬಂದಳ್ (ಕಾಂತಿಪು. ೬-೨೮) ; ಸೂಜಿಯ ಬಟ್ಟೆಯ ದಾರದಂತೆ (ಧರ್ಮಾಮೃ. ೦೪-೦೦೪). ೫. ವಂಶ ; ಪೀಳಿಗೆ; ಕುಲ; ಮನೆತನ : "ಬಟ್ಟೆ = ಬಟ್ಟೆ, ವಂಶಂ, ಕರೆವಂ, ಲೇಪಿಸುವುದು, ಪಿಂಗಲಿಯ ಬಟ್ಟೆಗೊರಲ್, ಮತ್ತೆ" (ಶಮದ. ಪಂ. ೦) ; ಅತ್ತಿಗೇರಿಯ ಬಟ್ಟೆ ಇದಕ್ಕೆ ಸಾಕ್ಷಿ (ಕಇ. II, ೫-೦೨ ; 859) ; ಅವರ ಪಿಡಿವ ಬಿಲ್ ಬಿಲ್ಲೆಮ್ಮಂಬುಗಳುಮವರಿತ್ತ ನಲ್ಲಂಬುಗಳೆಸೆ ಬಟ್ಟೆಗಾಯದಂತು ಚಲಮನೆ ಕಾವೆಂ (ಪಂಪಭಾ. ೦೨-೩೯) ; ಅಯೋಧ್ಯಾನಗರದೋಳ್ ನೇಸಱ ಬಟ್ಟೆಯ ಪಲಂಬರರಸರರಸುಗೆಯ್ಯುತಿರ್ವರ್ (ರಾಮಾಶ್ವ. ೬-೬). ೬. ಪಕ್ಷಿಗಳ ಗಂಟಲಿನ ಇಳಿಜಾರಾದ ಭಾಗ ; ೯ ಪಿಂಗಳಾನಾಡಿಯ ಮುಂದಕೆ ಇರುವ ಗಂಟಲಿನ ಭಾಗ : "ಬಟ್ಟೆ = ಬಟ್ಟೆ, ವಂಶ್ಯ, ಕರೆವಂ, ಲೇಪಿಸುವುದು, ಪಿಂಗಲಿಯ ಬಟ್ಟೆಗೊರಲ್, ಮತ್ತೆ" (ಶಮದ. ಪಂ. ೦). ೭. ಕರೆ ; ಆಹ್ವಾನ : "ಕರೆವಲ್ಲಿ ಲೇಪನಂಗೆಯ್ವಲ್ಲಿ ಬಟ್ಟೆಯೊಳ್ ವಂಶದೊಳ್ ಪಲ್ಲಕ್ಕಿಯಾ ಸ್ವರಭೇದದಲ್ಲಿ ಬಟ್ಟೆಯೆನಿಸುಗುಂ" (ಸಂಜೀವ. ೦೬) ; ಕುಬೇರಸೆಟ್ಟಿಯ (ಧನಮಿತ್ರ) ಶಿರೋರುಹದೊಳ್ ಪಳಿತಾಂಕುರಮಂ ಧನಪತಿ ಕಂಡು ನಿನಗೆ ಬಟ್ಟೆ ಬಂದುದೆಂದು ನಗುತುಂ ತೋಱೆದೊಡೆ (ಸಾಪುಂಪು. ೬೦) ; ಯೌವರಾಜ್ಯಾಭಿಷೇಕಪ್ರಾರಂಭಪ್ರೀತಿಯಿಂದಟ್ಟಿದ ಬಟ್ಟೆಗೆ ಮಗಂ ಬರ್ಪುದುಂ (ಕಾದಂಪು. ೫೭೬). ೮. ಯಾವುದಾದರೊಂದು ಸುದ್ದಿ ಅಥವಾ ಆಹ್ವಾನವನ್ನು ಒಯ್ಯುವ ದೂತ : ರಿಸಿಯರ್ಕಳ್ಗೆಲ್ಲಂ ಬಟ್ಟೆಯನಟ್ಟಿ ಬರಿಸಿ (ಪಡ್ಮಾರಾ. ೮೫-೦೬) ; ದುಶ್ಶಾಸನಾದಿಗಳ್ಗೆಲ್ಲಂ ಬಟ್ಟೆಯನಟ್ಟಿ ಬರಿಸಿ (ಪಂಪಭಾ. ೬-೩೩ ಪ) ; ಒಡಗೊಂಡು ಬರ್ಪಂತು ವೈಶಂಪಾಯನಂಗೆ ಬಟ್ಟೆಯನಟ್ಟುವಂ (ಕಾದಂಪು. ೪೬೯). 'ಬಟ್ಟೆಯಟ್ಟು' ಪರಾ. ೯. ಉಡುಗೊರೆ ; ಕಾಣಿಕೆ ; ಕೊಡುಗೆ : 'ಬಟ್ಟೆವಟ್ಟೆ$_1$' ಪರಾ. ೧೦. ನಡೆವಳಿಕೆ ; ವರ್ತನೆ : 'ಬಟ್ಟೆಯ' ಪರಾ. ಬಳ್ಳಿ$_2$: ೧. ಬಳಿವಿಡಿದು ನಡೆತಂದು ಕಂಡನು ಮುಂದೆ ಮುನಿವರೇಣ್ಯನನು (ಪಸಕಾ. ೫-೬೫) ; ಬಂಡಿಯನೇಱ ಪೋಪಾ ಬಳಿಯಲಿರೆ ಪೆರ್ಬಾವು (ಸಾಳ್ವಕಾ. ೨೦-೦೩). ೨. ಹಳ್ಳಿಯಲಿ ನಗರಂಗಳಲಿ ನಗಕುಲದ ಬಳಿಗಳಲಿ ಬಳಿಕವರು ಕಾಣದೆ ಹೊಳಲ ಸಾರ್ದರು (ಕೊರಣಾ. ೩-೨-೦೬) ; ಇಳಿದಿರ್ದ ಬಳಿಯಿಂದ ಪಾಳೆಯದೆಗೆದೊಡೆ (ಕಂಪಪಿ. ೦೯-೫೨) ; ಪರಮಪತಿವ್ರತೆಯಿದ್ದ ಬಳಿಯೊಳಾ ಸಿರಿರಾಣಿ ಸೇರಿ ಬಂದಿಹಳು (ಪದಿಪ. ೨-೦೬). ೩. ಮಣ್ಣಲಿ ಸಾಸಿರದ ಬಳಿಯ ಬಾಡಂ (ಎಕ. VII. ಶಿಕಾರಿ. ೯೬-೦೬ ; 1113) ; ಸೈಂಧವನ ತಲೆಯನು ಹೊಡೆದು ನಿನ್ನಯ ಕಾಲ ಬಳಿಯಲಿ ಕೆಡಹುವೆನು (ಕುಪ್ಯಾಪ್ರೋ. ೯-೩೩) ; ನೆಳಲು ತನುವಿನ ಬಳಿಯೊಳಲ್ಲದೆ ಚಲಿಸುವುದೆ (ಪಳಸ. ೦-೦೦). ೪. ಬಂದರು ವಸಂತರಾಜನ ಬಳಿಯ ಲತೆಯಂತೆ (ಇಹರ. ದೇ. ೩೩-೦೫). ೫. ಅಣನ್ದೂರು ಮೂನೂಱ ಬಳಿಯ ಅಂಕುಲಗೆಯೆಯ್ವತ್ತಱೊಳಗಣ [ಬಿ]ಟ್ಟೆಯನ ಕರಂಜಿಗೆಯ (ಎಇ. XXVII. ೦೫-೪೪ ; 1114) ; ಅರಿಯ ಬಳಿಯವರ ಗಡಿಯಿಂ ಕೊಳಹರ ಬಳಿಯವರ ಗಡಿಯಿಂದಂ (ಸೌಇಇ. XI-ii, ೪೨೪-೦೬ ; 1401) ; ಜನಿಯಿಸಿದೆನು ನಾನು ಮೂರನೆಯವನಾಗಿ ಬಳಿಯ ಬಳ್ಳಿಯ ಕುಡಿಯಾಗಿ (ಇಂಪಾಪ. ೩-೨೯). ೮. ನಗರೇಶ್ವರದೊಳಿರ್ದ್ದೇವರ್ಗಂ ಬಳಿಯನ(ಘ)ಟ್ಟಿಯರಸರಿಂ ಕಾಲು ಕಟ್ಟಿಸಿ (ಸೌಇಇ. IX — i, ೦೦೦-೩೬ ; 1045) ; ಬಳಿಯನಟ್ಟಿ ಬರಿಸಿ ಕಾಲಂ ಕಟ್ಟಿ (ಎಇ. XVI. ೬೬-೦೩ ; 1058).

ಬಳಿಯಣ = ಹತ್ತಿರದ ; ಸಮೀಪದ : ಉತ್ತರಕೆ ವೆಂನೊಬನ ಹಳಿ ಬಳಿಯಣ ಮುಂಡುಬಂಡೆ ದಕ್ಷಿಣಕೆ ಹುರಳಿಗೆರೆಯೇ ಮೇರೆ (ಎಕ. XII. ಪಾಪಗ. ೪೬-೫೪ ; 1670). ಬಳಿಯತನ = ಪಾರಂಪರ್ಯ : ಎರಡಿಲ್ಲದ ಬಳಿಯತನದಿಂ ಪಿಂತಣ ಕಬ್ಬಿಗರುಮೊಳರುಂ ಧರೆಗವತರಿಸಲ್ಕಿರ್ಪಾ ಸಾರ್ವಲೌಕಿಕಕವಿಗೆ ಬಲ್ಲಂತಿರೆ ತಾಂ ಮಾರ್ಗಪರಿಷ್ಕರಣಕಾರಿಗಳ್ ಭುವನಮನವಂಗೆಳ್ಚರಿಸಿ ಸಿದ್ಧಂ ಮಾಳ್ಪರ್ ಸೂಳಾಯ್ತರುದಯರಾಗವ ಪಾಡುತುಂ (ಸಂಸಪ. ೬-೫). ಬಟ್ಟೆವಟ್ಟೆ$_2$, ಬಳಿಬಳಿ, ಬಳಿವಳಿ (ದ್ವಿರುಕ್ತಿ) : ಇವರೆಲ್ಲಿಗೆ ಪೋದಪ್ಪರೋ ಎಂದು ಬಟ್ಟೆವಟ್ಟೆಯನೆ ವಂದು (ಪಡ್ಮಾರಾ. ೬೬-೦) ; ನರನಂದನನ ಬಟ್ಟೆವಟ್ಟೆಯಂ ತಗುಳ್ದು ಗಟ್ಟೆವಟ್ಟೆಯ ಪಾವಿನಂತೆ ಚಕ್ರವ್ಯೂಹಮಂ ಪುಗಲೆಂದು ಬರ್ಪ ದ್ರುಪದ . . . ಘಟೋತ್ಕಚಾದಿಗಳೊಡನೆ ಮಲ್ಲಾಮಲ್ಲಿಯಾಗಿ (ಪಂಪಭಾ. ೦೦-೯೬ ಪ) ; ಹರನು ಮೂಲಿಗನಾಗಿ ಪುರಾತರೊಳಗಾಗಿ ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯಾ (ಬಸವ. ೩೪೭); ಕಱುಗಳೋಡದಂತೊಡನೆ ಬಳಿವಳಿಯಲಿದ್ದೆಲ್ಲರೋಪಾದಿಯಿಂ ನಡೆವುದು (ಸಿದ್ಧರಾ. ೨-೦೪).

[ದೇ.॥ ತಮಿ. ಮಲ. ವಟ್; ತೊದ. ಪೊಳಿ; ತುಳು. ಬರಿ]

ಬಟ್ಟೆ₄ (ಅ). ಆಮೇಲೆ ; ನಂತರ ; ಮತ್ತೆ : ಮತ್ತೆಂಬರ್ಥದೊಳು ಸಿರ್ವರ್ ಬಿತ್ತಿಗರಾ ಬಲ್ಲೆ ಬಟ್ಟೆಗಳಂ (ಕಬುದ. ೩೦೯). [← ತಮಿ. ವಟ್ಟೆ]

ಬಟ್ಟೆಕ 'ಬಟ್ಟೆಕಂ' ನೋ.

ಬಟ್ಟೆಕಂ, ಬಳಿಕ₂, ಬಳಿಕ್ಕ, ಬಳಿಕ್ಕಂ, ಬಳಿಯಂ, ಬಟ್ಟೆಕ್ಕ, ಬಟ್ಟೆಕೆ, ಬಟ್ಟೆಕ್ಕ₂, ಬಟ್ಟೆಕ್ಕಂ, ಬಟ್ಟೆಕ್ಕೆ, ಬಟ್ಟೆಯಂ (ಅ). ತರುವಾಯ; ಆಮೇಲೆ; ಅನಂತರ : "ಪಶ್ಚಾತ್, ಚರಮಂ — ೨ ಈ ಬಟ್ಟೆಕಂ" (ಶಬಾಯು. ೦೦೭-೨೨); "ಬಟ್ಟೆಕಂ ಬಟ್ಟೆಕ್ಕೆ ಬಟ್ಟೆಯಂ ಮತ್ತೆನಿಪ್ಪುದು" ಸಂಜಾಸ. ೨) ; ನುಡಿ ಮುನ್ನಂ ಸ್ಪಷ್ಟಮಾಗಿರ್ದುದು ಬಟ್ಟೆಕವಿದಸ್ಪಷ್ಟಮಾಯ್ತು (ಕಾರಂಪೂ. ೫೯); ಬಟ್ಟೆಕಂ [ಪ್ರಾಕೃ. ಬಟ್ಟೆಯ] ಮನುಷ್ಯರಂ ಕಂಡು ಗರ್ಜನಾದಿಗಳಿನಂಜಿಸೆ (ಕಾಪುಂಪು. ೦೦). **ಬಳಿಕ₂** : ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗೆ ಭವವುಂಟೆ (ಸುಹಾರೇ. ೩. ೨೪-೪೬); ನರಲೋಕದೊಳ್ ಪುಟ್ಟಿ ಅರಿದು ಬಳಿಕಿಲ್ಲಿರವು ನರನಾದ ಬಳಿಕ ಎತ್ತಣದು ಇತ್ತಣ ಬರವು (ಸಂಬಸ. ೦-೫೬). **ಬಳಿಕ್ಕ** : ಅಲ್ಲಿ ಜಯಿಸಿ ಬಳಿಕ್ಕೆಂದು ಬಪ್ಪೆಂ ದೇವ (ಜಸ. ೦-೬೩); ವಿಷವನುಂಡು ಭ್ರಮಿಸಿ ಬಿದ್ದ ಬಳಿಕ್ಕ ಕಾದಡೆ ನಿಮಗೆ ಶಕ್ಯವೆ (ಜಸಪ. ೦೩-೬); ಸ್ವಾಮಿಯ ಪದಮಂ ನೆನೆದು ಬಳಿಕ್ಕೇ ಕಾವ್ಯಮನುಸುರುವೆನು (ಜಯಾ. ೦-೮). **ಬಳಿಕ್ಕಂ** : ಅಲ್ಲಿಂ ಬಳಿಕ್ಕಂ ಎಮ್ಮ ನರ್ಚಿಸುತ್ತೆ ಭಕ್ತರ ಬಂಧುವಾಗಿ (ಜಸ. ೯-೩೨); ಬಾಲಕನಂ ಬಿಸುಡೆ ಭೂಮಿದೇವಿ ಬಳಿಕ್ಕಂ ಪಾಲಿಸೆ ಬಳೆದಂ (ಹರಿಹ. ೨-೨೨). **ಬಳಿಯಂ** : ಸತ್ಯೇಂದ್ರಚೋಳಧರಣೀಶ್ವರಂ . . . ಮುಳಿಯದಿರ್ಪನೆ ಬಳಿಯಂ (ಶಾಕಾರೇ. ೦೩-೧೯). **ಬಟ್ಟೆಕ₂** : ಅವರಿಂ ಬಟ್ಟೆಕವರ ಮಗನ್ ರಾಜಪುಲಿಕುಲಮುದ್ದನ್ (ಎಳ. VIII, ಸೊರಬ. ೯-೩ ; ಸು. ೫೦೦) ; ಅಲ್ಲಿಂ ಬಟ್ಟೆಕ ಹಯಖುರಧ್ವಾನಂ (ಅಭಿಪ್ರ. ೦೯-೧೯). **ಬಟ್ಟೆಕೆ** : ಆಹವವಿಜಯಿಯಪ್ಪ ವಿಜಯನನೆ ವಲಂ ಮುಂ ಕಂಡು ಬಟ್ಟೆಕೆ ನೃಪನಂ ಕಂಡಂ (ಸಂಪಶಾ. ೯-೦೦); ಪತ್ರಲೇಖಾಂಗನೆಯಂ ಮುಂದಿಟ್ಟು ಬಟ್ಟೆಕೆ ಬರ್ಪುದು (ಕಾರಂಶಾ. ೨೬೦); ಬಿಡದಾರಾಧಿಸೆ ಮುನ್ನಮೆ ಕುಡಲಾಱದೆ ಬಟ್ಟೆಕೆ ಗಂಟಲಂ ಮೆಟ್ಟೆದೊಡೆ (ಗದಾಯು. ೩-೩೯). **ಬಟ್ಟೆಕ್ಕ₂** : ಸಂಧ್ಯಾಸಮಯಾತ್ತರಕ್ತರುಚಿ ಪಿಂಗೆ ಬಟ್ಟೆಕ್ಕುದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ (ಪಂಪಶಾ. ೩-೬೦); ಆಕೆಯಂ ತರ್ಪುದನುಟ್ಟೆಯೆ ಬಟ್ಟೆಕ್ಕಿಲ್ಲ ದೇಱೊಂದುಪಾಯಂ (ಕಾರಂಪೂ. ೧೩೯). **ಬಟ್ಟೆಕ್ಕಂ** : ಮೊದಲ ಪದಂ ನ್ಯೂನಾಕ್ಷರಮದಱಿಂದೆ ಬಟ್ಟೆಕ್ಕಮರ್ಧಮಧಿಕಾಕ್ಷರಂ (ಕವಿಗಾ. ೦-೯೯). **ಬಟ್ಟೆಕ್ಕೆ** : ಶ್ರೀಭದ್ರವಾಹು ಸಚಿನ್ದ್ರಗುಪ್ತಮುನೀನ್ದ್ರಯುಗ್ಮದಿನೊಪ್ಪೆ ವಲ್ ಭದ್ರಮಾಗಿದ ಧರ್ಮಮನ್ದುಬಟ್ಟೆಕ್ಕವನ್ದಿನಿಸಳ್ಕಲೋ . . . ವಿದ್ರುಮಾಧರ ಶಾನ್ತಿಸೇನಮುನೀಶನಾಕ್ಕಿ ಎವೆಳ್ಗೊಳ ಅದ್ರಿ ಮೇಲಶನಾದಿವಿಟ್ಟ ಪುನರ್ಧವಕ್ಕೆಜಿ ಆಗಿ (ಎಳ. II, ೩೦-೨; ಸು. ೫೦); ಈತನೆಮ್ಮಿಂ ಬಟ್ಟೆಕ್ಕೆ ಚತುರ್ದಶಪೂರ್ವಧಾರಿಯಪ್ಪ ಮಹಾತ್ಮಮನೊಡೆಯೊಂ ಭದ್ರಬಾಹುಭಟಾರರೆಂಬೊರಪ್ಪೊರ್ (ಪಡ್ಡಾರಾ. ೬೯-೯) ; ಬಟ್ಟೆಕ್ಕೆ ಧಾತ್ರಿಯಂ ಶತಬಲನಾತ್ಮಜಂಗೆ ನೆಗೞ್ದು (ಅಭಿಪ್ರ. ೨-೦೯). **ಬಟ್ಟೆಯಂ** : "ಬಟ್ಟೆಯಂ, ಬಟ್ಟೆಕಂ, ಬಟ್ಟೆಕ್ಕಂ, ಬಟ್ಟೆಕೆ, ಬಟ್ಟೆಕ್ಕೆ ಇವು ಪಶ್ಚಾದರ್ಥಂಗಳ್" (ಕಬುದ. ಸಂ. ೦) ; ಧರ್ಮಂಗಳಂ ನಮಸ್ಕಂ ನಡೆಯಿಸಿ ಬಟ್ಟೆಯಮೊನ್ದು ವರ್ಷಂ ರಾಜ್ಯಮಂ ಪತ್ತುವಿಟ್ಟು (ಎಳ. II, ೫೯-೦೦೯; ೧೯೪) ; ಪೊಡೆವಂ ಕೂಟಂ ಬಟ್ಟೆಯಂ ಪೊಡೆವಂ ರಕ್ಕಸನಂ (ಪಂಪಶಾ. ೩-೨೯); ಪೊಡೆವಾಟ್ಟು ಬಟ್ಟೆಯಂ ವಳೇಮುಖನಿಂತೆಂದುದು (ಪಂಪಕಂ. ೦೦೦-೨).

ಬಳಿಕಣ=ನಂತರದ : ಆ ಬಳಿಕಣ ಇದರ ಈ ೨ನೆಯ ಮುದ್ರಣವು . . . ಪ್ರಕಾಶಿತವಾಗಿದೆ (ಗೊಮ್ಮಟಸಾ. iii, ಮುನ್ನುಡಿ). [< ಬಟ್ಟೆ₄]

ಬಟ್ಟೆಕೆ 'ಬಟ್ಟೆಕಂ' ನೋ.

ಬಟ್ಟೆಕೊಳ್ 'ಬಟ್ಟೆಗೊಳ್' ನೋ.

ಬಟ್ಟೆಕ್ಕ₁ (ನಾ). ಅನಂತರದ ಸಮಯ : ಬಟ್ಟೆಕ್ಕನ ನುಡಿಗೆ ಸೈರಿಸಲಾಱದೆ ಫಣಕೇತನನಿಂತೆಂದಂ (ಪಂಪಶಾ. ೦೩-೨ ಪ). [<ಬಟ್ಟೆಕಂ]

ಬಟ್ಟೆಕ್ಕ₂ 'ಬಟ್ಟೆಕಂ' ನೋ.

ಬಟ್ಟೆಕ್ಕಂ 'ಬಟ್ಟೆಕಂ' ನೋ.

ಬಟ್ಟೆಕ್ಕೆ 'ಬಟ್ಟೆಕಂ' ನೋ.

ಬಟ್ಟೆಗಳಿಪು (ಕ್ರಿ). ಹಿಂದೆಯೇ ಕಳುಹಿಸು : ಆಗಲಲಾಱದೆ ಕಳಿಪುತ್ತುಂ ಕಳಿಯೆ ಪೋಗಿ ತದಾ [ದ] ನುಗ್ರಹಮಂ ಮಿಱಲಣ್ಮದೆ ಕಣ್ಮಲರ ಮಾಲೆಯನೆ ಬಟ್ಟೆಗಳಿಪಿ ಬಂದಂ (ಅಪಂಪು. ೯-೧೨ ಪ).

[ಬಟ್ಟೆ₃ + ಕಳಿಪು(< ಕಟ್ಟಿಪು)]

ಬಟ್ಟೆಗೊರಲ್ (ನಾ). ಪಕ್ಷಿಗಳ ಗಂಟಲಿನ ಇಳಿಜಾರಾದ ಭಾಗ ; ಪಿಂಗಳಾನಾಡಿಯ ಮುಂದಕ್ಕೆ ಇರುವ ಗಂಟಲಿನ ಭಾಗ : "ಬಟ್ಟೆ—ಬಟ್ಟೆ, ವಂಶ, ಕರೆವಂ, ಲೇಪಿಸುವುದು, ಪಿಂಗಲಿಯ ಬಟ್ಟೆಗೊರಲ್, ಮತ್ತೆ" (ಕಬುದ. ಸಂ. ೦). [ಬಟ್ಟೆ₃+ಕೊರಲ್]

ಬಟ್ಟೆಗೊಳ್, ಬಳಿಗೊಳ್, ಬಟ್ಟೆಕೊಳ್ (ಕ್ರಿ). ೧. ಹಿಂದೆ ಹೋಗು ; ಹಿಂಬಾಲಿಸು : ಮುಂದಣ ಮಿಗಮಂ ಕಟ್ಟಿಪದೆ ಸಂದಿಸಿ ಬಟ್ಟೆಗೊಳ್ವ ಮಿಗಮುಮಂ ಕಟ್ಟಿಪದೆ ತಾನೊಂದಳವಿದಪ್ಪದೆಟ್ಟು ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗಟ್ಟಿಸಿದಂ (ಪಂಪಶಾ. ೩-೯೬). ೨. (ಆಲಂ) ಗಮನ ವಿಡು; ಲಕ್ಷಿಸು: ಕಳಶಮನೆತ್ತಿ ನೀರೆಱೆವ ಕಾಂತೆಯ ಲೋಲ ವಿಲೋಚನಾಂಶುಸಂಕುಳಮನೆ ವಾರಿಧಾರೆಯೆನುತುಂ ನಿಜತೋಯಮನೀಂಟದೊಯ್ಯನಂಜಳಿಯನಮರ್ಚಿ ಬಾಯ್ಗೆ ಮೊಗಮಂ ಬಟ್ಟೆಗೊಂಡೆಡಕಂ ಬಲಕಮುದ್ದಳ ತೃಷೆಯಿಂದೆ ತಂದಱಕೆ ಪಿಂಗದೆ ನಾಣ್ಟದನೊರ್ವ ಬಟ್ಟೆಗಂ (ಕಾಪ್ರಪ. ೩-೩೨). **ಬಳಿಗೊಳ್** : ೧. ಎಂದಿನಂದದಿ ಗೋಕುಲಂಗಳು ಬಳಿಗೊಂಡು (ಕಾಪಾರೇ. ೦೬೯-೩); ಆಕೆಯ ಬಳಿಗೊಂಡು ಗಾಯಕಿಯರೆಯ್ದುದರು (ಪಂಪ. ೬-೧೭); ಅಲ್ಲಿರ್ದ ಸಭೆಯ ಬೀಳ್ಕೊಟ್ಟು ಮಂತ್ರಿಯ ಸಖರ ಸಲ್ಲೀಲೆಯಿಂದೆ ಬಳಿಗೊಂಡು . . . ಪಲ್ಲಕ್ಕಿಯುಮನೇರಿ (ಪಪಪುಂ. ೬-೧೫). ೩. ದಾರಿಯನ್ನು ಹಿಡಿ; ಮಾರ್ಗವನ್ನು ಅನುಸರಿಸು: ಗಿಡುವಿನ ಸರುವಿನ ಬರುವಿನ ಮಡುವಿನ ಬಳಿಗೊಂಡು ಶುನಕನಟ್ಟಿತು ಮೊಲನಂ (ಗಿಳಿ. ೦-೬೫). **ಬಟ್ಟೆಕೊಳ್** : ೪. ಕ್ರಮವಾಗಿಡು; ಕ್ರಮದಲ್ಲಿರಿಸು : "ಬಟ್ಟೆಕೊಳ್—ಕ್ರಮಸಂಧಾನೇ (ಕ್ರಮವಾಗಿಡು)" (ಕಸುಗಾ).

[ಬಟ್ಟೆ₃ + ಕೊಳ್₁]

ಬಟ್ಟೆದಪ್ಪು, ಬಳಿದಪ್ಪು (ಕ್ರಿ). ೧. ದಾರಿತಪ್ಪು; ಹಾದಿತಪ್ಪು : ಮರದ ಮಱೆಗಳೊಳ್ ಬಟ್ಟೆದಪ್ಪಿದ ಮಱಿಯನಱಸಿ ಮಱುಕದಿಂ ಸೂಟ್ವರ್ ಖಡ್ಗಧೇನುಗಳ (ಪಂಪ್ರಪು. ೩-೬೩ ಪ); ನೀನೆ ಸೋಲ್ತಿರ್ಪೆ ಜಾಣ್ಮೆಯೊಳ್, ಬಟ್ಟೆದಪ್ಪಿ ಪೋಗಿರ್ಪೆ (ಬಿಕ್ಕಪ್ರ. ೨೩-೩೩೮). ೨. ಸಾನ್ನಿಧ್ಯ ತಪ್ಪು; ದೂರವಾಗು: ದಿನಕರನ ಬಟ್ಟೆದಪ್ಪಿದ ಕಿರಣಂಗಳ್ ಕಟ್ಟಲೆಯಂ ಕಂಡಳ್ಕೆ ತನ್ನ ಮಱೆಯಂ ಪೊಕ್ಕಂತೆ (ಪಂಪಶಾ. ೦೨-೮೮ ಪ). **ಬಳಿದಪ್ಪು** : ೧. ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ (ಬಸವ. ೩೬೫). [ಬಟ್ಟೆ₃ + ತಪ್ಪು₁]

ಬಟ್ಟೆದೊಟ್ಟು, ಬಳಿದೊಟ್ಟು, ಬಳಿದೊಳ್ತು (ನಾ). ವಂಶಪಾರಂಪರ್ಯವಾಗಿ ಬಂದ ಆಳು.—ಸೇವೆ ಮಾಡುವ ವ್ಯಕ್ತಿ : ತೊಟ್ಟೇ ಬಟ್ಟೆದೊಟ್ಟಿರ ಪಡಿದೊಟ್ಟಿವಳಾರೊಳ್ಳಳೆಲವೊ ನರವಾನರ ಪೇಟ್ಟ್ (ಪಕಸಿ. ೬-೨೩೯). **ಬಳಿದೊತ್ತು**: ಬಳಿದೊತ್ತು ಬಳಗದೊತ್ತು ವಂಶದೊತ್ತು ನಾನಯ್ಯ (ಬಸವ. ೩೩೩); ಅವಂದಿರೆನಗೆ ಕುಲವಳಿಯ ಬಳಿದೊತ್ತಿರಪ್ಪು ವಱಿಂದೀ ಸಂಬಿಯನೆನಗೆ ತೊತ್ತಿನ ಮಗನಾಗಿ ಕೊಟ್ಟರ್ (ಪಂಬಿ. ೬-೦೦೦). **ಬಳಿದೊಳ್ತು** : ನಾವೆಲ್ಲವುಂ ನೆಲದೊಳ್ತಿರ್ ಬಳಿದೊಳ್ತಿರ್ ಸಲೆದೊಳ್ತಿರ್ ನಿಮಗೆನುತ್ತೆ (ಗಿಳಿ. ೦೦-೯೫). [ಬಟ್ಟೆ₃+ತೊಟ್ಟು]

ಬಟಿನೀರ್, ಬಳಿನೀರ್, ಬಳಿನೀರು (ನಾ). ೧. ದೇವತಾವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು ; ೨ ತನ್ನ ನಿಷ್ಠೆಯನ್ನು ನಿರೂಪಿಸಲು ಈ ನೀರನ್ನು ಕುಡಿಯುವ ಪದ್ಧತಿಯಿತ್ತು. ಇದೊಂದು ದಿವ್ಯ ಪರೀಕ್ಷೆ ; ಇದಕ್ಕೆ ಕೋಶಪಾನವೆಂದು ಹೆಸರಿದೆ : "ಕೋಶಪಾನಂ-ಬಟಿನೀರು[ರ್]" (ನೀತಿವಾ. ೨೯-೬೩). ೨. ವೇಶ್ಯೆಯು ವಿಟನಿಗೆ ತನ್ನ ಅಚಲವಾದ ಪ್ರೇಮವನ್ನು ತಿಳಿಸುವುದಕ್ಕಾಗಿ ಮಾಡಿ ತೋರಿಸುವ ಪ್ರತಿಜ್ಞೆಯ ಸಂಕೇತವಾಗಿ ಕುಡಿಯುವ ನೀರು : ವಿಟನು ಕುಡಿದ ಬಳಿಕ ಕುಡಿಯುವ ನೀರು : ನಿಱಿಗಳನಿಕ್ಕಿ ದಾಂಟಿಸದೆ ದುಂಡಿಸುವಾಕೆಯನೊತ್ತೆಗೊಳ್ಳದಂತೆಱಿಯದೆ ತೇಪೆಗುಳ್ಳ ಬಟಿನೀರ್ಗಳನಗ್ಗದ ಪೆಣ್ಗೆ ಮೆಯ್ಯನೆಯ್ದಿಱಿಯದೆ . . . ವಿಟವೃತ್ತಿಗೆ ಮುಯ್ವನಾಂಪುದೇ (ಶೀಲಾವ. ೨-೯೩); ನುಡಿಯೆಲ್ಲಂ ಹೊಲೆ ಸೂರುಳೊಳ್ನಿಱಿ ಹೊಸಂತಿಲ್ ಪೊಂಗೊಳಲ್ ಪುತ್ತುವಾಯ್ಕುಡಿನೀರೊರ್ಮೆಗೆ ಕಮ್ಮನಪ್ಪ ಬಟಿನೀರೂರೂರ ದೈವಂಗಳುಂ ಪಡಿಗೆತ್ತೋಡಿದುವೀಕೆಗಂಜಿ ವಿಟರೆಂದುಂ ಗೆಂಟು (ಶೀಲಾವ. ೨-೦೦೨); ಕುಡಿದೊಡೆ ಹೊಟ್ಟೆಯಿಂದೆ ಬಟಿನೀರ್ ಪೊಱಪಾಯ್ವುವೆ ಸುತ್ತಿ ಕಾಲನೇಂ ತೊಡರ್ವುವೆ ದಾಂಟುವಲ್ಲಿ ನಿಱಿ (ಸಂಪ್ರಪು. ೬-೬೦). **ಬಳಿನೀರ್** : ೨. ಕುಡಿದ ನೀರವರನುಳಿದು ಪೊಗದಂತವರ್ಗೊಡನೆ ಕುಡಿದ ಬಳಿನೀರ್ಗೆ [ಪಾಠಾಂ. ಬಳಲಿಕೆಯ] ಪಡಿಯಾಗೆ ಪಥಿಕರಲ್ಲಿಂ ತೆರಳದೆ ನಿಂದು ತಡೆಯ ದಿಟ್ಟಿಸುತಿಹರವರ (ಕುರಾಸಾಂ. ೨-೩೦). **ಬಳಿನೀರು** : ೧. ಹರಿ ಬ್ರಹ್ಮರಿಗೆಱಗದಂತೆ ಬಳಿನೀರನೆಱಿಯಾ (ಬಸವ. ೪೯೯); ಕೂಲಿಗೆ ಬಳಿನೀರ ಕುಡಿದರೆ ಆಧಾರ ಮುಟ್ಟುವುದು (ಬಲೇಶ್ವ. ೬೪). ೨. ಬಳಿನೀರ ಕುಡಿದು ನಿಱಿಯ ದಾಂಟಿ ಪುತ್ತೂದಿ ಬಳಿಸಂದಿನಿಯರ ಚಿತ್ತವನು ತಿಳಿಪಿ ಕಾಲ್ವಿಡಿದೊಡಗೂಡುವ ಗಳಿಸಾಳಿ ಬೆಲೆವೆಣ್ಗ ಸೆದರಂದಲ್ಲಿ (ಕುರಾಸಾಂ. ೨೯-೬೬). [ಬಟಿ$_1$ + ನೀರ್]

ಬಟಿನೀರ್ಗುಡಿ, ಬಳಿನೀರ್ಗುಡಿ (ಕ್ರಿ). ೧. ದೇವತಾವಿಗ್ರಹವನ್ನು ಅಭಿಷೇಕ ಮಾಡಿದ ನೀರನ್ನು, ತನ್ನ ನಿಷ್ಠೆ ಅಥವಾ ಸತ್ಯಸಂಧತೆಯನ್ನು ನಿರೂಪಿಸಲು ಕುಡಿ : ಬಟಿನೀರ್ಗುಡಿದು ಪುಸಿವನ ಸಂತಾನಕ್ಷಯಮಕ್ಕುಂ (ನೀತಿವಾ. ೨೯-೬೩). ೨. ವೇಶ್ಯೆಯು ವಿಟನಿಗೆ ತನ್ನ ಅಚಲವಾದ ಪ್ರೇಮವನ್ನು ತಿಳಿಸುವುದಕ್ಕಾಗಿ ಮಾಡಿ ತೋರಿಸುವ ಪ್ರತಿಜ್ಞೆಯ ಸಂಕೇತವಾಗಿ ವಿಟನು ಕುಡಿದು ಉಳಿಸಿದ ನೀರನ್ನು ಕುಡಿ : ಪೊಸವೇಟಮಂ ಪೊಯ್ದುಕೊಳಲುಂ ಮತ್ತಿನ ಗಂಡರ್ಮೊಱಿಯಲ್ಲರೆಂದು ಮನದೊಳಗೆ ಬಟಿನೀರ್ಗುಡಿದ ಬದ್ದೆಯರ್ (ಅರ್ಥಪೇ. ೩-೨ ಪ). **ಬಳಿನೀರ್ಗುಡಿ** : ೧. ಪರವೆಣ್ಗಳೆನಗಮ್ಮ ಹರಿಹರದೇವಿಯ ದೊರೆಯೆಂದೀಶನ ಮುಂದೆ ಭರದಿಂದ ಬಳಿ[ಪಾಠಾಂ. ಬಳಿಕ]ನೀರ್ಗುಡಿವಂತವನಾಗಳಿರದೀಂಟಿದನು ತೀರ್ಥಜಲವ (ಕುರಾಸಾಂ. ೨೯-೪೭). ೨. ಉಟ್ಟ ನಿಱಿ ದಾಂಟಿದಡೆ ಕಚ್ಚುವುದೆ ದೈವಮಂ ಮುಟ್ಟಿದಡೆ ಬೆರಳು ಹತ್ತುವುದೆ ಬಳಿನೀರ್ಗುಡಿಯೆ ಹೊಟ್ಟೆ ಹಱಿವುದೆ (ಹಕಕಾ. ೪-೨೩); ದೇವರ ನಿಲುಕೆ ಹತ್ತುವುದೆ ಕರತಳ ನಿಱಿಯ ದಾಂಟಲು ಕಚ್ಚುವುದೆ ಬಳಿನೀರ್ಗುಡಿಯಲೀಯುದರ ಉರಿವುದೇ (ಜೀವಂತ. ೦೭-೩೭). [ಬಟಿನೀರ್+ಕುಡಿ$_1$]

ಬಟಿಯ, ಬಳಿಯ (ನಾ). ೧. (ವಿಧೇಯತೆಯ) ನಡವಳಿಕೆಯುಳ್ಳವನು; ವಿಧೇಯ : "ಬಟಿಯನೆಂದೆನೆ ವಿಧೇಯಂ" (ಸಂಜೀವ. ೪); "ಬಟಿಯಂ-ವಿಧೇಯಂ" (ಕಪುದ. ಪಂ. ೧). **ಬಳಿಯ** : ೧. ಕಿರುಜಂತುವನುಂ ಕೊಲಲಿಲ್ಲಂ ಪಿರಿಯ ಗುಣಂ ಬಳಿಯಂ ಗುರುಸೇವೆಯಿನುರು ಕರುಣಾಳುವನೇನೆಂಬೆಂ (ಸೌವಂದ. ೩-೩೦). ೨. ಒಂದು ವಂಶದ ಹೆಸರು : ಮಹಾಜನ ಅಯ್ವದಿಂಬರುಂ ಉಭಯಸಮ್ಮತದೊಳಿಟ್ಟು ಬಳಿಯರ ಬಾದಮ್ಮಗೆ ಬೂದಗೂಟನಿತ್ತೊರ್ (ಸೌಇಇ. IX-I, ೩೯-೬; ?). [ಬಟಿ$_3$ + — ಅ$_7$]

ಬಟಿಯಂ 'ಬಟಿಕಂ' ನೋ.

ಬಟಿಯಟ್ಟು, ಬಳಿಯಟ್ಟು (ಕ್ರಿ). ದೂತನ ಮೂಲಕ ಸುದ್ದಿಯನ್ನು ಕಳುಹಿಸು,-ಕರೆಕಳುಹಿಸು : ಕಜ್ಜಂ ಪುಟ್ಟಿದೊಡೆಮಗೆ ಬಟಿಯಟ್ಟದೀ ಪೊಟ್ಟಿದಾವುದು ಮನೆವಾಟ್ಟಿಗೆಟ್ಟಂದೆ (ಪಂಪಭಾ. ೦೦-೩ ಪ); ಧಾತ್ರೀಪತಿಗಱಿಪಿ ಮರುತ್ಪುತ್ರಂ ಬಟಿಯಟ್ಟಿ ಕರಸಿ (ಗದಾಯು. ೬-೪೪); ಅಂತು ಬಟಿಯಟ್ಟಲೊಡಂ ಗಿರಿರಾಜರ್ ನೆಱಿದು ಬಂದು (ಪಂಪಕಂ. ೨೩೯-೦೨). **ಬಳಿಯಟ್ಟು** : ಭುವನೈಕ[ಮ]ಲ್ಲ ಭೂಪತಿ ಬಳಿಯಟ್ಟಿ ತನ್ನುನಿಪದಾಬ್ಜಯುಗಕ್ಕೆ ವಿನಮ್ನನಾಗಿ (ಎಇ. XVIII, ೦೯೮-೦೯;1104); ರಾಜಸದ ಹಮ್ಮಿನಲಿ ಬಳಿಯಟ್ಟುವುದು ಬಸವಾ ನಿನಗಿದುಚಿತವೆ (ಪ್ರಭುಲೀ. ೦೪-೦೯); ಮಾರಿಯ ಮನೆಗೆ ಬಳಿಯಟ್ಟುವವೊಲಟ್ಟಿದನುರಗಶಯನಂಗೆ (ಪಾಳ್ಯಪಾ. ೨೨-೩೦). [ಬಟಿ$_3$+ಅಟ್ಟು$_2$]

ಬಟಿವರ್, ಬಳಿಬರು, ಬಳಿವರ್, ಬಳಿವರು (ಕ್ರಿ). ೧. ಹತ್ತಿರ ಬರಂ ; ಸಮೀಪಿಸು : ನಂದವನಪವನಂ ಬಟಿವಂದೊಡಗೊಂಡೊಯ್ದು ಪುಗಿಸೆ ಬನಮಂ (ಕಾಂತಿಪು. ೮-೩); ನೋಟ್ಕೆ ಪರ್ವವನೀ ಬಾಲಕರೆಂಬಿದರ್ಕೆ ಬಟಿವಂದೆಂ ಭೋಜರಾಜಾಜ್ಞೆಯಿಂ (ಜಗನಿ. ೩-೬೩); ಏನ್ ಬಟಿವಂದೊಡಮಂಜಿಕೆ ವಡುವೆನ್ (ಬದ್ಧಪ್ರ. ೬-೦೬೩). **ಬಳಿಬರು** : ೧. ಗುರುಭಾರವಾದರು ಬಳಿಬಂದ ಮುಗಿಲನು ಹೊರುವುದು ತಲೆಯ ಮೇಲಗವು (ಇಂಪಾಪ. ೦೦೯-೩೩). **ಬಳಿವರ್** : ೨. ಕೂಡಿಕೊಳ್ಳು ; ಹೊಂದಿಕೊಳ್ಳು : ಎರಡುಂ ಕೇರಿಯ ಸಾಸಿರ್ವರ್ಗ್ಗಂ ನಿರ್ವಿಕಲ್ಪದಿಂ ಸಖಾಯರಾಗಿ ಬಳಿವನ್ದು ಬಾಳ್ವುದು (ಸೌಇಇ. XI-I, ೬೪-೩೬ ; 1028). **ಬಳಿವರು** : ೧. ಅಲರ ಪರಿಮಳವೆಳಸಿದೆಳೆಗಾಳಿ ಸುಳಿವಂತೆ ನಲವಿಂದ ಬಳಿವರುವ ಇನಿಯಳಂತೆ (ವಿಸೀಗೀ. ೩೦-೮). [ಬಟಿ$_3$ + ಬರ್ (< ವರ್)]

ಬಟಿವಟಿ, ಬಳುವಳಿ, ಬಳ್ಳವಳ್ಳಿ, ಬಳ್ಳೊಳ್ಳಿ (ನಾ). (ವಿಶೇಷವಾಗಿ ವಂಶದ ಸಂಬಂಧ ಅಥವಾ ಹೆಣ್ಣುಕೊಟ್ಟು ಬೆಳೆಸಿದ ನಂಟಿನ ಮೂಲಕ ಬರುವ) ಕೊಡುಗೆ; ಉಡುಗೊರೆ : "ಬಟಿವಟಿ (ಬಟಿವಟಿ) = ಕೊಟ್ಟ ವಸ್ತುವಿನ ಬಟಿಯೊಳ್ ಕುಡುವುದು" (ಕಪುದ. ಪಂ. ೦); ಕೊಟ್ಟಂ ತಂಗಿಗೆ ಬಟಿವಟಿಯೆಂದಿಂತು ಸರ್ವಸ್ವಮೆಲ್ಲಮಂ ಪುರುಷೋತ್ತಮಂ (ಪಂಪಭಾ. ೩-೨೬); ಬಟಿವಟಿಯೆಂಬುದು ಬಡವಂಗಟಿಪಂಗೇಂ ಮುಟ್ಟಿ (ಕಾಂತಿಪು. ೬-೨೦). **ಬಳುವಳಿ** : ನಿಮ್ಮಯ ಹೆಂಡಿರನು ಬಳುವಳಿಯ ಕೊಡಿ ಹಾರುವನ ಹೆಂಡತಿಗೆ (ಕುಮ್ಮಾಲ. ೦೩-೪೦); ಅಳಿಯನನು ಮನ್ನಿಸುತ ಮಗಳಿಗೆ . . . ಗಜ ರಥ ತುರಗ ಪಾದಾತಿಗಳ ಲಲನೆಯರ ಬಳುವಳಿಯನಿತ್ತ (ಪಳಪ. ೩-೬೨); ನಿಜನಂದನೆಗೆ ಬಳುವಳಿಯನು . . . ವಸ್ತ್ರಾಭರಣಮಂ ಕೊಟ್ಟು (ಪಂಪು. ೩೬-೬೦); ಹರಿಸಂ ಮಿಗೆ ಬಳುವಳಿಯಾಗಿತ್ತ ಧನಕನಕವಸ್ತುವಾಹನಸಖೀಸಂತಾನಮನೊಡವೋಪಂತೆ ನೇಮಿಸಿ (ಪಾಸ್ವ. ೪-೬೬ ಪ). ಅವಳ ಅಜ್ಜ ಬಳುವಳಿ ಬಿಟ್ಟಿದಾರೇನು? (ಪಾತ್ಯಶ್ಯ. ೬೨). **ಬಳ್ಳವಳ್ಳಿ** : ಕಾಮ ರತಿದೇವಿಗುಡುಗೊರೆ ಬಳ್ಳವಳ್ಳಿಗಳ ಕುಡು (ಮೋಹಕ. ೦೩-೦೩). **ಬಳ್ಳೊಳ್ಳಿ** : ದೊಡ್ಡಮಾವನ ಮದುವೇಲಿ . . . ಬಳ್ಳೊಳ್ಳಿ ಕೊಟ್ಟಿದ್ದಂತೆ (ಪುಲಿಪು. ೩೦೦). [< ಬಟಿ$_3$./ತುಳು. ಬಳಿವಳಿ, ಬಳುವಳಿ]

ಬಟಿವಟಿಗೊಡು, ಬಳುವಳಿಕೊಡು, ಬಳುವಳಿಗೊಡು (ಕ್ರಿ). (ವಿಶೇಷವಾಗಿ ಮದುವೆಯಾದ ಹೆಣ್ಣುಮಗಳಿಗೆ ತೌರಿನವರು) ಉಡುಗೊರೆ ಕೊಡು ; ಕೊಡುಗೆ ನೀಡು : ತನ್ನ ಮಗಳಪ್ಪ ಸುಮತಿಗೆ ಬಟಿವಟಿಗೊಟ್ಟು (ವಡ್ಡಾರಾ. ೦೦೮-೨೨); ಆತನ ಬಟಿವಟಿಗೊಟ್ಟ ಮದಕರಿಕರೇಣು ಜಾತ್ಯಶ್ವ ಶಶಿತಾರಹಾರವಸ್ತುಗಳಂ ಕೆಯ್ಕೊಂಡು ದ್ರುಪದಜೆಯನೊಡಗೊಂಡು . . . ಮದಗಜಪುರಮನೆಯ್ದೆವಂದಾಗಳ್ (ಪಪಭಾ. ೪-೪ ಪ); ಅನೇಕನೂತ್ನರತ್ನಾಭರಣಂಗಳುಮಂ ಬಟಿವಟಿಗೊಟ್ಟು ಕಟಿಪುತ್ತುಂ ಬರೆವರೆ(ಪೇಮಿಪು. ೯-೦೦೭ ಪ). **ಬಳುವಳಿಕೊಡು** : ಲಿಂಗಯ್ಯ ತಾನು ಮಗಳಿಗೆ

ಬಳುವಳಿ ಕೊಡಲೆಂದು ತೆಗೆದಿಟ್ಟ ನಗಗಳ ಗಂಟನ್ನು ತೆಗೆದುಕೊಳ್ಳಲು ಮರೆಯಲಿಲ್ಲ (ಹಾಚುತ್ತ. ೯೯). **ಬಳುವಳಿಗೊಡು:** ಉರುತರಮಪ್ಪ ವಸ್ತುವ ಬಳುವಳಿಗೊಟ್ಟು . . . ಕಳುಹೆ ಹರಿಸದಿ ಮದವಕ್ಕಳುಗೂಡಿ ಹಸ್ತಿನಪುರಕೆ ಬಂದನು ಭೀಷ್ಮನೃಪತಿ (ಶಾಂಪಾ. ೭-೮೨). [ಬಟಿವಟಿ + ಕೊಡು$_1$]

ಬಟಿವಟಿಗೊಳ್ (ಕ್ರಿ). ಉಡುಗೊರೆಯಾಗಿ ಸ್ವೀಕರಿಸಂ.— ಪಡೆ: ನಿನ್ನೀ ಪೊಟಲಂ . . . ನಿನ್ನೀ ಕುಲಧನಮನೊಡನೆ ಬಟಿವಟಿಗೊಳ್ವಂ (ಕುಸ್ತಕು. ೬-೬೦). [ಬಟಿವಟಿ + ಕೊಳ್$_1$]

ಬಟಿವಿಡಿ, ಬಳಿವಿಡಿ (ಕ್ರಿ). ಹಿಂದೆ ಹೋಗು; ಹಿಂಬಾಲಿಸು: ನಡೆ ನಟ್ಟ ಕೋಲ ಬಟಿವಿಡಿದೆತ್ತಂ ಸುರಿದುವು . . . ನವರುಧಿರಂಗಳ್ (ಶಂಪಭಾ. ೦೨-೦೪೮); ಇಂದ್ರಾಯುಧದ ಬಟಿವಿಡಿದು . . . ಕುತೂಹಲದಿಂದೆ ಪರಿಜನಂ ಬರುತ್ತಮಿರೆ (ಕಾದಂಕಾ. ೩೪೦); ವೀಣೆಯ ಕೊಟಲ ಬೆದಂಡೆಯ ಗಾಣದ ಬಟಿವಿಡಿದು ಸುಟಿದು . ಬಳಸುವ ನಾಣಿಲಿಗಳನೀ ಬುಧಾಳಿಯೊಳ್ ಪುಗಿಸುವುದೆ (ಸುಕುಮಾ. ೨-೨೯). **ಬಳಿವಿಡಿ:** ನಿನ್ನ ಶರಣರ ಬಳಿವಿಡಿದರೆ ಎನ್ನ ದಂದುಗ ಹಿಂಗುವುದು (ಪಸಪ. ೩೬); ತೀಡುವ ಗಂಧವಹನ ಬಳಿವಿಡಿದು...ಮೊಱೆವ ಮಧುಕರಪ್ರಕರದಿಂ (ಗಿಂಕ. ೨-೬೦ ಪ); ಬಳಿಕ ಸೌಗಂಧಿಕದ ಪವನವ ಬಳಿವಿಡಿದು ನಾ ಬಂದೆ (ಕುಸ್ಕಾಲಿ. ೦೦-೨೩). [ಬಟಿ$_3$ + ಪಿಡಿ$_1$]

ಬಟಿವಿಡು (ಕ್ರಿ). ೧. ದಾರಿಯನ್ನು ಬಿಡು; ಎಡೆಮಾಡಿಕೊಡು: ಸುರರಾ[ಜಿ] ಕೈವಾರದಿಂ ಬಟಿವಿಟ್ಟು ನಮ್ಮನೆ ನೋಡ ನೋಡುವರ್ (ಶಂಪಭಾ. ೦೩ ೪೩). ೨. ಸಾಮೀಪ್ಯವನ್ನು ಬಿಡು; ದೂರ ಹೋಗು: ಬಟಿವಿಡದೆ ಮುಸುಱುವಳಿಗಳ್ ಬಳಗಕ್ಕೇವೈಸಿ ಮುಗುದೆ ಕೆಳೆಯಳ್ ಸರದೊಳ್ ಮುಟುಗಿರ್ದು ನೆಗೆದುವಂ ಕಂಡು (ಕುಸುಮಾ. ೩-೦೪೮). [ಬಟಿ$_3$ + ಬಿಡು$_1$]

ಬಟಿವೋಕ (ನಾ). ದಾರಿಹೋಕ; ಪಥಿಕ, ಪಾಂಥ: ಬಟಿವೋಕರಂ ಕೊಲ್ವ ಕಳ್ವ ದುಱುದುಂಬಿ ಕೊಲೆಗಂಗೆ . . . ಕಾಣಲ್ಬಾರದು (ರಾಮಾಶ್ವ. ೬೯-೨). [ಬಟಿ$_3$ + ಪೋಕ]

ಬಟಿವೋಗು (ಕ್ರಿ). ದಾರಿ ಹಿಡಿದು ಹೋಗು; ಮಾರ್ಗವನ್ನು ಅನುಸರಿಸಿ ಸಾಗು: ಲಲಿತಯಾನವಿಳಾಸದಿನೊಂದೆ ಪೋಪ ಹಂಸೆಗಳನದೊಂದು ತಾಣದೊಳಭೀಕ್ಷಿಸಿ ಮೆಲ್ನಡೆಯಂ ಕಲಲ್ಕೆ ನೆಟ್ಟಗೆ ಬಟಿವೋಗುತಿರ್ದಪುವು ತತ್ಸತಿ ಪೋದಪಳಲ್ಲಿಯೆಂಬುದಂ ಬಗೆದಿರದೆಯ್ದುದಂ (ಕುಸುಮಾ. ೦೯-೦೨೦). [ಬಟಿ$_3$ + ಪೋಗು$_1$ (<ಪೋ$_1$)]

ಬಟಿಸಲ್, ಬಳಿಸಲ್, ಬಳಿಸಲು (ಕ್ರಿ). ಅನುಸರಿಸಿ ಹೋಗು; ಹಿಂಬಾಲಿಸು: "ಬಟಿಸಲ್-ಅನುಗಮನೇ (ಸಮೀಪಕ್ಕೆ ಬರು)" (ಶಪುಧಾ); ಮತ್ತಿನುಟಿದರುಮನುಟಿಯಲೀಯದೆ ಬಟಿಸಂದಾಗಳ್ (ಶಂಪಭಾ. ೦೦-೯ ಪ); ಮೊದಲೊಳ್ತತ್ಸಿನ್ನರದ್ವಂದ್ವದ ಬಟಿಸಲಲೆತ್ತಾನುಮಚ್ಛೋದಮಂ ಸಾರ್ವುದದೆತ್ತ (ಕಾದಂಕಾ. ೩೬೨). **ಬಳಿಸಲ್:** ಜಗತ್ಪ್ರಪಂಚವ ಮಾಡಿ ಆ ಜಗದಲ್ಲಿ ಜೀವರೂಪಿಂದ ಬಳಿಸಂದನೆಂದು ಹೇಳುವ ಶ್ರುತಿಯಂತಿರಲಿ (ಅಪಸ. ೩-೧೦); ಚಿತ್ತಜಕೇಳಿಗೆಂದು ಮತ್ತಗಜಂ ಪರಿವ ಕರಿಣಿಯ ಬಳಿಸಂದು ಬೋಳ್ಳೈಸಿ ಕರಮಂ ನೆಗಪಿ ಕೂಡುವ . . . ಸಮಯದೊಳ್ ತೊಟ್ಟನೆ ಕಂಠೀರವರವಮಂ ಕೇಳಲಾಗೆ (ಗಿಂಕ. ೦-೦೨೬ ಪ); ಹಿಂದಣಂಬುಗಳೆಂಜಲಿಸಿ ಬಳಿಸಂದವುಳಿದಂಬುಗಳೆನಲು ಕವಿದೆಚ್ಚನವನಿವನ (ಕುಸ್ಕಾಶ. ೨-೩೨). **ಬಳಿಸಲು:** ಕಾನನಾಂತರ ಬಳಿಸಲುವರೆನ್ನೊಡನೆ ನೃಪವರರು (ಕುಸ್ಕಾಲಿ. ಕಿಂಬ. ೨೩-೨೯); ಬಳಿಸಲುವ ತುಂಬಿಗಳ ಪಾಡುವ ಗಿಳಿಗಳ. . .ವನಲಕ್ಷುಮಿ ತಲೆದೂಗಿಸಿತು ಸುರರ (ಪಿಭಾಗ. ೯-೩-೦೬). [ಬಟಿ$_3$ + ಸಲ್$_1$]

ಬಟಿಸಲುಹ (ನಾ). ಹಿಂಬಾಲಿಸುವಿಕೆ: "ಅನುಪದಂ, ಅನ್ವಕೆ, ಅನ್ವಕ್ಷಂ — ಈ ೩ ಬಟಿಸಲುಹ" (ಹಲಾಯು. ೦೨೦-೧೬). [ಬಟಿ$_3$ + ಸಲುಹ]

ಬಟುವ (ನಾ). (?): ಮಱೆವುಗೆ ಕಾವ ಚಲದಂಕರಾಮ ನನ್ನಿಯ ಮೇರು ಶಂಕರ ಬಟುವ ಪೋಚಣ್ಣನ ತಮ್ಮ ಶ್ರೀಮದ್ಗಣ್ಡರ ಗಣ್ಡ ನೊಟಂಬಸೆಟ್ಟಿಯುಂ ಪದ್ಮಾವತಿಯಬ್ಬೆಯು ಪರೋಕ್ಷವಿನಯಕ್ಕೆಂದು ಬಿಟ್ಟ ಛತ್ರ (ಸೌಇಇ. IX-I, ೦೩೦-೨೩; ?). [?]

ಬಟ್ಟಿಸು, ಬಳಿಚಿಸು (ಕ್ರಿ). ೧. ಸವರು ತಡವು (?): ಪಟು ವೇಷಧಾರಿಯಾ[ದಂ] ಪಟುಮತಿ ಬಟ್ಟಿಸಿದ ಕಯ್ಯ ಕವಳಿಗೆಯುಂ ಕರ್ಪಟಮುಂಬೆರಸಜ್ಞಾನೋತ್ಕಟಮದನರಮನೆಯ ಬಾಗಿಲೊಳ್ ಬಂದಿರ್ದಂ (ಕಾಂತಿಪು. ೬-೦೨೬). **ಬಳಿಚಿಸು:** ೨. ವಿನಾಯಿತಿ ಕೊಡು; ಲೆಕ್ಕದಿಂದ ಬೇರೆ ಮಾಡು (?): ಯಾ ಹೊಂನಿಗೆ ಬಳಿಚಿಸಿದ ಸ್ಥಳದ ವಿವರ (ಎಕ. VI, ಮೂಡಗೆ. ೪೦-೨೬; 1516). [ಬಟ್ಟು + — ಇಸು$_3$]

ಬಟ್ಟು, ಬಳಚು, ಬಳಿಚು (ಕ್ರಿ). ೧. ಜಾರು; ಹೊರಳು; ನುಣುಚಿಕೊಳ್ಳು: ಸ್ವರ್ಗದಿಂದ ಬಟ್ಟು ಬಂಧಿಲ್ಲಿ. . .ಇಳಾಮಹಾದೇವಿಗೆ ಮಗನಾಗಿ ಪುಟ್ಟುಗುಂ (ಪಡ್ಡಾರಾ. ೦೦೬-೬); ಸಮ್ಯಕ್ತ್ವದಿಂ ಬಟ್ಟಿದರಾದೊಡೆ ಅರ್ಧಪುದ್ಗಲಪರಾವರ್ತನಕಾಲಮಿರ್ಪರು (ಶಾಸ್ತ್ರಪೀ. ೦೨೯-೬). **ಬಳಚು:** ೧. ಕೊರಳುಡಿದು ತೊಡೆಯಕ್ಕುಳಿಸಿ ತೋಳ್ಗಳು ಜರಿದು ಬೆನ್ನೆಲು ಬಳಚಿ ಕೆನ್ನೆತ್ತರು ಸುರಿದು (ಪಿಭಾಗ. ೦೦-೬೬-೯೦). ೨. ಕೊಚ್ಚಿಹಾಕು; ಕತ್ತರಿಸು: ಮೃತ್ಯುವಿನ ಪಾಶದ ಕೊರಳ ಬಳಚಿದೆಂ (ಕುಸ್ಕಾರ್ಪ್ರೋ. ೬-೬೬); ಕೊಲುವುದನುಚಿತವೆಂಬ ನುಡಿಯಿಂದೊಳಗವಳ ನಾಸಿಕವನುದ್ದಕೆ ಬಳಚಿದನು (ಶೊಸರಾ. ೩-೯-೨೬). ೩. ಪರಿಹಾರವಾಗು; ನಿವಾರಣೆ ಹೊಂದು: ಬಂದ ಕಂಟಕ ಬಳ [ಪಾಶಾಂ. ಕಳ. ೪]ಚಿತೇ (ಕುಸ್ಕಾಗ. ೬-೩೩). ೪. ಸವರು; ತಡವು: "ಭಾರವಿದೆ, ಕಂಚಿನ ಮೂರ್ತಿ ಇದ್ದ ಹಾಗೆ ಕಾಣುತ್ತೆ" ಎಂದು ಅರಿವೆಸಹಿತವಾಗಿಯೇ ಅದನ್ನು ಬಳಚಿ ನೋಡಿದರು (ಮೂಕಸ್ಥ. ೨೦೬); ಮೂಲೆಯಲ್ಲಿದ್ದ ಹರಕುಮುರುಕು ಸ್ಫೂಲನ್ನು ಬಳಚಿ ನೋಡುತ್ತ . . . ಅದರ ಮೇಲೆ ಕುಂಡೆಯೂರಿ ಕುಳಿತ (ಮೂಕುದಾ. ೦೬೬). **ಬಳಿಚು:** ೧. ಲೌಕಾಂತಿಕದೇವರಲ್ಲಿಂ ಬಳಿಚಿ ಮನುಷ್ಯರಾಗಿ ಮುಕ್ತರಪ್ಪರು (ಕಸೂಪ್ಯ. ೦೬೬). ೨. ಕೊಲುವ ದುರ್ಜನ ಕಾಲಪಾಶವ ಬಳಿಚಿ[ಪಾಶಾಂ. ಸ] ಬೇಕೆಂಬುವರು . . . ಆಶ್ರಯಿಸುವುದು ಹರಿಗುರುಚರಣಪಂಕಜವ (ಪಿಭಾಗ. ೩-೦೨-೨೩); ಸೀಳ್ದುತ್ತರಿಸಿ ಕೆತ್ತಿ ಖಂಡಿಸಿ ಬಳಿಚಿ ತಿವಿದಿಕ್ಕಿ ಕೊಯ್ದು ಪೊಯ್ದು . . . ಪೊರಳ್ಚಿದುವರಿಚತುರ್ಬಲವನೆಲ್ಲಮಂ ಕರ್ಣಜನಿಸುವ ಕಣೆಗಳು (ಸ್ವಮಾಭಾ. ೯-೯೯). ೪. ಬಳಿವಿಡಿದು ಬಳಿಚಿದಂಬಿಂ ಮುಂದೆ ಹರಿದು (ಹಸಕಾ. ೬-೩೯); ಬಳಿಚಿ ಬಿಟ್ಟೆನು ನಾಯ ಕೊಲ್ಲದೆ . . . ಎನುತುಲಿದು ಕಣೆಗಳ ಕೆದಱ ಕರ್ಣನ ತಱುಬಿದನು ಭೀಮ (ಕುಸ್ಕಾಕ. ೦೩-೩೦).

[ಬಟಲ್ + — ಚು$_1$./ತಮಿ. ಮಲ. ವಟುಕ್ಕು; ತೆಲು. ವ್ರಾಲು. ವ್ರಾಲುಚು. ವ್ರೇಲು]

ಬಟ್ಟು 'ಬಾಟ್ಟು$_1$' ಪರಾ.

Δ **ಬಟ್ಟುಂಕು** 'ಬರ್ದುಂಕು' ನೋ.

ಬಾ$_1$, ಬಾಯು (ಕ್ರಿ). ೧. ಬಾತ (ಭೂತಕೃ), ಬಾತು$_1$ (ಭೂತನ್ಯೂ). ೧. ಊದಿಕೊಳ್ಳು; ಉಬ್ಬು: "ಬಾ — ಶೋಫೇ (ಬಾತುಕೊಳ್ಳು)" (ಶಪುಧಾ); ಆತನಂ ಕಾಣದಿರುಳುಂ ಪಗಲುಂ ನೆನೆದಟ್ಟು ಕಣ್ಗಳ್ ಬಾತಿರ್ಪುವು (ಪಡ್ಡಾರಾ. ೦೬-೨೦); ಪುರಾಕೃತಸಂಕೃತಫಲಂಗಳವು ನೆನೆದನವರತಮಟ್ಟು ಬಾತ ಕಣ್ಗಳುಂ ಚಿಂತಾನಿದ್ರೆಯಿಂ ದರ್ದುರಮಾದ ಮೊಗಮುಂ (ಕಾಂತಿಪು. ೯-೬೯ ಪ); ಕುಸಿಗೊರಲಿಟಿದೆರ್ದೆ ಪೊಱಂಟ ಬೆನ್ ಬಾತ ಬಸಿಱ್ (ಯಶೋಸ. ೨-೩೬). ೨. (ಆಲಂ) ಸಂತೋಷದಿಂದ ಅಥವಾ ಹೆಮ್ಮೆಯಿಂದ ಉಬ್ಬು,—ಗರ್ವಿಸು: ಪುರುಳಿಲ್ಲ

ದಹಂಕಾರದೊಳ್ ಬಾತು ಬಲ್ಮೆಗೆ ಹಾರೈಸುವರೇಕೆ ಬಯಕೆಗವಿಗಳ್ ಕೆಲಬರ್ (ಲೀಲಾವ. ೦-೨೯). ಬಾಯು : 'ಬಾಯಿಸು' ಪರಾ.

ಬಾತುಕೊಳ್, ಬಾತುಕೊಳ್ಳು = ೧. ಊದಿಕೊಳ್ಳು : ನಡೆದು ನಡೆದು ಕಾಲುಗಳು ಬಾತುಕೊಂಡು, ಅಡಿ ಇಡುವುದೇ ಕಷ್ಟವಾಗಿದ್ದಿತು (ಪ್ರಶಾಪ. ೩೩); ಮುಖವೆಲ್ಲ ಬಾತುಕೊಂಡಿತ್ತು (ಶೇಷೋಡ. ೦೦). ೨. (ಆಲಂ) ಬೀಗು; ಗರ್ವಿಸು : ಮನೆಯೊಳ್ಮಯ್ಮೆಗೆ ಬಾತುಕೊಂಡು ಸಿರಿಯೊಳ್ಕಣ್ಗಾದೊಡ್ಡಯ್ಸುವಂ (ಸುಳುಮಾ. ೪-೨೬). ಬಾತು ಹೋಗು = ಊದಿಕೊಳ್ಳು : ನಮ್ಮ ಅಂಗೈಗಳೆಲ್ಲ ಬಾತು ಹೋಗಿವೆ (ರಂಗರೋ. ೦೦).

[ದೇ.॥ ತಮಿ. ಮಲ. ಕೋಲಾ. ನಾಯ್ಕಿ. ವಾಯ್]

ಬಾ$_2$ 'ವರ್' ಪರಾ.

ಬಾಂ$_1$ 'ಬಾನ್$_2$' ನೋ.

ಬಾಂ$_2$ 'ಬಾನ್$_3$' ನೋ.

ಬಾಂಕು$_1$, ಬಾಕು$_2$ (ನಾ). ತುದಿಯಲ್ಲಿ ಸ್ವಲ್ಪ ಬಾಗಿರುವ ಚಿಕ್ಕ ಕತ್ತಿ; ಕಿರುಗತ್ತಿ : ಬಲಗೈಯೊಳು ಬಾಂಕನಾಂತ ನಟನೆಯಿಂದ ಮಲಗಿನ ಮೇಲೊರಗಿರುವ (ಸ್ಥಾನಪ. ೦೯-೦೦೬); ಈ ಜನದ ವೇಷ ಬದಲುಮಾಡಿ ಕಠಾರಿ ಬಾಂಕು ಮುಂತಾದ ವಳಾಯದ ಕೊಟ್ಟು (ರಾಪೇಂದ್ರ. ೩೩). ಬಾಕು$_2$: ಚಿನ್ನದ ಬೆಳ್ಳಿಯ ಪಕ್ಕರೆಗಟ್ಟಿದ ರನ್ನದ ಬಾಕು ಕಯ್ಯಂಬು ಹೊನ್ನ ಚೂಡಾಯತ ಮೆಱೆಯೆ ಬಂದರು ಕೂಡೆ ಕನ್ನಡ ರಾಯರಾವುತರು (ಕುರಾಸಾಂ. ೦೦-೨೧); ಸಾಯದರಿಲ್ಲ ಖಂಡೆಯದ ಪೆಟ್ಟಲಿ ನೆಱೆ ನೋಯದರಿಲ್ಲ ಬಾಕಿನಲಿ (ಕಂಪಪಿ. ೦೩-೪೮); ಕಟ್ಟಿದ ಕಾಸೆ ಚಿಮ್ಮುರಿ ಬಾಕು ತ್ರಿಶೂಲ (ಬಿಷ್ಟರಾ. ೬-೩೩). 'ಬಾಕು' ಪರಾ.

[←ಹಿಂ. ಬಾಂಕ್; ಮರಾ. ಬಾಂಕ್, ಬಾಕ್]

ಬಾಂಕು$_2$, ಬಂಕ್ಕ, ಬಾಕು$_3$ (ನಾ). ೧. ಸಾಲಾಗಿ ನಾಲ್ಕಾರು ಜನ ಕಾಲು ಇಳಿಬಿಟ್ಟು ಕುಳಿತುಕೊಳ್ಳಬಹುದಾದ, ಮರ, ಕಲ್ಲು ಅಥವಾ ಲೋಹದಿಂದ ತಯಾರಿಸಿದ ಆಸನ ; ಬೆಂಚು : ವೆಂಕಟರಮಣ . . . ಮೂಲೆಯಲ್ಲಿಯ ಕಟ್ಟಿಗೆಯ ಬಾಂಕೊಂದರ ಮೇಲೆ ಹೋಗಿ ಕುಳಿತ (ಮೂರುದಾ. ೦೭೩). ಬಂಕ್ಕ : ೨. ಮನೆಯ ಮುಂದೆ ಇರುವ ಜಗುಲಿ : ಆ ಸನ್ಯಾಸಿಯು ಹೋಗಿ ಒಂದು ಬಂಕದಲ್ಲಿ ನೆಲದ ಮೇಲೆ ತನ್ನ ಹುಲಿದೊಗಲು ಹಾಸಿ . . . ಅಡ್ಡಾದನು (ಮುಂಬಯಿ. ೯-೦೩೦); ಪಟೇಲರು . . . ಮನೆಯ ಮುಂದಿನ ಬಂಕದಲ್ಲಿಯೇ ಕುಳಿತಿದ್ದರು (ರಿಪಸಿ. ೬೬). ೩. ಎತ್ತರವಾದ ವೇದಿಕೆಯುಳ್ಳ ಮಂಟಪ : ಆ ಬಂಕಗಳಲ್ಲಿ ಒಂದೊಂದು ಈಶ್ವರಲಿಂಗವೂ ಮುಂದೆ ನಂದಿಕೇಶ್ವರನೂ ಇದ್ದಾರೆ (ಹಬ್ಬಿಬ. ೯). ೪. ಎತ್ತಿನ ಗಾಡಿಯಲ್ಲಿ ಹುಲ್ಲು ಹೇರಲು ಅನುಕೂಲವಾಗುವಂತೆ ಬಗ್ಗಿಸಿ ಕಟ್ಟಿದ ಗಳು : ಭಾರಿ ಹುಲ್ಲು ಹೇರಿದ ಈ ಬಂಕದ ಗಾಡಿ ಎಳೆಯಲು ಎತ್ತಿಗೆ ಬಹು ಕಷ್ಟ (ಕೂಡಿ). ಬಾಕು$_3$: ೧. ಬಾಗಿಲಿನಿಂದ ಬರಲು ಎಡಗಡೆಗೆ ಒಂದು ದೊಡ್ಡ ಬಾಕು (ಉದಪ್ಯ. ೩೩); ಇಬ್ಬರೂ . . . ಬಾಕಿನ ಮೇಲೆ ಕುಳಿತರು (ಕಕ್ಷರ್ಯ. ೨೯) ; ಎದುರು ಬಾಕಿನ ಮೇಲೆ ರೂಪಾ ಕುಳಿತಿದ್ದಳು (ಇಯಂತ. ೪೯). [←ಇಂ. Bank = ಬೆಂಚು. / ತುಳು. ಬಾಂಕು. / ಪೋರ್ಚು. ಬಂಕೋ ; ಸ್ವೀಡಿಶ್. ಜರ್ಮನ್. ಬಾಂಕ್. /ಮರಾ. ಬಾಂಕ್]

ಬಾಂಕು$_3$ 'ಬಾಂಗ$_1$' ನೋ.

ಬಾಂಕು$_4$ 'ಭಾಂಕಿ' ನೋ.

ಬಾಂಗ$_1$, ಬಾಂಕು$_3$ (ನಾ). ೧. ಗಟ್ಟಿಯಾದ ಕೂಗು. ೨. ಮುಲ್ಲಾನು ಮಸೀದಿಯಲ್ಲಿ ನಿಂತು ನಮಾಜು ಮಾಡಲು ಮುಸಲ್ಮಾನ ಜನರನ್ನು ಕರೆಯುವ ಕೂಗು : "ಬಾಂಗೀ"ಗಳು 'ಬಾಂಗ' (ಭಗವದಾಹ್ವಾನ) ಮಾಡಿದ ಕೂಡಲೆ ಎಲ್ಲರೂ ಮೊಣಕಾಲೂರಿ ಭಕ್ತಿಪುರಸ್ಸರವಾಗಿ ಪ್ರಾರ್ಥನೆ ಮಾಡಿದರು (ಶಿರಂಗ. ೨೬). ಬಾಂಕು$_3$: ೨. ಮುಸಲ್ಮಾನಜನರು ಸಂಜೆ ಮುಂಜಾನೆಗಳಲ್ಲಿ . . . ಜನರನ್ನು "ಬಾಂಕು" ಕೊಟ್ಟು ಕರೆಯುವಂತೆ ಕ್ರಿಶ್ಚನರು ಉನ್ನತ ಕೊತ್ತಳಗಳನ್ನು ವಿರಚಿಸಿ, ಅವುಗಳಲ್ಲಿ ಘಂಟೆಯನ್ನು ಇರಿಸಿ ಬಾರಿಸತೊಡಗಿದರು (ಬಾಂಪ್ರ. II, ೦೦೬೨).

[← ಪಾರ. ಹಿಂ. ಬಾಂಗ್. / ತುಳು. ಬಾಂಕು, ಬಾಂಗ್, ಬಾಂಗ, ಬಾಂಗು]

ಬಾಂಗ$_2$ (ನಾ). ಅಫೀಮು ಬೆರಸಿ ತಯಾರಿಸಿದ ಒಂದು ಬಗೆಯ ಮಾದಕ ಪೇಯ : ಮಸಾಲ್ ಹಾಲು ಎಂದು ಹೇಳಿ ಒಂದು ರೀತಿಯ 'ಬಾಂಗ' ಮಾಡಿಕೊಟ್ಟಿದ್ದನು (ಇತಿಶ್ರೀ. ೦೯೭). [←ಹಿಂ. ಮರಾ. ಭಾಂಗ್]

ಬಾಂಗಡಲ್ (ನಾ). (ಆಲಂ) ಆಕಾಶದ ನದಿ ; ದೇವನದಿ : ಬಡಬಾಸೆಯೆಂಬ ಜಗುನೆಯೊಳೊಡವೆರೆಯಲ್ಕುಚಹಿಮಾದ್ರಿಯಿಂದೈದುವ ಬಾಂಗಡಲೆನೆ ಹಿಮಾಂಬು ಪೊಸ ಪೊಂಗೊಡದಿಂ ವಧು ಸೂಸೆ ಸುರಿವುತುಂ ಸೊಗಯಿಸುಗುಂ (ರಾಜಶೇ. ೧೦-೬೨). [ಬಾಂ$_2$ (<ಬಾನ್$_3$) + ಕಡಲ್$_2$]

ಬಾಂಗಡಿ (ನಾ). ಕೈಬಳೆ ; ಕಂಕಣ : ವಿಜಾಪುರದ ಬಾದಶಹನು ತನ್ನ ಮಗಳ ಬಳೆಯ (ಬಾಂಗಡಿಗಳ ವೆಚ್ಚಕ್ಕಾಗಿ ಬಾಗಲ್‌ಕೋಟೆಯನ್ನು ಹಚ್ಚಿ ಕೊಟ್ಟದ್ದರಿಂದ ಇದಕ್ಕೆ "ಬಾಂಗಡೀ ಕೋಟ್" ಯೆಂಬ ಹೆಸರು ಬಂತೆಂದು ಹೇಳುತ್ತಾರೆ (ಕಥಾಗ. ೩೨೩). [← ಮರಾ. ಬಾಂಗಡೀ]

ಬಾಂಗಡೆ (ನಾ). ೧. ಆಕಾಶದ ಕೊನೆ. —ಅಂಚು. —ತುದಿ : ಕಾಣಬಹುದು ಕಾಳಾಹಿಯ ಹಜ್ಜೆಯ ಕಾಣಬಹುದು ಬಾಂಗಡೆಯ (ಪ್ರಶಂಪ. ೩-೩೬). ೨. ಆಕಾಶದ ಭಾಗ ; ನಭಸ್ಥಳ : ಬಾಂಗಡೆಯ [ಯಿ] ನಿಳಿತಂದೆಱಗಿ ನೃಪಸಿಂಗ ಗಜವ ನಿರಂಕುಶದಿನಾಳ್ದಂಗವಿದು ಲೇಸೆನುತಲೀರ್ವರು ನೃಪನ ಪೊಗಳಿದರು (ಸಾಳ್ವಭಾ. ೦೬-೦೩). [ಬಾಂ$_2$ (<ಬಾನ್$_3$) + ಕಡೆ$_3$]

ಬಾಂಗರೆ (ನಾ). ಆಕಾಶದ ಅಂಚು ; ದಿಗಂತ ; ಕ್ಷಿತಿಜ : "ದಿಗಂತ ; ಕ್ಷಿತಿಜ ; ಬಾನಂಚು, ಬಾಂಗರೆ" (Horizon. ಇಂಕಿ).

[ಬಾಂ$_2$ (< ಬಾನ್$_3$) + ಕರೆ$_4$]

ಬಾಂಗಳ (ನಾ). ಕಲ್ಲಿನ ಗುಹೆ : ಕೆರೆಯ ಮೂಲೆಯ ಕಾಡನ್ನು ಹೊಕ್ಕು ಬಾಂಗಳದಿಂದ ತುಸು ದೂರದಲ್ಲಿಯೇ ... ಕಾಡು ಕುಳಿತರು (ಶ್ಯಾಗಮ. ೩೬); ಬಾಂಗಳದಿಂದ ಹುಲಿ ಹೊರಟು ಬರುವಲ್ಲೇ ಅಡಗಿ ಕುಳ್ಳಿರಲು ಸರಿಯಾದ ಜಾಗವಿರಲಿಲ್ಲ (ಶ್ಯಾಗಮ. ೩೬). [?]

ಬಾಂಗಿ 'ಭಾಂಗಿ' ನೋ.

ಬಾಂಗೀ (ನಾ). ಮಸೀದಿಯಲ್ಲಿ ನಿಂತು, ನಮಾಜಿನ ಕರೆ ಕೊಡುವ (ಇಸ್ಲಾಂ) ಮುಲ್ಲಾ : 'ಬಾಂಗೀ'ಗಳು 'ಬಾಂಗ' (ಭಗವದಾಹ್ವಾನ) ಮಾಡಿದ ಕೂಡಲೆ ಎಲ್ಲರೂ . . . ಪ್ರಾರ್ಥನೆ ಮಾಡಿದರು (ಶಿರಂಗ. ೨೬).

[<ಬಾಂಗ$_1$]

ಬಾಂಗುಳಿಗೆ (ನಾ). ಆಕಾಶದಲ್ಲಿರುವ ಚಿಕ್ಕಚಿಕ್ಕ ಗ್ರಹ ; ಕ್ಷುದ್ರಗ್ರಹ: ಒಂದುವಲಯದಲ್ಲಿ ನೂರಾರು ಕ್ಷುದ್ರಗ್ರಹಗಳು ಹರಡಿರುವುದನ್ನು ಜ್ಯೋತಿಷ್ಕರು ಕಂಡುಹಿಡಿದಿರುವರು. ಈ ತೆರನಾದ ಬಾಂಗುಳಿಗೆಗಳು ಬರಿಯ ಕಣ್ಣಿಗೆ ಕಾಣವು (ಸ್ಕೋತಿರ್ಜ. ೦೨೮). [ಬಾಂ$_2$ (< ಬಾನ್$_3$) + ಗುಳಿಗೆ$_1$]

ಬಾಂಗುಟಿ, ಬಾನಂಗುಟಿ$_1$ (ನಾ). ಆಕಾಶದ ಕುಳಿ. —ಗರ್ತ : ಮಿಾನಂಬುಟು, ಮಿಾಂಬುಟು, ಬಾನಂಗುಟಿ, ಬಾಂಗುಟಿ, ಕಣ್ಣಂದೊಟಲಿ, ಕಣ್ದೊಟಲಿ (ಶಿಷ್ಟಾಪು. ೩೪೬ ಪ್ರಯೋ). ಬಾನಂಗುಟಿ$_1$: ಮೇಲಿನ ಪ್ರಯೋಗವನ್ನು ನೋಡಿ. [ಬಾಂ$_2$ (<ಬಾನ್$_3$) + ಕುಟಿ$_2$]

ಬಾಂಗೂದಲ (ನಾ). ಆಕಾಶವನ್ನೇ ತಲೆಯ ಕೂದಲನ್ನಾಗಿ ಉಳ್ಳವನು; ವ್ಯೋಮಕೇಶ : ಶಿವ: ಅರೆಗೆಂಪಿಡಿದ ಮಾಡಿದ ಜಡೆಮುಡಿ ಬಾಂಗೂದಲನ ಕಪರ್ದಮಂ ಕೀಟ್ಮೂಡೆ (ರಾಮಾಶ್ವ. ೦೩೯-೬).

[ಬಾಂ$_2$ (< ಬಾನ್$_3$) + ಕೂದಲ್ (< ಕೂಂದಲ್) + — ಅ$_7$]

ಬಾಂಚೋತ್ (ನಾ). ತನ್ನ ಅಕ್ಕನೊಡನೆ ಅನೈತಿಕಸಂಬಂಧವಿಟ್ಟು ಕೊಂಡವನು ಎಂಬ ಅರ್ಥದಲ್ಲಿ ಬಳಸುವ ಒಂದು ಬೈಗುಳು.

[← ಹಿಂ. (ಬಹನ್ + ಚೂತ್)]

ಬಾಂಜಗುನೆ (ನಾ). (ಆಲಂ) ಆಕಾಶದಲ್ಲಿರುವ ಯಮುನೆ ; ಆಕಾಶನದಿ; ದೇವನದಿ : ಬಾಂಜಗುನೆಗೆ ನೆಗೆದುವೊ ನೊರೆಯೆನೆ ಬಗೆಗೊಂಡುವು ಬಾನೊಳೊಗೆದ ಬಿಳಿಯ ಮುಗಿಲ್ಗಳ್ (ಲೀಲಾವ. ೫-೨೨).

[ಬಾಂ$_2$ (<ಬಾನ್$_3$) + ಜಗುನೆ (<ಜಮುನೆ)]

ಬಾಂಜೊಡರ್ (ನಾ). ಆಕಾಶದ ದೀಪ,-ಸೊಡರು ; ಸೂರ್ಯ : ಬಾಂಜೊಡರಿದಿರರಿಸಿನ ಹರೆಯಂ (ಜಯಕಾ. ೦೩-೩೬).

[ಬಾಂ$_2$ (<ಬಾನ್$_3$) + ಸೊಡರ್]

ಬಾಂಡ್ 'ಬಾಂಡು' ನೋ.

ಬಾಂಡಲಿ 'ಬಾಣಲಿ' ನೋ.

ಬಾಂಡಲೆ 'ಬಾಣಲಿ' ನೋ.

ಬಾಂಡವಲು 'ಬಂಡವಾಳ' ನೋ.

ಬಾಂಡವಲುಶಾಹಿ 'ಬಂಡವಾಳಶಾಹಿ' ನೋ.

ಬಾಂಡು, ಬಾಂಡ್ (ನಾ). ೧. ಒಡಂಬಡಿಕೆಯ ಪತ್ರ ; ಕರಾರುಪತ್ರ : ಕೆಲವರು ತಾವಿರುವ ನಾಟಕಕಂಪನಿಯ ಯಜಮಾನನಿಗೆ ಬಾಂಡು ಬರೆದು ಕೊಟ್ಟಿರುವುದರಿಂದ ಬರುವದಾಗುವದಿಲ್ಲವೆಂದು ಹೇಳಿದರು (ಗಂಗಾಸಾ. ೭೦) ; ತಿಂಗಳೊಂದಕ್ಕೆ ೭೫ರೂ ಕೊಡುವ ಕರಾರ ಮಾಡಿ ೬ ವರ್ಷದ ಬಾಂಡು ಬರೆಯಿಸಿಕೊಂಡರು (ರಾಸಹು. ೬). ೨. ಸಾಲಪತ್ರ : ಒಂದರ ಬಾಂಡುಗಳನ್ನೂ ಸ್ಟಾಕುಗಳನ್ನೂ ಇನ್ನೊಂದು ಕಂಪನಿಯ ಮಾಲಿಕರೂ ಚಾಲಕರೂ ಕೊಂಡಿಟ್ಟುಕೊಂಡರೆ ಇದರ ಮೇಲಿನ ಅಧಿಕಾರವೆಲ್ಲ ಅವರ ಕೈಗೆ ಸಾಗುವುದು ತಾನೇ ! (ಹಣಪ್ರ. ೦೨೯). **ಬಾಂಡ್** : ೧. ನೀವು ಒಂದು ವರುಷದವರೆಗಾದರೂ ಇರುವದಾಗಿ 'ಬಾಂಡ್' ಬರೆದುಕೊಡಬೇಕು (ಪಸು. ೦೬೫). ೩. ದಸ್ತೈವಜುಗಳನ್ನು ಬರೆಯುವುದಕ್ಕೆಂದು ತಯಾರಿಸಿದ ಒಂದು ಬಗೆಯ ಉತ್ತಮವಾದ ಕಾಗದ : ಯಂತ್ರದಲ್ಲಿ ಕಾಗದವನ್ನು ತಯಾರಿಸುವಾಗ 'ಸೈಜ್' ಅನ್ನು ಸೇರಿಸಿ, ಬಾಂಡ್, ಲೆಡ್ಜರ್, ಇಂಡೆಕ್ಸ್ ಮೊದಲಾದ ಕಾಗದಗಳನ್ನು ತಯಾರಿಸುವರು (ಶುದ್ರಕ. ೬೦).

[←ಇಂ. Bond]

ಬಾಂಡ್ಲಿ 'ಬಾಣಲಿ' ನೋ.

ಬಾಂಡ್ಲೆ 'ಬಾಣಲಿ' ನೋ.

ಬಾಂದಲೆಯ (ನಾ). ಆಕಾಶವನ್ನೇ ತಲೆಯಂ ಕೂದಲನ್ನಾಗಿ ಉಳ್ಳವನು; ವ್ಯೋಮಕೇಶ ; ಶಿವ : ಪುಷ್ಪಂಬನೊಡಲುರಿಕ ಬಾಂದಲೆಯ ಯೆಲುಗೊರಲಯಡಿಗಣ್ಣ ಕಿಚ್ಚಚ್ಚಿಗನೆ (ಸಪಸೋ. ೩೩-೦).

[ಬಾಂ$_2$ (<ಬಾನ್$_3$) + ತಲೆ$_1$ + -ಅ$_7$]

ಬಾಂದಳೆ (ನಾ). ಆಕಾಶ ; ಗಗನ : ಬಿಸಿಲ್ ಬಾಂದಳನೊಡವುಟಿಯಲ್ . . . ಎಸೆದಂ ಪದ್ಮಿನೀಜೀವಿತೇಶಂ (ಕಾದ್ಯಟ. ೦೦-೦೪) ; ಮೋಸದೊಳ್ತು ರಗಮಂ ಕೊಂಡು ಬಾಂದಳಕಡರ್ದೊಡೆ ನಿನ್ನನು ಉಳುಹುವರೆ ಯೌವನಾಶ್ವನ ಸುಭಟರು (ಸ್ವಪಿಶಾ. ೪-೦೫); ಬಾಂದಳದ ಕರುಮಾಡದಲ್ಲಿ ಚಿಕ್ಕೆವೆಣ್ಣುಗಳು ನೆರೆದು ಇಳೆಯ ಸೊಬಗನ್ನು ದಿಟ್ಟಿಸುತ್ತಿದ್ದುವು (ರೂಮಸು. ೫೦).

[ಬಾಂ$_2$ (<ಬಾನ್$_3$) + ತಳ (=ತಲ)]

ಬಾಂದಿ 'ಬಾಂದೀ' ನೋ.

ಬಾಂದೀ, ಬಾಂದಿ (ನಾ). ಸೇವಕಿ; ದಾಸಿ : ಇಬ್ಬರು ಅರಸತಿಯರನ್ನೂ ವೀರರಾಜೇಂದ್ರಒಡೆಯರವರ ಬಲ ಅಣ್ಣನ ಮಗ ಒಬ್ಬರನ್ನೂ ಎರಡು ಜನ ಬಾಂದೀರನ್ನೂ ಅಂಬಿನಿಂದ ಇಟ್ಟು ಕೊಂದು ಹಾಕಿ (ರಾಸೇಂದ್ರ. ೨೭). **ಬಾಂದಿ** : ಈ ಹುಡುಗಿಯು . . . ಮನೆಯಲ್ಲಿ ಚಾಕರಿ ಮಾಡುವ ಬಾಂದಿಗಳಲ್ಲಿ ಹೆಚ್ಚು ಮಾತನಾಡುತಿರಲಿಲ್ಲ (ಮಾಪುರಾ. ೭೭).

[←ಹಿಂ. ಮರಾ. ಬಾಂದೀ ; ಪಾರ. ಬಂದಹ್]

ಬಾಂದೀತನ (ನಾ). ಚಾಕರಿ; ಸೇವೆ : ಬಾಂದೀತನಕ್ಕೆ ಆಸಾಮಿಯನ್ನು ಚೋರಿ ಮಾಡೋಣ (ಗ್ರಾಮಾಕ. ೦೯೪). [ಬಾಂದೀ + — ತನ]

ಬಾಂದು 'ಬಂದ್ಯು' ನೋ.

ಬಾಂದುಕಲ್ಲು (ನಾ). (ಭೂಮಿಯ) ಗಡಿಯನ್ನು ಗುರುತಿಸಲು ನಿಲ್ಲಿಸಿರುವ ಕಲ್ಲು : ಗಡಿಕಲ್ಲು : ಬಾಂದುಕಲ್ಲುಗಳೆಂದರೇನು ? (ರೂಮಿಲಿ. ೨೩); ಆಕೆಗೆ ತಾಗಿದ ಆ ಕಲ್ಲು ಅಣ್ಣತಮ್ಮಂದಿರನ್ನು ಬೇರ್ಪಡಿಸಿದ, ದೂರವಾಗಿಸಿದ 'ಬಾಂದು' ಕಲ್ಲಾಗಿತ್ತು (ಬರಹಾ. ೦೪೦) ; ಮೋಜಿನೀದಾರರನ್ನು ಕರೆಸಿ, ಅಳತೆ ಮಾಡಿಸಿ, ಸರಿಯಾದ ಸ್ಥಳಕ್ಕೆ ಬಾಂದುಕಲ್ಲು ನಡೆಸಿದ್ದನವನು (ಅಪಾಮಿ. ೫೩).

[ಬಾಂದು (<ಬಂದ್ಯು) + ಕಲ್ಲು (<ಕಲ್$_3$)]

ಬಾಂದೇರ್ (ನಾ). ಆಕಾಶದಲ್ಲಿ ಸಂಚರಿಸುವ ವಿಮಾನ : ಲೆಕ್ಕಿಪನೆ ಲಂಕೇಶ್ವರಂ . . . ಹಾರಿದನು ಬಾನ್ದೇರನೇರಿ (ಶ್ರೀರಾಮಾ. ೨೪೭-೫೨೭).

[ಬಾಂ$_2$ (<ಬಾನ್$_3$) + ತೇರ್$_2$]

ಬಾಂದೊರೆ 'ಬಾಂದೊಱೆ' ನೋ.

ಬಾಂದೊಱೆ, ಬಾಂದೊರೆ (ನಾ). ಆಕಾಶದ ನದಿ ; ದೇವಗಂಗೆ : "ದೇವತಾಗಂಗೆಯೊಳ್ ಬಾಂದೊಱೆ" (ಕರ್ಣಾನಿ. ೪೦) ; ಕಱೆಗೊರಲಾತಂ . . . ಬಾಂದೊಱೆಯನೆ ಪೊತ್ತು ಕ[ವ]ಲ್ದೊಱೆ[ಗೆಯ್ಸಿ]ದನೀ ಪ್ರದೇಶದೊಳ್ (ಪಂಪಭಾ. ೬-೭೫) ; ತೊಱೆಗಳೆಲ್ಲಂ ಬಾಂದೊ [ಪಾಠಾಂ. ಪಾಲ್ದೊ]ಱೆಯೆನಿಸೆಯುಂ (ಅಜಪು. ೪-೬೭ ಪ) ; ಬಾಂದೊಱೆಯಂ ಪೊತ್ತಿರ್ಪ್ಪನಗಜೆಯೊಳ್ಕೂಡಿಪ್ಪಂ (ಸಮಪ. ೬-೫೬). **ಬಾಂದೊರೆ** : ಬೊಮ್ಮಯ್ಯ ಭಕ್ತಿಯ ಬಾಂದೊರೆಯಲ್ಲಿ ಮಿಂದು ಆನಂದತುಂದಿಲನಾದ (ಶರಸ. ೭೭).

ಬಾಂದೊಱೆದಲೆಯ = ತಲೆಯಲ್ಲಿ ಗಂಗೆಯನ್ನು ಧರಿಸಿದವನು ; ಶಿವ : ಆ ಬಾಂದೊಱೆದಲೆಯನ ಸಾಪಂದಳೆದು ಬಂದು ನೀನೀ ಪೂವಿನ ಪೊಟಲೊಳ್ ನನೆಯಂಬನೆಂಬರಸಾದೆ (ಕಬ್ಬಿಕಾ. ೩೦೯) ; ಬಾಂದೊಱೆದಲೆಯನ ಮೊಗಕೊಂದರಲ್ ಮಱೆಯಾಗೆ ಕೆಂದಿ ಕುಂದುತ್ತೆ (ಪದ್ಮರಾ. ೭-೩೨). **ಬಾಂದೊಱೆಯ ಮಗ**=ಗಂಗಾದೇವಿಯ ಮಗ ; ಭೀಷ್ಮ : ಅಱನ ಮಗಂ ಪ್ರಾರ್ಥಿಸೆ ಬಾಂದೊಱೆಯ ಮಗಂ ಮಾಡೆ ಸಂಧಿಯಾದಪುದೆನುತುಂ ಮಱುಗುವೆಂ (ಗದಾಯು. ೦-೭೨). **ಬಾಂದೊಱೆಯ ಸುತ** = ಬಾಂದೊಱೆಯ ಮಗ : ಚಂದ್ರಹಾಸದ ಕೂರ್ಪಿನೊಳಂ ರುದ್ರನ ಕಾಯ್ಪಿನೊಳಂ ನೆರೆದು ಬಾಂದೊಱೆಯ ಸುತನೊಡ್ಡಿ ನಿಲೆ (ನೇಮಿಪು. ೦೨-೬೮ ಪ). [ಬಾಂ$_2$ (< ಬಾನ್$_3$) + ತೊಱೆ$_2$]

ಬಾಂಧವ (ನಾ). ೧. ನಂಟ ; ಸಂಬಂಧಿಕ : ಬಾಂಧವರನಿಱಿಸಿ . . . ನಮ್ಮಂಧನರೇಂದ್ರನ ಮೊಗವಂ ಗಾಂಧಾರಿಯ ಮೊಗಮನಾವ ಮೊಗದೊಳೆ ನೋಟ್ಟೆಂ (ಗದಾಯು. ೩-೭೦); ಅಪತ್ಯ ಭೃತ್ಯಬಾಂಧವಾಂತಃಪುರಪುರಸ್ಸರಯುರಗೇಶ್ವರ ಸಮುದ್ರಮಂ ಪೋಗಿ ಪುಗು (ಜಗನಿ. ೩-೦೦೪ ಪ) ; ಒಲಿದು ತನ್ನೊಡವುಟ್ಟು ಸೊಸೆ ಮಗಳೆಂದೆಂಬ ಪಲರು ಮುನ್ನಿನ ಬಾಂಧವರು . . . ತಂತಮ್ಮಿಷ್ಟ ಫಲವ ಪಡೆವರೆನ್ನಿಂದಂ (ಹದಿಬಿ. ೦-೪೦); ಹೊನ್ನನು ತನ್ನ ತಂದೆಗಾಗಿಯೂ ಬಾಂಧವರಿಗಾಗಿಯೂ ಮಾಡಿದ ಆಚರಣೆಯು ಆ ದೇಶದ ಅರಸನಿಗೆ ತಿಳಿಯಲು . . . ಬಹಳ ಕೌತುಕವಾಯಿತು (ಮುಂಬಿಯಿ. ೪-೭೬). ೨. ಗೆಳೆಯ; ಮಿತ್ರ. ೩. ಗೆಳೆತನದಿಂದ ಮಾಡುವ ಕಾರ್ಯ : ವಿಶ್ವಲೋಕವಿಭುಗೊರ್ವಂ ಭೂಪನಾತ್ಮೀಯ ಭೂಲವಮಂ ಕೊಟ್ಟಭಿಷೇಕಮಂ ನೆಗಟ್ಟೆನೆಂದಂ ಮರ್ತ್ಯವೇಷಂಗೆ ಬಾಂಧವವಂ ತೋಱಲೆ ಬಲ್ಲನೇಕಱಿಗುಮಜ್ಞಂ ವಿಷ್ಣುಸಾಮರ್ಥ್ಯಮಂ (ಜಗನಿ. ೬-೯೮). ೪. ಒಡಹುಟ್ಟಿದವನು; ಸಹೋದರ.

[ಸಂ.]

ಬಾಂಧವಕೃತ್ಯ (ನಾ). ಹಿರಿಯರಾದವರು ತಮ್ಮ ಸಂಬಂಧಿಕರಿಗೆ ಮಾಡುವ ಸಹಾಯ, ಸಲಹೆ ಮೊದಲಾದ ಕಾರ್ಯ: ಬಂಧುಗಳು ಮಾಡುವ ಕಾರ್ಯ : ವೈಭವಂಬಡೆದಿರೆ ಬಂದು ಸಂದಣಿಪ ಬಂಧುಗಳಿರ್ಕ ಸಮಂತು ನಿನ್ನೊಳಾದೊಡೆ ಕೊನೆಗಂಡುದೈ ಪ್ರಜೆಯ ಬಾಂಧವಕೃತ್ಯಂ (ಶಾಕುಂತ. ೬೩-೦೦೬). [ಸಂ.]

ಬಾಂಧವ್ಯ (ನಾ). ೧. ನಂಟು ; ನಂಟಸ್ತಿಕೆ ; ಸಂಬಂಧ : ಈಗಲೂ ಕಾಸಕ ಮನೆತನಗಳು ಬೆಚನ್‌ಗಳೊಂದಿಗೆ ಬಾಂಧವ್ಯವನ್ನು ಹೇಳಿಕೊಳ್ಳುತ್ತವೆ (ಸುಲೆಪಾ. ೨೦); ವಿಂತ್ರರ ಸ್ನೇಹವು ಬಾಂಧವ್ಯವಾದರೆ ಮತ್ತಷ್ಟು ಹಿತವನು ತರದೆ (ಇಂಪಾಪ. ೨೦೫-೦೫). ೨. ಕೆಳೆ ; ಸ್ನೇಹ ; ಮೈತ್ರಿ : ಇಲ್ಲಿ ಕಂಡು ಬರುವ ಜಾತಿ, ಮತ, ಕುಲ, ಗೋತ್ರ, ಭಾಷೆ — ಇವುಗಳ ಭಿನ್ನತೆ ನಮ್ಮ ನಮ್ಮ ಬಾಂಧವ್ಯವನ್ನು ಸಡಿಲಿಸುತ್ತಿದೆ (ಶಿಕ್ಷದ. ೨೪). ೩. ಸೋದರತೆ ; ಬಂಧುತ್ವ ; ಜ್ಞಾತಿಸಂಬಂಧ : ಭಾಷೆಗಳ ಬಾಂಧವ್ಯವನ್ನು ಪ್ರಕಟಗೊಳಿಸುವ ಅಳತೆಗೋಲು ವ್ಯಾಕರಣ (ದ್ರಾವಿವಿ. ೦೯ ಓನ್ನೆಲೆ). [ಸಂ.]

ಬಾಂಬ್ 'ಬಾಂಬು' ನೋ.

ಬಾಂಬ$_1$ (ನಾ). ೧. ಮಡಿಕೆ, ಕುಡಿಕೆಗಳನ್ನು ಮಾಡುವವನು ; ಕುಂಬಾರ: "ಬಾಂಬರ್ ಕುಂಬಱರ್ (ಕುಱುಂಬರ್)" (ಶಮದ. ಸರಿ. ೨); "ಬಾಂಬರ್ಕಳಾ ಕುಂಬಱರ್" (ಕರ್ಣಾವಿ. ೬೩) ; ಆ ಮಹಾಪಶಾಧವನ್ನು ನಡೆಯಿಸುವ ಜಡತ್ವವು ದೃಷ್ಟತೆಯ ದುಷ್ಕೃತವು ಬಾಂಬನೆನಿಸಿರುವ ನಾದರೂ, ಆ ಬ್ರಹ್ಮನಿಗೆ ಸಾಧ್ಯವೆ ? (ಮಂತ್ರಶ. ೯೦-೬). ೨. (ಆಲಂ) ಹೆಡ್ಡ ; ದಡ್ಡ: ತಾನೊರ್ವನೆ ಜಗಕ್ಕೆ ಗಂಡಂ, ಮಿಕ್ಕುಱಿದರೆಸುಗಳೆಲ್ಲರ್ ಬಾಂಬರೆಂದೆ ಬಗೆವಂ ರಾಮಂ (ರಾಮಾಶ್ವ. ೦೨೫-೨).

[ಬಾಂ$_1$ (< ಬಾನ್$_2$) + — ಬ$_2$]

ಬಾಂಬ$_2$ (ನಾ). ಸ್ವರ್ಗಲೋಕದವನು ; ದೇವತೆ : ಸ್ಯೂಸೆಂದುಂ ಬಾಂಬರನ್ ಅಳದಿರ್ಕೆಂದು ಚಲುಬಿಡಿದು ತಱಿಸಂದರರೆಬರ್ (ಇಧ್ಯಪ್ರ. ೦೨-೨೪೫).

ಬಾಂಬರೆಱಿಯ = ದೇವತೆಗಳ ಒಡೆಯ ; ದೇವರಾಜ : ಪಿರಿಯ ಬಾಂಬರೆಱಿಯನಿವನ್ . . . ಎನ್ನನಿಱಿಯುತಿರ್ಪವನ್ (ಇಧ್ಯಪ್ರ. ೦೦-೨೦೫).

[ಬಾಂ$_2$ (< ಬಾನ್$_3$) + — ಬ$_2$]

ಬಾಂಬಟ್ಟೆ 'ಬಾನ್ಬಟ್ಟೆ' ನೋ.

ಬಾಂಬಟ್ಟೆಗ (ನಾ). ಆಕಾಶಮಾರ್ಗದಲ್ಲಿ ಸಂಚಾರ ಮಾಡುವವನು ; ಖೇಚರ ; ದೇವತೆ : ಕಟ್ಟಿದ ವೈಜಯಂತಿಗಳ ಸಂದಣಿ ಬಾಂಬಟ್ಟೆಗರೆಡೆ ಯಾಟವನು ಕಟ್ಟಿದುದು (ಕುರಾಸಾಂ. ೬-೦೨) ; ಪಟ್ಟಶಿಲಾಪುಟಭೇದನ ದಟ್ಟಳೆಗಳನೊಲ್ದು ನೋಡಿ ತೊಲಗದೆ ಮಿಗೆ ಬಾಂಬಟ್ಟೆಗರಿರ್ದು ಪಥ ಶ್ರಮದಟ್ಟುಳಿಯಂ ಕಳೆದು ಪೋಪರತಿಮುದದಿಂದಂ (ಹಮ್ಮೀರ. ೦-೬೨); ಅಲರೊಳ್ ಬಂಡುಣಿವಿಂಡುಗಳ್ ಸೊದೆಯೊಳಾ ಬಾಂಬಟ್ಟೆಗರ್ . . . ಎಂದಿಗಂ ತಣಿಯದಂತೆ (ಪಕಪಿ. ೦-೯೦).

[ಬಾಂಬಟ್ಟೆ (< ಬಾನ್ಬಟ್ಟೆ) + — ಗ$_2$]

ಬಾಂಬಟ್ಟೆಗವೆಣ್ (ನಾ). ಆಕಾಶಮಾರ್ಗದಲ್ಲಿ ಸಂಚರಿಸುವವಳು ; ಖೇಚರಿ ; ದೇವತಾಸ್ತ್ರೀ : ವಿದ್ಯಾಧರರಾಯನ ಮಿಸುಕುವ ರೂಪಿಗೆ ಹೊಸ ಹರೆಯಂ ಬಂದುದು ಬಾಂಬಟ್ಟೆಗವೆಣ್ಗಳನತಿ ಮೋಹಿಸುತ (ಜಯಕಾ. ೦೩-೭). [ಬಾಂಬಟ್ಟೆಗ + ಪೆಣ್]

ಬಾಂಬರಿ (ನಾ). ಆಕಾಶದಲ್ಲಿ ಮಾಡುವ ಸಂಚಾರ; ಗಗನಸಂಚಾರ : ಬಾಂಬರಿಯೊಳ್ ಮಾರ್ತಂಡನುಮಂ ಪುಲ್ಲ ಕಡ್ಡಿಗಂ ಕೈಕೊಳ್ಳಳ್ (ಅರ್ಧನೇ. ೩-೬). [ಬಾಂ$_2$ (< ಬಾನ್$_3$) + ಪರಿ$_3$]

ಬಾಂಬರು (ನಾ). ಸಿಡಿಗುಂಡುಗಳನ್ನೆಸೆಯುವ ಯುದ್ಧವಿಮಾನ : ಚಂಡಮಾರುತನೇರಿ ಬಂದ ಬಾಂಬರುಗಳೂ ಸೋತೋಡಿದುವು (ಪಪ್ಕೆರ್ಸ. ೦೨-೪). [← ಇಂ. Bomber]

ಬಾಂಬಸು (ನಾ). ಸ್ವರ್ಗಲೋಕದ ಹಸು; ಕಾಮಧೇನು : ಏನೆಮಗಾ ಬಾಂಬಸುವಿಂದೇನೆಮಗಾ ಬಾಮ್ಮರಂಗಳಿಂ (ಅಪ್ರತಿ. ೪೦-೦೨) ; ಮದನನ ಚಾಗದೇಳ್ಗೆಯನಭೀಕ್ಷಿಸಿ . . . ಬೆದರ್ದತ್ತು ಬಾಂಬಸು ಕರಂ (ಸಂದ್ರಭ್ಯು. ೦೫-೦೪೩). [ಬಾಂ$_2$ (< ಬಾನ್$_3$) + ಪಸು$_4$]

ಬಾಂಬಳಿಕು (ನಾ). ಸೂರ್ಯಕಾಂತಶಿಲೆ ; ಆಕಾಶಸ್ಫಟಿಕ : ಗೋಡೆ ಗೋಮೇದಿಕರತ್ನದಿಂ ಬಾಗಿಲ್ವಾಡ ಬಾಂಬಳಿಕಿಂದ ಜಗಲಿ ವೈಡೂರ್ಯದಿಂ . . . ನಾಡೆ ಕಣ್ಗೆಸೆದಿಹವಲ್ಲಿ (ಕುರಾಸಾಂ. ೩-೬೨).

[ಬಾಂ$_2$ (< ಬಾನ್$_3$) + ಪಳಿಕು (< ಪಟಿಕ)]

ಬಾಂಬಾವು (ನಾ). ಆಕಾಶದ ಹಾವು ; ರಾಹು ; ಸೈಂಹಿಕೇಯ : "ಬಾಂಬಾವೆಂದು ರಾಹು" (ಕಪಾ. ೪೯-೩೦) ; ಇನಮಂಡಲಮಂ ಪಿಡಿಯಲ್ಕನುಗೈದೆಟ್ಟಿಂದು ಸಾರ್ದ ಬಾಂಬಾವೆನೆ ತಾಂ ಮಿನುಗುವ ಮುಡಿವಣಿಯಂ ತಳೆದೆನಸುಂ ಸೊಗಸಿದುದು ವೇಣಿ ತದ್ಬಾಲಿಕೆಯಾ (ಉದ್ಯಪ. ೫-೪೨); ಬಿಡದೆ ಬಾಂಬಾವಿಗಂಗಮುಮನೋಸರಿಸದೀವುದು (ಸಿಪು. ೦೪-೨೦).

[ಬಾಂ$_2$ (< ಬಾನ್$_3$) + ಪಾವು$_1$]

ಬಾಂಬಿಲ್ (ನಾ). ಆಕಾಶದಲ್ಲಿ ಮೂಡುವ ಕಾಮನ ಬಿಲ್ಲು; ಇಂದ್ರ ಧನುಸ್ಸು : ಕಣ್ಣ ಬಾಂಬಿಲ್ಗಳಲಿ ನೇಹವನು ಹೂಡುವಿರಿ ಕುದಿವ ಹೃದಯವ ಮಿಡಿಸಿ ಮೌನ ನುಡಿಸಿ (ವಿಷ್ಣುಧ. ೨).

[ಬಾಂ$_2$ (< ಬಾನ್$_3$) + ಬಿಲ್$_2$]

ಬಾಂಬು, ಬಾಂಬ್ (ನಾ). ಫಿರಂಗಿಯಿಂದ ಹೊಡೆಯುವ ಅಥವಾ ಕೈಯಿಂದ ಎಸೆದು ಸಿಡಿಸುವ ಸಿಡಿವಂದ್ದು ತುಂಬಿದ ಕಬ್ಬಿಣದ ಗುಂಡು ; ಸ್ಫೋಟಕಗುಂಡು; ಸಿಡಿಗುಂಡು : ಸಿಡಿವ ಮದ್ದಿನುಂಡೆಯಂತೆ, ಹಾರಲಿಹ ಫಿರಂಗಿಯಂತೆ, ಒಡೆಯಲಿರುವ ಬಾಂಬಿನಂತೆ, ವಿಪ್ಲವದ ಕೇಸರಿಯು . . . ಸಿದ್ಧವಾಗುತಿರುವುದು (ಪಾಂಪಸಿ. ೩೪-೨೨); ಬಾಂಬಿನ ದಾಳಿಗೆ ಊರು ತುತ್ತಾಯಿತು (ಸಂದ್ರವೀ. ೦೪-೫೬). ಬಾಂಬ್ : ಅಜಯ . . . ಬಾಂಬ್ ತಯಾರಿಕೆಯಲ್ಲಿ ನಿರತನಾಗುತ್ತಿದ್ದ (ಅತ್ಯಾರ್ಪ. ೦೩೬).

[←ಇಂ. Bomb]

ಬಾಂಬೆಣ್ (ನಾ). ಸ್ವರ್ಗದ ಹೆಣ್ಣು ; ದೇವತೆ ; ಅಪ್ಸರೆ.

ಬಾಂಬೆಂಡಿರ್ = ಅಪ್ಸರೆಯರು : ಅಡರ್ವರ್ತಾಂ ಮೇರುಶೃಂಗಕ್ಕರಿಗಳಡರೆ ನೀಂ ತನ್ಮಹಾದುರ್ಗಮಂ . . . ಪಿಡಿವರ್ಬಾಂಬಂಡಿರಂ ತಾಂ ಪಿಡಿಯೆ ಜಡಿದು ತತ್ಕನ್ಯಕಾರತ್ನಮಂ ನೀಂ (ಅಪ್ರತಿ. ೬೪-೬೨).

[ಬಾಂ$_2$ (< ಬಾನ್$_3$) + ಪೆಣ್]

ಬಾಂಬೊಚ್ಚ (ನಾ). ಆಕಾಶದ ನದಿ ; ದೇವಗಂಗೆ : ಅವುಗಳೆಲ್ಲಂ ಭೂಸ್ವಾಭಾವ್ಯಂಗೊಂಡ ಬಾಂಬೊಚ್ಚದ ನೀರ್ವನಿಗಳವೊಲ್ ಮಾನುಷ ಚಾರಿತ್ರಗಂಧಮಂ ತಾಳ್ದಿದುವು (ಅದ್ಭುತ. ೨-೦೬).

ಬಾಂಬೊಚ್ಚದಲೆಯ = ತಲೆಯಲ್ಲಿ ಗಂಗೆಯನ್ನು ಧರಿಸಿದವನು ; ಶಿವ : "ಬಾಂಬೊಚ್ಚದಲೆಯಂ . . . ಕಿಡಿಗಣ್ಣನು" (ಕಬ್ಬಿಕ್ಕೆ. ೪) ; ಕೆಂಗಿಡಿಗಣ್ಣ ಬಾಂಬೊಚ್ಚದಲೆಯ ಪಿರಿದಿನಿವ [ವೊ] ಡೆಯ ಮಿಡ ನಿರಂಜನ ಲಿಂಗ (ಪಾಸೋಪು. ೦೩-೦) ; ಬಾಂಬೊಚ್ಚಂ ತಲೆಯೊಳ್ ಆವಂಗೆ ಆತಂ ಬಾಂಬೊಚ್ಚದಲೆಯಂ (ಶಬ್ದಾನು. ೩೦೦ ಪ್ರಯೋ).

[ಬಾಂ$_2$ (<ಬಾನ್$_3$) + ಪೊಚ್ಚ$_3$]

ಬಾಂಬೊಳಲ್ 'ಬಾಂಬೊಱಲ್' ನೋ.

ಬಾಂಬೊಳಲ (ನಾ). ಆಕಾಶದಲ್ಲಿ ಕಟ್ಟಿದ ಪಟ್ಟಣಕ್ಕೆ ಸೇರಿದವನು.

ಬಾಂಬೊಳಲರ್ = ಆಕಾಶದಲ್ಲಿ ಕಟ್ಟಿದ ಮೂರು ಪಟ್ಟಣಗಳಿಗೆ ಸೇರಿದ ವಿದ್ಯುನ್ಮಾಲಿ, ಕಮಲಾಕ್ಷ, ತಾರಕಾಕ್ಷರೆಂಬ ಮೂರು ಜನ

ದೈತ್ಯರು : ಮೂಜಗ ಬಾಂಬೊಳಲರ ಮೊಗ್ಗರಮಂ ಮಗ್ಗಿಸಿದುರಿಗಣ್ಣಂ ಬಗ್ಗಂ ಕುಡುಗೆಮಗೆ (ಉದ್ಯದೇ. ೯-೪೬).

[ಬಾಂಬೊಳಲ್ (<ಬಾಂಬೊಟಲ್) + –ಅ$_7$]

ಬಾಂಬೊಳೆ 'ಬಾಂಬೊಟೆ' ನೋ.

ಬಾಂಬೊಟಲ್, ಬಾಂಬೊಳಲ್ (ನಾ). ೧. ಸ್ವರ್ಗದ ಪಟ್ಟಣ : ಅಮರಾವತಿ : 'ಬಾಂಬೊಟಲ್ಮರ' ಪರಾ. ೨. ಆಕಾಶದಲ್ಲಿ ಕಟ್ಟಿದ ಪಟ್ಟಣ; ತ್ರಿಪುರ; ℙ ತಾರಕಾಸುರನ ಮಕ್ಕಳಾದ ಮೂರು ಜನ ದೈತ್ಯರು ಕಟ್ಟಿಕೊಂಡ ಮೂರು ಪಟ್ಟಣಗಳು. ಆಕಾಶದಲ್ಲಿ ವಿದ್ಯುನ್ಮಾಲಿಯ ಕಬ್ಬಿಣದ ಪಟ್ಟಣ. ಅದಕ್ಕೂ ಮೇಲೆ ಅಂತರಿಕ್ಷದಲ್ಲಿ ಕಮಲಾಕ್ಷನ ಬೆಳ್ಳಿಪಟ್ಟಣ. ಅದಕ್ಕೂ ಮೇಲೆ ತಾರಕಾಕ್ಷನ ಚಿನ್ನದ ಪಟ್ಟಣ : ಬಾಂಬೊಟಲನುರ್ಕಿಂ ಮೂಜುಮಂ ಸುಟ್ಟು (ಕಬ್ಬಿಕಾ. ೦೫೬); ಬಾಂಬೊಟಲ ರಕ್ಕಸರಂ ಗಾಱುಗಿಡಿಸಿದ ತನ್ನೊಂದಧಟೆಂದಣುವನನಿರ್ದಿಚಿದಂ ಫಣಿಭೂಷಂ (ರಾಮಾಶ್ವ. ೧೩೨-೨). **ಬಾಂಬೊಳಲ್** : 'ಬಾಂಬೊಳಲ' ಪರಾ. [ಬಾಂ$_2$ (<ಬಾನ್$_3$) + ಪೊಟಲ್$_1$]

ಬಾಂಬೊಟಲುರಿಕ (ನಾ). ಆಕಾಶದ (ಮೂರು) ಪಟ್ಟಣಗಳನ್ನು ಸುಟ್ಟವನು; ಶಿವ : "ಬಾಂಬೊಟಲುರಿಕಂ, ದೇಸಿಗಂ, ಗಂದರಗಿವಿಯಂ, ಬೆಳ್ಳಡಿ . . . ಅಯ್ಮೊಗಂ–ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೪೭-೦); "ಬಾಂಬೊಟಲುರಿಕಂ ತಿಸುಳಿ ಕಂದುಗೊರಲಂ ಗೊರವಂ" (ಕವಿಕಂ. ೦೫).

[ಬಾಂಬೊಟಲ್ + ಉರಿಕ]

ಬಾಂಬೊಟಲ್ಮರ (ನಾ). ದೇವಲೋಕದಲ್ಲಿರುವ ಮರ ; ಸ್ವರ್ಗದ ವೃಕ್ಷ; ಕಲ್ಪವೃಕ್ಷ : ಪೂತೆಸೆವ ಬಾಂಬೊಟಲ್ಮರನಂ ದೊರೆಗೊಂಬ ಮೆಲ್ಲಡಿಗಳಂ (ಜಕಸಂ. ೩೪-೭). [ಬಾಂಬೊಟಲ್ + ಮರ$_1$]

ಬಾಂಬೊಟೆ, ಬಾಂಬೊಳೆ (ನಾ). = ಬಾಂಬೊಚ್ಚ : "ಬಾಂಬೊಟೆಯೆನೆ ಮಂದಾಕಿನಿ" (ಜಸಂ. ೦೦); ಬಾನೊಳ್ ಪೊಟೆ, ಬಾಂಬೊಟೆ (ಶಬ್ದಾನು. ೩೦೫ ವ್ಯಾಖ್ಯಾ) ; ಮೊಸಳೆ ಮುಸುಂಕದಚ್ಚ ಪೊಸಬಾಂಬೊಟೆಯಿಂ ಬೊನಲೊರ್ಮೆ ಕೂರ್ನೊಣಾಂ ಮುಸುಱದ ಜೇನ ಪುಟ್ಟ ಮೊನೆಮುಳ್ಳಿಲಿ ಗೇದಗೆ . . . ಮಾಮಸಗಿತೊ ಗಂಡುಮೋಳಿಗರ ಕೈಬೆಮರ್ಡೊಂದದ ಸೂಳೆಮೇಳಮೇಂ (ಜಕವಿ. ೬-೦೫೫). **ಬಾಂಬೊಳೆ** : "ನಾಕನದಿಗಕ್ಕು ಬಾಂಬೊಳೆಯೆಂದು" (ಕಶರ. ೭೭); ಬಾಂಬೊಳೆಯೊಳ್ ಸುರಗಿರಿಗೆ ಪರಿದು ಜಿನಬಿಂಬಕ್ಕೆಱಗಿ (ಜಯಕಾ. ೦೩-೨೫); ಇಳೆಯನೀರಡಿ ಮಾಡಿದ ಪಾದ ಜತನ ಬಾಂಬೊಳೆಯ ಪರಿಸಿದಂಘ್ರಿ ಜತನ (ಸೋಜತ. ೦೪-೦೯).

ಬಾಂಬೊಳೆದಲೆಯ = ತಲೆಯಲ್ಲಿ ಗಂಗೆಯನ್ನು ಧರಿಸಿದವನು : ಶಿವ : ಭಳಿವೆಟ್ಟನಣುಗಿಯಾಣ್ಮಾರುಮೊಗನೈಯ ಬಾಂಬೊಳೆದಲೆಯ . . . ಪೊರೆಗೆಮ್ಮನು (ನವಮೋ. ೩೨-೦). [ಬಾಂ$_2$ (<ಬಾನ್$_3$) + ಪೊಟೆ]

ಬಾಂಬೋಳ 'ಬೊಂಬಾಳ$_1$' ನೋ.

–ಬಾಕ, – ಬಕ್ಕ$_2$ (ಪ್ರ). (ಅತಿಯಾಗಿ ತಿನ್ನುವವನು ಎಂಬರ್ಥದಲ್ಲಿ ಸೇರುವ) ಒಂದು ತದ್ಧಿತಪ್ರತ್ಯಯ : 'ಹೊಟ್ಟೆಬಾಕ' ಪರಾ. **ಬಕ್ಕ$_2$** : 'ಕೂಳ್ಬಕ್ಕ', 'ತಿನಿಸುಬಕ್ಕ' ಪರಾ.

ಬಾಕತನ (ನಾ). ಹೊಟ್ಟೆಬಾಕತನ ; ತಿನಿಸುಬಕ್ಕತನ : ಉಪ್ಪುನೀರಂ ದಿನಂಪ್ರತಿ ಬಾ[ಪಾಶಾಂ. ಚಾ. ಪಾ]ಕತನದಿಂದ ತಪ್ಪದೇ ಹೀರಿದಾ ತಲೆ ಬಿಗುಡು ಗಗನದೊಳಗೊಪ್ಪದಿಂ ಪರಿವ ದೇವಾಪಗೆಯ ಮಧುರತರವಾರಿಯ ಹೀರಿಹೀರಿ ಚಪ್ಪರಿಸಿದಲ್ಲದೇ ಹೋಗದು (ಸಮ್ಯಕ್ತ. ೦೨-೯). ℙ ಇದು ಒಂದು ಅಪರೂಪದ ಶಬ್ದ. 'ಹೊಟ್ಟೆಬಾಕ' ಎಂಬುದರ ಸಂಕ್ಷಿಪ್ತ ರೂಪವಾಗಿ 'ಬಾಕ' ಎಂದು ಬಳಕೆಯಾಗಿರುವ ಪ್ರಯೋಗಗಳು ನಮಗೆ ದೊರೆತಿಲ್ಲ. ಆದರೆ ಇಲ್ಲಿ '–ಬಾಕ' ಮತ್ತು '–ತನ' ಎಂಬ ಎರಡು ಪ್ರತ್ಯಯಗಳು ಸೇರಿ ನಾಮಪದವಾಗಿರುವುದನ್ನು ಗಮನಿಸಬಹುದು. [–ಬಾಕ + –ತನ]

ಬಾಕಯ್ಯ (ನಾ). ಒಬ್ಬಾತನ ಹೆಸರು : ಬಾಕಯ್ಯ ತುಱುಗೊಳೊಳ್ ಸ್ವರ್ಗ್ಗಸ್ಥನಾದಂ (ಎಕ. XI. ಹೊಳಲ್ಕೆ. ೬೭-೫ ; 975).

[ಬಾಕ$_0$ + ಅಯ್ಯ$_1$]

ಬಾಕಿ (ಗು). ೧. ಇತರ; ಬೇರೆಯ : ಉಳಿದ : ಭಿಸಿ ಹೆಂಡೆ ಮಡಿ ತುಕದ ಬಾಕಿ ತುಕದ ತುಪ (ಎಕ. VII. ಶಿವಮೊ. ೦೦೭-೦೭; 1576) ; ಬಾಕಿ ಎರಡು ಪಾಠದ ಹಣವನ್ನೂ ಸಹ ಅವರ ಮನೆಗಳಲ್ಲಿ ಎಂದು ಕೊಡುತ್ತಾರೆಯೋ ! (ಕಲಾಸಾ. ೨೦). (ನಾ). ೨. ಉಳಿದುದು ; ಮಿಕ್ಕಿದುದು; ಶಿಲ್ಕು : ಇದರೊಳಿಮಗತ್ಯಧಿಕಬಲ ಬಂದೊದಗುವುದುಯಿನ್ನುಳಿದ ಬಾಕಿಯನದನು ಕೈಕೊಳ್ಳಯ್ಯ (ಜನಭಾ. ೩೮-೫೦); ಸರಿ! ಇನ್ನದೊಂದೇ ಬಾಕಿ! (ಕಂಕಕೂ. ೮) ; ಈ ಬಾಕಿಯದಷ್ಟೂ ನಾವು ತೆಗೆದುಕೊಳ್ಳೋಣ (ನಡದಾ. I. ೫೨೪). ೩. ತೀರಿಸಬೇಕಾದ ಹಣ; ಸಾಲ : ಏನಾದರೊಂದು ಬಾಕಿಗಾಗಿ ಯಾರಾದ ರೊಬ್ಬರು ಕಾಡಿದರೆ ಹೆಚ್ಚಾಗಿ ನೆರವಿಗೆ ಬರುತ್ತಿದ್ದುದು ಮಾಲತಿಯೆ (ಪಾತ್ಸಲ್ಯ. ೩೦).

ಬಾಕಿ ಉಳಿಸು = ೧. ಯಾವುದಾದರೊಂದು ಕೆಲಸವನ್ನು ಪೂರ್ತಿ ಮಾಡಿ ಮುಗಿಸದಿರು : ಇಂದಿನ ಕೆಲಸವನ್ನು ನಾಳೆಗೆ ಬಾಕಿ ಉಳಿಸಬಾರದು (ರೂಢಿ). ೨. ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಕೊಡದಿರು : ಈ ತಿಂಗಳು ಬಾಕಿ ಉಳಿಸದೆ ಪೂರ್ತಿಹಣವನ್ನು ಕೊಟ್ಟು ಬಿಡುತ್ತೇನೆ (ರೂಢಿ). **ಬಾಕಿ ತೀರು** = ಕೊಡಬೇಕಾದ ಹಣ ಸಂದಾಯವಾಗು; ಸಾಲ ತೀರು : ಬಾಕಿ ತೀರಿದ ಮೇಲೆ ಉಳಿಯುವ ಆಸ್ತಿ ನಮಗೆ ಸೇರುತ್ತದೆ (ಪ್ರವಾಣ. II. ೪೯೦). **ಬಾಕಿ ಬೀಳು** = ಪೂರ್ಣವಾಗದಿರು ; ತೀರದಿರು : ತೆತ್ತಷ್ಟೂ ಬಾಕಿ ಬಿದ್ದರೆ ಮತ್ತೇನು ಕೊಟ್ಟಾನು ? (ಗಾದೆ) ; ಬಾಕಿ ಬಿದ್ದ ಕೆಲಸವನ್ನು ನಾಳೆ ಪೂರೈಸಲೇ ಬೇಕು (ರೂಢಿ). **ಬಾಕಿಮಾತು** = ಬೇರೆಯ ಮಾತು : ನೀನು ಬಂದದ್ದೇಕೆ ಹೇಳು. ಬಾಕಿಮಾತು ಬೇಡ (ರೂಢಿ). **ಬಾಕಿಯಿರಿಸು** = ಕೊಡಬೇಕಾದುದರಲ್ಲಿ ಬಾಕಿಯನ್ನು ಉಳಿಸಿಕೊಳ್ಳು : ತಿಂಗಳಿಗೊಮ್ಮೆ ಕೊಡುವ ಹಣದಲ್ಲಿ ಏನೂ ಬಾಕಿಯಿರಿಸಬಾರದು (ಅಡುಸಾ. ೦೨೫).

[←ಅರ. ಹಿಂ. ಮರಾ. ಬಾಕೀ]

ಬಾಕಿದಾರ (ನಾ). ಸಾಲ ತೀರಿಸದೆ ಇರುವವನು ; ಕೊಡಬೇಕಾದ ಹಣವನ್ನು ಬಾಕಿ ನಿಲ್ಲಿಸಿ ಕೊಂಡವನು : ಸೀತಾರಾಮನು ಬಾಕಿದಾರರನ್ನೂ ತಹಸೀಲ್‌ದಾರರನ್ನೂ ಸೆರೆಯಲ್ಲಿಡಿಸಿದನು (ಬಂಕಿಮ. ೩೦೬) ; ಪುಂಡರು ಬಾಕಿದಾರರಿಗೆ ಕಂದಾಯ ಪಾವತಿ ಮಾಡದಂತೆ ಚಿತಾವಣೆ ಮಾಡುತ್ತಿದ್ದರು (ದಾದಾನ. ೭೨).

[ಬಾಕಿ + –ದಾರ್$_4$. / ಹಿಂ. ಮರಾ. ಬಾಕೀದಾರ್]

ಬಾಕಿಮಾರು (ನಾ). ಮನೆಯ ಮುಂದುಗಡೆಯಿರುವ ವಿಸ್ತಾರವಾದ ಜಮೀನು : ಬೀಡಿನ ಮುಂದಿನ ಬಾಕಿಮಾರು ಗದ್ದೆ (ಕೋಟಿತ. ೦೬).

[←ತುಳು. ಬಾಕಿಮಾರ್, ಬಾಕ್ಕಾರ್]

ಬಾಕಿಱಿ (ಕ್ರಿ). ಕಿರುಗತ್ತಿಯಿಂದ ಇರಿ –ಚುಚ್ಚು; ರಿಪುಭಟರ . . . ಬಾಕಿಱಿದು ಯಮರಾಜನ ಪುರಕೈದಿಸಿದರ (ಕಂಸವಿ. ೦೪-೬೫).

[ಬಾಕು$_2$ (< ಬಾಂಕು$_1$) + ಇಱ್$_1$]

ಬಾಕು$_1$ 'ಬಾಹು$_1$' ನೋ.

ಬಾಕು$_2$ 'ಬಾಂಕು$_1$' ನೋ.

ಬಾಕು$_3$ 'ಬಾಂಕು$_2$' ನೋ.

ಬಾಕುಳ 'ಬಾಗುಳ' ನೋ.

ಬಾಕುಳಿ 'ಬಾಗುಳಿ' ನೋ.

ಬಾಕುಳಿಕ (ಗು). ಅತ್ಯಪೇಕ್ಷೆಯಿಂದ ಕೂಡಿದ ; ಅತ್ಯಾಸೆಯ : ಶ್ರೀಕಂಠ

ಶಿವನ ನೆನೆಯದು ಲೌಕಿಕವಾರ್ತೆಯನೆ ಸೊರಹುತಿರ್ಪಪುವೆನ್ನೀ ಬಾಕುಳಿಕ ಜಿಹ್ವೆ (ಕಂಕಳಂ. ೦). [ಬಾಕುಳಿ (< ಬಾಗುಳಿ) + ?]

ಬಾಕುಳಿಕತ್ವ (ನಾ). ಅತ್ಯಪೇಕ್ಷೆ; ಅತ್ಯಾಸೆ : ಬಾಕುಳಿಕತ್ವ ನೀಗಿ ಮಿತಾಹಾರದಿಂದ ಆಚರಣೆ ಇತ್ಯಾದಿ (ಏಸಾಸು. ೯೯ ಸೂತ್ರ). [ಬಾಕುಳಿಕ + — ತ್ವ]

ಬಾಕುಳಿಗ (ನಾ). ಅಧಿಕವಾಗಿ ಆಸೆಪಡುವವನು, — ಅಪೇಕ್ಷಿಸುವವನು : ತೋಕಿದರು ತೂಱಂಬ ಬೊಬ್ಬೆಯ ಬಾಕುಳಿಗರೊಳಹೊಕ್ಕು (ಕೊರಣಾ. ೩-೩-೧೮). [ಬಾಕುಳಿ(<ಬಾಗುಳಿ) + — ಗ$_2$]

ಬಾಕುಳಿಗಣ್ (ನಾ). ಅತ್ಯಾಸೆಯಿಂದ ಕೂಡಿದ ಕಣ್ಣು ; ವಿಷಯಾತುರವಾದ ಕಣ್ಣು : ನಿಟ್ಟಿಪ ಬಾಕುಳಿಗಣ್ಗಳ್ ರುಚಿಯೊಡವುಟ್ಟಿದ ಕಾತರದಿಂ . . . ಮನಮುಟ್ಟಿ ಕರಂ ಕೂಡಿದರಂಗಭವಂ ಮಿಗೆ ಮೆಚ್ಚುವ ತೆಱದಿ (ಇಯಕಾ. ೨-೬೩). [ಬಾಕುಳಿ(<ಬಾಗುಳಿ)+ಕಣ್]

ಬಾಕುಳಿಗತನ (ನಾ). ಅತ್ಯಾಸೆ ; ಲೋಭ : ಸುರಾಸುರರ್ಜಲಧಿಯಂ ಕಡೆಯ ಲತ್ಯಲಘುಸದ್ವಸ್ತುಗಳ್ಬರೆ ಮತ್ತೆ ಮತ್ತೆ ಬಾಕುಳಿಗತನದಿಂ ಮಥನಿಸಲ್ವಿಷವನುಗುಳೆ . . . ತದ್ಗರಳವನಗಜಾವರಂ ಗಳದಲ್ಲಿ ಧರಿಸಿದಂ (ಜಾಸೋಪು. ೦೦-೬೬). [ಬಾಕುಳಿಗ + — ತನ]

ಬಾಕುಳಿಗೊಳ್ (ಕ್ರಿ). ಅಧಿಕವಾಗಿ ಆಸೆಪಡು,—ಬಯಸು : ಹೆಣ್ಣೆಂಬ ವಾರ್ತೆಯ ಕೇಳಿ ಕಾಮುಕರೆದೆ ಹಣ್ಣಾಗಿ ಬಾಕುಳಿಗೊಂಡು ಹಣ್ಣುಳ್ಳ ಮರಕೆ ಹಕ್ಕಿಗಳೋಡಿ ಬಹ ಮೋಡಿ ಹಣ್ಣೆ ಕೂಡಿದರು (ಭರತ. ೫೫-೦೬). [ಬಾಕುಳಿ(<ಬಾಗುಳಿ) + ಕೊಳ್$_1$]

ಬಾಕುಳಿತನ (ನಾ). = ಬಾಕುಳಿಗತನ : ಬಾಕುಳಿತನದಿಂ ಬಳಸಿ ನಿರೀಕ್ಷಿಪ ಶಾಕಿನಿ ಡಾಕಿನಿ ಭೂತಪ್ರೇತಾನೀಕದ ಕಣ್ಣೇಱಿಂದಿನಿವಿರಿದುಂ ತಿಂದಿನಿ ಸಳ್ಕಿಸದೆ ಓಕರಿಸುವ ಬೇತಾಳನ ಬಾಯಿಂದಾ ಕರುಳೋಪದೆ ಸುರಿದುದು (ಇಯಕಾ. ೬-೩೨); ಬಾಗಿಲ್ಗಾಯ್ದುದಿದಯ್ಯಗಳೋಜೆಯೆಯಂಬಲಿಯುಣ್ಬ ನೊಡನೆ ಬಾಕುಳಿತನದಿಂ ಕಯ್ಯಾಂತಾಂತದ ಸರಿಯದೆ ಸುಱಿವುದಿದಯ್ಯಗಳೇಳ್ಗೆಯೆ (ಕಾಶ್ಯದೇ. ೩-೩೨). [ಬಾಕುಳಿ (< ಬಾಗುಳಿ) + — ತನ]

ಬಾಕುಳಿವಾತು (ನಾ). ಅಧಿಕವಾದ ಆಸೆಯನ್ನು ಹುಟ್ಟಿಸುವ ನುಡಿ; ಅತ್ಯಪೇಕ್ಷೆಯ ಮಾತು : ಬೇಕಾದಷ್ಟು ಸೆಳೆದುಕೊಂಡು ದೊರೆಯೊಳು ಬಾಕುಳಿವಾತ ಗಂಟಿಕ್ಕಿ (ಸ್ಥಾಪನ. ೩೦-೦೪೪). [ಬಾಕುಳಿ (< ಬಾಗುಳಿ) + ಮಾತು$_1$]

ಬಾಕುಳೆ (ನಾ). ಅಧಿಕವಾದ ಆಸೆಯುಳ್ಳವಳು; ಅತ್ಯಪೇಕ್ಷೆಯುಳ್ಳವಳು : ಬಾಕುಳೆಯರ ಬಾಯ್ಕಡಿವಡೆದ ಸೆಳೆದು ಬದ್ದೆಯರುಡಿಸಿದೊಡುಡ ಕಲ್ತ ಕೊವರನಭಿನವಮದನಂ (ಅನಂಪು. ೦-೩೬). [ಬಾಕುಳ (< ಬಾಗುಳ) + — ಎ$_2$]

ಬಾಗ್ (ನಾ). ತೋಟ; ಉದ್ಯಾನ : 'ಲಾಲ್‌ಬಾಗ್' ಪರಾ. [← ಪಾರ. ಬಾಘ್; ಅರ. ಹಿಂ. ಮರಾ. ಬಾಗ್]

ಬಾಗ, ಬಾಗ್ಗೆ (ನಾ). ಪಾಲು ; ಭಾಗ : ಭಾಗಂ—ಬಾಗಂ; ಭಾಡಂ—ಬಾಡಂ (ಶಮಾ. ಸು. ೨೬೯ ಪ್ರಯೋ). 'ಕಡಿವಾಗ' ಪರಾ. ಬಾಗ್ಗೆ : ಅಷ್ಟಮಾಭಾಗೆಯೊಳಗೆಪ್ಪಾಂದು ಬಾಗೆಯಂ ಕೊಟ್ಟು (ನೋಂಬಿಕ. ೬-೬). 'ಭಾಗೆ' ಪರಾ. [< ಸಂ. ಭಾಗ]

ಬಾಗಡ, ಬಾಗಡಗೆ (ನಾ). ಒಂದು ಪ್ರಾಂತ್ಯದ ಹೆಸರು ; ಈಗಿನ ಬಿಜಾಪುರಜಿಲ್ಲೆಯ ಬಾಗಲಕೋಟೆಗೆ ಒಂದೆ ಇದ್ದ ಹೆಸರು : ಶ್ರೀಮತ್ಪೆರ್ಮಾನಡಿಗಳ್. . . ಕಿಸುಕಾಡೆಟ್ಟತ್ತುಮಂ [ಬಾಗಡೆ]ಟ್ಟತ್ತುಮಂ ನಿರಾಕುಳಮಾಳುತ್ತಿರೆ (ಸೌಇಇ. XI — i. ೪೦-೯; 969). ಬಾಗಡಗೆ : ಬಾಗಡಗಾ ರಾಜಪಥೋತ್ತರತಃ ಭೋಗಗಾವುಣ್ಡ ಬಳಮಧ್ಯೇ ನಿವತ್ತ[ಣ] ನಾನಾಂ ತ್ರಿಂಶತಂ ವಿಷ್ಣುದೇವಾಯನಿವೇದಿತಂ (ಸೌಇಇ. XI-i. ೬೫-೨೨; 1049) ; ಕಿಸುಕಾಡೆಟ್ಟತ್ತುಂ ಬಾಗಡಗೆಯೆಟ್ಟತ್ತುಂ (ಇಅ. IX. ೯೬-೨೨; 1169); ಅಚ್ತಿಯಿನ್ದೆ ಬಾಗಡಗೆಯ ರುದ್ರನಾದರದೆ ಮಾಡಿಸಿದಂ ವಿಳಸತ್ ಪ್ರತಿಷ್ಠೆಯಂ (ಎಕ. II. ೨೩೪. ೬೨; ಸು. 1180). [?]

ಬಾಗಡಗೆ 'ಬಾಗಡ' ನೋ.

ಬಾಗಡೋರು (ನಾ). ಕುದುರೆಯ ಲಗಾಮಿಗೆ ಜೋಡಿಸಿದ ಹಗ್ಗ ; ವಾಘೆ : ಕುದುರೆ ಇಳಿದು ಚಿಕ್ಕ ಮರಕ್ಕೆ ಬಾಗಡೋರು ಹಗ್ಗದಿಂದ ಕಟ್ಟಿಹಾಕಿ (ಕಥಾಮಂ. IV. ೩೯); ಅಲ್ಲಿ ಒಂದು ಕಂಭಕ್ಕೆ ಬಾಗಡೋರು ಹಗ್ಗದಿಂದ ಅವನನ್ನು ಬಿಗಿದು ಆಚೆಗೆ ಹೊರಟು ಹೋದರು (ಮುಸುಗ. ೧೪೩). [← ಹಿಂ. ಬಾಗಡೋರ್]

ಬಾಗಧೂಪ (ನಾ). ಗುಗ್ಗುಳದ ಮರ ; ಮಡ್ಡಿಮರ : ಗುಗ್ಗುಳಧೂಪ, ಮಂಡಧೂಪ, ಮಡ್ಡಿಧೂಪ, ಬಾಗಧೂಪ (ಪ್ರಾಸಿಗ. ೪-೩೯). [ಬಾಗ್ಗ + ಧೂಪ]

ಬಾಗರಣ (ನಾ). ವ್ಯಾಕರಣ : ಬಾಗರಣಂ ವ್ಯಾಕರಣಂ (ಕಣ್ಣಾಪು. ೪೦೬ ವ್ಯಾಖ್ಯಾ). [< ಪ್ರಾ. ವಾಗರಣ./ಸಂ. ವ್ಯಾಕರಣ]

ಬಾಗರಣಿಗ (ನಾ). ವ್ಯಾಕರಣಕಾರ ; ವೈಯಾಕರಣಿ : ಜೋಯಿಸಮನಜಿವನೋದುವಂ ಮೇಣ್, ಜೋಯಿಸಿಗಂ ಏವಂ ಗಣಿದಿಗಂ . . . ಶಾಸ್ತ್ರಿಗಂ ಬಾಗರಣಿಗಂ (ಕಣ್ಣಾಪು. ೧೦೮ ಪ್ರಯೋ). [ಬಾಗರಣ + — ಇಗ]

ಬಾಗವತ್ತ (ನಾ). ಯಕ್ಷಗಾನ, ಬಯಲಾಟ ಮೊದಲಾದುವುಗಳನ್ನು ಕಲಿಸುವ ಗುರು; ಭಾಗವತ : ಶಾಸನವಂ ಬರೆದಾತಂ ಬಾಗವತ್ತ ಬೀರಮರಸರ್ಗ್ಗಂ ಗೌರಬೆಗಂ ಹುಟ್ಟಿದ ಸರಸ್ವತೀಪ್ರಿಯಪುತ್ರ ಹಂದಲ ಕೆರೆಯ ಸೇನಬೋವ ಮಲಯ (ಎಕ. XVI. ಸಕ್ಕಣಾ. ೬೩-೫೦; 1224). [< ಸಂ. ಭಾಗವತ]

ಬಾಗವಸ (ನಾ). ಧನುರ್ವಿದ್ಯೆಯಲ್ಲಿ ಒಂದು ಪ್ರಕಾರ (?) : ನ್ಯಾಯ ಪುರುಷಸಂತಾನಮಾನಸಂಸ್ಥಾನಂ ಬಿಲ್ಮುಟ್ಟೆ ಲಕ್ಷಿಣಯೋಪೇತಂ ಬಗೆ ಬಾಗವಸಮೆಂಬಿವನಜಿದು ಧನುರ್ವಿದ್ಯೆಯೇ ರೂಪುಗೊಂಡಂತಿರ್ವರುಂ ಕಾದೆ (ಶಾಂತಿಪು. ೪-೪೫ ಪ). [?]

ಬಾಗವಳಿ (ನಾ). ಪಾಲು; ಭಾಗ : ತುರುಬಿನ ತಂಮನಾಯಕನ ಬಾಗವಳಿ ಹಳೆಹರವರಿ ಕೋಣಕಾರು ಅಂತುಯಿವಕೆ ಗೇಣಿ ೧೪೦ (ಕಇ. I. ೩೦-೨೦; 1432 ?). 'ಭಾಗಾವಳಿ' ಪರಾ. [ಬಾಗ + — ವಳಿ$_2$]

ಬಾಗವಾನ (ನಾ). ತೋಟವನ್ನು ನೋಡಿಕೊಳ್ಳುವವನು ; ತೋಟಗಾರ : ಸೀತಾಫಲಗಳು ತುಟ್ಟಿಯಾದ ಕಾರಣವೇನೆಂದು ಒಬ್ಬ ಬಾಗವಾನನನ್ನು ಕೇಳಿದನು (ಮುಂದಿಯಾ. ೩-೨೬೩) ; ಬಾಗವಾನರ ಮಕ್ಕಳಿಂದ ಕಾಯಿಪಲ್ಯಗಳನ್ನು ತೆಗೆದುಕೊಂಡು ತೃಪ್ತರಾಗುತ್ತಿದ್ದರು (ರಂಗರೋ. ೩೦); ಆ ಹಣ್ಣುಗಳೆಲ್ಲ ನಮಗೆ ಬರುವಂತಿಲ್ಲ ಅಣ್ಣ, ಅವುಗಳನ್ನು ಬಾಗವಾನರಿಗೆ . . . ಮಾರಿ ಬಿಟ್ಟಿದ್ದೇನೆ (ಹಬ್ಬಿ. ೦೨೯). [← ಪಾರ. ಬಾಘವಾನ್ ; ಹಿಂ. ಮರಾ. ಬಾಗವಾನ್]

ಬಾಗಾದಿ (ನಾ). (ಅವಿಭಕ್ತಕುಟುಂಬದ) ಆಸ್ತಿಯ ಪಾಲಿಗೆ ಹಕ್ಕುಳ್ಳವನು : ದಾಯಾದಿ : ಬಾಣಂತಿ ಮನೆ ಮುಂದೆ ಹೋಗಿ ಬಾ ಅಣ್ಣಯ್ಯ . . . ನಿನ ಕಂಡು ಬಾಗಾದಿ ಬಾಯ ಬಿಡುವಾಳು (ಹಕ್ಕಿಣಾ. ೭೬); ಬಾಗಾದಿ ಮಂದಿ ನೀ, ಹ್ಯಾಗಾದಿ ನನ ಮಗನ ಬಾಗಾದಿ ಕೇಳಿ ಹಾಸರತು ಜನದಾಗ ಮೂಗ ಮುಂದಾಡಿ ನಗತಾಳ . . . ಬಾಗಾದಿ ಮನಿ ಮುಂದ ಹ್ಯಾಂಗ್ಹಾಯ್ದೆ ನನ ಮಗನ ಚೌರಿ ಚಿತ್ತರಕಿ ನೆರಳೀಲೆ ಬರುವಾಗ ಬಾಗಾದಿ ಮಾರಿ ತಳ್ಯಾಕೊ (ಕಪ್ಪಣಾ. ೦೦೨). 'ಭಾಗಾದಿ' ಪರಾ. [< ಸಂ. ಭಾಗಾದಿನ್ ?]

ಬಾಗಾಯತ, ಬಾಗಾಯಿತಿ, ಬಾಗಾಯಿತು, ಬಾಗಾಯ್ತು (ನಾ). ತೆಂಗು, ಅಡಿಕೆ ಮೊದಲಾದುವುಗಳನ್ನು ಬೆಳೆಯುವ ನೀರಾವರಿ ಭೂಮಿ ; ತೋಟಪಟ್ಟಿ ಜಮೀನು : ಬಾಗಾಯತ ಭೂಮಿ ಇದ್ದವರಿಗೆ

ಯಾವ ಕಾಲವಾದರೂ ಬರಗಾಲವೇ ಇಲ್ಲ (ಕೃಷಿಪ್ರ. ೦೬೬). **ಬಾಗಾಯಿತಿ** : ಹೆಣ್ಣನ್ನು ಗಂಟು ಹಾಕಿಕೊಳ್ಳೋದು, ಒಂದು ಬಾಗಾಯಿತಿ ಜಮೀನಿನ ಖರೀದಿ ಮಾಡಿದ ಹಾಂಗ (ಕಕ್ಕರ್ಯ. ೬೨). **ಬಾಗಾಯಿತು** : ಜಲಾಧಾರದಿಂದ ಕಬ್ಬು, ತೆಂಗು, ಅಡಿಕೆ, ವೀಳ್ಯದೆಲೆ ಮುಂತಾದ ಬೆಳೆ ತೆಗೆಯುವಂತಾ ಭೂಮಿಯನ್ನು ಬಾಗಾಯಿತುಯೆಂದು ಹೇಳುವುದು (ಕೂಮಿಅ. ೩೩) ; ಮತ್ತೊಂದು ಜಾತಿಯ ಪೈರಿಗೆ ವರ್ಷವೆಲ್ಲಾ ನೀರು ಅಷ್ಟೋ ಇಷ್ಟೋ ಬೇಕಾಗುತ್ತದೆ. ಇದನ್ನು ತೋಟದ ಪೈರು ಅಥವಾ ಬಾಗಾಯಿತು ಎನ್ನುತ್ತಾರೆ (ಕಿಲ್ಯಾಸಾ. ೩೬೯). **ಬಾಗಾಯ್ತು** : ತರಿ ಬರಿದಾಯ್ತು, ಖುಷ್ಕಿ ಶುಷ್ಕವಾಯ್ತು, ಬಾಗಾಯ್ತು ಹೋಗಾಯ್ತು (ಗಾದೆ). [← ಹಿಂ. ಬಾಗಾತೀ ; ಮರಾ. ಬಾಗಾಈತ್, ಬಾಗಾಯತ್]

ಬಾಗಾಯಿತಿ 'ಬಾಗಾಯತ' ನೋ.

ಬಾಗಾಯಿತು 'ಬಾಗಾಯತ' ನೋ.

ಬಾಗಾಯ್ತು 'ಬಾಗಾಯತ' ನೋ.

ಬಾಗಾರ 'ಭಾಗಾಹಾರ' ನೋ.

ಬಾಗಿ$_1$ 'ಬಾಗೆ$_1$' ನೋ.

ಬಾಗಿ$_2$ 'ಬಾಗು$_2$' ನೋ.

ಬಾಗಿನ 'ಬಾಯನ' ನೋ.

ಬಾಗಿನಕೊಡು 'ಬಾಯಿನಂಗೊಡು' ನೋ.

ಬಾಗಿನಾಡು (ನಾ). ಒಂದು ನಾಡಿನ ಹೆಸರು : ಕಿಸುಕಾಡೆಟ್ಟತ್ತುಂ ಬಾಗಿನಾಡೆಟ್ಟತ್ತುವಂ ಬೂತುಗಂಗೆ ಕನ್ನರದೇವಂ ಮೆಚ್ಚುಗೊಟ್ಟಂ (ಎಕ. III. ಮಂಡ್ಯ. ೪೦-೨೦; 950). [ಬಾಗಿ$_1$ (< ಬಾಗೆ$_1$) + ನಾಡು]

ಬಾಗಿಲ್, ಬಾಗಿಲ, ಬಾಗಿಲು (ನಾ). ಪ್ರವೇಶಮಾರ್ಗ ; ದ್ವಾರ : "ದ್ವಾಃ, ದ್ವಾರಂ, ವಳಜಂ— ಈ ೩ ಬಾಗಿಲ್" (ಹಲಾಯು. ೩೦-೦೪೫) ; ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ (ಪಡ್ಡಾರಾ. ೦೨೨-೨೦) ; ಬಸಂತದೊಳ್ ಬಸದಿಯ ಬಾಗಿಲಂ ತೆಱೆದ ಮಾಟ್ಕೆಯೊಳಿರ್ದುವು ಮಾವುಗಳ್ (ಆದಿಪು. ೦-೬೬) ; ಸಮುತ್ತುಂಗಶಿಖರಂಗಳ್ ನಾಲ್ಕುಂ ದೆಸೆಯೊಳುದಾಗಿ ಬಾಗಿಲೊಂದೆಯಾಗಿರ್ಪುದು ಗುಹ್ಯಾಖ್ಯಂ (ಪಂಪಕಂ. ೨೦೫-೦೪). **ಬಾಗಿಲ** : ಕಾದಿ ಹಿರಣ್ಯಕನ ಕರುಳ ಕೊರಳೊಳಗೆ ಧರಿಸೇಳು ಕಾಯ್ದು ಬಲಿ ಬಾಗಿಲದೊಳು ಭೇದಿಸಿ ಭೂಮಿ ತ್ರಿಪಾದದಿಂದಳೆಬೇಕು (ಪುರಂದ. ೫-೦೩೯-೨). **ಬಾಗಿಲು** : ಆವಾವ ಭಾವದಲ್ಲಿ ಮಾಡಿ ಕೂಡಿಹೆವೆಂಬರ ಬಾಗಿಲ ತೋಱಯ್ಯ (ಬಸವ. ೩೬೨) ; ಅರಗಿನರಸನ ಬಾಗಿಲಲಿ ದಳ್ಳುರಿಗೆ ತಡವೇ (ಕುಮಾರ್ಯಾ. ೫-೪೦) ; ತುಂಬಿರುವ ಪಟ್ಟಣಕೊಂಭತ್ತು ಬಾಗಿಲು (ಪುರಂದ. ೦-೦೬೨-೦).

ಬಾಗಿಲ ಕಾ, ಬಾಗಿಲ ಕಾಯ್, ಬಾಗಿಲ ಕಾಯು = ೧. ದ್ವಾರಪಾಲಕನಾಗು : ನಿರ್ಜರಪತಿ ವಿಷ್ಣು ಬಾಗಿಲ ಕಾದಿರ್ಪ ಸಜ್ಜನಸಂಪತ್ತು ಬಡವೆ (ಮೋಹತ. ೩೦-೦೫). ೨. ಬಿನ್ನಹಮಾಡಿಕೊಳ್ಳಲೆಂದು ಬಾಗಿಲ ಬಳಿ ಬಂದು ನಿಂತಿರು : ಹರಿಯಜ ಮುನಿಗಳೆಲ್ಲರೂ ನಿಜ ನಿಮ್ಮ ಬಾಗಿಲ ಕಾಯ್ದಿಹರು (ಬಸವ. ೭೪೨) ; ಹರಿಯ ಬಾಗಿಲ ಕಾಯ್ದು ಬಲಿ ಭಾಗ್ಯವಂತನಾದ ಹರನ ಬಾಗಿಲ ಕಾಯ್ದು ಬಾಣನಳಿದ (ಪುರಂದ. ೨-೬೩-೧) ; ಬಾಗಿಲ ಕಾಯುವರು ಕಡುಮೂರ್ಖರಿಂತಿದ ನಮಗೆ ಮನ್ನಿಪುದು (ಸಂಪಸ. ೬-೯). **ಬಾಗಿಲ ಸೆಜ್ಜೆ** = ಅಗಸೆಬಾಗಿಲ ಮೇಲಿನ ಗೋಪುರ ; ಬಾಗಿಲುವಾಡ : ಪಿರಿದಾಗಿ ಬಾಗಿಲ ಸೆಜ್ಜೆಯಭ್ರವ ವ್ಯಾಪಿಸಿದುವು ಶುಭ್ರವಿಡಿದು (ಕಂಪಸಿ. ೬-೦೩).

[ದೇ. ॥ ತಮಿ. ವಾಯಿಲ್ ವಾಯಲ್, ವಾಚಲ್ ; ಮಲ. ವಾಕಿಲ್ ; ತುಳು. ಬಾಕಿಲು ; ತೆಲು. ವಾಕಿಲಿ ; ಕೋಲಾ. ವಕಲ್; ನಾಯ್ಕಿ. ವಾಕಲ್]

ಬಾಗಿಲ 'ಬಾಗಿಲ್' ನೋ.

ಬಾಗಿಲಾಯ್ತ (ನಾ). ಬಾಗಿಲು ಕಾಯುವವನು ; ದ್ವಾರಪಾಲಕ ; ಪಡಿಹಾರ : ಬಾಗಿಲಾಯ್ತಂ, ಅಚ್ಚುಳಾಯ್ತಂ, ಕಲ್ಲಾಯ್ತಂ (ಶಬ್ದಾನು. ೪೨೫ ಪ್ರಯೋ). [ಬಾಗಿಲ್ + —ಆಯ್ತ]

ಬಾಗಿಲು 'ಬಾಗಿಲ್' ನೋ.

ಬಾಗಿಲುಗಟ್ಟಳೆ (ನಾ). (ಯಾವುದಾದರೊಂದು ಸಾರ್ವಜನಿಕ ಕಾರ್ಯಕ್ಕೆ) ಪ್ರತಿಯೊಂದು ಮನೆಯವರೂ ಇಂತಿಷ್ಟು (ಹಣವನ್ನು) ತೆರಬೇಕೆಂಬ ನಿಯಮ : ಬೆಳುಗುಳದ ತೀರ್ತ್ಥದಲ್ಲಿ ವೈಷ್ಣವ ಅಂಗರಕ್ಷೆಗೋಸುಕ ಸಮಸ್ತರಾಜ್ಯದೊಳಗುಳ್ಳಂತಹ ಜೈನರಾ ಬಾಗಿಲುಗಟ್ಟಳೆಯಾಗಿ ಮನೆವಂನೆಗೆ ವರ್ಷಕ್ಕೆ ೧ ಹಣ ಕೊಟ್ಟು . . . ಕೀರ್ತ್ತಿಯನೂ ಪುಂಣ್ಯವನೂ ಉಪಾರ್ಜ್ಜಿಸಿಕೊಂಬುದು (ಎಕ. II, ೩೪೪-೨೩ ; 1368).

[ಬಾಗಿಲು (<ಬಾಗಿಲ್) + ಕಟ್ಟಳೆ$_1$]

ಬಾಗಿಲುಗಾಹಿ (ನಾ). = ಬಾಗಿಲಾಯ್ತ : ಕೊಡಲ ಸಂಗನ ಶರಣರ ಬಾಗಿಲುಗಾಹಿ ನಾನಾಗಿರ್ದು ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನೆ (ಬಸಹ. ೦೦೫-೩೦೪). [ಬಾಗಿಲು (< ಬಾಗಿಲ್) + ಕಾಹಿ]

ಬಾಗಿಲುಜೋಳ (ನಾ). ಪ್ರತಿಯೊಂದು ಮನೆಯವರೂ (ದೇವರ ಕಾರ್ಯಕ್ಕಾಗಿ) ಇಂತಿಷ್ಟು ಜೋಳವನ್ನು ಕೊಡಬೇಕೆಂಬ ನಿಯಮ : ಸ್ಥಾನಪೂಜೆ ಬೆಳುಗೊಡೆ ಬಾಗಿಲುಜೋಳ ತಳಾಱಗೂಲಿ ಅಸತನ್ಯಾಯ ವಿಂತಿನಿತುವಂ ಸರ್ಬ್ಬಮಾನ್ಯವಾಗಿ ಹಡದು ದೇವರ ಪೂಜಾರಿಗಂ ಕವಿಲೆಗವಿರಲು ಮ[ಠ]ವಾಗಿ ಬಿಟ್ಟರು (ಸೌಇಇ. XV. ೦೦೦-೪೪ ; 1165).

[ಬಾಗಿಲು (<ಬಾಗಿಲ್) + ಜೋಳ]

ಬಾಗಿಲುತಡೆ 'ಬಾಗಿಲುದಡೆ' ನೋ.

ಬಾಗಿಲುದಡೆ, ಬಾಗಿಲುತಡೆ (ಕ್ರಿ). (ಮದುವೆಯ ಸಂದರ್ಭದಲ್ಲಿ, ವಧೂವರರು ಪರಸ್ಪರ ಹೆಸರು ಹೇಳುವವರೆಗೂ ಒಳಗೆ ಬರದಂತೆ ವರನ ಸಹೋದರಿಯರು) ಬಾಗಿಲಲ್ಲಿ ತಡೆಗಟ್ಟಿ ನಿಲ್ಲು ; ಹಾಗೆ ತಡೆಗಟ್ಟುವ ಶಾಸ್ತ್ರವನ್ನು ಆಚರಿಸು : ಕುವರರ ಮದುವೆಯೊಳ್ ಬಾಗಿಲುದಡೆದಾಗ ಕುವರಿಯರ್ಗಿತ್ತ ಭೂತಳವ (ಭರಸ. ೪೪-೨೯). **ಬಾಗಿಲುತಡೆ** : ಬಾಗಿಲು ತಡೆದ ಅಕ್ಕನನ್ನು ತಮ್ಮ ಕೇಳಿಕೊಳ್ಳುತ್ತಾನೆ (ಪಮ್ಮರು. ೯೬). [ಬಾಗಿಲು (<ಬಾಗಿಲ್) + ತಡೆ$_1$]

ಬಾಗಿಲುವಾಡ 'ಬಾಗಿಲ್ವಾಡ' ನೋ.

ಬಾಗಿಲ್ಕೋಲು (ನಾ). ಬಾಗಿಲಿಗೆ ಹಾಕುವ ಅಗುಳಿ : ಭೂರಮಣ ದ್ವಾರಸ್ಥರಂ ಕರೆದು ನಿಂದು ಬಾಗಿಲ್‌ಕೋಲ ತೆಗೆಯದಿರಿ ನಮ್ಮರಿಕೆಯಿಂದಲಲ್ಲದೆ ವಿಪ್ರರಿಂಗೆನಲು ಕೈಗೊಂಡು ಕಾದಿರಲ್ಕೇಲುಭಟರು (ತುರಂಗ. ೬-೩೦). [ಬಾಗಿಲ್ + ಕೋಲು$_1$ (<ಕೋಲ್$_1$)]

ಬಾಗಿಲ್ಗಾಪು (ನಾ). ಬಾಗಿಲಿನಲ್ಲಿ ಇರುವ ಕಾವಲು : ಬಂದ ದೆಸೆಯಂ ಪೋದ ದೆಸೆಯನಾರುಂ ಕಾಣದಂದದಿಂ ಪಲವು ಬಾಗಿಲ್ಗಾಪುಗಳನುಳಿದು . . . ಪೋಪುದಿದು ಪರಿಭಾವಿಸೆ ಸಂದಳ್ತಿಕಾಱರೊಳಗುಂಟೆ (ಪದ್ಮರಾ. ೫-೫೦); ಬಾಗಿಲ್ಗಾಪಿನ ಪಡಿಯರತಿಯರು ಬಾಗಿ ತುಳಿಲ್ಗೆಯ್ವಾಗ ಒಡತಿಯ ಮುಖವನ್ನು ನೋಡುತ್ತಿದ್ದರು (ಸಪತಿ. ೨೦೦). [ಬಾಗಿಲ್ + ಕಾಪು]

ಬಾಗಿಲ್ಗಾಯ್ (ಕ್ರಿ). ಬಾಗಿಲನ್ನು ಕಾಯು ; ದ್ವಾರಪಾಲಕನಾಗು : ಬಾಗಿಲ್ಗಾಯ್ವುದಿದಯ್ಯಗಳೋಜೆಯೆ (ಉದ್ಯರೇ. ೫-೩೨); ಬಾಗಿಲ್ಗಾಯ್ವರ್ ತಾವುರುತರದ ಕೋಟಾಕವಾಟಂಗಳಂ ದಲ್ (ಹಾಲಾಸ್ಯ. ೩-೨-೦೫).

[ಬಾಗಿಲ್ + ಕಾಯ್$_1$ (<ಕಾ$_1$)]

ಬಾಗಿಲ್ಮಾಡ 'ಬಾಗಿಲ್ವಾಡ' ನೋ.

ಬಾಗಿಲ್ವಾಡ, ಬಾಗಿಲುವಾಡ, ಬಾಗಿಲ್ಮಾಡ, ಬಾಗಿಲ್ವಾಡು (ನಾ). ೧. ಹೆಬ್ಬಾಗಿಲು ; ಪುರದ್ವಾರ ; ಗೋಪುರ : ಸಾಕೇತನಗರಮಂ ಬಳಸಿದ

ಕನಕಪ್ರಾಕಾರದ ಬಾಗಿಲ್ವಾಡಂಗಳೊಳಂ (ಆಂಪ. ೦೬ ೩೭ ವ); ಇಳಿಯಾಣ್ಮನ ಕರುಣರಸಂ ತೀವಿದ ಲಲಿತತಟಾಮದಾಗಲ್ಕರಮನೆ ತೊಳಗುವ ಬಾಗಿಲ್ವಾಡಮಂದಱ ತೂಂಬೆಂಬಪೊಲೊಪ್ಪಿದುದು (ಜಯಂಕಾ. ೧-೬೩). **ಬಾಗಿಲುವಾಡ:** "ಗೋಪುರಂ, ಪುರದ್ವಾರಂ — ಈ ೨ ಬಾಗಿಲುವಾಡಂ" (ಹಲಾಯು. ೯೯-೧೩೩); ಪಿಂತೆ ಪತಿಹಿತವೆ ಸಹಿತಂ ಬರುತಭವನತ್ತ ಪುರದ ಬಾಗಿಲುವಾಡಮುಂ ಪೊಱಮಡಲು ಕಂಡು (ಜಹರ. ದೇ. ೩೮-೭). ೨. **ಅಗಸೆಬಾಗಿಲಿನ ಮೇಲಿನ ಉಪ್ಪರಿಗೆ :** ಮಾಡ ಗೋಪುರ ಮದಿಲ್ ಮಾಳಿಗೆ ಬಾಗಿಲುವಾಡ ದೇಗುಲಗಳನೇಱಿ ನೋಡಿದರ್ಪುರಸತಿಯರು (ಕರಕ. ೩೯-೩೯). ೩. **ಬಾಗಿಲಿನ ಚೌಕಟ್ಟು :** ಹೊಸಮನೆಗೆ ಇಂದು ಬಾಗಿಲುವಾಡವನ್ನು ಇಟ್ಟರು (ಕೂಡಿ). **ಬಾಗಿಲ್ವಾಡ :** ೧. ಧಾರಿಣಿಮಹಾದೇವಿಯುಮ್ಮೂರ್ವರರಸಿಯರ್ಕಳುಂ. . . ಬಂದು ಬಾಗಿಲ್ವಾಡದ ಪೊಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಿಱಿದು (ಪಡ್ಮಾರಾ. ೬೦-೧೩); ಗಂಗೆ ಜುನೆಗಳಿಂದೊಪ್ಪುವ ದ್ವಾರಜಗತೀತಳಂಗಳಂ ತೋಱುತ್ತುಂ ಎರಡನೆಯ ಬಾಗಿಲ್ವಾಡಮಂ ಪೊಕ್ಕು (ಶಾಂತಿಪು. ೩-೦೬ ವ). ೨. ಉಗ್ರಸೇನಮಹಾರಾಜನುಮಂ. . . ಪೊಱಲ ಬಾಗಿಲ್ವಾಡದ ಮೇಗಸಿಪಂಜರದೊಳ್ಸೆಱೆಯಿಟ್ಟು (ಹರಿವಂ. ೩-೧೩ ವ). **ಬಾಗಿಲ್ವಾಡು :** ೧. ಸತತಂ ಪೊಂಗಳಸದ ದೀಧಿತಿಯುನ್ನತಿಗಳ್ಕಳ್ಕಿ ಕೆಲಸಾರ್ದು ದಿವಾಪತಿ ದಕ್ಷಿಣಗತ್ಯುತ್ತರಗತಿಯಾದಂ ಪೊಱಟ್ಟರಳವೆ ಬಾಗಿಲ್ವಾಡಂ (ಜಗಿ. ೯-೦೦೬). [ಬಾಗಿಲ್ + ಮಾಡ₁]

ಬಾಗಿಲ್ವಾಡು 'ಬಾಗಿಲ್ವಾಡ' ನೋ.

ಬಾಗಿಸು₁ (ಕ್ರಿ). ೧. ಬಾಗುವಂತೆ ಮಾಡು; ಬಗ್ಗಿಸು; ಮಣಿಸು : ಕಲಿಯಂ ದೇವಾಗಾರದ ಪಳಯಿಗೆ ದೂರದೆ ಬಾಗಿಸುವನ್ತಿರ್ಕ್ಕುಮಲ್ಲಿ ವಾತೋದ್ಧೂತಂ (ಸೌಇಇ. IX-i, ೦೩೬-೪೬; 1090); ನಿಮ್ಮಡಿಯ ನೆನಹೆ ಕೊರ್ವಿದರಿವಾದಿಗಳ ಮೂಗನರಿದು. . .ಬಾಗಿಸದೆ ತಲೆಯಂ (ಪಡ್ಮಾರಾ. ೯-೨೯); ಮಳೆಗೆ ತೆರಳದೆ ಕೋಡ ಬಾಗಿಸಿ ಕಲಿವೃಷಭ ಹೊಗುವಂತೆ ದ್ರೋಣನ ಬಲುಸರಳ ಸರಿವಳೆಗೆ ದಂಡೆಯನೊಡ್ಡಿ ದಳವುಳಿಸಿ (ಕುಮಾಕ್ರೋ. ೦೩-೦೨). ೨. **ಸೋಲಿಸು; ಪರಾಜಯಗೊಳಿಸು :** ನಾಗಪುರದರಸುಗಳ ಮಕ್ಕಳ ಬಾಗಿಸಿತು ಬಿಲುವಿದ್ಯೆ ಲೋಕದ ಭೋಗಿನೃಪರತ್ನಜರ ವಿದ್ಯೆಯುದೇಕಲವ್ಯನಲಿ ಬಾಗಿ ಹೋಯಿತು (ಸಂಪಕ. ೦೭-೦೨೦). ೧. ೨ : ಕರವೀರವರ್ಗಮಂ ಬಾಗಿಸಿದರದಱರಂತಿರದೆ ಪುನ್ನಾಗಮಂ ಪತ್ತಿ ರಂಜಿಸಿದರ್ಚುರ ಮಾವುತಿಗರಂತೆ (ಕೃಷ್ಣಾಭಾ. ೬-೨೨). [ಬಾಗು₁ + — ಇಸ್₃]

ಬಾಗಿಸು₂ (ಕ್ರಿ). ೧. **ಸೀಳು; ಹೋಳು ಮಾಡು :** ತವಕದೆ ಬಿಳಿಯೆಲೆಯ . . . ಪಿರಿದು ಕೆಂಬಲ್ಲಿಂದ ಬಾಗಿಸಿಯಾತಗೆ ಪರಮಪ್ರೀತಿಯುಲೂಡುವುದು (ಕಂಪಸಿ. ೬ ೦೯೦). ೨. **ಭಾಗ ಮಾಡು; ವಿಭಾಗಿಸು :** ಭೃಂಗಕುಂತಲವನು ಬಾಗಿಸಿ ನಿಖಿಲ ಗೋಪಾಂಗನೆಯರು ಜಡೆವೆಣೆಯೆ (ಪೋಹತ. ೦೯-೯೨). ೩. [ಗಣಿತ] **ಭಾಗಾಹಾರ ಮಾಡು : ಭಾಗಿಸು :** ಲೆಖ್ಖ ಕುಂದದೆ ಬಾಗಿಸಿ ಕೊಟ್ಟರೆ (ಶಾಸ್ಕರ. ೦೩-೩). [ಬಾಗು₁ + — ಇಸ್₃]

ಬಾಗಿಸೂತ್ರ (ನಾ). ಒಂದು ಬಗೆಯ ಸಸ್ಯ : "ಬಾಗಿಸೂತ್ರ, ಗಂಟರಿಷಣ, ಬಾರ್ಬರಿ, ದೊಡ್ಡ ಮರದರಿಶಿನ, ಪೊಟ್ಟವಲ್ಲಿ" (ಸಸ್ಯಶಿ. ೨೦); ದೊಡ್ಡಮರದರಿಸಿನ, ಬಾಗಿಸೂತ್ರ (ಪ್ರೃಕಿಗಿ. ೦೨-೨೦೯). [?]

ಬಾಗು₁ (ಕ್ರಿ). ೧. **ಮಣಿ ; ಬಗ್ಗು :** ದೇವೋತ್ತಮಾಂಗಂಗಳುಂ ಬಾಗಿದುವು (ಆಂಪ. ೬-೩೯); ಫಳಭಾರದಿಂದೊಲೆದು ತೂಗಿ ಬಾಗುವ ಮರಂ (ಪಪಕಾ. ೬-೯೦); ಚಿನ್ನ ಪಣ್ಣೊನೆಯ ಭರದಿಂ ಸನ್ನತಮಾಗಿರ್ದ ಬಾಱಿಸಸಿಯೊಳ್ ಮಿಳಿರ್ಗುಂ ತನ್ನ ಶಿಶುವಿಂಗೆ ಮೊಲೆಯುಂ ಮನ್ನಿಸಿ ಬಾಗಿರ್ದು ಕೊಡುವ ಬಾಲೆಯ ತೆಱದಿಂ (ಶಾರಪು. ೦-೦೦೬). ೨. **ಡೊಂಕಾಗು; ಡೂಗಾಗು; ವಕ್ರವಾಗು :** ಗುಡಿಲಂತೆ ಬಾಗಿದ ಬೆನ್ನುಂ (ಧರ್ಮಾಮೃ. ೯-೬೩); ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ . . . ಪೂಜಿಸು ನಮ್ಮ ಕೂಡಲಸಂಗಮದೇವನ (ಬಸವ. ೦೬೦); ಆಗದು ತಪಕ್ಕೆ ವಿಘ್ನಂ ಬಾಗಿದ ಬೆನ್ನುಡುಗಿದುರಮಡಂಗಿದ ಜಘನ ತೂಗುವ ತಲೆ ಕೆಂಪಿಪ ಕೈ (ಧರ್ಮಪ. ೩-೯೬); ಬಾಗಿದ ಪುರ್ಬು ತಾವರೆಯೆಸಳನೇಳಿಪ ನಿಡುಗಣ್ಣು (ನೋಹತ. ೦೯-೬೨). ೩. **ಎರಗು : ವಂದಿಸು : ನಮಸ್ಕರಿಸು :** "ಬಾಗೆಜಗು ಮೊಗ್ಗು ತುಱ್ಪಿಗ್ಗೆಯಿನ್ನಲ್ . . . ವಂದನಾರ್ಥ" (ಕಬಿಕಂ. ೦೬೯); ಮುನೀಂದ್ರನಾ ಪದಯುಗದೊಳ್ ಮನೋಮುದದೆ ಬಾಗುವೆಂ (ಕವಿರಾ. ೨-೦೦೯); ಅಂಗದಪರ್ಣನೆಂಬ ಗಂಧರ್ವಂ . . . ಬಾಗಿದಂ ಪದಯುಗಕ್ಕಾರೂಢಸರ್ವಜ್ಞನಾ (ಸಂಪಶಾ. ೩-೩೯). ೪. **ಬಗ್ಗಿಸು ; ಮಣಿಸು ; ಬಾಗಿಸು :** ನಾಣ್ಚ ತಲೆಯಂ ಬಾಗಿ ನೆಲನಂ ಬರೆಯುತ್ತುಂ (ಸಂಪಶಾ. ೪-೬೯ ವ); ಉದ್ಧೃತಗೋತ್ರಾಭಿಮುಖಂ ವಜ್ರಾಘಾತಮಾದಂತೆ ಸಿಗ್ಗಾಗಿ ತಲೆಯಂ ಬಾಗಿ (ಗದಾಯು. ೩-೭೯ ವ); ಕರಪ ಮುಗಿದು ಸಜ್ಜನರಿಗೆ ಶಿರ ಬಾಗಿ ಚರಿಸುತಿರೆಚ್ಚರಿಕೆ (ಪುರಂದ. ೨-೧೩-೨). ೫. **ಪಾತ್ರೆಯನ್ನು ಬಗ್ಗಿಸಿ ಅನ್ನದ ಗಂಜಿಯನ್ನು ಬಸಿ :** ಪುಷ್ಪವಾಸನೆಯ ಮೆಲ್ಲಿನ ತಣ್ಪಿನ ಕಂಪಿನಲು ಪೊಂಪುಱೆ ಪೋಗುತಿರ್ಪ ತಂಡುಲಂಗಳಂ ಕಳಿದುಕೊಂಡು ಬಾಗಿದೋಗರಮನಾರೋಗಿಸುವಂ (ಸುಳುಪಾ. ೦೦-೩೫ ವ); ಕುದಿ ಬರಲೊಯ್ಯನೆ. . . ಅಗುಬ್ಬಗಳ ಹದನಂ ತೆಗೆದೊತ್ತಿ ನೋಡಿ ಬಾಗಿದಳಾಗಳ್ (ಪಶಕ. ೦೨-೧೨೨); ಅನ್ನ ಬೆಂದದ್ದು ಹೆಚ್ಚಾಗಿ. ಬೋಸವಾಗಿದೆ. ಬಾಗಿದರೆ ತಿಳಿಯೇ ಇಲ್ಲ (ಮಾರಮ. ೨೨). ೬. (ಆಲಂ) **ವಿನಯದಿಂದ ವರ್ತಿಸು : ತಗ್ಗಿ ನಡೆ ; ಸಗ್ಗು :** ತಾಗಿ ಬಾಗದ ಮರುಳುತನದುದ್ಯೋಗವಿದಕೇನೆಂಬಿನಕಟಕಟೀಗಲದ್ದುದು ಕೌರವಾನ್ವಯವೆಂದನಾದ್ರೋಣ (ಕುಮಾಭಾ. ೦-೯) ; ಪಿರಿಯರ ಸೇವೆಗೆಯ್ . . . ಪರಿಜನವಂಕರಂ ಸಲಹು ಭಾಗ್ಯದೆ ಬಾಗಿರು ಪೆಣ್ಗಳಿಂತಿರಲ್ ಗರತಿಯರಪ್ಪರ್ (ಶಾಕುಂತ. ೩೭-೯೬).

ಬಾಗಿಕೊಂಡಿರು = (ಆಲಂ) **ವಿನಯದಿಂದಿರು : ನಮ್ರತೆಯಿಂದಿರು :** ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದಡೆ ಬೇಡಿದ ಪದವಿಯನೀವ . . . ಕೂಡಲ ಸುಗಮದೇವ (ಬಸವ. ೦೬೯). **ಬಾಗೊತ್ತು** = ಬಾಗುವಂತೆ ಒತ್ತು : ಬಾಗಿಸು : ಪೂಗಣೆಯನ ಚಾಮರಮಂ ಸೀಗುರಿಯಂ ಪಿಡಿವಳಂತೆ ಸೆಳೆಗೊಂಬುಗಳಿಂ ಬಾಗೊತ್ತಿ ಗುಜ್ಜುಮಾವಿನ ಪೂಗೊಂಚಲನುಡಿದು ಪಿಡಿವಳಳಿವರಸೊರ್ವಳ್ (ಲೀಲಾವ. ೦೩-೬೨) ; ಎತ್ತಿದನು ಬಾಗೊತ್ತಿದಿನು ಕೊರಳಿಗೆ ತೊಡಿಸಿದನು ತಿರುವ (ಕುಮಾಆ. ೦೫-೨೭); ಹಂಸಧ್ವಜಂ. . .ರಥವೇಱಿ ಬಾಗೊತ್ತಿ ನಿಜಚಾಪಮಂ ಜೇಗೈದು ಪಡೆಸಹಿತ ಫಲುಗುಣಂಗಿದಿರಾದನು (ಕೃಷ್ಣಾಭಾ. ೦೯-೨೯). 'ಬಗ್ಗು₁' ಪರಾ.

[ದೇ.॥ ತಮಿ. ವಾಙ್ಕು. ವಾಕ್ಕು; ದುಲ. ವಾಙ್ಜ : ತುಳು. ಬಾಗು, ಬಾಂಗು ; ತೆಲು. ವಂಗು; ಕೊಡ. ಬಾಕ್ : ಕೋಲಾ. ವಂಗ್]

ಬಾಗು₂, ಬಾಗ್ಯ₂, ಬಾಗ್ಯೆ₂ (ನಾ). ೧. (ಆಯುಧ ಮುಂತಾದುವುಗಳ ತುದಿಯ) **ಕೊಂಕಾದ ಭಾಗ :** ನಾರಿಸುತನ ಆರೈಕೆಗೊಂಬವನ ಬೇರಿನ ಬಿಲ್ಲು ನುಂಗಿತ್ತು ಬಿಲ್ಲಿನಾ ಬಾಗಿನಲ್ಲಿ ಇವರೆಲ್ಲರು ಸಿಕ್ಕಿದರು (ಮೋಕಾಮಾ. ೦೯೦-೬೦೭) ; ತಾಗಿ ಕಡಿದೊಟ್ಟಿದನು ಕೊಡಲಿಯ ಬಾಗಿನಲಿ ಬಹು ಚಾತುರಂಗವ (ಸಂಪಕ. ೨೬-೬೮) : ಆಗಸದ ಬಾಗು ಚಂದ್ರಮನ ಗುಂಡಿನ ನಣ್ಪು ಸಾಗರದ ತೆರೆಪಂಕು, ಗಿಡಬಳ್ಳಿ ಬಳುಕು . . . ಯಿಾ ಸೃಷ್ಟಿಯಿಂ ನಮ್ಮೊಳಾಗಿಹುದು ರೂಪರುಚಿ (ಮುಂಕಃಸ. ೨೦೭). ೨. **ನದಿಯ ತಿರುವಿನಲ್ಲಿ ಇರುವ ಜಮೀನು, ಗದ್ದೆ. ತೋಟ ಮುಂತಾದ ಫಲವತ್ತಾದ ಪ್ರದೇಶ :** ಅಳಿಯಿಲ್ಲದಚ್ಚವನಮಿಲ್ಲುದ್ಯಾನಸಂತಾನಮಿಲ್ಲದ ಬಾಗಿಲ್ಲ (ಶಾಂತಿಪು. ೯-೦೩೩) ; ಆಗ್ನೇಯದೊಳೆಱೆಯ

ಬಾಗುಂ . . . ಪಡುವ ಪೂವಿನ ಕೆಱೆಯುಂ ಬುರುಲ ಬಾಗುಂ (ಸೌಇಇ. IX-i. ೦೨೦-೪೩ ; 1058) ; ಮಾಬಲಯ್ಯನ ಬಳದ ಮರೆಯ ಸೋಂಕಿನ ಬಾಗಿನ ಬಟ್ಟೆಯಿಂ ಮೂಡಣ ಮೆಯ್ಯ ಕೆಯ್ (ಕಇ. II, ೯-೨೫ ; 1075). ೩. ಸಂದುಗೊಂದು ; ಮೂಲೆ : ಕೆಲ್ಲೆ ಕುಹರದ ಕೋಣೆ ಬಾಗು ಗಳೆಲ್ಲವನು ಹೊಕ್ಕರಿಸಿ ತೆರಳಿಚಿದನು ಮಹಾಧನವ (ಕುಪ್ಯಾಸ. ೩-೪೭) ; ಓರೆಬಾಗಿನ ಕುಱುವ ಕೊಳ್ಳದ ಗೌರಿಕರನಪ್ಪಳಿಸಿ ಮಲೆಯ ವಿಹಾರಿಗಳ ಬಱಿಗೈದು ತುಂಬಿಸಿದನು ಸುವಸ್ತುಗಳ (ಕುಪ್ಯಾಸ. ೪-೦೦). ೪. [ಸಂಗೀತ] ಧ್ವನಿಯ ಪಲುಕು.—ಬಳುಕು : ಉದ್ದ ನೀಚ ಸ್ಥಾಯ ಸಂಚಾರಿ ಠಾಯೆ ಬಾಗು ನಿಬದ್ಧಾಬದ್ಧಾದ್ವಾವಿಂಶತಿ ಶ್ರುತಿಯೇಕವಿಂಶತಿ ಮೂರ್ಚನೆ ಗಳೆಸೆಯೆ . . . ಪಾಡುತ್ತಿರೆಯುಂ (ಶಾಂತೀಕ್ಯ. ೦೬-೬೬ ಪ) ; ಆ ವಧು ಠಾಯೆ ಬಾಗು ಮೋಹ ಚಾಳೆಯಮಂ ನೆಱೆ ಮಾಡಿ ತೋಡಿ ಪೇಳಾವಳಿ ದೇಶಿ ಗುಜ್ಜರಿಪರಾಳಿಗಳಿಂದಮೆ ನಾಡೆ ಪಾಡುತುಂ (ಧರ್ಮಪ. ೩-೯೦). ಬಾಗ್ಗೆ : ೨. ಪಡುವ ಬಾಗಿಯ ಪೊಳಗೆ (ಸೌಇಎ. ೦೯೩೦, ಉಡುವಿ. ೫೯೬-೦೯; 1414). ಬಾಗ್ಗೆ : ೨. ತೆಂಕಣ ಬಾಗೆಯ ತೊಱೆವಳಿ ನಾಡ ಬೆಳತ್ತೆಯೆ ಮೂಳಗದ್ದೆ ಬೆದ್ದಲು ಚತುಸ್ಸೀಮೆಯನುಳ್ಳದನು ಸರ್ವಮಾನ್ಯದ ಕೊಡಗೆಯಾಗಿ . . . ಶಿಲಾಶಾಸನವ ಮಾಡಿಕೊಟ್ಟೆವು (ಎಳ. IX, ಬೆಂಗಳೂ. ೮೦-೦೨ ; 1303) ; ಚೊಕ್ಕಣ್ಣಗಳ ಬಾಗೆಯೊಳಗೆ ಬೀಯಣ್ಣನ ಹೊಲ (ಎಳ. IX (3), ಬೆಂಗಳೂ. ೦೬೯-೦೦; 1424). [<ಬಾಗು$_1$]

ಬಾಗುಂಜಿ 'ಬಾಗುಜಿ' ನೋ.

ಬಾಗುಜಿ, ಬಾಗುಂಜಿ, ಬಾಬಿಂಜಿ, ಬಾವಂಚಿ, ಬಾವಂಜಿ, ಬಾವುಜಿ, ಭಾವಂಜಿ, ವಾಕುಷಿ, ವಾಗುಂಜಿ, ವಾಗುಷಿ (ನಾ). ಒಂದು ಬಗೆಯ ಔಷಧೀಸಸ್ಯ ; ಸೋಮವಲ್ಲಿ : "ಚಂದ್ರಮುಷ್ಟಿ, ಬಾಗುಜಿ" (ಅಳಾವಿ. ೦೦-೦೦) ; "ಕಾಳಮೇಷಿ—ಕರಿಯ ತಿಗಡೆ, ಕರಿಯ ಜೀರಗೆ, ಮಂಜಿಷ್ಠೆ, ಬಾಗುಜಿ ?" (ಓಷಧಿ. ೩೦). **ಬಾಗುಂಜಿ** : ಚಿತ್ರಮೂಲ ಬಾಗುಂಜೀ ಬೀಜ ಇವನು ಗೋಮೂತ್ರದಿಂದ ಅರೆದು ಲೇಪಿಸಲು ಕುಷ್ಠ . . . ಶಮನ (ಸೈದ್ಧಸಾ. I, ೩೯೩) ; ಬಾಗುಂಜಿಬಿತ್ತುವಾಕಳತುಪ್ಪದಲಿ ಕುಡೆ ಕುಷ್ಠ ತಾ ಕೆಡುಗುಂ (ಸಾಳ್ಯಸಾಂ. ೨೦) ; ಚಿತ್ರಮೂಲ ಬಾಗುಂಜೀ ಬೀಜ ಇವನು ಗೋಮೂತ್ರದಿಂದ ಅರೆದು ಲೇಪಿಸಲು ಕುಷ್ಠ ಹರ (ವಿಸ್ತೃವಿ. ೦೪೫). **ಬಾಬಿಂಜಿ** : ಗುಲ್ಲಕಂಚಿ, ಬಾಬಿಂಜಿ (ಮೃಜಿಗಿ. ೨೫-೪೭೯). **ಬಾವಂಚಿ** : ಹೀರಿಯು ಮತ್ತು ಬಾವಂಚಿಯು ಮಲಭೇದಕ (ಅಷ್ಟಾಂಗ. ೦೩೫-೫ ಪೇಳು) ; ಬಾವಂಚಿ ಗಿಡ, ಕಾರ್ಬೆಕ್‌ಬೀಜ (ಮೃಜಿಗಿ. ೬೫-೦೩೦೩). **ಬಾವಂಜಿ** : ತಗಚಿಯ ಬೀಜ ಬಾವಂಜಿಯ ಬೀಜ . . . ಇವೆಲ್ಲವಂ ತಮ್ಮೊಳು ಸರಿಯಾಗಿ ಕೊಂಡು ಚೂರ್ಣವಂ ಮಾಡಿ (ವಿಸ್ತೃವಿ. ೯೨). **ಬಾವುಜಿ** : "ವಾಕುಚಿಯೆನಲು ಬಾವುಜಿಯೆನಿಕ್ಕು" (ಮಂಗರಾ. ೩೬-೨೦). **ಭಾವಂಜಿ**: ಏಲಕ್ಕಿ ಲವಂಗ . . . ಭಾವಂಜಿಯಲೆರಸದಿಂದರೆದು . . . ಕಲಸಿ ಕೊಡಲು ಜ್ವರಾತಿಸಾರ ಗ್ರಹಿಣಿ ಸಹ ಗುಣಮಕ್ಕುಂ (ಸಕಸ್ಯ. ೩೦೯). **ವಾಕುಷಿ**: "ಅವಲ್ಗುಜ, ಸೋಮರಾಜಿ . . . ವಾಕುಷಿ, ವಾಗುಷಿ, ಪೂತಿಫಲಿ " (ಶಾಸಂ. ೪). **ವಾಗುಂಜಿ** : ಸಾಸಿವೆಯ ಗಿಡದ ಅಗಿಲು, ಬಿಳಿಯ ಗುರುಗುಂಜಿ, ವಾಗುಂಜಿಯ ಬೀಜ, ಪ್ರತ್ಯೇಕ ೪ ತೂಕ(ವಿಸ್ತೃವಿ. ೨೮). **ವಾಗುಷಿ** : ಮೇಲಿನ 'ನಾಚಿರಾ' ಪ್ರಯೋಗವನ್ನು ನೋಡಿ.

[<ಸಂ. ವಾಕುಚೀ./ಹಿಂ. ಬಕುಚೀ, ಬಾಬಚೀ; ಮರಾ. ಬಾವಚೀ]

ಬಾಗುಮರಿಗೆ (ನಾ). ಅನ್ನದ ಗಂಜಿಯನ್ನು ಬಸಿಯುವ ಪಾತ್ರೆ: ಅನ್ನದ ಹಿತ್ತಾಳೆಚರಿಗೆಯನ್ನು ಒಲೆಯ ಪಕ್ಕದಲ್ಲಿಟ್ಟಿದ್ದ ತಾಮ್ರದ ಬಾಗುಮರಿಗೆಗೆ ಎತ್ತಿ ಇಳಿಸಿ . . . ಅನ್ನ ಬಸಿಯಲು ಅಣಿಯಾಗುತಿದ್ದಳು (ಮಲೆಸು. ೩೦೦). [ಬಾಗು$_2$ + ಮರಿಗೆ (< ಮರಗೆ)]

ಬಾಗುಪಡೆ (ಕ್ರಿ). ಕೊಂಕನ್ನು ಹೊಂದು ; ವಕ್ರತೆಯನ್ನು ಪಡೆ : ಎಡೆಯಾದ ನೀಡಡಿ ಶರೀರದೊಡನತಿಬಾಗುಪಡೆದೆಡದ ಮೆಯ್ ನೆಗೆದ ಬಲದ ಕಟಿ ನಾರಿಯಂ ತುಡುಕಿ ಕರ್ಣದ ಕಡೆಗೆ ಸೆಳೆದ ಕೈ . . . ದೃಷ್ಟಿ ಮುಷ್ಟಿ ಶರಸಂಧಾನವನುವಾಗೆ ಕೆಡೆಕೆಡೆಯೆನುತ್ತೆ ಕೂಕಿಱಿದೆಚ್ಚನು (ಪಕಣಾ. ೬-೨೯). [ಬಾಗು$_3$ + ಪಡೆ$_1$]

ಬಾಗುಳ್ 'ಬಾಗುಳ' ನೋ.

ಬಾಗುಳ, ಬಾಕುಳ, ಬಾಗುಳ್ (ನಾ). ೧. ಮನಸ್ಸಿನ ಗೊಂದಲ; ಕಳವಳ ; ಚಿಂತೆ : "ಬಾಗುಳಂ ವ್ಯಾಕುಲದೊಳ್" (ಕರ್ಣಾವಿ. ೬೮); ಬಯಕೆಯ ಬಾಗುಳಮಾ ಕಾಂತೆಯೊಳಂತದು ನೆಗಟ್ಟುದಿಲ್ಲಣಂ ತೃಷ್ಣಾರ್ತಿ ಕ್ಷಯಕರನಿರೆ ತಾಂ ಗರ್ಭಾಶಯದೊಳ್ ತೋಱುಗುಮೆ ದೋಹದಂಗಳ ವೊಂದುಂ (ವರ್ಧಮಾ. ೦೦-೬೨); ಪೋಗುಪೋಗೆಂದೆನ್ನನಟ್ಟಿಯೆ . . . ಬಾಗುಳದೆ ಹುಲುನರರಿಗೊಪ್ಪುವ ಕೀಳುನುಡಿಗಳಲಿ ಬೇಗುದಿಯನೆನ ಗಿತ್ತರದರಿಂ ಬೇಗ ಬಂದೆನು (ರಾಮಾಸಂ. ೩-೫-೦೩). **ಬಾಕುಳ** : ೨. ತೀವ್ರವಾದ ಅಪೇಕ್ಷೆ; ಉತ್ಕಟವಾದ ಬಯಕೆ: ನೋಡುವ ಕಣ್ಗೆ ಮೆಯ್ಸವಿಯ ಮಾಡುವ ಕೂರುಗುರ್ಪೊಯ್ಯೆ ಮೆಯ್ಗುಳಂ ನೀಡುವ ಬಾಯ ಬಾಕುಳಕೆ ಪಲ್ಲಟಮಾಡುವ ಬಯ್ದು ಬಯ್ಗುಳಂ ಬೇಡುವ . . . ಗಂಡು ಹೆಣ್ ತಡಂ ಮಾಡುಗುಂ (ಅನಂಪು. ೮-೫೦). ೩. ಆಸೆ ಪಡುವವನು ; ಆಸಕ್ತ : ತನಿಗಳ್ಳ ತವಕಿಗಂ ಬಾಡಿನ ಬಾಕುಳನೀತನೆಂದು ಲೋಹದ ರಸಮಂ ತನು ಕುಡಿಯೆ ಕುಡಿಯಿಪರ್ (ಅನಂಪು. ೯-೩೫). **ಬಾಗುಳ್**: ೧. ಗಾಳಿ ಬೆಮರ್ತಂದು ನೇಸಱ್ ಕಂಗಳನಾದಂದು ಅಮರ್ದು ನಂಜಾದಂದು ನಿನಗೆ ಬಾಗುಳ್ (ರಾಮಾಶ್ವ. ೦೦-೩೦). ℙ ಈ ಶಬ್ದರೂಪ ವಿಚಾರಣೀಯ ವಾದುದು. [< ಸಂ. ವ್ಯಾಕುಲ]

ಬಾಗುಳಿ, ಬಾಕುಳಿ (ನಾ). ೧. ಹೆಬ್ಬಯಕೆ ; ಲೋಲುಪತೆ ; ಅತ್ಯಾಸಕ್ತಿ : "ಬಾಗುಳಿಯೆನಲ್ಕತ್ಯಾಸೆ" (ಕಶರ. ೬೬). ೨. ಅಧಿಕವಾಗಿ ಬಯಸುವ ವ್ಯಕ್ತಿ; ವ್ಯಸನಿ : ಬಾಗುಳಿಗಳು ಏಸು ನೆರೆದಿರ್ದೊಡೆ ಏನು ಕೂಗಿಸುವೆನು ಕಾಗೆಯಂತೆ (ಶ್ಯಾಪಶ. ೦೯-೦೦೦). **ಬಾಕುಳಿ** : ೧. "ಬಾಕುಳಿ, ಮೊಗಸು, ಪಸಂ, ಇಚ್ಛೆ—ಈ ೪ ಇಚ್ಛೆ" (ಕಶಸಾ. ೫೭-೨೩೩); ಕೊಸಱುವ ಲಾಗು ಕೂಡಿ ತಣಿವಿಲ್ಲದ ಬಾಕುಳಿ ಗುಡುರಿಚ್ಚಿಯುಂ ಪೊಸಯಿಪ ಬೇಟಮಂ ಬೆಳಸುವಿಚ್ಚೆಯು ಜತ್ತಕಿ ತಾನೆ ಲೋಕದೊಳ್ (ಸೂಕ್ತಿಸು. ೮-೪೦೦) ; ಓಕುಳಿಯ ನೆವದಿಂದ ತೆಕ್ಕೆಯ ಬಾಕುಳಿಗಳುರವಣಿಸಿತೇ (ಕುಪ್ಯಾಅ. ೭-೮೭); ಮಱಿದುಂಬಿ ಮೇಲಱಿಯದೆ ಅಲರ್ಗಳಂ ಬಾಯ ಬಾಕುಳಿಯಿಂದೆ ತುಳಿದು ಸಲ್ಲಲಿತಕುಸುಮಾಮೋದಮಂ ಪೀರ್ವುವೋ (ಅರಾಶ. ೨-೦-೦೦). ೨. ಮತ್ತೊರ್ವಳ್ ಬೆಸನದ ಬಾಕುಳಿ (ಲೀಲಾವ. ೦೪-೪೨ಪ); ಪುಣ್ಯಲೋಭಿ ಭಕ್ತರ ಬಾಕುಳಿ ಶರಣರ ಸೂಱೆ (ಬಸರ. ೮-೨೫).

[< ಬಾಗುಳ]

ಬಾಗುಱಿ (ನಾ). ಬಲೆ ; ಜಾಲ : ವಾಗುರಾ—ಬಾಗುಱಿ (ಶಬ್ದಾಸು. ೦೪೦ ಪ್ಯಾಪ್ಯಾ). [< ಸಂ. ವಾಗುರಾ]

ಬಾಗ್ಗೆ, ಬಾಗ್ಗಿ (ನಾ). ೧. ಒಂದು ಬಗೆಯ ಮರ; ಶಿರೀಷ ; ಸಿರಿಸಲ ಮರ : "ಶಿರಿಸಮೆನೆ ಬಾಗೆ" (ಮಂಗರಾ. ೩೬-೦೭); ಬಾಗೆಯಂತೆ ನಿಸ್ಸಾರನಾಗಿ ಅಶೋಕೆಯಂತೆ ನಿಷ್ಫಲನಾಗಿ . . . ಎಲ್ಲಾ ಪಱಿಗಮೊಳಗಾದೈ (ರರ್ಮಾಸ್ಕು. ೨-೦೦೫) ; ಬಾಗೆಯನೊತ್ತಿ ಹಿಡಿದ ಕುಂದಂ ಕೃಷ್ಣಾಗರು ವಿಡಿದುಡುವಳ್ಳಿಗಳಿಂದಾ ಪೂಗಣೆಯನ ಜಯನಾಲಯಮೆನೆ ವನವತಿಪಾವನ ವಾಯ್ತು (ಜಯಕಾ. ೦೫-೪೪). ೨. ಒಂದು ಊರಿನ ಹೆಸರು : ಬಾಗೆಯೆಟ್ಟಿತ್ತುವಾಂ (ಎಇ. IV, ೩೫-೨೭ ; 975); ಶ್ರೀಮತ್ ಕೇತಲ ದೇವಿಯರ್ ತರ್ದ್ದವಾಡಿಸಾಸಿರದೊಳಗಣಱುನೂಱುಂ ಬಾಡದ ಖಂಪಣ ಬಾಗೆಯಯ್ವತ್ತಱ ಬಱಿಯಮುತ್ತಮಮಗ್ರಹಾರಂ ಪೊನ್ನವಾಡಮಂ . . . ಆಳುತ್ತಮಿರೆ (ಇಆ. XIX. ೨೭೨-೭; 1054). **ಬಾಗ್ಗಿ** : ೧. ಕೋಸಲ

ದೇಶದಲ್ಲಿ ಪುಟ್ಟುವ ಪಜ್ರವು ಬಾಗೀಹೂವಿನ ವರ್ಣದಿಂದಿರುವದು (ಸೌಗಂಧಿ. ೩೬೩-೨೫) : ಮರಗಳು ಹೆಸವ, ಹೆಬ್ಬಲಸು . . . ತೇಗ, ಕೋಲುತೇಗ, ಬಾಗಿ, ಬಿಲ್ವಾರ, ದಿಂಡಿಗ (ಸಮ್ಮನು. ೨೩೬).

[ದೇ.॥ ತಮಿ. ವಾಕೈ; ಮಲ. ವಾಕ; ತುಳು. ಬಾಗೆ]

ಬಾಗೆ$_2$ 'ಬಾಗು$_2$' ನೋ.

ಬಾಗೆ$_3$ 'ಬಾಗ' ನೋ.

ಬಾಗೆಯ (ನಾ). ಒಬ್ಬಾತನ ಹೆಸರು : ಸಳಿನಾಡಾ ಬಾಗೆಯವೆಱಿದು ವಿಟ್ಟಾನ್ (ಎಳ. XVI. ತುಮಳೂ. ೯೩-೬ ; ಸು. 780).

[ಬಾಗೆ$_1$ + ಅಯ್ಯ$_1$ (<ಅಯ್ಯ$_1$)]

ಬಾಗೆಯೂರ್ (ನಾ). ಒಂದು ಊರಿನ ಹೆಸರು : ಬಾಗೆಯೂರ ಬಲ್ಲಹನೆಱಿಱಿ ನೊಳ್ಳಿಯಾನ್ . . . ಪಡೆಯುಳಿಱಿದು ಸತ್ತನ್ (ಎಳ. XVI. ತುಮಳೂ. ೯೨-೬ ; ಸು. 780) ; ಇದಕ್ಕೆ ಸಕ್ಕಿ ಜಮ್ಬೂರ ಪೆಮ್ಮಾಡಿ ಗಾವುಣ್ಡನು ಬಾಗೆಯೂರ ಕಮ್ಮಾಱಗಾವುಣ್ಡನು (ಎಳ. V. ಪನ್ನಗಾ. ೨೫೦-೦೨ ; ಸು. 925). [ಬಾಗೆ$_1$ +ಊರ್]

ಬಾಗೆವಾಡಿ (ನಾ). ಒಂದು ಊರಿನ ಹೆಸರು ; ℘ ಬಸವಣ್ಣನವರ ಜನ್ಮಸ್ಥಳವಾದ. ಈಗಿನ ವಿಜಾಪುರಜಿಲ್ಲೆಯ ಬಸವನ ಬಾಗೆವಾಡಿ: ಸಿ[ರ್ಮ್ಮ]ಲಗೆ ಪೂರ್ವ್ವದಿಗ್ಭಾಗೇ ಕೃಷ್ಣಬೆಣ್ಣೋತ್ತರ ಪಥೇ ಬಾಸುರಿಕೋಡು ಇಂಗಳಿಸರ ಬಾಗೆವಾಡಿ ಸಾಮಳವಾಡಿಗೆ ಒಡ್ಡವೊಡಿಗೆ ಮಧ್ಯವತ್ತಿ[ನ] ಪಿಪ್ಪರಗೆನಾಮಗ್ರಮೋ (ಸೌಇ. XI — i. ೮-೦೮ ; 862) ; ಅಗ್ರಹಾರಂ ಬಾಗೆವಾಡಿಯೊಳಗೆಸದಿರ್ಪ ಅಗ್ರೇಶ್ವರಂ ಕಮ್ಮೆಕುಲದಿಂದೆ ಮೆಱೆದಿರ್ಪ ವಿಪ್ರನಿರ್ಪಂ (ಬಸರ. ೧-೯೭). [ಬಾಗೆ$_1$ + ಪಾಡಿ$_2$]

ಬಾಗೇಶ್ರೀ, ಬಾಗೇಶ್ವರಿ (ನಾ). [ಸಂಗೀತ] ಒಂದು ರಾಗದ ಹೆಸರು : ಹತಭಾಗ್ಯೆಯಾದ ಚಿತ್ರಾಂಗದೆ ತನ್ನ ಪೂರ್ವಕತೆಯನ್ನು ಬಾಗೇಶ್ರೀಯಲ್ಲಿ ತೋಡಿಕೊಳ್ಳುತ್ತಾಳೆ (ಸ್ವಪ್ನಹೂ. ೩೨೯). **ಬಾಗೇಶ್ವರಿ** : ಬಾಗೇಶ್ವರಿ ಪೂರಿಯಾ ದರ್ಬಾರಿ ಕಮಾಚ್ ರಾಗಗಳು ಉನ್ಮಾದವನ್ನೂ . . . ಗುಣಪಡಿಸುವುವೆಂಬ ಭಾವನೆ ಉತ್ತರಭಾರತದಲ್ಲಿದೆ (ಭಾರದ. ೫೪೪).

[←ಹಿಂ. ಬಾಗೇಸರೀ; ಮರಾ. ಬಾಗೇಶ್ರೀ, ಬಾಗೇಸರೀ, ವಾಗೇಶ್ವರೀ]

ಬಾಗೇಶ್ವರಿ 'ಬಾಗೇಶ್ರೀ' ನೋ.

ಬಾಚಂಗೆ 'ಬಾಚಣಿಗೆ' ನೋ.

ಬಾಚಣಿಗೆ, ಬಾಚಂಗೆ, ಬಾಸಣಿಗೆ$_1$ (ನಾ). ೧. ಒಂದು ಬಗೆಯ ಮರ : ಈಜಿಗಿಡ, ಅಗ್ನಿಮಂದ, ತಕ್ಕಿಲೆ, ಬಾಚಣಿಗೆಮರ (ಮೈಶಿಗಿ. ೬೪-೦೩೦೦). ೨. ಕೂದಲನ್ನು ಹಿಕ್ಕುವ ಒಂದು ಬಗೆಯ ಸಾಧನ ; ಹಣಿಗೆ ; ಕಂಕತಿಕೆ : ಅಣದು ವೀಳೆಯದೆಲೆಗೊಡುತ ಬಾಚಣಿಗೆ ಬೊಕ್ಕಸವಾಂತು ಬಲುಸಂದಣಿಸುತಾಳೀಜನ ನಡೆಯಿತಾ ಚಾರುಚಪ್ಪರಕೆ (ಸವಸ್ಕು. ೯-೫೭) ; ತಲೆಯ ಕೂದಲೆಲ್ಲಾ ಬಾಚಣಿಗೆ ಕಾಣದೆ ಗಾಳಿಯಲ್ಲಿ ಹಾರಾಟದ ಅಭ್ಯಾಸ ನಡೆಸುತ್ತಿವೆ (ಅಂಹೂ. ೦೦೬). **ಬಾಚಂಗೆ** : ೧. ಬಾಚಂಗೆ (ಪನಿಯಾರ) —ಎತ್ತರವಾದ ವೃಕ್ಷವು. ಇದರ ಕಟ್ಟಿಗೆಯಿಂದ ಹಣಿಗೆಗಳನ್ನೂ ಕರಡಿಗೆ ಮುಂತಾದ ಶೋಭೆಯ ಒಡವೆಗಳನ್ನೂ ಮಾಡುತ್ತಾರೆ (ಕಭಾಗೆ. ೪೪). **ಬಾಸಣಿಗೆ$_1$** : ೨. ಕಾಳಾಂಜಿ ಕೈಪಿಡಿ ಬಾಸಣಿಗೆ ಬಂಧುರದಾಲವಟ್ಟ ಚಾಮರದ . . . ನಾರಿಯ ರೈದಿದರು (ಕಂನವಿ. ೯-೭೬) ; ರನ್ನದ ಬಾಸಣಿಗೆ ಚಿನ್ನದ ಸೀರಣಿಗೆ ಕೈಕಟ್ಟಿನವ ಕಟಿನರಿಗೆ ಸೀರೇಯ ತಾಯಿ ನಮ್ಮವ್ವ ಕಳುವ್ಯಾಳೇ (ಗೌರಹ. ೦೦). [ಬಾಚು (<ಬಾರ್ಚು) + ಪಣಿಗೆ./ತುಳು. ಬಾಚಣಿಗೆ]

ಬಾಚಣಿಸು$_1$, ಬಾಸಣಿಸು$_1$ (ಕ್ರಿ). ಕೂದಲನ್ನು ಹಿಕ್ಕು.— ಬಾಚು : ಕುರುಳ ಬಾಚಣಿಸುತಲಿ ಬೈತಲಿಸರವು ಮುತ್ತಿನ ಬೊಟ್ಟು . . . ಇಟ್ಟು ಶೃಂಗರಿಸೆ (ನಂದಿಲೀ. ೩-೬೪); ಹೆದ್ವಾರವಿಂತು ಕಡುಚೆಲುವೆಸೆಯೆ ತತ್ಪುರದ ಮಧ್ಯ ಭೂದೇವಿ ತಿನ್ಮಸ್ತಕವ ಬಾಚಣಿಸಿ ತಿದ್ದಿದ ಸುಬೈತಲೆಯ ರೇಖೆಯೆನೆ (ಸವಮೋ. ೨-೨೯). **ಬಾಸಣಿಸು$_1$** : ರುಕ್ಮಿಣಿಸತ್ಯಭಾಮಾದೇವಿಯರ್ ಕುರುಳ ಬಾಸಣಿಸಿ ಪೂವಿಡಿಕಿಱಿದು ಪರ್ಜೆಡೆವೆಣೆದರು (ಮೋಹತ. ೦೪-೪೦); ಶ್ರೀತಳೋದರಿಯ ಕೇಶವ ಬಗಿದು ಬಾಸಣಿಸಿ ಬೈತಲೆಯ ತೆಗೆದು ತಿದ್ದಿದರು (ಸವಮೋ. ೨೩-೦೨). [<ಬಾಚಣಿಗೆ + — ಇಸು$_3$]

ಬಾಚಣಿಸು$_2$ 'ಬಾಸಣಿಸು$_2$' ನೋ.

ಬಾಚಿ$_1$ (ನಾ). ಮರವನ್ನು ಕೆತ್ತಲು, ಬಡಗಿಗಳು ಬಳಸುವ ಅಗಲ ಬಾಯಿಯ ಒಂದು ಬಗೆಯ ಕಬ್ಬಿಣದ ಸಾಧನ : "ದುಡಿಯೆನೆ ಬಾಚಿ" (ಮಂಗರಾ. ೦೦೩-೬) ; ಬಾಚಿಯಿಂ ತಡಂಗಡಿದುಂ ಕೊಂತದಿಂ ತಗುಳ್ದಿಱಿದುಂ (ಧರ್ಮಾಮೃ. ೩-೭೩) ; ಬಾಚಿಯೊಳು ಕೆತ್ತುವ ಕತ್ತಿಯಿಂ ಕಡಿವ ಕರಗಸದಿ ಕೊಱೆವ ರೌರವದ ನರಕಂ ಭಯಂಕರವಾದುದು (ಸಿದ್ಧರಾ. ೬-೨೬). 'ಕೈಬಾಚಿ' ಪರಾ.

[<ಸಂ. ವಾಶೀ, ವಾಸೀ./ತಮಿ. ವಾಚ್ಚಿ, ವಾಯ್ಚ್ಚಿ ; ಮಲ. ವಾಚ್ಚಿ ; ತುಳು. ಬಾಚಿ, ಬಾಜಿ ; ತೆಲು. ಬಾಡಿಸ]

ಬಾಚಿ$_2$ (ನಾ). ಮೈಜೋಡು; ಕಂಚುಕ : "ಆ ವಾರವಾಣಕಂ ಕಂಚುಕಂ ಚೋಳಕಂ ಕುಪ್ಪಸಂ ಬಾಚಿಯಕ್ಕುಂ " (ಮಂಗರಾ. ೦೦೦-೨೯). [?]

ಬಾಚಿಸು$_1$ (ಕ್ರಿ). ೧. (ಕಸವನ್ನು) ಒಟ್ಟಾಗುವಂತೆ ಸೇರಿಸು; ಗೋರಿಸು: (ಕಿ). ೨. ಹಣಿಗೆಯಿಂದ ಕೂದಲನ್ನು ಹಿಕ್ಕುವಂತೆ ಮಾಡು : ಶಾಂತಿಯೇನೋ . . . 'ಅಕ್ಕ' ನಿಂದ ತಲೆ ಬಾಚಿಸಿಕೊಳ್ಳಲು ಒಪ್ಪಿದಳು (ಪಾತ್ಸಲ್ಯ. ೫೬). [ಬಾಚು (<ಬಾರ್ಚು) + — ಇಸು$_3$]

ಬಾಚಿಸು$_2$, ಬಾಜಿಸು$_1$ (ಕ್ರಿ). ಓದು ; ವಾಚಿಸು : ವಾಚಕನೋಲೆಯರ್ಥ ಮನಱಿಯದೆ ವಿಪರೀತಮಾಗಿಂತೆಂದು ಬಾಚಿ[ಪಾಠಾಂ. ಜಿ]ಸಿದಂ (ಪಡ್ಡಾರಾ. ೭೫-೦೭); ಯುವರಾಜನೃಪಂ . . . ರಾಜಾದೇಶವನಾಗಳ್ಬರ್ಚಿ ನೋಡಿ ತಾಂ ಬಾಚಿಸಿದಂ (ಕಾದಂಉ. ೨೫೭); ಒಂದಂ ಬಾಚಿಸುತಿರೆ ಮತ್ತೊಂದಂ ಬೆಸಗೊಳ್ವಂ . . . ಇದು ಕಾವ್ಯಮಂ ಖಳಂ ಕೇಳ್ವಂದಂ (ಸೂಕ್ತಿಸು. ೦-೫೩). **ಬಾಜಿಸು$_1$** : ಅದಂ ಸಂಧಿವಿಗ್ರಹಿ ಕೊಂಡು . . . ಅತಿಮಧುರೋದ್ಭಾವಿತಗಂಭೀರನಾದದಿಂ ಬಾಜಿಸಿದಂ (ಅದಿಪು. ೦೪-೪೬); ಸಂಧಿವಿಗ್ರಹಿ ರಾಜಾಜ್ಞೆಯಿಂ (ರಾಜಶ್ರೇಷ್ಠಿಯಾ) ಲೇಖಮನಿಂತೆಂದು ಬಾಜಿಸಿದಂ (ಶಾಪುಂಪು. ೦೬೩); ಬರೆಯಲುಂ ಬಾಜಿಸಲುಂ ಬಲ್ಲ ಶಬ್ದ ಸಂಸ್ಕಾರವುಳ್ಳಾತನಾಗದೇಸಿಗರ್ಗ್ಗೆ ನಿತ್ಯಸ್ಥಿತಿಯೊನ್ದು ಪೊಟ್ಟಱಾಹಾರಮುಂ ವರಿಷಕ್ಕೊನ್ದು ಕಪ್ಪಡವುವನಿಕ್ಕಿಯೋದಿಸಿ (ಎಇ. XX. ೬೮-೨೬; 1012).

[< ಬಾಜನೆ$_1$ + — ಇಸು$_3$]

ಬಾಚು 'ಬಾರ್ಚು' ನೋ.

ಬಾಚುಗಱು (ನಾ). ತಲೆ ಬಾಚಿಕೊಳ್ಳುವ ವ್ಯಕ್ತಿ; ಶೃಂಗಾರದಲ್ಲಿ ಆಸಕ್ತನಾದ ವ್ಯಕ್ತಿ : ಲೋಚಿನೊಳಗಿರ್ದಿಂತು ಬಾಚುಗಱುವಾದನೇ ವಾಚಾಲರೊಳಗಿರ್ದನಾಚಾರಿಯಾದನೇ (ಪಾಗೀರ. ದೇ. ೨೫೬-೭).

[ಬಾಚು (< ಬಾರ್ಚು) + ಕಱು$_2$]

ಬಾಚುಮುದ್ದೆಬೆಲ್ಲ (ನಾ). ಉಂಡೆಬೆಲ್ಲ : ಒಳ್ಳೆಯ ಬಾಚುಮುದ್ದೆಬೆಲ್ಲ ಒಂದು ತಟ್ಟೆಯಲ್ಲಿತ್ತು (ಮರಮ. ೦೨೫).

[ಬಾಚು (<ಬಾರ್ಚು) + ಮುದ್ದೆ$_1$ + ಬೆಲ್ಲ]

ಬಾಚುವಲೆ (ನಾ). (ಬೇಟೆಯಲ್ಲಿ ಪ್ರಾಣಿ, ಪಕ್ಷಿಗಳನ್ನು ಒಟ್ಟಾಗಿ ಗೋರಲು ಸಾಧ್ಯವಾಗುವಂತೆ ಹೆಣೆದ) ಒಂದು ಬಗೆಯ ಬಲೆ : ಬಡಿಗೆವಲೆ ಬಾಚುವಲೆ ಗಾಢವಲೆ ಗೂಢವಲೆ ಮಡಿಕೆವಲೆ ಮಂದಸಿನ ವಲೆಯ ಹೊಱೆಗಳ ಬೇಡವಡೆ ನೆರೆದುದು (ಹಸಕಾ. ೩-೬).

[ಬಾಚು (< ಬಾರ್ಚು) + ಬಲೆ$_1$]

ಬಾಜಂತ್ರಿ, ಬಜಂತ್ರಿ (ನಾ). ಒಂದು ಬಗೆಯ ಚರ್ಮವಾದ್ಯ : ತ್ರಿಸಂಧ್ಯೆ

ಯೊಳಂ ಸಂಜೆವಱಿಯಂ ಬಾಜಂತ್ರಿಯುಣ ಹಱಿಕಾಱಗೆ[ಕೆ]ಯ್ಮತ್ತರು ಹಂಸೆರಡು (ಶಾಸಪ. ೯೭-೦೦೦ ; 1178). ಬಜಂತ್ರಿ :, ಬಜಂತ್ರಿಗಳು ಡಮುರುಗವು . . . ಮೊರವುತಿರ್ದವು ಸರ್ವವಾದ್ಯವು ಸರಲಘೋಷದಲಿ (ಶ್ಯಾಪಸಿಂ. ೦೫-೨೯) ; ಬಜಂತ್ರಿಯ . . . ಒಡಕುದನಿ ಕಿವಿಯನ್ನು ಗಡಚಿಕ್ಕಿಸಿಬಿಟ್ಟಿತು (ಪೃಪಿ. ೬). [←ಮರಾ. ವಾಜಂತ್ರೀ./ಸಂ. ವಾದಿತ್ರ]

ಬಾಜಣೆ 'ಬಾಜನೆ$_2$' ನೋ.

ಬಾಜನೆ$_1$ (ನಾ). ಓದು ; ಓದುವಿಕೆ ; ವಾಚನ : ಬರೆವದ ಬಲ್ಮೆ ಬಾಜನೆಯ ಬಿನ್ನಣಮೊಪ್ಪುವ ಲೆಕ್ಕದೋಜೆ ಸಂಕರಸುತನೊಳ್ಸರಸ್ವತಿಯೊಳಂಬುರುಹಾಸನನೊಳ್ವಿಚಾರಿಸಲ್ದೊರೆ ಸರಿಪಾಟಿಯೆಂದು ನಿಖಿಳೋರ್ಬ್ಬರೆ ಬಣ್ಣಿಸುತಿರ್ಪ್ಪುದೆಂದೊಡೇಂ ಪಿರಿಯನೊ ಸಿಂಗಂ (ಎಳ. VII, ಶಿಕಾಂ. ೦೨೯-೨೯; 1077) ; ಚಕಾರಕ್ಕೆ ಜಕಾರಂ . . . ವಾಚನಾ_ಬಾಜನೆ (ಕಪುಪ. ೨೫೫ ಪ್ರಯೋ). 'ಬಾಜನೆಗಬ್ಬ' ಪರಾ. [< ಸಂ. ವಾಚನ]

ಬಾಜನೆ$_2$, ಬಾಜಣೆ (ನಾ). ವಾದ್ಯಗಳನ್ನು ನುಡಿಸುವಿಕೆ, —ಬಾರಿಸುವಿಕೆ: ಆಟಂ ಬಾಜನೆ ಗಾಡಿಗಳ್ ಪಸದನಂ ಬೆಳ್ದಿಂಗಳೊಳ್ವಾತು ಕೊಂಡಾಟಂ ಕತ್ತುರಿ ಕಪ್ಪುರಂ . . . ಎಂದಿಂತಿವಂ ಬೇಟಕ್ಕಾಗರಮೆಂಬೆನಣ್ಣ (ಕಾಪ್ಯಾಪ. ೬೫೫); ಪಾಡುವ ಸುರಗಣಿಕಾಜನಮಾಡುವ ದೇವಾಂಗನಾಜನು ಬಾಜನೆಯಂ ಮಾಡುವಮರಿ ಜನಂ ತೇಂಕಾಡಿಸುವುದು ರಾಗರಸದೊಳ ಮರನ ಸಭೆಯಂ (ಅಪಂಪು. ೦೨-೪೦); ನಾಡಿಗೆ ನಾಡೇ ಉರಿಯುತ್ತಿರುವಾಗ ಎಲ್ಲಿಯ ಹಾಡುಗಾರಿಕೆ ? ಬನ್ನವೇ ಅನ್ನವಾದಾಗ ಎಲ್ಲಿಯ ಬಾಜನೆ ? (ಅಪ್ಪ. ೦). ಬಾಜಣೆ : ಪರುಟವಣೆಯ ಗಾನದ ನಚ್ಚಣೆಯ ಬಾಜಣೆಯ ಬಿಜ್ಜೋದರರ ಗಂದರರಚ್ಚರರ ಗಜಬಜಿಂ ತೇರೈಸಿದ ... ದೇವಾಂಗನೆಯರ ಗೊಂದಣಂ (ರಾಮಾಶ್ವ. ೭೬-೨೯). [<ಸಂ. ವಾದನ]

ಬಾಜನೆಕಾಱ (ನಾ). ವಾದ್ಯವನ್ನು ನುಡಿಸುವವನು ; ವಾದಕ ; ವಾದನಕಾರ : ರಾಜಸುತೆಯನು ತಜ್ಜಾತಿಗೆ ಕುಡುವುದೊಂದೋಜೆಯ ಮಿಱಿ ದುಷ್ಕುಲದ ಬಾಜನೆಕಾಱಗೆ ಕುಡುವುದುಚಿತವೆ (ಪೇಮಿಸಂ. ೦೨-೬೫).

[ಬಾಜನೆ$_2$ + — ಕಾಱ]

ಬಾಜನೆಗಬ್ಬ (ನಾ). ಒಂದು ಬಗೆಯ ಕಾವ್ಯ : ಪಲತೆಱದ ಪದ್ಯದಿಂದಂ ಲಲಿತವಚೋರಚನನಿಚಯಪದ್ಧತಿಕೆಗಳಿಂ ಸಲೆ ನಿಲೆ ಸಮೆದುದು ಸರಸಾಖಿಲ ವರ್ಣನಮಾದೊಡದುವೆ ಬಾಜನೆಗಬ್ಬಂ (ಕಾಪ್ಯಾಪ. ೯೫೫) ; ಕನ್ನಡದ ಮಟ್ಟಿಗೆ ಪಾಡು, ಮೆಲ್ವಾಡು, ಬಾಜನೆಗಬ್ಬಗಳಿದ್ದುವು (ಕಸಾಪ. ೨೯೯).

[ಬಾಜನೆ$_1$ + ಕಬ್ಬ$_1$]

ಬಾಜವಣೆ 'ಬಜಾವಣೆ' ನೋ.

ಬಾಜಾ, ಬಾಜೆ$_1$ (ನಾ). ೧. ಊದುವ ಅಥವಾ ಬಾರಿಸುವ ವಾದ್ಯ : ಆ ಜಾತ್ರ್ಯಾಗ ಬಾಜಾ ತಗೋತೀನಿ (ಎಡ್ರುಪ. ೦೪೬). ೨. ವಾದ್ಯಗಳನ್ನು ಬಾರಿಸುವಿಕೆ ; ವಾದನ : ಬೇಂಡು ಬಜಂತ್ರಿ ಎರಡೂ ಬಾಜಾ ಸುರುಮಾಡಿದವು (ಪೃಪಿ. ೯). ಬಾಜೆ$_1$: ೧. 'ಬಾಜೆಬಜಾವಣೆ' ಪರಾ.

ಬಾಜಾ ಬಜಂತ್ರಿ = ಹಲವಾರು ಬಗೆಯ ವಾದ್ಯಗಳ ಮೇಳವಾದನ: ರಾಜರಾಜೇಶ್ವರಿ ಕಂಪೆನಿ ಬಹಳ ವೈಭವದಿಂದ ಬಾಜಾಬಜಂತ್ರಿ ಮಾಡಿಸಿಕೊಂಡು ಬೆಂಗಳೂರಿಗೆ ಬಂತು (ಪಟಿಸಾ. ೯೯).

[← ಹಿಂ. ಮರಾ. ಬಾಜಾ. / ಸಂ. ವಾದ್ಯ]

ಬಾಜಾಣೆ (ನಾ). ನಾಲ್ಕಾರು ಬಗೆಯ ಧಾನ್ಯಗಳನ್ನು ಹುರಿದು ಕೂಡಿಸಿ ಮಾಡಿದ ಹಿಟ್ಟು ; ಇದರಿಂದ ತಾಲೀಪಿಟ್ಟು, ಕೋಡುಬಳೆ ಮೊದಲಾದ ತಿಂಡಿಗಳನ್ನು ಮಾಡುತ್ತಾರೆ : ಗಿರಿಣ್ಯಾಗ ಬೀಸಿದ ಬಾಜಾಣಿ ಜಿಗಟ ಇರಾಕಿಲ್ರಿ (ಜೂಪು. ೩).

[←ಮರಾ. ಭಾಜಣೇ, ಭಾಜಾಣೇ]

ಬಾಜಾರ್ 'ಬಾಜಾರ' ನೋ.

ಬಾಜಾರ, ಬಜಾರ್, ಬಜಾರ, ಬಜಾರು, ಬಾಜಾರ್, ಬಾಜಾರು (ನಾ). ದಿನಸಿ ಮುಂತಾದ ಪದಾರ್ಥಗಳನ್ನು ಮಾರಾಟ ಮಾಡುವ ಸ್ಥಳ; ಪೇಟೆ ; ಮಾರುಕಟ್ಟೆ : ಪುರದ ಬಾಜಾರದೈಶ್ವರ್ಯಮಂ ಪೊಗಳಲಳವೆ (ಗುರುಕಾ. ೦-೨೯) ; ಪುರದ ಬಾಜಾರದಿಂದೈತಂದರಾನಂದದಿಂ (ಮಹಾವಿ. ೦೪-೧೦೦) ; ರೇವತಿ ಗಂಡನಿಂದ ಇಪ್ಪತ್ತು ರೂಪಾಯಿಗಳನ್ನು ಪಡೆದುಕೊಂಡು ಸಾಮಾನುಗಳನ್ನು ತರಲು ಬಾಜಾರಕ್ಕೆ ನಡೆದಳು (ಮುತ್ತೈದೆ. ೬೦). ಬಜಾರ್ : (ಮೈಗಸೆ. IV, ೭೬೪). ಬಜಾರ : ಬಾಜ ಬಜಾರವು ಬಯಲೆದ್ದು ಹೋದೀತು (ಎಬಿಕಾ. ೦೨೬-೨೯). ಬಜಾರು : ಬಜಾರಿನಲ್ಲಿ ಕಬ್ಬಿಣದ ಧಾರಣೆ ಹೇಗೆ ಏರುತ್ತಿದೆ ಬಲ್ಲಿರಾ ? (ಕಾಮಿಕಾಂ. ೦೦೩). ಬಾಜಾರ್ : ಚಾರುತರದ ಬುರುಜಿನೊಳು ಬಾಜಾರ್ ಹೂಡ್ರೇ (ಪಂಕ. ೨೩). ಬಾಜಾರು : ಸರಹದ್ದಿನ ಬೆಟ್ಟ ಪರಿಯಂತ್ರ ಲಷ್ಕರಿನ ಬಾಜಾರು ಇಳಿಸಿ ಇದ್ದರು (ರಾಪೇಂದ್ರ. ೦೩೪) ; ಬಾಜಾರಿನಲ್ಲಿ ಅಕ್ಕಿ ತುಟ್ಟಿ (ಮುಂಜಯಿ. ೩-೨೫೯).

[← ಪಾರ. ಹಿಂ. ಮರಾ. ಬಾಜಾರ್]

ಬಾಜಾರಬೀದಿ (ನಾ). ಪೇಟೆಯ ಬೀದಿ : ಮಹಾಲಿಂಗೇಂದ್ರಂ . . . ಮಂಟಪವನುಳಿದು ಬಾಜಾರಬೀದಿಯೊಳ್ಳೆದಲು (ಮಹಾವಿ. ೨೯-೫೪).

[ಬಾಜಾರ + ಬೀದಿ]

ಬಾಜಾರಮುಖ್ಯ (ನಾ). ಪೇಟೆಯ ಮುಖಂಡ ; ವರ್ತಕಪ್ರಮುಖ : ಲಲಿತ ತೊಂಬತ್ತೆಂಟು ಬಾಜಾರಮುಖ್ಯರ್ಗೆ ಗೆಲವಿನಿಂ ವೀಥಿಗಳ ಶೃಂಗರಿಸವೇಳ್ಕೆಂದು ದಲಿತದಿಂ ಬಸವರಸ ಪೇಳಲು (ಪ್ರಶುಪು. ೯-೦೬).

[ಬಾಜಾರ + ಮುಖ್ಯ]

ಬಾಜಾರಿ, ಬಜಾರಿ (ಗು). ೧. ಪೇಟೆಗೆ ಸಂಬಂಧಿಸಿದ ; ವ್ಯಾಪಾರ ವಿಷಯಕವಾದ. ೨. ನೀಚ ; ಕೀಳುಮಟ್ಟದ : ನಿಜಗಂಡನ ಸಂಗವನೊಲ್ಲದೆ ಭುಜಗರ ಸಂಗವ ಮಾಡುವ ಬಾಜಾರಿ ತೊತ್ತಿಗೆಲ್ಲಿಯದೋ ನಿಜ ಮುತ್ತೈದಿತನ (ಪಶಶಾ. I, ೩೩೩). ಬಜಾರಿ : ೩. ಕಳಪೆಯಾದ ; ಅತಿಸಾಮಾನ್ಯವಾದ : ಎಣ್ಣೆಯಲ್ಲಿ ಕರಿದಿದ್ದ ವಡೆ, ಹಳಸಿದ ಕೊಬ್ಬರಿ ಮಿಠಾಯಿ, ಬಜಾರಿ ಪರಬತ್ತು ಅವುಗಳ ಕೆಲಸ ಅವು ಮಾಡಿದ್ದವು (ಸಾವಿಸ. ೨೬). (ನಾ). ೪. ಮಾನಗೆಟ್ಟ ಹೆಣ್ಣು ; ಸೂಳೆ ; ಬೀದಿಬಸವಿ : ಮಗನಿಗೆ ಆಸ್ತಿಯನ್ನು ತಪ್ಪಿಸಿ ಚಲ್ಲುಚಾಲಿನ ಬಜಾರಿಗೆ ಸ್ವತ್ತು ಸೇರುವಂತೆ ಮಾಡಬಾರದು (ಹುಟ್ಟಹ. ೦೮೭) ; ನನ್ನ ಚಾರಿತ್ರ್ಯದ ಬಗ್ಗೆ ಮಾತನಾಡಿದಳೇ ಈ ಮೂರು ಕಾಸಿನ ಬಜಾರಿ ? (ಮೂರುದಾ. ೦೪೫).

[←ಹಿಂ. ಮರಾ. ಬಾಜಾರೀ]

ಬಾಜಾರು 'ಬಾಜಾರ' ನೋ.

ಬಾಜಿ (ನಾ). ೧. ಪಣವನ್ನಿಟ್ಟು ಆಡುವ ಗಂಜೀಪು, ಇಸ್ಪೀಟು ಮುಂತಾದ ಆಟ ; ದ್ಯೂತ ; ಜೂಜು : ಸಾಕುಸಾಕು ಬಾಜಿಯ ಬಿಟ್ಟು ತೊಲಗಿರಿ (ಸಮುಸು. ೨೦). ೨. ದ್ಯೂತಕ್ಕೆ ಒಡ್ಡುವ ಪಣ ಅಥವಾ ವಸ್ತು : ಅವ್ರೇನೂ ಬಾಜೀ ಮಡಗ್ಬೇಕಾದ್ದಿಲ್ಲ (ಪಯ್ಯಸು. ೨೨). 'ಬಾಜಿಕಟ್ಟು' ಪರಾ. [←ಪಾರ. ಹಿಂ. ಮರಾ. ಬಾಜೀ]

ಬಾಜಿಕಟ್ಟು (ಕ್ರಿ). ೧. ಜೂಜಿನಲ್ಲಿ ಪಣವಿಡು, —ಪಣಕಟ್ಟು : ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎಂಬುದಾಗಿ ಅನೇಕರು ಬಾಜಿಕಟ್ಟಿದ್ದರು (ಇಸುಕಾ. ೦) ; ಇಬ್ಬರು ಸ್ನೇಹಿತರು ಬಾಜಿಕಟ್ಟಿ ಅದರ ಅರ್ಥವನ್ನು ನಿರ್ಣಯಿಸುವ ಭಾರವನ್ನು ವಹಿಸಿಕೊಂಡರು (ಪಿಬಂಧ. II, ೯೦). ೨. ಒತ್ತೆಯಾಗಿ ಒಡ್ಡು ; ಒಪ್ಪಿಸು : ಇವರು ಒಂದು ಹಗಲೆಲ್ಲ ಅನ್ನ ನೀರು ಇಲ್ಲದೆ ತಮ್ಮ ಪ್ರಾಣವನ್ನೇ ಬಾಜಿಕಟ್ಟಿ ಹಿಂಬಾಲಿಸಿದ ಮೇಲೆ, ಕಳ್ಳರು . . . ಮೊಕ್ಕಾಂ ಮಾಡಿದರು (ಪಡದಾ. III, ೬೬೨).

[ಬಾಜಿ + ಕಟ್ಟು$_1$]

ಬಾಜಿಗ (ನಾ). ವಾದ್ಯಗಾರ ; ವಾದಕ : ಮೊಳಗಿತು ಬಾಜಿಗರಲ್ಲಿ ಬಾಜಿಸಲ್' ಶುಭವಾದ್ಯ (ಶುಕಾಶ. ೮೨-೭೭).

[<ಬಾಜಾ + — ಇಗ./ತುಳು. ಬಾಜಿಗೆ]

ಬಾಜಿಸು$_1$ 'ಬಾಚಿಸು$_3$' ನೋ.

ಬಾಜಿಸು$_2$, **ಬಾರಿಸು**$_3$ (ಕ್ರಿ). ವಾದ್ಯವನ್ನು ನುಡಿಸು.–ಧ್ವನಿಮಾಡುವಂತೆ ಬಡಿ : ದೇವಲೋಕದ ಪಜಿಗಳಂ ಬಾಜಿಸುತ್ತಂ . . . ಇಂತೆಂದು ಪೇಳ್ದುಡಿದಂ (ಪಡಾ.ಣಾ. ೮೪-೭) ; ಸುರಸುದತಿ ಪೆಱಳ್ ಮೆಱೆದು ಬೀಣೆಯಂ ಬಾಜಿಸಿದಳ್ (ಆದಿಪು. ೭-೨೦) ; ಆ ಸುರದುಮಕುಸುಮ ಕೊಯ್ಕದೆ ಸೂಸಿದವು ಬಾಜಿಸದೆ ಮೊಳಗಿದವಾ ಸುರಾನಕವು (ಶಾಳ್ಕಣಾ. ೩೩-೬). **ಬಾರಿಸು**$_3$: ದಾರಿಸುವ ಕೊಂಬು ಮದ್ದಳೆ ಘಂಟೆಯಂದುಗೆಯ ಘೋರತರರಭಸದಲಿ . . . ಎಯ್ದುಂದರು (ಸಿದ್ಧಣಾ. ೯-೪೯) ; ರಾಜಕುಮಾರಿ ವೀಣೆಯನ್ನು ಬಾರಿಸಲಾರಂಭಿಸಿದಳು (ಣಾಣಿಪು. ೪೦).

[ಬಾಜನ್ಯೆ + — ಇಸ್ಯು./ತುಳು. ಬಾರಿಸು; ತೆಲು. ವಾಯಿಂಚು]

ಬಾಜೀಬಂದು 'ಬಾಜುಬಂದ' ನೋ.

ಬಾಜು, ಬಾಜೂ (ನಾ). ೧. ತೋಳು ; ಭುಜ. ೨. ಪಕ್ಕ; ಮಗ್ಗುಲು; ಪಾರ್ಶ್ವ : ವಿಕ್ರಮನ ಬಾಜುಯಲ್ಲಿ ತಾನೂ ಪವಳಿಸಿ ನಿದ್ರೆಯಂ ಗೆಯ್ಮಲು (ಪಪುಚ. ೦೩); ಪರಮ್ಮ ಯಾರದೋ ಮಾರ್ಗಪ್ರತೀಕ್ಷೆ ಮಾಡುತ್ತ ತನ್ನ ಮನೆಯ ಬಲ ಬಾಜುವಿನ ಕಟ್ಟೆಯ ಮೇಲೆ ನಿಂತಿದ್ದಾಳೆ (ಗಂಗಾಗೌ. ೬೪). ೩. ಪಕ್ಷ ; ಪರ : ಆ ಮುದಿಹದ್ದು ತನ್ನ ಮಗನ ಬಾಜು ಹಿಡಿದು ನನ್ನನ್ನು ಜೂಡಬೇಕೆಂದ (ಕೀಪಪಾ. ೭೮) ; ಅವರು ಚಂದ್ರಭಾಗಕ್ಕನ ಬಾಜು ಹಿಡಿದು . . . ಛೀಮಾರೀ ಹಾಕಿದರೆ ಚಂದ್ರಭಾಗಕ್ಕನ ಪಾಡು ನಾಯಿ ಪಾಡಾಗುತ್ತಿತ್ತು (ಶುಚರಿತಾ. ೬೭). **ಬಾಜೂ** : ೨. ಆನೆಗೆ ಬಾಜೂ ಘಂಟೆಗೆ ಕಬ್ಬಿಣದ ಸರಪಣಿ ಸಹಾ ಪೋಣಿಶಿರುವ ಹಿತ್ತಾಳೆ ಸರಪಣಿ ೧ (ಎಳ. XIV, ಹಂಚಿಪ. ೨೮೨-೪೬; 1847); ಎಡಬಲದ ಎರಡು ಬಾಜೂದಲ್ಲಿಯೂ ಒಡ್ಡುಹಾಕಿಸದೇಕು (ಕೃಶಿಕ್ರ. ೫೫) ; ವಿವಾಹಕಾಲದಲ್ಲಿ ಅಂತಃಪಟವನ್ನು ಹಿಡಿದಿರುತ್ತಾರೆ. ಕೊನೆಗೆ ಚಪ್ಪಾಳೆ ಹೊಡೆದ ಓಡಲೆ ಬಾಜೂಕ್ಕೆ ಸರಿಸುತ್ತಾರೆ (ಣಾಪಜಂ. ೬೫೩). ೪. ದಿಕ್ಕು ; ಕಡೆ : ಭಾಳ ದಿನಾ ಆತು ನೀವು ಈ ಬಾಜೂಕು ಬಂದು ! (ಜಿಲೀ. ೬೬೭).

[←ಪಾರ್. ಹಿಂ. ಮರಾ. ಬಾಜೂ]

ಬಾಜುಬಂದ, ಬಾಜೀಬಂದು, ಬಾಜುಬಂದಿ, ಬಾಜುಬಂದು, ಬಾಜೂಬಂದು (ನಾ). ಸ್ತ್ರೀಯರು ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ; ತೋಳುಬಂದಿ : ಕೈಗಳಲ್ಲಿ ರತ್ನಜಡಿತ ಕಂಕಣಗಳು, ಭುಜದಲ್ಲಿ ಬಾಜುಬಂದಗಳು ಒಪ್ಪುತ್ತಿದ್ದವು (ಎಪಣಾ. ೦೦೩); ವಜ್ರದ ಬಿಂಡೋಲೆ ಮುತ್ತಿನ ಕಂಠಿ ಬಸಮ್ಮ ಬಾಜುಬಂದ ನಾಗಮುರಿಗೆ (ಸಿದ್ಧಪ್ರ. ೦೯-೬೭). **ಬಾಜೀಬಂದು** : ನಾಗಮುರಿಗೆ, ವಂಕಿ, ಬಾಜೀಬಂದು . . . ಮೊದಲಾದ ಆಭರಣಗಳನ್ನು ಧರಿಸಿಕೊಂಡು (ಶುಕಪುಂ. ೭೪). **ಬಾಜುಬಂದಿ** : ವಂಕಿಯು ಭಾವುರಿ ಕಂಕಣಗಳುಲಿಯೆ ಬಾಜುಬಂದಿ ನೆರವಿನ ಮಣಿ ಸಿರಿಯೆ (ಶುಕೀಪೂ. ೦೨೭). **ಬಾಜುಬಂದು** : ತೋಳಿಗೊಂಕಿ ಬಾಜುಬಂದು ಗೊಂಡೆಗಳು (ಕಣಾಗ. ೨೬೭). **ಬಾಜೂಬಂದು** : ತೋಳಿಗೆ ಬಾಜೂಬಂದು, ಕತ್ತಿನಲ್ಲಿ ಅಡ್ಡಿಕೆ (ಪುಬ್ಬಿ. ೪೦).

[←ಪಾರ್. ಹಿಂ. ಬಾಜೂಬಂದ್ ; ಮರಾ. ಬಾಜುಬಂದ, ಬಾಜೂಬಂದ]

ಬಾಜುಬಂದಿ 'ಬಾಜುಬಂದ' ನೋ.

ಬಾಜುಬಂದು 'ಬಾಜುಬಂದ' ನೋ.

ಬಾಜೂ 'ಬಾಜು' ನೋ.

ಬಾಜೂಬಂದು 'ಬಾಜುಬಂದ' ನೋ.

ಬಾಜ್ಜೆ$_1$ 'ಬಾಜಪ' ನೋ.

ಬಾಜ್ಜೆ$_2$ (ಗು). ಚಿಲ್ಲರೆಬಾಬುಗಳನ್ನೊಳಗೊಂಡ ; ಸಾದಿಲ್ವಾರಿಗೆ ಸೇರಿದ : ಚಿಲರ ಬಾಜೆಬಾಬು ಬೇರೀಜು ಮೇರೆ (ಕ್ಯಾಲಿ. ೧೯೩೮. ೫೦-೦೬; 1817) ; ಬಾಜೆಬಾಬುಗಳು ಸಹಾ ಯಾವತ್ತುರನ್ನೂ . . . ಅನುಭವಿಸುವದೂ (ಕ್ಯಾಲಿ. ೦೯೩೯, ೪೨-೯೬ ; 1825). [← ಮರಾ. ಬಾಜೇ]

ಬಾಜೆಬಜಾವಣೆ (ನಾ). ಹಲವಾರು ಬಗೆಯ ವಾದ್ಯಗಳ ಮೇಳ ವಾದನ : ಮುದುಮಕ್ಕಳನ್ನು ಬಾಜೀಬಜಾವಣೆಗಳೊಂದಿಗೆ ಪೆರೆಯಿಸುತ್ತ . . . ನಿಬ್ಬಣ ಹೊರಡಿಸಿದರು (ಹೂಂಸಿ. ೦೪).

[ಬಾಜೆ$_1$ (< ಬಾಜಾ) + ಬಜಾವಣೆ]

ಬಾಟಲಿ 'ಭಾಟಲು' ನೋ.

ಬಾಟಲು, ಬಾಟಲಿ (ನಾ). ಗಾಜಿನ ಸೀಸೆ : ಕಂಪ್ಪಿ : ಏಳು ಬಾಟಲು ಬ್ರಾಂದಿ ಮೊದಲೇ ತರಿಸಿ ಇಟ್ಟುಕೊಂಡಿದ್ದೆವು (ಪಂಗಾಕ. ೬). **ಬಾಟಲಿ** : ನನ್ನ ಶಾಂಪೆನ್ ಬಾಟಲಿ ಎಲ್ಲಿ ಆದೆ ? (ಪೋಪೋ. ೫೬) ; ಬಾಟಲಿ ಕೊಟ್ಟು ಕಳಿಸಿರಿ. ಔಷಧ ಕೊಡುವೆ (ಅಪೋಳ. ೨೪). [← ಇಂ. Bottle]

ಬಾಟಾ 'ಭಾಟಾ' ನೋ.

ಬಾಟಾಮಾರ್ಗ್ 'ಭಾಟಾವಮಾರ್ಗ' ನೋ.

ಬಾಟಿ (ನಾ). ೧. ಒಂದು ಬಗೆಯ ರೊಟ್ಟಿ : ಎಲ್ಲರೂ ದೂರದಲ್ಲಿ ಬದಿಯಲ್ಲಿ ಕುಳಿತು ಬಾಟಿ ತಿನ್ನುತ್ತಿದ್ದರು (ಹೂಸಪೋ. ೨೬೪). ೨. ಜೋಳದ ತೆನೆ : ಸುಗ್ಗಿಯ ಪೂರ್ವದಲ್ಲಿ ಕೂಲಿಕಾರೆ ಜನರು . . . ಹೊಲಗಳಲ್ಲಿಯ ಬೆಳೆಗಳನ್ನು ಕೊಂಡು, ಬಾಟೀ ಮಾರಿ ಬಹಳ ರೊಕ್ಕ ಗಳಿಸುವರು (ಕಣಾಗ. ೪೫೪) ; ನಾನು ಕೈಯಲ್ಲಿ ಕುಡಗೋಲು ಹಿಡಿದು ಬಾಟಿ ಕೊಯ್ಯುವವ (ಣಾಣಂ. ೮೦). [← ಹಿಂ. ಮರಾ. ಬಾಟೀ]

ಬಾಟು (ನಾ). ಎತ್ತರದಲ್ಲಿ ಸಪಾಟಾಗಿದ್ದು, ವ್ಯವಸಾಯಯೋಗ್ಯವಾಗಿರುವ ಭೂಮಿ : ಸ್ಥಳದ ಪೂರ್ವದ ಮಾನ್ಯ ಆಯ ಸ್ವಾಮ್ಯ ಬಾಟು ಬೋಟು ಸಹ ತೊಗರಿಗಟ್ಟಿಕೆ ಸಲುವ ಉವಗ್ರಮಿ ಹಳಿ ಸಹ . . . ಅನುಭವಿಸಿಕೊಣ್ಣು (ಎಳ. XII, ಶುಧ್ಧಿ. ೪೩-೬; 1684 ?).

[← ಹಿಂ. ಭಾಟ್, ಭಾಠ್ ; ಮರಾ. ಭಾಟ್]

ಬಾಟೆ 'ಭಾಟಾ' ನೋ.

ಬಾಡ, ಬಾಡೆ, ಮಾಡ, ವಾಡೆ$_1$ (ನಾ). ೧. ಹಳ್ಳಿ ; ಗ್ರಾಮ : ಇಂತಗ್ರಾಸನಮನುಣುತ್ತಮಱುವತ್ತು ಬಾಡಮನಾಳುತ್ತಂ ಸುಖಸುಕಥಾವಿನೋದದಿಂ ಕಾಲಂ ಸಲೆ (ಪಡಾ.ಣಾ. ೦೬೩-೦೩) ; ಆವರ್ಗೀವುದೊಳ್ಬು ನಿಲೆ . . . ಅಯ್ದು ಬಾಡಮಂ (ಪಂಪಪಾ. ೯-೪೩) ; ಸಂಧಿಗೆಯಲ್ಲೆ ಜೇಡಿದರೆ ಪಾಂಡುತನೂಭವರಯ್ದು ಬಾಡಮಂ (ಗಕಾಯು. ೩-೨೦). ೨. ಒಂದು ಊರಿನ ಹೆಸರು : ಕಱಿಯೂರ ಜಾದಿಯೂರ ಕೊಡಂಗನೂರ ಬಾಡದ ಮಹಾಜನವುಂ (ಎಳ. XI, ೫೩ಪ್ರಮ. ೭೯-೨೮; ೧೮೮) ; ಕದಂಬಳಿಗೆ ಸಾಸಿರದ ಬಳಿಯಗ್ರಹಾರ ಬಾಡದ ಶ್ರೀನಾರಾಯಣದೇವರ್ಗ್ಗೆ ನಿವೇದ್ಯಕ್ಕೆ . . . ಬಿಟ್ಟ ಗಟ್ಟಿಯ ಕವ್ಮ ೨೩೫ (ಎಳ. XI, ಣಾಪಜ. ೦೪೦-೦೩; 1060). ೩. ಕೆಲವು ಊರಿನ ಹೆಸರುಗಳ ಕಡೆಯಲ್ಲಿ ಸೇರುವ ಶಬ್ದ : 'ಗಂಗವಾಡ' ಪರಾ. **ಬಾಡೆ** : ೪. ಮನೆ ; ನಿವಾಸ : ಅವಳು ಆ ರಾತ್ರಿ ನೆಲಕ್ಕ ಬಾಡೆಯಲ್ಲಿ ಬೆಳಗುತ್ತಿದ್ದ ದೀಪಕ್ಕೆ ನಮಸ್ಕರಿಸಿ . . . ಮಟ್ಟಲಿಳಿದಳು (ಹುಂಚಾ. ೦೩). ೫. ಪಜಾರ : ನಡುಮನೆ : ಅತ್ತೆ . . . ಗಂಡನನ್ನೂ ಮಗನನ್ನೂ ಕರೆದುಕೊಂಡು ಬಂದು ಬಾಡೆಯಲ್ಲಿ ಊಟಕ್ಕೆ ಕುಳಿತರು (ಪುಸಣಾ. ೧೧). **ವಾಡ** : ೬. ದನಗಳ ಹಟ್ಟಿ ; ಕೊಟ್ಟಿಗೆ : ವಾಡ-ವಾಡಿ ಪದಕ್ಕೆ ಗೋವುಗಳ ಹಟ್ಟಿ, ಎಂದರ್ಥ (ಕಣಾಗೌ. ೧೧). 'ಕೊಂಡವಾಡ' ಹೋ. **ವಾಡೆ**$_1$: ೪. ಅವರು . . . ಹಳೇ ಹುಬ್ಬಳ್ಳಿಯ ಒಂದು ಮೂಲೆಯೊಳಗಿನ ಒಂದು ವಾಡೆಯಲ್ಲಿ ಒತ್ತಟ್ಟಿಗಿನ ಒಂದು ಕೋಣೆಯನ್ನು ಬಾಡಿಗೆ ಹಿಡಿದರು (ಪೋಪೋ. ೩).

೭. (ಅರಸರು, ಜಮೀನುದಾರರು ಮುಂತಾದವರು ವಾಸಿಸುವ) ಭವ್ಯವಾದ ಗೃಹ ; ಪ್ರಾಸಾದ ; ಭವನ : ದೊಡ್ಡ ವಾಡೆಯಂತಿದ್ದ ಮನೆ ಅವರದು. ಅದಕ್ಕೊಂದು ಮಹಾದ್ವಾರ (ಸಮಜೀ. ೦೨೯) ; ವಾಡೆಯ ಹೆಬ್ಬಾಗಿಲಿನ ಭವ್ಯವಾದ ಹೊಸ್ತಿಲನ್ನು ಅವಳಿನ್ನೂ ದಾಟಿರಲಿಲ್ಲ (ಗ್ರಾಮಾಯ. ೬). 'ಪಾಡಿ$_2$' ಪರಾ.

[< ಸಂ. ವಾಟ./ತಮಿ. ವಾಟೈ. ಮಲ. ವಾಡ ; ಕೊಡ. ಬಾಡೆ ; ತೆಲು. ವಾಡ = ಮನೆಗಳ ಸಾಲು. / ಮರಾ. ವಾಡ, ವಾಡಾ]

ಬಾಡಗ (ನಾ). ತೋಟ ; ವನ : "ವಾಟಕಮೆನೆ ಬಾಡಗಮದು" (ಸಕುಪಿ. ೦೬). [<ಸಂ. ವಾಟಕ]

ಬಾಡಗೆ, ಬಾಡಿಗೆ, ಭಾಡಿಗೆ (ನಾ). ಮನೆ, ಕೊಠಡಿ, ಯಂತ್ರ ಮೊದಲಾದುವುಗಳನ್ನು ನಿಯಮಿತ ಅವಧಿಗೆ ಉಪಯೋಗಿಸಿಕೊಳ್ಳುವವನು, ಅವುಗಳ ಒಡೆಯನಿಗೆ ಕೊಡಬೇಕಾದ ಹಣ : "ಭಾಟಕಃ, ಅವಕ್ರಯಃ_ಈ ೨ ಬಾಡಗೆ" (ಹಲಾಯು. ೯೯-೪೦೯) ; ಕೆಯ್ಯ ಗುತ್ತಗೆಯಿಂ ಮನೆಯ ಬಾಡಗೆಯಿಂ ವಿಶೇಷಂ ಗದ್ಯಾಣ ಧರಣವಾಗಿಯುಳಿದಡೆ ಪಸಿದು ಬಂದವರ್ಗಂಬಲಿಯ ಸತ್ರವಂ ನಡೆಯಿಸುವರು (ಸೌಇಇ. XX, ೦೦೦-೫೯; 1129) ; ಬಾಡ[ಪಾಠಾಂ. ಡಿ]ಗೆಯ ಮನೆಗೆ ಹೊಯಿದಾಡಲೇತಕ್ಕೆ (ಪೋಳಿಮಾ. ೬-೨೯) ; ಕೊಳಚೆಯುದಕಕೆ ಕೊಂಬುದೇ ಹಱಗೋಲ ಬಾಡಗೆಯ (ಕುಪ್ಯಾಳ. ೨೨-೩೦). **ಬಾಡಿಗೆ** : ಲೋಗರ ಕಾರ್ಯಕ್ಕೆ ಬಡಿದು ಕೊಳ್ವ ಬಾಡಿಗೆಯ ಮನೆಗೆ ತಿವಿದುಕೊಳ್ವ . . . ಕಟ್ಟೆಗ್ಗರಂತೆ (ಧರ್ಮಾಮೃ. ೯-೦೬೨); ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ (ಪುರಂದ. ೦-೦೨೬-೦) ; ಬಾಲಕರಿಲ್ಲದ ಬಾಲೆಯದು ಯಾತರ ಜನ್ಮ ಬಾಡಿಗೆ ಎತ್ತು ದುಡಿದ ಹಾಗೆ (ಹಕ್ಕಿಪಾ. ೭೯). **ಭಾಡಿಗೆ** : ಪೊಂದು ತೇಣಿ ಮನೆಗೆ ಮಾಡಿದ ಯೆರಡು ಪಸರದ ಭಾಡಿಗೆಯಿಂದ . . . ದಿನ ೧ ಕೆ ಸೊಲ್ಲಗೆ ತೆಂಗಿನ ಯೆಂಣೆ (ಕಾ. III-1, ೦೯-೫೦; 1545); ಸಾಹೇಬರು . . . ಆ ಜಾಗಾ ಭಾಡಿಗೆಗೆ ಪಡಕೊಂಡರಂತೆ (ಅಪಪಾ. ೦೦೯).

[<ಸಂ. ಭಾಟಕ./ತಮಿ. ವಾಟಕೈ; ಮಲ. ವಾಡಕ. ತುಳು; ಬಾಡಿಗೆ, ಬಾಡಾಯಿ; ತೆಲು. ಬಾಡಿಗೆ, ಬಾಡಿಗ, ಬಾಡುಗ./ಮರಾ. ಭಾಡೇ]

ಬಾಡಗೆಕಾಱ (ನಾ). ಕೂಲಿಗೆ ಗೊತ್ತುಮಾಡಿಕೊಂಡ ಆಳು ; ಹಣವನ್ನು ಕೊಟ್ಟು ನೇಮಿಸಿಕೊಂಡವನು : ಬಾಡಗೆಕಾಱ ನನ್ನ ಸ್ತ್ರೀಯೆನಲು ತವರೂರಲ್ಲಿರ್ದ ಜಾರ ನನ್ನ ಸ್ತ್ರೀಯೆನಲು . . . ಅವಳ ಸೀಳಿ ಎರಡು ಹೆಣ್ಣುಗಳ ಮಾಡಿಯವರಿಬ್ಬರಿಗೆ ಕೊಟ್ಟು (ಭೈರಸೂ. I, ೩೩೭). [ಬಾಡಗೆ + — ಕಾಱ]

ಬಾಡಗೆಗೊಳ್ (ಕ್ರಿ). ಬಾಡಿಗೆಯನ್ನು ಕೊಡುವ ಕರಾರಿನಿಂದ ವಸ್ತುವನ್ನು ಪಡೆ : ಕೆಲವೆತ್ತಂ ಬಾಡಗೆಗೊಂಡು ಭಂಡಮಂ ಪೇಱಿ . . . ಪೆರ್ವಟುವಿನೊಳ್ ಬಿಟ್ಟಲ್ಲಿ (ಬಂಹರಿ. ೯-೦೦ ಪ). [ಬಾಡಗೆ+ಕೊಳ್$_1$]

ಬಾಡಬ (ನಾ). ೧. ಕುದುರೆ ; ಅಶ್ವ : ಶ್ರೀರಾಮಚರಿತಮಂ ಕೇಳಿಸಲೊಡಂ ಬಾಡಬಂಗಂ ಬಾಡಬಕ್ಕಂ ವಿಮೋಚನಮಕ್ಕುಂ (ರಾಮಾಸ್ತ. ೦೩೬-೯). ೨. ಕಡಲೊಳಗಿರುವ ಕುದುರೆಯ ಮುಖದಿಂದ ಹುಟ್ಟಿದುದೆಂದು ನಂಬಲಾದ ಬೆಂಕಿ; ಔರ್ವಾನಳ; ಕಡಲ್ಗಿಚ್ಚು : "ಔರ್ವಃ, ಸಮುದ್ರವಹ್ನಿಃ, ಬಾಡಬಃ, ಬಡಬಾಮುಖಃ — ಈ ೪ ಸಮುದ್ರದ ಕಿಚ್ಚು" (ಹಲಾಯು. ೦೩-೭೦); ಭವಗರ್ವರಸಜೀವನಿಧಿಬಾಡಬ ಉಮಾವಲ್ಲಭ (ವೀಕೈಪು. ೩-೦೦-೦); ನೊರಜು ಬಾಡಬನುದರವರಿವುದೆ (ಉತ್ಸಕ. ೨೩-೦೯). ೧, ೨ : ಆ ಮಹಾರ್ಣವಂ . . . ಮದ್ಯಜನ್ಮಸ್ಥಾನಮಾಗಿಯುಂ ಬಾಡಬೋಪಭೋಗಯೋಗ್ಯಮುಂ . . . ಎನಿಸಿದುದು (ಜಗವಿ. ೦-೯೯ ಪ). ೩. ಹಾರವ; ಬ್ರಾಹ್ಮಣ ; ವಿಪ್ರ : "ಬ್ರಾಹ್ಮಣಂ ಬಾಡಬಂ ಭೂಮಿದೇವಂ ದ್ವಿಜಂ" (ಮಂಗರಾ. ೬೩-೦); ಆ ಕಲ್ಲಿದೇವಯ್ಯ . . . ಆ ಬಾಡಬರ್ಗಿಂತೆಂದು ನುಡಿದನು (ಬಸಪು. ೫೫-೩೬); ಭೋರನೆ ಬಂದು ತುಱುಗಿರ್ದ ಜಿನರು ಬಾಡಬರು ವೈಷ್ಣವರು ತನತನಗಿದು ಚೋದ್ಯವೆನುತ ವೆಂಗಿಸೆ ಕೋಪ ಕೊನರಿತು ಭೈರವಾಂಕನಿಗೆ (ಭೈರವೇ. ೫-೫೧). ೪. [ಕಾಮಶಾ] ರತಿಕ್ರೀಡೆಯಲ್ಲಿ ಒಂದು ಬಗೆ : 'ಬಾಡಬಕರಣ' ಪರಾ. [ಸಂ.]

ಬಾಡಬಕ (ನಾ) = ಬಾಡಬ ೪ : ಅಗಲಿರ್ದ ಸ್ತ್ರೀ ತನ್ನಯ ಯೋನಿಯ ಇರ್ದೆಶೆಯಂ ಸಂಪುಟಂಗಳಿಂ ಪುರುಷನ ಲಿಂಗವೇಳದಿರ್ದೊಡೆಯಲ್ಲಿ ಈ ಸ್ತ್ರೀಯಿಾ ಕರಣದಿಂದೊತ್ತಲ್ಕೆ ರಮಿಸೋದು ಬಾಡಬಕಂ (ಕಾಮಶಾ. ೨೩೫). [ಸಂ.]

ಬಾಡಬಕರಣ (ನಾ). = ಬಾಡಬ ೪ : ಪುರುಷನ ವಕಾಕೆಯೊಱಗಿರೆ ಮಗುಳ್ದು ಮಲಗಿರ್ದ ಗುರುಕುಚೆಯುತನುಗೃಹದೆರಡುಕಡೆಯೊಳು ಪಿರಿದೊತ್ತಲವಗೆಚ್ಚಱುರವಣಿಸಿ ನೆರವುತಿಪ್ಪಿರವದೇ ಬಾಡಬಕರಣಂ (ಜಪಪ. ೯-೦೯). [ಸಂ.]

ಬಾಡಬಕ್ಕ, ಬಾಡಬಾಕ, ಬಾಡಬಾಕು, ಬಾಡುಬಕ್ಕೆ, ಬಾಡುಬುಕ್ಕ (ನಾ). ೧. ಒಂದು ಬಗೆಯ (ದ್ವಿದಳಧಾನ್ಯದ) ಬಳ್ಳಿ: "ಬಾಡಬಕ್ಕ, ಬಾಡಬುಕ್ಕಬಳ್ಳಿ" (ಸಸ್ಯವಿ. ೦೦೦); (ಮೈಜಿಗಿ. ೬೫-೦೩೧೯). ೨. ಒಂದು ಬಗೆಯ ಮುಳ್ಳುಗಿಡ : ಚರ್ವಿತಚರ್ವಣಲಬ್ಧವಾದ ವರ್ಣನೆಗಳನ್ನು ತುರುಕಿ, ಸಾಹಿತ್ಯ ಸೀಗೆ ಗಜ್ಜುಗ ಬಾಡಬಕ್ಕಗಳ ಕಗ್ಗಾಡಾಗುವಂತೆ ಪರಿವರ್ತಿಸುತ್ತಾರೆ (ಪಂಚಾಂಡ. ೬೯). **ಬಾಡಬಾಕ** : ೧. ಬಾಡಬಾಕನ ಸೊಪ್ಪಂ ನೀರಿಂ ಅರೆದು ಎಣ್ಣೆಯಾಗಲಿ ಹಸುವಿನ ತುಪ್ಪವಾಗಲೀ ಕೂಡಿಸಿ ಆಱುದಿನ ಕೊಂಡರೆ ಅಂಡವಾತ ಮಾಣ್ಗುಂ (ವಿಸ್ತಾ. ೬೫). **ಬಾಡಬಾಕು** : ೨. ಬೆತ್ತ ಕೆಂಜಿಗೆ ಸೀಗೆ ಗಜುಗ ಬಿದಿರು ಮುಳ್ಳಮುತ್ತುಗ ಬಾಡಬಾಕುಗಳು (ಶ್ಯಾಸಪ. ೦೦-೨೩). **ಬಾಡುಬಕ್ಕೆ** : ೨. 'ಬಾಡುಬಕ್ಕೆ ಮುಳ್ಳು' ಎಂಬ ಚೂಪಾದ ಕೊಕ್ಕೆಯ ಮುಳ್ಳುಂಟು. ಇದಕ್ಕೆ ಮೈ ತಾಗಿದರೆ ಒಂದಿಷ್ಟಾದರೂ ಬಾಡು ಕಿತ್ತು ಬರದೆ ಇರುವುದಿಲ್ಲ (ಪಮ್ಸೂರು. ೩೯೭). **ಬಾಡುಬುಕ್ಕ** : ೧. "ಬಾಡಬಕ್ಕ, ಬಾಡುಬುಕ್ಕಬಳ್ಳಿ" (ಸಸ್ಯವಿ. ೦೦೦). [?]

ಬಾಡಬಾಕ 'ಬಾಡಬಕ್ಕ' ನೋ.

ಬಾಡಬಾಕು 'ಬಾಡಬಕ್ಕ' ನೋ.

ಬಾಡಬಾಗ್ನಿ (ನಾ). = ಬಾಡಬ ೨ : ಹಿಡಿದು ಬಲುಹಿಂ ಕಡಲ ಕುಡಿಸುವೆ ಬಾಡಬಾಗ್ನಿಯನು (ಕೌತಿರಾ. ೦೫-೯೨); ಕಾಲಾಗ್ನಿ ಬಾಡಬಾಗ್ನಿ ಪಾಷಾಣಾಗ್ನಿ ವೈದ್ಯುತಾಗ್ನಿ ಸೂರ್ಯಾಗ್ನಿ ಎಂಬ ಸೂಕ್ಷ್ಮಬಿಂದುರೂಪ ಪಂಚಾಗ್ನಿ ಧ್ಯಾನಯುಕ್ತನಾಗಿ (ವಿವೇಕ. ೦೨೬). [ಸಂ.]

ಬಾಡಬಾನಲ, ಬಾಡಬಾನಳ (ನಾ). = ಬಾಡಬ ೨. **ಬಾಡಬಾನಳ** : ಪರಸೈನ್ಯಸುಭಟಮಹಾರ್ಣವಕೆ ಬಿಡು ನಿನ್ನ ವಿಶ್ರಮಬಾಡಬಾನಳನ (ಕುಪ್ಯಾಕ್ರೋ. ೦-೦೭). [ಸಂ.]

ಬಾಡಬಾನಳ 'ಬಾಡಬಾನಲ' ನೋ.

ಬಾಡಬೇಯ (ನಾ). ಎತ್ತು; ವೃಷಭ : "ಉಕ್ಷಾ . . . ಬಾಡಬೇಯಃ, ಶಾಕ್ವರಃ — ಈ ೧೧ ಯೆ(ಎ)ತ್ತು" (ಹಲಾಯು. ೯೪-೦೦೬). [ಸಂ.]

ಬಾಡವ (ನಾ). ೧. ಕುದುರೆ; ಅಶ್ವ : ಬಾಡವಂಗಳಂ ಹಂಸೆಗಳಂ . . . ಅಂಬರಚರೇಶ್ವರ ಪ್ರಭು ಮಗಳ್ಗೆ ಬಟಿವಟಿಗೊಟ್ಟಂ (ವರ್ಧಮಾ. ೩-೯೯). ೨. = ಬಾಡಬ ೨ : ಕೃತ್ರಿಮಸೌಷ್ಠವದಿಂ ಸಲಿಲಮುಮಂ ಬಾಡವನು ಮನೊಳಕೊಂಡ ಕಡಲನರಸಂ ಪೋಲ್ತಂ (ಲೀಲಾವ. ೯-೭) ; ವಾರಿಧಿಯೊಳಡಗಿ ನಿದ್ರಿಪ ಬಾಡವವೊ ತೃಷ್ಣೆ (ಮಂಕುಕ. ೨೬೭). ೧, ೨ : ಧಾರದೊಳ್ ಶೂದ್ರನೂರ್ಜ್ಜಿತಾರ್ತ್ಥಚಯದಿಂ ಧೈರ್ಯಭ್ರಮಕ್ಷತ್ರಿಯಂ ಪರಸೈನ್ಯಾಂಬುಧಿ ಬಾಡವಂ ದಲ್ ಅದಱಿಂ ತಾಂ ವರ್ಣ್ಣಸಾಂಕರ್ಯ್ಯಮಂ ನರಸಿಂಹಂ

ತಳೆದಿರ್ದನ್ (ಎಳ. V, ೯೬೦೫-೯೦; 1161). ೩. ಬ್ರಾಹ್ಮಣ; ವಿಪ್ರ : "ಬ್ರಾಹ್ಮಣಃ, ಬಾಡವಃ, ವಿಪ್ರಃ . . . ದ್ವಿಜಃ — ಈ ೧೦ ಬ್ರಾಹ್ಮಣಂ" (ಹಲಾಯು. ೬೫-೨೩೭). [ಸಂ.]

ಬಾಡವಾಗ್ನಿ (ನಾ). = ಬಾಡಬ ೨ : ತವೆ ಕುಡಿಯಲ್ಕೆಱೆಯದು ಬಾಡವಾಗ್ನಿ ಪೋಗೆಂದು ಕುಂಭಸಂಭವಕೋಪಾಗ್ನಿ ವಿಯತ್ತಳದಿಂ ಕಿಡಿ ವಿಡುತುಮಿಱಿವವೊಲ್ಪವನನವರಜಳನಿಧಿಗಿಱಿದಂ (ಶುಭ್ರಕ. ೬-೦೯). [ಸಂ.]

ಬಾಡವಾನಳ (ನಾ). = ಬಾಡಬ ೨ : ಬಾಡವಾನಳಾವಿಳಜಳಮಂ ಮನಂ ಬಯಸಿ ನೋಡಿದನರ್ಣವಮಂ ಗುಣಾರ್ಣವಂ (ಪಂಪಭಾ. ೪-೨೩).

[ಸಂ. ಬಾಡವಾನಲ]

ಬಾಡವೆ (ನಾ). ಬ್ರಾಹ್ಮಣ ; ಹಾರವ : ಕನ್ನಡ ಯಾತ್ರಿಕರು ಪಂಢರಪುರಿಗೆ ಹೋದಾಗ ಅಲ್ಲಿನ ಬಾಡವೆಗಳು ಅದೇ ಸ್ತಂಭವನ್ನು ದಾಸರ ಸ್ತಂಭವೆಂದು ತೋರಿಸುತ್ತಾರೆ (ಕಸಂ. ii, ಸುಸ್ಮೃತಿ). [ಸಂ. ಬಾಡವ]

ಬಾಡಿಗೆ 'ಬಾಡಗೆ' ನೋ.

ಬಾಡಿಗೆದಾರ (ನಾ). (ಮನೆ ಮುಂತಾದುವನ್ನು) ಬಾಡಿಗೆಗೆ ಹಿಡಿದಿರುವವನು : ಈ ಸಲ ಬಾಡಿಗೆದಾರರ ಪೈಕಿ ನಾರಾಯಣಸು . . . ತುಂಬಾ ಕಂಗಾಲಾಗಿ ಹೋಗಿದ್ದನು (ಕಂಬಹು. ೦೨೨).

[ಬಾಡಿಗೆ (< ಬಾಡಗೆ) + — ದಾರ$_{೨}$]

ಬಾಡಿಗೆಮನೆ (ನಾ). ಬಾಡಿಗೆ ಕೊಡುವ ಕರಾರಿನಿಂದ ಪಡೆದ ಮನೆ : ಶ್ಯಾಮಲಾಲರು . . . ಕಲಕತ್ತೆಯ ಬಾಡಿಗೆಮನೆಯಲ್ಲಿ ಹೆಂಡತಿ ಬೀಗರೊಡನೆ ವಾಸಿಸುತ್ತಾರೆ (ಕುಂಹಿಂ. ೦೧೯) ; ಬಾಡಿಗೆಮನೆ, ಕೂಡಿಕೆಗೆಂಟರು (ಗಾದೆ). [ಬಾಡಿಗೆ (< ಬಾಡಗೆ) + ಮನೆ]

ಬಾಡಿಸು, ವಾಟಿಸು (ಕ್ರಿ). ೧. ಸೊಪ್ಪು, ತರಕಾರಿ, ಮಾಂಸ ಮುಂತಾದುವನ್ನು ಬಾಣಲೆಯಲ್ಲಿ ಹಾಕಿ ಬೆಂಕಿಯ ಮೇಲಿಟ್ಟು ಹುರಿ.— ತಾಳಿಸು : ಚಮ್ಮಟಿಗೆಗಂಶುಕಕಟಿಟ್ಟೊಳಗಾಗಿ ಬೆಟ್ಟಿದರ್ ಬಾಡಿಸುವೇಱ ಬಾಡಿಸುವ ಹೇಱುವ ಕಟ್ಟುವ ಕುಟ್ಟುವಾಪಗಂ ಹೂಡುವ ದುಃಖದಿಂ ತಿರಿಕಜಾತಿಯ ಕೋಟಲೆ ಕುಂದದೊರ್ಮೆಯುಂ (ಅಪಂಪು. ೯-೧೩); ಪಿಸಿತವನು ಕತ್ತರಿಸು ಹುರಿ ಹುರಿ ಕಾಸು ತಾಳಿಸು ಬಾಡಿಸು (ಜಾಗಸ. ೦೬-೧೬); ಈ ಕಾದುತರಕಾರಿಗಳನ್ನು . . . ಬೇಯಿಸುವುದು ಬೇಕಿಲ್ಲ, ಒಗ್ಗರಣೆ ಹಾಕಿ ಬಾಡಿಸಿದರೆ ಸಾಕು ! (ಹಸುಹೂ. ೩೦೦). ೨. ಕಳೆಗುಂದಿಸು ; ಒಣಗಿಸು ; ಕಂದಿಸು : ತೇಜಂ ಬಾಡಿಸುತಿರ್ಪ ರೇಪೆಯೊ ಚಿರಂ ಬಾಟ್ಯಾಸೆಯಿಂದೀ ಮಹಾರಾಜನರ್ನೋಡುವ ತೀವ್ರತೇಜದ ಮಹಾಸಪ್ತಾರ್ಚಿಗಂಡುಂ ಮಹಾತೇಜಂ ಭಾಸ್ಕರನಸ್ತದೊಳ್ ಕೆಡೆವುದುಂ ಕಂಡುಂ ಮಹೋಳ್ಕಂ ಜ್ವಳತ್ತೇಜಂ ಬೀಚ್ಚುದುಗಂಡುಮುದ್ಧತಮಹಾಮೋಹಾಂಧಕಾರಾಂಧಕರ್ (ಅರ್ಧನೇ. ೯-೩೯). ೩. ಹಪ್ಪಳ, ಉಪ್ಪಿನಕಾಯಿ, ಚಕ್ಕಣ ಮೊದಲಾದ ಪದಾರ್ಥಗಳನ್ನು (ಆಹಾರ ಅಥವಾ ಕಳ್ಳಿನೊಂದಿಗೆ) ನಂಜಿಕೊಳ್ಳು : ಉಪದಂಶಃ, ಅವದಂಶಃ, ಭಕ್ಷಣಂ—ಈ ೩ ಕುಡಿವುತ್ತೆ ಬಾಡಿಸುವುದು (ಹಲಾಯು. ೩೯-೦೬೩) ; ಕುಂಟಣಿಯಂ ನೊಣೆಗಬ್ಬೆ ತಿಂಗೆ ಬೆಂಗುರುಟೆ ಬಳಾರಿ ಬಾಡಿಸುಗೆ (ಲೀಲಾವ. ೨-೦೦೬) ; ಮೊಸರನ್ನ ಉಂಡ ಮೇಲೆಯೂ ಹಾಗೆಯೆ ಪಲ್ಲೆಕಾಯಿ ಬಾಡಿಸುತ್ತ, ಅವು ತೀರಿದ ಮೇಲೆ ಬರಿಯ ಉಪ್ಪನ್ನೆ ಬಾಡಿಸುತ್ತ . . . ಕಾಳಿತಾಗ ಬಡಿಸುವವರ ಹುಚ್ಚುತನಗೆ ಕಂಡಾಗ ನನ್ನ ಊಟ ಮುಗಿದುದರ ಕಲ್ಪನೆ ಬಂದುದೂ ಗೊತ್ತಿದೆ (ಮುಂಗಾಳು ೬೩). ವಾಟಿಸು : ೧. ಪೆರ್ನೊಣಂಗಳಿಂ ತಗುಳ್ದೂಟಿಸಿಯುಂ ಕಾವಲಿಯೊಳಿಕ್ಕಿ ವಾಟಿಸಿಯುಂ ಇಂತನೇಕವಿಧದಂಡನೆಗಳಿಂ ದಂಡಿಸಿಯುಂ ಸೈರಿಸಲಾಱದೆ (ರರ್ಜಾಸ್ತು. ೩-೬೩). [ಬಾಡು$_{೩}$ + — ಇಸು$_{೩}$./ತೆಲು. ವಾಡಿಂಚು]

ಬಾಡು$_{೧}$ (ಕ್ರಿ). ೧. (ಹೂವು, ಚಿಗುರು ಮುಂತಾದುವುಗಳು) ಒಣಗು ; ಮುರುಟು : "ಬಾಡು—ಮ್ಲಾನೇ, ಮಾಂಸೇ ಶಾಕೇಚ" (ಕಸುಶಾ. ೫) ; ಸಸ್ಯಾವಳಿ ಸುಗಿದಗಿದು ಕೂಡೆ ಬಾಡಿರ್ದುದು (ಅಂಪು. ೦೦-೬೬) ; ಹೂ ಬಾಡದಲ್ಲಿ ಪರಿಮಳವನಱಸುವರೆ (ಪಸಪ. ೦೨೬) ; ಕಟ್ಟಿಯುಮೇನೊ ಮಾಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ (ಅಪಂಪು. ೦-೧೩) ; ಭಯದಲಿ ಬಾಡುವುದಲೇ ರಿಪುನೃಪಾಲರ ಸಮರಜಯಂಬೀಜ (ಕುಶಾಸ. ೦೨-೬೬). ೨. ಕಳೆಗುಂದು ; ಕಾಂತಿಗುಂದು ; ಮಂಕಾಗು : ಇಂದೆಮ ಗುಣಲ್ಕೆ ಬಗೆಯಿಲ್ಲುಪವಾಸಂಗೆಯ್ದಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ಮೊಗಂ ಬಾ[ಡಾಡಾಂ. ಮಾ]ಡಿ ಭಟಾರರಂ ವಂದಿಸಿ ಪೋಗಿ (ಪಡ್ಡಾಣಾ. ೬೦-೦೦); ಈ ಮೊಗಮಿದಿಂತೇತರ್ಕೆ ಬಾಡಿರ್ದುದು (ಅಂಪು. ೩-೨೩); ಅರಾತಿನೃಪವಕ್ರಾಬ್ಜಂ ಕರಂ ಬಾಡುಗುಂ (ಕಾಪ್ರಕಾ. ೦೨-೬೨). ೩. ಸೊರಗು ; ಕಂಗ್ಗು : ಇಂತೇಕೆ ಬರ್ದಿ ಬಂಬಳಂಬಾಡಿ ಪಾಡಟಿದುಬ್ಬೆಗಂಬಟ್ಟಿರ್ದ್ (ಪಡ್ಡಾಣಾ. ೩೯-೬) ; ಬಾಡಿ ಪಾಡಟಿದು ಬಟಲ್ದು ಜೋಲ್ದಿರವು . . . ಕನ್ನಡಿಸದವ್ವುವ ಕನ್ನೆಯ ಕನ್ನೆವೇಟಮಂ (ಪಂಪಭಾ. ೯-೬೦) ; ಹೂಡಿದಂಬಿನ ತೋಳ ತೆಗಹಿನ ಬಾಡಿದುತ್ಸಾಹದ ವಿತಾಳದ ಬೀಡಿಕೆಯ ಬೇಳುವೆಗೆ ಬೆಬ್ಬಳೆಪೋದನಾ ಪಾರ್ಥ (ಕುಶ್ಯಾಶ. ೦೯-೦೦).

[ದೇ. ॥ ತಮಿ. ವಾಟು, ವಾಟ್ಟು ; ಮಲ. ವಾಟುಕ, ವಾಟ್ಟುಕ; ತುಳು. ಬಾಡು ; ಕೊಡ. ಬಾಡ್ ; ತೆಲು. ವಾಡು ; ಪರ್ಜಿ. ವಾಡ್]

ಬಾಡು$_{೨}$ (ನಾ). ೧. ಅಡಗು ; ಮಾಂಸ : "ಅಡಗು, ಬಿಕ್ಕು, ಬಾಡು— ಈ ೩ ಮಾಂಸಂ" (ಶಕಶಾ. ೫೨-೦೨೬) ; ಲೇಸಾಗಿ ಬೆಂದ ಬಾಡಂ ಬಾಸಣಿಸಿಟ್ಟದನೆಯಮೃತಮತಿಗಟ್ಟಿಸಿದಂ (ಯಶೋಧ. ೩-೬೦) ; ಸಗರ್ಮೆ ಭೀಮನ ಬಾಡ ಕೊಯ್‌ಕೊಯ್ದು ಮರುಳ ಬಳಗವ ತಣಿಸಿದಡೆ ಹಿರಿಯರಸರಲಿ ಸಂಧಾನವೆಂಬೈ (ಕುಶ್ಯಾಗ. ೩-೨೯) ; ಜೀಮೂತವಾಹನ . . . ತನ್ನೊಡಲ ಬಾಡ ಗರುತ್ಮನಿಗಿತ್ತು ಸತ್ಕೀರ್ತಿಯ ನಾಡೊಳು ಪಡೆದುದನಱಿಯೂ (ಪೋಪಶ. ೩-೩೩) ; ಸೊಕ್ಕಿದೀ ಬಾಲ ಹೆಮ್ಮಾರಿ ಕಾಲಿನಂತೋಡದಿದು ; ಹಲ್ಗಳೊಲು ಕಡಿಯದಿದು ; ನಾಲಗೆಯ ತೆರ ಬಾಡಸವಿ ತಿಳಿಯದು (ಕಂಪು. ೧೩-೬). ೨. ತರಕಾರಿ ; ಕಾಯಿಪಲ್ಯ : ಹೆಡಗೆಗೆ ಮೊಂದು ಹಿಡಿ ಬಾಡು (ಪೂಂಗಣಾ. ೦೧೩೯. ಇಂಡಿ. ೩೬-೦೦; ?). 'ಬಾಡುಕಾಯ್' ಪರಾ. ೩. ಊಟದ ಮಧ್ಯೆ ಮಧ್ಯೆ ನಂಜಿಕೊಳ್ಳಲು ಬಳಸುವ ಹುರಿದ ಅಥವಾ ಕರಿದ ಮಾಂಸ, ತರಕಾರಿ ಮುಂತಾದುವುಗಳಿಂದ ಮಾಡಿದ ಪದಾರ್ಥ : ತುಪ್ಪಮುಂ ಪಲವುಂ ತೆಱದ ಬಾಡು[ಶಾಕಾಂ. ಶಾಕಂ]ಗಳುಂ ತುಯ್ಯಲುಂ . . . ಪದಿನೆಂಟುಂ ತೆಱದ ಭಕ್ಷ್ಯರೂಪಂಗಳುಮಂ . . . ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ (ಪಡ್ಡಾಣಾ. ೬೯-೦೬) ; ಆ ಪರದಂ ಕೂಟಂ ಕಲಸಿ ಪಲವುಂ ಬಾಡುವೆರಸಿ ಕೂಟನೊಂದು ದಳಿಂಬದ ಕಪ್ಪಟದೊಳ್ ಕಟ್ಟಿ ಕೊಟ್ಟಡೆ (ಪಾಕಂ. ೦೯-೩೦ ಪ). [ದೇ. ॥ ತಮಿ. ವಾಟ್ಟು; ತುಳು. ಬಾಟಣೆ]

ಬಾಡು$_{೩}$ (ನಾ). ೧. ತೆರೆ ; ಮರೆ : ಕೃಷ್ಣನುಯೆಲ್ಲಿ ಪೋದನುಯೆನುತ್ತೆ ನಲ್ಲೆಯರು ಕೈಗಳನು ಹೊಸಕೊಳುತ ಬಾಡ ಮರೆಯಲ್ಲಿ ಮರೆಗೊಂಡಿರ್ಪನೆಂದು ಪೊಕ್ಕರಸಿ ತಾವೆಲ್ಲ[ವಲ್ಲಿ] ಕಾಣದೆ ಮರಳಿ ಬಂದು (ಪಪಪೂ. ೦೦ ೩೯). 'ಪಂಬಾಡು' ಪರಾ. ೨. ಗುಡಾರ ; ತಂಬು : ಸುತ್ತುವಳೆಯುವರಿ[ಲಿ] ಶುಭ್ರಪಚ್ಚಡಗಳಲಿ ರಚಿತ ಪೊಸಬಾಡನುರೆ ಬಂಧಿಸಿದರು (ಪಪಪೂ. ೩೯-೬೬). [← ತೆಲು. ಬಾಡು./ ಮರಾ. ಬಾಡ್]

ಬಾಡುಂದಳಿರ್ (ನಾ). ಒಣಗಿದ ಎಲೆ ; ಮುರುಟಿದ ಚಿಗುರು : ಬಟ್ಟೆಪೋಪರ್ಬಟಲ್ಕೆಗಟ್ಟಿದುದನಱಿಪುವ ಬಾಡುಂದಳಿರ ಪಾಸಿಕೆಗಳುಮಂ (ಕಾದಂಬಾ. ೨೬೬). [ಬಾಡು$_{೧}$ + ತಳಿರ್$_{೩}$]

ಬಾಡುಕಟ್ಟು (ಕ್ರಿ). (ಹೊಲಗದ್ದೆಗಳ ರಕ್ಷಣೆಗಾಗಿ ಸುತ್ತಲೂ ಬಾಡಿದ ಸೊಪ್ಪು, ರೆಂಬೆ ಮುಂತಾದುವುಗಳಿಂದ) ಬೇಲಿಯನ್ನು ಕಟ್ಟು : ಗಿಡಗಳು ದೊಡ್ಡವಾಗುವವರೆಗೂ ಸುತ್ತಲೂ . . . ಈಚಲುಬರಿಗಳಿಂದಾ

ಗಲಿ ಕರಕಲ ಕಟ್ಟಿಗೆಯ ಬರಿಗಳಿಂದಾಗಲಿ ತಟ್ಟಿಗಳನ್ನು ಹೆಣೆದು ಸುತ್ತಲೂ ಬಾಡು ಕಟ್ಟಿದ ಹಾಗೆ ಕಟ್ಟಿ ಚಾಟು ಮಾಡಬೇಕು (ಕೃಷಿಪ್ರ. ೦೭೩).

[ಬಾಡ್ಯು (p ← ತುಳು. ಬಾಡು = ಬೇಲಿ) + ಕಟ್ಟು$_1$]

ಬಾಡುಕಾಯ್, ಬಾಡುಕಾಯಿ (ನಾ). ತರಕಾರಿಯಾಗಿ ಉಪಯೋಗಿಸುವ ಕಾಯಿ: ಬಾಡುಕಾಯೆಂಬಿವು ಭಂಡಿಗೆ ಹತ್ತು ತಲೆವೊಱೆಗೆ ನಾಲ್ಕಕ್ಕುಂ (ಎಇ. XIX, ೩೩-೩೦ ; 1135); ಶಾಕಶಾಕಟಂ, ಶಾಕಶಾಕಿನಂ— ಈ ೨ ಬಾಡುಕಾಯ ತೋಂಟಂ (ಹಲಾಯು. ೨೭-೯); ಮಾಱುವ ಹೆಡಗೆಯ ಹಣ್ಣುಹಂಪಲ್ ಬಾಡುಕಾಯ್ಗೆ ಹಿಡಿಬಾಡು ಹಿಡಿಹಣ್ಣಂ ಕೊಟ್ಟರ್ (ಎಇ. V, ೨೦-೬೯; 1161). **ಬಾಡುಕಾಯಿ**: [ಬೋವ]ಕ್ಕಳು ತಂದು ಮಾಱುವ ಬಾಡುಕಾಯಿಗೆ ತಿಪ್ಪೆಸುಂಕವ ಕೊಟ್ಟರು (ಸೌಇಇ. XX, ೨೪೮-೭೬; 1228).

[ಬಾಡ್ಯು$_2$ + ಕಾಯ್$_4$]

ಬಾಡುಕಾಯಿ 'ಬಾಡುಕಾಯ್' ನೋ.

ಬಾಡುಣಿ (ನಾ). ಮಾಂಸವನ್ನು ತಿನ್ನುವಂಥದು; ಭೂತ; ಪಿಶಾಚಿ: ಓಡಂ ಪಿಡಿದಿರ್ದೊಡೆಯುಂ ಬಾಡುಣಿಗಳ ಕೂಡಿ ಬೆತ್ತಲೋಡಾಡಿಯು ನೀಂ ಬೇಡಿದ ವರಗಳ ನೀಡುವೆ (ಪಂಚತ. ೪-೦೦). [ಬಾಡ್ಯು$_2$ + — ಉಣಿ]

ಬಾಡುಬಕ್ಕೆ 'ಬಾಡಬಕ್ಕ' ನೋ.

ಬಾಡುಬುಕ್ಕ 'ಬಾಡಬಕ್ಕ' ನೋ.

ಬಾಡುಮೋಱೆ[3] (ನಾ). ಮಂಕಾದ ಮುಖ; ಕಾಂತಿಹೀನವಾದ ಮುಖ: ಭೀತಿಯಲಿ ಬಾಡುಮೋಱೆಯನೆತ್ತಿ ಕೈಗಳ ನೀಡಿ ಕಂಗಳ ಮುಚ್ಚಿ . . . ಬೆಚ್ಚಿದನಡಿಗಡಿಗೆ ಭೀಮ (ಕುಪ್ಯಾಲ. ೦೦-೩೬). [ಬಾಡ್ಯು$_1$ + ಮೋಱೆ[3]]

ಬಾಡೆ 'ಬಾಡ' ನೋ.

ಬಾಣ$_1$ 'ಬಾಣೆ' ನೋ.

ಬಾಣ$_2$, ವಾಣ$_1$ (ನಾ). ಒಬ್ಬಾತನ ಹೆಸರು: 'ಬಾಣರಸ', 'ಬಾಣಸಾಮಿ' ಪರಾ. **ವಾಣ$_1$**: ಪ್ರತಿಪನ್ನಮಂದರಂ ವಾಣಸ್ಯನ್ವಯಪುರಂದರಂ . . . ಶ್ರೀಮನ್ಮಹಾಪ್ರಧಾನಂ ಕೆಡಿತವೆರ್ಗ್ಗಡೆ (ಕಇಲ. ೭-೩-೨೬೨; 1062). 'ವಾಣರಸ' ಪರಾ.

ಬಾಣನ ಪಳ್ಳಿ = ಒಂದು ಊರಿನ ಹೆಸರು: ದೇವಕೊಮಾರನುಂ ಧೋರನುಮಿಟ್ಟೊರರವೆ ಬಾಣನ ಪಳ್ಳಿಯ ಕೊಣ್ಡ ಶ್ರೀ ಕೇಸಿಗ × × × ತಲೆಸೆಱೆಯಲು ಕಟ್ಟನ್ ಕಟ್ಟು ವುದರ್ಕ್ಕೆ ಕೊಟ್ಟ ಸ್ತಿತಿಕ್ರಮವೆಂತುವೆಂದೊಡೆ (ಎಕ. III, ಶ್ರೀರಂಗ. ೦೪೮-೦೨; 904 ?). **ಬಾಣರವಾಡಿ** = ಒಂದು ಸ್ಥಳದ ಹೆಸರು: ಗಂಗವಾಡಿ ತೊಮ್ಬತ್ತಱುಸಾಸಿರವುಂ ಬಾಣರವಾಡಿ ಪನ್ನಿರ್ಚ್ಚಾಶಿರದ ಬಳಂಜಮೆಲ್ಲ ಸೆರೆದು (ಎಕ. X (೭), ಮುಳಬಾ. ೩೦೬-೩; ಸು. 950).

ಬಾಣ$_2$ (ನಾ). ೧. ಬಿಲ್ಲಿಗೆ ಹೂಡಿ ಬಿಡುವ ಅಸ್ತ್ರ; ಅಂಬು; ಕಣೆ: "ಚಿತ್ರವುಂಖಂ ಮಾರ್ಗಣಂ ಬಾಣಂ . . . ಕಾಂಡಮೆಂದೆನಲ್ಕಂಬೆನಿಕ್ಕು" (ಮಂಗರಾ. ೮೭-೩೪); ಗುಣಾರ್ಣವಂ ಮತ್ತಮೈಂದ್ರ ವಾರುಣವಾಯ ವ್ಯಾಗ್ನೇಯಪಾರ್ವತಾದಿ ಬಾಣಂಗಳಂ ತುಡೆ (ಪಂಚಪಾ. ೨-೭೬ ಪ); ಐದುಬಾಣವ ಕೊಂಡು ಯಂತ್ರದ ಹೊಳಹನೀಕ್ಷಿಸಿದ (ಕುಪ್ಯಾಲ. ೦೫-೨೮); ವನಜಾಕ್ಷಿ . . . ನಂದನನ ಕಾಣದೆ ಕಂಗೆಟ್ಟು ಹೊರಳ್ದಳು ಮುಮ್ಮೊನೆಬಾಣ ತಾಗಿದ ಹುಲ್ಲೆಯಂತೆ (ಮೋಹತ. ೪-೭೯). ೨. ಶಬ್ದ; ಸದ್ದು: ಶಬರಬಲ ಬಾಣಮಯ ಬಾಣಮಯ ಬಾಣಮಯ ವಾಗಿ ಕಾನನಂ ಕಣ್ಗೆಸೆದುದು (ಪಸಕಾ. ೫-೦೯). ೩. ಬೆಂಕಿ; ಅಗ್ನಿ: ಮೇಲಿನ 'ಹಚಕಾ' ಪ್ರಯೋಗವನ್ನು ನೋಡಿ. ೪. ಒಂದು ಬಗೆಯ ಸಸ್ಯ; ನೀಲಿಗೋರಂಟೆ: "ನೀಲೀ, ಝಂಟೀ, ಬಾಣಃ—ಈ ೩ ಕರಿಯ ಗೋರಂಟೆ" (ಹಲಾಯು. ೩೪-೫೨). ೫. ಈಶ್ವರ ಸಂಕೇತವಾದ ಲಿಂಗಾಕೃತಿಯಲ್ಲಿ ಪಾಣಿಪಟ್ಟಲಿನ ಮೇಲೆ ಕಾಣುವ ರುಬ್ಬುಗುಂಡಿನಾಕಾರದಲ್ಲಿರುವ ಭಾಗ: ಅವರು ಶಿವಲಿಂಗದ ಬಾಣವೇ ಪುರುಷಚಿಹ್ನೆಯೆಂದೂ ಅದರ ಕೆಳಗಿರುವ ಯೋನಿಯೇ ಶಕ್ತಿಯೆಂದೂ ಹೇಳುತ್ತಾರೆ (ಭಾರದ. ೨೦೬). ೬. ಶಿವಭಕ್ತನಾದ ಒಬ್ಬ ರಾಕ್ಷಸರಾಜ; ಬಲೀಂದ್ರನ ಮಗ: ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ (ಜಸಪ. ೭೪೨); ಸಂಬಂಧಿ ಬಾಣನಂ ಹಾರೈಸುವೊಡೆ ನಿನ್ನ ಬೇರ್ಗೊಲೆಗೆ ಶಿವನಿಪ್ಪ ಕಾರಣಮನಂಗತ್ವಮೇ ಪ್ರಾಪ್ತಮೆಂದು ಹರಿ ತನ್ನ ಸುತನಂ ಜಱೆದನು (ಶೈಮಿಭಾ. ೭-೪೦). ೭. ಹುಲ್ಲು: ತೃಣ. ೮. ಹರ್ಷವರ್ಧನನ ಕಾಲದಲ್ಲಿ ಕಾದಂಬರೀ. ಹರ್ಷಚರಿತಗಳೆಂಬ ಕಾವ್ಯಗಳನ್ನು ಬರೆದ ಒಬ್ಬ ಪ್ರಸಿದ್ಧ ಸಂಸ್ಕೃತಕವಿ: ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವಂ ಜಾಣಂ ಬಾಣೆಯೆನಿಪ್ಪದೊಂದು ಪೆಸರಂ ಮುನ್ನಿತ್ತಂ (ಕಾದಂಪೂ. ೩). ೯. ದೀಪಾವಳಿ ಮುಂತಾದ ಹಬ್ಬದ ದಿನಗಳಲ್ಲೂ ಸಂತೋಷಸಮಾರಂಭಗಳಲ್ಲೂ ಹಾರಿಸುವ ಹೂಬಾಣ ಮುಂತಾದ ಸಿಡಿಮದ್ದು: ಬುದ್ಬುದ ನಾನಾ ಚಿತ್ರಭೆ ತೋರುವ ಬಾಣ ಬಿರಿಸು ಬಹಳಿನಲಿ (ಸದಾಪ. ೦೪೫-೬); ಹಗಲುಬತ್ತಿಯು ಬಾಣಬಿರಿಸು ಮಹತಾಪುಗಳು (ಕೃಷ್ಣವಿ. ೩-೦೦); ಬಾಣಬಿರುಸು ರಂಢೋಲುವಾದ್ಯ (ಹುಟ್ಟಿಹ. ೧೦). ೧೦. ಒಂದು ಬಗೆಯ ಬಟ್ಟೆ,-ವಸ್ತ್ರ. ೧೧. [ಗಣಿತ]ಐದು ಎಂಬ ಸಂಖ್ಯೆಯ ಸಂಕೇತ: ಕ್ಷೋಣೀಶ ವಾಯು ದಿನೇಶ ರುದ್ರನುಂ ಬಾಣಸ್ಥಾನದೊಳಾಗೆ ವಿಶ್ರಮಂ ಜಾಣಂ ನಿಲ್ತಿರೆ ಸಂದುದಲೆ ಕಲ್ಯಾಣಂ (ಧರ್ಮೋಂಬು. ೨-೦೦೨); ಹಿಮಕರ ಬಾಣೇಂದುವಾಗಲಾ ಪುಷ್ಪತೆಯಂ ವಿಪ್ರ ೧ ಕೆ ತಾವರೆಪುಷ್ಪ ೯ ಕೊಡುತ್ತಿರಲು (ಭಾಸ್ಕರ. ೦೬-೬); "ಎಲ್ಲ ಶರದೊಳು ತೃಣದೊಳಸುರನೊಳು ಗೋರಟೆ[ಪಾಠಾಂ.. ಗದೆ]ಯೊಳುಂ ಬಾಣಶಬ್ದಮಕ್ಕುಂ" (ಮಂಗರಾ. ೦೪೮-೪೦); "ಪುಲ್ಲು ವಸನ ದೈತ್ಯ ಸಂಖ್ಯೆ ಶರ ಗೋರಟೆ ಎಂಬಿವು ಬಾಣವಾಚಕಂ" (ನಾನಾರ. ೮). ೧೨. [ಛಂದ] ಪ್ರತಿಪಾದದಲ್ಲಿ ಹನ್ನೆರಡು ಅಕ್ಷರಗಳಿರುವ ಒಂದು ಅಕ್ಷರವೃತ್ತ: 'ಬಾಣವೃತ್ತ' ಪರಾ.

[ಸಂ.]

ಬಾಣಂತನ 'ಬಾಣಂತಿತನ' ನೋ.

ಬಾಣಂತಿ 'ಬಾಳಂತಿ' ನೋ.

ಬಾಣಂತಿಕಾಯಿ (ನಾ). ಪಗಡೆಯಾಟದಲ್ಲಿ (ಬಾಣಂತಿಯಂತೆ) ಪೇಲವವಾಗಿರುವ ಕಾಯಿ; ಹಳದಿಕಾಯಿ: ದುಗವನೆಸೆ ಭಾರಗಳನಿಡುಯಿಡು ನೆಗೆದು ಹೊಯ್ ಬಾಣಂತಿಕಾಯ್ಗಳ ಚಿಗುಟಿಬಿಡು ಹಸುರ (ಅಂಬಿಕಾ. ೪೮-೭೦). [ಬಾಣಂತಿ (<ಬಾಳಂತಿ) + ಕಾಯ್ಯು$_4$ (<ಕಾಯ್$_4$)]

ಬಾಣಂತಿಖಾರ (ನಾ). ಬಾಣಂತಿಗೆ ಪ್ರತಿದಿನ ತಿನ್ನಲು ಕೊಡುವ, ಪುಷ್ಟಿಕರವಾದ ಔಷಧೀದ್ರವ್ಯಗಳಿಂದ ಕೂಡಿದ ಒಂದು ಬಗೆಯ ಖಾರಪದಾರ್ಥ: ಮೆದುವಲ್ಲ ಸಿಹಿಯಿಲ್ಲ ಹಾಲುಬಾಯಿಯವೋಲು ಬಾಣಂತಿಖಾರವೊ ಬಾಳು (ಇಂಕಾಪ. ೬೭-೨೪).

[ಬಾಣಂತಿ (<ಬಾಳಂತಿ) + ಖಾರ$_1$ (<ಕಾರ$_2$). /ಮರಾ. ಬಾಳಂತಕಾಢಾ]

ಬಾಣಂತಿಜ್ವರ (ನಾ). ಸಾಮಾನ್ಯವಾಗಿ ಹೆರಿಗೆಯಾದ ಹತ್ತು ದಿನಗಳಲ್ಲಿ ಬಾಣಂತಿಗೆ ಬರುವ ಜ್ವರ: ಜನನಾಂಗಗಳ ಸೋಂಕುರೋಗ ಬಾಣಂತಿ ಜ್ವರಕ್ಕೆ ಬಹಳಷ್ಟು ಪ್ರಮುಖ ಕಾರಣ (ಕವಿಕೋ. XII, ೨೬).

[ಬಾಣಂತಿ (<ಬಾಳಂತಿ) + ಜ್ವರ]

ಬಾಣಂತಿತನ, ಬಾಣಂತನ, ಬಾಲಂತಿತನ (ನಾ). ೧. ಹೆರಿಗೆಯಾದವಳಿಗೆ ಮಾಡುವ ಆರೈಕೆ.—ಉಪಚಾರ: ನನ್ನ ಬಾಣಂತಿತನ ಮಾಡಿದವಳು ಅತ್ತೆಯೇ (ಸ್ಮೃತಿಪ. ೭೬); ಎರಡನೇ ಬಾಣಂತಿತನಕ್ಕಾಗಿ ತವರೂರಿಗೆ ಹೋಗಬೇಕೆಂದು ರಮಾದೇವಿಯ ಮನಸ್ಸಿನಲ್ಲಿತ್ತು (ಸ್ಕೂಲಮಿ. ೨೨೯). **ಬಾಣಂತನ**: ೧. ಬಾಣಂತನ ಯಾರು ಮಾಡುವರಪ್ಪಾ? ತಾಯನ್ನೂ ದೂರ ಮಾಡಿದ್ದಾನೆ (ನಿಕಿಕಾ. ೨೫೦); ತನ್ನ ಬಾಣಂತನಕ್ಕೆ ತನ್ನ ತಾಯಿ,

ವಾತ್ಸಲ್ಯದೇವಿ ಬರಬಹುದೇ ? (ಪಾತ್ರಂ. ೩೭೨). ೨. ಬಾಣಂತಿಯಾಗಿರುವಿಕೆ : ಇಂಥಾ ದಿನಗಳಲ್ಲಿ ವರ್ಷಕ್ಕೊಂದು ಬಾಣಂತನವು ಬೇರೆ ! (ಪ್ರಬಸ. ೫). ಬಾಲಂತಿತನ : ೧. ಬಾಲಂತಿತನಕ್ಕಾಗಿಯೇ ಎಂದು ಬೇವಿನ ಗಿಡದ ಬುಡದಲ್ಲಿ ಹಾಕಿದ ಗುಡಿಸಲಿನಲ್ಲಿ ತಾಯಿ ಶಚೀದೇವಿಯಿಂದ ಅವತರಿಸಿದನು (ಗೌರಂಗ. ೬). [ಬಾಣಂತಿ (<ಬಾಳಂತಿ) + — ತನ]

ಬಾಣಂತಿಬೋಳ (ನಾ). ಬಾಣಂತಿಯರಿಗೆ ಔಷಧಿಯಾಗಿ ಕೊಡುವ ಕರಿಬೋಳ ಎಂಬ ಸಸ್ಯದ ಅಂಟು : ಲವಂಗಪತ್ರೆ ೧/೨ ಪಾವು. ಬಾಣಂತಿಬೋಳ ೧/೨ ಪಾವು . . . ಇಡಿದು ವಸ್ತ್ರಗಾಳಿತವಂ ಮಾಡಿ . . . ತಾರೆಕಾಯಿಪ್ರಮಾಣಮಂ ತೆಗೆದುಕೊಳ್ಳಲು ಸಮಸ್ತಪೈತ್ಯವ್ಯಾಧಿ . . . ಪರಿಹರಮಕ್ಕುಂ (ಸಕಸೂ. ೦೩೫).

[ಬಾಣಂತಿ(<ಬಾಳಂತಿ) + ಬೋಳ್$_3$(<ಬೋಟ್ಟು$_3$)./ಮರಾ. ಬಾಳಂತ ಬೋಳ]

ಬಾಣಂತಿಸನ್ನಿ (ನಾ). ಬಾಣಂತಿಗೆ ಜ್ವರದಿಂದುಟಾಗುವ ಸನ್ನಿಪಾತ : ತುಱುವೆ:—ಈ ಬೇರಂ ನರಮೂತ್ರದಿಂದ ಅರೆದು ತೆಗೆದುಕೊಳ್ಳೆ ಬಾಣಂತಿಸನ್ನಿ ಹರ (ಪಸ್ಮಪ. ೯); ಪುತ್ರಜೀವಿ ತಿರುಳು, ಬೇವಿನ ಬೀಜದ ತಿರುಳು . . . ನಿಂಬೆಹುಳಿಯಲ್ಲರೆದು ನಾಲಗೆಗೆ ಲೇಪ ಮಾಡೆ ಸುಖಸನ್ನಿ ದೋಷಂ ಮಾಣ್ಗುಂ ; ಬಾಣಂತಿಸನ್ನಿ, ತಲೆಯ ಪಿತ್ತ ಸಹ ಕೆಡುಗುಂ (ಸಕಸೂ. ೦೬೦). [ಬಾಣಂತಿ (<ಬಾಳಂತಿ) + ಸನ್ನಿ]

ಬಾಣಂತಿಸೂಳೆ, ಬಾಣತಿಸೂಳೆ (ನಾ). ಇನ್ನೂ ಬಾಣಂತಿಯಾಗಿರುವ ವೇಶ್ಯೆ ; ಕೂಸುಳ್ಳ ಸೂಳೆ : ಹೆತ್ತ ಶಿಶುವಿಂಗಲ್ಲ ವಿತ್ತವನಿತ್ತ ವಿಟನಿಂಗಲ್ಲದೆಡೆಯಾಡುತ್ತಲಿಹ ಬಾಣಂತಿಸೂಳೆಯ ಚೇಷ್ಟೆಯಂದದಲಿ ವ್ಯರ್ಥವಾಗಿಯೆ ಕೆಡುವನಕಟಾ ಮರ್ತ್ಯನೆತ್ತಲು ಮುಟ್ಟ (ಅಮ್ಮುಕ. ೨-೦೦೬). **ಬಾಣತಿಸೂಳೆ** : ಬಾಣತಿಸೂಳೆಯಂತೆ ಸಿಡಿಮಿಡಿಗೊಂಡು ತಳಾಱನಂ ಕಂಡ ಕಳ್ಳನಂತೆ ಕುಸಿದು (ಧರ್ಮಾಮೃ. ೩-೨೩).

[ಬಾಣಂತಿ (<ಬಾಳಂತಿ) + ಸೂಳೆ$_1$]

ಬಾಣಗಗೆಱ^3 (ನಾ). ಒಂದು ಕೆರೆಯ ಹೆಸರು : ಅನ್ತೆ ಬನ್ದು ಬಾಣಗಗೆಱಯ ಏರಿಯ ಮೇಗಣಿಂ (ಎಕ. III, ಪಂಚಸ. ೦೩೯-೨೨; 915 ?).

[ಬಾಣಗ? + ಕೆಱ^3]

ಬಾಣಗತ್ತಲು (ನಾ). ಕಣಿಗಳ ದಟ್ಟಣೆಯಿಂದುಂಟಾದ ಕತ್ತಲೆ : ಹತ್ತು ಬಿಲ್ಲಲಿ ಸರಳ ಸುರಿದನದೆತ್ತ ನಭ ದೆಸೆಯೆತ್ತ ರಾಘವನೆತ್ತಲಂಬರ ಮಣಿಯ ಮುಸುಕಿತು ಬಾಣಗತ್ತಲದು (ಕೌಶಿರಾ. ೨೨-೧೫). 'ಮೊಲಗಟ್ಟಲೆ' ಪರಾ. [ಬಾಣ$_3$ + ಕತ್ತಲು (<ಕಟ್ಟಲೆ)]

ಬಾಣಗಾಱ (ನಾ). ಬಿಲ್ಲಿಗೆ ಕಣಿಗಳನ್ನು ಹೂಡಿ ಬಿಡುವವನು : ರಾಜರು ರಕ್ಕಸಮಾಂತರು ಲಾಳಿ ಬಲ್ಲೋಜರು ಪೆಟಲಂಬಿನವರು ತೇಜೋಮಯ ಬಾಣಗಾಱರೇಱೆತು ಖಗರಾಜನೆಱಂಕೆಯಿಕ್ಕೆಲದಿ (ಮೋಹತ. ೩೬-೧೨). [ಬಾಣ$_3$ + — ಕಾಱ]

ಬಾಣಗೇಹ (ನಾ). ಕಣಿಗಳನ್ನಿಡುವ ಚೀಲ ; ಬತ್ತಳಿಕೆ ; ಮೂಡಿಗೆ : ಬಾಣಗೇಹನದ್ಯಂಬುಧಿಕಾನನಂ ಶರಧಿ ಎಂದೆನಿಕುಂ (ಪಾಣಾರ. ೦೨). [ಸಂ.]

ಬಾಣಜಾತ (ನಾ). ಕಣಿಗಳ ಸಮೂಹ : ಮುರಹರನ ಮೊಮ್ಮನಾಂ ಬೆಚ್ಚುವೊಡೆ ಬಿಡು ಹಯವನಲ್ಲದೊಡೆ ನೋಡೆನ್ನ ಬಾಣಜಾತವನು (ಕೃಷ್ಣಬಾ. ೨೫-೨೦). [ಸಂ.]

ಬಾಣಜಾತೆ (ನಾ). ಬಾಣಾಸುರನ ಮಗಳು; ಅನಿರುದ್ಧನ ಹೆಂಡತಿಯಾದ ಉಷೆ : ಬಾಣಜಾತವನೀಗ ನೋಡಲಿರ್ದಪುದೆ ನೀಂ ಬಾಣಜಾತೆಯ ರಮಣನು (ಕೃಷ್ಣಬಾ. ೨೫-೨೦). [ಸಂ. ಬಾಣಜಾತಾ]

ಬಾಣತಟ್ಟರ (ನಾ). ಒಬ್ಬಾತನ ಹೆಸರು : ಬಾಣರಸರ್ ಪೃಥುವೀರಾಜ್ಯಂಗೆಯೆ ವಿಜಯಿತ್ತನಾಳು ಬಾಣತಟ್ಟರನ್ ತನ್ನ ಆಳು ಉಗೆ ಪೋಗಿ ಮಱುಬಪ್ಪೊಂಗೆ ಕುಂತಿಆಲದಲಿ ಕುದುರೆ ಏಱೆ ಬರುತಿರೆ ಗಣಮುರ್ತ್ತಿ ಎಚ್ಚೊಡೆ . . . ತಟ್ಟು ಸತ್ತ (ಸಾಇಇ. IX-i, ೬-೬; ೨೧೮೮ ಶ). [?]

ಬಾಣತಿ 'ಬಾಳಂತಿ' ನೋ.

ಬಾಣತಿಸೂಳೆ 'ಬಾಣಂತಿಸೂಳೆ' ನೋ.

ಬಾಣದಾಯಕ (ನಾ). (ಯುದ್ಧದಲ್ಲಿ ಯೋಧನಿಗೆ) ಕಣಿಗಳನ್ನು ತಂದು ಕೊಡುವವನು : ಹಡಪಿಗ ಚಮರ ಬಾಹೆಯ ಬಾಣದಾಯಕರ ಕರೆದು ಮನ್ನಿಸಿ . . . ರಣಸುಮ್ಮಾನದಲಿ ಹೊಗರೇಱೆದನು ಕರ್ಣ (ಕುಮಾಕ. ೨೦-೩). [ಸಂ.]

ಬಾಣಧಿ (ನಾ). = ಬಾಣಗೇಹ : ಅಂತಮೋಘಬಾಣಮಂ ಬಾಣಧಿಯಿಂದುರ್ಚಿಕೊಂಡು ಪುರುಪರಮೇಶ್ವರಪುತ್ರಂ ಭರತೇಶ್ವರಚಕ್ರವರ್ತಿ ಬಂದಿರ್ದಂ (ಆರಿಪು. ೦೨-೫೮ ಪ) ; ಲುಬ್ಧಕರ್ತಂಡದೆ ಸುತ್ತಿ ಮುತ್ತಿ ಗೊಲೆಗೊತ್ತಿದನೇ ಧನುವಂ ಸರಲ್ಗಳಂ ಕೊಂಡನೆ ದಿವ್ಯಬಾಣಧಿಯಿಂ . . . ಜನಾರ್ದನಂ (ಪಂಚಾಪಾ. ೭-೦೦೫). [ಸಂ.]

ಬಾಣಪಂಚಕ (ನಾ). ಐದು ಕಣಿಗಳನ್ನುಳ್ಳವನು ; ಕಾಮ ; ಮನ್ಮಥ : ಬಾಣಪಂಚಕಭಸ್ಮಧಾರಣ ಪರಾಕು (ಪಪಪೋ ೨೯-೯೦); ಬಾಣಪಂಚಕಗಿತ್ತು ಚೆಲ್ವನು . . . ಜಾಣರೆಲ್ಲರಿಗೊಡೆಯನಾದ ನಿರ್ವಾಣಲಕ್ಷ್ಮೀಕಾಂತರೀಗೆ ಮಗಿಷ್ಟಸಿದ್ಧಿಯನು (ಪಾಗಪ. ೦-೦). [ಸಂ.]

ಬಾಣಪೀಠ (ನಾ). ಈಶ್ವರಸಂಕೇತವಾದ ಲಿಂಗಾಕೃತಿಯಲ್ಲಿ (ಅಭಿಷೇಕದ ನೀರು ಹರಿದು ಹೋಗಲು ಅನುಕೂಲವಾಗುವಂತೆ) ಲಿಂಗದ ಸುತ್ತಲೂ ಇರುವ ತಗ್ಗಾದ ಪೀಠ : ಸ್ಫುರಿತರುಚಿರಸ್ಫಟಿಕಲಿಂಗವು ಬಾಣಪೀಠದಲಿ ಸ್ಫುರಿತರುಚಿರಸ್ಫಟಿಕಪೀಠಕೆ ಸುರುಚಿರೋನ್ನತ ಬಾಣ ಲಿಂಗವು ಕರಮೆಸೆವುತಿರೆ ಸುಪ್ರತಿಷ್ಠಿತವಾದವೆಯಿತೆಂದು (ಪಸಪು. ೫೭-೬೩). 'ಬಾಣಲಿಂಗ' ಪರಾ. [ಸಂ.]

ಬಾಣಪ್ರಯೋಗ (ನಾ). ಕಣಿಯನ್ನು ಎಸೆಯುವುದು,—ಬಿಡುವುದು : ಬಾಣಪ್ರಯೋಗದಲ್ಲಿ ಲಾಘವ . . . ವಿಕ್ರಮ ಇವು ಯಾವುವರಲ್ಲೂ ಅರ್ಜುನನು ನನಗೆ ಸಮನಲ್ಲ (ಪಕಥಾ. ೨೯೩). [ಸಂ.]

ಬಾಣಬೆಟ್ಟು (ನಾ). ಎತ್ತರದ ಪ್ರದೇಶದಲ್ಲಿರುವ ಗದ್ದೆ : ಬಾಣಬೆಟ್ಟುನಲ್ಲಿ ಬಿದ್ದು ಸುಟ್ಟು ಸಾಯುವ ಅಂತೀಯಾ ? (ಪಶಾಪ. ೫೬).

[ಬಾಣ$_1$ (< ಬಾಣಿ) + ಬೆಟ್ಟು$_2$ (<ಬೆಟ್ಟ). / ತುಳು. ಬಾನೆಬೊಟ್ಟು]

ಬಾಣರಸ, ವಾಣರಸ (ನಾ). ಒಬ್ಬಾತನ ಹೆಸರು : ಮಹಾರಾಜರು[೦] ಬಾಣರಸರುಂ ಸೋರೆಮಟೆ ಕೋಟ್ಟಿಂ(ಕೋಟ್ಟಿ) ಯಿಟ್ಟಲ್ಲಿ (ಎಇ. XXIV, ೦೯೦-೩; ಸು. 885) ; ಪೊಮ್ಬಲ್ಲಮೊಡೆಯಮೂರ್ಗ್ಗೆ ಪಾಡಿಯೊಳೊಡ್ಡಿ ಬಾಣರಸರುಳ್ ಕಾದಿ ಪಲರನೆಱೆದು ಬಿಟ್ಟು ಬೀರಲೋಕಮೆಯ್ದಿದ (ಎಕ. X, ಕೋಟಾರ. ೭೯-೦೦ ; ಸು. 890). **ವಾಣರಸ** : ಸ್ವಸ್ತಿಗುವಳಾಲಂಗೊಂಗುಂ ವಾಣರಸ ಆಳೆ (ಎಕ. X, ಮುಳಿಕಾ. ೨೬೩-೦; ಸು. 860).

[ಬಾಣ$_2$ + ಅರಸ$_1$]

ಬಾಣರಾಸ (ನಾ). ಒಬ್ಬಾತನ ಹೆಸರು : ಸಪ್ರತಿಹಾರೀಕೃತಮಹಾ × × × ಮತ್ ಬಾಣರಾಸರ್ ಗಙ್ಗನಱು × × × ಳುತಿರೆ (ಎಕ. X (S), ಪಾಗೇಪ. ೯೬-೩; ಸು; 820).

[p ಇದು 'ಬಾಣರಸ' ಎಂಬುದರ ಅಪಲಿಖಿತ]

ಬಾಣರಾಸಿ 'ಬಾರಣಾಸಿ' ನೋ.

ಬಾಣಲಿ, ಬಾಂಡಲಿ, ಬಾಂಡಲೆ, ಬಾಂಡ್ಲಿ, ಬಾಂಡ್ಲ, ಬಾಣಲೆ, ಬಾಳಣಿ, ಬಾಳಲಿ (ನಾ). ಆಹಾರಪದಾರ್ಥಗಳನ್ನು ಕರಿಯಲು ಅಥವಾ ಹುರಿಯಲು ಬಳಸುವ, ಬಳಪದ ಕಲ್ಲು ಅಥವಾ ಲೋಹದಿಂದ ಮಾಡಿದ, ಅಗಲಬಾಯಿಯ ಒಂದು ಸಾಧನ : "ಅಂಬರೀಷಃ, ಭ್ರಾಷ್ಟಃ— ೨ . . . ಹುರಿಯುವ ಹೆಂಚು, ಬಾಣಲಿ"

(ಸಿದ್ಧಾಂತಶಿ. ೨೫೩); ಕ್ಷೋಣಿಯೊಳೀ ಬಲ್ಪಿಸಿಲಿಂದೆ ಕಡುಗಾದ ಬಾಣಲಿ ಯೆಣ್ಣೆಯೊಳಬುದಿ ಹೂಣಿಸಿ ಕುದಿಗೊಂಡು ಮರಳ್ದುದು ವನಚರಶ್ರೇಣಿ ಬೆಂಡೆದ್ದು ತೇಲಿದುವು (ಸೋಮಕ. ೦೯-೪೫); ಬೀದಿ ಮಗ್ಗುಲಲ್ಲಿ ಬಾಣಲಿ ಇರಿಸಿಕೊಂಡು ಕರೀತಾರಲ್ಲಾ ಆಂಬೊಡೆ, ಅದರ ಹೆಸರು ಕೇಳಿದರೆ ಸಾಕು ಅವಳಿಗೆ ಬಾಯಲ್ಲಿ ನೀರು (ಸೊಗಲ. ೧೨). ಬಾಂಡಲಿ : ಬಾಂಡಲಿಯೊಳಗೆ, ಕಾದಿರುವ ಎಣ್ಣೆಯೊಳಕ್ಕೆ ಆಹಾರವನ್ನು ಹಾಕಿ ಕರಿಯಬಹುದು (ಗೃಹಪ್ರ. ೩೯). ಬಾಂಡಲೆ : ಏನು ಕಪ್ಪು, ಎಂತಹ ಆಕಾಶ_ಬಾಂಡಲೆಯನ್ನು ಮೇಲೆ ಕವಿಚಿದಂತೆ, ಏನು ನೀರವತೆ! (ರಾಮಾಶ್ವ. ೦೦೩). ಬಾಂಡ್ಲಿ: "ಬಾಣಲಿ (ಲೆ, ಬಾಂಡ್ಲಿ) ಭ್ರಾಷ್ಟ" (ಕದಳೀಕೋ. ೩೦). ಬಾಂಡ್ಲೆ: ಕಾವಲಿ, ಬಾಂಡ್ಲೆ ಇಟ್ಟುಕೊಂಡು (ಬಡಬಾ. ೨). ಬಾಣಲೆ : "ಅಂಗಾರಶಕಟಿಯೆಂದರೆ ಬಾಣಲೆಯೆನಿಕ್ಕು" (ಸುಂಗೋಶ. ೬೩-೨೯); ಸಂಪಂಗಿ ಹೂಗಳನ್ನು ಬಾಣಲೆಯಲ್ಲಿ ಹೊಗೆ ಹೋಗದ ರೀತಿಯಲ್ಲಿ ಏಳಾವರ್ತಿ ಹುರಿದು ನಯವಾಗಿ ಆರೆದು ಜೇನುತುಪ್ಪದೊಡನೆ ಕೊಟ್ಟರೆ ಕೆಮ್ಮು ಹೋಗುವುದು (ಪಶಸ್ಯ. ಹಂ. ೧೩೩); ಅವರ ಹೊಗಳಿಕೆ ಕೇಳಿ ಎದೆ ಕಾದ ಬಾಣಲೆ! (ಪಶಬಾ. ೬೬-೯). ಬಾಳಣೆ : ಅವರ ನಾದಿನಿ ಅವರಿಗೆ ಹುಂಚು ಬಾಳಣೆ ಮುಂತಾದವುಗಳನ್ನು ತರಹೇಳಿದ್ದಳು (ಕೃಷ್ಣಶಿ. ೩೧೨). ಬಾಳಲಿ: "ಬುಜೇಷ, ಪಿಷ್ಟಪಚನ-ಎಣ್ಣೆಯಲ್ಲಿ ಹಿಟ್ಟನಡುವ ಬಾಳಲಿ" (ಜಾಕಾಂ. ೩).

[ದೇ. ॥ ತಮಿ. ಪಾಣಲಿ, ವಾಣಲಿ; ತುಳು. ಬಾಣಲೆ; ತೆಲು. ಬಾಣಲಿ]

ಬಾಣಲಿಂಗ (ನಾ). ೧. ನರ್ಮದಾನದಿಯಲ್ಲಿ ದೊರಕಿದುದೆಂದು ಭಾವಿಸಿ, ಶಿವಲಿಂಗವೆಂದು ಪೂಜಿಸುವ ಒಂದು ಬಗೆಯ ಬಿಳಿಯ ಶಿಲೆ : ಸ್ಫುರಿತರುಚಿರಸ್ಫಟಿಕಲಿಂಗವು ಬಾಣಪೀಠದಲಿ ಸ್ಫುರಿತರುಚಿರ ಸ್ಫಟಿಕಪೀಠಕೆ ಸುರುಚಿರೋನ್ನತ ಬಾಣಲಿಂಗವು ಕರವೆಸೆವತಿರೆ ಸುಪ್ರತಿಷ್ಠಿತ ಪಾದವೆಯೆಂದು (ಪಶಪು. ೩೭-೬೬); ವಾರಣಾಸಿಯಿಂದ ಬಾಣಲಿಂಗವನು ತರಿಸಿ ವಿಶ್ವೇಶ್ವರ ಲಕ್ಷ್ಮೀನಾರಾಯಣದೇವರ ಪ್ರತಿಷ್ಠೆಯನು ಮಾಡಿಸಿ (ಎಇ. X, ಗೋಕರ್ಣ. ೫೯-೬ ; 1408). ೨. [ವೀಶೈ] ಒಂದು ಲಿಂಗಾಕೃತಿಯ ಹೆಸರು ; ಸ್ವಯಂಭುಲಿಂಗ, ಬಾಣಲಿಂಗ, ಚರಲಿಂಗ, ಸಂಕೀರ್ಣಲಿಂಗ ಮತ್ತು ಪ್ರಾಣಲಿಂಗವೆಂಬ ಐದು ಬಗೆಯ ಲಿಂಗಗಳಲ್ಲಿ ಒಂದು : ಸೆಱಂಗಿನಲಿ ಕಟ್ಟಿರ್ದ ಬದನೆಯ ಕಾಯಿ ನಿಮಿಷದಲಿ ಸಂಗಮೇಶ್ವರ ಬಸವರಾಜನ ಸಂಗಭಾವದಿ ಬಾಣಲಿಂಗ ಸುರಂಗಮಾದುವು (ಪಶಪು. ೯-೩) ; ಶೈವಸಿದ್ಧಾಂತಸಮ್ಮತಮಾದ ಪಂಚಲಿಂಗಾರ್ಚನದೊಳು ಸ್ವಯಂಭುಲಿಂಗ ಬಾಣಲಿಂಗ . . . ಪ್ರಾಣಲಿಂಗವೆಂಬೈದಱೊಳಗೆ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಅರ್ಚನತತ್ಪರರಾಗಬೇಕೆಂದು ನಿಶ್ಚಯಿಸಲಕ್ಕುಂ (ಪಸೇಶ. ೦೦೨). 'ಪಂಚಲಿಂಗ' ಪರಾ. [ಸಂ.]

ಬಾಣಲೆ 'ಬಾಣಲಿ' ನೋ.

ಬಾಣವರ್ಷ (ನಾ). ಅಂಬುಗಳ ಮಳೆ.—ವೃಷ್ಟಿ : ಅಶ್ವತ್ಥಾಮನು ಅರ್ಜುನನಿಗೆ ಅಡ್ಡವಾಗಿ ಬಂದು ಮೇಘವು ಮಳೆಗರೆದಂತೆ ಅವನ ಮೇಲೆ ಬಾಣವರ್ಷವನ್ನು ಕರೆದನು (ಪಕಣಾ. ೨೦೩). [ಸಂ.]

ಬಾಣವೃತ್ತ (ನಾ). [ಛಂದ] ಪ್ರತಿಪಾದದಲ್ಲಿ ಹನ್ನೆರಡು ಅಕ್ಷರಗಳಿರುವ ಒಂದು ವರ್ಣವೃತ್ತ: ಸಭರಯಂ ಬರೆ ಬಾಣವೃತ್ತಮಕ್ಕುಂ (ಕೃಷಿ. ೮೦). [ಸಂ.]

ಬಾಣವೃಷ್ಟಿ (ನಾ). = ಬಾಣವರ್ಷ : ಇಷ್ಟರೊಳ್ ಪ್ರಸಾದಸೌಮ್ಯ ದೃಷ್ಟಿಯಲ್ಲದೆ ವಿಷ್ಟಪಪತಿ ಬೇಳು ಬಾಣವೃಷ್ಟಿ ಬೀಳ್ದುದೆ (ಶಾಕುಂತ. ೯೭ ೨೩೫). [ಸಂ.]

ಬಾಣಶಯನ (ನಾ). ಕಣೆಗಳ ಹಾಸುಗೆ ; ಶರಶಯನ : ಭೀಷ್ಮ . . . ನೋವಿನ ಕಳಕಳಕೆ ಧೃತಿಗೆಡದೆ ಮೆಱೆದನು ಬಾಣಶಯನದಲಿ (ಕುಪ್ಪಾಂ. ೦೦-೨೩). [ಸಂ.]

ಬಾಣಸ, ಬಾಣಸು (ನಾ). ೧. (ಅಧಿಕಸಂಖ್ಯೆಯ ಜನರ ಭೋಜನ ಕೂಟಕ್ಕೆ ಉಪಯೋಗಿಸುವ) ದೊಡ್ಡ ಅಡುಗೆಮನೆ.—ಪಾಕಶಾಲೆ : "ಬಾಣಸ(ಸು) — ಮಹಾನಸ = ಪಾಕಶಾಲೆ" (ಶಬ್ದಕೋ. ೩೦) ; ಅರ್ಣವದೊಳ್ ನೀಂ ಮತ್ಸ್ಯನಾಗಲಾನಂದು ಸಮುದ್ಭವಿಸಿದನಪ್ಪುದಂ ಗಾಣವಿಕ್ಕೆ ಬಾಣಸಕ್ಕೊಪ್ಪಿಸೆನೇ (ಜಗಪ. ೦೭-೩೪) ; ಅವರನೊಪ್ಪಿಟ್ಟ ಮನೆಯನೇನೊಗಳ್ವೆನದು . . . ಅಂತಕನ ನಗರ ಮೃತ್ಯುವಿನ ಬಲುಬಾಣಸದ ಹಂತಿ (ಪಕಣಾ. ೦೨-೨). ೨. ಅಡುಗೆ ; ಪಾಕ : ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ ಕಾಡಿದೆ (ಪಸಪ. ೭೧೦); ಸಿಡಿಲುವಕ್ಕಿಯ ಪಕ್ಕವನು ಕಿತ್ತಡಬಳದ ಬಾಣಸವ ಮಾಡುವ ಕಡುಗಲಿಗಳಾರುಂಟು (ಶ್ರೀಪುರಾ. ೯-೦೩) ; ಹೆಣ್ಣಾಗಿ ಬಾಣಸದ ಪವಣಱಿದುದಿಲ್ಲಲಾ (ಶ್ರೀಪುಣಾ. ೨-೬೦). 'ಬಾಣಸಗೈ' ಪರಾ. ೩. ಅಡುಗೆಯ ಕೆಲಸ.—ಕಸುಬು : ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು (ಪಸಪ. ೩೩೦). ೪. ಉಣಿಸು ; ಆಹಾರ ; ಭಕ್ಷ್ಯ : ಇಂದಿನ ಬಾಣಸಕ್ಕೆನ್ನಂ ನಿವೇದಿಸಿದೆಂ ದೇವರ್ ಕೈಕೊಳ್ಳಿಂ (ಪಂಚಸಂ. ೦೧೩-೩) ; ಅಂಜಬೇಡ ಮಹಾಸುರನ ಬಾಣಸದ ಬೀಯಕೆ ರಮಣ ವುಂಟೆಮಗೆ (ಕುಪ್ಪಾಂ. ೦-೦೧) ; ಬೆರಕೆಯಲಿ ಜವನುಂಡು ಬೆಲ್ಲಿದ ಪರಿ ಪರಿಯ ಬಾಣಸಗಳೆಸೆದಿಹ ಹರಿಯಾಣದವೊಲು ಕಣ್ಗೆ ಕೌತುಕವಾಯ್ತು ರಣಭೂಮಿ (ಶಾತ್ಕಾಂ. ೨೦-೨೩). ೫. ಅಡುಗೆಮಾಡುವವನು ; ಅಡುಗೆಯವನು : ವಣಿಗ್ವರರ್ ಗಂಧಿಗರ್ ಬಾಣಸರ್ ತಾಂಬೂಲಿಗರ್ . . . ಜೂಜುಗಾಱರ್ ಮುಂಖ್ಯರೊದಗಿ ಬರುತಿರ್ದರ್ (ಕಸಪು. ೯೭-೯೦). ಬಾಣಸು : ೧. ನೃಪೇಂದ್ರತನುಜಾತರ್, ನಿಶ್ಚಿಂತಂ ಪೊಕ್ಕರ್ ಪಸಿದ ಕೃತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ (ಯುದ್ಧಕಾಂ. ೦-೩೩) ; ಲಲಿತ ಬೋನದ ವಿವಿಧ ಭಕ್ಷ್ಯಾವಳಿಯ ಬಾಣಸಿನೊ[ಜಾಕಾಂ. ಸದೊ]ಳಗೆ ಬಂದಳು ಮತ್ತಗಜಗಮನೆ (ಕುಪ್ಪಾಕಿ. ೩-೩೬). ೨. ವಿರಾಟಂ . . . ನಿನ್ನ ನಾಳ್ವೆನೆಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದಂ (ಪಂಚಶಾ. ೯-೩೪ ಪ) ; ಅಂತು ಮನೆಗಟ್ಟ ಬಾಣಸಿನ ಕೂಟಕ್ಕಿಲ್ಲಮನುಂಡುಮವ್ವಾ ಪಸಿವು ಪೋಗದೆಂದಡರಿಸಿ ಚೋದ್ಯಂಬಟ್ಟು (ಪಂಪಂ. ೯-೨೬ ಪ); ಅದೊಂದು ನೀಲಪರ್ವತಂ . . . ನಿಚ್ಚವಯಣಂಬರ್ಪ ಜಾತ್ರೆಯ ಜನರ ಬಿರ್ದಿನ ಪಗಲೂಟದ ಬಾಣಸಿನಾವಿಗೆಯ ತನಿಗೆಂಡದೋವರಿಯೆಂಬಂತು ತಟತಟನೆ ಪೊಳೆವ ರಂಗು ಮಾಣಿಕದಗಟ್ತೆಯಿಂ . . . ಮನೋಜ್ಞಂ (ಕುಪ್ಪಾಕಿ. ೭೨ ೨೩).

ಬಾಣಸದ ಭವನ = ಅಡುಗೆಮನೆ ; ಪಾಕಶಾಲೆ : ಸೈರಿಸರು ಬಾಣಸದ[ಜಾಕಾಂ. ಸಿನ] ಭವನದ ನಾರಿಯರು ದುರ್ಜನರು (ಕುಪ್ಪಾಕಿ. ೩-೪೦); ಹನ್ನೆರಡುಯೋಜನತರದ ಭೋಜನಶಾಲೆಗಳು ವಿಸ್ತರಿಸಿದವು ಬಾಣಸದ ಭವನಂಗಳು ಸುವೀಥಿಯಲಿ (ಶೊರಕಾ. ೦-೬-೬). ಬಾಣಸದ ಮನೆ, ಬಾಣಸಿನ ಮನೆ = ಬಾಣಸದ ಭವನ : ಬಾಣಸದ ಮನೆ—ರಸವತಿ, ಪಾಕಸ್ಥಾನ, ಮಹಾನಸ" (ಜಾಕಾಂ. ೩) ; ಗುಹೇಶ್ವರ ನಿಮ್ಮ ಶರಣ ಕಟ್ಟಿದಿರ ಬಾಣಸದ ಮನೆಗೆ ಬಂದನು (ಅಪಸಂ. ೦೧೩-೬೬೨) ; "ಪಾಕಸ್ಥಾನಂ, ರಸವತೀ, ಮಹಾನಸಂ—ಈ ೩ ಬಾಣಸಿನ ಮನೆ" (ಹಡಾಯು. ೯೯-೦೯೦) ; ಸಹಸ್ರಸಿಂಹಬಲನೆನಿಪ ಸಿಂಹಬಲನ[ನ]ಶ್ರಮದೊಳೆ ಕೊಂದು ಜವಂಗೆ ಬಾಣಸುಗೆಯ್ದಂದಿನಂದದೊಳೆ ಬಾಣಸಿನ ಮನೆಯೊಳ್ ಬಂದಿರ್ದಂ (ಪಂಚಶಾ. ೯-೬೯ ಪ); ಕಳವಳದ ಕರಣದ ಮುಗುದೆ ಬಂದಳು ಬಾಣಸಿನ ಮನೆಗೆ (ಕುಪ್ಪಾಕಿ. ೩-೩೩). ಬಾಣಸದ ಶಾಲೆ = ಬಾಣಸದ ಭವನ : ಮೃತ್ಯುವಿನ ಬಾಣಸದ ಶಾಲೆಯೋ ಸಮರಾಂಗಣವೊ (ಶೊರಕಾ. ೬-೩೬-೧೩).

[< ಸಂ. ಮಹಾನಸ. / ಪ್ರಾ. ಮಹಾಣಸ. / ತೆಲು. ಬಾನಸ]

ಬಾಣಸಂಧಾನ (ನಾ). ಬಿಲ್ಲಿನ ಹೆದೆಗೆ ಕಣೆಯನ್ನು ಹೂಡುವುದು ; ಶರಸಂಧಾನ : ಕರ್ಣನು ಎರಡು ಸಾರಿ ಗುರಿಯಿಟ್ಟು ಬಾಣಸಂಧಾನ ಮಾಡುವುದಿಲ್ಲ (ಪಕಣಾ. ೨೯೯). [ಸಂ.]

ಬಾಣಸಗಿತ್ತಿ (ನಾ). ಅಡುಗೆಯ ಕೆಲಸ ಮಾಡುವವಳು; ಅಡುಗೆಯವಳು : ಶೂಲಧರ ನಿಮ್ಮಡಬಳಂ ಸಿರಿಯಾಳ ಬಾಣಸಗಿತ್ತಿ ಚಂಗಳೆ (ಬಸಪು. ೯-೪೦). [ಬಾಣಸ + — ಗಿತ್ತಿ]

ಬಾಣಸಗೈ, ಬಾಣಸುಗೆಯ್, ಬಾಣಸುಗೈ (ಕ್ರಿ). ಅಡುಗೆ ಮಾಡು; ಆಹಾರವನ್ನು ಸಿದ್ಧಪಡಿಸು : ಅನಲ ಬಾಣಸಗೈಯನೋ ತಿಥಿದಿನವ ಸುರಗುರುವುಸುರನೋ (ಶೂರರಾ. ೬ ಪಂ. ೭೦೦). **ಬಾಣಸುಗೆಯ್** : ಸಹಸ್ರಸಿಂಹಬಲನೆನಿಪ ಸಿಂಹಬಲನ[ನ]ಶ್ರಮದೊಳೆ ಕೊಂದು ಜವಂಗೆ ಬಾಣಸುಗೆಯ್ದೆಂದಿನಂದದೊಳೆ ಬಾಣಸಿನ ಮನೆಯೊಳ್ ಬಂದಿರ್ದಂ (ಪಂಪಭಾ. ೯-೭೬ ಪ); ಪಿರಿಯಣ್ಣನ ನನ್ನಿಯನಾದರದಿಂ ಕಾಯಲ್ಕೆ ಪೆಱರ್ಗೆ ಬಾಣಸುಗೆಯ್ದೆಂ ಕುರುವಂಶಜ ಕೇಳ್ ನಿನ್ನೀ ಶರೀರಮಾಂಸದೊಳೆ ಮರುಳ್ಗೆ ಬಾಣಸುಗೆಯ್ದೆಂ (ಗದಾಯು. ೭-೩೯). **ಬಾಣಸುಗೈ** : ಅಗ್ಗಿ ಮೊಗರ್ಗೆ ಬಾಣಸುಗೈದು ನಿಚ್ಚಮುಯ್ವ ಜನ್ನದುರಿಯ ನಡುಬೀದಿಯೆನೆ ಮುಗಿಲುದ್ದಮೊಂದಿದ ಕರ್ವೊಗೆಯಿಂ . . . ತೋರ್ಪ ತಪೋವನಮೊಂದು ಕಣ್ಗೊಳಿಸಲ್ (ರಾಮಾಶ್ವ. ೬೪-೨). [ಬಾಣಸ + ಗೈ (< ಕೆಯ್$_1$)]

ಬಾಣಸಮನೆ 'ಬಾಣಸವನೆ' ನೋ.

ಬಾಣಸವನೆ, ಬಾಣಸಮನೆ (ನಾ). = ಬಾಣಸ ೧ : ಜವನ ಕಣಜವೊ ಮೇಣು ಲಯಮೃತ್ಯುವಿನ ಬಾಣಸವನೆಯೊ (ಶೊಕರಾ. ೬-೦೩-೪೩). **ಬಾಣಸಮನೆ** : ಮರ್ತ್ಯವೆಂಬುವದು ಕರ್ತಾರನ ಕಮ್ಮಟವು ಮತ್ತೆ ಆಚ್ಚಿನ ಮೊಳೆ ಬಾಣಸಮನೆ ದೇವನ ಸೊತ್ತಿಹುದು ನೀನೇನು ಕೊಟ್ಟೆ ಬಸವ (ಸಿದ್ಧಪು. ೩೦-೪೯). [ಬಾಣಸ + ಮನೆ]

ಬಾಣಸವಿದ್ಯೆ (ನಾ). ಅಡುಗೆಯ ವಿಧಾನವನ್ನು ತಿಳಿಸುವ ಕಲೆ ; **ಪಾಕವಿದ್ಯೆ** : ಹದ್ದು ಕಾಗೆಯ ಮನೆಯ ಬಾಣಸವಿದ್ಯೆಯೆಮ್ಮದು ಯಮನ ನಿಳಯಕೆ ಬಿದ್ದಿನರು ನೀವು (ಕುಮಾಭೀ. ೯-೨೩). [ಬಾಣಸ + ವಿದ್ಯೆ]

ಬಾಣಸವಿರು (ಕ್ರಿ). ಅಡುಗೆಯ ಕೆಲಸಕ್ಕಿರು : ಹದ್ದು ಕಾಗೆಯ ಮನೆಗೆ ಬಾಣಸವಿದ್ದುದೋ ಗಜವೆನುತ ಬೊಬ್ಬಿಡುತಿದ್ದುದರಿಬಲವು (ಕುಮಾಭ್ರೋ. ೩-೪೩). [ಬಾಣಸ + ಇರು$_1$ (< ಇರ್$_1$)]

ಬಾಣಸವೆರ್ಗಡೆ, ಬಾಣಸಿವೆರ್ಗಡೆ, ಬಾಣಸುವೆಗ್ಗಡೆ, ಭಾಣಸವೆರ್ಗಡೆ, ಭಾಣಸುವೆರ್ಗಡೆ(ನಾ). ಪಾಕಶಾಲೆಯ ಮೇಲ್ವಿಚಾರಕ,–ಮುಖ್ಯಸ್ಥ : ಶ್ರೀಮಹಾಪ್ರಧಾನ ಬಾಣಸವೆರ್ಗ್ಗಡೆ ಮನೆವೆಗ್ಗಡೆ ದಣ್ಣನಾಯಕನನನ್ತ ಪಾಳಯ್ಯಂಗಳ ಪೆರ್ಗ್ಗಡೆ ಸಿರಿಪತಿನಾಯಕಂ . . . ಮೂಱುಗದ್ಯಾಣ ಪೊನ್ನಂ ಬಿಟ್ಟರ್ (ನಾಂದೇಡ್. ೦೯-೦೦; 1116). **ಬಾಣಸಿವೆರ್ಗಡೆ** : ಶ್ರೀಮಂನ್ಮಹಾಪ್ರಧಾನಂ ದಣ್ಣನಾ[ಯ]ಕ ಬಾಣಸಿವೆರ್ಗ್ಗಡೆ ಅನನ್ತ ಪಾಳಯ್ಯಗಳ [ಪ(ತ)]ತುಪಾದಪದ್ಮೋಪಜೀವಿ (ಕಇ. IV. ೩-೦೨ ; 1114). **ಬಾಣಸುವೆಗ್ಗಡೆ** : "ಪೌರೋಗವಃ, ಸೂದಾಧ್ಯಕ್ಷಃ — ಈ ೨ ಬಾಣಸುವೆಗ್ಗಡೆ" (ಹಲಾಯು. ೭೦-೨೭೭). **ಭಾಣಸವೆರ್ಗಡೆ** : ಶ್ರೀಮನ್ಮಹಾಪ್ರಧಾನಂ ಭಾಣಸವೆರ್ಗ್ಗಡೆ ಮನೆವೆರ್ಗ್ಗಡೆ ಪ(ಂ)ನ್ನಾಯದಧಿಷ್ಠಾಯಕನ ನನ್ತಪಾಳಯ್ಯದಣ್ಣನಾಯಕರು . . . ಸುಂಕಮಂ ಸರ್ವ್ವಾಯ ಶುದ್ಧಿಯಿಂ ಬಿಟ್ಟರು (ಸೌಇಇ. IX — i, ೧೫೩-೬೬ ; 1083): ಶ್ರೀಮನ್ಮಹಾಪ್ರಚಂಡದಂಡನಾಯಕಂ ಭಾಣಸವೆರ್ಗ್ಗಡೆ ಅನನ್ತಪಾ[ಳ]ದಂಡನಾಯಕಂಗೆ ಬಿನ್ನಪಂಗೆಯ್ದು . . . ಬಿಟ್ಟ ಧರ್ಮ್ಮಮೆಂತೆಂದ[ಡೆ] (ಸೌಇಇ. XI — ii, ೧೯೦-೬; 1106). **ಭಾಣಸುವೆರ್ಗಡೆ** : ಶ್ರೀಮನ್ ಮಹಾಪ್ರಧಾನಂ ಭಾಣಸುವೆರ್ಗ್ಗಡೆ ಅನನ್ತ ಪಾಳರಸರ ದೆಸೆಯಿನವರಳಿಯಂ . . . ಬೆಟ್ಟಲವೆರಡಾಱುನೂಱುಮಂ ದುಷ್ಟನಿಗ್ರಹಶಿಷ್ಟಪ್ರತಿಪಾಳನದಿಂದಾಳುತ್ತಮಿರ್ದ್ದು (ಎಇ. XVIII, ೦೯೦-೪; 1104) ; ಶ್ರೀಮನುಮಹಾಪ್ರಧಾನಂ ಭಾಣಸುವೆರ್ಗ್ಗಡೆ ಮನೆವೆರ್ಗ್ಗಡೆ ಸೇನಾಧಿಪತಿ ದಂಡನಾಯಕನ ನನ್ತಪಾಳಯ್ಯಂಗಳು... ಧಾರಾಪೂರ್ವ್ವಕಮಾಗಿ ಕೊಟ್ಟು (ಸೌಇಇ. IX — i, ೨೨೪-೦೭; 1130). [ಬಾಣಸ + ಪೆರ್ಗಡೆ$_1$]

ಬಾಣಸಾಮಿ (ನಾ). ಒಬ್ಬಾತನ ಹೆಸರು : ಬೆಣ್ಣಗೂರ ಕರ್ವ್ವುವೆ ಬಾಣಸಾಮಿ ಮಗನ್ ಪುಜೆಕಾಮನ್ . . . ಸತ್ತನ್ (ಎಳ. X, ಬೌರಂಗ್. ೪೫-೫; ಸು. 880?). [ಬಾಣ$_2$ + ಸಾಮಿ$_1$]

ಬಾಣಸಿ (ನಾ). ಅಡುಗೆ ಮಾಡುವ ಕೆಲಸಕ್ಕೆ ನಿಯುಕ್ತನಾದವನು : ಅಡುಗೆಯವನು : "ಬಾಣಸಿಯೆನಲ್ ಅಡಿಗೆವಳಂ" (ಶಶುಶಿ. ೨೦೭); ಬಾಣಸಿಯಾನು ಭೀಮನ ಮನೆಯವನು (ಕುಮಾಭಿ. ೦-೨೨); ಭೂಮಿ ತಾನೋ ವಾರಿ ತಾನೋ ವ್ಯೋಮಚರ ಬಾಣಸಿಯು ತಾನೋ (ಎಕಾಗ. ೦೦-೧೬-೦೩).

[ಬಾಣಸ + — ಇ$_3$. / ಸಂ. ಮಹಾನಸೀ. / ಪ್ರಾ. ಮಹಾಣಸಿ. / ತಮಿ. ಪಾನಚಿ ; ತೆಲು. ಬಾನಸೀಂಡು]

ಬಾಣಸಿಗ (ನಾ). = ಬಾಣಸಿ : "ಆರಾಳಿಕಃ, ಸೂಪಕಾರಃ, ಸೂದಃ, ಪಲ್ಲವಃ — ಈ ೪ ಬಾಣಸಿಗಂ" (ಹಲಾಯು. ೭೦-೨೭೭); ಬಾಣಸಿಗಂ ಬಂದು ಬೋನಮೆತ್ತಿಯೋಗರಮಾಱಿದಪ್ಪುದೆಂದು ಪೇಟ್ದೊಡೆ (ಪಡ್ಡಾರಾ. ೪೬-೦೬); ವಿರಾಟಂ . . . ತನ್ನ ಬಾಣಸಿಗನಾಗಿರ್ದ ವಲ್ಲಲನಂ ಕರೆದು ಪೇಟ್ದಾಗಳ್ (ಪಂಪಭಾ. ೯-೫೭ ಪ); ಎಸರನಿಡುವ . . . ಕಂಚುಗರ್ಚುವ ಬೆಸನಂ ಬೆಸನಲ್ಲದೆ ಮತ್ಸ್ಯನ್ಗಬಾಣಸಿಗಂಗಾರಿತ್ತರೆಲವೊ ನಿನಗೀ ಬೆಸನಂ (ಗದಾಯು. ೭-೩೭). [ಬಾಣಸ + — ಇಗ]

ಬಾಣಸಿಗತನ (ನಾ). ಅಡುಗೆಯವನ ಕೆಲಸ ; ಬಾಣಸಿಗನ ಕಾರ್ಯ : ಬಾಣಸಿಗತನಕ್ಕೆ ಸಂದು ಮಿಗೆ ಮತ್ಸ್ಯನೃಪಂಗುಣಲಿಕ್ಕಿ ಭೀಮ ಜೀವಿಸಿದನು (ಕಱಕಂ. ೦೭). [ಬಾಣಸಿಗ + — ತನ]

ಬಾಣಸಿಗಿತಿ 'ಬಾಣಸಿಗಿತ್ತಿ' ನೋ.

ಬಾಣಸಿಗಿತ್ತಿ, ಬಾಣಸಿಗಿತಿ (ನಾ). = ಬಾಣಸಗಿತ್ತಿ : ಆ ಸತ್ಯಭಾಮೆಯಾ ಯತಸನ್ನೆ ಬಾಣಸಿಗಿತ್ತಿಯಾಗಿರ್ದೊಂದುದಿವಸಂ . . . ಪಂಚಾಶ್ವರ್ಯಂ ನೆಗಟ್ (ತಾಪುಂಪು. ೦೯೩). **ಬಾಣಸಿಗಿತಿ** : ಪೂಜಾರಿ ಬಾಣಸಿಗಿತಿ ದವಸಿಗ × × × ತೋಟಿಗಂ ಸಂಕಿಮಯನೊಳಗಾಗಿ ಜೀರ್ಣ್ಣೋದ್ಧಾರಕಂ ವಿತ್ತಿ ಮೂವತ್ತು (ಎಳ. XII, ಗುಬ್ಬ. ೦೪-೬೨ ; 1140) ; ಬಿಡದಮೃತಾನ್ನಮನೊಱಲ್ದು ಬಾಣಸಿಗಿತಿವೊಲ್ ಕುಡುತಿರ್ದಳ್ (ಕಾಮ್ಯಾಪ. ೩೩೦).

[ಬಾಣಸಿಗ + — ಇತ್ತಿ]

ಬಾಣಸಿಗೆ, ಭಾಣಸಿಗೆ (ನಾ). = ಬಾಣಸಗಿತ್ತಿ : ಕಿಱುಕಬೆ ಸರ್ಗ್ಗತನ ಬಾಣಸಿಗೆಯಾಕೆಯ ಪಿರಿಯ ಮಗಂ × × ಟಿಯಕ್ಕಂ (ಎಳ. VIII, ನಗರ. ೪೫-೫; ಸು. 950); ಬಾಣಸಿಗೆಯರ್ . . . ಹಯ್ಯಂಗವೀನಮುಮನರಸಂಗಂ ಪಂಕ್ತಿಯೊಳುಣ್ಬ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಕುಮಾ. ೦೦-೨೯ ಪ). **ಭಾಣಸಿಗೆ** : ನಿವೇದ್ಯಮನಡುವ ಭಾಣಸಿಗೆಗೆ ಮತ್ತುರು ೯ (ಕಇಲ. ೯-೩-೩೨೩; 1085). [ಬಾಣಸಿಗ + — ಎ$_3$]

ಬಾಣಸಿತನ (ನಾ). = ಬಾಣಸಿಗತನ : ಬಾಹುಕನು . . . ತುರಗನಿಕರದ ಶಿಕ್ಷೆಯಲಿ ಮಂದಿರದ ಬಾಣಸಿತನದ ಕೆಲಸದಿ ನೆಱೆ ನಿಪುಣನೆಂದೆನಿಸಿಕೊಂಡಿಹ ನೃಪನ ಸಭೆಯೊಳಗೆ (ಪಳಶ. ೯-೧೯) ; ಅಗ್ನಿಯು ಅನವರತಂ ಬಾಣಸಿತನಮಂ ಕೈಕೊಂಡಿರ್ಪನು (ಶುಕಸ. ೧೪೪). [ಬಾಣಸಿ + — ತನ]

ಬಾಣಸಿವೆರ್ಗಡೆ 'ಬಾಣಸವೆರ್ಗಡೆ' ನೋ.

ಬಾಣಸು 'ಬಾಣಸ' ನೋ.

ಬಾಣಸುಗೆಯ್ 'ಬಾಣಸಗೈ' ನೋ.

ಬಾಣಸುಗೈ 'ಬಾಣಸಗೈ' ನೋ.

ಬಾಣಸುವೆಗ್ಗಡೆ 'ಬಾಣಸವೆರ್ಗಡೆ' ನೋ.

ಬಾಣಹತಿ (ನಾ). ಅಂಬಿನ ಹೊಡೆತ,– ಪೆಟ್ಟು : ದೇವ ನಿಜೋಗ್ರ ಬಾಣಹತಿಯಿಂ ತಲೆಗಳ್ ಗಗನಕ್ಕೆ . . . ಪಾಱುತಿರ್ಪಿನಂ . . . ರಾವಣನಂ ರಘುಪ್ರಭವರೂಪದೆ ಮರ್ದಿಸಿದೈ ಜನಾರ್ದನಾ (ಜಗನಿ. ೦-೬೦);

ಬಾಣಹತಿಗಕ್ಕುಡಿಸಿ ರಾಜ್ಯಶ್ರೇಣಿ ಜರುಗಿತು (ಕಾದಂಬ ೨೯-೯೨). [ಸಂ.]

ಬಾಣಹರ (ನಾ). ಬಾಣನೆಂಬ ರಾಕ್ಷಸನನ್ನು ಕೊಂದವನು; ಕೃಷ್ಣ: "ಮುರಹಿರಣ್ಯ ಕಂಸಮಧುಕೇಶಿಬಲಿಬಾಣಹರನೆನಲು . . . ಕೃಷ್ಣಂ" (ಮಂಗರಾ. ೬-೦೬). [ಸಂ.]

ಬಾಣಾಗ್ನಿ (ನಾ). ಬಾಣದಿಂದ ಉತ್ಪತ್ತಿಯಾಗುವ ಬೆಂಕಿ: ಆ ಮಹಾರಿಪುಭಯಂಕರನೀಗಳೆನಗಾಗಿ, ತನ್ನೊಲಿದ ಕೈಹಿಡಿದಬಲೆಗಾಗಿ, ಶೋಷಿಸನೆ ಶರಧಿಯಂ ಬಾಣಾಗ್ನಿಯಿಂ? (ತ್ರೇತಾಮಾ. ೩೦೬-೯೯೩). [ಸಂ.]

ಬಾಣಾಯಿತ (ನಾ). (ಬಿಲ್ಲಿಗೆ) ಅಂಬನ್ನು ಹೂಡುವವನು; ಬಿಲ್ಲುಗಾರ: ಕಠಾರಾಯಿತರ ಬಾಣಾಯಿತರ ಮಲ್ಲಜಟ್ಟಿಗಳ . . . ಮೊತ್ತ ದೊತ್ತರದ ತಿಂಥಿಣಿಯನೊತ್ತರಿಸಿ ಇಟ್ಟಣಿಸಿದ ಕಟ್ಟಣಕದಾಸ್ಥಾನದೊಳು (ಬಸರ. ೬-೨೩). [ಬಾಣ್ + – ಆಯಿತ (< – ಆಯ್ತು)]

ಬಾಣಾರಸಿ 'ಬಾರಣಾಸಿ' ನೋ.

ಬಾಣಾಶ್ರಯ (ನಾ). ಅಂಬಿಗೆ ಆಶ್ರಯಸ್ಥಾನವಾದಂದಂ; ಬತ್ತಳಿಕೆ: "ತೂಣೀರಂ. ಉಪಾಸಂಗಃ . . . ಬಾಣಾಶ್ರಯಃ, ಕಳಾಪಃ — ಈ ೮ ಮೂಡಿಗೆ" (ಹಲಾಯು. ೭೬-೩೦೦). [ಸಂ.]

ಬಾಣಾಸನ (ನಾ). ೧. ಬಿಲ್ಲು; ಧನುಸ್ಸು: "ಧನು ಕೋದಂಡಂ ಬಾಣಾಸನಮಸ್ತ್ರಂ ಕಾರ್ಮುಕಾಖ್ಯಮದು ಚಾಪಂ" (ಶಸ್ತ್ರಕೋ. ೬೩-೦೭); ಪಂಚವಿಂಶತ್ಯನ್ವಿತಸಪ್ತಶತಬಾಣಾಸನೋಚ್ಛ್ರಿತನುಂ ನಲಿನಪ್ರಮಾಣಾಯುಷ್ಯನುಮಾಗಿ . . . ಪುಟ್ಟಿ (ಅಂಪು. ೬-೩೭ ಪ); ಬಾಸಣಿಸಿದ ಮದನನ ಬಾಣಾಸನದವೊಲೆಸೆವ ಚಾರುಝಂಪಾಣದೊಳುದ್ಭಾಸಿನಿಯರ್ ನೃಪಸುತನ ವಿಳಾಸಿನಿಯರ್ ಬಂದರೇಱಿ ಪೊನ್ನಂದಣಮಂ (ಪುಷ್ಪಪು. ೩-೨೦). ೨. ಬಿಲ್ಲಿನ ಹಗ್ಗ; ನಾರಿ: ವಿನುತ ಶಿವಪದವೆಂಬ ಬಾಣಾಸನವನೇಱಿಸಿ ತಿರುಗುವಿಂದ್ರಿಯವೆನಿಪ ಬಲು ಸಾರಂಗವಂ ನಿಮಿಷಕೆ ಪಱಿಯಲೆಚ್ಚು (ಬಸಪು. ೩೯-೩೩). [ಸಂ.]

ಬಾಣ್$_1$ 'ಪಾನೆ' ನೋ.

ಬಾಣ್$_2$ (ನಾ). ೧. ಮಾತು; ವಚನ; ನುಡಿ. ೨. ಶಬ್ದ; ಧ್ವನಿ. ೩. ಮಾತಿನ ಅಧಿದೇವತೆ; ಸರಸ್ವತಿ; ವಾಣಿ: "ಬಾಣ ಬಿಜ್ಜೆ ವೆಣ್ಣಾಂ ಬಾಸೆವೆಣ್ಣು ಸರಸತಿಯುಮೆನೆ ವಾಣಿಯಕ್ಕುಂ" (ಕಬ್ಬಿಗ. ೯); ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವಂ ಜಾಣಂ ಬಾಣಿಯೆನಿಪ್ಪದೊಂದು ಪೆಸರಂ ಮುನ್ನಿತ್ತಂ (ಶಾಂಪು. ೩); ಬೀಣೆ ಹೊತ್ತಗೆಗಳಂ ಪೊತ್ತ ಕೈಯ ಚೆಲ್ವೆ! ಸುವ್ವಿ! ಸುವ್ವಿ! ಬಾಣ (ರಾಮಾಶ್ವ. ೬೬-೭). [<ಸಂ. ವಾಣೀ]

ಬಾಣಿಗ, ಬಾಣಿಗ್ಗ, ವಾಣ್ಯ$_2$, **ವಾಣಿಯ**$_2$ (ನಾ). ೧. ವ್ಯಾಪಾರ ಮಾಡುವವನು; ವ್ಯಾಪಾರಿ: ಬಾಣಿಗ ಬೀಮಯ್ಯನ ಮಗ . . . ಸಾನ್ತಯ್ಯ ಕೊಟಗಮ್ಬನ್ದು ತುಱುವ ಕೊಣ್ಡು ಪೋಪಾಗ (ಪ್ರಾಶಿಂ. ೦೯೯೧, ೨೫-೦೦; 1030); ಬಾಣಿಗರ ಬೆಳ್ಳಿಗವುಣ್ಡನ ಮಗ ಬಿಟ್ಟಿಗಾವುಂಡನು . . . ನಡಿಸಿದ ಕಲ್ಲ ಗಾಣ (ಪ್ರಾಶಿಂ. ೦೯೫೫, ೬೬-೬; 1179); ಚಉಡೋಜನ ಬರಹ ಸಮಸ್ತ ಬಾಣಿಗರ ಒಪ್ಪ (ಎಕ. III, ಮಳವ. ೨೦-೨೦; 1388). **ಬಾಣಿಗ್ಗ**: ೧. ಸಮಸ್ತ ಬಾಣಿಗ್ಗರ ಅರುಹನಹಳ್ಳಿಯ ಬಾಗಿಗಾಗಿ ನಟ × × × (ಎಕ. III, ಮಳವ. ೨೦-೦೫; 1388). **ವಾಣ್ಯ**$_2$: ೨. ವ್ಯಾಪಾರ ಮಾಡುವ ಒಂದು ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ: ಮಾರವಾಡೀ ಬ್ರಾಹ್ಮಣರು . . . ಹಲಕೆಲವರು ಮಾರವಾಡೀವಾಣೀ ಜನರಲ್ಲಿ ಅಡಿಗೆ ಮಾಡುವರು (ಕಜಾಗ. ೬೪); ಸಿಂಪಿ, ವಾಣಿ (ಬಣಜಿಗ). ಕುಣಬಿ (ಒಕ್ಕಲಿಗ) ಮುಂತಾದವರು ಶ್ರೇಷ್ಠಸಾಧುಗಳೆಂದು ಎಲ್ಲರಿಂದ ಮನ್ನಣೆ ಪಡೆದಿರುವರು (ಕರ್ನಾಸಂ. ೯೭). ೩. ವ್ಯಾಪಾರದ ಸರಕು: 'ಹಸುರುವಾಣಿ' ಪರಾ. ☞ ಈ ಶಬ್ದದ ರೂಪದಲ್ಲಿ ಮರಾಠಿಯ ಪ್ರಭಾವವಿದ್ದಂತೆ ಕಾಣಬರುತ್ತದೆ. **ವಾಣಿಯ**$_2$: ೧. ವಾಣಿಯರುಂ ವಾರಸ್ತ್ರೀಜಾಣರುಗಳ್ . . . ಶಿಲ್ಪಿಗರ್ ಪೊಱಮಟ್ಟರ್ (ಸೂಕ್ತಿಸು. ೦೬-೨೬); ಶೌರ್ಯನಗರದ ವಾಣಿಯರು ಹೊಕ್ಕಿಱಿದು ಹೋಗಾಡಿದರು ಪತಿರಿಣವ (ಕಾದಂಬ. ೨೯-೯೨); ವಾಣಿಯರ್ ಚಿನ್ನವರದರ್ ದೂಸಿಗರ್ . . . ಜೂಜುಗಾಱರ್ ಮುಖ್ಯರೊದಗಿ ಬರುತಿರ್ದರ್ (ಕಲಿಪು. ೯೬-೯೦). 'ಬನಿಯ' ಪರಾ.

[<ಸಂ. ವಾಣಿಜ./ಪ್ರಾ. ವಾಣಿಅ./ಮರಾ. ವಾಣಿಯಾ, ವಾಣೇ./ತಮಿ. ವಾಣಿಯನ್, ವಾಣಿಕನ್; ತೆಲು. ವಾಣಿಜುಡು]

ಬಾಣಿಗ್ಗ 'ಬಾಣಿಗ' ನೋ.

ಬಾಣಿನೋಟ (ನಾ). ಸರಸ್ವತಿಯ ದೃಷ್ಟಿ.—ಕಟಾಕ್ಷ: ಚಂಚಳಿಸುವ ಭಾವವಾಂತೆಡೆಗಳೊಳ್ ನೆಲೆನಿಲ್ವ ಬೆಡಂಗಿನಿಂದಮೇಂ ಬಳೆದುಪೊ ಬಾಣಿನೋಟದವೊಲೀ ಚಿಕದೇವನ ತಾನದೊಳ್ಬುಗಳ್ (ಕಳಿ. ೯-೦೨೩).

[ಬಾಣ್$_2$ + ನೋಟ]

ಬಾಣೆ. ಬಾಣ$_1$ (ನಾ). ಗದ್ದೆಯ ಸಮೀಪದಲ್ಲಿರುವ, ಸಾಮಾನ್ಯವಾಗಿ ಕುರುಚಲುಗಿಡಗಳಿಂದ ತುಂಬಿರುವ ಕಾಡುಪ್ರದೇಶ: (ಕೆಸಂಗ್ರಾ. ೦೩೦); ಕಾನ, ಬಾಣೆ, ಕುಮುಕಿ, ದರ್ಕಾಸ್ತ್, ತೋಡು, ಕೆರೆ ಇವುಗಳ ವಿಸ್ತೀರ್ಣಗಳೆಲ್ಲ ಬಾಯಿ ಪಾಠ (ಕರುಳ. ೬). **ಬಾಣ**$_1$: 'ಬಾಣಬೆಟ್ಟು' ಪರಾ.

[ದೇ. ॥ ತುಳು. ಬಾಣೆ, ಬಾನೆ; ಕೊಡ ಬಾಣೆ]

ಬಾತ 'ಬಾ$_1$' ಪರಾ.

ಬಾತಖಾನಿ, ಬಾತಾಖಾನಿ (ಗು). ೧. ಹರಟೆ ಹೊಡೆಯುವ ಸ್ವಭಾವದ: ಆ 'ಬಾತಖಾನಿ' ಮುದುಕಿಗೆ ತನ್ನ ಮಾತು ಕೇಳುವವರು ಒಬ್ಬರು ಬೇಕು (ಶಾಲೇಮು. ೦೦೩). **ಬಾತಾಖಾನಿ**: ೨. ಹರಟೆ ಹೊಡೆಯುವ ಸ್ವಭಾವವುಳ್ಳ ವ್ಯಕ್ತಿ; ನಿರರ್ಥಕವಾಗಿ ಮಾತನಾಡುವ ವ್ಯಕ್ತಿ: "ಬಾತಾಖಾನಿ = ಮಾತುಗಂಟ" (ಕಾನಕೋ. ೨೦).

[← ಮರಾ. ಬಾತೇಖಾನಿ]

ಬಾತಮಿ 'ಬಾತಮೀ' ನೋ.

ಬಾತಮಿದಾರ 'ಬಾತಮೀದಾರ' ನೋ.

ಬಾತಮೀ, ಬಾತಮಿ, ಬಾತ್ಮಿ, ಬಾತ್ಮೆ (ನಾ). ೧. ವರ್ತಮಾನ; ಸುದ್ದಿ; ಸಮಾಚಾರ: ಈ ಬಾತಮೀ ತಿಳಿದು ನವಾಬರು ಪಟ್ಟದ ದಂಡಿನ ಮೇಲೆ ಬಿದ್ದು . . . ಪತ್ತೆಮಾಡಿದರು (ಕ್ಷತ್ರರ. ೫೦). **ಬಾತಮಿ**: ೧. ಯಾರಾದರೂ ಈ ಬಾತಮಿಯನ್ನು ಹೊರಡಿಸಿದರೇ ಎಂದು ಸಂಶಯವು ಆತನ ಮನಸ್ಸಿಗೆ ಫಕ್ಕನೆ ಹೊಳೆಯಿತು (ಎಧಿಸ್ಮ. ೦೨೬); ಒಂದೆರಡು ಸಲ ನನ್ನಿಂದ ಬಾತಮಿಯನ್ನು ಹೊರಡಿಸುವ ಬೇತಿನಿಂದ . . . ಕೇಳಿ ನೋಡಿದ್ದ (ರೀಸಕ. II. ೧೯). ೨. ಬೇಹು; ಗೂಢಚರ್ಯೆ: ಇವರನ್ನು ನವಾಬರ ಕಡೆ ಬಾತಮಿ ಕುದುರೆಯವರು ಹಿಡಿದು ಹೈದರಲ್ಲಿಯ ಸಮೀಪಕ್ಕೆ ಕರೆದು ತಂದರು (ಕಪ್ರಜಾ. ೬೬). **ಬಾತ್ಮಿ**: ೧. ತೀರ ತಾಜಾ ಬಾತ್ಮಿ ಯಾವುದರಲ್ಲಿ ಇದೆ? (ಗಾಶಕ. ೩೭). **ಬಾತ್ಮೆ**: ೨. ದುಷ್ಟಾನರ ಲಷ್ಕರಿನ ಬಾತ್ಮೆ ಸಮಾಚಾರ ತರಿಸಿಕೊಡಬೇಕು (ರಾಸೇಂದ್ರ. ೦೭೦).

[←ಮರಾ. ಬಾತಮೀ. / ಸಂ. ವಾರ್ತಾ ?]

ಬಾತಮೀದಾರ, ಬಾತಮಿದಾರ, ಬಾತ್ಮಿದಾರ, ಬಾತ್ಮೀದಾರ (ನಾ). ೧. (ವರ್ತಮಾನಪತ್ರಿಕೆ ಮುಂತಾದುವುಗಳಿಗೆ) ಸುದ್ದಿ, ಸಮಾಚಾರಗಳನ್ನು ಸಂಗ್ರಹಿಸಿ ತಿಳಿಸುವವನು; ಸುದ್ದಿಗಾರ; ವರದಿಗಾರ: ಎಲ್ಲ ಪತ್ರಿಕೆಗಳವರೂ, ಬೇರೆಬೇರೆ ಪ್ರದೇಶಗಳಲ್ಲಿ ಬಾತಮೀದಾರರನ್ನು ನಿಯಮಿಸಿರುತ್ತಾರೆ (ರೂಢಿ). ೨. ಬೇಹುಗಾರ; ಗೂಢಚಾರ: "ಯಥಾರ್ಹಃ, ವರ್ಣಃ . . . ಗೂಢಪುರುಷಃ — ೭ ಬಾತಮೀದಾರನ ಹೆಸರುಗಳು, ಗೂಢಚಾರನು, ವೇಷಧಾರಿಯಾಗಿ ಕಪಟದಿಂದ ತನ್ನನ್ನು

ತಿಳಿಯಪಡಿಸದೇ ಹೊಂಚಿ ವಿಷಯವನ್ನು ತಿಳಿದು ತಂದರಿಕೆ ಮಾಡುವ ದೂತನು" (ಸಿಹ್ಯಾಂ. ೨೬೮). **ಬಾತಮಿದಾರ** : ೧. "(ಸಂಗತಿ) ಹೇಳುವವನು ; ವರ್ತಮಾನ ಕೊಡುವವನು ; ಬಾತಮಿದಾರ" (Informant· ಇಂಗ್ಲಿ). ೨. ಗೊಲ್ಲರವನು ದುರ್ಗಕ್ಕೆ ಹೋಗಿ ದಕ್ಷಿಣ ಪ್ರಾಂತದ ಬಾತಮಿದಾರನ ಸಮೇತ ದೊರೆಯ ಸನ್ನಿಧಾನದಲ್ಲಿ ಈ ಸಂಗತಿಯನ್ನು ಅರಿಕೆಮಾಡಿದನು (ಕೃಕ್ರಾ. ೭೬). **ಬಾತ್ಮಿದಾರ** : ೧. ಸಾಕ್ಷಿಗಳು ಬಾತ್ಮಿದಾರರು ಎಲ್ಲಾ ಬಂದಿದ್ದಾರೋ ? (ಪೀಡತೋ. ೩೦) ; ಪತ್ರಿಕಾಬಾತ್ಮಿದಾರನ ಅಸೂಯೆಯಿಂದ ಆ ವಿಷಯವು ಬರಲಿಲ್ಲವೆಂದು ಸಮಾಧಾನ ಮಾಡಿ, ರಾಯರ ಮನಸ್ಸಿಗೆ ಶಾಂತಿಸುಸ್ಸುಂಟುಮಾಡಲು ಪ್ರಯತ್ನಿಸಿದೆ (ರಾಹುಗ. ೬೩). **ಬಾತ್ಮೀದಾರ** : ೧. ಒಬ್ಬಿಬ್ಬ ಸಂಪಾದಕರು ಬಗಲಿಗೆ ಇರಲಿ ; ಕೊನೆಗೆ ಬಾತ್ಮೀದಾರ (ಅಆಸ. ೩೪೬-೯) ; ಅದರಲ್ಲಿ ಸಮ್ಮೂರಿನ ಬಾತ್ಮೀದಾರನಿಂದ, ರಾಯರ ವಿಷಯವಾಗಿ ಈ ರೀತಿ ಬರೆದಿತ್ತು (ರಾಹುಗ. ೬೩).

[ಬಾತಮಿ + — ದಾರ್ ./ ಮರಾ. ಬಾತಮಿದಾರ್]

ಬಾತಾಪಾನಿ 'ಬಾತಪಾನಿ' ನೋ.

ಬಾತಾಳಿಸು (ಕ್ರಿ). ಕಿರಿಚು; ಅರಚು ; ಒರಲು : ಕೇಳಿ ದಶಕಂಧರನು ಕೋಪ ಬಡಾಳಿಸಲು . . . ತೋಳುಬಲುಹನು ನೋಡೆನುತ ಬಾತಾಳಿಸಲು (ಅನಂತ. ೦-೦೦-೨೦); ತೊಪಕಿ ಕಾಮುಪ ಸಂಭೂತಸಸುವನು ತುದುಕಿನುತ ಬಾತಾಳಿಸುತಲಾ ವ್ಯಾಪ್ತನ ಭೂತಗಣಂಗಳೆಸಲುರುಬಿದರು ಕಪಿವರರು (ಅಪಂತಾ· ೬-೦೦-೬೨). [← ತೆಲು. ಬಾತಳಿಂಚು, ಬಾತಲೆಂಚು]

ಬಾತು$_1$ 'ಬಾ$_1$' ಪರಾ.

ಬಾತು$_2$ (ನಾ). ಊಟ ; ಬಾವು : ಉಡಿಯಿಂದ ಮೇಲೆ ಬಾತು ಉಂಟಾಗಿ ಹಣ . . . ಅಪಾನಪ್ರದೇಶ. ಗುಹ್ಯಪ್ರದೇಶಗಳಲ್ಲಿ ಬಾತುವುಂಟಾಗಿ ಇಹಣ . . . ಈ ರೀತಿಯಲ್ಲಿರಲು ಆತನು ಸರ್ವಥಾ ಜೀವಿಸುವುದಿಲ್ಲ (ಕೈವೈಕಾ. I. ೩೩೬). 'ಬಾತುಗಾಲು' ಪರಾ.

[< ಬಾ$_1$ ./ ತುಳು. ಬಾತ್ = ಊದು]

ಬಾತು$_3$ (ನಾ). ಒಂದು ಬಗೆಯ ನೀರುಪಕ್ಕಿ : "ಬಾತೆನೆ ತಾಂ ಕೋಳಿಯೆಂಬುದರ್ಥಂ" (ಶಾಕಪ. ೫೯); ಚಿಮ್ಮುವ ಬಾಲದ ಬಾತುಗಳು . . . ಉದ್ಯಕಾಲಿನ ಬಾತುಗಳೂ ಈ ಗುಂಪಿಗೆ ಸೇರುವುವು (ಪಕೋ. XII· ೨೬).

[←ಅರ. ಬತ್ ; ಪಾರ. ಬತಕ್ ; ಹಿಂ. ಬತ್ತ್, ಬತಕ್, ಬತಪ್ ; ಮರಾ. ಬತಕ್, ಬದಕ್. / ತಮಿ. ವಾತ್ತು ; ಮಲ. ಬಾತ್ತು ; ತುಳು. ಬಾತ್, ಬತ್ತ್ ; ಕೊಡ. ಬಾತ್ ; ತೆಲು. ಬಾತು./ಪೋರ್ಚು. ಪಾತೊ]

ಬಾತುಕೋಳಿ 'ಬಾತುಗೋಳಿ' ನೋ.

ಬಾತುಗಾಲು (ನಾ). ಊತ ಬಂದ ಕಾಲು ; ಬಾವಿನಿಂದ ಕೂಡಿರುವ ಕಾಲು : ನಿತ್ರಾಣವಾದ ಬಳಿಯ ಬದುರೆಯೂ ಬಾತುಗಾಲಿನ ಬಡಕಲು ಕುದುರೆಯೂ . . . ನಿಧಾನವಾಗಿ ಸಾಗುತ್ತಿದ್ದುದರಿಂದ ಅವನು ಅಪರಿಚಿತ ವ್ಯಕ್ತಿಯನ್ನು ಮಾತಾಡಿಸಬೇಕೆಂದು ಕಾತರನಾಗಿದ್ದನು (ಕುಪರು. ೫೬೩).

[ಬಾತು$_2$ + ಕಾಲು$_1$ (< ಕಾಲ್$_1$)]

ಬಾತುಗೋಳಿ, ಬಾತುಕೋಳಿ (ನಾ). = ಬಾತು$_3$: ಬಾತುಗೋಳಿ ಹಾಂಗ ಬಾತಕದ ಜಾತ್ಯಲ್ಲ (ಕೂಪೋಗಾ· ೪೬-೦೩). **ಬಾತುಕೋಳಿ** : "ಕಾರಂಡ, ಕಾರಂಡವ — ಕಾಗೆಯ ಹಾಗೆ ಇರುವದೊಂದು ಹಕ್ಕಿ. ಬಾತುಕೋಳಿ" (ಗೀಗಮ. ೮೦); ಯುಂತ್ರದ ಬಳಿಯ ನೀರಿನಿಂದ ಬಾತು ಕೋಳಿಗಳ ಕೇಕಾತವ ಕೇಳಿಸುತ್ತಿತ್ತು (ಪುಪರು· ೨೯೭).

[ಬಾತು$_3$ + ಕೋಳಿ$_1$ (< ಕೋಬ್$_1$)]

ಬಾತೆ 'ಬಾಬ್ತಿ' ನೋ.

ಬಾತೆಗೆಡು 'ಬಾರ್ತೆಗೆಡು' ನೋ.

ಬಾತೆಗೇಡಿ (ನಾ). ಬದುಕು ಕೆಟ್ಟವನು ; ಹಾಳಾದವನು : ಬಾತೆಗೇಡಿಗಳೆ ಪ್ಲೇಕಸಿತ್ತು ರೋಷವೆಲೆ ಪಾತಕರನಜಿದಜಿದು ಮೂದಲಿಸಲೇಕೆ ಸಲೆ (ಕಾಪಂಡ. ೪-೨೦೩). [ಬಾತೆ (< ಬಾಬ್ತಿ) + ಕೇಡಿ$_1$]

ಬಾತ್ಮಿ 'ಬಾತಮಿ' ನೋ.

ಬಾತ್ಮಿದಾರ 'ಬಾತಮಿದಾರ' ನೋ.

ಬಾತ್ಮೀದಾರ 'ಬಾತಮಿದಾರ' ನೋ.

ಬಾತ್ಮೆ 'ಬಾತಮಿ' ನೋ.

ಬಾದಣ$_1$ 'ಬಾದವಣ' ನೋ.

ಬಾದಣ$_2$ (ನಾ). ತಟ್ಟೆ; ತಳಿಗೆ : ದೇವಪಿತಿ ಚಂದಿರನ ಬಾದಣಜಿ ದವ್ಯತಸೇವನೆಯ ಮಾಡುತಿರೆಯೊಸರ್ದುದೋ ಎಂಬುಪೊಲು ಕಳಂಕಾಂಕ ನೆಸದಿರೆ ಜೊಸ್ನೆಮುಜಿ ವರ್ಬಿತು (ಸಿಕ್ಕೇಶ್ವ. ೦೬-೨೦). [< ಸಂ. ಭಾಜನ]

ಬಾದಣಂಗೈಸು (ಕ್ರಿ). ತೂತು ಬೀಳುಮಂತೆ ಮಾಡು : ದನುಜೇಂದ್ರನಂಗವ ಬಾದಣಂಗೈಸಿದರು ಶಿವಶಿವ ಶೂಲ ಚಕ್ರದಲಿ (ಅಂಗಾಣ· ೪೧-೨೩). [ಬಾದಣ$_1$ (< ಬಾದವಣ) + ಕೈಸು (<ಕೆಯ್ಸು)]

ಬಾದಣಗಂಡ (ನಾ). ಬಿರುಕು ಬಿಟ್ಟ ಗಾಯದ ಮಾಂಸ : ಬಾಗಿ ಮುರಿದವುಡಿ ಕೆಡವುವ ಮೊಗಂ ಬಿಗಿದು ಬಾದಣಗಂಡವ ಒಡೆಕಾಜಿ ಓರಿ ಹಿಂಡುವ ಕಂಠ . . . ಮೆಜಿಯೆಂ ಕರಿಗಳಂ ಕೆಡಹ್ಪಿದುವು ಸಿಂಹಂಗಳು (ಪಪಣಾ. ೩-೩೭). [ಬಾದಣ$_1$ (< ಬಾದವಣ) + ಕಂಡ$_1$]

ಬಾದಣಗೊಜಿ$_3$ (ಕ್ರಿ). ೧. ತೂತಾಗುವಂತೆ ಕೊರೆ; ರಂಧ್ರಮಾಡು : ನೀ ಬಜಿದೇಕೆ ಚುಚ್ಚುವೆ ಕಾಸಿ ಬಾದಣಗೊಜಿದ ಘಾಯದಲಿ (ಕುಪ್ಯಾಗ. ೬-೩೯); ಬಾದಣಗೊಜಿದು ಪಾತಾಳಕಿಳಿದು ಭೋಗಾವತಿಯ ಮುಕ್ತಿದರು (ಸಿಕ್ಕೇಶ್ವ. ೪-೪೭). ೨. ರಂಧ್ರವಾಗು ; ತೂತಾಗು : ರಣದೊಳು ಪಾಸಪಾಸನ ಬೆಯ್ಗುಳು ಬಾದಣಗೊಜಿದವು (ಕುಣಾಸಾಂ. ೪೩-೪೭); ಇಭ ನಕ್ರಪತಿಗಳ ಪರಮಸತ್ತ್ವೋತ್ಕರ್ಷವೆಂತುಟೊ ಗಿರಿ ಬರಿಯೆ ಧರೆ ದೆಸೆಗೆ ಬಾದಣಗೊಜಿಯೆ ಪದಹತಿಗೆ (ಸಿಣಗ. ೬-೩-೬).

[ಬಾದಣ$_1$ (< ಬಾದವಣ) + ಕೊಜಿ$_1$]

ಬಾದಣದಲೆ (ನಾ). ತೂತು ಬಿದ್ದ ತಲೆ : ಸೂಕರನ ದಾಡೆಗಳಿಜಿತದಂಗದ ಬರಿಯ ಬಾದಣದಲೆಯ ಭಟರದೆ ದೇವ ನೋಡು (ಕೊಕಣಾ. ೬-೨೦-೬೦).

[ಬಾದಣ$_1$ (< ಬಾದವಣ) + ತಲೆ$_1$]

ಬಾದಣದೆಗೆ (ಕ್ರಿ). ತೂತುಮಾಡು; ರಂಧ್ರವನ್ನು ಕೊರೆ : ಜೀವಂ ನೆಗೆದು ತಾಗಿ ನಡುನೆತ್ತಿಯಂ ಬಗಿಮ ಬಾದಣದೆಗೆದು ವೇಗದರ್ದು ಗಗನಕ್ಕೆ ದಂಡಾಯಮಾನದುರಿಯಾಗಿ ನೆಗೆಯಲ್ಕೆ (ಸಿಕ್ಕೇಶ್ವ. ೪-೪೬).

[ಬಾದಣ$_1$ (< ಬಾದವಣ) + ತೆಗೆ$_1$]

ಬಾದಣವಾಗಿಲು (ನಾ). ರಂಧ್ರದ ದ್ವಾರ; ಬಿಲದ ಬಾಯಿ : ಇಂದು ನಿನ್ನೈಶ್ವರ್ಯಲಕ್ಷ್ಮೀಕ್ಕೆಲಿದು ಭಂಡಾರಮಂದಿರವೊಗಲ್ಸಂಜೆ ಗಡ ಸಾರ್ದಿರಲು ತಿರುಗುವಂದಗಂಡೊಳಹೊಗಿಸಲಭವ ನಿರ್ಮಿಸಿದ ಬಾದಣವಾಗಿಲದು ಕನ್ನವೆ (ಸಿಂಗಣಾ· ೦೬-೦೬).

[ಬಾದಣ$_1$ (< ಬಾದವಣ) + ಬಾಗಿಲು (< ಬಾಗಿಲ್)]

ಬಾದಣಿಸು, ಬಾದಳಿಸು (ಕ್ರಿ). ತೂತಾಗು ; ರಂಧ್ರವಾಗು : ಬಾದಣಿಸಿ ದೇಜುಗಳ ಬಾಯೊಳು ಕಾದ ಬಾರಂಗಿಗಳನಳತೆಗೆ ಕೋದು ವಾಮ ದೊಳೆಯೆ೦ದ್ದೆ ಹಿಡಿದರು ತೈಲಧಾರೆಗಳ (ಕುಣ್ಯಲೀ. ೩-೪೦). **ಬಾದಳಿಸು** : ಬಿಲ್ಲ ನಾರಿಯ ನೀವಿ ರೆಳ್ಗೋಲ್ಪಯಲಬ್ಬಿ ತುಳುಕಿ ಮೇದಿನಿಯು ನಡುಗಲುಚಲ ಗಳಲುಗೆ ಎಗರ ಹೃದಿ ಬಾದಳಿಸೆ (ಕಪಮು· ೨೯-೦೩).

[ಬಾದಣ$_1$ (< ಬಾದವಣ) + — ಇಸು$_3$]

ಬಾದಮಿ 'ಬಾದುಬ್ಪೆ' ನೋ.

ಬಾದಮ್ಮ (ನಾ). ಒಬ್ಬಾತನ ಹೆಸರು : ಬಾಳುಗುಳಿಯ ಮಹಾಜನ ಅಯ್ವತ್ತಿಂಬರುಂ ಉಭಯಸಮ್ಮತದೊಳಿಟ್ಟು ಬಳಿಯರ ಬಾದಮ್ಮಗೆ ಬೂದಗೂಟನಿತ್ತೂರ್ (ಸಿಇಇ. IX-i, ೫೯-೬ ; ಸು. 10೫೮ ೫೫).

[? + ಅಮ್ಮ1]

ಬಾದರ್ 'ಬಹಾದುರ್' ನೋ.

ಬಾದರ (ಗು). ೧. ಎಲಚಿಮರಕ್ಕೆ ಸಂಬಂಧಿಸಿದ. ೨. ಪತ್ರಿಯಿಂದ ಮಾಡಿದ. ೩. ಒರಟಾದ ; ನಯವಿಲ್ಲದ. (ನಾ). ೪. ಪತ್ರಿ ಮತ್ತು ಅದರ ಗಿಡ ; ಅರಳಿ : "ಬಾದರಂ ಪಿಚುವ್ಯಾಖ್ಯಮಜ್ಞಿಗೆ ಪಿಚು ಕಾರ್ವಾಸಂ" (ಪಸ್ತು೫೯. ೩೯-೩೦). ೫. ಪತ್ರಿಯಿಂದ ತಯಾರಿಸಿದ ಬಟ್ಟೆ : "ಕಾರ್ವಾಸಂ, ಬಾದರಂ—ಈ ೨ ಪತ್ರಿಯಿಂದಾದ ಸೀರೆ" (ಹಕಾಪು. ೧೦-೩೧೬). ೬. ಎಲಚಿಗಿಡ ಮತ್ತು ಅದರ ಹಣ್ಣು ; ಬೋರೆ. ೭. ನೀರು ; ಜಲ. ೮. [ಜೈನ] ಸೂಕ್ಷ್ಮವಲ್ಲದುದು ; ಸ್ಥೂಲವಾದುದು : ಸುಗಮಸಂಜ್ವಲನದ ಮುನಿಸೊಮ್ಮೆ ಹವ್ಮೊಮ್ಮೆ ತೆಗೆದುಹೋದುವು ಮುಂದೆ ಲೋಭ ಏಗೆ ಸೂಕ್ಷ್ಮದೊಳು ನಿಂದುದದಱ ಬಾದರಗೂಡಿ ಜಗುಳಿತು ಮಾಯೆ ಲೆಕ್ಕಿಸದೆ (ಕಾಕ. ೫೪-೭೫). 'ಬಾದರರೂಪ' ಪರಾ. ೯. (ಹಾಲು, ನೀರು ಇತ್ಯಾದಿ ದ್ರವ ಪದಾರ್ಥಗಳಂತೆ) ವಿಭಾಗ ಹೊಂದಿದ ಮೇಲೆ ಮೂರನೆಯ ವಸ್ತುವಿನ ಸಹಾಯವಿಲ್ಲದೆ ವಿಕರೂಪವಾಗುವ ಪುದ್ಗಲಸ್ಕಂಧ : ಅಂತರ್ಮುಹೂರ್ತನಿರುದ್ಧಾಶೇಷಮನೋವಾಗ್ಬಾದರಕಾಯಯೋಗಸೂಕ್ಷ್ಮ ಕಾಯಯೋಗಪರಿಣತಂ (ಅಂಪ್ರ. ೦೬-೪೯ ೪) ; ಬಾಪರಸೂಕ್ಷ್ಮೈಕೇಂದ್ರಿಯ ದ್ವಿತ್ರಿಚತುರಿಂದ್ರಿಯಸಂಜ್ಞಾಸಂಜ್ಞಿಗಳು ಆದವು ಪರ್ಯಾಪ್ತಾಪರ್ಯಾಪ್ತದ ಭೇದದಿ ಜೀವಸಮಾಸೆ (ದ್ರಾಕಾ. ೫-೩). ೧೦. ಜೀವಾದಿತತ್ತ್ವಗಳಲ್ಲಿ ವಿವಕ್ಷಿತವಾಗಿರುವ ಹದಿಮೂರು ಪ್ರಕೃತಿಗಳಲ್ಲಿ ಒಂದು : ಸ್ವಕೀಯಚರಮಸಮಯದೊಳನ್ಮತರವೇದನೀಯ . . . ಬಾದರ ಯಶಸ್ಕೀರ್ತಿರುಚ್ಚೈರ್ಗೋತ್ರತೀರ್ಥಕರನಾಮಾಂಗಳೆಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ (ಅಪ್ರ. ೦೬-೪೯ ೪) ; ಚರಮ ಸಮಯದೊಳ್ ಪುರುಷಾನ್ಯತರವೇದನೀಯ ಮನುಷ್ಯಾಯುರ್ಮನುಷ್ಯ ಗತಿ ಪಂಚೇಂದ್ರಿಯ ಜಾತ್ಯಾನುಪೂರ್ವಿತ್ರಸನಾಮಬಾದರಪರ್ಯಾಪ್ತಕ ಸುಭಗಾದೇಯಯಶಸ್ಕೀರ್ತಿ ತೀರ್ಥಂಕರನಾಮೋಚ್ಚೈರ್ಗೋತ್ರಂಗಳೆಂಬ ಪದಿಮೂಱುಂ ಪ್ರಕೃತಿಗಳುಮೊರ್ಮೆಯೆ ನಿರ್ಮೂಲಮಾಗೆ (ಪಂಗಾಪ್ರ. ೦೬-೬೦ ೪). 'ಪ್ರಕೃತಿ' ಪರಾ. [ಸಂ.]

ಬಾದರಕೃಷ್ಟಿ (ನಾ). [ಜೈನ] "ಅನಿವೃತ್ತಿಕರಣಗುಣಸ್ಥಾನದಲ್ಲಿ ಸಂಜ್ವಲನಕ್ರೋಧ-ಮಾನ-ಮಾಯಾ-ಲೋಭಗಳ ಅನುಭಾಗಗಳನ್ನು ಕಡಿಮೆಮಾಡಿ ಸ್ಥೂಲಖಂಡ ಮಾಡುವುದು" (ಅಂಪ್ರ. ೭೭ ಶೈಪಣಾಂಣಾಳಕ್ಕೊಗಂ) : ಬಾದರಕೃಷ್ಟಿಕರಣಕಾಲಪ್ರಮಾಣಮೇನೆಂದೊಡೆ (ಲಕ್ಷ. ೨೩-೩೫). [ಸಂ.]

ಬಾದರರೂಪ (ನಾ). [ಜೈನ] ಸೂಕ್ಷ್ಮವಲ್ಲದ ರೂಪ ; ಸ್ಥೂಲವಾದ ರೂಪ : ಪದಪು ಜಿನೇಂದ್ರಪಾದಕಮಲಂಗಳೊಳಾವಗಮ್ಮಾಗೆ ಕರ್ಮ ಬಂಧದ ಬಗಿಪೊಯ್ಯನೊಯ್ಯನೆ ಸಡಿಲ್ದಿರೆ ಬಾದರರೂಪದಿಂದೆ ಕೊಲ್ಲದ ಪರನಾರಿಗಾಟಿಸದ ಕಳ್ಳದಸತ್ಯದೊಳೊಂದದಾಗಳುಂ ಕುದಿವವತೃಷ್ಣೆಯಂ ಕುಸಿದು ಮಾಣಿಸುವಯ್ದುಮಣುವ್ರತಂಗಳಂ . . . ತಾಳ್ದಿ (ಅಂಪ್ರ. ೬-೭). [ಸಂ.]

ಬಾದರಸೂಕ್ಷ್ಮ (ನಾ). [ಜೈನ] "ಸ್ಥೂಲರೂಪವಾಗಿ ಕಂಡರೂ ಯಾವ ಪುದ್ಗಲಗಳನ್ನೂ ಛೇದಿಸಲಿಕ್ಕೂ ಅವುಗಳಲ್ಲಿ ಛಿದ್ರವನ್ನು ಮಾಡುವುದಕ್ಕೂ ಅನ್ಯಗಳನ್ನು ಹಿಡಿಯುವುದಕ್ಕೂ ಬರುವುದಿಲ್ಲವೋ ಅವು ಬಾದರಸೂಕ್ಷ್ಮಗಳು" (ಕ್ಷಪ್ರ. ೫೫). [ಸಂ.]

ಬಾದರಸ್ವರೂಪ (ನಾ). = ಬಾದರರೂಪ : ಅಲ್ಲಿ ಮೂಲಪ್ರಕೃತಿ ಗಳೆಂಟುಮಂ ಬಾದರಸ್ವರೂಪದಿಂ ನೂಱು ನಾಲ್ವತ್ತೈಂಟುವಿಕಲ್ಪವಾದುತ್ತರ ಪ್ರಕೃತಿಗಳುಮನೊಳಕೊಂಡನುಬಂಧಿಸುವ ಬಂಧಂ ಪ್ರಕೃತಿಬಂಧಮೆಂಬುದಕ್ಕುಂ (ಸುಳುವಪ್ರ. ೬-೨೬ ೪). [ಸಂ.]

ಬಾದರಾಯಣ (ನಾ). ಬ್ರಹ್ಮಸೂತ್ರ ಮತ್ತು ಮಹಾಭಾರತಗಳನ್ನು ಬರೆದವನೆಂದು ನಂಬಲಾದ ಒಬ್ಬ ಮಹರ್ಷಿ ; ವ್ಯಾಸ ; ಕೃಷ್ಣ ದ್ವೈಪಾಯನ ; ಈ ಋಷಿಯು ಬದರೀವನದಲ್ಲಿ ಆಶ್ರಮವನ್ನು ಹೊಂದಿ ತಪಸ್ಸನ್ನಾಚರಿಸುತ್ತಿದ್ದ ಕಾರಣ ಈ ಹೆಸರು ಬಂದಿದೆಯೆಂಬ ನಂಬಿಕೆಯಿದೆ : ದ್ವಾಪಾರದಲಿ ಭಾವಜಜನಕನಾವಿರ್ಭವಿಸಿದ ತ್ರಿಜಗವಜ್ಯಮುಲು ಬಾದರಾಯಣನೆಂಬ ನಾಮದಲಿ (ಪಸಪು. ೫೪-೬೨) ; ಶಾಲಿಹೋತ್ರಾಶ್ರಮವನೆಸಬರು ಬೀಳುಕೊಂಡರು ಪುತ್ರ ಕಂಡರು ಬಾದರಾಯಣನ (ಶಾಬ್ಯಾಂ. ೦೦-೦) ; ಹ್ಯಾಂಗೆ ನೀ ದಾಸನಾದಿ ಪ್ರಾಣಿ . . . ಬಾದರಾಯಣಕೃತ ಭಾಗವತ ಕೇಳದೆ (ಕನಳ. ೦೦೬-೯). **ಬಾದರಾಯಣಸಂಬಂಧ**=(ಆಲಂ) ಕಲ್ಪಿತವಾದ ಅಥವಾ ಅತ್ಯಂತ ದೂರದ ಸಂಬಂಧ ; ಬಹುದೂರದ ನಂಟುತನ : ಚೌಲಕರ್ಮಕ್ಕೂ ಸ್ತ್ರೀಯರ ನಗ್ನಚಿತ್ರಗಳಿಗೂ ಯಾವ ಬಾದರಾಯಣಸಂಬಂಧವೋ ಕಾಣೆ (ನಾಶಗೇ. ೨೬೬) ; ಅವರು ಮನೆ ಬಿಟ್ಟು ಹೋಗುವುದಕ್ಕೂ ನನ್ನ ವಿದ್ಯೆಗೂ ಇರುವ ಬಾದರಾಯಣಸಂಬಂಧವಾದರೂ ಯಾವುದು ? (ಜಾಠಕ. ೦೦೦). [ಸಂ.]

ಬಾದರಾಯಣಸಿದ್ಧಾಂತ (ನಾ). ಬಾದರಾಯಣಮಹರ್ಷಿಯಿಂದ ರಚಿತವಾದ ವೇದಾಂತಸೂಕ್ತಿ : ಈ ವಾದದಲ್ಲಿ . . . ಪುರುಷಾರ್ಥಕ್ಕೆ ಲೋಪವಿಲ್ಲವೆಂಬುದು ತಾತ್ಪರ್ಯವಾಗುತ್ತದೆ. ಬಾದರಾಯಣಸಿದ್ಧಾಂತ ದಲ್ಲೂ ಇದೇ ತಾತ್ಪರ್ಯವು (ಹಿಂದಶಾ. ೬೩). [ಸಂ.]

ಬಾದರಾಯಣಸೂತ್ರ (ನಾ). =ಬಾದರಾಯಣಸಿದ್ಧಾಂತ : ಈ ಬ್ರಹ್ಮ ಸೂತ್ರಕ್ಕೇ ಬಾದರಾಯಣಸೂತ್ರ, ವೇದಾಂತಸೂತ್ರ, ಶಾರೀರಕಮೀಮಾಂಸಾ, ಬ್ರಹ್ಮಮೀಮಾಂಸಾ ಎಂಬ ಹೆಸರುಗಳು ಬಂದಿವೆ (ಶಾರಪ್ರ. ೫೭೦). [ಸಂ.]

ಬಾದಲಿ1, ಬಾದ್ಲಿ, ಬಾಲ್ದಿ (ನಾ). (ನೀರನ್ನು ಸೇದಲು ಅಥವಾ ತೆಗೆದು ಕೊಂಡು ಹೋಗಲು ಬಳಸುವ) ಒಂದು ಬಗೆಯ ಪಾತ್ರೆ : ಬಾದಲಿಯ ಮೇಲೆ ಬಾದಲಿ ಬಿಸಿನೀರು ತಾ, ತಣ್ಣೀರು ತಾ ಎಂದು ಇವನ ಅಜ್ಜ ಇರತಕ್ಕದ್ದೆ ! (ಗಾಳಕ. ೪೩). **ಬಾದ್ಲಿ** : ಚಿನ್ನ . . . ಬಾದ್ಲಿಯನ್ನು ನೀರಲ್ಲಿ ಮುಣುಗಿಸಿದಳು (ಹೂಳಕ. ೬೬). **ಬಾಲ್ದಿ** : ಕೆಲವೇಳೆ ಬಾಲ್ದಿ ತೆಗೆದುಕೊಂಡು ಸಸಿಗಳಿಗೆ ನೀರು ಹಾಕುತ್ತಿದ್ದೆವು (ಕಂಳ. ೨೨) ; ಸೊಸೆ ಬಾಲ್ದಿಯಲ್ಲಿ ನೀರು ತಂದು, ಒದ್ದೆಬಟ್ಟೆಯಿಂದ ನೆಲವನ್ನೊರಸಿದಳು (ಜಾಳಗಿ. ೪೨).

[←ಹಿಂ. ಬಾಲಟೀ, ಬಾಲ್ಟೀ ; ದುರಾ. ಬಾದಲೀ, ಬಾರಡೀ, ಬಾಲಟೀ, ಬಾಲಡೀ, ಬಾಲ್ದೀ, ಬಾಲ್ಟೀ./ಇಂ. Bucket]

ಬಾದಲಿ2 (ಗು). ಜರತಾರಿಯ ; ಕಲಾಬತ್ತಿನಿಂದ ಕೂಡಿದ : ಯಾರ ತಲೆಯ ಮೇಲೆ ನೋಡಿದರೂ ಗಾಂಧಿಟೊಪ್ಪಿಗೆಯ ಬದಲು 'ಬಾದಲಿ' 'ಕೋಪ್ತಾ' ಪಟುಕೆಗಳೇ ಕಾಣಹತ್ತಿದವು (ಏಚಿಕ್ರೀ. ೪).

[← ಹಿಂ. ಬಾದಲಾ = ಜರತಾರಿ ; ದುರಾ. ಬಾದಲೀ]

ಬಾದವಣ, ಬಾದಣ1, ಬಾದಳ (ನಾ). ೧. (ಮನೆಯಲ್ಲಿ ಗಾಳಿ ಬೆಳಕು ಬರುವುದಕ್ಕಾಗಿ ಮಾಡಿರುವ) ಗವಾಕ್ಷಿ : "ಬಾದವಣಂ ನಾತಾಮನಂ ಗವಾಕ್ಷಂ ಜಾಳಂ" (ಪಸ್ತು೫೯. ೪೭-೦೦). ೨. ತೂತು ; ರಂಧ್ರ : 'ಬಾದವಣಂಬೋಗು' ಪರಾ. **ಬಾದಣ1** : ೧. ನೃಪತಿಯ ಪ್ರಾಸಾದದ ಶಿಬಿರದ ಮಧ್ಯಪ್ರದೇಶಮಂ ಬಾದಣ[ಪಣಾಂ. ವ]ದಂತಿರೆ ಛಿದ್ರಂ ಮಾಡಿ (ಪಜ್ಜಾಣಾ. ೦೬೬-೦೪) ; ಕುದುರೆ ಕಟ್ಟುವರ್ ಬಾದಣಮಂ ನೋಡಿದ

ರೆಂಬಂತೆ ನಾಣ್ಣುಡಿಯುಂ ನಸ್ನ ಮಾತಿ (ಕರ್ಣಾಪ್ಪ. ೧೨-೬೫) ; ಸೂಳಿಗೇರಿಯೋವರಿಯು ಬಾದಣದಿನೊಗೆವ. ಅಗುರುವಿನ ಕರ್ಬೊಗೆಯ ಸುರ್ಬಿನೊಳ್ ತಳ್ಕೊಯ್ದು (ಕಂರ್ರಪು. ೯-೧೪ ಪ). ೨. ಬಸಿಜ ಬಾದ್ಗಾಕೆ ಬಾಯ್ವಿಟ್ಟು ದುಬಿದುಜಿನೊಗುವ ಬಿಸಿನೆತ್ತರಂ ಕುಡಿದು (ಹಪಣಾ. ೬-೦೬); ಜೋಡನೊಡಹಾಯ್ದಂಬು ಧರಣಿಬೊಳಾಡಿದವು ಗುಳ ಸರಿದ ಕರಿಗಳ ತೋಡಿ ನೆಟ್ಟವು ಬದ್ಧರಂಗಳ ಬಾದಣವ ಕೊಂಡ್ದು (ಕಾಪ್ಪ್ರಕ. ೯-೧೭); ಬೆಟ್ಟಕ್ಕೆ ಬಾದಣವ ತೆಗೆದಂತೆ ಫಾಯವಿರೆ (ಕ್ರಪುಕ್ಷ. ೫-೬೯). **ಬಾದಳ** : ೧. ಆ ಮನೆಗೆ ಒಂಬತ್ತ್ರುಬಾಗಿಲು ಈಡ ಖಂಗಳವೆಂಬ ಗಾಳಿಯ ಬಾದಳ (ಗಣಾ. ೦೫-೫) ; ಅನುನಯದೆ ಹೊಂಹೊಣಕೆ ನೋಡುತ್ತ ಬಾದಳದಿ . . . ಕಳ್ಳರೆಸೆದರ್ ತಮದೊಳು (ಕಶುಕ್ಷ. ೦-೬-೦೨). ೨. ಬಲುಗಜಕ್ಕೆ ಬಾದಳದಲ್ಲಿ ಹಾದಿಯುಂಟೆ (ಪಶ್ವಣಾ. ೪. ೭೦-೬೬). [<ಸಂ. ವಾತಾಯನ]

ಬಾದವಣಂಬೋಗು (ಕ್ರಿ). ರಂಧ್ರವಾಗು ; ತೂತಾಗು : ಪೂಗಣೆಯುಂ ಬಾದವಣಂಬೋಗಿರೆ ಹೃದಯಂ (ಕರ್ಣಪ್ಪ. ೬-೦೩).

[ಬಾದವಣ + ಪೋಗು₁ (< ಪೋ₁)]

ಬಾದಶಹ 'ಪಾತಶಹ' ನೋ.

ಬಾದಶಾಹ 'ಪಾತಶಹ' ನೋ.

ಬಾದಷಹ 'ಪಾತಶಹ' ನೋ.

ಬಾದಷಹಜಾದೆ (ನಾ). (ಮುಸಲ್ಮಾನ) ದೊರೆಯ ಮಗಳು ; ರಾಜಕುಮಾರಿ : ಬಾದಷಹಜಾದಿಯುರು ಮದುವೆಯ ಕಟ್ಟಿಗೆ ಸಿಕ್ಕಿ ಸಂಕಟಪಡಬೇಕಾಗಿಲ್ಲ (ಪಂಕಮ. ೨೪೬). [←ಪಾರ. ಹಿಂ. ಬಾದಶಾಹ್‌ದಾದೀ]

ಬಾದಷಾಹಿ 'ಪಾತಷಾಹಿ' ನೋ.

ಬಾದಳ ' ಬಾದವಣ ' ನೋ.

ಬಾದಳಗಂಡಿ (ನಾ). ಗವಾಕ್ಷಿಯ ಕಂಡಿ. ಎರಂಧ್ರ : ಬಾದಳಗಂಡಿಯೊಳಗೆ ಕಂದನಸ್ತಾದ್ರಿಗಾದಿತ್ಯಬಿಂಬ ಸಾರ್ದುದನು (ಕಚ. ೦೦-೦೨೮).

[ಬಾದಳ (<ಬಾದವಣ) + ಕಂಡಿ₁]

ಬಾದಳಗೊಯಿ (ಕ್ರಿ). ತೂತಾಗುವಂತೆ ಕತ್ತರಿಸು ; ರಂಧ್ರವಾಗುವಂತೆ ಕೊಯ್ಯು : ಸುರಗಿಯಂ ಕಿತ್ತು ಹಜುಗೋಲ ತೊಗಲಂ ಹಜುಯಲಿಜ್ದು ಬಾದಳಗೊಯಿದುಯೆಲವೊ ನಿನ್ನಪು ಹರಿಯ ಚರಣದೊಳಗದಿಸಿದುದು ದಿಟವಾದೊಡಿವರೆಲ್ಲರಂ ರಕ್ಷಿಸೆಂದೆನುತಿರೆ (ಗುಕುಚ. ೦೫-೦೨).

[ಬಾದಳ (<ಬಾದವಣ) + ಕೊಯಿ (< ಕೊಯ್)]

ಬಾದಳಿಸು ' ಬಾದಣಿಸು ' ನೋ.

ಬಾದಾಮಿ₁, ಬಾದಾವಿ (ನಾ). (ಚಾಲುಕ್ಯರ ರಾಜಧಾನಿಯಾಗಿದ್ದ) ಒಂದು ಊರಿನ ಹೆಸರು : " ಬಾದಾಮಿ-ವಾತಾಪಿ = ಒಂದು ಪಟ್ಟಣ " (ಕಡ್ಡಕೋ. ೩೦) ; ತೊಜಿಗಲ್ಲು ಬಾದಾಮಿ ಮುದಿಗಲ್ಲು ಕೊಪಣದ ತೆಜಿನ ರಾಜ್ಯವೆಲ್ಲವನು ಇಜ್ದು ಕೆಡಿಸುತ (ಭುಬಾಕಾಂ. ೦೯-೪೯) ; ಶ್ರೀತಾಮರಗೆರೆ ರಾಜ್ಯೇ ಗ್ರಾಮಂ ಬಚ್ಚನಹಾಳುಕಂ ಗ್ರಾಮಂ ತಥೈವ ಬಾದಾಮಿದೇಶಂ ಪ್ರಾಡಾಭಿದಂ ವರಂ (ಎಕ. III (R). ಪಂಷಕ. ೦೦೨-೨೦; 1576); ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ಸುಪ್ರಸಿದ್ಧ ಅತ್ಯಂತ ಪ್ರಾಚೀನ ಕೋಟೆಯೆಂದರೆ ಬಾದಾಮಿಯ ಕೋಟೆ (ಕಣಾಕ. ೨೬೬). **ಬಾದಾವಿ**: ಬಾದಾವಿಯ ಸಿದ್ಧಾಯದೊಳಗೆ ಹತು(ತ್ತು) ಗದ್ಯಾಣ ಪೊನ್ನು . . . ಬಿಟ್ಟರು (ಇಕ. VI. ೦೪೦-೨೫ ; 1139). ಪ ಕ್ರಿ. ಶ. ಎರಡನೆಯ ಶತಮಾನದ ಟಾಲೆಮಿಯು ಬಾದಾಮಿಯನ್ನು ' ಬದಿಯ ಮೈಪಿ ' (badia maioi) ಎಂಬ ಹೆಸರಿನಿಂದ ಸೂಚಿಸಿರುವುದರಿಂದ. ಆರನೆಯ ಶತಮಾನದ ಜಯಸಿಂಹನಿಗಿಂತ ಒಂದೆಯೇ ಇದು ಪ್ರಮುಖಸ್ಥಳವಾಗಿದ್ದಿತೆಂದು ಎಇ. XXVII. ೨ನೆಯ ಶಾಸನದ ವಿವರಣೆಯಿಂದ ತಿಳಿದುಬರುತ್ತದೆ. [← ತಮಿ. ವಾತಾಪಿ. ವಾತಾವಿ]

ಬಾದಾಮಿ₂. ಬದಾಮಿ. ಬದಾಮು (ನಾ). ಒಂದು ಬಗೆಯ ಮರ ಮತ್ತು ಕಠಿಣವಾದ ಕವಚವುಳ್ಳ, ಪೌಷ್ಟಿಕವಾದ ಅದರ ಬೀಜ : ಕತ್ತರಿಸಿದ ಕಬ್ಬು ಬಾದಾಮು ಬುಗುರಿಯು ಅಕ್ಕಿ ಪನ್ನೇರಳೆ ನೆಸೆಗಡಲೆಯು (ಪಂರಥೀ. ೦೪೯-೨); ಮುದಿಕರಂಡಿ ಹೊಂಗೆಯಂನು "ಬಾದಾಮಿ, ಕೋಯೆಸುತ ಮದುಳದಿಂ ಮೊಮ್ಮಂಗೆ ಕೊಡಲು ಸಿಹಿಯಹುದೆ? (ಪುಂಕಾಚ. ೬೬೩). **ಬದಾಮಿ** : ಬದಾಮಿಯು ಅಗಿಗಳನ್ನು ಒಂದು ಪರ್ಷಪರಿಯಂತರ ಚನ್ನಾಗಿ ಬೆಳಸಿ ಬೇರೆ ಒಂದು ಕಡೆಗೆ ತಗ್ಗುಗಳನ್ನು ತಯಾರುಮಾಡಿ ಅಗಿಗಳನ್ನು ಕಿತ್ತಿ ಹಚ್ಚಬೇಕು (ಕೃಚಕ್ರ. ೦೯೦). **ಬದಾಮು** : ಈ ಪಡಗಗಳಲ್ಲಿ ಅರಬಸ್ತಾನದಿಂದ ಉತ್ತಮ್ತಿ, ಖರ್ಜೂರ, ಡಾಳಂಬ, ಬದಾಮು . . . ಪಿಸ್ತೆ ಮುಂತಾದ ಸರಕುಗಳು ಬರುತ್ತವೆ (ಕಕಾಗ. ೬೦೬) ; ಹುಣಚಿ ಬದಾಮು ಮುಂತಾದ ಫಲಪ್ಯಕ್ಷಗಳು (ಪುಂಅಂಮು. ೬-೨೬೬).

[← ಪಾರ. ಬಾದಾಮ್; ಹಿಂ. ಬದಾಮ್, ಬಾದಾಮ್; ಮರಾ. ಬದಾಮ್, ಬಾದಾಮ್, ಬಾದಾಮಿ. / ತಮಿ. ವಾತುಮೈ; ಮಲ. ಬಾದಾಮ್; ತುಳು. ಬಾದಾಮ್, ಬದಾಮು; ತಲು. ಬಾದಮು, ಬಾದಾಮು, ಬಾದಾಮುಮು]

ಬಾದಾಮಿಮಾವು (ನಾ). (ಬಾದಾಮಿಯ ಆಕಾರದ) ಒಂದು ಬಗೆಯ ಉತ್ತಮಜಾತಿಯ ಮಾವು : ಬಾದಾಮಿಮಾವು ಇತರ ಮಾವಿನ ಹಣ್ಣುಗಳಿಗಿಂತ ಸಿಹಿಯಾಗಿರುತ್ತದೆ (ಕೃಅ). [ಬಾದಾಮಿ₂ + ಮಾವು]

ಬಾದಾಮಿಹಲ್ವ (ನಾ). ಬಾದಾಮಿಬೀಜದಿಂದ ತಯಾರಿಸುವ ಒಂದು ಬಗೆಯ ಸಿಹಿತಿಂಡಿ : ದುರೋಟ್, ಬಾದಾಮಿಹಲ್ವ . . . ಗರಮಾಗರಂ ಬಾದೂಷಾ _ ಏನು ಕೊಡಲಿ ಸಾರ್ (ಪುಹಾಂ. ೪೬); ಅಪಲಕ್ಕಿ. ಬಾದಾಮಿಹಲ್ವ, ಕೋಸುಂಬರಿ (ಧೂಪಂ. ೦೭).

[ಬಾದಾಮಿ₂ + ಹಲ್ವ (< ಹಲ್ವಾ)]

ಬಾದಾಮಿಹಾಲು (ನಾ). ಬಾದಾಮಿಯ ಪುಡಿಯನ್ನು ಮಿಶ್ರಮಾಡಿ ಕಾಯಿಸಿದ ಹಾಲು : ಮೇಜೊಂವರ ಮೇಲಿದ್ದ ಬಾದಾಮಿಹಾಲು ಅಲ್ಲೇ ಅರಿ ತಣ್ಣಗಾಗಿತ್ತು (ಕೀಲಗೊಂ. ೪೩); ಗೋವಿಂದಪ್ಪನ ಬಾದಾಮಿಹಾಲು ಬಿಟ್ಟರೆ ಹೊಟ್ಟೆಗೆ ಮತ್ತೇನೂ ಬಿದ್ದಿರಲಿಲ್ಲ (ಪುಹಾಂ. ೬೦).

[ಬಾದಾಮಿ₂ + ಹಾಲು₁ (<ಪಾರ್₁)]

ಬಾದಾವಿ ' ಬಾದಾಮಿ₁ ' ನೋ.

ಬಾದಿ (ನಾ). ಭಾರ ; ಹೊರೆ : ಬದುಕು ಬಾದಿ ಇದು ಅನಾದಿ ಹಿಡಿದ ಹಾದಿ ಲೇಸೋ (ಶ್ರೀಂಕಕ್ಕ. ೪-೨೦) ; ಹೆಣ ಹೊರುವವನಿಗೆ ರೋಮ ಬಾದಿಯೇ ? (ಗಾಪ). [←ತುಳು. ಬಾದಿ = ಭಾರವಾದ]

ಬಾದಿಪೊಡ್ಡಿ (ನಾ). ಒಬ್ಬಾಕೆಯ ಹೆಸರು : ಗೋಯಿನ್ದಪೊಡ್ಡಿಯ ಮಗಳು ಬಾದಿ(?ಳಿ)ಪೊಡ್ಡಿಯೆಮ್ಬೊಳ್ . . . ಅಶ್ವರಥ[ಂ]ಗೊಟ್ಟೊಳ್ (ಇಕ. XI. ೧೨೬-೪ ; ಸು. 778). [ಬಾದಿ₂ + ಪೊಡ್ಡಿ]

ಬಾದಿಶರ್ಮ (ನಾ). ಒಬ್ಬಾತನ ಹೆಸರು: ಪುನ ಬಾದಿಶರ್ಮ್ಮನಾ ಎಕ್ಕೆಂಶಃ (ಇಕ. VII. ೦೬೬-೬೬ ; ೦೮೪). [ಬಾದಿ₂ + ಶರ್ಮ]

ಬಾದು₁, ವಾದು (ನಾ). ೧. ಮಾತು ; ನುಡಿ : ಬಾದೇನಾ ಮದೀಯ ಕರ್ಮಫಲೋದಿತಸಂತಾಪರೂಪಪಾವಕಳಾವಚ್ಛೇದನಕರಮಾಯ್ತು ಭವತ್ಪಾದಪ್ರಕ್ಷಾಳನೋದಕಂ ಮುನಿನಾಥಾ (ಪಂಪಭಾ. ೬-೦೬) ; ಆದರಿಸಿ ಭವ್ಯ ಜನಮುಂ ಸೋದರರಿವರೆಂದು ತಮ್ಮ ಸುಕೃತದ ಫಲದೊಳಾಪಾಯನೀವ ಜೈನರು ಬಾದಿನೊಳೇನನ್ಯಸಮಯದವರಿತ್ತಪರೆ (ಪಪಾಚ. ೪-೬೬) ; ಓದಿನೊಳಂ ರೂಪಿನೊಳಂ ಬಾದೇಂ ನಮ್ಮೂರೊಳಿರ್ದ ಮುನಿಗಳವೋಲೀ ಮೇದಿನಿಯೊಳೊಳರೆ (ಕರ್ಣಾಪ್ಪ. ೪-೦೦೬). ೨. ಚರ್ಚೆ; ತರ್ಕ; ವಾದ: ಬಾದಿನೊಳವೋದಿನೊಳಂ ವಿಬುಧಾಳಿಯುಂ ತೊದಲ್ವಾಡುವ ಕೀರವೀ ಪೊಸವಡಂಗಿಲೆಯೊಪ್ಪುವ ನಾದನಂಗಳೊಳು . . . ರಂಜಿಕುಂ (ಪಾಪಾ. IX-i.

೧೦೬ ೨೪ ; ಸಂ. ೧೦೫೭) : ತರ್ಕದೊಳ್ ಬಾದುಂ ಬರ್ಗಡಿಗುಟ್ಟಿ ಪೊಟ್ಟುವತೆದೆಂ (ಸುಳುಪೂ. ೩-೧೩) : ಆದಿಯಾಗಿಪ್ಪುರ್ದಾರ್ಹತಸಪಯಕ್ಕೆ ಮೂಲ ಸಂಘಂ ಕೊಣ್ಡಕುನ್ದಾನ್ವಯಂ ಬಾದುಪೇಡವಂ ಬಳಿಯುವುದಲ್ಲಿಯ ದೇಸಿಗ ಗಣದ ಪುಸ್ತಕಗಚ್ಛದ . . . ಗಂಗಚಸೂವತಿ (ಎಕ.೧೧. ೭೩-೩೦ ; ೧೧೫). 'ಬಾದುಗುಟ್ಟು'. ' ಬಾದುಗೆಯ್ ' ಪರಾ. ೩. ಭಾಷೆ ; ಶಪಥ : ಬಾದುಂಟೆಂದು ಪತ್ರನಿಯ ತಲೆಯುಮಂ ನೇರ್ದಾಗಳ್ (ಕಮುಪ. ೨೪೦ ಕ್ರಿಯೋ). ೪. ಜೊತೆ ; ಜೋಡಿ : ತಿಱಿಕಲ್ಲಾಡುವ ಬೊಟ್ಟುಪೋರಿಸುವ ಸಂಡಂ ಪೊಪ್ಪು ಬಾದಿಂಗೆ ಕೈನೀಡಿದೆರ್ದಾಡುವ . . . ನಾನಾಕ್ರೀಡೆಯಿಂದಿರ್ದರುಂ ತಱಿಸುವು (ಸುಳುಪೂ. ೨-೬). 'ಬಾದುಗೈ' ಪರಾ. **ವಾದು** : ೨. ಇಲ್ಲಿ ಪ್ರಸಾದಮುಂ ಕುಡದಿರ್ದ ಬಳಿವಿಡಿದು ಅಲ್ಲಿ ಪ್ರಸಾದಮುಂ ವಾದಿನಿಂದಂ ಪಡೆಮ . . . ಎನ್ನ ಪ್ರಸಾದಸಾಮರ್ಥ್ಯಮುಂ ತೋಱುತಂ ಮನ್ನಣೆಯೊಳ್ಗೆಗೈತಪ್ಪುದು (ಜಾಪ. ೦–೧೦). 'ವಾದುಗುಟ್ಟು' ಪರಾ. ೫. ಮೂದಲಿಕೆ ; ನಿಂದೆ : ಸೇದುವರೆನ ತಿರುವಿನಂಬಿನ ವಾದಿನಿಸುಗೆಯು ಬಿರುದರಗ್ಗದ ಕೈದುಕಾಱರು ಕೆಣಕದಮರರ ಹೊಟ್ಟ ತೂಱಿದರು (ಕುಚ್ಚೆ. ೬–೨೬). [<ಸಂ. ವಾದ. / ತಮಿ. ವಾಕು ; ತೆಲು. ವಾದು]

ಬಾದು₂ (ನಾ). ೧. (ಉಕ) ವ್ಯರ್ಥವಾದುದು ; ನಿಷ್ಪಯೋಜಕವಾದುದು : ಈ ಹೆಣ್ಣುಮಕ್ಕಳ ಬುದ್ಧಿ ಅಂದರ ವ್ಯವಹಾರಕ್ಕೆ ಬಾದು (ಕಱುಕು. ೫೭). ೨. (ಸಂಖ್ಯೆ, ಪಟ್ಟಿ ಮುಂತಾದುವುಗಳಿಂದ) ಕಳೆದುದು ; ವಜಾಮಾಡಿದುದು : (೪).

ಬಾದಮಾಲು = ವಿಕ್ರಯವಾಗದ ಉಳಿದ ಸರಕು ; ನಿಷ್ಪಯೋಜಕವಾದ ಮಾಲು : ಅಂಗಡಿಯಲ್ಲಿ ಉಳಿದ ಬಾವಮಾಲಿನ ಪ್ರಮಾಣದಿಂದ, ಆ ಅಂಗಡಿಗೆಯವು ಸರುಕಗಳನ್ನು ಕೊಳ್ಳುವವನ ದತ್ತತನ ಜಾಣತನಗಳನ್ನು ತಿಳಿದುಕೊಳ್ಳಬಹುದು (ಕಳ್ಳ. ೦೨೯). ಬಾದಾಗು = ೧. ವ್ಯರ್ಥವಾಗು ; ನಿರರ್ಥಕವಾಗು : ಒಂದು ವರ್ಷಂತೂ ಬಾದಾತು. ಇನ್ನು ಮುಂದಿನ ಪರುಷರ . . . ಪರೀಕ್ಷಾಕ ಕೂಡಪ (ಅವ್ಯ. ೧೬). ೨. ಊನವಾಗು ; ವಿಕಲವಾಗು : ನಡುವಿನ ಸ್ಥಿತಿಯಲ್ಲಿ ಶಳವು ಹೆಚ್ಚಾಗಿ ಒಮ್ಮೊಮ್ಮೆ ರೋಗಿಯ ಯಾವುದಾದರೊಂದು ಅವಯವವೇ ಬಾದಾಗುತ್ತದೆ (ಗೃಹವೈ. ೪೬). ೩. ಶೂನ್ಯವಾಗು ; ತೆರವಾಗು : ಪೋಲಿಗಳೆಲ್ಲಾ ಬರಬರತಾ ಬಹಳ ಬಾದಾಗಲಿಕ್ಕೆ ಪತ್ಯಾವರೆಪಾ (ಶಾಪಜಾ. ೧೦). [← ಅರ. ಬಅದ್ ; ಹಿಂ. ಬಾದಿ ; ಮರಾ. ಬಾದ್]

ಬಾದುಬೆ 'ಬಾದುಬ್ಬೆ' ನೋ.

ಬಾದುಗುಟ್ಟು, ವಾದುಗುಟ್ಟು (ಕ್ರಿ). ವಾದ ಮಾಡು ; ತರ್ಕಮಾಡು ; ಚರ್ಚಿಸು : ಪರಮನ ಪೋಲ್ವೆಗೆ ಬರ್ಪಂತಿರೆ ತನ್ನೊಳ್ ಬಾದುಗುಟ್ಟಿ ಸುರಡಿಂಭರ್ ಬಿತ್ತರಿಸಿದ ವಿಕ್ರಿಯೆಯೊಳ್ಪಂತಿರೆ ಸಹಜಾತಿಶಯದಿಂದೆ ಸೊಬಗಂ ಸೋಲ್ವರ್ (ಕಪಂಪು. ೬–೧೦). **ವಾದುಗುಟ್ಟು** : ವಾದುಗುಟ್ಟ ನಶೇಷಶಾಸ್ತ್ರವನಾದರಿಸನು . . . ವೈಯಾಕರಣನವನು (ಕಭಾಗ. ೩-೪–೩೦); ವಾದುಗುಟ್ಟದೆ ಕೊಡು ಮಗನೆ (ಕಭಾಗ. ೯-೨-೧೨). [ಬಾದು₂ + ಕುಟ್ಟು₂]

ಬಾದುಗೆಯ್, ಬಾದುಗೈ, ವಾದುಗೆಯ್ (ಕ್ರಿ). ೧. =ಬಾದುಗುಟ್ಟು : ಇರ್ವರುಮೊಂದುದಿವಸಮಜಿತಂಜಯನೊಡನೆ ಪೋಗಿ ತತ್ಪುರೋಪವನದೊಳಿರ್ದ ಮತಿಸಾಗರಮುನಿಪತಿಯೊಳ್ ಬಾದುಗೆಯ್ದು (ಕರಿಪ. ೩–೭೫ ೪) ; ಬಿಡೆ ಬಾದುಗೆಯ್ದೊಡರಿಸುವ ತಪ್ಪು ಕಡುಪಿಂದೆ . . . ಹಾಸ ಬೀಭತ್ಸಾದಿ ನಾನಾರಸಂಗಳಿಂದೊಂದಿದ ಜರದ್ಪಾವಿಳಧಾರ್ಮಿಕಜನಂಗಳಿಂ (ಕಾದಂಬಾ. ೨೭೦); ಎಕ್ಕೆಯ ಬೇರ್ . . . ಅರೆದು ಲೇಪಿಸೆ ವೃಶ್ಚಿಕಮೂಜಿ ದೊಂದು ತಾಣಕ್ಕೆ ಬಟ್ಟಿಕ್ಕಮುಗ್ರಮೆನಿಸಿರ್ಪ ವಿಷಂ ಕಿಡುಗುಂ ಜನಂಗಳ್ಕೈಕ್ಕೆಗೆ ಬಾದುಗೆಯ್ದು ಕಿವುವಂತಿರೆ ಲೋಕದ ಪಕ್ಷಪಾತದಿಂ (ಕಮುಪ. ೧೧–೩೫). **ಬಾದುಗೈ** : ೨. ಜೊತೆಗೂಡು ; ಸೇರು : ಹೆಣೆದು ಕೊಳ್ಳು : ಅದು . . . ನೀಳ್ದುವರಿದಡ್ಡಂಬಾದ್ಬಳ್ಳಿಗೊಂಬುಗಳೊಳ್ ಬಾದುಗೈದು ಬಳೆದು ಮುಗಿಲಂ ಮುಟ್ಟಿ ಪಗುಳ್ವಂತೆ ಸಸಂಬಾಗಿ ನಿಂದ ಕೀಬ್ಗೊಂಬುಗಳೊಳಂ . . . ಸೊಗಬಿಸಿದುದು (ಅಂಗಾನ. ೬-೪೦ ಪ). **ವಾದುಗೆಯ್** : ೧. ಸ್ಕಂದಕುಪಾರಮುಷಿಯೊಡನೆ ವಾದುಗೆಯ್ದು ಸೋಲೊಡೆ (ವಡ್ಡಾರಾ. ೧೭೬–೦೨) ; ಶೂನ್ಯವಾದಿಗಳ್ . . . ಮುತಿಸಾಗರ ಮುನಿಪತಿಯೊಳು ವಾದುಗೆಯ್ದು (ಶಾಪುಂತಿ. ೨೨). [ಬಾದು₁ + ಕೆಯ್₁]

ಬಾದುಗೈ 'ಬಾದುಗೆಯ್' ನೋ.

ಬಾದುಬೆ 'ಬಾದುಬ್ಬೆ' ನೋ.

ಬಾದುಬ್ಬೆ, ಬದುಬೆ, ಬಾದವಿ, ಬಾದುಂಬೆ, ಬಾದುಬೆ, ಬಾದುವೆ, ಬಾಳುಬೆ (ನಾ). ೧. ಒಂದು ಕ್ಷುದ್ರದೇವತೆಯ ಹೆಸರು : ಅದರ ಅತಿ ಪ್ರಾಚೀನರೂಪ ಕ್ರಿ. ಶ. ೮೭೨ರ ಶಾಸನದಲ್ಲಿರುವ ಬಾದುಬ್ಬೆ ಎಂಬುದು. ಕಾಲಕ್ರಮದಲ್ಲಿ ಇದರ ಬೆಳವಣಿಗೆ ಬಾದುಬ್ಬೆ > ಬಾದುಂಬೆ > ಬಾದುಬೆ, ಬಾದುವೆ > ಬಾದವಿ ಎಂದಿರುವಂತೆ ತೋರುತ್ತದೆ. ಸಾಹಿತ್ಯದಲ್ಲಿ ಈ ಪದ ಹೆಚ್ಚಾಗಿ ಬಳಕೆಯಾಗಿಲ್ಲ (ಕರ್ನಾ. ೪೯). ೨. ವೈಶಾಖಮಾಸದ ಅಮಾವಾಸ್ಯೆಯಂದು ಆಚರಿಸುವ ಒಂದು ಹಬ್ಬ.–ಉತ್ಸವ : ಅಂತಹ ಹಬ್ಬಗಳಲ್ಲಿ ಮುಖ್ಯವಾಗಿ ಮೂರು ಹಬ್ಬಗಳನ್ನು ಶಾಸನಗಳು ಹೆಸರಿಸಿವೆ—ಬಾದುಬ್ಬೆ, ದೀಪಾವಳಿ, ಕಾರ ಹುಣ್ಣಿವೆ. ಈ ಮೂರು ಹಬ್ಬುಗಳು ಇಂದಿಗೂ ಉಳಿದುಕೊಂಡಿವೆ (ಕಣಾಶಾ. ೦೯೩). **ಬದುಬೆ** : ೨. ಬವುಬೆಯು ಅಮಾವಾಸೆಯಂದು ಸ್ವಸ್ತಿಶ್ರೀಪಾತು ದಣ್ಡನಾಯಕಂ . . . ವಿನಾಯಕಗ್ಗೆ ಬಿಟ್ಟ ಕರಿಯ ಕೆಯಿ (ಕೌಇತಿ. VIII. ೪:೪ ೦ ; 1090). **ಬಾದವಿ. ಬಾದುಂಬೆ** : ೧. ಸಾಯಿರಖಂಡುಗಮಂ ಬೆಳದಾವೊಕ್ಕಲ ಮಗನದೊಂದು ರಂಬುಮನೊಯಿದಿಟ್ಟಾವೂರಿನ ಬಾದುಂಬೆಗೆ ಸಾಯಿರಮುಂ ಬೆಳದನೆಂದು ಸುಡಿವರ್ಮೂರ್ಧರ್ (ಕಪುಶ. ೯-೮೨); ಪೆಱಿಯಂ ಗೋಕುಳಮಂ ಗಿರಿಪ್ರಕರಮಂ ಬಾದುಂಬೆಯುಂ ಶಾಂತಿಯುಂ . . . ದೈವಂಗಳೆಂದಿಂತು ಕೂರ್ತಿಜಗುತ್ಪಿರ್ಪವರೆಂತು ಮುಕ್ತಿವಡೆವರ್ (ಕಬಿಪ. I. ೦೩೧ ಕ್ರಿಯೋಕ್ಕಿಂಡಾಪುಡಿಸ್ಕೋಕ್ಕ) : ಬಾದುಂಬೆ ದೇಶ್ಯವೋ ಅನ್ಯದೇಶ್ಯವೋ ಎಂಬುದನ್ನು ನಿರ್ಣಯಿಸುವುದಕ್ಕೂ, ಅದು ಯಾವ ದೇವತೆಯೆಂಬುದಕ್ಕೂ ಇದುವರೆಗೆ ದೊರೆತಿರುವ ಸಾಕ್ಷ್ಯಗಳು ಸಾಲವು (ಕರ್ನಾ. ೫೩). ೨. ದೀಪಾವಳಿ ಬಾದುಂಬೆ ಕಾರ ಪುಣ್ಣಮೆಯೆಂಬೀ ಮಹಾಪರ್ವ್ವಗಳೊಳ್ (ಕೊಂಳಾಶಾ. ೦೯೩೪, ಹಾವೇರಿ. ೬೦–೪೬ ; ?). ೩. ಬಾದುಂಬೆಯೆಂಬ ದೇವತೆಯ ವಿಗ್ರಹವಿರುವ ಒಂದು ಸ್ಥಳದ ಹೆಸರು (?) : ಬಳ್ಳಿಗೊಳನೆ ಮೇರೆಯಲ್ಲಿಂ ಪಡುವಲು ಬಾದುಂಬೆಯುನಿಂ ಬಡಗಲು ಪೂದೋಂಟಿ ಕಂಮ ನಾಲ್ವತ್ತುಮನಾ ದೇವರ ಪೂಜೆ ಪುನಸ್ಕಾರಕ್ಕಂ . . . ಜೀರ್ಣೋರ್ದ್ಧಾರಕ್ಕ ವೇದು ಕೊಟ್ಟರು (ಎಕ. VII. ೫೪೨. ೦೨೬–೪೦ ; 1019) ; ಅಲ್ಲಿಯ ಬಾದುಂಬೆಯುನಿಂ ಬಡಗಣ ಗದ್ದೆಕಟ್ಟು (ಎಇ XIV. ೨೭೨–೭೩ ; 1173). **ಬಾದುಬೆ** : ೧. ವಟವಾರವೆ ಬಾದುಬೆ ಶತ್ರುಸಾಲೆವಂ ದೇವವಿನಿರ್ಮ್ಮಿತಂಗಳೆನೆ ಮಾಡಿಸಿ[ದೀ]ಶ್ವರನೇಂ ಕೃತಾರ್ತ್ಥನೋ (ಕವಿ. v. ೨೦-೪೪ ; 1080) ; ಪಡುವ ಚಂದಣಗೇರಿಯೆಕ್ಕಸಂದಿಯಿಂ ಬಡಗದಾರಿಯಿಂ ಮೂಡಣ ಮನೆಯು ನಿವೇಶನಮಂ ಬಾವುಬೆಯು ದೇಗುಲದಿಂ × × × (ಕೌಇತಿ. XIV. ೦೨೯-೯೯ ; 1176) ; ಬಸದಬ್ಬೆ ಬಳರಿ ಬಾದುಬೇ ಕಿನಿಸಂಬರಿ [ಪಾಶಾಂ. ಬಾದುಮ ಕಿನಿಸಂಬಲಿ. ಬಾದುಂಬೆ ಕಿನಿಸಂಬಲಿ] ಜಲದ ಜಕ್ಕಿ ಜಾತ್ರೆಯ ದೈವಂ ಪುನೆದೈವವೆಂಬೆಲ್ಲಂ ಜಿನಭಕ್ತಂಗಡದ ಕಾಲ ಕಪ್ಪಂ ದಪ್ಪಂ (ಕಸಾಚ. ೪೬೯). ೨. ಬಲಂ ಗೊಣ್ಡಾ ಸವಾಸ್ತು ಪೋದನೆಸವೀ ಗಾವಾಧಿಪಂ ಸಂದ ಬಾದುಬೆ ದೀಪಾವಳಿ ಕಾರ ಪುಣ್ಣಮೆಯೆನಿಪ್ಪೀ ಮೂಜುಪರ್ವ್ವಂಗಳೊಳ್ (ಕೌಇತಿ. XI–೧. ೩೨–೬೬ ; 1007) ; ಬಾದುಬೆ ಕಾರ ಪುಣ್ಣವಿ ದೀಪಾಳಿಗೆ ಮೂಜುಪರ್ವ್ವ

ದೊಳಂ ಪ್ರತ್ಯೇಕವೊನ್ದು ಗದ್ಯಾಣ (ಎಇ. XX, ೬-೩೫; 1012). ಬಾದುಮೆ: ೧. ಹರವಲ್ಲಿಕಾರ್ಜುನಂಗಪ್ಪಪೂಜೆಯ ಕೊಟ್ಟು ಪರಿಸೂತ್ರದೊಳಗಿರ್ದ ಬಾದುಮೆ[ಪಾಠಾಂ. ದುಮಿ, ದುವೆ, ಧುಮೆ]ಯ ಕಟ್ಟೆ . . . ಕೈಲಾಸಕ್ಕೆ ಹೊ.ಗಿ (ಸಿದ್ಧರಾ. ೬-೩೦); ಸೊನ್ನಲಿಗೆಯ ಮಲ್ಲಿಕಾರ್ಜುನದೇವಸ್ಥಾನದ ಒಳವಲಯದಲ್ಲಿ ("ಪರಿಸೂತ್ರ") ಬಾದುಮೆದೇವತೆ ಇದ್ದಳೆಂಬುದು ಇದರಿಂದ ತಿಳಿಯಬರುತ್ತದೆ (ಸಂಕೋಕ. ೦೩೫). ಬಾದುವೆ: ೧. ಕ್ರಿ. ಶ. ೧೨೦೩ರ ಶಾಸನದಲ್ಲಿ 'ಬಾದುವೆಯ ನಾಯಕ' ಎಂಬ ವ್ಯಕ್ತಿಯ ಹೆಸರಿದೆ . . . ಇಲ್ಲಿ ಬಾದುವೆದೇವತೆಯ ಹೆಸರನ್ನು ಕಾಣಬಹುದು (ಸಂಕೋಕ. ೦೩೬). ೪. ಬಾದುಬ್ಬೆಯೆಂಬ ದೇವತೆಯ ದೇವಸ್ಥಾನ: × × × ಕುಡಿಸುದೆ ಱೆಯ್ಯಂ ಅಯ್ದು ಬ್ರಹ್ಮಪುರಿಯ ಬಾ[ದು]ವೆಯ ಕಾಹಳಿಗಳ ಕೈಯಲು × × × ಮಂ ಪಾದಪ್ರಕ್ಷಾಲನಂ ಮಾಡಿ ಧಾರಾಪೂರ್ವ್ವಕವಾಗಿ ಬಿಟ್ಟರು (ಸಿಇಇ. XV, ೬೨-೩೬; 1186). ಬಾಳುಬೆ: ೧. ಪಶ್ಚಿಮದೊಳ್ಪುಷ್ಕರಿಣಿ ವಾಯವ್ಯದೊಳ್ಗೋನೇಶ್ವರದೇವರ ತೋಂಟಂ ಉತ್ತರದೊಳ್ ಬಾಳುಬೆಯೇರಿ (ಎಕ. VIII, ಶಾಗರ. ೦೦೯-೬೦; 1042); ಸಾಗರತಾಲ್ಲೂಕಿನ ಶಾಸನವೊಂದರಲ್ಲಿ 'ಬಾಳುಬೆಯೇರಿ' ಎಂದಿದೆ. ಈ 'ಬಾಳುಬೆ' ಎಂಬುದು ಬಹುಶಃ 'ಬಾದುಬೆ' ಎಂದಿರಬೇಕು (ಸಂಕೋಕ. ೦೩೬).

ಬಾದಮಿಅಮವಾಸೆ = ಬಾದುಬ್ಬೆಯ ಉತ್ಸವ ನಡೆಯುವ ವೈಶಾಖಮಾಸದ ಅಮಾವಾಸ್ಯೆ: ವೈಶಾಖಮಾಸದ ಅಮಾವಾಸ್ಯೆಗೆ 'ಬಾದಮಿಅಮವಾಸೆ'ಯೆಂದು ಉತ್ತರಕರ್ಣಾಟಕದ ರೂಢಿಯ ಹೆಸರು (ಕಬ್ಬಿ. ೯೬); ಬಾದಮಿಅಮವಾಸೆಯಲ್ಲಿ ಬಾದಾಮಿಯಲ್ಲಿ ಬನಶಂಕರಿಪೂಜೆ ನಡೆಯುತ್ತದೆ (ಕಬ್ಬಿ. ೩೦). ಬಾದಮಿನೈವೇದ್ಯ = ವೈಶಾಖದ ಅಮಾವಾಸ್ಯೆಯಂದು ಆಚರಿಸುವ ಬಾದುಬ್ಬೆಯ ಹಬ್ಬದಲ್ಲಿ ಮಾಡುವ ಎಡೆ: ನದಿಯಿಂದಲಾಗಲಿ ಹೊಲದಿಂದಲಾಗಲಿ ಐದು ಚಿಕ್ಕ ಕಲ್ಲುಗಳನ್ನು ಆಯ್ದು ತಂದು ... ಮನೆಯ ಯಜಮಾನ ಅವುಗಳನ್ನು ಪೂಜಿಸಿ ಹೂರಣದ ಹೋಳಿಗೆಯ ನೈವೇದ್ಯ ಮಾಡುವನು . . . ಪ್ರತ್ಯೇಕವಾದ ಎಡೆಯಲ್ಲಿ ಬಡಿಸುವ ಈ ನೈವೇದ್ಯವನ್ನು 'ಬಾದಮಿನೈವೇದ್ಯ' ಎಂದು ಹೇಳುವರು (ಸಂಕೋಕ. ೦೩೮). ಬಾದುಂಬೆಯ ಕಟ್ಟೆ = ಬಾದುಬ್ಬೆಯೆಂಬ ದೇವತೆಯ ಹೆಸರಿನಲ್ಲಿರುವ ಕೆರೆ (?): ಬಾದುಂಬೆಯ ಕಟ್ಟೆಯಿಂ ಮೂಡ ಹಿರಿಯೋಣಿಯಿಂ ಬಡಗ ಕೆಂಗಾಡು ಮತ್ತರೆರಡು (ಸಿಇಇ. IX-i, ೩೨೯-೫೫; 1209). ಬಾದುಬ್ಬೆಯ ಪರ್ವ, ಬಾದುಂಬೆಯ ಪರ್ವ = ವೈಶಾಖದ ಅಮಾವಾಸ್ಯೆಯಂದು ಉತ್ತರಕರ್ಣಾಟಕದಲ್ಲಿ ಆಚರಿಸುವ, ಬಾದುಬ್ಬೆಯೆಂಬ ದೇವತೆಯ ಒಂದು ಹಬ್ಬ: ಆ ನಗಿಸಿದ ಪಗರಣಿಗಂಗೆ ಪಿರಿದು ಕಸವರಮಸಿತ್ತೊನಂದಿಂದಿತ್ತ ಬಾದುಬ್ಬೆ[ಪಾಠಾಂ. ಂಬೆ]ಯ ಪರ್ವಮುಂ ಪಗರಣದಾಟಪಾಟಮುಮಾದುವು (ಪಗ್ಗಾಣಾ. ೦೦೬-೨೦); ಬಾದುಬ್ಬೆಯ ಪರ್ವ್ವದನ್ದು ಪೆರ್ಗ್ಗಡೆ ಗೊಪಗರಣದ ದ್ರಮ್ಮಮೆಣ್ಬತ್ತು (ಕಇಇ. ೬೬-೦೮-೨೯; 932); 'ಬಾದುಂಬೆಯ ಪರ್ವ'ವೆಂದು ಶಾಸನಗಳಲ್ಲಿ ಹೇಳಿರುವ ಹಬ್ಬ ಈ ದೇವಿಯ ಜಾತ್ರೆಯ ಕಾಲವೆಂದು ತೋರುತ್ತದೆ (ಕಬ್ಬಿ. ೩೦). ಬಾದುಬ್ಬೆಯ ಪಾಳು, ಬಾದುಂಬೆಯ ಪಾಳು = ಬಾದುಬ್ಬೆಯೆಂಬ ದೇವತೆಯ ದೇವಸ್ಥಾನಕ್ಕೆ ಬಿಟ್ಟ ಭೂಮಿ,—ಜಮೀನು: ಶ್ರೀಮತ್ತತ್ಪುರುಷ ಪಣ್ಡಿತದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಕಿಸುಕಾಡೆಬ್ಬತ್ತಱ ಬಳಿಯ ಬಾದುಬ್ಬೆಯ ಪಾಳನವರ ವಿದ್ಯಾರ್ತ್ಥಿತಪೋಧನರ ಗ್ರಾಸಕ್ಕಂ ದೇವರ ಪೂಜೆಗಂ . . . ಶ್ರೀ ಬಲ್ಲವರಸರ್ಕ್ಕೊಟ್ಟರ್ (ಸಿಇಇ. XI-i, ೦೦೩-೨೯; 1075); ಈ ದೇವಿಗಾಗಿ ಬಿಟ್ಟ ಭೂದತ್ತಿಗಳಿಗೆ 'ಬಾದುಂಬೆಯ ಪಾಳು' ಎಂಬ ಹೆಸರಿತ್ತೆಂದು ಊಹಿಸಬಹುದು (ಕಬ್ಬಿ. ೩೦). ಬಾದುಬ್ಬೆಯಮಾವಾಸ್ಯೆ, ಬಾದಮಿಅಮವಾಸೆ, ಬಾದುಂಬೆಅಮವಾಸೆ, ಬಾದುಬೆಯಮಾವಾಸ್ಯೆ = ಬಾದಮಿಅಮವಾಸೆ: ಜಯಸಂವತ್ಸರದ ಬಾದುಬ್ಬೆಯಮಾವಾಸ್ಯೆ ಸೂರ್ಯ್ಯಗ್ರಹಣದನ್ದು . . . ಶ್ರೀಖಣ್ಡಕ್ಕಂ ಧೂಪಕ್ಕಂ ಮೊದಲೊಗ್ಗಿಟ್ಟ ಗದ್ಯಾಣಂ ಪದಿನೈಯ್ದು (ಸಿಇಇ. XI-i, ೯೨-೩೦; 1054); ಈಗಲೂ ಆ ಅಮಾವಾಸ್ಯೆಯನ್ನು 'ಬಾದಮಿಅಮವಾಸ್ಯೆ' ಎಂದು ಕರೆಯುತ್ತಿರುವುದು. ಆ ದಿನ ಬನಶಂಕರಿಗೆ ವಿಶೇಷಪೂಜೆ ನಡೆಯುವುದು—ಇವೆಲ್ಲಾ ಬನಶಂಕರಿ (= ಬನದಬ್ಬೆ) ಮತ್ತು ಬಾದುಬ್ಬೆ ಒಂದೇ ಎಂಬುದನ್ನು ಸೂಚಿಸುವುದಿಲ್ಲವೇ? (ಸಂಕೋಕ. ೦೩೯); ವೈಶಾಖ ಬಹುಳಅಮಾವಾಸ್ಯೆಯನ್ನು ಬಾದುಮೆ, ಬಾದುಂಬೆಅಮಾವಾಸ್ಯೆಯೆನ್ನುವರು. ಈ ಅಮಾವಾಸ್ಯೆಯ ದಿವಸ ಬಾದಾಮಿಯ ಬನಶಂಕರಿಯ ಉತ್ಸವ ನಡೆಯುತ್ತದೆ (ಕಾಪ್ರ. ೬೬); ಬಾದುಬೆಯಮಾವಾಸ್ಯೆಯಾದಿವಾರಂ ಸೂರ್ಯ್ಯಗ್ರಹಣದಂದು . . . ಎಲೆಯ ಬೇಱೆನ ಸಂಕಮಂ ದೇವಸಿಂಗಜೇಯರ ಪುತ್ರಂ ನೀಲೇಶ್ವರಪಣ್ಡಿತದೇವರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕ(ಂ)ಮ್ಮಾಡಿ ಕೊಟ್ಟಂ (ಸಿಇಇ. IX-i, ೦೯೯-೨೦; 1119). ಬಾದುಬ್ಬೆಯ ಹಬ್ಬ = ಬಾದುಬ್ಬೆಯ ಪರ್ವ: ಬಾದುಬ್ಬೆಯ ಹಬ್ಬವು ಮೂಲತಃ ಜೈನರ ಹಬ್ಬ ಎಂದು ಸಾಧಿಸುವ ಪ್ರಯತ್ನವಿದೆ. ಆದರೆ ನಮಗೆ ಮುಖ್ಯವಾದದ್ದು ಈಗಿನ ರಂಜಾನ್ ಹಬ್ಬದಲ್ಲಿನಂತೆ ಬಾದುಬ್ಬೆಯ ಹಬ್ಬದಲ್ಲಿಯೂ ವೇಷಗಳನ್ನು ಕಟ್ಟುತ್ತಿದ್ದರು ಎಂಬುದು (ಸಂಕೋಕ. ೦೩೫). ಬಾದುಮೆಯ ಮದುವೆ = ಬಾದುಬ್ಬೆಯೆಂಬ ದೇವತೆಯ ಮದುವೆ; ಅಸಂಭವವಾದುದು: ಗೀಜಗನ ಗೂಡು ಕೋಡಗದಣಲ ಸಂಚ ಬಾದುಮೆಯ ಮದುವೆ ಬಾವುಲ ಬಿದ್ದಿನಂತೆ ಜೂಜುಗಾಱನ ಮಾತು ಬೀದಿಯ ಗುಂಡನ ಸೊಬಗು ಓಡಿನೊಳಗಗೆಯ ಹೊಯ್ದಂತೆ (ಬಸವ. ೬೩೬); 'ಬಾದುಮೆಯ ಮದುವೆ' ಎಂಬುದು 'ಗಣಪತಿಯ ಮದುವೆ' ಎಂಬ ಉಕ್ತಿಗೆ ಸಮಾನವಾದುದು (ಸಂಕೋಕ. ೦೩೮). ☞ ಈ ಶಬ್ದದ ವ್ಯುತ್ಪತ್ತಿಯ ಬಗೆಗೆ ಬೇರೆಬೇರೆ ಊಹೆಗಳಿವೆ. ಶ್ರೀ ಪಿ. ಬಿ. ದೇಸಾಯಿಯವರು 'ವಸಂತಾಂಬೆ' ಎಂಬುದರಿಂದಲೂ ಶ್ರೀ ಡಿ. ಎಲ್. ನರಸಿಂಹಾಚಾರ್ ಅವರು 'ಭದ್ರಾಂಬೆ' ಎಂಬುದರಿಂದಲೂ ಮತ್ತು ಡಾ. ಎಂ. ಚಿದಾನಂದಮೂರ್ತಿಯವರು 'ಬನದಬ್ಬೆ' ಎಂಬುದರಿಂದಲೂ ಈ ಶಬ್ದವು ಬಂದಿರಬೇಕೆಂದು ಊಹಿಸಿದ್ದಾರೆ.

[?]

ಬಾದುಮಯ 'ಬಾದುಮಯ್ಯ' ನೋ.

ಬಾದುಮಯ್ಯ, ಬಾದುಮಯ (ನಾ). ೧. ಒಂದು ದೇವತೆಯ ಹೆಸರು (?): ಅರಗಿನ ರೂಪನುರಿಯ ಕೊನೆ ಪತ್ತಿದಂತಾಗೆ ಬಾದುಮಯ್ಯನ ಮೆಯ್ಯಂ ಬಱಸಿಡಿಲು ಪೊಡೆದಂತಾಗೆ (ಶಂಚಾರ. ಹ. ೪೦೩-೦೬); ನಮ್ಮ ದೇವರು ಮಾರಿ ಮಸಣಿ ಬೀರ ಮೈಲಾರ ಉಡಿಸಿಕಾರಿ ಬಾದುಮಯ್ಯ ವೀರನ ಬಿಡಲಾಱೆ (ಶೃಕಸೂ. I. ೨೦೪). ಬಾದುಮಯ: ೨. ಒಬ್ಬಾತನ ಹೆಸರು (?): ಅದಕೆ ಒಡೆಯ ಮಲೆಯರ ಪಾರಿಸಯಾ ಬಾದುಮಯಂಗೆ ಮತ್ತರು ೨ (ಕೊಣ್ಣಾಣಾ. ೫೬-೫೦; 1049).

[ಬಾದುಮೆ (< ಬಾದುಬ್ಬೆ) + ಅಯ್ಯ$_1$]

ಬಾದುಮೆ 'ಬಾದುಬ್ಬೆ' ನೋ.

ಬಾದುರ 'ಬಹಾದುರ್' ನೋ.

ಬಾದುವೆ 'ಬಾದುಬ್ಬೆ' ನೋ.

ಬಾದುಶ 'ಪಾತಶಹ' ನೋ.

ಬಾದೂಷಾ (ನಾ). ಒಂದು ಬಗೆಯ ಸಿಹಿತಿಂಡಿ: ಜಿಲೇಬಿ, ದಂರೋಟ್ . . . ಬಜ್ಜಿ, ಗರಮಾಗರಂ ಬಾದೂಷಾ—ಏನು ಕೊಡಲಿ ಸಾರ್? (ಬಾಹಾಂ. ೩೬). [← ಹಿಂ. ಬಾಲೂಸಾಹೀ, ಬಾಲೂಶಾಹೀ]

ಬಾದೆಯ (ನಾ). ಒಬ್ಬಾತನ ಹೆಸರು: ಶ್ರೀಗಣ್ಣಮಹಾನಾಯ್ಕರಾ

ಮಗನ್ಬಾದೆಯನ್ನಿರಟ್ಟಿ ತುಱುಗೊಳೊಳ್ಳಾದಿ ತುಱುವನಿಕ್ಕಿಸಿ ಸುರ ಲೋಕದ ಭೋಗಿ ಆದನ್ (ಎಕ. IX, ಹೊಸಕೋ. ೬೯-೨; ಸು. 720).

[? + ಅಯ್ಯ$_1$ (<ಅಯ್ಯ$_1$)]

ಬಾದೆಯಹುಲ್ಲು (ನಾ). ಒಂದು ಬಗೆಯ ಹುಲ್ಲು : ಮೂಡಲ ದೇಶಕ್ಕೆ ಹೋದ್ಯಲ್ಲೊ ಗೀಜುಗ ಬಾದೆಯಹುಲ್ಲ ತಂದ್ಯಲ್ಲೊ ಗೀಜುಗ (ಶಾಪದ. ೦೯). [? + ಹುಲ್ಲು (<ಪುಲ್)]

ಬಾದೋವೋಜ (ನಾ). ಒಬ್ಬಾತನ ಹೆಸರು : ಬಾದೋವೋಜ ಮಾಡಿದ (ಎಕ. VIII, ಸೊರಬ. ೯-೬; ಸು. 800). [? + ಓಜ$_1$ (<ಒವಝು)]

ಬಾದ್ಲಿ 'ಬಾದಲಿ$_1$' ನೋ.

ಬಾಧ (ನಾ). ೧. ನೋವು ; ವೇದನೆ. ೨. ಕಷ್ಟ ; ತೊಂದರೆ. ೩. ಹಿಂಸೆ; ಕಾಟ; ಕಿರುಕುಳ. ೪. ಕೆಡುಕು ; ಹಾನಿ. ೫. ಅಪಾಯ; ಆಪತ್ತು. ೬. ತಡೆ ; ಅಡ್ಡಿ. ೭. ವಿರೋಧ ; ಪ್ರತಿಷೇಧ. ೮. [ನ್ಯಾಯಶಾ] ಹೇತ್ವಾಭಾಸದಲ್ಲಿ ಹೇಳಿರುವ ವ್ಯಭಿಚಾರ, ವಿರುದ್ಧ, ಸತ್ಪ್ರತಿಪಕ್ಷ, ಅಸಿದ್ಧಿ ಮತ್ತು ಬಾಧ ಎಂಬ ಐದುಬಗೆಯ ದೋಷಗಳಲ್ಲಿ ಒಂದು : ಸವ್ಯಭಿಚಾರ ವಿರುದ್ಧ ಸತ್ಪ್ರತಿಪಕ್ಷ ಅಸಿದ್ಧಿ ಬಾಧಗಳೆಂಬ ಹೇತ್ವಾಭಾಸದೋಷಗಳಿಲ್ಲದಿರುವಿಕೆಯುಂ (ಪಿಸೇಕ. ೦೬); ಬಾಧ ಎಂದರೆ ಪ್ರಮಾಣಜ್ಞಾನದ ವಿಷಯವು ಅಸತ್ ಎಂದು ಸಿದ್ಧಿಸೋಣ (ಶಾಶಕ್ತ್ಯ. ೩೨೩). ೯. ಮನುಷ್ಯನು ಆಚರಿಸಬೇಕಾದ ನಾಲ್ಕುಬಗೆಯ ಆಶ್ರಮಗಳ ವಿಷಯದಲ್ಲಿರುವ ಮೂರು ರೀತಿಯ ಮತಗಳಲ್ಲಿ ಒಂದು : ಆಶ್ರಮವಿಷಯದಲ್ಲಿ ಬಾಧ ವಿಕಲ್ಪ ಸಮುಚ್ಚಯವೆಂದು ಮೂರು ಮತಗಳಾದವು. ಬಾಧಪಕ್ಷವು ಜೈಮಿನಿ ಸಮ್ಮತವು (ಹಿಂದಸಾ. ೦೩೪). [ಸಂ.]

ಬಾಧಕ (ನಾ). ತೊಂದರೆ ; ಕಷ್ಟ : ಒಬ್ಬನಿಗೆ ತಲೆ ಸರಿಯಿಲ್ಲ ಅನ್ನುತ್ತಾರೆ. ಏನು ಬಾಧಕ ಅದರಿಂದ ? (ಮೂಕಕ್ಕ. ೨೪೦) ; ಅಳದಿದ್ದರೆ ಮಗುವಿನ ಶರೀರವೃದ್ಧಿಗೆ ಬಾಧಕವೆಂದು ವಿಕಾಸವಾದಿಗಳ ಮತ (ಜೀವಾಕ್ಯ. ೦೬೦). [ಸಂ.]

ಬಾಧಾಕರ (ನಾ). ತೊಂದರೆಯನ್ನುಂಟುಮಾಡುವುದು ; ಉಪದ್ರವಕಾರಿಯಾದುದು : ದೃಷ್ಟಾದೃಷ್ಟಬಾಧಾಕರಮಿದುವೆ ಪರಪ್ರೇಯಸೀ ಪ್ರೇಮಂ (ಸಂಶಾಮಾ. ೦೦-೬೦). [ಸಂ.]

ಬಾಧಿಸು (ಕ್ರಿ). ೧. ಕ್ಲೇಶಪಡಿಸು ; ಸಂಕಟಪಡಿಸು : ತೂಲೆ ಬಾಧಿಸುತಿಪ್ಪ ಸಂಕಟಕಾಱದಿಳೆಯೊಳು ದೊಪ್ಪದೊಪ್ಪನೆ ಕೆಡೆದು ಹೊರಳುತ ಮಿಗೆ ನರಳುತಿರಲು (ಬಸಪು. ೪೯-೨೬) ; ಪಾತಕದ್ರೋಹಿಗಳ ಮುಂದಲೆಯ ಪಿಡಿದೆಳೆದುಕೊಂಡೊಯ್ದು ಕೈಕಾಲ ಸಂದುಗಳ ಬಿಡಿಸಿ ಕೊಱೆದಿಱೆದರಿದು ಬಾಧಿಸುವುದು (ಪಬಪು. ೩೬-೪೦); ರಮಣೀಯವಾದ ಆ ಗಿರಿಯನ್ನು ನೋಡಿ ರಾಮನ ಮನಸ್ಸನ್ನು ಆ ವ್ಯಥೆ ಬಾಧಿಸುವುದು ನಿಂತುಹೋಯಿತಂತೆ (ಸಮಾಕೋ. ೦೦೦). ೨. ಪೀಡಿಸು ; ಹಿಂಸೆಮಾಡು : ಸಾಧುಗೆ ಸಾಧು ಮಾಧೂ(ಧು)ರ್ಯ್ಯನ್ಗೆ(ಂಗೆ) ಮಾಧೂ(ಧು)ರ್ಯ್ಯಂ ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ (ಇಆ. X, ೬೦-೩; ೧ಸೆಯ ೫೫); ಹೆಱರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು (ಬಸಪ. ೦೦) ; ಬಾಧಿಸುವುದೀ ದೇಹಮಂ ನರೆ ತೆರೆಗಳಿನ್ನು (ಕೃಮಿಪಾ. ೦೦-೩೬). ೩. ನಿಗ್ರಹಗೊಳಿಸು ; ದಂಡಿಸು : ಸಾಧಿಸುವೊಡಮಸ್ತ್ರಚಯಮನಿನ್ನುಂ ತನುವಂ ಬಾಧಿಸು ತಪೋಗ್ನಿಯಿಂದಾ ರಾಧಿಸು ನೀಂ ಮಗನೆ ದುರಿತಹರನಂ ಹರನಂ (ಪಂಪಭಾ. ೬-೬).

[ಬಾಧೆ + — ಇಸು$_3$]

ಬಾಧುರ 'ಬಹಾದುರ್' ನೋ.

ಬಾಧೆ (ನಾ). ೧. ನೋವು ; ವೇದನೆ : "ಪೀಡಾ, ಬಾಧಾ . . . ಅಭೀಲಂ, ೯ ಸಾಮಾನ್ಯವಾಗಿ ದುಃಖದ ಹೆಸರುಗಳು" (ಸಿಟ್ಟಾಂತಿ. ೭೩). ೨. ಹಿಂಸೆ; ಕಾಟ ; ಕಿರುಕುಳ : ಇಂಚೆಯ ಪಸವಿನ ಬಱದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್ (ಪಂಪಭಾ. ೬-೩೦) ; ಜನವೆಲ್ಲ . . . ದೇಶದೊಳಗಾದ ಖಗಮೃಗದ ಬಾಧೆಯನು ಧರಣೀಶನೆನಿಸುವ ಹರಿಶ್ಚಂದ್ರರಾಯಂಗೆ ತಮ್ಮಾಸಱಳಿವಂತೆ ಬಿನ್ನೈಸುತ್ತ ಕೈಮುಗಿಯುತಿರ್ದರು (ಪಪಕಾ. ೩-೬೬); ಇನ್ನು ಕೆಲವರು ಇದು ಪಿಶಾಚಿಯ ಬಾಧೆಯೆಂದೂ ಹೇಳತೊಡಗಿದರು (ಕಾಲೂರ. ೦೪ ಕಥಾಸಾರ). ೩. ಅಪಾಯ ; ಆಪತ್ತು. ೪. ನಿಷೇಧ ; ನಿರೋಧ : "ಆಪತ್ತಿನೊಳು ನಿಷೇಧದೆ ಬಾಧೆಯೆಂದೆಂಬುದು" (ಮಂಗಶಾ. ೦೪೩-೨೩). ೫. ಅಡಚಣೆ ; ಅಡ್ಡಿ. ೬. [ನ್ಯಾಯಶಾ] ವಾದದಿಂದ ಖಂಡಿಸುವಿಕೆ ; ಆಕ್ಷೇಪಣೆ. [ಸಂ. ಬಾಧಾ]

ಬಾಧೆಬಡಿಸು (ಕ್ರಿ). ಸಂಕಟಪಡಿಸು ; ಹಿಂಸಿಸು : ಋಣವೆಂಬ ಸೂತಕವು ಬಹುಬಾಧೆಬಡಿಸುತಿದೆ ಗುಣನಿಧಿಯೆ ನೀ ಎನ್ನ ಕಡೆಹಾಯಿಸಯ್ಯ (ಪುರಂದ. ಧಾ. ೨-೨೦ ಸಂಧಿ). [ಬಾಧೆ + ಪಡಿಸು]

ಬಾಧ್ಯ$_1$ (ಗು). ೧. ನೊಂದ ; ವೇದನೆಗೊಳಗಾದ. ೨. ಪೀಡೆಗೊಳಗಾದ ; ಹಿಂಸೆಗೊಂಡ. ೩. ವಿರುದ್ಧವಾದ ; ಹೊಂದಿಕೆಯಾಗದ : ಪ್ರಕಟಂ ವಾರಿಧಿವೇಲೆ ವಾರ್ಧಿಗೆ ಜಲೌಘಸ್ಪರ್ಧೆಯೊಳ್ ಬಾಧ್ಯ ಬಾಧಕಭಾವಂ ನೆಗಟಲ್ಕೆ ನಿಲ್ವ ತೆಱದಿಂದೀ ಸೃಷ್ಟಿಗನ್ಯೋನ್ಯ ಸೈನಿಕ ಸಂಗ್ರಾಮದೆ ಬಾಧ್ಯಬಾಧಕತೆ ಪುಟ್ಟಲ್ ನಿಲ್ವೆನಾನಿಂತು ಸೃಷ್ಟಿ ಕರಂ ಪೆರ್ಚಿದೆ ದೇವ ತಾಳ್ದು ನಿಲಲಾಱಂ ತನ್ಮಹಾಭಾರಮಂ (ಜಗವಿ. ೦-೩೦). ೪. ಪ್ರತಿಭಟಿಸಲು ಯೋಗ್ಯವಾದ ; ವಿರೋಧಿಸಲು ತಕ್ಕುದಾದ. ೫. ಅಸಂಬದ್ಧವಾದ ; ಅಸಂಗತವಾದ. [ಸಂ.]

ಬಾಧ್ಯ$_2$ (ನಾ). ೧. (ಆಸ್ತಿಯ ಮೇಲಿರುವ) ಹಕ್ಕು. — ಸ್ವಾಮ್ಯ : ತಂದೆಯ ಆಸ್ತಿಯ ಮೇಲೆ ಮಗನಿಗೆ ಬಾಧ್ಯವುಂಟು (ಕೂಡಿ). ೨. ಕಟ್ಟು ; ಬಂಧನ ; ಸಂಬಂಧ : "ಬಧನಂ, ಬಧನೀಯಂ, ಬಧ್ಯಂ, ಬಾಧ್ಯಂ, ಈ ೪ ಕಟ್ಟು" (ಶಾಶಕ್ಕ. ೦೩೦). ೩. ಹಕ್ಕನ್ನು ಹೊಂದಿರುವ ವ್ಯಕ್ತಿ ; ಸ್ವಾಮ್ಯವನ್ನು ಪಡೆದಿರುವ ವ್ಯಕ್ತಿ : ಹ್ಯಾಗಾದರೂ ಹೆಣ್ಣುಮಕ್ಕಳು ನೆರೆಮನೆಗೆ ಬಾಧ್ಯರಾಗುವರು (ಕಥಾಮಂ. IV, ೬). ೪. ಹೊಣೆಗಾರಿಕೆಯನ್ನು ಹೊಂದಿದ ವ್ಯಕ್ತಿ ; ಜವಾಬ್ದಾರ : ಮಂಡಲೇಶ್ವರರಾದ ಶ್ರೀರಂಗರಾಯರು ನಮ್ಮನ್ನು ರಕ್ಷಿಸಲು ಬಾಧ್ಯರಾಗಿದ್ದಾರೆ (ಶ್ರೀರಾಯ. ೦೨೬). ೫. ಆಸ್ತಿ ; ಸ್ವತ್ತು : "ದಾಯ-ಬಾಧ್ಯ" (ಗಂಗಾಮ. ೦೬೩).

ಬಾಧ್ಯಪಡು = ಸಂಬಂಧಪಡು ; ನಂಟುತನವನ್ನು ಹೊಂದು : ಅಜಿಂಖಾನನೂ ಡಿಲ್ಲಿಯಲ್ಲಿಯೂ ಆಗ್ರಾದಲ್ಲಿಯೂ ಇದ್ದ ಉಮರಾಗಳೂ ಲುತ್ಪಉನ್ನೀಸೆಗೆ ಬಹಳ ಬಾಧ್ಯಪಟ್ಟವರಾಗಿದ್ದರು (ಕಥಾಕುಂ. ೬೬).

[< ಸಂ. ಬಾಂಧವ್ಯ ?./ ತಮಿ. ಪಾತ್ತಿಯಮ್; ಮಲ. ಬಾಧ್ಯಮ್; ತುಳು. ಬಾಧ್ಯ = ಸಂಬಂಧಿಸಿದ; ತೆಲು. ಬಾಧ್ಯಮು]

ಬಾಧ್ಯತನ (ನಾ). ಒಡೆತನ ; ಹಕ್ಕು; ಅಧಿಕಾರ : ಸ್ವಾಮ್ಯ = ಬಾಧ್ಯತನ, ಒಡೆಯತನ (ಗಂಗಾಮ. ೩೪೪). [ಬಾಧ್ಯ$_2$ + —ತನ]

ಬಾಧ್ಯತೆ (ನಾ). ೧. ಸಂಬಂಧ ; ನಂಟುತನ : ಈ ಬಾಧ್ಯತೆಯನ್ನು ಪಂಡಿತರು ಅನುಗ್ರಹಿಸಬೇಕು (ಶಾಂಕಲಾ. ೬೭). ೨. (ಆಸ್ತಿಯ ಮೇಲಿರುವ) ಹಕ್ಕು ; ಅಧಿಕಾರ : ರಾಜ್ಯದ ಮೇಲೆ ನ್ಯಾಯವಾಗಿದ್ದ ತನ್ನ ಬಾಧ್ಯತೆಯನ್ನು ಸ್ಥಿರಪಡಿಸಿಕೊಂಡನೆಂದೂ ವ್ಯಕ್ತವಾಗುತ್ತದೆ (ಕರ್ಣಾಲಿ. ೦೩೬); ಲಾಜೆಯನ್ನು ಎತ್ತಿ ವಧುಗಳ ಬೊಗಸೆಗಳಿಗೆ ತುಂಬುವ ಬಾಧ್ಯತೆ ವಧುಗಳ ಸೋದರರಿಗೆ ಮಾತ್ರ ಸೇರಿದ್ದು (ಶಾಂಕಲಾ. ೦೦೦). ೩. ಹಕ್ಕಿಗೆ ಒಳಗಾಗಿರುವುದು ; ಸ್ವಾಮ್ಯಕ್ಕೆ ಒಳಪಟ್ಟುದು : ಬಾಧ್ಯತೆಗೆ ಬಾಧ್ಯನಾದರೆ ಚೋದ್ಯವೇನು? (ಗಾದೆ). ೪. ಹೊಣೆಗಾರಿಕೆ; ಕರ್ತವ್ಯ : ಒಪ್ಪಂದಗಳು ಮತ್ತು ಇತರ ಅಂತರರಾಷ್ಟ್ರೀಯ ಕಾನೂನುಗಳಿಂದ ಉದ್ಭವಿಸಿದ ಬಾಧ್ಯತೆಗಳು(obligations) ತೃಪ್ತಿಕರವಾಗಿ

ಗೌರವಿಸಲ್ಪಡುವಂತಹ ವಾತಾವರಣವನ್ನು ಕಾಪಾಡಿಕೊಂಡು ಬರಬೇಕು (ಅಂತಸಂ. ೧೩). [ಬಾಧ್ಯ$_2$+ — ತ್ವ$_3$]

ಬಾಧ್ಯತ್ವ (ನಾ). ಕಳೆದುಕೊಳ್ಳುವಿಕೆ; ನಿರರ್ಥಕಗೊಳಿಸುವಿಕೆ : ಬಾಧ್ಯತ್ವ ವೆಂದರೆ ತಮ್ಮ ಶಕ್ತಿಯನ್ನು ಕಳೆದುಕೊಳ್ಳುವಿಕೆ, ಅಷ್ಟೆ (ಧ್ವನ್ಯಾಲೋ. ೦೬೯). [ಸಂ.]

ಬಾಧ್ಯಸ್ತ (ನಾ). ೧. ಹಕ್ಕನ್ನುಳ್ಳ ವ್ಯಕ್ತಿ ; ಅಧಿಕಾರವಿರುವ ವ್ಯಕ್ತಿ : ಗಂಡಸುಮಗ ಹುಟ್ಟಿದರೆ . . . ತಾನೂ ಸಕ್ಕರೆ ಹಂಚಲು ಬಾಧ್ಯಸ್ತನಲ್ಲವೇ ? (ಗಂಪಾಹು. ೨೩೬). ೨. ಹಕ್ಕುದಾರ; ಒಡೆಯ : (ಕ). ೩. (ಯಾವುದಾದರೂ ಒಂದು ಕರ್ತವ್ಯವನ್ನು ಮಾಡಲು) ನಿಯೋಜಿತನಾದವನು : ಹೊಣೆಗಾರ: (ಕ). 'ಬಾಧ್ಯಸ್ಥ' ಪರಾ. [ಬಾಧ್ಯ$_2$+ — ಸ್ತ]

ಬಾಧ್ಯಸ್ಥ (ನಾ). ಹಕ್ಕುದಾರ ; ಉತ್ತರಾಧಿಕಾರಿ : ಚೊಚ್ಚಲ ಮಕ್ಕಳಾದ ಆಲ್ಬರ್ಟ ಎಡ್ವರ್ಡ ಎಂಬವರು ಚಕ್ರವರ್ತಿನಿಯವರ ಪಟ್ಟಕ್ಕೆ ಬಾಧ್ಯಸ್ಥರು (ಮುಂಶಿಯು. ೪-೫); ರಾಂಪುರದಲ್ಲಿ ದೂರದ ನೆಂಟರು, ಬಾಧ್ಯಸ್ಥರು ಇದ್ದಾರೆ ಅಂತ ಯಾರೋ ಹೇಳಿ ಇಲ್ಲಿಗೆ ಕಳಿಸಿದರಂತೆ (ಮರೀ. ೯೦). 'ಬಾಧ್ಯಸ್ತ' ಪರಾ. [ಬಾಧ್ಯ$_2$+ —ಸ್ಥ]

ಬಾನ್$_1$ (ಕ್ರಿ). ಮಡಕೆ, ಕುಡಿಕೆ ಮುಂತಾದುವುಗಳನ್ನು ಮಾಡು ; ಕುಂಬಾರನ ಕೆಲಸವನ್ನು ಮಾಡು : " ಬಾನ್-ಕುಲಾಲಕರಣೇ, ಆಕಾಶ, ಗೋಮಯಪಿಂಡಪುಂಜಯೋಃ (ಸಗಣಿಯ ಉಂಡೆಯ ರಾಶಿ) " (ಕಮರಾ); ತಾನಕ್ಕರೆಯಿನೊಪ್ಪಿ ಬಾಂದೊಡವೆಯೊಡೆವನೇ ಹಿಂಗಿಸಿ ಕಾಲಂ ? (ಗಿಇಪಂ. ೦೨೩-೪೩).

[ದೇ.॥ ತಮಿ. ಮಣ್ಣು, ಮನೈ=ಆಕಾರ ಕೊಡು ; ಮಲ. ಮನಯುಂ, ಮನಿಯುಂ ; ತೆಲು. ವಾನು ; ಪರ್ಜಿ. ವಾನ್]

ಬಾನ್$_2$, ಬಾಂ$_1$, ಬಾನು$_1$ (ನಾ). ೧. ಮಡಕೆ, ಕುಡಿಕೆ ಮುಂತಾದುವು : 'ಬಾನಿಗ' ಪರಾ. ೨. ಮಣ್ಣಿನ ಪಾತ್ರೆಗಳ ರಾಶಿ; ಮಡಕೆ, ಕುಡಿಕೆಗಳ ಒಟ್ಟಲು : (ಕ). ೩. (ಒಣಗಿದ) ಸಗಣಿಯ ರಾಶಿ ; ಬೆರಣಿಯ ರಾಶಿ : "ಬಾನ್—ಕುಲಾಲಕರಣೇ. ಆಕಾಶ, ಗೋಮಯ ಪಿಂಡಪುಂಜಯೋಃ (ಸಗಣಿಯ ಉಂಡೆಯ ರಾಶಿ)" (ಕಮರಾ). **ಬಾಂ$_1$** : ೧. 'ಬಾಂಬು$_1$' ಪರಾ. **ಬಾನು$_1$** : ೨. "ಸಗಣಿಪಿಂಡದ ಪುಂಜದಲ್ಲಿ ಯಾಕಾಶದೊಳ್ ಮಿಗೆ ಕುಂಬದೊಟ್ಟಲೊಳ್ ಬಾನು" (ಕಬ್ಬಿಮಂ. ೦೦೦). ೩. ಮೇಲಿನ 'ಶಬ್ದಮಂ' ಪ್ರಯೋಗವನ್ನು ನೋಡಿ. [<ಬಾನ್$_1$]

ಬಾನ್$_3$, ಬಾಂ$_2$, ಬಾನ$_2$, ಬಾನು$_3$ (ನಾ). ೧. ಆಕಾಶ ; ಗಗನ : "ಆಗಸ . . . ಮುಗಿಲ್ವಟ್ಟೆ, ಬಾನ್—ಈ ೬ ಆಕಾಶಂ" (ಕಕಾ. ೪೯-೯೦); ನಾರದನೆದ್ದು ನೋಡಿ ಬಾನೊಳ್ಕುಣಿದಾಡೆ ದೇವತತಿ ನೋಡೆ (ಶಾಂತಿಪು. ೩ ೬೯) ; ಆಗಳ್ ಬಾನತ್ತಣಿನರಬ್ಬಟ್ಟ ಸುರಿದತ್ತು ರಾಮನ ಸಿರದೊಳ್ (ಅಭಿನ. ೩೭-೨೦) ; ಬಾನಾಚೆಯಿಂ ವಿಶ್ವಸತ್ತ್ವ ತಾನಿಳಿದಿಳೆಗೆ ನಾನೆನುವ ಚೇತನದಿ ರೂಪುಗೊಂಡಿಹುದೋ ? (ಮುಂಖಳ. ೦೩೬). ೨. ಸ್ವರ್ಗ : 'ಬಾನಂದ'. 'ಬಾನಾಳ್ಕೆ' ಪರಾ. ೩. ಆಕಾಶದಿಂದ ಸುರಿಯುವ ಮಳೆ : 'ಬಾನಗೇಡು' ಪರಾ. **ಬಾಂ$_2$** : ೧. ಪೊಂಗಾಲಿ ಮಿಱುಗೆ ಪಱಯಿಗೆ ಬಾಂಗೆ ಪೆಡಂಮಗುಟ್ . . . ರಥಂಗಳ್ ಪರಿದುವು ಬಳಾಬ್ಧಿ ನಕ್ರಾಕೃತಿಯೊಳ್ (ಜಗವಿ. ೭-೬೨) ; ಜೋಡಿಸುವೆನೋ ತುರಗವಂ ತನ್ನ ತೇರ್ಗಂದು ಗಾಡದಿಂ ಬಾಂಗೆತ್ತಿಕೊಂಡೊಯ್ದದಿರನಬ್ಜಸಖಿಂ (ಕೃಷ್ಣಶಾ. ೪-೧೯) ; ಆಗಳಾಸುರುಳ್ವ ಬಾಂಗಿಟ್ಟಿನೀ ಮೊರೆಯಂ (ಗಿಇಪಂ. ೦೨೦-೨೪). ೨. 'ಬಾಂಬಸು', 'ಬಾಂಬೆಣ್' ಪರಾ. **ಬಾನ$_2$** : ೧. ಬಾನ ದೊಳಾಗಸವಟ್ಟಿಗರ್[ಶಾಶಾಂ. ಬಾನೊಳು ಸಗ್ಗವಟ್ಟಿಗ, ಬಾನೊಳಾಗಸ ವಟ್ಟಿಗ] ನೆಲದೊಳು ಮಾನವಬಲ ಕಿಕ್ಕಿಱಿದು ಸಾನುರಾಗದೊಳೆಯ್ದಿತು ಪುಂಡರೀಕಿಣಿಗಾ ನರನಾಥನೊಂದಾಗಿ (ಶ್ರೀಪಾಂ. ೦೩-೦೬) ; ಬಾನದಿಂದಿಳಿದು ಬಂದಾ ಬಾಲಭಾಸ್ಕರನೀ ನೆಲದೊಳು ನಡೆವಂತೆ (ಪ್ರಶಂಕ. ೨-೭೩) ; ಇಟ್ಟೆರಡಡಿಯಂ ಯತಿಗತಿ ಪುಟ್ಟದೆ ಬಾನಮನೊರಲ್ದು ನಿಟ್ಟಿಸಿ ಹಸಿರಿಂದಟ್ಟಿಸಿ ಹಲಗೆಯ ತೊಟ್ಟನೆ ಪಟ್ಟಿರಿಸುವ ಹೊಟ್ಟುಗಬ್ಬಿಗಂ ಕಬ್ಬಿಗನೇ (ಕೀಕಾ. ೬೦). **ಬಾನು$_3$** : ೧. ತನ್ನ ದಾಂಗುಡಿಯ ಗೊನೆ ಬಾನು ಮಣ್ಣೊಂದಾಗಿ ಒಂದಾಗಿ ಕೆಲವಾಗಿ ಇರುವ ಹರುಹಿನ ತುಂಬ . . . ಮಿಂಚಿತ್ತು ಒಂದೇ ಬಿಂಬ (ಪುಷ್ಪಕಾಂ. ೩೨-೩) ; ನಿನ್ನ ಬಾಳ ಬಾನಿನಲ್ಲಿ ಗುಡುಗು ಸಿಡಿಲುಗಳಷ್ಟೇ ಇಲ್ಲ ಇಂದ್ರಚಾಪವೂ ಇದೆ (ಕರ್ಣೋ. ೨-೦೬). ೨. ಬಾನ್ ಕೊಂಡ ಕೃಷ್ಣನ್, ನೆಲನೆಲ್ಲಮನ್ ಗೆಲ್ದು, ಬಾನುಮನ್ ಕೊಂಡ ಕೃಷ್ಣನ್ ! (ಹೊಂಗಳು. ೨೯-೦೦).

ಬಾನಗಣ್ಣು=ಸೂರ್ಯ: ಬಾನಗಣ್ಣನ ಬಿಸಿಯ ಹಸಿಯೂರದಲೆ ಕುಡಿದು ಬೆಳಕ ನೀರಡಿಕೆಯನು ಹುಟ್ಟಿಸುವದು (ಸೂರ್ಯಶಾ. ೦-೩). **ಬಾನ ಜೊಡರ್** =ಆಕಾಶದ ದೀಪ ; ಸೂರ್ಯ ; "ನೇಸಱ್" (ಶಕುನಿ. ೬. I. ೯). **ಬಾನದರ್** = ದೇವತೆಗಳು ; ಸುರರು : ಬಾನದರುಳ್ಳೆಯೆಂದು ಪೊಗಳೆ ಪೆರ್ಬನವನು ಕೃಶಾನು ಪೊಕ್ಕಂತೆ ಸಂಹರಿಸಿದಂ ಸತ್ಯಸಂಧಾನಿ ಗಾಂಗೇಯಂ (ರಕ್ಷಶಾ. ೪-೬). **ಬಾನವರ್**=ಬಾನದರ್ : ಬಾನವರೊರ್ಮೆ ಕಾಡಲ್ ಮನೆಯನ್, ತಪ್ಪದೆ ಕಾಡುಗುಮದಱಾ ಕಾಟವ್ (ಅಂತಿಗೂ. ೨೬-೩೫); ಸಟೆಯ ಕರೆದಪರ್ ಬಾನವರ್, ಪ್ರಮಿತ್ಯೂಸ್ ಮುನ್ನೆಣಿಕೆಯುಳ್ಳವನ್ ಎಂದು (ಪಾಪ್ರಶ್ನ. ೬.೦೦೬). **ಬಾನುದ್ದಂ**=ಆಕಾಶದ ವರೆಗಿರುವ ಎತ್ತರ; ಆಕಾಶದಷ್ಟು ಉದ್ದ : ಬಾನುದ್ದಂ ; ಏನಾಯ್ತು (ಕಸುದ. ೬೯ ಪ್ರಯೋ); ಬಾನುದ್ದಂಬರವೊಗೆದಂದೇನೆಸೆದುದು ರತ್ನವಪ್ರಂ (ಪುಷ್ಪಾಸ್ರ. ೦೦-೨೫); ತಣಿವೀವುದು ಬಾನುದ್ದಮುಪ್ಪ ಪೇರೊಡಲವರ್ಗಂ (ಶಶ್ರಾಮ. ೫೯೨ ಪ್ರಾಪ್ರಾ). **ಬಾನುದ್ದಮಾಗು**=(ಆಲಂ) ಅತಿಯಾಗಿ ಗರ್ವಿಸು.— ಅಹಂಕಾರಪಡು : ಆನುಂ ಬುಧರೊಡನೆ ನೃಪಾಸ್ಥಾನದೊಳಿರ್ದಪ್ಪೆನೆಂದು ಕಾಕವಿಕದಂಬಂ ಬಾನುದ್ದಮಪ್ಪುದೇಕುದ್ಯಾನದೊಳೊಡನಿರವೆ ಕಾಗೆಯುಂ ಕೋಗಿಲೆಯುಂ (ಲೀಲಾವ. ೦-೨೬). [ದೇ.॥ ತಮಿ. ಮಲ. ವಾನ್, ವಾನಮ್ ; ತುಳು. ಕೊಡ. ಬಾನ, ಬಾಣ ; ತೆಲು. ಕೋಲಾ. ನಾಯ್ಕಿ. ವಾನ ; ಕೋತ. ವಾನ್ಮ್ ; ಪರ್ಜಿ. ವಾನಿ]

ಬಾನ$_1$ ' ಪಾನೆ ' ನೋ.

ಬಾನ$_2$ ' ಬಾನ್$_3$ ' ನೋ.

ಬಾನಂಗುಳಿಗೆ (ನಾ). (ಒಣಗಿದ) ಸಗಣಿಯ ಉಂಡೆ ; ಬೆರಣಿ : ನಕಾರಕ್ಕೆ — ಮಿಾನಂಬುಬು, ಬಾನಂಗುಳಿಗೆ (ಕಸುದ. ೦೭೨ ಪ್ರಯೋ). ☞ 'ಶಮದ. ನ. ೧೮೩ ಅಡಿಟಿ' ಯಲ್ಲಿ ಈ ಶಬ್ದಕ್ಕೆ 'ನಕ್ಷತ್ರ' ಎಂಬ ಅರ್ಥವನ್ನು ಕೊಡಲಾಗಿದೆ. 'ಬಾಂಗುಳಿಗೆ' ಪರಾ. [<ಬಾನ್$_3$+ಗುಳಿಗೆ$_1$]

ಬಾನಂಗುಟಿ$_1$ 'ಬಾಂಗುಟಿ' ನೋ.

ಬಾನಂಗುಟಿ$_2$ (ನಾ). (?) : ಪುಟ್ಟ ಬಾಯ್ ಬೇಕರಿಯೋದಂತಿರ್ದ ಬಾನಂಗುಟಿ[ಶಾಶಾಂ. ಬಾನಂಗುಳಿ, ಬೆನ್ನಂಗುಳಿ] ಗಿಟಿಗಿಟಿಜಂತ್ರಂಬೊಲಾಗಿರ್ದ ಮೈ ಮೆಯ್ಸುರಿ ಚಿದ್ರೂಪಕ್ಕೆ ಪಕ್ಕಾಗಿರೆ ಚರಿಗೆಗೊಡಲ್ಬಂದ ನೊರ್ವಂ ಮುನೀಂದ್ರಂ (ಅರ್ಧನೇ. ೭-೨); ☞ "ಇಲ್ಲಿ ಬರುವ ಬಾನಂಗುಳಿ ಎಂಬುದು ಮೈಯ ಒಂದು ಭಾಗವಿರಂವಂತೆ ತೋರುತ್ತದೆ" (ಪಂಪದೀ. ೪೯೦). [?]

ಬಾನಂಗುಟಿಗೆ ? (?). (?) : ತಾನುಂ ಹಿಡಿಂಬೆಯುಂ . . . ಕೂಕಿಱಿದುಂ ತೇಗಿಯುಂ ಪಸಿಗೆವರಿದುಂ ಬವಳಿವರಿದುಂ ಬಾನಂ[ಶಾಶಾಂ. ಸಂ] ಗುಟಿಗೆವಱಿದುಂ ಸೂಟ್ಟರಿದುಮಾಡುವಾಗಳುಬಯಬಲಂಗಳ್ ಬೆಕ್ಕಸಂ ಬಟ್ಟು ನೋಡಿ (ಪಂಪಶಾ. ೦೨-೦೫೬ ಪ) ; " ಬಾಸಂಗುಟಿಗೆ — ಒಂದು

ಬಗೆಯ ನಡಿಗೆ " (ಪಂಪಾ. ಕೋಕ) ; " ಬಾನಂಗುಳಿಗೆವರಿದುಂ–ನಕ್ಷತ್ರ ಮಂಡಲಕ್ಕೆ ನೆಗೆದೂ" (ಪಂಪರೀ. ೪೮೮).

ಬಾನಂಚು (ನಾ). ಭೂಮಿಯೂ ಆಕಾಶವೂ ಸೇರುವಂತೆ ಕಾಣುವ ಭಾಗ : ಕ್ಷಿತಿಜ ; ದಿಗಂತ : ಕಣ್ಣು ತುಂಬುವ ಹೋರೆ ಬಾನಂಚಿಗೆ (ಪಂಪಾ. ೨೧ ೦೪). [ಬಾನ್$_3$ + ಅಂಚು$_2$]

ಬಾನಂದ (ನಾ). ಸ್ವರ್ಗದ ಸೊಬಗು; ದೇವಲೋಕದ ಮನೋಹರತೆ: ಬಾನಂದವನು ಸವಿದ ಸುಖದ ಯದುಭೂಪರ್ . . . ಕಲೆತೆಲ್ಲ ಬಂದರ್ (ಹೊಂಗಳು. ೩೦-೧೨). [ಬಾನ್$_3$ + ಅಂದ]

ಬಾನಕ್ಕಿ ' ಬಾನ್ವಕ್ಕಿ ' ನೋ.

ಬಾನಗಡಿ ' ಭಾನಗಡಿ ' ನೋ.

ಬಾನಗಿತ್ತಿ ' ಬೋನಗಿತ್ತಿ ' ನೋ.

ಬಾನಗೇಡು (ನಾ). ಆಕಾಶದಿಂದ ಸುರಿಯುವ ಮಳೆಯಿಂದ ಉಂಟಾಗುವ ತೊಂದರೆ; ಅತಿವೃಷ್ಟಿಯಿಂದಾಗುವ ಕೆಡುಕು: ಆ ಮಂಡಚನುಂ ಬಾನಗೇಡು ಬಱಗೇಡು ಎಂನದೆ (ಸೌಇಎ. ೦೯೩೨, ಉಡುಪಿ. ೩೦೮ ೨೨; 1293); ವರುಷಂಪ್ರತಿ ಬಾನಗೇಡು ಬಱಗೇಡುಯೆಂನದೆ ೧೨ ಮುಡಿ ಅಕ್ಕಿಯನೂ . . . ನಡಸಿ ಬಹರು (ಸೌಇಎ. IX – ii, ೪೪೪-೩೩ ; 1434).

[ಬಾನ$_2$ (<ಬಾನ್$_3$) + ಕೇಡು]

ಬಾನಲ್ (ನಾ). ೧. ಧಾರೆ; ಪ್ರವಾಹ : ಪೊದಟ್ಟ ಕಣ್ಣನಿಯ ಬಾನಲ ತಣ್ಣಸದೊಳ್ ಪಗಿಲ್ತು ಪಾವಸೆಗೊಳೆ ಕಾರ ತಂದಲೊಳಗುಂದಲೆಯಾಗಿರೆ ನಟ್ಟು ಸೋರ್ವ ಪಾಟ್ಟಸದಿಯ ಪೆಣ್ಣ ಜೋಹದವೊಲೊಪ್ಪಿದಳೊರ್ವ ಳನಂಗರಾಗದಿಂ (ಶಾಂತಿಪು. ೯-೮೯); ಕಣ್ಣೀರ ಬಾನಲ್ಗಳಿಂ ಬಸಿವಾಸ್ಯಂ . . . ಪಿಸುಣಾಡಿತ್ತಸಮಾಸ್ತ್ರನಸ್ತ್ರಹತಿಯಂ ತತ್ಕಾಮಿನೀರೂಪಕಂ (ಲೀಲಾವ. ೪-೦೪೩) ; ಕಪೋಲದೊಳ್ ಬಳೆಯಿಸೆ ಬಾನಲಂ ಸುರಿವ ಬಾಷ್ಪಜಳಂ ಕರುಣಾರ್ದ್ರಹಾರವಂ ಬಳೆಯಿಸೆ ಬಾಯ ಬತ್ತುಗೆಯನಿಂತೆರ್ದೆಗೆಟ್ಟಳುತುಂ . . . ಬಿಟ್ಟಳಂದಜಿತಸೇನೆ ನೃಪಾಲಪದಾಬ್ಜಮೂಲದೊಳ್ (ಪಂಪ್ರಪು. ೩-೦೦). ೨. ನಿಂತ ನೀರು; ಕುಂಟೆ; ಬೆಂಚೆ : ನಾನಲ ಬಾನಲ ನೀರಂ ಮಿನೊಲ್ಗುಂ ರಾಜಹಂಸನೊಲ್ಗುಮೆ (ಪುಲ್ಲಪು. ೦೩-೦೬೩); ಮೆಳೆಯುಮಂ ನಾನಲುಮಂ ಬಾನಲುಮಂ ಸಡಿಂಬಮನಿಡಿಂಬಮಂ . . . ಬಳ್ಳಿಯುಮಂ ಕಳ್ಳಿಯುಮಂ ಕಳೆದು ಪೋಗಿ (ಲೀಲಾವ. ೬-೦೬ ಪ). ೩. (ಕಣ್ಣೀರು, ಬೆವರು ಇತ್ಯಾದಿಗಳ ತೇವದಿಂದ) ಕದಡಿರುವ ಸ್ಥಿತಿ ; ಮಸುಕಾಗಿರುವಿಕೆ : "ಬಾನಲೆನೆ [ಪಾಶಾಂ. ಬಾಸುಳೆನೆ] ಮಸುಳಿದುದುಂ" (ಸಕುಪಿ. ೬೦) ; ಉಣ್ಮೆ ಬೆಮರ್ ನಸುಬಾನಶಾದ ಬೊಟ್ಟೆಂಬಿವು ಕೂಟದೊಂದು ಸವಿಯಂ ಪಿಸುಣಾಡುವುವೀ ಲತಾಂಗಿಯಾ (ಪಂಪ್ರಪು. ೯-೭೨) ; ತಾಱುಂಬಟಿಯೆಟ್ಟ ಚುಂಚುಬೆಮರಿಂ ಕಡೆಗೆನ್ನೆಯ ಬಾನಲಾದ ಬೊಟ್ಟು (ಪಸುರ. ೦೬೨ ಪ್ರಯೋ) ; ಚಿತ್ತಭ್ರಮಣದ ಮಂಕಿನಿಂದ ಬಾನಲಾಗಿ, ರಣಧೀರನಿಗೆ ಅನಿಮಿಷಾಕ್ಷಿಯಾಗಿರುವಳು (ಪುಂಕ್ರಪ. ೦೪೩-೭). 'ಬಾನಲ್ಗೊಳ್'. 'ಬಾನಲ್ಪೊರೆ' ಪರಾ.

[ದೇ.ಪ ತಮಿ. ಪಾಣಲ್ = ವ್ಯವಸಾಯದ ಭೂಮಿ, ಸಮುದ್ರ. ಒಂದು ಬಗೆಯ ಸಸ್ಯ ; ಮಲ. ಪಾಣಲ್ = ಒಂದು ಬಗೆಯ ಸಸ್ಯ]

ಬಾನಲೆ (ಕ್ರಿ). ಆಕಾಶದಲ್ಲಿ ತಿರುಗು.–ಸುತ್ತಾಡು: ಗಾಳಿ ಬಾನಲೆಯುತಿದೆ ದೆಸೆಗೆಟ್ಟ ತಿರುಕನಂತೆ (ಗೋಕುಪಿ. ೦-೦೩).

ಬಾನಲೆವರ್ – ಆಕಾಶದಲ್ಲಿ ಸಂಚರಿಸುವವರು ; ದೇವತೆಗಳು : ಬನ್ನಿ, ಓ ಬಾನಲೆವರೆ, ನಮ್ಮ ತೋಟಕೆ, ನಂದನವನೆ ಮಿಾರಿಸುವೀ ದಿವ್ಯ ನೋಟಕೆ (ಅಪಿಕೇ. ೨೦-೦). [ಬಾನ್$_3$ + ಅಲೆ$_1$]

ಬಾನಲ್ಗೊಳ್ (ಕ್ರಿ). ಮಸುಕಾಗು ; ಕಾಂತಿಹೀನವಾಗು : ಬೆಳ್ಳೇಱಿ ಬಾನಲ್ಗೊಂಡ ವದನಮಂಡಲಮುಂ ... ಜಡತೆಗೆಡೆಯಾದ ಯಾನಮುಂ ಬೆರಸು ಮೆಲ್ಲನಲ್ಲಿಗೆ ವಂದು (ಕುಸುವಾ. ೦೩-೪೬ ಪ). [ಬಾನಲ್ + ಕೊಳ್$_1$]

ಬಾನಲ್ಪೊರೆ (ಕ್ರಿ). (ಕಣ್ಣೀರಿನ) ಧಾರೆಯಿಂದ ಕೂಡಿಕೊಳ್ಳು : ವ್ಯಸ್ತ ಭೃಂಗಾಳಕಂ ಪ್ರಸ್ಪಳಿತೋದ್ಯದ್ವೇಣಿ ಬಾನಲ್ಪೊರೆದಮಳಕಪೋಳ[ಸ್ಥಳಂ] . . . ಕಣ್ಗೊಳೆ ತಳಿರ್ವಸೆಯೊಳ್ಕಾಂತೆಯಂತಿರ್ದಳಾಗಳ್ (ಶಾಂತೀಶ್ವ. ೦೦ ೬೯). [ಬಾನಲ್ + ಪೊರೆ$_2$]

ಬಾನಲ್ವರಿ (ಕ್ರಿ). ಧಾರೆಯಾಗಿ ಸುರಿ. – ಹರಿ : ಬಲ್ವೆಣನುರ್ಚಿ ಕೋಡೊಳಿರೆ ನೆತ್ತರುರೋಮಣಿಯಿಂ ನೆಲಕ್ಕೆ ಬಾನಲ್ವರಿವನ್ನೆಗಂ ಪ್ರಹತ ದಿಂಡಿಱಿದೆತ್ತಿದೊಡಗ್ರಹಸ್ತದೊಳ್ (ಕಾವ್ಯಾವ. ೬೮); ಕಣ್ಣೀರೆ ಬಾನಲ್ವರಿದು ಬೆಳಪ ಮೈ ಮೈಯ ಸಂತಾಪದಿಂ ಬಾಡುವ ಪಕ್ಕಂ (ಜಗಂ. ೦೦-೬) ; ಆ ನುಡಿಗೇಳುತಾನಂದಾಶ್ರು ಕಣ್ಣೊಳು ಬಾನಲ್ವರಿದುದು (ಕುರಾಪಾಂ. ೩೬-೪೦).

[ಬಾನಲ್ + ಪರಿ$_2$]

ಬಾನಳ್ಳಿ (ನಾ). ಒಂದು ಹಳ್ಳಿಯ ಹೆಸರು : ಬಾನಳ್ಳಿಯ ಬನ್ನಿಯಮ್ಮ ಸೆಟ್ಟಿಯ ಮಗ ಪೆಮ್ಮಣ್ಣ (ಎಕ. IV(R), ಪಾಮರಾ. ೦೦೩-೪ ; 10ನೆಯ ಶತ).

[? + ಹಳ್ಳಿ (<ಪಳ್ಳಿ$_1$)]

ಬಾನಾಡಿ (ನಾ). ಆಕಾಶವನ್ನು ಮುಟ್ಟುವಂತೆ ಕಾಣುವಷ್ಟು ಎತ್ತರಕ್ಕೆ ಹಾರಾಡುವ ಒಂದು ಬಗೆಯ ಪಕ್ಷಿ ; ಟಿಟ್ಟಿಭ : "ಬಾನಾಡಿಯೆಂದು ಟಿಟ್ಟಿಭಂ" (ಕಪಾ. ೩೦-೧೭) ; ಶುಕಂ ಬಾನಾಡಿ . . . ರತ್ನಖಗಮಿರ್ಕುಂ ತದ್ವನಾಗೌಘದೊಳ್ (ರಾಜಶೇ. ೩-೩೯) ; ಈ ದೃಷ್ಟಿಯಿಂದ ಪೆಲ್ಲಿ ಕವಿಯ ಬಾನಾಡಿ (Skylark) ಒಂದು ಹಕ್ಕಿ ಮಾತ್ರವಲ್ಲ ; ಅದೊಂದು ಚೈತನ್ಯ (ಸೌಂದಸ. ೩೩). [ಬಾನ್$_3$ + –ಆಡಿ$_1$]

ಬಾನಾವರ (ನಾ). ಒಂದು ಬಗೆಯ ಸಸ್ಯ: ಬಾನಾವರ, ನೀರುಸಲ್ಲೆ, ಹನಕೆ (ಪ್ರಾಸಿಗಿ. ೩೯-೭೭೩). [?]

ಬಾನಾಳ್ಕೆ (ನಾ). ಸ್ವರ್ಗದ ಆಳ್ವಿಕೆ.– ರಾಜ್ಯಭಾರ : ಸರ್ವಜೀವಂಗಳುಂ ಮುಕ್ತಿಯಂ ಕಾಣ್ಗೆ . . . ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ (ಹೊಂಗಳು. ೩೮-೨೦). [ಬಾನ್$_3$ + ಆಳ್ಕೆ]

ಬಾನಿ$_1$ 'ಪಾನೆ' ನೋ.

ಬಾನಿ$_2$, ಭಾನೆ (ನಾ). ಗಾಯನದ ರೀತಿ.–ಪದ್ಧತಿ : ಆ ರಾಗವನ್ನು ಹಾಗೆ ಹಾಡಬಹುದೆಂದು ಅವನು ತಿಳಿದಿರಲಿಲ್ಲ. ಆ 'ಬಾನಿ' ಅವನಿಗೆ ತುಂಬ ಹಿಡಿಸಿತ್ತು (ರಾಗಿಜಿ. ೦೩೬). **ಭಾನೆ** : ನಿಮ್ಮ ಭಾನೆ ನೋಡಿದರೆ ನಿಮಗೆ ಕರ್ಣಾಟಕಸಂಗೀತ ಚೆನ್ನಾಗಿ ಬರುತ್ತೆ ಎಂದು ಕಾಣುತ್ತೆ (ರಾಪಾಸಿ. ೯೦).

[←ಹಿಂ. ಬಾನಾ ; ಮರಾ. ಬಾಣೇ]

ಬಾನಿಗ (ನಾ). ಮಡಕೆಯನ್ನು ಮಾಡುವವನು ; ಕುಂಬಾರ : ನಾಗಪಣ್ಡಿತರ ಮಕ್ಕಳು ಮಲ್ಲಪನವರು ಕಾಳಿಭಕ್ತನ ಮಕಳು ಮಾರಹಳಿ ಬಾನಿಗ ಕಾಲಭಕ್ತಗೆ . . . ವಿಕ್ರಮಸಂವತ್ಸರದ ಕಾರ್ತಿಕ ಶು ೧ ಪರಿಯನ್ತರ × × × (ಎಕ. III, ಮಳವ. ೦೦೯-೦೯ ; 1338) ; ಒಳ್ಳೊರಿಗಂ, ಬಾನಿಗಂ, ಪಟ್ಟಣಿಗಂ (ಶಬ್ದಾಮ. ೪೦೯ ಪ್ರಯೋ). [ಬಾನ್$_2$ + – ಇಗ]

ಬಾನು$_1$ 'ಬಾನ್$_2$' ನೋ.

ಬಾನು$_2$ 'ಪಾನೆ' ನೋ.

ಬಾನು$_3$ 'ಬಾನ್$_3$' ನೋ.

ಬಾನುಲಿ (ನಾ). ೧. ಆಕಾಶದಲ್ಲಿ ಕೇಳಿ ಬರುವ ಶಬ್ದ : ಅಶರೀರವಾಣಿ: ನೀರಡಿಸಿದುದರಿಂದ . . . ಕೊಳದೊಳಗೆ ಕಾಲಿಟ್ಟನು, ಅಷ್ಟರಲ್ಲಿ ಒಂದು ಬಾನುಲಿಯು ಕೇಳಬಂದಿತು (ಯಕ್ಷಪ್ರ. ೨) ; ನನ್ನ ದೇಹದ ಬೂದಿಯೊಳಗೊಂದಿನಿತು ಗಂಗೆಯ ಸೇರಲಿ. ಅಲ್ಲ ಧಾರ್ಮಿಕನಂಬಿಕೆಯು ; ಅದು ನನ್ನ ಬಾಲ್ಯದ ಬಾನುಲಿ (ಪಂಪಾ. ೩೩-೨). ೨. ರೇಡಿಯೋ ; ಆಕಾಶವಾಣಿ : ಅದು ಸಂಗೀತಕಚೇರಿ ಇಲ್ಲವೆ ಬಾನುಲಿ ಇವುಗಳಿಂದ ಕೇಳಿ ಬರುವ ಸಂಗೀತವಲ್ಲ (ಪರಪ. ೩೦) ; ಬಾನುಲಿಯೇ ಕಂಪಿಸಿ ವಿಶ್ವವೆಲ್ಲ

ರ್ಕೊಂಪಿಸಿ ಏನನರ್ಥ ಏನನರ್ಥ ಎಂದು ಕೂಗೆ ಕೂಗಿತು (ಸೂರ್ಯನಾ. ೦೦-೯). ೩. ನಿಸ್ತಂತುವಾರ್ತಾಪ್ರಸರಣವನ್ನು ಮಾಡುವ ಕೇಂದ್ರ : ಆಕಾಶವಾಣಿನಿಲಯ ; ರೇಡಿಯೋಕೇಂದ್ರ : ಬಾನುಲಿ ಅಧಿ ಉಪಅಧಿಕಾರಿಗಳಿಗೆ ಮಾತಿಗೊಮ್ಮೆ ಕೈಮುಗಿದು ನಗಲು ಸಹ ಸವುಡಿಲ್ಲದಾಯಿತು (ಹುಕ್ಕುಹು. ೦೯) ; ಬಾನುಲಿಯಲ್ಲಿಯ ತನ್ನ ಕಾರ್ಯಕ್ರಮವನ್ನು ಮುಗಿಸಿಕೊಂಡು ಮರುದಿನ . . . ರಹೀಮ ಊರಲ್ಲಿದ್ದ (ಪಿರೀಕ್ಷೆ. ೬೩).

[ಬಾನ್$_3$ + ಉಲಿ$_2$]

ಬಾನುಲಿಕೇಂದ್ರ (ನಾ). = ಬಾನುಲಿ ೩ : ದೆಹಲಿಯ ಬಾನುಲಿಕೇಂದ್ರದೊಳಿರುವರು ಆ ರಾಮಕೃಷ್ಣನೆನುವವರು (ಇಂಜಾಪ. ೩೯-೬೦) ; ಬಾನುಲಿಕೇಂದ್ರದ ಮಂತ್ರಿಗಳಿಂದ ಹಿಡಿದು . . . ಪ್ರತಿಯೊಬ್ಬರಿಗೂ ಪತ್ರಗಳನ್ನು ತಂದ (ಹುಕ್ಕುಹು. ೦೭). [ಬಾನುಲಿ + ಕೇಂದ್ರ]

ಬಾನೆ 'ಪಾನೆ' ನೋ.

ಬಾನೆಡೆ (ನಾ). ಗಗನಸ್ಥಳ ; ಆಕಾಶ : ಎನ್ನೊಡೆಯನ ಬಲ್ಪಂ . . . ಬಾನೆಡೆಯೊಳ್ ಸುಱಿದಾಡುವರೇನಱಿಯರೆ (ಕಬ್ಬಿಕಾ. ೦೬೭) ; ಏನೆಂಬೆ ನತುಳಸಂತೋಷಮುಂ ರೋಷಮುಂ ಬಾನೆಡೆಗೆ ನೆಗೆವ ಬೊಬ್ಬಾಟಮುಂ ಘಾಟಮುಂ . . . ದೇವಾಸುರರೊಳೆಸೆದುದು (ಸಂಪು. ೪೩-೩೬).

[ಬಾನ್$_3$ + ಎಡೆ$_3$]

ಬಾನೆರೆಯ (ನಾ). ದೇವತೆಗಳ ಒಡೆಯ ; ದೇವರಾಜ : ಮಣಿಯುವೆನು ಮಾತಾಯಿ, ಬಾನೆರೆಯನೆರಗುವೆನು (ಪಡಿಪಾ. I, ೪೩೬).

[ಬಾನ್$_3$ + ಏರೆಯ (< ಎಱೆಯ)]

ಬಾನೊಡತಿ (ನಾ). ದೇವತೆ; ಅಪ್ಸರೆ : ಮುಡಿ ಮುಗಿಲ್ಕಣ್ಮಿಂಚುಗುರು ತಾರೆ ಮೊಗ ಸಸಿ ಬಡನಡುವಾಗಸವಾಗೆ ಕಡುರಯ್ಯಮಾದಳು ಯ್ಯಲೆಯೊಳೊರ್ವಳು ಬಾನೊಡತಿ[ಶಾಕಾಂ. ಲಿ]ಯಂತೆ (ಕುರಾಸಾಂ. ೨೮-೩೩).

[ಬಾನ್$_3$ + ಒಡತಿ]

ಬಾನೊಡಲ (ನಾ). ಆಕಾಶವೇ ದೇಹವಾಗುಳ್ಳವನು; ಸ್ವರೂಪರಹಿತ : ನುಡಿವುದು ಪುದ್ಗಲ ಕೇಳ್ವುದು ಪುದ್ಗಲ ಕಡೆಗೆ ಪುದ್ಗಲ ಸ್ನೇಹ ಕೋಪ ಜಡಿದಿವ ನೂಂಕಿ ನನ್ನೆದೆಯೊಳಿರಯ್ಯ ಬಾನೊಡಲಾ ಚಿದುಂಬರಪುರುಷ (ಕರಿಪ. ೪೬.೦೨೩). [ಬಾನ್$_3$ + ಒಡಲ್ + — ಅ$_7$]

ಬಾನ್ಕೆ (ನಾ). "ಕುಂಬಾರಿಕೆ" (ಪ್ರಶಂಕ) : ಬಾನ್ಕೆ, ಆನ್ಕೆ, ಸೀನ್ಕೆ (ಕಬ್ಬಾಸು. ೩೩೬ ಪ್ರಯೋ). [ಬಾನ್$_1$ + — ಕೆ]

ಬಾನ್ನವಿರ (ನಾ). ಆಕಾಶವೇ ಕೂದಲಾಗಿರುವವನು ; ವ್ಯೋಮಕೇಶ ; ಶಿವ : "ಎಣ್ಮಯ್ಯಂ . . . ಬಾನ್ನವಿರಂ, ದಪ್ಪಕವಗೆಯುಂ . . . ಅಯ್ಮೊಗಂ — ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೦-೪೭) ; ಬೆಳ್ಜಸಂದಳೆದೆಸೆದಿರ್ದ ಬಾನ್ನವಿರನೊಳ್ವರಿಜಂ ತಳೆದೊಪ್ಪಿ ತೋಱಿದಂ (ಶಾಶಂ. ೩-೯) ; ಬಾನ್ನವಿರನ ತಲೆಯನಡರ್ದುಂ ಪಾರ್ವತಿಗೆ ಸವತಿಯಾಗಿಯುಂ . . . ಪಾತಾಲದತ್ತಣ್ಗೆ ಪೋದ ತ್ರಿಪಥಗೆ ಕಾಣಿಸಿಕೊಂಡಳ್ (ರಾಮಾಶ್ವ. ೩೦-೦೦). [ಬಾನ್$_3$ + ನವಿರ್ + — ಅ$_7$]

ಬಾನ್ನಿಗಾರ್ಲಕುಪ್ಪೆ (ನಾ). ಒಂದು ಸ್ಥಳದ ಹೆಸರು : ಅನ್ತೆ ಬನ್ದು ಬಾನ್ನಿಗಾರ್ಲಕುಪ್ಪೆಯ ವಾಱೊಱ್ವೆಯ ಸನ್ದು ಪಾದರಿಯುಳ್ ಕೂಡಿತ್ತು (ಪ್ಯುಆರಿ. ೦೯೨೬,೦೦೬-೪೯ ; 726). [?]

ಬಾನ್ನೀಱೆ (ನಾ). ಸ್ವರ್ಗಲೋಕದ ಹೆಣ್ಣು ; ಅಪ್ಸರೆ : ಮಡದಿ ಬಾನ್ನೀಱೆಯೊರ್ವಳ್ ಚಂಚಲದೃಷ್ಟಿಯಿನತ್ತಮಿತ್ತಂ ನೋಟ್ಟಿಳ್ (ರಾಮಾಶ್ವ. ೦-೪). [ಬಾನ್$_3$ + ನೀಱೆ]

ಬಾನ್ನುಡಿ (ನಾ). = ಬಾನುಲಿ ೧ : "ಎಲೈ ರಾಯ . . . ಇವಳಂ ಮನೆಗುಯ್ದು ಮಗಳೆಂದೆ ಪಾಲಿಸು" ಎಂದು ಬಾನ್ನುಡಿಯೊಂದಾಮದು (ಅದ್ಭುತ. ೩೦-೨೬). [ಬಾನ್$_3$ + ನುಡಿ$_2$]

ಬಾನ್ಬಟ್ಟೆ, ಬಾಂಬಟ್ಟೆ (ನಾ). ಆಕಾಶದ ದಾರಿ ; ಅಂತರಿಕ್ಷಮಾರ್ಗ : ಗಿರಿಶನೊಡವೆರಸಿ ಗಿರಿಜಾತೆ ಬಾನ್ಬಟ್ಟೆಯೊಳು ಬರುತಲಿ (ಸೌಂದಪು. ೦೨-೩೮) ; ಬಾನ್‌ಬಟ್ಟೆಯಲೆವ ಬರ್ದಿಲರಾ ಚಾಚರೆಯೊಳೇಗಳುಂ ಕುಳಿತಿರ್ದ ಶಿಖರ ಗಾತ್ರದ ಪರ್ದುಮುದಿಯನಂ ಕಂಡದಕೆ 'ಶಕುನಿಶಿಲೆ' ವೆಸರಿಟ್ಟರನ್ವರ್ಥಮಂ (ಶ್ರೀರಾಮಾ. ೩೬೩-೩೮). **ಬಾಂಬಟ್ಟೆ** : ಇಂದಿರವಿಲ್ಲ ಪಾಂಗನೆನಸುಂ ಬಾಂಬಟ್ಟೆಯೊಳ್ ಬೀಱಿ ಕಣ್ಗೆತ್ತಂ ಸೋಲಮನೀವ ರತ್ನವಸರಂ ಚೆಲ್ವಾದುದಾ ಬೀದಿಯೊಳ್ (ಕಬ್ಬಿಕಾ. ೩೬) ; ಆಸಱ ತೊಲಗಿಪ ಜಲವುಂಟೆ ಬಾಂಬಟ್ಟೆಯೊಳು (ನಾಗಳು. ೦-೩೩). [ಬಾನ್$_3$ + ಬಟ್ಟೆ$_1$]

ಬಾನ್ಬರೆಪ (ನಾ). (ಆಲಂ) ವಿಧಿಲಿಖಿತ ; ದೈವಸಂಕಲ್ಪ : ಆ ಭಯಂಕರ ಗಗನಶಕುನಮಂ ನೋಡಿ, ದೊರೆ ದಶರಥಂ ತನ್ನ ಕೊನೆಗದೆ ಬಾನ್‌ಬರೆಪ ಮೆಂದು ಬಗೆದು . . . ಒರೆದನಿಂತುಟು (ಶ್ರೀರಾಮಾ. ೩೬-೭೬).

[ಬಾನ್$_3$ + ಬರೆಪ]

ಬಾನ್ಬೆಳಕು (ನಾ). ಆಕಾಶದ ಬೆಳಕು ; ಗಗನದ ಕಾಂತಿ : ಕಂಡರಾ ಬಿಡುಗಣ್ಣ ಬೆಳಕನ್, ಪೊಳದು ಪೊಳೆಯಿಸುತಿರ್ಪ ಬಿಳಿಯ ಬಾನ್‌ಬೆಳಕನ್ (ಹೊಂಗಳು. ೩೭-೦೨). [ಬಾನ್$_3$ + ಬೆಳಕ್ಕು$_2$ (<ಬೆಳಗ್ಕು$_2$)]

ಬಾನ್ಮಣಿ, ಬಾಮ್ಮಣಿ (ನಾ). ೧. ಸೂರ್ಯ : "ತಾವರೆಗೆಳೆಯಂ, ಪಗಲ ಬೊಜಂಗಂ . . . ಬಾನ್ಮಣಿ . . . ಗರಂಗಳಾಣ್ಮಂ — ಈ ೧೧ ಸೂರ್ಯನ ಪೆಸರ್" (ಕಶಸಾ. ೪೬-೨೬) ; "ಬೆಂಗದಿರಂ . . . ಬಾನ್ಮಣಿ ಪಿಂಗದೆ ತಾಂ ನೇಸಱಿಂದು ತಾವರೆಗೆಳೆಯಂ" (ಕವಿಕಂ. ೪೦). **ಬಾಮ್ಮಣಿ** : ೨. (ಬೇಡಿದುದನ್ನು ಕೊಡಬಲ್ಲುದೆಂದು ಭಾವಿಸಲಾದ) ಸ್ವರ್ಗಲೋಕದ ಒಂದು ರತ್ನ ; ಚಿಂತಾಮಣಿ : ಮದನನ ಚಾಗದೇಳ್ಗೆಯನ ಭೀಕ್ಷಿಸಿ ಬಾಮ್ಮರಮಂದು ನಾಡೆ ನಿಂದುದು ಬೆದರ್ದತ್ತು ಬಾಂಬಸು ಕರಂ ಮಿಗೆ ಬಾಮ್ಮಣಿ ಕಲ್ಲಿದೆಂದು ತೋರ್ದುದು ಜಗದಲ್ಲಿ (ಕಂದ್ರಕ್ಕು. ೦೩-೦೪೩).

ಬಾನ್ಮಣಿಗಣ್ಣ = ಸೂರ್ಯನನ್ನು ಕಣ್ಣಾಗುಳ್ಳವನು ; ಶಿವ : ಬಾನ್ಮಣಿಗಣ್ಣನು . . . ನೆಲದಳೆದನಣುಗಿಯಾಣ್ಮಂ ಸಿದ್ಧನಂಜೇಶ ರಕ್ಷಿಸುಗೆ ಬಿಡದೆಮ್ಮನು (ರಾಶಿಸ. ೦-೯). [ಬಾನ್$_3$ + ಮಣ್ಣಿ$_2$]

ಬಾನ್ಮೀನ್ (ನಾ). (ಆಕಾಶದ) ನಕ್ಷತ್ರ ; ತಾರೆ : ಬಾರ, ಓ ಬಾನ್ಮೀನ್ಗಳ ಮೇಟೀ ! (ಅಂತಿಗೊ. ೩೦-೦೦೬೬). [ಬಾನ್$_3$ + ಮೀನ್$_1$]

ಬಾನ್ಮೀನ (ನಾ). = ಬಾನ್ಮೀನ್ : ನನ್ನಲ್ಲಿ ಏನೊ ಮಿಸುಗುತ್ತಲಿಹುದು ಬಾನ್‌ಮೀನ ಮಿಣುಕುವಂತೆ (ಹೃದಸ. ೪-೮). [ಬಾನ್$_3$ + ಮೀನ]

ಬಾನ್ವಕ್ಕಿ, ಬಾನಕ್ಕಿ (ನಾ). ಒಂದು ಬಗೆಯ ಹಕ್ಕಿ ; ಬಾನಾಡಿ : ನರ್ತಿಪ ನವಿಲು ಕೊಂಡಾಡುವ ಬಾನ್ವಕ್ಕಿ ಪತಿಯ ಬೇಡುವ ಗಿಳಿವಿಂಡು ದೈನ್ಯದಿಂ ಬಿನ್ನಹ ಮಾಡುತಿರ್ದುವು ಮನ್ಮಥಗೆ (ಪೋಹಕ. ೩-೩೪). **ಬಾನಕ್ಕಿ** : ಬಾನಕ್ಕಿಯು ಬೇರೆ ತರದಿಂದ ತನ್ನ ಗೂಡು ಕಟ್ಟಿಕೊಳ್ಳುತ್ತದೆ (ಮುಂಬಯಿ. ೩-೦೦೯); ಸುಗ್ಗಿಯೆಡೆಗಯ್ದುವಾ ಬಾನಕ್ಕಿಯಂತೆ (ಗೊಲ್ಲೂಕಾ. ೪೯-೩೩೪). [ಬಾನ್$_3$ + ಪಕ್ಕಿ]

ಬಾಪು 'ಬಾಪ್ಪು' ನೋ.

ಬಾಪುರಿ, ಬಾಪೂರಿ, ಬಾಪ್ಪುರಿ, ಬಾಹುಪುರಿ, ಬಾಹುರಿ (ನಾ). ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ ; ಕೇಯೂರ : "ಬಾಪುರಿ (ಬಾಹುರಿ)–ಬಾಹುಪೂರ(–ಯ) = ಕೇಯೂರ" (ಕರ್ಣಕೋ. ೩೦) ; ಕಂಕೆಲ್ಲಿಯ ಕರ್ಣಪೂರಮದಿರ್ಮುತ್ತೆಯ ಬಾಪುರಿ ಮೆಱೆವ ಪೂವಿನ ಸಂತೆ ಕರಂ ಮನೋಹರಂ (ಸ್ವಪಸಿ. ೪-೬೬) ; ಅಳವಡಿಸಿ ತೋಳ ಬಾಪುರಿ ಬಂದಿ ಭುಜ ಕೀರ್ತಿಗಳನು (ಸವಪೋ. ೦೦-೨೫). **ಬಾಪೂರಿ** : ಗೌರವ್ಮ ಉಟ್ಟಿಹಳು ಭರಜರಿ ಹೊನ್ನ ಹಾರ ತೋಳಿಗೆ ಒಂಕಿ ಬಾಪೂರಿ (ಶಿದ್ಧಪು. ೦೯-೬೦) ; ಹರಡೇ ಕಂಕಣ ಕಮಲಾದೇವೀ ಒಂಕೀ ಬಾಪೂರೀ ನಿಟ್ಟಿನೊಳಗೇ ಕುಪುಸಾವೂ (ಹುಟ್ಟಿಹ. ೦೮೩). **ಬಾಪ್ಪುರಿ** : ಬಾಲೆಯ ಕಡಗ ಕಂಕಣ

ತೋರ ಬಾಪ್ಪುರಿ ಮೇಳೈಸಿರೆ ತನುವಿನೊಳು (ತರ್ಕಕೌ. ೭ ೭೭). **ಬಾಹುಪುರಿ** : ಪೊಳೆವ ರನ್ನದ ಬಾಹುಪುರಿ ಭುಜಕೀರ್ತಿ ತೋಳ್ವಳೆ . . . ಧರಿಸಿ ಕಳಿಪುವೆನು (ಗೀತಗೋ. ೭-೯) ; ವಜ್ರದ ಕಡಗಗಳಂ ರತ್ನಬಾಹುಪುರಿ ಉಂಗುರಗಳು . . . ತರಿಸಿ ಅವರನ್ನು ತಾನೇ ಅಲಂಕರಿಸಿ (ಮುಂಪ್ರಾಮಂ. ೦೦೯). **ಬಾಹುರಿ** : ರನ್ನಬಾಹುರಿಯು ಕರಮೆಸೆವ ಜಝ್ಝಣಿತಕಂಕಣ ಬೆರಳ ಮುದ್ರಿಕೆ ಚೆಳ್ಳುಗುರ ಸಿಂಗರವಿಡಾಯದೊಳ್ (ಆನಂರಾ. ೬ ೭-೧೯) ; ಬಿಂಕದೊಡ್ಯಾಣ ಬಾಹುರಿ ಪಿಲ್ಲಿ ಮಂಟಿಕೆ ಕುಂಕುಮಾಂಗಿಯು ಧರಿಸಿಪಳು (ಕಂದಕೂ. ೦೯೯). 'ಬಾಹುಪೂರಕ', 'ಬಾಹುಪೂರಯ' ಪರಾ.

[<ಸಂ. ಬಾಹುಪೂರ./ ತೆಲು. ಬಾಹುಪುರಿ]

ಬಾಪುರೆ 'ಬಾಪ್ಪುರೆ' ನೋ.

ಬಾಪೂರಿ 'ಬಾಪುರಿ' ನೋ.

ಬಾಪ್ಪು, ಬಾಪು, ಬಾರ್ಪು, ಭಾಪು, ಭಾಪ್ಪು (ಅ). ಶೌರ್ಯ, ಸಾಹಸಗಳನ್ನು ಕುರಿತು ಮೆಚ್ಚುಗೆ, ಸಂತೋಷ, ಅಭಿನಂದನೆ ಮುಂತಾದುವುಗಳನ್ನು ಸೂಚಿಸುವಾಗ ಬಳಸುವ ಒಂದು ಶಬ್ದ : ಪೊಗಳಲ್ ಬಾಪ್ಪಪ್ಪುಕೆಯ್ದಂ ನೃಪಗುಣಗಣಮಂ ರಟ್ಟಕಂದರ್ಪ್ಪದೆ ವಂ (ಎಇ. XIII, ೩೩೦:೬ ; ೪೧೮) ; ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗಟ್ಟಂ (ಪಂಪರಾ. ೨-೬೦) ; ಸ್ಥಿರನೇ ಬಾಪ್ಪಮರಾದ್ರಿಯಿಂದಧಿಕ ಗಭೀರನೆ ಬಾಪ್ಪು (ಮೃಆಂ. ೧೯೯೩, ೦೩-೪; 1170). **ಬಾಪು** : ಉತ್ತುಂಗಂ ಬಾಪೆಂದು ಧಾತ್ರಿ ಕೈಮುಗಿವಿನೆಗಂ ಉಪವಾಸದೊಳ್ನೆಗಟ್ಟಂ ಪ್ರೋಷ ಧೋಪವಾಸನೆಂಬ ನಾಲ್ಕನೆಯ ಶ್ರಾವಕನಕ್ಕುಂ (ಧರ್ಮಾಮೃ. ೩-೦೩೮) ; ಬಾಪು ಭಾಗ್ಯವೆ ನರಜನ್ಮದೊಳು ಬಂದು ಗುರುಕರುಣಮಂ ಹೊತ್ತು ಹರಕಿಂಕರನಾಗಿ ಶರಣರ ಬರವಂ ಪಡೆದೆಂ (ಬಸರ. ೬-೯೯). **ಬಾರ್ಪು** : ಆ ಶೇಷನಂ ತಾಂ ಹೆಡೆಯಿಂ ಬಾಲಂಬರಂ ಬಾಟ್ಟಮಮ ಮಲೆವರಾರ್ಗ್ಗೆಲ್ದಪಂ . . . ಏಕ್ಕಲಕ್ಷೋಣಿಪಾಳ (ಎಕ. VIII, ಸೊರಬ. ೦೩೯-೩೦ ; 1145). **ಭಾಪು** : ಒಬ್ಬರೊಬ್ಬರ ವಿಧಿಯನೊಮ್ಮಿಂಗೆ ಕೈಗೊಳ್ಳಾ ಉರ್ವೀಶ ಸೊಡ್ಡಳಾ ಭಾಪು ಭಾಪುರೆ (ಸರ್ವವ. ೧೬೩-೬೬೩) ; ಪೂತು ಸಾರಥಿ ಭಾಪು ಮಝುರೇ ಸೂತ ಧಿರುಧಿರು ಎನುತ ರಥಿಕವ್ರಾತಮಿಗೆ ಬೋಳೈಸಿಕೊಂಡರು ಹಯದ ವಾಘೆಗಳ (ಕುಪ್ಯಾಭೀ. ೪-೯೩); ದಶಾಸ್ಯನ ಪದವಿಘಾತಿಗೆ ಪೂತು ಮಝು ಭಾಪೆಂದುದಮರಗಣ (ತೊರರಾ. ೦-೦೩-೨೦). **ಭಾಪ್ಪು** : ಅಂಬರದೊಳ್ ನಿಂದು ಗಜಪ್ರಿಯಾಂಬರಚರರ್ ಜೀಯಯ್ಯ ಭಾಪ್ಪೆಂದು ಜೀಂಕರಿಪನ್ನಂ ವನದಂತಿ ಪೋರ್ವುದು ನಿಷಾದ್ಯಾರೂಢದಿಂ ಪೋರ್ವವೊಲ್ (ಶಾಂತಿಪು. ೨-೦೦೦); ಭಾಪ್ಪೆನೆ ಪಂಚಾಚರಣಂಗಳಿಂ . . . ದಯೆಗೆಯ್ಗೆ ಸೂರಿಗಳಶೇಷರ್ ನಮ್ಮೊಳಾ ಚಾರಮಂ (ಐಮದ. ೦-೩).

ಬಬಾಪ್ಪು, ಭಾಪುಭಾಪು, ಭಾಪ್ಪುಭಾಪ್ಪು (ದ್ವಿರುಕ್ತಿ): ವಂದಿಜನ ಕಲ್ಪಕುಜಾತನೆನಲ್ಕೆ ಸಾಲ್ದು ಲಕ್ಷ್ಮೀನಿಳಯಂ ಬಬಾಪ್ಪೆಸೆದನೀ ಕಲಿಸಿಂದರ ಬಾಚಿಭೂಮಿಪ (ಸೌಇಇ. IX-i, ೨೨೬-೨೯; 1132); ವಿಳಸದ್[ಉ] ಭೋಗಾವತಿಯೆನೆರೆ (ಸ)ಲೆ ಭೋಗಿಗಳಿಂ ಬಬಾಪ್ಪು ಮಾಳಿಗೆ ರಯ್ಯಂ (ಎಇ. XV. ೩೨೦-೩೩; 1172); ಅಭಿನವಭಂಗಿಯೊಳರಿಯಂ ವಿಭು ಮಡಿಪಿದೆ ಭಾಪುಭಾಪೆ ನುತ್ತುತ್ಸವದಿಂ ನಭದೊಳ್ ಮುನಿಪತಿ ನಾರದಂ . . . ಹರಿಗಿಂತೆಂದಂ (ಜಗಂ. ೩-೪೯); ಗಗನದಿ ಸುರರು ಕೊಂಡಾಡಿದರು ರಾವುತರರಸನಹುದೋ ಭಾಪುಭಾಪೆಂದುದು ಸಮಸ್ತಜನ (ನಳಚ. ೭-೬); ಸಂಗರರಂಗಭೂಮಿಯೊಳ್ಪರಿದುದು ಭಾಪ್ಪುಭಾಪ್ಪು ಮಝು ಭಾಪ್ಪೆನಲಂಣನ ಗಂಧವಾರಣಂ (ಎಕ. VIII, ಸಾಗರ. ೦೦೯-೨೭; 1079).

ಬಾಪ್ಪುರಿ 'ಬಾಪುರಿ' ನೋ.

ಬಾಪ್ಪುರೆ, ಬಾಪುರೆ, ಭಪ್ಪರೆ, ಭಾಪುರೆ (ಅ). ಶೌರ್ಯ, ಸಾಹಸಗಳನ್ನು ಕುರಿತು ಹೊಗಳುವಾಗ ಬಳಸುವ ಒಂದು ಕೊಂಡಾಟದ ನುಡಿ : ಬಾಪ್ಪುರೆ ಸಿಂಗಂ ಭಬ್ಯ(ವ್ಯ)ಸೇಬ್ಯ(ವ್ಯ)ಂ ಸು(ಶು)ಚಿ ಸು(ಶು)ಭ ಚರಿತಂ ಧಾತ್ರಿಯೊಳು ಪುಣ್ಯಪುಂಜ[ಂ] (ಇಆ. XVIII, ೩೯-೧೬; ೪೪೪); ನಾನಾವಿಷಯತತಿಗೆ . . . ತನ್ನುಣ್ಡಿಗೆಯೆನೆ ವಿದಿತಾಜ್ಞಾನ್ವಿತಂ ಮಾಡಿದಂ ಬಾಪ್ಪುರೆ ಪವ್ಮಾನಂದತೇಜಂ (ಸೌಇಇ. XI-i, ೦೦೬-೭ ; 1075); ಭಲಾ! ಭಲಾ! ಭಲಾ! ಬಾಪ್ಪುರೇ! (ಪಂಪ್ರಸ. ೯೩-೦೯). **ಬಾಪುರೆ** : ಬಾಪು[ಪಾಠಾಂ. ರ್ಪು]ರೆ ಲೋಕೋತ್ತರಮಾರ್ಹತವ್ರತಮದಂ ಬಣ್ಣಿಪ್ಪನೇವಣ್ಣಿಪಂ (ಸಮಪ. ೯-೭೦); ಶಿವ ಶಿವ ಮಹಾದೇವ ಬಾ[ಪಾಠಾಂ. ಭಾ]ಪುರೇ ಸೌಂದರಾ (ನುಬರ. ೦೭ ೦೯೩). **ಭಪ್ಪರೆ** : ಭಪ್ಪರೆ! ಎರಡು ಹೆಚ್ಚಿನ ಕಣ್ಣು ಉಪಯೋಗಿಸಿದ್ದಕ್ಕೂ ಸಾರ್ಥಕ ಆಯ್ತು (ಪಂಪುಟ. ೩೨); ಭಪ್ಪರೇ ವಿದ್ಯಾಪ್ರವೀಣ! (ರಂದವ. ೨೦೩). **ಭಾಪುರೆ** : ಭಾಪುರೇ ಕಾವ್ಯನಾಥಂ ಗಿರಿಜಾನಾಥಂ (ಗಿರಿಕ. ೧-೩೩); ಭಾಪುರೇ ಕೌರವಮಹಾರ್ಣವವೆನುತ ಮಕುಟವ ತೂಗಿದನು ಪಾರ್ಥ (ಕುಪ್ಯಾಕ. ೦೯-೩೯); ಸವ್ಯಾಪಸವ್ಯದಿ ಬಿಡದೆಸುವ ಚಾಪಗಾಱರ ಪೊಗಳ್ದರು ಭಾಪುರೆ ಮಝು ಭಾಪುರೆಯೆಂದು ಸಗ್ಗಿಗರು (ಪಂಪ್ರಸಾಂ. ೮-೯೧). 'ಬಾಪ್ಪು' ಪರಾ. [<ಬಾಪ್ಪು./ತೆಲು. ಬಾಪುರೆ, ಬಾಪುರೇ]

ಬಾಬಂದಿ (ನಾ). ಒಂದು ಬಗೆಯ ತೆರಿಗೆ: ಬಾಳ್ಗುಳಿಯೂರೊಡೆಯಂ ಪಶುಪತಿ ಧಟ್ಟಜ್ಗೆ ಬಾಬನ್ದಿಯ ಸಂಬನ್ಧದ ರಾಜದ್ರವ್ಯಮಾದುದೆಲ್ಲವಂ ಬಿಟ್ಟರ್ (ಸೌಇಇ. IX-i. ೬೬-೦೦; ಸು. ೪೦೦). [?]

ಬಾಬತ್ 'ಬಾಬತ್ತು' ನೋ.

ಬಾಬತು 'ಬಾಬತ್ತು' ನೋ.

ಬಾಬತ್ತು, ಬಾಬತ್, ಬಾಬತು (ನಾ). ವಿಷಯ ; ಸಂಗತಿ : ಇನ್ನೊಂದಷ್ಟು ಖರ್ಚಿನ ಬಾಬತ್ತಿದೆ (ಸಂಸ್ಕಾರ. ೦೨೩) ; ನಲ್ಲಿ ದೀಪ ಇವುಗಳ ಬಾಬತ್ತೆಲ್ಲಾ ನಿಮಗೇ ಸೇರಿದ್ದು (ರಂಟಿರ. ೯೨). **ಬಾಬತ್** : ಮೊದಲು ಈ ಬಾಡಿಗೆ ಬಾಬತ್ ಫೈಸಲ್ ಮಾಡಿ (ರಂಟಿರ. ೩). **ಬಾಬತು** : ಫಸಲಿನ ಮಾರಾಟದಿಂದ ಸಿಗುತ್ತಿದ್ದ ದ್ರವ್ಯ ಇತರ ಬಾಬತುಗಳಿಗೆ ವ್ಯಯವಾಯಿತು (ಶಾಸಗಿ. ೩೨); ನಿನ್ನ ಮುಖದ ಗೆಲವು ನೋಡಿದರೆ ಅದೇನೋ ಭಾರೀ ಬಾಬತೇ ಇದ್ದಾಗಿದೆ (ನಡೆವಾ. I, ೩೩೩).

[←ಅರ. ಪಾರ. ಹಿಂ. ಬಾಬತ್ ; ಮರಾ. ಬಾಬತ್, ಬಾಬದ್]

ಬಾಬಯ್ಯ (ನಾ). ಅಂಗೈ ಅಥವಾ ಪಂಜದ ಆಕಾರದಲ್ಲಿರುವ ಒಂದು ಪ್ರತೀಕ ; P "ಮಧ್ಯಇರಾನ್ ಮತ್ತು ಮೆಸೊಪೊಟೇಮಿಯವನ್ನು ಆಳಿದ ಬುವಯ್‌ಹಿ ಸಂತತಿಯವರು ಅಲಿಸಂತತಿಗೆ ಭಕ್ತಿಯಿಂದ ನಡೆದುಕೊಂಡು ಕರ್ಬಲದ ದುರಂತಪ್ರಕರಣದ ನೆನಪಿಗಾಗಿ ಕೂಟ ಕೂಡುವುದಕ್ಕೆ ಪ್ರೋತ್ಸಾಹ ಕೊಟ್ಟರು . . . ಇದೇ ರೀತಿ ಇಂಡಿಯದಲ್ಲೂ ವರ್ಷಂಪ್ರತಿ ಕೂಟಗಳು ಏರ್ಪಟ್ಟವು. ಆದರೆ, ಶೋಕಮೂಲವಾದ ಈ ಕೂಟಗಳು ಬರಬರುತ್ತ, ಇಂಡಿಯದಲ್ಲಿ ಉತ್ಸವಸಂದರ್ಭವಾಗಿ ಪರಿಣಮಿಸಿಬಿಟ್ಟಿವೆ. ಆದರೆ, ಹುಲಿಯ ವೇಷ ಕರ್ಬಲದಲ್ಲಿ ಸತ್ತು ಕೆಡೆದ ವೀರರ ದೇಹವನ್ನು ಕಾದುವೆಂದು ಹೇಳುವ ಹುಲಿಗಳಿಗೂ, ಅಲಾವಹ್ ಅಥವಾ ಹೊಂಡ ಪಾಳಯದ ಹಿಂಭಾಗದಲ್ಲಿ ಹಾಕಿದ್ದ ಬೆಂಕಿಗೂ, ಪಂಜ ಅಥವಾ ಕೈ ಆಕಾರದ ಗುಡಿ (ಬಾವುಟ) ಮಹಮ್ಮದ್, ಆಲಿ, ಫಾತಿಮ, ಹಸನ್ ಮತ್ತು ಹುಸೇನರಿಗೂ ಚಿಹ್ನೆಯಾಗಿರಬಹುದು" (ಇಸ್ಲಾಂಸಂ. ೩೬೯): ಮುಸ್ಲೀಮರು ಹಿಂದುಗಳ ಮಧ್ಯೆ ಬೀದಿಯಲ್ಲಿ ಸಣ್ಣಕುಂಡವನ್ನು ತೋಡಿ, ಏದುರಿಗಿದ್ದ ಕೃಷ್ಣಾಚಾರಿಯ ಮನೆಯ ಜಗುಲಿಯ ಮೇಲೆ ಅಂಗೈ ಆಕಾರವಿರುವ ಬಾಬಯ್ಯನ ಬೆಳ್ಳಿಯ ವಿಗ್ರಹಗಳನ್ನು ಸ್ಥಾಪಿಸಿ, ಹೂವು, ಗಂಧ, ಚಂದನದಿಂದ ಪೂಜಿಸುತ್ತಿದ್ದರು (ಮಗವಾಂ. ೦); ಬಾಬಯ್ಯನ ಹಸ್ತಗಳನ್ನು ಕೆರೆಯಲ್ಲಿ ತೊಳೆದು 'ಅಲ್ಪಿ

ದಾಯ' ಪಾಡುತ್ತಾ ಅವನು ಬರುವಾಗ . . . ಹಿಂದುಗಳ ಕಣ್ಣಿನಲ್ಲೂ ನೀರು ಬರುತ್ತಿತ್ತು (ಊರುಶ. ೩೦).

ಬಾಬಯ್ಯನ ಜಲ್ದಿ = ಮೊಹರಂ ಹಬ್ಬದ ಕೊನೆಯ ದಿನದ ಉತ್ಸವ : ಹಿಂದೆ ಹೆಮ್ನಳ್ಳಿಯಲ್ಲಿ ಬಾಬಯ್ಯನ ಜಲ್ದಿ ಎಂದರೆ ಹಿಂದುಗಳಿಗೆ ಒಂದು ದೊಡ್ಡ ಹಬ್ಬ (ಮಗಮಾಂ. ೧). 'ಜಲ್ದಿ' ಪರಾ. ಬಾಬಯ್ಯನ ಹಬ್ಬ = ಬಾಬಯ್ಯನ ಜಲ್ದಿ : ಬಾಬಯ್ಯನ ಹಬ್ಬದ ಸಂದರ್ಭದಲ್ಲಿ ಹುಲಿವೇಷದ ಜೊತೆಗೇ ಬರುವ ಮತ್ತೊಂದು ಮನರಂಜನೆಕಲೆ ಕರಿಬೇವಿನ ಸೊಪ್ಪಿನ ವೇಷ (ಕಸಕ. ೧೬೯).

[ಬಾಬ್ಯ (ಫ ← ಪಾರ. ಹಿಂ. ಮರಾ. ಬಾಬಾ) + ಅಯ್ಯ$_{61}$]

ಬಾಬರ (ನಾ). ಒಂದು ಬಗೆಯ ಸಿಹಿಯ ಭಕ್ಷ್ಯ: ನೆಱೆ ಸಣ್ಣಗೋದುವೆಯ ಹಿಟ್ಟ ಸಿಹಿವಾಲೊಳಗೆ ನುಱುಗುವಂದದಿ ಕಲಸಿ ಹೆಬ್ಬೆಟ್ಟ ತೋರದೊಳು ಕೊಱೆದ ಕರಟಕೆ ತುಂಬಿ ವೊಡೆಯದೊಲು ತುಪ್ಪದೊಳಗಡಲು ಚಿಲುಮುರಿಯಾದುದು ಎಱೆಯಪ್ಪದಂತೆ ಬೇಯಿಸಲು ಬಾಬರಮಾಯ್ತು ಬಱಿಮೊಸರು ಕೆನೆಯನದಱೊಳು ಕಲಸಿ ವುಂಡೆಯಂತೆಱೆಯೆ ಪಾವುಡಮಾಯ್ತು ದೋಸೆಯಂದದಿನಡಲು ತಾನೆ ಬಾಬ[ಶಾಕಾಂ. ಬಾ]ರ ಮಾದುದು (ಸೂಪಶಾ. ೦-೩೩).

[?./ಹಿಂ. ಬಾಬರ್ = ಒಂದು ಬಗೆಯ ಮಿಠಾಯಿ]

ಬಾಬರಿ (ನಾ). ಒಂದು ಬಗೆಯ ಸಸ್ಯ : "ಕಗ್ಗೊಱಲೆ ಬಾಬರಿ ಕ್ಷುದ್ರ ಪತ್ರಂ" (ಮಂಗರಾ. ೩೯-೨೭). [?./ಪಾರ. ಬಾಬಾರೀ = ಕರಿಮೆಣಸು : ಮರಾ. ಬಾಬರೀ = ತೃಣಧಾನ್ಯ]

ಬಾಬಿಂಜಿ 'ಬಾಗುಜಿ' ನೋ.

ಬಾಬು$_1$ (ನಾ). ೧. ವಿಷಯ ; ಸಂಗತಿ : ವಿಳಾಸದಾರ ಸಿಗಲಿಲ್ಲ ಎನಿಸುವುದು ಅಷ್ಟೇನೂ ಖರ್ಚಿನ ಬಾಬಲ್ಲ (ಬಕಾಂಗಿ. ೨೦೦); ಅಲ್ಲಿಯವರೆಗೆ ಅದು ಕೇವಲ ಖರ್ಚಿನ ಬಾಬು (ಅಶೋಕ. ೬೯). ೨. ವಸ್ತು; ಪದಾರ್ಥ : ನಮ್ಮ ತಾಯಿಯವರು ಇನ್ನೂ ಕೆಲವು "ಬಾಬು"ಗಳನ್ನು ಹೆಚ್ಚಾಗಿ ಬೇಡಿದರೂ ಅವುಗಳನ್ನು ಸುಬ್ಬರಾಯರು ಕೊಡಲೊಪ್ಪಿದ್ದರಿಂದ ಮಾಧವನ ಮದುವೆಯ ನಿಶ್ಚಯವೇ ಆಗಿಹೋಯಿತು (ಕೊಳಮು. ೨೨೭). ೩. ವಿಭಾಗ; ಬಾಬತ್ತು : ಈ ವರ್ಷ ಆ ಬಾಬುಗಳಿಂದಲೂ ಹಣ ಬಂದಿಲ್ಲ ಪ್ರಭೂ (ಗಿರಿಪ. ೦೬೯); ಸೊಸೆಗೆ ಮರದ ಬಾಗಿಣ ಮೊದಲಾದ ಬಾಬುಗಳಿಂದ ಸಿಗುವ ಸಂಭಾವನೆಯ ಲೆಕ್ಕವನ್ನೂ ಆಚಾರ್ಯರು ಹಾಕಿದರು (ಮಸಪ. ೪೪). ೪. ಸಂಂಕ; ತೆರಿಗೆ : ಈ ಜನಗಳು . . . ಕಾಣಿಕೆ ಕಡ್ಡಾಯ ಮನೆದೆರಿಗೆ ಮುಂತಾದ ಬಾಬುಗಳನ್ನು ಕೊಡಕೆಲಸವಿಲ್ಲ (ಮಹಾಪಂ. I, ೦೦೬); ರೈತರನ್ನು ತಗ್ಗಿಸುವ ನಿಮಿತ್ತವಾಗಿಯೂ, ಅರಮನೆಗೆ ಕೂಡಿ ಬರುವಂತೆಯೂ, ಹೆಚ್ಚಾಗಿ ಮನೆದೆರಿಗೆ ಮೊದಲಾದ ೧೯ ಬಾಬುಗಳನ್ನು ನೇಮಿಸಿದರು (ಮಹಾಪಂ. I, ೦೨೪). ೫. ಪರಿಪಾಠ; ಕ್ರಮ; ವಾಡಿಕೆ : ಜೀರರಿಗೂ (ಹೂಗಾರ) ಒಕ್ಕಲಿಗನ ಕಣದಲ್ಲಿ ರಾಶಿಗೆ ಪತ್ರಿ ಹೂದಂಡೆಗಳನ್ನು ಕೊಡುವ ಬಾಬಿದೆ (ಕನ್ನಶಾ. ೦೩೪). ೬. ರೂಢಿಯಾಗಿ ಕೊಡುವ ಪದಾರ್ಥ; ಮಾಮೂಲು : ತುಂಬುವ ರಾಶಿಯಲ್ಲಿ ತಟ್ಟೆಯ ತುಂಬ ಜೋಳವನ್ನು ಒಕ್ಕಲಿಗನು ಹೂಗಾರನಿಗೆ 'ಬಾಬು' ಎಂದು ಕೊಡುವ ವಾಡಿಕೆಯು ಈಗಲೂ ಇರುವುದು (ಕನ್ನಶಾ. ೦೩೪); ಹನ್ನೆರಡು ಕಸಬಿನವರೂ ತಮ್ಮ ತಮ್ಮ ಬಾಬಿಗಾಗಿ ಹೊರಗಡೆ ಕಾದಿರುವರು (ಸುವಸಂ. ೩೦).

ಬಾಬುವಾರು = ಆಯಾ ವಿಷಯಗಳ ಪ್ರಕಾರ : ಆರು ಬಾಬುಗಳಲ್ಲಿ ಕ್ರಿಮಿನಲ್ ಕೋರ್ಟ್ ಕಾನೂನಿನ ಅರ್ಥವನ್ನು ಹೇಗೆ ತಿರುಗುಮುರುಗು ಮಾಡಿತ್ತೆಂಬುದನ್ನು . . . ಬಾಬುವಾರಾಗಿ ಅವನು ಸಮರ್ಥಿಸಿದನು (ಪುನರು. ೩೬೫). [←ಅರ. ಹಿಂ. ಮರಾ. ಬಾಬ್]

ಬಾಬ್ಯು$_2$, ಬಾಬೂ (ನಾ). (ಸಭ್ಯಗೃಹಸ್ಥ, ಮಹಾಶಯ ಎಂದು ಮುಂತಾಗಿ ಒಬ್ಬ ವ್ಯಕ್ತಿಯನ್ನು ಸೂಚಿಸಲು) ಗೌರವಸೂಚಕವಾಗಿ ಬಳಸುವ ಪದ : ನಯನಜೋರದ ಜಮೀನುದಾರರು ಒಂದಾನೊಂದು ಕಾಲಕ್ಕೆ ಬಾಬು ಎಂಬುದಾಗಿ ವಿಶೇಷ ವಿಖ್ಯಾತರಾಗಿದ್ದರು (ಇಪ್ಪಕ. ೦೨೯); ಬಂಗಾಲಿ ಬಾಬುಗಳು ಒಳಗಿದ್ದಾರೆ (ಶಾರತಿ. ೦೩೩). ಬಾಬೂ : 'ಬಾಬೂಜಿ' ಪರಾ. [←ಹಿಂ. ಮರಾ. ಬಂಗಾಲಿ. ಬಾಬೂ]

ಬಾಬುಗಾರ (ನಾ). ಆಯಾ ವಿಭಾಗದ ಕೆಲಸಕ್ಕೆ ಸಂಬಂಧಪಟ್ಟ ವ್ಯಕ್ತಿ : ಅವನಿಗೆ ಎಲ್ಲ ಆಯಗಾರರೂ, ಬಾಬುಗಾರರೂ ಬರಲೇ ಬೇಕು (ಕನ್ನಶಾ. ೬೬). [ಬಾಬು$_1$ + — ಗಾರ (< — ಕಾಱ)]

ಬಾಬುಜಿ, ಬಾಬೂಜಿ (ನಾ). = ಬಾಬ್ಯು$_2$: ಆ ರಮಣಿಯು ಎದ್ದು ನಿಂತು, "ನಮಸ್ಕಾರ ಬಾಬುಜಿ!" ಎಂದಳು (ಇಪ್ಪಕ. ೦೯೬). ಬಾಬೂಜಿ: ಈ ಜನವೆಲ್ಲ ನಿಷ್ಕರುಣಿಗಳು ಬಾಬೂಜಿ (ಶಾರತಿ. ೬೬).

[ಬಾಬು$_2$ + — ಜಿ]

ಬಾಬುದಾರ (ನಾ). = ಬಾಬುಗಾರ : ಪ್ರಿಯಜನರು, ಅತಿಥಿಗಳು, ಪೂಜ್ಯಮಂಡಲಿಯು, ಬಾಬುದಾರರು ಇವರೆಲ್ಲರನ್ನು ಅರಸನು ಸಂತೋಷಪಡಿಸಿದನು (ತುಳಸೀ. ೯೯); ಬಗೆಬಗೆಯ ಬಾಬುದಾರರು ತಮ್ಮ ತಮ್ಮ ಕರ್ತವ್ಯಗಳಲ್ಲಿ ತಲ್ಲೀನರಾದರು (ಗಂಗಾಸಾ. ೪೯). [ಬಾಬು$_1$ + — ದಾರ್$_4$]

ಬಾಬೂ 'ಬಾಬ್ಯು$_2$' ನೋ.

ಬಾಬೂಜಿ 'ಬಾಬುಜಿ' ನೋ.

ಬಾಬೂನ (ನಾ). ಒಂದು ಬಗೆಯ ಔಷಧೀಸಸ್ಯ : ಬಾದರನ ಬೋಯ್ಯ, ಬಾದ್ವಾನ, ಬಾಬೂನ (ಮುಂಬಪ್ಯಾ. ೦೬೬).

[←ಪಾರ. ಬಾಬೂನಹ್ ; ಹಿಂ. ಬಾಬೂನಾ ; ಮರಾ. ಬಾಬುನಾ]

ಬಾಬೆಹುಕುಮತ್ (ನಾ). ಧರ್ಮದರ್ಶಿಗಳ ಸಭೆ : ಸರ್ಕಾರದವರಿಂದ ನಿಯಮಿಸಲ್ಪಟ್ಟ ಧಾರ್ಮಿಕಕಲಹವಿಮರ್ಶನಸಂಘದವರ ರಿಪೋರ್ಟು ಬಾಬೆಹುಕುಮತ್ ಅಂದರೆ ಕೌನ್ಸಿಲ್‌ದವರಿಂದ ಅನುಮೋದಿಸಲ್ಪಟ್ಟು (ಗುರುದ. ೪೬). [← ಹಿಂ. ?]

ಬಾಮ (ನಾ). ಸೊಗಸು ; ವಿಲಾಸ : ಅವರೊಳೊರ್ವಳ್ . . . ತನ್ನೊಂದು ಬೆಡಂಗಿನ ಬಾಮದಿಂ ಬಳ್ಕಿ ಬಾಗಿ ಕುಪ್ಪಸಮಂ ಸಡಿಲ್ಚಿದಳ್ (ರಾಮಾಶ್ವ. ೦೨೩-೦೪) ; ಆ ಸುಶೀಲೆ ಬಾಗಿ ಬಾಮದಿಂ ಬಲ್ಲಿದರ್ಗೆಂದಳ್ (ಅದ್ಭುತ. ೩೯-೨). [< ಸಂ. ಭಾಮ. /ತಮಿ. ವಾಮ; ತುಳು. ಬಾಮ]

ಬಾಮ್ಮಣಿ 'ಬಾನ್ಮಣಿ' ನೋ.

ಬಾಮ್ಮರ (ನಾ). (ಬೇಡಿದುದನ್ನು ಕೊಡಬಲ್ಲುದೆಂದು ಭಾವಿಸಲಾದ) ಸ್ವರ್ಗಲೋಕದ ಒಂದು ಮರ ; ಕಲ್ಪವೃಕ್ಷ : ಏನೆಮಗಾ ಬಾಂಬಸುವಿಂದೇನೆಮಗಾ ಬಾಮ್ಮರಂಗಳಿಂ ಬರ್ಪುದು (ಅಪ್ರತಿ. ೪೦-೦೩) ; ಸಂಕಿನ ಪಾಱುಂಬಳೆಯ ಬಾಮ್ಮರದ ಪಟಯಿಗೆಯ ತಾವರೆಯಂಕುಸದ ಬಜ್ಜರದ ಮೆಯ್ಸಿರಿವೆತ್ತ ನುಣ್ಗೆಱೆಗಳಿಂದೆಸೆವ ಕೆಂದಳಿರ್ದಳಮಂ . . . ಕೂರ್ತು ನೋಡುತ್ತಿರ್ದೊಡಂ (ಪಕಪಂ. ೩೪-೪). [ಬಾಂ$_2$ (< ಬಾನ್$_3$) + ಮರ್$_1$]

ಬಾಯ್, ಬಾಯಿ$_1$ (ನಾ). ೧. ಮನುಷ್ಯರ ಹಾಗೂ ಪ್ರಾಣಿ, ಪಕ್ಷಿಗಳ ಮುಖದಲ್ಲಿ, ಆಹಾರ ಪಾನೀಯಾದಿಗಳನ್ನು ಸೇವಿಸುವುದಕ್ಕೂ ಶಬ್ದದ ಉದ್ಗಾರಗಳಿಗೂ ಸಹಾಯಕವಾಗಿರುವ ಒಂದು ಅವಯವ; ವಕ್ತ್ರ : ತಾಳತರುವಿತತಿಯೊಳ್ ಬೇತಾಳಂಗಳ್ ಮೊಱೆದು ತೆಱೆದು ಬಾಯ್ಗಳನಾ ಪಾತಾಳಬಿಲಂಗಳವೋಲ್ . . . ಕುಣಿಯೆ ಭಯಮಯನಾದೆಂ (ಕಪಾಂ. ೩-೦೯೩) ; ಪಚ್ಚು ಪರಿಕಲಿಸಿ ಬೆನ್ನಂ ಮುಚ್ಚಿರೆ ಮುಡಿಕಳ್ಳ ಬೆಳ್ಳಿವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ ತಶಿಯು ಕಚ್ಚಿ ನೆಲಕ್ಕಿಟಿದ ರಾಹುವಂ ನೆಱೆ ಪೋಲ್ತಳ್ (ಕಾನ್ಯಸಾ. ೯೬೬ ಶೂದ್ರಕ) ; ಪಾತಾಳಗಣಂಗಳಿವೆತ್ತಂ ತಾಳುಗೆವರೆಗಂ ತೆಱೆದ ಬಾಯನನುಕರಿಸಿರ್ಕುಂ (ಅಂಪು. ೦೨-೭೯). ೨. ಪಾತ್ರೆ, ಚೀಲ ಮೊದಲಾದುವುಗಳ ತೆರೆಯುವ

ಭಾಗ : (ಕ). ೩. ಕೆರೆಯ ತೂಬು, ಬಚ್ಚಲು, ಮೋರಿ ಮೊದಲಾದುವುಗಳ ಹೊರತುದಿ.— ಕಂಡಿ : (ಕ). ೪. ಚರ್ಮವಾದ್ಯದ ಮೇಲುಭಾಗ : (ಕ). ೫. ಹುಣ್ಣು, ಗಾಯ ಮೊದಲಾದುವುಗಳ ಬಿರುಕು.—ತೂತು : ಮೇಲ್ವಾಯ್ದು ಪೊಯ್ದತ್ತು ಕೈಯೇಱಿಡೆಯಿಂ ಬಾಯೇಱ ಬಾಯಿಂದೊಡನೆ ರುಧಿರಮುಂ ಕಂಡಮುಂ ಸೂಸುವನ್ನಂ ಸಿಡಿಲೆಂಬಾಶಂಕೆಯಂ ಪೆಣ್ಬುಲಿ ಪಡೆದು ಮೃಗೀರಕ್ತಸೇವಾನುರಕ್ತಂ (ಶಂಕಾಮಾ. ೨-೫೫) ; ಏಱ ಬಾಯ್ಗಳ ತಳಿತ ಖಂಡದ ಸೂಱಿಗೊಂಡವು ಹಿಂದಣಂಬುಗಳು (ಕುಪ್ಯಾಕ್ರೋ. ೦೬-೩೬). ೬. ಪ್ರವೇಶದ್ವಾರ ; ಬಾಗಿಲು : ಹುತ್ತಕ್ಕೆ ಏಸು ಬಾಯಾದರೇನು ಸರ್ಪನಿರ್ಪುದು ಒಂದೇ ಸ್ಥಾನ (ಬಸವ. ೯೫೦) ; ಏಱ್‌ವಾಯ್ ಥೇಬಾಯ್ಗೆಂದುಮ್ ಮೂಡದ ಓ ಮುನ್‌ಗದಿರೇ ! (ಅಂತಿಗೂ. ೫-೬೬). ೭. ಚೂರಿ, ಕತ್ತಿ, ಕೊಡಲಿ ಮೊದಲಾದುವುಗಳ ಅಂಚು.—ತುದಿ : ಎನ್ನಯ ಸಂತತಿಗಾಗಿಸಿರ್ದ ನಿನ್ನನೆ . . . ಕರವಾಳ ಬಾಯ್ಗಮಂಬಿನ ಮೊನೆಗಂ ಮಹಾರಥರ ತಿಂತಿಣಿಗಂ ಪಿಡಿದೆಂತು ನೂಂಕುವೆಂ (ಪಂಪಭಾ. ೦೦-೯೦); ಬೆಲ್ಲದ ಮೋಹಕ್ಕೆ ಸುರಗಿಯ ಬಾಯ ಧಾರೆಯ ನೆಕ್ಕುವಂತಾನುಂ (ಧರ್ಮಾಮೃ. ೬-೦೭೫); ಜಮದಗ್ನಿರಾಮನು . . . ಪರಶುಗೊಡಲಿಯ ಬಾಯ ಮಸೆವುತ ಬಂದು ಭೂಪನ ದಾಯಿಗರ ಹರೆಗಡಿದು ಹಿಡಿದನು ಕಾರ್ತವೀರ್ಯಕನ (ಸಂಭಪ. ೨೬-೩೦). ೮. ನುಡಿ ; ಮಾತು ; ವಚನ : ಬಲ್ಲರ ಬಾಯಂ ಪೊಕ್ಕೋದಿ ಕಲ್ಗೆ ಕವಿ ಸಕಲಮುಮಂ (ಅರ್ಥನೇ. ೦-೩೪) ; ಬಾಯಲಿ ಬಲ್ಲಿದನು ನೀನಹೆ ಭಟಾಂಗದ ಮಾತದಂತಿರಲಿ (ಕುಪ್ಯಾಕ್ರೋ. ೫-೫೩). ಬಾಯಿ$_1$: ೧. "ವದನಂ ಮುಖಂ . . . ಆಸ್ಯಂ ಪೋಱ್ ಬಾಯಿಯೆನೆ ಕಬಳಿಕಂ" (ಮಂಗರಾ. ೯೩-೦) ; ಒಱಲುವಮರರ ಬಾಯಿ ಕೈಗಳ ಮೊಱೆಯ ತೆಗಸಿ . . . ನಂದೀಶ್ವರನು ಹೊಕ್ಕನು ಹೊಯ್ದು ದಾನವರ (ಕುಪ್ಯಾಕ. ೭-೨೯) ; ಅಡಸಿ ಗಿರಿಯನು ನುಂಗುವ ವೀರನ ಬಾಯಿ ಹಿಡಿಯದೆ ಪಣ್ಬಲಗಳನು (ಕಂಪಪಿ ೦೯-೬೩). ೨. ಅಷ್ಟೊಂದು ಹತ್ತಿ ತುಂಬಿದರೆ ದಿಂಬಿನ ಚೀಲದ ಬಾಯಿ ಹೊಲಿಯುವುದು ಹೇಗೆ ? (ರೂಢಿ). 'ಬಾಯಿಕಟ್ಟು$_2$' ಪರಾ. ೪. ಪುಷ್ಕರಂ . . . ಡೋಲು, ಮದ್ದಳೆ, ಝಡಾ ಮುಂತಾದ ವಾದ್ಯಗಳ ಬಾಯಿ (ಸಿದ್ಧಾಂತಿ. ೯೦೭). ೬. ಅರಮನೆಗೆ ಆರು ಬಾಯಿ (ಗಾಬೆ). ೭. ವರದಾನ ಹೃದಯದಲ್ಲಿ ಎರಡು ಬಾಯ ಅಲಗನ್ನು ಹಾಕಿ ತಿರುವಿದಂತಾಯಿತು (ಜಯಂತ. ೬). ೮. ಬಿನ್ನಹಕೆ ಬಾಯಿಲ್ಲವಯ್ಯ ಅನ್ನಂತ ಅಪರಾಧ ಎನ್ನಲ್ಲಿ ಇರಲಾಗಿ (ಪುರಂದ. ೨-೦೫೦ ಪಲ್ಲವಿ) ; ಈ ವಿಷಯವನ್ನು ಸವತಿಯಾದ ಅವಳೊಡನೆ ನಾನೇ ಪ್ರಸ್ತಾಪಿಸಲು ನನಗೆ ಬಾಯಿ ಬಾರದು (ಪಪಭಾ. ೦೩) ; ಬಾಯಿ ಒಳ್ಳೆಯದಾದರೆ ಊರು ಒಳ್ಳೆಯದು (ಗಾಬೆ). ೯. (ಆಲಂ) ಮಾತನಾಡುವ ಚಾತುರ್ಯ ; ವಾಕ್ಚಾತುರ್ಯ : ಬಾಯಿಯುಳ್ಳವನಾದರೆ ಬರದಲ್ಲಿಯಾದರೂ ಬದುಕಿಯಾನು (ಗಾಬೆ).

ಬಾಯಂ ಬಡಿ, ಬಾಯ ಬಡಿ = ಇನ್ನೊಬ್ಬರಿಗೆ ಮಾತನಾಡಲು ಅವಕಾಶ ಕೊಡದಂತೆ ಮಾತಾಡು; ವಾದಿಸು : ಮಾದೇವನ ಪೊದ್ದ ಬಟ್ಟೆಯಂ ತಿಳಿಯದವರ್ ವೇದಗಳೊಳಗುಳ್ಳುದೆಲ್ಲಂ ಮಾದೇವನ ಚರಿತಮೆಂದು ಬಾಯಂ ಬಡಿವರ್ (ಸಮಪ. ಅಮಬಂಧ. I, ೩೭೯-೫೦) ; ಪೆಱರ ಬೈಗುಳಂ ಸೈರಿಸುವುದರಿದೊ ಪೆಱರೊಡನೆ ಬಾಯಂ ಬಡಿವುದರಿದೋ (ಧರ್ಮಾಮೃ. ೭-೬೦); ಬಲ್ಲಿದ ನೀನೆಂದು ಬಡವರ ಬಾಯ ಬಡಿಯದಿರೆಚ್ಚಱಿಕೆ (ಪುರಂದ. ೦-೦೬೦-೦). ಬಾಯಂ ಬಿಡು, ಬಾಯ ಬಿಡು = ೧. ಪ್ರಲಾಪಿಸು; ಅಸಹಾಯಕತೆಯಿಂದ ಹಲುಬು; ಹಳಹಳಿಸು : ವಿದ್ವಿಷ್ಟವಿದ್ರಾವಣನ ಮೊನೆಯಂಬಿನಂಬೇಱಿಂಗಳ್ಕಿ . . . ಕಿಂಪುರುಷರ್ ಕಾಪುರುಷರಂತೆ ಬಾಯಂ ಬಿಡೆಯುಂ (ಪಂಪಭಾ. ೫-೬೮ ಪ); ಸೇದೆವಟ್ಟು ಬಾಯಂ ಬಿಟ್ಟು ಕಾ[ಪಱಿದು] (ಗದಾಯು. ೯-೨೦ ಪ); ಆ ಯುವತಿ ಮೃತವಾಗೆ ಮಱುದಿನ ತಾಯಿ ತಂದೆಯರಳುತೊಱಲುತಂ ಬಾಯ ಬಿಡುತಂ ಕೊಂಡು ಬಂದೆಯ್ತಂದು (ಬಸಪು. ೩೨-೪೨); ಬಾಯ ಬಿಟ್ಟುದು ಸೇನೆ ಕೌರವರಾಯನಾವೆಡೆ ದಳಕೆ ಬಲುಗೈನಾಯಕರು ಕೃಪ ಗುರುಸುತರು ಕೈಗೊಟ್ಟರೇ ಹಗೆಗೆ (ಕುಪ್ಯಾಕ. ೦೨-೨೮). ೨. (ಅಭಿಲಾಷೆ ಪೂರೈಸುವುದನ್ನು) ನಿರೀಕ್ಷಿಸು : ಚಾದಗೆಯಂತಾಕಾಸವನಿಗೆ ಬಾಯಂ ಬಿಡುತ್ತುಂ (ಧರ್ಮಾಮೃ. ೦-೦೬೦); ಪಾರ್ಥಿವಶರಾಗ್ನಿಯಿಂ . . . ಎಮ್ಮನುಳುಹೆಂದು ಫಣಿಕುಲಂ ಬಾಯ ಬಿಡಲು (ಶೈಮಿಭಾ. ೨೯-೩೭). ೩. ಬೆರಗಾಗು ; ಆಶ್ಚರ್ಯಪಡು; ದಿಗ್ಭ್ರಾಂತಿ ಹೊಂದು : ಬೆಕ್ಕಸಂಬಟ್ಟು ಬಾಯಂ ಬಿಟ್ಟರ್ ಭೀಷ್ಮರ್ (ಶಮದ. ೨೪೦ ಪ್ರಯೋ); ಬಲ ಬಾಯ ಬಿಡೆ ಚಿಗಿದಂಬು ಕಡಿದುದು ಕರ್ಣನಂದನನ (ಕುಪ್ಯಾಕ. ೨೦-೩೫). ೪. ಸ್ಪಷ್ಟವಾಗಿ ನುಡಿ ; ಪ್ರಕಟಪಡಿಸು: ಕಾಯವಳಿದರು ಅಂತರಂಗವ ಬಾಯ ಬಿಡರು (ನಳಕ. ೩-೨೩). ೫. ಬಿರಿ ; ಸೀಳು ; ಬಿರುಕು ಬಿಡು : ಅರಸ ಕೇಳಾಶ್ಚರ್ಯವನು ಗಜಪುರದೊಳಗೆ ನೆಲ ಬಾಯ ಬಿಟ್ಟುದು (ಕುಪ್ಯಾಸ. ೦೫-೪೦). ಬಾಯ ಕಟ್ಟು = ಮಾತಿಗೆ ಸಿಕ್ಕಿಸು ; ಮಾತಿಗೆ ಕಟ್ಟುಬೀಳಿಸು : ಸೂರುಳಿಸಿ ನೆಱ್ ಬಾಯ ಕಟ್ಟಿ ಹಣವಂ ಕೊಳಲು ಕಲಿವುದೆಂದೊಬ್ಬ ಕುಂಟಿಣಿಮಗಳ ಬೋಧಿಸಿದಳು (ಸೋಮತ. ೨-೪೦). ಬಾಯ ಕಲ್ಲಿ = ದನಗಳಂ ಬೆಳೆಗಳನ್ನು ಮೇಯದಂತೆ ನಿರ್ಬಂಧಿಸುವುದಕ್ಕಾಗಿ ಅವುಗಳ ಬಾಯಿಗೆ ಕಟ್ಟುವ ಹೆಣಿಕೆಯ ಬಲೆ ; ಬಾಯಿಕುಕ್ಕೆ : ದಾನಧರ್ಮ ಮಾಡಿ ಉಳಿದ ಹುಡುಗರ ಗಾದಿಯ ಕಾತಿಯಿಂದ ನಾವಿಬ್ಬರೂ ಹಗ್ಗ, ಬಾಯ ಕಲ್ಲಿಗಳನ್ನು ಮಾಡಿದ್ದೆವು (ಸ್ಮೃತಿಸ. ೩೪೦). ಬಾಯ ತುತ್ತು = ಬಾಯಿಗೆ ಸೇರಬೇಕಾದ ಕಬಳ: ಆ ತಾಪಸಾಗ್ರ್ಯನ ಬಾಯ ತುತ್ತಿದನೀ ಪವನಸುತ ತಂದನಱಿಯದೆ (ಕುಪ್ಯಾಅ. ಓಂಇ. ೯-೨೨); ತುಡುಗುಣಿಗಳಿವದಿರು ನಭೋಗ್ರಕೆ ಸಿಡಿದು ಹವಿಗೊಂಬಮರನಿಕರದ ಹೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ (ತೊರರಾ. ೦-೦೦-೮). ಬಾಯ ಬಡಕ, ಬಾಯ ಬಡಿಕ, ಬಾಯ ಬಡುಕ = ಬಡಾಯಿ ಕೊಚ್ಚಿಕೊಳ್ಳುವವನು: ಬಾಯ ಬಡಕ[ಪಾಠಾಂ. ಬಾಯಿಬಡಿಕ]ರು ಬಗುಳಿದೊಡೆ ಹರಿಯಾಯಿತಕೆ ಪಾಸಟಿಯೆ (ಕುಪ್ಯಾಸ. ೯-೯೭); ಬಾಯ ಬಡಿಕರು ಬಂದ ಬಣ್ಣಗೆಯೆಸಗಿ ಬಗುಳುವರು (ಕೃಷ್ಣಾಕಾ. ೦೯-೨೯); ಬಾಯ ಬಡುಕನದೆಂದಿರದೆ ಸಮರಾಯತದಿ ನೋಡೆನ್ನ ಭುಜಬಲದಾಯತದ ರಣಕೌಶಲವ. ನೀನು (ಕೋಗಯ. ೦೬-೨೦). ಬಾಯ ಬಡಾಯಿ = ಜಂಬದ ಮಾತು : ಕೇರಿಯವರ ಮುಂದೆ ವೇಳೆ ಅವೇಳೆಯಲ್ಲಿ ಬರಿಯೆ ಬಾಯ ಬಡಾಯಿ ಹೊಡೆಯುತ್ತಿದ್ದರು (ಮೂರುದಾ. ೭೦). ಬಾಯ ಬಿಯಗ, ಬಾಯ ಬೀಗ, ಬಾಯ ಬೀಯಗ = ೧. ಮಾತನಾಡದಂತೆ ಮಾಡಿದ ತಡೆ.— ಕಟ್ಟು : ದೇವರ್ಕಳ ಬಾಯ ಬಿಯಗಮಂ ಕಳೆಯಿಸುವೈ (ಅನಂಪು. ೦೩-೩೫). ೨. (ಹರಕೆಯನ್ನು ಹೊತ್ತು) ಬಾಯಿಗೆ ಚುಚ್ಚಿಸಿಕೊಳ್ಳುವ ತಂತಿಯ ಸಾಧನ : ಬೇವಿನುಡಿಗೆ ಬಾಯ [ಪಾಠಾಂ. ಯಿ] ಬೀಗದಿಂ ನಿನ್ನಡಿದಾವರೆಗಳಿಗೆಱಗುವೆನು (ಕುರಾಸಾಂ. ೨೩-೬೬). ೩. ಮಾತಿನಿಂದ ಹೇಳಲಾಗದುದು; ವಚನಾತೀತವಾದುದು: ನಿಗಮದ ಬಾಯ ಬೀಯಗವೀ ಮುಕುಂದನನಱಿವರಾರು (ಕುಪ್ಯಾಸ. ೯-೯೭); ವೇದ ಶ್ರುತಿಯ ಬಾಯ ಬೀಯಗ . . . ಸಜ್ಜನಸಮಾಧಿಗಳ ಭೇದಕ್ಕೆ ನಿಲುಕದ ಶ್ರೀಕೃಷ್ಣರಾಯನ ಪಾದವ ಕೂರ್ತು ಪೇಳ್ಗತೆಯ (ಪೋಪತ. ೬-೦). ಬಾಯ ಬೊಬ್ಬೆ = ಕೂಗಾಟ ; ಕೇಕೆ : ನಾಯಕರ ಕೆಡೆನುಡಿವ ಬೈಗುಳ ಬಾಯ ಬೊಬ್ಬೆಯ ಕೈಯ ಹೊಯ್ಗುಳ ದಾಯಿಗರಲೇ ಎನುತ ಮೂದಲಿಸಿದನು ತಮ್ಮೊಳಗೆ (ಕುಪ್ಯಾಕ. ೨-೦೩) ; ಬಾಯ ಬೊಬ್ಬೆಯ ಬಿಱುಬುಗಳಲಡಹಾಯಿದೋಡುವ ನಿಖಿಳಮೃಗಸಮುದಾಯವನು ಸಂಹರಿಸುತಿರ್ದುದು ಶಬರಸಂದೋಹ (ತೊರರಾ. ೩-೩-೦೫). ಬಾಯಲಿ ಬೆರಳನಿಡು=

(ಶರಣಾಗತಿಯ ಸೂಚಕವಾಗಿ) ಬಾಯಲ್ಲಿ ಬೆರಳನ್ನಿಟ್ಟುಕೊಳ್ಳು : ಕೈಯ ಕೈದುವನಿಳುಹಿ ಬಾಯಲಿ ಬೆರಳನಿಟ್ಟುದು ವೈರಿಪಾಯದಳ (ಕುಪ್ಯಾದ್ರೋ. ೩-೦೯). ಬಾಯ ಲೆಕ್ಕ = ಮನಸ್ಸಿನಲ್ಲಿಯೇ ಲೆಕ್ಕ ಮಾಡಿ. ಬಾಯಲ್ಲಿ ಉತ್ತರವನ್ನು ಹೇಳಬಹುದಾದ ಲೆಕ್ಕ ; ಲೇಖನಿ, ಬಳಪ ಮುಂತಾದುವುಗಳ ಸಹಾಯವಿಲ್ಲದೆ ಮಾಡುವ ಲೆಕ್ಕ ; ಮೌಖಿಕವಾದ ಲೆಕ್ಕ : ಕೇಂಬ್ರಿಜ್ಜಿನಲ್ಲಿ ಬಾಯ ಲೆಕ್ಕ ಕೇಳಿದ ಹಾಗೆ ರ್‍ಯಾಂಗ್ಲರ್ ಮಹಾಜನರು ನನಗೆ ತಿಳಿಸಿಲ್ಲ (ಗಾಳಿಪ. ೦೭೯). ಬಾಯಲ್ಲಿ ಅಕ್ಕೀಕಾಳು ಹಾಕಿಕೊಳ್ಳು=ಆಗಬೇಕಾಗಿದ್ದ ಕೆಲಸವಾಗದೆ ದೀರ್ಘನಿರೀಕ್ಷೆಯಲ್ಲಿ ಇರು : ನಾವೆಲ್ಲರೂ ಮುಂದೇನಾಗುವದೋ ಎಂದು ಬಾಯಲ್ಲಿ ಅಕ್ಕೀಕಾಳು ಹಾಕಿಕೊಂಡು ಕುಳಿತೆವು (ಮೇದಿಮ. ೯೯). ಬಾಯಲ್ಲಿ ನೀರೂರಿಸು=ಆಸೆ ಹುಟ್ಟಿಸು ; ಅಪೇಕ್ಷೆಯನ್ನುಂಟುಮಾಡು : ಅಂಬಾಸಮುದ್ರದ ಶಾಸನ . . . ಬಾಯಲ್ಲಿ ನೀರೂರಿಸುವಂಥ ಭಕ್ಷ್ಯ ಭೋಜ್ಯಗಳನ್ನು ಹೆಸರಿಸುತ್ತದೆ (ಶಾಸಗಿ.೩೬) ಬಾಯಲ್ಲಿ ನೀರೂರು=ಅಪೇಕ್ಷೆಯುಂಟಾಗು : ಆ ಕಾಲದಲ್ಲಿ ಕವಿಗಳು ಚಕ್ರವರ್ತಿಗಳ ಜೊತೆ ಕುಳಿತು ಊಟ ಮಾಡುತ್ತಿದ್ದರು. ಅದರ ನೆನಪಾದಾಗಲೆಲ್ಲಾ ಬಾಯಲ್ಲಿ ನೀರೂರುತ್ತದೆ (ಅಕ್ರಮ. ೯೩). ಬಾಯಾರೆ = ೧. ಬಾಯಿಗೆ ತೃಪ್ತಿಯಾಗುವಂತೆ; ಬಾಯಿ ತುಂಬ; ವಚೋಕ್ತಿಯಲಿ ಬಾಯಾರೆ ನುತಿಸಿನುತಿಸಿ (ಜಿಸಪು. ೬-೨೬) ; ಶಾಸ್ತ್ರಿಗಳೂ ಹಿರಿಯರೂ ಆತನಿಗೆ ಬಾಯಾರೆ ಕಟಕಿಯಾಡಿದರು (ಗೊಲ್ಡೊಲಾ. VIII. ಮುಸ್ಸುಡಿ). ೨. ಬಾಯಿಬಿಟ್ಟು; ಸ್ಪಷ್ಟವಾಗಿ ; ಖಚಿತವಾಗಿ : ನಾನು ಬಾಯಾರೆ ಕೇಳುವುದಕ್ಕಿಂತ, ಆತ ಸಂತೋಷದಿಂದ ತಾನಾಗಿ ಕೊಡುವುದನ್ನು ಕೊಂಡರೆ ಭೂಷಣ (ಪಾಕುದಾ. ೨೦೦). ಬಾಯಿ ಕೆಡು=(ರೋಗ ಮೊದಲಾದುವುಗಳ ಪರಿಣಾಮವಾಗಿ) ನಾಲಗೆಗೆ ರುಚಿ ತಿಳಿಯದಂತಾಗು : ಬಾಯಿ ಕೆಟ್ಟು ಹೋಗಿ ತಿನ್ನಲು ಏನೂ ಸೇರುವುದಿಲ್ಲ (ಕೂಡಿ). ಬಾಯಿಗೆ ಬೀಗ=ಮಾತಿಗೆ ಹಾಕಿದ ತಡೆ,-ಪ್ರತಿಬಂಧ : ಬಾಯಿಗೆ ಬೀಗವಾಯಿತಲ್ಲ ಖಳರ (ವೈಕುಂಪ. ೨-೨೦); ಅವಳ ತಾಯಿ ಎಷ್ಟೋ ಸಲ ಗದ್ದರಿಸಿ ಅವಳ ಬಾಯಿಗೆ ಬೀಗ ಹಾಕುತ್ತಾಳೆ (ಇಶ್ವಕ. ೩೨). ಬಾಯಿಗೆ ಬೀಳು = ೧. ತುತ್ತಾಗು ; ಬಲಿಯಾಗು : ನಾನು . . . ತೋಳಗಳ ಬಾಯಿಗೆ ಬೀಳುತ್ತೇನೆ (ಕಾಪ್ಯಸ. ೭); ಬಾಧೆಪಡುವ ಬಾಳಿಗಿಂತ ಬಕನ ಬಾಯಿಗೆ ಬೀಳೋದುತ್ತಮ (ಗಾಪ). ೨. ಜನರ ನಿಂದೆಗೆ ಗುರಿಯಾಗು ; ಜನಾಪವಾದಕ್ಕೆ ಒಳಗಾಗು : ಇದ್ದುದನ್ನು ಇದ್ದಂತೆ ಹೇಳಲು ಹೋಗಿ ಅವನು ಎಲ್ಲರ ಬಾಯಿಗೆ ಬೀಳುತ್ತಾನೆ (ಕೂಡಿ). ಬಾಯಿಗೆ ಮಣ್ಣು ಬೀಳು=ಏನೂ ಉಳಿಯದಿರು ; ಎಲ್ಲವೂ ಹಾಳಾಗು : ಇನ್ನು ನನ್ನ ಜೀವನದ ಬಾಯಿಗೆ ಮಣ್ಣು ಬಿದ್ದು ಹೋಗುವುದು (ಶೆನ್ನಪೇ. ೧೯೯). ಬಾಯಿಗೆ ಮಣ್ಣು ಹಾಕು = ಪೂರ್ತಿಯಾಗಿ ಗತಿಗೆಡಿಸು ; ನಿರ್ಗತಿಕಸ್ಥಿತಿಗೆ ಇಳಿಸು : ಇದ್ದದ್ದನ್ನೆಲ್ಲಾ ಲೂಟಿ ಮಾಡಿ, ಅವನ ಬಾಯಿಗೆ ಮಣ್ಣು ಹಾಕಿದ (ಕೂಡಿ). ಬಾಯಿಗೆ ಹಾಕು=ಲಂಚ ಕೊಡು : ಆ ಗುಮಾಸ್ತನ ಬಾಯಿಗೆ ಹಾಕದೆ ಈ ಕೆಲಸ ಆಯಿತು (ಕೂಡಿ). ಬಾಯಿಯಿಲ್ಲದವ = ಅಗತ್ಯ ಬಿದ್ದಾಗ ತನ್ನ ಅಭಿಪ್ರಾಯವನ್ನು ತಿಳಿಸಲಾಗದವನು : ಈ ಕಾಲದಲ್ಲಿ ಬಾಯಿಯಿಲ್ಲದವ ಬದುಕಲು ಸಾಧ್ಯವಿಲ್ಲ (ಕೂಡಿ). ಬಾಯಿ ಹಾಕು = ೧. ತಿನ್ನುವುದಕ್ಕೆಂದು ಬಾಯಿಯಿಡು : ಗಬಕ್ಕಂತ ಸಿಂಹ ಕರುಳಿಗೆ ಬಾಯಿ ಹಾಕೋ ಹಾಗೆ ಒಂದೇ ಉಸ್ರಿಗೆ ಆ ಬೆತ್ತ ಎಳಕೊಂಡು . . . ತುಕ್ಡ ತುಕ್ಡ ಮಾಡಿ ಹಾಕಿದ್ಲು (ಪಾಗಿನ. ೯೦) ; ಹಸು ಬಂದು ಸಸಿಗೆ ಬಾಯಿ ಹಾಕಿತು (ಕೂಡಿ). ೨. ಬೇರೆಯವರ ಮಾತಿನಲ್ಲಿ ಮಧ್ಯೆ ಪ್ರವೇಶಿಸು ; ಬೇರೊಬ್ಬರ ಮಾತಿನಲ್ಲಿ ತಲೆ ಹಾಕು.—ತೂರಿಸು : ಬೇರೊಬ್ಬನು ಮಾತಾಡುವಾಗಲೂ ಮಾತಾಡುವ ಅಪೇಕ್ಷೆ ತೋರಿಸುವಾಗಲೂ ನಾವು ನಡುವೆ ಬಾಯಿ ಹಾಕಬಾರದು (ಮುಂದಿಯಿ. ೪-೯೯); ಈವರೆಗೆ ತುಟಿ ತೆರೆಯದಿದ್ದ ವೀರಣ್ಣ ಈಗ ನಡುವೆ ಬಾಯಿ ಹಾಕಿದ (ಪಾಹುತ್ತ. ೯೩). ಬಾಯ್ಗೆವರ್, ಬಾಯಿಗೆ ಬರು, ಬಾಯ್ಗೆ ಬರ್ = ೧. ಮಾತಿನಲ್ಲಿ ಹತೋಟಿಯಿಲ್ಲದಿರು : ಈ ಪಾರ್ವಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ ಎಂದು ಬಾಯ್ಗೆವಂದುದನೆ ನುಡಿಯೆ (ಪಂಪಭಾ. ೩-೬೨ ಪ); ಮಹಾತ್ಮನ ವಚನಕ್ಕುತ್ತರಮಂ ಕುಡಲಾಱದೆ ಬಾಯ್ಗೆವಂದಂತೆ ನುಡಿದವಂ (ರರ್ಮಾಮ್ಯ. ೯-೦೩೨) ; ಹಿಂದೆ ಗಳಹುವನಿವನು ಬಾಯಿಗೆ ಬಂದ ಪರಿಯಲಿ (ಕುಪ್ಯಾಭೀ. ೦-೦೦) ; ಕಾಗೆ ಬಾಯ್ಗೆ ಬಂದುದಂ ಗಟಿಪಿದೊಡೆ (ಪಂಪಕಂ. ೦೯೯-೦೦) ; ಬಾಯ್ಗೆ ಬಂದ ತೆಱದಿಂ ಪೆಱರೆಂದೊಡೆ ಕೇಳ್ದು (ಪಂಠಾಮಾ. ೦೫-೭೨). ೨. ಕಂಠಪಾಠವಾಗಿರು ; ಉರುಹೊಡೆದಿರು : ಸಂತರ ಎಲ್ಲ ಗೀತೆಗಳೂ ಬಾಯಿಗೆ ಬರುತ್ತವೆ (ಮೂರಸ. ೬೩). ೩. ದಕ್ಕು; ಲಭಿಸು : ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ (ಗಾಪ). ಬಾಯ್ಮಾಡು, ಬಾಯಿ ಮಾಡು=೧. ಪ್ರತಿಜ್ಞೆ ಮಾಡು ; ಶಪಥಮಾಡು : "ಬಾಯ್ಮಾಡು (ಬಾಯ್ + ಮಾಡು)—ಪ್ರತಿಜ್ಞಾಯಾಂ" (ಕಪುಧಾ); ಅಶ್ವತ್ಥಾಮಂ . . . ಹಸ್ತಿನಪುರದೊಳ್ ಪಾಂಡವರಿರ್ದರೆ ಗೆತ್ತುಮಲ್ಲಿಗೆ ನಿಟ್ಟಾಲಿಯಾಗಿ ದಾಟಿಯನಿಟ್ಟು ಮುಟ್ಟಿವಂದು ಬಾಯ್ಮಾಡಿ ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯೂತ್ತಮೌಜಸರಂ ಕೊಂದು (ಪಂಪಭಾ. ೦೩-೦೦೬ ಪ). ೨. ಕೂಗಾಡು ; ಗಲಾಟೆ ಮಾಡು : ಸುಮ್ಮನೆ ಬಾಯಿಮಾಡಿ ಏನಾಗಬೇಕಾಗಿದೆ ? (ಕಮಸ. ೨೦೯). ಬಾಯ್ವಾಯ್= ಮುತ್ತು; ಚುಂಬನ: ಬಾಯ್ವಾಯೊಳಾವಟ್ಕಱೊಂದೊದವಿಂ ತಂಬುಲಮಂ ಕೊಳಲ್ ಮಱೆದು ನೀನಿರ್ದಂದಮೇಂ (ಅಂಪ್ರ. ೩-೨೩) ; ಹೃದಯ ಮನಿತ್ತಪನಾ ಸಮಯದೊಳೆನೆ ಬಾಯ್ವಾಯೊಳಿತ್ತು ತಂಬುಲಮನಲಂ ಪೊದವಲ್ಕೆ ಪರಸಿ ಬೀಟ್ಕೊಳಿಸಿದನೆಂತಾನುಂ ನಿಜಾತ್ಮಜನನಧಿರಾಜಂ (ಕಾರಂಉ. ೩೦೦). [ದೇ. ॥ ತಮಿ. ಕೋತ. ಪರ್ಜಿ. ವಾಯ್; ಮಲ. ವಾಯ್, ವಾ ; ತುಳು. ಬಾಯಿ; ಕೊಡ. ಬಾಯ್; ತೆಲು. ವಾಯಿ; ಕುರುಖ್. ಬಾಈ ; ಬ್ರಾಹುಈ. ಬಾ]

ಬಾಯಕ್ಕಿ (ನಾ). ಬಾಯಿಗೆ ರುಚಿಯಾದ ಆಹಾರ; ಮೃಷ್ಟಾನ್ನ (?): ಬಾಯಕ್ಕಿಯ ಬೇಡುವವರೆಲ್ಲರೂ ಬಡಪಾಯಿವಂತರ ನೋವು ಬಲ್ಲರೆ ಹಿ[ಶಾಕಾಂ. ಹ]ಸಿವ ವಿಹಂಗ ಪಶುವಿನ ನೋವ ಬಲ್ಲುದೆ (ಕೂಪ್ಯಸಂ. ೩೦೯-೦೯). [ಬಾಯ್ + ಅಕ್ಕಿ]

ಬಾಯನ, ಬಾಗಿನ, ಬಾಯಿನ (ನಾ). ಮದುವೆ, ಹಬ್ಬ, ವ್ರತ ಮುಂತಾದ ಶುಭಪ್ರಸಂಗಗಳಲ್ಲಿ ಮುತ್ತೈದೆ, ಬ್ರಾಹ್ಮಣ ಮೊದಲಾದವರಿಗೆ ಕೊಡುವ (ಆಹಾರಪದಾರ್ಥ ಇತ್ಯಾದಿಗಳ) ಕಾಣಿಕೆ : ಉಪಾಯನ : ಬಲಿ ಬಾಯನಂಗಳುಂ ಮಂಗಲತೂರ್ಯ ಮುಮೆಸೆಯೆ . . . ಗೋಪಕಾಂತೆಯರ್ ನೆರೆದಾಗಳ್ (ಜಗನಿ. ೩-೨೬); ಸುತನಂ . . . ವಿಜಯಾವತೀಮಹಾಸತಿ ಪಡೆದಳ್ ಸಮಂತಿರದೆ ಬರ್ಪುದು ಬಾಯನಕೆ (ಕುಸುಮಾ. ೬-೦೦೬); ಮುನಿಕಾಮಿನಿಯರ್ಗೆಂದು ಕಟ್ಟಿದ ಬಾಯನಂಗಳಂ ಮಱೆತೆನಲಾ ! (ರಾಮಾಶ್ವ. ೨೯-೨೫). ಬಾಗಿನ : ಹರನರಸಿ ಗೌರಿಗೆ ಸಮರ್ಪಿಸಿ ಹರುಷದಿಂ ಬಾಗಿನವನೀಯೆಂದುಱುವ ವೇದವ್ಯಾಸಮುನಿ ಗಾಂಧಾರಿಗಱುಹಿದನು (ಸಮಪ. ೨೦-೬); ಬಾಗಿನಕ್ಕಾಗಿ ಚಕ್ಕುಲಿ ಉಂಡೆಗಳು ಮುಂತಾದ್ದು ತುಂಬಾ ಇತ್ತು (ನೀತಿಸಂ. II, ೭) ; ಅರಮನೆಯಿಂದ ಮೊರದ ಬಾಗಿನ ತೆಗೆಸಿಕೊಂಡು ಬಂದಿದ್ದೇನೆ (ಇಪಿದು. ೬೯). ಬಾಯಿನ : ಮಣಿಮಯಭಾಜನಂಗಳೊಳ್ ತೆಕ್ಕನೆ ತೀವಿದ ಪಂಚರತ್ನದ . . . . ಕಪ್ಪುರದ ಪಳಿಕಿನ ಬಾಯಿನಂಗಳಂ ಬೀಱು (ಅಂಪ್ರ. ೯-೩೯ ಪ); ರನ್ನದ ಬಾಯಿನಕ್ಕೆ ಪಲವಂದದ ಚಂದದ ಸೀರೆಗೆನ್ನವರ್ತನ್ನವರೆನ್ನದಿತ್ತು (ಮುಲ್ಲಪು. ೯-೦೦೯) ; ಕೂಡಲಸಂಗಮದೇವರಿಗೆ ಚೀಲಾಳನೆಂಬ ಬಾಯಿ [ಶಾಕಾಂ. ಗಿ]ನವನಿಕ್ಕಿದರೆ ಹೇಳಾ (ಬಸವ. ೦೩೨) ; ಶಾಕಿನಿಯರನು ಕರೆಯಿಸಿ ನಿನ್ನ ಕಯ್ಯಲಿ ಧುರದೊಳಗೆ ಬಾಯಿನವ ಕೊಡಿಸುವೆನು (ಕುಪ್ಯಾಸ. - ೬೦೩

೦೬-೪೮). 'ಉಪಾಯನ' ಹೋ.

[< ಸಂ. ವಾಯನ. / ಪ್ರಾ. ವಾಯಣ. / ತುಳು. ಬಾಯನ, ವಾಯನ ; ತೆಲು. ವಾಯನ]

ಬಾಯರು 'ಬಾಯಾಱು$_2$' ನೋ.

ಬಾಯಳಿ 'ಬಾಯಱಿ' ನೋ.

ಬಾಯಱಿಕೆ 'ಬಾಯಾಱಿಕೆ' ನೋ.

ಬಾಯಱು 'ಬಾಯಾಱು$_1$' ನೋ.

ಬಾಯಱಿ, ಬಾಯಳಿ (ಕ್ರಿ). ೧. ಬಾಯಿಯುಹರಿದು ಹೋಗು,— ಸೀಳಿ ಹೋಗು : ಆಯದ ನೀರೊಳಗೆ ತನ್ನನಡಸಿದ ನೆಗಟಂ ಬಾಯಱಿ ವಿನಮಿಸಿಯುಮರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗಟ್ಟಂ (ಪಂಪಭಾ. ೨-೬೦). ೨. ಬಾಯಿ ಸೋಲು ; ಬಾಯಿ ಬಿದ್ದುಹೋಗು: ಸಂಬೋಧನೆ ದೀರ್ಘೋಕ್ತಿಯೊಳಿಂಬಾಗಿರೆ ಬರ್ಕುಮದನೆ ಪಲವೆಡೆಗಳೊಳೆಂದುಂ ಬಲ್ಲವರಿಡದಿರ್ಕಾದಂ ಬಾಯಱಿದೂಳ್ವವೋಲ್ ಕರಂ ವಿರಸತರಂ (ಕವಿರಾ. ೨-೨೩) ; ಭಾನುಮತಿ ಬಾಯಱಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ ಕವಿದು ಪಟ್ಟು (ಪಂಪಭಾ. ೭-೩೩ ಪ) ; ಹಾಹಾರವದಿಂ ಶೂಲಾಗ್ರದೊಳ್ ಬಾಯಱಿದೊಳಱುವಿನಂ ಕೊಲ್ವುದಂ ಕನ್ನೆ ಕಂಡಳ್ (ಸುಕುಮಾ. ೭-೩೫). ೩. ಗೋಳಾಡು ; ದುಃಖಿಸು : ಇಂತುಟು ಸಂಸ್ಕೃತಿಧರ್ಮಮೇಕೆ ಬಾಯಱಿವುದದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ (ಅದಿಪು. ೩-೫೩); ತರಳಿಕೆ . . . ಕಾದಂಬರಿಯನುಱಿದೆತ್ತ ಪೋಪೆಯೆಂದು ಬಾಯಱಿದು ಪಳವಿಸುತ್ತಮಿರ್ದಳ್ (ಕಾದಂಉ. ೫೭೮) ; ಗಾಂಗೇಯರ ಮಾತುಗೇಳದಱಿದಂ ಕುರುರಾಜನದರ್ಕೆ ದುಃಖದಿಂ ಬಾಯಱಿಯಲ್ಕೆವೇಡ (ಗದಾಯು. ೦೦-೦೨). ಬಾಯಳಿ : ೩. ಕಾವುದೆಂದೊಱಲುತ್ತುಂ ಬಾಯಳಿವ ಮದನನಂ ಕಾತ್ಯಾಯನಿ ದಯೆಯಿಂದೆ ನೋಡಿ ನಯದಿಂ ನುಡಿದಳ್ (ಗಿರಿಕ. ೮-೦೬) ; ಒರ್ವಬಳೆ . . . ಮೊಱೆಯಿಟ್ಟೊಱಲಿ ಬಾಯಳಿಯುತ್ತೆದಳೆ (ಭಾವಸಂ. ೮-೩೨). ೪. ಕಿರಿಚು; ಬೊಬ್ಬೆ ಹಾಕು : ಸತ್ಕೃತಿಯನು ಒಳಗಱಿಯದೆ ಪೊಱಗಱಿಯದೆ ಕುಕವಿಗಳಿಳಿಕೆಯ್ವುತಿಹರು ಬಾಯಳಿದು (ಕುರಾಸಾಂ. ೦-೭೭). ೫. ಬಾಯಿಬಿಡು ; ಬಾಯಿ ತೆರೆ : ಆ ಮೃಗನೇತ್ರೆಯ ರೂಪಳವೆ ಬಣ್ಣಿಸಲು ಬಾಯಳಿದು (ಕುರಾಸಾಂ. ೨೯-೦೦೬) ; ಪೋಯೆಂದು ಬಂದೆಮ್ಮ ಕೊರಳ ತಕ್ಕಿಸಿಕೊಂಡು ಬಾಯಳಿದುಱಿ ಹಲುಬುವರು (ಭರತ. ೬೫-೪೭) ; ಮದಮುಖನೆ ಬಾಯಳಿದು ಪೇಳಲೇಂ ನಮ್ಮಂಗಮಂ ಪರಿಕಿಸು (ಘೋರಾಸು. ೨೩-೨೪). ೬. (ನಾಚಿಕೆ ಅಥವಾ ಸಂಕೋಚದಿಂದ) ಮಾತಾಡಲಾಗದಿರು ; ಮಾತು ತೋಚದಿರು : ತಲೆಗುತ್ತಿ ಕಡುನಾಣ್ಚಿ. . .ಭೂಪಾದಿಗಳ್ ಬಾಯಳಿವುತಿರಲು (ಪದ್ಮರಾ. ೬-೬೯). [ಬಾಯ್ + ಅಱಿ$_1$]

ಬಾಯಾಚಾರ (ನಾ). ಹೊರಗಿನ ನಡವಳಿಕೆ : ಬೂಟಾಟಿಕೆ ; ಕಪಟಾಚರಣೆ : ತಾವು ಕುಂಪನಿಗೆ ಬಾಯಾಚಾರ ದೋಸ್ತಾರರಾದ್ದರಿಂದ, ಇದಕ್ಕಿಂತ ಅಧಿಕವಾಗಿ ಬರದು ಕಳುಹತಕ್ಕದಿಲ್ಲವ್ದಷ್ಟೆ (ರಾಪೇಂದ್ರ. ೬೭); ತಾವು ನಾವು ದೋಸ್ತಾರರಾದ್ದರಿಂದಾ ಬಾಯಾಚಾರಕ್ಕೆ ಸಲುವಾಗಿ ಬಹಳ ಫಲವಾಗಿ ಇರುವಂಥಾದ್ದು ವರ್ಧನೆ ಆಗಿ ಇರಬೇಕು (ರಾಪೇಂದ್ರ. ೦೬೦).

[< ಸಂ. ಬಾಹ್ಯಾಚಾರ]

ಬಾಯಾಡಿಸು (ಕ್ರಿ). ಆಸ್ವಾದಿಸು ; ರುಚಿ ನೋಡು : ಸತ್ಯ ಲೋಕದಲಿ ತ್ರಿದಶರುಱಿ ಬಾಯಾಡಿಸಿದರಗ್ಗದ ಧ್ರುವಾದಿಗಳನು (ಕುಮ್ಮಾಸ. ೭-೩೪); ಬಾಯಾಡಿಸುತ ಬಣ್ಣಿಸುತ ಕೈಗಳ ನೀಡಿ ಬಹುವಿಧಭಕ್ಷ್ಯ ಭೋಜ್ಯಂಗಳನು ಜಠರದಲಿ ಕೂಡಿದನು ಗೋಪರಿಗೆ ಹರುಷವ ಮಾಡಿದನು (ವಿಭಾಗ. ೦೦-೨೨-೨೮); ಚಿರೋಟಿಗಳನ್ನೂ ಹುರಿಗಾಳನ್ನೂ ಶಾರದಮ್ಮನವರು ಎಲ್ಲರಿಗೂ ಹಂಚಿದರು. ಇಂಥ ಸಂದರ್ಭದಲ್ಲಿ ಇವನ್ನು ಬಾಯಾಡಿಸುವುದರಿಂದ ಬಹಳ ಪ್ರಯೋಜನವಿದ್ದಿತು (ಮೂಲಾನ. ೦೨೩). [ಬಾಯಾಡು + — ಇಸು$_3$]

ಬಾಯಾಡು (ಕ್ರಿ). ಆಹಾರವನ್ನು ಅಗಿ, — ಜಗಿ : ಬಾಯಾಡಿದರೆ ಕೈಯಾಡೀತು (ಗಾದೆ). 'ಬಾಯಾಡಿಸು' ಪರಾ. [ಬಾಯ್+ಆಡು$_1$]

ಬಾಯಾನ್ (ಕ್ರಿ). ೧. ಬಾಯಿ ನೀಡು ; ಬಾಯೊಡ್ಡು : ಪಕ್ಕಿ ಸೋವ ವರಸ್ತ್ರೀಯರ . . . ತಂಬುಲಕೆ ಬಾಯಾಂಪಂದದಿಂ ಬಂದು ಪಾಯ್ದುವು ಕೀರಾಳಿಗಳಲ್ಲಿ ಪಾಮರವಧೂಬಿಂಬಾಧರಕ್ಕಾವಗಂ (ಧರ್ಮನಾ. ೨-೨೯). ೨. ಆಸೆ ಪಡು ; ಹಾತೊರೆ : ನಮ್ಮ ಉದಾರಾತಿಥ್ಯಕ್ಕೆ ಬಾಯಾಂತು ಹರಿತರುತ್ತಿರುವ ಆ ತಿರಿಕೂಳ ತೆಲುಂಗರೊಡೆಯನಿಗೆ ಉತ್ತರವೇನು (ಮಂತ್ರಕ. ೦೯-೦೪). [ಬಾಯ್+ಆನ್$_1$]

ಬಾಯಾರ್, ಬಾಯಾರು$_1$ (ಕ್ರಿ). ೧. ಕೂಗಾಡು ; ಬೊಬ್ಬಾಟ ಮಾಡು ; ಆರ್ಭಟಿಸು : ವರರುಚಿಭಟ್ಟನಂ ಪಲರ್ ದುಷ್ಟರೊಂದಾಗಿ ಪೊಲೆಯನೆಂದು ಗೆಲೆ ಬಾಯಾರ್ವರೆಂದೊಡುಱಿದರಳವಾವುದು (ಪಂಪಕಂ. ೦೪೮-೧೩); ಧರ್ಮಬುದ್ಧಿ ತತ್ಕೂರ್ಮೆಗಿಡಲ್ನುಡಿದು ನೀಂ ಗೆಲೆ ಬಾಯಾರ್ದು ಪೋಗಲ್ಪಡೆಯೆ ವಿಚಾರಂಗೆಯ್ವಂ (ಪಂಪಕಂ. ೦೭೦-೮). ೨. ಆಕ್ರಂದಿಸು ; ಪ್ರಲಾಪಿಸು ; ರೋದಿಸು : ಗರಳಭಯದಿಂದೆ ಬಾಯಾರ್ವರಂ ಚೀರ್ವರಂ . . . ಚಂದ್ರಚೂಡಂ ಕಂಡನು (ಪಂಪು. ೨೨-೦೮); ನಡೆಗೊಳಲ್ ಕಂಡು ಬಾಯಾರ್ವಳಂ ಚೀರ್ವಳಂ . . . ಭರತಾವರಜನಗಲ್ದು ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ (ಶೈವಿಭಾ. ೦೯-೩೦). ಬಾಯಾರು$_1$: ೩. ಬಾಯಿಬಡಿ ; ಅಲ್ಲಗಳೆ : ಬೆಟ್ಟಕ್ಕೆ ಬೇಗೆಯಿಕ್ಕಿದನಿವಂ ಸಾಲಮಂ ಕೊಟ್ಟುದಿಲ್ಲೆಂದು ಬಾಯಾರಿದನಿವಂ . . . ಬಟ್ಟೆಯಂ ಬಡಿದು ಬಾಳಿದನಿವಂ (ಪಂಪು. ೫೬-೩೬).

[ಬಾಯ್+ಆರ್$_1$]

ಬಾಯಾರಿಕೆ 'ಬಾಯಾಱಿಕೆ' ನೋ.

ಬಾಯಾರು$_1$ 'ಬಾಯಾರ್' ನೋ.

ಬಾಯಾರು$_2$ 'ಬಾಯಾಱು$_1$' ನೋ.

ಬಾಯಾಲ್ (ಕ್ರಿ). ಬಾಯಿಗೆ ಬಂದದ್ದು ಆಡು ; ಮನಸ್ವಿಯಾಗಿ ಮಾತನಾಡು : ಕಂಡುದ ನುಡಿದೆನು ಸ್ತುತಿಯೆನ್ನದಿರು ಲೇಸ ಕಂಡು ಬಾಯಾಲ್ವನು ಕವಿಯೇ (ಭರತ. ೨-೬೨). [ಬಾಯ್ + ಆಲ್]

ಬಾಯಾಳಿ (ನಾ). ಅತಿಯಾಗಿ ಮಾತನಾಡುವ ವ್ಯಕ್ತಿ: 'ಬಾಯಾಳಿತನ' ಪರಾ. [ದೇ.॥ ತಮಿ. ವಾಯಾಟಿ ; ತುಳು. ಬಾಯಾಳಿ, ಬಾಯಾಡಿ]

ಬಾಯಾಳಿತನ (ನಾ). ಅತಿಯಾಗಿ ಮಾತಾಡುವ ಸ್ವಭಾವ : ಅವಳು ಅತಿಕೋಪಸ್ವಭಾವವುಳ್ಳವಳೂ ಬಾಯಾಳಿತನವುಳ್ಳವಳೂ ಆದುದರಿಂದ . . . ಅವಳನ್ನು ಗಯ್ಯಾಳಿಗೌರಿಯೆಂದು ಕರೆಯುತ್ತಿದ್ದರು (ಕವಿಕ. ೪೪).

[ಬಾಯಾಳಿ + — ತನ]

ಬಾಯಾಱಿಕೆ, ಬಾಯಱಿಕೆ, ಬಾಯಾರಿಕೆ (ನಾ). ೧. ನೀರಿಗಾಗಿ ಬಾಯಿ ಒಣಗುವುದು, — ಗಂಟಲು ಒಣಗುವುದು : ತೃಷೆ ; ನೀರಡಿಕೆ : ದೇಶಾಂತ್ರಿಯಾದವ ತಿಗುಣೆ ಚಿಕ್ಕುಟ ಪಸಿವು ಬಾಯಾಱಿಕೆ ಗಂಜಿದರೆಂತಹುದು (ರೇವರೆ. ಹ. ೩೬೬-೦೪) ; ಮಗಮಗಿಪ ಪರಿಮಳವನಿಕ್ಕಲದು ನವ್ಯೋದಕಂ ಬಾಯಾಱಿಕೆ[ಬಾಕಾಂ. ಯಱಿಕೆ, ಯಱಿತೆ]ಯಂ ಕೆಡಿಪುದು (ಸೂಪಶಾ. ೨-೪೩). ಬಾಯಱಿಕೆ : ೧. ಬಾಯ್ದೆಱಿಯನೊಲ್ದು ಕರ್ದುಂಕಿ ಕರ್ದುಂಕಿ ಪೀರ್ದು ಪೀರ್ದೊಡನಡಸಿರ್ಪ ಬಾಯಱಿಕೆಯಂ ತವಿಪೆಂ ಸವಿ ಪೆಂಪುಗೊಂಬಿನಂ (ಪಕವಿ. ೬-೨೦೨). ಬಾಯಾರಿಕೆ : ೧. ತೃಷ್ಣೆಯೆಂದೊಡಂ ದಾಹಮೆಂದೊಡಂ ಬಾಯಾರಿಕೆಯೆಂದೊಡಂ ನೀರಡಿಕೆಯೆಂದರಿವುದು (ಸಕವೈ. ೨೮೨); ಬಹಳ ದೂರ ನಡೆದು ಬಂದಿದ್ದೀಯೆ. ನಿನಗೆ ಬಾಯಾರಿಕೆಯಾಗಿರಬೇಕು (ರೇವೀಕಾ. ೦೦) ; ಬಾಯಾರಿಕೆ ಬಂದಾಗ ಬಾವಿ ತೋಡಿದ ಹಾಗೆ (ಗಾದೆ). ೨. ನೀರಡಿಕೆಯನ್ನು ಹಿಂಗಿಸುವ (ಎಳನೀರು, ಪಾನಕ ಮೊದಲಾದ) ಪಾನೀಯ ಅಥವಾ ಬೆಲ್ಲದೊಡನೆ ಕೊಡುವ

ನೀರು ಇತ್ಯಾದಿ : ನಾರಾಯಣನು . . . ಬಂದು ಲೋಟ ಬಾಯಾರಿಕೆಯನ್ನು ತಾನೇ ತಂದು ಕೊಟ್ಟನು (ಮಾಂಗಾಮು. ೬೯) ; ಬಂದವರಿಗೆ ಬಾಯಾರಿಕೆ ಕೊಡುವುದು ಬೇಡವೆ ? (ದೇವಹಂ. ೧೬೦) ; ಆತ ಒಂದಪ್ಪು ಹೊತ್ತು ಅಲ್ಲೇ ವಿರಮಿಸಿದ. ಬಾಯಾರಿಕೆ ಕೇಳಿದ (ಮೂಕಜ್ಜಿ. ೩೫).

[ಬಾಯಾಜು$_1$ + — ಇಕೆ./ತುಳು. ಬಾಯಾರಿಗೆ]

ಬಾಯಾಜಿಸು (ಕ್ರಿ). ಬಯಕೆಯನ್ನು ಹುಟ್ಟಿಸು : ಆತ್ಮೇಶ್ವರನ ದಿಟ್ಟಿಗೆ ರೂಹುಗಾಣಿಸಿ ಬಾಯಾಜಿಸುತೆ ಬಾಣತಿರೂಹಿಂದೆ ಬಂದಳು ಹರಿನೀಲವೆಂಗೆ ತೊಟ್ಟಿಲ ಕಟ್ಟುವೆಡೆಗೆ (ನೋಹತ. ೦೬-೯೬). [ಬಾಯಾಜು$_1$ + — ಇಸು$_3$]

ಬಾಯಾಜು$_1$, ಬಾಯಜು, ಬಾಯಾರು$_2$ (ಕ್ರಿ). ೧. ಬಾಯಿ ಒಣಗು ; ನೀರಡಿಸು ; ದಾಹವುಂಟಾಗು : ಅರಗಿನ ಪುತ್ಥಳಿಯನುರಿ ಕೊಂಡಡೆ ಉದಕ ಬಾಯಾಜಿ ಬಳಲುತ್ತಿದೆ ಆಗೆಯಿಂ ಭೋ ಭಾವಿಯನಗೆಯಿಂ ಭೋ (ಅವಕಂ. ೬-೩೦); ಬಾಯಾಜಿತು ಎಂದು ಬಾವಿನೀರಿಗೆ ಪೋದೆ ಬಾವಿಲಿ ಜಲ ಬತ್ತಿ ಬಜಿದಾಯ್ತು (ಭುಕಂರ. ೯-೬೫-೦). ೨. ಹಂಬಲಿಸು ; ಹಾರೈಸು : ತೀವ್ರವಾಗಿ ಅಪೇಕ್ಷಿಸು : ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾಜುತ್ತಿಹೆನು (ಮಹಾದೇ. ೨. ೧೪೦-೩೨೦) ; ನೂಜು ಜನ್ಮವ ತಿರುತಿರುಗಿ ಬಾಯಾಜಿ ಕಾಮಿಸಲೀತನಂದದ ನೀಜರುಂಟೇ ನಳನ ಭವ ನಿರ್ಮಿಸಿದ ಸೃಷ್ಟಿಯಲಿ (ಶಂಕರಾ. ೩-೩-೪೬). ೩. ಗಾಬರಿಯಾಗು ; ದಿಗಿಲುಗೊಳ್ಳು : ಬಾಯಾಜಿದಿರಿ ಕಳ್ಳೇಜುಕಾಜನ ಕರುಳ ಹರಹುವೆನು (ಕುಮಾರ್ಕ್ರೋ. ೦೬-೩೦); ಬಾಯಾಜಿದುದು ಜನಕೆ ಲಯದೋಜಿದುದು ಜಗಕೆ (ಕಬಸಿ. ೩೦-೯). ೪. ಆಯಾಸಗೊಳ್ಳು ; ಬಳಲು : ಮಿಥ್ಯಾದೃಷ್ಟಿಗಳ್ . . . ಕುಚರ್ಚೆಗಳಿಂ ಬಾಯಾರ್ಪೊಡಂ ಸಜ್ಜಾನಮಿಲ್ಲದೆ ದರ್ಶನಮಂ ಪೊರ್ದದೆ ಮೋಕ್ಷಮನೈದಲ್ಪಾರದು (ಧರ್ಮಾಮೃ. ೬-೩೨) ; ದೂರದಲ್ಲಿರ್ದನೆಂದು ಆನು ಬಾಯಾಜಿ ಬಳಲುತ್ತಿರ್ದೆನಯ್ಯ (ಮಹಾದೇ. ೪. ೦೦೦-೨೩೭); ಬಾಯಾಜಿ ಚೀಜಿ ಚಿತ್ರಾಂಗದೆ ಹಲುಬಲು (ಕೈಲಾಸಾ. ೨೪-೦). **ಬಾಯಜು** : ೧. ಬಜತೆಯಾಜುತು ವರುಣಶರ ಬಾಯಜತು ನೀರಡಿಸಿದುದು (ಕುಮಾರ್ಕ್ರೋ. ೦೯-೯೬). **ಬಾಯಾರು$_2$** : ೧. ಬಳಲಿ ಬಾಡಿ ಬಾಯಾರಿ ಹಸಿದ ತೋಳನು ಹರಿವ ಹಳ್ಳವನೆ ಸಾರಿ ತೃಷೆಯ ಕಳೆಯಲು ನೀರಿಗಿಳಿಯೆ (ಕಬಭಾ. ೦೨-೦) ; ಪ್ರೇಮಲತೆ ಬಾಯಾರಿ ಕಾತರಿಸಿತಾವುದನೊ ತಾನರಿಯದುದ ಬಯಸಿ (ಜಕ್ಕಾಂಗ. ೬-೦೭೩). ೨. ಯುವತಿ ಪುರುಷನ ಬಯಸಿ ಬಾಯಾರುವದನರಿದುಯುವಳ ಸತ್ಕಾರ್ಯ ತನ್ನಿಂದ ತಡೆದಿದೆಯೆನುತ ರವಿಯಸ್ತಮಯಮಾಗಲು (ಪವಪೋ. ೨೬-೬). ೩. ನುಡಿ ನನ್ನಿಯೆಂದೆನಲ್ ಬಡವ ಬಾಯಾರಿದಂ (ಶಾಂಪು. ೦೬೦-೩೫೭). ೪. ವೀರವಿಕ್ರಮವಿಜಯರೆಂದಾಗೆ ದೈನ್ಯದಲಪಾರಚಿಂತೆಯೊಳು ಬಾಯಾರುವರೆ ದೇವ ನೀಂ (ಪಂಕಾರಾ. ೪-೦-೨೫). [ಬಾಯ್ + ಆಜು$_1$]

ಬಾಯಾಜು$_2$, ಬಾಯಾರು (ನಾ). ೧. = ಬಾಯಾಜಿಕೆ ೧: ಬಾಯಾಜಿದ ವರುಷ್ಟ ನೀರ್ಗುಡಿಯಲು ಮತ್ತು ಬಾಯಾಜು ಹೆಚ್ಚುವಂದದೊಳು (ಧರಕ. ೬೫-೩೯). **ಬಾಯರು** : ೨. = ಬಾಯಾಜಿಕೆ ೨ : ಮನೆಗೆ ಬಂದು ಬಾಯರು ಕೊಡಿ ಅಂದಾಗ ಬರಿ ನೀರು ಕೊಟ್ಟರೆ ಸೂರನ ಮಾಲು ಸಪ್ಪಗೆ ಆಗುತ್ತದೆ (ಮಾರಮಾ. ೫೭). ೩. (ಕರಾ) ದನಕರುಗಳಿಗೆ ಕುಡಿಯಲು ಇಡುವ. ತವಡು ಬೆರಸಿ ಕುದಿಸಿದ ನೀರು : ದನಗಳು ಹಟ್ಟಿಯನ್ನು ಸೇರುತ್ತವೆ . . . ಅವಕ್ಕೆ ಮೈಲಿಗೆಯಲ್ಲಿರುವಾಗಲೇ ಅಕ್ಕಚ್ಚು, ಬಾಯರು ಹಾಕಿ. ಬಳಿಕ ಸ್ನಾನ ಮಾಡಿ . . . ಕಾಲುದೀಪ ಉರಿಸಬೇಕು (ಮಾರಮಾ. ೧೨). [< ಬಾಯಾಜು$_1$]

ಬಾಯಿ$_1$ 'ಬಾಯ್' ನೋ.

ಬಾಯಿ$_2$ (ನಾ). ೧. ಹೆಂಗಸರ ಹೆಸರಿನ ಕೊನೆಯಲ್ಲಿ ಗೌರವಾರ್ಥವಾಗಿ ಸೇರಿಸುವ (ತಾಯಿ ಅಥವಾ ಅಮ್ಮ ಎಂಬರ್ಥದ) ಪದ : ಹಾಗೆಯೇ ಒರಗಿಕೊಂಡ ಕಮಲಾಬಾಯಿಗೆ ಕ್ರಮೇಣ ಎಚ್ಚರಾಗಿತ್ತು (ಸಮಜೀ. ೯೩೯). ೨. ಮನೆಯ ಒಡತಿ ; ಯಜಮಾನಿ : ಆಚಾರ್ಯರು ಬಂದ ಮೇಲೆ 'ಬಾಯರು' ಒಬ್ಬರ ಬೇಕೇ ಬೇಕು (ಶ್ರೀರಂಗ. ೧೬೦) ; ಬಾಯೊ, ರಾಯರು ಎರಡು ಊಟ ಕಳಿಸಿದ್ದಾರೆ (ಕಪ್ಪುಹು. ೨೬). ೩. ಹೆಂಗಸು ; ಸ್ತ್ರೀ : ಮರಾಠರ ಬಾಯಿಯೊಬ್ಬಳನು ಪಾತ್ರೆ ತಿಕ್ಕಲು ಗೊತ್ತುಮಾಡಿದೆ (ಸ್ಮೃತಿತ. ೨೫೫). ೪. ಸಂಗೀತ, ನೃತ್ಯಗಳಿಂದ ಜೀವಿಸುವವಳು ; ಪಾತ್ರದವಳು ; ವೇಶ್ಯೆ : ಇಷ್ಟು ಪ್ರಸಿದ್ಧ 'ಬಾಯಿ' ಯ ಮನೆಯಲ್ಲಿ ಸಂಗೀತಸಾಮಗ್ರಿಯೊಂದೂ ಕಾಣಲಿಲ್ಲ (ಶ್ರೀಕಾಂತ. II, ೧೯೦).

[< ಹಿಂ. ಮರಾ. ಬಾಈ]

ಬಾಯಿಕ (ನಾ). ಒಬ್ಬಾತನ ಹೆಸರು : ಅಯದ ಮೆಯ್ಗಲಿ ಬಾಯಿಕ ನೆಮ್ಮ ನೆಗಟ್ಟಿಯಂ ಪ್ರಕಟಿಸಿದನ್ ಶ್ರೀದಯಿತನ ಬಾಯಿಕನ ಮನೋದಯಿತೆಗೆ . . . ತಾಮಾದರ್ ತನಯರ್ ಬೇಟಲ್ ಮಾದುವರಂ ದೋಯಿಲಮ್ಮನೆಮ್ಮರ್ ಪೆಸರಿಂ (ಎಕ. II, ೦೩೯-೨ ; ಸು. ೪೫೦). [?]

ಬಾಯಿಕಟ್ಟು$_1$ 'ಬಾಯ್ಕಟ್ಟು$_1$' ನೋ.

ಬಾಯಿಕಟ್ಟು$_2$ 'ಬಾಯ್ಕಟ್ಟು$_2$' ನೋ.

ಬಾಯಿಕಡಾಣಿ (ನಾ). ಕುದುರೆಯ ಬಾಯಿಗೆ ಹಾಕುವ ಕಡಿವಾಣ : "ಕವಿಕಾ, ಖಿಲೀನ:— ೨ ಬಾಯಿಹಗ್ಗ, ಬಾಯಿಚಿಕ್ಕ, ಲಗಾಂ, ಬಾಯಿಕಡಾಣಿ, ಕಾಣಿಕೆ " (ಸಿಂಗ್ಲಂತಿ. ೨೫೦). [ಬಾಯಿ$_1$ (< ಬಾಯ್) + ಕಡಾಣಿ]

ಬಾಯಿಕಲು 'ಬಾಯ್ಕಾಲ್' ನೋ.

ಬಾಯಿಕಲ್ಲಿ (ನಾ). (ದನಗಳ ಬಾಯಿಗೆ ಕಟ್ಟುವ) ಬಾಯಿಕಾಕ್ಕೆ : "(ಕಚ್ಚದಂತೆ, ತಿನ್ನದಂತೆ, ತೋಡದಂತೆ, ಪ್ರಾಣಿಗಳ ತಲೆಗೆ ಕಟ್ಟುವ) (ಬಾಯಿ)ಕಾಕ್ಕೆ, ಬಾಯಿಕಲ್ಲಿ " (Muzzle. ಇಂಗಸಿ).

[ಬಾಯಿ$_1$ (< ಬಾಯ್) + ಕಲ್ಲಿ$_1$]

ಬಾಯಿಕಲ್ಲು 'ಬಾಯ್ಕಾಲ್' ನೋ.

ಬಾಯಿಕಾಲು 'ಬಾಯ್ಕಾಲ್' ನೋ.

ಬಾಯಿಕಾಕ್ಕೆ (ನಾ). = ಬಾಯಿಕಲ್ಲಿ : ಆಡಿಕೊಳ್ಳುವ ಬಾಯಿಗಳಿಗೆ ಬಾಯಿಕಾಕ್ಕೆ ಹಾಕುವುದಕ್ಕಾದೀತೆ ? (ಪಳುಸು. ೬೯).

[ಬಾಯಿ$_1$ (<ಬಾಯ್) + ಕಾಕ್ಕೆ$_1$]

ಬಾಯಿಕೊಚ್ಚು, ಬಾಯ್ಕೊರ್ಚು (ಕ್ರಿ). ತನ್ನನ್ನು ತಾನೇ ಹೊಗಳಿಕೊಂಡು ಮಾತಾಡು; ಜಂಬ ಕೊಚ್ಚಿಕೊಳ್ಳು; ಬಡಾಯಿ ಕೊಚ್ಚು: ಸೊಸೆಯನ್ನು ಹೊಟ್ಟೆಯ ಮಗಳಿಗಿಂತ ಹೆಚ್ಚಾಗಿ ನೋಡಿಕೊಂಡಿದ್ದೇನೆ . . . ಎಂದು ಬಾಯಿಕೊಚ್ಚಿಕೊಂಡರು (ಪದ್ಮಸ. ೧೦). **ಬಾಯ್ಕೊರ್ಚು** : ಚೆಂಬೊನ್, ಕರ್ಬೊನ್, ಬೆಳ್ಳಿ, ಬಂಗಾರಂಗಳನ್, ನಾನಲ್ಲದಾರ್ ತೋರ್ದರಯ್ ಬಜಿದೆ ಬಾಯ್ಕೊರ್ಚುವನನುಬಿದು ಆರುಮಲ್ಲೆಂದೆ ಬಗೆದಪೆನ್ (ಪದ್ಮಶ್ರ. ೨೬-೫೭೦). [ಬಾಯಿ$_1$ (< ಬಾಯ್) + ಕೊಚ್ಚು$_1$]

ಬಾಯಿಕೊಬ್ಬು 'ಬಾಯ್ಗೊಬ್ಬು' ನೋ.

ಬಾಯಿಕೋಲು 'ಬಾಯ್ಕಾಲ್' ನೋ.

ಬಾಯಿಗರೆ (ಕ್ರಿ). ನುಡಿ ; ಧ್ವನಿ ಮಾಡು : ಪಿರಿದು ರಂಜಿಸುವುದಂತದ ಜೊಳುಗ್ಗಡಿಸುವ ಗೊರವ ಬಂದುದ ಬಾಯಿಗರೆವ ಅರಗಿಳಿ (ಪಂಪಾಸಂ. ೦-೬೯). [ಬಾಯಿ$_1$ (<ಬಾಯ್) + ಕರೆ$_1$]

ಬಾಯಿಗಾಳಿಗ 'ಬಾಯ್ಗಾಳಿಗ' ನೋ.

ಬಾಯಿಗೂಡಿಸು (ಕ್ರಿ). ಹೊಂದಿಸು ; ಸರಿಗೊಳಿಸು : ಲೆಕ್ಕ ಬಾಯಿಗೂಡಿಸುವ ಬಗೆ ಇದಲ್ಲ (ಇಶ್ವಳ. ೨೩೦).

[ಬಾಯಿಗೂಡು (<ಬಾಯ್ಗೂಡು) + — ಇಸು$_3$]

ಬಾಯಿಗೂಡು 'ಬಾಯ್ಗೂಡು' ನೋ.

ಬಾಯಿಚಪಲ (ನಾ). ತಿನ್ನುವ ಬಯಕೆ ; ಜಿಹ್ವಾಚಾಪಲ್ಯ : ಬಾಯಿ ಚಪಲದವರು ಏನಾದರೂ ಮಾಡಿಕೊಂಡು ತಿಂದದ್ದು ಪತ್ತೆಯಾದರೆ ನಂದಾದೀಪದ ಖರ್ಚನ್ನೆಲ್ಲಾ ಅವನೊಬ್ಬನೇ ದಂಡವಾಗಿ ತೆರಬೇಕಾಗಿತ್ತು (ಹುಸ್ಕಿಹ. ೨೦). [ಬಾಯಿ$_1$(<ಬಾಯ್)+ಚಪಲ]

ಬಾಯಿಚಿಕ್ಕ (ನಾ). = ಬಾಯಿಕಡಾಣಿ : "ಕವಿಕಾ, ಖಲೀನಃ — ೨ ಬಾಯಿಹಗ್ಗ, ಬಾಯಿಚಿಕ್ಕ, ಲಗಾಂ, ಬಾಯಿಕಡಾಣಿ, ಕುಣಿಕೆ" (ಸಿಕ್ಕಾಂತಿ. ೨೩೦). [ಬಾಯಿ$_1$ (< ಬಾಯ್)+ಚಿಕ್ಕ$_2$ (< ಸಿಕ್ಕ$_1$)]

ಬಾಯಿಚ್ಛೆ (ನಾ). = ಬಾಯಿಚಪಲ : ಕೊಲ್ಲೆನಯ್ಯಾ ಪ್ರಾಣಿಗಳ ಮೆಲ್ಲೆನಯ್ಯಾ ಬಾಯಿಚ್ಛೆಗೆ (ಬಸವ. ೭೩೫).

[ಬಾಯಿ$_1$ (<ಬಾಯ್)+ಇಚ್ಛೆ]

ಬಾಯಿಜಾಳಿಗೆ (ನಾ). = ಬಾಯಿಕಲ್ಲಿ : ಇರಿವೆಗಳಿಗೆ ಸಹಿತ ಬಾಯಿಜಾಳಿಗೆ ಹಾಕಲಿಕ್ಕೆ ಸುರೂ ಮಾಡ್ಯಾರ! (ಬಸವ. ೬) ; ಎಡೆಕುಂಟೆ ಹೊಡೆಯುವಾಗ ದನಕ್ಕೆ ಬಾಯಿಜಾಳಿಗೆ ಹಾಕಬೇಡವೆ ? (ಕೂಡಿ).

[ಬಾಯಿ$_1$ (<ಬಾಯ್)+ಜಾಳಿಗೆ$_1$]

ಬಾಯಿಜ್ವರ (ನಾ). (ಸಾಮಾನ್ಯವಾಗಿ ಬೇಸಗೆಯಲ್ಲಿ) ದನಗಳಿಗೆ ಬರುವ ಒಂದು ಬಗೆಯ ಬಾಯಿಹುಣ್ಣು : ಈ ಎಮ್ಮೆಗೆ ಒಂದು ಸಲ ಕಾಲುಜ್ವರ ಬಾಯಿಜ್ವರ ಆಯಿತು (ಹೇಮಾಶೀ. ೭೯). 'ಕಾಲುಜ್ವರ' ಪರಾ. [ಬಾಯಿ$_1$ (< ಬಾಯ್)+ಜ್ವರ]

ಬಾಯಿಡಬ್ಬು (ನಾ). ಮಾತಿನ ಆಡಂಬರ ; ಬಡಾಯಿ : ಶೀನಮಯ್ಯರ ಹತ್ತಿರ ಆಪಾಟಿ ರೂಪಾಯಿ ಎಲ್ಲಿಂದ ಬರಬೇಕು ? ಸುಮ್ಮನೆ ಬಾಯಿ ಡಬ್ಬಿಗೆ ಹೇಳಿರಬೇಕು (ಸುರಸು. ೦೩೯).

[ಬಾಯಿ$_1$ (< ಬಾಯ್)+ಡಬ್ಬು$_4$ (< ದಂಬ)]

ಬಾಯಿತಪ್ಪು$_1$ (ಕ್ರಿ). ಮಾತಾಡುವಾಗ ಎಚ್ಚರವಿಲ್ಲದಿರು ; ಅಜಾಗರೂಕತೆಯಿಂದ ಬಾಯಿ ಬಿಡು : ಇಂದಿರೆಯು ಒಂದು ದಿನ . . . ಬಾಯಿತಪ್ಪಿ "ಇದು ಕಾಲಾದಿಘಯ ಡಕಾಯಿತಿ!" ಎಂದು ಬಿಟ್ಟಳು (ಬಂಕಿಸು. ೦೦೯) ; ನಾನು ಬಾಯಿತಪ್ಪಿ ಒಂದು ಹೇಳುವುದಕ್ಕೆ ಬದಲು ಇನ್ನೊಂದು ಹೇಳಿದ್ದೆ (ಮಾರ್ಗದ. ೬೩). [ಬಾಯಿ$_1$ (<ಬಾಯ್)+ತಪ್ಪು$_1$]

ಬಾಯಿತಪ್ಪು$_2$ (ನಾ). ಎಚ್ಚರ ತಪ್ಪಿ ಆಡುವ ನುಡಿ ; ಅರಿವಿಲ್ಲದೆ ಹೊರಬರುವ ಮಾತು : (ಕಿ). [< ಬಾಯಿತಪ್ಪು$_1$]

ಬಾಯಿತೀಟೆ (ನಾ). ಇತರರನ್ನು ದೂರಬೇಕೆಂಬ ಆತುರ,—ಆಡಿಕೊಳ್ಳ ಬೇಕೆಂಬ ಚಾಪಲ್ಯ : ಈಗಲೆ ನಮ್ಮ ಮೇಲೆ ಕತ್ತಿ ಕಠಾರಿ ಹಿಡಿದು ಎಷ್ಟೋ ಜನ ನಿಂತಿದ್ದಾರೆ. ಅವರ ಬಾಯಿತೀಟೆಗೆ ಗ್ರಾಸ ಒದಗಿಸಿದ ಹಾಗಾ ಗುತ್ತೆ (ಪಟಿಸಾ. ೩೦). [ಬಾಯಿ$_1$ (< ಬಾಯ್)+ತೀಟೆ (<ತೀಂಟೆ$_1$)]

ಬಾಯಿತೆಗೆ 'ಬಾಯ್ದೆಗೆ' ನೋ.

ಬಾಯಿತೆರೆ 'ಬಾಯ್ದೆಱೆ$_1$' ನೋ.

ಬಾಯಿದುತ್ತು 'ಬಾಯ್ದುತ್ತು' ನೋ.

ಬಾಯಿದೆಱೆ$_1$ 'ಬಾಯ್ದೆಱೆ$_1$' ನೋ.

ಬಾಯಿದೆಱೆ$_2$ 'ಬಾಯ್ದೆಱೆ$_2$' ನೋ.

ಬಾಯಿಧಾರೆ 'ಬಾಯ್ಧಾರೆ' ನೋ.

ಬಾಯಿನ 'ಬಾಯನ' ನೋ.

ಬಾಯಿನಂಗುಡು 'ಬಾಯಿನಂಗೊಡು' ನೋ.

ಬಾಯಿನಂಗೊಡು, ಬಾಗಿನಕೊಡು, ಬಾಯಿನಂಗುಡು (ಕ್ರಿ). ಬಾಗಿನ ವನ್ನು ನೀಡು ; ಉಪಾಯನವನ್ನು ಕೊಡು : ಆಗಳಾ ಶಿವದೇವಿ ಮಹಾದೇವಿಯುಂ ಕನ್ಯಕಾಕದಂಬದಂಬಿಕಾನಿಕುರುಂಬಮುಂ . . . ತೆಕ್ಕನೆ ಶೀವಿದ ಕನಕರಜತಭಾಜನಸಮಾಜಮಂ ಭೂಜನಂ ಪೊಗಟ್ ಬಾಯಿನಂ ಗೊಟ್ಟು (ಶೇಖುಪು. ೧೩-೩೩ ಸ) ; ಬಾಯಿನಂಗೊಟ್ಟು ನಾನಾನವರತ್ನಸ್ವರ್ಣ ವಸ್ತ್ರಂಗಳಿನುಖಿಳಜನಂ ಕೂಡೆ ಸಂಪನ್ನಮಪ್ಪನ್ನಂ (ಶುಸ್ತುಪು. ೯-೦೩). **ಬಾಗಿನಕೊಡು** : ಮುತ್ತೈದೆಯರಿಗೆ ಬಾಗಿನಕೊಡುವ ಶಾಸ್ತ್ರವನ್ನೂ ಮಾಡಿ ಆಯಿತು (ಬೆಳುಸು. ೭೩). **ಬಾಯಿನಂಗುಡು** : ಮನಮದು ಮನದನ್ನನ ಬೆನ್ನನೆ ಪೋಗಿರೆ ತನ್ನ ಬಸನದಿಂದವಳೊಳ್ಪಂ ಮನಮಂ ಬಿಡೆ ಬಳೆಯಿಪ ಬೆಳ್ತನವಿಂದು ಪಾಟ್ಮನೆಗೆ ಬಾಯಿನಂಗುಡುವಂದಂ (ಕಂದ್ರಪು. ೮-೩೯). [ಬಾಯಿನ (<ಬಾಯನ) + ಕೊಡು$_1$]

ಬಾಯಿನಂದೀವು (ಕ್ರಿ). ಉಪಾಯನವನ್ನು ತುಂಬಿ ಸಿದ್ಧಪಡಿಸು ; ಬಾಗಿನವನ್ನು ತುಂಬಿಡು : ರಂಗವಲಿಯಿಕ್ಕುವ ಕಾಲ್ವಳಿಗೊಳ್ವ ಬಾಯಿನಂ ದೀವುವ . . . ನಾನಾವಿಧಮಂಗಳಾಚರಣದಕ್ಷಿಯರಿಂ ಪತಿಪತ್ನಿಯರ್ಕಳಿಂ ತೀವಿ ಜನಾವಳೋಕಹೃದಯಾಸ್ಪದಮಾಯ್ತು ವಿವಾಹಮಂಡಪಂ (ಸರ್ಗಪು. ೭-೩). [ಬಾಯಿನ (<ಬಾಯನ) + ತೀವು]

ಬಾಯಿನೀರು 'ಬಾಯ್ನೀರ್' ನೋ.

ಬಾಯಿಪಂತ (ನಾ). ಕೇವಲ ಮಾತಿನ ಜರ್ಬು : ನೋಡೆನ್ನ ಕೈಚಳಕವ ಬಾಯಿಪಂತವನಾಡುವರಾವಲ್ಲ (ಮೋಹಕ. ೩೯-೦೯).

[ಬಾಯಿ$_1$ (<ಬಾಯ್) + ಪಂತ$_1$]

ಬಾಯಿಪಾಠ (ನಾ). ೧. ಉರು ಹೊಡೆಯುವುದು ; ಕಂಠಪಾಠ : ರಂಗನು ಪ್ರಾಥಮಿಕಸಾಲೆಯ ಅಭ್ಯಾಸವನ್ನು ಮುಗಿಸುವ ಹೊತ್ತಿಗೆ ಅವನಿಗೆ ಅನೇಕ ದೇವರ ಸ್ತೋತ್ರಗಳು ಬಾಯಿಪಾಠವಾದವು (ರಂಗರೋ. ೦೯) ; ಹಸ್ತಪ್ರತಿಗಳನ್ನು ಓದಿ ಓದಿ ಇವನಿಗೆ ಅವು ಬಾಯಿಪಾಠವಾಗಿತ್ತು (ಳನ್ನಸಂ. ೨೬) ; ಬೇಕಾದರೆ ನಿಮ್ಮ ಬಾಯಿಪಾಠ ಪ್ರಕಾಶನಿಗೇ ಒಪ್ಪಿಸಿ (ಮರಳಿ. ೦೯೬). ೨. ಉರುಹೊಡೆದು ಕಂಠಗತ ಮಾಡಿಕೊಳ್ಳಬೇಕಾದ ಪದ್ಯ, ಕೋಷ್ಟಕ ಮೊದಲಾದುವು : ವಾಸುದೇವನು ಬೆಳೆಯುತ್ತ ಬಂದ ಹಾಗೆಲ್ಲ . . . ಅಕ್ಷರಾಭ್ಯಾಸವಾಯಿತು. ಬಾಯಿಪಾಠಗಳನ್ನು ಬಹುಬೇಗನೆ ಕಲಿತನು (ಭಾರವ. ೨೭೦).

ಬಾಯಿಪಾಠ ಮಾಡು = ಉರು ಹೊಡೆ ; ಕಂಠಪಾಠ ಮಾಡು : ಇಬ್ಬರಲ್ಲಿ ಯಾರೂ . . . ಲಕ್ಷಣಗ್ರಂಥಗಳನ್ನು ಬಾಯಿಪಾಠ ಮಾಡಿ ಪ್ರತಿ ವಿಷಯಕ್ಕೂ ಒಂದು ಶ್ಲೋಕವನ್ನುದಾಹರಿಸಬಲ್ಲವರಲ್ಲ (ಗಾನಕ. ೩೬).

[ಬಾಯಿ$_1$ (<ಬಾಯ್) + ಪಾಠ$_2$]

ಬಾಯಿಬಡಕ 'ಬಾಯ್ಬಡಿಕ' ನೋ.

ಬಾಯಿಬಡಿ 'ಬಾಯ್ಬಡಿ' ನೋ.

ಬಾಯಿಬಡಿಕ 'ಬಾಯ್ಬಡಿಕ' ನೋ.

ಬಾಯಿಬಡಿಕತನ 'ಬಾಯ್ಬಡಿಕತನ' ನೋ.

ಬಾಯಿಬಡುಕ 'ಬಾಯ್ಬಡಿಕ' ನೋ.

ಬಾಯಿಬಡುಕಿ 'ಬಾಯ್ಬಡಿಕಿ' ನೋ.

ಬಾಯಿಬಿಡು 'ಬಾಯ್ಬಿಡು' ನೋ.

ಬಾಯಿಬೀಗ, ಬಾಯ್ಬಿಯ್ಯಗ, ಬಾಯ್ಬಾಗ (ನಾ). ೧. (ಹರಕೆ ಹೊತ್ತ ಭಕ್ತರು) ಬಾಯಿಗೆ ಚುಚ್ಚಿಸಿಕೊಳ್ಳುವ ತಂತಿಯ ಸಾಧನ : ಬಾಯಿ ಬೀಗ ಅಕ್ಕಸಾಲಿಗನಿಂದ ಮಾಡಿಸಿದ ಸಣ್ಣ ಬೆಳ್ಳಿಯ ಕಡ್ಡಿ. ಚಚ್ಚೌಕ ವಾಗಿರುತ್ತದೆ. ಒಂದು ಕಡೆಯ ಮೊನೆ ತುಂಬಾ ಹರಿತವಾಗಿದ್ದು ಚೂಪಾಗಿ ರುತ್ತದೆ. ಮತ್ತೊಂದು ಕಡೆ ಒಂದು ತೂತಿರುವಂತೆ ಗುಂಡಗೆ ಮಡಿಸಿರುತ್ತದೆ (ಶೋರೆದೇ. ೯೩) ; ದೇವರಿಗೆ ಬೇವಿನುಡುಗೆ ನಗನಾಣ್ಯ ಮಾಡಿಸಿಕೊಡುವುದಾಗಿ . . . ಬಾಯಿಬೀಗ ಚುಚ್ಚಿಸಿಕೊಳ್ಳುವುದಾಗಿ ಹರಕೆ ಕಟ್ಟಿಕೊಳ್ಳುತ್ತಾರೆ (ಸಂಸುಂಡ. ೧೩೯) ; ಕೆಲವು ಹೆಂಗಸರು ಬಾಯಿಬೀಗದ ಹರಕೆ ಮಾಡಿಕೊಂಡಿರುತ್ತಾರೆ. ಅಂಥವರು ಬೆಳಗಿನಿಂದ ಉಪವಾಸವಿದ್ದು, ರಂಗದಲ್ಲಿ ಗುಡೀಗೌಡನಿಂದ ಬಾಯಿಬೀಗ ಚುಚ್ಚಿಸಿಕೊಂಡು, ದೇವರ ಹಿಂದೆ ಕೈಯಲ್ಲಿ ಹೊಂಬಾಳೆ ಹಿಡಿದು ಹೋಗುತ್ತಾರೆ (ವನ್ನೂರು. ೩೦).

ಬಾಯ್ಬಿಯ್ಯಗ : ೨. (ಆಲಂ) ಬಾಯಿಯ ತಡೆ.—ಹತೋಟಿ : ಸದ್ದು ! ಸಿಂಗಾರಿ ! ಬಾಯ್ಬಿಯ್ಯಗವಿರಲಿ ! (ಶಬ್ದಅ. ೩೬-೦). ಬಾಯ್ಬಾಗ : ೧. ಚಿಕ್ಕ ಚಿಕ್ಕ ಹುಡುಗರೂ ಕೂಡ ಬಾಯ್ಬಾಗ ಚುಚ್ಚಿಸಿಕೊಂಡಿದ್ದರು (ಕೂಡಿ). [ಬಾಯಿ1 (< ಬಾಯ್) + ಬೀಗ1]

ಬಾಯಿಬೂಟಕ (ನಾ). ಡಂಭಾಚಾರದ ಮಾತು : ಸಾಟಿಯಿಲ್ಲೀಕೆಗೆ ಜಗತ್ತಿನ ಕೋಟಲೆಯನಪಹರಿಪಳುರೆ ಬಾಯಿಬೂಟಕದ ನುಡಿಯಲ್ಲ ಸತ್ಯವಿದು (ಕಾಕೇಮ. ೦-೧೦೨). [ಬಾಯಿ1 (<ಬಾಯ್) + ಬೂಟಕ]

ಬಾಯಿಮಾತು 'ಬಾಯ್ವಾತು' ನೋ.

ಬಾಯಿಮುಚ್ಚು 'ಬಾಯ್ಮುಚ್ಚು' ನೋ.

ಬಾಯಿಲೆಕ್ಕ (ನಾ). ಮನಸ್ಸಿನಲ್ಲಿಯೇ ಬಿಡಿಸಿ, ಬಾಯಿಮಾತಿನಲ್ಲಿಯೇ ಉತ್ತರಿಸಬೇಕಾದ ಗಣಿತಪ್ರಶ್ನೆ.—ಲೆಕ್ಕ : ಗಣಿತ, ಬಾಯಿಲೆಕ್ಕ, ಮುಂತಾದುವುಗಳೆಲ್ಲದರಲ್ಲೂ ಈ ಹುಡುಗಿಯು ಪ್ರಥಮತರಗತಿಯಲ್ಲಿ ತೇರ್ಗಡೆಯಾದಳು (ಕೂಡಿ). [ಬಾಯಿ1 (<ಬಾಯ್) + ಲೆಕ್ಕ2]

ಬಾಯಿವಿಡು 'ಬಾಯ್ವಿಡು' ನೋ.

ಬಾಯಿವೆಣ್ಣೆ 'ಬಾಯ್ವೆಣ್ಣೆ' ನೋ.

ಬಾಯಿಸವಿ 'ಬಾಯ್ಸವಿ' ನೋ.

ಬಾಯಿಸು (ಕ್ರಿ). ಉಬ್ಬುವಂತೆ ಮಾಡು : ಊದಿಸು : ಧನಂಜಯ ವಾಯುವೆಂಬುದು ತಾನು ನಿಕ್ಷೇಪಿಸುವಂತಹ ದೇಹವಾದರೆ ಆ ದೇಹವನ್ನೆಲ್ಲ ಉಕ್ಕಿಸಿ ಬಾಯಿಸಿ ಊದಿಸಿ ಓಡಿಸಿ ಭೌತಿಕಾಗ್ನಿಯ ಕೂಡಿ ಹೋಗುವುದು (ಪಪಣಾ. II, ೧೭) ; ಆ ದಿನ ಹುಸೇನಿ . . . ಸೋಮನ ಕಪಾಳವನ್ನು ಬಾಯಿಸಿದನು (ರಂಗರೋ. ೨೬) ; ಆ ದೇಶಪಾಂಡೆಯ ಕೆನ್ನೆ ಬಾಯಿಸಬೇಕಾಗಿತ್ತು (ಹಬ್ಬಿಂ. ೨೦೩). [ಬಾಯು (<ಬ್ಹಾ1) + — ಇಸು3]

ಬಾಯಿಹಗ್ಗ (ನಾ). = ಬಾಯಿಕಡಾಣಿ : "ಕವಿಕಾ, ಖಲೀಃನಃ — ೨ ಬಾಯಿ ಹಗ್ಗ, ಬಾಯಿಚಿಕ್ಕ, ಲಗಾಂ, ಬಾಯಿಕಡಾಣಿ, ಕುಣಿಕೆ" (ಸಿಂಗ್ರಂಕಿ. ೨೩೦). [ಬಾಯಿ1 (<ಬಾಯ್) + ಹಗ್ಗ (<ಪಗ್ಗ)]

ಬಾಯಿಹುಣ್ಣು (ನಾ). ಬಾಯಿಬೊಕ್ಕೆ ; ಬಾಯಿಯಲ್ಲಿ ಏಳುವ ಹುಣ್ಣು : ನಿರ್ನಿದ್ರೆ, ನೂತಿ, ಬಾಯಿಹುಣ್ಣು, ಗಂಟಲುಹುಣ್ಣು, ಕಾವುಗಣ್ಣುಗಳಿಗ ಇದು ಸಂಜೀವನ (ಬಕಿ. ೯). [ಬಾಯಿ1 (<ಬಾಯ್) + ಹುಣ್ಣು (<ಪುಣ್)]

ಬಾಯು 'ಬ್ಹಾ1' ನೋ.

ಬಾಯುಗಿ (ನಾ). ದಂತಕ್ಷತ (?) : ತೆಱಪಱಿದೋಪನಪ್ಪಿದೊಡೆ ಮೆಯ್ಮಱಿವಪ್ಪು ಸಡಿಲ್ದುದಕ್ಕೆ ಮೆಯ್ಮಱಿವ ಪೊದಟ್ಟ ಬಾಯುಗಿಗೆ ಮೆಯ್ಮಱಿವಂತದು ಮೆಲ್ಲನಾಗೆ ಮೆಯ್ಮಱಿವ . . . ಎಡೆ ಸಾವ ಪುಟ್ಟು ವೆಡೆಯಾದುದವಳ್ಗೆ ರತಾತಿರೇಕದೊಳ್ (ಲೀಲಾವ. ೦೩-೨೦) ; ತವದ ಕಾಮೋದ್ರೇಕದಲಿ ಕೂಡುವ ಸಮಪ್ರಣಯಿಗಳ ನಿಡುಗಣ್ಣೆವೆಗಳರೆ ಮುಗಿವುತಿರೆ ... ಸವಿವ ಬಾಯುಗಿಯಡಗೆ ಮೈ.ಮಿಗೆ ಬೆವರೆ ಸೂಳೋಸರಿಸೆ ಕೆಡಪಿದ ಜವಳಿಜಂತ್ರದ ಬೊಂಬೆಯಿನಲೀರ್ವರು ಮಱೆದರೊಡಲ (ಸಾಳ್ವಕಾ. ೦೯-೩೭). [ಬಾಯ್ + ಉಗ್ಗಿ7]

ಬಾಯುಪಚಾರ (ನಾ). ಕೇವಲ ಬಾಯಿಮಾತಿನ ಮನ್ನಣೆ ; ಹೃತ್ಪೂರ್ವಕವಲ್ಲದ ಗೌರವ ; ಬರಿ ಬಾಯಿಮಾತಿನ ಸತ್ಕಾರ : ಅವರು ಬಾಯುಪಚಾರಕ್ಕಾದರೂ ಬನ್ನಿ ಎಂದು ಕರೆಯುಲಿಲ್ಲ (ಕೂಡಿ). [ಬಾಯ್ + ಉಪಚಾರ]

ಬಾಯೂರಿಸು (ಕ್ರಿ). ೧. ಬಾಯಲ್ಲಿ ನೀರು ಸುರಿಸು. ೨. (ಆಲಂ) ಅತಿಯಾಗಿ ಹಂಬಲಿಸು.—ಬಯಸು : ಕೆಲವು ಜನ ಅವಳನ್ನು ವರಿಸಲು ಬಾಯೂರಿಸುತ್ತಿದ್ದರು (ಮುಸಕೂ. ೯). [ಬಾಯ್ + ಊರಿಸು3]

ಬಾಯೆಣಿಕೆ (ನಾ). ಉದ್ಗಾರ ; ಉದ್ಘೋಷ : ಕಾಯಗಟ್ಟಿತು ಭೀತಿ ಬಿರುದಿನ ಬಾಯೆಣಿಕೆ ಬಯಲಾಯ್ತು ಜೀವದ ಬೀಯಕಿಪರಂಜಿದರು (ಶುಾಪ್ರಂ. ೯-೬೦). [ಬಾಯ್ + ಎಣಿಕೆ]

ಬಾಯೆತ್ತು (ಕ್ರಿ). (ಮಾತಾಡಲೆಂದು) ಬಾಯಿ ತೆರೆ ; ಬಾಯಿ ಬಿಡು : ಮತ್ತೆಯುಂ ಪರಸಮಯಿಗಳು ಬಾಯೆತ್ತಲಂಜೆಂದೆಂದರು (ಪಸಪು. ೩೩-೬೦) ; ಬಾಯೆತ್ತದಂತೆ ನುಡಿವುತೆ ಕಾಯಜರಿವು ಭಕ್ತ ನೆಲ್ಲರಂ ಗೆಲೆ (ಪ್ರಭಲಿ. ೩೭-೩೩) ; ಕೋಲಾಹಲವ ಸಂತವಿಸಲವಂ ಎನಿತೊ ಸಲ ಬಾಯೆತ್ತ ಮಾತೊಂದು ಕೇಳಿಸದೆ . . . ಕಲಕಲವೆ ಎದ್ದೆದ್ದು ನಡುವೆ ತವಿವಂದು (ಗೊಲ್ಗೊಥಾ. ೬-೦೩೦). [ಬಾಯ್ + ಎತ್ತು1]

ಬಾಯೆಸಳ್ ? (ನಾ). ಬಾಯಿ ಹುಣ್ಣು : ಬಿಸುಸುಯ್ಯೆ ಬಾಯ್ ಕರಂ ಕೆಂಪೆಸೆದಿರೆ ಬಿಡೆ ಲೋಳೆ ಸುರಿಯೆ ಬಾಯೆ(ಎ)ಸಳದನೋಡಿಸುವೊಡೆ ಕಾಗೆಯ ಗಱಿಯಿಂ ಬಿಸುನೀರೊಳ್ ಕರ್ಚಿ ತೊಡೆಗೆ ಕಟುಕತ್ರಯುವಂ (ಲೋಕೋಪ. ೯-೦೯೯). [ಬಾಯ್ + ಎಸಳ್?]

ಬಾಯೊದರು (ಕ್ರಿ). ಕೂಗು ; ಕಿರಿಚು : ವಾನರದಳಂ ಬೆದರಿ ಬಾಯೊದರಿ ದೆಸೆದೆಸೆಗೆ ಕೆದರೆ (ಶ್ರೀರಾಮಾ. ೯೦೩-೦೪೦). [ಬಾಯ್ + ಒದರು3 (<ಒದಱು2)]

ಬಾಯೊರಸು (ಕ್ರಿ). ಸ್ಪರ್ಶವನ್ನು ಪಡೆ (?) : ಇಱಿಯದ ವೀರಮಂ ಪೊಗಳೆ ಮೆಚ್ಚುವ ರಾಯರ ಗಂಡ ಯಾವ ಸೊಂಪಱಿಯದೆ ಕೀರ್ತಿಸಲ್ ಬರಿದೆ ಹಿಗ್ಗುವ ರಾಯರ ಗಂಡವೊಂಮ್ಮೆ ಬಾಯೊರಸದೆ ಪೆಂಣ್ಗಳಂ ಸೊಬಗರೆಂದಪ ರಾಯರ [ಗಂಡ]ನೆಂದು ಬೊಬ್ಬಱಿಉದು ಕೀರ್ತಿ ಡಿಂಡಿಮದುಂಖಂ ಜಗದೊಳ್ ವಿಜಯಕ್ಷಿತೀಂದ್ರನಾ (ಏಕಾ. XI, ೩೯೨ಮ. ೩-೬ ; ?). [?]

ಬಾಯೊಱಿ3 (ಕ್ರಿ). ೧. ಬಾಯಲ್ಲಿ ನೀರು ಸುರಿ : ಆ ಸಿಂಹಂ ಮಱು ಗುತ್ತಂಬಟ್ಟು ಗೊಂಕರ ಕಟ್ಟೆಯಂ ಬಯಸಿ ಬಾಯೊಱಿತು ತನಗನುಚರ ನಪ್ಪುದೊಂದು ನರಿಗೆ ಪೇಟ್ಟುದುಂ (ಪಂಚತಂ. ೨೬೨-೨೦) ; ಮಿಸುಪ ಪುಳಿಗೆ ಬಾಯೊಱಿತು ಬಾತಂತಿರೆ ತಿಂದು ಕೈಗರ್ಚಿ (ಪುಷ್ಪಾಸ್ರ. ೩-೯೬ ಪ). ೨. ಬಯಸು ; ಹಂಬಲಿಸು : ಹಾತೊರೆ : ನವಯೌವನಕ್ಕೆ ರತಿ ಬಾಯೊಱಿಯೆ . . . ಹದಿನಾಱು ಹರೆಯಮದಾಗಲ್ (ಪಂಪಂ. ೩-೦೬) ; ಶೃಂಗಾರ ವೀರಕ್ಕೆ ಬಾಯೊಱಿತೀ ತಸ್ಕರಚಾರವೀರವಿಟವೇಶ್ಯಾಕಾಮ್ಯಮಂ ಕೇಳ್ದು ಮೆಯ್ ಮಱೆವರ್ . . . ಭೂಪರ್ (ಕಬ್ಬಿಕ. ೯೭). [ಬಾಯ್ + ಒಱಿ1]

ಬಾಯ್ಕಟ್ಟು1, ಬಾಯಿಕಟ್ಟು1 (ಕ್ರಿ). ೧. ಬಾಯಿಚಪಲವನ್ನು ನಿರೋಧಿಸು ; ಪಥ್ಯ ಮಾಡು ; ಅಪಥ್ಯವಾದ ಆಹಾರವನ್ನು ಸೇವಿಸದೆ ನಿರ್ಬಂಧದಲ್ಲಿರು : ಅವರು ವೈದ್ಯರು ಹೇಳಿದಂತೆಲ್ಲ ಚೆನ್ನಾಗಿ ಬಾಯ್ಕಟ್ಟಿ ಖಾಯಿಲೆಯನ್ನು ಬೇಗ ವಾಸಿಮಾಡಿಕೊಂಡರು (ಕೂಡಿ). ೨. ವಾದದಲ್ಲಿ ಎದುರಾಳಿಯನ್ನು ಬಾಯಮ್ಮಚ್ಚುವಂತೆ ಮಾಡು ; ನಿರುತ್ತರಗೊಳಿಸು : ಬಾಯ್ಬಡಿ : ಆಣೆ ಇಟ್ಟು ಬಾಯ್ಕಟ್ಟಿ ಬಿಟ್ಟ ಮೇಲೆ ಪಾಪ ಅವನೇನು ಮಾಡಿಯಾನು ? (ಕೂಡಿ). ೩. ಮಂತ್ರ ಮಾಟಗಳಿಂದ ಮನುಷ್ಯನ ಅಥವಾ ಪ್ರಾಣಿಯ ಬಾಯನ್ನು ತೆರೆಯಲಾಗದಂತೆ ಮಾಡು.—ಮುಚ್ಚಿಸು : (ಕ). ಬಾಯಿಕಟ್ಟು1 : ೨. ನಾನು ಯಾವಾಗಲೂ ಪ್ರಶ್ನಿಸುತ್ತೇನೆ ; ಆಗ ನೀವು ಹೀಗೆ ಹೇಳಿ ನನ್ನ ಬಾಯಿಕಟ್ಟುತ್ತೀರಿ (ಭುತಾಗಾ. ೦೬) ; ಎಲ್ಲರೂ ಸೇರಿಕೊಂಡರು ತೆನ್ನಾಲಿ ಹೇಳಿದ್ದು ಸುಳ್ಳು ಅಂತ ಬಾಯಿಕಟ್ಟುವುದಕ್ಕೆ (ತಪ್ಪೂರು. ೦೮೫). ೪. ಮಾತಾಡಲು ಅವಕಾಶವಿಲ್ಲವಾಗು : ಅಪ್ಪಾಜಿಗೆ ಬಾಯಿಕಟ್ಟಿತು. ಆದರೂ ಕಡೆಯದೊಂದು ಪ್ರಯತ್ನ ಮಾಡಲು ಬಯಸಿದ (ಪಲಿಸ. ೬೯). ೫. ಮಡಕೆ ಅಥವಾ ಪಾತ್ರೆಗಳ ಬಾಯಿಗೆ ಬಟ್ಟೆಯನ್ನು ಕಟ್ಟು : ಮಡಬಟ್ಟೆಯಿಂದ ಮಡಿಕೆಯ ಬಾಯಿಕಟ್ಟಿ, ವಿಭೂತಿಕಟ್ಟು ಹಾಕುತ್ತಾಳೆ (ಪಪ್ಪೂರು. ೯೨). [ಬಾಯ್ + ಕಟ್ಟು1]

ಬಾಯ್ಕಟ್ಟು೨, ಬಾಯಿಕಟ್ಟು೨ (ನಾ). ೧. (ನಾಯಿ, ಎತ್ತು ಮೊದಲಾದ ಪ್ರಾಣಿಗಳಿಗೆ) ಬಾಯಿ ತೆರೆಯಲಾಗದಂತೆ ಮುಖಕ್ಕೆ ಅಳವಡಿಸುವ ಬಂಧನ; ಪ್ರಾಣಿಯ ಬಾಯಿಗೆ ಕಟ್ಟುವಕವುಕ್ಕೆ.–ಚೀಲ: ಸಳಿಗೋಲು ಒಂದಟ್ಟೆಯು ಕೆರಹು ನಾಯಿಗಳ ಬಾಯ್ಕಟ್ಟು ಒಳಿಯಿಂದಿವು ಮೆಜಿಯೆ ನಡೆದು (ಬಸಪು. ೩೦-೪). ೨. ಮಾಟಮಂತ್ರಗಳಿಂದ ಬಾಯಿ ಮುಚ್ಚಿಸುವಿಕೆ.–ಬಾಯಿ ತೆರೆಯದಂತೆ ಮಾಡುವಿಕೆ: (೫). **ಬಾಯಿಕಟ್ಟು೨**: ೩. ಮುಚ್ಚಳದಂತೆ ಪಾತ್ರೆಗಳ ಬಾಯಿಗೆ ಬಿಗಿದ ಬಟ್ಟೆಯ ಕಟ್ಟು: ಎಕ್ಕದ ಮೊಗ್ಗು ೧ ಬಳ್ಳವಂ ಒಂದು ಮಡಕೆಯಲ್ಲಿ ಹಾಕಿ ನೀರು ಹಾಕಿ: ಪಾವಡೆ ಕಟ್ಟಿ ಜೆಳತಿಗೆ ಅಕ್ಕಿಯನ್ನು . . . ರೊಟ್ಟಿ ಮಾಡಿ ಆ ಬಾಯಿಕಟ್ಟಿನ ಮೇಲಿಟ್ಟು ಬೇಯಿಸಿ ತೆಗೆದು (ಸಳವ್ಯ. ೨೦೬). [ಬಾಯ್ + ಕಟ್ಟು೨]

ಬಾಯ್ಮಡಿಗೊಳ್ (ಕ್ರಿ). ಪಿಡುಗಚ್ಚು; ಹಲ್ಲುಕಡಿ: ಎಮಗೆ ಮಾತಾಡದಿರೇಟಿದಿರ್ ಎಮಡುಕದಿರ್ ಮೇಲ್ಬೀಟಿದಿರ್ ಸೊರ್ಕದಿರ್ ನಗದಿರ್ ಬಾಯ್ಮಡಿಗೊಳ್ಕದಿರ್ (ಕಬ್ಬಿಗ. ೧೬೬). [ಬಾಯ್ + ಕಡಿ೧ + ಕೊಳ್೧]

ಬಾಯ್ಮಲ್ 'ಬಾಯಮ್ಮಾಲ್' ನೋ.

ಬಾಯ್ಮಾಲ್, ಬಾಯಿಕಲ್ಲು, ಬಾಯಿಕಾಲು, ಬಾಯಿಕೋಲು, ಬಾಯ್ಕಲ್, ಮಾಯ್ಮಾಲು (ನಾ). ಕಾಲುವೆ; ನಾಲೆ: ಅನ್ತೆ ಬಸ್ದ ಕಳರಾ ಬಾಯ್ಮಾಲುಳ್ ಕೂಡಿ . . . ಅನ್ತೆ ಬಸ್ದ ತೊಜಿ ಯುಳ್ ಕೂಡಿತ್ತು (ಪ್ಯಆರ್. ೦೯೩೬. ೫೩-೨೪; ಸು. 700 ?). **ಬಾಯಿಕಲು**: ಮೂಡಲು ದಿಬ್ಬ ಬಡಗಲು ಪಳ್ಳ ಪಡಪಲು ಬಾಯಿಕಲು ತೆಂಕಲು ಭೂಡಿ ವಟ್ಟೆ (ಸಾಇಇ. IX-i. ೦೬೫-೬೯; 1099); ತೆಂಕಲು ಕಜುಂಬಗದ್ದೆಯ ಬಾಯಿಕಲು (ಸಾಇಇ. IX-i. ೪೧೩-೫೬; 1226). **ಬಾಯಿಕಲ್ಲು**: ಪಿರಿಯ ತುಂಬಿನ ಬಾಯಿಕಲ್ಲ ಮೂಡ ದೆಸೆಯ ಮೊದಲೇರಿಯು ಗದ್ದೆ (ಪ್ಯಆರ್. ೦೬೫೭. ೦೭-೪೭; 1196); ತುಂಬಿನ ಬಾಯಿಕಲ್ಲಿಂದಂ ಪಡುವಲು ಮೇರೆ (ಎಕ. XVI. ತಕ್ಕನಾ. ೭೦-೦೭; 1235); ವಿಡಿಚ್ಚಿಯು ಬಾಯಿಕಲ್ಲಿಂ ತೆಂಕಲು ಕೋಡಿಯು ಗೋವಿಂದ ಶಣಂಗಿಣಂ ಮೂಡಲು ಗದ್ದೆ ಮತ್ತರು ೧ (ಸಾಇಇ. IX-i. ೩೭೦-೪೬; 1259). **ಬಾಯಿಕಾಲು**: ವರುಶಕ್ಕೆ ಗದ್ಯಾಣಂ ಮೂವತುವನುಮ್ ಆ ಕೆಜಿಗೆ ಆ ತುಮ್ಬಿಂಗೆ ಆ ಬಾಯಿಕಾಲಿಗೆ . . . ಆ ಮಹಾಜನಂಗಳು ನಡೆಸುತೆ ಬಹರು (ಎಕ. VI, ಕತೂರು. ೪೨-೦೭; 1259 ?). **ಬಾಯಿಕೋಲು**: ಮಚಣನ ಕೆಜಿಯ ತಾಯಿವಳದಿಂದಾ ಬಡಗಲು ಅಲಕಱಿಗೆ ಹೋದ ಬಾಯಿಕೋಲಿಂ ದೇವಿಹೊಲದ ಕಟ್ಟೊಬೆಯಿಂ ಅಲಕಱ ಪೊಳೆಗೆಜಿಯಿಂ ಪೂಡಲು ಯಿಂತೀ ಚತುಃ ಸೀಮೆಯ ಪೊಳಗಣ ಭೂಮಿ (ಎಕ. XIV, ಎಳಂದೂ. ೦೬೭-೦೩; 1631). **ಬಾಯ್ಕಲ್**: ಮೂಚಿಸಟ್ಟಿಯ ಕೆಲಿಯ ಪಡುವಣ ಬಾಯ್ಕಲ್ಲ ಬಳಿವಿಡಿದು ಹುಣಸೆಯ ಬಾಯ್ಕಲ್ಲಿಂ ತೆಂಕಲು ಗದ್ದೆ ಮತ್ತರು ೨ ಹೊಸಗೆಜಿಯು ಬಾಯ್ಕಲ್ಲಿಂ ಮೂಡಲು ಗದ್ದೆ ಕಮ್ಮ ೬೦೦ (ಸಾಇಇ. IX-i. ೧೫೫-೩೦; 1079). **ವಾಯ್ಮಾಲು**: ಮೂಡಲು ಪಳ್ಳ ವಾಯ್ಮಾಲು (ಕ್ಯಆಸಿ. ೩-೭-೨೯; 1088). 'ಕಾಲ್ವಾಯ್' ಪರಾ.

[ಬಾಯ್ + ಕಾಲ್೨./ತಮಿ. ವಾಯಕ್ಕಾಲ್; ಮಲ. ವಾಯ್ಕಾಲ್]

ಬಾಯ್ಕುಟುಕು 'ಬಾಯ್ಗುಟುಕು' ನೋ.

ಬಾಯ್ಕುಟ್ಟು 'ಬಾಯ್ಗುಟ್ಟು' ನೋ.

ಬಾಯ್ಕೇಳ್ (ಕ್ರಿ). ಪಾತು ಕೇಳು; ಆಜ್ಞಾಧಾರಕನಾಗು; ವಿಧೇಯನಾಗಿ: ಆಳುವಬೇಡಮಱುಸಾಸಿರನುಮಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳ್ದಿರೆ ಮುನಿದು ಕೊಲ್ಲಿ ಪಲ್ಲಪ ನೊಲಂಬಂ ನೊಲಂಬರಾದಿತ್ಯನನ್ ವೆಸಸಲ್ (ಎಕ. VIII. ಸೊರಬ. ೦೦-೩; ಸು. 800); ಅರಸುಗಳೆಲ್ಲಂ ಬಾಯ್ಕೇಳ್ದರೆಂದುಮಾಶಾಂತರಂಗಳೆಕ್ಕದುವೆಂದುಂ ಧರಣಿತಳಂ ಕೀರ್ತಿಸೆ (ಆಂಪು. ೦೯-೨೯); ವರುಣಂ ಬಾಯ್ಕೇಳನೆಂಬೀ ಮುನಿಸನುವಿಸೆ ಮೇಲೆತ್ತ ಲೆಂದೀಗಳಿಮ್ಮಂ ಬರವೇಟ್ಟಂ ದಾಸವೇಂದ್ರಂ (ಕಂಗಾಪು. ೦೦-೨೦೩).

ಬಾಯ್ಕೇಳ್ದೊಂ = (ಜಲದುರ್ಗ ಮುಂತಾದುವುಗಳನ್ನು) ವಶಪಡಿಸಿಕೊಂಡಪನು: ಎಂತಾನುಂ ಸ್ಥಳ ಜಳದುರ್ಗಂ ತವೆ ಬಾಯ್ಕೇಳ್ದೊಂ ನೀತನವೆ ದಿಗ್ವಿಜಯಾತ್ಯಂತೋತ್ಸವಂ (ಶಾಃಕಪ್ಪ. ೩-೦೯೦).

[ಬಾಯ್ + ಕೇಳ್]

ಬಾಯ್ಕೇಳಿಕೆ (ನಾ). ಬಾಯಲ್ಲಿ ಹೇಳುವ ಪೂತು (?): ಪರಾಕು; ಸ್ವಾಗತದ ಮಾತು (?): ಬಾಳಲಗರ್ಜಿ ಓಕಮತಿ ಬಾಯ್ಕೇ [ಕಾಕಾಂ. ಯೋ]ಳಿಕೆ ಮೂಂದಳರ ಕಂಪು ದೀವಿಗೆಯೆನೆ ಭೂಪಾಳಂ ಬರೆ ಕೋಧಿಪ ಪನಪಾಳಸವೊಲ್ಮಂದೆ ಬಂದುದಂದು ವಸಂತಂ (ಹುಕೋತ. ೯-೨). [ಬಾಯ್ + ಕೇಳಿಕೆ೧]

ಬಾಯ್ಕೇಳಿಸು (ಕ್ರಿ). ಗೆದ್ದುಕೊಳ್ಳು; ವಶಪಡಿಸಿಕೊಳ್ಳು; ತನ್ನ ಆಜ್ಞೆಗೆ ಒಳಪಡಿಸಿಕೊಳ್ಳು: ಆ ಮುನಿರಾಜು ಕರ್ಮಂಗಳಂ ಗಾಳಿಸಿದಂ ಈ ರಾಜರಾಜಂ ಷಟ್ಖಂಡಮಂಡಲಮಂ ಬಾಯ್ಕೇಳಿಸಿದಂ (ಆದಿಪು. ೬-೨೪ ಪ); ಮೂಳವಪತಿ . . . ಲೀಲೆಯೊಳಿ ವೀರದೊಳಿ ಬಾಯ್ಕೇಳಿಸುವಂ ಗಡ ಸಮುಸ್ಪಪಸುಧಾತಳಮಂ (ಧರ್ಮಾಮೃ. ೦೦-೨೨೬); ರಣಪಥೂಪಲ್ಲಭಂ ದೇಶ ದೇಶಂ ಗೆಲ್ಲುತದಟಿನಿಂ ಬಾಯ್ಕೇಳಿಸುತೆ, ಚಂಡಜವದಿಂದಮಿತ್ರಣ್ಗೆ ನುರ್ಗುತಿಪಂ (ಶಾಶ್ರಂಗ. ೭೦-೦೧೯೯). [ಬಾಯ್ಕೇಳ್ + — ಇಸು೩]

ಬಾಯ್ಕೊಡು (ಕ್ರಿ). ಬಾಯಿ ಬಿಡು; ಬಾಯಿ ತೆರೆ: ಬಿಕ್ಕಿ ಬಿಕ್ಕಿ ಅತ್ತಳು; ಎಪ್ಪ ಕುಳಿತಳು; ಬಾಯ್ಕೊಟ್ಟು ಗೋಳಿಟ್ಟಳು (ಒಡ್ಡಿಕಾ. ೬).

[ಬಾಯ್ + ಕೊಡು೧]

ಬಾಯ್ಕೊರ್ಚು 'ಬಾಯಿಕೊಚ್ಚಿ' ನೋ.

ಬಾಯ್ಗಳೆ (ಕ್ರಿ). ಬಾಯಿ ಬಿಡು; ಬಾಯಿ ತೆರೆ: ಸುಂಗಳೆಂದು ಬಾಯ್ಗಳೆದು ಬರ್ಪರಿದಿರೊಳ್ ಪಲ್ಗಿಜಿಯುಂತೆ (ಅಕ್ಕುತ. ೪೭-೬). [ಬಾಯ್ + ಕಳೆ೧]

ಬಾಯ್ಗಾಳಿಗ, ಬಾಯಿಗಾಳಿಗ (ನಾ). ಬರಿಯ ಮಾತಿನ ಯುದ್ಧ; ವಾಕ್ಕಲಹ: ಆಂ ಬಲ್ಲಗಳಿಗಮೆಂದೇ ಬಗೆದೆಂ ಬಾಯ್ಗಾಳಿಗಮನೀಗಳಜ್ಜಂದೆಂ (ಶಾಂಕಪ್ಪ. ೪-೩೦ ಪ). **ಬಾಯಿಗಾಳಿಗ**: ಕಕ್ಕ ಪೂಡುವುದು ಮಗನಿಗಾಗುತ್ತಿರಲಿಲ್ಲ, ಪಂಗುಸು ಕಕ್ಕನಿಗಾಗುತ್ತಿರಲಿಲ್ಲ. ಯಾವಾಗಲೂ ಬಾಯಿಗಾಳಿಗ ನಡೆದಿರುತಿತ್ತು (ಕ್ರಿಪಾಕ್ರ. ೬). [ಬಾಯ್ + ಕಾಳಿಗ]

ಬಾಯ್ಗುಟುಕು, ಬಾಯ್ಕುಟುಕು (ನಾ). ಒಂದು ಸಲ ಬಾಯಿ ತುಂಬ ಹಾಕಿಕೊಳ್ಳುವಷ್ಟು ಆಹಾರ; ಒಂದು ತುತ್ತು: ಸಲಿಸುವೆಂ ಇವರಸುವ ಬಾಳ ಬಾಯ್ಗುಟುಕೆಂದು (ವೀಪ್ರ. ಹ. ೪೭೩-೨೮). **ಬಾಯ್ಗುಟುಕು**: ಕೊಡು ತಂದೇ, ಇನ್ನೊಂದೇ ಂದೇ ಬಾಯ್ಗುಟುಕು (ಅಚಳು. ೩-೧೦). [ಬಾಯ್ + ಕುಟುಕು೨]

ಬಾಯ್ಗುಟ್ಟು, ಬಾಯ್ಕುಟ್ಟು (ಕ್ರಿ). ಹರಟು; ಗಳಹು: ಪಂಹಾಸನ್ನಿಧಾನದ ಸಮುಖದಲ್ಲಿ ಹಾಗೆ . . . ಆ ಸಲ್ಗಳಿಯಿಂದ ಬಾಯ್ಗುಟ್ಟದಿರಿ (ಪಚ್ಚಕ. ೧೬೪-೦೭). **ಬಾಯ್ಕುಟ್ಟು**: ಪುಟ್ಟುಗುರುಡಂ ಕಾಣ್ಬನೆ ಬಟ್ಟೆಯನಮಳಾಕ್ಷನಂತೆ ಸದ್ಭಲಿಷ್ಯಿಯೆ ಬಾಯ್ಕುಟ್ಟದೆ ಕಾಣ್ಗುಂ ಧರ್ಮದ ಬಟ್ಟೆಯ ನೆಜಕೆ ಕಾಣಲಜಿವ[ಯ]ನಕ್ಕು ಮುದಾಂಧಂ (ಅರ್ಹನೇ. ೪-೫೫). [ಬಾಯ್ + ಕುಟ್ಟು೧]

ಬಾಯ್ಗೂಟ (ನಾ). ಮುತ್ತಿಡುವಿಕೆ; ಚುಂಬನ: ಬಾಯ್ಗೂಟದೊಳಟ್ಟಿಕುಂ ಪಡೆಮ ಕೂಟದೊಳುಣ್ಮೆದ ಬೆಚ್ಚ ತಟ್ಟಿಯೊಳ್ ಕೂಟಸುಖಿಂಗಳಂ ಪಡೆದನೇಂ ಚದುರಂ ಗಳ ಬದ್ದೆಲ್ಲಬುಂ (ಕಂಕರಾ. ೩-೬೨); ಮಸಪ ನಸುಲಜ್ಜೆಯುಂ ಮಾಣಿಸಿದುದು ಬಾಯ್ಗೂಟದಿಂಪು (ಕಂರ್ಕಶ. ೬-೮೩).

[ಬಾಯ್ + ಕೂಟ೧]

ಬಾಯ್ಗೂಡು, ಬಾಯಿಗೂಡು (ಕ್ರಿ). ೧. ಒಕ್ಕೊರಲಾಗು; ಏಕಕಂಠವಾಗು: ನೋಡಿದರಾನಂದಿಸಿದರು ಪೌರರು ಬಾಯ್ಗೂಡಿ ಬಣ್ಣಿಸಿ

ಪೊಗಳಿದರು (ಕುರುಸಾಂ. ೯-೦೪೯). ೨. (ಆಯುಂಧ ಮೊದಲಾದುವುಗಳ) ಬಾಯಿ ಅಥವಾ ಧಾರೆ ಹರಿತವಾಗು,— ಮಸೆದು ತೀಕ್ಷ್ಣವಾಗು : ಬಾಯ್ಗೂಡಿದುದಾ ಕುಸುಮಾಸ್ತ್ರನ ಚಕ್ರಮಿದೆಂಬೆಸಕಮನಾಳ್ದತ್ತು ಪಸದನಂ ದ್ರೌಪದಿಯಾ (ಪಂಪಭಾ. ೩-೪೭). ೩. ಮುದ್ದಿಸು ; ಚುಂಬಿಸು: ಸಾರ್ಚಿ ಬಾಯ್ಗೂಡಿ ವಿಲಾಸದಿಂ ಕೆಲೆವ ಪಾರಿವಂ . . . ಕುಕಿಲ್ವ ಪಿಕಂ ವಿಯೋಗಿಗೇಂ ಮಾಡದೆ ಪೋಕುಮೇ ಮದನನಂಡಲೆಯಂ (ಪಂಪಭಾ. ೦-೩೨); ಇಲ್ಲಿ ಬಾಯ್ಗೂಡಿದೆವದಿಲ್ಲಿ ಸರಸಕ್ಕೆಳಸಿ ಕೂಡಿದೆವು (ವಂಶಾಭಾ. ೩-೨-೨೯). ೪. (ಲೆಕ್ಕ ಖರ್ಚು ಮುಂತಾದಂವು) ಹೊಂದಾಣಿಕೆಯಾಗು ; ಸರಿದೂಗು : ಇಷ್ಟು ವೆಚ್ಚಗಳು ಬಾಯ್ಗೂಡಿಯೂ ಉಳಿತಾಯವಿತ್ತು (ಶ್ರೀಮಾಶ್ರ. ೨೪೪). ಬಾಯಿಗೂಡು : ೩. ಮಡಿಸಿದೆಲೆಯ ಗಳಿಗೆಯ ಕಿಂಬಲ್ದುದಿಗಡಸಿ ಬಾಯೊಳು ಬಾಯಿಗೂಡಿ ತುಡುಕುತ್ತ ಸವಿಮುತ್ತ ನಿವಗೀವ ಪುಣ್ಯವ ಪಡೆವುದೆಂದಿಗೆ ನಾನು (ಕಂಪಪ. ೯-೦೨೫). ೪. ಖರ್ಚು—ಜಮಾ ಬಾಯಿಗೂಡಿತು (ದೀಕಹ. I. ೦೭೩). [ಬಾಯ್ + ಕೂಡು₁]

ಬಾಯ್ಗೆಡು (ಕ್ರಿ). ೧. ಬಾಯಿ ರುಚಿಯಿಲ್ಲದಾಗು, —ರುಚಿಗೆಡು : (ಕ). ೨. ಕಳವಳಿಸು ; ದುಃಖಿಸು : ಕುತ್ಸಿತರ್ . . . ಪರೀಷಹಂಗಳಡಸಿ ದಂದು ದೆಸೆಗೆಟ್ಟು ಬಾಯ್ಗೆಟ್ಟು ಮಱುಗುತ್ತಿರ್ಪರ್ (ಧರ್ಮಾಮೃ. ೦-೦೭೪). 'ಬಾಯಟಿ' ಪರಾ. ೩. ಕೆಟ್ಟ ಮಾತನ್ನಾಡು ; ದೋಷಾರೋಪಣೆ ಮಾಡು (?) : ಉನ್ಮತ್ತವಪ್ಪ ವಿಶ್ವಾಸಘಾತುಕಂಗೆ ವಂದಿಸಿ ನಿಂದಿಸುವಂಗೆ ಹಿಂದೆ ಮುಂದೆ ಬಂದುದ ಬಾಯ್ಗೆಡುವಂಗೆ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಸಂಧಿಸನವರಿಗೆ (ಮಾದೇವ. ೨೮೦-೪೭). [ಬಾಯ್ + ಕೆಡು₁]

ಬಾಯ್ಗೆಯ್ (ಕ್ರಿ). ದೊಡ್ಡ ಧ್ವನಿ ಮಾಡು ; ಅಬ್ಬರಿಸು : ವರಾಹ ರೂಪದ ಮೂಕದಾನವಂ . . . ಬಾ[ಯ್ಗೆ]ಯೆ ದಿಗ್ಗಜಂ ಪೆಱಗಿಟ್ಟುವಾಂ [ತ]ರದೆ ತೊಟ್ಟನೆ ದಾಡೆಗುಟ್ಟೆ ಕಱಲ್ದು ತಾರಗೆಗಳ್ ನಭಂಬೆರಸು ಬಿರ್ದುವು (ಪಂಪಭಾ. ೮-೦೩) ; ಇನ್ನು ನಿಮ್ಮ ಸಟೆಗಳ ಸರಗಳನ್ನು ಪವಣಿಸಿ ಬಾಯ್ಗೆಯ್ದು ಕತೆಗುಟ್ಟಿರಿ (ಕಬ್ಬಿಗ. ೩೦-೦೨). [ಬಾಯ್ + ಕೆಯ್₁]

ಬಾಯ್ಗೇಡಿ (ನಾ). ಬಾಯಿಗೆ ಬಂದಂತೆ ಮಾತಾಡುವವನು,—ಗಳಹುವವನು : "ಜಲ್ಪಾಕ, ವಾಚಾಲ, ಬಹುಗರ್ಹ್ಯವಾಕ್-ಬಾಯ್ಗೇಡಿ" (ಶಾಸಾಂ. ೪). 'ಬಾಯ್ಗೇಡಿತನ' ಪರಾ. [ಬಾಯ್ + ಕೇಡಿ₁]

ಬಾಯ್ಗೇಡಿತನ (ನಾ). ಬಾಯಿತೀಟೆ ; ಬಾಯಿಚಪಲ : ಬಾಯ್ಗೇಡಿತನದೊಳೇನೆಂದಾದೊಡಂ ಜರೆದು ಬಯ್ಗುಮೇ ಪಟುಭಟರ್ (ಶಬಸಿ. ೪೯-೦೩). [ಬಾಯ್ಗೇಡಿ + — ತನ]

ಬಾಯ್ಗೊಬ್ಬು, ಬಾಯಿಂಕೊಬ್ಬು (ನಾ). ಮಾತಾಡದೆ ಇರಲಾಗದಂತಹ ಚಪಲ ; ಬಾಯಿತೀಟೆ : ಬಾಯ್ಗೊಬ್ಬಿನಿಂದಲನ್ಯರನು ಜಱೆಯಲಾಗದು (ತಿಮ್ಮಕಾಂ. ೬-೦೭) ; ಪಂದೆಗಳ ಬಾಯ್ಗೊಬ್ಬು ಪಿಂದೆ ನಾರಿಯರೆಡೆಯೊಳ್ (ಅಮ್ಮಕ. ೪೭-೦೦). ಬಾಯಿಕೊಬ್ಬು : ಬಯ್ವ ಜನರು, ಜರಿವ ಜನರು, ಅವರಿಗೇನು, ಬಾಯಿಕೊಬ್ಬು ನೋವ ತೆಗೆವರೆ ? (ಶಿಪೋ. ೬೦-೨೦). [ಬಾಯ್ + ಕೊಬ್ಬು₂ (< ಕೊರ್ವು₂)]

ಬಾಯ್ಗೊಲೆ (ನಾ). ಬಾಯಿಂದ ಕಚ್ಚಿ ಕೊಲ್ಲುವಿಕೆ : ಕಯ್ಗೊಲೆ ಬಾಯ್ಗೊಲೆ . . . ಕೋಳ್ಗೊಲೆಯಂ ಕಲಿಪ ಕಡುಬಿನ್ನಣಂಬಡೆದು ಕಟ್ಟುಳ್ತನಂಬೆತ್ತಿಂತು ಗಜಾರೋಹಣಧುರೀಣರಾದಾ ಧೋರಣರ್ ನೆರೆ ನೆರೆದು (ರಾಜಶೇ. ೬-೦೦ ಪ). [ಬಾಯ್ + ಕೊಲೆ₂]

ಬಾಯ್ಗೊಳ್ (ಕ್ರಿ). ೧. ಧ್ವನಿಮಾಡು ; ಕೂಗು : ತಳಿಶ ಪಾಲ್ಮರ ನೇಱಿ ಪಿಂಗಲಿ ಬಳಿದು ಬಾಯ್ಗೊಂಡವು ಸರಾಗದಿನೊಲಿದು ದಂಪತಿ ತಾಱನಿತ್ತವು ಕರಿಯ ಹಕ್ಕಿಗಳು (ತೊಂಪರಾ. ೦-೬-೬). ೨. ಬಾಯಲ್ಲಿ ಸೇರು; ಬಾಯಿಮಾತಾಗು : ಮಹಾಕವಿಯಾದ ಅವನ ಹೆಸರನ್ನೊಂದಿದ ಆ ನಾಮವು . . . ಮತ್ತಿನವರ ಬಾಯ್ಗೊಂಡು ರೂಢವಾದುದಾಗಿರಬೇಕು (ಪಾರೋಕ. ೦೬೨). [ಬಾಯ್ + ಕೊಳ್₁]

ಬಾಯ್ಚಳಕ (ನಾ). ಮಾತಿನಲ್ಲಿರುವ ಚಾಲಾಕು,— ಜಾಣ್ಮೆ,— ಕೌಶಲ ; ವಾಕ್ಚಾತುರ್ಯ : ಕೈಚಳಕ ಬಾಯ್ಚಳಕದಿಂದ ಸಮಾಜದ ದುಡ್ಡನ್ನು ಹೀರಿ ಸ್ವಾರ್ಥ ಸಾಧಿಸುತ್ತಿರುವ ಶೀಲಭ್ರಷ್ಟರ ಕುಲ, ಯಾವ ಕುಲ ? (ಹಕ್ಕಿಪ್ರ. ೦೩೯). [ಬಾಯ್ + ಚಳಕ₂]

ಬಾಯ್ಚು 'ಬಾರ್ಚು' ನೋ.

ಬಾಯ್ತೆರೆ 'ಬಾಯ್ದೆಱೆ₁' ನೋ.

ಬಾಯ್ದಂಬುಲ (ನಾ). ಬಾಯಲ್ಲಿಯ ತಾಂಬೂಲ; ಎಂಜಲು : ನಿನಗೆ ಕಿಂಕರವೆರಡು ಸಂತತಿಯೆನಿಸಲೊಲ್ಲದೆ ನೀನು ದುರಿಯೋಧನನ ಬಾಯ್ದಂಬುಲಕೆ ಕೈಯಾನುವರೆ ಹೇಳು (ಕುಪ್ಪಾಉ. ೦೦-೬). [ಬಾಯ್ + ತಂಬುಲ]

ಬಾಯ್ದಣಿ (ಕ್ರಿ). ಬಾಯಿ ಸೋತುಹೋಗು : ಬಾಯ್ದಣಿಯೆ ಬೈಗುಳಿನಲುಭಯದ ಕಯ್ದುಗಾಱರು ನೀಗಿದರು ನಿಜಪತಿಯ ಹಣರುಣವ (ಕುಪ್ಪಾಶ. ೦೯-೦೦). [ಬಾಯ್ + ದಣಿ₁ (< ತಣಿ₁)]

ಬಾಯ್ದಾರ (ನಾ). ಚೀಲ, ಹಸಿಬೆ ಮೊದಲಾದುವುಗಳ ಬಾಯನ್ನು ಕಟ್ಟುವ ದಾರ : ಚಿನ್ನದ ಚೀಲಕ್ಕೆ ರನ್ನದ ಬಾಯ್ದಾರ (ಪಗೀಕ. ೨೦). [ಬಾಯ್ + ದಾರ₁]

ಬಾಯ್ದಾರೆ (ನಾ). ಕತ್ತಿ, ಕುಡುಗೋಲು ಮೊದಲಾದುವುಗಳ ಹರಿತವಾದ ಅಂಚು : "ಬಾಯ್ದಾರೆಗಳೆಂದಸಿಧಾರೆಗಳೊಳ್" (ಕಜಾಪಾ. ೩೯); ಬಾಯ್ದಾರೆ ನಿಲೆ ಕುಮಾರಂ ಪೊಯ್ದೊಡೆ . . . ಪಱಿದುದಾ ವಂಶವನಂ (ಪಂಗಾಮಾ. ೯-೨೩); ಬಾಳ ಬಾಯ್ದಾರೆಯ ಸೋಂಕಿಂದು ಕದಳೀದಳಸ್ಪರ್ಶನಕ್ಕೆ ದರ್ಪಂಗೆಟ್ಟೊಪ್ಪಂಗುಂದುತ್ತುಂ (ಗಿಂಕ. ೪-೦೦೬೮). [ಬಾಯ್ + ದಾರ₁]

ಬಾಯ್ದುಂಬಿಸು (ಕ್ರಿ). ಬಾಯಲ್ಲಿ ಗಿಡಿ, — ತುರುಕು : ಬಿಸಿಯ ಮಳಲಂ ತರಿಸಿ ಬಾಯ್ದುಂಬಿಸಿದವೆಂ ನಾನು (ಬಸಪು. ೦೦-೦೯). [ಬಾಯ್ + ತುಂಬಿಸು]

ಬಾಯ್ದುತ್ತು, ಬಾಯಿದುತ್ತು (ನಾ). ಬಾಯಿಗೆ ನೀಡುವ ಆಹಾರ; ಬಲಿ ; ಆಹುತಿ : ಶಸ್ತ್ರಾವಳಿಯ ಬಾಯ್ದುತ್ತುಗಳ ಸೆಳೆಯದಿರೆಂದರುಬ್ಬಿನಲಿ (ಕುಪ್ಪಾಕ. ೨-೦೬). ಬಾಯಿದುತ್ತು : ಕಾಲನ ಬಾಯಿದುತ್ತಾಗಿ ಸತ್ತು ಹುಟ್ಟುವರೆಲ್ಲ . . . ಎತ್ತ ಬಲ್ಲರು ಲಿಂಗ ಭೋಗೋಪಭೋಗಿ ಶರಣನ ಲಿಂಗಸುಖವ ? (ಮೋಳಿಮಾ. ೦೩೨ ಪ್ರಸ್ತಾವನೆ). [ಬಾಯ್ + ತುತ್ತು₂]

ಬಾಯ್ದೆಗೆ, ಬಾಯಿತೆಗೆ (ಕ್ರಿ). ೧. ಬಾಯನ್ನು ತೆರೆ ; ಬಾಯಿ ಬಿಡು : ಸುರಿವ ಖಂಡದ ರಕುತಧಾರೆಗೆ ತರತರದಿ ಬಾಯ್ದೆಗೆದು ಶಾಕಿನಿಯವರ ಸಮೂಹವು ಬಳಿಯಲೈದಿತು ಪಾರ್ಥನಂದನನ (ಕುಪ್ಪಾದ್ರೋ. ೬-೪೦) ; ಅಗಣಿತಾತ್ಮಕನೆನಿಪ ಹರಿಚರಿತಗಳನಂತವ ಮುನಿವರನು ಬಾಯ್ದೆಗೆದು ಪೇಳಲು ಶೇಷಗೆಯು ಶ್ರುತಿನಿಕರಕಳವಲ್ಲ (ಪಶಾಗ. ೦೦-೬-೨). ೨. ಬಿರಿ; ಬಿರುಕುಬಿಡು : ಅರಮನೆಯೊಳಗೆ ನೆಲ ಬಾಯ್ದೆಗೆದುದು (ಶಾಳ್ಳಾ. ೨೦-೩೪). ೩. ಅರಳು ; ವಿಕಾಸವಾಗು : ಮುಗಿದು ದಬ್ಬಾಳಿ ಬಾಯ್ದೆಗೆದುದುತ್ಪಲನಿಕರಮಗಲ್ದುದು ರಥಾಂಗಕುಲಂ (ಪಪಪು. ೪೯-೨೯). ಬಾಯಿತೆಗೆ : ೪. ಮಾತನಾಡಲು ಆರಂಭಿಸು: ಸಭೆಯಲ್ಲಿ ಆ ಹಿರಿಯರು ಬಾಯಿತೆಗೆದ ಕೂಡಲೆ ಜನಸಂದಣಿ ತನ್ಮಯತೆಯಿಂದ ಆಲಿಸಿತು (ರೂಪಿ). [ಬಾಯ್ + ತೆಗೆ₁]

ಬಾಯ್ದೆರೆ₁ 'ಬಾಯ್ದೆಱೆ₁' ನೋ.

ಬಾಯ್ದೆರೆ₂ 'ಬಾಯ್ದೆಱೆ₂' ನೋ.

ಬಾಯ್ದೆಱಸು (ಕ್ರಿ). ೧. ಬಿರಿಯುವಂತೆ ಮಾಡು ; ಬಿರುಕು ಬಿಡುವಂತೆ ಮಾಡು : ಬಳಧಾರಂ ಭೂಮಿಯಂ ಬಾಯ್ದೆಱಸೆ . . . ಪರ್ವಿತ್ತ ಮರಪಥಮನಾ ಸೈನ್ಯಧೂಳೀತಮಿಸ್ರಂ (ಜಗಪ. ೦೩-೦೪). ೨. (ಆಸೆಯಿಂದ) ಬಾಯಿಬಿಡುವಂತೆ ಮಾಡು ; ಹಂಬಲಿಸುವಂತೆ ಮಾಡು : ಗಾಳಿಯೊಲಹಿಗೆ ನಿಲುಕುವವು ಹೊಂಬಾಳೆ ಖಚರೀಜನದ ಕಬರಿಗೆ ಬಾಳೆ ಬಾಯ್ದೆಱ[ಱ]ಸುವವು ಬಿರಿವಣ್ಣಿನ ರಸಾವಳಿಗೆ ಬಾಲಕಿನ್ನರಿಯರನು (ಶೊರಣಾ ೩-೩-೧೩). [ಬಾಯ್ + ತೆಱಸು (< ತೆಱೆಯಿಸು)]

ಬಾಯ್ದೆಱೆ$_1$, ಬಾಯಿತೆರೆ, ಬಾಯಿದೆಱೆ$_1$, ಬಾಯ್ತೆರೆ, ಬಾಯ್ದೆರೆ$_1$ (ಕ್ರಿ). ೧. ಬಾಯನ್ನು ತೆಗೆ.— ಬಿಚ್ಚು ; ಬಾಯಿಬಿಡು : ಆ ಮಿಟ್ಟು ಪೋ ಬಾಯ್ದೆಱೆದತ್ತು (ಶಾಂತಿಪು. ೪-೧೨) ; ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆಱೆಯೆನಯ್ಯಾ (ಬಸವ. ೪) ; ಮಾರಿ ಬಾಯ್ದೆಱೆದಳೋ ಮಹಾದೇವ (ಕುಮ್ಮಾರ್ಪ್ರೋ. ಪರಿ. ೨೯೩-೦೦). ೨. ನುಡಿ ; ಮಾತಾಡು : ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ (ಪಂಪಭಾ. ೭-೮೮) ; ಮತಿವಂತಂಗರ್ದೆದೆಱೆದನಲ್ತೆ ಬಾಯ್ದೆಱೆದಾತಂ (ಶಾಂತಿಪು. ೨-೩೬) ; ಬಾಯ್ದೆಱೆಯಲಂಜಿತು ಸಭೆ (ನಿಭಾಗ. ೪-೪-೦೯). ೩. ಬೇಡಿಕೊಳ್ಳು ; ಅಂಗಲಾಚು ; ಯಾಚಿಸು : ಹುಯ್ಯಲ ಕಂಡು ಬಿರುತೋಡಿ . . . ಬಾಯ್ದೆಱೆವವಂ ರಾಜನೇ ಹಗರಣದ ರಾಜನಲ್ಲದೆ (ಪಂಪು. ೯-೧೨). ೪. ಬಯಂಸು ; ಹಂಬಲಿಸು : ಪುದಿದುರಿಗಣ್ಣನಾಣೆಯನದೇವೊಗಟ್ವೆಂ ಮುಗುಳೆಂದು ಮುಟ್ಟಬಾರದು ಬನಮೆಂದು ಬಾಯ್ದೆಱೆಯಬಾರದು ಸಂಪಗೆಯೆಂದು ಸೂಡಬಾರದು (ಕಬ್ಬಿಣಾ. ೦೪೭) ; ಸುತನ ಬರವಿಗೆ ಬಾಯ್ದೆಱೆದ ತೆಱದಿ ಪರಮಸತಿಗಾಗುಳಿಕೆ ಬಂದುದು (ಬಸವು. ೩-೨). ೫. ಅರಳು; ವಿಕಾಸವಾಗು : ಮಱುಗಿದವು ಕೋಕ ಕೋಕನದಂಗಳಾಗ ಬಾಯ್ದೆಱೆದುವು ಚಕೋರ ಕೋರಕಕುಮುದರಾಜಿಗಳ್ (ಸೈನಿಭಾ. ೨೬-೦೪). **ಬಾಯಿತೆರೆ** : ೧. ರುಕ್ಷ್ಮಿಣಿಯೂ ಗರ ಬಡಿದವಳಂತೆ ಬಾಯಿ ತೆರೆದುಕೊಂಡು ನೋಡುತ್ತಿದ್ದಳು (ಪದ್ಮಸ. ೨೦೬). ೨. ಭಾವ ಬಾಯಿ ತೆರೆಯುವ ಸ್ಥಿತಿಯಲ್ಲಿರಲಿಲ್ಲ (ಜಾರುಹಾ. ೯೨). ೩. ಎರಡನೆಯವರಿಗೆ ನಾನು ಎಂದೂ ಬಾಯಿ ತೆರೆದವನಲ್ಲ (ಮುಂಬಯಿ. ೪-೪೩). ೪. ಪ್ರತಿಯೊಬ್ಬನೂ ಲಂಚಕ್ಕಾಗಿ ಬಾಯಿ ತೆರೆದುಕೊಂಡಿರುವಾಗ, ನನ್ನೊಬ್ಬನಿಂದ ಲಂಚನಿರ್ಮೂಲನ ಹೇಗೆ ತಾನೆ ಸಾಧ್ಯ? (ಪುಪರು. ೩೬೬). **ಬಾಯಿದೆಱೆ**$_1$: ೧. ಪ್ರಾಣಪದವಾದಿರವಿಗಲ್ಲದೆ ಬಾಯಿದೆಱೆಯದು ಕರಮೆಸೆವ ಸಿಂಪೊಂದು ನೆನವುತವಿಹುದು ಮಳೆಗಳಿಗೆ (ಬಸವು. ೩೦-೨೪). **ಬಾಯ್ತೆರೆ** : ೧. ಜಯಸೇನನು ಮಾಧವಿಯೆಂದು ಹೇಳುವುದಕ್ಕೆ ಬಾಯ್ತೆರೆಯುವಷ್ಟರಲ್ಲಿ ಅವಳು . . . ಮಾತಾಡಬಾರದೆಂದು ಸಂಜ್ಞೆ ಮಾಡಿದಳು (ಮಣಿಸ. ೮೭) ; ಗಳಗಳನೆ ಬಾಯ್ತೆರೆದು ತಾಯಿಯಳುತಿಹಳು (ಕಾಲೂರ. ೦೬೨-೩೮೩). ೨. ಸಯ್ತಿರ್ಪುದೀಗ ನೀಂ ಬಂದಾಗ ನೋಳ್ಪಂ ಕಯ್ವಿಡಿಯೊಳಳವಿರ್ಪುದೊಳ್ಳಿತೆನೆ ಬೀಳ್ಕೊಂಡ ಬಾಯ್ತೆರೆಯದೆಯೆ ಕಾಳು (ಕಾಲೂರ. ೦೪೩-೩೦೩). ೫. ಚೆಂದೆಂಗು ತಲೆದೂಗೆ ಕೆಂದಳಿರ್ ಬಾಯ್ತೆರೆಯೆ (ಕಾಲೂರ. ೬೭-೦೦೭). **ಬಾಯ್ದೆರೆ**$_1$: ೧. ಬಹುಗುಣಿತ ಜನಗಣದ ಸಂಸ್ತುತಿಯ ಧವಳಧಾರಾಸ್ವಾತಿವರ್ಷಕ್ಕೆ ಬಾಯ್ದೆರೆಯುತೆನ್ನ ಹೃದಯದ ಭಕ್ತಿಶುಕ್ತಿಯಲಿ ಮುತ್ತುಗಳ ರಚಿಸಿ ಕೋದಿಹೆ ವರಣಮಾಲೆಯಂ (ಜಿಶ್ರಾಂಗ. ೩೭-೦೦೦೩) ; ಕಟ್ಟಳಲ ಬಿಚ್ಚಿ ಕರು ಕರೆಯೆ ಬಾಯ್ದೆರೆದು (ಕಾಲೂರ. ೬೭-೦೦೭). ೨. ದಾರಿಗನು ಬಾಯ್ದೆರೆಯುವುದರೊಳಗಾಗಿ ಮೂವರು ಸೈನಿಕರೂ, ಸೈನ್ಯಾಧಿಪತಿಯೊಬ್ಬನೂ . . . ಮುಂದೆ ನಿಂತರು (ಮಣಿಸ. ೬). ೪. ಕುದಿಯಿಲ್ಲದೆ ಎಸರಿಲ್ಲದೆ ಕಸುಕಿಗೆ ಬಾಯ್ದೆರೆದವು (ಪಂಮು. ೨೩-೪). [ಬಾಯ್ + ತೆಱೆ$_1$]

ಬಾಯ್ದೆಱೆ$_2$, ಬಾಯಿದೆಱೆ$_2$, ಬಾಯ್ದೆರೆ$_2$ (ನಾ). ೧. ಬಾಯನ್ನು ತೆರೆದಿರುವ ಸ್ಥಿತಿ; ತೆರೆದ ಬಾಯಿ : ಲಲನೆ ಮುದ್ದಾಡುತ್ತ ಬಾಯ್ದೆಱೆಯೊಳಗೆ ಕಾಣಳೆ ಸಕಲಭುವನಾವಳಿಯನು (ನಿಭಾಗ. ೨-೩-೨೩). ೨. ತುಟಿ ; ಅಧರ : ಮಿಸುಗುವ ತನ್ನ ಬಾಯ್ದೆಱೆಯೊಳಾಲದ ಪಣ್ಣನೆ ಮೈಯ ಬಣ್ಣದೊಳ್ ಕೊಸಗನೆ ತನ್ನ ಬಳ್ವಳಿಕೆಯೊಳ್ ಸೆಳೆಗೊಂಬನೆ ಪೋಲ್ತು ನೋಡ ಮಾನಸೆಯಣಮಲ್ಲಳೀಕೆ (ಆದಿಪು. ೦೨-೩೮) ; ಬಾಯ್ದೆಱೆಯಂ ಧವಳಿಸೆ ನಿಜದಂತಕಾಂತಿಸಂತಾನಂಗಳ್ ಪೂರ್ಣೇಂದುವದನೆ . . . ನೆಱೆ ನುಡಿದಳ್ (ಮಲ್ಲಿಪು. ೪-೮೬) ; ಮಾತನಾಡಿದ ಬಾಯ್ದೆಱೆಯ ಚೆಲ್ವನೆ ಕಂಡು ಸೋತನೀಶ್ವರ ಮನದೊಳಗೆ (ಮೋಹತ. ೨೩-೦೪). ೩. ಬಿರುಕು; ಬೀಡೆ : ಎರೆಯ ಭೂಮಿಯ ಬಾಯ್ದೆಱೆ ಧಾನ್ಯಮಾನ್ಯರ ಕರೆವ ಗೋಳಿಗೆ ಗಂಡು ಮೊರೆವ (?) . . . ನಾಮಾಂಕಿತ ವರವೃಕ್ಷ ವಿಪಿನದೊಳಿಹವು (ಮೋಹತ. ೭-೬). ೪. ಬಾಗಿಲು ; ದ್ವಾರ : 'ಚೆಂಬಾಯ್ದೆಱೆ' ಪರಾ. **ಬಾಯಿದೆಱೆ**$_2$: ೫. ಬಾಯಿ ; ವದನ ; ಮುಖ : ಬಾಯಿದೆಱೆಯಿನಾಣೆಯಾಯ ತಪ್ಪದ ಗೀತಗಾಯಕಿಯರುಗಳೊಪ್ಪಿದರು (ಮೋಹತ. ೦೮-೪೪). **ಬಾಯ್ದೆರೆ**$_2$: ೧. ಭರದಿಂದ ಯೆಕ್ಕಲನ ಹೊಕ್ಕಿರಿದು ಕರಡಿ ಬಾಯ್ದೆರೆಯ ಮುಸುಡಂ ಮುರಿಯಲಿಕ್ಕಿ (ಪವಮೋ. ೦೬-೨೩). ೨. ಮೊನೆಯ ನಗೆ ಬಾಯ್ದೆರೆಯ ಸೊಂಪ ಬೀರಿದುವು (ಕಾಲೂರ. ೬೯-೧೨೦). ೬. ಬಾಯಿಮಾತು : ಬರೆಯದೆ ಇರುವ ಬಾಯ್ದೆರೆಯಾಗಿ ಹರಿದು ಬಂದ ಮತೀಯ ಆಚರಣೆಗಳ ಕಟ್ಟಳೆಗಳು, ಹಾಡುಗಳು, ಗಾದೆಗಳು ಸಹ ಸಹಾಯ ಮಾಡಬಹುದು (ಜಾವಗೀ. ೩೦) ; ನನಗೆ ನಿಮ್ಮ ಆಸ್ತಿಯಿಂದ . . . ತೊಂದರೆಯಿಲ್ಲವೆಂಬುದು ಖಾತ್ರಿಯಾದ ಬಳಿಕ ಮಾತ್ರ ಕೊಟ್ಟೇನು. ಅದು ಬಾಯ್ದೆರೆ (ಮುಗಿಯು. ೦೪೯). [ಬಾಯ್ + ತೆಱೆ$_2$]

ಬಾಯ್ಧಾರೆ, ಬಾಯಿಧಾರೆ, ವಾಯಿಧಾರೆ (ನಾ). = ಬಾಯ್ದಾರೆ : ಕಠೋರದ ಮೊರಹುಗಳ ಬಾಯ್ಧಾರೆಗಳ ಕಿಡಿಹೊರಳಿಗಳ ಹೊಗರಂಬು ಹೊಕ್ಕವು ಪಾಂಡುಸೈನ್ಯದಲಿ (ಕುಮ್ಮಾರ್ಪ್ರೋ. ೨-೩೩). **ಬಾಯಿಧಾರೆ** : ಈ ಉಭಯದ ತಟಿಗಾಱದೆ ಹೊತ್ತು ಹೋರುವ ಮಾತಿನ ಕತ್ತಿಯ ಬಾಯಿಧಾರೆಯ ಘಾಯಕ್ಕೆ ಇನ್ನೇತಱ ಮದ್ದು (ಮೋಳಮಾ. ೪೪-೦೬೦); ತಳಿತ ಹೊಗರಿನ ಬಾಯಿಧಾರೆಯ ಹೊಳಹುಗಳ ಹೊಗರಂಬು ಕವಿದವು (ಕುಮ್ಮಾರ್ಪ್ರೋ. ೫-೦೩). **ವಾಯಿಧಾರೆ** : ಹೊಳೆವ ಕೆಂಗೆಂಪುಗಳ ಮೂಳಿಯ ಲಲಿತರತ್ನದ ರೋಚಿಗಳ ಗಜಗಲಿಸುವಂಬಿನ ವಾಯಿಧಾರೆಯ ಕಿಡಿಯ . . . ಜ್ವಾಲೆಗಳೆನಲು ಹೊಕ್ಕನು ಮಹಾಹವವ (ಕುಮ್ಮಾರ್ಪ್ರೋ. ಪರಿ. ೨೯೪). [ಬಾಯ್ + ಧಾರೆ]

ಬಾಯ್ನೀರ್, ಬಾಯಿನೀರು (ನಾ). ೧. ಬಾಯಲ್ಲಿ ಬರುವ ನೀರು; ಜೊಲ್ಲು ; ಲಾಲಾರಸ : ಏಕಾದಶಿಯೊಳಿವಿಲ್ಲದುದರ್ಕೆ ಬಾಯ್ನೀರೊಱೆತು ಬಣ್ಣಂಗುಂದುವರ್ (ಸಕವಂ. ೯-೦೨). **ಬಾಯಿನೀರು** : ೨. ಬಾಯಲ್ಲಿ ನೀರು ಸುರಿಯುವಿಕೆ : ಶ್ವಾಸವು, ಕೆಮ್ಮು, ಬಾಯಿನೀರು . . . ಇನಿತುಂ ಕರ್ಣಿಕ ಸನ್ನಿಪಾತವೆಂದರಿವುದು (ಸಕವೈ. ೦೬೦). [ಬಾಯ್ + ನೀರ್./ತಮಿ. ವಾಯ್ನೀರ್]

ಬಾಯ್ನುಡಿ (ನಾ). ಖರಿಯ ಬಾಯಿಮಾತು ; ಬಾಯಿಬಡಾಯಿ : ನಿನ್ನನ್ನರಂ ಬಾಯ್ನುಡಿಯ ಬೀರರನ್ನೆನಿತೊ ಕಂಡಿಹೆನೊ ನಾಂ (ಜಿಶ್ರಾಂಗ. ೬೯-೨೦೮೦). [ಬಾಯ್ + ನುಡಿ$_2$]

ಬಾಯ್ಬರೆ 'ಬಾಯ್ವೆಱೆ' ನೋ.

ಬಾಯ್ಬಡಕ 'ಬಾಯ್ಬಡಿಕ' ನೋ.

ಬಾಯ್ಬಡಿ, ಬಾಯಿಬಡಿ (ಕ್ರಿ). ೧. ಇನ್ನೊಬ್ಬರಿಗೆ ಮಾತಾಡಲು ಅವಕಾಶವಿಲ್ಲದಂತೆ ದಬಾಯಿಸಿ ಮಾತನಾಡು; ಇತರರು ಮಾತನಾಡದಂತೆ ಮಾಡು : ಪೊಡವಿಯೊಡೆತನವೆಮ್ಮದೆಂದು ಬಾಯ್ಬಡಿವರೇ (ಸೌಂದಪು. ೪-೭೭). ೨. ಬಡಾಯಿ ಕೊಚ್ಚಿಕೊಳ್ಳು : ವೃಥಾಭಿಮಾನದಲಿ ಹಣುಕಿ ಬಾಯ್ಬಡಿದೇನಹುದು ಕೈಗುಣವ ತೋಱಿರೆ

(ಕುಮಾ.ಸ. ೦೦-೩೯). **ಬಾಯಿಬಡಿ :** ೧. ಗುಣ ಮಾತನಾಡಿತು ಹಣ ಬಾಯಿಬಡಿಯಿತು (ಇಂಶಾಪ. ೨೦೩-೨) ; ಗಿರಾಕಿಗಳ ಬಾಯಿ ಬಡಿದ ಹಾಗೆ ಹೆಂಡ್ತಿ ಬಾಯಿಬಡಿಯೋಕೆ ಬರಬೇಡಿ (ಹೇಪುಕೂ. ೬) ; ತಪ್ಪು ಮಾಡುವುದು ಮೇಲೆ ಬಾಯಿಬಡಿಯುವುದು (ಕೂಶತಾ. ೩೦).

[ಬಾಯ್+ಬಡಿ$_1$]

ಬಾಯ್ಬಡಿಕ, ಬಾಯಿಬಡಕ, ಬಾಯಿಬಡಿಕ, ಬಾಯಿಬಡುಕ, ಬಾಯ್ಬಡಕ (ನಾ). ೧. ಬಡಾಯಿ ಕೊಚ್ಚಿಕೊಳ್ಳುವವನು : ಒತ್ತಿ ನೀನೆನ್ನಂ ಬಲುಹು ಮಾಡುತ್ತ ಕಾಡಲದೆಂತು ಬಹುದಾನೆತ್ತಲೈ ನೀನೆತ್ತಲೇತಱ ಮಾತು ಬಾಯ್ಬಡಿಕ (ಬಸಪು. ೪೦-೪೬); ಬಱಿಯ ಬಾಯ್ಬಡಿಕನೇ ಶಿಶುಪಾಲನೀ ಪರಿ ನಡೆವುದೇಕೈ ಹರಿಯೊಡನೆ ಸಮಬೆಸನ ಬಿಂಕದಲಿ (ಕುಮಾ.ಸ. ೦೦-೬೬); ಕತ್ತ ಹಿಡಿದೀಗಳೀ ಬಾಯ್ಬಡಿಕನಂ ನೂಂಕು (ಪಂಪು. ೩೦-೨೩). (ಗು). ೨. (ಇನ್ನೊಬ್ಬರಿಗೆ ಮಾತನಾಡಲು ಅವಕಾಶ ಕೊಡದಂತೆ) ಬಹಳ ಮಾತನಾಡುವ ; ಅತಿಯಾಗಿ ಹರಟುವ : ಕೆಡುವೀ ಪ್ರಪಂಚಮಂ ನಿತ್ಯವೆಂದೆಂಬ ಬಾಯ್ಬಡಿಕ ಮಿಮಾಂಸಕಾ ನೀಂ ಸುಮ್ಮನಿರ್ (ಪಡ್ಕಣಾ. ೦೦-೦೯) ; ಬಾಯ್ಬಡಿಕ ಹೆಂಗುಸ ಕೊಲುವೆನೆನುತುಗ್ಗಡದ ಕೋಪದಲೆತ್ತಿದನು ಖಂಡೆಯವ ನಸುರೇಂದ್ರ (ಕೊರಣಾ. ೩-೩-೩೯). **ಬಾಯಿಬಡಕ :** ೧. ನಾನು ಬಾಯಿ ಬಡಕನಲ್ಲದುದರಿಂದ ಜಗಳವನ್ನು ಬಯಸುವುದಿಲ್ಲ (ಹೋರಕು. ೨೯); ಇದನ್ನು ತಿಳಿದೂ ತಿಳಿದೂ ತಾನು ಅಂಧಶ್ರದ್ಧೆಯ ಬಾಯಿಬಡಕರ ಬಾಲ ವಾಗಬೇಕೇ ? (ಏಕ್ಷಾರ. ೬೯); ಬಾಯಿಬಡಕ ಬರದಲ್ಲಿ ಗೆದ್ದ (ಗಾಪ). **ಬಾಯಿಬಡಿಕ :** ೧. ಹತ್ತಿರಕೆ ಕರೆವರು ಬಾಯಿಬಡಿಕರ ಜಗದ ಭಂಡರನು ಅರಸುಗಳು ದುಶ್ಶೀಲರೆಂಬುದನಱಿಯದೇ ಜಗ (ಕುಮಾ.ಪ್ರೋ. ೦೩-೬) ; ಬಾಯಿಬಡಿಕನಲಾ ವೃಥಾ ರಾಧೇಯ ಮದವೇಕಿನ್ನು . . . ನೀನುಳಿವಾಯತಿಕೆಯನ್ನೆಂತು (ಕುಮಾ.ಪ. ೨೬-೭). ೨. ಆಯತಿ ಹೆಣ್ಣು ಗಳೇನು ಗಹನವೆಂಬ ಬಾಯಿಬಡಿಕ ತವಸಿಗಳ ತಾಯೆ ನೀ ಕೆಡೆಮೆಟ್ಟು (ಪೋಹಕ. ೨೩-೪೬). **ಬಾಯಿಬಡುಕ :** ೧. ರಾಯ ಬಿನ್ನಪವಿದನೊಂದ ಚಿತ್ತೈಸೆನ್ನ ಬಾಯಿಬಡು[ಪಾಕಾಂ. ಡಿ]ಕನೆನ್ನದಿರು (ಕುರಾಪಾಂ. ೦೯-೭೦); ವರ್ಣಾಶ್ರಮಗಳಿಂದ ದೇಶ ಹಾಳಾಯಿತೆಂಬ ಬಾಯಿಬಡುಕರೂ ಬಹಳ (ಕಪಂ. VIII ಮುಸ್ಸಂ). **ಬಾಯ್ಬಡಕ :** ೧. ಮಾತು ಹಡೆಯುವದೆಲ್ಲ, ಮೌನಗರ್ಭದ ಬದುಕು ಬಾಯ್ಬಡಕಗೇನು ಗೊತ್ತು! (ಅರಳು. ೨೩೯-೦೩); ಅಂಥಾ ಕಥೆಗಳಲ್ಲಿ ಅರ್ಧಕ್ಕರ್ಧ ಸುಮ್ಮೆ ಊರ ಬಾಯ್ಬಡಕರ ಕಪೋಲ ಕಲ್ಪಿತವೆಂಬುದೇನೂ ಸುಳ್ಳಲ್ಲ (ಬಿಡ್ಡಿಯು.೩೯). ೨. ಕೊನೆಗೆ ಬಾಶ್ಮೀದಾರ, ಇಲ್ಲವೋ ಬಾಯ್ಬಡಕ ಸಾಯ್ಕಲ್‌ಸ್ವಾರ (ಅರಳು. ೩೪೭-೦೦).

[ಬಾಯ್ + — ಬಡಿಕ$_2$]

ಬಾಯ್ಬಡಿಕತನ, ಬಾಯಿಬಡಿಕತನ (ನಾ). ಜಂಬದಿಂದ ದಬಾಯಿಸಿ ಮಾತಾಡುವಿಕೆ ; ಜಂಬಕೊಚ್ಚಿಕೊಳ್ಳುವಿಕೆ : ಘಡ ವಿಕಾರವೆ ನಮ್ಮೊಡನೆ ಬಾಯ್ಬಡಿಕತನವೇ ಕುರುಮಹೀಪತಿಯೊಡನೆ ಹುಟ್ಟಿದೆಯಾದ ಕಾರಣ ಬಿಟ್ಟೆವು (ಕುಮಾ.ಸ. ೦೯-೧೭) ; ಗಂಡುತನವೇನಾಯ್ತು ಹೆಳೆಲೆ ಭಂಡ ನೀ ಬಾಯ್ಬಡಿಕತನದಲಿ ತೊಂಡುಗೆಡವರೆ (ಕೌಶಾ. ೨೦-೩೦); ಅವ ನಿನ್ನಿಂದ ಬಾಯಲಿ ಬಲ್ಲಿದನು ಬಾಯ್ಬಡಿಕತನದಲಿ ಬಗುಳಿ ಬಾಲವನು ಕೊಳ್ಳಿಗಿಡಿಯಲಿ ಸುಡಿಸಿಕೊಂಡವ (ಕೊರಣಾ. ೬-೦೦-೩೬). **ಬಾಯಿಬಡಿಕತನ :** ಹಿರಿದು ರಕ್ಷಿಸಿದೊಡತಿಯೆಂದಾನಱಿಯದುಸುರಿದೆ ನಿಮಗಿನಿತು ನಿಷ್ಠುರತೆಯಾದಡೆ ನಮಗಿದೇಕೀ ಬಾಯಿಬಡಿಕತನ (ತೊರಣಾ. ೨-೦-೩೦). [ಬಾಯ್ಬಡಿಕ+—ತನ]

ಬಾಯ್ಬಡಿಕಿ, ಬಾಯಿಬಡುಕಿ (ನಾ). ಇನ್ನೊಬ್ಬರಿಗೆ ಮಾತನಾಡಲು ಅವಕಾಶವಿಲ್ಲದಂತೆ ದಬಾಯಿಸಿ ಮಾತನಾಡುವವಳು : ಕೊಡ ಸಮರ್ಥರೆ ಬೇಡಿದುದ ನೀವ್ ನುಡಿದು ತಪ್ಪುವರಲ್ಲಲೇ ಬಾಯ್ಬಡಿಕಿ ಯಿವಳೆಂದೆನ್ನಿರೆಲೆ (ತೊರಣಾ. ೨-೨-೬). **ಬಾಯಿಬಡುಕಿ :** ರಿಪುರಾಯರಿಗೆ ದಾಸತ್ವವಾಗಲು ಬಾಯಿಬಡುಕಿ[ಪಾಕಾಂ. ಬಾಯ ಬಡಿಕೆ]ಯದಾರೊಡವೆ ತದ್ದಾಸ ಧನವಲ್ಲ (ಕುಮಾ.ಸ. ೦೩-೦೨). [ಬಾಯ್ಬಡಿಕ+ — ಇ$_2$]

ಬಾಯ್ಬಡಿಕೆ (ನಾ). = ಬಾಯ್ಬಡಿಕಿ : ನಿರ್ಬುದ್ಧಿವಂತೆ ಬಾಯ್ಬಡಿಕೆ . . . ಮಧುಗೋಷ್ಠಿಗೊರ್ಬಳೆಡೆಯಾಡುತಿರೆ ಕಂಡಾ ವಿದೂಷಕಂ ಸರ್ಬವದೊಳೆ ಲ್ಲರಂ ನಗಿಸುತಿವಳೀಗ ಹಸ್ತಿನಿಯೆಂದುಸಿರ್ದನು (ಕಪಪು. ೦೦-೨೩) ; ಹೆಣ್ಣೆ ವಾದಿಸಬೇಡ ಬಲ್ಲೆ ಬಾಯ್ಬಡಿಕೆಯೆಂದಳು ಖದ್ರು ಖಾತಿಯಿಂದ (ಶಂರಂಗ. ೩-೨೦). [ಬಾಯ್ಬಡಿಕ+ — ಎ$_2$]

ಬಾಯ್ಬಿಡು 'ಬಾಯ್ವಿಡು' ನೋ.

ಬಾಯ್ಬಿಯ್ಯಗ 'ಬಾಯಿಬೀಗ' ನೋ.

ಬಾಯ್ಬೀಗ 'ಬಾಯಿಬೀಗ' ನೋ.

ಬಾಯ್ಮಱುಕ (ನಾ). ಅಭಿವ್ಯಕ್ತಿಗೊಳ್ಳುವ ಪ್ರೀತಿ, —ವ್ಯಾಮೋಹ : ಸೂಟ್ಟಡೆದ ಕೂಟಂ ಪಲ್ಲಟಂಬಾಯ್ವ ಬಾಯ್ಮಱುಕಂ ತಾಂಗಿಗಟಲ್ವ ನಾಣಲಿತನಂ . . . ಅಳುಂಬಂ ಕೂಟದೊಳ್ ನಲ್ಲರಾ (ಕಂದ್ರಪು. ೯-೬೯).

[ಬಾಯ್ + ಮಱುಕ]

ಬಾಯ್ಮಾತು 'ಬಾಯ್ವಾತು' ನೋ.

ಬಾಯ್ಮಿಡುಕು (ಕ್ರಿ). ಧ್ವನಿ ಮಾಡು; ಮಾತಾಡು: ಬಱಿದೆ ಬಾಯ್ಮಿಡು ಕದಿರಿ ಮಱಿಯೊಳಡಿಗಡಿಗಿಬ್ಬರೊಂದಾಗಿ ನುಡಿಯದಿರಿ (ಸೌಂದಪು. ೦-೩೯).

[ಬಾಯ್ + ಮಿಡುಕು$_1$]

ಬಾಯ್ಮುಚ್ಚು, ಬಾಯಿಮುಚ್ಚು (ಕ್ರಿ). ೧. ಬಾಯಿ ಬಿಡದಿರು ; ಮಾತಾಡದಿರು ; ತೆಪ್ಪಗಿರು : ಬಾಯ್ಮುಚ್ಚಿರಲ್ ಚೆಲ್ವು ಪೆಣ್ (ಅಕ್ಕಣ್ಣ. ೦೨-೨೫೩). **ಬಾಯಿಮುಚ್ಚು :** ೧. ಹೆಣ್ಣನ್ನು ತರುವಾಗ ಬಾಯಿಮುಚ್ಚಿಕೊಂಡಿರಬೇಕು ಅನ್ನುತ್ತೀಯಾ ? (ಮೂಗಶ್ಲೋ. ೦೨೪). ೨. ಬಾಯಿ ಮುಚ್ಚಿಸು ; ಬಾಯನ್ನು ಕಟ್ಟು : ಮಾಯೆ ಎನ್ನ ಕಾಯ ವನ್ನುಪಾಯದಿಂದ ನೋಯಿಸಿ ಬಾಯಿಮುಚ್ಚಿ ಕೊಲ್ಲುತ್ತಾಳೆ ಕಾಯೊ ಲಕ್ಷ್ಮಿಯರಸನೆ (ಭುರಂದ. ೦-೧೬೬ ಪದ್ಯ). [ಬಾಯ್ + ಮುಚ್ಚು$_1$]

ಬಾಯ್ಮೋಸ (ನಾ). ಮಾತಿನ ತಪ್ಪು ; ಉಕ್ತಿದೋಷ : ಆನಿವರೊಳ್ ವ್ಯವಹರಿಪುದರ್ಕೆನಗೆ ತಿಳಿವಂತೆ ನಿರಪಿಸಿ ರಾಯಸಮಂ ದಯೆಗೆಯ್ವುದು ಇದಱೊಳೇನಾನುಂ ಕೆಯ್ಮೋಸ ಬಾಯ್ಮೋಸಂಗಳುಳ್ಳೊಡವೊಲ್ಮೆಯಿಂ ಸೈರಿಪುದು (ಪಸಪಂ. ೨೩-೯). [ಬಾಯ್ + ಮೋಸ]

ಬಾಯ್ವಲ (ನಾ). ಮಾತಿನ ಶಕ್ತಿ ; ವಾಗ್ಬಲ : ಚಲಮಂ ತೋಳ್ವಲಮಂ ನೃಪಾಳನಳವಂ ನಾವಿನ್ತು[ಟಿ]ನ್ದೆಯ್ದಿ ಬಾಯ್ವಲದಿಂ ಬಣ್ಣಿಸದಿರ್ದೆ [ಳ]ಣ್ಣ (ಕಇಪ. ೨-೨-೪೦; 1058); ಪಲವುಂ ಮತಂಗಳಂ ಬಾಯ್ವಲದಿಂದಂ ಬಾದುಗೆಯ್ವ ಬಸನದೆ ಮಾಟ್ಟರ್ ಕೆಲಬರದನೊಲುವರೊಲ್ಲರ್ ಪಲರೆಂತುಂ ಮೋಕ್ಷಮಾರ್ಗಮಂ ಜಿನಮತಮಂ (ಸಮಾಪ. ಅಪಾಂಬಂ. I. ೩೬೩-೩೬). [ಬಾಯ್ + ಬಲ$_3$]

ಬಾಯ್ವಸ (ನಾ). ಬಾಯಿಯ ಉತ್ಕಟವಾದ ಅಪೇಕ್ಷೆ : ಬಾಯ್ವಸವೋಡ ದಂತಡರೆ ಚುಂಬಿಸೆಯುಂ ಬಗೆದೆಂತು ತಳ್ತೊಡಂ ಮೆಯ್ವಸವೋಡದಪ್ಪು ಗಡ ಕಣ್ಬಸವೋಡದಿದೆಂತು ನೋಡೆಯುಂ (ಅರ್ಧನೇ. ೬-೬).

[ಬಾಯ್ + ಪಸ$_1$]

ಬಾಯ್ವಱ್ಜಿ, ಬಾಯ್ಬರೆ (ನಾ). ಬಾಯಿಂದ ಮಾಡುವ ಶಬ್ದ; ಬೊಬ್ಬೆ : ಸುರಿಗೆ ಶುಭಂಕರಗತ್ತಿಗೆ ಕರಗಂ ತಲೆಮುಂಡೆ ಮರುಳ ಬಾಯ್ವಱ್ಜಿ ಪಱಿಯಾಗಿರೆ ಕಳದೊಳಱಿಯಲಿರ್ದುವು ನೆರೆದು ನಿಶಾಚರರ ತಕ್ಕಿನೆಕ್ಕತುಳಂಗಳ್ (ಕಾಪ್ರಾಪ. ೬೬). **ಬಾಯ್ಬರೆ :** ನಾನಾಶಕುಂತವ್ರಜಂ . . . ಪಾಮರಿಯ ಬಿರುದನಿಗೆ ಕೈಪರೆಗೆ ಬಾಯ್ಬರೆಗೆ ಕಲ್ಗವಣೆ ಗೊಂದಿನಿತು ಪೆಳರಿ ಗಾರಾಗುತುಂ . . . ತೊಡಗಿದಪವಿನ್ನೊರ್ಮೆ ನೆಲ್ಲೇವಿಗೆ

(ಸಪ್ತಾಂಗ. ೫೩-೦೪೫೦). 'ಕೆಯ್ಪಱಿ' ಪರಾ. [ಬಾಯ್+ಪಱಿ$_1$]

ಬಾಯ್ವಱಿಗುಟ್ಟು (ಕ್ರಿ). ಬಾಯಿಂದ ಜೋರಾಗಿ ಶಬ್ದ ಮಾಡು ; ಬೊಬ್ಬೆಯಿಡು : ಘಟೋತ್ಕಚನ ತಲೆಯಂತೆ ಮರುಳ ಕಾಳೆಗಕ್ಕಾರ್ವ ಸೂಲದ ತಲೆಗಳಂ ತಮ್ಮಟ್ಟೆಯಾಟಕ್ಕೆ ಬಾಯ್ವಱಿ[ಪಾಠಾಂ. ಯ್ದಱಿ] ಗುಟ್ಟುವ ಸಿಡಿದಲೆಗಳುಮಂ (ಅರ್ಥಪಂ. ೩-೪೦ ಪ). [ಬಾಯ್ವಱಿ+ಕುಟ್ಟು$_1$]

ಬಾಯ್ವಾತು, ಬಾಯಿಮಾತು, ಬಾಯ್ಮಾತು (ನಾ). ೧. ಬರಿ ಮಾತು ; ಶುಷ್ಕವಾದ ನುಡಿ ; ತೋರಿಕೆಯ ಮಾತು : ಈ ಬಾಯ್ವಾತಿನೊಳೇ ವಂದಪುದಮ್ಮಣ್ಮಿ ಕಾದುಕೊಳ್ (ಪಂಪಭಾ. ೦೨-೦೬೩). **ಬಾಯಿಮಾತು** : ೧. ನನ್ನ ಕನ್ನಡಾಭಿಮಾನವು ಬರೀ ಬಾಯಿಮಾತಿನಲ್ಲೇ ಉಳಿಯಿತು (ಸಂಗಾಳ್ಯ. II, ಮುನ್ನುಡಿ). ೨. ಮುಖತಃ ಹೇಳಿದ ಮಾತು ; ವ್ಯಕ್ತವಾಗಿ ನುಡಿದ ಮಾತು : ಬಾಯಿಮಾತಿನ ದಾಯದೊಳು ತಮಗಾಯಿತೆಂದೇ ಹಂಕರಿಸಿ . . . ತರಣೋಪಾಯವರಿಯದವರಿಂಗೊರೆಯದಿರು ಮಾಯಹರ ಚಿತ್ಕಾಯ ಘನಗುರುರಾಯ ವಚನವನು (ಗಗತಾ. ೦೬-೨) ; ಅವಳ ಬಾಯಿಮಾತಿನಲ್ಲಿ ಅರ್ಥವೊಂದಾದರೆ, ಕಣ್ಣಿನ ಭಾಷೆಯ ಅರ್ಥವೇ ಬೇರೆಯಾಗಿತ್ತು (ಪುನರು. ೩೨೨). **ಬಾಯ್ಮಾತು** : ೧. ನಾವೀಗ ಬಾಯ್ಮಾತಿನ ಗೌಡಿಕೆಯನ್ನೂ ಸ್ವಪ್ರತಿಷ್ಠೆಯನ್ನೂ ಮೆರೆಸುವುದರಲ್ಲಿ ಮುಳುಗಿದ್ದೇವೆ (ಸ್ಮೃತಿಸ. ೩೭೦).

[ಬಾಯ್ + ಮಾತು$_1$]

ಬಾಯ್ವಿಡು, ಬಾಯಿಬಿಡು, ಬಾಯಿವಿಡು, ಬಾಯ್ಬಿಡು (ಕ್ರಿ). ೧. ಬಾಯನ್ನು ತೆರೆ ; ಬಾಯಿ ತೆಗೆ : ಕರಿಗಳ್ ಭೀಮಂ ಪಿಡಿದಡರ್ದೊಡೆ ಬಾಯ್ವಿಟ್ಟೆಲ್ವಡಗಾದುವು (ಪಂಪಭಾ. ೨-೫); ನೀಂ ಭಕ್ತಿಯಂ ಮಱೆದೈ ನಿನ್ನಯ ಕೂರ್ಮೆಯೆಲ್ಲಿತೆನುತಂ ಬಾಯ್ವಿಟ್ಟು ಪುಯ್ಯಲ್ಚಿದಳ್ (ಕಾದಂಬಾ. ೬೬೨); ಪೆಱರ್ಗೆ ಪೇಟಲಂಜಿ ಲಜ್ಜೆಯಿಂ ಮಾಗಿಯ ಕೋಗಿಲೆಯಂತೆ ಬಾಯ್ವಿಟ್ಟಾಡದೆ (ಧರ್ಮಾಮೃ. ೦-೧೫೬). ೨. ಮಾತನಾಡು ; ನುಡಿ : ತಾಯಿ ಮೋರೆಯ ನೋಡಿಯೇನಾದುದೆಂದೊಡಂ ಬಾಯ್ವಿಡದೆ ಹಾಸನೋಸರಿಸಿ ಮಲಗಿದಳು (ಕಾಂಖರ. ೧೩೨-೨೬೨). ೩. ಆಶ್ಚರ್ಯಪಡು ; ಬೆರಗಾಗು : ಷೋಡಶಖುತ್ವಿಜರ್ಗಿತ್ತುದರ್ಕೆ ಬಾಯ್ವಿಟ್ಟರೆ ವಿಪ್ರಕೋಟಿ . . . ಯಮನಂದನನೇಂ ತೊದಳಿಲ್ಲದಿತ್ತನೋ (ಪಂಪಭಾ. ೬-೩೯). ೪. (ನೋವಿನಿಂದ) ನರಳು ; ಚೀರು ; ಕಿರಿಚು : ನೊಂದು ಬಾಯ್ವಿಡದಿನಿಸಪ್ಪೊಡಂ ಪೆಳಱದಳ್ಕದೆ . . . ಬಿಟ್ಟುವಿರ್ದನೆಲೆಯಿಂ ಕೆಲವುನ್ಮದಗಂಧಸಿಂಧುರಂ (ಪಂಪಭಾ. ೦೦-೯೪) ; ಪಟ್ಟಿರ್ದನಾಯ ನಡುವಂ ಮೆಟ್ಟಿ ಕನಲ್ದೊಡನೆ ಮೇಲೆ ಪಾಯ್ದುದು ತಿನೆ ಬಾಯ್ವಿಟ್ಟು ಲಲಿತಾಂಗನಿಱಿದಂ ಕೆಟ್ಟೆನೆನ್ನುತ್ತೋಡುವಾತನಂ ಮತ್ತೊರ್ವಂ ತಾಂ ಕಂಡು (ಧರ್ಮಾಮೃ. ೨-೫೬). ೫. ಮರುಗು ; ಸಂಕಟಪಡು ; ದುಃಖಿಸು : ಮತಿಗೆಟ್ಟೆರ್ದೆಗೆಟ್ಟು ಬಟಲ್ದಟಲ್ದು ಬಾಯ್ವಿಟ್ಟು ಕುಯೋನಿಯೊಳ್ ತಿರಿದು ಪೋದುವು ಕಾಲಮನಂತಂ (ಸುಳುಮಾ. ೦೦-೬೨); ತಾಯ್ ಸತ್ತ ಶಿಶುವಿನಂತೆ ಬಾಯ್ವಿಡುತ್ತುಂ (ಧರ್ಮಾಮೃ. ೦-೦೪೪) ; ಮಂಡೋದರಿ . . . ಬಸುಱ ಹೊಡೆದಳಲುತ್ತ ಗರುವಿಕೆಗೆಟ್ಟು ಹೊರಳಿದಳಕಟ ಬಾಯ್ವಿಡುತ (ಕೌಶಿಯಾ. ೩೭-೦). ೬. (ದೈನ್ಯದಿಂದ) ಬೇಡಿಕೊಳ್ಳು ; ಯಾಚಿಸು : ಇನಿಸೆಟ್ಟು ನೋಡಿ ನುಡಿಯೆಂದೆನಿತುಂ ತೆಱದಿಂ ಕಪಿಂಜಲಂ ದೆಸೆದೆಸೆಗಂದು ಬಾಯ್ವಿಡುತಮಿರ್ದುದನಾಲಿಸಿದೆಂ (ಕಾದಂಪು. ೯೦೩) ; ತಂದೆ ಕರುಣಿಸು ವಿಶಾಪವನೆಂದು ಬಾಯ್ವಿಡುವ ಮಂದಮತಿಗಳಿಗೆ ದೊರಕದ ಲೇಸನೀಯಬೇಕು (ಸಿದ್ಧರಾ. ೦-೨೫) ; ಗತಿವಿಹೀನೆಗೆ ಕೃಷ್ಣ ನೀನೇ ಗತಿಯೆನುತ ಬಾಯ್ವಿ [ಪಾಠಾಂ. ಯ್ಬಿ]ಡಲು ಲಜ್ಜಾಸ್ಥಿತಿಯನುಳುಹಿದ ದೈವ ನೀ ಮೈದೋಱಿದೈ ತನಗೆ (ಕುಮಾಸಂ. ೨-೦೩). ೭. ಬಯಸು ; ಹಂಬಲಿಸು : ಘನದುಃಖಂಗಳನೆಯ್ದೆ ಮಾಟ್ಟವನಿತಾಸೌಖ್ಯಕ್ಕೆ ಬಾಯ್ವಿಟ್ಟು ದುರ್ಮನುಜಂ ಸಿಕ್ಕಿ ವಿಶೇಷದಿಂದೆ ಬಟಲುತ್ತಿರ್ಪಂ ದಲುತ್ಮಜ್ಞನೆಂದೆನಿಪಂ ಬಾಯ್ವಿಡನಂಬುವೆಂಬ ಬಗೆಯಿಂ ಗಾಂಪಂ ಮರೀಚೀಜಲಕ್ಕೆನಸುಂ ಬಾಯ್ವಿಡುವಂ ಪರೀಕ್ಷಕನದಕ್ಕೆಂ ತಾದೊಡಂ ಬಾಯ್ವಿಡಂ (ಬಾರಪು. ೩-೩೯). ೮. ಬಿರಿ ; ಬಿರುಕು ಬಿಡು ; ಸೀಳು : ನೆಲಂ ಮೊಟಗೆ ಕಂಪಿಸೆ ಬಾಯ್ವಿಡೆ ಬೆಟ್ಟು ಬೀಟಿ ಮಂದಿರಮುಡಿದಟ್ಗೆ ತರ್ಗೆ . . . ಘನಾಗಮದೊಳ್ ವಿನಿಂದಿತಂ (ಶೋಕೋಪ. ೪-೭೪). ೯. ಚೆದರು ; ಸಿಡಿದುಹೋಗು : ಮಂದರದ ಘಾರಾಘಾರಿಯಲಿ ಬಾಯ್ವಿಡುವ ಕಡಲಂತೆ ಅರಿವರೂಥಿನಿ ಕೆದಱಿ ತಳಿತವು (ಕುಮಾಸ್ತ್ರೋ. ೦೨-೧೯). **ಬಾಯಿಬಿಡು** : ೨. ಅವನ ಆಗಿನ ಮನಸ್ಥಿತಿಯನ್ನು ಸರಿಯಾಗಿ ಅರಿತವಳ ಹಾಗೆ ತುಂಗಕ್ಕ ಮೆಲ್ಲನೆ ಬಾಯಿಬಿಟ್ಟಳು (ಮೂರುದಾ. ೪೨) ; ತಮ್ಮ ಯಜಮಾನ ಬಾಯಿ ಬಿಡುವುದನ್ನೇ ನಿರೀಕ್ಷಿಸುತ್ತ ರೈತರು ಅವನನ್ನೆ ನೋಡುತ್ತಿದ್ದರು (ಪುನರು. ೨೬೯); ಬಾಯಿಬಿಟ್ಟರೆ ಬಣ್ಣಗೇಡು (ಗಾದೆ). ೬. ಪಡೆದೊಡವೆಯ ಧರ್ಮಕೆ ಈಯದವ ಬಾಯಿಬಿಡುವುದೆ ಪರರಿಗೆ ಸಾಕ್ಷಿ (ಪುರಂದ. ೨-೦೬-೨) ; ಭ್ರಷ್ಟದೈವಕೆ ಬಾಯಿಬಿಟ್ಟಲ್ಲಿ ಫಲವಿಲ್ಲ (ಸರ್ವಜ್ಞ. ೦೯೫). ೭. ಮುನ್ನೂಱಱುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು ಅದು ಸ್ವಾತಿಗಲ್ಲದೆ ಬಾಯ್ದೆಱಿಯದು ಕೇಳು ಕೇಳಾ ತಂದೇ ಎಲ್ಲವಕ್ಕೆ ಬಾಯ ಬಿಟ್ಟರೆ ತಾನೆಲ್ಲಿಯ ಮುತ್ತಪ್ಪುದೊ (ಬಸವ. ೬೦೯) ; ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ ಹರಿ ಕೊಡದ ಕಾಲಕ್ಕೆ ಬಾಯಿಬಿಡುವ್ಯಲ್ಲೊ ಪ್ರಾಣಿ (ಪುರಂದ. ೦-೬೭ ಪಣ್ಣಿ). ೧೦. ಗೌಪ್ಯವಾದುದನ್ನು ಬಯಲು ಮಾಡು,— ರಟ್ಟುಮಾಡು : ಇವನು ತಂದೆ ತಾಯಿ ಬಂಧು ಬಳಗದ ಹೆಸರನ್ನು ಬಾಯಿಬಿಡ (ಪಡಿದಾ. II, ೬೫೬). **ಬಾಯಿವಿಡು** : ೧. ತುರಗದಟಂ ಪಡಲ್ವಡೆ ಕಡಂಗಿ ಘಟಾವಳಿ ತಾಗಿ ಮತ್ತೆ ನಿತ್ತರಿಸದೆ ಭೀತಿಯಿಂ ಪೆಳಱಿ ಬಾಯಿವಿಡೆ (ಎಕ. VIII. ಸಾಗರ. ೦೦೯-೨೬ ; 1042). **ಬಾಯ್ಬಿಡು** : ೧. ಪಿಡಿವ ಪುಲಿ ಕರಡಿ ಬಾಯ್ಬಿಡುವ ಭೂತಂಗಳಸುಗುಡಿವ ಪಾವುಗಳಟ್ಟಿ ಸುಡುವ ಕಾಳ್ಕಿಚ್ಚುಳಿಯಗೊಡವು (ಸ್ವಪ್ನಾ. ೪-೨೩) ; ಬಾಯ್ಬಿಟ್ಟು ಹೇಳುವುದಿಲ್ಲವೇಕೆ, ನಿನಗೀಗ ಬಾಯ್ಗೆ ನೀರು ಬಂದು ಮನ ಸೋತಿದೆಯೆಂದು ? (ಇಷ್ಟಳ. ೨೬೯). ೫. ಸಂಸೃತಿದುಃಖದಿಂದೆ ಬಾಯ್ಬಿಟ್ಟು ಪಲುಂಬುವೆಲ್ಲ ಜನಮಂ ನಡೆ ನೋಡಿ (ಉದ್ಯಟಿ. ೦೦-೫೪) ; ಇರುಳು ತಸ್ಕರಬಾಧೆಯಲಿ ಭೂಸುರರು ಬಾಯ್ಬಿಡುತ್ತೈದೆಯಿಂದ್ರಪ್ರಸ್ಥಪುರವರವ (ಕುಮಾಸಂ. ೦೯-೨) ; ಹೆಂಡಿರುಗಳ ಬಿಟ್ಟೋಡಿದವರ . . . ಗಂಡನ ಬಿಟ್ಟು ಬಾಯ್ಬಿಡುತ್ತೈದಿದ ಹೆಂಗಳಂಡಲೆಗಳನೇವೇಳ್ವೆ (ಕಂಪಿ. ೦೦-೫೨). ೬. "ಬಾಯ್ಬಿಡು (ಬಾಯ್+ಬಿಡು)—ದೈನ್ಯೇ" (ಶಮಧಾ) ; ಬಟ್ಟಲ ಪಿಡಿದು ಬಾಯ್ಬಿಟ್ಟು ಕೇಳಿದರಿಲ್ಲ ಅಟ್ಟಡವಿಗೆ ಅತ್ತರಿಲ್ಲ (ಪುರಂದ. ಧಾ. ೨-೩೨-೩). ೭. ನೀನೊಲ್ದಡೇನೊಲ್ಲದಿರ್ದೊಡಮೇಂ ನಾನೆರಡಿಲ್ಲದೊಲ್ಲೆ [ಲ್ದೆ] ನದಱಿಂ ಬೇಱೂರ ಬೇಟಕ್ಕೆ ಬಾಯ್ಬಿಡಲಾಱಿಂ (ಅನಂಪು. ೦೦-೯೫). [ಬಾಯ್ + ಬಿಡು$_1$]

ಬಾಯ್ವೂಸು (ಕ್ರಿ). ೧. ಬಾಯನ್ನು ಸವರು, — ಒರೆಸು. ೨. (ಆಲಂ) ಬಾಯಿ ಮುಕ್ಕುಳಿಸು : ಸಮಕಟ್ಟಱಿಯದೆ ಹರಿಗರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾನಮರ್ದುಮಮರ್ದಿ [ರದೆ] ತಣಿಯುಂಡಮರ್ದಂ ಗೋಮೂತ್ರದಿಂದೆ ಬಾಯ್ವೂಸಿದವೋಲ್ (ಪಂಪಭಾ. ೬-೪೬) [ಬಾಯ್ + ಪೂಸು$_1$]

ಬಾಯ್ವೆಣ್ಣೆ, ಬಾಯಿವೆಣ್ಣೆ (ನಾ). ನವಜಾತಶಿಶುವಿಗೆ ತಿನ್ನಿಸುವ ಬಜೆ ಮತ್ತು ಬೆಣ್ಣೆಗಳ ಮಿಶ್ರಣ: ಆತನುಂ ಚಂದ್ರಭುಕ್ತನೆಂದು ಪೆಸರನಿಟ್ಟು ಬಾಯ್ವೆಣ್ಣೆಯೊಡನೆ ಕಿಱಿಕಿಱಿದೆ ನಂಜನೂಡಿ ಬಟಿಕೆ ಬಳೆದೊಡಾ ಹಾರದೊಳೂಡಲ್ ತಗುಳ್ದೊಂ (ಪಡ್ಮಾರಾ. ೦೬೬-೨೪) ; ತಿರುತಲೆಯೂರ ಶಿವನ ಪ್ರಸಾದಮಂ ತಂದು ಬಾಯ್ವೆಣ್ಣೆಯಿಕ್ಕಿದರತಿಸ್ವಾದುಮಂ (ಕುದ್ರಕ.

ಹ. ೨೦-೩) ; ಶಂಕರಶಿಶುಗೆ ಪರಮಪ್ರಸಾದದಿಂ ಬಾಯ್ವೆಣ್ಣೆಯಿಟ್ಟು ಮೊಲೆಗೊಟ್ಟು (ಪರ್ಶರಾ. ೨-೬೬). ಬಾಯಿವೆಣ್ಣೆ : ಊರೊಡೆಯ ನಾಚರಸರು ಕರುವರ ಕಲ್ಲಗಾವುಂಡಂಗೆ ಬಾಯಿವೆಂಣೆಗೆ ಕೊಟ್ಟ ಮನೆ (ಕೊಲ್ಹಾಪಾ. ೦೩-೩೮ : 1166). [ಬಾಯ್ + ಬೆಣ್ಣೆ]

ಬಾಯ್ವೆಸ (ನಾ). (ರತಿಕ್ರಿಯೆಯಂಲ್ಲಿ ಮಾಡುವ) ಚುಂಬನ ಮುಂತಾದ ಬಾಯಿಯ ಕೆಲಸ : ಮೆಯ್ವೆಸದಿಂ ಕೆಯ್ವೆಸದಿಂ ಬಾಯ್ವೆಸದಿಂ ಮಂತ್ರ ತಂತ್ರದಿಂದಂ ಸುಖಮಂ ಮೆಯ್ವಿಡೆ ವನಿತೆಗೆ ಪಡೆದಾ ಮೆಯ್ವೋಗಕ್ಕೆಳಸಿ ಸೋಲ್ವನೆಟ್ಟುವೊಜಂಗಂ (ಕಾವ್ಯಾವ. ೬೭). [ಬಾಯ್ + ಬೆಸ$_1$]

ಬಾಯ್ವೆಱೆ ? (ನಾ). (?) : ತೋಳ ವಾಯಸದ ಮೊಲದ ಕರಡಿಯಾ ಸೂಲದೊಂದಿರದ ಬೆಂದ ಮೊರಡಿಯಾ ನರಿಯ ಕೋಡಗದ ಗೂಗೆ(ಬೆ) ಯಂದಮಂ ಮರೆಯ ಪಾಟ್ಮನೆಯ ಬಾಯ್ವೆಱೆಯಂದಮಂ . . . ಪೋಲ್ವೊಡಿಲ್ಲ ಮಟೆ (ಅಟ್ಟಮ. ೬-೦೨). [?]

ಬಾಯ್ಸನ್ನೆ (ನಾ). ಬಾಯಿಯ ಸಂಜ್ಞೆ ; ಮುಖದ ಇಂಗಿತ : ಕೈಸನ್ನೆಯಿಂದ ಕಾತರದಿಂದ ಪೊಯ್ವೆನು ಬಾಯ್ಸನ್ನೆಯಿಂದಾನು ಬೈವೆ ಮೈಸನ್ನೆಯಿಂದ ಚಿತ್ತದೊಳೊಡಗೂಡುವೆನೈಸರಲನ ಸಮರೂಪ (ಕುರಾಸಾಂ. ೨೬-೦೪೦). [ಬಾಯ್ + ಸನ್ನೆ]

ಬಾಯ್ಸವಿ, ಬಾಯಿಸವಿ (ನಾ). ೧. ಬಾಯಿಗೆ ಸಿಹಿಯಾದುದು,— ಮಧುರವಾದುದು : ಜಾರ ಚೋರ ವೀರರ ಕಥೆಯಂ ಬಾಯ್ಸವಿಯ ಮಾತುಗಳಂ ಬಱಿಕೆಯ್ವ ಚರ್ಚೆಯಲ್ಲ (ಅನಂಪು. ೦-೩೬) . ಬಾಯ್ಸವಿಗೆ ಮೆಯ್ಸವಿ ಕಣ್ಸವಿಯಪ್ಪ ರೂಪು (ಕಮರ. ೬೮ ಪ್ರಯೋ). ೨. ಬಾಯಿಗೆ ರುಚಿಯೆನಿಸುವ ಪದಾರ್ಥ ; ಪ್ರಿಯವಾದ ಖಾದ್ಯವಸ್ತು : ಕಲ್ಲಗವಿಯೊಳಗೊಕ್ಕ ಬಾಯ್ಸವಿಯ ನಾಲಗೆಯಿಂದೊಕ್ಕನೆ ಸವಱುತ ಮುಂಗಾರ ಪನಿಯೊಳು ಮಿಕ್ಕಿರ್ದವಾ ಪುಲಿವಿಂಡು (ಅನಂಪ. ೦೨-೪೦); ಹಸಿವಿಗೆ ಬಾಯ್ಸವಿ ಬೇಡ, ನಿದ್ದೆಗೆ ಹಾಸಿಗೆ ಬೇಡ (ಗಾರ). ಬಾಯಿಸವಿ : ೨. ಬಾಯಿಸವಿಗೆ ತಿಂದು ನಾಯಿಸಾವು ಸತ್ತ (ಗಾರ). [ಬಾಯ್+ಸವಿ$_3$]

ಬಾಯ್ಸೋವು (ನಾ). ಬಾಯಿಗೆ ಸಿಕ್ಕ ಬೇಟೆ,—ಬಲಿ : ಕೋಟಿಕೋಟಿ ಜನ, ಪರ್ಸದ ಪೂವು, ತುರುಗಿತು ಜವರಾಯನ ಬಾಯ್‌ಸೋವು ! (ಪಾರಸಿ. ೩೩-೬೦೦). [ಬಾಯ್+ಸೋವು$_2$ (<ಸೋಪು$_1$)]

ಬಾರ್$_1$ (ಕ್ರಿ). ೧. (ಚರ್ಮವನ್ನು) ಸುಲಿ ; ಕೀಳು : ಕಡಿಯೆಲ್ಗಳೊಗ್ಗಂ ಕುರ್ಕಿ ಪಂದೊವಲಂ ಬಾರ್ದುಂ ಸಾರ್ದುಂ ನಲಿವ ಕಾಗೆ ಗೂಗೆಗಳುಂ. . . ನರಿ ನಾಯ್ಗಳ್ ಪಗಲುಮಿರುಳುಂ ಕಾವಲಿರ್ದುವು (ರಾಮಾಶ್ವ. ೯೭-೦೬). ೨. ಚರ್ಮವನ್ನು ಸುಲಿದು ತೆಳುವಾದ ಉದ್ದನೆಯ ಪಟ್ಟಿಗಳನ್ನು ತಯಾರಿಸು : "ಬಾರ್—ಚರ್ಮವಲ್ಲೀಕರಣೇ (ಚರ್ಮವನ್ನು ಪಟ್ಟಿಯಾಗಿ ಮಾಡು) ದ್ರವದ್ರವ್ಯನಿರ್ಮುಕ್ತೌ (ಸುರಿ)" (ಕಮರಾ); ನೇರ್ದಂ, ಬಾರ್ದಂ, ಗೋರ್ದಂ, ನೋರ್ದಂ ತಾನೆಂದೊಡಂ ಗುರೂಪಧೆಯಿನಿತುಂ (ಕಮಪ. ೪೦). ೩. (ಮಣ್ಣನ್ನು) ಅಗೆದು ತೆಗೆ,—ಬಾಚು : ದರಿಗೊಂಡೀಡಿಱಿ ದಾಡುತುಂ ಕೊಣಕುತುಂ ಬಾರುತ್ತುಮೊಳ್ಗಾಡೊಳಾದರದಿಂ ಮೇದೆಳವುಲ್ಗಳಂ ತೊರೆದು ಪಾಲ್ಗಳ್ ಕೆಚ್ಚಲಿಂದೆಚ್ಚು ಪಾಯ್ತರೆ ಪಟ್ಟಿರ್ದುವು. . . ಕಾಡೆರ್ಮೆಗಳ್ (ಪಗಸಿ. ೪-೨೩). ೪. (ನೀರು ಮೊದಲಾದ) ದ್ರವವಸ್ತುವನ್ನು ಬಸಿ,— ಸುರಿ : "ಬಾರ್—ಚರ್ಮವಲ್ಲೀಕರಣೇ (ಚರ್ಮವನ್ನು ಪಟ್ಟಿಯಾಗಿ ಮಾಡು) ದ್ರವದ್ರವ್ಯನಿರ್ಮುಕ್ತೌ (ಸುರಿ)" (ಕಮರಾ). ೫. ತಲೆಗೂದಲನ್ನು ಹಣಗೆಯಿಂದ ಹಿಕ್ಕು,— ಬಾಚು : 'ಬಾರ್ಚು' ಪರಾ.

[ದೇ.॥ ತಮಿ. ವಾರ್, ವಾರು; ಮಲ. ತೆಲು. ವಾರು; ತುಳು. ಬಾರು]

ಬಾರ್$_2$, ಬಾರಿ$_2$, ಬಾರು$_1$ (ನಾ). ೧. ತೊಗಲು ; ಚರ್ಮ : ನೀರೊಳ್ ನೀರಿಱಿವನಲ್ಲ ಪಂದಿಯ ಬಾರಂ ಕೊಱೆದದಱ ನೆತ್ತರೊಳ್ ನೀರಿಱಿವೆಂ (ಸೂಕ್ತಿಸು. ೩-೨೨೬). ೨. ಚರ್ಮದ ಪಟ್ಟಿ : ಸೊಗಯಿಪ್ಪೊಳ್ದೊಡೆ ನೋಯೆ ಸೂತ್ರದೆಟೆಪೋಲ್ ನೀಳ್ದಿರ್ದ ಬಾರಂತೆ ತೋರ್ಪುಗಿಯಂ ಪುಣ್ಮಯಮಾಗಿ ಮಾಡಿ ಬಿದಿ ಮುಂ ಜಂಘಾಪ್ರಮಾಣಕ್ಕೆ ನೂಲ್ದೆಗೆ ದಂತಿರ್ಪ ನಖವ್ರಣಾವಳಿಗಳಂ ನಲ್ಲಂಗೆ ಕಣ್ಗೆತ್ತುತುಂ ನಗುತುಂ ಸಾರ್ದು ಸವಂಗಮಂ ಕಳೆಯಿಸುತ್ತಿರ್ಪಾಕೆ ಕಣ್ಗೊಪ್ಪಿದಳ್ (ಕಾವ್ಯಾವ. ೬೦೦); ಗೀರ್ವಾಣಮುನಿ ಪೊಱಮಡುತ್ತುಂ ಸಾಣೆಯ ಬಾರಂತೆ ಪೋದ ಕೆಯ್ಯೊಳೆ ಮಗುಟ್ಟಂ (ಅನಂಪು. ೧೩-೨೩). ೩. ಚರ್ಮದ ತೆಳುವಾದ ಪಟ್ಟಿಯಿಂದ ಮಾಡಿದ ಬಾಯಿಹಗ್ಗ ; ಲಗಾಮು : ನಕುಳನುಮಂಕವಣಿಯುಂ ಬಾಳುಂ ಬಾರುಂ ಚಮ್ಮಟಿಗೆಯುಮನೊರ್ವ ಕೀಟಾಳಿಂ ಪಿಡಿಯಿಸಿಕೊಂಡು ಬಂದು ವಿರಾಟನಂ ಕಂಡು (ಪಂಪಭಾ. ೬-೩೪ ವ). ಬಾರಿ$_2$: ೪. ಚರ್ಮದ ಹಗ್ಗ,— ಮಿಳಿ : ಸುತ್ತಿದ ಮುಪ್ಪುರಿಯ ಬಾರಿ ಕಡ್ಡಣಿಗೆಯ . . . ಕಲಿವೀರ ಬಾಹುಕ ಬರುತ್ತಂ (ಹಪಕಾ. ೦೦-೦೬); ನೂಲ ಹರಿಗೆಯ ಹೆಗಲ ಬಾರಿಯ . . . ಛಲದಂಕರಾವುತರೊತ್ತಿ ನೂಕಿದರು (ಕುಪ್ಯಾರೀ. ೪-೩೬). ಬಾರು$_1$: ೧. ತಳವಾಱನುಟ್ಟ ಸೀರೆಯ ಸುಲಿದ ನಾಚಿ ಹೋದರೆ ಮನೆಯ ಗಂಡ ಬೆನ್ನ ಬಾರನೆತ್ತಿದ (ಬಸವ. ೦೦೦) ; ಬಾಲಬ್ರಹ್ಮಚಾರಿಯ ಬಾರನೆತ್ತಿತ್ತ ಕಂಡೆ (ಅವಪಂ. ೯೩-೪೨೬) ; ಕರ್ಣನೆ ಕೊರಳ ಬಾರಲಿ ನಿಲುಕಿಸುವೆನೀ ಶರಸಲಾಕೆಗಳ (ಕುಪ್ಯಾಳ. ೨೪-೨೬). ೨. ಮಾಸಾಳ್ಗಳ ಬಾರ ಸಂಕಲೆಯ ತೊಡರ ತೋಟಿಯ ಕಠಾರಾಯಿತರ . . . ಮೊತ್ತದೊತ್ತರದ ತಿಂಥಿಣಿಯನೊತ್ತರಿಸಿ ಇಟ್ಟಣಿಸಿದ ಕಟ್ಟಣಕ ದಾಸ್ಥಾನದೊಳು (ಬಸರ. ೬-೨೨) ; ಬಾರ ಸಂಕಲೆ . . . ಕೈಹಾರೆ ಕೂರಂಕುಶದ ಬಿರುದರು ಹೊದ್ದಿದರು ಗಜವ (ಕುಪ್ಯಾರೀ. ೪-೬೦). ೩. ಉಗ್ರಾಣಗಳಲ್ಲಿ ನೂಲೇಣಿ, ಹೊರಜಿ, ಮಿಣಿ, ಬಾರು . . . ಬತ್ತಳಿಕೆಗಳ ಎಲ್ಲ ವಿಚಾರವನ್ನು ಬಿಡಿಬಿಡಿಯಾಗಿ ನೋಡುವನು (ಸಪಟಿ. ೪೯) ; ಕಡಿವಾಳಕ್ಕೆ ಬಾರಿಲ್ಲದೆ ಇದ್ದುದರಿಂದ . . . ಹುಲ್ಲುಸರವಿಯನ್ನು ಗುಟುಹಾಕಿ ಕಟ್ಟಿದರು (ವಗಗ. ೪೯). ೫. ಉದ್ದ ; ನೀಳ : (ಕಿ). ೬. ಸಾಲು; ಪಂಕ್ತಿ : (ಕಿ). ೭. ಚರ್ಮದ ಮೇಲೆ ಪಟ್ಟಿನಿಂದಾಗುವ ಪಟ್ಟೆಯಾಕಾರದ ಗುರುತು ; ಬಾಸುಂಡೆ : ಸೊಸೆಯ ಮೈ ಮೇಲಿನ ಬಾರುಗಳನ್ನು ನೋಡಿ ಮಗನನ್ನು ಕರೆದು : "ಕಡಬಿನಂತ ಬಾರು ಏಳುವವರೆಗೆ ಬಡಿಯಬೇಕೆ ?" ಎಂದು ಸಿಟ್ಟು ಮಾಡಿದಳು (ಕನ್ನಡಾ. ೬೩).

ಬಾರಗುಣಿ = ಬಾರುಕೋಲು : ಬಾರಗುಣಿಯಿಂದ ಅವನ ಬೆನ್ನಿಗೆ ಬಲವಾಗಿ ಏಟುಗಳನ್ನು ಕೊಟ್ಟು ಚಕ್ಕಡಿಯನ್ನು ಹೊಡೆದುಕೊಂಡು ನಡೆದನು (ಬುದ್ಧಜಾ. ೯೦). ಬಾರುಕಾಲವನು = ಉದ್ದವಾದ ಕಾಲುಗಳಿರುವವನು ; ದಾಪುಗಾಲು ಇಡುವವನು : "ಊರ್ಧ್ವಜ್ಞಃ, ಊರ್ಧ್ವಜಾನುಃ—೨ ಉದ್ದವಾದ ಮೊಳಕಾಲುಳ್ಳವನು, ಬಾರುಕಾಲವನು" (ಸಿದ್ಧಾಂತಿ. ೦೬೦).

[<ಬಾರ್$_1$./ತಮಿ. ಮಲ. ವಾರ್; ತುಳು. ಬಾರ; ತೆಲು. ವಾರು]

ಬಾರ್$_3$, ಬಾರು$_2$ (ನಾ). ೧. ಬಂದೂಕು, ತೋಪು ಮೊದಲಾದುವುಗಳಿಗೆ ತುಂಬುವ ಸಿಡಿಮದ್ದು : (ಕಿ). ೨. ಬಂದೂಕು, ತುಪಾಕಿ ಮೊದಲಾದುವುಗಳನ್ನು ಮದ್ದು ಗುಂಡು ತುಂಬಿಸಿ ಉಡಾಯಿಸಲು ಅಣಿಗೊಳಿಸಿರುವಿಕೆ : ಬಂದೂಕು ಬಾರಾದವು (ಸಳತೆ. ೬೦). ೩. ತುಪಾಕಿದಳ; ಬಂದೂಕುಸಿಪಾಯಿಗಳ ಪಡೆ : (ರೈಸ್‌ಗೆ. II, ೩೪೩). 'ಬಾರ್ಸಿಪಾಯಿ' ಪರಾ. ಬಾರು$_2$: ೧. "ಯಾವುದಾದರೂ ಒಂದಕ್ಕೆ ತುಂಬಬೇಕಾದ ಪದಾರ್ಥದ ನಿಯತವಾದ ಮೊತ್ತ (ಮು. ಬಂದೂಕಿಗೆ ತುಂಬುವ ಸಿಡಿಮದ್ದು; ಬಂದೂಕಿನ ಬಾರು)" (charge. ಇಂಕಪಿ). ೩. ಬಾರು :— ಬಾರಿನವರ ಸಂಖ್ಯೆಯು . . . ಹೆಚ್ಚಿ ಇಂಗ್ಲೀಷ್‌ಪದ್ಧತಿಯಂತೆ ಕವಾಯಿತು ಕ್ರಮದಲ್ಲಿ ಸುಶಿಕ್ಷಿತವಾಗಿತ್ತು (ಮಹಾವಂ. II, ೩೦). ೪. ತುಪಾಕಿ

ಮೊದಲಾದುವುಗಳ ಸ್ಫೋಟ : (ಕ). ೫. ಹೊಗೆಸೊಪ್ಪು ತಿನ್ನುವುದಕ್ಕೆ ಪೂರ್ವಸಿದ್ಧತೆಯಾಗಿ ಬಾಯಿಗಿಟ್ಟುಕೊಳ್ಳುವ ವೀಳ್ಯದ ಕವಳ: ಚಹಾ–ತಂಬಾಕದ ಬಾರು ಇಲ್ಲದೆ ಅವರಿಗೆ ನಡೆಯುತ್ತಿರಲಿಲ್ಲ (ದೀಪಹ. II, ೯೦). ೬. ನೋಂದಣಿ ; ದಾಖಲೆ : 'ಬಾರನಿಸಿ' ಪರಾ.

ಬಾರಕೋತು = ಕಾಲುದಳದ ಯೋಧರ ವಾಸಸ್ಥಾನ,–ಪಾಳೆಯ : (ಕ). ಬಾರು ಮಾಡು = ೧. ಸಿಡಿಮದ್ದನ್ನು ಬಂದೂಕಿಗೆ ತುಂಬಿ ಉಡಾಯಿಸಲು ಅಣಿಮಾಡು : ತನ್ನ ಬಾರು ಮಾಡಿದ ಬಂದೂಕನ್ನೆತ್ತಿ ಅದರ ಹಣೆಗೆ ಗುರಿ ಇಕ್ಕಿದನು (ಬಂಗಾಹ. ೩). ೨. ವೀಳ್ಯವನ್ನು ಸಿದ್ಧಪಡಿಸು,—ಅಣಿ ಮಾಡು : ರಾವಜೀಕಾಕಾ . . . ತಂಬಾಕದ ಬಾರು ಮಾಡುತ್ತ ನಿರ್ಣಾಯಕ ಅಭಿಪ್ರಾಯ ಕೊಟ್ಟರು (ದೀಪಹ. I, ೬). ೩. (ದಾಖಲೆ) ಪುಸ್ತಕದಲ್ಲಿ ಬರೆದು ಸೇರಿಸು; ನೋಂದುಮಾಡು : (ಕ).

[← ಮರಾ. ಬಾರ್]

ಬಾರ್$_4$, ಬಾರ್ಸು$_3$ (ನಾ). ೧. ಗಟ್ಟಿಯಾಗಿಯೂ ಉದ್ದವಾಗಿಯೂ ಇರುವ ಲೋಹ, ಮರ, ಸಾಬೂನು ಮೊದಲಾದುವುಗಳ ತುಂಡು : ಒಂದು ಬಾರ್ ಸಾಬೂನು ತಂದು ಈ ಬಟ್ಟೆಗಳನ್ನೆಲ್ಲ ಒಗೆಯಬೇಕು (ಕೂಡಿ). ೨. ಮಾದಕಪಾನೀಯಗಳನ್ನು ಅಥವಾ ಖಾದ್ಯ ವಸ್ತುಗಳನ್ನು ಒದಗಿಸುವ ಸ್ಥಳ; ಪಾನಶಾಲೆ : ಮಧುಪಾನದ ಸಲಕರಣೆಗಳನ್ನಿಡುವುದಕ್ಕೂ ನಾಲ್ಕುಜನ ಸ್ನೇಹಿತರು ಸೇರುವುದಕ್ಕೂ ಅನುಕೂಲಿಸುವಂತೆ ಒಂದು ಸಣ್ಣ 'ಬಾರ್' ಏಕೆ ಕಟ್ಟಬಾರದು ? (ಯೋಧಪು. ೨೯) ; ಒಂದೆರಡು ದಿನದೊಳಗಾಗಿ . . . ಹಡಗಿನ "ಬಾರ್" ನಲ್ಲಿ ಕುಳಿತುಕೊಳ್ಳುವ ಚಟ ಬರುತ್ತದೆ (ಅಪೂಪ. ೦೦). ಬಾರ್ಸು$_3$: ೧. ನನಗೆ ಎರಡು ಬಾರು ಸಾಬೂನು ಬೇಕು (ಕೂಡಿ). ೩. (ಕಿಟಕಿ, ಬಾಗಿಲು ಮೊದಲಾದುವುಗಳಲ್ಲಿ ತಡೆಗಾಗಿ ಉಪಯೋಗಿಸುವ) ಕಂಬಿ ; ಸರಳು : ಕಿಟಕಿಗಳಿಗೆ ಉದ್ದುದ್ದವಾಗಿ ಬಾರುಗಳನ್ನು ಅಳವಡಿಸುವುದುಂಟು (ಕೂಡಿ).

[← ಇಂ. Bar]

ಬಾರ್‌ಕಛೇರಿ, ಬಾರಕಚೇರಿ (ನಾ). ಹಿಂದೆ ಮೈಸೂರು ಅರಸರ ಆಡಳಿತಕಾಲದಲ್ಲಿದ್ದ ಹದಿನೆಂಟು ಕಚೇರಿಗಳಲ್ಲಿ ಒಂದು ; ಕಾಲ್ದಳದ ವಿಷಯವನ್ನು ನೋಡಿಕೊಳ್ಳುವ ಕಚೇರಿ : ೧. ದಿವಾನ್‌ಕಛೇರಿ . . . ೧೨. ಬಾರ್‌ಕಛೇರಿ (ಮಹಾವಂ. II, ೩೯). ಬಾರಕಚೇರಿ : ಶ್ರೀಮದ್ರಾಜಾಧಿರಾಜ ಕೃಷ್ಣರಾಜಒಡೆಯರವರು ಅವಲ್‌ಬಾರಕಚೇರ್ರಿ ಬಕ್ಷಿ ಗುಲಾಮ ಮಹಮ್ಮದಖಾನರ್ರಿಗೆ ಪುತ್ರ ಪವುತ್ರಪಾರಂಪರ್ಯವಾಗಿ ನಡಿಯುವ ಮ್ಯರೆಗೆ ಕೊಟ ಸರ್ವಮಾನ್ಯವಾದ ನಾಚನಹಳ್ಳಿ ಗ್ರಾಮದಯಲ್ಲಿಕಲ್ಲು (ಎಳ. III, ಮೈಸೂರು. ೫೬–೩ ; ಸು. 1825 ?). 'ಅಠಾರಾ ಕಚೇರಿ' ಪರಾ. [ಬಾರ್$_3$ + ಕಛೇರಿ (<ಕಚೇರಿ)]

ಬಾರ$_1$ (ನಾ). ಬಾಗಿಲು ; ದ್ವಾರ : ದರ ದಾರ ಬಾರಮಕ್ಕುಂ ಪರದಾ ದ್ವಾರಕ್ಕೆ ಪೂರ್ವದೊಳ್ ತದ್ಭವಮಾಗಿರೆ ಸಿರಿಯ ವಂಕ ಪಾಣಿಯಮಿರೆ ಕಂಟಿಯುಮುಚಿತವಿಧಿ ವಿಕಲ್ಪವಿಧಾನಂ (ಶಮದ. ೨೯೬) ; ಶ್ರೀದ್ವಾರ—ಸಿರಿಯದರ, ಸಿರಿಯದಾರ, ಸಿರಿಯಬಾರ. ವಕ್ರದ್ವಾರ—ವಂಕದರ, ವಂಕದಾರ, ವಂಕಬಾರ (ಶಮದ. ೨೯೬ ಪ್ರಯೋ). 'ದಾರ$_2$' ಪರಾ.

[< ಪ್ರಾ. ಬಾರ, ವಾರ ; ಹಿಂ. ಬಾರ./ಸಂ. ದ್ವಾರ]

ಬಾರ$_2$ (ನಾ). ತೂಕ ; ಭಾರ : "ಬಾರ (ರು)–ಭಾರ" (ತದ್ಯಕೋ. ೩೦).

[< ಸಂ. ಭಾರ]

ಬಾರ$_3$, ಬಾರಹ, ಬಾರಾ (ನಾ). ೧. ಒಂದು ಸಂಖ್ಯೆ ; ಹನ್ನೆರಡು : ಬಾರಹವೆಂಬುದು ದ್ವಾದಶದ ಪ್ರಾಕೃತರೂಪ ; ಬಾರ ಎಂದರೆ ಹದಿನೆರಡು (ಶುಳುವಾ. ೨೬೯). 'ಬಾರಮಾಹೆ' ಪರಾ. ೨. ಲೆತ್ತದಾಟದಲ್ಲಿ ಬೀಳುವ ಹನ್ನೆರಡರ ಗರ : ದುಗನು ಪಂಚಕ ಬಾರವೆರಡಿತ್ತಿಗೆಯು ಬೇಡಿದಡಲ್ಲಿ ಬೀಳ್ವುದು ವಿಗಡ ಪುಷ್ಕರ ನೃಪನ ಗೆಲಿದನು ಹಲಗೆಯೊಂದಱಲಿ (ನಳಪ. ೯–೨೯). ಬಾರಹ : ೧. ನಾರಿ ಸಹಿತಾ ಪತಿ ಚರಿಸುವುದು ಬಾರಹ ದ್ವಿಜರಿಂಗೆ ಭೋಜನ ಭೂರಿಭೂಷಣ ವಸನ ತಿಲದಾನಾದಿ ಸತ್ಕೃತಿಯಾ (ನಿಭಾಗ. ೬–೦೭–೦೬). ಬಾರಾ : ೧. ನಿನ್ನಂಥ ಬಾರಾ ಹಜಾರ ಮಂದಿನ್ನ ಬಗಲಾಗ ಹಾಕೀನ್ನಾನು (ಬಾಂಡಾಯ. ೬೯). ೩. ಹನ್ನೆರಡು ಘಂಟೆ: ಇದೆಲ್ಲಾ ಉದ್ಯೋಗ ನಡಿಯೋದು ರಾತ್ರಿ ಬಾರಾದಿಂದ ನಸುಕು ಹರಿಯೋ ತನಕ (ಅಪ್ಪ. ೨೫೫).

ಬಾರಖೂನ್ ಮಾಫ್, ಬಾರಾಖೂನಿ ಮಾಫ್ = ಎಷ್ಟು ತಪ್ಪು ಮಾಡಿದರೂ ಕ್ಷಮಿಸುವುದು : ತಮ್ಮ ಅನುಗ್ರಹಕ್ಕೆ ಪಾತ್ರರಾದವರಿಗೆ 'ಬಾರಖೂನ್ ಮಾಫ್', ಏನು ಉಪಕಾರವನ್ನಾದರೂ ಮಾಡಿ ಕೊಟ್ಟುಬಿಡುವರು (ಕಲಿ. ೯೦) ; ಒಮ್ಮೊಮ್ಮೆ ಬಾರಾಖೂನಿ ಮಾಫ್ ಅಂತೂ ಅನಬೇಕಾಗತದ (ಧನಂಜ. ೩೨).

[← ಹಿಂ. ಬಾರಹ್, ಬಾರಾ; ಮರಾ. ಬಾರಾ]

ಬಾರಂಗಧ್ವಜ (ನಾ). (?) : ಮದನಕೈಯಿದರ ಬೊಂದಿಗೆಯು ಬಾರಂಗಧ್ವಜ ಕದಳಿಗೊನೆ ಕಬರಿದ ಸುಲೋವೆ ಚಿತ್ರದ ಭಿತ್ತಿ ವುದಿಪ ನವರತ್ನಗಳ ದೀಪ್ತಿ (ನವನೋ. ೨–೩೦). [? + ಧ್ವಜ]

ಬಾರಂಗಿ (ನಾ). ಒಂದು ಬಗೆಯ ಔಷಧೀಸಸ್ಯ ; ಅಂಗಾರವಲ್ಲಿ ; ಬ್ರಾಹ್ಮಿ : ಬಾದಣಿಸಿದೇಱುಗಳ ಬಾಯೊಳು ಕಾದ ಬಾರಂಗಿಗಳನಳತೆಗೆ ಕೋದು ವಾಮದೊಳೆಯ್ದೆ ಹಿಡಿದರು ತೈಲಧಾರೆಗಳ (ಕುಮಾಭೀ. ೫–೯೦) ; ತಡಸಿ ಸುವರ್ಣ ಬಿಳಿಯ ಬಾರಂಗಿ ಗಿಡವು ಕಗ್ಗಲೆ ಕಂಪು ಪರಿಮಳಯಡಿಗಡಿಗೆ ರಸದಾ ಮಡುಗಳು (ನಂದಿಲೀ. ೭–೧೯). [< ಸಂ. ಭಾರಂಗೀ]

ಬಾರಕಚೇರಿ 'ಬಾರ್‌ಕಛೇರಿ' ನೋ.

ಬಾರಗಿರಿ 'ಬಾರ್ಗೀರಿ' ನೋ.

ಬಾರಗೀರ 'ಬಾರ್ಗೀರ್' ನೋ.

ಬಾರಗೀರು 'ಬಾರ್ಗೀರ್' ನೋ.

ಬಾರಗುತ್ತು 'ಬಾರ್ಗುತ್ತ' ನೋ.

ಬಾರಗೆಯ್ (ಕ್ರಿ). (?) : ಕ್ಷೀರ ದಧಿ ಮಧು ಘೃತಂ ಸಿತ ನಾಗರಂ ಮರಿಚ ಜೀರಕಂ ಲವಣವೆ [ಮ]ಲ್ಲಾ ದಶಾಮೃತಸಾರಪೂರಕಳಸಂ ನಾಲ್ಕು ಕನಕ ಪುಷ್ಪಾನ್ವಿತ ತಮಂಧಕಳಸಂ ಪೀಲಿಯಿಂ ಬಾರಗೆಯ್ದೊಂದಗ್ರಜಲಭರಿತ ಮಾಗೆ ಮಂದಾರಮಂಜರಿವಿಡಿದ ಹದಿಮೂಱು ಕಳಸವಿಂತೀರೊಂಬತಿನ್ನುಳಿದ ವಿಭವವೀ ಪರಿಯಿಂದ ನೇಮದಿಂ ನಡಸೆಂದಳು (ಸಿದ್ಧರಾ. ೫–೭). "ಅಂದವಾಗಿಸು (?)" (ಸಿದ್ಧರಾ. ಕೋಶ). [?]

ಬಾರಡ (ನಾ). ಚರ್ಮದ ಪಟ್ಟಿ : "ಕುಟ್ಟಿಗೋಲ್ ಬಾರಡಮದಕ್ಕು" (ಮಂಗರಾ. ೦೦೨–೩). [ದೇ.ಕ ತಮಿ. ವಾರಾಟೈ]

ಬಾರಣ (ನಾ). ಆನೆ : ದಾರುದಾರುಣನು ದಾನವಾರಿವಾರಿತಲೋಕನಂ ಬಾರ ಬಾರಣಮಂ ನೋಡಾ ಸಾರಸಾರಾಂಬುದಾಭಮಂ (ಕವಿರಾ. ೨–೦೩೨).

[< ಸಂ. ವಾರಣ]

ಬಾರಣಸಿ 'ಬಾರಣಾಸಿ' ನೋ.

ಬಾರಣಾಸಿ, ಬಾಣರಾಸಿ, ಬಾಣಾರಸಿ, ಬಾರಣಸಿ, ಬಾರ್ಣಾಸಿ, ವಾಣರಾಸಿ, ವಾರಣಶಿ, ವಾರಣಾಸಿ (ನಾ). ಗಂಗಾನದೀತೀರದಲ್ಲಿರುವ ಪ್ರಸಿದ್ಧವಾದ ಯಾತ್ರಾಸ್ಥಳ; ಕಾಶಿ ಕ್ಷೇತ್ರ; ಇದು ವರುಣಾ ಮತ್ತು ಅಸಿ(ಅಥವಾ ಅಸೀ)ಯೆಂಬ ಎರಡು ನದಿಗಳನ್ನು ಒಳಗೊಂಡಿದೆಯೆಂದು ಪ್ರತೀತಿಯಿದೆ : ಇ ದರ್ಮ್ಮಕ್ಕೆ ಬಕ್ರ ಬಪ್ಪೊಂ ಬಾರಣಾಸಿಯುಳ್ ಸಾಸಿರ್ವ್ವ ಪಾರ್ವ್ವರುಂ ಸಾಸಿರಂ ಕವಿಲೆಯುಂ ಕೊನ್ದ ಪಾತಕನಕ್ಕೆ (ಮೈಅಂ. ೦೯೩೬, ೫೩–೩೫ ; ಸು. 550) ; ಇದನಟ್ ದುಣ್ಡೋನುಂ ಕೊಣ್ಡೋನುಂ ಪಸುವುಂ ಪಾರ್ವ್ವರುಂ ಕೆಱೆಯುಂ

ಆರಮೇಯುಂ ಬಾರಣಾಸಿಯುಮನಟಿದೊಂ (ಎಕ. III, ಶ್ರೀರಂಗ. ೦೪೬-೦೬; ಸು. 900 ?). **ಬಾಣರಾಸಿ :** ದುದ್ಧರಸಂ ಮಾಡಿಸಿದ ತೊಱೆ ಗಟ್ಟಿಯಂ ಮಾಱಿಕೊಣ್ಡವಂ ಬಾಣರಾಸಿಯಲು ಹಸುವುಂ ಹಾರುವನಂ ಕೊಂದ (ಎಕ. I (R), ೬೨-೩೬; 1095) ; ಇದನಳಿದಂ ಬಾಣರಾಸಿಯುಮಂ ಕವಿಲೆಯುಮಂ ಲಿಂಗಮಂ ಕಿತ್ತು ಬ್ರಹ್ಮತಿಗೆ ಸನ್ದಂ (ಎಕ. III, ಸಂಜನ. ೪೪-೦೦; 1113) ; ಇದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರೋರ್ವ್ವಿಯೊಳ್ ಬಾಣರಾಸಿಯೊಳೇಳ್ಕೋಟಿಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊನ್ದುದೊನ್ದಯಸಂ ಸಾರ್ಗ್ಗುಂ (ಎಕ. II, ೬೩-೪೯; 1118). **ಬಾಣಾರಸಿ:** ಇದನಟಿವಂಗೆ ಕವಿಲೆಯುಂ ಬಾಣಾರಸಿಯುಂ ಅಟಿದ ಪಾತಕಂ (ಎಕ. I (R), ೬೪-೦೦; 10ನೆಯ ಶತ). **ಬಾರಣಸಿ:** ಇದನಟಿವೊ ಬಾರಣಸಿಯನಟಿದೊ ಪಾತಕಂ (ಕಇ. II, ೩-೦೯ ; 859). **ಬಾರ್ಣಾಸಿ :** ಇದನಟಿದೋಂ ಬಾ[ರ್ಣಾ]ಸಿಯುಂ ಕವಿಲೆಯುಮನಟಿದೋಂ (ಎಕ. IV (R), ಜಾಮರಾ. ೬೦-೦೦ ; ೧ನೆಯ ಶತ). **ವಾಣರಾಸಿ :** ಈ ಧರ್ಮ್ಮಮನಳಿದಂ ವಾಣರಾಸಿ ಕುರುಕ್ಷೇತ್ರದೊಳ್ ಸಾಸಿರಕವಿಲೆಯುಂ ಸಾಸಿರಬ್ರಾಹ್ಮಣರನಳಿದ ಪಂಚ ಮಹಾಪಾತಕನಕ್ಕು (ಎಇ. XIX, ೦೬೯-೨೯ ; 1079). **ವಾರಣಶಿ :** ಇದಕ್ಕಾರಾನುಂ ಪ್ರತಿಬಂಧಕರಾಗಿ ಕಿಡಿಸಿದರಪ್ಪಡೆ ವಾರಣಶಿಯಲು ಕವಿಲೆಯಂ ವಧಿಯಿಸಿದ ದೋಷಮನೆಯ್ದುವರು (ಕಇಅ. ೩೬-೪೯-೨೦ ; 1134). **ವಾರಣಾಸಿ :** ಅಟಿದೊನ್ವಾರಣಾಸಿಯೊ ಸಾಸಿರ್ವ್ವಪಾರ್ವ್ವರುಂ ಸಾಸಿರ ಕವಿಲೆಯುಮನ್ಕೊನ್ದ ಪಞ್ಚಮಹಾಪಾತಕನಕ್ಕು (ಎಕ. V (R), ತಿರುಮ. ೪೬-೬ ; ೩ನೆಯ ಶತ) ; ಗಂಗೆಯೊಳು ಮಿಂದು ಭಾಸುರವಾರಣಾಸಿಯಂ ಹೊಕ್ಕು (ಪಶಕಾ. ೦೦-೩೩).

[< ಸಂ. ವಾರಣಸೀ, ವಾರಾಣಸೀ, ವಾಣಾರಸೀ, ವರಾಣಸೀ]

ಬಾರಣೆ (ನಾ). ಊಟ ; ಪಾರಣೆ : ಬಾಯೊಳ್ನೆಗೆದ ಹಲ್ಲ ನೋಳ್ಪುದೊಂದೆ ಕ್ಷಣದಿ ನುಂಗಿ ಬಾರಣೆಯ ಸವನಿಸುವೆನು (ಪಾರ್ತಿಸು. ೬೬) ; ಹುಲಿರಾಯನು ಓಲಸರಿಯ ಬಾರಣೆಗಾಗಿ ಹೊರಟನೆಂಬುದು ಅವರಿಗೆ ಗೊತ್ತಾಯಿತು (ಪೀರಬಂ. ೨೫) ; ಪಶುಪಕ್ಷ್ಯಾದಿಗಳನ್ನೂ ನೀವು ಮನುಷ್ಯರು ಶಕ್ತಿಯುಕ್ತಿಗಳಿಂದ ಬಡಿದು ಬಾರಣೆ ಮಾಡುತ್ತೀರಂತೆ (ಹಗಲಿ. ೪೦). 'ಪಾರಣೆ$_1$' ಹೋ. [← ತುಳು. ಬಾರ್ಣೆ. / ಸಂ. ಪಾರಣಾ]

ಬಾರದ (ನಾ). ಒಂದು ಮನೆತನದ ಹೆಸರು : ಇದಕ್ಕೆ ಸಕ್ಕಿ ಮುದಿರೆ ಬೂವಯ್ಯ ಬೆಳ್ಳನ ಕರುಕುಡಿ ಬಾರದರೆಱೆಯಮ್ಮ ಕೆದಟೆಯರಯ್ಯಪ (ಎಕ. IV, ಹುಣಸೂ. ೪೨-೦೨ ; ಸು. 920). [?]

ಬಾರದಾನ, ಬಾರದಾನು (ನಾ). ೧. ವ್ಯಾಪಾರದ ಸರಕುಗಳನ್ನು ತುಂಬಲು ಬಳಸುವ ಚೀಲ, ಡಬ್ಬಿ, ಪೀಪಾಯಿ ಮೊದಲಾದುವು : ಬಾರದಾನಗಳನ್ನು ತಿರುಗಿ ಕಳುಹಿಸುವುದಕ್ಕೆ ಬಹಳ ಸಾರಿ ಪತ್ರ ಬರದಿದ್ದು ಇನ್ನೂ ಯಾಕೆ ರವಾನೆ ಮಾಡಲಿಲ್ಲ ? (ಮುಂಬಪ್ಪಾ. ೭ ಪ್ರಸ್ತಾವನೆ). ೨. ಗೋಣಿತಟ್ಟು ; ಗೋಣಿಚೀಲ : ಹೆಗಲಿಗೊಂದು ಬಾರದಾನ ಒಗೆದುಕೊಂಡು, ದಂಡಪಾಣಿಯಾಗಿ ಗೃಹತ್ಯಾಗ ಮಾಡಿದೆವೆಂದರೆ ತೀರಿತು, ಮರಳಿ ನಮ್ಮ ಗೃಹಾಭಿಗಮನ ಅಪರಾಹ್ನ ಎರಡಕ್ಕೆ (ದೀಪಹ. II, ೦). **ಬಾರದಾನು :** ೧. ಒಂದೊಂದು ಸಾಮಾನು ಒಂದೊಂದು ವಿಧವಾಗಿ ಕಟ್ಟಿ ಬರುವದರಿಂದ, ಅವೆಲ್ಲವುಗಳ ಬಾರದಾನು ಅಥವಾ ಹೊರಗಿನ ಆವರಣ ಒಂದೇ ತರವಾಗಿರುವದಿಲ್ಲ (ಮುಂಬಪ್ಪಾ. ೭).

[← ಪಾರ. ಬಾರ್ದಾನ್ ; ಹಿಂ. ಬಾರದಾನಾ ; ಮರಾ. ಬಾರದಾನ್]

ಬಾರದಾನು 'ಬಾರದಾನ' ನೋ.

ಬಾರದೂರ್ (ನಾ). ಒಂದಂ ಊರಿನ ಹೆಸರು : ಬಾಣಶರ್ಮ್ಮಣೇ ತೇಗಟ್ಟೂರ್ವ್ವಿಷಯೇ ಬಾರದೂರ್ನ್ನಾಮಗ್ರಾಮಸ್ಸರ್ವ್ವಪರಿಹಾರೋಪೇತ ಉದಕಪೂರ್ವ್ವನ್ದತ್ತಃ (ಮೈಅರಿ. ೦೪೪೪, ೦೫-೩೪; ಸು. 725). [? + ಊರ್]

ಬಾರನಿಸಿ (ನಾ). ೧. ದಾಖಲೆಗಳನ್ನು ನೋಂದುಮಾಡಿ, ಅದರ ಮೇಲೆ ನೋಂದಿಸಲಾಗಿದೆಯೆಂದು ಬರೆಯುವ ಅಧಿಕಾರಿ ; ನೋಂದಣಿಯ ಅಧಿಕಾರಿ : ಹೊರಟು ಹೋಗಲಿದ್ದ ಬಾರನಿಸಿಯಿಂದ ಕಾಗದಪತ್ರಗಳ ಚಾರ್ಜ್ ತೆಗೆದುಕೊಂಡೆ (ಬಂಗಾರ. ೭೯). ೨. ನೋಂದಣಿ ಮಾಡುವ ಕೆಲಸ, – ಹುದ್ದೆ : "ಬಾರನಿಸಿ ಕಾರಕೂನ್" ಸ್ಥಳಕ್ಕೆ ನನ್ನ ನೇಮಕವಾಗಿತ್ತು (ಬಂಗಾರ. ೭೯).

[← ಪಾರ. ಬಾರನಿವಿಶೀ ; ಮರಾ. ಬಾರನಿಶೀ, ಬಾರನಿಸೀ, ಬಾರನೀಸ್]

ಬಾರಮಾಹೆ (ನಾ). ಹನ್ನೆರಡುತಿಂಗಳು : ಯಿಾ ನಿರೂಪ ಸ್ತಳಕೆ ತಲಪಿದ ತಾರ್ರಿಖಿನಾರಭ್ಯಾ ಸಾಲ್ಲಿಯಾನಾ ಯೆರಡು ಖಿಸ್ತಿನ ಮೇರ್ರಿಗೆ ಬಾರಮಾಹೆ ಬಜಿನ್ಸ ಕೊಡತಕದು (ಮೈಅರಿ. ೦೯೩೬. ೨೬-೦೨; 1830). [ಬಾರ$_3$+ಮಾಹೆ]

ಬಾರವಟ್ಟಿಗೆ, ಭಾರವಡ್ಡಿಗೆ (ನಾ). ಬಾಗಿಲಿನ ಚೌಕಟ್ಟು ; ಬಾಗಿಲುವಾಡ: ಬಕುಳದ ಬೋದಿಗೆಗಳಿಂ ಬಂಧೂಕದ ಬಾರವಟ್ಟಿಗೆಗಳಿಂ ಕೇತಕಿಯ ಕಂಟವಲಗೆಗಳಿಂ . . . ಕಂಪಿನ ಕಡಾರಮುಂ ತಣ್ಪಿನ ತಾಣಮುಮೆನಿಸಿರ್ಪ ಲತಾಮಂಟಪಮುಂ ಪೊಕ್ಕು (ಕುಸುಮಾ. ೦೨-೦೩೬ ಪ). **ಭಾರವಡ್ಡಿಗೆ :** ಶ್ರೀರನ್ಗದಂಣ್ಣಾಯಕರ ಪಟ್ಟಸಾಹುಣಿ ಮಣ್ಡಲಸಾಹಣಿ ಮಾಡಿಸಿದ ಭಾರವಡ್ಡಿಗೆ (ಎಕ. XIV, ಎಳಂದೂ. ೦೭೨-೨; 1243).

[< ಸಂ. ದ್ವಾರಪಟ್ಟಿಕಾ]

ಬಾರವಿಗೊಂಡ (ನಾ). ಒಬ್ಬಾತನ ಹೆಸರು : ಶ್ರೀಬಾರವಿಗೊಣ್ಡಂ ನರಸಿಂಘ ಆತನ ಭ × × × ಬಾಱಿಯ ನನ್ದಿವರ್ಮನ ಮಗಂ ಶ್ರೀಮನ್ ಸತ್ಯಮಂಗಲದ ಚೋ × × (ಎಕ. IX, ಹೊಸಕೋ. ೦೦೬-೨; ಸು. 900 ?).

[ಬಾರವಿ$_?$ + ಗೊಂಡ$_1$ (< ಗಾಮುಂಡ)]

ಬಾರಸ (ನಾ). ೧. ಹನ್ನೆರಡು : "ಬಾರಸ – ದ್ವಾದಶ = ಹನ್ನೆರಡು" (ತದ್ಭಕೋ. ೩೦). 'ಬಾರಸನಾಮ' ಪರಾ. ೨. ಜನನವಾದ ಹನ್ನೆರಡನೆಯ ದಿನದಂದು ಮಗುವಿಗೆ ಮಾಡುವ ನಾಮಕರಣದ ಉತ್ಸವ : ಬಾಲುಗೆ ಬಾರಸವ[ಪಾಠಾಂ. ಬಾರಸೆಯ, ದ್ವಾದಶ] ಮಾಡಿ ತೊಟ್ಟಿಲೊಳಿಕ್ಕಿ ಏಲೇಶನೆಂದು ನಾಮವ ಕೊಟ್ಟು (ಸಿದ್ಧರಾ. ೯-೨೬). 'ಬಾರಸಂಗೆಯ್' ಪರಾ.

[< ಪ್ರಾ. ಬಾರಸ. / ಹಿಂ. ಬಾರಸ ; ಮರಾ. ಬಾರಸಾ. / ಸಂ. ದ್ವಾದಶ]

ಬಾರಸಂಗೆಯ್ (ಕ್ರಿ). ಹುಟ್ಟಿದ ಹನ್ನೆರಡನೆಯ ದಿನದಂದು ಮಗುವಿಗೆ ನಾಮಕರಣದ ಉತ್ಸವವನ್ನು ಮಾಡು: ಬಾರಸಂಗೆಯ್ದೊಡೆ ಬೋವಂಗೆ ಪಣ ಮೂಱು ತಳಾರಂಗೆ ಪಣ ಮೂಱು (ಹೈಅರಿ. ೦೯೩೬, ೨೭-೩೩; 872).

[ಬಾರಸ + ಕೆಯ್$_1$]

ಬಾರಸನಾಮ (ನಾ). ದೇಹದ ಮೇಲೆ ಧರಿಸುವ ಹನ್ನೆರಡು ನಾಮ: ಕಿಸುವೊನ್ನ ಬಟ್ಟಗೊಡೆ ಬಾರಸ[ಪಾಠಾಂ. ಭಾರಸ, ಭಾಸುರ]ನಾಮದ ಬೊಟ್ಟು . . . ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮದಂ (ಅರ್ಥಪೇ. ೬-೨೩). [ಬಾರಸ + ನಾಮ]

ಬಾರಸಿ, ಬಾರಸೆ (ನಾ). ಚಾಂದ್ರಮಾನ ಪಕ್ಷದ ಹನ್ನೆರಡನೆಯ ದಿನ ; ದ್ವಾದಶಿ : ಮಾಘಬಹುಳಬಾರಸಿ ವಿಶ್ವಯೋಗದೊಳ್ ತ್ರಿಜ್ಞಾನಧರಂ ಪುಟ್ಟೆ (ಶಾಪುಂಪು. ೦೩೩); ವ್ಯಯಸಂವತ್ಸರದ ಪುಷ್ಯದ ಬಹುಳದ ಬಾರಸಿಯ ಕುಜನ ವಾರದೊಳ್ (ಎಕ. VII, ಶಿವಮೊ. ೬೬-೨; 1227 ?). **ಬಾರಸೆ :** ಆರಯ್ಯೆ ಬಿದಿಗೆ ಸಪ್ತಮಿ ಬಾರಸೆಯೆಂಬಿವಱೊಳರ್ಕಸುತ ಕುಜ ದಿನ ಕೃದ್ವಾರಂಗಳುಂ ತ್ರಿಪಾದದ ತಾರೆಗಳುಂ ಕೂಡೆ ತಾಂ ತ್ರಿಪುಷ್ಕರಯೋಗಂ (ಲೋಕೋಪ. ೦-೨೦); ರೇವತಿಯುಗ ಭಾದ್ರಪಾ(ಪ)ದದೆರಡಷ್ಟಮಿ ಬಾರಸೆ ವಾಯುರಿಕ್ಷೆಯಂದತಿಶಯಮಾಗಿ ಗಾಳಿ ಬಿಡೆ ಬೀಸಿದೊಡಾಸಡಿಯಂದು ಮತ್ತೆ ಭೂನುತಮೆನೆ ನಾಡೆ ಪೆರ್ಮಟೆಗಳಪ್ಪುವು (ಅಟ್ಟಿಪು. ೬-೯೦).

[< ಪ್ರಾ. ಬಾರಸೀ. / ಮರಾ. ಬಾರಶೀ. / ಸಂ. ದ್ವಾದಶೀ]

ಬಾರಸೆ 'ಬಾರಸಿ' ನೋ.

ಬಾರಹ 'ಬಾರ್ಹ' ನೋ.

ಬಾರಹೆ (ನಾ). ಒಂದು ಬಗೆಯ ಕೊಳಲು : ರಾಗಸಾಗರನೆಂಬ ವಾಸು ಕಾರಂ ಭಾಸುರತೆವಡೆದ ಬಾರಹೆಯೆಂಬ ವಾಸಮಂ ಕಳೆದುಕೊಂಡು . . . ಆದಿಗ್ರಾಮ ರಾಗಚ್ಯಾಯೆ ಸುಚ್ಛವಿಯಿಂ ಪುದಿದು ತೋಱಿ (ಜಾಂಟಕ್ಕ. ೬-೧೩ ಕ). [?]

ಬಾರಾ 'ಬಾರ್ಹ' ನೋ.

ಬಾರಾಅಲುತೆ 'ಬಾರಾಬಲೂತಿ' ನೋ.

ಬಾರಾಂದರವಯ್ಯ (ನಾ). ಒಬ್ಬಾತನ ಹೆಸರು : ಪೊಂಕುನ್ದದ ಬಾರಾನ್ದರವಯ್ಯ ತಗಡೂರ ಕೆಳೆಯ ಕಾಳೆಗದೊಳೆ ಬಸವಯ್ಯನ ಮುನ್ದೆ ಕಾದಿ ಸತ್ತು ಸಗ್ಗೆಯದ (ಎಳ. X, ಚೌಂಗ. ೪೪-೨; ಸು. 950). [? + ಅಯ್ಯ೩]

ಬಾರಾಗೀರ 'ಬಾರ್ಗೀರ್' ನೋ.

ಬಾರಾಬಂಗಾಲಿ, ಬಾರಾಬಂಗಾಳಿ (ನಾ). ೧. "ಮೋಸಗಾರ" (ಜಾಕಳೋ. ೨೨). ೨. ಮೋಸಗಾರಿಕೆ; ತಂತ್ರಗಾರಿಕೆ : 'ಬಾರಾಬಂಗಾಲಿವಿದ್ಯೆ' ಪರಾ. ಸಿ. "ಜಿಪುಣ, ಜೀನ, ಕೈಬಿಡದವ" (ಕಡಾಕಾಂಕ. ೪೨೦). ಬಾರಾಬಂಗಾಳಿ : ೨. ಏನೇನೊ 'ಬಾರಾಬಂಗಾಳಿ' ಮಾಡಿ ಹುಡುಗನನ್ನು ಒಪ್ಪಿಸಿಕೊಂಡು ಬಂದಿದ್ದೇನೆ (ಶಃಚಿ. ೭೪). ೪. ತೀರ ಮೇಲಿನ ನ್ಯಾಯಸ್ಥಾನ ; ಸುಪ್ರೀಂಕೋರ್ಟು ; P ಈಸ್ಟ್ ಇಂಡಿಯಾ ಕಂಪನಿಯವರ ಆಡಳಿತಕಾಲದಲ್ಲಿ ಕಲಕತ್ತೆಯ ಸುಪ್ರೀಂಕೋರ್ಟು ಕೊಟ್ಟಕೊನೆಯ ಅಪೀಲ್‌ಕೋರ್ಟಾಗಿತ್ತು. ಹಳ್ಳಿಯ ಪಂಚಾಯಿತಿ ನ್ಯಾಯಾಲಯದಿಂದ ಈ ಕೋರ್ಟಿನವರೆಗೆ ಹನ್ನೆರಡು ಕೋರ್ಟುಗಳಿದ್ದುವು : ನೀನು ಏನು ಬೇಕಾದರೂ ಮಾಡು, ನಾನು ಬಾರಾಬಂಗಾಳಿ ನೋಡಿ ಬಿಡುತ್ತೇನೆ (ಕೂಡ).

[ಬಾರಾ (< ಬಾರ್ಹ) + ಬಂಗಾಲಿ]

ಬಾರಾಬಂಗಾಲಿವಿದ್ಯೆ, ಬಾರಾಬಂಗಾಳಿವಿದ್ಯೆ (ನಾ). ಮೋಸಗಾರಿಕೆ : ಕಪಟವಿದ್ಯೆ : ಅದೇನಾ ಹುಡುಗ 'ಬಾರಾಬಂಗಾಲೀವಿದ್ಯೆ' ಕಲ್ತಿದ್ದನೋ ಏನೋ ದೇವರೇ ಬಲ್ಲ ! (ಡಾಗಿಕ. ೪೭). ಬಾರಾಬಂಗಾಳಿವಿದ್ಯೆ: (*).

[ಬಾರಾಬಂಗಾಲಿ + ವಿದ್ಯೆ]

ಬಾರಾಬಂಗಾಳಿ 'ಬಾರಾಬಂಗಾಲಿ' ನೋ.

ಬಾರಾಬಂಗಾಳಿವಿದ್ಯೆ 'ಬಾರಾಬಂಗಾಲಿವಿದ್ಯೆ' ನೋ.

ಬಾರಾಬನೂತಿ 'ಬಾರಾಬಲೂತಿ' ನೋ.

ಬಾರಾಬನೋತಿ 'ಬಾರಾಬಲೂತಿ' ನೋ.

ಬಾರಾಬಲುತೆ 'ಬಾರಾಬಲೂತಿ' ನೋ.

ಬಾರಾಬಲೂತಿ, ಬಾರಾಅಲುತೆ, ಬಾರಾಬನೂತಿ, ಬಾರಾಬನೋತಿ, ಬಾರಾಬಲುತೆ (ನಾ). ಹನ್ನೆರಡು ಜನ ಆಯಂಗಾರರಾದ ಗ್ರಾಮಾಧಿಕಾರಿಗಳಂ ; P "ಗೌಡ, ಶಾನುಭೋಗ, ಪಂಚಾಂಗಿ, ತಳವಾರ, ತೋಟಿ, ನೀರ್ಗಂಟಿ, ಅಗಸ, ನಾಯಿಂದ, ಕುಂಬಾರ, ಲೋಹರ, ಬಡಗಿ, ಅಗಸಾಲೆ" (ಪ್ರಾಗಿಚ. IV, ೭೬೪). ಈ ಪಟ್ಟಿಯ ಹೆಸರುಗಳಲ್ಲಿ ವ್ಯತ್ಯಾಸವಿರುತ್ತದೆ : ಇನಾಮುದಾರರು ಬಾರಾಬಲೂತಿ ಜನರು ತಮಗೆ ಸರಕಾರದಿಂದ ಜಾರಿಯಾಗಿರುವ ಭೂಮಿ ಅಲ್ಲದೆ ಜಾಸ್ತಿ ಭೂಮಿ . . . ಅನುಭವಿಸುತ್ತ ಇರುವಂಥಾದ್ದು ಸಹ ಚೆನ್ನಾಗಿ ದರಿಯಾಪ್ತು ಮಾಡಿ (ಕುಜಾಚಿ. II, ೬೨); ಗ್ರಾಮಗಳಲ್ಲಿ ಸೇಅದಾರ, ಶಾನುಭೋಗ, ಗೌಡ, ಬಾರಾಬಲೂತಿಯವರು ಇವರೆಲ್ಲಾ ಈನಿನಂತೆಯೇ ಇದ್ದರು (ಜಾಳಿಗ. ೫೫). ಬಾರಾಅಲುತೆ : "ಬಾರಾಅಲುತೆ–೧೨ : ಗಾಣಿಗ, ವೀಳೆಯದಲೆ ದಾರುವವವು, ವೆಳ್ಳುಯವವು, ತೋಟಿಗಾರ, ಜಂಗಮ (ಶಿವಾಲಯದ ಅರ್ಚಕ), ಕಲೆಗಾರ, ಬುಡುಬುಡಿಕೆಯವನು, ಢಕಾರೆಯವನು, ಕುಂಬಾರ, ತಳವಾರ, ಅಕ್ಕಸಾಲೆ, ಬೌಗಲೆ (ಪಟೇಲನ ಕೆಳಗೆ ಕೆಲಸ ಮಾಡುವವನು)" (ಕ್ರೀಚಕ್ಕ. ೨೯೧). ಬಾರಾಬನೂತಿ : ೧೨ ಕೈವಾಡ ಬಾರಾಬನೂತಿ ಸಹ ಯಿಟ್ಟುಕೊಂಡ್ದು ದೇವತಾಶೇವೆ ವಗ್ಗೆರೆ ನಡಶಿಕೊಂಡ್ದು ಹೋಗಲುಳ್ಳವರು (ಪ್ರಾಇಂ. ೦೪೨೯. ೪೭-೨೬ ; 1593). ಬಾರಾಬನೋತಿ: ಊರ ಈ ನೌಕರರ ಸಂಖ್ಯೆಯು ಸಾಧಾರಣವಾಗಿ ಹನ್ನೆರಡು ಇರುವದರಿಂದ ಇವರ ಸಂಘಕ್ಕೆ ಬಾರಾಬನೋತಿಯೆನ್ನುವರು (ಕುಜಾಚಿ. ೦೬೦). ಬಾರಾಬಲುತೆ : "ಬಾರಾಬಲುತೆ- (i) ನಂಬಿ, ರೆಡ್ಡಿ, ಕರಣ, ಪುರೋಹಿತ, ತಳವಾರ, ಒಡಗಿ, ಕಮ್ಮಾರ, ಕುಂಬಾರ, ಅಗಸ, ಕ್ಷೌರಿಕ, ಹೊಲೆಯ, ಮಾದಿಗ (ಕಂಧ. ೬೯೦). (ii) ಒಡಗಿ, ಕಮ್ಮಾರ, ಹೊಲೆಯ, ಮಾದಿಗ, ಕುಂಬಾರ, ಚಮ್ಮಾರ, ಅಗಸ, ನಾಯಿಂದ, ಪುರೋಹಿತ, ಮುಲ್ಲಾ, ಗೊರವ, ಬೆಸ್ತ" (ಕ್ರೀಚಕ್ಕ. ೨೯೦).

[← ಮರಾ. ಬಾರಾಬಲೂತೀ, ಬಾರಾಬಲುತೇ]

ಬಾರಾಭಾಯಿ (ನಾ). (ಆಡಳಿತದ ನಿರ್ವಹಣೆಗಾಗಿ ನೇಮಕವಾದ) ಹನ್ನೆರಡು ಜನ ; P ನಾರಾಯಣರಾವ್‌ಪೇಶ್ವೆಯ ವಧೆಯ ನಂತರ ನಾನಾಫಡಣವೀಸ, ಸಖಾರಾಮಬಾಪೂ ಮೊದಲಾದ ಹನ್ನೆರಡು ಜನ ಮುತ್ಸದ್ದಿಗಳು ರಾಜ್ಯಭಾರ ನಡಸಿದರು. ಇದಕ್ಕೆ 'ಬಾರಾಭಾಯಿ ಕಾರಭಾರ'ವೆಂಬ ಹೆಸರಾಯಿತು : ರಾಜರ ಕಾಟ ಕಾಯಿಗಳು ಹೆಚ್ಚುತ್ತಾ ಬಂದ ಹಾಗೆಲ್ಲಾ ಬಿಗಿಯಾದ ದರಬಾರನ್ನು ನಡಿಸುವುದಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಮಾಡಿ ಬಾರಾಭಾಯಿಗಳನ್ನು ನೇಮಿಸಿ ಮರಾಟಿಸಂಸ್ಥಾನವನ್ನು ಎಸ್ತರಿಸಿ ಉದ್ಧಾರ ಮಾಡಿದವರು ಪೇಷ್ವೆಗಳಲ್ಲವೆ ? (ಮುಚಿಗ. ೩೦).

[←ಮರಾ. ಬಾರಾಭಾಈ, ಬಾರಭಾಈ]

ಬಾರಾಮಾರ್ಗ, ಭಾರಾಮಾರ್ಗ (ನಾ). ೧. ಹೆದ್ದಾರಿ; ರಾಜಮಾರ್ಗ : ಅವರಿಬ್ಬರೂ ಬಾರಾಮಾರ್ಗದ ಮಗ್ಗುಲ ಮಾಲೀಕನ ಕಾಡಿನಲ್ಲಿ. . . . ಕುದುರೆಯ ಹಿಂಡನ್ನು ಮೇಯಿಸುವ ಸಲುವಾಗಿ ಅಟ್ಟಿಕೊಂಡು ಹೋಗುತ್ತಿದ್ದರು (ಪುಪಚ ೨೯೩). ೨. "(ಒಂದು ದೇಶದ ಮೂಲಕ ಹಾದು ಹೋಗಲು ತೆರುವ) ಸಾಗಣಿಸುಂಕ, ಹೆದ್ದಾರಿಯ ಸುಂಕ" (ಕರ್ನಾಶಾ. ೦೪೨) : ಕಾಕೋಲು ಬುಚಯ್ಯನ ವಪಿತಾ ಭಾರಾಮಾರ್ಗದ ದ್ವಂಡಿ ಶಿಲದಯನ ವಪಿತಾ (ಎಳ. X (೪), ಕೋಡಾಕ. ೨೪೬-೧೮; 1761); ಬಾರಾಮಾರ್ಗದ ಏರತ್ತೈಯಶೆಟ್ಟರು ಹನಿಕೆ ಚಿನ್ನದೇವರು ಬಿಗ ದೇವನಹಳ್ಳಿ ನಿರಂಜನಯ್ಯ . . . ಮೊದಲಾದ ೫೬ ದೇಶದ ಬಾರಾಮಾರ್ಗದವರು ಬರಸಿಕೊಟ್ಟ ದಾನದ ವರದಿ ಕ್ರಮ (ಎಳ. IX (೪), ಹೂಕಳೋ. ೦೬೭-೨; 1771). ಭಾರಾಮಾರ್ಗ : ೨. ಸ್ಥಳ ವಿಸ್ತಾರದ ಚತುರ್ದಿಕ್ಕು ಐವತ್ತಾರುದೇಶದ ಭಾರಾಮಾರ್ಗ್ಗದ ದೇಶದವರು (ಎಳ. X (೪), ಕೋಡಾಕ. ೨೪೬-೦೦; 1761). 'ಭಾಟಾಮಾರ್ಗ' ಪರಾ. [? + ಮಾರ್ಗ]

ಬಾರಾಸುಂಕ (ನಾ). = ಬಾರಾಮಾರ್ಗ ೨ : ಇನ್ನೀ ಧರ್ಮವನುತ್ತ ರಾಯಣಸಂಕ್ರಾನ್ತಿ ನಿಮಿತ್ತದಿಂ ಕೊಟ್ಟು ಬಾರಾಸುಂಕದ ಭೀಣೆ ಕಾಱ್ಕೈಡಸದೆ . . . ತಪ್ಪದೆ ಪ್ರತಿಪಾಳಿಸುವರು (ಕಇಂ. ೫೬-೪೯-೦೬: 1136). [? + ಸುಂಕ೩]

ಬಾರಿ೧, ವಾರಿ೧ (ನಾ). ೧. ಸಲ ; ಸರದಿ ; ಸಾರಿ : ಪಶುಗಳ ಮೆಯ್ಯೊಳಿನಿತು ರೋಮವುಂಟಿನಿತು ಬಾರಿ ತಾಂ ಕೊಲಿಸಿಕೊಂಬಂ ವೃಥಾ ಪಶುವಧೆಯಂ ಮಾಡಿದವಂ (ಕಂಚಕಂ. ೬೨-೦೬); ಎನಿತು ಬಾರಿ ಪಲಾಯನದ ಸಿರಿ ನಿನಗೆ ಸೇದಿತು (ಕುಪ್ರಾರಾಕ್ಷೋ. ೦೪-೪೩); ಬಲಗೊಂಡನುಜ ಮೂಱು ಬಾರಿ ತನ್ನೊಳು ತಾನು ಗೆಲವೇಱೆ ಮುನಿಗಳರ್ವರಿಗೆ ನಲಿದಱಿಗಿದನು (ಚಿಕ. ೩-೬೦). ೨. ಆಹುತಿಯಾಗುವ ಸರದಿ ; ಬಲಿಯಾಗುವ ಪಾಳಿ : ಪಾಳಿನ ಬಾರಿಯೆಮ್ಮ ಮೇಲೆ ಬಂದುದು (ಕಂಚಿಪಾ. ೩-೨೬ ಕ);

ಅಬ್ಬಾ ನಿಮ್ಮ ಮನೆಗೆ ಬಾರಿ ಬಂದುದು ನಾಳೆ ರಕ್ಕಸನಲ್ಲಿಗಟ್ಟಿಂ (ಜೀವಸಂ. ೩೮-೨೩ ಪ); ಎನಗೆ ಬಂದುದು ತಾಯೆ ನಾಳಿನ ದಿನದ ಬಾರಿ (ಕುಪ್ಯಾಲಿ. ೧೦-೦೨). ೩. ಬಲಿ; ಆಹುತಿ : ಆತನು ಪವಮಾನಸೂನು ಬಾರಿಯ ನೆವದಿಂ ಪೋಗಿ ಕೀನಾಶಂಗಾಪೋಶನಮನಿತ್ತು ಮತ್ತಂ ಬರೆ (ಪೇಮಿಪು. ೯-೩೨ ಪ); ಎಲ್ಲರುಮಿರ್ದು ಮಾಡಿದೊಡೆ ಮಾಡಿದ ಬಾರಿಯ ಸೂಟ್ ನಿಯೋಗದಿಂದಲ್ಲಿಯುಮಂತೆ ಬಂದು ಬಟಿಕಾ ಮನೆಯಲ್ಲಿಗೆ ಬಂದುದು (ಜೀವಸಂ. ೩೮-೨೩). ೪. ಬಾಯಿ; ದವಡೆ : ಬೇಟದುಬ್ಬದಿಗಮನಾಂತ ನಲ್ಲಳ ಮುಖಾಂಬುಜಮಂ ನಡೆ ನೋಡಿ ನೋಡಿ ಸಾಯದೆ ಬರ್ದು ಕಾಡಿದಂ ಜವನ ಬಾರಿಯೊಳಂ ಬರ್ದುಕಾಡದಿರ್ಕುಮೇ (ಅಧಿಪು. ೦೨-೨೫); ಪೆಂಡತಿಯ ಮೂಗನಕಾರಣದಿನರಿವವನಂ ಜವನ ಬಾರಿಗಟ್ಟುವುದೆ ಧರ್ಮಂ (ಪಂಚತಂ. ೭೯-೯); ಅರಣ್ಯದೊಳ್ ಚರಿಯಿಪ ರೌದ್ರರಾಕ್ಷಸರ ಬಾರಿಗೆ ಬಿಟ್ಟಳೋ ಕಾಂತೆ (ಕುಸುಮಾ. ೧೯-೦೦೯). ೫. ದಾಳಿ; ಆಕ್ರಮಣ; ಲಗ್ಗೆ : ತಳವಜ ಕಳ್ಳರ ಬಾರಿಯೊಳೊಳಗಾಗದೆ ನಿನ್ನ ಬರ್ದುಕಿ ಬಂದಂದ ಮಿದಾರಳವು (ಸುಕುಮಾ. ೭-೨೯); ನೀನಾ ನಿಷ್ಠುರನ ಕೆಯ್ಯೊಳೆರಡಿಲ್ಲದೆ ಪೇರಾನೆಯ ಬಾರಿಗೆ ಬಿರ್ದಾ ಶ್ವಾನನ ತೆಱದಂತೆ ಬಾಧೆಗೊಳಗಾಗಿರ್ಪೈ (ಧರ್ಮಾಮೃ. ೬-೧೩೦); ಇನನಿದಿರೆಟ್ಟ ಕಾರ್ಮುಗಿಲ ಬಾರಿಗೆ ಬಿಟ್ಟನೊ ತಳ್ತ ಬಳ್ಳಿಮಿಂಚಿನ ಬಲೆಯಲ್ಲಿ ಸಿಕ್ಕಿದನೊ . . . ಘನಜಳಧಾರೆಯಿಂ ಕರಗಿ ಹೋದನೊ (ಅನಂಪು. ೯-೦೫). ೬. ಅಧೀನ; ವಶ; ಹತೋಟಿ : ಪೊದೆದ ಮಡಿ ಬಟಿಯಂ ಧೂಳಿಯೊಳ್ ಮಾಸಿಯಸಗನ ಬಾರಿಯೊಳ್ ಬಿರ್ದು ನಿಗ್ರಹಕ್ಕೊಳಗಪ್ಪಂತೆ ಚಪಳರ್ . . . ದುಃಖಂಬಡುವರ್ (ಧರ್ಮಾಮೃ. ೯-೩೮); ಭೀಮ ಧರಿತ್ರೀಭೃತ್ತನುಜೆ ನಳನೃಪಂಗೆರ್ದೆದೆತ್ತು ಕರಂ ಚಿತ್ತಭವನ ಬಾರಿಗೆ ಬಂದಳ್ (ಧಮಸ್ಯ. ೩-೦). ೭. ಕಪಿಲೆಬಾವಿಯ ಬಳಿ(ನೀರು ಎಳೆಯುವ) ಎತ್ತುಗಳು ಕೆಳಗೆ ಇಳಿಯುವುದಕ್ಕಾಗಿರುವ ಇಳಿಜಾರುಪ್ರದೇಶ : ಮೊಟ್ಟೆಯ ಬಾರಿಯ ಕಡೆಗೆ ಮಣ್ಣು ಭರತಿ ಹಾಕದೆ ಗುಣೆಗಲ್ಲುಗಳನ್ನು ಅಥವಾ ಗರಸುಮಣ್ಣನ್ನು ಹಾಕಿ . . . ಮೊಟ್ಟೆಯ ಬಾರಿಯನ್ನು ತಯಾರು ಮಾಡಿ ಮೊಟ್ಟೆಯನ್ನು ಸಾಗಿಸಬೇಕು (ಕೃಷಿಪ್ರ. ೦೦೯); ಬಾವಿಗೊಂದು ಹೊಸ ಮೊಟ್ಟೆಯಾಗಿದೆ; ಬಾರಿಯಾಗಿದೆ (ಪಾಲಿ. ೧೬), ಜೀವ ನೀಗುವ ಈರ್ಷೆಯಿಂದ ಧಡಧಡನೆ ಬಂದ ಬಸವಂತಿ, ಬಾರಿಯ ಮೇಲಿಂದಲೇ ನೀರಿಗೆ ಧುಮುಕಿದಳು (ದೀಪಹ. II. ೦೯೯). ೮. ಕಾಮೋದ್ರೇಕ; ಬೆದೆ : ಪುಗಿಲಂ ಪೋಗಂ ಬಾರಿಯಂ ಸನ್ನೆಯಂ ನೂಱುವಮರ್ಚುವ ನಿಲ್ವೆಡೆಯಂ ಬಗೆಯಂ ತೆಗೆಯನಲ್ಲಾಟಮಂ . . . ನೀಂ ಬಲ್ಲೆ ಬೇಂಟೆಕಾಱರೊಳೆಲ್ಲವಾನೆ ಬಲ್ಲೆಂ (ಪಂಪಭಾ. ೫-೯೩); ಹಸು ಬಾರಿಗೆ ಬಂದಿದೆ, ಹೋರಿ ಕೊಡಿಸಬೇಕು (ಕೂಡಿ). ೯. ಕೂಟ; ಸುರತ : ಆ ಮುದುಪಂ ಗಡ ಕೊಟ್ಟನೊತ್ತೆಯಂ ಗರಗರನಾಯ್ತು ಬಲ್ಮೆ ಮುದುಗೂಗೆಯ ಬಾರಿಗೆ ಕೈನೆ ತಾನೆ ಮೈಗರೆದೆನಗೊತ್ತೆಗೊಟ್ಟ ಸುಖ ಮಾಟ್ಕೆವೆ ವಟ್ಟದನಕ್ಕ ಬಟ್ಟಪೆಂ (ಸೂಕ್ತಿಸು. ೯-೯೨೨); ಅವನ ಬಾರಿಯೊಳ್ ಮಗಳ ಮೆಯ್ ಕಳೆಯೇಱುವುದೊಳ್ಮೊಗಂ ಪೊಗರ್ತೀವುವುದೋಜೆಯುರ್ಕುವುದು (ಪಕಿ. ೬-೯೬). ವಾರಿ$_1$: ೧. ವಾರಿ ಇಲ್ಲದ ಸುಂಕ ದಾರಿಗೆ ದಾರಿಯೇ ? (ಗಾದೆ). ೨. ಬಿರುದರ ಗೋವ ವಾರಿಗೆ ತಪ್ಪುವ ಲೆಂಕರ ಗಂಡ (ಎಕ. VII. ಶಿಕಾರಿ. ೦೯೯-೯; 1181).

ಬಾರಿಬಾರಿ (ದ್ವಿರುಕ್ತಿ) : ಬಾರಿಬಾರಿಗೆ ಪಾತಿವ್ರತ್ಯವ ಬೋಧಿಸೆ ಜಾರೆಗದಱ ನಿಜ ಸೊಗಸೀತೆ (ಪುರಂದ. ೦-೦೫೭-೦); ಆ ರಣದೊಳಿಂತಿವನ ಸ್ಯಂದನಸಹಸ್ರವಂ ಬಾರಿಬಾರಿಗೆ ಕತ್ತರಿಸಿ ಕೆಡಹಿ ಫಲುಗುಣಂ ಪೂರೈಸಿದಂ ದೇವದತ್ತಮಂ (ಶೈಮಿಪಾ. ೨೫-೩೯); ಇಂದ್ರನೂ ಜಯಂತನೂ . . . ಬಾರಿಬಾರಿಗೂ ಸೋತು ಓಡಿ ಹೋಗಲಿಲ್ಲವೆ ? (ಕೃಷಾಉ. ೦೬೭).

[ದೇ.॥ ಕೊಡ. ಬಾರೀ ; ತೆಲು. ಬಾರಿ./ಹಿಂ. ಬಾರ್; ಮರಾ. ಬಾರಿ]

ಬಾರಿ$_2$ 'ಬಾರ್$_2$' ನೋ.

ಬಾರಿ$_3$ (ನಾ). ಆನೆಯನ್ನು ಹಿಡಿಯಲು ಮಾಡುವ ಉಪಾಯ : ಗಂಧ ಹಸ್ತಿಯೊಡನೆ ಬಾರಿ [ಪಾಠಾಂ. ಚಾಲಿ, ಬಾಳಿ, ಬಾಲಿ, ಬಾವಿ]ಯೊಳ್ ಮೂವತ್ತೆರಡು ಗಜಕ್ರೀಡೆಗಳಿಂದಂ ನೀಡುಂ ಬೇಗಂ ಕ್ರೀಡಿಸಿಯಾನೆಯಂ ಸೇದೆಗೆಡಿಸಿ ತನ್ನ ಬಸಕ್ಕೆ ಮಾಡಿಯೇಱಿ (ಪಡ್ಡಾಣಾ. ೩೯-೧೯); ತೋರದೆರೆ ಮುರಿಯೆ ಮೂಡುವ ವಾರಣಮಂ ಪೋಲ್ತುದಡಸಿ ನಿಡುಗೆಯ್ಯಂ ಭಂಡಾರಿಸಿ ಮೆಡಱಿದ ತಳಿಯಂ ಬಾರಿಯುಮಂ ಮುಱಿಯೆ ಪೊಯ್ದು ಪೊಱಮಡು ವಿಭಮಂ (ಅರ್ಧನೇ. ೩-೦೦೩). 'ಕೆಡ್ಡಾ' ಹೋ. [< ಸಂ. ವಾರೀ]

ಬಾರಿಕ (ನಾ). ೧. ಸರದಿಯನ್ನು ತಿಳಿಸುವವನು : ಬಾಯಾಳೆಂಬ ಬಳ್ಳುಮಂ ಬಾರಿಕನಂ ಮಾಡಿ ಪಲಕಾಲಂ ಸಲುತುಮಿರ್ಪುದುಂ (ಪಂಚತಂ. ೯೯-೦೨); ಬಾರಿಕಂ ಬಂದಾ ಪಾರ್ವನಂ ಕಾಣದಬ್ಬಾ ನಿಮ್ಮ ಮಗನ ಮೇಲೆ ಬಾರಿ ಬಂದುದು ನಾಳೆ ರಕ್ಕಸನಲ್ಲಿಗಟ್ಟಿಂ ಎಂದು ಪೇಟ್ದು ಪೋದಾಗಳ್ (ಜೀವಸಂ. ೩೮-೨೩ ಪ); ಬೊಬ್ಬೆಯಿಂ ಪೇಳ್ದ ಬಾರಿಕನ ನುಡಿಯಂ ಕೇಳ್ದು ತಬ್ಬಿಬ್ಬುಗೊಂಡು (ಲಕ್ಷ್ಮಭಾ. ೩೯-೯). ೨. ಗ್ರಾಮದ ಕಾವಲುಗಾರ : ಸಾಸಿರ್ವ್ವರ ಬಾರಿಕಂಗೆ ಮನೆದೆಱೆ (ಇಎ. ೦೯೯೬, ಹಾವಗಲ್. ೨೫೦-೩೩ ; 993); ಬಂಟ ಸಾಸಿರ್ವ್ವರ(ರುಂ) ಬಾರಿಕಂಗೆ ಮನೆದೆಱೆ ಬಿಟ್ಟ ಬೆಸಕೊಳ್ದೆಱೆ ಮೊದಲಾಗೆ ಸರ್ವ್ವಮಾನ್ಯಮಾಗೆ ಬಿ[ಟ್ಟ]ರ್ (ಕಇ. II. ೯-೩೩ ; 1072).

[ಬಾರಿ$_1$ + — ಕ$_3$]

ಬಾರಿಕಾರ (ನಾ). ಹಳ್ಳಿಯನ್ನು ಕಾವಲು ಕಾಯುವವನು ; ಗ್ರಾಮದ ಕಾವಲುಗಾರ : ಮನೆಯಲ್ಲಿ ನಿತ್ಯ ಕಸ ಮುಸುರೆಯನ್ನು ಮಾಡುವ ತಳವಾರ, ಬಾರಿಕಾರರಿಂದ ಮದುವೆ ಮುಂಜಿಗಳನ್ನು ಮಾಡಿಸುವ ಪುರೋಹಿತರವರೆಗೂ . . . ಬೇರೆ ಬೇರೆ ಮನೆತನಗಳಿರುವವು (ಪಳಭಾ. ೦೩೭).

[< ಬಾರಿಕ + — ಕಾರ$_1$ (< — ಕಾಱ)]

ಬಾರಿಕಿ, ಬಾರೀಕಿ (ನಾ). = ಬಾರಿಕಾರ : ಬಾರಿಕಿ—ಈತನು ಗೌಡನ ಅಪ್ಪಣೆಯಂತೆ ಹಳ್ಳಿಯಲ್ಲಿ ಮುಸುರೆ ತಿಕ್ಕುವದು, ಹಿಲಾಲು ಹಿಡಿಯುವದು ಮುಂತಾದ ಕೆಲಸ ಮಾಡುವನು (ಮಭಾರ. ೦೬೨). ಬಾರೀಕಿ : ತೋಟಿ—ತಳವಾರ, ವೆಟ್ಟಿ, ಬಾರೀಕಿ ಅಥವಾ ಕೋಲುಕಾರನೆಂದು ಹೆಸರುಂಟು (ಗ್ರಾಮಾಳ. ೦). [< ಬಾರಿಕ. / ತೆಲು. ಬಾರಿಕಿವಾಡು]

ಬಾರಿಗುಱಿ (ನಾ). ಬಲಿಯಾಗಿ ಕೊಡುವ ಕುರಿ ; ಆಹುತಿಯಾಗಿ ಕೊಡುವ ಕುರಿ : ಕುತ್ತಮಂ ಕಿಡಿಸುವ ನಿಮಿತ್ತದಿಂ ಚಂಡಿಕೆಗೆ ಪಿಂಡಮನಿಟ್ಟುಂ ಮಾರಿಗೆ ಬಾರಿಗುಱಿಯನಿತ್ತುಂ . . . ಇಂತನೇಕಪ್ರಕಾರಂಗಳಿಂ ರೌದ್ರದೇವತೆಗಳಂ ಪಿಡಿದು ದುರ್ಗತಿದುಃಖದಿಂದಾಳುತ್ತಂ ಮುಟುಗುತ್ತ ಮಿರ್ಪರ್ (ಪಸಾರ. ೯೬೯). [ಬಾರಿ$_1$ + ಕುಱಿ$_3$]

ಬಾರಿಗೆ (ನಾ). ಕಸ ಗುಡಿಸುವ ಸಾಧನ ; ಪೊರಕೆ : ಹನುಮಂತಪ್ಪನು . . . ಅಡುಗೆಮನೆಯನ್ನು ಬಾರಿಗೆಯಿಂದ ಸ್ವಚ್ಛವಾಗಿ ಗುಡಿಸಿದನು (ರಕ್ತರ್ಯ. ೦೦೯). 'ಬೋಹರಿಗೆ' ಪರಾ. [?]

ಬಾರಿದಿ (ನಾ). ವೇಶ್ಯೆ; ಸೂಳೆ : ಮೊಳ ಬಟ್ಟೆಗೆ ದೇಹವನ್ನು ಮಾರುವ, ಮಾರಿಕೊಂಡ ಬಾರಿದಿಯಾಗಿದ್ದಾಳೆ (ಒಡಮು. ೨೦೦).

[← ಹಿಂ. ಬಾರತಿಯ. / ಸಂ. ವಾರಸ್ತ್ರೀ]

ಬಾರಿಯಿಕ್ಕು (ಕ್ರಿ). (ಸರದಿಯ ಪ್ರಕಾರ) ಕಾವಲಿಡು ; ಕಾವಲು ಹಾಕು : ಅರಸನಪ್ಪಣೆಯಾಯಲೂರ ಸೀರೆಯನೆಲ್ಲ ಗಿರಿಯಂತೆ ಮಡಿವಳಯ್ಯನ ಮುಂದೆಯೊಟ್ಟುತ್ತೆ ಕರಿ ತುರಗ ರಥ ಪತ್ತಿ ಮುಂತಾದ ಬಹುಬಲವ ಬಾರಿಯಿಕ್ಕುತ್ತ ಭಟರು ಮರುಳಸಗ ಭೂವರಗೆ ನೀನಿದಿರೆ . . . ಎನ್ನಲು (ಪ್ರಶುಪು. ೬-೮೨). [ಬಾರಿ$_1$ + ಇಕ್ಕು]

ಬಾರಿಯಿಡು (ಕ್ರಿ). ಬಲಿಯಾಗಬೇಕಾದ ಪ್ರಾಣಿಯ ಸರದಿಯನ್ನು ಗೊತ್ತುಮಾಡು ; ಸರದಿಯ ಮೇರೆಗೆ ಬಲಿಯನ್ನು ತೆಗೆದಿಡು :

ಫಣೆರಾಜಂ ಬಾರಿಯಿಟ್ಟಟ್ಟಿದೊಡನುದಿನದಿಂ ಬರ್ಪ ಸರ್ಪಂಗಳಂ ಬಲ್ಕಣಿ ತಾರ್ಕ್ಷ್ಯಂ ಭಕ್ಷಿಸುತ್ತುಂ ಮಳಯಗಿರಿಯೊಳಿರ್ಪಂ ಬಲಂ ಕೇಳಿರೇ (ಕಾವ್ಯಾಪ. ೯೦೦). [ಬಾರಿ$_1$ + ಇಡು$_1$]

ಬಾರಿಲುಮಕ್ಕಿ (ನಾ). ಒಂದು ಬಗೆಯ ಭೂಮಿ : ಬಾರಿಲುಮಕ್ಕಿಯ ಗಳ್ದೆಗೆ ಇಕ್ಕಿ ಹೊನ್ನ . . . ಏಳು ಭೆಯದ ಬತ್ತ ಇಂನೂಱ ಮೂವತ್ತು ಇಕ್ಕಿದಂ (ಎಕ. V. ಹಾಸನ. ೩೮-೧೭ ; ಸು. 1000 ?). [? + ಮಕ್ಕಿ$_1$]

ಬಾರಿಸು$_1$ (ಕ್ರಿ). ೧. ಚಾವಟಿಯಿಂದ ಹೊಡೆ ; ಚರ್ಮದ ಪಟ್ಟಿಯಿಂದ ಏಟುಕೊಡು : ಆರು ಬಾರಿಪ್ಪೆನಾರಂ ನಿನಗೆಱಗಿಪೆಂ. . .ಬೆಸಸು ಬೆಸಸು (ಅರ್ಧನೇ. ೭-೬೯) ; ತುಡುಗುಣಿಗಳವದಿರು ನಭೋಗ್ರಕೆ ಸಿಡಿದು ಹವಿಗೊಂಬಮರನಿಕರದ ಹೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ (ತೊರಣ. ೧-೧೧-೬). ೨. ಜೋರಾಗಿ ಏಟು ಕೊಡು ; ಬಿಗಿ : ರೋಷಗೊಂಡ ಇನ್ಸ್‌ಪೆಕ್ಟರ್ ಅವನ ಕೆನ್ನೆಗಳಿಗೆ ಬಾರಿಸಿದ (ಆತ್ಮಾರ್ಪ. ೧೦೯). [ಬಾರ್$_2$ + — ಇಸು$_3$. / ತುಳು. ಬರ್ಜು]

ಬಾರಿಸು$_2$ (ಕ್ರಿ). ೧. ನಿರೋಧಿಸು ; ಪ್ರತಿಬಂಧಿಸು : ದೇವತೆಗಳ ಮಾಡಿದಾಹಾರಮಂ ರಿಸಿಯರ್ಗೆ ಚರಿಗೆ ಮಾಡಲಾಗದೆಂದು ಬಾರಿಸಿ (ಪಡ್ಡಾರಾ. ೯೦-೨೯); ಕಡುಕೆಯ್ದು ಕೃತಾಂತನಿಂತು ನಿರ್ನೆರಮೆಟ್ಟಿದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ (ಆದಿಪು. ೩-೯) ; ಇಷ್ಟರ್ ಬಾರಿಸಿದೊಡಂ ಪಾಣದೆ ದುಷ್ಟರನೊಳಕೊಂಡು ಕಟ್ಟರ ಕಥೆಗಳಂ ಪೇಟ್ಟೆಂ (ಪಂಚತಂ. ೦೨೨-೦೨). ೨. ಎಚ್ಚರಿಕೆ ಕೊಡು,—ನೀಡು: ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಿಜನನಿಷೇವಿತಮಿದಱೊಳ್ ಸಾರದಳಿಪೆಂದು ಪೆಳ್ಳನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್ (ಆದಿಪು. ೯-೯೩) ; ಅಂದೆನ್ನಂ ನೀಂ ಬಾರಿಸಿದುದು ಸನ್ನಿದಮಾಯ್ತಿನ್ನಿದರ್ಕೆ ಪೇಟೇಗೆಯ್ವೆಂ (ಪಂಚತಂ. ೬೯-೦೯); ಬಾರಿಪ ನಿಮ್ಮ ತರ್ಜನದಿನೀ ಜನದೊಂದುಲಿ ಮಾಣ್ಗೆ (ಪುಷ್ಪಪು. ೭-೩೩). ೩. ಪರಿಹರಿಸು ; ನಿವಾರಿಸು : "ಬಾರಿಸೆಂದು ನಿವಾರಿಪುದು" (ಕರಸಾ. ೭೦-೬೦೦) ; ಚಂದ್ರಾಂಶುಚಂದ್ರಕಾಂತದ್ರವ ಕರ್ಪೂರ ಮೃಣಾಲಾದಿಗಳುಂ ಬಾರಿಸಲಾಱವೆ ದಲವನ ದಾಹಜ್ವರಮಂ (ಆದಿಪು. ೨-೦೩). ೪. ಹೀಯಾಳಿಸು ; ಧಿಕ್ಕರಿಸು : ಕ್ಷೀರೋದವಾರಿಧಾರಾಪೂರದ ಚೆಲ್ವಿಂಗೆ ಸೆಣಸುವಂತಭಿನವನೀಹಾರದ ಬೆಳ್ಪನೆ ಬಾರಿಸಿ ಪಾಂಡುಕ ಶಿಲಾತಲಂ ಸೊಗಯಿಸುಗುಂ (ಆದಿಪು. ೭-೭೯) ; ಕೀರ್ತ್ತಿ ದಿಗ್ವಳಯಭಿತ್ತಿಯ ನೋವದೆ ಬಾರಿಸಿತ್ತು ಭಾಸುರರುಚಿಯಿನ್ದೆ ಚನ್ದ್ರಮನ ಚನ್ದ್ರಿಕೆಯಂ (ಎಕ. V. ಅರಸೀ. ೦೨೭.೩೭; 1185); ನೇರಿತೆಳವಾಟಿಗಂಬಮನೋರಂತಿರೆ ನುಣ್ಬುವೆತ್ತು ಸೋಲಿಪ ಚೆಲ್ವಿಂ ಬಾರಿಸಿ ಸೊಬಗಿಂಗೆತ್ತಿದ ತೋರಣಗಂಬಂಬೊಲಿರ್ದುವಾಕೆಯ ತೊಡೆಗಳ್ (ಕಬ್ಬಿಗಾ. ೭೩). ೫. ಬಿಡು ; ತೊರೆ : ತ್ಯಜಿಸು : ಬಾರಿಸುತಿಂದ್ರಿಯಜ್ಞಾನವ ಪ್ರಾಣಾಪಹಾರಿಯಾಗಿರ್ದ ಕ್ಷುಧೆಯೊಳು ಸಾರನಿಜಾತ್ಮಭಾವನೆಯೆಂಬಮೃತಾಹಾರವ ಕೊಳುತಿರ್ದರೊಲಿದು (ಶಾಂತೀಶ. ೯-೭೩). [< ವಾರಿಸು]

ಬಾರಿಸು$_3$ 'ಬಾಜಿಸು$_2$' ನೋ.

ಬಾರೀಕ (ಗು). ದಪ್ಪವಾಗಿಲ್ಲದ ; ತೆಳುವಾದ : ತುಂಬುಗಲ್ಲ. ಬಾರೀಕ ಮೀಸೆ. ಭರ್ತಿ ಆಳು (ಹೂಸಕ್ಷಿ. ೭೯).

[←ಪಾರ. ಹಿಂ. ಮರಾ. ಬಾರೀಕ್]

ಬಾರೀಕಿ 'ಬಾರಿಕಿ' ನೋ.

ಬಾರು$_1$ 'ಬಾರ್$_2$' ನೋ.

ಬಾರು$_2$ 'ಬಾರ್$_3$' ನೋ.

ಬಾರು$_3$ 'ಬಾರ್$_4$' ನೋ.

ಬಾರುಕೋಲು 'ಬಾರ್ಕೋಲು' ನೋ.

ಬಾರುಗಿ (ಕ್ರಿ). ಚರ್ಮವನ್ನು ಎತ್ತು.—ಸುಲಿ : ಒದೆದುಗುರಿಂದೆ ಬಾರುಗಿದುದೆಯ್ದದೆ ಕುತ್ತಿದಳಪ್ಪಿ ಕಂಟಕೌಘದಿನಳಿ ಪಾಱದವ್ವಳಿಸಿ ಕೆಂದಳದಿಂದೊಳಪೊಯ್ದು ಪೊಯ್ದುದೆಯ್ದದೆ . . . ಕಡೆಗಣ್ಗಳಿಂ ಪಡೆದಳೋಪನನೋಪಳನಂಗಯುದ್ಧದೊಳ್ (ಲೀಲಾವ. ೦೩-೨೦).

[ಬಾರ್$_2$ + ಉಗಿ$_1$]

ಬಾರುಗುತ್ತ 'ಬಾರ್ಗುತ್ತ' ನೋ.

ಬಾರುಗುತ್ತು 'ಬಾರ್ಗುತ್ತ' ನೋ.

ಬಾರುಗೋಲು 'ಬಾರ್ಕೋಲು' ನೋ.

ಬಾರುದಾರಿ (ನಾ). ಚರ್ಮದ ಮೇಲೆ ಬಿದ್ದ ಪೆಟ್ಟಿನ ಗುರುತು; ಬಾಸುಂಡೆ : ಏರಗಯ್ಯನು ಕಟ್ಟಿ ಬಿಜ್ಜನ ಚೇರ ಬಂದನು ಹೆಚ್ಚಿ ಬಡಿಯಲು ಬಾರುದಾರಿಗಳು ಎದ್ದು ಗುರುಗಳ ಬೆನ್ನಿನ ಮೇಲೆ (ನಂದಿಲೀ. ೩-೨೭). [?]

ಬಾರುಸಿಪಾಯಿ 'ಬಾರ್ಸಿಪಾಯಿ' ನೋ.

ಬಾರುಳಿ (ನಾ). (?) : ನೋಟ್ಟು ತರಳಲೋಚನವ ಸರಳಾಪಾಂಗಂ ಹರಿಣೇ ಭಾವಮಂ ಮನಂಗೊಳಿಸಿ ನಿಱಿದಳಿರ್ದೊಂಗಲಂ ತೆಗೆಯೆ ಬಾ[ಪಾಠಾಂ. ಬಾ]ರುಳಿಯಂ ದನಿಗೆಯ್ದಶೋಕೆಯೊಳ್ ಕಿಱುಮುಗುಳ್ಗುಂಜಿಯಂ ತಳೆದು ಪೂವಿನ ಬಿಲ್ ನನೆಯಂಬು ಕೆಯ್ಯೊಳಚ್ಚಿಱಿದಿರೆ ಮೇಚಕಚ್ಛವಿಯ ತಾವರೆ ಗಣ್ಗಳ ಗಾಳುವೆಣ್ಗಳೇಂ ಮೆಱೆದರೊ ಕೇಳಿಶೈಲಶಿಖರಾವಳಿಯೊಳ್ ಶಬರೀವಿಲಾಸಮಂ (ಅನಂಪು. ೭-೦೭). [?]

ಬಾರೂತ್ 'ಬಾರೂದು' ನೋ.

ಬಾರೂದು, ಬಾರೂತ್ (ನಾ). ತುಪಾಕಿಗಳಿಗೆ ತುಂಬುವ ಮದ್ದು ; ಸಿಡಿಮದ್ದು : ಮತ್ತೊಂದು ಜಹಜಿನಲ್ಲಿ ಬಾರೂದಿಗೆ ಬೆಂಕಿ ಹತ್ತಿ ಬೆಂದುಹೋಯಿತು (ರಾಜೇಂದ್ರ. ೦೩೦) ; ಒಂದೆರಡು ಕಡೆ ಪೋಲೀಸು ಠಾಣೆಗಳಿಂದ ಕೋವಿ, ಬಾರೂದುಗಳು ಕಾಣೆಯಾಗಿವೆ (ಗೊಂಡಾರ. ೬). **ಬಾರೂತ್** : ಬಾರೂತ್ ಜನಗಳು, ಎಂದರೆ . . . ಖಾಸಾಬಾರು, ಕಂದಾಚಾರ ವಗೈರೆ ಜನರಿಗೆ ಸೇರಿಸಿಕೊಂಡು ನಿಂತರು (ಚತ್ರಪಾ. ೬೯).

[← ಪಾರ. ಹಿಂ. ಮರಾ. ಬಾರೂದ್, ಬಾರೂತ್]

ಬಾರೆ 'ಬೋರೆ$_2$' ನೋ.

ಬಾರೆತ್ತು (ಕ್ರಿ). ಚರ್ಮವನ್ನು ಕೀಳು; ತೊಗಲನ್ನು ಸುಲಿ : ಬಾರೆತ್ತಿ ಸೀಳೆಯುಂ ಗುಗ್ಗುಳಂಬೊತ್ತಿಸೆಯುಂ ಅಸಗವೊಯಲ್ಪೊಯ್ಯೆಯುಂ (ಅಪಪು. ೦೧-೦೦ ಪ) ; ಮಾದೆಗನಂತೆ ಬಾರೆತ್ತುವರ್ ನಾಯಂತೆ ಕಚ್ಚಿ ತೆಗೆವರ್ (ಧರ್ಮಾಮೃ. ೩-೭೩) ; ಮಡದಿಂ ಹೆಡತಲೆವರಂ ಬಾರೆತ್ತುವುದುಂ ಕೂರಸಿಗಳಿಂದೆತ್ತಿ ಕುತ್ತುವುದುಂ (ಶಾಂತೀಶ್ವ. ೯-೦೦೦ ಪ).

[ಬಾರ್$_2$ + ಎತ್ತು$_1$]

ಬಾರೇಟು (ಕ್ರಿ). ಹೊಡೆತದಿಂದ ಚರ್ಮದ ಮೇಲೆ ಬಾಸುಂಡೆ ಬರು : ತೋರಮುಡಿವಿಡಿದು ಕುಡಿಯಂ ನಾರಂ ಸದೆವಂತೆ ತದೆದು ಬೀಟೆಯ ಕಾಲಿಂ ಬಾರೇಟ್ ಬದಿಯನೊದೆದೊಡೆ ಕೇರು ಪೊರಳ್ವಂತೆ ಕಾಲ ಮೇಲೆ ಪೊರಳ್ದಳ್ (ಯಶೋಚ. ೨-೩೦) ; ಎನಗಿನ್ನಾರಾಸೆಯಾರ್ಕಾವರಾರ್ಶರಣೆಂದಾ ಕಳಕಂಠನಾದೆ ಬಸಿಱಂ ಬಾರೇಟ್ವುನಂ ಮೋದಿದಳ್ (ಅಸಂಪು. ೦೦-೯೬).

[ಬಾರ್$_2$ + ಏಟು$_1$]

ಬಾರ್ಕೋಲು, ಬಾರುಕೋಲು, ಬಾರುಗೋಲು (ನಾ). ಚರ್ಮದ ಹೆಣೆಕೆಯುಳ್ಳ ಚಾವಟಿ : ತುದಿಯಲ್ಲಿ ಚರ್ಮದ ಪಟ್ಟಿಗಳನ್ನು ಹೊಂದಿಸಿದ ಚಾವಟಿ ; ಬಾರುಗುಣಿ (ಉಕ) : ಹೇರು ಕಟ್ಟಾಗ ಬಾರ್ಕೋಲ ನಾ ಮರೆತೆ . . . ನಮ್ಮೆತ್ತು ಮುಂದೆ ಮೂರ್ಹೆಜ್ಜೆ ತೂಯೊಲ್ಲೊ (ಹಳ್ಳಿಪಾ. ೩೩). **ಬಾರುಕೋಲು** : ಬಂಡಿಕಾರಣ್ಣನ ಬಂಡಾಟ ನೋಡಿರೊ. ಬಾರುಕೋಲವನ ಬಲಗೈಲಿ (ಹಳ್ಳಿಯ. ೪೯); ಬಿರುಗಾಳಿ ಮೈದುಂಬಿ, ಆಗಸದ ಮೂಲೆಮೂಲೆಯಲಿ ಸಿಡಿಲು ಮಿಂಚಿನ

ಬಾರುಕೋಲು ಬೀಸಿ (ಸಂಪಟು. ೧೨-೦೯). **ಬಾರುಗೋಲು :** ಬಂಡಿಗಾರ ತನ್ನ ಬಾರುಗೋಲನ್ನು ನಡುಪಟ್ಟಿಯಲ್ಲಿ ಸಿಕ್ಕಿಸುತ್ತ . . . ನುಡಿದನು (ಪುನರು. ೩೬೦). [ಬಾರ್$_2$ + ಕೋಲ್$_1$ (<ಕೋಲ್$_1$)]

ಬಾರ್ಗಿರ್ 'ಬಾರ್ಗೀರ್' ನೋ.

ಬಾರ್ಗೀರ್, ಬಾರಗೀರ, ಬಾರಗೀರು, ಬಾರಾಗೀರ, ಬಾರ್ಗಿರ್ (ನಾ). ಕುದುರೆದಳದ ಸಿಪಾಯಿ : ಅಶ್ವಾರೋಹಿಯೋಧ : 'ಬಾರ್ಗೀರ್‌ಕಛೇರಿ' ಪರಾ. **ಬಾರಗೀರ :** ಹತ್ತು ಮಂದಿ ಸಿಲೇದಾರರೂ ನಾಲ್ವತ್ತು ಮಂದಿ ಬಾರಗೀರರೂ ಅವರನ್ನು ಹಿಂಬಾಲಿಸಿದ್ದರು (ಕಸುಂ. ೧೭). **ಬಾರಗೀರು :** ಅರವತ್ತು ಸಾವಿರ ಕುದುರೆಗಳಿಗೆ ಜೀನು ಹಾಕಿ ಸವಾರರು ಏರಿಕೊಂಡು ಯುದ್ಧಕ್ಕೆ ಹೊರಡಲು ಈ ಕ್ಷಣ ಸಿದ್ಧವಾಗಿದಾರೆ, ಬಾರಗೀರು ಸೇರಿ ಇದಕ್ಕೆ ಎರಡರಷ್ಟು ಫೌಜು ಇದೆ (ಮುಸುಗ. ೧೯). **ಬಾರಾಗೀರ :** ದರ್ಬಾರದಲ್ಲಿ ಬಾದಶಹನು ನಮ್ಮನ್ನು ಒಬ್ಬ ಬಾರಾಗೀರನಂತೆ ಭಾವಿಸಿ, ದೂರ ನಿಂತುಕೊಳ್ಳುವಂತೆ ಸಂಜ್ಞೆ ಮಾಡಿದನು (ಛತ್ರಪ. ೦೧೨). **ಬಾರ್ಗಿರ್ :** ಇಂಗ್ಲಿಷ್ ಕಂಪೆನಿಕ್ಯಾವಲ್ರಿಯ ಪದ್ಧತಿಯಂತೆ ಏರ್ಪಟ್ಟ ೫೦೦ ಮಂದಿ ಸವಾರರು ಕ್ಲೋಸ್‌ಪೇಟೆಯಲ್ಲಿ ಮೊಕ್ಕಾಂ ಮಾಡಿದ್ದರು. ಇವರಿಗೆ ಬಾರ್ಗಿರ್ ಎಂಬ ಹೆಸರು ಕೊಟ್ಟಿತ್ತು (ಮಹಾಪಂ. II. ೧೬). [← ಪಾರ. ಬಾರ್ಗೀರ್ ; ಮರಾ. ಬಾರ್ಗೀರ್, ಬಾರಗೀರ್ ; ಹಿಂ. ಬಾರಗೀರ್]

ಬಾರ್ಗೀರ್‌ಕಛೇರಿ (ನಾ). ಹಳೆಯ ಮೈಸೂರು ಸರಕಾರದ ಅಠಾರಾ ಕಛೇರಿಗಳಲ್ಲಿ ಒಂದು ; ಅಶ್ವದಳದ ಕಚೇರಿ : ಕಛೇರಿಗಳು—೧. ದಿವಾನ್‌ಕಛೇರಿ. . ೪. ಬಾರ್ಗೀರ್‌ಕಛೇರಿ (ಮಹಾಪಂ. II. ೩೬).
[ಬಾರ್ಗೀರ್ + ಕಛೇರಿ (<ಕಚೇರಿ)]

ಬಾರ್ಗೀರಿ, ಬಾರಗಿರಿ (ನಾ). ಕುದುರೆ ದಳದ ಕೆಲಸ ; ಅಶ್ವಾರೋಹಿ ಸೈನಿಕರ ವೃತ್ತಿ : ಅಶ್ವಸೇನೆಯಲ್ಲಿ ಬಾರ್ಗೀರಿಯವರೂ ಸಿಲೇದಾರರೂ ಎಂದು ಎರಡು ಬಗೆಯವರಿದ್ದರು (ಛತ್ರಶಿ. ೦೩೨). **ಬಾರಗಿರಿ :** ಬಾಗಿಲ ಕಂದಾಚಾರದ ಚಾವಡಿ— ಇಲ್ಲಿ ಸವಾರರು, ಬಾರಿನವರು, ಬಾರಗಿರಿಯವರು . . . ಮುಂತಾದವರ ಲೆಕ್ಕವನ್ನು ಬರೆವಂತೆ ಗೊತ್ತುಮಾಡಿದರು (ಮಹಾಪಂ. I. ೦೯೭). [← ಮರಾ. ಬಾರಗಿರೀ]

ಬಾರ್ಗುತ್ತ, ಬಾರಗುತ್ತು, ಬಾರುಗುತ್ತ, ಬಾರುಗುತ್ತು (ನಾ). ಒಂದು ಬಗೆಯ ಜೂಜು ; ಪಣವೊಡ್ಡಿ ಆಡುವ ಒಂದು ಬಗೆಯ ಆಟ : ನೆತ್ತಂ ಚದುರಂಗಂ ಬಾರ್ಗುತ್ತಂ ಕಡದೊಂಟಿ ಗೊಟ್ಟಿ ಜೂದೆಂಬಿವ ನಾಡುತ್ತಮಿರಲಾಗದು (ಸಮಪ. ೬-೪೮). **ಬಾರಗುತ್ತು :** ವಾರನಾರಿಯ ರೊತ್ತೆ . . . ಬಾರಗುತ್ತು ನಿಯೋಗ ಜೂಜಿನ ಧನ ಸುಭಾಷಿತವು ಏಱುಮಾಱು ವಿವಾಹ ರತಿಯುಪಕಾರ ನೆಗಳಿದ ರಾಜಕಾರ್ಯವಿವಾರನಾ ಹದ ತಪ್ಪಿ ತಪ್ಪುಗುಂ (ಜೀವಂಪ. ೪-೬೭); ಧೂಕಾಂತರಾತ್ಮಜರು . . . ತಂ ತಮಗೆ ಬಾರಗುತ್ತಾದಿ ಬಹು ಜೂಜುಗಳನಾಡುತಿಹರು (ಪಪಪೋ. ೨-೧೯). **ಬಾರುಗುತ್ತ :** ಲೆತ್ತ ಪಗಡೆ ರಾಯಬೊಗರಿ ಸೊಲ್ಲೆಹ ಬಾರುಗುತ್ತದೊಪ್ಪಿಯ ಸರಿಬೆಸದಿ ವಿತ್ತನಾಶವ ಮಾಡುವ ಜೂದುಗಾಱರ ಮೊತ್ತವಿರ್ದುದು ಮನೆಮನೆಗೆ (ಪೋಹಕ. ೨೦-೨೫). **ಬಾರುಗುತ್ತು :** ಜೇಯ ಜೂಜಿನ ಬಾರುಗುತ್ತಿದು ನಿಮ್ಮ ಚಿತ್ತಕೆ ಬಹಡೆ ಮಾಡುವೆವು (ಕುಮ್ಮಾಲ. ೯-೬೨); ಹೊಣೆ ಬಾರುಗುತ್ತು ಕಬ್ಬಿನ ಹಣೆದಂ ಪಿರಿದೊತ್ತೆ ಗೊಂಬ ಸೂಳೆಯ ಸಂಗಂ ಕ್ಷಣದೊಳ್ ಕೊಲ್ಲದೆ ಮನುಜನ ತೃಣದಿಂ ಕಡೆ ಮಾಡದಿಹವೆ (ವೀತಿಸಾ. ೨೫೮). [?]

ಬಾರ್ಚು, ಬಾಚು, ಬಾಯ್ಚು, ಬಾಸ್ಚು$_2$ (ಕ್ರಿ). ೧. ಎಳೆದುಕೊಳ್ಳು ; ಸೆಳೆ ; ಗೋರು : ಅಸುವಂ ತೀರ್ಚಿ ಕೆಲವರ ಮಹಾ ಡ್ರೂಂಕಾರದಿಂದಂ ತಳರ್ಚಿ ಕೆಲವರನೊಡನೆ ವಾಲಾಗ್ರದಿಂದಿರದೆ ಬಾರ್ಚಿ ಕೆಲಬರನಿಂತು ಪುಂಗವಂ ಭಂಗವಂ ಮಾಡುತೈತರುತಿರ್ದೆನು (ಕಪಿಪು. ೧೯-೦೯). ೨. ಉತ್ಕಟವಾದ ಬಯಕೆಯಿಂದ ತಬ್ಬಿ ಹಿಡಿ,— ಬಾಚಿ ಹಿಡಿ ; ಸೆಳೆದಪ್ಪಿಕೊಳ್ಳು : ಪೆರ್ಚುವೆತ್ತಪರಂಜಗಳಶವನಷ್ಟವಿಧಾರ್ಚನೆಯಿಂದ ಸತ್ಕರಿಸಿ ಬಾರ್ಚಿ ಕೈವಿಡಿದನು ಮಾಂದಳಿರಿಗೆ ಪಣ್ಣ ಸಾರ್ಚಿದಂತೊಪ್ಪಿತಾ ಭಾವ (ಭರತ. ೦೬-೬೫). ೩. ಒಟ್ಟುಗೂಡಿಸು ; ರಾಶಿಮಾಡು : "ಬಾರ್ಚು—ಪುಂಜೀಕರಣೇ (ರಾಶಿ ಮಾಡು)" (ಕಮರಾ). ೪. ತಲೆಗೂದಲನ್ನು ಹಣೆಗೆಯಿಂದ ಹಿಕ್ಕು,— ಸಿಕ್ಕು ಬಿಡಿಸಿ ಓರಣಗೊಳಿಸು : ಪಸರಿಸಿ ಪಂದಲೆಯಂ ಮೆಟ್ಟಿಸಿ ವೈರಿಯ ಪಲ್ಲ ಪಣೆಗೆಯಿಂ ಬಾರ್ಚಿ ಪೊದಟ್ಟೊಸಗೆಯಿನವನ ಕರುಳ್ಗಳೆ ಪೊಸವಾಸಿಗ ಮಾಗೆ ಕೃಷ್ಣೆಯಂ ಮುಡಿಯಿಸಿದಂ (ಪಂಪಭಾ. ೦೨-೦೫೫); ಮದಿರಾರಸದಿಂದಂ ಬಾರ್ಚಿದರೋ ಪೇಟಿಸಿಸಿ ಪೊಳೆವ ತಲೆದುಡಿಗೆಯ ರನ್ನದಿನೊಸರ್ವ ರಾಗ ರುಚಿಯಂ ಪುದಿದೆಸೆದುದು ಕೇಶಪಾಶಮಾ ಕಾಮಿನಿಯಾ (ಕಾದಂಕಾ. ೨೦). **ಬಾಚು :** ೧. ಸಪ್ತಕುಲಪರ್ವತಂಗಳನೋರ್ವೆ ಬಾಚಿಯಂಗೈಯೊಳಾಂತು ಓರಂತೆ ತಿರಿಕಲ್ಲನಾಡುತ . . . ಗಹಗಹಿಸುವಂ ಬಾಲಲೀಲೆಯ ಕುಮಾರಂ (ವೀಕೈಪು. ೩-೨೦-೪೯) ; ನಿದ್ರಾಂಗನೆ ಕರುಣೆ ತೋರಿ ಆಕೆಯನ್ನು ಬಾಚಿ ತಬ್ಬಿದಳು (ಕೂಸಭೇ. ೨೦೦) ; ಜಗದ ಒಲವನೆಲ್ಲ ಬಾಚಿ ಜ್ವಲಿಸುವಳೀ ಜರ್ಬರಾ ! (ಅನಿಕೇ. ೦೬-೩). ೨. ನಯದೊಳ್ಪನೇ ಬಳಸಿ ಕೈಬಾಚಿ ಬಾಚಿದಿರಿ ಬಳಿಗೆ (ಅಮತಂ. ೨೨-೦೯). ೪. ಕಲಿಭೀಮ ಮಾಡಿದ ರಹವನದನೇ ನೆಂಬೆನೈ ಕೂರಿಹ ಕಠಾರಿಯ ಹಣೆಗೆಯಲಿ ಬಾಚಿದನು ಸಿರಿಮುಡಿಯ (ಕುಮ್ಮಾಲ ೨೨-೪೦). ೫. ಕಿತ್ತುಕೊಳ್ಳು ; ದೋಚು : ಭಟನು ನಾನಿರಲುಭಯರಾಯರ ಕಟಕದೊಳಗಿನ್ನಾವನೆಂದುಬ್ಬಟೆಯ ನುಡಿಗಳ ನುಡಿದು ಬಾಚಿದೆ ಕೌರವನ ಧನವ (ಕುಮ್ಮಾವಿ. ೯-೦೯) ; ತುಡುಗುಣಿಗಳವದಿರು . . . ಹವಿಗೊಂಬಮರನಿಕರದ ಹೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ (ಕೊರರಾ. ೦-೦೦-೮); ನಾನಾ ಪರಿಯಲರಮನೆಯ ರೊಕ್ಕವಂ ತಿಂದು ಹೊಳ್ಳಿಸಿ ಬಾಚಿ ದಕ್ಷಿಣೆಯ ನೆವದೊಳಗೆ (ತುರಂಗ. ೩೭-೦೯). ೬. ಒಟ್ಟುಗೂಡು ; ಗುಂಪಾಗು : ಈ ಚತುರ್ದಶ ಭುವನಜೀವರ ಸ್ವೋಚಿತವ್ರತಪುಣ್ಯವೆಲ್ಲವು ಬಾಚಿ ಪುಟ್ಟಿತು ಕಾಮಧೇನುವಿನಂಗಮಧ್ಯದಲಿ (ಸಂಭಪ. ೩-೨೮) ; ಕಡಲೆಡೆಯೊಳಿರ್ದ ವಿಃಗಿಲಾಣಿಮುತ್ತುಗಳ್ ಬಾಚಿ ಬರಲುರ್ವರೆಗೆ ಮಗುಳೊಗುವ ಬಗೆಯೊ . . . ಎನೆ ಬೆಳ್ಸರಿ ಶರತ್ಸಮಯದೊಳ್ ಮೆಱೆದವು (ಸಂಧಿಮಾ. ೨೨-೫೬). **ಬಾಯ್ಚು :** ೪. ಮಾನಿನಿಯರುಂ ಪೊಸೆದು ತಲೆಗರೆದು . . . ಬಾಯ್ಚು ಬೈತಲೆಯ ತೆಗೆದು (ಪಪಪೋ. ೯-೮). **ಬಾಸ್ಚು$_2$:** ೨. ಪ್ರಿಯದಿಂ ಬಾಸಿ ಪಿಡಿದೈತಂದು ಕುಳಿತರು ತುಪ್ಪುಳಾಸನದಿ (ಜಿರಾಮಾ. ೨೦೬-೩೬).
[ಬಾರ್$_1$ + — ಚ್ಚು$_1$./ತುಳು. ಬರ್ಚು, ಬಾಚು]

ಬಾರ್ಣಾಸಿ 'ಬಾರಣಾಸಿ' ನೋ.

ಬಾರ್ತೆ 'ಬಾಟ್ತೆ' ನೋ.

ಬಾರ್ತೆಗಿಡು 'ಬಾರ್ತೆಗೆಡು' ನೋ.

ಬಾರ್ತೆಗೆಡು, ಬಾತೆಗೆಡು, ಬಾರ್ತೆಗಿಡು (ಕ್ರಿ). ಅವಮಾನ ಹೊಂದು ; ಹೀಯಾಳಿಕೆಗೊಳಗಾಗು : ಕೊಳದೊಳಗೆ ಪೊಕ್ಕು ಮೆಯ್ಗರೆದೈ ಚಿಃ ಖಲ್ಯನೆನೆ ಬಾರ್ತೆಗೆಟ್ಟುವಮೂಲ್ಯಯಶೋರತ್ನಮೆಂಬುದಂ ಮಾಡುವೆನೇ (ಗಣಾಯು. ೭-೨೯) ; ದಾನವರುಪಟಳಕೆ ಬಣ್ಣಂಗುಂದಿ ಬಾರ್ತೆಗೆಟ್ಟು ದೂಱಿದ ಬರ್ದಿಲರ್ಗೆ ನಾರಾಯಣಂ . . . ಪಡಿನುಡಿದಂ (ರಾಮಾಶ್ವ. ೦೯-೬). **ಬಾತೆಗೆಡು :** ಯಾಗದಗ್ರದೊಳ್ ಬಾತೆಗೆಟ್ಟಳನು ಪಟ್ಟಿರಿಸಿ (ಐಕೋಪು. ೯-೭೫). **ಬಾರ್ತೆಗಿಡು :** ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇರ್ಪಡುಗಿಡೆ ಸತ್ಯಶೌಚಗುಣಸಂಪದವೇಳಿದನಾದಂ (ಪಂಠಾಮಾ. ೯-೬೫). [ಬಾರ್ತೆ (<ಬಾಟ್ತೆ) + ಕೆಡು$_1$]

ಬಾರ್ತೆಗೆಯ್ 'ಬಾಟ್ತೆಗೆಯ್' ನೋ.

ಬಾರ್ಪು 'ಬಾಪ್ಪು' ನೋ.

ಬಾರ್ಲಿ (ನಾ). ಒಂದು ಬಗೆಯ ಧಾನ್ಯ : ಕ್ರಿ.ಪೂ. ೫೦೦೦ರಲ್ಲಿ ಈಜಿಪ್ಟಿನಲ್ಲಿ ಗೋಧಿಯನ್ನೂ ಬಾರ್ಲಿಯನ್ನೂ ಬೆಳೆಯುತ್ತಿದ್ದರು (ಶಿಲ್ಪನಾ. ೪೬೯) ; ಬಾರ್ಲಿ . . . ಇದನ್ನು ಜವೆಗೋದಿ ಎಂದು ಕರೆವುದುಂಟು (ಕವಿಕೋ. XII, ೫೯). [←ಇಂ. Barley]

ಬಾರ್ಸಿಪಾಯಿ, ಬಾರುಸಿಪಾಯಿ (ನಾ). ತುಪಾಕಿಯನ್ನು ಹಿಡಿದು ಕಾಲ್ನಡಿಗೆಯಿಂದ ಸಾಗುವ ಪದಾತಿ : "ಪದಾತಿಃ, ಪತ್ತಿಃ . . . ಪದಿಕಃ — ೭ ಕಾಲುನಡೆಯ ಭಟರ ಹೆಸರುಗಳು, ಬಾರ್‌ಸಿಪಾಯಿಗಳು" (ಸಿದ್ಧಾಂತಿ. ೨೫೬). **ಬಾರುಸಿಪಾಯಿ** : ದಳವಾಯಿ ನಂಜರಾಜಅರಸಿನವರ ಅಧಿಕಾರದಲ್ಲಿ ಬಾರುಸಿಪಾಯಿಗಳು ೧,೦೦೦ ಮಂದಿ ಮಾತ್ರ ಪಾಯಮ್ಮಾಗಿದ್ದರು (ಮಹಾವಂ. II, ೦೮). [ಬಾರ್$_3$ + ಸಿಪಾಯಿ]

ಬಾರ್ಹತ (ನಾ). ಹೆಗ್ಗುಳ್ಳದ ಕಾಯಿ ; ಬೃಹತೀಫಲ : "ಅಶ್ವತ್ಥಂ, ವೈಣವಂ, ಪ್ಲಾಕ್ಷಂ, ನೈಯಗ್ರೋಧಂ, ಐಂಗುದಂ, ಬಾರ್ಹತಂ . . . ಕ್ರಮವಾಗಿ ಅಶ್ವತ್ಥಾದಿ ವೃಕ್ಷಗಳ ಫಲಗಳಿಗೆ ಹೆಸರುಗಳು" (ಸಿದ್ಧಾಂತಿ. ೧೦೫). [ಸಂ.]

ಬಾರ್ಹಸ್ಪತ್ಯ (ಗು). ೧. ಬೃಹಸ್ಪತಿಗೆ ಸಂಬಂಧಿಸಿದ. (ನಾ). ೨. ಬೃಹಸ್ಪತಿಯಿಂದ ರಚಿತವಾದ ಶಾಸ್ತ್ರ. ೩. ಬೃಹಸ್ಪತಿಯ ಅನುಯಾಯಿ. ೪. ಕಾಲವನ್ನು ಅಳೆಯುವ ಒಂದು ಬಗೆಯ ಲೆಕ್ಕಾಚಾರ : ಆ ಸಂವತ್ಸರವೇ ಸೌರ ಚಾಂದ್ರ ಬಾರ್ಹಸ್ಪತ್ಯ ನಾಕ್ಷತ್ರ ಸಾವನಭೇದದಿಂದೈದು ತೆಱನಾಗಿರ್ಪುದು (ವಿವೇಕ. ೩೨೦); ಪರಿ ಇಡಾ ವತ್ಸರನು . . . ಬಾರ್ಹಸ್ಪತ್ಯ ಸೌರಭ ಚಾಂದ್ರಮನುಯೆನಿಸಿ ಇರುತಿಹ (ಹಸಾರ. ೫-೪೦). ೫. ಅಗ್ನಿ. ೬. [ಜ್ಯೋತಿ] ಒಂದು ನಕ್ಷತ್ರದ ಹೆಸರು ; ಪುಷ್ಯನಕ್ಷತ್ರ. [ಸಂ.]

ಬಾಲ$_1$, ಬಾಳ$_4$ (ನಾ). ೧. ಪ್ರಾಣಿಗಳ ಹಿಂಭಾಗದಲ್ಲಿ ಗುಹ್ಯಾಂಗವನ್ನು ಮುಚ್ಚುವಂತಿರುವ ಹಾಗು ಅಲಂಗಾಡಿಸಬಲ್ಲ ಉದ್ದವಾದ ಚಾವಟಿಯಂತಹ ಅಂಗ ; ಲಾಂಗೂಲ ; ಪುಚ್ಛ : "ವಾಳಧಿಯು ಲಾಂಗೂಲ ಮೆನೆ ಬಾಲವೆಸರಕ್ಕು" (ಮಂಗರಾ. ೬೧-೦೩) ; ತೆಗೆದೆಚ್ಚರ್ಜುನನಂಬು ಶೀವೆ ತುದಿಯಿಂ ಬಾಲಂಬರಂ . . . ಕೊಂಡುದು (ಪಂಪಭಾ. ೬-೧೬) ; ನಾಯ ಬಾಲಮಂ ಕಾಸಿ ತಿರ್ದಿದೊಡಂ ಕೊಂಕು ಮಾಣದಹಗೆ (ಪಂಪಸಂ. ೧೦೫-೨) ; ಹೊನ್ನ ಹುಳವ ಕಂಡು ನರಿ ತನ್ನ ಬಾಲವ ಹುಣ್ಣುಮಾಡಿಕೊಂಡರೆ ಹೋಲಬಹುದೆ (ಬಸವ. ೨೬೬). ೨. ಕೂದಲು. **ಬಾಳ$_4$**: ೧. ವಾಲ—ಬಾಳ (ಶಮದ. ೨೪೮ ಪ್ರಯೋ).

ಬಾಲ ಅಲ್ಲಾಡಿಸು = ೧. ಬಾಲವನ್ನು ಅಲುಗಾಡಿಸು : ಅವನನ್ನು ಕಂಡ ಕೂಡಲೇ ಆ ನಾಯಿಯು ಬಾಲ ಅಲ್ಲಾಡಿಸುತ್ತಾ ಅವನ ಬಳಿಗೆ ಬಂದು (ಮುಂಬಯಿ. ೪-೦೦೭). ೨. (ಆಲಂ) ಇನ್ನೊಬ್ಬ ವ್ಯಕ್ತಿಯು ಹೇಳಿದುದಕ್ಕೆಲ್ಲ ಒಪ್ಪಿಗೆ ನೀಡು : ಮುಂದಾಳುಗಳ ಎದುರಿನಲ್ಲಿ ಬಾಲ ಅಲ್ಲಾಡಿಸುತ್ತಿರುವುದೆ ಅವನ ಕಸುಬಿನ ಗುಟ್ಟು (ರೂಢಿ). **ಬಾಲಕೊಳ್ಳಿ**= (ಹನುಮಂತನನ್ನು ನೆನಪಿಸುವ) ಒಂದು ಬಿರುದು : ಪಟಹನುರುವ ಬಾಲಕೊಳ್ಳಿ ಚಬುಕು ಜೇಗಟೆ ಚೋಹ ಜಗಜಾಪು ಚೆಂಡು ನಿಟಿಲದ ನೇತ್ರದ ಬಲುಬಿರುದಿನ ಬಲುಭಟರಲ್ಲದಿಲ್ಲವವನಿಗೆ (ರಾಮವಿ. ೦೪-೪೨). **ಬಾಲ ಬಡಿ**= ಅನುಗ್ರಹ ಸಂಪಾದನೆಗಾಗಿ ಅನುನಯದಿಂದ ವರ್ತಿಸು. —ಅನುಚರನಂತೆ ನಡೆ : ದೈವವಶದಿಂದ ಒಂದು ವೇಳೆ ಕಾಲೀಪದನು ತನ್ನ ವಶವರ್ತಿಯಾಗಿ ಬಾಲ ಬಡಿಯುತ್ತ ಬಂದಿದ್ದರೆ ಇಂದು ಶೈಲೇಂದ್ರನ ಲಜ್ಜೆಗೆ ಸೀಮೆಯೇ ಇರುತ್ತಿರಲಿಲ್ಲ (ಇಷ್ಟಕ. ೩೬೬). **ಬಾಲಬಡುಕ** = (ಆಲಂ) ಅನುಚರ ; ಹಿಂಬಾಲಕ; ಅನುಯಾಯಿ : ಆಂಗ್ಲೇಯ ಬಾಲಬಡುಕ ರಂತಿದ್ದ ರಂಗನಾಥ, ನಾಗೇಂದ್ರ . . . ಮುಂತಾದವರು ಸ್ವರಾಜ್ಯ ಬಂದ ನಂತರ . . . ಶುದ್ಧ ಖಾದಿಧಾರಿಗಳಾದರು (ಪಂಜಪಂ. ೯೫). **ಬಾಲ ಬಿಚ್ಚು** = (ಆಲಂ) ಚೇಷ್ಟೆ ಮಾಡು; ಕಿತಾಪತಿ ಮಾಡು : ಇವ ಬಾಲಾ ಬಿಚ್ಚಿದರ ಸಾಕು, ಕೊಯ್ದು ಒಗೀತೀವಿ (ಮಣ್ಣುಹ. ೬೪). **ಬಾಲ ಮಡಿಚು** = (ಆಲಂ) ಸೋತುಹೋಗು ; ಸುಮ್ಮನಾಗು : ನಾವು ಹೆಂಗಸರೇ ಇದ್ದುದಾದರೂ ಗೋವಿಂದಯ್ಯ ಬಾಲ ಮಡಿಚಿ ಹೋಗಲಿಲ್ಲವೇ ? (ತ್ಯಾಗಮ. ೦೬೦). **ಬಾಲಸುಡುಕ** = ಬಾಲವನ್ನು ಸುಡಿಸಿಕೊಂಡವನು ; ಹನುಮಂತ : ಹೇಳಲೇನದನವನ ವಿಧಿಯನು ಕೇಳಿತಿಲ್ಲವಲಾ ಕಪೀಂದ್ರನ ಪಾಳೆಯವ ಹೊಗಗೊಡದೆ ಕಪಿಪೋತಂಗಳು ಬ್ಬಿಱಿದು ಬಾಲಸುಡುಕನ ತೆವರಲಾ ಕಪಿಯೂಳಿಗವು ನಮಗಾಯ್ತು (ತೊರರಾ. ೬-೧೦-೩೯). **ಬಾಲ ಹಿಡಿ** = ಹಿಂಬಾಲಿಸು ; ಅನುಸರಿಸು : ಸುಮ್ಮನೆ ಕಣ್ಣು ಮುಚ್ಚಿಕೊಂಡು ದುರ್ಯೋಧನನ ಬಾಲ ಹಿಡಿದು ಹೋಗುತ್ತ ಪಾಂಡವರನ್ನು ಸದಾ ದ್ವೇಷಿಸುತ್ತಿರುವ ಈ ಕರ್ಣನೊಬ್ಬನೆ ನನ್ನ ಎದೆಗಿಚ್ಚಾಗಿದ್ದಾನೆ (ಪಸಭಾ. ೨೬೦) ; ಗೆದ್ದ ಎತ್ತಿನ ಬಾಲ ಹಿಡಿ (ಗಾರ). ☞ ಈ ಉಲ್ಲೇಖದಲ್ಲಿ ಸೂಚಿಸಿರುವ ಎರಡು ಅರ್ಥಗಳೂ ಸಂಸ್ಕೃತಕೋಶಗಳಲ್ಲಿ 'ಬಾಲ' ಉಲ್ಲೇಖಕ್ಕೆ ಇರುವುದಾದರೂ ಇದು 'ವಾಲ' ಎಂಬುದರ ತದ್ಭವವೆಂದು ಪರಿಗಣಿಸಿದೆ.

[<ಸಂ. ವಾಲ]

ಬಾಲ$_2$, ಬಾಳ$_5$ (ಗು). ೧. ಬಲಿಯದ ; ಎಳಸಾದ : ಬಾಲ ಮೃಣಾಳಮಂ ಪಿಡಿದು ಕೀಟ್ವವೊಲಶ್ರಮದಿಂ ಮನೋಭವವ್ಯಾಲಗಜೇಂದ್ರ ದಂತಯುಗಳಂಗಳನೇಕೆಯೊ ಕಿಟ್ಟಂ (ಪಂರಾಮಾ. ೬-೩೦). ೨. ಚಿಕ್ಕ ವಯಸ್ಸಿನ; ಎಳೆಯ: ಬಾಲಜಾಯಿಲನಿಂದ ವೇದವನೋಳಿಯಿಂದೋದಿಸನೆ ಹಾವಿನ ಹಾಳ ಕಲಿದೇವಂ (ಬಸವು. ೫೫-೫೩) ; ಬಾರಯ್ಯ ನಮ್ಮ ಮನೆಗೆ ಬಾಲಗೋಪಾಲ (ಪುರಂದ. ೫-೦೦೫ ಅನುಪಲ್ಲವಿ). ೩. ಅದೇ ಉದಯವಾಗಿ (ಸೂರ್ಯ ಅಥವಾ ಚಂದ್ರನಂತೆ) ಬೆಳೆಯುತ್ತಿರುವ ; ಏರುತ್ತಿರುವ. ೪. ಬಾಲಿಶವಾದ ; ಹುಡುಗಾಟಿಕೆಯ ; ಮಕ್ಕಳಾಟಿಕೆಯ. ೫. ದಡ್ಡತನದ ; ತಿಳಿಗೇಡಿಯಾದ. (ನಾ). ೬. ಬಲಿಯದುದು ; ಎಳಸಾದುದು : ಮೂಲಕಂ ಬಾಲಂ ದೋಷಹರಮಬಾಲಂ ದೋಷಕರಂ (ಶಾಂತಿಪು. ೬-೦೨೬ ವ). ೭. ಮಗು ; ಶಿಶು : ಆತನುಂ ಬಾಲನಾಕಾಂಕ್ಷೆ ಗಚ್ಚರಿವಡುತೆ ಮೌನಮಿರೆ (ಶ್ರೀರಾಮಾ. ೨೦-೫೩೯). ೮. ಹುಡುಗ ; ಬಾಲಕ: "ಬಾಲಃ, ಬಾಲಕಃ—ಈ ೨ ಹುಡುಗಂ" (ಕಾಶಕ್ಕ. ೦೪೭); ನಾನುಂಡು ಇದ್ದದ್ದು ಬಾಲರಿಗುಣಲಿಕ್ಕೆ ಮೇಲಿಟ್ಟು ಮುಚ್ಚಿಡೋ ಎನ್ನ ಗುಡ (ಪುರಂದ. ೩-೧೬೭-೬). ೯. ಪ್ರಾಣಿಗಳ ಮರಿ ; ಪೋತ. ೧೦. ದಡ್ಡ ; ಮೂರ್ಖ. **ಬಾಳ$_5$** : ೧. ಮುತ್ತಿನ ಸೂಸಕಂಗಳಂ ಬಾಳಮೃಣಾಳಮೆಂದೆ ಕರ್ದುಕಲ್ಬಗೆಗುಂ ಕಳಹಂಸಪೋತಕಂ (ಮಲ್ಲಿಪು. ೨-೭೭). ೭. "ಬಾಳಃ, ಪಾಕಃ, ಅರ್ಭಕಃ . . . ಡಿಂಬಃ — ಈ ೯ ಮಗವು" (ಹಲಾಯು. ೮೩-೩೪೮) ; ಬಾಳನ ನಾನಾಪುಟದೊಳ್ ಮೇಳಿಸೆ ದುಗ್ಧೋದಬಿಂದುಸಂದೋಹಂಗಳ್ ಲೀಳೆಯಿನಾಂತುಸಿರ್ದೊಡೆ ಕಡುಗಾಳಿಯ ತಱಗೆಲೆಗಳಂತೆ ಪಾಱುದ ರಮರರ್ (ಅಜಪು. ೪-೬೫). ೮. ಬಾಳಂ ನಿಜಾನುಜಂ ರಣಲೋಳಂ ಸಲೆ ದ್ರುಪದನೆನ್ನದರ್ಜುನನು ತತ್ಕಾಳಸುತನಟ್ಟಿ ಪೋಗಿ ವಿಶಾಳಬಳಂ ಕಾದಿ ಕಟ್ಟಿತಂದೊಪ್ಪಿಸಿದಂ (ಪೇಮಿಪು. ೯-೩೦). ೧೦. "ವೈಧೇಯಃ, ಬಾಲಿಶಃ, ಬಾಲಃ, ಜಡಃ . . . ಮಾತೃಶಾಸಿತಃ — ಈ ೧೧ ಅಱಿಯದವಂ" (ಹಲಾಯು. ೫೬-೦೮೦). [ಸಂ.]

ಬಾಲಂಗಚ್ಚೆ 'ಬಾಲಗಚ್ಚೆ' ನೋ.

ಬಾಲಂಗೋಚಿ, ಬಾಲಂಗೋಸಿ (ನಾ). ೧. ಗಾಳಿಪಟದ ತಳಕ್ಕೆ ಕಟ್ಟುವ ಉದ್ದವಾದ ಪಟ್ಟಿ ; ಬಾಲಂಗಚ್ಚೆ : ಗಾಳಿಪಟ ಮೇಲೇರಲು ಬಾಲಂಗೋಚಿ ಅಗತ್ಯ (ರೂಢಿ). ೨. ಉದ್ದವಾದ ಪಟ್ಟಿ ; ದೀರ್ಘವಾದ

ಯಾದಿ : ಉದಾಹರಣೆಗಳ ಬಾಲಂಗೋಚಿ ಬೆಳೆಯುತ್ತಲೇ ಹೋಗುತ್ತಿತ್ತು (ಸಾಹೇಬ್. ೪೦೯). **ಬಾಲಂಗೋಸಿ** : ೧. ಬಣ್ಣದ ಕಾಗದ ಬೇಕು . . . ಬಿದಿರಿನ ಕಡ್ಡಿಗಳು. ಒಂದು ಸಣ್ಣ ಬಾಲಂಗೋಸಿ ಮತ್ತು ಅಂಟು ಬೇಕು (ಕಪಪು. ೨-೨೦). [ಬಾಲ$_1$ + ಗೋಚಿ]

ಬಾಲಂಗೋಸಿ 'ಬಾಲಂಗೋಚಿ' ನೋ.

ಬಾಲಂತಿತನ 'ಬಾಣಂತಿತನ' ನೋ.

ಬಾಲಕ, ಬಾಳಕ$_3$ (ಗು). ೧. ಎಳೆಯ ವಯಸ್ಸಿನ ; ಶೈಶವಾವಸ್ಥೆಯ: ಚಿಕ್ಕಂದಿನ : 'ಬಾಲಕತನ' ಪರಾ. (ನಾ). ೨. ಮಗು ; ಶಿಶು : "ಶಿಶು ಪೋತ ಬಾಲಕ ಶಾಬ ಡಿಂಬಮರ್ಭಕ ಪಾಕಮೆನೆ ಪಡೆದ ಕೂಸೆನಿಕ್ಕು" (ಮಂಗರಾ. ೯೧-೮) ; ಬಾಲಕನಮೃತಮೆ ಕೆಯ್ಯುಂ ಕಾಲುಂ ಬಳೆವಂತೆ ಮಧುರಗಂಭೀರಂ . . . ಎನಿಸಿದಂ ಕಿಱಿಯಂದುಂ (ಶಾಂತಿಪು. ೬-೦೦೬) ; ಬಾಲಕರಿಲ್ಲದ ಬಾಲಿದ್ಯಾತರ ಜನ್ಮ ಬಾಡೀಗಿ ಎತ್ತು ದುಡಿದಂಗ (ಗರತಿ. ೧೦೬). ೩. ಹುಡುಗ ; ಕುಮಾರ : ಕಾಳೆಗದೊಳಂಗೈಸಲಮ್ಮದೆ ಬಾಲಕನ ನೂಕಿದಿರಲಾ ನಿಮ್ಮಾಳುತನವನು ತೋಱಿದಿರಲಾ (ಕುಮ್ಮಾರ್ಪ್ರೋ. ೬-೨೯). ೪. ಮೂರ್ಖ; ತಿಳಿಗೇಡಿ. **ಬಾಳಕ$_3$** : ೨. ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬಱಿದೆ ಕಳೆದೆಂ (ವಡ್ಡಾರಾ. ೨೬-೨೯); ಪುಂಡರೀಕನೆಂಬ ಬಾಳಕನಂ ಸಂತಾನಪಾಲನಾರ್ಥಂ ನಿಱಿಸಿ (ಅಂಪು. ೯-೬೦ ವ). [ಸಂ.]

ಬಾಲಕತನ (ನಾ). ಚಿಕ್ಕಂದು; ಬಾಲ್ಯ : ಬಾಲಕತನದಲ್ಲಿ . . . ಕಾಳಿಯ ಮಡುವ ಕಲಕಿದ ಕಾರಣ ಕಾಲು ನೊಂದಿತೆ ನಿನಗೆ ರಂಗಯ್ಯ (ಪುರಂದ. ೩-೦೦-೩). [ಬಾಲಕ + —ತನ]

ಬಾಲಕಾಲ, ಬಾಳಕಾಲ (ನಾ). ಚಿಕ್ಕಂದು; ಬಾಲ್ಯಾವಸ್ಥೆ : ಮೃಗ ಶೃಂಗನೆಂಬೊಂ ತಾಪಸಕುಮಾರನಾತಂ ಬಾಲಕಾಲಪರಿಗೃಹೀತತಾಪಸಾಚರಣಂ (ಶಾಂತಿಪು. ೬-೯೩ ವ). **ಬಾಳಕಾಲ** : ಮದದಂತಿದಂತದೊಳೆ ಕಟ್ಟಿದ ತೊಟ್ಟಿಲಂ ನಯದಿಂದಮೇಱಿ[ಸೆ] ಬಾಳ[ಪಾಶಾಂ. ಬ್ವ]ಕಾಲದೊಳ್ ತೊಟ್ಟಿಲಿಗಂ ಗಜಪ್ರಿಯನಪ್ಪುದಂ ಸಲೆ ತೋಱಿದಂ (ಪಂಪಭಾ. ೧-೯೩) ; ನಡೆದುದು ಬಾಳ[ಪಾಶಾಂ. ಬ್ವ]ಕಾಲದೊಳೆ ತೊಟ್ಟೆನಗಂಕದ ಶೌಚವೀಗಳೋಗಡಿಪುದೆ (ಪಂಪಭಾ. ೦೦-೯೭). [ಸಂ.]

ಬಾಲಕಿ, ಬಾಳಕಿ (ನಾ). ೧. ಹುಡುಗಿ; ಕನ್ನೆ : ಕೈಯ ಬಟ್ಟಲ ಹಾಲಿಗಂ ತಾಂ ಕೈಯ ನೀಡುತ್ತೀಂಟೆ ಬಾಲಕಿ ಅಯ್ಯನಂ ಬಿಟ್ಟೊದಱಲು (ಬಸಪು. ೦೪-೩೨). ೨. ತರುಣಿ ; ಯುವತಿ : ಗರ್ಭಂ ಬಳೆಯದ ಬಾಲಕಿಯ ಬಸಿಱನರ್ಥಕಮಲ್ತೇ (ಮಲ್ಲಿಪು. ೩-೧೦೦); ಬಾಲಕಿಯಲರ್ಗಣ್ಗಳ್ ಸಂಲಾಲಿತ ಲಾವಣ್ಯರಸಮಯಾಬ್ಜಾಕರದೊಳ್ ಬಾಳೆಯ ಮೀಂಗಳ ತೆಱದಿಂ ಲೀಲೆಯೊಳಂ ಪೊಳೆದು ತಳೆದವತಿಚಪಳತೆಯಂ (ಬಾರಪು. ೨-೩೦); ನಿಶಾಚರಿಯರಲ್ಲವೇ ನರಕಾಸುರನ ಮನೆಯ ಬಾಲಕಿಯರು (ಶೈಮಿಭಾ. ೨-೩೯). **ಬಾಳಕಿ** : ೨. ಬಾಳಕಿಗಳಿನಿಚಯಾಳಂ ಬಾಳಕಿಗಾ ರೋಮರಾಜಿ ರಂಜಿಸುತಿರ್ಕುಂ ನೀಳದ ಕಾಂಚೀಮಧ್ಯದ ನೀಳದ ನೆಗೆದುನ್ಮುಖ ಪ್ರಭಾರೇಖೆಯ ವೋಲ್ (ಜಗದಿ. ೦೦-೨೯); ಉಡೆ ಬಾಳಕಿಯರ ಪಱಿಕೈ ದುಡುಕಿಂದಂ ಪಱಿದ ಮುಂಜಿ . . . ಬದ್ದೆಯರುಡಿಸಿದೊಡುಡಕಲ್ತ ಕೊವರನಭಿನವಮದನಂ (ಅನಂಪು. ೦-೩೬). [ಬಾಲಕ + —ಇ$_2$]

ಬಾಲಕೇಲಿ, ಬಾಲಕೇಳಿ, ಬಾಳಕೇಳಿ (ನಾ). ೧. ಮಗುವಿನ ಆಟ; ಬಾಲಲೀಲೆ ; ಮಕ್ಕಳಾಟ : (ಕಿ). **ಬಾಲಕೇಳಿ** : ೧. ದಾರಕರೂಪದೆ ಜಿನವೃಂದಾರಕನೊಡನೊಡನೆ ಬಾಲಕೇಳಿಗಳಂ ವೃಂದಾರಕರೆ ಮಾಡಿ ದುರಿತವಿದಾರಕನ ಮನಕ್ಕೆ ಮಾಡಿದರ್ ಸಂತಸಮಂ (ಅಜಿಪು. ೩-೬೨); ಎನಿತೊಳವು ಬಾಲಕೇಳಿಗಳನಿತಱೊಳಂ ಮುದ್ದುವಡೆದು ಮನೆಯಂಗಣದೊಳ್ ಮನಮೊಸೆದಾಡುವ ಮಕ್ಕಳ ವಿನೋದಮಂ ಕಾಣ್ಬ ದಿವಸಮೆಂದಾದಪುದೋ (ಸುಕುಮಾ. ೯-೦೦೦). ೨. ಮೂರ್ಖತನದ ನಡವಳಿಕೆ : ನೆಱೆ ಕೇಳಿದೈ ಕೌರವನ ಕದನದ ಬಾಲಕೇಳಿಗಳ (ಕುಮ್ಮಾರ್ಪ್ರೋ. ೦-೦). **ಬಾಳಕೇಳಿ** : ೧. ಚೆಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ (ಪಂಪಭಾ. ೨-೯); ಸುತ ನಿನ್ನ ಬಾಳಕೇಳಿಯನತಿಮುದದಿಂ ನೋಡಿ ಹರ್ಷಮಂ ತಳೆಯಲ್ ಸಂಸ್ತುತ ನೋಂತೆನಿಲ್ಲೆನಲ್ (ನೇಮಿಪು. ೬-೦೯೦). [ಸಂ.]

ಬಾಲಕೇಳಿ 'ಬಾಲಕೇಲಿ' ನೋ.

ಬಾಲಕ್ಕಿ (ನಾ). ಉದ್ದವಾದ ಪುಚ್ಛವಿರುವ ಒಂದು ಬಗೆಯ ಪಕ್ಷಿ : ಹಾರುತ್ತಿರುವ ಬಾಲಕ್ಕಿಗಳಿಂದ ಬಾನೆಲ್ಲ ಸುಗ್ಗಿಯ ಸ್ವರ್ಗದಂತೆ ಕಾಣಿಸುತ್ತಿದೆ (ಗಿರಿಬಾ. ೩). [ಬಾಲ$_1$ + <ಪಕ್ಕಿ]

ಬಾಲಕ್ರೀಡೆ, ಬಾಳಕ್ರೀಡೆ (ನಾ). = ಬಾಲಕೇಲಿ ೧ : ಬಾಲಕ್ರೀಡೆಯೆ ಪೂತನಾ ಬಕಮುಖವ್ಯಾಪಾದನಂ (ವಸ್ತವಂ. ೩-೦೦). **ಬಾಳಕ್ರೀಡೆ** : ಬಾಳಕನಾಗಿ ಬಱಿಕ್ಕಾ ಬಾಳಕ್ರೀಡೆಗಳನೆಯ್ದೆ ತೋಱಿ ಸಮಂತಾ ಲೀಳಾನಿಧಿ ನಿಜರೂಪಂ ಬಾಳಂ ತಳೆದಿರಲ್ (ನೇಮಿಪು. ೬-೧೯೦). [ಸಂ. ಬಾಲಕ್ರೀಡಾ]

ಬಾಲಗಚ್ಚೆ, ಬಾಲಂಗಚ್ಚೆ (ನಾ). ೧. ಹಿಂಭಾಗದಲ್ಲಿಯ ಕಚ್ಚೆ ; ಹಿಂಗಚ್ಚೆ : ಕೆಂದಳಿರ್ಗೊಂಚಲ ಚೆಲ್ಲಣಂ ಪ್ರವಾಳಳತೆಯ ಬಾಲಗಚ್ಚೆ ಬಲಕಿಕ್ಕಿದ ಚಂಪಕಮಾಲೆ ಶೋಭೆಯಂ ಬಳೆಯಿಸೆ ನಿಂದ ನಚ್ಚಣಿಯ ಭಾವಮನಾವನೊಱಲ್ದು ನೋಡಿದಂ (ಲೀಲಾವ. ೦೦-೬೩) ; ಬದ್ದಿಗೆಯ ತೊಂಗಲ್ದೆಗೆದು ಬಿಗಿದೆಬಿಲ್ವ ಬಾಲಗಚ್ಚೆಯ ವಿಳಸದ ಸೆಱಗಂ ಸೆಳೆದಳ್ಳಿಱಿಯೆಯುಂ (ಅನಂಪು. ೧೦-೮೩ ವ) ; ಸಕಲರತ್ನರಚನೆಯಿಂ ಸಲ್ಲಲಿತಮಾದ ಚೆಲ್ಲಣದ ಚಿತ್ರಿಸಿದ ಪತಾಕಾಂಚಲದಂತೆ ಪಲ್ಲವದ ಶೋಭೆಯಂ ಪಳಚ್ಚನೆ ಮೆಱೆವ ಬಾಲಗಚ್ಚೆಯ ಬೆಳ್ದಿಂಗಳಂ ಬೀದಿವರಿಯಿಸುವ ಪೊಸಮುತ್ತುಗಳ ಮೊತ್ತದಿಂ . . . ಮಂಡಿತಮಾದ ಮಂಡನದ ತಂಡದಿಂ (ಶಾಂತೀಶ್ವ. ೬-೯೩ ವ). **ಬಾಲಂಗಚ್ಚೆ** : ೨. ಗಾಳಿಪಟದ ತಳಕ್ಕೆ ಅಳವಡಿಸಿರುವ ಬಾಲದಂತಹ ಬಟ್ಟೆಯ ಅಥವಾ ಹುರಿಯ ತೆಳುವಾದ ಪಟ್ಟಿ : (ಕಿ) ೩. (ಆಲಂ) ಯಾವಾಗಲೂ ಹಿಂಬಾಲಿಸಿಕೊಂಡು ಬರುವವನು ; ಅನುಯಾಯಿ; ಹಿಂಬಾಲಕ : ಕೆಲವು ರಾಜಕಾರಣಪಟುಗಳಿಗೆ ಅನೇಕ ಬಾಲಂಗಚ್ಚೆಗಳಿರುತ್ತಾರೆ (ರೂಢಿ). [ಬಾಲ$_1$ + ಕಚ್ಚೆ]

ಬಾಲಗೀಸು (ಕ್ರಿ). ೧. (ಗಾಡಿಗೆ ಹೂಡಿದ ಎತ್ತನ್ನು ವೇಗಗೊಳಿಸಲು) ಬಾಲ ಹಿಡಿದು ಎಳೆದು ತಿರಿಚು ; ಬಾಲವನ್ನು ಮುರಿ. ೨. (ಆಲಂ) ಪ್ರೇರಿಸು ; ಎತ್ತಿ ಕಟ್ಟು ; ಪ್ರಚೋದಿಸು : ಈ ಗಾಣಿಗನ ಎಲುವು ಇಡದ ಹಾಗೆ ದಬಾಯಿಸು – ಎಂದು ಬಚ್ಚನ ಬಾಲಗೀಸಿ ಬಿಟ್ಟಿದ್ದೇನೆ ! (ಹಹಸ. ೬೬). [ಬಾಲ$_1$ + ಕೀಸು$_1$]

ಬಾಲಗುರಿ (ನಾ). (ಬಾಲವು ಉದ್ದವಾಗಿರುವ) ಒಂದು ಬಗೆಯ ಕುರಿ : ದೊರೆ ಸೀಮೆಹಸು, ಬಾಲಗುರಿ, ಸೀಮೆಕುದುರೆ ಮುಂತಾದುವುಗಳನ್ನು ಸಾಕಿದ್ದ . . . ಬಾಲಗುರಿರೊಪ್ಪವೂ ಇತ್ತು (ನನ್ನೂರು. ೩). [ಬಾಲ$_1$ + ಕುರಿ$_3$(<ಕುಱಿ$_3$)]

ಬಾಲಗ್ರಹ (ನಾ). ಎಳೆಯ ವಯಸ್ಸಿನ ಮಕ್ಕಳಿಗೆ ಬರುವ ಒಂದು ಬಗೆಯ ಭೀಕರವಾದ ಅಪಸ್ಮಾರರೋಗ ; ೩ ಮಕ್ಕಳಿಗೆ ಈ ಬಗೆಯ ಪೀಡೆಯನ್ನುಂಟುಮಾಡುವ ಒಂಬತ್ತು ಬಗೆಯ ಗ್ರಹಗಳುಂಟೆಂದು ಭಾವಿಸಲಾಗಿದೆ. "ಸ್ಕಂದ, ಸ್ಕಂದಾಪಸ್ಮಾರ, ಶಕುನೀಗ್ರಹ, ಪೂತನಾಗ್ರಹ, ಅಂಧಪೂತನಾಗ್ರಹ, ಶೀತಪೂತನಾ, ರೇವತೀ, ಮುಖಮಂಡಿಕಾಗ್ರಹ, ನೈಗಮಗ್ರಹ (ಸಂಶ್ರುತ. ಸಂ. ೧೬೬)." (ಶ್ರೀವತ್ಸ. ೨೯೦). [ಸಂ.]

ಬಾಲಗ್ರಾಸ (ನಾ). ಎಳೆಯ ಹುಲ್ಲು.—ಮೇವು : ಘರ್ಮಕಾಲಂ ಸಮನಿಸಿರೆಯುಮೆತ್ತೆತ್ತಲುಂ ಬಾಲಗ್ರಾಸಾಳಿಗಳಿಂ ವರ್ಷರ್ತುವೊಲ್ದೆಳ್ತರ್ಪ

ವೋಲೆಡೆಕಿರಿದಿರ್ದತ್ತು ಪಾನೀಯಪೂರಂ (ಏಷ್ಟುಪು. ೩-೨.೩೫).

[p ಇದು 'ಬಾಲಘಾಸ' ಎಂದಿರಬಹುದೇ ?]

ಬಾಲಘಾತಿನಿ (ನಾ). ಮಕ್ಕಳನ್ನು ಕೊಲ್ಲುವವಳು : ಈತನೆ ಗಡ ವಿಷಸ್ತನ್ಯೆಯಾದ ಬಾಲಘಾತಿನಿಯಾದ ಪೂತನಿಯೆಂಬ ರಕ್ಕಸಿಯನೆಡೆಗೆಡಹಿ . . . ನಿಂದಿರ್ಪ ಬೆಡಂಗನು ನೋಡಿರಯ್ಯ (ಕಗಪ. ೬೭).

[ಸಂ. ಬಾಲಘಾತಿನೀ]

ಬಾಲಚಂದ್ರ, ಬಾಳಚಂದ್ರ (ನಾ). ೧. ಶುಕ್ಲಪಕ್ಷದ ಪ್ರಾರಂಭದಲ್ಲಿ ಕಾಣುವ ಚಂದ್ರ ; ಬಿದಿಗೆಯ ಚಂದ್ರ : ಬಾಲಚಂದ್ರನ ಸೂಡದಂದು . . . ನಿಮ್ಮ ನೀವಱಿಯದೆ ಅನಂತಕಾಲವಿರ್ದಿರಂದು (ಅಖಂಡೇ. ೨-೩). ಬಾಳಚಂದ್ರ : ೨. (ಜೈನಮುನಿಯಾದ) ಒಬ್ಬ ಕನ್ನಡ ಕವಿಯ ಹೆಸರು : ಅಧ್ಯಾತ್ಮಕಳಾಧರನುಜ್ವಳಕೀರ್ತ್ತಿ ಬಾಳಚಂದ್ರ ಮುನೀಂದ್ರಂ (ಎಕ. II, ೨೩೯-೬೯ ; ಸು. 1180) ; ಧರಣೀಚಕ್ರದೊಳತಿ ಚಿತ್ರಂ ಕವಿಚಕ್ರಪ್ರಿಯನೆನಿಸಿ ಬಾಳಚಂದ್ರಂ ನೆಗಬ್ದಂ (ಪಾರ್ಶ್ವಪು. ೦-೬೮).

[ಸಂ.]

ಬಾಲಚಮೂ (ನಾ). 'ಸ್ಕೌಟ್' ಎಂಬ ದಳ; ಸ್ಕೌಟುದಳ ; p ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯೇತರವಿಷಯಗಳಲ್ಲಿ ತಿಳಿವಳಿಕೆ ಕೊಡಲು ಪಾಶ್ಚಾತ್ಯದೇಶದಲ್ಲಿ 'ಬಾಡನ್‌ಪಾವೆಲ್' ಎಂಬ ಪ್ರಸಿದ್ಧ ಪುರುಷನಿಂದ ೧೯೦೮ರಲ್ಲಿ ಇದು ಸ್ಥಾಪಿತವಾಯಿತು : ಮಕ್ಕಳ ಜೀವನದಲ್ಲಿ ಪರಿಣಾಮಕಾರಿಯಾಗುವಂತೆ ಶಿಕ್ಷಣವೀಯುವ ಸಂಘಸಂಸ್ಥೆಗಳಲ್ಲಿ . . . ಬಾಲಚಮೂ, ರೆಡ್‌ಕ್ರಾಸ್, ರೋಟರಿ ಸಂಘ, ಯುನೆಸ್ಕೋ ಮುಂತಾದುವು ಪ್ರಧಾನವಾದುವು (ಶಿಕ್ಷದ. ೫೩). [ಸಂ.]

ಬಾಲಚಾರ (ನಾ). ಸ್ಕೌಟುದಳಕ್ಕೆ ಸೇರಿದ ಹುಡುಗ : ಅಗ್ರಚಾರ (ಸ್ಕೌಟ್) ಬಾಲಚಾರನಿಗಿಂತ (ಬಾಯ್‌ಸ್ಕೌಟ್) ಭಿನ್ನ (ಕಪಕೋ. I, ೦೬೬); ನಾಣಿ ನಮ್ಮ ಊರಿಗೆ ಒಬ್ಬ ಬಾಲಚಾರ (ನಮ್ಮೂರ. ೩೯). [ಸಂ.]

ಬಾಲಚಿಕ್ಕೆ 'ಬಾಲಚುಕ್ಕೆ' ನೋ.

ಬಾಲಚುಕ್ಕಿ 'ಬಾಲಚುಕ್ಕೆ' ನೋ.

ಬಾಲಚುಕ್ಕೆ, ಬಾಲಚಿಕ್ಕೆ, ಬಾಲಚುಕ್ಕಿ (ನಾ). (ಸೌರವ್ಯೂಹದಲ್ಲಿದ್ದು, ಆಗೊಮ್ಮೆ ಈಗೊಮ್ಮೆ ಅಡ್ಡವಾಗಿ ಬಂದು ಕಾಣಿಸಿಕೊಳ್ಳುವ) ಬಾಲದಂತೆ ಗುಂಜುಗುಂಜಾದ, ಪ್ರಕಾಶವಾದ ಪಟ್ಟಿಗಳನ್ನುಳ್ಳ ಉಲ್ಕೆ ; ಧೂಮಕೇತು; p ಇದು ಉತ್ಪಾತಸೂಚಕವೆಂಬ ನಂಬಿಕೆಯಿದೆ : ಸೂರ್ಯನೂ, ಸೂರ್ಯನ ಸುತ್ತಲೂ ತಿರುಗುವ ಗ್ರಹಗಳೂ. ಬಾಲಚುಕ್ಕೆಗಳೂ ಇವುಗಳಿಗೆ . . . ಎಂದು ಹೆಸರು (ಭೂಗೋಳ. ೪). ಬಾಲಚಿಕ್ಕೆ : ಈಗ ನಾವು ನೋಡುವ ಬಾಲಚಿಕ್ಕೆಗಳ ಸ್ಥಿತಿಯಂತೆ ಆ ಕಾಲದಲ್ಲಿ ಭೂಮಿಯ ಸ್ಥಿತಿಯಿತ್ತೆಂದು ಹೇಳಬಹುದು (ಮುಂಬಯಿ. ೬-೨೪೨). ಬಾಲಚುಕ್ಕಿ : ನಭದೊಳೆಳ್ಳೆಡೆವಿಡದೆ ತುಂಬಿದ ವಸುರರುದಯಕೆ ಬಾಲಚುಕ್ಕಿಗಳು (ಪ್ರಹ್ಮಾಸ. ೨-೨೩) ; ೧೫೭೭ರಲ್ಲಿ ಒಂದು ಬಾಲಚುಕ್ಕಿಯು ಕಾಣಿಸಿತು (ಶಿಲ್ಪಾ. ೦೦೦). [ಬಾಲ$_1$ + ಚುಕ್ಕೆ$_1$]

ಬಾಲಜ್ವರ (ನಾ). ರೋಗಿಗೆ ಆಗ ತಾನೇ ಪ್ರಾರಂಭವಾಗಿರುವ ಜ್ವರ : ರಾಸ್ಮೆ . . . ಬೆಳ್ಳುಳ್ಳಿ ಇವುಗಳನ್ನು ಕುಟ್ಟಿ ಅರೆದು ಕೊಡಲು ವಾತದೋಷಜ್ವರ ಮತ್ತು ಬಾಲಜ್ವರ ಸಹ ಪರಿಹಾರವಾಗುವುವು (ಸಕವೈ. ೦೦೪). [ಸಂ.]

ಬಾಲತನ (ನಾ). ಚಿಕ್ಕಂದು ; ಎಳಮೆ : ಬಾಲ್ಯ : ನಿಮಗಾನುಜುವುದೆನ್ನ ಬಾಲ[ಪಾಠಾಂ. ಲ್ಯ]ತನದಿಂದಂದಾದುದೆಂದಾದುದೇ ನಿಮಗಾನಂಜದೊಡೆಂಜಿಸಲ್ ನೆಱೆವೆನೇ ತ್ರೈಲೋಕ್ಯಮಂ ಯುದ್ಧದೊಳ್ (ಪಂಪಭಾ. ೦೦-೦೩೪); ಬಾಲತನವೇನೂಣಯವೆ ಕಟ್ಟಾಳುತನವಾಭರಣವವನೀಪಾಲಸುತರಿಗೆ (ಕುಮ್ಮಾದ್ರೋ. ೫-೩೦). [ಬಾಲ$_2$ + – ತನ]

ಬಾಲತನಯ (ನಾ). ಒಂದು ಬಗೆಯ ಮರ ; ಕಗ್ಗಲಿಮರ ; ಖದಿರ ವೃಕ್ಷ : "ಗಾಯತ್ರೀ, ಬಾಲತನಯಃ, ಖದಿರಃ, ದಂತಧಾವನಃ – ೪ ತರೆಯದ ಮರದ ಹೆಸರು; ಕಗ್ಗಲೀಮರ" (ಸಿದ್ಧಾಂತಿ. ೦೨೩). [ಸಂ.]

ಬಾಲತಪ (ನಾ). [ಜೈನ] ಶುದ್ಧವಾದ ದರ್ಶನವಿಲ್ಲದೆ, ವ್ಯರ್ಥವಾದ ದೇಹದಂಡನೆಯೊಡನೆ ಆಚರಿಸುವ ತಪಸ್ಸು ; ಮೂರ್ಖತನದ ತಪಸ್ಸು : ಮಿಥ್ಯಾದರ್ಶನೋಪೇತತಪಃ ಬಾಲತಪಂ ನಿಕೃತಿಬಹುಲವ್ರತಧಾರಣಂ ಅನುಪಾಯಕಾಯಕ್ಲೇಶಪ್ರಚುರಂ ಎಂಬಿವು ಮೊದಲಾಗೊಡೆಯವು ದೇವಾಯುಷ್ಯಾಸ್ರವಕಾರಣಂಗಳಪ್ಪುವು (ತತ್ತ್ವಪ್ರ. ೨೬೩). [ಸಂ.]

ಬಾಲತೆ, ಬಾಳತೆ (ನಾ). ೧. = ಬಾಲತನ : ಬಾಲತೆಯೊಳ್ ದರ್ಶನಮುಂ ಮೇಲೆನಿಪೀ ವ್ರತಮುಮೊಡನೆ ಸಂಭವಿಸಿದುವು (ರರ್ಮಾಮ್ಯ. ೩-೨೦). ಬಾಳತೆ : ೧. ಬಾಳತೆಯಂ ಕಳಿಪಿ ಸುದಂಭೋಳಿಧರಾನತಪದಂ ಕುಮಾರತೆಯಂ ಸಲ್ಲೀಲಾನಿಧಾನನಾಂತಂ . . . ಭಾಸುರರೂಪಂ (ನೇಮಿಪು. ೯-೪). ೨. ಹುಡುಗುತನದ ವರ್ತನೆ ; ಬಾಲಿಶವೃತ್ತಿ : ಪಾಲಿಪುದು ವಿನಯಮಂ ಬಾಳತೆಯನುಳಿವುದಿದನೇಳಿಸದಿರೆಂದು ಸೌಮಿತ್ರಿ ನುಡಿದಂ (ಕುಮುರಾ. ೬-೦೦೭). [ಸಂ. ಬಾಲತಾ]

ಬಾಲತ್ವ, ಬಾಳತ್ವ (ನಾ). = ಬಾಲತನ : ಬಾಲತ್ವದೊಳಂ ಗುಣಮಣಿ ಮಾಲಿನಿ ಶಿಶುಸುಮತಿ . . . ಜನಪತಿಗೆ ವಿನಯವಿನಮಿತೆಯಕ್ಕುಂ (ಶಾಂತಿಪು. ೯-೬೭) ; ಬಾಲತ್ವದಿಂದೆಲ್ಲಿಯುಂ ವಿನಯೋಲ್ಲಂಘನಮಾದುದಿಲ್ಲ (ಗದಾಯು. ೫-೭) ; ಬಾಲತ್ವದೊಳಮುದಾತ್ತಗುಣಾಲಯಮೆನಿಸಿದ ತನೂಜಮುಖಚಂದ್ರಮನಂ ಲೀಲೆಯಿನೀಕ್ಷಿಸಿ ದಶರಥನೋಲಾಡಿದನಧಿಕರಾಗರಸವಾರಿಧಿಯೊಳ್ (ಪಂರಾಮಾ. ೩ ೦೩೨). ಬಾಳತ್ವ : ಗಗನಕ್ಕೇಡಾಡಿ ವಾಮೇತರಾಯತಹಸ್ತಾಗ್ರದೊಳಾಂತು ತಾಳ್ದಿದುದಱಿಂ ಬಾಳತ್ವದೊಳ್ ಕೋಟಿಕಾಂತಿತಮಾ ಕಲ್ ತಿರಿಕಲ್ ತ್ರಿಪೃಷ್ಠಮಹಿಪಂಗಕ್ಕುಂ ಪೆಱಂಗಕ್ಕುಮೇ (ಶಾಂತಿಪು. ೫-೨೬); ಬಾಳತ್ವದೊಳಂದಗಮಂ ಚುಳಿಸಿದೀ ಕೃಷ್ಣನಳಿಯನಲ್ಲೆನೆ ಶೌರ್ಯಾಭೀಳನರತನುಜನಲ್ಲೆನೆ ಪೇಟಾಮಿದೆಂ ಗಹನಮೆನಗೆ ಬೆಸಸಿಂ ನೃಪತೀ (ನೇಮಿಪು. ೦೨-೩೩). [ಸಂ.]

ಬಾಲದುಡಿಗೆ 'ಬಾಲದೊಡಿಗೆ' ನೋ.

ಬಾಲದುಡುಗೆ 'ಬಾಲದೊಡಿಗೆ' ನೋ.

ಬಾಲದೆರಿಗೆ 'ಬಾಲದೆಱಿಗೆ' ನೋ.

ಬಾಲದೆಱಿಗೆ, ಬಾಲದೆರಿಗೆ (ನಾ). ದನಕರುಗಳ ಮೇಲೆ ಹಾಕುತ್ತಿದ್ದ ತೆರಿಗೆ; p ದನಕರುಗಳ ಗಣನೆಯ ಸಮಯದಲ್ಲಿ, ಬಾಲಗಳ ಎಣಿಕೆಯಿಂದ ಕಾಲ್ನಡೆಯ ಸಂಖ್ಯೆಯನ್ನು ಸೂಚಿಸುವ ಪರಿಪಾಠವಿದ್ದಿರಬಹುದು : ಪಳ್ಳಿಗರ ಜಾತಿದೆಱಿಗೆ ಬಾಲದೆಱಿಗೆ ನಾಮಗಾಣಿಕೆ ಗೋಪಾಲಸ್ವಾಮಿವರ್ತ್ತನೆ ಸುಂಕಕ್ಕೆ ಸಲ್ಲುವ ಪಟ್ಟಡಿಯೇರುಸುಂಕ (ಎಕ. III, ಶ್ರೀರಂಗ ೦೦೦-೧೬೫; 1724). ಬಾಲದೆರಿಗೆ : ಈಚಲುಕಂದಾಯ ಬಾಲದೆರಿಗೆ ಹೊರಾದಾಯ ಚರಾದಾಯ . . . ಈ ಸಂಖ್ಯೆಯ ಮಹಾಜನರಿಗೂ ಯಥಾಂಶವಾಗಿ ನಿರ್ವಿವಾದವಾಗಿ ಸಲುವದು (ಎಕ. III, ತಿರುಮ. ೬೩-೦೩೬೮; 1748); ಕುರಿದೆರಿಗೆ ಬಾಲದೆರಿಗೆ ಹುಲ್ಲುಹಣ (ಮೈಲಿ. ೦೯೩೮. ೨೯-೦೯; 1820). 'ಬಾಲವಣ' ಪರಾ. [ಬಾಲ$_1$ + ತೆಱಿಗೆ]

ಬಾಲದೊಡಿಗೆ, ಬಾಲದುಡಿಗೆ, ಬಾಲದುಡುಗೆ (ನಾ). ಮಕ್ಕಳಿಗೆ ತೊಡಿಸುವ ಆಭರಣ : ತಾಲಿ ಕಡಗಂ ಜಣ್ಣಸರವುಂ ತೋಳಬಂದಿಯೆನಿಪ್ಪ ಚಲ್ವಿನ ಬಾಲದೊಡಿಗೆಗಳ . . . ತಂದಪೆವು (ಬಸಪು. ೦೪-೯); ಈತನರ್ಜುನನರಮನೆಯೊಳಭಿಜಾತನೆನಿಪಭಿಮನ್ಯುವನು ಸಂಪ್ರೀತಿಯಿಂದಪ್ಪಿದನು ಕೊಟ್ಟನು ಬಾಲದೊಡಿಗೆಗಳ (ಕುಮ್ಮಾಲ. ೨೦ ೦೦). ಬಾಲದುಡಿಗೆ: ಆ ಬಾಲಕಂ ಬಾಲದುಡಿಗೆಗಳಂ ತೊಟ್ಟು ನಡೆಗಲ್ತು (ಪಂಪತಂ. ೦೬೭-೮); ಇಂತು ಸಕಲಸೌಂದರ್ಯಮಂ ಬೀಱುವ ಬಾಲದು [ಪಾಠಾಂ. ದೊ]ಡಿಗೆ

ವೆರಸು ಲೀಲೆ ಮಿಕ್ಕು (ಗಿರಿಕ. ೩-೯೯ ಪ). **ಬಾಲದುಡುಗೆ:** ಜನ್ಮಾಭಿಷೇಕದುಂ ಮಾಡಿ ತದನಂತರಮನೇಕಬಾಲದುಡು[ಪಾಶಾಂ. ಡಿ]ಗೆಗಳಂ ತುಡಿಸಿ ತಾಯಿ ತಂದೆಗೆ ನಂದನನಂ ಕೊಟ್ಟಾಖಂಡಳಂ . . . ನಿಜನಿವಾಸಕ್ಕೆ ಪೋದಂ (ಪುಣ್ಯಾಶ್ರ. ೦೦-೦೬ ಪ). [ಬಾಲ$_2$ + ತೊಡಿಗೆ (<ತೊಡುಗೆ)]

ಬಾಲಪಂಡಿತಮರಣ (ನಾ). [ಜೈನ] ಐದು ಬಗೆಯ ಮರಣಗಳಲ್ಲಿ ಒಂದು; ℙ "ಸಮ್ಯಕ್‌ದರ್ಶನಜ್ಞಾನ, ಏಕದೇಶಚಾರಿತ್ರಗಳನ್ನು ವಶಮಾಡಿಕೊಂಡಿರುವ ದೇಶವ್ರತಿಯ ಮರಣ" (ಕೈವಕೋ. ೦೫೫) : ಸಮ್ಯಗ್ದರ್ಶನ ಸಂಯಮಾಸಂಯಮಚಾರಿತ್ರಂಗಳಂ ತನಗೆ ವಶಂಮಾಡಿ ನೆಗಟ್ಟ ಸಂಯತಾಸಂಯತನ ಸಾವು ಬಾಲಪಂಡಿತಮರಣಂ (ಪಸಾರ. ೩೬೬). [ಸಂ.]

ಬಾಲಪತ್ರ (ನಾ). ಕಗ್ಗಲಿಮರ; ಖದಿರವೃಕ್ಷ. [ಸಂ.]

ಬಾಲಪಾಶ್ಯೆ (ನಾ). ೧. ಸ್ತ್ರೀಯರು ಬೈತಲೆಗೆ ಧರಿಸುವ ಒಂದು ಬಗೆಯ ಆಭರಣ. ೨. ಒಂದು ಬಗೆಯ ಆಭರಣ ; ಜಡೆಬಿಲ್ಲೆ. [ಸಂ. ಬಾಲಪಾಶ್ಯಾ]

ಬಾಲಪುಳು, ಬಾಲಹುಳು (ನಾ). ಬಚ್ಚಲುಹರಿ ಮೊದಲಾದ ಕೊಚ್ಚೆ ಸ್ಥಳಗಳಲ್ಲಿ ಹಾಗೂ ಗೊಂಡಗಟ್ಟಿದ ಅಕ್ಕಿ ಮೊದಲಾದುವುಗಳಲ್ಲಿ ಹರಿದಾಡುವ ಚಿಕ್ಕ ಬಾಲವುಳ್ಳ ಹುಳು : ಪುರಾಣಕನೊಡಲು ಬಿಕ್ಕನೆ ಬಿರಿದುದಾಗಳೆ ಬಾಲಪುಳುಗಳ ರಾಶಿಯಾಯಿತ್ತು (ಬಸಪು. ೫೭-೩೦). **ಬಾಲಹುಳು :** ಅಹಂಕಾರವಿಲ್ಲದಿಹಂತಹ ಪುರಾತನರ ಮನೆಯ ಬಚ್ಚಲ ಬಾಲಹುಳುವಾಗಿ ಹುಟ್ಟಿಸಯ್ಯಾ (ಸಮಾವ. ೬-೨೦) : ಜಾತಿಪೂರ್ವವ ಎತ್ತಿ ದೂಷಿಸುವ ಪಾತಕರ ಬಾಯಲ್ಲಿ ಬಾಲಹುಳುಗಳು ಸುರಿಯದೆ ಮಾಣ್ಬವೆ ಹೇಳಾ (ಅಖಂಡೇ. ೨೦೬-೪೦). [ಬಾಲ$_1$ + ಪುಳು (<ಪುಟು)]

ಬಾಲಬಂದು, ಬಾಳಬಂದು (ನಾ). ೧. ಸರಳವಾದುದು : ಸುಲಭವಾದುದು : (ಕಿ). ೨. ಒಂದು ಬಗೆಯ ಲಿಪಿ : ದೇವನಾಗರೀ ಲಿಪಿ. **ಬಾಳಬಂದು :**(ಕಿ). [← ಮರಾ. ಬಾಳಬದ, ಬಾಳಬಂದ]

ಬಾಲಬಾಲಮರಣ (ನಾ). [ಜೈನ]ಐದು ಬಗೆಯ ಮರಣಗಳಲ್ಲಿ ಒಂದು : "ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ, ತಪಸ್ಸುಗಳೆಂಬ ಆರಾಧನೆಗಳಲ್ಲಿ ಒಂದೂ ಇಲ್ಲದ ಮಿಥ್ಯಾದೃಷ್ಟಿಯ ಸಾವು" (ಕೈವಕೋ. ೦೯೫) : ಬಾಲಬಾಲಮರಣಂ ಬಾಲಮರಣಂ ಬಾಲಪಂಡಿತಮರಣಂ ಪಂಡಿತಮರಣಂ ಪಂಡಿತಪಂಡಿತಮರಣಮೆಂದಿಂತು ಪಂಚ ಪ್ರಕಾರಮಕ್ಕುಂ . . . ಚತುರ್ವಿಧಾರಾಧನೆಗಳೊಳೊಂದಾರಾಧನೆಯುಮಿಲ್ಲದ ಮಿಥ್ಯಾದೃಷ್ಟಿಯ ಸಾವು ಬಾಲಬಾಲಮರಣಂ (ಪಸಾರ. ೩೬೬). [ಸಂ.]

ಬಾಲಬೋಧೆ (ನಾ). ೧. ಚಿಕ್ಕಮಕ್ಕಳಿಗೆ ಕೊಡುವ ಆರಂಭದ ಪಾಠ. ೨. ಮಕ್ಕಳಿಗೆ ಓದು ಕಲಿಸುವುದಕ್ಕಾಗಿ ಬಳಸುವ ಪ್ರಾಥಮಿಕ ಪುಸ್ತಕ: ಬಾಲಪಾಠದ ಪುಸ್ತಕ: (ಕಿ). [ಸಂ. ಬಾಲಬೋಧಾ]

ಬಾಲಬ್ರಹ್ಮಚಾರಿ (ನಾ). ಚಿಕ್ಕಂದಿನಲ್ಲಿಯೇ ಸಂನ್ಯಾಸವನ್ನು ಸ್ವೀಕರಿಸಿದವನು : ಬಾಲಬ್ರಹ್ಮಚಾರಿಯ ಬಾರನೆತ್ತಿತ್ತ ಕಂಡೆ ಭಕ್ತರೆಲ್ಲರೂ ಸತ್ತು ನೆಲಕಿಕ್ಕಿತ್ತ ಕಂಡೆ (ಅವನಂ. ೯೫-೪೨೬). [ಸಂ. ಬಾಲಬ್ರಹ್ಮಚಾರಿನ್]

ಬಾಲಭಾವ (ನಾ). ಬಾಲ್ಯ ; ಎಳೆತನ : ಆ ಬಾಳಕೇಳಿಗಳ ಬಟಿಯಿಂ ಬಾಲಭಾವಮಂ ಪೆಱಗಿಕ್ಕಿ ಯೌವನಪ್ರಾದುರ್ಭಾವಕ್ಕಿದಿರಾಗಿ (ಶಾಂತಿಪು. ೧೦-೯೦ ಪ) ; ಕಳಾಗುಣಂ ಪೊದಟ್ಟಳವಡೆ ಬಾಲಭಾವದೊಳೆ ಭಾವಕಿಯರ್ ಬಳೆವರ್ ನಿರಂತರಂ (ಶಮದ. ೦೯೫ ಪ್ರಯೋ). [ಸಂ.]

ಬಾಲಭಾಷಿತ (ನಾ). ಹುಡುಗುತನದ ಮಾತನ್ನಾಡುವವನು: ಅರ್ಥವಿಲ್ಲದ ಮಾತನ್ನಾಡುವವನು : ಬೀಳುಕೊಂಡಿರೇ ಸಾಕು ಭೀಮನು ಬಾಲಭಾಷಿತನಾದನೀ ಭೂಪಾಲ ಕೌರವನೆಂಬೆನೇ ಮೊದಲಿಗನು ಮೂರ್ಖರಿಗೆ (ಕುಮ್ಯಾಭೀ. ೦೦-೩೮). [ಸಂ.]

ಬಾಲಭಾಷೆ (ನಾ). ೧. ಮಕ್ಕಳ ಮಾತು : ಅಪ್ರಬುದ್ಧವಾದ ಭಾಷೆ : ರಂಗನು . . . ತನ್ನ ಬಾಲಭಾಷೆಯಲ್ಲಿ ಏನೇನೋ ಬರೆದು ಮಹಾದೇವಯ್ಯನವರಿಗೆ ತೋರಿಸಿ ತಿದ್ದಿಸಿಕೊಳ್ಳುತ್ತಿದ್ದನು (ರಂಗಕೋ. ೩೪). ೨. ಪ್ರಾಕೃತ ಭಾಷೆ : ಪ್ರಾಕೃತಭಾಷೆಗೆ ಸಾರಸ್ವತವೆಂತಲೂ ಬಾಲಭಾಷೆಯೆಂತಲೂ ಹೆಸರುಗಳುಂಟು (ಮುಂಬಿಡು. ೪-೧೫೫). ೩. (ಆಲಂ) ಬಾಲ್ಯದಲ್ಲಿ ಕಲಿತ ವಿದ್ಯೆ : ಚಾಪದ ಚಾರುವಿದ್ಯೆಯ ನಿಮ್ಮೊಳಱಿದುದ ನಿಮಗೆ ತೋಱಿಸುವೆ ಸೈರಿಸುವುದೀ ಬಾಲಭಾಷೆಗೆ ವೈರಬಂಧದ ಬಿಡುವದು (ಕುಮ್ಯಾಭೀ. ೬-೩೫). [ಸಂ. ಬಾಲಭಾಷಾ]

ಬಾಲಮಂಡನ (ನಾ). = ಬಾಲದೊಡಿಗೆ : ಭುವನೈಕಮಂಡನನೊಳೇ ನೆಸೆದಿರ್ದುದೊ ಬಾಲಮಂಡನಂ (ಅಜಿಪು. ೫-೬೦). [ಸಂ.]

ಬಾಲಮರಣ (ನಾ). [ಜೈನ]ಐದು ಬಗೆಯ ಮರಣಗಳಲ್ಲಿ ಒಂದು : ಅಜ್ಞಾನ ಅಥವಾ ಅವಿವೇಕದಿಂದ ತಂದುಕೊಳ್ಳುವ ಸಾವು : ಸಮ್ಯಗ್ದರ್ಶನಾರಾಧನೆಯನುಳ್ಳಸಂಯತ ಸಮ್ಯಗ್ದೃಷ್ಟಿಯ ಸಾವು ಬಾಲಮರಣಂ (ಪಸಾರ. ೩೬೬) ; ಯಾವುದೋ ಕ್ಷುದ್ರದೇವತೆಗೆ ಹರಕೆ ಹೊತ್ತು ಉಪವಾಸ ಮಾಡಿ ಸಾಯುವುದು, ವಿಷಪಾನ ಮಾಡಿ ಅಥವಾ ನೀರಲ್ಲಿ ಮುಳುಗಿ ಸಾಯುವುದು, ಇರಿದುಕೊಂಡು ಸಾಯುವುದು—ಇವುಗಳನ್ನು "ಬಾಲಮರಣ "ವೆಂದೂ (ಬಾಲ = ಅಜ್ಞಾನಿ, ಅವಿವೇಕಿ), ಸಲ್ಲೇಖನವನ್ನು "ಪಂಡಿತಮರಣ "ವೆಂದೂ ಕರೆಯುತ್ತಾರೆ (ಕಶಾಲ. ೯೨). [ಸಂ.]

ಬಾಲಮೆಣಸು (ನಾ). (ತೊಟ್ಟು ಉದ್ದವಾಗಿರುವ) ಒಂದು ಬಗೆಯ ಮೆಣಸು : "ಚವಿಕೆ, ಗಂಧಮೆಣಸು, ಮರಮೆಣಸು, ಬಾಲಮೆಣಸು, ಕಪ್ಪರಚಿನ್ನಿ" (ಸಸ್ಯವಿ ೦೦೬) : ಕಾಳುಗಳು . . . ಪಕ್ವವಾಗುತ್ತಿದ್ದಂತೆ ಫಲಾವರಣದ ಬುಡ ಅಸಾಧಾರಣವಾಗಿ ಬೆಳೆಯುವುದರಿಂದ ಪ್ರತಿಕಾಳಿಗೂ ಒಂದು ತೊಟ್ಟು (ಬಾಲ) ಹೊರಟಂತೆ ಭಾಸವಾಗುತ್ತದೆ. ಆದ್ದರಿಂದಲೇ ಇದಕ್ಕೆ ಬಾಲಮೆಣಸು ಎಂಬ ಹೆಸರು (ಕವಿಕೋ. XII, ೬೩). [ಬಾಲ$_1$ + ಮೆಣಸು (<ಮೆಟಸು)]

ಬಾಲರಕ್ಷೆ (ನಾ). ದುಷ್ಟಗ್ರಹ ಅಥವಾ ಭೂತಬಾಧೆಯಾಗದಂತೆ ಮಕ್ಕಳಿಗೆ ಕಟ್ಟುವ ತಾಯಿತ, ದಾರ ಮೊದಲಾದ ಪ್ರತಿಬಂಧಕ ಸಾಧನ. [ಸಂ. ಬಾಲರಕ್ಷಾ]

ಬಾಲರಸ (ನಾ). [ವೈದ್ಯಶಾ] (ಮಕ್ಕಳ ಹಳೆಯ ಜ್ವರ, ಕೆಮ್ಮು, ಶೂಲೆ ಇತ್ಯಾದಿಗಳಿಗೆ ಕೊಡುವ ಗಂಧಕ, ಸೋನಾಮುಖಿ ಮುಂತಾದುವುಗಳ ಮಿಶ್ರಣದಿಂದ ತಯಾರಿಸುವ) ಒಂದು ಬಗೆಯ ಔಷಧ : ಮಣಿಶಿಲಾಸಿದ್ಧರಸವು ಸಮವಾಗಿ ಕರಗಿಸಲು ಬಾಲರಸವಾಗುವುದು (ಗಂಧಪ್ರ. ೯-೦). [ಸಂ.]

ಬಾಲರಾಕ್ಷಸ 'ಬಲರಾಕ್ಷಸಿ' ನೋ.

ಬಾಲರಾಕ್ಷಸಿ 'ಬಲರಾಕ್ಷಸಿ' ನೋ.

ಬಾಲರ್ಷಿ (ನಾ). ಋಷಿಸತ್ವವುಳ್ಳ ಬಾಲಕ : ನನ್ನೊಲ್ಮೆಗೇಂ ಕಡಮೆ, ಹೇಳವ್ವ, ನಿನಗೆ ಬಾಲರ್ಷಿ ಭರತನ ಕೂರ್ಮೆ? (ಶ್ರೀರಾಮಾ. ೬೩-೧೫೨). [ಸಂ.]

ಬಾಲಲೀಲೆ (ನಾ). = ಬಾಲಕೇಲಿ : ಶಿಶುವಾಗಿ ಬಾಲಲೀಲೆ ತೋಱಿದೆ (ಪುರಂದ. ೩-೬೯-೩) ; ಕಂದನಾಡುವ ಬಾಲಲೀಲೆಯಂ ನೋಡಿ . . . ಪ್ರೀತಿಯಂ ಪಡೆವರ್ (ಕೈವಿಪಾ. ೦೮-೨೦). [ಸಂ. ಬಾಲಲೀಲಾ]

ಬಾಲವ (ನಾ). [ಜ್ಯೋತಿ] ಹನ್ನೊಂದು ಬಗೆಯ ಕರಣಗಳಲ್ಲಿ ಎರಡನೆಯದು ; ಒಂದು ಬಗೆಯ ಕಾಲಮಾನ : ಬವ ಬಾಲವ ಕೌಲವ ತೈತಿಲ ಗರಜೆ ವಣಿಜೆ ಭದ್ರೆಗಳೆಂಬವೇಳುಂ ಚರಕರಣಂಗಳು . . . ವರ್ತಿಸುತ್ತಿಹವು (ಏವೇಕ. ೨೬೨) ; ಚರ ಮತ್ತು ಸ್ಥಿರ ಎಂದು ಕರಣ ಎರಡು ವಿಧ. ಬವ ಬಾಲವ ಕೌಲವ ತೈತುಲೆ ಗರಜೆ ವಣಿಜೆ ಭದ್ರೆ ಈ ಏಳು ಚರಕರಣಗಳು (ಜಾತಕ. ಪಂ. ೩-೩೬೮). 'ನಾಗವ' ಪರಾ. [ಸಂ.]

ಬಾಲವಂದ, ಬಾಳವಂದ (ನಾ). ಮಕ್ಕಳಿಗೆ ತೊಡಿಸುವ ಉಡುಪು, ಆಭರಣ ಇತ್ಯಾದಿ ; ಮಕ್ಕಳ ಉಡುಗೆ ತೊಡುಗೆ : ಅರಳೆಲೆಯುತ್ತಿ ಕಾಯ್ ಪುಲಿಯುಗುರ್ . . . ಗೊಂದಳಿಸಿರೆ ಬಾಲವಂದದ ತೆರಳ್ಕೆಯಿಂ ನಚ್ಚುತನಾದವೊಪ್ಪಿದಂ (ಸೂಕ್ತಿಸು. ೬-೭೩). **ಬಾಳವಂದ** : ಬಾಳವಂದಂಗಳ ನೊಯ್ಯನೆ ತುಡಿಸಿದಾಗಳಾ ಶಿಶು ಜಿನಶಿಶುವೆಂಬನಗಮೇಂ ಮನಂಗೊಳಿಸಿದನೋ (ಸುಖಸಾ. ೦೦-೪೪) ; ಅರಳೆಲೆ . . . ನೂಪುರಂ ವರವಲಯಂಗಳೆಂಬ ಪಲವಂದದ ಚಂದದ ಬಾಳವಂದವೊಪ್ಪಿರೆ ಲತ್ಯಮಾತ್ಯಗಳ್ಗಿ ಪಡೆದರ್ ತನಯರ್ ನಯನೋತ್ಸವಂಗಳಂ(ಪಂಡಾಪು. ೬-೦೪೦).

[←ಹಿಂ. ಬಾಲಾಬಂದ / ಸಂ. ಬಾಲಬಂಧ]

ಬಾಲವಕರಣ (ನಾ). = ಬಾಲವ : ಬಾಲವಕರಣಕ್ಕೆ ವನಂ ಳಿಗಳಿಗೆ ಮೇಲೆ ತ್ಯಾಜ್ಯ (ಜಾಸ್ಕರ. ೬೦-೩).

[ಸಂ.]

ಬಾಲವಣ (ನಾ). = ಬಾಲದೆಱಿಗೆ : ಬಾಲವಣಮುಮಾಯಿಲದೆಱಿಗಳುಮನ್ನೆಲದ ನೇಸಱಿ ಉಳ್ಳನ್ನಿಗ ಬಿಟ್ಟ (ನೀಇಇ. XI–i. ೪೪-೬ ; ೨೭೫ು ೫೬ ?) ; ಬಾಲವಣಾ ಬೇಡುವನೊಂದೆ ಗೊಂದೆಗಂ (ಕವುದ. ೬೬ ಕ್ರಿಯೋ).

[ಬಾಲ$_1$ + ಪಣ$_3$]

ಬಾಲವಣದೆಱಿ (ನಾ). = ಬಾಲದೆಱಿಗೆ: ಚಿಕ್ಕ ಬೆಳಗಲಿಯ ಹೊಗೆದೆಱಿ ಬಾಲವಣದೆಱಿಯೊಳಗೆ ಎಳ್ಕೇಶ್ವರದೇವರ ನಂದಾದೀವಿಗೆಗೆ ವರುಷ ನಿಬಂದ್ಧಿಯಾಗಿ ಕೊಟ್ಟ ಪ ೨ (ಎಕ. XV. ಹೊಳಕ. ೯೪-೦೦; 1237).

[ಬಾಲವಣ + ತೆಱಿ$_3$]

ಬಾಲವತಿ, ಬಾಳವತಿ (ನಾ). ಹೆರಿಗೆಯಾಗಿ ಇನ್ನೂ ಆರೈಕೆಯನ್ನು ಹೊಂದುತ್ತಿರುವವಳು ; ಬಾಣಂತಿ : ಮಾಡಿದರ್ . . . ಬಾಲವತಿ ಗಂದಭಿಷೇಕವಮನುಗನಾಜನಂ (ಶಾಂತೀಶ್ವ. ೪.೩೨). **ಬಾಳವತಿ** : ಮಾಡಿದರ್ . . . ಬಾಳವತಿಗಂದಭಿಷೇಕಮಾನಿಂತು ಕಾಂತೆಯರ್ (ಶುಸುವಾ. ೬-೭೮). ' ಬಾಳಂತಿ ' ಪರಾ

[ಸಂ. ಬಾಲವತೀ]

ಬಾಲವದ್ದೆ (ನಾ). ಬಾಲ್ಯಾವಸ್ಥೆಯಲ್ಲಿರುವವನು ; ಪಸುಮಗು (?): ಬಾಲವದ್ದೆಯಂ ಕೂಸಂ ಸಿಸುವನವ್ಯಕ್ತನಂ ವಿಸುಟ್ಟಿಂತು ತಪಂಬಟ್ಟಿ ಪಾಪ ಕರ್ಮ ದಯೆಯಿಲ್ಲದೊಂ ನಿಷ್ಕರುಣಿ ಎಂದು ಬಯ್ದಳ್ (ಪಡ್ಮಾರಾ. ೧೩-೦೦); ಮಗನೆ ನೀನಿನ್ನುಂ ಕೂಸನೈ ಧೀಗಾ[ಪಾಣಾ. ೪]ವದ್ದೆ . . . ಪಶ್ಚಾತ್ಕಾಲದೊಳ್ ತಪಂಬಡುವುದೆಂದೊಡೆ (ಪಡ್ಮಾರಾ. ೧೦೩-೬). " ಮಂಗಳ ಕರನಾದ ಬಾಲಕ ? " (ಪಡ್ಮಾರಾ. ೪೬೪ಕ. ೨೪೬). [ಬಾಲ್ಯ + ?]

ಬಾಲವಧ (ನಾ). ಮಕ್ಕಳ ಕೊಲೆ ; ಶಿಶುಹತ್ಯೆ : ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ (ಗದಾಪಬ. ೯-೪೪).

[ಸಂ.]

ಬಾಲವಿಧವೆ (ನಾ). ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡವಳು : ಹೀಗೆಯೇ ಇನ್ನೊಬ್ಬ ಬಾಲವಿಧವೆಯಿದ್ದಳು (ಹುಪುಬ. ೬೬).

[ಸಂ. ಬಾಲವಿಧವಾ]

ಬಾಲವೂರು, ಬಾಳವೂರು (ನಾ). ಒಂದು ಊರಿನ ಹೆಸರು ; ಈಗಿನ ಧಾರವಾಡಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಬಾಳೂರು : ಪಾನು ಜ್ಞರ್ ಕಿಱುವಳ್ಳಿ ಬಾಲವೂರು . . . ಗ್ರಾಮಾನ್ ಮಧ್ಯೇ (ಇಆ. VIII, ೨೭ : 758). **ಬಾಳವೂರು** : ಬಾಳವೂರು ಇತ್ಯೇತೇಷಾಂ ಗ್ರಾಮಾಣಾಂ (ಎಇ. ೪. ೨೦೪-೬೬; 757). [? + ಊರ್ಯ್ (<ಊರ್)]

ಬಾಲಶಯ್ಯೆ (ನಾ). (ಮಗುವನ್ನು ಮಲಗಿಸುವ) ತೊಟ್ಟಿಲು : "ಶೈಶವಿ ಬಾಲಶಯ್ಯೆಯೆನೆ ತೊಟ್ಟಿಲಕ್ಕುಂ " (ಮಂಗಣಾ. ೬೦-೦೬).

[ಸಂ. ಬಾಲಶಯ್ಯಾ]

ಬಾಲಶಶಿಮೌಳಿ (ನಾ). ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದವನು : ಶಿವ : ಪ್ರಮಥರಱಿಯದೆ . . . ಆದ್ಯರಱಿಯದೆ ಬಾಲಶಶಿಮೌಳಿ ಕ್ಷಮೆಯುಳಿದು . . . ಭಕ್ತೈಕಭಾವದ ಸಮತೆಯುಳಿದಿಬ್ಬರನು ಮಡಗಿದ ಬೆಡಗು ಲೇಸಾಯ್ತು (ಪಪಕ್ಷ. ೬೬-೨೦); ನಿಮ್ಮ ನೆಱಿ ಕೆಟ್ಟಾಡಿದರ ಬಾಪುರ್ ಹುಳುವುದೆಂದನು ಬಾಲಶಶಿಮೌಳಿ (ಶುವಾ.ಕ. ೦೬-೨೮).

[ಸಂ. ಬಾಲಶಶಿಮೌಲಿನ್]

ಬಾಲಶಿಕ್ಷೆ (ನಾ). ಚಿಕ್ಕ ಮಕ್ಕಳ ಶಿಕ್ಷಣ ; ಬಾಲಕರಿಗೆ ಕೊಡುವ ವಿದ್ಯಾಭ್ಯಾಸ : ಬಾಲಶಿಕ್ಷೆಗಂ ವಿನ್ಯಾಸದ ಪಕ್ಕಾಣಕ್ಕಂ ವೃತ್ತಿಯ ಭೂಮಿಯೊಳಗೆ ಬಿಟ್ಟ ಭಟ್ಟವೃತ್ತಿಯೊಂದು (ಶಿಇಇ. XX, ೧೩-೬೦ ; ?). [ಸಂ. ಬಾಲಶಿಕ್ಷಾ]

ಬಾಲಸಂಗಡ (ನಾ). ೧. ಕುಸ್ತಿಯ ಒಂದು ಪೇಚು; ಪೈಲ್ವಯುದ್ಧದ ಒಂದು ವರಸೆ. ೨. ಕತ್ತಿವರಸೆಯಲ್ಲಿ ಒಂದು ಬಗೆ : ಬಾಲಕರೊಡನೆ ಕೂಡಿದಂಥಾ ಗೊಣೆಯಿದಕ್ಕೆ ಬಾಲಸಂಗಡಯೆಂಬ ಹೆಸರು (ಪಡ್ಡಟೀ. ೨-೪೦).

[←ಹಿಂ. ಬಾಲಸಂಗಾಡಾ, ಬಾಲಸಿಂಗಡಾ ; ಮರಾ. ಬಾಳಸಾಂಗಾಡಾ]

ಬಾಲಸನ್ಯಾಸಿ (ನಾ). ಚಿಕ್ಕವಯಸ್ಸಿನಲ್ಲಿಯೇ ಸಂನ್ಯಾಸಿಯಾದವನು : ಉಡುಪಿಯಲ್ಲಿ ಬಾಲಕೃಷ್ಣನ ಪ್ರತಿಷ್ಠೆಯೂ ಬಾಲಸನ್ಯಾಸಿಗಳ ಪೂಜಾ ಪದ್ಧತಿಯೂ . . . ಭಕ್ತಿಯ ಸಾಕ್ಷಿಯಲ್ಲದೆ ಬೇರೆ ಅಲ್ಲ (ಶಾಸರ. ೨೪೭) ; ಬಾಲಸನ್ಯಾಸಿ ಕಟ್ಟರೆ ಪೊಳನಾಯಿಗಿಂತ ಕಡೆ (ಗಾಸ).

[<ಸಂ. ಬಾಲಸಂನ್ಯಾಸಿನ್]

ಬಾಲಸರ (ನಾ). ಗಾಳಿಪಟಕ್ಕೆ ಕಟ್ಟುವ ಉದ್ದವಾದ ಪಟ್ಟಿ : ಬಾಲಂಗಚ್ಚೆ ; ಬಾಲಂಗೋಸಿ : ಪಟ ಬಾಲಸರ ಕೂಡಿದ್ದರೇನು ಸೂತ್ರ ಕಿಂಚಿತ್ತು ತಪ್ಪಿದಡೆ ಅದು ಪೇಚರತ್ವದಲ್ಲಿ ಆಡಲಱಿಯದು (ಪೂಗೀವಾ. ೩೭-೦೩೬) ; ಪಟದೊಳಗಣ ಬಾಲಸರಕ್ಕೆ ಪ್ರತಿಸೂತ್ರ ನೇಣಾಂಟೆ (ಪಂಪೀಪ. ೨೭೪-೨೦). [ಬಾಲ್ಯ$_1$ + ಸರ$_3$]

ಬಾಲಹುಳು 'ಬಾಲಪುಳು' ನೋ.

ಬಾಲಳಿ (ನಾ). ಎಳೆಯ ದುಂಬಿ ; ಮರಿದುಂಬಿ : ' ಬಾಲಳಿಗುರುಳು ' ಪರಾ. [ಸಂ. ಬಾಲಲಿ]

ಬಾಲಳಿಗುರುಳು (ನಾ). ಮರಿದುಂಬಿಯಂತೆ ಕಪ್ಪಾಗಿರುವ ಕೂದಲು : ಸಂಳಿಗುರುಳವರುಂಗುರಗುರುಳವರು ಜಾಲಳಿಗುರುಳವರು . . . ಆ ಕುವರಿಯ ಬಳಿವಿಡಿದ್ಯೆದಿತೊಗ್ಗಿನಲಿ (ಪೋಚರ. ೪೪-೦೦).

[ಬಾಲಳಿ+ಕುರುಳ್ಳು$_1$ (<ಕುರುಳ್$_1$)]

ಬಾಲಾಪಾನೆ (ನಾ). ಉಪ್ಪರಿಗೆ ; ಮೇಲ್ಮಾಡ ; ಮಹಡಿ : ಅರಮನೆಯೊಳಕ್ಕೆ . . . ಎಡಪಾರ್ಶ್ವದ ಬಾಲಾಪಾನೆಯಲ್ಲಿ ಮಹಾರಾಜರವರು ನವರತ್ನಾಲಂಕೃತವಾದ ದಂತದ ಸಿಂಹಾಸನದ ಮೇಲೆ ಮುಹೂರ್ತ ಮಾಡಿಸಿದ್ದರು (ಪುಚಾವಂ. II, ೩೩). [←ಪಾರ. ಹಿಂ. ಬಾಲಾಖಾನಾ]

ಬಾಲಾಟ (ನಾ). ಮಗುವಿನ ಆಟ ; ಬಾಲಕೇಳಿ : ಬಲು ಪರಿ ಒಂದೊಂದು ಬಾಲಾಟದಲಿ ನಲಿದು ಒಲಿಮೆಯಿಂದಲಿ ನೋಡ ಬಂದ ಯೌವನಸ್ಥೀಯರ ನಿಲಿಯ ಬಿಡಿಸಿ (ಪಚ್ಚೋಸು. ೦೯-೩). [ಬಾಲ್ಯ+ಆಟ]

ಬಾಲಾತಪ, ಬಾಳಾತಪ (ನಾ). ೧. ಆಗ ತಾನೆ ಉದಯವಾದ ಸೂರ್ಯನ ಬೆಳಕು ; ಎಳೆಬಿಸಿಲು; ಬಲಿಯದಿರುವ ಬಿಸಿಲು : ಹರಿಚಂದನವಿಚ್ಚುರಿತಾಂಗರಾಗನತಿರುಚಿರಹಾರನೇನೆಸೆದನೊ ನರ್ಘ್ಯರಮುಂ ಬಾಲಾತಪಮುಂ ಬೆರಸಿರ್ದದ್ರೀಂದ್ರನಂತೆ ಪಾಂಡ್ಯನೃಪೇಂದ್ರುಂ (ಪಾಂತೀಪು. ೩-೦೩೮) ; ಪೆಣ್ದುಂಬಿಗಳ್ಬಾಯ್ಬುದ್ದು ಪುಷ್ಪರಸಾಸಾವದ ತುಂತುಱಿಂದೆಱಿಕೆ ನಾಂದಾದೋಳಿತಾಶೋಕಮಂಜರಿಯಂ ಸಾರ್ವುವು ಪಲ್ಲವೋಲ್ಲಸಿತಮುಂ ಬಾಲಾತಪಭ್ರಾಂತಿಯಿಂ (ಪುರ್ಗಿಪು. ೨-೪೬). **ಬಾಳಾತಪ** : ೧. ಮತ್ಪೂರ್ವಳ ಲೋಚನಕುಮುದಂ ಮುಗಿದುವು ಕುಮುದಿನಿಗಳ್ ಬಾಳಾತಪಕ್ಕೆ ಪೊಗಪೊಸಮದಪೋಲ್ (ಪುರ್ಗಿಪು. ೬-೦೨೪). ೨. ಕಿರುಪ್ರಕಾಶ ; ಮಂದಕಾಂತಿ : ಅರಿಕೇಸರಿಯ ಪಾದತಳಂಗಳಡಿಗೆಱುಗಿದರಿನರಪಾಲರ ಮಕುಟಮಾಣಿಕ್ಯಪರೀಚಿಜಾಲಬಾಳಾತಪಂಗಳನಲೆದು ಕೆಂಕಮಾದಂತಾದುವು (ಪಂಪಭಾ. ೨-೪೯ ವ). [ಸಂ.]

ಬಾಲಾಭ್ಯಾಸ (ನಾ). ಚಿಕ್ಕವಯಸ್ಸಿನಲ್ಲಿ ಮಾಡುವ ಸಾಧನೆ : ಬಾಲಾಭ್ಯಾಸವ ಮಾಡಹೋದರೆ ಎನ್ನ ಸುರಿಗೆ ಎನ್ನ ನಟ್ಟಿತ್ತು ಎಂತಯ್ಯಾ ಕಲಿಯೊಡನೆ ಶ್ರವವ ಮಾಡುವೆನು (ಬಸವ. ೬೨೪). 'ಬಾಲಸಂಗಡ' ಪರಾ. [ಸಂ.]

ಬಾಲಾರಿಷ್ಟ (ನಾ). = ಬಾಲಗ್ರಹ. [ಸಂ.]

ಬಾಲಾರ್ಕ, ಬಾಳಾರ್ಕ (ನಾ). ಅದೇ ತಾನೆ ಹುಟ್ಟಿದ ಸೂರ್ಯ ; ಉದಯರವಿ : ತದಂಗನಾಂಕತಲದೊಳ್ ಬಾಲಾರ್ಕನಂ ಪೋಲ್ತು ಭಾಸುರ ತೇಜೋಧಿಕನಪ್ಪ ಬಾಲನನೊಱಲ್ದಟ್ಕರ್ತು ನೋಡುತ್ತಮಿರ್ವರುಮಂ ಮೂಮೆ . . . ಬಲಗೊಂಡು (ಅಂಪು. ೭-೪೪) ; ದಿನದೇವಿ ತಾಂ ಬಾಲಾರ್ಕಕಲಶದೀಪಂಬಿಡಿದು ಹೊತ್ತರೆಯ ಹೊಸ್ತಿಲಂ ದಾಂಟುತಿರೆ, ಸೇರ್ದುದಾ ತೇರಯೋಧ್ಯೆಯ ನಾಡಿನೆಲ್ಲೆಯಂ (ಶ್ರೀರಾಮಾ. ೯೬-೪೯೭). **ಬಾಳಾರ್ಕ** : ವೇಲೆಯ ತಮಾಳವನಮಂ ಕಾಳದ ಕಟ್ಟಲೆಯೆ ಗೆತ್ತು ಮುತ್ತಿದುವಕ್ಕುಂ ಬಾಳಾರ್ಕಬಿಂಬಶತಂ (ಮಲ್ಲಿಪು. ೦೨-೧೨೭). [ಸಂ.]

ಬಾಲಾಶೋಕ (ನಾ). ೧. ಏಳೆಯ ಅಶೋಕವೃಕ್ಷ. ೨. ತರುಣಿಯರಿಗುಂಟಾಗುವ ದುಃಖ ; ಯುವತಿಯರಿಗಾಗುವ ಶೋಕ : ೧, ೨ : ಬಾಲಾಶೋಕಂ ವಿಗ್ರಹಲೀಲೆ ರಜೋವಿಕೃತಿ . . . ಇಲ್ಲ ಬನದೊಳಲ್ಲದೆ ಜನದೊಳ್ (ಸುಸ್ವಪು. ೨-೨೮).

[ಸಂ. (ಬಾಲ+ಅಶೋಕ ; ಬಾಲಾ+ಶೋಕ)]

ಬಾಲಾಸು (ನಾ). ಭಾರ ಹೇರುವುದಕ್ಕೆ ಮುಂಚೆ ಎತ್ತು, ಕುದುರೆ ಮುಂತಾದುವುಗಳ ಬೆನ್ನಿನ ಮೇಲೆ ಹಾಕುವ ಬಟ್ಟೆಯ ತಡಿ : ಒಳ್ಳೆ ಒಳ್ಳೆ ಎತ್ತುಗಳ ತಲಾಸು ಮಾಡಿಸಿ ಕವುದಿ. ಗೋಣಿ, ಬಿಗಿ. ಬಾಲಾಸು ಸಹಾ ತಯಾರು ಮಾಡಿಸಿ . . . ಹುಲ್ಲು ನೀರು ಇದ್ದಲ್ಲಿಗೆ ಚರಾಯಿಗೆ ಕೂಡಿಸಿದರು (ರಾಸೇಂದ್ರ. ೭೭). [←ಪಾರ. ಬಾಲಾಸ್].

ಬಾಲಿಕೆ, ಬಾಳಿಕೆ$_2$ (ನಾ). ೧. ಹುಡುಗಿ ; ಬಾಲಕಿ : ಬಾಲಿಕೆ[ಪಾಠಾಂ. ಲಕಿ]ಮುಗ್ಧೆ ತಕ್ಕುದಱಿಯಳ್ ಪಲರಂ ಪೆಱಗಿಕ್ಕಿ ಸೂಡಿದಳ್ ಮಾಲೆಯಂ (ಪಂಠಾಮಾ. ೩-೪೭). ೨. ಚಿಕ್ಕ ಗಾತ್ರದ ಏಲಕ್ಕಿ. ೩. ಉಸುಕು ; ಮರಳು. ೪. ಶ್ರೇಷ್ಠವಾದ ನೆಲ್ಲಿಯ ಮರ : ರಾಯನೆಲ್ಲಿ ; ಅರನೆಲ್ಲಿ (?) : "ಅರನೆಲ್ಲಿ ಬಾಲಿಕೆ[ಪಾಠಾಂ. ಲಕಿ]ಯೆನಿಕ್ಕು" (ಮಂಗರಾ. ೩೬-೦೯). **ಬಾಳಿಕೆ$_2$** : ೧. ಶಿಖಂಡಿಯು ಕೇಳಿ ನಮ್ಮಿ ಮಾನ ಹೋಗುವುದೆನುತ ರಾತ್ರಿಯಲಿ ಆಲಯವ ಬೀಳ್ಕೊಂಡು ಗಹ್ವರದೊಳು ವನಕ್ಕೈ ತರಲು ತುಂಬುರು ಬಾಳಿಕೆಯ ಕಂಡಂದು ದುಗುಡವಿದೇನು ಹೇಳೆಂದ (ಸಂಭವ. ೦೩-೬೦). [ಸಂ. ಬಾಲಿಕಾ]

ಬಾಲಿಶ (ಗು). ೧. ಮಗುವಿಗೆ ಸಂಬಂಧಿಸಿದ ; ಶಿಶುಸಹಜವಾದ ; ಬಾಲಸ್ವಭಾವದ. ೨. ದಡ್ಡತನದ ; ಜ್ಞಾನಹೀನವಾದ : ಹೀಗೆ ಸ್ಥಿರವಾಗಿ ಬಂದ ಬಾಲಿಶ ಭಾವನೆಗಳ ಪುಂಜವಾದ ಅಂತಃಕರಣವು ವ್ಯಕ್ತಿ ವ್ಯಕ್ತಿಗೂ . . . ಕಾಲಕಾಲಕ್ಕೂ ಬೇರೆಯಾಗುತ್ತದೆ (ವಿಶಾಪಾ. ೩೦) ; ಮೊದಲು ಅರಿವು, ವಿಚಾರಶಕ್ತಿ ಎಂಬುದೇ ಇಲ್ಲ. ಕೇವಲ ಬಾಲಿಶ ಕಲ್ಪನೆ ; ಒರಟು ತರ್ಕ (ಬಿರ್ಕಪ್ರ. XXIX ಪ್ರಸ್ತಾವನೆ). ೩. ಎಚ್ಚರಗೇಡಿಯಾದ ; ಅಜಾಗರೂಕತನದ. ೪. ಮಕ್ಕಳಾಟಿಕೆಯ ; ಹುಡುಗುತನದ. (ನಾ). ೫. ಮಗು ; ಶಿಶು : "ಮಗುವಿನಲ್ಲಿಯುಂ ಬಾಲಿಶನೆಂಬುದು" (ಜಲಾಯು. ೦೩೪-೨೦) ; "ಬಾಲನೊಳ್ ಬಾಲಿಶನೆಂದೆಂಬುದು" (ಮಂಗರಾ. ೧೪೦-೦೦). ೬. ಮೂಢ ; ತಿಳಿಗೇಡಿ ; ಮೂರ್ಖ : ಅಜ್ಞಜನಂಗಳ್ ಬಾಲಿಶರೆಂದಜಿತರ್ ಪೇಳ್ಗುಂ (ವಿಸ್ತುಪು. ೧-೪-೦೩೪) ; ಬಾಲಿಶರ ನುಡಿಗಳಿಂ ಮರುಳಾಗಿ ಸಂತತಿಯ ಕಾಲವಶಗೆಯ್ಯಲೇಂ ಜೀಯ (ಪಂಕಾರಾ. ೬-೪-೨೦) ; ಬಾಲ ಬಾಲಿಶರು ಗುರುಪೀಠಗಳನೇರಿದರು (ಯಶೋಧ. ೩೪-೨೨). ೭. ಹುಡುಗಾಟ ; ಮಕ್ಕಳಾಟ : ಎನ್ನ ಮೇಣೆನ್ನ ಪೊನ್ನ ಪಿಳುಕಿನ ಕೋಲ ಬಾಲಿಶಮಂ ನೋಡು (ರಾಮಾಶ್ವ. ೦೬೦-೧೨). ೮. ದಿಂಬು ; ಮತ್ತೆ. [ಸಂ.]

ಬಾಲಿಶತೆ (ನಾ). ದಡ್ಡತನ ; ಮೂಢತೆ : ಜಗತಿಯುದ್ದಂಡ ರಣಪಂಡಿತ ಸುರೇಂದ್ರಸುತನಿಗೆ ಸಿಲುಕಿದೀ ರಾಜ್ಯ ತನಗೆಂತಡಸಿತೆಂಬ ಬಗೆಯನರಿಯದೆ ಪೋದ ಬಾಲಿಶತೆಗೊಳಗಾದನುಪಕೃತಿಯನೆಣಿಸದಾದ (ಪಂಕಾರಾ. ೪-೦೪-೬). [ಸಂ. ಬಾಲಿಶತಾ]

ಬಾಲಿಶತ್ವ (ನಾ). = ಬಾಲಿಶತೆ : ಎಲೆ ಮೂಢ ಬಾಲಿಶತ್ವದ ನುಡಿಗಳಂ ಮನ ಬಂದ ತೆರದೊಳುಸಿರಿದೆ (ಪಂಕಾರಾ. ೬-೨೬-೬೭). [ಸಂ.]

ಬಾಲು (ನಾ). ರಬ್ಬರು, ಪ್ಲಾಸ್ಟಿಕ್ಕು ಮುಂತಾದುವುಗಳಿಂದ ಮಾಡಿದ ಆಟದ ಗುಂಡನೆಯ ವಸ್ತು ; ಚೆಂಡು : ಬಾಲು ನಮ್ಮ ಗೋಲಿನ ಒಳಗೆ ಬಂದು ಬಿದ್ದಿತ್ತು (ಶಾಲಮ. ೭೭). [← ಇಂ. Ball]

ಬಾಲೆ$_1$, ಬಾಳೆ$_3$ (ನಾ). ೧. (ಹದಿನಾರುವರ್ಷದ ಒಳಗಿನ) ಹುಡುಗಿ : ವಯಸವಿಭೇದದಿಂ ಬಾಲೆ ಯೌವನೆ ಪ್ರೌಢೆ ಲೌಲ್ಯೆಯೆಂದಿಂತು ಧರಿತ್ರಿಯೊಳಪ್ಪರ್ ನಾಲ್ವರ್ ಕಾಂತೆಯರ್ (ಮದಕಿ. ೬-೦) : ಸಲೆ ಬರಿಸ ಮಿರಾಜಱಲಿ ಬಾಲೆ (ಜನವ. ೫-೪). ೨. ಯುವತಿ ; ತರುಣಿ : ಬಾಲೆಗೆ ಗುಣಕಾಂತಿ ವಯೋಲೀಲೆಗೆ ವಿನಯಪ್ರಧಾನಗುಣಗಣಿಗೆಣೆ ಭೂಪಾಲಂ (ಶಾಂತಿಪು. ೫-೦೫೫) ; ಬಾಲೆಯ ಕಡೆಗಣ್ಣೋಟಮೆ ಸಾಲದೆ ನನೆಗಣೆಗಳೇವುವು (ಪಂಠಾಮಾ. ೫-೪೪) ; ಕೇಳೆಲೆ ಬಾಲೆ ! ಬಾಲೇಂದು ಫಾಲೆ ! (ರಾಮಾಶ್ವ. ೭-೦). ೩. ಮಗು ; ಶಿಶು : ಬಾಲೇನ ತೊಟ್ಟಿಲಿಗೆ ಮಲಗಿಸಕ್ಕೆ ಮುಂಚೆ. ಮೈಗೆ ಎಣ್ಣೆ ಹಚ್ಚದೆ ಅಂತಾ ಕಾಣ್ತದೆ (ಮಲಮ. ೪೬೦). ೪. ಒಂದು ಬಗೆಯ ಮಲ್ಲಿಗೆ. ೫. ಒಂದು ಬಗೆಯ ಸಸ್ಯ : "ಬಾಲೆ. ಸೊಟಗೆ. ಸೋಟಿಗೆ" (ಸಸ್ಯವಿ. ೯೯) ; ಸೊಟಗೆ. ಬಾಲೆ (ಮೈಸಿಗಿ. ೫೮-೧೦೭೩). ೬. ಸಣ್ಣ ಗಾತ್ರದ ಏಲಕ್ಕಿ. ೭. ಅರಿಸಿನ. ೮. ತೆಂಗಿನ ಕಾಯಿ. **ಬಾಳೆ$_3$** : ೨. ಕೇಳಿರೆ ಕಂಕಭಟ್ಟನೆ ಯುಧಿಷ್ಠಿರನಾ ವಲಲಂ ವೃಕೋದರಂ ಬಾಳೆಯರಂ ದಲಾಡಿಪ ಬೃಹಂದಳೆ ಫಲ್ಗುಣಂ (ಪಂಪಭಾ. ೯-೬) ; ತೋಳ ನಖವ್ರಣಕೆಱಗಿ[ದ] ಬಾಳೆಗಳಂ ನೋಟ್ಟು ಬಾಳೆ ಕಣ್ಮೇನೆಂಬಾಳೋಳಮನೊಡರಿಸೆ ಸಲೆ ನೃಪಮಾಳೆಗೆ ಪಡೆದಳ್ ಮೃಗಾಕ್ಷಿ ಪರಿಸಂಭ್ರಮಮಂ (ಶಾಂತಿಪು. ೮-೪೩).

[ಸಂ. ಬಾಲಾ]

ಬಾಲೆಮರ (ನಾ). ಒಂದು ಬಗೆಯ ಮರ : "ಬಾಲೆಮರ, ಮಲ್ಲಲಿ. ಅಬನಾಸ. ಕರೀಮರ" (ಸಸ್ಯವಿ. ೫೦) ; (ಮೈಸಿಗಿ. ೩೦-೫೯೯). [ಬಾಲೆ+ಮರ$_1$]

ಬಾಲೆವೆಣ್ಣು (ನಾ). = ಬಾಲೆ ೨ : ತೋಳೊಳೊಪ್ಪುವ ಸರ ತಾತಿ ಹೊಂಬಳೆಗಳ ಬಾಲೆವೆಣ್ಣುಗಳೈದಿದರು (ಕಂಸವಿ. ೨೦-೦೬).

ಬಾಲೆವೆಂಗಳು (ಬಹುವ) : ಹೊಸಹರೆಯದ ಹೊಮ್ಮಿನ ಬಾಲೆವೆಂಗಳು ಜಸವಡೆದೆಸೆದರೇನೆಂಬೆ (ಕಂಸವಿ. ೨೪-೪೦). [ಬಾಲೆ+ಪೆಣ್ಣು(<ಪೆಣ್)]

ಬಾಲೇಂದು (ನಾ). = ಬಾಲಚಂದ್ರ ೧ : ಕೇಳೆಲೆ ಬಾಲೆ ! ಬಾಲೇಂದು ಫಾಲೆ ! (ರಾಮಾಶ್ವ. ೭-೦). [ಸಂ.]

ಬಾಲೇಂದುಗೆಱ^3 (ನಾ). [ಕಾಮಶಾ] ಬಾಲಚಂದ್ರನ ಆಕಾರದ ನಖಕ್ಷತದ ಗುರುತು ; ಅರ್ಧಚಂದ್ರಾಕೃತಿಯ ನಖಕ್ಷತದ ಗುರುತು : ಓಪಳ ಗುರುಕುಚಯುಗಳವ ಪುಂಡ್ರೇಕ್ಷುಚಾಪ ಕಣ್ಣೆಟ್ಟು ನಿಟ್ಟಿಸಲು ಸ್ಥಾಪನೆವಡೆದಿರ್ದ ಬಾಲೇಂದುಗೆಱ^3 ಸುಸ್ವರೂಪವಾಗಿರ್ದುದೇನೆಂಬೆ (ಪೋಹತ. ೦೬-೫೦). [ಬಾಲೇಂದು+ಗೆಱ^3]

ಬಾಲೇಂದುಧರ (ನಾ). ಬಾಲಚಂದ್ರನನ್ನು ಧರಿಸಿದವನು ; ಶಿವ : ಅಕ್ಕಱಿಂ ಬಾಲೇಂದುಧರನೊಳು ಪೊಕ್ಕು ಪೊಕ್ಕಲರ್ದಲರ್ದು. ಕೂಡುತ ಸೊಕ್ಕಿ ತಲ್ಲಿಂಗದೊಳಗಿಂತು ವಿಲೀನನಾಗಿರ್ದು (ಬಸವು. ೩೫-೪). [ಸಂ.]

ಬಾಲೇಯ (ಗು). ೧. ಬಲಿ ಕೊಡಲು ಯೋಗ್ಯವಾದ. ೨. ಮಕ್ಕಳಿಗೆ ಯೋಗ್ಯವಾದ, —ಉಚಿತವಾದ. ೩. ಕೋಮಲವಾದ ; ಮೃದು

ಪಾದ. (ನಾ). ೪. ಕತ್ತೆ : "ಬಾಲೇಯಮಾ ಗರ್ದಭಂ ಚಕ್ರೀವತ್ಸರಂ ರಾಸಭಮೆ ಕತ್ತೆಯಕ್ಕುಂ" (ಮಂಗರಾ. ೫೫-೬). [ಸಂ.]

ಬಾಲೇಯಶಾಕ (ನಾ). ಒಂದು ಬಗೆಯ ಸಸ್ಯ : "ಹಂಚಿಕಾ . . . ಬಾಲೇಯಶಾಕಃ, ಬರ್ಬರಃ, ವಂದಕಃ — ೯ ಭಾರಂಗಿಃ ಹೆಸರುಗಳು" (ಸಿದ್ಧಾಂತಿ. ೦೩೨). [ಸಂ.]

ಬಾಲೋತ್ತರ (ನಾ). "ಬಾಲಿಶನುಡಿ. ಹುಡುಗತನದ ಮಾತು" (ಮೋಳಿಮಾ.ಸ. ಕೋಶ) : ಹಸಿವ ಕೊಂದೆನೆಂದು ಘೃತ ಹಾಲು ಸಕ್ಕರೆ ಹಣ್ಣುಕಾಯಿ ಮುಂತಾದ ಫಲಾಹಾರವ ಕೊಂಡು ಫಲಕ್ಕೆ ಬಾರೆವೆಂಬ ಬಾಲೋತ್ತರವ ನುಡಿದು ಬಾಲಹರಾದೆವೆಂಬ ಗೆಲ್ಲಗೂಳಿಗಳು ಕೇಳಿರೋ (ಮೋಳಿಮಾ. ೫೭-೨೩೯). [ಸಂ.]

ಬಾಲ್ಕನಿ (ನಾ). ೧. ಮನೆಯ ಗೋಡೆಯಿಂದ ಮುಂಚಾಚಿಕೊಂಡು, ಕಂಬಗಳ ಆಧಾರದಿಂದ ನಿಂತಿರುವ (ಕಟಕಟೆಯುಳ್ಳ) ಭಾಗ : ರಾಮಕೃಷ್ಣ ಹಾಗು ಜಾನಕಿಯರು ತಮ್ಮ ಕೋಣೆಯ ಹೊರಗಿನ ಬಾಲ್ಕನಿಗೆ ಬರುವಾಗ ಅತ್ಯಂತ ಉಲ್ಲಸಿತ ಮನಃಸ್ಥಿತಿಯಲ್ಲಿದ್ದರು (ಅಶೋಲೀ. ೦೨೬); ರೇಣು ಅಲ್ಲಿಂದ ಮೇಲಕ್ಕೆದ್ದು ಬಾಲ್ಕನಿಯೆಡೆಗೆ ಸರಿದುಹೋದಳು (ಹೇಮಂತ. ೨೪೩). ೨. ಚಿತ್ರಮಂದಿರ ಅಥವಾ ನಾಟ್ಯಮಂದಿರಗಳಲ್ಲಿ ಪ್ರೇಕ್ಷಕರು ಕುಳಿತುಕೊಳ್ಳುವುದಕ್ಕಾಗಿ ನಿರ್ಮಿಸಿದ ಮೇಲಟ್ಟದ ಪ್ರದೇಶ : ಶ್ರೀಧರ ಬಾಲ್ಕನಿಗೆ ತಾನೇ ಟಿಕೀಟು ತೆಗೆದ (ರೂಪಶ್ವಿ. ೦೦೬).

[←ಇಂ. Balcony]

ಬಾಲ್ದಿ 'ಬಾದಲಿ$_1$' ನೋ.

ಬಾಲ್ಯ (ನಾ). ೧. ಚಿಕ್ಕಂದು ; ಎಳವೆ ; ಶೈಶವ : ಚಕ್ರಿಗೆ ಬಾಲ್ಯಕ್ಕನು ರೂಪಕ್ರಮವಾಯ್ತೆನಿಸಿ ಮುತ್ತಿನುಡೆವಣಿಯೆಸೆಗುಂ (ಜಗವಿ. ೩-೪೬); ಹುಟ್ಟಿದ ಒಂದು ವರ್ಷ ತೊಡಗಿ ಹದಿನಾರು ವರ್ಷ ಪರ್ಯಂತಕ್ಕೂ ಬಾಲ್ಯವೆನಿಸಿಕೊಂಬುದು(ಸಕಪ್ಯ. ೦೫). ೨. ಹುಡುಗುತನದ ಅವಿವೇಕ : ಮೂರ್ಖತನ. ೩. ವಿನಯ ; ನಮ್ರತೆ. [ಸಂ.]

ಬಾಲ್ಯವಿನೋದ (ನಾ). = ಬಾಲಕೇಲಿ ೧ : ಭವದೀಯಮನೋಹರಬಾಲ್ಯ ವಿನೋದಾಮೃತದೊಳೆಯ್ದೆ ತೀವಿದ ಮತ್ಸ್ವಾಂತವನಿಂತೀ ವಿಷದಿಂ ತೀವುವುದೇ ಶ್ರೀವತ್ಸವತ್ಸವತ್ಸಾ (ಜಗವಿ. ೩-೯೨). [ಸಂ.]

ಬಾಲ್ಯವಿವಾಹ (ನಾ). ಎಳೆಯ ವಯಸ್ಸಿನಲ್ಲಿ ಮಾಡುವ ಮದುವೆ ; ವಯಸ್ಸಿಗೆ ಬರುವ ಮುನ್ನವೇ ಮಾಡುವ ಮದುವೆ : ಹಿಂದೆ ಬಾಲ್ಯವಿವಾಹಗಳು ನಡೆಯುತ್ತಿರಲಿಲ್ಲ (ಶಾರದ. ೩೯೦); ಬಾಲ್ಯವಿವಾಹ ಒಳ್ಳೆಯದಲ್ಲ (ವಿಶಉ. ೬೪). [ಸಂ.]

ಬಾಲ್ಯಾವಸ್ಥೆ (ನಾ). ೧. ಚಿಕ್ಕಂದು; ಬಾಲ್ಯಕಾಲ : ಬಾಲ್ಯಾವಸ್ಥೆಯ ಪ್ರಾರಂಭದ ಹೊತ್ತಿಗೆ ಜ್ಞಾಪಕಶಕ್ತಿ ತಕ್ಕಮಟ್ಟಿಗೆ ಬೆಳೆದಿರುತ್ತದೆ (ಕವಿಕೋ. XII, ೭೬). ೨. ಪ್ರಾರಂಭದ ಹಂತ,—ಸ್ಥಿತಿ : ಈ ಸಂಘದ ಕಾರ್ಯಯೋಜನೆಗಳು ಇನ್ನೂ ಬಾಲ್ಯಾವಸ್ಥೆಯಲ್ಲಿವೆ (ರೂಢಿ).

[ಸಂ. ಬಾಲ್ಯಾವಸ್ಥಾ]

ಬಾವ 'ಭಾವ$_1$' ನೋ.

ಬಾವಂಚಿ 'ಬಾಗುಜಿ' ನೋ.

ಬಾವಂಜಿ 'ಬಾಗುಜಿ' ನೋ.

ಬಾವಂತಿ 'ಭವಂತಿ' ನೋ.

ಬಾವಟೆ 'ಬಾವುಟ' ನೋ.

ಬಾವಡಿ (ನಾ). ಸೋಪಾನವುಳ್ಳ ಅಗಲವಾದ ಬಾವಿ ; ಹೊಕ್ಕರಣೆ ; ಪುಷ್ಕರಿಣಿ : 'ಬಾವಡಿದಸವಂದ' ಪರಾ.

[←ಹಿಂ. ಮರಾ. ಬಾವಡೀ, ಬಾವಲೀ]

ಬಾವಡಿದಸವಂದ (ನಾ). "ಬಾವಿ, ಕೊಳ ಮುಂತಾದವನ್ನು ಅಗೆಯಿಸುವ ಹಾಗು ಅವುಗಳನ್ನು ನಡೆಸಿಕೊಂಡು ಹೋಗುವ ಕಾರ್ಯಕ್ಕಾಗಿ ಕೊಡಲಾಗುತ್ತಿದ್ದ ದ್ರವ್ಯಾದಾಯ" (ಕಸಂಗ್ಲಾ. ೯೨). 'ದಶಬಂಧ' ಪರಾ. [ಬಾವಡಿ + ದಸವಂದ (<ದಶವಂಧ)]

ಬಾವಡೆ (ನಾ). ಮಣ್ಣಿನ ಮುಚ್ಚಳ : ತಿಮ್ಮ ಒಂದು ಬಾವಡೆಯಲ್ಲಿ ಗಂಜಿಯನ್ನು ಎತ್ತಿಕೊಂಡು ಹೊರಗೆ ಬರುತ್ತಾನೆ (ಮೊಮಗು. ೬೨).

[←ತುಳು. ಬಾವಡೆ]

ಬಾವಣಯ್ಯ (ನಾ). ಒಬ್ಬಾತನ ಹೆಸರು : ಬರೆದಂ ಬಾವಣಯ್ಯಂ (ಎಕ. I, ೨೬-೦೭ ; 944). [? + ಅಯ್ಯ$_1$]

ಬಾವಣಿಕೆ (ನಾ). ಆದರ ; ಗೌರವ : ಬಾವಣಿಕೆಯಿಲ್ಲದ ನಂಟರ ಮನೆಗೆ ಹೋಗಬಾರದು (ರೂಢಿ). [< ಭಾವ$_2$]

ಬಾವಣಿಸು (ಕ್ರಿ). ಆದರಿಸು ; ಗೌರವಿಸು : ಇಂಕರನಾವರೂ ಬಾವಣಿಸ ಬೇಕಲ್ಲ ನನ್ನ ಮಾತಾ ? (ಸರ್ವಮಂ. ೦೭). [ಬಾವಣಿಕೆ + —ಇಸ್ಯು$_3$]

ಬಾವನಂಟ (ನಾ). ಸೋದರಿಯ ಗಂಡ ; ಭಾವ : ಬಾವನಂಟ ಬಂದಾಗ್ಯೂ ಹಾಲು ಚಲ್ಲೋದು ಬಿಡಲಿಲ್ಲ (ಗಾರ).

[ಬಾವ (< ಭಾವ$_1$) + ನಂಟ]

ಬಾವನ್ನ$_1$ (ನಾ). ಒಂದು ಸಂಖ್ಯೆ ; ಐವತ್ತೆರಡು : ತಿಳಿವುದಾಯತಾಂ ಬಕಿಯೆ ಬಾವನ್ನಾದಿ ಸಂಜ್ಞೆಯೆಂದೆನುತಲಾಕೃತಿಯುಗದೊಳು . . . ಅವರ್ಗಳು ಯೋಚಿಸಲು ಬಾವನ್ನ ತತ್ಕಳಾರೂಪಹರೌ (ವೀಶೈಪು. ೭-೬-೦೭).

ಬಾವನ್ನಮೂರ್ತಿ = ಶಿವನ ಐವತ್ತೆರಡು ಮೂರ್ತಿಗಳು : ಸೃಷ್ಟಿಗಳ ಸವಿನಯದ ಬಾವನ್ನಮೂರ್ತಿಗಳ ಭೇದಮಂ ನಂಜುಂಡಮೂರ್ತಿ ನೋಡೆ ವಿವರಿಸಿದನಾ ಹಲಗೆಯಾರ್ಯನು (ವೀಶೈಪು. ೦-೬-೪೯). P ಸಾದಾಖ್ಯಗಳು ೫, ಶಿವನ ಅಷ್ಟತನುವಿನ ಅಧಿದೈವಗಳು ೮, ಶಿವನ ಲೀಲಾ ಮೂರ್ತಿಗಳು ೨೫. ರುದ್ರರು ೧೧. ಅವಯವಮೂರ್ತಿಗಳು ೩—ಹೀಗೆ ೫೨ ಕಲೆಗಳು ಅಥವಾ ಮೂರ್ತಿಕಲೆಗಳೆಂದು ವೀಶೈಪು. ೧—೬—೪೪ರಲ್ಲಿ ಹೇಳಿದೆ. ಬಾವನ್ನರು = "ಬುದ್ಧಿಶಾಲಿಗಳು, ವೀರರು" (ಶಿವಗೀ. ಕೋಶ. ೪೪೫) : ಕಣ್ಣಾರೆ ಕಂಡೆ ನಾ . . . ಅಘಹರರೂಪಾಗಿ ಅಗಣಿತವಹ ಘನಮಹಿಮರನು ಬಗೆಗೊಳ್ಳದೆ ಬಾವನ್ನರ ಸಂಗವನೊಗೆದು ಈಡಾಡುವ ಓಜಿವಂತರನು (ಶಿವಗೀ. ೦೫೩-೭೮೫); "ಐವತ್ತೆರಡು ಅಕ್ಷರಗಳು" (ಶಿವಗೀ. ವ್ಯಾಖ್ಯಾ. ೪೨೬).

[< ಪ್ರಾ. ಬಾವನ್ನ. ಬಾವಣ್ಣ. / ಹಿಂ. ಬಾವನ : ಮರಾ. ಬಾವನ. ಬಾವನ್ನ]

ಬಾವನ್ನ$_2$ (ನಾ). (ಉತ್ತಮಬಗೆಯ) ಚಂದನ : ಶ್ರೀಗಂಧ : "ಸಿರಿಕಂಡಮೆಂದುಂ, ಬಾವನ್ನಮೆಂದುಂ ಮಲಯಜಂ" (ಕಶಸಾ. ೫೦-೭೦) ; ಬಾವನ್ನದ ವೃಕ್ಷ ಊರೊಳಗಿದ್ದಡೇನು ಅಡವಿಯೊಳಗಿದ್ದಡೇನು ಪರಿಮಳವೊಂದೆ (ಪನ್ನವ. ಕ. ೪೬-೦೦೬) ; ಜಾತಿಬಾವನ್ನದಲಿ ಸರ್ಪದ ಭೀತಿ ಸತ್ಪುರುಷರಿಗೆ ದುರ್ಜನಭೀತಿ (ಕುವ್ಯಾಅ. ೬-೪೯).

[← ಮರಾ. ಬಾವನ್ನ. ಬಾವನ. ಬಾವನಾ]

ಬಾವನ್ನವೀರ (ನಾ). ೧. ಐವತ್ತೆರಡು ಸಂಖ್ಯೆಗಳಿರುವ ದೇವತೆಗಳ ಒಂದು ಗುಂಪು,—ದೇವತಾಸಮೂಹ. ೨. ಮಹಾವೀರ ; ಪರಾಕ್ರಮಿ : ಅಷ್ಟಾದಶಪಟ್ಟಣಾಧಿಷ್ಠಿತ ಪಂಚಮಟ್ಟಿಗಾದಿ ಬಾವನ್ನವೀರಂ ಶಾಸನಪಟ್ಟಸಾಲಿಗಸಮಯಸಮುದಿತಲಲಾಟಪಟ್ಟಂ ವೈರಿಘರಟ್ಟಂ (ಸೌಇಇ. IX-i, ೭೮-೮೨; 1045) ; ಏಂದೊರೆಯಸ್ಸೇಡಿಂಬದ ನಾಡೆಯ ಬಾವನ್ನವೀರರೊಳ್ಮಚ್ಚರದಿಂ ಕಾದುವನಾರ್ (ಕಇಅ. ೯೭-೪-೫೩ ; 12ನೆಯ ಶತ) ; ಬಾವನ್ನವೀರ ಕಂಸನ ಕಡುಗೈಗೇಳಿದಾ ವಸುಧಾಮಂಡಲದ ಚಾವಡಿ ಚಾವಡಿಯೊಳಗುಳ್ಳ ವೀರಭಟಾವಳಿ ಬಂದು ಸೇರಿದುದು (ಸೇಮಿಸಂ. ೦೯-೨).

[← ಹಿಂ. ಬಾವನಬೀರ ; ಮರಾ. ಬಾವನ್ನವೀರ]

ಬಾವರಿ (ನಾ). [ಜೈನ] (ದುಂಬಿಯು ಮಧುವಿನ ಸಂಗ್ರಹಕ್ಕಾಗಿ ಹೂಗಳನ್ನು ಹುಡುಕಿಕೊಂಡು ಸುತ್ತುವಂತೆ) ಜೈನಮುನಿಗಳು ಭಿಕ್ಷೆಗಾಗಿ ಶ್ರಾವಕರ ಮನೆಗಳನ್ನು ಕುರಿತು ಹೋಗುವುದು ; ಚರಿಗೆ ಹೋಗುವುದು: ಮಾಧುಕರಿ : ಜಿನಮುನಿಚರ್ಯಾಯೋಗ್ಯಮಲ್ಲದ ಕಾಲದೊಳ್ ಭಾ[ಬಾ]ವರಿಯಂ ನೋಡಿ ತಾಂ ಭೋಜನಮಂ ಮಾಟ್ಟ ಕಾಲಾತಿಕ್ರಮಮುಂ (ಕಶ್ಯಪ್ರ. ೨೬೯) ; ಬನಮೆ ಬನಕ್ಕೆ ಬಾವರಿಗೆ ಬಂದಪೊಲಾಮದು ತಂಡತಂಡದಿಂ . . . ಸಾಧುಜನಸಂಗಸಮಾಗಮನಪ್ರಪಂಚದೊಳ್ (ಅನಂಪು. ೩-೩೧) ; ಅರಸನನುಜ್ಞೆಯಿಂದರಸಿ . . . ಯತಿಗಳ್ಗೆ ನಮೋಸ್ತುಗೆಯ್ದು ಬಾವರಿಯನೊಡರ್ಚವೇಟ್ಕುಮೆನೆ (ಕ್ರಿಶ್ಯಾಸ್ತ್ರ. ೯-೬).

[< ಸಂ. ಭ್ರಾಮರೀ]

ಬಾವರಿಗೊಡು (ಕ್ರಿ). ಚರಿಗೆಗಾಗಿ ಹೊರಡು ; ಮಾಧುಕರಿವೃತ್ತಿ ಮಾಡು: ಆ ಸುರವಂದಿತ ಕೈಯೆತ್ತಿ ನಾನಾದೇಶಗಳಲ್ಲಿ ವಿಹರಿಸಿ ಕೌಶಂಬಿಪುರಕೆ ಭಾ[ಬಾ]ವ[ಪಾಠಾಂ. ಭವಾ]ರಿಗೊಟ್ಟ ವೃಷಭದತ್ತಾಸೆಟ್ಟಿ ಮನೆಯೊಳಗಿರ್ದ (ವರ್ಧಸ. ೦೦-೬೫). [ಬಾವರಿ + ಕೊಡು$_1$]

ಬಾವರಿಯಿಡು (ಕ್ರಿ). = ಬಾವರಿಗೊಡು : ಸಾಗರದತ್ತಮುನಿಗಳು ಲೋಕವಂದ್ಯರು ಭಿಕ್ಷೆಗೆಂದು ಆ ಕೇರಿಯೊಳು ಬಾವರಿಯಿಡಲ್ (ಜೀವಂಸಾಂ. ೬-೨೦). [ಬಾವರಿ + ಇಡು$_1$]

ಬಾವರಿವುಗು (ಕ್ರಿ). = ಬಾವರಿಗೊಡು : ನಿನ್ನ ತಂದೆವಿರ್ . . . ಪೊಟಲೊಳಗೆ ಚರಿಗೆವೊಕ್ಕು. ಬಾವರಿವುಗುತ್ತುಂ[ಪಾಠಾಂ. ತಿರಿಯುತ್ತುಂ, ತಿರುಗುತ್ತುಂ] ಬಂದು ನಿನ್ನ ಮನೆಯಂ ಪೊಕ್ಕು ಪೊಱಮಟ್ಟು ಪೋದರ್ (ವಡ್ಡಾರಾ. ೪೬-೨೯). [ಬಾವರಿ + ಪುಗು (< ಪೊಗು)]

ಬಾವಲ್ 'ವಾವಲ್' ನೋ.

ಬಾವಲಿ$_1$ 'ವಾವಲ್' ನೋ.

ಬಾವಲಿ$_2$ 'ಬಾವುಲಿ$_2$' ನೋ.

ಬಾವಲಿ$_3$ (ನಾ). ಒಂದು ಬಗೆಯ ತೆರಿಗೆ : ಹರುಗೋಲ ಹಣ ಬಾವಲಿ ಬಿರಾಡ . . . ಸರ್ವಬಾಧೆ ಪರಿಹಾರಕ್ಕೆ ಗದ್ಯಾಣ ಗ ೧೧ ವರಹ (ಮೈಅಂ. ೦೯೩೪, ೨೭-೨೨; 1430). [?]

ಬಾವಲು 'ವಾವಲ್' ನೋ.

ಬಾವಾ (ನಾ). ಊರೂರು ಅಲೆಯುವ ಜಟಾಧಾರಿಯಾದ ಜೋಗಿ.— ಬೈರಾಗಿ : ಈ ಬಂಕಗಳ ಉಪಯೋಗವನ್ನು ಭಿಕ್ಷುಕರು ಬಾವಾ ಬೈರಾಗಿಗಳು ಇನ್ನೂ ಮಾಡಿಕೊಳ್ಳುತ್ತಾರೆ (ಹಬ್ಬಿಶಿ. ೯) ; ಮುಂದ ಹೋಗುವಾಗ ಒಬ್ಬ ಬಾವಾ ಭೆಟ್ಟಿ ಆದನಂತ (ಅಮಸಿ. ೬೬). [←ಮರಾ. ಬಾವಾ]

ಬಾವಾಜಿ (ನಾ). = ಬಾವಾ : ನಾನು ಅನೇಕ ಸಲ . . . ಭಿಕ್ಷುಕರನ್ನು ಬಾವಾಜಿಗಳನ್ನು ನೋಡಿದ್ದೇನೆ (ಗಾಳಿಗು ೭೫); ಬಾವಾಜಿಗಳಂತೆ ಜಟಾಧಾರಿಯಾದೆನು (ಇಂರುಮು. ೬೨). [←ಮರಾ. ಬಾವಾಜೀ]

ಬಾವಿ, ಭಾವಿ$_1$, ವಾವಿ$_1$ (ನಾ). ಭೂಮಿಯ ಒಳಗಿರುವ ನೀರನ್ನು ತೆಗೆದುಕೊಳ್ಳುವುದಕ್ಕಾಗಿ ಅಗೆದು ಮಾಡಿದ ಕೂಪ : "ಅಂಧುಃ, ಕೂಪಃ—ಈ ೨ ಬಾವಿ" (ಹಶಾಯು. ೦೧೩-೬೨) ; ನೀರಂ ತರಲ್ಕೆಂದು ಬಾವಿಗೆವೋದಾಕೆಯಂ ಕಂಡರಸನೆಲೆ ಕೂಸೆ ನೀರಂ ಕುಡಿಯಲೆಱೆಯಾ ಎಂದೊಡೆ (ವಡ್ಡಾರಾ. ೦೧೦-೨೫) ; ರಸರಸದ ಬಾವಿ ಮನೆಮನೆಗೆ ಬೇಱೆ ಕಿಸುಗಲ್ಗಳ ರಜದ ಕಣೆವೆರಸು ತೋಱೆ (ಪಂಪರಾ. ೪-೦೦); ಮಟ್ಟಿಗಾಲ ಮುಂಟೆಂದು ತಪ್ಪಿದ ಜೋಯಿಸಂ ಬಾವಿಯ ನೀರನಡಕಿ ನೀರ್ವೊಯ್ದಂ (ಪಂಪಸು. ೦೨೭-೨). **ಭಾವಿ$_1$** : ಅನುರಾಧೆ ಭಾನು . . . ಉತ್ತರೆಯೆಂಬಿ ನಿತಱೊಳಂ ವಿಧಿಯಿಂ ವರುಣನನರ್ಚಿಸಿ ಭಾವಿ ತೋಡೆ ಶುಭಮಂ ಮಾಟ್ಕುಂ (ಲೋಕೋಪ. ೫-೨); ಎಲ್ಲೆಡೆಯೊಳಂ . . . ಮಟ್ಟಿ ಸುರಿದೊಡಂ ನೀರ್ ಪುಣ್ಯಮಿಲ್ಲದ ಸ್ಥಾನಮಂ ಪರಿಹರಿಸಿ ಬಂದು ತೊಱೆ ಕೆಱೆ ಭಾವಿಗಳೊಳ್ ತೀವುವಂತೆ (ರರ್ಮಾಪ್ಯ. ೬-೦೨೬). **ವಾವಿ$_1$** : ವಾವಿಯಿಂ ಬಡಗ ತೋಂಟಿ ೧ (ಸೌಇಇ. IX-i, ೨೦೦-೨೦ ; 1125).

ಬಾವಿ ಮುಟ್ಟುವದು = ಬಾಣಂತಿಯು ಹತ್ತು ದಿನ ಕಳೆದ ಮೇಲೆ ಮೈಲಿಗೆಯನ್ನು ಕಳೆಯುವುದಕ್ಕಾಗಿ. ಊರಿನ ಬಾವಿಯ ಕಟ್ಟೆಯ ಬಳಿಗೆ ಹೋಗಿ ಗಂಗೆಯ ಪೂಜೆ ಮಾಡುವುದು : "ಹಡೆದ ಮೇಲೆ ಬಾಣತಿಯು ಗಂಗೆಯ ಪೂಜಿಸುವದು" (ಜಾನಕೋ. ೨೨). ಬಾವಿ ಮೆಟ್ಟುವದು = ಬಾವಿ ಮುಟ್ಟುವುದು: "ಹಡೆದ ಮೇಲೆ ಬಾಣತಿಯು ಗಂಗೆಯ ಪೂಜಿಸುವದು" (ಜಾನಕೋ. ೨೨). 'ಪೊಟ್ಟೆ ಮೆಟ್ಟು' ಪರಾ. [<ಸಂ. ವಾಪಿ]

ಬಾವಿಗಪ್ಪು (ನಾ). (ಆನೆಯನ್ನು ಹಿಡಿಯಲು ತೋಡುವ) ಆಳವಾದ ಕುಳಿ ; ಬಾವಿಯಂತಹ ಹಳ್ಳ : ತೆರೆದ ಬಿಂಬಾಧರವು ನೃಪಮತಿಯ ಗಜಗತಿಗೆ ಸತಿಯಗೆವ ಬಾವಿಗಪ್ಪಿನ ಕಾವಿಮಣ್ಣಾಗೆ (ಶ್ರೀರಾಮಾ. ೬೯-೩೯೭).

[ಬಾವಿ + ಕಪ್ಪು$_3$]

ಬಾವಿಗೆ (ನಾ). = ಬಾವಿ : 'ಪಟಿವಾವಿಗೆ' ಪರಾ. [<ಸಂ. ವಾಪಿಕಾ]

ಬಾವಿದೋಡು (ಕ್ರಿ). ಬಾವಿಯನ್ನು ಅಗೆ : ಕಿಚ್ಚೆಟ್ಟ ಬಟಿಕೆ ನಂದಿಸಲಚ್ಚಿಗದಿಂ ಬಾವಿದೋಡುವಂತಿರೆ ಕಣ್ಣಂ ಮುಚ್ಚಿ ಜಪಿಯಿಸುವೆ ರಾಘವನೆಚ್ಚಂಬಿಂ ಕಾಯಲಾರ್ಪುವೇ ದೇವತೆಗಳ್ (ಪಂರಾಮಾ. ೦೪-೦೦೦).

[ಬಾವಿ + ತೋಡು$_1$]

ಬಾವು (ನಾ). ೧. (ಪೆಟ್ಟು, ಖಾಯಿಲೆ ಮುಂತಾದುವುಗಳಿಂದ ಉಂಟಾಗುವ) ಊತ : ಉಬ್ಬು ; ಶೋಫ : ತಗರಂ ಕೊಕ್ಕುಳಿ . . . ಹರಿದ್ರಾದ್ವಂದ್ವಮಿಾ ಪೇಟ್ಟ ಮರ್ದುಗಳಂ ಪುತ್ತಿನ ಪುಣ್ಣುಮಂ ಕದಡಿ ಕಾಸಿಟ್ಟೆಯ್ದ ಪೊಯ್ಯಾವ ಬಾವುಗಳುಂ ತೀರ್ಚುಗುಂ (ಲೋಕೋಪ. ೯-೨೪೦); ನೊಸಲ ಬಿಸಿಗಣ್ಣನೇಱೆಂದು ಶಿವಲಿಂಗಮಂ ಮುಸುಕಿ ಬೆಳೆದುತ್ತಮಾಂಗವನು ಬಾವೆಂ[ಪಾಠಾಂ. ಹೆಂ]ದು . . . ಶಂಕಿಸಿ ನೋಡಲಮ್ಮದೊಯ್ಯನೆ ದೂರದಿಂದೆ ದೀವಿಗೆವಿಡಿದು ದಿಟ್ಟಿಸಿದರು (ಸಿದ್ಧರಾ. ೨-೪). ೨. ಹುಣ್ಣು ; ಕುರು : ವ್ರಣ : ಪಿಡಿಯದು ದೋಷಮಿಲ್ಲದತಿನಿರ್ಮಲಮಪ್ಪೆಡೆಯಂ ಜಲೂಕನೋಗಡಿಸದೆ ಬಾವು ತರ್ದು ತುಱೆಯುಳ್ಳ ತ್ರಿದೋಷದ ತಾಣಮಂ ಕರಂ ಪಿಡಿವುದು (ಜೀವಸಂ. ಪಂ. ೦. ೨೩೯-೦೧); ನಾರುಬೇಳೆಸೊಪ್ಪು, ಕಕ್ಕೆಯ ತಿಗುಡು, ನವಣೆಅಕ್ಕಿ ಇವಂ ಅಕ್ಕಿಗಚ್ಚಿನಲ್ಲಿ ಅರೆದು ಪೂಸೆ ಬಾವು ಮಾಣ್ಗುಂ (ವಿವೃವಿ. ೭೬). 'ಬಾಹು$_1$' ಪರಾ. [ಬಾ$_1$ + — ವು]

ಬಾವುಂಜಿಗೆ 'ಬಾವುಜಿಗೆ' ನೋ.

ಬಾವುಗ (ನಾ). ಗಂಡುಬೆಕ್ಕು ; ಗಡವಬೆಕ್ಕು : ಬಲುಕಾಲ ಮುದ್ದಿಸಿ ಕಲಿಸಿ ಮಾತುಗಳ ಗಿಳಿಯ ಸಾಕಿ ಬಾವುಗಗೆ ಒಪ್ಪಿಸುವುದು (ಪುರುದ. ೪-೦೪೩-೪) ; ಮಳೆಗೆ ಹಂದರ ಹೊಲ್ಲ ಗಿಳಿಗೆ ಬಾವುಗ ಹೊಲ್ಲ (ಸರ್ವಜ್ಞ. ೦೯೯೬).

[ದೇ.॥ ತೆಲು. ಬಾವುರು, ಬಾವುರುಗಾಂಡು, ಬಾವುರುಗಾಡು, ಬಾವುರುಪಿಲ್ಲಿ, ಬಾವುರಂಬಿಲ್ಲಿ ; ಪರ್ಜಿ. ಬಾವ್ಕಿ ; ಕುಇ. ಬಾಒಡಿ, ಬಾಒಲಿ; ಮರಾ. ಬಾವಗಾ]

ಬಾವುಜಿ 'ಬಾಗುಜಿ' ನೋ.

ಬಾವುಜಿಗೆ, ಬಾವುಂಜಿಗೆ, ಬಾಹುಜಿಗೆ (ನಾ). ಒಂದು ಬಗೆಯ ಸಸ್ಯ : ಕಾಡುಜೇರಿಗೆ : "ವಾಕುಚಿಃ—ಸೋಮವಲ್ಲಿ, ಬಾವುಜಿಗೆ" (ಓಷಂ. ೦೫೦); ಅವಿನಳೆಯೊಳ್ ಚಗಚ್ಚೆಯ ಬಾವುಜಿಗೆಯ ಬಿತ್ತನಲ್ಲಿ ನಿಶೆಗಂಧಕಮೆಂಬೀ ವಸ್ತುವನರೆದೊಂದಿರೆ ಲೇವಿ(ಪಿ)ಸಿದೊಡೆ ಚಿಬ್ಬಿನುರ್ಬು ಪರ್ಬದೆ ಕಿಡುಗುಂ (ಲೋಕೋಪ. ೯-೦೦೨) ; ರಜನಿ ಸುದಾರ್ವಿ ಬಾವುಜಿಗೆ ಬೇವಿನ ಬಿತ್ತು . . . ನಿಜದೆ ಸಮಾನಮಾಗರೆದು ಲೇಪಿಸೆ . . . ಉಗ್ರವಿಷಂ ಪರೆಗುಂ (ಐಮದ. ೦೩-೦೪). **ಬಾವುಂಜಿಗೆ** : "ಅವಲ್ಗುಜಃ, ಸೋಮರಾಜೀ . . . ಪೂತಿಫಲೀ—ಈ ೮ ಬಾವುಂಜಿಗೆ" (ಪಾಸರಾ. ೦೦೯). **ಬಾಹುಜಿಗೆ** :

"ಅವಲ್ಗುಜ ! . . . ಪೂತಿಫಲೀ—ಲ ಬಾಹುಜಿಗೆಯ ಪೆಸರುಗಳು" (ಸಿದ್ಧಾಂತಿ. ೦೩೩). [< ಬಾವುಜಿ]

ಬಾವುಟ . ಬಾವಟೆ . ಬಾವುಟೆ (ನಾ). ಧ್ವಜ : ಪತಾಕೆ ; ನಿಶಾನೆ : ಏರಿಸಿ, ಹಾರಿಸಿ ಕನ್ನಡದ ಬಾವುಟ (ಕನ್ನಡಾ. viii ಪ್ರಸ್ತಾವನೆ) ; ಎತ್ತಿ ಕಟ್ಟಿದ ಬಾವುಟಗಳು ಪಟಪಟನೆ ಹಾರುತ್ತಿದ್ದವು (ಕಸಾಪ. ೦೯). **ಬಾವಟೆ** : ಭಾರಿಗಾಳಿಯ ಬಾವಟೆ ಹಾರೆ, ಮೊಳಗಿಸಿ ಮಿಂಚು ಬೆಳಗಿಸಿ, ತೇರ ನಡೆಯಿಸಿ ಸರಿವೆನೈ (ಕಎಪು. ೩೦-೧೧). **ಬಾವುಟೆ** : ಎದುರಿಗೆ ನೋಡು ರಾಠೋರ ಸೇನಾಪತಿಯ ಕೆಂಪುಬಾವುಟೆಯು ಕಾಣುತ್ತದೆ (ಕೋಹಿಮೂ. ೪೦).

[← ಮರಾ. ಬಾವಟಾ. ಬಾವಹಟಾ. ಬಾಹುಟಾ]

ಬಾವುಟೆ 'ಬಾವುಟ' ನೋ.

ಬಾವುದಿವಸ (ನಾ). "ಬಲಿ ಕೊಡುವ ದಿವಸ—ವ್ರತದ ಪಾರಣೆ ದಿನ" (ಜೀವಸಂ. ಕೋಶ) : ಅಷ್ಟೋಪವಾಸಮರ್ಧಾಷ್ಟಮೀಯೆಂಬಿನ ವಷ್ಟಮೀ ಬಾ[ಪಾಠಾಂ. ನಾ]ವುದಿವಸಮಂ ನೋಂತೀವೆ ಜ್ಯೇಷ್ಠಪುತ್ರಕನೆ ಬಿಸುಡಿದಂ (ಜೀವಸಂ. ೨೩೨-೩೨). [ಬಾವು$_2$ + ದಿವಸ]

ಬಾವುದೆವಸ (ನಾ). = ಬಾವುದಿವಸ : ನಾಳೆ ಬಾವುದೆವಸ[ಪಾಠಾಂ. ಜಾವದಿವಸ, ಬಾಯುದೆವಸ, ಬಾಉದೇವಸ]ದೊಳ್ ದೇವತೆಗೆ ಪರಕೆಗುಡುವ ಮೀತನನಿಂದಿನ ದೆವಸಂ ಕಾದಿರಿಂ (ಜೀವಸಂ. ೩೬-೩೬೫). [ಬಾವು$_2$ + ದೆವಸ]

ಬಾವುಲಿ$_1$ 'ವಾವಲ್' ನೋ.

ಬಾವುಲಿ$_2$, ಬಾವಲಿ$_2$, ಬಾಹುಲಿ (ನಾ). ೧. ಕಾಲಿನ ಒಂದು ಆಭರಣ ; ಕಾಲ್ಗಡಗ ; ಪೆಂಡೆಯ : ಪಗಲ ಕೈದೀವಿಗೆಯ ಕಾಲ ಹಾಹೆಯ ಮೊತ್ತದ ಬಾವುಲಿಯ ಮಾಲೆದೊಡರ ಮಾಸಾಳ್ಗಳ ಮಂತಣದೊಳಂ (ಗಿಂಕ. ೨-೦೦೩ ಪ) ; ಚರಣದ ತೊಡರ ಮೊಳಗಿನ ಬಾವುಲಿಗಳಲಿ ಘಣಘಣಧ್ವನಿಯ ನಿಡಿಯೊಡಲ . . . ದಾನವನವನಿ ಹೆಜ್ಜೆಗೆ ನೆಗ್ಗಲೈ ತಂದ (ಕುಪ್ಯಾಡ್ರೋ. ೦೩-೪೪) ; ಕಾಲಲಿ ಕಿಱುಗೆಜ್ಜೆ ನೀಲದ ಬಾವುಲಿ (ಪುರಂದ. ೦-೦೪೦-೩). ೨. ಕಿವಿಯ ಒಂದು ಆಭರಣ; ಕಿವಿಯ ಹಾಲೆಯ ಮೇಲುಭಾಗದಲ್ಲಿ ನೇತಾಡುವಂತೆ ಇಟ್ಟುಕೊಳ್ಳುವ ಮುತ್ತು, ಹರಳುಗಳನ್ನು ಜೋಡಿಸಿದ ಉಂಗುರದಂತಿರುವ ಚಿನ್ನದ ಆಭರಣ : ಮೌಕ್ತಿಕಗಳ ಮುಡಿವಲೆ ಮೆಱೆವ ಬಾವುಲಿಯ ನಿಡುಗುರುಳಿನ ಮುತ್ತಿನ ಕುಚ್ಚಿನಿಂದ ಬಲ್ಬೆಡಗಾಗಿ ಮೆಱೆವರರ್ತಿಯಲಿ (ಕಂಪಪಿ. ೨೪-೪೨) : ಕಿವಿಯೊಳ್ ಮಾತನಾಡುವವೆಂಬಂತೆ ನವಿಲು ಗಿಣಿ ಬಾವುಲಿಗಳನ್ನಿಟ್ಟು (ಸೌಗಂಧಿ. ೨೦೦-೬) : ಕಿವಿಯಲ್ಲಿ ಹರಳು ಮುತ್ತಿನ ಬಾವುಲಿ (ತಿಡುಗು. ೬೩). **ಬಾವಲಿ$_2$** : ೨. ಕಿವಿಯಲ್ಲಿ ಹರಳಿನ ಬಾವಲಿ. ಹಣೆಯ ಮೇಲೆ ತಿಲಕ (ಕುಂಹಿಂ. ೦೩೨) ; ಬಲಗಿವಿಯಲ್ಲಿ ಮುತ್ತು ಕಳಚಿ ಹೋದ ಬಾವಲಿಯ ಚಿನ್ನದ ಉಂಗುರವೊಂದು ತೂಗಾಡುತ್ತಿತ್ತು (ಜನಪ. ೨೬). **ಬಾಹುಲಿ** : ೨. ಥಳಥಳಿಸುವ ಬಾಹುಲಿ . . . ಕಂಕಣದಿಂದ ಬಲುಸೊಬಗಾಂತನರ್ತಿಯಲಿ (ಕಂಪಪಿ. ೨೩-೭೯).

[ದೇ.ಸಿ ತಮಿ. ಪಾವಿಲಿ; ತುಳು. ಬಾವಲಿ, ಬಾವೊಲಿ; ತೆಲು. ಬಾವಿಲಿ./ ಸಂ. ಬಾಲೀ]

ಬಾವುಲಿಗಾಱ (ನಾ). ಬಿರುದಿನ ಕಾಲ್ಗಡಗವನ್ನು ತೊಟ್ಟವನು ; ಬಿರುದಾಂಕಿತನಾದ ವೀರ : ಹಿಣಿಲ ಬಾವುಲಿಗಾಱರಾವೆಡೆ ಭಾಷೆಯತಿ ಬಳರು (ಕುಪ್ಯಾಭೀ. ೪-೩೯). [ಬಾವುಲಿ$_2$ + — ಕಾಱ]

ಬಾವುಲು 'ವಾವಲ್' ನೋ.

ಬಾವೆಮಣ್ಣು (ನಾ). ಒಂದು ಬಗೆಯ ಮೆದುವಾದ ಮಣ್ಣು : ಅಗೆದ ಎಲ್ಲ ಕಡೆಗಳಲ್ಲೂ ಕಲ್ಲುಗಳಿರಲಿಲ್ಲ. ಕೆಲವು ಕಡೆ ಬಾವೆಮಣ್ಣು (ಬಾಳಿಗಿ. ೮೨). [← ತುಳು. ಬಾವೆಮಣ್]

ಬಾಷಿಗ 'ಬಾಸಿಗ' ನೋ.

ಬಾಷೀಕಾಗದ (ನಾ). (ಭಾಪಾಕಾಗದವಲ್ಲದ) ಸಾದಾಕಾಗದ : ಅಸಲು ಚುಂಗಡಿ ಸಹ ಸಂತೆಂದು ಒಳ್ಳೇ ಬಾಷೀಕಾಗದದಲ್ಲಿ ರಶೀತಿ ಬರೆದು . . . ಕಳುಹಿಸಿಬಿಟ್ಟನು (ಕಥಾಮಂ. IV, ೪೩).

[ಬಾಷೀ$_0$ + ಕಾಗದ. / ತುಳು. ಬಾಶಿಕಾಗಜಿ]

ಬಾಷ್ಕಳ$_1$ (ನಾ). ೧. ಋಗ್ವೇದದ ಒಂದು ಶಾಖೆ. ೨. ಶತೋಪನಿಷತ್ತುಗಳಲ್ಲಿ ಒಂದು : ಶ್ರೀರುದ್ರಬೃಹದಾರಣ್ಯಕ . . . ಬಾಷ್ಕಳ [ಪಾಠಾಂ. ಭಾಷ್ಕಳ, ಭಾಸ್ಕಳ] . . . ಮೊದಲಾದವೇ ಉಪನಿಷತ್ತುಗಳು (ವಿವೇಕ. ೩).

[ಸಂ. ಬಾಷ್ಕಲ]

ಬಾಷ್ಕಳ$_2$ (ನಾ). ೧. ಸುಳ್ಳು; ಹುಸಿ ; ಅಸತ್ಯ : ಪತಿ ವಿಸರ್ಜಿಸಿದಾಕೆ ಗಾವುದಿನ್ನಧಿಕಾರ ಮೃತಿಯೆ ನಿಷ್ಕೃತಿ ಮಗನೆ ಬಾಷ್ಕಳವೆ ಕೇಳ್ ವೀಸುನಿ ಹುತವಹನನಲ್ಲಿಟ್ಟರಪ್ಪುದೆಲೆ ಕಡೆಯಾಣೆಯಂತಿದಂ ಗ್ರಹಿಸು ನೀನು (ಹರಶು. ೧೭-೦೬). ೨. ನಡತೆಯಲ್ಲಿ ಅಥವಾ ಮಾತಿನಲ್ಲಿ ಹಿಡಿತವಿಲ್ಲದಿರುವುದು ; ಸ್ವೈರವೃತ್ತಿ ; ಸ್ವಚ್ಛಂದವರ್ತನೆ. ೩. ಅಸಭ್ಯತೆ : ಎಂಥ ಬಾಷ್ಕಳ ಮಾತಾಡತೀ ನಿಂಗೀ. ಜನಲಜ್ಜಾ ನಿನಗ ಎಳ್ಳಷ್ಟೂ ಇಲ್ಲಲ್ಲಾ (ರಕ್ತರ್ಷ. ೨೦೭). ೪. ಅಪ್ರಾಮಾಣಿಕನಾದವನು : ಏನಪಾ ರಾಮಾಚಾರಿ, ನೀ ಏನು ಬರೇ ಬಾಷ್ಕಳ ಕಾಣತೀದಿ (ತಿಡುಗು. ೪೭). [← ಮರಾ. ಬಾಷ್ಕಲ, ಬಾಷ್ಕಳ, ಬಾಸ್ಕಳ]

ಬಾಷ್ಕಳಂಗೆಯ್ (ಕ್ರಿ). ಅಸಂಬದ್ಧವಾಗಿ ಮಾತನಾಡು ; ಗಳಹು : ಕೇಳೆಲೆ ನಿರೀಶ್ವರ ಸಾಂಖ್ಯವಾದಿ ನೀಂ ಮತ್ತತ್ವದಿಂ ಭಾಷ್ಕಳಂಗೆಯ್ಯದಿರ್ (ಅರಾಪ. ೩-೬-೦೨). [ಬಾಷ್ಕಳ$_2$ + ಕೆಯ್$_1$]

ಬಾಷ್ಕಳಗೆಡೆ (ಕ್ರಿ). = ಬಾಷ್ಕಳಂಗೆಯ್ : ಎಲ್ಲಾ ಜಾತಿಗೂ ನಾವೇ ಮಿಗಿಲೆಂದು . . . ಬಳ್ಳಿಟ್ಟು ಬಾಷ್ಕಳಗೆಡೆವುತ್ತಿಪ್ಪರಿ ನೋಡಾ (ಸರ್ವಪ. ೦೭೫-೬೨೯) ; ಮನೆಯಲಿ ಸೂಳೆಯರ ಮುಂದೊದಱೆ ಬಾಷ್ಕಳಗೆಡೆದು ಬಂದೀಗ ಕೋಲನಿಕ್ಕದೆ ಗಾಯವಡೆಯದೆ ಕಾಲುವೇಗವ ತೋಱೆದೊಡೆ ನಿನ್ನೋಲಗದೊಳೆಂತಕಟ ನಾಚದೆ ಕುಳ್ಳಿತಿಹೆಯೆಂದ (ಕುಪ್ಯಾಪಿ. ೬-೨೪) ; ವೀರಭದ್ರೇಶ್ವರನ ಬೋಧೆಯಂ ಕೇಳದಾ ನಾರಸಿಂಹಂ ಕೊಬ್ಬಿ ಭಾ [ಬಾ] ಷ್ಕಳಂಗೆಡೆದು . . . ಜಱೆವುತ್ತಿರ್ದಂ (ವೀಶ್ವಪು. ೩-೫-೨೯). [ಬಾಷ್ಕಳ$_2$+ಕೆಡೆ$_2$]

ಬಾಷ್ಪ (ನಾ). ನಂಜು ; ವಿಷ : ಗಾಯ ಬಾಷ್ಪವೇರಿ ತುಂಬಾ ನೋವಾಗಿದೆ (ಕೂಡಿ). [← ತೆಲು. ಬಾಸಟ. / ಮರಾ. ಬಾಸಟ, ಬಾಸೂಟ]

ಬಾಷ್ಪ (ನಾ). ೧. ಕಣ್ಣೀರು ; ಅಶ್ರು: "ಅಶ್ರು, ಬಾ(ಷ್ಪಂ)ಬ್ಬಂ, ರೋದನ, ನಯನಜಳಂ, ಅಸ್ರಂ—ಈ ೫ ಕಣ್ಣ ನೀರ್" (ಹಲಾಯು. ೬೬-೩೬೫) ; ಕುಚಾಂತರದೊಳ್ ಕೊಳಗೊಂಡು ಮೋಹವಲ್ಲಿಗೆ ಬಿದಿ ತಿರ್ದಿಸುತ್ತಿಸಿದ ನೀರ್ಗೆಣೆಯಾದುದು ಬಾಷ್ಪಮೋಪಳಾ (ಶಾಂತಿಪು. ೮-೯೨) ; ಕ್ಷಣದೊಳೊದಗುವ ಬಾಷ್ಪಲುಳಿತೇಕ್ಷಣನು ಬಂದನು ಮನೆಗೆ (ಕುಪ್ಯಾಪಿ. ೩-೨೫). ೨. ಹಬೆ ; ಆವಿ : ಹವೆಯೊಳಗೆ ತೊಯ್ದ ವಸ್ತ್ರಗಳನ್ನು ಬಿಚ್ಚಿ ಹರವಿದರೆ, ಅವುಗಳಲ್ಲಿಯ ನೀರು ಬಾಷ್ಪರೂಪದಿಂದ ಹಾರಿ ಹೋಗಿ ವಸ್ತ್ರಗಳು ಒಣಗುತ್ತವೆ (ಮುಂಬಿಯಿ. ೩-೦೩೯). ೩. ಒಂದು ಬಗೆಯ ಸಸ್ಯ. [ಸಂ.]

ಬಾಷ್ಪಜಲ (ನಾ). ಕಣ್ಣೀರು : ಅಕ್ಷಿಗಳ್ ಬಾಷ್ಪಜಲಪ್ರಶಮಿತರುಚಿಗಳ್ (ಜಗವಿ. ೩-೬೬). [ಸಂ.]

ಬಾಷ್ಪವಾರಿ (ನಾ). = ಬಾಷ್ಪಜಲ : ಅನವರತಬಾಷ್ಪವಾರಿಧಾರಾಪೂರ ಪರಿವಾರಿತಪಲ್ಲವನೇತ್ರೆಯುಂ (ಗವಾಯು. ೦-೫೫ ಪ) ; ವಿಲೋಲಲೋಚನೆಯಕಟ ನೆನೆದಳು ಬಾಷ್ಪವಾರಿಯಲಿ (ಕುಪ್ಯಾಪಿ. ೩-೫೪). [ಸಂ.]

ಬಾಸ (ನಾ). ಒಬ್ಬಾತನ ಹೆಸರು : ಶ್ರೀ ಬಾಸ (ಎಕ. II, ೪೨೨ ; ಸು. 1000) ; ಶ್ರೀ ಬಾಸನಣ್ಣನ ದಣ್ಡೆ (ಎಕ. II, ೪೫೩-೦ ; ಸು. 1000). 'ಬಾಸಬೆ' ಪರಾ. [?]

ಬಾಸಂತಿ (ನಾ). ಒಂದು ಬಗೆಯ ಮಲ್ಲಿಗೆ : ವಾಸಂತಿ : ವಾಸಂತೀ — ಬಾಸಂತಿ (ಕಮರ. ೨೫೬ ಪ್ರಯೋ) ; ಉಪವನದಲಾಡುತ ಬಾಲೆಯರು ಬಾಸಂತಿ ಮರುಗ ತಮಾಲ ಮಾಲತಿ ಮಲ್ಲಿಗೆಗಳ ಮನೋಜ್ಞಸೌರಭದ ಲೋಲಭೃಂಗಾವಳಿಯ ಗೀತವನಾಲಿಸುತ (ನಿಭಾಗ. ೯-೨೦-೦೩).

[<ಸಂ. ವಾಸಂತೀ]

ಬಾಸಂಬಳ್ಳಿ (ನಾ). ಒಂದು ಊರಿನ ಹೆಸರು: ಪಡುವಣ ತೊರೆವಳ್ಳಿಯ ಬಾಸಂಬಳ್ಳಿಯೂರ ಮುನ್ದಣ ಕೆಱೆಯೊಳಿಸಾರ್ಬ್ಬ ನಮ್ಮಸ್ಯಮಂನ್ದೇವ ಭೋಗಂ ಬಿಟ್ಟಂ (ಎಕ. III, ಮೈಸೂರು. ೩೬-೦೫ ; ಸು. 990 ?).

[ಬಾಸ + ಪಳ್ಳಿ$_1$]

ಬಾಸಗವುಂಡ 'ಬಾಸಗಾವುಂಡ' ನೋ.

ಬಾಸಗಾವುಂಡ, ಬಾಸಗವುಂಡ (ನಾ). ಒಬ್ಬಾತನ ಹೆಸರು: ಉಚ್ಚಂಗಿಯ ಕೋಟೆಗೆ ರಾಜಾದಿತ್ಯನ ಕಾಳೆಗಕೆ ಚಣ್ಡೆಡೆ ಬಾಸಗಾವುಣ್ಡನ್ಗೆ ಕೊಟ್ಟ ಕೊಡನ್ಗೆ (ಎಕ. XV, ಬೇಲೂರು. ೩೦೮-೬ ; 971). **ಬಾಸಗವುಂಡ** : ಉರ್ಪ್ಪವಳ್ಳಿಯ ಬಾಸಗವುಣ್ಡನ ಬಿಟ್ಟಿಗವುಣ್ಡನ ಮಗಂ ಬಿಟ್ಟಿಯಣ್ಣ (ಎಕ. VI, ತಕ್ಕಮ. ೩೬-೬; 1012). [ಬಾಸ+ಗಾವುಂಡ (<ಗಾಮುಂಡ)]

ಬಾಸಟ (ನಾ). (ಆಯುಧಗಳನ್ನು ಹರಿತಗೊಳಿಸುವುದರಿಂದುಂಟಾದ) ಹೊಳಪು : ಕಾಂತಿ : ಕಂತು ಪಿಡಿದ ಖಡ್ಗಕೆ ಬಾಸಟವೇಱುವಂತೆ ಜವ್ವನವೇಱಿದಳು (ಶ್ರೀಪಾಲ. ೩-೪೦); ಆ ತನುಜಾತೆಗೆಣ್ಣೆಯನೊತ್ತಿಸಿದಳು ಪ್ರೀತಿಯಿಂದಂಗಭವನ ಪುಷ್ಪಬಾಣಕ್ಕೆ ಓತು ಬಾಸಟಮಿಕ್ಕುವಂತೆ (ವೇಮಸಂ. ೨೩-೨೨೩) ; ಸ್ಮರಗಜಕುತ್ತಮಮದವೇಱುವವೊಲ್ ಸುರಭಿಶರಕೆ ಬಾಸಟವೇಱುವವೊಲು ಹರಿಣಧರಗೆ ಹದಿನಾಱು ಕಲೆಗಳೇಱುವವೊಲ್ ... ವಿದ್ಯಾಧರರಾಯನ ಮಿಸುಕುವ ರೂಪಿಗೆ ಹೊಸಹರೆಯಂ ಬಂದುದು (ಜಯಕಾ. ೦೩-೭). [?]

ಬಾಸಟಮಿಡು (ಕ್ರಿ). ಮಸೆದು ಕಾಂತಿಗೊಳಿಸು : ಅಂಗೋದ್ಭವನೆಂಬ ಮಹಾಸಾಹಸಿಗಂಗೊಲಿದು ರತಿ ಬಾಸಟಮಿಟ್ಟಲರ್ಗಯ್ದಂ ಕುಡುವಂತೆ (ಜಯಕಾ. ೦೪-೨೨). [ಬಾಸಟ+ಇಡು$_1$]

ಬಾಸಣ, ಬಾಸಣಿ (ನಾ). ೧. ಹೊದಿಕೆ ; ಮುಸುಕು : ಆಚ್ಛಾದನ : ಚರಣದ ಧೂಳಿ ಬಾಂದೊಱೆಗೆ ಬಾಸಣಮಾಗಿರೆ . . . ಅದ್ಭುತಮಾಹವ ಭೂಮಿಗಪ್ಪಿನಂ (ಗಿಂಕ. ೬-೬೬): ಪಂಚರಂಗದ ಚೂಣಿಕೆ, ಬಿಳಿಯ ಬಟ್ಟೆಯ ಬಾಸಣ . . . ರತ್ನಾವಳಿಗಳಿಂದ ಮಂಟಪ ಸುಂದರವಾಗಿ ರಾರಾಜಿಸುತ್ತಿತ್ತು (ಗಿಂವ. ೦೨೩). ೨. ಯಾವುದಾದರೂ ವಸ್ತುವನ್ನು ಒಳಗೊಳ್ಳುವ ಸಂಪುಟ ; "ಬುಟ್ಟಿ ; ಪೆಟ್ಟಿಗೆ ; ಪಾತ್ರೆ" (ಪ್ರಶಣ್ಣ). ೩. ಜ್ಞಾನ ; "ತಿಳಿವಳಿಕೆ" (ಪ್ರಶಣ್ಣ). **ಬಾಸಣಿ** : ೧. "ಬಾಸಣಿಯೆನೆ ಮುಸುಕಿ [ಪಾಠಾಂ. ಮಾಸಣೆಯೆನೆ ಮಿಸುಂಕಿ]ದರ್ಥಂ" (ಶತುನಿ. ೬೦); ತೊಳಲ್ವ ಮಂಜಿನ ತಪ್ಪಲೊಳಗೆ ತನ್ನೊಡಲ ಮರೆಗೊಳಿಪ ಹೂವುಲ್ಲುಗಳ ಬಾಸಣಿಯೊಳು ಸುಳುಹು ಕಾಣಿಸಬೆಲರ ತಳುವ ಬಣ್ಣವ ಚಲ್ಲ ತಳಿವ ಮಿಸುನಿಯ ಮಿಂಚುಹುಳುವೊ ನೀನು ? (ಗಿಳಿಮಿ. ೬-೫೭).

[<ಸಂ. ವಾಸನ./ಪ್ರಾ. ವಾಸಣ./ಹಿಂ. ಮರಾ. ಬಾಸನ ; ಗುಜ. ವಾಸಣಾ]

ಬಾಸಣಿ 'ಬಾಸಣ' ನೋ.

ಬಾಸಣಿಗೆ$_1$ 'ಬಾಚಣಿಗೆ' ನೋ.

ಬಾಸಣಿಗೆ$_2$ (ನಾ). ಹೊದಿಕೆ ; ಆಚ್ಛಾದನ ; ಮುಸುಕು : ಪೊಸಮುತ್ತಿನ ಬಾಸಣಿಗೆಯೊಳ್ ಬಾಸಣಿಸಿದ ಬಿರಿಮುಗುಳ್ಗಳೊಳ್ (ಪಂಪಭಾ. ೫-೫ ವ) ; ಇರ್ಪುವೊರೆದ ದುಗುಲದ ಬಾಸಣಿ[ಪಾಠಾಂ. ಣ]ಗೆಯಂ ಕಳೆದು (ಕಾದಂಉ. ೦೬೮) ; ಸ್ಮರನಲರ್ವಿಲ್ಲ ಬಾಸಣಿ[ಪಾಠಾಂ. ಬಾಣಸಿ]ಗೆಯಂ ಕಳೆವಂತೆ ಮುಸುಂಕನೋಸರಿಸೆ (ಲೀಲಾವ. ೦೩-೦೨). [< ಬಾಸಣ]

ಬಾಸಣಿಗೆಗಳೆ (ಕ್ರಿ). ಮುಸುಕನ್ನು ಓಸರಿಸು: ಗವಸಣಿಗೆಯನ್ನು ತೆಗೆ : ಶಂಖಮಂ ಬಾಸಣಿಗೆಗಳೆದು . . . ವಿಕ್ರಮಾರ್ಜುನಂಗೆ ಕೊಟ್ಟು (ಪಂಪಭಾ. ೬-೩ ವ). [ಬಾಸಣಿಗೆ$_2$+ಕಳೆ$_1$]

ಬಾಸಣಿಸು$_1$ 'ಬಾಚಣಿಸು$_1$' ನೋ.

ಬಾಸಣಿಸು$_2$, ಬಾಚಣಿಸು$_2$ (ಕ್ರಿ). ೧. ಆವೃತವಾಗು : ಆ ಸಭೆಯು ಮನೇಱಿದ ಸಿಂಹಾಸನಮುಮನೊಡನೆ ಬೆಳಗೆ ಬೆಳಗಿಂದೆ ಜಗಂ ಬಾಸಣಿಸಿದುದೆನೆ ಸಕಲಸುರಾಸುರಪತಿಯುರದೊಳೆಸೆದುದಿಂದ್ರಜ್ಞಂದಂ (ಅದಿಪು. ೯-೭). ೨. ಹೊದಿಸು ; ಮುಚ್ಚು : ಕರಡಿಯ ತೊವಲಂ ಕಾಡಿಗೆಯೊಳರ್ದಿ ವಿಧಾತ್ರಂ ಲೋಕಮಂ ಬಾಸಣಿಸಿದನೆಂಬಂತಪ್ಪ ಕತ್ತಲೆಯೊಳ್ (ರರ್ವಾಮ್ಯ. ೦೨-೨೦). ೩. ಆವರಿಸು ; ಹಬ್ಬು : ಆ ಸುಗಂಧಕಪದುಮಪರಿಮಳ ಬಾಸಣಿಸಿತೀ ಜನಮನೋವಿನ್ಯಾಸವನು (ಕುಪ್ಯಾಲ. ೧೦-೩). ೪. ಧರಿಸು ; ತೊಟ್ಟುಕೊಳ್ಳು : ಎಕ್ಕಡವ ಬಾಸಣಿಸಿ ಪದತಳಕೆ ಪೀತಸುವಾಸವನು ತೆಗೆದುಟ್ಟು . . . ಎಲೆವನೆಯ ಹೊಱವಂಟನಾ ರಾಮ (ತೊರರಾ. ೩-೬-೩೪). ೫. ರಕ್ಷಿಸು ; ಕಾಪಾಡು : ಸ್ಥಾಣುಗಾದಿಯ ಹಳೆಯರಣಕಿಸೆ ಪ್ರಾಣವಂ ಬಾಸಣಿಸಲಱಿಯದ ಹೂಣಿಗರು ಜಾಣರುಗಳಭವನೊಳಗಲದವಿರಳರು (ಸಾನಂಶ. ೯-೦೦). **ಬಾಚಣಿಸು$_2$** : ೨. ಕರಿಮೊಗಂ ಸುಂಡಲದಿಂ ಸ್ತನ್ಯಪಾನಂಗೈವುತಿರಲ್ . . . ಸೆರಗ ಬಾಚಣಿಸಿದಗಜೆ ಸಲಹಾ (ನವಮೋ. ೬-೨). [ಬಾಸಣ + — ಇಸು$_3$]

ಬಾಸಬೆ (ನಾ). ಒಬ್ಬಾಕೆಯ ಹೆಸರು : ತಾಮ್ನೆಱೆದ ಕದಮ್ಬನಗ್ಗಳದ ಬಾಸಬೆಗಾದನೇಂ ಪುತ್ರನುತ್ತಮನ್ನೆರದಿಕೆ ನೋನ್ತು ಮೂಱುದಿನಮಂ ಸುರನಾಗಿದನಿನ್ತು ರಾಚಯಂ (ಎಕ. XV, ಹೊಳೆನ. ೬೬-೦೦ ; ಸು. 950).

[ಬಾಸ + ಅಬೆ (<ಅಬ್ಬೆ$_1$)]

ಬಾಸರ$_1$ 'ವಾಸರ$_1$' ನೋ.

ಬಾಸರ$_2$ (ಗು). ೧. ಬಿಳಿಚಿಕೊಂಡ ; ಪೇಲವವಾದ : ಮಿಡಿದು ಪಾಯ್ದಪುದಳ್ಳೆರ್ದೆ ಬತ್ತೆ ತೊಂಡೆವಾಯ್ ಬಾಸರವರ್ಣಮಾಯ್ತು (ಅನಂಪು. ೬-೦೦). ೨. ಮ್ಲಾನವಾದ ; ನಿಸ್ತೇಜವಾದ : ಕೆದಱಿದ ಕೇಶಬಂಧದ ಮಲಿನವೇಹದ ಬಾಸರದ ಶಶಿಮುಖದ ಸೂಸುವ ಸುಯ್ಲ ಸಂದಣಿಯ ಬೇಸಱಿನ ಬೆಱಗಿನಲಿ (ನಿಭಾಗ. ೬-೦೩-೨೬). (ನಾ). ೩. ಕಾಂತಿ ; ಮೆರುಗು; ಶೋಭೆ : ಮೃದುಪದಪುಕಜಂ ನಡೆದು ಕೆಂಪು ಮರಲ್ದು ನಿಜಾರುಣಾಂಶು ಪಾಸಿದ ದುಗುಲಕ್ಕೆ ಬಾಸರದ ಮಾಸರಮಂ ಕುಡೆ ಬಂದ ಯೋಗಿರೂಪದ ನಿಧಿಯಂ (ಅನಂಪು. ೯-೮೫) ; ಒಪ್ಪುವ ಯಜ್ಞಸೂತ್ರಕಂ ಕಿವಿಯ ತೊಳಂಚಿಯುಟ್ಟುಡೆಯ ಬಾಸರಮಿಕ್ಕಿದ ದರ್ಭೆ ಶೋಭೆವೆತ್ತ ವಿರಳಕೂರ್ಚಂ . . . ಒಪ್ಪೆ (ಮಹಾವೇ. ೦೦-೬೭). ೪. ಶುಭ್ರವಸ್ತ್ರ : ಉಟ್ಟ ಬಾಸರದ ಬಂಬಲ್ ಡೊಳ್ಳು ಚಿಲ್ವಾಗೆ ಸಂಭಿನ್ನಶ್ರೋತೃ ಧರಾಮರಂ ನೃಪತಿಗಾಶೀರ್ವಾದಮಂ ಮಾಡಿದಂ (ಶಾಂತೀಶ್ವ. ೨-೪೯); ಉಟ್ಟ ಬಾಸರ ಬಳಲುಗಚ್ಚೆಯನಟ್ಟಹಾಸದ ಜನದ ನಗೆಗಳ ನಟ್ಟವಿಗ ನೋಸರಿಸಿ ಸಭೆಯಲಿ ಮೆಲ್ಲನೈತಂದ (ಕುಪ್ಯಾಲ. ೦೫-೦೫). [<ಸಂ. ಭಾಸ್ವರ]

ಬಾಸಳು 'ಬುಸುಱ್' ನೋ.

ಬಾಸಾಳ 'ಬಾಸಂಱ್' ನೋ.

ಬಾಸಾಳು 'ಬಾಸಂಱ್' ನೋ.

ಬಾಸಿಂಗ 'ಬಾಸಿಗ' ನೋ.

ಬಾಸಿಕಾಱ (ನಾ). ದೇವಸ್ಥಾನದ ಪರಿಚಾರಕ (?) : ಬೀಹಳಿಯರೆನಿ ಬರಾವಡಂ ಮೆಯಲು ವಿ ೧೦ ಬಾಸಿಕಾಱಂ ಪ ೧ × × × (ಸೌಷಾ. XV, ೩೬-೦೦ ; 1148). [ಬಾಸಿ$_7$ + — ಕಾಱ]

ಬಾಸಿಕೆ (ನಾ). (?) : ಸೂಸುವ ಕಣ್ಣ ಕೆಂಪು ಪೊಸಬಾಸುಟ ಮೈ ಜಡೆ ಬಿಟ್ಟ ಮಂಡೆ . . . ಕಿಱುಲಜ್ಜೆ ತೊದಳ್ನುಡಿ ದೋರೆವಲ್ಲು ಕೈ ಬಾಸಿಕೆ

ಕೊಯ್ದ ಮುಂದಲೆ ಕಱುಗಿದ ಕೆಂದುಟಿಯೊಪ್ಪಿ ಬರ್ಪ ಸಂತೋಷದ ಲೇಸು ಬಾಸಣಿಸಿತಾ ಕವಿರಾಜಕಲಾವಿಲಾಸನಾ (ಕಾವ್ಯನಾ. ಪುಟ. ೨೩೫). [?]

ಬಾಸಿಗ, ಬಾಷಿಗ, ಬಾಸಿಂಗ (ನಾ). ೧. (ಹೂವಿನ) ಮಾಲೆ,—ದಂಡೆ : "ಬಾಸಿಗಮೆಂದು ಪೂಮಾಲೆ" (ಕಶನಾ. ೬೩-೪೦೬) ; ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯನಿರ್ಪೋಡಿದುದು (ಆದಿಪು. ೩-೩) ; ಕಟ್ಟಿಯುಮೇನೊ ಮಾಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ (ಅನಂಪು. ೦-೪೫) ; ಪಂದಲೆಯೊಂದು ಬಾಸಿಗಂ ನೆತ್ತರ ತಳ್ತ ಬಲ್ದಲೆಯ ಬಿಂದಿಗೆ . . . ಇವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯನಾ. ೫೩೩). ೨. ವಿವಾಹಸಮಯದಲ್ಲಿ ವಧೂವರರ ಹಣೆಗೆ ಕಟ್ಟುವುದಕ್ಕಾಗಿ (ಚಿನ್ನ, ಮುತ್ತು, ರತ್ನಗಳಿಂದ ಅಥವಾ ಕಾಗದ, ಬೆಂಡುಗಳಿಂದ) ರಚಿಸಿದ, ಎಡಬಲಕ್ಕೆ ಗೊಂಚಲುಗಳನ್ನುಳ್ಳ ಒಂದು ಬಗೆಯ ಅಲಂಕಾರಸಾಧನ : ಹೊಳೆವ ಬಾಸಿಗಕೆ ಹದಿನಾಱು ದಂಡೆ (ಅಪಸಂ. ೨೯೬-೦೩೦೯); ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ (ಮಹಾದೇ. ೩. ೩೭-೬೯) ; ಮಗ ಸೊಸೆಗೆ . . . ಸಿಂಗರಗೆಯ್ದು ರನ್ನದ ಬಾಸಿಗವನು ಕಟ್ಟಿದರು (ಮೋಹತ. ೦೩-೬೪). **ಬಾಷಿಗ** : ೨. ಬಣ್ಣದ ಸೊಡರು ಮೆಟ್ಟಕ್ಕಿಗಳ ಗೂಡೆಯ ಸಡಗರದ ಪುತ್ಥಳಿಯು ವಿರಚಿತ ರತುನಬಾಷಿಗದ . . . ಗುಧಾಕ್ಷತೆಯಗಿಲುಗಳೆಸೆದವು (ಅಂಬಿಕಾ. ೪೯-೫೦). **ಬಾಸಿಂಗ** : ೧. ಮಿಂದು ದಳಿಂಬ ಮನುಟ್ಟುಂ ಚಂದನಮಂ ಪೂಸಿ . . . ನವಕುಸುಮದಾಕೃತದಿಂದಂ ಬಾಸಿಂಗಮ ನಿಮಿರಿ ಕಟ್ಟಿದ ಬಟ್ಟೆಕಂ (ಜಿಟ್ಟಿಮ. ೯-೨೫); ಅದಟುಳ್ಳ ಭಟರು ಸೂಡುತೆ ಬಾಸಿಂಗ ಡೌಡೆ ಚೇಗಟೆ ದನಿಮಾಡಿಸುತ್ತೈದಿದರು (ಮೋಹತ. ೩೩-೩೪). ೨. ಆಗಮೋಕ್ತಿಯಲಿ ಬಾಸಿಂಗವ ಸೂಡಿದರ್ . . . ಪರಮ ಶೋಭನದಿಂದೆ ಮದುವೆಯಂ ಮಾಡಿದರ್ (ಮೋಹತ. ೪೨-೬೨); ಆಸೆಯಿಲ್ಲದ ದೋಸೆ ಮೀಸೆಯಿಲ್ಲದ ಮೋಱೆ ಬಾಸಿಂಗವಿರದ ಮದುವೆ ಇವು ಮೂಱು ಹೇಸಿ ಕಾಣಯ್ಯ (ಸರ್ವಜ್ಞ. ೦೪೬೨).

ಬಾಸಿಂಗಬಲ = ಬಾಸಿಂಗವನ್ನು ಕಟ್ಟುವ ಯೋಗ ; ಮದುವೆಯ ಯೋಗ : ಬಾಸಿಂಗಬಲ ಬರಲು ಬಾಸೆ ಕೊಡುವೆನು ತಂಗಿ (ಕನ್ನಜಾ. ೬೯). 'ಕಂಕಣಬಲ' ಪರಾ.

[ದೇ.॥ ತಮಿ. ವಾಚಿಕೈ; ತುಳು. ಬಾಸಿಂಗ, ಬಾಶಿಂಗ, ಭಾಷಿಂಗ ; ತೆಲು. ಬಾಸಿಕ./ಮರಾ. ಬಾಶಿಂಗ, ಬಾಸಿಂಗ]

ಬಾಸಿಗಂಗಟ್ಟು (ಕ್ರಿ). ೧. ಹೂಮಾಲೆಯನ್ನು ಹೆಣೆ ; ಹೂದಂಡೆಯನ್ನು ಕಟ್ಟು : ಬಾಸಿಗಂಗಟ್ಟುವನಂತು ಕಟ್ಟುವುದು ಕಬ್ಬಮನುಬ್ಬಿನ ಮಾಗೆ ಕಬ್ಬಿಗಂ (ಅಲಾಪ. ೦-೬೨). ೨. ಮದುವೆಯ ಕಾಲದಲ್ಲಿ ಬಾಸಿಗವನ್ನು ಧರಿಸು : ಬಾಸಿಗಂಗಟ್ಟಿದ ಶೀರ್ಷದಿಂದೆಱಗಿದಂ ವಸುದೇವಂ (ಜಗನಿ. ೨-೫೦) ; ಮುತ್ತಿನ ಬಾಸಿಗಂಗಟ್ಟಿ ನಂದಿಯಂ ಮೃಡನೇಱಿದಂ (ಸಂಪು. ೩೭-೪). [ಬಾಸಿಗ + ಕಟ್ಟು$_1$]

ಬಾಸಿಗಹುವ್ವು 'ಬಾಸಿಗಹೂ' ನೋ.

ಬಾಸಿಗಹೂ, ಬಾಸಿಗಹುವ್ವು (ನಾ). ಮಾಲೆಯಾಗಿ ಕಟ್ಟಿದ ಹೂವು ; ಹೂವಿನ ಹಾರ : ಶ್ರೀಗೊಮ್ಮಟದೇವರ ನಿತ್ಯಾರ್ಚ್ಚನೆಗೆ ೨೦ ಬಾಸಿಗ ಹೂವಿಂಗೆ ಶ್ರೀಮನ್ಮಹಾಮಣ್ಡಳಾಚಾರ್ಯ್ಯರು . . . ಕೊಟ್ಟ ದತ್ತಿ (ಎಳ. II. ೨೩೭-೫; 1196 ?). **ಬಾಸಿಗಹುವ್ವು** : ಯಿ ಮರಿಯಾದೆಯಲು ಕುನ್ದದೆ ೬ ಬಾಸಿಗಹುವ್ವನಿಕ್ಕುವರು (ಎಳ. II. ೨೪೩-೦೪; 1274 ?).

[ಬಾಸಿಗ + ಹೂ$_2$ (< ಪೂ$_2$)]

ಬಾಸು$_1$ (ಕ್ರಿ). ಮಲವಿಸರ್ಜನೆ ಮಾಡು : "ಬಾಸು — ಪುರೀಷೋತ್ಸರ್ಗೇ" (ಕಮಧಾ) ; ಬಾಸುತಂ ಹೀಸುತಂ ಮೂಸುತಂ (ಜನಮು. ೩೫-೦೫); ಲವಂ . . . ಮೂಸಿಯುಂ ಬಾಸಿಯುಂ ಮೇದುಂ ಪಾಯ್ದುಂ ವನಮಂ ಮನಮಂತುಟಾಱೆ ಪುಡಿಗುಟ್ಟಿ ಕಿಚಿಕಿಲ್ವ ಹಯಮಂ ದಿಟ್ಟಿಸಿ (ರಾಮಾಶ್ವ. ೦೫೨-೧೦).

[ದೇ.॥ ತಮಿ. ಪಾಚನ = ಭೇದಿ; ತೆಲು. ಪಾಸನ = ಮಲವಿಸರ್ಜನೆ]

ಬಾಸು$_2$ 'ಬಾರ್ಚು' ನೋ.

ಬಾಸುಂಡೆ 'ಬಾಸುಟ್' ನೋ.

ಬಾಸುಂದಿ, ಬಾಸುಂದೆ (ನಾ). ಹಾಲನ್ನು ಗಟ್ಟಿಯಾಗುವಂತೆ ಕುದಿಸಿ ಅದರಲ್ಲಿ ಸಕ್ಕರೆ, ಬಾದಾಮಿ, ದ್ರಾಕ್ಷಿ ಮೊದಲಾದುವುಗಳನ್ನು ಬೆರಸಿ ಮಾಡುವ ಮಂದದ್ರವವಾದ ಒಂದು ಬಗೆಯ ತಿನಿಸು : ಮನೆಯಲ್ಲಿ ತಾನೇ ನಿಂತು ಬಾಸುಂದಿ ಪೂರಿ ಅಡಿಗೆ ಮಾಡಿ ಕಮಲೆಯು ಬಯಕೆಯೂಟ ಆರಂಭಿಸಿದಳು (ಸಹಾರ. ೦೦೦); ಕರ್ನಾಟಕ ಕ್ಲಬ್ಬಿನಲ್ಲಿ ಇಂದು "ಬಾಸುಂದೀ ಪುರೆ"ಯಿತ್ತು (ಸಮಜೀ. ೧೦೦). **ಬಾಸುಂದೆ** : ಕಾರ್ಯದರ್ಶಿಯು . . . "ಬಾಸುಂದೆ, ಪುರೆ" ಯಾಗಬೇಕೆಂದು ನಿರ್ಣಯಿಸಿದ್ದನು (ಸಮಜೀ. ೦೦೦).

[← ಮರಾ. ಬಾಸುಂದೀ. ಬಾಸುದೀ. ಬಾಸೋಂದೀ]

ಬಾಸುಂದೆ 'ಬಾಸುಂದಿ' ನೋ.

ಬಾಸುಗಿ 'ವಾಸುಗಿ' ನೋ.

ಬಾಸುರಕಬ್ಬು (ನಾ). ಒಂದು ಬಗೆಯ ಕಬ್ಬು : "ಇಕ್ಷಾಳಿಕ :— ಬಾಸುರಕಬ್ಬು. ಹೆಗ್ಗಬ್ಬು. ಈಶ್ವರಿ" (ಓಷಧಿ. ೦೩).

[ಬಾಸುರ$_0$ + ಕಬ್ಬು$_2$ (< ಕರ್ವು$_1$)]

ಬಾಸುರಿಕೋಡು (ನಾ). ಒಂದು ಊರಿನ ಹೆಸರು : ಬಾಸುರಿಕೋಡು ಇಂಗಳಿಸರ ಬಾಗೆವಾಡಿ ಸಾಮಳವಾಡಿಗೆ ಒಡ್ಡವೊಡಿಗೆ ಮಧ್ಯವತ್ತಿ[ಗ] ಪಿಪ್ಪರಗೆನಾಮಗ್ರಮೋ . . . ದತ್ತಿ (ಸೌಇಇ. XI-i, ೯-೦೭; 862). [?]

ಬಾಸುಳ್ 'ಬಾಸುಟ್' ನೋ.

ಬಾಸುಳ 'ಬಾಸುಟ್' ನೋ.

ಬಾಸುಳಿ 'ಬಾಸುಟ್' ನೋ.

ಬಾಸುಳು 'ಬಾಸುಟ್' ನೋ.

ಬಾಸುಳುವಡೆ (ಕ್ರಿ). ಮೈ ಮೇಲೆ ಬಾಸುಂಡೆಗಳನ್ನು ಬರಿಸಿಕೊಳ್ಳು : ಬಳೆಯ ಮುಱಿಯಿಂ ತೋಳೊಳಗೆ ನೆಲೆಮೊಲೆಗಳಲಿ ಕೊರಳಲಿ ಬರೆದು ಬಾಸುಳುವಡೆದು ಮುಸುಕಿಟ್ಟು ಮಲಗಿದಳರಸ ಕೇಳು (ಸಾಳ್ವಭಾ. ೨೯-೧೯).

[ಬಾಸುಳು (< ಬಾಸುಟ್) + ಪಡೆ$_1$]

ಬಾಸುಳೆ 'ಬಾಸುಟ್' ನೋ.

ಬಾಸುಳೇಳು 'ಬಾಸುಟೇಟ್' ನೋ.

ಬಾಸುಟ್, ಬಾಸಳು, ಬಾಸಾಳ, ಬಾಸಾಳು, ಬಾಸುಂಡೆ, ಬಾಸುಳ್, ಬಾಸುಳ, ಬಾಸುಳಿ, ಬಾಸುಳು, ಬಾಸುಳೆ (ನಾ). ಗೀರಿದ ಅಥವಾ ಹೊಡೆದ ಪೆಟ್ಟಿನಿಂದ ಚರ್ಮದ ಮೇಲೆ ಉದ್ದವಾಗಿ ಉಬ್ಬಿಕೊಳ್ಳುವ ಗುರುತು : ಮಿಳಿರ್ವಸಿಯ ಪಸಿಯ ಪೊಸವಾಸುಟ ಕರರುಹರೇಖೆ ತುಱುಗಿ ರತನಾಟ್ಯಪರಿಸ್ಖಳಿತಕ್ಕೆ ಮುಳಿದು ದಂಪತಿಗಳ ನಂಗಜನಟನ ಸೆಳೆದ ಬಾಸುಟನಿಳಿಕುಂ (ಆದಿಪು. ೦೨-೦೫) ; ಎಲ್ಲರ ಮೆಯ್ಗಳೊಳಂ ತಳುವಿಲ್ಲದೆ ಬಾಸುಟ್ಗಳೊಗೆಯೆ (ರರ್ಮಾನ್ಮ. ೩-೨೦೩); ವಿರಹ ದಿನಟಿಲ್ದು ಬಸವಟಿದು ಮೋದೆ ತನ್ನುರದೊಳ್ ಬಾಸುಟ ತಳ್ಳು ಶೋಕ ಶಿಖಿಯಂ ಕಟಲ್ಚಲೆಂದೊಟ್ಟಿದಸುಗೆದಳಿರಂ ಪೋಲ್ಕುಂ (ಕಾವ್ಯಾನ. ೨೦೦). **ಬಾಸಳು** : ಬಾಳೆಯ ಸುಳಿಯ ಕಟ್ಟಿಗೆಕೋಲೊಳವ ಹೊಯ್ದನೇಳೇಳು ಮೂಲೆಗೋಡಾಡಿ ಆ ಲೇಸುವೆಂಗಳ ಮೈಗೆ ಬಾಸಳು ಪುಷ್ಪಮಾಲೆಯಂ ತೆದ್ದುವಾಕ್ಷಣವೆ (ಭರತ. ೪೯-೬೪) ; ಓಡಿತಂದೊಡನನಿಬರಾಕ್ಷಣ ನೋಡದೆಡ ಬಲಗಳನು ದೈತ್ಯರ ತ್ರಾಡನೆಯ ಬಾಸಳಿನ ತಲೆಬೋರುಗಳ ಯೇರಿನಲಿ (ಅಂಬಿಕಾ. ೪೦-೪೪) ; ಬೆತ್ತದೇಟಿಗೆ ಬಾಸಳು ಎದ್ದಿದ್ದುವು (ಕೂತಕಾ. ೨೯).

ಬಾಸಾಳ : ಪಂಡಿತನಿಗೆ ತನ್ನ ಕೆನ್ನೆಯ ಮೇಲೆ ಮೂಡಿದ ಬಾಸಾಳದ ನೆನಪಾಯಿತು (ಸಮಜೀ. ೧೨೦೬) ; ಅವಳ ಬೆನ್ನು ಗಲ್ಲಗಳ ಮೇಲೆ ಬೆತ್ತದ ಬಾಸಾಳಗಳು ಮೂಡಿದ್ದುವು (ದೇವರಾ. ೦೩). **ಬಾಸಾಳು** : ಸಿಕ್ಕವರ ಬೆನ್ನಿಗೆ ಬಾಸಾಳು (ಪಾಬಿಲಿ. ೩೪) ; ಕೈಕಾಲುಗಳ ಮೇಲೆ ಬಾಸಾಳು ಮೂಡಿದ್ದಲ್ಲದೆ ಅವನ ಹಣೆಯಿಂದ ರಕ್ತವು ಸುರಿಯತೊಡಗಿತು (ಸಮಜೀ. ೨೩). **ಬಾಸುಂಡೆ** : ಬಾಸುಂಡೆ ಬರುವಂತೆ ಸೆಳೆದ (ಅರಳು. ೦೪೭-೦೦) ; ನೀವು ಈ ಅರಿಯದ ಕಂದನಿಗೆ ಬಾಸುಂಡೆ ಬೀಳುವಂತೆ ಹೊಡೆದಿದ್ದೀರಿ (ಶಿಂದನ. ೪೬). **ಬಾಸುಳ್** : ನೋಡಯ್ಯ ಮಗನೆ ಎನ್ನಯ್ಯ ಮಯ್ಯ ಬಾಸುಳಂ (ನಾಜರ. ೦೭೭-೨೩) ; ಬಾಸುಳಂ ತೋರದಂದದಿ ಬೆರಳ್ಪೊಡೆತಮಂ ಕೊಡು (ವಂಕಾರಾ. ೩-೨-೪೦). **ಬಾಸುಳ** : ನೊಂದನೆಂದು ಮಯೂರನ ಸಂತೈಸಿ ಬಾಸುಳವ ನೋಡುವ ನೆವದಿಂದ ಕುಪ್ಪಸವ ಕಳೆದು ನೋಳ್ಪಾಗ ಮಯೂರನ ಮೈ ಸುವರ್ಣವಾಗಿರೆ (ಭೈರಸೂ. I, ೪೩). **ಬಾಸುಳಿ** : ಕರಿಕಾಲಚೋಳನಾಳ್ಗಳ ಭರದಿಂದಂ ಹೊಡೆದೊಡಿಲ್ಲ ಬಾಸುಳಿಯೆಂದುಂ (ಭೈರಪು. ೦೩-೨೮). **ಬಾಸುಳು** : ತಱೆದ ಬಾಸುಳ ಬರಿಯ ಮುಸುಱುವ ನೊಣದ ಹುಣ್ಣುಗಳ . . . ಕುಱುಹನಡಗಿಸಿಕೊಂಡು ಹಸ್ತದ ನಿಱಿಗೆಯಲಿ ನೆಱೆ ಸುಳಿದನಾ ಪ್ರಭುಲಿಂಗ ಲೀಲೆಯಲಿ (ಪ್ರಭುಲೀ. ೨೨-೩೪). **ಬಾಸುಳೆ** : ಮಯೂರನಂ ನರಪ ತಾನೆಸೆದು ಬಾಸುಳೆಯ ನೋಡುವ ನೆವದಿ ಶರಿರಮಂ ಪರಿಕಿಸೆ ಸುವರ್ಣದಂತಿರಲು (ಪ್ರೌಢರಾ. ೨-೪೦) ; ಬೆತ್ತದಿಂ ಬಡಿಯೆ, ಬಾಸುಳೆಗಳಿಂ . . . ನೆತ್ತರೊಡಮೂಡಿದೊಡಮವನೊಂದು ಮಾತನೆತ್ತಿಲ್ಲ! (ಗೂಢ್ಯಾಕ್ಷಿ ೪೬-೨೪೬).

[ದೇ.ಸ / ಪ್ರಾ. ಭಾಸುಂಡ = ಹೊರಸೆಳೆಯುವುದು]

ಬಾಸುಟೀಟ್, ಬಾಸುಳೇಳು (ಕ್ರಿ). ಮೈಮೇಲೆ ಬಾಸುಂಡೆಯೇಳು,— ಬಾರೇಳು : ಮೈ ಬಾಸುಟೀಟ್ವನ್ನೆಗಂ ಪಱಿದತ್ತಕ್ಕಟ ಪೊಕ್ಕು ಕೇದಗೆಯ ಪೂಗೊಯ್ಯಲ್ಕೆ (ಸೂಕ್ತಿಸು. ೦೦-೬೦). **ಬಾಸುಳೇಳು** : ಹೊಯ್ಲಿನ ಬಿಱುಸಿನಲಿ ಬಾಸುಳೆದ್ದಾ ತನುಗಳಂ ನಸುಮುಟ್ಟಿ ನೋಡುತ ಹೆದಱುತೋಡುತ್ತ (ಬಸಪು. ೩೫-೦೦) ; ಅರಿದು ನೆತ್ತರಗಾಣದಲಗಿದು ನೆಱೆ ಬಿಗಿಯೆ ಮೈ ಬಾಸುಳೇಳದ ಹುರಿ ಬಲಿದ ನೇಣ್ ಸೋಂಕಿದೊಡೆ ಹೊಗೆ ಮಸಗದೆದೆಗಿಚ್ಚು (ಕುಪ್ಯಾಪಿ. ೩-೦೦). [ಬಾಸುಟ್ + ಏಟ್$_1$]

ಬಾಸೆ$_1$ (ನಾ). ಎದೆಯ ಮಧ್ಯಭಾಗದಿಂದ ಹೊಕ್ಕುಳ ಮೇಲು ಭಾಗದ ವರೆಗೆ ರೇಖಾಕೃತಿಯಾಗಿರುವ ತೆಳುಕೂದಲಿನ ಸಾಲು,— ರೋಮರಾಜಿ : "ನಾಭಿಯ ರೋಮ ಬಾಸೆಯೆನಿಸಿಕ್ಕು" (ಮಂಗರಾ. ೯೪-೩); ಆಕೆಯ ಬಾಸೆಗಳುಂ ಪಗೆವರ ಬಾಟ್ವಾಸೆಗಳುಮೊಡನೊಡನಸಿಯವಾದುವು (ಪಂಪಭಾ. ೦-೦೪೦ ವ); ಭ್ರೂಲತೆಯ ಬಿಲುಗಳ ಕಟಾಕ್ಷದ ಕೋಲ ಹೊದೆಗಳ ಬಾಸೆಗಳ ಕರವಾಳಗಳ . . . ಮನ್ಮಥನಾಳು ನಡೆದುದು ದ್ರೌಪದಿಯ ದಂಡಿಗೆಯ ಬಳಸಿನಲಿ (ಕುಪ್ಯಾಪಿ. ೦೩-೩೪).

ಬಾಸೆ$_2$, ಭಾಸೆ (ನಾ). ೧. ಜನರು ತಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸಲು ಉಪಯೋಗಿಸುವ ಪದಪ್ರಯೋಗ ; ಭಾಷೆ : "ಬಾಸೆಯೆ ಭಾಷೆ" (ಕರ್ಣಾನಿ. ೬೪); ಭಾಷಾ-ಬಾಸೆ (ಶಮದ. ೨೫೫ ಪ್ರಯೋ). ೨. ಕನ್ನಡ, ತಮಿಳು ಇತ್ಯಾದಿ ಬೇರೆಬೇರೆ ಮಾತು,—ವಾಙ್ಮಯ : ಆತನನಾಕೆಗಳ್ ಬಾಸೆಯೊಳಿಂತೆಂದರ್ (ಶಂಪಭಾ. ೪-೯೫ ವ); ಕೆಲದೊಳಿರ್ದ ವಿದಗ್ಧಸೌಂದರಿಯೆಂಬ ವಿಳಾಸಿನಿ ಅರಸಿಯ ಮನಮನಱಿದು ಆಕೆಯ ಬಾಸೆಯೊಳಿಂತೆಂದಳ್ (ಧರ್ಮಾಮೃ. ೪-೦೯೯). ೩. ಆಣೆ; ಶಪಥ; ಪ್ರತಿಜ್ಞೆ: ದೇವಿ ತನ್ನಯ ತನುವಂ ನಿಲೆ ಪಿಡಿವ ಬಾಸೆಯಂ ಮಾಡುಗುಮೋ (ಕಾವಂಉ. ೩೭೯). ೪. ವಚನ; ವಾಗ್ದಾನ : ಬಾಸೆಯಂ ಬೇಡಿ ನಾನರಚುವಂದೆನ್ನ ಕಯ್ಯೊಳಾರ್ಮರಸಿಟ್ಟರೀ ಗಿರಿಕೆಯನ್ನ? (ಗಿಳಿವಿಂ. ೩೦-೩). **ಭಾಸೆ**: ೪. ಒಲ್ದ ಮಾಟ್ಕೆಯಿಂ ಭಾಸೆಯನಿತ್ತು ಪುಚ್ಚಳಿವರಲ್ಲದೆ ಭಾಸೆಯನುದ್ಧರಿಪ್ಪರೇ (ಎಕ. V, ಬೇಲೂರು. ೦೦೨-೦೦೨; ಸು. 1220 ?).

ಬಾಸೆಯ ಕೊಡು = ಮಾತು ಕೊಡು; ವಚನ ಕೊಡು; ಭಾಷೆ ನೀಡು : ಪೂಸರಳಿಂದೆ ಶಿವನ ತಟ್ಟನೆ ತಾಗಲಿಕ್ಕುವೆನೆಂದು ಬಾಸೆಯ ಕೊಟ್ಟ ಮನ್ಮಥ ಜೀವನಿಗೆ (ಮೋಹತ. ೩-೬೦). **ಭಾಸೆಗೆ ತಪ್ಪು**=ಆಡಿದ ಮಾತನ್ನು ನಡೆಸದಿರು; ಕೊಟ್ಟ ಮಾತಿಗೆ ತಪ್ಪು; ಭಾಷೆಗೆ ತಪ್ಪು: ಭಾಸೆಗೆ ತಪ್ಪು ವಂಕದ ನೆಗಟ್ತೆಯ ಲೆಂಕರ ಗಂಡಂ (ಎಕ. V, ಬೇಲೂರು. ೦೦೨-೦೦೨; ಸು. 1220 ?). [<ಸಂ. ಭಾಷಾ]

ಬಾಸೆಗೆಡು (ಕ್ರಿ). ಕೊಟ್ಟ ಮಾತಿಗೆ ತಪ್ಪು; ವಚನಭ್ರಷ್ಟನಾಗು : × × × ಬಾಸೆಗೆಟ್ಟೊಡೆ × × × (ಸೌಇಇ. IX-i. ೨೨-೦೦; 923).

[ಬಾಸೆ$_2$ + ಕೆಡು$_1$]

ಬಾಸೆಗೊಡು (ಕ್ರಿ). ವಚನ ಕೊಡು; ಮಾತು ಕೊಡು : ಎಲೆ ಶುಕ ನೀನಾವನನೀ ಲಲನೆಗೆ ಪತಿಯೆಂದು ತರ್ಪೆಯಾತನೆ ನಿನ್ನುಜ್ವಲಸಖಿಗೆ ಭರ್ತೃವೆಂದೆನಲೊಲವಿಂದಂ ಬಾಸೆಗೊಟ್ಟು ಕಟುಪಿದರೆನ್ನಂ (ಉದ್ಕಟಿ. ೬-೦೨೨); ಸುಭುಜಂ ಪಗೆರಾಯರಂ ಕೊಲ್ವೆನೆಂಬಾಸೆಯಿಂ ಬಾಸೆಗೊಟ್ಟು ತನ್ನ ಪಡೆಯಂ ಕೊಂಚೆಗಟ್ಟಿನ ಕೋಂಟೆಯಂತೆ ಸಮೆದು (ರಾಮಾಶ್ವ. ೯೪-೨೬). [ಬಾಸೆ$_2$ + ಕೊಡು$_1$]

ಬಾಸೆದೋಱು (ಕ್ರಿ). ಮಾತಾಡು; ಧ್ವನಿ ಮಾಡು : ಆ ಶಶಿಮುಖಿ ಮಾಗಿಯ ಕೋಗಿಲಂದದಿ ಬಾಸೆದೋಱದೆ ಸುಮ್ಮನಿರಲು (ಜ್ಞಾನಸ. ೨-೭೪).

[ಬಾಸೆ$_2$ + ತೋಱು]

ಬಾಸೆಯಿಲಿ (ನಾ). ಸುಳ್ಳು ಹೇಳುವ ವ್ಯಕ್ತಿ : ಮೋಸಮನೀವ ಬಾಸೆಯಿಲಿಗಳ್ ದ್ರವಿಡಾಂಗನೆಯರ್ (ಜಕವಿ. ೩-೦೬೩). [ಬಾಸೆ$_2$+ — ಇಲಿ$_3$]

ಬಾಸೆವಕ್ಕಿ (ನಾ). ಮಾತನ್ನಾಡುವ ಹಕ್ಕಿ ; ಗಿಳಿ : ಮೊರೆವ ಕುಕಿಲ್ವ ಪಾಡುವ ಬಾಸೆವಕ್ಕಿಗಳ ಗಜಬಜದಿಂ . . . ತಪೋವನವೊಂದು ಕಣ್ಗೊಳಿಸಲೊಡಂ (ರಾಮಾಶ್ವ. ೬೪-೬). [ಬಾಸೆ$_2$ + ಪಕ್ಕಿ]

ಬಾಸೆವತ್ತಳೆ (ನಾ). ಆಶ್ವಾಸನೆಯ ಪತ್ರ ; ಸಹಾಯದ ವಾಗ್ದಾನ ಕೊಡುವ ಪತ್ರ : ಇದು ನಿಶ್ಚಿತಂ ಇನಿತಱೊಳವರುಪಟಳಕ್ಕೆ ಬೆಚ್ಚ ದೆಮ್ಮಂ ನಚ್ಚಿರ್ಪುದು — ಎಂದನಿಬರುಂ ಕಳುಪಿದ ಬಾಸೆವತ್ತಳೆಗಳನಿತ್ತು ಬಿನ್ನವಿಪುದುಂ (ಜಕವಂ. ೪೩-೩) ; ಈ ಬಾಸೆವತ್ತಳೆಯು . . . ಕಾಕತಾಳೀಯದ ಫಲಸಿದ್ಧಿಯಾಗಿ. ನಮಗೆ ಬಹಳಮಟ್ಟಿಗೆ ಉಪಕಾರವಾಗುವುದು (ಪಟ್ಟಿಲಿ. ೬೩-೦೬). [ಬಾಸೆ$_2$ + ಪತ್ತಳೆ$_1$]

ಬಾಸೆವಾಲ (ನಾ). ರೋಮಮಯವಾದ ಬಾಲ (?) : ಶೇಷಕಾಯದ ನಿಡಿದ ನಿಳಿಕೆಯ ದೀರ್ಘತರ ಬಾಸೆವಾಲಂ ಮಿಳಿರೆ ನೇತ್ರತ್ರಯಂಗಳೊಂದೇ ಸಮಯದಿಂ ವಿಸ್ಫುಲಿಂಗಂಗಳ ಸೂಸುತಿರೆ ದಿವ್ಯಶಾರಭರೂಪದಿಂ ಬಾಸಂಗಳಿಗೆ ಭಯಭ್ರಾಂತಿಯಂ ತಳೆದು . . . ದುಷ್ಟನರಕೇಸರಿ ಗಗನದೊಳಿರೆ ಮೇಗಣ್ಗೆ ಜಿಗಿದು ಪಕ್ಷಂಗಳಿಂದಪ್ಪಳಿಸಿದಂ (ರಾಘಶ.೦೪-೦೦).[ಬಾಸೆ$_1$+ಬಾಲ$_1$]

ಬಾಸೆವೆಣ್, ಬಾಸೆವೆಣ್ಣು (ನಾ). ವಾಗ್ದೇವತೆ ; ಸರಸ್ವತಿ : "ನುಡಿವೆಣ್, ಬಾಸೆವಣ್ . . . ಸಾರದೆ, ಸರಸತಿ — ಈ ೬ ಸರಸ್ವತಿಗೆ ಪೆಸರ್" (ಕಶಸಾ. ೪೮-೧೬); ಬಾಸೆವೆಣ್ಣೊಂದೊಲ್ಮೆದಾಳ್ದಿ ವಾಕ್ಸಿದ್ಧಿಯಂ ಪಡೆದು ನಿನ್ನಂ . . . ರತಿಯಿಂ ನೂರ್ಮಡಿ ಮಿಗಿಲೆನಿಸಿ ಬಣ್ಣಿಪೆಂ (ರಾಮಾಶ್ವ. ೬೮-೨). **ಬಾಸೆವೆಣ್ಣು** : "ನಿರುತಂ ತಾಂ ಬಾಸೆವೆಣ್ಣು ಶಾರದೆಯಕ್ಕುಂ" (ಕವಿಕಂ. ೩೦).

ಬಾಸೆವೆಣ್ಣನಿಯ=ಸರಸ್ವತಿಯ ಪತಿ ; ಬ್ರಹ್ಮ : "ಪೊಂಬೊಡೆಯಂ . . . ಬಾಸೆವೆಣ್ಣನಿಯ . . . ಬ್ರಹ್ಮಗೆಸೆವ ನಾಮಂ" (ಕಬ್ಬಿಕ್ಕೆ. ೯) ; ಬಾಸೆವೆಣ್ಣನಿಯ ಕೇಳ್ ಭೂಸುರರ ಸಲಹುವರೆ ವಾಸಿಯಿಂದುದಯಿಸುವೆ ವಸುಮತಿಯೊಳು (ವಂಕಾರಾ.೦-೨-೦೬). [ಬಾಸೆ$_2$ + ಪೆಣ್]

ಬಾಸೆವೆಣ್ಣು 'ಬಾಸೆವೆಣ್' ನೋ.

ಬಾಸೆಹೀನ (ನಾ). ಕೊಟ್ಟ ಮಾತಿಗೆ ತಪ್ಪುವವನು ; ವಚನಭ್ರಷ್ಟ : ಬಾಸೆಹೀನನ ಹೆಣವನೀಶನಿವಾಸದೊಳಗಿರಿಸುವುದನುಚಿತಂ (ಬಸಪು. ೨೬-೨೮). [ಬಾಸೆ + ಹೀನ]

ಬಾಸ್ತಿಮಲ್ಲಿಗೆ (ನಾ). ಮಲ್ಲಿಗೆಯಲ್ಲಿ ಒಂದು ಬಗೆ ; ಕಸ್ತೂರಿಮಲ್ಲಿಗೆ : ಬಾಸ್ತಿಮಲ್ಲಿಗೆ, ಕಸ್ತೂರಿಮಲ್ಲಿಗೆ (ಮೈಸಿಗಿ. ೪೭-೯೩೭). 'ಬಾಸಂತಿ' ಪರಾ. [ಬಾಸ್ತಿ + ಮಲ್ಲಿಗೆ]

ಬಾಹ 'ವರ್' ಪರಾ.

ಬಾಹಟ (ನಾ). ೧. ಒಬ್ಬ ಪ್ರಾಚೀನವೈದ್ಯನ ಹೆಸರು. ೨. ಆ ವ್ಯಕ್ತಿಯು ಬರೆದ ವೈದ್ಯಗ್ರಂಥ : "ಅಷ್ಟಾಂಗಹೃದಯವೆಂಬ ವೈದ್ಯಗ್ರಂಥ" (ಪಡ್ಡಾರಾ. ಪಶ್ಚಿ) : ಸಾಮುದ್ರಿಕಂ. . .ಬಾಹಟಂ[ಪಾಕಾಂ. ಲಂ] ಸುಸ್ರುತಂ ಕ್ಷಾರಪಾನೀಯಂ ಮೊದಲಾಗೊಡೆಯ ನರವೈದ್ಯಂಗಳುಂ . . . ನೆಱೆಯೆ ಕಲ್ಪಿಸಿ (ಪಡ್ಡಾರಾ. ೪-೦). ೩. ವೈದ್ಯಶಾಸ್ತ್ರ : ನ್ಯಾಯ ವೈಶೇಷಿಕ . . . ಬಾಹಟ . . . ಧರ್ಮ ವೇದಾಂತ ಸಿದ್ಧಾಂತಗಳಲ್ಲಿ . . . ಸದ್ಯುಕ್ತಿನಿರೂಪಕರಾದ ವಾದಿಗಳಿಂ (ಏಪೇಶ. ೨೨೬); ಮಾನವರಿಗೆಂದೆಣಿಸಲಪ್ಪುದನೂನವಿಲ್ಲದ ಬಾಹಟದ ಸಂಜ್ಞಾನಿಬಂಧನ ಪೀಟಿಕೆಯನು ಕರ್ನಾಟಕ ಭಾಷೆಯಲಿ (ಏಪೇಶ. ೦೬-೩೨). ೪. [ಸಂಗೀತ] (?) : ಗತಿ ಸಂಗತಿ ವಡೆಯೆ ಗಮಕಂ ಗಾರವಂಬಡೆಯೆ ಗಹಗಹಿಕೆ ಗೊಂಡಂ ಗೊಂಡಿ ಚಡಂ ಬಾಹಟಂ ಲಾಲಂಗಿ ತನ್ನೆವಣೆ ನಿಸ್ಸರಡೆ ರಂಗರಕ್ತಿ ಬೇಗವಣಿತು ತರಹರಂ ಸುಠಿವೊಟ್ಟಜಿ ದಾಳವಾಳಂ ಪದಿರ್ಪೊಜೆ ಕೊಂಕು ಕಮ್ಮಣೆ ಪೆಸರಂ ಬೆಡಂಗು ವಡೆಯೆ ಪಾಡುತ್ತಿರೆಯುಂ (ಶಾಂತೀಶ್ವ. ೦೬-೬೬ ಪ). [ಸಂ.]

ಬಾಹಣ (ನಾ). ಬರುವಿಕೆ ; ಆಗಮನ : ವೆಗ್ಗಳವಾಗಿಹ ತತ್ತ್ವಗ್ರಂಥವ ಹೇಳಿ ವಸ್ತುವಾಗಿ ಹರದು ಹೇಗೆ ಬೊಗ್ಗುವಡವೆ ಮಾಡಬಾಹಣವಲ್ಲದೆ ಬೊಗ್ಗು ಕಟ್ಟಿಗೆಯಾಗದಾಗೆ (ಸಾಕೋ. ೪೪-೫) ; ಅದು ಹೋಪಣ ಬಾಹಣಿಲ್ಲವಮ್ಮಾ (ಸಾಪ ೭೬-೯) ; ಸೊಗಸಿನಾಟಕೆ ಪಗಲೆಯಿರುಳೆ ಹೋಗಿ ಬಾಹಣವಾಗಿರುತಿಪ್ಪಾ (ಕಕ್ಕೋಕ. ೬-೭).

[< ಬರ್ (< ವರ್) + – ಅಣ]

ಬಾಹತ್ತರ (ನಾ). ಒಂದು ಸಂಖ್ಯೆ : ಎಪ್ಪತ್ತೆರಡು : ಸೋಮನಾಥಲಿಂಗ ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯ (ವಸಸಂ. ೨೫೫-೪೫).

ಬಾಹತ್ತರನಿಯೋಗ, ಬಹತ್ತರನಿಯೋಗ = ರಾಜ, ರಾಣಿಯರಿಗೆ ಎಪ್ಪತ್ತೆರಡು ಬಗೆಯ ಸೇವೆ ಮಾಡುವವರ ಸಮೂಹ : ಅಲ್ಲಿಗಲ್ಲಿಗೆ ಗುಜಿಗುಜಿಗೊಂಡು . . . ಮಱುಗುವ ಬಾಹತ್ತರನಿಯೋಗದಧಿಕಾರಿಗಳುಮಂ (ಪರ್ಧಪಾ. ೫-೯ ಪ); ದರ್ಪಣದ ಹಡಪದ ಶಂಖದ ಬಿಂಕದ ಬಾಹತ್ತರನಿಯೋಗಂ (ಸಂಬರ. ೮-೦೭); ಭೂವರಂ ಬಹತ್ತರನಿಯೋಗವನು ಪುರಜನವೆಲ್ಲವಂ ಬರಿಸಿ ಇಂತೆಂದನು (ಸಮ್ಮಕ್ಕಾ. ೨-೯೦). **ಬಾಹತ್ತರನಿಯೋಗಾಧಿಪತಿ, ಬಾಹತರಿನಿಯೋಗಾಧಿಪತಿ** = ರಾಜ, ರಾಣಿಯರ ಎಪ್ಪತ್ತೆರಡು ಬಗೆಯ ಸೇವಾಕಾರ್ಯಗಳಿಗೆ ನಿಯಮಿತರಾದ ಗುಂಪಿನ ಪ್ರತಿಯೊಬ್ಬ ವ್ಯಕ್ತಿ : ಸರ್ವಾಧಿಕಾರಿ ಸೇನಾಧಿಪತಿ ಬಾಹತ್ತರನಿಯೋಗಾಧಿಪತಿ ಸಕಳಲಕ್ಷ್ಮೀಪತಿ (ಸೌಇಇ. IX-i. ೩೦೭-೯; 1223) ; ಪರಮವಿಶ್ವಾಸಿ ಬಾಹತರಿನಿಯೋಗಾಧಿಪತಿ ನಿಯೋಗಯೋಗಂಧರನುಂ (ಎಕ.XVI, ಸಕ್ಕಪಾ. ೭೦-೦೧; 1235). **ಬಾಹತ್ತರನಿಯೋಗಿ**=ಬಾಹತ್ತರನಿಯೋಗಾಧಿಪತಿ : ಚಾಳುಕ್ಯಚಕ್ರೇಶ್ವರಕಟಕ ಬಾಹತ್ತರನಿಯೋಗಿ ನಿವಾಹಾರಾಧ್ಯನುಂ (ಎಇ. XV, ೮೦-೧೯ ; 1060); ಮಕ್ಕಳ ದೆಸೆಯವರನೋಲಗಿಸುವರ ಬಾಹತ್ತರನಿಯೋಗಿಗಳ ನಂಬುವುದುಚಿತವೇ (ಕುಪ್ಕಾಲ. ೮-೩೫).

[< ಪ್ರಾ. ಬಾಹತ್ತರ./ಸಂ. ದ್ವಿಸಪ್ತತಿ./ಹಿಂ. ಬಹತ್ತರ್ ; ಮರಾ. ಬಹಾತ್ತರ್, ಬಾಹತ್ತರ್]

ಬಾಹತ್ತರನಿಯೋಗ 'ಬಾಹತ್ತರ' ಪರಾ.

ಬಾಹಪ್ಪಳಿಸು (ಕ್ರಿ). ತೋಳುಗಳನ್ನು ಚಪ್ಪರಿಸು ; ಸೆಡ್ಡುಹೊಡೆ ; ಬಾಹಾಸ್ಫಾಲನಮಾಡು : ಮಲೆತು ನಿಂದು ಅಖ್ಖಡದೊಳ್ ಪೊಕ್ಕು ಬಾಹಪ್ಪಳಿಸಿ ಬಲ್ಬುದೋಱಿಸಿದ ಮಲ್ಲನನುರ್ಬುತ್ತೊಯ್ಯನೊಳಪೊಕ್ಕು (ಗಿಂಕ. ೨-೦೦೫ ಪ) ; ಒಲಿದು ಮುದದಲಿ ಭೀಮ ಬಾಹಪ್ಪಳಿಸಿದನು (ಕುಪ್ಕಾಲ. ೦೦-೨೦); ಗಾಢಮುಷ್ಟಿಯೊಳೌಕಿ ಬಿಡದಲ್ಲಾಡಿಸಿದನಾ ಧನುವನದು ಕೈಗೂಡದಿರೆ ಕೈದೆಗೆದು ಬಾಹಪ್ಪಳಿಸಿ ಬೊಬ್ಬಿಱಿದ (ತೊರುಂ. ೦-೦೫-೦೬). [ಬಾಹು + ಅಪ್ಪಳಿಸು]

ಬಾಹರಪುಟ (ನಾ). (?) : ಬತ್ತೀಸಕಡಿಯ ಬಾಹರಪುಟದ ಗುಳದ ಕಣಂಗಳ ಕುಳಿಶದಳಂ (ಅನಂಪು. ೦೪-೬ ಪ). [?]

ಬಾಹಲ್ಯ (ನಾ). ಅಗಲ ; ವಿಸ್ತಾರ : ತ್ರಿಭುವನಭವನಕಲಶಾಯಮಾನಮುಂ ಯೋಜನದ್ವಿತಯಾಂತ್ಯಬಾಹಲ್ಯಮುಮಷ್ಟಯೋಜನಮಧ್ಯಬಾಹಲ್ಯಮುಂ . . . ಸ್ಫಾಟಿಕಶಿಲಾತಲದ ಮೇಗರ್ಧಯೋಜನಬಾಹಲ್ಯದಿಂ ಘನೋದಧಿಯಿರ್ಕುಂ (ಸುಕುಮಾ. ೦೦-೭೫ ಪ); ಸೀಮಂತಕಾಭಿಧಾನೇಂದ್ರಕಂ ಕ್ರೋಶೈಕಬಾಹಲ್ಯಂ . . . ತತ್ಪ್ರಕೀರ್ಣಕನಿಕರಂ ತದುಭಯಬಹಲ ಕಲಿತಸಂಖ್ಯಾಬಾಹಲ್ಯಂ (ತತ್ತ್ವಪ್ರ. ೦೨೦). [ಸಂ.]

ಬಾಹಾಬಲ (ನಾ). ತೋಳ್ಬಲ; ಭುಜಶಕ್ತಿ: ಪಲರಾ ವಂಶಜರವನೀತಲಮಂ ಪಾಳಿಸಿದರ[ಳ]ವಿನದಟಿನ ಬಾಹಾಬಲದ ಕಲಿತನದ ಚಾಗದ ನೆಲೆಯೆ[ನಿಸಿ] ದುದಾರವೀರಗುಣಗಣನಿಳಯರ್ (ಕಇಲ. ೨-೨-೦೬ ; 1058). [ಸಂ.]

ಬಾಹಾವಿಹೀನತ್ವ (ನಾ). ತೋಳುಗಳಿಲ್ಲದಿರುವಿಕೆ ; ಭುಜಗಳಿಲ್ಲದಿರುವಿಕೆ : ವಿಚಾರಮಿಲ್ಲದುಲಿಯಲ್ ಬಾಹಾವಿಹೀನತ್ವದಾಯಾಸಂ ಬಂದುದು (ಶಾವಶ. ೨೯). [ಸಂ.]

ಬಾಹಾಸ್ಫಾಲನ, ಬಾಹಾಸ್ಫಾಳನ (ನಾ).(ಕದನಕ್ಕೆ ಸಿದ್ಧವಾಗಿರುವುದನ್ನು ಸೂಚಿಸಲು) ತೋಳುಗಳನ್ನು ಚಪ್ಪರಿಸುವುದು ; ಸೆಡ್ಡು ಹೊಡೆಯುವುದು : ಕುವರನ ಬಾಹಾಸ್ಫಾಲನರವಮುರ್ಬಿಸೆಯಗಿದು ಪಾಡಿ ಬಿಡದೊದಱುತ್ತಿರ್ದವೊಲಾದುದು ತದ್ಗಹ್ವರನಿವಹಪ್ರಭವಾತಿಭೀಷಣಂ ಪ್ರತಿಘೋಷಂ (ಸಂಪ್ರಪು. ೫-೭೭). **ಬಾಹಾಸ್ಫಾಳನ** : 'ಬಾಹಾಸ್ಫಾಳನಂಗೆಯ್' ಪರಾ. [ಸಂ.]

ಬಾಹಾಸ್ಫಾಲನಂಗೆಯ್, ಬಾಹಾಸ್ಫಾಳನಂಗೆಯ್ (ಕ್ರಿ). ತೋಳುಗಳನ್ನು ಚಪ್ಪರಿಸಿಕೊಳ್ಳು ; ಭುಜಗಳನ್ನು ತಟ್ಟಿಕೊಳ್ಳು : ಸಂತಸದೆ; ಬಾಹಾಸ್ಫಾಲನಂಗೆಯ್ದು ದಿಗ್ವಲಯಂ ಮಾರ್ದನಿಯಿಟ್ಟವೋಲ್ ಗಜಱಿದಂ ಚಾಳುಕ್ಯಕಂಠೀರವಂ (ಗದಾಯು. ೬-೪೭) ; ಓರೊರ್ವರುದೀರ್ಣರೋಷಾವೇಷಪರುಷಪಾಟಲಿತಕಟಾಕ್ಷದಿನಡರೆ ನೋಡಿ ಬಾಹಾಸ್ಫಾಲನಂಗೆಯಲೊಡನೆ (ಶಬಶಂ. ೪-೭೦ ಪ). **ಬಾಹಾಸ್ಫಾಳನಂಗೆಯ್** : ಅಲ್ಲಿ ಪರಿಪರಿದಾಡಿ ಮುಂತೆ ಬಾಹಾಸ್ಫಾಳನಂಗೆಯ್ದು ಕುಣಿದಾಡಿ (ಬಸರ. ೯-೩೦).

[ಬಾಹಾಸ್ಫಾಲನ + ಕೆಯ್$_1$]

ಬಾಹಾಸ್ಫಾಳನ 'ಬಾಹಾಸ್ಫಾಲನ' ನೋ.

ಬಾಹಾಸ್ಫಾಳನಂಗೆಯ್ 'ಬಾಹಾಸ್ಫಾಲನಂಗೆಯ್' ನೋ.

ಬಾಹಿ (ನಾ). ದೇವಸ್ಥಾನದ ಹೊರಗಿನ ಪರಿಚಾರಕರಲ್ಲಿ ಒಬ್ಬ : ಬಾಣಸದ ಅಪ್ಪಣೆ ಐದಕ್ಕಂ ಗದ್ಯಾಣಂ ಇಪ್ಪತ್ತು ಬಾಹಿಯವರು ಐದಕ್ಕಂ ಗದ್ಯಾಣಂ ಇಪ್ಪತ್ತು ಮಾಲೆಗಾಱರು ಹತ್ತೂ ಅರ್ಧಕ್ಕಂ ಗದ್ಯಾಣಂ ನಾಲ್ವತ್ತ ಎರಡು (ಎಕ. III, ತಿರುಮ. ೯೭-೯೩ ; 1273). [?]

ಬಾಹಿಗೆ (ನಾ). ಹೊರಭಾಗ : ಹೊರವಲಯ : ಪೊಱಲಂ ಪೊಱಮಟ್ಟು ಪುರದ ಬಾಹಿಗೆಯನೆಯ್ದುವಾಗಳ್ ಗಾಂಗೇಯದ್ರೋಣಕೃಪವಿದುರಾದಿಗಳ್ ಕೊಂತಿವೆರಸೆಯ್ದುವಂದು (ಪಂಪಶಾ. ೭-೨೦ ಪ). [< ಸಂ. ಬಾಹೀಕ]

ಬಾಹಿತ್ಥ (ನಾ). ಆನೆಯ ಕುಂಭಸ್ಥಳದ ಕೆಳಗಿನ ಹಣೆಯ ಪ್ರದೇಶ : ಕರಮಂ ಸಂ[ಜೋ]ಗಮಂ ಕುಂಭಮನುರವಣೆಯಂ ಗ್ರಾಹಮಂ ಕರ್ಣ

ಜಾಲಾಂತರಮಂ ನಿರ್ಯಾಣಮಂ . . . ಪುಷ್ಕರಮಂ ಬಾಹಿಸ್ಥ [ತ್ಥ] ಮಂ ಲೋಚನಘಟಮನಿಷೀಕಾಂತಮಂ ಕೂಡೆ ತೀರೀ ಶರಸಂಘಾತಂಗಳುಚ್ಚುತ್ತಿರೆ ಕೆಡೆದುವಿಭಾನೀಕಂ (ವರ್ಧಮಾ. ೯-೬೯).

[<ಸಂ. ವಾಹಿತ್ಥ. /ಪ್ರ ಸಂಸ್ಕೃತದಲ್ಲಿ 'ವಾಹಿಸ್ಥ' ಎಂಬ ಶಬ್ದರೂಪವೂ ಇರಬಹುದೆಂದು ಕೋಶಗಳಲ್ಲಿ ಹೇಳಿದೆ]

ಬಾಹಿತ್ರ 'ಬಹಿತ್ರ' ನೋ.

ಬಾಹಿರ (ಗು). ೧. ಹೊರಭಾಗಕ್ಕೆ ಸೇರಿದ. ೨. ಹೊರದೂಡಲಾದ: ಬಹಿಷ್ಕೃತವಾದ. (ನಾ). ೩. ಹೊರಭಾಗ ; ಹೊರವಲಯ : ಬಹಿಃಪ್ರದೇಶ : ಕಟ್ಟಿದ ಮುಟ್ಟು ಬಾಹಿರಿಗೆ ಕಿಟ್ಟೊಡವಂದುದು (ಸಂಪ್ರಪು. ೯-೧೨) ; ಬಾಹಿರದ ಪಾಳ್ದೇಗುಲದೊಳಗೆ ಸಾವಿರ ಸೊಡರು ಗಳನೆತ್ತಿ ಭಜಿಸುವ ನೇಮವಾತಂಗೆ (ಬಸವು. ೫೦-೫೯). ೪. ಹೊರತಾದುದು; ಸಂಬಂಧವಿಲ್ಲದುದು : ಅತೀತವಾದುದು : ಆ ತಪ್ಪುತೀರ್ಮಾನ ದೇನೆಂದರೆ. ಭಾರತದ ಪ್ರಾಚೀನ ತತ್ವಜ್ಞಾನ ಬೌದ್ಧಿಕತತ್ವಜ್ಞಾನಕ್ಕೆ ಬಾಹಿರ ವೆಂಬುದು (ತತ್ವಜ್ಞಾ. ೯) ; ಪುಣ್ಯಪಾಪಗಳಿಂದ ಬಾಹಿರವಾದ ... ಬ್ರಹ್ಮವೆ ನನ್ನ ಗಮ್ಯ (ಪಡೆಬಾ. I, ೫೧೦). ೫. ಅಯೋಗ್ಯವಾದುದು : ಬಾಹಿರವ ಕಳೆದು ಎಡೆನಾಣ್ಯವನುಳಿದು ಹಲವು ನಾಣ್ಯವ ಕಳೆದು ಸಲುವ ನಾಣ್ಯವ ಹಿಡಿದು ನೋಡುವೆನಯ್ಯಾ (ಶಡವ. ೨೬-೭೭). ೬. ಅನರ್ಹ : ಅಯೋಗ್ಯ: ಭರತವಂಶದ ಬಾಹಿರರು ನಿಮ್ಮರಸುಗಳು (ಕುಪ್ಯಾಲಿ. ೬-೦೨) ; ಕ್ಷಿತಿಗೆ ಬಾಹಿರನಾದೆನ್ನೆ ಜೀವಿತವ ಹಿಡಿದಿರಲಾಱೆನು (ಕೌಶಿರಾ. ೨೨-೬೩). ೭. ಕ್ಷುದ್ರ : ಅಲ್ಪ : ಹೀನ : ವಚನಿಸಿ ಪೂಡದಿಹ ಬಾಹಿರರು ನಾವಲ್ಲ (ಕುಪ್ಯಾರ್ಪ್ರೋ. ೧-೯೦) ; ಅಂತಕನ ಬಱ ಘಲ್ಲಣೆಗೆ ಬೆದಱುವರೆ ಬಾಹಿರರಂತೆ ಮರಣದಲಿ (ವಿಭಾಗ. ೨-೦-೨೯). [ಸಂ.]

ಬಾಹಿರಂಗ (ಗು). ೧. ಹೊರಭಾಗಕ್ಕೆ ಸಂಬಂಧಿಸಿದ : ಬಾಹ್ಯದ ; ಬಹಿರಂಗದ. (ನಾ). ೨. ಹೊರಗೆ ಕಾಣುವಂಥದು : ರಾಕ್ಷಸರ ವಧೆಗಾ ಸುಲಭ ತನ್ನಿಚ್ಛೆಯಲ್ಲಿ ಜನಿಸಿಯೆ ನಳಿನನಾಭನು ಬಾಹಿರಂಗದ ರೂಪ ಧರಿಸುವನು (ವಿಭಾಗ. ೦೦-೩೬-೬೭). ೩. (ಆಲಂ) ತೋರಿಕೆ ; ಆಡಂಬರ : ಮೋಹಮುಳ್ಳೊಡೆ ತಪ್ತತೈಲಪೂರಿತ ಘನಕಟಾಹದೊಳ್ಕೆಡಪಿ ಸುವನೇ ತಂದೆ ತನಯನಂ ಬಾಹಿರಂಗದ ಶೋಕವೆಂದು ಜಱೆಯದೆ ಲೋಕಂ (ಶೈಮಿಶಾ. ೦೩-೫೬). [ಸಂ.]

ಬಾಹಿರಗಿತ್ತಿ (ನಾ). ವೇಶ್ಯೆ : ಸೂಳೆ : ಕೃತ್ರಿಮದ ರೂಪುಗಳು ಬಾಹಿರಗಿತ್ತಿಯರು (ಬಸವು. ೪೦-೫೫). [ಬಾಹಿರ + — ಗಿತ್ತಿ]

ಬಾಹಿರತನ (ನಾ). ಅಯೋಗ್ಯತನ : ನಿನಗೆ ಸಾರಥಿಯಾದ ಬಾಹಿರತನವೇ ತಾನದು ಸಾಲದೇ (ಕುಪ್ಯಾಕ. ೯-೩೭). [ಬಾಹಿರ + — ತನ]

ಬಾಹಿರವಟ್ಟ (ನಾ). ಹೊರಗಿನವರ ನಾಣ್ಯ ವಿನಿಮಯಕ್ಕಾಗಿ ಕೊಡ ಬೇಕಾದ ಸೋಡಿ : ಪಟ್ಟಣದೊಳು ಜನ ಕೊಟ್ಟ ಹಣವನೆಡೆವಟ್ಟ ಬಾಹಿರ ವಟ್ಟವೆಂದು ದಿಟ್ಟತನದೆ ಪೆಸರಿಟ್ಟು ವಟ್ಟವ ಕೊಂಬ ಸೆಟ್ಟಿಗಳಿರುತಿಹರಲ್ಲಿ (ಅಂಜನ. ೩-೬೩). [ಬಾಹಿರ + ವಟ್ಟ]

ಬಾಹಿರಸುಂಕ (ನಾ). ಒಂದು ಬಗೆಯ ತೆರಿಗೆ : ಮಾಜಲಿ × × ಕೊಳಲಿ ಬಾಹಿರಸುಂಕವಿಲ್ಲ (ಸೌಇಇ. XX, ೨೦೮-೦೦ ; ?). [ಬಾಹಿರ + ಸುಂಕ$_1$]

ಬಾಹಿರಾತ್ಮ (ನಾ). ನೀಚವ್ಯಕ್ತಿ ; ದುಷ್ಟಾತ್ಮ : ಬಾಹಿರಾತ್ಮರು ಗೌಳತಾಪಸರೋಹಿಲಯ್ಯನು ಹುಗದಹಗೆ ಶಿವಗೇಹದಲಿ ಹಗಲೆಯ್ದೆ ಕಾವಲನಿರಿಸಿ . . . ಬಾಗಿಲ ಕದವನುಱೆ ಮೋಹಿ ಬೀಯಗವಿಕ್ಕಿಯನಿಬರು ಗಹಗಹಿಸಿ ನಗುತ (ಬಸಪು. ೪೩-೪೬). [ಸಂ. ಬಾಹಿರಾತ್ಮನ್]

ಬಾಹು$_1$, ಬಾಕು$_1$ (ನಾ). ೧. (ಪೆಟ್ಟು, ಖಾಯಿಲೆ ಮೊದಲಾದುವು ಗಳಿಂದ ಉಂಟಾಗುವ) ಊತ ; ಉಬ್ಬು ; ಶೋಫ : "ಶೋಫಃ . ಶ್ವಯಥುಃ —ಈ ೨ ಬಾ(ವು) ಹು" (ಹಲಾಯು. ೯೬-೪೪೬) ; ಮರುಳ ಮನ್ನಣೆಯಂತೆ ಬಾಹಿನ ಡೊಳ್ಳಿನಂತೆ ಸೂಳೆಯ ಕರೆಹದಂತೆ . . . ಕಡೆ ಯೊಳ್ ಪೇಸುಪಥಮುಮಶೋಭೆಯುಮಾಗದೆ ಪೋಗದು (ರರ್ಮಾಸ್ಮು. ೬-೧೨೨) ; ತೊಱೆಗಣಿಗಿಲೆಗಳವೊಂದಿರೆ ಮಱುಗಿಸಿ ಕಟಿಯಿಂದಮಂತದಂ ಕಟ್ಟಲೊಡಂ ನೆಱೆಯಿಡುಗುಂ ಬಾಹು ವಿಷಂ ಪಱಿಪಡುಗುಂ (ಐಮಾಪ. ೦೬-೭೦). ೨. ಹುಣ್ಣು ; ವ್ರಣ : ವೇದವತಿಯ ಮೊಗ ದೊಳೊಂದು ಬಾಹು ಪುಟ್ಟಿ ಪೊಲ್ಲರಲ್ಲದರಂ ಪೊಲ್ಲರೆಂದು ನುಡಿದೊಡೀ ಬಾಹಾದುದೆಂದೆಲ್ಲರ್ಗಂ ತಿಳಿಯೆ ಪೇಟ್ದು (ಪಂರಾಮಾ. ೧೬-೩೬ ವ). **ಬಾಕು$_1$** : ೧. ಮಂಡಲವಿಷಕ್ಕೆ ಆರುವೇಗ. ಅದರಲ್ಲಿ ಮೊದಲ ವೇಗ ಮುಖ ದಲ್ಲಿಯು ದೇಹದಲ್ಲಿಯು ಹಳದಿವರ್ನವನು ಮೈಯಲ್ಲಿ ಬಾಕನು ಉಂಟು ಮಾಡುವದು (ವಿಷಸ. ೯-೩) ; ನಡುಮಳೆಗಾಲದಲ್ಲಿ ಚಂದ್ರಯ್ಯಗೌಡರ ಮೈಗೆ ಬಾಕು ಬಂಧಿತು (ಕಾಸಮಾರು. ೩೬೩). 'ಬಾವು' ಪರಾ.

[ಬಾ$_1$ + — ಹು$_2$ (< — ಪು$_2$)]

ಬಾಹು$_2$ (ನಾ). ೧. ತೋಳು ; ಭುಜ : "ದೋರ್ಬಾಹು ಭುಜಮೆನಲು ತೋಳಿಂಗೆ ನಾಮಂ" (ಮಂಗರಾ. ೯೫-೭) ; ದಿಕ್ಕರಿಕರಾನುಕಾರಿಗಳಪ್ಪ ಬಾಹುಗಳಿಂದಮೋರೊರ್ವರಂ ತೆಗೆದಪ್ಪಿ (ಪಂಪಭಾ. ೯-೩೩ವ); ಖಳನ ಬಾಹುವ ನೊದೆದು ತುಱುಬಿಗೆ ನಿಲುಕಿ ಕುಸುಬಿದನು (ಕುಪ್ಯಾಲಿ. ೨೨-೩೩). ೨. ಹನ್ನೆರಡುಅಂಗುಲದ ಒಂದು (ಉದ್ದಳತೆಯ) ಪ್ರಮಾಣ. ೩. [ಜ್ಯೋತಿ] ಆರ್ದ್ರಾನಕ್ಷತ್ರ. ೪. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ : ಯಮ ನಯನ ಕರ್ಣ ಕರ ಪದ . . . ಬಾಹು ಕಿವಿಗಳೆರಡಱ ನಾಮಂ (ವ್ಯವಹಾ. ೯-೨). ೫. [ರೇಖಾಗ]ರೇಖಾಕೃತಿಗಳ ಹೊರಮೈಯನ್ನು ರಚಿಸುವ ರೇಖೆ : ಭುಜರೇಖೆ : ಎರಡು ತ್ರಿಭುಜಗಳ ಕೋಣಗಳು ಪರಸ್ಪರ ಸಮನಾಗಿದ್ದರೆ, ಅವುಗಳ ಪರಸ್ಪರ ಬಾಹುಗಳು ಒಂದೇ ಪ್ರಮಾಣದಲ್ಲಿರುತ್ತವೆ (ಗಣಿತ. ೦೯). [ಸಂ.]

ಬಾಹುಗಡಿ (ನಾ). ಮುರಿದ ತೋಳು ; ತುಂಡಾದ ತೋಳು : ಕಂಧರ ಗಡಿ ಬಾಹುಗಡಿ ಹಸ್ತಗಡಿ ನೇರಂದದ ನಡುತೊಡೆಗಡಿಯ ವೃಂದಾರಕ ವಿರೋಧಿಗಳು ಬಿದ್ದರು ಕಾಮನಂದನಬಾಣಗಳಿಂದೆ (ಮೋಹತ. ೩೫-೨೨).

[ಬಾಹು$_2$ + ಕಡಿ$_3$]

ಬಾಹುಗತ್ತರಿ (ನಾ). ಮಲ್ಲಯುದ್ಧದ ಒಂದು ಪಟ್ಟು ; ತೋಳು ಗಳಿಂದ ಪಟ್ಟಿಗೆ ಸಿಕ್ಕಿಸಿ ಹಿಡಿಯುವುದು : ತುಡುಕಿ ಪಿಡಿದು ತೊಡೆಗಳಂ ನಡುವಂ ಚೂಕ್ಕರಿಸಿ ಬಾಹುಗತ್ತರಿಯಿಂ ಗಳಮನೊತ್ತುವುದುಂ (ಮಹಾವೇ. ೬-೭೬ ವ). [ಬಾಹು$_2$ + ಕತ್ತರಿ$_2$]

ಬಾಹುಜ (ನಾ). ೧. ಕ್ಷತ್ರಿಯ ; ಪಾರ್ಥಿವ : ಪ್ರ ವಿಷ್ಣುವಿನ ತೋಳಿನಿಂದ ಕ್ಷತ್ರಿಯರು ಹುಟ್ಟಿದರೆಂಬ ಪೌರಾಣಿಕನಂಬಿಕೆಯಿದೆ : ಕಾದಿ ಸಾವುದು ಮೇಣು ರಿಪುಭಟನಾದವನ ನೆತ್ತಿಯಲಿ ಸಬಳವ ಕೋದು ಕೊಂಬುದು ನೆಲನನಿದು ಬಾಹುಜರ ಮಕ್ಕಳಿಗೆ (ಕುಪ್ಯಾಲಾ. ೦-೯) ; ವೈಹಾಳಿಯನುಱಿದು ಬಾಹುಜನಿವಹಂ ಬೀಡಂ ಪುಗುತರೆಯುಂ (ರಾಮಾಶ್ವ. ೨೨-೦೬) ; ಕಾದುವುದು ಬಾಹುಜರ ಧರ್ಮ (ನಾಗರ. ೩೯-೦೬). ೨. ಗಿಳಿ. [ಸಂ.]

ಬಾಹುಜಿಗೆ 'ಬಾವುಜಿಗೆ' ನೋ.

ಬಾಹುತಳ (ನಾ). ಕುಸ್ತಿಯ ಒಂದು ವರಸೆ ; ಎದುರಾಳಿಯನ್ನು ತೋಳಿನ ಒಳಗೆ ಸಿಕ್ಕಿಸಿಕೊಳ್ಳುವುದು,— ಹಿಡಿಯುವುದು : ಭುಜಗ ಬಂಧಂ ತೋರಹಸ್ತಂ ಶಿರೋವಳಯಂ ಬಾಹುತಳಂ ಚಮತ್ಕರಿಸೆ ನಾನಾಕೌಶಲಂದೋಱಿದರ್ (ಶಬಶಂ. ೯-೭೫ ವ). [ಸಂ. ಬಾಹುತಲ]

ಬಾಹುದಣೆ (ನಾ). ಮಲ್ಲಯುದ್ಧದ ಒಂದು ಪಟ್ಟು,— ವರಸೆ : ಪಾಸಗೆ ವನ್ನಿಮುಟ್ಟಿ ಚಟ್ಟು ಸಿರಣವಟ್ಟಿ ಬಾಹುದಣೆ ಖಮ್ಮರಿ ಕತ್ತರಿ . . . ಎನಿಪ್ಪ ಜೆಟ್ಟಿಗನ ನಚ್ಚಿನ ಬಿನ್ನಣಮೊಪ್ಪೆ ಕಾದಿದರ್ (?) (ಪಂಪ್ರಪು. ೫-೭೬) ;

ತಿರುಣಿ ಕುಳಾಡೆ ಬಾಹುಗೆ[ದ]ಣೆ ಸುಭಾಹುಡೆ . . . ಪಟ್ಟಿಕತ್ತರೆಗಳೆ ನಿಪ್ಪ ಜಟ್ಟಿಗರ ಬಿನ್ನಣಮೊಪ್ಪೆ ಕಡಂಗಿ ಕಾದಿದರ್ (ಶ್ರೀಪುರಿ. ೨೬-೦೯). 'ದಣುವಟ್ಟಿ' ಪರಾ. [ಬಾಹು$_2$ + ದಣ್ಣೆ]

ಬಾಹುದೆಕ್ಕೆ (ನಾ). ತೋಳಿನ ತೆಕ್ಕೆ ; ಬಾಹುಬಂಧನ : ಭರತೇಶ . . . ಶ್ರೀಹಂಸಾಥಯೆಂದೊಡನೆದ್ದು ಕುಳಿತನಾ ಬಾಹುದೆಕ್ಕೆಯ ಪಟ್ಟದರಸಿ ಆ ಹೊತ್ತಿನೊಳೆ ರಾಯನಳುವ ಕನಸ ಕಂಡು ದೇಹ ಕಂಪಿಸುತಿರ್ದಳೊಡನೆ (ಭರತ. ೭೩-೦೦). [ಬಾಹು$_2$ + ತೆಕ್ಕೆ$_1$ (<ತಟ್ಕೆ)]

ಬಾಹುಪುರಿ 'ಬಾಪುರಿ' ನೋ.

ಬಾಹುಪೂರ (ನಾ). ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ; ಕೇಯೂರ : "ಬಾಹುರಿಕೆಯೆನಲ್ಕೆ ಬಾಹುಪೂರಕೆ [ಪಾಠಾಂ. ರಕ್ಷೆಗೆ] ನಾಮಂ" (ಭಾರನಿ. ೩೩); ಬಂದುಗೆಯ ಬಾಹುಪೂರಮುಂ ದಾಡಿಮಾಬೀಜದ ಕರ್ಣಾವತಂಸಮುಂ . . . ಮಿಗೆ ಸೊಗಸಂ ಮೂವಡಿಸೆ (ಗಿರಿಕ. ೭-೦೦ ಪ); ಸಲ್ಲಲಿತಕಾಂತಿಯ ಕಳಲ್ಚುವ ಭುಜಗಳಿಂದುರಗಬಾಹುಪೂರಗಳಿಂದಲವಿರತಂ ವಿಶ್ವತೋಬಾಹು ಸಿಂಹಾಸನಾಗ್ರದೊಳು ಕಣ್ಗೊಳಿಸಿರ್ದನು (ಸಂದಿಸೂ. ೩-೬). [ಸಂ.]

ಬಾಹುಪೂರಕ (ನಾ). = ಬಾಹುಪೂರ : ಒದವಿದ ನವ್ಯಲತಾಮಧ್ಯದ ಕುಸುಮಾಳಿಯೊಳೆ ಮೊರೆವ ಮಱಿದುಂಬಿಗಳಂ ಮುದದಿಂ ಕೀಲಿಪವೋಲ್ ನೀಲದ ರವೆಯದ ಬಾಹುಪೂರಕಂಗಳನಿತ್ತರ್ (ಗಿರಿಕ. ೦೦-೩೬); ಶ್ರೀವಧು ಮುತ್ತಿನೆಕ್ಕಸರದಂತುರದೊಳ್ ನಲಿವಂತು ವಿಕ್ರಮಶ್ರೀವಧು ಬಾಹುಪೂರಕದವೋಲ್ ಭುಜದೊಳ್ ನಲಿವಂತು . . . ಪಾಲಿಸಿದನುರ್ವರೆಯಂ ಕಲಿ ಸೋಯಿಬಲ್ಲಹು (ಎಕ. VI, ಕಡೂರು. ೦೨-೨; 1233). [ಸಂ.]

ಬಾಹುಪೂರಯ(ನಾ). = ಬಾಹುಪೂರ : "ಕೇಯೂರಮೆನೆ ಬಾಹುಪೂರಯ ಮಕ್ಕು" (ಮಂಗರಾ. ೦೦೦-೨೬); ಬಾಹುಪೂರಯಮಂ ತೋಳ್ಗೆ ಕೈ ಕೊಳಿಸಿ (ಬಸರ. ೬-೦೯); ಪದಕದ ಬಾಹುಪೂರಯದ ತೊಳತೊಳಗುವೆಳ ಮಾಣಿಕದ ಕರ್ಣಪೂರದ ಮಹಾಮುದ್ರಿಕೆಗಳ . . . ಸೊಬಗನಡಿಯಿಟ್ಟನ ಪ್ರತಿಮನವನೀಶನು (ಹಪಕಾ. ೪-೨). [<ಸಂ. ಬಾಹುಪೂರಕ]

ಬಾಹುಬಲ (ನಾ). ತೋಳಿನ ಬಲ ; ಭುಜಶಕ್ತಿ : ಬಾಹುಬಲಮಿಲ್ಲದ ರಾಜಪುತ್ರನಂತೆ ತಕ್ಕುಗೆಟ್ಟು (ಶಾಂತಿಪು. ೪-೩೦ ಪ); ಬಾಹುಬಲ ಬಲವಲ್ಲ ದೈವ ದ್ರೋಹಿಗಳಿಗೆ (ಕುಪ್ಯಾಲಿ. ೦೩-೦೯) ; ಭರತಖಂಡದ ಆಧುನಿಕ ದುರ್ಗತಿಗೆ ಪ್ರಧಾನಕಾರಣ ಬಾಹುಬಲದ ಅಭಾವ (ಬಂಕಿಮ. ೪೭೭). [ಸಂ.]

ಬಾಹುಬಲಿ (ನಾ). ೧. ಬಾಹುಬಲವುಳ್ಳವನು. ೨. ಆದಿತೀರ್ಥಂಕರನ ಎರಡನೆಯ ಮಗ : ಇಂತಾದೊಡೆಮಗೆ ಬಾಹುಬಲಿಯ ಸಮರಸಂಘಟ್ಟ ದೋಹಳಮಿದು ದರಿದ್ರಂಗೆ ಹೀನಗರ್ಭದೋಹಳದಂತಾದುದು (ಆದಿಪು. ೦೪-೦೦೨ ಪ). [ಸಂ. ಬಾಹುಬಲಿನ್]

ಬಾಹುಬಳೆ (ನಾ). = ಬಾಹುಪೂರ : ಬಾಹುವಳಯ — ಬಾಹುಬಳೆ (ಶಪುದ. ೨೯೯ ಪ್ರಯೋ). [<ಸಂ. ಬಾಹುವಲಯ]

ಬಾಹುಮುರಿ (ನಾ). = ಬಾಹುಪೂರ : ಶರೀರಕ್ಕೆ ಆನಂದಕರವಾಗಿ . . . ಅರಸುಗಳ ಮನಸ್ಸೆಂಬ ಸಮುದ್ರಕ್ಕೆ ಕೆರೆಯೋಪಾದಿಯಲ್ಲಿ ಪ್ರಕಾಶಿಸುವುದೇ ಬಾಹುಮುರಿಯ ಗುಣಗಳು (ಸಳಪ್ಯ. ೩೯) ; ಪೂರ್ವದ ಕವಿಗಳು . . . ರಾಜರು ಧರಿಸುವ ಕಿರೀಟ, ಭುಜಕೀರ್ತಿ, ಎದೆಹಾರ, ಬಾಹುಮುರಿ . . . ಮಂಜೂರಿ ಮುಂತಾದುವುಗಳನ್ನೂ ಬಣ್ಣಿಸಿರುವರು (ಹುಬ್ಬಹ. ೬೩). [ಬಾಹು$_2$ + ಮುರಿ$_3$ (< ಮುರಿವು)]

ಬಾಹುಮೂಲ (ನಾ). ಕಂಕುಳು ; ಬಗಲು : "ಕಕ್ಷಂ, ಬಾಹುಮೂಲಂ— ಈ ೨ ಕೌಂಕುಟ್ಯ" (ಹಲಾಯು. ೬೭-೩೭೦); ಎಮೆಯಿಕ್ಕದೆ ನೋಡುವ ನರರಮರರ ಕಣ್ಗಳೊಳನಂಗರಾಜನ ಬಯ್ತಿಟ್ಟಮರ್ದಂ ಕೊಳೆ ತಳಿದು ನಾಭಿಮೂಲಮುಂ ಬಾಹುಮೂಲಮುಂ ಸುರವಧುವಾ (ಆದಿಪು. ೯-೩೫) ; ಒಂದು ಸರಸಿಯ ತಡಿಯಲಳವಡೆ ನಿಂದು ಸಂವರಿಸಿದನು ಗದೆಯನು ಬಾಹುಮೂಲದಲಿ (ಕುಪ್ಯಾಗ. ೪-೭). [ಸಂ.]

ಬಾಹುರಕೆ 'ಬಾಹುರಕ್ಕೆ' ನೋ.

ಬಾಹುರಕ್ಕೆ, ಬಾಹುರಕೆ (ನಾ). ೧. ಯೋಧರು ತೋಳಿಗೆ ರಕ್ಷಣೆಯಾಗಿರಲೆಂದು ತೊಡುವ ಕವಚ ; ಭುಜತ್ರಾಣ : ಗುರು ಕವಚು ಕರ್ಣಂ ಬಾಹುರಕ್ಕೆ ಸುರಸಿಂಧುನಂದನಂ ಸೀಸಕಂ (ಗದಾಯು. ೨-೨೬) ; ಎಕ್ಕತುಳಕ್ಕಿಱಿವ ವೈರಿ ನಿನ್ನಿಕ್ಕಿದ ವಜ್ರದಮ್ಬುರಕೆ ಸೀಸಕವೊನ್ದಿದ ಬಾಹುರಕ್ಕೆ ತಾವಕ್ಕಟ ತಾಯ ಉಟ್ಟ ನಿಱಿ ಬಿಟ್ಟ ಸಿರಂ ಮುಗಿದಿರ್ದ್ದ ಕಯ್ ಸಮನ್ತಿಕ್ಕಿದ ಕೈದು ಹೊಕ್ಕ ಜಳ . . . ಆಜಿಯೊಳ್ (ಎಕ. VI, ಕಡೂರು. ೩೫-೩೯ ; 1136) ; ನುಗ್ಗಾದ ಗುಳವನು ಬಿರಿದ ಸೀಸಕ ಬಾಹುರಕ್ಕೆಯ ಮುಱಿದ ಬಲ್ಲೆಹದ ಅರೆಗಡಿದ ಬಿಲ್ಲುಗಳ . . . ಮುಕ್ಕಾದ ಕೈದುವ ತರಿಸಿ ಕಳುಹಿಸುತಿರ್ದನತಿರಭಸದಲಿ ಕಲಿದ್ರೋಣ (ಕುಪ್ಯಾದ್ರೋ. ೦೩-೦೬). ೨. ಆನೆಯ ಎರಡು ಪಕ್ಕಗಳಿಗೂ ರಕ್ಷೆಯಾಗಿ ಕಟ್ಟುವ ರಂಚೆ ; ಪಕ್ಕರಕ್ಕೆ: ಮದಜಳದ ಕವಡಂ ಕದರಿ ಕೆದಱುವ ಕರ್ಣ ಚಾಮರದ ಕತ್ತಲೆಸಿರ್ಪಿನ ಬಾಹ[ಹು]ರಕ್ಕೆಯುಂ (ಅಪಂಪು. ೧೪-೬ ಪ). ℘ ಇದು 'ಪಕ್ಕರಕ್ಕೆ' ಎಂಬ ಶಬ್ದ ಮತ್ತು ಅರ್ಥಗಳ ಸಾಮ್ಯದಿಂದ ಆದ ಪ್ರಯೋಗವಿರಬಹುದು. **ಬಾಹುರಕೆ** : ೧. ಕರತುಷಾರದ ಲಿವರು ಮೋಱೆಯ ತಿರುಹೆ ನನೆದವು ಬಾಹುರಕೆ ಹಕ್ಕರಿಕೆ ಹಲ್ಲಣ ಜೋಡು ಸೀಸಕ ಛತ್ರ ಚಮರಿಗಳು (ಕುಪ್ಯಾದ್ರೋ. ೩-೪೦). ℘ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪವಿರಬಹುದು. [<ಸಂ. ಬಾಹುರಕ್ಷಾ]

ಬಾಹುರಕ್ಷೆ (ನಾ). = ಬಾಹುರಕ್ಕೆ ೧ : ಜೋಡು ಸೀಸಕ ಬಾಹುರಕ್ಷೆಗಳ ಮುರುಹಿ ಬಿಗಿದನು . . . ರಥವೇಱಿದನು ಕಲಿದ್ರೋಣ (ಕುಪ್ಯಾದ್ರೋ. ೯-೦೩) ; ವೀರಪಟ್ಟದ ಬಾಹುರಕ್ಷೆಗಳಿಂದ ಖಳನೆಸೆದ (ಕೌಶಿರಾ. ೪೦-೨). [ಸಂ. ಬಾಹುರಕ್ಷಾ]

ಬಾಹುರಿ 'ಬಾಪುರಿ' ನೋ.

ಬಾಹುರಿಕೆ (ನಾ). ಬಾಹುಪೂರ : ಕೇಯೂರ : "ಬಾಹುರಿಕೆಯೆನಲ್ಕೆ ಬಾಹುಪೂರಕೆ [ಪಾಠಾಂ. ರಕ್ಷೆಗೆ] ನಾಮಂ" (ಭಾರನಿ. ೩೩). [< ಬಾಹುರಿ$_2$]

ಬಾಹುಲ (ಗು). ೧. ಅನೇಕವಾದ ; ಅಧಿಕವಾದ. (ನಾ). ೨. ಹೆಚ್ಚಳ ; ಆಧಿಕ್ಯ ; ವಿಪುಲತೆ. ೩. ಕಾರ್ತೀಕಮಾಸ. ೪. ಬಾಹುರಕ್ಷೆ. ೫. ಅಗ್ನಿ. [ಸಂ.]

ಬಾಹುಲಿ 'ಬಾವುಲಿ$_2$' ನೋ.

ಬಾಹುಲೇಯ (ನಾ). ಕಾರ್ತಿಕೇಯ ; ಸ್ಕಂದ. [ಸಂ.]

ಬಾಹುಲ್ಯ, ಬಾಹುಳ್ಯ (ನಾ). ೧. ಹೇರಳ ; ಆಧಿಕ್ಯ. ೨. ಮಹತ್ತ್ವವುಳ್ಳುದು ; ಘನವಾದುದು : ಕೃತಿ ಬಾಹುಲ್ಯಮಪ್ಪುದೆಂದವ ಬುಧರು ಬಲ್ಲಂತನೇಕರೊರೆದಿಹರು (ಕೃಷ್ಣವಿ. ೧-೨೨). ೩. ವಿಸ್ತಾರ : ಚಿತ್ತೆಯೆಂಬ ಧಾತ್ರಿ ಮೊದಲ್ಗೊಂಡು ಕೆಱಗಶೀತಸಹಸ್ರೋತ್ತರಲಕ್ಷಯೋಜನಬಾಹುಲ್ಯಮನಾಂತು ರತ್ನಪ್ರಭೆಯೆಂಬ ಪೃಥ್ವಿಯಿರ್ಕುಂ (ಸುಕುಮಾ. ೦೦-೪೦ ಪ). **ಬಾಹುಳ್ಯ** : ೧. ಸಂಗ್ರಹಣದ ಬಾಹುಳ್ಯ ನಮ್ಮ ಶಕ್ತಿಗೆ ಮೀರಿದುದೆನ್ನಿಸಿತು (ಹಸುಹೂ. ೦೦೩). [ಸಂ.]

ಬಾಹುವಳನ (ನಾ). ತೋಳುಗಳ ಚಲನೆ : ಆಕೆಯರ ನವವಿಧ ಬಾಹುವಳನದಿಂದೆಳಲತೆಯ ಬಳ್ಳಿ ಚಳಿಸಿದಂತೆಯುಂ . . . ಅತಿಮನೋಹರಮಾಗೆ (ಸಂದ್ರಪು. ೧೨-೦೯೪ ಪ). [ಸಂ. ಬಾಹುವಲನ]

ಬಾಹುವಳಯ (ನಾ). = ಬಾಹುಪೂರ : ಬಾಹುವಳಯ — ಬಾಹುಬಳೆ (ಶಪುದ. ೨೯೯ ಪ್ರಯೋ). [ಸಂ. ಬಾಹುವಲಯ]

ಬಾಹುವಿಕ್ರಾಂತ (ನಾ). ತೋಳಿನ ಬಲ ; ಬಾಹುಬಲ : ಚಳುಕ್ಯರುನ್ನತಿ

ಯದಾರ್ಗ್ಗಂ ಬಣ್ಣಿಸಲ್ಬಾರದೆಂಬಿನೆಗಂ . . . ಭೂತಳಮನಾಳ್ದರ್ಬಾಹು ವಿಕ್ರಾಂತದಿಂ (ಕಇಅ. ೨-೨-೨೬ ; 1053) ; ಪತಿಗೇಕಚೃತ್ರದಿನ್ಬಾಳಿಸನೆ ವಸು[ಧೆ]ಯಂ ಬಾಹುವಿಕ್ರಾನ್ತದಿಂ ಚಾಳಿತ ಚೋಳಂ (ಕಇಅ. ೯-೨-೦೩೦ ; 1058). [ಸಂ.]

ಬಾಹುವಿಕ್ಷೇಪ (ನಾ). =ಬಾಹುವಳನ : ಮೂವತ್ತೆರಡುಂ ತೆಱದ ಚಾರಿ ಚಾರಿಸೆ ತಮ್ಮೊಳ್ ಪತ್ತಿಸಿದುವು ದೃಷ್ಟಿಗಳಂ ಪತ್ತುಂ ತೆಱನೆನಿಪ ಬಾಹುವಿಕ್ಷೇಪಂಗಳ್ (ಮಲ್ಲಿಪು. ೬-೫೦). [ಸಂ.]

ಬಾಹುವೀರ (ನಾ). ತೋಳಿನ ಬಲದಿಂದ ಶೂರನೆನಿಸುವವನು ; ಭುಜ ಬಲಶಾಲಿ: ಕ್ಷತ್ರಿಯನು ಬಾಹುವೀರ, ವಚನವೀರನಲ್ಲ (ವಚನಾ. ೭೮). [ಸಂ.]

ಬಾಹುಳ್ಯ 'ಬಾಹುಲ್ಯ' ನೋ.

ಬಾಹೆ (ನಾ). ೧. ಹೊರಭಾಗ ; ಹೊರವಲಯ : ಕೊಂದು ದನುಜನ ಪೆಣನ ಬಂಡಿಯ ಹಿಂದೆ ಬಂಧಿಸಿ ಪುರದ ಬಾಹೆಗೆ ತಂದುಬಿಟ್ಟನು (ಕುಮಾಕ. ೦೦-೩೯) ; ಅರಸ ಪುರದ ಬಾಹೆಯೊಳಿರೆ ಜೀವಂಧರ ಪರಸೇನೆಯ ತಱಿದು ತುಱುವಿಂಡ ತಾನೊರ್ವನೆ ತಿರುಪುವೆನೆಂದಿರದೆ ನೆನೆದನೆದೆಯೊಳಗೆ (ಜೀವಂಸಾಂ. ೦೫-೨೯) ; ನಿಜ ಚತುರಂಗವನು ನೆರಹಿದನು ನೃಪನಾ ಪುರದ ಬಾಹೆಯಲಿ (ಉರರಾ. ೬-೩೩). ೨. ಬದಿ ; ಮಗ್ಗುಲು ; ಪಾರ್ಶ್ವ: ತನ್ನಿಳಯಮ ನ್ನೊಳಪುಗುವ ಕಾಂತೆಯರ ಹಂತಿಯೆಸೆಯಿತ್ತು ಬಸದಿಯ ಬಾಹೆಬಾಹೆ ಗಳೊಳು (ಸೋಮನ. ೪-೪೨) ; ತುರಗವೈಸಾವಿರಸಹಿತ ಮೋಹರಿಸಿ ನಿಂದನು ಶಕುನಿ ಥಟ್ಟಿನ ಬಲದ ಬಾಹೆಯಲಿ (ಕುವ್ಯಾಗ. ೦-೪) ; ತನ್ನಯ ಬೆರಲು ಮಣಿಮುದ್ರಿಕೆಯ ತೆಗೆದಂಬುರುಹಮುಖಿ ಸುತಗಿಟ್ಟು ತೊಲಗಿ ದಳೊಂದು ಬಾಹೆಯಲಿ (ಜೀವಂಸ. ೫-೩೯). [< ಸಂ. ಬಾಹ್ಯ]

ಬಾಹ್ಯ (ಗು). ೧. ಹೊರಗಿನ ; ಹೊರಗಡೆ ಇರುವ : ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗೞ್ದು (ವಡ್ಡಾರಾ. ೦-೯). ೨. (ಊರಿನ ಅಥವಾ ಪ್ರದೇಶದ) ಹೊರಗಿರುವ ; ಹೊರಭಾಗದಲ್ಲಿರುವ. ೩. ಬಹಿಷ್ಕೃತವಾದ : ಹೊರದೂಡಿದ ; ನಿಷಿದ್ಧವಾದ. (ನಾ). ೪. ಹೊರಭಾಗ : ಹೊರವಲಯ : ಭರದಿ ನಂದಿಗ್ರಾಮ ಬಾಹ್ಯದಲುರಿವ ದಳ್ಳುರಿಗಂಡು ಚಿಂತೆಯ ತಾಳ್ದ ಹನುಮಂತ (ಕೌಶಿಂಗಾ. ೯೯-೩೫). ೫. ಹೊರಗಡೆ ; ಬಹಿರಂಗ : ಒಳಗೆ ಹೊಳೆದನು ಬಾಹ್ಯದಲಿ ಪ್ರಜ್ವಲಿಸಿದನು (ಕುಮ್ಯಾಲು. ೯-೬೯) ; ಬಿಡು ಬಾಹ್ಯದೊಳು ಡಂಭವ (ಕೈಕವ. ೬೨-೭ ಪಲ್ಲವಿ). ೬. ಹೊರಗಿನದು ; ಬಹಿರಂಗಕ್ಕೆ ಸಂಬಂಧಿಸಿದುದು : ಬಾಹ್ಯವಾದ ಉಪಪ್ಲವ ಒದಗಿದಾಗ ಕೌಟಿಲ್ಯಾದಿ ನೀತಿಜ್ಞರು ರಾಜರಿಗೆ ಮಾರ್ಗದರ್ಶಿಗಳಾಗಿದ್ದಾರೆ (ಪುಕ್ಕಾರ. ೧೦೬ ಬೀಕಿಕೆ). ೭. ಹೊರಗಿನವನು ; ಅಪರಿಚಿತ ; ಹೊಸಬ. [ಸಂ.]

ಬಾಹ್ಯತಪ (ನಾ). [ಜೈನ] ದೇಹವನ್ನು ದಂಡಿಸಿ ಕರ್ಮನಿರ್ಜರೆಯನ್ನು ಸಾಧಿಸುವ ತಪಸ್ಸು : ಅಂತು ಬಾಹ್ಯತಪದೊಳಸಹ್ಯಮಾನಸಾಹಸನಾಗಿ ಮತ್ತಮುತ್ತರತಪದೊಳುತ್ತರೋತ್ತರಂ ನೆಗೞ್ದು (ಸುಕುಮಾ. ೯-೦೯ ವ) ; ಅನಶನ ಅವಮೋದರ್ಯ ವೃತ್ತಿಪರಿಸಂಖ್ಯಾನ ರಸಪರಿತ್ಯಾಗ ವಿವಿಕ್ತಶಯ ನಾಸನ ಕಾಯಕ್ಲೇಶ ಎಂಬಿವಾಱುಂ ಬಾಹ್ಯತಪಂಗಳು (ಪಸಾರ. ೩೭೬). [ಸಂ.]

ಬಾಹ್ಯದರ್ಶನ (ನಾ). ಹೊರಗಿನ ನೋಟ ; ಹೊರಗಣ್ಣಿಗೆ ಗೋಚರ ವಾಗುವ ದೃಶ್ಯ : ಭಯಾಕುಳೆ . . . ಬಾಹ್ಯದರ್ಶನಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸುಮುಚ್ಚೆವೋಗಿ ತಣ್ಣೆಲರಲೆಪಿಂದೆ ಮೂರ್ಛೆ ದಿಳಿದಳ್ (ಪಂಠಾಮಾ. ೯-೦೦೦). [ಸಂ.]

ಬಾಹ್ಯಪ್ರದರ್ಶನ (ನಾ). ಹೊರಗೆ ಗೋಚರವಾಗುವಂತೆ ಮಾಡುವಿಕೆ; ಪ್ರಕಟವಾಗಿ ತೋರ್ಪಡಿಸುವಿಕೆ: ಒಳಿತಿಗೆ ಬಾಹ್ಯಪ್ರದರ್ಶನಯೋಗ್ಯ ವಾದ ಶಕ್ತಿಯಿಲ್ಲವಾದರೂ ಆಂತರಿಕಶಕ್ತಿಯಿದೆಯೆಂದು ಸಮಾಧಾನಪಟ್ಟು ಕೊಳ್ಳಬಹುದು (ಐದೃಪ್ರ. LXVII ಬೀಕಿಕೆ). [ಸಂ.]

ಬಾಹ್ಯಪ್ರಪಂಚ (ನಾ). ಹೊರಜಗತ್ತು : ಹಿಮಚೂಳಂ ಯಮಕೋಪ ಲೀಲನುಪಸರ್ಗಂಗೆಯ್ಯೆ ಬಾಹ್ಯಪ್ರಪಂಚಮನಾತ್ಮಾಶ್ರಿತಮಂ ಬಿಸುಟ್ಟಿರೆ (ಶಾಂತಿಪು. ೯-೨೩). [ಸಂ.]

ಬಾಹ್ಯಪ್ರಮಾಣ (ನಾ). ಹೊರಗಿನ ಆಧಾರ; ಬೇರೆಯ ಪ್ರಮಾಣ : ಬಾಹ್ಯಪ್ರಮಾಣಗಳಿಂದ ಆಂಡಯ್ಯನ ಕಾಲಪರಿಮಿತಿಯು . . . ೧೨೬೩ ಎಂದಂತಾಯಿತು (ಸಾಹಿಸ. ೦೭೩). [ಸಂ.]

ಬಾಹ್ಯಮತಿ (ನಾ). ಇಂದ್ರಿಯಗೋಚರವಿಷಯಗಳಲ್ಲಿರುವ ಆಸಕ್ತಿ : ಅನಘನೊಳ್ ನಿರವಸ್ಥನೊಳೊಡವರೆದು ಬಾಹ್ಯಮತಿಯಱಿತಿರ್ದಂ (ಶಬಶಂ. ೨-೦೦೩). [ಸಂ.]

ಬಾಹ್ಯರತ (ನಾ). [ಕಾಮಶಾ] ಸಂಭೋಗಕ್ಕೆ ಪೂರ್ವಭಾವಿಯಾಗಿ ಕಾಮೋದ್ದೀಪನಕ್ಕಾಗಿ ನಡೆಸುವ ನಖಕ್ಷತ, ದಂತಕ್ಷತ, ಆಲಿಂಗನ, ಚುಂಬನಾದಿ ಕ್ರಿಯೆ : ಆಲಿಂಗನ ಚುಂಬನ ದಂತಕ್ಷತ ತಾಡನ ಚಪೇಟನ ಆಕರ್ಷಣ ಮರ್ದನ ಮೊದಲಾದ ಕೃತ್ಯಗಳೆಂಬ ಬಾಹ್ಯರತಮಂ ತಿಳಿದು ಸುರತಮಂ ಮಾಳ್ಪುದು (ಕಾಮಶಾ. ೨೨೦); ಈ ಉಭಯರತದೊಳು ಬಾಹ್ಯರತ ಮೊದಲು ಮಾಡಬೇಕು ಆ ಬಾಹ್ಯರತದೊಳು ಆಲಿಂಗನ ಮೊದಲು ಮಾಡಬೇಕು (ಕಾಮಶಾ. ೨೨೦). [ಸಂ.]

ಬಾಹ್ಯವ್ಯಾಪಾರ (ನಾ). (ದೇಹದ) ಹೊರಗಿನ ಚಟುವಟಿಕೆ : ನಿದ್ದೆಯ ಹೊತ್ತಾಯಿತೆಂದರೆ ಶರೀರದ ಬಾಹ್ಯವ್ಯಾಪಾರಗಳು ಮೆಲ್ಲನೆ ನಿಲ್ಲುತ್ತವೆ (ಮುಂಬಯಿ. ೯-೧೩೦). [ಸಂ.]

ಬಾಹ್ಯಶೌಚ (ನಾ). ದೇಹದ ಹೊರಭಾಗದ ಶುದ್ಧಿ; ಬಹಿರಂಗಶುದ್ಧಿ: ಮೃತ್ತಿಕಾಜಲಾದಿಗಳಿಂದ ಶರೀರದ ಮಲವಂ ನಿವೃತ್ತಿಸುವುದರ ಪೆಸರು ಬಾಹ್ಯಶೌಚವೆನಿಸುವುದು (ಮುಮುಕ್ಷುದ್ವಿತೀಯಸೋಪಾನ) ಮೃಜ್ವಲ ದಿಂದಾ ಮಾಡೋಣ ಯಿದು ಬಾಹ್ಯಶೌಚವು (ಉಶ್ಶಸ್ತ. ೨೨-೨). [ಸಂ.]

ಬಾಹ್ಯಸಂಭಾವ್ಯತೆ (ನಾ). ಗ್ರಂಥಸಂಪಾದನೆಯಲ್ಲಿ ಕವಿಪಾಠವು ಅಕ್ಷರ ಭ್ರಾಂತಿ ಇತ್ಯಾದಿ ವಿಧಾನಗಳಿಂದ ಹೀಗೆಯೇ ಕೆಟ್ಟಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುವಿಕೆ : ಯೋಜಿತಪಾಠಾಂತರವು . . . ಇತರ ಪಾಠಾಂತರಗಳೊಡನೆ ಸಾಂಪ್ರದಾಯಿಕ ಅಥವಾ ಪರಂಪರಾಗತಪಾಠದಲ್ಲಿ ಉಳಿದಿರುವಂಥದಾಗಿದ್ದರೆ ನಮ್ಮ ಊಹಾಪಾಠಕ್ಕೆ ಅಂತಸ್ಸಂಭಾವ್ಯತೆ ಮತ್ತು ಬಾಹ್ಯಸಂಭಾವ್ಯತೆ (Extrinsic probability) ಈ ಎರಡರ ಬೆಂಬಲವೂ ಇದೆಯೆಂದು ಹೇಳಬಹುದು (ಭಾರತ. ೭೬). [ಸಂ. ಬಾಹ್ಯಸಂಭಾವ್ಯತಾ]

ಬಾಹ್ಯಸೌಂದರ್ಯ (ನಾ). ಹೊರನೋಟಕ್ಕೆ ಕಾಣುವ ಚೆಲುವು : ಮಾನವನು ಸತ್ಯದ ಕಡೆಗೆ ಗಮನಿಸಬೆ ಕೇವಲ ಬಾಹ್ಯಸೌಂದರ್ಯಕ್ಕೆ ದಾಸನಾಗಿ ಅದರ ವ್ಯಾಮೋಹದಿಂದ ನರಳುತ್ತಿರುವನು (ಶಕ್ತಿವಿ. ೧). [ಸಂ.]

ಬಾಹ್ಯಸ್ಥ (ಗು). ೧. ಹೊರಗಿರುವ. (ನಾ). ೨. ಹೊರಗೆ ಇರುವುದು; ಹೊರಗೆ ಗೋಚರವಾದುದು: ತೀರ ಬಾಹ್ಯಸ್ಥವೂ ವ್ಯಕ್ತವೂ ಗಾಢವೂ ಆದ . . . ಆಂಗ್ಲಕಾವ್ಯಗಳನ್ನು ವಿವೇಚಿಸಿದ್ದಾರೆ (ನವ್ಯಕಾ. ೦೦೭). [ಸಂ.]

ಬಾಹ್ಯಾರ್ಥಸಿದ್ಧಿ (ನಾ). ಪ್ರಕೃತಕ್ಕೆ ಸಂಬಂಧಪಡದ ಅರ್ಥವನ್ನು ಉಂಟುಮಾಡುವುದು, —ವ್ಯಕ್ತಪಡಿಸುವುದು : ವಿಜ್ಞಾನವ್ಯತಿರಿಕ್ತ ಸಾಧನವಾಕ್ಯೋಪನ್ಯಾಸದಿಂ ಸಾಧಿಸುವೊಡಾ ವಾಕ್ಯಮೆ ಬಹಿರರ್ಥ ಮಪ್ಪುದಱಿಂ ಬಾಹ್ಯಾರ್ಥಸಿದ್ಧಿಯಕ್ಕುಂ (ಆದಿಪು. ೨-೦೦ ವ). [ಸಂ.]

ಬಾಹ್ಯಾಳಿ (ನಾ). ಕುದುರೆಗಳನ್ನು ಓಡಾಡಿಸುವ ಸ್ಥಳ; ಕುದುರೆ ಸವಾರಿಯ ಮೈದಾನ, — ಬಯಲು : ಸಂಚಾರಿತತುರಗಪರಿಮಳ ಗ್ರಾಹ್ಯಾಳಿಗಳೆನಿಪ ಬಾಹ್ಯಾಳಿಗಳುಂ ಅನುದಿನವಿನೋದಿತಾನೇಕಕರಿಗಳೆನಿಸು ವಾನೆವಱಿಗಳುಂ . . . ತನಗನೂನಶೋಭೆಯಂ ಪಡೆಯೆ (ಪುಷ್ಪಪು. ೯-೨೨ ವ). 'ವೈಹಾಳಿ' ಪರಾ. [< ಸಂ. ವಾಹ್ಯಾಲೀ]

ಬಾಹ್ಯೋಪಕರಣ (ನಾ). ಹೊರಗಿನ ಸಾಧನ : ಕೃಷ್ಣಶುಕ್ಲಮಂಡಲಂ ಅಭ್ಯಂತರೋಪಕರಣಮಕ್ಕುಂ ಅಕ್ಷಿಪತ್ರಪಕ್ಷ್ಮದ್ವಯಾದಿ ಬಾಹ್ಯೋಪಕರಣಂ (ಕತ್ತ್ವಪ್ರ. ೯೬). [ಸಂ.]

ಬಾಹ್ಯೋಪವನ (ನಾ). (ಊರಿನ) ಹೊರವಲಯದಲ್ಲಿರುವ ತೋಟ: ಹಯವರಸಮಾರೂಢನಾಗಿ . . . ಬಾಹ್ಯೋಪವನಕೆ ಬರಲು (ಕೈಪುಭಾ. ೨೯-೪೪). [ಸಂ.]

ಬಾಹ್ಲಿಕ (ನಾ). ೧. ಒಂದು ದೇಶದ ಹೆಸರು : ದ್ರವಿಳ ಕಾಶ್ಮೀರ ಬಾಹ್ಲಿಕ ಭೋಟಭೂ ಕಾಂಬೋಜ . . . ಕೇರಳಮುಖಾಪಾರದೇಶಂಗಳೊಳೆಸೆವ ಜಂಗಮವು ಭಕ್ತಾಳಿ (ಬಸವು. ೬-೧೯). ೨. ಆ ದೇಶದ ರಾಜ ಮತ್ತು ಪ್ರಜೆ : ಬಾಹ್ಲಿಕ ಶೂರಸೇನ ಕಳಿಂಗ ಸಲೆ ಗಾಂಧಾರ . . . ದಂತವಕ್ರರು ಬಂದರೊಗ್ಗಿನಲಿ (ಕುಮ್ಮಾಸ. ೬-೩). ೩. ಆ ದೇಶದ ಕುದುರೆ. ೪. ಕುಂಕುಮಕೇಸರಿ. ೫. ಇಂಗು. [ಸಂ.]

ಬಾಹ್ಲೀಕ (ನಾ). ೧.=ಬಾಹ್ಲಿಕ ೧: ಲಾಳಚೋಳವರಾಳಯವಬಂಗಾಳ ಬಾಹ್ಲೀಕ . . . ನಿಷಧ ವಿದರ್ಭಧರಣೀಪಾಲಸಂತತಿ ಸಂದಣಿಸಿದುದು ಸಾಕೇತನಗರಿಯಲಿ (ತೊರರಾ. ೦-೬-೦೬). ೨.=ಬಾಹ್ಲಿಕ ೨: ಬಾಹ್ಲೀಕ ಸ್ವಾಂತ ಕುಂತ ಪರಾಕು (ಯಾದವಂ. ೩-೦ ಪ). ೩.=ಬಾಹ್ಲಿಕ ೩: ಬಿಸಕಾಂಭೋಜಕ ಬಾಹ್ಲೀಕ ಸೈಂಧವಾರಟ್ಟ ತೈತಿಲಂ ವಾನೇಯಂ ಪೆಸರ ಕ್ಷೇತ್ರದ ಹಯಕಾ ಪೆಸರೆ ಪೆಸರ್ (ಅಶ್ವಶಾ. ೬-೬೬). ೪. = ಬಾಹ್ಲಿಕ ೪: "ಕುಂಕುಮಂ, ಕಾಶ್ಮೀರಜನ್ಮ, ಅಗ್ನಿಶಿಖಂ, ವರಂ, ಬಾಹ್ಲೀಕಂ . . . ಚಂದನಂ—೧೧ ಕುಂಕುಮದ ಹುವ್ವಿನ ಹೆಸರುಗಳು, ಕುಂಕುಮಕೇಸರಿ" (ಸಿದ್ಧಾಂತಿ. ೨೦೬). ೫. = ಬಾಹ್ಲಿಕ ೫: "ಸಹಸ್ರವೇದಿ, ಜತುಕಂ, ಬಾಹ್ಲೀಕಂ, ಹಿಂಗು, ರಾಮಠಂ—೫ ಹಿಂಗು, ಇಂಗಿನ ಪೆಸರುಗಳು" (ಸಿದ್ಧಾಂತಿ. ೨೮೫). [ಸಂ.]

ಬಾಳ್$_1$ 'ಬಾಳ್$_1$' ನೋ.

ಬಾಳ್$_2$ 'ಬಾಳ್$_3$' ನೋ.

ಬಾಳ್$_3$, ಬಾಳ$_1$, ಬಾಳಿ, ಬಾಳು$_3$ (ನಾ). ೧. ಕತ್ತಿ : ಖಡ್ಗ : ಬಾಳಾ ಮೇಲ್ಕಿಖಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ಸಲ್ವಪೋಲ್ ಸಾಲಾಮ್ಬಾಲ ತಪೋಗ್ರದಿನ್ತು ನಡದೊಂ ನೂಱೆಂಣ್ಟುಸಂವತ್ಸರಂ. . . ಪೆರ್ಗ್ಗೊರವಂ ಸಮಾಧಿ ನೆಱೆದೊನ್ (ಎಕ. II, ೨೨-೦; ಸು. 700) ; ನಾಗಗುಟ್ಟರಸಮ್ . . . ಬಾಳಂ ಕಿಟ್ಟು ನಡದು ಪಲರನಿಱಿದು ಸತ್ತೊಡೆ (ಎಕ. X, ಕೋಲಾರ. ೨೦೦-೦೦; ಸು. 890 ?) ; ಮಸೆದುದು ಮದನನ ಬಾಳ್ (ಪಂಪಭಾ. ೩-೪೭). ೨. ಉಳುಮೆ ; ವ್ಯವಸಾಯ : 'ಇರ್ವಾಳ್' ಪರಾ. ೩. ನೇಗಿಲಿನ ಗುಳ. ಬಾಳ$_1$: ೪. ಕಾಳಗ; ಯುದ್ಧ; ಕದನ: ಶ್ರೀ ಜುದ್ದನ್ . . . ಊರೊಳ್ವಲ್ಲಹನಾ ಬಾಳದುಳೆಱೆದು ವಿಟ್ಟೊನ್ (ಎಕ. XVI, ತುಮಕೂ. ೯೦-೨ ; ಸು. 780) ; ಬಲ್ಲವರಸರ ಬಾಳದುಳ್ . . . ಬಾಗೆಯ ವೆಱಿದು ವಿಟ್ಟೊನ್ (ಎಕ. XVI, ತುಮಕೂ. ೯೩-೪ ; ಸು. 780). ಬಾಳಿ: ೪. ಬಾಗೆಯೂರ ಬಲ್ಲಹನೇಱಿ ನೊಳ್ಳಿಯಾನ್ ವೈರಾಳ್ ಸಮಪದರುಳ್ ಕೊಪುಳವೂರ ಬಾಳಿಯೊಳ್ ಪೊಣ್ಣೆದಿಕ್ಕಿಜ್ಜಿಯ ತಮ್ಮುಳೆ ಪಡೆಯುಳೆಱಿದು ಸತ್ತನ್ (ಎಕ. XVI, ತುಮಕೂ. ೯೨-೧೦ ; ಸು. 780). ಬಾಳು$_3$: ೧. ಸಂಗನ ಶರಣರ ಭಕ್ತಿ ಬಾಳ ಬಾಯ ಧಾರೆ (ಬಸವ. ೨೦೦); ಬಾಳ ಚಾಚಿದಳಿವಳೆನಗೆ ಗೋನಾಳಿಗೊಡ್ಡಿದ ಬಂದಿಯಲಿ ತುದಿ ನಾಲಗೆಗೆ ನರಸುಕ್ಕನಿಕ್ಕಿದಳಿವಳು ತನಗೆ (ತೊರರಾ. ೨-೨-೩೬) ; ತೋಳ ನೀಡಿದಳು ಮನ್ಮಥನೊಱೆಯಿಂದುರ್ಚಿ ಬಾಳ ನೀಡಿದನೊಯೆಂಬಂತೆ (ಭರತ. ೦೨-೬೬).

ಬಾಳ್ವಾಳ್ (ದ್ವಿರುಕ್ತಿ) : ಬಾಳ್ವಾಳ್ಗಳ ಘಟ್ಟಣೆಯೊಳ್ ಬಳ್ವಳ ಬಳೆದೊಗೆದು ನೆಗೆವ ಕಿಡಿಗಳ ಬಂಬಲ್ಗಳ್ವೆರಸು ಪೊಳೆದು ನೆಗೆದುದು ಬಾಳ್ವೊಗೆ (ಪಂಪಭಾ. ೧೦-೬೪). ಬಾಳಬಟ್ಟು = (?) : ಆತನ ಕೆಲದೊಳ್ ಬಾಳಬಟ್ಟಂ [ಪಾಠಾಂ. ಬಾಳಪಟಂ] ತೂಂತಿಟ್ಟಂತೆ ಸಂದಣಿಸಿ ನಿಂದ ಗೋಪಕುಮಾರರಣಿಯ ನಡುವೆ ಪೊನ್ನ ರಥಮನೇಱಿ ನಿಂದಾತನೆನ್ನ ತಮ್ಮಂ ಕೃತವರ್ಮಂ (ಪಂಪಭಾ. ೦೦-೩೭ ಪ). ಬಾಳವಣ್ಣ, ಬಾಳ ಬಣ್ಣ=(ತೊಳೆದ) ಕತ್ತಿಯ ಬಣ್ಣ ; ನೀಲಿಬಣ್ಣ : ತೊಡರ್ದಮರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ ನೊಸಲೊಳೊಡಂಬಡುವರಳೆಲೆಯಿವಱಿಂ ಚೆಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ (ಪಂಪಭಾ. ೨-೪) ; ಪುಳಿಯೊಳ್ ಕರ್ಚಿದ ಬಾಳ ಬಣ್ಣಮನೆ ಪೋಲ್ವಾಕಾಶಂ (ಪಂಪಭಾ. ೬-೭೦). ಬಾಳುಗತ್ತಿ = ಉದ್ದವಾದ ಕತ್ತಿ ; ನೀಳವಾದ ಖಡ್ಗ : ಜಾಡಿಯ ಹರಿಗೆ ಸಿಂಗಾಡಿ ಕರಾಚೂರಿ ನೀಡುವ ಬಾಳುಗತ್ತಿಗಳ ಪಾಡುಪಂಥದ ಸುಭಟರು ಕೋಟೆಯನಾಗ ರೂಢಿಯೊಳಗೆ ಕಾದಿಹರು (ಕಂಪವಿ. ೦೦-೧೪೬). ☞ ಇದು ಒಂದೇ ಅರ್ಥದ ಎರಡು ಶಬ್ದಗಳು ಸೇರಿ ಆಗಿರುವ ರೂಪ. ಕೊಡವ ಭಾಷೆಯಲ್ಲಿ 'ಬಾಳಿಕತ್ತಿ' ಶಬ್ದಕ್ಕೆ 'ಉದ್ದವಾದ ಕತ್ತಿ' ಎಂಬರ್ಥವಿದೆ.

[ದೇ.॥ ತಮಿ. ಮಲ. ಕೋತ. ವಾಳ್; ತುಳು. ಬಾಳು; ತೆಲು. ವಾಲು]

ಬಾಳ$_1$ 'ಬಾಳ್$_3$' ನೋ.

ಬಾಳ$_2$, ಬಾಳು$_4$ (ನಾ). ಒಂದು ಬಗೆಯ ಸಂಗಂಧದ ಬೇರು ; ಮುಡಿವಾಳ ; ಲಾಮಂಚ : "ಬಾಳಮೆಂದುಂ ಲಾಮಂಚಂ" (ಶಕಸಾ. ೩೪-೦೭೯) ; ಕುಳಿರ್ಪ ಬಾಳದ ಬೇರ್ಗಳ ಕೇರ್ಗಳಿಂ . . . ಒಪ್ಪಿ ತೋರ್ಪ ಜಲಮಂಟಪದಲ್ಲಿಗೆ ಬಂದನಾ ನೃಪಂ (ಕಾದಂಬಾ. ೪೫೬); ಬಾಳದ ಕಂಪು ಬಾಳ್ಜಿನುಗುವಾಱಡಿಯಾಱಡಿ ಹಂಸೆ ಹಿಂಸೆ . . . ಬಾಲಿಕೆಗಾದುದೀ ವಿರಹದಿಂದೆ (ಉದ್ಯಟಿ. ೭-೫೬). 'ಬಾಳವೇರ್' ಪರಾ. ಬಾಳು$_4$: ಬಾಳು ಜವಾಜಿ ಕುಂಕುಮಕೇಸರಿ ಅಡಕೆಯ ಹೇರು ಮೆಣ್ಸಿನ ಭಾರ . . . ಮುನ್ತಾದ ಸಮಸ್ತಬೆಪಹಾರಕೆ (ಎಕ. XII, ಕಿರಾ. ೭೬-೧೪; 1370). 'ಕರಿಯ ಬಾಳ', 'ಮುಡಿವಾಳ' ಹೋ. ☞ ಸಂಸ್ಕೃತದ 'ಬಾಲ' ಶಬ್ದಕ್ಕೆ ಮೇಲೆ ಸೂಚಿಸಿರುವ ಅರ್ಥವು ಕೋಶಗಳಲ್ಲಿ ಸಿಗುವುದಾದರೂ ಇದನ್ನು ದೇಶ್ಯಶಬ್ದವೆಂದು ಪರಿಗಣಿಸಲಾಗಿರುವುದರಿಂದ 'ಬಾಲ' ಉಲ್ಲೇಖದ ಜೊತೆಯಲ್ಲಿ ಇದನ್ನು ಪರ್ಯಾಯ ಪದವಾಗಿ ಕೊಟ್ಟಿಲ್ಲ.

ಬಾಳ$_3$ (ನಾ). ಹಣೆ ; ನೊಸಲು : "ಬಾಳ—ಭಾಲ=ಹಣೆ" (ಶದ್ಯಕೋ. ೩೦); ಒಪ್ಪಿದುದೆನಸುಂ ಕಂದರ್ಪನ ವಿಮಳರುಚಿವಿಶಾಲಂ ಬಾಳಂ (ಕುಸುಮಾ. ೭ ೦೦೩) ; ಬಾಳದೊಳೆಸೆವ ಮುತ್ತಿನ ಬೊಟ್ಟ ತಳೆದಿಹ ನೀಲಾಳಕಿಯರೊಪ್ಪಿದರು (ಕಂಪವಿ. ೬-೦೦೩). [<ಸಂ. ಭಾಲ]

ಬಾಳ$_4$ 'ಬಾಲ$_1$' ನೋ.

ಬಾಳ$_5$ 'ಬಾಲ$_2$' ನೋ.

ಬಾಳಂಗೆಣಸೆ (ನಾ) ಒಂದು ಬಗೆಯ ಸಸ್ಯ : ಬಾಗುಂಜಿಬೀಜ, ಗೀರುಗೊಟ್ಟೆ, ಬಾಳಂಗೆಣಸೆ ಇವಂ ಸರಿಯಾಗಿ ತೂಗಿಕೊಂಡು . . . ಚೂರ್ಣವಂ ಮಾಡಿ ಜೇನುತುಪ್ಪದಲ್ಲಿ ಗ ಮೂರು ತೂಕವನ್ನು ಕಲಸಿ ಕೊಡುವುದು (ವಿವೃವಿ. ೪೦). [?]

ಬಾಳಂತಪಣ (ನಾ). ೧. ಹೆರಿಗೆ ; ಪ್ರಸೂತಿ : ಫಲ್ಗೂಬಾಯಿ ಕಮಲೆಯನ್ನು ಮುಂಬಯಿಗೆ ಆಮಂತ್ರಿಸುತ್ತ . . . ದವಾಖಾನೆಯಲ್ಲಿಯೇ ಬಾಳಂತಪಣ ಮಾಡಿಸಿಕೊಳ್ಳಲು ಸಲಹೆಯಿತ್ತಳು (ಶ್ರಜಾರ. ೧೮೨). ೨. ಬಾಣಂತಿಗೆ ಮಾಡುವ ಶುಶ್ರೂಷೆ : ಬಾಣಂತನ.

[← ಮರಾ. ಬಾಳಂತಪಣ]

ಬಾಳಂತಿ, ಬಾಣಂತಿ, ಬಾಣತಿ (ನಾ). ಹೆರಿಗೆಯಾಗಿ ಇನ್ನೂ ಆರೈಕೆಯನ್ನು ಹೊಂದುತ್ತಿರುವವಳು ; ಹಡೆದವಳು ; ಪ್ರಸೂತೆ :

ಬಾಳಂತಿಗೆ ಮಂತ್ರಪೂರ್ವಕಮುಂ ಸುಖೋಷ್ಣಮುಮಪ್ಪ ಜಲಂಗಳಂ ಮೀಯಲೆಱೆದು (ಶಾಪುಂಪು. ೯೦). ಬಾಣಂತಿ : "ಪ್ರಸೂತೆಯೆನೆ ಬಾಣಂತಿಯಕ್ಕು" (ಮಂಗರಾ. ೯೧-೬); ಕಳಮಾಕ್ಷತಚೂರ್ಣಂ ಮೇಣ್ ನೆಲಗುಂಬಳ ಮಿವಱೊಳೊಂದನೆರ್ಮೆಯ ಪಾಲಿಂ ಕಲಸಿ ಕುಡಿಯಿಸುಗೆ ತೊರೆ(ಱೆ)ಗುಂ ಪೊಲೆಗಳ್ ಬಾಣಂ(ಳಂ)ತಿಗೆಚ್ಚು ಪಾಲ್ ಪಾಯ್ವಿನೆಗಂ (ಲೋಕೋಪ. ೯-೧೬೨); ಬಾಣಂತಿಯೆಂಬೋ ಬಗೆಯ ನೀನಱಿತು ಬಾರೆಂದು ಕರೆವೋಮಚಿತವೆ ರಂಗ (ಪುರಂದ. ೩-೪೩ ಪಲ್ಲವಿ); ಗೌರಿ ಚೊಚ್ಚಿಲು ಬಾಣಂತಿ (ಮುಂಗಾಮು. ೨೩). ಬಾಣತಿ: ಬಸುಱಿ ಬಾಣತಿ ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ . . . ಕೇತಯ್ಯಗಳೆಂಬ ನೂಱುಮಡಕೆಗೆ ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದು ದಡಿ ಸಾಲದೆ (ಬಸವ. ೩೩೭); ಎರಡೆಡೆಯೊಳೋಲಗವೆಂತು ನಿನಗಳವಡುವುದಿದು ಬಾಣತಿಯ ಸೂಳೆಯ ಪಡಪಿನಂದದಲಿ (ಬಸವು. ೫೩-೦೨); ಕೂಸುಳ್ಳ ಸೂಳೆಗೆ ಹೇಸದೊತ್ತೆಯ ಕೊಟ್ಟು ಕೂಸತ್ತು ನಲ್ಲ ಬೇಸತ್ತು ಬಾಣತಿಯು ವೀಸಕ್ಕು ಬೇಡ (ಸರ್ವಜ್ಞ. ೧೬೦೬).

[ದೇ.॥ ಮಲ. ವಣ್ಣ ; ತುಳು. ಬಾಣಂತಿ ; ತೆಲು. ಬಾಲಿಂತ. ಬಾಲೆಂತ./ ಸಂ. ಬಾಲವತೀ./ಮರಾ. ಬಾಳಂತ, ಬಾಳಂತಿಣ]

ಬಾಳಂಬಾಕಂತಿ (ನಾ). ಒಬ್ಬಾಕೆಯ ಹೆಸರು : ನವಿಲೂರ ಗಣದ ಬಾಳಂಬಾಕನ್ತಿಯರ ಮಗಳ್ ವಿಜಕ್ಕಂ ಪರೋಕ್ಷವಿನಯಂಗೆಯ್ದು ಕಲ್ಲ ನಿರಿಸಿದಳ್ (ಎಕ. VI. ಕಡೂರು. ೧೫೯-೦೩; 961). [ಬಾಳಂಬ್ಯಾ+ಕಂತ್ಯಾ]

ಬಾಳಕ$_1$ 'ಬಾಱುಕ' ನೋ.

ಬಾಳಕ$_2$ (ನಾ). = ಬಾಳ್$_2$: "ಪ್ರೀಬೇರಂ, ಬಾಳಕಂ, ಜಳಂ — ಈ ೩ ಕರಿಯ ಬಾಳಂ" (ಹಲಾಯು. ೦೦೨-೪೬೬); ಮಗಧ ಕತ್ತುರಿಯಿಂ ಮಳಯೆಂ ಶ ಚಂದನಂ ಲಾಳನ ಬಾಳಕಂ ನೆಱೆಯಿವೆಂದು ಚರರ್ ಸಲೆ ಬಿನ್ನಪಂಗಳಂ ಕೇಳಸುತಿರ್ಪರೋಲಗದೊಳಂ ವಿಭು ಸಂಕಮದೇವಭೂಪನಾ (ಎಕ. VII, ಶಿಕಾರಿ. ೯೬-೦೫; 1170; ಶಾಪಮಂ. ೯೦೦ ನೋ). [<ಬಾಳ್$_2$]

ಬಾಳಕ$_3$ 'ಬಾಲಕ' ನೋ.

ಬಾಳಕಾಲ 'ಬಾಲಕಾಲ' ನೋ.

ಬಾಳಕಿ 'ಬಾಲಕಿ' ನೋ.

ಬಾಳಕೇಳಿ 'ಬಾಲಕೇಳಿ' ನೋ.

ಬಾಳಕ್ರೀಡೆ 'ಬಾಲಕ್ರೀಡೆ' ನೋ.

ಬಾಳಗಟ್ಟು 'ಬಾಳ್ಗಟ್ಟು' ನೋ.

ಬಾಳಚ (ನಾ). ಒಬ್ಬಾತನ ಹೆಸರು : ಬಾಱಗಾವುಣ್ಡ ಕಂಭಯ್ಯನು ಕಳ್ಳಪುಣುಯೂರ ಮಹಾಜನಮುಂ ಗೊಗಿಯಪುರದ ಬಾಳಚನು . . . ಸಾಕ್ಷಿ (ಎಕ. XI. ಚಿತ್ರದು. ೩೦-೨೨; 968). [?]

ಬಾಳಚಂದ್ರ 'ಬಾಲಚಂದ್ರ' ನೋ.

ಬಾಳಣಿ 'ಬಾಣಲಿ' ನೋ.

ಬಾಳತೆ 'ಬಾಲತೆ' ನೋ.

ಬಾಳತ್ವ 'ಬಾಲತ್ವ' ನೋ.

ಬಾಳನಯನ (ನಾ). ೧. ಹಣೆಯಲ್ಲಿ ಇರುವ ಕಣ್ಣು. ೨. ಹಣೆಯಲ್ಲಿ ಕಣ್ಣುಳ್ಳವನು; ಭಾಳನೇತ್ರ ; ಶಿವ : ಬಾಳನಯನನದೇನು ಕಾರಣ ಹೇಳಿದನು ಋತುಪರ್ಣಗರುಹುವದೆಂದು ಈ ಕಥೆಯ (ಅಂಬಿಕಾ. ೩-೫೬).

[< ಸಂ. ಭಾಲನಯನ]

ಬಾಳಪರ್ಣ (ನಾ). ಲವಂಗ : "ಬಾ[ಶಾಕಾಂ. ಭಾ, ರಾ]ಳಪರ್ಣಂ ಲವಂಗ ಮೆನಿಕ್ಕು" (ಮಂಗರಾ. ೪೨-೪೦). [?]

ಬಾಳಬಂದು 'ಬಾಲಬಂದು' ನೋ.

ಬಾಳ ಬಟ್ಟು 'ಬಾಳ್$_3$' ಪರಾ.

ಬಾಳ ಬಣ್ಣ 'ಬಾಳ್$_3$' ಪರಾ.

ಬಾಳಮತಿ (ನಾ). ಹುಡುಗುಬುದ್ಧಿಯವನು; ಅವಿವೇಕಿ; ಮೂರ್ಖ : ಆ ಕೊಳನನವಂ ಬಾಳಮತಿ ಪುರುಷರತ್ನದ ಪೇಳಿಗೆಯಂ ಮುಚ್ಚುವಂತೆ ಮುಚ್ಚಿದನಗದಿಂ (ಶಾಂತಿಪು. ೬-೫೦). [ಸಂ. ಬಾಲಮತಿ]

ಬಾಳಮೃತಿ (ನಾ). ತಿಳಿವಳಿಕೆಯಿಲ್ಲದೆ. ಬಾಲಿಶಬುದ್ಧಿಯಿಂದ ತಂದು ಕೊಂಡ ಮರಣ. — ಸಾವು : ಅತಿವಯನಾಗಿ ಬಾಳಮೃತಿಯಿಂದಱಿದಂದಿನ ಮೂರ್ಖವೃತ್ತಿ ಪಂಡಿತಮೃತಿಯಿಂದಮಲ್ಲದದು ನೀಗದು ಪೋಗೆನಗೆ (ಶಾಂತಿಪು. ೬-೪೦). [ಸಂ. ಬಾಲಮೃತಿ]

ಬಾಳರ (ನಾ). ಗರಗಸದ ಹಲ್ಲುಗಳನ್ನು ಹರಿತಗೊಳಿಸಲು ಬಳಸುವ, ಎರಡು ಅಲಗುಳ್ಳ ಅರ : ಗಾಳದ ಡೊಂಕಿಯಗ್ರಮನೆ ಬಾಳರನಿಂ ಪಿಡಿದರ್ಮವಾರ್ದ್ರಮಂ ಜಾಳಿಸಿ ಜಾಲಮಂ ಬಿಸಿಲೊಳಿಕ್ಕುವ ಬೆಂಕೆಯೊಳೊಡ್ಡಿ ಕಾಸಿ ಕೊಂಡಾಳಿಸಿ ಸೆಂದುಕೋಲನುಡಿಗಟ್ಟುವ ಕೆಂಗಱಿಯಂ ಸರಾಳಿಯೊಳ್ ಮೇಳಿಸಿ ಸುತ್ತುತಿರ್ಪ ಶಬರರ್ಕಳಿನಿಂತೆಸೆದತ್ತು ಪಕ್ಕಣಂ (ಶಾಂತೀಶ್ವ. ೩-೭೪). [←ತಮಿ. ವಾಳರಮ್]

ಬಾಳರಾಕ್ಷ 'ಬಲರಾಕ್ಷಸಿ' ನೋ.

ಬಾಳಲಿ 'ಬಾಣಲಿ' ನೋ.

ಬಾಳವಂದ 'ಬಾಲವಂದ' ನೋ.

ಬಾಳವಚ್ಚ (ನಾ). = ಬಾಲವಂದ : ರಕ್ಕೆವಣಿ ಪುಲಿಯುಗುರ್ . . . ಮೊಕ್ಕಳಗಾಡಿಗೆ ಜಡೆ ಸೊಡರ್ವಕ್ಕಿನ ಬೊಟ್ಟೆಂಬ ಬಾಳವಚ್ಚದಿನೆಸೆದಂ (ಪುಷ್ಪಪು. ೯-೪೯). [ಬಾಳ್$_5$ (= ಬಾಲ್$_2$) + ಪಚ್ಚ$_2$]

ಬಾಳವಣ್ಣ 'ಬಾಳ್$_3$' ಪರಾ.

ಬಾಳವತಿ 'ಬಾಲವತಿ' ನೋ.

ಬಾಳವಾಳಿಗೆ (ನಾ). ಒಂದು ಬಗೆಯ ತೆರಿಗೆ : ಮನೆವಾರ್ತೆ ಹಣ ಕಾಹು ಕಾಣಿಕೆ ಕಡಾಯ ಬಾಳವಾಳಿಗೆ ಉಡುಗರೆ ಉಲುಪು ಮನೆದೆರೆ ಅಳಿಉ ಅನ್ಯಾಯ ಮುಂತಾದ ಸರ್ವಬಾಧೆಯು (ಮೈಆರಿ. ೧೯೩೪, ೫೬-೨೯; 1435).

[?]

ಬಾಳವಿದ್ಯೆ (ನಾ). ಬಾಲ್ಯದಲ್ಲಿ ಕಲಿತ ವಿದ್ಯೆ: ಎಮ್ಮ ಕಂಡುಂ ಕೇಳ್ದು ಮಱಿಯದ ವಸ್ತುಗಳಿಲ್ಲ ಗಾಂಧರ್ವಮೆಂಬುದೆಮ್ಮ ಬಾಳವಿದ್ಯೆಯದ ಱೊಳೆಮ್ಮಂ ರಂಜಿಸುವನ್ನರ್ ಪ್ರೌಢರಿಲ್ಲ (ಶಾಂತಿಪು. ೨-೨೧ ವ).

[ಸಂ. ಬಾಲವಿದ್ಯಾ]

ಬಾಳವೂರು 'ಬಾಲವೂರು' ನೋ.

ಬಾಳವೇರ್ (ನಾ). ಬಾಳದ ಬೇರು ; ಲಾಮಂಚದ ಬೇರು: ಕೆಂದಳಿರ ಪಂದರೊಳಗಣ ಬಾಳವೇರ ಈರ್ಗಟ್ಟಿನೋವರಿಯೊಳಗೆ (ಸಂಧ್ರಪು. ೬-೬೩).

[ಬಾಳ್$_2$ + ಬೇರ್$_1$]

ಬಾಳಾಂಬಕ (ನಾ). = ಬಾಳನಯನ ೨: ಬಾಳಾಂಬಕನ ಭಕ್ತನಾಗಿ ಭಕ್ತಿಯ ತಾಳಲಱಿಯನೆಂದಡೆ ಅದು ಬಾಲನ ಚಿತ್ತದ ಲೀಲೆಯಂತೆ (ಮೋಳಿಮಾ. ೨೪-೯೮). [< ಸಂ. ಭಾಲಾಂಬಕ]

ಬಾಳಾಕ್ಷ (ನಾ). = ಬಾಳನಯನ ೨ : ಪಾಲು ಸಕ್ಕರೆ ತುಪ್ಪ ಹಾಲನ್ನ ಸವಿದಂತೆ ಬಾಳಾಕ್ಷ ಪೇಳ್ದಾನು (ಕಂಕ. ೩-೦೦). [< ಸಂ. ಭಾಲಾಕ್ಷ]

ಬಾಳಾತಪ 'ಬಾಲಾತಪ' ನೋ.

ಬಾಳಾಯಿ (ನಾ). ಒಂದು ಬಗೆಯ ಮರ ; ತುಮ್ರಿಮರ: ಬಾಳಾಯಿ (ತುಮ್ರಿ) . . . ಇದರ ಕಟ್ಟಿಗೆಯು ಗಟ್ಟಿ, ಜಿಗುಟುಳ್ಳದ್ದು, ತಾಳೆಯುಳ್ಳದ್ದು ; ಆದಾಗ್ಯೂ ಇದಕ್ಕೆ ಬಹಳ ಬೆಲೆ ಬರುವದಿಲ್ಲ. ಘನಪೂಟಿನ ತೂಕ ೫೦ ರಿಂದ ೭೦ ಪೌಂಡುಗಳ ವರೆಗೆ. ಇದರ ಹಣ್ಣುಗಳನ್ನು ಜನರು ಪ್ರೀತಿಯಿಂದ ತಿನ್ನುವರು (ಕಶಾಗ. ೪೯). [?]

ಬಾಳಾರ್ಕ 'ಬಾಲಾರ್ಕ' ನೋ.

ಬಾಳಾಳ್ (ನಾ). ಖಡ್ಗವಿದ್ಯೆಯನ್ನು ಬಲ್ಲವನು ; ಪರಾಕ್ರಮಿ :

ಸಿಂಗದೀಕ್ಷರ್‌ಬ್ಬಾಳಾಳ್ ಅರಟ್ಟೀತೀರಾರ್ ಕೂಡಲೂರ್ ಆಳೆ (ಮೈಸಂ. ೦೯೦೬. ೦೩-೪; ಸು. 726). [ಬಾಳ್$_3$ + ಆಳ್$_3$]

ಬಾಳಿ 'ಬಾಳ್$_3$' ನೋ.

ಬಾಳಿಕೆ$_1$ 'ಬಾಟ್ಕೆ' ನೋ.

ಬಾಳಿಕೆ$_2$ 'ಬಾಲಿಕೆ' ನೋ.

ಬಾಳಿಸು 'ಬಾಟಿಸು' ನೋ.

ಬಾಳು$_1$ 'ಬಾಟ್$_1$' ನೋ.

ಬಾಳು$_2$ 'ಬಾಟ್$_3$' ನೋ.

ಬಾಳು$_3$ 'ಬಾಳ್$_3$' ನೋ.

ಬಾಳು$_4$ 'ಬಾಳ$_2$' ನೋ.

ಬಾಳುಕ 'ಬಾಟುಕ' ನೋ.

ಬಾಳುಗುಳಿ 'ಬಾಟ್ಗುಟಿ' ನೋ.

ಬಾಳುಗೇಡಿ (ನಾ). ಜೀವನವನ್ನು ಹಾಳುಮಾಡುವವನು ; ಬದುಕನ್ನು ಕೆಡಿಸುವವನು : ನೆಟ್ಟನೆಲೆ ಧೃತರಾಷ್ಟ್ರನೃಪ ನೀನಿಟ್ಟ ಕಿಚ್ಚಿದು ಪಾಪಿ ಮಗನನು ಹುಟ್ಟಿದಂದೇ ಬಿಸುಡದಾದೆವು ಬಾಳುಗೇಡಿಯನು (ಕುಪ್ಯಾಲಾ. ೯-೯೯). [ಬಾಳು$_2$ (< ಬಾಟ್$_3$) + ಕೇಡಿ$_1$]

ಬಾಳುಗೇಡು (ನಾ). ಬದುಕಿಗೆ ಕೇಡು ತರುವಂತಹುದು ; ಜೀವನವನ್ನು ಹಾಳುಮಾಡುವಂತಹುದು : ಆಳುಕೂಳುಗಳ ಮೇಳವಿಲ್ಲದ ಮನೆಯು ಬಾಳುಗೇಡು (ಸರ್ವಜ್ಞ. ೦೯೯೯).

[ಬಾಳು$_2$ (<ಬಾಟ್$_3$) + ಕೇಡು]

ಬಾಳುಡಿ (ನಾ). ಖಡ್ಗದ ತುಂಡು; ಕತ್ತಿಯ ತುಂಡು : ನೆಣದೊಳ್ಗೆ ಸಱೊಳ್ ಜಿಗಿಲ್ತಗುರ್ವಡರೆ ನಿರಂತರಂ ಪೊಳೆವ ಬಾಳುಡಿ ಸುಯ್ವ ನವವ್ರಣಂಗಳೊಳ್ ಪೊಡರೆ ಪೊದಟ್ಟುದದ್ಭುತಭಯಾನಕಮಾಹವರಂಗ ಭೂಮಿಯೊಳ್ (ಪಂಪಭಾ. ೦೦-೫೬) ; ಬಾಳುಡಿ ಪಾಱಿ ಬೀಟಿ ಪಗಲುಳ್ಕದ ಪೋಲ್ . . . ಭಯಂಕರಮಾಯ್ತು ತುರಂಗಸಂಗರಂ (ಪಂರಾಮಾ. ೦೩-೬೩).

[ಬಾಳ್$_3$ + ಉಡಿ$_6$]

ಬಾಳುತ್ತಾರ (ನಾ). ಉಂಬಳಿಯಾಗಿ ಕೊಟ್ಟ ಭೂಮಿ : ಯಾಗ ಉತ್ತಾರವ ಕೊಟ್ಟ ಭೂಮಿ ಸಹ ಬಾಳುತ್ತಾರವಾಗಿ ವಿಂಗಡಿಸಿ ಕೊಡ ಹೇಳಿ (ಎಕ. IX (S), ಪಂಗಳೂ. ೦೩೦-೪ ; ಸು. 1700).

[ಬಾಳು$_2$ (<ಬಾಟ್$_3$) + ಉತ್ತಾರ]

ಬಾಳುದಲೆ 'ಬಾಟ್ದಲೆ' ನೋ.

ಬಾಳುದಲೆವಿಡಿ ' ಬಾಟ್ದಲೆವಿಡಿ ' ನೋ.

ಬಾಳುಬೆ 'ಬಾದುಬ್ಬೆ' ನೋ.

ಬಾಳುಮನೆ 'ಬಾಟ್ವನೆ' ನೋ.

ಬಾಳುವೆ 'ಬಾಟ್ವೆ' ನೋ.

ಬಾಳೆ$_1$ 'ಬಾಟ್$_1$' ನೋ.

ಬಾಳೆ$_2$ (ನಾ). ಒಂದಂ ಬಗೆಯ ಉದ್ದವಾಗಿರುವ ಮೀನು : ಪೇಟ್ದಿ ನಿಸನಾಂ ಮಗುಟ್ದಾಗಳೆ ಸೂಸಿ ಕಣ್ಣ ನೀರೊಡನೊಡನುಣ್ಮೆ ಕುಂಕುಮ ದೊಳರ್ದಿದ ಬಾಳೆಗಳನ್ನವಾಗಿ ಕೆಂಪಡರ್ದಲರ್ಗಣ್ಗಳಿಂದುಗುಟ್ದು ನೋಡಿದುದಂ ನೆನೆವೇಂ ಮೃಗಾಕ್ಷಿಯಾ (ಆದಿಪು. ೦೨-೨೪); ಬಾಲಕಿಯ ಲರ್ಗಣ್ಗಳ್ . . . ಬಾಳೆಯ ಮೀಂಗಳ ತೆಱದಿಂ ಲೀಲೆಯೊಳೇಂ ಪೊಳೆದು ತಳೆದವತಿಚಪಳತೆಯಂ (ಪಾಧಪು. ೨-೩೦) ; ತೊಡೆಯುಮೆಸೆವಕ್ಷಿಯುಂ ಬಾಳೆಯಂ ಬಾಳೆಯಂ ನಡುವುಂ ಸುವಾಣಿಯುಂ ಹರಿಯುಮಂ ಹರಿಯುಮಂ ಬಿಡದೆ ಪೋಲ್ತಿರೆ ಮೆಱೆವ ಕಾಂತೆಯರ್ . . . ಸೊಗಯಿಸಿದರು (ಶೈಪುಭಾ. ೬-೨೩). [ದೇ.॥ ತಮಿ. ವಾಳೈ; ಮಲ. ವಾಳ; ತುಳು. ಬಾಲೆ; ಕೊಡ. ಬಾಳ್; ತೆಲು. ವಾಲುಗ, ವಾಲುವ]

ಬಾಳೆ$_3$ 'ಬಾಲೆ' ನೋ.

ಬಾಳೆಕಂಬ 'ಬಾಳೆಗಂಬ' ನೋ.

ಬಾಳೆಕೊನೆ 'ಬಾಳೆಗೊನೆ' ನೋ.

ಬಾಳೆಗಂಬ, ಬಾಳೆಕಂಬ (ನಾ). ಬಾಳೆಗಿಡದ ತಾಳು.—ಕಾಂಡ : ತಾವರೆಯಲ್ಲಿ ತಾರೆ ಜನನಂಬಡೆದಂದು ನಗೇಂದ್ರಮೂಲದೊಳ್ ಭಾವಿಸೆ ಬಾಳೆಗಂಬಮೊಗೆದಂದು ಲತಾಗ್ರದೊಳದ್ರಿ ಪುಟ್ಟಿದಂದು . . . ಸತಿಯಂಗ ಮನಾಂ ಪೊಗಳಲ್ಕೆ ಸಾಲ್ದಪೆಂ (ರಾಜಶೇ. ೬-೨೬). **ಬಾಳೆಕಂಬ** : ಚಪ್ಪರ ಕಟ್ಟುವುದಕ್ಕೆ ಇನ್ನೂ ಎರಡು ದೊಡ್ಡ ಬಾಳೆಕಂಬಗಳನ್ನು ತರಬೇಕು (ಕೂಡಿ). [ಬಾಳೆ$_1$ (<ಬಾಟ್) + ಕಂಬ$_1$ (<ಕಂಭ)]

ಬಾಳೆಗಣ್ (ನಾ). ಮೀನಿನ ಆಕಾರದ ಕಣ್ಣು : ಚಂಚತ್ಕಾಂಚನಾಬ್ಜಾಸ್ಯ ಮಂಡಳಮಿಂಬಾಗಿರೆ ಬಾಳೆಗಣ್ಪೊಳೆಯೆ . . . ಸರಿದ್ವಧು ರಥಾಂಗೋರೋಜೆ ಕಣ್ಗೊಪ್ಪಿದಳ್ (ವೃಷಪಿ. ೪-೮) ; ಪೊಳೆದೊಪ್ಪೆ ಬಾಳೆಗಣ್ ಬಿಸಜಮುಖಂ ಮರುಚ್ಚಳಿತಮೊಂದೆ (ಶಬಕಂ. ೨-೩೩). [ಬಾಳೆ$_2$ + ಕಣ್]

ಬಾಳೆಗೊನೆ, ಬಾಳೆಕೊನೆ (ನಾ). ಬಾಳೆಯಕಾಯಿ ಅಥವಾ ಹಣ್ಣುಗಳ ಗೊಂಚಲು : ಜವರ, ನಿಂಗ, ಬೋರಿ ಮುಂತಾದವರು ಕಾಯಿ, ಕೊಬರಿ, ಬಾಳೆಗೊನೆಗಳನ್ನು ಹೇಳದೆ ಕೇಳದೆ ಚಾವಡಿಗೆ ತಂದು ಒಪ್ಪಿಸುತ್ತಾರೆ (ನನ್ನೂರು. ೦೪೭). **ಬಾಳೆಕೊನೆ** : ಬಾಳೆಕೊನೆ ತರಾಕೆ ಹೇಳಿದಾರೇನು ನಿನ್ನ ಸಾಹುಕಾರರು ? (ಮಲೆಮ. ೨೮೮).

[ಬಾಳೆ$_1$ (<ಬಾಟ್) + ಗೊನೆ$_3$ (< ಗೊಲೆ$_2$)]

ಬಾಳೆದೊಡೆ (ನಾ). ಬಾಳೆಕಂಬದಂತೆ ದುಂಡಗೆ, ನುಣುಪಾಗಿ ಇರುವ ತೊಡೆ : ಪಸುಗಿಳಿವಾತಿನ ಬಾಳೆದೊಡೆಯ ಬಣ್ಣಗೆಗಾಲ . . . ನೀಱೆಯ ನವಲಾವಣ್ಯದ ಸಿರಿಯನದೇನಂ ಬಣ್ಣಿಪೆನು (ಜಯಕಾ. ೩-೬೩); ಪೇರೆದೆ ಹೊನ್ನ ಸೆಳೆನಡು ಬಾಳೆದೊಡೆ ಮೆಱೆದೆನ್ನರಂ ಸೋಲಿಸುವ ಜವ್ವನವಾಂತನಾ ಕುವರ (ಸಾಳ್ವಭಾ. ೪-೬); ಬಾಳೆದೊಡೆಯ ಕೊನಬುಗಾತಿಯಳ ಕೊಸರಿ ರಂಗಾಯೆಂಬ ವನಿತೆ ತಾ ವಶವಪ್ಪಳೆಂದೊ (ಶತಸಾಂ. ೨೨-೧೦).

[ಬಾಳೆ$_1$ (<ಬಾಟ್) + ತೊಡೆ$_2$]

ಬಾಳೆಮೀನ್, ಬಾಳೆಮೀನು (ನಾ). = ಬಾಳೆ$_2$: ಅದನೊಂದು ಬಾಳೆ ಮೀನ್ನುಂಗಿ ಗರ್ಭಮಂ ತಾಳ್ದಿದೊಡೆ (ಪಂಪಭಾ. ೦-೬೩ ವ); ಕಣ್ಣ ನೀರಿಟಿದುವು ಬಾಳೆಮೀನ್ ಜಲಮನಟ್ಕಿಸಲಾಱದೆ ಕಾಱುವಂತೆವೋಲ್ (ಕಾವ್ಯಸಾ. ೬೦೦). **ಬಾಳೆಮೀನು** : ಸೂಳೆ ಸೂತ್ರದ ನೇಣು ಗಾಳವಾಕೆಯ ಮೊಗವು ಮೇಳಯ್ಸುವವಳು ಸಲೆ ಬೆಂಡು ಮಿಂಡ ತಾ ಬಾಳೆಮೀನು (ಸರ್ವಜ್ಞ. ೦೯೯೪).

[ಬಾಳೆ$_2$ + ಮೀನ್$_2$. /ತಮಿ. ವಾಳ್ಮೀನ್; ತುಳು. ಬಾಲೆಮೀನ್]

ಬಾಳೆಮೀನು ' ಬಾಳೆಮೀನ್ ' ನೋ.

ಬಾಳೆಲೆ ' ಬಾಟಿಲೆ ' ನೋ.

ಬಾಳೆವಣ್ ' ಬಾಟಿವಣ್ ' ನೋ.

ಬಾಳೆವಸುಳೆ (ನಾ). ಬಾಳೆಮೀನಿನ ಮರಿ : ಬಾಳೆವಸುಳೆದಿಟ್ಟಿಯ ಬಂಧಕಿಯರ ಜಾಳಂ ನಡೆತಂದುದು (ಜಯಕಾ. ೦೩-೬೯). [ಬಾಳೆ$_2$ + ಪಸುಳೆ]

ಬಾಳೆಹಣ್ಣು ' ಬಾಟಿವಣ್ ' ನೋ.

ಬಾಳ್ಕಟ್ಟು ' ಬಾಳ್ಗಟ್ಟು ' ನೋ.

ಬಾಳ್ಕೆ ' ಬಾಟ್ಕೆ ' ನೋ.

ಬಾಳ್ಗನಸು (ನಾ). (ಆಲಂ) ಜೀವನದಲ್ಲಿ ಒಳ್ಳೆಯದನ್ನು ಬಯಸಿ ಕಲ್ಪಿಸಿಕೊಂಡಿರುವ ಬದುಕಿನ ಭವಿಷ್ಯ : ಹಿಂದಾವ ಮುದಿಯ ಮೆಯ್ . . . ಸುಖದಮಾಗಿರ್ದತ್ತೊ ತಾನದೆ ಇಂದು ಸೂಡಿನೊಲ್, ಕೆಟ್ಟಾಸೆ ಬೀಡಿನೊಲ್, ಬಾಳ್ಗನಸುಗಳಿಗೆಲ್ಲ ಕೊನೆಯ ಸುಡುಗಾಡಿನೊಲ್ ಕಾಣುತಿರೆ (ಶ್ರೀರಾಮಾ. ೦೦೯-೦೯೦). [ಬಾಳ್$_2$ (< ಬಾಟ್$_3$) + ಕನಸು]

ಬಾಳ್ಗರ್ಚು 'ಬಾಳ್ಗಟ್ಟು' ನೋ.

ಬಾಳ್ಗರ್ಚುಗೊಡು 'ಬಾಳ್ಗಟ್ಟುಗೊಡು' ನೋ.

ಬಾಳ್ಗಟ್ಟು, ಬಾಳಗಟ್ಟು, ಬಾಳ್ಕಟ್ಟು, ಬಾಳ್ಗರ್ಚು, ವಾಳ್ಗಟ್ಟು (ನಾ). ಯುದ್ಧದಲ್ಲಿ ಪರಾಕ್ರಮವನ್ನು ತೋರಿದುದಕ್ಕಾಗಿ ಯುದ್ಧಾಂತ್ಯದಲ್ಲಿ ವೀರನ ಕತ್ತಿಯನ್ನು ತೊಳೆದು, ಕೊಡುವ ಮಾನ್ಯ: ಕೇಕಯ ಪಲ್ಲವರಂ ಕಾದೆಱೆದು ಪೆತ್ತಜಯನಾ ವಿಜಅರಸನ್ಗೆ ಬಾಳ್ಗಟ್ಟು ಪಲ್ಮಡಿಉ ಮೂಱಿಪಳ್ಳಿಉಂ ಕೊಟ್ಟಾರ್ (ಮೈಅಂ. ೦೯೩೬, ೧೬-೦೨; ಸು. 450); ಬಾಳ್ಗಟ್ಟು ಕೊಟ್ಟೊದು ಅಯ್ಗು . . . ಕಟನಿ (ಎಕ. XVI, ತುಮಕೂ. ೯೪-೪; ಸು. 780); ಅವರ ಮಾಮ ತಿಮ ಮೆದೆಯಮಾದವಾಡಿಯ ಬಾಳ್ಗಟ್ಟು ಕೊಟ್ಟೊ (ಮೈಅಂ. ೧೯೩೦, ೪೯-೪; ಸು. 886). **ಬಾಳಗಟ್ಟು**: ನಾಗಗುಟ್ಟರಸಂ ತಮ್ಮ ಏಱಿದ ಕುದುರೆಯನ್ಮಗುಟ್ಟೆ ಅಟ್ಟಿ ಬಾಳಂ ಕಿಟ್ಟು ನಡದು ಪಲರನಿಱಿದು ಸತ್ತೊಡೆ ಬೆಳ್ಳಮ್ಬರವಿ ಮಾ×ಬಾಳಗಟ್ಟು ಆಗೆ ಕೊಟ್ಟೊದು (ಎಕ. X, ಕೋಲಾರ. ೨೦೦-೦೫; ಸು. 890 ?). **ಬಾಳ್ಕಟ್ಟು**: ಬಲಮಾನ್ತಾಳ್ದಿ ಏಱಿದು ಬಿಟ್ಟರ್ ಬಿಟ್ಟೊಡೆ ಮೆಚ್ಚಿ ಲಕುನ್ದಮಾ ಬಾಳ್ಕಟ್ಟು ಕೊಟ್ಟ (ಎಕ. X (3), ಶಾಗೇಪ. ೬೬-೬; 820). **ಬಾಳ್ಗರ್ಚು**: 'ಬಾಳ್ಗರ್ಚುಗೊಡು' ಪರಾ. **ವಾಳ್ಗಟ್ಟು**: ಶಾನ್ತನೂರೂಂ ಎರೆಡಿಯೂರುಳುಂ ವನ್ದು ತೂಮ್ಬಕಟನಿಯುಂ ಅವರ ಮನೆಯುಂ ವಾಳ್ಗಟ್ಟುಂ ಪ್ರಸಾದಙ್ಗೆಯ್ದಾರ್ (ಎಕ. X, ಮುಳಬಾ. ೨೫೫-೦೨; ಸು. 750); ಮೂಱುಕೊಡೆ ಅಣ್ಣೆಯರ್ಪಿಞ್ಚನೂರಾ ಏಱಿನುಳ್ಳೆಱಿದು ಬಿಱ್ದಾರ್ ಕ[ನ್ನ]ರಸರುಳ್ ಇದರ್ಕೆ ಚಿವಾನಿ ಕಳನಿ ವಾಳ್ಗಟ್ಟು ಕೊಟ್ಟೊದು ರೊಣಮೊಡೆಯೊಗೆ ಕೊಟ್ಟರ್ (ಎಕ. XVI, ತುಮಕೂ. ೬೬-೫; ?).

[ಬಾಳ್$_3$ + ಕಟ್ಟು]

ಬಾಳ್ಗಟ್ಟುಗೊಡು, ಬಾಳ್ಗರ್ಚುಗೊಡು (ಕ್ರಿ). ಯುದ್ಧದಲ್ಲಿ ಶೌರ್ಯವನ್ನು ತೋರಿದುದಕ್ಕಾಗಿ ಮಾನ್ಯವಾಗಿ ಭೂಮಿಯನ್ನು ಕೊಡು; ನೆತ್ತರುಕೊಡುಗೆಯನ್ನು ಕೊಡು: ಆತಂಗೆ ಬಾಣವಿದ್ಯಾಧರಂ ಮೆಚ್ಚಿ ಬಾಳ್ಗಟ್ಟುಗೊಟ್ಟದು (ಸೌಇಇ. IX-i, ೪-೦೦; ಸು. 9 ನೆಯ ಕತ). **ಬಾಳ್ಗರ್ಚುಗೊಡು**: ನೀತಿಮಾರ್ಗ್ಗ ಪೆರ್ಮ್ಮಾನಡಿಗಳು ನೊಟಮ್ಬಾಧಿರಾಜರು ಸೂರೂರಂ ಬಾಳ್ಗರ್ಚುಗೊಟ್ಟರ್ (ಎಕ. X, ಕೋಲಾರ. ೭೯-೦೩; ಸು. 890). [ಬಾಳ್ಗಟ್ಟು + ಕೊಡು$_1$]

ಬಾಳ್ಗೀಟ್ (ಕ್ರಿ). ಖಡ್ಗವನ್ನು ಹಿರಿ; ಕತ್ತಿಯನ್ನು ಒರೆಯಿಂದ ಕೀಳು: ಸಂಗ್ರಾಮವಿದ್ಯಾನ್ವಿತರ್ × × × ಯಂ ಪತಿ ಕೋಗಿಯೂರ ಬಯಲೊಳ್ಬಾಳ್ಗಿಟ್ಟುಕೊಣ್ಡೆಯ್ದಿದಂ (ಎಕ. XIV, ಎಡತೊ. ೩೧-೬; ಸು. 900); ಅನಿಬರುಂ ಬಾಳ್ಗಿಟ್ಟು[ಪಾಠಾಂ. ತ್ತು] ಮೇಲ್ವಾಯ್ದೊಡರ್ಬಿಸೆ ತಿಣ್ಣಂ ತೆಗೆದರ್ಧಚಂದ್ರಶರದಿಂ ಸೂಟ್ ಸೂಟೊಳೆಚ್ಚಾಗಳರ್ಚಿಸಿದಂತಿರ್ದುದುರುಳ್ದ ಕೌರವಶಿರಃಪದ್ಮಂಗಳಿಂ ಕೊಳ್ಗುಳಂ (ಪಂಪಭಾ. ೦೨-೦೪೫); ಬಾಳ್ಗಿತ್ತು ಮಚ್ಚರದಿಂ ಸಾರ್ಚಿದರಂ ಪಡಲ್ವಡಿಸಿ (ಅಪಪು. ೦-೩೬).

[ಬಾಳ್$_3$ + ಕೀಟ್$_1$]

ಬಾಳ್ಗುಡತೆ (ನಾ). (ರಾಜರು ಧರಿಸುತ್ತಿದ್ದ) ಅಧಿಕಾರಸೂಚಕವಾದ ಅಂಗಿ: ತೊಟ್ಟ ಮಹಾರಾಜಮುದ್ರೆಯ ಬಾಳ್ಗುಡುತೆಗೂ, ಹಿಡಿದ ವೀರದಣ್ಡೆನ ಕಯ್ದುವಿಗೂ ಕಟ್ಟೇವವು ಜಕ್ಕುಳಿಕೆಯು ಅಪಮಾನವು ಅಡಸಿ ಮಸಗುವಂತೆ-ನೀವು ಕುಬುದ್ಧಿಯನೆಣಿಸಿ (ಪಟ್ಟಿಅ. ೨೦೯-೦೪).

[ಬಾಳ್$_2$ (< ಬಾಟ್$_3$) + ಕುಡುತ್ತೆ$_3$ (< ಕುಡತಿ)]

ಬಾಳ್ಗುಳಿ 'ಬಾಟ್ಗುಟಿ' ನೋ.

ಬಾಳ್ಗೆಡು (ಕ್ರಿ). ಜೀವನವನ್ನು ಹಾಳುಮಾಡಿಕೊಳ್ಳು: ಕೆಟ್ಟೆವೋ! ಕಂಗೆಟ್ಟೆವೋ! ಮನೆಗೆಟ್ಟೆವೋ! ಬಾಳ್‌ಗೆಟ್ಟೆವೋ! (ಕ್ರೀರಾಮಾ. ೭೦೩-೦೨೦).

[ಬಾಳ್$_2$ (< ಬಾಟ್$_3$) + ಕೆಡು$_1$]

ಬಾಳ್ಗೆಳೆಯ (ನಾ). ಬಾಳಿನುದ್ದಕ್ಕೂ ಸ್ನೇಹಿತನಾಗಿರುವವನು: ವತ್ಸ! ಕಾಣದು ಕಣ್ಗೆ! ಬಗೆಗೆ ಸುಳಿದಿದೆ ಬರವು ಬಾಳ್ಗೆಳೆಯನೊರ್ವನಾ! (ಕ್ರೀರಾಮಾ. ೨೮೮-೮೭). [ಬಾಳ್$_2$ (< ಬಾಟ್$_3$) + ಕೆಳೆಯ]

ಬಾಳ್ಗೊಲೆ (ನಾ). ಜೀವಹಾನಿ: ಪ್ರಾಣಹತ್ಯೆ: ಗಳಹದಿರು ಕೆಲಬಲದ ಹಂಗಿನ ಬಳಕೆಯೇ ಘಡ ಸೂತಸುತ ಬಾಳ್ಗೊಲೆಯ ಬಾಹಿರ ಬಿನುಗ ಬೆದಱಿಸಿ ಬಱಿದೆ ಬೆಱತೆಯಲ (ಕುಪ್ಯಾಕ. ೧೦-೨೫); ನಿರ್ಜನ ನಿಶಾವೇಳೆಯಲಿ ಚಿತ್ರೆ, ಕ್ಷಾತ್ರಕುಲರಮಣಿ, ಬಾಳ್ಗೊಲೆಗುಜ್ಜುಗಂಗೈದು . . . ಶಶಿತಾರೆಗಳಿಗೆ ಬಿನ್ನೈಸಿದಳ್ ಕೈಮುಗಿದು (ಜತ್ರಾಂಗ. ೬೫-೦೭೬೩).

[ಬಾಳ್$_2$ (< ಬಾಟ್$_3$) + ಕೊಲೆ$_2$]

ಬಾಳ್ತರ (ನಾ). ತಾಳಿಕೆ: ಬಾಳಿಕೆ: ಬೆತ್ತದ ಸಂದುಕ ನೂರುವರ್ಷ ಬಾಳ್ತರ ಬರುತ್ತದೆ (ಮೂಕಜ್ಞ. ೦೬೩). [← ತುಳು. ಬಾಳ್ತರ]

ಬಾಳ್ತೆ 'ಬಾಟ್ತೆ' ನೋ.

ಬಾಳ್ತೆಗ (ನಾ). ಮನೆವಾರ್ತೆಗಾರ: ನಮ್ಮಯ ಮನೋವಿಧಾನಗಳನ್ನು ನಮಗೆ ಕೈಗೂಡಿಸಿ ಕುಡುವುದು . . . ನಿಮ್ಮಂತಹ ಕುಲಕ್ರಮಯುಕ್ತವಾದ ಸ್ವಧರ್ಮನಿಷ್ಠೆಯ ಬಲ್ಲ ಬಾಳ್ತೆಗರಿಗೆ ಬಿರುದಾಗಿದೆ (ಪಟ್ಟಿಅ. ೧೯೯-೧೭). [ಬಾಳ್ತೆ (< ಬಾಟ್ತೆ) + — ಗ$_2$]

ಬಾಳ್ತೆಗೆಯ್ 'ಬಾಟ್ತೆಗೆಯ್' ನೋ.

ಬಾಳ್ದಲೆ 'ಬಾಟ್ದಲೆ' ನೋ.

ಬಾಳ್ದಲೆಗೊಳ್ 'ಬಾಟ್ದಲೆಗೊಳ್' ನೋ.

ಬಾಳ್ದಲೆವಿಡಿ 'ಬಾಟ್ದಲೆವಿಡಿ' ನೋ.

ಬಾಳ್ದುದಿ (ನಾ). ಖಡ್ಗದ ಮೊನೆ; ಕತ್ತಿಯ ತುದಿ: ಬಾಳ್ದುದಿ ವೊಲಿರ್ಪ ನಖದಿಂ ಸೀಳ್ದಸುರನ ಕುಕ್ಷಿಯಂ . . . ಬೇಳ್ದಂ ನಿಜವಿಕ್ರಮಾಗ್ನಿಯೊಳ್ ನರಸಿಂಹಂ (ಏಷ್ಟುಪು. ೦-೫-೨೫೦). [ಬಾಳ್$_3$ + ತುದಿ]

ಬಾಳ್ಬೀಟ್ (ಕ್ರಿ). (ಆಲಂ) ಶತ್ರುವಿನ ಖಡ್ಗಕ್ಕೆ ಸಿಕ್ಕಿ ಸಾಯು: ತುಱುವನಿಕ್ಕಿಸಿ ರಣದೊಳ್ಬಾಳ್ಬಿಟ್ಟೊ ಸುಗತಿಯ ಪಡೆದನ್ (ಎಕ. VIII, ಸೂರಬ. ೨೦೪-೦೪; 965). [ಬಾಳ್$_3$ + ಬೀಟ್$_1$]

ಬಾಳ್ಮೆ 'ಬಾಟ್ಮೆ' ನೋ.

ಬಾಳ್ಮೊದಲ್ 'ಬಾಟ್ಮೊದಲ್' ನೋ.

ಬಾಳ್ಮೊನೆ (ನಾ). = ಬಾಳ್ದುದಿ: ಬಾಳ್ಮೊನೆ: ಪಾಟ್ಮನೆ (ಕಮಧ. ೬೭ ಪ್ರಯೋ); ದಾದಿ ಬಟಿ ಪಸುಳೆಯನ್ ಬಾಳ್‌ಮೊನೆಗೆ ಚುರ್ಚಿದನ್ (ಅಶ್ವತ್ಥಾ. ೩-೪೬). [ಬಾಳ್$_3$ + ಮೊನೆ]

ಬಾಳ್ವಂದರ 'ಬಾಟ್ವಂದರ್' ನೋ.

ಬಾಳ್ವನೆ 'ಬಾಟ್ವನೆ' ನೋ.

ಬಾಳ್ವಲ (ನಾ). ಖಡ್ಗಬಲ; ಆಯುಧಬಲ: ಪರವಿಗ್ರಹದ ಮೇಲಣ ತೋಳ್ವಲಮುಮಂ ನಿಜವಿಗ್ರಹದ ಮೇಲಣ ಬಾಳ್ವಲಮುಮೋಸರಿಸದೆ ಸುತ್ತಿಱಿದ ಮುತ್ತಿದ ಬೀಡಂ ತೆಗೆಯಿಸಿ ಮಗುಟ್ಟು ಬರ್ಪಾಗಳ್ (ಅಪಂಪು. ೦೨-೨೭ ಪ); ಆಳ್ವಲದ ತೋಳ್ವಲದ ಬಾಳ್ವಲದ ಗರ್ವದಿಂದುರ್ವಿ ಮಲೆತ ಗರ್ವಿತೋರ್ವೀಶಬಳಮನೆಟ್ಟಿಟ್ಟಿ (ಪುಷ್ಪಪು. ೫-೫೧ ಪ). [ಬಾಳ್$_3$ + ಬಲ$_3$]

ಬಾಳ್ವಲಿ (ನಾ). ಪ್ರಾಣದ ಬಲಿದಾನ,—ಆಹುತಿ: 'ಬಾಳ್ವಲಿಗುಡು' ಪರಾ. [ಬಾಳ್$_2$ (< ಬಾಟ್$_3$) + ಬಲಿ$_3$]

ಬಾಳ್ವಲಿಗುಡು (ಕ್ರಿ). ಪ್ರಾಣವನ್ನು ಆಹುತಿ ಕೊಡು,—ಬಲಿಯಾಗಿ ಅರ್ಪಿಸು: ಈ ನಮ್ಮ ನಾಯಕರ ಶರಭಾವತಾರದ ಪ್ರಚಣ್ಡಮೂರ್ತಿಗೆ ಬಾಳ್ವಲಿಗುಡಬೇಕು (ಮಂತ್ರಶ. ೪೯-೨೫).

[ಬಾಳ್ವಲಿ + ಕುಡು$_1$ (< ಕೊಡು$_1$)]

ಬಾಳ್ವಿಕೆ 'ಬಾಟ್ಕೆ' ನೋ.

ಬಾಳ್ವಿಡಿ$_1$ (ಕ್ರಿ). ಜೀವಧಾರಣೆ ಮಾಡು; ಬದುಕು: ಮತ್ತೆಂತೊ

ಬಾಳ್ವಡಿದು ಬಂದರೊಡಗೂಡಿ (ಕಾಲೂರ. ೯೮-೦೯೪).

[ಬಾಳ್$_2$ (< ಬಾಟ್$_3$) + ಪಿಡಿ$_1$]

ಬಾಳ್ವಡಿ$_2$ (ಕ್ರಿ). ೧. ಕತ್ತಿಯನ್ನು ಹಿಡಿ; ಖಡ್ಗವನ್ನು ಹಿಡಿ. ೨. (ಆಲಂ) ಯುದ್ಧಮಾಡು; ಸೆಣಸು: ಬಾಳ್ವಡಿದಾರ್ ಬಾಟ್ದಪ್ಪರಾತ ನಿದಿರೊಳ್ ಪಗೆವರ್ (ಕಬ್ಬಿಗಾ. ೯೯). [ಬಾಳ್$_3$ + ಪಿಡಿ$_1$]

ಬಾಳ್ವೀಡು (ನಾ). ಬಾಳುವ ಮನೆ; ಮೂಲಾಶ್ರಯ; ನೆಲೆವನೆ: ಸಿಂಹಪುರ ಕಂತುವಿನ ನೆಲೆವೀಡು ಸೊಬಗಿನ ಸಂತತಿಯ ಶಾಯ್ವಾಡು ಲಕ್ಷ್ಮಿಯ ಸಂತಸದ ಬಾಳ್ವೀಡೆನಿಸಿ ಶೋಭಿಪುದು ಸೊಬಗಾಗಿ (ಸಾಳ್ವಾ. ೨-೦). [ಬಾಳ್$_1$ (< ಬಾಟ್$_1$) + ಬೀಡು$_2$]

ಬಾಳ್ವೆ 'ಬಾಟ್ವೆ' ನೋ.

ಬಾಳ್ವೆಗೆಡಿಸು (ಕ್ರಿ). ಬಾಳುಗೇಡು ಮಾಡು; ಬದುಕನ್ನು ಹಾಳು ಮಾಡು: ಇದಿರಾದರಂ ಬಾಳ್ವೆಗೆಡಿಸುತ್ತಸುಂಗೊಂಬೆನೀ ಬ್ರಹ್ಮಾಂಡಮಂ ಪೋಳ್ವೆಂ (ಶಿಲಪು. ೩೦-೦೦). [ಬಾಳ್ವೆ (< ಬಾಟ್ವೆ) + ಕೆಡಿಸು$_1$]

ಬಾಳ್ವೆಣ 'ಬಾಟ್ವೆಣ' ನೋ.

ಬಾಳ್ವೆಳೆ (ನಾ). (ಹೊಲಗದ್ದೆಗಳ) ಬೆಳೆಯುತ್ತಿರುವ ಪೈರು; ಹಸುರಾಗಿರುವ ಬೆಳೆ: ಬೆಳ್ವೆಳಗಿನ ಬಾಳ್ವೆಳೆಯಂ ತಳ್ವದೆ ಬಾಂಬೊಲದೊಳರುಣಕರ ಶಿಖಿಶಿಖೆ ಪಾಳೇಳ್ವಿನಮಳುರ್ದುಱ್ ಚಿಂತೆಯನಾಳ್ವಂತೆವೊಲೋಷಧೀಶ್ವರಂ ಕಳೆಗೆಟ್ಟಂ (ರಾಜಶೇ. ೦೨-೧೩). [ಬಾಳ್$_1$ (< ಬಾಟ್$_1$) + ಬೆಳೆ$_2$]

ಬಾಳ್ವೇಲಿ 'ಬಾಟ್ವೇಲಿ' ನೋ.

ಬಾಳ್ವೊಗರ್ (ನಾ). ಕತ್ತಿಯ ಹೊಳಪು, -ಕಾಂತಿ: ಧರಣೀರಕ್ಷಣ ಮಂತ್ರಾಕ್ಷರಮಂ ವಿದ್ವಿಷ್ಟಸೈನ್ಯಮಾರಣಮಂತ್ರಾಕ್ಷರಮಂ ಪೊನ್ನೊರೆಯಿಂದಂ ಬರೆದಂತಾ ನೃಪನ ತೋಳ ಬಾಳ್ವೊಗರೆಸೆಗುಂ (ಪಂಪಪು. ೩-೦೩). [ಬಾಳ್$_3$ + ಪೊಗರ್]

ಬಾಳ್ವೊಗು (ಕ್ರಿ). ವೈವಾಹಿಕಜೀವನವನ್ನು ಮೊದಲು ಮಾಡು; ಸಾಂಸಾರಿಕಜೀವನವನ್ನು ಪ್ರಾರಂಭಿಸು; ಮದುವೆಯಾಗು: ಪಳೆಯ ರೋಗಕ್ಕೌಷಧಂಗೊಳಲ್ ನವರೋಗಮೊಲಿದು ಬಂದಂತೆ ಮೊದಲಾಣ್ಮನೊಲ್ಲೆಂದೊರ್ವ ಬಲವಂತನಂ ಬಯಸಿ ಬಾಳ್ವೊಗಲ್ ಬಡಿವ ಗಂಡಂ ದೊರಕಿದಂತೆ (ಶಿಲಪು. ೩೩-೭). [ಬಾಳ್$_2$ (< ಬಾಟ್$_3$) + ಪೊಗು]

ಬಾಳ್ವೊಗೆ (ನಾ). ಕತ್ತಿಗಳು ಪರಸ್ಪರ ತಾಗಿದಾಗ ಅವುಗಳ ಘರ್ಷಣೆಯಿಂದ ಹೊರಡುವ ಹೊಗೆ: ಬಾಳ್ವಾಳ್ಗಳ ಘಟ್ಟಣೆಯೊಳ್ ಬಳ್ವಳ ಬಳೆದೊಗೆದು ನೆಗೆದ ಕಿಡಿಗಳ ಬಂಬಲ್ಗಳ್ವೆರಸು ಪೊಳೆದು ನೆಗೆದುದು ಬಾಳ್ವೊಗೆ [ಕಾರ ಮುಗಿಲ್] ಬಳ್ಳಿಮಿಂ[ಚಿನಿಂದು]ಳ್ಕುವವೋಲ್ (ಸಂಪಭಾ. ೧೦-೮೪). [ಬಾಳ್$_3$ + ಪೊಗೆ$_2$]

ಬಾಱೊಬ್ಬೆ (ನಾ). ಬೆಳೆಯುವ ಪೊದೆ, ಕಂಟಿ ಮೊದಲಾದುವುಗಳಿಂದ ರಚಿಸಿದ ಬೇಲಿ: ಉತ್ತರಸ್ಯಾನ್ ದಿಶಿ ಬಾಱೊಬ್ಬೆ (ಪ್ರಾಸಂ. ೦೯೨೪, ೬೦-೯೬; 799).

[ಗ ಇದು 'ಬಾಱೊಬ್ಬೆ' ಎಂಬುದರ ಅಪಲಿಖಿತವಿರಬಹುದು]

ಬಾಟ್$_1$, ಬಾಳ್$_1$, ಬಾಳು$_1$ (ಕ್ರಿ). ಬದ್ದು$_1$, ಬರ್ದು$_2$, ಬಳ್ದು, ಬಟ್ದು (ಭೂತನ್ಯೂ). ೧. ಬದುಕು; ಜೀವಿಸು: ಪತ್ತಿ ಪ್ರಮಾದ ಫಲಕಮನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್ ಮತ್ತೀ ರತ್ನಾಕರದೊಳ್ ಪುತ್ರಿಕೆಯೆನೆ ಬಟ್ದಳಿಂತು ಬಾಟ್ವುದೆ ಚೋದ್ಯಂ (ಕವಿರಾ. ೨-೩೬); ಆರಾತಿಗಳ್ಗಳ್ಕಿ ತನ್ನ ಕುಲಮುಂ ಚಲಮುಂ ದೊರೆಯುಂ ಕಿಡೆ ಬಾಟ್ವಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ (ಆದಿಪು. ೧೨-೯೬); ಸಮಸಂದ ತನ್ನ ಸಂತತಿಗೆ ಮಕ್ಕಳುಳ್ಳವಳೆ ಬಟ್ದು ಬಾಟ್ವಳ್ [ಕ್ಷಿ]ತಿಯೊಳ್ ಸಮಸಂದೆಸೆಗುಮೆ ಸಂತತಿಗೆ ಮಕ್ಕಳಿಲ್ಲದಳ್ ಬರ್ದುದೇಂ ಬಾಟದುದೇಂ (ಸುಳುಮಾ. ೯-೦೦೪); ಸುಖದಿಂ ಅನುಭವಿಸಿಕೊಂಡು ಸರ್ವಮಾನ್ಯವಾಗಿ ಬದ್ದು ಬಹಿರಿ (ಮೈಆರಿ. ೦೯೩೪, ೩೦-೨೩; 1640). ೨. ಹೊಟ್ಟೆ ಹೊರೆ: ಉದರ ನಿರ್ವಾಹ ಮಾಡು; ಉಪಜೀವನ ನಡೆಸು: ಜೀವಿತಮಂ ಕೊಂಡು ಬಾಟ್ವೆನೆಂಬವಂ ಪ್ರಾಣಮುಂ ಕುಡಲ್ವೇಟ್ಕುಂ (ಸಂತತಂ. ೩೨-೦೦). ೩. ನೆಮ್ಮದಿಯಾಗಿರು; ಸುಖದಿಂದ ಜೀವಿಸು; ಸಂತುಷ್ಟವಾಗಿರು: ಬತ್ತಲೆಗರ ಮಾತುಗೇಳದಿರು ಬಾಟ್ವೆನಮಿಂದ್ರಿಯವರ್ಗದಿಚ್ಛೆಯಂ ಸಲಿಸಿ . . . ಬಿಚ್ಚತಂ ನಲಿವುದು (ಆದಿಪು. ೨-೯); ನಾಲಿಗುಳ್ವನೆ ಬಾಟ್ಗುಂ (ಶಾಸಾಭೂ. ೨೦ ಪ್ರಯೋ); ಬಾಟ್ವ ಮನೆಗೊಂದು ಬಗುಳ್ವುದು ಬೇಟ್ಕುಮೆನ್ನಿರೆ? (ಅಸಂಪು. ೦-೪೦). ೪. ಒಕ್ಕಲಾಗು; ನೆಲಸು; ವಾಸಮಾಡು: "ಬಟ್ದಂ (ಬಾಟ್ದಂ) = ಜೀವಿಸಿದಂ; ಒಕ್ಕಲಾದಂ" (ಶಮದ. ಪಂ. ೦); ಬಿಸಿಗೂರುಳ್ಬಾಟ್ವ ಪ್ರಜೆಗೆಲ್ಲಂ ಕೊಟ್ಟೊದು ಕಟ್ಟಾಣೆ ಮರ್ಯಾದಿ ಕಾರಾಳ್ಮೆಗೊಟ್ಟಾರ್ (ಎಕ. IX (8), ಮಾಗಡಿ. ೦೨೯-೪; ಸು. 900). ೫. (ಆನೆಯನ್ನು) ನೆಲೆಯಾಗಿ ನಿಲ್ಲಿಸು: 'ಬಾಟಿಸು', 'ಬಾಟ್ಗಂಬ' ಪರಾ. **ಬಾಳ್$_1$**: ೧. ಕೆಮ್ಮಿ ಕುಮ್ಮುತ್ತೊಡಲನೊಲೆಯುಂ ಮುಗ್ಗಿ ಬಳ್ದುಂ ನಿತಾಂತಂ ಕೆಡವಲ್ಲಿಂ ಮುನ್ನ . . . ರಕ್ಷಿಪ್ಪುದೆನ್ನಂ (ರಕ್ಷಾಶ. ೩೬); ಮೋಹನ ರೂಪನೆ ನಿನ್ನ ಬಿಟ್ಟೇಪರಿಯಲಿ ಬಾಳ್ವೆ ಜೀಯ (ಮೋಹತ. ೬-೦೬). ೩. ಸಪ್ತಋಷಿಗಳ್ ನುಡಿದಾಪ್ತವಚನಂ ಕರ್ಣರಸಾಯನಮಾಗೆ ಗಿರಿರಾಜಂ ಕೇಳ್ದು ಬಾಳ್ದು ಸಂದಣಿಸಿದ ಪುಳಕದಿಂ ದಳವೇಱಿ (ಗಿರಿಕ. ೦೦-೨೬ ವ). ೬. ಬಾಳುವೆಮಾಡು; ಒಗೆತನಮಾಡು; ದಾಂಪತ್ಯಜೀವನವನ್ನು ನಡೆಸು: ವನಿತೆ ನಿನ್ನಂ ಬಾಳಲೀಯೆವು ಮನೆಯೊಳಿರವೇಡೀಗ ಹೊಱವಡು ನಿನಗೆ ನಾವಂಜುವೆವು (ಐಸಪು. ೩೨-೨೦). **ಬಾಳು$_1$**: ೧. ಬಾಣಾತ್ಮ ಸಂಭವೆಯಿಲ್ಲದಾನೊರ್ವ ಬಾಳೆನು (ಮೋಹತ. ೩೯-೨೩). ೩. ತಾ ಬಾಳಲಾಱದೆ ವಿಧಿಯ ಬೈದನೆಂಬ ನಾಣ್ನುಡಿಯಾಯಿತ್ತಲ್ಲ ಬಸವಣ್ಣ (ಶೂನ್ಯಸಂ. ೦೦೬-೬೭); ಆಯುವಂತನೆ ಬಾಳು ದನುಜನಿಕಾಯಮಸ್ತಕಶೂಲ ಬಾಳೆನು ತಾಯತಾಂಬಕಿ ಹರಸೆ ಮಾರುತಿ ಹದಸ ವಿವರಿಸಿದ (ಕೌಶಿರಾ. ೯೩-೩); ಸೊಕ್ಕಾನೆ ಸಿಂಗದೊಳ್ ಕದನವ ಕಟ್ಟಿಕೊಂಡೊಕ್ಕಲಾಗಿರ್ದು ಬಾಳುವುದೇ (ಮೋಹತ. ೩೩-೨೯). ೬. ಎಳೆವೆಣ್ಗಳೀ ಕೃತಿಗೇಳೆ ತಮ್ಮಿನಿಯರನೆಳಮೆಯೊಳಳವುಗೆಡಿಸದೆ ಬೆಳಿಸಂದು ಬಾಳುವರು (ಹದಿಬ. ೦-೩೩). ೭. ಬೆಲೆಯಾಗು; ಬೆಲೆ ತರು: ಸಂತೆಯಲ್ಲಿ ಒಂದು ರೂಪಾಯಿ ಬಾಳುವ ಜೋಡು ಶ್ರೀಮಂತನ ಮೂಲಕವಾಗಿ ಎರಡು ರೂಪಾಯಿ ಬಾಳೀತೆಂಬುವ ಹಾಗಲ್ಲ (ಮುಂಬಯಿ. ೩-೦೨೦).

ಬರ್ದಂ, ಬರ್ದೊಂ = ಬದುಕಿದವನು; ಬಾಳಿದವನು: ಬರ್ದರೊಳಾನೆ ಬ[ರ್ದಂ] [ಪಾಶಾಂ. ರ್ದೆಂ] (ಸಂಪಭಾ. ೯-೬೩); ಕಲ್ಲೆರ್ದೆತನದಿಂದೆನ್ನಂತು ಬರ್ದನಾವನುಮೊಳನೇ (ಗದಾಯು. ೩-೨೬); ಶಾಂತಮನುತಾಪ ಮನಾಱಿಸಿತಂ[ದುದಂ]ದು ಬರ್ದೊಂ ಪರೆದಿರ್ದವೋಲ್ ಮುನಿಗೆ ಕಲ್ನೆಲೆ ಬಲ್ನೆಲೆಯಂ ನಿದಾಘದೊಳ್ (ಶಾಂತಿಪು. ೯-೦೦೬).

[ದೇ. ॥ ತಮಿ. ವಾಟ್; ಮಲ. ವಾಟು; ತುಳು. ಬಾಳು; ಕೋತ. ವಾಳ್]

ಬಾಟ್$_2$ (ಕ್ರಿ). ೧. ಸೀಳು; ಹೋಳು ಮಾಡು: ಕರಗಸಂಗಳಿಂದಂ ಮರನಂ ಪೋಟ್ವಂತೆ ಕೆಯ್ಯಂ ಕಾಲನಗಲ್ಚಿ ಪಿಡಿದಡಸಿ ಕಟ್ಟಿಯುದ್ದಂ ಬಿಡಿದು ಬಾಟ್ವುದುಂ (ವಡ್ಡಾರಾ. ೦೨೬-೦೩). ೨. (?): ಬಾಟುಕಂ— ಸೀಳ್ದೊಣಗಿ ಬಾಟ್ದ ಶಾಕಂ (ಕಿಲಿಂ. ಪಂ. ೦).

ಬಾಟ್$_3$, ಬಾಳ್$_2$, ಬಾಳು$_2$ (ನಾ). ೧. ಬದುಕು; ಇರವು; ಜೀವನ: ಆವುದು ನಿನ್ನ ಬೈಗಮೆಮ್ಮ ಬಾಟಿನಿತೆ ನೀನಿಂತಿರ್ದೊಡಾವಾಸೆಯೋ (ಆದಿಪು. ೩-೨೩); ಉತ್ತದ ಶಂಕಾತಂಕದ ಸುತ್ತಿನೊಳ ಗುಟಿದುಱ್ ನಮೆವ ಬಾಟುಂ ಬಾಟೇ (ಪೇಕಾಪು. ೦೩-೬೯); ನೀನೆಂತೊ ಮಱವೆಯೊಳ್ ಪಱರೊಡನುಸಿರ್ದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಟ್ ಪಾಟಕ್ಕುಂ (ಶಾಮಾಶ್ವ. ೧೦೬-೦೭). ೨. ನೆಮ್ಮದಿ

ಯಾದ ಬದುಕು ; ಸುಖಜೀವನ : ಪಱಿಪಟ್ಟ ಪಗೆವರಂ ನೆಱೆ ಪಱಿಪಡಲಣಮಿಾಯವವರನವರ್ಗಳ ಬಾಟೊಳ್ ನಿಱಿಸಲ್ ಬಗೆದ್ಯೆ (ಪಂಪಾ. ೯-೪೫); ನೆಲನ ಈ ಗೆಂಟಱೆಡೆಗೆ, ಬಱಿಯಿರದ ಬಾಟಿರದ ಸಿದಿಯದೀ ಪಾಟ್ಗೆ ಮೆಟ್ಟಿದೆವು ಬಂದು ಕಟ್ಟಕಡೆಗೆ (ಪಡ್ಕತ್ರ. ೦-೦). ೩. ದಾಂಪತ್ಯಜೀವನ: ಸಂಸಾರ : ಸ್ನೇಹಮಿಲ್ಲದ ಕೋಡುಂ ಮೋಹಮಿಲ್ಲದ ಬಾಟುಂ ಭಕ್ತಿಯಿಲ್ಲದ ಕೊಂಡಾಟಮುಂ ಶಕ್ತಿಯಿಲ್ಲದ ಸೆಣಸುಂ. . . ಒಪ್ಪಲಾರ್ಕುಮೆ (ಧರ್ಮಾಮ್ಯ. ೦-೭೫). ೪. ಜೀವನಾಂಶ ; ಜೀವಿತ : ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿಪದವಿಯುಂ ಬಾಟುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದು (ವಡ್ಡಾರಾ. ೨-೨೫). ೫. ಜೀವ ; ಪ್ರಾಣ : 'ಬಾಟ್ವೆಣ' ಪರಾ. ೬. (ಜೀವಿತಕ್ಕಾಗಿ) ಕೊಡುವ ಭೂಮಿ : ಗಾಡಿಯೆಮ್ಮನಾ ಬಾಟಂ ಪ್ರತಿಪಾಳಿಸ ನಿಲೆ ಪಡೆದೊಂ (ಎಇ. VII. ೨೦೩-೦೫;874). ೭. ಹಸುರಿನಿಂದ ಕೂಡಿದುದು; ಹಸುರಾದುದು : 'ಬಾಟ್ಕೊಂಪ' ಪರಾ. ೮. ಹಸಿಯಾದುದು; ತೇವವುಳ್ಳುದು: 'ಬಾಟ್ನೆಣ' ಪರಾ. ಬಾಳ್$_2$: ೧. 'ಪುದುವಾಳ್$_2$' ಪರಾ. ೫. 'ಬಾಳ್ಗೊಲೆ' ಪರಾ. ಬಾಳು$_2$: ೧. ಬಾಳೆ ನೋಡಕಟಕಟ ಎನಗಿದು ಬಾಳೆ (ಜಸಪು. ೪೫-೪೦); ಸೇವಾಪರನ ಬಾಳು ನಿರರ್ಥವವನಿಯಲಿ (ಜೀಪಂತ. ೪-೪೯); ಉತ್ತಮಮಾನವನ ಬಾಳೂ, ಬದುಕೂ ಇರಬೇಕು ನದಿಗಳಂತೆ (ಪನಂ. ೦೭). ೩. ಬಾಳಿಲ್ಲದವಳ [ಓ]ಲೆಯಂತಾಯಿತ್ತೆನಗೆ (ಬಸವ. ೨೯೬); ನನ್ನ ಬಾಳು ತಪ್ಪಿಸಿದ ನನ್ನ ಗಂಡನ ವಂಶದ ಹೆಣ್ಣುಮಕ್ಕಳು ಚೆನ್ನಾಗಿ ಬಾಳದೆ ಇರಲಿ (ಒಡೆಳ. ೨೦). ೬. ಹಿತ್ತಿಲ ಕೇರಿಯ ಉತ್ತರೇಸ್ವರ ದೇವರ ಬಾಳೊಳು ಹೂದೋಟದಿಂ ಪಡುವಲು (ಸೌಇಇ. IX-i. ೩೭೦-೫೫; 1258); ಅನ್ತು ಮೂ ೧೨ ಹ ೨೦ ಗದೆಯೂ ಆ ಬಾಳಿಂಗೆ ಬಂದ ತೋಟ ಮನೆಯೂ (ಸೌಇಇ. XI-ii. ೪೦೭-೨೬ ; 1364) ; ಧರಣಿದೇವಂಗಳು ಧನಿಯರ ಕಯ್ಯಲು ಧಾರಾಪೂರ್ವ್ವಕವಾಗಿ ಕೊಂಡ ಬಾಳಿನ ವಿವರ (ಸೌಇಇ. IX-ii. ೪೦೯-೯; 1365).

ಬಾಳದಿರಿಕೆ = ಭಿಕ್ಷೆಯನ್ನು ಬೇಡಿ ಜೀವಿಸುವಿಕೆ. — ಬದುಕುವಿಕೆ : ಏಳುಧರಣಿಯನಾಳುವರಸನಂ ಪೊಲೆಯನಿಗೆಯಾಳುಮಾಡಿದೆ ಪಂಚನರ ಸಾರ್ವಭೌಮರಿಗೆ ಬಾಳದಿರಿಕೆಯನಿತ್ತೆ ಶಂಭುಲಿಂಗೈಕ್ಯರೊಳು ಕೀಲಿಸಿದೆ ಪ್ರಾರಬ್ಧಭೋಗನೀತಿಯನು (ಕೃಪಂ. ೩-೦೦-೩). ಬಾಳು ಮಾಡು = ದಾಂಪತ್ಯಜೀವನವನ್ನು ನಡೆಸು ; ಬಾಳುವೆ ಮಾಡು : ನೋಡು. ನೀನಿನ್ನೂ ಹುಡುಗಿ, ಅದರಲ್ಲೂ ಗಂಡನ ಮನೇಲಿ ಸುಖವಾಗಿ ಬಾಳು ಮಾಡ್ತಾ ಇರೋಳು (ಬಾಗಿನ. ೭). [<ಬಾಟ್$_1$]

ಬಾಟಗಾವುಂಡ (ನಾ). ಒಬ್ಬಾತನ ಹೆಸರು : ಬಾಟಗಾವುಣ್ಡ ಕಂಭಯ್ಯನು ಕಳ್ಳವುಣುಯೂರ ಮಹಾಜನಮುಂ (ಎಳ. XI. ಪತ್ರದು. ೫೦-೨೦; 968).

[ಬಾಟ್$_0$ + ಗಾವುಂಡ (< ಗಾಮುಂಡ)]

ಬಾಟಿಕೆ 'ಬಾಟ್ಕೆ' ನೋ.

ಬಾಟಿಗೆ 'ಬಾಟ್ಕೆ' ನೋ.

ಬಾಟಿಮೆ 'ಬಾಟ್ಮೆ' ನೋ.

ಬಾಟಿಸು, ಬಾಳಿಸು (ಕ್ರಿ). ೧. ಬದುಕಿಸು ; ಉಜ್ಜೀವಿಸು : ರಸ[ಂ]ತಿಂದ ಮೆಯ್ಗೆ ತಕ್ಕ ಪ್ರತೀಕಾರದ ಮರ್ದುಗಳಂ ಮಾಡಿಯಾತನಂ ಬಾಟಿಸಿ ಕಟುಪಿದಂ (ಪಡ್ಡಾರಾ. ೧೯೭-೦೯); ಎನ್ನಿಂ ಮುನ್ನಮೆನ್ನ ಮಗಂ ಸತ್ತನಾತನಂ ಬಾಟಿಸಲ್ವೇಟ್ಕುಂ (ಪಾಪುಂಪು. ೪-೭). ೨. ಸಲಹು ಕಾಪಾಡು : ಆರುಮಂ ತಂತಮ್ಮ ಪುಣ್ಯಮೆ ಬಾಟಿಸುಮಂ (ಬಂಹಂ. ೩-೦೩ ಪ). ೩. ಜೀವನವನ್ನು ಸಾಗಿಸಲು ಅವಕಾಶ ಮಾಡಿಕೊಡು ; ಬಾಳಲು ಅನುಕೂಲ ಮಾಡಿ ಕೊಡು : ಅಯ್ವರುಮನಯ್ದಟಿಯೂರೊಳೆ ಬಾಟಿಸು (ಪಂಪಾ. ೦೨-೪೮) ; ಪೆರ್ಗ್ಗಡೆ ಮಾಚಯ್ಯ ಮಪ್ಪಲದ ಗಾವುಣ್ಡ ಗಱಿಯ ಮೆಟ್ಟಿಟ್ಟಡೆ ಬಾಟಿಸಿದ ಸ್ಥಿತಿಕ್ರಮಮಾವುದೆನ್ನೊಡೆ (ಎಳ. IV (R). ಪಾಮರಾ. ೦೩೮-೯; 965). ೪. (ಆನೆಯನ್ನು) ನೆಲೆಯಾಗಿ ನಿಲ್ಲುವಂತೆ ಮಾಡು: ನೀಳ್ದ ತೋಳ್ ಮೆಱೆವುವು ಪೇರುರದೊಳ್ ನೆಲಸಿದ ಲಕ್ಷ್ಮೀಕರಿಣಿಗೆ ಬಾಟಿಸಿದ ರನ್ನದಮಳ್ಗಂಬವವೋಲ್ (ಯಶೋಪ. ೨-೯). ಬಾಳಿಸು : ೩. ನೀವು ಪ್ರೀತಿಯಿಂದ ನನ್ನನ್ನು ಬಾಳಿಸುವುದು ನನಗೆ ಬೇಕು (ಶಡ್ಕಸ. ೨೦೨). [ಬಾಟ್$_1$ + — ಇಸು$_3$]

ಬಾಟುಕ, ಬಾಳಕ$_1$, ಬಾಳುಕ (ನಾ). ಸಂಡಗೆಯಂತೆ ಕರಿದು ನಂಜಿಕೊಳ್ಳಲೂ ಅಗತ್ಯ ಬಿದ್ದಾಗ ತರಕಾರಿಯಂತೆ ಬಳಸಲೂ ಅನುಕೂಲವಾಗುವಂತೆ ಸೀಳಿ ಅಥವಾ ಹೆಚ್ಚಿ, ಉಪ್ಪು ಬೆರಸಿ ಒಣಗಿಸಿದ ಮೆಣಸಿನಕಾಯಿ, ತರಕಾರಿ ಮೊದಲಾದುವು : "ಬಾಟುಕಂ = ಸೀಳ್ದೊಣಗಿ ಬಾಟ್ದ ಶಾಕಂ" (ಕಮಧ. ಪಂ. ೦). ಬಾಳಕ$_1$: ನೊರೆಸಂಡಗೆಯನು ಹುರಿಸಂಡಗೆಯನು ಬಾಳಕವನು ತಪ್ಪದೆಲ್ಲಾ ಸಾಧನವನು ಸಂಪರಿಸಿತಂದು (ಸಿದ್ಧರಾ. ೬-೫೨) ; ಪರಿಪರಿಯುಪ್ಪಿನಕಾಯಿ ಹಪ್ಪಳ ಸವಿವೆರಸಿದ ಬಾಳಕವ . . . ತರುಣಿಯರೆಡೆಮಾಡಿದರು (ಕಂಪಂ. ೬-೮೪) ; ಪಡುವಲಕಾಯಿ, ಬದನೆಕಾಯಿ, ಅವರೆಕಾಯಿ, ಹಾಗಲಕಾಯಿ ಇತ್ಯಾದಿ ತರಕಾರಿಗಳ "ಬಾಳಕ" ಮಾಡಿಟ್ಟುಕೊಂಡರ್ಬೇಕಾದಾಗ ಕರಿದು ಊಟದ ಸಮಯದಲ್ಲಿ ಉಪಯೋಗಿಸಬಹುದು (ಅಡುಸೌ. ೦೦೩). 'ಬಾಟ್$_2$' ಹೋ. ಬಾಳುಕ : ಉಪ್ಪಿನಕಾಯ್ ಪಳಿದ್ಯ ಕಚ್ಚರಿ ಬಾಳುಕಂಗಳೊಪ್ಪುವ ಪಕ್ವಫಲ ರಸಾಯನದ ಸೀಕರಣೆಗಳನು . . . ಉಱೆ ನೀಡಿಸಿದನಾ ಮಹಾಚರಕೊಲ್ದು ಚೆನ್ನಬಸವೇಶನಂದು (ಪಬಪು. ೫-೬೦) ; ರಸರಸಾಯನ ಸಾರ್ಗಳುಪ್ಪುಗಾಯ್ಬಾಳುಕಂ ಕಸರಿ ಕಚ್ಚಡಿ ಪಾಲ್ಮೊಸರ್ಗಳಿವು ಬಗೆಗೊಳಿಸಿ ಪೊಸತೆನಿಸಿರಲ್ಸವಿದನಚ್ಯುತಂ (ಶೃಮಿಭಾ. ೬-೪೪) ; ಸಂಡಗೆಯ ಬಾಳುಕಗಳಂ ಕಲಸೋಗರಂಗಳನು . . . ನೈವೇದ್ಯಮಂ ಮಾರ್ತಂಡಕೋಟಿಪ್ರಭೆಯ ಬೆಳಗುವಗರ್ಪಿಸಿವರೊಲಿದು (ಪಂಕಡಾ. ೨-೬೦).

ಬಾಟುಕಮಾಗು = (ಆಲಂ) (ಚಿಂತೆಯಿಂದ) ಸತ್ತ್ವಹೀನವಾಗು ; ಬೆಂಡಾಗು : ಒಂಭತ್ತುತಿಂಗಳ್ ಬತ್ತಿ ಬಾಟುಕಮಾಗಿ ಪೊತ್ತ ಬೇನೆಯಂ ಸತ್ತ ಬೇನೆಯುಮಂ ನೀಗಲಾಱಿಂ (ಅರ್ಧನೇ. ೬-೩೫ ಪ).

[ದೇ. ॥ ತುಳು. ಬಾಳಕ, ಬಾಳುಗ]

ಬಾಟಿ, ಬಾಳೆ$_1$ (ನಾ). ಅಗಲ ಹಾಗೂ ಉದ್ದವಿರುವ ಎಲೆಗಳಿದ್ದು, ಒಂದು ದಂಟಿಗೆ ಒಂದೇ ಗೊನೆ ಬಿಡುವ ಒಂದು ಬಗೆಯ ಹಣ್ಣಿನ ಗಿಡ ; ಕದಳಿ : "ರಂಭಾ ಮೋಚ ಕದಳಿಯೆನಲು ಬಾಟಿಯಕ್ಕುಂ" (ಮಂಗರಾ. ೩೪-೯) ; ಭೀಮಸೇನಂ . . . ಬಾಟಿಯ ಚೆಲ್ವನಪ್ಪ ಬನಮಂ ಕಾಡಾನೆ ಪೊಯ್ದಂತೆ ಪೊಯ್ದಿನಿಸುಂ ಮಾಣದೆ ನೀಚಕೀಚಕನಿಕಾಯಧ್ವಂಸನಂ ಮಾಡಿದಂ (ಪಂಪಾ. ೯-೮೦); ಬಾಟಿಯ ಪಣ್ಣದೊಂದು ರುಚಿ ನೇಱಿಲ ಪಣ್ಣೊಳಗುಂಟೆ (ಧರ್ಮಾಮ್ಯ. ೪-೦೨೭). ಬಾಳೆ$_1$: ಬಾಳೆ ತೊಟ್ಟುಪಟ್ಟು ಬ್ರಹ್ಮದೇಯಂ ಕೊಟ್ಟೋದು (ಎಳ. X. ಕೋಡಾರ. ೨೩೦-೫ ; ಸು. 800 ?); ಕಬ್ಬು ಬಾಳೆ ಹಲಸು ನಾರಿವಾಳಕ್ಕ ಸಿಹಿನೀರನೆಱೆದವರಾರಯ್ಯ (ಮಹಾದೇ. ಬಿ. ೦೦-೩) ; ನಿನ್ನ ಬಟ್ಟದೊಡೆಗೆ ಬಾಳೆ ಬಹಿಷ್ಕಾರಂ (ಪಂಬರ. ೦೪-೦೮).

ಬಾಳೆಕಂದು = ಬಾಳೆಯ ಸಸಿ : ಕಂಬ ತರುವುದು ಎಂದರೆ ಒಂದು ಬಾಳೆಕಂದು ಕಡಿದು ಅದನ್ನು ತೊಳೆದು ಪೂಜೆ ಮಾಡಿ . . . ಅಡಕೆ ಹೊಂಬಾಳೆ ಸಮೇತ ಕಟ್ಟುವುದು (ಪಮ್ನೂರು. ೪೫). ಬಾಳೆಕಾಯಿ = ೧. ಬಾಳೆಗಿಡದ ಕಾಯಿ ; ಪಕ್ವವಾಗದ ಬಾಳೆಹಣ್ಣು: ಬಾಳೆಕಾಯಿಯ ಪಲ್ಯ ಎಂದರೆ ನನಗೆ ಇಷ್ಟ (ರೂಪಿ). ೨. (ಸೀರೆಯನ್ನು ಉಡುವಾಗ) ನಿರಿಗೆಗಳನ್ನು ಬಾಳೆಕಾಯಿಯ ಆಕಾರದಲ್ಲಿ ಮೇಲಕ್ಕೆ ತಿರುವಿ, ಸೊಂಟದಲ್ಲಿ ಮಡಿಸಿ ಸಿಕ್ಕಿಸಿದ ಸೀರೆಯ ಅಂಚು :

ಬಾಳೆಕಾಯಿಯಲ್ಲಿ ಸಿಕ್ಕಿಸಿಟ್ಟುಕೊಂಡಿದ್ದ ದುಡ್ಡು ಭದ್ರವಾಗಿಯೇ ಇದೆ (ರೂಢಿ). ೩. (ಉಕ) ಬಾಳೆಯ ಹಣ್ಣು: ಪೇಟೆಗೆ ಹೋಗಿ ಬೇಗನೆ ದೇವರ ಪೂಜೆಗೆ ನಾಲ್ಕು ಬಾಳೆಕಾಯಿ ತೆಗೆದುಕೊಂಡು ಬಾ (ರೂಢಿ). ಬಾಳೆದಿಂಡು = ಬಾಳೆ ಗಿಡದ ಕಾಂಡದ ಒಳಭಾಗ: ಬಾಳೆದಿಂಡನ್ನು ಅಡಿಗೆಗೆ ಉಪಯೋಗಿಸುತ್ತಾರೆ (ರೂಢಿ). ಬಾಳೆಪಟ್ಟೆ = ಬಾಳೆಕಂಬದ ತೊಗಟೆ.— ಸಿಪ್ಪೆ: ಫಲಗಳ ವೃಕ್ಷಗಳ ಬಿತ್ತಗಳಂ ಚೆನ್ನಾಗಿ ಕಳಿತ ಬಾಳೆಹಣ್ಣುಗಳಿಂದಾ ಬಾಳೆನಾರುಗಳಿಗೆ ಲೇಪವಂ ಮಾಡಿ ಆ ಪಟ್ಟೆಗಳಲ್ಲಿಯಿರಿಸಿ ಮೇಲುಗಡೆ ಬಾಳೆಪಟ್ಟೆಗಳಂ ಮುಚ್ಚಿ (ಸೌಗಂಧಿ. ೪೨೬-೦೦).

[ದೇ. ॥ ತಮಿ. ವಾಟೈ; ಮಲ. ವಾಟ; ತುಳು. ಕೊಡ. ಬಾಳೆ]

ಬಾಟಿಪಣ್ 'ಬಾಟಿವಣ್' ನೋ.

ಬಾಟಿಲೆ, ಬಳ್ಳೆ₂, ಬಾಳೆಲೆ (ನಾ). ಬಾಳೆಯ ಗಿಡದ ಎಲೆ; ಕದಳೀ ಪತ್ರ: ಬಾಟಿಲೆಯುಂ ತಿಂದು ಪಣ್ಣಂ ತಿಂದೆನೆಂಬಂತೆ (ರರ್ಮಾಮ್ಯ. ೦೩-೦೮೦); ಪಚ್ಚನೆ ಬೆಳೆದ ಬಾಟಿಲೆಯೆ ಪೊಸಕಾವಣಮಾಗೆ . . . ಸಮೆ ದೊಂದೋಲಗದ ಶಾಲೆಯೊಳ್ (ರಾಮಾಶ್ವ. ೫೬-೨೫). ಬಳ್ಳೆ₂: ಅಣ್ಣಯ್ಯಾ ಬಳ್ಳೆ ಹಾಕಿದ್ದಾರೆ, ಉಣ್ಣಕ್ಕೆ ಬರಬೇಕಂತೆ (ಕಾಸೂರು. ೩೨೮); ಸಾಲಾಗಿ ಬಳ್ಳೆ ಹಾಕಿದ್ದರು ಒಳಗೆ (ಪ್ರಶ್ನ. ೧೫೦). ಬಾಳೆಲೆ: ತುಪ್ಪ ಮಜ್ಜಿಗೆ ಬಾಳೆಲೆ ತಾಂಬೂಲ ಮುಂತಾಗಿ (ಶೊಂಕಶಾ. ೧೯೪೦, ಕುಮಟ. ೦೦೩-೨೬; 1475); ಒಪ್ಪಿರೆ ಬಾಳೆಲೆಯಲ್ಲಿ ಭಕ್ಷ್ಯಭೋಜ್ಯಾದಿಗಳಂ ಗಡಣಿಸಿ . . . ದೇವರಾರೋಗಿಪುದೆಂದೊಡನುಸಿರ್ದು ಕೆಯ್ಮುಗಿದಳೊಲ್ದುಡುಪತಿಮುಖಿ (ವೃಷಪ. ೩೬-೨೫); ಬಾಲಕರಿಲ್ಲದ ಬಾಲಿದ್ಯಾತರ ಜನ್ಮ . . . ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಂಗ (ಗರತಿ. ೦೦೬). [ಬಾಟಿ + ಎಲೆ₁]

ಬಾಟಿವಣ್, ಬಾಳೆವಣ್, ಬಾಳೆಹಣ್ಣು, ಬಾಟಿಪಣ್ (ನಾ). ಬಾಳೆಯ ಹಣ್ಣು; ಕದಳೀಫಲ: 'ನಲ್ವಾಟಿವಣ್' ಪರಾ. ಬಾಳೆವಣ್: ವನಪಾಲಂ ಕಾಣ್ಕೆಗೈದಂ ವಿಚಕಿಲದರಲಂ ಪಚ್ಚೆಯಂ ಬಾಳೆವಣ್ಣೊಳ್ಗೊನೆಯಂ (ರಾಜಶೇ. ೦೦-೨). ಬಾಳೆಹಣ್ಣು: ಬಾಳೆಹಣ್ಣು, ತುಪ್ಪ ಮುಂತಾದುವುಗಳನ್ನು ಸೇರಿಸಿ ಮಾಡಿದ ಬೂಪ ತಟ್ಟೆಯಲ್ಲಿರುತ್ತದೆ (ವಸ್ನೂರು. ೯೯); ಬಾಳೆಹಣ್ಣು ತಿನ್ನು ಬಾರೋ ಎಂದರೆ ಸುಲಿದು ಇಟ್ಟಿದ್ದೀಯಾ ಎಂದ (ಗಾಡ). ಬಾಟಿಪಣ್: ಬಾಟಿಪಣ್ಗೆನಿದಪ್ಪುದೆಂತು ಸಹಜಂ ಸಕ್ಕರೆಗೆ ಸಿಹಿಯಾಗಿರ್ಪುದೆಂತು ಸಹಜಂ . . . ಅಂತೆ . . . ಭಕ್ತಿಯುಂ ಸಹಜಮಾಗಿರ್ಕುಂ (ರರ್ಮಾಮ್ಯ. ೪-೪೦).

[ಬಾಟಿ + ಪಣ್₃]

ಬಾಟಿಂಟ್ಟಿ, ವಾಟಿಂಟ್ಟಿ (ನಾ). ಬೆಳೆಯುವ ಪೊದೆ, ಕಂಟಿ ಮೊದಲಾದುವುಗಳಿಂದ ರಚಿಸಿದ ಬೇಲಿ; ಹಸುರುಬೇಲಿ: ಅಂತೆವಂದು ಮಂಜಳ್‌ತೊಣೆಎ ಬಾಟಿಂಟ್ಟಿಎ ಸಂದು (ಮೈಆಂ. ೦೯೨೭. ೦೧೬-೪೯; 726). ವಾಟಿಂಟ್ಟಿ: ಅಂತೆ ಬಂದು ಬಾನ್ನಿಗಾರ್ಲಕುಪ್ಪೆಯೆ ವಾಟಿಂಟ್ಟಿಯೆ ಸಂದು ಪಾದರಿಯುಳ್ ಕೂಡಿತ್ತು ಸೀಮೆ (ಮೈಆಂ. ೦೯೨೭. ೦೦೬-೫೦; ಸು. 726). [ಬಾಟ್ಟ್₁ + ಒಟ್ಟಿ (< ಒಟ್ಟಿ)]

ಬಾಟ್ಕೆ, ಬಾಳಿಕೆ₁, ಬಾಳ್ಕೆ, ಬಾಳ್ವಿಕೆ, ಬಾಟಿಕೆ, ಬಾಟಿಗೆ (ನಾ). ೧. ಬದುಕು; ಜೀವನ: ಅಂಧನಾದೆನಾರ್ ಶರಣೆನಗೆನ್ನ ಬಾಟ್ಕೆಯೆ ನಿರರ್ಥಕಂ (ಕಾದಂಪೂ. ೯೦೨); ಸತ್ತೊಡೆ ಪುಟ್ಟರೆ ತನಗಿದೇಕೆ ಬಾಟ್ಕೆಯ ಮೋಹಂ (ರರ್ಮಾಮ್ಯ. ೪-೬೦); ಪಾಪಪುಣ್ಯದಱಿವಿಂದಿರದಾತನ ಬಾಟ್ಕೆ ನಿಷ್ಫಲಂ (ಜಶಕು. ೦೪-೨೫). ೨. ಉಸಿರು; ಜೀವ; ಪ್ರಾಣ: ಶಾರದಂಗಳ ಜಸದೇಟ್ಗೆ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾಟ್ಕೆ ರತ್ನಸಂಕುಳ ದಧಿದೈವಮೆಂದೆಸೆದುದುಜ್ವಳಮೌಕ್ತಿಕಹಾರಮಂಡಲಂ (ಕಾದಂಕಾ. ೦೦೬); ಒಕ್ಕನಿನಿಯಂ ತನ್ನಿಕ್ಕೆಯಂ ಬಾಟ್ಕೆಯಂ (ಅರ್ಧನೇ. ೩-೬೦). ೩. ಜೀವನಕ್ಕೆ ಹಿತವಾದುದು; ಪ್ರಯೋಜನವುಳ್ಳುದು: ಪದಿನೆಂಟುಂ ದೋಸಮುಂ ಪೊರ್ದದಾಡಿದ ಮಾತೆಲ್ಲರ ಬಾಟ್ಕೆಯಪ್ಪಱಿವಿನೊಳ್ ಮೂಲೋಕಮಂ ಕಾಣ್ಬ . . . ಅರುಹಂತಂ ನಲ್ಮೆಯಿಂ ಮಾಟ್ಕೆ ಬೇಡಿದುದಂ ತನ್ನಱಪಟ್ಟೆಗರ್ಗೆ (ಕಬ್ಬಿಕಾ. ೩೪೯). ೪. ಬದುಕಿನ ಅವಧಿ; ಸಮಗ್ರಆಯುಷ್ಯ: ಅನಿವಿರಿದವಂತಿ ಮಾಳವಮನಾಳ್ವ ವೃಷಭಾಂಕನೃಪನ ಬಾಟ್ಕೆಯ ಸಿರಿಯಾತನ ದಿವಸದ ಭೋಗದನಿತಿಲ್ಲೆನೆ ಪರದನ ಪಿರಿಯ ಸಿರಿಯೆನಱಿಯೆಂ ಪೊಗಟಲ್ (ಸುಕುಮಾ. ೯-೬೫). ಬಾಳಿಕೆ₁: ೧. ಮೇಲನಱಿಯದ ನೃಪನ ಬಾಳಿಕೆ ಗಾಳಿಗೊಡ್ಡಿದ ಸೊಡರು (ಕುಪ್ಯಾಸ. ೦-೫೦); ಮಾನವಿಲ್ಲದ ಬಾಳಿಕೆಗಿಂತ ಸಾವು ಲೇಸು (ಮುಂಬಯಿ. ೪-೦೯೦). ೪. ಹೂಸಕದ ಶೌರಿಯದ ಬಾಳಿಕೆಯೇಸು ದಿನವೈ (ಕುಪ್ಯಾಕ್ರೋ. ೬-೨೦); ತನುವಿದು ತಾಮರಸಬಾಂಧವನ ಬಾಳಿಕೆ ತನಕ ಶಾಶ್ವತವೆ (ತೊರರಾ. ೩-೬-೫೪). ೫. ಗೃಹಸ್ಥಜೀವನ; ದಾಂಪತ್ಯ ಜೀವನ: ಸತಿಸುತಕೂಟ ಭಯವೆಂದು ಬಾಳಿಕೆಯನತಿಗಳೆದು ಮರಳಿಯು ಬೋಳು ಮಂಡೆಯ ಕೀರ್ತಿಗೋಸುಗ ಕೋಳುಹೋದನೆ ರಾಮನು (ಪ್ರಭುಲೀ. ೦೩-೫). ೬. ಹೆಚ್ಚುಕಾಲ ಕೆಡದೆ ಇರುವಿಕೆ; ಚೆನ್ನಾಗಿ ಉಳಿಯುವಿಕೆ: ತಾಳಿಕೆ: ಅಡುಗೆಮನೆಯ ಸಲಕರಣೆಗಳು . . . ಒಳ್ಳೆಯ ತರಗತಿಯವುಗಳಾಗಿರಬೇಕು. ಇವುಗಳಿಗೆ ಕ್ರಯ ಹೆಚ್ಚಾದರೂ ಹೆಚ್ಚು ಕಾಲ ಬಾಳಿಕೆ ಬರುತ್ತವೆ (ಅಡುಸೌ. ೩೨); ರೆಯಾನ್‌ಬಟ್ಟೆ . . . ಇದು ತಕ್ಕಮಟ್ಟಿಗೆ ಬಾಳಿಕೆ ಬರುತ್ತದೆ (ಗೃಹಪ. ೭೦). ೭. ದತ್ತಿ ಕೊಟ್ಟ ಜಮೀನು; ಮಾನ್ಯದ ಭೂಮಿ: ಹಿರಿಯರು ಲೋಕ ಬೆಟ್ಟೆಂಬ ಬಾಳಿಕೆಯನು ಬಾಳಿ ಬಂದಲ್ಲಿ ಅಲ್ಲಿಯ ತೆರು [ಸಿ]ದ್ದಾಯ ಬಡ್ಡಿ ವಾಸಿ ಹೊಂನು ಭತ್ತವನು ಕಾಲಕಾಲಕೆ ನಡಸತೀರದೆ ಯಿರಲಾಗಿ (ಸೌಇಇ. IX-ii, ೪೬೦-೦೨; 1465); ಮುಂದಕ್ಕೆ ನಿಂದು ಬಾಳಿಕೆಯಲು ಪಟ್ಟಿಲಬಿದ ಕಾರು ಬಿತು ಬಳ್ಳ ೩೦ (ಸೌಇಇ. IX-ii, ೪೬೦-೦೬; 465). ಬಾಳ್ಕೆ: ೨. ವಿರೋಧಿಯ ಬಾಳ್ಕೆ ತನ್ನದೆ ಮ್ಬುದನೆನೆ ಪೆರ್ಮೆಯಂ ತಳೆದನೋ ನ್ರಿಪರೊಳ್ ನ್ರಿಪತೈಲಶಾನ್ತರಂ (ಎಕ. VIII. ಸಾಗರ. ೦೫೯-೦೩; 1159). ೪. ಜವನುಮಾತನ ಬಾಳ್ಕೆಯ ಲೆಕ್ಕದೋಲೆಯಂ ತೊಡದು ಬಿಸುಟ್ಟನೆಂದಱಿವುದು (ಸೌಇಇ. IX-i, ೨೯೬-೩೦; 1177). ೫. ದುಗುಡದಿ ಬಾಳ್ವ ಗೃಹಸ್ಥರ ಬಾಳ್ಕೆಯ ನಗುವಂತೆ ನಗುತ ನಡೆದರು (ಭರಸ. ೨೦-೩೩); ಬಿಟ್ಟನೆ ರಘುಶ್ರೇಷ್ಠ ನೆನ್ನನು . . . ನೆಗಳ್ದ ಬಾಳ್ಕೆಗೆ ಸಂಚಕಾರಮಂ ಕೊಟ್ಟನೆ (ಸ್ವಮಿಭಾ. ೦೯-೦೬). ಬಾಳ್ವಿಕೆ: ೧. ಛೀ ನನ್ನ ಬಾಳ್ವಿಕೆಯೆ, ಛೀ ನನ್ನ ಚಿಲ್ವಿಕೆಯೆ (ಕೃಷ್ಣಾಕು. ೨-೨೦). 'ಆಳ್ವಿಕೆ' ಹೋ. ಬಾಟಿಕೆ: ೧. "ಜೀವನ ಮೆನಲು ಬಾಟಿಕೆ" (ಮಂಗರಾ. ೦೦೨-೦). ಬಾಟಿಗೆ: ೭. ಜಿಡ್ಡೂರಾಳ್ಗೆ ಯೆಟ್ಟುತ್ತರ್ಕ್ಕಂ ಬಳ್ಳಿಗಾಮೆಯ ಬಾಟಿಗೆ ಸಹಿತ ನಾಟ್ಗೊವುಣ್ಡುಗೆಯ್ಯೆ (ಮೈಆಂ. ೦೯೨೯, ೭೬-೭; 964). [ಬಾಟ್ಟ್₁ + —ಕೆ]

ಬಾಟ್ಕೆಗೊಡು (ಕ್ರಿ). ಉಪಜೀವನಕ್ಕಾಗಿ ಭೂಮಿಯನ್ನು ದಾನವಾಗಿ ಕೊಡು,—ವೃತ್ತಿಯನ್ನು ಕಲ್ಪಿಸು: ಕರಣಗ್ರಾಮಮನೀ ಮಾಮರಕ್ಕೆ ಮಧು ಬಾಟ್ಕೆಗೊಟ್ಟು ಕಿಸುವಲಗೆಗಳಿಂ ಬರೆದೆತ್ತಿದ ಶಾಸನಕೇಂ ದೊರೆಯಾದುವೊ ಸೊನೆಯ ಪನಿ ಪಗಿಲ್ತೆಳದಳಿರ್ಗಳ್ (ಮಲ್ಲಿಪು. ೬-೩೦).

[ಬಾಟ್ಕೆ + ಕೊಡು₁]

ಬಾಟ್ಗಂಬ (ನಾ). ಆನೆಯನ್ನು ನೆಲೆಯಾಗಿ ಕಟ್ಟಲು ಕಂಬದಂತೆ ಉಪಯೋಗಿಸುವ ಮರ; ಆಲಾನಸ್ತಂಭ: ಅಂಬುಜಸೂತ್ರಮೆಂಬ ಪೆಣೆದಾವಣೆಯಂ ಪಱಿದಾವಲೆಂಬ ಬಾಟ್ಗಂಬಮನೊತ್ತಿ ಕಿಟ್ಟು . . . ಸೋವುದು ಸಮೀರಣವಾರಣಂ (ಕಾಪ್ಯಾಪ. ೬೮೯); ಆ ಮಹಾಮದೇಭಂ . . . ಬೀಡಿಂಗೊರ್ಗಾವುದದಱ ಬಾಟ್ಗಂಬದೊಳ್ ಸೆಱೆಗೆಯ್ದುಮಿರ್ದೊಂದುದಿವಸಂ ಕ್ರೋಧಿನಿಯೆಂಬ ಸಪ್ತಮದಾವಸ್ಥೆಯಿಂದಾದ ಮನದ ಮಸಕದಿನಸವಸದೆ ನೆಲದ ನಾಲಗೆಯಂ ಕೀಟ್ವಂತೆ

ಬಾಟ್ಗಂಬಮಂ ಕಿಟ್ಟು (ಕಂದ್ರಪು. ೯-೦೦೦ ವ); ಅವಳ . . . ನುಣ್ದೊಡೆಯೆಂಬ ಪೊಂಬಾಟ್ಯೆಯ ಬಾಟ್ಗಂಬಮಲರ್ಗಣೆಯನೆಂಬ ಸೊರ್ಕಾನೆಯಂ ತೊಲಗಲೀಯದೆ ನಿಲಿಸೆಯುಂ (ಕಬ್ಬಿಕಾ. ೦೨೩).

[ಬಾಟ್ಯ್$_1$ + ಕಂಬ$_1$ (< ಕಂಭ)]

ಬಾಟ್ಗುಡಿ (ನಾ). (ಆಲಂ) ಚಲಿಸುತ್ತಿರುವ ಕುಡಿ ; ಚಂಚಲವಾದ ಚಿಗುರು: ಬಳ್ವಳಿಪ ಬಹುಳಹಿಂಸಾವಿಷಮವಿಷವಲ್ಲಿಯ ಬಳೆದ ಬಾಟ್ಗುಡಿಯೆನೆ ಬೆಡಂಗುವಡೆದ ಲೋಳಲಾಂಗೂಲಲತೆಯೊಳಂ . . . ಭಯಂಕರಮಾದುದು (ಪರ್ಯಪು. ೦೦-೩ ವ). [ಬಾಟ್ಯ್$_3$ + ಕುಡಿ$_2$]

ಬಾಟ್ಗುದಿ (ನಾ). ಜೀವಂತವಾಗಿ ಅನುಭವಿಸುವ ಅತಿಯಾದ ಹಿಂಸೆ ; ಪ್ರಾಣಸಂಕಟ : ತೋ[ಕೋ]ಳ್ಗುದಿ ಬಾಟ್ಗುದಿಯಾಗಿ ಬೇವ ದಳ್ಳುರಿಗಳ ಮಾಲೆಗೊಂಡ ಬೆಳಗಿಂ ಬೆಳಗಾಯ್ತೆರಡುಂಬಲಂಗಳೊಳ್ (ಅಪಂಪು. ೦೦-೯೭). [ಬಾಟ್ಯ್$_3$ + ಕುದಿ$_3$]

ಬಾಟ್ಗುಟಿ, ಬಾಳುಗುಳಿ, ಬಾಳ್ಗುಳಿ (ನಾ). ಒಂದು ಊರಿನ ಹೆಸರು : ಬಾಟ್ಗುಟಿಯೂರ ಬೊಜಜ್ಗೇಶ್ವರದೇವರ ಪರ್ಬ್ಬದಭೂಮಿ ಎಡೆಯೊಳೆ ರಾಶಿಕಮಾಗಿಟ್ಟೊಡೆ ಬಿಡಿಸಿ (ಎಕ. IV (R), ಜಾಮರಾ. ೧೦೪-೯; 10ವೆಯ ಶತ). ಬಾಳುಗುಳಿ : ಬಾಳುಗುಳಿಯ ಮಹಾಜನ ಅಯ್ವದಿಂಬರುಂ ಉಭಯಸಮ್ಮತದೊಳಿಟ್ಟು ಬಳಿಯರ ಬಾದಮ್ಮಗೆ ಬೂದಗೂಟನಿತ್ತೊರ್ (ಸೌಇಇ. IX–i, ೩೯-೭; ಸು. 10ವೆಯ ಶತ). ಬಾಳ್ಗುಳಿ : ಬಾಳ್ಗುಳಿಯೂರೊಡೆಯಂ ಪಶುಪತಿಭಟ್ಟಜ್ಗೆ ಬಾಬನ್ದಿಯ ಸಂಬನ್ಧದ ರಾಜದ್ರವ್ಯಮಾದುದೆಲ್ಲವಂ ಬಿಟ್ಟರ್ (ಸೌಇಇ. IX–i, ೬೬-೦೦ ; 956) ; ಶ್ರೀಮತುಹರಿಶ್ಚಂದ್ರ ದತ್ತಿಯ ಮಹಾಗ್ರಹಾರಂ ಬಾಳ್ಗುಳಿಯೂರೊಡೆಯ ಪ್ರಮುಖವಶೇಷಮಹಾಜನಂ (ಸೌಇಇ. IX–i, ೨೫೫-೦೪ ; 1143) ; ಶ್ರೀವೀರಬಲ್ಲಾಳದೇವರು ಶ್ರೀಮತುಹರಿಶ್ಚಂದ್ರ ದತ್ತಿಯಗ್ರಹಾರ ಬಾಳ್ಗುಳಿಯ ನೆಲೆವೀಡಿನೊಳು . . . ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರ್ದು (ಸೌಇಇ. IX–i, ೩೦೯-೩೨ ; 1193).

[ಬಾಟ್ಯ್$_3$ + ಕುಟ್ಟು$_2$]

ಬಾಟ್ಜೊಂಪ (ನಾ). (ಹಸುರಾದ) ಬಳ್ಳಿಗಳ ಮಂಟಪ; ಲತಾಕುಂಜ : ಮನವೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂಬಿನ ಕೋಳ್ಗಂ . . . ಬಾಟ್ಜೊಂಪಕ್ಕಮೊಂದೊಂದೆ ತಣ್ಬನಿಯೊಳ್ ಕೋಡಿ ಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ (ಆದಿಪು. ೦-೭೫); ಬಾಟ್ಜೊಂಪಮೋ ಕೋಗಿಲೇ ಗಿಳಿಯೋ ಕಂಡಿರೆ ಪೇಟಿಮಮ್ಮ ಪತಿಯಂ (ಸುಳುಮಾ. ೧೨-೨೦); ಅಸುಕೆಯ ಕೆಂದಳಿರ್ಗಳ ಬಾಟ್ಜೊಂಪಂ ಪಸರಿಸಿ ಪಡೆದುದು ಚಿತ್ತದಲಂಪಂ (ಅಪಂಪು. ೦೦-೦೬ ಕಗಳ). [ಬಾಟ್ಯ್$_3$ + ಜೊಂಪ$_1$]

ಬಾಟ್ತೆ, ಬಾತೆ, ಬಾರ್ತೆ, ಬಾಳ್ತೆ, ವಾಟ್ತೆ (ನಾ). ೧. ಬದುಕು ; ಬಾಳುವೆ ; ಜೀವನ : ಸೈಪಿನೊತ್ತಂಬರಂ ಪೊಗರ್ವೆತ್ತಂಗದ ಸಿಂಗರಂ ಸೊಗಸಿನೊಪ್ಪಂ ಬಾಟ್ತೆಯೊಂದೇಟ್ತರಂ ಮಿಗುತೇಂ ಬಂದವುವು (ಪಳಿ. ೬-೨೫೬) ; ಪಗೆದೊರೆಗಳುಮೊಂದಿದರಾ ಬರ್ದಿಲನಾಡ ಬಾಟ್ತೆಯ ಸಿರಿಯಂ (ಅಪ್ರತಿ. ೦೭-೦೩). ೨. ಉಪಯೋಗ ; ಪ್ರಯೋಜನ : "ಬಾಟ್ತೆ ಪ್ರಯೋಜನಂ" (ಕಮದ. ಪಂ. ೦) ; ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟ್ತೆ (ಪಂಪಭಾ. ೦-೬೨); ದ್ರಷ್ಟವ್ಯ ದರ್ಶನಫಂಲ ಲೋಚನಮೆಂಬಂತೆ ನೋಡುವುದೆ ಬಾಟ್ತೆ (ಶಾಂತಿಪು. ೯-೭೬ ವ) ; ನಾಲಗೆಯುಮಂ ನಲ್ಲನುಮನೊಲ್ಲದ ಪಣ್ಣಸವಿಯುಂ ಪಣ್ಣ ರೂಪುಮೇಂ ಬಾಟ್ತೆ (ಅರ್ಧನೇ. ೩-೦೦ ವ). ೩. ಇಷ್ಟವಾದುದು ; ಬೇಕಾದುದು ; ಬಯಸಿದುದು : ಎಮಗೆ ಮರ್ದು ಬಾಟ್ತೆಯಪ್ಪೊಡೆಮಗಾಮೆ ಮರ್ದಂ ಬಲ್ಲೆವೆಮಗದು ಬಾಟ್ತೆಯಲ್ತು (ಪಡ್ಡಾರಾ. ೬೯-೨೮) ; ನಿಮಗೆ ಬಾಟ್ತೆಯಪ್ಪುದಂ ಬೇಡಿಕೊಳ್ಳಿಂ (ಪಂಪಭಾ. ೩-೬೦ ವ). ೪. ಉಪಯುಕ್ತವಾದುದು ; ತಕ್ಕುದು ; ಯೋಗ್ಯವಾದುದು : "ಬಾಟ್ತೆಯೆನೆ ಯೋಗ್ಯಂ" (ಸಂಸೇವ. ೨) ; ಎಮಗೊಂದು ಪೇಟು ಮಣ್ಣು ಬಾಟ್ತೆಯಾಗೆ ತರಿಸಿಕೊಂಡೆವೀಯುಟಿದ ಮಣ್ಣೆಮಗೆ ಬಾಟ್ತೆಯಲ್ತು ನಿಮ್ಮ ನಿಮ್ಮ ತಂದ ಮಣ್ಣಂ ಕೊಂಡು ಪೋಗಿಂ (ಪಡ್ಡಾರಾ. ೦೬೯-೯) : ಈ ವ್ರತಂ ನಮಗೆ ಬಾಟ್ತೆಯಲ್ಲಿದಂ ಬಿಡುವುದು (ಪೇಮಿಪು. ೯-೦೬ ವ). ೫. ಯೋಗ್ಯನಾದವನು ; ತಕ್ಕವನು : ಅರಸಿಯರ್ಕಳೆಲ್ಲಂ . . . ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿನಿಸಿ ಇನ್ನಾತನೆನಗೆ ಬಾಟ್ತೆಯಲ್ಲನೆಂದು ತನ್ನ ಮಾಡದಿಂ ಪೊಱಮಟ್ಟು . . . ಪೋಗಿರ್ದೊಳ್ (ಪಡ್ಡಾರಾ. ೦೦೦-೨೫). ೬. ಕೆಲಸ ; ಕಾರ್ಯ ; ಉದ್ಯೋಗ : ಬಾಟ್ತೆಯುಳ್ಳೊಡೆ ನೀನೆ ಬರ್ಪಂತುಟಾದುದೆ ಪೇಟ ನೀಂ ಬಟಿಯಟ್ಟಲಾಗದೆ (ಪಂಪಭಾ. ೧೨-೬೯) ; ಬಸನದ ಬಾಟ್ತೆಗಪ್ಪೆಡೆಗಳಿಲ್ಲದೆ ನಲ್ಲರ್ . . . ಮನದೊಳ್ಳೊಟಲ್ದಱಸುವರ್ಬನದೊಳ್ ಕೃತಕಾಚಲಂಗಳಂ (ಪುಲ್ಲಪು. ೨-೩೫) ; ಏಬಾಟ್ತೆಗೆ ಬಂದರಿಲ್ಲಿಗಿವರೆಂದಾರಯ್ವಂ (ಪೇಮಿಪು. ೦-೭೭). ೭. ಅಗತ್ಯ ; ಅವಶ್ಯಕತೆ : ಎಂದಾನುಂ ನಿನಗೆ ಬಾಟ್ತೆ [ಪಾಠಾಂ. ರ್ತೆ]ಯಾದಂದೆನ್ನಂ ನೆನೆವುದು (ಪಡ್ಡಾರಾ. ೦೫೯-೦೧). ಬಾತೆ : ೧. 'ಬಾತೆಗೇಡಿ' ಪರಾ. ೨. ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ ಸುಂಡಿಲು ಮುಱಿದರೆ ಗಜವೇನು ಬಾತೆ (ಬಸವ. ೬೩೯) ; ದಯವಿಲ್ಲದವನ ಭಕ್ತಿ ಏತಕ್ಕೆ ಬಾತೆ (ಗಣಭಾ. ೦೭೦-೩) ; ಹಣವೇನು ಬಾತೆ ನಿನ್ನಯ ಗುಣವೆಂಬುದು ಮಣಿಹಾರವಾಗೆನ್ನ ಮನವ ಕ್ಷಣದಲಿ ಬೀಱುಗೊಂಡುದು (ಕಂನವಿ. ೬-೦೬೯). ೩. ನಿನ್ನ ಧನಗಿನವೆನಗೆ ಬಾತೆಯೆ ಎನ್ನ ಸೊಬಗಂ ನೋಳ್ಪೆಯಾದಡೆ ಹೊನ್ನನೀಗಳೆ ಬಿತ್ತಿಸುವೆನೇ ಬೀದಿಬೀದಿಯಲಿ (ಬಸಪು. ೨೮-೦೯). ೪. ಮಕ್ಕಳನು ಪಡೆವಡೆ ಸುನೀತಿಗೆ ತಕ್ಕುದಲ್ಲದೆ ಒಡಲ ಕೇಡಿನ ಮಕ್ಕಳೇತಕೆ ಬಾತೆ (ನಿಭಾಗ. ೯-೯-೫೬). ಬಾರ್ತೆ : ೨. ನೀನೀ ಸಾಮ್ರಾಜ್ಯಮನಾವಗಂ ಕೈಕೊಳ್ವುದೆನಗಿದೇನುಂ ಬಾರ್ತೆಯಿಲ್ಲ (ಜಾವುಂಪು. ೯೯) ; ಧರ್ಮಾರ್ಥಂಗಳಿಗೆ ಶಾಸ್ತ್ರಂ ಬಾರ್ತೆ ಕಾಮಕ್ಕೆ ಶಾಸ್ತ್ರಂ ನಿಃಪ್ರಯೋಜನಂ (ಪುದತಿ. ೦-೫೬ ವ) ; ಪರಿವಾರವಿಲ್ಲದ ರಾಯನ ಸಿರಿಯ ದೇತಕ್ಕೆ ಬಾರ್ತೆ (ಬಕೋಪು. ೧೯-೩೭). ೪. ಅರಲ್ದಿರೆ ಕೊರಗಿ ದುಸ್ಸಹ ವಿರಹಶಯನರಚನೆಗೆ ಬಾರ್ತೆಯಾಗಲಾಱೆವೆಂದಗಿದು ಮೆಯ್ದೆಗೆದವೆಂಬಂತೆ ತಾವರೆಗಳ್ ಮುಗಿಯೆ (ಕಾದಂಕಾ. ೩೭೫) ; ಹರದನ ಬಡ್ಡಿಗೊಟ್ಟೊಡವೆ ರಾಜಕುಮಾರನ ತೇಜದೇಟ್ಗೆ . . . ಚೆನ್ನಪೊಂಗರ ಕುಡಿಮುಂಜೆಱಂಗು ನಿಡುಬಯ್ತಲೆ ಬಾರ್ತೆಯೆ (ಅಪಂಪು. ೬-೯೯). ೫. ಮಱಿಗೆ ಪಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದಧಮನದೇತರ್ಕೆ ಬಾರ್ತೆ (ಆದಿಪು. ೦೨-೯೭) ; ಭಕ್ತಿಯಿಲ್ಲದವನೇತರ್ಕಂ ಬಾರ್ತೆಯಲ್ಲಂ (ಪಂಪಸಂ. ೯೨-೨೦). ೬. ಬೆಸನಂ ಪಾರ್ವುವು ಮಂತ್ರದೇವತೆಗಳಾದೇಬಾರ್ತೆಗಂ ಬೇಗದೂಗಸದೊಳ್ ವಿದ್ಯೆಗಳೆಯ್ದೆ ಬರ್ಪುವು (ಆದಿಪು. ೦-೬೯). ೭. ಆಂ ಪದ್ಮನಗರದೊಳರ್ಪೆಂ ನೀಮೆತ್ತಾನುಂ ಬಾರ್ತೆಯಪ್ಪೊಡಲ್ಲಿಗೆ ಬನ್ನಿಂ (ಪಂಪಸಂ. ೦೦೦-೦). ೮. ಬದುಕಿನ ಕ್ಲೇಶ ; ಜೀವನದ ಜಂಜಾಟ : ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣ ಕ್ಲೇಶಮಂತ್ರ ಪದಧ್ಯಾನ ಬಿಲಪ್ರವೇಶರಸವಾದಾಯಾಸದೊಳ್ ಬಾರ್ತೆ ತೀರ್ದಪುದೇ (ಆದಿಪು. ೦೬-೭). ಬಾಳ್ತೆ : ೧. ಬಾಳ್ತೆಯೊಳ್ ನಲ್ಮೆಯೆನೆ ತೊನೆಯುತಿವೆ ಚೆಲ್ವಂ (ಕಾಲೂರ. ೭೦-೦೨೩). ೨. ಕಾಡ ಕಾಪಿನವರ್ಗೆ ದೂರಿದೊಡೆ ಬಾಳ್ತೆಯೇಂ (ಕಾಲೂರ. ೯೯-೭೨). ವಾಟ್ತೆ : ೯. ಸುದ್ದಿ; ಸಮಾಚಾರ : 'ವಾಟ್ತೆಗೊಳ್' ಪರಾ.

ಬಾತೆಗೆ ಬರು = ಉಪಯೋಗವಾಗು : ಬಾತೆಗೆ ಬಾರದ ವಸ್ತು ಬಹಳಿದ್ದರೇನು (ಪುರಂದ. ೩-೦೯೩ ಪಲ್ಲವಿ). **ಬಾರ್ತೆ ಮಾಡು** = ಬಯಸು ;

ಇಷ್ಟಪಡು : ಪುದ್ಗಳಮನೆ ಪಾಟಿಸುವರ್ . . . ಪುದ್ಗಳಮಂ ಬಾರ್ತೆ ಮಾಡಿ ಪೊರೆಯರ್ ಜೈನರ್ (ಸಮಪ. ೬-೩೦). ಬಾಟ್ತಿಯಾಗು = ಬಾತೆಗೆ ಬರು : ಅರಸುಗೆಯ್ವಾತಂಗೆಂತಪ್ಪನುಂ ಬಾಟ್ತಿಯಾಗದನಿಲ್ಲಂ (ಪಂತಕಂ. ೩೯-೦೦). [ಬಾಟ್ಯ್$_1$ + — ತ್ಯೆ]

ಬಾಟ್ತಿಗೆಯ್, ಬಾರ್ತೆಗೆಯ್, ಬಾಳ್ತೆಗೆಯ್ (ಕ್ರಿ). ೧. ಬಯಸು ; ಇಷ್ಟಪಡು : ಇಂದುಗತಿಯಂತೆ ರಾಜ್ಯಮನೊಂದರ್ಕಂ ಬಾಟ್ತಿಗೆಯ್ಯದಾವನೊ ತೊಱೆದಂ ಮಂದರಧೈರ್ಯಂ ನೃಪಂ (ಪಂಠಾಮಾ. ೬-೨೯). ೨. ಲೆಕ್ಕಿಸು ; ಗಮನಿಸು : ಗಣನೆಗೆ ತರು : ಅರ್ಣವಮೇಖಲೆಯಂ ಧರಿತ್ರಿಯಂ ಬಗೆಯನೆ ಬಾಟ್ತಿಗೆಯ್ಯನೆ ಜರತ್ತೃಣಲಾಘವಮೆಂದೆ ರಾಘವಂ (ಪಂಠಾಮಾ. ೬-೦೦೨) ; ಅರಮನೆಯಂ ವಧೂವಿತತಿಯಂ ಸುತರಂ ಪರಿವಾರಮಂ . . . ಬಾಟ್ತಿಗೆಯದಾ ಮಹಿಪಂ ಪೊಱಮಟ್ಟಂ (ಪಂದ್ರಪು. ೨-೩೭). ಬಾರ್ತೆಗೆಯ್ : ೨. ಶ್ರುತಮಂ ಕಯ್ಕೊಳ್ಳಳಾಚಾರಮನವ ಧರಿಸಳ್ ಸತ್ಯಮಂ ಬಾರ್ತೆಗೆಯ್ಯಳ್ . . . ಸಿರಿಯನಱಿವುತಂ ಬಣ್ಣಿಪಂ ಗಾಂಪನಲ್ತೇ (ಕಾದಂಪೂ. ೩೯೬) : ಈ ರಾಜೇಂದ್ರಸೌಂದರ್ಯಮೆ ನೆರಮಬಳಾಚಿತ್ತಸಂಮೋಹನಕ್ಕಾವುದುಮಿಂ ಪೇಟೇವುದೆಂದು . . . ಪುಂಸ್ಕೋಕಿಲಾಲಾಪಮನಲೆವೆಲರಂ ಬಾರ್ತೆಗೆಯ್ಯಂ ಮನೋಜಂ (ನುಲ್ಲಪು. ೩-೨೯) ; ಬಗೆಯದ ಬಾರ್ತೆ[ಪಾಠಾಂ. ಟ್ತಿ]ಗೆಯ್ಯದೊಲವಂ ಪ್ರತಿಪಾಳಿಸದಾಳಿದೋರ್ಪ ಬಲ್ಮೆಗೆ ಬೆಸೆದಿರ್ಪ . . . ಅಂಗನೆಗೆ ಕೂರ್ತವನಗ್ಗದ ಕಟ್ತಿಯಲ್ಲನೇ (ಪಾರ್ಶ್ವಪು. ೦೦-೬೯). ಬಾಳ್ತೆಗೆಯ್ : ೧. ನಿನ್ನವರೊಲ್ದುಂಡುಳುಪಿರ್ದ ಶೇಷಮೆನಗುಂಟೆಂದುಮಾ ಶೇಷಮಂ ಸವಿದಾನಂದ ಮನಾಳ್ದು ಮಿಕ್ಕ ಸುಖಮೊಂದಂ ಬಾಳ್ತೆಗೆಯ್ಯಂ (ವೃಷಪು. ೬-೦೩). [ಬಾಟ್ತಿ + ಕೆಯ್$_1$]

ಬಾಟ್ದಲೆ, ಬಾಳುದಲೆ, ಬಾಳ್ದಲೆ (ನಾ). ೧. ಜೀವಂತವಾಗಿ ಸಿಕ್ಕಿರುವ ಸೆರೆ : ಮಲೆಪರ್ ಮಂಡಳಿಕರ್ ಕಱುಂಬರದಟರ್ ವೀರರ್ಕಳುಂ ತಮ್ಮ ಬಾಟ್ದಲೆಯುಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು ಮೂವಿಟ್ಟೆಯೊಕ್ಕಲವೋಲಿಂ ಬೆಸಕೆಯ್ಯೆ ಸಂತಮಿರುತುಂ ಕುಂತೀಸುತರ್ ತಮ್ಮ ತೋಳ್ವಲಮಂ ನಚ್ಚರೆ (ಪಂಪಠಾ. ೯-೦೦) ; ಪೋ ಬಾಟ್ದಲೆಯಿಂದೊಯ್ದವನೇ ಬಗೆಯಿಂ ನೀರೊಳಿರ್ದೊಡೆಂತುಂ ಕೊಲ್ಲೆಂ (ನೇಮಿಪು. ೦೨-೦೮೩); ಮಧುವಿನ ಕುಮಾರಂ ಹಿರಣ್ಯನಾಭಂ ಬಲದೇವನ ಮಱೆಯಂ ಪೊಕ್ಕುಱಿವುದುಮಾತನ ಬಾಟ್ದಲೆವೆರಸು ಬಂದು ವಸುದೇವನ ಪಾದಾರವಿಂದಕ್ಕೆ ತಾಳಧ್ವಜನುಂ ತಾರ್ಕ್ಷ್ಯಧ್ವಜನುಂ ಪೊಡಮಟ್ಟು (ಮಹಾನೇ. ೬-೬೯. ಪ). ಬಾಳುದಲೆ : ೧. ಬಾಳುದಲೆಗಳನರಿದು ಹೋಮವ ಬೆಳಗುವೆನು (ಶೇಷಮ. ೨-೨೬). ೨. ಆಗ ತಾನೆ ಕತ್ತರಿಸಿ ಹಸಿರಕ್ತವನ್ನು ಸುರಿಸುತ್ತಿರುವ ತಲೆ ; ಹಸಿತಲೆ ; ಪಂದಲೆ : ಬಾಳುದಲೆಸಹಿತ ನಡೆತಂದು ಭೃತ್ಯಂ ತಿರವ ಚೋಳರಾಯನ ಬಲದ ಕೈಗೆ ಕುಡೆ (ಭಾವಸಂ. ೯-೩೦); ತಲೆಯ ತರಹೇಳಂತಕನ ಬಾಳ್ದಲೆಯ ತರಹೇಳ ಜನನತಳಕೆ ನಿಲಿಸಹೇಳಮರೇಂದ್ರನಗರವನು (ತೊರಂಗ. ೬-೨-೧೦) ; ಆ ಹರಿಯಜಸುರೇಂದ್ರಾದ್ಯರಂ ಬಾಳ್ದಲೆಗಳಂ ಕೊಂಬೆನುಳಿದವರ ಪೊಡೆಗಳಂ ಸೀಳ್ದಿಕ್ಕುವೆಂ (ಪಂಪಪು. ೩೧-೧೯). ಬಾಳ್ದಲೆ : ೧. ಬಲವ ಮುಱಿದು ಕಲುಗೋಟೆಯ ನೃಪನ ಬಾಳ್ದಲೆಯ ಖಂಡಿಸಿದುದನಱಿಯ (ಕಂಸಪಿ. ೦೬-೦೩೬). [ಬಾಟ್ಯ್$_1$ + ತಲೆ$_1$]

ಬಾಟ್ದಲೆಗೊಳ್, ಬಾಳ್ದಲೆಗೊಳ್ (ಕ್ರಿ). ಜೀವಂತವಾಗಿ ಸೆರೆ ಹಿಡಿ... ಕೈದುಮಾಡು : ರಘುವೀರಂ ಲಕ್ಷ್ಮಣಂ ರಾಷ್ಟ್ರಕಂಟಕನಂ ಬಾಟ್ದಲೆಗೊಂಡನುಯ್ದನಿಭಮಂ ಪಂಚಾನನಂ . . . ಮಾರ್ಕೊಂಡು ಕೊಂಡುಯ್ವವೋಲ್ (ಪಂಠಾಮಾ. ೭-೬೨). ಬಾಳ್ದಲೆಗೊಳ್ : ಚಟ್ಟನಂ ಮುತ್ತಿ ಬಾಳ್ದಲೆಗೊಂಡಂ (ಮುಂಬರಾ. XI, ೨೩೦-೦೯ ; 1060) ; ವಿಕ್ರಮಭೂಪಂ . . . ಅನ್ಯ ಭೂ(ಮಿ)ಪರಂ ಬಾಳ್ವೆರಸೆಯ್ದೆ ಬಾಳ್ವೆರಸು ಬಾಳ್ದಲೆಗೊಣ್ಡನ್ (ಎಕ. XI, ದಾವಡ. ೩-೭ ; 1121); ಬಲರಾಮನನು ಬಾಳ್ದಲೆಗೊಂಡವನ ಕರತಳದ ಹಲಾಯುಧಸಹಿತ ಛಲದಂಕ ಕೇಳ್ನಿನ್ನ ತೆರಿಗೆಯ ಹಳ್ಳಿಯೊಳುಳುವೊಕ್ಕಲ ಮಾಡುವೆವು (ನೇಮಿಸಂ. ೨೬-೬೯). [ಬಾಟ್ದಲೆ + ಕೊಳ್$_1$]

ಬಾಟ್ದಲೆದರ್ (ಕ್ರಿ). ಜೀವಂತವಾಗಿ ಸೆರೆಹಿಡಿದು ತರು : ಇಂದ್ರನ ಮಗನಪ್ಪ ಜಯಂತನನಿಂದ್ರಜಿತ್ಕುಮಾರಂ ಬಾಟ್ದಲೆದಂದೀಯೆ ರಾವಣನಭಯಘೋಷಣೆಯಂ ಮಾಡಿಸಿ (ಪಂಠಾಮಾ. ೦೦-೨೦೦ ಪ); ಚಕ್ರಧರಂ . . . ಧುರದೊಳ್ ಬಾಟ್ದಲೆದಂದಂಬರಚರರಂ ಕರೆದು ಪೇಟ್ದು ಪೇಟ್ದುದುಗೆಯ್ವಂತಿರೆ ಕೊಟ್ಟು ದಕ್ಷಿಣಶ್ರೇಣಿರಾಜ್ಯಮಂ ಕಱಿಪಿದಂ (ವರ್ಧಪು. ೬-೬೯). [ಬಾಟ್ದಲೆ + ತರ್]

ಬಾಟ್ದಲೆವಿಡಿ, ಬಾಳುದಲೆವಿಡಿ, ಬಾಳ್ದಲೆವಿಡಿ (ಕ್ರಿ). = ಬಾಟ್ದಲೆಗೊಳ್ : ಪೆಱೆಯಂ ಬೀರದಿನಾ ಗೊರವನೆಯ್ದೆ ಬಾಟ್ದಲೆವಿಡಿದಂ (ಕಬ್ಬಿಕಾ. ೦೯೯) : ದೆಸೆಗೆ ಬಿಟ್ಟಾ ರಾಯರ ಬಾಟ್ದಲೆವಿಡಿದುಂ ಜಯಕಾಂತೆಗೆ ತೊಟ್ತಿರಂ ಮಾಡುತುಂ (ರಾಮಾಶ್ವ. ೯೯-೦೭). ಬಾಳುದಲೆವಿಡಿ: ದೇವಗುಹೇಶ್ವರನ ಬಾಳುದಲೆವಿಡಿದೆ (ಅವಸಂ. ೬೭-೩೬೩). ಬಾಳ್ದಲೆವಿಡಿ : ಕಮಂಪನಗ್ನಿಯನಟ್ಟಿ ಬಾಳ್ದಲೆವಿಡಿದಭಯಘೋಷಣೆಯ ಮಾಡಿಸಿದೊಡನೆ ತತ್ಪತ್ತನವ ಪೊಕ್ಕು (ಸಾಳ್ವಭಾ. ೨೭-೩೦). [ಬಾಟ್ದಲೆ + ಪಿಡಿ$_1$]

ಬಾಟ್ದಾಣ (ನಾ). ಬದುಕುವ ಸ್ಥಳ : ವಾಸಸ್ಥಳ : ನೀರ್ಗಂಡಿ, ಕೂರ್ಗಲಿ, ಕೂಟ್ಗಟ್ಟೆ, ಬಾಟ್ದಾಣಾ (ಶಪ್ಪಾಮ. ೯೦ ಪ್ರಬೋ). [ಬಾಟ್ಯ್$_1$ + ತಾಣ]

ಬಾಟ್ನೆಣ (ನಾ). ದೇಹದಿಂದ ಅದೇ ತಾನೆ ಹೊರಬಿದ್ದ ನೆಣ ; ಹಸಿಯ ಕೊಬ್ಬು : ಕರುಳ್ಬಿಣಲ ಪೊದಟ್ಕೆ ರುಂಡದಡಕಿಲ್ ನರದುರ್ಬುಕಪಾಲದೋಳಿ ಬಾಟ್ನೆಣದೆಡೆ ಖಂಡದಿಂಡೆ ಬಿಸುನೆತ್ತರ ಪೆರ್ಬೊನಲರ್ಬಿಸಲ್ಕೆ ಮಾರ್ಗಣಗಣಘಾತದಿಂ ಕವಿಸಿದಂ ವಿರೋಧಿಸೈನ್ಯಮಂ (ಜಗವಿ. ೭-೬೯) [ಬಾಟ್ಯ್$_3$ + ನೆಣ]

ಬಾಟ್ಮೆ, ಬಾಳ್ಮೆ, ಬಾಟಿಮೆ (ನಾ). ೧. ಬದುಕು ; ಜೀವನ : ಅನಟಿವು ಬಾಟ್ಮೆಗಳೆದೆಯೊಳ್ ನಿಂದಿರ್ಪೆಂ (ಮಿತ್ರಗೋ. ೨೬-೨೦). ಬಾಳ್ಮೆ : ೧. ಅಪಕೀರ್ತಿಯಂ ಪೊತ್ತು ಮೃತಜೀವರಂದದೋಳ್ನಾವಿರ್ದ ಬಾಳ್ಮೆಯಂ ಸುಡಲಿ (ತುರಂಗ. ೭೯-೬) ; ಕಯ್ವಾರಿಸಿದ ಬಿರುದಾವಳಿಯ ಸಮ್ಮೋಹನಕ್ಕೆ ನೀನೇ ಕರಗಿ, ಬೇರೊಂದಚ್ಚಿನ ಬಾಳ್ಮೆಗೆ ಮಾರ್ಪಡುವುದೆ, ಶ್ರೀಮನ್ತಮಹಾಶಯ? (ಪಟ್ಟಿಲಿ. ೨೦೯-೦೨) ; ಅರ್ಥಹೀನಂ ಬಾಳ್ಮೆ ಒಲುಮೆಯಿಲ್ಲದಿರೆ (ಜಿತ್ರಾಂಗ. ೬೬-೦೭೯೨). ಬಾಟಿಮೆ : ೨. ವೃತ್ತಿ : ಅರಸನಾತಂಗಾದಮಾನುಮೊಸೆದು ತಂದೆಯ ಬಾಟಿಂದಗ್ಗಳ ಬಾಟಿಮೆಯಂ[ಪಾಠಾಂ. ಬಾಳಂ,ದ ಬಾಳಂ] ಮಾಡಿದಂ (ವಡ್ಡಾರಾ. ೦೬೩-೨). [ಬಾಟ್ಯ್$_1$ + — ಮೆ$_1$]

ಬಾಟ್ಮೊದಲ್, ಬಾಳ್ಮೊದಲ್ (ನಾ). ೧. (ಬದುಕಿಗೆ) ಬಂಡವಾಳವಾದುದು; ಮೂಲಧನವಾದುದು : ಮದುವೆಗಿದು ಪೆತ್ತ ಮಕ್ಕಳಿಗಿದು ಬಾಟ್ಮೊದಲೆನ್ನದುಳ್ಳುದಂ ಸವಣರ್ಗಿಕ್ಕಿದಪಂ (ಸಮಪ. ೩-೯೬). ೨. ಬದುಕಿಗೆ ಆಧಾರವಾದುದು; ಜೀವನಸರ್ವಸ್ವ : ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾಟ್ಮೊದಲದು ಚಿತ್ತಜಂಗೆ ಕುಲದೈವಂ (ಅಪಪು. ೨-೭೯); ಕವಿಗಳ್ಗಿದು ಕೆಯ್ಗನ್ನಡಿ ಕವಿತೆಗೆ ಬಾಟ್ಮೊದಲುದಾತ್ತವಾಗ್ದೇವತೆಗುದ್ಭವಹೇತು (ಕಾಮ್ಯಾವ. ೯); ಬಿದಿ ಮೇರೆದಪ್ಪಿ ನಿಷ್ಕರುಣದೆ ನಿಮ್ಮ ಬಾಟ್ಮೊದಲನಕ್ಕಟ ವಂಚಿಸಿ ಕೊಂಡು ಪೋದನೇ (ವರ್ಧಪು. ೯-೭೦). ೩. ತವರು ; ನೆಲೆವೀಡು ; ಮೂಲಾಶ್ರಯ : ಒದವಿದ ಕೋಟಲೆಗಳ ಬಾಟ್ಮೊದಲೆನಿಸಿದ . . . ನನ್ನೀವೊಡಲಂ ನಿಲಿಸಿದುದರ್ಕ್ಕೇನಾನುಮೊಂದು ನೆಪಮುಸಿರ್ದಪ್ಪೆ (ಕಾದಂಪೂ. ೯೩೩); ಅದು

ಪಿರಿಯ ಸಿರಿಯ ಬಾಟ್ಮೊದಲದು ಚಾಗದ ಭೋಗದಾಗರಂ (ಯಶೋಧ. ೦-೩೩). **ಬಾಳ್ಮೊದಲ್** : ೨. ಪುರು[ಷಾ]ರ್ತ್ತದ ನೆಲೆ ಸತ್ಯದ ಕರು ಪರಹಿತಲಕ್ಷ್ಮಿಗಿಕ್ಕೆದಾಣಂ ಸೌಚಾಚಾರದ ಬಾಳ್ಮೊದಲೆಂನದೆ. ನರನೆಂಬುದು ಸಿಂ[ಗನ]ಣುಗನಂ ಶೋಭನನ (ಸೌಇಇ. XX. ೬೬-೨೬; 1118).

[ಬಾಟ್$_3$ + ಮೊದಲ್$_1$./ತಮಿ. ವಾಟ್ಮುತಲ್=ದೇವರು, ಸೃಷ್ಟಿಕರ್ತ]

ಬಾಟ್ಮೊಸರ್ (ನಾ). (ಒಗ್ಗರಣೆ ಹಾಕಿದ) ಗಟ್ಟಿಮೊಸರು : ಇದು ಬಾಟ್ಮೊಸರಿದು ಕಟಲಿಂತಿದು ರುಚಿವೆತ್ತಿರ್ದ ಪಾನಮಿದು ಮಜ್ಜಿಗೆ ತಾನಿದು ಶಿಖರಿಣಿಯೆನುತುಂ ತಿಂಬಿದಿಂಬಿ ತಂದೆಱೆದರಬಲೆಯರ್ ಸಿರ್ಪುಗಳಿಂ (ಸುಳುಮಾ. ೦೦-೩೧); ಸಮೆದೆಂ ಮೊಸರಂ ಬಾಟ್ಮೊಸರುಮನಾಂ ಘನವಾಗಿ ತಂದೆಂ (ಅರ್ಥಸೇ. ೬-೭೫). [ಬಾಟ್$_3$ + ಮೊಸರ್]

ಬಾಟ್ವಂದರ್, ಬಾಳ್ವಂದರ (ನಾ) = ಬಾಟ್ಮೊಂಪ : ಕಾಯ್ತು ಬಳ್ಳಿ ಗೌಂಗಿನ ಪಸುರ್ವಂದರುಮಂ ಪಣ್ತ ಮಧುರದ್ರಾಕ್ಷೆಯ ಬಾಟ್ವಂದರು ಮನಿರ್ಕೆಲದೊಳಿಕ್ಕಿಸಿ (ಅರ್ಥಸೇ. ೩-೦೦ ಪ). **ಬಾಳ್ವಂದರ** : ಕೆಂದಳಿರ ತುಱುಗಲಿಂದೊಪ್ಪಂಬೆತ್ತ ಬಾಲಸಹಕಾರದ ಬಾಳ್ವಂದರಂಗಳೊಳ್ . . . ಪಳುಕಿನ ವೇದಿಕೆಯೊಳ್ನಿಂದು (ನಾಗಕು. ೨-೨೫ ಪ). [ಬಾಟ್$_3$+ಪಂದರ್]

ಬಾಟ್ವಣ (ನಾ). ಜೀವಂತವಾಗಿರುವ ಧನ,– ಸಂಪತ್ತು : ಎನ್ನ ಕೊಂಡಾಟದ ಬಾಟ್ವಣಮೆ ! (ರಾಮಾಶ್ವ. ೪೪-೦೦). [ಬಾಟ್$_3$ + ಪಣ್$_3$]

ಬಾಟ್ವನೆ, ಬಾಳುಮನೆ, ಬಾಳ್ವನೆ(ನಾ). ತವರುಮನೆ; ಮೂಲಾಶ್ರಯ: ಕನರ್ಗೊನರಿರ್ಕೆ ನುಣ್ದಳಿರ ಬಾಟ್ವನೆ ಕೆಂದಳಿರಿರ್ಪ ಬೀಡು . . . ನಸು ದೋರೆವಣ್ಣ ತಾಯ್ವನೆ ಪೊಸವಣ್ಣ ಗೊತ್ತಿದನೆ ಕಣ್ಗೆಸೆದಿರ್ದುದದೊಂದು ಮಾಮರಂ (ಕಬ್ಬಿಗಾ. ೦೦೦); ಪಾರ್ವರ ಬಂಚದಱನ ಬಾಟ್ವನೆಯೆಂಬೊಂದು ನೆಗಟ್ತಿಗಡರ್ಪಾಗಿ ಸಂದ ಅಹಿಚ್ಛತ್ರಪುರವರದ ರಾಯನ ಮನ್ನಣೆಯ ಬಿರ್ದಂ ಕೈಕೊಂಡು (ರಾಮಾಶ್ವ. ೬೩-೨೩). **ಬಾಳುಮನೆ**: ಖೂಳನೆಂಬೆನೆ ಸಕಲ ಕಲೆಗಳ ಬಾಳುಮನೆ ಗಡ ನಿನ್ನ ಬುದ್ಧಿ ವಿಶಾಲಮತಿ ನೀನೆಂಬೆನೇ ಜಗದಜ್ಞ ರಧಿದೈವ (ಕುಮ್ಮಾಸ. ೦೩-೭೩). **ಬಾಳ್ವನೆ** : ನೆಲವೆಣ್ ಪೊಂಬೆಳಸನ್ನೆಟ್ಟನೆ ಪಡೆದವರ್ಗೀವೊಲ್ ಪಾಲ್ಜೊನ್ನದ ತೆನೆ ಸುಜನರ ಬಾಳ್ವನೆ ಕಳಮದ ನಿಡಿದೆನೆಯೆಸೆಗುಂ (ಉದ್ಯರೇ. ೨-೨೬). [ಬಾಟ್$_3$ + ಮನೆ]

ಬಾಟ್ವೆ, ಬಾಳುವೆ, ಬಾಳ್ವೆ (ನಾ). ೧. ಜೀವನ ; ಬದುಕು : ಉಱದಿರ್ಪಂತೆಮಗಾವ ಗರ್ವಮಿಱಿಯಲ್ವೇಡೆಮ್ಮನೆಮ್ಮುಳ್ಳುದಂ ನೆಱೆ ಕೊಂಡೆಮ್ಮಯ ಬಾಟ್ವೆಯೊಳ್ ನಿಱಿಸುವಂ ನೀಂ (ಪಂಪಭಾ ೬-೩೦); ಅವಱ ಬಾಟ್ವೆ ಇಂದಿನದಲ್ಲ, ನಿನ್ನೆಯದುಮಲ್ಲ, ಎಂದೆಂದಿನದು (ಆಂತಿಗೊ. ೨೦-೪೪೦). **ಬಾಳುವೆ** : ೧. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗ ನಂತೆ ಎನ್ನ ಬಾಳುವೆ (ಬಿಸವ. ೩೫); ಅರ್ಥವಿಲ್ಲದ ಸಿರಿಯ ಸಡಗರ ಅರ್ಥ ಯಿಲ್ಲದ ಬಾಳುವೆಗಳಿವನರ್ಥವಾರಂಪರೆ (ಕುಮ್ಮಾಉ. ೪-೫೬) : ಬಾಳುವೆಯ ಗೂಡೊಳಿದೆ ತತ್ತಿಯಿದನೆಂದು ಮೃತ್ಯು ತಾನಿಕ್ಕಿ ಮೆಯ್ಗರೆಯಿತೆನಗರಿವೆ ? (ಗಿಳಿಮಿ. ೫೦-೦). ೨. ಸಂಸಾರ; ದಾಂಪತ್ಯಜೀವನ : ಐದು ಮಾನವ ಕುಟ್ಟಿ ಒಂದು ಮಾನವ ಮಾಡು ಕಂಡಾ ಮದವಳಿಗೆ ಇದು ನಮ್ಮ ಬಾಳುವೆ ಮದವಳಿಗೆ (ಬಿಸವ. ೬೬೭) ; ಅವಳು . . . ಮತ್ತೆ ಕೈ ಹಿಡಿದವನ ಕೂಡ ಬಾಳುವೆ ಮಾಡಹತ್ತುವಳು (ಕನ್ನಜಾ. ೦೨೫). ೩. ಜೀವಮಾನ ; ಆಯುಷ್ಯ : ಬದುಕಿನ ಅವಧಿ : ಏಸು ದಿನವೀ ಜಗದ ಬಾಳುವೆ (ಕುಮ್ಮಾಅ. ೦೪-೩೨). ೪. ಅಭಿವೃದ್ಧಿ : ಕಾನನದಡವಿಯಲ್ಲಿ ಕಿಚ್ಚು ಬಾ[ಪಾಶಾ. ಬ]ಳುವೆಯಾಗಿ ಮಿಕ್ಕೊಡೆ ಒಱಲುವ ಬಳ್ಳುವಿನಂತಿಪ್ಪರಯ್ಯಾ ಮನುಜರು ನರವಿಂಧ್ಯದೊಳಗೆ (ಬಿಸವ. ೨೨೭) ; ಕೇಳಿದಳು ಹರುಷದಲಿ ಪುತ್ರಕರೇಳಿಗೆಯ ಮುತ್ತೈದೆತನದಲಿ ಬಾಳುವೆಯ ಕೈಕೊಂಡೆನೆಂದಳು ನಗುತ ಗಾಂಧಾರಿ (ಸಂಭಪ. ೨೦-೭). **ಬಾಳ್ವೆ** : ೧. ಏನಾ ದೊಡೇನೋ ಮಕ್ಕಳ ಹಡೆಯದರ ಬಾಳ್ವೆ ಹೆಣಕೆ ಸರಿ (ಸಮ್ಮಳಾ. ೫-೯); ಸಕಲ ಪ್ರಾಣಿಗಳ ಪ್ರಯತ್ನವು ಬಾಳ್ವೆಗಾಗಿ, ಸಾವಿಗಾಗಿಯಲ್ಲ (ಜೀವಾತ್ಮ. ೨೮೪). ೩. "ಆಯುಸ್ = ಆಯುಷ್ಯಂ, ಬಾಳ್ವೆ" (ಕಾಶಕ್ಕ. ೦೦೯).

ಬಾಳುವೆ ಮಾಡು, ಬಾಳ್ವೆಮಾಡು = ದಾಂಪತ್ಯಜೀವನ ನಡೆಸು ; ಒಕ್ಕತನ ಮಾಡು : ಇಂಥವರೊಡನೆ ತಾನು ಇಲ್ಲಿಯವರೆಗೆ ಹೇಗೆ ಬಾಳುವೆ ಮಾಡಿಕೊಂಡು ಬಂದೆಯೆಂದು ಅವಳೇ ಆಶ್ಚರ್ಯ ಪಟ್ಟಳು (ಹಳ್ಳಹಾ. ೯೦); ಯಾರೊಡನಾದರು ಬಾಳುವೆ ಮಾಡುವೆನಳಿವೆಣ್ಣೆನೊಡನಾಟ ಬೇಡ (ಇಂಪಾಪ. ೨೦೨-೯೬) ; ಗಂಡನ ಮನೆಯಲ್ಲಿ ಆರು ತಿಂಗಳ ಕಾಲ ಬಾಳ್ವೆ ಮಾಡಿದ ಗಂಗತ್ತೆಯನ್ನು 'ಆಟ' ತಿಂಗಳಲ್ಲಿ ತವರುಮನೆಯವರು ಪದ್ಧತಿಯಂತೆ ಕರೆದೊಯ್ದರು (ಒಡ್ಡಿಲಾ. ೦). [ಬಾಟ್$_1$ + — ವೆ]

ಬಾಟ್ವಿಣ, ಬಾಳ್ವಿಣ (ನಾ). ಜೀವವಿದ್ದರೂ ಸತ್ತಂತಿರುವ ವ್ಯಕ್ತಿ ; ಜೀವಚ್ಛವ : ಪಂದಲೆಯೋಳಿದೋರಣದ ಸೀಯದರಂ ಪೊಸ ದೂವೆ ದೂಪ ತೂಗುಂದಲೆ ಬಾಟ್ವಿಣಂ ಪೊಡರೆ ಬಳ್ಳುವ ಸಮ್ಮನ ಸೂಲಿಮಾಲ ದೊಳ್ ಸಂದಣಿಯಾಗಿ ನೇಲ್ವ ಪೆಣನೊಂದಿರೆ ನಿಂದುರಿಯುಯ್ಯಲೇಱಿ ಕೈರಂದಱಿಯಲ್ಕೆ ಮಾಡಿದಡೆ ಮಂಚಿಕೆ ಮಿಂಚಿದುದಾ ಶ್ಮಶಾನದೊಳ್ (ಕಾಪ್ಯಾವ. ೫೬) ; ವಿಜಯಾಪುರೀಶನಂ ಬಾಟ್ವಿಣನೆಂಬಿನಂ ಪಿಡಿದು ಕೆಯ್ಸೆಱೆ ಗೊಂಡುಱೆ ಪಾಡುಪಂತದಿಂ ಬಾಟ್ವಿನಭೇದ್ಯವಿಕ್ರಮನೆನಲ್ ಮೆಱೆವಂ ಚಿಕದೇವಭೂವರಂ (ಗೀತಗೋ. ೬೫-೦೪). **ಬಾಳ್ವಿಣ** : ಕಂಗೆಟ್ಟು ಬಾಯ್ವಿಟ್ಟು ಕಲುಮರನಾಗಿ ಕಂಡು ಮತಿಗೆಟ್ಟು ದೆಸೆಗೆಟ್ಟು ಬಾಳ್ವಿಣನಾಗಿ (ಕಣ್ಣರ. ದೇ. ೦೪೬-೦೪) ; ಬದುಕಲೆಳಸಿದರಿಂತು ಬಾಳ್ವಿಣಗಳಾಗಿ ! (ಪತ್ರಸ್ಥ. ೦೩). [ಬಾಟ್$_1$ + ಪೆಣ]

ಬಾಟ್ವೇಲಿ, ಬಾಳ್ವೇಲಿ (ನಾ). = ಬಾಟೊಟ್ಟೆ : ಪೂತ ಚೂತವನಮೆ ಬಾಟ್ವೇಲಿಯಾಗೆ . . . ಅಶೋಕೋದ್ಯಾನಮಧ್ಯದೊಳ್ (ಶಾಂತಿಪು. ೪-೯೫ ಪ) ; ಆ ವನಕ್ಕಿಕ್ಕಿದ ಬಾಟ್ವೇಲಿಯಂತೆ . . . ನವ ಫಲಂಗಳಿಂ ನೆಱೆದೊಪ್ಪುವ ಮಾತುಲುಂಗದ ಪೊದಱುಗಳುಮಂ (ಪಂಪತಂ. ೦೦೭-೦೨) ; ನಂದನಕ್ಕೆ ಬಾಟ್ವೇಲಿಯಾದ ಕೇದಗೆಯ ಬನದ ಬಳಸಿನೊಳಗೆ ಶಿವನರೆವೆಣ್ತನಂ ಹರಿಯ ಹಾದರವಬ್ಬಜನೊಲ್ದ ಲಜ್ಜೆ ಹೆಂಬಿ ನನೆವಿಲ್ಲ ಬಲ್ಲಹನ ಶೌರ್ಯಮಂ (ಅನಂಪು. ೦-೯೦ ಪ). **ಬಾಳ್ವೇಲಿ** : ಕಂಜಾಸ್ತ್ರನ ವನದುರ್ಗದಂತಾಯ್ತುಪರಂಜಿಗೇದಗೆಯ ಬಾಳ್ವೇಲಿ (ಶ್ರೀಪಾಂ. ೦-೬೪); ಸುತ್ತಿದ ಜಲಖಾತಿ ಮಿಸುನಿಗೇದಗೆಯ ಚೆಲ್ವೆತ್ತ ಬಾಳ್ವೇಲಿ (ನಾಗಕು. ೨-೩೨). [ಬಾಟ್$_1$ + ಬೇಲಿ]

ಬಾಟ್ಸಬ (ನಾ). = ಬಾಟ್ವಿಣ : ಎಲೆಲೆ ಸಮ್ಮಂಗುಂದಿದ ಪುಚ್ಚಟಿಯ ಬಾಟ್ಸಬಮೆ ! (ರಾಮಾಶ್ವ. ೦೦೨-೦೫). [ಬಾಟ್$_1$ + ಸಬ (<ಶಬ)]

ಬಿಂ, ಬಿಮ್ಮು$_2$ (ನಾ). ಶೂನ್ಯತೆಯನ್ನು ಸೂಚಿಸುವ ಒಂದು ಅನುಕರಣಶಬ್ದ : (ಕಿ). **ಬಿಮ್ಮು$_2$** : ಒಂದೆ ನಿಮಿಷದ ಆಯು ಮರುಚಣವೆ ಕತ್ತಲೆಯು ಬಿಮ್ಮೆಂಬ ಕತ್ತಲೆಯು (ಕವಿಸೋ. ೬೦-೯). 'ಬಿಮ್ಮುಗಱೆ' ಪರಾ.

ಬಿಂಬಿಮ್ಮೆನ್=ನಿರ್ಜನವಾಗಿರು ; ಬಿಕೋ ಎನ್ನು : ಬಿಂಬಿಮ್ಮೆಂಬ ಪೇರಡವಿಯಂ ನೋಡಿ ಜಳಜಮುಖಿ ನಾಡೆಯುಂ ತಲ್ಲಱದಿಂ ಭೋರೆಂದು ಸುಯ್ದು (ಧರ್ಮಾನ್ಯು. ೩-೫೩).

ಬಿಂಕ$_1$ (ನಾ). ೧. ಗರ್ವ ; ಜಂಬ ; ಸೊಕ್ಕು : "ವಕ್ಕೆವಂ, ಬಿಂಕಂ . . . ಅದಟು — ಈ ೭ ಗರ್ವಂ" (ಕಶಸಾ. ೫೬-೨೩೦) ; ಆ ದ್ರುಷದಜೆಯೊಳ್ ನೆರೆದೊಸಗೆಗೆ ತಮ್ಮ ಬೀರಮಂ ಬಿಂಕಮುಮಂ ತೆಱವುಂ ತೆಲ್ಲಂಟಿಯುಮೆಂದರಿಕೇಸರಿಗಾಗಳೀವವೋಲ್ ಬೆನ್ನಿತ್ತರ್ (ಪಂಪಭಾ. ೩-೭೨) : ಬೇಡಿದ ಶರಣರ್ಗಿಲ್ಲೆನ್ನದೀವೆನೆಂಬ ಗೀತದೊಳಗಣ ಬಿಂಕದ ಬಿರುದಂ ಕೇಳ್ದು ನಿನ್ನೊಳೊಂದಂ ಬೇಡಿ ಬಂದೆಂ (ಬಿಸರ. ೦೨-೪೬) ; ಕಡಲು ಪರಿವರುಣಾಂಬುಜಲಧಿಗೆ ಬಿಡಿಸಿದವು ಬಿಂಕವನು ಶಿವಶಿವ ನುಡಿವ ಕವಿ

ಯಾರಿನ್ನು ಪಾರ್ಥಕುಮಾರನಾಹವವ (ಕುಸ್ಯಾರ್ಪ್ರೋ. ೬-೬). ೨. ಠೀವಿ ; ಗತ್ತು : ಗಾಂಭೀರ್ಯ : ಬಿಂಕದಿಂ ಬಲಗೆಲದೊಳ್ ನೆಗಟ್ತಿವಡೆ ದಿರ್ಪರಸಂಚೆಯ ಪಿಂಡು (ಕಬ್ಬಿಕಾ. ೧೨೬) : ಆವ ಬಿಂಕವೋ ಎಡಗಾಲ ಗದ್ದುಗೆಯ ಮೇಲೋವಿ ಮಡಿದು . . . ಠೀವಿಯೊಳೆಸೆದನಾ ರಾಯ (ಭರತ. ೧-೩೦). ೩. ಹೆಮ್ಮೆ ; ಸ್ವಾಭಿಮಾನ : ಬಿಡೆ ನಿನ್ನ ಪಾದವ ಬಿಂಕವಿನ್ನೇಕೊ ಕೊಡು ಮನದಿಷ್ಟವ ಕೋಪವಿದೇಕೊ (ಪುರಂದ. ೦-೨೩ ಪಲ್ಲವಿ) : ಲಂಕಾದುರ್ಗಕೆ ಸರಿಯೆಂದಾವೂರ ಬಿಂಕದೆ ಕೊಂಡಾಡು ತಿಹರು (ಕಂಪಪಿ. ೦೬-೭೨) ; ಗಂಡನ ಬಿಂಕ ಹೆಂಡತಿಯ ದೈನ್ಯವನ್ನೇ ಬಯಸುತ್ತದೆ (ಮಹಾಗ. ೨೯). ೪. ಬೂಟಾಟಿಕೆ ; ಡಂಭಾಚಾರ : ಬಾಯ ಬಿಂಕದ ಸವಿನುಡಿಯನಾ ರಾಯರಾಡಿದರಲ್ಲಿ (ನಳಿ. ೩-೬೦) : ನಾವು ಯೋಧರು, ನೋವನ್ನೂ ಸಹಿಸಬಲ್ಲೆವು, ಸಂತೋಷವನ್ನೂ ಸಹಿಸ ಬಲ್ಲೆವು. ಈ ಎರಡೂ ನಿಮಗೆ ಸಾಧ್ಯವಿಲ್ಲ. ಇದೊಂದು ಬಿಂಕ (ಶಾಂತಲಾ. ೬೯). ೫. ಆಡಂಬರ : ಡೌಲು : ಪಾತ್ಸ್ಯವು ರಣ ಧೂಳಿಖಾನನ ಬಿಂಕದೆ ಬೀಳ್ಕೊಟ್ಟನಾಗ (ಕಂಪಪಿ. ೧೦-೯). ೬. ಒಯ್ಯಾರ; ಬೆಡಗು ; ಬಿನ್ನಾಣ : ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳ್ : . . ಆ ಬಿಂಕಮಾ ತರಳಾಪಾಂಗವಿಲಾಸಂ . . . ಏಂ ಮನಂಗೊಳಿಸಿತೋ ಚಾಳುಕ್ಯಕಂದರ್ಪನಾ (ಗದಾಯು. ೯-೩೦) ; ನಳಿತೋಳ್ಗಳ್ ಮುತ್ತಿನ ಸರಿಗೆಯನಾಂತೆಸೆಯೆ ಕಾಂತೆ ಬಿಂಕಮನಾಂತಳ್ (ಜಗಪಿ. ೦೦-೧೧೭) : ನಿನ್ನ ನಡೆವ ಬಿಂಕವ ಗಾಡಿಯುಮಂ . . . ಆ ನಿನ್ನ ಕಿಱುನಗೆಯ ಬಗೆಯುಮಂ ಕಂಡು ಸೋಲ್ತು ಮೆಚ್ಚಿದೆನಲ್ತೆ ! (ರಾಮಾಶ್ವ. ೩೬-೯). ೭. ಸೊಬಗು : ವಿಲಾಸ ; ಸೊಗಸು : ಶ್ರೀವತ್ಸಾಂಕನ ಸುಲಲಿತ ಯಾನದ ಬಿಂಕಮನನುಕರಿಸಿ ತೋಱುತಿರ್ದಳದೊರ್ವಳ್ (ಜಗಪಿ. ೩-೨೦): ನಿಡುಹುರ್ಬಿಂಗಂ ಕರ್ವಿಲ್ಲ ಬಿಂಕಮಂ ಸುಂಕಮಿಕ್ಕಿದಂತೆ . . . ಶೃಂಗಾರಕ್ಕೆ ಸೀಮೆಯಾಗಿಪ್ಪಳ್ (ಪುಷ್ಯಾಸ್ತ್ರ. ೨-೩೨ ಪ); ಬಿಂಕದಿಂದಲಿ ಕೊಳಲೂದುತ್ತ ಪಾಡುತ್ತ ಪಂಕಜಾಕ್ಷನು ಬಂದ ಕಾಣಿರೇನೆ (ಪುರಂದ. ೧-೦೪೦-೩). ೮. ಹಿರಿಮೆ ; ಮೇಲ್ಮೆ : ಅತಿಶಯತೆ : ಶಂಕರಂಗೆ ಸಕಲ ಮಜ್ಜನಾದಿ ಪೂಜೆಯಂ ನಿಮಿರ್ಚಿ ಬಿಂಕದಿಂದೆ ಕನಕರತ್ನರಾಶಿಗಳನೆ ಹತ್ತೆ ಸಾರ್ಚಿ (ಮಳಿರ.ಹ. ೨೨೦-೦೦) ; ಅರಸನಭ್ಯುದಯವನು ಭೀಮನ ಧರಧೊರವನ ರ್ಜುನನ ಬಿಂಕವನು ... ಕಂಡೆದೆ ಬಿರಿದುದು (ಕುಸ್ಯಾಸ. ೦೨-೩೪): ಸಾಸಿರದೆ ಬಿಂಕದ ಕರಿ ಹತ್ತು ಕೂಡಿದ ಬಲುಪೌಜನಂಕುಶಖಾನ ತೋಱಿದನು (ಕಂಪಪಿ. ೦೦-೯೩). ೯. ಸಾಹಸ: ಪರಾಕ್ರಮ; ದಿಟ್ಟತನ : ಬಿಂಕದಿಂದ ಸಿಯಂ ಜಡಿದು (ಬಸಪು. ೦೬-೦೮); ಮನ್ನಣೆಯ ಬಿಲ್ಲ ಗುರುವಿನ ಬಿಂಕ ಬಯಲಾಯ್ತಿಲ್ಲಿಯೆಂಬಪಕೀರ್ತಿ ಹೊಱುವುದು (ಕುಸ್ಯಾರ್ಪ್ರೋ. ೦೩-೦೧). ೧೦. ಅಟ್ಟಹಾಸ; ಆಟೋಪ : ಧರಾಧೀಶರಾಗಳ್ ಪೊಣರಲ್ ರಾಜೇಂದ್ರ ಹಮ್ಮೀರನ ತುರಗಿನಿಯಂ ಮುತ್ತಿದರ್ ಬಿಂಕದಿಂದಂ (ಹಮ್ಮೀರ. ೩-೫). ೧೧. ಜಂಬದ ಮಾತು ; ಹೆಮ್ಮೆಯ ನುಡಿ : ಧನವ ಕೊಟ್ಟೆನು ತನುವ ಕೊಟ್ಟೆನು ಮನವ ಕೊಟ್ಟೆನು ಕೊಟ್ಟೆನೆಂಬೀ ಬಿನುಗು ಬಿಂಕವ ನಾಡಲಾ ಧನ ತನು ಮನಂಗಳನು ನಿನಗೆ ಕೊಟ್ಟವರಾರು (ಪ್ರಭುಲೀ. ೦೬-೪೯). ೧೨. ಶಸ್ತ್ರಪ್ರಯೋಗದಲ್ಲಿ ಒಂದು ರೀತಿ,—ಬಗೆ : ಬಿಂಕಂ ಭ್ರಮರೀಜ್ಯಾಲೀಢಮಾಕೀರ್ಣತೆ ... ಬೆಡಂಗೆಂದೆನಿಪನಿತಱ ವೈಚಿತ್ರ್ಯದಿಂ ತಾನೆ ಶಸ್ತ್ರಾಗಮಶಿಕ್ಷಾಚಾರ್ಯನೆಂಬೊಂದೆಸಕದಿನೆಸೆದಂ ನಾಡೆ ಕಂದರ್ಪ ದೇವಂ (ಕುಸುಮಾ. ೬-೬೪). 'ಬಿಗಿ$_1$ ಪರಾ.

[ದೇ. ॥ ತುಳು. ತೆಲು. ಬಿಂಕ]

ಬಿಂಕ$_2$ 'ಬಿಂಗ$_1$' ನೋ.

ಬಿಂಕಂಗುಂದು (ಕ್ರಿ). ಶಕ್ತಿಯು ಕುಂದು: ಪರಾಕ್ರಮವು ಕಡಮೆಯಾಗು : ಬಾನ್ಬಟ್ಟೆಯೊಳ್ ಬಿಱುವಿಸಿಲ್ ಬೆನ್ನಂ ಸುಡೆ ಬಿಂಕಂಗುಂದಿ ಬಳಲ್ದು ಬರ್ಪ ಗರುಡದಂಪತಿಗೆ ತಂಪಂ ಪರೆಪಲೆಂದು ... ರಂಜಿಪ ಪರ್ಣ ಪಾಳಿಯಿನೇಳ್ಗೆವೆತ್ತ ತಾಳಭೂರುಹದಿಂ ... ಮಹಾಗಹನಮೊಪ್ಪಿರ್ದುದು (ಶಬಸಂ. ೩-೩೩ ಪ). [ಬಿಂಕ$_1$ + ಕುಂದು$_1$]

ಬಿಂಕಂಗೆಡಿಸು (ಕ್ರಿ). ಗರ್ವವು ನಾಶವಾಗುವಂತೆ ಮಾಡು; ಅಹಂಕಾರವನ್ನು ತಗ್ಗಿಸು : ಬಿದಿಗೆವೆಱೆಯ ಬಿಂಕಂಗೆಡಿಪಧರಂ ... ಒಪ್ಪಿದುವಾ ಸತಿಗೆ (ಜಯಕಾ. ೨-೬). [ಬಿಂಕಂಗೆಡು + – ಇಸು$_3$]

ಬಿಂಕಂಗೆಡು (ಕ್ರಿ). ಗರ್ವವು ನಾಶವಾಗು ; ದರ್ಪವು ಅಳಿದುಹೋಗು : ಅಹಂಕಾರವಡಗು : ಪೊಡವೀಶರ್ಬ್ಬೀತಿಯಿಂದಂ ಸೆಡವರಡಗುವ ಕ್ಕೋಡುವಕ್ಕೊಂಕಿ ಬಿಂಕಂಗೆಡುವರ್ (ಎಕ. XI, ಚಿತ್ರದು. ೨-೬೪ 1355).

[ಬಿಂಕ$_1$ + ಕೆಡು$_1$]

ಬಿಂಕಂಬಡೆ (ಕ್ರಿ). ಸ್ವಾಭಿಮಾನದಿಂದ ಕೂಡಿರು : ಅತ್ಯಂತ ಚತುರ ಚಿತ್ರಿಕನೊರ್ವಂ ಬಿಂಕಂಬಡೆದೈತಂದು ಕಂತುನಿಭಂಗಭಿವಂದಿಸಿ (ಜಯಕಾ. ೩-೪). [ಬಿಂಕ$_1$ + ಪಡೆ$_1$]

ಬಿಂಕಂಬೆಱು (ಕ್ರಿ). ೧. ವಿಲಾಸದಿಂದ ಕೂಡಿರು : ಸೊಗಸನ್ನು ಹೊಂದಿರು : ಬಿಂಕಂಬೆತ್ತೆಸೆವಂಚೆಯಂ ಸಂಕುಳಮುಂ ತೊಂಡುಗೆಡೆವ ಶುಕಶಾರಿಕೆಯುಂ ಸೊಂಕಿ ಬಲವಂದು ತೀಡುವ ತೆಂಕಣಗಾಳಿಯುಮಿವೇಂ ಮನಂಗೊಳಿಸಿದುವೋ (ಕಾಸ್ಯಾಪ. ೦೬); ಬಿಂಕಂಬೆತ್ತಿರೆ ಹಸ್ತನಖಾಂಕುರದೊಳ್ ಬಾಹುಶಾಖೆಯೊಳ್ ದಿವಿಜನಟೀಸಂಕುಳಮಂದನುಗತಿಯಿಂದಂ ಕುರಶಾಖಾಭಿನಯಮನೇಂ ತೋಱಿದುದೋ (ಸಂಪ್ರಪು. ೧೨-೦೯೨) ; ಬಿಂಕಂಬೆತ್ತರ ಮಕ್ಕಳ ತಂಡದ ಮಂತ್ರಿಗಳ ಗೊಂದಣದತಿಚತುರ ಕವೀಂದ್ರರ ಬಲುಸಂದಣಿಯೊಳು . . . ಓಲಗಮಿರ್ದಂ ಜಯಭೂವರನು (ಜಯಕಾ. ೩-೦). ೨. ಉಬ್ಬು; ಸಡಗರಿಸು : ಉತ್ಸಾಹಿಸು : ಬಿಂಕಂಬೆತ್ತುಬುಬೆಂದಾಡುತ್ತಂ ಆಡುವ ಗುಂಡಯ್ಯನ ಪೊಸನೃತ್ಯಂ (ಕುಂಬಿಱ. ೦೩೦-೨೪). ೩. ಗರ್ವಿಸು : ಜಂಬಪಡು : (ಕಿ). [ಬಿಂಕ$_1$+ಪೆಱು$_1$]

ಬಿಂಕಕಾತಿ 'ಬಿಂಕಗಾತಿ' ನೋ.

ಬಿಂಕಕಾರ್ತಿ 'ಬಿಂಕಗಾರ್ತಿ' ನೋ.

ಬಿಂಕಕಾಱ (ನಾ). ಅಹಂಕಾರಿ: ಗರ್ವಿಷ್ಠ: ಬಿರುದಿನ ಬಿಂಕಕಾಱರ ವಾಸಿಗರ ನಲ್ಲೆನಿಸುವಲ್ಲಮನೆಂಬ ಪೆಸರೆನಗೆ (ಪ್ರಭುಲೀ. ೩-೦೩). [ಬಿಂಕ$_1$ + – ಕಾಱ]

ಬಿಂಕಗಾತಿ, ಬಿಂಕಕಾತಿ (ನಾ). ೧. ಒಯ್ಯಾರಿ; ಬಿನ್ನಾಣಗಿತ್ತಿ : ಕನ್ನಡಿಗಿಂಡಿ ಬಿಜ್ಜಣಿಗೆಗಳ ಪಿಡಿದೂಳಿಗಗೈವ ಬಿಂಕಗಾತಿಯರಾ ಪೊಡವಿಯಾಣ್ಮನ ಪೊದ್ದಿಹರು (ಹದಿಬ. ೦-೦೬) ; ಗುರುವ ನೋಟದ ಬಿಂಕಗಾತಿ . . . ಸೋಗೆಗಣ್ಣುಗಳಿಂದ ಕರೆದಳಾ ಕಾಮುಕರರಸಿ (ಸೌಂದಕಾ. ೩-೦೦). **ಬಿಂಕಕಾತಿ:** ೧. ಕರಜಾಣ ನಿನ್ನೋಪನೆಂದು ಸಿರಿವೆಣ್ಣು ಕಿವಿ ಸಾರ್ದು ಸೂಚಿಸು ತೋಲೈಸಿ ಬರೆ ಬಂದಳಾ ಬಿಂಕಕಾತಿ (ಭರತ. ೭೯-೦೦೯). ೨. ಸೊಕ್ಕಿನವಳು; ಗರ್ವದ ಹೆಂಗಸು : (ಕಿ). [ಬಿಂಕ$_1$ + – ಕಾತಿ$_5$]

ಬಿಂಕಗಾರ್ತಿ, ಬಿಂಕಕಾರ್ತಿ (ನಾ). = ಬಿಂಕಗಾತಿ ೧ : ನಲವಿಂದಮೊಡನೊಡನಡಿಯಿಟ್ಟರ್ ನೆರೆದು ಬಿಂಕಗಾರ್ತಿಯರರೆಬರ್ (ಕಬ್ಬಿಕಾ. ೯೩) ; ನಡೆಯ ಬೆಡಗಿನ ಬಿಂಕಗಾರ್ತಿ[ಪಾಶಾಂ. ಕಾತಿ]ಯರ್ . . . ನಡೆತಂದರು (ಸಂಪು. ೪೩-೩೩). **ಬಿಂಕಕಾರ್ತಿ** : ಬಿಂಕಕಾರ್ತಿಯರಲ್ಲಿ ಕಡುಗಾಡಿವೆತ್ತಿರುತಿಹರು (ಕುರಾಸಾಂ. ೩-೩೫); ಜೆಡೆಯ ಗೊಂಡೆಯ ಬಿಗಿದೊತ್ತಿ ಕಟ್ಟಿದ ಜವದಾಡೆ ಚಿತ್ತಕೆಳಸಿ ಬಿಂಕಕಾ[ಪಾಶಾಂ. ಗಾ]ರ್ತಿ ಬಿಬ್ಬಿಯರವ ನೊತ್ತಿನೊಳೆಯ್ತಂದರಂದು (ಕುರಾಸಾಂ. ೧೮-೦೯).

[ಬಿಂಕ$_1$ + – ಕಾಱ + – ತಿ$_1$ (< – ಇತ್ತಿ)]

ಬಿಂಕಣ 'ಬಿಜ್ಜಣ' ನೋ.

ಬಿಂಕಣಗಿವಿ, ಬಿಂಕಣಿಗಿವಿ (ನಾ). ಬೀಸಣಿಗೆಯಂತೆ ದೊಡ್ಡದಾಗಿರುವ ಕಿವಿ : 'ಬಿಂಕಣಗಿವಿಯ' ಪರಾ. **ಬಿಂಕಣಿಗಿವಿ** : ಒರ್ವನೆಯ ಬಿಂಕಣಿ

ಗಿವಿಯ ಮೂಗೊಂಕುಮೂಗಿನ ಪೇರೊಡಲ ಇಲಿದೇರ ಬೆನಕ ! ಇದೆ ಮಣಿವೆಂ (ರಾಮಾಶ್ವ. ೯೯-೨೦). 'ಬಿಂಕಣಗಿವಿಯ' ಪರಾ.

[ಬಿಂಕಣ (<ಬಿಜ್ಜಣ) + ಕಿವಿ₃]

ಬಿಂಕಣಗಿವಿಯ, ಬಿಂಕಣಗಿವಿಯ (ನಾ). ಬೀಸಣಿಗೆಯಂತೆ ದೊಡ್ಡ ದೊಡ್ಡ ಕಿವಿಗಳುಳ್ಳವನು; ಗಣಪತಿ : "ಕರಿಮೊಗಂ . . . ಬಿಂಕಣ [ಶಾಣಾಂ. ಣಿ]ಗಿವಿಯಂ, ತಂದೆಯ ತಂದೆಯಿಲ್ಲದವಂ — ಈ ೭ ವಿನಾಯಕಂಗೆ ಪೆಸರ್" (ಕಶಸಾ. ೯೭-೯); "ಬಿಜ್ಜೆವಳಂ . . . ಬಿಂಕಣಗಿವಿಯನು ಮೂಸಕದೇರನೆನೆ ವಿನಾಯಕನ ನಾಮಂ" (ಕಬ್ಬಿಕ್ಕ. ೩). **ಬಿಂಕಣಗಿವಿಯ** : ಬಿಂಕಣಗಿವಿಯನೆ ಪಾಲಿಪುದಂಕುಶಧರ ದಯದಿ (ಕುಮಾವಿ. ೦). [ಬಿಂಕಣಗಿವಿ + — ಅ₇]

ಬಿಂಕಣಿ 'ಬಿಜ್ಜಣ' ನೋ.

ಬಿಂಕಣಗಿವಿ 'ಬಿಂಕಣಗಿವಿ' ನೋ.

ಬಿಂಕಣಗಿವಿಯ 'ಬಿಂಕಣಗಿವಿಯ' ನೋ.

ಬಿಂಕಣೆ (ನಾ). ಒಯ್ಯಾರ ; ಒನಪು : ತೊಟ್ಟ ಸಿಂಗಾರದ ಕೊಂಕು ಬಿಂಕಣೆ ರಸ ತೊಟ್ಟಿಡುವಂತೆ ಲಾವಣ್ಯ ಮುಟ್ಟೆ ಕಂದುವ ಮೈಯ ಪೆಂಗಳಿದ್ದರು (ಭರತ. ೦೨-೬೦). [ಬಿಂಕ₁ + — ಅಣ್ಣೆ₄]

ಬಿಂಕತನ (ನಾ). ಗರ್ವ; ಸೊಕ್ಕು: ಬೀಡಿದರೆ ಕೊಡದಿಹಗೆ ಕಡುಬಿಂಕ ತನವೇಕೆ ಪಾಡಲಱಿಯದವಂಗೆ ಪ್ರೌಢತನವೇಕೆ (ಪುರಂದ. ೨-೬೨-೦).

[ಬಿಂಕ₁ + —ತನ]

ಬಿಂಕಪಡು (ಕ್ರಿ). ಗರ್ವಿಸು; ಅಹಂಕಾರ ಪಡು; ಸೊಕ್ಕು : ಇತರ ಬಂಧುಜನರೂ ಸೇನಾಪತಿಗಳೂ ತಮ್ಮಿಂದಲೇ ಈ ದ್ವಾರಕಿಯು ಉಳಿದಿರುವುದೆಂದು ಬಿಂಕಪಡುವರು (ನೀತಿಶಂ. XV. ೦೬). [ಬಿಂಕ₁+ಪಡು₁]

ಬಿಂಕೆಯ (ನಾ). ಒಬ್ಬಾತನ ಹೆಸರು : ಕನ್ನರವಲ್ಲಹಂ ಪೃಥುವೀ ರಾಜ್ಯಂಗೆಯ್ಯೆ ಬಿಂಕೆಯ ನಾಡಾಳೆ (ಎಕ. VIII. ಸೊರಬ. ೭೭-೬; 940).

[ಐ ಇದು 'ಬಂಕೆಯ' ಎಂಬುದರ ಅಪಲಿಖಿತವಿರಬಹುದು].

ಬಿಂಗ₁, ಬಿಂಕ₂, ಬಿಂಗು (ನಾ). ೧. ಒಂದಂ ಬಗೆಯ ದೊಡ್ಡ ಜಾತಿಯ ತುಂಬಿ ; ಭ್ರಮರ : "ಆಱಡಿಯಲರ್ವಕ್ಕಿ . . . ಬಿಂಗ ಬಂಡುಣಿಯೆಲರುಣಿಯು ಪಱಮೆ ಚಿತ್ರವಿಹಗಕ್ಕೆ ನಾಮಂ" (ಕಬ್ಬಿಮಂ. ೨೯); ಭೃಂಗ- ಬಿಂಗ ; ಭೃಂಗಾರ — ಬಿಂಗಾರ (ಶಮದ. ೨೬೯ ಪ್ರಯೋ). ೨. ಒಂದು ಬಗೆಯ ಖನಿಜ ; ಕಾಗೆಬಂಗಾರ; ಅಭ್ರಕ : ಜಲವಿಹಗಾವಳಿ ಜಲಚರಜಾಲಂ ನೆಱೆ ಚಿತ್ರಿಸೆ ಜಳಕನೆಸೆವ ತೆಳುವಳುಕಿನ ಬಿಂಗದ ಮೇಲ್ಗಟ್ಟೊಪ್ಪಿದುದು (ಪಡುಣಾ. ೯-೬) ; ಬಿಂಗದ ಕುಪ್ಪಿಗೆಗಿಳಿವ ಕುಂಕುಮದ ನಿರಂಗದಿ ತಾಂಬೂಲರಸವ ನುಂಗುವಾಗಿದಿರಿಗೆ ತೋಱುವುದರಸನ ನುಂಗೊರಳೇನ ಬಣ್ಣಿಪೆನು (ಭರತ. ೬-೩೫); ಬುದ್ಧಿಯೆನಿಸುವ ಕರಣವನು ಭವಸಿದ್ಧವಾಗಿಹುದಾತ್ಮನಡಿಯೊಳಗಿರ್ದು ತೋಱುತ ಬಯಲೊಳೆಸೆಯುವ ಬಿಂಗದಂದದಲಿ (ಅಮೃತ. ೭-೮). ೩. ಒಂದು ಬಗೆಯ ಬಳ್ಳಿ : "ಪಱಮೆಯೊಳಗಭ್ರಕದೊಳಂ ಲತೆಯೊಳಂ ಬಿಂಗ" (ಕಬ್ಬಿಮಂ. ೮೯). **ಬಿಂಕ₂** : ೨. ಫಿರಂಗಿಶೂಲೆಗೆ : — ರಸ, ಗಂಧಕ ... ಗೇರ ಹರಳ ಕುಟ್ಟಿ ಬೀಜವ ತೆಗೆದು ಬಿಂಕದ ಹಾಗೆ ಕಾಸಿ (ವಿಸ್ತಿ. ೬೯); ಅದರಲ್ಲಿ ಬಿಂಕದ (Mica) ಹುಡಿಗಳು, ಕೆಲವು ಬೆಣಚು(Felspar)ಗಲ್ಲು ಇವೆಲ್ಲ ಥಳಿಸುವುವು (ಪಾಲಿಪ್ರ. I. ೦೯೬); ಇದು ಒಂದು ಕರಡಿಯಂತಿದ್ದು, ಒಳಗಡೆಯಲ್ಲಿ ಎರಡು ರಬ್ಬರ್ ಬಳೆಗಳ ನಡುವೆ ಸೆಳೆದು ಹಿಡಿಯಲ್ಪಟ್ಟ ಒಂದು ಬಿಂಕದ ಪರೆಯಿಂದ ಕೂಡಿರುತ್ತದೆ (ವಿಜ್ಞಾವಿ. ೨). **ಬಿಂಗು** : ೨. "ಬಿಂಗು (ಗ)—ಭೃಂಗ = ಅಭ್ರಕ" (ತದ್ಭಕೋ. ೩೦); ಇಂಗು ಕರ್ಪುರವಕ್ಕು ಬಿಂಗು ಬಜ್ಜರವಕ್ಕು . . . ಕರ್ಮ ತಾ ಹಿಂಗುವ ದಿನಕೆ (ಸರ್ವಜ್ಞ ೯೯೨). [<ಸಂ. ಭೃಂಗ]

ಬಿಂಗ₂ (ನಾ). ದೋಷ; ಕುಂದು; ಹುಳುಕು.

ಬಿಂಗ ಬಿದಿಸು=ಹುಳುಕನ್ನು ಹೊರಹಾಕು, —ಹೊರಪಡಿಸು : ತಂಗಿಯಾದರೂ ನಮಗೆ ಅನುಕೂಲಳಿದ್ದರೆ ಆ ಗೋವಿಂದನ ಬಿಂಗ ಬಿಡಿಸುತ್ತಿದ್ದೆ (ರಕ್ತರ್ಷ. ೨೯೨). [←ಮರಾ. ಬಿಂಗ]

ಬಿಂಗಗೆಕ್ಕೆ (ನಾ). ಅಭ್ರಕದಂತೆ ನುಣುಪಾದ ಕಪೋಲ, —ಕೆನ್ನೆ : ಬಿಲ್ಬುರ್ಬಿನ ಬಿಂಗಗೆಕ್ಕೆಯ ಬಿಂಬಾಧರದ . . . ಬಾಲೆಯೊರ್ವಳ್ . . . ಬರುತುಮಿರ್ದಳ್ (ರಾಮಾಶ್ವ. ೯೯-೨೨). [ಬಿಂಗ₁+ಕೆಕ್ಕೆ]

ಬಿಂಗರ 'ಬಂಗಾರ' ನೋ.

ಬಿಂಗಳಿ (ನಾ). ದುಂಬಿಯ ಜಾತಿಗೆ ಸೇರಿದ ಒಂದು ಬಗೆಯ ಹುಳು; ಜೀರುಂಡೆ : "ಬಿಂಗಳಿ = ಭೃಂಗಾರೀ=ಜೀರುಂಡೆ" (ತದ್ಭಕೋ. ೩೦).

[<ಸಂ. ಭೃಂಗಾರೀ]

ಬಿಂಗಾರ 'ಬಂಗಾರ' ನೋ.

ಬಿಂಗಾರಿ₁ (ನಾ). ಜಂಬಗಾತಿ ; ಅಹಂಕಾರಿ ; ಸೊಕ್ಕಿನವಳು : ಹ್ಯಾಗೆ ಹೊಂಟಳು ನೋಡು ಬಿಂಗಾರಿ (ರಂಗರೋ. ೬೯).

[<ಬಿಂಕ₁. / ತುಳು. ಬಿಂಗಾರಿ. ಬಿಂಗಿರಿ, ಬಿಂಗ್ರಿ=ಮರಭಿಮಾನವುಳ್ಳ]

ಬಿಂಗಾರಿ₂ 'ಬಂಗಾರ' ನೋ.

ಬಿಂಗಿ (ನಾ). ೧. ಶಿವನ ಪ್ರಮಥಗಣಗಳಲ್ಲಿ ಒಬ್ಬ; ಭೃಂಗಿ : ಬಿಂಗಿಯ ಕುಣಿತಮನೀಕ್ಷಿಸಿಯಂಗನೆ ನಗೆಯುಗುಳ್ವ ತಚ್ಛಿರಃಕಂಪದ ಕಂಪಿಂಗೆಳಸಿ ಮುಡಿಗೆ ಮುಸುಱಿದ ಭೃಂಗಂಗಳ್ ನೆಗೆದ ಪೀಲಿಗೊಡೆಯೆನೆ ತೋರ್ಕುಂ (ರಸರ. ೨-೯೭) ; ಕಂಗಳ ಮುಚ್ಚಿ ತೆಱೆವುತ ಬಿಂಗಿಯಂತಾಡುವ ಕಂಥೆಯ ಜೋಗಿಣಿಯಂಗದಾಟವೆ ನಮ್ಮ ನೃತ್ಯ (ಭರತ. ೦೯-೩೨). ೨. (ಆಲಂ) ನಿರ್ಗತಿಕವ್ಯಕ್ತಿ ; ದರಿದ್ರ : ಅವನೂ ಬಿಂಗಿಯಂತೆ ಬರಿಗೈಯಲ್ಲಿ ಬಂದು ನಿಂತು ಅವಳ ಸ್ನೇಹಭಿಕ್ಷೆಗೆ ಕೈ ಚಾಚಿರಲಿಲ್ಲ (ರೂಪಸ. ೬೦) ; ನಾನು ಭೂಷಣವಾಗಿರುತೀನಿ ನೀನು ಹೀಗೆ ಕೋರಿ ಸುತ್ತಿಕೊಂಡು ಬಿಂಗಿಯ ಹಾಗೆ ನಿಂತಿರು (ರಾಗಿಣಿ. ೯೦). ೩. ಹುಚ್ಚ ; ಮರುಳ : ಬಂಗಾಳದರಸೀತ ನೋಡೆಂದರೀಕ್ಷಿಸಿ ಮುಂಗಡೆಗೆಯ್ದಿದಳೊಡನೆ ಸಿಂಗಾರ ಮುಱುಕು ವಿಡಾಯ ಹಾಱಿತು ಹೊಸಬಿಂಗಿಯಂತಿರ್ದನಾ ನೃಪತಿ (ಭರತ. ೩೩-೯೯) ; ಏ ಬಿಂಗಿ, ನಾನು ಯಾರು ಅಂತ ಮಾಡಿದ್ದೀ ? ನಿನ್ನ ಅಜ್ಜಿ ಇದ್ದಳಲ್ಲ ? ಅವಳು ನನ್ನ ತಂಗಿ (ಮರಮ. ೯೭೩). [< ಸಂ. ಭೃಂಗಿನ್]

ಬಿಂಗು 'ಬಿಂಗ₁' ನೋ.

ಬಿಂಗುಂಡು 'ಬಿಣ್ಗುಂಡು' ನೋ.

ಬಿಂಗುಂಡುಗೊಳ್ (ಕ್ರಿ). ಭಾರವಾದ ಗುಂಡಿಗೆ ಸಿಕ್ಕಿಕೊಳ್ಳು : ಬೆಂ[ಬಿಂ]ಗುಂಡುಗೊಂಡ ಗಂಡಗತ್ತರಿಯ ಸಂಸರ್ಗದರ್ಗಳಮನಮರೆ ಸಾರ್ಚಿಯುಂ (ಪುತ್ರಪು. ೭-೬೯ ಪ). [ಬಿಂಗುಂಡು(<ಬಿಣ್ಗುಂಡು)+ಕೊಳ್₁]

ಬಿಂಗುಸುಬು (ನಾ). ಅಭ್ರಕದ ಪುಡಿಯಿಂದ ಕೂಡಿದ ಮರಳು, —ಉಸುಕು : ನನಸು ಕನಸುಗಳ ದರ್ಶನವನೇಂ ತರಲಾರೆ, ಬಿಂಗುಸುಬು ಬಂಗಾರದಿರವನೊರೆವಂತೆ ? (ಗಿಳಿವಿಂ. ೨೭-೨೦).

[ಬಿಂಗು (<ಬಿಂಗ₁) + ಉಸುಬು (< ಉಸುಕು)]

ಬಿಂಗೆ (ನಾ). (?) : ಕಂಪಿಸಿದನಡಿಗಡಿಗೆ ತಲ್ಲಣಿಸಿ ಕುರುನೃಪತಿಯು ಬಿಂಗೆಯಾಗಿರುತಿರಲ್ಗರ್ವಗಿರಿ ಜರಿದು ರಕ್ತಂಗಳನ್ನೊಸರುತಿರೆ ದ್ರೋಣ ಕೌರವ ರಾಯನಿಂಗಿತವನರಿದು . . . ಇಲ್ಲಿ ನೀವಿದ್ದೇನು ಫಲವೆನಲು (ತುರುಂದ. ೩೦-೦೯). [?]

ಬಿಂಜ (ನಾ). ೧. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷವಾನ್, ವಿಂಧ್ಯ ಮತ್ತು ಪಾರಿಯಾತ್ರ ಎಂಬ ಏಳು ಕುಲ ಪರ್ವತಗಳಲ್ಲಿ ಒಂದು ; ಉತ್ತರ ಹಿಂದೂಸ್ಥಾನ ಮತ್ತು ದಖನ್ನಿನ ಮಧ್ಯದಲ್ಲಿರುವ ನೀಳವಾದ ಪರ್ವತಗಳ ಸಾಲು ; ವಿಂಧ್ಯ : "ಬಿಂಜಮೆನೆ ವಿಂಧ್ಯಂ" (ಕಬ್ಬಿಕ್ಕ. ೩೯) ; ಬಿಂಜದಡವಿಯೊಳಗೆಲ್ಲಂ ನಂಜಿನ

ಮುಬ್ಗೊಂಡು ಬಿಟ್ಟ ತೆಱನಾಯ್ತು (ಕಾದಂಪೂ. ೦೬೨) ; ಮುಂದಿರ್ಪುದು ಬಿಂಜವಡವಿ ಪಸುಳಿಮಕ್ಕಳಿರ್ಬರ್ ಸಹಿತಂ . . . ಪರ್ವತಕ್ಕೆ ಪೋಪ ಸಂಬಂಧಮೇನೆನೆ (ಪುಷ್ಪಾಸ್ತ್ರ. ೧೨-೩೨ ವ). ೨. ಕಾಡು; ಅಡವಿ : ಅರಣ್ಯ: "ಪಱುವೆಂದುಂ ಬಿಂಜಮೆಂದುಂ ಅಡವಿ" (ಕಶಸಾ. ೩೦-೬೦) ; ಅಲ್ಲಿ ನೆರೆದ ಪರ್ವಡೆ ಪಯಣಂಬೋಪಾಗಳೆಲೆಯಿಕ್ಕಿದ ಬಿಂಜಮೆ ನಡೆವಂತೆ ಧನುರ್ಬಲಂ ನಡೆಯೆ (ಬಂಹರಿ. ೧೧-೬೨ ವ) ; ನೇಸಱವೆಳಗಿಗೆ ವೆಜ್ಜಗೊಡದೆ ಬೆಳೆದಿರಲಾ ಬಿಂಜಂ ಭೀಕರತರಮಾಯ್ತು (ಜಯಕಾ. ೧೩-೨೪) ; ನಂಜಿಡಿದ ಭರಣಿಯಂತೋ ಮಹಾಮಾಯೆಗಳ ಬಿಂಜದಂತೋಯೆಂಬವೂಹೆಗಳವಡದಂತೆ ಕಂಜೋದ್ಭವಾಂಡಮೊಪ್ಪಿರ್ದುದೇಂ ಸಾಂದ್ರಾಂಧಕಾರದೊಳ್ (ಶಿಪು. ೪೬-೧೯). ೩. (ಆಲಂ) ಸಮೂಹ; ರಾಶಿ ; ಒಟ್ಟಿಲು : ನೆಲಂ ಬೆಸಲೆಯಾದಂತೆ ಬರ್ಪ ಬೇಡವಡೆ ರಸೆಯಿನೊಗೆವಸುರರ ಪಡೆಯಂತೆಯುಂ . . . ನಡೆವ ನಂಜಿನ ಬಿಂಜದಂತೆಯುಂ . . . ಅಗುರ್ವುಮದ್ಭುತಮುಮಾದುದು (ಶಂರಾಮಾ. ೪-೩೪ ವ).

ಬಿಂಜದೋಜ = ಅಗಸ್ತ್ಯ ; ೯ ವಿಂಧ್ಯಪರ್ವತವು ಮೇರುವಿನ ಔನ್ನತ್ಯದೊಂದಿಗೆ ಸ್ಪರ್ಧಿಸಿ ಮೇಲೇರಿದಂತೆಲ್ಲಾ ಭೂಮಿಯ ಸಮತೂಕವು ತಪ್ಪಿತು. ಆಗ ದೇವತೆಗಳ ಪ್ರಾರ್ಥನೆಯಂತೆ ಅಗಸ್ತ್ಯನು ದಕ್ಷಿಣಕ್ಕೆ ಬಂದಾಗ ವಿಂಧ್ಯವು ಗೌರವದಿಂದ ಅವನಿಗೆ ಮಣಿಯಿತು ಮತ್ತು ಅಗಸ್ತ್ಯನ ಮಾತಿನಂತೆ ಹಾಗೆಯೇ ಬೆಳೆಯದೆ ಉಳಿಯಿತು. ಹೀಗಾಗಿ ಅಗಸ್ತ್ಯನು ವಿಂಧ್ಯಪರ್ವತದ ಗುರುವಾದನು ಎಂಬ ಪೌರಾಣಿಕ ಕಥೆ ಇದೆ : ರಾಜಪರಮೇಶ್ವರಂಗೆ ಬೆಳ್ನಗೆಯೊಳ್ ಬಿಂಜದೋಜ ನೋಜೆಯಿಂ . . . ಪಡಿನುಡಿದಂ (ರಾಮಾಶ್ವ. ೦೪-೨). [<ಸಂ. ವಿಂಧ್ಯ]

ಬಿಂಜಾಡಿ (ನಾ). ಒಂದು ಬಗೆಯ ತೆರಿಗೆ (?) : ಕುಡುಕೂರ ಗ್ರಾಮದ ಒಳಗೆ ಅಂಣಹ[ತ್ವಾ]ರನು ಸ(ಂ)ಮ್ಮ ಅರಮನೆಗೆ ತೆಱುವ ಬಿಂಜಾಡಿಯ ಅಧಿವಾಸದ ಒಳಗೆ ತಂನ ಹದಿಮೊದಲು ಅಪ್ಪಣೆಯ ಬಗೆಯಿಂದ ಕಾಟಿಗ ೫೫ (ಸೌಇಇ. IX—ii. ೪೬೦-೦೪; 1467). [?]

ಬಿಂಡಿಗ (ನಾ). ಒಂದು ಬಗೆಯ ಸಸ್ಯ : "ಅರುಣಮೂಲಮೆನೆ ಬಿಂಡಿಗ ವಕ್ಕು" (ಮಂಗರಾ. ೩೩-೦೪) ; ವರಮಿಂದ್ರವಾರುಣಿಯ ಬೇರ್ ಪರತರಮೂ ಬಿಂಡಿ(ದಿ)ಗಂ . . . ಪರಿಹರಿಕುಂ ವಿಷದುರುವ ಪುಣ್ಗಳಂ ತತ್‌ಕ್ಷಣದಿಂ (ಐಮದ. ೦೬-೦೦೩). [<ಸಂ. ಭಿಂಡಕ]

ಬಿಂಡಿವಾಲ 'ಬಿಂಡಿವಾಳ' ನೋ.

ಬಿಂಡಿವಾಳ, ಪಿಂಡಿವಳ, ಪಿಂಡಿವಾಳ, ಬಿಂಡಿವಾಲ (ನಾ). ಒಂದು ಬಗೆಯ ಆಯುಧ; ಈಟಿ : ಮಧ್ಯಮನಿಷಾದಿಗಳ್ ಮಧ್ಯಮನಿಷಾದಿಗಳೊಳಸಿ ಮುಸಲ ಕಣಾಯ ಕಂಪನ ಮುಸುಂಡಿ ಬಿಂಡಿವಾಳ . . . ಪಾಶಾಂಕುಶಾದಿ ಶಸ್ತ್ರಾಸ್ತ್ರಂಗಳೊಳೆಚ್ಚುಮಿಟ್ಟುಮಿಱಿದುಂ ಪೊಯ್ದು ಮತಿಭಯಂಕರಾಕಾರಮಾಗಿ ಕಾದುವಾಗಳ್ (ಶಂರಾಮಾ. ೦೩-೭೬ ವ) ; ಸಬಳದಲಿ ಗದೆಯಲಿ ಬಿಂಡಿವಾಳ[ಪಾಶಾಂ. ಲ]ದಲಿ ಪರಿಪರಿಯ ಚಿತ್ರದ ಚಮತ್ಕೃತಿ ಕರವ ತೋಱಿಸಿದನು (ಕುಮ್ಮಾಲಿ. ೬-೨೯). ಪಿಂಡಿವಳ : ಚಕ್ರ ಪರಶು ಪಿಂಡಿವಳಂ ಪೇರ್ಬಾಳು . . . ಘಳಕಂಬಿಡಿದಮರರ್ ನೆರೆದುದು (ವೀರೇಶ. ೩೩-೩೦). ಪಿಂಡಿವಾಳ : "ಯಷ್ಟಿಃ, ಪಟ್ಟಿಶಕಃ . . . ಪಿಂಡಿವಾಳಃ, ಗದಾದಂಡಃ, ಚಕ್ರಂ — ಇವು ಮೊದಲಾಗುಳ್ಳುವು ಕೆಯ್ದುಗಳ ಭೇದಂಗಳ್" (ಹಲಾಯು. ೬೮-೩೨೨) ; ಪಿಡಿ ಬಡಿ ಕಟ್ಟು ನೂಂಕು . . . ಗಾಣದೊಳ್ ಪಿಱಿ ಪಿಸುಳ್ದಿರೆ [ಪೋ]ಱಿಸು ಪಿಂಡಿವಾಳದೊಳ್ (ಸುಕುಮಾ. ೬-೩೨) ; ಖಡುಗ ತೋಮರ ಪರಶುಗಳ ಕಕ್ಕಡೆಯ ಕುಂತದ ಪಿಂಡಿವಾಳದ ಕಡುಗಲಿಗಳುಱ್ ಮಗ್ಗಿದರು ತಗ್ಗಿದುದು ಯಮಲೋಕ (ಕುಮ್ಮಾಲಿ. ೪-೩೮). ಬಿಂಡಿವಾಲ : ಶೂಲ ಧಮರುಗ ಬಿಂಡಿವಾಲಗಳಿಂದೆ (ಕೊಲ್ಲಿಮಾ. ೯೪-೬). [<ಸಂ. ಭಿಂದಿವಾಲ]

ಬಿಂದ (ನಾ). ೧. ಗುಂಪು ; ಸಮೂಹ : "ಬಂಬಲ್, ತುಱುಗಲ್, ವಂಗಡಂ, ಗಡಣಂ, ಮೊಗ್ಗರಂ, ಬಿಂದಂ . . . ಗೊಂದಣಿ (ಉಂದಲ್) —ಈ ೪೦ ಸಮೂಹಂ" (ಕಶಸಾ. ೫೬-೨೨೨) ; ಅನಂಗನ ಬೇಂಟೆಯ ಬಿಂದದಂದದಿಂ ಬರೆ ಪೊಸಸುಗ್ಗಿ ಕೆಯ್ಗಱಿಯೆ ಕಣ್ಗೆಸೆದಿರ್ದುವು ನಂದನಾಳಿಗಳ್ (ಶಾಂಶಿಪು. ೬-೦೨೪) ; ಬಿಂದವ ಹಱಿದು ನಿಂದು ಹಾಡಿರೋ ಚಿಣಿತಿಯರಿರಾ (ಸರ್ವಾ. ೪೮-೨೩೩) ; ಜೇನೆಯ್ಗಳಂ ತರ್ಪುದಕ್ಕೆ ಪೊಗೆಗೊಂಡು ಪೊಱಮಡುವ ಬೇಡರ ಬಿಂದಮೊಪ್ಪಿತಾ ಪೆಕ್ಕಣದೊಳು (ಸಮ್ಮಕೌ. ೧೦-೨೬). ೨. ಒಟ್ಟಿಲು : ರಾಶಿ ; ಮೊತ್ತ : ದೆಸೆದೆಸೆಯ ಕಟ್ಟಲೆಯ ಬಿಂದಮೊಂದುಗೂಡಿ ಗುಂಡುಗೊಂಡು . . . ಬಾಂದಳಮನೇಱಿ ಪೋಪುವೆನೆ (ರಾಮಾಶ್ವ. ೬೨-೦೨).

[< ಸಂ. ಬೃಂದ. / ತೆಲು. ಬಿಂದ]

ಬಿಂದಂಗೊಳ್ (ಕ್ರಿ). ಒಟ್ಟಾಗು ; ಕೂಡು ; ಸೇರು : ಬಿಂದಂಗೊಂಡಿಹ ಕಾಲ್ವೆ ಮಾರಿಕಣಿವೇ ಜಾತಂಗಳೆಲ್ಲೆಲ್ಲಿಯುಂ ಸಂದೊಳ್ವಚ್ಚದ ಪಾಂಗನಾಂತು ಪರಿಗುಂ (ಮೈಸೂಮಾ. ೦-೪೮). [ಬಿಂದ + ಕೊಳ್$_1$]

ಬಿಂದಣಿಕೆ 'ಬಂದಣಿಕೆ' ನೋ.

ಬಿಂದರೆ, ಬಿಂದಾರಿ (ನಾ). ಒಂದು ಬಗೆಯ ಮರ : ಬಿಂದರೆ ಬೀಜವನ್ನು ನೀರಲ್ಲರೆದು ತೆಗೆದುಕೊಳ್ಳಲು ಮೂಲವ್ಯಾಧಿಯ ರಕ್ತ ನಿಂತು ಗುಣಮಕ್ಕುಂ (ಸಳವೈ. ೨೮೮). ಬಿಂದಾರಿ : ದೊಡ್ಡತೊಪ್ಪೆಮರ, ದೊಡ್ಡಿಮರ, ಬಿಂದಾರಿಮರ, ದಲ್ಲಿಮರ, ಬಟ್ಟಗ (ಮೈಸಿಗಿ. ೪೫-೬೬೩). [?]

ಬಿಂದಲಿ, ಬಿಂದಿಲು (ನಾ). ಚಿಕ್ಕ ಮಕ್ಕಳ ಮುಂಗೈಗೆ ತೊಡಿಸುವ ಒಂದು ಬಗೆಯ ಆಭರಣ : ಗೋದಕ್ಕ ಕೂಸಿಗೆ ಬಂಗಾರದ ಬಿಂದಲಿ, ಜರದ ಕುಂಚಿಗೆ ಎಲ್ಲಾ ತಂದಿದ್ದರು (ವೈವಿ. ೨೦೦) ; ದತ್ತೂನ ಬಿಂದಲಿ ಮುರಿಸಿ ಟಿಳಕರಿಗೆ ಎರಡು ತೊಲೆಯ ಉಂಗುರ ಮಾಡಿಸಿದ್ದೆ (ಸ್ಮೃತಿಪ. ೦೬೪). ಬಿಂದಿಲು : ತರುಣಂಗೆ ಬಿಂದಿಲರಳೆಲೆ ಗೆಜ್ಜೆ . . . ಪೊಕ್ಕುಳ ಘಂಟೆ ಮೊದಲಾದ ಮಣಿದೊಡಗಳ ಹರುಷದಿನಲುಕರಿಸಿ (ರಾಘಶ. ೨-೪೬); ಬಿಂದಿಲರಳೆಲೆ ಗೆಜ್ಜೆಯನ್ನು ... ಮಣಿಮಯಮುದ್ರೆಗಳ ಬೆರಳ್ಗಳಿಗಮರ್ಚಿ (ನವಮೋ. ೦೨-೦೮). [← ಮರಾ. ಬಿಂದಲೀ, ಬಿಂದಲೇ, ಬಿಂದುಲೇ]

ಬಿಂದಲು (ನಾ). ಒಂದು ಬಗೆಯ ಹೂವು : ದೇವರಿಗಾಗಿ ಒಂದು ಬಿಂದಲನ್ನು ಕೊಯ್ಯಬಹುದು (ಬಾಳ್ಕೆಪ. ೬೨). 'ಬಿಂದಿಗೆ' ಪರಾ. [?]

ಬಿಂದಾರಿ 'ಬಿಂದರೆ' ನೋ.

ಬಿಂದಿ (ನಾ). ಒಂದು ಬಗೆಯ ಆಭರಣ : ಮಕ್ಕಳ ಬಯಸಿ . . . ಹರಿಗೆ ಪಟ್ಟದ ಹರಕೆ ತೊಟ್ಟಿಲ ಹರಕೆ ಬಿಂದಿಯ ಹರಕೆವಿಡಿದಿಹರರಸಿ ಕೌಸಲೆದೇವಿ ಕೈಕೆ ಸುಮಿತ್ರೆಯರು (ಕೌಶಿರಾ. ೦-೩೩); ಕೆಂದ ಪೀತಾಂಬರವ ಸುಧೆ ಉಟ್ಟಿರುವಳು ಅಂದಮುಡಿಗೆ ಮುತ್ತಿನ ಸೊಂಡಿಲ ಬೈತಲ ಬಿಂದಿ ಬಿಜವರ ಬಲು ಚೆಂದ (ಸಿದ್ಧಪು. ೧೯-೬೦).

[?. / ತೆಲು. ಬಿಂದೀ = ಮುಂದಲೆಯ ಆಭರಣ. / ಹಿಂ. ಮರಾ. ಬಿಂದೀ = ಕೆನ್ನೆಸರಪಳಿ]

ಬಿಂದಿಗ (ನಾ). ಗುಂಪಿನಲ್ಲಿರುವ ಕ್ಷುದ್ರದೇವತೆ (?) : ಕೆಮ್ಮಗಿದೇಕೆ ನಾಡ ಪಲವಂದದ ನಂದಿದ ಬಿಂದಿಗರ್ಕ್ಕಳಂ ನೀಮ್ಮರುಳಾಗಿ ದೇವರಿವರೆನ್ದವರಂ ಮತಿಗೆಟ್ಟು ನಿನ್ನನೇಕಮ್ಮ ತೊಳಲ್ತಿದಪ್ಪೆ ಭವಕಾನನದೊಳ್ ಗೊಮ್ಮಟದೇವನೆಂ ನೆನೆಯ ನೀಗುವೆ ಜಾತಿಜರಾದಿದುಃಖಮಂ (ಎಕ. II. ೨೩೪-೪೦; ಸು. 1180). 'ವೃಂದಾರಕ' ಹೋ. [ಬಿಂದ + —ಇಗ]

ಬಿಂದಿಗ (ನಾ). ೧. ಬಾವಿಯಿಂದ ನೀರನ್ನು ಸೇದಲು ಮತ್ತು ಸೊಂಟದಲ್ಲಿಟ್ಟುಕೊಂಡು ಹೊರಲು ಅನುಕೂಲವಾದ ಸಣ್ಣ ಕಂಠವುಳ್ಳ, ಗುಂಡನೆಯ ಲೋಹದ ಪಾತ್ರೆ ; ಕೊಡಪಾನ ; ಕೊಡ : ಬೆಳಕಿನಿಂದಗ್ಭವಣಿಯಂ ಕಂಗೊಳಿಸಿ ತುಂಬಿದ ಹೊನ್ನ ಬಿಂದಿಗೆಗಳನಿರಿಸಿ

ಲಲಿತಾಂಗಿ . . . ಧೂಪಾರತಿಯನೀಯೆ (ಬಸಪು. ೧೨-೩೪); ಪಂದಲೆಯೊಂದು ಬಾಸಿಗಂ ನೆತ್ತರ ತಳ್ತ ಬಲ್ದಲೆಯ ಬಿಂದಿಗೆ ಪಾವುಗೆ ಪಂಚಮಸ್ವನಂ ಬೆತ್ತದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೩೩೩); ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ ತಾರೇ ಬಿಂದಿಗೆಯ ಬಿಂದಿಗೆ ಒಡೆದರೆ ಒಂದೇ ಕಾಸು ತಾರೇ ಬಿಂದಿಗೆಯ (ಪುರಂದ. ೦-೪೯ ಪಲ್ಲವಿ). ೨. ಗುಂಡನೆಯ ಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು: ಸುಗಂಧರಾಜ ಕನಕಾಂಬರಿ ಬಿಂದಿಗೆ ನಾಗಲಿಂಗಪುಷ್ಪ ನೀಲಾಂಬರಿ . . . ಸೂರ್ಯಕಾಂತಿ ಪುಷ್ಪಗಳು (ಸಿದ್ಧಪು. ೨೯-೪೦).

[ದೇ. ॥ ಮಲ. ವಿನ್ದ; ತುಳು. ಬಿಂದಿ = ಸಣ್ಣ ಮಣ್ಣಿನ ಮಡಕೆ; ತೆಲು. ಬಿಂದಿಯ. ಬಿಂದೆ. / ಮರಾ. ಬಿಂದಗಾ]

ಬಿಂದಿಲು 'ಬಿಂದಲಿ' ನೋ.

ಬಿಂದಿಸು (ಕ್ರಿ). ಸೊನ್ನೆಯಿಡು; ಬಿಂದುವಿನ ಗುರುತುಮಾಡು: ಬರೆದು ಕುಂಡಲಿಚಕ್ರಮಂ . . . ನಿಜೇಷ್ಟಗ್ರಹದೆಡೆಗೆ ಪೇಟ್ದೆಡೆಗಳಂ ಬಿಂದಿಸಿ ಪೇಟದೆಡೆ ತರದಿ ರೇಖೆಯನಂತವು ಸರಿಯಾಗಿ ಸರಿಗಳೆವುದು (ಜಾತಕ. ೦೦-೨). [ಬಿಂದು + — ಇಸ್ಸು$_3$]

ಬಿಂದು (ನಾ). ೧. (ಯಾವುದಾದರೂ ದ್ರವದ) ಹನಿ; ತೊಟ್ಟು: "ಬಿಂದುವೆನೆ ಸುರಿವ ಹನಿಯಕ್ಕು" (ಮಂಗರಾ. ೦೨೪-೦೫); ಅಱಿದಡೆ ತಾವರೆಯೆಲೆಯ ಬಿಂದುವಿನಂತೆ ಅಂಗಲೇಪವಿಲ್ಲದೆ ಗೊಹೇಶ್ವರಲಿಂಗವನಱಿಯಬೇಕು (ಅವಸಂ. ೨೬೩-೦೨೦೦); ಹಿಂಡುಹಿಂಡಾಗಿ ನೊಣಗಳು ಬಂದು . . . ಪಾಯಸದ ಬಿಂದುಗಳನ್ನು ನಿರಾತಂಕವಾಗಿ ಹೀರಿದ ದೃಶ್ಯವನ್ನು ವಿಸ್ಮಿತನೇತ್ರಗಳಿಂದ ನಾನು ನೋಡಿದ್ದು ಇಂದಿಗೂ ನೆನಪಿದೆ (ನಂಟರು. ೪೩). ೨. ಚುಕ್ಕೆ; ಬೊಟ್ಟು: ಹಣೆಯಲ್ಲಿ ಚಂದ್ರಕುಂಕುಮಬಿಂದುವನ್ನಿಟ್ಟು (ಪತ್ರಾಂಗ. ೦೯-೫೦೪); ಬಿಂದು ವಿಸರಗಳನುವು,ವಂಕು ಸರಲಗಳನುವು ಚೆಂದ ಕಣ್ಣಿಗೆ ವರ್ಣವಿವಿಧಂಗಳನುವು (ಮಂಕುಕ. ೪೪೮). ೩. ಗುರುತು; ಚಿಹ್ನೆ. ೪. ಆನೆಯ ಮೈಮೇಲಿನ ಬಿಳಿಯ ಮಚ್ಚೆ. —ಚಿಬ್ಬು: "ಬಿಂದು, ಪದ್ಮಕಂ — ಈ ೨ ಚಿಬ್ಬು" (ಹಲಾಯು. ೩೭-೬೬); ಸೂಕ್ಷ್ಮಬಿಂದುರುಚಿ[ರ]ನುಂ ಕಾಳಿಂಗವನಸಂಭೂತನುಮನೇಕಲಕ್ಷಣೋಪೇತನುಮಪ್ಪ ತ್ರಿಭುವನಾಭರಣಮೆಂಬಾನೆಗಂ . . . ತ್ರಿಭುವನತಿಲಕಮೆಂಬ ಕುದುರೆಗಂ ಪಟ್ಟಂಗಟ್ಟಿ (ಪಂಪಭಾ. ೦೪-೨೦ ವ). ೫. ಶುಕ್ಲ; ವೀರ್ಯ; ರೇತಸ್ಸು: ಬಾಯೆ ಭಗವಾಗಿ ಕೈಯೆ ಇಂದ್ರಿಯವಾಗಿ ಹಾಕುವ ತುತ್ತುಗಳೆಲ್ಲಾ ಬಿಂದು ಕಾಣಿರೋ (ಅವಸಂ. ೦೦೩-೪೬೯); ಬಿಂದುವೂ ಮೂತ್ರವೂ ಒಂದೆ ನಾಳದಿಬಕ್ಕು ಒಂದ ಬಿಟ್ಟೊಂದ ತಡೆದಿಹರೆ ಪರಬೊಮ್ಮವಂದು ತಾನಕ್ಕು (ಸರ್ವಜ್ಞ. ೩೩೮). ೬. ಹುಟ್ಟಿದ ಮಕ್ಕಳನ್ನು ಕಳೆದುಕೊಂಡಿರುವವಳು; ಮಕ್ಕಳಿಲ್ಲದಿರುವವಳು: "ನಶ್ಯತ್ಪ್ರಸೂತಿಃ, ಬಿಂದುಃ — ಈ ೨ ಮಕ್ಕಳ್ ಬಾಟದವಳ್" (ಹಲಾಯು. ೮೦-೩೩೪); "ಮಕ್ಕಳುಱ್ ಸಾವ ಸತಿ ಬಿಂದುವಕ್ಕು" (ಮಂಗರಾ. ೮೯-೩). ೭. ಹುಬ್ಬುಗಳ ನಡುವಿನ ಜಾಗ. —ಎಡೆ. ೮. [ವ್ಯಾಕ] (ಯೋಗವಾಹಗಳಲ್ಲಿ ಒಂದಾದ) ಅನುಸ್ವಾರದ ಚಿಹ್ನೆಯಿಂದ ಗುರುತಿಸುವ ವರ್ಣ: ಅನುಸ್ವಾರ; ಸೊನ್ನೆ: ಬಿಂದು ವಿಸರ್ಗಂ ವ್ಯಂಜನವೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ ಬಂದೊಡಱಿ ವನಜಮುಖಿ ಗುರುವೆಂದು (ಛಂದೋಂಬು. ೧-೩೫); ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಟ ಚೆಲ್ವು . . . ವಿಸರ್ಗದೊಳ್ಪೊಂದಿರಲಕ್ಕರಕ್ಕೆ ಬರೆವಂ . . . ಮಾದಿರಾಜವಿಬುಧಂ (ಪುಷ್ಪಪು. ೦೪-೫೮); ಬಿಂದುವನುಸ್ವಾರಂ ತಾನೆಂದಕ್ಕುಂ ಸೊನ್ನೆ ಮುತ್ತುವೋಲಃ ವೃತ್ತತೆಯಿಂ ಸಂದಿರ್ಪುದು (ಕಮದ. ೦೦). ೯. [ಕಾವ್ಯಮೀ] ನಾಟಕದ ಕಥಾವಿನ್ಯಾಸದಲ್ಲಿ ಗೌಣವಾಗಿದ್ದ ಘಟನೆಯೊಂದು ಒಮ್ಮೆಲೇ ಪ್ರಾಮುಖ್ಯವನ್ನು ಪಡೆಯುವುದು: ಬೀಜಂ ಬಿಂದು ಪತಾಕೆ ಪ್ರಕರಿ ಕಾರ್ಯಮೆನೆ ಪಂಚವಿಧಂ ನಿಪುಣಕವಿರಚನೆಯೊಳ್ ಸಪ್ರಪಂಚದಿಂದೊಂದಿ ತೋಱುಗುಂ ಸಂಧ್ಯಂಗಂ (ಕಾವ್ಯಾವ. ೯೫೮). ೧೦. [ಕಾಮಶಾ] ದಂತಕ್ಷತಗಳಲ್ಲಿ ಒಂದು: ನಲ್ಲಳ ತುಟಿಗಳ ಮೇಲೆ ಒತ್ತಿದ ನಲ್ಲನ ಹಲ್ಲಿನ ಗುರುತು: 'ಬಿಂದುಮಾಲೆ' ಪರಾ. ೧೧. [ತತ್ತ್ವಶಾ] ಪ್ರಪಂಚದ ಸೃಷ್ಟಿಗೆ ಕಾರಣವಾದ ನಾದ, ಬಿಂದು ಮತ್ತು ಕಳೆಗಳೆಂಬ ಮೂರು ಅವಸ್ಥೆಗಳಲ್ಲಿ ಎರಡನೆಯದು: ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು . . . ಲೋಕದ ಸಂದೇಹಿಗಳೆತ್ತ ಬಲ್ಲರೈ (ದೇರಾವ. ೬೫-೦೩೨); ಈ ಷಟ್ಸ್ಥಲಂ ತಮ್ಮೊಳೆರಡೆರಡು ಕೂಡುತ ಮೂಱು ತೆಱನಾಗಿ ಕಳೆ ನಾದ ವರಬಿಂದುವೆಂದು ಭೇದಿಸಿದಾದಿಶಿಕನ ಚರಣಾಂಬುಜಕ್ಕೆ ಶರಣು (ಲಿಶಿಸಂ. ೫೦-೦೯); ತನು ನಾದಂ ಗುರು ಲಿಂಗಂ ಮನಮುಂ ವರ ಬಿಂದು (ಹಮ್ಮೀರ. ೫-೩೪). ೧೨. [ವೀಶೈ] ಮೂರು ತತ್ತ್ವಗಳಲ್ಲಿ ಒಂದಾದ ಪಾಶದ ಐದು ವಿಭಾಗಗಳಲ್ಲಿ ಒಂದು: ಶೈವ ಸಿದ್ಧಾಂತದಲ್ಲಿ ಪಾಶವು ಐದು ವಿಧವಾಗಿದೆಯೆಂಬ ವಿವರಣೆ ಇದೆ. ಮಲ, ರೋಧಶಕ್ತಿ, ಕರ್ಮ, ಮಾಯಾ, ಬಿಂದು ಅಥವಾ ಮಹಾಮಾಯ ಎಂಬಿವೇ ಪಾಶದ ವಿಭಾಗಗಳು (ಭಾರದ. ೨೦೦). [ಸಂ.]

ಬಿಂದುಕ (ನಾ). [ಚಿತ್ರಶಾ] ಚಿತ್ರಗಳಿಗೆ ಬಣ್ಣ ಹಾಕುವ ಅನಿಲಕ, ಪತ್ರಕ, ಬಿಂದುಕ, ಧೂಮ್ರಾವರ್ತಕ, ಉದ್ವರ್ತನ ಮತ್ತು ಚಿತ್ರಪ್ರವರ್ತನಗಳೆಂಬ ಆರು ಬಗೆಯ ಕ್ರಮಗಳಲ್ಲಿ ಒಂದು: ಅನಿಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತಕಮುದ್ವರ್ತನಂ ಚಿತ್ರಪ್ರವರ್ತನಮೆಂಬಾಱುಂ ತೆಱದಣ್ಕೆಯುಮಂ . . . ಪರಿಭಾವಿಸಿ ನೋಡಿ (ಮಲ್ಲಪು. ೫-೪೨). [ಸಂ.]

ಬಿಂದುಗಳೆ (ಕ್ರಿ). ದ್ರವಿಸುವಂತೆ ಮಾಡು; ಕರಗುವಂತೆ ಮಾಡು (?): ತೀವಿದಮೃತವಂ ತುಳುಂಕಿದುಂ ಚಂದ್ರಿಕೆಯಂ ಬಿಂದುಗಳೆದಂ . . . ಏನುತೆ ಭೋಂಕನೆ ಸಂಕಿಲಿಯನತ್ತಲವರ ಮನೆಗೊಯ್ದರ್ (ನಂಬರ. ೦೨-೬೨). [ಬಿಂದು + ಕಳೆ$_1$]

ಬಿಂದುಚಕ್ರ (ನಾ). [ವೀಶೈ] ಚಕ್ರವು ರಥವನ್ನು ನಡೆಸುವಂತೆ ಪ್ರಪಂಚದ ವ್ಯವಹಾರವು ನಡೆಯುವುದಕ್ಕೆ ಕಾರಣವಾದ ಶಿವಶಕ್ತಿ: ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರದೊಳಗೆ ಹುಟ್ಟದ ಯೋನಿಯಿಲ್ಲ ಮುಟ್ಟದ ನೆಲನಿಲ್ಲ (ಸನ್ನಪ. ೪. ೫೩೪-೦೦೫೨). [ಸಂ.]

ಬಿಂದುಚ್ಯುತಕ (ನಾ). [ಕಾವ್ಯಮೀ]ಇರುವ ಬಿಂದುವನ್ನು ಬಿಡುವುದೂ ಇರಬೇಕಾದ ಬಿಂದುವನ್ನು ಸೇರಿಸುವುದೂ ಸಾಧ್ಯವಾಗುವ ಒಂದು ಪ್ರಹೇಳಿಕೆಯ ಪ್ರಕಾರ: ಸೊಗಯಿಸುಗುಮಿಂದ್ರನೀಲಮಣಿಸನ್ನಿಭದೊಳ್ ಮಿಗೆ ಜಳನಿಧಿಯೊಳಗುದಿತದಿಂದಿರದವೊಲ್ನೆಗದತಿಧವಳಮೂರ್ತಿಗೆ ಘನವಳಯಸದಗ್ಧ ಗಗನದೊಳುಱಿಮಱಿದು ವಿಶಾಳಿತಾಶಾವಳಯಂ (ಬಿಂದುಚ್ಯುತಕಂ) (ಕವಿರಾ. ೨-೦೪೭). [ಸಂ.]

ಬಿಂದುಚ್ಯುತಿ (ನಾ). = ಬಿಂದುಚ್ಯುತಕ: ಪೇಟ್ದೆಂ . . . ಆ ವರ್ಣವ್ಯತ್ಯಯಮಂ ಬಿಂದುಚ್ಯುತಿಯಂ ಭಾವಿಸಿದೊರ್ನುಡಿಯಂ (ಕವಿರಾ. ೨-೦೪೨). [ಸಂ.]

ಬಿಂದುಜ (ನಾ). (ನೀರಿನ) ಹನಿಯಿಂದ ಹುಟ್ಟಿದುದು: ಅಂಡಜ ಪಿಂಡಜ ಬಿಂದುಜ (ಜರಾಯುಜ) ಉದಯವಾಗದಂದು . . . ಪರಾಪರವಸ್ತು ನೀನೊಬ್ಬನೇ ಇದ್ದೆಯಯ್ಯಾ (ಸಿದ್ಧೇವ. ೭-೨೦). [ಸಂ.]

ಬಿಂದುಪಾಶ (ನಾ) — ಬಿಂದು ೧: ಆ ಪಾಶಪದಾರ್ಥವು ಪಶುಬಂಧಲಕ್ಷಣಮುಳ್ಳುದಾಗಿ ಪಶುಕೋಟಿಯಂ ಬಿಡದೆ ವ್ಯಾಪಿಸಿ ಶಿವಾಧೀನಮಾಗಿ ಮಲಪಾಶ ಮಾಯಾಪಾಶ ಕರ್ಮಪಾಶ ಬಿಂದುಪಾಶ ತಿರೋಧಾನಪಾಶವೆಂದು ಪಂಚಪ್ರಕಾರಮಾಗಿರ್ಪುದು (ವಿವೇಕ. ೧೬೫) [ಸಂ.]

ಬಿಂದುಮಂತ (ನಾ). ೧. ಹನಿಗಳಿಂದ ಕೂಡಿದುದು. ೨. [ವ್ಯಾಕ] ಅನುಸ್ವಾರಸಹಿತವಾದುದು : ಆ ಸಮುಚಿತಬಿಂದುಸ್ಥಿತಿ ಬಿಂದುಮಂತ ಶಬ್ದಕ್ಕೆ ಬಿಂದುಲೋಪಂ ಬಹುಳಂ (ಶಮದ. ೨೮೩). [ಸಂ. ಬಿಂದುಮತ್]

ಬಿಂದುಮತಿ (ನಾ). [ಕಾವ್ಯಮೀ]ಒಂದು ಪದ್ಯದಲ್ಲಿ ಇರುವ ಪ್ರಸಕ್ತವಾದ ಅರ್ಥವನ್ನು ಸೂಚಿಸುವಲ್ಲಿ ಬಿಂದುವನ್ನು ಅಧಿಕವಾಗಿ ಉಪಯೋಗಿಸಿ ಚಮತ್ಕಾರದಿಂದ ರಚಿಸುವ ಪದ್ಯ : ಒಂದು ಬಗೆಯ ಒಗಟಿನ ಪದ್ಯ. [ಸಂ.]

ಬಿಂದುಮಾಧವ (ನಾ). ವಿಷ್ಣುವಿನ ಹೆಸರುಗಳಲ್ಲಿ ಒಂದು : P ಕಾಶೀಕ್ಷೇತ್ರದಲ್ಲಿ ನೆಲೆಸಿರುವ ವಿಷ್ಣು: ಬಿಂದುಮಾಧವನ ಘಟ್ಟಕ್ಕೆ ಹೋಗುವೆ ತಾರೇ ಬಿಂದಿಗೆಯ (ಪುರಂದ. ೧-೪೯-೩); ವಿಶ್ವೇಶ್ವರ . . . ಬಿಂದುಮಾಧವ ಮುಂತಾದ ಎಲ್ಲ ದೇವರುಗಳ ದರ್ಶನವಾಯಿತು (ಗಂಮಾಯಿ. ೦). [ಸಂ.]

ಬಿಂದುಮಾಲೆ (ನಾ). = ಬಿಂದು ೧೦ : ವೃತ್ತಮಾಗಿರೆ ತುಟಿಯನೊತ್ತಲದೆಯಧರಮಣಿ ಚಿತ್ತಭವಗೃಹ ನಿಟಲಕಕ್ಷದಲ್ಲಿ ತಳ್ತೆಸೆಯೆ ಪಲ್ವಜ್ಜೆ ಮತ್ತುಗುರೊಳೆಳೆಯಲದು ಬಿತ್ತರದ ಮಣಿಮಾಲೆ ಬಿಂದುಮಾಲೆ (ಜನವ. ೭-೩೦). [ಸಂ. ಬಿಂದುಮಾಲಾ]

ಬಿಂದುವಿಡು (ಕ್ರಿ). ಹನಿಯಿಡು ; ತೊಟ್ಟಿಕ್ಕು ; ಒಸರು : ತಮಾಲ ಪಲ್ಲವಮಂ ಪಿಡಿದು ತನ್ನ ಬಿಂದುವಿಡುವ ಮೊಗದ ಬೆಮರಂ ಬೀಸುವಂತೆಯುಮಿರ್ದಳ್ (ಕಾದಂಬ. ೯೦) ; ಬಿಂದುವಿಡುವಿಂದೂಪಳಜಳಪುತ್ರಿಕೆಗಳಿಂ ಕೆಂಪಿಡುವ ಕಂಕೆಲ್ಲಿಯ ಪಲ್ಲವಾಸ್ತರಣಂಗಳಿಂ . . . ಹಿಮಗೃಹಮಂ ಸಮೆದು (ಕುಸುಮಾ. ೧೩-೪೬ ವ). [ಬಿಂದು + ಬಿಡು]

ಬಿಂಪು 'ಬಿಣ್ಪು' ನೋ.

ಬಿಂಬ (ನಾ). ೧. ಸೂರ್ಯ ಅಥವಾ ಚಂದ್ರನ ಸುತ್ತಲೂ ಇರುವ ಪ್ರಭಾವಲಯ, — ಪರಿವೇಷ : " ಮಂಡಲಂ, ಬಿಂಬಂ — ಈ ಎರಡು ಚಂದ್ರಮಂಡಲದ ಪೆಸರ್ " (ಹಲಾಯು. ೬-೪೪) ; ಬಿಂಬದಧಿದೈವಮರ್ಕನ ಬಿಂಬದೆ ತಳರ್ದಿಟಿದುದಿಂತಿದದ್ಭುತವಸುರಂಗೆಂಬಿನವಿನಬಿಂಬದ ದೆಸೆಯಿಂ ಬಂದಿಳೆಗಿಟಿದನಮಲಕಾಂತಿಮುನೀಂದ್ರಂ (ಜಗವಿ. ೩ ೩೨); ಬಿಂಬದೊಳಗಿರ್ಪ ಜಿನಪತಿಬಿಂಬಕ್ಕೆಳೆಯಿಂದೆ ಪೆರ್ಚಿ ಕಣ್ಣೆಂಜಲ್ಗಿಂದ್ರಂ ಬಿಗಿದ ಪೊನ್ನ ಕಾಹಳೆಯೆಂಬಿನಮೆಸೆದಂ ಮೃಗಾಂಕನರ್ಧೋದಯದೊಳ್ (ಅನಂಪು. ೭-೬೦). ೨. ಮಂಡಲಾಕಾರವಾದುದು ; ವೃತ್ತತೆಯೆನ್ನುಳ್ಳುದು. ೩. ಪ್ರತಿರೂಪ ; ಪ್ರತಿಚ್ಛಾಯೆ ; ಪಡಿನೆಳಲು : ಅದಱ ಪರಾರ್ಧ್ಯನೀಲಮಣಿ ಕುಟ್ಟಿಮಭೂತಳದರ್ಪಣೈಕಬಿಂಬದೊಳಹಮಿಂದ್ರದಿವ್ಯತನು ಬಿಂಬಿಸೆ ರೂಪಿದು ಬಿಂಬಮಿಂತಿದೆಂಬುದನಱಿಯಲ್ಕೆ ಬಾರದು (ಶಾಂತಿಪು. ೯-೧೨೨). ೪. ಕನ್ನಡಿ ; ದರ್ಪಣ. ೫. ವಿಗ್ರಹ ; ಮೂರ್ತಿ ; ಪ್ರತಿಮೆ : ಕಂಬದಿನೊ ಬಿಂಬದಿನೊ ಮೋಕ್ಷವವರಿಂಗಾಯ್ತು ಸಿಂಬಳದಿ ನೊಣ ನೀನು (ಮಂಕುಕ. ೪೮೩); ಬಿಂಬದೊಳಗಮಿತಸತ್ತ್ವ ಪಿಡಿದಿಡುವ ಭಕ್ತಿಯಿಂಬು ಕಿಂಚಿನ್ಮತಿಗೆ (ಮಂಕುಕ. ೪೯೦). ೬. ಒಂದು ಬಗೆಯ ಬಳ್ಳಿ ಮತ್ತು ಅದರ ಹಣ್ಣು ; ತೊಂಡೆ: "ಬಿಂಬ ತೊಂಡೆಯಕ್ಕುಂ" (ಮಂಗರಾ. ೩೯-೨೩); ಬಿಂಬದ ಪಕ್ವಮಾದ ಫಳಮೆಂಬಿನಮೀ ಜಗದಲಿ ಚೆಲ್ವನಾಲಂಬಿಸಿದತ್ತು ಮಾನಿನಿಯ ಸಾರಮೆನಿಪ್ಪಧರಂ (ಪಾರಪು. ೨-೪೯). ೭. ಓತಿಕೇತ. ೮. ಕಾಮನ ಬಿಲ್ಲು. ೯. ಕಿರಣ; ರಶ್ಮಿ. ೧೦. ಗಗನ; ಆಕಾಶ. ೧೧. ಮಳೆ; ವೃಷ್ಟಿ. ೧೨. ಬಟ್ಟೆ; ವಸ್ತ್ರ " ಅಂಬರಂ ವೃಷ್ಟಿ ಸುವೃತ್ತ ಬಿಂಬಿಕೆ ನಭಂ ಪ್ರತಿರೂಪ ಮಯೂಖಮಿಂದ್ರಚಾಪಾಷ್ಟಕಮಿಂತು ಬಿಂಬಮೆನಿಸಿರ್ಕುಂ" (ಪಾಸಾರ. ೭೦). ೧೩. ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು : ಕಾಮಿಕ, ಯೋಗಜ . . . ಚಂದ್ರಜ್ಞಾನ, ಬಿಂಬ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಶಾರದ. ೭೨). 'ಬಿಂಬಾಗಮ' ಪರಾ. [ಸಂ.]

ಬಿಂಬಕಲ್ಪನೆ (ನಾ). ಮಾತಿನಿಂದ ಹೊಳೆಯುವ ಚಿತ್ರವನ್ನು ಮನಸ್ಸಿನಲ್ಲಿ ಸೃಷ್ಟಿಸಿಕೊಳ್ಳುವುದು : ಮಕ್ಕಳ ಬಿಂಬಕಲ್ಪನೆಯ ರೀತಿಯಲ್ಲೂ ಭಿನ್ನತೆ ಕಾಣಬಹುದು . . . ಕೆಲವರಿಗೆ ಸ್ಥಾವರರೂಪದ ಬಿಂಬಕಲ್ಪನೆಯಲ್ಲಿ ಚತುರತೆಯಿದ್ದರೆ ಮತ್ತೆ ಕೆಲವರಿಗೆ ಚಲನ ಬಿಂಬಕಲ್ಪನೆಯಲ್ಲಿ ಹೆಚ್ಚಿನ ಚಾತುರ್ಯವಿರುತ್ತದೆ (ಶಿಕ್ಷದ. ೯೪). [ಸಂ. ಬಿಂಬಕಲ್ಪನಾ]

ಬಿಂಬಗ್ರಾಹಕ (ನಾ). ಪ್ರತಿಚ್ಛಾಯೆಯನ್ನು ಬಿಂಬಿಸುವ ಯಂತ್ರ ಸಲಕರಣೆ : ಛಾಯಾಗ್ರಾಹಿ ; ಕ್ಯಾಮೆರಾ : ಅಬೆ . . . ಬಿಂಬಗ್ರಾಹಕಗಳಲ್ಲಿ (ಕ್ಯಾಮರಾ) ಮುಖ್ಯ ಸುಧಾರಣೆಗಳನ್ನು ಮಾಡಿದುದಲ್ಲದೆ . . . ಕೂಲಂಕಷಶೋಧನೆ ನಡೆಸಿದ (ಕವಿಕೋ. I. ೩೮೪). [ಸಂ.]

ಬಿಂಬಗ್ರಾಹಿ (ನಾ). = ಬಿಂಬಗ್ರಾಹಕ : ವಿಮಾನಗಳಲ್ಲಿ ಬಿಂಬಗ್ರಾಹಿಗಳನ್ನು (ಕ್ಯಾಮರ) ಕೊಂಡೊಯ್ದು ಅಂತರಿಕ್ಷದಿಂದ ಬಂದು ಭೂಪ್ರದೇಶದ ಛಾಯಾಚಿತ್ರಗಳನ್ನು ಪಡೆದು . . . ನಕ್ಷೆಯನ್ನು (ಟಾಪೋಗ್ರಫಿಕ್ ಮ್ಯಾಪ್) ತಯಾರಿಸಬಹುದು (ಕವಿಕೋ. I, ೦೧೦). [ಸಂ. ಬಿಂಬಗ್ರಾಹಿನ್]

ಬಿಂಬಪ್ರತಿಬಿಂಬಭಾವ (ನಾ). ೧. ಬಿಂಬಕ್ಕೂ ಪ್ರತಿಬಿಂಬಕ್ಕೂ ಇರುವ ಪರಸ್ಪರಸಂಬಂಧ : ಈ ಸಂಬಂಧವನ್ನು ದೃಗ್ದೃಶ್ಯಭಾವ, ಬಿಂಬಪ್ರತಿಬಿಂಬಭಾವ, ವ್ಯಂಗ್ಯ ವ್ಯಂಜಕಭಾವ, ಭೋಗ್ಯಭೋಕ್ತೃಭಾವವೆಂದು ಬುದ್ಧ್ಯಾರೋಹಕ್ಕಾಗಿ, ಮನಸ್ಸಿಗೆ ಮನದಟ್ಟಾಗುವುದಕ್ಕಾಗಿ ನಿರೂಪಿಸಿರುವರು (ಬಂದಸಾ. ೧೦೨). ೨. [ಕಾವ್ಯಮೀ] "ಪರಸ್ಪರ ಸಾದೃಶ್ಯದಿಂದ ಅಭಿನ್ನವೆಂದು ಹೇಳಬಹುದಾದ ಭಿನ್ನಭಿನ್ನ ಧರ್ಮಗಳನ್ನು ಉಪಮಾನೋಪಮೇಯಗಳಲ್ಲಿ ಬೇರೆ ಬೇರೆಯಾಗಿ ಗ್ರಹಿಸಿರುವುದಕ್ಕೆ 'ಬಿಂಬಪ್ರತಿಬಿಂಬಭಾವ' ವೆಂದು ಪ್ರತೀತಿ " (ಕೃಟಿ. ೨೩೭ ಅಡಿಟಿ). [ಸಂ.]

ಬಿಂಬಫಲ, ಬಿಂಬಫಳ (ನಾ). ತೊಂಡೆಹಣ್ಣು : ಬಿಂಬಫಲಾಧರಂ ಪವಳಮಂ . . . ಪೋಲ್ತಿರೆ (ಧರ್ಮಾಮೃ. ೭-೨೦೯) ; ಬಿಂಬಫಲೋಪಮಾನರದನಚ್ಛದಮಂ ನಸುಗಚ್ಚಿ (ಸೂಕ್ತಿಸು. ೭-೭೪) ; ಬಿಂಬಫಲಮಂ ಸಮಂತಧರವೆಂದು . . . ಪಂಬಲಿಸಿ ಮಮ್ಮಲ ಮಱುಗುತಿರ್ದನು (ಗುರುಪು. ೧೦-೩೩). **ಬಿಂಬಫಳ** : ಬಿಂಬಫಳರುಚಿಯಂ ಬಗೆಯದರುಣಾಧರೋನ್ನತಿಯ . . . ಕಂಬುಕಂಧರೆಯರು ನೆರೆದರು (ಬಸಪು. ೩-೨೩) ; ಬಿಂಬಫಳಮಂ ಕಂಡ ರಾಜಶುಕಿಯಂತೆ ಬಿಂಬಾಧರಮಂ ಕರ್ದುಂಕಿ (ರಾಜಶೇ. ೧೦-೦೪೦ ವ). [ಸಂ.]

ಬಿಂಬಫಳ 'ಬಿಂಬಫಲ' ನೋ.

ಬಿಂಬಲಿ 'ಬಿಳಿಂಬಿ' ನೋ.

ಬಿಂಬಾಗಮ (ನಾ). ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು : ಆ ಸಿದ್ಧಾಂತಭೇದಂಗಳಾವವೆಂದೊಡೆ ೧. ಕಾಮಿಕಾಗಮ ೨. ಯೋಗಜಾಗಮ . . . ೨೦. ಬಿಂಬಾಗಮ . . . ೨೮. ವಾತೂಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕು (ವಿವೇಕ. ೬೩). [ಸಂ.]

ಬಿಂಬಾಧರ (ನಾ). ತೊಂಡೆಯ ಹಣ್ಣಿನಂತೆ ಕೆಂಪಾಗಿರುವ ತುಟಿ : ಪುಳಿಯೊಳಲೆದ ಪವಳದ ಬಟ್ಟಿನಂತೆ ಸೊಗಯಿಸುವ ಸಂಸಾರಸಾರೋದಯನ ಬಿಂಬಾಧರಮನಂಗರಾಗರಸದುರುಳಿಯಂತಾದುದು (ಪಂಪಶಾ. ೨-೩೯ ವ) ; ಮೆಱೆವ ರತುನಾವಳಿಯ ಬಿಂಬಾಧರಮಯೂಖದಲಿ . . . ಒಪ್ಪಿದಳು ದೇವಿ (ಕೌಶಿರಾ. ೨-೩). [ಸಂ.]

ಬಿಂಬಾಧರೆ (ನಾ). ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯುಳ್ಳವಳು : ಬಿಂಬಾಧರೆಯರ್ ಬಂದಲರಂಬಂ ಕತ್ತುರಿಯ ಸಾಣೆಯಿಕ್ಕುವ ತೆಱದಿಂದಂಬುಜವಳಸದೃಶಾಂಬಕದಂಬಿಕೆಗಂಜನಮನೆಚ್ಚಿದರ್ (ಗಿಂಕ. ೦೦-೪೧); ರಾಜಶುಕಸಲ್ಲಾಪಾಂಗಶೃಂಗಾರೆ ಭಾಸುರಬಿಂಬಾಧರೆ (ಹನಿಸ್ಮಾರ. ೨-೭೨). [ಸಂ. ಬಿಂಬಾಧರಾ]

ಬಿಂಬಿ (ನಾ). (?) : ಸಲೆ ನಿಲೆ ಮಾವು ಪೂವು . . . ಗಿಳಿವಿಂಡು ಬಂಡು ಕೋಗಿಲೆ ಗೊಲೆ ತುಂಬಿ ಬಿಂಬಿ ಸುಟಿಗೇದಗೆ ಚಾದಗೆ ಕಂಪು ಸೊಂಪ ಗುಂದಲೆಯೆನೆ ರಮ್ಯಮಾ ವಿಷಯದೂರ್ಗಳ ನಂದನವೃಂದವೆತ್ತಲುಂ (ಪುಸ್ತಪು. ೨-೨೩). [?]

ಬಿಂಬಿತ (ಗು). ಪ್ರತಿಫಲಿತವಾದ ; ಪ್ರತಿರೂಪವುಂಟಾದ : ಮತ್ತಂ ರತ್ನಪ್ರತಿಬಿಂಬಬಿಂಬಿತಮಣಿದೀಪಪ್ರತಿಬಿಂಬದಂತಾನುಂ . . . ತನ್ನ ಬೆಳಗೆ ಬೆಳಗಾಗೆ ಶುದ್ಧಗರ್ಭಾವಾಸದೊಳ್ ಜಿನಾರ್ಭಕಂ ಬಳೆಯೆ(ಶಾಂತಿಪು. ೯-೨೦೪ ವ); ಶಿತಿಕಂಠನಾಮಪೂರಿತವಾಕ್ಯಘೃತನಿರೀಕ್ಷಿತನಯನ ಮಣಿ ಮುಕುರಮಧ್ಯಬಿಂಬಿತವದನಂ (ಹಕಾ. ೪-೫೮). [ಸಂ.]

ಬಿಂಬಿಸು (ಕ್ರಿ). ೧. ಪ್ರತಿರೂಪವನ್ನು ತೋರಿಸು ; ಪ್ರತಿಫಲಿಸು : ಅದಱಪರಾರ್ಧ್ಯ ನೀಲಮಣಿಕುಟ್ಟಿಮಭೂತಳದರ್ಪಣೈಕಬಿಂಬದೊಳಹಮಿಂದ್ರ ದಿವ್ಯತನು ಬಿಂಬಿಸೆ ರೂಪಿದು ಬಿಂಬಮಿಂತಿದೆಂಬುದನಱಿಯಲ್ಕೆ ಬಾರದು (ಶಾಂತಿಪು. ೯-೦೨೨); ಕರ್ಣೋತ್ಪಲಂಗಳ್ ಕಪೋಲಬಿಂಬಗಳೊಳ್ ಬಿಂಬಿಸೆಯುಂ (ಕಾದಂಪು. ೬೭) ; ಬಿಂಬಿಸುವ ಶಶಿಬಿಂಬದಿಂ ಪ್ರತಿಬಿಂಬಿಸುವ ಮುಖಬಿಂಬದರ್ಪಣ (ಬಸಪು. ೫-೨೩). ೨. ಸ್ಪಷ್ಟವಾಗಿ ತಿಳಿಯುವಂತೆ ಮಾಡು : ವಿಶದೀಕರಿಸು : ವಿವರಿಸು : ಶೇಷಪ್ಪ . . . ತಾನೀಗ ನಡೆದಿರುವುದು ಕೇವಲ ಗೌಡಿತಿಯ ಕಲ್ಯಾಣಕ್ಕಾಗಿ ಎಂಬುದನ್ನು ಬಿಂಬಿಸಿದ (ಗ್ರಾಮಾಯ. ೫೩೫); ಈ ಮಾತನ್ನು ಹೇಗಾದರೂ ಮಾಡಿ ಶೈಲೇಂದ್ರನಿಗೆ ಬಿಂಬಿಸಬಲ್ಲನಾದರೆ ಕಾಲೀಪದನ ಮನ ಹಗುರಾಗುತ್ತಿತ್ತು (ಇಪ್ಪಳ. ೩೯೩). ೩. ತೋರಿಸು ; ಪ್ರಕಟಿಸು : ಅವರ ಹೃದಯದ ವಿಶಾಲ ಮಾರ್ಗವನ್ನು ಬಿಂಬಿಸುವದೇ ಈ ತಿರುಗಾಟದ ಅರ್ಥವಾಗಿದೆ (ರಂಗರೋ. ೬೦); ಕೃಪೆಯನು ಬಿಂಬಿಸಿ, ಬಾಳನು ತುಂಬಿಸಿ. ತೋಟದೊಳರಳಿದ ಹೂ ತಾನಾದುದು ಶ್ರೀಮದ್‌ಭಗವದ್ಗೀತೆ (ಅನಿಕೇ. ೩೨-೦೪). ೪. ತೋರು; ಕಾಣು; ಪ್ರಕಟವಾಗು : ಲಜ್ಜೆ ಬಿಂಬಿಸೆ ಲಾವಣ್ಯದೊಳೊಯ್ಯನೆ ಪಜ್ಜೆಯಿಡುವುದು ಭಾವೆಯರು (ಹದಿಬ. ೮-೩೬). [ಬಿಂಬ + — ಇಸ್ತು3]

ಬಿಂಬೋಷ್ಠ (ನಾ). = ಬಿಂಬಾಧರ : ಅಬ್ಜಪತ್ರಾಕ್ಷಿಯ ನವರತಿಸರ್ವಸ್ವ ಬಿಂಬೋಷ್ಠಮಂ ಮುದ್ದಿಡುವೈ ರೋಲಂಬ ನೀನೇ ಕೃತಿ ನಿಜವರ ಸುತ್ತಾವಣಂ ಕೆಟ್ಟೆವಲ್ತೇ (ಶಾಕುಂತ. ೦೦-೨೪). [ಸಂ.]

ಬಿಂಬೋಷ್ಠಿ (ನಾ). = ಬಿಂಬಾಧರೆ. [ಸಂ. ಬಿಂಬೋಷ್ಠೀ]

ಬಿಂಬೋಷ್ಠೆ (ನಾ). = ಬಿಂಬಾಧರೆ : ಈ ಬಿಂಬೋಷ್ಠೆಯಂ ಸರ್ಪದಷ್ಟೆಯ ನೆನಗೆ ಮದುವೆಮಾಟ್ಟರಪ್ಪೊಡೆ ನಾಳೆ ನೇಸರ್ಮೂಡದ ಮುನ್ನಮೆ ವಿಷಾಪಹಾರಂ ಮಾಡಿದಪ್ಪೆಂ (ಸುಕುಮಾ. ೬-೬ ವ). [ಸಂ. ಬಿಂಬೋಷ್ಠಾ]

ಬಿಂಬ್ಲಿ 'ಬಿಳಿಂಬಿ' ನೋ.

ಬಿಕ್ (ನಾ). ಒಂದು ಅನುಕರಣಶಬ್ದ : ಬೆಕ್ಕಂ ಕಂಡಿಲಿಯಂತಿರೆ . . . ಮಾರ್ಕೊಳ್ಳದೆ ಮಾರ್ನುಡಿಯದೆ ಬಿಕ್ಕೆನ್ನದೆ ಮಿಡುಕದಿರ್ದರ್ (ಸುಕುಮಾ. ೨-೨೦).

ಬಿಕನಾಶಿ 'ಬಿಕನಾಸಿ' ನೋ.

ಬಿಕನಾಸಿ, ಬಿಕನಾಶಿ (ಗು). ೧. ಅಲ್ಪವಾದ ; ಕ್ಷುದ್ರವಾದ : ಅವಳು ಆ ಒಂದು ಬಿಕನಾಸಿ ಎಂಟಾಣೆಯ ತುಂಡು ಕದ್ದಳು ಅಂತ ಗೊಜ್ಜು ಗೊಡಸಾರು ತಿನ್ನುವ ಗತಿಗೆ ಬಂದುಬಿಡಿತು ಅನ್ನುತ್ತೀಯೇನೇ (ವಡದಾ. I, ೫೨೦). (ನಾ). ೨. ತಿರುಪೆಯಿಂದ ಬದುಕುವ ವ್ಯಕ್ತಿ ; ಭಿಕ್ಷುಕ : ಉಳಿದ ಭಕ್ತರೆಲ್ಲ ಬೇಡುವುದಕ್ಕೇ ಹುಟ್ಟಿದ ಬಡ ಬಿಕನಾಸಿಗಳು (ಶರಕ. ೪೨೦); ಇವನಾರೊ ಸಂನ್ಯಾಸಿ, ಅತ್ತೊಬ್ಬ ಬಿಕನಾಸಿ (ಗಂಗಾತ. ೬೦-೦). ೩. ಅಲ್ಪವ್ಯಕ್ತಿ; ಕ್ಷುದ್ರವ್ಯಕ್ತಿ; ಹೀನವ್ಯಕ್ತಿ : ಮಡಿ ಮಡಿ ಮಡಿಯೆಂದು ಮೂರ್ಮಾರು ಹಾಱುತಿ ಮಡಿಯೆಲ್ಲಿ ಬಂತೆ ಬಿಕನಾಸಿ (ಪುರಂದ. ೦-೦೦೫ ಪಲ್ಲವಿ); ಆ ಬಿಕನಾಸಿಯ ಮನೆಗೆ ! ನನ್ನ ಮುಂದೆ ಲಕ್ಷವರಹ ಸುರಿದರೂ ಅವಳ ಮನೆಗೆ ನಾನು ಕಾಲಿಕ್ಕುವುದಿಲ್ಲ (ಮಹಾಗ. ೮೫). ೪. ಲೋಭದಿಂದ ಕೂಡಿದ ವ್ಯಕ್ತಿ ; ಕೃಪಣ : ಬಿಕನಾಸಿಗಳ್ಗೆ ಫಲಿಸುವುದೆ ನಿರತಿಶಯ ದಾನಶೌಂಡನ ಭಜನೆ (ಕೂಟ್ಟೂಬ. ೪-೬). ಬಿಕನಾಶಿ : ೨. ಕೆಂಚ ದಿಕ್ಕಿಲ್ಲದ ಬಡವ, ಮನೆ—ಮಾರು ತೊರೆದ ಬಿಕನಾಶಿ (ಗ್ರಾಮಾಯ. ೨೦೦). ೩. ಆ ಮೈಸೂರು ಬಿಕನಾಶಿಯ ಸಹವಾಸ ಅವಳಿಗಿನ್ನೂ ಸಾಕಾಗಿಲ್ಲವೇನು ? (ರೂಪಸ. ೦೩೨).

[< ಸಂ. ಭಿಕ್ಷಾಶಿನ್. /ತುಳು. ಬಿಕ್ಕನಾಸಿ. ಬಿಕ್ನೇಸಿ ; ತೆಲು. ಬಿಕಾಸಿ]

ಬಿಕರಿ, ಬಿಕ್ರಿ (ನಾ). ಮಾರಾಟ ; ವಿಕ್ರಯ : ನಕಲಿಮಾಲುಗಳು ಬಿಕರಿಗೆ ಬರುತ್ತಿವೆ (ಕಟಕೋ. I, ೩೫೦); ಅಂಟುರೋಗದಿಂದ ಮೃತಪಟ್ಟ ದನಗಳನ್ನು . . . ಚರ್ಮದ ಆಶೆಗಾಗಿ ಬಿಕರಿ ಮಾಡುತ್ತಾರೆ (ಗ್ರಾಮಾಕ. ೦೨೦). ಬಿಕ್ರಿ: ಅವರ ಮನೆ ಬಿಕ್ರಿಗೆ ಬಂದಿದೆ (ರೂಢಿ).

[←ಹಿಂ. ಬಿಕಿರೀ, ಬಿಕ್ರೀ; ಮರಾ. ವಿಕರೀ, ವಿಕರಾ./ಸಂ. ವಿಕ್ರಯ]

ಬಿಕರಿದಾರ, ಬಿಕ್ರಿದಾರ (ನಾ). ಮಾರಾಟ ಮಾಡುವವನು ; ವ್ಯಾಪಾರಿ : (ಕಿ). ಬಿಕ್ರಿದಾರ : ಕೊಂಬಿನ ಊದುವ ಕಡೆಗೆ ಅಂಗೈಯೊತ್ತಿ ಅದರ ಬಾಯಿಯನ್ನು ಅಂಗಡಿ ಬಿಕ್ರಿದಾರನಿಗೆ ಒಡ್ಡುವರು (ಕಲನೆ. ೩೯).

[ಬಿಕರಿ + — ದಾರ್ಯ]

ಬಿಕಾರಿ, ಭಿಕಾರಿ (ನಾ). ೧. ಭಿಕ್ಷೆ ಬೇಡುವವನು; ತಿರುಕ : ಮುನೀಶ್ವರನ ಪರಭಾಗಮಂ ಸುಕೌಶಲಂ ಕಂಡವರಾರೆಂದು ಬೆಸಗೊಳೆ ಸಹದೇವಿಯೆಂದಳಾ ತನೊರ್ವ ಬಿ[ಶಾಕಾಂ. ಭಿ]ಕಾರಿಯನೇನಂ ಬೆಸಗೊಂಡಪೆಯೆನೆ (ಪುಷ್ಕಾಸ್ತ. ೬-೬೦ ವ) ; ಅಳುಂಬದ ಡುಬಿಗನಂ ಬಿಕಾರಿಯಂ ಬೆಸನಿಗನಂ . . . ಕಸಗಳೆದಿತ್ತು ಮನ್ನಿಪರಮಕ್ಕಳ ಪಟ್ಕಿಗೆ ತಂದು ಸೊರ್ಕಿಸಾ (ಪಕವಿ. ೬-೦೦೪) ; ಹೊಟ್ಟೆಗಿಲ್ಲದ ಬಿಕಾರಿಗಳು ಹೊಟ್ಟೆಗಾಗಿ ತೆರತೆರನಾಗಿ ಅಂಗ ಲಾಚಿಕೊಳ್ಳುವರು (ಬಿಶಾಪ. ೩). ಭಿಕಾರಿ : ೨. ಗತಿಯಿಲ್ಲದವನು ; ನಿರ್ಗತಿಕ : ಇದ್ದ ಬದ್ದ ಮಕ್ಕಳನ್ನೆಲ್ಲಾ ಕಳೆದುಕೊಂಡು ಭಿಕಾರಿಗಳಾದ ನಿನ್ನ ಅನಾಥ ತಾಯಿ ತಂದೆಗಳನ್ನು ನೆನೆಸಿಕೊಂಡರೆ ಸಂಕಟವಾಗುತ್ತದೆ (ವಡಭಾ. ೩೦೭) ; ನಾನು ಭಿಕಾರಿ, ದುಡಿಮೆಯಿಲ್ಲದ ಭಿಕಾರಿ . . . ಬಡತನದ ಭೂತ ಬಡಿದ ಭಿಕಾರಿ (ಮುಂಗಾಮು. ೩೦). (ಗು). ೩. ಕೀಳಾದ ; ತುಚ್ಛವಾದ : ಜಕಣೆಯು ಜಲದೇವರು ಮೊದಲಾದ ಭಿಕಾರಿದೈವಗಳ ಪೂಜಿಸರವರು (ಪುರಂದ. ೦-೦೪೫-೩).

[<ಪ್ರಾ. ಭಿಖಾರಿ./ ಸಂ. ಭಿಕ್ಷಾಚಾರಿನ್./ ಹಿಂ. ಭಿಕಾರೀ, ಭಿಖಾರೀ./ ಮರಾ. ಭಿಕಾರೀ]

ಬಿಕಾರಿತನ (ನಾ). ಬಡತನ; ದಾರಿದ್ರ್ಯ; ಕಂಗಾಲುತನ : (ಕಿ).

[ಬಿಕಾರಿ + — ತನ]

ಬಿಕೋ (ನಾ). (ಶೂನ್ಯತೆಯನ್ನು ಸೂಚಿಸುವ) ಒಂದು ಅನುಕರಣ ಶಬ್ದ : ತೊಟ್ಟಿಲಿಲ್ಲದೆ ಕೊಟಡಿ ಬಿಕೋ ಅಂತ ಕಾಣುತ್ತದೆಯಲ್ಲ ! (ಮಹಾಗ. ೨೩೦).

ಬಿಕೋ ಎನಿಸು=ಶೂನ್ಯವಾಗಿ ತೋರು ; ಬರಿದಾಗಿರು ; ಖಾಲಿಯಾಗಿ ಕಾಣಿಸು : ಮಗ ಸೊಸೆಯರು ಇಲ್ಲದೇ . . . ಅವರ ಮನಸ್ಸಿಗೆ ಬಿಕೋ ಎನಿಸುತ್ತಿತ್ತು (ಬಾಡಬ. ೦೦೩). ಬಿಕೋ ಎನ್ನು=ಬಿಕೋ ಎನಿಸು : ನಿರ್ಜೀವವಾಗಿ ಬಿಕೋ ಎನ್ನುತ್ತಿರುವ ಈ ಊರನ್ನು ನೋಡಲಾರೆ (ವಡಭಾ. ೩೬೦).

ಬಿಕ್ಕ1 (ನಾ). (ಸುಮಾರು ಹತ್ತುವರ್ಷ ವಯಸ್ಸಿನ) ಆನೆಯ ಮರಿ : ಹರಿಣರಿಪುಗೆ ಬಿಕ್ಕಪೋತಕಳಭಕುಳಮಾರಣಕೋಳಾಹಳಮಾನೆದಿಂಬಂಗಾವೆ ಡೆವಳಿಗೆಯೆಂಬಂತಕ್ಕುಂ (ಶಾಂತಿಪು. ೩-೬೬ ವ); ಅಪಹಸಿತ ಬಿಕ್ಕಪೋತಕಳಭಜ [ವ]ನಕಲ್ಯಾಣಯೌಧತರಪ್ರಾಯಗಜಯೂಥಕೋಳಾಹಳಾರಾವದೊಳ್ (ವರ್ಧಮಾ. ೫-೬೨ ವ). [<ಸಂ. ವಿಕ್ಕ]

ಬಕ್ಕ2 (ನಾ). ಒಂದು ಅಳತೆಯ ಪ್ರಮಾಣ (?) : ಹಂನೆರಡು ೧೨ ಬಕ್ಕ ಹುಣಸೆಯಲ್ಲಿ (ಇಮ. ೦೧೪೭, ಹಾಸಗ್. ೨೨೯-೨೪;೧). [?]

ಬಕ್ಕಟ್ಟು 'ಬಿಗಿಗಟ್ಟು' ನೋ.

ಬಕ್ಕಡಿಸು 'ಬಕ್ಕುಳಿಸು' ನೋ.

ಬಕ್ಕನೆ (ಅ). ತಟ್ಟನೆ; ಸರಕ್ಕನೆ : ಭಕ್ತ ವಿರಕ್ತರೆಂದು ಆತ್ಮತೇಜಕ್ಕೆ ಬಕ್ಕನೇಱಿ ಬರಿವುತ್ತ ಇಂತೀ ಕೆಟ್ಟ ಕೇಡ ನೋಡಿ . . . ರಾಜೇಶ್ವರ ಲಿಂಗವು . . . ಅಂಜ ನಪ್ಪವಾಗಿ ಹೋದ (ಶಪ್ರಸ. ೦೨೦-೬೨೦); ಬಕ್ಕನೆ ನೆಜಿ ಬರಿದರು . . . ಶೋಕೋ ದ್ರೇಕವರವಶರು (ಶಾಸಂಪ್ರ. ೬-೪೨); ಭೂವಿ ಬಕ್ಕನೆ ಸೀಳಿತು ಕೂರ್ಮನ ಬೆನ್ನು ಹೋಳಿಗೆವಡದುದು ಬಲುಬಿಸಿಲೊಂದು ಚಡಾಳಕೆ ಜಗವ ಭಂಗಿಸಿತು (ಪೋಷಕ. ೦೯-೪೬ .

ಬಕ್ಕಬಿಕ್ಕನೆ (ದ್ವಿರುಕ್ತಿ) : ಸವಿಸವಿದು ಬಿಕ್ಕಬಿಕ್ಕನೆ ಸವಿನೋಡೆನ್ನಾಣೆ ಯೆಂದು ರಕ್ಕಸಿಗಮದಂ ಸವಿದೋಱಿ ನೆತ್ತರೆಲ್ಲಂ ತವೆ ಮುಳಿಸಿಂದವನ ಕರುಳ ಪಿನಲಂ ನೊಣೆದಂ (ಕಂಕಥಾ. ೦೨-೦೩೬). ಬಕ್ಕನೆ ಬಿರಿ, ಬಕ್ಕಬಿರಿ, ಬಗ್ಗಬಿರಿ=ತಟ್ಟನೆ ಸೀಳು,—ಒಡೆ : ವೃಕೋದರಂ . . . ಡೊಕ್ಕನೆ ಸುರಿಗೆಯೊಳುರಮಂ ಬಿಕ್ಕನೆ ಬಿರಿಯಿಱಿದು (ಕಂಕಥಾ. ೦೨-೦೩೩) ; ನವ್ಯ ಕೂಡಲಸಂಗಮದೇವನಲ್ಲದೆ ಪರದೈವಂಗಳು ಮನಕ್ಕೆ ಬಂದುವೆ ಬಿಕ್ಕನೆ ಬಿರಿವ ದೈವಂಗಳು (ಬಸವ. ೩೬೨) ; ಕೋಪದಲಿ ಪವನಜ ಖಳನ ನೆತ್ತಿ ಬಿಕ್ಕಬಿರಿಯೊಲು ತಿವಿಯೆ (ಪಾಂಡವ. ೪೩-೦೨) ; ಅಗ್ಗ ಸೂರೆ ಅನ್ನವೆಂದು ಬಗ್ಗಬಿರಿಯ ಉಂಡಳು (ಗಾಸ). [ಬಿಕ್ + — ಅನೆ1]

ಬಕ್ಕಲ (ನಾ). ಮಾತನ್ನಾಡುವಾಗ ತೊದಲುವವನು ; ಉಗ್ಗ : ಅವನು ಬಕ್ಕಲ. ಅವನ ಮಾತುಗಳನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ (ಡಿಡಿ). [ಬಕ್ಕಲು (<ಬಕ್ಕುಳು) + — ಅ7]

ಬಕ್ಕಲಂ, ಬಕ್ಲಂ (ನಾ). ಓದು, ಬರಹವನ್ನು ತಿಳಿಯದವರಿಗೆ ಬೇರೆಯವರು ಪತ್ರ ಇತ್ಯಾದಿಗಳಲ್ಲಿ ಬರೆದುಕೊಟ್ಟ ಬರಹ. – ಒಕ್ಕಣೆ : 'ಬಕ್ಕಲಂದಾರ' ಪರಾ. ಬಕ್ಲಂ : ಆ ಹಳ್ಳಿಯಲ್ಲಿ ಅತನೇ ಹಳ್ಳಿಗರಿಗೆ ವ್ಯವಹಾರಗಳನ್ನು ನಡೆಸಲು ಬಕ್ಲಂಗಳನ್ನು ಬರೆದು ಕೊಡುವ ವಾಡಿಕೆ (ಡಿಡಿ). [←ಪಾರ. ಮಕಾ. ಬಕಲಂ]

ಬಕ್ಕಲಂದಾರ (ನಾ). ಓದು, ಬರಹ ಬಾರದವರಿಗೆ ಪತ್ರ ಇತ್ಯಾದಿಗಳನ್ನು ಬರೆದು ಕೊಡುವವನು : ಈ ಪತ್ರದ ಬಕ್ಕಲಂದಾರರು ಚೆನ್ನಾಗಿ ಬರೆದಿದ್ದಾರೆ (ಡಿಡಿ). [ಬಕ್ಕಲಂ + —ದಾರ4]

ಬಕ್ಕಲು 'ಬಕ್ಕುಳು' ನೋ.

ಬಕ್ಕಳಿಕೆ 'ಬಕ್ಕುಳಿಕೆ' ನೋ.

ಬಕ್ಕಳಿಸು 'ಬಕ್ಕುಳಿಸು' ನೋ.

ಬಕ್ಕಳು 'ಬಕ್ಕುಳು' ನೋ.

ಬಕ್ಕಿ (ನಾ). ಒಬ್ಬಾತನ ಹೆಸರು : ಕಳ್ಳುಣಿಸೆಯ ರಟ್ಟನು ಬಿಕ್ಕಿಯು . . . ಸಾಕ್ಷಿ (ಎಕ. XI, ೩೪ಶ್ರ. ೬೪-೨೬, ೧೮೮) ; ಕುಪ್ಪಯ್ಯನುಂ ಚಿನ್ನನುಂ ಬಿಕ್ಕಿಯುಂ ತಮ್ಮುತ್ತ ಮೂವರುಂ ಕಲ್ಲ ನಿಱಿಸಿದರ್ (ಎಕ. VIII, ಸೊರಬ. ೪೩೪-೬ ; ೧೧೨). [?]

ಬಕ್ಕಿಗ1 (ನಾ). ಮೂವುತ : ಪಿತ್ಕಾಧಿಕನಂತೆ ಬೀಸೆಸುತ್ತುಂ ಬಿಕ್ಕಿಗನಂತೆ ತಿವಿಯೆನುತ್ತುಂ (ರರ್ಮಾಮ್ಯ. ೨-೭೦). [ಬಿಕ್ಕ1 + — ಇಗ]

ಬಕ್ಕಿಗ2 (ನಾ). (?) : ಮನ ಮಾಡಿ ಬಿಕ್ಕಿಗನ ಮೊಗವ ನೋಡಿದನು, ಆ ಹೊತ್ತಿಗೆಯೊಳೊಂದೋದ ನೋಡಿದನು (ಕಗಡ್ಯ. ೭೪). [?]

ಬಕ್ಕಿಗಿಡ (ನಾ). ಒಂದು ಬಗೆಯ ಸಸ್ಯ : ಬಕ್ಕಿಗಿಡ, ದಿಕಾಮಲಿ, ಕಂಬಮೇಣ (ಮೃಶಿಗ. ೪೮-೭೭೦). [ಬಿಕ್ಕಿ? + ಗಿಡ (<ಗಿಡು)]

ಬಕ್ಕಿಯಣ್ಣ, ಬಕ್ಕಿಯಣ (ನಾ). ಒಬ್ಬಾತನ ಹೆಸರು: ಆತಂಗೆ ಬಕ್ಕಿಯಣ್ಣಂ ಪಾತೆ[ಗೆ] ಸತ್ಪುತ್ರಂ(ಎಕ. XI, ೩೪ಶ್ರ. ೭೪-೯ ; ೧೧೮). ಬಕ್ಕಿಯಣ : ಶ್ರೀಮತ್ ದಿಲೀಪರಸ ಪೃಥಿವೀರಾಜ್ಯಂಗೆಯ್ಯುತ್ತಿರೆ ಚೊಕ್ಕಯ್ಯಜ್ಞಂ ಆಚಬ್ಬೆಗಂ ಪುಟ್ಟಿದಂ ಬಕ್ಕಿಯಣಂ(ಎಕ. XII, ೪೦ಶ್ರ. ೪೫-೪ ; ೧೧೮). [ಬಕ್ಕಿ + ಅಣ್ಣ1]

ಬಕ್ಕಿರಾಣಕ (ನಾ). ಒಬ್ಬಾತನ ಹೆಸರು : ಶ್ರೀ ಬಕ್ಕಿರಾಣಕೀನ ಪುರಿಕರ ನಗರೇ ಶ್ರೀಶಂಖಜಿನಾಲಯಾಂತರ್ವರ್ತ್ತಿಯತ್ಕಾರಿತಂ (ಸಿಇಇ. XX, ೩-೩೬ ; ೭೨೨). [ಬಕ್ಕಿ + ರಾಣಕ್4]

ಬಕ್ಕಿರು (ನಾ). ನೊಳ್ಳಿ; ಮುಶಕ : ಲಿಖಿತದುರ್ಗಾಸ್ತೋತ್ರಪಟ್ಟಿಕಾವ್ಯಾತದಿಂ ತಲೆದೂಗಿ ಬಕ್ಕಿರಿನವೊಲ್ಮೊರೆವ ಗೀತದಿಂ (ಕಾಡಂಬು. ೨೭೦).

[ಇದು 'ಚಿಕ್ಕಡು' ಎಂಬುದರ ಅಪಲಿಖಿತವಿರಬಹುದು]

ಬಕ್ಕಿಸು (ಕ್ರಿ). (ದುಃಖಾತಿರೇಕದಿಂದ) ಗದ್ಗದಧ್ವನಿಯನ್ನು ಹೊರಡಿಸು ; ಬಿಕ್ಕಳಿಸು : ಸೀರೆಯ ಸೆರಗನ್ನು ಮುಖದ ಮೇಲೆ ಸರಿಸಿಕೊಂಡು ಮತ್ತೆ ಬಿಕ್ಕಿಸಲಾರಂಭಿಸಿದಳು (ಕಂಸಂ. ೩೩).

[ಬಕ್ಕು1 + — ಇಸು3]

ಬಕ್ಕು1 (ಕ್ರಿ). ೧. ಶ್ವಾಸಾಂಗಗಳು ಅನೈಚ್ಛಿಕವಾಗಿ ಇದ್ದಕಿದ್ದಂತೆ ಸಂಕೋಚಗೊಂಡು, ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಂಡಾಗ ಗಂಟಲಿನಲ್ಲಿ ಒಂದು ಬಗೆಯ ವಿಲಕ್ಷಣವಾದ ಶಬ್ದವುಂಟಾಗು ; ಬಿಕ್ಕುಳಿಕೆಯುಂಟಾಗು ; ಬಿಕ್ಕಳಿಸು : ಕೆಲರ್ ಕುದುಗುಳಿರಕ್ಕಸರ್ ಬಿಸುಗೆಗಳ್ವೆರಸುಗ್ರಮಪಾಗಜಂಗಳಂ ಚದುರ್ಗಿಡೆ ನುಂಗಿ ಬಿಕ್ಕಿ ಕುಡಿದರ್ ಬಿಸುನೆತ್ತರ ಕಾಬ್ಬುರಂಗಳಂ (ಕಂಕಥಾ. ೦೨-೬) ; ಜನಂ . . . ಬಿಕ್ಕುವ ತೇಂಕುವ ತೇಗುವ ಕಂಟಲಿಸುವಖಿಳವಿಕೃತಿಗೆ ಸಲ್ಲಂ (ಪುಪ್ರಪು. ೦೨-೬೪). ೨. (ದುಃಖ, ಭಯ ಅಥವಾ ಸಂತೋಷಾತಿರೇಕಗಳಿಂದ) ಮಾತು ತಡವರಿಸು ; (ಭಾವಾತಿರೇಕದಿಂದ) ಗದ್ಗದಿಸು : ಬೆಸ್ಮಪಂಗೆಯ್ದ ವೊಕ್ಕಲಿಗನಂತೆ ಬಿಕ್ಕುತ್ತುಂ (ರರ್ಮಾಮ್ಯ. ೦-೦೪೪) ; ಅಬಲೆ . . . ಗದ್ಗದ ಸ್ವನದಿಂ ಬಿಕ್ಕುತುಮಿಕ್ಕಿದಳ್ ಬಿಡದೆ ಭೋರೆಂಬಂತೆ ಬಾಷ್ಪಾಂಬುವಂ (ಋಸುವಾ. ೦೩-೬೭) ; ಬಿಕ್ಕಿದನು ಬಿರಿಬಿರಿದು ಸೆರೆಗಳು ಮುಕ್ಕುಱಿಸಿದವು ಕೊರಳ ಹೃದಯದೊಳೊಕ್ಕಲಿಕ್ಕಿತು ಶೋಕಪಾವಕವಾ ನೃಪಾನುಜನ (ಋಮ್ಯಾಶ್ರ. ೨೦-೩೩). ೩. ಮೇಲುಸಿರು ಬಿಡು ; ಏದುಸಿರು ಬಿಡು : "ಬಿಕ್ಕು—ಉಚ್ಛ್ವಾಸೇ, ಮಾಂಸಭೇದೇ ಚ"(ಶಮಂಡಾ); ನಯನಜಲಂಗಳುಣ್ಮುವೊಡೆ ಬಿಕ್ಕುವೊಡಂ ತನು ಸೇದೆಗೆಟ್ಟು ಬೆಂಕೆಯನೊಳಗೊಳ್ವೊಡಂ ಜ್ವರಿತನೆಂದಱಿದು . . . ಉಪಯೋಗಿಸಿದಂದು ಮಬ್ಬುಗುಂ (ಕೋಕೋಚ. ೯-೨೦೩) ; ಬಿಱಿಸಿನಲಿ ಖಳ ತಿವಿದೊಡಂಗದ ಬಿರಿದು ಬಿಕ್ಕಿದ ಬಿದ್ದನಾಕ್ಷಣ ಮುರಳಿ ಚೇತರಿಸುತ್ತ . . . ತಿವಿದನು (ಶಾಖಂಣ ೭೭-೩೦) ; ಹೊಕ್ಕುದಾ ಸಮಯದಲಿ ಸುಂಡಿಲ ಸೆಕ್ಕುಗಳ ಖಂಡೆಯವ ಗಜವಳ ಬಿಕ್ಕಲಿಳಿ ಬೆರಸಿದುದು ರಣರಥರಾಜಿ (ಕೂಶಾಖ. ೩-೬-೦೩). ೪. (ಉಸಿರು ಬಿಡುವಾಗ) ಅಳ್ಳೆಯು ಹೊಡೆದುಕೊಳ್ಳು : ಬರಿವೆದೆ ಬಿಕ್ಕುವಳ್ಳೆ . . . ಬಿಗಿದ ಗಂಟಲಿನ ಮುಕ್ಕುಳಿಸಿದಕ್ಕೆಗಳಿಸಿವ ಸತಿಯಳಲು ಸೀಗೆಯೊಳಗಣ ಬಾಳಿಗೆಣೆಯಾದುದು (ಹಕಥಾ. ೦೨-೦೩). ೫. ಹೊರ ಹೊಮ್ಮು ; ಹೊರಸೂಸು ; ಪ್ರಕಟಗೊಳ್ಳು : ಪೊರಳ್ದ ಪೆಣದಿಂ ಬಿಡೆ ಬಿಕ್ಕುವ ಮಸ್ತಕೌಘದಿಂ ಕೆದಱಿದ ಮಾಂಸದಿಂದೆ . . . ಜವನುಂಡು ಕಾಱಿದವೊಲಿರ್ದುದು ಮಾರ್ಗಮದೆತ್ತ ನೋಟ್ಪೊಡಂ (ಲೀಶಾವ. ೬-೬); ಮೃಗಶಿಶರೆಯ ಮುಳಿಯಂತೆ—ದೈವೇಚ್ಛೆಗರಗಿ ಹುಗಿದ ಚಿಂತೆಯು ಹೊರಗೆ ಬಿಕ್ಕಿದುದು ಕರಗಿ (ಕುಪು. ೪೩-೬). ೬. (ಬಾಣ ಮುಂತಾದುವನ್ನು) ಪ್ರಯೋಗಿಸು : ರಿಪುಗಳನ್ನೊರೆಸಿ ಕೂರ್ಗಣೆಗಳ ಬಿಕ್ಕಿ ರಣಮುಂಡಲಕೆ ಚತುರಂಗಸೇನೆಯೊಳ್ ಪೊಕ್ಕು (ತುರಂಗ. ೩೦-೭). ೭. ಬೆಲ್ಲು ; ತೂರು : ಕಡಿಕಡಿದು ಕೆಡಹಿದರ್ ಕುರಿಕೋಳಿಲಕ್ಕಮಂ ಬಿಕ್ಕಿದರ್ ಬೂದಿಯಂ (ಕ್ರೀಪಾಮಾ. ೬೭೦-೬೯೦); ನಿನ್ನನ್ನು ನನ್ನ ಕತ್ತಿಯು ಒಂದೇ ಪೆಟ್ಟಿಗೆ ತುಂಡರಿಸಿ

ರಣಹದ್ದುಗಳಿಗೆ ಬಿಕ್ಕುತ್ತಿದ್ದೆ (ಕ್ರೀಣಾಯ. ೩೫೬). ೮. ಪ್ರಕಟಪಡಿಸು ; ವ್ಯಕ್ತಪಡಿಸು : ಸೊಕ್ಕು ಕೌರವಕುನ್ನಿ ನಮ್ಮೊಳಗೆ ಪೌರುಷವ ಬಿಕ್ಕಿದನೆ (ಶಂಕಂಗ. ೩೬-೨೭). ೯. ಹೊಡೆ ; ಬಡಿ : ಸದೆದು ದಾಡೆಯ ತಿರುಹಿ ಕಿತ್ತನು ಬಿಕ್ಕಿದನು ಬಿದುವಿನಲಿ ಬಲುಗದೆಯ (ಕುಮಾಗ. ೧-೫೬). ೧೦. ಧ್ವಂಸಗೊಳಿಸು ; ನಾಶಪಡಿಸು : ಆಹವದೊಳೊಡ್ಡೊಡನೆ ಕಕ್ಕಸವನು ಮಾಡಿದೊಡವರನು ಯವೆಯಿಕ್ಕದ ಮುನ್ನ ಬಿಕ್ಕುವೆವು (ಕ್ರಿಶಾಸಾಂ. ೦೫-೦೬೫). ೧೧. (ಮಾತನ್ನಾಡುವಾಗ) ತೊದಲು,— ಉಗ್ಗು : ಅವನು ಮಾತನಾಡುವಾಗ ತುಂಬ ಬಿಕ್ಕುತ್ತಾನೆ (ರೂಢಿ).

ಬಿಕ್ಕಿ ಬಿಕ್ಕಿ ಅಳು=ಗದ್ಗದಿಸುತ್ತ ಅಳು : ಐದು ವರ್ಷದ ಕೂಸಂ ನಿಚ್ಚಣಿ ಎಂಬ ದೇವತೆ ಪಿಡಿದೊಡಾ ಕೂಸು . . . ಬಿಕ್ಕಿ ಬಿಕ್ಕಿ ಅಳುಗು (ಶಾಂಶಿ. ೦೩೨-೦೩) ; ಕೃಷ್ಣರಾಯರು . . . ಬಿಕ್ಕಿ ಬಿಕ್ಕಿ ಅಳುತ್ತ ಕಡೆಗೆ ಮುಖವನ್ನು ತಿರುಗಿಸಿಕೊಂಡರು (ಮಹಾಗ. ೨೩೨) ; ಬಿಕ್ಕಿ ಬಿಕ್ಕಿ ಅತ್ತರೆ ಬೀಸುವ ಕಲ್ಲು ತಿರುಗೀತೇ ? (ಗಾರ).

[ದೇ. ॥ ತಮಿ. ಮಲ. ವಿಕ್ಕು ; ತುಳು. ಬಿಕ್ಕು ; ಕೊಡ. ಬಿಕ್ಕ್ ; ತೆಲು. ವೆಕ್ಕು ; ಕುರುಖ್. ಬೆಕ್ಕ್ವಾ]

ಬಿಕ್ಕು₂. ಬಿರ್ಕು (ನಾ). ೧. ಶ್ವಾಸಾಂಗಗಳು ಅನೈಚ್ಛಿಕವಾಗಿ ಇದ್ದಕ್ಕಿದ್ದಂತೆ ಸಂಕೋಚಗೊಂಡು ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಂಡಾಗ, ಗಂಟಲಿನಲ್ಲಿ ಹುಟ್ಟುವ ಒಂದು ಬಗೆಯ ವಿಲಕ್ಷಣ ಶಬ್ದ ; ಬಿಕ್ಕುಳು : ಇಕ್ಕುತಿರ್ಪುಸಿರ್ ತಡೆದೊಡಮಿಲ್ಲ ಬಿಕ್ಕು ಬಿಡದೊತ್ತಿದೊಡಂ ತಱಿಸಂದೊಡಿಲ್ಲ . . . ಇಂತು ಕೆಟ್ಟುಪೋಪೊಡಲಿದಕೇಕೆ ಕಾಮ (ಶಂಶಾಶ. ೩೩-೬೩); ವಾಯು ಕ್ಷೀಣವಾದರೆ ಗುರುತು, ದೇಹದಲ್ಲಿ ಬಳಲಿಕೆ . . . ಶ್ಲೇಷ್ಮ ಹೆಚ್ಚುವದು ; ಬಿಕ್ಕು ಉಂಟಾಗಿಹುದು (ವೃಧೃಸಾ. I, ೨೯). ೨. (ದುಃಖ, ಅಳು, ಭಯ, ಸಂತೋಷಾತಿರೇಕಗಳಿಂದ) ಧ್ವನಿಯಲ್ಲುಂಟಾಗುವ ನಡುಕ ; ಗದ್ಗದ : ತನ್ನೊಳಗೆ ತೆಕ್ಕನೆ ತೀವಿ ತೆರೆ ಮಸಗುವ ಶೋಕರಸಮುರ್ಕಿ . . . ಮಿಕ್ಕು ನೆಗೆವ ಬಿಕ್ಕಿನೊಳ್ ಬೆರಸಿ (ಗಿರಿ. ೬-೭೭ ವ); ಇರೆ ಕಂಡು ಸುವಿವೇಕಗುರುವ ಪುಳಕಂಗಳುಬ್ಬರಿಸಿ . . . ಬಿ[ಶಾಂಶಾ. ಮಿ]ಕ್ಕು ಮಿಕ್ಕು . . . ಸೈಗೆಡದನು (ಮುಮೋಮ. ೦-೩೨); ಬಿಕ್ಕು ಬಿಕ್ಕನೆ ತೋಱೆ ಇಕ್ಕುವಳು ಕಣ್ಣೀರ (ಸರ್ವಜ್ಞ. ೦೯೨೪). ೩. ದುಃಖ ; ಸಂಕಟ : ಗುಣವಂತಿಯ . . . ಕಳವಳವನ್ನು ಜಯಂತನು ಸಂಪೂರ್ಣ ಅರಿತನು. ಆದರೆ ಅದಕ್ಕೆ ಅನುಕೂಲವಾಗಿ ಮಾತಾಡಿ ಇನ್ನಷ್ಟು ಬಿಕ್ಕು ತಂದುಕೊಡುವುದು ಬೇಡಾಯಿತು (ಜಯಂತ. ೩೨೬). ೪. ತೊದಲು ; ಉಗ್ಗು : ಅವನಿಗೆ ಬಿಕ್ಕು ಇರುವುದರಿಂದ ಮಾತನ್ನಾಡಲು ಕಷ್ಟಪಡಬೇಕಾಗುತ್ತದೆ (ರೂಢಿ). ಬಿರ್ಕು: ೧. ಬರಿಗಂಡಂ ಪಿಣಿಲೇಱೆ ರೋಮಮುಡಿದಿರ್ಬೆನ್ನಾಗೆ ಮುಂಗಾಲಗಲ್ತರೆ ಬಿರ್ಕುರ್ವೆ . . . ಪೆರ್ನೋರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೇಕರಂ ಸೂಕರಂ (ಸಂಪ್ರಪು. ೩-೬೦).

[<ಬಿಕ್ಕು₁/ತಮಿ. ವಿಕ್ಕು; ಮಲ. ವಿಕ್ಕು, ವಿಕ್ಕವುಕ್ ; ತುಳು. ಬಿಕ್ಕ್]

ಬಿಕ್ಕು₃ (ನಾ). ಮಾಂಸ ; ಅಡಗು : "ಬಿಕ್ಕು-ಉಚ್ಛ್ವಾಸೇ, ಮಾಂಸ ಭೇದೇಚ" (ಶಮರಾ) ; ಚೋಳನ ಕಾರಡಗಿಂಗೆ ವಂಗಭೂಪಾಳನ ಬಿಕ್ಕುಗಂಧ್ರ ನರಪಾಳನ ಮೂಳೆಗೆ ಕಾಯ್ದು ಖಳ್ಗಮಾಕಾಳಿಯಡುತ್ತುರ್ ನಿಳ್ಕುವಳು ನಾಲಗೆಯಂ ನರಸಿಂಗಭೂಪನ (ಎಳ. IV (R), ಹುಣಸೂ. ೨೯-೦೭; 1162); ಅಗುರ್ಬಿಪ ಬಿಕ್ಕಿನಿಂದಮೊಟ್ಟಿದ ನೆಣದಿಂ . . . ಕೆತ್ತುತಿರ್ಪ ಖಂಡದೆ ಜವನುಂಡು ಕಾಱೆದವೊಲಿರ್ದುದು ಮಾರ್ಗಮದೆತ್ತ ನೋಟಱ್ಪೊಡಂ (ಅಂಗಾವ. ೬-೬) ; ಮೂಳೆ ಬಿಕ್ಕುಗಳ ಸಂದಣಿ . . . ಕಾಳಿಜಗಳೆಕ್ಕೆಕ್ಕೆ ತದ್ರಣರಂಗದೆಲ್ಲೆಡೆಯೊಳುಂ ತೀವೆ ಬಲಮೆರಳ್ ಪೂಣರ್ದುವು (ಶಿಪು. ೧೯-೧೩). [ದೇ. ॥ ತಮಿ. ವಿಟ್ಕು. /ಸಂ.ವೃಕ್ಕ, ವೃಕ್ಕಾ]

ಬಿಕ್ಕು₄. ಬಿಚ್ಚು₃ (ನಾ). ೧. ಬೌದ್ಧಸಂನ್ಯಾಸಿ : ತಕ್ಷಶಿಲಾನಗರದಲ್ಲಿ ಮಹಾಯಾನಪಂಥದ ಬೌದ್ಧಬಿಕ್ಕುಗಳು ನೆಲೆಸಿಕೊಂಡು ತಮ್ಮ ಮತವನ್ನು ಬೋಧಿಸತೊಡಗಿದರು (ಶಾಂಶ್ರ. II, ೬೦೩). ಬಿಚ್ಚು₃ : ೨. ಸಂನ್ಯಾಸಿ ; ಭಿಕ್ಷು : " ಬಿಚ್ಚುವೆನಲ್ಕೆ ಭಿಕ್ಷು " (ಕರ್ಣಾಸಿ. ೩೩): ಭಿಕ್ಷು-ಬಿಚ್ಚು (ಶಮದ. ೨೬೨ ಕ್ರಯೋ). [<ಪ್ರಾ. ಭಿಕ್ಖು./ಸಂ. ಭಿಕ್ಷು]

ಬಿಕ್ಕುಂದನಿ (ನಾ). ನಡುಗುವ ಧ್ವನಿ ; ಗದ್ಗದ : ಸಿಂಗಾರಮ್ಮ :— (ಎದ್ದು ಹೋಗಿ . . . ನಸೆದಿಟ್ಟಿಯ ಬಿಕ್ಕುಂದನಿಯಿಂದ) (ಶಪ್ರಅ. ೧೬-೨೦). [ಬಿಕ್ಕು₁ + ದನಿ₁]

ಬಿಕ್ಕುಳಿಕು ' ಬಿಕ್ಕುಳಿಕೆ ' ನೋ.

ಬಿಕ್ಕುಳಿಕೆ. ಬಿಕ್ಕಳಿಕೆ. ಬಿಕ್ಕುಳಿಕು (ನಾ). ೧. ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಂಡಾಗ ಗಂಟಲಿನಲ್ಲಿ ಹುಟ್ಟುವ ಒಂದು ಬಗೆಯ ವಿಲಕ್ಷಣವಾದ ಶಬ್ದ ; ಬಿಕ್ಕುಳು : ನಿಮಿರ್ಚ್ ಬಿಕ್ಕುಳಿಕೆ ಮೆಯ್ ಮುಯ್ಯಾಗೆ ಕಂಪಕ್ಕೆ ದಲ್ ಕುರುರಾಯಂ ಗದೆವೊಯ್ದು ನಿಂದಿಳಿಗೆ ಬಿಟ್ಟಂ ಬೆಟ್ಟು ಬಿಟ್ಟಂದದಿಂ (ರಸರ. ೪-೦೯೦). ಬಿಕ್ಕಳಿಕೆ : ೧. ಹಿಕ್ಕೆಯ ಬಾಷ್ಪಮದೆಂತೆನೆ ಬಿಕ್ಕಳಿಕೆಗಳಕ್ಕುಮಕ್ಷಿಯೊಳ್ ತಿಮಿರಂ ತುಂಬರ್ಕುಂ (ಪಮದ. ೦೩-೪೦) ; ದವನ, ಜೀರಿಗೆ, ಶುಂಠಿ ಇವಂ ಜೇನು ತುಪ್ಪದಿಂದ ಅರೆದು ಕೊಳ್ಳಲು ಬಿಕ್ಕಳಿಕೆ ಮಾಣ್ಗುಂ (ಪಿಪ್ಪ. ೦೩೦) ; ಓಮವನ್ನು ಸುಟ್ಟು ಮಸಿಯನ್ನು ಸಕ್ಕರೆಯೊಡನೆ ಕಲಸಿ ಕೊಟ್ಟರೆ ವಾಂತಿ ಬಿಕ್ಕಳಿಕೆ ನಿಲ್ಲುವುದು (ಸಕವೈ. ಶರ ೪೪೬). ೨. (ದುಃಖ, ಅಳು, ಸಂತೋಷ, ಭಯ ಮುಂತಾದುವುಗಳಿಂದ) ಧ್ವನಿಯಲ್ಲುಂಟಾಗುವ ನಡುಕ,—ಗದ್ಗದ: ಅದನ್ನು ನೆನಸಿಕೊಂಡ ಯಶೋದೆಗೆ ಪುನಃ ಬಿಕ್ಕಳಿಕೆ ಆರಂಭವಾಯಿತು (ಪಾತ್ಯಂ. ೦೦) ; ಅವಳ ಅಳು ನಿಂತಿತ್ತು ; ಬಿಕ್ಕಳಿಕೆ ಮಾತ್ರ ನಿಂತಿರಲಿಲ್ಲ (ಪುನರು. ೦೦೦). ಬಿಕ್ಕುಳಿಕು : ೨. ಧರ್ಮಜನು ತಂದೆ ನಿನಗಿಂತಧಿಕದುಃಖವ ತಂದೊವಗಿಸಿದೆ ಎನ್ನನೀಗಲೆ ಕೊಂದು ಕರುಣಿಸೆನುತ ಬಿಕ್ಕುಳಿಕಿನಲಿಯಳಲಿದನು (ತಿಮ್ಮಸ್ತ್ರೀ. ೨-೯೩). [ಬಿಕ್ಕುಳು + —ಇಕೆ]

ಬಿಕ್ಕುಳಿಸು. ಬಿಕ್ಕಡಿಸು. ಬಿಕ್ಕಳಿಸು (ಕ್ರಿ). ೧. ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಂಡಾಗ ಗಂಟಲಿನಲ್ಲಿ ಒಂದು ಬಗೆಯ ವಿಲಕ್ಷಣಶಬ್ದವುಂಟಾಗು ; ಬಿಕ್ಕು : ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತೊಡಂಕದೆಯ್ದೆ ನೂರ್ಪುಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳಟ್ಟಜವಾಗೆಯಾಡಿದಳ್ (ಪಂಪಭಾ. ೪-೯೦). ೨. (ದುಃಖ, ಭಯ, ಸಂತೋಷಾತಿರೇಕಗಳಿಂದ) ಮಾತು ತಡವರಿಸು,— ಗದ್ಗದಿಸು : ಸಿಕ್ಕಿದ ನಲ್ಲಳು ಮುನಿದ ನಲ್ಲನ ಮುಂದೆ ಬಿಕ್ಕುಳಿಸುತ ನುಡಿವಂತೆ ಲೆಕ್ಕ ಟವಣೆಯಾಗಿ ಕೊರಳು ಕುಣಿದು ದನಿಯಿಕ್ಕುವ ರಾಗ ರಂಜಿಸಿತು. (ಭರಭ. ೩-೬೩). ೩. ಕಾರು ; ಕಕ್ಕು : " ಬಿಕ್ಕುಳಿಸು – ಉದ್ಗಾರೇ " (ಶಮರಾ). ಬಿಕ್ಕಡಿಸು: ೨. ಚಿಕ್ಕೋರು ಸುಮ್ಮನೆ ಬಿಕ್ಕಡಿಸಿಕೊಂಡು ಬಿಕ್ಕಡಿಸಿಕೊಂಡು ಅಳ್ತಾನೇ ಇದ್ರು (ಸಂಗಾಳ್ಳ. ೩೨೯). ಬಿಕ್ಕಳಿಸು : ೨. ರಂಗನು ಬಿಕ್ಕಳಿಸುತ್ತ ನಡೆದ ಸಂಗತಿಯನ್ನೆಲ್ಲ ವಿವರಿಸಿದನು (ರಂಗರೋ. ೪೦) ; ಪರದೆಯ ಹಿಂದೆ ಮತ್ತೆ ಬಿಕ್ಕಳಿಸುವ ಶಬ್ದ ಕೇಳಿಸಿತು (ಭೂಗಾಶಿ. ೦೦೪).

[ಬಿಕ್ಕುಳು + — ಇಸು₃]

ಬಿಕ್ಕುಳು. ಬಿಕ್ಕಲು. ಬಿಕ್ಕಳು (ನಾ). ೧. ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಂಡಾಗ ಗಂಟಲಿನಲ್ಲಿ ಉಂಟಾಗುವ ಒಂದು ಬಗೆಯ ವಿಲಕ್ಷಣಶಬ್ದ; ಬಿಕ್ಕುಳಿಕೆ : ಕವುಳು . . . ಶುಂಠಿ ಹಿಪ್ಪಲಿ ಇವ ಚೂರ್ಣವ ಮಾಡಿ ಬೇಲದ ಹಣ್ಣಿನ ರಸದಲ್ಲಿ ಅರೆದು ಗುಳಿಗೆಯ ಮಾಡೆ ಬಿಕ್ಕುಳು ಪೋಕುಂ (ಪಿಪ್ಪ. ೦೩೯). ೨. (ದುಃಖ, ಸಂತೋಷ, ಕೋಪ, ಭಯ, ಮುಂತಾದುವುಗಳಿಂದ) ಧ್ವನಿಯಲ್ಲುಂಟಾಗುವ ನಡುಕ,— ಗದ್ಗದ : ಎತ್ತಿ ಹಾಯ್ಕುವ ಕೊರಳ ಬಿಕ್ಕುಳ ಕೆತ್ತುವಧರದ

ರೋಷದಲಿ ಹೊಗೆ ಸುತ್ತಿದುರಿವಾತುಗಳ ಸೂಸಿದರವನಿಪನ ಮೇಲೆ (ಕುಮಾಸ. ೯-೦೯); ನಿಮ್ಮಾಶ್ವರಕುಲಲಲಾಮನು . . . ಇಳಿವ ಕಂಬನಿಗಳಲಿ ಕಂಪಿತಗಳದ ಬಿಕ್ಕುಳಿನಕ್ಕೆಯಲಿ ಮಕ್ಕಳನು ಕೈವರ್ತಿಸಿ ಕಕುತ್ಸಾಸ್ಥನ್ಯಯನ ಬೀಳ್ಕೊಂಡ (ತೊರರಾ. ೦-೦೭-೨); ಉಕ್ಕಿದುದು ಮೇಲುಸಿರು ಕಂಠದ ಬಿಕ್ಕುಳಿನ ಭೀತಿಯಲಿ ತನ್ನೊಂದಕ್ಕರಿನ ಮನದೊಳಗೆ ರಾಮನ ನೆನೆದನಾ ಹನುಮ (ವೃಕಾಶಾ. ೩-೭೯). ೩. ಪ್ರಾಣ ಹೋಗುವ ಸಮಯದಲ್ಲಿ ಗಂಟಲಿನಲ್ಲಿ ಉಂಟಾಗುವ ಗದ್ದದ: ಈ ಐದು ಬಿಕ್ಕುಳುಗಳು ಮುಟ್ಟಿ ನವರಿಗೂ ಬಹಳವಾಗಿ ಸ್ತ್ರೀಸಂಗವುಳ್ಳವರಿಗೂ ವ್ಯಾಧಿಯಿಂದ ಕ್ಷಯಿಸಿದ ದೇಹದವರಿಗೂ . . . ಮರಣಕ್ಕೆ ಕಾರಣವಾಗಿ ಕಾಣಿಸಿಕೊಂಬುದು (ಸಳವೃ. ೨೯೦). 'ಬಿಕ್ಕುಳುರೋಗ' ಪರಾ. ಬಿಕ್ಕಲು: ೩. ಶ್ಲೇಷ್ಮದಿಂದ ತಡೆಯಲ್ಪಟ್ಟ ಪ್ರಾಣವಾಯು . . . ಐದು ಪ್ರಕಾರವಾದ ಬಿಕ್ಕಲುಗಳ ಉಂಟುಮಾಡುವದು (ವೃಕ್ಷಸಾ. I. ೦೩೩). ೪. ಉಗ್ಗು; ತೊದಲು: ಶೇಷಣ್ಣನವರಿಗೆ . . . ಹಾಡಲು ಬಹಳ ಉತ್ಸಾಹ; ಆದರೆ ಬಿಕ್ಕಲು. ಹಾಡಲು ಸಾಧ್ಯವಿಲ್ಲದೆ ಬಹುವಾಗಿ ನೊಂದುಕೊಳ್ಳುತ್ತಿದ್ದರು (ಸಂಗೀಸಂ. ೨೬೯). ಬಿಕ್ಕಳು: ೧. ಚಂದನಾದಿಚೂರ್ಣ . . . ಮೆಲ್ಲಲು ತೃಪೆ. ಛರ್ದಿ. ಬಿಕ್ಕಳು, ಪಿತ್ತ, ಭ್ರಮೆ, ಅರೋಚಕ ಇವು ಗುಣ (ಏವೈಸಂ. ೨೬). ೨. ಉಕ್ಕುವುದಲಲದನೊಯ್ಯನಾಱಿಸುವನು ಬಿಕ್ಕಳು ಬಹುದ ನಿಲ್ಲಿಸುವ (ಭರತ.೦೭-೦೯).

[ದೇ. ॥ ತಮಿ. ವಿಕ್ಕುಳ್, ವಿಕ್ಕಲ್, ವಿಕ್ಕಿಳ್; ತೆಲು. ವೆಕ್ಕಿಲಿ, ಎಕ್ಕಿಲಿ]

ಬಿಕ್ಕುಳುಬೇನೆ (ನಾ). ಉಸಿರಾಟದ ತೊಂದರೆಯಿಂದ ಅಧಿಕವಾಗಿ ಬಿಕ್ಕಳಿಕೆ ಉಂಟಾಗುವ ಒಂದು ಬಗೆಯ ರೋಗ: ಶೀತು ಬಿಕ್ಕುಳು ಬೇನೆ ನಾನಾಹಾನಿ ಬಳಿಕುದ್ಗಾರಗಳು ಏನೇನೊ ವೈಕಾರಗಳುದಾಸದ ವಾಯುವಿನ ಧರ್ಮ (ಗಗಶಾ. ೯-೬೮). [ಬಿಕ್ಕುಳು + ಬೇನೆ]

ಬಿಕ್ಕುಳುರೋಗ (ನಾ). = ಬಿಕ್ಕುಳುಬೇನೆ: ಐದು ತೆರನಾದ ಬಿಕ್ಕುಳು ರೋಗದಲ್ಲಿ ಕ್ಷುದ್ರೆ, ಅನ್ನಜೆ ಎಂಬೆರಡು ವಿಧವಾದ ಬಿಕ್ಕುಳುರೋಗವೆ ಅಸಾಧ್ಯವಾಗಿ ಪ್ರಾಣವನಪಹರಿಸುತ್ತ ಇಹುದು (ಸಳವೃ. ೨೯೦).

[ಬಿಕ್ಕುಳು + ರೋಗ]

ಬಿಕ್ಕೆ$_1$ 'ಬಿಟ್ಕೆ' ನೋ.

ಬಿಕ್ಕೆ$_2$. ಬಿಚ್ಚೆ (ನಾ). ತಿರುಪೆ: ಭಿಕ್ಷೆ: "ಬಿಕ್ಕೆ ಭಿಕ್ಷೆಯೆಂ" (ಶಕಾಸಾ. ೭೨); ಬತತನದ ಬೇನೆಯನು ರಾಗದಿಂ ಪಾಡಿ ಜೋಡುಕೈಗಳ ವಸೌನದೈನ್ಯದಿಂ ನೀಡಿ ಬೇಡಿದನು ಬಿಕ್ಕೆಯನು (ಗಗದ. ೭೯); ಭಕ್ತ ಬೇಡಲು ಬಿಕ್ಕೆ ಇತ್ತ ತೆರನಾದುದೌ! (ತೆಲುಸಾ. ೩೯). ಬಿಚ್ಚೆ: 'ಬಿಚ್ಚೆಕಾರ' ಪರಾ.

ಬಿಕ್ಕೆ ಬೇಡು = ಯಾಚಿಸು; ಭಿಕ್ಷೆಯನ್ನು ಕೇಳು; ತಿರಿ: ಬ್ರಿಟಿಶರಲ್ಲಿ ಸ್ವರಾಜ್ಯದ ಬಿಕ್ಕೆ ಬೇಡಲು, ನಾವು . . . ವರ್ಣಾಶ್ರಮವನ್ನು ನಾಶ ಮಾಡಬೇಕೆ? (ಯಕ್ಷಪ್ರ. ೧೩); ಹೀಗೆ ಸ್ವಾರ್ಥ ಬಿಟ್ಟು ಧರ್ಮಾತ್ಮನಾದರೆ ನಾಳೆ ಬಿಕ್ಕೆ ಬೇಡಬೇಕಾದೀತು (ಕುರುಕಾ. ೧೩೮). [<ಸಂ. ಭಿಕ್ಷಾ]

ಬಿಕ್ಕೆಯಣ 'ಬಿಕ್ಕಿಯಣ್ಣ' ನೋ.

ಬಿಕ್ರಿ 'ಬಿಕರಿ' ನೋ.

ಬಿಕ್ರಿದಾರ 'ಬಿಕರಿದಾರ' ನೋ.

ಬಿಕ್ಲಂ 'ಬಿಕ್ಕಲಂ' ನೋ.

ಬಿಗಡ$_1$ 'ಬೇಗಡ್ಡ' ನೋ.

ಬಿಗಡ$_2$ (ನಾ). ಕಷ್ಟ; ತೊಂದರೆ; ಕೇಡು: ಇವರಿಗೆ ಬಿಗಡಾವ ಮಾಡಿ ಲಡಾಯಿಗೆ ನಿಲ್ಲಬೇಕು (ಪುದಕ. ೨೦-೦೩).

[← ಹಿಂ. ಬಿಗಾಡ್; ಮರಾ. ಬಿಗಡ, ಬಿಗಾಡ, ಬಿಘಡ, ಬಿಘಾಡ]

ಬಿಗಡಾಯಿಸು, ಬಿಗಡಿಸು, ಬಿಘಡಾಯಿಸು (ಕ್ರಿ). ೧. ಹದಗೆಡು; ಕೆಟ್ಟುಹೋಗು: ಇನ್ನು ಮುಂದು ಸಲ್ಲಾ ಬಿಗಡಾಯಿಸಿದರೆ . . . ನಮ್ಮ ದವಲತ್ತನ್ನು ಮುಳುಗಿಸಿಬಿಟ್ಟಾರು (ರಾಕೇಂಪ್ರ. ೦೦೨); ಶ್ರೀಕೃಷ್ಣದೇವ ರಾಯನ ಆಳ್ವಿಕೆಯ ಅನಂತರದಲ್ಲಿ ರಾಜಕೀಯಪರಿಸ್ಥಿತಿ ತುಂಬಾ ಬಿಗಡಾಯಿ ಸಿತ್ತು! (ಹೇಮಾಶಾ. ೦೦೯). ೨. ಬಿಗಿಯಾಗು; ಗಡುಸಾಗು; ಘಮುಜ ಜಮಿಯೆತ್ತು ಆಯಿತು ಜಿರಮುಲೆದವರು ಬಿಗಡಾಯಿಸಿಕೊಂಡೆ ಹೋಗಿ ಯಿದ್ದರು (ಮುದಕ. ೭೯-೯); ಚೀಂಕ್ರನ ಧ್ವನಿ ಬಿಗಡಾಯಿಸಿತು (ಮುಲಿಮು. ೯೭೩). **ಬಿಗಡಿಸು**: ೩. ಕೆರಳಿಸು; ಕೋಪಗೊಳಿಸು: ಭಾಗಾನಗರದವರ ಬಗೆಯ (?) ಪೆದೂರ ಲಿಂಗಪ್ಪಂ ಬಿಗಡಿಸಿ ಬಂದಿರಲು (ಕಳವೃ. ೯-೦೯). **ಬಿಘಡಾಯಿಸು**: ೧. ನಮ್ಮ ಕುಟುಂಬದ ಪ್ರಕೃತಿ ಬಿಘಡಾಯಿಸೇದ (ಸಮಾಕೇ. ೯೬).

[ಬಿಗಡ್ಯಾ (ಪ ← ಹಿಂ. ಬಿಗಡನಾ; ಮರಾ. ಬಿಗಡಣೇ, ಬಿಘಡಣೇ) + — ಇಸ್ಯು$_3$]

ಬಿಗಡಿಸು 'ಬಿಗಡಾಯಿಸು' ನೋ.

ಬಿಗಿ$_1$ (ಕ್ರಿ). ೧. (ಹಗ್ಗ, ಸರಪಣಿ ಮುಂತಾದುವುಗಳಿಂದ) ಕಟ್ಟು,— ಬಂಧಿಸು: "ಬಿಗಿ—ಬಂಧನೇ, ಹಯಪರಿಕರೇ ಚ" (ಶಬರಾ); ಹಗಱ ಗಳನಿಕ್ಕಿ ಬಿಗಿದಡೆ ನಾಯ ಬಾಲವದು ಬಳಿಕ ನೀಳಕೆ ಸಸಿನವಹುದೇ (ಬಸಪು. ೬೦-೨೬); ಮುತ್ತಿನ ಗದ್ದುಗೆ ಗರುಡನ ಹೆಗಲಿನೊಳಿತ್ತಿಸಿ ಬಿಗಿದು ಹಲ್ಲಣಿಸೆ ಅತ್ಯಂತ ಸೌಖ್ಯವ ಮಾಡಿ ಸಂತಸದಿಂದೆ ಹತ್ತಿದ ಶ್ರೀಕೃಷ್ಣರಾಯ (ಮೋಹತ. ೩೬-೩೭); ಡೊಳುಹೊಟ್ಟೆಗೆ ನಾಗರ ಬಿಗಿದವನೇ . . . ದಯಮಾಡಯ್ಯಾ ದಂತಾಯುಧನೇ (ಗಣೇಶ.೦-೦೨). ೨. ಭದ್ರಪಡಿಸು; ಸಡಿಲವಾಗದಂತೆ ಮಾಡು; ಅಳ್ಳಕವಾಗಿಲ್ಲದಂತೆ ಮಾಡು: ಗುಲ್ಮದಂತೊತ್ತುವರ್ ಪೊಱೆಕಾಱನಂತೆ ಬಿಗಿದು ಕಟ್ಟುವರ್ (ರರ್ಮಾಸ್ತ. ೩-೭೩); ವಿಜಯವೀಣೆಯಂ ಕೊಂಡು . . . ತಂತ್ರಿಯಂ ಬಿಗಿದುರ ದೊಳ್ ಸಾರ್ಚಿ (ಬಂಹಂ. ೨-೩೧ ಪ); ಬಿಗಿದ ಬೀಯಗ ಬದ್ದರದ ಬಂಡಿಗಳು (ಕುಮಾಕಾ. ೦೭-೨೯). ೩. ಅವಕಾಶವಿಲ್ಲದಂತೆ ಒತ್ತಿ ಹಿಡಿದಿರು,— ಅಮುಕಿ ಹಿಡಿದಿರು; ಸಡಿಲವಾಗಿಲ್ಲದಿರು; ಹತ್ತೆಯಾಗಿರು: ಈ ಪ್ರಿಯಂವದೆಯು ಬಿಗಿಯಾಗಿ ಕಟ್ಟಿದ ವಲ್ಕಲದಿಂದ ನನ್ನ ಎದೆಯು ಬಿಗಿಯುತ್ತಿರುವುದು (ಶಾಕುಂತ. ೯-೬); ಈ ಅಂಗಿ ಮಗುವಿಗೆ ಬಿಗಿಯುತ್ತದೆ, ಹಾಕಲಾಗುವುದಿಲ್ಲ (ರೂಢಿ). ೪. ವಸ್ತ್ರ ಮುಂತಾದುವನ್ನು ಉಡಲು ಭದ್ರವಾಗಿ ಕಟ್ಟು,— ಬಂಧಿಸು: ಸಪುರ ಬಳಿದಂ ಬಿಗಿದುಡಿಸಿ ಬೆಳಗುವ ದುಕೂಲಮಂ ಪೊದಯಿಸಿ (ಪಂಪಿಕ. ೦೦-೨೩); ಕಂಸಸರಸುಮಕ್ಕಳ್ಗಿಲ್ಲಮುಡಲುಂ ತುಡ[ಲುಮ]ಟ್ಟಿ ನಂದಂಗಂ ಕೃಷ್ಣಂಗಮಱೀವು ಪುಟ್ಟಿ ಕಲಿಗಂಟಿಕ್ಕಿ ತೆರಳ್ದಿ ಬಿಗಿದುಟ್ಟು ಪೊಯಿಕಯ್ಯ ನೆಂಬಂತಿರ್ದಂ (ಬಂಹಂ. ೬-೨೭ ಪ); ಬಿಗಿದ ಗಂಡುಡಿಗೆಯಲಿ . . . ನಸುನಗೆ ಮೊಗದ ಸೊಂಪಿನಲಾಹವಕ್ಕನುವಾದನಭಿಮನ್ಯು (ಕುಮಾಕ್ರೋ. ೯-೯೯). ೫. ಹೊಂದಿಸು; ಅಳವಡಿಸು: ಬಿಗಿದ ಸಾರಂಗದ ಮೇಲ್ಕಟ್ಟಿನೊಳಂ ಮಾಂಗಾಯ ಫಲಾವಳಿಗಳೊಳುಂ . . . ಎಸೆವ ಮಂಟಪಂಗಳ ನಡುವಣ ಪದ್ಮರಾಗದ ಪಟ್ಟವಣೆಯೊಳ್ ನಿಲಿಸಿದ ಕಾಮದೇವನನತಿಪ್ರೀತಿ ಯಿಂದರ್ಚಿಸಿ (ಕಾದಂಬಾ. ೬೦); ಬಿಗಿದ ಝಲ್ಲರಿ ಮುಗಿಲ ಹೊಸಕೈದುಗಳ ಮಿಂಚಿನ . . . ತನಿಹೊಗರಿಱಿದು ಪರಬಲದ ಕಡುವೇಸಗೆಗೆ ಕವಿದುದು ರಾಜಹಂಸಪ್ರಕರವೋಸರಿಸೆ (ಕುಮಾಕ್ರೋ. ೦.೯೬); ಬಿಗಿದ ಬಿಂಗಾರಿಗಳ ಮಿಸುನಿಯ ಜಗಲಿಗಳ . . . ವಿಲಾಸದಲಿ ಸೊಗಸಿತಾ ಮಂಟಪ (ತೊರರಾ. ೦-೦೩-೬). ೬. ರಚಿಸು; ನಿರ್ಮಿಸು: ನಳನು ರಿಪುಸಂಹಾರ ಕಾಲಾನಳನು ಕಾರುಣ್ಯದಲಿ ಬಿಗಿದನು ಜಲನಿಧಿಗೆ ಸೇತುವನು (ತೊರರಾ. ೬-೩ ಸೂಚನೆ); ಲೋಲಲೋಚನೆ ಬಳಲಿದುದ ಕಾಣುತ ವನಪಾಲರು ಪಕ್ಷಪಾತದಲಿ ಬಾಲೇಂದುಕಾಂತಸೋಪಾನದೆ ಬಿಗಿದ ವಿಶಾಲಸರಸಿಯ ತೋಱಿದರು (ಮೋಹತ. ೯-೯೦). ೭. ಕೂಡು; ಸೇರು: ಬಿಗಿದ

ಹುಬ್ಬಿನ ಭೀಮ ಹೊಕ್ಕನು ಗದೆಯ ತಿರುಗಿಸುತ (ಕುಷ್ಯಾದ್ರೋ. ೨-೬೨) : ಕರ ನಡುಗೆ ಮೈ ಬಲಿಯೆ ಹುಬ್ಬುಗಳುಱ್ ಬಿಗಿಯೆ . . . ವೀರಾವೇಶದಲಿ ಮಸಗಿದನು ಕಲಿಭೀಮ (ಕುಷ್ಯಾಕ. ೦೨-೦೦). ೮. ಕೂಡಿಸು ; ಸೇರಿಸು : ಹುಬ್ಬುಗಳನುಱ್ ಬಿಗಿದೌಡನೊಡೆಯೊತ್ತಿ . . . ಹೊಂಗಿದನಧಿಕರೋಷದಲಿ (ಕುಷ್ಯಾದ್ರೋ. ೦೯-೦೩) ; ಝಗಝಗಿಸಿದುದಾ ಉಭಯಕಾವೇರಿಯ ಬಿಗಿದೊಪ್ಪುತಿಹ ದಿವ್ಯಸೇತು (ಕಂನಪಿ. ೩-೬೦). ೯. ಗಾಢವಾಗು ; ಗಟ್ಟಿಯಾಗು ; ಬಲವಾಗು : ನಿನ್ನಿಂದಂ ಕೊಲೆಸತ್ತುವಱ ಕೋಟ್ಕಳ ನಾದಮಾನುಂ ಬಿಗಿದಪ್ಪಿಕೊಂಡು ಸತ್ತುದರ್ಕಿದು ಕಾರಣಂ (ಪಡ್ಮಾಣಾ. ೩೯-೦೬) ; ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ . . . ಮಱಸೊಂದಿದಂದದೊಳೆ ಜೋಲ್ದ ನಿಜೇಶನನಾ ಲತಾಂಗಿ ತೊಟ್ಟಗೆ ಕೊಳೆ ನೋಡಿ (ಪಂಪಭಾ. ೨-೦೯) ; ಇಲ್ಲೀಗ ಕಂಡೆನಾದಡೆ ಚರಣದಲ್ಲಿ ದೊಪ್ಪನೆ ಬಿದ್ದು ಬಿಗಿದು ತರ್ಕೈಸಿ . . . ತಲ್ಲೀಯವಪ್ಪೆನು (ಸಿದ್ಧಾಣಾ. ೨-೩೩). ೧೦. ಬಿರುಸಾಗು ; ಕಠಿಣತೆಯನ್ನು ಹೊಂದು : ಕೇಳಂಗನೆ ನಿನ್ನ ಬೀಗಿ ಬಿಗಿದಿರ್ದ ಕುಚದ್ವಯಮಧ್ಯದಲ್ಲಿ ತಾಂ ಪಿಂಗದೆ ನಟ್ಟ ದಿಟ್ಟಿಯನವಂ ಕಿಟಲೆಂದನುಗೆಯ್ದು ತೂಗಿದಂ. (ಆದಿಪು. ೦೨-೦೩) ; ಬಿಗಿದೊಗೆವ ಕುಚದ್ವಂದ್ವವಿಂತಾಗವೇಡಾ ನಳಿತೋಳಿಂತಾಗವೇಡಾ (ಗದಾಯು. ೯-೬೦) ; ಬಿಗಿದುತ್ತುಂಗಕುಚಂ ಕದಕ್ಕದಿಸೆ ಹಾರಂ ತೂಗೆ (ಜಗಪಿ. ೦೦-೦೦೦). ೧೧. ಆವರಿಸು ; ಕವಿ ; ಮುಸುಕು : ಧಾರುಣಿಯೊಳುತ್ಪಾತ ಬಿಗಿದುದು (ಕುಷ್ಯಾಸ. ೦೩-೪೨) ; ಕತ್ತಲೆ ಬಿಗಿದುದವನೀತಳವ ಪೆಟ್ಟಿಗೆ ಮುಚ್ಚಿದಂದದಲಿ (ಪಳಸ. ೩-೪೩). ೧೨. ಕವಿಯುವಂತೆ ಮಾಡು ; ಮುಚ್ಚು : ಭೀಮಸೇನನ ತಱುಬಿ ನಿಂದನು ಭೀಷ್ಮ ಬಿಗಿದನು ಸರಳಲಂಬರವ (ಕುಷ್ಯಾಭೀ. ೬-೩). ೧೩. ಮುಚ್ಚಿಕೊಳ್ಳು : ಮೇಲುಗಾಣದ ಪಾರ್ಥನೆಂಬೀ ಕಾಳುಮೂಳನ ವಿಧಿಯನೇಪರಿವೇಳುವೆನು ಹರಿಯೆನುತ ಕಂಗಳನೆವೆಗಳಲಿ ಬಿಗಿದ (ಕುಷ್ಯಾಭೀ. ೩-೬೦) ; ರಾತ್ರಿಯೆಲ್ಲಾ ನಿದ್ರೆ ಬರದೆ ಈಗ ಕಣ್ಣು ಬಿಗಿಯುತ್ತಾ ಇದೆ (ರೂಢಿ). ೧೪. ಕುಂದಣಿಸು ; ಕೆಚ್ಚು : ಬಿಗಿದ ಮರಕತಮಣಿಯ ನೆಲಗಟ್ಟುಗಳ . . . ಲೋವೆಗಳ ಕಾಂತಿಯ ಲಳಿಯ ಲಹರಿಯೊಳೆದ್ದನಮರಾರಿ (ಕುಷ್ಯಾಸ. ೩-೨೯) ; ಪಳುಕಿನಱಿಯಲಿ ಬಿಗಿದ ಬೀದಿಯ ನೆಲನ ನಿಳಯಶ್ರೇಣಿಗಳ ನುಜ್ವಲಿಪ ಚಂದ್ರೋಪಲದ ಘನಸೋಪಾನಪಂಗ್ತಿಗಳ . . . ಪಸರದಿನೆಸೆದುದಾ ಪುರ (ಶೂರಣಾ. ೦-೯-೦೯). ೧೫. ಸಿದ್ಧಪಡಿಸು ; ಸಜ್ಜುಗೊಳಿಸು : ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು (ಪಂಪಭಾ. ೬-೩೬ ಪ); ಶಿವನ ಬೇಡಿದ ಶರವ ತೆಗೆ ಗಾಂಡಿವವ ಬಿಗಿ. . .ಬವರಕೇಳೇಳು (ಕುಷ್ಯಾದ್ರೋ. ೪-೨೩). ೧೬. ಉಸಿರು ಅಥವಾ ಸ್ವರವು ಸಹಜವಾಗಿ ಹೊರಬರದಂತೆ ಕಂಠವು ಉಬ್ಬಿ ಕಟ್ಟಿಕೊಳ್ಳು.— ಅಡ್ಡಿ ಹೊಂದು : ಒಗುವ ಕಂಬನಿಗಳಲಿ ಕಂಠವ ಬಿಗಿದ ಸೆರೆಗಳ ಸೇದುವಕ್ಕೆಯ ವಿಗತಪರಿತೋಷಿತನು ಪಾವನತರರಿಗಿಂತೆಂದ (ಶೂರಣಾ. ೦-೪-೬) ; ಗೆಳೆಯರು ಬಿಗಿದ ಕಂಠದಿಂದಲೇ ಅವರನ್ನು ಬೀಳ್ಕೊಟ್ಟರು (ರೂಢಿ). ೧೭. ನಿರೋಧಗೊಳಿಸು ; ಅಂಕೆಯಲ್ಲಿಟ್ಟುಕೊಳ್ಳು ; ಹಿಡಿತದಲ್ಲಿರಿಸು : ಆತ್ಮನಂ ಭೇದಿಸಿ ಪ್ರಾಣವಾಯು ನಾಡಿಗಳನಱಿತು ಹಿಡಿವ ಭೇದಮಂ ತಿಳಿದು ತೆಗೆವ ಬಿಗಿವ ಸಂಚಮಂ ಕಂಡು . . . ಆತ್ಮಲಿಂಗದಲ್ಲಿ ಸಂಯೋಗವ ಮಾಡುವುದಾತ್ಮಯೋಗ (ಆದಪ. ೨೯-೬೭) ; ಪ್ರತ್ಯಾಹಾರ, ಉಪಾದಾನಂ . . . ಇಂದ್ರಿಯಗಳನ್ನು ಹಿಂದಿರುಗಿಸಿ ನಿಗ್ರಹಿಸುವಿಕೆ, ಆಶೆಯನ್ನು ಬಿಡದೆ ಬಿಗಿದು ಹಿಡಿಯುವಿಕೆ (ಸಿದ್ಧಾಂತಿ. ೩೬೦) ; ಹುಲ್ಗರಿಯ ಬಳವಿಗೆಯ ಬಿಗಿದುಸಿರೊಳಾಲಿಸುತ . . . ಎಲೆ ಅಹಂಭಾವ, ನಿನ್ನ ಪರಿವೆಯೆ ಇಲ್ಲದಂದದೊಳು ತೊಲಗುತಿಹುದಿಲ್ಲಲಾ ನಿನ್ನ ಹೇವ (ಪುಲೆಬೇ. ೩೩-೦). ೧೮. ಹೊಡೆ ; ಬಡಿ ; ಥಳಿಸು : ಎಲ್ಲಿ ಸಿಕ್ಕಿದರಲ್ಲಿ ಬಿಗಿವರು . . . ಒಡನೆಗೆವರು ನಿಂದು ಕಾದುವರು (ಮೋಹತ. ೦೨-೬೬) ; ಅವನಕ್ಕ ಅವನನ್ನು ಎಳೆದು ಹಾಕಿ ನಾಲ್ಕು ಚೆನ್ನಾಗಿ ಬಿಗಿದರಂತೆ (ಹೊಸಕ್ಷಿ. ೦೦೪). ೧೯. (ಹೊಟ್ಟೆ ಬಿರಿಯುವಂತೆ) ತುಂಬು,— ಭರ್ತಿಯಾಗು : ತನ್ನ ಉದರಂ ಬಿಗಿಯೆ ಗಱ್ಱನೆ ತೇಗುತಂ (ಬಸಪು. ೨೩-೩೦). ೨೦. ಸೆಟೆದುಕೊಳ್ಳು ; ಸೆಡೆ : ಬಿಗಿದ ನರಗಳ ತೆಱದ ನೊರೆವಾಯ ಉಱುಗಿ ಬಾಗಿದ ಶಿರದ . . . ಹೇಸಿಕೆಯು ನಾತವಧಿಕಭಯಂಕರವು (ಬಸಪು. ೪೬-೩೬) ; ಬಿಗಿದ ನರಂಗಳುಬ್ಬರಿಪ ಬಲ್ಬಸಿಱ್ . . . ನಾತಮಂ ನೆಗಳ್ವ ತದುಗಕಾರ್ದೆಱಗಿ ಝುಮ್ಮೆನುತೋಡುವ ಮಕ್ಷಿಕಾಳಿಗಳ್ (ಪ್ರಸಪಿ. ೩೦-೩೩). ೨೧. ಸೆಳೆತದಿಂದ ಕೂಡಿರು ; ಎಳೆತವನ್ನು ಹೊಂದಿರು : ಗಾಯ ಒಣಗುತ್ತಾ ಬಂದಿರುವುದರಿಂದ ಬಿಗಿಯುತ್ತಿದೆ (ರೂಢಿ); ಅನಾರೋಗ್ಯದಿಂದ ಮೈ ಬಿಗಿಯುತ್ತಿದೆ (ರೂಢಿ). ☞ ಈ ಪದವು ಅನೇಕ ಶಬ್ದಗಳ ಮುಂದೆ ಸೇರಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಉದಾ. 'ಏಟು ಬಿಗಿ, ಭಾಷಣ ಬಿಗಿ' ಇತ್ಯಾದಿ.

ಬಿಗಿಬಿಗಿ (ದ್ವಿರುಕ್ತಿ) : ಅಚಲಿತಭಕ್ತನು . . . ಹೊಳಚಿ ತಂದಾ ಸೆಕ್ಕೆಗಳನೊಳಗೊಳಗೆ ಶೋಧಿಸಿ ತನ್ನ ಕಂಬಿಯ ನೆಲಹಿನಿತ್ತರದಲ್ಲಿ ಸುತ್ತಲಾ ಸೆಕ್ಕೆ ಬಿಗಿಬಿಗಿದು (ಬಸಪು. ೪೩-೨೩) ; ಬಗಸೆಗೈಗಳಲಿ ನೀರ್ವಿಡಿದು ಶ್ರೀರಂಗೇಶ ಸೊಗಸುಗಾತಿಯರ ಮೇಲಿಡಲು ಒಗುವ ನೀರ್ವೊಯ್ಲ ಸೈರಿಸದೆ ಶ್ರೀಹರಿಯನು ಬಿಗಿಬಿಗಿದಪ್ಪಿದರಾಗ (ಕಂನಪಿ. ೨೩-೦೨೩). ಬಿಗಿದುಕೊಳ್, ಬಿಗಿದುಕೊಳ್ಳು = ೧. ಭದ್ರವಾಗಿ ಕಟ್ಟಿಕೊಳ್ಳು : ತನ್ನ ತೊಟ್ಟ ದಿವ್ಯಾಭರಣಂಗಳೆಲ್ಲಮಂ ಕಳೆದು ದಿವ್ಯಶರೆಧಿಗಳಂ ಬಿಗಿದುಕೊಂಡು (ಪಂಪಭಾ. ೪-೦೨ ಪ). ೨. ಬಿಗುಮಾನವಾಗಿರು : ಬಿಗಿಯಲ್ಲಿರು : ಇವತ್ತು ಹೀಗೆ ಯಾಕೆ ಬಿಗಿದುಕೊಂಡಿದ್ದೀಯೆ ಶಾಂತಾ ? (ಮೂರುದಾ. ೦೬೯) ; ಅವನೊಮ್ಮೆ ತನ್ನ ಮುಖ ನೋಡಿದರೆ ಸಾಕು . . . ಬಿಗಿದುಕೊಂಡ ಮುಖ ಹಸನ್ಮುಖವಾಗುತ್ತದೆ (ಕುಸುಸಂ. ೦೬೦). ಬಿಗಿದು ಬರು = ಗಂಟಲಿನ ಸೆರೆಗಳು ಉಬ್ಬು ; ಗದ್ಗದವಾಗು : ಕಂಠವು ಬಿಗಿದು ಬಂತು. ಮುಂದೆ ಮಾತು ಹೊರಡದಾಯಿತು. (ದೌಲತ್. ೦೪).

[ದೇ.॥ ತಮಿ. ಪಿಕಿ ; ತುಳು. ಬಿಗಿ ; ತೆಲು. ಬಿಗಿಯು]

ಬಿಗಿ$_2$ (ನಾ). ೧. ಭದ್ರವಾಗಿರುವಿಕೆ ; ಗಟ್ಟಿಯಾಗಿರುವಿಕೆ : ಅವರ ಹಾಸಿಗೆಯ ಗಂಟು ಬಿಗಿಯಾಗಿದೆ (ರೂಢಿ). ೨. ಬಲವಾಗಿರುವಿಕೆ ; ದುರ್ಬಲವಲ್ಲದಿರುವಿಕೆ : ಬಾವಿಯಿಂದ ನೀರು ಸೇದುವ ಹಗ್ಗ ಬಿಗಿಯಾಗಿರಬೇಕು (ರೂಢಿ). ೩. ಸಡಿಲತೆಯಿಲ್ಲದಿರುವಿಕೆ ; ಅಳ್ಳಕವಾಗಿಲ್ಲದಿರುವಿಕೆ : ನಿಱಿಯ ಬಿಗಿ ಪೈಸರಿಸೆ ಪೆಣ್ಮಂಚದಂಚಿದುಪ್ಪುಳ್ವಾಸಿಗೆಳೆ ದೊಯ್ದಳಿನಿಯನಂ ಬಲ್ಪಿನಿಂದೆ (ಪೈಪಿಪಾ. ೧೦-೦೯) ; ದೊಡ್ಡವನು ತೊಟ್ಟುಕೊಂಡ ಅಂಗಿಯು ಅವನ ಮೈಗೆ ಬಹಳ ಬಿಗಿಯಾಗುತ್ತಿತ್ತು (ಮುಂಬಿಯು. ೪-೬೬). ೪. ಮಜಬೂತಾದುದು : ಅವರ ಮನೆಯ ಬಾಗಿಲು ಬಿಗಿಯಾಗಿದೆ (ರೂಢಿ). ೫. ಕಟ್ಟುಪಾಡು ; ಭದ್ರತೆ ; ವ್ಯವಸ್ಥೆ : ಲಂಚ ಕಡಮೆಯಾಗಬೇಕಾದರೆ ಆಡಳಿತದಲ್ಲಿ ಬಿಗಿ ಮತ್ತು ದರ್ಪ ಹೆಚ್ಚಾಗಿರಬೇಕು (ಪಂಇಸಂ. ೦೬೩). ೬. ಕಟ್ಟುನಿಟ್ಟು ; ಬಿಗುವು : ಆ ಮಾತಿನಲ್ಲಿ ಬಿಗಿಯಿರದೆ ಸರಳಪ್ರಸನ್ನತೆ ಇದ್ದುದನ್ನು ಅರಿತುಕೊಂಡು (ಪಶಂಪಾ. ೦೯) ; ಅವರ ಸ್ವಭಾವ ಬಿಗಿ. ಆದರೆ ಹೃದಯ ವಿಶಾಲವಾದದ್ದು (ಪುರಶ. ೧೬೬). ೭. ಕಷ್ಟ ; ಕಠಿಣ ; ಜಟಿಲ : ಈ ಭಾವಸಂವೇದನೆಯೇ ಭ್ರಮೆಯೋ ಆ ಬುದ್ಧಿವಾದವೇ ಭ್ರಮೆಯೋ ಎಂಬುದನ್ನು ಹೇಳುವುದು ಬಿಗಿ (ಸಾಹಿಪಿ. ೦೦೯) ; ವೀಣಾ ಬಾರಿಸಲಿಕ್ಕೆ . . . "ರೂಢೀ ಮಾಡಿದರ, ಅಷ್ಟೇನೂ ಬಿಗೀ ಅಲ್ಲ" (ಗಂಗಾಸಾ. ೯೪). ೮. ಮನಸ್ಸು ಬಿಚ್ಚಿ ಮಾತನಾಡದಿರುವುದು ; ಬಿಗುಮಾನ :

ಹುಡುಗರ ಹತ್ತಿರ ಅವನು ಬಹಳ ಬಿಗಿಯಾಗಿರುತ್ತಿದ್ದ (ಕಾಲಿಮ. ೨೦೯); ಆಕೆ ಬಂದಾಗಿನಿಂದ ಮನೆಗೆ ಹೋಗುವವರೆಗೂ ಬಹಳ ಬಿಗಿಯಲ್ಲೇ ಇದ್ದರು (ಕೂಡಿ). ೯. ಕುದುರೆ, ಎತ್ತು ಮುಂತಾದ ಪ್ರಾಣಿಗಳ ಜೀನನ್ನು ಭದ್ರಪಡಿಸಲು ಅವುಗಳ ಒಡಲಿಗೆ ಕಟ್ಟುವ ಚರ್ಮದ ಪಟ್ಟಿ; ತಂಗುಪಟ್ಟಿ: "ಕಾಮಕರದೊಳೆಟ್ಟಿನ ಪಟ್ಟಿಯಲ್ಲಿ ಬಂಧನದೊಳಂ ದೊರೆಕೊಳ್ಗು ಬಿಗಿಯೆಂಬ ಶಬ್ದವು" (ಶಬ್ದಮಂ. ೬೨).೧೦. ಎರಡುತೋಳುಗಳಲ್ಲಿ ಹಿಡಿಯಬಹುದಾದಷ್ಟು ಸೊಪ್ಪು, ಹುಲ್ಲು ಇತ್ಯಾದಿಗಳ ಕಟ್ಟು.—ಹೊರೆ: ಒಂದು ಬಿಗಿ ಹುಲ್ಲು ಕೊಡು (ಕೂಡಿ). ೧೧. ಕುಸ್ತಿಯ ಒಂದು ವರಸೆ; ಮಲ್ಲಯುದ್ಧದ ಒಂದು ಪಟ್ಟು: ಬಿಡದೆ ಬಿಗಿಗಳ ಬಿಡಿಸಿ ಕಳಚುವರೊಡನೆ . . . ಬಿನ್ನಣ ಬಿಡಿಕೆಗಳ ಬಂಧದಲಿ ಹೆಣಗಿದರುಭಯಪಟುಭಟರು (ಅಂಬಿಕಾ. ೦೬-೨೦). ೧೨. [ಸಂಗೀತ] ತಂತೀವಾದ್ಯದಲ್ಲಿ ನಾದವನ್ನು ಹೆಚ್ಚಿಸುವ ಆರುಬಗೆಯ ಸಾಧನಗಳಲ್ಲಿ ಒಂದು: ಬಿರಟೆ ಚಕ್ಕು ಸನ್ನೆ ಬಿಗಿ ಜಬ್ಬು ಜೀವಾಳವೆಂಬಾಱು ಬಗೆಯಾದ ನಾದಕಟ್ಟುಗಳಿಂ ತಂತ್ರಿಗಳಂ ವರಿಸಿ (ವಿವೇಕ. ೨೩೭).

ಬಿಗಿಬಂದು=ಭದ್ರವಾದ ಕಟ್ಟುಪಾಡು; ಸುವ್ಯವಸ್ಥೆ: ತೊಗರೆಯ ತೊಗೆ ಲೇಸು ತಿಗುರಿಗೆ ಮೊಳೆ ಲೇಸು . . . ದೊರೆಗಳಿಗೆ ಬಿಗಿಬಂದು ಲೇಸು (ಸರ್ವಜ್ಞ. ೭೨೨). ಬಿಗಿಬಂದು ಮಾಡು=ಭದ್ರವಾಗಿ ಅಳವಡಿಸು; ಭದ್ರಪಡಿಸು: ರಂಧ್ರಗಳಲ್ಲಿ ಕಬ್ಬಿಣದ ಸಳಿಯು ಹಾಯ್ದು ಹೋಗಿ ಪತ್ರಗಳನ್ನೆಲ್ಲ ಸೂಚಿಯ ಕಪಚಕ್ಕೆ ಬಿಗಿಬಂದು ಮಾಡಲು ಬರುವಂತೆ ಒಂದು ಬಗೆಯ ಯಾಂತ್ರಿಕವ್ಯವಸ್ಥೆಯಿರುತ್ತದೆ (ಗ್ರಂಥಾಂ. ೪೪). ಬಿಗಿ ಮಾಡು = ಭದ್ರಗೊಳಿಸು: ಹೀಗೆ ಬಿಗಿ ಮಾಡಿದ ನಂತರ ಅಕ್ಷರ ಮತ್ತು ಪಡಿಯಚ್ಚುಗಳ ಮುಖಭಾಗವನ್ನು ಕುಂಚ(Brush)ದಿಂದ ಚೊಕ್ಕಟಗೊಳಿಸಬೇಕು (ಮುದ್ರಕ. ೫೭). [< ಬಿಗಿ$_1$./ ತುಳು. ತೆಲು. ಬಿಗಿ]

ಬಿಗಿಕಟ್ಟು 'ಬಿಗಿಗಟ್ಟು' ನೋ.

ಬಿಗಿಕಲ್ಲು (ನಾ). ಕಮಾನಿನ ಕಟ್ಟಡವನ್ನು ಮೇಲುಭಾಗದಲ್ಲಿ ಸೇರಿಸುವ ಕಲ್ಲು; ನೆತ್ತಿಗಲ್ಲು: (ಕಿಸಂಗ್ರಾ. ೩೦). [ಬಿಗಿ$_1$+ಕಲ್ಲು (<ಕಲ್$_3$)]

ಬಿಗಿಗಟ್ಟು, ಬಿಕ್ಕಟ್ಟು, ಬಿಗಿಕಟ್ಟು (ನಾ). ೧. ಕಟ್ಟುಪಾಡು: ಬಿಗಿಯಾದ ನಿಯಮ.—ಅಂಕೆ: ತಮ್ಮ ನಾಡನ್ನು ಒಂದು ಬಿಗಿಗಟ್ಟಿನಲ್ಲಿ ಇಟ್ಟುಕೊಂಡು ಬಾಳುತ್ತಿದ್ದ ತಮಿಳರ ಬೇರಿಗೇ ಬಿಸಿನೀರನ್ನು ಎರೆದು . . . ಜಯಭೇರಿಗಳನ್ನು ಬಾರಿಸಿದರು (ಸವಿ. ೦೬೨). ಬಿಕ್ಕಟ್ಟು: ೨. ಭದ್ರವಾದ ಕಟ್ಟು.—ಬಂಧನ: ಬಿಕ್ಕಟ್ಟದು ಬಿಕ್ಕಟ್ಟು ಚೌಕಟ್ಟಿನ ಗುಟ್ಟು (ಅರಳು. ೪೦೩-೦೨). ೩. ಕಷ್ಟ; ತೊಂದರೆ: ಆ ಗುಡ್ಡದ ಮೇಲಿಂದ ಆಚೆ ಕಡೆಗೆ ಹೋಗಬೇಕಾದರೆ, ಜೀವಕ್ಕೆ ಅಪಾಯಪಡಿಸುವಂಥ ಬಿಕ್ಕಟ್ಟಿನ ಘಟ್ಟಗಳುಂಟು (ಮುಂಬಯಿ. ೫-೦೭); ಹರಿಕುಲಿಶನಿಗೆ ಬಿಕ್ಕಟ್ಟಿನ ಪರಿಸ್ಥಿತಿಯೊದಗಿತು (ಮಜಿಸ. ೦೦೧). ೪. ಸಂದಿಗ್ಧಪರಿಸ್ಥಿತಿ; ಇಕ್ಕಟ್ಟು: ಚಾರುಪೊನ್ನೇರನು . . . ರಾಷ್ಟ್ರಕೂಟಸಾಮ್ರಾಜ್ಯದಲ್ಲಿ ಬಿಕ್ಕಟ್ಟು ತಲೆದೋರಿದಾಗ ತನ್ನ ನಿಷ್ಠೆಯನ್ನು ತಲಕಾಡುಗಂಗರ ಕಡೆಗೆ ಸರಿಸಿದನು (ನೊಳಂಬ. ೨೬); ಇಂಥ ಬಿಕ್ಕಟ್ಟಿನಲ್ಲಿ ಧೈರ್ಯದಿಂದ ನೀವು ಇದ್ದೀರಲ್ಲ! (ಬದುಕ. ೬೫). ಬಿಗಿಕಟ್ಟು: ೫. ಸಾಹಿತ್ಯಿಕರಚನೆಗಳಲ್ಲಿ ಇರುವ ಗಾಢವಾದ ಸಂಬಂಧ.—ಹೊಂದಾಣಿಕೆ: ಇವುಗಳಲ್ಲಿ ಬಿಗಿಕಟ್ಟೂ ಇಲ್ಲ, ಹೊಸತನವೂ ಇಲ್ಲ (ಸಾಹಿವಿ. ೬); ಈ ಪ್ರಸ್ತಾರದ ಮತ್ತು ಲಯದ ಬಿಗಿಕಟ್ಟಿಲ್ಲದೆ ಕೀರ್ತನೆಗಳು ಸಹಜಮನೋಹರವಾದ ಗೇಯತೆಯನ್ನು ಪಡೆದುದು ಹರಿದಾಸಸಾಹಿತ್ಯದ ವೈಶಿಷ್ಟ್ಯವೆಂದು ತೋರುತ್ತದೆ (ಕಸಾಸ. ೨೯೭). [ಬಿಗಿ$_2$ + ಕಟ್ಟು$_2$. / ಮರಾ. ಬಿಕಟ]

ಬಿಗಿಗೊಳಿಸು (ಕ್ರಿ). ೧. ಎಳೆದು ಭದ್ರಗೊಳಿಸು; ಬಿಗಿಮಾಡು: ನಿರೂಪಣೆ . . . ಒಂದು ಎಳೆಯಿಂದ ಇನ್ನೊಂದು ಎಳೆಯನ್ನು ಬಿಗಿಗೊಳಿಸುವ ಹೆಣಿಕೆಯ ರೀತಿಯಂತೆ . . . ನಡೆಯುತ್ತದೆ (ಹೊಸಕ್ಷಿ. ೨೯೨). ೨. ಬಂದೋಬಸ್ತು ಮಾಡು; ಕಟ್ಟುನಿಟ್ಟಾಗಿರುವಂತೆ ಮಾಡು: ಸಿಂಹಾಸನವನ್ನೇರಿದ ಕೂಡಲೇ ಆಡಳಿತವನ್ನು ಬಿಗಿಗೊಳಿಸಿ ಸಮಸ್ತ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡನು (ಕ್ಯಾದೇವ. ೨೪). [ಬಿಗಿ$_2$ + ಕೊಳ್$_1$ + — ಇಸು$_3$]

ಬಿಗಿತ (ನಾ). ೧. ಕಟ್ಟಿದುದು; ಕಟ್ಟು: ಬೇಕಾದಾಗ ಸುಲಭವಾಗಿ ಈ ಬಿಗಿತವನ್ನು ಸಡಿಲಿಸಿ ಬೇರೆ ಪತ್ರಗಳನ್ನು . . . ಸೇರಿಸಿಕೊಳ್ಳಲು ಬರುವಂತೆ ಇರುತ್ತದೆ (ಗ್ರಂಥಾಂ. ೪೪). ೨. ಗಟ್ಟಿ; ಭದ್ರ: ಕರವು(ವು)ಡಿ ಸಾಸಿವೆ ಲೋಯಿಸರದ ತಿರುಳೆಂಬವನಿಟ್ಟಡಸಿ ಬಿಗಿತಾಗಿ ಕಟ್ಟಲ್ ನಿಡಪೊಂಗುಡಿದಿರ್ದ ಕೆಯ್ಗೆ ಭಂಗಂಬಡುಗುಂ (ಲೋಕೋಪ. ೯-೩೩೨). ೩. ಗಟ್ಟಿಯಾಗಿ ಕಟ್ಟುವಿಕೆ; ಭದ್ರಗೊಳಿಸುವಿಕೆ: ಬಿಗಿತಂ ಬಿಗಿತಂಗಳ್ (ಶಬ್ದಾಮ. ೫೫೪ ಪ್ರಯೋ); ಉಪನಾಹಃ, ನಿಬಂಧನಂ—೨ ವೀಣೆಯ ತಂತಿ ಕಟ್ಟುವ ಬಾಯಿಗೂ ಬಿರಡೆಗಳಿಗೂ ಕಟ್ಟಿನ ಬಿಗಿತಕ್ಕೂ ಹೆಸರುಗಳು (ಸಿದ್ಧಾಂತಿ. ೫೯). ೪. ಎಳೆತ; ಸೆಳೆತ: ಬೆನ್ನು ಬಿಗಿತದಿಂದ ಯಾವ ಕೆಲಸವನ್ನೂ ಮಾಡಲಾಗಲಿಲ್ಲ (ಕೂಡಿ). ೫. ಹೊಡೆತ; ಪೆಟ್ಟು; ಏಟು: ಅವರು ಎರಡು ಬಿಗಿತ ಬಿಗಿದು ಹುಡುಗನನ್ನು ಕರೆತಂದರು (ಕೂಡಿ). [ಬಿಗಿ$_1$ + — ತ$_2$]

ಬಿಗಿತರ್ಬು (ಕ್ರಿ). ಗಾಢವಾಗಿ ಆಲಿಂಗಿಸು; ಬಿಗಿಯಾಗಿ ಅಪ್ಪು: ತೊಳ್ತಾಕೆ ಬಿಗಿತರ್ಬಿ ಮಗುವನೊತ್ತಿಟ್ಟದರ ಬಾಯಲ್ಲಿ ಸೇರ್ದ ಮಣ್ ಗಟ್ಟಿಯಂ ತೆಗೆವಂತೆ (ಸೌವಂದ. ೫-೪೭). [ಬಿಗಿ$_1$+ತರ್ಬು$_1$ (<ತಟ್ಟು$_1$)]

ಬಿಗಿನೇಣು (ನಾ). ಕಟ್ಟುವ ಹಗ್ಗ: ವಿಗಡದ ಪುಲಿ ಕರಡಿಗಳ ಬಿಗಿನೇಣ ಪಱಿದು ಕಾದುವ ವೀರರ ಮೊತ್ತ ಸೊಗಸ ಬೀಱಿದುದೋಲಗದೆ (ಕಂವಪಿ. ೨೦-೯೬). [ಬಿಗಿ$_1$ + ನೇಣು (< ನೇಣ್$_1$)]

ಬಿಗಿಪಡಿಸು (ಕ್ರಿ). ಭದ್ರಗೊಳಿಸು: ಜೋಡಿಸಿದ ಮೊಳೆಗಳ ಕರಡುಪ್ರತಿಯನ್ನು ತೆಗೆದು . . . ಮುದ್ರಣಕ್ಕೆ ಅಣಿ ಮಾಡುವಂತೆ ಚೇಸ್‌ನಲ್ಲಿ ಬಿಗಿಪಡಿಸಬೇಕು (ಮುದ್ರಕ. ೫೭). [ಬಿಗಿ$_2$ + ಪಡು$_1$ + — ಇಸು$_3$]

ಬಿಗಿಪು (ನಾ). ೧. ಬಂಧನ; ಬಿಗಿತ; ಕಟ್ಟು: ಕರ್ಮಬಂಧದ ಬಿಗಿಪೊಯ್ಯನೊಯ್ಯನೆ ಸಡಿಲ್ದಿರೆ (ಅದಿಪು. ೬-೭); ಪದಮಲರ್ಗಳಂದದಿಂ ಬಂಧದ ಬಿಗಿಪಿನೊಳೊಂದಿ ನಿಲೆ ಸಮುಜ್ವಳಕಾಂತಿ (ವರ್ಧಮಾ. ೦-೦೦); ತೋಳ ಬಿಗಿಪೊಂದಿರೆ ಕೋಡುತಳಂಗಳಂ ಸಮಂತೊಡನೊಡನಪ್ಪಿದರ್ ಭರದ ಕಾಳಸೆಯಂತಿರೆ ತಮ್ಮೊಳಿರ್ವರುಂ (ಕಾವ್ಯಸಾ. ೬೫೭). ೨. ದೃಢತೆ; ದಾರ್ಢ್ಯ; ಗಟ್ಟಿತನ: ಬಿಗಿಪು ಸಡಿಲ್ದು ಪಲ್ಗಳಿನಿಸುಂ ಚರಿಸುತ್ತಿದೆ ಮೆಯ್ಯನುಣ್ದೊವಲ್ . . . ಸುರ್ಕುತಿದೆ (ಪಕವಿ. ೬-೨೪೪). ೩. ಬಿರುಸು; ಕರ್ಕಶತೆ: ಬಿಗಿಪಿಂ ಬಿಣ್ಮೊಲೆ ಪೊಂಗಿ ಪೊಣ್ಮೆದೊಡಂ (ಪಕವಿ. ೬-೨೫೯). [ಬಿಗಿ$_1$ + — ಪು$_2$]

ಬಿಗಿಮುಷ್ಟಿ (ನಾ). (ಆಲಂ) ಭದ್ರವಾದ ಹಿಡಿತ; ಬಿಗಿಯಾದ ಹತೋಟಿ: ಈ ಬಿಗಿಮುಷ್ಟಿಯಲ್ಲಿರುವ ಮೈಸೂರು ಭದ್ರವಾಗಿಯೇ ಉಳಿಯುವುದು (ದೌಲತ್. ೦೪). [ಬಿಗಿ$_2$ + ಮುಷ್ಟಿ$_2$]

ಬಿಗಿಮೊಗ (ನಾ). ಬಿಗಿದುಕೊಂಡಿರುವ ಮುಖ: ಅರುಣತೆವೆತ್ತ ಮೆಯ್ಬಿಗಿಮೊಗು . . . ಚಿತ್ರಿತವೇತ್ರದಂಡಮೊಪ್ಪಿರೆ ಸಹವಾಸಿಗಳ್ ತಳರ್ದರಾತ್ಮನಿಯೋಗನಿವಿಷ್ಟನಿಷ್ಟಿತರ್ (ಶಾಂತೀಶ್ವ. ೦೫-೯೯). [ಬಿಗಿ$_1$ + ಮೊಗ]

ಬಿಗಿಮೊಳೆ (ನಾ). ೧. (ಕೀಲನ್ನು) ಭದ್ರಪಡಿಸುವ ಮೊಳೆ.—ಆಣಿ: ಗುಡಿಯೊಡೆಯಂಗೆ ಕಂಭವೊಂದು ಬಿಗಿಮೊಳೆಯೆಂಟು ಕಂಭಕ್ಕೆ ಕಟ್ಟಿದ ಆಧಾರದಾರವೈದು (ಮನುಗುಂ. ಕ. ೨೬೦-೫೭). ೨. "ಹಡಗುಕಟ್ಟಡದಲ್ಲಿ ಉಪಯೋಗಿಸುವ ಒಂದು ತೆರದ ಬಿಗಿಮೊಳೆ" (Dump. ಇಂಕವಿ). [ಬಿಗಿ$_1$ + ಮೊಳ್ಳೆ$_2$]

ಬಿಗಿಯಪ್ಪು (ಕ್ರಿ). ಗಾಢವಾಗಿ ಆಲಿಂಗಿಸು. – ತಬ್ಬು : ಕಳೆದುವು ಮೆಯ್ಯ ಸುಯ್ಯ ಪದವೆಂಕೆಗಳಂ ಬಿಗಿಯಪ್ಪಿದಪ್ಪುಗಳ್ (ಶಂಪಶಾ. ೩-೨೬); ಬಾ ಸುತಯೆನುತೆ ತೆಗೆದು ಬಿಗಿಯಪ್ಪಿ (ಪದ್ಮಶಾ. ೩-೦೩) ; ಹಸುಳೆಯದಟಿನ ನುಡಿಯ ಕೇಳಿದು ನಸುನಗುತ ಧರ್ಮಜನು ಘನಪೌರುಷವು ನಿನಗುಂಟೆಂದು ಕಂದನ ತೆಗೆದು ಬಿಗಿಯಪ್ಪಿ (ಕುಪ್ಪಾಡ್ರೋ. ೪-೩೬).

ಬಿಗಿಯಪ್ಪಿಕೊಳ್ = ಬಿಗಿಯಪ್ಪು : ನೀಱನ ಕರೆ ಬಿಗಿಯಪ್ಪಿಕೊಂಬೆನು ಬೆಚ್ಚಂತೆ (ಕಂಪಸಿ. ೯-೦೦೬). [ಬಿಗಿ$_1$ + ಅಪ್ಪು$_1$]

ಬಿಗಿಯಿಸು, ಬಿಗಿಸು (ಕ್ರಿ). ೧. ಕಟ್ಟು ; ಬಂಧಿಸು : ತ್ರಿಗುಣಿಸೆ ನಯನವಿಭೂಷಾಂಶುಗಳಲಗಿನ ರುಚಿಯನಲಗನೆರಡುಂ ಕೈಯೊಳ್ ತ್ರಿಗುಣಿಸಿ ಚಿತ್ರಂಬಡೆದಳ್ ಬಿಗಿಯೆ ಕುಚಂ ಬಿಗಿಯಿಪಂತು ಕಂತುಗೆ ದೊಣೆಯಂ (ಜಗಸಿ. ೩-೧೭). ಬಿಗಿಸು : ೨. ಕಟ್ಟಿಸು ; ಬಂಧಿಸುವಂತೆ ಮಾಡು : ಕಳ್ಳರಿರ್ಕೈಗಳಂ ಬಿಗಿಸಿ ತೊದಲಂ ನುಡಿಸಿ ಸುಳ್ಳು ನಾಲಗೆಯ ನಡುಗಿಸುತರವನೆರೆಗುಂ (ಕಾಲೂರ. ೭೭-೦೪೦). ೩. ನಿರ್ಮಿಸು ; ರಚಿಸು ; ಕಲ್ಪಿಸು : ನಗರದುಪಕಂಠದಲಿ ಕೋಟೆಯ ಬಿಗಿದು ಬಿಡಿಸಿದನಧ್ವರಕೆ ಸಲುವಗಣಿತಾಖಿಳವಸ್ತುಗಳ ನೆರಹಿದನು ನರನಾಥ (ತೊರರಾ. ೦-೭-೪). ೪. ಕುದುರೆಗೆ ತಂಗುಪಟ್ಟಿಯನ್ನು ಕಟ್ಟಿ ಸಿದ್ಧಪಡಿಸು : ಚಂದ್ರಹಾಸಂ . . . ಬಳಿಕ ಬಿಗಿಸಿ ನಿಜವಾಜಿಯಂ ಬಂದಡರ್ದನು (ಶೈಮಿಭಾ. ೩೦-೪೨). ೫. ಹೊಡೆಸು ; ಥಳಿಸುವಂತೆ ಮಾಡು : ಅವನಿಗೆ ನಾಲ್ಕು ಬಿಗಿಸಿದರೆ ಸರಿ ಹೋಗುತ್ತಾನೆ (ರೂಢಿ).

ಬಿಗಿಸಿಕೊಳ್ಳು = ೧. ಕಟ್ಟಿಸಿಕೊಳ್ಳು : ಕಾಳಗದೊಳೆಲ್ಲರನಿಕ್ಕಿ ಪಟ್ಟವ ಬಿಗಿಸಿಕೊಂಡವರಲ್ಲವೇ (ಕುಪ್ಪಾಸ. ೬-೪೯). ೨. ಹೊಡೆಸಿಕೊಳ್ಳು; ಪೆಟ್ಟು ತಿನ್ನು : ನೀನು ಹೀಗೆ ಒಂದೇ ಸಮನೆ ಹಠ ಹಿಡಿದರೆ ಚೆನ್ನಾಗಿ ಬಿಗಿಸಿಕೊಳ್ಳುತ್ತೀಯೇ (ರೂಢಿ). [ಬಿಗಿ$_1$ + –ಇಸು$_3$]

ಬಿಗಿಯುಡುಪು (ನಾ). ಸಡಿಲವಾಗಿಲ್ಲದಿರುವ ತೊಡುಗೆ ; ಮೈಗೆ ಅಂಟಿಕೊಂಡಿರುವ ಉಡುಗೆ : ಬೇಸಿಗೆಯಲ್ಲಿ ಬಿಗಿಯುಡುಪುಗಳನ್ನು ಧರಿಸಿದರೆ ತುಂಬ ಸೆಕೆಯಾಗುತ್ತದೆ (ರೂಢಿ). [ಬಿಗಿ$_1$ + ಉಡುಪು]

ಬಿಗಿಯುಡೆ (ನಾ). = ಬಿಗಿಯುಡುಪು : ಅವಳು . . . ರೇಷ್ಮೆಯ ಬಿಗಿಯುಡೆಯನ್ನು ಧರಿಸಿದ್ದಳು (ಪುನರು. ೪೨೦). [ಬಿಗಿ$_1$ + ಉಡೆ$_2$]

ಬಿಗಿವಡು (ಕ್ರಿ). ಕಟ್ಟಲ್ಪಡು ; ಜೋಡಣೆಯಾಗು : ಬಲಗಡೆಗಾಗಿ ಬಾಗಿ ಬಿಗಿವಟ್ಟುಱ್ ಬಟ್ಟಿತೆಂಬಿನಮಲರ ಸರಂಗಳೊತ್ತರಿಸೆ (ಜಕಸಿ. ೩-೭). [ಬಿಗಿ$_2$ + ಪಡು$_1$]

ಬಿಗಿವಡೆ (ಕ್ರಿ). ೧. ಬಂಧನಕ್ಕೊಳಗಾಗು ; ಸೆರೆ ಸಿಕ್ಕು; ಕಟ್ಟುಬೀಳು : ಅಡವಿಯಲಿ ಘಣಭೋಗದಲಿ ಬಿಗಿವಡೆದು ಬಳಲಿದ ಭೀಮಸೇನನ ಬಿಡಿಸಿದನು ಯಮಸೂನು ಧರ್ಮಕಥಾಪ್ರಸಂಗದಲಿ (ಕುಪ್ಪಾಲಿ. ೦೩ ಸೂಪನ); ರಾವಣಸುತನಿನಬುಜಭವಾಸ್ತ್ರದಲಿ ಬಿಗಿವಡೆದನಾ ಹನುಮ (ತೊರರಾ. ೩-೬ ಸೂಪನ). ೨. ಅಳವಡಿಕೆಯಾಗು ; ಹೊಂದಿಕೊಂಡಿರು : ಮುಂಗುರುಳೊಳು ಬಿಗಿವಡೆದಿಹ ಮಣಿಯ ಕುಚ್ಚುಗಳ . . . ಕಡುಚೆಲುವೆಯರೆಸೆದಿಹರು (ಕಂಪಸಿ. ೬-೦೦೪). ೩. ಉಬ್ಬು; ಗರ್ವಿಸು : ದೊರೆಕೊಂಡ ಪೊಸ ಸೊಗದ ಸುಗ್ಗಿಯ ನುರ್ಗಿನೊಳ್ ಬಿಗಿವಡೆದಗ್ಗದ ಸಗ್ಗದ ಜೋಸೆಯರೊಂದು ನೆರವಿಯೊಳ್ ದೇಸಿಯಿಂ ಬೆರೆದಾಗಳುಂ ಬಿನದಿಸುತ್ತೆ (ರಾಮಾಶ್ವ. ೦೩೭-೦೭). ೪. ಕಠಿಣವಾಗು; ದೃಢವಾಗು : ಸತ್ಕೋಮಲಾಂಗಿಯ ಪೇರುರದಿ ಹೇಮಾಬ್ಜಮುಕುಳಸ್ತನ ಬಿಗಿವಡೆದಿರೆ ಭ್ರಾಮಕಗೊಂಡು ವೀಕ್ಷಿಸಿದ (ವೋಹತ. ೦೭-೩೭). [ಬಿಗಿ$_2$ + ಪಡೆ$_1$]

ಬಿಗಿವಾತು (ನಾ). ಗಂಭೀರವಾದ ಮಾತು : ಬಿಗಿವಾತು ಮೆಲ್ವಾತು ನಗೆವಾತು . . . ಸೊಗವಾತುಗಳಿಂದ ಸೊಗಸ ಕಿವಿಗೆ ಸೂಸುವುದು (ಜಕಸಿ. ೬-೦೩೭ ಸಾಂಗತ್ಯ). [ಬಿಗಿ$_2$ + ಮಾತು$_1$]

ಬಿಗಿವಿಡಿ, ಬಿಗಿಹಿಡಿ (ಕ್ರಿ). ೧. ತಡೆ; ನಿಗ್ರಹಿಸು; ಹತೋಟಿಯಲ್ಲಿಟ್ಟುಕೊಳ್ಳು : ನೀನಡಕಮಿರವೇಟ್ಕುಂ ; ಸಿಡಿಲ್ದುಗುವ ಸೊರ್ಕುನುಡಿ ಬಿಗಿವಿಡಿಯವೇಟ್ಕುಂ (ಬದ್ಧಪ್ರ. ೦೬-೩೬೨). ಬಿಗಿಹಿಡಿ : ೧. ಪರರ ರೀತಿಗೆ ಹರಿವ ಮನವನ್ನು ಬಿಗಿಹಿಡಿದು . . . ವರಸನಾತನಧರ್ಮವೇ ಮಾನ್ಯವೆಂದದನು ಧರಿಸಿ ತಲೆಯಲ್ಲಿ ಮರೆಯದೆ ಪೂರ್ವಿಕರನು (ಕುಪ್ರ. ೦೩-೩) ; ಅವಳು ಉಕ್ಕಿ ಬರುತ್ತಿದ್ದ ನಗುವನ್ನು ಪ್ರಯಾಸದಿಂದ ಬಿಗಿಹಿಡಿದಳು (ಪುನರು. ೩೨೨). ೨. ಗಟ್ಟಿಯಾಗಿ ಹಿಡಿದುಕೊಳ್ಳು : ಭದ್ರವಾಗಿ ಹಿಡಿ : ಈ ಕುದುರೆಯೇರಿ, ಲಗಾಮು ಬಿಗಿಹಿಡಿದು ಸವಾರಿ ಮಾಡುವುದಷ್ಟು ಸುಲಭವಲ್ಲ (ಸಂಸಾ. ೩೦-೨೦).

ಬಿಗಿ ಹಿಡಿದುಕೊಳ್ಳು = ಅಂಕೆಯಲ್ಲಿಡು; ಹಿಡಿತಕ್ಕೆ ತರು : ಅವಳು . . . ಮನಸ್ಸನ್ನು ಬಿಗಿ ಹಿಡಿದುಕೊಂಡು ರೋಗಿಯ ಪರೀಕ್ಷೆ ಮಾಡಿ ಹೊರಟಳು (ಕುಂಕುಮ. ೬೪). [ಬಿಗಿ$_1$ + ಪಿಡಿ$_1$]

ಬಿಗಿವೊಂದು (ಕ್ರಿ). ಬಿಗಿಕಟ್ಟಿನಿಂದ ಕೂಡಿರು ; ಬಿಗಿಯಾದ ಬಂಧವನ್ನು ಹೊಂದು : ಅಚ್ಚಗನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆಂ (ಕಬ್ಬಿಕಾ. ೦೬). [ಬಿಗಿ$_2$ + ಒಂದು$_1$]

ಬಿಗಿಸು 'ಬಿಗಿಯಿಸು' ನೋ.

ಬಿಗಿಹಿಡಿ 'ಬಿಗಿವಿಡಿ' ನೋ.

ಬಿಗು 'ಬಿಗುವು' ನೋ.

ಬಿಗುಗಟ್ಟು (ನಾ). ಬಲವಾದ ಕಟ್ಟು; ಬಿಗಿಯಾದ ಬಂಧನ : ಜಗದ ಜಂಜಡದ ಕವಡುಮಾಯೆಯ ಬಿಗುಗಟ್ಟಿಂ ಕಟ್ಟುವಡೆದಾಂ . . . ಬಲ್ಲಿದರ ನೆರೆಯ ಮಱೆಯ ನೆರಮಂ ಪಾರುತುಮಿರ್ಪೊಡಾದೆಂ (ರಾಮಾಶ್ವ. ೦೧೯-೬). 'ಬಿಗಿಗಟ್ಟು' ಪರಾ. [ಬಿಗು (<ಬಿಗುವು) + ಕಟ್ಟು$_2$]

ಬಿಗುಡು (ನಾ). ಬೇನೆ ; ನೋವು : ಉಪ್ಪುನೀರಂ ದಿನಂಪ್ರತಿ ಪಾಕತನದಿಂದ ತಪ್ಪದೇ ಹೀರಿದಾ ತಲೆಬಿಗುಡು ಗಗನದೊಳಗೊಪ್ಪದಿಂ ಪರಿವ ದೇವಾಪಗೆಯ ಮಧುರತರವಾರಿಯ ಹೀರಿ ಹೀರಿ ಚಪ್ಪರಿಸಿದಲ್ಲದೇ ಹೋಗದೆಂದೆನುತುಮಾ ನೆಪ್ಪಿಂಗೆ ತದ್ವನಧಿಯಿಂದ ವಡಬಾಗ್ನಿಯೇ ಉಪ್ಪರಿಸಿ ನೆಗೆವಂತೆ ಉಷ್ಣಕಿರಣಂ ಮೂಡಿ ನೆಗೆದುದಂಬರತಳಕ್ಕೆ (ಸಮ್ಮಕಾ. ೦೨-೯). 'ಬಿಗಡ$_2$' ಪರಾ. [ಬಿಗು (< ಬಿಗುವು) + – ಡು$_2$]

ಬಿಗುನಡೆ (ನಾ). ಕುದುರೆಯ ಒಂದು ಬಗೆಯ ನಡಗೆ : "ರೇಚಿತಂ— ಬಿಗುನಡೆ, ಜಾರುನಡಿಕೆ, ನೀಡುನಡಿಕೆ" (ಸಿದ್ಧಾಂತಿ. ೨೩೦). [ಬಿಗು$_2$+ನಡೆ$_2$]

ಬಿಗುಪು, ಬಿಗುಹು (ನಾ). ೧. ಭದ್ರವಾದ ಜೋಡಣೆ ; ಬಿಗಿಯಾದ ಸೇರುವೆ : ಕೂವಕಂಭಂ ಮುಱಿಯೆ ಬಂಧಂ ಬಿರಿಯೆ ರಣಂ ಮುಱಿಯೆ ಕೀಲ್ ಕಟಲೆ ಬಿಗುಪು ಬಟಲೆ . . . ನಾವಿಕಾಜನಮೆರ್ದೆಗೆಟ್ಟು ಬಾಯ್ವಿಟ್ಟು ಸುಯ್ದು (ಬಂಹಂ. ೪-೦೪ ಪ); ಇಸೆ ಬಗೆಯನುರ್ಚಿ ಧೈರ್ಯದ ಬೆಸುಗೆಯ ಬಿಗುಪಂ ಸಡಿಲ್ಚಿ (ವೃಷಿ. ೨೬-೨೦). ೨. ದೃಢತೆ ; ಬಿರುಸುತನ : ಭವಪಾಶದ ಪುದಿದ ಬಲ್ಕಟ್ಟು ಸಡಿಲುವ ತೆಱದಿ ಸಡಿಲಲಂಗದ ಬಿಗುಪು ಗರ್ಭಿಣಿಗೆ ನವಮಾಸ ಪೂರ್ಣವಾದುದು (ಭಾವಸಂ. ೩-೩೬). ೩. ಶಿಸ್ತು : ಕತ್ತತ್ತಿಕೊಂಡು ಸಿಪಾಯಿಗಳಂತೆ ಬಿಗುಪಿನಿಂದ ನಡೆಯುತ್ತಿದ್ದರು (ಪನ್ನಪ. ೦೯). ೪. ಗರ್ವ; ಠೀವಿ; ದರ್ಪ : ದುರ್ಬಲಂ ನಿನ್ನ ಒಳ್ಳಱಿವು ಇಲ್ಲಿ. ಏತಕೆನೆ, ಬೇರಿತಾರಯ್ಕೆಯಿಲ್ಲದ ಬಱಿಬಗೆಯ ಬಿಗುಪೊಂದೆ ವ್ಯರ್ಥಂ (ಬದ್ಧಪ್ರ. ೫೪-೦೦೭೩). ೫. ರಭಸ; ಜೋರು : ಬಲ್ಲು ಲೇಸು ಗೆಲವರಿದೆಂಬಂತೆ ಬಿಗುಪು ಲೇಸು ಕಳನ ಮೇಗರಿದೆಂಬಂತೆ (ಧರ್ಮಾಮ್ಯ. ೬-೬೦); ಕಾಳಗವೇ ಜೀವಾಳವಾಗಿರುವ ಬಯಲಾಟದಲ್ಲಿ. ಬಯಲಿನಲ್ಲಿ ಕುಳಿತು, ಬಡಿದು ರೂಢಿಯಾದ ಈ ವಾದ್ಯಕಾರರ ಕೈಗೆ ಬಿಗುಪು ಹೆಚ್ಚು ; ಅಬ್ಬರ ಹೆಚ್ಚು (ಯಕ್ಷಪ. ೯೦). ಬಿಗುಹು : ೧. ವಾನರರು ಹೊಱಲೆಡೆಗೆಡೆಗೆ ಜಱಿವಾ ಮಣ್ಣ ಬೆಟ್ಟಂಗಳ ಬಿಗುಹದೆನಿತು

(ಶಿಸಪು. ೦೯-೩೦) ; ನಗಂಗಳ ಬಿಗುಹು ಸಡಿಲಿತು ಧರಣಿ ನೆಗ್ಗಿತು (ಕುಸ್ಕಾಪ್ರೋ. ೩-೩೩) ; ಉಗುರುಸೋಂಕಿನಲಬುಜಜಾಂಡದ ಬಿಗುಹು ಬಿಡುವುದು (ಕೊರಣ. ೬-೯-೧೦). ೨. ಆರು ಮರುಳಾಗರು ವಧೂಟಿಯ ತೋರಮೊಲೆಗಳ ಬಿಗುಹನೀಕ್ಷಿಸಿ (ಬಸಪು. ೪೦-೬); ತಳಿತ ರೋಮದ ತೋಳ ಬಿಗುಹಿನ ಕಲಿಗಳಿದ್ದುದು ಕಲಿತ ಘನ ರೌದ್ರಾತಿರೇಕದಲಿ (ಕೊರಣ. ೬-೦೦-೭). ೩. ಪಿಸುಣಿಗರ ಒಂದು ಪರಿವಾರವೆ ದರ್ಬಾರಿನ ಸುತ್ತಲೂ ಅದರ ಬಿಗುಹನ್ನು ಶಿಥಿಲ ಮಾಡಲು ಸುಳಿದಾಡುತ್ತಿದೆ (ಪೂರಣ. ೭೩). ೪. ಬಿಗುಹಿನೊಳ್ ಕೆಲಕೆಲಬರಂ. . . ಮೈದೆಗಹಿನೊಳ್ ಕೆಲಕೆಲಬರಂ ಮರುಳ್ಮಾಡುತೀಶ್ವರನಡಿಯಿಡುತ್ತಿರ್ದನು (ಶಿಸಪು. ೧೯-೩೫) ; ಬಿಗುಹ ಬಿಡಿಸುವೆನಿಂದಿನಾಜಿಯೋಳ್ನೀನು ಮೈದೆಗೆಯದಿರು (ಕುರಂಗ. ೭೩-೩೯). ೫. ಕರತಳದ ಬಿಗುಹಿಗೆ ಕುಲಮಹೀಧರ ಕಳಲಿದವು (ಕೊರಣ. ೬-೩-೦೩). ೬. ಬಿಗುಮಾನ ; ಬಿಂಕ : ಮುಸುಡ ಬಿಗುಹಿನ ಸೆಳೆದಡಾಯುಧ ಹೊಸಪರಿಯ ಬಿರುದುಗಳ ಗಜರಥವಿಸರ ಮಧ್ಯದಲೆಂಟುಸಾವಿರರಥಿಕರೌಂಕಿದರು (ಕುಸ್ಕಾಪ್ರೋ. ೦-೩೭); ದೇಸಾಯರೊಬ್ಬರೇ ಕಿಟ್ಟಿಯನ್ನು ಬಿಗುಹಿನ ಆದರದಿಂದ ಸ್ವಾಗತಿಸಿದರು (ಗಂಮಾಯಿ. ೧೯). ೭. ಜೊತೆ ; ಸಂಬಂಧ : ಹೊಗಳುಭಟ್ಟರ ಸಾಲ ಕೈದೀವಿಗೆಯ ಕಹಳಾರವದ ಲಗ್ಗೆಯ ಬಿಗುಹಿನಲಿ ಕುರುರಾಯ ಬಂದನು ರಾಜಮಂದಿರಕೆ (ಕುಸ್ಕಾಳ. ೩-೨). ೮. ಸೆಳೆತ ; ಹಿಡಿತ ; ವಶ : ಮೇಲುಸುರ ಬಿಕ್ಕುಳಿನ ಬಿಗುಹಿನ ತಾಳಿಗೆಯ . . . ನರನಾಥ ತೆಗೆದಪ್ಪಿದನು ಫಲುಗುಣನ (ಕುಸ್ಕಾಳ. ೦೯-೦); ಅರಿನೃಪರು ಮೈದೆಗೆವರುಲ್ಕಾಪಾತಭೀತಿಯ ಬಿಗುಹಿನಲಿ ಬಹಳಪ್ರತಾಪವದೆಂತೊ ದಶರಥನ (ಕೊರಣ. ೦-೩-೨೩); ಶೋಕದ ಬಿಗುಹಿನಲಿ ಬೆಂಡಾದ ಮಾತೆಯ ನಗೆಮೊಗದಿ ನಗಿಸುತ್ತಲೊಡಬಡಿಸಿದನು ಶೋಕವನು (ಕೃಷ್ಣಾಳಾ. ೮-೨೬). ೯. ಕುದುರೆಯ ಜೀನನ್ನು ಬಿಗಿಗೊಳಿಸಲು ಸೊಂಟಕ್ಕೆ ಕಟ್ಟುವ ಪಟ್ಟಿ ; ತಂಗುಪಟ್ಟಿ : ಬಿಗುಹನೇಱಿ [ಪಾಠಾಂ. ಬಿಗಿದು ತೆತ್ತಿ]ಸಿ ಹಯಗಳನು ಱಂಚಿಗಳ ಹಮ್ಮಿದರಾನೆಯಲಿ (ಪಳಸ. ೯-೩೭). ೧೦. ಆಲಿಂಗನ ; ಅಪ್ಪುಗೆ : ಬೆಸುಗೆ ಬಿಗುಹುಳು ಕೊತ್ತುಕಲೆಗಳ ರಸದ ಪಸರವನಱಿಯಬಾರದು ವಿಗಡವಿಟರುಗಳ (ಕುಸ್ಕಾಅ. ೦೩-೨೫).

[ಬಿಗು + — ಪ್ಪು]

ಬಿಗುಪೇರು 'ಬಿಗುಪೇಱು' ನೋ.

ಬಿಗುಪೇಱು, ಬಿಗುಪೇರು, ಬಿಗುಹೇರು, ಬಿಗುಹೇಱು (ಕ್ರಿ). ೧. ಬಿಗಿಯಾಗು ; ಹಿಡಿದುಕೊಳ್ಳು : ಮೊಗಸಿರಿದೋಱೆ ಮಿಱೆ ನವಿರುಂ ಸೆರೆಗಳ್ ಬಿಗುಪೇಱೆ (ಪಳಸಿ. ೦-೪೯). ೨. ಗಾಢವಾಗು ; ತೀವ್ರವಾಗು : ಅಪ್ಪಿರದೊರ್ಮೆಗೊರ್ಮೆ ಮತ್ತಂ ಬಿಗುಪೇಱುತಿರ್ಪುದು (ಸಂಪ್ರಪು. ೬-೬೯); ಸಂದರ್ಭದೊಳ್ ಕ್ರಮದಿಂ ಬಿಗುಪೇಱಿ ಬರ್ಪುದುಂ ಕ್ರಮದಿಂದಿಱಿ ತರ್ಪುದುಂ ಸಮಾಧಿಯೆನಿಪುದು (ಅಪ್ರತಿ. ೯-೦೪). ಬಿಗುಪೇರು : ೩. ಕಾಠಿಣ್ಯವನ್ನು ಪಡೆ ; ಕರ್ಕಶತೆಯನ್ನು ಹೊಂದು : ದಿನದಿನಕ್ಕೆ ಬಲಿಯಲುದರಂ ತುಂಗಕುಚ ಬಿಗುಪೇರಿದವು ಅಕ್ಷಿ ಜಡನಾದವು (ರರ್ಮಸ್ಕಾ. ೦-೯). ಬಿಗುಹೇರು : ೨. ಸೇರುವೆಯ ಸನ್ನಾಹದಿಂ ಬಿಗುಹೇರಿ ಮೊಳಗುವ ಮೊಳಗುಗಳ ವಿಸ್ತಾರದಿಂ ಬಲುನೇರದಿಂ ಕಾಣಿಸಿತು ವರ್ಷರುತು (ಕಾಪೇಕು. ೦೭-೪೦). ೪. ಗರ್ವಿಸು ; ಸೊಕ್ಕೇರು : ಬಿಗುಹೇರಿ ಮೈಮುರಿದು ನಿಲ್ಲಲಾಗದು ಮನಸ್ಸು ತೆಗೆದ ಹಾಗೆಲ್ಲ ಮಾತುಗಳಾಡಲಾಗದೀವಗೆಯಿಂದ (ಕೃಷ್ಣಪಿ. ೪-೯). ಬಿಗುಹೇಱು : ೨. ಖತಿ ಬಿಗುಹೇಱಿ ಹಲುಹಲುದಿನುತೆ ಕಂಗಳಲುರಿಯನುಗುಳುತ . . . ಜನಪತಿಯ ಹಣೆಯೊಡೆಯಲಿಡೆ (ಕುಸ್ಕಾಪಿ. ೯-೦೯) ; ನಗೆನುಡಿ ನೋಟ ಸರಸಗಾನದೊಳು ಹೊತ್ತುದೆಗೆವಾಗ ಲೊಬ್ಬರೊಬ್ಬರಿಗೆ ಬಿಗುಹೇಱುತಿದ್ದುದು ತವಕ (ಭರಸ. ೦೦-೭೩). ೩. ಬಿಡೆಯವಿಲ್ಲದ ಕುಚ ಬಿಗುಹೇಱಿ ರುತುಕಾಲವಡೆದ ಪುಷ್ಪಿಣಿಯ ರೊಪ್ಪಿದರು (ಪೋಹಕ. ೦೯ ೩೨) ; ನೀರೊಳು ನನೆದಾಗ ಬಿಗುಹೇಱಿ ವೃತ್ತಾಕಾರದೊಳುನ್ಮುಖವಡೆದು ಚಾರುತರದ ಮೊಲೆ ಮೆಱೆದುವು ಮೇಲಕ್ಕೆ ಪಾಱುವ ಕೋಕಗಳಂತೆ (ಕಂನವಿ. ೨೩ ೦೩೨). ೫. ಉಬ್ಬು ; ಉತ್ಸಾಹಿಸು : ಬೊಬ್ಬಿಱಿತದಲಿ ಬಾಹಪ್ಪಳಿಸಿ ಬಿಗುಹೇಱಿದನು ಹನುಮ (ಕೊರಣ. ೩-೪-೨) ; ತನುವ ಸಗ್ರಂಥದೊಳಿರಿಸಿ ನಿರ್ವಾಣವ ವಿನುತಾತ್ಮನೊಡಗೂಡಿ ನೋಡಿ ಜನಿಸಿದ ಸುಖದಿಂದ ಪರಿಪೂರ್ಣನಾಗಿ ಬಿಮ್ಮನೆ ಬಿಗುಹೇಱಿರ್ದನಾಗ. (ಭರಸ. ೦೯-೭೧). [ಬಿಗುಪು+ಏಱು$_1$ (<ಏಱು^{1})]

ಬಿಗುಮಾನ (ನಾ). ಮನಸ್ಸು ಬಿಚ್ಚಿ ಮಾತನಾಡದಿರುವಿಕೆ ; ಅತಿಯಾದ ಸ್ವಾಭಿಮಾನ ; ದೊಡ್ಡಸ್ತಿಕೆ : ಮಾನ್ಯರಾದವರನ್ನು ಬಿಗುಮಾನ ಬಿಟ್ಟು ಗೌರವಿಸಬೇಕು (ಪಶಶಾ. ೩೩೯) ; ಪ್ರಾಣೇಶಾಚಾರ್ಯರಿಗೆ ಉತ್ತರ ಹೊಳಿಯಿತು. ಆದರೆ ಹೇಳಲು ಬಿಗುಮಾನ (ಸಂಸ್ಕಾರ. ೧೦೩) ; ಸಿರಿವಂತಿಕೆಯ ಬಿಗುಮಾನವೂ ಪರಂಪರಾಗತವಾದುದೇನೋ ! (ಆಪೋಲೀ. ೪೩). [ದೇ.॥ ತೆಲು. ಬಿಗುಮಾನ, ಬಿಗಿಮಾನ]

ಬಿಗುಮೊಗ (ನಾ). ಪ್ರಸನ್ನತೆಯಿಲ್ಲದ ಮುಖ ; ಕೋಪದಿಂದ ಕೂಡಿದ ಮುಖ : ಆ ಕಟ್ಟಾನೆ ಭೋರನೆ ಬಿಟ್ಟ ಕಣು ಬಿಗುಮೊಗದಿನಿದಿರಾಯ್ತು (ಸಾಳ್ಕಣಾ. ೦೬-೦೩). 'ಬಿಗಿಮೊಗ' ಪರಾ.

[ಬಿಗು (< ಬಿಗುವು) + ಮೊಗ]

ಬಿಗುರ್$_1$, ಬಿಗುರು$_1$ (ಕ್ರಿ). ಬಿಗುರ್ತ(ಭೂತಕೃ). ಬಿಗುರ್ತು (ಭೂತನ್ಯೂ). ಬಿಗುರ್ಪ, ಬಿಗುರ್ವ (ವರ್ತಕೃ). ೧. ಹೆದರು ; ಅಂಜು ; ಭಯಪಡು : "ಬಿಗುರ್—ಭಯೇ" (ಶಮರಾ) ; ತಕ್ಕಿನ ಕುಂಭಸಂಭವನದೀಜ ಕೃಪಪ್ರಮುಖಪ್ರವೀರರೆಕ್ಕೆಕ್ಕೆಯಿನೊರ್ವರೊರ್ವರೆ ಬಿಗುರ್ತಿರದಾಂತು ನಿಶಾತಬಾಣಜಾಲಕ್ಕೆ ಸಿಡಿಲ್ದು ಜೋಲ್ದು ಸೆರಗಂ ಬಗೆದೋಡಿದರ್ (ಪಂಪಶಾ. ೮-೦೦೮); ಕಂಠೀರವರವಮಂ ಕೇಳಲೊಡನೆ ಬೆಳ್ಳಾಗಿ ಬಿಗುರ್ತು ರಾಗಮಳಿದು (ಗಿಂಕ. ೧-೦೨೮ ಪ) ; ದಿಕ್ಕುದಿಕ್ಕಿಂಗೆ ಪರಿದು ಬಲಮನಿತುಂ ಬಱಿದಾದುದಂ ಕಂಡು ಬೆರ್ಚಿ ಬಿಗುರ್ತು (ಪಳಸಿ. ೨-೧೧೩). ೨. ಕುಗ್ಗು ; ಕುಸಿ ; ಸೊರಗು : ತಮ್ಮನನಾಗಳಂಬರವರೇಶ್ವರಕನ್ನೆಗೆ ಕಾಪುವೇಱೆ ತಮ್ಮದ್ಮನದೊಳ್ ಬಿಗುರ್ತು (ಶಾಂತಿಪು. ೪-೨) ; ಬಲಭಾರಕ್ಕೆ ಬಿಗುರ್ತು ಸುಯ್ಯೆ ಘಣೆರಾಜಂ (ಪಂರಾಮಾ. ೯-೩೪) ; ಇಂತಸಮಾಸ್ತ್ರವ್ಯಥೆಯಿಂ ಬಿಗುರ್ತಬಲೆ ಮೆಯ್ಯಿಕ್ಕಿರ್ದಳಾ ಶಯ್ಯೆಯೊಳ್ (ಕುಸುಮಾ. ೦೩-೧೦೬). ೩. ಗರ್ವಿಸು ; ಸೊಕ್ಕು ; ಕೊಬ್ಬು : ಬಿಗುರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ (ಪಂಪಶಾ. ೭-೦೩) ; ಪಿರಿದೊಂದಜ್ಞಾನದಿಂ ಯೌವನವಿಕಳತೆ ಮೈದೋಱೆ . . . ತತ್ಕರಣಕ್ಕಾಳಾಗಿ ಹಾಳಾಗುತೆ ಬಱುದೊಱೆವೋದೆಂ ಬಳಲ್ದೆಂ ಬಿಗುರ್ತೆಂ (ರಕ್ಷಾಶ. ೩). ೪. ಎದುರು ನಿಲ್ಲು ; ವಿರೋಧವನ್ನು ವ್ಯಕ್ತಪಡಿಸು ; ವಿರೋಧಿಸು : ಚಕ್ರಿಗೆ ಬಿಗುರ್ಪ ಮಂಡಲಮೊಳವೇ (ಪರ್ಗಮಾ. ೯-೬೯); ಬಿಗುರ್ತೆಯ್ತಂದೊಡಂ ಕೋಪದಿಂ ಕೊಲಲಕ್ಕುಂ ಗೆಲಲಕ್ಕುಂ (ಜೀಪಸಂ. ೨೨೮-೪೦). ೫. ಬಾಡು ; ಮ್ಲಾನವಾಗು : ಕಣ್ಣ ನೀರಡಿಗಡಿಗುಣ್ಮಿ ಪಾಯ್ತರೆ ಮುಖೇಂದು ಬಿಗುರ್ತಿರೆ (ಅಪಪು. ೬-೦೨೧); ಮಧುಕರಧ್ವನಿಯಿನಲರ್ವಿಲ್ಲ ಜೇವೊಡೆಯ ರವವೆಂದು ಕಿವಿಯಿತ್ತು ಕೇಳಲುಮ್ಮಳಿಸಿ ತಮ್ಮೊಳ್ ಬಿಗುರ್ವ ಬಿರಯಿಗಳುಂ (ಪುಷ್ಪಪು. ೨-೩೯ ಪ). ೬. ಆಶ್ಚರ್ಯಪಡು ; ದಿಗ್ಭ್ರಾಂತವಾಗು : ಪಕ್ಕಿ ಸೋವವರ ಸ್ತ್ರೀಯರ ಸೀಯನಪ್ಪನುಡಿಯಂ ಕೇಳ್ದಾಗಳಂತಾತ್ಮಗರ್ವವನೀಡಾಡಿ ಬಿಗುರ್ತು ತಂಬುಲಕೆ ಬಾಯಾಂಪಂದದಿಂ ಬಂದು ಪಾಯ್ವುವು ಕೀರಾಳಿಗಳಲ್ಲಿ ಪಾಮರ ವಧೂಬಿಂಬಾಧರಕ್ಕಾವಗಂ (ರರ್ಮಸಾ. ೨-೨೯). ಬಿಗುರು$_1$: ೪. ಅಕ್ಕಾಜಿಯದೇವಗೆಯೊಳ್ ಬಿಗಿದಪ್ಪುವಳೋ ಬಿಗುರದೆ ಮೊಗವಿಟ್ಟು ಮೊಗದೆ ಮುದ್ದಾಡುವಳೋ (ಪಳಸಿ. ೬-೨೩೮) ; ಬಗೆಯೊಳ್ಬಲ್ಪು ಕಟಲ್ದೊಡಂ

. . . ಮೆಯ್ಯುಂ ಮರಂಬರ್ದೊಡಂ ಬಿಗುರುತ್ತೇನಳವೊಂದಿ ನಿಂದಳಪ ಚಾರಂ ಬರ್ಪುದೆಂದಾರ್ಪಿನಿಂ (ಜಿಕಪಿ. ೬-೨೩೦). 'ಬೆಗಡು$_1$', 'ಬೆಗಟ್ಟು$_1$' ಪರಾ.

ಬಿಗುರ್$_2$, ಬಿಗುರು$_2$ (ನಾ). ೧. ಭಯ ; ಅಂಜಿಕೆ ; ಹೆದರಿಕೆ : "ಅಗುರ್ವು, ಬಿಗುರ್, ಬೆಗರ್ . . . ಅದಿರ್ಪು _ ಈ ೧೦ ಭಯಂ" (ಕಶಸಾ. ೩೬-೨೨೩). ೨. ಆಶ್ಚರ್ಯ ; ಬೆರಗು : (ಕಿ). ೩. ಭಯಂಕರವಾದುದು : (ಕಿ). ಬಿಗುರು$_2$: ೧. ಚೋದ್ಯಮೇಂ–ಬಿಗುರ ಬೀರಿದ ಬೀರಮೊ ? ಬಲ್ಲ ಬಿಜ್ಜೆಯೊ ? (ಗಿಳಿಪಿಂ. ೩೨-೬) ; ಬಿಗುರಿಂದ ಬಾಯ್ಬಿಗಿದು ಗಾಳಿ ಬೀಸುವಳು (ಕಾಲೂರ. ೦೬೦-೩೩೩). ೨. "ಬಿಗುರೆನಲ್ ಬೆರಗು" (ಕಶರ. ೭೯). ೩. 'ಬಿಗುರುಗಂಡೆಯ' ಪರಾ. [<ಬಿಗುರ್$_1$]

ಬಿಗುರಿಸು (ಕ್ರಿ). ಅಂಜಿಸು; ಹೆದರಿಸು ; ಭಯಗೊಳಿಸು : ಬಿಗುರಿಪ ವಹ್ನಿಜ್ವಾಲಾಖ್ಯಗತಿಗಿವರ್ ಸಲ್ಗುಂ (ಪಿಷ್ಟುಪು. ೬-೦೯೭) ; ರವಿತನಯನ ದೂತರಾದೊಡಂ ಬಿಗುರಿಸಲಣ್ಮುವರೆ (ಪಿಷ್ಟುಪು. ೦೦-೪೩).

[ಬಿಗುರ್$_1$ + — ಇಸು$_3$]

ಬಿಗುರು$_1$ 'ಬಿಗುರ್$_1$' ನೋ.

ಬಿಗುರು$_2$ 'ಬಿಗುರ್$_2$' ನೋ.

ಬಿಗುರುಗಂಡೆಯ (ನಾ). ಭಯಂಕರವಾದ ಕತ್ತಿ; ರೌದ್ರವಾದ ಖಡ್ಗ: ಬಿಗುರುಗಂಡೆಯ ಪಚ್ಚ ರನ್ನವಾಹಾರ ಪಯ ಬೆಗಡು ನಗೆ ವೈಶ್ವನರ ವಿಂದ ಸುಮ ಕಸ್ತೂರಿಯೊಗುಮಿಗೆಯೊಳಾಂತು ಸುರಿಗಿಯ ಪುಚ್ಛಕಾಗ್ರ ದೊಳಗಿಹನೆಂಬರಶಿಬುಧರ್ಕಳು (ಪ್ರಭುಪು. ೦-೩೮).

[ಬಿಗುರು$_2$ (<ಬಿಗುರ್$_2$) + ಕಂಡೆಯ$_1$ (< ಖಂಡೆಯ$_2$)]

ಬಿಗುರೇಟ್ (ಕ್ರಿ). ಹೆದರಿಕೆಯಿಂದ ಕೂಡು ; ಅಂಜು : ಬಿಗುರೆಟ್ಟ ಬಗೆಯಿಂತು ಬಗೆಗುಂ (ಐದ್ಯಪ್ರ. ೦೦-೨೨೩). [ಬಿಗುರ್$_2$+ ಏಟ್$_1$]

ಬಿಗುರ್ತ 'ಬಿಗುರ್$_1$' ಪರಾ.

ಬಿಗುರ್ತು 'ಬಿಗುರ್$_1$' ಪರಾ.

ಬಿಗುರ್ಪ 'ಬಿಗುರ್$_1$' ಪರಾ.

ಬಿಗುರ್ಪಿಟ್ (ಕ್ರಿ). ಉಬ್ಬರವು ಕಡಮೆಯಾಗು ; ಮದವಿಳಿ : ಪೊಸವೆಸಲಾದ ಪೆಣ್ಗಳ ಜವ್ವನದ ಬಿಗುರ್ಪಿಟ್ಟದು ತಿಳಿವಂತೆ ತೊಱ ವೆಂಡಿರ್ಗುರ್ಕಿನುಬ್ಬರಮಡಂಗಿ ತಿಳಿದುದು (ರಾಮಾಶ್ವ. ೬೩-೪).

[ಬಿಗುರ್ಪು+ಇಟ್]

ಬಿಗುರ್ಪು (ನಾ). ೧. ಭಯ; ಅಂಜಿಕೆ : ದೇವ ನಿನ್ನ ಧಾಟಿಯೊಳ್ಮರಾಟಿ ಗಳ್ಬಿಗುರ್ಪಿನಿಂ . . . ಅಳ್ಕಿ (ಅಪ್ರತಿ. ೨೬-೨). ೨. ತೀವ್ರತೆ; ಅಧಿಕ್ಯ ; ಹೆಚ್ಚಳ : ರಾವಣಾರಿ ಬಾಗುಟ್ಟೊಂದು ಬಿಗುರ್ಪಿಂ ತಲೆ ತಿಣ್ಣಮಾಗೆ . . . ಲಕ್ಷ್ಮಣನಂ ಕರೆದು (ರಾಮಾಶ್ವ. ೨೬-೩). ೩. ಸೊಕ್ಕು ; ಮದ : 'ಬಿಗುರ್ಪಿಟ್' ಪರಾ. ☞ 'ಬಿಗಿಪು' ಶಬ್ದರೂಪದ ಸಾಮ್ಯದಿಂದ ಈ ರೂಪವನ್ನು ಮಾಡಿರುವ ಸಾಧ್ಯತೆಯಿದೆ. [ಬಿಗುರ್$_1$+ —ಪು$_2$]

ಬಿಗುರ್ಪುಗೊಳ್ (ಕ್ರಿ). ಹೆದರು; ಭಯಪಡು : (ಪಿಂದಿರುಗಿ ನೋಡಿ ಬಿಗುರ್ಪುಗೊಂಡು) (ಪಿತ್ರಗೋ. ೨೨-೦೪). [ಬಿಗುರ್ಪು+ ಕೊಳ್$_1$]

ಬಿಗುರ್ವ 'ಬಿಗುರ್$_1$' ಪರಾ.

ಬಿಗುರ್ವರಿಜ (ನಾ). ಭಯಂಕರವಾದ ರೂಪವುಳ್ಳವನು ; ಭೈರವ : "ತೇಟ್ಟೀರಂ, ಬಿಗುರ್ವರಿಜಂ _ ಈ ೨ ಭೈರವಂಗೆ ಪೆಸರ್" (ಕಶಸಾ. ೪೬-೬); ಬಿಗುರ್ವರಿಜಂ, ಹಳಿಗಂ, ಕೊಂಡಂ, ಗುಳಿಕಂ ಮುಂತಪ್ಪ ಭೂತ ವೇತಾಳಂಗಳ ಮರುಳ್ವಡೆವೆರಸು . . . ನಡೆತಂದು (ರಾಮಾಶ್ವ. ೦೩೦-೦೬).

[ಬಿಗುರ್$_2$ + ಪರಿಜು + — ಅ$_7$]

ಬಿಗುರ್ವು (ನಾ). ೧. ಭಯ ; ಹೆದರಿಕೆ : "ಮಲ್ಲಟ್ ಬೆಜ್ಜರ ಬೆಬ್ಬಳ ತಲ್ಲಟ ಬಿಗುರ್ವಗುರ್ವದಿರ್ಪು . . . ಭಯನಾಮ" (ಕವಿಕಂ. ೦೦೬) ; ವಿಧುಂತುದಂ ಸಮೀಪವರ್ತಿಯಾದೊಡಂ ದಿನಕರಂ ಬಿಗುರ್ವನಾನಲಿಲ್ಲ (ಸರಸ. ೦೦೪-೩). ೨. ಬೆರಗು ; ಆಶ್ಚರ್ಯ : "ಬಕ್ಕುಡಿ ಬಿಗುರ್ವಗುರ್ವು ಬೆಬ್ಬಳ . . . ಮಲ್ಲಟ್ಟಿಯೆನಲ್ಕೆ ಬೆಱಗಪ್ಪ ಭಾವಂ" (ಕಬ್ಬಿಕ್ಕ. ೪೦).

[ಬಿಗುರ್$_1$ + — ವು]

ಬಿಗುವು, ಬಿಗು (ನಾ). ೧. ಬಿಗಿಯಾದ ಕಟ್ಟು, — ಬಂಧನ : ಎಲುವಿನ ಪಂಜರ ನರಗಳ ಬಿಗುವು ತೊಗಲಿನ ಹೊದ್ದಿಕೆ (ಪುರಂದ. ೦-೦೬೦-೩); ಬಂಧನಂಗಳ ಬಿಗುವು[ಪಾಠಾಂ. ಹು] ಬಿಡೆ(ಸಬಪು. ೪೭-೩೦). ೨. ಬಿಗಿ ; ಹಿಡಿತ ; ಹತೋಟಿ : ತನ್ನ ರಾಜಮುಂಡಲದಲ್ಲಿಯೂ ಬಿಗುವು ತಪ್ಪಿಹೋಗಿದೆ (ಶ್ರೀರಾಯ. ೩೦೦) ; ಗೋವಿಂದಮಾಸ್ತರರ ಬಿಗುವಿಲ್ಲದ ಆಡಳಿತವೇ ಅದಕ್ಕೆ ಕಾರಣ (ಕಾಪಂ. ೦೦). ೩.ಗತ್ತು ; ಠೀವಿ ; ಬಿಂಕ : ಬಂಧು ಬಂದರೆ ಎನ್ನ ಬಿಗುವ ಬಿಂಕವ ತೋಱ ಬಂದೋಡ್ವರೈ ಎನ್ನ ಬೇಕೆಂದು ಕೋಱದೆ (ಪುರಂದ. ೨-೯-೦) ; ಬಲವಂತನೆಂಬೊ ವೆಗ್ಗಳ ಗರ್ವಿಕೆಯೊ ಸಕಲಲೋಕ ನಿನ್ನ ವಶವೆಂಬೊ ಬಿಗ[ಗು]ವೊ (ಸೋಕ್ಷದೀ. ೨೦-೦) ; ರಾಯರು ಬಿಗುವಿನಿಂದ ಉತ್ತರ ಕೊಟ್ಟರು (ಸಮಜೀ. ೪೦). ೪. ಬಿಗಿಯಾದ ಬಂಧ, — ರಚನೆ : ಅವರ ಹಾಡುಗಳಲ್ಲಿ ಅಲ್ಲಲ್ಲಿ ಅಶ್ಲೀಲಪ್ರಯೋಗಗಳು ಕಂಡುಬಂದರೂ . . . ತುಚ್ಛಶೃಂಗಾರವೆಂದು ನಿರಾಕರಿಸಕೂಡದು. ಹಾಗಾದರೆ ಆ ಹಾಡಿನ ಬಿಗುವೆ ಸಡಿಲಾಗುವುದು (ಕಪ್ಪಣಾ. ೯೬). ಬಿಗು : ೧. ಬಿಗು ಹಿಂದುಗಡೆಯಿಂದ [ಪಾಠಾಂ. ಬಿಗುಹಿಂದ ಗಡೆಯಿಂದ] ಸಡಿಲಿಸಲು ಸಡಿಲದಿರೆ ಬಿಗುಹೇರಿ ಭೀಮ ಮಂದರಗಿರಿಗೆ ಸರ್ಪನಾ ತೆಗೆನೇಣದೆಂಬ ಮರಿಯಾದೆಯಲಿ ಬಿಗುಹತ್ತಿ ಕಣ್ಣಾಲಿ ಮೇಲ್ಸಿಕ್ಕಿತು (ತುರಂಗ. ೩೦-೩೦). ೫. ಬಿಗಿಯಾದ ಸೇರುವೆ : ಕುಲಾಚಲಾದ್ರಿಗಳ ಬಿಗು ಸಡಿಲೆ ರಣಭೇರಿಗಳ್ಮೊಳಗಿದುವು (ತುರಂಗ. ೬೩-೦). ೬. ವ್ಯಗ್ರತೆ ; ಅಪ್ರಸನ್ನತೆ ; ಕೋಪ : 'ಬಿಗುಮೊಗ' ಪರಾ.

[ದೇ.॥ ತಮಿ. ಪಿಕು, ಪಿಕುವು ; ತುಳು. ತೆಲು. ಬಿಗು, ಬಿಗುವು]

ಬಿಗುವುಗುಂದು (ಕ್ರಿ). ದರ್ಪವಿಲ್ಲದಾಗು ; ಠೀವಿಯನ್ನು ಕಳೆದು ಕೊಳ್ಳು : ದುಗುಡದಿಂ ಬಂದು ಪೊಕ್ಕನು ಬೀಡ ಬಲ್ಲಾಳ ಬಿಗುವು [ಪಾಠಾಂ. ಹು]ಗುಂದಿದ ಬಿಂಕದೊಳು (ಕುಂಡಾಂ. ೦೩-೦೩೩).

[ಬಿಗುವು + ಕುಂದು$_1$]

ಬಿಗುಹಡಗು (ಕ್ರಿ). ತೀವ್ರತೆಯು ಕುಗ್ಗು : ರಣದೇಳುವೆಯ ಬಿಗುಹಡಗಿದ ಪೊಲನಿಬರು ತವತವಗೆ ನಾಚಿದರು ಕೋಳಾಹಳಕೆ ಪವನಜನ (ಕಾಸ್ಕಾಳ. ೨೩-೦). [ಬಿಗುಹು (<ಬಿಗುವು) + ಅಡಗು$_1$ (<ಅಡಂಗು$_1$)]

ಬಿಗುಹತ್ತು (ಕ್ರಿ). ಬಂಧನವು ತೀವ್ರವಾಗು : ಬಿಗು ಹಿಂದುಗಡೆಯಿಂದ ಸಡಿಲಿಸಲು ಸಡಿಲದಿರೆ . . . ಬಿಗುಹತ್ತಿ ಕಣ್ಣಾಲಿ ಮೇಲ್ಸಿಕ್ಕಿತು (ತುರಂಗ. ೩೦-೩೦). [ಬಿಗು (< ಬಿಗುವು) + ಹತ್ತು$_1$ (< ಪತ್ತು$_1$)]

ಬಿಗುಹಿಕ್ಕು (ಕ್ರಿ). ಬಿಗಿಮಾಡು ; ಗಟ್ಟಿಗೊಳಿಸು : ಕುಂಬಳದ ಕಾಯ ಮೇಲಣ ಹಸುರ ಕೆತ್ತಿ ಹಲ್ಲೆಯ ಮಾಡಿ ಕುಯಿದು ಜುವಡೆಯಿಂದವೊತ್ತಿ ನೀರಂ ಹಿಂಡಿ ಕಟ್ಟಿ ಬಿಗುಹಿಕ್ಕಿ (ಸೂಪಶಾ. ೩-೩೦).

[ಬಿಗುಹು (<ಬಿಗುವು)+ ಇಕ್ಕು]

ಬಿಗುಹು 'ಬಿಗುವು' ನೋ.

ಬಿಗುಹುಕಾಱ (ನಾ). ದರ್ಪವುಳ್ಳವನು ; ಗರ್ವಿಷ್ಠ : ಬೆಳ್ನುಡಿಯಿಂದ ಬಿಗುಹುಕಾಱರ ಬಲ್ಮೆಯಿಂದ ಬಗೆಗಾಱರನೆದೆಗೆಡಿಸುವರಲ್ಲಿಯ ಬಗಸೆ ಗಂಗಳ ಬಾಲೆಯರು (ಕುಂಡಾಂ. ೪-೦೦೩).

[ಬಿಗುಹು (< ಬಿಗುವು) + — ಕಾಱ]

ಬಿಗುಹುಗುಂದು (ಕ್ರಿ). ದೃಢತೆಯನ್ನು ಕಳೆದುಕೊಳ್ಳು ; ಕಾಠಿಣ್ಯ ವಿಲ್ಲದಿರು : ಹೊಯ್ವಳ್ಳೆ ಬಿಗುಹುಗುಂದಿದ ಕುಚಂ ಬೆಳರ್ತ ಮುಖ (ಹಸಕಾ. ೪-೩೩). [ಬಿಗುಹು (< ಬಿಗುವು) + ಕುಂದು$_1$]

ಬಿಗುಹುಗೊಳ್ (ಕ್ರಿ). ಬಿಗಿದುಕೊಳ್ಳು ; ಸೇರು ; ಒಂದಾಗು : ಕುಡಿಮೀಸೆಗಳು ಕೌಱಿದವಂಗ ಕಾಹೇಱಿದುದು ಕಡುಹಿನಲಿ ಬಿಗುಹುಗೊಂಡುಪ್ಪರಿಸಿದವು ಹುಬ್ಬುಗಳು (ಹೊರರಾ. ೨-೩-೬).

[ಬಿಗುಹು (< ಬಿಗುಪು) + ಕೊಳ್$_1$]

ಬಿಗುಹೇರು 'ಬಿಗುಪೇಱು' ನೋ.

ಬಿಗುಹೇಱು 'ಬಿಗುಪೇಱು' ನೋ.

ಬಿಘಡಾಯಿಸು 'ಬಿಗಡಾಯಿಸು' ನೋ.

ಬಿಘಾ 'ಬಿಘೆ' ನೋ.

ಬಿಘೆ, ಬಿಘಾ (ನಾ). (ಇಪ್ಪತ್ತೈದು ಗುಂಟೆಗಳಿಂದಾದ) ಜಮೀನಿನ ಒಂದು ಅಳತೆ : ೧ ಬಿಘೆಯೆಂದರೆ ಸುಮಾರು ೧ ೧/೨ ಯಿಂದ ೧ ೩/೪ ಯೆಕರು ಆಗುತ್ತದೆ (ಕಣಗಾ. ೨೯೦) ; ಒಂದು ಬಿಘೆಯಲ್ಲಿ ಸರಾಸರಿ ಎಷ್ಟು ಉತ್ಪತ್ತಿಯಾಗುತ್ತದೆಂಬುದನ್ನು ಗೊತ್ತುಮಾಡುವುದು (ಅಕ್ಕರ. ೦೨೫) : ತಮ್ಮ ಭೂಮಿ ಹೋದರೆ ಎಷ್ಟು ಹೋದೀತು ? ಇನ್ನೂರು ಬಿಘೆಗಳಿಗಿಂತ ಹೆಚ್ಚು ಹೋಗಲಿಕ್ಕಿಲ್ಲ (ಹೋಡಶಿ. ೨೦೫). **ಬಿಘಾ** : ಅವನು . . . ನೂರು ಬಿಘಾ ಭೂಮಿಯನ್ನೂ 'ಮುಲ್ಲಾಜಮಾಸ್ಪ್' ಎಂಬ ಬಿರುದನ್ನೂ ಪಡೆದನು (ರಾದಾಪ. ೩). [←ಮರಾ. ಬಿಘಾ ; ಹಿಂ. ಬೀಘಾ]

ಬಿಚವಾ, ಬಿಚ್ವ (ನಾ). ಒಂದು ಬಗೆಯ ಔಷಧಪದಾರ್ಥ. ಸೂರ್ತಿಮಣದ ಮೇಲೆ ಕಿಮ್ಮತ್ತು ಆಗತಕ್ಕ ಜೀನಸುಗಳು. ೧, ಅಕ್ಕಲಖಾರ . . . ೧೬, ಬಿಚವಾ (ನಿರಗುಂಡಿ) (ಮುಂಬಿಪ್ಯಾ. ೦೨೨). **ಬಿಚ್ವ** : ಬಿಚ್ವ . . . ಬೀಜಬಂದ (ಸೂರ್ತಿ ಚವಾಳ ಮಣ) (ಮುಂಬಿಪ್ಯಾ. ೦೬೬). [?]

ಬಿಚಾಣಿ 'ಬಿಚಾನ' ನೋ.

ಬಿಚಾನ, ಬಿಚಾಣಿ, ಬಿಛಾನಾ (ನಾ). ಹಾಸುಗೆ, ಚಾಪೆ ಮುಂತಾದ ಹಾಸುವ ಸಾಧನ : (ಕಿ). **ಬಿಚಾಣಿ** : ಹಾಸಲಿಕ್ಕೆ ಒಂದು ಬಿಚಾಣಿ, ಹೊದೆಯಲಿಕ್ಕೆ ಒಂದು ಚಾದರ — ಇಷ್ಟಿದ್ದರೆ ಸಾವಿರ ಊರು ತಿರುಗೇವು (ರೂಠಿ). **ಬಿಛಾನಾ** : ನಡೀರಿ, ಎತ್ರಿ ಬಿಛಾನಾ (ಸಕೂರ. ೦೨).

[←ಪಾರ. ಬಿಛಾನ್; ಹಿಂ. ಬಿಚಾನಾ; ಮರಾ. ಬಿಛಾನಾ, ಬಿಛೋನಾ ; ಬಂಗಾಲಿ. ಬಿಚಾನ್ ; ಒರಿಯಾ. ಬಿಚಾಇನ]

ಬಿಚಾಯಿತ 'ಬಿಛಾಯತ' ನೋ.

ಬಿಚಿಗದಮ್ಮಸೆಟ್ಟಿ (ನಾ). ಒಬ್ಬಾತನ ಹೆಸರು : ಶ್ರೀಗೊಗ್ಗಿಯ ಮನೆ ಮಗತಿ ಬಿಚಿಗದಮ್ಮಸೆಟ್ಟಿ ಉತ್ತವಗಳ್ಳಂ ಕ್ರ(ಮ)ದೊಳೆ ನಿಲೆ (ಎಕ. III. ಮೈಸೂರು. ೪೩-೨ ; ಸು. ೨೮೨ ?). [? + ಸೆಟ್ಟಿ]

ಬಿಚುವಾ, ಬಿಚ್ಚ್ವ, ಬೀಚ್ವಾ (ನಾ). ಚೇಳಿನಾಕಾರದ ಒಂದು ಬಗೆಯ ಕತ್ತಿ : ಒಂದೊಂದು ಜನಕ್ಕೆ ಬಾರುಬಂದೂಕು ಒಂದು . . . ಬಿಚುವಾ ಒಂದು, ಈ ಮೇರೆ ಎರಡುಜನಕ್ಕೂ ಜಂಗಿಸಾಮಾನು ಕೊಟ್ಟು (ರಾಶೇಂದ್ರ. ೦೦೫). **ಬಿಚ್ಚ್ವ** : ತೋಳಿನಲ್ಲಿ ಹುಡುಕಿ ನೋಡಿದ್ದರೆ ಚೇಳಿನ ಹಾಗೆ ಬಾಗಿಕೊಂಡಿದ್ದ ಒಂದು ಬಿಚ್ಚ್ವ ಎಂಬ ಕಠಾರಿ ಸಿಕ್ಕುತ್ತಿತ್ತು (ಭಾರವೀ. ೩೬). **ಬಿಚ್ವಾ** : ಶಿವಾಜಿಯು . . . ಅಂಗಿಯ ಬಲತೋಳಿನೊಳಗೆ ಬಿಚ್ವಾ ಎಂಬಾಯುಧವನ್ನು ಬಚ್ಚಿಟ್ಟುಕೊಂಡು . . . ಅಫ್ಜುಲ್‌ಖಾನನನ್ನು ನೋಡುವುದಕ್ಕೆ ಹೊರಟನು (ಭಕ್ರತಿ. ೬೬).

[←ಮರಾ. ಬಿಚವಾ ; ಹಿಂ. ಬಿಛೂಆ. /ಪ್ರಾ. ವಿಚ್ಚುಅ =ಚೇಳು]

ಬಿಚ್ಚಂಡ 'ಬಿಚ್ಚಂದ' ನೋ.

ಬಿಚ್ಚಂದ, ಬಿಚ್ಚಂಡ (ನಾ). ಬಹುಮಹಡಿಗಳುಳ್ಳ ಮಹಲು, ಅರಮನೆ ಮುಂತಾದುವು : "ಬಿಚ್ಚಂದ(ಡ) — ವಿಚ್ಛಂದ — ಮುಖಮಂಟಪಗಳ ಸೌಧ ; ಮಂತ್ರಾಲಯ" (ತದ್ಭಕೋ. ೩೦) ; ವಿಛ್ಯಂದ — ಬಿಚ್ಚಂದ (ಶಮದ. ೨೫೬ ಪ್ರಯೋ). **ಬಿಚ್ಚಂಡ** : ದತ್ವಕ್ಕೆ ಡತ್ವಂ — ವಿಚ್ಛಂದ — ಬಿಚ್ಚಂಡ (ಶಮದ. ೨೬೭ ಪ್ರಯೋ). [< ಸಂ. ವಿಚ್ಛಂದ]

ಬಿಚ್ಚಡಿ (ನಾ). ದಾಪುಗಾಲು ; ದೊಡ್ಡ ಹೆಜ್ಜೆ (?) : ಕುಂಟನ ವೊಲು ಕೊಂಕಡಿಗಳನಿಡುತಂ ತುಂಟನ ವೊಲು ಬಿ[ಪಾಠಾಂ. ಬೆ]ಚ್ಚಡಿಗಳನಿಡುತಂ ಹೆಳವನವೊಲು ಮೊಳಕಾಲಿಕ್ಕುತ್ತಂ (ಶೃಂಗೀರ. ೦೪-೨೬).

[ಬಿಚ್ಚು$_{1?}$ + ಅಡಿ$_1$]

ಬಿಚ್ಚಣಿಗೆ (ನಾ). ಸ್ವಚ್ಛಂದವಾದ ಅಭಿನಯ.— ಹಾವಭಾವ : ಪಾಠಕರ ಸಘಾಟದಿಂ ನಚ್ಚಣಿಗರ ಬಿಚ್ಚಣಿಗೆಯಿಂ ಗಾಣರ ಗಮಕದಿಂ . . . ಮಹೋನ್ನತವೈಭವಮನೊಳಕೊಂಡುದ್ಭಟರಾಜೇಂದ್ರಚಂದ್ರಮನೋಲಗಂ ವಿರಾಜಿಸುತ್ತಿರ್ದುದು (ಉಪ್ಪಟಿ. ೨-೦೬ ಪ). [< ಬಿಚ್ಚು$_2$]

ಬಿಚ್ಚತ (ನಾ). ೧. ವಿಸ್ತಾರ ; ಹರಹು ; ವಿಶದ : ಓಹಿಲದೇವಂ ನಲವಿಂ ಮಱಿಚಂದರಹಚ್ಚನನೊಚ್ಚತ ಮಚ್ಚಿದ ಬಿಚ್ಚತದಿಂ ತುತಿಸೆ (ಉದ್ಯರೇ. ೩-೩೯) ; ಶ್ರೀಪಾದಕ್ಕೆ ಸಮಕ್ಷದಲ್ಲಿ ಬಿಚ್ಚತವಾಗಿ ಬಿನ್ನಯಿಸಿಕೊಳ್ಳುವೆನು (ಮಂತ್ರಶ. ೦೨೫-೨೨). ೨. ಅಧಿಕವಾದುದು ; ಹೆಚ್ಚು : (ಕಿ). ೩. ಅನಿರ್ಬಂಧ ; ಸ್ವೇಚ್ಛೆ : ಅಚ್ಚರಕನ್ನೆಯರೊಳ್ ಸರಾಗದಿಂ ಬಿಚ್ಚತವಾಗಿ ಕೂಡಿ ಸುಖಮಿರ್ಪರನಿಂದಿತದೇವಲೋಕದೊಳ್ (ಜೀವಸಂ. ೯೯-೦೦). ೪. ನೆಮ್ಮದಿಯುಳ್ಳವನು ; ಸುಖಿ : ಅಂತು ಜನಮೆಲ್ಲಂ ಪಗಲ ತಾವರೆಯಂತೆ ಬಿಚ್ಚತರಾಗಿ . . . ಶೃಂಗಾರ ಮಾಡುವುದುಂ (ರರ್ಮಾಮ್ಯ. ೬-೨೦೫). [< ಸಂ. ವಿಸ್ತೃತ]

ಬಿಚ್ಚತಂ (ಅ). ೧. ಸ್ವೇಚ್ಛೆಯಾಗಿ ; ಅನಿರ್ಬಂಧಿತವಾಗಿ : ಬಾಟ್ವಿನ ಮಿಂದ್ರಿಯವರ್ಗದಿಚ್ಚಿಯಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು (ಅಂಪು. ೨-೯); ಪರಮೋತ್ಸವದಿಂ ಪಱಿಗುಟ್ಟಿ ಬಿಚ್ಚತಂ ಕುಣಿದುವು ಭೂತಕೋಟಿ (ಪಂಠಾಮಾ. ೦೦-೦೪೪); ಬಿಚ್ಚತಂ ನಲಿವ ಮದಕಳಾಪಿಗಳ ಮೊತ್ತಮಂ ಚಿತ್ತಜನ ವಿಚಿತ್ರಫಲಕಾಯತವ್ರಜಮೆಂದಾತಂಕಮನೊಂದುತುಂ (ಕುಸುಮಾ. ೦೨-೦೩೮ ಪ). ೨. ಸುಲಭವಾಗಿ ; ನಿರಾತಂಕವಾಗಿ ; ಸರಾಗವಾಗಿ : ಮುಂ ಮಹಿಯೆಲ್ಲಮಂ ಶಿಶಿರರಾಜನೆ ಬಿಚ್ಚತಮಾಳ್ದಂ (ಪಂಪಶಾ. ೫-೩೦); ಬಿಚ್ಚತಂ ಬತ್ತೀಸಕೋಟಿ ಸಮುಚ್ಚಯದ ಧನವನು ಗಳಿಸಿದನು (ಸಾಳ್ವಶಾ. ೦೬-೪೫). ೩. ಅಧಿಕವಾಗಿ; ಯಥೇಚ್ಛವಾಗಿ : ಹರಿನ್ಮಣಿಮರೀಚಿಮೇಚಕಿತಸಾನು ಭಾಗಂಗಳೊಳ್ ಕುರಂಗತತಿ ಬಿಚ್ಚತಂ ಪಸಲೆಗೆತ್ತು ಕಾರ್ದಾಸೆಯಿಂ ನಿರರ್ಥ ಜನಿತಶ್ರಮಂ ಬಳ[ಟಿ]ಕದ[ವ]ಲ್ಲಿಯುಂ ಪುಲ್ಲುಮಂ ಗಿರೀಂದ್ರದೊಳ[ಗ]ಲ್ಲಿ ಮೇಯ[ವು] ಹರಿನ್ಮಣಿಭ್ರಾಂತಿಯಿಂ (ಪರ್ಶಮಾ. ೫-೫೭) ; ಕರೀಂದ್ರೋತ್ಕರಂ . . . ಚಿತ್ತದೊಳಾದ ಮೋಹಮಚ್ಚುಡಿದಿರೆ ಬಿಚ್ಚತಂ ಕಡುಪನೊಲ್ಲದೆ ನಿಂದುದದೊಂದು ತಾಣದೊಳ್ (ಮಲ್ಲಿಪು. ೦೦-೭೬) ; ಧೂಮಸಂಪಾದಿತ ಕಾಳಿಮಾಂಕಿತ ನಭಸ್ಥಳಮೆಂದುಮಿದೆಂದು ಬಿಚ್ಚತಂ ಮೇದಿನಿ ಮೆಚ್ಚಿ ಬಣ್ಣಿಪುದು ಪೊಂಬೊಳಲಂ (ಸೌಇಇ. XV. ೬೩-೦೨ ; 1189). ೪. ನೆಮ್ಮದಿಯಾಗಿ ; ಸುಮ್ಮನೆ : ಬಿಚ್ಚತಮಿರ್ದು ಕಣ್ಣ ಪಸವೋಡುವಿನಂ ಸಲೆ ನೀನೆ ನೋಡ (ಕಾವ್ಯಾಪ. ೪೯೪). ೫. ಗಟ್ಟಿಯಾಗಿ ; ಗಾಢವಾಗಿ : ನಿಜೇಶನಂಕದಿನಿಳೇಶನ ಕಾಂತೆ ಚೆಚ್ಚರಮೆರ್ದು ಬಿಚ್ಚತಮಪ್ಪಿದಳ್ (ಅನಂಪು. ೨-೪೬). [< ಬಿಚ್ಚತ]

ಬಿಚ್ಚತಿಕೆ, ಬಿಚ್ಚತಿಕ್ಕೆ, ಬಿಚ್ಚತಿಗೆ (ನಾ). ೧. ವಿಸ್ತಾರ ; ವ್ಯಾಪ್ತಿ ; ಹರವು ; ವೈಶಾಲ್ಯ : (ಕಿ). ೨. ನೆಮ್ಮದಿ ; ಸಮಾಧಾನ : ಪಗಲಂದಿರುಳಾದೊಡೆ ರಾಜ್ಯಮಾದವೋಲ್ ಪೆರ್ಚಿ ಮನಕ್ಕೆ ಬಿಚ್ಚತಿಕೆವಂದಿರೆ (ಪಂಪಶಾ. ೬-೭೫) : ಆತನ ತನುಜಾತರಪ್ರಮಿತಶಾಸ್ತ್ರವಿಶಾರದರಾದೊರಕ್ಕುಮೆಂಬಿನಿತನೆ ಮೆಚ್ಚಿ ಬಿಚ್ಚತಿಕೆಯಿಂ ಪರಿಭಾವಿಸದೀ ದುರಾತ್ಮ ದುರ್ಜನರ್ಗೆ ನಿಕೃಷ್ಟದುಷ್ಟರಿವರ್ಗಾನೊಸೆದಿತ್ತನುದಾತ್ತವೃತ್ತಿಯಂ (ಸುಕುಮಾ. ೨-೨೬). ೩. ಅಡ್ಡಿಯಿಲ್ಲದಿರುವುದು; ನಿರಾತಂಕ: "ವಿಶ್ರಂಭಃ—ಬಿಚ್ಚತಿಕೆ" (ವೀಠಿವಾ. ೨೬-೦೦). ೪. ಅತಿಶಯತೆ ; ಹೆಚ್ಚುಗಾರಿಕೆ : ನೆಱೆಯ ನೆಗರ್ತ್ತವೆತ್ತುದು ನಿಯೋಗಮಗುಂದಲೆಯಾಯ್ತು

ತೇಜ ಮಬ್ಬಿಱಿದುದು ಮಿಕ್ಕ ಬಿಚ್ಚತಿಕೆ ಸ × ದಮಾದುದು (ಕಣ. V, ೦೪-೩೬ ; 1099). ೫. ಸಲಿಗೆ ; ಆಪ್ತತೆ : ಜಲಜಾತಾಕ್ಷನೊಳಾಕೆ ಬಿಚ್ಚತಿಕೆಯಂ ಮಾಡಲ್ ಬಱಿಕ್ಕಂ ಕಳಾನಿಲಯಂ ಮಾಡಿದನೊಲ್ದು ಚುಂಬನ ಪರಿಷ್ವಂಗಪ್ರಪಂಚಂಗಳಂ (ಜಗನಿ. ೦೦-೦೪೦). ಬಿಚ್ಚತಿಕ್ಕೆ : ೩. ಅಮಾತ್ಯರಂ ಕರೆದು . . . ಭೂಮಂಡಳಮಂ ಪಚ್ಚು ಬಿಚ್ಚತಿಕ್ಕೆಯಿನಾಳ್ವಂತವರಂ ನಿಯೋಜಿಸಿ (ವೇಮಿಪು. ೩-೪೫ ವ) ; ಬಾಯ್ಗೆ ವಂದಂದದೊಳೆಂದೊಡೆಂದು ದನೊಡಂಬಡಿಪಿಚ್ಚೆಯ ಬಿಚ್ಚತಿಕ್ಕೆ . . . ಇಂಗೊರಲ ಮೆಲ್ಲುಲಿಯೊಪ್ಪಿದುದು (ಸಂಧ್ರಪು. ೬-೬೩). ೪. ಮಸೆವುದು ಮಾಸಲಿರ್ದ ಪಟವೇಟ ಮನಿಚ್ಚೆಯ ಬಿಚ್ಚತಿಕ್ಕೆಯಂ ಪೊಸಯಿಪುದು (ಶಾಂತಿಪು. ೬-೯೦). ೬. ಹೃದಯವೈಶಾಲ್ಯ ; ಧಾರಾಳತನ : ಆನೊಂದು ಬೇಡಿದಪೆಂ ನೀನದನೆನಗೀವುದಣ್ಣ. . . ಮೋಸಂಗೊಂಡಿರದೆ ಬಿಚ್ಚತಿಕ್ಕೆಯೊಳಿನಿಸಂ (ಧರ್ಮಾಮೃ. ೨-೦೬೬). ಬಿಚ್ಚತಿಗೆ : ೪. ಅಂತು ಮುಟ್ಟಿ ಮೂದಲಿಸಿ ಪೆಟ್ಟಿನಿಂದೆಚ್ಚ ಬಿಚ್ಚತಿಗೆ[ಪಾಠಾಂ. ರಿಕೆ]ಗೊಚ್ಚತಂ ಕೆಳರ್ದು (ಅನಂಪು. ೧೪-೦೬ ವ). [ಬಿಚ್ಚತ + — ಇಕೆ]

ಬಿಚ್ಚತಿಕ್ಕೆ 'ಬಿಚ್ಚತಿಕೆ' ನೋ.

ಬಿಚ್ಚತಿಗ (ನಾ). ಶ್ರೇಷ್ಠನಾದ ವ್ಯಕ್ತಿ : ಚೆಚ್ಚರಿಗಂ ಪರಿವಾಯಂ ತುಚ್ಚಳನತ್ಯುಗ್ರಕೋಪಿ ಮೂರ್ಖಂ ಕೆಸಱೊಳ್ಕಿಚ್ಚಿಡುವನೆನಿಪ ಖಳನುಂ ಬಿಚ್ಚತಿ[ಪಾಠಾಂ. ರಿ]ಗನೆನಿಕ್ಕುಮೊಂದಿ ಚೈನರ ಕೆಲದೊಳ್ (ಸಮಪ. ೬-೦೦೬). [ಬಿಚ್ಚತ + — ಇಗ]

ಬಿಚ್ಚತಿಗೆ 'ಬಿಚ್ಚತಿಕೆ' ನೋ.

ಬಿಚ್ಚನೆ (ಅ). ೧. ಅಗಲವಾಗಿ ; ವಿಶಾಲವಾಗಿ ; ದೊಡ್ಡದಾಗಿ : ಆತಂ ಕ್ರೋಧಾನಲದಿನೆನ್ನನುರಿಪುವಂತು ಕೆಚ್ಚನಾಗೆ ಬಿಚ್ಚನೆ ಬಿಟ್ಟ ದಿಟ್ಟಿಗಳಿಂ ನೋಡಿ (ಕಾಪಂಉ. ೦೦೨); ಬಿಸುನೆತ್ತರನೆತ್ತಂ ಸೂಸುವಂತೆ ಬಿಚ್ಚನೆ ಬಿಟ್ಟಿರ್ದೆರಡುಂ ಕಣ್ಗಳೊಳವರೊರ್ಬರನೊರ್ಬರ್ನುಂಗುವಂತೆ ನೋಡಿದರೆನಸುಂ (ಗದಾಯು. ೬-೪); ಬಿಚ್ಚನೆ ಬಿಟ್ಟ ದಿಟ್ಟಿ ಸಿಡಿಲಂ ಕೀಟ್ಮೂಡೆ ಬಂದೆಯ್ದಿ. . . ತಾಗಿದುವದ್ಭುತಸ್ತನಿತಮೆಂಬನ್ನಂ ಬೃಹದ್ಬೃಂಹಿತಂ (ಪಂರಾಮಾ. ೦೩-೬೬). ೨. ತಟ್ಟನೆ; ಕೂಡಲೆ : ಎಸೆವೀ ಬ್ರಹಾಂಡಮಂ ಬಿಚ್ಚನೆ ಬಿರಿಯಿಸುತುಂ ವಾರ್ಧಿಯಂ ಕೂಡೆ ತುಳ್ಕಾಡಿಸುತುಂ . . . ಪರ್ವಿತ್ತಗುರ್ವಿಂ ತಳೆದೊಗೆದ ಗಂಭೀರಭೇರೀನಿನಾದಂ (ಶಾಂತೀಶ್ವ. ೧೫-೩೪). ೩. ರಭಸವಾಗಿ ; ವೇಗವಾಗಿ : (ಕ). [<ಬಿಚ್ಚತ + — ಅನೆ₁]

ಬಿಚ್ಚಲರ್ (ನಾ). ಅರಳಿದ ಹೂವು : ಮಕರಂದಮಂ ಭ್ರಮರಾವಳಿಗೆ ಮಾಜದೊಲಿದಿತ್ತು ಮೆಱೆವ ಬೆಳ್ದಾವರೆಯ ಬಿಚ್ಚಲರ್ಗಳ ಪೆರ್ಚ ನೋಡು (ಕೈಮಿಶಾ. ೩-೩೯). [ಬಿಚ್ಚು₁ (<ಬಿರ್ಚು) + ಅಲರ್₂]

ಬಿಚ್ಚಳ₁, ಬಿಚ್ಚಳೆ (ನಾ). ಹರಹು; ವಿಸ್ತಾರ; ವೈಶಾಲ್ಯ : "ಬಿಚ್ಚಳ ಮುಮೆನಲ್ ವಿಸ್ತರಾರ್ಥಮಕ್ಕುಂ" (ಕವಿಕಂ. ೦೯೩). 'ಬಿಚ್ಚಳಿಸು' ಪರಾ. ಬಿಚ್ಚಳೆ : ನರನೆಚ್ಚ ಕೆಂಗಱಿಗೋಲ ಬಿ[ಪಾಠಾಂ. ಬ]ಚ್ಚಳೆಯ ಪೊಸಮಸೆಯ ನಿಚ್ಚಳದ ನಿಡುಸರಳ್ಪೆಚ್ಚಿದವು . . . ಕೊಚ್ಚಿದವು ಪರಬಲವನು (ಕೈಮಿಶಾ. ೦೩-೦೬). [<ಬಿತ್ತರ./ಸಂ. ವಿಸ್ತರ]

ಬಿಚ್ಚಳ₂ 'ಬಿಜ್ಜಣ' ನೋ.

ಬಿಚ್ಚಳಿಕೆ (ನಾ). ೧. ಹರಹು ; ವೈಶಾಲ್ಯ : "ಬಿಚ್ಚಳಿಕೆಯೆಂದು ವಿಸ್ತಾರಮಕ್ಕುಂ" (ಕಬ್ಬಿಕ್ಕ. ೦೭) ; "ಬಿತ್ತರಮೆನಲ್ ಬಿಚ್ಚಳಿಕೆಯೆನಲು ವಿಸ್ತಾರಮಕ್ಕು" (ಕಶರ. ೬೦). ೨. ಧಾರಾಳತನ ; ಹೃದಯವೈಶಾಲ್ಯ: ದಾನಧರ್ಮಾನುರಾಗಮುಂ ಬಿಚ್ಚಳಿಕೆಯುಂ ಪಾಪಕ್ಕಂ ಪಱಿಗಮಂಜುವುದುಂ . . . ಅಖಂಡಿತಚಾರಿತ್ರರಾಗಿ ನೆಗೞ್ವುದುಂ ತಪೋಭಾವನೆಯುಮೆಂದಿವಱಿಂ ಸಾತಾವೇದನೀಯಾಸ್ರವಮಕ್ಕುಂ (ಪಸಾರ. ೪೪). ೩. ನೆಮ್ಮದಿ; ಸಮಾಧಾನ : ಅನುನಯದಿಂ ಬಿಚ್ಚಳಿಕೆವೆರಸಿ ಮನದೊಳ ಮೆಚ್ಚಿ ಮಹೇಶ್ವರನನಲ್ಲಿ ಚಿನ್ತಿಸುತಿಟ್ಟಿಂ (ಇಆ. XX, ೬೯-೬; ೨ನೆಯ ಶತ). ೪. ಹರಡಿರುವುದು ; ಚೆದರಿರುವುದು : (ಕ). [ಬಿಚ್ಚಳ₁ + — ಇಕೆ]

ಬಿಚ್ಚಳಿಕೆಗೆಯ್ (ಕ್ರಿ). ವಿಸ್ತಾರವಾಗಿ ನಿರೂಪಿಸು : ಸೌಂದರ್ಯ ಶಾಲಿತನಯಂಗೆ ನೃಪಂ ಯುವರಾಜಪಟ್ಟಮಿತ್ತನುಭವಮಂ ಬಿಚ್ಚಳಿಕೆಗೆಯ್ವುದುಚಿತಂ ತನುಜಾ (ಕಮಮಾ. ೦೨-೪೭). [ಬಿಚ್ಚಳಿಕೆ + ಕೆಯ್₁]

ಬಿಚ್ಚಳಿಸು (ಕ್ರಿ). ೧. ಹಬ್ಬು : ಹರಡು ; ಪಸರಿಸು : ಸ್ಫುರಿತ ಕಮನೀಯಂಗಳಾಗಿ ಬೆಳತಿಗೆಬೆಳಗನಿರದೆಂಟುದೆಸೆಗಳೊಳ್ ಬಿಚ್ಚಳಿಸಿ ಥಳಥಳಿಸುತಿರಲ್ (ಆರಾಸ. ೪-೫-೪) ; ಸೌದಾಮಿನಿಯ ಕರೆಗೆಱೆದ ಪ್ರತುಮೆಯಂದದೊಳಗಜೆಯಚ್ಚರಿಯ ಬಿಚ್ಚಳಿಸುತೆಸೆದಳಾಗ (ನಂದಿಮಾ. ೬-೩). ೨. ವಿಸ್ತಾರಗೊಳಿಸು; ವ್ಯಾಪಿಸುವಂತೆ ಮಾಡು : ನಿಚ್ಚಲುಂ ಬಿಚ್ಚಳಿಸಲ್ ವಿಖ್ಯಾತನಾದಂ (ಸೂಂಕಶಾ. ೦೯೩೬, ರಿಕ್ಷ್ಮೀಶ್ವರ. ೧೦-೦೩; ?). ೩. ಅತಿಶಯಗೊಳಿಸು; ದೊಡ್ಡದು ಮಾಡು : ತಮ್ಮ ಪಂಡಿತಿಕ್ಕೆಯನಱಿಪಿದೊಡೆ ಸಭೆಯೊಳಿರ್ದ ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ ಪೊಗೞ್ದೊಡೆ (ವಡ್ಡಾರಾ. ೪-೨೬) ; ಸಭಾಸದರ್ ಮೆಚ್ಚಿ ಬಿಚ್ಚಳಿಸಿ ಪೊಗೞ್ವಿನಂ (ಸುಳುಮಾ. ೭-೫೬ ವ). ೪. ಬಿತ್ತರಿಸು; ವಿಶದೀಕರಿಸು; ವಿವರಿಸು : ನಾಯಿಕಾನಿಕುರುಂಬಮುಮಂತವರ ತೆಱನನುಱೆ ಬಿಚ್ಚಳಿಪೆಂ (ರಸರ. ೩-೭೦ ಸೂತ್ರ) ; ನಿಗಮಾಗಮಪುರಾಣವಾಣಿಗಳಿಂ ಸಹಜಸಿದ್ಧಶಿವಾಧಿಕ್ಯಮಂ ಬಿಚ್ಚಳಿಸುತ್ತುಂ (ವೃಷಪಿ. ೩೭-೦೩೨ ವ). ೫. ಅಧಿಕವಾಗಿ ಹೊಗಳು.— ಪ್ರಶಂಸಿಸು : ಆತಂಗೆ ಮೆಚ್ಚಿ ಬಿಚ್ಚಳಿಸಿ ತನ್ನಂಗಚಿತ್ತಮುಮಂ ಕೆಲವು ಬಾಟುಮಂ ಕೊಟ್ಟು (ವಡ್ಡಾರಾ. ೧೬೨-೬); ತದನಂತರಮೇ ಲೋಕಾಂತಿಕಾಮರವೃಂದಂ ಬಂದು ಬಿಚ್ಚಳಿಸಲೊಡಂ ವಜ್ರಕ್ಕೆ ಬಳಮಿತ್ತಂತೆ ವಜ್ರಸೇನಮಹಾರಾಜಂ . . . ತಪಂಗೊಂಡಂ (ಆದಿಪು. ೬-೨೩ ವ); ಸುರರಂಬರದೊಳ್ ತಗುಳ್ದು ಬಿಚ್ಚಳಿಸೆ ನದೀಜನುಚ್ಚಳಿಸೆ ಕಾದಿದನೇಂ ಕಲಿಯೋ ಗುಣಾರ್ಣವಂ (ಪಂಪಭಾ. ೦೦-೪೩). ೬. ಹೆಚ್ಚಾಗು ; ಅಧಿಕಗೊಳ್ಳು : ಮೊರೆವ ಪೆಣ್ದುಂಬಿಯ ಬಿಚ್ಚಳಿಪ ಪರಭೃತದ ಕಳಕಳದೊಳೆ ಮಸುಳ್ದುದು ದಿವಿಜಯುಗಲಕಲಕಲನಿನದಂ (ಆದಿಪು. ೬-೯೪); ಸಾಹಸಂ ಬಿಚ್ಚಳಿಸಲು ಕೊಡಲಿಯಿಂ ಖಂಡಿಸಿದನಾತನ ಶಿರಸ್ಸನು (ಆರಾಸ. ೨-೨-೨೧). ೭. ಸಂತೋಷಪಡು; ಹರ್ಷಗೊಳ್ಳು: ತಳಿರ್ತೆಳಮಾವು ಮಾವಿನಂಕುರಮನೆ ಕರ್ಚಿ ಬಿಚ್ಚಳಿಪ ಕೋಗಿಲೆ ಕಂಪನವುಂಕಿ ಪೊತ್ತು ನಿತ್ತರಿಪೆರಲೆಂಬಿವೇವುವೊ (ಪಂಪಭಾ. ೫-೦೦); ನಡುವ ಸರಲ್ ಸರಲ್ಕೊಳೆ . . . ಮೆಯ್ವೊಣರ್ಚುವ ಮಹಾರಥರಾಜಿಯೊಳಂತ ಗುರ್ವಿನಚ್ಚುಡಿದಿರೆ ಕಾದಿ ಬಿಚ್ಚಳಿಸಿದರ್ ಬಿಸುನೆತ್ತರ ಸುಟ್ಟುರೆ ಸೂಸುವನ್ನೆಗಂ (ಪಂಪಭಾ. ೦೦-೦೦೪). ೮. ಶೋಭಿಸು; ಪ್ರಕಾಶಿಸು; ಹೊಳೆ: ನಚ್ಚಣೆಯರನು ನೋಡುತೈತರೆರೆ ಬಿಚ್ಚಳಿಪ ಚೆಂಬೊನ್ನ ಸೊಬಗಿನ ಸ್ವಚ್ಛವಾದಾ ಸಿದ್ಧಮಂಡಪಮೆಯ್ದಿ (ಸಾಳ್ವಭಾ. ೪-೩೨).

[ಬಿಚ್ಚಳ₁ + — ಇಸು₃]

ಬಿಚ್ಚಳೆ 'ಬಿಚ್ಚಳ₁' ನೋ.

ಬಿಚ್ಚಾಲೆ 'ಬಿಚ್ಚೋಲೆ' ನೋ.

ಬಿಚ್ಚಾಳು (ನಾ). ಸ್ವಾತಂತ್ರ್ಯವುಳ್ಳವನು ; ಬಿಡುಗಡೆ ಹೊಂದಿದವನು: ಚನ್ನಮ್ಮಾಜಿಯುಮಾಳೋಚಿಸಿ ತಮ್ಮ ರಾಷ್ಟ್ರಕಾಗಿಯವಂ ಬಿಚ್ಚಾಳಾಗಿ ಪೋದುದಹುದಾವಾಳುತ್ತಿರ್ಪಳೆಯೊಳಿಲ್ಲವೆಂದರುಹಿಸಿದಳ್ (ಕೆಳಸ್ಕ. ೯-೬೪).

[ಬಿಚ್ಚು₂ + ಆಳು₃ (<ಆಳ್₃)]

ಬಿಚ್ಚಿಸು 'ಬಿರ್ಚಿಸು' ನೋ.

ಬಿಚ್ಚು₁ 'ಬಿರ್ಚು' ನೋ.

ಬಿಚ್ಚು₂ (ನಾ). ೧. ಸಡಿಲವಾಗುವಿಕೆ : (ಕ). ೨. ಸಡಿಲಗೊಂಡುದು : (ಕ). ೩. ಸರಳತೆ : 'ಬಿಚ್ಚುಗನ್ನಡ' ಪರಾ. ೪. ವಿರಳಗೊಳಿಸುವ

ಸಾಧನ : ಮಚ್ಚರಿಸುವರ ಬಿಚ್ಚು ಕುಜನರ ಬೆಚ್ಚು ಶಾಂತಿಯ ಹೆಚ್ಚು ಧೂರ್ತರ ಕೊಚ್ಚು ಕಲಿತನದಚ್ಚು ಸುಖಕಣಿ ಮುಚ್ಚುಮಱೆಯಿಲ್ಲ (ಬಸವು. ೨೮-೪೮) ; ಜಾರರ ಚೋರರ ಬಿಚ್ಚು ಸಂತತಂ ಕುವಲಯದ ಮನೋವಿಲಾಸದ ಮಚ್ಚು (ನವನೋ. ೦೭-೨೯). (ಗು). ೫. ಬಿಡಿಯಾದ ; ಚಿಲ್ಲರೆಯಾದ : 'ಬಿಚ್ಚುರೊಕ್ಕ' ಪರಾ. [<ಬಿಚ್ಚು₁]

ಬಿಚ್ಚು₃ 'ಬಿಕ್ಕು₄' ನೋ.

ಬಿಚ್ಚು₄ 'ಬಿಜ್ಜು₂' ನೋ.

ಬಿಚ್ಚುಕಣ್ಣು 'ಬಿಚ್ಚುಗಣ್' ನೋ.

ಬಿಚ್ಚುಕತ್ತಿ 'ಬಿಚ್ಚುಗತ್ತಿ' ನೋ.

ಬಿಚ್ಚುಗಣ್, ಬಿಚ್ಚುಕಣ್ಣು, ಬಿಚ್ಚುಗಣ್ಣು (ನಾ). ಅಗಲವಾಗಿ ತೆರೆದಿರುವ ಕಣ್ಣು : ಎಚ್ಚು ಹಾಯ್ದಂಬುಗಳು ಭೂತದ ಬಿಚ್ಚುಗಂಗಳ ಕೊಂಡದುರಿಯಲಿ ಬಚ್ಚಿಸಿದ ಗಱಿ ಸೀದು ಸೀಕರಿಯೋಗಿ ನಿಮಿಷದಲಿ (ಕುಪ್ಯಾಗ. ೯-೦೬) ; ಅನಿಲಜನ ಕರಪುಟದಿ ಮಿರುಗುತಿರ್ದವತಂಸಮಂ ಬಿಚ್ಚುಗಣ್ಗಳಿಂ ನೋಡುತಿರ್ದು (ಶ್ರೀರಾಮಾ. ೫೨೩-೬೦೫). ಬಿಚ್ಚುಕಣ್ಣು: ಅವಳನ್ನು ಬಿಚ್ಚುಕಣ್ಣಿನಿಂದ ನೋಡುತ್ತ . . . ಎಂದಳು (ದೌಲತ್. ೦೦೦). ಬಿಚ್ಚುಗಣ್ಣು: ನೀರಲುಗಿ . . . ಸಾವಿನಲ್ಲಿ ತೆರೆದ ಬಿಳಿಯ ಬಿಚ್ಚುಗಣ್ಣು, ಪಾಚಿಯ ಮೂಲಕ ಕಂಡಿತು (ಹೊಸಕ್ಷಿ. ೦೬೯).

[ಬಿಚ್ಚು₁ (<ಬಿರ್ಚು) + ಕಣ್]

ಬಿಚ್ಚುಗಣ್ಣು 'ಬಿಚ್ಚುಗಣ್' ನೋ.

ಬಿಚ್ಚುಗತ್ತಿ, ಬಿಚ್ಚುಕತ್ತಿ (ನಾ). ಒರೆಯಿಂದ ಹೊರತೆಗೆದ ಕತ್ತಿ ; ಹಿರಿದ ಕತ್ತಿ : ಹರಿಗೆ ಬಿಚ್ಚುಗತ್ತಿಯ ಹೊಳೆವ ಕಟಿಯ ಮುಂಡುಗಳ ಬಲಗಳ ಮಧ್ಯದೆ ಸರ್ವಸಂಭ್ರಮದೊಳು ಮಳೆಯಾಳವವನೀಶ ಬಂದ (ಕಂಪಪಿ. ೨೦-೬೫) ; ಬಿಚ್ಚುಗತ್ತಿಪಹರೆಯವರು ಬಲುಜಾಗರೂಕತೆಯಿಂದ ಕಾವಲು ಕಾಯುತ್ತಿದ್ದಾರೆ (ದೌಲತ್. ೯). ಬಿಚ್ಚುಕತ್ತಿ : ಬಿಚ್ಚುಕತ್ತಿಗಳಂ ಪಿಡಿದು (ಸೌಗಂಧಿ. ೨೩೨-೦೦) ; ಆಪ್ತಭಟರು . . . ಬಿಚ್ಚುಕತ್ತಿಗಳನ್ನು ಹಿಡುಕೊಂಡು ನಿನ್ನ ಸುತ್ತಲು ನಡೆದು ಬರುವರೆ ? (ಕೃಪಾಸ. ೦೦) ; ಬಿಚ್ಚುಕತ್ತಿಗಳನ್ನು ಕೈಲಿ ಹಿಡಿದು ಮುಂದೆ ನುಗ್ಗಿದರು (ರಾಜಸೂ. ೫೯). [ಬಿಚ್ಚು₁ (<ಬಿರ್ಚು) + ಕತ್ತಿ]

ಬಿಚ್ಚುಗನ್ನಡ (ನಾ). ಸರಳವಾದ ಕನ್ನಡ : ತಿಳಿಗನ್ನಡ : ಒಮ್ಮೆ ಕಂಡನೆಂದರೆ ಆಗ ಆಗುವ ಆನಂದವನ್ನು ಬಿಚ್ಚುಗನ್ನಡದಲ್ಲಿ ಬಣ್ಣಿಸಿದ ವಚನಗಳನ್ನು ನೋಡಿ ! (ಕನ್ನಮ. I. ೦೭೫). [ಬಿಚ್ಚು₂ + ಕನ್ನಡ₁]

ಬಿಚ್ಚುಗಯ್ದು (ನಾ). ಒರೆಯಿಂದ ಸೆಳೆದ ಆಯುಧ : ಮಲ್ಲರಾಜನನ್ನು ಬೆನ್ನಟ್ಟಿ ಬಂದ ಬಿಚ್ಚುಗಯ್ದುಗಳ ತನ್ನವರನ್ನು ಕೆಯ್ಸನ್ನೆಯಿಂದ ಹಿಂದಣ್ಗೆ ಕಳಿಹಿಬಿಡುವನು (ಬಿರುಗಂ. ೩೯-೦೯).

[ಬಿಚ್ಚು₁ (<ಬಿರ್ಚು) + ಕಯ್ದು (<ಕೆಯ್ದು)]

ಬಿಚ್ಚುಜಡೆ (ನಾ). ಬಿಚ್ಚಿಕೊಂಡಿರುವ ಜಟೆ ; ಹರಡಿಕೊಂಡಿರುವ ಜಟೆ : ಮೆಚ್ಚಿದನು ಮದನಾರಿ ಹೋಮದ ಕಿಚ್ಚು ತುಡುಕದ ಮುನ್ನ ತೆಗೆದನು ಬಿಚ್ಚುಜಡೆಗಳ ಜಹ್ನುಸುತೆಯಲಿ ನಾದಿದನು ಭಟನ (ಕುಪ್ಯಾಗ. ೯-೨೩). [ಬಿಚ್ಚು₁ (<ಬಿರ್ಚು) + ಜಡೆ₁]

ಬಿಚ್ಚುನುಡಿ (ನಾ). ಮುಚ್ಚುಮರೆಯಿಲ್ಲದ ಮಾತು ; ಸ್ಪಷ್ಟವಾದ ನುಡಿ ; ನೇರವಾದ ಮಾತು : ಅವರ ಬಿಚ್ಚುನುಡಿಗಳನ್ನು ನಾನು ಪ್ರೀತಿಸಿದೆ (ಪಾಪೋಲೀ. ೯೯) ; 'ಎನ್ನ ತಪ್ಪು ಅನಂತಕೋಟಿ ; ನಿಮ್ಮ ಸೈರಣೆಗೆ ಲೆಕ್ಕವಿಲ್ಲಾ !' ಎಂಬ ಬಿಚ್ಚುನುಡಿ (ಸಾಹಿಪಂ. ೩).

[ಬಿಚ್ಚು₁ (<ಬಿರ್ಚು) + ನುಡಿ₂]

ಬಿಚ್ಚುಪೇಣಿ (ನಾ). ಒಂದು ಬಗೆಯ ಸಿಹಿತಿಂಡಿ : ಬೆಂದುದಂ ಹಿಡಿದು ತೆಗೆದಿರಿಸಿಯುತ್ತಮದ ಸಕ್ಕರೆಯನದಱ ಪದರೊಳು ತುಂಬಲದು ಬಿಚ್ಚುಪೇಣಿಯಾಯ್ತು (ಸೂಪಶಾ. ೦-೯೯). [ಬಿಚ್ಚು ? + ಪೇಣಿ]

ಬಿಚ್ಚುಫಿರಂಗಿ (ನಾ). "ದೊರೆಯ ಸಂಗಡ ತೆಗೆದುಕೊಂಡು ಹೋಗುವ ಆಯುಧ" (ಚತ್ರಪಾ. ೨ ಅಮಬಂಧ) : ಓಬಳಣ್ಣನಾಯಕನಿಗೆ ಪಟ್ಟವಾಯಿತು. ಇವನಿಗೆ ಬಿಚ್ಚುಫಿರಂಗಿ ಹಿಡಿಸಿದರು (ಚತ್ರಪಾ. ೦೬).

[ಬಿಚ್ಚು ? + ಫಿರಂಗಿ]

ಬಿಚ್ಚುಫೇಣಿ (ನಾ). = ಬಿಚ್ಚುಪೇಣಿ : ಈವೋಪಾದಿಯಲ್ಲಿ ಎಲ್ಲ ಫೇಣಿಗಳನೂ ಅಟ್ಟು ಇರಿಸಿ ಎಲ್ಲ ಪದರಿನೊಳಗೆ ಸಕ್ಕರೆಯ ತುಂಬಿ ತಳಿವುದು. ಇದರ ಹೆಸರು ಬಿಚ್ಚುಫೇಣಿ ಎನಿಸಿಕೊಂಬುದು (ಸೂಪಶಾ. ೧-೯೯ ಅಡಿಟಿ). [ಬಿಚ್ಚು ? + ಫೇಣಿ]

ಬಿಚ್ಚುಮನಸ್ಸು (ನಾ). ಮುಚ್ಚುಮರೆಯಿಲ್ಲದ ಹೃದಯ ; ತೆರೆದ ಮನಸ್ಸು : ಪದ್ಮಾಕರ ಬಿಚ್ಚುಮನಸ್ಸಿನಿಂದ ಮಾತನಾಡತೊಡಗಿದ (ರತ್ನಗೋ. ೨೨) ; ಒಬ್ಬರನ್ನೊಬ್ಬರು ಬಿಚ್ಚುಮನಸ್ಸಿನಿಂದ ಮೆಚ್ಚಿಕೊಂಡುದು ಜನರಿಗೆ ಮಹದಾನಂದವಾಯಿತು (ಸಂಗೀತ. ೩೦).

[ಬಿಚ್ಚು₁ (<ಬಿರ್ಚು) + ಮನಸ್ಸು]

ಬಿಚ್ಚುಮಾತು (ನಾ). = ಬಿಚ್ಚುನುಡಿ : ನಿನ್ನ ಬಿಚ್ಚುಮಾತನ್ನು ನಾನು ಮೆಚ್ಚುತ್ತೇನೆ (ದೂರಸ. ೦೦೩) ; ಇದನ್ನು ಬಿಚ್ಚುಮಾತಿನಿಂದ ಶ್ರೀಮದಾನಂದತೀರ್ಥರು . . . ಉಪದೇಶಿಸಿದ್ದಾರೆ (ಭಾರದ. ೨೬೧).

[ಬಿಚ್ಚು₁ (<ಬಿರ್ಚು) + ಮಾತು₁]

ಬಿಚ್ಚುಮೊಗ್ಗೆ (ನಾ). ಅರಳಿದ ಮೊಗ್ಗು : ಹೌದು ಧಣಿಯೆ, ನಾ ಬಿಚ್ಚುಮೊಗ್ಗೆ, ನನಗಿಲ್ಲ ಸೆರಗುಮುಚ್ಚು (ಮುಕ್ತಕಂ. ೨೯-೩).

[ಬಿಚ್ಚು₁ (<ಬಿರ್ಚು) + ಮೊಗ್ಗೆ]

ಬಿಚ್ಚುರಥಿಕ (ನಾ). ಏಕಾಕಿಯಾಗಿ ಕಾದಬಲ್ಲ ರಥಿಕ : ಹೆಚ್ಚಿ ವೀರಾವೇಶದಲಿ ಬಹ ಬಿಚ್ಚುರಥಿಕರನಾಯ್ದು ಧೈರ್ಯದ ಕೆಚ್ಚ ಮುಱಿದನು (ಕುಪ್ಯಾಕ. ೦೫-೨೨). [ಬಿಚ್ಚು₂ + ರಥಿಕ]

ಬಿಚ್ಚುರೊಕ್ಕ (ನಾ). ಚಿಲ್ಲರೆ ಹಣ ; ಪುಡಿಗಾಸು : ಬಿಚ್ಚುರೊಕ್ಕ ವಿರಲಿಲ್ಲ. ಗುಮಾಸ್ತ ರೂಪಾಯಿ ಮುರಿಸಿಕೊಂಡು ಬರಲು ಹೋದ (ಶ್ರೀಮಾಶ್ರ. ೦೯೭). [ಬಿಚ್ಚು₂ + ರೊಕ್ಕ]

ಬಿಚ್ಚುವ (ನಾ). ಸಂನ್ಯಾಸಿ ; ಭಿಕ್ಷುಕ : ಒರ್ವ ರಸವಾದಕನೆಂಬ ಬಿಚ್ಚುವಂ [ಪಾಠಾಂ. ಭಿಕ್ಷುಕಂ] . . . ಎಂದೊಡೆ (ವಡ್ಡಾರಾ. ೦೬೭-೦೦); ಆ ಬಿಚ್ಚುವಂ . . . ತನ್ನೊಳವಧಾರಿಸಿ (ಸುಳುವಪಾ. ೩-೬ ವ).

[< ಸಂ. ಭಿಕ್ಷುಕ]

ಬಿಚ್ಚೂರಿಗೆ (ನಾ). ಒಂದು ಬಗೆಯ ಭಕ್ಷ್ಯ : ಮುಂಡಗೆ ಪೇಣಿ ನಲ್ಗೈದ ಲಡ್ಡುಗೆಯ ಬಿಚ್ಚೂರಿಗೆಗಳಂ ಬಡ್ಡಣಿಸಿದರಂಗನೆಯರು (ಮರೇಪು. ೧೬-೨೯) ; ಗಾರಿಗೆ ಲಡ್ಡುಗೆ ಬೀಸೂರಿಗೆ ಬಿಚ್ಚೂರಿಗೆ . . . ಮಧು ಸಕ್ಕರೆಗಳ ಸಾರಂಗಳ ಸುಳಿವಾಳೆಯ ದೊನ್ನೆಯೊಳಾರೈದೆರೆದರ್ಸವಿಗಾತಿಯರ್ (ಮರೇಪು. ೦೯-೫೬).

[ಬಿಚ್ಚು ? + ಹೂರಿಗೆ (<ಪೂರಿಗೆ)]

ಬಿಚ್ಚೆ 'ಬಿಕ್ಕೆ₂' ನೋ.

ಬಿಚ್ಚೆಕಾರ (ನಾ). ಭಿಕ್ಷುಕ ; ತಿರುಪೆಯವನು : ಈ ಬಿಚ್ಚೆಕಾರ ಭಿಕಾರಿರಾಯ . . . ಕೊಸವ . . . ವೃದ್ಧಜಂಬುಕ (ಮಂತ್ರಶ. ೦೦೦-೦೯).

[ಬಿಚ್ಚೆ (< ಬಿಕ್ಕೆ₂) + -ಕಾರ₁ (< -ಕಾಱ)./ತಮಿ. ಪಿಚ್ಚೈಕ್ಕಾರನ್]

ಬಿಚ್ಚೋಗರ (ನಾ). (ಹೂವಿನಂತೆ) ಉದುರುದುರಾಗಿರುವ ಅನ್ನ ; ಮಿಡ್ಡೆಯಾಗಿಲ್ಲದ ಅನ್ನ : ಮಲ್ಲಿಗೆಯರಳಂತೆ ಬಿಚ್ಚೋಗರ ಮೊಸರು . . . ರಸರಸಾಯನವ ಚಪ್ಪಿರಿದು ನೀರ್ಮಜ್ಜಿಗೆ ಹಸಗೆಯ್ದಿರಲೀಂಟಿದರು (ಮೋಹತ. ೩-೫೬). [ಬಿಚ್ಚು₁ (<ಬಿರ್ಚು) + ಓಗರ]

ಬಿಚ್ಚೋಲೆ, ಬಿಚ್ಚಾಲೆ (ನಾ). (ಮುತ್ತೈದೆಯರು) ಕಿವಿಗೆ ಆಭರಣದಂತೆ ಧರಿಸುವ ತಾಳೆಗರಿಯ ಸುರುಳಿ : ಬಿಚ್ಚೋಲೆ ಹರಿಹು ಹೆಱ

ತಿಲಕಂ ಕಂಗಳನಲಸದೆ ಕೇದಗೆವೂಗಳೊಳೆತ್ತಂ ಮಾಡಿ ತೊಟ್ಟರಬಲೆಯರೆಲ್ಲಂ (ಸೂಕ್ತಿಸು. ೦೦-೩೦); ಮಱನ ಬಿಚ್ಚೋಲೆಗಳ ಬಣ್ಣದ ಹೊನ್ನ ನೂಲುಂಗಳ ಗಿರಿಗಳೇ ಫಲವಾದುವಾ ಸುರಕರಿಯ ನೋಂಪಿಯು ದಾನಕೆ (ಸಂಧಪ. ೨೦-೨೦); ತಾನೆ ಐರದಾಳಿಯ ಬಿಚ್ಚೋಲೆಯ ಚಂದನದ . . . ಕರುಂಡಮಂ ಕೈಯೊಳ್ಕೊಂಡು (ರಾಮಾಶ್ವ. ೨೯-೦೭). **ಬಿಚ್ಚಾಲೆ :** ಶ್ರೀರಂಗಮ್ಮನು ಆಭರಣಗಳನ್ನೆಲ್ಲಾ ಪರಿತ್ಯಜಿಸಿ ಅರಿಶಿನ ಕುಂಕುಮವನ್ನು ಇಟ್ಟುಕೊಂಡು ಬಿಚ್ಚಾಲೆಯನ್ನು ಧರಿಸಿಕೊಂಡು . . . ಹೇಳಿ ಕಳುಹಿಸಿದಳು (ಶ್ರೀರಾಯ. ೩೭೦); ಮದುವೆಯಾಗಿದ್ದರೆ ಹೆಂಡತಿಯು ಅರಿಶಿನಕುಂಕುಮ ಬಳೆ ಬಿಚ್ಚಾಲೆಯನ್ನು ತೆಗೆಸುತ್ತಿದ್ದರು (ಧೂರಸ. ೨೬೯).

ಬಿಚ್ಚೋಲೆ ಗೌರಮ್ಮ, ಬಿಚ್ಚೋಲೆಯ ಗೌರಮ್ಮ = ಯಾವ ಆಭರಣಗಳನ್ನೂ ಹಾಕಿಕೊಂಡಿರದ ಬಡಮುತ್ತೈದೆ : ಅವಳು ಬಿಚ್ಚೋಲೆ ಗೌರಮ್ಮನಂತೆ ಮದುವೆಮನೆಗೆ ಹೊರಟಿದ್ದಳು (ರೂಢಿ); ತಾಯಿಯ ಜಂಬ ಆಡಂಬರಗಳನ್ನೇ ಅರಿಯದ ಬಳೆ ಬಿಚ್ಚೋಲೆಯ ಗೌರಮ್ಮ (ಧೂರಸ. ೯೩).

[ಬಿಚ್ಚು1 (<ಬಿರ್ಚು) + ಓಲೆ . / ತುಳು. ಬಿಚ್ಚೋಲೆ]

ಬಿಚ್ಚಡ 'ಬಿಚುವಾ' ನೋ.

ಬಿಚ್ಚ 'ಬಿಚುವಾ' ನೋ.

ಬಿಚ್ಚಾ 'ಬಿಚುವಾ' ನೋ.

ಬಿಛಾನಾ 'ಬಿಚಾನ' ನೋ.

ಬಿಛಾಯತ, ಬಿಚಾಯಿತ, ಬಿಛಾಯಿತ (ನಾ). ದಲ್ಲಾಳಿ ; ಕಮಿಷನ್ ಏಜೆಂಟ್ : ಇಲ್ಲಿ ಠೋಕಬಂದ ಜೀನಸಗಳ ಒಡವೆ ಬಹಳ, ಅಂತ ನಮ್ಮ ಬಿಛಾಯತರು ಇದು ಧ್ಯಾನದಲ್ಲಿ ತಂದು (ಮುಂಬಾಪ್ರಾ. ೩೦). **ಬಿಚಾಯಿತ :** ಪರವೂರಿಂದ ಬಂದ ಬಿಚಾಯಿತರು ಊರಿನೊಳಗಿನ . . . ಅಂಬೋಣ ಏನಿರುವದು ಇದನ್ನು ಕೇಳಿಕೊಂಡು ಅದರಂತೆ ವ್ಯವಸ್ಥೆಯನ್ನು ಮಾಡುವದು (ಮುಂಬಾಪ್ರಾ. ೨೬೦). **ಬಿಛಾಯಿತ :** ಈ ಮಾಹಿತಿಯು ಬಿಛಾಯಿತರಿಗೆ ಬಹು ಅಗತ್ಯ ಇರತಕ್ಕದ್ದು (ಮುಂಬಾಪ್ರಾ. ೨೯).

[← ಮರಾ. ಬಿಛಾಯತ್, ಬಿಛಾಇತೀ, ಬಿಛಾಯತೀ]

ಬಿಛಾಯಿತ 'ಬಿಛಾಯತ' ನೋ.

ಬಿಜ 'ಬಿಜಯ' ನೋ.

ಬಿಜಆ (ನಾ). ಒಬ್ಬಾಕೆಯ ಹೆಸರು : ಪೊಳಲಿನಾಡುಳ್ಳೊಱೆಯೂರು ಬರಗೂರು ಬಿಜಆ ಮಾದೇವಿಯಾಳುತ್ತಿರೆ (ಎಕ. XII. ೫೦೩. ೨೪-೩೬; ಸು. ೪೦೦). [< ಸಂ. ವಿಜಯಾ]

ಬಿಜಯ, ಬಿಜ (ನಾ). ೧. ವಿಜಯ ; ಗೆಲುವು : "ಬಿಜಯ (ಬಿಜ)—ವಿಜಯ=ಗೆಲುವು" (ತದ್ಭವಕೋ. ೩೦). ೨. ಪ್ರಯಾಣ ಮಾಡಿ ಬರುವುದು ; ಆಗಮನ ; ಬರವು : ಮಾಡುವುದು ನೀವ್ ಬಿಜಯವಲ್ಲಿಗೆ (ಸಂಧಪ. ೦೬-೩೦) ; ವರದರಾಜದೇವರ ತೇರಲ ಪಟ್ಟಣಕೆ ಬಿಜಯಂ ಮಾಡ್ಸಿಕೊಂಡು (ಎಕ. X (S). ಮುಳಶಾ. ೩-೦೭; 1430). ೩. ತೆರಳುವಿಕೆ; ಹೊರಡುವಿಕೆ ; ನಿರ್ಗಮನ : ಬಿಜಯಮೆಸಗಲಿಕೆಮಗಸುಜ್ಞೆಯೋಂ (ಪರಶು. ೩-೦೩). ☞ ಇದು ಸಾಮಾನ್ಯವಾಗಿ ರಾಜರು, ಗುರುಗಳು, ಹಿರಿಯರು ಮುಂತಾದವರ ಆಗಮನ, ನಿರ್ಗಮನಗಳಿಗೆ ಅನ್ವಯಿಸುವ ಗೌರವಸೂಚಕವಾದ ಶಬ್ದ. ೪. (?) : ಆ ಊರ ಬಿಜಯರು ಕಂಮಾಜರು ಅಗಸಾಲೆಯರು ನಾಯಿಂದರು (ಎಕ. IV (R). ಎಳಂದೂ. ೦೩೪-೯; 14ನೆಯ ಶತ). **ಬಿಜ :** ೧. ಮೇಲಿನ 'ತದ್ಭವಕೋ' ಪ್ರಯೋಗವನ್ನು ನೋಡಿ.

ಬಿಜಯ ಮಾಡಿಸು, ಬಿಜ ಮಾಡಿಸು = ೧. ಬರುವಂತೆ ಮಾಡು; ಕರೆತರು : ಸರಸ್ವತೀಮಂದಿರದೊಳಗೆ ಅವರನ್ನು ಬಿಜಯ ಮಾಡಿಸು (ಪದೇವ. ೦೦೩) ; ಆಗ ಹುಜೂರ್‌ಸವಾರಿ ಬಿಜಯ ಮಾಡಿಸುವುದೆಂದರೆ ಬಹಳ ದೊಡ್ಡ ಉತ್ಸವ (ಕಲಿನ. ೬೯). ೨. (ಉತ್ಸವದಲ್ಲಿ ದೇವರ ವಿಗ್ರಹ ಮುಂತಾದುವುಗಳಂತೆ) ತೆಗೆದುಕೊಂಡು ಹೋಗು ; ಸಾಗಿಸಿಕೊಂಡು ಹೋಗು ; ಒಯ್ಯು : ಆ ಶ್ವೇತವರಾಹಸ್ವಾಮಿಯ ಪ್ರತಿಮೆಯನ್ನು ಬಿಜ ಮಾಡಿಸಿಕೊಂಡು ಶ್ರೀರಂಗಪಟ್ಟಣವನ್ನು ಸೇರಿದರು (ಒಡೆ. ೯೯); ಛತ್ರಕ್ಕೆ ಈಶ್ವರದೇವರ ಉತ್ಸವಮೂರ್ತಿಯನ್ನು ಬಿಜ ಮಾಡಿಸಿಕೊಂಡು ಹೋದರು (ಗುರುಚಾ. ೦೩೧). ೩. ಬರು ; ಆಗಮಿಸು : ಭರತಪ್ರಭುಗಳ ಸವಾರಿ ಬಿಜ ಮಾಡಿಸುತ್ತಿದೆ (ಹುಬ್ಬಹ. ೦೬೨) ; ಮಹಾರಾಣಿಯವರು . . . ಕೈಸಾಲೆಗೆ ಬಿಜ ಮಾಡಿಸಿದರು (ಪುಟ್ಟರ. ೬). **ಬಿಜಯ ಮಾಡು, ಬಿಜ ಮಾಡು** = ೧. ದಯಮಾಡು ; ಬರು ; ಆಗಮಿಸು : ಈಯಟವಿಯಲಿ ದುಷ್ಟಮೃಗಸಮುದಾಯವಿದೆ . . . ಬೇಂಟೆಗೆ ಬಿಜಯ ಮಾಡು (ಹರಿಹಾ. ೩-೩-೬) ; ದ್ವಿಜತಿಲಕ . . . ನಿಜಶಿಷ್ಯನಂ ಕೂಡಿಕೊಂಡು ಮುಖಮಂಟಪಕೆ ಬಿಜಯ ಮಾಡಿದ ಕಜ್ಜಮಾವುದು (ಕೃಷ್ಣಮಾ. ೨೬-೩೨) ; ನಿಜವಾಗಿ ತೆರಳಬೇಕಾಯಿತಾದಡೆ ಜೀಯ ಬಿಜ ಮಾಡಿ ಬೆನ್ನಾಂತುಕೊಂಬೆ (ಪೋಷಕ. ೩೬-೩೬); ಶ್ರೀ ಜ್ಞಾನಸಂಬಂಧರನ್ನು ಮನೆಗೆ ಬಿಜ ಮಾಡುವಂತೆ ಮಾಡಿರಿ (ಪುರಾಪ. ೦೬೦). ೨. ತೆರಳು ; ನಿರ್ಗಮಿಸು ; ಹೊರಡು : ನಿಮ್ಮ ಪದದರುಶನದಿ ಧನ್ಯನು ಬಿಜಯ ಮಾಡುವುದೆನುತ ಕಂದೆಱೆದೀಕ್ಷಿಸಿದನಂ ದುಭಯಸೈನಿಕವ(ಶಾಸ್ತ್ರಾಧ್ಯೇ. ೦೮-೬೦); ನಿರುತದಾರೋಗಣೆಯ ಮಾಡಿಯೆ ಮರಳಿ ಬಿಜ ಮಾಡು (ಸಂಧಪ. ೨೬-೧೩) ; ಆಶ್ಚರ್ಯವನು ತೋಱುವೆ ಬಂದಿರಾದರೆಯೆನಲು ಬಿಜ ಮಾಡೆಂದು ಮುನಿಪನ ಕೂಡೆ ಹೊಱವಂಟರು ಕುಮಾರಕರು (ಶೌರಿಶಾ. ೦-೯೭). ೩. ಆರಂಭವಾಗು ; ಮೊದಲಾಗು : ಈ ಸೂತ್ರಸಮುದಾಯ ಮತ್ತು ಇದರೊಂದಿಗೆ ಉಪನಿಷತ್ತುಗಳು ಮತ್ತು ಭಗವದ್ಗೀತೆ ಈ ಮೂರೂ ಸೇರಿ ವೇದಾಂತಶಾಸ್ತ್ರದ ಆಧಾರಶಿಲೆಯೆನಿಸಿದೆ. ವೇದಾಂತವು ಬಿಜ ಮಾಡುವುದು ಇಲ್ಲಿಂದಲೇ (ಶಾರದ. ೨೬೦).

[< ಸಂ. ವಿಜಯ]

ಬಿಜಯಂಗೆಯ್, ಬಿಜಯಂಗೆಯಿ, ಬಿಜಯಂಗೈ, ಬಿಜಯಂಗೈಯಿ (ಕ್ರಿ). ೧. ಬರು ; ದಯಮಾಡು ; ಆಗಮಿಸು ; ಚಿತ್ತೈಸು : ಘಟ್ಟಾರಾ ಕಿತ್ತಯ್ಯಂಗಳನೆಮ್ಮಲ್ಲಿಗೊಡಗೊಂಡು ಬಂದು ಚರಿಗೆದೋಱೆ ನೀಮುಂ ಬಿಜಯಂಗೆಯ್ಯಿಮೆನೆ (ಪಡ್ಡಾರಾ. ೬೦-೦೩) ; ನಿಮ್ಮಯ್ಯಂ ಧೃತರಾಷ್ಟ್ರನ ಬೆಸದಲ್ ಮುನ್ನಮೆ ಮಾಡಮಂ ಸಮೆದಿಟ್ಟೆನಲ್ಲಿಗೆ ಬಿಜಯಂಗೆಯ್ಯಂ (ಪಂಪಭಾ. ೩-೨ ಪ) ; ಎಲೆ ದೇವಾ ಭೀಷ್ಮರಿತ್ತಲಿರ್ದಪರಿತ್ತ ಬಿಜಯಂಗೆಯ್ಯಂ (ಗದಾಯು. ೩-೩೬ ಪ). ೨. ಹೊರಡು ; ತೆರಳು ; ನಿರ್ಗಮಿಸು ; ಹೋಗು : ಎಮ್ಮ ಪಾಸಿದ ಚಿತ್ರಪಟವೆಂಬ ಬಲೆಯೊಳ್ ನಿಮ್ಮಂತಪ್ಪ ಬೆಳ್ಳಿಗಂಗಳಾಗಳೆ ತೊಡರ್ಗುಮುಸಿರದೆ ಬಿಜಯಂಗೆಯ್ಯಂ (ಆದಿಪು. ೩-೬೯ ಪ) ; ದೇವ ನೀವಿಂ ತಡೆಯದೆ ಬಿಜಯಂಗೆಯ್ಯುದೌಚಿತ್ಯಂ (ಕುಸುಮಾ. ೯-೦೦೩) ; ವಿಮಳಪ್ಪೋಮಕೇಶನು ನಗುತ ಬಿಜಯಂಗೆಯ್ಯಲನುವಾದ (ಕುಪ್ಪಾಕ. ೭-೧೦). ೩. ಇರು ; ವಿರಾಜಿಸು : ಇಂತು ಬಂದು . . . ಗಿರಿಜೆ ಭರದಿಂ ಗಿರಿರಾಜನ ತೊಡೆಯ ಮೇಲೆ ಬಿಜಯಂಗೆಯ್ದುಳ್ (ಗಿಂಗ. ೯-೯೯). **ಬಿಜಯಂಗೆಯಿ :** ೧. ಆ ಶಂಕರಪ್ರತಿಮಾನ ಸಹಿತಭಯಂಕರಂ ಬಿಜಯಂಗೆಯಿದನಿಂದು (ಪಾಪ. ೩೦-೭). **ಬಿಜಯಂಗೈ:** ೧. ಸಿರಿಸರಸ್ವತಿವೆರಸಿ ಗಿರಿಜೆ ಬಿಜಯಂಗೈದಳು (ಸಿದ್ಧರಾ. ೦-೩೭) ; ಕರುಣೆ ಬಿಜಯಂಗೈದು ಮೃತ್ಯುವಿನಾರಿವ ಗಂಟಲೊಳಿಳಿವ ತನ್ನನು ಬರಸೆಳೆದನೆಂದಮಳಮಾರ್ಕಂಡೇಯಮುನಿ ನುಡಿದ (ಶಾಸ್ತ್ರಾಪ. ೧೯-೦೭); ನೀವು ಬಿಜಯಂಗೈದಡಧಿಕೃತಪಾಪನರಲೇ (ತೊರಗಾ. ೦-೩ ೩೦). ೨. ಹರಂ ಕರುಣದಿಂ ನೋಡಿ ಬಸವನ ಚಿತ್ತದೊಳ್ ಪೊಕ್ಕು . . . ನೆಲಂ ಮೆಚ್ಚಿ ಮೆಱೆದಪೆಂ ಎಂದು ಬೆಸಸಿ ನಿಜಲಿಂಗಕ್ಕೆ ಬಿಜಯಂಗೈವುದುಂ (ಬಸರ. ೨-೬೨); ಹರನ ಕರುಣದ ಹದನನೀತಂಗೊರೆದು ಶತರುದ್ರೀಯವನು ವಿಸ್ತರಿಸಿ ಬಿಜಯಂ

ಗೈದನಾ ಮುನಿಪತಿ ನಿಜಾಶ್ರಮಕೆ (ಕುಮಾ. ಕ್ರೋ. ೦೯-೫೪). **ಬಿಜಯಂಗೈಯಿ** : ೨. ನಮಗೆ ನಿಮಗಿನ್ನಾಪ ಜಂಜಡ ಬೇಡ ತಪದ ಫಲಾವಳಿಯೆ ಸಾಕಿನ್ನು ಬಿಜಯಂಗೈಯಿ ನೀವು (ತೊರರಾ. ೦-೦೭-೦೭).

[ಬಿಜಯ + ಕೆಯ್1]

ಬಿಜಯಂಗೆಯಿ 'ಬಿಜಯಂಗೆಯ್' ನೋ.

ಬಿಜಯಂಗೆಯಿಸು 'ಬಿಜಯಂಗೆಯ್ಸು' ನೋ.

ಬಿಜಯಂಗೆಯ್ಸು, ಬಿಜಯಂಗೆಯಿಸು, ಬಿಜಯಂಗೈಯಿಸು, ಬಿಜಯಂಗೈಸು (ಕ್ರಿ). ೧. ಕರೆದು ತರು ; ಬರುವಂತೆ ಮಾಡು : ಜಂಗಮವ ಕಂಡು ಗೃಹಕ್ಕೆ ಬಿಜಯಂಗೆಯ್ಸಿ ತಂದು (ಶನ್ನವ. ಕ. ೩೯-೭೯); ಅವರ್ಗಳನೀಗ ಬಿಜಯಂಗೆಯ್ಸಿ ತಹೆ (ಬಸಪು. ೬-೪೨) ; ಅರಸನನುಜರು ಸಹಿತ ಮುನಿಮುಖ್ಯರನು ಕಂಡಿದಿರೆದ್ದು ಚರಣದೊಳೆಱಗಿ ಬಿಜಯಂಗೆಯ್ಸಿ ತಂದನು ತಳಿರ ಮಂಟಪಕೆ (ನಳಶ. ೦-೦೦). ೨. ಒಳಹೊಗುವಂತೆ ಮಾಡು; ಪ್ರವೇಶಿಸುವಂತೆ ಮಾಡು : ಪಾರ್ವತಿಯಂ ಪರ್ವತರಾಜಂ ಪುಷ್ಪಕದೊಳ್ ಬಿಜಯಂಗೆಯ್ಸಿ ತಾನುಂ ಕುಳ್ಳಿರ್ದು (ಗಿಂಕ. ೫-೦೨ ಪ) ; ಸಜ್ಜಾಮಂದಿರಕೆ ಸಡಗರಿಸಿ ಮಾಯೆಯನಲ್ಲಮನನೊಲಿಸಿ ತಂದು ಬಿಜಯಂಗೆಯ್ಸಿದರು ಬಳಿಕಿಂದುಮುಖಿಯರು (ಪ್ರಶುಲೀ. ೫-೪೪). **ಬಿಜಯಂಗೆಯಿಸು** : ೧. ಋಷಿಕುಮಾರನಂ . . . ಒಲವಿನಿಂದ ಬಿಜಯಂಗೆಯಿಸಿ ಕರೆತಂದು (ಕಾದ್ಯಟಿ. ೨-೨೨ ಪ) ; ದಯಾಳುವಂ ಬಿಜಯಂಗೆಯಿಸಿ ತಂದೊಳಗೆ ಕುಳ್ಳಿರಿಸಿ (ಬಸಪು. ೫೨-೪). **ಬಿಜಯಂಗೈಯಿಸು** : ೧. ಸೌಂದರವತಿಯಂ . . . ಒಯ್ಯನೆ ಕನಕಾಂದೋಳನದೊಳ್ ಬಿಜಯಂಗೈಯಿಸಿಕೊಂಡೆಟ್ಟಂದುಪವನಮಂ ಪೊಕ್ಕು (ಕಾದ್ಯಟಿ. ೭-೩೩ ಪ). **ಬಿಜಯಂಗೈಸು** : ೧. ಹರಿಯ ಬಿಜಯಂಗೈಸಿ ತಂದಸುರರನು ಭಂಗಿಸಿ ಯಜ್ಞಕರ್ಮವ ಧರಿಸಿ ಸುಖಿಯಹೆನು (ಕೌಶಿರಾ. ೦-೭೯) ; ಬಂದನತಿಹರುಷದಲಿ ಮುನಿಕುಲವೃಂದದೊಡನೈತರಲು ರಘುಕುಲನಂದು ಬಿಜಯಂಗೈಸೆ ತಂದನು ರಾಜಮಂದಿರಕೆ (ರಾಮಶ. ೩೯-೦೨೭). ೨. ಮತ್ಸ್ಯದೇವರನೊಯ್ದು ಗಂಗೆಯಲಿ ಒಯ್ದು ಬಿಜಯಂಗೈಸೆ ಗಂಗೆಯನೈದೆ ತುಂಬಿದನೊಂದು ರೂಪಿಲಿ (ಸಂಭಶ. ೪-೬). [ಬಿಜಯ + ಕೆಯ್ಸು]

ಬಿಜಯಂಗೈ 'ಬಿಜಯಂಗೆಯ್' ನೋ.

ಬಿಜಯಂಗೈಯಿ 'ಬಿಜಯಂಗೆಯ್' ನೋ.

ಬಿಜಯಂಗೈಯಿಸು 'ಬಿಜಯಂಗೆಯ್ಸು' ನೋ.

ಬಿಜಯಂಗೈಸು 'ಬಿಜಯಂಗೆಯ್ಸು' ನೋ.

ಬಿಜಯಿತ, ಬಿಜಯಿತ್ತ, ಬಿಜಯ್ತ, ಬಿದಿಯಾಯ್ತ, ಬಿದೆಯಿತ್ತ, ಬೆಜಯಿತ್ತ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಬಿಜಯಿತನು ಮರಿಯಸೆಯೊಳ್ ಭಗವತಿಯಂ ಪದಿಷ್ಟೆಗೆಯ್ಸಿದೊಡೆ (ಮೈಆರಿ. ೦೯೨೯, ೩೮-೦ ; ೯ನೆಯ ಶತ). **ಬಿಜಯಿತ್ತ** : 'ಬಿಜಯಿತ್ತಯ್ಯ' ಪರಾ. **ಬಿಜಯ್ತ** : ಗವಱ ಬಿಜಯ್ತನ ನಟ್ಟ ಬೆಲ್ಲಪಾತ್ರದ ಮರಂಗಳ್ (ಎಕ. III (R), ಸಂಜನ. ೨೩೯-೦೩; ಸು. 10ನೆಯ ಶತ). **ಬಿದಿಯಾಯ್ತ** : ಬಿದಿಯಾಯ್ತ ತುಱುವ ನಿಕ್ಕಿಸಿ ಕಾದು ಸತ್ತು ದಿವನೇಱಿದಂ (ಎಕ. II, ೩೯೯-೯; 884 ?). **ಬಿದೆಯಿತ್ತ** : ಪೆರ್ಬಟ್ಟಕ್ಕಂ ಬಿದಿರೂರ ಅಗ್ಗಳಮಿಳವಲ್ಲಿ ಅಂಕಕೆ ಕಾದಿದ ಬಿದೆಯಿತ್ತ ಸತ್ತನ್ (ಎಕ. X, ಶ್ರೀನಿವಾ. ೨೭-೨೪; 870). **ಬೆಜಯಿತ್ತ** : ಬೆಜ[ಯಿ]ತ್ತನ್ . . . ಅಣಿಯುಳ್ ಕುದುರೆಯುಳ್ ತಾಗಿ ಪಲರನಿಱಿದು ಸತ್ತೊಡೆ (ಎಕ. X, ಮುಳಬಾ. ೨೨೬-೬; ಸು. 890 ?). [< ವಿಜಯಾದಿತ್ಯ]

ಬಿಜಯಿತಗಾವುಂಡ (ನಾ). ಒಬ್ಬಾತನ ಹೆಸರು : ಇದಕ್ಕೆ ಸಾಕ್ಷಿ . . . ಬಿಜಯಿತಗಾವುಣ್ಡನುಂ ಬನ್ದಗಾವುಣ್ಡನುಂ (ಎಕ. XI, ಹೊಳಲ್ಕೆ. ೩೦-೦೦ ; 964) ; ಬಿಜಯಿತಗಾವುಣ್ಡನ ಮಗಂ ಅಮ್ಮಡಿಗಾವುಣ್ಡಂ (ಮೈಆರಿ. ೦೯೩೦, ೪೩-೫; 994). [ಬಿಜಯಿತ + ಗಾವುಂಡ (< ಗಾಮುಂಡ)]

ಬಿಜಯಿತಮಂಗಲ (ನಾ). ಒಂದು ಸ್ಥಳದ ಹೆಸರು : ಶ್ರೀಮನ್ನೊಟಮ್ಬಾಧಿರಾಜರ್ ಪೃಥಿವೀರಾಜ್ಯಂಗೆಯ್ಯುತ್ತಿರೆ ಚೋಟ ಬಿಜಯಿತಮಂಗಲದ ನೊಟಮ್ಬನ ದಣ್ಡಂ ಕಾದು ಪೆಱ್ಱಟಿಯೊಳ್ನೊಟಮ್ಬರಸ ಕಾದಿ ಸತ್ತಂ (ಎಕ. IX, ಹೊಸಕೋ. ೪೭-೬; ಸು. 980 ?). [ಬಿಜಯಿತ + ಮಂಗಲ]

ಬಿಜಯಿತಾಚಾರಿ (ನಾ). ಒಬ್ಬಾತನ ಹೆಸರು : ಬೆಸಂಗೆಯ್ದೊಂ ಕೊಯತೂರ ಬಿಜಯಿತಾಚಾರಿಯ ಮಗಂ ವಿಕ್ರಮಾದಿತ್ಯಂ (ಎಕ. X, ಮುಳಬಾ. ೦೦೬-೯; ಸು. 950). [ಬಿಜಯಿತ + ಆಚಾರಿ]

ಬಿಜಯಿತ್ತ 'ಬಿಜಯಿತ' ನೋ.

ಬಿಜಯಿತ್ತಯ್ಯ (ನಾ). ಒಬ್ಬಾತನ ಹೆಸರು : ಶ್ರೀ ಬಿಜಯಿತ್ತಯ್ಯಂ ಮಾದಾಮತ್ತರಸರಾ ಪೊಟಲಮ್ಮನಾ ಮೇಗೆಟ್ಟು (ಎಕ. X, ಶ್ರೀನಿವಾ. ೪೦-೧; ಸು. 900). [ಬಿಜಯಿತ್ತ (< ಬಿಜಯಿತ) + ಅಯ್ಯ1]

ಬಿಜಯಿಸು (ಕ್ರಿ). ಬರು; ಆಗಮಿಸು; ದಯಮಾಡು : ಲಂಕೇಶ್ವರಂ ಶ್ರಮನಿವಾರಣಾರ್ಥಂ ಪುರಕೆ ಬಿಜಯಿಸಿದನು (ಶ್ರೀರಾಮಾ. ೬೦೦-೨೫೯); ಲಕ್ಷ್ಮಿ, ಪಡಸಾಲೆಯಿಂದ ದೇವರ ಮನೆಗೆ ಬಿಜಯಿಸಿದ ಭಾಸವಾಯಿತು (ದೀಪಹ. II. ೦೯೦). [ಬಿಜಯ + — ಇಸು3]

ಬಿಜಯ್ತ 'ಬಿಜಯಿತ' ನೋ.

ಬಿಜಲಿ (ನಾ). ೧. ಮಿಂಚು; ವಿದ್ಯುತ್ತು : ಈ ನಿನ್ನ ಹುಡುಗೆಯಂತೂ ಕೇವಲ ಬಿಜಲಿಯಾಗಿದ್ದಾಳೆ — ಬಿಜಲಿ (ಹಂಸಾ. ೪೬). ೨. ವಿದ್ಯುದ್ದೀಪ: ಅದು ಸಂಜೆಗೆ ಬಿಜಲಿಗಳನ್ನು ಹಚ್ಚಿದಾಗ ಆಟದ ಚಪ್ಪರ . . . ಒಳ್ಳೆ ಸಿಂಗಾರವಾಗಿ ಕಾಣುತ್ತಿದ್ದಿತು (ಪುನರ್ಮಿ. ೦೫೬).

[← ಹಿಂ. ಮರಾ. ಬಿಜಲೀ. / ಪ್ರಾ. ವಿಜ್ಜಲಿಯಾ]

ಬಿಜವರ (ನಾ). ಒಂದು ಬಗೆಯ ಆಭರಣ : ಕೆಂದ ಪೀತಾಂಬರವ ಸುಧೆ ಉಟ್ಟಿರುವಳು ಅಂದಮುಡಿಗೆ ಮುತ್ತಿನ ಸೊಂಡಿಲ ಬೈತಲ ಬಿಂದಿ ಬಿಜವರ ಬಲುಚೆಂದ (ಸಿರ್ಕಪು. ೧೯-೬೦).

[← ಮರಾ. ಬಿಜವರಾ, ಬಿಜೋರಾ]

ಬಿಜಾಗರಿ (ನಾ). ತಿರುಗಣಿ; ತಿರುಪುಮೊಳೆ ; ಕೀಲು : ಅದರ ಮೇಲೆ ತಲೆಯ ಹಿಂದೆ ಮುಂದೆ ಮಣಿಯುವ ಹಾಗೆ (ಬಿಜಾಗರಿಯಂತೆ) ಕೂಡ್ರಿಸಲ್ಪಟ್ಟಿದೆ (ಮುಂಬಿಯಿ. ೬-೩೦೨); ಬಿಜಾಗರಿಯನ್ನು ಟೆಲಿಗ್ರಾಫ್ ಸುತ್ತಿನ ತಂತಿಗೆ ಜೋಡಿಸಿರುತ್ತಾರೆ (ವಿಶ್ವಾವಿ. ೨೩); ಬೀಗ, ಬಿಜಾಗರಿ, ಅರ, ಕೊಡತಿ ಮೊದಲಾದ ಸಾವಿರಾರು ಸಲಕರಣೆಗಳಿದ್ದುವು (ಅಪೂಪ. ೬೭).

[← ಮರಾ. ಬಿಜಾಗರೀ, ಬಿಜಾಗರೇ. / ತುಳು. ಬಿಜಾಗ್ರಿ, ಬಿಜಾಕ್ರಿ, ಬಿಜಿಗ್ರೆ]

ಬಿಜಿಕ್, ಬಿಝಿಕ್ (ನಾ). ಒಂದು ಬಗೆಯ ಇಸ್ಪೀಟು ಆಟ : ೧ ಇಬ್ಬರು ಅಥವಾ ನಾಲ್ವರು ಸೇರಿ ಆಡುವ ಆಟ; ಕಪ್ಪುರಾಣಿ ಮತ್ತು ಕೆಂಪು ರಾಜರನ್ನು ಸೇರಿಸಿ ಅಂಕಗಳನ್ನು ಆಡುವ ಆಟ : ಗಂಜೀಪೀ ಆಡೂ ಹಾಂಗಿಲ್ಲಾ, ಬಿಜಿಕ್ ಆಡೂ ಹಾಂಗಿಲ್ಲಾ (ತಿಡುಗು. ೩೫); ಮಧ್ಯಾಹ್ನಕ್ಕ ಬಿಜಿಕ್ಕಿಗೆ ಬರತೀವಲ್ಲೋ ? (ತಿಡುಗು. ೪೫). **ಬಿಝಿಕ್** : ನಿನಗೆ ಬಿಝಿಕ್ ಬರುವುದೋ (ಗಾಳಿಪ. ೦೯) ; ಈ ಮಿತ್ರರನ್ನು ಕರೆದುಕೊಂಡು ಎರಡನೇ ಕೋಣೆಯಲ್ಲಿ ಬಿಝಿಕ್ ಆಡಲಿಕ್ಕೆ ಹೋಗುತ್ತೇನೆ (ಮೋಹನೀ. ೫೯). [← ಮರಾ. ಬಿಜಿಕ್, ಬಿಝಿಕ್./ಇಂ. Bezique]

ಬಿಜಿಲು (ಗು). ಗಜಿಬಿಜಿ : ದೊಳ್ಳ ಹೆಬ್ಬಾಗಿಲಲ್ಲಿ ಕಾಣಿಸಿಕೊಂಡು ಬಿಜಿಲು ಬಿಜಿಲು ಮಾತಿನಲ್ಲಿ "ಅಂವಿನ್ನೂ ಬಂದಿಲ್ಲಂತೆ" ಎಂದನು (ಮಲೆಮ. ೩೭೬).

[?]

ಬಿಜ್ಜ1 (ನಾ). ಒಬ್ಬಾತನ ಹೆಸರು : ಸತ್ಯಳ್ಗೆ ಎಟ್ಟತ್ತಱೊ[ಳೆ] ಬಿಜ್ಜಂ ನಾಟ್ಗೂ[ವು]ಣ್ಡುಗೆಯೆ (ಸೌಇಇ. XX, ೦೫-೦೦; 904); ಮುಂ ಬಿಜ್ಜನಂ [ಪಾಠಾಂ. ವಜ್ರಿಯಂ ?] ಕಾದರಿಗನುಟಿದರಂ ಕಾವುದೇಂ ಚೋದ್ಯ

ಮಾಯ್ತೋ (ಪಂಪಭಾ. ೦೦-೬೦); P "ಬಿಜ್ಜನಂ=ವಿಜಯಾದಿತ್ಯನೆಂಬ ರಾಜನನ್ನು" (ಪಂಪರೀ. ೪೦೦).

ಬಿಜ್ಜನ ಬಂಟ=ಒಂದು ಬಿರುದು : ಬಲಪದರಿನ್ರಿಪತಿ ನಿಷ್ಕಂಟಂ ಬಿಜ್ಜನ ಬಂಟಂ (ಎಕ. VIII, ಶಾಗರ. ೦೦೯-೦೦; 1042). [<ಬಿಜಯ]

ಬಿಜ್ಜ2, ಬೆಜ್ಜ2 (ನಾ). ಒಂದು ಬಗೆಯ ತೆರಿಗೆ : ಬೆಳುದಂಡ ಎಸೆ ಒಸಗೆ ಬಿಜ್ಜ ಬಿಡಾರವತ್ತುಗಾಯಿ ಮೊದಲಾಗಿ ಆಉದೂ ಸಲ್ಲ ಸರ್ವ್ವಮಾನ್ಯವಾಗಿ (ಕಾ. I, ೫೯-೫; 1483 ?); ತುಳುವದ ಶಾಸನಗಳಲ್ಲಿ ಬರುವ ತೆರು ವಣಗಳು: ತೆರು. . . ಒಸಗೆ, ಬಿಜ್ಜ, ಬಿಡಾರ (ತುಳುಶಾ. ೨೬೦). **ಬೆಜ್ಜ2**: ಆ ಮಳಲೂರ ಪಟ್ಟಣದ ಹೊಱಕೇರಿಗೆ ಸಲುವ ಬೆಜ್ಜನೂ (ಎಕ. IX (S), ಶಕೃಶಿ. ೦೫೨-೦೦; 1535 ?). [?]

ಬಿಜ್ಜಣ, ಬಿಂಕಣ, ಬಿಂಕಣೆ, ಬಿಚ್ಚೆಳ್ಳ2, ಬಿಜ್ಜಣೆ, ಬಿಜ್ಜಲ, ಬಿಜ್ಜಳ, ಬೀಜನ, ವಿಜ್ಜನ (ನಾ). ಬೀಸಣಿಗೆ; ವೀಜನ; ಪಂಕ : "ಬಿಜ್ಜಣವೆನ ಲಾಲವಟ್ಟಂ" (ಶಕುನಿ. ೦೫೨); ಹಿಮಾನಿಲನಿಂ ನಿಮಿರುವ ಪೊಂಬಾಱೆಯ ಸುಱಿಯೆಲೆಯ ಬಿಜ್ಜಣಂಗಳಿಂ . . . ಹಿಮಗೃಹಮಂ ಸಮೆದು (ಶಾಸುಮಾ. ೦೩-೪೬ ಪ); ಸೊಗಸಿ ತಂಗಾಳಿಗೊಲೆವೆಲೆಯಿಂದೆ ಬಿಜ್ಜಣಮೆಸಗಿ . . . ಬಾಳೆಗಳ್ ಮೆಱೆದುವು (ಪಪುರಾ. ೮-೩೫). **ಬಿಂಕಣ** : "ಬಿಂಕಣ (ಣೆ)— ವ್ಯಜನ" (ಪಪುಕೋ. ೩೦). 'ಬಿಂಕಣಗಿವಿಯ' ಪರಾ. P 'ಬಿಂಕಣ' ಶಬ್ದಕ್ಕೆ ಬೇರೆಯ ವ್ಯುತ್ಪತ್ತಿ ಸಾಧ್ಯವಿದೆಯೆ ಎಂಬುದು ಪರಿಶೀಲ ನಾರ್ಹ. **ಬಿಂಕಣೆ** : 'ಬಿಂಕಣಗಿವಿ' ಪರಾ. **ಬಿಚ್ಚೆಳ್ಳ2** : ಸೂಱಱ ದೊಯ್ಯನೊಯ್ಯನೆ ಮಹೀಧರನಂದನರೊಲ್ದು ಬೀಸುವಾ ಬಾಳದ ಪೊಚ್ಚ ಬಿಚ್ಚಳದ ತಂಬೆಲರಿಂಪಿಗೆ ಮೆಯ್ಯನಿತ್ತು . . . ಉದ್ಭಟದೇವನೊಪ್ಪಿದಂ (ಉದ್ಭಟಿ. ೨-೦೦೩). **ಬಿಜ್ಜಣೆ** : ಅನಂತಮೆನಿಪ್ಪ ವೃತ್ತವದನದ ಲಕ್ಷ್ಮಿಯೆತ್ತಿ ಕೈನೀಡಿ ಬೀಸುತ್ತಲಿಹ ಬಿಜ್ಜಣೆಯ ಮೊತ್ತಮೊಂಬಂತಿರ್ದುದು (ರುಕ್ಮಾಂಗ. ೩-೬). **ಬಿಜ್ಜಲ** : ಚೂರ್ಣ ಹಿಮತಾಂಬೂಲ ಪರ್ಣ ಪೂಗಂಗುಡುವೆಲರ್ ನಯದ ಬಿಜ್ಜಲದ ವರ್ಣನೆಯ ಸಚಿಯರೊಳು ಮಾರ್ನಡೆದಳರಸಿ (ಶಾಪಸಂ. ೯-೨೦). **ಬಿಜ್ಜಳ** : ಬಿಜ್ಜಳ ಹಡಪ ಚಾಮರ ಗಿಂಡಿ ಕಾಳಾಂಜಿ . . . ಮುಕುರ ಬಾಚಣಿಗೆಯ ಕಜ್ಜದರೊಱಗಿರ್ದರು ಸುತ್ತ (ಸೊಂಪಿಸೋ. ೨೩-೨೭); ಸಿರಿಗಂಧದಣ್ಪೆಗೆ ಬಿಜ್ಜಳದೆಲರಿಗೆ ಪರಿಮಳಿಸುವ ಪನ್ನೀರ್ಗೆ ಪಿರಿದು ಬಯಸುತವರಿರ್ವರೆಸೆದರಾಗ (ಕಂಪಂ. ೦೦-೩೨). **ಬೀಜನ**: ಹಿಮರೋಚಿಯ ತಣ್ಗಾರ್ದಿಗಳ್ಗೆ ಶೀತಶೀತಳಿಕೆಯ ಬೀಜನಕ್ಕೆ ಗುಱಿಯಾಯ್ತು [ವಿ]ಯೋಗಿಜನಂ ಬಸಂತದೊಳ್ (ಪರ್ಯಸಾ. ೦೦-೯೯). **ವಿಜ್ಜನ** : 'ವಿಜ್ಜನಸತಿ' ಪರಾ.

ಬಿಜ್ಜಣದೂಳಿಗ =ಬೀಸಣಿಗೆ ಹಿಡಿದು ಬೀಸುವ ಸೇವೆ, –ಊಳಿಗ : ಅಂಗಮರ್ದನದ ಬಿಜ್ಜಣದೂಳಿಗದೊಂತ ಭೃತ್ಯರಂದಂಚಿತ ಚಿಕ್ಕದೇವನರ ನಾಯಕನಾ ಸಭೆಯೊಳ್ ವಿರಾಜಿಕುಂ (ಯಾದವಕಂ. ೨-೩೬).

[< ಸಂ. ವೀಜನ./ಪ್ರಾ. ವಿಜ್ಜ=ಗಾಳಿ ಹಾಕುವುದು.–ಬೀಸುವುದು]

ಬಿಜ್ಜಣಂದಳೆ (ಕ್ರಿ). ಬೀಸಣಿಗೆಯನ್ನು ಹಿಡಿ: ಹಸ್ತಕಂಜದಿಂ ಕರೆದುಱೆ ಬಿಜ್ಜಣಂದಳೆದು ಬೀಸಿ ಮುದಂಬಡೆ (ಪಿಷ್ಟಾಪು. ೩-೭-೬೦). [ಬಿಜ್ಜಣ+ತಳೆ1]

ಬಿಜ್ಜಣವಿಕ್ಕು, ಬಿಜ್ಜಳವಿಕ್ಕು (ಕ್ರಿ). (ಬೀಸಣಿಗೆಯಿಂದ ಬೀಸುವಂತೆ) ಗಾಳಿ ಹಾಕು : ಗಾಳಿ ಬೀಸು : ಗಱಿಗೆದಱೆ ಕೊಡೆವಿಡಿದು ನಿಂದುವು ಬಿಸಿಲ್ಗೆ ನವಿಲೆಱಕೆಯಂ ಬೀಸಿ ಬಿಜ್ಜಣವಿಕ್ಕಿತಂಚೆ (ಶ್ರೀಪಾಶಾ. ೨೬-೫೬); ಆ ಪಾಂಥದೊಳು ಮಂದಾನಿಲಂ ಕುಳಿರಾಂತು ಬಿಜ್ಜಣವಿಕ್ಕಿದುದು (ಕಂಪಂಭಾ. ೨-೧೯). **ಬಿಜ್ಜಳವಿಕ್ಕು**: ಬಳಲಿದರ್ಗೆಸೆವ ಗಱಿಯಿಂದ ಬಿಜ್ಜಳವಿಕ್ಕಿದಪ್ಪುವು ಶಿಖಿವಿಸರಂ (ಪಂಚಿಪಾ. ೨೦-೨೬). [ಬಿಜ್ಜಣ + ಇಕ್ಕು]

ಬಿಜ್ಜಣೆ 'ಬಿಜ್ಜಣ' ನೋ.

ಬಿಜ್ಜಣಿಗ (ನಾ). ಬೀಸಣಿಗೆಯಿಂದ ಗಾಳಿ ಹಾಕುವವನು,— ಬೀಸುವವನು : ಹಡಪದವರಂ ಬಿಜ್ಜಣಿ [ಪಾಣಾಂ. ೪]ಗರನಾ ಕಾಳಾಂಜಿ ವಿಡಿವರಂ . . . ಎಳೆವಕ್ಕಳ ಕಡುವಿಲಾಸದೊಳಮರ್ಚಿಸಿ ಕೊಟ್ಟು (ಪಪು. ೫-೪೩). [ಬಿಜ್ಜಣ + – ಇಗ]

ಬಿಜ್ಜಣಿಗೆ, ಬಿಜ್ಜಳಿಗೆ, ವಿಜ್ಜಣಿಗೆ (ನಾ). = ಬಿಜ್ಜಣ : "ಬಿಜ್ಜಣಿಗೆ. ಆಲವಟ್ಟಂ — ಈ ೨ ತಾಲವೃಂತಂ" (ಶಕಾ. ೭೨-೬೩೨) ; ಪೊಸ ತಳಿರ್ಗಳ ಬಿಜ್ಜಣಿಗೆಯಿನೆಸೆವೆಲರ್ಗಳಿನೊಗೆವ ಘರ್ಮಜಲಮಂ ಪೀರ್ದಾ ಱಿಸಿದುವು . . . ಲತಾಂಗಿಯರ್ಗೆ (ಪಪು. ೧೦-೭೫); ಅಂತು ಕಂತು ಸಂತಾಪಕ್ಕೆ ಪಕ್ಕಾಗಿ . . . ಬೀಸುವ ಕುಱುವೆಯ ಬಿಜ್ಜಣಿಗೆಯೊಳಂ ಪಾಸುವ ಬಾಳಪ್ರವಾಳತಳ್ಪತಳದೊಳಂ . . . ಶಿಶಿರೋಪಚಾರಚಾತುರತ್ವಂ ಮೆಱೆಯೆ (ಅಪಂಪು. ೦೧-೨೯ ಪ). **ಬಿಜ್ಜಳಿಗೆ** : ಅಹಿಗಳಂ ಸಂತೈಸಿ ಬಿಜ್ಜಳಿಗೆಯಾ ಮೇಲೆ ಬೀಸುತ್ತೆಲರುಣಿಸನಿತ್ತು ಸಂತೈಸಿ (ಎಕೈಪು. ೭-೩-೦); ಮಿಳಿರ್ವೆಳದರ್ಗೊಂಗಲ ಬಿಜ್ಜಳಿಗೆಯ . . . ಎಲರಿಂ ಕುಳಿರ್ದುದು ಮೆಯ್ ಬನದೊಳೊಯ್ಯನಾ ಅರಮಗನಾ (ಕಶ್ಯಾಮ. ೬೫ ವ್ಯಾಖ್ಯಾ). **ವಿಜ್ಜಣಿಗೆ** : ಸೊರಗುವಗೆಯ ತಿಳಿದಳವಳಿದು ವಿಜ್ಜಣಿಗೆ ಬೀಸಿದುದು ನಿನಗೆ ಮಿಗೆ ಬೇಸಱುದುದಕಟಾ (ಶಕಸ. ೯೯). 'ಬಿಜ್ಜಣ', 'ಬೀಸಣಿಗೆ' ಪರಾ. [< ಸಂ. ವ್ಯಜನಕ. / ತುಳು. ಬಿಜ್ಜಣಿಗೆ]

ಬಿಜ್ಜಣಿಸು (ಕ್ರಿ). (ಬೀಸಣಿಗೆಯಂತೆ) ಅತ್ತಿತ್ತ ಒಲೆದಾಡು,– ತೂಗಾಡು : ಕುಕ್ಕಿದಡುಗುರಲಿಳೆ ಬಿಜ್ಜಣಿಪ ಲಂಘನೆಗುದಯಗಿರಿಗಸ್ತಾದ್ರಿ ದಡದಡಿಪ . . . ಸಿಂಗಣಿಕಗಳನರ್ಬುದವನಿಪಲ ತಾರ ತೋಱಿಸಿದ (ತೊರಾ. ೯-೬-೨೩). [ಬಿಜ್ಜಣ + – ಇಸ್ಸು]

ಬಿಜ್ಜಲ 'ಬಿಜ್ಜಣ' ನೋ.

ಬಿಜ್ಜವಳ 'ಬಿಚ್ಚೆವಳ1' ನೋ.

ಬಿಜ್ಜಳ 'ಬಿಜ್ಜಣ' ನೋ.

ಬಿಜ್ಜಳವಿಕ್ಕು 'ಬಿಜ್ಜಣವಿಕ್ಕು' ನೋ.

ಬಿಜ್ಜಳಿಗೆ 'ಬಿಜ್ಜಣಿಗೆ' ನೋ.

ಬಿಜ್ಜಾದರ, ಬಿಜ್ಜೋದರ, ವಿಜ್ಜಧರ (ನಾ). ೧. ದೇವತೆ; ವಿದ್ಯಾಧರ: ಆ ಡಂಗುರದನಿಗೇಳಿ ಬಿಜ್ಜಾದರನಾಡ ನರೇಂದ್ರನಂದನರು . . . ಗತಿ ಯುದ್ಧವ ಮಾಡುವೆವೆಂದೆಯ್ದುದರು (ಪೇಜಿಸಂ. ೩-೫೫). **ಬಿಜ್ಜೋದರ**: ೧. "ಅಮರ್ದುಣಿಸುಗಳ್ . . . ಬಿಜ್ಜೋದರರ್ . . . (ಬೋಳೆಯರ್) — ಈ ೯ ದೇವರ್ಕಳ ಪೆಸರ್" (ಶಕಾ. ೯೬-೦೯); ವಿದ್ಯಾಧರ–ಬಿಜ್ಜೋದರ (ಕಮದ. ೨೫೯ ಪ್ರಯೋ); ನರರ ಬಿಜ್ಜೋದರರ ಸುರರ ಮುನಿವರರ ಮನದಬಲುರಿ ಪಿರಿದಾಗೆ (ರಾಮಾಶ್ವ. ೦೨-೦೬). **ವಿಜ್ಜಧರ** : ೨. ಒಬ್ಬಾತನ ಹೆಸರು : ಶ್ರೀಮದುಗ್ಗಮರರ ಪ್ರೋ ಇತ್ತರ್ ವಿಜ್ಜಧರರ ದೇಗುಲ (ಎಕ. VI, ತರೀಕೆ. ೩೦-೨; ಸು. 750). [< ಸಂ. ವಿದ್ಯಾಧರ]

ಬಿಜ್ಜಾದರಿ, ಬಿಜ್ಜೋದರಿ (ನಾ). ವಿದ್ಯಾಧರ ಸ್ತ್ರೀ; ಹೆಣ್ಣುದೇವತೆ : ಆದರದಿಂ ಪುಣ್ಯನಿಧಿ ನಿನ್ನ ಕಂಡು ಬಿಜ್ಜಾದರಿಗೀಗಲೆಯ್ದಿದವು (ಶ್ರೀಪಾಶಾ. ೬-೩). **ಬಿಜ್ಜೋದರಿ** : "ಬಿಜ್ಜೋದರಿಯರೆ ವಿದ್ಯಾಧರಿಯರ್" (ಶಕಾ. ೮೯) ; ಮುಗಿಲೆಡೆಯೊಳೆಡೆವಿಡದೆಡೆಯಾಡಿ ಬಱಲ್ದ ಬಿಜ್ಜೋದರಿ ಯರ್ಕಳಱವಟ್ಟಿಗದಾಣಮೊಂಬಂತೆಸೆವೆಳನೀರ್ಗಳಂ ಪೊತ್ತಾಗಸದೆಡೆಗಡರ್ ಚೆಂದೆಂಗಿನ ಮರಂಗಳೊಳಂ (ಶಪ್ಪಾಶಾ. ೩೦); ಇಲ್ಲೆ ಹುಟ್ಟಲುಬಹುದು ಗಂಗೆಯು ಇಲ್ಲೆ ಬಿಜ್ಜೋದರಿಯು (ಪಾಪಶ. ೨೦-೬). [<ಸಂ. ವಿದ್ಯಾಧರೀ]

ಬಿಜ್ಜು1 (ನಾ). (ಅತಿಯಾಗಿ ತಿನ್ನುವ) ಒಂದು ಬಗೆಯ ಪಕ್ಷಿ : ಪಾರಿವ ಕೌಡೆ ಬಿಜ್ಜು ಹೊಂಗಱೆ ಚರಣಾಯುಧಂ ಗಿಡುಗ ಗೀಜಗನಾ ಗಿಳಿ ಕಾಡ ಗುಬ್ಬಿಗಳ್ ಬರುತಿರೆ (ಪಪ್ಪಶಾ. ೬-೨೦೩); ಪಕ್ಷಿಗಳ ಗೂಡು ಗುಂಪುಗಳ ಗುರ್ಯಾಡುವ ಗಿಡುಗ ಲಗಡು ಬಿಜ್ಜುಗಳಂ (ಸೌಗಂಂ. ೫೦-೬).

[ದೇ. ? ಕೋತ. ವಿಜ್]

ಬಿಜ್ಜು₂, ಬಿಚ್ಚು₄ (ನಾ). ೧. ಸಿಡಿಲು : ಕೂಸು ಉಣ್ಣುತ್ತಿರಲಾಗಿ ಆಕಾಶದ ಬಿಜ್ಜು ಹೊಯಿದೆತ್ತಿತ್ತು . . . ಆ ಬಿಜ್ಜು ಹೊಟ್ಟೆಗೆಯ್ದದೆ ಅಪ್ಪ ಅಪ್ಪೆ ಎನ್ನುತ್ತಿದ್ದಿತ್ತು (ಮನುಗುಂ. ಕ. ೨೩೨-೨೯). ೨. (ಆಲಂ) ಹಾನಿ ಕೆಡುಕು: ಎಲ್ಲರಿಗಿಂತಲೂ ಹೆಚ್ಚಾಗಿ ತಾವು ಮೇಲಕ್ಕೆ ಏರಬೇಕೆಂದು ಯತ್ನ ಮಾಡುವಾಗ, ಏನೋ ಒಂದು ಬಿಜ್ಜು ಬಡಿದು ಅವರು ಕೆಳಕ್ಕೆ ಬೀಳುತಾರೆ (ಸುಮನ. ೨೩೬). **ಬಿಚ್ಚು₄** : ೧. ಚಠಾರನೆ ಒಂದು ಸಿಡಿಲು ಬಡಿಯಿತು . . . ಆ ಅಧಿಕಾರಿಯು ತಾನೇ ಆ ಸ್ಥಳಕ್ಕೆ ಬಂದು ನೋಡಿ ಬಿಚ್ಚು ಬಡಿದು ಆ ಹಗರಣವೆಲ್ಲಾ ಆಯಿತೆಂದು ನಿಷ್ಕರ್ಷೆ ಮಾಡಿಕೊಂಡು (ಅದೂಟಿ. ೦೬೯).

[<ಪ್ರಾ. ವಿಜ್ಜು, ವಿಜ್ಜುಆ./ಹಿಂ. ಬಿಜ್ಜು; ಮರಾ. ವೀಜ್; ಪಂಜಾಬಿ. ಬಿಜ್ಜ; ಸಿಂಧಿ. ವಿಜು]

ಬಿಜ್ಜೆ, ವಿದ್ದೆ (ನಾ). ೧. ತಿಳಿವಳಿಕೆ : ಜ್ಞಾನ ; ವಿದ್ವತ್ತು : "ಬಿಜ್ಜೆಯೆಂದು ವಿದ್ಯಂ" (ಕಶಸಾ. ೫೭-೨೪೦); ಉದ್ಯೋಗ—ಉಜ್ಜುಗ; ವಿದ್ಯಾ—ಬಿಜ್ಜೆ (ಕಮಾದ. ೨೫೯ ಪ್ರಯೋ); ಬಿನಯದ ಬಿತ್ತು ಬಿನ್ನಣದ ಪೆರ್ಮೊಳೆ ಬಿಜ್ಜೆಯ ಬೇರ್ . . . ಅನುವಾತುವಣ್ಣ ಬಿಣ್ಗೊನೆಯೆನೆ ಚಿಕ್ಕದೇವ ನೆಸೆದಂ (ಅಪ್ರತಿ. ೦೫-೨೦). ೨. ಕಲಿಕೆ; ವಿದ್ಯೆ; ಶಿಕ್ಷಣ: ಸುಗಜಾಶ್ವರೋಹಣ ಭರವಿರಿಂಚಿಯೆನಿಪ್ಪ ಬಿಜ್ಜೆಯ ಕಲಿತನಾ ಕುವರ (ಸಾಳ್ವಭಾ. ೪-೫); ಕಲಿತ ಬಿಜ್ಜೆಯ ಬಲ್ಲರಿಗೆ ಕೇಳಿಪುದೈಸೆ (ಹದಿಬಿ. ೦-೨೯). ೩. ಜಾಣ್ಮೆ; ಪ್ರೌಢಿಮೆ ; ಚಾತುರ್ಯ ; ಕೌಶಲ : ಅಲರುವಿಲ್ಲನ ಬಿಜ್ಜೆಯೆಂಬಗ್ಗಲದ ಬಿನ್ನಣಿ ಸವೆದ ನರಪುತ್ಥಳಿಗಳಿನಿಸಿದರಾಂತು ನಿಂದಖಿಳಾವನೀಶ್ವರರು (ಸಾಳ್ವಭಾ. ೩೦-೬೩); ಬಿಗುರ ಬೀರಿದ ಬೀರಮೊ ? ಬಲ್ಲ ಬಿಜ್ಜೆಯೊ (ಗಿಳಿಮಂ. ೫೨-೬). ೪. [ಜೈನ] ದೇಹವನ್ನು ಮಾರ್ಪಾಟುಗೊಳಿಸುವ ಶಕ್ತಿ ; ವೈಕುರ್ವಣವಿದ್ಯೆ : ದೇವಕೋಟಿಗಳ ಬಿಜ್ಜೆಗಳೊಳ್ ತೊಡರ್ದೇಕೆ ಪೋಪನೀ ದೊರೆಯನನಾಳ್ದನಂ ಪಡೆವುಪಾಯಮದಾವುದೊ ಜನ್ಮ ಜನ್ಮದೊಳ್ (ಅದಿಪು. ೯-೭೫) ; ನಾಲ್ಕುಂ ತೆಱದ ಪುಸಿವಡೆಯಂ ಬಿಜ್ಜೆಯಿಂ ಪುಟ್ಟಿಸಿ (ಕಬ್ಬಿಗಾ. ೦೯೬). ವಿದ್ದೆ : ೧. "ವಿದ್ದೆ—ವಿದ್ಯಾ" (ತದ್ಭಕೋ. ೪೦); ಓದದೋಪಱಿಯದ ವಿದ್ದೆ ಸಲ್ಲದ ಚದುರ್ ನೆಱೆ ಕಲ್ಲದ ಕಲ್ಪಿ (ಪಂಪಭಾ. ೪-೯೫); ಶ್ರೀಗೆ ವಿಜಯಕ್ಕೆ ವಿದ್ದೆಗೆ ಚಾಗಕ್ಕದಟಿಂಗೆ ಜಸಕೆ ಪೆಂಪಿಂಗಿನಿತರ್ಕ್ಕಾಗರಂ (ಎಕ. II, ೦೩೩-೭೪; 982) ; ಅವರವರುಗಳ ವಿದ್ದೆಯ ನೋಡಿ ಮೆಚ್ಚಿ ಸದ್ವಿಪರದಿಂದುಡುಗೊಱೆಯಿತ್ತು (ಪೋಹತ. ೦೬-೦೭). ೨. ಗುರುಗಳೆನಗಂ ಭಾರದ್ವಾಜಂಗದೊರ್ವರೆ ವಿದ್ದೆಯೊಳ್ ಪುರುಡು ಪಿರಿದುಂಟು (ಪಂಪಭಾ. ೦೨-೦೯); ತದಂಬಿಕೆ ಲಸದ್ವೈರಾಗ್ಯ ಸಂಯುಕ್ತೆ ಸಂಜಾತಾನಂದದಿನಿತ್ತು ವಿದ್ದೆಗಳನಾ ಭೀಷ್ಮಂಗೆ (ಪೇಮಿಪು. ೩-೨೨). [<ಪ್ರಾ. ವಿಜ್ಜಾ./ಸಂ. ವಿದ್ಯಾ]

ಬಿಜ್ಜೆಗ (ನಾ). ೧. ವಿದ್ವಾಂಸ ; ಪಂಡಿತ : 'ಬೇದಬಿಜ್ಜೆಗ' ಪರಾ. ೨. ಚತುರ ; ಕುಶಲ ; ಜಾಣ : ಸರಭಸದಿಂದೆರಟ್ಟಿಲದ ಬಿಲ್ವಡೆಯೊಳ್ ಸಲೆ ಬಿಲ್ಲ ಬಿಜ್ಜೆಗರ್ ಸುರರನಡುರ್ತುಕೊಳ್ವ . . . ಬೇಗಮದೆಂತುಟೊ (ಶಾಂತೀಶ್ವ. ೬-೬೬). [ಬಿಜ್ಜೆ + —ಗ₂]

ಬಿಜ್ಜೆಗಲ್, ಬಿಜ್ಜೆಗಲಿ (ಕ್ರಿ). ವಿದ್ಯೆಯನ್ನು ಕಲಿ ; ಶಿಕ್ಷಣವನ್ನು ಹೊಂದು : ಆವಗಂ ಬಿಜ್ಜೆಗಲ್ವುದುಂ ಬಿನಯಂದೋರ್ಪುದುಂ . . . ಜಯಮಂ ಸಂಪಾದಿಪುದುಂ ಮೊದಲಾದೊಳ್ಗೆಯ್ತುದೊಳೆ ಪೊತ್ತುಗಳೆಯುತ್ತೆ (ಪಕಿ. ೩-೦೪). **ಬಿಜ್ಜೆಗಲಿ** : ಪಿರಿಯರ ಮಗಳೆಂದು ಬಿಜ್ಜೆಗಲಿತೆನೆಂದು . . . ಬೆಱೆಯದನುಸರಿಸುವುದಾತ್ಮವಲ್ಲಭನ (ಹದಿಬಿ. ೩-೩೦).

[ಬಿಜ್ಜೆ + ಕಲ್₁]

ಬಿಜ್ಜೆಗಲಿ 'ಬಿಜ್ಜೆಗಲ್' ನೋ.

ಬಿಜ್ಜೆಗಲಿಸು (ಕ್ರಿ). ಶಿಕ್ಷಣ ಕೊಡು ; ವಿದ್ಯೆಯನ್ನು ಹೇಳಿ ಕೊಡು : ನಿನಗೆ ಬಿಜ್ಜೆಗಲಿಸಿದ ಬೊಜ್ಜುಹಾರುವ, ಆ ಗಾಲವ, ಹಾಳಾಗಿ ಹೋಗಲಿ ! (ತಂಪ್ರಸ. ೯೦-೦೯). [ಬಿಜ್ಜೆಗಲ್ + — ಇಸು₃]

ಬಿಜ್ಜೆಗುಱುಹು (ನಾ). ವಿದ್ಯೆಯ ಗುರುತು.— ಚಿಹ್ನೆ : ಗುತ್ತಿಗೆವಿಡಿದಂತೆ ನೆಱೆ ಸಾಧಿಸಿದಱುವತ್ತುನಾಲುಕು ಬಿಜ್ಜೆಗುಱುಹ ವೃತ್ತಕುಚಾನ್ವಿತೆಯರ ಪರಿಕೆಯ ನೋಡು ಚಿತ್ತಯಿಸೆಂವರಂಗಜಗೆ (ಪೋಹತ. ೧೬-೦೦).

[ಬಿಜ್ಜೆ + ಕುಱುಹು (<ಕುಱಿಪು)]

ಬಿಜ್ಜೆವರು (ನಾ). ಒಂದು ಊರಿನ ಹೆಸರು : ಬನ್ದಗಾವುಣ್ಡನುಂ ಕೊಳ್ಳಮ್ಮಗಾವುಣ್ಡನುಂ ಗಾವುಣ್ಡ ಗಣ್ಡಯ್ಯನುಂ ಬಿಜ್ಜೆವರುಮಯಿನ್ದ ಮಯ್ಯನೆಱೆಯಮ್ಮನುಂ (ಎಕ. XI, ಹೊಳಲ್ಕೆ. ೩೦-೦೧; 964).

[ಇದು 'ಬಿಜ್ಜೆವರ' ಎಂದಿರಬಹುದೆ ?]

ಬಿಜ್ಜೆವಳ, ಬಿಜ್ಜವಳ (ನಾ). ೧. ವಿದ್ಯಾವಂತ : ಪಂಡಿತ : ವಿದ್ವಾಂಸ : ಸರಸತಿಯಡಿದಳಿರ್ಗೆ ತಲೆದುಡುಗೆಯೆನೆ ಪೆಸರ್ವಡೆವ ಬಿಜ್ಜೆವಳನಿಂ ಸಮೆದ ಕಾವನ ಗೆಲ್ಲಂ ಮೆಱೆಯುತಿರ್ಪುದು (ಕಬ್ಬಿಗಾ. ೩೪೯); ಪೊಱಗಣ ತೋಪುಗಳೊಳಂ ಬಿಜ್ಜೆವಳರ ನೆರವಿಗಳೊಳಂ . . . ತಮ್ಮ ಚಾರರಂ ನೆಲೆಗೊಳಿಸಿ (ಭಾರಶಾಂ. ೪೩೫-೭೦); ನಾನಾ ನಾಡುಗಳಿಂದೆ ಬಿಜ್ಜೆವಳರುಂ ಕೈಗೈಯ್ತ ದೊಳ್ಜಾಣರುಂ ತೇನಂತೇನಮೆ ಬಂದು ಬೀಡುಗೊಳುತಂ (ಮೈಸೂಮೆ. ೦-೩೯). ೨. ವಿದ್ಯೆಯ ಅಧಿದೇವತೆ ; ಗಣಪತಿ : "ಕರಿಮೊಗಂ, ಇಲಿದೇರಂ, ಎಡರ್ಗೇಡಿ, ಬಿಜ್ಜೆವಳಂ . . . ತಂದೆಯ ತಂದೆಯಿಲ್ಲದವಂ ಈ ೭ ವಿನಾಯಕಂಗೆ ಪೆಸರ್" (ಕಶಸಾ. ೪೭-೪). ಬಿಜ್ಜವಳ : ೨. "ಬಿಂಕಣ ಗಿವಿಯನೆನೆ ಬಿಜ್ಜವಳನೆನಲ್ ವಿಘ್ನೇಶಗಭಿಧಾನವು" (ಕಶರ. ೬೦).

[ಬಿಜ್ಜೆ + —ವಳ]

ಬಿಜ್ಜೆವಳ್ತಿ (ನಾ). ವಿದ್ಯಾವತಿ ; ಪಂಡಿತೆ : ಕಿರಿದು ಪೊಳ್ತೀ ನೆಲದೊಳಾಂ ಬಿಜ್ಜೆವಳ್ತಿಯರೆನಿಸಿದುದರ್ಕೆ . . . ಮೆಚ್ಚಂ ಪಡೆಯದಿರ್ದೊಡೆಮಗೆ ಪೆಸರ್ವಾಸಿಯಿಲ್ಲಂ (ಮರಾಪ. ೬-೦೯).

[ಬಿಜ್ಜೆವಳ + < — ಇತಿ₁ (< — ಇತ್ತಿ)]

ಬಿಜ್ಜೆವೆಣ್ಣು (ನಾ). ವಿದ್ಯೆಯ ಅಧಿದೇವತೆ ; ಸರಸ್ವತಿ : "ಬಾಣಿ ಬಿಜ್ಜೆವೆಣ್ಣುಂ ಬಾಸೆವೆಣ್ಣು ಸರಸತಿಯುಮೆನೆ ವಾಣಿಯಕ್ಕುಂ" (ಕಬ್ಬಿಗಾ. ೯). [ಬಿಜ್ಜೆ + ಪೆಣ್ಣು (<ಪೆಣ್)]

ಬಿಜ್ಜೋದರ 'ಬಿಜ್ಜಾದರ' ನೋ.

ಬಿಜ್ಜೋದರಿ 'ಬಿಜ್ಜಾದರಿ' ನೋ.

ಬಿರಿಂಕ್ 'ಬಿಜಿಕ್' ನೋ.

ಬಿಟಿ 'ಬಿಟ್ಟಿ₁' ನೋ.

ಬಿಟೆ 'ಬಿಟ್ಟಿ₁' ನೋ.

ಬಿಟೋಜ (ನಾ). ಒಬ್ಬಾತನ ಹೆಸರು : ಕಲಿವಿಟ್ಟಯ್ಯನ ಲಿಖಿತ ಬಿಟೋಜನ ಸಿಲಾತರ್ಮ್ಮ (ಸ್ಕೃಆಂ. ೦೯೨೯, ೭೬-೧೫; 964).

[<ಬಿಟ್ಟು₂ + ಓಜ₁ (<ಒಪ್ಪು)]

ಬಿಟ್ಟ 'ಬಿಡು₁' ಪರಾ.

ಬಿಟ್ಟಪು (ನಾ). ಬಿಗಿ; ದಾರ್ಢ್ಯ ; ಅಡವು (?) : ಸಱಿಗೊಂಡ ಪೆರ್ಬಸಿಱ್ ಬಿಟ್ಟಪುಗೆಟ್ಟ ತೋಳ್ ತೊಡೆ ತೆರಳ್ದ ಮೊಗಂ ನೆಠೆ ಮತ್ತೆ ಮಾಣಳೀ ಬಟ್ಟೆಯ ಚಿಕ್ಕಣಿಕ್ಕೆ ಪೊಸ ಬರ್ಬರ ಸೂಳೆಯರಾಳಿಗೊಂಬುದಂ (ಸೂಕ್ತಿಸು. ೬-೩೯೪). [?]

ಬಿಟ್ಟರಸ (ನಾ). ಒಬ್ಬಾತನ ಹೆಸರು : ಸಿಡಿಯನೂರ ಗಾಮಿಗಗೆಯ್ತ ಮಿದೊ ಊರ ಬಿಟ್ಟರ[ಸ] ರ[ಸ]ವಟಿಗೆಯ ಗಂಗರ ಕಾಳೆ × × × (ಸೌಇಇ. XX, ೦೦-೪; 8 ಪದು ಕತ). [ಬಿಟ್ಟು₂ + ಅರಸ₁]

ಬಿಟ್ಟಿ₁, ಬಿಟಿ, ಬಿಟೆ, ಬಿಟ್ಟೆ (ನಾ). ೧. ಸಂಬಳವಿಲ್ಲದೆ ಮಾಡುವ ಕೆಲಸ ; ಪುಕ್ಕಟೆ ಕೆಲಸ : ನಾಡ ಗಾದೆಯ ಬಿಟ್ಟಿಯಿಂದ ಕಟಕವ ಕಂಡೆನೆಂಬು

ದೆನಗಾಯ್ತೆನುತ್ತೆಱಗಿದಂ ಭೂನಾಥನು (ಹತಕಾ. ೩-೮೪); ಪಂಪಾಕ್ಷೇತ್ರಮಂ ಕಾಣ್ಬುದನಂತತಪಃಫಲಮಿಲ್ಲದೆ ಸಮನಿಸದು ನೀಂ ಬಿಟ್ಟಿಯಂ ಬಂದು ಕಟಕಮಂ ಕಂಡ ತೆಱನಾಯ್ತು (ಉರ್ಕಟ. ೩-೩೨ ವ); ಬೆಸಸುತಂ ತವೆ ಬಿಟ್ಟಿಯಂ ಮಾಡಿಸಿಕೊಳುತ ಬಡಕೆಲಸವಂ ಸಂತಸದಿ ಮಾಡಿಸೆ ಮಾಡಿ ಬದುಕುವೆವು (ಬಸಪು. ೨೩-೦೮). 'ಮೂವಿಟ್ಟಿ' ಪರಾ. ೨. ಕೆಲಸ; ಕಾರ್ಯ; ವೃತ್ತಿ : ಅಷ್ಟವಿಧಾರ್ಚನೆ ಷೋಡಶೋಪಚಾರವನು ಅರಸಱಿಯದ ಬಿಟ್ಟಿಯ ಮಾಡುವೆನು (ಬಸವ. ೩೭೯); ಎನ್ನ ಮಾಟ್ಟಿ ಬದಗೇಂ ಪೆಱತಾದುದೆ ಬೇಡ ಕೆಮ್ಮಗಂ ಮನೆಗುಸುಟೇಕೆ ತನ್ನ ಸುಖಕಲ್ಲದೆ ಕೇಳಿಕೆಯಾರ ಬಿಟ್ಟಿಯೋ (ಲೀಲಾವ. ೨-೦೧೪); ಕಾಯಕ ಯಾವುದಾದರೇನು ? ಶಿವನ ಬಿಟ್ಟಿಯೆಂದು ಮಾಡುವ ಮಾಟವೆಲ್ಲ ಕಾಯಕ (ತುಂಗಭ. ೬). ೩. ಪುಕ್ಕಟೆ ; ಉಚಿತ : ಸಿಟ್ಟು ಸೆಡವಿಲ್ಲದೆಯೆ ಬಿಟ್ಟಿ ದುಡಿದವ ಕೋಣ (ಅರಳು. ೩೪೭-೬) ; ಈ ಮನೆ ೧೮,೦೦೦ ಕ್ಕೆ ಮುಗಿದರೆ ಬಿಟ್ಟಿ ಆದ ಹಾಗೆ (ಯೋರಪು. ೨೯) ; ಚಟ್ಟಿದಿನ ಬಿಟ್ಟಿಗೂ ಹೋಗಬೇಡ (ಗಾಡೆ). ೪. ವ್ಯರ್ಥವಾದುದು; ನಿರುಪಯುಕ್ತವಾದುದು : 'ಬಿಟ್ಟಿವೇಱ್' ಪರಾ. ೫. ಒಂದು ಬಗೆಯ ಸುಂಕ: ನೀರುಣಿಸುಂಕಂ ಬಿಟ್ಟಿ ಮೊದಲಾಗಿ ಎಲ್ಲಮಂ ಬಿಟ್ಟೋಮ್ (ಸೌಇಇ. XI-i, ೦೩-೩; 873) ; ನಕರಕ್ಕಂ ಮಹಾಜನಕ್ಕಂ ಗಾವುಣ್ಡಗಳ್ಗಂ ಪಞ್ಚಮಟಸ್ಥಾನಕ್ಕಂ ಬಿಟ್ಟಿಯಿಲ್ಲ (ಸೌಇಇ. IX-i, ೭೭-೩೩ ; 992). ಬಿಟೆ : ೫. ಮನೆವಣ ಸೊಲಗೆ ಬಿಟಿಯಿನ್ನಿಷ್ಟು ಸರ್ವ್ವಮಾನ್ಯವಾಗಿ ಸ್ವರುಚಿಯಿನ್ದ ಕೊಟ್ಟರು (ಎಕ. 1, ೩೦-೮; ಸು. 13ಪೆಯ ಶತ) ; ಹಳದು ಹೊಸ್ತು ಗ್ರಾಮ ವೆಚ ಬಿಟಿ ಬಿರಾಡ ಸೊಲ್ಲಗ ಆಉದೂಯಿಲ್ಲ (ಎಕ. X, ಮುಳಬಾ. ೦೭೨-೦೩; 1496). ಬಿಟೆ : ೫. ಏರುಗಾಣಿಕೆ ಕಾಣಿಕೆ . . . ಬಿಟೆ ಮೊದಲಾಗಿ ಎಲ್ಲವನು ಸರ್ವಮಾನ್ಯವಾಗಿ ಬಿಟ್ಟೆಉ (ಎಕ. IX, ಹೊಸಕೋ. ೪-೧೧; 1581). ಬಿಟ್ಟೆ : ೫. ಜೋಲಕಾರುಣ್ಯ ಜೆಡೆದೆರ್ರೆ ೯ ಪ ೩ ೧೧ ಬಿಟ್ಟೆಯ ಭಂ ೧ಕ್ಕ೦ ಗ ೨ ಎತ್ತಿಲು ಪೊತ್ತರ ಪ ೫ (ಎಕ. XVI, ಪಕ್ಕಪಾ. ೭೧-೨೦; 1330).

ಬಿಟ್ಟಿಗಂಟು = ಯಾವ ಬಗೆಯ ಶ್ರಮವೂ ಇಲ್ಲದೆ ದೊರೆತ ಹಣ; ಪುಕ್ಕಟೆಯಾಗಿ ಲಭ್ಯವಾದ ದುಡ್ಡು : ಬಿಟ್ಟಿಗಂಟು ಸಿಕ್ಕಿದರೆ ತೆಗೆದು ಕೊಳ್ಳುವುದು ಸರಿಯೇ ? (ಕೂಡಿ). ಬಿಟ್ಟಿಬೇಗಾರಿ = ಯಾವ ಪ್ರತಿಫಲವೂ ಇಲ್ಲದೆ, ಪುಕ್ಕಟೆಯಾಗಿ ಮಾಡುವ ಕೆಲಸ : ಬಲವಂತದಿಂದ ಬಿಟ್ಟಿಬೇಗಾರಿಯಲ್ಲಿ ಹೊಲಗದ್ದೆಗಳ ಮಾಡಿಸಿಕೊಂಡು ಯಿದ್ದಾಗ್ಯೂ (ಮಹಾಪಂ. II, ೩೯) ; ಹೆಣ್ಣುಗಂಡು ಆದಿಯಾಗಿ ಇವರ ಅರಮನೆಯಲ್ಲಿ ಬಿಟ್ಟೀಬೇಗಾರಿ ಚಾಕರಿಯನ್ನು ಮಾಡಿ ಮಾಡಿ ಮುಪ್ಪಾಗುತ್ತಾ ಇದ್ದರು (ಸುಮಚ. ೦); ಧನಿಯರ ಬೇಸಾಯ ಬಿಟ್ಟಿಬೇಗಾರಿ ಇದ್ದದ್ದೇ (ಬಾಳಿಗಿ. ೩೩). ಬಿಟ್ಟಿಯ ಮಾನಿಸ = ಹಣ ಪಡೆಯದೆ ಕೆಲಸಮಾಡುವವನು ; ಬಿಟ್ಟಿಯಾಳು : ಪ್ರಕಾಶಾಪ್ರಕಾಶರೂಪಂಗಳಾದ ತೇರಾನೆಕುದುರೆಕಾಲಾಳ್ಗಳುಂ ಬಿಟ್ಟಿಯ ಮಾನಿಸರುಂ ಗೂಢಚರರುಂ (ಶಾರಶಾಂ. ೩೭೬-೩೯). ಬಿಟ್ಟಿಹಣ = ಬಿಟ್ಟಿಗಂಟು : ಸುಲಭವಾಗಿ ಸಂಪಾದಿಸಿದ ಬಿಟ್ಟಿಹಣದ ಮಾಲೀಕತ್ವವನ್ನು ಸೂಚಿಸುವ ದುಂದುವೈಭವ ಆ ವಾತಾವರಣದಲ್ಲಿ ತುಂಬಿ ತುಳುಕುತ್ತಿತ್ತು (ಪುನರು. ೨೦೦). [< ಪ್ರಾ. ವಿಟ್ಠಿ / ಸಂ. ವಿಷ್ಟಿ]

ಬಿಟ್ಟಿ2 'ಬಿಟ್ಟು2' ನೋ.

ಬಿಟ್ಟಿಕೂಳು 'ಬಿಟ್ಟಿಗೂಳು' ನೋ.

ಬಿಟ್ಟಿಕೆಲಸ 'ಬಿಟ್ಟಿಗೆಲಸ' ನೋ.

ಬಿಟ್ಟಿಗ (ನಾ). ೧. ಒಬ್ಬಾತನ ಹೆಸರು : ನರಸಿಂಘಅಮ್ಮ × × × ಳಥುಬ್ಗಮರಾ ಬಿಟ್ಟಿಗ ಗೋನಾಥನಾ[ಗುಟೆ]ಪೋತ ಬಮ್ಮ (ಸೌಇಇ. XI-i, ೦೩-೦೬; 869); ಬಿಟ್ಟಿಗ ನಟ್ಗುವುಣ್ಡುಗೆಯ್ಯೆ (ಎಕ. VIII, ಸೊರಬ. ೨೦೨-೩; 955). ೨. ಹೊಯ್ಸಳರ ಒಬ್ಬ ಪ್ರಸಿದ್ಧರಾಜನ ಹೆಸರು ; ವಿಷ್ಣುವರ್ಧನ : ವೀರಾರಿನೃಪಾಳರಂ ಬರಿಸಿದಂ ಮೂವಿಟ್ಟಗಂ ಬಿಟ್ಟಿಗಂ (ಎಕ. VIII (R), ಹಾಸನ. ೦೩೮-೨೩ ; ?).

[ಬಿಟ್ಟಿ2 (< ಬಿಟ್ಟು2) + – ಗ2]

ಬಿಟ್ಟಿಗೂಳು, ಬಿಟ್ಟಿಕೂಳು (ನಾ). ಪುಕ್ಕಟೆಯಾಗಿ ಲಭ್ಯವಾಗುವ ಆಹಾರ : ಅರಮನೆಯ ಬಿಟ್ಟಿಗೂಳಿಂದ ಕೊಬ್ಬಿ ಉಬ್ಬಿದ ತನ್ನ ಊಳಿಗದವರಿಗೆ ಸಶ್ರಮದ ಕಾರ್ಯಕಲಾಪಗಳು ಸ್ವಲ್ಪಮಟ್ಟಿಗಾದರೂ ಅಳವಡಿಕೆಯಾಗಿ (ಬೆಟ್ಟಲಿ. ೧೬೯-೩). ಬಿಟ್ಟಿಕೂಳು : ಅಷ್ಟೈಶ್ವರ್ಯವು ಮೃಷ್ಟಾನ್ನವಿರುತಿರೆ ಬಿಟ್ಟಿಕೂಳನು ತಿನ್ನಲ್ಯಾಕಯ್ಯ (ಜಾನಗೀ. ೩೮); ತಮ್ಮ ಮನೆಯಲ್ಲಿ ಬಿಟ್ಟಿಕೂಳು ಉಣ್ಣಬೇಕು, ಹುಡುಗನಿಗೆ ಪಾಠ ಹೇಳಿಕೊಂಡಿರಲಿ ಎಂಬ ಭಾವನೆಯೂ ಇರಲಿಲ್ಲ (ಮರಳಿ. ೪೨).

[ಬಿಟ್ಟಿ1 + ಕೂಳು2 (< ಕೂಱ್1)]

ಬಿಟ್ಟಿಗೆಯ್, ಬಿಟ್ಟಿಗೈ, ಬಿಟ್ಟೆಗೆಯ್ (ಕ್ರಿ). ಪ್ರತಿಫಲವಿಲ್ಲದೆ ಸೇವೆ ಮಾಡು; ಬಿಟ್ಟಿಯಾದ ಕೆಲಸಮಾಡು : ಉಜ್ವಲವೀರಶೈವಭಕ್ತಂ ಬಿಟ್ಟಿಗೆಯ್ಯದಿರೆ ತಳುವದಾತನ ಸೊನ್ನಲಿಗೆಯಿಂದೆ ಪೋಗೆಂದು ಸಿದ್ಧರಾಮಯ್ಯನುಡಿಯೆ (ಶಾಸೋಪು. ೦೦-೨೯). ಬಿಟ್ಟಿಗೈ : ಅಷ್ಟದಿಕ್ಪಾಲಕರು ದನುಜಗೆ ಬಿಟ್ಟಿಗೈವುದ ಕಂಡನಂಗದ (ಕೌಶಿರಾ. ೧೮-೧೩). ಬಿಟ್ಟೆಗೆಯ್ : ಅನ್ತು ಪರಮಂಡಲಿಕರೆಲ್ಲ ತಂತಂಮ್ಮ ವಸ್ತುವಾಹನಂಗಳಂ ಕೊಟ್ಟು ಕಂದು × × ಬಿಟ್ಟೆಗೆಯ್ಯುತ್ತಮಿರೆ (ಸೌಇಇ. XX, ೪೯-೨೬; 1076). [ಬಿಟ್ಟಿ1 + ಕೆಯ್1]

ಬಿಟ್ಟಿಗೆಯ್ಮೆ (ನಾ). ಪ್ರತಿಫಲವಿಲ್ಲದ ಊಳಿಗ ; ಪುಕ್ಕಟೆ ಕೆಲಸ : ಆವಗಂ ಜಗಮನೊಗಯಿಪ ಬಿಟ್ಟಿಗೆಯ್ಮೆ ಇವಳೊಲ್ದು ನಿಟ್ಟಿಪ ದಿಟ್ಟಿಯಿಂ ಸಫಲಮೊಂದೆನಿಸಿರ್ಕುಂ (ಪಕಮ. ೦೧೪-೦೮).

[ಬಿಟ್ಟಿ1 + ಗೆಯ್ಮೆ (< ಕೈಮ್1)]

ಬಿಟ್ಟಿಗೆಲಸ, ಬಿಟ್ಟಿಕೆಲಸ (ನಾ). = ಬಿಟ್ಟಿಗೆಯ್ಮೆ : ಹಿಂದೆ ನಿನ್ನೊಳು ಪುಟ್ಟಿದುದು ಮೊದಲಿಂದುತನಕೊಂದಡಕೆ ಹಂಗಿನೊಳೊಂದೆನುಸಿಕನೆ ನಿನ್ನ ನಾನೋಲೈಸಿದೆನು ಹೊದ್ದಿ ಕುಂದದಲಸದೆ ಬಿಟ್ಟಿಗೆಲಸಕೆ ಸಂದು ಮಾಡುತ್ತಿರ್ದಡೆ (ಬಸಪು. ೬೦-೩೭). ಬಿಟ್ಟಿಕೆಲಸ : ಸಂಸ್ಥಾನದಲ್ಲಿ ಬಿಟ್ಟಿಕೆಲಸ ಮಾಡಿದರೂ ಅದಕ್ಕೆ ಸರಿಯಾದ ರಿಯಾಯತಿಯು ದೊರಕುತ್ತಿದ್ದಿತು (ಝಾರಾಡೆ. ೦೬೦). [ಬಿಟ್ಟಿ1 + ಕೆಲಸ]

ಬಿಟ್ಟಿಗೈ 'ಬಿಟ್ಟಿಗೆಯ್' ನೋ.

ಬಿಟ್ಟಿದೇವ (ನಾ). ಹೊಯ್ಸಳರ ಒಬ್ಬ ಪ್ರಸಿದ್ಧರಾಜನ ಹೆಸರು : ವಿಷ್ಣುವರ್ಧನ : ಸಖವರ್ಷ ೧೦೧೭ ಯುವಸಂವಚ್ಛರದ ಸೋಮವಾರ ಸಂಕ್ರಾಂತಿಯಲು ಬಿಟ್ಟಿದೇವ . . . ಬ್ರಹ್ಮೇಸ್ವರದೇವರ್ಗ್ಗೆ ಬಿಟ್ಟ ಗದ್ದೆ ಕಣ್ಡುಗ ೧೫ (ಎಕ. VI (R), ಕೃಷ್ಣರಾ. ೩೭-೭; 1095); ಮಹಾಮಣ್ಡಳೇಶ್ವರ ಪೊಯ್ಯಳ ಬಿಟ್ಟಿದೇವನ ದಣ್ಣಾಯಕ (ಎಕ. VII, ಶಿವಮೊ. ೦೨-೩ ; 1120).

[ಬಿಟ್ಟಿ2 (<ಬಿಟ್ಟು2) + ದೇವ]

ಬಿಟ್ಟಿಬೆಸ 'ಬಿಟ್ಟಿವೆಸ' ನೋ.

ಬಿಟ್ಟಿಬೆಸಕೆಯ್ 'ಬಿಟ್ಟಿವೆಸಗೆಯ್' ನೋ.

ಬಿಟ್ಟಿಬೆಸನ 'ಬಿಟ್ಟಿವೆಸ' ನೋ.

ಬಿಟ್ಟಿಯಾಳ್, ಬಿಟ್ಟಿಯಾಳು (ನಾ). ಸಂಬಳವಿಲ್ಲದೆ ದುಡಿಯುವವನು; ಪುಕ್ಕಟೆಯಾಗಿ ಕೆಲಸ ಮಾಡುವವನು : ಓ! ಬಿಟ್ಟಿಯಾಳ್ಗಳಂ ಬಿಟ್ಟಂತಾಗದೆ! ಎಂತೀತಂಗಳ್ ಪೋಗಲಾರ್ಪರ್ (ರಾಮಾಶ್ವ. ೧೦೬-೨೩). ಬಿಟ್ಟಿಯಾಳು : ಬಿಟ್ಟಿಯಾಳು ಆದರೆ ಹಟ್ಟಿ ಕಟ್ಟಬಾರದೇ ? (ಗಾಡೆ).

[ಬಿಟ್ಟಿ1 + ಆಳ್3]

ಬಿಟ್ಟಿಯಾಳು 'ಬಿಟ್ಟಿಯಾಳ್' ನೋ.

ಬಿಟ್ಟಿಯೆಸಗು (ಕ್ರಿ). ಪ್ರತಿಫಲವಿಲ್ಲದೆ ದುಡಿ,-ಕೆಲಸ ಮಾಡು: ತವಿವಾಲಿಂ ಘೃತದಿಂ ಕರುಳೆನಸುಂ ಬಾಲ್ಯದೊಳೆ ನಾಂದುದಿಲ್ಲದಱಿಂ ತಾನೆನಿತು

ತಿರುದುಂಡೊಡಂ ಪಸಿವನುಗೆಡದಿರೆ ಬಸಿರ್ಗೆ ಬಿಟ್ಟಯೆಸಗಿದನಲ್ತೆ (ವೃಷಭ. ೯-೦೦೬). [ಬಿಟ್ಟ$_1$ + ಎಸಗು$_1$]

ಬಿಟ್ಟವಿಡಿ, ಬಿಟ್ಟಹಿಡಿ (ಕ್ರಿ). ಸಂಭಾವನೆಯಿಲ್ಲದೆ ಒತ್ತಾಯದಿಂದ ಕೆಲಸ ಮಾಡಿಸು ; ಪುಕ್ಕಟೆಯಾಗಿ ದುಡಿಸಿಕೊಳ್ಳು: ಭೂತದಯಾರಹಿತ ನೀ ಬಿಟ್ಟವಿಡಿವುದು ಯೋಗ್ಯವಲ್ಲ (ಶಿಶುಗ. ೩-೭-೩೦). **ಬಿಟ್ಟಹಿಡಿ** : ನಮ್ಮನ್ನು ಬಿಟ್ಟಹಿಡಿದು ನಮ್ಮ ಕೈಲಿ ಈ ತೋಟದಲ್ಲೆಲ್ಲ ಅಗತೆ ಮಾಡಿಸುತ್ತಾರಂತೆ (ಪುಟ್ಟರ. ೨೦). [ಬಿಟ್ಟ$_1$ + ಹಿಡಿ$_1$]

ಬಿಟ್ಟವೆಸ, ಬಿಟ್ಟಬೆಸ. ಬಿಟ್ಟಬೆಸನ (ನಾ). = ಬಿಟ್ಟಗೆಯ್ಮೆ : ಪೊಲೆಯರುಂ ಮಾದಿಗರುಂ ಕೀಲಿಗರುಮೆನಿಸಿ ಬಿಟ್ಟವೆಸಂಗಳಂ ಮಾಡಿ (ಪಜಾಕ. ೨೬೩). **ಬಿಟ್ಟಬೆಸ** : ಗಂಗಸಿದ್ದಾಯ ಹೊಱಗಾಗಿ ಆಯ ದಾಯ ಬಿಟ್ಟಬೆಸ ಪಡುವಗೇರಿಗೆ ಪರಿಹಾರವಂ ಬಿಟ್ಟ (ಎಕ. I, ೮೭-೦೩ ; 1175); ಬಿಟ್ಟಬೆಸ . . . ಇದು ದೈಹಿಕಶ್ರಮರೂಪವಾದ ತೆರಿಗೆ (ಶಾಶಾ. ೪೦೦). **ಬಿಟ್ಟಬೆಸನ** : ಎಲ್ಲ ಮಾನ್ಯಂಗಳಂ ಭಕ್ತರ್ಗೆ ಸಾರ್ಚುತಂ ಬಿಟ್ಟಬೆಸನಂ ಶಿವನ ಭಕ್ತರ್ಗೆ ಮಾಡುತಂ (ಇಳರ. ದೇ. ೪೯-೦೩). [ಬಿಟ್ಟ$_1$ + ಬೆಸ$_1$]

ಬಿಟ್ಟವೆಸಗೆಯ್, ಬಿಟ್ಟಬೆಸಕೆಯ್ (ಕ್ರಿ). ಸಂಭಾವನೆಯಿಲ್ಲದೆ ದುಡಿ ; ಪುಕ್ಕಟೆಕೆಲಸ ಮಾಡು : ಜೀಯೆನುತನುದಿನವೆಯ್ದೆ ಬಿಟ್ಟವೆಸಗೆಯ್ಯದ ಜೆಟ್ಟಗರಿಲ್ಲ (ಎಕ. XI. ರಾಪಂ. ೮೫-೬ ; 1143). **ಬಿಟ್ಟಬೆಸಕೆಯ್** : ಘೋಷಾಕರಸಂಗ್ರಹಾಕರಗೋಪ್ರಜಂಗಳುಮಾನವನಾಳ್ವ ತೆಱಗೊಳ್ವ ಬಿಟ್ಟಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮನಿಂತು ಮಾಡಿ (ಅದಿಪು. ೬-೬೩ ವ). [ಬಿಟ್ಟವೆಸ + ಕೆಯ್$_1$]

ಬಿಟ್ಟವೇಱ್, ಬಿಟ್ಟಹೇಳು (ಕ್ರಿ). ೧. ವ್ಯರ್ಥವಾದುದನ್ನು ಹೇಳು : ಕೆಲಸಕ್ಕೆ ಬಾರದುದನ್ನು ನಿರೂಪಿಸು, — ತಿಳಿಸು : ಕಾವ್ಯ ಲಕ್ಷಣದೊಳೊಳ್ಳಳವಟ್ಟರೆ ಪೇಱ್ದುದಲ್ಲದೇಕಾರಣವಯ್ಯ ಕೆಮ್ಮಗಿರಲಾಗದೆ ಕಬ್ಬ[ವ] ಬಿಟ್ಟವೇ[ಱ್ದು]ದೇ (ಜಾಕಾಂ. ೦-೦೦). **ಬಿಟ್ಟಹೇಳು** : ೨. ಕೆಲಸಕ್ಕೆ ನಿಯಮಿಸು, — ಗೊತ್ತುಪಡಿಸು : ಲಿಂಗಕ್ಕೆ ಇಲ್ಲೆಂಬ ಜಂಗಮಕ್ಕೆ ಇಲ್ಲೆಂಬ ಬಂದ ಪುರಾತರಿಗೆ ಇಲ್ಲೆಂಬ ಸಾವಾಗ ದೇಹವ ದೇಗುಲಕ್ಕೊಯ್ಯೆಂಬ ದೇವರಿಗೆ ಹೆಣ ಬಿಟ್ಟಹೇಳಿತ್ತೆ (ಇಸವ. ೨೨೨).

[ಬಿಟ್ಟ$_1$ + ಪೇಱ್]

ಬಿಟ್ಟವೊಱು (ಕ್ರಿ). ಪುಕ್ಕಟೆಯಾಗಿ ಕಾರ್ಯಭಾರವನ್ನು ಹೊರು, — ವಹಿಸಿಕೊಳ್ಳು : ರಾಜ್ಯಭಾರಮಂ ಬಿಟ್ಟವೊತ್ತವಂ ಕಲ್ಲ ಭಾರವ ನೀಡಾಡುವಂತೀಡಾಡಿ (ಧರ್ಮಾಮೃ. ೯-೩೨). [ಬಿಟ್ಟ$_1$ + ಪೊಱು]

ಬಿಟ್ಟಪೋಗು (ಕ್ರಿ). ಪುಕ್ಕಟೆಕೆಲಸಕ್ಕೆ ಹೋಗು : ಎಲ್ಲವನ್ನು ಬಿನ್ನವಿಸಿ ಪಟ್ಟಾದೇಶನಿರ್ಧಾರವ ಸೋದಿಸಿಂದೇ ಹೋಗಿ ನಾಳೆ ಬಹುದೆನಲವರು ಮೇದಿನಿಯಂ ನಾಣ್ಣುಡಿಯ ವಾರಣಸಿಯ ಬಿಟ್ಟಪೋದರೆಂದೆಂಬುದೆನ ಗಾಯ್ತೆಂದು ಹರುಷ ಮಿಗಲಾ ಪುರಕ್ಕೈತಂದರು (ಸಿದ್ಧಣಾ. ೯-೦೬).

[ಬಿಟ್ಟ$_1$ + ಪೋಗು$_1$ (< ಪೋ$_1$)]

ಬಿಟ್ಟಹಿಡಿ 'ಬಿಟ್ಟವಿಡಿ' ನೋ.

ಬಿಟ್ಟಹೇಳು 'ಬಿಟ್ಟವೇಱ್' ನೋ.

ಬಿಟ್ಟು$_1$ 'ಬಿಡು$_1$' ಪರಾ.

ಬಿಟ್ಟು$_2$, ಬಿಟ್ಟೆ$_2$, ವಿಟ್ಟು, ವಿನ್ನು (ನಾ). ೧. ಒಬ್ಬಾತನ ಹೆಸರು : ವಂಶಿಗ ಬಿಟ್ಟು ಕೃತಂ (ಇಅ. IX, ೭೯-೩೦ ; ೮ ಪಹು ೫೩). **ಬಿಟ್ಟೆ$_2$** : ೧. 'ಬಿಟ್ಟಿಗ', 'ಬಿಟ್ಟಿದೇವ' ಪರಾ. **ವಿಟ್ಟು** : ೨. ತ್ರಿಮೂರ್ತಿಗಳಲ್ಲಿ ಒಬ್ಬ; ವಿಷ್ಣು : "ವಿಟ್ಟು - ವಿಷ್ಣು" (ಶಾಶಕೋ. ೪೦) ; ವಿಟ್ಟುವುಂ ಬ್ರಹ್ಮನುಂ ಕಣ್‌ತಲೆಗಳಂ ಶಿವಗೆ ಕೊಟ್ಟು ಡಿಂಗರಿಗರಾದವರವನೀಶಂಗೆ ಪಡಿಗಟ್ಟುವರೆ (ಶಿಪು. ೩೨-೨೪). **ವಿನ್ನು** : ೨. "ವಿನ್ನು — ವಿಷ್ಣು" (ಗುರುಪೋ. ೦೩೦); ಜನ್ಮಾಂತರದೆ ಮಾಡಿದ ನನ್ನ ದುಷ್ಕರ್ಮಾನುಸಾರವೆ ವಿನ್ನುವಿನ ಸುತನೀಗ ಪೊಸದಾದ ಶಸಿಯನು ಮಾಡಿ ಸನ್ನುತಾಂಗಿಯನೊಯ್ದು . . . ಸಮಕೌಶಲ್ಯವನೆ ತೋರಿಸಿದನು (ರಘುವಂ. ೯-೪೬). [< ಸಂ. ವಿಷ್ಣು]

ಬಿಟ್ಟುಳಿ (ನಾ). (?) : ಅಮರೆ ಮಾಡಿದ ಬಿಟ್ಟುಳಿಯು ಕಕ್ಕುಂಬ ತೊಡಂಬೆಯು ಮೂಡಿಗೆಯು ಕವಳಿಕೆಯು ಕಂಡಪಟಂಗಳುಮಂ ಪಲವುಂ ತೆಱದ ಪಲವುಂ ಪೊಱೆಯಾಗಿ ಕಟ್ಟಿದ ಬಲೆಗಳುಮಂ . . . ಅಳವಿಯೊಳ್ ಕೂಡಿ ನಡೆಯಲ್ವೇಱ್ದು ಬೇಂಟೆವಸದನಂಗೊಂಡು (ಶಂಶಶಾ. ೫-೪೭ ವ). [?]

ಬಿಟ್ಟೆ 'ಬಿಟ್ಟ$_1$' ನೋ.

ಬಿಟ್ಟಿಗೆಯ್ 'ಬಿಟ್ಟಗೆಯ್' ನೋ.

ಬಿಟ್ಟೇಱು, ಬೆಟ್ಟೇಱು$_2$ (ನಾ). (ಕೈಯಿಂದ ದೂರದವರೆಗೆ ಎಸೆಯುವ) ಉದ್ದವಾದ ಈಟಿ ; ಎಸೆಯೊಟೆ : "ಬಿಟ್ಟೇಱು ಮೊದಲಾದುದು ಕೆಯ್ಯಂ ಬಿಡಲ್ಪಡುವುದು ಪಾಣಿ(ಕರ)ಮುಕ್ತಮೆಂಬುದು" (ಹಲಾಯು. ೭೬-೩೦೯) ; ವೀರದೊಳ್ ಕೂಡಿ ಪರಿಗೆಯುಂ ಬಿಟ್ಟೇಱುಂ ಬೆರಸಿರ್ಪಂತೆ (ಧರ್ಮಾಮೃ. ೦೧-೨) ; ಬಿಟ್ಟೇಱೊಟ್ಟಿ ನಖಂ ಚಕ್ರ ಪರಶು . . . ಫಳಕಂಬಿಡದಮರರ್ ನೆರೆದುದು (ಏಕೇಕ. ೨-೩೦); ಇಟ್ಟ ಸಲ್ಲೆಹ ಸಬಳ ಬಿಟ್ಟೇಱೊಟ್ಟಿಗಳ ಮಳೆ ನಾದಿದವು ಕಾದಿದರು ಚೂಣಿಯಲಿ (ಕುಮಾಕ. ೦೯-೦೦); ಈಟಿಯಲಿ ಬಿಟ್ಟೇಱುನಲಿ ಹೊಗುವ ಹರಿಕದಂಬವ ಹೊಡೆವುತಿಱುವುತ ಜರಿಯಗೆಡಹಿದರು (ತೊರಣಾ. ೬-೦೦-೦೦). **ಬೆಟ್ಟೇಱು$_2$** : ಬಾಚಿಯಿಂ ತಡಂಗಡಿದುಂ ಕೊಂತದಿಂ ತಗುಳ್ದಿಱಿದುಂ ಖಡ್ಗದಿಂ ಪೂಣಿಸಿ ಪೊಯ್ದುಂ ಬೆಟ್ಟೇಱುಗಳಿಂ ಪರಿತಂದಿಟ್ಟುಂ . . . ಸೈರಿಸಲಾಱದೆ (ಧರ್ಮಾಮೃ. ೩-೭೩).

ಬಿಜ್ಜಲ ಬಿಟ್ಟೇಱು, ಬಿಜ್ಜಬಿಟ್ಟೇಱು = (?) : "ಬಿಜ್ಜಲ ಬಿಟ್ಟೇಱು = ಹಿರಿಯ ಬಿಟ್ಟೇಱು" (ಶಮದ. ಪರಿ. ೨); "ಬಿಜ್ಜ[ಪಾಶಾ. ಜ್ಜೆ] ಬಿಟ್ಟೇಱೆಂದು ಹಿರಿಯ ಬಿಟ್ಟೇಱೆನಿಕ್ಕುಂ" (ಕಬ್ಬಿಗ. ೮೮).

[ದೇ.॥ ತಮಿ. ವಿಟ್ಟೇಱು, ವೆಟ್ಟೇಱು ; ಮಲ. ವಿಟ್ಟೇಱು]

ಬಿಟ್ಟೇಱುಕಾಱ (ನಾ). ಉದ್ದವಾದ ಈಟಿಯನ್ನು ಹಿಡಿದಿರುವವನು : ಐಶ್ವರ್ಯಮದಮೆಂಬ ಬಿಟ್ಟೇಱುಕಾಱರ್ವೆರಸು ಬಲಮದಮೆಂಬ ಕಟ್ಟಿಗೆ ಕಾಱರ್ವೆರಸು . . . ನಿಲ್ಲದೆಲ್ಲಿಯುಂ ಬೆನ್ನಟ್ಟಿ ತಗುಳ್ದು (ಧರ್ಮಾಮೃ. ೦೦-೮೭ ಅಂತಶ್ಚ) ; ನಿಗಳಂಕಮಲ್ಲಂ ಭುಜಬಳವೀರಂ ಕೊಟ್ಟೋಡುವ ಬಿಟ್ಟೇಱು ಕಾಱರ ಗಣ್ಡಂ (ಎಕ. VI, ಕಡೂರು. ೩೯-೨೦ ; 1148).

[ಬಿಟ್ಟೇಱು + — ಕಾಱ]

ಬಿಡ (ನಾ). ಒಂದು ಬಗೆಯ ಉಪ್ಪು ; ಡೊಣೆಯುಪ್ಪು : "ಪಾಕ್ಯಂ, ಬಿಡಂ . . . ತೊಳೆದು ಕಾಯಿಸಿ ತೆಗೆದ ಉಪ್ಪು, ಡೊಣೆಉಪ್ಪು ಮತ್ತು ಪೆಟ್ಟುಪ್ಪು ಮುಂತಾದ ಅಡಿಗೆಯಿಳಿಸಿದ ಕೃತ್ರಿಮಲವಣಕ್ಕೂ ಬಿಡಾಲವಣಕ್ಕೂ ಪೆಸರುಗಳು" (ಸಿದ್ಧಾಂತಿ. ೨೬೬); ಸುರದಾರು ಸೈಂಧವಂ ಜಳಧರಂ ಬಿಡಂ ಬೀಟಲಕ್ಕಿ ಸದ್ಯಃಕ್ಷಾರಂ ಸುರಭಿಜಳಪೆಣ್ಣೆಯೆಂಬಿವನಿರದಟ್ಟಿಱೆ ನಸ್ಯಮಂ ಕಬಿಲ್ಗುಂ ಸೆಂಬಂ (ಲೋಕೋಪ. ೯-೨೨೪). [ಸಂ.]

ಬಿಡಕಿ (ನಾ). ಗಳಹುವವಳು ; ಜಗಳಗಂಟಿ ; ಗಯ್ಯಾಳಿ : ಮಗಳಿಗೆ ದುಡಕಿಯು ಕಟಕಿಟಿ ಬಲು ಜೋರ ನಿನ್ನಂಥ ಬಿಡಕಿಗೆ ಹೆಣ್ಣಲ್ಲತಿಗೆ ಹೆಣ್ಣಲ್ಲತಿಗೆ (ಇಸಗೀ. ೯೨) ; ಕೆಲವರು ಬಿಡಕಿಯರು ಮಾತ್ರ 'ಅಯ್ಯೋ . . . ಮದಲಿಂ ಗಿತ್ತಿಯೋ ಸೋಬಾನೆ ಹೇಳ್ತಾರೆಯೋ ತುಂಬಿದ ಸಭೆಯಾಗೆ' ಎಂದು ಮೂತಿ ತಿರುವಿದರು (ಶಳುಮ. ೩೬). [< ಬಿಡು$_1$]

ಬಿಡತ (ನಾ). [ಸಂಗೀತ] ಮೃದಂಗವನ್ನು ಬಾರಿಸುವಾಗ ಎರಡು ಹೊಡೆತಗಳ ನಡುವೆ ಇರುವ ಅವಧಿ, — ಕಾಲಮಾನ : ಚಮತ್ಕಾರಲಾಗು ಹಿಡಿತ ಬಿಡಿ[ಡ]ತಗಳ ಮೋಹನವನ್ನು ತೋಱೆ ನುಡಿಸಿದ ಮಾರ್ದಂಗಿಕನು (ಗೋಪಮೇ. ೭-೦೭). [< ಬಿಡು$_1$ + — ತ$_2$]

ಬಿಡತಿ 'ಬಿಡದಿ' ನೋ.

ಬಿಡದಿ, ಬಿಡತಿ (ನಾ). ೧. ಅತಿಥಿಗಳ ಬಿಡಾರಕ್ಕೆಂದು ತೆರವು

ಮಾಡಿರುವ ಮನೆ ; ಬಿಡಾರ : ಮಡದಿ ನಿಂಯೆನ್ನ ಪಡನೆ ಬಾಯೆಂದು ನಡದಾರು ಖಳನಾ ಬಿಡದಿಗೆ (ವಾಲಿಕೇ. ೬೫–೧೭) ; ಯುಧಿಷ್ಠಿರನು . . . ಬಿಡದಿಯಲ್ಲಿ ತಂಗಿ ಶ್ರಮಪರಿಹಾರ ಮಾಡಿಕೊಂಡ (ವ್ಯಾಸಕಿ. ೧೨೦). ೨. ತಂಗುವಿಕೆ ; ವೊಕ್ಕಾಮು ; ವಾಸ್ತವ್ಯ : ನಮ್ಮ ಬಿಡದಿಗೆ ಬೇರೆ ಮನೆಯನ್ನು ಏರ್ಪಾಟು ಮಾಡಿರಬೇಕು (ಶಾಂತ್ರಿ. ೬೩). ಬಿಡತಿ : ೧. ನಮ್ಮನ್ನು ನಿಜವಾದ ಆದರದಿಂದ ಸತ್ಕರಿಸಿ, ಅವನ ಭಾರಿ ಹೊಸ ತೊಟ್ಟಿಮನೆಯಲ್ಲಿನ ಮುಖ್ಯಭಾಗವನ್ನು ನಮಗೆ ಬಿಡತಿ ಮಾಡಿ ಕೊಟ್ಟ (ಕಂಪ. ೩೩೯).

ಬಿಡದಿ ಬಿಡು=ಬಿಡಾರ ಹೂಡು; ತಂಗು : ಸುಲ್ತಾನರು ಚಿತ್ರದುರ್ಗದಲ್ಲಿಯೇ ಬಿಡದಿ ಬಿಟ್ಟಿದ್ದರು (ದೌಂಕ್. ೨೦೯) ; ಎಲ್ಲರೂ ಬಿಡದಿ ಬಿಟ್ಟಿದ್ದ ಮನೆಗೆ ಪ್ರಯಾಣ ಮಾಡಿದರು (ಮೂಲಾಸ. ೦೨೯). ಬಿಡದಿ ಮನೆ, ಬಿಡದಿಯ ಮನೆ= (ಮದುವೆ ಮೊದಲಾದ ಸಂದರ್ಭಗಳಲ್ಲಿ) ಅತಿಥಿಗಳ (ವಿಶೇಷವಾಗಿ ಬೀಗರ) ಬಿಡಾರಕ್ಕಾಗಿ ತೆರವು ಮಾಡಿರುವ ಮನೆ : ಬಿಡದಿಮನೆಯಲ್ಲಿ ಸರಿಯಾದ ವ್ಯವಸ್ಥೆಯಿಲ್ಲ (ಮುಳ್ಳಿಹಾ. ೩೭) ; ಲಲನೆ ಲಕುಮಿಯು ಸಹಿತ ವೇಂಕಟನಿಲಯನನ್ನೈದಿಸುತ ಬಿಡದಿಯ ಮನೆಯೊಳಿಸಿದನು (ಶಾಕಾಸ. ೧೯–೪೯) ; ಬಿಡದಿಯ ಮನೆಯಲ್ಲಿ ಇವನ ಅತ್ತೆ ಮತ್ತು ಇವನ ತಾಯಿಯವರು ಮಾತನಾಡುತ್ತಿದ್ದುದು (ಐಂಗಾಚಾ. ೧೭).

[<ಬಿಡು$_1$ + – ದಿ./ತಮಿ. ಮಲ. ವಿಟುತಿ ; ತೆಲು. ವಿಡಿದಿ]

ಬಿಡದಿವುಳಿಗ (ನಾ). ಬಿಡಾರದಲ್ಲಿ ಸಲ್ಲಿಸುವ ಸೇವೆ,—ಊಳಿಗ : ಬಿಡದಿವುಳಿಗದ ಲಿಂಗಣ ಮಡಿವುಳಿಗದ ದೊಡ್ಡೆಯ (ಎಳ. XIV, ಗುಂಡ್ಮಶೇ. ೦೪೯–೩೫ ; 1087). [ಬಿಡದಿ + <ಊಟಿಗ]

ಬಿಡಯ$_1$ 'ಬಿಡೆಯ'$_1$ ನೋ.

ಬಿಡಯ$_2$ 'ಬಿಡೆಯ$_2$' ನೋ.

ಬಿಡಯ$_3$ 'ವಿಡಾಯ' ನೋ.

ಬಿಡಲವಣ (ನಾ). ಒಂದು ಬಗೆಯ ಉಪ್ಪು ; ಡೊಣಿಯುಪ್ಪು : "ಕೃತ್ರಿಮಕಂ – ಬಿಡಲವಣ" (ಲಿಂಗಾ. ೩೯). [ಸಂ.]

ಬಿಡವೆ (ನಾ). ಬಿರುಕು ; ಸೀಳು ; ಸಂದು : ಕಲ್ಲ ಬಿಡವೆಯೊಳಿರ್ದ ಪಣವಿನಂತೆ ಸಿಡಿಲೊಳಗಿರ್ದ ಸಕ್ಕರೆಯಂತೆ (ಧರ್ಮಾಮೃ. ೦೩–೦೫೫).

[ದೇ.॥ ತಮಿ. ವಿಟವು, ವಿಟಪ್ಪು ; ಮಲ. ವಿಟವು]

ಬಿಡವೆಳಗು (ನಾ). ಹೊರಹೊಮ್ಮುವ ಕಾಂತಿ,– ಪ್ರಭೆ : ಎಡೆಯಾಡುವಬಲೆಯರಡಿರುಚಿತಳಿರನು ಪಡೆದು ನೀಲದ ನೆಲನುಗುರ ಬಿಡವೆಳಗಿಂದಲರಾಗಿ ನೋಡುವರಕ್ಷಿಗೊಡರಿಪುದದುವೆ ಸತ್ಪಲವ (ಪರ್ಶ. ೩–೪೯).

[? + ಬೆಳಗು$_2$]

ಬಿಡಾಡಿ 'ಬೀಡಾಡಿ' ನೋ.

ಬಿಡಾಡಿಗ (ನಾ). ಕೀಳಾದ ವ್ಯಕ್ತಿ; ಹೀನವಾದ ವ್ಯಕ್ತಿ: ಹಾದರದೆ ಮುಪ್ಪುಗೊಂಡಾ ಬಿಡಾಡಿಗ ಪೆಣ್ಗಳಾದರದೆ ಕಂಥಾಕಮಂಡಲುಗಳಂ ಬಳೆಯ ಸೀರೆಯಂ ಧರಿಸಿಕೊಂಡು (ಮಹಾಂತೇ. ೦೩–೨೩).

[ಬಿಡಾಡಿ (< ಬೀಡಾಡಿ) + – ಗ$_2$]

ಬಿಡಾಯ 'ವಿಡಾಯ' ನೋ.

ಬಿಡಾರ 'ಬೀಡಾರ' ನೋ.

ಬಿಡಾರುವಾರ, ಬಿಡಾರ್ವರ (ನಾ). ಚರ ಹಾಗೂ ಸ್ಥಿರ ಆಸ್ತಿಗಳನ್ನು ಭೋಗ್ಯಕ್ಕೆ ಪಡೆಯುವುದು, – ವಾರಕ್ಕೆ ಮಾಡಿಕೊಳ್ಳುವುದು : ಹದಿನಾರು ಹಾನೆ ಗದೆಯನು ಬಿಡಾರುವಾರವಾಗಿಯಿರಿಸಿ (ಶಾಸಾಂ. ೦೯೩೦, ಕುಂಬಾಪುರ. ೬೩–೬೫; 1467); ಆ ಜಂನಕೆ ಉಂಟಾದ ಸೀಮೆ ಸಾಮ್ಯ ಯಿಪ್ಪನೂ ಬಿಡಾರುವಾರವಾಗಿ ಮಾಡಿಕೊಂಡು ದುಗ್ಗಣ ಸೆಟಿಯರು ಕೊಟ್ಟ ಅರ್ಥ ಕಾಟಿ ಗ ೬೫೧ (ಶಾಸಾಇ. IX–ii, ೯೬೫–೯೫ ; 1472); ಕಂದಪರದ ಗ್ರಾಮಿಣಿ ಅಂಣಉಡುಪರು ಕೊಟ್ಟ ಬಿಡಾರುವಾರದ ಪತ್ರದ ಕ್ರಮವೆಂತೆಂದರೆ (ಶಾಸಾಇ. IX–ii, ೬೫೫–೦೫ ; 1554). ಬಿಡಾರ್ವರ : ತೊಳಹನ ಕಯ್ಯಲೂ ಬಿ[ಡಾ]ರ್ವ್ವರ ಮಾಗ ಹಿಡಿವ [ಸುಗೆ] ಬಿತುವ ಬಿದಿರ ಗದ್ದೆಯ ಮೇಲಿಕ್ಕಿದ ಪಾಣ್ಡ್ಯಗದ್ಯಾಣಂ (ಶಾಸಾಇ. VII, ೩೯೦–೦೯ ; 1140). [<ಬಿಡಾರ + ಆರುವಾರ]

ಬಿಡಾರ್ವರ 'ಬಿಡಾರುವಾರ' ನೋ.

ಬಿಡಾಲ, ಬಿಡಾಳ (ನಾ). ೧. ಬೆಕ್ಕು; ಮಾರ್ಜಾಲ : "ಮಾರ್ಜಾಲಂ ಬಿಡಾಲಂ . . . ಓತುವೆನೆ ಬೆಕ್ಕೆನಿಕ್ಕುಂ" (ಪಂಗಂಗಾ. ೯೯–೦೦); ಆ ಕಾಗೆ ಸತ್ತು ಬಿಡಾಲನಾದುದಾ ಬಿಡಾಲಂ ಮುನ್ನಿನ ಕುಕ್ಕುಟನಂ ತಿಂದುದು (ಪಂಚಾಪಾ. ೦೫–೩೬ ಪ). ೨. ಕಣ್ಣುಗುಡ್ಡೆ. ಬಿಡಾಳ : ೧. ಬಿಡಾಳಕ್ಕಂ ಪಾಲ ಕಾಪಿನತ್ತವೊಲಾಯ್ತು (ಪಾರ್ಶ್ವಪು. ೩–೦೦೨). [ಸಂ.]

ಬಿಡಾಳ 'ಬಿಡಾಲ' ನೋ.

ಬಿಡಿ, ಬಿಡು$_3$ (ನಾ). ೧. ಒಂದು; ಒಂಟಿಯಾದುದು : 'ಬಿಡಿತನ', 'ಬಿಡಿಮುತ್ತು' ಪರಾ. ೨. ಪ್ರತ್ಯೇಕವಾದುದು; ಭಿನ್ನವಾದುದು; ಬೇರೆಯಾದುದು : ಚರಣಕಾಂಡಂಗಳ್ಗೆ ಬಿರಿಮುಗುಳ ಬಿಡಿಗಳಿಟ್ಟಳವಾದ ಪಾಯವಟ್ಟಂಗಳನಮರ್ಚಿಯುಂ (ಶಾಂತೀಶ್ವ. ೩–೦೨೬ ಪ); ಆಯ್ದುಕೊಂಡರೆ ಸಾಕು ಸಾವಿರ ಬಿಡಿಗಳಲೊಬ್ಬೊಬ್ಬರೊಂದೊಂದರಂತೆ ಸಂತೋಷಪಡುವೆನು (ಇಂಶಾಪ. ೭೦–೪೦). ೩. ಒಂದು ಊರಿನ ಹೆಸರು : ಅನ್ತಿಯ ಸುಗ್ಗಯ್ಯನು ಬಿಡಿ ಪೊನ್ನಯ್ಯನುಂ ಅಲ್ಲಮ್ಮನುಂ ಬಯ್ಯರಚೋಗನುಂ ಇನ್ತಿನಿಬರುಂ ಸಾಕ್ಷಿಯಾಗೆ ಕೊಟ್ಟರ್ (ಎಳ. XI.ಹೂಳಿಕೆ. ೩೦–೦೩; 964). ಬಿಡು$_3$: ೨. 'ಬಿಡುಗೆಲಸ', 'ಬಿಡುಮುತ್ತು' 'ಬಿಡುವೆಸರ್', 'ಬಿಡುವೊನ್' ಪರಾ.

ಬಿಡಿಬಿಡಿ (ದ್ವಿರುಕ್ತಿ): ಬಿಡಿಬಿಡಿಯಾದ ಹಾಳೆಗಳನ್ನು ಒಟ್ಟಿಗೆ ಸೇರಿಸಿ ಕಟ್ಟಿದು (ರೂಢಿ). [ದೇ.॥ ತಮಿ. ವಿಟಿ; ಮಲ. ವಿಡು ;ತೆಲು. ವಿಡಿ]

ಬಿಡಿಕಸಬಿ (ನಾ). ಪ್ರತ್ಯೇಕವಾಗಿ ಕೆಲಸ ಮಾಡುವ ವ್ಯಕ್ತಿ : ಕೈಗಾರಿಕೆಗಳನ್ನೆಲ್ಲ ಬಿಡಿಕಸಬಿಗಳ ಅಡ್ಡಕಸಬಿಗಳ "ಕೈ" ತಪ್ಪಿಸಿ ದೊಡ್ಡ ಪ್ರಮಾಣದಲ್ಲಿ ಅದೇ ಕಸಬಿಗಳನ್ನು ಕೂಲಿಗೆ ಇಟ್ಟು ನಡೆಯಿಸಬಾರದೇಕೆ ? (ಮೂಸಾದ. ೯೭). [ಬಿಡಿ + ಕಸಬ್ಬಿ$_2$]

ಬಿಡಿಕಾರು (ನಾ). ಪ್ರತ್ಯೇಕವಾಗಿ ಮಳೆಯ ನೀರಿನಿಂದ ತೆಗೆದ ಫಸಲು (?) : ಉಳುಕೊಳುವ ಭೂಮಿಯಲು [ಬ]ಯಲು ಬಿತ್ತು ಬಿಡಕಾಡು ಮು ೫೦ × × × [ದ್ದು] ಬಿಡಿಕಾರು ಮೂ ೨ (ಶಾಸಾ. ೦೯೨೯, ಮುಂಗಳೂರು. ೯೭೦–೦೩; 1329). [ಬಿಡಿ + ಕಾರ್ಯ$_2$ (< ಕಾರ್ಯ)]

ಬಿಡಿಕಾಸು 'ಬಿಡಿಗಾಸು' ನೋ.

ಬಿಡಿಕೆ (ನಾ). ೧. ಬಿಡಬೇಕಾದುದು; ತ್ಯಾಜ್ಯ : ಒಂದು ಹೇಳಿಕೆಯಲ್ಲಿ ಅತ್ಯುಕ್ತಿಗಾಗಿ ಬಿಡಬೇಕಾದ ಭಾಗ; ಬಿಡಿಕೆ ; ಕಳೆತ ; ತ್ಯಾಜ್ಯಾಂಶ (Discount. ಇಂಕಶಿ). ೨. ಬೇರೆಯಾಗುವುದು; ಬೇರ್ಪಡುವುದು. ೩. ಜಟ್ಟಿಕಾಳಗದಲ್ಲಿ ಒಂದು ಪಟ್ಟು,– ವರಸೆ : ಬಿಡದೆ ಬಿಗಿಗಳ ಬಿಡಿಸಿ ಕಳಚುವರು . . . ಅಡಿಮಗುಚಿಯುಪ್ಪರಿಸಿ ಬಿನ್ನಣ ಬಿಡಿಕೆಗಳ ಬಂಧವಲಿ ಹೆಣಗಿದರುಭಯಪಟುಭಟರು (ಐಂಗಾಚಾ. ೦೬–೨೦).

[ಬಿಡು$_1$ + – ಇಕೆ]

ಬಿಡಿಗಮ್ಮಟ (ನಾ). ಪ್ರತ್ಯೇಕವಾದ ಕೆಲಸಕ್ಕೆ ಗೊತ್ತುಮಾಡಿರುವ ಟಂಕಸಾಲೆ (?) : ಉಣ್ಣಾಗೆಯ ಕಮ್ಮಟದಲು ತಿಂಗಳಿಗೆ ಸ ಒನ್ದು ಬಿಡಿಗಮ್ಮಟದಲು ತಿಂಗಳಿಗೆ ಹ ೧ (ಎಳ. XII, ಕರಾ. ೩೭–೨೦; ಸು. 1040).

[ಬಿಡಿ + ಕಮ್ಮಟ]

ಬಿಡಿಗಾಸು, ಬಿಡಿಕಾಸು (ನಾ). ೧. (ಹಿಂದೆ ಬಳಕೆಯಲ್ಲಿದ್ದ) ತಾಮ್ರದಿಂದ ಮಾಡಿದ ಒಂದು ಅತಿ ಸಣ್ಣ ನಾಣ್ಯ; ಚಿಕ್ಕಾಸು.

೨. ಚಿಲ್ಲರೆಹಣ; ಪುಡಿಗಾಸು : ರಸೀತಿ ಕೊಡದೇ ಇದ್ದರೆ ಒಂದು ಬಿಡಿಗಾಸು ಬಿಚ್ಚಲು ಅವನು ಸಿದ್ಧನಿರಲಿಲ್ಲ (ಮಾರ್ಗದ. ೭೯); ಅವರು ಕೊಡುವ ನಾಲ್ಕು ಬಿಡಿಗಾಸುಗಳ ಮೇಲೆ ಅವನು ಬದುಕಬೇಕಿತ್ತು (ಮಹಾಪ್ರ. ೩೩). ಬಿಡಿಕಾಸು : ೨. ಕೆಲಸ ಮಾಡಿ ರೂಪಾಯಿ ಸಂಪಾದಿಸಬಹುದಾದ ಕಡೆ ಕೆಲಸ ಮಾಡದೆ ಬಿಡಿಕಾಸು ಬಂದರೂ ಅವನಿಗೆ ತೃಪ್ತಿ (ಯೋಧವು. ೬೩). [ಬಿಡಿ + ಕಾಸು$_2$]

ಬಿಡಿಗಾಳು (ನಾ). ಒಂದಕ್ಕೊಂದು ಅಂಟಿಕೊಂಡಿರದೆ ಬೇರೆಬೇರೆಯಾಗಿರುವ ಕಾಳು : ಬಿಡಿಗಾಳು ಬದ್ಧ; ಇಡಿಹಣ್ಣು ಸಿದ್ಧ, ಬಯಲಲ್ಲೆ ಇರುವ ಬುದ್ಧ (ಅರಳು. ೪೨೬-೯). [ಬಿಡಿ + ಕಾಳು$_2$ (< ಕಾಟ್$_2$)]

ಬಿಡಿತನ (ನಾ). ಏಕಾಂತತೆ; ಒಂಟಿತನ : ಬಿಡಿತನದ ಬಿಕ್ಕಟ್ಟಿನಲ್ಲಿ ಇಡಿತನದ ಒಕ್ಕಟ್ಟು ಹುಟ್ಟಿಸುವ ಹುಟ್ಟೇ ಬಳಗ (ವಿಕಾಮಂ. ೬೩). [ಬಿಡಿ + — ತನ]

ಬಿಡಿತೆ 'ಬಿಡುತೆ' ನೋ.

ಬಿಡಿದರ (ನಾ). ಸಗಟುಮಾರಾಟದವರಿಂದ ಪದಾರ್ಥಗಳನ್ನು ತಂದು ಬಿಡಿಬಿಡಿಯಾಗಿ ಮಾರುವಾಗ ಹಾಕುವ ಬೆಲೆ : ಬಿಡಿದರದ ಅಂಗಡಿಯ ಮಾತು ಬೇರೆ, ಈ ಅಂಗಡಿಕಾರನು ತನ್ನ ಸರಕುಗಳನ್ನು ದೊರಕಿಸುವುದು ಇಡಿಯ ದರದ ಅಂಗಡಿಗಳಿಂದ . . . ಪೂರೈಸುವದು – ಪುಡಿಗಿರಾಕಿಗಳಿಗೆ (ತಕ್ಕಡಿ. ೨೨). [ಬಿಡಿ + ದರ$_3$]

ಬಿಡಿದಳ (ನಾ). ಒಂದಕ್ಕೊಂದು ಸೇರಿಕೊಂಡಿರದೆ ವಿರಳವಾಗಿರುವ ಪಕಳೆ : ಹೂವುಗಳು ಬಿಡಿದಳಗಳಿಂದ ಕೂಡಿದ್ದರೆ ಅವುಗಳನ್ನು ಬಿಡಿದಳದ ಹೂವುಗಳೆಂದು (Polypetalous) ಕರೆಯುತ್ತಾರೆ (ಸಸ್ಯಶಾ. ೫೬). [ಬಿಡಿ + ದಳ್$_2$ (=ದಲ)]

ಬಿಡಿದಿವಸ (ನಾ). ಯಾವ ಬಗೆಯ ಉತ್ಸವವಾಗಲಿ, ವಿಶೇಷವಾಗಲಿ ಇಲ್ಲದ ದಿನ : ಉಡುಪಿ ಶ್ರೀಕೃಷ್ಣನ್ನ ಬಿಡಿದಿವಸದಾಗೆ ತೋರಿಸಿದಿರಿ (ಹಮ್ಮೊಂದ. ೨೨). [ಬಿಡಿ + ದಿವಸ]

ಬಿಡಿನುಡಿ (ನಾ). ಪ್ರತಿಯೊಂದು ವಚನವೂ ಬೇರೆ ಬೇರೆಯಾಗಿಯೆ ಉಪಯೋಗವಾಗುವಂತೆ ರಚಿತವಾಗಿರುವ ಪದ, ವಚನ ಇತ್ಯಾದಿ: ಬಿಡಿನುಡಿಯ ಬಂಟ, ಸತ್ಯವಾದಿ, ಸರ್ವಜ್ಞಕವಿಗೆ ಗಂಗಪ್ಪ ಮನಸೋತಿದ್ದಾರೆ (ಸಾಸಮಾ. ೦೫೫). [ಬಿಡಿ + ನುಡಿ$_2$]

ಬಿಡಿಬಿಲ್ (ನಾ). ಒಂದು ಬಗೆಯ ಜೂಜಾಟ : ನೆತ್ತ ಚದುರಂಗ ಪಗಡೆಯು ಚಿತ್ತಾಯಂಬೈದುದಾಯ ಬಿಡಿಬಿಲ್ ಸೊಗುಳಿಯುತ್ತಮರಾದರು ಆಡಲ್ಬೆತ್ತಲೆಯಹ ಭಂಗ ಬಪ್ಪನೆಂಬುದು ಪುಸಿಯೇಂ (ವೀಕಿಸಾ. ೬೦೦). [?]

ಬಿಡಿಬೇಸಱು (ನಾ). ಅನಾದರ; ಅಲಕ್ಷ್ಯ; ಉದಾಸೀನ : ಸೊರ್ಕಿನುರ್ಕಿನ ಬಿಡಿಬೇಸಱಂ ನೆರೆಯೊಳಘಮರ್ಷಣದೊಳಿರ್ಪ ಮುನಿಗಳು ಲೆಕ್ಕಿಸದೆ ತೆಕ್ಕಟಿದು ಮುಕ್ಕುಳಿಸಿ ಜಕ್ಕುಳಿಸಿದಂ (ರಾಮಾಶ್ವ. ೦೩೬-೨೦). [ಬಿಡಿ + ಬೇಸಱು$_2$]

ಬಿಡಿಮುತ್ತು, ಬಿಡುಮುತ್ತು (ನಾ). ಪೋಣಿಸದೆ ಬಿಡಿಯಾಗಿರುವ ಮುತ್ತು; ಒಂಟಿಮುತ್ತು : ಕ್ಷೀರಸಾಗರದಲ್ಲಿ ನಿರುತ ಬಿಡುಮುತ್ತಿ ನಕ್ಷತೆಯ ಸುರಿಸಿದವೋಲು (ನವಮೋ. ೦೦-೫೫). ಬಿಡುಮುತ್ತು: ಕಡೆಯಿಕ್ಕಿದ ಬಿಡುಮುತ್ತಿನ ಪೊಡರ್ದುಣ್ಮುವ ಬೆಳಗು ಪೊಳೆವ ದುಗುಲದ ಪಸೆಯೊಳ್ ತೊಡರ್ದಿರೆ ಪೆಱತಲ್ತಿದೆ ಪಾಲ್ಗಡಲೆನಿಸಿದುದು (ಆದಿಪು. ೬-೦೬); ಕಾವಿಲ್ಲದ ಕರ್ನೆಯ್ದಿಲ ಪೂವಿಂ ಬಿಡುಮುತ್ತು ಬಿಡದೆ ಬಿಡುತಂದಪುವೆಂಬೀ ವಿಸ್ಮಯಮಂ ಮಾಡಿದುವಾ ವನಿತೆಯ ನೀಳ್ದ ಕಣ್ಗಳುಂ ಕಣ್ಬನಿಯುಂ (ಮಲ್ಲಿಪು. ೪-೦೩); ಬಿಡುಮತ್ತಿನ ಮಣಿಗದ್ದುಗೆಯೊಳಾಗ ಕಡುನೀಱ್ ಕಣ್ಗೊಪ್ಪಿದಳು (ಶ್ರೀಪಾಲ. ೨-೦೪). [ಬಿಡಿ + ಮುತ್ತು$_3$]

ಬಿಡಿಮೊಳೆ (ನಾ). (ಮುದ್ರಣದಲ್ಲಿ ಬಳಸುವ) ಬಿಡಿಬಿಡಿಯಾದ ಮೊಳೆ, —ಅಚ್ಚು : ಸರ್ವಸಮರ್ಪಕವಾಗಿ ಬಿಡಿಮೊಳೆಗಳಿಂದ ಮುದ್ರಿಸುವುದನ್ನು ಕಂಡುಹಿಡಿದವನು ಗೂಟೆನ್ಬರ್ಗ್ (ಮುದ್ರಣ. ೯). [ಬಿಡಿ+ಮೊಳೆ$_3$]

ಬಿಡಿಯ$_1$ 'ಬಿಡೆಯ$_2$' ನೋ.

ಬಿಡಿಯ$_2$ 'ವಿಡಾಯ' ನೋ.

ಬಿಡಿಯುತ್ತರ (ನಾ). ಸಂಬಂಧವಿಲ್ಲದ ಮಾತು; ಅಸಂಬದ್ಧವಾದ ಮಾತು : ದಾನವೇಶ ರೋಷದಿಂ ಬಿಡಿಯವಿಲ್ಲದೆ ಸಭಾಂತರದಿ ಬಿಡಿಯುತ್ತರವ ನುಡಿಯಬಹುದೇ (ನವಮೋ. ೨೭-೬೩). [ಬಿಡಿ + ಉತ್ತರ]

ಬಿಡಿಸರಳು (ನಾ). ಒಂದೊಂದಾಗಿ ಬಿಟ್ಟ ಅನೇಕಬಾಣಗಳ ವರ್ಗ : ಕಡುಗಿ ನೂಕುವ ಕದನರಾಗಿಗಳೊಡನೆ ಕಾದುವ ಪಾರ್ಥತನಯನ ಬಿಡಿಸರಳು ಬೀಱಿದವು ರಮಣರನಮರವಧುಗಳಿಗೆ (ಕುಮ್ಮಾಧ್ರೋ. ೫-೬೬). [ಬಿಡಿ + ಸರಳು$_1$ (< ಸರಲ್$_1$)]

ಬಿಡಿಸು, ವಿಡಿಸು (ಕ್ರಿ). ೧. ಕಳಚು ; ಸಡಿಲಿಸು; ಕಳೆ : ನಿನ್ನ ಪೆಡಗೆಯ್ಗ[ಟ್ಟ]ಂ ಶರದಿಂ ಬಿಡಿಸಿದನಲ್ಲದೆ ಸರಿತ್ಸುತಂ ಬನ್ನವಿನ್ನವೆಂಬುವು ಮೊಳವೇ (ಪಂಪಭಾ. ೬-೫೩) ; ವಕುಳದ್ರುಮಕಂ ಮಾಲತಿಗಂ ಮದುವೆ ಮಾಡಿದೆಂ ಬಿಡಿಸವರ್ಕೆ ನೀಂ ಕಂಕಣಮಂ (ಕಾದಂಕಾ. ೫೯೩); ಈ ಕಟ್ಟುಗಳಂ ಬೇಗಂ ಬಿಡಿಸೆಂದು [ಪಾಕಾಂ. ಬಿಡೆಂದು] ಬಿಡಿಸಿಕೊಂಡು ಪೋದಳ್ (ಪಂಪತಂ. ೭೬-೦೬). ೨. ಹೋಗಲಾಡಿಸು; ನಿವಾರಿಸು: ನುಡಿಸಿದನೆನ್ನಂ ನಲ್ಲಂ ಬಿಡಿಸಿದನೆನ್ನಂತರಂಗದನುತಾಪಮಂ (ಕವಿರಾ. ೩-೨೩೫); ನಂಬದುದಂ ನಂಬಿಸಲುಂ ನಂಬಿದುದಂ ಬಿಡಿಸಲುಂ . . . ಬಲ್ಲೆಂ (ಪಂಪಭಾ. ೫-೪೩ ಪ); ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಾ ನಿಮ್ಮ ಧರ್ಮ (ಮಹಾದೇ. ಬಿ. ೦೯-೨೯); ಎನ್ನ ಗರ್ವಾಂಧಕಾರವ ಬಿಡಿಸಿ ರಕ್ಷಿಸು (ಪುರಂದ. ೨-೯ ಪಲ್ಲವಿ). ೩. ಬಿಡುಗಡೆ ಮಾಡು ; ವಿಮೋಚನೆಗೊಳಿಸು ; ಬಂಧಮುಕ್ತವನ್ನಾಗಿ ಮಾಡು : ಅಂತಪ್ಪೊಡೆ ನಿನ್ನಂ ಕಾವ ಗಂಧರ್ವರೆ ಬಿಡಿಸುಗೆ ಪೋಗೆಂದು ಪೊಯ್ದಂ ದುರಾತ್ಮಂ (ಪಂಪಭಾ. ೬-೭೦) ; ಈ ಕರುಣೆ ಸಾವಿರಹೊನ್ನನಾದಡೆ ಕೊಟ್ಟು ಕುಱಿಯಂ ಬಿಡಿಸದಿರನು (ಬಸಪು. ೨೮-೦೬); ಖೂಳ ಬಿಡಿಸಾ ಭೀಮಸೇನನ ತೋಳುವಲೆಯಲಿ ಸಿಕ್ಕಿದನು ಭೂಪಾಲನು (ಕುಮ್ಮಾಕ. ೦೩-೪೮). ೪. ಅಗಲಿಸು; ಬೇರ್ಪಡಿಸು; ಪ್ರತ್ಯೇಕಿಸು : ಬಿಡಿಸಿ ಭುಜಂಗಿಯ ತಟ್ಟಂ ಪಿಡಿದುಯ್ವಂತೆಳೆಯ ಮಲಯಜಾತಮನಳಿಪಿಂ ತೊಡರ್ದಾ ಖಚರಿಯ ತಟ್ಟಂ ಬಿಡಿಸಿ ನೃಪಾತ್ಮಜನನೊರ್ವನುಯ್ದಂ ಖಚರಂ (ಅರ್ಧನೇ ೬-೯); ಬಲಿದ ಮುಳಿಸಂ ತಿಳುಹಲಿಕೆಯೆಮ್ಮಳವಿಯಲ್ಲೆನು ತಾತ್ಮಜನ ಕೈಗಳನೆರಡನೊಯ್ಯನೆ ಬಿಡಿಸಿ (ಬಸಪು. ೪೭-೨೩). ೫. ತೆಗೆದು ಹಾಕು; ವಜಾ ಮಾಡು : "ನಿಮ್ಮ ಅಗಸನನ್ನು ಬಿಡಿಸಿ ನೋಡಿರಿ" ಎಂದು ನಾನು ಸಲಹೆ ಮಾಡಿದೆ (ದೇಶನ್ಯ. ೨೮). ೬. ಕೀಳು; ಕಿತ್ತು ಹಾಕು : ಬಿಱುಗಾಳಿಂಗೆ ಕೆದಱಿರ್ಪಸಿಯ ಹೂಗಳನು ಬಿಡಿಸದೆ . . . ನವಪರಿಮಳದ ಬಿರಿಮುಗುಳ್ಗಳನವಿಕಳಾತ್ಮನು ಸೆಜ್ಜೆದುಂಬಲು ತವಕದಿಂ ತವೆ ಕೊಯ್ದುಕೊಂಡು (ಬಸಪು. ೨೨-೯); ಅದನ್ನು ಬಿಡಿಸಿ, ತಂದು ಆರಿಸಿ ಕಾಳು ಬೇರೆ ಮಾಡುತ್ತಾರೆ (ಮುಂಬಯಿ. ೪-೨೭). ೭. ಕತ್ತರಿಸು; ಕಡಿ; ಛೇದಿಸು: ದುರುಳ ನುಡಿದನ ನಾಲಗೆಯ ನಿಡುಸೆರೆಯ ಬಿಡಿಸುವೆ (ಕುಮ್ಮಾಕ. ೦೨-೩೦); ನಿನ್ನ ಗಂಟಲ ಬಳೆಯ ಬಿಡಿಸುವ ಮೃತ್ಯುವಿದೆ ನೋಡಿತ್ತ ತಿರುಗು (ತೊರಣಾ. ೦-೦೦-೦೩); ಮುಳಿದು ಕೊಂಡೊಯ್ದೊಡೆ ಜವನ ಗಂಟಲ ಬಳೆಯ ಬಿಡಿಸುವೆನು (ಸಾಳ್ವಭಾ. ೨೭-೨೨). ೮. ಲೆಕ್ಕ, ಒಗಟು ಮುಂತಾದುವುಗಳಲ್ಲಿಯ ಸಮಸ್ಯೆಗೆ ಉತ್ತರವನ್ನು ಕಂಡುಹಿಡಿ,– ಸಮಸ್ಯೆಯನ್ನು ಬಗೆಹರಿಸು : ನೀವಿಕ್ಕಿದ ತೊಡಕ ಬಿಡಿಸಬಾರದು ನೀ ಬಿಡಿಸಿದ ತೊಡಕನಿಕ್ಕಬಾರದು (ಸಿದ್ಧಪ. ಕ. ೦೦೬-೩೫೫); ನಮಗಿದರಿದರಿದು ನಮ್ಮಳವಲ್ಲ ಆಸುರದ ತೊಡಕಿದಂ ಬಿಡಿಸ ಬಲ್ಲವರಿಲ್ಲ (ತಿರುರ. ದೇ. ೨೪-೯);

ಪರೀಕ್ಷೆಯಲ್ಲಿ ಎಲ್ಲ ವಿಷಯಗಳನ್ನು ಚೆನ್ನಾಗಿ ಬಿಡಿಸಿದ್ದನು (ಜಯಂತ. ೬೮). ೯. (ಹಾಸುಗೆ, ಚಾಪೆ, ಬಟ್ಟೆ ಮೊದಲಾದುವನ್ನು) ಹಾಸು; ಹರಡು; ಹರವು: ಹಂಸಾವಳಿ ಗಜಾವಳಿ ಮೊದಲಾದ ಪಟ್ಟಾವಳಿಯ ದಿಂಡುಗಳಂ ತರಿಸಿ [ಚೆ]ಂದದೊಳಿರಿಸಿ ತರತರದಿಂ ಬಿಡಿಸಿ (ಬಸರ. ೯-೦೩); ಬಿಡಿಸುತ್ತುಂ ಬೆಳ್ಳಾರಮಂ . . . ಸಡಿಲಿಸು ಹಾಸಮನೆನುತುಗ್ಗಡದಿಂ ಮುತ್ತಿದುದು ಪುಲ್ಲೆಯಂ ಭಿಲ್ಲಾಘಂ (ಉದ್ಯಟ. ೨-೭೦). ೧೦. (ಚಿತ್ರ, ರಂಗವಲ್ಲಿ ಮುಂತಾದುವುಗಳನ್ನು) ಬರೆ; ರೇಖಿಸು; ಚಿತ್ರಿಸು: ಆಗಿನ ಕಾಲದಲ್ಲಿ ಚೀನಿಯರು . . . ಹೂ, ಹಕ್ಕಿ, ನಿಸರ್ಗದ ದೃಶ್ಯ ಮೊದಲಾದುವನ್ನು ಬಿಡಿಸುತಿದ್ದರು (ಬಾಂಪ್ರ. II, ೬೯೦); ಚಿತ್ರ ಬಿಡಿಸುವುದು ಮಕ್ಕಳಿಗೆ ಬಹು ಪ್ರಿಯವಾದ ಒಂದು ಹವ್ಯಾಸ (ಕವಿಕೋ. VII. ೩೯೩). ೧೧. ಕೊರೆ; ಕಂಡರಿಸು; ಕೆತ್ತು: ಅಲ್ಲಿ ನಿತ್ಯಮಹ ಮೆಂಬುದು . . . ಭಕ್ತಿಪೂರ್ವಕದಿಂ ಶಾಸನಂ ಬಿಡಿಸುವುದುಂ ಮುನಿಜನಂಗಳಂ ಪೂಜಿಸುವುದುಮಕ್ಕುಂ (ಅಜಿಪು. ೦೨-೦ ವ); ಇಷ್ಟನ್ನೂ ಅಭಿನ್ನಕಲ್ಲಿನಲ್ಲಿ ಕೆತ್ತಿ ಸುತ್ತಲೂ ಅಂಚಿನಲ್ಲಿ ಪ್ರಭಾವಳಿ ಬಿಡಿಸಿದೆ (ಪೋರೆರೇ. ೯). ೧೨. (ಅತಿಥಿಗಳು) ಬೀಡು ಬಿಡುವಂತೆ ಮಾಡು; ತಂಗಲು ಅನುವು ಮಾಡಿಕೊಡು; ವಸತಿಗೊಳಿಸು: ಗಂಗಾಸಿಂಧುಮಧ್ಯಕ್ಷಿತಿ ಪತಿಗಳುಮಿ ತಾಣದೊಳ್ ಬಂದು ಕಾಣ್ಬರ್ ಪಲರೆಂದೆಂತಲ್ಲಿ ಚೆಲ್ವಾಗಿರೆ ಬಿಡಿಸಿದನುರ್ವೀಶ್ವರಂ ತನ್ನ ಬೀಡಂ (ಆದಿಪು. ೦೩-೨೦); ಅರಮನೆಯೊಳ ವರವರ ಹವಣಱಿದರಸುಗಳ ನೆಱೆ ಬಿಡಿಸಿ ವಾಣಿಜವರನು ನಾಂದೀಮುಖದ ಬಳಿಕೊಂದಿಸಿದನೊಲವಿನಲಿ (ಜೀವಂಪ. ೭-೪೪); ಪೊಡೆಸು ಭೇರಿಯನಿಂದೆ ನಡೆಸು ಮತ್ಸ್ಯೈನ್ಯಮಂ ಬಿಡಿಸು ಪಾಳೆಯವನು (ಶಿಪು. ೪೭-೨೨). ೧೩. ನೆಲೆಗೊಳಿಸು; ಇರಿಸು; ಇಡು: ಅಲ್ಲಿ ಜಲಕೇಳಿಯಾಡುವ ಗಾಡಿಕಾರ್ತಿಯರಂ ಕಾಡಲೆಂದೊಳ್ಳೆಗಳಂ ತಂದು ಬಿಡಿಸಿಯವರ್ಕೆ ಪಾಲನೆಱೆದು ನಡೆಪುತಿರ್ಪನ್ನೆಗಂ (ಪಂಪತಂ. ೧೨೩-೦೯); ಆ ಸುರನರ ಭುಜಂಗಮರಿತ್ತ . . . ವಸ್ತುಗಳ ಸರಯುವಿನ ತೀರದಲಿ ಯೋಜನವೆರಡ ಱಳತೆಯ ವಿಶ್ವಕರ್ಮೋದ್ಧರಣರಮ್ಯಾಗಾರದಲಿ ಬಿಡಿಸಿದನು ಭೂಪಾಲ (ತೊರರಾ. ೦-೭-೩). ೧೪. ಸಂಬಂಧವನ್ನು ಕಳೆದುಕೊಳ್ಳು; ಅಗಲು: ಅರಸನುಮಂ ಸ್ವಜನಪರಿಜನಬಂಧುವರ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು (ವಡ್ಡಾರಾ. ೬೪-೨೮); ಎನ್ನ ಪಂಬಲನಿದಂ ಬಿಸುಡಿಂ ಬಿಡಿಮೆಂದು ಖೇಚರಂ ಬಿಡಿಸಿದನಾಪ್ತರಂ ಬಿಡಿಸುವಂತಿರೆ ಮೋಹದ ಬಳ್ಳವಳ್ಳಿಯಂ (ಆದಿಪು. ೨-೫೦); ಗಂಧರ್ವರಾಜನಂದನೆಯಿಂ ತನ್ನನೆಂತಾನುಂ ಬಿಡಿಸಿ ಬೀಟ್ಕೊಂಡು ನಿಜಸ್ಕಂಧಾವಾರಕ್ಕೆ ಪೋಗಲೆಂದು ತದೀಯಭವನಮಂ ಪೊಱಮಟ್ಟು (ಕಾದಂಉ. ೨೫೩). ೧೫. ಸಡಿಲಗೊಳಿಸು; ಸುಗಮವಾಗಿಸು: ಕೈದುಕಾಱರ ಬಿಗುಹು ಘನ ನೀ ಹೊಯ್ದು ಮೊದಲಲಿ ಬಿಡಿಸು ಬಳಿಕಾವೈದಿ ನಿನ್ನನು ಕೂಡಿಕೊಂಬೆವು (ಕುಪ್ಯಾರ್ಪ್ರೋ. ೪-೪೪); ಮಾಧವನ ಸಮ್ಮುಖವ ಬಿಡಿಸುವ ಸುದಂಡ ಧಾರಿಗಳು ಪೊಲಿದುಗ್ಗಡಿಸಲು (ವವಮೋ. ೦೦-೦೯). ೧೬. (ಸಿನಿಮಾ, ನಾಟಕ ಮುಂತಾದುವಕ್ಕೆ) ಪುಕ್ಕಟೆಯಾಗಿ ಪ್ರವೇಶಿಸಲು ಅವಕಾಶವಾಗುವಂತೆ ಮಾಡು: ಇವತ್ತು ನಮ್ಮನ್ನು ಬಿಡಿಸುತ್ತೀರಾ ನಾಟಕಕ್ಕೆ? (ಪಾಪೋಲೀ. ೦೭೨). ೧೭. ನೀಡು; ಕೊಡು: ಬಿಳಿಯಕ್ಕಿಯುಂ ಸೊಲ್ಲಗೆಯು ಬಿಟ್ಟಿಯುನ್ತುಪ್ಪಮುಮನೆಲ್ಲಾ ಕಾಲಕ್ಕಂ ಸರ್ವ್ವಬಾಧಾಪರಿಹಾರಮಾಗೆ ಬಿಡಿಸಿದರ್ (ಎಕ. III, ಶ್ರೀರಂಗ. ೦೪೭-೦೪; ಸು. 900?); ಶ್ರೀಮತ್ಪ[ದ್ಮ]ಬ್ಬರಸಿಯತ್ತರ್ಮ್ಮ ಬಸದಿಗೆ ದಾನಸಾಲೆಗೆ ಬಿಡಿಸೆ (ಸೌಇಇ. XI—i, ೩೯-೭; 950). ೧೮. ಚಿತ್ರಿಸಿ, ಕಸೂತಿಮಾಡು: ಕೌಶೇಯ — ತೆರಳೆಯ ಹುಟು ಮುಕುಲಾಕಾರದಿಂದ ಮಾಡಿದುದ ಬಿಡಿಸಿ ನೆಯ್ದ ಸೀರೆ (ಶಾಖರಾ. ೬) ವಿಡಿಸು: ೧೭. ಇಗ್ಗಲಿಯೂರಾ ಗವತೆಯ ವಿಡಿಸಿದರ್ (ಮೈಆರಿ. ೦೯೩೦. ೪೦-೯; ೨ವೆಯ ಕತ).

ಬಿಡಿಸಿ ನೋಡು = ವಿಶ್ಲೇಷಿಸು; ವಿವರವಾಗಿ ಪರಿಶೀಲಿಸು: ಅದರ ಇತಿಹಾಸವನ್ನು ನೋಡುವುದಕ್ಕೆ ಮುಂಚೆ ನಿಟ್ಟೂರನ್ನು ಬಿಡಿಸಿ ನೋಡುವ (ಸಿಟ್ಟೂಶಾಂ. ೨). [ಬಿಡು$_1$ + — ಇಸು$_3$]

ಬಿಡಿಹೂ, ಬಿಡಿಹೂವು (ನಾ). ಮಾಲೆಯಾಗಿ ಕಟ್ಟದಿರುವ ಹೂವು; ಪ್ರತ್ಯೇಕಪ್ರತ್ಯೇಕವಾಗಿರುವ ಹೂವು: ಸ್ವಲ್ಪ ಬಿಡಿಹೂಗಳನ್ನು ಬೇರೆ ತೆಗೆದಿಡು (ಕೂಡಿ). ಬಿಡಿಹೂವು: ಬಿಡಿಹೂವಾದರೂ ಹುಡಿಗಿ ಮುಡಿದುಕೊಳ್ಳಬಾರದೇ? (ಗಾರ.) [ಬಿಡಿ + ಹೂ$_2$ (<ಪೂ$_2$)]

ಬಿಡಿಹೂವು 'ಬಿಡಿಹೂ' ನೋ.

ಬಿಡಿಹೋರೆ (ನಾ). ಒಬ್ಬನೇ ಮಾಡುವ ಕೆಲಸ, —ವೃತ್ತಿ, —ಕಸಬು: ಕೈಕಸಬುಗಾರರು ತಮ್ಮ ಬಿಡಿಹೋರೆಗಳನ್ನು ಬಿಟ್ಟು ಕಾರಖಾನೆ, ಗಿರಣಿ ಮುಂತಾದ ಪ್ರಚಂಡಸಂಘಟನೆಯ ಒಳಕೀಲುಗಳಾಗಿ ದುಡಿಯತೊಡಗುವರು (ಮಾಪಾದ. ೧೦೦). [ಬಿಡಿ + ಹೋರೆ$_2$]

ಬಿಡು$_1$, ವಿಡು (ಕ್ರಿ). ಬಿಟ್ಟ, ವಿಟ್ಟ$_1$ (ಭೂತಕೃ). ಬಿಟ್ಟು$_1$ (ಭೂತನ್ಯೂ). ೧. ತೊರೆ; ತ್ಯಜಿಸು: ಪರಲೋಕಮಿಲ್ಲದಂದು ತಲ್ಲೋಕಸುಖಾನುಭಾವನಾಪೇಕ್ಷೆಯಿನೈಹಿಕಸುಖವಿಮುಖನಾಗಿ ಶರೀರಾರ್ಥವ್ಯಯಂ ಮಾಡುವಾತಂ ಕಯ್ಯದಂ ಬಿಟ್ಟು ಕಾಲದರ್ಕೆಱಗುವಾತನಂ ಪೋಲ್ಕುಂ (ಆದಿಪು. ೨-೯ ವ); ಹಗೆ ಸಮೀಪವಾದೆಡೆಯಲ್ಲಿರಲಾಗದು ಯುದ್ಧಂ ಮಾಡಲಾಗದು ಆ ದೇಶಮಂ ಬಿಟ್ಟು ಪೋಪುದು (ಪಂಪತಂ. ೩೯-೨೩); ಪದ್ಮವ್ಯೂಹದಲಿ ಹೊಕ್ಕಾಳು ಮರಳಿದಡಸ್ತ್ರವಿದ್ಯಾಭಾಳಲೋಚನನೆಂಬ ಬಿರುದನು ಬಿಟ್ಟೆ ನಾನು (ಕುಪ್ಯಾರ್ಪ್ರೋ. ೪-೯). ೨. ಅಡ್ಡಿಯಿಲ್ಲದಿರು; ತಡೆಯಿಲ್ಲದಿರು: ಎಲೆಲೆ ದೊರೆ ಸಿಕ್ಕಿದನು ಸಿಕ್ಕಿದನಳಿದುದೋ ದ್ರೌಪದಿಯ ಸಿರಿಯೆಂಬುಲುಹ ಕೇಳುತ ಪಾರ್ಥ ಬಂದನು ಬಿಟ್ಟ ಸೂಠಿಯಲಿ (ಕುಪ್ಯಾರ್ಪ್ರೋ. ೨-೩). ೩. ಕಟ್ಟಿನಿಂದ ಸಡಿಲಗೊಳಿಸು; ಹಿಡಿತದಿಂದ ಕಳಚು; ವಿಮೋಚನೆಗೊಳಿಸು; ಬಿಡುಗಡೆ ಮಾಡು: "ಬಿಡು-ವಿಮೋಚನೇ" (ಕಮರಾ); ಒಂದಂ ಕ್ರಿಯಾವಿಶೇಷಣಮಂ ದೊರೆಕೊಳೆ ಸಯ್ತು ಪೇಟದದಱೊಳೆ ಪೆಱತಂ ಸಂಧಿಸಿ ಪೇಟ್ಕೊಡೆ ಕೃತಿಯೊಳಗೊಂದಿರದೆರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ (ಕವಿರಾ. ೨-೯); ಕೊಂದೊಡೇವಂದಪುದೆಂದು ದುರ್ಯೋಧನನಲ್ಲಿಗೆ ಪೋಗೆಂದು ಕಟ್ಟಿದ ಕಟ್ಟುಗಳಂ ಬಿಟ್ಟು ಕಳೆದೊಡೆ ಜಯದ್ರಥಂ ಸಿಗ್ಗುಗಿ (ಪಂಪಭಾ. ೭-೩೨ ವ); ತಂಗಿನ ಪೊಸನೇಣಿಂದಱುದಿಂಗಳ್ವರಮಡಸಿ ಕಂಬಿಯಂ ಕಟ್ಟಿದೊಡಂ ತಾಂ ಗಡ ಬಿಟ್ಟೊಡೆ ಮತ್ತಂ ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ (ರರ್ಮಾಮ್ಯ. ೨-೯೨). ೪. ಕಳಚಿಕೊಳ್ಳು; ಬೇರೆಯಾಗು; ಉಚ್ಚು; ಸಡಿಲವಾಗು: ಮಾಯಾಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮದೇವನೆಂತೊಲಿವನಯ್ಯಾ (ಬಸವ. ೨೦೨); ಹೊಗರುಗೆಟ್ಟುದು ಕುಮುದ ಕಮಳದ ಬಿಗುಹು ಬಿಟ್ಟುದು ಚಕ್ರವಾಕದ ತಗಹು ಕೆಟ್ಟುದು ಹೇಳೆನಲು ರಂಜಿಸಿತು ದೀಪಾಳಿ (ಕುಪ್ಯಾರ್ಪ್ರೋ. ೦೫-೩೪). ೫. (ಉಸಿರು ಮುಂತಾದುವನ್ನು) ಹೊರಹಾಕು; ಸೂಸು; ಹೊರಹೊಮ್ಮಿಸು: ನಾಸಿಕದಿ ಬಿಡುವಾನಿಲಂ ರೇಚಕಮೆನಿಕ್ಕು (ಮಂಗರಾ. ೦೬-೦೪); ಕುಲಶೈಲಂಗಳಾಸಱಿಂ ಕಂದರದ ಮೊಗದಿಂದೆ ಬಿಡುವ ಬಿಸುಸುಯ್ಯೆಲರ್ ಬಂದಪುದೆನಲ್ಕೆ ಝಳದಿಂ ಬಿಡದೆ ಬೀಸುತಿರ್ದುದು ಗಾಳಿ ಬೇಸಗೆಯೊಳು (ಕೈಮಿಭಾ. ೦೫-೩). ೬. (ನಾಯಿಯನ್ನು) ಮೇಲೆ ನುಗ್ಗಿಸು, — ಛೂ ಬಿಡು: ಸೀಳ್ನಾಯ್ಗಳಂ ಬಿಡು ಕೋಲಂ ತುಡು (ಕಾದಂಪೂ. ೦೬೦); ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ ಎನ್ನ ಬಿಡು ತನ್ನ ಬಿಡೆಂಬುದು ಕಾಯವಿಕಾರ (ಬಸವ. ೩೬). ೭. ತೆಗೆ; ತೆರೆ; ಅಗಲಿಸು: ಅಂತು ಕಾದೆ ವಿದ್ವಿಷ್ಟವಿದ್ರಾವಣನ ಮೊನೆಯಂಬಿನಂಬೇಱಿಂಗಳ್ಕಿ . . . ಕಿಂಪುರುಷರ್ ಕಾಪುರುಷರಂತೆ ಬಾಯಂ ಬಿಡೆಯುಂ

(ಪಂಪಭಾ. ೩-೯೮ ವ) ; ಬಿಡುಗುಂ ಬಾಯಂ ನೆಲದೊಳ್ ಪಡುಗುಂ . . . ವಸುಭೂತಿ ಧೈರ್ಯವಿಲ್ಲದೆ ಮನದೊಳ್ (ರರ್ಮಾಮ್ಯ. ೦-೦೩೬): ಬಿಟ್ಟ ಕಣ್ಣು ಬಿಗಿದ ಹುಬ್ಬು ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ ಕೂಡಲಸಂಗಮದೇವ ಹಿಡಿವಡೆದ (ಬಸವ. ೯೧೪). ೮. ವಾಹನ . ಕುದುರೆ ಮುಂತಾದುವನ್ನು ಓಡಿಸು._ನಡೆಸು : ತನ್ನ ಸಂಗಡದವರುಂ ಪರಿಗ್ರಹಮುಮೆಯ್ತರಲಾಱದೆ ಪಿಂದೆ ನಿಲ್ವಿನಂ ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾ ನೃಪೋತ್ತಮಂ (ಕಾಪಂಪು. ೬೨೦); ನೀನಾ ಪಶುವಂ ಬಿಡುವ ಪೊಡೆವ ಕಳಕಳಮಂ ಕೇಳ್ದು ಪಾರ್ವನೆಟ್ಟತ್ತೊಡೆನ್ನ ಕಾರ್ಯಂ ಕಿಡುಗುಂ (ಪಂಚತಂ. ೨೪೭-೧೪): ಬಿಡು ರಥವನಾ ದ್ರೋಣನಿದಿರಲಿ (ಕುಮ್ಮಾರ್ಪ್ರೋ. ೨-೩೩). ೯. (ಬಾಣ. ಈಟಿ ಮುಂತಾದುವನ್ನು) ಎಸೆ ; ಹಾಕು ; ಪ್ರಯೋಗಿಸು : ಮತ್ತಮಲ್ಲಿ ಬಡಿವುದುಂ ಬಿಡುವುದುಂ ಚಾಪವಿದ್ದೆಯೊಳ್ (ಎಇ. XIII, ೩೩೨-೪೦ ; ೩೭೨) ; ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ಪತ್ತು ಬಾಣಂ ಧನುರ್ಗುಣದಿಂದಂ ಬಿಡುವಲ್ಲಿ ನೂಱು (ಗದಾಯು. ೩-೩) ; ತುಡುವಾಗಳೊಂದು ಬಿಲ್ಲಿಂ ಬಿಡುವಾಗಳು ಲಕ್ಕೆ . . . ಅಪ್ಪುವು ಗಡ ಪಾರ್ಥನ ಬಾಣವೆಂಬರ್ (ಸಮಪ. ೦೦-೦೭೦). ೧೦. ಉಳಿ ; ಹೊರತು ಪಡಿಸು : ಭಟ್ಟರೆ ಕೇಳಿಂ ನಿಮ್ಮಂ ಬಿಟ್ಟು ಕೆಲರ್ಕುಲಜರೊಳರೆ (ರರ್ಮಾಮ್ಯ. ೦-೦೨೦) ; ಹರನಿಂದುರ್ವಿಗೆ ದೈವವೇ ಕಿರಣಕಿಂದುಂ ಬಿಟ್ಟು ಸೊಂಪುಂಟೆ (ಸೋಮೇಶ. ೬). ೧೧. ನಿರ್ಲಕ್ಷಿಸು ; ಗಣಿಸದಿರು : ಈ ನಡುಗುವುವಲ್ಲವೇ ತೊಡೆ ನಿತಂಬದ ಬಿಣ್ಪೆನೊಳೇವುದಕ್ಕ ಪೋ ಬಿಡು ಕಟಿಸೂತ್ರಮಂ(ಪಂಪಭಾ. ೩-೪೬); ಗುಣದೋಷಮನಱಿದವಱೊಳ್ಗುಣಮಂ ಕೈಕೊಂಡು ದೋಷಮಂ ನೆಱೆ ಬಿಡುವಾ ಗುಣವಂತನ ಮುಂದೋದುಗೆ (ಸಮಪ. ೦-೬೩). ೧೨. ಬಿಡಾರ ಹಾಕು ; ತಂಗು ; ನೆಲಸು ; ವಸತಿ ಮಾಡು : ಮಹಾರಾಜರು[ಂ] ಬಾಣರಸರುಂ . . . ಸಮಸ್ತಬಲಂ ಬೆಱಿಸಿ ಬಿಟ್ಟೊಡೆ (ಎಇ. XXIV. ೦೯೦-೮ ; ಸು. 886) ; ಆರಾನುಂ ಬಟ್ಟೆ ವೋಪರ್ ಬೀಡಂ ಬಿಟ್ಟಿರ್ದರ್ ನಿಱಿಸುವರ್ (ವಡ್ಡಾರಾ. ೯೯-೩) : ಹರಿಗನಾ ಕುರುಕ್ಷೇತ್ರದೊಳಂತೇನುಂ ಮಾಣದ ಬಿಟ್ಟುದನಾ ನೆಗಟ್ಟಿ ಸುಯೋಧನಂಗೆ ಚರರಱಿಪುವುದುಂ (ಪಂಪಭಾ. ೧೦-೦) ; ಎಲ್ಲಿಯುಂ ದುರ್ಯೋಧನನನಱಸಿ ಕಾಣದೆ ವಿಸ್ಮಯಂಬಟ್ಟವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು (ಗದಾಯು. ೬-೨೮ ವ). ೧೩. ಅವಕಾಶ ಕೊಡು ; ಆಸ್ಪದ ಮಾಡಿಕೊಡು : ತನ್ನ ಪ್ರಕೃತಿ ಬಿಡದಿರಲ್ ಅಱಕೆಯೇನಂ ಮಾಡುವುದು (ಪಂಚತಂ. ೦೯-೨) ; ಅವರವರ ಸ್ವಸ್ಥಾನಂಗಳ ಸಲುಗೆಯನಱಿದು ಬಿಡುತ್ತಿದ್ದೆ ಕೂಡಲಸಂಗಮದೇವರಲ್ಲಿ ಬಸವಣ್ಣನ ಕಾಲವೇಳೆಯನಱಿದು (ಸರ್ವಪ. ೯೦-೪೩೩). ೧೪. ಕೊಡು ; ನೀಡು : ಕಿಟ್ಟೂನದೇವಕೆ ಎಲ್ಲಮಾನ್ಸರ್ವಪರಿಹಾರಂ ಬಿಟ್ಟ (ಎಕ. VI, ಕೊಪ್ಪ. ೩೯-೭ : 676?) ; ಪುನ್ನಾಡಱುಸಾಸಿರಕ್ಕೆ ಎಱೆಯರ್ ನೆಲಕ್ಕಿ ಸೊಲ್ಲಗೆ ಬಿಟ್ಟು (ಎಕ. III, ಪಂಚಪ. ೨೬-೩ ; ಸು. 810) ; ನೈಷ್ಠಿಕತಪೋಧನರ್ಗ್ಗಂ ಬಿಟ್ಟ ಮತ್ತರ್ ೪ (ಶಾಇಇ. XI-i, ೦೦೦-೦೩; 1064). ೧೫. ಸುರಿಸು; ಚೆಲ್ಲು: ಮಿಡಿದೊಡೆ ತನಿಗ[ರ್ವು] ರಸಂ ಬಿಡುವುವು (ಪಂಪಭಾ. ೦-೩೬); ಬಿಟ್ಟೆಸೆದುದು ಪೊಱವಾಱಂ ಮುಟ್ಟದ ತರುಣೇಸುಗಂಧಕೇಶಂ ತೆಗೆದಿಂ ಕಟ್ಟಿದಪರೆಂದು ಬಾಷ್ಪಂ ಬಿಟ್ಟೊಡನೆ ಬಟಲ್ದುವಟ್ಟಪೋಲಳಿರವದಿಂ (ಲೀಲಾವ. ೦೪-೦೩). ೧೬. ಸುರಿ ; ಹುಯ್ಯು : ಎರಕಕ್ಕೆ ಬಿಟ್ಟ ಕರುವಿನಂತೆ ಮಱುಗುತ್ತುಂ(ರರ್ಮಾಮ್ಯ. ೦-೦೬೨); ಖಡುಗದಡವೊಯ್ಲುಗಳಲಡುಮದ್ದಡಸಿದರು ಸೂಕರನ ತುಪ್ಪವ ತೊಡೆದರಿಱಿದೇಱಿನೊಳು ಬಿಟ್ಟರು ತೈಲಧಾರೆಗಳ (ಕುಮ್ಮಾಭೀ. ೩-೪೨). ೧೭. ಚಿತ್ರಿಸು ; ಬರೆ : ಹೆಂಗಸರು ಮನೆ ಮುಂದೆ . . . ಆಕರ್ಷಕವಾಗಿ ರಂಗೋಲಿ ಬಿಡುತ್ತಾರೆ (ಪೋರೆದೇ. ೨೩). ೧೮. ಶಿಲೆಯಲ್ಲಿ ಕೆತ್ತಿಸಿ ದಾನಮಾಡು : ಜಿನಗೃಹಂಗಳ್ಗೆ ತನ್ನ ಮನೆಯಿಂ ಗಂಧಪುಷ್ಪಾಕ್ಷತಾದಿಗಳನುಯ್ವುದುಂ . . . ಶಾಸನಂಗಳಂ ಬಿಡುವುದುಂ ಮುನಿಜನಂಗಳಂ ಪೂಜಿಸುವುದುಂ ಚತುರ್ಮುಖಮೆಂಬುದು (ಶಾಪುಂಪು. ೨೦೦). ೧೯. ಹೋಗಲು ಅನುಮತಿಸು ; ಬೀಳ್ಕೊಡು ; ನಿರೂಪ ಕೊಡು : ಎನ್ನ ಪಂಬಲನಿದಂ ಬಿಸುಡಿಂ ಬಿಡಿಮೆಂದು ಖೇಚರಂ ಬಿಡಿಸಿದನಾಪ್ತರು ಬಿಡಿಸುವಂತಿರೆ ಮೋಹದ ಬಳ್ಳವಳ್ಳಿಯಂ (ಆದಿಪು. ೨-೩೦): ಬಹುಕಳಾಳಾಪಂಗಳಂ ಕಲ್ತು ಬರ್ಪೆವಮೋಘಂ ಬಿಡಿಮೆಂಬುದುಂ (ಸುಕುಮಾ. ೨-೩೩). ೨೦. ಗಳಹು ; ಆಡು ; ನುಡಿ : ತೊಟ್ಟ ಜೋಹಕೆ ತಕ್ಕ ನುಡಿಗಳ ಬಿಟ್ಟೆವಲ್ಲದೆ ನಿಮ್ಮ ರಾಯನ ಕಟ್ಟಲಾಪೆವೆ (ಕುಮ್ಮಾರ್ಪ್ರೋ. ೨-೩೨). 'ಬಿಡಕಿ' ಪರಾ. ೨೧. ಕೆಳಕ್ಕೆ ಇಳಿಬಿಡು: ನೇತಾಡುವಂತೆ ಮಾಡು ; ಜೋಲಾಡಿಸು : ವಾಯುರಥಂ ಪ್ರಭಾವತಿವೆರಸು ಸಿದ್ಧಕೂಟಚೈತ್ಯಾಲಯದ ಮುಂದಿರ್ದು ಬಿಟ್ಟ ಮಾಲೆಯಂ ನೆಲಂ ಮುಟ್ಟಲೀಯದೆ ಮೇರುವಂ ತ್ರಿಪ್ರದಕ್ಷಿಣಂಗೆಯ್ದು ಕೊಳಲಾಱದೆ (ಶಾಪುಂಪು. ೬೪) : ಬಿಡೋ . . . ಪರದೇನಾ (ರಾಯಕ. ೭೪). ೨೨. ಕ್ಷಮಿಸು : ಕಕ್ಕಸದಿಂ ಕಾದಿ ಹಿಮ್ಮೆಟ್ಟಿ ಗಜ ಮಱೆವೊಕ್ಕಡೆ ಬಿಡನೆಂದ ನಗುತೆ (ಮೋಹತ. ೩೪-೩೯). ೨೩. ಹಾಸು ; ಹರಡು : ಒಂದು ಹರಿಣಿ ತನ್ನಯ ಪರಿಸ್ಪಂದಸಹಿತೆಯ್ದುತಿರೆ ಪರಿವರಿಪ ಕಾಳ್ಕಿಚ್ಚು ಮುಂದುಗಡೆ . . . ಬಿಟ್ಟ ಬೆಳ್ಳಾರಬಲೆಯೆಡಗಡೆ . . . ಈ ಅನುವರವನು ಮಾಣಿಪರಿಲ್ಲ (ಸಮ್ಮಕೌ. ೨-೪೭). ೨೪. ತೊಡಗಿಸು ; ಆರಂಭಮಾಡಿಸು : ನಾಲ್ಕು ಆಳುಗಳನ್ನು ಈ ಕೆಲಸಕ್ಕೆ ಬಿಟ್ಟರೆ ಬೇಗ ಮುಗಿಸಬಹುದು (ರೂಢಿ). ೨೫. (ಸಾಲದಲ್ಲಿ ಅಥವಾ ವ್ಯಾಪಾರ ಮಾಡುವಾಗ ವಸ್ತುಗಳ ಬೆಲೆಯಲ್ಲಿ) ರಿಯಾಯಿತಿ ತೋರಿಸು ; ಸೋಡಿ ಕೊಡು : ಸಾವಿರಾರುರೂಪಾಯಿಗಳ ವ್ಯಾಪಾರ ಮಾಡಿರುವಾಗ ಹತ್ತು ರೂಪಾಯಿಯೂ ಬಿಡುವುದಿಲ್ಲವೆಂದರೆ ಹೇಗೆ ? (ರೂಢಿ). ವಿಡು : ೧. ವಿದ್ರುಮಾಧರ ಶಾನ್ತಿಸೇನಮುನೀಶನಾಕ್ಕಿಎ ವೆಳ್ಗೊಳಅದ್ರಿ ಮೇಲಶನಾದಿ ವಿಟ್ಟಪುನರ್ಭವಕ್ಕೆಱೆ ಆಗಿ (ಎಕ. II. ೩೦-೪ ; ಸು. 650). ೬.ಕೆಟಲೆನಾಡ ಬೆಳತೂರ ಪಡುವಣದೆಸೆಯ ಮೊಱಡಿಯೊಳ್ಪಿರಿಯ ಪನ್ನಿಗೆ ವಿಟ್ಟೊಡೆ ಪನ್ದಿಯುಂ ನಾಯುಮೊಡಸತ್ತುವು (ಎಕ. III, ಮಂಡ್ಯ. ೪೦-೦೦; 950). ೧೪. ಸಟ್ಟಿಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱುಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ (ಮೈಆಂ. ೦೯೩೬, ೦೬-೦೩ ; ಸು. 450) ; ಅನುಜೊ ಇನ್ದು ಕನಲ್ಗೊಳಿ ನನ್ದಿಯಾಲರಾ ವಿಟ್ಟದು ಪಡೆವೈಲಾಮು ಅಮಸಪಾಲುಂ (ಎಕ. VI, ಚಿಕ್ಕಮ. ೫೦-೩ ; ಸು. 480 ?) ; ಶಿವಮಾರಂ ಪ್ರಿಥುವೀರಾಜ್ಯಂಕೆಯೆ ವೆಡಿರುನ್ ಸ್ವರ್ಗತ್ತಿಱೆಯ ಮರಿಯಾದಿ ಕೊಟ್ಟಾನ್ ಸೇಬೆಗೆ ವಿಟ್ಟಾರ್ (ಎಕ. IV (R), ಹಗ್ಗಡ. ೧೩೬-೪ ; ಸು.700).

ಬಿಟ್ಟ ಬಾಯಿ. ಬಿಟ್ಟ ವಾಯ್ = (ಆಶ್ಚರ್ಯ-ಭಯ ಮುಂತಾದುವುಗಳಿಂದ) ತೆರೆದ ಬಾಯಿ : ಭಗವಂತನ ಮಹಿಮೆಯನ್ನು ದಾಸರು ಹೃದಯಂಗಮವಾಗಿ ವರ್ಣಿಸುತ್ತಲಿದ್ದಾಗ ನೆಟ್ಟ ಕಣ್ಣೂ ಬಿಟ್ಟ ಬಾಯೂ ಆಗಿ ಜನರು ಕೇಳುತ್ತಲಿದ್ದರು (ರಾಜಾಮ. ೨೫೨); ಬಿಟ್ಟ ವಾಯ್ ಬಿಟ್ಟಂತಿರೆ ಬಂದಾಕೆ ಪೊಕ್ಕಳಿರದರಮನೆಯಂ (ಶಾಂತಿಪು. ೪-೦೦೩). ಬಿಟ್ಟಾಡಿಕೊಳು = ಮನಸ್ವಿಯಾಗಿ ನಿಂದಿಸು ; ಮನೆ ಬಂದಂತೆ ತೆಗಳು : ಬಿಟ್ಟಾಡಿಕೊಳುವ ವೈರಿಯ ಮನೆ ಮುಂದೆ ಬಿಚ್ಚುಗತ್ತ್ಯಾಗಿ ಹೊಳೆದೇನು (ಹಮಪ. ೨೨-೧೨). ಬಿಟ್ಟಿಕ್ಕು = ಮೇಲೆ ನಂಗ್ಗುವಂತೆ ಮಾಡು ; ಚೋದಿಸಂ : ವಿರೋಧಿ ಸಾಧನಘಟಾಳಿಯನೋಡಿಸಲಾಗಳಾರ್ದು ಬಿಟ್ಟಿಕ್ಕಿದರುಗ್ರಸಿಂಧುರಘಟಾವಳಿಯಂ ಮುಳಿಸಿಂ ನಿಷಾದಿಗಳ್ (ಪಂಪಭಾ. ೧೦-೯೨) : ಅಣೆದಿಭಮಂ ಕೀಱಿ ಬಿಟ್ಟಿಕ್ಕಿ (ಶಾಂತಿಪು. ೩-೩೮). ಬಿಟ್ಟು ಕೊಡು = ೧. ತೊರೆ ; ತ್ಯಜಿಸು ; ಬಿಟ್ಟುಬಿಡು : ಅದನ್ನು ಬೇಗ ಬಿಟ್ಟುಕೊಟ್ಟು . . . ಹೊಸಸಮಾಜದೊಂದಿಗೆ, ಬಾಳಿನೊಂದಿಗೆ ಬೆರೆಯಬೇಕು (ಹೊಸಕ್ಷಿ. ೨೬೯) ; ಬ್ರಿಟಿಶ್

ಸರಕಾರವು ದಯಪಾಲಿಸಿದ 'ಸರ್' ಪದವಿಯನ್ನು ಠಾಕೂರರು ಬಿಟ್ಟು ಕೊಟ್ಟರು (ರರ್ಮಾ. ೬೬). ೨. ನೀಡು ; ಕೊಡು ; ದಾನಮಾಡು : ಅಯ್ಯಪಮಂಗಳದ ಪೂರ್ವ್ವಮರ್ಯ್ಯಾದೆಯ ಬಳನಂ ಬಿಟ್ಟು ಕೊಟ್ಟಂ (ಎಕ. XI. ಹಿರಿಯೂ. ೧-೨೬ ; 975) ; ಕೂಚಿಭಟ್ಟಾರರ ಕಾಲನ್ ಕಟ್ಟಿ ಧಾರೆಯನೆಱೆದು ಬಿಟ್ಟು ಕೊಟ್ಟರ್ (ಎಕ. IV, ಜಾವುರಾ. ೦೬-೦೭ ; ಸು. 1000 ?) ; ಶ್ರೀಸ್ವಯಂಭುಸೋಮೇಶ್ವರದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಬಿಟ್ಟು ಕೊಟ್ಟರ್ (ಸೌಇಇ. XX. ೪೯-೬೨ ; 1076 ?) ; ರಾಜ್ಯವನ್ನು ಈಗಾಗಲೇ ಬಿಟ್ಟುಕೊಟ್ಟಿದ್ದೇನೆ (ವಸಭಾ. ೪). ೩. ಹೋಗಲು ಅಪ್ಪಣೆ ಕೊಡು ; ಬೀಳ್ಕೊಡು : ನನಗೆ ತಪಸ್ಸಿನ ಮೇಲೆ ಮನಸ್ಸಾಗಿದೆ . . . ನನ್ನನ್ನು ಬಿಟ್ಟುಕೊಡಿ (ವಸಭಾ. ೩೬೯). ೪. ಓಡಿಸು; ಹರಿಯ ಬಿಡು: ಮನಸ್ಸನ್ನು ಲಂಗು ಲಗಾಮಿಲ್ಲದ ಕುದುರೆಯಂತೆ ಬಿಟ್ಟುಕೊಟ್ಟು . . ಆಡಂಬರದ ಆಟಗಳನ್ನು ಕಟ್ಟುತ್ತೇವೆ (ವಾರಾಕ್ಯ. ೦೦೭). ೫. ಉಳಿಸು ; ಇರಗೊಡು : ಈ ರಾಜರು ಬಿಟ್ಟುಕೊಟ್ಟಿರುವುದರಿಂದ ನಾನು ಬದುಕಿದ್ದೇನೆಯೋ? (ವಸಭಾ. ೬೪). ೬. ಮನಸ್ಸಿನಲ್ಲಿರುವ ವಿಷಯವನ್ನು ಬಹಿರಂಗಗೊಳಿಸು,— ರಟ್ಟುಮಾಡು: ನಾನೆಲ್ಲ ಗುಟ್ಟನ್ನು ಅವನಿಗೆ ಬಿಟ್ಟು ಕೊಟ್ಟೆ (ಆಂಹೂ. ೫೯). ೭. ಪಕ್ಷದಿಂದ ಹೊರತುಮಾಡು; ಪಕ್ಷ ವಹಿಸದಿರು : ಜೀವದ ಗೆಳೆಯನಲ್ಲವೇ — ಒಬ್ಬರಿಗೊಬ್ಬರು ಬಿಟ್ಟು ಕೊಡುವವರಲ್ಲ (ಮೂರುದಾ. ೦೪೦). ಬಿಟ್ಟು ಬಿಡು = ೧. ತೊರೆ; ತ್ಯಜಿಸು : ಅವನು ಅದನ್ನು ಅಡವಿಗೆ ಒಯ್ದು ಬಿಟ್ಟು ಬಿಡಬೇಕೆಂದು ನಿಶ್ಚಯಿಸಿ ಅದರ ಸರ್ಪಳೀ ಬಿಚ್ಚಿಹೋದನು (ಮುಂಬಿಯಿ. ೨-೨೦). ೨. ಗಣನೆಗೆ ತೆಗೆದುಕೊಳ್ಳದಿರು; ಕಡೆಗಣಿಸು: ಆ ವಿಷಯವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಬಿಟ್ಟುಬಿಡು (ಕೂಡಿ). ಬಿಟ್ಟು ಹೋಗು = ೧. (ಒಂದು ಸ್ಥಳದಿಂದ) ನಿರ್ಗಮಿಸು ; ಹೊರಡು : ನಿನಗೆ ಇಲ್ಲಿರಲು ಇಷ್ಟವಿಲ್ಲದಿದ್ದರೆ ಬಿಟ್ಟು ಹೋಗಬಹುದು (ಕೂಡಿ). ೨. ಇಲ್ಲವಾಗು : ಸ್ವರದ ಮುಂದೆ ಸ್ವರವು ಬಂದರೆ ಸಾಮಾನ್ಯವಾಗಿ ಹಿಂದಿನ ಸ್ವರವು ಬಿಟ್ಟು ಹೋಗುತ್ತದೆ (ಮರ್ಯಮ. ೦೭). ಬಿಡಬೀಸು = ಕಡೆಗಣಿಸು ; ತಿರಸ್ಕರಿಸು ; ಬಿಟ್ಟು ಬಿಡು : ಎನ್ನ ಬಿಡಬೀಸದಿರು ಕಂಡಾ ಲಿಂಗವೇ (ಶಿವಗೀ. ೩೬-೦೬೬); ಬಿಡಬೀಸದಿರು . . . ಕಡೆಗೆ ಸದ್ಗುರುವೆ (ದೀಕ್ಷಾಕೋ. ೪. ೦೪-೨೯). ☞ ಈ ಧಾತುವು ಹಲವು ಶಬ್ದಗಳ ಜೊತೆಗೂಡಿ ವಿಶಿಷ್ಟವಾದ ಧಾತುವಾಗಿ ವಿಧವಿಧವಾದ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಉದಾ. ಕಾಯಿಬಿಡು, ಕೈಬಿಡು, ಮನೆಬಿಡು, ಹಾದಿಬಿಡು, ಹೂಬಿಡು ಇತ್ಯಾದಿ. [ದೇ.॥ ತಮಿ. ಮಲ. ವಿಟು; ತುಳು. ಬುಡು; ತೆ... ವಿಡು; ಗೊಂಡಿ. ಬಿರ್ಸಾನ; ಬ್ರಾಹೂಈ. ಬಿಟ್ಟಿಂಗ್]

ಬಿಡು$_2$ 'ಬಿಡುವು' ನೋ.

ಬಿಡು$_3$ 'ಬಿಡಿ' ನೋ.

ಬಿಡು$_4$ (ಅ). 'ಛೆ' ಎಂಬರ್ಥದಲ್ಲಿ ನಿಪಾತಾವ್ಯಯದಂತೆ ಬಳಸುವ ಒಂದು ಶಬ್ದ: ಕಲಿತನದಿಂದಂ ಲೋಗರ್ ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ (ರರ್ಮಾಮ್ಯ. ೦-೦೭೩); ಬಿಡು ಮರೀಚಿಯ ತೊಱೆಗೆ ಹಱುಗೋಲಿಡುವರುಂಟೇ (ಕುವ್ಯಾಕ್ರೋ. ೪-೩೯). [< ಬಿಡು$_1$]

ಬಿಡುಕುಳ (ನಾ). ಪ್ರತ್ಯೇಕವಾಗಿರಿಸಿದ ಜಾತಿ ; ಬೇರೆಯಾಗಿರಿಸಿದ ಕುಲ : ಹರಿಜನರ ಚೋಮ, ಪಾತಿರ ಅಪ್ಪು ಮತ್ತು ಮೇದರ ಮುದ್ದ ಮೊದಲಾದವರಂತೆ ತಾನೂ ಬಿಡುಕುಳದ ಮಗನಂತಿದ್ದಾನೆ ! (ಮಸಕೂ. ೦೦).

[ಬಿಡು$_2$ (< ಬಿಡುವು) + ಕುಳ್$_5$ (= ಕುಲ)]

ಬಿಡುಗಂಡಿ (ನಾ). ಕೆರೆ, ಕಟ್ಟೆ ಮುಂತಾದುವುಗಳಲ್ಲಿ ನೀರು ಹೊರ ಹೋಗುವುದಕ್ಕಾಗಿ ಮಾಡಿರುವ ಕಂಡಿ ; ತೂಬು : ಸಸಿನವಹ ಕೊತ್ತಳದ ಸಾಲಿನ ನುಸುಳುಗಂಡಿಯ ಮುರುಹುಗಳ ಮುಂದೆಸೆವ ಕಲು ಮುಳುವೇಲಿ ಬಿಡುಗಂಡಿಗಳನೀಕ್ಷಿಸಿದ (ಮೃರಾಕಾ. ೨-೦೩); ನಾಲೆಯಲ್ಲಿ ಬರುವ ಹೆಚ್ಚು ನೀರನ್ನು ಹೊರಕ್ಕೆ ಸಾಗಿಸುವ ಬಿಡುಗಂಡಿಗಳು ಎರಡು ವಿಧವಾಗಿವೆ (ಶಿಲ್ಕಾ. ೩೬೦). [ಬಿಡು$_1$ + ಕಂಡಿ$_1$]

ಬಿಡುಗಟ್ಟು (ನಾ). (ಕರಾ) ಸಾಲದ ಹಣದ ಮೇಲೆ ಸಮಯಕ್ಕೆ ಸರಿಯಾಗಿ ತೀರಿಸದೆ ಇದ್ದಾಗ ಹೆಚ್ಚಾಗಿ ಪಡೆಯುವ ಬಡ್ಡಿ; ದುಬಾರಿ ಬಡ್ಡಿ: (ಕಸಂಗ್ಲಾ. ೦೭೬). [ಬಿಡು$_2$ (< ಬಿಡುವು) + ಕಟ್ಟು$_2$]

ಬಿಡುಗಡೆ (ನಾ). ೧. ಬಂಧನದಿಂದ ಪಾರಾಗುವಿಕೆ ; ವಿಮೋಚನೆ : ಆ ಉಭಯದ ಬಿಡುಗಡೆಯನಱಿದು ಆಡಗಿಯಲ್ಲದೆ ಸ್ವಯಂಭುವಲ್ಲ (ಮೋಳಿಮಾ. ೨-೩) ; ಕರುಣೆಯ ಸ್ಪರ್ಶವಿಲ್ಲದ ಕಟ್ಟಳೆಯ ಪ್ರಭುತ್ವಕ್ಕೆ ನಾನು ಒಳಗಾದರೆ ಕರ್ಮದಿಂದ ನಮಗೆ ಬಿಡುಗಡೆ ಎಂದೂ ಸಾಧ್ಯವಿಲ್ಲ (ತತ್ಕಪ್ರಾ. ೩೩೭). ೨. ಮೋಕ್ಷ ; ಕೈವಲ್ಯ ; ಮುಕ್ತಿ : ಕಡೆಯಿಲ್ಲ ಮೊದಲಿಲ್ಲ ತಡೆ ಬಿಡುಗಡೆಯಿಲ್ಲ (ಪರಶೋ. ೪-೬-೬) ; ಮೋಕ್ಷವೆಂದರೆ ಬಿಡುಗಡೆಗೆ ಪೆಸರು (ಭರತ. ೭೨-೯). ೩. ಸ್ವಾತಂತ್ರ್ಯ; ಸ್ವತಂತ್ರತೆ : ಮುಂದೆಯದು ತೋರುವುದು ಬಿಡುಗಡೆಯ ಹಬ್ಬದಲಿ ! (ಶಾಂತಜ. ೬-೪). ೪. ಅಂತ್ಯ ; ಕೊನೆ ; ಮುಕ್ತಾಯ : ನಡುಹೊಳೆಯ ಹಱಿಗೋಲ ಮೂಲೆಯ ಕಡಿದಿರಾದರೆ ನಮ್ಮ ಪುಣ್ಯದ ಬಿಡುಗಡೆಯ ಕಾಲವು (ಕುವ್ಯಾಕ್ರೋ. ೯-೩).

[ಬಿಡು$_1$ + ಕಡೆ$_3$]

ಬಿಡುಗಣ್, ಬಿಡುಗಣ್ಣು (ನಾ). ೧. (ಅಗಲವಾಗಿ) ತೆರೆದ ಕಣ್ಣು ; ಬಿಟ್ಟ ಕಣ್ಣು: ಬಿಡುಗಣ್ ಬಿಡುವಾಯ್ . . . ಅಱುಗೆಱೆಯೆಂಬಿವು ಪಡೆಯವು ಬಿಂದುವನುದಂತವೃತ್ತಿಯನಾಳ್ದುಂ (ಶಮದ. ೦೭೦) ; ಬಾಯ್ಗಳಂ ಬಿಡುವ ಬಿಡುಗಂಗಳ ಸುಜಾಣೆಯರ್ ಸಲೆ ದಶಾವಸ್ಥೆಯೊಳ್ ಕಣ್ಗೆಸೆದರು (ಪಿಪು. ೦೯-೩೦). ೨. (ಆಲಂ) ದಿವ್ಯದೃಷ್ಟಿ: ಗಿಡಿದ ಕತ್ತಲೆಯ ಗುಹೆಯೊಳಡಗಿರ್ದರಾ ಅಸುರರ್ ಕೇಳ್ದರಾ ಪಾಟಮಂ ಪಲ್ಮೊರೆದು, ಕಣ್ಣಿರಿಯೆ ಕಂಡರಾ ಬಿಡುಗಣ್ಣ ಬೆಳಕನ್ (ಹೊಂಗಳು. ೩೭-೦೦). **ಬಿಡುಗಣ್ಣು** : ೧. ಮೊಗದ ಹೊಗರವಗಡಿಸೆ ಸುಯಿಲಲಿ ಹೊಗೆಯ ಹೊದಱಂಕುರಿಸೆ ಬಿಡುಗಣ್ಣುಗಳೊಳೊಕ್ಕುದು ಕೆಂಪು ಸೊಂಪಡಗಿತು ಮುಖಸ್ನೇಹ (ಕುವ್ಯಾಕ್ರೋ. ೬-೨೦); ಶಾಂತೆಯೂ . . . ಕುಳಿತುಕೊಂಡು ಬಿಡುಗಣ್ಣುಗಳಿಂದ ಮನೆಯ ನಾಲ್ಕು ಮೂಲೆಗಳನ್ನೂ ನೋಡುತ್ತಿದ್ದಳು (ಪಿರಾತೆ. ೪೬). ೩. ರೆಪ್ಪೆ ಹೊಡೆಯದಿರುವ ಕಣ್ಣು ; ಅನಿಮಿಷನೇತ್ರ : ದೇವತೆಗಳು . . . ಬೆವರಿಲ್ಲದ ಮೈ, ಬಿಡುಗಣ್ಣು, ಬಾಡದ ಮಾಲಿಕೆ, ಭೂಮಿಯನ್ನು ಮುಟ್ಟದಿರುವುದು, ಈ ದೇವತೆಗಳ ವಿಶೇಷಚಿಹ್ನೆಗಳನ್ನು ತೋರಿದರು (ವಸಭಾ. ೦೩೦). 'ಬಿಡುಗಣ್ಣ' ಪರಾ. [ಬಿಡು$_1$ + ಕಣ್]

ಬಿಡುಗಣೆ (ನಾ). ನಡುವೆ ಬಿಡುವಿಲ್ಲದಂತೆ ಪ್ರಯೋಗಿಸುವ ಬಾಣ ; ಏಕಪ್ರಕಾರವಾಗಿ ತೊಡುವ ಕಣೆ : ವಡಬಗೌತಣವಿಕ್ಕುವರೆ ಕಡಲೊಡೆಯಗಹುದು ಸಮರ್ಥನಲ್ಲಾ ಬಿಡುಗಣೆಯ ಬೀಱುವರೆ ಕಟಕಾಚಾರ್ಯನು (ಕುವ್ಯಾಕ್ರೋ. ೬-೦೯). [ಬಿಡು$_2$ (<ಬಿಡುವು) + ಕಣೆ$_1$]

ಬಿಡುಗಣ್ಣ (ನಾ). ೧. ತೆರೆದ ಕಣ್ಣುಳ್ಳವನು ; ಅಗಲವಾಗಿ ಕಣ್ಣು ಬಿಟ್ಟಿರುವವನು : ಪೊಂಜೊಡರು ತೂಗಿದೊಲು ನೆಲ ಬಾನ ತಳ್ಳೆಯಲಿ ನೇಸರನು ಬಿಡುಗಣ್ಣನಾಗುತ್ತಿರಲು . . . ಸ್ವರ್ಣಮಂದಿರದ ಛಾಯೆಯೊಲು ಬೆಟ್ಟ ಕಾನು ಗಂಭೀರಗುಂಭವಲಿ ಮೈದುಂಬಿ ನಿಂತಿಹವು (ಶಾವಜೀ. ೦-೬). ೨. ರೆಪ್ಪೆ ಬಡಿಯದಿರುವವನು ; ಬಿಟ್ಟ ಕಣ್ಣುಳ್ಳವನು ; ದೇವತೆ : "ಗಾಳಿವಟ್ಟೆಗರ್ . . . ಬಿಡುಗಣ್ಣರೆನೆ ನಿರ್ಜರರ್ಗ ಮರ್ದ ನಾಮಮಕ್ಕುಂ" (ಕಬ್ಬಿಕ್ಕ. ೦೦೦) ; ಬೇಡುವರನು ಮನ್ನಿಪ ಬಿಡುಗಣ್ಣರ ನಾಡೆಱೆಯನ ಮಗನಂತೆ ಗಾಡಿವಡೆದ ರೂಪಿನ ಗರುವನ ನೀ ನೋಡು ಕಳಿಂಗನನಬಲೆ (ಜೀವಂಸಾಂ. ೦೦-೬೪).

ಬಿಡುಗಣ್ಣರೆಱೆಯ = ದೇವತೆಗಳ ಒಡೆಯ ; ಶಿವ : ಬಿಡುಗಣ್ಣ

ರೆಱೆಯಂ ವಿಶ್ವನಾಥಂ ಪ್ರಸನ್ನನಾದಂ ಭಕ್ತರುಘೆಯುಘೆಯೆನೆ (ಶರ್ಮರಾ. ೬-೩೫). [ಬಿಡುಗಣ್ + —ಅ$_7$]

ಬಿಡುಗಣ್ಣು 'ಬಿಡುಗಣ್' ನೋ.

ಬಿಡುಗಯ್, ಬಿಡುಗೈ (ನಾ). ತೆರೆದ ಕೈ ; ಮುಕ್ತಹಸ್ತ : ಮಹತ್ಕಾರ್ಯಕ್ಕೆ ಉಜ್ಜುಗಿಸಲೆದೆಗೊಳ್ಳುವ ಸಾಹಸಾತ್ಮನು ಇಂತಹ ಕೋಟಿ ಸಾಧನಗಳನ್ನು ಬಿಡುಗಯ್ಯಿಂದ ಸೂಸಿ ವ್ಯವಸಾಯ ಮಾಡಬೇಕು (ಮಂತ್ರಶ. ೨೬-೦೦). **ಬಿಡುಗೈ** : ಸಾಹಿತ್ಯ ಸಂಗೀತಗಳಿಗೂ ಬೇಕಾದಷ್ಟು ಬಿಡುಗೈ ಉತ್ತೇಜನ ದೊರೆಯುತ್ತಿತ್ತು (ರಂಗನಾ. ೨೦೭).

[ಬಿಡು$_1$ + ಕಯ್$_2$ (<ಕೆಯ್$_2$)]

ಬಿಡುಗಾವಲಿ (ನಾ). ೧. (ಗದ್ದೆ, ತೋಟ ಮೊದಲಾದುವುಗಳಿಗೆ) ನೀರು ಹರಿಯಲು ಮಾಡಿರುವ ತೋಡು ; ಕಾಲುವೆ : ಗದ್ದೆಯ ನೆಲ್ಲಿಗೆ ಕೆರೆಯ ನೀರು . . . ಬೇಕಾದಾಗ ಬಿಡುಗಾವಲಿಯಿಂದ ಬಿಡುವ ಮಂಟು. ಬಿಡುಗಾವಲಿನೀರಿನ ಭೂಮಿಯಾದರೆ ಪ್ರತಿವರ್ಷಕ್ಕೆ ಎರಡು ಸಾರೆ ನೆಲ್ಲು ಬೆಳೆಯಾಗುವದು (ಕೃಷಿಪ್ರ. ೫೪).

[ಬಿಡು$_1$ + ಕಾವಲಿ$_3$ (<ಕಾಲ್ವಾಯ್)]

ಬಿಡುಗಿವಿ (ನಾ). ಆಭರಣವಿಲ್ಲದೆ ಬರಿದಾಗಿರುವ ಕಿವಿ ; ಬರಿಗಿವಿ : ಬಿಡುಗಿವಿ ಮಿಂಚುವೆತ್ತ ಸುಲಿಪಲ್ ಕುಣಿದಾಡುವ ಕುಂತಳಂ ನೊಸಲ್ಪಿಡಿದ ಬೆಮರ್ (ಸೂಕ್ತಿಸು. ೩-೨೦೦). [ಬಿಡು$_2$ (<ಬಿಡುವು) + ಕಿವಿ$_3$]

ಬಿಡುಗು (ನಾ). ಎರಚುವಿಕೆ ; ಇರಿಸಿಲು ; ಎರಚಲು : ಮಿಂಚಿನ ಕಡುಗು ಕತ್ತಿಯ ಬೆಡಗು ಮಳೆನೀರ್ ಕರಿಕರಾಯತದೀ ಬಿಡುಗು (ಕೃಕರ್ಣಾ. ೨-೬೮). [ಬಿಡು$_1$ + ?]

ಬಿಡುಗುರುಳು (ನಾ). ಬಿಚ್ಚಿರುವ ಕೂದಲು ; ಕೆದರಿದ ಕೇಶ : ತುಱುಬು ಜಡೆಯೊಳು ಬಿಡುಗುರುಳು ಇವೆಲ್ಲವೂ ರುದ್ರನ ಅಡಿವೆಜ್ಜೆಯ ಕುಱುಹು (ಸರ್ವಪ. ೦೨೫-೬೩೭); ಮೊಗದೊಳ್ ಮುಸುರ್ವ ಬಿಡುಗುರುಳ ಬೆನ್ನೊಳ್ ನಟ್ಟ ಸರಳ ತಬ್ಬಿಬ್ಬೆಸೆವ ನಡೆನುಡಿಗಳ . . . ಸರ್ವದಿಕ್ಪಾಲರೋಟಂ ಗಾಣುತಜನಾಗ್ರಹಂದಾಳ್ದನು (ಸೆಬಿಪು. ೪೯-೨೪).

[ಬಿಡು$_1$ + ಕುರುಳು$_1$ (<ಕುರುಳ್$_1$)]

ಬಿಡುಗುಱಿತನ (ನಾ). ಮಂದೆಯನ್ನು ಬಿಟ್ಟು ಒಂಟಿಯಾಗಿ ಹೋಗುವ ಕುರಿಯ ನಡವಳಿಕೆ : ಹಾ ನುಡಿಯದಿರು ನಿಲು ಪಿತಾ ಮಹನೇನ ಬೆಸಸಿದುದಕೆ ಹಸಾದವು ನೀನು ನಡೆ ಪಾಳೆಯಕೆ ಬಿಡುಗುಱಿತನವ ಮಾಣೆಯಲ ಮೌನಮುದ್ರೆಯ ಹಿಡಿ (ಕುಪ್ಯಾಭೀ. ೦೦-೩೭). [ಬಿಡು$_1$ + ಕುಱಿತನ]

ಬಿಡುಗೂದಲು (ನಾ). = ಬಿಡುಗುರುಳು : ಆಕೆಯ . . . ಬಿಡುಗೂದಲನ್ನು ಚಿತ್ರಿಸಿದ ಬಗೆ, ಅವುಗಳನ್ನು ಹೊಂಬಣ್ಣದಿಂದ ಮಿನುಗಿಸಿದ ಬಗೆ ಈತನ ಕಲಾನೈಪುಣ್ಯವನ್ನು ಎತ್ತಿ ತೋರಿಸುತ್ತವೆ (ಅಪೂಪ. ೨೯೩).

[ಬಿಡು$_1$ + ಕೂದಲು (<ಕೂಂದಲ್)]

ಬಿಡುಗೆ (ನಾ). ೧. ತ್ಯಜಿಸುವುದು ; ದೂರ ಮಾಡುವುದು : "ತ್ಯಜನಂ . . . ತ್ಯಕ್ತಿಃ, ಈ ೫ ಬಿಡುಗೆ" (ಕಾಶಕ್ಕ. ೭೬). ೨. ಬಿಡುಗಡೆ ; ವಿಸರ್ಜನೆ : "ಮುಚ—ಪ್ರಮೋಚನೇ, ಬಿಡುಗೆಯೊಳ್" (ಕಾಶಕ್ಕ. ೨೭೯); ಹಿಪ್ಪಲಿ . . . ಏಲಕ್ಕಿ, ಸೈಂಧವ ಇವುಗಳ ಚೂರ್ಣಿಸಿ ಜೇನುತುಪ್ಪ, ಸಕ್ಕರೆವೆರಸಿ ನಾಭಿಯಿಂದ ಕೆಳಕ್ಕೆ ಲೇಪಂಗೈಯಲು ಜಲ, ಮಲ ಬಿಡುಗೆ (ವೈದ್ಯಸಾ. I, ೪೮೦). ೩. ನಿವಾರಣೆ : "ಪರಿಹಾರಃ—ಬಿಡುಗೆ" (ಕಾಶಕ್ಕ. ೦೫೭). ೪. (ಬರಬೇಕಾದ ಹಣದಲ್ಲಿ ತೋರಿಸುವ) ರಿಯಾಯಿತಿ : ಸೋಡಿ: ಎತ್ತಿನ ವ್ಯಾಪಾರದಲ್ಲಿ ಎಷ್ಟು ಬಿಡುಗೆ ಬಿಟ್ಟುಕೊಟ್ಟರು? (ಗೂಡಿ). ೫. ನಿರೂಪ ; ಅಪ್ಪಣೆ : 'ಬಿಡುಗೆಗೊಡು' ಪರಾ. ೬. ಅವಕಾಶ ; ಆಸ್ಪದ : 'ಬಿಡುಗೆವಡು' ಪರಾ. [ಬಿಡು$_1$ + —ಗೆ]

ಬಿಡುಗೆಗುಡು 'ಬಿಡುಗೆಗೊಡು' ನೋ.

ಬಿಡುಗೆಗೊಡು, ಬಿಡುಗೆಗುಡು (ಕ್ರಿ). ೧. ಹೋಗಲು ಅನುಮತಿ ಕೊಡು, —ಅವಕಾಶಕೊಡು ; ಬೀಳ್ಕೊಡು : ಕೆಡುವ ದೇಹವನಿನ್ನು ತಪದಲ್ಲಿ ವೆಚ್ಚಿಸಿ ಕೆಡದ ಸಿದ್ಧಿಯ ಮಾಳ್ಪೆನದಕೆ ಬಿಡುಗೆಗೊಡೆಂದು ಸಾಷ್ಟಾಂಗವೆಱಗಿದನು ಪೊಡವೀಶನೆದೆ ದಿಗಿಲೆನಲು (ಭರತ. ೬೦-೬೩); ಸರ್ವರಿಗೆ ಕೈವೀಸಿ ಬಿಡುಗೆಗೊಟ್ಟರಮನೆಯೊಳಗೆ ತಾ ಹೊಕ್ಕನಾ ಕಡುಗಾಡಿಕಾಱನು (ಭರತ. ೭೨-೬೬). **ಬಿಡುಗೆಗುಡು** : ೨. ಬಿಡುಗಡೆಯನ್ನು ಮಾಡು ; ವಿಮೋಚನೆಗೊಳಿಸು ; ಬಿಟ್ಟು ಬಿಡು : (ಕಟ್ಟುವಟ್ಟವನಿಗೆ ಬಿಡುಗೆಗುಡುವನು) (ಶಬ್ದಶ. ೦೦೩-೭). [ಬಿಡುಗೆ + ಕೊಡು$_1$]

ಬಿಡುಗೆಗೊಳ್ (ಕ್ರಿ). ಹೊರಡಲು ನಿರೂಪ ತೆಗೆದುಕೊಳ್ಳು ; ಬೀಳ್ಕೊಳ್ಳು : ಬಿಡುಗೆಗೊಂಡರು ವೃದ್ಧವ್ರತಿಕರು ಭರತೇಶನಡಿಗಳಿಗೆಱಗಿ ಭಕ್ತಿಯೊಳು (ಭರತ. ೦೬-೦೨೪). [ಬಿಡುಗೆ + ಕೊಳ್$_1$]

ಬಿಡುಗೆಗೊಳಿಸು (ಕ್ರಿ). ಬಂಧನದಿಂದ ಹೊರಹಾಕು ; ಸೆರೆಯಿಂದ ಹೊರಗೆ ಕಳಿಸು : ಆ ವೃದ್ಧ ವೆಂಕಟಾದ್ರಿನಾಯಕನನ್ನು ಕಾರಾಗೃಹದಿಂದ ಬಿಡುಗೆಗೊಳಿಸುವ ಸನ್ಧಾನದಲ್ಲಿ ಈ ದುರ್ಮೋಹನದ ಚಿನ್ತೆಗಳನ್ನೆಲ್ಲ ಮರೆಯುವೆನು (ಸುಗುಗಂ. ೦೦೭-೦೪). [ಬಿಡುಗೆಗೊಳ್ + —ಇಸು$_3$]

ಬಿಡುಗೆಚ್ಚಲು (ನಾ). ಹಾಲಿನಿಂದ ತುಂಬಿರುವ ಕೆಚ್ಚಲು ; ತೊರೆದ ಕೆಚ್ಚಲು : ಈ ಉಪೆ ನರ್ತಕಿ ಚಿತ್ರಾಂಬರಧಾರಿ ಬಿಡುಗೆಚ್ಚಲ ಧೇನುವಿನೊಲು ಎದೆ ತೋರಿ . . . ಬರುವಳು ಲೋಕಕೆ ಜ್ಯೋತಿಯನೆರೆದು ! (ಸೌಂದಸ. ೯೬) [ಬಿಡು$_1$ + ಕೆಚ್ಚಲು (<ಕೆಚ್ಚಲ್)]

ಬಿಡುಗೆಲಸ (ನಾ). ಬಿಡಿಯಾದ ಕೆಲಸ ; ಪ್ರತ್ಯೇಕವಾದ ಕೆಲಸ : ತೊಡರಿಸಿ ಪೊಸದಳಿರ್ದೊಂಬೆದೋರಣಗಳ ನಡೆಮಡಿಗಳನಳವಡಿಸಿ ಬಿಡುಗೆಲಸದ ಪೆಣ್ಗಳೆಡೆಯಾಡದಿರಿಮಿನ್ನಡೆಯಿಮೆಂದವರನಟ್ಟುವುದು (ಪಕವಿ. ೬-೩೫ ಸಾಂಗತ್ಯ). [ಬಿಡು$_3$ (<ಬಿಡಿ) + ಕೆಲಸ]

ಬಿಡುಗೆವಡು (ಕ್ರಿ). ಅವಕಾಶ ಹೊಂದು ; ಆಸ್ಪದವನ್ನು ಪಡೆ : ಅರಸಿಯರೆಲ್ಲರು ಮುಡಿಬಾಗಿ ಚಿಂತಿಸುತಿರಲು ಎಡೆನರೆಹಾಯ್ವ ಪಾಟಿಯ ರಾಣಿಯೊರ್ವಳು ಬಿಡುಗೆವಟ್ಟಿಂತು ನುಡಿದಳು (ಭರತ. ೫೯-೭೨).

[ಬಿಡುಗೆ + ಪಡು$_1$]

ಬಿಡುಗೇಶ (ನಾ). = ಬಿಡುಗುರುಳು : ಹಾಸಿ ಹರಹಿದ ತೋಳುಗಳ . . . ಬಿಡುಗೇಶದನುಜನ ಕಂಡು ದೊಪ್ಪನೆ ಕೆಡೆದನವನಿಯಲಿ (ತೊರರಾ. ೬-೪೭-೩೭); ಸಿಖಿ ಗರಿಯ ಗೆದರ್ದಂತೆ ಬಿಡುಗೇಶದೋನೆ ಮನೆಯೊಕ್ಕು ಬರೆ ಕಾಣುತ್ತಲಿ (ಪವಮೋ. ೨೬-೩೨). [ಬಿಡು$_1$ + ಕೇಶ]

ಬಿಡುಗೈ 'ಬಿಡುಗಯ್' ನೋ.

ಬಿಡುಗೊಡೆ (ನಾ). ದಾನವಾಗಿ ಬಿಟ್ಟು ಕೊಟ್ಟುದು ; ಕೊಡುಗೆ : ಪಳಥ ಬಿಡುಗೊಡೆಯಾಗಿ ಬಿಟ್ಟ ಗ ೨೧೪ ಪ ೬ (ಎಕ. VI, ಕಡೂರು. ೪೯-೩೩ ; 1291). [ಬಿಡು$_1$ + ಕೊಡೆ$_3$]

ಬಿಡುಗೊಳ್ (ಕ್ರಿ). ಬಿಡುಗಡೆ ಹೊಂದು ; ವಿಮೋಚನೆಗೊಳ್ಳು : ಚೆನ್ನೆಯ ಕಂಠಾಲಿಂಗನದಿಂ ನೆಱೆ ಬಿಡುಗೊಂಡು ಪೊರಳ್ವ ತಾರಾವಳಿಯಿಂದೇಂ ನೇಹದೆ ಸಂತೈಕುಂ ತನ್ನವೊಲಿರ್ಪೆನ್ನ ತನುವನೊಳ್ಗೆಳದಿಯವೋಲ್ (ಮಿತ್ರಗೋ. ೫೪-೬೦). [ಬಿಡು$_2$ (<ಬಿಡುವು) + ಕೊಳ್$_1$]

ಬಿಡುಜಡೆ (ನಾ). ತುರುಬು ಕಟ್ಟದೆ ಇಳಿಬಿಟ್ಟಿರುವ ಹೆರಳು,—ಜಡೆ : ಬಿಡುಜಡೆಯ ಬಿದುಮೊಗದ ಬಿರಿದೆಸಳ್ಗಣ್ಣ ಬಿಲ್ಪುರ್ಬಿನ . . . ಬೆಡಂಗಿನ ಬಾಲೆಯೊರ್ವಳ್ . . . ಬರುತುಮಿರ್ದಳ್ (ರಾಮಾಶ್ವ. ೪೯-೨೦).

[ಬಿಡು$_1$ + ಜಡೆ$_1$]

ಬಿಡುತರ್ (ಕ್ರಿ). ೧. ವಿಮೋಚನೆಯಾಗು ; ಬಿಡುಗಡೆ ಹೊಂದು : ನವನಿರ್ಯತ್ಸಹಕಾರವಾರಿ ಮದಮಂ ತತ್ಪಲ್ಲವಂ ಕರ್ಣಪಲ್ಲವಮಂ . . .

ಎಯ್ದೆ ಪೋಲೆ ಬಿಡುತಂದುಗ್ರದ್ವಿಪಂ ಬಂದು ತಾಂಗುವುದೆಂಬಂದೆಳಮಾವಿ ನೊಳ್ ದ್ವಿಪಮೆಗೆತ್ತೇಂ ಸೊರ್ಕು ಸೈತಿರ್ಕುಮೇ (ಶಾಂತಿಪು. ೯-೦೪೨) : ವಿನತಾತ್ಮಜನಂ ಕಂಡಂ ವಿನತಾತ್ಮಜನಿಂದೆ ನಾಗಪಾಶಂ ಬಿಡುತಂದನಿರುದ್ಧನಾಗಿ ಮುಂದಿರ್ದನಿರುದ್ಧನನಾಗಳಟ್ಕಱಂ ಪ್ರದ್ಯುಮ್ನಂ (ಜಗನಿ. ೧೮-೬೦). ೨. ಬಿಚ್ಚಿ ಹೋಗು ; ಕಳಚಿಕೊಳ್ಳು : ಕಚಬಂಧಂ ಬಿಡುತಂದು ನೀವಿ ಶಿಥಿಲತ್ವಂಬೆತ್ತು . . . ಕಣ್ಗೆಸೆಯೆ ಬಂದರ್ . . . ಕಾಂತೆಯರ್ (ಜಗನಿ. ೦೪-೬೫) ; ಮುಡಿ ಬಿಡುತಂದು ಸೂಸೆ ಮುಗುಳಂ (ರಾಜಶೇ. ೬-೧೦). ೩. ಹೊರಸೂಸು ; ಹೊರಚೆಲ್ಲು : ಪರಚಕ್ರಭೂಪರಟ್ಟಿದ ಕರಿಗಳ್ ಬಿಡುತರ್ಪ ಮದದ ಪೊನಲಿಂದೆತ್ತಂ ನರಲೋಕಚಂದ್ರನಾ ಮಂದಿರದೊಳಗೆಲ್ಲ ಕಾಲಮುಂ ಕೆಸಱಕ್ಕುಂ (ಕದಿರಾ. ೩-೦೮೨) ; ಬಿಡದೆ ಬಿಡುತರ್ಪ ಸಹಕಾರದ ಸೊನೆಯ ಸೋನೆಯೊಳಂ . . . ಪಾಡುವಪೆ ಣ್ದುಂಬಿಯ ಮಂದ್ರನಾದದಿಂ ಶ್ರುತಿಸುಭಗಮಾಗೆ (ಮಲ್ಲಿಪು. ೩-೦೦೦) ; ತಂಗೊಳದ ಬಿಡುತರ್ಪ ಪುಷ್ಪ ವಾಸನೆಯಿಂದ ಪಥಶ್ರಮವಡಗಿಪ್ಪುವೇನ ಬಣ್ಣಿಸುವೆ (ಕಂಪಿ. ೩-೦೦೪)

[ಬಿಡು$_1$ + ತರ್]

ಬಿಡುತೆ, ಬಿಡಿತೆ (ನಾ). ೧. ಬಿಡುಗಡೆ; ಬಂಧನರಾಹಿತ್ಯ; ಸ್ವಾತಂತ್ರ್ಯ: ನಲಮಿಸಿನ ಕೊಲೆ ಬಿಡುತೆ ಬಿತ್ತಿತ್ತು (ಪಾರಸಿ. ೨೨-೩೦೩). 'ಬಿಡುತೆಗೊಳ್ಳು', 'ಬಿಡುತೆಯಾನ್' ಪರಾ. ೨. ಅವಕಾಶ ; ಆಸ್ಪದ : ಲಂಘನೆಲಾಗು ಬಿಡುತೆಗಳ ಬಿಡುಬಿನಿಂ ಕುಡಿಮಿಂಚು ಪೊಡವಿಯೊಳು ಕುಡಿದೋಱಿತು (ಪಕಸ. ೩೫) ; ಕಾರ್ಯಕರ್ತಮಂಡಲಿ ಮೊದಲಾದ ಕೆಲವು ಅಧಿಕಾರ ಸ್ಥಾನಗಳಲ್ಲಿ ಒಂದು ವರ್ಷ ಅಥವಾ ಒಂದು ಸಾರಿ ಇದ್ದವರು ಪುನಃ ಇರಬೇಕಾದುದಿಲ್ಲವೆಂಬ ಬಿಡುತೆಯ ಏರ್ಪಾಟೂ ಇತ್ತು (ಸೋಕ್ರಮ. ೦೩). **ಬಿಡಿತೆ** : ೩. (ಬಾಣ ಮುಂತಾದುವನ್ನು) ಬಿಡುವಿಕೆ ; ಪ್ರಯೋಗಿಸುವಿಕೆ ; ಎಸೆತ : ಸರಳಿನ ಬಿಡಿತೆ ಬಿನ್ನಣಗಳನು ತೋರುವೆವು (ಅಂಬಿಕಾ. ೩೦-೦೩). ೪. ಸ್ವಚ್ಛಂದತೆ ; ಸ್ವೇಚ್ಛೆ : ಸೊಲ್ಲಿನ ಹಿಡಿತೆ ಬಿಡಿತಗಳೆಲ್ಲ ತ್ರೈಜಗದೊಡೆಯ ತಾ ಬಲ್ಲ (ಗಗತಾ. ೨-೧೪).

[ಬಿಡು$_1$ + — ತೆ$_2$]

ಬಿಡುತೆಗೊಳ್ಳು (ಕ್ರಿ). ಬಿಡುಗಡೆ ಹೊಂದು ; ಮುಕ್ತಿಯನ್ನು ಪಡೆ : ಏಕಣ್ಣ ಕೆಳರಿಪಿರ್, ಇದೆ ತಾನೆ ಮೇಲೆ ಮೇಲೊತ್ತಿ ಬರ್ಪಬಲಿಂದೆ ಬಿಡುತೆಗೊಂಡಿದ್ದಳನ್ ? (ಅಶ್ವತ್ಥಾ. ೩೨-೬೦೭); ದೋಣಿ ಹೊರಟುನಿಂತಿದೆ ಎಂಬ ಮಾತು ಬಿಡುತೆಗೊಂಡ ಚೇತನದ ನಿಲುವನ್ನು ಧ್ವನಿಸುತ್ತದೆ (ಪರಿಶೀ. ೨೩೨). [ಬಿಡುತೆ + ಕೊಳ್ಳು$_1$ (<ಕೊಳ್$_1$)]

ಬಿಡುತೆಯಾನ್ (ಕ್ರಿ). = ಬಿಡುತೆಗೊಳ್ಳು : ಕೇಡಿಂದೆ ನಾನ್ ಬಿಡುತೆಯಾಂತುದೋ ಪೆರ್‌ನಲಿವು (ಅಂತಿಗೂ. ೨೦-೪೨೨). [ಬಿಡುತೆ + ಆನ್$_1$]

ಬಿಡುತೆವೆಱು (ಕ್ರಿ). = ಬಿಡುತೆಗೊಳ್ಳು : ರಾಣಿಯ ಕಯ್ಯೊಳ್ಬಂದಿಗೆ ಸಿಲ್ಕಿ ಪುಣ್ಯದಿಂದಮಾಂ ಬಿಡುತೆವೆತ್ತು ಈ ಕಣ್ಗಳಿಂದಮೆ ನಿನ್ನಂ ನೋಡಿದೆಂ (ಮಿತ್ರಗೋ. ೫೩-೦೫). [ಬಿಡುತೆ + ಪೆಱು$_1$]

ಬಿಡುದಂಬುಲ (ನಾ). (ನಿರ್ದಿಷ್ಟವ್ಯಕ್ತಿಗಾಗಿ) ಮೀಸಲಾಗಿಟ್ಟ ತಾಂಬೂಲ : ಪಲತೆಱದ ತೊಡುಗೆ ಬಿಡುದಂಬುಲವೊಳ್ಳುಣಿಸುಗಳನೆಯ್ದೆ ಸಲಿಸುಗೆ ಕೂರ್ತಂತಲಸದೆ ಸಂಭೋಗದೊಳಂ ಪಲವುಂ ಬಿನದದೊಳವರ್ಗೆ ಕಳೆವುದು ಪೊತ್ತಂ (ಮದತಿ. ೮-೬೩). [ಬಿಡು$_1$ + ತಂಬುಲ]

ಬಿಡುದಲೆ (ನಾ). ಕೂದಲು ಕೆದರಿದ ತಲೆ ; ಬಿಟ್ಟ ಮಂಡೆ : ಬಿಡುದಲೆಯ ಬಿಟ್ಟ ಬಾಯ್ಗಳ ಬಱತ ಬಸುಱ . . . ಭೂತವೇತಾಳಪಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝುಂಕಿಸಿದವು (ಹಕಕಾ. ೦೨-೩೨) ; ಬಿಡುದಲೆಯ ಬಸಿವೇಱುಗಳ ಶೋಣಿತದ ನರಳುವಾರೋಹಕರ . . . ಭಂಗವನೇನ ನೆಂಬೆನು (ಕುಪ್ಪಾರ್ಯೋ. ೦೮-೩೪). [ಬಿಡು$_1$ + ತಲೆ$_1$]

ಬಿಡುದಾಣ (ನಾ). ಇಳಿದುಕೊಳ್ಳುವ ಸ್ಥಳ ; ತಂಗುದಾಣ ; ಬಿಡಾರ : ಮಂಗಳಿವೇಡಂ ಬಿಡುದಾಣಂ ತನಗೆನೆ ಜಸಮಂ ತಾಳ್ದಿದಂ ಕೃಷ್ಣರಾಜಂ (ಸೌಇಇ. XX. ೦೩೩-೦೬; 1067) ; ಪಾಂಡುಪುತ್ರರಲ್ಲಿಂದೆಟ್ಟು ತಮ್ಮ ಬಿಡುದಾಣಕ್ಕೆ ಪೋಪುದುಂ (ಮಹಾಪೇ. ೧೦-೧೪ ವ); ಬಿಡುದಾಣವನೀಯಲ್ . . . ಪಡೆವಳನಂ ಕಳುಪಿದಳ್ ನಿತಂಬಿನಿ ಕಡುಪಿಂ (ನಳಸಂ. ೭೦೩).

[ಬಿಡು$_1$ + ತಾಣ]

ಬಿಡುದಾರ (ನಾ). ಬರಿದಾದ ದಾರ ; ಮಣಿ ಕಳಚಿದ ಎಳೆ : ಮಡದಿ ಜಾನಕಿ ರತುನವಿಲ್ಲದೀ ಮೈಯೊಂದು ಬಿಡುದಾರವಾಯ್ತುಲ್ಲೊ ತಮ್ಮಾ (ಪಾರ್ತಿಸು. ೬೬). [ಬಿಡು$_2$ (< ಬಿಡುವು) + ದಾರ$_1$]

ಬಿಡುದೇವಸ್ವ (ನಾ). ದೇವಾಲಯಕ್ಕೆ ದತ್ತಿಯಾಗಿ ನೀಡಿದ ಆಸ್ತಿ; ದೇವರ ಸೇವೆ ನಡೆಸುವುದಕ್ಕಾಗಿ ಮಾಡಿದ ದಾನ : ಯಿಾ ಧರ್ಮಕೆ ಧಾರೆಯನೆಱದು ಆಚಂದ್ರಾರ್ಕ್ಕಸ್ಥಾಯಿಯಾಗಿ ಬಿಡುದೇವಸ್ವವಾಗಿ ಸರ್ವ್ವ ಮಾನ್ಯವಾಗಿ ಕೊಟ್ಟೆವಾಗಿ ಸುಖದಿಂ ಭೋಗಿಸೂದು (ಸೌಇಇ. IX-ii, ೪೩೦-೦೭; 1447); ಆ ದೇವರಿಂಗೆ ನಡವ ಅಂಗರಂಗ ನೈವೇದ್ಯ ಮುಂತಾದ ಧರ್ಮಂಗಳಿಗೆ ಬಿಡುದೇವಸ್ವವಾಗಿ ಕ್ಷೇತ್ರಂಗಳ ಬಿ[ಟ್ಟು] (ಕಇ. III-i, ೬-೦೩; 1527). [ಬಿಡು$_1$ + ದೇವಸ್ವ]

ಬಿಡುನಾಯ್ (ನಾ). ಸ್ವೇಚ್ಛೆಯಾಗಿ ತಿರುಗುವ ನಾಯಿ ; ಬೀದಿನಾಯಿ : ಕೊರಲೊಳ್ ಕಟ್ಟಿದ ಮಾಲೆಯ ಸಿರಿಖಂಡದ ತಳ್ಕಿನೊಂದು ಬಿಡುನಾಯ್ಬೆರ ಸಾದರದಿಂದನರ್ಘ್ಯಮಣಿವಿಷ್ಟರದೊಳ್ ಕುಳ್ಳಿರ್ದು ಸರುಗನುಣಿ ಕಂಡುದಱಿಂ ಪ್ರತಹೀನರ್. . . ಅತಿಕಷ್ಟರಪ್ಪರವನಿಯೊಳತಿಥಿಗಳಿನ್ನನ್ನದಾನಮಂ ಕುದುವೆಡೆಯೊಳ್ (ಆದಿಪು. ೦೫-೪೨). [ಬಿಡು$_2$ (<ಬಿಡುವು) + ನಾಯ್]

ಬಿಡುನುಡಿ (ನಾ). ಅಡ್ಡಿಯಿಲ್ಲದ ಮಾತು ; ತಡೆಯಿಲ್ಲದ ಮಾತು : ಮತ್ತೋರ್ವಳ್ ಪುರುಡಿನಿಂ ಪುಟ್ಟಿದ ಮುಳಿಸಂ ತಿಳಿಪಲೊಡರಿಸಿದ ವಲ್ಲಭಂಗೆಡೆಗುಡದೆ ಬಿಡುನುಡಿಯಂ ನುಡಿದು (ಸಂಧ್ರಪು. ೬-೬೬ ವ); ಬಿಡುನುಡಿಗಳ ಬಿತ್ತರಿಸುವ ಬಿಡದೆ ಕಾದುವ ಗಂಡ ಪೆಂಡಿರನೇತಕೆ ಪಡೆದನಕಟ ಪದ್ಮಭವನು (ಹದಿಬಿ. ೬-೯); ಸೊರ್ಕಿಂ ಗಟಪುವರಗಿಳಿಯ ಬಿಡುನುಡಿಯ ಭಂಗಿಯಂತೆ, ಕರ್ಣರಸಾಯನಮಾಗೆ ಶ್ರೀರಾಮನಂ ಪಾಡಿ ಪೊಗಟ್ಟ ಗಾಯಕಸಂದೋಹದಿಂ . . . ಕೇರಿಗಳ್ ಸೊಗಯಿಸೆ (ರಾಮಾಶ್ವ. ೨೩-೦೬).

[ಬಿಡು$_2$ (<ಬಿಡುವು) + ನುಡಿ$_2$]

ಬಿಡುಪಡು 'ಬಿಡುವಡು' ನೋ.

ಬಿಡುಬಿಸಿಲು (ನಾ). ತಡೆಯಿಲ್ಲದ ಬಿಸಿಲು : ಒಂದು ಬೀಜವ ಬಿತ್ತಿವಡೆ ಮೂರು ಫಲವಾಯಿತ್ತು . . . ಅದು ಬಿಡುಬಿಸಿಲಿನಲ್ಲಿ ಒಣಗೆ ಪಡಿಪುಚ್ಚಕ್ಕೆ ಮೂಗಳವಾಯಿತ್ತು (ಮೋಳಿಮಾ. ೨೦೭-೬೭೧).

[ಬಿಡು$_2$ (< ಬಿಡುವು) + ಬಿಸಿಲು (< ಬಿಸಿಲ್)]

ಬಿಡುಬೀಸು (ನಾ). ೧. ನಿರ್ಬಂಧವಿಲ್ಲದುದು ; ಯಾವ ಕಟ್ಟಿಗೂ ಒಳಪಡದುದು ; ಸ್ವಚ್ಛಂದವಾದುದು : ಆ ಸ್ವಾತಂತ್ರ್ಯದಲ್ಲಿ ನಮ್ಮ ಮನಸ್ಸು ಬಿಡುಬೀಸಾಗಿತ್ತು (ವಿಶಾಲ. II, ೪೦). ೨. ವಿಶಾಲವಾದುದು; ವಿಸ್ತಾರವಾದುದು ; ಹರವು : ನಮ್ಮ ಮನೆ ಬಿಡುಬೀಸಾಗಿದೆ (ರಾಮಾನೆ. ೬೫); ಅವಳು . . . ಕೋಣೆಯ ಬಿಡುಬೀಸಾದ ಸ್ಥಳದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸುತ್ತಾಡುತ್ತಿದ್ದಳು (ಪುನರು. ೦೪೩).

[ಬಿಡು$_2$ (<ಬಿಡುವು) + ಬೀಸು$_2$]

ಬಿಡುಬು (ನಾ). [ನಾಟ್ಯ]ಒಂದು ಭಂಗಿ (?): ಅಡಿದೊಡರ್ವನಿದು ಜಡೆಯ ನಡುಬಳಸಿಯನುಗೊಳಿಸಿ ಜಡಿವವೋಲೆಯನೊಡಂಬಡಿಸಿ ಒಡನೆ ಲಂಘನೆಲಾಗು ಬಿಡುತೆಗಳ ಬಿಡುಬಿನಿಂ ಕುಡಿಮಿಂಚು ಪೊಡವಿಯೊಳು ಕುಡಿದೋಱಿತು (ಪಕಸ. ೩೫). [?]

ಬಿಡುಮಂಡೆ (ನಾ). = ಬಿಡುದಲೆ : ಹಸುರುಮೈ ಹಾವಿನಾಭರಣ ಬಿಡುಮಂಡೆ . . . ಕೆಂಪಿನ ಪುಷ್ಪಸರವೊಪ್ಪುವಾ ಹೊಸ ವಿಜಯೆ

ಯಮದೊತಿ . . . ಅಜಿತೆಯೆಂಬೆಂಟು ಹೆಸರೆಸೆವ ದೇವಾಂಗನೆಯರು (ಸಿದ್ಧರಾ. ೪-೯) ; ತರಹರಿಕೆ ಕೈಗೂಡದವನೀಶ್ವರನು ಕೌಸಲೆಸಹಿತ ಬಳಲುವ ಶಿರದ ಬಿಡುಮಂಡೆಗಳ . . . ಕಟ್ಟಳಲಿಕೆಯಲೈದಿದನವನಿಜಾಪತಿಯ (ತೊರರಾ. ೨-೩-೩೩); ಆರು ಅಳುಪಿದವರುಗಳು . . . ತೆಂಕಮುಖವಾಗಿ ಬಿಡುಮಣ್ಡೆಯಲ್ಲಿ ಸುರಾಪಾನವಂ ಸೇವಿಸಿ ಹೋದವನ ಪಾಪಕೆ ಹೋಹರು (ಎಕ. XI, ದಾವಣ. ೦೦೬-೨೬; 1528). [ಬಿಡು$_1$ + ಮಂಡೆ]

ಬಿಡುಮಂದಿ (ನಾ). ಕೆಲಸಕ್ಕೆ ತೊಡಗಿಸಿದ ಜನ ; ಕೆಲಸಕ್ಕೆ ಬಿಟ್ಟ ಜನ : ಕರದ ಕುಡುಗೋಲು ತಡಿಕೆ ಮಕ್ಕರಿ ಸಹ ಬಹ ಕಾಮಾಟದ ಬಿಡುಮಂದಿಗೆ ಲೆಕ್ಕವಿಲ್ಲ (ಕಂನಪಿ. ೦೦-೪೦). [ಬಿಡು$_1$ + ಮಂದಿ$_1$]

ಬಿಡುಮಿದುಳ್ (ನಾ). (ತಲೆಯಿಂದ) ಹೊರಚೆಲ್ಲಿದ ಮಿದುಳು : ಬಿಡುಮಿದುಳ ರಾಸಿಗಳ ರಚನೆಯ ರಾಜಹಂಸೆಗಳ . . . ಸರಸಿಯ ನಡುವೆ ನಲಿನಲಿದಾಡುತಿರ್ದುದು ಭೀಮವನದಂತಿ (ಕುಮ್ಮಾರ್ಜ್ರೋ. ೦೨-೨೩) ; ಬಿಡುಮಿದುಳ ಜೊಂಡಿನಿಂ ನಡುತೊಡೆಯ ತುಂಡಿನಿಂ ಪೊಡೆಗೆಡೆದು ಬೀಳ್ದರಿಂ ನೆತ್ತರಿನೊಳಾಳ್ದರಿಂ ರಣಧರಣಿ ಕಣ್ಗೆಸೆದುದು (ಕಪಪು. ೩೮-೩೯) ; ಬಿಡುಮಿದುಳ ತುಂಡದಿಂ ತಂಡದಿಂ ರುಂಡದಿಂ ಮುಂಡದಿಂ . . . ಎಡೆವಿಡದೆ ಸತ್ತರಿಂದಿಡಿದಿರ್ದುದು (ಕೈಪುಭಾ. ೦೨-೪೪).

[ಬಿಡು$_1$ + ಮಿದುಳ್]

ಬಿಡುಮುಡಿ (ನಾ). ೧. ತುರುಬು ಕಟ್ಟದಿರುವ ಕೂದಲು ; ಬಿಚ್ಚಿರುವ ತಲೆಗೂದಲು : ಸ್ಮರಕೃತಕಾಚಲಶಿಖರಾಂತರಲತೆ ಮೇಲ್ವಾಯ್ದದೊಂದು ಸೋಗೆಯ ಬಿಣ್ಪಂ ಧರೆಗೆಱಗುವಂತದೊರ್ವಳ್ ವರಾಂಗಿ ಬಿಡುಮುಡಿಯಿನೆಸೆದು ಪಿಡಿಯಿಂದಿಟ್ಟಿದಳ್ (ಜಗವಿ. ೦೪-೫೮) ; ನಿಕ್ಕುವಂ ಪೆಣ್ಣೆ ಇವಳ್. ಸರಸಕಮಲಮೆ ಮೊಗಂ; ಮೀನೆ ಕಣ್; ಪಾವಸೆ ಬಿಡುಮುಡಿ (ರಾಮಾಶ್ವ. ೬-೦೦). ೨. ಕೆದರಿದ ತಲೆ ; ಓರಣವಾಗಿ ಬಾಚದಿರುವ ಕೂದಲು : ಬಿಡುಮುಡಿಯ ಸುರಿವ ಕಂಬನಿವೊನಲ . . . ಮಡದಿಯರ ದನಿಯನಾಲಿಸಿ ಪರ್ಣಶಾಲೆಯಂ ಪೊಱಮಟ್ಟನು (ಜಡಕಾ. ೭-೨೬) ; ಒಡನೆ ಬಂದರು ಕಂಬನಿಯ ಬಿಡುಮುಡಿಯ ಹಾಹಾರವದ ರಭಸದ ನಡೆಯಲಖಿಳವಿಲಾಸಿನಿಯರು ಸಹಸ್ರಸಂಖ್ಯೆಯಲಿ (ಕುಮ್ಮಾಸ. ೦೪-೬೯). ೩. ಸಡಿಲವಾಗಿ ಹಾಕಿದ ತುರುಬು ಅಥವಾ ಜಡೆ : "ಬಿಡುಮುಡಿ=ತುದಿಯಲ್ಲಿ ಮಾತ್ರ ಗಂಟುಹಾಕಿರುವ ಕೂದಲು" (ಪ್ರಭಣ್ಣ). [ಬಿಡು$_1$ + ಮುಡಿ$_3$]

ಬಿಡುಮುತ್ತು 'ಬಿಡಿಮುತ್ತು' ನೋ.

ಬಿಡುರಥ (ನಾ). ಹರಿಯುವ ರಥ ; ಮುನ್ನುಗ್ಗುವ ತೇರು : ತುಡುಕುವಾನೆಯನೀಸಿನಲಿ ಖುರವಿಡುವ ಕುದುರೆಯನೊತ್ತಿ ಹಾಯ್ಸುವ ಬಿಡುರಥವ ತಲೆವರಿಗೆಯಲಿ ತವಕಿಸುವ ಕಾಲಾಳ ಕಡಿದನಂಬಿನೊಳಾಗಜವನಾ ಕಡುಹಯವನಾ ರಥವನಾ ವಂಗಡದ ಕಾಲಾಳುಗಳನೊಂದು ವಿಘಳಿಗೆ ಮಾತ್ರದಲಿ (ಕುಮ್ಮಾಕ. ೦೫-೨೩) ; ಅಶ್ವವನಶ್ವದಿಂದಪ್ಪಳಿಸುತೊಡ ಹಾಯ್ದು ಬಿಡುರಥವ ರಥದಿಂದ ಹೊಯ್ದುಱ್ ಹುಡಿಗೆದಱುತಱ್ಯಟ್ಟಿಸದೆದನು (ತೊರರಾ. ೫-೬-೦೮). [ಬಿಡು$_1$ + ರಥ]

ಬಿಡುರನ್ನ (ನಾ). ಬಿಡಿಯಾದ ರತ್ನ : ಕಡೆಗರ್ಘ್ಯಶಾಂತಿಧಾರೆಯ ಮಾಡಿ ಮಿಸುನಿಪೂ ಬಿಡುರನ್ನಗಳ ವೃಷ್ಟಿಮಾಡೆ (ಭರತ. ೫೯-೨೯).

[ಬಿಡು$_3$ (<ಬಿಡಿ) + ರನ್ನ (<ರತುನ)]

ಬಿಡುಲವಣ (ನಾ). ಒಂದು ಬಗೆಯ ಕ್ಷಾರ ; ಡೊಣೆಯಂಪ್ಪು : ಒಡಲೊದವಿ ಬಾತು ತೋರ್ಪೊಡೆ . . . ಆಡಿನ ಪಾಲಂ ಬಿಡುಲವಣ ಮುಮಂ ಕರಿಯ ತೊವರಿಯಶನಮೆ ಪಥ್ಯಂ (ಲೋಕೋಪ. ೯-೦೬೪); ಬಿಡುಲವಣ ಜೀರಕ ಚವ್ಯಲವಣ ಸಂವರ್ಚಕಮಮೃತಂ ಶ್ಲೇಷ್ಮವಾತ ಶೂಲಾಪಹರಂ (ಅಶ್ವಶಾ. ೦೦-೦೦). [< ಬಿಡಲವಣ]

ಬಿಡುವಕ್ಕಲು (ನಾ). ಪ್ರತಿಯೊಂದು ಒಕ್ಕಲು ; ಪ್ರತ್ಯೇಕವಾದ ಒಕ್ಕಲು : ತಳವಾರ ಮುಖಾಂತ್ರ ಬಾಹ ಬಿಡುವಕ್ಕಲ ತೆರು (ಎಕ. VII, ಶಿವಮೊ. ೩-೨೬ ; 1671). [ಬಿಡು$_3$ (<ಬಿಡಿ) + <ಒಕ್ಕಲು$_2$]

ಬಿಡುವಡು, ಬಿಡುಪಡು (ಕ್ರಿ). ಬಿಡುಗಡೆಯನ್ನು ಹೊಂದು; ಸ್ವತಂತ್ರವಾಗು; ಮುಕ್ತವಾಗು : ಜನಕಂ ತನ್ನ ಪುಣ್ಯದೊಳಡ್ಡಮಂ ಧಾರೆಯನೆಱೆವುದುಂ ಪಾಪಿಗಳೆಲ್ಲರ್ ಬಿಗಿವಟ್ಟ ನರಕಬಾಧೆಯಿಂ ಬಿಡುವಟ್ಟು. . . ಬರ್ದಿಲರ ನಾಡಂ ಪುಗುತಂದರ್ (ರಾಮಾಶ್ವ. ೦೦೭-೬). ಬಿಡುಪಡು : ಬಿಡುಪಟ್ಟ ನೊಸಲ ನುಣ್ಗುರುಳ ಸಾಲಿಂದೊಂದು ಬೆಡಗಾಗಿ ನಿಂದಿರ್ದರಾಗ (ಭರತ. ೦೪-೦೨). [ಬಿಡು$_2$ (<ಬಿಡುವು) + ಪಡು$_1$]

ಬಿಡುವಡೆ (ಕ್ರಿ). = ಬಿಡುವಡು : ಅಣೆಗಟ್ಟನಲ್ಲಿ ತುಂಬಿ ತುಳುಕುವ ಜೀವನಪ್ರವಾಹವು ಕಂಡಿಯಲ್ಲಿ ಬಿಡು(ಮೋಕ್ಷ)ವಡೆದು ಹರಿದು ಸಾಗರದಲ್ಲಿ ಸಂಗಮವಡೆದು ಶಾಂತವಾಗುತ್ತಿದೆ (ನಾಡೋಜ. ೩೫೪).

[ಬಿಡು$_2$ (<ಬಿಡುವು) + ಪಡೆ$_1$]

ಬಿಡುವನಿ (ನಾ). ಸಂರಿಯುತ್ತಿರುವ ಕಂಬನಿ,— ಕಣ್ಣೀರು : ಒಡನೆ ಕಳುಹುತ ಬಂದನಾ ನೆಲದೊಡೆಯನನುಜರುಸಹಿತ ನಯನದಿ ಬಿಡುವನಿಯ ಸಾಲಿನಲಿ ನನೆದರು ಬಂದು ಕಿಱಿದೆಡೆಯ (ಕುಮ್ಮಾರ್ಜ್ರೋ. ೪-೫೩); ಹರಿನಂದನನ ಲಲನೆಯ ಲೋಚನದ ಬಿಡುವನಿಯನಂಶುಕದಗ್ರದಿಂದೊರಸಿದನು (ತೊರರಾ. ೪-೫-೨೬). [ಬಿಡು$_1$ + ಪನಿ$_2$]

ಬಿಡುವನೆ (ನಾ). ಇಳಿದುಕೊಂಡಿರುವ ಮನೆ ; ಬಿಡಾರ : ಮಹಾರಾಜನು . . . ಆ ವೇಶ್ಯೆಯ ಬಿಡುವನೆಗೆ ಎರಡುಸಾರಿ ಬಿಜಯ ಮಾಡಿದ್ದನು (ಮಂತ್ರಶ. ೦೩೦-೦೬). [ಬಿಡು$_1$ + ಮನೆ]

ಬಿಡುವಯಣ (ನಾ). ಪ್ರಯಾಣಮಧ್ಯದಲ್ಲಿ ತಂಗುವಿಕೆ ; ಉಪ್ಪಯಣ : ಬಿಟ್ಟ ಪಯಣದೊಳು ಬಿಡುವಯಣಮಿಲ್ಲದೆ ದಾಳಿಯಿಟ್ಟು (ಸಮ್ಮಕೌ. ೨-೦೦). [ಬಿಡು$_1$ + ಪಯಣ]

ಬಿಡುವರಿ (ನಾ). ಸ್ವೇಚ್ಛೆಯಾಗಿ ನುಗ್ಗುವುದು ; ಅಡೆತಡೆಯಿಲ್ಲದೆ ಸಾಗುವುದು : ಗಿಡುಮರನ ಸೆಳೆಸೆಳೆದು ಬಿಸುಡುತ ಬಿಡುವರಿಯ ಬೀದಿಗಳಲಟ್ಟಿದವು . . . ಕಪಿಪಡೆಯ ಕೊಂದವು ಕೋಟಿಸಂಖ್ಯೆಯಲಾ ಮದೇಭಚಯ (ತೊರರಾ. ೬-೩೨-೫). [ಬಿಡು$_2$ (<ಬಿಡುವು) + ಪರಿ$_3$]

ಬಿಡುವಲೆ (ನಾ). ಒಂದು ಬಗೆಯ ಬಲೆ ; ಅಗಲವಾಗಿ ಹಾಸುವಂಥ ಬಲೆ : ಬಿಡುವ[ಪಾಠಾಂ. ವೆ]ಲೆ ಸೊರ್ಕುಮರ್ದು ಪದವಿಲ್ . . . ಗಿಡಗ ಮೆವಿಪ್ಪಿವಂ ಪಿಡಿದು ಬೇಂಟೆಗೆ ಸಂದ ಪುಳಿಂದರೆಯ್ದಿದರ್ (ರಾಜಶೇ. ೫-೫೨); ನಿಡುವಲೆ ಸಾಲ್ವಲೆ ಬಿಡುವಲೆಗಳನಿಪ್ಪುವೆಸೆದುವಾ ಬೇಂಟಿಗರೊಳ್ (ಶಬಶಂ. ೩-೨೪). [ಬಿಡು$_1$ + ಬಲೆ$_1$]

ಬಿಡುವಾಯ್, ಬಿಡುವಾಯಿ (ನಾ). ಅಗಲವಾಗಿ ತೆರೆದ ಬಾಯಿ : ಬಿಡುವಾಯ್ ತುಡುಜೊಡರಱುಗೆಱ್ಯೆಯಿಂಬಿವು ಪಡೆಯವು ಬಿಂದುವನುದಂತ ವೃತ್ತಿಯನಾಳ್ದುಂ (ಕಮರ. ೦೭೦) ; ಹೆಬ್ಬಲ್ಲ ಬಿಡುವಾಯ ಜೋಲ್ವ ಕೆನ್ನಾಲಗೆಯ ಗಬ್ಬಿನಾಯ್ಗಳ ಹಾಸನುಗಿದು ಬಿಡೆ ಪಂದಿಗಳನಬ್ಬರಿಸಿ ತುಡುಕಿದುವು (ಕೈಪುಭಾ. ೨೮-೪೬). ಬಿಡುವಾಯಿ : ಬ್ರಹ್ಮಹತ್ಯೆ ಕಾರೊಡಲಿಂ ತಾಂ ಬಿಡುವಾಯಿಂ ಕಪ್ಪರಮಂ ಪಿಡಿದೊಡನೊಡನೆಯ್ದಿ ಸುರಪನಂ ಪೀಡಿಪುದು (ಹಾಲಾಸ್ಯ. ೦-೨-೨೫). [ಬಿಡು$_1$ + ಬಾಯ್]

ಬಿಡುವಾಯಿ 'ಬಿಡುವಾಯ್' ನೋ.

ಬಿಡುವಾರು (ನಾ). ಬೇಟೆಯ ಒಂದು ಸಾಧನ (?) : ಪೆರ್ಬಲೆ ಬಿಡುವಾರು ಗೋಡುವಲೆಯೆಂಬಿನಿತಂ ಪೊಱ್ಗಟ್ಟಿ ಕಾನನಸ್ಥಲದೊಳಗಲ್ದು ತೋಹುವಿಡಿದೊಡ್ಡಿದರೆಯ್ದೆ ಪುಳಿಂದನಾಯಕರ್ (ದಶಕು. ೨-೦೦೫). [?]

ಬಿಡುವೀಳೆಯ (ನಾ). = ಬಿಡುದಂಬುಲ : 'ಬಿಡುವೀಳೆಯದಂಬುಲ' ಪರಾ. [ಬಿಡು$_1$ + ವೀಳೆಯ]

ಬಿಡುವೀಳೆಯದಂಬುಲ (ನಾ). = ಬಿಡುದಂಬುಲ : ನಿಡುಸುಯ್ಲ ಧಾಳಿಯ ಜಳಕೆ ಚೆಂದುಟಿರಸವೊಡನೆ ಬಜ್ಜಿತುದು ಕರ್ಪುರದ ಬಿಡುವೀಳೆಯದಂಬುಲ ವಿರಹಾಗ್ನಿಗೆ ಪುಡಿವಟ್ಟುದೇನ ಬಣ್ಣಿಸುವೆ (ಕಂಪಪಿ. ೯-೧೭೨).

[ಬಿಡುವೀಳೆಯ + ತಂಬುಲ]

ಬಿಡುವು, ಬಿಡು$_2$ (ನಾ). ೧. ವಿರಾಮ; ವಿಶ್ರಾಂತಿ : ಗುರುಗಳ ಪರಿಚರ್ಯೆಯನ್ನು ಯಥಾವಿಧಿಯಾಗಿ ಮಾಡಿ ಮುಗಿಸಿದನಂತರವೇ ಅವಳಿಗೆ ಬಿಡುವು ಸಿಕ್ಕುತ್ತಿತ್ತು (ಬಾಡಿಜ. ೪೦೦); ಬಿಡುವನು ಕೊಟ್ಟಂಥ ಹೊಲದೊಳು ಬೆಳೆದರೆ ಹುಲುಸಾಗಿ ಬಲಿವುದು ಕಾಳು (ಇಂಪಾಪ. ೧೪೦-೯೩); ಆಫೀಸಿನಲ್ಲಿ ಬಿಡುವಿಲ್ಲದ ಕೆಲಸ (ಮಗಮಾಂ. ೦೩೪). ೨. ರಜೆ ; ಸೂಟಿ : ಅವರು ಈ ಮೂರು ಬಿಡುವಿನ ದಿನಗಳನ್ನು ಬಹು ಸುಖವಾಗಿ ಕಳೆಯಲಿದ್ದರು (ಆಪೋಲೀ. ೦೨೬) ; ನನ್ನ ಬಿಡುವು ಇನ್ನೆರಡು ವಾರವಿದೆ (ಗಿಂಬಾ. ೫); ಈ ದಿನ ಶಾಲೆಗೆ ಬಿಡುವು (ಕಪಪು. ೩-೦). ೩. ಅಂತರ ; ಅವಕಾಶ ; ಆಸ್ಪದ : ಪಿಡಿವ ಜವನಿಕೆಯ ಮಜ್ಜಿಯೊಳ್ ಕುಡುಮಿಂಚಿನ ಬಳ್ಳಿ ಮುಗಿಲ ತೆಳ್ಳೊರೆಯೊಳ್ ಕಣ್ಗೆಡಱುವೊಲಡರೆ ತೋರ್ದುವು ತೊಡವಿನ ಬಿಡುವುಂ ಬಿಡೌಜನಂಗಚ್ಛವಿಯುಂ (ಅನಂಪು. ೫-೯೪); ಬವರ ಸವೆಯದೆ ತೇಜಿಗಳ ಬಲು ಜವವು ಜಾಱದೆ ಬಿಡುವ ತಿವಿದರೆ ಸವಗವುಚ್ಚಳಿಸುವವು (ಕುಪ್ಯಾಭೀ. ೪-೬೬) ; ಕಾರ್ಯಭಾರವು ಬಹಳವಾಗಿದ್ದುದರಿಂದ ಇತ್ತಕಡೆ ಬರಲು ಬಿಡುವೇ ಸಿಕ್ಕಲಿಲ್ಲ (ರಾಪಿಜ. ೦೦೫). ೪. ಮನೆಗಳಿಲ್ಲದ ವಿಶಾಲವಾದ ಪ್ರದೇಶ ; ಬಯಲು : ಮಂದಿರ ಪ್ರಾಕಾರ ಸೋಪಾನದೊಳು ಕುಳಿತು ಪಡುವ ಬಿಡುವಿನ ಸೊಗಕು ಮಿಗಿಲ ಕಾಣೆ (ಮಲೆದೇ. ೪೬-೯). ೫. ಸುರಿಯುವಿಕೆ : ಧಾರೆಯೆರೆಯುವಿಕೆ : ವಿಡೂರಜಂಗಳ ಕೊಡಂಗಳ ಬಿಡುವಿನಿಂ ಘೃತಾಭಿಷೇಕಮನತಿ ಸಂತೈಸುವಂತೆಯುಂ . . . ಅಭಿನಯಿಸುತ್ತಂ (ಅನಂಪು. ೫-೭೦ ವ). **ಬಿಡು$_2$** : ೧. ಈಚೀಚೆಗೆ ಬಿಡು ಸಿಗೋದೇ ಅಪರೂಪವಾಗಿದೆ (ರೂಡಿ). ೬. ಬಿಡುಗಡೆ : ಅನಿರ್ಬಂಧತೆ : 'ಬಿಡುವಡು', 'ಬಿಡುವಡೆ' ಪರಾ. ೭. ಸ್ವಚ್ಛಂದತೆ : ಸ್ವೇಚ್ಛೆ : 'ಬಿಡುನಾಯ್', 'ಬಿಡುಸೂಳೆ' ಪರಾ. ೧೮. ಬರಿದು ; ಖಾಲಿ ; ಬೋಳು : 'ಬಿಡುಗಿವಿ', 'ಬಿಡುದಾರ' ಪರಾ. ೯. ದಾನ : ಕೊಡುಗೆ (?) : ಚೊಕ್ಕನಾಥದೇವರಿಗೆ ಸಲುವಂತಾ ದಿನಕಟ್ಟಲೆಯಲು ಕರಡಿಯ ಪಳಿಯ ಚತುಸೀಮೆವೊಳಗಾದ ಬಿಡುಗಳಿಗೆ ಸಲುವ ಗ್ರಾಮ ೧ ಜ ಮಗ್ಗದೆಜ್ (ಎಕ. IX (ಸ). ಪಂಗಳೂ. ೦೬೨-೩; 1408).

ಬಿಡುವಾಗು = ಅವಕಾಶವುಂಟಾಗು : ಆಸ್ಪದವಾಗು : ಇನ್ನು ಮದನನ ಬೀಯಗಕೆ ಬಿಡು [ಪಾಣಾಂ. ಡ]ವಾಯ್ತು ನಿನಗೆಲೆ ರವಿಜ (ತೊರರಾ. ೪. ೫-೧೩). [ಬಿಡು$_1$ + — ವು./ಮಲ. ವಿಟ; ತೆಲು. ಬಿಡುವು]

ಬಿಡುವುಗೊಳ್ (ಕ್ರಿ). ಸ್ವತಂತ್ರವಾಗಿರು; ಯಾವ ಕಟ್ಟಿಗೂ ಸಿಕ್ಕದಿರು : ಎನ್ನ ಪಕ್ಷಧರ ಚತುಷ್ಪಾದಿಯಿದು . . . ಪಾಯ್ವುದುಂ. ಮನೆಯೊಳಗದಱ ಗೊತ್ತಿನೊಳ್ ಬಗೆಯೊಸೆದು ಬಿಡುವುಗೊಂಡಪುದು (ಬದ್ಧಪ್ರ. ೨೨-೪೫೬).

[ಬಿಡುವು + ಕೊಳ್$_1$]

ಬಿಡುವೆಣ್, ಬಿಡುವೆಣ್ಣು (ನಾ). (ಯಾವುದಾದರೂ ಸೇವೆಗಾಗಿ) ಮೀಸಲಾಗಿ ಕೊಟ್ಟ ಯುವತಿ ; ಸಖಿ : ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದುಂ ಬಲ್ಲಹನಱಿಯೆ ಗುಣಾರ್ಣವಂ ಕವಿತಾಗುಣಾರ್ಣವನಂ (ಪಂಪಭಾ. ೦೪-೫೫) ; ಮೀಟಾದ ರೂಪು ಜವ್ವನ ಬಿಡುವೆಣ್ಗಳೊಳ್ ಬೇಟವ ಮಾಳ್ಪುದನ್ಯಾಯ ಕೂಟಕೆ ತರಣಿ ಬಂದರೆ ಪೃದ್ಧನೆಂದು ಕವಾಟವ ಮುಗಿದುವಂಘೋಜ (ಪೋಹತ. ೦೫-೬); ಬಿನವಕ್ಕಂಗಣಮಂ ಸಾರುವ ಬಿಡುವೆಣ್ಗಳ್ ಪಿಂಗದೆ ಹಣಿಗಿ ನಡೆವ ಬೆಸವೆಣ್ಗಳ್ . . . ಮನೆವೆಣ್ಗಳ್ ಸೊಗಸಿದುದಾವುದಯದೊಳು (ಜಯಕಾ. ೦೨-೦೫). **ಬಿಡುವೆಣ್ಣು** : ಬಿಡುವೆಣ್ಣುಗಳ ನಿಳಯವೆನಿಸಿ ಮೆಱೆದಿಹುದಾ ದುರ್ಗದ ಕಲಕಲರವ ರಾಜವೀಥಿ (ಕುರಾಸಾಂ. ೪-೦೦೬); ಬಿಡುವೆಣ್ಣು ಬೆಲೆವೆಣ್ಣು ಬೆಸವೆಣ್ಣುಗಳ ವಂಗಡವಾ ಪುರದೊಳೊಪ್ಪಿದುದು (ರಾಮಪಿ. ೩-೪೬); ಬೆಲೆವೆಣ್ಣು ಬೆಸವೆಣ್ಣು ಮನೆವೆಣ್ಣು ಬಿಡುವೆಣ್ಣು . . . ಭೂಲಲನೇಶನ ನೋಡಿದರು (ಗೊಮ್ಮಜ. ೦-೬೫). [ಬಿಡು$_1$ + ಪೆಣ್]

ಬಿಡುವೆಣ್ಣು 'ಬಿಡುವೆಣ್' ನೋ.

ಬಿಡುವೆಸರ್ (ನಾ). ಬೇರೆಯ ಹೆಸರು ; ಪರ್ಯಾಯನಾಮ : ಒಡವುಟ್ಟಿದ ಕೌಸ್ತುಭಮಣಿಯೊಡನಿರಲಾಗೆಂದು ಬಿಟ್ಟು ವಿಷ್ಣುವಿನುರಮಂ ಬಿಡುವೆಸರ್ಗೆ ಪದ್ಮನಾಭನ ಬೆಡಂಗಿನುರದಲ್ಲಿ ಲಕ್ಷ್ಮಿ ಸಲೆ ನೆಲಸಿರ್ಪಳ್ (ಅರ್ಧನೇ. ೦-೪೨). [ಬಿಡು$_3$ (<ಬಿಡಿ) + ಪೆಸರ್]

ಬಿಡುವೊನ್ (ನಾ). ಹಂಚಲು ಅನುಕೂಲವಾದ ಬಿಡಿಯಾದ ನಾಣ್ಯ.—ಹೊನ್ನು : ಅರ್ಥಿಸಂತತಿಗೀಯಲ್ ಬಿಡುವೊನ್ನುಮನಾಳ್ಗಟ್ಟುವ ತೊಡರೊಳ್ ತೊಡರ್ದಿರ್ದರರಸುಮಕ್ಕಳ್ ಕೆಲಬರ್ (ಪಂಪಭಾ. ೧೦-೩೬).

[ಬಿಡು$_3$ (<ಬಿಡಿ) + ಪೊನ್]

ಬಿಡುಸೂಳೆ (ನಾ). ಒಬ್ಬನಿಂದ ಪರಿತ್ಯಕ್ತಳಾಗಿ ಸ್ವೇಚ್ಛೆಯಾಗಿ ಬಾಳುವ ಸೂಳೆ.—ವೇಶ್ಯೆ: ಈಗ ಒಬ್ಬರ ಸೂಳೆ ಇನ್ನು ಅವರು ಬಿಟ್ಟರೆ ಬಿಡುಸೂಳೆಯಾಗಿ ಕಂಡವರನ್ನೆಲ್ಲ ಮೋಹಿಸಬೇಕೇ ? (ಹಳ್ಳಿಹಾ. ೨೯); ಈ ಹಾದಿ ಬಿಟ್ಟವರನ್ನು ಸಾಮಾನ್ಯವಾಗಿ 'ಬಿಡುಸೂಳೆ'ಯರೆಂದು ಊರಲ್ಲಿ ಕರೆಯುತ್ತಾರೆ (ಹುಮುಖ. ೭೯) ; ನಾಳೆ ಎರಡು ಹೊತ್ತಿನ ಅನ್ನಕ್ಕೆ ತೊಂದರೆಯಾಗಿ ಮಗಳು ಬಿಡುಸೂಳೆಯಾಗಿ ಬಾಳುವುದು ಅವಳಿಗೆ ಇಷ್ಟವಿಲ್ಲ (ದೇವಹಂ. ೪೬).

[ಬಿಡು$_1$ + ಸೂಳೆ$_1$]

ಬಿಡುಹ (ನಾ). ತ್ಯಜಿಸುವಿಕೆ ; ತೊರೆಯುವಿಕೆ : ಆವಂಗದಿಂ ಧನ ಬರಲು ಬಿಡುಹವೆ ನಿರಾಶತ್ವ (ಶಿವಗೀ. ೫೬-೨೬೪).

[ಬಿಡು$_1$ + — ಹ$_2$ (< — ಪ$_2$)]

ಬಿಡುಹು (ನಾ). ಬಿಡುಗಡೆ ; ಅನಿರ್ಬಂಧತೆ : ತುಡುಕುವಂಕುಶದಿಂದ ಮುನ್ನಿಳೆಯೊಡೆಯೆ ಗಜ ಗಾಢಿಸಿದವರಸರ ಬಿಡುಹು ತಡೆದೆಡಗಲಸಬಗೆದುವು ವಿಗಡ ಪಾಯದಳ (ಕುಪ್ಯಾಭೀ. ೨-೨).

[ಬಿಡು$_1$ + — ಹು$_2$ (< — ಪು$_2$) / ತೆಲು. ವಿಡುಪು]

ಬಿಡೆ$_1$ (ನಾ). (ಕರಾ) ಹಣ್ಣಿನ ಒಳಭಾಗದ ಒಂದೊಂದು ಖಂಡ ; ತೊಳೆ : ಹಲಸಿನ ಹಣ್ಣಿನ ಬಿಡೆಗಳನ್ನು ಜೇನುತುಪ್ಪದಲ್ಲಿ ಅದ್ದಿಯದ್ದಿ ಯಥೇಷ್ಟವಾಗಿ ತಿಂದು ತೇಗಿದನು (ಗಂಗಾವ. ೨೦). [< ಬಿಡಿ ?]

ಬಿಡೆ$_2$ (ಅ). ೧. ವಿಶೇಷವಾಗಿ ; ಅತಿಶಯವಾಗಿ : ಕಪಿಂಜಳಂ ಬಾಯಱಿದಬ್ರಹ್ಮಣ್ಯಮೆಂದು ಬಿಡೆ ಪುಯ್ಯಲ್ಚಲ್ (ಕಾದಂಪೂ. ೯೦೬) ; ಬಿಡೆ ಬಗ್ಗಿಸೆ ಮಧುವಿಕಾರಿ ಕೋಗಿಲೆ ಕಿಸುಗಣ್ಣುವೆ ನೀಂ ವಿಜಾತಿಯೊಳ್ಗುಣಮುಂಟೇ (ಮಲ್ಲಪು. ೩-೩೯) ; ಮಿಗೆ ಮುನ್ನಂ ಕಂಡವೋಲಿರ್ದವುದು . . . ಈ ಪಾದರಿ ಬಿಡೆ ಮೊರವೀ ತುಂಬಿ (ಕಬ್ಬಿಣಾ. ೦೦೬). ೨. ರಭಸವಾಗಿ ; ತೀಕ್ಷ್ಣವಾಗಿ ; ಜೋರಾಗಿ : ಒಡನೆ ಕಾಳಗ ಬಯಿಸಿದ ಘೋಟಿಯಿಲರ್ಪ್ಪ ಜಿಪಿಂಗೆ ಮಾರ್ಬ್ಬಲಂ ಬಿಡೆ ಕಡಿಕಯ್ದಾ ನೂಂಕಿ ಕಿಡೆ (ಎಕ. II. ೦೩೬-೬ ; ಸು. 940). ೩. ನಿಸ್ಸಂದೇಹವಾಗಿ ; ನಿಜವಾಗಿ ; ಖಂಡಿತವಾಗಿ ; ಸ್ಪಷ್ಟವಾಗಿ : ಎರಡನೆಯ ಪುರಮಥನಯೆನಿಸುವ ವಸಿಷ್ಠ ಮುನಿಪನ ಮೊಮ್ಮನು ಬಿಡೆ ಪರಾಶರನು ನಾನು (ಹಚಕಾ. ೫-೬೫). ೫ ಈ ಅವ್ಯಯವು ಅನೇಕ ಕ್ರಿಯಾಪದಗಳೊಡದೆ ಸೇರಿ ಅನೇಕ ಅರ್ಥಗಳನ್ನು ಕೊಡುತ್ತದೆ. [< ಬಿಡು$_1$?]

ಬಿಡೆಯ$_1$, ಬಿಡಯ$_1$ (ನಾ). ೧. ಬಿಡುವು ; ಅವಕಾಶ ; ಪುರುಸೊತ್ತು : ನಿಮ್ಮ ವನದೋಲಗಕೆ ಬಿಡೆಯವ ಕಾಣೆನು (ಕುಪ್ಯಾಅ. ೦೫-೨೮) ; ಜಗಕೆ ನಿಮ್ಮಡಿವಿಡಿಯಲೆಲ್ಲಿಯ ಬಿಡೆಯ ಮಾಯೆಯ ಸೆಡಕಿನೊಳು ಸಿಲುಕಿ (ಮದೇಪು. ೨೬-೪). ೨. ಎಡೆ ; ಅಂತರ : ಬಿಡೆಯವಿಲ್ಲದ ಕುಚ ಬಿಗುಹೇಱಿ

ರುತುಕಾಲವಡೆದ ಪುಷ್ಪಿಣಿಯರೊಪ್ಪಿದರು (ಮೋಹತ. ೦೬-೩೨). **ಬಿಡೆಯ್ಯ** : ೨. ನಿನ್ನಾತ್ಮನೊಡಲುಗೊಂಡಿರ್ಪ ತನಕೈಕ್ಯಪದಕೆ ಬಿಡಯವೆಂತಲ್ಲದಱ ನೊಡಲುಪಾಧಿಕದಳಿವ ಪಡೆಯಬೇಕು (ಪುಸೋಪಿ. ೬-೪೭). ೩. ವಿರಾಮ; ವಿಶ್ರಾಂತಿ : ಬಿಡಯವಿಲ್ಲದ ಹೊನ್ನಂಡೆಗಾತಿಯರು ಬೆಂಗಡೆಯ ಸಾರಿದರು ರುಕ್ಮಿಣಿಯ (ಮೋಹತ. ೦೪-೬೦). ೪. ತಣಿವು ; ತೃಪ್ತಿ: ದಣಿಯದಾತನ ಬೆರಳು ನಾರಾಯಣರವದ ವೀಣೆಯಲಿ ಹೃದಯಾಂಗಣದ ಸೀಮೆಗೆ ಬಿಡಯ ವಾಗದು ಕೃಷ್ಣಪದ ಕೇಳಿ (ಕುಪ್ಯಾಸ. ೦-೨೪). [< ಬಿಡುವು]

ಬಿಡೆಯ್ಯ, ಬಿಡಯ್ಯ, ಬಿಡಿಯ, ಭಿಡಿಯ, ಭಿಡೆ, ಭಿಡೆಯ (ನಾ). ೧. ದಾಕ್ಷಿಣ್ಯ; ಸಂಕೋಚ : ನೀನೇ ಕೆಣಕಿದವನೇ ಶಿವಶಿವಾ ರಾವಣತನೂಭವ ನೆಂಬ ಬಿಡೆಯಕೆ ಸೈರಿಸಿದೆನೈಸೆ (ತೊರಣಾ. ೬-೦೪-೮) ; ಅವನೊಬ್ಬಗೆ ಚಿತ್ತ ದಲಿ ಪರರ ಠಾವೆನಿಪ್ಪಾ ಬಿಡೆಯವಿಲ್ಲ (ಪಿಶಾಗ ೦೦-೩-೦೨) ; ಬಿಡೆಯಮಿದೇ ತರ್ಕೀ ಪರಿ ಕುಡುವಂದದೆ ಕೊಟ್ಟೊಡಾನೆ ಕೊಂಬವನುಸಿರಾ (ಪಕಪಿ. ೬-೩೩). **ಬಿಡಯ್ಯ**: ೧. "ಬಿಡಯಮೆನಲ್ ದಾಕ್ಷಿಣ್ಯಂ" (ಪತುಪಿ. ೨೦೨) ; ಕಡು ಜಾಣಂ ಕಲೆಯೊಳ್ ಸಮಂತು ಕುಶಲಂ ಸಂಗೀತಸಾಹಿತ್ಯದೊಳ್ . . . ಆಂ ಬಿಡಯಕ್ಕೆನ್ನೆನಿದಂ ದಲೆಲ್ಲರುಸಿರ್ವರ್ ಶ್ರೀ ಚಿಕ್ಕದೇವೇಂದ್ರನೊಳ್ (ಪುತ್ರಗೋ. ೩-೭). **ಬಿಡಿಯ** : ೨. ಲಜ್ಜೆ; ನಾಚಿಕೆ : ದಾನವೇಶ ರೋಷದಿಂ ಬಿಡಿಯವಿಲ್ಲದೆ ಸಭಾಂತರದಿ ಬಿಡಿಯುತ್ತರವ ನುಡಿಯಬಹುದೆ (ಪಪಪೋ. ೨೭-೬೩). **ಭಿಡಿಯ** : ೧. ಭಿಡಿಯಾ ಸಲ್ಲದು ಎನಗೆ ಕೊಡದ ಮ್ಯಾಲೆ ತಿಳಿ ಬಡಿವಾರವೇನು ಭಯಬಡುವ ನಾನಲ್ಲ (ಮೋಕ್ಷದೀ. ೨೦-೩). ೩. ಪ್ರೀತಿ ; ಪ್ರೇಮ: ಅವಳ ಮುಂದೆನ್ನಾ ಭಿಡಿಯಾವಿಟ್ಟಾನೆ ಮರ್ಮ ಗಳಾಡಿ ಬಿಟ್ಟಾನೆ (ಶ್ರೀಕೃಷಾ. ೨೪). **ಭಿಡೆ** : ೧. ಇವರು ಭಿಡೆ ವ್ಯಕ್ತಪಡಿಸಿ ದಾಗ . . . ಬಲವಂತಗೊಳಿಸಿದ (ಮೂರುದಾ. ೬) ; ಗಾಬರಿಯ ದನಿಯಲ್ಲಿ ನುಡಿದರು ಬರಿಯೇ ಭಿಡೆಗಾಗಿ (ಅಪೋಲೀ. ೦೩೦); ನಿನಗೆ ಭಿಡೆ ಅನಿಸದಿದ್ರ . . . ಖೋಲೀ ಖಾಲೀ ಮಾಡಿಸಿಕೊಡತೀನಿ (ಗೀಷುಗೆ. ೯). ೨. ಮಾಯಾ ಪಾಶ ಬಿಗುಹೇಱೆ ಮಱುಗಿದನು ಭಿಡೆಯನು ಮಱೆದನು (ಕೌಶಿರಾ. ೬-೩೦). **ಭಿಡೆಯ** : ೧. ರಾಯರು ಅಕ್ಕನ ಭಿಡೆಯಕ್ಕೊಳಗಾದರು (ಕಪಪಿ. ೫೬೮); ಅನಾಥಬ್ರಾಹ್ಮಣನ ಭಿಡೆಯ ಯಾತಕೆ (ಕರ್ಪಾಳ. ೩೦೦).

ಭಿಡೆ ಬಿರಸತ್ತು = ದಯೆ ಮತ್ತು ದಾಕ್ಷಿಣ್ಯ: ಪೆಜತ್ತಾಯರಿಗೆ ಭಿಡೆ–ಬಿರ ಸತ್ತಿಲ್ಲವೆಂದು ನನಗೆ ಖಾತ್ರಿಯಾಯಿತು (ಗಂಗಾಪ. ೦೧). ಭಿಡೆ ಮುರವತ್ತು = ಭಿಡೆ ಬಿರಸತ್ತು : ಯಾವ ಭಿಡೆ–ಮುರವತ್ತುಗಳಿಗೆ ಒಳಗಾಗುವುದಿಲ್ಲ (ರಂಪ. ೨) : ನಿನ್ನ ಭಿಡೆ–ಮುರವತ್ತುಗಳನ್ನು ಅಡ್ಡ ಹಾಕಿ ನಮ್ಮನ್ನು ಬಿಡಿಸುವುದಾದರೆ . . . ಹೇಳುವೆವು (ಇಂದುಮು. ೬೩).

[< ಪ್ರಾ. ವಿಡ್ಡಾ./ಸಂ. ವ್ರೀಡಾ./ತುಳು. ಬಿಡೆ]

ಬಿಡೆಯ್ಯ 'ವಿಡಾಯ' ನೋ.

ಬಿಡೆಯಂಬಡೆ (ಕ್ರಿ). ಸೊಗಸನ್ನು ಪಡೆ ; ಶೋಭಿಸು : ಕುಡಿದು ಕೊರಲ್ವರಮಮರ್ದಂ ಕಡುಬಿಡೆಯಂಬಡೆದು ನಡೆವ ಪೊಸಬೆಳ್ಮುಗಿಲಂತಡಿ ಯಿಡುವಳ್ (ಪಕಪಿ. ೪-೮). [ಬಿಡೆಯ್ಯ (< ವಿಡಾಯ) + ಪಡೆ$_1$]

ಬಿಡೋಜ (ನಾ). ಇಂದ್ರ; ದೇವೇಂದ್ರ : ರೇವಂತನ ರೇಖೆಯಂ ಬಿಡೋಜನೋಜೆಯನೀಶ್ವರನ ದಕ್ಷತನಮಂ ತನ್ನೊಳಳವಡಿಸಿ (ಪುಷ್ಯಾಸ್ತ್ರ. ೬-೩೦ ಪ). [< ಸಂ. ಬಿಡೌಜಸ್]

ಬಿಡೌಜ (ನಾ). = ಬಿಡೋಜ : "ಪುರುಹೂತಂ. . .ಬಿಡೌಜಂ ಕೌಶಿಕಂ ಹರಿ ಪಾಕಶಾಸನಂ . . . ತುರಾಷಾಡ್ಮರುತ್ವಾನೆನಲ್ಕೆ ಸುತ್ರಾಮನಕ್ಕುಂ" (ಮಂಗರಾ. ೦೨-೦) ; ವಿಭವಜಿತಬಿಡೌಜಂ ರೇಚಕಾಂತಾಮನೋಜಂ (ಮದಶಿ. ೦-೦೩) ; ಕುಡಲಱಿಯಂ ನಿಮಗೆಂತುಂ ಬಿಡೌಜನಾ ಪಾರಿಜಾತ ಕುಜಮಂ (ಪಗಪಿ. ೦೩-೨೬). [ಸಂ. ಬಿಡೌಜಸ್]

ಬಿಡೌಜವಧು (ನಾ). ದೇವೇಂದ್ರನ ಹೆಂಡತಿ ; ಶಚೀದೇವಿ : ಆಗಳ್ ಬಿಡೌಜವಧು ವಿಧುಮುಖಿ ನೂರ್ಮಡಿಸಿದ ಹರ್ಷೋತ್ಕರ್ಷತೆಗೆಡೆಯಾಗಿ ಮರಾಳಯಾನದಿಂ ಪೊಱಮಟ್ಟಳ್ (ಪೇಮಿಪು. ೬-೦೦೫). [ಸಂ.ಬಿಡೌಜವಧೂ]

ಬಿಡೌಜಸ (ನಾ). = ಬಿಡೋಜ.

ಬಿಡೌಜಸರ್ (ಬಹುವ) = ಇಂದ್ರನ ಕಡೆಯವರು; ದೇವತೆಗಳು: ನೇಜೆಯದಿಂದಿಱಿದೆತ್ತಿ ನಿಜೌಜಮನೆ ಬಿಡೌಜಸರ್ಗೆ ತೋರ್ಪಂತಸುಹೃದ್ರಾಜಿ ಯನೆ ವಾಜಿವಾಹಕರಾಜಿ ಮಹಾಜಿಯೊಳ್ ತಳರ್ದುದದ್ಭುತಮೊಗೆಯಲ್ (ರಾಜಶೇ. ೬-೬೩). [ಸಂ. ಬಿಡೌಜಸ್]

ಬಿಣ್, ಬಿಂ (ಸಪೂರೂ). ಬಿಣ್ಣಿತು ಎಂಬ ನಾಮವಾಚಕಕ್ಕೆ ಸಮಾಸ ಗಳಲ್ಲಿ ಬರುವ ಆದೇಶರೂಪ : 'ಬಿಣ್ಗೆಚ್ಚಲ್', 'ಬಿಣ್ಪು' ಪರಾ. ಬಿಂ : 'ಬಿಂಗುಂಡು', 'ಬಿಂಪು' ಪರಾ. [< ಬಿಣ್ಣಿತು]

ಬಿಣಕು (ನಾ). (?) : ಫಣಗಳನು ಹೊಲೆವೀರಬಾಹುವು ಬಿಣಕುಗಳ ಮಾಡಿ ಥರಥರದ ಚೇಷ್ಟೆಗಳ ತೋರಿಸಿ ಪುರದ ವೀಧಿಯೊಳಾಗ ಬಂದನು (ಹಪುಪ. ೦೦೩). [?].

ಬಿಣಮ್ಮ (ನಾ). ಒಬ್ಬಾತನ ಹೆಸರು : ಶ್ರೀಧರಜೌವೇರಪುತ್ರಸ್ಯ ಬಿಣಮ್ಮದ್ವೇದಿ (ಇಅ. XVIII, ೩೬೭-೦೭; ೩ಪೆಯ ಕಕ). [? + ಅಮ್ಮ$_1$]

ಬಿಣಯಿತ (ನಾ). ಒಬ್ಬಾತನ ಹೆಸರು : ಶ್ರೀದಸವಮ್ಮರಸರ ಮಗ ಬಿಣಯಿತನಾಳೆ (ಎಕ. XI, ೩ಗಳೂ. ೦೩-೦ ; ಸು. 1010 ?).

[ಇದು 'ವಿನಯಾದಿತ್ಯ' ಎಂಬುದರಿಂದ ಬಂದಿರಬಹುದು]

ಬಿಣಿಕೆ (ನಾ). ಒಂದು ಬಗೆಯ ಸಸ್ಯ : "ಬಿಣಿಕೆ ಬಲವತಿಯಕ್ಕು" (ಮಂಗರಾ. ೪೨-೩೭). [?]

ಬಿಣಿಲು 'ಬೀಳಿಲ್' ನೋ.

ಬಿಣ್ಗುಂಡು, ಬಿಂಗುಂಡು (ನಾ). ಬಂದರಿನಲ್ಲಿ ಹಡಗನ್ನು ನಿಲ್ಲಿಸುವುದ ಕ್ಕಾಗಿ ಹಡಗಿಗೆ ಸೇರಿದಂತೆ ಇಳಿಬಿಡುವ ದಪ್ಪವಾದ ಕಬ್ಬಿಣದ ಗುಂಡು ; ಲಂಗರು : ಅಂತು ಬಿಣ್ಗುಂ[ಪಾಠಾಂ. ಬಿಂಗುಂ, ಬೀಟ್ಗುಂ] ಡಿಕ್ಕಿದ ಬಹಿತ್ರದಂತೆ ಅಲ್ಲಿಂ ತಳರದೆ ನಿಂತ ತನ್ನ ರಥಮಂ ಕಂಡು (ಅದಿಪು. ೦೨-೬೩ ಪ) ; ಆ ಭುವನತ್ರಯವಿಜಯಿಯಪ್ಪ ರೂಪಾತಿಶಯ ದೊಡನಮಳ್ಳಳೆದಂತೆ ಬಳೆದ ನಿಸರ್ಗ ಶೌಚಾದಿಗುಣಂಗಳಿಂ ಬಿಣ್ಗುಂಡಿಕ್ಕಿದ ಭೈತ್ರಮುಮಂ . . . ಪೋಲ್ತು (ಶಾಂತಿಪು. ೦೦-೯೨ ಪ). **ಬಿಂಗುಂಡು** : ಭೈತ್ರಕ್ಕೆ ಬೆಂ [ಬಿಂ] ಗುಂಡನಿಕ್ಕಿದಂತಿರಬೇಕು ಹಿರಿಯರು (ಅವಕಂ. ೬೯-೩೩೩). 'ಬೀಟ್ಗುಂಡು' ಪರಾ. [ಬಿಣ್ (< ಬಿಣ್ಣಿತು) + ಗುಂಡು]

ಬಿಣ್ಗುಂದು (ಕ್ರಿ). ಗರ್ವವು ಇಳಿ; ಸೋಲು : ಮೂದಲಿಸಿ ನುಡಿಯಲಾಗಿ ಬಿಣ್ಗುಂದಿ ತಿರುಗಿ ಶಿವನಂ ಪತ್ರವಂ ಬೇಡೆ (ಶೇರಮ. ೯-೪೦).

[ಬಿಣ್ (< ಬಿಣ್ಣಿತು) + ಕುಂದು$_1$]

ಬಿಣ್ಗೆಚ್ಚಲ್ (ನಾ). ಹಾಲು ತುಂಬಿ ದಪ್ಪಪುಷ್ಟವಾಗಿರುವ ಕೆಚ್ಚಲು: ಬಿಣ್ಗೆಚ್ಚಲಿಕ್ಕಿ ಕೊಡವಾಲ್ಗಱೆಯದಾವಿಲ್ಲ ನುಣ್ಗಾಡಿವೆತ್ತಿರದ ಪಶುಪಕ್ಷಿ ಮೃಗಮಿಲ್ಲ ಕಣ್ಗೊಳಿವ ರಾಮರಾಜ್ಯದೊಳ್ (ಪೈಮಿಪಾ. ೦೬-೦೩).

[ಬಿಣ್ (<ಬಿಣ್ಣಿತು) + ಕೆಚ್ಚಲ್]

ಬಿಣ್ಗೊನರ್ (ನಾ). ದಪ್ಪವಾದ ಚಿಗುರು,–ಕುಡಿ : 'ಬಿಣ್ಗೊನರ್ಗಿಱು' ಪರಾ. [ಬಿಣ್ (< ಬಿಣ್ಣಿತು) + ಕೊನರ್$_2$]

ಬಿಣ್ಗೊನರ್ಗಿಱು (ಕ್ರಿ). ಗಟ್ಟಿಯಾಗಿರುವ ಚಿಗುರೆಂದು ಭಾವಿಸು,– ಭ್ರಮಿಸು : ಪಣ್ಗೆತ್ತು ಸವಿದುಟಿಯ ಬಿಣ್ಗೊನರ್ಗೆತ್ತು ಬೆರಳ್ಗಳ ಸೋವುವ ಪೆಣ್ಗಳಂ ಬಗೆಯದಾ ನುಣ್ಗಳಿಗಳೆಸೆವವು (ಗುರುಭ. ೨-೦೩).

[ಬಿಣ್ಗೊನರ್ + ಗಿಱು]

ಬಿಣ್ಗೊನೆ 'ಬಿಣ್ಗೊಲೆ' ನೋ.

ಬಿಣ್ಗೊಲೆ, ಬಿಣ್ಗೊನೆ (ನಾ). ಹೂವು, ಹಣ್ಣುಗಳಿಂದ ತುಂಬಿರುವ ಗೊನೆ ; ದೊಡ್ಡ ಗೊಂಚಲು ; ದಪ್ಪವಾದ ಗೊನೆ : ತೂಗಿ

ಬ[ಹಾಣಾಂ.ಪ]ಣ್ಗೊಲೆಯುಂ ಬಳ್ಕುಪ ಕೌಂಗು ಕಾಯ್ದುಜುಗಲಂ ಪೇಜ್ರ್ದರ್ ಚೆಂದೆಂಗು . . . ಏಸಿಗುಂ ವಿದ್ಯಾಧರೋದ್ಯಾನದೊಳ್ (ಆದಿಪು. ೦-೬೭) ; ಬಿಣ್ಗೊಲೆ[ಹಾಣಾಂ. ನೆ]ಯಿಂ ತೂಗಿ ತೊಸೆವ ಕೌಂಗಂ ತನ್ನತ್ತಣ್ಗೆ ಬರೆ ತೆಗೆವ ತೆಱದಿಂ ಕಣ್ಗೊಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ (ಕಾಪ್ಯಾಪ. ೨೦೬). **ಬಿಣ್ಗೊನೆ** : ಕುದುರೆಯ ಪಂದಿಯ ವಿಪ್ಪೆಯೊಳೊದವಿದ ಕರ್ಬಿಂದೆ ಸೂಜಿಯಿಂ ಕಾಸಿ ಒಟ್ಟಿಕ್ಕದಱೊಳ್ ಬಾಟಿಯ ಗೊನೆ ಪುಟ್ಟಿದೆಡೆಯನಱಿ ದೂಜಿ ಪಿರಿಯ ಬಿಣ್ಗೊನೆಯಕ್ಕುಂ (ಶೋಕೋಚ. ೬-೨೬) ; ಬಿಣ್ಗೊನೆ ಗಳನೊನದಾಡುವ ಕೌಂಗು ಬೇಗ್ಗಳಿಸ್ರುಜುಗಿರೆ ಕಾಯ್ತ ಬಕ್ಕೆ (ಎಕ. XI, ಡಾಕಡಾ. ೩೫-೩೭ ; ಸು. 1160) ; ಪಣ್ಗಾಮ್ ತೀವಿದ ಬಾಜಿಯ ಬಿಣ್ಗೊನೆ . . . ಪಥಿಕರ ಕಣ್ಗೊಳ್ಪಂ ಪಾಸಕೆ ಬಯಕೆಯಂ ಪುಟ್ಟಿಸುಗುಂ (ಪಂಪ್ರತಿ. ೦-೦೦೭). [ಬಿಣ್ (< ಬಿಣ್ಣೆತು) + ಗೊಲೆ೨]

ಬಿಣ್ಣೆತು, ಬಿಣ್ಣೆತ್ತ್ರ (ನಾ). ೧. ಹೊರೆ ; ಭಾರ ; ತೂಕ : "ಭಾರಕೆ ಬಿಣ್ಪು ಬಿಣ್ಣೆತಕ್ಕು" (ಕಂಕ್ಕೆ. ೬೨) : ಲಲನೆಯರ್ಗರ್ಂಗರಾಗಮದು ದುರ್ವಹಂ . . . ಕಣ್ಮಲರ್ಗ್ ಕಾಡಿಗೆ ಬಿಣ್ಣೆತು ಪಾದಪಂಕಜ ಕೃಲತೆಗೆ ಭಾರಮೆಂದೊಡಱಿಯೆಂ ಪೊಗಲಲ್ ಸುಕುಮಾರವೃತ್ತಿಯಂ (ಕಾಡಂಪು. ೦೦೦೩) : ತನುಲೇಪೆಗೆ ಚಂದನದಣ್ಪು ಬಿಣ್ಣೆತಂಬಲಸಪದಕ್ಕ ಲಕ್ತಕರಸಂ ಪೊಜೆಯೆಂಬಿನಿತೊಂದು ಚಿತ್ರಮಾ ಲಲನೆಗೆ ದೇವಕೀವನಿತೆ ಗಾದುದು ನಿರ್ಭರಪೂರ್ಣಗರ್ಭದೊಳ್ (ಹರಿವಂ. ೨-೯೯) ; ಬಿಣ್ಣೆತೇನೆಪಂಗೆ ನಿಮಗೆ ಬಂಧುತನದೊಂದು ಬಣ್ಣಿಗೆಯಿರಲಿ (ಕಬಸ. ೩೫-೪೬). ೨. ದೊಡ್ಡದು ; ಗಾತ್ರವಾದುದು ; ಭಾರಿಯಾದುದು : ಬಿಣ್ಣೆತು ಕೊನೆ, ಬಿಣ್ಗೊನೆ (ಶಬ್ದಾಮ. ೪೪೪ ಕ್ರಹೋ). **ಬಿಣ್ಣೆತ್ತು** : ೧. ತನ್ನ ಕಯ್ಯ ಕಳಶಮಂ ಬಳ್ಳಿಯೊಳ್ ಕಟ್ಟಿ ನೀರಂ ತೆಗೆವಾಗಳದು ಪುಲಿ ಪಿಡಿದು ನೆಲ್ವುದುಮದು ಕಯ್ಗೆ ಬಿಣ್ಣೆತ್ತಾದೊಡದಂ ನೋಟ್ಟಿ ನೆಂದು . . . ತೆಗೆಯೆ (ಪಂಕಕಂ. ೦೦೯-೪) ; ನುಣ್ಣೆತ್ತು ; ತಣ್ಣೆತ್ತು ; ಬಿಣ್ಣೆತ್ತು (ಶಮರ. ೬೬ ಕ್ರಹೋ). ೨. ಬಿಣ್ಣೆತ್ತಾದಲರ್ಜೊಂಪದ ಕಂಪಂ ಹಣ್ಣ ಹದುಳದಿಂದಾಂತಳಸುತ್ತಂ . . . ಸುಳಿಗೆಲರಾ ಬನದೊಳ್ (ಕಾರ್ಕರೇ. ೨-೨೦).

ಬಿಣ್ಣೆತಂಬಡೆ = ಘನತೆಯನ್ನು ಹೊಂದು ; ಗೌರವಾಸ್ಪದವಾಗಿರು : ಬಿಣ್ಣೆತಂಬಡೆದ ಭವ್ಯೋತ್ತಮರ್ ಕಡು ಮುನಿದು ಬಣ್ಣಗೆಡಿಸುವರೆ ತಮ್ಮ ವರೊಂದುವೇಳೆಯೊಳ್ಪಪ್ಪವಾತಂ ನುಡಿದೊಡೆ (ಸಮ್ಮಳಿ. ೦೦-೫೫). **ಬಿಣ್ಣೆದಂ** = ಘನತೆಯುಳ್ಳವನು : ಲಘುವಾತ್ರನಾಗಿ ಕಾಗೆಯ ಕೊರ ಲೊಳ್ಕಟ್ಟಿದೊಡೆ ಪಾಱುವವನುಂ ನೆಟ್ಟನೆ ಬಿಣ್ಣೆದನೆನಿಕ್ಕುಮಾರ್ಹತದಿಂದಂ (ಸಮಕ. ೦೫-೪೫) ; ಗಾರುಡಮೊಂದನೆ ಕಲ್ಲದನ್ನೆವರೆಗಂ ಜಸಕೆಲ್ಲಂ ವಿದ್ಯೆ ಬುಂದೆ ಬಿಣ್ಣೆದನಲ್ಲಂ (ಧರ್ಮಾಪ್ರ. ೦೨-೦೦೬).

ಬಿಣ್ಣೆತ್ತು 'ಬಿಣ್ಣೆತು' ನೋ.

ಬಿಣ್ಮೊಡೆ (ನಾ). ದಪ್ಪವಾದ ತೊಡೆ ; ತೋರವಾದ ಊರು : ಬಿಣ್ಮೊಡೆಯ ಬಡವಾಸೆಯ ಬಳ್ಳುಡುವಿನ . . . ಬೆಡಂಗಿನ ಬಾಲೆಯೊರ್ವಳ್ . . . ಬರುತುಮಿರ್ದಳ್ (ಧಾಪಪಾಕ್ಕ. ೪೬-೨೬) ; ಬಿಡಯದೆ ಕಂಭವೇಱಿ ಬಱಿಕ್ಕೈ ಬಿಗಿಪಂತಿರೆ ಸುತ್ತಿ ಪಾಯ್ವ ಬಿಣ್ಮೊಡೆಗಳನುರ್ಬಿ ಪೆರ್ಬಾಕೆಯ ಪೋಲ್ ಬೆಣೆಗೊಂಡು ಪೊದಪ್ಪಿ ತೋಳ್ಗಳಿಂ . . . ಜಟ್ಟಿಗರ್ ಗರುಡಿಗೋವಳನೀ ನೃಪನೆಂದು ವಂದಿಪರ್ (ಕಪಪ. ೪-೦೩೭). [ಬಿಣ್ (< ಬಿಣ್ಣೆತು) + ತೊಡೆ೨]

ಬಿಣ್ನುಡಿ (ನಾ). ಕೆಚ್ಚಿನ ಮಾತು ; ವೀರೋಕ್ತಿ : ನೀಮೆ ಬಿಲ್ಲಾಳ ಬಲ್ಲಾಳರಪ್ಪನಂ ಮೊನೆಯೊಳೆ ಹಯಮಂ ಕೊಳ್ವುದು ರಾಮನಂ ತೋಱುದ ಸಂಧಿಗೊಂದೆಂ ಬಿಣ್ನುಡಿಗೆ ಬೆಜಗಾಗಂ (ಧಾಪಪಾಕ್ಕ. ೦೪೩-೦೩). [ಬಿಣ್ (< ಬಿಣ್ಣೆತು) + ನುಡಿ೨]

ಬಿಣ್ಪಡರು (ಕ್ರಿ). ದೊಡ್ಡದಾಗು ; ಬೆಳೆ ; ವೃದ್ಧಿಸು : ತಿಣ್ಣಮೊಲೆ ಬಿಣ್ಪಡರೆ ಕಾಲ್ಕುಂದಗಱಿಗಲಸೆ . . . ಪೊಸಗಾಡಿವೆತ್ತಿರ್ದಳೀ ವಣ್ಣಿಸುವೆನು (ಕೃಬಾಣ. ೦೬-೩೪). [ಬಿಣ್ಪು + ಅಡರು೧ (< ಅಡರ್)]

ಬಿಣ್ಪಾರಿ (ನಾ). ಪ್ರಾಣಿಗಳು ಬೇಟೆಗೆ ಗಾಢವಾಗಿ ಸಿಕ್ಕಿ ಬೀಳುವ ಜಾಗ.— ಪ್ರದೇಶ : ಹರಿಣೇಲೋಚನೆ ದೀವದಾ ಹರಿಣನೇಂ ವೆರ್ಗಾಡಿದೀ ಬೀಡು ಬಿಣ್ಪಾರಿಗಳ್ಳೇಣ್ಪಾರಿ ಶಂಬರಾರಿ ಶಬರಂ ಪುಲ್ಲಂಬು ಕೆಲ್ಲಂಬು ಮದ್ದಿರ ಪಾಪಸ್ಥಿತಿ ಗೋರಿಗೋರಗೆಯೆನಿಪ್ಪಂತಾದುದು (ಶಪಂಪು. ೧೦-೮೨). [ಬಿಣ್ (<ಬಿಣ್ಣೆತು) + ಪಱಿ೩]

ಬಿಣ್ಪು. ಬಿಂಪು (ನಾ). ೧. ಭಾರ ; ಒಜ್ಜೆ ; ತೂಕ : "ಬಿಣ್ಪೆಂದುಂ, ತಿಣ್ಣಮೆಂದುಂ ಭಾರಂ" (ಶಪಸಾ. ೬೯-೩೬೭) ; ಎಣಿಕೆಗಳುಂಬುಮುಂ ಪರಿದುಮಾದ ಪದಾತಿವರೂಥವಾಜಿವಾರಣಬಲದಿಂದಮಿರ್ಪುಡಿಸೆ ಧಾತ್ರಿಯ ಬಿಣ್ಪಿನಗೆಂದಿನಂದವಲ್ಲಣಕಮಿದೆಂದು . . . ಬೇಸಱುಂ ತಿಣುಕಿದನಾನಲುಮ್ಮಳಿಸೆ ಶೇಷನಶೇಷಮಹೀವಿಭಾಗಮುಂ (ಪಂಪಭಾ. ೯-೧೯) : ನಡು ನಡುಗೆ ಬಿಗಿದೊಗೆದ ಪೆರ್ಮೊಲೆಯ ಬಿಣ್ಪಿನಿಂ . . . ಬೆಲ್ವಿಸೆಯೆ ಕರಮೆಸೆದರಬಲೆಯರ್ (ಶಪು. ೪-೬ ಹಗಳೆ). ೨. ದೊಡ್ಡ ಗಾತ್ರ. — ಆಕಾರ : ಸ್ತನದ ಬಿಣ್ಪನೆ ನೋಡಿ ಮನಮಿಕ್ಕುವರ್ ವಿಟರ್ ಕನಕಪಂಕಜದ ಬಿರಿಮುಗುಳ ನನೆ ನೋಡಿ ಮನಮಿಕ್ಕುವಂತೆ ಮಱುದುಂಬಿ (ಉತ್ತಪು. ೦೦-೯೪). ೩. ದೃಢವಾದುದು ; ಮಜಬೂತಾದುದು : ಗಟ್ಟಿಯಾದುದು : (ಕ). ೪. ಅತಿಶಯ ; ಆಧಿಕ್ಯ : ಹೆಚ್ಚಳ : ಭೂತಳ (ಲ)ಸತಿಗೊಳ್ವನಾಳ್ದ ನವಮೇಃಖಳಿಯೆಂಬ ಸಮುದ್ರದಂತೆ ಕೊಂಡಲಿ ಗೆಜ್ಜೆಯೊಪ್ಪಿ ತೋಱುವುದೆನೆ ಬಿಣ್ಪಿನೊಳಾವರಿಸಿರ್ದ್ದ ಪೆಂಪಿನೊಳ್ (ಎಇ. XIII, ೩೩೦-೩೪ ; ೩೭೨) ; ನಿನ್ನ ಪೆಂಪಿನ ಬಿಣ್ಪಂಗದಾರ್ ಮರುಳ್ಗಿಳಸರ್ (ಕಾಡಂಕಾ. ೦೦೦) ; ಈಗಳಾತನ ವುರುಷಾರ್ಥದ ಪುರುಳುಂ . . . ಪರಾಕ್ರಮದ ಬಿಣ್ಪುಂ ಕರತಳಾಮಳಕಮಾಗಿರ್ದಪ್ಪುದು (ಪಂಪಕಂ. ೧೩-೨೦). ೫. ವೈಭವ ; ಆಡಂಬರ : ತನ್ಮಹಾರುದ್ರಗಣಭರಮನೀ ನಾಳ್ಗಳರಸುಗಳ ಬಿಣ್ಪಂ ಶಿವನ ಸಭೆಯಲ್ಲದಾವ ಲೋಕಂದಳೆದೊಡಂ ಮುಳ್ಕಿ ಬೀಳವೆ ಸಕಲ ದಿಗ್ಗಜಂಗಳ್ (ಪಪು. ೨೯-೩೩). ೬. ಹಿರಿಮೆ ; ಮಹತ್ತ್ವ ; ಗುರುತ್ವ : ಮುಂದಣ ಕಜ್ಜದ ಬಿಣ್ಪುಮನಱಿದುಂಭೋರುಹ ನಾಭಂ ಶುಂಭದಂಭೋಧರಧ್ವನಿಯಿನಿಂತೆಂದಂ (ಪಂಪಕಾ. ೬-೨೨ ಕ) ; ಕಂಡಿಹೆಯಾ ಈ ಸೂಕ್ಷ್ಮವ ಈ ಭವ್ಯತೆ ಬಿಣ್ಪ (ಕಉಚ್ಚಾ. ೬೯-೦೬). ೭. ಘನತೆ ; ಗೌರವ ; ದೊಡ್ಡಸ್ತಿಕೆ : ಇಂದುಗುಪಶಾಂತತೆ ವೇರುಗೆ ಬಿಣ್ಪು ತನ್ನದೊಂದಿರವಿನೊಳಾದುವೆಂಬಿನಮುದಾರಗುಣಪ್ರಕರಾಗಳಿಂದ ಳಂಕರಿಪ ನಿಜಪ್ರಭಾವಮಹಿಮೋನ್ನತಿಯಿಂದಿಸೆದಂ ಮುನೀಶ್ವರಂ (ಕಾಡಂಪು. ೨೧೩); ನೀವಪ್ಪೊಡೆ ಪೆಂಪಿನೊಳಂ ಬಿಣ್ಪಿನೊಳಂ ಸಾಹಸದೊಳಂ ಮರುತಂಗೆ ಪಿರಿಯರ್ (ಪಂಕಕಂ. ೨೩೯-೦೪) ; ಸಲೆ ಮೆಱಿವುದಿಂತು ಹಿಮವನ್ನಗೇಂದ್ರಂ ಪೂರ್ವಜಲಧಿ ಪಶ್ಚಿಮವಾರ್ಧಿಗಳ ಕೂಡಿಕೊಂಡು ನಿರ್ಮಲಶಿವನ ಮಾವ ನೆನಿಸುವ ಬಿಣ್ಪಿನಿಂದೆನಿಪುದು (ಕಾವಕಂ. ೨-೨). ೮. [ಛಂದ] ಉಚ್ಚಾರಣೆಗೆ ಎರಡು ಹ್ರಸ್ವಾಕ್ಷರಗಳಷ್ಟು ಕಾಲವನ್ನು ತೆಗೆದುಕೊಳ್ಳುವ ಸ್ವರ ; ದೀರ್ಘಾಕ್ಷರ ; ಗುರು : "ಕೊಂಕು ಬಿಣ್ಪೆನೆ ಗುರುವಲಾ" (ಕಛಪು. ೩೭) ; ಬರೆ ವಕ್ರಂ ಶಿಖಿಯೊಂದು ಕೊಂಕುಕಡೆಯಿಂದಾ ಮಾರುತಂ ವ್ಯೋಮಮೊಪ್ಪರೆ ಬಿಣ್ಪಂತೆರಡಾದಿಯೊಳ್ (ಛಂಕೋಂಬು. ೦-೩೬). **ಬಿಂಪು**: ೪. ಕೆಂಪ ಕಾಱಿದವಾಲಿಗಳು ಮೈ ಕಂಪಿಸುದದಿಗಡಿಗೆ ರೋಷದ ಬಿಂಪಿನೊಳು ತಗ್ಗಿದನು ಗಂಟಿಕ್ಕಿದನು ಹುಬ್ಬುಗಳ (ಕುವಾ.೦೯. ೬-೩೬). ೫. × × × ವುರಿ ಪೆಂಪಿನಲು ಧರಣಿ ಬಿಂಪಿನಲು ಜಳರಾಸಿ ಗುಂಪಿನಲು × × ದೇವನಂತಿರ್ಪ × × × (ಕೌಇಪ. XV. ೩೯-೫೦ ; 1148). ೬. ಗಾಢತೆ ; ತೀವ್ರತೆ : 'ರೆಂಪಿಸುವ ಸಿರಿಮೊಗದ . . . ನಿಜ

ರಾಜತೇಜದ ವಿಪುಳವೇದನೆಯ ಬಿಂಪಗಿಪ ಬೇಸಱಿನ ತುಱುಗಿದ ತಂಪಿನ ಗ್ಗಳಿಕೆಯ ವಿಘಾತಿಯ ಝೊಂಪಿನಲಿ ಹುದುಗಿದ ಮಹೀಶನ ಕಂಡನಾ ವಾರ್ಥ (ಕುಮಾಕ. ೧೬-೫) : ಕುಸುಮಸೌರಭಸಾಂದ್ರದಿಕ್ತಟದ ಬಿಂಪು ದುರ್ಧರವಾಯ್ತು (ಶಿಶಾಗ. ೦೦-೩-೫೫). [ಬಿಣ್ + — ಪ್ಪು$_2$]

ಬಿಣ್ಪುಗೊಳ್ (ಕ್ರಿ). ಅಧಿಕವಾಗು ; ಹೆಚ್ಚಾಗು : ತೀವ್ರವಾಗು : ಜನಿಯಿಸಿದತ್ತು ಚಿತ್ರಮತಿದೇವಿಗೆ ಗರ್ಭಮದಿಂತು ನಾಡೆಯುಂ . . . ಜನಿ[ಯಿಸೆ] ಬಿಣ್ಪುಗೊಂಡಲಸಮಾ ನಿಜನಿರ್ಮಳಚಿತ್ತವೃತ್ತಿಯೊಳ್ (ಕುಸುಮಾ. ೦೨-೨೫). [ಬಿಣ್ಪು + ಕೊಳ್$_1$]

ಬಿಣ್ಪುವೆಱು (ಕ್ರಿ). ಭಾರವಾಗು : ತೆರೆ ಮಸಗಿ ಬಾಷ್ಪಜಳಮೊತ್ತರಿಸೆ ಮೊದಲ್ ನಾಂದು ಬಿಣ್ಪುವೆತ್ತೆಮೆದೊಱೆಯಂ ಭರದಿಂ ತಾಂಗಿ ನಿಜಾರ್ದ್ರಾಂ ತರಂಗಭರಮಂ ನಿವೇದಿಪಂತೀಕ್ಷಿಸಿದಂ (ವರ್ಧಪು. ೪-೬೭). [ಬಿಣ್ಪು+ಪೆಱು$_1$]

ಬಿಣ್ಪೇಱು (ಕ್ರಿ). ೧. ಭಾರವಾಗು ; ತೂಕದಿಂದ ಕೂಡಿರು : ನನೆಯಂ ಪೂಗೊಂಚಲಂ ಪೊತ್ತು ನೆಟ್ಟನೆ ಬಿಣ್ಪೇ[ಪಾಠಾಂ. ಳ್ಪೇ]ಱಿದ ಬಳ್ಳಿಗೊಂಬು . . . ಚೆಲ್ವಾದುದಿಮ್ಮಾವಿನೊಳ್ (ಕಬ್ಬಿಕಾ. ೬೨). ೨. ಹೆಚ್ಚಾಗು ; ಅಧಿಕಗೊಳ್ಳು : ಆಳೀಜನಂ ಮಾಟ್ಟಿ ಶಿಶಿರೋಪ ಚಾರದ ತಣ್ಪಿಂಗೆ ಬಿಣ್ಪೇಱುವ ವಿರಹಾಗ್ನಿಯಿಂದಂ ಕಂದಿ ಕುಂದಿ (ಶಾಪ್ಯಲಿ. ೭-೩೦ ಪ). ೩. (ಅಲಂ) ಸಡಗರಿಸು : ಉತ್ಸಾಹಗೊಳ್ಳು : ವಿದ್ವಜ್ಜನಂ ನೆರೆದಿಂಪೇಱೆ ನೆಗಟ್ಟಿ ಬೀರವಡೆಗಳ್ ಬಿಣ್ಪೇಱೆ . . . ಪಟ್ಟವಣೆಯಂ ತಾನೇಱಿದಂ ಸದ್ಗುಣಾಕರಂ (ಸಕವಿ. ೨-೬೫).

[ಬಿಣ್ಪು + ಏಱು$_1$ (<ಏಱ್$_1$)]

ಬಿಣ್ಪೊಱೆ (ನಾ). ಭಾರವಾದ ಹೊರೆ ; ತೂಕವಾದ ಹೊರೆ : ಕೂಸಿನ ತಲೆಯೊಳ್ ಬಿಣ್ಪೊಱೆಯನಿಟ್ಟವೋಲಸುಖಕರಂ (ಕಪರಾ. ೨-೬) ; ನಟ್ಟ ಕೂರ್ಗಣೆಯ ಬಿಣ್ಪೊಱೆಯಿಂದೆ ಬಟಿಲ್ದಂ . . . ಸಿಂಧುಜಂ (ಪಂಪಭಾ. ೦೦-೪೫) ; ಇಂತೀ ದುಃಖದ ಬಿಣ್ಪೊಱೆಗಾನಲ್ ಪೆಗಲನ್, ಓ ಸ್ಯೂಸ್ ಎನ್ನಯ ತಪ್ಪೇನ್ (ಬಿಗ್ಯಪ್ರ. ೩೦-೬೫೦). [ಬಿಣ್ (< ಬಿಣ್ಣೆತು) + ಪೊಱೆ]

ಬಿಣ್ಬಡು (ಕ್ರಿ). ದೊಡ್ಡದಾಗು ; ಗಾತ್ರವಾಗಿ ಬೆಳೆ : ಪಣಗಿಟ್ಟು ಪೊಂಬೊಟ್ಟನೆಡೆಗಟ್ಟಿಯಾ ದಿಟ್ಟೆ ಬಿಣ್ಬಟ್ಟ ಮೊಲೆಗೆ ತೊಟ್ಟುಡಿಗೆ ಪಟ್ಟೆ ನೆಱೆದುಟ್ಟುಕೊಂಡೊಟ್ಟಜದ ಪಟ್ಟಣಗರಿಟ್ಟೆಡೆಯ ಬಟ್ಟೆಯಂ ಮೆಟ್ಟಿ ಬರೆ(ಶ್ರೀರಾಮ. ೪-೯). [ಬಿಣ್(<ಬಿಣ್ಣೆತು) + ಪಡು$_1$]

ಬಿಣ್ಮಾಣಿಕ (ನಾ). ದೊಡ್ಡದಾಗಿರುವ ಮಾಣಿಕ್ಯ: 'ಬಿಣ್ಮಾಣಿಕವಡೆ' ಪರಾ. [ಬಿಣ್ (<ಬಿಣ್ಣೆತು) + ಮಾಣಿಕ]

ಬಿಣ್ಮಾಣಿಕವಡೆ (ಕ್ರಿ). ದೊಡ್ಡದಾದ ಮಾಣಿಕ್ಯವನ್ನು ಹೊಂದು : ದುಱಿದುಂಬಿಗಳ ಪಂಚಮದ ನುಣ್ಚರಕ್ಕೆ ಬಿಣ್ಮಾಣಿಕ[ಕ]ವಡದ ನೂಪುರಕಲಾಪ ತುಲಾಕೋಟಿಮಂಜರಿಕಾಪುಂಜಶಿಂಜಾನದೊಳಂ (ಅನಂಪು. ೩-೯೫ ಪ). [ಬಿಣ್ಮಾಣಿಕ + ಪಡೆ$_1$]

ಬಿಣ್ಮಾಲೆ (ನಾ). ದೊಡ್ಡ ಹಾರ: ಭಾರವಾದ ಹಾರ : ಗೋಣ್ಮೊದಲ ನೆಲುದಲೆಯ ಬಿಣ್ಮಾಲೆಗಳ್ಗಿತ್ತ ತಣ್ಮೆಯ್ಯವೆಟ್ಟಮಗಳಾಣ್ಮನೆನಿಸಿದ ಸ್ಮರನ ಮಣ್ಮಾಡಿದುಱೆ ಸೊಕ್ಕು ಪೊಣ್ಮೆದಾನೆಯ ಸೀಳ್ದು ಜಾಣ್ಮೆಱೆವ ನೀಕ್ಷಿಸಿದನು (ಪಂದಿಮಾ. ೦೬-೦೫). [ಬಿಣ್ (<ಬಿಣ್ಣೆತು) + ಮಾಲೆ]

ಬಿಣ್ಮೊಲೆ (ನಾ). ದೊಡ್ಡ ಮೊಲೆ; ತೋರವಾದ ಸ್ತನ : ಬಿಣ್ಮೊಲೆಯ ಮಿಗೆ ಬಟ್ಟಮೊಲೆಯ ತಂಗಾಯ್ಮೊಲೆಯ ನುಣ್ಮೊಲೆಯ . . . ವೈಸಿಕ ದೊಳುಣ್ಮುವ ಗುಣಂಗಳ ಮಹಾಪ್ರೌಢವನಿತೆಯರ್ ಕಣ್ಗೆಸೆದರಲ್ಲಿಗಲ್ಲಿ (ಕಬಿಪು. ೦೦-೨೦) ; ಮೇಲುದಂ ಬಿಣ್ಮೊಲೆಗಳನೋಸರಿಸೆ ನಿಱಿಯ ಬಿಗಿ ಪೈಸರಿಸೆ ಪೆಣ್ಮಂಚದಂಚೆದುಪ್ಪುಳ್ವಾಸಿಗಳೆದೊಯ್ದಳಿನಿಯನಂ ಬಲ್ಪಿನಿಂದೆ (ಕೈಮಿಶಾ. ೦೦-೦೯). [ಬಿಣ್ (< ಬಿಣ್ಣೆತು) + ಮೊಲೆ$_1$]

ಬಿತ್ತ 'ಬಿಟ್ತು' ನೋ.

ಬಿತ್ತಣ, ಬಿತ್ತನೆ, ಬಿತ್ತಾಣ (ನಾ). ೧. ಬೀಜವನ್ನು ಭೂಮಿಯಲ್ಲಿ ಬಿತ್ತುವಿಕೆ : [ಕೆಯ್ಯೊಳ್] ಪದಂಬಡೆವಂತೆ ಬಿತ್ತಣದಂತೆ ಸಸಿಯಂತೆ (ಧರ್ಮಾಮ್ಯ. ೧೨-೨೪). ೨. ಬೀಜ : ಬಿತ್ತ : ಕುಂಬಳದ ಹಣ್ಣಿನ ತೊಕ್ಕು ಒಳಗಣ ದುದ್ದು ಬಿತ್ತಣಗಳ ಸಹ ತೆಗೆದು (ಸಕಪ್ಪೆ. ೨೨೫). **ಬಿತ್ತನೆ** : ೧. ಭೂಮಿಯನ್ನು ಸಮ ಮಾಡಿದ ನಂತರವೇ ಬಿತ್ತನೆ ಮಾಡ ಬೇಕು (ವ್ಯವಮಾ. ೨೦) ; ಮಳೆಯಿಲ್ಲದೆ ಬಿತ್ತನೆಯ ಕಾಲ ಮುಗಿಯಿತು (ಬರಹಾ. ೫೮). **ಬಿತ್ತಾಣ** : ೧. ಈ ಪುರವಲಿ ಗೌಡು ಭೂಮಿ ಆಯ್ದು ದಿನದ ಬಿತ್ತಾಣ ಈ ದೇವರಿಗೆ ಸೋತ್ರವ ತೆತ್ತುಕೊಮ್ಬರು (ಎಕ. XI. ತತ್ರಮ. ೩-೩೬; 1356). [ಬಿತ್ತು$_1$ + — ಅಣ]

ಬಿತ್ತನೆ 'ಬಿತ್ತಣ' ನೋ.

ಬಿತ್ತರ, ವಿತ್ತರ (ನಾ). ೧ ವಿಸ್ತಾರ : ಹರಹು ; ವ್ಯಾಪ್ತಿ : "ಬಿತ್ತರ ಮೆನಲ್ . . . ವಿಸ್ತಾರಮಕ್ಕುಂ" (ಕಶರ. ೮೦) ; ಸಂಪತ್ತಿನ ಬಿತ್ತರದೆತ್ತಿದ ಮುತ್ತಿನ ಮಂಡವಿಗೆ ಪೊಟಲ ಮನೆಗಳೊಳೆಲ್ಲಂ (ಪಂಪಭಾ. ೩-೨) ; ಈ ಕಾವ್ಯಮಂ ಬಿತ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರದೇವಂ (ಗಿರಿಕ. ೦-೩೩). ೨. ಅತಿಶಯತೆ ; ಹೆಚ್ಚಳ ; ಆಧಿಕ್ಯ : 'ಬಿತ್ತರಂಬಡೆ', 'ಬಿತ್ತರಿಕೆ' ಪರಾ. ೩. ಪೀಠ ; ಆಸನ : 'ಬಿತ್ತರಂಗೆಯ್' ಪರಾ. ೪. ಒಯ್ಯಾರ ; ಬೆಡಗು : 'ಬಿತ್ತರ್ಯಿ' ಪರಾ. **ವಿತ್ತರ** : ೧. ಅರಸಿಯರ ಸುಕುಮಾರಕರನಾದರಿಸಿ ಮಧುರರಸೋಕ್ತಿಯಲಿ ವಿತ್ತರದ ನುಡಿಗಳ ನುಡಿದು (ಕುಮ್ಯಾಸ. ಓಂಇ-೦೭-೪೩). [< ಸಂ. ವಿಸ್ತರ./ಪ್ರಾ. ವಿತ್ಥರ]

ಬಿತ್ತರಂಗೆಯ್ (ಕ್ರಿ). ೧. ವಿವರವಾಗಿ ಹೇಳು.— ನಿರೂಪಿಸು : ಮೃಡನಿಂತು ಬಿತ್ತರಂಗೆಯ್ದು ರುದ್ರಾಕ್ಷೆಯಂ ತೊಡಿಸಲು (ಸೌಂದಪು. ೬-೩೬). ೨. ಆಸನವಾಗು ; ಪೀಠವಾಗು : ಯೋಗಾಭ್ಯಾಸಂಗೆಯ್ವ ಯೋಗೀಂದ್ರ ಬೃಂದಕ್ಕೆ ಯೋಗಾಸನವಾಗಿ ಸುತ್ತುಗೊಂಡು ಬಿತ್ತರಂಗೆಯ್ವಂತಿರ್ದ ಭೋಗೀಂದ್ರವೃಂದಮುಮಂ (ಪಂಪತಂ. ೦೦೯-೯). [ಬಿತ್ತರ + ಕೆಯ್$_1$]

ಬಿತ್ತರಂಗೊಳಿಸು (ಕ್ರಿ). ವಿವರವಾಗಿ ನಿರೂಪಿಸು : ವಿಶದೀಕರಿಸು : ರಹಸ್ಯಮನಾದೊಡಂ ತಮ್ಮ ಮನದೊಳ್ಮರೆಮಾಂಜದೆ ಬಯಲ್ಗೆಯ್ದು ಬಿತ್ತರಂಗೊಳಿಸಲಿ ಎಂದು ಶಾಪಮನಿತ್ತು (ಭಾರಶಾಂ. ೨೨-೬); ನಿಗಮಾಂ ತಾರ್ಥವ ಬಿತ್ತರಂಗೊಳಿಸುವ ಗ್ರಂಥಂಗಳಂ (ಮೃಸೂಮ. ೦-೧೩).

[ಬಿತ್ತರ + ಕೊಳ್$_1$ + — ಇಸು$_3$]

ಬಿತ್ತರಂಬಡೆ, ಬಿತ್ತರವಡೆ (ಕ್ರಿ). ೧. ವಿಸ್ತಾರವನ್ನು ಹೊಂದು: ದೊಡ್ಡದಾಗು : ಧವಳತೆಯನಾಂತ ಮುಗಿಲ ಮೊತ್ತಮೊತ್ತಲುಂ ಬಿತ್ತರಂ ಬಡೆಯೆ (ಶಾರಪು. ೪-೬೬ ಪ) : ತಳೆಗುಂ ತೋರ್ಕೆಯ ಬಿತ್ತರಂಬಡೆದು ಬತ್ತಿತ್ತೆಂಬವೋಲಿರ್ದ ಪೆರ್ಬೊಳೆ (ಶಾಕುಂತ. ೦೦೧-೧೭೦). ೨. ಅತಿಶಯ ವಾಗು; ಶ್ರೇಷ್ಠತೆಯನ್ನು ಪಡೆ : ಸಂಪಗೆಯ ಮುಗುಳನಗೆಗಳಿಂ ತೆತ್ತಿಸಿ ಬಿತ್ತರಂಬಡೆದ ಜವಳಿವಡಿಗಳೊಳಂ (ಪಂದ್ರಪು. ೬-೯೫ ಪ); ಸೂಳಱಿದೇಱುವ ಸುತ್ತೇಱುವ ಬಿತ್ತರಂಬಡೆದ ವಾಹಳಿತನದೊಳ್ (ರಾಜಶೇ. ೬-೦೦ ಪ). **ಬಿತ್ತರವಡೆ** : ೧. ಬಿತ್ತರವಡೆವೀ ಪಟ್ಟಣದೊಳಗೊರ್ವನುತ್ತಮನಾಯಕ ನಿಹನು (ಕಂನವಿ. ೯-೪೫). ೨. ವ್ರತದೇಳ್ಗೆಯಿಂತು ಬಿತ್ತರವಡೆದುದೊ ಎನೆ ಸತಿಯರು ಜಸವಡೆದಿಹರು (ಹರಿಬಿ. ೨-೦೯). [ಬಿತ್ತರ + ಪಡೆ$_1$]

ಬಿತ್ತರಂಬೆಱು, ಬಿತ್ತರವೆಱು (ಕ್ರಿ). ೧. = ಬಿತ್ತರಂಬಡೆ ೧ : ಕಟ್ಟಲೆಯ ಕಾರಾಗಾರದಂತೆ ಬಿತ್ತರಂಬೆತ್ತು ಬಿಚ್ಚತಂ ಪರ್ವಿದ ತಮಾಳ ಮಾಳಾಪರಂಪರೆಗಳುಂ (ಪಂದ್ರಪು. ೦-೦೦೫ ಪ). **ಬಿತ್ತರವೆಱು** : ೨. = ಬಿತ್ತರಂಬಡೆ ೨ : ನವೀನಚೀನದಿಂ ಬಿತ್ತರವೆತ್ತ ಮೇಲ್ಗುಡಿ . . . ವಿರಾಜಿತ ಮಾಯ್ತು ವಿವಾಹಗೇಹದೇಳ್ (ರಾಜಶೇ. ೬-೨). [ಬಿತ್ತರ + ಪೆಱು$_1$]

ಬಿತ್ತರವಡೆ 'ಬಿತ್ತರಂಬಡೆ' ನೋ.

ಬಿತ್ತರವೆಱು 'ಬಿತ್ತರಂಬೆಱು' ನೋ.

ಬಿತ್ತರಿ$_1$ (ನಾ). ಗದ್ದುಗೆ ; ಸಿಂಹಾಸನ : "ಪಟ್ಟವಣೆಯೆಂದುಂ, ಬಿತ್ತರಿಯೆಂದುಂ ಸಿಂಹಾಸನಂ" (ಕಶಸಾ. ೬೦-೩೨೩): ಅಬ್ಬದೆಳೆಯಲೆಗಳ ಬಿತ್ತರಿಗಳೊಳರಸಿಯರ್ ನೆಮ್ಮಿ (ಶಾಂತಿಪು. ೬-೫); ಈ ಪಟ್ಟದ ಬಿತ್ತರಿಯನ್ನು ನೀನು ಆರೋಹಣ ಮಾಡಬೇಕು (ಪಟ್ಟಅ. ೦೦೦-೦೦).

[< ಬಿತ್ತರ]

ಬಿತ್ತರಿ$_2$ (ನಾ). ಬೆಡಗುಗಾತಿ; ಒಯ್ಯಾರಿ : ಬಿ[ಪಾಠಾಂ. ಭಿ]ತ್ತರಿಯರೆದೆ ಗತ್ತರಿಯರಾ ಪೊತ್ತು ಹಾದರಗಿತ್ತಿಯರು ಬ್ರಹ್ಮತ್ಯಕಾತಿಯರು (ಬಸಪು. ೪೦-೫೫) ; ಕೆಲರು ಬಿತ್ತರಿಯರು ಅತ್ತೆಮಾವಂದಿರಂ ಮರೆಯಿಸಿ (ಸೌಗಂಧಿ. ೦೬೬-೩). [ಬಿತ್ತರ + — ಇ$_2$./ತೆಲು. ಬಿತ್ತರಿ]

ಬಿತ್ತರಿಕೆ (ನಾ). ೧. ವಿಸ್ತಾರವಾದ ನಿರೂಪಣೆ : ಸಂಚದೊಳ್ ಸುಸಂಚನೆನಿಸಿ ಕರಂಗಳ ಬಹುರೇಖೆಯ ಚಾರಣೆಯ ಧಿಕ್ಕವಣೆಯ ನೇವಣೆ ಬೊಲ್ಲವಣೆಯ ಬೆಡಂಗು ಬಿತ್ತರಿಕೆಯಂ ಬೀಱಿ ಬಾಜಿಸುತ್ತಿರೆಯುಂ (ಶಾಂತೀಶ್ವ. ೭-೯೩ ವ). ೨. ಅತಿಶಯ ; ಆಧಿಕ್ಯ ; ಹೆಚ್ಚುಗಾರಿಕೆ : ತನ್ನುರಮನುರ್ಚಿದೊಡಚ್ಚರಿದಟ್ಟನೆಚ್ಚ ಬಿತ್ತ[ಪಾಠಾಂ. ಚ್ಚ]ರಿಕೆಗಮಾ ತೆಱಂ ಮುರಿದ ದಂತಿಗಮಾ ವನದೊಳ್ ವನೇಚರಂ (ಸೂಕ್ತಿಸು. ೩-೦೫೮).

[ಬಿತ್ತರ + — ಇಕೆ]

ಬಿತ್ತರಿಗೆ$_1$ (ನಾ). ಪೀಠ : ಆಸನ : "ಬಿತ್ತರಿಗೆ—ವಿತರ್ದಿಕಾ = ವಿಷ್ಟರ" (ತದ್ಭಕೋ. ೩೦); ಬೊಂದರಿಗೆ ಪಟಿಯ ಬಿತ್ತರಿಗೆ ಕರಂ ಪೆರ್ಚುವ ಮಹಿಮೆಯನೆಯ್ದೆ ನಿಮಿರ್ಚೆ (ಪಂಪಭಾ. ೦೪-೨೪); ಬಿತ್ತರದ ಬಿತ್ತರಿಗೆಯೊಳೊತ್ತರದ ಗಾಡಿಯಿನೊಪ್ಪಿರ್ದ ರಾಯಂ . . . ಪೇಟಿಂದೊಡೆ (ರಾಮಾಶ್ವ. ೦೪೨-೮).

[<ಸಂ. ವಿತರ್ದಿಕಾ]

ಬಿತ್ತರಿಗೆ$_2$ (ನಾ). ಒಂದು ಬಗೆಯ ಸಸ್ಯ : (ಮೃಜಿಗಿ. ೨೦-೩೬೦).

[?]

ಬಿತ್ತರಿತನ (ನಾ). ಒಯ್ಯಾರ; ಬೆಡಗು : ಏಳೇ ಸಾಕು ನಿನ್ನ ಬಿತ್ತರಿತನ (ಮಾಮರಾ. ೦೪೬). [ಬಿತ್ತರಿ$_2$ + — ತನ]

ಬಿತ್ತರಿಸು (ಕ್ರಿ). ೧. ವಿಸ್ತರಿಸು ; ಹರಡು : "ಬಿತ್ತರಿಸು—ವಿಸ್ತಾರೇ" (ಶಮರಾ) ; ಅದಱಿಂದೆನ್ನ ರಾಜ್ಯೋದಯಂ ಬಿತ್ತರಿಸುತ್ತಿರ್ಕುಂ (ಅಜಪು. ೦೨-೫) : ಪರಿಮಳಮನೆಣ್ದೆಸೆಗೆ ಬಿತ್ತರಿಸುವ ನನೆಗಣೆಗಳಿಂದೆ ಗಿರಿಪತಿತನಯಾ ವಿರಹಾತಪಮೊಗೆಯಲ್ (ಗಿರಿಕ. ೭-೭೦) ; ಅನಂತಸತ್ತ್ವ . . . ಬಿತ್ತರಿಸುತಿಹುದು ಹೊಸಹೊಸತನವನೆಡೆವಿಡದೆ ನಿತ್ಯನಿತ್ಯವು (ಮಂಕುಕ. ೯೨). ೨. ವಿವರಿಸು; ನಿರೂಪಿಸು: ಕೇಳ್ವಂಗೆ ಬಿತ್ತರಿಪಂಗಾದ ಮಳುಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ (ಅದಿಪು. ೭-೦೦೦); ನೀವೆತ್ತಣವರೇನೆಂದು ನಿಮ್ಮಭಿಧಾನವೇನಹುದು ಬಿತ್ತರಿಸಿ ಹೇಳು (ಕುಪ್ಯಾಸ. ೫-೩೦); ಮುನ್ನಂ ಶೇಷಂ ವಾತ್ಸ್ಯಾಯನಂಗೆ ಪೇಟ್ದನವನೆಯೆ ನಿನಗೆ ಬಿತ್ತರಿಪೆಂ (ರಾಮಾಶ್ವ. ೫-೦೦). ೩. ಹಿರಿಮೆಯನ್ನು ಪಡೆ : ಇತ್ತಲಾ ಸಭೆಯೊಳಗೆ ಸಿಂಹಾಸನದ ಮೇಲೆ ಬಿತ್ತರಿಪ ಕನಕಮಣಿ ಭದ್ರಾಸನದ ಮೇಲೆ ಸಕಲನೃಪ ರಾಜಪುತ್ರರ ನಡುವೆಯೊಪ್ಪಿದಂ (ನಂಬರ. ೩-೯೮). ೪. ಸಿದ್ಧಪಡಿಸು : ಅಣಿಮಾಡು: ಲವಲವಿಕೆಯಂ ಪರಿಯಣಮಂ ಬಿತ್ತರಿಸಲುಂ . . . ಪೇಟ್ದೂಗಳ್ (ಅದಿಪು. ೭-೨೦ ವ); ಬಿತ್ತರಿಸಲ್ಕೆವೇಟೂ ವರೂಥೋತ್ಕರಮಂ ಬಲಿದೊಡ್ಡವೇಟ್ ಪದಾತಿಯಂ (ಕಾವ್ಯಾವ. ೪೦೩). ೫. ವ್ಯಕ್ತವಾಗು; ಗೋಚರಿಸು: ತತ್ಕಪೋಲದೊಳ್ಬಿತ್ತರಿಸಿದುವು ಕೊನರ್ತ ಬೆಮರ ಬಿಂದುಗಳಾಗಳ್ (ಕಾದಂಪೂ. ೭೫೭). ೬. ಕೊಂಡಾಡು ; ಕೀರ್ತಿಸು : ಹರಿ ಹರ ಹಿರಣ್ಯಗರ್ಬ್ಬರನುರವಣೆಯಿಂ ಗೆಲ್ದ ಕಾಮನಂ ದೀಪ್ತತಪೋಭರದಿನ್ದುರಿಪಿದರೆನೆ ಬಿತ್ತರಿಸದರಾರ್ ವೀರಣನ್ದಿಸೈದ್ಧಾನ್ತಿಕರಂ (ಎಕ. II. ೦೪೦-೦೭೩; 1145). [ಬಿತ್ತರ + — ಇಸು$_3$]

ಬಿತ್ತಲಂಡೆ 'ಬಿತ್ತಲಟ್ಟೆ' ನೋ.

ಬಿತ್ತಲಟ್ಟೆ, ಬಿತ್ತಲಂಡೆ (ನಾ). ಒಂದು ಬಗೆಯ ತೆರಿಗೆ (?): ಕೆಱೆಯ ಕೆಱಗೆ ತಲೆರಾಸಿಯಲಿ ಬಿತ್ತಲಟ್ಟೆಯುಂ ಖಣ್ಡಗಗಟ್ಟೆಯುಂ ಕೆಱೆಗೆ ಸಲ್ಗು (ಸೌಇಇ. IX- i, ೨೭-೬; 10ನೆಯ ಶತ). **ಬಿತ್ತಲಂಡೆ** : ಕಲ್ಲಳೂರ ಕೆಱೆಯ ಕೆಱಗುಟ್ಟಿ ಬಿತ್ತಲಣ್ಡೆಯುಂ ಕೆಱೆಗೆ ಇಕ್ಕದನ್ದು ವಾರಣಾಸಿಯುಂ ಕವಿಲೆಯು ಮನಳಿದ ಪಾಪಕ್ಕೆ ಸಲ್ವಂ (ಸೌಇಇ. IX-i, ೩೪-೬ ; 10ನೆಯ ಶತ). [?]

ಬಿತ್ತವಟ್ಟ 'ಬಿತ್ತುವಟ್ಟ' ನೋ.

ಬಿತ್ತಾಣ 'ಬಿತ್ತಣ' ನೋ.

ಬಿತ್ತಿ (ನಾ). ಗೋಡೆ : "ಬಿತ್ತಿ — ಭಿತ್ತಿ = ಗೋಡೆ" (ತದ್ಭಕೋ. ೩೦): ಬಿತ್ತಿಯೊಳಂದಂಬಡೆವಂತು ಬಚ್ಚಿಸಿದ ಬಣ್ಣಂಗಳಂ . . . ನೋಡಿ (ಕಬೃಕಾ. ೬೩) ; ಭರ್ಗಸಖನ ಬಂಡಾರದ ನವರತ್ನವರ್ಗದ ಬಿತ್ತಿಗಳಿಂದ ದೀರ್ಘವಡೆದು ದಿವ್ಯಕಾಂತಿಯ ಬೀಱುತ ದುರ್ಗಾಮಂಟಪವಿದ್ದುದು (ಕಂಪಪಿ. ೭-೩೩). [< ಸಂ. ಭಿತ್ತಿ]

ಬಿತ್ತಿಕೆ, ಬಿತ್ತಿಗೆ$_1$ (ನಾ).=ಬಿತ್ತಣ ೧ : ಮಾಟಕೂಟವೆಂಬ ಹೊಲದಲ್ಲಿ ಪಾಪ ಪುಣ್ಯವೆಂಬ ಬೀಜದ ಬಿತ್ತಿಕೆಲ್ಲ ತಂಗಾಲಕ್ಕೆ ಬೆಳೆದು ಮಳೆಗಾಲಕ್ಕೆ ತಗ್ಗಿ ಹೊಲದ ಒಳಹರಿಯಲ್ಲಿ ಜಲ ನಿಂದು ಹೋಯಿತ್ತು (ಮೋಳಿಮಾ. ೦೦೪-೪೦೩) ; ಗೋದಿಯ ಬಿತ್ತಿಕೆಯಕ್ಕಿಂತಲೂ ಸ್ವಲ್ಪು ಅಗಲವಾಗಿ ನಾಲ್ಕು ಬೆರಳು ಅಂತರಕ್ಕೊಂದು ಬೀಜ ಬೀಳುವಂತೆ ಬಿತ್ತಬೇಕು (ಕೃಷಿಪ್ರ. ೯೨). **ಬಿತ್ತಿಗೆ$_1$** : ಬಿತ್ತಿಗೆಯ ಬಿತ್ತೊಂದುಳಿಯವಂತೆ ಬಂಧುರಮಾಗಿ ನಾಂಟಿ ಕಂಗೊಳಿಸುತಿರ್ದವು (ಮಲ್ಲಿಕ. ೦೨-೦೦) ; ನವಬೀಜದ ಹೊಸ ಬಿತ್ತಿಗೆಗಾಗಿ ಬಿಡಬೇಕು, ಹೊಲ ಬಿಡಬೇಕು (ಹೃದಸ. ೩೩-೩) ; ಒಂದು ಹಳ್ಳಿ ಬೆಳೆದರೆ ಹತ್ತು ಹಳ್ಳಿಗಳಲ್ಲಿ ಬಿತ್ತಿಗೆಯಾಗುತ್ತಿರಲಿಲ್ಲ (ಮತ್ತೆಮ. ೫).

[ಬಿತ್ತು$_1$ + — ಇಕೆ]

ಬಿತ್ತಿಕ್ಕು (ಕ್ರಿ). ಬೀಜವನ್ನು ಎರಚು ; ಕಾಳುಗಳನ್ನು ಬಿತ್ತು : ತೆತ್ತೀಸಕೋಟಿ ನಿರ್ಜರರು ಮುತ್ತಿನ ತ್ಯಾಗವ ಕೊಟ್ಟಂತೆಯಾಲಿಕಲ್ ಬಿತ್ತಿಕ್ಕಿ ಬಿರ್ದುದುರ್ವಿಯಲಿ (ಮೋಹತ. ೪-೩೮).

[ಬಿತ್ತು$_2$ (< ಬಿಟ್ಟು) + ಇಕ್ಕು]

ಬಿತ್ತಿಗ 'ಬಿತ್ತೆಗ' ನೋ.

ಬಿತ್ತಿಗಪೆಣ್ 'ಬಿತ್ತೆಗವೆಣ್' ನೋ.

ಬಿತ್ತಿಗವೆಣ್ 'ಬಿತ್ತೆಗವೆಣ್' ನೋ.

ಬಿತ್ತಿಗೆ$_1$ 'ಬಿತ್ತಿಕೆ' ನೋ.

ಬಿತ್ತಿಗೆ$_2$ (ನಾ). ಪ್ರೌಢೆ ; ಚದುರೆ : ಒರ್ವ ಬಿತ್ತಿಗೆಯಂ ನಿಟ್ಟಿಸಿ ನೀರಡಿಕೆಯಂ ತೀರ್ಚೆ ತೆಱನಾವುದೆಂದು ಬೆಸಗೊಳಲ್ (ಪರಕ. ೦೦೬-೩).

[ಬಿತ್ತಿಗ (< ಬಿತ್ತೆಗ) + — ಎ$_2$]

ಬಿತ್ತಿಸು (ಕ್ರಿ). ಬೀಜವನ್ನು ನಾಟಿಸು : ಕೇತಿದೇವನು ಸಸಿನೆ ಬಿತ್ತಿಸಿ ಸಾಲು ಸಾವಿರವಾಗಿ ಬೆಳೆದನಲಾ (ಬಸಪು. ೬೦-೦೯) : ಅರಿನೃಪರನು ಕೊಂದು ಪುರವ ಪಾಳ್ಗೈದಾಗ ಹರಳ ಬಿತ್ತಿಸಿದರೇನೆಂಬೆ (ಕಂಪಪಿ. ೩-೦೭).

[ಬಿತ್ತು$_1$ + — ಇಸು$_3$]

ಬಿತ್ತು$_1$, ವಿತ್ತು$_1$ (ಕ್ರಿ). ೧. ಬೀಜ ಹಾಕು; ಬೀಜಾವಾಪ ಮಾಡು : "ಬಿತ್ತು—ಬೀಜಸ್ಥಾಪನೇ, ಬೀಜೇ ಚ" (ಶಮರಾ) ; ಸುಕ್ಷೇತ್ರಮಲ್ಲದ ನೆಲದೊಳ್ ಬಿತ್ತಿದ ಫಲಮಂ(ಮುಂ) ಬಿತ್ತೆಂದುಂ ಫಲಮಾಗಲಾಱವು (ಶಾಪುಂಪು. ೦೩೬); ಹೊಳ್ಳ ಬಿತ್ತಿ ಫಲವನಱಸುವಂತೆ (ಮಹಾದೇ. ಬ. ೫೬-೦೪೦); ಹುರಿದು ಬಿತ್ತಿದ ಬೀಜ ಮೊಳೆವುದೆ (ಭರಕ. ೨-೩೩). ೨. ಪ್ರಕಟಪಡಿಸು; ಹರಡು : ಸತ್ಕೀರ್ತಿಯಂ ಧರೆಯೊಳ್ ಬಿತ್ತುವಗಡ್ಡದುಡ್ಡು ಜಱ್ ವರ್ಗಿಷ್ಟಾರ್ಥದಾನಂಗಳುಂ . . . ಈಕ್ಷಿಸಲ್ ದೊರೆಗಳ್ಗೆತ್ತಣ ನೀತಿಯೈ (ಸೋಮೇಶ. ೬೦); ಚರ್ಮಭಸ್ತ್ರಿಕೆಯನೊಂದಂ ಚೆಂದಮಪ್ಪಂತೆ ನಿರ್ಮಿಸಿದೆಂ ಲಕ್ಷ ಸುವರ್ಣಮಂ ಕಱೆವುದೆಂಬೀ ಸುದ್ದಿಯಂ ಬಿತ್ತಿದೆಂ (ದಶಕು. ೬-೦೩೭);

ವಿತ್ತು$_1$: ೧. ಒಕ್ಕಲ್ತನಂಕೈಯ್ವನಾ ವಿತ್ತಿದಲ್ಲಿ ವೆಳೆಯಾದೆ ಕೆಡುಗೆ (ಎಕ. VII, ಶಿಕಾಂ. ೦೭೯-೦೭ : 685). [ದೇ.॥ ತಮಿ. ವಿತ್ತೈ. ವಿತ್ತು : ಮಲ. ವಿತೆ ; ತೊದ. ಪಿತ್ ; ಕೊಡ ಬಿತ್ತ್ ; ತುಳು. ಬಿತ್ತು, ಬುತ್ತು ; ತೆಲು. ವಿತ್ತು ; ಕೋಲಾ. ನಾಯ್ಕಿ. ಪರ್ಜಿ. ಗದಬ. ವಿತ್]

ಬಿತ್ತು$_2$ 'ಬಿಟ್ತು' ನೋ.

ಬಿತ್ತುಕಟ್ಟು (ನಾ). ಕೆರೆಯ ಜೀರ್ಣೋದ್ಧಾರಕ್ಕಾಗಿ ಬೆಟ್ಟ. ಭೂಮಿ ಮೊದಲಾದುವನ್ನು ಮತ್ತು ಅವುಗಳ ಆದಾಯವನ್ನು ಬಿಟ್ಟುಕೊಡುವುದು : ತಿರುವಯ್ಯನ ಮಗಂ ಚನ್ದ್ರಸೇಕರಂ ಮಣ್ಣಿಗಲ್ಲ ಕೆಱೆಗೆ ಬಿತ್ತುಕಟ್ಟು ಬಿಟ್ಟಂ(ಎಕ. X. ಮುಳಬಾ. ೧೯೬-೯; ಸು. 950); ಬಂಗವಾಡಿಯ ಕೆಱೆಗೆ ಬಿತ್ತು ಕಟ್ಟು ಬಿಟ್ಟುದು (ಎಕ. X, ಕೋಲಾರ. ೦೯೮-೩೫; ಸು. 950); ಶ್ರೀಮತ್ಸಂಬಯ್ಯಂ ಬಿದಿರೂರನಾಳುತ್ತಿಟ್ಟು ಕೆಱೆಗೆ ಬಿತ್ತುಕಟ್ಟಂ ಬಿಟ್ಟ (ಎಕ. X. ಮುಳಬಾ. ೦೨೬-೦೬; 961). 'ಬಿತ್ತುವಟ್ಟ' ಪರಾ.

[ಬಿತ್ತು$_2$ (<ಬಿಟ್ತು) + ಕಟ್ಟು$_2$]

ಬಿತ್ತುಗಟ್ಟಣೆ (ನಾ). = ಬಿತ್ತುಕಟ್ಟು : ಆಸಂದಿಯಲಯ್ಯುಗಳದ ಬಿತ್ತುಗಟ್ಟಣೆಯ ಗ೧ವ ಕೊಟ (ಮೈಅಂ. ೦೯೩೭. ೩೦-೨೫ ; 1162) ; ಬಿತ್ತುಪಾಟವೆಂದೂ. ಬಿತ್ತುಕಟ್ಟೆಂದೂ. ಬಿತ್ತುಗಟ್ಟಣೆಯೆಂದೂ ಕೆಲವೆಡೆಗಳಲ್ಲಿ ಕರೆದಿರುವರು (ಸಂಭಾನ. ೨೦೦).

[ಬಿತ್ತು$_2$ (<ಬಿಟ್ತು) + ಕಟ್ಟು$_1$ + – ಅಣ್ಣೆ$_4$]

ಬಿತ್ತುಪಾಟ 'ಬಿತ್ತುವಟ್ಟ' ನೋ.

ಬಿತ್ತುಬೀಜ (ನಾ). ಬಿತ್ತುವ ಬೀಜ ; ಬೀಜವರಿ : ನಾಲ್ಕುಮೂಡೆ ಬಿತ್ತುಬೀಜದ ಗದೆಯನು × × ಕಾಣಿಕೆ ಕಡ್ಡಾಯ ಆಉದೂಯಿಲ್ಲ (ಸೌಇಇ. IX–ii. ೪೨೫-೦೫; 1401). [ಬಿತ್ತು$_1$ + ಬೀಜ]

ಬಿತ್ತುಬೀಟ್ (ನಾ). ಬೀಜವನ್ನು ಬಿತ್ತುವ ಭೂಮಿ : ಬಿತ್ತುಬೀಟ ಮೂಗೊಳ ಗಟ್ಟೆಯುಂ ಮೂಗೊಟ ಪಾಳುಂ ಬಿಟ್ಟರ್ (ಎಕ. X, ಸಂತಾಮ. ೧೫೩-೫; ಸು. 1000). [ಬಿತ್ತು$_1$+ಬೀಟ್$_2$ (<ಬೀಡು$_2$)]

ಬಿತ್ತುವಟ್ಟ, ಬಿತ್ತವಟ್ಟ, ಬಿತ್ತುಪಾಟ, ಬಿತ್ತುವಾಟ (ನಾ). = ಬಿತ್ತುಕಟ್ಟು : ℙ "ಬಿತ್ತುವಟ್ಟವೆಂದರೆ ಕೆರೆಯ ಹಿಂದಿನ ತರೀ ಜಮೀನಿನಲ್ಲಿ ಬಿತ್ತು ಅಥವಾ ಬೀಜವರಿಯ ಮೇಲೆ ವಟ್ಟ ಎಂದರೆ ಪಾಲು ಎಂದರ್ಥ" (ಸಂಭಾನ. ೨೦೦) : ಮೂಡಣ ಕೆಱೆಯಂ ಕಟ್ಟಿಸಿ ಮೂಱು ಕೆಱೆಯ ಬಿತ್ತುವಟ್ಟವಂ ಪಡೆದಂ (ಎಕ. IX. ಶಂಗಳೂ. ೭೯-೬ : ಸು. 820) ; ಊರುಮ್ಮಹಾಜನವು ವರುಣಶಿವಬಟಾರರುಮಿಟ್ಟು ಕೆಱೆಗೆ ಬಿತ್ತುವಟ್ಟ ಕೊಟ್ಟು (ಸೌಇಇ. IX–i. ೨೪-೩೯ ; 930) ; ಊರೊಕ್ಕಲು ಒಬ್ಬೊಬ್ಬನೂ ಒಂದು ಕೊಳಗ ಬಿತ್ತುವರಿಗೆ ಒಂದು ಪಡಿ ನೆಲ್ಲನ್ನು ಬಿತ್ತುವಟ್ಟವಾಗಿ ಕೊಡಬೇಕೆಂಬ ಆಣತಿ ಕಳೆದ ವರುಷ ಶಾಸನವಾಯಿತು (ಸವತಿ. ೦೬೬) ; ಊರಿನ ಜನ ಸೇರಿ ಕೆರೆಗಾಗಿ ಒಂದು ಜಮೀನನ್ನು ಬಿಡುತ್ತಿದ್ದರು. ಬಹುಶಃ ಇದನ್ನೇ ಬಿತ್ತುವಾಟ ಅಥವಾ ಬಿತ್ತುವಟ್ಟ ಎಂದು ಶಾಸನಗಳಲ್ಲಿ ಕರೆದಿರುವುದು (ಕಶಾಅ. ೧೫೪). **ಬಿತ್ತವಟ್ಟ** : ಹೊಲದವರೆಯ ನೆಟ್ಟು ಸೊಡಗೆಯ ಸುಲಿದಲ್ಲಿ ತಳಲು ಬಲಿದು ಒಡೆದುದಿಲ್ಲ ಬಿತ್ತವಟ್ಟಕ್ಕೆ ಮೊದಲೆ ಕೊಳೆ ಹೋಯಿತ್ತು (ನೋಳಿಮಾ. ೨೬೫-೬೦೭) ; ಬಿತ್ತಿದ ಬೆಳೆಯ ಪೃಥ್ವಿ ನುಂಗಿದಾಗ ಬಿತ್ತ[ಪಾಠಾಂ. ಬಿತ್ತಿದ]ವಟ್ಟ ಎಂತಪ್ಪುದೊ (ಗುಪ್ತಮಂ. ೨೦೩-೬) : ಹೊತ್ತ ಕೊಂಗವ ಇಳುಹುವರಿಲ್ಲ ಸಡ್ಡೆಗೆ ಮೂಱು ಕವೆ ಪೊಂದೆ ಬಿತ್ತವಟ್ಟ ಮೊರಕ್ಕೆ ಮೂಱು ಗೋಟು (ಕಲ್ಯಾಶಾಂ. ೦೦೨-೬). **ಬಿತ್ತುಪಾಟ** : ಪನ್ನಿರ್ಕ್ಕಣ್ಡುಗ ಮಣ್ಣು ಬಡಗದಡಿಯ ಬಿತ್ತುಪಾಟವುಮಂ ಕೊಟ್ಟರ್ (ಎಕ. XII, ಶಿರಾ. ೯-೪೦ : 1072). **ಬಿತ್ತುವಾಟ** : ಚಿತ್ತಪ್ಪ ಕೆಱೆಯನ್ ಕಟ್ಟಿಸಿ ನಾಲ್ಕಳವೆಯ ಭಾಗಂ ಬಿತ್ತುವಾಟಂ ಕೆಱೆಗೆ ಕುಡುವುದು (ಎಕ. XI, ಹಿಂಯೂ. ೩೩-೬; ಸು. 890); ಕೆಱೆಯ ಬಿತ್ತುವಾಟದುಂ ಕೆಱೆಗೆ ಕೊಡದುಣ್ಡಮನುಮನ್ತೆ (ಮೈಅಂ. ೦೯೩೬, ೬೭-೦೦ ; 908) ; ದುರಸ್ತು ಮಾಡಿಸಲು ಬಿಟ್ಟುಕೊಡುತ್ತಿದ್ದ ಭೂಮಿಯನ್ನೇ 'ಬಿತ್ತುವಾಟ' ಎಂದು ಶಾಸನಗಳು ಕರೆದಿರುವುದು (ಕಶಾಅ. ೩೬೮).

[ಬಿತ್ತು$_2$ (<ಬಿಟ್ತು) + ವಟ್ಟ$_2$]

ಬಿತ್ತುವರಿ (ನಾ). ಒಂದು ನಿರ್ದಿಷ್ಟ ಅಳತೆಯ ಜಮೀನಿಗೆ ಬಿತ್ತಲು ಬೇಕಾಗುವಷ್ಟು ಬೀಜದ ಪ್ರಮಾಣ : ಊರೊಕ್ಕಲು ಒಬ್ಬೊಬ್ಬನೂ ಒಂದು ಕೊಳಗದ ಬಿತ್ತುವರಿಗೆ ಒಂದು ಪಡಿ ನೆಲ್ಲನ್ನು ಬಿತ್ತುವಟ್ಟವಾಗಿ ಕೊಡಬೇಕೆಂಬ ಆಣತಿ ಕಳೆದ ವರುಷ ಶಾಸನವಾಯಿತು (ಸವತಿ. ೦೬೬).

[ℙ 'ಇದು ಬೀಜವರಿ' ಎಂಬ ಶಬ್ದಸಾಮ್ಯದಿಂದ ಆದ ರೂಪ]

ಬಿತ್ತುವಾಟ 'ಬಿತ್ತುವಟ್ಟ' ನೋ.

ಬಿತ್ತುಹ (ನಾ). ಬಿತ್ತುವಿಕೆ : ನೆಲದಲ್ಲಿ ತಾವರೆಯಂ ಬಿತ್ತುವವುಂ . . . ಕುರುಡಂಗೆ ಕನ್ನಡಿಯಂ ತೋಱುಹವುಂ (ಪಂಚತಂ. ೧೩೬-೯).

[ಬಿತ್ತು$_1$ + – ಹ$_2$(< – ಪ$_2$)]

ಬಿತ್ತೆಗ, ಬಿತ್ತಿಗ (ನಾ). ೧. ಪಂಡಿತ ; ಬಲ್ಲಿದ ; ವಿದ್ವಾಂಸ : "ಬಿತ್ತೆಗಂ-ಪ್ರೌಢಂ" (ಶಮದ. ಪಂ. ೨) : ಪಿತ್ತವೇಱಿದರೆ ಶರೀರಶೋಧನೆಗೈದು ಬಿತ್ತೆಗರಿಳೆಯೊಳಿಹಂತೆ ಒತ್ತಿದ ಮದವ ಪೆಂಗಳೊಳಾಡಿ ಕಳೆದು ರಾಜೋತ್ತಮನಿಹನಾತ್ಮನೊಳಗೆ (ಶರಸ. ೦೦-೦೨೪) ; ಬಿತ್ತೆಗರೊಳ್ ಬಿಜ್ಜೆಯ ನೆನಿರ್ದೆವುಗೆ ಕಲ್ವರನಿತ್ತು ತಿಳಿವು ಪೊಣ್ಮುಗುಮವರೊಳ್ (ನೀತಿಮಂ. ೨-೨೬೬). ೨. ನಿಪುಣ ; ಚತುರ: ಕೆಂಗಱಿಯ ಮೊನೆಯಂಬುಗಳ್ ಕಣ್ಡಱಿಯಿಸಿದವು ಪೊಣರ್ವ ಬಿಲ್ಲ ಕಡುವಿತ್ತೆಗರಂ (ಪಂಪಭಾ. ೦೦-೭೩). **ಬಿತ್ತಿಗ** : ೨. ಮಾರ್ಮಲೆದು ಬಿಲ್ಲ ಬಿತ್ತಿಗರೊರ್ಮೊದಲಿಸೆ ಕಣೆಗಳುರ್ಚಿ ಪೋದುವು ನೆಱನಂ (ಪಂರಾಮಾ. ೦೩-೪೦) : ಶರಾಳಿಯಂ ಕಱೆದರಾಹವದೊಳ್ ಕಡು ಬಿಲ್ಲ ಬಿತ್ತಿಗರ್ (ಉದ್ಯಟ. ೪-೬೮).

[ಬಿತ್ತೆ$_0$ (ℙ ← ತಮಿ. ವಿತ್ತೈ = ವಿದ್ಯೆ) + – ಗ$_2$]

ಬಿತ್ತೆಗವೆಣ್. ಬಿತ್ತಿಗಪೆಣ್. ಬಿತ್ತಿಗವೆಣ್ (ನಾ). ಪ್ರೌಢಯಾದ ಹೆಣ್ಣು ; ಜಾಣೆ ; ಚತುರೆ : "ಬಿತ್ತೆಗವೆಣ್ಣೆಂದು ಪ್ರೌಢೆ" (ಕಶಸಾ. ೬೨-೩೭೪) ; "ಬಿತ್ತೆಗವೆಣ್ಣನೆ ಪ್ರೌಢೆಗೆ" (ಕವಿಕಂ. ೧೬೫). **ಬಿತ್ತಿಗಪೆಣ್** : ಗಣಿಕೆ ಬಿತ್ತಿಗಪೆಣ್ಣೊಳೊರ್ವಳತಿ ಸ್ನೇಹದಿಂದೈತರುತ (ರುಕ್ಮಾಂಗ. ೩-೪೦). **ಬಿತ್ತಿಗವೆಣ್** : "ಬಿತ್ತಿಗವೆಣ್ಣೆನಲ್ ಪ್ರೌಢೆ" (ಕಬ್ಬಕ್ಕೆ. ೨೭) : "ಬಿತ್ತಿಗವೆಣ್ಣೆನಲ್ ಪ್ರೌಢೆಯೂ" (ಕಶರ. ೭೬). [ಬಿತ್ತಿಗ + ಪೆಣ್]

ಬಿತ್ತೋಣ (ನಾ). ಬಿತ್ತನೆ ಮಾಡುವಿಕೆ ; ಬಿತ್ತುವಿಕೆ : ಒಂದು ವರ್ಷ ಹದ ತಪ್ಪಿ ಬಿತ್ತೋಣದರಿಂದಾಗಲಿ ಅಥವಾ ಮಳೆಯು ಹೆಚ್ಚು ಕಡಿಮೆಯಾಗುವದರಿಂದಾಗಲಿ . . . ಒಂದು ವರ್ಷ ಬೆಳೆಯದೆ ಹೋದರೆ ಆ ಪದಾರ್ಥಗಳು ನಮ್ಮ ದೇಶದಲ್ಲಿ ಆಗುವುದಿಲ್ಲವೆಂದು ಬಿಟ್ಟು ಬಿಡಲಾಗದು (ಕೃಷಿಪ್ರ. ೬೦). [ಬಿತ್ತು$_1$ + – ಓಣ]

ಬಿದಣ (ನಾ). (?) : ವ್ಯಾಧಿಯೊಳು ನೊಂದು ನಡು ಬಗ್ಗಿ ಕಣ್ಗಳ ಮುಚ್ಚಿ ಹಾದಿಗಾಣದರು ಹಿರಿಯರೆಯಲ್ತು ಹಿರಿಯಳೆಮ್ಮಕ್ಕ ಮಹದೇವಿಯೆನುತಂ ಮೇದಿನಿಯೊಳತಿಬಿದಣಗೊಂಡು ಕರಪುರಿ ಹೆಚ್ಚಿ (ಪ್ರಭುಪು. ೬-೭೬). [?]

ಬಿದಾಗಿ (ನಾ). ಬೀಳ್ಕೊಡುವಾಗ ಕೊಡುವ ಕಾಣಿಕೆ,–ಸಂಭಾವನೆ : ಸಲ್ಲ ತಕ್ಕ 'ಬಿದಾಗಿ'ಯ ಆಸೆಯನ್ನು ತೊರೆದು ದಾರಿ ಸಿಕ್ಕತ್ತ ಕಾಲಿಗೆ ಬುದ್ಧಿ ಹೇಳಿದರು (ಗ್ರಾಮಾಯ. ೫೬).

[←ಹಿಂ. ಬಿದಾಈ ; ಮರಾ. ಬಿದಾಗೀ. ಬಿದಾಈ]

ಬಿದಾನಂದ, ಬಿದಾನದ (ನಾ). ತಿಳಿವಳಿಕೆ ಪತ್ರ ; ನೋಟೀಸು : ಮೈಸೂರ ಬಿದಾನಂದ ಮದ್ದಗಿರಿ ಕಸಬೆ ಬೆಟ್ಟದ ಹಿಂದೆ ಸುತ್ತಾ ಅಡವಿಗಿಡಾ ಕಡದು ಸಾಗುವಳಿ ಮಾಡುವ ಬಗ್ಗೆ . . . ಸರಕಾರಕ್ಕೆ ಹಣಾ ಸಂದಾಯ ಮಾಡುತ್ತಾ (ಮೈಅಂ. ೦೯೨೯. ೯೪-೪ ; 1813). **ಬಿದಾನದ** :

ನಗರ ಸರಕಾರ ದಾರೂಲರಿಯಾಸತ ಮೈಯಿಶೂರು ಬಿದಾನದದ್ದರಿವಿಲ್ಲ ತಾಲೋಕ ಮಜಕೂರ ಪೈಕಿ (ಮೈಆಂ. ೦೯೩೪. ೩೨-೩; 1812).

[← ಪಾರ. ಬಿದಾನಂದ್; ಮರಾ. ಬಿದಾನಂದ್, ಬಿದಾನದ್]

ಬಿದಾನದ 'ಬಿದಾನಂದ' ನೋ.

ಬಿದಿ (ನಾ). ೧. ಸೃಷ್ಟಿಕರ್ತ; ಬ್ರಹ್ಮ: "ಅಂಚಿದೇರಂ, ನುಡಿವೆಣ್ಣಿನಿಯಂ. ಪೊಂಬಸಿಱಂ. ಬಿದಿ . . . ತಾವರೆವಸೆಯಂ— ಈ ೮ ಬ್ರಹ್ಮಂಗೆ ಪೆಸರ್" (ಕಶಸಾ. ೪೮-೦೫); ಸೌಂದರಿಯರ ಗಾಡಿಗಳೊಳಗೊಂದೊಂದನೆ ನೆಱಪಿ ಮಾಡಿದಂ ಬಿದಿ (ಆದಿಪು. ೨-೩೬); ಪುಟ್ಟಿಸಿದನದೇಕೆಯೊ ಬಿದಿ (ಪುಷ್ಪಪು. ೦-೫೦); ತಾರಕನುಪಟಳವನು ಬಿದಿಯೊಳು ಸುರರು ಬಿನ್ನೈಸೆ (ಮೋಹತ. ೫-೩). ೨. ಅದೃಷ್ಟ; ಹಣೆಬರಹ: ಕಿರಾತಂ ಬೇಸತ್ತು . . . ಬಿದಿಯಂ ಬಯ್ದು ತನ್ನ ಮನೆಗೆ ಮಗುಟ್ಟಂ (ಪಂಪತಂ. ೨೯೦-೦೬); ಇದು ಬಿದಿಯ ಕುಶಲತೆಯ . . . ಬೆಳ್ಳಸವನುರುಳಿಸುವ ಕಾಲನೆಂಬುದ ವಿಲಯರುದ್ರ ನೊಲಿದಲೆಯುತಿಹ ಕಟ್ಟುರಿಯ ಸುಡುಗಾಡು! (ಕವಿಕಾ. ೨೪-೬).

ಬಿದಿಯ ತೇರು = ಬ್ರಹ್ಮನ ವಾಹನ; ಹಂಸ: "ಬಿದಿಯ ತೇರುಮಂಚೆಯೆಂದು ಹಂಸಾಖ್ಯಮದಕ್ಕುಂ" (ಕಬ್ಬಿಕ್ಕೆ. ೯). [< ಸಂ. ವಿಧಿ]

ಬಿದಿಗ (ನಾ). ೧. ಅದೃಷ್ಟಶಾಲಿ: ಗ ಪ್ರತ್ಯಯಕ್ಕೆ . . . ಬಿದಿಗಂ, ಸಟೆಗಂ (ಕಮದ. ೨೦೧ ಪ್ರಯೋ). ೨. ಒಬ್ಬಾತನ ಹೆಸರು: ಶ್ರೀಮತ್ ರೂವಾರಿ ಬಿದಿಗಯಿಾ ಕಮ್ಮಟದ ಸೂಳೇರಿದ ಮುಟ್ಟಿದರ ಮೆಯಿ ಜಾಯಿಲೆ ಪೆಱಗಗಿನ್ (ಎಕ. II, ೩೦೬; ಸು. 950). [ಬಿದಿ + —ಗ$_2$]

ಬಿದಿಗೆ, ಬಿದಿಯೆ (ನಾ). ಪಕ್ಷದ ಎರಡನೆಯ ದಿನ; ದ್ವಿತೀಯೆ: "ಬಿದಿಗೆಯೆನಲ್ಕೆ ದ್ವಿತೀಯಾಖ್ಯೆ" (ಕಶರ. ೬೯); ಗರ್ಭಾವತರಣಂ ಆಷಾಢ ಬಹುಲಬಿದಿಗೆಯುತ್ತರಾಷಾಢಾನಕ್ಷತ್ರದ ಬೆಳಗಪ್ಪ ಜಾವದೊಳ್ (ಆದಿಪು. ೬-೩೨ ಪ); ಶುಕ್ಲಪಕ್ಷದೊಳ್ ಬಿದಿಗೆಯೊಳಾದಿವಾಸರದೊಳ್ . . . ವೃಶ್ಚಿಕಲಗ್ನದೊಳರ್ಕಜಾಂಶಮಾದುದು ಕವಿರತ್ನನಂದನನ ರಾಯನ ಜಾತಕಮುತ್ತರೋತ್ತರಂ (ಅಪಪು. ೦೨-೫೩). ಬಿದಿಯೆ: ಭಾದ್ರಪದ ಬಹುಳ ಬಿದಿಯೆ (ಎಇ. VI, ೨೫೯-೬; 975); ಜೇಷ್ಟ ಸುದ್ಧ ಬಿದಿಯೆ (ಕಇ. II, ೭-೨೨; 1030).

ಬಿದಿಗೆಚಂದ್ರ, ಬಿದಿಗೆಯ ಚಂದ್ರ = ವೃದ್ಧಿಯಾಗುತ್ತಿರುವ ಚಂದ್ರ; ಶುಕ್ಲಪಕ್ಷದ ಚಂದ್ರ: ಬಿದಿಗೆಚಂದ್ರ ಬಂದ ನೋಡು ದೀಪ ಹಚ್ಚಿದಂತೆ ಜೋಡು (ಆಕಳು. ೨೬೯-೦); ಆತನುಂ ಬಿದಿಗೆಯ ಚಂದ್ರನಂತೆ ಕ್ರಮಕ್ರಮದಿಂ ಸುಖದಿಂ ಬೆಳೆದು (ಪಡ್ಡಾರಾ. ೭೩-೦೯); ಬಿದಿಗೆಯ ಚಂದ್ರ [ಪಾಠಾಂ. ದ್ರಮ]ನಂತಭಿವೃದ್ಧಿಯನೆಯ್ದಿ ಶೈಶವಂ ಪತ್ತುವಿಡಲ್ (ಪುಷ್ಪಾಸ್ರ. ೬-೨೧ ಪ). [< ಪ್ರಾ. ಬಿಇಆ, ಬಿದಿಯ. /ಸಂ. ದ್ವಿತೀಯಾ]

ಬಿದಿಗೆದಿಂಗಳ್ (ನಾ). ವೃದ್ಧಿಯಾಗುತ್ತಿರುವ ಚಂದ್ರ; ಶುಕ್ಲಪಕ್ಷದ ಚಂದ್ರ: ಸಭಾಕೈರವಕುತೂಹಲಕೆ ಬಿದಿಗೆದಿಂಗಳ್ ನಗೆಯ ಜೊನ್ನಮಂ ಸಿಂಚಿಸುತೆ, ಮಿಡಿಯತೊಡಗಿದನಿಂತು ತನ್ನುಸಿರ್ತೇನೆಯಂ (ಶ್ರೀರಾಮಾ. ೫೬೪-೩೨೫). [ಬಿದಿಗೆ + ತಿಂಗಳ್]

ಬಿದಿಗೆವೆಱ^3 (ನಾ). = ಬಿದಿಗೆದಿಂಗಳ್: ಬಿದಿಗೆವೆಱ^{3}ಯ ಬಿಂಕಂಗೆಡಿ ಪಧರಂ . . . ಒಪ್ಪಿದುವಾ ಸತಿಗೆ (ಜಯಕಾ. ೨-೬); ಬಿದಿಗೆವೆಱ^{3}ಯಂ ನಾಣ್ಚಿಸುವ ಕೋರೆದಾಡೆಗಳ್ (ರಾಘವ. ೦೪-೬). [ಬಿದಿಗೆ + ಪೆಱ^3]

ಬಿದಿಮಾಳ್ಕೆ (ನಾ). ವಿಧಿಯ ಕೆಲಸ; ಅದೃಷ್ಟದ ಕೈವಾಡ: ಬಿದಿಮಾಳ್ಕೆಯೊಳ್ಳಿತಕ್ಕುಂ (ಶ್ರೀರಾಮಾ. ೪೩೦-೨೯೫).

[ಬಿದಿ + ಮಾಳ್ಕೆ (< ಮಾಟ್ಕೆ)]

ಬಿದಿಯಣ್ಣ (ನಾ). ಒಬ್ಬಾತನ ಹೆಸರು: ಕೊನೆಗೌಡ ಬಿದಿಯಣ್ಣ . . . ಏಳುತ್ತ ಓಡೆ (ಎಕ. VIII, ಸೊರಬ. ೪೫೬-೫; 972). [ಬಿದಿ + ಅಣ್ಣ$_1$]

ಬಿದಿಯಮ್ಮ (ನಾ). ಒಬ್ಬಾತನ ಹೆಸರು: ಮಗಂ ಬಿದಿಯಮ್ಮಂ ಕುಪ್ಪಳೂರ ಮಹಾಜನಕ್ಕೆ ಗೋಸಹಸ್ರಕೆ ಪೊನ್ನ ಕೊಟ್ಟು (ಎಕ. VIII, ಸೊರಬ. ೨೪೬-೦; ಸು. 950 ?). [ಬಿದಿ + ಅಮ್ಮ$_1$]

ಬಿದಿಯಾಯ್ತ 'ಬಿಜಯಿತ' ನೋ.

ಬಿದಿಯೆ 'ಬಿದಿಗೆ' ನೋ.

ಬಿದಿರ್$_1$, ಬಿದಿರು$_1$, ಬಿದುರ್, ಬಿದುರು (ಕ್ರಿ). ೧. ಕೆದರು; ಚೆದರು; ಹರಡು: "ಬಿದಿರ್—ವಿಕೀರ್ಣೇ (ಚದರು—ಹರಡು), ವೇಣೌ ಚ" (ಶಮರಾ); ದರಿಗಳಂ ಕೋಡೊಳ್ ಕುತ್ತಿಯೆತ್ತಿ ಬಿದಿರ್ದೀಡಾಡುತಿರ್ದು (ಪಂಪತಂ. ೪೬-೦); ಬಿದಿರ್ದೀಡಾಡಿ ಕೆಲಂಬರಂ ಕೆಲಬರಂ ನಿಟ್ಟೆಲ್ವು ನುರ್ಗಾಗೆ ಕಾಯ್ದೊದೆದು . . . ಕೊಂದಂ ಮರುನ್ನಂದನಂ (ಪಂಠಾಮಾ. ೦೦-೧೪೩). ೨. ಕೊಡಹು; ಒದರು; ಝಾಡಿಸು: ಕಯ್ಯುಂ ಬಾಯುಂ ಬೆಂದೊಡೆ ಮೆಯ್ಯನದಿರ್ದು ಕೈಯಂ ಬಿದಿರ್ದವನಂ ಕಂಡು ನಕ್ಕಿಂತೆಂದಳ್ (ಪಡ್ಡಾರಾ. ೦೬೮-೨೦); ಭೀಮಸೇನಂ ತನ್ನ ತಲೆಯೊಳಂ ಮೆಯ್ಯೊಳಂ ಕರಗಿ ಸುರಿವರಗಿನುರಿಯ ಬಂಬಲ್ಗಳಂ ಪೊಸೆದು ಬಿದಿರ್ದು ಕಳೆದು (ಪಂಪಭಾ. ೩-೬ ಪ); ಶುನಕಂ ಕಡಂಗಿ ವಕ್ರಿಸೆ . . . ಕರ್ಣಮಂ ಬಿದಿರೆ ತಾನೆ ಪರಾಜಯಮಕ್ಕುಮಾಜಿಯೊಳ್ (ಲೋಕೋಪ. ೦೨-೨೮). ೩. ಅದಿರು; ನಡುಗು; ಕಂಪಿಸು: ಬಿದಿರ್ದವರಿನರರ ಹೃದಯಂ (ಎಕ. VII, ಶಿವಮೊ. ೫೬-೨೮; 1125). ೪. ಚೆಲ್ಲು; ತುಳುಕು: ಅರೆಗೊಡ ತುಳುಕುವುದಲ್ಲದೆ ತುಂಬಿದ ಸಿರಿಗೊಡ ಬಿದಿರ್ವುದೆ (ಭರತ. ೬೦-೬೬). ೫. ಎಸೆ; ಎರಚು: ಹದನಱಿದೆಸರಿಟ್ಟೊಯ್ಯನೆ ಮೃದುವಹ್ನಿಯನೆಸಗಿ ಪದೆದೆಸರ್ ಕಾಯಲ್ ನಿಲ್ಲದೆಯಕ್ಕಿಯೆರಡನೊಲೆಯೊಳ್ ಬಿದಿರ್ದೆಸರೊಳ್ ಪೊಯ್ದಳಕ್ಕಿಯಂ ಸತಿಯಾಗಳ್ (ದಶಕು. ೦೨-೦೨೦). ೬. ಒಗೆ; ಬಿಸಾಡು: ಮಚ್ಚರಂ ದೋರ್ಪ್ಪ ಸಾಮಂತರನಾಟಂದೊತ್ತಿಗೆ ಗೋಣಂ ನುಲಿದು ಬಿದಿರ್ವ ಮಾಕಾಳಿ ಸಾವನ್ತಕೇತಂ (ಎಕ. VI, ತರೀಕೆ. ೪೨-೫೫; 1206). ೭. ನುಡಿಸು; ಮಿಡಿ; ಮೀಟು: ವೀಣೆಯಂ ಬಿದಿರ್ದು ಮೃದುಸ್ವನಂ ನೆಗೞ^3 (ಕಾವ್ಯಸಾ. ಪುಟ. ೨೩೬). ೮. ಇಲ್ಲವಾಗು; ನಾಶವಾಗು: ಬಿದಿರ್ದುದು ಬಿಂಕಂ ಬೀತುದು ಪರಿ ಪೈಸರವೋದುದು ಪೆಂಪು (ಜಯಕಾ. ೫-೫೨). ಬಿದಿರು$_1$: ೧. ಬಿದಿರಿದುವು ಮಕುಟ ತಾಗಿ ತಾರಕೆಗಳು . . . ನಮ್ಮ ಕೂಡಲಸಂಗಮದೇವನಿಂದು ನಾಟ್ಯವನಾಡೆ (ಬಸವ. ೫೪೦); ತಪ್ಪದೆ ಜಲಚರನಿಕರ ಬಿದಿರೆ ಮೇಲಕುಪ್ಪರಿಸುವ ಜಲಬಿಂದು ಚಿಪ್ಪಿಂದ ಲೊಡೆದು ಸಿಡಿವ ಮುತ್ತುಗಳೆನಲೊಪ್ಪಿದುದತಿರಮ್ಯಮಾಗಿ (ಕಂನವಿ. ೫-೪೫). ೨. ಕುದುರೆ ಕಂಬನಿಯಿಕ್ಕಿದವು ಮೈ ಬಿದಿರಿದವು ದಂತಿಗಳು (ಕುಮ್ಮಾಭೀ. ೧೦-೦೬); ಕಾಲ ಹುಡಿಯನು ಬಿದಿರಿ ಬಿಸುಡುವವೋಲು ಸಕಲವನೊದೆದು ನಡೆದನು (ವಿಭಾಗ. ೪೦೦-೦೨). ೩. ಬಟ್ಟಕಂತುಕದಿಂದೆ ಬಲ್ಮೊಲೆ ಬಿದಿರು ವಂತಿಟ್ಟಾಡಿದುದು ಸಖನಿವಹ (ಮೋಹತ. ೦೪-೯೭). ೯. (ಆಲಂ) ವಿನಯದಿಂದಿರು; ನಮ್ರವಾಗಿರು: ಬಿದಿರಲಂದಣವಕ್ಕು ಬಿದಿರೆ ಸತ್ತಿಗೆಯಕ್ಕು ಬಿದಿರಲ್ಲಿ ಗುಡಿಯು ಗೂಡಾರವಕ್ಕು ಬಿದಿರಲ್ಲಿ ಸಕಲ ಸಂಪದವೆಲ್ಲವು ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವ (ಬಸವ. ೨೨೦); ಬಿದಿರೆ ಅಂದಣವಕ್ಕು ಬಿದಿರೆ ಸತ್ತಿಗೆಯಕ್ಕು ಬಿದಿರಿಂದ ಸಕಲ ಪದವಕ್ಕು ಲೋಕದೊಳು ಬಿದಿರದವ ಕೆಟ್ಟ (ಸರ್ವಜ್ಞ. ೬೬೯). ಬಿದುರ್: ೧೦. ಕಟ್ಟನ್ನು ಬಿಚ್ಚು; ಕಟ್ಟನ್ನು ಸಡಿಲಿಸು: "ಬಿದುರ್ — ಅಶೃಂಖಲಾಯಾಂ" (ಶಮಧಾ). ೧೧. ಕೀಳು; ಉತ್ಪಾಟಿಸು: ಕೆಲರಂ ಕಿರ್ತ್ತಿಕ್ಕಿ ಬೇರಂ ಬಿದುರ್ದ್ದು ಕೆಲರನತ್ಯುಗ್ರಸಂಗ್ರಾಮದೊಳು ಬಾಳ್ದಲೆಗೊಂಡು (ಎಕ. II, ೦೩೨-೨೦; 1123). ಬಿದುರು: ೨. ಶಿರವ ಬಿದುರಿ ಮಹಾದುರಾಗ್ರಹಬುದ್ಧಿಯಲಿ ಬಂದನು ನಿಜಾಲಯಕೆ (ಸಂಭಪ. ೧೫-೨೦); ಕಾಗೆ . . . ಪಕ್ಕವ ಬಿದುರೆ ನೀರ್ವನಿಯು ಲಿಂಗಶಿರಭಾಗದೊಳು ಬೀಳಲು (ಗುರುಪಾ. ೫-೬೦); ಮರುತಸುತ ಕ್ರೋಧದಿಂದೌಡೊತ್ತುತ ಬಿದುರುತಂ

ಬಾಲಮಂ ಭೂತಳಕೆ ಧುಮ್ಮಿಕ್ಕಿ ಸದೆದು ಗಜರಥತುರಗಕಾಲಾಳು ಗಳನೆಲ್ಲನೊದೆದೆಮನ ಸದನಕಂ ಕಳುಪುತಿರ್ದನು (ವಂಶಾಂ. ೩-೦೬-೧೬). ೩. ಸುರಗಿರಿ ವಜ್ರಹತಿಯಲಿ ಬಿದುರಿ ಬೀಳುವವೊಲು (ನಿಭಾಗ. ೦೦-೩೬-೩೦); ದಿಕ್ಕರಿ ಕಮಠರೆದೆ ಬಿದುರೆ ಮುರಸಾಹರನ ಪಾರ್ಥನ ದಳದ ಚೂಣಿಯ ಸಮರ ರಂಜಿಸಿತು (ಕೋಗಯ. ೨೦ ಸೂತನ). ೫. ಅಕ್ಷತೆ ಫಲಗಳ ಬಿದುರಿದ ರವರು ನಲ್ಮೆಯೊಳು (ಜ್ಞಾನಕ. ೩೪-೯೯). ೧೨. ಬಿಡು; ತ್ಯಜಿಸು: ಕಡಿವಡೆದು ರಥಿಕರು ಬಿದುರಿದರು ಜೀವವನು (ನಿಭಾಗ. ೦೦-೩೬-೧೪).

[ದೇ.॥ ತಮಿ. ವಿತಿರ್; ಮಲ. ವಿತರು; ತುಳು. ಬಿದುರ್, ಬಿದುರು]

ಬಿದಿರ್$_2$, ಬಿದಿರು$_2$ (ನಾ). ೧. ಉಷ್ಣ ಹಾಗೂ ಉಪೋಷ್ಣವಲಯ ಗಳಲ್ಲಿ ಸ್ವಾಭಾವಿಕವಾಗಿ ಮರದ ರೀತಿಯಲ್ಲಿ ಬೆಳೆಯುವ ಹುಲ್ಲು ಜಾತಿಯ ಸಸ್ಯ ; ವಂಶವೆಂಬ ಸಸ್ಯ: "ತ್ವಚಿಸಾರಃ, ಚಪಃ, ವಂಶಃ, ವೇಣುಃ, ತ್ವಕ್ಸಾರಃ, ಮಸ್ಕರಃ – ಈ ೬ ಬಿದಿರ್" (ಹಲಾಯು. ೩೪-೫೦); ಬಿದಿರ ಸಿಡಿಂಬಿನ ಪೊದಱೊಳಗೆ ಮಱೆದೊಱಗಿದ ಮೃಗರಾಜನಂತೆ (ಸಂಪಭಾ. ೦೦-೫೦ ಪ). ೨. ಗಳು; ಗಳೆ : ಮಿಳಿಯ ಬಿದಿರ ಮೇಗೇಱಿಯಾಕಾಶ ದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ (ವಡ್ಡಾರಾ. ೬-೨೬). ಬಿದಿರು$_2$: ೧. "ವಂಶಃ, ತ್ವಕ್ಸಾರಃ . . . ವೇಣುಃ, ಮಸ್ಕರಃ, ತೇಜಸಃ – ಈ ೯ ಬಿದಿರು" (ನಾಸರಾ. ೦೦೨); ಬೆತ್ತ ಬಿದಿರಿಡ ದಡಸಿ ಬೆಳೆದ ಮೆಳೆಗಳ ನಡುವೆ . . . ನಿಂದೆಯೊ (ಸಿದ್ಧರಾ. ೨-೬೦); ಕಬ್ಬಿಗರೋದುಗಬ್ಬವ ಹಾಡುಗಬ್ಬವ ಕಬ್ಬದೊಳೊರೆವರಿವೆರಡು ಕಬ್ಬಿನಂತಿರ ಬೇಕು ಬಿದಿರಂತೆ ರಚಿಸಲೇಕಬ್ಬ ಹೇಳೆಲೆ ಸರಸ್ವತಿಯೆ (ಭರಕ. ೦-೬); ಬಿದಿರಡವಿದುಱುಗಲ್ ಮುಸುಕಿದ ಆ ದಿವ್ಯಚಂದನದ್ರುಮಗಳೆನೆ . . . ನಿಮ್ಮ ಶ್ರೀಪಾದಭಕ್ತರ್ ದುರಿತಮುಕ್ತರಿಪ್ಪರ್ (ಸಿಂಪು. ೩-೦೩).

ಬಿದಿರ ಲಳಿಗೆ = ಬಿದಿರಿನ ಅಂಡೆ : ಬಿದಿರ ಲಳಿಗೆಯಲಗ್ಘವಣೆಯ ತಂದು . . . ಲಿಂಗವ ಸಿಂಗಾರವ ಮಾಡಿ ನೋಡುವದೆಂದು ದೊರೆಕೊಂಬುವುದೋ ಎನಗೆ (ಸಕವ. II. ೬೦೬-೬೪೯).

[ದೇ.॥ ತಮಿ. ವೆತಿರ್, ವೆತಿರಿ, ವಯಿರ್; ತುಳು. ಬೆದ್‌ರ್; ತೆಲು. ವೆದುರು; ಕೋಲಾ. ವೆದುರ್; ಪರ್ಜಿ. ವೆದ್ರಿ; ಗಡಬ. ವೆದಿರ್, ವೆದ್ರೆ; ಗೊಂಡಿ. ವೆದುರಿ, ವೆದೂರ್; ಕೊಂಡ. ದೇರ್; ಕುವಿ. ದೇರು]

ಬಿದಿರಕ್ಕಿ (ನಾ). ಬಿದಿರಿನ ಸಸ್ಯದಲ್ಲಿ ಉತ್ಪತ್ತಿಯಾಗುವ ಕಾಳು,– ಬೀಜ : ಶೀತಳಶಶಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ (ಗಿಂಕ. ೦-೦೨೩) ; ಬಿದಿರಕ್ಕಿಯೋಗರವೊಲಿದೊಡುಡುವಿನ ತುಪ್ಪವುಂಟಲ್ಲಿ (ಬಸಪು. ೦೬-೧೭); ಬಿದಿರಕ್ಕಿಯಿನಿಜೇನುತುಪ್ಪ ಕರ್ಜುರ ದ್ರಾಕ್ಷೆ ಬದರಿ ಮುಂತಾದ ಸತ್ಫಲವ . . . ತಂದು ಇದಿರಿಕ್ಕಿದರು ಮೇಲ್ಮೇಲೆ (ಮೋಹತ. ೦೯-೭೩); ಬಿದಿರಕ್ಕಿ ದೇಹಕ್ಕೆ ಉಷ್ಣ ಎಂದು ಹಿಂದಣ ಕಾಲದವರು ಉಪಯೋಗಿಸಲು ಅಂಜಿರಲಾರರು (ಸ್ವಸ್ಥಹೂ. ೨೩೦). [ಬಿದಿರ್$_2$+ಅಕ್ಕಿ$_1$]

ಬಿದಿರಿಸು (ಕ್ರಿ). ೧. ಕೊಡಹು ; ಝಾಡಿಸು : ಕೊಸರ್ವಡಿದ ಕೋ ಎನುತಲೊಂದೆ ತಿರುಪಿನೊಳು ಬಿದಿ [ಪಾಠಾಂ.ದು]ರಿಸಿ ಬಿಟ್ಟು ನಿಂದು ನಿರುಪಾಧಿಕಜ್ಯೋತಿಯಂತೆಸದಧಿಕ ಪದವಡೆದು (ಲಕಿಸಂ. ೩೬-೨) ; ಕಲಹಕ್ಕೆ ಕಾಲ್ಕೆದರಿ ಗರಿಯ ಪಸರಿಸಿ ತಮ್ಮ ತಲೆಯ ಬಿದಿರಿಸಿ . . . ಕಲಹಂಸ ಕಂಗೆಸೆದಿರ್ದವು (ವವಮೋ. ೯-೩೨). ೨. ಉದುರಿಸು ; ಎರಚು : ಭಸಿತ ವನು ತೆಗೆದು ಕಂಗೊಳಿಸುತವನಿಯೊಳು ಬಿದಿರಿಸಲ್ (ಸಿದ್ಧೇಪು. ೬-೨೬).

[ಬಿದಿರ್$_1$ + – ಇಸು$_3$]

ಬಿದಿರು$_1$ 'ಬಿದಿರ್$_1$' ನೋ.

ಬಿದಿರು$_2$ 'ಬಿದಿರ್$_2$' ನೋ.

ಬಿದಿರುಪ್ಪು (ನಾ). ಬಿದಿರಿನ ಪೊಳ್ಳುಬೊಂಬಿನೊಳಗೆ ಸಂಗ್ರಹ ವಾಗುವ ಒಂದು ಬಗೆಯ ಹರಳು ; P "ಹರಳಿನ ರೀತಿಯ ಬಿದಿರುಪ್ಪು (ಟ್ಯಾಬಷಿಯರ್) ಔಷಧಿಯಾಗಿಯೂ ರಾಸಾಯನಿಕ ಕ್ರಿಯೆಗಳಲ್ಲಿ ವೇಗವರ್ಧಕವಾಗಿಯೂ ಬಳಕೆಯಾಗುತ್ತದೆ" (ಕವಿಕೋ. XII. ೦೨೦) : "ವಂಶಜಾ – ಬಿದಿರುಪ್ಪು" (ಓಷಧಿ. ೦೨೭).

[ಬಿದಿರು$_2$ (<ಬಿದಿರ್$_2$) + ಉಪ್ಪು$_1$]

ಬಿದಿರುಮೆಳೆ (ನಾ). ದಟ್ಟವಾಗಿ ಬೆಳೆದ ಬಿದಿರಿನ ಪೊದೆ.– ಪೊದರು : ಬಿದಿರುಮೆಳೆ ಧಗಧಗಿಸೆ ಘನಹೆಬ್ಬಿದಿರು ಛಟಿಛಟಿರೆನಲು (ವಳಕ. ೬-೭); ದಟ್ಟಯಿಸಿ ಬೆಳದಿರ್ದ ಬಿದಿರುಮೆಳೆ ಪವನಸಂಘರ್ಷಣೆಗೆ ಘೀಂಕರಿಸಲಿಭ ದಂತೆವೋಲ್ ವಿಕಟರವಗೈದು ಕಂಪಿಸಿತು ಕಾಂತಾರಮಾ ಕೀಚಕಧ್ವನಿಗೆ ! (ಸತ್ರಾಂಗ. ೫೦-೦೩೯೦). [ಬಿದಿರು$_2$ (<ಬಿದಿರ್$_2$) + ಮೆಳೆ$_1$]

ಬಿದಿರುಲಳಿಗೆ (ನಾ). ಬಿದಿರಿನ ಅಂಡೆ : ಬೊಂಬಿನಿಂದ ಮಾಡಿದ ಪಾತ್ರೆ : ಜೇನುತುಪ್ಪದ ಗಡಿಗೆಗಳನ್ನು ಬಿದಿರುಲಳಿಗೆಗಳಲ್ಲಿ ತುಂಬಿದ್ದ ಮುತ್ತಿನ ಮಣಿಗಳನ್ನು ತಂದು (ಶಿವದ. ೯೯-೩).

[ಬಿದಿರು$_2$ (<ಬಿದಿರ್$_2$) + ಲಳಿಗೆ (<ನಳಿಗೆ)]

ಬಿದಿರುವಳ್ಳಿ 'ಬಿದಿರ್ವಳ್ಳಿ' ನೋ.

ಬಿದಿರೂರ್ (ನಾ). ಒಂದು ಊರಿನ ಹೆಸರು ; P ಶಿವಮೊಗ್ಗ ಜಿಲ್ಲೆಯ ಈಗಿನ ಬಿದನೂರು : ಪೆರ್ಬಟ್ಟಕ್ಕಂ ಬಿದಿರೂರ ಅಗ್ಗಳ ಮಿಳಿವಲ್ಲಿ (ಎಕ. X, ಶ್ರೀನಿವಾ. ೨೭-೨೨ ; ಸು. 870) ; ಬಿದಿರೂರಲು ಬೂತುಗನಂ ಪೊನ್ನಿಗಂ ಕಾದಿ ಸತ್ತು ಸ್ವರ್ಗ್ಗದಲಿಟ್ಟ (ಎಕ. XII, ಮುದ್ದಗಿ. ೭೨-೦೬ ; ಸು. 950) ; ಬಿದಿರೂರಂ ಬೆದೆಗೆಡಿಸಿ . . . ಇರ್ಕೇರಿಯ ನೊಕ್ಕಲಿಕ್ಕಿ (ಪಕವಿ. ೩-೨೬). [ಬಿದಿರ್$_2$ + ಊರ್]

ಬಿದಿರೆಲೆ (ನಾ). ೧. ವಂಶವೆಂಬ ಸಸ್ಯದ ಎಲೆ ; ಬಿದಿರಿನ ಗರಿ : ಬಿದಿರೆಲೆಯೊಳ್ ರಸಮನಱಸುವ ಕಳ್ಳಿಯ ಪಾಲೊಳ್ ಬೆಣ್ಣೆಯನಱಸುವ (ಧರ್ಮಾಮ್ಯ. ೦೨-೨೪) ; ಬಿದಿರೆಲೆಯ ಮೆಲಿದರೆ. ಮೆಲಿದಂತಲ್ಲದೆ ರಸವನು ಹಡೆಯಲು ಬಾರದು (ಬಸವ. ೩೫೪). ೨. ಬಿದಿರಿನ ಗರಿಯ ಆಕಾರದ ಬಾಣ : ಹಿಳಿಕು ಕವಲಂಬು ಬೋಳೆವಿದಿರೆಲೆ . . . ಸವಿವಾಯನೆಂಬ ನಾನಾ ಸರಳನು ಸೆಳೆದು (ಸೋಮಶ. ೩-೨೬) : ದೊರೆವಡೆದ ಕಣಗಿಲ ಪುಳುಂಬವು ತರದಿ ಬಿ[ಪಾಠಾಂ. ವಿ]ದಿರೆಲೆ ಶರಧಿಯಂ ತಳ್ತಿರಿಸಿದಾ ಬತ್ತಳಿಕೆಗಳು ನೆರೆದಿರ್ದುವವರಲ್ಲಿ (ಸಾಳ್ವಭಾ. ೩-೦೪). [ಬಿದಿರ್$_2$ + ಎಲೆ$_1$]

ಬಿದಿರ್ಕಲ್ (ನಾ). ಒಂದು ಊರಿನ ಹೆಸರು : ಕರಿಕನಾಡ ಬಿದಿರ್ಕಲ್ಲಾಳ್ದ ಕುಕ್ಕರ ಪಾಳಿಕ್ಕಾಱಿನಾಡಿಯರ್ ತುರಿದು (ಎಕ. IX, ಬೆಂಗಳೂ. ೩೬-೩ ; ಸು. 750). [ಬಿದಿರ್$_2$ + ಕಲ್$_3$]

ಬಿದಿರ್ಕೆ (ನಾ). ಎರಚುವಿಕೆ : ಅದಿರ್ಕೆ, ಬಿದಿರ್ಕೆ, ಪೊಣರ್ಕೆ (ಶಬ್ದಾಮ. ೩೫೭ ಪ್ರಯೋ). [ಬಿದಿರ್$_1$ + –ಕೆ]

ಬಿದಿರ್ಚು (ಕ್ರಿ). ೧. ಹರಡು ; ಕೆದರು : ಎರಲಲೆಪಿಂದೆಸಟ್ಟಿಸುಪ ನೆಯ್ದಿಲಂ . . . ಬಿದಿರ್ಚಿ ದಳಂಗಳಂ ತೆಱಂದಿರಿದುದು ಜಕ್ಕವಕ್ಕಿ (ಅನಂಪು. ೭-೭೦); ನುಡಿಯಾಗರವಂ ಬಿದಿರ್ಚಿದೈ! (ಗಿಳಿಪಿ. ೫೦-೩). ೨. ಕೊಡಹು; ಝಾಡಿಸು : ಎಱಂಕೆಗಳಂ ಬಿದಿರ್ಚಿಕೊಂಡು ತಾಮ್ರುತುಂಡಂ ಕಣ್ದೆಱೆದು . . . ಅಗ್ರಭಾಗದೊಳ್ಮನಂಗೊಳಿಪವನಿಪನನಾಲೋಕನಂಗೆಯ್ದು (ಕಾದ್ಕಟಿ. ೩-೨ ಪ) ; ಎಱಕೆಗಳೊಳ್ ಪೊದಟ್ಟ ಪನಿಪುಲ್ಲ ಪಯಃಕಣಮಂ ಬಿದಿರ್ಚಿ (ಶಾಂತೀಶ್ವ. ೦೦-೯೭) ; ತುಂತುಱನುದಿರ್ಚಿತು ಸಾರಸಂ ಸಲಿಲದೊಳ್ಳನೆದ ಪಕ್ಕಂಗಳಂ ಬಿದಿರ್ಚಿ (ಶೈಮಭಾ. ೨೬-೩೬). ೩. ಬಿಚ್ಚು; ಕಳಚು : "ಬಿದಿರ್ಚು–ರಥವಿಮೋಚನೇ, (ಬಂಡಿಯಿಂದ ಕುದುರೆ ಮೊದಲಾದುವನ್ನು ಬಿಚ್ಚು, ಹರಡು)" (ಶಮಧಾ) ; ಮೋಹಪಾಶದ ತೊಡರಂ ಬಿದಿರ್ಚಿ ದೆಸೆಯಂತುವರಂ ನಿಜಕೀರ್ತಿಯಂ ನಿಮಿರ್ಚಿದಂ (ಪಂಠಾಮಾ. ೨-೨೬). ೪. ತೆರೆ ; ಅಗಲಿಸು : ಮುದಿರ್ದ ಕಣ್ಣೆವೆಯಂ ಬಿದಿರ್ಚಿ ನೋಡೆಮ್ಮಂ (ರಾಮಾಶ್ವ. ೬೦-೬). [ಬಿದಿರ್$_1$ + –ಚು$_1$]

ಬಿದಿರ್ದಟ್ಟಿ (ನಾ). ಬಿದಿರಿನ ಸೀಳಿನಿಂದ ಹೆಣೆದು ಮಾಡಿದ ತಡಿಕೆ : ಬಿದಿರ್ದಟ್ಟಿ, ಪೊಗರ್ವಟ್ಟಿ (ಕಮರ. ೪೩ ಪ್ರಯೋ). [ಬಿದಿರ್$_2$ + ತಟ್ಟಿ$_1$]

ಬಿದಿರ್ಮುತ್ತು (ನಾ). ಬಿದಿರಿನಲ್ಲಿ ಸಿಗುತ್ತದೆ ಎಂದು ನಂಬಲಾದ ಒಂದು ಬಗೆಯ ಮುತ್ತು ; ೧ ಆನೆ, ಸರ್ಪ, ಮೀನು, ಕಾಡು ಹಂದಿ, ಕಪ್ಪೆಚಿಪ್ಪು, ಶಂಖ, ಮೋಡ ಹಾಗೂ ಬಿದಿರುಗಳಲ್ಲಿ ಮುತ್ತು ಸಿಗುತ್ತದೆಯೆಂಬ ಕವಿಸಮಯವಿದೆ: ತೋರಬಿದಿರ್ಮುತ್ತಿನ ನವಹಾರದ ಕೆಂದಳಿರ್ಗಳುಡೆಯ ವನಚರಿಯೊರ್ವಳ್ . . . ನವಸಂಧ್ಯಾ ರಾಗದೊಳೆಸೆವ ನಿಶೆಯನನುಕರಿಸಿರ್ದಳ್ (ಜಗವಿ. ೦೬-೦೬).

[ಬಿದಿರ್$_2$ + ಮುತ್ತು$_3$]

ಬಿದಿರ್ವಳ (ನಾ). ಬಿದಿರಿನ ಕೆಲಸ ಮಾಡುವವನು ; ಮೇದಾರ : ಕದಿರ್ವಳಂ, ಬಿದಿರ್ವಳಂ (ಶಬ್ದಾನು. ೭೩ ಪ್ರಯೋ). [ಬಿದಿರ್$_2$ + — ವಳ]

ಬಿದಿರ್ವಳ್ಳಿ, ಬಿದಿರುವಳ್ಳಿ (ನಾ). ಒಂದು ಊರಿನ ಹೆಸರು : ಬೀರವುರಮುಂ ಬಿದಿರ್ವಳ್ಳಿಯುಮನೊನ್ದೊ ಅಗ್ರಹಾರಂ ಮಾಡಿ(ಎಕ. XI, ಪತ್ರದು. ೩೦-೦೬ ; 968). **ಬಿದಿರುವಳ್ಳಿ** : ಶ್ರೀಮತ್ಕನ್ನಯ್ಯ ಚರಿತ್ರ ವಳ್ಳಿಯುಮಂ ಪೆರ್ಬ್ಬಾಳುಮಂ ಬಿದಿರುವಳ್ಳಿಯು × × × ರದೊಳ್ ಕೊಣ್ಡು (ಎಕ. XI, ಪತ್ರದು. ೪೯-೬೦ ; 947). [ಬಿದಿರ್$_2$ + ವಳ್ಳಿ$_1$]

ಬಿದಿರ್ಹಕ (ನಾ). ಒಂದು ಊರಿನ ಹೆಸರು : ಬಿದಿರ್ಹಕದ ಏಚಗಾವುಣ್ಡ ನೆಕ್ಕಲವನ್ದಿಯ್ಯನಿಱಿದು ಪನ್ದಿ ಸತ್ತಿಂಬಟಿಯಂ ತಾಂ ಸತ್ತಂ (ಎಕ. XV, ಹೊಳೆನ. ೦೨೬-೦; 970). [?]

ಬಿದಿವಸ (ನಾ). ವಿಧಿಯ ವಶದಲ್ಲಿರುವುದು ; ದೈವಾಧೀನ : ಬಿದಿವಸದಿಂದೆ ಪುಟ್ಟುವುದು ಪುಟ್ಟಿಸುವಂ ಬಿದಿ (ಪಂಪಭಾ. ೦೨-೦೬೨).

[< ಸಂ. ವಿಧಿವಶ]

ಬಿದು$_1$, ವಿದು$_1$ (ನಾ). ೧. ಚಂದ್ರ ; ಇಂದು : "ಜೊನ್ನೊಡಲಂ . . . ಬಿದು . . . ಕಟ್ಟಿಲೆವಣೆ, ತಿಂಗಳ್ — ಈ ೨೦ ಚಂದ್ರನ ಪೆಸರ್" (ಕಶಸಾ. ೪೬-೨೩); ಮದನಂಗೆ ಜಯಮಕ್ಕೆ ಮಧುಗೆ ಸಂಪದಮಕ್ಕೆ ಬಿದುವೆಗದಿರಿಂತು ನೆಲಸಿರ್ಕೆ (ಉದ್ಯಟ. ೧೦-೯೭); ಬಿದುಗೆಱಪ ರಾಹುವಿನ ಮಾಳ್ಕೆಯಿಂ ರಥದ ಬಳಿಗೊದಗಿ ಪಿಡಿದಪ್ಪಳಿಸೆ (ಶಬಿಪು. ೨೬-೩೦). ೨. ತ್ರಿಮೂರ್ತಿಗಳಲ್ಲಿ ಒಬ್ಬ; ವಿಷ್ಣು : ಬಿದಿಯನುಮಂ, ಬಿದುವನುಮಂ ಪಾಸಟಿಗೆಯ್ವನಲ್ಲಂ (ಅದ್ಭುತ. ೪೩-೨). **ವಿದು$_1$** : ೧. "ನೆಯ್ದಿಲ್ಗೆಳೆಯಂ ವಿದು ಬೆಳ್ಗದಿರಂ" (ಕರ್ಣಾನಿ. ೩೯). ೨. "ಸಿರಿಯರಸಂ . . . ಪರ್ದುದೇರ ವಿದು ಕಾರೊಡಲನಲರ್ವೊಡೆಯ ಕಾವನಯ್ಯಂ ಬಟ್ಟುಗೆಯ್ದುಗಯ್ಯಂ ಭಾವಿಸೆ" (ಶಬ್ದಮಂ. ೬). [< ಸಂ. ವಿಧು]

ಬಿದು$_2$ (ನಾ). ೧. ಆನೆಯ ಕುಂಭಸ್ಥಳದ ಮಧ್ಯಭಾಗ : "ಬಿದು — ವಿದು = ಆನೆಯ ಗುಂಡಪ ನಡು" (ಸಂಸ್ಕೃತ. ೧೦); ಬಡಿಗೊಳೆ ಬಿದು ಬಿಬ್ಬರಬಿರಿದೊಡನುಗೆ ಪೊಸಮುತ್ತು (ಪಂಪಭಾ. ೧೦-೦೦೩); ಅಮರೇಂದ್ರೋತ್ತುಂಗಮಾತಂಗದ ಬಿದುವಿನ ಮುಕ್ತಾಳಿಯಿಂದಾದ ಮಂಜೂಷಮಿದು (ಜಗವಿ. ೬-೨೯). ೨. ಕುದುರೆಯ ಕಿವಿಯ ಹೊರಭಾಗ : ಉದಯಿಸೆ ಸುಱಿಗಳ್ ತುರಗದ ಬಿದುಸಂಸ್ಥಾನಕದೊಳರ್ಥಹಾನಿಯನವು ಮಾಡದೆ ಮಾಣವು (ಅಶ್ವಶಾ. ೪-೨೦); ಕಿವಿಯ ಪೊಱಗಣ್ಗೆ ಬಿದುವೆಂಬ ಪೆಸರಕ್ಕುಂ (ಅಶ್ವಶಾ. ಪುಟ. ೬೮-೬). [< ಸಂ. ವಿದು]

ಬಿದುಗದಿರ್ (ನಾ). ಚಂದ್ರಕಿರಣ : ಬಿದುಗದಿರಿಂತು ನೆಲಸಿರ್ಕೆ ರತಿಗೆ ಸಂಪದಮೆಂದು ತೊಲಗದಿರುತಿರ್ಕೆ (ರಾಜಶೇ. ೦೦-೬೯).[ಬಿದು$_1$+ಕದಿರ್$_2$]

ಬಿದುಗಲ್, ಬಿದುಗಲ್ಲು (ನಾ). ಚಂದ್ರನ ಕಾಂತಿಯಿಂದ ದ್ರವಿಸುವುದೆಂದು ನಂಬಲಾಗಿರುವ ಶಿಲೆ ; ಚಂದ್ರಕಾಂತಶಿಲೆ : ಸದಲಂಕಾರ ವೃಷೇಂದ್ರನಂ ವಿತತರೋಚಿರ್ಗಾತ್ರನಂ ಮಿತ್ರನಂ ಬಿದುಗಲ್ಗನ್ನಡಿಯಂ . . . ಸ್ವಪ್ನದೆ ಕಂಡಳಾ ವಧುಕಳಾಶ್ರೀಸಾಂದ್ರನಂ ಚಂದ್ರನಂ (ರಾಜಶೇ. ೪-೨೦) ; ಬಿದುಗಲ್ನೆಲದೊಳುಂ ಬಾಡುತಿರ್ಪ ತಳಿರಡಿ ನಡೆಯೆ ಕಾಪಥದೊಳೆಂತಪ್ಪುದವನಿಸುತೆಗೆ (ಶ್ರೀರಾಮಾ. ೦೬-೩೩). **ಬಿದುಗಲ್ಲು** : ಜೊನ್ನದೊಂದು ಪುತ್ತಟಿಯವೊಲೊಪ್ಪವೆತ್ತ ಬಿದುಗಲ್ಲಿನ ಬೊಂಬೆಯ ಪಾಂಗಿನಂತೆ (ಕಬ್ಬಿಕಾ. ೬೦) ; ತಟಿತಟಿನೆ ಪೊಳೆದು ಬಿತ್ತರಂಬಡೆದ ಬಿದುಗಲ್ಲ ಸುತ್ತಣ ಮೆಟ್ಟಡಿಯಿಂ . . . ಕೊಳಂ ಪಗಲ್ವೆಣ್ಣ ಕೈಪಿಡಿಯೆಂಬಂತಿರೆ ಸೊಗಯಿಸಿದತ್ತು (ರಾಮಾಶ್ವ. ೩೨-೦೮). [ಬಿದು$_1$ + ಕಲ್$_3$]

ಬಿದುಗಲ್ಲು 'ಬಿದುಗಲ್' ನೋ.

ಬಿದುಮೊಗ (ನಾ). ಚಂದ್ರನಂಥ ಮುಖ : ಬಿಡುಜಡೆಯ ಬಿದುಮೊಗದ ಬಿರಿದೆಸಳ್ಗಣ್ಣ . . . ಬೆಡಂಗಿನ ಬಾಲೆಯೊರ್ವಳ್ . . . ಬರುತುಮಿರ್ದಳ್ (ರಾಮಾಶ್ವ. ೪೬-೨೦). [ಬಿದು$_1$ + ಮೊಗ]

ಬಿದುರ್ 'ಬಿದಿರ್$_1$' ನೋ.

ಬಿದುರ (ನಾ). ಸಿಡಿಲು; ಅಶನಿ: ಕದನಕ್ರೀಡಾವಿನೋದನುದ್ಧತದರ್ಪ್ಪಂ ಬಿದುರ ಪರಾಕ್ರಮನಾದಂ ವಿದಿತಗುಣಂ ಮಲ್ಲಿದೇವಂ (ಎಕ. XI, ರಾಮಾ. ೪೩-೬೩; 1164); ಬಿದುರ ಹತಿಯಿಂ ಶೈಲಮೊಡೆವವೊಲ್ (ವಂಕಾರಾ. ೦-೦೯-೫೩). [<ಸಂ. ಭಿದುರ]

ಬಿದುರಾಳ್ಗೆ (ನಾ). ಒಂದು ಪ್ರದೇಶದ ಹೆಸರು : ಬಿಟ್ಟಿಗಂ ಬಿದುರಾಳ್ಗೆ ಎಟ್ಟತ್ತರ್ಕ್ಕಮ್ ನಾಟ್ಗೊವುಣ್ಡುಗೆಯ್ಯೆ (ಎಕ. VIII, ಸೊರಬ. ೩೩೦-೪; 967). [?]

ಬಿದುರು 'ಬಿದಿರ್$_1$' ನೋ.

ಬಿದೆಯಿತ್ತ 'ಬಿಜಯಿತ' ನೋ.

ಬಿದ್ದ 'ಬೀಟ್ಟು$_1$' ಪರಾ.

ಬಿದ್ದ$_2$ (ನಾ). ೧. ಕೊರೆದುದು ; ತೂತು ; ರಂಧ್ರ : "ಬಿದ್ದ—ವಿದ್ದ = ತೂತು, ತೂತಾದ" (ಸಂಸ್ಕೃತ. ೩೦). ೨. ಗಾಯ ; ಪೆಟ್ಟು ; ವ್ರಣ : 'ಬಿಱುಬಿದ್ದಂಬೋಗು' ಪರಾ. ೩. ಬಿಂಬ ; ಆಕೃತಿ : ಕರುಣದ ಕರುವೋ ಕಾರ್ಷ್ಯದ ತಿಟ್ಟವೊ ವಿರಹದ ಬಿದ್ದವೊ ದುಃಖದ ಮೂರ್ತಿಯೋ (ಕುಮುರಾ. ೯-೪೬). [<ಸಂ. ವಿದ್ಧ]

ಬಿದ್ದಣ 'ಬಿರ್ದಿನ' ನೋ.

ಬಿದ್ದಣಂಬೇಳು (ಕ್ರಿ). ಔತಣಕ್ಕೆ ಕರೆ ; ಊಟಕ್ಕೆ ಆಹ್ವಾನಿಸು : ವೈತಾಪಿಯು ಸುರನಿವಹಮುನಿಚಯಕೆ ಬಿದ್ದಣಂಬೇಳಿಯತಿಭರದಿನಿಲವಲನ ಕೊಂದಾ ಮಾಂಸವಿಕ್ಕಿ ಚೆಚ್ಚರದಿನವರುಂಡ ಬಳಿಕಿಲವಲಾ ಎನಲು (ಪಾಸೋಪು. ೬-೩೦). [ಬಿದ್ದಣ (< ಬಿರ್ದಿನ) +ಪೇಳು (<ಪೇಳ್)]

ಬಿದ್ದಿ 'ಬಿರ್ದಿ' ನೋ.

ಬಿದ್ದಿಕ್ಕಿಸು (ಕ್ರಿ). ಔತಣ ಮಾಡಿಸು : ಕಡುಹಿತನೊಲು ತೊಡಗಿಸಿ ನೆಱೆ ಬಿದ್ದಿಕ್ಕಿಸುವೆನಿದಕ್ಕೆನುತಯ್ದಿದನೀಶನ ಸಭೆಗಿತ್ತಲ್ ಮುನಿಪತಿನಾರದನು (ವೀರೇಶ. ೦-೩೩). [ಬಿದ್ದು$_2$ (<ಬಿರ್ದು$_1$)+ಇಕ್ಕಿಸು$_1$]

ಬಿದ್ದಿಕ್ಕು 'ಬಿರ್ದಿಕ್ಕು' ನೋ.

ಬಿದ್ದಿನ 'ಬಿರ್ದಿನ' ನೋ.

ಬಿದ್ದಿನಂಗೆಯ್ (ಕ್ರಿ). = ಬಿದ್ದಿಕ್ಕಿಸು : ಬಿರಿದಿನಿಸು ನಱುಗಂಪಿನಿಂಪು ಸೊಂಪಿಂ ತುಂಬೆಲರ ಬಿದ್ದಿನಂಗೆಯ್ದು (ಉದ್ಯಟೇ. ೨-೩೪).

[ಬಿದ್ದಿನ (<ಬಿರ್ದಿನ)+ಕೆಯ್$_1$]

ಬಿದ್ದು$_1$ 'ಬೀಟ್ಟು$_1$' ಪರಾ.

ಬಿದ್ದು$_2$ 'ಬಿರ್ದು$_2$' ನೋ.

ಬಿದ್ದೂಟ 'ಬಿರ್ದೂಟ' ನೋ.

ಬಿನ್— (ಉಪ). ಇಲ್ಲದುದು ಎಂಬ ಅರ್ಥವನ್ನು ಕೊಡುವ ಒಂದು ಉಪಸರ್ಗ: 'ಬಿನ್‌ಪಗಾರಿರಜೆ', 'ಬಿನ್‌ಪುಕಾರ್' ಪರಾ.

[← ಹಿಂ. ಮರಾ. ಬಿನ್ = ಇಲ್ಲವಾದ, ಹೊರತಾದ]

ಬಿನ್‌ಪಗಾರಿರಜೆ (ನಾ). ಸಂಬಳರಹಿತವಾದ ರಜೆ : ಬಿನ್‌ಪಗಾರಿ ರಜೆಯ ಬಗ್ಗೆ ವಿಚಾರ ಮಾಡುವೆನು (ಸ್ಕೂಲಿಯಾ. ೦೦೦).
[ಬಿನ್ — + ಪಗಾರಿ + ರಜೆ(<ರಜಾ)]

ಬಿನ್‌ಪುಕಾರ್ (ಅ). ಯಾವ ದೂರೂ ಇಲ್ಲದೆ : ಕೆಲಸ ಸಲೀಸಾಗಿ ಬಿನ್‌ಪುಕಾರ್ ನಡೆದು ಹೋಗುತ್ತೆ (ಕಂಪ. ೨೯೬).
[ಬಿನ್ — + ಪುಕಾರ್$_0$ (<ಪುಕಾರು)]

ಬಿನಎತ್ತಿಅಬ್ಬೆ (ನಾ). ಒಬ್ಬಾಕೆಯ ಹೆಸರು : ಮಾರಕ್ಕಅರಸರ್ ಬನವಾಸಿ ನಾಡಾ ಬಿನಎತ್ತಿಅಬ್ಬೆ ಊರಾಳೆ (ಸೌಇಇ. XX, ೦೦-೨; ೪ನೆಯ ಶತ).
[< ವಿನಯಾದಿತ್ಯ + ಅಬ್ಬೆ$_1$]

ಬಿನದ (ನಾ) ೧. ವಿನೋದ ; ತಮಾಷೆ : " ಬಿನದಂ ವಿನೋದದೊಳ್ " (ಕರ್ಣಾಪ. ೦೬); ಗೌರೀಪತಿಯ ಬಿನದಕ್ಕೆ ಭೂಭೃತ್ಸುತೆ ಬೇಡಿತಿಯಾದ ತೆಱನನನುಕರಿಸಿರ್ದಳ್ (ಕಾದಂಪು. ೪೦). ೨. ಆಟ ; ವಿಹಾರ ; ಕ್ರೀಡೆ : ಬೇಂಟೆಯೆ ಬಿನದಂಗಳರಸಲ್ತೇ (ಪಂಪಭಾ. ೩-೪೭). 'ಬಿನದವೆಟ್ಟು' ಪರಾ. ೩. ಸಂತೋಷ; ಆನಂದ: 'ಬಿನದಂಬಡೆ' ಪರಾ. [< ಸಂ. ವಿನೋದ]

ಬಿನದಂಬಡೆ (ಕ್ರಿ). ಸಂತೋಷಗೊಳ್ಳು ಆನಂದಿಸು : ತುಂಗಮೃದಂಗ ಮಂಗಳರವಂ . . . ಶಂಖನಿನದಂ ಬಿನದಂಬಡೆದಿರ್ದ ಭಕ್ತಲೋಕಂಗಳ ಕಂಗಳಂಗವಿಸೆ ಸಂಗಳಿಸಿರ್ಪುವು ಲಿಂಗಗೇಹದೊಳ್ (ರಾಜಶೇ. ೨-೦೨೬).
[ಬಿನದ + ಪಡೆ$_1$]

ಬಿನದಗೊಳು (ಕ್ರಿ). = ಬಿನದಂಬಡೆ : ಭವಲೀಲೆಯುದ್ವೀಕ್ಷಣಗವಾಕ್ಷ . . . ನಿರುಕಿಸುತ ಬಿನದಗೊಳೆ ಸರ್ವಪಕ್ಷ (ಪುರಿದೇ. ೪೯-೦೦).
[ಬಿನದ + ಕೊಳು (< ಕೊಳ್$_1$)]

ಬಿನದವಡಿಸು (ಕ್ರಿ). ಸಂತೋಷಗೊಳಿಸು ; ಆನಂದಿಸುವಂತೆ ಮಾಡು : ಮಾಯೆ ಬೊಮ್ಮನ ಬಿನದವಡಿಸಿ ನಮ್ಮೀ ಜಗವ ಕಾಯುವಳು ತನ್ನಿಚ್ಛೆ (ಮಂಕುಕ. ೦೪೬). [ಬಿನದ + ಪಡಿಸು]

ಬಿನದವಾಡು (ಕ್ರಿ). ಕ್ರೀಡಿಸು ; ವಿಹರಿಸು : ಮನದ ಬನದಲಿ ಬಿನದ ವಾಡಿದೆ ತನ್ನ ತಿಳಿಯದೆ ತಾನು (ಅರಳು. ೦೪-೬). [ಬಿನದ+ಆಡು$_1$]

ಬಿನದವೆಟ್ಟು (ನಾ). ವಿಹಾರಕ್ಕಾಗಿ ರಚಿಸಿದ ಕೃತಕವಾದ ಬೆಟ್ಟ : ಕ್ರೀಡಾಶೈಲ : ಬಾವಿ ಕೊಳಂ ಬಿನದವೆಟ್ಟುಗಳ್ ನೆರೆದಿರ್ಕುಂ (ಪಕವಿ. ೩-೦೨೨). [ಬಿನದ + ಬೆಟ್ಟು$_2$ (<ಬೆಟ್ಟ)]

ಬಿನದವೇಂಟೆ (ನಾ). ವಿನೋದಕ್ಕಾಗಿ ಮಾಡುವ ಬೇಟೆ : ಮೆರೆದುವಾ ಕುಂಭಕರ್ಣನ ಬಿನದವೇಂಟೆಯ ಕವರ್ತೆಗಳ್, ತೋರುಮನೆಯಲ್ಲಿ ! (ಕ್ರೀರಾಮಾ. ೪೫೫-೨೬೮). [ಬಿನದ + ಬೇಂಟೆ]

ಬಿನದಸಾಲೆ (ನಾ). ವಿಹಾರಶಾಲೆ ; ಕ್ರೀಡಾಮಂದಿರ : ಓಲಗಸಾಲೆ ಮಂತಣಸಾಲೆ ನಾಟಕಸಾಲೆ ಬಿನದಸಾಲೆ . . . ಸುಚಿತ್ರಸಾಲೆಗಳೊಳಱಸಿ ದಳಾ ಲೋಲಲೋಚನೆ ರಾಮನನು (ಕುರಾಸಾಂ. ೩೩-೪೨).
[ಬಿನದ + ಸಾಲೆ$_4$]

ಬಿನದಿ (ನಾ). ವಿನೋದಪ್ರಿಯನಾದವನು : ಜಗಳವಾಡಿಸಿ . . . ನಗುತಲಿರುವನು ನೋಡಿ ; ಪರಬೊಮ್ಮನೇಂ ಬಿನದಿ ! (ಮಂಕುಕ. ೦೬೨) ; ತರುಣ ತರುಣಿಯರು ಮಾಡದಲ್ಲಿರುವ ಬಿನದಿಗಳ ಜತೆಯಲ್ಲಿ ಸೇರುತ್ತಾರೆ (ಹಂಸದ. ೦೫೬). [ಬಿನದ + — ಇ$_3$]

ಬಿನದಿಸು (ಕ್ರಿ). ಆನಂದಿಸು ; ಸಂತೋಷಪಡು : ಪಾರಿವಂಗಳೊಳ್ಬಿನದಿಪ ಸರಸಯುವತಿಯರಿಂ (ಉದ್ಯಪ. ೧-೬೮ ಪ) ; ಬಿನದಿಪ ಹಸುಳೆ ಜವಾದಿಯ ಮಿಗಗಳನನುರಾಗದಿ ನೋಡುತ ಬಿಜಯಂಗೈವನಿತಱೊಳು (ಪಯಶಾ. ೪-೨) ; ಮಾತೆಯ ಪಕ್ಷಪುಟವ ಸೇರುವ ತೊದಲ್ವಾತ ನುಡಿದು ಬಿನದಿಸುವ . . . ಗಿಳಿವಱಿಗಳ ರೀತಿಯ ಕಂಡಳಾ ಕಾಂತೆ (ಕಂಪಪ. ೪-೪೭). [ಬಿನದ + — ಇಸು$_3$]

ಬಿನದೆ (ನಾ). ವಿನೋದಿಸುವವಳು : ವಿನೋದಪ್ರಿಯೆ : ಕಾಡ ಬಂದವರಲ್ಲ ನೋಡಬಂದೆವು . . . ಎಂದು ಮಾತಾಡಿದರಾ ಬಿನದೆಯರು (ಭರತ. ೪೨-೦೭). [ಬಿನದ + — ಎ$_2$]

ಬಿನಮಿತ (ನಾ). ಒಬ್ಬಾತನ ಹೆಸರು : ಎಱೆಯ ಪರ್ಮಾಡಿಯ ಸಾನ್ತಕಾಮಪನ ಮಗಮ್ಬಿನಮಿತನ ಮಗಂ . . . ಪುರದೊಳೊಳ್ಗಣ್ಡಂ (ಎಕ. VII, ಶಿಕಾರಿ. ೨೮೪-೩; 902). [?]

ಬಿನಮ್ಮ 'ಬಿನಾಮ್ಮ' ನೋ.

ಬಿನಯ (ನಾ). ೧. ವಿನಯ ; ನಮ್ರತೆ : ಬಿನಯದ ಬಿತ್ತು ಬಿನ್ನಣದ ಪೆರ್ಮೊಳೆ (ಅಪ್ರತಿ. ೦೫-೨೦) ; ಬಿನಯಂ ಬೇರ್ವರಿಜಾಂತುದೋ (ಪಕವಿ. ೩-೦೦೩). ೨. ಪ್ರೇಮ; ಪ್ರೀತಿ (?): "ಬಿನಯಂ ಪ್ರೇಮಂ" (ಕರ್ಣಾಪ. ೪೦). [< ಸಂ. ವಿನಯ]

ಬಿನಸು (ನಾ). ಹಾನಿ ; ನಷ್ಟ : ತನಗಾಪ್ತರೆನಿಸಿ ಚಿರಕಾಲದಿಂದಾಶ್ರೈಸಿ ಮನಸು ಮರ್ಮಗಳರಿತ ಜನರು ಸುಕ್ಷೇಮಕರವನು ಪೇಳ್ವರಲ್ಲದನ್ಯವ ನುಸುರರೆಂಬ ನಂಬುಗೆಯ ದೃಢತೆಗೈದು ಬಿನಸು ತೋರದ ತೆರದಿ ರಾಜಾರ್ಥಕೂಣಯಂ ತೋರದಂತೆ (ಪಂಕಾರಾ. ೬-೦೩-೬).
[<ಸಂ. ವಿನಾಶ./ಮರಾ. ಬಿನಸಣೇ, ಬಿನಾಸಣೇ = ನಷ್ಟವನ್ನುಂಟು ಮಾಡು]

ಬಿನಾಕಳಿ (ನಾ). ಒಂದು ಊರಿನ ಹೆಸರು : ಕುಟುವರುಂ ಬಿನಾಕಳಿ ಊರುಗ್ಗಾಮುಣ್ಡುಗೆಯ (ಎಕ. VIII, ಸೊರಬ. ೪೭೬-೪ ; 972). [?]

ಬಿನಾಮಿ 'ಬೇನಾಮಿ' ನೋ.

ಬಿನಾಮೀ 'ಬೇನಾಮಿ' ನೋ.

ಬಿನಾಮೆ 'ಬೇನಾಮಿ' ನೋ.

ಬಿನಾಮ್ಮ, ಬಿನಮ್ಮ (ನಾ). ಒಬ್ಬಾತನ ಹೆಸರು : ಶ್ರೀಪುರುಷಮಹಾರಾಜರ್ ಪೃಥುವೀರಾಜ್ಯಂಗೆಯ ಕೆಸುಗೊಳಮೊಡೆಯ ಬಿನಾಮ್ಮಂಗೆ ಧಣ್ಣಗವಾಡಿಯಂ ಬ್ರಹ್ಮಾದೇಯಂಗೊಟ್ಟಂ (ಎಕ. IV, ಹಗ್ಗಡ. ೪-೩ ; ಸು 750). ಬಿನಮ್ಮ : ಸವುಳಙ್ಗದ ಮೆಣ್ಡೆಗಾವುಣ್ಡನು ಬೆಳ್ವೊಟಲ ಬಿನಮ್ಮನು (ಎಕ. V, ಹನ್ನರಾ. ೨೫೦-೦೪ ; ಸು. 925). [? + ಅಮ್ಮ$_1$]

ಬಿನುಂಗು, ಬಿನುಗು$_2$ (ನಾ). ಒಂದು ಬಗೆಯ ತೆರಿಗೆ : ನಗರದ ವಶವತ್ತಿಗಳಪ್ಪ ಬಿನುಂಗಿನೊಳ್ವೀಸವಂ ೧೦ ಮಾನ್ಯ ಸಾಮ್ಯದೊಳ್ಪಣ ೧ (ಎಕ. VII, ಶಿಕಾರಿ. ೪೪-೩೩ ; 1094). ಬಿನುಗು$_2$: ಅಯ್ದು ಬಿನುಗು ಮೂವತ್ತು × × × ರರಸ ಕೊಟ್ಟ ಬಿನುಗು (ಮೈಆರಿ. ೦೯೩೦, ೬೬-೦೫ ; 1300) ; ಆಡ ತೆಱೆ ಕುಂಬಾರುದೆಱೆ ಬಿನುಗು ಬೆಸಒಕ್ಕಲು ತಗಡೂರ ಸ್ಥಳಕ್ಕೆ ಸಲುವ ಸುಂಕ (ಮೈಆರಿ. ೧೯೪೬, ೦೯-೨೦ ; 1488). [?]

ಬಿನುಗ (ನಾ). ಅಲ್ಪವ್ಯಕ್ತಿ ; ಕ್ಷುದ್ರವ್ಯಕ್ತಿ : ಮದ ಮತ್ಸರವ ಬಿಡದೆ ಕುದಿದು ಕೋಟಲೆಗೊಂಬ ಬಿನುಗರನೊಲ್ಲ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ (ವಚಸಂ. ೬೪೮-೦೪೮) ; ಬಿನುಗರವರವರಂಗದಲಿ ಕೈಮನವ ಖಂಡಿಸಿ ಸಕಲರಿಪುಸಾಧನವನೊಬ್ಬನೆ ಕರ್ಣ ಗೆಲಿದನು (ಕುವ್ಯಾಕ. ೦೦-೬) ; ಡಂಬಕರ್ಬಿನುಗರು ಕಡೆಯ ಕಾಲಕೆ ಪೂಜೆಗೊಂಬರೊಳ್ಳಿದನುಂಬರು (ಭರತ. ೬೦-೩೯). [ಬಿನುಗು$_1$ + — ಅ$_7$]

ಬಿನುಗಾಟ (ನಾ). ಅಲ್ಪತನ ; ಕ್ಷುಲ್ಲಕತನ : ಮನುಜರ ಗುಣ ತನಗೊಂದೂ ಬಿಡದೆ ಘನವನಱಿವೆನೆಂಬ ಬಿನುಗಾಟದ ಮಾತೇಕೆ (ಮೋಳಿಮಾ. ೬೬-೩೦೦). [ಬಿನುಗು$_1$ + ಆಟ]

ಬಿನುಗು$_1$ (ನಾ). ೧. ಹೀನವ್ಯಕ್ತಿ ; ಕ್ಷುದ್ರವ್ಯಕ್ತಿ ; ಅಲ್ಪವ್ಯಕ್ತಿ : ಅನಿಮಿಷಗತಿಯೆಂಬ ದನುಜನಾಯಕ ಮಿಕ್ಕ ಬಿನುಗುಗಳನು ಮುಟ್ಟೆನೆಂದು ವನಜನಾಭನು ಮೊದಲಾದ ದೇವರ್ಕಳು ತನಗಾಹುತಿಯೆನುತಿಹನು (ತ್ರಿಪುಸಾಂ. ೩-೩೮); ಕಟ್ಟಿತುರಿ ದೆಸೆ ನಾಲ್ಕಱಲಿ ಬೆನ್ನಟ್ಟಿ ಹೊಯ್ದುದು

ಬಿನುಗುಗಳ (ಕುಮ್ಮಾಳ. ೭-೪೦). ೨. ಬಡವ; ದರಿದ್ರನಾದವನು: ಬಿನುಗಂ ನಂಬಿ ತೆಱುವೊಕ್ಕಲಂ ಕಳೆವ ಪ್ರಭುವುಮಂ (ರರ್ಮಾಮ್ಯ. ೬-೫೦). (ಗು). ೩. ಅಲ್ಪವಾದ; ಕ್ಷುದ್ರವಾದ: ಇಂತೀ ಬಿನುಗುಮಾನವನ . . . ಹೀನಯೋನಿಯಲ್ಲಿ ಬರಿಸದೆ ಮಾಣ್ಬನೆ (ಚಿನ್ನವ. ಕ. ೧೫-೨೦೯); ಹಾರುವ ನಿನಗೆ ಬಿನುಗುಭೀಮಾರ್ಜುನರ ಪರಿಯಂತೇಕೆ (ಕುಮ್ಮಾರ್ಜ್ಯೋ. ೦-೫೫).

ಬಿನುಗುಬಿಚ್ಚಟೆ, ಬಿನುಗುಬಿಕ್ಕಟೆ, ಬಿನುಗುಬಿಚ್ಚಟ = ಅಲ್ಪವ್ಯಕ್ತಿ; ಕ್ಷುದ್ರಮನುಷ್ಯ: ಆಳು ನಡೆದುದು ಮುಂಗುಡಿಯ ಹರಿಧಾಳಿ ನೂಕಿ ಹಿರಣ್ಯನಗರಿಯ ಮೂಲೆಗೈದಿತು ಹೊಯ್ದರಲ್ಲಿಯ ಬಿನುಗುಬಿಚ್ಚಟೆಯ (ಕುಮ್ಮಾಲ. ೧೨-೦೩); ಧನಿಕದೊರೆಗಳ ಬಿನುಗುಬಿಚ್ಚಟೆಯ ಹಲವುಜಾತದ ವರ್ಣಭೇದದ ಹೊಳಲ ಜನದ ಸಮಸ್ತಭುವನಾವಳಿಯ ಭರಭಾರವನು ಹೊಱಿಸಿದನಗ್ನಿದೇವರಿಗೆ (ತೊರರಾ. ೫-೬-೫೫); ಭಟರು ... ಮುಕ್ಕುರಿಕಿಯಿರಿದಿರಿದು ಕೊಂದರಗಣಿತ ಬಲವ ಬಿನುಗುಬಿಕ್ಕಟೆಜನಗಳ (ತುರಂಗ. ೪೫-೯); ಒರ್ವರ ಸುಳುವ ಕಾಣೆನು ಬಿನುಗುಬಿಚ್ಚಟರಲ್ಲದೀ ಪುರಿಗೆ (ಶಾತ್ಸಕ. ೦೦-೩೫).

[ದೇ. ॥ ತೆಲು. ಬಿಲುಗು = ಕಪಟವಾದ]

ಬಿನುಗ್ಯು 'ಬಿನುಂಗು' ನೋ.

ಬಿನುಗುತನ (ನಾ). ನೀಚತನ; ಕ್ಷುಲ್ಲಕತನ: ಷಟ್ಕರ್ಮದಿಂ ಬಾಳ್ವ ಬಿನುಗುತನಗಳನುಳಿದು . . . ಸರ್ವಾವಧಾನದಿಂ ಚರಿಪನೆ ನಿರಾಭಾರಿ ವೀರಶೈವಂ (ಪಾಸೋಪು. ೦೨-೫೬); ಬಿನುಗುತನದಿಂದಖಿಳವಿಷಯಗಳನುಂಡು ಅನುವರಿಯದ ಜ್ಞಾನದೊಳಗೆ ಬಳಿಸಂದು (ತತ್ತ್ವಪ. ೫೫-೧).

[ಬಿನುಗ್ಯು$_1$ + — ತನ]

ಬಿನೆಯ (ನಾ). (?): ಅರಳಿಹಳಿಯ ಬಿನೆಯ ಗ ೯೮೦ ಯಿಾ ಧಂರ್ಮಾಗಳಿಗೆ ಆವನಾನೊಬನು ನಡಪದೆ ಇದವನು ಗೋಉ ಭ್ರಾಂಹ್ಮರನು ವಾರಣಾಸಿಯಲಿ ಕೊಂದ ಪಾಪವ ವೊಯಿದುವನು (ಎಕ. XI. ಹೊಳಲ್ಕೆ. ೦೧೩-೨೦; 1556). [?]

ಬಿನ್ನ 'ಬಿನ್ನಪ' ನೋ.

ಬಿನ್ನಗೆ (ಅ). ೧. ನೀರವವಾಗಿ; ಮೌನವಾಗಿ; ಸುಮ್ಮನೆ: "ಱಿಕ್ಕಟಂ, ಬಿನ್ನನೆ, ಬಿನ್ನಗೆ — ಈ ೩ ಸುಮ್ಮನೆಯೆಂಬರ್ಥಂ" (ಕಶಸಾ. ೫೬-೨೬೫); ಮಗನಟಲೊಂದು ಭೂಪತಿಯ ತಮ್ಮನೊಳಾದಟಲೊಂದು ನೊಂದು ಬಿನ್ನಗೆ ಮೊಗದಿಂದೆ ಕುಂದಿ ಫಣಕೇತನನಿರ್ದಟಲೊಂದು (ಪಂಪಭಾ. ೦೨-೦೭೦). ೨. ಬರಿದಾಗಿ; ಬಿಕೋ ಎಂದು: ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು (ಪಂಪಭಾ. ೪-೬೨); ಮಂದರಗಿರಿ ಬಿನ್ನಗಾಯ್ತು ಮದುವೆ ಪೋದ ಮಂದಿರವೊ ಎಂಬಂತೆ (ಪಂಪ್ರಸಾಂ. ೨೪-೦೬೬). ೩. ಖಿನ್ನವಾಗಿ; ಖೇದದಿಂದಿರುವಂತೆ: ಬೇನೆಗಳೊಳ್ ಮೊಗಂಗಳಂ ಬಿನ್ನಗೆ ಮಾಡದಿರ್ದರಳ ವಚ್ಚರಿಯಾಗೆ ಕೆಲರ್ ಮಹಾರಥರ್ (ಪಂಪಭಾ. ೦೦-೩); ಇನ್ನಱುದಿಂಗಳುಂಟೆನೆ ನಿಜಾಯು ಸುರಪ್ರಕರಂ ಮೊಗಂಗಳಂ ಬಿನ್ನಗೆ ಮಾಡೆಯುಂ (ಶಾಂತಿಪು. ೭-೭೯). [? + — ಅಗ್ಯೆ]

ಬಿನ್ನಣ 'ಬಿನ್ನಾಣ' ನೋ.

ಬಿನ್ನಣಂದೋಱು, ಬಿನ್ನಣದೋಱು (ಕ್ರಿ). ಕೌಶಲ್ಯವನ್ನು ತೋರು; ಚಾತುರ್ಯವನ್ನು ತೋರಿಸು: ಸುತ್ತಿ ಬಳಸಿ ಮೊನೆದೋಱುವ ಬಿರುದಿನಂಕಮನುರವಣಿಸಿ ಪತ್ತಿ ಪೊರಳ್ಚಿ ಕೊಳ್ವ ಬಿನ್ನಣಂದೋರ್ಪ ಗನ್ನದಂಕಮಂ ಬಿಡಿಸಿ (ಗಿರಿಕ. ೨-೧೦೫ ವ). ಬಿನ್ನಣದೋಱು: ಬಿಲ್ಲ ಬಿನ್ನಣದೋಱಿದನು ನೃಪತಿ (ಸಾಳ್ವಭಾ. ೬-೭೦).

[ಬಿನ್ನಣ (< ಬಿನ್ನಾಣ) + ತೋಱು]

ಬಿನ್ನಣಂಬಡೆ, ಬಿನ್ನಣವಡೆ (ಕ್ರಿ). ಕೌಶಲ್ಯವನ್ನು ಪಡೆ; ನೈಪುಣ್ಯವನ್ನು ಹೊಂದು: ಪೊಳ್ತಂ ಸನ್ನೆಯಂ ಜಾತಿಯಂ ಜವಂಗೆಡದಱಿವ ಬಿನ್ನಣಂಬಡೆದ ಬೇಡರೊಡವರೆ (ರಾಜಶೇ. ೫-೦೦ ವ). ಬಿನ್ನಣವಡೆ: ಭರತಕ್ಷೇತ್ರವಿಜಯಾಚಲದಿರ್ಕೆಲದೊಳು ಮಿಾನಧ್ವಜನಾಡುಂಬೊಲನೆನಲೆನೆದುದು ಸರಸಿಜನಣುಗನ ಕೈಮಾಟಕೆ ಕಡುವಿರಿದುಂ ಬಿನ್ನಣವಡೆದು (ಜಯಕಾ. ೦-೩೪). [ಬಿನ್ನಣ (< ಬಿನ್ನಾಣ) + ಪಡೆ$_1$]

ಬಿನ್ನಣಕಾತಿ (ನಾ). ಒಯ್ಯಾರ ಮಾಡುವವಳು; ಬೆಡಗುಗಾತಿ: ಅಣಿಮಾದಿಸಿದ್ದಿದೇವಿಯರೊಡನೆಯ್ದೆ ಬಿನ್ನಣಕಾತಿ ಬಂದಳಾ ದೇವಿ (ಪರಿಶ. ೭೯-೦೧೬). [ಬಿನ್ನಣ (< ಬಿನ್ನಾಣ) + — ಕಾತ್ಯಿ$_5$]

ಬಿನ್ನಣಗವಿ (ನಾ). ಚಮತ್ಕಾರಗಳಿಂದ ಕೂಡಿದ ಕಾವ್ಯವನ್ನು ರಚಿಸುವವನು; ಕುಶಲನಾದ ಕವಿ: ಗತಪ್ರತ್ಯಾಗತಾದಿ ಸಂಧಾನ ಮುರಜಬಂಧಾದಿಗಳಂ ಮಾಳ್ಪ ಬಿನ್ನಣಗವಿಯುಂ (ಪೀಠಿವಾ. ೩೦-೭).

[ಬಿನ್ನಣ (< ಬಿನ್ನಾಣ) + ಕವ್ಯಿ]

ಬಿನ್ನಣಗಾರ್ತಿ (ನಾ). = ಬಿನ್ನಣಕಾತಿ: ಕಂಬುಕಂಠದ ಕರಿಗತಿಯ ಬಿಂಬಾಧರದ ಬಿನ್ನ[ಪಾಠಾಂ. ನ್ನಾ]ಣಗಾರ್ತಿಯರವಲಂಬಿಸಿ ಕೊಳನ ತಡಿಯೊಳು (ಜೀವಂಸಾಂ. ೦೬-೩೬).

[ಬಿನ್ನಣ (< ಬಿನ್ನಾಣ) + — ಕಾಱ + — ತಿ$_1$ (< — ಇತ್ತಿ)]

ಬಿನ್ನಣದೋಱು 'ಬಿನ್ನಣಂದೋಱು' ನೋ.

ಬಿನ್ನಣವಡೆ 'ಬಿನ್ನಣಂಬಡೆ' ನೋ.

ಬಿನ್ನಣಿ 'ಬಿನ್ನಾಣಿ$_2$' ನೋ.

ಬಿನ್ನಣಿಗ 'ಬಿನ್ನಾಣಿಗ' ನೋ.

ಬಿನ್ನಣಿಗೆ (ನಾ). ಕೌಶಲ; ಚಮತ್ಕಾರ: ಗಗನದಿಂದಲೊ ಗಗನದರುಗಿಂದಲೊ ಮೊಗೆವೆ ತುಂಬೆದೆಯ ಮುಂಬಗೆದಿಲ್ಲದಿಹ ಬಿನ್ನಣಿಗೆಯುಗುವುದಾರ ಗಾಯನದ ಝುರಿಯಿಂ (ಗಿಳಿಪಿಂ. ೪-೬). [< ಬಿನ್ನಾಣ]

ಬಿನ್ನಣಿಸು 'ಬಿನ್ನಾಣಿಸು' ನೋ.

ಬಿನ್ನಣೆ (ನಾ). ಜಂಬ; ಹೆಮ್ಮೆ: ನಿನ್ನ ಮಗನ ಬಾಧ ಬಲು ಘನವಾಗಿದೆ ಇನ್ನೆಷ್ಟು ಕಾಲ ತಾಳುವೆವೆ ಗೋಪಿ ಬಿನ್ನಣೆಯನು ಬಿಡು ಬಲು ದುಷ್ಟನು ಕೇಳೆ (ಪುರಂದ. ೩-೨೦೬-೦). [ಬಿನ್ನಣ (<ಬಿನ್ನಾಣ)+—ಎ$_4$]

ಬಿನ್ನತಿ (ನಾ). ನಿವೇದನೆ; ವಿಜ್ಞಾಪನೆ; ಅರಿಕೆ: 'ಬಿನ್ನತಿಗೆಯ್' ಪರಾ. 'ವಿನಂತಿ' ಹೋ.

[<ಪ್ರಾ. ವಿನ್ನತ್ತಿ, ವಿಣ್ಣತ್ತಿ./ಹಿಂ. ಬಿನತಿ./ಸಂ. ವಿಜ್ಞಪ್ತಿ]

ಬಿನ್ನತಿಗೆಯ್ (ಕ್ರಿ). ವಿಜ್ಞಾಪನೆ ಮಾಡು; ಬಿನ್ನವಿಸು: ಆನುಮೊಂದು ಬಿನ್ನತಿಗೆಯ್ವೆಂ (ಜಯಕಾ. ೫-೬೩); ಭಕ್ತಿಯಿಂ ಬಿನ್ನತಿಗೆಯ್ವೆನಾಲಿಪುದು (ಜಕಪಿ. ೫-೭೬); ಅಪ್ರತಿಮಂ ಯಾದವಗಿರಿಯೊಡೆಯನಡಿಗೆ ಬಿನ್ನತಿಗೆಯ್ದಂ (ಜಕಪಿ. ೦೩). [ಬಿನ್ನತಿ + ಕೆಯ್$_1$]

ಬಿನ್ನತಿವತ್ತಳೆ (ನಾ). ಅರಿಕೆಯ ಓಲೆ; ವಿಜ್ಞಾಪನಾಪತ್ರ; ಬಿನ್ನವತ್ತಳೆ: ಈ ಬಿನ್ನತಿವತ್ತಳೆಗೆ ಮಹಾಸನ್ನಿಧಾನದ ಸಮುಖದ ಅವಸರದ ಆಜ್ಞಾಪನ (ಮಂತ್ರಶ. ೦೨೭-೦೦). [ಬಿನ್ನತಿ + ಪತ್ತಳೆ$_1$]

ಬಿನ್ನನೆ (ಅ). ೧. ಮೌನವಾಗಿ; ನೀರವವಾಗಿ: "ಱಿಕ್ಕಟಂ, ಬಿನ್ನನೆ, ಬಿನ್ನಗೆ — ಈ ೩ ಸುಮ್ಮನೆಯೆಂಬರ್ಥಂ" (ಕಶಸಾ. ೫೬-೨೬೫); ಎನ್ನಂ ಬೆಂಕೊಂಡು ಕಾದಲುಂ ಬಂದೀಗಳ್ ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದನಿನಿಸು ನೋಡ (ಪಂಪಭಾ. ೩-೭೩); ಲಕ್ಷ್ಮಣನುಂ ಬೆನ್ನನೆ; ಬಿನ್ನನೆ ನಡೆದಂ (ರಾಮಾಶ್ವ. ೩೩-೧೭). ೨. ಚಿಂತೆಯಿಂದ ಕೂಡಿ; ಖಿನ್ನವಾಗಿ: ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ಮೊಗಂ ಮಾಡಿ (ವಡ್ಡಾರಾ. ೬೦-೦೦); ಎಮ್ಮಣುಗದಮ್ಮನಿಲ್ಲದೆ ಬಿನ್ನನೆ ಸಾಮ್ರಾಜ್ಯಮಿನಿತುಮಾದೆಱಕಮುಮತ್ಯುನ್ನತಿಯಲ್ತು (ಆದಿಪು. ೧೪-೬೨); ಚರನ ಬಿನ್ನಪದಿಂ ಬಿನ್ನನೆ ಮೊಗಮಂ ಮಾಡಿ (ಸುಳುಮಾ. ೭-೪ ವ).

ಬಿನ್ನನಿರ್, ಬಿನ್ನನಿರು = ೧. ಸುಮ್ಮನೆ ಇರು; ಮೌನವಾಗಿರು; ನೀರವವಾಗಿರು: ನಾಣ್ಚಿ ತಲೆಯಂ ಬಾಗಿ ಬಿನ್ನನಿರೆಯುಂ

(ಅಂಗಾಸ. ೪-೩೪ ಪ) ; ಅಭಿಮಾನದಿಂದಮೋ ಸೊರ್ಕಿಂದಮೋ ನಾನ್ ಬಿನ್ನನಿರ್ದಪೆನೆಂದು ಬಗೆಯಲಿಂ (ಬದ್ಧಪ್ರ. ೨೪-೪೯೬) ; ಕೆಲರು ವೀಣೆಯ ನುಡಿಸಿ ಕುವರಿಯನೊಲಿಸಲಱಿಯದೆ ಬಿನ್ನನಿರೆ (ಸಾಳ್ವಭಾ. ೬-೬). ೨. ಖಿನ್ನವಾಗಿರು ; ಚಿಂತೆಯಿಂದಿರು : ತನ್ನಗಲ್ಕೆಗೆ ಬಿನ್ನನಿರ್ಪಂತೆ ಬಿನ್ನನಾಗಿರ್ಪ ಏಮಾನದ ಮಣಿಕುಟ್ಟಿಮಭೂಮಿಗಳುಂ (ಆದಿಪು. ೩-೩ ಪ); ಮಾಸಿ ತಾಱಿದ ಕುರುಳ್ಗಳುಂ ತನ್ನ ಬಿನ್ನನಿರ್ದ ಮೊಗದಿಂ ತವಿಲ್ದಿರೆ ವಿಲಾಸಮುಂ ಮುಂದೆ ಕಂಡನಲ್ಲಿ ಕಮಳಾಕ್ಷಿಯಂ (ಗದಾಯು. ೯-೩). ೩. ಬಿಕೋ ಎನ್ನು ; ಬಣಗುಡು ; ಬಿನ್ನನಿರ್ದುದು ಸುರಶೈಲಮದೊಂದು ಮದುವೆಗಳಿಪಿದ ಮನೆವೊಲ್ (ಆದಿಪು. ೭-೦೦೮). [? + — ಅನ್ನೆ$_1$]

ಬಿನ್ನಪ, ಬಿನ್ನ, ಬಿನ್ನಹ, ಬಿನ್ನಾಯ$_1$, ವಿನ್ನಪ, ವಿನ್ನಪ್ಪ (ನಾ). ೧. ಅರಿಕೆ ; ವಿಜ್ಞಾಪನೆ ; ಮನವಿ ; ವಿನಂತಿ : ದೇವ ಬಿನ್ನಪಂ (ಸಂಪರಾ. ೩-೯೪); ಆಲಿಸೆನ್ನ ಬಿನ್ನಪವ ಲಾಲಿಸೆನ್ನ ಬಿನ್ನಪವ (ಮಹಾದೇ. ಪ. ೩೭-೮೦); ಬಿನ್ನಪವ ಕೇಳದರಸಿನೋಲಗದಿಂದ ಸಂನ್ಯಾಸ ಲೇಸು (ಸರ್ವಜ್ಞ. ೭೭೩). ಬಿನ್ನ : ೨. [ವೀಶೈ] ಜಂಗಮರನ್ನು ಊಟಕ್ಕೆ ಆಹ್ವಾನಿಸುವುದು : ನಿಮ್ಮನ್ನೇ ದೇವ್ರೂಂತ ತಿಳ್ಕೊಳ್ಳ ಶೇವಿ. ಬಿನ್ನ ಬಿಡುಗಡೆ ಎಲ್ಲಾನು ನೀವೇ ತೀರಿಸ್ಬೇಕು (ಮುಳ್ಕಿಹಾ. ೧೯೫). ಬಿನ್ನಹ : ೧. ಕಿಂಕರನಾಗಿ ಬಿನ್ನಹವ ಮಾಡುವ ಸದ್ಭಕ್ತರ ತೋಱಯ್ಯಾ (ಬಸವ. ೪೪೯) ; ಬಿನ್ನಹವ ಕೇಳೈ ಕೃಷ್ಣ (ಕುಮ್ಮಾರೇ. ೩-೬); ಬಿನ್ನಹಕೆ ಬಾಯಿಲ್ಲವಯ್ಯ (ಪುರಂದ. ೨-೦೫೦ ಪಲ್ಲವಿ). ಬಿನ್ನಾಯ$_1$: ೨. ಊರಿನ ಒಂದು ಬಿನ್ನಾಯದ ನೆವ ಮಾಡಿಕೊಂಡು . . . ಊರು ಬಿಟ್ಟು ಕೆಲ ತಿಂಗಳು ಅಸ್ತಂಗತರಾದರು (ಗ್ರಾಮಾಯ. ೨೦). ವಿನ್ನಪ : ೧. 'ವಿನ್ನಪಂಗೆಯ್' ಪರಾ. ವಿನ್ನಪ್ಪ : ೧. 'ವಿನ್ನಪ್ಪಂಗೆಯ್' ಪರಾ. [<ಪ್ರಾ. ವಿನ್ನಪ್ಪ, ವಿಣ್ಣಪ್ಪ, ವಿನ್ನವ. / ತಮಿ. ವಿಣ್ಣಪ್ಪ ; ತುಳು. ಬಿನ್ನಯ, ಬಿನ್ನಹ; ತೆಲು. ವಿನ್ನಪ. / ಸಂ. ವಿಜ್ಞಾಪನ]

ಬಿನ್ನಪಂಗೆಯ್, ಬಿನ್ನಪಂಗೈ, ಬಿನ್ನಹಗೆಯ್, ಬಿನ್ನಹಗೈ, ವಿನ್ನಪಂಗೆಯ್, ವಿನ್ನಪ್ಪಂಕೆಯ್, ವಿನ್ನಪ್ಪಂಗೆಯ್ (ಕ್ರಿ). ಅರಿಕೆ ಮಾಡಿಕೊಳ್ಳು ; ವಿಜ್ಞಾಪನೆ ಮಾಡು : ಮಂತ್ರಿಯರಸುಗಿಂತೆಂದು ಬಿನ್ನಪಂಗೆಯ್ದಂ (ಪಡ್ಡಾರಾ. ೮೦-೦೩); ಕುರುಕುಳಗಗನಮೃಗಧರಂ ಬಂದನೆಂದು ಬಿನ್ನಪಂಗೆಯ್ವುದುಂ (ಪಂಪಭಾ. ೦೩-೬೩ ಪ); ಬಗೆಯಱಿದು ಬಿನ್ನಪಂಗೆಯ್ದು (ಕಬ್ಬಿಗಾ. ೦೩೦). ಬಿನ್ನಪಂಗೈ : ವಿರಚಿತಾಂಜಲಿಪುಟಘಟಿತಕರನಿಂತೆಂದು ಬಿನ್ನಪಂಗೈದಂ (ಶಾಂತಿಪು. ೨-೦೯ ಪ); ಹಂಪೆಯ ಹರಿಹರಂ ಬಿನ್ನಪಂಗೈದಂ [ಪಾಠಾಂ. ಗೆಯ್ದಂ] (ಗಿರಿಕ. ಕಥಾಗರ್ಭಸಂಧಿ. ೩). ಬಿನ್ನಹಗೆಯ್ : ಸುರಿವ ಕಂಬನಿಯಿಂದೆ ಬಿನ್ನಹಗೆಯ್ದಳು (ಮೋಹತ. ೬-೩೦). ಬಿನ್ನಹಗೈ : ಎನ್ನ ಮೆಲ್ನುಡಿಯ ನಿವಾರಿಸಬೇಡೆಂದು ಬಿನ್ನಹಗೈದಳು (ಮೋಹತ. ೦೦-೨೫). ವಿನ್ನಪಂಗೆಯ್ : ಆ ಗ್ರಾಮದ ಪ್ರಜೆಗಳೆಲ್ಲಂ ಸುಖಮಿರೆ ಪುಣ್ಯಂ ನಿನಗಕ್ಕುಮೆನ್ದು ವಿನ್ನಪಂಗೆಯ್ದಡೆ (ಮೃಆಂ. ೧೯೩೦. ೭೬-೪೨ : 1080). ವಿನ್ನಪ್ಪಂಕೆಯ್ : ತಟ್ಕಾಡಾ ಯಿರ್ಪ್ಪತ್ತಯ್ವರ್ಕ್ಕಂ ಸಿನ್ದರಸರುಂ ದೇವಸತ್ತಿಅರಸರುಂ ಮನಸಿಜರುಂ ವಿನ್ನಪ್ಪಂಕೆಯೆ (ಎಕ. III, ತಿರುಮ. ೦-೬ ; 726). ವಿನ್ನಪ್ಪಂಗೆಯ್ : ಎಱಿಯಿತಿಯಡಿಗಳ್ಪ್ರಸಾದಂಗೆಯ್ತು ಪೂರ್ವಾವತಾರಬಾಣರಾಜಱ್ಗ × ಣ್ಯಾರಂ ವಿನ್ನಪ್ಪಂಗೆಯ್ದೊಡೆ ಅಡಿಗಳಾ ಪ್ರಸಾದಂಗೆಯ್ದನ್ತೆ ಸಲ್ಗೆನ್ದರ್ (ಸೌಇಇ. IX-i, ೪೬-೦೦ ; ಸು. ೩ನೆಯ ಶತ).

[ಬಿನ್ನಪ + ಕೆಯ್$_1$]

ಬಿನ್ನಪಂಗೈ 'ಬಿನ್ನಪಂಗೆಯ್' ನೋ.

ಬಿನ್ನಯಿಸು 'ಬಿನ್ನವಿಸು' ನೋ.

ಬಿನ್ನಯ್ಸು 'ಬಿನ್ನವಿಸು' ನೋ.

ಬಿನ್ನವತ್ತಲೆ 'ಬಿನ್ನವತ್ತಳೆ' ನೋ.

ಬಿನ್ನವತ್ತಳೆ, ಬಿನ್ನವತ್ತಲೆ (ನಾ). ೧. (ರಾಜ, ಅಧಿಕಾರಿ ಮುಂತಾದವರಿಗೆ ಒಪ್ಪಿಸುವ) ಅರಿಕೆಯ ಓಲೆ ; ಮನವಿಪತ್ರ ; ವಿಜ್ಞಾಪನಾ ಪತ್ರ : ಕಂನಡಸಂಧಿವಿಗ್ರಹಿ ಬಿಂನವತ್ತಳೆಯ ಪ[ದ್ಧ][ರ]ಸನುಂ (ಸೌಇಇ. XI-i, ೩೦-೨೫ ; 1138); ಚರಣಕಾನತನಾಗಿ ಕೊಟ್ಟನು ಬಿನ್ನವತ್ತಳೆಯ (ತೊರಗಾ. ೦-೦೬-೨); ದುರಗಲಿ ದಳವಾಯಿಯೊಡೆಯನ ಬಳಿಗಾಗ ಬರಿಸಿದ ಬಿನ್ನವತ್ತಳೆಯ (ಕಂನವಿ. ೦೬-೦೭೩). ೨. ಸನ್ಮಾನಪತ್ರ ; ಮಾನಪತ್ರ : ಪುರಪ್ರಮುಖರು ಹಲವರು ಸೇರಿ ದಾದಾಭಾಯಿಗೆ ಬಿನ್ನವತ್ತಳೆಯನ್ನೂ ನಿಧಿಯನ್ನೂ ಅರ್ಪಿಸಬೇಕೆಂದು ನಿರ್ಧರಿಸಿದರು (ದಾದಾಪ. ೪೯). ಬಿನ್ನವತ್ತಲೆ : ೧. ಬಿನ್ನವತ್ತಲೆಯಂ ತಂದಿರೆ ತೋಱಮೆಂದು ನುಡಿವುದುಂ (ಕಾದಂಬಾ. ೬೩೬) ; ಕಳುಹಿದ ಬಿನ್ನವತ್ತಲೆ ಚಂದದುಡುಗೊಱೆಗಳನು ಕಟ್ಟಿಸಿ . . . ತಾ ಮುದದಿಂದಲೈದುವ ಹದನ ತನ್ನಯ ತಂದೆಗಱುಹೆಂದಟ್ಟಿ ನಡೆತರುತಿರ್ದ (ಸನತ್ಕು. ೦೨-೪೩) ; ಪಾಂಡ್ಯರಾಜನಿಗೆ ಬಿನ್ನವತ್ತಲೆಯಲ್ಲಿ ಬರೆದು ಮಧುರಾಪುರಕ್ಕೆ ಕಳುಹಿಸಿದನು (ಕಬಿಕ. ೫೯).

[ಬಿನ್ನ (<ಬಿನ್ನಪ) + ಪತ್ತಳೆ$_1$. / ತುಳು. ಬಿನ್ನತ್ತಲೆ]

ಬಿನ್ನವಿಸು, ಬಿನ್ನಯಿಸು, ಬಿನ್ನಯ್ಸು, ಬಿನ್ನೈಸು (ಕ್ರಿ). ಅರಿಕೆ ಮಾಡಿಕೊಳ್ಳು ; ವಿನಂತಿಸು ; ವಿಜ್ಞಾಪಿಸು : ಕೇಳ ಬಿನ್ನವಿಸುವೆನೆನ್ನ ಕಂಡುದನೆ (ಪಂಪಭಾ. ೬-೪೦); ದೇವ ಕೈಕೊಂಡು ಕಾವುದು ನೀನೆಂದು ಸುರಾಳಿ ಬಿನ್ನವಿಸೆ (ಧರ್ಮಾಮ್ಯ. ೦-೨೦೦); ತಪ್ಪದೆ ಬಿನ್ನವಿಸಿದನು ಮಾದ್ರರಾಜಂಗೆ (ಕುಮ್ಮಾಕ. ೫-೦೮). ಬಿನ್ನಯಿಸು : ಹರಭಕ್ತನಂ ಪದುಳದಿಂದೆ ಕಳುಪಿದೆನೆಂದನು ಬಿನ್ನಯಿಸೆ (ಸೇರಿರ. ದೇ. ೬೬-೭) ; ವಿನಯದಲಿ ಬಿನ್ನಯಿಸೆ ಕೃಪನೆಂದನು (ಕುಮ್ಮಾರೇ. ೨-೩೪) ; ಎನ್ನ ಬಿನ್ನಪವ ಲಾಲಿಪುದೆಂದು ಸುಗುಣಂಗೆ ಬಿನ್ನಯಿಸಿದಳು (ಮೋಹತ. ೪-೨೩). ಬಿನ್ನಯ್ಸು : ಬಿನ್ನಯ್ಸಿದಂ ಸುರರೆಲ್ಲ ಚೋದ್ಯಮೆನೆ (ಕಣ್ಣರ. ದೇ. ೦೫೦-೨); ಪಣೆಯೊಳ್ಕೆಯ್ಗಳಿಟ್ಟು ಬಿನ್ನಯ್ಸಿದಂ (ಕಬಿಪು. ೩-೪). ಬಿನ್ನೈಸು : ಎಲ್ಲರ್ಗೆ ಕೊಟ್ಟೆನೆಂದಭವಂಗೆ ಬಿನ್ನೈಸೆ (ಬಸರ. ೦-೪೫); ಸಾತ್ಯಕಿ . . . ಉತ್ತಮಾಂಗಕೆ ಕರಯುಗವ ಚಾಚುತ್ತ ಬಿನ್ನೈಸಿದ ಧನುರ್ಧರಫಾಲನೇತ್ರಂಗೆ (ಕುಮ್ಮಾದ್ರೋ. ೦೦-೬); ಸನ್ನಿಧಿಯಲಿ ಬಿನ್ನೈಸಿದೆವು (ಮುದ್ರಾಮಂ. ೫೦).

[<ಬಿನ್ನಪ + — ಇಸು$_3$]

ಬಿನ್ನಹ 'ಬಿನ್ನಪ' ನೋ.

ಬಿನ್ನಹಗೆಯ್ 'ಬಿನ್ನಪಂಗೆಯ್' ನೋ.

ಬಿನ್ನಹಗೈ 'ಬಿನ್ನಪಂಗೆಯ್' ನೋ.

ಬಿನ್ನಾಣ, ಬಿನ್ನಣ, ಬಿನ್ನಾಯ್ಸ, ವಿಂದಾಣ, ವಿನ್ನಾಣ (ನಾ). ೧. ವಿಶೇಷವಾದ ಜ್ಞಾನ ; ಗಾಢವಾದ ತಿಳಿವಳಿಕೆ : ಬಂದು ನಿಂದನಂ ಕಂಡು ವಿರಾಟಂ ನಿನ್ನ ಬಿನ್ನಾಣಮೇನೆಂದು ಬೆಸಗೊಳೆ (ಪಂಪಭಾ. ೬-೫೩ ಪ); ಎನ್ನೊಡಲೂ ಅಲ್ಲ ನಿನ್ನೊಡಲೂ ಅಲ್ಲ ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ (ದೇದಾಪ. ೦೭-೨೪); ಪನ್ನಗಧರ ಕೊಟ್ಟ ಬಿನ್ನಾಣದಿಂದ ಸ್ತುತಿಗೈದು ಪೊಗಳುವೆ (ಸರ್ವಜ್ಞ. ೨೮). ೨. ಕೌಶಲ್ಯ ; ನೈಪುಣ್ಯ ; ಚಾತುರ್ಯ ; ಜಾಣ್ಮೆ : ಬೆಡಗು ಬಿನ್ನಾ[ಪಾಠಾಂ. ನ್ನ]ಣಮೆಂಬುದೇನೋ (ಬಸವ. ೭೭); ಬಾಣಾವಳಿಯ ಬಿನ್ನಾಣವನು ತೋಱಿದನು (ಸಂಭವ. ೦೬-೭೦) ; ಎನ್ನೊಡಲೊಳಗೆ ತೋಱಿ ತೋಱಿ ಅಡಗುವ ನಿಮ್ಮ ಬೆಡಗು ಬಿನ್ನಾಣವನೆನಗೆ ತಿಳಿಯಬಾರದು (ಅಖಂದೇ. ೨೪೦-೬೫). ೩. ಚಮತ್ಕಾರದಿಂದ ದೊರಕಿದುದು ; ಕೌಶಲದಿಂದ ಲಭ್ಯವಾದುದು : ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು (ಸರ್ವಜ್ಞ. ೬೦೩). ೪. ಅಂದ ; ಸೊಬಗು : ಪಚ್ಚೆಯ ಪಾಸುಗಲ್ಲ ಬಿನ್ನಾಣದಿನಿಂದ್ರನೀಲಮಣಿವೇದಿಕೆಯಿಂ . . . ಬಗೆಗೆ ಕೌತುಕಮಾಯ್ತು ವಿವಾಹಮಂಟಪಂ (ಉತ್ಕಟಿ. ೬-೪). ೫. ಒನಪು ; ಒಯ್ಯಾರ :

ಹೆದರುವೆನು ನಾ ನಿನ್ನ ಬಿನ್ನಾಣಕೆಲೆ ಹೆಣ್ಣೆ (ಇಂಗೀತ. ೫೯-೦). ೬. ವಿನೋದ ; ಹಾಸ್ಯ ; ಗೇಲಿ : ಬಾಣ ನಿಷ್ಫಲವಾದುದಮರರ ಶ್ರೇಣಿಗಳು ಕೈಮುಚ್ಚಿ ನಗೆ ಬಿನ್ನಾಣವಾದುದು ದನುಜ ಕೈಗುಂದಿದನು ನಿಮಿಷದಲಿ (ಕೌಶಿರಾ. ೨೨-೯). ಬಿನ್ನಣ : ೧. ತನ್ನ ಬಿನ್ನಣಮಂ ನೆರೆದ ನೆರವಿಗೆ ಮೆಱೆಯಲ್ವೇಡಿ (ಪಡ್ಕಾರಾ. ೦೨೦-೦೬); ಶಿವಭಕ್ತರೆಲ್ಲರು ಶೂನ್ಯಸಿಂಹಾಸನದ ಗುರುವಿನ ಬಿನ್ನಣಕೆ ಬೆಱಗಾಗುತಿರ್ದರು (ಪ್ರಭುಲೀ. ೨೩-೩). ೨. ನೆಗೞ್ದುದು ಬಿಲ್ಲ ಬಿನ್ನಣಮಿಳಾವಳಯಕ್ಕೆ ಸಮಸ್ತಧಾತ್ರಿ ಕೆಯ್ಮುಗಿವುದು ನಿಮ್ಮದೊಂದೆ ಪೆಸರ್ಗೇಳ್ವೊಡೆ (ಪಂಪಭಾ. ೦೩-೫೬); ಅಱಿಯಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ಲು ಪಿನಾಕಪಾಣಿಯುಂ ನೆಱೆಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ (ಗದಾಯು. ೯-೯೯); ಪಿರಿದುಂ ಬಿನ್ನಣದಿಂದೆ ನಿರ್ಮಿಸಿದ ನಾನಾಚಿತ್ರಸತ್ಪುತ್ರಿಕೋತ್ಕರಮಂ ತೆತ್ತಿಸಿ (ಬಾರಪು. ೪-೩೨). ೪. ಬಿನ್ನಣದ ಮನೆ ಕಟ್ಟಿ ಕೋಟೆಕೊತ್ತಳವಿಕ್ಕಿ (ಪುರಂದ. ೦-೦೩೨-೨). ೬. ಬಿನ್ನಣದಿ ಮಿಗೆಯೋರೆನೋಟಡ ಕಣ್ಣಿನಿಂದೀಕ್ಷಿಸಿದಳೆಂದಾಡಿದರು ಕೆಲಕೆಲರು (ನಳಕ. ೩-೬೦). ೭. ಹೆಚ್ಚುಗಾರಿಕೆ ; ಅತಿಶಯ : ಎನ್ನಟ್ಟಡುಗೆಯನುಂಡೊಡೆ ಬಿನ್ನಣಮೇನರಸ ನರೆಗಳಾಗವು (ಪಂಪಭಾ. ೯-೫೯); ಇನ್ನಿಪ್ಪುವುಮಿಾ ತೆಱದಿಂ ಬಿನ್ನಣಮೇಂ ಕಂದಲಕ್ಷಣಂ ಕಮಲಮುಖೀ (ಛಂದೋಂಬು. ೯-೨೩೨ ಅಡಿಪದ್ಯ). ೮. ಭ್ರಮೆ ; ಭ್ರಾಂತಿ : ಮುನ್ನಿಲ್ಲದುದಂ ಪಡೆವನೆ ಬಿನ್ನಣ ಮಾಕಾಶದಲ್ಲಿ ಪೂವಡೆವಂದಂ (ಸಮಪ. ೦೦-೨೦). ಬಿನ್ನಾಯ್ಯ : ೨. ಬಿಲ್ಲ ನಾಯಕರು ದೇವ ರಘುರಾಮರ ಹೊಗಳುವ ಭಟರು ಬಿನ್ನಾಯ ದಿಂದೊಪ್ಪುತಿಹರು (ಕರ್ನಾಳ. ೨೬೯). ವಿಂದಾಣ : ೯. ಮಲ್ಲಯುದ್ಧದ ಒಂದು ವರಸೆ,– ಪಟ್ಟು : ವಿಂದಾಣಕೆ ಮೈಗೊಡುವನು ಡೊಕ್ಕರದಿಂದ ಹಾಕಿದೊಡುರುಳುವನು . . . ಮುಕುಂದನದೇಂ ವೈಸಿಕನೊ (ವೇಮಸಂ ೦೬-೧೨೩); ಸಂದ ಕೊಕ್ಕಸ ಗುಂಡು . . . ಚೇಣ ಪಟ್ಟಸು ವೆಂದೆನಿಪ ವಿಂದಾಣದಲಿ ಕಾದಿದರು ಜಟ್ಟಿಗಳು (ಸಾಳ್ವಭಾ. ೨೨-೬೨). ವಿನ್ನಾಣ : ೧೦. [ಕಾಮಶಾ] ಸುರತದ ಒಂದು ಬಗೆ, – ರೀತಿ : ನಸುಸಡಿಲಿದ ತಕ್ಕೆಯ ವಿನ್ನಾಣದಿನಸಮಾಯುಧನೃಪನೀಕ್ಷಿಸುತಿರೆ ಭರವಸದಿಂ ಮೋಹನಮಲ್ಲಗಲಹಮಂ ಮಾಡಿದರಾ ಪ್ರಿಯರು (ಜಯಕಾ. ೯-೫೦).

[< ಪ್ರಾ. ವಿನ್ನಾಣ. ವಿಣ್ಣಾಣ; / ತಮಿ. ವಿಣ್ಣಾಣ; ತೆಲು. ವಿನ್ನಾಣ. /ಸಂ. ವಿಜ್ಞಾನ]

ಬಿನ್ನಾಣಗಿತ್ತಿ (ನಾ). ಒಯ್ಯಾರಿ; ಬೆಡಗುಗಾತಿ : ಪೋಟೋ ತೆಗಿಸಿ ಕೊಳ್ಳಲಿಕ್ಕೆ ಹೋಗಿದ್ದಳೇ ಈ ಬಿನ್ನಾಣಗಿತ್ತೀ? (ಮೂರುಡಾ. ೪೯); ಇನ್ನು ಕೆಲವರು ಬಿನ್ನಾಣಗಿತ್ತಿ ಎಂದರು(ಅಪೋಲೀ. ೦೬೩); ಮನಸ್ಸು . . . ಒಬ್ಬ ಬಿನ್ನಾಣಗಿತ್ತಿಯನ್ನು ಆರಾಧಿಸಲೆಳಸಿತು (ಸಾಪಿಸ. ೩೯).

[ಬಿನ್ನಾಣ + – ಗಿತ್ತಿ]

ಬಿನ್ನಾಣವತಿ (ನಾ). = ಬಿನ್ನಾಣಗಿತ್ತಿ : ಬಿನ್ನಾಣವತಿಯ ತಿಸರದ ಚೆನ್ನೆಯ . . . ನೆರೆವುದಿನ್ನೆಂತೊ (ಶತಸಾಂ. ೨೬-೩೯).

[ಬಿನ್ನಾಣ + – ವತಿ$_3$]

ಬಿನ್ನಾಣಿ$_1$ (ನಾ). = ಬಿನ್ನಾಣಗಿತ್ತಿ : ಬಿನ್ನಾಣಿ, ಸೊಕ್ಕೆಲ್ಲ ಇಳಿಯುವುದು ನಾಳೆ ! (ಸಂಧ್ರಸ. ೯೯-೩); ಕೊಂಕುನೋಟದೊಳೆನ್ನನೇತಕೆ ಕೊಲ್ಲುವೆ ಬಿನ್ನಾಣಿ (ಇಂಜಾಪ. ೦೮೬-೦೭). [ಬಿನ್ನಾಣ + –ಇ$_3$]

ಬಿನಾಣಿ$_2$, ಬಿನ್ನಣಿ, ವಿನ್ನಾಣಿ (ನಾ). ೧. ಜಾಣ; ಚತುರ : ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು (ಬಸವ. ೭೨೯); ಪ್ರೌಢಿಯೊಳೆಂತಪ್ಪ ರುಮಂ ಮೆಚ್ಚದೆ ಕಡುಬಿನ್ನಾ[ಪಾಶಾಂ. ನ್ನ]ಣಿಯಪ್ಪ ಪಱೆಯಂಗೊಸೆ ದೊಡೆ (ಬಂಹಂ. ೩-೦೫); ಸಮಜೋಳಿ ಜೋಕಿಯಿಂ ಕಾದಿದರ್ ಬಿಲ್ಲ ಬಿನ್ನಾಣಿಗಳ್ (ಸಂಪು. ೩೯-೦೦). ೨. ಕುಶಲಕಾರ್ಯಗಳಲ್ಲಿ ನೈಪುಣ್ಯ ವುಳ್ಳವನು; ಕರಕುಶಲಿ : ಸೂತ್ರಧಾರಿ ಶ್ರೀಗುಂಡನ್ ಅನಿವಾರಿತಾಚಾರಿಗೆ ಮೂಮೆ ಪೆರ್ಜ್ಜೆಱೆಪುಪಟ್ಟಮು ತ್ರಿಭುವನಾಚಾರಿಯೆಂದು ಪೆಸರಿತ್ತು ಪ್ರಸಾದಂಗೆಯ್ದಾ ಪ್ರಿ(ಪೃ)ಧಿ(ಥಿ)ವಿಯಾ ಬಿನ್ನಾಣಿಗಳಾ ಬಳ್ಳಿಗವಾರ್ತ್ತೆ ಇಲ್ಲ (ಇಅ. X, ೦೬೯-೭; ೫ನೆಯ ಶತ); ದೇಗುಲಮಂ ಬೆಸಗೆಯ್ದ ಬಿನ್ನಾಣಿ ಪೊಲ್ಲಮಂಗೆ ಪನ್ನೆರಡು ಮತ್ತರ್ (ಎಇ. IV, ೩೫೯-೩೬; 975); ಹಲವು ಚಿತ್ರವ ಬರೆದನವಱೊಳಿಹನೆ ಅಳವಟ್ಟ ಕೆಲಸಂಗಳೊಳಗಿಹನೆ ಬಿನ್ನಾಣಿ (ಕಿವಗೀ. ೩೪-೦೫೯). ಬಿನ್ನಣಿ : ೧. ಬಲ್ಲಾಳಪ್ಪ ಬಿಲ್ಲ ಬಿನ್ನಣಿಯಿದಿರ ರೂಪನೆತ್ತಲೀಯದೊಂದೆ ಕೋಲಿಂದಿಸುವಂತೆ (ಪಂಪತಂ. ೦೨೬-೦೬). ವಿನ್ನಾಣಿ : ೨. ಸೂತ್ರಧಾರಿಗೆ ಮೂಮೆ ಪೆರ್ಜ್ಜೆಱೆಪುಗೆಯ್ದ ಬಱಿಕ್ಕೆ ಈ ವಿಷಯದ ವಿನ್ನಾಣಿಗಳಾ ಬಳ್ಳಿಗವರ್ತ್ತೆಯನುಱಿಪಿದ ಆಚಾರಿಯ ಪೆಸರಿವನಱಿಮಿ (ಇಅ. X, ೦೬೫-೬; ೫ನೆಯ ಶತ).

[ಬಿನ್ನಾಣ + – ಇ$_3$ /ಪ್ರಾ. ವಿಣ್ಣಾಣಿ. / ತೆಲು. ವಿನ್ನಾಣಿ]

ಬಿನ್ನಾಣಿಗ, ಬಿನ್ನಣಿಗ (ನಾ). ಚತುರ; ನಿಪುಣ : ಪ್ರಾಣ ಕೊರಳಲಿ ನಿಲಲು ರಣಬಿನ್ನಾಣಿಗರು ಜವಗುಂದೆ (ಕುಪ್ಯಾವಿ. ೬೦ಇ. ೫-೬೫). ಬಿನ್ನಣಿಗ : ಎಚ್ಚಾಡಿದರ್ ಬಿಲ್ಲ ಬಿನ್ನಣಿಗರಂದು (ಸಂಪು. ೯೮-೯೯); ಬಿಜ್ಜೆಯೊಳ್ ಬಿನ್ನಣಿಗರನಾಗಿಸಿ . . . ಬಿಲ್ಗಾಱಿಕೆಯೊಳ್ ಬಲ್ಗೈಗಲಿ ಗಳನೆಸಗಿ, ಪಾಟಮಾಟಮಪ್ಪಂತು ಕಲಿಸಲೊಡಂ (ರಾಮಾಶ್ವ. ೦೫೦-೦೯).

[ಬಿನ್ನಾಣ + – ಇಗ]

ಬಿನ್ನಾಣಿಸು, ಬಿನ್ನಣಿಸು (ಕ್ರಿ). ೧. ಚಾತುರ್ಯವನ್ನು ತೋರು; ಕುಶಲತೆಯನ್ನು ತೋರಿಸು : ತನ್ನ ಮಂತ್ರಿಯ ಕೈಗೆ ಕೊಟ್ಟು ನಿವಾಳಿಯ ಬಿನ್ನಾಣಿಸಿದನಕಂಪಾಂಕಾ(ಭರತ. ೫೭-೫೬). ೨. ಚಾತುರ್ಯ ದಿಂದ ಹೇಳು; ಕುಶಲತೆಯಿಂದ ನಿರೂಪಿಸು : ನೀವೊಮ್ಮೆ ದೇವನ ಮುನ್ನ ಕಂಡಿದ್ದುದರಿಂದ ಬಿನ್ನಾಣಿಸಿದಿರದು ನಮಗೆ ಕಂಡಂತಾಯ್ತು (ಭರತ. ೬೬-೦೭೭); ಮುನ್ನಿನ ಪಾಂಡವವರಸುತಕಥನವ ಬಿನ್ನಾಣಿಸುವೆ ಧರೆಯೊಳಗೆ (ಕುಮಾಸಾಂ. ೧೦). ೩. ಮಲ್ಲಯುದ್ಧದ ಪಟ್ಟು ಹಾಕು : ಹುಗುವರು ಹೊಕ್ಕು ಹೋರುವರು ಬಿನ್ನಾಣಿಸಿ ಬಿಗಿವರು ಕೈ ಕಾಲ ಬೆರಲ ಸಿಗಿವರು ಸಿಕ್ಕಿದರಾಯೆನ್ನಲೊಲ್ಲದೆ ಸಗುಣಾತ್ಮಕರು ಕಾದಿದರು (ಮೋಹತ. ೩೯-೩೬). ಬಿನ್ನಣಿಸು : ೧. ಲಸದ್ಭಿತ್ತಿಯೊಳಾ ಚಿತ್ರ ಪಟದೊಳೊಪ್ಪುವ ನವಬಾಲಿಕೆಯ ಅದ್ಭುತಮಪ್ಪ ವಿಲಾಸಶ್ರೀಯಂ . . . ಅತಿಚತುರಂ ಬಿನ್ನಣಿಸುತ ಬರೆದಂ (ಜಯಕಾ. ೩-೦೩). ೪. ಕೌಶಲ್ಯದಿಂದ ರಚಿಸು : ಮುನ್ನಮಿಾಶಾಲಯದೊಳಗೆ ಚಿತ್ರರಥನೆಂಬವಂ ನಿಖಿಲವರ್ಣ ಕದೆ ಚಿತ್ರಮಂ ಬಿನದದಿಂ ಬಿನ್ನಣಿಸೆ (ಪದ್ಮರಾ. ೦೦-೦೯೩).

[ಬಿನ್ನಾಣ + – ಇಸು$_3$]

ಬಿನ್ನಾಯ್ಯ$_1$ 'ಬಿನ್ನಪ' ನೋ.

ಬಿನ್ನಾಯ್ಯ$_2$ 'ಬಿನ್ನಾಣ' ನೋ.

ಬಿನ್ನೈಸು 'ಬಿನ್ನವಿಸು' ನೋ.

ಬಿಪ್ಪಂಡ (ನಾ). ಪಕ್ಷಿಗಳ ಕೂಗು,–ಕಲರವ : "ಬಗ್ಗು, ಬಿಪ್ಪಂಡಂ, ಬೆಜ್ಜೆ, ಚಪ್ಪರಣೆ–ಈ ೪ ಜಂಕಣೆ" (ಕಶಸಾ. ೫೭-೨೫೭); ಪಪ್ಪುಕಂ, ಕಪ್ಪಡಿ, ಬಿಪ್ಪಂಡಂ, ಉಪ್ಪಂಡಂ (ಶಮದ. ೩೬ ಪ್ರಯೋ); "ವ್ಯರ್ಥ" (ಶಮದ. ನ. ೯೬ ಪ್ರಯೋ). [?]

ಬಿಪ್ಪಂಡಿಸು (ಕ್ರಿ). (ಆಲಂ) ದೂಷಿಸು : ದೂರು : ಮತಿಯಂ ಬಿಪ್ಪಂಡಿಪಳ್ ಲಕ್ಷಣಮನೆಣಿಸಳೌದಾರ್ಯಮಂ ಚಿಂತಿಸಳ್ (ಕಾದಂಪೂ. ೫೯೮); ಈ ನಡೆನುಡಿವಳಿಗಳಿಂದ ಜಂಕಿಸಿ ಬಿಪ್ಪಂಡಿಸಿ ನಮ್ಮನ್ನೊದೆದು, ಹುಚ್ಚಡಸು ವಂತೆ ಹೀಗೆ ಕುಣಿಯಿಸಿ (ಮಂತ್ರಶ. ೦೬೦-೦೮). [ಬಿಪ್ಪಂಡ + – ಇಸು$_3$]

ಬಿಬೀಚಣ (ನಾ). ರಾವಣನ ಸಹೋದರ ; ವಿಭೀಷಣ : ಸುಸೇಣಂ, ಬಿಬೀಚಣಂ ಮುಂತಪ್ಪ ಬೀರರ ಕೂಟಮುಂ (ಅದ್ಭುತ. ೪೯-೦೯).

[<ಸಂ. ವಿಭೀಷಣ]

ಬಿಬ್ಬಚ್ಚ (ನಾ). ೧. ಅಸಹ್ಯ : 'ಬಿಬ್ಬಚ್ಚೆ' ಪರಾ. ೨. (ಆಲಂ) ನಿವಾರಣೆ ; ಪರಿಹಾರ : 'ಬಿಬ್ಬಚ್ಚಿಸು' ಪರಾ. ೩. ನಿಷ್ಫಲ; ವ್ಯರ್ಥ: 'ಬಿಬ್ಬಚ್ಚಗೊಳಿಸು' ಪರಾ. [<ಸಂ. ಬೀಭತ್ಸ]

ಬಿಬ್ಬಚ್ಚಗೊಳಿಸು (ಕ್ರಿ). ನಿಷ್ಫಲಗೊಳಿಸು ; ವ್ಯರ್ಥಮಾಡು : ಮೆಚ್ಚಿದೆನೊ ಅಹಿತೆನ್ನ ಶರ ಬಿಬ್ಬಚ್ಚಗೊಳಿಸಿದಕೀಗಲುರುಗಾಸ್ತ್ರೆಚ್ಚಪೆನು ತಡೆಯೆಂದು ಬಿಡಲು (ಶಾಂಪಾ. ೩೨೯-೪೬). [ಬಿಬ್ಬಚ್ಚ + ಕೊಳ್$_1$ + — ಇಸು$_3$]

ಬಿಬ್ಬಚ್ಚಿಸು (ಕ್ರಿ). ನಿವಾರಿಸು; ಹೋಗಲಾಡಿಸು : ತುಚ್ಚರಾಗುವರಂದು ಮಿಗಿಲ ಭೂಭುಜರು ಮುಂದೆಚ್ಚರದೊಳಿರ್ದಲ್ಲೆ ವಿಜಯಾಧಿನಾಥ ಬಿಬ್ಬಚ್ಚಿಸದಲಿರಲ್ (ಜನಮು. ೬-೩೦); ಆ ವ್ಯಸನವನು ಬಿಬ್ಬಚ್ಚಿಸಲು ತಿಳುಹಾಗುದಲ್ಲಾಗೆನೆ ವಿಭೀಷಣನು (ಶಾಂಪಾ. ೪೨೯-೨೦).

[ಬಿಬ್ಬಚ್ಚ + — ಇಸು$_3$]

ಬಿಬ್ಬಚ್ಚು (ನಾ). ಅಸಹ್ಯಕರವಾಗಿರುವುದು : ಬೇರನಗಿತಿಂಬವನಿಸುರರಿರವೀರಣಕೆ ಬಿಬ್ಬಚ್ಚು . . . ಎಂದೊದರೆ ಕಹಳೆಗಳು (ಪಶುಭಾ. ೨೩-೦೦).

[< ಸಂ. ಬೀಭತ್ಸು]

ಬಿಬ್ಬಚ್ಚೆ (ನಾ). ಅಸಹ್ಯವನ್ನುಂಟುಮಾಡುವವಳು ; ಅಸಹ್ಯಕರಳಾದವಳು : ಮೆಚ್ಚಿದನುಕೂಲೆಯರ ಸಂಗ ಸುಖಪುಂಗ ಬಿಬ್ಬಚ್ಚೆಯರ ಬಲಾತ್ಕಾರ ನೋಟಮುಂ ಬೇಟವನು ಘೆಚ್ಚುವದೆ (ಜನಮು. ೨೬-೧೪).

[ಬಿಬ್ಬಚ್ಚ + — ಎ$_2$]

ಬಿಬ್ಬನೆ (ಅ). ಅತಿಶಯವಾಗಿ ; ಅಧಿಕವಾಗಿ : ಬೆಬ್ಬನೆ ಬೆಱತು ಬಿಬ್ಬನೆ ಬೀಗಿ ಅಹಂಕಾರಭರಿತನಾಗಿಪ್ಪವನ ಮನೆಯ ಲಿಂಗಸನುಮತರು ಹೊಗರು (ಸಕವ. II. ೩೩೦-೯); ಸಂತೋಷಂ ಸರ್ವಾಂಗದೊಳು ತೀವಿ ಬಿಬ್ಬನೆ ಬಿರಿದಬ್ಬರಿಸುತ್ತೆ (ಸಂಬರ. ೬-೩೪); ಓಹಿಲದೇವಂ ಕೊಬ್ಬುತ್ತುರ್ಬುತ್ತಂ ಬಿಬ್ಬನೆ ಬೀಗಿ (ಉದ್ಯದೇ. ೩-೪೩). [ಬಿಬ್$_0$ + — ಅನೆ$_1$]

ಬಿಬ್ಬಿ 'ಬೀಬಿ' ನೋ.

ಬಿಬ್ಬಿನಂ (ಅ). ಕೂಡಲೆ : ಮರ್ತ್ಯಾಂಗನಿಕಾಯಂ ಬಿಬ್ಬಿನಂ ಬೆಕ್ಕನೆ ಬಿರಿದಪುದು (ಸುಕುಮಾ. ೯-೦೦).

ಬಿಬ್ಬಿರಿವಲ್ 'ಬಿರಿ$_2$' ಪರಾ.

ಬಿಬ್ಬೋಕ (ನಾ). ೧. [ಕಾವ್ಯಮೀ] ಸ್ತ್ರೀಯ ದಶವಿಧಶೃಂಗಾರ ಭಾವಗಳಲ್ಲಿ ಒಂದು ; ಲೀಲಾ, ವಿಲಾಸ, ವಿಚ್ಛಿತ್ತಿ, ವಿಭ್ರಮ, ಕಿಲಕಿಂಚಿತ, ಮೊಟ್ಟಾಯಿತ, ಕುಟ್ಟಮಿತ, ಬಿಬ್ಬೋಕ, ಲಲಿತ ಮತ್ತು ವಿಹೃತ ಎಂಬ ಹೆಣ್ಣಿನ ಹತ್ತು ಸ್ವಭಾವಜನ್ಯಅಲಂಕಾರಗಳಲ್ಲಿ ಒಂದು ; ಗರ್ವದಿಂದ ಉಂಟಾಗುವ ಅನಾದರ : "ಬಿಬ್ಬೋಕ ಮೆಂದೊಡೆ ಕಾಂತನ ಕೂಟಂಗಳಲ್ಲಿ ಗರ್ವದಿಂದಿಹ ಅನಾದರಣಂಗಳು" (ಪಾಜಿರಾ. ೯೬); ಲಲಿತವಿಲಾಸಬಿಬ್ಬೋಕವಿಭ್ರಮಗುಣ ಕಿಲಕಿಂಚಿತಲೀಲೆಗಳು ತೊಲಗದೆ ಸಲೆ ನೆಲಸಿಹವಾ ಕೇರಿಯ ಬೆಲೆವೆಣ್ಗಳೊಳಗೆ (ಕುರಾಸಾಂ. ೯-೦೦೬). ೨. ಹುಸಿಮುನಿಸಂ ; ಹುಸಿಕೋಪ : ಉಳ್ಳುಡೆಯಂ ಮೆಲ್ಲನೆ ಲೀಲೆಯಿಂ ಸೆಳೆದೊಡೆನ್ನಂ ಸಸ್ಪೃಹಂ ಕೊಳ್ವವೊಲ್ ಕಡೆಗಣ್ಣಿಂದಮೆ ಕೊಂಕುವಳ್ ಸಹಜಮೀ ಬಿಬ್ಬೋಕಮೆನ್ನಾಕೆಯಾ (ಲೀಲಾವ. ೨-೦೦೫) ; ಸೌಂದರಿ . . . ಬಿಬ್ಬೋಕಂ ಕುಡಿವರಿಯಲ್ ನಿಬ್ಬೆಗದೆ ನಿನಗಕಾರಣಂ ಹಸನಮದೆಂದಳ್ (ಕಾದ್ಯಟಿ. ೦೦-೨೩). [ಸಂ].

ಬಿಭೀಷಿಕೆ (ನಾ). ಅಂಜಿಕೆ; ಭಯ : ಉತ್ತಪ್ತರಜತಾವದಾತಲೋಹ ಪುತ್ರಿಕಾನಂದ ಲಾಕ್ಷಾಹಿಂಗುಲಿ ಕಪಾಟಲಕಮರ್ಧಕರವಾಳಚಾಲನಪ್ರಕಟಿತ ಭಟಬಿಭೀಷಿಕಾಡಂಬರಂ (ಆದಿಪು. ೦೩-೪೫ ವ); ಅಂತೆ ವೇಷದಲಿ ಮತವೆಂದು ಕಾಣುವ ಬಿಭೀಷಿಕೆಯ ನಿಜವಾಗಿ ಮತವೆನ್ನಬಾರದೆಲೆ ಅದು ಬಿಭೀಷಿಕೆಯೆಂದು ತೋರುವುದು ನಿಜವಾದ ಮತಕೆ ಬೆಲೆ ತಂದಂತೆ (ನವರಾ. II. ೪೦).

[ಸಂ. ಬಿಭೀಷಿಕಾ]

ಬಿಮ್ಮಗೆ$_1$ (ಅ). ೧. ಬಿಗಿಯಾಗಿ ; ಬಲವಾಗಿ : ಗಟ್ಟಿಯಾಗಿ ಒಮ್ಮೆಯುಂಡವ ತ್ಯಾಗಿ ಇಮ್ಮೆಯುಂಡವ ಭೋಗಿ ಬಿಮ್ಮಗುಂಡವ ನೆಱ³ ರೋಗಿ (ಸರ್ವಜ್ಞ. ೨೦೨೩); ಹಾಗೆಲ್ಲ ಬಿಮ್ಮಗೆ ಉಂಡು ತೇಗಬೇಕಾದರೆ . . . ಉಡುಪಿಗೇನೆ ಹೋಗಬೇಕು (ಮರಮ. ೯೯) ; ಬೊಪ್ಪಣ . . . ಮಹಾರಾಣಿಯ ಕಾಲುಗಳನ್ನು ಬಿಮ್ಮಗೆ ಹಿಡಿದು, ಅದರ ಮೇಲೆ ತನ್ನ ತಲೆಯನ್ನಿಟ್ಟ (ಶಾಂತಲಾ. ೧೮೪). [ಬಿಮ್ಮು$_1$ + — ಅಗೆ$_3$./ತುಳು. ಬಿಮ್ಮಗೆ]

ಬಿಮ್ಮಗೆ$_2$ (ಅ). ಮೌನವಾಗಿ; ಸುಮ್ಮನೆ : ಬೊಮ್ಮವನು ಅಱಿದಿಹರೆ ಬಿಮ್ಮಗಿದ್ದಿರಬೇಕು (ಸರ್ವಜ್ಞ. ೪೩೪); ಬಿರುಸು ಲಲ್ಲೆ ಮಣ್ಣಿಗಾಯ್ತು ಬಿಮ್ಮಗುಳಿದಳು (ಪಲಾವ. ೨೪-೬); ನಿಲ್ಲೆಂದ ಹಾಗಾಗಿ, ಅಲ್ಲೆ ನಿಂತೆಯೊ, ಜಾಣ ಹೊರಟಾಗ ಕೇಳಿದರೆ ಬಿಮ್ಮಗಿಹರು (ಮಸಾಹಿ. ೨೬).

[ಬಿಮ್ಮು$_2$ (< ಬಿಂ) + — ಅಗೆ$_3$]

ಬಿಮ್ಮನಸೆ, ಬಿಮ್ಮನಿಸೆ (ನಾ). ಬಸಿರಿ ; ಗರ್ಭಿಣಿ : ಹೆಣ್ಣು ಬಿಮ್ಮನಸೆಯಾಗಿ, ಒಡವೆಗಳು ಹೊರೆಯಾದಾಗಲೂ ಅವುಗಳ ಚಾಪಲ್ಯ ಹಿಂಗುವುದಿಲ್ಲ (ಸಂಜುಂಡ. ೦೨೮) ; ಅಬ್ಬಬ್ಬ . . . ಎಂದು ಬಿಮ್ಮನಸೆ ಅಬ್ಬರಿಸಿದಳು (ಪುನರು. ೨೯೮). ಬಿಮ್ಮನಿಸೆ : ಬಿಮ್ಮನಿಸೆ ಆಗಿಬಿಟ್ಟಳು (ನನ್ನೂರು. ೨೯೮).

[<ಬಿಣ್ + < ಮಾನಸೆ]

ಬಿಮ್ಮನಿಸೆ 'ಬಿಮ್ಮನಸೆ' ನೋ.

ಬಿಮ್ಮನೆ$_1$ (ಅ). ೧. ವೇಗವಾಗಿ : ಶೀಘ್ರವಾಗಿ ; ರಭಸವಾಗಿ : "ಬಿಮ್ಮನೆ ಗಮ್ಮನೆ ವಹಿಲಂ" (ಪತುಸಿ. ೬೦); ಈ ಪರಿಯಂ ಕೇಳಿಪುದುಂ ಪಡೆವಳರೆಲ್ಲರ್ ದಿಮ್ಮನೆಟ್ಟು ಬಿಮ್ಮನೈತಂದು (ರಾಮಾಶ್ವ. ೦೩೬-೧); ಹೆಮ್ಮೆಯ ಮುಗಿಲಿಗೆ ಬಿರುಗಾಳಿಯಿದೋ ಬಿಮ್ಮನೆ ಬೀಸುವುದು ನೋಡಿ (ಪಡೆದಾ. I. ೪೪೩). ೨. ಬಲವಾಗಿ ; ಗಟ್ಟಿಯಾಗಿ ; ಬಿಗಿಯಾಗಿ : ಬಾಯಲ್ಲಿ ತುತ್ತನಿಕ್ಕಲೊಲ್ಲದೆ ಬಿಮ್ಮನೆ ಬಾಯಂ ಮುಚ್ಚಿಕೊಳಲು (ಧರ್ಮಾಪ್ಯಾ. ೧೦-೨೦೮). [ಬಿಮ್ಮು$_1$ + — ಅನೆ$_1$./ತುಳು. ಬಿಮ್ಮನೆ]

ಬಿಮ್ಮನೆ$_2$ (ಅ). ೧. ಬಿಕೋ ಎನ್ನುವಂತೆ ; ಬಣಗುಟ್ಟುವಂತೆ : ಬಿಮ್ಮನೆಯಾಗಿ ಮದುವೆಗಳುಪಿದ ಮನೆಯಂದದಿನಿರ್ದುದು (ಅಪಪು. ೬ ೯೦). ೨. ಸುಮ್ಮನೆ ; ತೆಪ್ಪಗೆ : ಪ್ರಭುವು ಅವರ ಯಾವ ಮಾತುಕತೆಗಳಲ್ಲಿಯೂ ಭಾಗವಹಿಸಲಿಲ್ಲ. ಬಿಮ್ಮನೆ ಕುಳಿತನು (ಚಟ್ಟಹೂ. ೨೬).

[ಬಿಮ್ಮು$_2$ (<ಬಿಂ) + — ಅನೆ$_1$]

ಬಿಮ್ಮಿಸು (ಕ್ರಿ). ಅಹಂಕಾರಪಡು ; ಗರ್ವಿಸು : ಪೂವಸಿಱ ಪೂವಿಲ್ಲ ಮೊದಲಹ ಜೀವಿಗಳ್ಬಿಮ್ಮಿಸಿದೊಡಸದಳ ದೇವನಲ್ತೆ ಕೇಳ್ಚವಂ ಜವಗೆಟ್ಟ ಮುಂಗಥೆಯ (ಮದೇಪು. ೩-೨). [ಬಿಮ್ಮು$_1$ + — ಇಸು$_3$]

ಬಿಮ್ಮು$_1$ (ನಾ). ೧. ದೊಡ್ಡತನ ; ಘನತೆ ; ಹಿರಿಮೆ : ಬಲ್ಲವರ ಬೆಸಗೊಂಡರೆ ಎನ್ನ ಬಿಮ್ಮು ಕೆಟ್ಟಿಹುದೆಂದು ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ (ಬಸವ. ೬೮೮); ಭಕುತಿಯ ಬಿಮ್ಮಿನಲಿ ಬೀಸಾಡಿದನು ಪದದಲಿ ಕಳೇವರವ (ಪಿಭಾಗ. ೯-೬-೪೦). ೨. ಗರ್ವ ; ಅಹಂಕಾರ : ನಗುವುದು ನುಡಿವುದು ಶಿವಭಕ್ತರೊಡನೆ ಸುಮ್ಮಾನ ಹಮ್ಮು ಚಿಮ್ಮಾಗಿರಲೇಕಯ್ಯ (ಬಸವ. ೨೪೨); ಬಿಮ್ಮು ಬೀಸರವಹುದೆ ನಿಮ್ಮ ಸೊಮ್ಮಿನವರಿಗೆ (ಕುಮ್ಯಾವಿ. ೮-೫೩). ೩. ಬಿಗುಹು ; ಬಿಗಿತ : ಪ್ರಾರಬ್ಧಕರ್ಮದ ಬಿಮ್ಮು ತೀರಲು . . . ಸುಖಿಯಹನು (ಅಮೃತ. ೬-೫೨) ; ಇತ್ಯ ರವಿರಶ್ಮಿಗಳ ಬಿಮ್ಮು ಸಡಿಲುತ್ತಿರ್ದುದು ನೋಡಿ (ತುರಂಗ. ೫೬-೦೬); ಈ ಪ್ರಸಂಗದಿಂದ ಹಿಂದಿನ ಹತ್ತಿಪ್ಪತ್ತು ದಿನಗಳ ಬಿಮ್ಮು ಒಮ್ಮೆಲೆ ಬಿಟ್ಟು ಬಯಲಾಯಿತು (ಕಾಳರಾ. ೦೦). 'ಬಿಮ್ಮಗೆ$_1$' ಪರಾ.

[ದೇ.॥ ತಮಿ. ವಿಮ್ಮು = ಭಾರ, ಹೊರೆ]

ಬಿಮ್ಮು$_2$ 'ಬಿಂ' ನೋ.

ಬಿಮ್ಮುಗಱ³ (ಕ್ರಿ). ಬಿಕೋ ಎನ್ನು ; ಬಣಗುಡು : ಪಾ[ಟ]

ದಾಟದ ಮುದ್ದಿನ ಬಿದ್ದಿನ ವಿಳಾಸಿನೀಜನದ ಬಿನದಮಿಲ್ಲದೆ ಬಿಮ್ಮುಗಱ^3 ಯುತ್ತಿರ್ದವಿನಾಣಿಗಳ ಬಾಗಿಲ್ಕೆತ್ತಂತೆ ಬಿನ್ನನಾಗಿ (ಪರ್ಗಮಾ. ೫-೯ ಪ).

[ಬಿಮ್ಮು$_2$(<ಬಿಂ) + ಕಱ$^3_1$]

ಬಿಮ್ಮುಗಿಡು ' ಬಿಮ್ಮುಗೆಡು ' ನೋ.

ಬಿಮ್ಮುಗೆಡು, ಬಿಮ್ಮುಗಿಡು (ಕ್ರಿ). ಅಹಂಕಾರವಿಲ್ಲವಾಗು ; ಗರ್ವನಾಶವಾಗು : ಗರಳವಂ ಕೊರಳ ಹೊಱಗಿಟ್ಟುಕೊಂಡಾ ಹೆಮ್ಮೆ ಬಿಮ್ಮುಗೆಡುತಿರೆ (ಸಿದ್ಧರಾ. ೫-೦೬); ನಿಮ್ಮ ಶರಣಂಬೊಕ್ಕೆವೆನುತಂ ಬಿಮ್ಮುಗೆಟ್ಟ ಷ್ಟಾಂಗದಿಂ ಪೊಡವಡುತ ನಸು ಸಾರ್ದು (ಬಸಪು. ೫೬-೪೩). **ಬಿಮ್ಮುಗಿಡು** : ಪೊಣರ್ದರಿಳೆ ಕಮಠಫಣಿರಾಜಾಳಿ ಬಿಮ್ಮುಗಿಡಲಲ್ಲಿ ಮಱ^{3}ದುದು ಭಾಪು ಚತುರವೈಹಾಳಿ ಹರ್ಷದ ಛಡಾಳಿ (ಭಾವಸಂ. ೮-೧೨). [ಬಿಮ್ಮು$_1$+ಕೆಡು$_1$]

ಬಿಮ್ಮೆನ್ನಿಸು (ಕ್ರಿ). ಬಿಕೋ ಎನ್ನಿಸು ; ಬಣಗುಟ್ಟು : ಏನು ಸೊಗಸು ಈ ಶರತ್ಕಾಲ . . . ಇಷ್ಟಾದರೂ ಏಕೋ ಬಿಮ್ಮೆನ್ನಿಸುತ್ತದೆ (ರಾಕ್ಷಮು. ೪೨). [ಬಿಮ್ಮು$_2$ (<ಬಿಂ) + ಎನ್ನಿಸು (<ಎನಿಸು$_1$)

ಬಿಯ, ಬಿಯ್ಯ, ಬೀಯ್ಯ$_3$, ಬೆಯ, ಬ್ರಯ, ವೆಯ, ವ್ರಯ (ನಾ). ೧. ಖರ್ಚು ; ವೆಚ್ಚ ; ಪುಟ್ಟಿದಂದಿವಂಗಿದು ಬಿಯಮೊಳ್ಳಿವಂಗಿದು ವಿನೋದಮಿವಂಗಿದು ಸಾವ ಪಾಂಗು (ಪಂಪಭಾ. ೦೨-೦೬೨); ಚಾರುದತ್ತಂ ಬಿಯಕ್ಕೆ ತಕ್ಕುದಂ ಬೇಡಿದನೆನೆ (ಪಂಪಿಪು. ೪-೫೫ಪ). 'ಉಪಬಿಯ' ಪರಾ. ೨. ದಾನ; ಕೊಡುಗೆ : ಬಿಯಮುಂ ಪರಾಕ್ರಮಮುಮೊಪ್ಪಿರೆ ತನ್ನೊಡ ವುಟ್ಟಿದರ್ ಸಮಂತೊಡವರೆ ವಾರಣಾವತಮನೆಯ್ದಿದನಮ್ಮನ ಗಂಧ ವಾರಣಂ (ಪಂಪಭಾ. ೨-೯೮); ಜನಕೆಲ್ಲಮಿಾವ ಸೂಸುವ ಕುಡುವೀಡಾಡುವ ವಸ್ತುಗಳಿಂದೆಡಱೋಡುವಿನಂ ಪಿರಿದನಿತ್ತು ಬಿಯಮಂ ಮೆಱ^{3}ದಳ್ (ಸುಕುಮಾ. ೦೦-೯೨). ೩. ಅಳಿವು ; ನಾಶ : ಹರಣದ ಬಿಯಕೊಂದಿನಿಸು ಮನೆಣಿಸದ ದೊರೆಗಲಿಗಳ್ ಬಿನದಕೆ ನಡೆವಂದದಿ ಹರಿಸಂ ಮಿಗೆ ನಡೆತಂದರ್ (ಜಯಕಾ. ೬-೨೪). ೪. [ಗಣಿತ] ಭಾಗಿಸಿ ಉಳಿದ ಶೇಷ : ಧನಂ ತದವಾಪಂ ನಗಸಂಗುಣ ಘಣಿಹೃತಂ ಶೇಷಂ ಬಿಯಂ (ಲೋಕೋಪ. ೩-೨೦) ; ಧನಮಂ ಏಟಱಿಂ ಗುಣಿಸಿ ಎಂಟಱಿಂ ಭಾಗಿಸಲ್ ಉಱ^{3}ದ ಶೇಷಂ ಬಿಯಂ (ಲೋಕೋಪ. ೩-೨೦ ಟೀಕೆ). **ಬಿಯ್ಯ** : ೩. ಮಾರಿಯ ಮನೆ ಬಿಯ್ಯದ ಕಣಜಂ ಮತ್ತಾ ರಾಜಕೃತಾಂತನ ಬಳಕೆಯ ಭಂಡಾರಂ . . . ತಾಮೆನಲಾ ದಾರುಣತರಸಂಗ್ರಾಮಧರಾತಳಮತಿಭೀಕರಮಾಯ್ತು (ಜಯಕಾ. ೬-೨೦). **ಬೀಯ್ಯ$_3$** : ೧. ಪಡದೊಡಮೆಯಂ ಮೂಱು ಭಾಗಂಗೆ ಯ್ದೊಂದು ಭಾಗಮಂ ಧರ್ಮಕ್ಕೆ ಮತ್ತೊಂದು ಭಾಗಮಂ ಮನೆಯ ಬೀಯಕ್ಕೆ . . .ಸಂವಿಭಾಗಂಗೆಯ್ದು (ಶಾಪುಂಪು. ೨೦೬); ಆಯಕ್ಕೆ ಬೀಯ ಸರಿ ಮೇಲೆ ಭಂಡಾರಕ್ಕೆ ರಾಯರಿಕ್ಕಿದ ಕಪ್ಪ ತಾವುಪಾರ್ಜಿಸಿದರ್ಥ (ರಿಕಿಸಂ. ೩೦-೪೦); ಆಯ ಬೀಯವನವಳೊಡನಾಳೋಚಿಸಿ ಕೈಯಡಕದೊಳಿರಿಸುವುದು (ಹದಿಬ. ೬-೪೨). ೨. ಬೀರಕೆ ಬೀಯಕ್ಕಿಱಿವ ಬೆಡಂಗನೊಳಾರ್ದೊರೆ ನೆಱ^3 ತೋರ್ಕುಮೆ ಶತ್ರುಜನಕಮರ್ಥಿಜನಕ್ಕಂ (ಗದಾಯು. ೧-೦೬) ; ಜನಕಂ ಬೀಯದ ಚಾಗದ ಪೆರ್ಮೆಯಂ ಮೆಱ^{3}ವುದುಂ (ಪಂಠಾಮಾ. ೫-೦೪೦ ಪ); ನಯದ ಬೀಯದ ಚಾಗದುಪಭೋಗದೆಸಕದೊಳಂ . . . ಅತಿ ಮನೋ ಹಾರಿಯಪ್ಪ ಸೂಱ^{3}ಗೇರಿಗಾಸನ್ನಮಾದ ವಿಪಣಿವೀಧಿಯೊಳ್ (ಪುಷ್ಪಪು. ೨-೬೬ ಪ). ೩. ಜೀವದ ಬೀಯಕಿವರಂಜಿದರು ನೆನೆದರು ಮನೆಯ ರಾಣಿಯರ (ಕುಮ್ಕಾಲೀ. ೬-೬೧) ; ವಾಯುಸೂತ್ರದಲಿಂದು ರವಿ ಚಕ್ರಾಯುಧಂಗಳು ತಿರುಗುತಿರ್ದೊಡೆ ಬೀಯವಹವವ ನಿಲಿಸಲಱಿಯದ ಭವಿಗಳಾಯುಷ್ಯ (ಪ್ರಭುಲೀ.೬-೩೨). ೫. ವೆಚ್ಚಕ್ಕೆ ಆಧಾರವಾದ ದ್ರವ್ಯ : ಧನ : ಪೊಂದರುತಿರೆ ಗಂಡಂ ಸಾಯೆಂದಡೆ ಜೀಯೆಂದು ಪೇಱ^{3}ದೊಡಂ ಮಾಡುವರಿಂತೊಂದು ದಿನ ಬೀಯ[ಪಾಠಾಂ. ವಿನಯ]ಮಿಲ್ಲದೊಡಂದಾ ಗಳ್ಮಾತುಗೇಳರ್ (ಸಮಪ. ೫-೦೦೦) ; ೯ ಈ ಶಬ್ದವು ' ಬೀ ' ಎಂಬ ಧಾತುವಿಗೆ ಸಂಬಂಧಪಟ್ಟಿರಬಹುದೇ ಎಂಬುದು ಪರಿಶೀಲನಾರ್ಹವಾಗಿದೆ. **ಬೆಯ** : ೧. ಇಂತೀ ದೇವದಾನವಸ್ಥಳಂಗಳ ಆಯಕ್ಕೆ ಬೆಯ ಸರಿ (ಎಕ III, ತಿರುಮ. ೯೭-೯೪ ; 1276). ೬. (?) : ಭಟ್ಟವುತ್ತರ್ ಸಾಸಿರ್ವ್ವರು ಒಲೆಯ ಅಯ್ನೂರ್ವ್ವರು ಬೆಯ ಮೂನೂರ್ವ್ವರುಂ . . . ಧರ್ಮನಿಮಿತ್ತ ಕೊಟ್ಟ ಸ್ಥಿತಿಯ ಕ್ರಮ (ಎಕ. XVI, ತುಮಕೂ. ೬೧-೬:೨೦೬). **ಬ್ರಯ** : ೧. 'ಧರ್ಮಬ್ರಯ' ಪರಾ. ೭. (ಯಾವುದಾದರೂ ಖರ್ಚು, ವೆಚ್ಚಗಳಿಗಾಗಿ ವಸೂಲು ಮಾಡುತ್ತಿದ್ದ) ಒಂದು ಬಗೆಯ ತೆರಿಗೆ : 'ಮಳಬ್ರಯ' ಪರಾ. **ವೆಯ** : ೧. ನರನೊಂದು ವೆವಹಾರ ಕೆರಡಾಯವೆಯ ಲೆಕ್ಕ ಹೊರಗಣನುಭೋಗಕೊಂದೊಳನೀತಿಗೊಂದು (ಮಂಕುಳ. ೬೬೪). **ವ್ರಯ** : ೧. ಇನ್ತಿನಿತುಂ ನಿತ್ಯವ್ರಯವಾಗಿ ನಡೆವುದು (ಹೈಅಸಿ. ೫-೬-೪೦ ; 1088). ' ಧರ್ಮವ್ರಯ ' ಪರಾ.

[<ಸಂ. ವ್ಯಯ./ಪ್ರಾ. ವಯ, ವಿಅ]

ಬಿಯಂಗೆಯ್, ಬಿಯ್ಯಂಗೆಯ್, ಬೀಯಂಗೆಯ್ (ಕ್ರಿ). ೧. ವೆಚ್ಚ ಮಾಡು ; ಖರ್ಚುಮಾಡು : ತವದಾಯುಷ್ಯದ ಕುಂದವಂದದ ಬಿಯಂಗೆಯ್ದುಂ ಪವಣ್ದೋಱದುದ್ಭವದೇ ನೋಂತೆನೆನಿಪ್ಪ ರೂಪಿನ ಮನಂಗೊಂಡಿರ್ಪ ಲಾವಣ್ಯದೊಪ್ಪುವ ನೇಪಥ್ಯದಮರ್ಕೆ ನಿಲ್ಲವನಿಮೇಷೆಂದ್ರಾದಿಗಳ್ಗಂ ದೊಡಾರ್ಗಿವು ನಿಲ್ಕುಂ (ಶಾಂತಿಪು. ೬-೬) ; ಸಿರಿಯಂ ತಕ್ಕಲ್ಲಿಗಿನ್ತಿತ್ತನ ತೆಱದೆ ಬಿಯಂಗೆಯ್ಯಲ್ (ಎಕ. III, ಮಂಡ್ಯ. ೦೨೦-೩೨ ; 1235). **ಬಿಯ್ಯಂಗೆಯ್** : ೧. ಪೂರ್ವೋಪಾರ್ಜಿತಪುಣ್ಯದಿಂ ಧನಂಬಡೆದ ಗೃಹಸ್ಥಂ ನಿರರ್ಥಕಂ ಬಿಯ್ಯಂಗೆಯ್ಯದೆ . . . ಸ್ವಸಮಯಿಗಳ್ಗೆ ಕೊಟ್ಟೊಡಕ್ಷಯದಾನಮಕ್ಕುಂ (ಪಸಾರ. ೩೨೨). **ಬೀಯಂಗೆಯ್** : ೧. ಬೇಟ್ಟರ್ಥವನಾರ್ಜಿಸಿ ಬೀಯಂಗೆಯ್ದು ಧನಮಿತ್ರನುಮಾನುಂ ಸುಖದಿನಿರೆ (ದಶಕು. ೬-೧೫೪ ಪ). ೨. ದಾನ ಮಾಡು ; ಕೊಡುಗೆ ನೀಡು : ನಿಧಿಗಳೊಳಿರ್ದೊಡಮೆಯಂ ಬೀಯಂಗೆಯ್ದು . . . ಅಹಮಿಂದ್ರನಾದೊಂ (ಶಾಪುಂಪು. ೨೬೯) ; ಪೇರಾನೆಗಳ ತೇರ್ಗಳ ವಂಗಡಮಂ ತಂಡತಂಡದಿಂ ಬೀಯಂಗೆಯ್ವರಸುಮಕ್ಕಳ ಮುಂದೋದಿ ಮೆಚ್ಚಂ ಕೊಳ್ವಕ್ಕರಿಗರಬ್ಬರ ದೊಳಂ (ಕಬ್ಬಕಾ. ೪೪) ; ಇನಿತಜಿನರತ್ನಮಂ ನಚ್ಚಿ ನಿಜಾಲಯದರ್ಥ ಮೆಲ್ಲಮಂ ಬೀಯಂಗೆಯ್ದೆನಸುಂ ದರಿದ್ರೆಯಾದಳ್ (ದಶಕು. ೬-೨೦೬).

[ಬಿಯ + ಕೆಯ್^{1}]

ಬಿಯಕಾರ್ತಿ (ನಾ). ಬೆಲವೆಣ್ಣು ; ಗಣಿಕೆ ; ವೇಶ್ಯೆ : ಕಣ್ಗೆಸೆದರ್ . . . ಲೀಲೆಯಿನಾಂತು ನಿಂದ ಬಿಯಕಾ[ಪಾಠಾಂ. ಗಾ]ರ್ತಿಯರಗ್ಗದ ಗಾಡಿ ಕಾರ್ತಿಯರ್ (ಪಾರ್ಶ್ವಪು. ೦೨-೯).

[ಬಿಯಕಾಱ + — ತಿ$_1$ (< — ಇತ್ತಿ)]

ಬಿಯಕಾಱ, ಬೀಯಕಾಱ (ನಾ). ಹೆಚ್ಚಾಗಿ ಖರ್ಚುಮಾಡುವವನು ; ದುಂದುಗಾರ : "ಬಿಯಕಾಱರ್ ವ್ಯಯಶೀಲರೊಳ್" (ಕರ್ಣಾನಿ. ೬೩) ; ನಯವಿದನೊಪ್ಪುವ ಬಿಯಕಾಱನೊಳ್ಳಿದ ಪ್ರಿಯತಮನಾಗೆ ತನ್ನ ಮುನ್ನೋಂತ ನೋಂಪಿಯ ಫಲವೈಸೆ ಬೆಲವೆಣ್ಣೆ (ಸೂಕ್ತಿಸು. ೬-೩೪೪). **ಬೀಯಕಾಱ** : ಬೀಯಕಾಱನಂ ಬಿಟ್ಟು ಬೇಂಟಗಾಱನಂ ಕರೆವ ಸೂಳೆಯುಮಂ (ಧರ್ಮಾಮ್ಯ. ೬-೫೧). [ಬಿಯ + — ಕಾಱ]

ಬಿಯಗ$_1$ 'ಬೀಗ$_1$' ನೋ.

ಬಿಯಗ$_2$, ಬಿಯ್ಯಗ$_2$, ಬೀಗ$_2$, ಬೀಯ್ಯ$_2$, ಬೀಯಗ$_2$ (ನಾ). ೧. ಮದುವೆಯಿಂದ ಪರಸ್ಪರ ಸಂಬಂಧವನ್ನು ಬೆಳೆಸಿದವನು ; ಅಳಿಯನ ಅಥವಾ ಸೊಸೆಯ ತಂದೆ : ಬಿ[ಪಾಠಾಂ. ಬೀ]ಯಗನನಟ್ಕಱಿಂ ತಟ್ಕಯಿಸಿ (ಪರ್ಗಪು. ೫-೪೩ ಪ) ; ಅಂತಹ ಶ್ರೀಮತಿಯನ್ನು ಮದುವೆಯಾಗಬೇಕಾದರೆ ಬಿಯಗರಿಗೆ ಸಮನೆನಿಸಿಕೊಳ್ಳುವಷ್ಟು . . . ಸೇರಿಸಬೇಕು (ಕವಿಕ. ೨). 'ಬಿಯಗತನ' ಪರಾ. **ಬಿಯ್ಯಗ$_2$** : ೧. ರುದ್ರದೇವ ಮಹಾದೇವ

ರಿಬ್ಬರೂ ಬಿಯ್ಯಗರಯ್ಯಾ ಒಬ್ಬರು ಹೆಣ್ಣಿನವರು ಒಬ್ಬರು ಗಂಡಿನವರು (ಸರ್ವಜ್ಞ. ೨೯-೧೩೯) ; ಬಿ[ಜಾತಾಂ· ಬೀ]ಯ್ಯಗನಾದ ಜನಕನು ನಿಮಗೆ ಮತ್ತೇನು ಪಾಳೆಯವ ನೀನಿದಿರುಗೊಳ್ಳಿನೆ (ಕ್ಷತ್ರಿಜ. ೨-೩೩); ವಿಚಲದೇವಿ ಬಿಯ್ಯಗನನ್ನು ಸಂತೋಷದಿಂದ ನೋಡುವುದಾಗಿ ಹೇಳಿ ಕಳುಹಿಸಿದಳು (ಸವಜ. ೬೨). ಬೀಗ್ಯ : ೧. ನಿನ್ನ ಸತಿ ಸುತರ ಒಡಹುಟ್ಟಿದ ಬಂಧುಗಳು ಸ್ನೇಹಿತರು ಬೀಗರು . . . ಸಕಲರು ಅಳದು ಹೋಗುವದು ನೋಡುತ್ತಿದ್ದಿ (ಪಕಣಾ. I, ೨೪೯-೨೩); ಬೀಗರುಂಬುವ ದಿನದಿ ಯೋಗಿ ಭಿಕ್ಷಕೆ ಬರಲು ಬೀಗರಿಗೆ ನೀಡಿ ಯೋಗಿಗಿಲ್ಲೆಂದವಗೆ ಕಾಗೆಯು ಜನುಮ (ಸರ್ವಜ್ಞ· ೬೩೨) ; ಜೋಯಿಸರು ಹಾರಿ ಬಂದು ಬೀಗರ ಕಿವಿಯಲ್ಲಿ ಏನೋ ಪಿಸುಮಾತಾಡಿ . . . ಎಂದರು (ಹುಬ್ಬಕ. ೦೦). ಬೀಯ್ಯ : ೨. ಭಾವಮೈದುನ : ನರನ ಬೀಯನೆ ಕೇಳು ವಿಜಯವಿಠ್ಠಲ ಇದಕ್ಕೆ ಕರುಣ ಮಾಡುವ ದೇವರ ದೇವನು ನೀನೆ (ಪೋಕ್ಷೋ. ೬೩-೩). ಬೀಯಗ್ಯ : ೧. ಮಗನೆ ನೀಂ ಬಹ್ವಾಶಿ ದಿವಸ ದೊಳ್ಕೆದಾಜು ಸೂಳುಂಡಲ್ಲದೆ ನಿಲಲಾಜಿ ಬೀಯ[ಜಾತಾಂ. ಬಿಯ, ಬಿಯ್ಯ] ಗರ ಮನೆಯೊಳಿದಂ ಕಂಡೊಡೆ ಮರುಳಾಡುವರದಱಿಂ ಕಿಱಿದಾಗಿ ಯುಣ್ಬಾದು (ಧರ್ಮಕ. ೯-೨೩ ಪ) ; ನೃಪಾಲ ಮದುವೆಯು ಮನೆಗೆ ರಾಯರ ಧಾಳಿ ಬಿದ್ದಿನವಾಯ್ತು ನಡೆ ಸಂತೈಸು ಬೀಯಗರ (ಭುಪ್ಯಾ·೮-೦೩-೪೭); ತಾಯೊಂದೆಸೆ ಮಕ್ಕಳೊಂದೆಸೆ ಕೊಟ್ಪಿಹ ಬೀಯಗರೊಂದೆಸೆಯಾಗಿ . . . ಹೊಕ್ಕರಾಯಾಸಗೊಂಡು ಹೆಮ್ಮಲೆಯು (ಶಂಪ೩. ೦೦-೪೭). ೩. = ಬಿಯಗತನ : ಕನಕಪುರದ ಜಯಭೂಭುಜ . . . ನಿಮ್ಮೆಡೆಗೆ ಬೀಯಗಮನೆ ತವುಗಾದುದರಿಂದೆಮ್ಮನೊಯ್ಯಾರ ಏಗೆ ಕಳುಹಿದನು (ಪಾಗಳು. ೩-೪೩); ಹರಿಕುಲಪಾಲಕರು ಶೌರೀಪುರವ ಪರಿಪಾಲಿಪರು ನಮಗಲ್ಲಿ ಬೀಯಗವುಟು (ಪಪಣಾ. ೩-೦೨).

ಬೀಗರೌತಣ = ಸಾಮಾನ್ಯವಾಗಿ ಮದುವೆಯ ಮಾರನೆಯ ದಿನ ವರನ ಕಡೆಯವರು ವಧುವಿನ ಕಡೆಯವರಿಗಾಗಿ ಏರ್ಪಡಿಸುವ ಔತಣ : ಬೀಗರೌತಣ ಬಹಳ ವಿಜೃಂಭಣೆಯಿಂದ ನಡೆಯಿತು (ಕೂಪ್ರ). ಬೀಯು ಬಿಜ್ಜರು = ಮದುವೆಯಿಂದ ಪರಸ್ಪರ ಸಂಬಂಧ ಬೆಳೆಸಿದವರು; ಬೀಗರು : ತಾಯಿ ಮಕ್ಕಳು ಸೊಸೆ ಒಂದೆಯಾದರೆ ಮದುವೆ ಬೀಯೂ ಬಿಜ್ಜರ ಗೋತ್ರಭೇದವ್ಯಾಕೊ (ಏಶಾಸು. ೩೯-೦). ಈ ಇದು ಒಂದು ಕೊಡುನುಡಿ. [ದೇ· ॥ ತುಳು. ಬೀಗೆ ; ತೆಲು. ವಿಯ್ಯ]

ಬಿಯಗತನ, ಬೀಗತನ, ಬೀಯಗತನ (ನಾ). ಮಕ್ಕಳ ಮದುವೆಯಿಂದ ಪರಸ್ಪರ ಉಂಟಾದ ಸಂಬಂಧ ; ನಂಟಸ್ತಿಕೆ : ಪುಣ್ಯವಶದಿಂದಿನ ಕುಲೇಂದ್ರನ ಬಿಯಗತನವಿದು ನುತ್ಯವೆನಿಪುದಲಾ (ಶಾಪಮಾಂ. ೦-೪-೪೬). ಬೀಗತನ : ಬೀಗತನ ಮಾಡಿದ ಮೇಲೆ ಅವನ ಪರಿಚಯವಿಲ್ಲದ ಭೂಗವೇ ಇರಲಿಲ್ಲ ಆ ವಿಜಯನಗರದಲ್ಲಿ (ಹೇಪುಳೂ· ೬೪); ಇಲ್ಲಿಯ ಮುಸ್ಲಿಂರು ಪಾಕಿಸ್ತಾನಿ ಮುಸಲ್ಮಾನರೊಡನೆ ಬೀಗತನ ಬೆಳೆಸುವುದು ಪರರಾಷ್ಟ್ರ ದೊಡನೆ ಸಂಬಂಧಮಾಡಿದಂತೆ (ಪ್ರಚಕ್ರ. ೦೬೨). ಬೀಯಗತನ : ಬೀಯಗ ತನದೆ ಆಳವಾಡಿದಿರಿ ಮತ್ಪಿತನಲಗೊ೯ೋಲಿಂದೆ ಭಾಳಾಕ್ಷ ತಪಗಟ್ಟನಱಿಯು (ಪೋಹಶ. ೩೬-೪೩) ; ಜನಕರ ಕಾಲದೊಳ್ಪಡೆದ ಬೀಯಗತನ ತನುಜ ರೊಳ್ಪೆಡಬಾರದು (ಕಚಪ. ೩೬-೪೪). [ಬಿಯಗ್ಯ + — ತನ]

ಬಿಯದ ' ಬ್ಯಾದ ' ನೋ.

ಬಿಯದವೆಣ್ (ನಾ). ಬೇಡರ ಹೆಣ್ಣು ; ಶಬರಿ : ಬಾಕದ ಬೆಡಂಗಿನ ಬಿಯದವೆಣ್ಗಳೊಡನೆ ಸಂಭ್ರಮಾಡಂಬರಂ ಮಿಗೆ ಬಂದ ಗಿರಿತನೂಜೆ ವೆರಸು ಕಿರಾತಮಹೇಶ್ವರಂ . . . ನಡತಂದೆ (ಕಪಕಂ. ೩-೨೦ ಪ).

[ಬಿಯದ (< ಬ್ಯಾದ) + ಪೆಣ್]

ಬಿಯದಿ೧ (ನಾ). = ಬಿಯದವೆಣ್ : ಬೆಳತಿಗೆಗಣ್ಣ ಬಲ್ಮೊಲೆಯ ತೊಳಪ ಗಲ್ಲದ ತೋರ ಪೊಜವಾಜಿ ಬಿಯದಿಯರೆಳಸಿ ನೋಡಿದರು ಭೂವರನ (ಶ್ರೀಜಾಂ. ೬-೩೦). [ಬಿಯದ (< ಬ್ಯಾದ) + — ಇ೨]

ಬಿಯದಿ೨ ' ಬ್ಯಾದಿ ' ನೋ.

ಬಿಯಸ (ನಾ). ವ್ಯಾಸಮಹರ್ಷಿ : "ಬಿಯಸ — ವ್ಯಾಸ = ಒಬ್ಬ ಋಷಿ " (ಕಡ್ಯಕೋ. ೩೦) ; ಬಿಯಸಗೊಲಿದು ಸನತ್ಕುಮಾರನು ನಯದ ಗಸ್ತ್ಯೇಶಾದಿಲಿಂಗೋದಯವನಾ ಮಹಿಮೆಯನೊರೆಯಲು (ಕಾವೇಮ. ೯೮ ಕ್ಷ೨೨). [< ಸಂ. ವ್ಯಾಸ]

ಬಿಯಸಂಗ (ನಾ). ಅಭ್ಯಾಸ ; ವ್ಯಾಸಂಗ : ವ್ಯಾಸಂಗ _ ಬಿಯಸಂಗ (ಕಬಾದ· ೨೩೪ ಕ್ರಿಯೋ). [< ಸಂ. ವ್ಯಾಸಂಗ]

ಬಿಯಳ ' ಬ್ಯಾಲ ' ನೋ.

ಬಿಯಳಗಾವುಂಡ (ನಾ). ಒಬ್ಬಾತನ ಹೆಸರು : ಇದಕ್ಕೆ ಸಾಕ್ಷಿ ಶಾನ್ತಿ ಭಟ್ಟಾರರುಂ ಉತ್ತಮರಾಸಿಭಟ್ಟಾರರುಂ ಬಿಯಳಗಾವುಣ್ಡನುಂ (ಎಕ. XI, ಹೊಳಕೆ· ೩೧-೦೦ ; ೧೬೩). [ಬಿಯಳ (< ಬ್ಯಾಲ) + ಗಾವುಂಡ (< ಗಾಮುಂಡ)]

ಬಿಯಳಚೋರ (ನಾ). ಒಬ್ಬಾತನ ಹೆಸರು : ಬಿಯಳಚೋರ ತನ × ತುಱುಗೊಳೊಳ್ . . . ಸತ್ತ (ಎಕ. IX (s), ಶಾಸನಾ· ೦೩೦-೬ ; ೧೦೦). [ಬಿಯಳ (<ಬ್ಯಾಲ) + ಚೋರ]

ಬಿಯಳಮ್ಮ (ನಾ). ಒಬ್ಬಾತನ ಹೆಸರು : ಕಿಱುವುಣುಸೆಯ ಬಿಯಳಮ್ಮ ನ×ಗ ಪಡೆವಳ್ಳ ಅರಿಗನು ಎಱಿಯಬ್ಬೆಯಂ . . . ಅಬ್ಬನ್ತರಸಿದ್ದಿ ಪಡೆದರ್ (ಎಕ. VIII, ಸೊರಬ· ೩೦೦-೩ ; ೨೩೩).

[ಬಿಯಳ (<ಬ್ಯಾಲ) + ಅಮ್ಮ೧]

ಬಿಯಳಯ್ಯ (ನಾ). ಒಬ್ಬಾತನ ಹೆಸರು : ಬಿಯಳಯ್ಯ ಮಗ ಚಟ್ಟಯ್ಯನಳಿಯ ಕನ್ನಯ್ಯ (ಎಕ. VIII, ಸೊರಬ· ೪೩೩-೬ ; ೪೭೭).

[ಬಿಯಳ (<ಬ್ಯಾಲ) + ಅಯ್ಯ೬೧]

ಬಿಯ್ಯ ' ಬಿಯ ' ನೋ.

ಬಿಯ್ಯಂಗೆಯ್ ' ಬಿಯಂಗೆಯ್ ' ನೋ.

ಬಿಯ್ಯಗ್ಯ೧ ' ಬೀಗ್ಯ೧ ' ನೋ.

ಬಿಯ್ಯಗ್ಯ೨ ' ಬಿಯಗ್ಯ೨ ' ನೋ.

ಬಿಯ್ಯದ ' ಬ್ಯಾದ ' ನೋ.

ಬಿರಂಜಿ (ನಾ). (ಅಕ್ಕಿಯಿಂದ ತಯಾರಿಸುವ) ಒಂದು ಬಗೆಯ ತಿನಿಸು : ಅಮ್ಮ ಬಿರಂಜೀ ಮಾಡತೀನಿ ಅಂತಿದ್ದಳು, ಕಳಿಸಿಕೊಡತೀನಿ. ಬಿರಂಜಿ ಅಂದರೇನು ಮತ್ತ ? ಅನ್ನ . . . ಇದು ಬರಿ ಬೆಣ್ಣಾಗ ಬೇಯತೈತಿ (ಕಾಖಂ. ೫೭). [←ಪಾರ. ಬಿರಿಂಜ್./ತೆಲು. ಬಿರಂಜಿ]

ಬಿರಟು ' ಬಿರಡೆ೨ ' ನೋ.

ಬಿರಟೆ ' ಬಿರಡೆ೧ ' ನೋ.

ಬಿರಡಿ ' ಬಿರಡೆ೨ ' ನೋ.

ಬಿರಡೆ೧, ಬಿರಟೆ, ಬಿರುಡೆ (ನಾ). ೧. (ಸೀಸೆ, ಮೊದಲಾದುವು ಗಳಿಗೆ ಅಳವಡಿಸುವ) ಮುಚ್ಚಳ ; ತಿರುಪು ; ಬೂಚು (ಉಕ) : ಪದ್ಮಜಂ ಪದೆದಿಟ್ಟ ಪವಳವಂಕುರದ ಬಿರಡೆಗಳೊ ಲಾವಣ್ಯದ ಶಲಾಕೆಗಳ ತೆಱದ ಚರಣಾಂಗುಲಿಗಳೊಪ್ಪಿದುವವೋಲ್ಪದಿಂ ಶ್ರೀ ಪಾರ್ವತೀದೇವಿಯ (ಪಂಂಪಪ. ೬-೦೦) ; ತೌಟಿಗೆಯ ಮೇಲೆ ನೀರು ತುಂಬಿದ ಗಾಜು ಬಿರಡೆಯ ಸೀಸೆಯೂ ಬೆಂಕಿಪೊಟ್ಟಣವೂ . . . ಇದ್ದುವು (ಕ್ಷಪ್ರ. ೨೩೩). ೨. ವೀಣೆ, ತಂಬೂರಿಗಳ ತಂತಿಯನ್ನು ಬಿಗಿಗೊಳಿಸಲು ಅಳವಡಿಸಿರುವ ಸಾಧನ. — ಕೀಲು : ಬಿರಡೆಯನ್ನು ನುಲಿದು ಎಳೆತವನ್ನು ಹೆಚ್ಚಿಸಿದರೆ ಸ್ವಾಯಿಯು ಏರುವುದು (ಕಾತಂ. ೦೪೨) ; ಈ ವ್ಯಾಳೀತಲೆಗೆ ನಾಲ್ಕು ಬಿರಡೆಗಳಿವೆ (ಸಂಗೀಪಂ. ೦೦೨). ೩. ಅಂಗಿ ಮೊದಲಾದ ಉಡುಪಿನ

ಗುಂಡಿ : ಕೋಟಿನ ಬಿರಡೆಗಳನ್ನು ಬಿಚ್ಚಿ, ಬೆವರಿನಿಂದ ಒಣಗಿ ಹೋದ ಶರ್ಟ್ ಒಣಗುವುದಕ್ಕೆ ಅವಕಾಶ ಮಾಡಿಕೊಟ್ಟೆ (ಶಂದುಪ. ೬೩). **ಬಿರಟೆ:** ೧. ತೊಗಟೆಯಿಂದ ಬಿರಟೆ ತಯಾರಾಗುತ್ತದೆ (ಕವಿಕೋ. I, ೬೮೦) ; ಅದರ ಬಾಯಿಗೆ ಬಿರಟೆಯಂತೆ ಇಡಬೇಕಾದ ಹತ್ತಿ ಎಲ್ಲವನ್ನೂ ಶುದ್ಧ ಪಡಿಸಿಕೊ (ಹೂಸಕ್ಷಿ. ೬) ; ಅಷ್ಟು ವಾಸನೆ ಸಹಿಸಲಾಗದಿದ್ದರೆ ಮೂಗಿಗೆ ಬಿರಟೆ ಹಾಕಿಕೊಳ್ಳಿ (ಹಸುಹೂ. ೦೮). **ಬಿರುಡೆ :** ೧. ಜಂತದಲಿ ಹೊಂಗರಡಿಗೆಗಡೆದು ಕರ್ಮಣಿಯ ಬಿರುಡೆಯ ಬಿಗಿದಿಟ್ಟನೆಂಬಂತೆ ಬಲ್ಮೊಲೆ ಯೆರಡರ ಮೊಗಪು ತೋಱಿದುವು (ಪೋಹತ. ೨೩-೨೩) ; ಕಲಧೌತಂಗಳ ಭರಣಿಗಳ ಬಾಯ್ಗಿರಿಸಿದಿಂದ್ರನೀಲದ ಮಣಿಯ ಬಿರುಡೆಗಳೊ ಪೇಳೆನಲ್ ಸ್ತನಚೂಚುಕದ ಕಪ್ಪು ಕರಮೊಪ್ಪಲೊಪ್ಪಿದಳ್ (ಶಂಪ. ೪-೦೪). ೨. ನಖಗಳಿಂ ಬಿರುಡೆಯಂ ಪಿಡಿದೌಂಕಿಯೊಡರ್ಚೆ ಮೇಳಮಂ (ಪಕಪ. ೬-೨೨೨). ೩. ಕತ್ತರಿಸಿತು ಬಾಸು ಬಿರುಡೆಯ ಶಕ್ತಿಗಳುತ್ತರಿಸಲು ಜೋಡು ಜರಿದು ಬಿತ್ತರಿಸಿದುವಂಬುಗಳು ಮೆಯ್ಯೊಳು ಬಿಸುನೆತ್ತರ ಬಸವಂತಗೊಳಿಸಿ (ಪೋಹತ. ೩೮-೩೨) ; ಚಿನ್ನದ ಬಿರುಡೆಯ ನೇಜೆಯದಧಟರ ಸನ್ನಾಹದೆ ಬಹನಾರೆ (ಕಂಪಪ. ೨೩-೩೦).

[ದೇ.॥ ತಮಿ. ಪಿರಟೈ ; ತೆಲು. ಬಿರಡ, ಬಿರಡಾ]

ಬಿರಡೆ$_2$, ಬಿರಟು, ಬಿರಡಿ (ನಾ). ಒಂದು ಬಗೆಯ ಸಸ್ಯ : ಹೆರಳೆ ಬಿರಡೆ ಬೇವು ಹಾಲೆ ತಾಳೆ . . . ಮೊದಲಾದ ಗಗನಮಂ ತುಡುಕುವ ವೃಕ್ಷಂಗಳ್ (ಸೌಗಂಧಿ. ೩೪-೩). **ಬಿರಟು :** ಬಿರಟು, ಸೀಸೆಬಿರಟುಮರ (ಮೃತಿಗಿ. ೩೪-೦೨೬೬) ; ಬಿರಟು, ಪಾದರು, ನೆಲವೆಂಬು (ಪಮ್ಮಮ. ೨೩೮). **ಬಿರಡಿ :** ಶಿಸ್ಸು, ಬಿರಡಿ, ಶಿಷ್ಟಭಾಗೆ, ಬಿಂಡಿ, ಇರಗುಂಡಿಮಾವು (ಮೃತಿಗಿ. ೨೮-೩೩೨).

[?]

ಬಿರದ (ನಾ.) ಒಂದು ವಂಶದ ಹೆಸರು : ಸನ್ದಿಗಾಲಾ ಪುಟ್ಟರುಂ ಬಳ್ಳವರುಂ ಪಸುಂಗಾಯ ಕಟಿಸ್ಥಾತರು ಬಿರದರುಂ (ಎಕ XVI, ಗುಬ್ಬಿ. ೬೩-೬೯ ; 733). [?]

ಬಿರಬಿರ (ನಾ). ಒಂದು ಅನುಕರಣ ಶಬ್ದ : 'ಬಿರಬಿರನೆ' ಪರಾ.

ಬಿರಬಿರನೆ (ಅ). ವೇಗವಾಗಿ ; ಶೀಘ್ರವಾಗಿ : ಶರಧಿಯೊಳ್ ಬಿರಬಿರನೆ ಮಂದರ ತಿರುಗಲಾಗ ಧಳಂಧಳಧ್ವನಿ ಮೊರೆಯಲು (ಅನಂರಾ. ೧-೨೨-೪) ; ಹೋಗಬೇಕು ಅಂತ ಎರಡು ದಿನ ಹೊರಟರು. ನಾನೇ ತಡೆದೆ . . . ಎಂದು ಬಿರಬಿರನೆ ಹೇಳಿದಳು (ಮಸೋನಂ. ೩೦). [ಬಿರಬಿರ + — ಅನೆ$_1$]

ಬಿರಯ, ಬಿರಹ (ನಾ). ಅಗಲಿಕೆ ; ವಿರಹ : "ಬಿರಯಮೆನೆ ವಿರಹಮಕ್ಕುಂ" (ಕಶರ. ೧೨೮). 'ಬಿರಯಿ' ಪರಾ. **ಬಿರಹ :** "ಬಿರಹಂ ಕೂಟದಗಲ್ಕೆಯಲ್ಲಿ" (ಕರ್ಣಾಪ. ೬೮); ಬಿರಹದ ಬೆಂಕೆಯಿಂ ಬೆಂದು ಕಡುಹರವಸಂಬೋದರಮರಿಯರ್ (ಶಂಪ. ೦೯-೪೩). [<ಸಂ. ವಿರಹ]

ಬಿರಯಿ (ನಾ). ಅಗಲಿಕೆಯನ್ನು ಹೊಂದಿದವನು ; ವಿಯೋಗ ಹೊಂದಿದವನು ; ವಿರಹಿ : "ವಿಯೋಗಿಯೊಳ್ ಬಿರಯಿಯೆನಲ್" (ಕರ್ಣಾಪ. ೯೩) ; ನಂದನಂಗಳೊಳ್ ಸುಟಿದ ಬಿರಯಿಯಿಂ ಕಂಪು ಕಣ್ಮಲೆಯೆ ಪೂತ ಸುರಯಿಯಿಂ (ಪಂಪಭಾ. ೩-೨೨) ; ಮದನಾನಳನ ಕರ್ಪೂಗೆಯಿದೆನಿಸಿ ಬಿರಯಿಗಳ ಕಣ್ಗಳೊಳು ಕಣ್ಬನಿಯನೊದವಿಸೆಯುಂ (ಪರ್ಧಪು. ೬-೨೯ ಪ) ; ಮಲ್ಲಿಗೆಗಳೇಂ ಬಿರಿದುವೋ ಬಿರಯಿಯೆರ್ದೆ ಬಿರಿವ ಮಾಳ್ಕೆಯಿಂದಾ ಬಸಂತದ ಮೊದಲೊಳು (ಶಂಪ. ೪೫-೦೬). [<ಸಂ. ವಿರಹಿನ್]

ಬಿರಯಿಸು (ಕ್ರಿ). ಅಗಲಿಕೆಯನ್ನು ಅನುಭವಿಸು ; ವಿರಹವನ್ನು ಹೊಂದು : ಬಿರಯಿಸಿ ಬೇಟದೊಳ್ ಬಿರಿವ ನಲ್ಲರಗಲ್ದು ಕನಲ್ದೊನಲ್ದು ನಲ್ಲರ ದೆಸೆಯಿಂದಮಟ್ತಿವರೆ (ಪಂಪಭಾ. ೪-೦೦೦) ; ಕಮಳಪತ್ರಚಯ ಮೆನಿತನಿತುಂ ಕೊರೆಗುವಿನಂ ಬಿಸುಸುಯ್ದೇಂ ಬಿರಯಿಸಿದುವೊ ಚಕ್ರವಾಕ ಮಿಥುನಮವಿರುಳೊಳ್ (ಕಾಣ್ಮಾಪ. ೮೫೯) ; ಬಿರ[ಪಾಠಾಂ. ರಿ]ಯಿಸಿ ಬೇಂಟದೊಳ್ ಮನಮದಾಟಿಸೆಯುಂ ಮನಮಿಾಯದಿರ್ದುಮಂತಿರದೆ ಬಟ್ಕಮಾಖಳನ ಲಲ್ಲೆಗೆ ತಾನೊಳಗಾದಳ್ (ಪಾರ್ಶ್ವಪು. ೩-೧೦೦). [ಬಿರಯ + — ಇಸು$_3$]

ಬಿರವ (ನಾ). (?) : ಭಂಡಾರಿಯ ಟಾವಿನ ಬಿರವದಲು ಭತ ಮೂ ೧೦ (ಸೌಇಎ. ೦೯೩೦, ಮಂಗಳೂರು. ೩೪೪-೩೦ ; 1353). [?]

ಬಿರಸ (ನಾ). ರಸಹೀನತೆ ; ಅಸುಖ : ಖರತೆ ಬಾಸಿಂಗ ಕಟ್ಟಿ ಸರಸದಲಿ ಮೆರೆಸಲು ಹರುಷದ ಸೊಬಗು ತಿಳಿದಡೆ ಅದು ತಾನು ಬಿರಸದ ದಡ್ಡಿಗೆ ಮರಳುವುದು (ಕಾಮ್ಯೋಪ್ರ. ೬-೪೦-೨೦). [< ಸಂ. ವಿರಸ]

ಬಿರಹ 'ಬಿರಯ' ನೋ.

ಬಿರಾಡ 'ಬೀಡಾರ' ನೋ.

ಬಿರಾಡಿಸು, ವಿರಾಡಿಸು (ಕ್ರಿ). (ಭೂಮಿಯ ಮೇಲೆ) ಸುಂಕ ಹಾಕು ; ತೆರಿಗೆ ಹಾಕು : ಗದೆ ಸಹವಾಗಿ ಬಿರಾಡಿಸಿ ಗದೆಯ ಮೇಲೆ (ಸೌಇಎ. ೦೯೩೪, ಪುಂಗಪೂರು. ೦೩೬-೦೪ ; 1419). **ವಿರಾಡಿಸು :** ನಿಮ್ಮ ದಸವಂದದ ಗದೆ ಸಹವಾಗಿ ವಿರಾಡಿಸಿ ಗದೆಯ ಮೇಲೆ ರೊಕ ಭತ್ತವನೂ ವರಿಯನಿಕಿ ಎತ್ತಿ ಕೆಱೆಯನು ಕಟಿಸುವೆಉ (ಎಕ. X, ಮುಳಬಾ. ೦೭೨-೦೪ ; 1496).

[ಬಿರಾಡ (< ಬೀಡಾರ) + — ಇಸು$_3$]

ಬಿರಾಡು 'ಬೀಡಾರ' ನೋ.

ಬಿರಾದರಿ (ನಾ). ಸೈನ್ಯದಲ್ಲಿ ಒಂದು ಭಾಗ ; ಒಂದು ನಿರ್ದಿಷ್ಟವಾದ ಸಂಖ್ಯೆಯಿರುವ ಕುದುರೆಯ ಸೇನೆ ; P "ಬಿರಾದರಿ — ಕುದುರೆ ಸೇನೆಯ ಒಂದು ಭಾಗ, ಸವಾರ ಕಚೇರಿ ಇಲಾಖೆಯಲ್ಲಿ ಬಿರಾದರಿಗೆ ಇರಬೇಕಾದ ಕುದುರೆ ಸಂಖ್ಯೆಯನ್ನು ಗೊತ್ತುಮಾಡಿದಾರೆ" (ಚತ್ರಪಾ. ಅಮಬಂರ. ೨) : ಖಾಸಾ ಬಿರಾದರಿ . . . ಖಾಸಾಬಾರು, ಕಂದಾಚಾರ ವಗೈರೆ ಜನರಿಗೆ ಸೇರಿಸಿಕೊಂಡು ನಿಂತರು (ಚತ್ರಪಾ. ೬೩) ; ಪೇಶ್ವೆ ಶ್ರೀಮಂತ ಬಾಜೀರಾಯರನ್ನು ಕೈಸೆರೆ ಹಿಡಿದ ಬಿರಾದರಿಯಲ್ಲಿ ನಾನು ಸೇರಿದ್ದೆ (ಮುಸುಗ. ೦೮೮).

[←ಪಾರ. ಹಿಂ. ಮರಾ. ಬಿರಾದರೀ = ಬಂಧುವರ್ಗ ; ಬಳಗ]

ಬಿರಿ$_1$ (ಕ್ರಿ). ಬಿರಿದ (ಭೂತಕೃ), ಬಿರಿದು (ಭೂತನ್ಯೂ). ೧. ಒಡೆ ; ಬಿರುಕುಂಟಾಗು ; ಹಿಸಿದು ಹೋಗು : "ಬಿರಿ — ಸ್ಫುಟನೇ" (ಶಮಭಾ) ; ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಳಂ ತೊಟ್ಟನಾಗಳ್ ಬಿರಿದತ್ತು (ಆದಿಪು. ೦೩-೩೬); ಒತ್ತಂಬದಿಂ ಬರ್ಪ ಕೆಮ್ಮಿಂ ಬಿರಿಯಲ್ಬೆಟ್ಟಂಗಳ್ (ಕಾದಂಪೂ. ೦೬೩) ; ಬೆಳೆದು ಬೀಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆ (ಪಂಪತಂ. ೦೦೬-೦೩). ೨. (ಹೂವು) ಅರಳು ; ವಿಕಾಸವಾಗು : ಬಿರಿದೊಂದು ಮಾಗುಳ ಕಂಪಿನೊಳೆ ದೊಗಂಗಿಡುವುವು ತುಂಬಿಗಳ್ (ಪಂಪಭಾ. ೦-೩೬) ; ಅಂಗಜಾತನ ಪುಷ್ಪಶರ ಬಿರಿದಪುವೆಂದು ಹೊಂಗಟ್ಟುಗಳ ಬಿಗಿದಂತೆ . . . ಉಂಗುರಗಳನಿಕ್ಕಿದರು (ಪೋಹತ. ೨೩-೪೨). 'ನಸುವಿರಿ' ಪರಾ.

ಬಿಬ್ಬರಿ ಬಿರಿ, ಬಿಬ್ಬರಂಬಿರಿ, ಬಿಬ್ಬರಬಿರಿ (ದ್ವಿರುಕ್ತಿ) : ಕರಿ ಮಕರಂಗಳ ಕಯ್ಯೇಱಿನೊಳ್ ಬಿಬ್ಬರಿ[ಪಾಠಾಂ. ಬಿಬ್ಬರಿ, ಬಿಚ್ಚರಿ]ಬಿರಿದೊಡೆದ ಮುಕ್ತಾಪುಟೋದರಂಗಳೊಳಗಣಿಂದಮುಚ್ಚಳಿಸಿದ ತಾರಾತರಳಮುಕ್ತಾಫಳಂಗಳುಮಂ (ಆದಿಪು. ೦೨-೬೯ ಪ) ; ಬಿಸಲೊಳೆ ಬಿಬ್ಬರಂ ಬಿರಿವ ಮಸ್ತಕ ಶುಕ್ತಿಕೆಯಿಂದೆ ಮುತ್ತು ಮುಂದೆಸೆ ಕಎತಂದೊಡಾಂತಿರುತೆ . . . ಪುಷ್ಕರಮನೆತ್ತಿದುದಂದು ನಭಕ್ಕದೊಂದಿಭಂ (ಕಂಪ್ರಪು. ೯-೬೩) ; ಬಡಿಗೊಳೆ ಬಿದು ಬಿಬ್ಬರ ಬಿರಿದೊಡನುಗೆ ಪೊಸಮುತ್ತು ಕೋಡನೂಱಿ ಮದೇಭಂ ಕೆಡೆದುವು (ಪಂಪಭಾ. ೦೦-೦೦೩) ; ಉರುಮುದದಿಂದಂ ಬಿಬ್ಬರ ಬಿರಿವಂತಿರೆ ಬಿರಿದುವಂದು ಮಲ್ಲಿಗೆ ವನದೊಳ್ (ವೇಮಿಪು. ೦೩-೦೪). **ಬಿಬ್ಬರಿವಲ್** = ಸಂದು ಬಿಟ್ಟಿರುವ ಹಲ್ಲು : ಪಱಿದಲೆ ಕುಟಿನೊಸಲಱಿಗಣ್ . . .

ಬಿಬ್ಬಿರಿ[ಶಾಕಾಂ.ಜು]ವಲ್ ಕುಸಿಗೊರಲ್ (ಯಕೋಸ. ೨-೩೮).

[ದೇ.॥ ತಮಿ. ವಿರಿ; ಮಲ. ತೆಲು. ವಿರಿಯು; ತುಳು. ಬಿರಿ, ಬಿರಿಯು]

ಬಿರಿ$_2$ (ನಾ). ೧. ಬಿರುಕು : ಸೀಳು : ಮಣ್ಣಿನ ಬಿರಿ[ಶಾಕಾಂ.ರ]ಯ ತೆಱಂತೆ ಬಲ್ಲತನವಿಲ್ಲದವನ ಅನುಭಾವಕೂಟ ಕಲ್ಲಿನ ಹೋಟೆಯಂತೆ (ಗುಪ್ತಮಂ. ೪. ೨೦೬-೩೬). 'ಕೋಟೆವಿರಿ', 'ಬಿರಿವಡು' ಪರಾ. ೨. ತಡೆ; ನಿಯಂತ್ರಣ : ತಿಮ್ಮಪ್ಪಯ್ಯ ಒಮ್ಮೆ ಬಾಯಿ ತೆರೆದರೆಂದರೆ ಅದಕ್ಕೆ ಬಿರಿಯೇ ಇಲ್ಲ (ಸರಸ. ೪). ೩. ಕಠಿಣ ; ಕಷ್ಟ ; ಬಿಗಿ : ನಿಮಗೆ ಅದೇನು ಬಿರಿಯಲ್ಲ, ಆದರೆ ಅದನ್ನು ಒಪ್ಪುವುದೇ ಬಿರಿ (ಅರಗಿ. ೦೦೦) ; ಒಬ್ಬರ ಮನಸ ಸಂಬಾಳಸೋದಂದರ ಭಾಳ ಬಿರೀ ಏತಿ (ಪಿಸರ್ಗ. ೦೬೩); ಸಂಸಾರವನ್ನು ಸರಿಯಾಗಿ ಮಾಡಿಕೊಂಡು ಹೋಗುವುದು ಅವನಿಗೆ ಬಿರಿಯಾಯಿತು (ಕನಿಂಹಾ. ೦೦). ೪. ಒಂದು ಬಗೆಯ ಆಯುಧ : ಹಾರೆ ಬಿರಿ ಕೊಱಡು ಪೆಟಲ ತಿರುಗಣಿ ಬೀಸುವಲೆ ತಳಿಯ ಮರದ ಗೊಂದಣದ ಸಂವರಣೆಯಿಂದಾ ಕೋಂಟೆ ಕಣ್ಗೊಪ್ಪಿತು (ಸಮ್ಯಕೌ. ೬-೨೬). ೫. ಚಲಿಸುತ್ತಿರುವ ಯಂತ್ರವನ್ನು ನಿಲ್ಲಿಸಲು ಅಥವಾ ಅದರ ವೇಗವನ್ನು ಕಡಮೆ ಮಾಡಿ ಮುಂದೆ ಬೇಕಾಗಿರುವಷ್ಟು ಹೊತ್ತು ನಿಶ್ಚಲವಾಗಿಟ್ಟಿರಲು ಬಳಸುವ ವೇಗನಿರೋಧಕಸಾಧನ ; ಬ್ರೇಕು : "ಚಕ್ರದ ಚಲನೆಯನ್ನು ತಡೆಯಲು ಉಪಯೋಗಿಸುವ ಸಲಕರಣೆ ; ಬಿರಿ ; ತಡೆ" (Brake. ಇಂಕಸಿ) ; ರೈಲುಬಂಡಿಗಳಲ್ಲಿನ ಪ್ರತಿಚಕ್ರಕ್ಕೂ ಬಿರಿ(brake)ಯನ್ನು ಒತ್ತಲು ಇವನ್ನೇ ಉಪಯೋಗಿಸುವರು (ಶಾಲಶ್ರ. I, ೦೬೭) ; ಕೆಲವು ಬಂಡಿಗಳಲ್ಲಿ ನಿರ್ವಾತ ಬಿರಿಗಳ ಬದಲಿಗೆ ವಾಯುಸಂಕೋಚನೆಯ ಬಿರಿಗಳಿವೆ (ವಿಜ್ಞಾನಿ. ೫೦). ೬. ಅಗಳಿ ; ಚಿಲಕ : ಮನೆಬಾಗಿಲು ಮುಚ್ಚಿ ಬಿರಿ ಕಟ್ಟಿಬಿಟ್ಟು ಊರು ಮುಂದಕ್ಕೆ ಹೊರಟು ಹೋದನು (ಕಥಾಮಂ. IV, ೩೨). [< ಬಿರಿ$_1$]

ಬಿರಿ$_3$ 'ಬಿಱು$_2$' ನೋ.

ಬಿರಿಕಂಡ (ನಾ). ಸೀಳಿಹೋದ ಮಾಂಸ : ನೇರ್ವಲ್ಲಿ ಕೆನ್ನೆತ್ತರುಂ ಬಿರಿಕಂಡಂಗಳೆ ಬೀಟಲ್ (ಪಂಪಭಾ. ೯-೬೩). [ಬಿರಿ$_1$ + ಕಂಡ$_1$]

ಬಿರಿಕಿ 'ಪಿರಿಕಿ$_1$' ನೋ.

ಬಿರಿಕು. ಬಿರುಕು (ನಾ). ೧. ಒಡಕು ; ಸೀಳು : ಪುದಿದ ತನಿವಣ್ಣ ಬಿರಿಕಿಂದುದಿರ್ದೆತ್ತಂ ರಾಸಿಯಾದ ಬಿಟ್ಟುಗಳಿಂ (ಕಬ್ಬಿಕಾ. ೦೦೯). ಬಿರುಕು : ೧. ರಸದಾಳಿಂಬದ ಪಣ್ಣ ಬತ್ತು ಬಿರುಕಿಂ ತೋರ್ಪಂತೆ (ಸೂಕ್ತಿಸು. ೦೦ ೦೦೩) ; ಹೋಳಾದ ಕವಚವ ಹೊಲಿಸಿದರು ಬಾಹುರಕೆ ಸವಗದ ಬಿರುಕ ಬೆಸಸಿದರು (ಕುಮ್ಮಾಭೀ. ೫-೩೬). ೨. (ಆಲಂ) ವೈಮನಸ್ಯ ; ಮಾನಸಿಕ ಒಡಕು : ಪಂತಕುಟುಂಬದಲ್ಲಿ ಮೂಡಿದ ಬಿರುಕು, ಈ ಒಂದು ಸಣ್ಣ ಮಾತಿನಿಂದಾಗಿ ಊರು ತುಂಬ ಹರಡುವುದು ಬೇಡ (ದೀಪಹ. II, ೯).

ಬಿರುಕು ಬಿಡು = ೧. ಸೀಳಿಹೋಗು : ನೆಲ ಕಿತ್ತು ಹೋಗಿದೆ, ಗೋಡೆಗಳು ಬಿರುಕು ಬಿಟ್ಟಿವೆ (ರಂಗಕ. ೦೦೦). ೨. (ಆಲಂ) ವೈಮನಸ್ಯ ಬರು : ಒಡಕುಂಟಾಗು : ತಪ್ಪುತಿಳುವಳಿಕೆಯಿಂದ ಆಪ್ತಸ್ನೇಹಿತರಿಬ್ಬರ ವಿಶ್ವಾಸದಲ್ಲಿ ಬಿರುಕುಬಿಟ್ಟಿತು (ರೂಢಿ). [< ಬಿರಿ$_1$./ತುಳು. ಬಿರ್ಕೆ]

ಬಿರಿಕುಂಟೆ (ನಾ). ಬಂಡಿಯ ಓಟವನ್ನು ನಿಯಂತ್ರಣ ಮಾಡುವ ಸಾಧನ ; ಗಾಡಿಯ ಓಟವನ್ನು ನಿಯಂತ್ರಿಸುವ ತಡೆಮರ : ಇಳುಕಲಲಿ ಬಿರಿಕುಂಟೆಯೊತ್ತಿ ಮುಲುಕಿತು ಕುಲುಕಿ . . . ಮುರುಕು ಬಂಡಿ (ಸಂಡಮ. ೨೯-೧೦). [ಬಿರಿ$_2$ + ಕುಂಟೆ$_4$]

ಬಿರಿಗಲ್ಲು 'ಬಿಱುಗಲ್' ನೋ.

ಬಿರಿಗಳಿಕೆ (ನಾ). ಅರಳುತ್ತಿರುವ ಮೊಗ್ಗು : ಕುರುವಕದಂಕುರಮನದಱ ಬಿರಿಗಳಿಕೆಯುಮಂ . . . ತಾವರೆಯೆಲೆವಟ್ಟಲ್ಗಳೊಳಮೊಟ್ಟಿ ಕಟ್ಟಿ (ಲೀಲಾವ. ೦೩-೩೬ ವ). [ಬಿರಿ$_1$ + ಕಳಿಕೆ$_1$ (=ಕಲಿಕೆ$_2$)]

ಬಿರಿನನೆ (ನಾ). ಅರಳುತ್ತಿರುವ ಮೊಗ್ಗು : ಬಿರಿನನೆ ನಾರು ಬೀರದೇ ? (ಗಿಳಿಮಿ. ೨೬-೩೯). [ಬಿರಿ$_1$ + ನನ್ನೆ$_3$]

ಬಿರಿಬಿರಿ (ನಾ). ಒಂದು ಅನುಕರಣಶಬ್ದ : ದೂತರು ಬಿರಿಬಿರಿ ನೋಡುತ ಭರದೊಳು ಚಾಪದ ಸರಳಿನೊಳೊಗೆಯುತ ಹರಣವ ಕಳೆಯುತಲಿ (ಹಮನ. ೦೬); ಆ ತರುಣಿ ಬಿರಿಬಿರಿ ನೋಡುತ್ತಲೇ ಇದ್ದಳು (ಪಿರ್ದೋಷಿ. ೦೬೭) ; ಭುವನದ ಭಾಗ್ಯವು ಬಿರಿಬಿರಿ ಬಿರಿದಾಗ ಕವಿ ರಚಿಪನು ತನ್ನ ಕೃತಿಯ (ಇಂಶಾಪ. ೬೬-೦೬).

ಬಿರಿಮುಗುಳ್, ಬಿರಿಮುಗುಳು (ನಾ). ಅರಳುತ್ತಿರುವ ಮೊಗ್ಗು : ತಳಿರ ನಿಱಿದಳಿರ ಮುಗುಳ ಬಿರಿಮುಗುಳ ಮಿಡಿಯ ಕಿಱುಮಿಡಿಯ ಬಲ್ಮಿಡಿಗಳೊಳೆಱಗಿ (ಪಂಪಭಾ. ೫-೫ ವ) ; ಇರವಂತಿಯೊಳ್ ಮೆಱೆವ ಬಿರಿಮುಗುಳ್ಗಳಂ ಕೊಂಡು (ಬಸರ. ೩-೨೨) ; ಸುರಯಿಯ ಬಿರಿಮುಗುಳು ಮನದಱ ಪೂವುಮಂ . . . ತಾವರೆಯೆಲೆವಟ್ಟಲ್ಗಳೊಳಮೊಟ್ಟಿ ಕಟ್ಟಿ (ಲೀಲಾವ. ೦೩-೩೬ ವ) . ಬಿರಿಮುಗುಳು : ತಳಿತಿಹ ಬಿರಿಮುಗುಳನೀಕ್ಷಿಸುವ ಮಱೆದುಂಬಿಗಳ ಮೇಳವದ . . . ಪಕ್ಷಿಮೃಗಕುಲವೆರಸಿ ಮೆಱೆದವು ಬನದ ಸುತ್ತಲು (ಕುಮ್ಮಾಲ. ೩-೨); ನಸುನಗುವೊಲು ಬಿರಿಮುಗುಳ ಶೃಂಗಾರದ ಮಲ್ಲಿಗೆಯಿಹುವು (ಕಂನವಿ. ೭-೫೦). [ಬಿರಿ$_1$ + ಮುಗುಳ್$_2$]

ಬಿರಿಮುಗುಳು 'ಬಿರಿಮುಗುಳ್' ನೋ.

ಬಿರಿಮೊಗ್ಗೆ (ನಾ). = ಬಿರಿಮುಗುಳ್ : ಚಂಪಕದ ಬಿರಿಮೊಗ್ಗೆಯ ತುದಿಗಮೃತದ ಘುಟಿಕೆಯನಿರಿಸಿದವೊಲು (ಜಯಕಾ. ೫-೯); ಸಾಂಗದಿಂ ಮೀಸಲಾಗಿರ್ದ ಬಿರಿಮೊಗ್ಗೆಯ ನಖಂಗಳಿಂದರಿಯದೆಯತಿಸಾಪದಾನದಿಂದ . . . ತಿರುವುತಲಿರ್ದರು (ನವಮೋ. ೨೪-೫೭). [ಬಿರಿ$_1$ + ಮೊಗ್ಗೆ$_1$]

ಬಿರಿಯಾನಿ, ಬಿರ್ಯಾನಿ (ನಾ). ಮಾಂಸಮಿಶ್ರಿತವಾದ ಒಂದು ಬಗೆಯ ಕಲಸನ್ನ : ಕೋಳಿಮರಿಯ ಮಾಂಸ ಅಥವಾ ಸಿಗಡಿಮೀನುಗಳಿಂದಲೂ ಇದೇ ರೀತಿ ಬಿರಿಯಾನಿ ತಯಾರಿಸಬಹುದು (ಅಡುಸೌ. ೯೯). ಬಿರ್ಯಾನಿ : ಬಿರ್ಯಾನಿಯನ್ನು ತಯಾರಿಸುವ ವಿಧಾನವನ್ನು ಆ ಪುಸ್ತಕದಲ್ಲಿ ಹೇಳಿದೆ (ರೂಢಿ). [← ಪಾರ. ಬಿರ್ಯಾನ್ = ಬೇಯಿಸಿದ ಅಥವಾ ಹುರಿದ ; ಹಿಂ. ಬಿರಿಯಾನೀ; ಮರಾ. ಬಿರಿಯಾಣೀ, ಬಿರ್ಯಾಣೀ]

ಬಿರಿಯಿಕ್ಕು (ಕ್ರಿ). ತಡೆ ಹಾಕು ; ನಿಯಂತ್ರಿಸು : ಪಂತಿಪಂತಿಯ ಪೊಂಜುಗಳ ಕೆಂಜೊಡರ್‌ವೆಳಗು ತನ್ನನೆಣ್ದೆಸೆಯಿಂದಮಾವರಿಸುವಂತೆ ವೋಲ್ ಬಿರಿಯಿಕ್ಕಿದನು ತನ್ನಂಘ್ರಿಶೀಘ್ರತೆಗೆ (ಶ್ರೀರಾಮಾ. ೬೦೩-೭೦).

[ಬಿರಿ$_2$ + ಇಕ್ಕು]

ಬಿರಿಯಿಸು, ಬಿರಿಸು$_1$ (ಕ್ರಿ). ೧. ಸೀಳು ; ಹೋಳು ಮಾಡು : ಆಭೀಳ ನಿಸ್ಸಾಳನಾದಂ ನೆಱೆ ಮಿಕ್ಕಂಭೋಜಗರ್ಭಾಂಡಮನೆ ಬಿರಿ[ಪಾಕಾಂ. ರ]ಯಿಸುತ್ತಿರ್ಪಿನಂ ಬೇಗದಿಂ ತಾಂ ಪೊಱಮಟ್ಟಂ (ಕುಸುಮಾ. ೪-೯೨). ೨. ಅರಳಿಸು : ವಿಕಾಸಗೊಳಿಸು : ಸುರಯಿಯ ಬಿರಿಮುಗುಳೊಳು ರವದಳಿಪತಿ ಬಿರಿ[ಪಾಕಾಂ. ರ]ಯಿಸೆ (ಅರ್ಧನೇ. ೬-೮). ಬಿರಿಸು$_1$: ೧. ವಿರಹಿಗಳೆದೆಯನು ಬಿರಿಸುವ ಮಳೆಮೋಡ ಗಗನದೊಳೆದ್ದಿದೆ ನೋಡ (ಇಂಶಾಪ. ೯-೪೦). ೨. ಕೇಳದೆ ಹೋದರು ತಾವರೆಹೂವನು ತಾನಾಗಿ ರವಿ ಬಿರಿಸುವನು (ಇಂಶಾಪ. ೦೦೬-೦೯). [ಬಿರಿ$_1$ + ಇಸು$_3$]

ಬಿರಿಯೂರ್ (ನಾ). ಒಂದು ಊರಿನ ಹೆಸರು : ಮಹೇನ್ದ್ರಮ್ ಅಜಯೆತ್ ಬಿರಿಯೂರ್ ಸುಱೂರ್ ಅನ್ಯತ್ರ ಸಾಮಿಯರಣೇ (ಮೈಲಿಂ. ೦೯೨೦, ೦೦-೫೬; 962). [? + ಊರ್]

ಬಿರಿವಡು (ಕ್ರಿ). ಬಿರುಕು ಬಿಡು ; ಸೀಳಿಹೋಗು : ಬೆಳೆದು ಬೀಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆ (ಪಂಪಕಂ. ೧೦೭-೦೫). [ಬಿರಿ$_2$ + ಪಡು$_1$]

ಬಿರಿವಣ್ಣು (ನಾ). (ಚೆನ್ನಾಗಿ ಮಾಗಿ) ಸೀಳಿದ ಹಣ್ಣು ; ಬಿರಿದ ಹಣ್ಣು :

ಗಾಳಿಯೊಲಹಿಗೆ ನಿಲುಕುವವು ಹೊಂಬಾಳೆ ಖಚರೀಜನದ ಕಬರಿಗೆ ಬಾಳೆ ಬಾಯ್ದೆಱೆಸುವವು ಬಿರಿವಣ್ಣಿನ ರಸಾವಳಿಗೆ (ತೊರರಾ. ೩-೩-೦೩).

[ಬಿರಿ$_1$ + ಪಣ್ಣು$_2$ (<ಪಣ್$_3$)]

ಬಿರಿವಾಯಿತ (ನಾ). (?) : ತಿಗಳಾಂಣ್ಯ ಮಂಗಳಾಣ್ಯಾದಲ್ಲಿ ನೆಟ್ಟ ಕಲ್ಲು ಬಿಟ್ಟ ಬಸವಿ ಆಚಾರ ವ್ಯವಹಾರಕ್ಕೆ ಪವಾಡಪುರುಷ ಬಿರಿವಾಯಿತನೆಂದು ಕೊಟ್ಟಂಥಾ ಧರ್ಮ (ಎಕ. XVI. ಗುಬ್ಬ. ೬೩-೬೬ ; ಸು. 1672). [?]

ಬಿರಿವೂ (ನಾ). ಅರಳಿದ ಹೂವು : ಬಿರಿವೂವಂ ನಗುವ ನಾಲ್ಕು ಮೊಗಮುಂ (ಕಬ್ಬಿಗಾ. ೨೯೩) ; ಕೊಸಗಿನ ಬಿರಿವೂವಂ ಕೈವಿಡಿದಂದದಿನೊರ್ವ ಕಲಾವಿದೆ ಪಿಡಿದು ವಿರಾಜಿಸಿದಳು ಚಿನ್ನದ ಕಾಳಂಜಿಯನು (ಜಯಕಾ. ೨-೦೬).

[ಬಿರಿ$_1$ + ಪೂ$_2$]

ಬಿರಿವೊಡೆ (ನಾ). ಒಡೆದ ಹೊಟ್ಟೆ ; ಸೀಳಿದ ಉದರ : ಗಜಮುಖನ ಬಿರಿವೊಡೆಯ ಪಾವಂ . . . ತನ್ನ ಬಸವನಂ ಇನ್ನಾನುಂ ಪಗೆಯಂ ಮಱೆತು ಸಂತಂ ಪುದುವಾಟ್ಟುದೆಂದು ಬುದ್ಧಿವೇಟಲೊಡಂ (ರಾಮಾಶ್ವ. ೪೨-೦೨).

[ಬಿರಿ$_1$ + ಪೊಡೆ$_3$]

ಬಿರಿಸು$_1$ 'ಬಿರಿಯಿಸಂ' ನೋ.

ಬಿರಿಸು$_2$ 'ಬಿಱುಸು' ನೋ.

ಬಿರಿಹೊಳ್ಳೆ (ನಾ). ಅರಳಿದ ಮೂಗಿನ ಹೊಳ್ಳೆ : ಮುರುಟಿದ ಮುಸುಡಿನ ಹಳ್ಳದ ಮೂಗಿನ ಬಿರಿಹೊಳ್ಳೆಗಳ . . . ಮೃಗವಿದಿಗೋ ಗುಡ್ಡೆಯ ಕಣ್ಣುಗಳ ! (ಸೌಂದಸ. ೩೭). [ಬಿರಿ$_1$ + ಹೊಳ್ಳೆ$_1$]

ಬಿರು$_1$ 'ಬಿಱು$_2$' ನೋ.

ಬಿರು$_2$ 'ಬಿಱು$_3$' ನೋ.

ಬಿರುಕಿಸು (ಕ್ರಿ). ಬಿರಿಯುವಂತೆ ಮಾಡು ; ತೆರೆ : [illegible] ಬಿರುಕಿಸಿದ್ದ ತುಟಿ ಇನ್ನೂ ಹಾಗೆಯೇ ಇದ್ದಂತೆ ತೋರಿತು (ಯೋರಪು. ೦೩)

[ಬಿರುಕು (< ಬಿರಿಕು) +– ಇಸು$_3$]

ಬಿರುಕು 'ಬಿರಿಕು' ನೋ.

ಬಿರುಗಡಲು (ನಾ). ಕ್ಷೋಭೆಗೊಂಡ ಸಮುದ್ರ; ಪ್ರಕ್ಷುಬ್ಧವಾದ ಸಾಗರ : "ಭಾರಿ ಬಿರುಗಾಳಿ, ಚಂಡಮಾರುತ; ಬಿರುಗಡಲು" (Heavy-Storm, Sea. ಇಂಕಸಿ); ಬಿರಿದ ಕಮ್ಮಲರ್ಗಳಲಿ ಮುಗುಳುನಗುತಿಹನು ಬಿರುಗಡಲ ನಿಲುಗನ್ನಡಿಯಲಿ ನಿರುಕಿಪನು (ಗಿಳಿಪಿ. ೨-೯).

[ಬಿರು$_2$ (<ಬಿಱು$_3$) + ಕಡಲು (<ಕಡಲ್$_2$)]

ಬಿರುಗಣ್ಣ (ನಾ). (ಕೋಪದಿಂದ) ಕಣ್ಣನ್ನು ಉಗ್ರವಾಗಿ ತೆರೆದಿರುವವನು : ಲೇಖನಿ ಉದ್ದವಾಯಿತೆಂದು ಬಿರುಗಣ್ಣರಾಗಬೇಡಿರಿ (ಮುಂಗಾಪು. ೯). [ಬಿರುಗಣ್ಣು + – ಅ$_7$]

ಬಿರುಗಣ್ಣು (ನಾ). (ಕೋಪದಿಂದ) ಉಗ್ರವಾದ ಕಣ್ಣು: ಗುರುತರದಪರಾಧವನ್ನಿಂದಲಾಯಿತೆ ಬಿರುಗಣ್ಣನೇತಕೆ ಬಿಡುವೆ (ಇಂಪಾಪ. ೧೨೯-೯) ; ಭೀಮಸೇನನು ಕೆಂಪಾದ ತನ್ನ ಕಣ್ಣುಗಳನ್ನು ಅರಳಿಸಿ ಬಿರುಗಣ್ಣಿನಿಂದ ನೋಡುತ್ತ ... ಪ್ರತಿಜ್ಞೆ ಮಾಡಿದನು (ಪಪಶಾ. ೦೦೩) ; ಆನೆಯು ಮುಟ್ಟಲಿಲ್ಲ, ಬಿರುಗಣ್ಣಿನಿಂದ ನೋಡಲಾರಂಭಿಸಿತು (ಶ್ರೀರಾಯ. ೦೯).

[ಬಿರು$_1$ (<ಬಿಱು$_2$) + ಕಣ್ಣು (<ಕಣ್)]

ಬಿರುಗತ್ತಲು 'ಬಿಱುಗತ್ತಲೆ' ನೋ.

ಬಿರುಗಯ್ಪೆ (ನಾ). ಅಧಿಕವಾದ ಕಹಿಯ ಅನುಭವ : ಈ ನಿಮ್ಮ ಬಿರುಗಯ್ಪೆಯು ಬೆಟ್ಟಬೇಗುದಿಯ ಜುಗುಪ್ಸೆಯು . . . ಇಂದಿಗೆ ಹಿತವಾದುದಲ್ಲ (ಮಂತ್ರಶ. ೩೯-೦೩). [ಬಿರು$_2$ (< ಬಿಱು$_3$) + ಕಯ್ಪೆ]

ಬಿರುಗಾರ್ಮಳೆ (ನಾ). ಕಾರ್ಗಾಲದ ಬಿರುಸಾದ ಮಳೆ : ಹೊರಗಡೆ ಹೊಯ್ಯುತಿದೆ ಬಿರುಗಾರ್ಮಳೆ (ಅಗ್ನಿಹಂ. ೬೯).

[ಬಿರು$_2$ (<ಬಿಱು$_3$) + ಕಾರ್ಮಳೆ (<ಕಾರ್ಮಬೆ^{3})]

ಬಿರುಗಾವಲ್ (ನಾ). ಭದ್ರವಾದ ಪಹರೆ ; ಬಿಗಿಯಾದ ಕಾವಲು : ಅವರನ್ನೆಲ್ಲಾ ನಿರಾಯುಧರನ್ನಾಗಿಸಿ, ಬಿರುಗಾವಲ್ಗುಡುತ್ತಿರುವರು (ಬಿರುಗಂ. ೨೩-೧). [ಬಿರು$_2$ (<ಬಿಱು$_3$) + ಕಾವಲ್$_1$]

ಬಿರುಗಾಳಿ 'ಬಿಱುಗಾಳಿ' ನೋ.

ಬಿರುಗು (ನಾ). (ಆಲಂ) ಬೆಪ್ಪು ; ಮೊದ್ದು : ಪೆದ್ದು : ಹಾಂಗೆಲ್ಲಾ ಹೇಳಬ್ಯಾಡೇ ! ಅಯ್ಯೋ ನನ್ನ ಬಿರುಗುಮಗಳೇ ! (ಮಲೆಮ. ೬೬).

[< ಸಂ. ಭೃಗು]

ಬಿರುಗುಟ್ಟು 'ಬಿಱುಗುಟ್ಟು' ನೋ.

ಬಿರುಗೂದಲು (ನಾ). ಬಿರುಸಾದ ಕೂದಲು : ಒರಟುಕೂದಲು : ಇವುಗಳಲ್ಲಿ ಬಿರುಗೂದಲುಗಳಿದ್ದು ಚಲನೆಗೆ ಇವುಗಳಿಂದ ಸಹಾಯ ಒದಗಿದೆ (ಕಪಿಕೋ. I, ೦೪೩) : ಬಿರುಗೂದಲುರೂಪ – ಭಾಗಗಳು ಸಣ್ಣ. ದಪ್ಪ ಬುಡದಿಂದ ಕ್ರಮೇಣ ತುದಿ ಚೂಪು (ಕೀಟಬೆ. ೦೯).

[ಬಿರು$_2$ (< ಬಿಱು$_3$) + ಕೂದಲು (< ಕೂಂದಲ್)]

ಬಿರುಜವ್ವನ (ನಾ). ಕಠಿಣವಾದ ಕುಚ : ನಿನ್ನ ತುಂಬುವರಯದ ಗುಡದೋಳ್ಗಳ ತಳ್ತಪ್ಪುಗೆಯಲ್ಲಿ ನನ್ನೀ ಬಿರುಜವ್ವನದ ಬಿಗಿಪಿನ ಅನಮ್ರತೆಯ ಕರ್ಕಶಾಹಂಕಾರವನ್ನೊಡೆದು ಮಣ್ಣಳಿಗಿಳಿಹಿ ಬಾಗಿಸಿಕೊ ! (ಪಟ್ಟಣ. ೬೭-೩). [ಬಿರು$_2$ (<ಬಿಱು$_3$) + ಜವ್ವನ]

ಬಿರುಡೆ 'ಬಿರಡೆ$_1$' ನೋ.

ಬಿರುದ (ನಾ). ಗೌರವಸೂಚಕವಾದ ಪ್ರಶಸ್ತಿಯನ್ನು ಪಡೆದವನು ; ಬಿರುದು ಗಳಿಸಿದವನು : ಧನದರನ್ನರಿವರೆನಿಪ ಪರದರಿಂ ದೇವರನ್ನರಿವರೆನಿಪ ಬಿರುದರಿಂ (ಪಂಪಶಾ. ೩-೨೨ ಕಗಳ) ; ಬಿರುದರ ಬಿಂಕಮಂ ಕಿಡಿಸಿ (ಎಕ. VII. ಶಿಕಾರಿ. ೩೩೯-೦೩ ; ಸು. 1100) ; ನುಗ್ಗಾಯ್ತು ಬಲ ಸುಮ್ಮಾನ ಬೀತುದು ಬಿರುದರಿಗೆ ಕಾಲೂಱಿತಪಮಾನ (ಕುಪ್ಮಾಕ. ೩-೦೯). [ಬಿರುದು + –ಅ$_7$]

ಬಿರುದಂಕ (ನಾ). ೧. ಪ್ರಶಸ್ತಿಯಿಂದುಂಟಾಗುವ ಖ್ಯಾತಿ,– ಪ್ರಸಿದ್ಧಿ : ಬಿಂಕದ ಬಿರುದಂಕದ ವಿಡಾಯದ . . . ಹರಿಗೆಕಾಱರ ಮೊತ್ತದೊತ್ತಿ ನುಭಯಪಾರ್ಶ್ವದೊಳಿಂಬುಗೊಂಡು (ಹಮ್ಮೀರ. ೩-೩೩ವ). ೨. = ಬಿರುದ : ಬಿರುದಂಕದ [ರ]ಂತೆ ಪೋಗದೆ ಕಾದುವರ್ (ರರ್ಮಾಮ್ಯ. ೩-೬೩).

[ಬಿರುದು + ಅಂಕ$_2$]

ಬಿರುದನಿ 'ಬಿಱುದನಿ' ನೋ.

ಬಿರುದಾಯತ (ನಾ). ಪ್ರಸಿದ್ಧಿಯನ್ನು ಹೊಂದಿದವನು ; ಪ್ರಖ್ಯಾತನಾದವನು : ರಾಯ ಮೆಚ್ಚಿದ ಸಾರಥಿಯೆ ಬಿರುದಾಯತ [ಪಾಶಾಂ. ಕ]ನು ನೀನೆಂದು ಕೊಂಡಾಡಿದನು ಪಾಹುಕನ (ಪಳಪ. ೬-೩೨).

[ಬಿರುದು + – ಆಯತ್$_3$ (< – ಆಯ್ತು)]

ಬಿರುದಾವಲಿ, ಬಿರುದಾವಳಿ (ನಾ). ೧. ಗೌರವಸೂಚಕವಾಗಿ ಕೊಡುವ ಪ್ರಶಸ್ತಿಗಳ ಸಮೂಹ : ಬಿರುದುಗಳ ಸಾಲು. ೨. (ಆಲಂ) ಅಡ್ಡ ಹೆಸರುಗಳ ಗುಂಪು : ಗುರುಗಳು ಕೊಟ್ಟ ಈ ಬಿರುದಾವಲಿಯಿಂದಲೇ ಒಬ್ಬರನ್ನೊಬ್ಬರು ಕೂಗಿ ಕರೆಯುತ್ತಿದ್ದರು (ಕಂಗರೋ. ೨). ಬಿರುದಾವಳಿ: ೧. ಕಹಳಾಧ್ವನಿಗಳಿಂ ಬಿರುದಾವಳಿಯನೋದುತ (ಪದ್ಮರಾ. ೯-೦೦); ಮಲೆತ ಹಗೆವನ ಪಡಿಮುಖದ ಬಲುವಲಗೆಯಲಿ ಗದೆಯಿಂದ ರಾಯನ ಬಲುಹ ಬಿರುದಾವಳಿಯ ಬರೆವೆನು (ಕುಪ್ಮಾಗ. ೩-೩೩); ಬಿರುದಾವಳಿಯ ಪದ್ಯವನೋದಲಾಗಿ ... ಸಂತೋಷವಂ ಪಟ್ಟು (ಪಪಶಾ. ೦) . [ಬಿರುದು + ಆವಲಿ]

ಬಿರುದಾವಳಿ 'ಬಿರುದಾವಲಿ' ನೋ.

ಬಿರುದಿಕ್ಕು (ಕ್ರಿ). (ಒಂದು ಉದ್ದೇಶಕ್ಕಾಗಿ) ಸವಾಲು ಹಾಕು ; ಸವಾಲು ಎಸೆ : ಧರಣಿಪಕುಲೋತ್ತುಂಗಚೋಳರಾಯಂ ತನ್ನ ಪುರಕೆ ರೋಗದ ಮೇಲೆ ಬಿರುದಿಕ್ಕೆ ಜಂಗಮಂ ಭರದೆ ಕುಷ್ಠವ್ಯಾಧಿಯಿಂ ಬರಲ್ ಕಂಡು (ಪಬಪು. ೩೫-೩೨). [ಬಿರುದು + ಇಕ್ಕು]

ಬಿರುದು (ನಾ). ೧. ಗೌರವಸೂಚಕವಾಗಿ ಕೊಡುವ ಹೆಸರು,— ಪ್ರಶಸ್ತಿ : ಕುಡೆ ಪಡೆದಂ ವಶ್ಯವಾಣಿ ಕವಿಚಕ್ರವರ್ತಿಬಿರುದಂ ಬಾಣಂ (ಪಂಪಕಂ. ೪-೬); ಜಗಭಂಡರಿವರಿಗೆ ಮತ್ತೆ ಬಿರುದುಗಳೆ (ಕುಮ್ಯಾರ್ಪ್ರೋ. ೦೦-೪೩); ಭಕ್ತವತ್ಸಲನೆಂಬ ಬಿರುದ ಪೊತ್ತಾ ಮೇಲೆ ಭಕ್ತರಾಧೀನನಾಗಿರಬೇಡವೆ (ಕುರಂದ. ೦-೯೩-೩). ೨. ಪ್ರಶಸ್ತಿಯ ಸೂಚಕವಾದ ಅಲಂಕಾರ ಸಾಧನ : ಹೇಡಿ ಬಿರುದ ಕಟ್ಟಿದಂತಾಯಿತ್ತೆನ್ನ ವೇಷ (ಬಸವ. ೩೦೦); ಬಿರುದಿನ ಪೊಂಬಾವಡೆ ಸೆಡಕಿನ ಪಲ್ಲಿ ಕೊರಳ ಮುತ್ತಿನ ಜೂಳೆಯದ . . . ಹಯ ಖುರವೆತ್ತಿ ಕುಣಿಯುತ್ತೈದಿದುವು (ಕಂಪಪಿ. ೦೩-೦೪). ೩. ಪ್ರಖ್ಯಾತಿ; ಪ್ರಸಿದ್ಧಿ: 'ಬಿರುದಾಯತ' ಪರಾ. ೪. ಸ್ಪರ್ಧೆಗೆ ನೀಡುವ ಆಹ್ವಾನ; ಸವಾಲು : 'ಬಿರುದಿಕ್ಕು' ಪರಾ.

ಬಿರುದಂತೆಂಬರ ಗಂಡ = ಪ್ರಶಸ್ತಿಯನ್ನು ಗಳಿಸಿದ ವೀರರನ್ನು ನಿಗ್ರಹಿಸಬಲ್ಲ ವೀರ; ಒಂದು ಬಿರುದು : ಬಿರುದಂತೆಂಬರ ಗಂಡ ಭೀಮಪರಾಕ್ರಮಿ ಧುರಧೀರನೇಕಾಂಗವೀರ (ಕಂಪಪಿ. ೦-೨೦); ಸಕಲಕಲಾ ಪ್ರವೀಣ ಬಿರುದಂತೆಂಬರ ಗಂಡಂ (ಸಕಪಿ. ೦-೯೭ ಪ); ಬಿರುದಂತೆಂಬರ ಗಂಡ ಎಂಬ ಮಹಾಬಿರುದು ಶ್ರೀಮನ್ಮಹೀಶೂರಮಹಾರಾಜವಂಶಕ್ಕಲ್ಲದೆ ಇತರರಿಗೆ ಸಲ್ಲುವುದಿಲ್ಲ (ಬಿರುಗಂ. ೨೦-೦೨). **ಬಿರುದಗುರ್ವ** = ತಾನು ಗಳಿಸಿದ ಪ್ರಶಸ್ತಿಗಳಿಂದ ವೈರಿಜನಕ್ಕೆ ಭಯಂಕರಸ್ವರೂಪನಾದವನು : ವೈರಿಮದಭಂಜನಂ ಬಿರುದಗುರ್ವ್ವನುಂ (ಸೌಇಇ. XX. ೪೦-೨೨; 1069). **ಬಿರುದನಿಕ್ಕು** = ಬಿರುದಿಕ್ಕು : ಸುರಪುರದ ಸೂಳೆಯರ ಸೊಬಗಿಗೆ ಬಿರುದನಿಕ್ಕುವ . . . ನವ್ಯಯವ್ವನಭರದ ವನಿತೆಯರೊಪ್ಪಿದರು (ತೊರರಾ. ೦-೩-೨೭); ಬಿರುದನಿಕ್ಕುವೆನಿನ್ನು ದಶಕಂಧರಗೆ ಕೈ ಮಾಡಿದ ನಿಶಾಟರನರವೆ ನೆಂದುಬ್ಬರದ ಹರುಷವ ತಾಳ್ದನಾ ಹನುಮ (ತೊರರಾ. ೩-೩-೨೭). **ಬಿರುದ ಭಂಗಾಱ** = ಪ್ರಶಸ್ತಿಗಳನ್ನು ಹೊಂದಿದವರಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ತ್ಯಾಗವಿನೋದಂ ಮುಱು[ಡಿ]ಯ ಮಣ್ಡಳಿಕ ಬಿರುದ ಭಂಗಾಱಂ (ಸೌಇಇ. XI-i, ೯೭-೭ ; 1062). **ಬಿರುದ ರಂಕುಸ** = ಪ್ರಶಸ್ತಿಗಳನ್ನು ಗಳಿಸಿಕೊಂಡವರಿಗೆ ಅಂಕುಶದಂತಿರುವವನು ; ಒಂದು ಬಿರುದು : ಮಾವನ ಬಣ್ಣ ಬಿರುದರಂಕುಸ ಬಣ್ಣರ ಭೀಮ (ಎಕ. VI, ಸಕ್ಕಮ. ೬೦-೦೦ ; 1058 ?) ; ಪರಚಕ್ರಸಾಧನ ಬಿರುದ ರಂಕುಸಂ (ಸೌಇಇ. XI-i, ೯೭-೦೦ ; 1062). **ಬಿರುದರ ಸಿಂಗ** = ಪ್ರಶಸ್ತಿಯನ್ನು ಗಳಿಸಿದವರಿಗೆ ಸಿಂಹದಂತಿರುವವನು ; ಒಂದು ಬಿರುದು : ಬಿರುದರ ಸಿಂಗಂ ಸಾಮನ್ತಭುಜಂಗಂ (ಸೌಇಇ. XI-i, ೬೪-೦೦ ; 1041). **ಬಿರುದರಾದಿತ್ಯ** = ಪ್ರಶಸ್ತಿಯನ್ನು ಗಳಿಸಿದವರಿಗೆ ಸೂರ್ಯನಂತಿರುವವನು ; ಒಂದು ಬಿರುದು : ಕಲಿಗಳ ಮೊಗದ ಕಯಿ ಬಿರುದರಾದಿತ್ಯಂ (ಎಕ. VII, ಶಿಕಾರಿ. ೦೨೦-೯ ; 1048). **ಬಿರುದರೂವಾರಿ** = ಕೀರ್ತಿಯನ್ನು ಪಡೆದ ಶಿಲ್ಪಿ ; ಒಂದು ಬಿರುದು : ದಾಸೋಜನಿಗೆ 'ಬಿರುದ ರೂವಾರಿ ಗೊಂದಲ ಬಡಿವ' ಎಂದೂ . . . ಬಿರುದುಗಳಿತ್ತೆಂದು ಶಾಸನಗಳಿಂದ ನಮಗೆ ಗೊತ್ತಾಗಿದೆ (ಕಾರದ. ೩೦೩). **ಬಿರುದಿನಂಕ** = ಬಿರುದಂಕ ೧: ಎಡೆಯಿಂ ಕೋಲೊಡ್ಡಿದ [ಪಾಠಾಂ. ಕೋಲಾಡಿದ, ತೋಲಾಡಿದ]ಬಿರುದಿನಂಕದಂತಿರೆ ಖಚರಂ (ಅಪಿಪು. ೩-೬೪) ; ಭುವನಕ್ಕಾರಾಧ್ಯನೆಂಬೀ ನೆಗಟ್ಟ ಬಿರುದಿನಂಕಕ್ಕೆ ತಕ್ಕಂದದಿಂ . . . ಬಿಲ್ಲೊವಜಂ ಗಾಂಡೀವಿಯೊಳ್ಕಾದಿದಂ (ಗದಾಯು. ೨-೩೦); ಅದಿರದೆ ಪೆಱತೆಗೆಯದೆ ಬೆಚ್ಚದೆ ಬೆದಱದೆ . . . ಕೋಲೊಡ್ಡಿದ ಬಿರುದಿನಂಕದಂದದಿನದೇಂ ಪರಿಚ್ಛೇದಮಾತನೊಳ್ ಕೂಡಿದುದೋ (ಸುಳುಮಾ. ೦೨-೬). **ಬಿರುದಿನ ತೊಡರ್** = ಬಿರುದಿನ ಸಂಕೇತವಾದ ಕಾಲಿನ ಬಳೆ : ಬಿರುದಿನ ತೊಡರ್ ಝಣಝಣಿಸಲೇಳ್ದು (ರಾಜಶೇ. ೬-೦೦ ಪ). **ಬಿರುದಿನೋಲೆ** = ಪ್ರಶಸ್ತಿಸೂಚಕವಾದ ಪತ್ರ: ತನ್ನ ಬಿರುದಿನೋಲೆಗಂಜಿ ಜಾಯಿಲಗಳ ನನ್ನೊಡೆಯನ ಕೇಳದಾನು ತನ್ನವರೊಡನಟ್ಟುವಣ ಗಡಮಿಾ ಕಜ್ಜಕಿನ್ನೆಣೆಯಿಲ್ಲ ಭೂಮಿಯಲಿ (ಕ.ರಾಸಾಂ. ೦೦-೦೦). **ಬಿರುದುಧ್ವಜ** = ಪ್ರಶಸ್ತಿಸೂಚಕವಾದ ಬಾವುಟ ; ಲಾಂಛನದ ಧ್ವಜ : ಕೆಲವು ಭದ್ರಗಜಗಳು ಬಿರುದುಧ್ವಜಗಳನ್ನು ಮುರಿದು ತಿರುಗುತ್ತಿದ್ದವು (ಕೃಪಾಭೀ. ೬೪). **ಬಿರುದುಪಾಡು, ಬಿರುದ ಪಾಡು** = ಪ್ರಶಂಸೆಯ ಕೀರ್ತನೆ ; ಗುಣಗಾನ : ಬಿರುದುಪಾಡಿನ ಚೂಳಿಗಲಹದ ಕದಡುಜೂಜಿನ ತೋಳುವಲರೊಳ ತೋಟಿ ಮಸಗಿತು ದಿವಸದಿವಸದಲಿ (ಕುಮ್ಯಾಲಿ. ೬-೦) ; ಪ್ರತಿಗರುಡಿಕಾಱ ಬಿರುದ[ಪಾಠಾಂ. ರಿದ, ರುದಿನ]ಪಾಡಿಂಗೆ ಒದಗಲು ವೀರಪಟ್ಟಿಯ ಕಟ್ಟಿ ತಿಗುರನೇಱಿಸಿಕೊಂಬೆ (ಬಸವ. ೬೦೦). **ಬಿರುದುಪೆಂಡೆಯ** = ಬಿರುದಿನ ತೊಡರ್ : ಬಿರುದುಪೆಂಡೆಯ ಕಾಲೊಳಿಟ್ಟು ಪೊಗಳಿಸಿಕೊಂಬ ಧುರಧೀರ ಮಾವತಿಗರು . . . ಇರ್ದರವನೀಶನೋಲಗದೊಳು (ಸಪಪು. ೬-೦೩). **ಬಿರುದುಬಾವಲಿ** = ಪ್ರಶಸ್ತಿಸೂಚಕವಾದ ವಸ್ತುವಿಶೇಷ : ಬಿರುದುಬಾವಲಿ ಹೆಚ್ಚೆ ? ಹೆಸರು ಹೊಗಳಿಕೆ ಹೆಚ್ಚೆ ? (ಕೋಗಿಲೆ. ೬೩-೩); ಪೋಲೀಸ್ ಅಧಿಕಾರಿ . . . ಎದೆಯ ಮೇಲೆ ಬಿರುದುಬಾವಲಿಗಳನ್ನು ಧರಿಸಿದ್ದ ಹಳ್ಳಿಯ ಹೆಗ್ಗಡೆ—ಇವರೆಲ್ಲ ಅವನ ಬಳಿ ನಿಂತಿದ್ದರು (ಪುನರು. ೬೯) ; ಈ ರಾಜಾಸ್ಥಾನದಲ್ಲಿ ಬಿರುದುಬಾವಲಿಗಳನ್ನು ನೀವೇ ಹಂಚುವಿರಂತೆ (ತುಟಿಮಾ. ೩೨). 'ಬಾವುಲಿ$_2$' ಪರಾ. ℙ ಇದು ದ್ವಿರುಕ್ತಿಯಂತಿರುವ ಒಂದು ದ್ವಂದ್ವಪದ.

[ದೇ.॥ ತಮಿ. ಮಲ. ವಿರುತು ; ತುಳು. ಬಿರುದು, ಬಿರ್ದ್ ; ತೆಲು. ಬಿರುದು, ಬಿರುದ./ಸಂ. ವಿರುದ]

ಬಿರುದುಗೆದಱು (ಕ್ರಿ). (ತನ್ನ) ಪ್ರಶಸ್ತಿಯನ್ನು ಹೇಳಿಕೊಳ್ಳು ; ಹಿರಿಮೆಯನ್ನು ಮೆರೆ : ಇದಿರಾಂತು ಸುರಗಿಯೊಳಹಮಿನದಟರು ಬಿರುದುಗೆದಱುತ್ತಹಿತರಿಱಿದಾಡಿದರು (ಕುಮ್ಯಾಭೀ. ೪-೨೦).

[ಬಿರುದು + ಕೆದಱು$_1$ (<ಕೆದಱ್$_1$)]

ಬಿರುನಗೆ 'ಬಿಱುನಗೆ' ನೋ.

ಬಿರುನುಡಿ 'ಬಿಱುನುಡಿ' ನೋ.

ಬಿರುನೆಲ (ನಾ). ಒರಟಾದ ಭೂಮಿ ; ಬಿರುಸಾದ ನೆಲ : ಬಿರುನೆಲವನ್ನು ಎಂದೂ ಮೆಟ್ಟದಿದ್ದ ಅವನ ಕಾಲಗಳಲ್ಲಿ ನೆತ್ತರು ಹನಿಯುತ್ತಿತ್ತು (ಹೇಮಾಕೂ. ೩೯). [ಬಿರು$_2$ (<ಬಿಱು$_3$) + ನೆಲ]

ಬಿರುನೋಟ 'ಬಿಱುನೋಟ' ನೋ.

ಬಿರುಬ 'ಬಿಱುಬ' ನೋ.

ಬಿರುಬಿಸಿಲ್ 'ಬಿಱುವಿಸಿಲ್' ನೋ.

ಬಿರುಬಿಸಿಲು 'ಬಿಱುವಿಸಿಲ್' ನೋ.

ಬಿರುಬು 'ಬಿಱುಬು' ನೋ.

ಬಿರುಮಳೆ 'ಬಿಱುವಳೆ' ನೋ.

ಬಿರುಮಾತು 'ಬಿಱುವಾತು' ನೋ.

ಬಿರುವರಿ 'ಬಿಱುವರಿ$_2$' ನೋ.

ಬಿರುವಳೆ 'ಬಿಱುವಳೆ' ನೋ.

ಬಿರುವುರಿ (ನಾ). ತೀವ್ರವಾದ ಜ್ವಾಲೆ ; ತೀಕ್ಷ್ಣವಾದ ಉರಿ : ಕಂಪಿಸಿತು ರೌಪ್ಯಗಿರಿ ; ಸುಗಿದರಮರರ್ ಬೆದರಿ ಬಿರುವುರಿಗೆ ! (ಸಪ್ರಾಂಗ. ೮೩-೨೨೯೯).

[ಬಿರು$_2$ (<ಬಿಱು$_3$) + ಉರಿ$_2$]

ಬಿರುವೆಲರ್ 'ಬಿಱುವೆಲರ್' ನೋ.

ಬಿರುವೆಲರು 'ಬಿಱುವೆಲರ್' ನೋ.

ಬಿರುವೇಸಗೆ (ನಾ). ತೀಕ್ಷ್ಣವಾದ ಬೇಸಗೆಯ ಕಾಲ : ದವದ ದಳ್ಳುರಿ ದಹಿಸೆ ಬಿರುವೇಸಗೆಯ ಮಲೆಯ ನೀರಸಾರಣ್ಯಮಂ (ಶ್ರೀರಾಮಾ. ೯೩-೪೩೩).

[ಬಿರು$_2$ (<ಬಿಱು$_3$) + ಬೇಸಗೆ]

ಬಿರುಸರ 'ಬಿಱುಸರ' ನೋ.

ಬಿರುಸು 'ಬಿಱುಸು' ನೋ.

ಬಿರುಸುಗಾಳಿ (ನಾ). ರಭಸವಾಗಿ ಬೀಸುವ ಗಾಳಿ ; ಜೋರಾಗಿ ಬೀಸುವ ಗಾಳಿ : ಇರುಳುವೇಳೆಯ ಬಿರುಸುಗಾಳಿಯ ಕರಗಳಿಂದಲೆ ತರುವೆನು (ಕುಪು. ೨೯-೫) ; ಬಿರುಸುಗಾಳಿಯದರ ಬರವ, ಕೇಳು, ಅದೋ ಸಾರುತಿದೆ ! (ಪಾಂಪಪ. ೩೯-೦೮). [ಬಿರುಸು (<ಬಿಱುಸು)+ಗಾಳಿ$_1$]

ಬಿರುಸುಗೂದಲು (ನಾ). ಒರಟಾದ ಕೂದಲು : ಸಿಂಹದ ಹೆಗಲುಗಳ ಮೇಲೆ ಬಿರುಸುಗೂದಲು ಉದ್ದವಾಗಿ ಬೆಳೆಯುವುವು (ಮುಂಬಯಿ. ೪-೨೦೬). [ಬಿರುಸು (<ಬಿಱುಸು)+ಕೂದಲು (<ಕೂಂದಲ್)]

ಬಿರೋಜಾ (ನಾ). ನೀಲಿವಜ್ರದ ಬಣ್ಣವಿರುವ ಒಂದು ಬಗೆಯ ಶಿಲೆ : ಮೈಸೂರಲ್ಲಿ ದೊರೆಯುವ ಬಿರೋಜಾ ಎಂಬ ಶಿಲೆಯು (ಮುಂಬಯಿ. ೨-೨೫೨). [←ಪಾರ. ಬೀರೋಜನ್ ; ಮರಾ. ಬಿರೋಜಾ]

ಬಿರ್ಕು 'ಬಿಕ್ಕು$_2$' ನೋ.

ಬಿರ್ಕುಬಿರ್ಕು (ನಾ). ಒಂದು ಅನುಕರಣ ಶಬ್ದ : ಮೆಯ್ ಬಿರ್ಕು ಬಿರ್ಕೆನೆ ನಿಬ್ಬರಂ ಬಿರಿದೊಳಱುಗುಂ ಜೋಲ್ಗುಂ ವೈಚಿತ್ರ್ಯಜೀವರ ರೂಪದಿಂ (ಕಾಂತಿಪು. ೬-೯೨).

ಬಿರ್ಚಿಸು, ಬಿಚ್ಚಿಸು (ಕ್ರಿ). ಕಳಚುವಂತೆ ಮಾಡು : ತೆಗೆಸು : ದಿಗ್ದಂತಿಯಂ ಬಾಯ್ವಿಡೆ ಬೆದಱಿಸುತುಂ ನಭೋಬಂಧಮಂ ಬಿರ್ಚಿಸುತುಂ (ಕಾಂತೀಶ್ವ. ೦೫-೩೯). **ಬಿಚ್ಚಿಸು** : ಆ ಬಂಧನದಿಂದ ಅದಕ್ಕೆ ತೊಂದರೆಯೆಂದು ಆ ಕಟ್ಟನ್ನು ಬಿಚ್ಚಿಸಿದೆ (ಸಂಗಾಳ್ವ. ೦೫೦). [ಬಿರ್ಚು+ ಇಸು$_2$]

ಬಿರ್ಚು, ಬಿಚ್ಚು$_1$ (ಕ್ರಿ). ೧. ಬೇರೆಮಾಡು ; ವಿಭಾಗಿಸು ; ಭಾಗಮಾಡು : "ಬಿರ್ಚು—ವಿಭಜನೇ" (ಕಮರಾ) ; ಪಸುಳೆಯನ್ ಬಾಳ್ ಮೊನೆಗೆ ಚುರ್ಚಿದನ್, ಬಿರ್ಚಿದನ್, ಕೊಯ್ದನ್ (ಅಶ್ವತ್ಥಾ. ೩-೦೬). ೨. ಬಿಡಿಸು ; ಸುಲಿ : ಬೆಳೆದೆಳ್ಳಂ ಬಿರ್ಚಿ ರಾಶಿಸ್ಥಿತಿಯಿನಿರಿಸಿ ತದ್ರಾಶಿಯಂ ಮತ್ತಮೋರಂತಳವಟ್ಟಿರ್ದಂದದಿಂದಾ ಕೊದಳಿಯ ಮಣಿಯೊಳ್ ತೀವುತಿರ್ದಾಗಳ್ (ಸುಕುಮಾ. ೫-೩೯). ೩. ತೆರೆ ; ಅಗಲಿಸು : ಧ್ಯಾನದೊಳಿರ್ದ ಲೋಚನಯುಗಳವ ಬಿರ್ಚಿಯಾನಂದ ಮನದೊಳು ಪೆರ್ಚಿ (ಮೋಹಶ. ೨೦-೩೯). ೪. ಕಳಚಿಕೊಳ್ಳು ; ಬಿಚ್ಚಿಕೊಳ್ಳು : ಹಱಿಗವಿಗಳ ಕಬ್ಬಂಗಳ ಹೊಱಗಳಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ ಬಱಿ ತಾಱಿಗೆ ಬೀಱಿಗ (ಗಿರಿಕ. ೦-೨೩) ; ಸಂಧಿಬಂಧಮದು ಪೋ ಬಿರ್ಚಿತ್ತೆನಲ್ (ಕುಸುಮಾ. ೦೯-೦೧೦). ೫. ಇಬ್ಭಾಗವಾಗು ; ಬಿರಿ : ಆ ಗಿರಿ ಬಿರ್ಚದಂತೆಯುಂ ಸರ್ಪಂ ಸತ್ವಂಗಿಡದಂತೆಯುಂ ಪ್ರತ್ಯೇಕಮವರವರ್ಗೆ ಪ್ರಾಣವನಿತ್ತು (ಸಳವ್ಯ. ೯). ೬. ಬೇರೆಯಾಗು ; ಅಗಲು : ಹಂಸಮಿಥುನಮಂ ನೋಡಿ ನಸುನಗುತ್ತುಮಿವು ಬೆರ್ಚಿ ಬಿರ್ಚುಗುಂ ತೊಲಗಿಮೆಂದು . . . ಪರಿಜನಮುಮಂ ತೊಲಗಿಸಿ (ಪರ್ಧಪು. ೪-೯ ಪ) ; ಅಂತು ಬೆಚ್ಚಂತೆ ಬಿರ್ಚದಚ್ಚಳಿಯದ . . . ಶಿವಯೋಗ ನಿದ್ರಾಮುದ್ರಿತನಾಗಿ (ಪ್ರಸಪ. ೨೩-೦೦ ಪ). ೭. ಇಲ್ಲವಾಗು ; ತೊಲಗು : ಪಕ್ಷ್ಮಯುಗ್ಮನಿದ್ರಾಳುತೆ ಬಿ[ಪಾಕಾಂ. ವೆ]ರ್ಚೆ ಬಳ್ಳಿಯುಲಿ ಪೆರ್ಚಿ ಮನಂ ಬಿಡೆ ಪೊಯ್ದು ಕರ್ಣಮಂ ಲೀಳೆಯಿನೀಶ ನಿನ್ನ ಗಜರಾಜಗಳೆಟ್ಟಿಪುವಲ್ತೆ ಸೆಜ್ಜೆಯಿಂ (ಕಾಂತಿಪು. ೫-೯೦). ೮. ಹರಡು ; ಅಗಲಿಸು : ರೂಢಿಯ ಪರಮಾತ್ಮನದೇಂ . . . ಕರಿಯಂ ಸೀಳ್ದೀಡಾಡುವನೆ ಬಿರ್ಚಿ ಜೆಡೆಯನೆರ್ದಾಡುವನೇ (ಸಮಪ. ೬-೬೯) ; ಪಳಂಚಲೆದೊಲೆದು ಪಕ್ಕಮಂ ಬಿರ್ಚಿಲಲ್ಲೆಗೆಯ್ದುತ್ತು ಪಾರಿವಂ ಪಾರಿವದೊಳ್ (ಗಿರಿಕ. ೨-೫೨). ೯. ನೀರು ಕೋಡಿ ಹರಿ : ಒಲ್ದು ಕೂಟದೊಳ್ ನೆಗಳ್ವಿನಮಂಗಜಾಂಬು ಕೆಱೆ ಬಿರ್ಚಿದವೋಲ್ ಸತಿಯರ್ಗೆ ಪೊಣ್ಮುಗುಂ (ಮಸ್ಯಪಿ. ೩-೦೪). ೧೦. ವ್ಯಕ್ತಪಡಿಸು ; ಪ್ರಕಟಗೊಳಿಸು : ಒಡನೆ ಸುದತೀಶಿರೋಮಣಿ ನಿರ್ದೋಷಿ ತಾನೆಂದು ಹೃದಯದ ಮಾತ ಬಿರ್ಚಿದಳು (ಮೋಹಶ. ೬-೫). **ಬಿಚ್ಚು$_1$** : ೧. ಕಾಯದ ಜೀವದ ಹೊಲಿಗೆಯ ಸಂದ ಬಿಚ್ಚಲಱಿಯದವನು ನಾನು (ಸಿದ್ಧಪ.ಕ ೪೦-೦೨೯). ೫. ಶಲ್ಯನ ಶರಹತಿಗೆ ಬಿಚ್ಚಿದವು ಹೂಡಿದ ಹರಿಗೆಯಿಬ್ಬಗಿಯಾದವಾ ಬದ್ಧರದ ಬಂಡಿಗಳು (ಕುಪ್ಯಾಕ. ೨-೩೯); ಘಣಿಪ ಕೂರ್ಮನ ಹೃದಯ ಬಿಚ್ಚಿತು . . . ದಶಾಸ್ಯನ ಪದವಿಘಾತಿಗೆ (ತೊರರಾ. ೦-೦೫-೨೦). ೬. ಇನಿಯರ್ ಬಿಚ್ಚದೆ ಮಚ್ಚಿ ಬಾಟ್ಗೆ ಸೊಬಗಿಂ (ಅನಂಪು. ೯-೩೦); ತಾಯನೆಳಗಱು ಬಿಚ್ಚುವಂತೊಯ್ಯನೊಯ್ಯನತ್ಯಾಯಾಸದಿಂದಗಲ್ದು . . . ಸೌಮಿತ್ರಿ ಸಾಗಿದನು (ಶೈಪಿಶಾ. ೦೯-೩೦). ೧೦. ಕೋಪಮಂ ಕಣ್ಗಳೊಳ್ ಬಿಚ್ಚುವರ್ (ಸಂಪು. ೨೯-೦೬); ಅವರ ಕಥೆ ಓದಿ ಎಂಥೆಂಥ ಪಂಡಿತರೂ ಸಹ ತಲೆದೂಗುವರೆಂಬ ಸುದ್ದಿಯನ್ನೂ ಬಿಚ್ಚುವರು (ಕಟ್ಟಿಕೂ. ೦೦). ೧೧. ಸಡಿಲಿಸು ; ಕಳಚು : ನಿಚ್ಚಟನೆ ನೀನವನ ಬಂಧನ ಬಿಚ್ಚುವೀಗಳಿಗೆಗಳ ಕಂಡುದೆ ಅಚ್ಚರಿ ಕಣಾ (ಸಾಳ್ವಶಾ. ೦೭-೨೦); ಆ ಗಂಟುಗಳನ್ನು ಬಿಚ್ಚಲು ನಮ್ಮ ಯಾರ ಕೈಯಲ್ಲೂ ಆಗುವುದಿಲ್ಲ (ಆರ್ಯಕ. ೭೬). ೧೨. ಸಡಿಲವಾಗು ; ಶಿಥಿಲವಾಗು : ಬೆಚ್ಚದಗಲದೆ ಲೆಕ್ಕಿಸದೆ ಧೃತಿ ಬಿಚ್ಚದತಿಬಳ ಬೊಮ್ಮಿದೇವಂ ಹೆಚ್ಚಿ ಹೋ ಹೋ ನಿಲ್ಲುನಿಲ್ಲೆಂದೆನುತ ಝಂಕಿಸಲು . . . ಮದಕರಿ ಕೆಡೆದು ಮಡಿಯಿತು (ಬಸಪು. ೨೨-೩೩). ೧೩. ಕೆದರು ; ಹರಡು : ಕಿಡಿಗಳ ಬಿಚ್ಚಲುದುರಿತು ಚಾಪಮಾರ್ಗಣ ರಥತುರಂಗಚಯ (ಕುಪ್ಯಾಕ. ೨೦-೦೯). ೧೪. ಅರಳಿಸು ; ವಿಕಾಸಗೊಳಿಸು : ಸೌರಭದ ಮುದ್ರೆಯನೊಡೆವಂತೆ ಹೂವಂ ಬಿಚ್ಚುತೊಳಗಣ ಪರಿಮಳದ ತೆನೆಯ ಮಗ್ಗುಲೊಳೊಗ್ಗಿ (ಬಸರ. ೬-೬೯). ೧೫. ಕತ್ತಿ ಮುಂತಾದುವನ್ನು ಸೆಳೆ.—ಹಿರಿ : 'ಬಿಚ್ಚುಗತ್ತಿ' ಪರಾ. ೧೬. ವಿಶಾಲವಾಗು; ವೈಶಾಲ್ಯವನ್ನು ಹೊಂದು: 'ಬಿಚ್ಚುಮನಸ್ಸು' ಪರಾ. ೧೭. (ಆಲಂ) ಕೊಡು; ನೀಡು: ಐದು ರೂಬಲ್ ಬಿಚ್ಚು. ನಾನವಳನ್ನು ಬಿಡಿಸ್ತೀನಿ (ಪುವರು. ೪೭೪); ಸಣ್ಣ ಪುಟ್ಟ ಕೆಲಸಗಳಿಗೂ ಹಣ ಬಿಚ್ಚದಿದ್ದರೆ ಮದುವೆ ನಡೆಯುವುದಿಲ್ಲ (ನನ್ನೂರು. ೩೦೬).

ಬಿಚ್ಚಿ ಹೇಳು = ವಿವರಿಸಿ ಹೇಳು ; ವಿಶದೀಕರಿಸು : ದಯಮಾಡಿ ನನ್ನ ಸಹೋದರರನ್ನು ಹೊರಗೆ ಕಳುಹಿರಿ, ಅಂದರೆ ನಾನು ತಮಗೆಲ್ಲಾ ಬಿಚ್ಚಿ ಹೇಳುತ್ತೇನೆ (ಮುಂಬಯಿ. ೪-೭೬). 'ಬಿರಿ$_1$' ಪರಾ.

[ದೇ.॥ ತುಳು. ಬಿಚ್ಚು; ತೆಲು. ವಿಚ್ಚು, ವಿಜ್ಜು, ವಿರುಚು]

ಬಿರ್ಚುವಲೆ (ನಾ). ಅಗಲವಾಗಿ ಹರಡಿಕೊಳ್ಳುವ ಒಂದು ಬಗೆಯ ಬಲೆ : ಬಿರ್ಚುವಲೆ ಬಳ್ಳಿವಲೆ ಗೋರಿವಲೆ ಖಂಡವಲೆಗಳೆಂಬಿವಂ ಬೀಸರಂ ಬುಗದೆ ಬಿರ್ಚಿ ಬೀಸಿದಾಗಳ್ (ರಾಜಕೇ. ೫-೦೦೪ ಪ). [ಬಿರ್ಚು + ಬಲೆ$_1$]

ಬಿರ್ದ 'ಬೀಟ್$_1$' ಪರಾ.

ಬಿರ್ದಿ, ಬಿದ್ದಿ (ನಾ). ಮುದುಕಿ ; ವೃದ್ಧೆ : ಗಂಭೀರೆಯೆಂಬೊಳೊರ್ವಳ್ ಬಿ[ರ್ದಿ] [ಪಾಕಾಂ.ದ್ದಿ, ಳ್ದಿ]ಯಾಕೆಯ ಮಗಳ್ ಹರಿಣಿಯೆಂಬೊಳ್ (ಪಡ್ಡಾರಾ. ೦೬-೦೨) ; ಬಿಸಿಯುಬಲಿಯಂ ಬಾಯೊಳಿಟ್ಟಾಗಳ್ ಕಯ್ಯುಂ ಬಾಯುಂ ಬೆಂದೊಡೆ ಮೆಯ್ಯನದಿರ್ಚು ಕೈಯಂ ಬಿದಿರ್ದವನಂ ಬಿರ್ದಿ ಕಂಡು ನಕ್ಕಿಂತೆಂದಳ್ (ಪಡ್ಡಾರಾ. ೦೬೬-೨೦). **ಬಿದ್ದಿ** : ಬೆಕ್ಕಸಂಬಟ್ಟು ನಿಂದಂತೆ ನೋಟ್ಟಲ್ಲಿ ಪಳವಿಸುತ್ತಿರ್ದ ಬಡಬಿದ್ದಿಯಂ ಕಂಡು (ಬಂತರಿ. ೬-೦೨ ಪ).

[< ಸಂ. ವೃದ್ಧಾ]

ಬಿರ್ದಿಕ್ಕು, ಬಿದ್ದಿಕ್ಕು (ಕ್ರಿ). ಔತಣವನ್ನು ಏರ್ಪಡಿಸು : ಈ ವಿದ್ಯಾಧರ ಸೈನ್ಯಮಂ ನಿಮಿಷದಿಂ ಪರ್ದಿಂಗೆ ಬಿರ್ದಿಕ್ಕುವೆಂ (ಪಂರಾಮಾ. ೯-೫೭) ; ಭೀಮಸೇನನುದ್ದಾಮಕೋಪದಿಂ ಕುರುರಾಜನನುಜವ್ರಾತಮಂ ಜವಂಗೆ ಬಿರ್ದಿಕ್ಕಿದಂ (ಪೇಡಿಪು.೦೨-೬೩ ಪ). **ಬಿದ್ದಿಕ್ಕು** : ಬಿದ್ದಿ[ಪಾಕಾಂ. ಬಡಿದಿ]ಕ್ಕಿದ ಪೊಲಾಯ್ತುಮಮ ವಿಲಯದ ಮೃತ್ಯುದೇವತೆಗೆ (ತೊರರಾ. ೬-೨೭-೨೦).

[ಬಿರ್ದು$_2$+ ಇಕ್ಕು]

ಬಿರ್ದಿನ, ದಿಬ್ಬಣ, ನಿಬ್ಬಣ, ಬಿದ್ದಣ, ಬಿದ್ದಿನ (ನಾ). ೧. ಆತಿಥ್ಯಕ್ಕೆ ಪಾತ್ರನಾದವನು ; ಉಪಚಾರಕ್ಕೆ ಅರ್ಹನಾದವನು ; ಅತಿಥಿ :

ಬಿರುಸು 'ಬಿಱುಸು' ನೋ.

ಬಿರುಸುಗಾಳಿ (ನಾ). ರಭಸವಾಗಿ ಬೀಸುವ ಗಾಳಿ ; ಜೋರಾಗಿ ಬೀಸುವ ಗಾಳಿ : ಇರುಳುವೇಳೆಯ ಬಿರುಸುಗಾಳಿಯ ಕರಗಳಿಂದಲೆ ತರುವೆನು (ಕುಪು. ೨೯-೫) ; ಬಿರುಸುಗಾಳಿಯದರ ಬರವ, ಕೇಳು, ಅದೋ ಸಾರುತಿದೆ ! (ಪಾಂಪಪ. ೩೪-೦೬). [ಬಿರುಸು (<ಬಿಱುಸು)+ಗಾಳಿ$_1$]

ಬಿರುಸುಗೂದಲು (ನಾ). ಒರಟಾದ ಕೂದಲು : ಸಿಂಹದ ಹೆಗಲುಗಳ ಮೇಲೆ ಬಿರುಸುಗೂದಲು ಉದ್ದವಾಗಿ ಬೆಳೆಯುವುವು (ಮುಂಬಯಿ. ೪-೨೦೬). [ಬಿರುಸು (<ಬಿಱುಸು)+ಕೂದಲು (<ಕೂಂದಲ್)]

ಬಿರೋಜಾ (ನಾ). ನೀಲಿವಜ್ರದ ಬಣ್ಣವಿರುವ ಒಂದು ಬಗೆಯ ಶಿಲೆ : ಮೈಸೂರಲ್ಲಿ ದೊರೆಯುವ ಬಿರೋಜಾ ಎಂಬ ಶಿಲೆಯು (ಮುಂಬಯಿ. ೨-೨೩೨). [←ಪಾರ. ಬೀರೋಜನ್ ; ಮರಾ. ಬಿರೋಜಾ]

ಬಿರ್ಕು 'ಬಿಕ್ಕು$_2$' ನೋ.

ಬಿರ್ಕುಬಿರ್ಕು (ನಾ). ಒಂದು ಅನುಕರಣ ಶಬ್ದ : ಮೆಯ್ ಬಿರ್ಕು ಬಿರ್ಕೆನೆ ನಿಬ್ಬರಂ ಬಿರಿದೊಳಱುಗುಂ ಜೋಲ್ಗುಂ ವೈಚಿತ್ರ್ಯಜೀವರ ರೂಪದಿಂ (ಶಾಂತಿಪು. ೬-೯೨).

ಬಿರ್ಚಿಸು, ಬಿಚ್ಚಿಸು (ಕ್ರಿ). ಕಳಚುವಂತೆ ಮಾಡು : ತೆಗೆಸು : ದಿಗ್ದಂತಿಯಂ ಬಾಯ್ವಿಡೆ ಬೆದಱಿಸುತುಂ ನಭೋಬಂಧಮಂ ಬಿರ್ಚಿಸುತುಂ (ಶಾಂತೀಶ್ವ. ೦೫-೩೪). ಬಿಚ್ಚಿಸು : ಆ ಬಂಧನದಿಂದ ಅದಕ್ಕೆ ತೊಂದರೆಯೆಂದು ಆ ಕಟ್ಟನ್ನು ಬಿಚ್ಚಿಸಿದೆ (ತಂಗಾಳ್ವ. ೦೫೦). [ಬಿರ್ಚು+ ಇಸು$_2$]

ಬಿರ್ಚು, ಬಿಚ್ಚು$_1$ (ಕ್ರಿ). ೧. ಬೇರೆಮಾಡು ; ವಿಭಾಗಿಸು ; ಭಾಗಮಾಡು : "ಬಿರ್ಚು—ವಿಭಜನೇ" (ಕಮಧಾ) ; ಪಸುಳೆಯನ್ ಬಾಳ್ ಮೊನೆಗೆ ಚುರ್ಚಿದನ್, ಬಿರ್ಚಿದನ್, ಕೊಯ್ದನ್ (ಅಶ್ವತ್ಥಾ. ೩-೦೬). ೨. ಬಿಡಿಸು ; ಸುಲಿ : ಬೆಳೆದೆಳ್ಳಂ ಬಿರ್ಚಿ ರಾಶಿಸ್ಥಿತಿಯಿನಿರಿಸಿ ತದ್ರಾಶಿಯಂ ಮತ್ತಮೋರಂತಳವಟ್ಟಿರ್ದಂದದಿಂದಾ ಕೊದಳಿಯ ಮಣಿಯೊಳ್ ತೀವುತಿರ್ದಾಗಳ್ (ಸುಳುಮಾ. ೫-೩೪). ೩. ತೆರೆ ; ಅಗಲಿಸು : ಧ್ಯಾನದೊಳಿರ್ದ ಲೋಚನಯುಗಳವ ಬಿರ್ಚಿಯಾನಂದ ಮನದೊಳು ಪೆರ್ಚಿ (ಮೋಹಶ. ೨೦-೩೯). ೪. ಕಳಚಿಕೊಳ್ಳು ; ಬಿಚ್ಚಿಕೊಳ್ಳು : ಹಱಿಗವಿಗಳ ಕಬ್ಬಂಗಳ ಹೊಱಗಳಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ ಬಱಿ ತಾಱಿಗೆ ಬೀಱಿಗ (ಗಿರಿಕ. ೦-೨೩) ; ಸಂಧಿಬಂಧಮದು ಪೋ ಬಿರ್ಚಿತ್ತೆನಲ್ (ಕುಸುಮಾ. ೦೪-೦೧೦). ೫. ಇಬ್ಭಾಗವಾಗು ; ಬಿರಿ : ಆ ಗಿರಿ ಬಿರ್ಚದಂತೆಯುಂ ಸರ್ಪಂ ಸತ್ವಂಗಿಡದಂತೆಯುಂ ಪ್ರತ್ಯೇಕಮವರವರ್ಗೆ ಪ್ರಾಣವನಿತ್ತು (ಸಳಪ್ರ. ೯). ೬. ಬೇರೆಯಾಗು ; ಅಗಲು : ಹಂಸಮಿಥುನಮಂ ನೋಡಿ ನಸುನಗುತ್ತುಮಿವು ಬೆರ್ಚಿ ಬಿರ್ಚುಗುಂ ತೊಲಗಿಮೆಂದು . . . ಪರಿಜನಮುಮಂ ತೊಲಗಿಸಿ (ಪರ್ಧಪು. ೪-೯ ಪ) ; ಅಂತು ಬೆಚ್ಚಂತೆ ಬಿರ್ಚದಚ್ಚಳಿಯದ . . . ಶಿವಯೋಗ ನಿದ್ರಾಮುದ್ರಿತನಾಗಿ (ಪ್ರಶಪ. ೨೩-೦೦ ಪ). ೭. ಇಲ್ಲವಾಗು ; ತೊಲಗು : ಪಕ್ಷ್ಮಯುಗ್ಮನಿದ್ರಾಳುತೆ ಬಿ[ಪಾಕಾಂ. ವೆ]ರ್ಚೆ ಬಳ್ಳಿಯುಲಿ ಪೆರ್ಚಿ ಮನಂ ಬಿಡೆ ಪೊಯ್ದು ಕರ್ಣಮಂ ಲೀಳೆಯಿನೀಶ ನಿನ್ನ ಗಜರಾಜಗಳೆಟ್ಟಪುವಲ್ತೆ ಸೆಜ್ಜೆಯಿಂ (ಶಾಂತಿಪು. ೫-೯೦). ೮. ಹರಡು ; ಅಗಲಿಸು : ರೂಢಿಯ ಪರಮಾತ್ಮನದೇಂ . . . ಕರಿಯಂ ಸೀಳ್ದೀಡಾಡುವನೆ ಬಿರ್ಚಿ ಜೆಡೆಯನೆರ್ದಾಡುವನೇ (ಸಮಪ. ೯-೬೯) ; ಪಳಂಚಲೆದೊಲೆದು ಪಕ್ಕಮಂ ಬಿರ್ಚಿಲಲ್ಲೆಗೆಯ್ದುತ್ತು ಪಾರಿವಂ ಪಾರಿವದೊಳ್ (ಗಿರಿಕ. ೨-೫೨). ೯. ನೀರು ಕೋಡಿ ಹರಿ : ಒಲ್ದು ಕೂಟದೊಳ್ ನೆಗಳ್ವಿನಮಂಗಜಾಂಬು ಕೆಱೆ ಬಿರ್ಚಿದವೋಲ್ ಸತಿಯರ್ಗೆ ಪೊಣ್ಮುಗುಂ (ಮುಸ್ಕಪ. ೩-೦೪). ೧೦. ವ್ಯಕ್ತಪಡಿಸು ; ಪ್ರಕಟಗೊಳಿಸು : ಒಡನೆ ಸುದತೀಶಿರೋಮಣಿ ನಿರ್ದೋಷಿ ತಾನೆಂದು ಹೃದಯದ ಮಾತ ಬಿರ್ಚಿದಳು (ಮೋಹಶ. ೬-೫). ಬಿಚ್ಚು$_1$: ೧. ಕಾಯದ ಜೀವದ ಹೊಲಿಗೆಯ ಸಂದ ಬಿಚ್ಚಲಱಿಯದವನು ನಾನು (ಸಿದ್ಧಪ.ಕ ೪೦-೦೨೯). ೫. ಶಲ್ಯನ ಶರಹತಿಗೆ ಬಿಚ್ಚಿದವು ಹೂಡಿದ ಹರಿಗೆಯಿಬ್ಬಗಿಯಾದವಾ ಬದ್ಧರದ ಬಂಡಿಗಳು (ಕುಪ್ಯಾಶ. ೨-೩೯); ಘಣಿಪ ಕೂರ್ಮನ ಹೃದಯ ಬಿಚ್ಚಿತು . . . ದಶಾಸ್ಯನ ಪದವಿಘಾತಿಗೆ (ತೊರರಾ. ೦-೦೫-೨೦). ೬. ಇನಿಯರ್ ಬಿಚ್ಚದೆ ಮಚ್ಚಿ ಬಾಟ್ಗೆ ಸೊಬಗಿಂ (ಅಪಂಪು. ೯-೩೦); ತಾಯನೆಳಗಱು ಬಿಚ್ಚುವಂತೊಯ್ಯನೊಯ್ಯನತ್ಯಾಯಾಸದಿಂದಗಲ್ದು . . . ಸೌಮಿತ್ರಿ ಸಾಗಿದನು (ಶೈಪಿಪಾ. ೦೯-೩೦). ೧೦. ಕೋಪಮಂ ಕಣ್ಗಳೊಳ್ ಬಿಚ್ಚುವರ್ (ಸಿಪು. ೨೪-೦೯); ಅವರ ಕಥೆ ಓದಿ ಎಂಥೆಂಥ ಪಂಡಿತರೂ ಸಹ ತಲೆದೂಗುವರೆಂಬ ಸುದ್ದಿಯನ್ನೂ ಬಿಚ್ಚುವರು (ಕಲ್ಕಿಹೊ. ೦೦). ೧೧. ಸಡಿಲಿಸು ; ಕಳಚು : ನಿಚ್ಚಟನೆ ನೀನವನ ಬಂಧನ ಬಿಚ್ಚುವೀಗಳಿಗೆಗಳ ಕಂಡುದೆ ಅಚ್ಚರಿ ಕಣಾ (ಪಾಳ್ಯಗಾ. ೦೭-೨೦); ಆ ಗಂಟುಗಳನ್ನು ಬಿಚ್ಚಲು ನಮ್ಮ ಯಾರ ಕೈಯಲ್ಲೂ ಆಗುವುದಿಲ್ಲ (ಅರ್ಯಾಳ. ೭೬). ೧೨. ಸಡಿಲವಾಗು ; ಶಿಥಿಲವಾಗು : ಬೆಚ್ಚದಗಲದೆ ಲೆಕ್ಕಿಸದೆ ಧೃತಿ ಬಿಚ್ಚದತಿಬಳ ಬೊಮ್ಮಿದೇವಂ ಹೆಚ್ಚಿ ಹೋ ಹೋ ನಿಲ್ಲುನಿಲ್ಲೆಂದೆನುತ ರ್ಝುಂಕಿಸಲು . . . ಮದಕರಿ ಕೆಡೆದು ಮಡಿಯಿತು (ಬಸಪು. ೨೨-೩೩). ೧೩. ಕೆದರು ; ಹರಡು : ಕಿಡಿಗಳ ಬಿಚ್ಚಲುದುರಿತು ಚಾಪಮಾರ್ಗಣ ರಥ ತುರಂಗಚಯ (ಕುಪ್ಯಾಅ. ೨೦-೦೯). ೧೪. ಅರಳಿಸು ; ವಿಕಾಸಗೊಳಿಸು : ಸೌರಭದ ಮುದ್ರೆಯನೊಡೆವಂತೆ ಹೂವಂ ಬಿಚ್ಚುತೊಳಗಣ ಪರಿಮಳದ ತೆನೆಯ ಮಗ್ಗುಲೊಳೊಗ್ಗಿ (ಬಸರ. ೬-೬೯). ೧೫. ಕತ್ತಿ ಮುಂತಾದುವನ್ನು ಸೆಳೆ.—ಹಿರಿ : 'ಬಿಚ್ಚುಗತ್ತಿ' ಪರಾ. ೧೬. ವಿಶಾಲವಾಗು; ವೈಶಾಲ್ಯವನ್ನು ಹೊಂದು: 'ಬಿಚ್ಚುಮನಸ್ಸು' ಪರಾ. ೧೭. (ಆಲಂ) ಕೊಡು; ನೀಡು: ಐದು ರೂಬಲ್ ಬಿಚ್ಚು. ನಾನವಳನ್ನು ಬಿಡಿಸ್ತೀನಿ (ಪುನರು. ೪೭೪); ಸಣ್ಣ ಪುಟ್ಟ ಕೆಲಸಗಳಿಗೂ ಹಣ ಬಿಚ್ಚದಿದ್ದರೆ ಮದುವೆ ನಡೆಯುವುದಿಲ್ಲ (ಪನ್ನೂರು. ೩೦೬).

ಬಿಚ್ಚಿ ಹೇಳು = ವಿವರಿಸಿ ಹೇಳು ; ವಿಶದೀಕರಿಸು : ದಯಮಾಡಿ ನನ್ನ ಸಹೋದರರನ್ನು ಹೊರಗೆ ಕಳುಹಿರಿ, ಅಂದರೆ ನಾನು ತಮಗೆಲ್ಲಾ ಬಿಚ್ಚಿ ಹೇಳುತ್ತೇನೆ (ಮುಂಬಯಿ. ೪-೭೬). 'ಬಿರಿ$_1$' ಪರಾ.

[ದೇ.॥ ತುಳು. ಬಿಚ್ಚು; ತೆಲು. ವಿಚ್ಚು, ವಿಜ್ಜು, ವಿರುಚು]

ಬಿರ್ಚುವಲೆ (ನಾ). ಅಗಲವಾಗಿ ಹರಡಿಕೊಳ್ಳುವ ಒಂದು ಬಗೆಯ ಬಲೆ : ಬಿರ್ಚುವಲೆ ಬಳ್ಳಿವಲೆ ಗೋರಿವಲೆ ಖಂಡವಲೆಗಳೆಂಬಿವಂ ಬೀಸರಂ ಬುಗದೆ ಬಿರ್ಚಿ ಬೀಸಿದಾಗಳ್ (ರಾಜಶೇ. ೫-೦೦೪ ಪ). [ಬಿರ್ಚು + ಬಲೆ$_1$]

ಬಿರ್ದ 'ಬೀಟ್$_1$' ಪರಾ.

ಬಿರ್ದಿ, ಬಿದ್ದಿ (ನಾ). ಮುದುಕಿ ; ವೃದ್ಧೆ : ಗಂಭೀರೆಯೆಂಬೊಳೊರ್ವಳ್ ಬಿ[ರ್ದಿ] [ಪಾಕಾಂ.ದ್ದಿ. ಳ್ದಿ]ಯಾಕೆಯ ಮಗಳ್ ಹರಿಣಿಯೆಂಬೊಳ್ (ಪಡ್ಡಾರಾ. ೦೫-೦೨) ; ಬಿಸಿಯುಂಬಲಿಯಂ ಬಾಯೊಳಿಟ್ಟಾಗಳ್ ಕಯ್ಯುಂ ಬಾಯುಂ ಬೆಂದೊಡೆ ಮೆಯ್ಯನದಿರ್ದು ಕೈಯಂ ಬಿದಿರ್ದವನಂ ಬಿರ್ದಿ ಕಂಡು ನಕ್ಕಿಂತೆಂದಳ್ (ಪಡ್ಡಾರಾ. ೦೬೯-೨೦). ಬಿದ್ದಿ : ಬೆಕ್ಕಸಂಬಟ್ಟು ನಿಂದಂತೆ ನೋಟ್ಟಲ್ಲಿ ಪಳವಿಸುತ್ತಿರ್ದ ಬಡಬಿದ್ದಿಯಂ ಕಂಡು (ಬಂಹರಿ. ೬-೦೨ ಪ).

[< ಸಂ. ವೃದ್ಧಾ]

ಬಿರ್ದಿಕ್ಕು, ಬಿದ್ದಿಕ್ಕು (ಕ್ರಿ). ಔತಣವನ್ನು ಏರ್ಪಡಿಸು : ಈ ವಿದ್ಯಾಧರ ಸೈನ್ಯಮಂ ನಿಮಿಷದಿಂ ಪರ್ದಿಂಗೆ ಬಿರ್ದಿಕ್ಕುವೆಂ (ಪಂರಾಮಾ. ೯-೫೭) ; ಭೀಮಸೇನನುದ್ದಾಮಕೋಪದಿಂ ಕುರುರಾಜನನುಜವ್ರಾತಮಂ ಜವಂಗೆ ಬಿರ್ದಿಕ್ಕಿದಂ (ಪೇಪುಪು.೦೨-೬೩ ಪ). ಬಿದ್ದಿಕ್ಕು : ಬಿದ್ದಿ[ಪಾಕಾಂ. ಬಡಿದಿ]ಕ್ಕಿದ ವೊಲಾಯ್ತುಮಮ ವಿಲಯದ ಮೃತ್ಯುದೇವತೆಗೆ (ತೊರರಾ. ೬-೨೭-೨೦).

[ಬಿರ್ದು$_2$ + ಇಕ್ಕು]

ಬಿರ್ದಿನ, ದಿಬ್ಬಣ, ನಿಬ್ಬಣ, ಬಿದ್ದಣ, ಬಿದ್ದಿನ (ನಾ). ೧. ಆತಿಥ್ಯಕ್ಕೆ ಪಾತ್ರನಾದವನು ; ಉಪಚಾರಕ್ಕೆ ಅರ್ಹನಾದವನು ; ಅತಿಥಿ :

ಹೂಡಿ ಬಿಡುವ ಸಾಧನ : ಧನುಸ್ಸು : ಚಾಪ : "ಬಿಲ್ಲ್‌ವಿದ್ಯೆಯೇ (ಮಾಜು), ಕೋದಂಡೇ ಚ" (ಕವಿಪ್ರ) : ಅವುರಂ ಬಿಲ್ಲುಳನೇಜಿಸಿ ತಿರುವಾಯೊಳಂಬನಿಟ್ಟಸರೆಂದು ತೆಗೆದಿಸುವಸ್ಮಿಗಂ (ಪಪ್ರಾ.ಗ. ೧೬-೬) ; ಸೆಳ್ಳುಗುರಂ ಕೇದಗೆ ಪುರ್ಬನಂಗಜನ ಬಿಲ್ ದಂತಾಳಿಯುಂ ಮುತ್ತು ಕೈಮುಗಿದಾರಾಧಿಸಿ ಪೋಲ್ತುವು (ಆರಾಪ್ರ. ೬-೬೩) ; ಚಂದ್ರ ಅಳಿಯನ ಬಿಲ್ಲ್ ಬೆಳಸಿದಂತೆ ಧವಳೇಕ್ಷುಗಳ ಗದ್ದೆ ರಾಜಿಸುತಿಹುವು (ಶಂಪಪ್ರ. ೬-೭೪). ೨. ಧನುಸ್ಸಿನಿಂದ ಬಾಣಪ್ರಯೋಗ ಮಾಡುವ ಕೌಶಲ : ಧನುರ್ವಿದ್ಯೆ : ಮೂಲಬಲಮಿಲ್ಲದ ತುಬಿಲಸಂದನಂತೆ ಬಿಲ್ಲೊಳ್ಕೊಟ್ಟ ನಾಗಿ (ಕಾಂಶಕ್ತಿ. ೪-೩೦ ಪ). ೩. ಬಿಲ್ಲಿನ ಆಕಾರವಾದುದು : ಜೊನ್ನಿರುಳ್ ಭೂಮ್ಯೇವಸಾಗರಂಗಳನೊಂದುವಮಾಳ್ಪಂತೆ ಬೆಸೆದಪ್ಪಿದುದು, ಮುಡಿದ ಬಿಲ್ದಿಂಗಳಿಂದೊಪ್ಪಿ (ಶ್ರೀಣಪಪ್ರ. ೩೩೦-೩೯೦). ೪. ಬಿಲ್ಲಾರರ ಸೈನ್ಯ : ಧನುಸ್ಸನ್ನು ಹಿಡಿದ ಸೇನೆ : ಸರಳ ಪೊದಪ್ಪ ಬಿಲ್ಲರಿಯ ಕೋಳ್ಗಿರ ಲಾಜದೆ ಬಿಲ್ ತೆರಳ್ದು ದುರ್ಗರಹಯಪುಬ್ಬಿ ಸಂದಣಿಸಿ ಸಂದಣಿ ಕೋಬ್ಬುದಿಗೊಂಡುದು (ಕಂಕರಾ. ೩-೭೦). ೫. ಒಂದು ಬಗೆಯ ಮರ : ತಂಡಸು ಬಿಳಿಲ್ಬಿಲ್ಲತ್ತಿ ಬೇವತ್ತಿ . . . ಕೆಕ್ಕಮ್ಮರಂ ಎಂಬೀ ಮರದುಱುಗಲಿಱುಂಬಿನಿಂದತಿಗಹನವೆನಿಪ ಗಹನಾಂತರದೊಳಗೆ (ಪಾರ್ಶ್ವಪು. ೧೨-೩೬). 'ಬಿಲ್ವರ್‌೧' ಪರಾ. ೬. [ಜೈನ] ನಾಲ್ಕು ಪೊಳಗಳ ಎತ್ತರದ ಒಂದು ಅಳತೆ : ನಾಲ್ಕು ನಾಲ್ಕುಂ ಬಿಲ್ಲಿಡಿಯಪ್ಪ ಮೂಱುಂ ಪೀಠಂಗಳ ಮೇಲೆ (ಪಾವುಂಪು. ೪೩) ; ಸಮನಿಕ್ಕುಂ ಮುನ್ನ ಮಾದ್ಯಕ್ಷಿತಿಯೊಳಿಯಿಂದೇಱುಬಿಲ್ ಮೂಱುಹಸ್ತಂ ಸಮಸಂದಾಱಿಂಗುಲಂಗಳ್ ನಿರಯಜರ್ಗೆ ತನೂತ್ಸೇಧಂ (ಪರ್ಧಪು. ೦೩-೭) ; ದೇಹ ಮಿರ್ಧಾಸಿರ ಬಿ[ಕಾಕಾಂ.ವಿ]ಲ್ ಒಳೆಯೆ ಸುಧಾಸಾರಮನಾಮಳಕಫಲ ಪ್ರತಿಮಮುಂ ದಿನಾಂತರಮುಂಬರ್ (ಶಂಶಾಮಾ. ೦-೬೬). 'ಧನು' ಪರಾ. ಬಿಲು : ೧. ಪರಶು ಬಿಲು . . . ಸುರಗಿ ಮೊದಲಾಗೆ ಮೂವತ್ತೆರಡಾಯುಧಮಂ . . . ಪೂಜಿಸಿ (ಧರ್ಮಾಮ್ಯ. ೨-೧೨೬) ; ಅಖಿಳಯಾವವಜಾಲವೆಂದುದು ಬಿಗಿದ ಬಿಲುಗಳ ಸೆಳೆದಡಾಯುಧದಿ (ಕುವಾ.ಸ. ೮-೪೬). ಬಿಲ್ಲು೧ : ೧. " ಅಸ್ತ್ರಂ . . . ಬಾಣಾಸನಂ, ದ್ರುಣಾ-ಈ ೯ ಬಿಲ್ಲು " (ಪಡಾಪು. ೬೬-೪೦೦); ಕರ್ಬಿನ ಬಿಲ್ಲ ದೊರೆಯೆನಿಪ ಪುರ್ವಿನಿಂ ನಗೆಮೊಗದ ಚೆಲ್ವಿಸೆಯೆ (ಆಪಕ್ತಿ. ೪-೬); ನಾರಿ ಹಱಿಯಿತ್ತು ಬಿಲ್ಲುಮಱಿಯಿತು (ಅಪಕಂ. ೦೨೨-೨೩೭) ; ಮದನಂ ಗರ್ಜಿಸಿ ಬಿಲ್ಲುಮಂ ಸರಲುಮಂ ಕೈಕೊಂಡು ಬಂದಾರ್ದು (ಪಂಪಾಕ. ೪೦). ೬. ಮೊದಲ ನಾರಕರ ದೇಹೋತ್ಸೇಧಮೇಱು ಬಿಲ್ಲು ಮೂಱು ಮೊಱನುಮಾಱಿಂಗುಲಮುಮಕ್ಕುಂ (ಸುಳುಪಪ್ರ. ೦೦-೧೭ ಪ). ೭. (ದೂರವನ್ನು ತಿಳಿಸುವ) ಒಂದು ಅಳತೆ : ಈಡಿಱಿದನಂಬಿನಿಂ ಪಾರ್ಥನ ವರೂಥಮಂ ಕೂಡ ಹಿಂಭಾಗಕ್ಕೈಸೂಱು ಬಿಲ್ಲಂತರಕೆ ಪೋದುದು (ಕೃಷ್ಣಾ. ೦೪-೧೨). ೮. ಕಾಮನ ಬಿಲ್ಲು ; ಇಂದ್ರಧನು : ಬಿಲ್ಲು ಮೂಡಿದ ಮೋಡ ಸುರಿಯುತ್ತಿರುವುದು ! (ಇಂಗೀತ. ೦೨-೦೩). ೯. (ಆಲಂ) ನವ್ರನಾಗಿರುವ ವ್ಯಕ್ತಿ : ವಿನೀತನಾದ ವ್ಯಕ್ತಿ : ಕಲ್ಲಾಗಿಯಿರ ಬೇಕು ಕಠಿಣಭವತೊಜಿಂಗೊಳಗೆ ಬಿಲ್ಲಾಗಿಯಿರಬೇಕು ಬಿಲ್ಲವರೊಳಗೆ (ಪುಕಂಪ. ೦-೩೨-೦). ೧೦. ಪಿಟೀಲನ್ನು ಬಾರಿಸುವ ಕಮಾನು: ತಂತಿಗಳ ಮೇಲೆ ಬಿಲ್ಲನ್ನು ಕವಿಪರೆಗೆ ಸೆಳೆದೂಸೆಳೆದೂ ಉಜ್ಜುತ್ತಿದ್ದನು (ರಾಹುಶ್ರ. ೬೦). ೧೧. [ಜ್ಯೋತಿ] ಹನ್ನೆರಡುರಾಶಿಗಳಲ್ಲಿ ಒಂಬತ್ತನೆಯದು ; ಧನುಸ್ಸು : ಬಿಲ್ಲನೇಱುಗುರುವು ತಲ್ಲಣವು ಪಿರಿದಕ್ಕು (ಸರ್ವಜ್ಞ. ೦೩೬೬). ವಿಲ್ : ೧. ×× ಗಮನಮಂ ನೋರ್ಬಂನ್ತೆವಿಲ್ಲೊಬ್ಬಿ ××× ನೀಟ್ದೂತನೆಂದೀಯಾ ××× (ಸಾಸಾ. XI–i. ೦೦-೨೦; 864) ; ಪಲರನ್ ×× ಎಚ್ಚು ವಿಲ್ಲುಜ್ಜಿದೊಡೆ . . . ಪಲರನೆಱಿದು ಸಗಮೇಱಿದನ್ (ಪ್ರ. X. ೬೮೪. ೩೨-೩; 870 ?) ; ಕಂಗಳ ಬಲೆ ಕಟಾಕ್ಷಂಗಳ ಬಾಣ ಭೃಂಗಂಗಳ ವಿಲ್ವೆಱಿಸೊಸಲ ಬಿಂಗದೆ ಬಡಿಕೊಂಬು ನಗೆತುನಿಯಿಂ ಸ್ತ್ರೀಜನಂಗಳು ಬೇಂಟೆಯಾಡುವರು (ಕಮುಸಾಂ. ೩-೬೧).

ಬಿಲ್ಲಂಕಾಜಿ = ಧನುರ್ವಿದ್ಯೆಯಲ್ಲಿ ನಿಪುಣನಾದವನು : ಒಂದು ಬಿರುದು : ರಣರಂಗನೀಜಿನುಂ ಬಿಲ್ಲಂಕಕಾಜಿಸುಂ ಕಂಣ್ಮಂಬಿನಾಥನುಂ . . . ಅದೆಂತುವೊಪ್ಪುವನುಂ (ಪ್ರ. VI. ಕುಂಕ್ರ. ೩೧-೩೪ ; 1154). ಬಿಲ್ಲ ಕೊಪ್ಪು = ಬಿಲ್ಲಿನ ತುದಿ ; ಗೊಲೆ : "ಕಾರ್ಮುಕಕೋಟಿ, ಆಟನಿಃ — ಈ ೨ ಬಿಲ್ಲ ಕೊಪ್ಪು" (ಹರಾಹು. ೬೬-೩೦೧) : ನಾರೀಚೋರ ನಡೆನಡೆ ಯೆನುತ ಶಿವಿದನು ಬಿಲ್ಲ ಕೊಪ್ಪಿನಲಿ (ಕುವಾ.ಗ. ೨೨-೩೬) : ಅಲ್ಲಿ ಶಿವನು ಬಿಲ್ಲ ಕೊಪ್ಪಿಗೆ ನೆಮ್ಮಿದಾತನಾಗಿ ಮುಗುಳುಸಗೆಯಿಂದ ತ್ರಿಪುರವ ನೋಡಲು (ಕೃರಾ. I. ೩೦). ಬಿಲ್ಲ ಜಾಣ=ಧನುರ್ವಿದ್ಯೆಯಲ್ಲಿ ನಿಪುಣನಾದವನು.—ಕೌಶಲ್ಯವನ್ನು ಹೊಂದಿದವನು : ಕನಕಕಲಶಧ್ವಜನುಮೆನಿಸಿದ ಬಿಲ್ಲ ಜಾಣಂ ದ್ರೋಣನಬಾವಿನೊಳಂ . . . ಸುಯೋಧನಂ ಚಿಂತಾಕ್ರಾಂತನಾಗಿ (ಗದಾಹು. ೨-೦೦ ಪ). ಬಿಲ್ಲ ನಾರಿ = ಧನುಸ್ಸಿನ ಹಗ್ಗ : ಪೆದೆ : "ಬಿಲ್ಲ ನಾರಿಯೊಳು ಸುರಗುರುವಿನೊಳು ತುರಗದೊಳಗೆಲ್ಲ ಜೀವವೆನಿಕ್ಕು" (ಪುಂಗಣಾ. ಪುಡಕೆ ದೈವ ಮೊಜ ದೈವ ಬಿಲ್ಲ ನಾರಿ ದೈವ ಕಾಣಿರೋ (ಪಸಪ. ೫೬೨). ೦೩೦-೩೩) ; ಬಿಲ್ಲ ಬಂಟ = ಬಿಲ್ಲ ಜಾಣ : ಕಲಿ ಪಂದಿಯೊಂದು ಕಟ್ಟುಬ್ಬಟೆಯಿಂ ಮೆಲ್ಲನೆ ಪೊಱಡುತ್ತಿರೆ ಬಂದಲ್ಲೂರ್ವಂ ಬಿಲ್ಲ ಬಂಟನಿರ್ಮಂ ಮಜಿಯೊಳ್ ಮುಂಬಂದೆಚ್ಚೊಡೆ (ತಪ್ರಾ.ರ. ೪-೧೪). ಬಿಲ್ಲ ಬಲ್ಮೆ, ಬಿಲ್ಲ ಬಲುಮೆ = ಬಿಲ್ಲುಗಾರಿಕೆಯ ಚಾತುರ್ಯ.—ನೈಪುಣ್ಯ : ನೋಟ ಮನಂಗನ ಬಿಲ್ಲ ಬಲ್ಮೆಯಂ ಪಡೆಯೆ (ಆಂಪು. ೨-೪) ; ಬಿಲ್ಲ ಬಲ್ಮೆಯುಂ ಕುಲಮುಂ ನಿರ್ವ್ಯಾಜಂ ಮಸುಬ್ದುವು (ಗದಾಹು. ೨-೦೬) ; ಬಿಲ್ಲ ಬಲುವೆಂ ಯದೆನ್ನ ಗಂಡಸೊಳಲ್ಲದಾರಿಗೆ ಹೇಳು ಬೌಪಟಪಲ್ಲತನ (ಕೂರಾ. ೪-೩-೦೯). ಬಿಲ್ಲ ಬಲ್ಲಹ = ಬಿಲ್ಲ ಜಾಣ : ಕೋಲ ಮಳೆಯುಂ ಕಱಿದರ್ ವಿಗೆ ಬಿಲ್ಲ ಬಲ್ಲಹರ್ (ಕಲ್ಕಾ. ೨೬೭). ಬಿಲ್ಲ ಬಿತ್ತೈಗ = ಬಿಲ್ಲ ಜಾಣ : ಬಿಲ್ಲ ಬಿತ್ತೈಗರ್ ಕಡುಪೊತ್ತುಂಬಱಿಯದೆ ತಮ್ಮೊಳ್ ಸಲೆ ಸುರಿಗಱಿದಬ್ಬರ ವಂಧ್ಯಮಲ್ತೆ ವೀರೋದ್ರೇಕಂ (ಕಂವ್ರಪು. ೧೦-೭೧). ಬಿಲ್ಲವ್ಯ=ಬಿಲ್ಲಾಳ್ : ಕುದುರೆ ತಗುಳ್ದುವಾ ದೆಸೆಯ ಬಿಲ್ಲವರಂ (ಕಪಂಚ. ೦-೦೨೦) ; ತೆಗೆಸಿದರು ಸೇನೆಯನು ನೂಕಿದರಂದು ಬಿಲ್ಲವರ (ಕುವಾ.ಭೀ. ೪-೦೦). ಬಿಲ್ಲ ಹಬ್ಬ = ಧನುಸ್ಸನ್ನು ಪೂಜಿಸುವ ಹಬ್ಬ : ಬಿಲ್ಲ ಹಬ್ಬವೆನುತ್ತ ಧರೆಯೊಳಗೆಲ್ಲ ಬೊಬ್ಬಿಱಿದಾಡುತಿರೆ (ಪಧಾಗ. ೦೦-೪೭-೪೬); ಬಿಲ್ಲ ಹಬ್ಬದ ಚೆಲುವ ಬಳಿಕಾ ಮಲ್ಲಯುದ್ಧದ ದಂಡಿಯನು ಕಂಡಲ್ಲದೀ ಬಲ ಕೃಷ್ಣರಿಹರೇ ಕೇಳಿಲಂಪಟರು (ಆಕೃಕ. ೩-೩).

. [ದೇ.॥ ತಮಿ. ಮಲ. ಕೋಲಾ. ಪರ್ಜಿ. ವಿಲ್ ; ತುಳು. ಬಿಲ್ಲು, ಬಿರು; ತೆಲು. ವಿಲು, ವಿಲ್ಲು, ವಿಲ್ ; ಕೂಗ. ವಿಲು, ವಿಡು; ಕುವಿ. ವೆಲ್ಲೂ ; ಬ್ರಾಹುಈ. ಬಿಲ್]

ಬಿಲ್‌ಕುಲ್, ಬಿಲ್‌ಖುಲ್ (ಅ). ೧. ಸುಪೂರ್ಣವಾಗಿ ; ಪೂರ್ತಿಯಾಗಿ : ಇದೆಲ್ಲಾ ಬಿಲ್‌ಕುಲ್ ಸುಳ್ಳು (ಸರ್ವಕುಂ. ೨೮೬). ೨. ಖಡಾಖಂಡಿತವಾಗಿ : ಅವಳು ಬಿಲ್‌ಕುಲ್ ಆಗದೆನ್ನುತ್ತಾಳೆ (ಪುಕಥು. ೪೬೦). ಬಿಲ್‌ಖುಲ್ : ೨. ನಾನಂತೂ ಬಿಲ್‌ಖುಲ್ ಬರೊಲ್ಲ (ರಾಗಿ. ೧೦೩); ಮೊದಲು ಬಿಲ್‌ಖುಲ್ ಆಗುವುದಿಲ್ಲವೆಂದು ಜೋರು ಮಾಡಿ . . . ಅಪರ ಮಾತನ್ನೆಲ್ಲಾ ಕೇಳಿ ನನಗೆ ವರದಿ ಮಾಡಬೇಕು (ಕಬಿ. ೦೦೦).

[←ಅರ. ಬಿಲ್ಕುಲ್ಲ್ ; ಟರ್ಕಿ. ಬಿಲ್‌ಕುಲ್ಲ್ ; ಹಿಂ. ಬಿಲ್‌ಕುಲ್, ಬಿಲ್ಕುಲ್ ; ಮರಾ. ಬಿಲ್‌ಕುಲ್, ಬಿಲ್‌ಕೂಲ್, ಬಿಲ್ಕುಲ್, ಬಿಲ್ಕೂಲ್]

ಬಿಲ್‌ಖುಲ್ 'ಬಿಲ್‌ಕುಲ್' ನೋ.

ಬಿಲ (ನಾ). ೧. ಆಳವಾದ ಹಳ್ಳ ; ಕುಳಿ ; ಕೊಳ್ಳ : "ನಿಮ್ನಂ, ಅಗಾಧಂ, ಗರ್ತಃ, ಶ್ವಭ್ರಂ, ಸುಷಿರಂ, ಬಿಲಂ . . . ದರಃ — ಈ ೧೫

ಕುಟಿ" (ಹಲಾಯು. ೦೦೩-೨); ಬೇತಾಳಂಗಳ್ ಮೊಱೆದು ತೆಱೆದು ಬಾಯ್ಗಳನಾ ಪಾತಾಳಬಿಲಂಗಳವೋಲ್ ... ಕುಣಿಯೆ ಭಯಮಯನಾದೆಂ (ಕಬಿರಾ. ೩-೦೯೪); ಇದು ಪಾತಾಳಬಿಲಕ್ಕೆ ಬಾಗಿಲಿದು ದಲ್ ಘೋರಾಂಧ ಕಾರಕ್ಕೆ ಮಾಡಿದ ಕೂಪಂ(ಸಂಪರಾ. ೧೩-೬೨); ಮಾರಿಯ ದಿಂಡುಗೆಡಹುವೆ ನೆನುತ ತೆರಳಿದ ಕುಂಭಿನಿಯ ಬಿಲಕೆ (ಕೌಶಿರಾ. ೧೯-೩೩). 'ನರಕಬಿಲ' ಪರಾ. ೨. (ಇಲಿ, ಮೊಲ, ಹಾವು ಮುಂತಾದುವು ವಾಸಕ್ಕಾಗಿ ನೆಲದಲ್ಲಿ ಮಾಡಿಕೊಂಡಿರುವ) ಡೊಗರು; ಹೋರು; ರಂಧ್ರ: ಬಿಲದೊಳಗಿರ್ದ ಇಲಿಯಂ ತೆಗೆವಂತೆ (ಪಂಪತಂ. ೦೫೭-೯); ಬಿಲದೊಳಗಣ ಇಲಿ ಹುತ್ತದೊಳಗಣ ಹಾವು ಇತ್ತಂಡವು ಕೂಡಿ ಮನೆಯೊಳಗಣ ಬೆಕ್ಕ ಮುರಿಯಿತ್ತು (ಬಬ್ಬಿಣಾ. ೨೦-೪೪); ಬಿಲ ಸಿಕ್ಕೂಂತ ಹುಲಿ ನುಗ್ಗೋಕಾಗುತ್ತೆ! (ಬುರಂಪಾ. ೬೯). ೩. ಗುಹೆ; ಗವಿ: ಭೂತಂಗಳಾತನನೊಂದುಬಿಲ ದೊಳಿಕ್ಕಿ ಕಲ್ಲಂ ಕವಿದೊಡೆ (ಪಾಪುಂಪು. ೦೮೮); ನೀನೀ ಬಿಲನ ಬಾಗಿಲ ಕಾದಿರೆನುತೊಳಹೊಕ್ಕನಾ ವಾಲಿ (ತೊರರಾ. ೪-೨-೨೬). ೪. ಹೊರಕಿಂಡಿ: 'ಬಿಲದ್ವಾರ' ಪರಾ. ೫. ಸ್ತ್ರೀಯ ಇಂದ್ರಿಯನಾಳ; ಯೋನಿನಾಳ. ೬. ದೇವೇಂದ್ರನ ಕುದುರೆ; ಉಚ್ಚೈಃಶ್ರವಸ್ಸು. [ಸಂ.]

ಬಿಲಂದರ (ನಾ). ಮೋಸಗಾರ; ವಂಚಕ: ಮಧುರಾದಾಸನೆಂದರೇನು ಸಾಮಾನ್ಯನೇ. ಪಕ್ಕಾ ಬಿಲಂದರನಿರುವನು (ಕರ್ಣಿಪಿ. ೦೫).

[←ಮರಾ. ಬಿಲಂದರ್, ಬಿಲಿಂದರ್]

ಬಿಲಂದರಿ$_1$ (ನಾ). ಮೋಸಗಾರಿಕೆ; ವಂಚಕತನ: ಮೊದಲಿನಂತೆಯೇ ಬಿಲಂದರಿಯಾದ ಮುಖಚರ್ಯೆ. ಆದರೆ ವ್ಯಥೆಗೊಂಡಂತೆ ಅವನ ಕಣ್ಣು ಕಂಡವು (ಬರುಗಾ. ೩೫). [<ಬಿಲಂದರ]

ಬಿಲಂದರಿ$_2$ (ನಾ). (ಉಕ) ೧. ಮೋಸಗಾತಿ; ವಂಚಕಿ. ೨. ಚತುರೆ; ನಿಪುಣೆ: ಆಕೆ ಬಿಲಂದರಿಯಾದ್ದರಿಂದ ಇಕ್ಕಟ್ಟಿನಿಂದ ಪಾರಾದಳು (ರೂಕಿ). [ಬಿಲಂದರ + — ಇ$_2$]

ಬಿಲಂಬುಗು (ಕ್ರಿ). ರಂಧ್ರವನ್ನು ಪ್ರವೇಶಿಸು: ಗಱೆವೆರಸು ಬಿಲಂ ಬುಗುವೆನೆಂಬ . . . ಬೆಳ್ತನಮಕ್ಕುಂ (ರರ್ಮಾಮ್ಯ. ೦೪-೦೩೪).

[ಬಿಲ + ಪುಗು (<ಪೊಗು)]

ಬಿಲಚರ (ಗು). ಬಿಲಗಳಲ್ಲಿ ಓಡಾಡುವ; ಡೊಗರುಗಳಲ್ಲಿ ಸಂಚರಿಸುವ: ಕಿಱುವೇಂಟೆಗಾಱರ್ ಇಲಿ ಬೆಳ್ಳಿಲಿ ಮೊದಲಾದ ಬಿಲಚರಪ್ರಾಣಿಗಳಂ ತಂದು ಮುಂದಿರಿಪುದುಂ (ಪಕಪಂ. ೬-೨). [ಸಂ.]

ಬಿಲದುರ್ಗ (ನಾ). (ಆಲಂ) ರಹಸ್ಯಸ್ಥಾನ; ದುರ್ಗಮಪ್ರದೇಶ: ಯಕ್ಷಿಣಿಯರಂ ಬಯಸಿ ಮಾಡುವ ಜಪಂಗಳಿಂ ಬಿಲದುರ್ಗಮಂ ಪೊಕ್ಕು ಪಡೆವ ಶಾಪಂಗಳಿಂ (ಕಾದಂಕಾ. ೨೬೦). [ಸಂ.]

ಬಿಲದ್ವಾರ (ನಾ). ೧. ಗುಹೆಯ ಬಾಗಿಲು; ಗುಹಾಮುಖ: ಬಿಲಕ್ಕೆ—ಬಿಲದ್ವಾರ, ಬಿಲಸರ್ಗ (ಬಿಲಸಗ್ಗ), ಪೆರ್ಬಿಲ (ಕಮರ. ೨೯೮ ಪ್ರಯೋ); ಕಾಯುತಿಹನಣ್ಣನಾಣತಿಯಂತೆ ಸುಗ್ರೀವನಾ ಬಿಲದ್ವಾರಮಂ (ಶ್ರೀರಾಮಾ. ೨೭೯-೪೯). ೨. ಹೊರಕಿಂಡಿ: ಪದಿನಾಱು ದಿಡ್ಡಿ ಬತ್ತೀಸ ಬಿಲದ್ವಾರ ವಿಧುಮಿತ್ರದುಪಲದಿಂ ಬಿಗಿದ ರುಧಿರಾಪುರದಾಳುವೇರಿಯ ಸೌಭಾಗ್ಯ ದುದಯವನೇನ ಬಣ್ಣಿಸುವೆ (ಮೋಹತ. ೨೦-೦೪). [ಸಂ.]

ಬಿಲಮಾರ್ಗ (ನಾ). ಕಂದರದ ದಾರಿ; ಕೊಳ್ಳದ ಹಾದಿ,—ಮಾರ್ಗ: ಬಲವೈರಿಸುತನ ನಂದನನಾ ಘಣೆಲೋಕಕೆ ತಳತಂತ್ರಸಹಿತೈದಿ ಬಂದ ಬಿಲಮಾರ್ಗವೆಂದೆನಲಾ ಪುರದಗಳು ಕಣ್ಗೊಳಿಸಿದುದು (ಕಂಪಪಿ. ೨-೬೦). [ಸಂ.]

ಬಿಲವರ 'ಬಿಲ್ವರ$_2$' ನೋ.

ಬಿಲವರಗ (ನಾ). ಒಂದು ಬಗೆಯ ಸೊಪ್ಪು: ಸೊಪ್ಪುಗಳು . . . ದೊಡ್ಡಬಸಲಿ, ಬಿಲವರಗ, ಬಿಳಿಸಾಸವೆ, ಕಾರೆ (ನಮ್ಮಪು. ೨೩೭). [?]

ಬಿಲವಾರ 'ಬಿಲ್ವರ$_1$' ನೋ.

ಬಿಲಸಗ್ಗ, ಬಿಲಸರ್ಗ (ನಾ). ೧. ನರಕ. ೨. ದೊಡ್ಡ ಬಿಲ; ಗವಿ: ಬಿಲಸಗ್ಗಂ ಸವಿ ಸಂದಿ ಡೋಣಿ ಪರಿಚಾರೇರುಂ ಪುಗಿಲ್ವಟ್ಟೆ . . . ರಯ್ಯಮಾ ಬೆಟ್ಟದೊಳ್ (ಸೂಕ್ತಿಸು. ೩-೨). **ಬಿಲಸರ್ಗ**: ೨. ಬಿಲಕ್ಕೆ—ಬಿಲದ್ವಾರ, ಬಿಲಸರ್ಗ (ಬಿಲಸಗ್ಗ), ಪೆರ್ಬಿಲ (ಕಮರ. ೨೯೮ ಪ್ರಯೋ).

[< ಸಂ. ಬಿಲಸ್ವರ್ಗ]

ಬಿಲಸರ್ಗ 'ಬಿಲಸಗ್ಗ' ನೋ.

ಬಿಲಹರಿ (ನಾ). [ಸಂಗೀತ] ಒಂದು ರಾಗದ ಹೆಸರು: ಈ ಸಮಸ್ತ ರಾಗಂಗಳೊಳಗೆ ರಾಮಕ್ರಿ . . . ಬಿ[ಪಾಕಾಂ. ಮ]ಲಹರಿ ಧನ್ಯಾಸಿ ಆರಭಿ ಎಂಬ ಮೂವತ್ತೆರಡುರಾಗಂಗಳೇ ಲೋಕಪ್ರಸಿದ್ಧಮಾಗಿಹವು (ಏವೇಳ. ೦೮೯); ಬಿಲಹರಿ :— ೨೯ನೇ ಮೇಳಕರ್ತ, ಧೀರಶಂಕರಾಭರಣದಲ್ಲಿ ಜನ್ಯ (ಸಂಗೀಪಂ. ೦೩೬). [ಸಂ.]

ಬಿಲಾಕ (ನಾ). ಒಂದು ಬಗೆಯ ಔಷಧೀಸಸ್ಯ: ರಕ್ತಗಂಧಕ, ಬಿಲಾಕ, ಚೆಂಗಣಿಗಿಲೆ, ಶ್ವೇತಗುಂಜಿ (ಏಪ್ಕಪಿ. ೯೨). [?]

ಬಿಲಾರ 'ಬಿಲ್ವರ$_1$' ನೋ.

ಬಿಲಾವಲ್ (ನಾ). [ಸಂಗೀತ] ಒಂದು ರಾಗದ ಹೆಸರು: ತಿಲಂಗ್, ಬಿಲಾವಲ್ ಮುಲ್ತಾನಿ, ರಾಮಕಲಿರಾಗಗಳು ಕ್ಷಯರೋಗವನ್ನೂ . . . ಗುಣಪಡಿಸುವುವೆಂಬ ಭಾವನೆ ಉತ್ತರಭಾರತದಲ್ಲಿದೆ (ಭಾರದ. ೫೪೪).

[← ಹಿಂ. ಬಿಲಾವಲ್; ಮರಾ. ಬಿಲಾವಲ್, ಬಿಲಾವರ್]

ಬಿಲಿ 'ಬಿಲ್$_1$' ನೋ.

ಬಿಲಿಗಿ 'ಬಲಿಗೆ' ನೋ.

ಬಿಲಿತರ್ (ಕ್ರಿ). ಕೊಂಡು ತರು; ಖರೀದಿಸು: ಇಂದು ದೇವತೆಗೆಂದು ನೀ ಬಿಲಿತಂದ ಕುಱಿಯಂ ತಾರದಡೆ ನಾವಿಂದೊಸಗೆಯಂ ಮಾಡಲಮ್ಮೆವು (ಬಸಪು. ೨೯-೨೪). [ಬಿಲಿ (< ಬಿಲ್$_1$) + ತರ್]

ಬಿಲು 'ಬಿಲ್$_2$' ನೋ.

ಬಿಲುಕುಡಿ 'ಬಿಲ್ಕಡೆ' ನೋ.

ಬಿಲುಕೊಡೆ 'ಬಿಲ್ಕಡೆ' ನೋ.

ಬಿಲುಗಡೆ 'ಬಿಲ್ಕಡೆ' ನೋ.

ಬಿಲುಗಾರ 'ಬಿಲ್ಗಾಱ' ನೋ.

ಬಿಲುಗಾಱ 'ಬಿಲ್ಗಾಱ' ನೋ.

ಬಿಲುಗಾಱತನ 'ಬಿಲ್ಗಾಱತನ' ನೋ.

ಬಿಲುಗೊಳು 'ಬಿಲ್ಗೊಳ್' ನೋ.

ಬಿಲುಜಾಣ 'ಬಿಲ್ಜಾಣ' ನೋ.

ಬಿಲುಜಾಣತನ (ನಾ). ಧನುರ್ವಿದ್ಯೆಯಲ್ಲಿ ಹೊಂದಿರುವ ಪ್ರೌಢಿಮೆ: ಆವ ಬಲು ಬಿಲುಜಾಣತನದ ಮಹಾವಿಚಿತ್ರಪ್ರೌಢಿಯೋ (ತೊರರಾ. ೦-೦೦-೦೯). [ಬಿಲು (< ಬಿಲ್$_2$) + ಜಾಣತನ (< ಜಾಣ್ತನ)]

ಬಿಲುಜಾಣಿಕೆ 'ಬಿಲ್ಜಾಣಿಕೆ' ನೋ.

ಬಿಲುಜೇವಡೆ (ನಾ). ಬಿಲ್ಲಿನ ಹೆದೆಯ ದನಿ; ಧನುಷ್ಟಂಕಾರ: ಭುಜದ ಹೊಯ್ಲಿನ ಹರಿಗೆಗಳ ಗಜಬಜದ ಬಿಲುಜೇವಡೆಯ ರವದಕ್ಕಜದ ಕಾಲಾ ಳೊವಗಿತು (ಕುಪ್ಯಾಶ. ೨-೪); ರಣದೊಳಗೆ ಬಿಲುಜೇವಡೆಯ ಬಲುಹಿಲ್ಲ (ತೊರರಾ. ೬-೦೯-೪೫). [ಬಿಲು (< ಬಿಲ್$_2$) + ಜೇವಡೆ$_2$(< ಜೇವೊಡೆ$_2$)]

ಬಿಲುಟಂಕಾರ (ನಾ). = ಬಿಲುಜೇವಡೆ: ಹರಿಯ ಬೊಬ್ಬೆ ರಥಾಶ್ವದಬ್ಬರ ನರನ ಬಿಲುಟಂಕಾರ . . . ಅರಿಬಲವ ತಿವಿದುದು (ಕುಪ್ಯಾಪ್ರೋ. ೦೪-೨೯).

[ಬಿಲು (< ಬಿಲ್$_2$) + ಟಂಕಾರ]

ಬಿಲುದನಿ 'ಬಿಲ್ದನಿ' ನೋ.

ಬಿಲುದಿರು 'ಬಿಲ್ದಿರುವು' ನೋ.

ಬಿಲುದಿರುವು 'ಬಿಲ್ದಿರುವು' ನೋ.

ಬಿಲುದುಡುಕು (ಕ್ರಿ). ಬಿಲ್ಲನ್ನು ಥಟ್ಟನೆ ಹಿಡಿ : ಶರಸಂಧಾನಕ್ಕೆ ಸಿದ್ಧವಾಗು : ಸೈಂಧವ ಬಿಲುದುಡುಕೆ ಮೋಹರಿಸಿದರು ಭೂರಿಶ್ರವಾದಿಗಳು (ಕುಸ್ಕಾಪ್ರೋ. ೯-೦೯); ಸರಳ ಸೂತ್ರದಲಹಿತವೀರರ ಶಿರವ ಸೂತ್ರಿಸಿ ಕಾಲ ಕಂಠನ ಕೊರಳಲಿಕ್ಕುವೆನೆನುತ ಬಿಲುದುಡುಕಿದನು ಸೌಮಿತ್ರಿ (ಕೊರಣಾ. ೩-೩-೦೨). [ಬಿಲು (< ಬಿಲ್$_2$) + ತುಡುಕು$_1$ (< ತೊಡಂಕು$_1$)]

ಬಿಲುದುದಿ (ನಾ). ಬಿಲ್ಲಿನ ತುದಿ. – ಕೊಪ್ಪು : ಕದಳಿ ಕಡವಮ್ಮಾವುಗಳ ಬಿಲುದುದಿಯಲಿಱಿದನು (ಕೊರಣಾ. ೩-೮-೫೦).
[ಬಿಲು (< ಬಿಲ್$_2$) + ತುದಿ]

ಬಿಲುದೆಗಹು (ನಾ). ಶರಸಂಧಾನದಲ್ಲಿ ಬಿಲ್ಲ ತಿರುವನ್ನು ಹಿಂದಕ್ಕೆ ಎಳೆಯುವಿಕೆ : ಬಿಲುದೆಗಹಿನಾಕರ್ಣಪೂರದ ಹಿಳುಕಿನನಿಲಜನಿರಲು ಸಿಂಹದ ಹೊಲನ ಹೊಗುವಿಭದಂತೆ ಹೊಱಕಾಲ್ಗೊಳುತಲಿರೆ ಕಂಡು . . . ತೆಗೆ ದೆಚ್ಚನಾ ಭೀಮ (ಕುಸ್ಕಾಪ್ರೋ. ೦೨-೩೦). [ಬಿಲು (< ಬಿಲ್$_2$) + ತೆಗಹು]

ಬಿಲುದೆಗೆ (ಕ್ರಿ). = ಬಿಲುದುಡುಕು : ದಾನವ ಕಾಳೆಗಕ್ಕನುವಾಗಿ ನಿಂದನು ಬಿಗಿದ ಬಿಲುದೆಗೆದು (ಕುಸ್ಕಾಪ್ರೋ. ೦೩-೪೬).
[ಬಿಲು (< ಬಿಲ್$_2$) + ತೆಗೆ$_1$]

ಬಿಲುಮುರಿ (ನಾ). (ಕರಾ) ವಿಷವಿಲ್ಲದ ಒಂದು ಬಗೆಯ ಚಿಕ್ಕ ಹಾವು.
[?]

ಬಿಲುರವ (ನಾ). ಬಿಲ್ಲಿನ ಹೆದೆಯ ಶಬ್ದ ; ಜ್ಯಾರವ : ಬಿಲುರವದ ಮೊಳಗಿನಲಿ ಕೃಷ್ಣನ ಫಲುಗುಣನ ಮೈಕಾಂತಿ ಮೇಘಾವಳಿಗಳಲಿ . . . ನಿಲುವ ಹಂಸವ್ಯೂಹವೆಲ್ಲಿಯದು (ಕುಸ್ಕಾಪ್ರೋ. ೦೦-೨೦).
[ಬಿಲು (<ಬಿಲ್$_2$) + ರವ$_1$]

ಬಿಲುವಡಿಕೆ (ನಾ). ಒಂದು ಬಗೆಯ ತೆರಿಗೆ : ನಾಡೊಳಗೆ ಬಿಲುವಡಿಕೆಯೇನು ಬಂದೊಡಂ ಕೋಗಿಲೂರ ಹಳಿಉಳೂರ ಹದಿಕೆಯ ಬಿಲ್ಲೇಶ್ವರ ದೇವರ ಧೂಪದೀಪಕೆ . . . ನಡಸಿ ಕೊಡುವರು (ಎಳ. VII, ಸಪ್ಪಗೆ. ೨೦-೩೯ ; 1262); ಹಂನಿರ್ಬ್ಬರು ಮಹಾಜನಂಗಳಿಗಂ ತಮ್ಮ ಬಿಲುವಡಿಕೆ ಮುಖ್ಯವಾಗಿ ಕಬ್ಬಿಲವಡಿಕೆ ಆವುದು ಬಂದಡಂ ಸರ್ವ್ವನಮಸ್ಯವಾಗಿ ಧಾರಾಪೂರ್ವಕಂ ಮಾಡಿಕೊಟ್ಟು ಬಿಟ್ಟ ಧರ್ಮ (ಸೌಇಇ IX – i ; ೩೩೦-೦೦; 1282). 'ಕಬ್ಬಿಲವಡಿಕೆ' ಹೋ. [?]

ಬಿಲುವರ 'ಬಿಲ್ವರ$_1$' ನೋ.

ಬಿಲುವರೆ 'ಬಿಲ್ವರ$_1$' ನೋ.

ಬಿಲುವಿಡಿ 'ಬಿಲ್ವಿಡಿ' ನೋ.

ಬಿಲುವಿದ್ದೆ 'ಬಿಲ್ವಿದ್ದೆ' ನೋ.

ಬಿಲುವಿದ್ಯ (ನಾ). = ಬಿಲ್ವಿದ್ದೆ : ಹರನು ಬಿಲುವಿದ್ಯವನು ಕೊಡು ತವೆ ಪರಶುರಾಮಂಗೆಂದನಧಮರಿಗೊರೆಯದಿರು ಸತ್ಪಾತ್ರಕಿದನಾದರಿಸಿ ಕಲಿಸೆಂದ (ಕುಸ್ಕಾಳ. ೬-೨). [ಬಿಲು (< ಬಿಲ್$_2$) + ವಿದ್ಯ]

ಬಿಲುವಿದ್ಯೆ 'ಬಿಲ್ಲುವಿದ್ಯೆ' ನೋ.

ಬಿಲುವೊಯ್ 'ಬಿಲ್ವೊಯ್' ನೋ.

ಬಿಲೇಶ (ನಾ). ಬಿಲದ ಒಡೆಯ ; ಹಾವು : 'ಬಿಲೇಶಭೂಷಣ' ಪರಾ. [ಸಂ.]

ಬಿಲೇಶಭೂಷಣ (ನಾ). ಹಾವನ್ನು ಆಭರಣವನ್ನಾಗಿ ಉಳ್ಳವನು ; ಸರ್ಪಭೂಷಣ : ಶಿವ : ಈಶ ಸೂರಿಯಕೋಟಿತೇಜಃಪುಂಜ ಬಿಲೇಶಭೂಷಣ ದೋಷನಾಶ . . . ಶರಣು (ಮೋಹತ. ೨೦-೩೯). [ಸಂ.]

ಬಿಲೇಶಯ (ನಾ). ೧. ಬಿಲದಲ್ಲಿ ವಾಸಿಸುವ ಪ್ರಾಣಿ ; ಹಾವು : ವಾಸುಗಿಯ ತಕ್ಷಕನನಂತನ ಮೈಸಿರಿಗಳುಡುಗಿದವು ಬಣಗು ಬಿಲೇಶಯಂಗಳ ಕಾಣೆನಿದಿರಿನಲುರಗಮರ್ದನನ (ಕೊರಣಾ. ೬-೦೬-೩೦) ; ಗಳಾನ್ವಿತ ಹಲಾಹಲ ಬಿಲೇಶಯಕಳೇವರವಿಳಾಸ (ರಾಜಕೇ. ೦೦-೦೦೦). ೨. ಇಲಿ. ೩. ಮೊಲ.
[ಸಂ.]

ಬಿಲೋರು (ನಾ). ಒಂದು ಬಗೆಯ ಖನಿಜಶಿಲೆ ; ಸ್ಫಟಿಕ : ಪರದೆಯ ಹೊರಮೈಯಲ್ಲಿ ಬಿಲೋರಿನ ಝಮಕುಗಳೊಳಗೆ ದಿಪಗಳು ರಾತ್ರಿಯಲ್ಲಿ ಬೆಳತನಕ ಉರಿಯುತ್ತಿರುತ್ತವೆ (ಮುಂಬಿಯಿ. ೬-೨೬). 'ಬಿಲ್ವರ$_2$' ಪರಾ.
[← ಅರ. ಬಿಲ್ಲಾರ್; ಮರಾ. ಬಿಲೋರ್, ಬಿಲ್ಲೋರ್]

ಬಿಲ್ಕಡೆ, ಬಿಲುಕುಡಿ, ಬಿಲುಕೊಡೆ, ಬಿಲುಗಡೆ, ಬಿಲ್ಕೊಡೆ (ನಾ). ಒಂದು ಬಗೆಯ ತೆರಿಗೆ : ಬೆಸದೆ ಬಿಲ್ಕಡೆಯ ಸುಂಕಾಧಿಪತಿಯೆನಿಸಿದ (ಮೊಂಕಶಾ. ೦೯೩೩, ಹಾಪೇರಿ. ೬೨-೨೯; 975); ತಮ್ಮ ನಡೆವ ಬಿಲ್ಕಡೆಯೆರಡಱೊಳಮೆರಡುಲಕಮಡಕೆಯ ಸುಂಕಮಂ ಕೆಱೆಯ ಕಲುಕಟ್ಟಿಂಗೆ ಬಿಟ್ಟ (ಕಇ. II, ೬-೩೦; 1072). **ಬಿಲುಕುಡಿ** : ತಪು ತವುಡಿ ದಣ್ಡವುಣ್ಡಿಗೆ ಹಾದರ ಹಸುಕರು ಸಂತಿಯಲು ಅಲ್ಲಾ ಕೂಡಿ ಬಿಲುಕುಡಿ (ಎಳ. IX, ಬೆಂಗಳೂ. ೬೦-೨೨; 1332). **ಬಿಲುಕೊಡೆ** : ವರಿಶಂಪ್ರತಿ ನಿಬಂಧವಾಗಿ ಸಲುವ ಗದ್ಯಾಣವೆರಡು ಯಾ ಬಿಲುಕೊಡೆಯಧಿಕಾರಿ ಬೊಪ್ಪಯ ದಂಣ್ಣಾಯಕರ ಹೆಗಡೆ . . . ಕೊಟ್ಟ ಗದ್ಯಾಣವೆರಡು (ಸೌಇಇ. IX – i, ೩೪೦-೦೦; 1226). **ಬಿಲುಗಡೆ** : ಅಂತು ಗ ೩೦ ॥ ೪ ॥ ಬಿಲುಗಡೆ ಪಾಲುಬೀಜ (ಎಳ. VIII, ತೀರ್ಥಹ. ೬೯-೦೯; 1681). **ಬಿಲ್ಕೊಡೆ** : ತಿಳಿವಳ್ಳಿಯ ಟ್ಟಾಣೆಯದ ಬಿಲ್ಕೊಡೆಯ ಅಧಿಷ್ಠಾಯಕಂ ರವಿಯುಪಯ್ಯನುಂ (ಸೌಇಇ. XX, ೩೯-೦೫; 1053) ; ವಡ್ಡರಾವುಳಮುಮೆರಡುಂ ಬಿಲ್ಕೊಡೆಯುಂ ಸರ್ವ್ವನಮಸ್ಯಮೆಂದು ಬಿಟ್ಟರ್ (ಎಳ. VII, ಕಿಲಾಂ. ೯೬-೩೦; 1103); ಬಿಲ್ಕೊಡೆ–ಇದು ಎರಡು ತೆರಿಗೆಗಳನ್ನು ಅಥವಾ ಸುಂಕಗಳನ್ನು ಸೂಚಿಸುತ್ತದೆ (ಕಶಾಲ. ೪೦೦).
[?]

ಬಿಲ್ಕಾಱ 'ಬಿಲ್ಗಾಱ' ನೋ.

ಬಿಲ್ಕುನಿಕ (ನಾ). ಒಂದು ಬಗೆಯ ಸಸ್ಯ : ಕಲ್‌ನಂದಿ, ಜಗಳಗಂಟಿ, ಬಿಲ್ಕುನಿಕ (ಪ್ಯುಜಿಗಿ. ೩೦-೬೦೨). [?]

ಬಿಲ್ಕೊಡೆ 'ಬಿಲ್ಕಡೆ' ನೋ.

ಬಿಲ್ಗಂಟೆ (ನಾ). ಬಿಲ್ಲಿಗೆ ಕಟ್ಟಿರುವ ಗಂಟೆ : ಕುಂಭಾಂಡ ಬಿರುದಿನ ಬಿಲ್ಗಂಟೆ ಢಣೆರೆನೆ ಕೊಂಡ ಕಾರ್ಮುಕವ (ಮೋಹತ. ೩೯-೨೯).
[ಬಿಲ್$_2$ + ಗಂಟೆ$_2$]

ಬಿಲ್ಗಲ್ (ಕ್ರಿ). ಧನುರ್ವಿದ್ಯೆಯನ್ನು ಕಲಿತುಕೊಳ್ಳು. – ಅಭ್ಯಾಸ ಮಾಡು : ಅಂತು ಬಂದು ವೈರಿಗಜಘಟಾವಿಘಟನನೊಳ್ ವಿಘಟಿಸಿ ಬಿಲ್ಗಲ್ನು (ಪಂಪಭಾ. ೨-೫೬ ಪ). [ಬಿಲ್$_2$ + ಕಲ್$_1$]

ಬಿಲ್ಗಲ್ಪಿ (ನಾ). ಧನುರ್ವಿದ್ಯೆ ; ಬಿಲ್ವಿದ್ಯೆ : ಪೊಱಮುಯ್ವಂ ತಾಗೆ ತಿಣ್ಣಂ ತೆಗೆನೆಱೆದಿಸೆ ಬಿಲ್ಗಲ್ಪಿ ತನ್ನೇಱೆನೊಳ್ ಕಣ್ದೆಱೆದತ್ತೆಂಬಂತುಂ . . . ಖಚರಪತಿ ಭರಂಗೆಯ್ದು ಕೆಯ್ವೋಗದೆಚ್ಚಂ (ಶಾಂತಿಪು. ೯-೯೨).
[ಬಿಲ್$_2$ + ಕಲ್ಪಿ]

ಬಿಲ್ಗಾರ 'ಬಿಲ್ಗಾಱ' ನೋ.

ಬಿಲ್ಗಾರತನ 'ಬಿಲ್ಗಾಱತನ' ನೋ.

ಬಿಲ್ಗಾರಿಕೆ 'ಬಿಲ್ಗಾಱಿಕೆ' ನೋ.

ಬಿಲ್ಗಾಳೆಗ (ನಾ). ಬಿಲ್ಲು ಬಾಣಗಳಿಂದ ಮಾಡುವ ಯುದ್ಧ : ಎರಡುಂ ಪಡೆಯ ನಾಯಕರ್ ಬಿಲ್ಗಾಳೆಗಂಗಾದುವಾಗಳ್ (ಪಂಪಭಾ. ೦೦-೬೦ ಪ) ; ಆಂ ಬಿಲ್ಗಾಳೆಗಮೆಂದೇ ಬಗೆದೆಂ ಬಾಯ್ಗಾಳಗಮನೀಗಳಱಿದೆಂ (ಶಾಂತಿಪು. ೯-೩೦ ಪ). [ಬಿಲ್$_2$ + ಕಾಳೆಗ]

ಬಿಲ್ಗಾಱ, ಬಿಲುಗಾರ, ಬಿಲುಗಾಱ, ಬಿಲ್ಕಾಱ, ಬಿಲ್ಗಾರ, ಬಿಲ್ಲುಗಾರ, ಬಿಲ್ಲುಗಾಱ (ನಾ). ಧನುರ್ವಿದ್ಯೆಯಲ್ಲಿ ಪಾರಂಗತನಾದವನಂ : ಬಿಲ್ಗಾಱನಂತೆ ನಾರಿಗಾಸೆ ಮಾಡದೆ (ಧರ್ಮಾಮೃ. ೩-೯೯) ; ಬಿಲ್ಗಾಱನ

ಕೈಯಂತೆ ಮಿಸುಪ ಸರದಿಸಳವಟ್ಟುಂ ಮಾಲೆಗಾಱನೆನಿಸಂ (ಕಬ್ಬಿಗಾ. ೬೧) : ಅರಿದೆನೆ ತೋಱಿದ ಕೈಚಳಕವನಿನ್ನು ಕಱುಹಿನ ಬಿಲ್ಗಾಱನೆನಿಸಿ (ಮೋಹತ. ೦೯-೩೯). **ಬಿಲುಗಾರ :** ಒಳ್ಳೆಯ ಬಿಲುಗಾರಗಿಲ್ಲವೊ ಬಡಿವಾರ (ಇಂಗಾಶ. ೬೬-೨೦). **ಬಿಲುಗಾಱ :** ವೀರನಹೆಯೋ ಪಾರ್ಥ ನಿನ್ನವೊಲಾರು ಬಿಲುಗಾಱರು (ಶುಪ್ಪಾರ್ಯ್ರೋ. ೧೪-೦೩) ; ಸಲುವುದು ಬಲರಾಮ ಕೈಚಳಕದಲಿ ನೀ ಬಿಲುಗಾಱರೊಳಗೆ ತಪ್ಪಲ್ಲ (ಮೋಹತ. ೯೦-೩೬). **ಬಿಲ್ಕಾಱ :** ದಿಂಡು ಕಾಱಂ, ಬಿಲ್ಕಾಱಂ, ಮೊನೆಕಾಱಂ (ಶಾಪಶೂ. ೦೭೦ ಉಪಾ). **ಬಿಲ್ಗಾರ :** ನಡೆದನಗೊ ಬಿಲ್ಗಾರ (ಕಾಂಡೂರ. ೯೨-೧೯೦) ; ಈ ನಾಲ್ವರು ನಾಯಕರುಗಳನ್ನು ಕೊಂದದ್ದು ಒಬ್ಬನೇ ಚತುರನಾದ ಬಿಲ್ಗಾರ (ಶಾಂತಲಾ. ೨೨೦). **ಬಿಲ್ಲುಗಾರ :** ಒಬ್ಬೊಬ್ಬ ಬಿಲ್ಲುಗಾರನಿಗೆ ಏಳು ಏಳು ಮಂದಿ ಹರಿಗೆಯವರನ್ನೂ ಸವರಿಸಿ ವ್ಯೂಹಂಗಳನ್ನು ಒಡ್ಡುತ್ತಿದ್ದರು (ಕೃಷ್ಣಾಭ್ಯ. ೨೩). **ಬಿಲ್ಲುಗಾಱ :** ಗಾಡಿವಡೆದತಿಬಿಲ್ಲುಗಾಱನೆ ಸುವ್ವಿ ಎಂದವರು ಪಾಡಿದರು (ಅಂಬಿಕ. ೨-೬೩); ಮನ ಬಂದ ಪರಿಯಲ್ಲಿ ಎಚ್ಚಾಡುವಾತ ಅರ್ತಿಕಾಱನಲ್ಲದೆ ಬಿಲ್ಲುಗಾಱನಲ್ಲವಯ್ಯ (ಶಿವಪ. ೪೨-೩೭). [ಬಿಲ್$_2$ + — ಕಾಱ]

ಬಿಲ್ಗಾಱತನ, ಬಿಲುಗಾಱತನ, ಬಿಲ್ಗಾರತನ (ನಾ). ಬಿಲ್ಲು ಬಾಣಗಳನ್ನು ಬಳಸುವ ಸಾಮರ್ಥ್ಯ ; ಧನುರ್ವಿದ್ಯೆಯ ಪ್ರೌಢಿಮೆ : ಅರರೆ ಬಿಲ್ಗಾಱತನದೇಳ್ಗೆಯೊಂತುಟೋ (ಕೃಷ್ಣಾಭ. ೨೨-೩೮). **ಬಿಲುಗಾಱತನ :** ಮನಗಲಿತನದಳವ ಬಿಲುಗಾಱತನದಳವ ಬಲಿಯುರೇ ನಮ್ಮೊಡನೆ ಮೆಚ್ಚಿಸಿ ಬಳಿಕ ಹಡೆಯಿರೆ ಬಿರುದ (ಶುಪ್ಪಾರ್ಯ್ರೋ. ೯-೩೦). **ಬಿಲ್ಗಾರತನ :** ಬೇರಿವನ ಗುಣಾಕೃತಿಗಳ್ಬೇರಿದು ಪನ್ನತಿಕೆ ಚಾಗ ಬಿಲ್ಗಾರತನಂ (ಪರತ. ೩೬-೬೭). [ಬಿಲ್ಗಾಱ + — ತನ]

ಬಿಲ್ಗಾಱಕೆ, ಬಿಲ್ಗಾರಿಕೆ, ಬಿಲ್ಲುಗಾರಿಕೆ (ನಾ). = ಬಿಲ್ಗಾಱತನ : ಅರಸನು ಪೊಸಬಿಲ್ಗಾಱಕೆಯನು ಕಲ್ತು ಧರೆಯೊಳು ಜಸವಡೆದಿಹನು (ತಂತ್ರಸಾಂ. ೦೫-೩). **ಬಿಲ್ಗಾರಿಕೆ :** ಎನಿತೊ ಸೋಜಿಗದ ಬಿಲ್ಗಾರಿಕೆಯ ಕೆಯ್ತಗಳ ಕಂಡಗೆ . . . ತಾನುಮಂತೆಸಗಬೇಕೆಂಬುವ ಸ್ಫೂರ್ತಿಯಾದರೆ ತಪ್ಪೆ (ಹಕ್ಕಿರ. ೦೭-೩೯). **ಬಿಲ್ಲುಗಾರಿಕೆ :** ಮನಮೆನ್ನ ಕಡುಗುತಿದೆ ತಂದೆಯಾಗದ ಬಿಲ್ಲುಗಾರಿಕೆಯ ಕಲಿಯೆ ! (ಹಕ್ಕಿರ. ೨-೦೦) : ಹೊಸದೊಂದು ಬಿಲ್ಲುಗಾರಿಕೆಯನ್ನು ತೋರಿದೆ (ಇಂಗಾಶ. ೦೩೦-೯೩).

[ಬಿಲ್ಗಾಱ + — ಇಕೆ]

ಬಿಲ್ಗೀಸು (ಕ್ರಿ). ಬಿಲ್ಲನ್ನು ಕೆತ್ತು, — ಹೆರೆ : ಮಾರ್ಗಣವಂ ಗಱಿಗಟ್ಟು ತಿರ್ಪ ಬಿಲ್ಗೀಸುವ ಬಾಣವಂ ತಿರುಪಿ ತಿರ್ದುವ . . . ವನೇಚರರಿಂ ಬಗೆಗೊಂಡುದಾ ವನಂ (ಪಗಪಿ. ೦೬-೦೬). [ಬಿಲ್$_2$ + ಕೀಸು$_1$]

ಬಿಲ್ಗೊನೆ (ನಾ). ಬಿಲ್ಲಿನ ಕೊನೆ ; ಗೊಲೆ ; ಕೊಪ್ಪು : ಎನ್ನೆಡಗೈಯ ಗುರ್ವಿಸುವ ಕರ್ಬಿನ ಬಿಲ್ಗೊನೆಯಲ್ಲಿ ಬಾರದಿರ್ಪನ್ನೆಗಂ . . . ಉಂಟು ತನ್ನ ಕಡುಸೊರ್ಕು ಬಱಿಕ್ಕದು ಪಾಱಿ ಪೋಗದೇ (ಕಬ್ಬಿಗಾ. ೦೯೦).

[ಬಿಲ್$_2$ + ಕೊನೆ$_2$]

ಬಿಲ್ಗೊಪ್ಪು (ನಾ). = ಬಿಲ್ಗೊನೆ : ಅಂದೆನ್ನ ಸುತ ಭೀಮನಂ ಮುಳಿದು ಬಿಲ್ಗೊಪ್ಪಿನಿಂದಿಱಿದ ಕರ್ಣನಯ್ಯನನಿಂದು ಕಾವಬೇಕೆಂದು (ಕಾವಸಂ. ೬-೬). [ಬಿಲ್$_2$ + ಕೊಪ್ಪು$_1$]

ಬಿಲ್ಗೊಲೆ (ನಾ). = ಬಿಲ್ಗೊನೆ : ಪೂಷಾದಿತ್ಯ ದಂತಂಗಳಂ ಜವದಿಂ ಬಿಲ್ಗೊಲೆಯಿಂದುದಿರ್ಚಿ. . . ಅಮರನಿವಹಮಂ ಭಂಜಿಸಿದಂ (ಕೃಷ್ಣಪಿ. ೩೭-೦೦೦). [ಬಿಲ್$_2$ + ಗೊಲೆ$_1$]

ಬಿಲ್ಗೊಳ್, ಬಿಲುಗೊಳು (ಕ್ರಿ). ಧನುಸ್ಸನ್ನು ಹಿಡಿ ; ಶರಸಂಧಾನಕ್ಕೆ ಸಿದ್ಧವಾಗು : ಅಂತು ವಿಕ್ರಮಾರ್ಜುನಂ ಬಿಲ್ಗೊಳಲುಂ ಭೀಮಸೇನಂ ಗದೆಗೊಳಲುಮಾಂಪುದರಿದು (ಸಂಶಕಾ. ೨-೯೦ ಪ) : ಎಕ್ಕಡಮಂ ಮೆಟ್ಟಿ ಬಿಲ್ಗೊಂಡು . . . ನಾಯಿಗಳ್ವೆರಸು ಸಿವಿಗೆಯನಿರಿಸಿ ನಡೆದು (ರಘುವಂಶ. ೬-೬೩) ; ಬಾಣಪ್ರಯೋಗಂಗಳಂ ಪ್ರವೀರಂ ಕೊಲ್ವುದಂ ಕಂಡು ಬಿಲ್ಗೊಂಡು ಕೋಪದಿಂದೆ . . . ಕಣೆಗರೆಯುತೆ (ಕೃಷ್ಣಾಭಾ. ೬-೨೯). **ಬಿಲುಗೊಳು :** ಬಿಲುಗೊಂಡುರಪಣಿಸಿ ತಡೆದನು ವಿರಾಟನು ಕಳಶ ಸಂಭವನ (ಶುಪ್ಪಾರ್ಯ್ರೋ. ೦೭-೩೯) ; ಕಂಡು ನನ್ನನು ಮನಸಿಜನು ಬಿಲುಗೊಂಡು ಬಡದೆಸುತಿರ್ದನೆನ್ನನು (ಶಿಶಾಗ. ೩-೪-೪). [ಬಿಲ್$_2$ + ಕೊಳ್$_1$]

ಬಿಲ್ಗಾಣ, ಬಿಲುಜಾಣ (ನಾ). ಧನುರ್ವಿದ್ಯೆಯಲ್ಲಿ ನಿಪುಣನಾದವನು : ಎಳವೆಯೊಳ್ ಪರಸುತ್ತೆ ತಂದೆ ಬಿಲ್ಗಾಣನಾದೆ, ಗೆಲ್ (ಅಕ್ಷತ್ರಾ. ೩೦-೬೦೦) : ಬಿಲ್ಗಾಣನಾಗು, ಜಸವಡೆಯ ಜಗದಲಿ ಕಂದ ! (ಹಕ್ಕಿರ. ೦೩-೯೨). **ಬಿಲುಜಾಣ :** ಕಾಣಿಸಿತು ಕರ್ಬುರರ ಕದನದ ಶೋಣಿತಾಂಬುಧಿಯಂಗಲದಲಿ ಬಿಲುಜಾಣರೊಳಗಿನ್ನಾವ ವೀರನೊ ನಿಮ್ಮ ಪಿತನೆಂದ (ತೊರರಾ. ೩-೬-೦೨).

[ಬಿಲ್$_2$ + ಜಾಣ]

ಬಿಲ್ಗಾಣಿಕೆ, ಬಿಲುಂಜಾಣಿಕೆ (ನಾ). = ಬಿಲುಜಾಣತನ : ದ್ರೋಣಾಂಗಂ ನಿನಗಂ ಬಿಲ್ಗಾಣಿಕೆಯುದು ಸಕ್ಕಸಮನೆ (ಶಮರ. ೧೨೨ ಪ್ರಮೋ); ಮುಪ್ಪುರಕೆ ಸಾಣೆಯಲಗಿನ ಸರಳ ಸುರಿದುವಿನ್ನೆಂತೊ ಬಿಲ್ಗಾಣಿಕೆ ಕುಮಾರ ಕಂಠೀರವನ ಜಗಜಟ್ಟಿ ಭಾಪೆಂದು ಸುರರುಲಿದರು (ಪಂಪಭಾ. ೯೩-೨೦) ; ಮೆರಸುವೆ ಸೊಗದಿ ಬಗೆಬಗೆಯಾ ಬಿಲ್ಗಾಣಿಕೆಯಾ ! (ಹಕ್ಕಿರ. ೦೭-೯೬). **ಬಿಲುಜಾಣಿಕೆ :** ಬೋಳೆಯತನವೊ ಬಿಲುಜಾಣಿಕೆಯ ಬಿಂಕವೊ ನಿನಗೆ (ಶುಪ್ಪಾಭ. ೨೦-೩೩).

[ಬಿಲ್$_2$ + ಜಾಣಿಕೆ]

ಬಿಲ್ದನಿ, ಬಿಲುದನಿ (ನಾ). ಧನುಸ್ಸಿನ ಹೆದೆಯ ನಾದ ; ಜ್ಯಾರವ : ಬಱಿಯ ಬಿಲ್ದನಿಗೆ ರಮಣನ ತಾಗಿತಂಬೆಂದು ನೆಱೆ ಮೋಹದಿಂ ಪೊರಳ್ದುವು ಕೆಲವು (ಕೃಷ್ಣಾಭಾ. ೨೬-೩೦). **ಬಿಲುದನಿ :** ಇವರ ಬಿಲುದನಿ ತುರಗ ಹೇಷಾರವದ ಘಲ್ಲಣೆ . . . ದಿವಿಜನಿಕರದ ಸಾಧುವಾದದಿ ಭುವನ ಶಬ್ದಬ್ರಹ್ಮ ಮಯವಾಯ್ತೊಂದು ನಿಮಿಷದಲಿ (ಶುಪ್ಪಾಕ. ೨೩-೯). [ಬಿಲ್$_2$+ದನಿ$_1$]

ಬಿಲ್ದಿರುವು, ಬಿಲುದಿರು, ಬಿಲುದಿರುವು (ನಾ). ಧನುಸ್ಸಿನ ಹಗ್ಗ ; ಹೆದೆ : "ಬಿಲ್ದಿರುವಿನೊಳು . . . ಗುಣಮೆನಿಕ್ಕುಂ" (ಮಂಗರಾ. ೦೪೭-೩೭) ; ಬಿಲ್ದಿರುವಿನಬ್ಬರದ ಕೋಳಾಹಳಕೆ ಧರೆ ಬಿರಿಯೆ ನಡೆತಂದನು (ಕೃಷ್ಣಾಭಾ. ೯-೨೬) ; ಕಣೆಗಳಿಂ ಪಂಜರಂಗಳಂ ಬಿಲ್ದಿರುವುಗಳಿಂ ಬಿಗಿನೇಣ್ಗಳಂ . . . ಅಳವಡಿಸಿ (ಪಸವಂ. ೩೯-೦೭). **ಬಿಲುದಿರು :** ನರನೆ ಹೊಕ್ಕವನಾದಡಯ್ಯನ ಹರಿಬವೆನ್ನದೆನುತ್ತ ಬಿಲುದಿರು ಮೊರೆಯೆ ಮೋಹರಗಡಲ ಕವಿಸಿದನಂದು ಗುರುಸೂನು (ಶುಪ್ಪಾಭ. ೬-೩೯). **ಬಿಲುದಿರುವು :** ಧರ್ಮಜ ಬಿಲುದಿರುವ ನೇವರಿಸಿ ನಿಂದನು ಸಮರಕನುವಾಗಿ (ಶುಪ್ಪಾಕ. ೯-೩೬).

[ಬಿಲ್$_2$ + ತಿರುಪು$_3$]

ಬಿಲ್ವತ್ರೆ 'ಬೆಲ್ಲವತ್ತ' ನೋ.

ಬಿಲ್ವಲ್ಮೆ 'ಬಿಲ್ವಲ್ಮೆ' ನೋ.

ಬಿಲ್ವಿಜ್ಜೆ (ನಾ). ಧನುರ್ವಿದ್ಯೆ ; ಬಿಲ್ಲುವಿದ್ಯೆ : ನೆಲದ ಸಿರಿ, ಬಿಲ್ವಿಜ್ಜೆ, ಮೈಬಲ್ಮೆ, ರಣಕೀರ್ತಿ, ಮೋಣ್ ಅರಸಕುವರಿಯತನಂ ತೃಣವಾಗಿ ಋಣವಾಗಿ ಕಾಣಿಸಿದುವು (ಪಪ್ರಾಂಗ. ೨೯-೬೯೦). [ಬಿಲ್$_2$ + ಬಿಜ್ಜೆ]

ಬಿಲ್ವಿನ್ನಣ (ನಾ). ಧನುರ್ವಿದ್ಯೆಯಲ್ಲಿ ಹೊಂದಿರುವ ಪ್ರೌಢಿಮೆ.— ಪ್ರಾವೀಣ್ಯ : ಕಲ್ತ ಬಿಲ್ವಿನ್ನಣಕ್ಕಿಂತಿದೆ ಯುಕ್ತಂ ಭೀಷ್ಮನಾಮಕ್ಕಿದು ಸಮುಚಿತಂ (ಗಣಾಯು. ೨-೩೦) : ಅಂತೆಚ್ಚ ಪುಳಿಂದ ಪುರಾಂತಕನ ಬಿಲ್ವಿನ್ನಣಕ್ಕೆ ಬೆಱಗುಪಟ್ಟು (ಶಶಹಂ. ೯-೩೨ ಪ) ; ಬಿಲ್ವಿನ್ನಣದ ಬಳವಿಗಕ ಮೂಲವೆಂದೆನಾದಡೆ ಕೇಳ ! (ಹಕ್ಕಿರ. ೦೩-೩).

[ಬಿಲ್$_2$ + ಬಿನ್ನಣ (< ಬಿನ್ನಾಣ)]

ಬಿಲ್ಲ1 (ನಾ). ಮಾರಾಟದ ವಸ್ತುಗಳನ್ನು ಖರೀದಿ ಮಾಡುವವನು,— ಕೊಂಡುಕೊಳ್ಳುವವನು : "ಬಿಲ್ಲನೆನಲ್ಕೆ ಕೊಂಡವನೊಳುಂ" (ಕರ್ಣಾಪಿ. ೨೬). [ಬಿಲ್$_1$ + — ಅ$_7$]

ಕರ್ನಾಟಕ ಸರ್ಕಾರದ ಉದಾರ ಧನಸಹಾಯದಿಂದ ಕಪ್ಪಡಿಗತ ಬಹುದಿನಗಳ ಬೇಡಿಕೆಯಾಗಿದ್ದ ಕನ್ನಡ ನಿಘಂಟಿನ ಏಂಟು ಸಂಪುಟಗಳು ಈಗ ಪುನರ್ಮುದ್ರಣಗೊಂಡು ನಿಮ್ಮ ಕೈಸೇರುತ್ತಿವೆ.

ಸಮಸ್ತ ಕನ್ನಡಿಗರಿಗೆ ಈ ಸಂಪುಟಗಳನ್ನು ಒಪ್ಪಿಸಲು ನೆರವು ನೀಡಿದ ಕರ್ನಾಟಕ ಸರ್ಕಾರವನ್ನು ನಾನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್ ಆರ್. ಕೆ

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು